ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ಮ ಫ್ದು ———— ಕ್ರಯ ೧ ದು ಫ್ದು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಜನವರಿ ತಾರೀಖು ೫ ನೇ ಗುರುವಾರ. — ಸಂಚಿಕೆ ೩೧

ಏನೂ ಗೊತ್ತೇ ಇಲ್ಲವೇ!

ಈಗ ಸಿದ್ಧವಾಗಿವೆ — ಎಲ್ಲರಿಗೂ ಬೇಕಾದದ್ದು

3

ವಿಶೇಷ ರೂಪಗೆ ಬಂದಿರುವ ೧೯೦೫ ನೇ ಇಸವಿ ಪಂಚಾಂಗ ಸಹಿತವಾದ ಎಸ್. ಜಿ. ಎಸ್. ಪಾಕೆಟ್ ಡೈರಿಗಳು

ಇವು ವರ್ತಕರು, ಕಂಟ್ರಾಕ್ಟುದಾರರು, ದೊಡ್ಡ ಮನುಷ್ಯರು, ಲಾಯರು ವಗೈರೆ ಸಮಸ್ತರಿಗೂ ಅತ್ಯಂತ ಉಪಯೋಗವುಳ್ಳ ವಿಶೇಷ ವಿಷಯ ಗರ್ಭಿತವಾಗಿಯೂ ಪ್ರತಿಪುಟಕ್ಕೂ ರೂಲು ಹಾಕಿ ಸೊಗಸಾಗಿ ಬೈಂಡು ಮಾಡಲ್ಪಟ್ಟು ಎಲ್ಲರಿಗೂ ಸಾಧ್ಯವಾಗುವಂತೆ ಬಹಳ ಕಮ್ಮಿ ಕ್ರಯಕ್ಕೆ ಬಿಕರಿಯಾಗುತ್ತಿವೆ. ತರಿಸಿ ನೋಡುವಲ್ಲಿ ಮನದಟ್ಟಾಗುತ್ತೆ.

ಎ ನಂಬರ್ — ಬಿ ನಂ॥

೩ ಅಂಗುಲ × ೫ ಅಂಗುಲದ ಚಿಕ್ಕ, ಮುಖ್ಯಳ ಜಾಕಿ ಪೆನ್ಸಲ್ ಇಟ್ಟ ಸ್ಪೆಷಲ್ ಡೈರಿಗೆ ೦—೩—೦ — ರೂಪ ಪ್ಲೈನ್ ಡೈರಿಗೆ ೦—೯—೦

ಒಂದೇ ನಂಬರು ೧೨ ಕಾಪಿ ಒಟ್ಟಾಗಿ ತರಿಸುವವರಿಗೆ ಪೋಸ್ಟು ಛಾರ್ಜು ಕಮ್ಮಿ ಬೀಳುವುದಲ್ಲದೆ ಅದೇ ನಂಬರು ೧ ಡೈರಿ ಮುಫತ್ತಾಗಿ ಕಳುಹಿಸುವೆವು

ವಿಳಾಸ—ಎಂ. ಪಿ. ಮಲ್ಲಯ್ಯ, ಕರ್ನಾಟಕ ಬುಕ್ ಡಿಪೋ,
೨೧೧, ತಾಲ್ಲೂಕು ಕಚೇರಿ ರೋಡು, ಬೆಂಗಳೂರು ಸಿಟಿ

P. SUBBAROY'S

World Renowned and most Efficacious
Ayurvedic Medicines

ಪಿ. ಸುಬ್ಬರಾಯರವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ
ಆಯುರ್ವೇದ ಔಷಧಗಳು

11

ಲಕ್ಷ್ಮೀವಿಲಾಸ ಕಸ್ತೂರಿ ಮಾತ್ರೆ.

ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಿಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯುರಿ, ಇವುಗಳು ವಾಸಿಯಾಗುವುವು. ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲಗೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೩ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ— ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೭ ಸೀಸೆಗೆ ವಿ. ಪಿ. ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮ್ಮದ್ ಸಮಾಚಾರ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಉಪಯೋಗಿಸಿದರೆ ಪಿತ್ತ, ತಲೆನೋವು, ಚಳಿ ವ್ಯಾಧಿಗಳು ನಿವಾರಣೆಯಾಗುತ್ತೆ ಬೇರೆ ಔಷಧ ಅವಶ್ಯವಿಲ್ಲ.—ಲೋಕೋಪಕಾರಿ

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಇದು ಜನಗಳಿಗೆ ವಿಶೇಷ ಪ್ರಯೋಜನವಾಗಿರುವುವು.—ಪೊಲೀಸ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.— ಕೃಷ್ಣಯ್ಯಂಗಾರ್, ಟೆಲಿಗ್ರಾಫ್ ದಿವಾನ್ ಪೇಷ್ಕಾರ್, ಕ್ವೆಟ್ಟಾ.

Apply to—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್,
ಪೋರ್ಟೊನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಇದು ಗುಣಕಾರಿ.

26

ಪೌಳ್ಯ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ ಮತ್ತು ರಾಮಾನುಜಪುರ. ಇವರ

೧. ಪ್ಲೇಗು ಪರಿಹಾರೌಷಧ —ಈ ಪರಿಯಂತರ ಪ್ರತಿಯೊಬ್ಬ ಪ್ಲೇಗು ರೋಗಿಗೂ ಈ ಔಷಧಿಯಿಂದ ಗುಣವಾಗಿದೆ. ಧನಾರ್ಜನೆಗಾಗಿ ಪತ್ರಿಕಾಲಂಕಾರವಾಗಿಲ್ಲ. ಲೋಕೋಪಕಾರದಿಂದ ಕೀರ್ತಿಯನ್ನು ಅಪೇಕ್ಷಿಸಿ, ಬಹು ಧನವ್ಯಯದಿಂದ ಕಂಡುಹಿಡಿಯಲ್ಪಟ್ಟಿತು. ಕೇವಲಾನುಭವದಿಂದ ನಂಬಿಕೆಯಾದೌಷಧಿ. ಗೆಡ್ಡೆಗೆ ಸವರುವ ಔಷಧಿ ಮತ್ತು ಸೇವಿಸುವ ಔಷಧಿ ಸಹಾ—೬ ಜನಕ್ಕೆ ಸಾಕಾಗುವಷ್ಟಕ್ಕೆ ಕ್ರಯ ೫ ರೂ. ಒಟ್ಟಿಗಾದರೆ ೧॥ ರೂ. ವಿ. ಪಿ. ಚಾರ್ಜು ಬೇರೆ.

೨. ಕಸ್ತೂರೀ ಮಾತ್ರೆಗಳು —ಮಕ್ಕಳ ಎಳವು, ಜ್ವರಾದಿಗಳು, ಹೆಂಗಸರ ಮುಟ್ಟುಕಟ್ಟು, ಗರ್ಭಸ್ರಾವಾದಿಗಳು, ಎಲ್ಲರ ಜ್ವರ, ವಾತ, ಮೈಕೈನೋವು, ಜ್ವರದಗೆಡ್ಡೆ ಮೊದಲಾದ ೨೦ ರೋಗಗಳು ಗುಣವಾಗುತ್ತೆ. ಅನುಪಾನ ಪತ್ರದಲ್ಲಿ ಎಲ್ಲಾ ಕಾಣಿಸಿರುತ್ತೆ. ೨೦೦ ಮಾತ್ರೆಗಳುಳ್ಳ ಡಪ್ಪಿಗೆ ೪ ಆಣೆ. ೧ ರಿಂದ ೭ ರ ವರೆಗೆ ಛಾರ್ಜು ೫ ಆಣೆ ೭ ಸೀಸೆಗೆ ೧ ಸೀಸೆ ಹೆಚ್ಚು ಕೊಡುವೆವು.

೩. ಬಾಲಸಂಜೀವಿನಿ —ಎಲ್ಲಾ ಬಗೆ ತಲೆನೋವು, ವಾಯುಗಳು, ಉಳುಕು, ಚಳುಕು, ಕೂಡ ಒಡನೇ ಗುಣವಾಗುತ್ತದೆ. ಡಬ್ಬಿ ೧ಕ್ಕೆ ಕ್ರಯ ೪ ಆಣೆ ೬ ಡಬ್ಬಿಗೆ ೧ ಡಬ್ಬಿ ಹೆಚ್ಚು ದೊರೆಯುತ್ತೆ.

೪. ದಂತಸಿತಚೂರ್ಣ —ಉಜ್ಜುತ್ತಾ ಬಂದರೆ ಹಲ್ಲಿನ ಪಾಚಿ, ರಕ್ತಸೋರುವುದು, ಬಾಯಿನಾತ, ಎಲ್ಲಾ ಬಗೆಯ ಹಲ್ಲುನೋವೂ ಹೋಗುತ್ತದೆ ಡಬ್ಬಿಗೆ ೪ ಆಣೆ, ೪ ಡಬ್ಬಿಗೆ ೧ ಹೆಚ್ಚು.

ಏಜಂಟರು —೧. ಕೆ. ಎಸ್. ಕೃಷ್ಣಶಾಸ್ತ್ರಿಗಳು, ಅಳ್ಳಪಬೀದಿ, ಮೈಸೂರು. ಅಥವಾ,
೨. ಕೆಬ್ ಎಸ್. ರಾವ್ ಅಂಡ್ ಬ್ರದರ್ಸ್, ಬೆಂಗಳೂರು ಸಿಟಿ.

ಅನುಭವಾನಂದ.

4

ಈ ಗ್ರಂಥಕ್ಕೆ ಅನೇಕ ಮಹನೀಯರಿಂದಲೂ, ಸಮಾಚಾರ ಪತ್ರಿಕೆಗಳಿಂದಲೂ ಯೋಗ್ಯತಾಪತ್ರಿಕೆಗಳನ್ನು ಹೊಂದಿದೆ ಇದರಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ಆತ್ಮವಿಚಾರ, ಮೋಕ್ಷೋಪಾಯ ಮೊದಲಾದ ಅನೇಕ ವಿಷಯಗಳು ಮನೋಹರವಾದ, ನೀತಿಯುಕ್ತವಾದ ಸಾಂಗತ್ಯಕವನಗಳಿಂದ ಬರೆಯಲ್ಪಟ್ಟವೆ ಕ್ರಯ ೬ ಆಣೆ ಪೋ ಬೇರೆ

ವಿಳಾಸ —ಟಿ. ರಂಗಸ್ವಾಮಿಶೆಟ್ಟಿ ಅಂಡ್ ಕೋ, ಮೈಸೂರು.

ಶ್ರೀ ತಾಂಬೂಲ.

6

ಇದನ್ನು ಓದಿ! ಬಳಸಿರಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ ಇದನ್ನು ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ, ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯೋಗಿಗಳೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಚಳಿ ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧-೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ೭ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ —

ದೇವನಹಳ್ಳಿ ಟವುನ್, ಬೆಂಗಳೂರು ಡಿಸ್ಟ್ರಿಕ್ಟ್. — ಎಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್.

೧೯೦೫ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

2

ಜನವರಿ ತಾ ೧೦ ರೊಳಗೆ ಸಿದ್ಧವಾಗುತ್ತೆ. ಪ್ರಶ್ನೋತ್ತರ ಸಹಿತ ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷಿಗಳಿಗೆ ತಕ್ಷಣ ದಯಮಾಡಿ ಪುಸ್ತಕವನ್ನು ಕಳುಹಿಸಲು ಸರಿಯಾದ ಏರ್ಪಾಡು ಮಾಡಿದೆ

ಬಾಲಬೋಧ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೭ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ—೧ ಆಣೆ. ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಇದುವರೆಗೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನುಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧ ಆಣೆ.
ವಿಳಾಸ.—ಎಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು

ಇಸ್ತಿಹಾರ್‌ನಾಮೆ

3

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಲೈನ್ ಮನೆಗಳ ಹರಾಜು.

ಮೈಸೂರು ಪುರಿಗೆ ಸೇರಿತವಾದ ವಿಂಡ್ಸರ್ ಲೈನ್ ಎಂಬ ಸ್ಥಳದಲ್ಲಿ ಇರುವ ಮನೆಗಳನ್ನು ಸನ್ ೧೯೦೫ನೇ ಇಸವಿ ಜನವರಿ ೧೫ನೇ ತಾರೀಖು ದಿವ ೪ ಗಂಟೆಗೆ ಸದರಿ ಸ್ಥಳದಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ

೧. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ ೨೫ ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ ಮಾಡಬೇಕಾಗಿ ಇರುತ್ತೆ. ಆದು ಜಾತಾ ಹರಾಜು ಬಾಬತ್ತು ಬಾಕಿ ಮೊಬಲಗು ಹರಾಜು ತಾರೀಖು ಮೊದಲಾಗಿ ೧೫ ದಿವಸಗಳಲ್ಲಿ ಪಾವತಿ ಮಾಡದೆ ಹೋದರೆ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ ಮೊದಲು ಹರಾಜುದಾರನು ಪುನಃ ಹರಾಜು ಮಾಡತಕ್ಕ ಸಂದರ್ಭದಲ್ಲಿ ಸಂಭವಿಸಬಹುದಾದ ನಷ್ಟಕ್ಕೆ ಗುರಿಯಾಗುತ್ತಾನೆ.

೨. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ ಮಾಡಲ್ಪಡದೆ ಯಾ ಹರಾಜು ಬಾಬತ್ತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಗೆ ಸದರಿ ಸ್ವತ್ತು ಪುನಃ ಹರಾಜು ಮಾಡಲ್ಪಡುತ್ತೆ. ಇದರಿಂದ ಮ್ಯುನಿಸಿಪಾಲಿಟಿಗೆ ಉಂಟಾಗಬಹುದಾದ ನಷ್ಟಕ್ಕೆ ಮೊದಲು ಹರಾಜುದಾರನು ಗುರಿಯಾಗುತ್ತಾನೆ.

೩ ಹರಾಜಿನಲ್ಲಿ ಸವಾಲುಮಾಡತಕ್ಕ ಜನಗಳು ತಾವು ತಮ್ಮ ಸ್ವಂತಕ್ಕೋಸ್ಕರ ಸವಾಲು ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲು ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕಲ್ಲದೆ ಇತರರಿಗೋಸ್ಕರ ಮುತಾಲೀಕರಾಗಿ ಸವಾಲು ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆ ಕೇಳಲ್ಪಡಬಹುದು. ಅದನ್ನು ಅವರು ಹಾಜರು ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

೪. ಹರಾಜು ಕಾಲದಲ್ಲಿ ಬರುವ ದರಖಾಸ್ತುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಅಥವಾ ಹರಾಜು ವಿನಹಾ ಖುಷ್ ಖರೀದಿಗೆ ಮನೆಗಳನ್ನು ವಿಲೆವಾರಿ ಮಾಡುವ ಹಕ್ಕನ್ನು ಪ್ರೆಸಿಡೆಂಟರು ಉಳಿಸಿಕೊಂಡಿರುತ್ತಾರೆ.

ತಾ ೧೪—೧೨—೧೯೦೪.
ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸು.

C VENKATA RAO,
for President.

NOTICE. 3

It is hereby notified that 17,588 Tolas or 444 lbs. more or less of ivory, the produce of the Mysore District, will be sold by public auction at 12 A.M., on the 15th February, 1905, at the Office of the Deputy Commissioner, Mysore District, at Mysore by the undersigned or other officer deputed by him therefor.

TERMS.—Twenty-five per cent. of the purchase money to be deposited by the purchaser on the spot, and the balance to be paid within three days from the date of sale.

M. KANTARAJA URS,
Deputy Commissioner,
Mysore District.

Deputy Commissioner's Office, Mysore,
Dated, 10th December, 1904.

ಸುಲಭಕ್ರಯ: ಸುಗಂಧದ್ರವ್ಯಗಳು. 7

ಅಂಬರ್ ಕಡ್ಡಿ ಸೇರು ೧ಕ್ಕೆ	.. ..	೭—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	..	೨—೮—೦
ಘುಸುಗು ಕಡ್ಡಿ ,, ೧ಕ್ಕೆ	.. ..	೨—೦—೦
ಮಸಾಲಾ ಕಡ್ಡಿ ,, ೧ಕ್ಕೆ	..	೦—೧೨—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	.. ..	೧—೦—೦
ಕೇಸರಿ ಬಿಲ್ಲೆ ೧ಕ್ಕೆ	..	೦—೧—೬
ಪಚ್ಚೆ ಗಂಧ ತೋಲ ೧ಕ್ಕೆ	.. ..	೨—೦—೦
ಡಿಟೋ	.	೦—೧೨—೦
ಸಾಲುಮಡ್ಡಿ ಗಟ್ಟಿ ೧ಕ್ಕೆ	.. ..	೦—೮—೦
ತಾಂಬೂಲ ವಿಹಾರಿಣಿ ಡಬ್ಬಿ ೧ಕ್ಕೆ	..	೦—೪—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ	.. .	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ	..	೦—೨—೦
ಪನ್ನೀರು ಶೀಸೆ ೧ಕ್ಕೆ	.. ..	೦—೫—೦
ತಂಬಾಕ್ ಷೋಕ್ ಡಬ್ಬಿ ೧ಕ್ಕೆ	..	೦—೨—೦
ಶ್ರೀವೈಷ್ಣವ ಪಾಕ್ಷೀಯ ಪಚಾಂಗ ಸೇರು ೧ಕ್ಕೆ		೦—೧೨—೦
ಫಿತ್ನ ತೋಲ ೧ಕ್ಕೆ	.. ..	೨—೦—೦
ಡಿಟೋ	..	೧—೦—೦
ಅಭ್ಯಂಗಚೂರ್ಣ ಪಟ್ಟಣ ೧ಕ್ಕೆ	.. ..	೦—೦—೬

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಜಟ್ಟಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ ವಿಳಾಸ—ಟಿ. ಎಲ್. ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ಸನ್ ೧೯೦೫ನೇ ಇಸವಿಯ 3

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿ



ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಖಿಷ್‌ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ವೃಕ್ಷಶಾಸ್ತ್ರ, ಹಲ್ಲಿ ಬಿಕ್ಕ ಫಲ, ರಾಹು ಗುಳಿಕಕಾಲ, ವಾರ ತೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಬಡ್ಡಿಬಿಚ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕೇಮಿ ಸಾವರ್ಣಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ.

ಎ. ನಂಬರ್ ಚಿಕ್ಕಸೈಜು ೩ ಆಣೆ. ಸಿ. ನಂಬರ್ ದೊಡ್ಡಸೈಜು ೬ ಆ
ಎಫ್. ,, ,, ೪ ಎಚ್. ,, ,, ೭ ,,
ಬಿ. ಮುಚ್ಚಳದ್ದು ,, ೫ ಡಿ. ಮುಚ್ಚಳದ್ದು ,, ೮ ,,

ಪೋಸ್ಟು ಚಾರ್ಜು ಬೇರೆ. ಒಂದೇ ಸಮಾಕೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

51



ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೈಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಶ್ರೇಷ್ಠವಾದುದು ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವಿಕೆ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಉಳಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮುಂದ[illegible] ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವ್ರುಂಟ್ ರೋಡ್,
ಮದರಾಸ್.

ಬೆಂಗಳೂರು "ಸೂರ್ಯೋದಯ ಪ್ರಕಾಶಿಕಾ." 2

ಬಹಳ ನಿಷ್ಪಕ್ಷಪಾತವಾಗಿಯೂ ಆಶ್ಚರ್ಯವಾಗಿಯೂ ಪ್ರಕಟಿಸಲ್ಪಡುವದು. ಚಂದಾದಾರರಿಗೆ ಜಪಾನ್ ರಷ್ಯಾ ಯುದ್ಧದಲ್ಲಿ [illegible] ಕೊನೆದಾಗಿ ರಕ್ತಪಾತವಾಗಿ ಪ್ರಾಣಬಿಟ್ಟ ತಸ್ವೀರುಗಳು ಬಹುಮಾನವಾಗಿ ಕೊಡಲ್ಪಡುವದು. ಚಂದಾ ವರ್ಷಕ್ಕೆ ಟಪಾಲ್ ಹಾಸಲ್ ಸಹಿತ ೩ ರೂ. ೨೦೦ ರೂ. ವರಮಾನ ಜಾಸ್ತಿ ಇರುವವರಿಗೆ ೪ ರೂ. ಬೇಕಾದವರು ಕಾರ್ಡು ಬರೆದರೆ ವಿ. ಪಿ. ಮೂಲಕ ಕಳುಹಿಸುತ್ತೇವೆ. ಬಿ. ನರಸಿಂಗರಾವ್, ಪ್ರೊಪ್ರೈಟರ್.

ವೃತ್ತಾಂತ ಪತ್ರಿಕೆ

ಸನ್ ೧೯೦೫ ನೇ ಇಸವಿ ಜನವರಿ ತಾ ೫ ನೇ ಗುರುವಾರ.

ರಾಜಕೀಯ ಸಭೆಯು.

ಕಳೆದ ೨೬ ನೇ ತಾರೀಖಿನಿಂದ ಹಿಂದೂಸ್ಥಾನದ ೨೦ ನೆಯ ನ್ಯಾಷನಲ್ ಕಾಂಗ್ರೆಸ್ ಎಂಬ ರಾಜಕೀಯ ಮಹಾ ಸಭೆಯು ಬೊಂಬಾಯಿ ಪಟ್ಟಣದಲ್ಲಿ ಪ್ರಾರಂಭವಾಗಿ ಮೂರು ದಿನ ನಡೆಯಿತು. ಸಭಾಮಂಟಪದಲ್ಲಿ ೧೪,೦೦೦ ಮಂದಿ ಸೇರಿದ್ದರು. ನೂರಾರು ಮಂದಿ ಸ್ತ್ರೀಯರೂ ಹಾಜರಾಗಿದ್ದರು. ಸರ್ ಹೆನ್ರಿ ಕಾಟನ್ ರವರು ಈ ಸಭೆಯ ಪ್ರೆಸಿಡೆಂಟರಾಗಿ ಇದ್ದರು. ಕಾರ್ಯಭಾಗ ನಡೆಸುವದಕ್ಕಾಗಿ ಬೇಕಾದ ರೀತಿಯಿಂದ ಒಂದರು. ಇವರೂ ಆ ಸಭೆಯ ಮೆಂಬರುಗಳಲ್ಲಿ ಮುಖಂಡರಾದ ಕೆಲವರೂ ಈ ರಾಷ್ಟ್ರದ ರಾಜಕೀಯ ವಿಷಯಗಳನ್ನು ಗವರ್ನಮೆಂಟಿನವರು ಪ್ರಜಾ ಸಮೃದ್ಧಿಗೂ ಶ್ರೇಯೋಭಿವೃದ್ಧಿಗೂ ಸಹಕಾರಿಯಾಗುವಂತೆ ಬದಲಾವಣೆ ಮಾಡಬೇಕೆಂಬದಾಗಿ ಗಂಭೀರವಾದ ವಾಕ್ಯಗಳಿಂದ ಉಪನ್ಯಾಸ ಮಾಡಿದರು. ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಈ ಸಭೆಗೆ ಮೆಂಬರುಗಳಾಗಿ ಹೋಗಿದ್ದರು. ಈ ಪ್ರಕಾರ ದೇಶೀಯ ವಿದ್ಯಾವಂತರು ಪ್ರತಿ ವರುಷವೂ ಒಂದೊಂದು ಪಟ್ಟಣದಲ್ಲಿ ಸಭೆ ಸೇರಿ, ಗವರ್ನಮೆಂಟಿನವರು ನಡಸುವ ಕಾರ್ಯಗಳನ್ನೂ ಪ್ರಜೆಗಳಿಗೆ ಪ್ರಯೋಜನಕರವಾದ ವಿಷಯಗಳನ್ನೂ ಕುರಿತು ಚರ್ಚೆಮಾಡುತ್ತಾ, ಸಕಲರೂ ಒಪ್ಪುವಂಥ ತೀರ್ಮಾನಗಳನ್ನು ಗವರ್ನಮೆಂಟಿಗೆ ಅರಿಕೆಮಾಡುತ್ತಾ ಬಂದಿರುವುದರಿಂದ ಕಾಲಾನುಕಾಲದಲ್ಲಾದರೂ ಇಷ್ಟಸಿದ್ಧಿಯಾದೀತೆನ್ನುವದಕ್ಕೆ ಸಂಶಯವಿಲ್ಲ. ಪ್ರಜೆಗಳು ಕೇಳುವುದನ್ನೆಲ್ಲಾ ಸರ್ಕಾರದವರು ನಡಿಸಿಕೊಡುತ್ತಾರೆನ್ನುವದಕ್ಕಾಗುವುದಿಲ್ಲ ಆ ಪೈಕಿ ಅನೇಕ ವಿಷಯಗಳು ದೇಶೋನ್ನತಿಗೆ ಅನುಕೂಲವಾದವುಗಳೆಂದು ಕಾಣಬಂದರೂ ಗವರ್ನಮೆಂಟಿನವರು ದೀರ್ಘಾಲೋಚನೆಯಿಂದ ಕಾಲಕ್ರಮದಲ್ಲಿ ನಡಸಿಕೊಡುವಂಥವುಗಳಾಗಿವೆ. ಈ ಸಭೆಯೂ ಅದರ ಕಾರ್ಯಗಳೂ ಸರ್ವಸಮ್ಮತವಾದವುಗಳೇ ಸರಿ. ಆದರೆ ದೇಶವು ಇನ್ನೂ ತಕ್ಕಮಟ್ಟಿಗೆ ಅಭಿವೃದ್ಧಿಸ್ಥಿತಿಗೆ ಬಂದಿರುವುದಿಲ್ಲ. ಪ್ರಜೆಗಳು ವಿದ್ಯಾವಂತರಾಗಿ ತಮ್ಮ ಕರ್ತವ್ಯಗಳನ್ನು ಪರಿಷ್ಕಾರವಾಗಿ ತಿಳಿದು, ಆ ಪ್ರಕಾರ ನಡೆಯುತ್ತಾ ಬಂದ ಹಾಗೆಲ್ಲಾ ಗವರ್ನಮೆಂಟಿನವರು ಅವರಿಗೆ ರಾಜಕೀಯ ವಿಷಯದಲ್ಲಿ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಾ ಬಂದಾರು. ಸಮಸ್ತ ಪ್ರಜೆಗಳೂ ವಿದ್ಯಾವಂತರಾಗಬೇಕಾದುದು ಮೊದಲನೆಯ ಭಾಗವಾಗಿರುತ್ತದೆ. ಈ ವಿಷಯಕ್ಕೆ ದೇಶೀಯ ವಿದ್ಯಾವಂತರು ವಿಶೇಷವಾದ ಗಮನವನ್ನು ಕೊಟ್ಟಾರೆಂದು ಹಾರೈಸುತ್ತೇವೆ

ಒಳದೇಶದ ವೃತ್ತಾಂತಗಳು

ಈ ವಾರದ ಪತ್ರಿಕೆಯ ಸಂಗಡ ನಮ್ಮ ಚಂದಾದಾರರಿಗೆಲ್ಲಾ ೧೯೦೫ ನೆ ವರ್ಷದ ಕ್ಯಾಲೆಂಡರನ್ನು ಬಹುಮಾನವಾಗಿ ಕಳುಹಿದೇವೆ. ಇನ್ನು ಮುಂದೆ ಈ ತಿಂಗಳೊಳಗೆ ಚಂದಾದಾರರಾಗತಕ್ಕವರಿಗೂ ಒಂದೊಂದು ಪ್ರತಿಯನ್ನು ರವಾನೆಮಾಡುವೆವು

❖❖❖❖

ಈ ತಿಂಗಳ ಕಡೇ ವಾರದಲ್ಲಿ ಶ್ರೀಮನ್ಮಹಾರಾಜರವರು ಬೆಂಗಳೂರಿಂದ ಮದರಾಸಿಗೆ ದಯಮಾಡಿ, ಗವರ್ನರವರ ಭೇಟಿ ಮಾಡಿಕೊಂಡು ಬರುವವರಾಗಿದ್ದಾರೆ.

❖❖❖❖

ಬೆಂಗಳೂರು ಸೆಂಟ್ರಲ್ ಕಾಲೇಜ್ ಸ್ಟೂಡೆಂಟ್ಸ್ ಹೋಮಿನಲ್ಲಿ ೧೪೦ ವಿದ್ಯಾರ್ಥಿಗಳ ಪೀಠಗಳನ್ನು ಇಡಬೇಕೆಂದು ಸರ್ಕಾರದವರು ೫೧,೦೦೦ ರೂ. ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಬೊಂಬಾಯಿ ಪ್ರದರ್ಶನಶಾಲೆಗೆ ಹೋಗಿರುವ ಮೈಸೂರು ಸಂಸ್ಥಾನದ ವಸ್ತುಗಳ ಪೈಕಿ ಮೂರಕ್ಕೆ ಚಿನ್ನದ ಮೂರು ಮೆಡಲ್ ಎಂಬ ಬಿರುದುಗಳು ದೊರೆತವೆಂದು ವರ್ತಮಾನ ಬಂದಿದೆ.

❖❖❖❖

ರತ್ನಾವಳಿ ಥಿಯೇಟ್ರಿಕಲ ಕಂಪನಿಯವರು ನಾಳೆ ಶನಿವಾರ ರಾತ್ರಿ "ರಾಮವರ್ಮ ಲೀಲಾವತಿ" ಎಂಬ ನಾಟಕವನ್ನು ರಾಜಧಾನಿಯ ಟೌನ್‌ಹಾಲ್ ಬಂಗಲೆಯಲ್ಲಿ ಆಡಿ, ಬಂದ ಉತ್ಪತ್ತಿಯನ್ನು ಮ॥ ಎ. ವಿ. ವರದಾಚಾರ್ಯರಿಗೆ ಕೊಡುವವರಾಗಿದಾರೆ.

❖❖❖❖

ಮೈಸೂರು ಡಿವಿಜನ್ ಪೋಸ್ಟು ಸೂಪರೆಂಟೆಂಡೆಂಟಾಗಿದ್ದ ಮ॥ ಸ್ವಾಮಿಯಾನ ಯವರನ್ನು ಬಡ್ತಿಯ ಮೇಲೆ ಅ॥ ಡೈರೆಕ್ಟರ್ ಜನರಲ್ಲಾಗಿ ನೇಮಿಸಿ, ಬಳ್ಳಾರಿ ಡಿವಿಜನಲ್ಲಿದ್ದ ಮ॥ ಎ. ವಿಲ್ಸನ್‌ರವರನ್ನು ಇಲ್ಲಿನ ಪೋಸ್ಟು ಸೂಪರೆಂಟು ಕೆಲಸಕ್ಕೆ ವರ್ಗಮಾಡಿದಾರೆ.

❖❖❖❖

ಕ್ಷಾಮಕಾಲದಲ್ಲಿ ಈ ಸಂಸ್ಥಾನದಲ್ಲಿ ದೊರಕುವ ಯಾವ ಗೆಡ್ಡೆಗೆಣಸು ಬೀಜಗಳನ್ನು ಜನರು ತಿನ್ನಬಹುದೆಂದು ಗೊತ್ತುಮಾಡುವುದಕ್ಕಾಗಿ ಸರ್ಕಾರಿ ವ್ಯವಸಾಯದ ಕೆಮಿಸ್ಟರಾದ ಡಾಕ್ಟರ್ ಲೆಹ್ಮರವರು ಪರೀಕ್ಷೆಗಳನ್ನು ಮಾಡಲಾರಂಭಿಸಿದಾರೆ.

❖❖❖❖

ದಿವಾನರವರು ಮೊನ್ನೆ ಭಾನುವಾರವೇ ಸರ್ಕೀಟು ಹೊರಟು, ಕೋಲಾರ, ತುಂಕೂರು, ಚಿತ್ರದುರ್ಗ, ಕಡೂರು, ಹಾಸನ ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಮಾಡಿಕೊಂಡು ಫೆಬ್ರವರಿ ೨೧ಕ್ಕೆ ವಾಪಸು ಬರುವಂತೆ ನಿರ್ಧಾರವಾಗಿತ್ತು. ಈಚೆಗೆ ಅವರು ಈ ಸರ್ಕೀಟನ್ನು ಸದ್ಯ ನಿಲ್ಲಿಸಿರುತ್ತಾರೆಂದು ಕೇಳುತ್ತೇವೆ.

❖❖❖❖

ಮೈಸೂರು ಸರ್ಕಾರದವರು ಈ ಸಂಸ್ಥಾನದ ರೆವಿನ್ಯೂ ಇಲಾಖೆಯನ್ನು ಈಗಿನಕಾಲಕ್ಕೆ ತಕ್ಕಂತೆ ಕ್ರಮಪಡಿಸಬೇಕೆಂದು ಕುತೂಹಲಪಟ್ಟು, ಕುಂಫಣಿ ರಾಜ್ಯದ ಬೇರೆ ಬೇರೆ ರೆವಿನ್ಯೂ ಇಲಾಖೆಗಳ ಕ್ರಮಗಳನ್ನು ನೋಡಿಬರುವಂತೆ ಮ॥ ಡಿ. ಎಂ. ನರಸಿಂಗರಾಯರನ್ನು ಮದರಾಸಿಗೂ ಬೊಂಬಾಯಿಗೂ ಇತರ ಕಡೆಗಳಿಗೂ ಕಳುಹಿಸಿರುತ್ತಾರೆ.

❖❖❖❖❖

ಚಿಕ್ಕಬಳ್ಳಾಪುರ? ಹದೇವನಕೋಟೆ ತಾಲ್ಲೂಕು ಸರಗೂರಿನಲ್ಲಿರುವ ಸರ್ಕಾರಿ ವ್ಯವಸಾಯದ ಬ್ಯಾಂಕಿನ ಕಾರುಬಾರುಗಳು ತೃಪ್ತಿಕರವಾಗಿಲ್ಲವೆಂದೂ ಅನೇಕ ಅಕ್ರಮಗಳೂ ಲೋಪಗಳೂ ಕಂಡುಬಂದಿವೆ ಎಂದೂ ಪ್ರಕಟವಾಗಿದೆ. ಸರ್ಕಾರದವರು ಕಳೆದ ಡಿಸೆಂಬರ ಆಖೈರಿನ ತನಕ ವಾಯಿದೆ ಕೊಟ್ಟು, ಅಷ್ಟರೊಳಗೆ ಎಲ್ಲಾ ಕ್ರಮಪಡಿಸಿಕೊಳ್ಳದಿದ್ದರೆ ಬ್ಯಾಂಕನ್ನು ವಜಾ ಮಾಡುವುದಾಗಿ ಅಪ್ಪಣೆ ಕೊಟ್ಟಿದಾರೆ. ಬ್ಯಾಂಕಿನ ಕಾರುಬಾರು ಈ ಸ್ಥಿತಿಗೆ ಬಂದುದಕ್ಕಾಗಿ ವ್ಯಸನಪಡಬೇಕಾಗಿದೆ.

ನಾಯಬ ಸರೂರ ನೃತ್ಯಗೋಪಾಲ ಬಾಸು, ಎಂ. ಎ. ರವರು ಕಲ್ಕತ್ತಾ ಪಟ್ಟಣದಲ್ಲಿ ಅಸಿ ಕಂಟ್ರೋಲರ್ ಜನರಲ್ಲಾಗಿದ್ದರು. ಇವರಿಗೆ ೧,೦೦೦ ರೂ. ಸಂಬಳ ಇತ್ತು. ಇವರನ್ನು ನಮ್ಮ ಸರಕಾರದವರು ಗವರ್ನಮೆಂಟ್ ಕಂಟ್ರೋಲರಾಗಿ ನೇಮಿಸಿಕೊಂಡ ಮೂರು ವರ್ಷ ಅವರು ನೌಕರಿ ಮಾಡುವಂತೆ ಒಪ್ಪಿಕೊಂಡ, ೩೦ನೆ ತಾರೀಖು ಬೆಂಗಳೂರಿಗೆ ಬಂದು ೩ನೆ ತಾರೀಖಿನಿಂದ ಕೆಲಸವನ್ನು ನೋಡುತ್ತಿದ್ದಾರೆ. ಇವರಿಗೆ ಸದ್ಯ ೧,೨೫೦ ರೂ. ಸಂಬಳ ಗೊತ್ತಾಗಿದೆ. ಇದುವರೆಗೆ ಈಗ ಕಂಟ್ರೋಲರಾಗಿದ್ದ ...ಯವರು ಪೆನ್ಷನ್ ಪಡೆದು ಕೆಲಸ ಬಿಟ್ಟರು.

❖❖❖❖

ಚಿನ್ನದ ಗಣಿಗಳಲ್ಲಿ ಕಂಪನಿಯವರು ಉತ್ಪತ್ತಿ ಮಾಡುವ ಚಿನ್ನದಲ್ಲಿ ಪ್ರತಿ ವರುಷವೂ ಆರು ಲಕ್ಷ ರೂಪಾಯಿನಷ್ಟು ಕಳುವಾಗುತ್ತಿರುವುದನ್ನೂ, ನೌಕರಮಾನೇರು ಲಂಚ ರುಷುವತ್ತು ತಗೆದುಕೊಳ್ಳುವುದನ್ನೂ ನಿಲ್ಲಿಸುವುದಕ್ಕೆ ಉಪಾಯಗಳನ್ನು ಕಂಡು ಹಿಡಿಯಬೇಕೆಂದು ಚಿನ್ನದ ಗಣಿಯ ಅಧಿಕಾರಿಗಳೆಲ್ಲಾ ಕಳೆದವಾರ ...ಗಪೇಟೆಯಲ್ಲಿ ಸೇರಿ ಸಭೆ ನಡಿಸಿದರು. ಮೈಸೂರು ಸರ್ಕಾರದ ಕೆಲವು ಅಧಿಕಾರಿಗಳೂ ಹಾಜರಾಗಿದ್ದರು. ಈ ಸಭಿಕರು— ...ಹೊಸ ಕಾನೂನನ್ನು ಮೈಸೂರು ಸಂಸ್ಥಾನದಲ್ಲೆಲ್ಲಾ ಜಾರಿಗೆ ತರುವಂತೆ ಮೈಸೂರು ಸರ್ಕಾರದವರನ್ನು ಕೇಳಿಕೊಳ್ಳಬೇಕೆಂಬು ನಿಶ್ಚಯಮಾನವಮಾಡಿದಾರೆ.

ಮೈಸೂರು ಗೆಜೆಟ್ ಸಂಗ್ರಹ

ಕೋಲಾರದ ಡಿಸ್ಟ್ರಿಕ್ಟು ಟ್ರೆಜರೀ ಛಾರ್ಜಿನಲ್ಲಿರುವ ...ಗ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರವರಾದ ಮೆ॥ ಟಿ ...ವರದರಾಜ ಐಯ್ಯಂಗಾರ್ಯರವರು ಮೊದಲನೆ ಕ್ಲಾಸ್ ಪ್ರ್ಯಾಜಿ...ಯಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕಲ್ಕತ್ತೆಯ ಕಂಟ್ರೋಲರ್ ಜನರಲ್ ಆಫೀಸಿನಲ್ಲಿದ್ದ ಮೆ॥ ನೃತ್ಯ ಗೋಪಾಲ ಬಾಸು ಎಂ ಎ ರವರು ಶ್ರೀಮನ್ಮಹಾರಾಜರವರ ಗವರ್ನಮೆಂಟ್ ಕಂಟ್ರೋಲರ್‌ರವರಾಗಿ ನಿಯಮಿಸಲ್ಪಟ್ಟಿರುವರು

ಶಿವಮೊಗ್ಗ ಡಿವಿಜನ್ನಿನ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜಿಯವರಾದ ಮೆ॥ ವೆಂಕಟವರದ ಐಯ್ಯಂಗಾರ್ಯರವರಿಗೆ ಜನವರಿ ೩ ತಾರೀಖಿನಾರಭ್ಯ ಕ್ರಿಸ್ಮಸ್ ರಜಾ ಅನುಸರಿಸಿ ಪ್ರೂಫ್ ಡಲೆವೆನ್ ಒಂದು ತಿಂಗಳು ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವುದು

ಜನರಲ್ ಮತ್ತು ರೆವಿನ್ಯೂ ಡಿಪಾರ್ಟಮೆಂಟಿನಲ್ಲಿ ಗವರ್ನಮೆಂಟಿಗೆ ಡೆಪ್ಯುಟಿ ಸೆಕ್ರೆಟರಿಗಳಾದ ಮೆ॥ ಕೆ ಎಸ್ ಚಂದ್ರಶೇಖರ ಐಯ್ಯರ್ ಬಿ. ಎ., ಬಿ. ಎಲ್ ರವರು ಮೆ ಎಸ್. ವೆಂಕಟವರದ ಐಯ್ಯಂಗಾರ್ಯರವರ ಗೈರ್ ಹಾಜರಿಯಲ್ಲಿ ಶಿವಮೊಗ್ಗ ಡಿವಿಜನ್ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜಿಗಳಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು ಡಿಸ್ಟ್ರಿಕ್ಟು ಸಿವಿಲ್ ಸರ್ಜನರವರಾದ ಮೆ॥ ಬಿ. ಕೆ. ಅಚ್ಯುತರಾಯರವರಿಗೆ ಜನವರಿ ೩ನೇ ತಾರೀಖಿನಾರಭ್ಯ ...ವಾರಗಳು ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವದು.

ಅಚ್ಯುತರಾಯರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೂ ಅಸಿಸ್ಟೆಂಟ್ ಸರ್ಜನರವರಾದ ಟಿ. ವಿ ಕುಪ್ಪುಸ್ವಾಮಿ ಮೊದಲಿಯಾರ್ರವರು ಸಿವಿಲ್ ಸರ್ಜನರಾಗಿ ನಿಯಮಿಸಲ್ಪಟ್ಟಿರುವರು.

ಯಡತೊರೆ ತಾಲ್ಲೋಕು ಅಮಲ್ದಾರರಾದ ಮೆ॥ ಸಿ ಕೃಷ್ಣರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ...ತಿಂಗಳ ರಜವು ಸ್ಯಾಂಕ್ಷನ್ ಮಾಡಲ್ಪಟ್ಟಿರುವದು

ಮೆ॥ ಸಿ ಕೃಷ್ಣರಾಯರವರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರೆಗೆ ರೆವಿನ್ಯೂ ಪ್ರೊಬೇಷನರ್ ...ರಂಗರಾವ್, ಬಿ. ಎ., ಬಿ ಎಲ್. ರವರು ಹಂಗಾಮಿ ಯಡತೊರೆ ತಾಲ್ಲೋಕು ಅಮಲ್ದಾರರಾಗಿಯೂ, ಮೂರನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುವರು

ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರರವರಾದ ಮೆ॥ ದೊರೆಸ್ವಾಮಿ ಐಯ್ಯರವರಿಗೆ ಹದಿನೈದು ದಿನಗಳು ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವುದು.

ಮೆ॥ ದೊರೆಸ್ವಾಮಿ ಐಯ್ಯರವರ ಗೈರ್ ಹಾಜರಿಯಲ್ಲಿ ಆ ಡಿಸ್ಟ್ರಿಕ್ಟು ಸೀನಿಯರ್ ಅಸಿಸ್ಟೆಂಟ್ ಕಮಿಷನರರವರು ಡೆಪ್ಯುಟಿ ಕಮಿಷನರ್ ಛಾರ್ಜಿನಲ್ಲಿರುವರು.

ಕಡೂರು ಡಿಸ್ಟ್ರಿಕ್ಟು ಟ್ರೆಜರೀ ಛಾರ್ಜಿನಲ್ಲಿರುವ ಮೆ॥ ಎ. ...ಶೇಷಗಿರಿ ಐಯ್ಯಂಗಾರ್ರವರಿಗೆ ಕ್ರಿಸ್ಮಸ್ ರಜಾವನ್ನನುಸರಿಸಿ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವುದು.

ಕೃಷ್ಣರಾಜಪೇಟೆ ಡಿವಿಜನ್ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರಾದ ಮೆ॥ ಎ. ಸುಬ್ರಹ್ಮಣ್ಯ ಐಯರ್, ಬಿ ಎ ರವರಿಗೆ ಎರಡುವರ ತಿಂಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವುದು.

ಮೆ॥ ಕೃಷ್ಣಸ್ವಾಮಿ ನಾಯುಡುರವರಿಗೆ ಫಸ್ಟ್ ಕ್ಲಾಸ್ ರೇಂಜ್ ಕೆಲಸದಿಂದ ಫಾರೆಸ್ಟ್‌ಗಳ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಕೆಲಸಕ್ಕೆ ಡಿಸೆಂಬರ್ ಮೊದಲನೇ ತಾರೀಖಿನಿಂದ ಪ್ರೊಮೋಷನ್ ಕೊಡಲ್ಪಟ್ಟಿರುವುದು.

ಮೆ॥ ಪಿ. ಎಸ್. ಗೋವಿಂದರಾಯರವರಿಗೆ ಎರಡನೇ ಕ್ಲಾಸ್ ರೇಂಜರ್ ಕೆಲಸದಿಂದ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಕೆಲಸಕ್ಕೆ ಡಿಸೆಂಬರ್ ೧ನೇ ತಾರೀಖಿನಿಂದ ಪ್ರೊಮೋಷನ್ ಕೊಡಲ್ಪಟ್ಟಿರುವುದು.

ಫಸ್ಟ್ ಕ್ಲಾಸ್ ಡೆಪ್ಯುಟಿ ಕಮಿಷನರ್ ಮೆ॥ ಎಚ್. ಎಚ್. ...ರವರು ಫರ್ಲೋ ರಜಾದಿಂದ ವಾಪಸು ಬಂದಿರುವ ಪ್ರಯುಕ್ತ ಹಂಗಾಮಿಯಾಗಿ ಮೊದಲನೇ ಕ್ಲಾಸ್ ಡೆಪ್ಯುಟಿ ಕಮಿಷನರಾಗಿದ್ದ ಮೆ॥ ಎಂ. ಎನ್. ನಾರಾಯಣರಾಯರವರು ಪ್ರೋವಿನ್ಷಿಯಲ್ ಎರಡನೇ ಕ್ಲಾಸಿಗೂ, ಮೆ॥ ಎಚ್. ರಾಮಾನುಜಯ್ಯಂಗಾರ್ಯರವರು ಮೂರನೇ ಕ್ಲಾಸಿಗೂ ವಾಪಸು ಮಾಡಲ್ಪಟ್ಟು, ಹಂಗಾಮಿಯಾಗಿ ಮೂರನೇ ಕ್ಲಾಸ್ ಡೆಪ್ಯುಟಿ ಕಮಿಷನರಾಗಿದ್ದ ಮೆ॥ ಪಿ ಆರ್. ಡಬ್ಲ್ಯು. ವೆದರಾಲ್‌ರವರು ಪುನಃ ಸಕಲೇಶಪುರದ ಸಬ್ ಡಿವಿಜನ್ ಆಫೀಸರ್ ಕೆಲಸಕ್ಕೆ ವಾಪಸು ಹೋಗುವರು. ಸಕಲೇಶಪುರದ ಸಬ್ ಡಿವಿಜನ್ ಛಾರ್ಜಿನಲ್ಲಿದ್ದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮೆ ಸೈಯ್ಯದ್ ಅಮೀರ್ ಹಸೇನರವರು ಕಡೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಟ್ಟಿರುವರು.

ನಂಜನಗೂಡು ಕನ್ನಡ ಗರಲ್ ಸ್ಕೂಲ್ ಬಹುಮಾನ ಸಭೆ.

ಈ ಸ್ಕೂಲ್ ವಿದ್ಯಾರ್ಥಿನಿಯರಿಗೆ ಬಹುಮಾನ ಕೊಡುವದಕ್ಕಾಗಿ ೧೯೦೪ ನೇ ಇಸವಿ ಡಿಸೆಂಬರು ೨೨ ನೇ ಸಾಯಂಕಾಲ ೪ ಘಂಟೆಗೆ ಗರಲ್ ಸ್ಕೂಲ್ ಹಾಲಿನಲ್ಲಿ ಸಭೆ ಸೇರಿತ್ತು. ಈ ಸಭೆಯಲ್ಲಿ ಸಬ್ ಡಿವಿಜನ್ ಆಫೀಸರಾದ ಮೆ॥ ವೈದ್ಯನಾಥೈಯರವರು ಅಗ್ರಾಸನವನ್ನು ವಹಿಸಿದ್ದರು. ಮುನ್ಸಿಫ್ ಮೆ॥ ಶೇಷಗಿರಿರಾಯರು, ಅಸ್ಪತ್ರೆ ಅಸಿಸ್ಟೆಂಟ್ ಸರ್ಜನ್ ಚಂಗಲರಾಯ ಮೊದಲಿಯಾರು, ಸಬ್ ರಿಜಿಸ್ಟ್ರಾರ್ ಮೆ॥ ರಾಮಸ್ವಾಮಿಶಾಸ್ತ್ರಿಗಳು ಮೊದಲಾದ ಸರ್ಕಾರಿ ನೌಕರರು, ಅಡ್ವೊಕೇಟ್ ಮತ್ತು ಲಾಯರುಗಳು ಗ್ರಾಮದ ಮುಖ್ಯ ಮುಖ್ಯ ಜನರು ವರ್ತಕರು ಮೊದಲಾದವರು ಸುಮಾರು ೬೦—೭೦ ಜನರವರೆಗೂ ಸೇರಿದ್ದರು. ಸಭೆಯು ಸೇರಿದ ಕೂಡಲೆ ಪ್ರೋಗ್ರಾಮ್ ಅನುಸರಿಸಿ, ಮೊದಲು ವಿದ್ಯಾರ್ಥಿನೀಯರು ದೇವತಾ ಸ್ತುತಿಯನ್ನು ಮಾಡಿದರು ನಂತರ ೪ನೇ ತರಗತಿಯ ಇಬ್ಬರು ಹುಡುಗಿಯರು ವ್ಯಾಕರಣ ಶಾಸ್ತ್ರದಲ್ಲಿ ಪ್ರಾರಂಭದಿಂದ ಕೊನೇವರಿಗು ಪ್ರಶ್ನೋತ್ತರಗಳನ್ನು ಮಾಡಿದರು. ೩ನೇ ತರಗತಿಯ ಇಬ್ಬರು ಹುಡುಗಿಯರು ಪದ್ಯಕಾವ್ಯದಲ್ಲಿ ಪ್ರಶ್ನೋತ್ತರಗಳನ್ನು ಮಾಡಿದರು. ೧ನೇ ತರಗತಿಯವರು ನವೀನವಾದ ಎರಡು ಹಾಡುಗಳನ್ನು ಹೇಳಿದರು. ಇದಾದ ಕೂಡಲೆ ಈ ಸ್ಕೂಲ್ ಆನರರಿ ಸೆಕ್ರೆಟರಿಯವರು ಸ್ಕೂಲ್ ರಿಪೋರ್ಟನ್ನು ಸಭಿಕರ ಮುಂದೆ ನಿಧಾನವಾಗಿ ಓದಿ ಹೇಳಿದರು. ಅನಂತರ ಅಗ್ರಾಸನಾಧಿಪತಿಗಳು ಎದ್ದು ನಿಂತು, ಸಭಿಕರನ್ನು ಕುರಿತು—ಈ ಸ್ಕೂಲ್ ಇಂದಿನ ಪ್ಲೇಗ್ ಕಾಲದಲ್ಲಿಯೂ ಉತ್ತಮಸ್ಥಿತಿಯಲ್ಲಿ ಇದೆ ಇದಕ್ಕೆ ೧೯೦೩—೧೯೦೪ ಈ ಎರಡು ಸಾಲ್‌ಗಳಲ್ಲಿಯೂ ವಿದ್ಯಾರ್ಥಿನಿಯರುಗಳು ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿ ತೇರ್ಗಡೆಯಾಗಿರುವದೇ ದೃಷ್ಟಾಂತವಾಗಿದೆ ಎಂದು ಅಪ್ಪಣೆಕೊಡಿಸಿದರು. ಈ ಸ್ಕೂಲ್ ಕಮಿಟಿ ಮೆಂಬರಾದ ಪ್ಲೀಡರ್ ಮೆ॥ ವೆಂಕಟಸುಬ್ಬಯ್ಯನವರು ಸಭಿಕರನ್ನೂ ಸಭಾಧ್ಯಕ್ಷರನ್ನೂ ಕುರಿತು—ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಪ್ಯಾಸ್ ಮಾಡಿ ಬಂದಿರುವ ಸರಸಮ್ಮನವರು ಈ ಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿ ಪಾಠ ಹೇಳುತ್ತಾ ಇರುವದರಿಂದಲೂ ಇತರ ಎಲ್ಲಾ ಮಾಸ್ಟರುಗಳೂ ಅತ್ಯಂತ ವಿಶ್ವಾಸದೊಡನೆ ಇವರಿಗೆ ತುಂಬಾ ಸಹಾಯ ಮಾಡುತ್ತಾ ಇರುವದರಿಂದಲೂ ಈ ಸ್ಕೂಲು ಇಷ್ಟು ಉತ್ತಮಸ್ಥಿತಿಗೆ ಬರಲು ಕಾರಣವಾಗಿದೆ ಎಂದು ಅಪ್ಪಣೆಕೊಡಿಸಿದರು ಅನಂತರ ಅಗ್ರಾಸನಾಧಿಪತಿಗಳ ಮುಂದೆ ಇರಿಸಲ್ಪಟ್ಟಿದ್ದ ಡೆಪ್ಯುಟಿ ಇನ್ಸ್ಪೆಕ್ಟರವರ ಆಫೀಸಿನಿಂದ ದಯಪಾಲಿಸಿದ್ದ ಇನಾಂ ಪುಸ್ತಕಗಳು, ಈ ಊರಿನ ದೊಡ್ಡಮನುಷ್ಯರು ಈ ವಿದ್ಯಾರ್ಥಿನಿಯರಿಗೆ ಬಹುಮಾನ ಕೊಡುವದಕ್ಕಾಗಿ ದಯಪಾಲಿಸಿದ್ದ ಚಂದಾ ಮೊಬಲಗು ತೊಂಬತ್ತೈದುವರೆ ರೂಪಾಯಿಗೆ ತಕ್ಕಷ್ಟು ಆಟದ ಸಾಮಾನುಗಳು ಮತ್ತು ಪುಸ್ತಕಗಳು, ಇತರ ದೊಡ್ಡಮನುಷ್ಯರು ದಯಪಾಲಿಸಿದ್ದ ಪುಸ್ತಕಗಳು, ಲೋಕಲ್ ಯಾಗ್ಜಾಮಿನೇಷನ್ ಮ್ಯಾನೇಜರವರ ಆಫೀಸಿನಿಂದ ಬಂದಿರಾಗಿದ್ದ ಸರಟಿಫಿಕೇಟ್, ಇವುಗಳನ್ನು ಅಗ್ರಾಸನಾಧಿಪತಿಗಳು ನಂಬರುವಾರಾಗಿ ಎಲ್ಲಾ ವಿದ್ಯಾರ್ಥಿನಿಯರಿಗು ಹಂಚಿದ ಕೂಡಲೆ ಈ ಸ್ಕೂಲ್ ಕಮಿಟಿ ಪ್ರೆಸಿಡೆಂಟರಾದ ಮುನ್ಸಿಫ್ ಮೆ॥ ಶೇಷಗಿರಿ ರಾಯರು—ತಾವು ಈ ದಿವಸ ಅಗ್ರಾಸನವನ್ನು ವಹಿಸಿದ್ದಕ್ಕಾಗಿ ನಾವುಗಳೆಲ್ಲ ಬಹಳ ಸಂತೋಷಪಡುತ್ತೇವೆ ಎಂದು ಅಪ್ಪಣೆಕೊಡಿಸಿದರು ತಕ್ಷಣ ವಿದ್ಯಾರ್ಥಿನಿಯರು ಮಂಗಳಕರವಾದ ಹಾಡನ್ನು ಹಾಡಿದರು. ಆ ಮೇಲೆ ಈ ಸಭೆಯಲ್ಲಿ ನೆರೆದಿದ್ದ ವಿಶಿಷ್ಟರಿಗೂ ಹೂವು ಗಂಧ ಯಲೆ ಅಡಕೆಗಳನ್ನು ಹಂಚಿದರು ಆರುವರೆ ಗಂಟೆಗೆ ಸಭೆಯು ಬರಖಾಸ್ತಾಯಿತು

ರಷ್ಯಾ ಜಪಾನ್ ಯುದ್ಧವು

ಕಳೆದ ಎರಡು ವಾರಗಳ ಮುಖ್ಯ ತಂತೀವರ್ತಮಾನಗಳು

ಪೋರ್ಟ್ ಆರ್ಥರ್ ಮುತ್ತಿಗೆ.

ಲಂಡನ್, ಡಿಸೆಂಬರ್ ೧೯.—ಪೋರ್ಟ್ ಆರ್ಥರನ್ನು ಕಾಪಾಡಿಕೊಳ್ಳುತ್ತಿರುವ ರಷ್ಯಾ ಜನರಲ್ ಸ್ಟೋಯಸೆಲ ರವರು ನವಂಬರ್ ೨೦ ರಿಂದ ಡಿಸೆಂಬರ್ ೨೮ ರ ವರಕ ನಡೆದ ಯುದ್ಧಗಳ ವಿವರವನ್ನು ರಿಪೋರ್ಟು ಮಾಡಿದಾರೆ ಈ ಯುದ್ಧಗಳಲ್ಲಿ ಜಪಾನರವರ ಕಡೆ ಕಡೇ ಪಕ್ಷ ೧೦,೦೦೦ ಸೈನ್ಯ ನಾಶವಾಯಿತು ಎಂದು ವರ್ತಮಾನಗಳು ತಿಳಿಸಿರುವರು. ವಿಕ್ಟರ್ ಹಿಲ್ ಎಂಬ ಗಡ್ಡ ಜಪಾನರವರ ಸ್ವಾಧೀನವಾಯಿತು; ರಷ್ಯಾ ಜನರಲ್ ಕಂಡ್ರ ಟೆಂಕೊ ವರು ಮೃತಪಟ್ಟರು. ಜಪಾನರವರ ಫಿರಂಗಿ ಪಟುವ ದೆಸೆಯಿಂದ ರಷ್ಯಾದವರ ಹಡಗುಗಳು ನಷ್ಟಪಡುತ್ತಿವೆ. ಆದರೆ ಕೋಟೆಯೊಳಗಿರುವ ರಷ್ಯಾ ಸೈನ್ಯವು ಬಹಳ ಧೈರ್ಯದಿಂದ ಕಾದಾಡುತ್ತಿರುವುದು ಎಂದು ಬರೆದಿದಾರೆ.

ಜಪಾನರವರ ಜಯ

ಕೀಕ್ವಾನ್ ಪೂರ್ವಕ್ಕಿರುವ ಉತ್ತರ ಕೋಟೆಯನ್ನು ಜಪಾನರವರು ಹಲ್ಲಾ ಹತ್ತಿ ಗೆದ್ದುಕೊಂಡರು ಈ ಯುದ್ಧದಲ್ಲಿ ಜಪಾನರವರಿಗೆ ೧೩ ಫಿರಂಗಿಗಳೂ ಬಹಳ ಮದ್ದು ಗುಂಡೂ ಸಿಕ್ಕಿದವು. ೩೦ ರಷ್ಯಾ ಹೆಣಗಳು ಬಿದ್ದವು. ಜಪಾನರವರ ಕಡೆ ೨೦ ಮಂದಿ ಹುದ್ದೇದಾರರು ಕೊಲ್ಲಲ್ಪಟ್ಟರು, ೪೪ ಮಂದಿಗೆ ಗಾಯಗಳಾದವು.

ಲಂಡನ್, ಡಿಸೆಂಬರ್ ೩೧—ಜಪಾನರವರು ಪೋರ್ಟ್ ಆರ್ಥರ್ ಸುತ್ತಲೂ ಇರುವ ೬ ಕೋಟೆಗಳ ಪೈಕಿ ೫ ಕೋಟೆಗಳನ್ನು ಗೆದ್ದುಕೊಂಡಿದಾರೆ. ರಷ್ಯಾ ಸೈನಿಕರಿಗಾಗಿ ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಕಿಂಗ್ ಆರ್ಥರೆಂಬ ಹಡಗನ್ನು ಜಪಾನರು ಹಡೆದು ಸ್ವಾಧೀನಪಡಿಸಿಕೊಂಡರು.

ಜಪಾನ್ ಹಡಗುಗಳು.

ಲಂಡನ್, ಡಿಸೆಂಬರ್ ೨೨.—ಪೋರ್ಟ್ ಆರ್ಥರಿನ ಮುತ್ತಿಗೆಯನ್ನು ಬಿಡಿಸಿಕೊಳ್ಳುವುದಕ್ಕೆ ರಷ್ಯಾದಿಂದ ಬರುತ್ತಿರುವ ಬಾಲ್ಟಿಕ್ ಕಡಲಿನ ನಾವೆಯನ್ನು ಅರ್ಧದಾರಿಯಲ್ಲೇ ತಡೆದು ಯುದ್ಧ ಮಾಡುವ ಉದ್ದೇಶದಿಂದ ಜಪಾನರವರು ತಮ್ಮ ೧೯ ಯುದ್ಧದ ಹಡಗುಗಳನ್ನು ಸಿದ್ಧಪಡಿಸಿ ಕಳುಹಿಸಿದಾರೆ.

ಲಂಡನ್, ಡಿಸೆಂಬರ್ ೨೪.—ಪೋರ್ಟ್ ಆರ್ಥರ್ ಬಳಿ ಇರುವ ಇನ್ನೊಂದು ಪ್ರಾಮುಖ್ಯವಾದ ಸ್ಥಳವನ್ನು ಜಪಾನರು ಗೆದ್ದುಕೊಂಡರು ಅಲ್ಲೇ ರಷ್ಯಾದವರ ಒಂದು ಫಿರಂಗಿಯೂ ದೊರಕಿತು.

ಬಾಯಿಯುದ್ಧವು.

ಶಾಹೋ ನದಿಯ ದಡಗಳ ಮೇಲೆ ಶತ್ರುಗಳ ಸೈನ್ಯಗಳು ಎದುರು ಬದುರಾಗಿ ನಿಂತಿವೆ. ರಾತ್ರಿ ಹೊತ್ತು ಸಣ್ಣ ಕದನಗಳು ನಡೆಯುತ್ತಲೇ ಇವೆ. ಫಿರಂಗಿ ಗುಂಡುಗಳ ಹಬ್ಬ ನಿಂತಿಲ್ಲ. ರಷ್ಯಾದವರು ಲಾಮಟನ್ ಎಂಬ ರಾಜ್ಯಕ್ಕೆ ಮುತ್ತಿಗೆ ಹಾಕಿ, ತುಂಬಾ ನಷ್ಟಪಟ್ಟು ಸೋತು ಹಿಮ್ಮೆಟ್ಟಿದರು.

ಪೋರ್ಟ್ ಆರ್ಥರ್ ಮುತ್ತಿಗೆ.

ಲಂಡನ್, ಡಿಸೆಂಬರ್ ೨೪—ಜಪಾನರವರು ಕೊಯಾಂಗ್ ಷುಶು ಎಂಬ ರಾಜ್ಯವನ್ನು ಹಲ್ಲಾಹತ್ತಿ ಯುದ್ಧ ಮಾಡಿ ಗೆದ್ದುಕೊಂಡರು. ಇದರಲ್ಲಿ ಮೂರು ಮಂದಿ ರಷ್ಯಾ ಆಫೀಸರ್‌ಗಳು ಕೊಲ್ಲಲ್ಪಟ್ಟರು. ಎರಡು ಕಡೆಗಳಲ್ಲೂ ತುಂಬಾ ನಷ್ಟವಾಗಿದೆ.

ರಷ್ಯಾದವರು ಕೋಟೆಯನ್ನು ಒಪ್ಪಿಸುವ ಮಾತು

ಪೋರ್ಟ್ ಆರ್ಥರ್ ಕೋಟೆಯನ್ನು ಒಪ್ಪಿಸಿ, ಒಳಗಿರುವ ಸೈನಿಕರೆಲ್ಲಾ ಶರಣಾಗತರಾಗುವದಾಗಿಯೂ, ಸೈನಿಕರನ್ನೂ ಹಡಗುಗಳನ್ನೂ ವಾಪಸು ರಷ್ಯಾದವರಿಗೆ ಕೊಡಬೇಕೆಂತಲೂ ರಷ್ಯಾ ಜನರಲ್‌ರವರು ಜಪಾನರವರಿಗೆ ಹೇಳಿ ಕಳುಹಿಸಿದರು. ಅದಕ್ಕೆ ಜಪಾನರವರು ಒಪ್ಪಲಿಲ್ಲ.

ರಷ್ಯಾ ಮದ್ದುಗುಂಡನ್ನು ಜಪಾನಿಯರು ಹಿಡಿದರು.

ಲಂಡನ್, ಡಿಸೆಂಬರ್ ೨೬—ರಷ್ಯಾದವರು ಬಹಳ ಮದ್ದುಗುಂಡನ್ನೂ ತೋಟಾಗಳನ್ನೂ ಭರ್ತಿಮಾಡಿ, ಚೀನಾ ಮಾರ್ಗವಾಗಿ ಕಳುಹಿಸಿದ್ದದನ್ನು ಫಂಗ್ ಕಾಚು ಎಂಬಲ್ಲಿ ಜಪಾನಿಯರು ಹಿಡಿದು ಸ್ವಾಧೀನಪಡಿಸಿಕೊಂಡರು ಇದನ್ನೆಲ್ಲಾ ವಾಪಸು ಕೊಡಬೇಕೆಂದು ರಷ್ಯಾದವರು ಬಹಳ ಒತ್ತಾಯವಾಗಿ ಹೇಳಿ ಕಳುಹಿಸಿದಾರೆ.

ಪೋರ್ಟ್ ಆರ್ಥರ್ ಮುತ್ತಿಗೆ

ಲಂಡನ್, ಡಿಸೆಂಬರ್ ೨೯—ಜಪಾನರವರ ಕಡೆ ೫೦ ಹುದ್ದೇದಾರರು ಕೊಲ್ಲಲ್ಪಟ್ಟರೆಂತಲೂ, ೧೪೦ ಮಂದಿಗೆ ಗಾಯಗಳಾದವೆಂತಲೂ ಟೋಕಿಯೋದಿಂದ ಸಮಾಚಾರ ಬಂದಿದೆ. ಯಾವ ಯುದ್ಧದಲ್ಲಿ ಯಾವಾಗ ಈ ನಷ್ಟ ಉಂಟಾಯಿತೋ ತಿಳಿಯಲಿಲ್ಲ

ರಷ್ಯಾ ಜನರಲ್ ಸ್ಟೋಯಸೆಲ್ ಯವರು ಕುದುರೆಯಿಂದ ಬಿದ್ದು ಗಾಯಪಟ್ಟರು ಜನರಲ್ ಸನಿನ್ ಕಾಫ್ ಯವರಿಗೆ ಗುಂಡು ತಗಲಿ ಗಾಯವಾಗಿದೆ.

ಜಪಾನರವರ ಜಯಪ್ರದ

ಲಂಡನ್, ಡಿಸೆಂಬರ್ ೨೯.—ಬುಧವಾರ ಜಪಾನರವರು ರಿಡೌಟ್ ಲಂಗ್‌ವಾನ್ ಎಂಬ ಭಾರೀ ಕೋಟೆಗೆ ಬೆಳಿಗ್ಗೆ ೧೦ ಗಂಟೆಗೆ ಮುತ್ತಿಗೆ ಹಾಕಿ ಬಹು ಘೋರಂಕರವಾಗಿ ಯುದ್ಧಮಾಡಿ, ಸಾಯಂಕಾಲ ೬ ಗಂಟೆಗೆ ಅದನ್ನು ಸ್ವಾಧೀನಪಡಿಸಿಕೊಂಡಿದಾರೆ. ಈ ಯುದ್ಧದಲ್ಲಿ ಜಪಾನರವರ ಕಡೆ ೪೯ ಮಂದಿ ಹುದ್ದೇದಾರರು ಹತರಾದರು; ೫೯ ಜನರು ಗಾಯಪಟ್ಟರು. ಸೈನಿಕರು ಲೆಕ್ಕವಿಲ್ಲದಷ್ಟು ಮೃತಪಟ್ಟರು. ರಷ್ಯಾದವರ ಕಡೆ ೩೦೦ ಮಂದಿ ನಷ್ಟಪಟ್ಟರು. ಇದು ಭಾರೀ ಕೋಟೆ, ಬಹು ಪ್ರಾಮುಖ್ಯವಾದದ್ದು ಮದ್ದು ಗುಂಡು ೪೩ ಫಿರಂಗಿಗಳು ಅಪಾರವಾಗಿ ಜಪಾನರವರಿಗೆ ಸಿಕ್ಕಿದವು.

ಇನ್ನೊಂದು ಜಯಪ್ರದ.

ಲಂಡನ್, ಡಿಸೆಂಬರ್ ೩೦—ಪೋರ್ಟ್ ಆರ್ಥರಿನಲ್ಲಿ ಸ್ಯೂಟಿಕ್ ಎಂಬ ಭಾಗವೆಲ್ಲಾ ಜಪಾನ್ ಫಿರಂಗಿಗಳ ದೆಸೆಯಿಂದ ನಾಶವಾದ ಕಾರಣ ರಷ್ಯಾದವರು ಆ ಭಾಗವನ್ನು ಬಿಟ್ಟುಬಿಟ್ಟರು. ಆದರೆ ಜಪಾನರವರು ಆ ಭಾಗವನ್ನು ಆಕ್ರಮಿಸಿಕೊಳ್ಳುವದಕ್ಕೆ ಅಲ್ಲಿ ರಷ್ಯಾದವರು ಭೂಮಿಯಲ್ಲಿ ಡೈನಮೈಟ್ ಇಟ್ಟಿರಬೇಕೆಂದು ಊಹಿಸಿ ಹಿಂತೆಗೆಯುತ್ತಿದಾರೆ.

ಲಂಡನ್, ಜನವರಿ ೧.—ಜಪಾನರವರು ವಿರಾಮವಿಲ್ಲದೆ ಫಿರಂಗಿಗಳನ್ನು ಎತ್ತಿ ಕಟ್ಟಿ ಹೊಡೆದು ಹಲ್ಲಾ ಹತ್ತಿ ಸಂಸೂಪಾನ್ ಎಂಬ ಇನ್ನೊಂದು ಕೋಟೆಯನ್ನು ಗೆದ್ದುಕೊಂಡರು ರಷ್ಯಾದವರು ಡೈನಮೈಟನ್ನು ಜಾರಿಸಿದ್ದರಲ್ಲಿ ಅವರ ಕಡೆ ಸೈನಿಕರೇ ಕೋಟೆ ಗೋಡೆಗಳ ಕೆಳಗೆ ಸಿಕ್ಕಿಕೊಂಡರು. ಜಪಾನರವರು ಅವರನ್ನೆಲ್ಲಾ ಎತ್ತಿ ಬದುಕಿಸಿದರು. ಉಳಿದವರೆಲ್ಲಾ ಹಿಮ್ಮೆಟ್ಟಿ ಹೋದರು ಕೆಲವು ಫಿರಂಗಿಗಳು ಸಿಕ್ಕಿದವು; ಜಪಾನರವರಿಗೆ ತುಂಬಾ ನಷ್ಟವಾಗಲಿಲ್ಲ. ಪೋರ್ಟ್ ಆರ್ಥರ್ ಕೋಟೆಯು ತುಂಬಾ ದುರ್ಬಲ ಸ್ಥಿತಿಗೆ ಬಂದಿದೆ,

ಜಪಾನವರು ಈ ದಿನ ಎಟ್ ಕೋಟೆ, ಪ್ಯಾನ್ ಲಂಘನ್ ಕೋಟೆ, ಹೌಸಾನ್ ಗಾರ್ಟನ್ ಪ್ರೋಗೆ ದಕ್ಷಿಣದಲ್ಲಿರುವ ಕೋಟೆ, ಈ ಸ್ಥಾನ್ಯಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡರು

ನಿಜವಾದ ನಂಬಿಕೆ, ಕುರುಡು ನಂಬಿಕೆ.

ನಂಬಿಕೆಯಿಲ್ಲದೆ ಭೂಲೋಕದಲ್ಲಿ ಬದುಕುವುದಕ್ಕೇ ಆಗುವದಿಲ್ಲ ಇದೇಕಿರಬಹುದು? ಎಂದು ತಿರಸ್ಕರಿಸಬೇಡಿರಿ. ಸಾವಧಾನವಾಗಿ ಆಲೋಚಿಸಿದರೆ ಈ ಮಾತು ಲೋಕ ವ್ಯವಹಾರದ ಪ್ರತಿಯೊಂದು ವಿಷಯದಲ್ಲಿಯೂ ಸತ್ಯವೆಂದು ಮನಸ್ಸಿಗೆ ತಿಳಿಯದಿರದು. ವ್ಯಾಪಾರದಲ್ಲಾಗಲಿ ವಿದ್ಯಾಭಿವೃದ್ಧಿಯಲ್ಲಾಗಲಿ ನಂಬಿಕೆಯ ಸಹಾಯವಿಲ್ಲದೆ ಒಂದು ಕ್ಷಣವಾದರೂ ಭೂಲೋಕದಲ್ಲಿ ಜೀವಿಸುವದಕ್ಕಾಗದೆಂದು ಗೊತ್ತಾಗದಿರಲಾರದು.

ಹೊಸದಾಗಿ ಹುಟ್ಟಿದ ಕೂಸಿಗೆ ಕೆಲವು ತಿಂಗಳಲ್ಲಿ ಬುದ್ಧಿ ಬಂದ ಕೂಡಲೆ ತನ್ನ ದೇಹ ಸಂರಕ್ಷಣೆಯ ವಿಷಯದಲ್ಲಿ ತಂದೆತಾಯಿಗಳೆಂಬುವರ ಬಲವೇ ತನಗೆ ಆಶ್ರಯವೆಂದು ಅದು ಸ್ವಭಾವವಾಗಿ ತಿಳಿದುಕೊಳ್ಳುತ್ತದೆ. ಈ ತಿಳುವಳಿಕೆಯ ಜೊತೆಯಲ್ಲೇ ಅದಕ್ಕೆ ನಂಬಿಕೆಯೂ ಬಲಪಡುತ್ತಾ ಹೋಗುತ್ತದೆ ಆ ತಂದೆತಾಯಿಗಳಿಗೆ ತನಗಿಂತ ಹೆಚ್ಚಾದ ಬುದ್ಧಿಯುಂಟೆಂದೂ, ತನ್ನ ಬಲಕ್ಕಿಂತ ಅವರ ಬಲವು ಹೆಚ್ಚೆಂದೂ ಪ್ರತ್ಯಕ್ಷವಾಗಿ ತಿಳುವಳಿಕೆಗೆ ಬಂದ ಹಾಗೆಲ್ಲಾ, ಅವರು ಪ್ರೀತಿಯಿಂದ ಪ್ರೇರಿತರಾಗಿಯೇ ತನ್ನನ್ನು ಕಾಪಾಡುತ್ತಾರೆಂದು ತಿಳಿದುಕೊಳ್ಳುತ್ತದೆ. ಮತ್ತು ಅವರು ಹೇಳಿದ ಹಾಗೆ ತಾನು ನಡಕೊಳ್ಳುವದರಿಂದಲೇ ತನಗೆ ಸಕಲ ವಿಷಯದಲ್ಲೂ ಸೌಖ್ಯವುಂಟೆಂದು ನಂಬಿ, ಹಾಗೇ ನಡೆದುಕೊಳ್ಳುತ್ತದೆ ಆದರೆ ಇಷ್ಟರ ಮಟ್ಟಿಗೂ ಮಗುವು ತಂದೆತಾಯಿಗಳ ವಿಷಯದಲ್ಲಿ ಆಲೋಚಿಸುತ್ತದೆಯೇ? ಎಂಬ ಆಕ್ಷೇಪಣೆಯು ಬರುವದು. ಆ ಮಗುವು ಇಷ್ಟೆಲ್ಲಾ ಆಲೋಚಿಸುತ್ತದೆಯೆಂದು ನಾವು ಹೇಳಲಾರೆವು ಆದರೆ ಅದರ ನಡವಳಿಕೆಯೆಲ್ಲಾ ನಂಬಿಕೆಯ ಆಧಾರದಿಂದಲೇ ನಡೆಯುತ್ತದೆಂದು ಸುಲಭವಾಗಿ ತಿಳಿದುಬರುವದು ಈ ನಂಬಿಕೆಯು ಅದಕ್ಕೆ ಸ್ವಭಾವವಾಗಿದೆಯಾದಕಾರಣ ಅದು ಈ ಕಾರ್ಯಗಳನ್ನು ಕ್ಷಣಮಾತ್ರವಾದರೂ ಆಲೋಚಿಸದೆ ನಡಸುತ್ತದೆ ತರುವಾಯ ಮಗುವು ಬಾಲಕನಾದಾಗ್ಗೆ ತಂದೆತಾಯಿಗಳ ಪ್ರೀತಿಯಲ್ಲಿ ಸಂಪೂರ್ಣವಾಗಿ ನಂಬಿಕೆಯಿರುವದರಿಂದ ಅವರು ಯಾವದನ್ನು ಹೇಳಿದರೂ ಅವನು ನಂಬುತ್ತಾನೆ. ಅವರು ಯಾವ ಆಜ್ಞೆಯನ್ನು ಕೊಟ್ಟರೂ ಅದು ಒಳ್ಳೇಯದೆಂದೇ ನಂಬಿ, ನಡೆದುಕೊಳ್ಳುತ್ತಾನೆ ಹೀಗೆ ಪ್ರಾರಂಭದಲ್ಲಿ ನಂಬಿಕೆಯನ್ನು ಅಭ್ಯಾಸಕ್ಕೆ ತರುವದರಿಂದ ಅಧಿಕಾರಕ್ಕೆ ಒಳಗಾಗಿ ನಡೆಯತಕ್ಕ ವಿಧೇಯತ್ವವೆಂಬ ಪ್ರಥಮ ಫಲವು ಕಾಣಿಸಿಕೊಳ್ಳುತ್ತದೆ

ಬಾಲಕನು ಪಾಠಶಾಲೆಗೆ ಹೋಗಿ ಉಪಾಧ್ಯಾಯರ ಬಳಿಯಲ್ಲಿ ಪಾಠ ಹೇಳಿಸಿಕೊಳ್ಳುವುದೂ ಈ ನಂಬಿಕೆಯಿಂದಲೇ ಉಪಾಧ್ಯಾಯರು ಹೇಳುವುದು ನಿಜವೆಂದು ಆ ಬಾಲಕನು ನಂಬದಿದ್ದರೆ ಅವನು ಏನನ್ನಾದರೂ ಕಲಿಯಲಾಗುವದೇ ಹೀಗೇ ದೊಡ್ಡವನಾಗಿ ಬೆಳೆದು, ಸಾಧಾರಣ ಪಾಠಗಳ ಅಭ್ಯಾಸವನ್ನು ಬಿಟ್ಟು, ಕಠಿಣವಾದ ಶಾಸ್ತ್ರಾಭ್ಯಾಸವನ್ನು ಆರಂಭಿಸುವಾಗಲೂ ಅಲ್ಲಿ, ಗುರುಗಳಾದವರು ಯಾವ ಯಾವ ಸಂಗತಿಗಳನ್ನು ಹೇಳುವರೋ ಅವೆಲ್ಲವೂ ನಿಜವೆಂತಲೆ ನಂಬಿ, ವಿಷಯಜ್ಞಾನವನ್ನು ಹೊಂದುತ್ತಾನೆ ಪುಸ್ತಕಗಳನ್ನು ಓದುವಾಗ ಆಯಾ ಪುಸ್ತಕಗಳನ್ನು ಬರೆದವರಲ್ಲಿ ತನಗೆ ನಂಬಿಕೆಯಿರುವದರಿಂದಲೇ ಅವರು ಹೇಳುವದನ್ನು ಒಪ್ಪುತ್ತಾನೆ.

ಈ ಪ್ರಕಾರ ನಂಬಿಕೆಯು ಮನುಷ್ಯನಿಗೆ ಸ್ವಭಾವವಾಗಿರುವದಲ್ಲದೆ ಆ ನಂಬಿಕೆಗೆ ವಿಷಯವಾದ ಯಾವದಾದರೂ ಒಂದು ವಸ್ತು ಇದ್ದೇ ಇರುತ್ತದೆಂದೂ, ಅಂಥಾ ವಸ್ತುವು ಒಬ್ಬ ಪುರುಷನೇ ಆಗಿರಬೇಕೆಂತಲೂ ತಿಳಿದುಕೊಳ್ಳುತ್ತೇವಷ್ಟೆ. ನಂಬಿಕೆಯು ಮನುಷ್ಯನಿಗೆ ಎಷ್ಟು ಸ್ವಭಾವವಾಗಿದೆಯೆಂದರೆ—ನಾವು ಮೇಲೆ ಸೂಚಿಸಿರುವಂತೆ ತಾನು ನಡೆಯುವುದೂ ಜೀವಿಸುವುದೂ ನಂಬಿಕೆಯಿಂದಲೆ ಎಂಬ ವಿಷಯವನ್ನು ಅವನು ಆಲೋಚಿಸುವನೋ? ಇಲ್ಲ. ಇದಕ್ಕೊಂದು ದೃಷ್ಟಾಂತವನ್ನು ಕೇಳಿ, ಹೇಳುತ್ತೇವೆ. ನೀವು ಮದ್ರಾಸಿಗೆ ಹೋಗಬೇಕೆಂದು ಇಟ್ಟುಕೊಳ್ಳಿರಿ. ರೇಲ್ವೆ ಸ್ಟೇಷನಿಗೆ ಹೋಗಿ ಹಣವನ್ನು ಕೊಟ್ಟು ಒಂದು ಟಿಕೇಟು ತೆಗೆದುಕೊಳ್ಳುತ್ತೀರಿ. ಆಮೇಲೆ ಅಲ್ಲಿರುವವರು ನಿಮ್ಮನ್ನು ಒಂದು ಬಂಡಿಯಲ್ಲಿ ಕುಳ್ಳಿರಿಸುತ್ತಾರೆ ನೀವು ಎಷ್ಟುಮಾತ್ರವೂ ಸಂಶಯಪಡದೆ ಅದರಲ್ಲಿ ಕೂತುಕೊಳ್ಳುತ್ತೀರಿ. ಸಂಶಯವೆಂಬ ಮಾತೇ ನಿಮ್ಮ ಮನಸ್ಸಿಗೆ ಬರುವದಿಲ್ಲ ನಿಮ್ಮಲ್ಲಿ ನಂಬಿಕೆಯು ಸ್ಥಿರಪಟ್ಟಿರುವದರಿಂದ ಆ ಗಾಡಿಯಲ್ಲಿ ಕುಳಿತುಕೊಳ್ಳುವಾಗ್ಗೆ ಇದು ನನ್ನನ್ನು ಮದ್ರಾಸಿಗೆ ತೆಗೆದುಕೊಂಡು ಹೋಗಿ ಬಿಡುವದೇ, ಬಿಡಲಾರದೇ ಎಂಬ ಯೋಚನೆಯೇ ಬರುವದಿಲ್ಲ. ಆ ಗಾಡಿಯನ್ನು ನಡಿಸುವವನ ಸಾಮರ್ಥ್ಯದಲ್ಲಿ ಸಂಪೂರ್ಣವಾಗಿ ನಂಬಿ, ನಿಮ್ಮನ್ನೂ ನಿಮ್ಮ ಪ್ರಾಣವನ್ನೂ ಅವನ ವಶಕ್ಕೆ ಒಪ್ಪಿಸಿಬಿಡುತ್ತೀರಿ ಇನ್ನೂ ಒಂದು ದೃಷ್ಟಾಂತವನ್ನು ಕೇಳಿರಿ. ನಿಮಗೇನಾದರೊಂದು ಅಸ್ವಸ್ಥವುಂಟಾದರೆ ನೀವು ನಿಮ್ಮನ್ನು ವೈದ್ಯನ ವಶಕ್ಕೆ ಒಪ್ಪಿಸುವುದು ಯಾತರಿಂದ? ನಂಬಿಕೆಯಿಂದಲ್ಲವೇ? ಶಸ್ತ್ರವೈದ್ಯನು ರೋಗಿಯ ಅಂಗಗಳಲ್ಲೊಂದನ್ನು ಕೊಯಿದುಹಾಕಬೇಕಾದರೆ ಮೊದಲು ಅವನಿಗೆ ಒಂದು ವಿಧವಾದ ಔಷಧವನ್ನು ಮೂಸಿನೋಡಿಸಿ, ಸ್ಮರಣೆಯನ್ನು ತಪ್ಪಿಸುತ್ತಾನಲ್ಲವೇ? ಹಾಗೆ ಮಾಡಿಸಿಕೊಳ್ಳುವದಕ್ಕೆ ರೋಗಿಯು ಆ ವೈದ್ಯನಿಗೆ ತನ್ನನ್ನು ಒಪ್ಪಿಸಿಕೊಡುವದು ನಂಬಿಕೆಯಿಂದಲ್ಲವೇ? ಹೌದು. ಪ್ರತಿ ನಿಮಿಷದಲ್ಲಿಯೂ ಪ್ರತಿ ದಿವಸದಲ್ಲಿಯೂ ನಾವು ಸುಖವಾಗಿ ಜೀವಿಸುವದಕ್ಕೂ ಇತರರೊಡನೆ ಸಹವಾಸಮಾಡಿಕೊಂಡಿರುವದಕ್ಕೂ ನಮ್ಮ ನಮ್ಮ ನಂಬಿಕೆಯೇ ಆಧಾರವಾಗಿರುತ್ತದೆ.

ನಾವು ಯಾರಲ್ಲಿ ನಂಬಿಕೆಯಿಡುತ್ತೇವೋ ಅವರು ಯಾವ ಕಾರ್ಯಗಳನ್ನು ಯಾವ ಕಾರಣಗಳಿಂದ ಮಾಡುತ್ತಾರೆಂಬುದನ್ನು ಸಂಪೂರ್ಣವಾಗಿ ತಿಳಿದುಕೊಳ್ಳದಿದ್ದರೆ ಅವರಲ್ಲಿ ನಮ್ಮ ನಂಬಿಕೆಯನ್ನಿಡುವದಕ್ಕಾಗುವದೇ ಹೊರತು ಬೇರೆ ವಿಧವಾಗಿ ಆಗುವದಿಲ್ಲವೆಂದು ಸಾಧಿಸಲು ಮಾರ್ಗವಿಲ್ಲ, ನಮಗಿಂತಲೂ ಬುದ್ಧಿವಂತರೂ ಬಲಿಷ್ಠರೂ ಆಗಿರುವವರು ಯಾರೆಂದು ಕಂಡುಹಿಡಿದು ಅವರಲ್ಲಿ ನಂಬಿಕೆಯನ್ನಿಡುವದು ಸಹಜವಾಗುವದೇ ಸರಿ. ಆದುದರಿಂದ ನಂಬಿಕೆಯು ಬುದ್ಧಿಪೂರ್ವಕವಾಗಿ ಮಾಡತಕ್ಕ ಒಂದು ಕಾರ್ಯವಾಗಿದೆಯಷ್ಟೆ. ಆದರೂ ಕೂಡ ನಮಗೆ ಇಂಥಿಂಥ ಕಾರ್ಯಗಳನ್ನು ಮಾಡಬೇಕೆಂದು ಆಜ್ಞೆ ಕೊಡುವವರು ಅಥವಾ ಬುದ್ಧಿ ಹೇಳುವವರು ಯಾತಕ್ಕೋಸ್ಕರ ಹೀಗೆ ಹೇಳುತ್ತಾರೆಂದು ಬುದ್ಧಿಯಿಂದ ಗ್ರಹಿಸಿ, ಅನಂತರ ಅವರಲ್ಲಿ ನಂಬಿಕೆಯಿಡಬೇಕೆಂಬ ಅವಶ್ಯವು ನಂಬಿಕೆಗೆ ಬೇಕಾಗಿರುವದಿಲ್ಲ. ರೈಲುಗಾಡಿ ನಡೆಸುವವನ ವಿಷಯದಲ್ಲಿ ನಾವು ಹೇಳಿರುವ ದೃಷ್ಟಾಂತದಿಂದಲೆ ನಮ್ಮ ಅಭಿಪ್ರಾಯವು ಪರಿಷ್ಕಾರವಾಗುವದು ಅವನು ಗಾಡಿಯನ್ನು ನಡಿಸುವ ರೀತಿಯು ನಮಗೆ ತಿಳಿಯದೆ ಹೋದರೂ ಅವನು ನಮ್ಮನ್ನು ಮದ್ರಾಸಿಗೋ ಮತ್ತಾವ ಸ್ಥಾನಕ್ಕೋ ನಡಸಿಕೊಂಡು ಹೋಗಿ ಸೇರಿಸುವನೆಂಬುದರಲ್ಲಿ ಸಂಶಯವೇನೂ ಇರಲಾರದಷ್ಟೆ

ಒಳ್ಳೇದು, ಇದೆಲ್ಲಾ ಒಪ್ಪತಕ್ಕದ್ದೇ ಸರಿ ಇತರರಲ್ಲಿ, ನಂಬಿಕೆಯಿಡದೆ ಬದುಕುವುದಕ್ಕೇ ಆಗುವದಿಲ್ಲ ತನ್ನ ಪ್ರಾಣದ ಮೇಲೂ ಭಯವನ್ನು ತೊರೆದು ಇತರರ ಕೈಯಲ್ಲಿ ನಮ್ಮನ್ನು ಒಪ್ಪಿಸಿಕೊಡುವಷ್ಟು ನಂಬಿಕೆಯೇ ಇರಬೇಕೆಂದರೂ ಆಕ್ಷೇಪವಿಲ್ಲ ಆದರೂ ಕೂಡ ಯಾರಲ್ಲಿ ನಂಬಿಕೆಯಿಡಬೇಕು, ಯಾರಲ್ಲಿಡಬಾರದು ಎಂಬುದನ್ನು ವಿಚಾರಿಸಿ ತಿಳಿಯದೆ ಕಣ್ಣುಮುಚ್ಚಿಕೊಂಡು ಇತರರ ವಶಕ್ಕೆ ನಮ್ಮ ಪ್ರಾಣವನ್ನು ವಶಮಾಡಿಕೊಡುವದು ಅವಿವೇಕವಲ್ಲವೇ? ರೈಲುಗಾಡಿಯನ್ನು ನಡಸುವವನಾದರೋ ತನ್ನ ವಶವರ್ತಿಗಳಾದವರನ್ನು ಅವರವರ ಸ್ವಸ್ಥಳಗಳಿಗೆ ಎಷ್ಟೋ ಸಾರಿ ಸುಖವಾಗಿ ಸೇರಿಸಿ ಬಂದಿರುತ್ತಾನೆ ಇದನ್ನು ತಿಳಿದಿರುವುದರಿಂದಲೆ ಅವನಲ್ಲಿ ನಮ್ಮ ನಂಬಿಕೆಯು ಬಲಪಟ್ಟಿರುತ್ತದೆ ಆದಕಾರಣ ಅವನಲ್ಲಿಟ್ಟಿರುವ ನಂಬಿಕೆಯು ಕುರುಡು ನಂಬಿಕೆಯಲ್ಲ, ದೇವರಲ್ಲಿಡಬೇಕಾದ ನಂಬಿಕೆಯು ಇಂತಿರುವದೋ? ಎಂದು ನೀವು ಪ್ರಶ್ನೆಮಾಡಬಹುದು

ಇದರಲ್ಲಿ ನಾವು ತಿಳಿಯಬೇಕಾದುದೇನೆಂದರೆ—ರೈಲುಗಾಡಿಯವನಲ್ಲಿಡತಕ್ಕ ನಂಬಿಕೆಗೂ ತಂದೆತಾಯಿಗಳಲ್ಲಿಡತಕ್ಕ ನಂಬಿಕೆಗೂ ವ್ಯತ್ಯಾಸವಿಲ್ಲವೇ? ಇತರ ತಂದೆತಾಯಿಗಳಲ್ಲಿ ಅವರ ಮಕ್ಕಳು ಇಟ್ಟಿರುವ ನಂಬಿಕೆಯನ್ನು ನೋಡಿ ನಾವು ನಮ್ಮ ತಂದೆತಾಯಿಗಳನ್ನು ನಂಬುತ್ತೇವೋ? ಅಥವಾ ಈ ನಂಬಿಕೆಯು ನಮ್ಮಲ್ಲಿ ಸ್ವಭಾವವಾಗಿ ಬರುತ್ತದೆಯೇ ಉಸಿರಾಡುವುದೂ ನಿದ್ದೆಮಾಡುವುದೂ ನಮ್ಮಲ್ಲಿ ಕೂಸುತನದ ಮೊದಲುಗೊಂಡು ದೇವದತ್ತವಾಗಿ ಬಂದಿರುವದು ಹೇಗೋ ಹಾಗೆಯೇ ದೇವರಲ್ಲಿಡತಕ್ಕ ನಿಜವಾದ ನಂಬಿಕೆಯು ದೇವರ ವರವಾಗಿ, ಸ್ವಭಾವವಾಗಿ, ನಮಗೆ ಲಭಿಸಿರುವಂಥಾದ್ದು ಇಂಥಿಂಥಾದ್ದನ್ನು ಮಾಡಬೇಡ ಎಂದು ನಮ್ಮ ತಂದೆತಾಯಿಗಳು ಹೇಳುವಾಗ ಅದರ ವಿಷಯದಲ್ಲಿ ಲವಲೇಶವಾದರೂ ಎದುರು ಮಾತನ್ನಾಡದೆ ನಾವು ನಡೆದುಕೊಳ್ಳುವದಕ್ಕೆ ಕಾರಣವೇನು ಎಂಬದಾಗಿ ಆಲೋಚಿಸಿದ್ದೂ ಇಲ್ಲವಷ್ಟೆ ಇದೀಗ ನಮಗೆ ಸ್ವಭಾವವಾಗಿ ದೇವರಿಂದ ಬಂದಿರುವ ನಂಬಿಕೆಯಿಂದುಂಟಾದ ಕಾರ್ಯವೆಂದು ತಿಳಿಯತಕ್ಕದ್ದು ಇದಕ್ಕೊಂದು ದೃಷ್ಟಾಂತವನ್ನು ಇಲ್ಲಿ ಕೊಡುತ್ತೇವೆ ಒಂದಾನೊಂದು ದಿನ ಒಬ್ಬ ಮನುಷ್ಯನು ಆಳವಾದ ಕೊಳದಲ್ಲಿ ಈಜುತ್ತಿದ್ದನು ನಾಲ್ಕೈದು ವಯಸ್ಸಿನ ಅವನ ಮಗನು ಕೊಳದ ತಡಿಯಲ್ಲಿ ನಿಂತು ನೋಡುತ್ತಿದ್ದನು. ಥಟ್ಟನೆ ತಂದೆಯು ಅವನನ್ನು ಕೂಗಿಕರೆದು—ಧುಮುಕು ಎಂದನು ಹುಡುಗನು ಆಳವಾದ ನೀರಿನಲ್ಲಿ ಧುಮುಕಿದರೆ ಮುಳುಗಿ ಸಾಯುವದುಂಟಲ್ಲಾ ಎಂದು ಅರ್ಧಕ್ಷಣ ಹಾಗೇ ನಿಂತಿದ್ದು, ಆಮೇಲೆ ತಂದೆಯನ್ನು ನೋಡಿ, ಏನೂ ಅನುಮಾನಪಡದೆ ಹಿಂದುಮುಂದು ನೋಡದೆ ಒಳಕ್ಕೆ ಧುಮುಕಿದನು ಇದೀಗ ನಿಜವಾದ ನಂಬಿಕೆಯ ಕಾರ್ಯ. ತಂದೆಯಾದರೋ ಮಗನು ಧುಮುಕಿದ ಸ್ಥಳಕ್ಕೆ ಈಜಿಕೊಂಡು ಬಂದು ಮಗನನ್ನು ಎತ್ತಿಕೊಂಡು ಹೋದನು ಇದೀಗ ನಂಬಿಕೆಯ ಫಲ.

(ಸಶೇಷ)

ಇಂಡಿಯಾ ದೇಶದ ವೃತ್ತಾಂತಗಳು

ಆವಾ ಸಂಸ್ಥಾನದ ರಾಜರು ಆಗ್ರಾಪಟ್ಟಣದ ವಿದ್ಯಾರ್ಥಿನಿಲಯದ ಮೂಲಧನಕ್ಕೆ ೫೦೦ ರೂಪಾಯಿ ಕೊಟ್ಟರು.

◆◆◆◆

ಬೊಂಬಾಯಿಯಲ್ಲಿ ಈಸಲ ನಡೆದ ಕೈಗಾರಿಕೆಗಳ ವಸ್ತುಪ್ರದರ್ಶನಾಲಯದಲ್ಲಿ ವ್ಯವಸಾಯಶಾಖೆಯೊಂದರಲ್ಲೇ ೩೦,೦೦೦ ವಸ್ತುಗಳನ್ನು ಇಟ್ಟಿದ್ದರೆಂದು ತಿಳಿದುಬಂದಿದೆ.

◆◆◆◆

ಅಂಬಾಲಾ ಪಟ್ಟಣದಲ್ಲಿ ಕಳೆದ ೨೭ನೆ ತಾರೀಖಿನದಿನ ಸುಮಾರು ೩,೦೦೦ ಜೈನಮಂಡಲಿಯ ಪ್ರತಿನಿಧಿಗಳು ಸೇರಿ, ಧರ್ಮ, ವಿದ್ಯೆ, ಸಾಂಸರ್ಗಿಕ ಮೊದಲಾದ ವಿಚಾರಗಳನ್ನು ಕುರಿತು ಚರ್ಚೆಮಾಡಿದರು

◆◆◆◆

ಕಲ್ಕತ್ತೆಯಲ್ಲಿ ಜೋಹೋರ್ ಸುಲ್ತಾನರ ಮೂರು ದೊಡ್ಡ ಕುದುರೆಗಳನ್ನು ಹರಾಜು ಹಾಕಿದರು ದಕ್ಷಿಣ ಆಫ್ರಿಕದ ಮಿ॥ ವಿಲ್ಸ ಎಂಬಾತನು ಆ ಮೂರನ್ನೂ ೨೫,೦೦೦ ರೂಪಾಯಿಗೆ ಕೊಂಡುಕೊಂಡನು

◆◆◆◆

ಧೋಲ್‌ಪುರಸಂಸ್ಥಾನದ ಮಹಾರಾಜ ರಾಣಾರವರ ಅರಮನೆ ಜವಾಹರಿಗಳನ್ನೂ ಕಿರೀಟ ಮೊದಲಾದ ಆಭರಣಗಳನ್ನೂ ಸರ್ಕಾರದವರು ಕಲ್ಕತ್ತಾ ಪಟ್ಟಣದ ಜವಾಹಿರಿ ವ್ಯಾಪಾರಗಾರರಿಂದ ಬೆಲೆ ಮಾಡಿಸುತ್ತಿದ್ದಾರೆಂದು ಪ್ರಕಟವಾಗಿದೆ.

◆◆◆◆

ಕಲ್ಕತ್ತೆಯ ಹತ್ತಿರ ಹೌರಾ ಪಟ್ಟಣದಲ್ಲಿರುವ ಭಾರೀ ಸೇತುವೆಯ ಮೇಲೆ ಎಷ್ಟು ಗಾಡಿಗಳು ಸಾಗಿಹೋಗುತ್ತವೆಂದು ಗೊತ್ತುಮಾಡುವುದಕ್ಕೆ ಒಬ್ಬ ಅಧಿಕಾರಿಯು ೧೪ ಗಂಟೆ ಹೊತ್ತು ನಿಂತು ಲೆಕ್ಕ ಹಾಕಿದ್ದರಲ್ಲಿ ೧೫,೦೦೦ ಗಾಡಿಗಳು ಆ ಸೇತುವೆಯ ಮೇಲೆ ತಿರುಗಿದ್ದವೆಂದು ತಿಳಿದಿದೆ

◆◆◆◆

ಕಲ್ಕತ್ತಾ ಪಟ್ಟಣದ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ॥ ಕಿಂಗ್ಸ್‌ಫರ್ಡ್‌ರವರ ಮನೆಗೆ ಕಳ್ಳರು ನುಗ್ಗಿ, ಸುಮಾರು ೨೦೦ ರೂಪಾಯಿನ ಬಟ್ಟೆಗಳನ್ನು ಕಳುವುಮಾಡಿದರು ಕಳ್ಳರು ಸಿಕ್ಕಿಲ್ಲ ಆದರೆ ಹಳೇಬಟ್ಟೆಗಳನ್ನು ವಿಕರಿಮಾಡುವ ಒಂದು ಅಂಗಡಿಯಲ್ಲಿ ಆ ಬಟ್ಟೆಗಳೆಲ್ಲಾ ಸಿಕ್ಕಿದವು

◆◆◆◆

ಜಮಾಲ್‌ಪುರದ ರೈಲ್ವೆ ಸ್ಟೇಷನ್ನಿನಲ್ಲಿ ವಾಸಮಾಡುತ್ತಿರುವ ಈಸ್ಟ್ ಇಂಡಿಯಾ ರೈಲ್ವೆ ಕಂಪನಿಯ ನೌಕರಮಾನೇಜರಿಗಾಗಿ ರಾತ್ರಿ ಹೊತ್ತು ಬಂಗಲೆಗಳೊಳಗೆ ವಿದ್ಯುಚ್ಛಕ್ತಿಯ ದೀಪವನ್ನು ಇಡಿಸಬೇಕೆಂದು ಕಂಪನಿಯವರು ಗೊತ್ತುಮಾಡಿ, ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

◆◆◆◆

ಪಂಜಾಬ್ ಆಧಿಪತ್ಯದಲ್ಲಿ ಸ್ತ್ರೀ ವಿದ್ಯಾಭಿವೃದ್ಧಿಯಾಗುವದಕ್ಕೆ ಯಾವಯಾವ ಕಾರ್ಯಗಳನ್ನು ಮಾಡಬೇಕು ಎಂಬುದನ್ನು ಕುರಿತು ಚರ್ಚಿಸಿ ತಿಳಿಸುವಂತೆ ಗವರ್ನಮೆಂಟಿನವರು ಸ್ಕೂಲ್‌ಗಳ ಇನ್ಸ್‌ಪೆಕ್ಟರ್ ರಾಯಬಹದೂರ್ ಪಿ ಎನ್ ಚಕ್ರವರ್ತಿಯವರಿಗೆ ತಿಳಿಸಿ, ಒಂದು ಸಂಘವನ್ನು ಏರ್ಪಡಿಸಿದಾರೆ

◆◆◆◆

ಬರ್ಮಾ ಆಧಿಪತ್ಯದಲ್ಲಿ ಮುಖ್ಯಪಟ್ಟಣವಾದ ರಂಗೂನ್ ನಗರದಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವದಕ್ಕೆ ಸರ್ಕಾರದವರು ೫೦ ಲಕ್ಷ ರೂಪಾಯಿ ಮುಟ್ಟಿಸಿ ಕಾಮಗಾರಿ ನಡಿಸುತ್ತಿದ್ದರೆ ಮುಂದಿನ ತಿಂಗಳಿಂದ ಕಾಮಗಾರಿ ಮುಗಿದು ನೀರು ಸರಬರಾಜಾಗುವುದೆಂದು ಪ್ರಕಟವಾಗಿದೆ

◆◆◆◆

ಹಿಂದುಸ್ತಾನದಲ್ಲಿ ಹೋದವಾರ ೧೯,೨೯೬ ಜನರು ಪ್ಲೇಗಿನಲ್ಲಿ ಮೃತಪಟ್ಟರು ಕಳೆದವಾರ ೧೯,೪೮೭ ಮಂದಿ ಸತ್ತರು ಈ ಉಪದ್ರವು ಹೆಚ್ಚುತ್ತಲೇ ಇದೆ ವಾಯುವ್ಯಪ್ರಾಂತ್ಯ, ಬಂಗಾಳ, ಪಂಜಾಬ್ ಈ ಪ್ರಾಂತ್ಯಗಳಲ್ಲೇ ಹೆಚ್ಚು ಬೊಂಬಾಯಿ ಆಧಿಪತ್ಯದಲ್ಲಿ ೬,೨೪೨ ಜನರೂ, ಬೊಂಬಾಯಿ ೧೯೦, ಮದರಾಸ್ ಆಧಿಪತ್ಯ ೩೩, ಬಂಗಾಳ ೩೦೦೯, ವಾಯುವ್ಯಪ್ರಾಂತ್ಯ ೬,೮೨೫, ಪಂಜಾಬ್ ೩,೯೩೦, ಹೈದರಾಬಾದು ೧೯೯ ಈ ಪ್ರಕಾರ ಮರಣಗಳಾಗಿವೆ

◆◆◆◆

ಲಕ್ನೋಪಟ್ಟಣದಲ್ಲಿ ಕೇಸರಿ ಬಾಗ್‌ನಲ್ಲಿರುವ ಬಂಗಲೆಯಲ್ಲಿ ಕಳೆದ ೨೭ ನೆ ತಾರೀಖಿನಲ್ಲಿ ಮಹಮದೀಯ ಸಭೆಯು ನಡೆಯಿತು ಹಿಂದುಸ್ಥಾನದ ಎಲ್ಲಾ ಕಡೆಗಳಿಂದಲೂ ಮಹಮದೀಯ ದೊಡ್ಡ ಮನುಷ್ಯರು ಹೋಗಿದ್ದರು ಅಲಿಘರ್ ಕಾಲೇಜಿನ ಪ್ರಿನ್ಸಿಪಲ್ ಮಿ॥ ಟಿ ಮಾರಿಸನ್‌ರವರು ಅಗ್ರಾಸನವನ್ನು ವಹಿಸಿ, ಮಹಮದೀಯರಲ್ಲಿ ವಿದ್ಯೆ ಇಲ್ಲದೆ ಇರೋಣದರಿಂದ ಅವರು ಬಹಳ ಹೀನಸ್ಥಿತಿಯಲ್ಲಿರುವಂತಾಗಿದೆ ಎಂತಲೂ, ಈ ದೋಷವನ್ನು ಅವರೆಲ್ಲಾ ಸೇರಿ ಪರಿಹರಿಸಿಕೊಳ್ಳಬೇಕೆಂತಲೂ ತಿಳಿಸಿದರು

◆◆◆◆

ಹೌರಾ ಪಟ್ಟಣದ ಗ್ರಾಂಡ್ ಟ್ರಂಕ್ ರೋಡಿನಲ್ಲಿರುವ ಬಾಬು ಗೋಪಾಲ ಗೋವಿಂದ ಬೋಸ್ ಎಂಬ ಪುಣ್ಯವಂತನ ಮನೆಗೆ ಕಳ್ಳರು ಬಿದ್ದು ೨೦,೦೦೦ ರೂಪಾಯಿನ ಜಿಂದಗಿಯನ್ನು ಅಪಹರಿಸಿದರು. ಕಳುವಾದ ಸಂಗತಿ ಮಾರನೆಯ ಬೆಳಗಿನವರೆಗೂ ಮನೆಯವರಿಗ್ಯಾರಿಗೂ ತಿಳಿಯಲೇ ಇಲ್ಲ. ಆ ಭಾಗದಲ್ಲೆಲ್ಲಾ ಯೂರೋಪಿಯರ್ ಸರ್ದಾರರುಗಳೇ ವಾಸಮಾಡುತ್ತಾರೆ ಡಿಸ್ಟ್ರಿಕ್ಟ್ ಆಫೀಸು ಇತರ ಕಚೇರಿಗಳೂ ಬಹಳ ಸಮೀಪದಲ್ಲೇ ಇರುವವು ಆದರೂ ಅತನ ಮನೆಯಲ್ಲಿ ಕಳುವಾಗಿರುವುದನ್ನು ನೋಡಿ ಎಲ್ಲರೂ ಆಶ್ಚರ್ಯಪಡುತ್ತಿದಾರೆ.

◆◆◆◆

ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿ ಕ್ವೆಟ್ಟಾ ಪಟ್ಟಣದಿಂದ ನುಷ್ಕಿ ನಗರದ ತನಕ ಸೈನಿಕರ ಕೈಯಿಂದ ಸರ್ಕಾರಿಯವರು ರೈಲ್ ರಸ್ತೆ ಹಾಕಿಸುತ್ತಿದಾರೆ ಈ ರಸ್ತೆಯಲ್ಲಿ ಕೂಲಿಕಾರರು ಹೋಗುತ್ತಿರುವಲ್ಲಿ ಕಳೆದ ೨೩ನೆ ತಾ॥ ರೈಲ್‌ಗಾಡಿಗೆ ಅಪಾಯ ಸಂಭವಿಸಿತು. ಸಾಮಾನು ಬಂಡಿಗಳೆಲ್ಲಾ ತಪ್ಪಿ ಇಳಿಜಾರಿನಲ್ಲಿ ವೇಗವಾಗಿ ಹೋಗಿ ಬಿದ್ದುಕೊಂಡುದರಿಂದ ಒಳಗೆ ಕುಳಿತ್ತ ಕೂಲಿಯಾಳುಗಳ ಪೈಕಿ ೧೫ ಮಂದಿ ಸತ್ತುಹೋದರು, ೩೦ ಮಂದಿಗೆ ಗಾಯಗಳಾದವು. ಈಚೆಗೆ ಇವರಲ್ಲೂ ಕೆಲವರು ಸತ್ತುಹೋದರೆಂದು ಸಮಾಚಾರ ಬಂದಿದೆ

◆◆◆◆

ಆಫ್ಘಾನಿಸ್ಥಾನದ ಅಮೀರರು ತಮ್ಮ ರಾಜ್ಯದ ಉತ್ತರಭಾಗದ ಮತ್ತು ಪಶ್ಚಿಮಭಾಗದ ಎಲ್ಲೆಕಟ್ಟುಗಳಲ್ಲಿರುವ ಸೈನ್ಯಗಳನ್ನು ಹೆಚ್ಚುಮಾಡಬೇಕೆಂದು ಹುಕುಂ ಕೊಟ್ಟಿದಾರೆ. ಅಧಿಕಾರಿಗಳು ಇದುವರೆಗೆ ಆಗಲೇ ೨೦,೦೦೦ ಹೊಸಜನರನ್ನು ಸೈನ್ಯಕ್ಕೆ ಸೇರಿಸಿಕೊಂಡರು. ಇವರಿಗೆಲ್ಲಾ ಸರಿಯಾದ ದಿರಸುಗಳನ್ನೂ ಹೊಸ ನಮೂನೆಯ ಬಂದೂಕುಗಳನ್ನೂ ಕೊಡುತ್ತಿದಾರೆ. ಆ ಪೈಕಿ

...ಮಂದಿ ಸೈನಿಕರನ್ನು ಹೀರತ್‌, ಅಫ್ಘಾನಗಳಿಗೆ ಕಳುಹಿಸಿ ... ಹೊರಡುವದಕ್ಕೆ ಮೊದಲು ಅವರಿಗೆಲ್ಲಾ ಒಂದು ತಿಂಗಳ ...ವನ್ನು ಅಡ್ವಾನ್ಸು ಕೊಟ್ಟರು.

****

...ಬೊಂಬಾಯಿ ಪಟ್ಟಣದಲ್ಲಿ ಲಾರ್ಡ್ ರೀಯವರ ಹೆಸರಿನ ಮೇಲೆ ...ಸ್ತು ನಡಸುತ್ತಿರುವ ಭಾರೀ ಹತ್ತಿಯ ಕಾರ್ಖಾನೆಯನ್ನು ಅ...ಸಿಯವರೇ ಹರಾಜು ಮೂಲಕ ವಿಕ್ರಯಿಸಬೇಕೆಂದು ...ಪ್ಪಮಾಡಿ, ಹರಾಜು ಹಾಕಿದರು. ಸೊರಾಬ್ಜಿ ಪಚಪ್ಪೂರ್ಜಿ ಕಂಪ...ಯ ಮಿ॥ ಠಕ್ಕರ್ ದಾದಾಭಾಯಿಯವರು ೪,೯೦,೦೦೦ ರೂಪಾ...ನವನ್ನು ಬೀಟಿಗೆ ನಿಲ್ಲಿಸಿಕೊಂಡರು. ಆದರೆ ಆ ಕಂಪನಿಯು ...ಅಷ್ಟು ಸ್ವಲ್ಪಕ್ಕೆ ಮಾರಿದರೆ ತಮಗೆ ತುಂಬಾ ನಷ್ಟವಾಗುವು...ದು ಹೇಳಿ ಹರಾಜನ್ನೇ ನಿಲ್ಲಿಸಿಬಿಟ್ಟರು. ಈಚಿಗೆ ಎರಡನೆ ಹರಾ...ಲ್ಲಿ ಮಿ॥ ಮರ್ಷುಕಾ ಭಾರು ಭಾಗೂಭಾಯಿಯವರು ಅದನ್ನು ...,೦೦೦ ರೂಪಾಯಿಗೆ ಕೊಂಡುಕೊಂಡರು.

****

...ವರೆಗೆ ಹಿಂದುಸ್ಥಾನದ ಯಾವ ಕೋರ್ಟಿನಲ್ಲೂ ನಡೆಯ...ದಂಥಾ ಭಾರೀ ಮೊಕದ್ದಮೆಯೊಂದು ಬಂಗಾಳ ಆಧಿನ... ಸೇರಿದ ಮುಜಫರ್‌ಪುರದ ಸಬ್ ಜಡ್ಜರ ಕೋರ್ಟಿನಲ್ಲಿ ಈಗ ...ಗಿದೆ. ದರ್ಭಾಂಗದ ಮಹಾರಾಜರವರು ಕಾಲವಾಗಿ ...ಆರು ಸಂವತ್ಸರಗಳಾದುವು. ಅವರ ಸ್ಥಾನಕ್ಕೆ ಅವರ ...ನೇ ನೇಮಕವಾಗಿ ಕೆಲಸನೋಡುತ್ತಿದ್ದಾರೆ. ಗತಿಸಿದ ಮಹಾ...ರ ಇಬ್ಬರು ಪತ್ನಿಯರೂ ಸೇರಿ—ಆ ಸಂಸ್ಥಾನಕ್ಕೆ ಸೇರಿದ ...ಆಸ್ತಿಗಳೆಲ್ಲಾ ತಮ್ಮ ಜೀವಮಾನ ಪರಿಯಂತ ತಮಗೆ ಸೇರಿದ...ವೆಂತಲೂ, ಹಿರಿಯ ರಾಣಿಯವರು ತಮಗೇ ತಮ್ಮ ಪತಿಯ ...ಸನ ಪದವಿ ಬರಬೇಕೆಂತಲೂ, ತಮ್ಮ ಪತಿಯು ಬದುಕಿ...ದ್ದಾಗ ಅವರಿಗೂ ಅವರ ತಮ್ಮನಿಗೂ ಸೌಹೃದಯವಿರಲಿಲ್ಲವಾದ್ದ...ರಿಂದ ಇಬ್ಬರೂ ಪ್ರತ್ಯೇಕವಾಗಿದ್ದರೆಂತಲೂ, ತಮ್ಮ ಪತಿಯು ಆ ...ನನ್ನು ದತ್ತು ಮೊದಲಾದ್ದು ಮಾಡಿಕೊಂಡಿಲ್ಲವೆಂತಲೂ ದಾವಾ ...ಹೂಡಿದ್ದಾರೆ.

****

ಕಾರಂಬ್ಯಾರದ ರಾಜರು ಬೊಂಬಾಯಿನಲ್ಲಿ ಗಾಮದೇವಿ ...ಯೊಳಗೆ ಒಂದು ಬಂಗಲೆಯಲ್ಲಿ ಸುಮಾರು ೬೫ ಮಂದಿ ಪರಿ...ವಾರದೊಡನೆ ಹೋಗಿ ಇಳುಕೊಂಡಿದ್ದರು. ಡಿಸೆಂಬರ್ ೧ನೆ ತಾ. ...ಅವರೆಲ್ಲಾ ಮಲಗುವುದು ರಾತ್ರಿ ೧ ಗಂಟೆಯಾಯಿತು. ಮಲ...ಗಿಕೊಂಡಮೇಲೆ ಸುಮಾರು ನಾಲ್ಕುಗಂಟೆ ಹೊತ್ತಿನಲ್ಲಿ ಕಳ್ಳರು ...ಬಂಗಲೆಗೆ ನುಗ್ಗಿ, ಒಂದು ದೊಡ್ಡ ಪೆಟಾರಿಯನ್ನು ಒಡೆದು...ಕಿ, ಅದರೊಳಗಿದ್ದ ೬—೭ ಕೈಪೆಟ್ಟಿಗೆಗಳನ್ನು ತೆಗೆದು...ಕೊಂಡು ಹೋದರು. ವಜ್ರ, ಪಚ್ಚೆ, ಮುತ್ತು, ಕೆಂಪು, ಕಂಠೀ...ಬಂಗಾರದ ನಗಗಳು ಮೊದಲಾದುವೆಲ್ಲಾ ಸುಮಾರು ...೫೫೭ ರೂ. ಕ್ರಯ ಬಾಳುವವು ಕಳುವಾಗಿವೆ. ಮರುದಿನ ...ಸಿಗೆ ರಿಪೋರ್ಟು ಮಾಡಿದಾಗ ಅವರು ಪತ್ತೆ ತೆಗೆದೂದು ನಡು...ವಲ್ಲಿ ಆ ಬಂಗಲೆಯ ಹಿಂಭಾಗದಲ್ಲಿ ಒಂದು ಚರಂಡಿಯೊಳಗೆ ...ಕೈಪೆಟ್ಟಿಗೆಯು ೩, ೯೮ ರೂ. ನಗಗಳಸಹಿತ ಸಿಕ್ಕಿತು. ...ರನ್ನು ಹುಡುಕುತ್ತಿದ್ದಾರೆ.

****

ಹಿಂದುಸ್ಥಾನದಲ್ಲಿ ಮದ್ಯವನ್ನು ಬಹಳ ಹೆಚ್ಚಾಗಿ ಜನರು ...ದು ಕೆಟ್ಟುಹೋಗುತ್ತಿರುವುದನ್ನು ತಪ್ಪಿಸಬೇಕೆಂದು ಕೆಲವು ...ಮನುಷ್ಯರು ಪ್ರಯತ್ನಪಡುತ್ತಿದ್ದಾರೆ. ಇದಕ್ಕಾಗಿ ಕಳೆದ ...ಬೊಂಬಾಯಿ ಪಟ್ಟಣದಲ್ಲಿ ಭಾರೀ ಸಭೆ ನಡೆಯಿತು. ಅವರು ...ರ್ಮಾನಿಸಿರುವುದೇನೆಂದರೆ—ಹಿಂದುಸ್ಥಾನದಲ್ಲಿ ಮದ್ಯದ ಉ...ಪಯೋಗ ದಿನೇದಿನೇ ಹೆಚ್ಚುತ್ತಾ ಬಂದಿರುವುದು ಶ್ರೇಯಸ್ಕರವಾದು...ದಲ್ಲ. ಪ್ರಜೆಗಳು ಬೇಗ ಹೀನಸ್ಥಿತಿಗೆ ಇಳಿಯುವರು. ೧೪ ವರು...ಷಕ್ಕೆ ಒಳಗಿನಂಥಾ ಮಕ್ಕಳಿಗೆ ಮದ್ಯವನ್ನು ಯಾರೂ ವಿಕರಿ...ಸದಂತೆಯೂ, ಯಾವ ಊರಿನವರು ತಮ್ಮ ಊರಿನಲ್ಲಿ ಮದ್ಯದ ...ಅಂಗಡಿಗಳೇ ಇರಕೂಡದೆಂದು ಬೇಡಿಕೊಳ್ಳುತ್ತಾರೋ ಅಂಥಾ ...ಊರುಗಳಲ್ಲಿ ಸರ್ಕಾರದವರು ನಿರ್ಬಂಧಮಾಡಿ ಅಂಗಡಿಗಳನ್ನು ...ತೆರೆಕೊಡದೆಂತಲೂ, ಅಂಥಾ ಮದ್ಯದ ಅಂಗಡಿಗಳಲ್ಲಿ ಹೆಂಗಸ...ರನ್ನು ನೇಮಿಸತಕ್ಕಂತೆ ಅಂಗಡಿಯವರಿಗೆ ಸರ್ಕಾರದವರು ತಾಕೀತು ...ಮಾಡಬೇಕೆಂತಲೂ ಪ್ರಾರ್ಥಿಸಿಕೊಂಡಿದ್ದಾರೆ.

****

ಅಫ್ಘಾನಿಸ್ಥಾನದ ಅಮೀರರವರ ಜ್ಯೇಷ್ಠಪುತ್ರರಾದ ಸರ್ದಾರ್ ...ನಾಯತ್ ಉಲ್ಲಾಖಾನರವರು ಪರಿವಾರಸಹಿತ ಕಳೆದ ೨೬ ನೆ ತಾ. ...ಪಟ್ಟಣವನ್ನು ತಲಪಿದರು. ವೈಸರಾಯಿಯವರ ಅಪ್ಪಣೆ...ಯಂತೆ ಇಂಡಿಯಾ ಗವರ್ನಮೆಂಟಿನ ಕೆಲವು ಮುಖ್ಯಾಧಿಕಾರಿಗ...ಳೂ ಸೈನಿಕರೂ ಕಾದಿದ್ದು, ಸರ್ದಾರರನ್ನು ಗೌರವವಾಗಿ ಎದುರು...ಗೊಂಡು, ಹೇಸ್ಟಿಂಗ್ಸ್ ಎಂಬ ಬಂಗಲೆಗೆ ಕರೆದುಕೊಂಡುಹೋಗಿ, ...ಇಳಿಸಿದಾರೆ. ಗೌರವಾರ್ಥವಾದ ೩೧ ತೋಪುಗಳನ್ನು ಹಾರಿಸಿದರು. ...ಮರುದಿನ ಅವರು ಮರ್ಯಾದೆಗಳೊಡನೆ ಪರಿವಾರಸಹಿತ ಸಾರೋ...ಟಿನಲ್ಲಿ ಹೊರಟು, ವೈಸ್‌ರಾಯಿ ಲಾರ್ಡ್ ಕರ್ಜನವರನ್ನು ಕಂ...ಡು ಯೋಗಕ್ಷೇಮಗಳನ್ನು ವಿಚಾರಿಸಿ ಬಂದರು. ಆಗ ಗವರ್ನಮೆಂ...ಟಿನವರು ಸಮಸ್ತ ಮಾನಮರ್ಯಾದೆಗಳನ್ನೂ ನಡಸಿದರು. ಈಚಿಗೆ ...ಕ್ರೀಡೆಯಲ್ಲಿ ಕುದುರೆಓಟ ನಡೆಯಿತು. ವೈಸ್‌ರಾಯಿಯವರೇ ...ಮೊದಲಾದವರೆಲ್ಲಾ ನೋಡುವುದಕ್ಕೆ ಹೋಗಿದ್ದರು. ಅಮೀರರ ಪು...ತ್ರರಿಗೂ ಅವರ ಸಂಗಡ ಬಂದಿರುವ ಅಧಿಕಾರಿಗಳಿಗೂ ಬಹು ಒ...ಳ್ಳೆ ಸ್ಥಾನಗಳನ್ನು ಬಿಡಿಸಿಕೊಟ್ಟಿದ್ದರು. ಇವರು ಕುದುರೆಓಟದ ...ವಿಲಾಸವನ್ನು ನೋಡಿ ತುಂಬಾ ಸಂತೋಷಪಟ್ಟರು.

ಪ್ರಾಂತಪಟ್ಟಣದ ಕ್ಯಾಂಬೇ ಎಂಬ ಬೀದಿಯಲ್ಲಿರುವ ಪ್ರಸಿದ್ಧವಾದ ಮೊಹಮಿ ಎಂಬ ದೇವಸ್ಥಾನದಲ್ಲಿ ಕಳೆದ ವಾರ ಭಯಂಕರವಾದ ಕೊಳ್ಳೆಯೂ ಕಳುವೂ ನಡೆದವು. ಡಿಸೆಂಬರ್ ಎರಡನೆ ವಾರದಲ್ಲಿ ಇಬ್ಬರು ಆ ದೇವಸ್ಥಾನಕ್ಕೆ ಬಂದು ಬಹಳ ಕಪ್ಪಕಾಣಿಕೆಗಳನ್ನು ಒಪ್ಪಿಸಿ, ಒಂದು ವಾರವಿದ್ದು ಹೋದರು. ಕೆಲವುದಿನಗಳ ಮೇಲೆ ಆ ದೇವಸ್ಥಾನದ ಆರುಮಂದಿ ಕಾವಲುಗಾರರೂ ಕೊಲ್ಲಲ್ಪಟ್ಟು ಬಿದ್ದಿದ್ದರು. ದೇವಸ್ಥಾನದೊಳಗಿದ್ದ ಅಪಾರವಾದ ಐಶ್ವರ್ಯವೆಲ್ಲಾ ಕಳುವಾಯಿತು. ಕೆಲವು ವಿಯಾನಾ ಎಂಬ ಜನರು ರಾತ್ರಿ ಒಂಟೆಗಳ ಮೇಲೆ ಬಂದು, ದೇವಸ್ಥಾನದ ಬಾಗಿಲಲ್ಲಿದ್ದವನನ್ನು ಕತ್ತುಹಿಸುಕಿ ಕೊಂದುಹಾಕಿ. ಒಳಕ್ಕೆ ನುಗ್ಗಿ, ಮಲಗಿದ್ದ ೫ ಮಂದಿ ಕಾವಲುಗಾರರನ್ನೂ ಕೊಂದುಬಿಟ್ಟು, ಇನ್ನೊಬ್ಬ ಕಾವಲುಗಾರನನ್ನು ಹಿಡಿದು, ಅವನ ಮೂಲಕ ದೇವಸ್ಥಾನದ ಸಮಸ್ತ ಬೆಂದಿಗೆಯನ್ನೂ ಪತ್ತೇಮಾಡಿ ದೋಚಿಕೊಂಡಾದ ಮೇಲೆ, ಕಳ್ಳರು ಅವನನ್ನೂ ಕೊಂದುಹಾಕಿ, ತಲೆತಪ್ಪಿಸಿಕೊಂಡು ಹೋಗಿದಾರೆ. ಅನೇಕ ಭಕ್ತಾದಿಗಳು ತಮ್ಮ ಆಸ್ತಿಯನ್ನೆಲ್ಲಾ ತಂದು ದೇವಸ್ಥಾನದಲ್ಲಿ ಭದ್ರವಾಗಿಟ್ಟಿದ್ದರು. ವ್ಯಾಪ್ಯದಲ್ಲಿ ಸಿಕ್ಕಿದ್ದಂಥಾ ನಗನಾಣ್ಯಗಳನ್ನು ಅದು ಧ್ವಂಸವಾಗುವ ತನಕ ಈ ದೇವಸ್ಥಾನದಲ್ಲಿ ತಂದಿಡುವುದೂ ಪದ್ಧತಿಯಾಗಿತ್ತು. ಈಗ ಈ ಬೆಂದಿಗೆಯೆಲ್ಲಾ ಸುಮಾರು ಕೆಲವು ಲಕ್ಷ ರೂಪಾಯಿಗಳು ಕಳುವಾಗಿವೆ. ಕೆಲವು ದಿನಗಳ ಹಿಂದೆ ಪೇಟ್ಲಾಡ್ ಜೈಲ್ ಖಾನೆಯಿಂದ ತಪ್ಪಿಸಿಕೊಂಡು ಹೋದ ವಿಯಾನಾ ದಂಗೇಕೋರರು ಪೈಕಿ ಇನ್ನೂ ಕೆಲವರು ಸಿಕ್ಕಿ ಇಲ್ಲ. ಈ ಕಳ್ಳರೇ ಈ ದೇವಸ್ಥಾನವನ್ನು ನುಗ್ಗಿ ಈಗ ಕೊಳ್ಳೆಹೊಡೆದಿರಬೇಕೆಂದು ಅನೇಕರು ಊಹಿಸುತ್ತಾರೆ.

****

ಇಂಡಿಯಾ ಗವರ್ನಮೆಂಟಿನ ಪರವಾಗಿ ಅಫ್ಘಾನಿಸ್ಥಾನಕ್ಕೆ ಪ್ರಯಾಣಮಾಡಿದ ಮಿ॥ ಲೂಯಿ ಡೇನ್‌ಯವರು ಪರಿವಾರಸಹಿತ ಕಳೆದ ತಿಂಗಳ ೨೨ನೆ ತಾ ಕಾಬೂಲ್ ನಗರವನ್ನು ತಲಪಿದರೆಂದು ಗವರ್ನಮೆಂಟಿನವರು ಪ್ರಕಟಿಸಿದಾರೆ. ಅಮೀರರು ತಮ್ಮ ರಾಜ್ಯಕ್ಕೆ ವಿಲಾಯಿತಿ ಜರ್ಮನಿ ಮುಂತಾದ ಕಡೆಗಳಿಂದ ತರಿಸಿದ ಮದ್ದುಗುಂಡು ಫಿರಂಗಿ ಮೊದಲಾದ ಯುದ್ಧಸಾಮಗ್ರಿಗಳನ್ನು ಇಂಡಿಯಾ ಗವರ್ನಮೆಂಟಿನವರು ಕರಾಚಿ ಮೊದಲಾದ ಬಂದರುಗಳಲ್ಲಿ ತಡೆದಿಟ್ಟಿದ್ದಾರೆಂತಲೂ, ಇಂಡಿಯಾ ಗವರ್ನಮೆಂಟಿನಿಂದ ಪ್ರತಿ ವರುಷವೂ ಅವರಿಗೆ ಸಲ್ಲುತ್ತಿರುವ ೧೮ ಲಕ್ಷ ರೂಪಾಯಿಗಳನ್ನು ಅಮೀರರು ಕೆಲವು ವರುಷಗಳಿಂದ ತೆಗೆದುಕೊಳ್ಳದೆ ಇದ್ದಾರೆಂತಲೂ ವರ್ತಮಾನವಿದೆ. ಇದಲ್ಲದೆ ಅಫ್ಘಾನಿಸ್ಥಾನದ ಉತ್ತರದಲ್ಲೂ ಪಶ್ಚಿಮದಲ್ಲೂ ರಷ್ಯಾದವರು ಸೈನ್ಯವನ್ನು ತಂದಿಟ್ಟುಕೊಂಡು, ಶೇಖರಿ ಮಾಡುತ್ತಿದ್ದಾರೆಂದೂ ಪ್ರಕಟವಾಗಿದೆ ಆ ಕಾರಣ ಅಮೀರರ ಸ್ನೇಹವನ್ನು ಬಲಪಡಿಸಿಕೊಳ್ಳುವುದಕ್ಕೂ ಅವರಿಗೂ ಇಂಡಿಯಾ ಗವರ್ನಮೆಂಟಿಗೂ ಮನಸ್ತಾಪಗಳೇನಾದರೂ ಇದ್ದಲ್ಲಿ ಅವನ್ನೆಲ್ಲಾ ಪರಿಹರಿಸುವುದಕ್ಕೂ ವೈಸ್‌ರಾಯಿಯವರು ಮೇಲ್ಕಂಡ ಮುದ್ದೇದಾರರನ್ನು ಪರಿವಾರಸಹಿತ ಅಮೀರರ ಆಸ್ಥಾನಕ್ಕೆ ಕಳುಹಿಸಿದಾರೆ ಮಿ॥ ಲೂಯಿ ಡೇನ್‌ಯವರನ್ನು ಕಾಬೂಲ್ ಪಟ್ಟಣದ ಬಾಗಿಲಿನಲ್ಲಿ ಅಮೀರರ ಹಿರಿಯಕುಮಾರರಾದ ಸರ್ದಾರ್ ಇನಾಯತ್ ಉಲ್ಲಾಖಾನರವರು ಪರಿವಾರಸಹಿತ ಕಾದಿದ್ದು ಮರ್ಯಾದೆಗಳೊಡನೆ ಎದುರುಗೊಂಡು, ಒಂದು ದೊಡ್ಡ ಡೇರಾದಲ್ಲಿ ಇಳಿಸಿ ಸನ್ಮಾನಮಾಡಿದರು. ತರುವಾಯ ಮಿ॥ ಡೇನ್‌ಯವರು ಅಂಗರಕ್ಷಕರ ಸಮೇತ ಸಾರೋಟುಗಳಲ್ಲಿ ಕುಳಿತು, ಶೇರ್ ಪುರದ ಸುತ್ತಲೂ ಸುತ್ತಿಬಂದು, ಅವರಿಗಾಗಿ ಸಿದ್ಧಪಡಿಸಿದ್ದ ಬಂಗಲೆಯನ್ನು ತಲಪಿದರು. ಬಂಗಲೆ ಬಾಗಿಲಲ್ಲಿ ಅಮೀರರ ಸೈನಿಕರು ಸಾಲು ಸಾಲಾಗಿ ನಿಂತು ಇಂಗ್ಲಿಷ್ ರಾಯಭಾರಿಗೆ ಸಲಾಂ ಬಾಜಾ ಮಾಡಿದರು. ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ಅಂತು ಅಮೀರರ ಈ ಆದರಣೆಯೂ ಸತ್ಕಾರವೂ ಪರಸ್ಪರ ಸ್ನೇಹವನ್ನು ವಿಶೇಷವಾಗಿ ಪ್ರಕಾಶಪಡಿಸುತ್ತಿದೆ.

ವಿದೇಶ ವರ್ತಮಾನಗಳು.

ವಿಲಾಯಿತಿಗೆ ಸೇರಿದ ಬರ್ಮಿಂಗ್‌ಹಂ ಪಟ್ಟಣದ ವಿದ್ಯಾಶಾಲೆಯಲ್ಲಿ ಬಾಲಕರಿಗೆ ಸಂಗೀತವನ್ನು ಹೇಳಿ ಕಲಿಸುವುದಕ್ಕಾಗಿ ಮಿ॥ ರಿಚರ್ಡ್ ಪೆಯರ್ಟ್ ಎಂಬಾತನು ಒಂದುವರೆ ಲಕ್ಷ ರೂಪಾಯಿ ಫಂಡು ಹಾಕಿರುತ್ತಾನೆ.

****

ಅಮೇರಿಕ ರಾಜ್ಯವನ್ನಾಳುವ ಪ್ರೆಸಿಡೆಂಟೆಂಬ ಅಧಿಪತಿಗೆ ಸರ್ಕಾರದಿಂದ ವರುಷಕ್ಕೆ ೧೦ ಸಾವಿರ ಪೌನ್ ಸಂಬಳ ಸಲ್ಲುತ್ತಿದೆ. ಇದನ್ನು ೨೦,೦೦೦ ಪೌನಿಗೆ ಏರಿಸಬೇಕೆಂದು ಅಲ್ಲಿನ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿರುವುದು.

****

ಪ್ಯಾರಿಸ್ ಪಟ್ಟಣದ ಮೃಗಪಕ್ಷಿಗಳ ಪ್ರದರ್ಶನಶಾಲೆಯಲ್ಲಿ ಒಂದೇ ಬೋನಿನಲ್ಲಿ ಸಿಂಹವೂ ಕುರಿಮರಿಯೂ ಇರುವವು. ಅವೆರಡಕ್ಕೂ ಶತ್ರುತ್ವ ಹೋಗಿ ಸ್ನೇಹ ಉಂಟಾಗಿರುವುದನ್ನು ನೋಡಿ, ಸಕಲರೂ ಆಶ್ಚರ್ಯಪಡುತ್ತಿದ್ದಾರೆ.

****

ಸರ್ವಿಯಾ ರಾಜ್ಯದ ಮಾಜಿ ರಾಣಿಯಾದ ಕ್ವೀನ್ ನಟಾಲಿಯವರು ಮಿಲಾನ್, ಅಲೆಕ್ಸಾಂಡರ್ ಎಂಬ ರಾಜರುಗಳಿಂದ ಶೇಖರಿಸಲ್ಪಟ್ಟಿದ್ದ ೪,೩೦,೦೦೦ ಪುಸ್ತಕಗಳುಳ್ಳ ಸರಸ್ವತಿ ಭಂಡಾರವನ್ನು ಬೆಲ್‌ಗ್ರೇಡ್ ನಗರದ ನ್ಯಾಷನಲ್ ಪುಸ್ತಕಾಲಯಕ್ಕೆ ಇನಾಮಾಗಿ ಕೊಟ್ಟುಬಿಟ್ಟರು. ಇವಲ್ಲದೆ ಆ ರಾಜರುಗಳು ಕೂಡಿಸಿದ್ದ ಆಯುಧಗಳನ್ನೂ ಕೊಟ್ಟಿರುತ್ತಾರೆ. ಇವೆರಡೂ ಸ್ವಲ್ಪ ಹೆಚ್ಚು ಕಡಿಮೆ ೧೯ ಲಕ್ಷ ರೂಪಾಯಿ ಕ್ರಯವಾಗುತ್ತವೆ.

ಫಿಲಿಪೈನ್ ದ್ವೀಪಗಳಿಗೆ ಸೇರಿದ ಸಾಮರ್ ಎಂಬ ದ್ವೀಪದಲ್ಲಿ ಪ್ರಜೆಗಳು ದಂಗೆಯೆದ್ದು, ಅಮೇರಿಕದ ಅಧಿಕಾರಿಯನ್ನೂ ೩೭ ಮಂದಿ ಸೈನಿಕರನ್ನೂ ಕೊಂದುಹಾಕಿದರು ಈಚಿಗೆ ಅಲ್ಲಿನ ಸ್ಥಿತಿಯು ತುಂಬಾ ಗಾಬರಿಪಡಿಸುವಂತಾಗಿದೆ

****

ಸ್ಪೇಯಿನ್ ರಾಜ್ಯಕ್ಕೆ ಸೇರಿದ ಗಲೇಷಿಯಾ ಡಿಸ್ಟ್ರಿಕ್ಟಿನಲ್ಲಿ ಕ್ಷಾಮಬಾಧೆಯು ಪ್ರಜೆಗಳನ್ನು ನಾನಾ ಕಷ್ಟನಷ್ಟಗಳಿಗೆ ಗುರಿಮಾಡಿದೆ. ಪ್ರಜೆಗಳು ಅನೇಕ ಗ್ರಾಮಗಳನ್ನು ಖಾಲಿಮಾಡಿಬಿಟ್ಟು ಅಮೇರಿಕಕ್ಕೆ ಹೊರಟು ಹೋದರು. ಹಳ್ಳಿಹಳ್ಳಿಗಳು ಹಾಳುಬಿದ್ದಿವೆ.

****

ಮೆಕ್ಸಿಕೋ ರಾಜ್ಯದಲ್ಲಿ ಪ್ರಾಚೀನಕಾಲದ ಒಂದು ಗುಹೆಯನ್ನು ಕಂಡು ಹಿಡಿದಿದ್ದಾರೆ. ಅದು ಭೂಮಟ್ಟದಿಂದ ೧೦೦ ಅಡಿ ಆಳದಲ್ಲಿ ಸಿಕ್ಕಿದೆ. ಅದರೊಳಗೆ ಪೂರ್ವಕಾಲದವರು ಇಟ್ಟಿದ್ದ ೬೪ ಹೆಣಗಳು ಸಿಕ್ಕಿದವು. ಆ ಜನರು ಪ್ರಪಂಚದಲ್ಲಿ ಚರಿತ್ರೆಹುಟ್ಟುವುದಕ್ಕಿಂತ ಮೊದಲೇ ಇದ್ದವರೆಂದು ಊಹಿಸಲ್ಪಟ್ಟಿದೆ.

****

ಯೂರೋಪ್ ಖಂಡದ ಕೆಲವು ಭಾಗಗಳಲ್ಲಿ ಹಿಂದಿನವಾರ ವಿಪರೀತ ಮಂಜು ಮುಸುಕಿಕೊಂಡು ಪ್ರಜೆಗಳ ಕಾರ್ಯಗಳನ್ನೆಲ್ಲಾ ನಿಲ್ಲಿಸಿಬಿಟ್ಟಿತ್ತು. ಆ ಮಂಜಿನಲ್ಲಿ ಪ್ಯಾರಿಸ್ ಪಟ್ಟಣದ ರೈಲ್ ಗಾಡಿಗಳೆರಡು ಕಾಣದೆ ಎದುರುಬದುರಾಗಿ ಬಂದು ಡಿಕ್ಕಿಹೊಡೆದವು. ಈ ಅನಾಹುತದಿಂದ ೧೩ ಮಂದಿ ಸತ್ತರು; ೩೨ ಮಂದಿಗೆ ಗಾಯಗಳಾದವು.

****

ವಿಲಾಯಿತಿಗೆ ಸೇರಿದ ನಾರ್ಫಕ್ ಡಿಸ್ಟ್ರಿಕ್ಟಿನಲ್ಲಿ ಫಲ್ ಹಾಂ ಗ್ರಾಮದಲ್ಲಿ ಒಂದು ಮದುವೆಯಾಯಿತು. ಈ ಮದುವಣಿಗ ಮದುವಣಗಿತ್ತಿಯರಿಬ್ಬರ ವಯಸ್ಸನ್ನೂ ಕೂಡಿಸಿದರೆ ೧೫೩ ವರುಷಗಳಾಗುವವು. ಮದುವಣಗಿತ್ತಿಯು ೭೮ ವರುಷದ ವಿಧವೆ; ಮದುವಣಿಗನು ೭೫ ವರುಷ ವಯಸ್ಸಿನವನು ಇವನಿಗೆ ಇದುವರಿಗೆ ಮದುವೆಯೇ ಆಗಿರಲಿಲ್ಲ.

****

ಬೇರೆ ಬೇರೆ ರಾಜ್ಯಗಳವರು ಕಳೆದ ವರುಷ ತಮ್ಮ ನಾವೆಯ ಸೈನ್ಯದ ಖರ್ಚನ್ನು ಎಷ್ಟುಮಟ್ಟಿಗೆ ಹೆಚ್ಚಿಸಿರುತ್ತಾರೆಂದರೆ— ವಿಲಾಯಿತಿಯವರು ಶೇಕಡ ೮೮ ರಷ್ಟು, ರಷ್ಯಾದವರು ಶೇಕಡ ೯೯ ರಷ್ಟು, ಜರ್ಮನಿಯವರು ಶೇಕಡ ೧೪೮ ರಷ್ಟು, ಅಮೇರಿಕದವರು ಶೇಕಡ ೧೯೫ ರಷ್ಟು. ಈ ಪ್ರಕಾರ ಈ ರಾಜ್ಯಗಳು ಸೈನ್ಯದ ಖರ್ಚನ್ನು ಜಾಸ್ತಿಮಾಡಿರುವುದರಲ್ಲಿ ಅವರ ಅಭಿಪ್ರಾಯವೇನೋ ವಿವರಿಸಬೇಕಾಗಿಲ್ಲ.

****

ಆಫ್ರಿಕ ಖಂಡದ ಉತ್ತರಭಾಗದಲ್ಲಿರುವ ಮೊರೋಕೋ ಸಂಸ್ಥಾನವು ಫ್ರೆಂಚರಿಗೆ ಸೇರಿದೆ ಅಲ್ಲಿನ ಸುಲ್ತಾನರು ಫ್ರೆಂಚರಿಗೆ ಅಧೀನರಾಗಿದಾರೆ ಈಚಿಗೆ ಅಲ್ಲಿನ ಸುಲ್ತಾನರಿಗೂ ಫ್ರೆಂಚರಿಗೂ ಮನಸ್ತಾಪಗಳು ಹುಟ್ಟಿ ಹೆಚ್ಚಿದವು ಫ್ರೆಂಚರ ರಾಯಭಾರಿಯು ಅಲ್ಲಿರುವ ಫ್ರೆಂಚ್ ಪ್ರಜೆಗಳನ್ನೆಲ್ಲಾ ಊರುಬಿಟ್ಟು ಹೋಗುವಂತೆ ಹುಕುಂ ಕೊಟ್ಟನು. ಅಲ್ಲಿ ಫ್ರೆಂಚರು ಯುದ್ಧಕಾರ್ಯಗಳನ್ನು ನಡಸಬೇಕಾದೀತೆಂದು ಸಮಾಚಾರ ಹುಟ್ಟಿದೆ.

****

ಅಮೇರಿಕದಲ್ಲಿ ಹಡಗುಗಳನ್ನೂ ಜಹಜುಗಳನ್ನೂ ಕಟ್ಟುವುದರಲ್ಲಿ ಪ್ರಖ್ಯಾತಿ ಪಡೆದಿರುವ ಮಿ॥ ಲೂಯಿ ನಿಕ್ಸನ್ ಎಂಬಾತನು ಅಮೇರಿಕದಿಂದ ೭,೦೦೦ ಕಾರೀಗಾರರನ್ನು ಕರೆದುಕೊಂಡುಹೋಗಿ, ಸಿಬಾಸ್ಟೊಪೋಲಿನಲ್ಲಿ ರಷ್ಯಾದವರಿಗೆ ೧೦೦ ಯುದ್ಧದ ಹಡಗುಗಳನ್ನೂ ಜಹಜುಗಳನ್ನೂ ಕಟ್ಟಿಕೊಡುವದಾಗಿ ರಷ್ಯಾ ಸರ್ಕಾರದವರಿಗೆ ಕರಾರು ಬರೆದುಕೊಟ್ಟು, ಕಂಟ್ರಾಕ್ಟುವಹಿಸಿರುತ್ತಾನೆಂದು ಅಮೇರಿಕದ ಒಂದು ಪತ್ರಿಕೆಯು ಹೇಳುತ್ತಿದೆ

****

ಜರ್ಮನಿ ರಾಜ್ಯಕ್ಕೆ ಸೇರಿದ ಲಿಪ್ಸಿಗ್ ನಗರದಲ್ಲಿ ಬಹು ವಿಸ್ತಾರವಾದ ಒಂದು ರೈಲ್ವೆ ಸ್ಟೇಷನ್ ತಯಾರಾಗುತ್ತಿದೆ. ಅದು ೧,೦೦೦ ಅಡಿ ಉದ್ದವಾಗಿಯೂ, ೧೩ ಕಡೆಗಳಿಗೆ ರೈಲ್‌ಗಳು ಹೊರಡುವಂತೆ ಪ್ಲಾಟ್‌ಫಾರಂಗಳೂ ಉಳ್ಳದಾಗುವುದು. ಇದಕ್ಕೆಲ್ಲಾ ಒಟ್ಟು ೧೦ ಕೋಟಿ ೨೫ ಲಕ್ಷ ರೂಪಾಯಿ ಖರ್ಚಾಗುವುದು. ಇಷ್ಟು ಭಾರಿಯಾದ ಮತ್ತು ಸುಂದರವಾದ ರೈಲ್ವೆ ಸ್ಟೇಷನ್ ಪ್ರಪಂಚದ ಇನ್ನಾವ ಊರಿನಲ್ಲೂ ಇರಲಾರದೆಂದು ಹೇಳುವರು.

****

ವಿಲಾಯಿತಿಗೆ ಸೇರಿದ ವೈಟ್ ಹೇವನ್ ಎಂಬ ಪಟ್ಟಣದಲ್ಲಿ ಒಬ್ಬನು ೩೦ ವರುಷಗಳ ಕೆಳಗೆ ಒಂದು ಪಿಟೀಲನ್ನು ೧೫ ರೂಪಾಯಿಗೆ ಕೊಂಡು ಇಟ್ಟುಕೊಂಡಿದ್ದು, ೯೦ ನೆ ವಯಸ್ಸಿನಲ್ಲಿ ಸತ್ತುಹೋದನು. ಆ ಪಿಟೀಲು ಬಹು ಉತ್ಕೃಷ್ಟವಾದ ಮತ್ತು ಪ್ರಸಿದ್ಧನಾದ ರಾಮ್ಸ್ ಎಂಬುವನಿಂದ ಬರೆಯಲ್ಪಟ್ಟಿದೆ ಎಂಬುದು ಈಗ ತಿಳಿದುಬಂದ ಕಾರಣ ಅದನ್ನು ಕಳೆದ ತಿಂಗಳಲ್ಲಿ ಹರಾಜು ಹಾಕಿದರು. ಹರಾಜುಹಾಕಿದಾಗ ಒಬ್ಬ ಧನ್ಯಾತ್ಮನು ಅದಕ್ಕೆ ೧,೪೭,೩೫ ರೂಪಾಯಿ ಕೊಟ್ಟು ಕೊಂಡುಕೊಂಡನು.

****

ಟ್ರಾನ್ಸ್ವಾಲಿನ ಮಾಜಿ ಪ್ರೆಸಿಡೆಂಟ್ ಕ್ರೂಗರ್‌ಯವರ ಶವವನ್ನು ಕಳೆದ ತಿಂಗಳು ಯೂರೋಪಿನಿಂದ ದಕ್ಷಿಣ ಆಫ್ರಿಕಕ್ಕೆ ಸಾಗಿಸಿಕೊಂಡು ಹೋಗಿ, ಪ್ರಿಟೋರಿಯಾ ಪಟ್ಟಣದಲ್ಲಿ ಅವರ ಪತ್ನಿಯ ಗೋರಿಯ ಪಕ್ಕದಲ್ಲಿ ಹೂಳಿಟ್ಟರು. ಮಿಲಿಟರಿ ಸೈನಿಕರು ಶವವನ್ನು ಸಂಸ್ಕಾರಮಾಡುವಾಗ್ಗೆ ಸಮೀಪದಲ್ಲಿದ್ದು ಸನ್ಮಾನಮಾಡಿದರು. ಗೌ

ದವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಈ ಸಂಸ್ಕಾರವನ್ನು ಎದುರಿಗಿದ್ದು ನೋಡಿಕೊಂಡು ಹೋಗುವುದಕ್ಕಾಗಿ ಸಾವಿರಾರು ಬೋಯರ್ ಜನರು ನೂರಾರು ಮೈಲಿಗಳಿಂದ ನಡೆದು ಬಂದು ಇದ್ದರೆಂದು ತಂತೀ ವರ್ತಮಾನ ಬಂದಿದೆ.

❖❖❖❖

ಚೀನಾರಾಜ್ಯಕ್ಕೆ ಸೇರಿದ ಹೊನಾನ್ ಪ್ರಾಂತ್ಯದಲ್ಲಿ ಎರಡು ವರುಷಗಳ ಕೆಳಗೆ ದುಷ್ಟರು ಸೇರಿ ಪಾದ್ರಿಗಳೆಲ್ಲರನ್ನು ಕೊಂದುಹಾಕಿದರು. ಈಚೆಗೆ ಚೀನಾ ಸರ್ಕಾರದವರು ನಷ್ಟಪರಿಹಾರಕ್ಕಾಗಿ ಅವರ ಹೆಂಡಿರು ಮಕ್ಕಳಿಗೆ ೫೧,೦೦೦ ರೂಪಾಯಿ ಕಳುಹಿಸಿದರು. ಆದರೆ ಆ ಹಣವನ್ನು ಅವರ ಹೆಂಡಿರು ಮಕ್ಕಳು ತಮಗೆ ಅವಶ್ಯವಿಲ್ಲವೆಂದು ಹೇಳಿದರು. ವಿಲಾಯತಿಯಲ್ಲಿ ಧರ್ಮಕಾರ್ಯಗಳನ್ನು ನಡಸುವ ಸಂಘಗಳವರೂ ತಮಗೆ ಆ ಹಣಬೇಡವೆಂದು ತಿರಸ್ಕರಿಸಿದರು. ಕಡೆಗೆ ಈ ಹಣವನ್ನು ಅಮೇರಿಕ ರಾಜ್ಯದ ಒಂದಾನೊಂದು ವಿದ್ಯಾಶಾಲೆಯ ಫಂಡಿನವರು ತಮಗಿರಲೆಂದು ಹೇಳಿ ತೆಗೆದುಕೊಂಡರು.

❖❖❖❖❖

ಪ್ರಷ್ಯರಾಜ್ಯಕ್ಕೆ ಸೇರಿದ ಜೂರಿಚ್ ಪಟ್ಟಣದಲ್ಲಿ ಸಮಸ್ತ ಪ್ರಜೆಗಳಿಗೂ ಸರ್ಕಾರದವರು ಔಷಧೋಪಚಾರಗಳನ್ನು ಒದಗಿಸಿಕೊಡುವಂತೆ ಏರ್ಪಾಡು ಮಾಡುತ್ತಿದ್ದಾರೆ. ಪ್ರತಿ ಒಂದು ಬೀದಿಗೂ ಒಬ್ಬೊಬ್ಬ ವೈದ್ಯನನ್ನು ನೇಮಿಸುವರು. ಈ ವೈದ್ಯರ ಸಂಬಳಕ್ಕಾಗಿಯೂ, ಔಷಧಗಳ ಖರ್ಚಿಗೋಸ್ಕರವೂ ಪ್ರಜೆಗಳ ಮೇಲೆ ತಲೆತೆರಿಗೆಯನ್ನು ವಿಧಿಸಿ ವಸೂಲ್ಮಾಡುವರು. ಪ್ರತಿ ಒಂದು ಮನೆಯವರೂ ಸರ್ಕಾರದವರಿಗೆ ಸುಮಾರು ೩ ರೂಪಾಯಿನಂತೆ ವರುಷಕ್ಕೆ ತೆರಿಗೆ ಕೊಡಬೇಕಾಗಿದೆ. ಈ ತೆರಿಗೆಯಿಂದ ವರುಷಕ್ಕೆ ೩ ಲಕ್ಷ ರೂಪಾಯಿ ಹುಟ್ಟುವಳಿ ಆಗುವುದು. ಅದರಲ್ಲಿ ಪ್ರತಿ ಒಬ್ಬ ವೈದ್ಯನಿಗೂ ೭,೫೦೦ ರೂ. ನಂತೆ ಸಂಬಳ ಗೊತ್ತುಮಾಡಿದಾರೆ. ಇದರಿಂದ ಆ ಪಟ್ಟಣದಲ್ಲಿ ಯಾರೂ ಯಾವ ವಿಧವಾದ ರೋಗದಿಂದಲೂ ಕಷ್ಟಪಡಬಾರದಂತೆ ಈ ವೈದ್ಯರು ನೋಡಿಕೊಳ್ಳುವುದಕ್ಕೆ ಅನುಕೂಲವಾಯಿತು.

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು. ಅದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಶೃಂಗೇರಿಯೂ ಪ್ಲೇಗ್ ಉಪದ್ರವೂ.

ಅಯ್ಯಾ,

ಶೃಂಗೇರಿಯೆಂಬ ಪುಣ್ಯಸ್ಥಳದಲ್ಲಿ ಪ್ಲೇಗ್ ರೋಗವು ಕಾಲೂರಿ ಜನಗಳೆಲ್ಲಾ ಊರನ್ನು ಬಿಡುತ್ತಲೂ ಇಲಿಗಳು ಹೆಚ್ಚಾಗಿ ಸಾಯುವವೆಂತಲೂ ಕೇಳುತ್ತೇನೆ. ಸ್ವಾಮಿಗಳು ಬಹು ತ್ವರೆಯನ್ನು ಸಹ ಬಿಟ್ಟು ಪೂಜೆಯನ್ನು ಮಾಡುವವರಾಗಿದ್ದಾರಂತೆ. ಮಹಾಮಾರಿಯ ಪೂಜೆಯು ನಡೆಯುವದಕ್ಕಾಗಿ ಚಂದಾ ಎತ್ತುತ್ತಿದ್ದಾರಂತೆ. ಅಶುಚಿಯಾದ ಊರಿನ ಕೊಳಕೇ ಕಾರಣವೆಂಬುದಾಗಿ ತಿಳಿಯದೆ ವ್ಯರ್ಥವಾಗಿ ಚಂದಾ ಎತ್ತುವದು ಯಾರಿಗೆ ನುಂಗೆ? ರಾತ್ರಿಯಲ್ಲಿ ಕಳ್ಳತನವೂ ಹಗಲಿನಲ್ಲಿ ತೋಳನ ಬಾಧೆಯೂ ಅಧಿಕವಾಗುವದು. ಜಾಗ್ರತೆಯಾಗಿ ಊರನ್ನು ಶುಚಿಮಾಡಿಸುವವರಾಗಿ ನಂಬುತ್ತೇನೆ.

ಬಾತ್ಮೀದಾರ್.

ಕಾನೂನಿಗೆ ವಿರೋಧವಾಗಿ ಶಿಕಾರಿ ಮಾಡುವುದು.

ಅಯ್ಯಾ,

ಚನ್ನಗಿರಿ ತಾಲ್ಲೂಕು ಸಾಸಿಕೇರಿ ಹಿರೇನೋಮನ ಪುರದ ಜನಗಳು ಕರೆಬಿಳಚಿ, ದೀವಿಗೆಹಳ್ಳಿ ಜನರು ಸೇರಿ ಕಳ್ಳ ಕೆರೆಗುಡ್ಡದಲ್ಲಿ ಇದ್ದ ಸಾರಗವನ್ನು ಹೊಡದುಕೊಂಡು ಬಂದರು. ನಮ್ಮ ಗವರ್ನ್‌ಮೆಂಟಿನವರ ಅಡವಿಯಲ್ಲಿ ಇತರ ಮೃಗ, ಸಾರಗ, ವಗ್ಯೆರೆ ಜಂತುಗಳನ್ನೂ ಹಕ್ಕಿಗಳನ್ನೂ ಶಿಕಾರಿ ಮಾಡಕೂಡದೆಂತ ರೂಲಸು ಮಾಡಿರುವರಾಗಿ ವರ್ತಮಾನ ಕೇಳುತ್ತೇನೆ. ಇಂಥಾ ನಿರ್ಬಂಧ ಇರುತ್ತಾ ಸಾಧುಜಂತುಗಳನ್ನು ಹಿಂಸೆ ಮಾಡುತ್ತಾರೆ. ಈ ಜನಗಳು ಪುನಃ ಬ್ಯಾಟೆಗೆ ಹೋಗುತ್ತಾರೆ ಎಂದು ವರ್ತಮಾನ ಕೇಳುತ್ತೇನೆ. ಈ ರೀತಿ ಬ್ಯಾಟೆ ಆಡಿದರೆ ಅವುಗಳ ಸಂತತೀ ನಿರ್ಮೂಲವಾಗುತ್ತೆ. ನಮ್ಮ ಸರ್ಕಾರದವರು ಇದರ ಶಿಕಾರಿ ಮಾಡದಂತೆ ಅಪ್ಪಣೆ ಮಾಡುವರೆಂದು ನಂಬುತ್ತೇನೆ.

ಜಂಗುದಾರ.

ನೂಲು ಬೇಕಾಗಿದೆ.

ಅಯ್ಯಾ,

ಕಳೆದ ವಾರದ ವೃತ್ತಾಂತ ಪತ್ರಿಕೆಯಲ್ಲಿ ಬೆಂಗಳೂರಿನಲ್ಲಿ ನೂಲಿನ ವ್ಯಾಪಾರವನ್ನು ಮಾಡುವವರ ಹೆಸರನ್ನು ತಿಳಿಸಬೇಕೆಂದು ನಿಮ್ಮ ಬಾತ್ಮೀದಾರರೊಬ್ಬರು ಕೇಳಿರುವದನ್ನು ಪ್ರಕಟಿಸಿರುವಿರಷ್ಟೆ. ಬೆಂಗಳೂರು ಸಿಟಿಯಲ್ಲಿ ವಿಶೇಷವಾಗಿ ನೂಲಿನ ವ್ಯಾಪಾರ ಮಾಡುವವರ ಹೆಸರನ್ನು ಈ ಕೆಳಗೆ ನಮೂದಿಸಿದ್ದೇನೆ. ಅವರಿಗೆ ಬರೆದುಕೊಳ್ಳಬಹುದು.—೧. ನೂಲಿನಂಗಡಿ ವೆಂಕಟರಾವ್ ಟಾಮರಾವ್, ದೊಡ್ಡ ಪೇಟೆ, ಬೆಂಗಳೂರು ಸಿಟಿ; ೨. ಚಿಂತನಪಲ್ಲಿ ವೆಂಕಟಮುನಿಯಪ್ಪ ಶೆಟ್ಟರು; ೩. ಶೇಗನಗಟ್ಟಿ ಸಂಕ್ರಾಂತನವರ ಕುಮಾರರು ಶಿವಪ್ಪನವರು, ಅರಳೇಪೇಟೆ; ೪. ಸಕುನಾಟಿ ನೂರ್ಸಿಂಡು, ಚಿಕ್ಕಪೇಟೆ; ೫. ಪಿ. ಸರೂಪ್ ಚಂದ್. ಚಿಕ್ಕಪೇಟೆ. ಇವರ ಪೈಕಿ ಯಾರಾದರೂ ಒಬ್ಬರ ಮೂಲಕ ನೂಲನ್ನು ತರಿಸಿಕೊಂಡು ವ್ಯಾಪಾರ ಮಾಡಬಹುದು.

ಬಿ. ರಾಮಯ್ಯ.

ಮಲೆನಾಡಿನಲ್ಲಿ ಹಾವುಗಳ ಕಾಟವು.

ಅಯ್ಯಾ,

ಈ ಮಲೆನಾಡಿನಲ್ಲಿ ನಾಗರಹಾವೂ ಕಾಳಿಂಗಸರ್ಪವೂ ಹೆಚ್ಚಾಗಿ ಅನೇಕ ಜನರನ್ನು ಕಚ್ಚಿ ಅನ್ಯಾಯವಾಗಿ ಕೊಲ್ಲುತ್ತವೆಯಾದ್ದರಿಂದ ಸರ್ಕಾರದವರು ಇದಕ್ಕೆ ತಕ್ಕ ಔಷಧಿಯನ್ನು ತಯಾರು ಮಾಡಿಸಿ, ಒಂದು ಕಂಪೆನಿಯಲ್ಲಿ ಇಡಿಸಿ, ಸಕಲರಿಗೂ ತಿಳಿಸಿದರೆ ಸರ್ವರೂ ವಿ. ಪಿ. ಪೋಸ್ಟ್ ಮೂಲಕ ತರಿಸಿಕೊಂಡು, ಅದರ ಬೆಲೆಯನ್ನು ಕೊಡಬಹುದು.

ಆದರೆ ಸರ್ಕಾರದವರು ಅನೇಕ ಆಸ್ಪತ್ರೆಗಳಲ್ಲಿ ಇಡಿಸಿದ್ದಾಗಿ ಕೇಳುತ್ತೇವೆ. ಆ ಆಸ್ಪತ್ರೆಗಳು ದೂರವಾಗಿ ಇರುವದರಿಂದ ಒಂದು ಅಥವ ಒಂದುವರೆ ಗಂಟೆಯೊಳಗೆ ಹಾವು ಕಚ್ಚಿದವನನ್ನು ಆ ಆಸ್ಪತ್ರೆಗಳಿಗೆ ಹೊತ್ತುಕೊಂಡು ಹೋಗಲು ನಾಲ್ಕು ಐದು ಮೈಲು ಒಳಗೆ ವಿಷವೇರಿ ಸಾಯುವನು. ಆದ್ದರಿಂದ ಸರ್ಕಾರದವರು ಮಲೆನಾಡು ಪ್ರಜೆಗಳ ಮೇಲೆ ದಯವಿಟ್ಟು ಈ ಕಾರ್ಯವನ್ನು ಮೊದಲು ಮಾಡಬೇಕಾಗಿ ಬೇಡುತ್ತೇವೆ. ಇಲ್ಲವಾದರೆ ಅಂಥಾ ಆಸ್ಪತ್ರೆಗಳನ್ನಾದರೂ ದಯವಿಟ್ಟು ತಿಳಿಸಿದರೆ ಔಷಧಿಯನ್ನು ತಂದು ಇಟ್ಟುಕೊಳ್ಳಬಹುದು.

ಯದಾರ್ಥವಾದಿ

ತಾಲ್ಲೂಕ್ ನೌಕರರ ಮೇಲೆ ಆಕ್ಷೇಪಣೆ.

ಅಯ್ಯಾ,

ತೀರ್ಥಹಳ್ಳಿಯ ಖಜಾನೆಯಲ್ಲಿ ನೋಟುಗಳನ್ನು ಕೊಟ್ಟು ಹಣ ತಕ್ಕೊಳ್ಳಬೇಕಾದರೆ ಬಹು ಪ್ರಯಾಸ ನೂರಕ್ಕೆ ಇಷ್ಟು ಎಂದು ವಟ್ಟ ಕೊಡಬೇಕಂತೆ. ಮತ್ತು ಕೆಲವು ಸಾರಿ ಖಜಾನೆ ನೌಕರರ ಇಷ್ಟದಂತೆ ಕೊಡದಿದ್ದರೆ ಹಣ ಸಿಕ್ಕುವದೇ ಪ್ರಯಾಸಕರವಾಗುತ್ತದೆ. ಇದು ಮಾತ್ರವಲ್ಲದೆ ಕೆಲಸದ ಮೇಲೆ ಕಚೇರಿಗೆ ಹೋಗುವಂಥವರು ಪೋಲೀಸಿನಲ್ಲಿಯೂ, ರಿಜಿಸ್ಟ್ರಾರ್ ಆಫೀಸಿನಲ್ಲಿಯೂ, ಶೇಕ್ದಾರರಲ್ಲಿಯೂ, ರೆವಿನ್ಯೂ ಗುಮಾಸ್ತರುಗಳಲ್ಲಿಯೂ ಮೊದಲು ಏನಾದರೂ ಕೊಟ್ಟು ಹೊರ್ತು ಬಂದ ಕೆಲಸ ಆಗುವದೇ ಕಷ್ಟ. ಇದನ್ನು ಕೇಳುವದಕ್ಕೆ ಅಸಹ್ಯವಾಗಿಯೂ ದುಃಖವಾಗಿಯೂ ಇದೆ. ಗವರ್ನ್‌ಮೆಂಟಿನವರು ಕೆಲವು ಫಾರಂಗಳನ್ನು ಪ್ರಿಂಟ್ ಮಾಡಿ ಅವುಗಳಲ್ಲಿ ತಾಲ್ಲೂಕ್ ನೌಕರರು ಏನೂ ರುಸುಂ ಅಂಗೀಕರಿಸಕೂಡದೆಂದು ಬರೆಸಿ, ಪೋಸ್ಟ್ ಆಫೀಸುಗಳಂತೆ ಬೋರ್ಡುಗಳ ಮೇಲೆ ಯಾಕೆ ಅಂಟಿಸಬಾರದು? ಪೋಸ್ಟ್ ಮಾಸ್ತರುಗಳೂ ಅವರ ನೌಕರರೂ ಭಯದಿಂದ ಕೆಲಸ ಮಾಡುತ್ತಾರೆ. ಹಾಗೆಯೇ ತಾಲ್ಲೂಕ್ ನೌಕರರೂ ದುರಾಶೆಪಡದೆ ತಮ್ಮ ಕೆಲಸ ಮಾತ್ರ, ಬಡವರ್ಗದವರನ್ನು ಪ್ರೀತಿಯಿಂದ ಕಂಡು, ನಲೀಸಾಗಿ ಕೆಲಸಮಾಡಿದರೆ ಎಲ್ಲಾ ಪ್ರಜೆಗಳಿಗೂ ಸರ್ಕಾರಕ್ಕೂ ಉತ್ತಮವಾಗಿರುವದು.

ಪ್ರಜಾಭಿಮಾನಿ

ಚನ್ನಪಟ್ಟಣದ ಮುನಿಸಿಪಾಲಿಟಿ.

ಅಯ್ಯಾ,

ಈ ಟವರ್ ೧೦ ಸಹಸ್ರ ಪ್ರಜೆಗಳುಳ್ಳ ದೊಡ್ಡ ಪಟ್ಟಣ. ಇಲ್ಲಿ ಪ್ರಜೆಗಳಿಗೆ ಅನುಕೂಲವಾಗಬೇಕಾದ ಕೆಲಸಗಳು ಅನೇಕವಿರುತ್ತೆ. ಇಲ್ಲಿನ ಮೆಂಬರುಗಳು ಮನಸ್ಸಿಗೆ ತಂದು ಒಂದಾದರೂ ಅನುಕೂಲಪಡಿಸಲಿಲ್ಲ. ಹಾಲಿ ಇರತಕ್ಕವರು ಬಹಳ ದಿವಸದಿಂದಲೂ ಇರುವದರಿಂದ ಇದರ ವಿಚಾರದಲ್ಲಿ ಶ್ರದ್ಧೆಯೇ ಇಲ್ಲ. ಮತ್ತು ಅಕ್ಕಾಯಿ ಬಾಬು ವ್ಯಾಪಾರಿಗಳು ಮೆಂಬರಾಗಿರುವದರಿಂದ ಆ ಬಾಬು ಉತ್ಪತ್ತಿಗೂ ಅವಕಾಶವಿಲ್ಲದೆ ಇದೆ. ಈ ಟವರ್‌ನಲ್ಲಿ ಒಳ್ಳೇ ಪ್ರಜಾಹಿತಚಿಂತಕರೂ ಅನುಕೂಲಸ್ಥರಾದವರೂ ಲಾಯಖ್ ಅಭಿವೃದ್ಧಿಯಿಂದ ಕೆಲಸಮಾಡಿ ಪ್ರಜೆಗಳಲ್ಲೂ ಗವರ್ನ್‌ಮೆಂಟಿನಲ್ಲೂ ಒಳ್ಳೇ ಯಶಸ್ಸು ಪಡೆಯಬೇಕೆಂಬವರೂ ಅನೇಕರಿದ್ದಾರೆ. ಮುನಿಸಿಪಲ್ ರೆಗ್ಯುಲೇಷನ್‌ನಲ್ಲಿ ಮೆಂಬರುಗಳನ್ನು ೫ ವರುಷಕ್ಕೆ ಬದಲಾಯಿಸಬೇಕೆಂದಿರುತ್ತೆ. ಈ ಟವರ್‌ಗೆ ಮಾತ್ರ ಆ ರೂಲಸು ಜಾರಿಯಲ್ಲಿ ಇಲ್ಲವಾಗಿದೆ. ಹಾಲಿ ಇರತಕ್ಕ ಮೆಂಬರುಗಳ ಅವಧಿ ತೀರಿ ಬಹಳ ದಿನವಾಗಿರುತ್ತೆ. ಸುಮಾರು ೨ ವರುಷದ ಹಿಂದೆ ಮೃತಪಟ್ಟ ಮೆಂಬರ್ ಪಟ್ಟುಸುಬ್ಬಯ್ಯನವರ ಸ್ಥಾನವು ಇನ್ನು ಭರ್ತಿಯಾಗ

ವಿಲ್ಲ. ಇದೇ ವಿಷಯದಲ್ಲಿ ಮೇಲ್ಪಟ್ಟ ಆಫೀಸರರು ಚಿತ್ತಕ್ಕೆ ತಾರದಿರುವದು ಈ ಪ್ರಜೆಗಳ ದುರಾದೃಷ್ಟವೆಂದು ಹೇಳಬೇಕಾಗಿದೆ. ಈಗಲಾದರು ದಯಾಳುಗಳಾದ ಸರ್ಕಾರದವರು ಚಿತ್ತಕ್ಕೆ ತಂದು ಪ್ರಜಾಸಮ್ಮತಿಯಿಂದ ಹೊಸ ಮೆಂಬರುಗಳನ್ನು ಚುನಾಯಿಸಿದರೆ ಪ್ರಜೆಗಳ ಅನುತಾಪವು ತೀರಿ, ಟವರ್ ಅಭಿವೃದ್ಧಿ ಸ್ಥಿತಿಗೆ ಬರುವದರಲ್ಲಿ ಯಾವ ಅಭ್ಯಂತರವೂ ಇರುವದಿಲ್ಲ.

ಪರ್ತ.

ತಾಲ್ಲೂಕು ವರ್ತಮಾನಗಳು.

ತಿಪಟೂರು.—ಘನವನ್ನು ಹೊಂದಿದ ನಮ್ಮ ಮೈಸೂರು ಗೌರ್ನ್‌ಮೆಂಟು ಸೀನಿಯರ್ ಕೌನ್ಸಿಲರ್ ಮಿ॥ ಶ್ರೀನಿವಾಸಯ್ಯಂಗಾರ್ಯರವರು ಕಳೆದ ತಾ. ೨೩ ನೇ ಸಾಯಂಕಾಲ ೬ ಗಂಟೆಗೆ ಈ ಊರಿಗೆ ದಯಮಾಡಿ, ಗ್ರಾಮಸ್ಥರಿಂದಲೂ ಅಮಲ್ದಾರರಿಂದಲೂ ಅಲಂಕೃತವಾಗಿದ್ದ ಮಂಟಪದಲ್ಲಿ ಮರ್ಯಾದೆಯನ್ನು ಸ್ವೀಕರಿಸಿ, ಆಗಲೇ ಊರೊಳಗೆ ದಯಮಾಡಿ, ಡೆ॥ ಕ॥ ರವರಿಂದಲೂ ಅಮಲ್ದಾರರಿಂದಲೂ ಮುನಿಸಿಪಲ್ ವತಿಯಿಂದ ತಯಾರಿಸಲ್ಪಟ್ಟದ್ದ ಸುಂದರವಾದ ರಸ್ತೆಗಳನ್ನೂ ಬಾವಿಗಳನ್ನೂ ದೇವಾಲಯಗಳನ್ನೂ ಪರಾಂಬರಿಸಿ ತರುವಾಯ, ಎ. ವಿ. ಸ್ಕೂಲ್ ಹೆಡ್ ಮಾಸ್ಟರವರ ಪ್ರಾರ್ಥನೆಯಂತೆ ಮರುದಿನ ಪ್ರಾತಃಕಾಲ ಸ್ಕೂಲಿಗೆ ದಯಮಾಡಿ, ಎಲ್ಲವನ್ನೂ ಪರಾಂಬರಿಸಿ, ಡೆ॥ ಇನ್ಸ್‌ಪೆಕ್ಟರವರಿಂದ ಕಳುಹಿಸಲ್ಪಟ್ಟಿದ್ದ ಇನಾಂ ಪುಸ್ತಕಗಳನ್ನೂ ತಾವು ಸ್ವತಃ ಕೊಟ್ಟ ೮ ರೂ. ಗಳನ್ನೂ ಬಾಲಕ ಬಾಲಕಿಯರಿಗೆ ಹಂಚುವಂತೆ ಅಪ್ಪಣೆ ಮಾಡಿ, ಹೊರಡುವ ಸಮಯದಲ್ಲಿ ಮ॥ ಶ್ರೀನಿವಾಸ ಶಾಸ್ತ್ರಿಗಳಿಂದ ಓದಲ್ಪಟ್ಟ ಸಂಸ್ಕೃತ ಮತ್ತು ಸ್ಕೂಲು ಅ ಮಾ॥ ಪಿ ವಿ ರಾಮಸ್ವಾಮಯ್ಯಂಗಾರ್ರಿಂದ ರಚಿಸಿ ಓದಲ್ಪಟ್ಟ ಕನ್ನಡ ಮಂಗಳಶಾಸನಗಳನ್ನು ಕೇಳಿ, ಸಂತುಷ್ಟರಾಗಿ ಹೆ॥ ಮಾಸ್ಟರಿಂದ ಮಾಡಲ್ಪಟ್ಟ ಮರ್ಯಾದೆಗಳನ್ನು ಸ್ವೀಕರಿಸಿ, ಮಾರೀಕಣಿವೆಗೆ ದಯಮಾಡಿದರು.

ತರೀಕೆರೆ.—ಇಲ್ಲಿನ ಹವಾ ಈಗ ಅಷ್ಟು ಚನ್ನಾಗಿಲ್ಲ. ಗಾಳಿಯು ವಿಪರೀತವಾಗಿದೆ. ಪ್ರಜೆಗಳು ಚಳಿ ಜ್ವರ ಮುಂತಾದ ವ್ಯಾಧಿಗಳಿಂದ ಪೀಡಿತರಾಗಿದ್ದಾರೆ.—ಇಲ್ಲಿ ಪ್ರತಿ ಶುಕ್ರವಾರ ಸಂತೆ ನಡೆಯುತ್ತದಷ್ಟೆ. ಅಕ್ಕಾಯಿಯವರು ಪ್ರತಿ ಒಂದು ಪದಾರ್ಥಕ್ಕೂ ತೆರಿಗೆಯನ್ನು ಬಹಳವಾಗಿ ಹಾಕಿರುತ್ತಾರೆಂದು ಪ್ರಜೆಗಳೂ ರೈತರೂ ಬಹಳ ಗುಣಗುಟ್ಟುತ್ತಾರೆ. ದೃಷ್ಟಾಂತವಾಗಿ ತೆಂಗಿನಕಾಯಿ ೧ಕ್ಕೆ ೧ ಕಾಸು ಇದ್ದದ್ದು ಈಗ ೯ ಕಾಸು ಕೊಟ್ಟರೂ ಸಿಕ್ಕುವದು ಕಷ್ಟವಾಗಿರುತ್ತದೆ. ಹಾಗೆಯೇ ವೀಳ್ಯದೆಲೆ ಕಟ್ಟು ಒಂದಕ್ಕೆ ೩ ಕಾಸು ಇದ್ದದ್ದು ಈಗ ೧ ಆಣೆ ಆಗಿರುತ್ತದೆ. ಸಂತೆಯಲ್ಲಿ ಪದಾರ್ಥಗಳನ್ನು ತಂದು ಮಾರುವಂಥವರು ತೆರಿಗೆಯನ್ನು ಕೊಡುವದಕ್ಕೆ ಅನುಕೂಲವಿಲ್ಲದೆ ಸರಿಗಾಣ ಇಟ್ಟುಕೊಂಡು ಮಾರುವರು. ಧಾರಣೆಗಳು ಬಹಳವಾಗಿ ಇಳಿದುಹೋಗಿವೆ. ಈ ವಿಷಯದಲ್ಲಿ ಸರ್ಕಾರದವರು ಪ್ರಜೆಗಳ ಮತ್ತು ರೈತರ ಗುಣಗುಟ್ಟುವಿಕೆಯನ್ನು ಮನಸ್ಸಿಗೆ ತಂದುಕೊಂಡು, ತೆರಿಗೆಯನ್ನು ಕಮ್ಮಿ ಮಾಡುವರೆಂದು ನಂಬುತ್ತೇವೆ.—ಕಳೆದ ತಿಂಗಳು ೨೩ ರಲ್ಲಿ ಕೌನ್ಸಿಲರ್ ಮಿ॥ ಶ್ರೀನಿವಾಸಯ್ಯಂಗಾರ್ಯರವರು, ಡೆಪ್ಯುಟಿ ಕಮಿಷನರ್ ಸಾಹೇಬರವರು, ಡಾಕ್ಟರ್ ಮಿ॥ ನಂಜಪ್ಪನವರು, ಪೋಲೀಸ್ ಸೂಪರಿಂಟೆಂಡೆಂಟ್ ಮುಂತಾದವರು ಈ ಕಡೆ ಸರ್ಕ್ಯುಟ್ ದಯಮಾಡಿಸುತ್ತಾರೆಂದು ತಿಳಿದು, ನಮ್ಮ ಅಮಲ್ದಾರರು ಮೊ॥ ಇನ್ಸ್‌ಪೆಕ್ಟರು ೨೨ ಕ್ಕೆ ಅಜ್ಜಂಪುರಕ್ಕೆ ಹೋಗಿ ಅವರುಗಳನ್ನು ಎದುರುಗೊಂಡು, ಊರೊಳಕ್ಕೆ ಕರೆತಂದರು.—ಅವರುಗಳ ಬಿಡುವಿಕೆಗಾಗಿ ಊರಿನ ಮಧ್ಯೆ ಒಂದು ಚಪ್ಪರವನ್ನು ಹಾಕಿಸಿ, ತೋರಣಗಳಿಂದಲೂ ಬಾವುಟಗಳಿಂದಲೂ ಅಲಂಕರಿಸಿದ್ದರು. ಚಪ್ಪರದ ಎಡಪಾರ್ಶ್ವದಲ್ಲಿ ಬಾಲಕರೂ ಬಲಪಾರ್ಶ್ವದಲ್ಲಿ ಬಾಲಕಿಯರೂ ಅವರ ಆಗಮನವನ್ನು ಕುರಿತು ಗಾನ ಮಾಡಿದರು. ಕೌನ್ಸಿಲರವರು ಆ ದಿನವೆಲ್ಲಾ ಇಲ್ಲಿದ್ದು ಸರ್ಕಾರದ ಎಲ್ಲಾ ಇಲಾಖೆಗಳನ್ನೂ ಸ್ಕೂಲುಗಳನ್ನೂ ನೋಡಿಕೊಂಡು, ಮಾರನೆ ಬೆಳಿಗ್ಗೆ ಶಿವಮೊಗ್ಗೆ ಕಡೆ ಪ್ರಯಾಣ ಬೆಳಸಿದರು.

ಚಿಕ್ಕಮಗಳೂರು.—ಪ್ಲೇಗ್ ರೋಗವು ಈ ಊರಿನಲ್ಲಿ ಇದ್ದೇ ಇರುತ್ತದೆ. ಒಂದೊಂದು ಸಮಯದಲ್ಲಿ ರೋಗವು ಬಹು ಕಠಿಣವಾಗಿ ಪರಿಣಮಿಸುತ್ತಲಿದೆ. ಕೆಲವರು ರೋಗ ತಗಲಿದ ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಸಾಯುತ್ತಿದ್ದಾರೆ. ಪೇಟೆಯಲ್ಲಿಯೂ ಬಸವನಹಳ್ಳಿಯಲ್ಲಿಯೂ ಇಲಿಗಳು ಬೀಳುವದು ತಪ್ಪಲಿಲ್ಲ. ಈಗ್ಯೆ ಸುಮಾರು ಒಂದು ವಾರದಿಂದಲೂ ಇಲ್ಲಿನ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಇಲಿಗಳು ಬೀಳುತ್ತಾ ಇರುವದರಿಂದ ಆಫೀಸನ್ನೆಲ್ಲಾ ಡಿಸಿನ್‌ಫೆಕ್ಟ್ ಮಾಡುವದರಲ್ಲಿದ್ದಾರೆ.—ಇಲ್ಲಿನ ಸ್ಟೇಷನ್ ವೈದ್ಯಶಾಲೆಯೂ ತುಂಬಾ ಅಭಿವೃದ್ಧಿಸ್ಥಿತಿಯಲ್ಲಿರುವದಾಗಿ ತೋರುತ್ತೆ. ಸಾಧಾರಣವಾಗಿ ಪ್ರತಿನಿತ್ಯವೂ ಅಲ್ಲಿ ಔಷಧಿಯನ್ನು ಪಡೆಯುವವರ ಸಂಖ್ಯೆ ನೂರಕ್ಕಿಂತಲೂ ಹೆಚ್ಚಾಗಿರುವದಾಗಿಯೂ ಪಂಡಿತ ಸಿದ್ದಲಿಂಗನವರು ರೋಗಿಗಳ ವಿಷಯ ಮುತುವರ್ಜಿಯಾಗಿ ನೋಡುವದಾಗಿಯೂ ಕೆಲವು ಪ್ಲೇಗ್ ರೋಗಿಗಳಿಗೆ ಚಿಕಿತ್ಸೆ ಮಾಡಿದ್ದರಲ್ಲಿ ಕೆಲವರ ವಿಷಮುಕ್ತರಾದವರು ಬದುಕಿಕೊಂಡ ಹಾಗೆಯೂ ಈ ಆಸ್ಪತ್ರೆಯ ಅಭಿವೃದ್ಧಿಸ್ಥಿತಿಯನ್ನು ನೋಡಿ ಮ್ಯುನಿಸಿಪಾಲಿಟಿಯವರು ಸಾದಿಲ್ವಾರು ಖರ್ಚಿಗಾಗಿ ಹೆಚ್ಚು ಹಣ ಕೊಡಲು ಸ್ಯಾಂಕ್ಷನ್ ಮಾಡಿದಾರೆಂದು ವರ್ತಮಾನವಿದೆ.—ಅಸಿಸ್ಟೆಂಟ್ ಕಮಿಷನರ್ ಮಿ॥ ವೈಲಾರಿ ರಾಯರು ಬಂದು ಕೆಲಸನೋಡುತ್ತಿದಾರೆ. ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರೂ ಡಾಕ್ಟರ್ ನಂಜಪ್ಪನವರೂ ಕಡೂರು ಅಜ್ಜಂಪುರದ ಪ್ರಾಂತ್ಯ ಸರ್ಕೀಟು ಹೊರಟಿದ್ದಾರೆ. ಬೆಂಗಳೂರಿನಿಂದ ಈ ಪ್ರಾಂತ್ಯ ಸರ್ಕೀಟು ಹೊರಡುವಂಥಾ ಕೌನ್ಸಿಲರ್ ಮಿ॥ ಶ್ರೀನಿವಾ

ಸಂಗಾಕ್ರವನ್ನು ಅಲ್ಲಿ ಸಂಧಿಸಿ, ಅವರು ತಿಪಟೂರಿಗೆ ಕಡೆ
ನಂತರ ಇವರು ಈ ಕಡೆ ತಮ್ಮ ಸರ್ಕೀಟು ತೀರಿಸಿಕೊಂಡು
ವ ಮೊದಲನೆ ವಾರದಲ್ಲಿ ಬರುವರೆಂದು ಹೇಳುತ್ತಾರೆ —ಈ
ಲ್ಲಿ ಕೆಲವರು ಇಸ್ಪೀಟಿನ ದ್ಯೂತವಾಡುತ್ತಿದ್ದಾರೆ. ಇದು ಪ್ರತಿ
ವರೆ ಅನೇಕರು ಕೆಟ್ಟುಹೋಗುವದಕ್ಕೆ ಕಾರಣವಾಗಿದೆ
ಗಳಲ್ಲಿ ಇಂಥಾ ಆಟವಾಡುವವರು ಸೇರುವ ಸ್ಥಳವನ್ನು ಪೊಲೀ
ಸರು ತಿಳಿದು ಅವರನ್ನು ಹಿಡಿದು, ದಂಡನೆಗೆ ಗುರಿಮಾಡುವದಾ
ಗಲ್ಲವೇ ಎಚ್ಚರಿಸಿ ಮುಂದೆ ಆಡದಂತೆ ವಾಗ್ದಂಡನೆಮಾಡುವ
ದರೂ, ಹ್ಯಾಗೂ ಈ ಕೆಟ್ಟ ಆಟವನ್ನು ನಿಲ್ಲಿಸಿ ಪ್ರಜೆಗಳಿಗೆ
ಯೋಜನವನ್ನುಂಟುಮಾಡುವದು ಸರ್ಕಾರಕ್ಕೆ ಸೇರಿದ್ದಾಗಿದೆ.
ಬೆಂಗಳೂರು ಚಳಿಯು ಕಾಯುತ್ತಿದ್ದರೂ ಶೀತ ಗಾಳಿ ಬೀಸು
ವದರಿಂದ ಚಳಿ ಅಧಿಕವಾಗಿರುವದಲ್ಲದೆ ಮಳೆಯ ಫಸಲೆಲ್ಲವೂ
ವಾಗಿ ಹರೀ ಪಸಲಿಗೆ ಬೀಜ ಪೇರಾವು ಮಾಡುತ್ತಿದ್ದಾರೆ ಧಾರಣೆ
ಮಾತ್ರ ಮೊದಲಿನಂತೆ ಜಾಸ್ತಿಯಾಗಿಯೇ ಇದೆ. ಪ್ಲೇಗ್ ಗಲಾ
ಟೆ ದಿನ ದಿನಕ್ಕೆ ಕಮ್ಮಿಯಾಗುತ್ತಾ ಬರುತ್ತಲಿದೆಯಾದರೂ ದಿನ
ವಾರಿನಲ್ಲಿ ಅಲ್ಲಲ್ಲಿ ವಾಸಮಾಡುತ್ತಿರುವದರಿಂದ ಮರಣಗಳಾಗು
ತ್ತಲೇ ಇವೆ ಇನ್ನು ಹೊರಗಡೆ ವಾಸ ಮಾಡುತ್ತಿರುವವರಲ್ಲನೇ
ಕರು ಈಗಾಗಲೇ ಮನೆಗಳಿಗೆ ವಾಸಕ್ಕೆ ಬಂದು ವ್ಯಾಪಾರಾದಿಗಳ
ನ್ನು ಕಸಲು ಕಾತುರರು ಭರಿತರಾಗಿರುವಂತೆ ತೋರಿ ಬರುತ್ತೆ
ವರುಷ ಇದೇ ರೀತಿಯಾಗಿ ಆತುರಪಟ್ಟದ್ದರಿಂದ ರೋಗವು
ವಾಗಿ ನಿಲ್ಲುವದಕ್ಕೆ ಆಸ್ಪದವಿಲ್ಲದೆ, ಇದುವರಿಗೂ ತೊಂದ
ರೆ ಪಡಬೇಕಾಗಿ ಬಂತಾದ್ದರಿಂದ ನಮ್ಮ ದುಮಾಕಿನ ಪ್ರ
ಈ ವಿಷಯವನ್ನು ವಿಚಾರಲೋಚಿಸಿ, ಕಾಯಿಲೆ ಸಂಪೂ
ರ್ಣವಾಗಿ ಶಮನವಾದ ನಂತರವಾದರೂ ತಮ್ಮ ಮನೆಗಳನ್ನು ಶ್ರ
ದ್ಧಾಪೂರ್ವಕವಾಗಿ ಶುದ್ಧಿ ಮಾಡಿಕೊಂಡು ವಾಸಕ್ಕೆ ಬರುವದು ಬಹು
ಸರ್ವ ಜನೋಪಕಾರವೆಂದು ತಿಳಿಯಬೇಕಾಗಿದೆ. ಮ್ಯು
ನಿಸಿಪಾಲಿಟಿಯವರು ಜನರು ವಾಸಕ್ಕೆ ಬರುವದಕ್ಕೆ ಮುಂಚೆ ಇಲ್ಲಿ
ಪೇಟೆಯಲ್ಲಿರುವ ಅನಾರೋಗ್ಯಕರವಾದ ಭಾಗಗಳಲ್ಲಿ
ರಸ್ತೆ ಮುಂತಾದ ಸ್ಯಾನಿಟರಿ ಏರ್ಪಾಡು ಮಾಡಿ, ರೋ
ವಿಶೇಷವಾಗಿ ನಾಶಮಾಡಿ, ಸೌಲಭ್ಯವನ್ನುಂಟುಮಾಡು
ವದಕ್ಕೆ ಸಕಾಲವಾಗಿರುವದರಿಂದ ನಮ್ಮ ವೈಸ್ ಪ್ರೆಸಿಡೆಂಟ
ವರು ಲಕ್ಷ್ಯವಿರಿಸಬೇಕಾಗಿ ಪ್ರಾರ್ಥಿಸುತ್ತೇವೆ —ಈಗ್ಯೆ ಕೆಲವು ದಿನಗ
ಮುಂಚೆ ಇಲ್ಲಿನ ಟೂರ್ ಕಿರಾಯಿಗಳಲ್ಲಿ ಒಬ್ಬನು ಆತನ ಬಂ
ಧು ಮನೆಯಲ್ಲಿ ಊಟ ಉಪಚಾರ ಹೊಂದುತ್ತಾ ಇದ್ದ. ಅವರ
ಮನೆಯಲ್ಲಿಯೇ ಇನ್ನು ಪ್ರಾಯಕ್ಕೆ ಬಂದಿರುವ ಹುಡುಗಿಯನ್ನು ಜಕಾತ
ದಿಂದ ತನ್ನ ವಶಪಡಿಸಿಕೊಂಡನೆಂದೂ ಧಿಡೀರನೆ ಈ ದಿನಲ್ಲಿ
ಬಾನೆ —ಈ ಟವನಿನ ಸೌದೆ ಸರಬರಾಯಿಗಾಗಿ ಇಲ್ಲಿನ ಸಾಹು
ಕಾರರೇ ಕಂಟ್ರಾಕ್ಟು ವಹಿಸಿದ್ದರಿಂದ ಎಲ್ಲರಿಗೂ ಅನುಕೂ
ಲವಾಯೇ ಇತ್ತು. ಈಗ್ಗೆ ಎರಡುವಾರಗಳಿಗೆ ಮುಂಚೆ ಯಾವ ಕಾ
ರಣದಿಂದಲೋ ಕಂಟ್ರಾಕ್ಟು ತಪ್ಪಿಸಿರುವದರಿಂದಲೂ ಒಬ್ಬನಿಗೆ ಗಾ
ಡಿಗೆ ಮಾತ್ರ ಲೇಸನ್ಸ್ ಕೊಡುತ್ತಿರುವದರಿಂದಲೂ ಬಡವರ
ಸೌದೆ ಬೆಲೆ ದುಬಾರಿಯಾಗಿ ದೊರಕದೆ ಉಂಟಾಗಿರುವ ತೊಂದರೆ
ಅಪಾರವಾಗಿದೆ. ಈ ಭಾಗದಲ್ಲಿ ನಮ್ಮ ಸರ್ಕಾರದವರು ಮೊದಲಿನಂ
ತೆ ಸೌಲಭ್ಯ ಉಂಟುಮಾಡಬೇಕಾಗಿ ಕೋರುತ್ತೇವೆ.

ತೀರ್ಥಹಳ್ಳಿ.—ಈ ಸಾರಿ ಹಿಂಗಾರು ಮಳೆ ಕಡಿಮೆಯಾಗಿ
ಮೃಗಶಿರ ತರುಗಿಳಿಗೆ ಅನೇಕ ಭಾಗಗಳಲ್ಲಿ ಪಸಲು ನಷ್ಟವಾ
ಅಡಿಕೆ ಫಸಲು ಎಲ್ಲಾ ತೋಟಗಳಲ್ಲಿ ತೀರಾ ಕಡಿಮೆಯಾ
ನೂರು ಮಣ ಆಗುತ್ತಿದ್ದವರಿಗೆ ೩೦ ಮಣ ಆಗುವದು ಪ್ರ
ಭತ್ತವಂತೂ ಧಾರಣೆ ಮರಕ್ಕೆ ನೂರು ಸೇರಾಗಿದೆ. ಈ
ಏನಾಗುತ್ತದೆಯೋ ಎಂದು ಜನನೆಲ್ಲಾ ಭಯದಿಂದ ತುಂಬಿ
—ಪ್ಲೇಗಿನ ದೆಸೆಯಿಂದ ಊರುಬಿಟ್ಟು ಹೋಗಿದ್ದವರೆಲ್ಲರೂ
ಸೇರಿ, ಬರುವ ಎಳ್ಳಮಾವಾಸ್ಯೆಯ ಜಾತ್ರೆಗಾದರೂ
ಟೆ ಸಂಭವಿಸಬೇಕೆಂದು ಬಹು ಆಶೆಯಿಂದ ಕಾದಿದ್ದಾ
—ಈ ಊರಿನ ಮುಂಚಿಪಾಲ್ಟಿಯ ನೌಕರರಲ್ಲಿ ಒಬ್ಬರಿಗೊಬ್ಬರು
ಕ್ಯವಿಲ್ಲದೆ ಒಬ್ಬರ ಮೇಲೊಬ್ಬರು ದೂರು ಹೇಳಿಕೊಳ್ಳು
ದರಿಂದಲೂ, ಬಂದಂಥ ಹಣಗಳ ಯಜಮಾನರಿಗೆ ಸಲೀಸಾಗಿ
ಕೊಟ್ಟು ಪ್ರಜೆಗಳ ಸುಖವನ್ನು ಕೋರದೆ ಆದಾಯಗಳ
ಕಳ್ಳಿಟ್ಟು ಬಿಡ್ತ್ಯಾರೆಂದೂ ಸುದ್ದಿ ಉಂಟಾಗಿದೆ.—ಈ
ವರಲ್ಲಿ ಮಲ್ನಾಡಿನವರೆಲ್ಲಾ ಬಂದೂಕುಗಳ ಲೈಸನ್ಸ್ ಬಾಬು
ಕ್ಟರ ಕಚೇರಿಗೆ ಬರುತ್ತಾರೆ. ಕೆಲವರು ದೂರದಿಂದ ಬಂದು
ರಾತ್ರಿ ಊಟಕ್ಕೆ ಮನೆಗೆ ಹೋಗಬೇಕು. ಇಂಥಾದ್ದರಲ್ಲಿ
ಶಿರಸ್ತೆದಾರ್ ಅಮಲ್ದಾರರು ಎಷ್ಟು ಜಾಗ್ರತೆ ಅವರ ಕೆಲಸ ಪೂರೈಸಿ
ಕಳುಹಿಸುತ್ತಾರೋ ಅಷ್ಟು ಒಳ್ಳೇದೇ. ಅದಕ್ಕೆ ಬದಲಾಗಿ ಕೆಲ
ಕಾದು ಹೋಗುತ್ತಾರೆ. ಒಂದು ವೇಳೆ ಅಮಲ್ದಾರ ಸ್ವಭಾವಾ
ಪೊಲೀಸ್ ಮುರ್ಚಿಗಳು ಬೇಗನೇ ಕೊಡದೆ ಅವರನ್ನು ಕಾ
ಯಿಸುತ್ತಾರೆ. ಜನೋಪಕಾರಕ್ಕಾಗಿಯೇ ನೇಮಕವಾಗಿರುವ ಪ್ರೊ
ನೌಕರರು ದುರಾಗೆ ಬಾಯಿತೆರೆಯದೆ ನ್ಯಾಯವಾಗಿ ನಡೆ
ನಡೆ ಉತ್ತಮ.—ಅಗುಂಬೆಯ ಮುಸಾಫರ್ ಬಂಗಲೆಯು
ರಾತ್ರಿಯಲ್ಲಿ ಹಾಕಿದ್ದ ಅಗ್ನಿಷ್ಟಿಗೆಯ ಬೆಂಕಿ ಮೇಲಕ್ಕೆ
ಹೊತ್ತಿ ಮೇಲಿನ ಕೆಲವು ಭಾಗವು ಹತ್ತಿಕೊಂಡು ನಾಶವಾ
ಆ ದಿನ ರಾತ್ರಿ ಪೋಸ್ಟ್ ಸೂಪರೆಂಟರು ತಂಗಿದ್ದರೆಂದು
ತ್ತದೆ. ಸುಮಾರು ೫೦೦ ರೂಪಾಯಿ ನಷ್ಟವಾಗಿದೆ ಎಂದು
ಹೇಳುತ್ತಾರೆ. ಸರ್ಕಾರಿ ಉದ್ಯೋಗಸ್ಥರು ನೋಟೀಸು ಮೇ
ರಿಪೋರ್ಟು ಮಾಡಿದಾರೆ.—ಈ ತಾಲೂಕಿನಲ್ಲಿ ಈಚೆಗೆ ಬಹು
ಮಾಡು ಪಾತಕವು ಬಹು ಸಾಧಾರಣವಾಗಿ ನಡೆಯು
ತ್ತಲೇ ಇರುತ್ತದೆ. ಈಗ ಒಂದೆರಡು ತಿಂಗಳಲ್ಲಿ ಮೂರು ಖೂನಿ
ಗಳಾದವೆಂದು ಕೇಳಿ ಬಂದಿದೆ. ಬೇಗುವಳ್ಳಿಯಲ್ಲಿ ಸಾರಾಯಿ
ಮಾಡುತ್ತಿದ್ದವಳನ್ನು ಒಬ್ಬ ದುರಾತ್ಮನು ಹತ್ತು ರೂಪಾಯಿಗೋ
ಸ್ಕರ ದೊಣ್ಣೆಯಿಂದ ಹೊಡೆದು ಕೊಂದನು. ಈಗ ಮುಂಡಗದ್ದೆ
ಯಲ್ಲಿ (ಕಣಗಲ್‌ಕೊಪ್ಪ) ಒಬ್ಬ ಹುಡುಗಿಯನ್ನು ಖೂನಿ ಮಾಡಿ
ದ್ದಾರೆ. ಮತ್ತು ಮಾದ್ದೂರು ಪ್ರಾಂತ್ಯ ಒಬ್ಬನನ್ನು ಕೊಂದು ಸುಟ್ಟು
ಹಾಕಿದಾರೆಂದು ಹೇಳುತ್ತಾರೆ.—ಇಲ್ಲಿ ಮುನಿಸಿಪಾಲಿಟಿಯ ವಿಚಾರ
ತುಂಬಾ ಶೋಚನೀಯವಾಗಿದೆ. ಜಾಡಮಾಲಿಗಳ ಕೆಲಸಕ್ಕೆ ಕೈಲಾಗ
ಕೊಳೆಯರನ್ನು ನೇಮಿಸಿದಾರೆ. ಅವರ ಕೆಲಸಗಳಾದರೋ ವಿಪರೀ
ತವಾಗಿವೆ ರಸ್ತೆಗಳನ್ನು ದುರಸ್ತು ಮಾಡಬೇಕಾದರೆ ಅವರನ್ನೇ
ಹಿಡಿದು ಮಾಡಿಸುತ್ತಾರೆ. ಬಾಕಿ ಸಮಯದಲ್ಲಿ ಸರ್ಕಾರಿ ನೌಕ
ರರು ಕೇಳಿ ಎಲೆ ತಂದು ಕೊಡಬೇಕಂತೆ. ರಸ್ತೆಗಳನ್ನು ದುರಸ್ತು
ಮಾಡುವದಕ್ಕೆ ಮುನಿಸಿಪಾಲಿಟಿಯವರು ಯಾಕೆ ಸರಿಯಾದ ಕಂ
ಟ್ರಾಕ್ಟುದಾರರನ್ನು ನೇಮಿಸುವದಿಲ್ಲವೋ ಮತ್ತು ಆ ಬಾಬಿಗಾಗಿ
ಪ್ರಜೆಗಳು ಕಂದಾಯ ಕೊಡುವದರಿಂದ ಸರಿಯಾದ ಆರೋಗ್ಯಕಾ
ರ್ಯಗಳು ಬೆಳಸದಿದ್ದರೆ ಯಾರಿಗೆ ತಾನೇ ಸುಖವುಂಟೋ ತಿಳಿಯ
ದು. ಅನೇಕ ಸ್ಥಳಗಳಲ್ಲಿ ಚರಂಡಿ ರಸ್ತೆ ಮುಂತಾದ್ದುಗಳು ಅಚು
ಕಟ್ಟಿಲ್ಲದೆ ಮಳೆಗಾಲದಲ್ಲಿ ಬಹು ಘಾಸಿಗೆ ಕಾರಣವಾಗುತ್ತದೆ.—
ಕಳೆದ ಸೋಮವಾರ ಇಲ್ಲಿನ ಗಂಧದ ಕೋಠಿಯಲ್ಲಿ ಗಂಧವೆಲ್ಲಾ
ಹರಾಜು ಆಯಿತು. ಬೊಂಬಾಯಿ ಮುಂತಾದ ಸ್ಥಳಗಳಿಂದ ಸಾಹು
ಕಾರರು ಬಂದು ಹಾಜರಾಗಿದ್ದರು.

ಚಿತ್ರದುರ್ಗ.—ನವಂಬರ್ ತಿಂಗಳಿಂದ ಪ್ಲೇಗಿನ ಉಲ್ಬಣ
ಕಮ್ಮಿಯಾಗುತ್ತಾ ಬಂದಿದೆ ಕ್ಯಾಂಪುಗಳಲ್ಲಿರತಕ್ಕವರು ಕಳೆದ
ನವಂಬರು ೧೭ ನೇ ತಾರೀಖಿನಿಂದ ಅವರವರ ಮನೆಗಳನ್ನು ತಿರ್ಗ
ಪಕ್ಷ ಮಾಡಿಸಿಕೊಂಡು ಊರಲ್ಲಿ ಹೋಗಬಹುದೆಂತ ಗವರ್ನಮೆಂ
ಟು ಅಧಿಕಾರಿಗಳು ಪ್ರಸಿದ್ಧಪಡಿಸಿದರು ಅಷ್ಟರಲ್ಲಿ ಪುನಃ ಪ್ಲೇಗ್
ಕೇಸಾಯಿತು. ಅದರಿಂದ ಗವರ್ನಮೆಂಟು ಅಧಿಕಾರಿಗಳು ಸಧ್ಯಕ್ಕೆ
ಊರಲ್ಲಿ ಹೋಗಕೂಡದೆಂದು ಪ್ರಸಿದ್ಧಪಡಿಸಿದರು. ಅನಂತರ ೪—
೧೧ ದಿವಸ ಏನೂ ಗಲಾಟೆ ಇರಲಿಲ್ಲ. ಅದರಿಂದ ನವಂಬರ್ ೨೫
ನೇ ತಾ॥ ನಂತರ ಜನಗಳು ಊರಲ್ಲಿ ಹೋಗಬಹುದೆಂದು ಅಧಿಕಾ
ರಿಗಳ ಅಪ್ಪಣೆಯಾಯಿತು. ಈಚೆಗೂ ಅಲ್ಲಲ್ಲಿ ಇಲಿಗಳೂ ಅಳಲು
ಗಳೂ ಸಾಯುತ್ತಿಂಬ ವರ್ತಮಾನ ಇದ್ದೇ ಇತ್ತು. ಜನಗಳು ಊರಲ್ಲಿ
ಹೋಗಲಿಕ್ಕೆ ಹೆದರಿ ಹಿಂದು ಮುಂದು ನೋಡುತ್ತಿದ್ದರು. ಡಿಸೆಂ
ಬರ್ ತಿಂಗಳು ಹುಟ್ಟಿದನಂತರ ವ್ಯಾಪಾರಸ್ಥರಲ್ಲಿ ವಿಶೇಷ ಜನಗ
ಳೂ, ಕೆಲವು ಬ್ರಾಹ್ಮಣರೂ ಅವರವರ ಮನೆಗಳಿಗೆ ಹೋಗಿ ಸೇರಿ
ಕೊಂಡರು. ಈ ತಾರೀಖಿನವರಿವಿಗೆ ಸುಮಾರು ನೂರಾರು ಮನೆಗ
ಳವರು ಊರಲ್ಲಿ ಹೋಗಿಬಿಟ್ಟರು. ಇನ್ನು ಕೆಲವರು ಹೋಗುತ್ತಿ
ದ್ದಾರೆ. ಬಾಕಿಯವರು—ತುಮಕೂರು, ದಾವಣಗೆರೆಗಳವರು ಅನು
ಭವಿಸಿದ ಕಷ್ಟಗಳನ್ನು ತಿಳಿದಿರತಕ್ಕವರಾದ್ದರಿಂದ ಈ ಚಳಿಕಾಲ
ತೀರಿದ ನಂತರ ಊರಲ್ಲಿ ಹೋಗೋಣವೆಂತ ಯೋಚಿಸಿಕೊಂಡು
ಕ್ಯಾಂಪುಗಳಲ್ಲೇ ಇದ್ದುಬಿಟ್ಟಿದ್ದಾರೆ.—ಈಗ ಚಳಿಗಾಲ. ಕ್ಯಾಂಪು
ಗಳಲ್ಲಿರತಕ್ಕವರು ಅದರಿಂದ ಬಹಳ ಬಾಧೆ ಪಡುತ್ತಿದ್ದಾರೆ. ಅದ
ರಲ್ಲೂ ಅಲ್ಲಲ್ಲಿ ಛಳಿ, ಜ್ವರ, ತಲೆನೋವು ಇದ್ದೇ ಇವೆ.—ಸಬ್
ಜಡ್ಜ್ ಕೋರ್ಟು ನೌಕರ್ ಪ್ಯಾದೆ ಚಿಕ್ಕನಾಯಕನಹಳ್ಳಿ ಭೀಮರಾ
ಯರ ೨೦ ವರ್ಷದ ಹೆಂಡತಿ, ೧೭ ವರ್ಷದ ಅಳಿಯ ತಂಗಿ, ಇವರಿ
ಬ್ಬರೂ ವಿಕಾಲದಲ್ಲಿ ಅವರಿದ್ದ ಕ್ಯಾಂಪಿನ ಬಳಿ ಭಾವಿಯಲ್ಲಿ
ಬಿದ್ದು ಮೃತಪಟ್ಟರು. ಆಗ ಭೀಮರಾಯರು ಇರಲಿಲ್ಲ. ಅವರ
ತಂದೆ ವಗೈರೆಯವರು ಆ ಹೆಣಗಳನ್ನು ಸುಡಿಸದೆ ಭೂಮಿಯಲ್ಲಿ
ಹೂಳಿಸಿದ್ದರು. ನಾಲ್ಕೈದು ದಿನವಾದ ನಂತರ ಸದರಿ ಭೀಮರಾ
ಯರು ಬಂದು ಆ ಹೆಣಗಳನ್ನು ಹೊರಗೆ ತೆಗೆಯಿಸಿ ಸುಡಿಸಿಬಿಟ್ಟು
ಸತ್ತವರಿಗಾಗಿ ಅವರ ಕರ್ಮಗಳನ್ನು ನಡೆಯಿಸಿದರು. ಈ ದುಃಖ
ವು ಭೀಮರಾಯರಿಗೆ ಬಹಳ ಹೆಚ್ಚಾಗಿದೆ.—ಚೀಫ್ ಕೋರ್ಟು
ಜಡ್ಜ್ ಮೆ॥ ಹೆಚ್. ವಿ. ನಂಜುಂಡಯ್ಯನವರು ಈ ತಿಂಗಳು ೨೦ ನೇ
ತಾರೀಖಿಗೂ, ಸೀನಿಯರ್ ಕೌನ್ಸಲರ್ ಮೆ॥ ಶ್ರೀನಿವಾಸಯ್ಯಂಗಾ
ರ್ಯರು ೨೦ ನೇ ತಾರೀಖಿಗೂ ಇಲ್ಲಿಗೆ ದಯಮಾಡಿಸಿದ್ದು, ೨ ನೆ
ಯವರು ೨೩ ನೇ ತಾ॥ ನಲ್ಲಿ ಹಿರಿಯೂರಿಗೂ, ೧ ನೆಯವರು ೨೪
ರಲ್ಲಿ ಹೊಳಲ್ಕೆರೆಗೂ ಪ್ರಯಾಣ ಮಾಡಿದರು. ಈ ಉಭಯ ದೊಡ್ಡ
ಮನುಷ್ಯರಿಗೂ ಇಲ್ಲಿನ ಅಧಿಕಾರಿಗಳು ಮ್ಯುನಿಸಿಪಲ್ ಗಾರ್ಡ
ನಲ್ಲಿ ಔತನ ಮುಂತಾದ ವಿನೋದಗಳನ್ನು ಬಹಳ ಚನ್ನಾಗಿ ನಡೆ
ಯಿಸಿದರು ಈ ವಿನೋದಗಳಲ್ಲಿಯೇ ಕಾಲಕಳೆಯಿತು. ಮೆ॥
ಶ್ರೀನಿವಾಸಯ್ಯಂಗಾರ್ಯರು ಈ ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡಿದವರು.
ಇವರ ಅದಾಲತ್ ನಿಷ್ಪಕ್ಷಪಾತವಾದ್ದಾಗಿದ್ದು, ಪ್ರಜೆಗಳನ್ನೆಲ್ಲಾ ಸ್ವಂತ
ಮಕ್ಕಳಂತೆ ಕಾಪಾಡಿದವರು. ಅದರಿಂದ ಎಲ್ಲಾ ಪ್ರಜೆಗಳಿಗೂ
ಇವರಲ್ಲಿ ಬಹಳ ನಂಬಿಕೆ, ಪ್ರೀತಿ, ವಿಶ್ವಾಸ ಸಹ ಇರುತ್ತೆ. ಹಾಗೂ
ಇವರೂ, ಮೆ॥ ಸಿ. ಮಾದ್ವಯ್ಯನವರೂ ಸದ್ಯದಲ್ಲಿ ರಿಟೈರ್ ಆಗುತ್ತಾ
ರೆಂಬ ವರ್ತಮಾನ ಈ ಪ್ರಾಂತ್ಯದಲ್ಲಿ ಹೆಚ್ಚಾಗಿದೆ. ಅದ್ದರಿಂದ ಮನ
ಸ್ಸಿನೊಂದ ಪ್ರಜೆಗಳು ಇವರನ್ನು ಕಂಡು, ತಮ್ಮ ವಿಶ್ವಾಸವನ್ನು
ಪ್ರದರ್ಶನ ಮಾಡಬೇಕೆಂದು ಬಹಳ ಪ್ರಯತ್ನಪಟ್ಟರು. ಮೇಲಿನ
ಕಾರಣಗಳಿಂದ ಅವರಿಗೆ ಅವಕಾಶ ದೊರಕಲಿಲ್ಲ. ಸತ್ಯವಂತರಾದ
ಇವರೂ ಮೆ॥ ಸಿ. ಮಾದ್ವಯ್ಯನವರೂ ರಿಟೈರ್ ಆಗತಕ್ಕದ್ದು ಪ್ರಜೆ
ಗಳಿಗೆಲ್ಲಾ ಬಹಳ ಸಂಕಟವೇ ಸರಿ —ಚಿಲ್ರೆ ನೌಕರರ ವಿಷಯ
ಹೇಳಲಿಕ್ಕೆ ಸಾಧ್ಯವಿಲ್ಲ. ದೊಡ್ಡ ಆಫೀಸರುಗಳ ಮೇಲೆ ಬಂದಿರತ
ಕ್ಕ ಕೇಸುಗಳು ಮೂರು. ಚಳ್ಳಕೆರೆತಾಲ್ಲೂಕು ಪೊಲೀಸ್ ಇನ್ಸ್ಪೆ
ಕ್ಟರ್, ದಫೇದಾರ್ ವಗೈರೇರ ಮೇಲೆ ಬಂದಿರತಕ್ಕ ನೋಟೀಸ್‌ಮೆ
ಯಲ್ಲಿ ಫಿರ್ಯಾದಿಯಾಗಿರತಕ್ಕ ಸಾಹುಕಾರ ಸಬ್ ಸ್ಟೇಷನ್ ಪೊಲೀ
ಸ್ ದಫೇದಾರ್ ಮಾಧೋರಾಯನ ಮೇಲೆ ಸಾಹುಕಾರ ಬಾಬು ಭೋ
ಗ್ ಕೆ. ಶಿವಪ್ಪನ ಬಾಬತು ೫೦೦ ರೂ. ಖರೀದಿ ಬಾಳತಕ್ಕ ಬಂಗಾ
ರದ ಸರಿಗೆ ಕದ್ದನೆಂತ ಫಿರ್ಯಾದು ಬಂದು ಅದನ್ನು ವಿಚಾರಿಸತಕ್ಕ
ದ್ದರಲ್ಲಿ ಇನ್ಸ್ಪೆಕ್ಟರ್, ದಫೇದಾರ್ ವಗೈರೇರು ತಪ್ಪಿತ ಮಾಡಿದಾರೆಂ
ಬುವದೇ ಫಿರ್ಯಾದಿಯ ಸಂಗತಿ. ಈ ಕೇಸಿನಲ್ಲಿ ಅಪರಾಧಿಗಳು ನಿರ್ಭ
ವಿಚಾರಣೆ ಬಗ್ಗೆ ಅಫಿಡವಿಟ್ ಆಗಿದಾರೆ.—ಹೊಸದುರ್ಗದ ಇನ್ಸ್ಪೆಕ್ಟ
ರು ಮೆ॥ ಹರೀಶಿಂಗರ ಮೇಲೆ ಬಂದಿದ್ದ ಕೇಸಿನಲ್ಲಿ ಅಪರಾಧಿಗೆ
ಬಿಡುಗಡೆಯಾಯಿತು.—ದಾವಣಗೆರೆ ಅಮಲ್ದಾರ್ ಮೆ॥ ವೆಂಕಟೇಶಯ್ಯ
ನವರ ಮೇಲೆ ಬಂದಿರತಕ್ಕ ದುರುವಿನ ತೆಗೆದುಕೊಂಡರೆಂಬ ಅಪ
ವಾದದ ಕೇಸಿನಲ್ಲಿ ಮೆ॥ ವೆಂಕಟೇಶಯ್ಯನವರಿಗೆ ಅಮಲ್ದಾರಿ ತಪ್ಪಿ
ಆ ಸ್ಥಳಕ್ಕೆ ಬೇರೆ ಅಮಲ್ದಾರರು ಬಂದರು. ಬಾಕೀ ವಿಷಯ ಗೊ
ತ್ತಾಗಿಲ್ಲ. ಪ್ರೈವೇಟ್‌ಮೆಂಟಾಗಿ ವಿಚಾರಣೆ ನಡೆಯುತ್ತಲಿದೆ
ಎಂತ ತಿಳಿಯಬರುತ್ತೆ.

ಕಾಲೀನ್ಸ್‌ಪೇಟೆ.—ಕಳೆದ ೯ ನೆ ತಾರೀಖು ಮಧ್ಯರಾತ್ರಿಯ
ಲ್ಲಿ ಅಡ್ವೋಕೇಟ್ ವೈದ್ಯನಾಥೈಯನವರ ಮನೆಯಲ್ಲಿ ಭಾರಿ ಕಳ್ಳತ
ನ ನಡೆಯಿತು. ಕಳ್ಳರು ಬಹು ಆಶ್ಚರ್ಯವಾಗಿ ಅವರ ಗುಡಿಸಲು
ಗಳಿಂದ ಅನೇಕ ಪೆಟ್ಟಿಗೆಗಳನ್ನು ಸಾಗಿಸಿದರು. ಕಡೆಯಲ್ಲಿ ವೈದ್ಯ
ನಾಥೈಯನವರು ಎಚ್ಚೆತ್ತು, ಕೀರಲು ಧ್ವನಿಯಿಂದ ಅರಚುತ್ತಾ
ಕೂಗುತ್ತಾ ಅಬ್ಬರಿಸುತ್ತಾ ಬಂದುದರಿಂದ ಕತ್ತಲೆಯ ಅವಾಂ
ತ್ರಕ್ಕೆ ಇವರು ಹೀಗೆ ಗಲಾಟೆ ಮಾಡುತ್ತಾರೆಂತಲೂ ಈ ಕಿರುಬನು
ಅವರ ಮನೆಬಳಿಗೆ ಹೋಗಿರುವದೆಂದೂ ಒಂದು ವೇಳೆ ಬೆಂಕಿಯು
ಅವಾಯವೆಂತಲೂ ಮಲಗಿದ್ದವರೆಲ್ಲಾ ನೆನಸಿದ್ದು ಕಡೆಗೆ "ದೊಂಗ
ಲು, ದೊಂಗಲು, ಅಂತಾ ಪೋಯಿನದಿ, ಪಟ್ಟುಕೋವಿ, ಪಟ್ಟು
ಕೊಂಡಿ" ಎಂಬ ಮಾತುಗಳನ್ನು ಕೇಳಿದ ಒಡನೆ ಲಾಯರ್ ಸಂ
ತಾನೈಯಂಗಾರ್ಯರು, ಹೆಡ್ ಮುನ್ಷಿ ರಾಮಣ್ಣನವರು ಎ. ಅಮಲ್ದಾ
ರ್ರವರು ಮುಂತಾಗಿ ಎಲ್ಲಾ ಕಡೆಯಲ್ಲೂ ಹುಡುಕುತ್ತಾ ಕಳ್ಳರು
ಸಿಕ್ಕದೆ ಹೋದರು. ಅವರು ತೆರೆದು ಹೋಗಿದ್ದ ಪೆಟ್ಟಿಗೆಗಳಲ್ಲಿ
ಕೆಲವು ಸಿಕ್ಕಿದವು. ಕಳ್ಳರೂ ಗಾಬರಿಯಿಂದ ಓಡಿದರು. ಸುಮಾ
ರು ಆರುನೂರು ರೂಪಾಯಿ ನಷ್ಟವಾದಂತೆ ಪೊಲೀಸಿಗೆ ಪಟ್ಟಿ
ಕೊಟ್ಟರು. ಅಷ್ಟರ ಮೇಲೆ ಅನಿಬೆಸೆಂಟರು ಪತ್ರ ತರದೂದಿನಲ್ಲಿ
ಇದ್ದಾರಂತೆ. ಪೊಲೀಸ್ ವಿಚಾರಣೆಯೂ ಪತ್ರ ತರದೂದೂ ಬರೀ
ಬಹ್ಯಾಚರಣೆಗಳಲ್ಲೂ ವಾಗ್ಧೋರಣೆಯಲ್ಲಿಯೂ ಮಾತ್ರ ಇದ್ದರೆ
ಪೊಲೀಸಿನಿಂದ ಸಹಾಯವಿಲ್ಲ.—ಪ್ಲೇಗ್ ಅವಾಂತ್ರ ಊರಲ್ಲಿ ತಪ್ಪಿ
ಲ್ಲ. ಕಳೆದ ಒಂದು ವರ್ಷದಿಂದಲೂ ಪ್ಲೇಗ್ ಇದ್ದೇ ಇದೆ.
ಸರ್ಕಾರದವರು ಮೋಚಿ ಜನರನ್ನು ಊರಿನ ಬಹು ಸಮೀಪವಾದ
ಬಹು ಜನರು ತಿರುಗಾಡುವ ರಸ್ತೆ ಪಕ್ಕದಲ್ಲಿಯೇ ಸೇರಿಸುವಂತೆ
ಯಾತಕ್ಕೆ ಅಸ್ಪದವಾಯಿತೋ ಬಹು ಸಂಶಯವಾಗಿದೆ. ಅವರಲ್ಲಿ
ಪ್ಲೇಗ್ ಮರಣಗಳು ರಸ್ತೆ ಬಾಜುದಲ್ಲಿ ಆಗುವಂತೆ ಆಸ್ಪದವಾಗಿ,
ಮಾಗಡಿ ರಸ್ತೆಯಲ್ಲಿರುವ ಸಾವಿರಾರು ಜನರಿಗೂ ಸಮೀಪದ ಗುಡಿಸ
ಲಿನವರಿಗೂ ಹಿಂಸೆಗೆ ಆಸ್ಪದವಾಯಿತು. ಆ ಜನರಿಗೆ ಸ್ವತಹಾ
ಬುದ್ಧಿಯಿಲ್ಲ. ಆದರೆ ಸರ್ಕಾರದವರು ನಿಶ್ಚಿಂತರಾದರೆಂತ ಹೇಳ
ಲಾಗದಿದ್ದರೂ ಈ ಮೋಚಿ ಜನರನ್ನೂ ಹಕಾಲಿಯವರನ್ನೂ ರಸ್ತೆ
ಯ ಉಭಯಕಡೆ ಸೇರಿಸಿದ್ದು ಬಹು ಅತ್ಯಂತ ಕಠಿಣವಾಗಿ ಬಹು ಜನ
ರಿಗೆ ತುಂಬಾ ಅಸಮಾಧಾನಕರವಾಗಿದೆ. ಹೆಚ್ಚು ಸಮೀಪದವರು
ಬುದ್ಧಿ ಪುರಾಂಬರಿಸಿದರೆ ಚನ್ನಾಗಿದೆ, ಇಲ್ಲವೇ ಕರ್ನಲ್ ಸ್ಮಿತ್
ಸಾಹೇಬರು ದಯವಿಟ್ಟು ತಕ್ಕ ಪುರಾಂಬರಿಕೆ ಮಾಡುವ ವರಿಗೂ
ಪ್ಲೇಗ್ ಸೋಂಕು ನಿವರ್ತಿ ಆಗಲಾರದೆಂತ ತೋರುತ್ತೆ. ನಿಜವಾ
ದ ಪ್ರೀತಿಯಾದ ಪರ್ವವೂ ಇಲ್ಲದೆ ಬರೀ ಡಂಭಾಚಾರದಿಂದ ಮಾಡು
ವ ಯಾವ ಉದ್ಯೋಗವಾದರೂ ಪ್ರಜಾಪರಿಪಾಲನೆಗೆ ಎಂದಿಗೂ
ಸಾಕಾಗುವದಿಲ್ಲವು.—ಅಂಗಡಿ ಬೀದಿಯಲ್ಲಿ ಕಳ್ಳತನವನ್ನು ತಪ್ಪಿ
ಸುವಂತೆ ವರ್ತಕರೂ ಕಾವಲುಗಾರನಿಗೆ ಸ್ವಂತ ಬಂಬಳ ಕೊಡು
ತ್ತಾರಂತೆ ಪೊಲೀಸ್‌ನವರು ರಾತ್ರಿ ವೇಳೆ ಅಂಗಡಿ ಬೀದಿಯಲ್ಲಿ
ಮಲಗುವದರಿಂದ ಅವರಿಗೂ ಏನಾದರೂ ಇನಾಂ ಸಿಕ್ಕಬಹುದಲ್ಲ
ವೇ? ಉರುಕಾವಲು ಗ್ರಾಮಸ್ಥರ ಕೆಲಸವೋ ? ಪೊಲೀಸಿನವರು
ಬಿಚ್ಚು ಅಲಂಕಾರ ತೋರಿಸಿದರೆ ಸಾಕೋ ? ಅವರ ಕೆಲಸವೇ
ನೋ ಅವರಿಗೆ ಚನ್ನಾಗಿ ತಿಳಿಯದಿದ್ದರೆ ಅಥವ ತಕ್ಕ ಲಾಯಖ್
ದಾರರು ಇಲ್ಲವಾದರೆ ಬರೀ ಪೋಟೋಗ್ರಾಫ್ ಸಾಲದು. ಪೆಡ್‌ಗಳಲ್ಲಿ
ರೋಗವಿಲ್ಲ. ಆದರೆ ಊರಿಂದ ಜನರು ಹೊರಗೆ ಬರುತ್ತಾರೆ
ಯಾಕೆಂದರೆ ಕಳೆದ ೬ ತಿಂಗಳಿಂದಲು ಜನರು ಕೆಲಕೆಲವರು
ಮಾತ್ರ ಬರುತ್ತಾರೆ ಎಲ್ಲರೂ ಒಂದೇ ಸಾರಿ ಬಂದು ಒಂದೇ
ಸಾರಿ ಹೋಗದೆ ಒಂದೊಂದು ಸಾರಿ ಸ್ವಲ್ಪಸ್ವಲ್ಪ ಬರುತ್ತಾರೆ.
ಇದು ಬಹು ಆಶ್ಚರ್ಯವು. ಹೀಗಾದರೂ ಇನ್ನೂ ಊರು ಸಂಪೂರ್ಣ
ವಾಗಿ ಖಾಲಿಯಾಗಲಿಲ್ಲ. ಇನ್ನೂ ೩೦೦ ಮನೆಗಳುಂಟಂತೆ.
ಯುಗಾದಿಯ ವರಿಗೂ ಜನರು ಊರು ಸೇರುವಹಾಗಿಲ್ಲ. ಸ್ಕೂಲು
ಗಳು ತೆರೆಯುವಂತಿಲ್ಲ. ಈ ಸ್ಥಳದಲ್ಲಿ ಜನರಾಗಲೀ ಸರ್ಕಾರದವ
ರಾಗಲೀ ಖಂಡಿತವಾಗಿ ಒಂದು ನಿರ್ಧಾರ ಮಾಡುವಂತಿಲ್ಲ.
ಎಲ್ಲಾ ಬೇಕಾಬಿಟ್ಟಿಯಂತೆ ತೋರುತ್ತೆ. ಯಾವಕಡೆ ನೋಡಿದರೂ
ದಿಕ್ಕು ಪಾಲಾಗಿ ಜನರು ಓಡಿ ಊರಿನ ಬಹು ಸಮೀಪದಲ್ಲೇ
ಗುಡಿಸಲುಗಳನ್ನು ಗುಂಪು ಗುಂಪಾಗಿ ಕಟ್ಟಿ ಊರಿನಂತೆಯೇ
ಎಲ್ಲಾ ವಿಧ ಗಲಭೆ ನಡಿಸುತ್ತಾರೆ.—ಧಾರಣೆ ಧಡಾಪಾಗಿದೆ. ಸ್ಕೂಲು
ಗಳೆಲ್ಲಾ ಅರ್ಧಪಾಲಾಗಿವೆ. ಪೋಸ್ಟ್ ಆಫೀಸ್ ಮಾತ್ರ ಇನ್ನೂ
ಊರಲ್ಲೇ ಇದೆ. ಈ ನೆವದಿಂದ ಬಹು ಜನರು ಪ್ರತಿದಿನ ಊರಿಗೆ
ಹೋಗಿ ಅಲ್ಲಿಂದ ಪ್ಲೇಗ್ ಸೋಂಕು ತರುತ್ತಿದ್ದಾರೆ. ಮಾಗಡಿ
ರಸ್ತೆಯಲ್ಲಿ ಜೋಪಡಿಗಳೂ ಗದ್ದಲವೂ ಬಹು ಜಾಸ್ತಿ. ಊರಿನ ಹಡಿ
ಯ ಸಮೀಪದಲ್ಲೇ ಊರಿಗೆ ಅಂಟಿಕೊಂಡು ಬಹು ಜನರು ಸೇರಿ
ದ್ದಾರೆ. ಈ ಕಾರಣಗಳಿಂದ ಯಾವ ಅಪಾಯವು ಸಹ್ಯ ತಪ್ಪದೆ
ಉಳಿಯ ಕಾಣದೆ ಪ್ರಜಾ ಹಿತಚಿಂತನೆ ಸಾಲದೆ ಮಾಡಬೇಕಾ
ಗಿದೆ.

ಜ್ವರ ಹರಿ. ೪

ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುನಿಸಿಫ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಔಷಧದಿಂದ ಅನೇಕ ಮಂದಿ ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೪ ಆಣೆ, ೧ ರೂ., ೧—೪ ರೂ., ರೂ. ೨—೧೨ ಆ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಟಿ ಮು ೦ ಕ ರ್ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಆತಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಟಿಮ್ಮಿಯ ಒಮಂ ಕರ್ಪೂರವನ್ನು ನಾನೂ ನನ್ನ ಕಾವೇರಿ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೀವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧನೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಶಾಪುಗಳಲ್ಲೂ, ಔಷದ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹವಿಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ನೆಕಂಡ್ ಲೇಸ್ ಲೈನ್. ಮದರಾಸ್.

ಶರೀರಸುಖಕ್ಕೆ ಬಹು ಸುಲಭ ಉಪಾಯವು.

ಅಂದರೆ ?

ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಹೇಗೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಪರಿಭ್ರಮಿಸುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಅನೇಕ ಧಾತುಗಳ ಸಮ್ಮೇಳನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ !!

ಮಿಂಚಿನ ಪದಕವು. ಮಿಂಚಿನ ಉಂಗುರವು.



ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು —ಅಶಕ್ತಿ, ಅಜೀರ್ಣ, ಕೈಕಾಲುಜಡತೆ, ಸಂಧಿವಾತ, ಕಟಿವಾತ, ತಲೇನೋವು, ಅರತಲೇನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ಅಸ್ವನಿದ್ರೆ, ಮಲಬದ್ಧತೆ ಮೂಲವ್ಯಾಧಿ, ಉಬ್ಬಸ, ಕೆಮ್ಮು, ಕಫ, ಗಂಡಮಾಲೆ, ಜ್ವರ, ಉದರವಾತ, ಕಾಲಿಡದ ವ್ಯಾಧಿ ಸ್ತ್ರೀಯರ ಬಾಣಂತಿ ರೋಗ, ತಲೆತಿರುಗುವಿಕೆ, ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುನಷ್ಟವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಾಧಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ —ಪದಕವು ಎದೆಯ ಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ವ್ಯಾಪ್ತವಾಗುವದು ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು ಕ್ರಯ ಪ್ರತಿ ೧ ಪದಕಕ್ಕೆ ೧—೨—೦. ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೪ ಆಣೆ ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗವನ್ನೂ, ಒಮ್ಮೇಲೆ ೧೨ ನಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನೂ ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ —ಉಂಗುರ ತಯಾರಾಗ ಬೆರಳಿನ ಅಳತೆ ಕಳುಹಿಸಬೇಕು. ಉಪಾಧಿಯು ಗುಣಹೊಂದಿದ ನಂತರ ಮುಂದೆ ೧ ಯಾ ೨ ತಿಂಗಳು ವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯ ಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೬ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವ್ಹಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮೂಡಗಾವ್ಕರ, ಮರ್ಚಂಟ್,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ
Post Bilgi, North Kanara District

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವ್ರೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

?

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ? ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ! ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳ ದಾರವಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ನಿಲುಯುತಿಯುಂಡಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೋ ಮಿ ಯೋ ಪ ಸಿ ಯಾ.

ಕಷ್ಟಕ್ಕೆ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ನಾಯಿಗಳು, ನರ ಹೊರಳುವದು, ಉಳುಕು, ಶೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೪ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೪ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೪ ಆ. ಡಬ್ಬಿನನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮಿಯೋಪಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಹುಂಬಿ ೪ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪಿಯಾ ಕಂಪೆನಿ. ೨೩ ಸೆಕಂಡು ಲೇಸ್ ಲೈನ್. ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೪—12—1904 ರಿಂದ 15—12—1904 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	19	18	99	[illegible]
ಮೈಸೂರು ,,	36	33	76	[illegible]
ಬೆಂಗಳೂರು ಡಿಸ್ಟ್ರಿಕ್ಟ್	67	53	121	1[illegible]
ಮೈಸೂರು ,,	78	63	162	1[illegible]
ಕೋಲಾರ್ ,,	21	16	93	[illegible]
ಕೋಲಾರ್ ಚಿನ್ನದ ಗಣಿಗಳು	19	6	6	[illegible]
ತುಂಕೂರು ಡಿಸ್ಟ್ರಿಕ್ಟ್	32	26	31	2[illegible]
ಹಾಸನ ,,	12	9	22	1[illegible]
ಚಿತ್ರದುರ್ಗ ,,	11	19	30	[illegible]
ಕಡೂರ್ ,,	32	19	43	3[illegible]
ಶಿವಮೊಗ್ಗ ,,	31	29	65	[illegible]
ಜುಮ್ಲಾ.	343	286	778	56[illegible]

ತಾರೀಖಾದ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರ ಮಾರ್ಗಶಿರ ಬಹುಳ ಅಮಾವಾಸ್ಯ ಗುರುವಾರದಿಂದ ಪುಷ್ಯ ಶು ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಜನವರಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
5	ಗುರು *	ಅಮಾ	11-30	ಮೂ	0 26	[illegible]
6	ಶುಕ್ರ .	ಪಾಡ್ಯ	11-50	ಪೂಷಾ	1-24	[illegible]
7	ಶನಿವಾ .	ಬಿದಿಗೆ	43 30	ಉತ್ತಾ	3-50	[illegible]
8	ರವಿವಾ	ತದಿಗೆ	46 38	ಶ್ರ	7-27	[illegible]
9	ಚಂದ್ರ ¶	ಚೌತಿ	50-45	ಧ	12 12	[illegible]
10	ಕುಜ	ಪಂಚಮಿ	55-35	ಶ	17 45	[illegible]
11	ಬುಧ ,,	ಷಷ್ಠಿ	60-0	ಪೂಭಾ	21-1	[illegible]

* ಸರ್ವತ್ರ ಅಮಾವಾಸ್ಯ, ತ್ರಿಗ್ರಹಯೋಗ ಹೊಸ್ತಮಾ[illegible] ರಂಭ. , ಚಂದ್ರೋದಯ. ¶ ದೂರ್ವಾಗಣಪತೀವ್ರತ ,, ಷಷ್ಠಿ . ಸುಬ್ರಹ್ಮಣ್ಯೋತ್ಸವ.

ಪೇಟೆ ಧಾರಣೆ.

ವಿನಸು.	ಮೈಸೂರು.	ಬೆಂಗಳೂರು.
ಸಣ್ಣ ಅಕ್ಕಿ ಪಲ್ಲ ೧ಕ್ಕೆ	ರೂ. ೧೧—೪—೦	೧೧-[illegible]
ಕೆಂಬೂತಿ ಅಕ್ಕಿ ಅವಲ್ ..	.. ೧೦—೨—೦	೧೨-[illegible]
,, ಮಾಯಂ	.. ೯—೪—೦	೧೭-[illegible]
ಜಾವಾಣಿ ಅಕ್ಕಿ	.. ೯—೪—೦	೧೧—೧೭-[illegible]
ಸಣ್ಣಕ್ಕಿ ಅವಲ್	.. ೧೨-೪—೦	೧೭-೪-[illegible]
,, ಮಾಯಂ	.. ೧೧-೪-೦	೧೨-[illegible]
ಕೋಗರೀ ಬೇಳೆ ಪಲ್ಲ ೧ಕ್ಕೆ	.. ೧೧-೪-೦	೧೦-[illegible]
,, ಮಾಯಂ	.. ೧೧—೦—೦	೯-[illegible]
ಹೈ ರಾಗಿ ಪಲ್ಲ ೧ಕ್ಕೆ	.. ೪-೬—೦	೭—೧-[illegible]
ಕಾರಾಗಿ ..	.. ೪—೧೨—೦	೫—[illegible]
ಹುರುಳಿ	.. ೪—೪—೦	೪-[illegible]
ಕಲಸಂದೆ ಪಲ್ಲ ೧ಕ್ಕೆ	.. ೪—೧೨—೦	೪-[illegible]
ಬಿಳೇ ಅವರೆ	.. ೯ ೦—೦	೪-[illegible]
ಹೆಸರು	.. ೯-೪—೦	೯—೪-[illegible]
ಉದ್ದು	.. ೪-೧೪-೦	೪-[illegible]
ಕಡಲೆ	.. ೧೦ ೦—೦	೪—೪-[illegible]
ಎಳ್ಳು	.. ೧೭-೪ ೦	೯—೧೭-[illegible]
ಹುರುಳಿ	.. ೫—೧೨ ೦	೬-[illegible]
ಹರಳು ೧೨೮ ಸೇರಿಗೆ	.. ೯—೪—೦	೬-[illegible]
ಸೀಗೇಕಾಯಿ ಮಣ ೧ಕ್ಕೆ	.. ೨—೪—೦	೨-[illegible]
ಮೆಣಸಿನಕಾಯಿ	.. ೪—೨—೦	೩-[illegible]
,, ಮಾಯಂ	.. ೩—೧೨-೦	೨—೧೭-[illegible]
ಬೆಲ್ಲ ದೊಡ್ಡ ಅಚ್ಚು	.. ೬—೪—೦	ಪು ೧೭-[illegible]
ಒಳ್ಳೆಣ್ಣೆ ಮಣ ೧ಕ್ಕೆ	.. ೪—೦ ೦	೩—೧೭-[illegible]
ಹರಳೆಣ್ಣೆ ,,	೩—೧೨—೦	೩—[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೫—೧೪—೦	೬—೧೦-[illegible]
ಉಪ್ಪು ,,	೯—೦—೦	೪—೧-[illegible]
ಮೆಣಸೇ ಹಣ್ಣು	೧ ೪—೦	೦—೧೪-[illegible]
,, ಹಳೇದು	೦—೧೪—೦	೦—೧೭-[illegible]
ಹುಣ್ಸ	.. ೧೨ ೦—೦	೧೦—೪-[illegible]
ಸೀಮೆಯಿಂದ ಬೆಟ್ಟ ೧ಕ್ಕೆ	.. ೫—೩—೦	೪—೬-[illegible]
ತೆಂಗಿನಕಾಯಿ ೧೦೦ ಕ್ಕೆ	.. ೫—೦—೦	೩—೪-[illegible]
ಅಳಲೇಕಾಯಿ ಮಣ ೧ಕ್ಕೆ	.. ೧—೦-೦	೦—೧೦-[illegible]
ಅಂಟ್ವಾಳದಕಾಯಿ ಮಣ ೧ಕ್ಕೆ	.. ೨—೧೪—೦	೦—೧೦-[illegible]
ಹತ್ತಿ (ಪಾರ್) ಕೆಂಪು	.. ೧೫—೪—೦	೧೫—೪-[illegible]
,, ,, ಹಸಿಮ	.. ೧೫—೧೦—೦	೧೫—೯-[illegible]
,, ,, ಗಟ್ಟಿ ತೊಲ ೧ಕ್ಕೆ	.. ೨೬—೦—೦	೨೪—೩-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	.. ೩೨—೦—೦	೨೭—[illegible]

Printed and Published by the Rev W B Tirwhitt the Proprietor and Manager, Wesleyan Mission Press Mysore 5,1 1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ — ಮೈಸೂರು—ಸನ್ ೧೯೦೫ ನೇ ಇಸವಿ ಜನವರಿ ತಾರೀಖು ೧೨ ನೇ ಗುರುವಾರ. — ಸಂಚಿಕೆ ೩೭

ನಿಮಗೆ ಗೊತ್ತೇ ಇಲ್ಲವೇ!

ಈಗ ಸಿದ್ಧವಾಗಿವೆ. ಎಲ್ಲರಿಗೂ ಬೇಕಾದದ್ದು

1

ವಿಶೇಷ ರೂಪಿಗೆ ಬಂದಿರುವ ೧೯೦೫ ನೇ ಇಸವಿ ಪಂಚಾಂಗ ಸಹಿತವಾದ ಎಸ್. ಜಿ. ಎನ್. ಪಾಕೆಟ್ ಡೈರಿಗಳು ಇವು ವರ್ತಕರು, ಕಂಟ್ರಾಕ್ಟ್ದಾರರು, ದೊಡ್ಡ ಮನುಷ್ಯರು ಮುಂತಾದ ಸಮಸ್ತರಿಗೂ ಅತ್ಯಂತ ಉಪಯೋಗವಾದ ಅನೇಕ ವಿಷಯ ಗರ್ಭಿತವಾಗಿಯೂ ಪ್ರತಿಪುಟಕ್ಕೂ ರೂಲು ... ಎಂದು ಮಾಡಲ್ಪಟ್ಟು ಎಲ್ಲರಿಗೂ ಸಾಧ್ಯವಾಗಿ ... ಕಡಮೆ ಕ್ರಯಕ್ಕೆ ವಿಕರಿಯಾಗುತ್ತಿವೆ ತರಿಸಿ ... ದಲ್ಲಿ ಮಾಯತಿಯಾಗುತ್ತೆ.

ಎನ್.೦ಬರ್ ೧ ಬಿ ನಂ॥

... ಅಂಗ್ಲದ ಚಿಕ್ಕ ... ಡೈರಿಗೆ ೦—೩—೦ | ಮುಚ್ಚಳ ಹಾಕಿ ಕ್ಲಾಸಲ್ ಇಟ್ಟರುವ ಪಾಕೆಟ್ ಡೈರಿಗೆ ೦—೪—೦

... ನಂಬರು ೧೨ ಕಾಪಿ ಒಟ್ಟಾಗಿ ತರಿಸುವವರಿಗೆ ಪೋಸ್ಟು ... ಕಾಸ್ಕು ಬೀಳುವುದಲ್ಲದೆ ಅದೇ ನಂಬರು ೧ ಡೈರಿ ಮಾಫ ... ಗಿ ಕಳುಹಿಸುವೆವು.

... —ಎಂ. ಪಿ. ಪಾಲ್ಲಯ್ಯ, ಕರ್ಣಾಟಕ ಬುಕ್ ಡಿಪೋ,
೨೧, ತಾಲ್ಲೂಕು ಕಚೇರಿ ರೋಡು, ಬೆಂಗಳೂರು ಸಿಟಿ

P. SUBBAROY'S
World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

12

ಪಚ್ಚಕರ್ಪೂರದ ಕಸ್ತೂರಿ ಮಾತ್ರೆ.

ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ... ದರೆ, ಬಾಯಿಯ ದುರ್ಗಂಧವು ಹೋಗುತ್ತದೆ. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಅಫೀಮು ಮೊದಲಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ... ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು ಕ್ರಯ — ... ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ... ವಿ. ಪಿ. ಛಾರ್ಜಿ ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ಬಿ ಮಹಮದ್ ಸಮಾಧಾನಿ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿ ... ದರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತೆ ... ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸಂಪೂರ್ಣ(ತೃಪ್ತಿ)ವಾಗಿರುತ್ತವೆ; ಅದರ ... ವಿಶೇಷ ಪ್ರಯೋಜನವಾಗಿರುವುದು.—ಪ್ರಕಾಶ ... ಇನ್ಸ್ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇ ... ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡುತ್ತವೆ.—... ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ತಿರ್ಲಾರ್.

Apply to :—**P. SUBBAROV,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್,
ಪೋರ್ಟನೋವೊ, ದಕ್ಷಿಣ ಆರ್ಕಾಟ್ ಜಿಲ್ಲಾ.

ಇದು ಗುಣಕಾರಿ.

27

ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ ಸುತ್ತು ರಾಮಾಪುರ. ಇವರ

೧. ಪ್ಲೇಗು ಪರೌಷಧ — ಈ ಪರಿಯಂತರ ಪ್ರತಿಯೊಬ್ಬ ಪ್ಲೇಗು ರೋಗಿಗೂ ಈ ಔಷಧಿಯಿಂದ ಗುಣವಾಗಿದೆ. ಧನಾರ್ಜನೆಗಾಗಿ ಪತ್ರಿಕಾಲಂಕಾರವಾಗಿಸಿಲ್ಲ. ಲೋಕೋಪಕಾರದಿಂದ ಕೀರ್ತಿಯು ಶರೀರವನ್ನು ಪರೀಕ್ಷಿಸಿ, ಬಹು ಧನವ್ಯಯದಿಂದ ಕಂಡುಹಿಡಿಯಲ್ಪಟ್ಟಿತು. ಕೇವಲಾನುಭವದಿಂದ ನಂಬಿಕೆಯಾದೌಷಧಿ. ಗಡ್ಡೆಗೆ ಸವರುವ ಔಷಧಿ ಮತ್ತು ಸೇವಿಸುವ ಔಷಧಿ ಸಹಾ—೬ ಜನಕ್ಕೆ ಸಾಕಾಗುವಷ್ಟಕ್ಕೆ ಕ್ರಯ ೫ ರೂ ಒಬ್ಬರಿಗಾದರೆ ೧॥ ರೂ. ವಿ. ಪಿ. ಚಾರ್ಜಿ ಬೇರೆ.

೨. ಕಸ್ತೂರೀ ಮಾತ್ರೆಗಳು:—ಮಕ್ಕಳ ಎಳವು, ಜ್ವರಾದಿಗಳು, ಹೆಂಗಸರ ಮುಟ್ಟುಕಟ್ಟು, ಗರ್ಭಸ್ರಾವಾದಿಗಳು, ಎಲ್ಲಾ ಜ್ವರ, ವಾತ, ಮೈಕೈ ನೋವು, ಧ್ವಜದಗೆಡ್ಡೆ ಮೊದಲಾದ ೨೦ ರೋಗಗಳು ಗುಣವಾಗುತ್ತೆ. ಅನುಪಾನ ಪತ್ರದಲ್ಲಿ ಎಲ್ಲಾ ಕಾಣಿಸಿರುತ್ತೆ. ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ೧ ರಿಂದ ೬ ರ ವರಿಗೆ ಭಾಂಗಿ ಛಾರ್ಜಿ ೫ ಆಣೆ. ೬ ಸೀಸೆಗೆ ೧ ಸೀಸೆ ಹೆಚ್ಚು ಕೊಡುವೆವು.

೩. ಬಾಧಾಪಹಾರಿಣಿ.—ಎಲ್ಲಾ ಬಗೆ ತಲೆ ನೋವು, ವಾಯುಗಳು, ಉಳುಕು, ಛಳುಕು, ಕೂಡ ಒಡನೇ ಗುಣವಾಗುತ್ತದೆ. ಡಬ್ಬಿ ೧ಕ್ಕೆ ಕ್ರಯ ೮ ಆಣೆ ೬ ಡಬ್ಬಿಗೆ ೧ ಡಬ್ಬಿ ಹೆಚ್ಚು ದೊರೆಯುತ್ತೆ.

೪. ದಂತಸಿತಚೂರ್ಣ.—ಉಬ್ಬುತ್ತಾ ಬೀಳುವ ಹಲ್ಲಿನ ಪಾಕ, ರಕ್ತಸೋರುವುದು, ಬಾಯಿನಾತ, ಎಲ್ಲಾ ಬಗೆಯ ಹಲ್ಲು ನೋವು ಹೋಗುತ್ತದೆ ಡಬ್ಬಿಗೆ ೪ ಆಣೆ ; ೪ ಡಬ್ಬಿಗೆ ೧ ರೂ.

ಏಜಂಟರು —೧. ಕೆ. ಎಸ್. ಕೃಷ್ಣಶಾಸ್ತ್ರಿಗಳು, ಕಳ್ಳದಬೀದಿ, ಮೈಸೂರು ಅಥವಾ,

೨. ಹೆಚ್. ಎಸ್. ರಾವ್ ಅಂಡ್ ಬ್ರದರ್ಸ್, ಬೆಂಗಳೂರು ಸಿಟಿ.

ಅನುಭವಾನಂದ.

5

ಈ ಗ್ರಂಥವು ಅನೇಕ ಮಹನೀಯರಿಂದಲೂ, ಸಮಾಚಾರ ಪತ್ರಿಕೆಗಳಿಂದಲೂ ಯೋಗ್ಯತಾಪತ್ರಿಕೆಗಳನ್ನು ಹೊಂದಿದೆ ಇದರಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ಆತ್ಮವಿಚಾರ, ಮೋಕ್ಷೋಪಾಯ ಮೊದಲಾದ ಅನೇಕ ವಿಷಯಗಳು ಮನೋಹರವಾದ, ನೀತಿಯುಕ್ತವಾದ ಸಾಮ್ಯಕಥೆಗಳಿಂದ ಬರೆಯಲ್ಪಟ್ಟವೆ ಕ್ರಯ ೬ ಆಣೆ ಹಾ ಬೇರೆ

ವಿಳಾಸ.—ಟಿ ರಂಗಸ್ವಾಮಿಶೆಟ್ಟಿ ಅಂಡ್ ಕೋ, ಮೈಸೂರು.

ಶ್ರೀ ತಾಂಬೂಲ.

9

ಇದನ್ನು ಓದಿ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಛಳಿಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧ ೨ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರಿಗೆ ವಿ. ಪಿ. ಛಾರ್ಜಿ ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಟವರ್, ಬೆಂಗಳೂರು ಡಿಸ್ಟ್ರಿಕ್ಟ್. — ಯಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್.

೧೯೦೫ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

3

ಜನವರಿ ತಾ. ೧೦ ರೊಳಗೆ ಸಿದ್ಧವಾಗುತ್ತೆ ಪ್ರಶ್ನೋತ್ತರ ಸಹಿತ. ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷೆಗಳಿಗೆ ತಕ್ಷಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಸರಿಯಾದ ಏರ್ಪಾಡು ಮಾಡಿದೆ.

ಬಾಲಬೋಧ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೭ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ—೧ ಆಣೆ ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈವರೆಗೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನುಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧॥ ಆಣೆ.

ವಿಳಾಸ.—ಯಸ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು.

ಇಸ್ತಿಹಾರ್‌ನಾಮೆ

3

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಲೈನ್ ಮನೆಗಳ ಹರಾಜು.

ಮೈಸೂರು ಪಟ್ಟಣಕ್ಕೆ ಸೇರಿದ ... ಎಂಬ ಸ್ಥಳದಲ್ಲಿ ಇರುವ ಮನೆಗಳನ್ನು ಸನ್ ೧೯೦೫ನೇ ಇಸವಿ ಜನವರಿ ೧೫ನೇ ತಾರೀಖು ... ಗಂಟೆಗೆ ಸದರಿ ಸ್ಥಳದಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿದೆ.

೧. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ೧೦ಕಡಾ ೧೫ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಬೇಕಾಗಿ ಇರುತ್ತೆ. ಆದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ... ದಿವಸಗಳಲ್ಲಿ ಪಾವತಿ ಮಾಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ. ಮೊದಲು ಹರಾಜುದಾರನು ಪುನಃ ಹರಾಜುಮಾಡತಕ್ಕ ಸಂದರ್ಭದಲ್ಲಿ ಸಂಭವಿಸಬಹುದಾದ ನಷ್ಟಕ್ಕೆ ಗುರಿಯಾಗುತ್ತಾನೆ.

೨. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಗೆ ಸದರಿ ಸ್ವತ್ತು ಪುನಃ ಹರಾಜು ಮಾಡಲ್ಪಡುತ್ತೆ. ಇದರಿಂದ ಮ್ಯುನಿಸಿಪಾಲಿಟಿಗೆ ಉಂಟಾಗಬಹುದಾದ ನಷ್ಟಕ್ಕೆ ಮೊದಲು ಹರಾಜುದಾರನು ಗುರಿಯಾಗುತ್ತಾನೆ.

೩ ಹರಾಜಿನಲ್ಲಿ ಸವಾಲುಮಾಡತಕ್ಕ ಜನಗಳು ಮುಂದು ತಮ್ಮ ಸ್ವಂತಕ್ಕೋಸ್ಕರ ಸವಾಲು ಮಾಡುತ್ತಾರೆಯೋ ಯಾ ಏಜಂಟು ಯಾ ಮುಖ್ತಾರೀಕರಾಗಿ ಸವಾಲು ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲು ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

೪. ಹರಾಜು ಕಾಲದಲ್ಲಿ ಬರುವ ದರಖಾಸ್ತುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಅಥವಾ ಹರಾಜು ವಿನಹಾ ಖುದ್ ಖರೀದಿಗೆ ಮನೆಗಳನ್ನು ವಿಲೆವಾರಿ ಮಾಡುವ ಹಕ್ಕನ್ನು ಪ್ರೆಸಿಡೆಂಟರು ಉಳಿಸಿಕೊಂಡಿರುತ್ತಾರೆ.

ತಾ. ೧೪—೧೨—೧೯೦೪.
ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸು. } C. VENKATA RAO, *for President.*

ಬೆಂಗಳೂರು "ಸೂರ್ಯೋದಯ ಪ್ರಕಾಶಿಕಾ

ಬಹಳ ನಿಷ್ಪಕ್ಷಪಾತವಾಗಿಯೂ ಆಶ್ಚರ್ಯವಾಗಿಯೂ ಪ್ರಕಟಿಸಲ್ಪಡುವದು. ಚಂದಾದಾರರಿಗೆ ಜಪಾನ್ ರಷ್ಯಾ ಯುದ್ಧದ ಫೋಟವೂ ಶೂರರ ಚಿತ್ರಗಳೂ ಬಹುಮಾನವಾಗಿ ಕೊಡಲ್ಪಡುವದು. ಚಂದಾ ವರ್ಷಕ್ಕೆ ಟಪಾಲ್ ಹಾಸಲ್ ಸಹಿತ ೨ ರೂ ೧ ವರ್ಷ ತರಿಸಿಕೊಂಡು ಓದಿದರೆ ಅದರ ಅಭಿರುಚಿಯು ಗೊತ್ತಾಗುವದು. ಬೇಕಾದವರು ಕಾರ್ಡ್ ಬರೆದರೆ ವಿ ಪಿ ಮೂಲಕ ಕಳುಹಿಸುತ್ತೇವೆ

ಬಿ ನರಸಿಂಗರಾವ್, ಪ್ರೊಪ್ರೈಟರ್

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಇದರಿಂದ ಸಮಸ್ತ ಜನಗಳಿಗೂ ತಿಳಿಸುವದೇನಂದರೆ —

೧೯೦೫ ನೆ ಜನವರಿ ೧೫ನೇ ತಾರೀಖು ಲಾಗಾಯಿತು ಇನ್ನೊಂದು ಹುಕುಂ ಕೊಡುವ ಪರಿಯಂತರ ನಾಯಿಗಳ ಬಾಯಿಯನ್ನು ಕಟ್ಟದೇನೂ ಮತ್ತು ಅದರ ಯಜಮಾನನ ಮನೆಯ ಆವರಣದ ಹೊರಭಾಗದಲ್ಲಿ ಪೋಲಿಯಾಗಿ ತಿರುಗುವ ನಾಯಿಗಳು ಕೊಂದುಹಾಕಲ್ಪಡುತ್ತ ನಾಯಿಗಳನ್ನು ಬಂದೋಬಸ್ತಾಗಿ ಕಟ್ಟಿಹಾಕಿ, ಬಾಯಿಕಟ್ಟೆ ಇಟ್ಟುಕೊಳ್ಳಬೇಕೆಂದು ಕೋರಿಯಿದೆ.

ಮೈಸೂರು ಸಿಟಿ ಮುನಿಸಿಪಲ್ ಆಫೀಸ್, ತಾ॥ ೩—೧—೧೯೦೫.

C. VENKATA RAO
Vice President

ಸನ್ ೧೯೦೫ನೇ ಇಸವಿಯ

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿ

ಎಸೆಯಿದ ಬೆಲೆಗಳು ಕಡಿಮೆ ಬೆಲೆ

ಈ ಡೈರಿಗಳು ವರ್ತಕರು, ವಾಯಿದೆಗಳು, ಕಂಟ್ರಾಕ್ಟರು ದೊಡ್ಡಮನುಷ್ಯರು, ಖುಷ್‌ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ಕುಸುಂ ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ದವಿರ್ಗಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕೇಮ ಸಾವರ್ಬೈಂಡು, ಚಿಕ್ಕ ಬೆಳ್ಳಿ ಗಿಲೀಟು ಮಾಡಿದೆ

ಎ ನಂಬರ್ ಚಿಕ್ಕಸೈಜು	೩ ಆಣೆ	ಸಿ ನಂಬರ್ ದೊಡ್ಡಸೈಜು	೬ ಆ
ಎಫ್ ,,	,, ೪	ಎಚ್ ,,	,, ೭ ,,
ಬಿ ಮುಚ್ಚಳವುಳ್ಳದ್ದು	,, ೫	ಡಿ. ಮುಚ್ಚಳವುಳ್ಳದ್ದು	,, ೮ ,,

ಪೋಸ್ಟು ಛಾರ್ಜ್ ಬೇರೆ. ಒಂದೇ ಸಮೂಹ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ—ಎಂ ಆರ್ ಕೃಷ್ಣಸ್ವಾಮಿ ಶೆಟ್ಟಿ ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು

ವೃತ್ತಾಂತ ಪತ್ರಿಕೆ

ಸನ್ ೧೯೦೫ ನೇ ಇಸವಿ ಜನವರಿ ತಾ॥ ೧೨ ನೇ ಗುರುವಾರ.

ಪೋರ್ಟ್ ಅರ್ಥರು ಜಪಾನ್‌ನವರ ಸ್ವಾಧೀನವಾಯಿತು.

ಕಳೆದ ೧೯೦೪ ಇಸವಿ ಫೆಬ್ರುವರಿ ೮ನೆಯ ತಾರೀಖಿನ ದಿನ ಜಪಾನ್‌ನವರು ಪೋರ್ಟ್ ಅರ್ಥರ್ ಕೋಟೆಗೆ ಮುತ್ತಿಗೆ ಹಾಕಿ, ಫಿರಂಗಿಯನ್ನು ಹೊಡೆದು, ರಷ್ಯಾದವರ ಮೇಲೆ ಯುದ್ಧವನ್ನು ಪ್ರಾರಂಭಿಸಿದರು. ಅಂದಿನಿಂದಲೂ ಜಪಾನ್‌ನವರು ಮುತ್ತಿಗೆಯನ್ನು ಬಿಡಲಿಲ್ಲ. ಕಡೆಗೆ ಸುಮಾರು ಹನ್ನೊಂದು ತಿಂಗಳ ತನಕ ಯುದ್ಧಮಾಡುತ್ತಲೇ ಬಂದು, ಕಳೆದ ೨ನೆ ತಾರೀಖು ಸೋಮವಾರ ಆ ಕೋಟೆಯನ್ನು ಗೆದ್ದು ಸ್ವಾಧೀನಪಡಿಸಿಕೊಂಡಿದ್ದಾರೆ. ಇದಕ್ಕಾಗಿ ಜಪಾನ್‌ನವರು ೬೦,೦೦೦ ಸೈನ್ಯವನ್ನು ಬಲಿಕೊಟ್ಟಂತಾಯಿತು. ಇದರಿಂದ ಅವರ ಸಾಹಸವೂ ಮನೋನಿಶ್ಚಯವೂ ಪರಾಕ್ರಮವೂ ಪ್ರಪಂಚಕ್ಕೇ ಅದ್ವಿತೀಯವಾದವುಗಳೆಂದು ಪ್ರಕಟವಾದವು ಪೂರ್ವದಿಗ್ದೇಶಗಳ

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

ಈ ಔಷಧವು ಪ್ರತಿ ಮನೆಯವರಿಗೂ ಅಗಾಗ್ಯ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಪಟ್ಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋಗುತ್ತೆ ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು ಕ್ರಯ ಬಾಟ್ಲಿ ೧ಕ್ಕೆ ೧ ರೂ., ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್‌ಕಂಪೆನಿ,
ಮವುಂಟ್ ರೋಡ್,
ಮದರಾಸ್.

ಜನಾಂಗಗಳಲ್ಲಿ ಕೂಡ ಇಂಥಾ ಶ್ರೇಷ್ಠ ಗುಣಗಳಿರುವವೆಂಬುದು ಈಗ ಪ್ರಕಾಶವಾಯಿತು ಪ್ರಪಂಚದ ಸಮಸ್ತ ರಾಜ್ಯಗಳವರೂ ಜಪಾನ್‌ನವರನ್ನು ಹೊಗಳುತ್ತಿದ್ದಾರೆ

ರಷ್ಯಾ ಸೈನಿಕರ ಪರಾಕ್ರಮವೂ ಧೈರ್ಯವೂ ಜಪಾನ್‌ನವರಿಗಿಂತ ಕಡಿಮೆಯಾದವುಗಳಲ್ಲವೆಂಬುದೂ ಇದರಿಂದ ಪ್ರಕಾಶವಾಯಿತು ಹನ್ನೊಂದು ತಿಂಗಳತನಕ ಕೋಟೆಯೊಳಗೆ ಸಿಕ್ಕಿಕೊಂಡು ನಾನಾ ಕಷ್ಟಗಳನ್ನು ಅನುಭವಿಸುತ್ತಿದ್ದಾಗ್ಯೂ ಅವರು ಕೋಟೆಯನ್ನು ಬಿಡದೆ ಯುದ್ಧಮಾಡಿದ್ದು ಸ್ತೋತ್ರಾರ್ಹವಾದುದೇ ಸರಿ ಕೋಟೆಯೊಳಗಿದ್ದ ೩೫,೦೦೦ ಸೈನಿಕರ ಪೈಕಿ ೨೮೦೦೦ ಜನ ಯುದ್ಧಮಾಡಿ ಹತರಾದರು. ಉಳಿದವರು ಗಾಯಪಟ್ಟಿದ್ದಾರೆ ಒಂದು ತಿಂಗಳಿಂದಲೂ ಸೈನಿಕರು ಅರೆಹೊಟ್ಟೆ ಊಟಮಾಡಿ ಯುದ್ಧಕೊಟ್ಟರು. ಅವರ ಪರಾಕ್ರಮವನ್ನು ಏನೆಂದು ಹೇಳೋಣ ತಿಂಡಿಯೂ ನೀರೂ ದೊರಕದೆ ಸೈನಿಕರು ಕೊಳಕು ರೋಗಕ್ಕೆ ಸಿಕ್ಕಿ ಸತ್ತಿದ್ದರು. ಆ ಮಾಗೂ ಕಡೆಯಲ್ಲಿ ಜನರಲ್ ಸ್ಟೊಯಿಸೆಲ್‌ಯವರು ಯುದ್ಧಕೊಡುತ್ತಾ ಪ್ರಾಣಬಿಡಬೇಕೆಂತಲೇ ನಿಶ್ಚಯಿಸಿಕೊಂಡಿದ್ದರೆಂದು ತಿಳಿದುಬರುವುದು. ಆದರೆ ಚಕ್ರವರ್ತಿಯವರ ಅಪ್ಪಣೆಯೋ ಅವನ್ನು ತಪ್ಪಿಸಿತು

ಇದು ಈ ಯುದ್ಧದಲ್ಲಿ ಒಂದು ಭಾಗವೆಂದು ಹೇಳಬಹುದು ರಷ್ಯಾದವರು ಇಷ್ಟಕ್ಕೇ ಸುಮ್ಮನಾಗುವುದಿಲ್ಲ ಇನ್ನು ಮುಂದೆ ಘೋರಯುದ್ಧಗಳು ನಡೆಯುವವು. ರಷ್ಯಾ ರಾಜಧಾನಿಯಲ್ಲೂ ಪ್ರಜಾ ನೆಮ್ಮದಿಗೆ ಭಂಗವುಂಟಾಗಿ ನಾನಾ ಕಷ್ಟ ನಷ್ಟಗಳು ಪ್ರಾಪ್ತವಾಗುವಂತಿವೆ

ಸ್ವದೇಶದ ವೃತ್ತಾಂತಗಳು

ಸರ್ಕಾರದವರು ಶಿವಮೊಗ್ಗಾ ರೈಲ್ವೆ ಸ್ಟೇಷನ್ ಬಳಿ ಒಂದು ಫಾರೆಸ್ಟು ಡಿಪೋ ಕಟ್ಟಬೇಕೆಂದು ಏರ್ಪಾಡು ಮಾಡಿದ್ದಾರೆ.

****

ರಾಜಧಾನಿಯಲ್ಲಿ ಸಿಡುಬಿನ ಉಪದ್ರವು ಬಹಳ ಕಠಿಣವಾಗಿರುವುದು. ಅನೇಕ ಮಕ್ಕಳಿಗೆ ಸಿಡುಬು ಆಗಿ, ಪ್ರತಿ ದಿನವೂ ನಾಲ್ಕಾರು ಮಂದಿ ಸಾಯುತ್ತಿದ್ದಾರೆ.

****

ರಾಜಧಾನಿಯ ಪಶ್ಚಿಮವಾರ್ಡ್ ವೃದ್ಧಿಯಲ್ಲಿರುವ ವೀರಣ್ಣನವರ ಲೈನ್ ಮನೆಗಳನ್ನು ನಾಳೆ ೧೫ ನೆ ತಾರೀಖು ಭಾನುವಾರ ಡೆಪ್ಯುಟಿ ಕಮಿಷನರು ಹರಾಜುಹಾಕುವರು.

*****

ಮೈಸೂರು ಲಕ್ಷ್ಮೀವಿಳಾಸ ರೋಡ ಜನರಲ್ ಏಜೆನ್ಸಿಯ ಷಾಪಿನವರು ೧೯೦೫ ನೆ ಇಸವಿಯ ಕ್ಯಾಲೆಂಡರನ್ನು ಪ್ರಕಟಿಸಿ, ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿದ್ದಾರೆ.

****

ಬೆಂಗಳೂರು ದಂಡಿನಲ್ಲೂ ಉದ್ಯಾನ ವನಗಳಲ್ಲೂ ಒಂದು ಹುಲಿಯೋ ಚಿರತೆಯೋ ಸಂಚರಿಸುತ್ತಿದೆಯೆಂದೂ, ಇದರಿಂದ ಜನರು ತಿರುಗಾಡಲು ತುಂಬಾ ಭಯಪಡುತ್ತಿದ್ದಾರೆಂದು ಪ್ರಕಟವಾಗಿದೆ

****

ಬ್ರಿಟಿಷ್ ರೆಸಿಡೆಂಟರಾದ ಸರ್ ಜೇಂಸ್ ಬೂರ್ಡಿಲಾನ್ ಯವರು ಪತ್ನಿ ಪರಿವಾರ ಸಹಿತ ಸರ್ಕೀಟು ಹೊರಟು, ಕಡೂರು ಡಿಸ್ಟ್ರಿಕ್ಟಿನಲ್ಲಿ ಸಂಚಾರ ಮಾಡುತ್ತಿದ್ದಾರೆ. ಇವರು ತಾ॥ ೧೭ ನೆ ಮಂಗಳವಾರ ವಾಪಸು ಬೆಂಗಳೂರಿಗೆ ಬರುವರೆಂದು ಕೇಳುತ್ತೇವೆ.

*****

ಕೋಲಾರ್ ತಾಲ್ಲೂಕ್ ಮುದುವಾಟಿ ಗ್ರಾಮದಲ್ಲಿ ಸರ್ಕಾರಿ ವ್ಯವಸಾಯದ ಬ್ಯಾಂಕಿನ ಮೆಂಬರುಗಳು ಸರ್ಕಾರದ ಹಣವನ್ನು ವಾಪಸು ಮಾಡುವುದರಲ್ಲಿ ಸುಸ್ತಿ ಮಾಡಿದ್ದರಿಂದ ಡೆಪ್ಯುಟಿ ಕಮಿಷನರು ಆ ಮೆಂಬರುಗಳ ಜಮೀನನ್ನು ಹರಾಜುಹಾಕುವವರಾಗಿದ್ದಾರೆ

*****

ಸೋಮವಾರ ಗುರುವಾರಗಳ ವಿನಾ ಇತರದಿನಗಳಲ್ಲೆಲ್ಲಾ ಇಲಾಖೆಗಳ ಮುಖ್ಯಾಧಿಕಾರರೂ ಅಧಿಕಾರಿಗಳೂ ಆವಶ್ಯ ಬಿದ್ದರೆ ದಿವಾನರವರನ್ನು ಮಧ್ಯಾಹ್ನ ೧ ರಿಂದ ೩ ಗಂಟೆಯ ತನಕ ಕಂಡು, ಮಾತನಾಡಿಕೊಂಡು ಹೋಗಬಹುದೆಂದು ಅವರ ಪ್ರೈವೆಟ್ ಸೆಕ್ರೆಟರಿಯವರು ತಿಳಿಸುತ್ತಾರೆ

*****

ಮೈಸೂರು ಸಂಸ್ಥಾನದಲ್ಲಿ ನೌಕರಿ ಕೆಲಸಕ್ಕೆ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬೇಕೆಂಬುವವರು ಇಂಗ್ಲೀಷಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಕೊಟ್ಟು, ಮೈಸೂರು ರೆವಿನ್ಯೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾಗಿದೆ ಎಂದು ಸರ್ಕಾರದವರು ಘೋಷಣೆ ಮಾಡಿರುತ್ತಾರೆ.

*****

ಮೈಸೂರು ಸಂಸ್ಥಾನದ ಸಮಸ್ತ ಸರ್ಕಾರಿ ಖಜಾನೆಗಳನ್ನು ಪ್ರತಿದಿನವೂ ಸಾಯಂಕಾಲ ೪ ಗಂಟೆಗೆ ಮುಚ್ಚಿಬಿಡುತ್ತಿದ್ದುದರಿಂದ ಪ್ರಜೆಗಳಿಗೆ ತೊಂದರೆಯಾಗಿದೆ ಎಂಬ ಸಂಗತಿಯನ್ನು ಕೇಳಿ, ಸರ್ಕಾರದವರು ಖಜಾನೆಗಳೆಲ್ಲಾ ೫ ಗಂಟೆ ತನಕ ತೆರೆದಿರಬೇಕೆಂದು ಹುಕುಂ ಕೊಟ್ಟಿರೆಂದು ಕೇಳುತ್ತೇವೆ

*****

ಬರುವ ತಿಂಗಳ ಆದಿಭಾಗದಲ್ಲಿ ನಮ್ಮ ಮಹಾರಾಜರವರು ಮದರಾಸಿಗೆ ದಯಮಾಡಿ, ಗವರ್ನರವರ ಭೇಟಿ ಮಾಡಿಕೊಂಡು ಬರುವರು. ಅವರ ಸಂಗಡ ದಿವಾನ್ ಸರ್ ಪಿ ಎನ್. ಕೃಷ್ಣಮೂರ್ತಿ ಯವರೂ ಪಯಣಮಾಡುವವರಾಗಿದ್ದಾರೆ! ದಿವಾನರವರು ಮದರಾಸಿನಿಂದ ಬಂದ ಮೇಲೆ ಸರ್ಕೀಟು ಹೊರಡುವರು.

*****

ಒಬ್ಬ ಬಾತ್ಮಿದಾರರು ಬರೆಯುವದೇನಂದರೆ—" ರತ್ನಾವಳಿ ಥಿಯಟ್ರಿಕಲ್ ಕಂಪನಿಯ ಮೆಂಬರುಗಳು ಕಳೆದ ಶನಿವಾರ ರಾತ್ರಿ ಪರ್ವ ಲೀಲಾವತಿ ಎಂಬ ನಾಟಕವನ್ನಾಡಿ, ಉತ್ಪತ್ತಿಯಾದ ಸುಮಾರು ೩೦೦ ರೂಪಾಯಿಗಳನ್ನು ಮ॥ ಎ. ವಿ. ವರದಾಚಾರ್ಯರಿಗೆ ಒಪ್ಪಿಸಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು. ಬಹುಜನ ದೊಡ್ಡ ಮನುಷ್ಯರೂ ವಿದ್ಯಾವಂತರೂ ಅಭಿಮಾನವಿಟ್ಟು ಬಂದು ನೋಡಿ, ತುಂಬಾ ಸಂತೋಷಪಟ್ಟರು ಇದಕ್ಕಾಗಿ ಕಂಪನಿಯ ಮೆಂಬರುಗಳೂ ಮೆ॥ ವರದಾಚಾರ್ಯರೂ ಅವರನ್ನೆಲ್ಲಾ ಮನಃಪೂರ್ವಕವಾಗಿ ವಂದಿಸಿರುತ್ತಾರೆ."

****

ಮೆ॥ ಎಚ್. ಎಚ್. ಸ್ಪಿಕ್ನರ್ ಯವರು ಮೊನ್ನೆ ಮಂಗಳವಾರ ರಾಜಧಾನಿಗೆ ಬಂದು, ಮೈಸೂರು ಡಿಸ್ಟ್ರಿಕ್ಟ ಛಾರ್ಜನ್ನು ಮೆ॥ ಎನ್. ವೆಂಕಟರಾಯರಿಂದ ಪಡೆದುಕೊಂಡರು ಪ್ರತಿದಿನವೂ ಆಫೀಸನ್ನು ಬೆಳಗ್ಗೆ ೧೧ ಗಂಟೆಯಿಂದ ಸಾಯಂಕಾಲ ೫ ಗಂಟೆ ತನಕ ನಡಸುವುದಾಗಿಯೂ, ಯಾರೂ ತಮ್ಮ ಬಂಗಲೆಗೆ ಬರಕೂಡದೆಂತಲೂ ಹುಕುಂ ಮಾಡಿರುತ್ತಾರೆ. ಇಷ್ಟೇ ಸಾಲದೆಂದು ನಮಗೆ ತೋರುವುದು ಪ್ರತಿ ಒಬ್ಬ ನೌಕರನೂ ಪ್ರತಿ ದಿನವೂ ಎಷ್ಟು ಕಾಗದಪತ್ರಗಳನ್ನು ವಿಲೆ ಮಾಡುತ್ತಾನೋ ಎಷ್ಟು ಕೆಲಸಮಾಡುತ್ತಾನೋ ತಿಳಿಯುವಂತೆ ಡೆಪ್ಯುಟಿ ಕಮಿಷನರು ತನಿಖೆ ಮಾಡುತ್ತಾ ಬರಬೇಕು. ಇಂಥಾ ತನಿಖೆ ಇಟ್ಟ ಹೊರತು ಡಿಸ್ಟ್ರಿಕ್ಟ ಆಫೀಸಿನಲ್ಲಿ ಚಟುವಟಿಕೆಯಾಗಿ ಕೆಲಸಗಳು ನಡೆಯಲಾರವು

ಪೋರ್ಟ್ ಅರ್ಥರ್ ಕೋಟೆಯನ್ನು ಜಪಾನ್‌ನವರು ಗೆದ್ದು ಸ್ವಾಧೀನಪಡಿಸಿಕೊಂಡುದು

ಕಳೆದ ವಾರದ ಮುಖ್ಯ ತಂತೀ ವರ್ತಮಾನಗಳು.

ಸ್ಟೊಯಿಸೆಲ್ ಯವರ ಕಾಗದ.

ಲಂಡನ್, ಜನವರಿ ೨ —ಪೋರ್ಟ್ ಅರ್ಥರ್ ಕೋಟೆಯನ್ನು ಒಳಗಿದ್ದು ಕಾಪಾಡಿಕೊಳ್ಳುತ್ತಿದ್ದ ರಷ್ಯಾ ಸೈನ್ಯಾಧಿಪತಿಯಾದ ಜನರಲ್ ಸ್ಟೊಯಿಸೆಲ್ ಯವರು ಕೋಟೆಯನ್ನು ಜಪಾನಿನವರಿಗೆ ಒಪ್ಪಿಸಿಕೊಡುವುದಾಗಿ ಜಪಾನ್ ಜನರಲ್ ನೋಗಿಯವರಿಗೆ ಕಾಗದ ಬರೆದಿದ್ದಾರೆ.

ಇನ್ನೊಂದು ಕೋಟೆ ಗೆದ್ದುದು

ಜಪಾನವರು ನೆನ್ನೆ ವಾರ್ ಶಾಯು ಎಂಬ ಕೋಟೆಗೆ ಹಲ್ಲೆ …ಯುದ್ಧಮಾಡಿ ಗೆದ್ದುಕೊಂಡರು

ಅಂತ್ಯದ ಸಾಮೀಪ್ಯವು

ಈ ದಿನ ಪೋರ್ಟ್ ಆರ್ಥರಿನ ಬಳಿ ಯುದ್ಧ ಕಾರ್ಯಗಳು …ಸಲ್ಪಟ್ಟವೆ ಕೋಟೆಯನ್ನು ಒಪ್ಪಿಸುವ ವಿಚಾರವಾಗಿ ರಷ್ಯಾ… ಜಪಾನವರ ಕಡೆ ಮುಖಂಡರು ಷೂಷಿಯಾಂಗ್ ಎಂಬಲ್ಲಿ …ಚರ್ಚೆಮಾಡುತ್ತಿದ್ದಾರೆ

ಜನರಲ್ ಸ್ಟೋಯೆಸೆಲ ಯವರು ಜನರಲ್ ನೋಗಿಯವ…ರಿಗೆ ಇನ್ನು ಮೇಲೆ ಕೋಟೆಯನ್ನು ಕಾಪಾಡಿಕೊಳ್ಳುವೆನೆಂದು …ಪಡುವುದು ನಿಷ್ಪ್ರಯೋಜನ. ಇದರಿಂದ ಅನಾವಶ್ಯವಾಗಿ …ಣಗಳನ್ನು ಒಪ್ಪಿಸಬೇಕಾಗುವುದು ಕೋಟೆಯನ್ನು ಒಪ್ಪಿಸುವುದಕ್ಕೆ ನಾನು ಸಿದ್ಧನಾಗಿದ್ದೇನೆ ದಯವಿಟ್ಟು ನಿಮ್ಮ ಕಡೆಯ …ಮಧ್ಯಸ್ಥಗಾರರನ್ನು ನೇಮಕಮಾಡಿ ಎಂಬುದಾಗಿ ಬರೆದು ಕಳುಹಿ…ದರು

ಪೋರ್ಟ್ ಆರ್ಥರಿನೊಳಗೆ ಕಾಯಿಲೆಯವರೂ ಗಾಯಪಟ್ಟವರೂ ೧೫,೦೦೦ ಮಂದಿ ಇರುತ್ತಾರೆ. ೫,೦೦೦ ಮಂದಿ ಮಾತ್ರ ಆರೋಗ್ಯವಾಗಿರುವರು. ಆಸ್ಪತ್ರೆಗಳೆಲ್ಲಾ ಜಪಾನವರ ಫಿರಂಗಿಗಳಿಂದ ನಾಶವಾದ ಕಾರಣ ಕಾಯಿಲೆಯವರೂ ಗಾಯಪಟ್ಟವರೂ ರಸ್ತೆಗಳಲ್ಲಿ ಬಿದ್ದುಕೊಂಡಿದ್ದಾರೆ. ಉಳಿದ ೫,೦೦೦ ಜನರೂ …ರ ಬಿದ್ದು ಈಗೀಗ ಗುಣ ಕೊಂಡುತ್ತಿರುವರು. ಕೋಟೆ…ಯಲ್ಲಿದ್ದ ಸಿಪಾಯಿಗಳ ಪೈಕಿ ೮೦೦ ಜನ ಮೂರು ಹಡಗುಗಳಲ್ಲಿ …ಕಿಯಾ ಸಿಂಗ್ ಟ' ಎಂಬಲ್ಲಿಗೆ ಬಂದಿಳಿದರು

ಜಪಾನ ಚಕ್ರವರ್ತಿಯವರು ತಮ್ಮ ಜನರಲ್ ನೋಗಿಯವ…ರ ಮುಖಾಂತರ ಜನರಲ್ ಸ್ಟೋಯೆಸೆಲ್ ಯವರು ಬಹು ಪರಾಕ್ರಮದಿಂದ ಇದುವರೆಗೆ ಕೋಟೆಯನ್ನು ಕಾಪಾಡಿಕೊಂಡದ್ದು ಕೀರ್ತಿಪ್ರದವಾ…ಗಿ, ಅವರನ್ನು ಸಕಲರೂ ಹೊಗಳಬೇಕು, ಅವರಿಗೆ ಸ್ವಲ್ಪವೂ …ಮಾನ ಬರಿಸಕೂಡದು ಮಿಲ್ಟೇರಿ ಕಾನೂನಿಗನುಗುಣವಾದ …ಮರ್ಯಾದೆಗಳನ್ನೆಲ್ಲಾ ಅವರಿಗೆ ತೋರಿಸಬೇಕು ಎಂಬು…ದಾಗಿ ಅಪ್ಪಣೆ ಕೊಟ್ಟರು

ಜನರಲ್ ಸ್ಟೋಯೆಸೆಲ್'ಯವರು ಹೇಳಿಕಳುಹಿಸಿದಂತೆ ಜಪಾನ…ವರು ಒಪ್ಪಿಕೊಂಡರು ಉಭಯ ಪಕ್ಷದ ಮಧ್ಯಸ್ಥಗಾರರೂ ಸಾ…ಯಂಕಾಲ ೪ ಗಂಟೆಯ ತನಕ ಚರ್ಚೆಮಾಡಿ, ಕರಾರಿನ ಕಲಮು…ಗಳನ್ನು ಗೊತ್ತು ಮಾಡಿದರು. ಜಪಾನವರು ಕೇಳಿದಂತೆ ಅವರು …ಎಲ್ಲಾ ವಿಷಯಗಳನ್ನು ಒಪ್ಪಿಕೊಂಡಿದ್ದಾರೆ ಕೋಟೆಯನ್ನು ಜ…ಪಾನವರಿಗೆ ಒಪ್ಪಿಸತಕ್ಕ ಕರಾರನ್ನು ಉಭಯಪಕ್ಷದ ಮುಖಂಡ…ರು ಈ ದಿನ ರಾತ್ರಿ ೯ ಗಂಟೆಯಲ್ಲಿ ರುಜುಮಾಡಿದರು.

ರಷ್ಯದವರು ಮಾಡಿದ ಕಾರ್ಯ.

ರಷ್ಯದವರು ಪೋರ್ಟ್ ಆರ್ಥರಿನೊಳಗಿದ್ದ ಸಮಸ್ತ ಕಟ್ಟಡ…ಗಳನ್ನೂ ತಮ್ಮ ಯುದ್ಧದ ಹಡಗುಗಳನ್ನೂ ಮದ್ದಿಟ್ಟು ಹಾರಿಸಿ…ಬಿಟ್ಟಿದ್ದರು ಜಪಾನವರು ಈ ಭಾಗದಲ್ಲಿ ಆಗ್ರಹಪಟ್ಟು …ಕೇಳಿದ್ದಕ್ಕೆ ರಷ್ಯದವರು ಪ್ರತ್ಯುತ್ತರವಾಗಿ—ಕೋಟೆಯ…ನ್ನು ಒಪ್ಪಿಸುತ್ತೇವೆಂದು ಒಪ್ಪಿ ಕರಾರಿಗೆ ರುಜು ಮಾಡುವುದಕ್ಕೆ …ಮುಂಚೆ ನಾವು ನಾಶ ಮಾಡಿದೆವು ಕರಾರಾದ ಮೇಲೆ ನಾವು ನಾಶ …ಮಾಡಿದ್ದರೆ ನೀವು ಆಕ್ಷೇಪಣೆ ಮಾಡಬಹುದಾಗಿತ್ತು ಎಂಬುದಾಗಿ …ಹೇಳಿದರು

ಕರಾರಿನ ವಿಷಯ.

ಲಂಡನ್, ಜನವರಿ ೩ —ಪೋರ್ಟ್ ಆರ್ಥರಿನಲ್ಲಿರುವ ರಷ್ಯಾ …ಸೈನ್ಯದ ಹುದ್ದೇದಾರರುಗಳೆಲ್ಲಾ ಮತ್ತೆ ಜಪಾನವರ ಎದುರಿಗೆ …ಬಂದು ನಿಂತು ಯುದ್ಧ ಮಾಡುವುದಿಲ್ಲವೆಂದು ರುಜುಮಾಡಿ…ಕೊಟ್ಟು, ತಮ್ಮ ಕತ್ತಿಗಳ ಸಹಿತ ವಾಪಸು ರಷ್ಯಾಕ್ಕೆ ಹಿಂತಿರಿಗಿ …ಹೋಗಬಹುದೆಂದು ಜಪಾನವರು ರಿಯಾಯಿತಿ ತೋರಿಸಿದ್ದಾರೆ.

ಜಪಾನವರು ಈ ದಿನ ಕೆಲವು ಕೋಟೆಗಳನ್ನು ತಮ್ಮ …ಸ್ವಾಧೀನಕ್ಕೆ ತೆಗೆದುಕೊಂಡರು

…ಲಿಲಂಗ್'ಷಾನ್ ಬಳಿ ಇರುವ ಈಗಲ್ ನೆಸ್ಟ್ ಎಂಬ ದೊಡ್ಡ …ಕೋಟೆಯಲ್ಲಿ ಕರಾರು ನಡೆಯಿತು. ರಷ್ಯದವರ ಕಡೆ ಕರ್ನಲ್ …ರೀಸ್ ಯವರೂ, ಜಪಾನವರ ಕಡೆ ಜನರಲ್ ಇಜಿಚಿಯವರೂ …ಪ್ರತಿನಿಧಿಗಳಾಗಿ ನಿಂತು, ಕರಾರಿನ ಕಲಮುಗಳನ್ನು ಗೊತ್ತುಮಾಡಿ…ದರು ಕೋಟೆಯೊಳಗಿರುವ ಸೈನಿಕರೆಲ್ಲಾ ಜಪಾನವರ ಬೈದಿಗ…ಳಾಗಿ ಜಪಾನ್‌ಗೆ ಹೋಗುವಂತೆ ನಿಷ್ಕರ್ಷೆಯಾಗಿದೆ

ಜನರಲ್ ಸ್ಟೋಯೆಸೆಲ್ ಯವರ ಕಾಗದ.

ಜನರಲ್ ಸ್ಟೋಯೆಸೆಲ್ ಯವರು ಕೋಟೆಯನ್ನು ಜಪಾನ…ವರಿಗೆ ಒಪ್ಪಿಸುವುದಕ್ಕೆ ಹಿಂದಿನ ದಿನ ರಷ್ಯಾ ಚಕ್ರವರ್ತಿಯವರಿಗೆ …ಬರೆದು ತಿಳಿಸಿದ್ದೇನೆಂದರೆ—ಕೋಟೆಯು ಪರಿತಾಪಕರವಾಗಿದೆ …ಮುಗಿಸಬ್ಯ ಜಡಾರವೇ ದೊಡ್ಡ ಶತ್ರುವಾಗಿದೆ. ಈ ರೋಗವು …ನಮ್ಮ ಸೈನಿಕರನ್ನು ಹಿಡಿದು ಕೆಡವುತ್ತಿದೆ. ಈ ರೋಗವಿಲ್ಲದವರು …ಬಹಳ ಸ್ವಲ್ಪಜನ. ಜಪಾನವರ ಫಿರಂಗಿಗಳು ನಮ್ಮ ಎರಡನೆ …ಯಾಗಿವೆ ಅತ್ರಗಳ ದೆಸೆಯಿಂದ ನಮಗೆ ಸುರಕ್ಷಿತವಾದ ಸ್ಥಳ …ವಿಲ್ಲವಾಯಿತು ಅನೇಕ ಮಂದಿ ದೊಡ್ಡ ದೊಡ್ಡ ಅಧಿಕಾರಿ…ಗಳು ಕೊಲ್ಲಲ್ಪಟ್ಟರು ಈಟಿಗೂ ಮೂವರು ಜನರಲ್ ಗಳು ಕಾಲ…ವಾದರು, ಇನ್ನು ಮೂರು ಮಂದಿಗೆ ಗಾಯಗಳಾಗಿವೆ ಇನ್ನು …ಇಬ್ಬರು ಮಾತ್ರ ಉಳಿದಿದ್ದಾರೆ. ಇದರಿಂದಲೇ ನಮ್ಮ ಅಪಾ…ರವಾದ ನಷ್ಟವನ್ನು ತಿಳಿದುಕೊಳ್ಳಬಹುದು ಎಂಬುದೇ.

ಒಬ್ಬ ರಷ್ಯಾ ಸೈನಿಕನ ಹೇಳಿಕೆ.

ಪೋರ್ಟ್ ಆರ್ಥರಿನಲ್ಲಿದ್ದ ಒಬ್ಬ ರಷ್ಯಾ ಸೈನಿಕನು ಅಲ್ಲಿನ …ಸ್ಥಿತಿಯ ವಿಷಯವಾಗಿ—ಜನರಲ್ ಸ್ಟೋಯೆಸಲ್'ಯವರು ಕೋಟೆ…ಯನ್ನು ಜಪಾನವರಿಗೆ ಒಪ್ಪಿಸುವುದಕ್ಕೆ ಒಪ್ಪಿದರೆಂಬ ಮಾತನ್ನು …ಕೇಳಿ ನಮಗೆಲ್ಲಾ ಎಷ್ಟೋ ಸಲಾಗವಾಯಿತು. ನಮ್ಮ ಕಷ್ಟ ಮುಕ್ತಾಯವಾಯಿತೆಂದು ಎಣಿಸಿದೆವು ಒಂದು ತಿಂಗಳಿಂದಲೂ ನಮಗೆ ಒಂದೇಟು ಬಿದ್ದರೆ ಸಾಕಲ್ಲಾ ಎನ್ನುವಂತಾಗಿತ್ತು ಯಾಕೆಂದರೆ ಸಾವಿರಾರು ಯುದ್ಧ ಮಾಡುವುದೂ ಅರೆಹೊಟ್ಟೆ ಊಟ ಮಾಡುವುದೂ ತಪ್ಪುತ್ತಿದ್ದವು ಸದಾ ಪಿಯಾನವಾಗಕ್ಕೆ ಈ ಕೋಟೆಯಲ್ಲಿ ಇರುವವರೆಲ್ಲಾ ತುಂಬಾ ದುರ್ಬಲದವರಾಗಿದ್ದಾರೆ ಪಟ್ಟಣವೆಲ್ಲಾ ಹಾಳು ಗೋಡೆಗಳಿಂದ ತುಂಬಿರುವುದು ರಷ್ಯದವರು ಕಟ್ಟಿದ ದೊಡ್ಡ ಕಟ್ಟಡವ್ಯಾವುದೂ ಜಪಾನವರಿಗೆ ಸಿಕ್ಕುವಂತಿಲ್ಲ. ಎಲ್ಲಾ ನೆಲಸಮನಾಗಿವೆ. ಜನರಲ್ ಸ್ಟೋಯೆಸಲ್'ಯವರೇನೋ ಯುದ್ಧಮಾಡುತ್ತಲೇ ಪ್ರಾಣ ಕೊಡಬೇಕೆಂದು ನಿಶ್ಚಯಿಸಿಕೊಂಡಿದ್ದರು. ಆದರೆ ತಮ್ಮ ಕೈಕೆಳಗಿನ ಜನರ ಪರಿತಾಪಕರವಾದ ಸ್ಥಿತಿಯನ್ನು ನೋಡಿ, ಮದ್ದು ಗುಂಡೆಲ್ಲಾ ಮುಗಿದುಹೋಯಿತೆಂದು ತಿಳಿದು, ಯುದ್ಧವನ್ನು ನಿಲ್ಲಿಸಿ ಕೋಟೆಯನ್ನು ಒಪ್ಪಿಸಿಬಿಡುವುದೇ ಮೇಲೆಂದು ತೀರ್ಮಾನಮಾಡಿದರು. ಮಿಾಟರ್ ಹಿಲ್ ಎಂಬ ಸ್ಥಳದಲ್ಲಿ ನಡೆದ ಭಯಂಕರವಾದ ಒಂದೇ ಯುದ್ಧದಲ್ಲಿ ನಮ್ಮ ಕಡೆ ೪,೦೦೦ ಜನರು ಮಡಿದುಹೋದರು ಆಗಲೇ ನಮ್ಮ ಅಂತ್ಯ ಸಮೀಪಿಸಿತೆಂದು ನಾವು ನಿಶ್ಚಯಿಸಿಕೊಂಡೆವು ಎಂಬುದಾಗಿ ತಿಳಿಸಿದ್ದಾನೆ.

ಕರಾರಿನ ಕಲಮುಗಳು

ಉಭಯತ್ರರೂ ಒಪ್ಪಿಕೊಂಡು ರುಜು ಹಾಕಿರುವ ಕರಾರು ಏನೆಂದರೆ—ರಷ್ಯಾದವರು ಸೈನ್ಯದ ದಿರಸಿನಲ್ಲಿ ಹೊರಟು ತಮ್ಮ ಬಾವುಟ ಮುಂತಾದ್ದನ್ನು ಹಿಡಿದು, ಲೈನ್ ಕಟ್ಟಿಕೊಂಡು ಕೋಟೆಯಿಂದ ಹೊರಕ್ಕೆ ಬಂದು, ತಮ್ಮ ಯುದ್ಧ ಮೊದಲಾದ ಮಿಲ್ಟೇರಿ ಏರಸುಗಳನ್ನೆಲ್ಲಾ ಜಪಾನವರಿಗೆ ಒಪ್ಪಿಸಿ ಶರಣಾಗತರಾದೆವೆಂದು ಒಪ್ಪಿಕೊಂಡು ಹೋಗತಕ್ಕದ್ದು ಅನಂತರ ಅವರನ್ನು ಅವರ ಸ್ವದೇಶಕ್ಕೆ ಹೋಗುವಂತೆ ಬಿಡುವರು. ಮತ್ತೆ ಅವರು ಯುದ್ಧದಲ್ಲಿ ಜಪಾನವರ ಮೇಲೆ ಕತ್ತಿ ಎತ್ತುವುದಿಲ್ಲವೆಂದು ರುಜು ಹಾಕಿಕೊಟ್ಟಲ್ಲಿ ಅವರೆಲ್ಲಾ ಬಿಡುಗಡೆ ಹೊಂದುವರು

ಈ ದಿನ ಜಪಾನವರು ಕೋಟೆಯೊಳಕ್ಕೆ ಪ್ರವೇಶಮಾಡಿದರು ಕೋಟೆ ಕೊತ್ತಲ ಮೊದಲಾದವುಗಳನ್ನು ದುರಸ್ತು ಮಾಡುವುದಕ್ಕೆ ೧೦,೦೦೦ ಜಪಾನ ಸೈನ್ಯಗಳು ನೇಮಕವಾಗುತ್ತವೆ. ಉಳಿದ ಜಪಾನ ಸೈನ್ಯವೆಲ್ಲಾ ಮುಕ್ಡೆನ್‌ಗೆ ಹೋಗಿ ಮಾರ್ಷಲ್ ಒಯಮಾಯವರ ಸೈನ್ಯದಲ್ಲಿ ಸೇರಿಕೊಂಡು, ಜನರಲ್ ಕುರೋಪಾಟ್ಕಿನ್ ರವರ ಮೇಲೆ ಯುದ್ಧಮಾಡುವವರಾಗಿದ್ದಾರೆ.

ಕರಾರಿನ ಕಲಮುಗಳು

ಲಂಡನ್, ಜನವರಿ ೪ —ಕರಾರಿನ ಕಲಮುಗಳು ೧೧ ಇರುವವು. ಮುಖ್ಯಭಾಗಗಳೇನೆಂದರೆ—ಕೋಟೆಯೊಳಗಿರತಕ್ಕ ಸೈನಿಕರೂ ನೌಕಾಪಡೆಯವರೂ ಎಲ್ಲಾ ಜಪಾನವರ ಬೈದಿಗಳಾಗಬೇಕು. ಕೋಟೆಗಳೂ ಯುದ್ಧಸಾಮಗ್ರಿಗಳೂ ಜಪಾನವರಿಗೆ ಒಪ್ಪಿಸಬೇಕು. ಈ ಪೈಕಿ ಯಾವುದನ್ನಾದರೂ ನಾಶಪಡಿಸಿದಲ್ಲಿ ಈ ಕರಾರು ರದ್ದಾಗುತ್ತೆ, ಜಪಾನವರು ಮತ್ತೆ ಯುದ್ಧಕಾರ್ಯಗಳನ್ನು ಪ್ರಾರಂಭಿಸುವರು. ರಷ್ಯದವರು ಕೋಟೆಗಳ ಸಮಸ್ತ ನಕ್ಷೆಗಳನ್ನೂ ಎಲ್ಲೆಲ್ಲಿ ಭೂಮಿಯೊಳಗೆ ಮದ್ದಿಟ್ಟಿದ್ದಾರೆಂಬುದನ್ನು ಜಪಾನವರಿಗೆ ಒಪ್ಪಿಸಿ ತಿಳಿಸಬೇಕು ಬಹಳ ಪರಾಕ್ರಮದಿಂದ ಕೋಟೆಯನ್ನು ಇದುವರೆಗೆ ಕಾಪಾಡಿಕೊಂಡದ್ದಕ್ಕಾಗಿ ರಷ್ಯಾ ಸೈನ್ಯದ ಹುದ್ದೇದಾರರು ಅವರ ಕತ್ತಿಗಳನ್ನೂ ಅವರ ಸ್ವಂತ ಸ್ವತ್ತುಗಳನ್ನೂ ತೆಗೆದುಕೊಂಡು ಹೋಗುವಂತೆಯೂ, ಅವರು ಮತ್ತೆ ಯುದ್ಧಕ್ಕೆ ಸೇರುವುದಿಲ್ಲವೆಂದು ರುಜುಹಾಕಿ ಕೊಟ್ಟಲ್ಲಿ ತಮ್ಮ ಊರಿಗೆ ವಾಪಸು ಹೋಗಬಹುದು. ಮತ್ತು ಸೈನಿಕರೆಲ್ಲಾ ಅವರವರ ಆಸ್ತಿಯನ್ನು ತೆಗೆದುಕೊಂಡು ಬಂದು, ಜಪಾನ ಅಧಿಕಾರಿಗಳು ಹೇಳುವ ಸ್ಥಳದಲ್ಲಿ ಗುಂಪು ಸೇರಬೇಕು. ಗಾಯಪಟ್ಟವರನ್ನೂ ಕಾಯಿಲೆಯವರನ್ನೂ ಉಪಚರಿಸುವುದರಲ್ಲಿ ಜಪಾನವರ ಸಹಾಯಕ್ಕೆ ರಷ್ಯಾ ಗಣತಿಯವರು ಕೋಟೆಯಲ್ಲೇ ಉಳಿಸಿಕೊಳ್ಳತಕ್ಕದ್ದು. ಹಡಗುಗಳು ಜಹಜುಗಳು ಮೊದಲಾದ್ದೆಲ್ಲಾ ಜಪಾನವರಿಗೆ ಸೇರಬೇಕು

ನೆನ್ನೆ ಮಧ್ಯಾಹ್ನದೊಳಗೆ ಕೆಲವು ಕೋಟೆಗಳನ್ನು ರಷ್ಯದವರು ಜಪಾನವರಿಗೆ ಒಪ್ಪಿಸಿ ಕೊಟ್ಟರು.

ಜನರಲ್ ಸ್ಟೋಯೆಸೆಲ್ ಯವರ ತಂತೀ ವರ್ತಮಾನ

ಜನರಲ್ ಸ್ಟೋಯೆಸೆಲ್ ಯವರು ತಮ್ಮ ಚಕ್ರವರ್ತಿಯವರಿಗೆ ತಿಳಿಸಿದ್ದೇನೆಂದರೆ —"ಘನವನ್ನೈದಿದ ಪ್ರಭುವೇ, ಕ್ಷಮಾಪಣೆಯನ್ನು ದಯಪಾಲಿಸು. ಮನುಷ್ಯನಿಗೆ ಸಾಧ್ಯವೆಂದು ಕಂಡು ಬಂದದ್ದನ್ನೂ ನಾವು ಮಾಡದೆ ಬಿಡಲಿಲ್ಲ. ನಮ್ಮ ಕಾರ್ಯಕಾರ್ಯಗಳನ್ನು ತನಿಖೆ ಮಾಡಿ ತೀರ್ಮಾನ ಮಾಡ ಬಹುದು ಆದರೆ ಕರುಣೆಯನ್ನು ನೀಡುವವನಾಗು" ಎಂಬುದೇ

ಚಕ್ರವರ್ತಿಯವರ ಪ್ರತ್ಯುತ್ತರ.

ರಷ್ಯಾ ಚಕ್ರವರ್ತಿಯವರು ಜನರಲ್ ಸ್ಟೋಯೆಸೆಲ್ ಯವರಿಗೆ—ಯುದ್ಧಕ್ಕೆ ಮತ್ತೆ ಬರುವುದಿಲ್ಲವೆಂದು ಶರಣಾಗತರಾಗಿ ವಾಗ್ದಾನ ಮಾಡಿ ಹಿಂದಕ್ಕೆ ಬನ್ನಿ ; ಇಲ್ಲವೇ ನೀವೆಲ್ಲಾ ಜಪಾನವರ ಬೈದಿಗಳಾಗಿ ಹೋಗಿ ಎಂಬುದಾಗಿ ತಿಳಿಸಿದರು

ಪೋರ್ಟ್ ಆರ್ಥರಿನಲ್ಲಿದ್ದ ಸೈನ್ಯ

ಪೋರ್ಟ್ ಆರ್ಥರಿನಲ್ಲಿ ಜನರಲ್ ಸ್ಟೋಯೆಸಲ್'ಯವರ ಕೈಕೆಳಗೆ ೩೫,೦೦೦ ರಷ್ಯಾ ಸೈನಿಕರಿದ್ದರು. ಈ ಪೈಕಿ ೧೧,೦೦೦ ಮಂದಿ ಯುದ್ಧಗಳಲ್ಲಿ ಹತರಾದರು, ೧೬,೦೦೦ ಜನರು ಗಾಯಪಟ್ಟರು ಇಲ್ಲವೇ ಕಾಯಿಲೆ ಬಿದ್ದುಕೊಂಡರು. ೮,೦೦೦ ಜನರು ಮಾತ್ರ ಯುದ್ಧ ಮಾಡುವುದಕ್ಕೆ ಉಳಿಕೊಂಡರು ಈ ಸೈನಿಕರಲ್ಲೂ ೨,೦೦೦ ಮಂದಿ ಯುದ್ಧ ಮಾಡಲು ಅಶಕ್ತರಾದರು.

ಇಂಗ್ಲಿಷರ ಪ್ರತ್ಯಕಾರ್ಯ.

ಕೋಟೆಯೊಳಕ್ಕೆ ಹೋಗಬಹುದೆಂಬ ಅಪ್ಪಣೆ ಬಂದ ಒಡನೆಯೇ ಇಂಗ್ಲಿಷರು ಒಂದು ಜಹಜಿನ ತುಂಬಾ ಆಹಾರಸಾಮಗ್ರಿ, ಔಷಧಾದಿಗಳು, ಹಾಸಿಗೆ ಉಡುಪುಗಳು ಮೊದಲಾದ ರೋಗಿಗಳ ಮತ್ತು ಗಾಯಪಟ್ಟವರ ಉಪಚಾರಕ್ಕೆ ಬೇಕಾಗುವ ವಸ್ತು ವಿಶೇಷಗಳನ್ನು ತೆಗೆದುಕೊಂಡು ಹೋದರು ಜಪಾನವರೂ ತುಂಬಾ ಸಹಾಯ ಮಾಡುತ್ತಿದ್ದಾರೆ.

ಪೋರ್ಟ್ ಆರ್ಥರಿನ ಸ್ಥಿತಿ.

ಪೋರ್ಟ್ ಆರ್ಥರಿನಲ್ಲಿ ಪ್ರಜಾ ನೆಮ್ಮದಿಯನ್ನು ಜಪಾನವರು ಕಾಪಾಡಿಕೊಂಡಿದ್ದಾರೆ. ಅದರೊಳಗೆ ೧೦,೦೦೦ ಪ್ರಜೆಗಳೂ, ೨೫,೦೦೦ ಯುದ್ಧ ಭಟರೂ ಇರುವರು ಈ ಪೈಕಿ ೨೦,೦೦೦ ಜನರು ಕಾಯಿಲೆಯಲ್ಲಿ ಬಿದ್ದಿದ್ದಾರೆ, ಇಲ್ಲವೇ ಗಾಯಪಟ್ಟು ನರಳುತ್ತಿದ್ದಾರೆ ಆಹಾರ ಸಾಮಗ್ರಿ ಕೋಟೆಯೊಳಗೆ ಸ್ವಲ್ಪವೂ ಇಲ್ಲ. ಆರೋಗ್ಯ ವಿಚಾರವು ತುಂಬಾ ಕೊರತೆಯಾಗಿದೆ.

ಚಕ್ರವರ್ತಿಯವರ ಮಾತಿನಂತೆ ನಡಕೊಂಡರು.

ಲಂಡನ್, ಜನವರಿ ೫.—ಪೋರ್ಟ್ ಆರ್ಥರನ್ನೆಲ್ಲಾ ಮದ್ದಿಟ್ಟು ನಾಶಮಾಡಿ, ಉಳಿದಿರುವ ಸೈನ್ಯವನ್ನು ಜಪಾನವರ ಮೇಲೆ ನುಗ್ಗಿಸಿ ಯುದ್ಧ ಮಾಡಿ ಹತರಾಗುವೆವು ಎಂದು ಜನರಲ್ ಸ್ಟೋಯೆಸಲ್ ಯವರು ಬರೆದು ಕೇಳಿದ್ದಕ್ಕೆ ಚಕ್ರವರ್ತಿಯವರು—ಹಾಗೆ ಮಾಡದೆ ಕೋಟೆಯನ್ನು ಒಪ್ಪಿಸಿ, ಶತ್ರುಗಳಿಗೆ ಶರಣಾಗತರಾಗಿ ಎಂಬುದಾಗಿ ಪ್ರತ್ಯುತ್ತರ ಕೊಟ್ಟರು.

ರಷ್ಯದವರು ಹೊರಕ್ಕೆ ಬರುವುದು

ರಷ್ಯದವರು ನಾಳೆ ಪೋರ್ಟ್ ಆರ್ಥರಿನಿಂದ ಹೊರಕ್ಕೆ ಬಂದುಬಿಡುತ್ತಾರೆ, ಜಪಾನವರು ತಾ॥ ೮ ರಲ್ಲಿ ಕ್ರಮವಾಗಿ ಕೋಟೆಯೊಳಕ್ಕೆ ಪ್ರವೇಶ ಮಾಡುವರು.

ರಷ್ಯಾ ಬೈದಿಗಳ ಸಂಖ್ಯೆ.

೪೮,೦೦೦ ರಷ್ಯದವರು ಕೈಸೆರೆಯಾಗಿದ್ದಾರೆ ಈ ಪೈಕಿ ೧೬,೦೦೦ ಮಂದಿ ಕಾಯಿಲೆ ಬಿದ್ದಿದ್ದಾರೆ ಎಂಬುದಾಗಿ ಜನರಲ್ ನೋಗಿಯವರು ತಿಳಿಸುವರು ಕೋಟೆಗಳನ್ನೂ ಫಿರಂಗಿಗಳನ್ನೂ ರಷ್ಯದವರು ಜಪಾನವರಿಗೆ ವಹಿಸಿದ್ದಾಯಿತು ಕಾಯಿಲೆಯವರನ್ನೂ ಗಾಯಪಟ್ಟವರನ್ನೂ ಅಲ್ಲಿಂದ ಹೊರಕ್ಕೆ ಸಾಗಿಸುವುದು ಅಸಾಧ್ಯವಾಗಿದೆ ಜಪಾನವರು ಬಹಳ ಆತುರವಾಗಿ ಔಷಧಾದಿಗಳನ್ನೂ ಆಹಾರ ವಸ್ತುಗಳನ್ನೂ ತೆಗೆದುಕೊಂಡು ಹೋಗುತ್ತಿದ್ದಾರೆ.

ರಷ್ಯಾ ಮಂತ್ರಾಲೋಚನಾ ಸಭೆ

ರಷ್ಯಾ ಚಕ್ರವರ್ತಿಯವರು ಮಂತ್ರಿ ಶ್ರೇಷ್ಠರುಗಳನ್ನೆಲ್ಲಾ ಕರೆಸಿಕೊಂಡು, ಈ ದಿನ ಅವರ ಸಂಗಡ ಆಲೋಚನೆ ಮಾಡಿ—ಯುದ್ಧವನ್ನು ನಿಲ್ಲಿಸಕೂಡದು, ಮುಂದರಿಸಲೇ ಬೇಕು, ಜನರಲ್ ಕುರೋಪಾಟ್ಕಿನ್ ರವರ ಸಹಾಯಕ್ಕೆ ಇನ್ನೂ ೨೦,೦೦೦ ಸೈನ್ಯವನ್ನು ಫೆಬ್ರವರಿ ಅಂತ್ಯದೊಳಗಾಗಿ ಕಳುಹಿಸಬೇಕು ಎಂಬುದಾಗಿ ತೀರ್ಮಾನ ಮಾಡಿದ್ದಾರೆ.

ಶರಣಾಗತರಾದರು.

ಲಂಡನ್, ಜನವರಿ ೬ —ಜನರಲ್ ಸ್ಟೋಯೆಸೆಲ್ ಯವರು ಜಪಾನವರಿಗೆ ಶರಣಾಗತರಾಗಿ ರುಜು ಮಾಡಿಕೊಟ್ಟದ್ದಾಯಿತು. ಅವರು ನಾಗಸಕಿಗೆ ಹೋಗಿ ಅಲ್ಲಿಂದ ಹಿಂತಿರುಗಿ ರಷ್ಯಾಕ್ಕೆ ಪ್ರಯಾಣ ಮಾಡುವರು. ಅವರೂ ಜನರಲ್ ನೋಗಿಯವರೂ ಪೋರ್ಟ್ ಆರ್ಥರಿನಲ್ಲಿ ಸೇರಿ ೨ ಗಂಟೆ ಹೊತ್ತು ಆಲೋಚನೆ ಮಾಡಿ, ಗಾಯಪಟ್ಟವರನ್ನೂ ಕಾಯಿಲೆಯವರನ್ನೂ ಚೀನಾ ಬಂದರುಗಳಲ್ಲಿರುವ ಆಸ್ಪತ್ರೆಗಳಿಗೆ ಹಂಚಿಹಾಕಿ ಉಪಚರಿಸುವಂತೆ ಏರ್ಪಾಡು ಮಾಡಬೇಕೆಂದು ತೀರ್ಮಾನ ಮಾಡಿದರು

ಸೈನಿಕರು ಹೊರಟರು.

ರಷ್ಯಾ ಸೈನಿಕರು ಲೈನು ಕಟ್ಟಿ ಕೋಟೆಯಿಂದ ಹೊರಟು ಡಾಲ್ನಿ ನಗರಕ್ಕೆ ಹೋಗುತ್ತಿರುವರು. ಜಪಾನ ಸೈನಿಕರು ಕೋಟೆಯೊಳಗೆ ಪ್ರಜಾ ನೆಮ್ಮದಿಯನ್ನು ಕಾಪಾಡಿಕೊಂಡಿದ್ದಾರೆ. ಕೋಟೆಗಳೆಲ್ಲಾ ಜಪಾನವರ ಸ್ವಾಧೀನಕ್ಕೆ ಬಂದವು. ರಷ್ಯಾ ಬೈದಿಗಳನ್ನೆಲ್ಲಾ ಜಪಾನವರು ಮತ್ತೆ ರಷ್ಯಾಕ್ಕೆ ವಾಪಸು ಹೋಗುವಂತೆ ಬಿಟ್ಟುಬಿಡುತ್ತಾರೆಂದು ವರ್ತಮಾನವಿದೆ

ಜಪಾನ ಚಕ್ರವರ್ತಿಯವರ ಶುಭನಾದ.

ಲಂಡನ್, ಜನವರಿ ೭ —ಜಪಾನ ಚಕ್ರವರ್ತಿಯವರು ಜನರಲ್ ನೋಗಿಯವರನ್ನೂ ಅವರ ಕೈಕೆಳಗಣ ದಂಡುಗಳ ಸೈನಿಕರನ್ನೂ, ಅಡ್ಮಿರಲ್ ಟೋಗೋಯವರನ್ನೂ ಅವರ ಕೈಕೆಳಗಣ ಹಡಗುಗಳ ಸೈನಿಕರನ್ನೂ ಬಹಳವಾಗಿ ಹೊಗಳಿ ಅವರಿಗೆಲ್ಲಾ ಕಾಗದ ಬರೆದಿದ್ದಾರೆ.

ಜಪಾನವರ ಇಸ್ತಿಹಾರ್ನಾಮೆ.

ಲಂಡನ್, ಜನವರಿ ೮ —ಲಿಯೋಟಂಗ್ ಪರ್ಯಾಯದ್ವೀಪದ ಮುತ್ತಿಗೆಯು ಮುಕ್ತಾಯವಾಯಿತು. ಪೋರ್ಟ್ ಆರ್ಥರಿಗೆ ಜಪಾನವರು ವಿನಹಾ ಪರರಾಜ್ಯದವರ್‍ಯಾರೂ ತಮ್ಮ ಜಹಜುಗಳನ್ನು ತರಕೂಡದು. ಯಾರನ್ನೂ ಒಳಕ್ಕೆ ಬಿಡುವುದಿಲ್ಲ ಎಂಬುದಾಗಿ ಜಪಾನವರು ಈ ದಿನ ಪ್ರಕಟಿಸಿರುತ್ತಾರೆ.

ಬೈದಿಗಳ ಸಂಖ್ಯೆಯು.

ಲಂಡನ್, ಜನವರಿ ೯.—ಜನರಲ್ ನೋಗಿಯವರು ತಿಳಿಸುವುದೇನೆಂದರೆ—ಕೋಟೆಯು ಸ್ವಾಧೀನಕ್ಕೆ ಸಂಬಂಧಪಟ್ಟ ವಿಚಾರವೆಲ್ಲಾ ನೆನ್ನೆಗೆ ಮುಕ್ತಾಯವಾಯಿತು. ಶನಿವಾರವೇ ಎಲ್ಲಾ ನಮ್ಮ ಸ್ವಾಧೀನಕ್ಕೆ ಬಂದಿದೆ. ೮೭೮ ಮಂದಿ ಹುದ್ದೇದಾರರೂ ೨೩,೪೯೧ ಜನ ಸೈನಿಕರೂ ನಮಗೆ ಬೈದಿಗಳಾಗಿ ಸಿಕ್ಕಿದರು. ಈ ಪೈಕಿ ಇದುವರೆಗೆ ೪೪೧ ಮಂದಿ ಹುದ್ದೇದಾರರಿಂದಲೂ ೨೨೯ ಮಂದಿ ಸೈನಿಕರಿಂದಲೂ ರುಜು ಹಾಕಿಸಿಕೊಂಡು ಬಿಟ್ಟದ್ದಾಯಿತು. ಫೋಕ್, ಸ್ಮಿರ್ನಾಫ್, ಗಾರ್ಬಟೋಸ್ಕಿ ಎಂಬೀ ಜನರಲ್'ಗಳೂ, ಅಡ್ಮಿರಲ್ ವೈಲ್ಡ್‌ಮಾರ್ ಯವರೂ ತಮ್ಮನ್ನು ಜಪಾನಸ್ಕೇ ಬೈದಿಗಳಂತೆ ಇಟ್ಟುಕೊಳ್ಳಬೇಕೆಂದೂ ರಷ್ಯಾಕ್ಕೆ ವಾಪಸು ಹೋಗಲು ತಮಗೆ ಇಷ್ಟವಿಲ್ಲವೆಂದೂ ಕೇಳಿಕೊಂಡರು. ಜನರಲ್ ಸ್ಟೋಯೆಸಲ್ ಯವರು ಮಾತ್ರ ಡಾಲ್ನಿ ನಗರದಿಂದ ೧೨ ನೆ ತಾ॥ ಹೊರಟು ರಷ್ಯಾಕ್ಕೆ ವಾಪಸು ಹೋಗುವರು.

ನಿಜವಾದ ನಂಬಿಕೆ, ಕುರುಡು ನಂಬಿಕೆ.

[ಕಳೆದ ವಾರದಿಂದ ಸಾಗಿಬಂದುದು.]

ಒಳ್ಳೇದು, ಭಗವಂತನು ನಮ್ಮ ತಂದೆಯಾಗಿದ್ದರೆ, ಆತನನ್ನು ನಾವು ತಿಳಿಯುವದಕ್ಕೂ ಆತನನ್ನು ನಂಬುವದಕ್ಕೂ ಶಕ್ತಿಯನ್ನು ಆತನೇ ನಮ್ಮಲ್ಲಿಟ್ಟಿರಬೇಕಲ್ಲವೇ? ಹೌದು, ಅಂಥ ಶಕ್ತಿಯನ್ನು ಆತನು ನಮ್ಮಲ್ಲಿಟ್ಟಿರುತ್ತಾನೆಂಬುದಕ್ಕೆ ಸಂಶಯವೇ ಇಲ್ಲ. ಆ ಶಕ್ತಿಯನ್ನು ನಾವು ಯಥಾರ್ಥವಾಗಿ ಸಾಧಿಸುವದರಿಂದಲೇ ನಮ್ಮ ನಮ್ಮ ಜನ್ಮಸಾಫಲ್ಯಕಾರ್ಯವು ಸಿದ್ಧಿಸುತ್ತದೆ. ನಮ್ಮ ಈ ಜೀವಮಾನದ ಉದ್ದೇಶವು ಸಿದ್ಧಿಯನ್ನು ಹೊಂದುವದಕ್ಕೆ ನಾವು ಲೋಕಯಾತ್ರೆಯ ಜೊತೆ ಪ್ರಯಾಣಿಕರಲ್ಲಿ ನಿಸ್ಸಂದೇಹವಾದ ನಂಬಿಕೆಯನ್ನಿಡುವದು ಎಷ್ಟು ಅವಶ್ಯವಾಗಿದೆಯೋ ಅಷ್ಟು ಅವಶ್ಯವಾಗಿ ನಾವು ನಮ್ಮ ಜೀವಮಾನದ ನಿಜಸೌಖ್ಯವನ್ನು ಪಡೆಯುವದಕ್ಕೆ ಭಗವಂತನಲ್ಲಿ ನಂಬಿಕೆಯಿಡಬೇಕಾಗಿದೆ.

ಇದೆಲ್ಲಾ ಸರಿಯೇ, ಮಗುವು ತಂದೆ ತಾಯಿಗಳನ್ನು ತಿಳಿದು ನಂಬುವದು ಬೇರೆ. ದೇವರು ಒಬ್ಬ ಪುರುಷನಾಗಿ ಇದ್ದಾನೋ ಇಲ್ಲವೋ ಎಂಬುವದೇ ನಂಬುವದಕ್ಕೆ ಮಹಾ ಪ್ರಯಾಸವಾದ ವಿಷಯವಾಗಿರುವಲ್ಲಿ ಆತನು ನಮ್ಮ ತಂದೆಯಾಗಿರುತ್ತಾನೆಂದು ನಂಬುವದು ಸುಲಭವೆಂದು ಹೇಳುವದಕ್ಕಾಗುವದಿಲ್ಲ. ಮಕ್ಕಳಾದರೋ ತಂದೆತಾಯಿಗಳನ್ನು ಕಣ್ಣಿನಿಂದ ನೋಡಬಲ್ಲರು, ಅವರನ್ನು ಸ್ಪರ್ಶಿಸಿ ತಿಳಿಯಬಲ್ಲರು, ಅವರ ಮಾತುಗಳನ್ನು ಕಿವಿಯಾರ ಕೇಳಬಲ್ಲರು. ಆದರೆ ದೇವರು ಆ ಪ್ರಕಾರ ತಿಳಿಯತಕ್ಕವನಲ್ಲವಲ್ಲಾ! ಎಂದಾಕ್ಷೇಪಿಸಬಹುದು. ಆದರೇನು? ಕುರುಡರಾಗಿ ಹುಟ್ಟಿದ ಮಕ್ಕಳ ವಿಷಯದಲ್ಲಿ ಏನು ಹೇಳೋಣ? ಅವು ತಮ್ಮ ತಂದೆತಾಯಿಗಳನ್ನು ಕಾಣದಿದ್ದರೂ ಅವರನ್ನು ಬಲ್ಲವಷ್ಟೆ. ಅದಿರಲಿ. ಆ ಕುರುಡುಮಗುವಿನ ತಂದೆಯಾದವನಲ್ಲಿ ವಾತ್ಸಲ್ಯವು ಇರುವದೇ ನಿಜವಾದರೆ, ಅವನು ತಾನಾರೆಂದು ಆ ಮಗುವಿಗೆ ತಿಳಿಯಪಡಿಸದೆ ಇರುವನೇ? ಎಷ್ಟು ಮಾತ್ರವೂ ಇರಲಾರನು. ಅದು ತನ್ನನ್ನು ತಿಳಿದು ಪ್ರೀತಿಸಿ ವಿಧೇಯನಾಗಿರುವಂತೆ ಮಾಡಿಕೊಳ್ಳಲು ತವಕಪಡುವನಲ್ಲವೇ?

ದೇವರನ್ನು ತಿಳಿದು ನಂಬತಕ್ಕ ಶಕ್ತಿಯನ್ನು ಆತನು ನಮ್ಮಲ್ಲಿಟ್ಟಿರುವದಾದರೆ ಆತನನ್ನು ತಿಳಿಯಲಾರದ ಕುರುಡುತನವು ಹೇಗೆ ಬಂದಿತು? ಅದನ್ನೂ ಆತನೇ ಅಲ್ಲಿಟ್ಟನೋ? ಎಂದು ಕೇಳಬಹುದು. ದೇವರನ್ನು ತಿಳಿಯುವ ಶಕ್ತಿಯನ್ನು ಕೊಟ್ಟಾತನು ಈ ವಿಷಯದಲ್ಲಿ ಮನುಷ್ಯನೆಂಬ ಮಗುವಿಗೆ ಕುರುಡುತನವನ್ನು ಕಲ್ಪಿಸುವದುಂಟೇ? ಎಷ್ಟು ಮಾತ್ರವೂ ಇಲ್ಲ. ಮನುಷ್ಯನನ್ನು ಕುರುಡನಾಗಿ ಮಾಡಿರುವಂಥಾದ್ದು ಪಾಪವೇ ಹೊರತು ದೇವರಲ್ಲ. ಜ್ಞಾನೇಂದ್ರಿಯವನ್ನು ಕೆಡಿಸಿಬಿಟ್ಟಿರುವ ಪಾಪವು ದೇವರನ್ನು ಮನುಷ್ಯನ ಕಣ್ಣಿಗೆ ಕಾಣದಂತೆ ಮಾಡಿದೆ. ಆದರೂ ಈ ದುಷ್ಟವಸ್ತುವು ದೇವದತ್ತವಾದ ನಂಬಿಕೆಯೆಂಬ ಶಕ್ತಿಯನ್ನು ಮನುಷ್ಯನೊಳಗಿಂದ ನಾಶಮಾಡಲಾರದು. ಆದುದರಿಂದಲ್ಲವೆ ಮನುಷ್ಯನು ದೇವರನ್ನು ತಿಳಿಯಬೇಕೆಂತಲೂ, ಆತನ ಕೈಗೆ ತನ್ನನ್ನು ಒಪ್ಪಿಸಿಕೊಡಬೇಕೆಂತಲೂ ಎಷ್ಟೋ ಕುತೂಹಲದಿಂದ ಪ್ರಯತ್ನಿಸುತ್ತಿರುವದು ಎಲ್ಲೆಲ್ಲೂ ಕಾಣುತ್ತಿದೆ! ಆದರೂ ಕೂಡ ತನ್ನ ನಂಬಿಕೆಗೆ ವಿಷಯನಾದ ಆ ನಿಜವಸ್ತುವನ್ನು ತಿಳಿಯದೆ ಅಂಧನಾಗಿ, ಸ್ವಕಪೋಲಕಲ್ಪಿತಗಳೂ ಕೆಲಸಕ್ಕೆ ಬಾರದವುಗಳೂ ಆಗಿರುವ ನಾನಾ ವಸ್ತುಗಳನ್ನು ನಂಬುವದರಲ್ಲಿ ತನ್ನ ಈ ದೇವದತ್ತವಾದ ವರವನ್ನು ವ್ಯರ್ಥವಾಗಿ ವ್ಯಯಮಾಡಿ ಕೆಟ್ಟುಹೋಗುತ್ತಿರುವನಲ್ಲಾ! ವಿಕಾರ ಕಲ್ಪನೆಗಳಾದಂಥ ಮತ್ತು ಬುದ್ಧಿಗೊವ್ವಂಬಡದಂಥ ನಿಷ್ಫಲವಾದ ನಂಬಿಕೆಯಿಂದ ತನ್ನ ದಿವ್ಯಶಕ್ತಿಯನ್ನು ಕೆಡಿಸಿಕೊಂಡು ನಿಜವಾದ ನಂಬಿಕೆಯನ್ನು ಕುರುಡುನಂಬಿಕೆಯಾಗಿ ಮಾರ್ಪಡಿಸಿಕೊಳ್ಳುತ್ತಿರುವನಲ್ಲಾ! ಅಕಟಕಟಾ!!

ನಿಜವಾದ ನಂಬಿಕೆಯೆಂಬುದು ನಮ್ಮ ಬುದ್ಧಿಯನ್ನು ಎಷ್ಟು ಹೆಚ್ಚಾಗಿ ಉಪಯೋಗಿಸಿದರೂ ಅಷ್ಟು ಚೆನ್ನಾಗಿ ಒಪ್ಪತಕ್ಕಂಥಾದ್ದಾಗಿದೆಯೆಂದು ಹೇಳಿದೆವಷ್ಟೆ. ಸುಳ್ಳುನಂಬಿಕೆ ಅಥವಾ ಕುರುಡು ನಂಬಿಕೆಯೆಂಬುವಂಥಾದ್ದರಲ್ಲಿ ಬುದ್ಧಿಯ ಒಟಕ್ಕೆ ಅವಲೋಕವೂ ಅವಕಾಶವಿಲ್ಲ. ಕೆಲವರು ನಂಬಿದ—ನಂಬಿದ ಮಾತ್ರಕ್ಕೆ ಎಷ್ಟೋ ಮೇಲಾಯಿತು! ನಂಬಿಕೆಗೆ ವಿಷಯವಾದ ವಸ್ತುವು ಸುಳ್ಳಾಗಲಿ ನಿಜವಾಗಲಿ ತಪ್ಪಾಗಲಿ ಚಿಂತೆಯಿಲ್ಲ ಎಂದು ಹೇಳುವರು. ನಿಜವಾದ ನಂಬಿಕೆಯು ಫಲವಾಗಿ ಬರುವ ಒಂದು ನಂಬಿಕೆಯುಂಟು. ಅದೇನಂದರೆ—ಪ್ರತ್ಯಕ್ಷದಲ್ಲಿ ನಿಜವಾಗಿ ತೋರಿದುದನ್ನು ನಿಜವೆಂದು ನಂಬುವದು. ಇಂಥ ನಂಬಿಕೆಯಲ್ಲಿ ಪುಣ್ಯವೂ ಇಲ್ಲ, ಪಾಪವೂ ಇಲ್ಲ. ಆದರೆ ಬುದ್ಧಿಯ ಉಪಯೋಗವನ್ನೇ ವಿಸರ್ಜಿಸಿ, ಬುದ್ಧಿಗೆ ಎಷ್ಟು ವಿರೋಧವಾಗಿದ್ದರೂ ಅವುಗಳಿಂದ ಅವನು ಎಷ್ಟು ಅಪಹಾಸ್ಯಕ್ಕೆ ಗುರಿಯಾದರೂ ಕಂಡಕಂಡ ವಿಷಯಗಳನ್ನೆಲ್ಲಾ ನಂಬುವ ಕುರುಡು ನಂಬಿಕೆಯಾದರೋ ಮನುಷ್ಯನನ್ನು ಎಷ್ಟು ಹೇಯವಾದ ಸ್ಥಿತಿಗೆ ತಂದು ಬಿಡುವದೋ ವಿವರಿಸಲೇಕೆ? ಅಂಥ ನಂಬಿಕೆಯಿಂದ ಪುಣ್ಯವು ಬರುವದೆಂದು ಹೇಳತಕ್ಕವರು ಎಂಥ ಮೋಸವಕರಾಗಿರುತ್ತಾರೋ ಹೇಳಲೇಕೆ? ಕುರುಡು ನಂಬಿಕೆಯು ಬುದ್ಧಿಶೂನ್ಯವಾದ ಕಾರ್ಯವೆಂಬುದೊಂದಲ್ಲದೆ ಮನುಷ್ಯನನ್ನು ಪಾಪಕೂಪದಲ್ಲಿ ಬೀಳಿಸುವ ದುಷ್ಟವಸ್ತುವಾಗಿ ಪರಿಣಮಿಸುವದು. ಇದಲ್ಲದೆ ಮತವಿಷಯದಲ್ಲಿ ಕುರುಡುನಂಬಿಕೆಗೆ ಎಡೆಕೊಟ್ಟರಾದರೋ ಹೇಯವಾದ ಅನೇಕ ಅಶುದ್ಧ ಕಾರ್ಯಗಳನ್ನು ಮಾಡುವಂಥ ಸ್ಥಿತಿಯು ಬಂದೇ ಬರುವದು. ಕುರುಡು ನಂಬಿಕೆಯನ್ನು ಹಿಡಿದು ಅನೇಕ ಸುಳ್ಳುಮತ ಪ್ರವರ್ತಕರ ಚರಿತ್ರೆಯನ್ನು ಪರೀಕ್ಷಿಸಿದರೆ ನಾವು ಹೇಳಿದ ಈ ವಿಷಯವು ಬಲು ಚನ್ನಾಗಿ ವಿದರ್ಶನಕ್ಕೆ ಬರುವದು. ಸುಳ್ಳು ನಂಬಿಕೆಗೆ ಒಳಬಿದ್ದ ಸುಳ್ಳು ಮತದವರ ಗತಿಯು ಹೀಗಿರುವಲ್ಲಿ ನಿಜವಾದ ನಂಬಿಕೆಯು ಆಧಾರದ ಮೇಲೆ ನಿಂತಿರುವ ನಿಜವಾದ ಮತವೆಂಬ ದಿವ್ಯಭವನದ ಬಲವೂ ಸೌಂದರ್ಯವೂ ಪ್ರಯೋಜನವೂ ಎಷ್ಟೆಂದು ವರ್ಣಿಸಲು ಸಾಧ್ಯವಲ್ಲ.

ಭೂಲೋಕವೆಂಬುದು ನಮ್ಮ ಪರಮಪಿತನ ಮನೆಯಲ್ಲವೇ? ಈ ಮನೆಯಲ್ಲಿ ಕುರುಡುತನದಿಂದ ತಂದೆಯನ್ನು ಕಾಣದೆ ಅಲೆಯುತ್ತಿರುವ ನಿರ್ಭಾಗ್ಯರಾದ ಮಾನವರು ನಾವಲ್ಲವೇ? ಎಲೈ ಮಿತ್ರರೇ! ಎಲೈ ಒಡಹುಟ್ಟುಗಳೇ! ನಮಗೀಪರಿಯಲ್ಲಿ ಅಂಧತ್ವವು ಒದಗಿರಲು, ನಮ್ಮ ತಂದೆಯಾದ ದೇವರು ನಮ್ಮನ್ನು ಮಂದಭಾಗ್ಯರನ್ನಾಗಿಯೇ ಬಿಟ್ಟು ಬಿಡುವನೇ? ನೀವೇ ಹೇಳಿರಿ. ನಮಗೆ ತನ್ನನ್ನು ಪ್ರಕಟಮಾಡಿಕೊಳ್ಳುವದಕ್ಕೆ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡದೆ ಬಿಡುವನೇ? ನೀವೇ ಹೇಳಿರಿ. ಈ ಪ್ರಕಟನಾಕಾರ್ಯವನ್ನು ಎಷ್ಟು ಕ್ರಮವಾಗಿಯೂ ಎಷ್ಟು ನಿಧಾನವಾಗಿಯೂ ಎಷ್ಟು ಮೃದುತರವಾಗಿಯೂ ಶಾಂತವಾಗಿಯೂ ನೆರವೇರಿಸುವನೋ ಹೇಳಬಲ್ಲಿರಾ? ಆ ಕುರುಡು ಮಗುವಿಗೆ ತಂದೆಯು ತನ್ನ ಪ್ರೀತಿಯನ್ನು ಪ್ರಕಟಿಸಬೇಕೆಂಬ ಉದ್ದೇಶವು ಹಾಗಿರಲಿ. ಆ ಮಗುವು ತನ್ನ ತಂದೆಯನ್ನು ಪ್ರೀತಿಸುವಂತೆ ಮಾಡಿಕೊಳ್ಳಬೇಕಾದ ಮಹಾಕಾರ್ಯವನ್ನು ತಂದೆಯು ಎಷ್ಟು ಅತಿಶಯವಾಗಿ ನಡಸಬೇಕೋ ಹೇಳಿರಿ. ಒಂದು ವೇಳೆ ಆ ಕುರುಡುತನವು ಸ್ವಸ್ಥವಾಗತಕ್ಕದೇ ಯಾಗಿದ್ದರೆ, ಅದಕ್ಕೆ ಎಷ್ಟೇ ಖರ್ಚಾಗಲೀ, ಎಷ್ಟೇ ತೊಂದರೆಯಾಗಲೀ, ಇನ್ನೆಷ್ಟೇ ಮಾಡಬೇಕಾಗಿರಲಿ ಅವನು ಆ ಮಗುವಿಗೆ ದೃಷ್ಟಿಯನ್ನು ಕೊಡಿಸಲು ಹಿಂದೆಗೆಯುವನೇ? ಪ್ರಿಯರೇ, ಭಗವಂತನು ತನ್ನ ಮಕ್ಕಳಾದ ನಮ್ಮ ಮೇಲೆ ತನ್ನ ಪರಾಂಬರಿಕೆಯನ್ನು ನಡಸುವ ವಿಧಾನಕ್ಕೆ ಇದು ಅತ್ಯಲ್ಪವಾದ ಸಾದೃಶ್ಯ ಮಾತ್ರವೇ ಎಂದು ತಿಳಿಯತಕ್ಕದ್ದು.

ನಂಬಿಕೆಯು ಎಂದಿಗೂ ಏಕಸ್ಥಿತಿಯಲ್ಲಿ ಇರುವಂಥಾದ್ದಲ್ಲ. ನಾವು ಮಕ್ಕಳಾಗಿರುವಾಗ ನಮ್ಮ ತಂದೆತಾಯಿಗಳಲ್ಲಿ ನಾವಿಟ್ಟಿದ್ದ ಪ್ರೀತಿಯು ದೊಡ್ಡವರಾಗುತ್ತಾ ಬೆಳೆಯುವದಲ್ಲವೇ? ತಂದೆತಾಯಿಗಳಿಗಿಂತಲೂ ಅತಿಶಯನೂ ಪೂರ್ಣನೂ ಆದ ದೇವರಲ್ಲಿ ನಮ್ಮ ನಂಬಿಕೆಯು ನೆಲೆಗೊಳ್ಳುವವರೆಗೂ ಅದು ಬೆಳೆಯುತ್ತಾ ಹೋಗಬೇಕು. ಮತ್ತು ಈ ನಂಬಿಕೆಯನ್ನು ಯಾವ ಭಗವಂತನಲ್ಲಿ ನಿಲ್ಲಿಸಬೇಕೋ ಆ ಭಗವಂತನನ್ನು ತಿಳಿಯುವದೇ ನಮ್ಮ ಜೀವಮಾನದ ಮುಖ್ಯ ಕರ್ತವ್ಯವಾಗಿರಬೇಕು.

ಭಗವಂತನ ಪ್ರೀತಿಯನ್ನೂ ಜ್ಞಾನವನ್ನೂ ಶಕ್ತಿಯನ್ನೂ ಯಾವ ಬಗೆಯಲ್ಲಿ ತಿಳಿಯಬಹುದು? ಇವನ್ನು ಆತನು ನಮಗೆ ಹ್ಯಾಗೆ ತಿಳಿಸುವನು? ತಾನೇ ನಮ್ಮಂತೆ ಮನುಷ್ಯನಾಗಿ ಹುಟ್ಟಿ, ತಿಳಿಯಪಡಿಸುವದಕ್ಕಿಂತ ಉತ್ತಮವಾದ ಬೇರೆ ಮಾರ್ಗವುಂಟೇ? ಮತ್ತು ಆ ಭಗವಂತನು ಎಂಥ ಮನುಷ್ಯನಾಗಿ ಹುಟ್ಟುವನು ಎಂದು ಕೇಳಿದರೆ, ಭಗವಂತನ ಈ ಪ್ರೀತಿ, ಜ್ಞಾನ, ಶಕ್ತಿಯೆಂಬ ಮೂರು ಲಕ್ಷಣಗಳು ತೇಜೋಮಾನವಾಗಿ ಬೆಳಗುತ್ತಿರಬೇಕಲ್ಲವೇ? ಇಂಥ ಅತಿಶಯವಾದ ಪುರುಷನಾಗಿ ಭಗವಂತನು ಹುಟ್ಟಿ ಮಾನವರ ಮಧ್ಯದಲ್ಲಿ ತಾನೊಬ್ಬ ಮಾನವನಾಗಿ ಬದುಕಿದರೆ ಆತನಲ್ಲಿಡುವ ನಮ್ಮ ನಂಬಿಕೆಯು ಪ್ರಕೃತಸ್ಥಿತಿಗಿಂತ ಕಾಲಾನುಕ್ರಮದಲ್ಲಿ ಎಷ್ಟೋ ಅತಿಶಯವಾಗಿ ಅಭಿವೃದ್ಧಿಯನ್ನು ಹೊಂದುತ್ತಾ ಹೋಗುವದು. ಇಂಥ ದಿವ್ಯ ಪುರುಷನು ನಮ್ಮ ಈ ಭೂಲೋಕದಲ್ಲಿ ಹುಟ್ಟಿದ್ದುಂಟೇ? ಉಂಟು. ಹಾಗಾದರೆ ಆತನು ನಮ್ಮನ್ನು ದೇವರ ಬಳಿಗೆ ನಡಿಸಿಕೊಂಡು ಹೋಗಬಲ್ಲನಲ್ಲವೇ? ಆತನು ನಂಬು ಎಂದು ಹೇಳಿದುದನ್ನೆಲ್ಲಾ ನಂಬುವೆವಲ್ಲವೇ? ಆತನು ಮಾಡು ಎಂದು ಹೇಳಿದುದನ್ನೆಲ್ಲಾ ಮಾಡುವೆವಲ್ಲವೇ?

[ಸಶೇಷ]

ಮೈಸೂರಿನಿಂದ ಮಂಗಳೂರಿಗೆ ರೈಲುಮಾರ್ಗ

ಇತ್ತಲಾಗೆ ಸೌತ್ ಮೈಸೂರ್ ಪ್ಲಾಂಟರ್ಸ್ ಅಸೋಸಿಯೇಷನ್ ಎಂಬ ಸಂಘದವರು ಮಾಡಿದ ಸಭೆಯಲ್ಲಿ ಪಶ್ಚಿಮ ಕರಾವಳಿಗೆ ಅಗತಕ್ಕ ರೈಲುಮಾರ್ಗವನ್ನು ಕುರಿತು ಚರ್ಚಿಸಿದರು. ಮೈಸೂರಿನಿಂದ ಮಂಗಳೂರಿಗೆ ರೈಲುಮಾರ್ಗ ಮಾಡುವದು ಅಗತ್ಯವೆಂದು ಮೈಸೂರ ಗವರ್ನಮೆಂಟಿನವರಿಗೆ ಅರ್ಜಿ ಬರೆಕೊಳ್ಳಬೇಕೆಂದ ನಿರ್ಣಯಿಸಿಕೊಂಡಿದ್ದಾರೆ. ಇದು ಮಂಗಳೂರವರಿಗೆ ಸಂತೋಷದ ವಾರ್ತೆಯೇ ಸರಿ. ಆದರೆ ಮೇಲೆ ಹೇಳಿದ ಸಂಘದವರೊಂದಿಗೆ ಮಂಗಳೂರಿನವರು ಅರ್ಜಿ ಬರಕೊಳ್ಳುವದು ಉಚಿತವೆಂದು ನಮಗೆ ತೋರುತ್ತದೆ. ನಮ್ಮ ಜಿಲ್ಲೆಗೆ ರೈಲುಮಾರ್ಗ ಮಾಡಬೇಕೆಂದು ಸುಮಾರು ೩೪ ವರ್ಷಗಳಿಂದ ಜಿಲ್ಲೆಯ ಮುಂದಾಳುಗಳು ಬಂದ ಬಂದ ಗವರ್ನರರಿಗೆ ಅರ್ಜಿ ಹಾಕುತ್ತಲೇ ಇದ್ದರು. ಆಗ ಕಳಸಿಸಲ್ಪಟ್ಟ ಗಂಟು ಈಗ ಅರ್ಜಿ ಪ್ರಭುಗಳ ಆಳಿಕೆಯಲ್ಲಿ ಕೈಯಲ್ಲಿರುವ ಗಂಟು ಆಯಿತು. ಈ ಬಗ್ಗೆ ಬೇಡುತ್ತಿದ್ದ ದಿವಾನ್ ಬಹದ್ದೂರ ಎಸ್. ಶಿವರಾಯರೂ ಟಿ. ರಾಮರಾಯರೂ ರಾವ್ ಬಹದ್ದೂರ ಬ್ರಿಟರೂ ರೈಲು ಬರುವದಕ್ಕೆ ಮೊದಲೇ ಕೀರ್ತಿಶೇಷರಾದದ್ದು ದುಃಖಕರವೇ. ಹತ್ತು ವರ್ಷಗಳ ಮೊದಲು ಮೈಸೂರಿನಿಂದ ತಲಚೇರಿಗೆ ರೈಲು ಮಾಡಬೇಕೆಂಬ ಚರ್ಚೆ ನಡೆಯುತ್ತಿದ್ದಾಗ, ಮೇಲೆ ಹೇಳಿದ ಪುರಾಣಿಕರು ಮೈಸೂರಿನಿಂದ ಮಂಗಳೂರಿಗೆ ರೈಲು ಮಾಡುವದೇ ಕಂಪನಿಯವರಿಗೂ ಮೈಸೂರು ಗವರ್ನಮೆಂಟಿನವರಿಗೂ ವಿಶೇಷ ಲಾಭಕರವೆಂದೂ ಈ ಜಿಲ್ಲೆಯ ನಿವಾಸಿಗಳಿಗೂ ಬಹು ಹಿತಕರವೆಂದೂ ವಿವಿಧ ನ್ಯಾಯಗಳನ್ನು ತೋರಿಸಿ, ಗವರ್ನಮೆಂಟಿಗೂ ಮೈಸೂರ ಸಂಸ್ಥಾನಕ್ಕೂ ಅರ್ಜಿ ಬರೆಕೊಂಡಿದ್ದರು. ಇದಲ್ಲದೆ ಈ ಜಿಲ್ಲೆಯ ಪ್ರತಿನಿಧಿಗಳಾದ ಇವರು ಇನ್ನು ಕೆಲವರ ಕೂಡಾ ಮೈಸೂರು ಮಹಾರಾಜ ದಿವಾನರನ್ನು ಕೂಡಾ ಸಂದರ್ಶಿಸಿ, ಅವರನ್ನು ಒಡಂಬಡಿಸಿದ್ದರಲ್ಲವೇ? ಮಂಗಳೂರಿನವರು ಈ ಸಂದರ್ಭದಲ್ಲಿ ಆ ಅರ್ಜಿಗಳನ್ನು ಪುನಹ ಮುಂತಕ್ಕೆ ತಂದು, ಮೈಸೂರ್ ಪ್ಲಾಂಟರ್ಸ್ ಅಸೋಸಿಯೇಷನಿನವರ ಅಭಿಪ್ರಾಯವನ್ನು ಪುಷ್ಟೀಕರಿಸುವವರಾಗಲಿ. ಮೈಸೂರಿನಿಂದ ಮಂಗಳೂರಿಗೆ ರೈಲು ಆಗುವದು ಅತ್ಯಗತ್ಯವೂ ಕನ್ನಡ ಜಿಲ್ಲೆಗೂ ಮೈಸೂರು ಸಂಸ್ಥಾನಕ್ಕೂ ಬಹು ಆದಾಯಕರವೂ ಆಗಿದೆ ಎನ್ನುವದರಲ್ಲಿ ಸಂಶಯವಿಲ್ಲ. —ಸ

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು. ಎಡಿ

ಕರೆಸ್ಪಾಂಡೆನ್ಸ್.

ಸಿಡುಬಿಗೆ ಒಳ್ಳೇ ಔಷಧ

ಅಯ್ಯಾ,

ಈಗ ರಾಜಧಾನಿಯಲ್ಲಿ ಮಕ್ಕಳಿಗೆ ಸಿಡುಬು ಏಳುತ್ತಿರುವದೂ ಅದರಿಂದ ಮಕ್ಕಳ ಮರಣ ಸಂಖ್ಯೆಯು ಹೆಚ್ಚಾಗುತ್ತಿರುವದೂ ಪ್ರಬಲವಾಗಿದೆಯಷ್ಟೆ. ಇಂಥ ರೋಗಗಳಿಗೆ ಹಿತಕರವಾದ ಮತ್ತು ಶೀಘ್ರ ಗುಣಕರವಾದ ಚಿಕಿತ್ಸೆಯು ನಮ್ಮ ವೈದ್ಯಶಾಲೆಯಲ್ಲಿ ಧರ್ಮಾರ್ಥವಾಗಿ ಮಾಡಲ್ಪಡುತ್ತೆ. ಹಿಂದೆ ಇದೇ ರೋಗದಿಂದ ನರಳುತ್ತಿದ್ದ ಅನೇಕ ಮಕ್ಕಳುಗಳು ನಮ್ಮ ದಿವ್ಯೌಷಧದಿಂದ ಗುಣವಾಗಿವೆ. ಪ್ರತಿ ಒಬ್ಬರೂ ಇದನ್ನೇ ಜ್ಞಾಪಕದಲ್ಲಿಟ್ಟುಕೊಂಡು, ಸಮಯಬಿದ್ದಾಗ ಈ ವೈದ್ಯಶಾಲೆಯ ಉಪಯೋಗವನ್ನೇ ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ದೊಡ್ಡಪೇಟೆ, ಮೈಸೂರು — ಸಂಪತ್ತಯ್ಯಂಗಾರ್ಯರು, ನಿಜಬಲರೋಗಹಾರಿ ವೈದ್ಯಶಾಲೆ.

ಅವ್ಯವಸ್ಥೆಯು

ಅಯ್ಯಾ,

ಹಲಗೂರು ಚನ್ನಪ್ಪಯ್ಯನವರು ಆಕ್ಷೇಪಿಸಿದ್ದ ವಿಚಾರವಾಗಿ ೧೯೦೪ ನೆ ಡಿಸೆಂಬರು ೨೨ ನೇ ತಾ. ವೃತ್ತಾಂತಪತ್ರಿಕೆಯ ೭ನೆ ಪುಟದಲ್ಲಿ ರೆವಿನ್ಯೂ ಕಮಿಷನರ್ ಸಾಹೇಬರವರ ಹುಕುಂ ಉಲ್ಲಂಘಿಸಿ ತಾಲ್ಲೂಕು ಅಧಿಕಾರಿಗಳು ನಡೆದಿರುತ್ತಾರೆಂಬುದಾಗಿ ಬರೆದಿರುತ್ತಾರಷ್ಟೆ. ಹೀಗೆ ನಡೆದಿದ್ದಪಕ್ಷಕ್ಕೆ ಬಹಳ ಶೋಚನೀಯವಾದದ್ದೇ ಸರಿ. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಮಾಡತಕ್ಕದ್ದು ಧರ್ಮವಾಗಿರುತ್ತೆ. ಹೀಗೆ ಮಾಡಬೇಕಾದರೆ ಚನ್ನಪ್ಪಯ್ಯನವರು ರೆವಿನ್ಯೂ ಕಮಿಷನರ್ ಸಾಹೇಬರವರಿಗೆ ಈ ಸಂಗತಿಗಳನ್ನೆಲ್ಲಾ ವಿಶದಪಡಿಸಿ, ಒಂದು ಅರ್ಜಿಯನ್ನು ಬರೆದುಕೊಂಡು ಖುದ್ದು ಹೋಗಿ ಕಾಣಿಸಿಕೊಂಡು, ಅವರಿಗೆ ಎಲ್ಲಾ ಹೇಳಿಕೊಂಡರೆ ರೆವಿನ್ಯೂ ಕಮಿಷನರ್ ಸಾಹೇಬರವರು ತಾವೇ ಖುದ್ದು ವಿಚಾರಿಸಿ, ನ್ಯಾಯವಾದ ಹುಕುಂ ಕೊಡುವದರಲ್ಲಿ ಸಂದೇಹವಿಲ್ಲ. ಪ್ರತಿ ದಿವಸವೂ ಅರ್ಜಿದಾರರ ಅಹವಾಲನ್ನು ವಿಚಾರಿಸಿ, ತಾವೇ ಖುದ್ದು ಕಾಗದಪತ್ರಗಳನ್ನು ಪರಾಂಬರಿಸಿ, ತಾಲ್ಲೂಕು ಅಧಿಕಾರಿಗಳ ಅನ್ಯಾಯವನ್ನು ಸರಿಪಡಿಸಿ, ರೈತಾಪಿ ಜನಗಳಿಗೆ ತುಂಬಾ ಸಹಾಯಮಾಡುತ್ತಿರುವದು ನಮ್ಮೆಲ್ಲರ ಅನುಭವದಲ್ಲಿರುವದು. ಆದ್ದರಿಂದ ನಮ್ಮ ಸ್ನೇಹಿತರಾದ ಚನ್ನಪ್ಪಯ್ಯನವರು ದಯವಿಟ್ಟು ತಮ್ಮ ಅಹವಾಲನ್ನು ರೆವಿನ್ಯೂ ಕಮಿಷನರ್ ಸಾಹೇಬರವರಲ್ಲಿ ಖುದ್ದು ಅರಿಕೆಮಾಡಿಕೊಂಡು, ತಮ್ಮ ನ್ಯಾಯವನ್ನು ವ್ಯವಸ್ಥೆಪಡಿಸಿಕೊಳ್ಳುವರೆಂದು ನಂಬಿಯಿದ್ದೇನೆ. ಮೊಕದ್ದಮೆದಾರರು ರೆವಿನ್ಯೂ ಕಮಿಷನರರಾಗಿ ಇರುವವರೆಗೂ ರೈತರು ಅನಾಥರೆಂದು ಹೇಳಿಕೊಳ್ಳುವದಕ್ಕೆ ಕಾರಣವಿಲ್ಲ.

ಬಿ. ರಾಮಯ್ಯ.

ಗ್ರಾಮಾಂತರದಲ್ಲೂ ಪ್ಲೇಗ್ ಉಪದ್ರವು.

ಅಯ್ಯಾ,

ಗುಬ್ಬಿ ತಾಲ್ಲೂಕು ಕಸಬಾ ಸಮ್ಮತು ಗುಬ್ಬಿ ಹೊಸಹಳ್ಳಿ ಎಂಬ ಗ್ರಾಮವು ಈ ಸಮ್ಮತಿನಲ್ಲಿ ದೊಡ್ಡದಾಗಿಯೂ ಅನೇಕ ಸಾಮಾನ್ಯ ಧನವಂತರುಳ್ಳದ್ದಾಗಿಯೂ ಪ್ಲೇಗಿನ ಸ್ಥಳಗಳಿಂದ ಬರತಕ್ಕ ಜನಗಳಿಗೆ ಆಸರೆಯನ್ನು ಕೊಡುತ್ತಿದ್ದಾಗ್ಯೂ ಯಾವಾಗ್ಯೂ ಪ್ಲೇಗಿಗೆ ತುತ್ತಾಗದೆ ಇರುವದಾಗಿಯೂ ಇದೆ. ಇಲ್ಲಿ ಲೇವಾದೇವಿ ಮಾಡತಕ್ಕವರ ಪೈಕಿ ಅಂಬಲಿ ಚನ್ನಬಸವಣ್ಣ ಎಂಬವರು ಅಕ್ಕರೆಗಿಂತ ಹಣವನ್ನು ಸುಲಭವಾದ ಬಡ್ಡಿಗೆ ಕೊಟ್ಟು ಬಡವರಾದ ಮಾಸ್ಥರಲ್ಲಿ ಕೆಲವರಿಗೆ ಬಡ್ಡಿಯ ಕೊಂಚಭಾಗವನ್ನೂ, ಕೆಲವರಿಗೆ ಪೂರಾಬಡ್ಡಿಯನ್ನೂ, ಕೆಲವರಿಗೆ ಅಸಲಿನಲ್ಲಿಯೇ ಸ್ವಲ್ಪಭಾಗವನ್ನೂ ಸೋಡಿ ಬಿಡುತ್ತಾರೆ. ಈ ಮಾಗೂರು ಸೀಮೆಯಲ್ಲಿ ಇಂಥಾ ಧರ್ಮಾತ್ಮರಾದ ಸಾಹುಕಾರರು ಹೆಚ್ಚಿಲ್ಲೆಂದು ಹಾರೈಸುತ್ತೇನೆ.

ಆದರೆ ಈ ಗ್ರಾಮದ ಪಟೇಲ ಶ್ಯಾನುಭೋಗರು ಪೂರ್ವವಯಸ್ಕರಾಗಿ ಈ ವಯಸ್ಸಿಗೆ ತಕ್ಕ ನಡತೆಯನ್ನು ವಹಿಸಿ ಪ್ಲೇಗಿನ ಸ್ಥಳಗಳಿಂದ ಇಲ್ಲಿಗೆ ವಾಸಿಸುವದಕ್ಕೆ ಬಂದ ಜನಗಳಿಂದ ಲಂಚವನ್ನು ತೆಗೆದುಕೊಂಡು ಊರೊಳಕ್ಕೆ ಬಿಟ್ಟುಕೊಳ್ಳುತ್ತಲೂ, ಲಂಚ ಕೊಡ

...ವನ್ನು ೧೦ ದಿನ ಹೊರಗಿರಬೇಕೆಂದು ಆಜ್ಞಾಪಿಸಿ, ಹೊರಗಣ ...ಸ್ಥಾನ ಮಂಟಪಗಳಲ್ಲಿಯೂ ಸ್ಥಳಸಿಕ್ಕದಂತೆ ಕೃತ್ರಿಮಪಡಿಸಿ ...ವರನ್ನು ವಿವಿಧ ಕಷ್ಟನಷ್ಟಗಳಿಗೆ ಗುರಿಮಾಡುತ್ತಲೂ, ಬಳಿಕ್ಕೆ ...ವರಿಗಾದರೂ ನೆಮ್ಮದಿಯಿಲ್ಲದಂತೆ ೩—೪ ತಿಂಗಳು ವಾಸಮಾ ...ಮಾಡ್ಕೇನೆ ಕಂದಾಯ ದಾಖಲ್ಮಾಡುತ್ತೇವೆಂದು ಹೆದರಿಸಿ ...ವರಿಂದ ರುಸುಮನ್ನು ತೆಗೆದುಕೊಳ್ಳುತ್ತಲೂ ಇದ್ದಾರೆ. ...ಕ್ಕೆ ದೃಷ್ಟಾಂತವಾಗಿ ಒಂದಾನೊಂದು ದಿನ ತುಮಕೂರಿನ ...ಗಿಗೆ ಭಯಪಟ್ಟು ಇಲ್ಲಿಗೆ ಬಂದ ಒಬ್ಬ ಶೆಟ್ಟಿನೂಲು ಸಾವಿ ...ವನ್ನು ಲಂಚ ಕೊಡದ್ದರಿಂದ ಅಮಲ್ದಾರರವರಿಗೆ ದೂರುಹೇಳಿ ...ಕ್ಕೆ ಹಾಕಿಸಿ ದಂಡ ತೆಗೆದುಕೊಂಡು ಆ ಮರುದಿನಕ್ಕೇನೆ ...ಕ್ಕೆ ಬಿಟ್ಟುಕೊಂಡರು. ಆ ನಿರ್ಭಾಗ್ಯರಾದರೊ ಎಷ್ಟುವೃತ್ತಿ ...ಗೆ ದಂಡಕೊಡಲೋ ಸ್ವಾಮಿ! ಎಂದು ಕಣ್ಣೀರು ಬಿಟ್ಟುದನ್ನು ...ವರು ನೋಡಿದ್ದೇನೆ ಈ ಪ್ಲೇಗಿನ ಹಾವಳಿಯಲ್ಲಿ ಕೂಲಿಯೂ ...ಕ್ಕಿ ಕೈಲಿದ್ದುದನ್ನೆಲ್ಲಾ ಖರ್ಚುಮಾಡಿಕೊಂಡು ಅನ್ನ ವಸ್ತ್ರಾದಿ ...ಗೆ ಮಾರ್ಗವಿಲ್ಲದೆ ಅಲೆಯುತ್ತಾ ಬಂದ ಬಡಜನಗಳನ್ನು ಕಾಲ ...ಮೇಲೆ ಬೊಕ್ಕೆ ಎದ್ದಂತೆ ಗ್ರಾಮನೌಕರರು ಹೀಗೆ ಬಾಧಿಸುವು ...ನ್ನು ಕೇಳ ಯಾರೂ ಕಾನೇ ಪಶ್ಚಾತ್ತಾಪ ಪಡಲಾರರು. ನಮ್ಮ ...ಮಲ್ದಾರರಾದರೂ ಈ ಭಾಗದಲ್ಲಿ ತುಂಬಾ ನಿಗಾ ಕೊಡಲೆಂದು ...ಮೂಳ ಅರಿಕೆ ಮಾಡಿಕೊಂಡಿದ್ದೇನೆ.

ಈ ಗ್ರಾಮದ ಬಳಿ ಬಾಳೆ ತೋಟದ ಓಣಿ ಎಂಬ ಒಂದು ...ಮಾರ್ಗವಿದೆ. ಈ ಮಾರ್ಗದ ಮೂಲಕ ೪—೫ ಸಮ್ಮತಾಗ ...ದ ಗುಬ್ಬಿ ತುಮಕೂರು ಮೊದಲಾದ ಸ್ಥಳಗಳಿಗೆ ಅಮದು ರಫ್ತು ...ಇದೆ ಈ ಮಾರ್ಗದಲ್ಲಿ ಕೆಸರುಹೆಚ್ಚಿ ಗಾಡಿಗಳು ಗುಂಬದ ...ಳುದು ಇಳಿದುಹೋಗುವುದರಿಂದ ಒಂದಾನೊಂದು ಗಾಡಿಯನ್ನು ...೧೦ ಜನಗಳು ಸೇರಿ ಎತ್ತುಗಳ ಗೋಳು ಹೊಯ್ದುಕೊಂಡು ...ಕಷ್ಟದಿಂದ ಸಾಗಿಸಬೇಕಾಗಿದೆ ಕೆಲವು ವೇಳೆ ಈ ಪ್ರಾಂತ್ಯ ...ಟ್ ಬಂತ ಆಫೀಸರ ಗಾಡಿಗೂ ಇದೇ ಅವಸ್ಥೆ ಪ್ರಾಪ್ತವಾಗಿದೆ. ...ದ್ದರೂ ಕೂಡ ಯಾವ ಮಹಾನುಭಾವರಾದರೂ ಈ ದುರ್ಗಮ ...ಸ್ಥಳವನ್ನು ನಿಷ್ಕಂಟಕಸ್ಥಳನಾಗಿ ಮಾಡದೆ ತಾಟಸ್ಥ್ಯವನ್ನವ ...ರುವುದು ಆಶ್ಚರ್ಯವೇಸರಿ.

ಗುಬ್ಬಿ ಹೊಸಹಳ್ಳಿ. ಎಂ ರಾಮಣ್ಣ.

ತೀರ್ಥಹಳ್ಳಿಯಲ್ಲಿ ಬ್ರಾಹ್ಮಣರ ಕೇರಿಯ ನಡುಮಧ್ಯೆ ಆದ ಭಾರಿ ಕಳ್ಳತನವು.

ಸ್ವಾಮಿ,

ಕೌನ್ಸಲರ ಸವಾರಿಯು ಆಗುಂಬೆ ಕಡೆಗೆ ಹೋಯಿತು. ಭ ...ಂಕರ ಕಳ್ಳರಾದ ಯಮಭಟರ ಸವಾರಿಯು ಸೋಮವಾರರಾತ್ರಿ ... ಘಂಟೆಗೆ ಚನ್ನಗಿರಿ ರಾಮಣ್ಣನವರ ಮನೆಗೆ ಇಳಿಯಿತು. ...ಸ್ವಾಮಿ ಎಡಿಟರೇ, ಈ ದರೋಡೆ ಕಳ್ಳತನವು ರಾತ್ರಿಯಲ್ಲಿ ನಡೆ ...ಸ್ಯ ಹಗಲು ಕಣ್ಣ ದುರಿಗೆ ನಡೆದಂತೆ ಕಾಣಿಸುತ್ತ ರಾತ್ರಿಯಲ್ಲಿ ... ಘಂಟೆಯ ಸಮಯಕ್ಕೆ ಹಿತ್ತಲಿನ ಮಾರ್ಗವಾಗಿ ಕಳ್ಳರು ಆ ...ಮಧಗಳು ಪಂಜುಗಳು ಇಕ್ಕಳ ... ದೊಣ್ಣೆ ಕಲ್ಲು ಮುಂತಾ ...ದ ಎಲ್ಲಾ ಆಯುಧಗಳೊಂದಿಗೆ ಒಳಕ್ಕೆ ನುಗ್ಗಿ ಸಿಕ್ಕಿದವರನ್ನು ...ಹೊಡೆಯಲು ಪ್ರಾರಂಭಿಸಿದರು. ಮನೆಯ ಯಜಮಾನರನ್ನು ಪ್ರಾ ...ಹೋಗುವಂಥ ಭಯಂಕರವಾದ ಏಟನ್ನು ತಲೆಗೆ ಹೊಡೆದು, ವಿಪ ...ರಕ್ತ ಸುರಿಸಿದರು ಹೆಂಗಸರನ್ನೆಲ್ಲಾ ಹೊಡೆಯಲಿಕ್ಕೆ ಪುರು ...ನು, ಸಣ್ಣ ಕೂಸುಗಳನ್ನು ಸುಡುತ್ತೇವೆಂದು ಹೆದರಿಸಿದರು. ...ಕಾಲದಲ್ಲಿ ಯಾವ ಹೆಂಗಸಿಗೆ ಧೈರ್ಯವಿದ್ದೀತು! ಎಲ್ಲರು ಹೆದ ...೪—೬ ಸಾವಿರ ರೂಪಾಯಿಗಳ ಒಡವೆಗಳನ್ನೂ ಬಟ್ಟೆ ಮುಂತಾ ...ದ್ದನ್ನು ಅವರ ಬಾಯಿಗೆ ಹಾಕಿದರು. ಈ ರಾಮಣ್ಣನವರ ಮನೆ ...ಬಳಿಕ್ಕೆ ಸ್ವಲ್ಪ ದೂರದಲ್ಲಿ ಅಮಲ್ದಾರರ ಮನೆಯೂ ಎಡಕ್ಕೆ ...ಸ್ಟೇದಾರರ ಮನೆಯೂ ಸುತ್ತುಮುತ್ತಲು ಇತರ ಬ್ರಾಹ್ಮಣರ ಮ ...ನೆಗಳೂ ತುಂಬಿವೆ ಕಳುವು ನಡೆದ ರಾತ್ರಿ ಅಮಲ್ದಾರರಾಗಲಿ, ಪೊ ...ಲೀಸ್ ಇನ್ಸ್‌ಪೆಕ್ಟರು ಮತ್ತು ಜಮೇದಾರರಾಗಲಿ ಊರಲ್ಲಿ ಇರ ...ಲ್ಲ ಎಲ್ಲರು ಕೌನ್ಸಲರ ಜೊತೆಯಲ್ಲಿ ಅಗುಂಬೆಗೆ ಪ್ರಯಾಣ ...ಮಾಡಿದ್ದರು. ಇದೇ ಸಮಯವೆಂದು ಕಳ್ಳರು ತಮ್ಮ ಕೆಲಸಕ್ಕೆ ...ಮೊದಲು ಮಾಡಿದರು ಅಮಲ್ದಾರ್ರ ಮನೆಯ ಹತ್ತಿರದಲ್ಲಿ ಇಂಥಾ ...ಘೋರವಾದ ದರೋಡೆ ನಡೆದ ಮೇಲೆ ಊರಿನಲ್ಲಿ ಜನರು ವಾಸ ...ಮಾಡುವದೇ ಬಹು ಪ್ರಯಾಸಕ್ಕೆ ಬಂದಿದೆ ಈ ಕೃತ್ಯವನ್ನು ಪೊ ...ಲೀಸಿನವರು ಬಹು ಸುಲಭವಾಗಿ ಪತ್ತೆ ಮಾಡಬಹುದಾಗಿದೆ. ಅಲ್ಲದೆ ...ವರ ಅಜಾಗರೂಕತೆಯಿಂದಲೇ ಇಂಥಾ ದರೋಡೆ ನಡೆದಿದೆ ಎಂದು ...ಹೇಳಲು ಅವಕಾಶವಾಗುತ್ತದೆ. ಇಷ್ಟು ಜನರು ಪೊಲೀಸ್ ಮುಂ ...ತಾದ ಆಫೀಸರು ಊರಿನ ಉಸ್ತುವಾರಿಗೆ ಏರ್ಪಾಡು ಮಾಡದೆ, ಕೌನ್ ...ಸಲರನ್ನು ಹಿಂಬಾಲಿಸಲು, ಅವರಿಗೆ ಹ್ಯಾಗೆ ಧೈರ್ಯ ಬಂತೋ ...ತಿಳಿಯದು. ಈ ದರೋಡೆಯನ್ನು ಪತ್ತೆ ಮಾಡುವದರಲ್ಲಿ ಪೊಲೀಸಿ ...ನವರು ವಹಿಸಿರುವ ಮುತುವರ್ಜಿ ಎಷ್ಟರಮಟ್ಟಿನದೋ ಗೊತ್ತಾಗು ...ವದು. ಪೊಲೀಸ್ ಸೂಪರೆಂಟರು ತೀರ್ಥಹಳ್ಳಿಯಲ್ಲಿಯೇ ಇದ್ದಾರೆ. ...ಹಾಗಾದರೆ ಬಹು ಮುತುವರ್ಜಿಯನ್ನು ವಹಿಸಿ ಕೆಲಸ ನಡೆಸ ಬಹು ...ದು. ಇಲ್ಲವಾದರೆ ಪೊಲೀಸ್ ಸೂಪರೇಂಟರು ತೀರ್ಥಹಳ್ಳಿಯ ...ಮುಕ್ಕಾಮಿಗೆ ಬಂದಿರುವಾಗ್ಯೆ ಬ್ರಾಹ್ಮಣರ ಕೇರಿಯಲ್ಲಿ ಅಮಲ್ದಾ ...ರ್ರ ಮನೆ ಹತ್ತಿರ ಆದ ದರೋಡೆ ಕಳ್ಳತನವನ್ನು ಪತ್ತೆ ಮಾಡಿಸಲಾ ...ರದೆ ಹೋದರೆಂಬ ಜನರ ಹೇಳಿಕೆಗೆ ಗುರಿಯಾಗಬೇಕಾಗಿದೆ. ಯಾ ...ರ್ಯಾರೋ ಏಳೆಂಟು ಜನ ಸಿಕ್ಕಿಬಿದ್ದಿದ್ದಾರೆ. ಮಾಲಂತೂ ಇನ್ನೂ ...ತ್ತೆ ಇಲ್ಲ.

ಈ ಮಧ್ಯೆ ಜಾತ್ರೆ ನಡೆಯುತ್ತಿದೆ. ಅಮಾವಾಸ್ಯೆ ದಿನ ಎಲ್ಲರೂ ...ರಾಮತೀರ್ಥದಲ್ಲಿ ಬಿದ್ದು ಬಿದ್ದು ಮುಳುಗುತ್ತಿದ್ದಾರೆ ಇವರನ್ನು ...ಪೊಲೀಸಿನವರು ಹೊಡೆಯುವದು ಒಂದು ಅವಾಂತ್ರವಾಗಿದೆ ಆಗಲೆ

ಮೇಗ್ರವಳ್ಳಿ ಕಡೆಯವರು ಗದ್ದೆ ಅಡ್ಡಕೆ ಮುಂತಾದ ಕೆಲವು ಒಡವೆ ರೂಪಾಯಿಗಳನ್ನು ಕಳ್ಳರದಾಲು ದೋಚಿದರು. ಈ ಗುಂಪಿನಲ್ಲಿ ಕಳ್ಳರು ಪೂರಾ ಬಂದಿದ್ದಾರೆ. ಅಮಲ್ದಾರ್ರು ಪೊಲೀಸಿನವರು ಎಚ್ಚರಿಕೆಯಿಂದ ನೋಡದಿದ್ದರೆ ಪ್ರಜೆಗಳ ಗುಂಪು ಕೂಡಿ ಬರುವದೇ ಕಷ್ಟವಾಗುತ್ತದೆ. ಎಲ್ಲಾ ಭಾಗದಲ್ಲೂ ಪೊಲೀಸಿನ ಬಿಗಿ ತಪ್ಪಿದೆ ಎಂದು ಹೇಳಬೇಕಾಗುತ್ತದೆ

ಪ್ರಜಾ ಕ್ಷೇಮಚಿಂತಕ.

ಇಂಡಿಯಾ ದೇಶದ ವೃತ್ತಾಂತಗಳು.

ಕಾಶ್ಮೀರ ಸಂಸ್ಥಾನದಲ್ಲಿ ಕಳೆದ ವರುಷ ಎಲ್ಲಾ ಬಾಬುಗಳಿಂದಲೂ ೯೨ ಲಕ್ಷ ರೂಪಾಯಿ ಉತ್ಪತ್ತಿಯಾಯಿತು ಆ ಪೈಕಿ ೮೮ ಲಕ್ಷ ಖರ್ಚಾಗುವುದೆಂದು ಅಂದಾಜಾಗಿದೆ. ಸಂಸ್ಥಾನದ ಖಜಾನೆಯಲ್ಲಿ ಈಗ ೬೦ ಲಕ್ಷ ರೂಪಾಯಿ ರೇವಣಿ ಉಳಿದಿರುವುದು.

****

ಕಪೂರ್ಥಲ ಸಂಸ್ಥಾನದ ಮಹಾರಾಜರವರು ಈ ವಾರ ಕಲ್ಕತ್ತೆಗೆ ಹೋಗಿ ವೈಸ್‌ರಾಯಿಯವರನ್ನು ಕಾಣುವರು. ತರುವಾಯ ಅವರು ಮಾರ್ಚಿ ತಿಂಗಳಲ್ಲಿ ಸಮುದ್ರಯಾನ ಮಾಡಿಕೊಂಡು ಯೂರೋಪ್ ಖಂಡದ ರಾಜ್ಯಗಳ ಮೇಲೆ ಸಂಚಾರ ಹೊರಡುವರು.

****

ಕೊಚ್ಚಿ ಸಂಸ್ಥಾನದ ಜೈಲಿನಲ್ಲಿದ್ದ ಒಬ್ಬ ಬಂದೀವಾನನನ್ನು ಅಲ್ಲಿನ ಒಬ್ಬ ಸಣ್ಣ ನೌಕರನು ಬಹಳವಾಗಿ ಹೊಡೆದು ಕೊಂದು ಹಾಕಿದನು. ಸರ್ಕಾರದವರು ಈಗ ತನಿಖೆ ಮಾಡುತ್ತಿದ್ದಾರೆ. ಜೈಲಿನ ಕಾರುಬಾರಿಗಳು ಅಷ್ಟು ತೃಪ್ತಿಕರವಾಗಿಲ್ಲವೆಂದು ತಿಳಿದು ಬರುವುದು.

****

ಅಲಿಘಡದಲ್ಲಿರುವ ಮಹಮದಿಯ ವಿದ್ಯಾಶಾಲೆಯಲ್ಲಿ ಅರಬ್ಬಿ ಭಾಷೆಯ ಪುರಾತನ ಗ್ರಂಥಗಳನ್ನು ಇಟ್ಟು, ಮಹಮದಿಯ ವಿದ್ಯಾರ್ಥಿಗಳು ಓದುವಂತೆ ಸೌಕರ್ಯವನ್ನು ಕಲ್ಪಿಸಬೇಕೆಂದು ರಾಜಾ ಜಯಪುರ್ ರಾಜಾ ಜಹಾಂಗೀರಾಬಾದ್ ಎಂಬ ದೊಡ್ಡ ಮನುಷ್ಯನು ೨೦.೦೦೦ ರೂಪಾಯಿ ಕೊಟ್ಟಿರುವನು

****

ಜರ್ಮನಿ ಚಕ್ರವರ್ತಿಯವರ ತಮ್ಮನೆಯ ಕುಮಾರರಾದ ಪ್ರಿನ್ಸ್ ಅಡಾಲ್‌ಬರ್ಟ್‌ರವರು ಪರಿವಾರ ಸಹಿತ ಹರ್ಥಾ ಎಂಬ ಹಡಗಿನಲ್ಲಿ ಪ್ರಯಾಣ ಮಾಡಿಕೊಂಡು ಬಂದು, ಕಳೆದ ವಾರ ರಂಗೂನ್ ಪಟ್ಟಣದಲ್ಲಿ ಇಳಿದರು ಇವರು ಅಲ್ಲಿಂದ ಮುಂದಕ್ಕೆ ಹೊರಟು, ದೇಶ ಯಾತ್ರೆ ಮಾಡುತ್ತಾರೆಂದು ಪ್ರಕಟವಾಗಿದೆ.

****

ಕಳೆದ ವರ್ಷದ ಮೊದಲನೆ ಆರು ತಿಂಗಳಲ್ಲಿ ಅನ್ಯದೇಶಗಳಿಂದ ನಮ್ಮ ಇಂಡಿಯಾ ದೇಶಕ್ಕೆ ಬಂದ ಪದಾರ್ಥಗಳ ಬೆಲೆಯು ೩೫,೨೪,೩೮,೦೧೯ರೂ ಇಂಡಿಯಾದಿಂದ ಇತರ ದೇಶಗಳಿಗೆ ಹೋದ ಸಾಮಾನಿನ ಬೆಲೆ ೭೦,೭೬,೭೬,೯೭೯ರೂ ಇವೆರಡರ ಪೈಕಿ ನಮ್ಮ ದೇಶದಿಂದ ಹೊರಕ್ಕೆ ಹೋಗುವ ಪದಾರ್ಥಗಳೇ ಹೆಚ್ಚು.

*****

ಹೈದರಾಬಾದ್ ಸಂಸ್ಥಾನದ ನೈಜಾಮರವರೂ, ಜಯಪುರದ ಮಹಾರಾಜರವರೂ, ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರೂ ಪರಿವಾರ ಸಹಿತ ಈ ತಿಂಗಳ ಕಡೇ ವಾರದಲ್ಲಿ ಕಲ್ಕತ್ತಾ ಪಟ್ಟಣಕ್ಕೆ ದಯಮಾಡಿ, ವೈಸ್‌ರಾಯಿ ಪ್ರಭುಗಳನ್ನು ಕಂಡು, ರಾಜಕೀಯ ವಿಷಯಗಳನ್ನು ಅವರ ಸಂಗಡ ಚರ್ಚಿಸುವವರಾಗಿದ್ದಾರೆ.

*****

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಪೂಸಾ ನಗರದಲ್ಲಿ ವ್ಯವಸಾಯ ಮುಂತಾದ ಜಮೀನು ವಿಷಯಗಳನ್ನು ಕುರಿತು ಚರ್ಚೆಮಾಡುವುದಕ್ಕೋಸ್ಕರ ಕಳೆದ ೩ನೆಯ ತಾರೀಖಿನಿಂದ ಒಂದು ಸಮಾಜವು ನಡೆಯುತ್ತಿದೆ. ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ವ್ಯವಸಾಯಕ್ಕೆ ಸಂಬಂಧಪಟ್ಟ ಅಧಿಕಾರಿಗಳೆಲ್ಲಾ ಹೋಗಿ ಸೇರಿರುವರು.

****

ಹೈದರಾಬಾದ್ ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರಾಗಿರುವ ಸರ್ ಡೇವಿಡ್ ಬಾರ್ ಯವರು ಮುಂದಿನ ತಿಂಗಳಲ್ಲಿ ಕೆಲಸಬಿಟ್ಟು ಸೀಮೆಗೆ ಪ್ರಯಾಣಮಾಡುವರು ಅವರ ಸ್ಥಾನಕ್ಕೆ ಈಗ ಸೆಂಟ್ರಲ್ ಇಂಡಿಯಾದಲ್ಲಿ ಗವರ್ನರ್ ಜನರಲ್‌ರವರ ಏಜಂಟರಾಗಿರುವ ಮಿ॥ ಛಾರ್ಲಸ್ ಸ್ಟುವರ್ಟ್ ಬೇಲಿ, ಸಿ. ಐ. ಇ ಯವರನ್ನು ವೈಸ್‌ರಾಯಿಯವರು ನೇಮಿಸಿದ್ದಾರೆ.

****

ಮಧ್ಯಪ್ರಾಂತ್ಯಗಳಲ್ಲಿ ಹೋದವರುಷ ಒಟ್ಟು ೬೦,೦೦೦ ಪ್ರಜೆಗಳು ಪ್ಲೇಗಿನಲ್ಲಿ ಮೃತಪಟ್ಟರು. ಈಗ ಆಹಾರ ಜಿನಸುಗಳು ಅಗ್ಗವಾಗಿವೆ. ಕೆಲಸ ಮುಂತಾದ ದುಷ್ಕಾರ್ಯಗಳೆಲ್ಲಾ ಕಡಿಮೆಯಾದವು. ಜೈಲ್‌ಖಾನೆಗಳಲ್ಲಿ ಬಂದೀವಾನರ ಸಂಖ್ಯೆ ದಿನೇ ದಿನೇ ಇಳಿಯುತ್ತಿದೆ. ಇದರಿಂದ ಸುಭಿಕ್ಷವು ತಲೆ ಹಾಕಿರುವುದೆಂದು ಧಾರಾಳವಾಗಿ ಹೇಳಬಹುದು ಎಂಬುದಾಗಿ ಸರ್ಕಾರದವರು ರಿಪೋರ್ಟು ಮಾಡಿದ್ದಾರೆ.

****

ಅಫ್ಘಾನಿಸ್ಥಾನದ ಅಮೀರರವರ ಜ್ಯೇಷ್ಠಪುತ್ರರಾದ ಸರ್ದಾರ್ ಇನಾಯತ್ ಉಲ್ಲಾಖಾನ್ ಯವರು ಮೊನ್ನೆ ಸೋಮವಾರ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳ ಅಪ್ಪಣೆ ಪಡೆದು ಹಿಂತಿರಿಗಿ

ಕಾಬೂಲ್ ನಗರವನ್ನು ಕುರಿತು ಪ್ರಯಾಣ ಮಾಡಿದರು. ದಾರಿಯಲ್ಲಿ ಇವರು ಆಗ್ರಾ, ಡಿಲ್ಲಿ, ರಾವಲ್‌ಪಿಂಡಿ ಮೊದಲಾದ ಸ್ಥಳಗಳಲ್ಲಿ ಇಳಿದು, ನೋಡತಕ್ಕ ಸಂಗತಿಗಳನ್ನೆಲ್ಲಾ ನೋಡಿಕೊಂಡು, ಪ್ರಯಾಣ ಮಾಡುವರು.

****

ಹಿಮಾಚಲದ ತಪ್ಪಲಿಗೆ ಸೇರಿದ ನಾನಾ ಬೆಟ್ಟಗಳಲ್ಲಿ ಇಂಗ್ಲಿಷ್ ಸೈನ್ಯವನ್ನು ಇಟ್ಟಿದ್ದಾರೆ. ಕಳೆದ ೧೯೦೪ನೇ ಇಸವಿಯಲ್ಲಿ ಮೊಯಂಗ್ ಜಾಮಿ ಎಂಬಲ್ಲಿರುವ ಜನರು ಹಿಂದುಸ್ಥಾನದ ಎಲ್ಲೆಯೊಳಕ್ಕೆ ಬಂದು, ಇಬ್ಬರು ಬ್ರಿಟಿಷ್ ಪ್ರಜೆಗಳನ್ನು ಕೊಂದು ಹಾಕಿದರು. ಇದಕ್ಕಾಗಿ ಇಂಡಿಯಾ ಗೌರ್ನಮೆಂಟಿನವರು ಅವರ ಊರಿಗೆ ಇಂಗ್ಲಿಷ್ ಸೈನ್ಯವನ್ನು ಕಳುಹಿಸಿಕೊಡುತ್ತಾರೆ. ಇವರು ಆ ದುಷ್ಟ ಜನರಿಂದ ಪರಿಹಾರದ್ರವ್ಯವನ್ನು ವಸೂಲ್ಮಾಡುವರು; ಇಲ್ಲವೇ ಅವರ ಮೇಲೆ ಯುದ್ಧಕಾರ್ಯಗಳನ್ನು ನಡಸುವರು.

****

ಹಿಂದುಸ್ಥಾನದಲ್ಲಿ ಸಿಗರೆಟ್ ಎಂಬ ಚುಟ್ಟಾಗಳ ಬಿಕರಿಯು ಪ್ರತಿ ವರುಷವೂ ಹಿಂದಿನ ವರುಷಕ್ಕಿಂತ ಬಹಳವಾಗಿ ಹೆಚ್ಚಾಗುತ್ತಿದೆ. ಕಳೆದ ೧೯೦೨ನೆ ಇಸವಿಯಲ್ಲಿ ಪರದೇಶಗಳಿಂದ ಈ ರಾಷ್ಟ್ರಕ್ಕೆ ೧೨,೫೮,೦೨೯ ರೂಪಾಯಿನ ಸಿಗರೆಟ್ಟುಗಳು ಬಂದು ಬಿಕರಿ ಆದವು. ಆದರೆ ೧೯೦೪ನೆ ಇಸವಿಯಲ್ಲಿ ೮ ತಿಂಗಳಿಗೆ ೨೨,೨೮,೩೭೯ ರೂಪಾಯಿನ ಸಿಗರೆಟ್ಟುಗಳು ರಫ್ತಾಗಿ ಬಂದು ಬಿಕರಿ ಆಗಿರುತ್ತವೆ. ಇದರಿಂದ ಈ ದುರಭ್ಯಾಸವು ಈ ರಾಷ್ಟ್ರದ ಪ್ರಜೆಗಳಲ್ಲಿ ಹ್ಯಾಗೆ ವೃದ್ಧಿಹೊಂದುತ್ತಿರುವುದೋ ತಿಳಿದುಕೊಳ್ಳಬಹುದು.

****

ಇಂಡಿಯಾ ಗವರ್ನಮೆಂಟಿನವರು ಟಿಬೆಟ್ ರಾಜ್ಯಕ್ಕೆ ದಂಡಯಾತ್ರೆ ಹೊರಟು ಕರಾರು ಮಾಡಿಕೊಂಡು ಬಂದಸಂದರ್ಭದಲ್ಲಿ ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರಾದ ಮಹಾರಾಜ ಚಂದ್ರ ಸೋಮೇಶ್ವರ ಜಂಗ್ ರಾಣಾ ಬಹದೂರ್ ಯವರೂ, ಭೂತಾನ ಸಂಸ್ಥಾನದ ಶ್ರೀಮಾನ್ ವಾಂಗ್ ಚುಕ್ ಟಾಂಗ್ಸಾ ಪೆನ್‌ಲಾಪ್‌ಯವರೂ ಗವರ್ನಮೆಂಟಿಗೆ ತುಂಬಾ ಸಹಾಯಮಾಡಿದಕಾರಣ ಚಕ್ರವರ್ತಿಯವರು ಮೊದಲನೆಯವರಿಗೆ ಜಿ. ಸಿ ಎಸ್. ಐ. ಎಂಬ ಬಿರುದನ್ನೂ ಎರಡನೆಯವರಿಗೆ ಕೆ. ಸಿ ಐ. ಇ. ಎಂಬ ಬಿರುದನ್ನೂ ದಯಪಾಲಿಸಿರುತ್ತಾರೆ.

****

ಕಳೆದ ತಿಂಗಳ ೨೮ನೆ ತಾರೀಖಿನಲ್ಲಿ ಅಂಬಾಲಾನಗರದಲ್ಲಿ ದಿಗಂಬರ ಜೈನಮಹಾಸಭೆಯು ಸೇರಿತ್ತು ನವಾಬಾಬಾದಿನ ಸೇಟ್ ಸಾಲೇಖಚಂದ್ ಯವರು ಸಭಾನಾಯಕರಾಗಿದ್ದರು ಅನೇಕಪಟ್ಟಣಗಳಿಂದ ಜೈನಸಂಘದ ದೊಡ್ಡ ಮನುಷ್ಯರು ಹೋಗಿ ಈ ಸಮಾಜವನ್ನು ಜರುಗಿಸಿ ಬಂದರು ಈ ಸಭೆಯು ಸ್ಥಾಪನೆಯಾಗಿ ಹತ್ತು ವರುಷವಾಗಿದೆ. ತಮ್ಮ ಜನರಲ್ಲಿ ವಿದ್ಯಾಭಿವೃದ್ಧಿಯಾಗುವುದಕ್ಕೂ ಸಂಘಪರಿಷ್ಕರಣವನ್ನು ಮಾಡಿಕೊಳ್ಳುವುದಕ್ಕೂ ಈ ಸಭಿಕರು ನಾನಾ ವಿಷಯಗಳನ್ನು ಕುರಿತು ಚರ್ಚೆ ಮಾಡಿ, ಒಳ್ಳೊಳ್ಳೇ ನಿರ್ಧಾರಗಳನ್ನು ಮಾಡಿಕೊಳ್ಳುತ್ತಿದ್ದಾರೆ.

****

ಜಬ್ಬಲ್‌ಪುರದ ಕಮೀಷನರಾದ ಮಿ॥ ಫ್ರಾನ್ಸಿಸ್ ಗ್ರೇಂಜ್ ವೇನ್ ಯವರು ತಮ್ಮ ಸಹೋದರನ ಸಂಗಡ ಕಾಡಿನಲ್ಲಿ ಶಿಕಾರಿ ಮಾಡಿಕೊಂಡು, ಕತ್ತಲಾದಕಾರಣ ಒಂದು ಗ್ರಾಮಕ್ಕೆ ಹೋದರು. ಆ ಸಮಯದಲ್ಲಿ ಆ ಗ್ರಾಮದ ಬೀದಿಗಳಲ್ಲೇ ಗ್ರಾಮಸ್ಥರು ಹೆಬ್ಬಮಾಡಿ, ಬೈಲಿನಲ್ಲಿ ಸಾಲಾಗಿ ಕುಳಿತು ಅಡಿಗೆ ಊಟ ಮಾಡುತ್ತಿದ್ದರು. ಈ ಸಾಹೇಬರಿಬ್ಬರೂ ಕುದುರೆಗಳ ಮೇಲೆ ಬಂದುದನ್ನು ಕಂಡು, ತಮ್ಮ ಜಾತಿಕಟ್ಟಿಗೆ ವಿರೋಧವಾಯಿತೆಂದು ಕೋಪಿಸಿಕೊಂಡು, ಎಲ್ಲಾ ಒಟ್ಟು ಕೂಡಿ ಆ ಸಾಹೇಬರುಗಳನ್ನು ಹಿಡಿದು ಹೊಡೆಯಲಾರಂಭಿಸಿದರು ಅವರು ಆ ಜನರಿಗೆ ಎಷ್ಟು ಮನವಿ ಹೇಳಿದರೂ ಕೇಳಲಿಲ್ಲ ಅಷ್ಟರಲ್ಲೇ ಕೆಲವರು ಸೇರಿ, ಆ ದುಷ್ಟರನ್ನು ಹಿಡಿದು, ಸಾಹೇಬರನ್ನು ಬಿಡಿಸಿ ಕಳುಹಿಸಿದರು. ಈ ಬಗೆ ಆ ದುಷ್ಟರಿಗೆಲ್ಲಾ ತಲಾ ಸಜಾಶಿಕ್ಷೆಯನ್ನು ವಿಧಿಸಿ ಬುದ್ಧಿ ಕಲಿಸಿರುತ್ತಾರೆ.

****

ಕಲ್ಕತ್ತಾ ಪಟ್ಟಣದ ಸ್ಟೀವರ್ ಎಂಬ ಅಂಗಡಿಯವರು ಕ್ರಿಸ್ಮಸ್ ಹಬ್ಬದಲ್ಲಿ ಸಾಮಾನುಗಳನ್ನು ವಿಶೇಷವಾಗಿ ಬಿಕರಿ ಮಾಡುವ ಉದ್ದೇಶ್ಯ ಒಂದು ಲಾಟರಿಯನ್ನು ಪ್ರಾರಂಭಮಾಡಿದರು. ಪೊಲೀಸ್ ಕಮೀಷನರು ಈ ಲಾಟರಿಯನ್ನು ನಿಲ್ಲಿಸುವಂತೆ ಹುಕುಂ ಕೊಟ್ಟರು. ಅಂಗಡಿಯವರಾದರೋ ತಾವು ಈಗ ಒಂಬತ್ತು ವರುಷಗಳಿಂದಲೂ ಇಂಥಾ ಲಾಟರಿ ಹಾಕುತ್ತಿದ್ದೇವೆಂತಲೂ, ಇದಕ್ಕಾಗಿಯೇ ಸೀಮೆಯಿಂದ ೨೫,೦೦೦ ರೂಪಾಯಿನ ಮಾಲುಗಳನ್ನು ತರಿಸುತ್ತೇವೆಂತಲೂ, ಇದುವರೆಗೆ ಸರ್ಕಾರದವರು ತಮಗೆ ಯಾವ ಅಡ್ಡಿಯನ್ನೂ ಮಾಡದೆ, ಈಗ ಲಾಟರಿಯನ್ನು ನಿಲ್ಲಿಸುವುದರಿಂದ ತಮಗೆ ತುಂಬಾ ನಷ್ಟವಾಗುತ್ತೆಂತಲೂ ಅರ್ಜಿ ಕೊಟ್ಟಿದ್ದಾರೆ. ಆದು ಇಂಥಾ ಲಾಟರಿಗಳೆಲ್ಲಾ ಮೋಸಕರವೇ ಆಗಿರುವುದರಿಂದ ಸರ್ಕಾರದವರು ಇವನ್ನು ಸಂಪೂರ್ಣವಾಗಿ ನಿಲ್ಲಿಸುವುದೇ ಧರ್ಮವಾಗಿದೆ.

****

ಈ ವರುಷ ಬೊಂಬಾಯಿನಲ್ಲಿ ನಡೆದ ಸಾರ್ವಜನಿಕ ಸಮಾಜದಲ್ಲಿ ಮೆಂಬರುಗಳು ಒಂದು ಹೊಸ ವಿಷಯವನ್ನು ಚರ್ಚಿಸಿ ಗೊತ್ತುಮಾಡಿರುತ್ತಾರೆ ಹಿಂದುಸ್ಥಾನದ ರಾಜಕೀಯ ವಿಷಯಗಳಲ್ಲಿ ಇಲ್ಲಿನ ಸರ್ಕಾರದವರು ನಡಸುವ ನ್ಯೂನಾತಿರೇಕಗಳನ್ನು ಕುರಿತು ಸೀಮೆಯ ಪ್ರಜೆಗಳಿಗೆ ಸಾಕ್ಷಾತ್ತಾಗಿ ಉಪನ್ಯಾಸಗಳ

ಮಾಲಿಕ ತಿಳಿಯಪಡಿಸಬೇಕೆಂದೂ, ಇದಕ್ಕಾಗಿ ಪ್ರತಿ ವರುಷವೂ ಬಂಗಾಳಾ, ಬೊಂಬಾಯಿ, ಮದರಾಸ್, ಈ ಮೂರು ಅಧಿಪತ್ಯಗಳಿಂದಲೂ ಒಬ್ಬೊಬ್ಬ ದೊಡ್ಡಮನುಷ್ಯನನ್ನು ಆರಿಸಿ, ಇವರ ಖರ್ಚಿಗೆ ೧೦,೦೦೦ ರೂಪಾಯಿಗಳನ್ನು ಚಂದಾ ಮೂಲಕ ಕೂಡಿಸಿಕೊಟ್ಟು, ಶೀಘ್ರವಾಗಿ ಕಳುಹಿಸಿಕೊಡಬೇಕೆಂತಲೂ ತೀರ್ಮಾನ ಮಾಡಿದಾರೆ. ಬಂಗಾಳದಿಂದ ಮಿ॥ ಸುರೇಂದ್ರನಾಥ ಬಾನರ್ಜೀಯವರೂ ಬೊಂಬಾಯಿನಿಂದ ಮಿ॥ ಜಿ. ಕೆ ಗೋಖಲೆಯವರೂ ಈ ಸಲ ವಿಲಾಯಿತಿಗೆ ಹೋಗತಕ್ಕದ್ದೆಂದು ಆಗಲೇ ಗೊತ್ತಾಗಿರುವುದು. ಮದರಾಸಿನಿಂದ ಯಾರು ಹೊರಡುವರೋ ಇನ್ನೂ ನಿಶ್ಚಯವಾಗಲಿಲ್ಲ.

****

ಕಲ್ಕತ್ತೆಯಲ್ಲಿರುವ ಇಂಪೀರಿಯಲ್ ಪುಸ್ತಕ ಭಂಡಾರಕ್ಕೆ ಬೀಹಾರ್ ಶೀಮೆಯ ಜಮೀನ್ದಾರ್ ಸಯ್ಯದ್ ಸದ್ರುದ್ದೀನ್ ಅಹಮದ್‌ರವರು ಅತ್ಯುತ್ತಮವಾದ ಮತ್ತು ಬಹಳ ಬೆಲೆಯುಳ್ಳ ೪,೦೦೦ ಪುಸ್ತಕಗಳನ್ನು ಕೊಟ್ಟಿರುತ್ತಾರೆ. ಅವುಗಳೆಲ್ಲಾ ಅರಬ್ಬಿ, ಪಾರ್ಸಿ ಮತ್ತು ಉರ್ದು ಭಾಷೆಯವುಗಳಾಗಿವೆ. ಅವುಗಳಲ್ಲಿ ಔರಂಗಜೇಬು ಚಕ್ರವರ್ತಿಯ ಸ್ವಂತ ಕೈಬರಹದ ಒಂದು ಕೊರಾನಿನ ಪ್ರತಿಯು ಸಿಕ್ಕಿರುತ್ತದೆ. ಅದನ್ನು ವಿಕ್ಟೋರಿಯಾ ಮೆಮೋರಿಯಲ್ ಹಾಲಿನಲ್ಲಿ ಇಡುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮಿ॥ ಟಿ. ವಿ. ಕುಪ್ಪುಸಾಮಿ ಮೊದಲಿಯಾರ್ರು ಮೈಸೂರು ಸಿವಿಲ್ ಸರ್ಜನರಾಗಿ ಕೆಲಸ ನೋಡುವಾಗ್ಗೆ ಜನರಲ್ ಆಸ್ಪತ್ರೆಯ ಮಿ॥ ಜಿ. ಎಲ್. ಲಕ್ಷ್ಮಣಸ್ವಾಮಿಯವರು ಮೈಸೂರು ಪಟ್ಟಣದ ಇನ್ಸ್‌ಪೆಕ್ಟಿಂಗ್ ಮೆಡಿಕಲ್ ಮತ್ತು ಹೆಲ್ತ್ ಆಫೀಸರಾಗಿ ಕೆಲಸ ನೋಡತಕ್ಕದ್ದು.

ಜನವರಿ ೧ ರಿಂದ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ.—

ಸಬ್ ಜಡ್ಜಿ ಮಿ॥ ಎಸ್. ವರದರಾಜೈಯಂಗಾರ್ರು ಚಿತ್ರದುರ್ಗದಿಂದ ಹೊಸದಾಗಿ ಶಿವಮೊಗ್ಗೆಯಲ್ಲಿ ಏರ್ಪಡಿಸಿರುವ ಸಬ್ ಜಡ್ಜಿ ಕೋರ್ಟಿಗೆ; ಮುನ್ಸಿಫ್ ಮಿ॥ ಎಸ್. ಕೃಷ್ಣರಾಯರು ಹೊನ್ನಾಳಿಯಿಂದ ಚಿತ್ರದುರ್ಗದ ಹೊಸ ಮುನ್ಸಿಫ್ ಕೋರ್ಟಿಗೆ.

ಬಿ ಲಿಂಗೈಯನವರನ್ನು ರೆವಿನ್ಯೂ ಇಲಾಖೆಗೆ ತಾಲ್ಲೂಕ್ ಶಿರಸ್ತೇದಾರಿ ಕೆಲಸಕ್ಕೆ ವರ್ಗಮಾಡಿದ್ದರಿಂದ ಬಿ. ವಿ. ನಾರಾಯಣೈಯಂಗಾರರನ್ನು ೩ ನೆ ಕ್ಲಾಸ್ ಸ್ಪೆಷಲ್ ಸಬ್ ರಿಜಿಸ್ಟ್ರಾರಾಗಿ ನೇಮಿಸಿದೆ.

ಮುಂದೆ ಹೇಳುವ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿ ಹುಕುಂ ಮಾಡಿದೆ —

ಕೆ. ವೆಂಕಟಾಚಾರ್ರು ಬೇಲೂರಿಂದ ಗುಂಡ್ಲುಪೇಟೆಗೆ, ಬಿ. ವಿ. ನಾರಾಯಣೈಯಂಗಾರ್ರು ಸೀಯಾರ್ಕ್ಕೆ, ವಿ ನರಸಿಂಗರಾಯರು ಬೇಲೂರಿಗೆ.

ಕೋಲಾರ್ ಚಿನ್ನದ ಗಣಿಗಳ ಅ ಕಮಿಷನರ್ ಮತ್ತು ೧ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ॥ ಬಿ. ಎಫ್ ಬೌರಿಂಗ್‌ಯವರಿಗೆ ಕ್ರಿಸ್‌ಮಸ್ ರಜಾದೊಂದಿಗೆ ಮೂರು ದಿನಗಳ ರಜಾ ಕೊಟ್ಟಿದೆ

ಮಿ॥ ಟಿ. ಎಸ್. ಎ. ತಿರುಕ್ರೂಸ್ ಯವರು ಅವರ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು.

ಸಬ್ ಅ॥ ಸರ್ಜನ್ ಮಿ॥ ಜೆ. ಆಶೀರ್ವಾದಂಯವರಿಗೆ ಜನವರಿ ೩ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶ್ರೀರಂಗಪಟ್ಟಣದ ಮುನ್ಸಿಫ್ ಮಿ॥ ಆನಂದರಾವ್ ಎಸ್. ಸಿರ್ಸಿಯವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ೧೫ ದಿನ ಜಾಸ್ತಿ ಮಾಡಿದೆ.

ಸಿವಿಲ್ ಸರ್ಜನ್ ಡಾಕ್ಟರ್ ಗೋವಿಂದರಾಜುಲು ಯವರಿಗೆ ಜನವರಿ ೩ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಫಾರೆಸ್ಟ್ ಅ॥ ಕನ್ಸರ್ವೇಟರ್ ಮಿ॥ ಬಿ. ರಾಮಸ್ವಾಮಿ ಐಯರ್ ಯವರು ನೊವೆಂಬರ್ ೨೦ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಎಕ್‌ಸೈಜ್ ಅ॥ ಕಮಿಷನರ್ ಮಿ॥ ಸುಬ್ರಾಯಲುನಾಯ್ಡು ಯವರು ನೊವೆಂಬರ್ ೧೪ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಮೈಸೂರು ಗವರ್ನಮೆಂಟ್ ಕಂಟ್ರೋಲರ್ ಮಿ॥ ಎಚ್. ಈಗಲ್ಸ್‌ಯವರಿಗೆ ಜನವರಿ ೩ ರಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅ॥ ಕೆಮಿಸ್ಟ್ ಬಿ. ವೆಂಕಟರಾಯರಿಗೆ ಜನವರಿ ೩ ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾಕೊಟ್ಟಿದೆ.

ಡೆಪ್ಯುಟಿ ಕಮಿಷನರ್ ಮಿ॥ ಪಿ ಆರ್. ಡಬ್ಲ್ಯು. ವೆದರಾಲ್‌ಯವರಿಗೆ ಜನವರಿ ೩ ರಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ॥ ಕಮಿಷನರ್ ಮಿ॥ ಸೈಯದ್ ಅಮೀರ್ ಹಸನ್‌ಯವರು ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರತಕ್ಕದ್ದು. ಇವರನ್ನು ಕಡೂರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಿರುವ ಹುಕುಮನ್ನು ರದ್ದುಮಾಡಿದೆ.

ಮಿ॥ ಎಂ. ಕಾಂತರಾಜೇ ಅರಸಿನವರಿಗೆ ಜನವರಿ ೨ ರಿಂದ ಆರು ತಿಂಗಳ ರಜಾ ಕೊಟ್ಟಿದೆ. ಈ ಪೈಕಿ ೨೯ ದಿನಗಳು ಪ್ರಿವಿಲೆಜ್ ರಜಾ ಎಂದು ಎಣಿಸತಕ್ಕದ್ದು.

ಮಿ॥ ರಾಯ ಸ್ವಕ್ಯ ಭೂಪಾಲ ಬಾಸು ಬಹದೂರ್‌ಯವರು ಮಿ॥ ಎಚ್. ಈಗಲ್ಸ್‌ಯವರಿಂದ ಜನವರಿ ೩ ರಲ್ಲಿ ಮೈಸೂರು ಗವರ್ನಮೆಂಟ್ ಕಂಟ್ರೋಲರ್ ಆಫೀಸ್ ಛಾರ್ಜನ್ನು ವಹಿಸಿಕೊಂಡಿದಾರೆ

ಮುಂದೆ ಹೇಳುವ ಅ॥ ಕಮಿಷನರ ವರ್ಗಾವರ್ಗಿ ಹುಕುಂ ಮಾಡಿದೆ.—

ಮಿ॥ ಕೆ. ಆರ್. ಶ್ರೀನಿವಾಸೈಯಂಗಾರ್ರು ಕೋಲಾರದಿಂದ ನೆಲಮಂಗಲದ ಸಬ್ ಡಿವಿಜನ್‌ಗೆ, ಮಿ॥ ವಿ. ಆರ್. ತ್ಯಾಗರಾಜ ಐಯರು ಬೌರಿಂಗ್‌ಪೇಟೆಯಿಂದ ಕೋಲಾರ್ ಸಬ್ ಡಿವಿಜನ್‌ಗೆ; ಮಿ॥ ನರಸಿಂಗರಾವ್ ಪೂರ್ಣಯ್ಯನವರು ಬೌರಿಂಗ್‌ಪೇಟೆ ಸಬ್ ಡಿವಿಜನ್‌ಗೆ; ಮಿ॥ ಬಿ. ರಾಮಸ್ವಾಮೈಯನವರು ಚಿತ್ರದುರ್ಗದ ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜನ್ನು ವಹಿಸತಕ್ಕದ್ದು, ಮಿ॥ ಸುಬ್ರಾಯಬುನಾಯ್ಡು ಯವರು ಶಿವಮೊಗ್ಗಾ ಡಿವಿಜನ್‌ಗೆ; ಮಿ॥ ವೇದಾಂತದೇಶಿಗಂ ಐಯಂಗಾರ್ರು ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜನ್ನು ವಹಿಸತಕ್ಕದ್ದು; ಮಿ॥ ಕೆ. ಮೈಲಾರಿರಾಯರು ತರೀಕೆರೆ ಸಬ್ ಡಿವಿಜನ್‌ಗೆ.

ಡೆಪ್ಟಿ ಕಮಿಷನರ ದರ್ಜೆಯಲ್ಲಿ ಮಿ॥ ಎಂ. ನಾರಾಯಣರಾಯರನ್ನು ೧ ನೆ ಕ್ಲಾಸಿಗೂ, ಮಿ॥ ಡಿ. ದೇವರಾಜೇ ಅರಸಿನವರನ್ನು ೨ ನೆ ಕ್ಲಾಸಿಗೂ, ಮಿ॥ ಪಿ. ಆರ್. ಡಬ್ಲ್ಯು. ವೆದರಾಲ್‌ಯವರನ್ನು ೩ ನೆ ಕ್ಲಾಸಿಗೂ ಖಾಯಂ ಖತ್ರಿಮಾಡಿದೆ.

ಮಿ॥ ಎಚ್ ಎಚ್ ಸ್ಪಾರ್ಕ್ಸ್‌ಯವರನ್ನು ಹಾಸನದಿಂದ ಮೈಸೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರಾಗಿ ವರ್ಗಮಾಡಿದೆ.

ಬೆಂಗಳೂರು ಸ್ಯಾನಿಟರಿ ರೇಂಜ್ ಅ॥ ಇಂಜನಿಯರ್ ಮಿ॥ ವಿ. ಆರ್. ಸುಂದರಂ ಐಯರಿಗೆ ಜನವರಿ ೩ ರಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಎಕ್ಸಿಕ್ಯುಟಿವ್ ಇಂಜನಿಯರ್ ಮಿ॥ ವಿ. ರಂಗಸ್ವಾಮಿ ಐಯಂಗಾರ್ರಿಗೆ ಜನವರಿ ೩ ರಿಂದ ಒಂದು ವಾರದ ಪ್ರಿವಿಲೆಜ್ ರಜಾ ಕೊಟ್ಟಿದೆ

ಸ್ಪೆಷಲ್ ಡ್ಯೂಟಿ ಎಕ್ಸಿಕ್ಯುಟಿವ್ ಇಂಜನಿಯರ್ ಮಿ॥ ವಿ ಎಚ್ ಕೆರ್ನಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ॥ ಎ. ಮುನಿಸ್ವಾಮಿ ಮೊದಲಿಯಾರ್ರು ಮೈಸೂರು ಸಂಸ್ಥಾನದಲ್ಲಿ ೩೩ ವರುಷಗಳ ತನಕ ಬಹಳ ನಂಬಿಕೆಯಾದ ಸರ್ವಿಸ್ ಮಾಡಿರುತ್ತಾರಾದಕಾರಣ ಅವರು ಕೆಲಸ ಬಿಟ್ಟ ಲಾಗಾಯಿತು ಅವರಿಗೆ ಅ॥ ಇಂಜನಿಯರ ದರ್ಜೆಯು ಕೊಡಲ್ಪಟ್ಟಿದೆ.

ಚಿತ್ರದುರ್ಗದ ಡಿವಿಜನ್ ಸಬ್ ಅ॥ ಇಂಜನಿಯರ್ ಮಿ॥ ಬಿ. ಕುಂಬಾರಾಧ್ಯರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಇನ್ನು [illegible] ದಿನ ಜಾಸ್ತಿ ಮಾಡಿದೆ

ಗಣಿಗಳ ಡೆಪ್ಟಿ ಇ[illegible] ಲಾಸೆಲ್ ಯವರಿಗೆ ಜನವರಿ ೩ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ತಾಲ್ಲೂಕು ವರ್ತಮಾನಗಳು.

ತಿಪಟೂರು —ಕಳೆದ ಡಿಸೆಂಬರು ತಾ ೨೯—೩೦ ರಲ್ಲಿ ಟ್ರಿಮಾರ್ಕರಾಗಿದ್ದ ಬ್ರಾಹ್ಮಣ ಜಾತಿಯ ಪುಟ್ಟಬಿ ಮತ್ತು ಸ್ವಾಮಣ್ಣ ಎಂಬ ಇಬ್ಬರು ಮೃತಪಟ್ಟರು. ಪುಟ್ಟಬಿ ಎಂಬಾತನು ಚಿಕ್ಕನಾಯಕನ ಹಳ್ಳಿಗೆ ಹೋಗಿ ಕಾಲವಾದನು. ಕ್ಯಾಂಪುಗಳಲ್ಲಿ ಪೊಲೀಸ್ ಉಸ್ತುವಾರಿ ಕೊಂಚವಾಟ್ಟಿಗೆ ಚನ್ನಾಗಿಗೆ —ಈ ತಾಲ್ಲೂಕು ಕಿಂಗೇನಹಳ್ಳಿ ಸ್ಟೇಷನ್ ಬಳಿ ಒಂದು ಹುಲಿ ಬಂದು ಜನಗಳಿಗೆ ಗಾಬರಿಯುಂಟಾಗಿದೆ. ಒಬ್ಬನು ಸತ್ತುಹೋದನೆಂದು ಹೇಳುತ್ತಾರೆ. ಪ್ರಖ್ಯಾತರಾದವರು ಇದನ್ನು ಷಿಕಾರಿಮಾಡಿ ಯಶಸ್ಸನ್ನು ಸಂಪಾದಿಸಬಾರದೇ —ಸುತ್ತುಮುತ್ತು ಗ್ರಾಮಗಳನ್ನೆಲ್ಲಾ ಪ್ಲೇಗಿನಿಂದ ಬಿಟ್ಟುಬಿಟ್ಟಿದ್ದರೂ ಮಳೆ ಇಲ್ಲದೆ ಪೈರೆಲ್ಲಾ ನಾಶವಾಗಿದ್ದರೂ ನಾಟಕಗಳು ಮಾತ್ರ ಪ್ರಬಲವಾಗಿವೆ.

ಹೊಸೂರು —ಪ್ಲೇಗಿನ ದೆಸೆಯಿಂದ ಕಳೆದ ಸೆಪ್ಟಂಬರ್ ತಿಂಗಳಲ್ಲಿ ಜನರೆಲ್ಲಾ ಊರುಬಿಟ್ಟು ಷೆಡ್ಡುಗಳಲ್ಲಿ ವಾಸಮಾಡುತ್ತಿದ್ದು, ಈಗ ತಾನೇ ಊರು ಸೇರಿಕೊಂಡರು. ದೇವರ ಕೃಪೆಯಿಂದ ೨೫ ದಿನಗಳಿಂದಲೂ ಟವ್ನಿನಲ್ಲಿ ಈ ಪ್ಲೇಗಿನ ಸಮಾಚಾರವೇ ಇಲ್ಲದಿರುವದು ಪ್ರಜೆಗಳಿಗೆಲ್ಲಾ ತುಂಬಾ ಸಂತೋಷವಾಗಿದೆ.—ಕಳೆದ ತಿಂಗಳು ೨೩ ನೇ ತಾ ರಾತ್ರಿ ಸುಮಾರು ಹನ್ನೊಂದುವರೆ ಗಂಟೆ ಸಮಯದಲ್ಲಿ ಮಹಮದ್ ಗೌಸ್ ಎಂಬುವವನ ಮನೆಗೆ ಬೆಂಕಿ ಹತ್ತಲಿದ ಸುದ್ದಿಯು ಟವ್ನ್ ದಫೇದಾರ್ ಸುಬ್ರಾಯರಿಗೆ ತಿಳಿದ ಕೂಡ್ಲೆ, ಬೀಟ್ ಕೊಡುತ್ತಿದ್ದ ೯೪ ನೇ ನಂಬರ್ ಕಾನ್‌ಸ್ಟೇಬಲ್ ಅಪ್ಪಾಜೀರಾಯನನ್ನೂ ೪೫೧ ನೇ ನಂಬರ್ ಮಾದೈಯನನ್ನೂ ಜೊತೆ ಮಾಡಿಕೊಂಡು, ಬೆಂಕಿಯು ಸುತ್ತುಮುತ್ತಲು ಇರುವ ಮನೆಗಳಿಗೆ ಹರಡಿಕೊಳ್ಳದಂತೆ ಬಹು ಸಾಹಸದಿಂದ ಬೆಂಕಿಯನ್ನು ಆರಿಸಿ, ಬೇರೆಯವರಿಗೆ ಕ್ಷೇಮವನ್ನು ಉಂಟುಮಾಡಿದ್ದಕ್ಕಾಗಿ ತುಂಬಾ ಸಂತೋಷಪಡಬೇಕಾಗಿದೆ ಪ್ರಾಣನಷ್ಟವೇನೂ ಆಗಲಿಲ್ಲ.—ಪ್ಲೇಗಿನ ದೆಸೆಯಿಂದಲೂ ಕ್ರಿಸ್‌ಮಸ್ ಹಬ್ಬದ ರಜಾ ಇದ್ದದ್ದರಿಂದಲೂ ಇಲ್ಲಿನ ಸ್ಕೂಲುಗಳೆಲ್ಲಾ ಮುಚ್ಚಲ್ಪಟ್ಟಿದ್ದವು. ಇದೇ ತಿಂಗಳು ೩ ನೇ ತಾ॥ ಸ್ಕೂಲುಗಳ ಬಾಗಲು ತೆರೆಯಲ್ಪಟ್ಟವು. ಆದರೆ ಸರಿಯಾಗಿ ಮಕ್ಕಳು ಸೇರಲು ಇನ್ನೂ ಕೆಲವು ದಿನಗಳಾಗಬೇಕು.

ತೀರ್ಥಹಳ್ಳಿ.—ಕಳೆದ ತಿಂಗಳು ೩೧ ನೇ ತಾ॥ ಶನಿವಾರ ಕೌನ್ಸೆಲರವರ ಸವಾರಿಯು ತೀರ್ಥಹಳ್ಳಿಗೆ ಬಂತು. ಪಟ್ಟಣದ ಜನರು ಉದ್ಯೋಗಸ್ಥರು ಅಧಿಕಾರಿಗಳನ್ನು ಬಹು ಆದರಪೂರ್ವಕ ಬರಮಾಡಿಕೊಂಡರು. ಅವರು ಇಲ್ಲಿನ ನಾನಾ ಭಾಗಗಳನ್ನು ಹೊಕ್ಕು ನೋಡಿ ಬಂದರು. ತರುವಾಯ ಯಡೆಹಳ್ಳಿ ತೋಟಕ್ಕೆ ಹೋಗಿ ಅಡಿಕೆ ಫಸಲು ಮುಂತಾದ ರೀತಿ ನಡೆಯುವ ಕೆಲಸಗಳನ್ನು ನೋಡಿಕೊಂಡು ಬಂದರು. ಸೋಮವಾರ ಇಲ್ಲಿಂದ ಹೊರಟು ಆಗುಂಬೆಗೆ ಹೋಗುತ್ತಾ ದಾರಿಯಲ್ಲಿ ಮುಳಬಾಗಲು ಶ್ರೀಮುಕ್ತೈಯ ಮಠಗಳವರ ಮರ್ಯಾದೆಯನ್ನು ಸ್ವೀಕರಿಸಿದರು. ಮಠಗಳವಳ್ಳಿಯಲ್ಲೂ ಜನರು ತೋರಣ ಮುಂತಾದ್ದು ಕಟ್ಟಿ ಅಲಂಕಾರ ಮಾಡಿದ್ದರು. ಆ ಮರ್ಯಾದೆ ಹೊಂದಿ, ನಂತರ ನಾಲೂರಿಗೆ ಹೋದರು. ಅಲ್ಲಿ ಮಿಷನ್ ಸ್ಕೂಲನ್ನು ಹೋಗಿ ನೋಡಿ ಸಂತೋಷಪಟ್ಟು ಬಾಲಕಿಯರು ಓದುವದನ್ನು ಅತ್ಯಂತ ಆದರದೊಡನೆ ಪರಾಂಬರಿಸಿ ಮಿಷನರಿಗಳು ಮಾಡುವ ವಿದ್ಯಾದಾನವನ್ನು ಹೊಗಳಿ ಮುಂದಕ್ಕೆ ದಯಮಾಡಿಸಿದರು. ಕೌನ್ಸೆಲರು ಬಂದು ಹೋದದ್ದನ್ನು ಕಾಣಿ ಜನರು—ಅಡಿಕೆಯ ಮೇಲಿನ ಸುಂಕ ತೆಗೆಯುತ್ತಾರೆಂದು ಬಹು [illegible] ಪ್ರಸ್ತಾಪ ಮಾಡುತ್ತಾರೆ ಇದು ನಿಜವಾದರೆ ಮಾತ್ರ [illegible]ಳ್ಳೇದೆ. ರೈತರು ಬಂದು ಕಡೆ ಬಾಗಾಯ್ತು ಕಂದಾಯವನ್ನು [illegible] ಬಾರಿ ಕೊಡುವದಲ್ಲದೆ ಸುಂಕದ ಹಾಸಲು ಸಹ ಮಣ ೧ ಕ್ಕೆ ೧—೧೩ ಆಣೆ ಕೊಡುವದು ಬಹು ಪರಿತಾಪವಾಗಿದೆ. ಈಗಾಗಲೇ ಎಷ್ಟೋ ತೋಟಗಳು ಮೂಲೆಗೆ ಬಿದ್ದು ಹಾಳಾಗುತ್ತಿವೆ.

ಮೂಡಿಗೆರೆ —ಮೂಡಿಗೆರೆಯಲ್ಲಿ ಮುನಿಸಿಪಾಲಿಟಿಯು ಸ[illegible]ಕರವಾಗಿದೆ ನಮ್ಮ ಅಮಲ್ದಾರರವರು ಬಹಳ ಮುತುವರ್ಜಿಯಿಂದ ಟವ್ನ್ ಇನ್ಸ್‌ಪೆಕ್ಷನ್ ಮಾಡುತ್ತಾರೆ ಇಲ್ಲಿನ ಯಾಕ್ಸಿನ ಅಸಿಸ್ಟೆಂಟು ಇನ್ಸ್‌ಪೆಕ್ಟರವರು ತಮ್ಮ ತಾಬೇದಾರನಾದ ಮಹಾರನ್ನು ಪಾದರಕ್ಷೆಯಿಂದ ಹೊಡೆದರೆಂದು ಆತನು ಅವರಮೇಲೆ ಚಿಕ್ಕಮಗಳೂರು ಫಸ್ಟ್ ಕ್ಲಾಸು ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಫಿರ್ಯಾದು ಮಾಡಿದನು. ಆದರೆ ಸದರಿ ಅಪರಾಧಿಯು ಆಮಗ ಕ[illegible] ಹೆಸರು ಬರುವದೆಂದು ತಿಳಿದು ಫಿರ್ಯಾದಿಗೆ ಜಾತಿ ಬಹಿಷ್ಕಾರ [illegible] ಕೆಲವು ಮೊಬಲಗನ್ನು ಕೊಟ್ಟು ರಾಜಿಯಾದರು. ಇಲ್ಲಿ ಅಕ್ಕಿ ದಾರಣೆ ಪಲ್ಲಾ ೧೦ ರೂ. ಇದೆ ಬಡವರ ಯೋಗ್ಯತೆಗೆ ಸರಿಯಾಗಿಲ್ಲ. ಈ ಪ್ರಾಂತ್ಯದಲ್ಲಿ ಬಿಸಿವರೇ ವಿಶೇಷ.—ಇಲ್ಲಿನ ಪೋಸ್ಟ್ ಮಾಸ್ಟರು ವರ್ಗವಾಗಿ ಹೋದದ್ದಕ್ಕಾಗಿ ಪ್ರಜೆಗಳು ಬಹಳ ವ್ಯಸನಪಡುತ್ತಾರೆ. ಇವರ ಬದಲಿಗೆ ಬಂದಿರುವ ಪೋಸ್ಟು ಮಾಸ್ಟರು ಅವರಂತೆಯೇ ಗುಣವಂತರಾಗಿಯೂ ವಿಧಾನಸ್ಥರಾಗಿಯೂ ಇರುವರು. ಮಲನಾಡಿನಲ್ಲಿ ಷಿಕಾರಿ ಆಡಕೂಡದೆಂದು ಗವರ್ನಮೆಂಟಿನವರ ಅಪ್ಪಣೆ ಆದಲಾಗಾಯಿತು ಪಯಿರು ಪಚ್ಚೆ ನಷ್ಟವಾಗಿ ಬಹಳ ಕಷ್ಟಕ್ಕೆ ಗುರಿಯಾಗಿದೆ. ಇದನ್ನು ದಯಾಪ್ರಯರಾಗಳಾದ ಸರ್ಕಾರದವರು ಈ ಮಲನಾಡು ಪ್ರಾಂತ್ಯಗಳಿಗೆ ಷಿಕಾರಿ ಮಾಡಬಹುದೆಂದು ಅಪ್ಪಣೆ ಕೊಟ್ಟರೇ ದು ನಂಬಿದೇವೆ —ಮೂಡಿಗೆರೆಯಿಂದ ಗಂಡೆ ಹಳ್ಳಿಗೆ ಹೋಗುವ ರಸ್ತೆ ಬಹಳ ತೊಂದ್ರೆ ಆಗಿದೆ. ಒಂದು ಗಾಡಿ ಹೋಗಲು ಕಷ್ಟ. ಎದುರು ಗಾಡಿ ಬರಲು ಎಷ್ಟು ಸಂಕಟಕರವಾಗಿರುವದೋ ದೇವರೇ ಬಲ್ಲ. ಈ ವಿಷಯದಲ್ಲಿ ಸರ್ಕಾರದವರು ನಿಗಾ ಇಡಬೇಕಾಗಿ ಪ್ರಾರ್ಥಿಸುತ್ತೇವೆ

ಶ್ರೀರಂಗಪಟ್ಟಣ.— ಈ ಊರಿನಲ್ಲಿ ಜನರೆಲ್ಲರೂ ಊರು ಸೇರಿದರು ದಿನಸಿಯ ಧಾರಣೆಯು ಹೆಚ್ಚಾಗಿದೆ. ಈ ವರುಷ ಮಳೆ ಕಮ್ಮಿಯಾದುದರಿಂದ ಊರಿನ ಮೇಲಣಭಾಗದಲ್ಲಿದ್ದ ನಾಲ್ಕಾರು ಕುಡಿಯುವ ನೀರಿನ ಬಾವಿಗಳು ತಪ್ಪಲ್ಲಿ ನೀರಿಲ್ಲದೆ ಹೊಳೆಗೆ ಹೋಗುವಂತಾಗಿವೆ ಮೇಲಣ ಬೀದಿಗಳಿಗೆ ನೀರಿನ ನಲ್ಲಿ ಇರುವಂತೆಯೂ ಕೆಳಗಣ ಬೀದಿಗಳಿಗೆ ಈಗಿರತಕ್ಕ ಕಾರಂಜಿಗಳನ್ನು ದುರಸ್ತು ಮಾಡಿ ನೀರು ಬರುವಂತೆಯೂ ದಿವಾನ್ ಸರ್ ಕೃಷ್ಣಮೂರ್ತಿಯವರ ಅಪ್ಪಣೆಯಾಗಿದೆ ಎಂದು ಹೇಳುವದೇ ಹೊರ್ತು ನೀರಿನ ಕ್ಷಾಮ ಪರಿಹಾರವಾಗಲಿಲ್ಲ. ಗ್ರಾಮಕ್ಕೆ ಹೊಳೆಯು ದೂರವಾಗಿರುವದೇ ಕಾರಣ ಇನ್ನೂ ಬೇಸಿಗೆಯು ದೂರವಾಗಿದೆ ಇಷ್ಟರಲ್ಲೇ ಹೀಗಿದ್ದು ಮುಂದೆ ಯಾವ ರೀತಿಯಾಗುತ್ತೋ! ಶ್ರೀಮನ್ಮಹಾರಾಜರವರು ದಿವಾನ್ ಸರ್ ಕೃಷ್ಣಮೂರ್ತಿಯವರೂ ಊರಿನ ಬಡ[illegible]ಳಾದ ನಮ್ಮಗಳ ಮೇಲೆ ಕೃಪೆ ಇಟ್ಟು ಕ್ಷಾಮವನ್ನು ಯಾವಾಗ ತಪ್ಪಿಸುತ್ತಾರೋ ತಿಳಿಯದು.—ಸುಗ್ಗಿಯ ಕಾಲವಾದುದರಿಂದ ಈ ಊರಿನ ಸಂತೆಗೆ ಜನರು ಸೇರುವದು ಕಡಮೆ ಮತ್ತು ಶನಿವಾರ ಕೋರ್ಟು ಕಚೇರಿಗಳಿಗೆ ರಜವಿಲ್ಲದಿರುವದೂ ಎರಡನೆಯ ಕಾರಣವು. ಆ ವಾರವನ್ನು ಬಿಟ್ಟು ಭಾನುವಾರ ಸಂತೆಯನ್ನು ಮಾಡಿದರೆ ಎಷ್ಟೋ ಉತ್ತಮವಾಗಿರುತ್ತೆ ಈ ಊರಿನ ಪೂರ್ವಭಾಗದ ಕೋಟೆಯಿಂದ ಪೂರ್ವಕಾಲದ ಚಿತ್ರಗಾರರ ಬೀದಿಯ ವರೆವಿಗೂ ಅಂಚೆ ಬೀದಿಯ ಮತ್ತು ಗೋಸೇಗೌಡನ ಬೀದಿಯ ರಸ್ತೆ ಉದ್ದಕ್ಕೂ ಕೋಟೆಯಾಗಿರುವದರಿಂದಲೂ ಲಾಂದ್ರ ಕಂಬಗಳು ಇಲ್ಲದೇ ಇರು[illegible]ದರಿಂದಲೂ ಆ ಬೀದಿಗಳಲ್ಲಿ ರಾತ್ರಿ ಕಾಲ ತಿರುಗಾಡುವವರ ಕಾಲಿಗೆ ತೊಡರು ಕೊಟ್ಟು ಕೆಡವಿ ಉರುಳಿಸಿ ಹಲ್ಲು ಚೆರಿಯಿಸಿ ಅವಕಾಶಿಸಿಕೊಳ್ಳುತ್ತಿದೆ. ಆಗ ಸಂಕಟಬಂದಾಗ ವೆಂಕಟರಮಣ ಎನ್ನುವ ಹಾಗೆ ಊರಿನ ಅಮಲ್ದಾರ್ರನ್ನು ಸ್ಮರಿಸಿಕೊಳ್ಳುತ್ತಾರೆ. ಇದರಿಂದ ರಾತ್ರಿ ಕಾಲ ತಿರುಗುವದಕ್ಕೆ ಭಯವಾಗುತ್ತೆ. ಅಮಲ್ದಾರರು ಬೇಗ ಇಷ್ಟು ಈ ಬೀದಿಗಳಿಗೆ ಲಾಂದ್ರ ಕಂಭಗಳನ್ನು ಇಡಿಸಿ ಇನ್ನುಮೇಲಾದರೂ ಈ ಕಷ್ಟವನ್ನು ತಪ್ಪಿಸ್ಯಾರೆಂದು ನಿರೀಕ್ಷಿಸುತ್ತೇನೆ.

ಚಿಕ್ಕಮಗಳೂರು.—ಪ್ಲೇಗ್ ರೋಗವು ದೇವರ ದಯದಿಂದ ಕಮ್ಮಿಯಾಗುವ ಹಾಗೆ ಕಾಣುತ್ತಲಿದೆ. ಮಹಮ್ಮದಿಯರ ಒಂದು ಮನೆಯಲ್ಲಿ ಮಾತ್ರ ಆರು ೬ ನರಿಗೆ ರೋಗತಗಲಿ ಈಗ ಎಲ್ಲರೂ ಗುಣವಾಗುತ್ತಲಿದಾರೆಂದೂ ಈಗ್ಯೆ ಒಂದುವಾರದಿಂದಲೂ ಹೊಸದಾಗಿ ಯಾರಿಗೂ ತಗಲದೆ ಇರುವದರಿಂದ ಇನ್ನು ಮುಂದೆ ಇದು ಹೀಗೆ ಕಮ್ಮಿಯಾಗಬಹುದೆಂದೂ ಮಾತನಾಡಿಕೊಳ್ಳುತ್ತಾರೆ. ಈಗ ಟೌನಿನಲ್ಲಿ ಅಲ್ಲಲ್ಲಿ ಇಲಿಗಳು ಬೀಳುತ್ತಿದೆಯೆಂದೂ ವೈಶ್ಯರ ಒಂದು ಮನೆಯಲ್ಲಿ ಮೂರು ಮಕ್ಕಳು ತೀರಿಹೋದರೆಂದೂ ಕೇಳುತ್ತಾರೆ.—ಈ ಊರಿನಲ್ಲಿರುವ ಅಧಿಕಾರಿಗಳೆಲ್ಲರೂ ಸಕೀರ್ಟಿನಲ್ಲಿದ್ದಾರೆ. ಡೆಪ್ಯುಟಿ ಕಮಿಷನರ್ ಸಾಹೇಬರು ಇಂಜನಿಯರ್ ಸಾಹೇಬರು ಡಾಕ್ಟರ್

…ಜನರಲ್ ಅಸಿಸ್ಟೆಂಟರು ಪೊಲೀಸ್ ಸೂಪರೆಂಟರು ಆ …ಸಕ್ರೇಟರಿಯಟ್ನಲ್ಲಿರುವ ರೆಸಿಡೆಂಟರ ಮತ್ತು ಕೌನ್ಸಿಲರ …ವಾಸಕ್ಕಾಗಿ ತಮ್ಮ ಡಿಸ್ಟ್ರಿಕ್ಟಿನ ಬೇರೆ ಬೇರೆ ಕಡೆಗಳಿಗೆ …ಹೋಗುವದಾಗಿಯೂ, ನಾಳೆ ೮ ನೆ ತಾ. ಗೆ ಸೀನಿಯರ್ ಕೌನ್ಸಿ… …ಮು ಶ್ರೀನಿವಾಸಯ್ಯಂಗಾರ್ಯರು ಈ ಊರಿಗೆ ದಯಮಾಡಿ …ವದ್ದರಿಂದ ಅವರ ಆಗಮನಕ್ಕಾಗಿ ಊರಿನ ಮುಖ್ಯವಾದ …ಮತ್ತು ರಸ್ತೆಗಳನ್ನು ಮುನಿಸಿಪಾಲಿಟಿಯವರು ಶುಚಿಮಾಡಿ …ಅವರು ಬರುವ ದಾರಿಯನ್ನು ಚಪ್ಪರ ತೋರಣಗಳಿಂದ …ರಿಸುತ್ತಲೂ ಇದ್ದಾರೆ. ಅವರ ಜೊತೆಯಲ್ಲಿಯೇ ನಮ್ಮ …ಕ್ಟಿನ ಅಧಿಕಾರಿಗಳಲ್ಲಿ ರೆಸಿಡೆಂಟರವರ ಕ್ಯಾಂಪಿನಲ್ಲಿರುವ …ಗಳ ವಿನಹ ಉಳಿದವರೆಲ್ಲರು ಬರುವವರಾಗಿದ್ದಾರೆಂದು …ರ್ತೆ ಕೌನ್ಸಿಲರವರು ಇಲ್ಲಿ ಭಾನುವಾರ ಸೋಮವಾರ …ದಿನಗಳಿದ್ದು ಮಂಗಳವಾರ ಕಡೂರು ಮಾರ್ಗವಾಗಿ ಹೊರ…ಡುವರೆಂದು ವರ್ತಮಾನವಿದೆ — ಈ ಊರಿನಲ್ಲಿ ಛಳಿ ಬಹಳವಾಗಿ …ಒಂದೊಂದು ದಿನದ ಬೆಳಗಿನ ವೇಳೆಯಲ್ಲಿ ಪೂರ್ವದಿಕ್ಕಿನಿಂದ …ವ ತಂಪು ಗಾಳಿಯಿಂದಾಗುವ ಛಳಿಯಾದರೋ ಸಹಿಸಲಸಾ…ಧ್ಯ.—ಒಂದೆರಡುವಾರದಿಂದ ಮುನಿಸಿಪಾಲಿಟಿಯವರು ನೀರ… ಎಲ್ಲಾ ನಲ್ಲಿಗಳಲ್ಲಿಯೂ ಬಿಡದೆ, ಒಂದೊಂದು ನಲ್ಲಿಯನ್ನು …ಮಾಡಿದ್ದರಿಂದ ಕಾರಣ ಜನರು ತಮಗೆ ದೂರವಾದ ನೀರಿರು… …ನಲ್ಲಿಗಳಿಗೆ ಹೋಗಬೇಕಾಯಿತು ವಿಚಾರಿಸಿದ್ದಲ್ಲಿ ನಲ್ಲಿಗಳಿರುವ …ವನ್ನು ರಿಪೇರಿ ಮಾಡುತ್ತಾರೆಂದು ಹೇಳಿದರು ರಿಪೇರಿ ಆದ… …ವಾರದ ವರಿವಿಗೂ ನೀರನ್ನು ಬಿಡಲಿಲ್ಲ. ಈಗಲೂ ಕೆಲವು …ಗಳಲ್ಲಿ ನಲ್ಲಿಗಳಲ್ಲಿ ನೀರಿಲ್ಲ ಇದರಿಂದ ಪ್ರಜೆಗಳಿಗಾಗುವ ತೊಂ…ದರೆಯನ್ನು ತಪ್ಪಿಸುವಂತೆ ಏರ್ಪಡಿಸುವದು ಮುನಿಸಿಪಾಲಿಟಿಯ ಆ…ವಶ್ಯಕ ಕೆಲಸವಾಗಿದೆ

…ಕೆರೆ —ಇಲ್ಲಿನ ಮ್ಯುನಿಸಿಪಾಲಿಟಿಯು ಮುಂಚಿಗಿಂತಲೂ …ಉತ್ತಮಸ್ಥಿತಿಯಲ್ಲಿ ಇದೆ ಈಗ ಹೊಸದಾಗಿ ಬಂದಿರುವ …ಅಮಲ್ದಾರರು ಮ್ಯುನಿಸಿಪಲ್ ಓವರ್ಸಿಯರು ಇನ್ನು ಅಭಿ…ಗೆ ತರವೇಕೆಂದು ಬಹಳ ಪ್ರಯಾಸಪಡುತ್ತಿದ್ದಾರೆ ಈಗ …ವಾರಗಳ ಕೆಳಗೆ ಕೌನ್ಸಿಲರವರು ಇಲ್ಲಿಗೆ ದಯಮಾಡಿಸಿ …ಮ್ಯುನಿಸಿಪಲ್ ಏರ್ಪಾಡುಗಳನ್ನು ನೋಡಿ ಬಹಳ ಸಂತೋ…ಷಪಟ್ಟರು ಹೀಗೆಯೇ ಕಡೇವರಿಗೂ ಇದ್ದರೆ ಪ್ರಜೆಗಳಿಗೆ ಯಾವ …ವಿಧ ಕಾಯಿಲೆಗಳೂ ಬರುವದಿಲ್ಲವೆಂಬುವದಕ್ಕೆ ಸಂದೇಹ… —ಈಗ ೨ ವಾರಗಳ ಕೆಳಗೆ …ಯಿಂದ ಸರ್ಕಸ್ …ವರು ಇಲ್ಲಿಗೆ ಬಂದು, ೩ ದಿವಸ ಇದ್ದು ಅವರ ಕೂಡ ತಂದು …ಕುದುರೆ ನಾಯಿ, ಹುಲಿ, ಚಿರತೆ ಮುಂತಾದವುಗಳಿಂದ …ಆಶ್ಚರ್ಯಕರವಾದ ಆಟಗಳನ್ನು ಆಡಿಸಿದ್ದಲ್ಲದೆ, ನಾನಾ ಮೋಹಲಾದ …ಪ್ರಾವೀಣ್ಯವನ್ನು ಸಹಾ ತೋರಿಸಿ, ಪ್ರಜೆಗಳಿಗೆ ಮನಸ್ಸಂತೋ…ಷವನ್ನುಂಟುಮಾಡಿ, ೩೦೦ ರೂಪಾಯಿ ವರಿಗೂ ಸಂಪಾದಿಸಿ…ಕೊಂಡು ಹೋದರು ಈಗ ೬ ವರುಷಗಳಿಗೆ ಮುಂಚೆ ಈ …ಕಸ್ ಆಟದವರು ಇಲ್ಲಿಗೆ ಬಂದಾಗ ಇವರುಗಳಲ್ಲಿ ಒಬ್ಬರಿಗೊ…ಬ್ಬರಿಗೆ ವಿಮನಸ್ಸು ಉಂಟಾಗಿ ೨ ಪಂಗಡವಾಯಿತು. ಒಂದು …ಪಂಗಡದವರು ಬಹಳ ಲಾಭಪ್ರದರು ಇನ್ನೊಂದು ಪಂಗಡದವರು …ಭಾಲ್ ಇನನ್ನನಿಂದ ಬಹಳ ಸಹಾಯವನ್ನು ಹೊಂದಿ, ೩ …ಆಟಗಳನ್ನು ಆಡಿ, ೨೫೦ ರೂಪಾಯಿಗಳ ವರಿಗೂ ಸಂಪಾದಿಸಿಕೊಂ…ಡು ಇವರು ಹೋಗುವಾಗ ತಮ್ಮ ಸಾಮಾನುಗಳಲ್ಲಿ ಕೆಲವನ್ನು …ವಿನವ್ವನಲ್ಲಿ ಕೊಟ್ಟು ಹೋಗಿದ್ದರು. ಈಗ ಬಂದಾಗ …ತಮ್ಮ ಸಾಮಾನುಗಳನ್ನು ಕೇಳಿದಾಗ, ಈತನು ಅವುಗ…ಳನ್ನು ಬಹಳ ಭದ್ರವಾಗಿ ಕಾಪಾಡಿ ಅವರಿಗೆ ತಿರುಗಿ ವಾಪಸು …ಕೊಟ್ಟದ್ದರಿಂದ, ಸರ್ಕಸ್ ಆಟದ ಮುಖ್ಯಸ್ಥನು ಬಹಳ ಸಂತೋ…ಷಪಟ್ಟದ್ದಲ್ಲದೆ, ಆಟದ ಮಧ್ಯದಲ್ಲಿ ಆತನು ತೋರಿಸಿದ ಉಪಕಾರ…ವನ್ನು ಸಭಿಕರ ಮುಂದೆ ತಿಳಿಸಿ, ಆತನನ್ನು ಹೊಗಳಿ ಆತನಿಗೆ …ಶಾಲು ಮಾಲನ್ನು ಬಹುಮಾನವಾಗಿ ಕೊಟ್ಟರು. ಪ್ರಜೆ…ಗಳು ಈ ವಿಷಯದಲ್ಲಿ ಬಹಳ ಸಂತೋಷಪಟ್ಟರು —ಈ ತಿಂಗಳು …ತಾ. ಬೆಳಿಗ್ಯೆ ೪ ಘಂಟೆ ಟ್ರೈನಿನಲ್ಲಿ ನಮ್ಮ ಮೈಸೂರು ರೆಸಿಡೆಂಟರು ಕುಟುಂಬ ಸಮೇತವಾಗಿ ಇಲ್ಲಿಗೆ ಶಿಕಾರಿ ಉದ್ದೇ…ಶದಿಂದ ದಯಮಾಡಿಸಿದರು. ಅವರ ಆಗಮನಕ್ಕಾಗಿ ನಮ್ಮ ಅಮ…ಲ್ದಾರರು ಊರಿನ ಮಧ್ಯದಲ್ಲಿ ಚಪ್ಪರವನ್ನು ಹಾಕಿಸಿ, ತೋರಣ …ಗಳಿಂದ ಬಹಳ ಚನ್ನಾಗಿ ಅಲಂಕರಿಸಿದ್ದರು. ರೆಸಿಡೆಂಟರ… ಇಲ್ಲಿ ಆ ದಿವಸ ಇದ್ದು, ಪ್ರಾತಃಕಾಲ ೯ ಘಂಟೆಯಿಂದ ೧೧ …ವರಿಗೂ ಇಲ್ಲಿಗೆ ಮೂರು ಮೈಲು ದೂರದಲ್ಲಿರುವ ಕಟ್ಟೆ… …ಗೆ ಹೋಗಿ ಅಲ್ಲಿ ತೆಪ್ಪದ ಮೇಲೆ ಕೂತು ಶಿಕಾರಿಮಾಡಿದರು. …ಯೇ ಸಾಯಂಕಾಲ ೪ ಗಂಟೆಯಿಂದ ೬ ಘಂಟೆ ವರಿಗೂ …ದೊಡ್ಡಕೆರೆಗೆ ಹೋಗಿ ತೆಪ್ಪದ ಮೇಲೆ ಕೂತು ಶಿಕಾರಿ …ಮಾಡಿಕೊಂಡು ಬಂದು, ಬಹಳ ಸಂತೋಷಪಟ್ಟು, ಮಾರನೆ… …ಲಿಂಗದಹಳ್ಳಿ ಕಡೆಗೆ ಪ್ರಯಾಣ ಬೆಳಸಿದರು. ರೆಸಿಡೆಂಟರವ… …ಸ್ವಲ್ಪ ಅಸ್ವಸ್ಥರಾದ್ದರಿಂದ ಲಿಂಗದಹಳ್ಳಿಯಿಂದ ೬ ತಾ. ಹರೀ… …ವಾಪಸು ಬಂದರು. ಮಾರನೆ ದಿನ ಬೆಳಿಗ್ಯೆ ಲಕ್ಕವಳ್ಳಿಗೆ …ಹುವರೆಂಬ ವರ್ತಮಾನವಿದೆ.

ವಿದೇಶ ವರ್ತಮಾನಗಳು.

…ಟೊರಂಟೋ ಪಟ್ಟಣದ ವಿದ್ಯಾಶಾಲೆಯ ಮೂಲಧನಕ್ಕೆ ಸರ್ …ರಿಲ್ಡ ಕರಿ ಎಂಬಾತನು ೩ ಲಕ್ಷ ರೂಪಾಯಿ ಧರ್ಮಕೊಟ್ಟ…

ಒಬ್ಬನು ಮಲಗಿರುವಾಗ ಅವನ ಎದೆ ಪದಗಟ್ಟುತ್ತಿತ್ತು ಓಡಾಡುತ್ತಿರುವಾಗ್ಗಿಂತ ಒಂದು ನಿಮಿಷಕ್ಕೆ ಹತ್ತರಂತೆ ಕಡಮೆಯಾಗುತ್ತೆ ಎಂದು ತಿಳಿದುಬಂದಿದೆ

****

ರಷ್ಯಾ ದೇಶದಲ್ಲಿ ಹೊಸದಾಗಿ ಜನಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವದಕ್ಕೆ ೬೨೪ ಪಟ್ಟಣಗಳಿವೆ ಎಂದು ಜರ್ಮನಿ ದೇಶದ ಒಂದು ವರ್ತಮಾನಪತ್ರಿಕೆಯು ಸೂಚಿಸುತ್ತದೆ.

****

ಅಮೇರಿಕದ ಡಾ।। ಮೇವಾಕರ್ ಎಂಬ ಪ್ರಸಿದ್ಧ ವೈದ್ಯಳು ಈಗ ೬೬ ವರುಷದವಳಾಗಿದ್ದಾಳೆ. ಈಕೆ ಕಳೆದ ೪೦ ಸಂವತ್ಸರಗಳಿಂದಲೂ ಗಂಡಸಿನಂತೆಯೇ ಉಡುಪುಗಳನ್ನು ಹಾಕಿಕೊಳ್ಳುತ್ತಿರುವಳು.

****

ಲಂಡನ್ ಪಟ್ಟಣದಲ್ಲಿ ಎಡ್ವರ್ಡ್ ಸಾರ್ವಭೌಮರು ಬಕಿಂಗ್‌ಹಾಂ ಅರಮನೆಯಲ್ಲಿ ಒಂದು ಸಭೆ ಸೇರಿಸಿ, ಟಿಬೆಟ್ಟಿನಿಂದ ಹೋದ ಮೇಜರ್ ಫ್ರಾನ್ಸಿಸ್ ಯಂಗ್‌ಹಸ್ಬೆಂಡರವರಿಗೆ ಕೆ. ಸಿ. ಐ. ಇ. ಎಂಬ ಬಿರುದನ್ನು ದಯಪಾಲಿಸಿರುತ್ತಾರೆ.

****

ಜರ್ಮನಿಯ ಒಂದಾನೊಂದು ಭಾರೀ ಕಾರ್ಖಾನೆಯಲ್ಲಿ ಪ್ರಖ್ಯಾತವಾದ ಕ್ರುಪ್‌ಗನ್ ಎಂಬ ಫಿರಂಗಿಗಳು ತಯಾರಾಗಿ ಸಮಸ್ತ ರಾಜ್ಯಗಳವರೂ ತರಿಸಿಕೊಳ್ಳುತ್ತಿದ್ದಾರೆ. ಈ ಕಾರ್ಖಾನೆಯ ಮುಖಂಡರಿಗೆ ಕಳೆದ ೧೨ ತಿಂಗಳಲ್ಲಿ ೧,೫೦,೦೦,೦೦೦ ರೂಪಾಯಿ ಲಾಭ ಬಂತು.

****

ಲಂಡನ್‌ಪಟ್ಟಣದಲ್ಲಿ ಚಕ್ರವರ್ತಿಯವರ ಹೆಸರಿನ ಮೇಲೆ ಒಂದು ಆಸ್ಪತ್ರೆಯನ್ನು ಕಟ್ಟಿ ನಡಸುತ್ತಿದ್ದಾರೆ ಈ ಆಸ್ಪತ್ರೆಯ ಮೂಲಧನವು ಖರ್ಚಿಗೆ ಸಾಲದೆಂದು ಪ್ರಕಟವಾದುದನ್ನು ಕೇಳಿ, ಲಾರ್ಡ್ ಮೌಂಟ್ ಸ್ಟೀವರ್ನ್ ಎಂಬ ಪ್ರಭುವರ್ಯನು ೩೦ ಲಕ್ಷ ರೂಪಾಯಿಗಳನ್ನು ಕಳುಹಿಸಿಕೊಟ್ಟನು.

****

ಮಿ|| ಜೆ ಡಿ. ರಾಕ್‌ಫೆಲರ್ ಎಂಬ ಕೋಟ್ಯಾಧೀಶ್ವರನು ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಒಂದು ಇರ್ಜನಿಯರ್ ವಿದ್ಯಾಶಾಲೆಯನ್ನು ಕಟ್ಟಿಸಿಕೊಡುವುದಾಗಿಯೂ, ಈ ವಿದ್ಯಾಶಾಲೆಯ ಮೂಲ ಧನಕ್ಕೆ ೬೬ ಲಕ್ಷ ರೂಪಾಯಿ ಧರ್ಮ ಕೊಡುವುದಾಗಿಯೂ ಮಾತು ಕೊಟ್ಟಿರುತ್ತಾನೆ.

****

ಇಟಲೀ ದೇಶದ ಮಂತ್ರಾಲೋಚನಾ ಸಭೆಯವರು ಬಹಳ ಪ್ರಸಿದ್ಧಿಯನ್ನು ಪಡೆದ ಗ್ರಿಯೋಸ್ ಕಾರ್ಡೂಸ್ಸಿ ಎಂಬ ಕವಿಶ್ರೇಷ್ಠನಿಗೆ ೩,೭೦೦ ರೂಪಾಯಿ ವರ್ಷ ಕೊಟ್ಟಿರುತ್ತಾರೆ. ಈತನು ೪೨ ವರುಷದಿಂದ ಬೊಲೋನ್ ಯೂನಿವರ್ಸಿಟಿ ಎಂಬ ವಿದ್ಯಾ ಸಂಘದಲ್ಲಿ ಉಪಾಧ್ಯನಾಗಿ ಬಹಳ ಹೆಸರುಪಡೆದಿದ್ದಾನೆ.

****

ಫ್ರಾನ್ಸ್ ರಾಜ್ಯಕ್ಕೆ ಸೇರಿದ ವ್ಯಾರಂಟೀ ಎಂಬ ಡಿಸ್ಟ್ರಿಕ್ಟಿನಲ್ಲಿ ಪ್ರಜೆಗಳು ಕಷ್ಟಪಟ್ಟು ಮಾಡಿದ್ದ ಬೆಳೆಯನ್ನೆಲ್ಲಾ ಮೊಲಗಳು ಹೆಚ್ಚಿ ತಿಂದು ಧ್ವಂಸ ಮಾಡಿದ್ದರಿಂದ ಸುಮಾರು ಒಂದುವರೆ ಕೋಟಿ ದ್ರವ್ಯದಷ್ಟು ಧಾನ್ಯ ನಷ್ಟವಾಯಿತು. ಇದಲ್ಲದೆ ಹೆಗ್ಗಣಗಳ ಕಾಟವೂ ಅಪಾರವಾಗಿದೆ ಅವುಗಳನ್ನೆಲ್ಲಾ ಧ್ವತಿಗಳನ್ನು ಹಾಕಿ ಕೊಲ್ಲುವುದಕ್ಕಾಗಿ ಡಾಕ್ಟರುಗಳು ನೇಮಕವಾಗಿದ್ದಾರೆ.

****

ಅಮೇರಿಕಕ್ಕೆ ಸೇರಿದ ಸಂಟ್ ಲೂಯಿಸ್ ನಗರದಲ್ಲಿ ಸರ್ವವಸ್ತು ಪ್ರದರ್ಶನೋತ್ಸವವು ನಡೆಯಿತಷ್ಟೆ. ಈ ಉತ್ಸವಶಾಲೆಯನ್ನು ಕಳೆದ ವರುಷದ ಆಖೈರಿಗೆ ಮುಕ್ತಾಯಮಾಡಿದರು. ಸ್ವಲ್ಪ ಹೆಚ್ಚು ಕಡಿಮೆ ಎರಡು ಕೋಟಿ ಜನರು ಹೋಗಿ ಪ್ರದರ್ಶನಶಾಲೆಯನ್ನು ನೋಡಿ ಬಂದರೆಂತಲೂ, ಇದರಿಂದ ಅಧಿಕಾರಿಗಳಿಗೆ ೪೦ ಕೋಟಿ ರೂಪಾಯಿ ತನಕ ಉತ್ಪತ್ತಿಯಾಯಿತೆಂತಲೂ ತಿಳಿದುಬಂದಿದೆ.

****

ಇಂಗ್ಲಾಂಡಿನಲ್ಲಿರುವ ಸರೇ ಸೆಸ್ಟರ್ ಎಂಬ ಕೌಂಟಿಯಲ್ಲಿ ಪಂಜಾಬ್ ದೇಶದ ಫಕೀರ್ ಚಂದ್ ಎಂಬವರಿಗೂ ಹೈದರಾಬಾದ್ ಸಂಸ್ಥಾನದ ನವಾಬ್ ಅವಿಜಾರ್‌ಜಾರ್ ಜಂಗ್‌ರವರಿಗೂ ಬರೋಡ ದೇಶದ ಶ್ರೀಮಂತ ವಿಲ್ ಹಲೇವ್ ಗಯಕ್ವಾಡ್ ಎಂಬ ರಾಜರಿಗೂ ಬಹಳ ಮರ್ಯಾದೆಯಿಂದ ವ್ಯವಸಾಯ ಭಾಗದಲ್ಲಿ ಬಹುಮಾನದ ಸರ್ಟಿಫಿಕೇಟುಗಳನ್ನು ದಯಪಾಲಿಸಿರುತ್ತಾರೆ.

****

ಲಂಡನ್‌ಪಟ್ಟಣದಲ್ಲಿ ಪುರಾತನ ಕಾಲದ ಪುಸ್ತಕಗಳನ್ನು ಹರಾಜು ಮಾಡಿದರು. ೧೬೬೬ ನೆ ಇಸವಿಯಲ್ಲಿ ಪ್ರಕಟವಾದ ಒಂದು ಬೈಬಲ್ ಎಂಬ ಸತ್ಯವೇದಪ್ರತಿಯನ್ನು ಒಬ್ಬ ದೊಡ್ಡ ಮನುಷ್ಯನು ೨೩,೩೦೦ ರೂಪಾಯಿಗೂ, ೧೪೯೯ನೆ ಇಸವಿಯಲ್ಲಿ ಅಚ್ಚಾದ ಒಂದು ಸಂಗೀತ ಪುಸ್ತಕವನ್ನು ಇನ್ನೊಬ್ಬ ದೊಡ್ಡ ಮನುಷ್ಯನು ೬೦,೦೦೦ ರೂಪಾಯಿಗಳಿಗೂ ಹರಾಜಿನಲ್ಲಿ ಬೀಟ್ ಮಾಡಿಕೊಂಡು ಕೊಂಡರು.

****

ಲಾಹೋರ್ ಪಟ್ಟಣದಲ್ಲಿ ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ವೇದಾಂತಮಾರ್ಗವನ್ನು ಹಿಡಿದು, ಪಾಶ್ಚಾತ್ಯರಾಜ್ಯಗಳಲ್ಲಿ ಸಂಚಾರಮಾಡುತ್ತಾ ಉಪನ್ಯಾಸಗಳನ್ನು ಮಾಡುತ್ತಾ ಜನರು ಸನ್ಮಾರ್ಗವಲಂಬಿಗಳಾಗುವಂತೆ ಎಲ್ಲೆಲ್ಲೂ ಬೋಧಿಸುತ್ತಾ ಇರುವ ಸ್ವಾಮಿ ರಾಮಾ ಯವರು ಕಳೆದವಾರ ಈಜಿಪ್ಟ್‌ರಾಜ್ಯದಲ್ಲಿ ಇರುತ್ತಾರೆ. ಇಷ್ಟರಲ್ಲೇ ಅವರು ಹಿಂದುಸ್ಥಾನಕ್ಕೆ ವಾಪಸು ಬರುವರೆಂದು ತಿಳಿದುಬಂದಿದೆ.

****

ರಷ್ಯಾ ರಾಜ್ಯದವರು ತಮ್ಮ ಸೈನ್ಯವನ್ನು ಹೆಚ್ಚಿಸಬೇಕೆಂದು ೧,೫೦,೦೦೦ ಜನರನ್ನು ಸೈನ್ಯಕ್ಕೆ ಹೊಸ್ತಾಗಿ ಸೇರಿಸಿಕೊಂಡರು. ಇದರಿಂದ ಅವರ ಒಟ್ಟು ಸೈನ್ಯವು ಐದು ಲಕ್ಷಕ್ಕೆ ಏರಬಹುದೆಂದು ತೋರುತ್ತೆ. ೪ ಲಕ್ಷ ಶಿಪಾಯಿಗಳ ಅಧಿಪತಿಯಾದ ಜನರಲ್ ಕುರೋಪ್ಯಾಟ್ಕಿನ್ ಎಂಬುವನು ತಿರಿಗಿ ಸಹಾಯ ಕೇಳುವುದನ್ನು ತಿಳಿದು, ಸೆಂಟ್ ಪೀಟರ್ಸ್‌ಬರ್ಗ್ ಜನಗಳೆಲ್ಲಾ ಆಶ್ಚರ್ಯಪಡುತ್ತಿದ್ದಾರೆ.

****

ಕಳೆದ ವಾರ ವಿಲಾಯಿತಿಯಲ್ಲಿ ಬಹು ಭಯಂಕರವಾದ ಗಾಳಿಯು ಬೀಸಿತು. ಅನೇಕ ಕಡೆ ಅನಾಹುತಗಳಾದವು. ಅನೇಕ ಭಾರೀ ಕಟ್ಟಡಗಳೂ ಮನೆ ಮಠಗಳೂ ಸುಂಟರಗಾಳಿಗೆ ಸಿಕ್ಕಿ ಬಿದ್ದುಹೋದವು, ಸಮುದ್ರ ತೀರದಲ್ಲಿ ಕಟ್ಟಿದ್ದ ಹಡಗುಗಳೂ ದೋಣಿಗಳೂ ಅನೇಕವಾಗಿ ಮುರಿದುಹೋದವು ಅನೇಕರು ಗಾಯಪಟ್ಟದ್ದಲ್ಲದೆ ಬಹು ಮಂದಿ ಪ್ರಾಣವನ್ನು ಕಳೆದುಕೊಂಡರೆಂದು ತಂತೀವರ್ತಮಾನ ಬಂದಿದೆ.

****

ಆಸ್ಟ್ರಿಯಾ ಹಂಗೆರಿ ರಾಜ್ಯದ ಬ್ಯೂಡಪೆಸ್ಟ್ ಎಂಬ ನಗರಕ್ಕೆ ಒಬ್ಬ ವಿಧವೆಯು ಹೊಸದಾಗಿ ಬಂದು ಸೇರಿದಳು. ಅವಳನ್ನು ವಯಸ್ಸೆಷ್ಟು ಎಂದು ವಿಚಾರಿಸುವಾಗ್ಗೆ ೧೦೫ ಎಂದು ಹೇಳಿದಳು. ಅವಳ ಜನ್ಮ ಪತ್ರಿಕೆಯನ್ನು ನೋಡುವಾಗ್ಗೆ ಅವಳು ೧೭೮೮ ನೇ ಇಸವಿಯಲ್ಲಿ ಜನಿಸಿದಳೆಂದು ತಿಳಿದುಬಂತು. ಆದ್ದರಿಂದ ಈಗ ಅವಳಿಗೆ ೧೧೬ ವರುಷವಾಗಿರುವುದು. ಈಗ ಪ್ರಪಂಚದಲ್ಲಿರುವ ಹೆಂಗಸರೆಲ್ಲಾ ಇವಳೇ ಬಹಳ ವಯಸ್ಸಾದವಳು.

****

ಕೊರಿಯಾ ರಾಜ್ಯದ ಚಕ್ರವರ್ತಿಯ ಹಳೇ ಅರಮನೆಯ ಉತ್ತರ ಪೊಕ್ಕಾರ್ಗ ಎಂಬ ಬೆಟ್ಟವಿದೆ. ಆ ಬೆಟ್ಟದಲ್ಲಿರುವ ಮರಗಳನ್ನೆಲ್ಲಾ ಕಡಿದುಹಾಕಿದರೆ ಆ ರಾಜ್ಯಕ್ಕೆ ಅಂತ್ಯ ಕಾಲ ಬರುವುದೆಂದು ಜನರು ಹೇಳುವುದು ವಾಡಿಕೆಯಾಗಿದೆ. ಆ ಬೆಟ್ಟದ ಮೇಲಿರುವ ಸೌದೆಯನ್ನು ಕಡಿಯುವವನು ಸಾಯುವದೇ ನಿಜ ಈಗ ಆ ಬೆಟ್ಟದ ತುದಿಯಲ್ಲಿ ಒಂದೇ ಒಂದು ಗಿಡವಿರುತ್ತದೆ ಅದೂ ಒಣಗುತ್ತಾ ಬಂದಿರುವುದರಿಂದ ಆ ದೇಶವು ಯಾವಾಗ ಕೊನೆಗಂಡೀತೋ ಎಂದು ಜನರೆಲ್ಲಾ ಗಾಬರಿಪಡುತ್ತಿದ್ದಾರೆ.

****

ಸಂಗೀತದಿಂದ ಅನೇಕ ಪ್ರಯೋಜನಗಳುಂಟು. ಅವರೆ ಅವುಗಳಲ್ಲಿ ಗಾಯಗಳಿಂದ ರಕ್ತ ಸುರಿಯುವದನ್ನು ನಿಲ್ಲಿಸುವದೇ ಮುಖ್ಯೋಪಯೋಗವೆಂದು ತಿಳಿದುಬಂದಿದೆ. ಒಬ್ಬ ರಣವೈದ್ಯನು ಯುದ್ಧದಲ್ಲಿ ಗಾಯಪಟ್ಟ ಒಬ್ಬ ಶಿಪಾಯಿಯನ್ನು ಸವಿಾಪದಲ್ಲಿದ್ದ ಒಂದು ಡೇರೆಗೆ ಕರೆದುಕೊಂಡು ಹೋಗಿ ಮಲಗಿಸಿದನು. ಆಗ ಗಾಯದಿಂದ ರಕ್ತವು ಸುರಿಯುತ್ತಿತ್ತು. ಅಲ್ಲಿಗೆ ಒಂದು ಸಂಗೀತ ಧ್ವನಿಯು ಕೇಳುತ್ತಿದ್ದದ್ದರಿಂದ ಅಕಸ್ಮಾತ್ತಾಗಿ ಆ ಗಾಯದಿಂದ ಸುರಿಯುತ್ತಿದ್ದ ರಕ್ತವು ನಿಂತುಹೋಯಿತು.

****

ಅನ್ಯೋನ್ಯ ರಾಜ್ಯಗಳಲ್ಲಿ ಪ್ರಾಮುಖ್ಯ ಪಟ್ಟಣವಾದ ಸಂಟ್ ಲೂಯಿಸ್ ಪಟ್ಟಣದಲ್ಲಿ ಒಂದು ಪ್ರದರ್ಶನೋತ್ಸವವು ನಡೆಯಿತು. ಚಿಕಾಗೋ ನಗರದಲ್ಲಿ ನಡೆದ ಉತ್ಸವದಲ್ಲಿ ೨೮ ಲಕ್ಷ ಜನರು ಸೇರಿದ್ದರು. ಸಂಟ್ ಲೂಯಿಸ್ ನಗರದಲ್ಲಾದರೋ ೧೨ ಲಕ್ಷ ಜನರೇ ಸೇರಿದ್ದರು. ಅದರಲ್ಲೂ ೧೦ ಲಕ್ಷ ಜನಗಳು ಮಾತ್ರವೇ ದುಡ್ಡು ಕೊಟ್ಟು ನೋಡುವದಕ್ಕೆ ಬಂದಿದ್ದರು. ಆದರೆ ಯೂರೋಪ್ ಖಂಡದ ಹಾಗೆಯೇ ಅಮೇರಿಕದಲ್ಲಿಯೂ ಪೂರ್ವಕಾಲದಲ್ಲಿ ನಡೆಯುತ್ತಿದ್ದ ಹಾಗೆ ಪ್ರದರ್ಶನೋತ್ಸವಗಳು ಈಗ ನಡೆಯುವುದಿಲ್ಲ.

****

ಜರ್ಮನಿ ಚಕ್ರವರ್ತಿಯವರು ಸ್ವಂತ ಹಣವನ್ನು ಖರ್ಚು ಮಾಡಿ ಒಂದು ಕಾರ್ಖಾನೆಯನ್ನಿಡಿಸಿ, ಅದರಲ್ಲಿ ಚಿತ್ರವಿಚಿತ್ರವಾದ ಇಟ್ಟಿಗೆ ಹಂಚು ಮುಂತಾದ ಪದಾರ್ಥಗಳನ್ನು ತಯಾರ್ಮಾಡಿಸಿ, ಬಿಕರಿಮಾಡಿ ಲಾಭ ಸಂಪಾದಿಸಿಕೊಳ್ಳುತ್ತಿದ್ದಾರೆ. ಇದು ಅಲ್ಲಿನ ಇತರ ಕಾರ್ಖಾನೆಗಾರರಿಗೆ ತುಂಬಾ ನಷ್ಟಕರವಾಗಿದೆ. ಅವರೆಲ್ಲಾ ಸೇರಿ ಚಕ್ರವರ್ತಿಯವರಿಗೆ ಅರ್ಜಿ ಬರೆದುಕೊಂಡಿರುವರು. ಕಸಬುಗಳನ್ನು ನಡಸುವ ಜನರಿಗೆ ದೊರೆಗಳು ಪ್ರೋತ್ಸಾಹಕೊಟ್ಟು, ಪೇಟೋನ್ನತಿಗೆ ಸಹಾಯಕರಾಗಬೇಕಲ್ಲದೆ ತಾವೇ ಕಾರ್ಖಾನೆಗಳನ್ನಿಟ್ಟು ನಡಸುವುದು ತರವಲ್ಲ

****

ಈಸ್ಟ್ ಇಂಡಿಯಾ ಅಸೋಸಿಯೇಷನ್ ಎಂಬ ಸಂಘದಲ್ಲಿ ದುರಂತ ಬೇಟ್ ಎಂಬುವರು ಇಂಡಿಯಾ ದೇಶದಲ್ಲಿ ಹೊಗೇಸೊಪ್ಪಿನ ಬೆಳೆಯ ವಿಷಯವಾದ ಒಂದು ಉಪನ್ಯಾಸಮಾಡಿದರು. ಸುಮಾತ್ರಾ ದ್ವೀಪದಲ್ಲಿ ಆ ಬೆಳೆಯು ನಾಲ್ವತ್ತು ವರುಷದಿಂದಲೂ ಬಹಳ ಉತ್ತಮಸ್ಥಿತಿಗೆ ಬಂದಿದೆ. ಕಳೆದ ವರುಷ ಅಲ್ಲಿಂದ ಇತರ ದೇಶಗಳಿಗೆ ಕಳುಹಿಸಿದ ಹೊಗೇಸೊಪ್ಪಿನ ಬೆಲೆಯು ೪೭ ಲಕ್ಷ ರೂಪಾಯಿಗಳು. ಈ ಬೆಳೆಯು ಉತ್ತಮಸ್ಥಿತಿಗೆ ಬಂದುದಕ್ಕೆ ಅನುಕೂಲವಾದ ಮೂಲಧನವೂ, ಉತ್ತಮವಾದ ಭೂಗುಣವೂ ಸಹಕಾರಿಗಳಾಗಿರುತ್ತವೆ ಇಂಡಿಯಾದಲ್ಲಿ ಮಾತ್ರ ಈ ಬೆಳೆ ಬಹಳ ಹೀನಸ್ಥಿತಿಯಲ್ಲಿರುವುದು ಇದಕ್ಕೆ ಯೂರೋಪ್ಯರ ಮೇಲ್ವಿಚಾರಣೆ ಇಲ್ಲದಿರುವುದೇ ಕಾರಣ. ಈಗ ಇಂಡಿಯಾದಲ್ಲಿ ಬೆಳದ ಹೊಗೇಸೊಪ್ಪು ವಿಲಾಯಿತಿಯಲ್ಲಿ ಬಹಳ ಕೆಟ್ಟ ಹೆಸರನ್ನು ಹೊಂದಿದೆ.

ಜ್ವರಹರಿ 9



ಇದು ಸಾಧಾರಣ ಜ್ವರ, ಚಳೀಜ್ವರ, ಮೈರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್‌ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬಿಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಎರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮುಂ ಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಾಪತ್ತಿರ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮ ಓಮುಂ ಕರ್ಪೂರವನ್ನು ನಾನೂ ನನ್ನ ಕಾಟೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಛಾವಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಚಿತ್ರಶಾಲಾ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೌತ್ ಜೇಲ್ ಲೈನ್, ಮದರಾಸ್.

ಶರೀರಸುಖಕ್ಕೆ ಒಂದು ಸುಲಭ ಉಪಾಯವು.

ಅಂದರೆ 10

ಮಿಂಚಿನ ವಸ್ತು ಪ್ರಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ ಈ ರಕ್ತದ ಕ್ರಿಯೆಗೆ ವಿದ್ಯುಲ್ಲತೆಯು (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಅನೇಕ ಧಾತುಗಳ ಸಮ್ಮೇಳನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು.—ಅಶಕ್ತಿ, ಅಜೀರ್ಣ, ಕೈಕಾಲುಜಡತ, ಸಂಧಿವಾತ, ಕಟಿವಾತ, ತಲೇನೋವು, ಅರತಲೇನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ಹಸ್ತನಿದ್ರೆ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ಕಫ, ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಣಂತಿ ರೋಗ, ತಲೆತಿರುಗುವಿಕೆ, ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುನಷ್ಟವು, ಸ್ಮರಣಶಕ್ತಿಯು ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ

ಉಪಯೋಗ—ಪದಕವು ಎದೆಯ ಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಿಯು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ವ್ಯಾಪ್ತವಾಗುವದು ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯವಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧—೨—೦. ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೪ ಆಣೆ ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗವನ್ನೂ, ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನೂ ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರುವಾಗ ಬೆರಳಿನ ಅಳತೆ ಕಳುಹಿಸಬೇಕು. ಉಪಹತಿಯು ಗುಣಹೊಂದಿದ ನಂತರ ಮುಂದೆ ೧ ಯಾ ೨ ತಿಂಗಳು ವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ ವೈಲಕ್ಷಣ್ಯ ಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವ್ಹಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮೂಡಗಾವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ
Post Bilgi, North Kanara District.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ
ಬರೆದು ತರಿಸಿಕೊಳ್ಳಿ

10

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರನೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.
ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೋಮೋಸಿಯಾ.

ಕಷ್ಟ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ. ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತಕ್ಷಣದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಶೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ಗಾಯಗಳು, ಮುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಮುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಆದರೂ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಛಾವಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೬ ಸೌತ್ ಜೇಲ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೩—೧೨—೧೯೦೪ ರಿಂದ ೩೦—೧೨—೧೯೦೪ ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	19	16	101	86
ಮೈಸೂರು ,,	39	26	16	34
ಬೆಂಗಳೂರು ಡಿಸ್ಟ್ರಿಕ್ಟ್	50	37	90	56
ಮೈಸೂರು ,,	70	54	163	12
ಕೋಲಾರ್ ,,	21	17	80	33
ಕೋಲಾರ್ ಚಿನ್ನದ ಗಣಿಗಳು	18	10	10	5
ತುಮಕೂರು ಡಿಸ್ಟ್ರಿಕ್ಟ್	47	42	54	44
ಹಾಸನ ,,	11	7	30	19
ಚಿತ್ರದುರ್ಗ ,,	16	15	59	44
ಕಡೂರ್ ,,	14	7	14	19
ಶಿವಮೊಗ್ಗ ,,	21	14	58	89
ಜುಮ್ಲಾ.	313	247	696	139

ಶಾಲೀವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರ, ಪುಷ್ಯ ಶುದ್ಧ ಷಷ್ಠಿ ಗುರುವಾರದಿಂದ ಪುಷ್ಯ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಜನವರಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ
12	ಗುರು *	ಷಷ್ಠಿ	0-53	ಉತ್ತರಾ	30 31	29
13	ಶುಕ್ರ :	ಸಪ್ತಮಿ	6 18	ರೇ	36-52	1
14	ಶನಿವಾ †	ಅಷ್ಟಮಿ	11 21	ಅ	12 42	2
15	ರವಿವಾ ;,	ನವಮಿ	15 38	ಭ	17-36	3
16	ಚಂದ್ರ ¶	ದಶಮಿ	18-42	ಕೃ	51 28	4
17	ಕುಜ ‡	ಏಕಾದಶಿ	20-36	ರೋ	51 4	5
18	ಬುಧ	ದ್ವಾದಶಿ	21-22	ಮೃ	..-39	6

* ಭೋಗೋತ್ಸವ ೧೪ ಗಳಿಗೆಯ ಮೇಲೆ ಪುಣ್ಯಕಾಲ ಕೂಪಾನ್ತದಾನ : ಕನಕಪಲ್ಲಿ, ಶ್ರೀರಂಗಪಟ್ಟಣದ ರಂಗನಾಥರಥ, ಚಾಂಚಾನಪಟ್ಟ ರಾಮಸ್ವಾಮಿರಥ. ;, ಶಿವಗಂಗೆ ಗಂಗಾಸ್ವತಿ. ¶ ಕೂನ್ಯತಿಥಿ ‡ ಸರ್ವತ್ರ ಏಕಾದಶಿ.

ಪೇಟೆ ಧಾರಣೆ.

ದಿನಸು.	ಮೈಸೂರು.	ಬೆಂಗಳೂರು
ಕಗ್ಗೀ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೦-೪-೦	೧೮-೦-೦
ಕೆಂಬೂತಿ ಅಕ್ಕಿ ಅವಲ್	೧೮-೨-೦	೧೮-೦-೦
,, ಮಾಯಂ	೯-೮-೦	೧೧-೮-೦
ಜಾಪಾಡಿ ಅಕ್ಕಿ	೯-೪-೦	೧೨-೮-೦
ಸಣ್ಣಕ್ಕಿ ಅವಲ್	೧೨-೮-೦	೧೨-೮-೦
,, ಮಾಯಂ	೧೧-೮-೦	೧೧-೮-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೧-೮-೦	೧೧-೭-೦
,, ಮಾಯಂ	೧೧-೦-೦	೧೪-೦-೦
ಹೈನ ರಾಗಿ ಪಲ್ಲಾ ೧ಕ್ಕೆ	೪-೬-೦	೫-೧೦-೦
ಕಾರ್ರಾಗಿ	೪-೧೨-೦	೫-೭-೦
ಜೋಳ	೪-೪-೦	೭-೦-೦
ಹುರುಳಿ ಪಲ್ಲಾ ೧ಕ್ಕೆ	೮-೧೨-೦	೭-೦-೦
ಬಿಳೀ ಅವರೆ	೯-೦-೦	೭-೦-೦
ಹೆಸರು	೯-೮-೦	೯-೦-೦
ಉದ್ದು	೮-೧೪-೦	೮-೮-೦
ಕಡಲೆ	೧೦-೦-೦	೮-೦-೦
ಎಳ್ಳು	೧೨-೮-೦	೧೦-೭-೦
ಹುರುಳಿ	೫-೧೨-೦	೬-೪-೦
ಹರಳು ೧೨೬ ಸೇರಿಗೆ	೯-೮-೦	೬-೬-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೨-೦-೦
ಮೆಣಸಿನಕಾಯಿ	೪-೨-೦	೩-೪-೦
,, ಮಾಯಂ	೩-೧೨-೦	೩-೦-೦
ಬೆಲ್ಲ ದೊಡ್ಡ ಅಚ್ಚು	೭-೪-೦	ಮ ೧ ೧೪-೦
ಒಳ್ಳೆಣ್ಣೆ ಮಣ ೧ಕ್ಕೆ	೪-೦-೦	೩-೮-೦
ಹರಳೆಣ್ಣೆ ,,	೩-೧೨-೦	೩-೪-೦
ಕೊಬ್ಬರಿ ಪಲ್ಲ ೧ಕ್ಕೆ	೫-೧೪-೦	೭-೮-೦
ಉಪ್ಪು ,,	೯-೦-೦	೮-೧೦-೦
ಹುಣಸೇ ಹಣ್ಣು	೧-೪-೦	೦-೧೪-೦
,, ಹಳೇದು	೦-೧೪-೦	೦-೧೨-೦
ಉಪ್ಪು	೧೨-೦-೦	೧೦-೮-೦
ಸೀಮೆಯೆಂಣೆ ಡಬ್ಬಿ ೧ಕ್ಕೆ	೫-೩-೦	೪-೨-೦
ತೆಂಗಿನಕಾಯಿ ೧೦೧ ಕ್ಕೆ	೫-೦-೦	೩-೮-೦
ಅಳಲೇಕಾಯಿ ಮಣ ೧ಕ್ಕೆ	೧-೦-೦	೦-೧೦-೦
ತಂಬ್ರ್ಯಳಕಾಯಿ ಮಣ ೧ಕ್ಕೆ	೦-೧೪-೦	೦-೧೦-೦
ಚಿನ್ನ (ಪವನ್) ತೊಲ	೧೫-೮-೦	೧೫-೪-೦
,, ,, ಪಸಮೆ	೧೫-೧೦-೦	೧೫-೯-೦
,, ,, ಗಟ್ಟಿ ತೊಲ ೧ಕ್ಕೆ	೨೬-೦-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩೨-೦-೦	೩೩-೦-೦

Printed and Published by the Rev W B Tresidder
the Proprietor and Manager, Wesleyan Mission Press
Mysore 12/1/1905

ವೃತ್ತಾಂತ ಪತ್ರಿಕೆ.

REGISTERED M '03

ಕ್ರಯ ೧ ದುಡ್ಡು —— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಜನವರಿ ತಾರೀಖು ೧೯ ನೇ ಗುರುವಾರ. — ಸಂಚಿಕೆ ೩

ಓದೋ! ಗೊತ್ತೇ ಇಲ್ಲವೇ!

ಈಗ ಸಿದ್ಧವಾಗಿವೆ — ಎಲ್ಲರಿಗೂ ಬೇಕಾದದ್ದು

5

ವಿಶೇಷ ರೂಪಿಗೆ ಬಂದಿರುವ ೧೯೦೫ ನೇ ಇಸವಿ ಪಂಚಾಂಗ ಪ್ರಕಾಶ ಎಸ್ ಜಿ ಎಲ್. ಪಾಕೆಟ್ ಡೈರಿಗಳು

ಈ ವರ್ತಕರು, ಕಂಟ್ರ್ಯಾಕ್ಟದಾರರು, ದೊಡ್ಡ ಮನುಷ್ಯರು, ಶಾಲೆಯ ಹುಡುಗರು ಮೊದಲಾದ ಸಮಸ್ತರಿಗೂ ಅತ್ಯಂತ ಉಪಯೋಗ ಅನೇಕ ವಿಷಯಗಳು ಗರ್ಭಿತವಾಗಿಯೂ ಪ್ರತಿಪುಟಕ್ಕೂ ರೂಲು ಹೊಸದಾಗಿ (ಸ್ಪೆಂಡು) ಮಾಡಲ್ಪಟ್ಟು ಎಲ್ಲರಿಗೂ ಸಾಧ್ಯವಾಗಿರುವ ಕಡಿಮೆ ಕ್ರಯಕ್ಕೆ ವಿಕರಿಸಲಾಗುತ್ತಿವೆ ತರಿಸಿ ನೋಡಿದಲ್ಲಿ ವಿಶದವಾಗುತ್ತೆ.

ಎ ನಂಬರ್ — ಬಿ ನಂ॥

ಅಗ್ಗ ೫ ಅಂಗ್ಲದ ಚಿಕ್ಕ ಡೈರಿ ೦—೩—೦ — ಮುಚ್ಚಳ ಹಾಕಿ ಪೆನ್ಸಲ್ ಇಟ್ಟಿರುವ ಪಾಕೆಟ್ ಡೈರಿಗೆ ೦—೫—೦

ಒಂದೆ ಸಲ ೧೨ ಕಾಪಿ ಒಟ್ಟಾಗಿ ತರಿಸುವವರಿಗೆ ಪೋಸ್ಟು ಚಾರ್ಜು ಕಡಿಮೆ ಬೀಳುವುದಲ್ಲದೆ ಅದೇ ಸಹ ೧ ಡೈರಿ ಉಚಿತವಾಗಿ ಕೊಡುತ್ತೇವೆ.

ಡಿ—ಎಂ ಪಿ ಮಲ್ಲಯ್ಯ, ಕರ್ನಾಟಕ ಬುಕ್ ಡಿಪೋ, ೨೧೧, ಅವಿನ್ಯೂ ರೋಡು, ಬೆಂಗಳೂರು ಸಿಟಿ

P. SUBBAROY'S

World Renowned and most Efficacious Ayurvedic Medicines.

ಪಿ ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

15

ಪ್ರತಿ ತಾಂಬೂಲ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದೊಂದಿಗೆ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಅಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೩ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ — ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೩ ಸೀಸೆವರೆಗೆ ವಿ ಪಿ ಖರ್ಚು ಚಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾಚಾರ

ಶೀತಕಾಲದಲ್ಲಿ ಈ ಮಾತ್ರೆಗಳನ್ನು ಅಗಿಯುವುದರಿಂದ ಸಂಗಡ ಹಾಕಿದ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದು ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ಡೆಪ್ಯುಟಿ ಇನ್ಸ್‌ಪೆಕ್ಟರ್

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನು ಉಂಟುಮಾಡುತ್ತವೆ.—ಕೃಷ್ಣಯ್ಯಂಗಾರ್, ಕೀರ್ತಿ ದಿವಾನ್ ಪೇಷ್ಕಾರ್, ಮೈಸೂರ್.

Apply to :—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಇದು ಗುಣಕಾರಿ.

28

ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ ಮತ್ತು ರಾಮಾನುಜಪುರ. ಇವರ

೧. ಪ್ಲೇಗು ಪರಿಹಾರಔಷಧ —ಈ ಪರಿಯಂತರ ಪ್ರತಿಯೊಬ್ಬ ಪ್ಲೇಗು ರೋಗಿಗೂ ಈ ಔಷಧಿಯಿಂದ ಗುಣವಾಗಿದೆ ಧನಾರ್ಜನೆಗಾಗಿ ಪತ್ರಿಕಾಲಂಕಾರವಾಗಿಲ್ಲ. ಲೋಕೋಪಕಾರದಿಂದ ಕೀರ್ತಿಯು ಶರೀರವನ್ನು ಪೇಕ್ಷಿಸಿ, ಬಹು ಧನವ್ಯಯದಿಂದ ಕಂಡುಹಿಡಿಯಲ್ಪಟ್ಟಿತು. ಕೇವಲಾನುಭವದಿಂದ ನಂಬಿಕೆಯಾದ ಔಷಧಿ, ಗಡ್ಡೆಗೆ ಸವರುವ ಔಷಧಿ ಮತ್ತು ಸೇವಿಸುವ ಔಷಧಿ ಸಹಾ—೧ ಜನಕ್ಕೆ ಸಾಕಾಗುವಷ್ಟಕ್ಕೆ ಕ್ರಯ ೫ ರೂ ಒಟ್ಟರಿಗಾದರೆ ೧॥। ರೂ. ವಿ ಪಿ. ಚಾರ್ಜು ಬೇರೆ.

೨. ಕಸ್ತೂರೀ ಮಾತ್ರೆಗಳು:—ಮಕ್ಕಳ ಎಳವು, ಪ್ರಾಣಾದಿಗಳು, ಹೆಂಗಸರ ಮುಟ್ಟುಕಟ್ಟು, ಗರ್ಭಸ್ರಾವಾದಿಗಳು, ಎಲ್ಲರ ಜ್ವರ, ವಾತ, ನೈಕ್ಕ ನೋವು, ಜ್ವರದಗೆಡ್ಡೆ ಮೊದಲಾದ ೨೦ ರೋಗಗಳು ಗುಣವಾಗುತ್ತೆ. ಅನುಪಾನ ಪತ್ರದಲ್ಲಿ ಎಲ್ಲಾ ಕಾಣಿಸಿರುತ್ತೆ. ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ. ೧ ರಿಂದ ೩ ರ ವರಿಗೆ ಪ್ಯಾಕಿಂಗ್‌ಚಾರ್ಜು ೫ ಆಣೆ. ೩ ಸೀಸೆಗೆ ೧ ಸೀಸೆ ಹೆಚ್ಚು ಕೊಡುವೆವು.

೩. ಬಾಧಾಪಹಾರಿಣಿ —ಎಲ್ಲಾ ಬಗೆ ತಲೆ ನೋವು, ವಾಯುಗಳು, ಉಳುಕು, ಛಳಕು, ಕೂಡ ಒಡನೇ ಗುಣವಾಗುತ್ತದೆ. ಡಬ್ಬಿ ೧ಕ್ಕೆ ಕ್ರಯ ೮ ಆಣೆ ೩ ಡಬ್ಬಿಗೆ ೧ ಡಬ್ಬಿ ಹೆಚ್ಚು ದೊರೆಯುತ್ತೆ.

೪. ದಂತಸಿತಚೂರ್ಣ —ಉಜ್ವಲಾ ಬಂದರೆ ಹಲ್ಲಿನ ಹಾಕಿ, ರಕ್ತಸೋರುವುದು, ಬಾಯಿನಾತ, ಎಲ್ಲಾ ಬಗೆಯ ಹಲ್ಲು ನೋವು ಹೋಗುತ್ತದೆ ಡಬ್ಬಿಗೆ ೪ ಆಣೆ, ೪ ಡಬ್ಬಿಗೆ ೧ ಹೆಚ್ಚು.

ಏಜಂಟರು :—೧. ಕೆ ಎಲ್. ಕೃಷ್ಣಶಾಸ್ತ್ರಿಗಳು, ಹಳ್ಳದಬೀದಿ, ಮೈಸೂರು. ಅಥವಾ,

೨. ಕೆಚ್ ಎಲ್. ರಾವ್ ಅಂಡ್ ಬ್ರದರ್ಸ್, ಬೆಂಗಳೂರು ಸಿಟಿ.

ಸನ್ ೧೯೦೫ನೇ ಇಸವಿಯ

1

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿ

ಎ ನಂಬರ್ ಬೈಂ॥ — ಸಿ ನಂ॥ ಬೈಂ॥

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರ್ಯಾಕ್ಟರು, ದೊಡ್ಡಮನುಷ್ಯರು, ಮುನ್ಷಿ'ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ" ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್‌ಫೀಜು, ಪ್ರೋಸೆಸ್ ರುಸುಂ ಸ್ಟ್ಯಾಂಪ್ ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ನವಗ್ರಹಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಕಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಕಂಬಳಿಪಟ್ಟಿ, ಜೋಬಿಲೆಕ್ಕ, ಬವಾಬರ್ಚನೆಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಶೀಮೆ ಸಂಪೂರ್ಣ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ ಎ ನಂಬರ್ ಚಿಕ್ಕಸೈಜು ೩ ಆಣೆ ಸಿ. ನಾಟಕ ದೊಡ್ಡಸೈಜು ೩ ಆ

ಎಫ್. ,,	,, ೪	ಎಚ್. ,,	,, ೭ ,,
ಬಿ ಮುಚ್ಚಳವು	,, ೫	ಡಿ. ಮುಚ್ಚಳವು	,, ೮ ,,

ಪೋಸ್ಟು ಚಾರ್ಜು ಬೇರೆ. ಒಂದೇ ಸಮೂಹ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ.—ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು

ಪ್ರಪಂಚದಲ್ಲಿ ದೊಡ್ಡದು ಯಾವದು?

7

ಜ್ಞಾನವೋ ? ದ್ರವ್ಯವೋ ? ಸ್ನೇಹಿತರೋ ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುವಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ, ವಿ ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ನಪ್ರವಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೪ ಆಣೆ

೪	"ರೋಮಸನ ಚರಿತ್ರೆ"	ಕ್ರಯ ೦—೬—೦
೫.	"ಗ್ರೀಕರ ಚರಿತ್ರೆ"	,, ೦—೨—೦
೬.	"ಅನುಭವಾನಂದ.",,	೦—೬—೦
೭.	"ಗಣಿತ ಸಂಜೀವಿನಿ."	೧—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ."	೦—೧೬—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೨—೦
೧೧	"೧೯೦೫ನೇ ಸಚಿತ್ರ ಡೈರಿಗಳು."	

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦ ; ಸಾದಾ ೦—೪—೦

ಮ್ಯಾನೇಜರ್,
ಸಿ. ಎಲ್ ಎಸ್ ಬುಕ್ ಡಿಪ್ಪೋ,
ಮೈಸೂರು

ಶ್ರೀ ತಾಂಬೂಲ.

10

ಇದನ್ನು ಓದಿ ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬಳಿನ ದುರ್ಗಂಧ ನಾಶವಾಗುತ್ತೆ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಪಿತ್ತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯೌವನಿಗಳೂ ಉತ್ಸಾಹ ಉಲ್ಲಾಸಧೈರ್ಯವನ್ನುಂಟುಮಾಡುತ್ತೆ ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೨ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೩ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಟವರ್, ಬೆಂಗಳೂರು ಡಿಸ್ಟ್ರಿಕ್ಟ್. — ಯಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್.

ಜ್ವರಹರಿ 9



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವೀಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಇದನ್ನು ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ. ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

●●●●●●●●●

ಓಮಂ ಕರ್ಪೂರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜ್ವರಹರಿಯು ಓಮಂ ಕರ್ಪೂರವನ್ನು ನಾನೂ ನನ್ನ ಕಾಚೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಊರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

ಹನ್ಸಿಯುತರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಪೋಸ್ಟ್ ಬಾಕ್ಸ್ ಕ್ಲಬ್. ಮದರಾಸ್.

ಶರೀರಸುಖಕ್ಕೆ ಒಂದು ಸುಲಭ ಉಪಾಯವು.

ಅಂದರೆ 10

ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ ಈ ರಕ್ತದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ ಅನೇಕ ಧಾತುಗಳ ಸಮ್ಮೇಳನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು —ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೇನೋವು, ಅರತಲೇನೋವು ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಿದ್ರೆ, ಮಲಬದ್ಧತೆ ಮೂಲವ್ಯಾಧಿ, ಉಬ್ಬಸ, ಕೆಮ್ಮು, ಕಜ್ಜಿ, ಗಜಕರ್ಣ, ಜ್ವರ, ಉದರವಾತ, ಕಿವಿಯ ವ್ಯಾಧಿ, ಸ್ತ್ರೀಯರ ಬಾಣಂತಿ ರೋಗ, ತಲೆತಿರುಗುವಿಕೆ, ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುನಷ್ಟವು ಸ್ಮರಣಶಕ್ತಿಯ ಊರತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ

ಉಪಯೋಗ —ಪದಕವು ಎದೆಯ ಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವದು ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯುವನ್ನಾಗಿ ಇಟ್ಟುಕೊಳ್ಳಬೇಕು ಕ್ರಯ ಪ್ರತಿ ೧ ಪದಕಕ್ಕೆ ೧—೨—೦ ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೪ ಆಣೆ ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗವನ್ನೂ, ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನೂ ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ —ಉಂಗುರ ಹಾಕುವಾಗ ಬೆರಳಿನ ಅಳತೆ ಕಳುಹಿಸಬೇಕು. ಉಪಹತಿಯು ಗುಣಹೊಂದಿದ ನಂತರ ಮುಂದೆ ೧ ಯಾ ೨ ತಿಂಗಳು ವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ ವೈಲಕ್ಷಣ್ಯ ಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೫ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವ್ಹಿ. ಪಿ ಯಿಂದಲೂ ಕಳುಹಿಸುವೆವು

ವಿಠಲದಾಸ ಮೂಡಗಾವುಕರ, ಮರ್ಚಂಟ್,

ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ

Post Bilgi North Kanara District

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

10

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಹೋಮೋಸಿಯಾ.

ಕಷ್ಟಪರಿಹಾರ

ಹಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ ಆಸ್ಪತ್ರೆ, ಪೊಲೀಸ್ ರಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ —ಸಣ್ಣ ಡಬ್ಬಾ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ ೨—೮ ಆ , ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

●●●●●●●●●

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಊರುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ —ಹೋಮೋಸಿಯಾ ಕಂಪೆನಿ, ೨೭ ಸೆಕೆಂಡ್ ಲೇನ್ ಬೀಚ್. ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

2 —12—1904 ರಿಂದ 30—12—1904 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಸತ್ತದ್ದು.	ಹೊಡವಿದ ಈ ವಾರದ ಸಂಖ್ಯೆ	[illegible]
ಬೆಂಗಳೂರು ಪಟ್ಟಣ	19	15	101	6[illegible]
ಮೈಸೂರು ,,	32	26	48	3[illegible]
ಬೆಂಗಳೂರು ಡಿಸ್ಟ್ರಿಕ್ಟು	50	37	80	5[illegible]
ಮೈಸೂರು ,,	70	54	103	1[illegible]
ಕೋಲಾರ್ ,,	21	17	80	3[illegible]
ಕೋಲಾರ್ ಚಿನ್ನದ ಗಣಿಗಳು	19	10	10	[illegible]
ತುಂಕೂರು ಡಿಸ್ಟ್ರಿಕ್ಟು	47	42	54	4[illegible]
ಹಾಸನ ,,	11	7	50	1[illegible]
ಚಿತ್ರದುರ್ಗ ,,	18	15	59	1[illegible]
ಕಡೂರ್ ,,	14	7	14	1[illegible]
ಶಿವಮೊಗ್ಗ ,,	21	14	58	8[illegible]
ಜುಮ್ಲಾ.	313	247	696	13[illegible]

ಶಾಲೀವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರ ಪುಷ್ಯ ಶುದ್ಧ ಷಷ್ಠಿ ಗುರುವಾರದಿಂದ ಪುಷ್ಯ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಜನವರಿ

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ತೇದಿ ವಾ...
12	ಗುರು *	ಷಷ್ಠಿ	0 12	ಉತ್ತರಾ	0 31	29
13	ಶುಕ್ರ	ಸಪ್ತಮಿ	6 15	ರೇ	3 02	1
14	ಶನಿವಾ ,	ಅಷ್ಟಮಿ	11 21	ಅಶ್ವಿ	12 13	2
15	ರವಿವಾ ,,	ನವಮಿ	15 15	ಭ	17 36	3
16	ಚಂದ್ರ ¶	ದಶಮಿ	1 12	ಕೃ	21 25	4
17	ಕುಜ ‡	ಏಕಾದಶಿ	20 36	ರೋ	24 4	5
18	ಬುಧ	ದ್ವಾದಶಿ	21 12	ಮೃ	[illegible]	6

ಮೋಗ್ರೋತ್ಸವ ೧೪ ಗಳಿಗೆಯ ಮೇಲೆ ಪುಣ್ಯಕಾಲ ಕೊಪ್ಪಂವದಾಸ ಕನೂರಪ್ಪ, ಶ್ರೀರಂಗಪಟ್ಟಣದ ರಂಗನಾಥರ ಪಾಂಚಾನಕಟ್ಟೆ ರಾಮಸ್ವಾಮಿಯವರ , ಶಿವಗಂಗೇ ಗಂಗಾ ತ್ರಿಮ ¶ ರೂಪ್ಯತಿಥಿ ‡ ಸರ್ವತ್ರ ಏಕಾದಶಿ.

ಪೇಟೆ ಧಾರಣೆ.

ದಿನಸು.		ಮೈಸೂರು	ಬೆಂಗಳೂರು
ಕನ್ನೇ ಅಕ್ಕಿ ಪಲ್ಲಾ ೧ಕ್ಕೆ	ರೂ	೧೦ ೪—೦	೧೧-೦-೦
ಕೆಂಬೂತಿ ಅಕ್ಕಿ ಅವಲ್	..	೧೦ ೨-೦	೧೧—೦-೦
,, ಪಾಯಂ	.	೯—೮—೦	೧೦—೮-೦
ಜಾಬ್ರಾನ್ ಅಕ್ಕಿ	..	೯—೪—೦	೧೨—೮-೦
ಸಣ್ಣಕ್ಕಿ ಅವಲ್	..	೧೨-೮—೦	೧೨-೮-೦
,, ಪಾಯಂ	..	೧೧ ೮-೦	೧೧—೮-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೧೧ ೮-೦	೧೦—೭-೦
,, ಪಾಯಂ	..	೧೧—೦—೦	೧೦—೦-೦
ಹೈಗ ರಾಗಿ ಪಲ್ಲಾ ೧ಕ್ಕೆ	..	೪ ೬—೦	೫—೧೦-೦
ಕಾರ್ರಾಗಿ	..	೪—೧೨—೦	೫—೧-೦
ಹೊಳ	..	೪—೪—೦	೭-೦-೦
ಹುಲಸಂದೆ ಪಲ್ಲಾ ೧ಕ್ಕೆ	..	೮—೧೨—೦	೭—೦-೦
ಬಿಳೇ ಅವರೆ	..	೯ ೦-೦	೭—೦-೦
ಹೆಸರು	..	೯ ೮—೦	೯—೦-೦
ಉದ್ದು	..	೭-೧೪ ೦	೮—೮-೦
ಕಡಲೆ	..	೧೦ ೦—೦	೮—೦-೦
ಎಳ್ಳು	..	೧೨ ೮ ೦	೧೦—೭-೦
ಹುರುಳಿ	..	೫—೧೨ ೦	೬—೦-೦
ಹರಳು ೧೨ ಸೇರಿಗೆ	..	೯—೭—೦	೬—೬-೦
ಸೀಗೇಕಾಯಿ ಮಣ ೧ಕ್ಕೆ	..	೨—೪—೦	೨—೦-೦
ಮೆಣಸಿನಕಾಯಿ	..	೪—೨—೦	೩—೪-೦
,, ಪಾಯಂ	..	೩—೧೨ ೦	೩—೦-೦
ಬೆಲ್ಲ ದೊಡ್ಡ ಅಚ್ಚು	..	೭—೪—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	..	೪—೦ ೦	೩—೮-೦
ಹರಳೆಣ್ಣೆ ,,	..	೩—೧೬—೦	೩—೬-೦
ಕೊತ್ತುಂಬರಿ ಪಲ್ಲ ೧ಕ್ಕೆ	.	೫-೧೪—೦	೭—೮-೦
ಸಾಸ್ವೆ ,,	..	೯—೦—೦	೮—೧೦-೦
ಹುಣಸೇ ಹಣ್ಣು	..	೧ ೪—೦	೦—೧೪-೦
,, ಹಳೇದು	..	೦—೧೨—೦	೦—೧೨-೦
ಉಪ್ಪು	..	೧೨-೦—೦	೧೦—೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೫—೩—೦	೪—೭-೦
ತೆಂಗಿನಕಾಯಿ ೧೦೦ ಕ್ಕೆ	..	೫—೦—೦	೩—೮-೦
ಅಡಕೇಕಾಯಿ ಮಣ ೧ಕ್ಕೆ	..	೯—೦—೦	೬—೧೦-೦
ಅಂಬ್ಯಾಳದಕಾಯಿ ಮಣ ೧ಕ್ಕೆ	..	೦—೧೪—೦	೦—೧೦-೦
ಹತ್ತಿ (ಪೇಟೆ) ಕೆಂಪು	..	೧೫—೮—೦	೧೫—೪-೦
,, ,, ಹಸಿರು	..	೧೫-೧೦—೦	೧೫—೯-೦
,, ,, ಗಟ್ಟಿ ಕೊಳ ೧ಕ್ಕೆ	..	೨೬—೦—೦	೨೪—೫-೦
ಲೆಕ್ಕ ಗಟ್ಟಿ ಕೊಳ ೦೦೦ ಕ್ಕೆ	..	೫೨—೦—೦	೫೬—೦-೦

Printed and Published by the Rev W B Tarrwhite the Proprietor and Manager, Wesleyan Mission Press Mysore 12/1/1905

ವೃತ್ತಾಂತ ಪತ್ರಿಕೆ.

REGISTERED M 05

ವರ್ಷ ೧ ಕ್ಕೆ ಮುಪ್ಪು — ಕ್ರಯ ೧ ರೂಪಾಯಿ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಜನವರಿ ತಾರೀಖು ೧೯ ನೇ ಗುರುವಾರ. — ಸಂಚಿಕೆ ೩೨

ನಿಮಗೇ ಗೊತ್ತೇ ಇಲ್ಲವೇ!

ಪ್ರಸಿದ್ಧವಾಗಿವೆ — ಎಲ್ಲರಿಗೂ ಬೇಕಾದದ್ದು

5

ವಿಶೇಷ ರೂಪಿನ ಬಂದಿರುವ ೧೯೦೫ ನೇ ಇಸವಿ ಪಂಚಾಂಗ ಸಹಿತವಾದ ಎಸ್. ಜಿ ಎಸ್ ಪಾಕೆಟ್ ಡೈರಿಗಳು ವರ್ತಕರು, ಕಂಟ್ರಾಕ್ಟುದಾರರು, ದೊಡ್ಡ ಮನುಷ್ಯರು ಮುಂತಾದ ಸಮಸ್ತರಿಗೂ ಅತ್ಯಂತ ಉಪಯೋಗ ಅನೇಕ ವಿಷಯ ಗರ್ಭಿತವಾಗಿಯೂ ಪ್ರತಿಷ್ಠಿತವಾಗಿಯೂ ರೂಲು ಹಾಕಲ್ಪಟ್ಟು ಎಲ್ಲರಿಗೂ ಸಾಧ್ಯವಾಗಿ ಕಡಿಮೆ ಕ್ರಯಕ್ಕೆ ಬಿಕರಿಯಾಗುತ್ತಿವೆ ತರಿಸಿ ನೋಡಿದಲ್ಲಿ ವಿಶದವಾಗುತ್ತೆ.

ಅಂಗ್ಲ ಕನ್ನಡ ಚಿಕ್ಕ ಡೈರಿ ೦—೩—೦ — ಮುಚ್ಚಳ ಕಾಪಿ ಪೆನಸಲ್ ಇಟ್ಟಿರುವ ಪ್ಲಾಪ್ ಡೈರಿಗೆ ೦—೫—೦

ಒಂದೆ ಸಂಬರು ೧೨ ಕಾಪಿ ಒಟ್ಟಾಗಿ ತರಿಸುವವರಿಗೆ ಪೋಸ್ಟು ಚಾರ್ಜಿ ಕಳಿಸಬೇಕಾದ್ದಿಲ್ಲದೆ ಅದೇ ನಂಬರು ೧ ಡೈರಿ ಮುಫ್ತಾಗಿ ಕಳುಹಿಸುವೆವು.

ಸ—ಎಂ ಪಿ ಮಲ್ಲಯ್ಯ, ಕರ್ನಾಟಕ ಬುಕ್ ಡಿಪೋ, ೫೧, ಕಾಲ್ವಾರಸ ಕಚೇರಿ ರೋಡು, ಬೆಂಗಳೂರು ಸಿಟಿ

P. SUBBAROY'S
World Renowned and most Efficacious
Ayurvedic Medicines
ಪಿ ಸುಬ್ಬರಾಯರವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

1

ಲಕ್ಷ್ಮೀ ವಿಲಾಸ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದೊಂದಿಗೆ ೧—೨ ಮಾತ್ರೆಗಳನ್ನು ತಿಂದರೆ, ಬಾಯಿಯ ದುರ್ಗಂಧವೆಲ್ಲ ಹೋಗುವದು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು ಇದರಲ್ಲಿ ಅಷ್ಟೇನೂ ಅಪಾಯಕರವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬಂಗಾರ ಮುಂತಾದ ಅಮೂಲ್ಯವಸ್ತುಗಳು ಸೇರಿರುವದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೩ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ — ೪೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ. ೧ ರಿಂದ ೬ ಸೀಸೆವರೆಗೆ ವಿ ಪಿ ಛಾರ್ಜಿ ೨ ಆಣೆ.



ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಜಬೂಬ್ ಸಮಾಚಾರ

ಕ್ಷಾಮಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ಕಲೆ ನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ ಬೇರೆ ಔಷಧ ಬೇಕಾಗುವದಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರ ನನಗೆ ವಿಶೇಷ ಪ್ರಯೋಜನವಾಗಿರುವುದು —ಪ್ರಸಿದ್ಧರು ಮಿಸ್ಟರ್ ಕಸ್ತೂರಿ

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರಿಗೆ ಉಪಯೋಗಿಸಿ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ಕೃಷ್ಣಯ್ಯಂಗಾರ್, ಕೋರ್ಟ್ ದಿವಾನ್ ಪೇಷ್ಕಾರ್, ಕ್ವಿಲಾನ್.

Apply to —P. SUBBAROY,
Porto Novo, South Arcot.
ವಿಳಾಸ —ಪಿ. ಸುಬ್ಬರಾಯರ್,
ಪೋರ್ಟೋನೋವೋ, ಸೌತ್ ಆರ್ಕಾಟ್ ಜಿಲ್ಲಾ.

ಇದು ಗುಣಕಾರಿ.

24

ಪಾಲ್ಘಾಟ ವೆಂಕಟಾಚಲಪಂಡಿತ, ಶ್ರೀ ಸೀತಾರಾಮ ವೈದ್ಯಶಾಲಾ, ಕೊಳ್ಳೇಗಾಲ ಮತ್ತು ರಾಮಾಪುರ. ಇವರ

೧. ಪ್ಲೇಗು ಪರಿಹಾರ ಔಷಧ —ಈ ಪರಿಯೋಚಕ ಪ್ರತಿಯೊಬ್ಬ ಪ್ಲೇಗು ರೋಗಿಗೂ ಈ ಔಷಧಿಯಿಂದ ಗುಣವಾಗಿದೆ ಧನಾರ್ಜನೆಗಾಗಿ ಪತ್ರಿಕಾಲಂಕಾರವಾಗಿಸಿಲ್ಲ. ಲೋಕೋಪಕಾರದಿಂದ ಕೀರ್ತಿಯನ್ನು ಅಪೇಕ್ಷಿಸಿ, ಬಹು ಧನವ್ಯಯದಿಂದ ಕಂಡುಹಿಡಿಯಲ್ಪಟ್ಟಿತು. ಕೇವಲಾನುಭವದಿಂದ ನಂಬಿಕೆಯಾದ ಔಷಧಿ. ಗಡ್ಡೆಗೆ ಸವರುವ ಔಷಧಿ ಮತ್ತು ಸೇವಿಸುವ ಔಷಧಿ ಸಹಾ—೬ ಜನಕ್ಕೆ ಸಾಕಾಗುವಷ್ಟಕ್ಕೆ ಕ್ರಯ ೫ ರೂ ಒಟ್ಟಿಗಾದರೆ ೧೧। ರೂ. ವಿ ಪಿ ಚಾರ್ಜಿ ಬೇರೆ.

೨. ಕಸ್ತೂರೀ ಮಾತ್ರೆಗಳು —ಮಕ್ಕಳ ಎಳವು, ಜ್ವರಾದಿಗಳು, ಹೆಂಗಸರ ಮುಟ್ಟುಕಟ್ಟು, ಗರ್ಭಸ್ರಾವಾದಿಗಳು, ಎಲ್ಲರ ಜ್ವರ, ವಾತ, ಮೈಕೈ ನೋವು, ಜ್ವರದಗೆಡ್ಡೆ ಮೊದಲಾದ ೨೦ ರೋಗಗಳು ಗುಣವಾಗುತ್ತೆ ಅನುಪಾನ ಪತ್ರದಲ್ಲಿ ಎಲ್ಲಾ ಕಾಣೋದು. ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ. ೧ ರಿಂದ ೬ ರ ವರೆಗೆ ಛಾಂಗಿಛಾರ್ಜಿ ೨ ಆಣೆ ೬ ಸೀಸೆಗೆ ೧ ಸೀಸೆ ಹೆಚ್ಚು ಕೊಡುವೆವು.

೩. ಬಾಲಾಮೃತ —ಎಲ್ಲಾ ಬಗೆ ತಲೆ ನೋವು, ವಾಯುಗಳು, ಉಳುಕು, ಛಳುಕು, ಕೂಡ ಒಡನೇ ಗುಣವಾಗುತ್ತದೆ ಡಬ್ಬಿ ೧ಕ್ಕೆ ಕ್ರಯ ೮ ಆಣೆ ೬ ಡಬ್ಬಿಗೆ ೧ ಡಬ್ಬಿ ಹೆಚ್ಚು ದೊರೆಯುತ್ತೆ.

೪. ದಂತಸಿತಚೂರ್ಣ —ಉಪಯೋಗಿಸಿ ಬೇಕಾದರೆ ಹಲ್ಲಿನ ನೋವು, ರಕ್ತಸೋರುವುದು, ಬಾಯಿನಾತ, ಎಲ್ಲಾ ಬಗೆಯ ಹಲ್ಲು ನೋವು ಹೋಗುತ್ತದೆ ಡಬ್ಬಿಗೆ ೪ ಆಣೆ, ೪ ಡಬ್ಬಿಗೆ ೧ ಹೆಚ್ಚು

ಏಜಂಟರು —೧. ಕೆ ಎಸ್ ಕೃಷ್ಣಶಾಸ್ತ್ರಿಗಳು, ಹಳ್ಳದಬೀದಿ, ಮೈಸೂರು. ಅಥವಾ,

೨. ಜೆಟ್ ಎಸ್ ರಾವ್ ಅಂಡ್ ಬ್ರದರ್ಸ್, ಬೆಂಗಳೂರು ಸಿಟಿ.

ಸನ್ ೧೯೦೫ನೇ ಇಸವಿಯ

1

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಖಷ್‌ಬಾಪ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕಾಂಪತಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ ಸ್ಟಾಂಪು ರಿಜಿಸ್ಟರ್ ಫೀಸುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ವಿಮಾನಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನೆಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳಪಟ್ಟಿ, ದೋಬಿಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ ರೂಲು ಹಾಕಿದೆ, ಕೀಮೆ ಸಂವರ್ಗ್ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ

ಎ ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರ್ ದೊಡ್ಡಸೈಜು ೬ ಆ
ಎಫ್ ,, ,, ೪ ಎಚ್. ,, ,, ೭ ,,
ಬಿ ಮುಚ್ಚಳದ್ದು ,, ೫ ಡಿ. ಮುಚ್ಚಳದ್ದು ,, ೮ ,,

ಪೋಸ್ಟು ಚಾರ್ಜಿ ಬೇರೆ. ಒಂದೇ ಸಮೂನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ.—ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ, ಶ್ರೀ ಕೃಷ್ಣ ವಿಳಾಸ ಪ್ರೆಸ್, ಮೈಸೂರು

ಪ್ರಪಂಚದಲ್ಲಿ ದೊಡ್ಡದು ಯಾವದು?

7

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿರುವರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ ಇದರ ಕ್ರಯ ೧೨ ಆಣೆ, ವಿ ಪಿ. ಮೂಲಕ ೧೪ ಆಣೆ.

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ರಸಾದ ಪಲವೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪ "ರೋಮನರ ಚರಿತ್ರೆ" ಕ್ರಯ ೦—೬—೦
೫. "ಗ್ರೀಕರ ಚರಿತ್ರೆ" ,, ೦—೨—೦
೬. "ಅನುಭವಾನಂದ." ,, ೦— —೦
೭ "ಗಣಿತ ಸಂಜೀವಿನಿ" ೦—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ" ೦—೧೬—೦
೧೦. "ಹಿಂದೂ ಧರ್ಮಶಾಸ್ತ್ರ (೮) ಸಂಗ್ರಹ." ೦—೧೬—೦
೧೧ "೧೯೦೫ನೇ ವರುಷದ ಡೈರಿಗಳು"
ಫ್ಲಾಪ್, ಪೆನಸಿಲ್ ಸಹಿತ ೦—೬—೦, ಸಾದಾ ೦—೪—೦

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು

ಶ್ರೀ ತಾಂಬೂಲ.

10

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಪಿತ್ತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೪೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರಿಗೆ ವಿ. ಪಿ. ಛಾರ್ಜಿ ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಟವರ್, ಬೆಂಗಳೂರು ಸಿಟಿ — ಯಂ. ಗೋವಿಂದಶೆಟ್ಟಿ

೧೯೦೫ನೇ ವರ್ಷದ ಬೋವರ್ ಸಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

4

ಜನವರಿ ತಾ. ೧೦ ರೊಳಗೆ ಸಿದ್ಧವಾಗುತ್ತೆ. ಪ್ರಶ್ನೋತ್ತರ ಸಹಿತ. ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷೆಗಳಿಗೆ ತಕ್ಷಣ ಜವಾಬನ್ನು ಪುಸ್ತಕವನ್ನು ಕಳುಹಿಸಲು ಸರಿಯಾದ ಏರ್ಪಾಡು ನಡೆದಿದೆ.

ಬಾಲಬೋಧದ (ಮೈಸೂರು ಸಂಸ್ಥಾನ) ಭೂವಿವರಣ —ಈಗ ೩ನೇ ಸಲ ತಿದ್ದಿ ಮುದ್ರಿಸಿದೆ. ಆದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ—೧ ಆಣೆ. ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈವರೆಗೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನುಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೩ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧॥ ಆಣೆ

ವಿಳಾಸ.—ಯಾ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ ಮೈಸೂರು.

ನೋಟೀಸು.

2

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಸುವುದೇನೆಂದರೆ.—

೧೯೦೫ನೆ ಜನವರಿ ೧೫ನೇ ತಾರೀಖು ಲಾಗಾಯಿತು ಇನ್ನೊಂದು ಹುಕುಂ ಕೊಡುವ ಪರಿಯಂತರ ನಾಯಿಗಳ ಬಾಯಿಯನ್ನು ಕಟ್ಟಬೇಕು ಮತ್ತು ಅವರ ಯಜಮಾನರ ಮನೆಯ ಆವರಣದ ಹೊರಭಾಗದಲ್ಲಿ ಪೋಲಿಯಾಗಿ ತಿರುಗುವ ನಾಯಿಗಳು ಕೊಂದುಹಾಕಲ್ಪಡುತ್ತೆ. ನಾಯಿಗಳನ್ನು ಬಂದೋಬಸ್ತಾಗಿ ಕಟ್ಟಿಹಾಕಿ, ಬಾಯಿಕಟ್ಟು ಇಟ್ಟುಕೊಳ್ಳಬೇಕೆಂದು ಕೋರಿಯಿದೆ.

ಮೈಸೂರು ಸಿಟಿ ಮುನಿಸಿಪಲ್ ಆಫೀಸ್, ತಾ॥ ೩—೧—೧೯೦೫.	C. VENKATA RAO, Vice President

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುತೇವೆ.

ಇದಲ್ಲದೆ ಕನ್ನಡ ಅಕ್ಷರಗಳು—ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಟೆನ್ನು ಕ್ವಾಡ್ಸು ಮೊಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ಸಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ —ಮ್ಯಾನೇಜರ್,
ಮಿಷನ್ ಪ್ರೆಸ್ ಮೈಸೂರು.

ಸುಲಭಕ್ರಯ, ಸುಗಂಧದ್ರವ್ಯಗಳು.

ಅಂಬರ್ ಕಡ್ಡಿ ಸೇರು ೧ಕ್ಕೆ	೬—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	೩—೮—೦
ಪುನುಗು ಕಡ್ಡಿ ,, ೧ಕ್ಕೆ	೩—೦—೦
ಮಸಾಲಾ ಕಡ್ಡಿ ,, ೧ಕ್ಕೆ	೦—೧೩—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ	೦—೧—೬
ಪಚ್ಚೆ ಗಂಧ ತೋಲ ೧ಕ್ಕೆ	೩—೦—೦
ಡಿಟೋ	೦—೧೩—೦
ಸಾಬುಮಾಡ್ಡಿ ಗಟ್ಟಿ ೧ಕ್ಕೆ	೦—೩—೦
ತಾಂಬೂಲ ವಿಹಾರಿಕ ಡಬ್ಬಿ ೧ಕ್ಕೆ	೦—೨—೦
ಕೇಶೊಲ್ಲಾಸಿನಿ ಶೀಶೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ	೦—೩—೦
ಪನ್ನೀರು ಶೀಸೆ ೧ಕ್ಕೆ	೦—೯—೦
ಶಂಬಾಕ್ ಪೋಕ್ ಡಬ್ಬಿ ೧ಕ್ಕೆ	೦—೩—೦
ಶ್ರೀವೈಷ್ಣವ ಶಾಸ್ತ್ರೀಯ ದಶಾಂಗ ಸೇರು ೧ಕ್ಕೆ	೦—೧೩—೦
ಫಿಕ್ಸಾ ತೋಲ ೧ಕ್ಕೆ	೩—೦—೦
ಡಿಟೋ	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ —ಬಿ ಎಲ್. ಉಪಾಧ್ಯಾಯ ಅಂಡ್ ಕೋ,
ಸುಗಂಧಶಾಲಿ, ಮೈಸೂರು.

ಚೇಂಬರ್ಲೇನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

3



ಶೀತ, ಕೆಮ್ಮು, ಗಂಟಲು ಗೂರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಾಣಪ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಿಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಉಪೇಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಬಾಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ, ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಚನ್ನಪಟ್ಟಣದ ನೋಟೀಸ್

ಚನ್ನಪಟ್ಟ ತಾಲ್ಲೂಕು ವಿರೂಪಾಕ್ಷಪುರದ ಹೋಬಳಿ ಸರ್ಕಾರ ಮೂಕ್ಯ ಸೋಗಾಲ ಗ್ರಾಮದ ಪಂಡಿತ ಹಲಗ್ಯೆಯನ ದತ್ತುಮಗ ರಾಮೈಯ್ಯ ತಿಳಿಯಪಡಿಸುವದೇನೆಂದರೆ —ಸೋಗಾಲ ಗ್ರಾಮದಲ್ಲಿರುವ ಸರ್ವೆ ನಂಬರು ೧೫೯—೭೭—೧೫೮ನೆ ಖುಷ್ಕಿ, ಬಾಗಾಯತು, ತರಿ ಜಮೀನುಗಳ ಪೈಕಿ ನನ್ನ ಚಿಕ್ಕಪ್ಪ ದೊಡ್ಡಪ್ಪ ಇವರ ಹಿಸ್ಸೆ ಜಾತಾ ನನ್ನ ತಂದೆಯ ಭಾಗಕ್ಕೆ ಬಂದ ಪಿತ್ರಾರ್ಜಿತ ಜಮೀನುಗಳು ಮತ್ತು ಮನೆ ಸಹಾ ನನ್ನ ಬಲತಾಯಿ ಮಲಗಮ್ಮ. ಮುದ್ದುಬೀಮ ವಗ್ಯೆರೇರು ನನ್ನ ತಂದೆಗೆ ದ್ರೋಹಬುದ್ಧಿಯಿಂದ ನನಗೆ ಮೋಸಪಡಿಸಲು ಮೇಲ್ಕಂಡ ಸ್ವತ್ತುಗಳನ್ನು ಕ್ರಯ ವಗ್ಯೆರೆ ಮೂಲಕ ಪರಾಧೀನ ಪಡಿಸುವದಾಗಿ ವರ್ತಮಾನವಿದೆ. ನಾನು ಮೈನರಲ್ಲ. ಈ ಸ್ವತ್ತುಗಳನ್ನು ನನ್ನ ತಾಯಿಯಿಂದ ಇತರರು ಕ್ರಯ ವಗ್ಯೆರೆ ಮೂಲಕ ತೆಗೆದುಕೊಂಡಲ್ಲಿ ಅಂಥಾವರು ಸ್ವತ್ತುಗಳ ಹಕ್ಕು ಮತ್ತು ಮೊಬಲಗು ಸಹ ಪಡೆಯಲು ಅರ್ಹರಾಗುವದಿಲ್ಲ ಆದಕಾರಣ ಈ ಸ್ವತ್ತುಗಳ ಮೇಲೆ ಆಗಲಿ ಇತರ ವಿಧದಿಂದಲಾಗಲಿ, ನನ್ನ ತಂದೆಗೆ ಯಾರೂ ಸಾಲ ವಗ್ಯೆರೆ ಕೊಡಕೂಡದು ನಮಗೆ ದೊಡ್ಡ ಜವರಾಯಿಗೌಡ್ರು ವೆಂಕಟೇಶ್ಯೆಯನವರು ಇವರಲ್ಲಿ ೧೪೦ ರೂಪಾಯಿ ಮಾತ್ರ ಸಾಲವಿದೆ ಮತ್ಯಾರಲ್ಲಿಯೂ ದೇಣೆ ವಗ್ಯೆರೆ ಇಲ್ಲ. ತಾ. ೭—೧—೧೯೦೫ನೆ ಇಸವಿ

(ಸೈ) ಹಲಗ್ಯೆಯನ ದತ್ತುಮಗ ರಾಮೈಯ.

ವೃತ್ತಾಂತ ಪತ್ರಿಕೆ

ಸನ್ ೧೯೦೫ ನೇ ಇಸವಿ ಜನವರಿ ತಾ॥ ೧೯ ನೇ ಗುರುವಾರ

ವಿದ್ಯಾವಂತರ ಕಾರ್ಯಾಕಾರ್ಯಗಳು.

ಕಲ್ಕತ್ತಾ ಪಟ್ಟಣದಲ್ಲಿ ಬಹಳ ಪ್ರಸಿದ್ಧಿಗೆ ಬಂದಿದ್ದ ದೊಡ್ಡ ವಕೀಲನಾದ ಕೋಲೀ ಎಂಬಾತನು ಬಹು ಕಕ್ಷಿಗಾರರ ಹಣದಲ್ಲಿ ಸುಮಾರು ಎರಡು ಲಕ್ಷ ರೂಪಾಯಿ ತನಕ ತಿಂದು ಹಾಕಿ ದುಂದುಮಾಡಿದನು. ಅವನು ಮಾಡಿದ ಮೋಜುಪ್ರವಕ್ಕೆ ಅವನು ಮಾಡಿದ ಉಪಾಯಗಳೂ ಮೋಸಕೃತ್ಯಗಳೂ ಅಷ್ಟಿಷ್ಟಲ್ಲ. ಆದರೂ ಸರ್ಕಾರದವರು ಅವನನ್ನು ಹಿಡಿದು, ವಿಚಾರಣೆ ಮಾಡುವಲ್ಲಿ, ಅವನು ತಾನು ಮಾಡಿದ ಅಕೃತ್ಯವನ್ನೆಲ್ಲಾ ವಿವರಿಸಿ, ಜಡ್ಜಿಗಳ ಕ್ಷಮಾಪಣೆಯನ್ನು ಬೇಡುವಂತೆ ತನ್ನ ವಕೀಲನಿಗೆ ತಿಳಿಸಿದನು ಜಡ್ಜಿಗಳು ಈ ಮೋಸಕೃತ್ಯ ನಡಿಸಿದ ಮನುಷ್ಯನಿಗೆ ಆರು ವರುಷ ಕಠಿಣ ಸಜಾ ವಿಧಿಸಿದರು.

ಈಗಿನ ಕಾಲದಲ್ಲಿ ವಿದ್ಯಾವಂತರಾದ ದೇಶೀಯ ದೊಡ್ಡ ಮನುಷ್ಯರ ಕಾರ್ಯಕಲಾಪಗಳು ತೃಪ್ತಿಕರವಾಗಿ ಕಾಣುವುದಿಲ್ಲ. ದೊಡ್ಡಸ್ತಿಕೆಯನ್ನು ಉಳಿಸಿಕೊಳ್ಳಬೇಕೆಂಬ ಅಭಿಪ್ರಾಯದಿಂದ ನಾನಾ ದುರಭ್ಯಾಸಗಳಲ್ಲಿ ಬಿದ್ದು ಅಪಾರವಾದ ದ್ರವ್ಯವನ್ನು ಕಳೆಯುವರು. ಜೂಜಾಡುವುದೂ ಮದ್ಯಪಾನ ಮಾಡುವುದೂ ದುರ್ವ್ಯಾಪಾರಗಳಲ್ಲಿ ಕಾಲವನ್ನು ಕಳೆಯುವುದೂ ಅಸದೃಶವಲ್ಲ. ಇಂಥವರಿಗೆ ದಣವಿಲ್ಲದ ಸಿಕ್ಕೀತು " ಮಹಾಪುರುಷರಿಗೇ ಮುಖ್ಯ ಶಕ್ತಿ ರಹಿತರಲ್ಲವೇ " ಕಕ್ಷಿಗಾರರನ್ನೂ ಪ್ರಜೆಗಳನ್ನೂ ಸರ್ಕಾರದವರನ್ನೂ ನಾನಾ ಪ್ರಕಾರವಾಗಿ ವಂಚಿಸಿದ ಹೊರತು ಇವರ ಮದಗಳಿಗೆಲ್ಲಾ ಹಣ ಒದಗುವುದಿಲ್ಲ ಇಂಥಾ ಮೋಸಕೃತ್ಯಗಳನ್ನು ಮಾಡಿ, ಅಂತರಂಗದಲ್ಲೇ ಅವುಗಳು ಬಯಲಾಗದಂತೆ ಸಾಧಿಸಬಹುದೆಂಬ ನಂಬಿಕೆಯು ಅಪರೂಪವಲ್ಲ. ಇಂಥಾ ಮೋಸಗಾರರಾದ ದೊಡ್ಡ ಮನುಷ್ಯರನ್ನೂ ಅವರ ಕಾರ್ಯಗಳನ್ನೂ ಇತರ ಸ್ತ್ರೀಗಳು ನೋಡುವಾಗ ಇವರಿಗೆ ಎಂಥಾ ಮೇಲ್ಪಂಕ್ತಿ ಆಗುವುದು" ಎಂದು ಜನಗಳು ಸಚ್ಚರಿತ್ರರಾಗಬೇಕಾದರೆ ಅವರ ವಿದ್ಯೆ ಇದ್ದರೆ ಸಾಲದು ತ್ರಿಕರಣಶುದ್ಧರಾಗಿ ಇರಬೇಕಾದುದು ಅತ್ಯವಶ್ಯಕ. ಆದಕಾರಣ ದೊಡ್ಡ ಮನುಷ್ಯರು ತಮ್ಮ ಸ್ಥಾನಕ್ಕೂ ಗೌರವಕ್ಕೂ ಯೋಗ್ಯವಾದ ನಡತೆಯನ್ನೇ ಅನುಸರಿಸುವವರಾಗಬೇಕು.

ಮೈಸೂರು ಪುರಾಣ

ಬರೆದು ಬಂದುದು

ಸುಮಾರು ೧೪ನೆಯ ಶತಕದಲ್ಲಿ ಯದುರಾಯರೆಂಬುವರು ಇಲ್ಲಿಗೆ ಬಂದು, ನಂಜನಗೂಡಿನ ಬಳಿಯಲ್ಲಿರುವ ಹದಿನಾಡು ಗ್ರಾಮದಲ್ಲಿ ಈ ರಾಜ್ಯವನ್ನು ಸ್ಥಾಪಿಸಿದರು ಕಾಲಚಕ್ರದ ಗತಿಗನುಸರಿಸಿ ರಾಜಧಾನಿಯು ಶ್ರೀರಂಗಪುರ ಎಂಬ ಗ್ರಾಮಕ್ಕೆ ಹೋಯಿತು ಅದೇ ಸ್ಥಳದಲ್ಲಿ ಈಗ ಮೈಸೂರು ಪಟ್ಟಣವಿದೆ. ಇದಕ್ಕೆ ಮೊದಲು ಮಹಿಷಾಸುರನ ಪುರವೆಂಬ ನಾಮಧೇಯವಿತ್ತೆಂದು ತಿಳಿಯುತ್ತೆ. ... ಮೈಸೂರು, ಈ ಪ್ರಕಾರ ಹೆಸರುಗಳು ಬಂದಿರುವದೆಂತಲೂ ಕೆಲಕೆಲವರು ಪ್ರತಿಪಾದಿಸುತ್ತಾರೆ ... ಇರಲಿ, ... ಒಬ್ಬ ಅರಸನ ಕಾಲದಲ್ಲಿ ಮಹಿಶೂರ ಎಂಬ ಅನ್ವರ್ಥಕ ನಾಮವುಂಟಾಗಿ ಬರಬರುತ್ತ "ಮೈಸೂರು" ಎಂಬ ಹೆಸರುಂಟಾಗಿರಬಹುದೆಂದು ತೋರುತ್ತದೆ.

ಬಹು ಪುರಾತನ ಕಾಲದಿಂದ ಇದು ರಾಜಧಾನಿಯ ಸ್ಥಳವಾದ್ದರಿಂದ ಆಯಾ ಕಾಲದ ಅರಸರು ನಗರವನ್ನು ಶೃಂಗರಿಸುವದರಲ್ಲಿ ತಮ್ಮ ವೇಳೆಯನ್ನೂ ದ್ರವ್ಯವನ್ನೂ ವೆಚ್ಚಮಾಡುತ್ತಾ ಬಂದಿದಾರೆ ಆದ್ದರಿಂದ ರಾಜಬೀದಿಗಳು ವಿಶಾಲವಾಗಿಯೂ ಸ್ವಚ್ಛವಾಗಿಯೂ ಇರುತ್ತವೆ ರಮ್ಯವಾಗಿಯೂ ಸುಂದರವಾಗಿಯೂ ಇರುವ ಎರಡು ಮೂರು ಅಂತಸ್ತುಗಳನ್ನು ಎಲ್ಲಾ ಭಾಗಗಳಲ್ಲಿ ನೋಡಬಹುದು. ಈ ಪ್ರಕಾರವು ಅಂದರೆ ಸುಣ್ಣ ಬಣ್ಣ ಕಾರಣಗಳಿಂದ ಅಲಂಕರಿಸಿದ ಮಂದಿರಗಳ ಬಾಹ್ಯ ಪ್ರದೇಶಗಳು ಎಷ್ಟು ಬಣ್ಣದಿಂದ ಬರೆದ ಚಿತ್ರಪಟದಂತೆ ಒಪ್ಪುವದು. ಸಾರಾಂಶವೇನೆಂದರೆ —ನಮ್ಮ ದಕ್ಷಿಣ ಮಹಾರಾಷ್ಟ್ರ ಪ್ರಾಂತ್ಯದಲ್ಲಿ ಇಂಥ ಸೊಬಗಿನ ಇನ್ನೊಂದು ಪಟ್ಟಣವು ನಮ್ಮ ಕಣ್ಣಿಗೆ ಬೀಳುವ ಹಾಗೆ ಇಲ್ಲ ಇಂಗ್ಲಿಷ್ ಅಧಿಕಾರಿಗಳು ಈ ನಗರಕ್ಕೆ ಬಂದಾಗ ಅವರವರ ಹೆಸರುಗಳ ಜ್ಞಾಪಕಕ್ಕಾಗಿ ಹೊಸದಾಗಿ ಸ್ಥಾಪಿಸಿದ ಕೆಲವು ರಾಜಮಾರ್ಗಗಳಿಗೆ "ಕರ್ಜನ್ ಪಾರ್ಕ, ಪ್ರಿನ್ಸ ವಿಕ್ಟರ್ ರೋಡ್" ಎಂದು ಹೆಸರುಗಳನ್ನು ಕೊಟ್ಟಿದಾರೆ.

ಈ ಪಟ್ಟಣದ ಒಂದು ಭಾಗದಲ್ಲಿ ಕೋಟೆಯುಂಟು ಅದರ ಮಧ್ಯದಲ್ಲಿ ಅರಮನೆಯೂ ರಾಜ ಬಂಧುಬಾಂಧವರ ಮನೆಗಳೂ ಉಂಟು ಹಳೆ ಅರಮನೆಯು ಒಂದು ಭಾಗವು ಕೆಲವು ದಿವಸಗಳ ಹಿಂದೆ ಆಕಸ್ಮಿಕ ಸುಟ್ಟು ನಾಶವಾದ್ದರಿಂದ ಈಗ ಹೊಸ ಅರಮನೆಯನ್ನು ನೂತನ ಪದ್ಧತಿಗನುಸರಿಸಿ ಕಟ್ಟಿಸುವ ಕೆಲಸವು ಕಳೆದ ೩—೪ ವರ್ಷಗಳಿಂದ ನಡೆಯುತ್ತ ಬಂದಿದೆ. ಸದ್ಯಕ್ಕೆ ಈ ಕಟ್ಟಡದ ಖರ್ಚಿಗಾಗಿ ೫೦ ಲಕ್ಷ ರೂಪಾಯಿಗಳ ಮಂಜೂರು ಮಾಡಿದ್ದಾರೆ ಈ ಕೆಲಸಕ್ಕೆ ಬೇಕಾದ ಕುಶಲರಾದ ಶಿಲ್ಪಿಗರನ್ನು ಮಿರಜ, ಕೊಲ್ಹಾಪುರ, ಸಾಂಗಲಿ, ಜಯಪುರ ಮುಂತಾದ ಸಂಸ್ಥಾನಗಳಿಂದಲೂ ಆಗ್ರಾ, ದಿಲ್ಲಿ, ಲಖನೌ ಮದರಾಸು, ಮುಂಬೈ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಿಂದಲೂ ಕರೆಸಿಕೊಂಡಿದಾರೆ. ಹೊಸದಾಗಿ ಕಟ್ಟುತ್ತಿರುವ ಈ ಅರಮನೆಯು ಉದ್ದಳತೆಯು ೨೫೦ ಅಡಿಗಳು ಅಗಲ ೧೫೦ ಅಡಿಗಳು, ಎತ್ತರವು ೧೪೦ ಅಡಿಗಳು, ಇದರಲ್ಲಿ ೩ ಅಂತಸ್ತುಗಳ ಸಮಾವೇಶವಾಗುವದು. ಕಂಬ, ತೊಲೆ, ಜೋಡಿಗೆ, ಕಮಾನು, ಸಾಳುವೆ, ಗವಾಕ್ಷಿ, ಮುಂತಾದವುಗಳನ್ನು ಮಾಡುವದಕ್ಕೆ ಬೇಕಾಗುವ ತರತರದ ಶಿಲೆಗಳನ್ನು ತಮ್ಮ ರಾಜ್ಯದೊಳಗಿಂದಲೇ ಆರಿಸಿ ತಂದು ಸಂಗಮರವರಿ, ಬಿಳಿಯ ಕಲ್ಲುಗಳನ್ನು ಉತ್ತರ ಹಿಂದೂಸ್ಥಾನದಿಂದಲೂ ವಿಲಾಯತಿಯಿಂದಲೂ ತರಿಸಿದ್ದಾರೆ. ಕಟ್ಟುವ ಕೆಲಸಕ್ಕೆ ಸಾಧನಭೂತವಾದ ಯಂತ್ರಗಳನ್ನೂ ಕಬ್ಬಿಣ ಬಿಡುಗಳ ಕಂಭ, ಕಟಾಂಜನಗಳನ್ನು ವಿಲಾಯತಿಯಿಂದಲೇ ತರಿಸಿದ್ದಾರೆ. ರಾಜಗೃಹದ ಮುಂಭಾಗದಲ್ಲಿ

...ಕಂಚು, ಗಡ್ಡಿಗೆ, ಬೋಗುಣಿ, ಚಿತ್ರವಿಚಿತ್ರವಾದ ಸುಳುವುಗಳು, ...ರಾಣೀಕ ದೇವತೆಗಳ ಗೊಂಬೆಗಳು, ದಶಾವತಾರದ ಗೊಂಬೆಗಳು, ಇವುಗಳನ್ನೆಲ್ಲ ಕೊರೆದು, ಕಟೆದು, ಸುಬುದ್ಧವಾಗಿ ಒಪ್ಪ...ತ್ತಿರುವ ಕುಶಲರಾದ ನಮ್ಮ ದೇಶೀಯ ಕಾರೇಗಾರರನ್ನು ನೋಡಿ ನನಗೆ ಬಲು ಸಂತೋಷವಾಯಿತು. ಪಕ್ಷತೆಯಿಂದಲೂ ...ಚಾತುರ್ಯದಿಂದಲೂ ಅರಮನೆಗೆ ಬೇಕಾದ ಉಪಕರಣಗಳನ್ನು ...ರವಾಗಿ ಮಾಡುತ್ತಿರುವ ನಮ್ಮ ದೇಶೀಯ ಜನಗಳನ್ನು ನೋಡಿ ...ಮಾನ ಹೊಂದದ ಅಧಮನು ನಮ್ಮ ದೇಶದಲ್ಲಿರಲಾರನು.

ಎರಡನೆಯ ಅಂತಸ್ತಿನಲ್ಲಿ ಕೈಗಾರಿಕೆಯ ಸೂಕ್ಷ್ಮ ಕೆಲಸಗಳು ...ಯುತ್ತಿದ್ದವು. ಶಂಖ, ದಸ್ತಿದಂತ ವಿಧವಿಧ ಬಣ್ಣದ ಕಲ್ಲು, ...ಗಸುರವರೀ ಕಲ್ಲು ಮುಂತಾದವುಗಳನ್ನು ಚದುರದ ಆಕಾರಗ...ಗಿ ಕತ್ತರಿಸಿ, ಮಾಬು ಮಂಟಪದ ಕಮಾನುಗಳಲ್ಲಿಯೂ ಅಡ್ಡ ...ಟ್ಟಗಳಲ್ಲಿಯೂ ಸೇರಿಸಿ ಒಪ್ಪುವಂತೆ ಮಾಡುತ್ತಿದ್ದರು. ಆಗ್ರಾ ...ಟ್ಟಣದ ಕೆಲವರು ಶಿಲ್ಪಿಗರು. ಮೊಗಲಾಯ ಬಾದಶಹರುಗಳಿಂದ ...ಲ್ಪಟ್ಟ, ಜಗತ್ಪ್ರಸಿದ್ಧವಾದ ತಾಜಮಹಲ್, ಡಿಲ್ಲೀ ಅರಮನೆಗ...ಳ ಮಾದರಿಗಾಗಿ ಸಂಗಮರವರೀ ಶಿಲೆಗಳಿಂದ ರಚಿಸಿದ ಸಣ್ಣ ...ಣ್ಣ ಮಾದರಿಯ ಮಂದಿರಗಳು ಪ್ರೇಕ್ಷಕರ ಚಿತ್ತಾಕರ್ಷಣವನ್ನು ...ಡಿ, ಅವರನ್ನು ತಮ್ಮಂತೆ ಸ್ತಬ್ಧವಾಗಿ ನಿಲ್ಲುವಂತೆ ಮಾಡುತ್ತಿದ್ದವು. ಇವುಗಳ ನೆರೆಯಲ್ಲಿಯೇ ಇದ್ದ ಒಂದು ಬಾಲ ಗೋಪಾಲ ...ಮೂರ್ತಿಯು ಶ್ರೀ ಬಾಲಗೋಪಾಲನ ಸೌಂದರ್ಯವನ್ನೇ ಧರಿ...ತು. ಇವನ್ನೆಲ್ಲ ನೋಡುತ್ತ ಅರಮನೆಯ ಒಂದು ಭಾಗವಾದ "...ಬಾವಿಲಾಸ" ವೆಂಬ ಮಂದಿರವನ್ನು ಸೇರಿದೆವು. ಅರಮನೆಗ...ನ್ನೂ ಎಂದೂ ನೋಡದ ನನಗೆ ಈ ಮಂದಿರವು ಜಗತ್ತಿಗೆ ...ಯಮಾದ ಅಂದಿಯ ವಿಲಾಸದ ಮಂದಿರವೋ ಏನೋ ಎಂಬಂತೆ ...ಸವಾಯಿತು. ಒಂದು ಕಡೆಗೆ ಇಟ್ಟಿದ್ದ ಗೋಪೀವಸ್ತ್ರಾಪಹಾರ...ನಾದ ಶ್ರೀ ಕೃಷ್ಣನು ಕದಂಬವೃಕ್ಷವನ್ನೇರಿ ಕೂತಂತೆಯೂ ...ಸ್ತ್ರಹೀನರಾದ ಗೋಪಿಕಾಸ್ತ್ರೀಯರು ಶ್ರೀ ಪರಮಾತ್ಮನನ್ನು ...ಸೆ...ಕ್ಕಾಗಿ ಬೇಡಿಕೊಳ್ಳುತ್ತಿರುವಂತೆಯೂ ರಚಿಸಿದ ಗಂಧ...ದ ಪ್ರತಿಮೆಯನ್ನು ನೋಡಿ ಆಶ್ಚರ್ಯವಾಯಿತು. ಬೀಡೇ...ಟ್ಟಿಗೆಯ ಟ...ಟ್ಟನಲ್ಲಿ ಹಸ್ತಿದಂತದ ಸುರುಳಿಗಳನ್ನು ಕೊರೆದು ...ದಿಂದ ಅವು ಬಹು ಸರಸವಾಗಿ ಕಂಗೊಳಿಸುತ್ತವೆ. ಗಂಧದ ...ಟ್ಟಿಗೆ, ಹಸ್ತಿದಂತಗಳಿಂದ ನಿರ್ಮಿಸಲ್ಪಟ್ಟಿರುವ ವಿಧವಿಧ ಪ್ರತಿಮೆ...ಗಳನ್ನು ಅಲ್ಲಲ್ಲಿ ಹಾಗೇ ಇಟ್ಟಿರುವರು. ಯಾಕೆಂದರೆ ತಕ್ಕಸ್ಥಳ...ದಲ್ಲಿ ಇರಿಸುವದಕ್ಕೆ ಕಟ್ಟುವದ ಕೆಲಸವು ಇನ್ನೂ ಸಂಪೂರ್ಣವಾ...ಗಿಲ್ಲ. ನೆಲಮಾಳಿಗದಲ್ಲಿ ಸುಳುವು, ಚಿತ್ರಗಳನ್ನು ನಾನಾಪ್ರಕಾರದ ...ಣ್ಣಗಳಿಂದ ಬರೆದ ಕನ್ನಡಿಗಳನ್ನು ಪ್ರೌಢವಾದ ಅರ್ಧ ಗೋಲಾ...ಕಾರವಾಗಿ ಜೋಡಿಸಿದ್ದಾರೆ. ತಾತ್ಪರ್ಯವೇನೆಂದರೆ—ಈ ಅಂಬಾ...ವಿಲಾಸ ಮಂದಿರವನ್ನು ನೋಡಲು "ನಿಂಬರತ್ನಗಳಿಂ" ಎಂಬೀ ...ಕ್ಯದಲ್ಲಿ ಮಾಡಿದ ಅರಮನೆಯು ಯಥಾರ್ಥವಾಗಿರಬಹುದೆಂದು ...ಭಾಸವಾಗುತ್ತದೆ.

ಮೈಸೂರು ಗೆಜೆಟ್ ಸಂಗ್ರಹ.

ಗವರ್ನಮೆಂಟ್ ಡಿಪ್ಟಿ ಸೆಕ್ರಟರಿ ಮ॥ ಕೆ. ಎಚ್. ಚಂದ್ರಶೇ...ಖರಯ್ಯನವರು ಇತರ ಡ್ಯೂಟಿಯ ಮೇಲಿರುವಾಗ್ಗೆ ಆ ಸೆಕ್ರಟರಿ ಮ॥ ಎಂ ರಾಮರಾಯರು ಗವರ್ನಮೆಂಟ್ ಡಿಪ್ಟಿ ಸೆಕ್ರಟರಿಯಾಗಿ ...ಸ ನೋಡತಕ್ಕದ್ದು.

ರೆಜಿಸ್ಟ್ರಾರ್ ಮ॥ ಡಿ. ಎಂ. ನರಸಿಂಗರಾಯರು ಡೆಪ್ಯುಟೇಷನ್ ...ಲೆಸದ ಮೇಲೆ ಹೋಗಿರುವ ಕಾಲದಲ್ಲಿ ಫೈನಾನ್ಷಲ್ ಬ್ರಾಂಚ್ ...ನ ಸೆಕ್ರಟರಿ ಮ॥ ಎಂ ಎನ್. ಕೃಷ್ಣರಾಯರು ರೆಜಿಸ್ಟ್ರಾರ್ ಕೆಲ...ಸಗಳನ್ನು ಚಲಾಯಿಸತಕ್ಕದ್ದು, ಅಲ್ಲದೆ ಆ ಕಂಟ್ರೋಲರ್ ಮ॥ ...ರಾಜ ಚಟ್ಟಿಯವರು ಫೈನಾನ್ಷಲ್ ಬ್ರಾಂಚ್ ಆ ಸೆಕ್ರಟರಿ...ಯಾಗಿ ಕೆಲಸ ನೋಡತಕ್ಕದ್ದು.

ಆ ಸರ್ಜನ್ ಮತ್ತು ಬೆಂಗಳೂರು ಸಿಟಿ ಹೆಲ್ತ್ ಆಫೀಸರ್ ಮ॥ ...ಪಲ್ಲಿಯವರಿಗೆ ಕ್ರಿಸ್‌ಮಸ್ ರಜಾವಿನೊಂದಿಗೆ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರೂ ಪ್ಲೇಗ್ ಆಸ್ಪತ್ರೆಯ ಮ॥ ಬಿ ಎಂ ಜ್ಞಾನಪ್ರಿಯಾ ಪಿಳ್ಳೆಯವರೂ ಮ್ಯುನಿಸಿಪಾಲಿಟಿಯ ಮತ್ತು ಪ್ಲೇಗ್ ಬಾಬಿನ ಕಾರ್ಯಗಳನ್ನು ಚ...ಲಾಯಿಸತಕ್ಕದ್ದು.

ತುಂಕೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಮ॥ ...ರ್ ಕೃಷ್ಣರಾಯರಿಗೆ ಇದೇ ಜನವರಿ ೩ನೇ ತಾರೀಖಿನಿಂದ ...ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪೊಲೀಸ್ ಇನ್ಸ್ಪೆಕ್ಟರ್ ಮ॥ ವಿಲ್ಲಿಯರ್ಸ್‌ರವರು ತುಂಕೂರು ಡಿಸ್ಟ್ರಿಕ್ಟಿನ ಪೊಲೀಸ್ ಅ॥ ಸೂಪರಿಂಟೆಂಡೆಂಟರಾಗಿ ಬದಲಿ ಕೆಲಸ ...ನೋಡತಕ್ಕದ್ದು.

ತುಂಕೂರು ಡಿಸ್ಟ್ರಿಕ್ಟ್ ಎಕ್ಸೈಸ್ ಇಲಾಖಾ ಅ॥ ಕಮಿಷ...ರ್ ಮ॥ ಟಿ. ಬಾಪಾರಾಯರಿಗೆ ಕಳೆದ ಡಿಸೆಂಬರ್ ೨೯ ರಿಂದ ...ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರಷ್ಯಾ ಜಪಾನ್ ಯುದ್ಧ ವೃತ್ತ

ಕಳೆದ ವಾರ ಬಂದ ತಂತೀ ವರ್ತಮಾನಗಳು

ಬಯುದ್ಧ ಸನ್ನಾಹ.

ಲಂಡನ್, ಜನವರಿ ೧೦.—ಅಮೇರಿಕದ ಭಾರೀ ಪಟ್ಟಣವಾದ ಸ್ಯಾನ್‌ಫ್ರಾನ್ಸಿಸ್ಕೊ ನಗರದಿಂದ ಚೈನಾ ಎಂಬ ಹಡಗು ೨೫ ಲಕ್ಷ ...ಮಿನ ಚಿನ್ನವನ್ನು ಭರ್ತಿಮಾಡಿಕೊಂಡು, ಜಪಾನ್ ರಾಜ್ಯ...ಕ್ಕೆ ಈ ದಿನ ಪ್ರಯಾಣ ಮಾಡಿತು.

ಪೋರ್ಟ್ ಅರ್ಥರಿನಲ್ಲಿದ್ದ ರಷ್ಯಾ ಹಡಗುಗಳ ಎಡಮಾಕ...ರಾದ ಅಡ್ಮಿರಲ್ ಸ್ಟ್ರೆವ್‌ಲಾಫ್‌ಯವರು ಈ ದಿನ ವ್ಲಾಡಿವೊಸ್ಟಾಕಿನಿಂದ ಹೊರಟರು. ಇವರು ಹಿಂತಿರುಗಿ ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್‌ಗೆ ಹೋಗುವರು.

ರಷ್ಯಾದವರ ಹೊಸ ಸಾಲ.

ಲಂಡನ್, ಜನವರಿ ೧೨.—ರಷ್ಯಾದವರು ಜರ್ಮನಿಯ ರಾಜಧಾನಿಯಲ್ಲಿರುವ ಬ್ಯಾಂಕುಗಳಲ್ಲಿ ಸಾಲ ಬೇಕೆಂದು ಪ್ರಕಟಿಸಿದರು. ಕೂಡಲೇ ವರ್ತಕರು ಬಹಳ ಹಣ ಸಾಲ ಕೊಡುವುದಾಗಿ ಅರ್ಜಿ ಕೊಟ್ಟರು. ರಷ್ಯಾದವರು ತಮಗೆ ಬೇಕಾದಷ್ಟು ಹಣವನ್ನು ತೆಗೆದುಕೊಂಡು, ಉಳಿದ ಅರ್ಜಿಗಳನ್ನು ವಾಪಸು ಮಾಡಿರುತ್ತಾರೆ

ಮ್ಯಾಂಚೂರಿಯದಲ್ಲಿ ಯುದ್ಧ ಸನ್ನಾಹ.

ಲಂಡನ್, ಜನವರಿ ೧೩.—ರಷ್ಯಾದವರು ತಮ್ಮ ಕುದುರೆ ಸೈನ್ಯವನ್ನೆಲ್ಲಾ ಕೂಡಿಸಿ, ಜನರಲ್ ಮಿಶ್ಚೆಂಕೊ ಯವರ ಕೈಕೆಳಗೆ ಕೊಟ್ಟು, ಬಹಳ ಚಟುವಟಿಕೆಯಿಂದ ತರಪೇತು ಮಾಡಿಸುತ್ತಿದಾರೆ. ಈ ಸೈನಿಕರಲ್ಲಿ ಒಂದು ಗುಂಪಿನವರು ನುಗ್ಗಿ ಹೋಗಿ, ಜಪಾನಿನವರ ರೈಲ್ ರಸ್ತೆಗಳನ್ನು ನಾಲ್ಕು ಕಡೆ ಬಹಳ ದೂರದ ತನಕ ಕಿತ್ತು ಹಾಳುಮಾಡಿದಾರೆ

ಸಣ್ಣ ಯುದ್ಧ.

ಬುಧವಾರ ಬೆಳಿಗ್ಗೆ ಜಪಾನಿನವರ ಕುದುರೆ ಸೈನಿಕರಿಗೂ ರಷ್ಯಾ ಸವಾರರಿಗೂ ಲಿಯೋಯಾಂಗಿನ ಬಳಿ ಸಂಧಿಯಾಗಿ ನಾಲ್ಕು ಗಂಟೆಗಳ ಹೊತ್ತು ಯುದ್ಧ ನಡೆಯಿತು. ಜಪಾನಿನವರು ಅವರನ್ನು ಸೋಲಿಸಿ ಓಡಿಸಿದರು. ರಷ್ಯಾ ಸವಾರರಲ್ಲಿ ಬಹುಮಂದಿ ನಷ್ಟವಾದರು.

ಅದೇ ದಿನ ಮಧ್ಯಾಹ್ನ ೨,೦೦೦ ರಷ್ಯಾ ಸವಾರರು ನುಗ್ಗಿ ನಿಯಚ್ವಾಂಗ್ ಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಜಪಾನಿನವರು ಕೂಡಲೇ ಅಲ್ಲಿಂದ ಹಿಮ್ಮೆಟ್ಟಿ ಹೋಗಿ ಹೊಸ ಸೈನ್ಯಗಳನ್ನು ಕಟ್ಟಿಕೊಂಡು ಬಂದು ಅವರ ಮೇಲೆ ಯುದ್ಧಮಾಡಿ, ಅವರನ್ನೆಲ್ಲಾ ಸೋಲಿಸಿ ಓಡಿಸಿದ್ದಲ್ಲದೆ ಅವರ ಬೆನ್ನು ಹತ್ತಿ ಓಡಿಸಿಕೊಂಡು ಹೋಗುತ್ತಿದಾರೆ. ರಷ್ಯಾದವರ ಕಡೆ ೪೦ ಜನರು ನಷ್ಟಪಟ್ಟರು.

ರೋಸ್ಲೆ ಎಂಬ ಇಂಗ್ಲಿಷ್ ಹಡಗು ರಷ್ಯಾದವರಿಗಾಗಿ ಕಲ್ಲಿದ್ದಲನ್ನು ಭರ್ತಿಮಾಡಿಕೊಂಡು ವ್ಲಾಡಿವೊಸ್ಟಾಕಿಗೆ ಹೋಗುತ್ತಿತ್ತು. ಜಪಾನಿನವರು ಆ ಹಡಗನ್ನು ಹಿಡಿದು ಸ್ವಾಧೀನಪಡಿಸಿಕೊಂಡಿದಾರೆ.

ರಷ್ಯಾದವರ ನಷ್ಟ

ಲಂಡನ್, ಜನವರಿ ೧೩.—ವೊನ್ನೆ ನಡೆದ ನಿಯುಚ್ವಾಂಗ್ ಪಟ್ಟಣದ ಯುದ್ಧದಲ್ಲಿ ರಷ್ಯಾದವರು ೩೨ ಹೆಣಗಳನ್ನೂ ೬ ಜನ ಗಾಯಪಟ್ಟವರನ್ನೂ ಬಿಟ್ಟು ಹೋದರು. ಅವರ ಕಡೆ ಒಟ್ಟು ೩೦೦ ಜನ ನಷ್ಟವಾಗಿದಾರೆ. ಜಪಾನಿನವರ ಕಡೆ ೧೯ ಮಂದಿ ಮಾತ್ರ ನಷ್ಟಪಟ್ಟರು. ಜಪಾನಿನವರ ಸಾಮಾನುಗಳಿಗಾಗಲಿ, ಮದ್ದು ಗುಂಡು ತುಂಬಿದ ಮನೆಗಳಿಗಾಗಲಿ ಸ್ವಲ್ಪವೂ ನಷ್ಟವಾಗಲಿಲ್ಲ

ಲೆಸಿಂಗ್ ಟನ್ ಎಂಬ ಇನ್ನೊಂದು ಇಂಗ್ಲಿಷ್ ಹಡಗು ಕಲ್ಲಿದ್ದಲನ್ನು ಭರ್ತಿಮಾಡಿಕೊಂಡು ವ್ಲಾಡಿವೊಸ್ಟಾಕಿಗೆ ತೆಗೆದುಕೊಂಡು ಹೋಗುತ್ತಿತ್ತು. ಇದನ್ನು ಕೂಡ ಜಪಾನಿನವರು ಹಿಡಿದು ಸ್ವಾಧೀನಪಡಿಸಿಕೊಂಡಿದಾರೆ

ಪೋರ್ಟ್ ಅರ್ಥರ್ ಕೋಟೆಯನ್ನು ಜಪಾನಿನವರು ಸ್ವಾಧೀನಪಡಿಸಿಕೊಂಡರು

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಜನರಲ್ ಸ್ಟೊಯಸೆಲ್ ಯವರ ತಿಳುವಳಿಕೆ.

ಲಂಡನ್, ಜನವರಿ ೯—ಪೋರ್ಟ್ ಅರ್ಥರಿನೊಳಗಿರುವ ರಷ್ಯಾ ಸೈನಿಕರನ್ನೂ ಪ್ರಜೆಗಳನ್ನೂ ಬಹಳ ದಯಾಪ್ರಾರ್ಥ್ಯದಿಂದ ಕಾಪಾಡಬೇಕೆಂದು ಜಪಾನ್ ಚಕ್ರವರ್ತಿಯವರು ಜನರಲ್ ನೋಗಿಯವರಿಗೆ ತಿಳಿಸಿದ್ದಲ್ಲದೆ ಆ ಹುಕುಮಿನ ಒಂದು ನಕಲನ್ನು ಕ್ಯಾಪ್ಟನ್ ಯಾನೋದಾಯವರ ಮೂಲಕ ರಷ್ಯಾ ಜನರಲ್ ಸ್ಟೊಯಸೆಲ್ ಯವರಿಗೆ ಕಳುಹಿಸಿಕೊಟ್ಟರು. ಆ ಕ್ಯಾಪ್ಟನ್‌ರು ಅವರಿಗೆ ಕಾಗದ ಕೊಟ್ಟಾಗ ಜನರಲ್ ಸ್ಟೊಯಸೆಲ್‌ಯವರು ಅವರನ್ನು ಕುರಿತು—ನಮ್ಮ ಜನರಲ್ ಕುರೊಪಾಟ್ಕಿನರವರು ಎಲ್ಲಿದ್ದಾರೆ ಎಂದು ಪ್ರಶ್ನೆಮಾಡಿದರು. ಅವರು ಷಾಹೋ ನದಿಯ ಬಳಿ ಇದ್ದಾರೆಂದು ಜವಾಬು ಕೊಟ್ಟಾಗ ಅವನ್ನು ಅವರು ನಂಬಲಾರದೆ ಹೋದರು "ಕಳೆದ ಅಕ್ಟೋಬರ್ ೬ ರಿಂದೀಚೆಗೆ ಜನರಲ್ ಕುರೊಪಾಟ್ಕಿನರವರಿಂದ ನನಗೆ ಕಾಗದ ಪತ್ರಗಳೇ ಬಂದಿಲ್ಲ" ಎಂದು ಹೇಳಿ, ಪೋರ್ಟ್ ಅರ್ಥರಿನ ಮುತ್ತಿಗೆಯನ್ನು ಬಿಡಿಸುವದಕ್ಕೆ ರಷ್ಯಾ ದಂಡುಗಳು ಇನ್ನೂ ಗುಪ್ ಜೋಪ್ ಭೂಶಿರದ ಬಳಿ ಬರುತ್ತಿವೆ ಎಂಬುದನ್ನು ಕೇಳಿ, ಜನರಲ್ ಸ್ಟೊಯಸೆಲ್‌ಯವರು ಪರಮಾಶ್ಚರ್ಯಪಟ್ಟರು.

ರಷ್ಯಾ ಖೈದಿಗಳು

ಲಂಡನ್, ಜನವರಿ ೧೧.—೬ನೇ ತಾರೀಖು ... ಅರ್ಥರಿನ ಒಳಗಿದ್ದ ರಷ್ಯಾ ಸೈನಿಕರು ೫೨,೦೦೦ ... ಲ್ಲಿಯ ಮಾರ್ಗವಾಗಿ ಬಂದು, ಡಾಂಗ್ ಪಿಂಗ್... ...ಗಳನ್ನು ಹತ್ತಿ ಬಂದು, ಡಾಲ್ನಿ ತೀರಪಟ್ಟಣದಲ್ಲಿ ಇಳಿದರು

ಜಪಾನಿನವರು ಆಗಲೇ ಪೋರ್ಟ್ ಅರ್ಥರ ವರೆಗೆ ಇದ್ದ ರೈಲ್ ರಸ್ತೆಯನ್ನು ದುರಸ್ತುಮಾಡಿ, ಗಾಡಿಗಳನ್ನು ಬಿಡುತ್ತಿದಾರೆ.

ಯುದ್ಧದಲ್ಲಿ ಕೈಸೆರೆ ಸಿಕ್ಕಿದ ರಷ್ಯಾ ಖೈದಿಗಳು ತಂಡತಂಡವಾಗಿ ಜಪಾನ್ ರಾಜಧಾನಿಯಾದ ಟೋಕಿಯೋ ನಗರಕ್ಕೆ ಬಂದು ಇಳಿಯುತ್ತಿದಾರೆ.

ಜಪಾನ್ ಸೈನಿಕರು ಪೋರ್ಟ್ ಅರ್ಥರಿನ ಸುತ್ತಲಲ್ಲಿ ೫೦ ಮೈಲಿವರೆಗೆ ೩೯೫ ಸ್ಥಳಗಳಲ್ಲಿದ್ದ ಡೈನಮೈಟ್ ಮದ್ದನ್ನು ಹುಡುಕಿ ತೆಗೆದಿರುತ್ತಾರೆ.

ಜರ್ಮನಿಯ ಬಿರುದುಗಳು.

ಜನರಲ್ ಸ್ಟೊಯಸೆಲ್ ಯವರು ಕೋಟೆಯನ್ನು ಬಹುಕಾಲದಿಂದ ಕಾಪಾಡಿಕೊಂಡದ್ದಕ್ಕೂ ಜನರಲ್ ನೋಗಿಯವರು ಮಹಾ ಪರಾಕ್ರಮದಿಂದ ಆ ಕೋಟೆಯನ್ನು ಗೆದ್ದುಕೊಂಡದಕ್ಕೂ ಜರ್ಮನಿ ಚಕ್ರವರ್ತಿಯವರು ತುಂಬಾ ಸಂತೋಷಪಟ್ಟು, ಅವರಿಬ್ಬರಿಗೂ ಎರಡು ಘನತರವಾದ ಬಿರುದುಗಳನ್ನು ದಯಪಾಲಿಸಿರುತ್ತಾರೆ.

ಜಪಾನಿನವರಿಗೆ ಸಿಕ್ಕಿದ ಕೊಳ್ಳೆ.

ಲಂಡನ್, ಜನವರಿ ೧೩—ಪೋರ್ಟ್ ಅರ್ಥರು ಸ್ವಾಧೀನವಾದರಿಂದ ಅದರಲ್ಲಿ ೫೪೬ ಫಿರಂಗಿಗಳೂ, ೪೨,೬೦೦ ಷೆಲ್ ಎಂಬ ಗುಂಡುಗಳೂ, ೩೦,೦೦೦ ಪೌಂಡು ತೂಕದ ಮದ್ದೂ, ೨೨,೬೬,೪೦೦ ತೋಟಾಗಳೂ ಸಿಕ್ಕಿರುತ್ತವೆ ಎಂಬುದಾಗಿ ಜನರಲ್ ನೋಗಿಯವರು ರಿಪೋರ್ಟು ಮಾಡಿದಾರೆ.

ಜನರಲ್ ಸ್ಟೊಯಸೆಲ್‌ಯವರ ಸಲಾಮು

ಲಂಡನ್, ಜನವರಿ ೧೩—ಈ ದಿನ ಜನರಲ್ ಸ್ಟೊಯಸೆಲ್ ಯವರು ಪೋರ್ಟ್ ಅರ್ಥರಿನಲ್ಲಿ ತಮ್ಮ ಕೈಕೆಳಗಿದ್ದ ರಷ್ಯಾ ಸೈನಿಕರನ್ನೆಲ್ಲಾ ಕರೆಸಿ ನಿಲ್ಲಿಸಿಕೊಂಡು—ನೀವುಗಳೆಲ್ಲಾ ಅತ್ಯಂತ ಧೈರ್ಯಸಾಮರ್ಥ್ಯಾದಿಗಳನ್ನು ಪ್ರಕಾಶಪಡಿಸಿ, ಇದುವರೆಗೆ ಕೋಟೆಯನ್ನು ಕಾಪಾಡಿಕೊಳ್ಳುವುದರಲ್ಲಿ ನನಗೆ ಸಹಾಯ ಮಾಡಿದ್ದಕ್ಕಾಗಿ ನಿಮ್ಮನ್ನೆಲ್ಲಾ ವಂದಿಸುತ್ತೇನೆ ಈಗ ನಾವು ಜಪಾನಿನವರ ಸಂಗಡ ಮಾಡಿಕೊಂಡಿರುವ ಕರಾರಿನ ಕಲಮುಗಳೇ ಮಹಾ ಸುಲಭವಾದವುಗಳೆಂದು ತಿಳಿಯಿರಿ. ಕೋಟೆಯನ್ನು ಶತ್ರುಗಳಿಗೆ ಒಪ್ಪಿಸಿಕೊಟ್ಟ ಅಪರಾಧವೆಲ್ಲಾ ನನ್ನದೇ ಅಲ್ಲದೆ ಮತ್ಯಾರದೂ ಅಲ್ಲ ಎಂಬುದಾಗಿ ಹೇಳಿ ವಂದಿಸಿದರು.

ಜಪಾನಿನವರ ಕೊಳ್ಳೆ—ಸರ್ಕಾರಿ ರಿಪೋರ್ಟು.

ಜಪಾನ್ ಗವರ್ನಮೆಂಟಿನವರು ಪೋರ್ಟ್ ಅರ್ಥರ್ ಕೋಟೆಯಲ್ಲಿ ತಮಗೆ ಸಿಕ್ಕಿರುವ ಸಾಮಾನು ಮುಂತಾದವುಗಳ ಪಟ್ಟಿಯನ್ನು ಪ್ರಕಟಿಸಿದಾರೆ. ಅದರಲ್ಲಿ ಕಂಡುಬರುವ ಮುಖ್ಯ ಬಾಬುಗಳ್ಯಾವೆಂದರೆ—

ಪೋರ್ಟ್ ಅರ್ಥರ್ ಕೋಟೆಯನ್ನು ಒಪ್ಪಿಸಿಕೊಟ್ಟದ್ದು ಗುರುವಾರಕ್ಕೆ ಮುಗಿಯಿತು ಎಂದು ಜನರಲ್ ನೋಗಿಯವರು ತಿಳಿಸುತ್ತಾರೆ. ಇದರಲ್ಲಿ ಜಪಾನಿನವರಿಗೆ ಸಿಕ್ಕಿರುವದೇನೆಂದರೆ—ಸರಿಯಾದ ಕೋಟೆಗಳು ೫೯, ಫಿರಂಗಿಗಳು ೫೪೬, ಫಿರಂಗಿ ಗುಂಡುಗಳು ೮೨,೬೭೦, ಮದ್ದು ೩೦,೦೦೦ ಪೌಂಡ ತೂಕ, ಬಂದೂಕುಗಳು ೩೫,೨೫೨, ಕುದುರೆಗಳು ೧,೯೨೦, ಯುದ್ಧದ ಹಡಗುಗಳು ೪, ಇತರ ಹಡಗುಗಳೂ ದೋಣಿಗಳೂ ೬೧. ಈ ಜಹಜುಗಳೂ ಹಡಗುಗಳೂ ಸ್ವಲ್ಪ ದುರಸ್ತುಮಾಡಿದಲ್ಲಿ ಮತ್ತೆ ಉಪಯೋಗಕ್ಕೆ ಬರುತ್ತವೆ

ಪೋರ್ಟ್ ಅರ್ಥರ್ ಪ್ರವೇಶ

ಲಂಡನ್, ಜನವರಿ ೧೪—ಜಪಾನಿನವರು ಕ್ರಮಪ್ರಕಾರ ಯಥಾವಿಧಿಯಾಗಿ ಪೋರ್ಟ್ ಅರ್ಥರ್ ಪಟ್ಟಣದೊಳಕ್ಕೆ ಪ್ರವೇಶಮಾಡಿ, ಹಳೆಯ ಮತ್ತು ಹೊಸಬಾಗಗಳನ್ನು ಆಕ್ರಮಿಸಿಕೊಂಡರು. ಅವರ ಸೈನಿಕರು ಊರೊಳಗಿನ ಕಟ್ಟವನ್ನು ಹಿಂಬಾಲಿಸಿ ಪಟ್ಟಣದೊಳಕ್ಕೆ ಹೋದರು.

ಕೋಟೆಯನ್ನು ಯಾಕೆ ಒಪ್ಪಿಸಿದರೋ! ಆಕ್ಷೇಪಣೆ.

ಲಂಡನ್ ಪಟ್ಟಣದ ಟೈಂಸ್ ಎಂಬ ಪತ್ರಿಕೆಯು—ರಷ್ಯಾದವರು ಕೋಟೆಯನ್ನು ಜಪಾನಿನವರಿಗೆ ಒಪ್ಪಿಸಿದ್ದಕ್ಕೆ ಕಾರಣವೇನೋ ಗೊತ್ತಾಗಲಿಲ್ಲವೆಂತಲೂ, ಒಳಗಿದ್ದ ಜನರಿಗೆ ಯಾವ ವಿಧವಾದ ಕಷ್ಟಗಳೂ ಪ್ರಾಪ್ತವಾಗಿರಲಿಲ್ಲವೆಂತಲೂ, ಕಾಯಿಲೆಯವರನ್ನೂ ಗಾಯಪಟ್ಟವರನ್ನೂ ಬಿಟ್ಟು, ೨೫,೦೦೦ ಜನರಿಗಿಂತಲೂ ಹೆಚ್ಚಾಗಿಯೇ ಜಪಾನಿನವರ ಖೈದಿಗಳಾಗಿ ಹೋಗುವುದಕ್ಕೆ ಕಾರಣವೇನೆಂಬುದಾಗಿಯೂ ಆಕ್ಷೇಪಣೆ ಮಾಡಿರುತ್ತದೆ

ರಷ್ಯಾ ಚಕ್ರವರ್ತಿಯವರ ಮೆಚ್ಚಿಕೆ.

ರಷ್ಯಾ ಚಕ್ರವರ್ತಿಯವರು ಪೋರ್ಟ್ ಅರ್ಥರ್ ಕೋಟೆಯು ಶತ್ರುಗಳ ವಶವಾದ ವಿಚಾರವನ್ನು ತಮ್ಮ ಸೈನಿಕರಿಗೆಲ್ಲಾ ತಿಳಿಯಪಡಿಸುವಾಗ್ಗೆ ಅಲ್ಲಿನ ತಮ್ಮ ಸೈನಿಕರ ಪರಾಕ್ರಮವನ್ನೂ ರಾಜಭಕ್ತಿಯನ್ನೂ ಹೊಗಳಿ ಪ್ರಕಟಿಸಿರುವುದೇನೆಂದರೆ—ನಮ್ಮ ಸಣ್ಣ ಸೈನ್ಯವು ಕೋಟೆಯನ್ನು ಕೀರ್ತಿಪ್ರದವಾಗಿ ಕಾಪಾಡಿಕೊಂಡು ಬಂದುದು ನಮಗೆ ತುಂಬಾ ಪ್ರತಿಷ್ಠೆಯನ್ನುಂಟುಮಾಡಿದೆ. ರಣರಂಗದಲ್ಲಿ ಪ್ರಾಣ ಕೊಟ್ಟವರ ಪ್ರಾಣಗಳಿಗೆ ಶಾಂತಿಯುಂಟಾಗಲಿ, ಬದುಕಿರುವವರಿಗೆ ಕೀರ್ತಿಯುಂಟಾಗಲಿ. ನಮ್ಮ ಶತ್ರುಗಳಾದರೋ ತುಂಬಾ ಪರಾಕ್ರಮಿಗಳು, ಮಹಾ ಸಮರ್ಥರು. ಅಷ್ಟು ದೂರದೇಶದಲ್ಲಿ ನಮ್ಮ ಸೈನಿಕರು ಹೋಗಿ ಯುದ್ಧಮಾಡ ಬೇಕಾದರೆ ತುಂಬಾ ನಷ್ಟವೂ ಅನಾನುಕೂಲವೂ ಆಗಿರುತ್ತೆ. ಆದರೇನು, ರಷ್ಯಾ ಚಕ್ರಾಧಿಪತ್ಯವು ಮಹಾ ಪೌರುಷಯುಕ್ತವಾದ ರಾಜ್ಯ, ಇದಕ್ಕಿಂತಲೂ ವಿಶೇಷವಾದ ಕಷ್ಟ ನಷ್ಟಗಳನ್ನು ಅನುಭವಿಸಿದ್ದಾಗ್ಯೂ ಪ್ರತಿ ಸಂದರ್ಭದಲ್ಲೂ ಜಯಪ್ರದವನ್ನೇ ಸಂಪಾದನೆ ಮಾಡಿರುವುದು. ನಮಗಾದ ಈಗಿನ ನಷ್ಟದ ವಿಚಾರದಲ್ಲಿ ವ್ಯಸನವೇನೋ ನಮಗೆ ಇದ್ದೇ ಇದ್ದಾಗ್ಯೂ ಅದರಲ್ಲೇ ನಾವು ಮಗ್ನರಾಗಿರುವುದು ನಮಗೆ ತರವಲ್ಲ. ರಷ್ಯಾದವರಿಗೆ ಇಷ್ಟರಲ್ಲೇ ಜಯಕಾಲವು ಒದಗುವುದೆಂಬುದಕ್ಕೆ ಯಾವ ಸಂದೇಹವೂ ಇರಲಾರದೆಂದು ನಂಬುತ್ತೇವೆ. ನಮ್ಮ ಸಕಲ ಸೈನಿಕರನ್ನೂ ಆಶೀರ್ವದಿಸುವಂತೆಯೂ ಅವರು ರಷ್ಯಾ ಚಕ್ರಾಧಿಪತ್ಯದ ಯಶಸ್ಸನ್ನು ಕಾಪಾಡಿಕೊಳ್ಳುವಂತೆ ಸಹಾಯಮಾಡಬೇಕೆಂತಲೂ ಭಗವಂತನನ್ನು ಪ್ರಾರ್ಥಿಸುತ್ತೇನೆ ಎಂಬುದೇ.

ನಿಜವಾದ ನಂಬಿಕೆ, ಕುರುಡು ನಂಬಿಕೆ.

[ಕಳೆದ ವಾರದಿಂದ ಸಾಗಿಬಂದುದು.]

ದೇವರು ತನ್ನ ಪ್ರೀತಿಯನ್ನೂ ಜ್ಞಾನವನ್ನೂ ಶಕ್ತಿಯನ್ನೂ ಮನುಷ್ಯರಿಗೆ ಪ್ರಕಟಿಸುವಂತೆ ತಾನೇ ಮನುಷ್ಯನಾದನೆಂಬುದು ಚರಿತ್ರಸಿದ್ಧವಲ್ಲವೇ? ಹೌದು, ಅಂಥ ದಿವ್ಯಪುರುಷನು ಭೂಲೋಕದಲ್ಲಿ ಬಂದು ಜೀವಿಸಿದನು. ಆ ಜೀವನಮಾನದ ಅತಿಶಯವನ್ನು ಏನೆಂದು ಹೇಳೋಣ! ಆ ಜೀವಮಾನವನ್ನು ಮನುಷ್ಯರು ಸಾವಿರಾರು ವರ್ಷಗಳಿಂದ ನೋಡುತ್ತಾ ಇದರ ಮಾರಿಯಾದ್ಯವು ಇನ್ನೆಷ್ಟು ಉತ್ಕೃಷ್ಟವಾದುದೋ? ಇದರಲ್ಲಿ ಪ್ರಕಟವಾಗುವ ಸ್ವಾರ್ಥತ್ಯಾಗ ಮಹಿಮೆಯು ಇನ್ನೆಂಥಾದುದೋ ಎಂದು ಆಶ್ಚರ್ಯಪಡುತ್ತಾ ಬಂದಿದ್ದಾರೆ. ಆತನನ್ನು ಆರಾಧಿಸುತ್ತಾ ಬಂದಿರುತ್ತಾರೆ. ಆ ದಿವ್ಯ ಪುರುಷನಿಗೆ ಭಕ್ತಿಯನ್ನು ಸಮರ್ಪಿಸುವವರು ಒಂದು ದೇಶದವರಲ್ಲ, ಒಂದು ಜನಾಂಗದವರಲ್ಲ; ಆತನು ಒಂದು ದೇಶದವರಿಗೂ ಒಂದು ಜನಕ್ಕೂ ಮಾತ್ರ ಮಾದರಿಯಾಗಿ ಬದುಕಿದನೆಂದು ಹೇಳಲಾಸ್ಪದವಿಲ್ಲ. ಮನುಷ್ಯರೆಂಬ ನಾಮಾಂಕಿತವನ್ನು ಧರಿಸಿದವರ ಪ್ರತಿಯೊಬ್ಬರಿಗೂ ತನ್ನನ್ನು ಮಾದರಿಯಾಗಿ ಕೊಟ್ಟಿರುತ್ತಾನೆ. ಅಂಧರಾಗಿ ತಂದೆಯನ್ನು ತಿಳಿಯದೆ ತಡವರಿಸುತ್ತಿರುವ ಮಕ್ಕಳಲ್ಲಿ ಆ ಪರಮಪಿತನ ತಿಳುವಳಿಕೆಯನ್ನು ಅರುಹುವುದಕ್ಕೆ ಸಿದ್ಧನಾಗಿದ್ದಾನೆ. "ನನ್ನನ್ನು ನಂಬುವವನು ನನ್ನನ್ನು ಕಳುಹಿಸಿದ ತಂದೆಯನ್ನೂ ನಂಬುತ್ತಾನೆ" ಎಂದು ಆತನು ಹೇಳುತ್ತಾನೆ.

ಈ ದಿವ್ಯ ಪುರುಷನು ಭೂಲೋಕದಲ್ಲಿ ಅವತರಿಸಿದುದು ಚರಿತ್ರಸಿದ್ಧವಾದ ವಿಷಯವೆಂದು ಹೇಳಿದೆವು. ಈತನು ಕೇವಲ ಸಾಧಾರಣರಾದ ಬಡ ಜನಗಳನ್ನು ಕಾಡುವ ಸಮಸ್ತ ಪ್ರತಿಬಂಧಕಗಳಿಂದ ಬಿಡಿಸಿ ಅವರನ್ನು ಉತ್ಕೃಷ್ಟ ಪದವಿಗೆ ತರುತ್ತೇನೆಂಬ ಶುಭವರ್ತಮಾನವನ್ನು ಭೂಲೋಕಕ್ಕೆ ಸಾರಿ ಹೇಳಿದನು. ಮನಃಕ್ಲೇಶವೆಂಬ ಘೋರವಾದ ಗಾಯದಿಂದ ಕಷ್ಟಪಡುವವರನ್ನು ಗುಣ ಮಾಡುತ್ತೇನೆಂದು ಹೇಳಿದನು. ಪಾಪಕ್ಕೆ ಸೆರೆಬಿದ್ದವರನ್ನು ಬಿಡಿಸುತ್ತೇನೆಂದು ಹೇಳಿದನು. ಅಂಥವರಿಗೆ ದೃಷ್ಟಿಯನ್ನು ಕೊಟ್ಟು, ನಾನಾ ವಿಧ ದುಷ್ಟ ಪಾಪಗಳಿಗೆ ಒಳಬಿದ್ದು ಗಾಯಪಟ್ಟವರನ್ನು ಆ ಪಾಪಗಳಿಂದ ಬಿಡಿಸುತ್ತೇನೆಂದು ಉಗ್ಗಡಿಸಿ ಹೇಳಿದನು. ಇದೆಲ್ಲಾ ನಿಜವಾಗಿ ನಡೆದಿದೆಯೋ? ಅಥವಾ ಇವೆಲ್ಲಾ ಸರಸ್ವತೀಪ್ರಸನ್ನ ಮಾತ್ರವೋ? ಎಂದು ಪರೀಕ್ಷಿಸಿ ನೋಡಿದರೆ ಆತನು ಹೇಳಿರುವ ಒಂದೊಂದು ಮಾತೂ ನೆರವೇರಿದೆ ಎಂಬುದು ನಿಶ್ಚಯವಾಗಿ ಗೊತ್ತಾಗುವುದು.

ಯೇಸುಸ್ವಾಮಿಯು ಸಂಕಲ್ಪವನ್ನು ಯಾರ್‍ಯಾರು ಮಾಡಿದ್ದರೋ ಅವರು ಆ ನಿಮಿಷ ಮೊದಲುಗೊಂಡು ಸಂಪೂರ್ಣವಾಗಿ ಬದಲಾಗಿದ್ದಾರೆಂಬುದನ್ನು ಭೂಲೋಕವು ಕಂಡಿಲ್ಲವೆ? ಯೇಸುಸ್ವಾಮಿಯು ಅವತಾರವೆತ್ತಿದುದರಿಂದಲೇ ಸಾಮಾಜಿಕವಾದ ಮತ್ತು ರಾಜಕೀಯವಾದ ಅನೇಕ ಬದಲಾವಣೆಗಳುಂಟಾದುವೆಂದು ಚರಿತ್ರೆಯೇ ಸಾಕ್ಷಿಕೊಡುತ್ತದಾಗಿದೆ. ಕ್ರೈಸ್ತಸಭೆಯನ್ನು ಬಿಟ್ಟು ಹೊರಗಣ ಚರಿತ್ರೆಯನ್ನು ನೋಡಿದರಾಗಲಿ ಕ್ರೀಸ್ತನ ಅವತಾರದ ಪ್ರಾಬಲ್ಯವು ಇಷ್ಟು ವಿಶೇಷವಾಗಿ ತಿಳಿಯುವಲ್ಲಿ ಕ್ರೀಸ್ತಭಕ್ತಮಂಡಲಿಯಲ್ಲಿ ನಡೆದಿರುವ ಅತಿಶಯವಾದ ಬದಲಾವಣೆಯನ್ನು ಹೇಗೆ ವಿವರಿಸೋಣ! ಸಾವಿರಾರು ವರ್ಷಗಳಿಂದ ಭೂಲೋಕದಲ್ಲಿ ನೆಲೆಗೊಂಡಿದ್ದ ಗುಲಾಮ ವ್ಯಾಪಾರವು ನಿರ್ನಾಮವಾಯಿತು! ವಿವಾಹ, ಸಾಮಾಜಿಕ ಪದ್ಧತಿಗಳು, ರೋಗಿಗಳ ಪರಾಂಬರಿಕೆ, ಬಡವರ ಪರಾಂಬರಿಕೆ, ಸಾಮಾಜಿಕ ದೋಷಗಳು, ಸದಸದ್ವಿವೇಚನೆ, ಮನುಷ್ಯರ ಬುದ್ಧಿ, ಬಲಿಷ್ಠರು ಬಲಹೀನರ ವಿಷಯದಲ್ಲಿ ವರ್ತಿಸತಕ್ಕ ವಿಧ, ಯುದ್ಧ, ಇವೇ ಮೊದಲಾದ ವಿಷಯಗಳಲ್ಲಿ ಕ್ರೀಸ್ತಮತವು ನಡಿಸಿರುವ ಉಪಕಾರ ಪ್ರವರ್ತಕವಾದ ಪರಿವರ್ತನೆಗಳು ಎಷ್ಟು ಅತಿಶಯವಾಗಿವೆ! ಮನುಷ್ಯರ ಜೀವಮಾನದಲ್ಲಿ ಯಾವ ಭಾಗವನ್ನು ಕ್ರೀಸ್ತಮತ ಸಂಪರ್ಕಕ್ಕೆ ತಂದರೂ ಮಹತ್ತರವಾದ ಆ ಯೇಸುಸ್ವಾಮಿಯು ಅದನ್ನು ಒಳ್ಳೆಯದನ್ನಾಗಿ ಮಾರ್ಪಡಿಸಿರುತ್ತಾನೆಂಬುದಕ್ಕೆ ನಿದರ್ಶನವು ಬೇಕೇ? ಕ್ರೀಸ್ತನು ದೇವಾವತಾರವೆಂಬುದು ಸುಳ್ಳೆಂದು ಕೋಟಿ ಜನಗಳು ಕೋಟಿ ಪರಿಯಾಗಿ ಹೇಳಲಿ! ಆ ಕ್ರೀಸ್ತಸ್ವಾಮಿಯನ್ನು—ಸ್ವಾಮಿಯೇ! ನೀನೇ ಗತಿಯೆಂದು ಹೇಳದೆ ಆತನನ್ನು ತಿರಸ್ಕರಿಸಲಿ! ಬಾಧೆಯಿಲ್ಲ. ನಾವು ಯಾವ ದೇಶದಲ್ಲಿ ನೋಡಲಿ, ಯಾವ ಜನಗಳನ್ನು ಪರೀಕ್ಷಿಸಲಿ, ಕ್ರೀಸ್ತಸ್ವಾಮಿಯೆಂಬ ಸೂರ್ಯನು ಪ್ರಕಾಶಿಸುವಲ್ಲೆಲ್ಲಾ ಸಮಸ್ತ ಚರಾಚರವು ಬೆಳಗುತ್ತಿರುವುದು ಪ್ರತ್ಯಕ್ಷವಾಗಿಯೇ ಇದೆ!

ಇಂಥ ಸ್ವಾಮಿಯಲ್ಲಿ ನಮ್ಮ ನಂಬಿಕೆಯನ್ನಿಡುವುದು—ಎಂದರೆ ಆತನಿಗೆ ನಮ್ಮನ್ನು ಪರವಾಧಿಕೊಡುವುದು—ಎಷ್ಟು ಉತ್ಕೃಷ್ಟವಾದ ನಂಬಿಕೆಯಾಗಿದೆ! ತನ್ನನ್ನು ನಂಬುವುದರಿಂದ ಆತನು ನಮ್ಮ ಬುದ್ಧಿಗೆ ಬಹು ವಿಪರೀತವಾಗಿ ತೋರುವ ವಿಷಯಗಳನ್ನೆಲ್ಲಾ ಸಮಂಜಸವಾಗಿ ವಿವರಿಸುತ್ತೇನೆಂದು ಹೇಳುವುದಿಲ್ಲ. ಆತನಿಗೆ ನಮ್ಮನ್ನು ಪರವಾಧಿಕೊಟ್ಟರೆ, ನಮಗೆ ಚಿಂತೆಯಾಗಲಿ ರೋಗವಾಗಲಿ ದುಃಖವಾಗಲಿ ಉಂಟಾಗುವದಿಲ್ಲವೆಂದು ಆತನು ಹೇಳುವುದಿಲ್ಲ. ಆದರೆ ತನ್ನನ್ನು ಯಾರು ಅನುಸರಿಸುತ್ತಾ ನಡೆಯುತ್ತಾರೋ ಅವರಿಗೆ ಕತ್ತಲಲ್ಲಿ ನಡೆವಂತೆ ಇರುವುದಿಲ್ಲ. ಅವರಿಗೆ ಬೆಳಕಿನಲ್ಲಿ ನಡೆದಂತಿರುವುದೆಂದು ಹೇಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ. ಇದಕ್ಕೊಂದು ದೃಷ್ಟಾಂತವನ್ನು ಕೊಡುತ್ತೇವೆ. ಕೇಳಿರಿ— ಒಂದು ಮಹಾ ಪಟ್ಟಣವಿರುವುದು, ಅದರಲ್ಲಿ ಸಾವಿರಾರು ಬೀದಿಗಳು. ಒಂದು ದಿನ ಒಬ್ಬ ಚಿಕ್ಕ ಹುಡುಗನು ತಪ್ಪಿಸಿಕೊಂಡನು. ತನ್ನ ಮನೆಯಿಂದ ಬಹು ದೂರವಾಗಿ ಹೋಗಿ ಆ ಬೀದಿಗಳಲ್ಲಿ ಅಲೆಯುತ್ತಿದ್ದನು. ಕಡೆಗೆ ಒಬ್ಬ ಪೋಲೀಸಿನವನು ಆ ಹುಡುಗನನ್ನು ಕಂಡು— ಮನೆಯಲ್ಲಿ? ಊರಿನ ಯಾವ ಭಾಗದಲ್ಲಿದೆ? ಎಂದು ಕೇಳುತ್ತಾ ಕೇಳಿ ತಿಳುಕೊಂಡ ಮೇಲೆ ಅವನ ಕೈಯನ್ನು ಹಿಡಿದು ಕೊಂಡು ನಡೆಯುತ್ತಾ ಹೋಗುತ್ತಿರುವಲ್ಲಿ ಆ ಹುಡುಗನು ಆ ಪೋಲೀಸಿನವನ ಕೈಯನ್ನು ಭದ್ರವಾಗಿ ಹಿಡಿದು ಸ್ವಲ್ಪವೂ ಸಂಶಯಪಡದೆ ಅವನ ಹಿಂದೆಯೇ ಹೋದನು. ಆ ಪೋಲೀಸಿನವನು ಯಾವ್ಯಾವ ಬೀದಿಯನ್ನು ಹೊಕ್ಕು ಯಾವ ಯಾವ ಸಂದಿಯನ್ನು ನುಗ್ಗಿ ಯಾವ ಯಾವ ಕೋಣೆಗಳನ್ನು ದಾಟಿ ಹೋಗುತ್ತಾನೋ ಆ ಹುಡುಗನಿಗೆ ತಿಳಿಯದೆ ಇದ್ದರೂ ಕಡೆಗೆ ತನ್ನ ಮನೆಗೆ ಸುರಕ್ಷಿತವಾಗಿ ಕರೆದುಕೊಂಡು ಹೋಗಿ ಸೇರುವುದರಲ್ಲಿ ಸಂಶಯಪಡದೆ ನಡೆದು ಹೋಗುವನಷ್ಟೆ. ಅದೇ ಪ್ರಕಾರ ಯೇಸುಸ್ವಾಮಿಯು ಕೈಯಲ್ಲಿ ನಮ್ಮನ್ನು ಒಪ್ಪಿಸಿಕೊಡುವದೆಂದರೆ, ಭೂ ಪರಲೋಕಗಳ ಸಮಸ್ತ ವಿಷಯಗಳನ್ನು ನಿಸ್ಸಂದೇಹವಾಗಿ ತಿಳಿದುಕೊಳ್ಳುವದೆಂಬ ಅಭಿಪ್ರಾಯವಲ್ಲ. ಆತನು ನಮ್ಮನ್ನು ತನ್ನ ವಶಕ್ಕೆ ತೆಗೆದುಕೊಂಡು, ನಾವು ಯಾವ ಸುರಕ್ಷಿತವಾದ ಸ್ಥಾನಕ್ಕೆ ಸೇರಬೇಕೋ ಅಲ್ಲಿಗೆ ಸೇರಿಸುವನೆಂದೂ ದೇವರನ್ನು ತಿಳಿದು ಪ್ರೀತಿಸಿ ಸೇವಿಸುವದಕ್ಕೆ ಸಂದೇಹವಿಲ್ಲದೆ ಕಲಿಯುವೆವೆಂದೂ ಕಡೆಯಲ್ಲಿ ನಿತ್ಯವಾಗಿ ಭಗವಂತನ ಸುಪ್ರಸನ್ನತೆಯನ್ನು ಅನುಭವಿಸುವ ಸ್ಥಿತಿಯನ್ನು ಅನುಗ್ರಹಿಸುವನೆಂದೂ ನಾವು ಗ್ರಹಿಸತಕ್ಕದ್ದು.

ಇಂಥ ಗ್ರಹಿಕೆಯನ್ನು ಸಂಪಾದಿಸುವದಕ್ಕಾಗಿಯೇ ಭಗವಂತನು ನಮಗೆ ನಂಬಿಕೆಯೆಂಬ ಮಹಾ ಶ್ರೇಷ್ಠವಾದ ವರವನ್ನು ದಯಪಾಲಿಸಿರುತ್ತಾನೆ. ಇಂಥ ಶಕ್ತಿಯನ್ನು ಕೆಡಿಸಿಕೊಳ್ಳಬಹುದೇ? ಅನೃತವಾದಂಥ ಮಾಯಾ ವಸ್ತುಗಳಲ್ಲಿ ನಂಬಿಕೆಯನ್ನಿಟ್ಟು ಕೆಟ್ಟುಹೋಗುವದು ನಮಗೆ ಯೋಗ್ಯವೇ? ಇಲ್ಲ, ಇಲ್ಲ. ಸಮಸ್ತ ಮನುಷ್ಯರಿಂದಲೂ ಸರ್ವೋತ್ಕೃಷ್ಟನಾದ ನರಕುಲತಿಲಕನೆಂದು ಕರೆಗಕೆಲ್ಪಟ್ಟಿರುವ ಆ ದೇವಮಾನವನಾದ ಕ್ರೀಸ್ತಸ್ವಾಮಿಗೆ ನಮ್ಮನ್ನು ಒಪ್ಪಿಸಿಕೊಡೋಣ. ಆತನು ಹೇಳುವುದೇನಂದರೆ—"ನಿಜವಾದ ದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿ ಕೊಟ್ಟ ಯೇಸುಕ್ರೀಸ್ತನನ್ನೂ ತಿಳಿಯುವದೇ ನಿತ್ಯ ಜೀವ" ಇಂಥಾ ನಿತ್ಯಜೀವವನ್ನು ಪಡೆಯಲು ನಮ್ಮ ನಂಬಿಕೆಯೆಂಬ ಪರಮ ಯತ್ನವನ್ನು ಉಪಯೋಗಿಸೋಣ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

"ಅವ್ಯವಸ್ಥೆಯು ವ್ಯವಸ್ಥೆಯಾಯಿತು."—ಈ ಬಾತ್ಮಿಯು ನಮಗೆ ಅರ್ಥವೇ ಆಗಲಿಲ್ಲವಾದಕಾರಣ ಪ್ರಕಟಿಸಲಿಲ್ಲ.

"ಬಾತ್ಮಿದಾರ್," ಆಗುಂಬೆ —ನೀವು ಬರೆಯುವ ಸಂಗತಿಯನ್ನು ರುಜುವಾತು ಮಾಡಬಲ್ಲಿರಾ? ನಿಮ್ಮ ಹೆಸರು ವಿಳಾಸ ಸಹಿತವಾಗಿ ನಿಮ್ಮ ಬಾತ್ಮಿಯನ್ನು ಪ್ರಕಟಿಸಬಹುದೇ?

"ಬಡವಿದ್ಯಾರ್ಥಿ," ಮಡಿಕೇರಿ —ನೀವು ಕೇಳುವಂಥಾ ಪಾಠಶಾಲೆ ಮೈಸೂರಲ್ಲಿ ಇಲ್ಲ.

ಕರೆಸ್‌ಪಾಂಡೆನ್ಸ್.

ಕಾನೂನಿಗೆ ವಿರೋಧವಾಗಿ ಷಿಕಾರಿಮಾಡುವುದು.

ಅಯ್ಯಾ,

ತಮ್ಮ ಜನವರಿ ತಾರೀಖು ೭ ನೆ ಪತ್ರಿಕೆಯಲ್ಲಿ ಚೆನ್ನಗಿರಿ ತಾಲ್ಲೂಕು ಸೂಳೆಕೆರೆ ಯೇರಿ ಹಿಂದೆ ಇರತಕ್ಕ ಗುಡ್ಡದಲ್ಲಿ ಸೋಮ್ಲಾಪುರ, ದೇವರಹಳ್ಳಿ ಕೆರೆ, ಬಳಚಿಗ್ರಾಮದ ಜನಗಳು ಸಾರಗವನ್ನು ಷಿಕಾರಿ ಆಡಿದರೆಂತ ನಾನು ತಮಗೆ ಅರಿಕೆ ಮಾಡಿದ ಮೇರಿಗೆ ತಾವು ಪತ್ರಿಕಾದ್ವಾರ ಪ್ರಾಯಿಷು ಮಾಡಿರುತ್ತೀರಷ್ಟೆ. ಸದರಿ ಜನಗಳು ಮೂರು ಹೆಣ್ಣು ಸಾರಗವನ್ನು ಕೊಂದು ತೆಗೆದುಕೊಂಡು ಬಂದರು. ಪುನಃ ಈ ದಿವಸ ಮೇಲೆ ಕಂಡ ಗ್ರಾಮದ ಜನಗಳು ಬ್ಯಾಟೆಗೆ ಸುಮಾರು ೫೦೦—೬೦೦ ಜನಗಳು ನಾಯಿಗಳು ಕಟ್ಟಿಕೊಂಡು ಸೂಳೆಕೆರೆ ಗುಡ್ಡದಲ್ಲಿ ಎರಡು ಅಡ್ವಿ ಹಂದಿಗಳನ್ನು ಹೊಡಕೊಂಡು ಬಂದರು. ಈ ಜನಗಳು ಪ್ರತಿ ಸೋಮವಾರ ಬ್ಯಾಟೆಗೆ ಹೋಗುತ್ತಾರೆ. ಇವರುಗಳು ಲೈಸೆನ್ಸು ಇಲ್ಲದೆ ಭರ್ಜಿಗಳು ಬಂದೂಕುಗಳು ತೆಗೆದುಕೊಂಡು ಹೋಗುತ್ತಾರೆ. ಇವರುಗಳು ಬ್ಯಾಟೆ ಆಡುವದಕ್ಕೆ ಆಗಲಿ ಲೈಸೆನ್ಸು ಇಲ್ಲದೆ ಆಯುಧಗಳನ್ನು ಧರಿಸುವದಕ್ಕೆ ಆಗಲಿ ನಮ್ಮ ಸರ್ಕಾರದ ಅಪ್ಪಣೆ ಏನೂ ಇರುವದಿಲ್ಲವೆಂದು ಕಾಣುತ್ತೆ. ಹೀಗೆ ಇರುತ್ತಾ, ಇವರುಗಳು ಮನಸ್ಸಿನಂತೆ ಸರ್ಕಾರದ ಬೆದರಿಕೆ ತಪ್ಪಿ ಬ್ಯಾಟೆ ಆಡುವದು ನೋಡಿದರೆ ಬಹಳ ಆಶ್ಚರ್ಯವಾಗುತ್ತೆ. ಇವರುಗಳಿಂದ ಜಂಗಲಿನಲ್ಲಿ ಇರತಕ್ಕ ಸಾಧುಜಂತುಗಳಾದ ಜಿಗರಿ ಸಾರಗ ವಗೈರೆ ಪ್ರಾಣಿಗಳ ವಂಶವೇ ನಿರ್ಮೂಲವಾಗುತ್ತೆ. ನಮ್ಮ ಸರ್ಕಾರದವರು ಚಿತ್ತಕ್ಕೆ ತಂದು, ಮೂಕಪ್ರಾಣಿಗಳ ಹಿಂಸೆ ತಪ್ಪಿಸುವರೆಂದು ನಂಬುತ್ತೇನೆ.

ನಾಪಿಗ ಸರಸಿಂಗರಾವು.

ಇಂಡಿಯಾ ದೇಶದ ವರ್ತಮಾನಗಳು.

ಜರ್ಮನಿಯ ಕಿರಿಯಮಗನಾದ ಅದಾಲ್ಬರ್ಟನು ಈ ದಿನ ಕಲ್ಕತ್ತೆಗೆ ಬರುವವನಾಗಿದಾನೆ.

❖❖❖❖

ಬರ್ಮಾ ಅಧಿಪತ್ಯಕ್ಕೆ ಸೇರಿದ ಬಾಪಿಯೂ ರೈಲ್ವೆ ಸ್ಟೇಷನ್ ಮಾಸ್ಟರು ಪ್ರಯಾಣಿಕರಿಗೆ ಟಿಕೆಟುಗಳನ್ನು ಟಿಕೆಟಿ ಮಾರಿ ಬಂದ ೩,೬೦೦ ರೂಪಾಯಿ ಅಪಹರಿಸಿ ತಲೆತಪ್ಪಿಸಿಕೊಂಡು ಹೋಗಿದಾನೆ.

❖❖❖❖

ನೀಲಗಿರಿ ಬೆಟ್ಟದ ಕಾರ್ಖಾನೆಗೋಸ್ಕರ ಅದರ ಸಮೀಪದಲ್ಲಿರುವ ಸುಮಾರು ೨ ಸಾವಿರ ಎಕರೆ ಜಮೀನುಗಳು ಸೌದೆಗೆ ಆಗುವ ಮರಗಳನ್ನು ಕಾಪಾಡುವದಕ್ಕೆ ಸರ್ಕಾರಕ್ಕೆ ಬಿಟ್ಟುಕೊಡಲಾಗಿದಾರೆ.

❖❖❖❖

ಕಲ್ಕತ್ತಾದಿಂದಲೂ ಬರ್ಮಾಕ್ಕೆ ಸೇರಿದ ಚಿಟ್ಟಗಾಂಗ್ ಎಂಬ ರೇವಿನಿಂದಲೂ ಬ್ರಿಟಿಷ್ ದ್ವೀಪಗಳಿಗೆ ೩೧ನೇ ಡಿಸೆಂಬರ್ ವರೆಗಿನ ಒಂಭತ್ತು ತಿಂಗಳಲ್ಲಿ ಹಡಗುಗಳ ಮೇಲೆ ಸಾಗಿಹೋದ ತೇವಲೆಯು ಸುಮಾರು ಹದಿನಾಲ್ಕುವರೆ ಕೋಟಿ ಪೌಂಡುಗಳು.

❖❖❖❖

ದಕ್ಷಿಣ ಆಫ್ರಿಕವನ್ನು ಆಳುತ್ತಿರುವ ಲಾರ್ಡ್ ಮಿಲ್ನರ್‌ಯವರು ಇಷ್ಟರಲ್ಲೇ ಕೆಲಸ ಬಿಟ್ಟು ವಿಲಾಯಿತಿಗೆ ಹೊರಡು ಹೋಗುವರೆಂತಲೂ ಮದರಾಸ್ ಗವರ್ನರಾದ ಲಾರ್ಡ್ ಅಂಪ್ಟಿಲ್‌ಯವರು ಅವರ ಸ್ಥಾನಕ್ಕೆ ನೇಮಕವಾಗಬಹುದೆಂತಲೂ ವರ್ತಮಾನವಿದೆ.

❖❖❖❖

ಅಫಘಾನಿಸ್ಥಾನದ ಅಮೀರರ ಜ್ಯೇಷ್ಠಪುತ್ರರಾದ ಸರ್ದಾರ್ ಇನಾಯತ್ ಉಲ್ಲಾ ಖಾನ್ ರವರು ೧೨ ನೇ ತಾರೀಖಿನ ದಿನ ಕಲ್ಕತ್ತೆಯನ್ನು ಬಿಟ್ಟು ಡೆಲ್ಲಿ ಪಟ್ಟಣವನ್ನು ನೋಡಿಕೊಂಡು ಹೋಗಬೇಕೆಂದಿದ್ದರು. ಆದರೆ ಅಲ್ಲಿ ಪ್ಲೇಗ್ ಉಪದ್ರವು ಬಹಳ ಉಲ್ಬಣಿಸುತಿಯಲ್ಲಿರುವದರಿಂದ ಜಾಗ್ರತೆ ಪ್ರಯಾಣ ಮಾಡುತ್ತಾರೆ.

❖❖❖❖

ಆಫ್ರಿಕಾ ಖಂಡದ ಉತ್ತರ ಭಾಗದಲ್ಲಿರುವ ಮೊರಾಕೋ ರಾಜ್ಯದಲ್ಲಿ ಒಬ್ಬ ದೊಡ್ಡ ಮನುಷ್ಯನು ರಾಜ್ಯಪದವಿಯನ್ನು ಸಂಪಾದಿಸಿಕೊಳ್ಳಬೇಕೆಂದು ಸೈನ್ಯವನ್ನು ಕಟ್ಟಿಕೊಂಡು ಯುದ್ಧ ಮಾಡಲಾರಂಭಿಸಿದಾನೆ. ಸುಲ್ತಾನರ ಸೈನ್ಯಕ್ಕೂ ಅವನ ಸೈನ್ಯಕ್ಕೂ ಕಳೆದ ವಾರ ಒಂದು ಯುದ್ಧವಾಯಿತು. ಸುಲ್ತಾನರ ಸೈನ್ಯಕ್ಕೆ ಅಪಜಯವಾಗಿ ಸುಮಾರು ೪೦೦ ಮಂದಿ ಹತರಾದರು.

❖❖❖❖

ಕಲ್ಕತ್ತೆಯಲ್ಲಿ ಪ್ರಸಿದ್ಧ ವಕೀಲನಾದ ಕೋವಿ ಎಂಬುವನು ಸುಳ್ಳು ಸರ್ಟಿಫಿಕೇಟನ್ನು ಕೋರ್ಟಿಗೆ ದಾಖಲ್ಮಾಡಿ, ಒಬ್ಬನ ಆಸ್ತಿಯಿಂದ ೧,೦೭...೯ ರೂಪಾಯಿ ವಸೂಲ್ಮಾಡಿಕೊಂಡು, ತಿಂದುಹಾಕಿದನು. ಸರ್ಕಾರದವರು ಅವನನ್ನು ಹಿಡಿದು ವಿಚಾರಣೆ ಮಾಡಿಸಿದರು. ಕಲ್ಕತ್ತೆಯ ಹೈಕೋರ್ಟ್ ಮಸ್ಜಿಯವರು ಅವನಿಗೆ ಕಳೆದ ವಾರ ೭ ವರುಷ ಕಠಿಣ ಶಿಕ್ಷೆ ವಿಧಿಸಿದರು.

❖❖❖❖❖

ಭೋಪಾಲ್ ಸಂಸ್ಥಾನದ ಮಹಾರಾಣಿಯವರು, ಸ್ವರ್ಗಸ್ಥರಾದ ತಮ್ಮ ಯಜಮಾನರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಅಹಮದಾಬಾದ್ ಎಂಬ ಪಟ್ಟಣ ಒಂದನ್ನು ಕಟ್ಟಬೇಕೆಂದಿರುವರು. ಇದಕ್ಕಾಗಿ ಆಕೆಯು ಆ ಪಟ್ಟಣದಲ್ಲಿ ಹೊಸದಾಗಿ ಮನೆ ಕಟ್ಟತಕ್ಕವರಿಗೆ ಮುಫತ್ತಾಗಿ ಜಾಗವನ್ನು ಕೊಡುತ್ತೇವೆಂದು ಪ್ರಸಿದ್ಧಿಪಡಿಸಿದ್ದಾರೆ. ಆ ಪಟ್ಟಣದಲ್ಲಿ ಕಟ್ಟತಕ್ಕ ಅತ್ಯಂತ ಸುಂದರವಾದ ಅರಮನೆಗೆ ಆಗಲೇ ಅಸ್ತಿಭಾರವನ್ನು ಹಾಕಿಸಿರುವರು.

❖❖❖❖

ಹಿಂದುಸ್ಥಾನದ ಇಪ್ಪತ್ತನೇ ವರುಷದ ನ್ಯಾಷನಲ್ ಸಭೆಯ ಪ್ರೆಸಿಡೆಂಟರಾದ ಸರ್ ಹೆನ್ರಿ ಕಾಟ್ಟನ್‌ರವರು ಬೊಂಬಾಯಿಯಲ್ಲಿ ಮೊನ್ನೆ ನಡೆದ ಸಭೆಯಲ್ಲಿ ಚರ್ಚಿಸಿದ ರಾಜಕೀಯ ವಿಷಯಗಳನ್ನು ಸ್ವತಃ ವೈಸರಾಯ್ ಲಾರ್ಡ್ ಕರ್ಜನರವರ ಸಂಗಡ ಚರ್ಚಿಸಬೇಕೆಂದು ಅವರ ಅಪ್ಪಣೆಯನ್ನು ಕೇಳಿದರು. ಅದಕ್ಕೆ ಲಾರ್ಡ್ ಕರ್ಜನ್‌ರವರು ಆಗುವುದಿಲ್ಲವೆಂತಲೂ ಗೌರವಾರ್ಥವಾಗಿ ಮಾತ್ರ ಭೇಟಿ ಮಾಡಬಹುದೆಂತಲೂ ತಿಳಿಸಿರುತ್ತಾರೆ.

❖❖❖❖

ಬಂಗಾಳಾ ಗವರ್ನಮೆಂಟಿನವರ ಶಿಫಾರಸಿನ ಮೇಲೆ ಇಂಡಿಯಾ ಗವರ್ನಮೆಂಟಿನವರು ರಾಯ ಸೂರತ್ ಚಂದ್ರ ದಾಸ್, ಸಿ. ಐ. ಇ. ರವರಿಗೆ ಅವರ ಗ್ರಂಥವನ್ನು ಪ್ರಕಟಿಸುವದಕ್ಕೆ ೩,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಗ್ರಂಥವು ಟಿಬೆಟ್ ದೇಶದ ಚರಿತ್ರೆಯನ್ನು ಆದಿಯಿಂದ ೧೭೩೭ ನೇ ವರುಷದ ವರೆಗೂ ತಿಳಿಸುತ್ತದೆ. ಆಗಲೇ ಟಿಬೆಟ್ ದೇಶಕ್ಕೆ ಲಾಸ ಎಂಬ ನಗರವು ರಾಜಧಾನಿಯಾದದ್ದು.

❖❖❖❖

ಪಂಜಾಬ್ ದೇಶಕ್ಕೆ ರಾಜಧಾನಿಯಾದ ಲಾಹೋರ್ ಎಂಬ ಪಟ್ಟಣದಲ್ಲಿ ಮಹಮ್ಮದೀಯ ವಿದ್ಯಾ ಪ್ರವರ್ತಕ ಸಂಘವು ಸೇರಿತ್ತು. ಆ ಸಂಘದ ಮೂಲಧನಕ್ಕೆ ಎರಡು ವರೆ ಲಕ್ಷ ರೂಪಾಯಿ ಕೊಡದಾಗಿ ಕೇಳಿದರು. ನವಾಬ್ ಸಿರಾಜ್ ಅಲ್ಲಿ ಖಾನ್, ಸಿ. ಎಸ್. ಐ. ರವರು ಬಡ ಜನರಾದ ವಿದ್ಯಾರ್ಥಿಗಳ ಹಿತವನ್ನು ಕಟ್ಟುವುದಕ್ಕೆ ೭೦ ಸಾವಿರ ರೂಪಾಯಿ ಕೊಟ್ಟರು. ಅಲಿಘರ್ ಕಾಲೇಜ್ ಎಂಬೀ ವಿದ್ಯಾಲಯ ಕಳೆದ ವರುಷ ಬಹಳ ಉತ್ಕೃಷ್ಟತೆಗೆ ಬಂದು

ಮದರಾಸ್ ಪಟ್ಟಣದಲ್ಲಿರುವ ಒಂದು ಸರ್ಕಸ್ ಕಂಪನಿಯ ...ವನು ಅಬ್ಬಾಸ್ ಎಂಬುವನಿಗೆ ೬೦೦ ರೂಪಾಯಿ ಕೊಟ್ಟು ...ವಲ್ಲಿ ಡಿಸ್ಟ್ರಿಕ್ಟಿನ ಸಿಂಗಪತ್ತಿ ಜಮೀನ್ದಾರರಿಂದ ಒಂದು ಹುಲಿ ...ನ್ನು ಕೊಂಡುತರುವಂತೆ ಹೇಳಿ ಕಳುಹಿಸಿದನು. ಅವನು ಆ ...ವನ್ನು ತಿಂದುಬಿಟ್ಟನು. ಕಳೆದ ವಾರ ಅವನನ್ನು ಹಿಡಿದು, ...ರ್ಣೆ ಮಾಡಿ, ಅವನಿಗೆ ೬ ತಿಂಗಳ ಕಠಿಣಶಿಕ್ಷೆಯನ್ನೂ ೬೦೦ ...ಯಿ ಜುಲ್ಮಾನೆಯನ್ನೂ ವಿಧಿಸಿದಾರೆ

* * * * *

ಕ್ಯೂಬಾದ್ವೀಪಕ್ಕೆ ಸೇರಿದ ಹವಾನಾ ಪಟ್ಟಣದಲ್ಲಿ ಹುಟ್ಟಿ ಬೆ... ಫ್ರಾನ್ಸ್ ರಾಜ್ಯದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ...ಕಾಲ ವಾಸ ಮಾಡಿಕೊಂಡಿದ್ದ ಸೇನಾರ್ ಪ್ರ್ಯಾಂಟಿ ಎಂಬಾತ ...ನ್ನ ಆಸ್ತಿಯಲ್ಲಿ ೧,೨೫,೦೦೦ ರೂಪಾಯಿಗಳನ್ನು ಹಿಂದೂ ...ದ ಕಾಶೀಪಟ್ಟಣದಲ್ಲಿ ಮಿಸಸ್ ಬೆಸೆಂಟ್ ಎಂಬಾಕೆಯಿಂದ ...ಲ್ಪಡುತ್ತಿರುವ ಹಿಂದೂ ಕಾಲೇಜಿನ ಮೂಲಧನಕ್ಕೆ ಕೊಡಬೇ...ದು ಮರಣಶಾಸನವನ್ನು ಬರೆದಿರುತ್ತಾನೆ

* * * * *

ಪೋರ್ಟ್ ಬ್ಲೇರ್ ಎಂಬ ಕೋಟೆಯಲ್ಲಿ ಒಬ್ಬನೊಬ್ಬ ಬರ್ಮಾ...ದ ಖೈದಿಯು ಮಿ॥ ಓಟ್ಬ್ರಿಂಗ್ ಎಂಬ ಆಫೀಸರವರ ಮನೆಗೆ ಅ...ರಾತ್ರಿಯಲ್ಲಿ ನುಗ್ಗಿ ಅವರ ಹೆಂಡತಿ ಮಲಗಿದ್ದ ಚಿಕ್ಕ ಮನೆಗೆ ...ವೇಶಿಸಿ, ಆಕೆಯನ್ನು ನಿದ್ದೆ ಮಾಡುತ್ತಿದ್ದಾಗ ತಿವಿದನು. ಆಕೆ ...ು ಎದ್ದು ಹೊರಕ್ಕೆ ಹೋಗಬೇಕೆಂದು ಪ್ರಯತ್ನಿಸುವಲ್ಲಿ ಅನೇ...ಗಾಯಗಳನ್ನು ಮಾಡಿ ಓಡಿಹೋದನು. ತಕ್ಷಣವೇ ಹೊರಗಿದ್ದ ...ಗಳು ಅವನನ್ನು ಹಿಡಿದರು.

* * * * *

ಸರ್ದಾರ್ ಇನಾಯತ್ ಉಲ್ಲಾ ಖಾನವರು ವೈಸ್‌ರಾಯಿರವರ ...ಭೇಟಿ ಮಾಡಿ, ತನ್ನ ತಂದೆ ಅಮೀರರು ಕಳುಹಿಸಿದ್ದ ೬ ಅರ...ದೇಶದ ಕುದುರೆಗಳನ್ನೂ ಆಸ್ಟ್ರೇಲಿಯಾ ದೇಶದ ಬೆಲೆಯುಳ್ಳ ...ಮೃಗಗಳ ಚರ್ಮಗಳನ್ನೂ ಮಾಯೂರ ದಾರ್ಢ್ಯವಾಗಿ ನಜರು ...ಸಿರುತ್ತಾರೆ. ವೈಸ್‌ರಾಯಿ ರವರು ಅದಕ್ಕೆ ಬದಲಾಗಿ ಅಮೀರ...ಒಂದು ರತ್ನಖಚಿತವಾದ ಕತ್ತಿಯನ್ನೂ ಚಿನ್ನದ ನಡುಕಟ್ಟ...ನ್ನೂ ಅನೇಕ ಅಮೂಲ್ಯವಾದ ಆಭರಣಗಳನ್ನೂ ಕಳುಹಿ...ರು.

* * * * *

ಬೊಂಬಾಯಿನ ಪ್ರಸಿದ್ಧ ಸಾಹುಕಾರರಾದ ತಾತಾರವರು ಯೂ...ಪ್ ಖಂಡದ ಜರ್ಮನಿಯಲ್ಲಿ ಕಳೆದ ಮೇ ತಿಂಗಳು ೧೯ ನೇ ...ಯಲ್ಲಿ ಸ್ವರ್ಗಸ್ಥರಾದರು. ಅವರ ಪತ್ನೀ ಹೀರಾಬಾಯಿ ಎಂ...ಯು ಕಳೆದ ನವಂಬರ ೩ ನೇ ತಾರೀಖಿನಲ್ಲೇ ಸ್ವರ್ಗಸ್ಥರಾಗಿ...ು. ತಾತಾರವರ ಇಂಡಿಯಾದಲ್ಲಿರುವ ಆಸ್ತಿಯು ಒಂದೂವರೆ ...ಟಿ ರೂಪಾಯಿಗಳು, ಇತರ ರಾಜ್ಯಗಳಲ್ಲಿರುವುದು ಸುಮಾರು ...ು ಲಕ್ಷ ರೂಪಾಯಿ ಇವರ ಹೆಂಡತಿಯ ಆಸ್ತಿಯು ಸುಮಾರು ...ಸಾವಿರ ರೂಪಾಯಿ.

* * * * *

ಕಲ್ಕತ್ತೆಯಲ್ಲಿ ಒಬ್ಬಾನೊಬ್ಬ ದೊಡ್ಡ ಮನುಷ್ಯನು ತನ್ನ ಜವಾ...ನಿಗೆ ಸಾವಿರ ರೂಪಾಯಿನ ನಾಲ್ಕು ನೋಟುಗಳನ್ನು ಕೊ...ಹಣ ತರುವಂತೆ ಖಜಾನೆಗೆ ಕಳುಹಿಸಿದನು. ಆ ಜವಾನನು ...ವನ್ನು ಕೊಡುವುದಕ್ಕಾಗದೆ ಒಬ್ಬ ಕೂಲಿಯವನನ್ನು ಗೊತ್ತು...ಅವನ ಕೈಲಿ ಹಣ ತೆಗೆಸಿಕೊಂಡು ಅವನು ಹಿಂದೆ ತಾನು ...ುಂದೆ ಹೋಗುತ್ತಿದ್ದನು. ಆ ಕೂಲಿಯವನು ಆ ಹಣವನ್ನು ತೆಗೆ...ಕೊಂಡು ಪರಾರಿಯಾದನು ಅವನನ್ನು ಹಿಡಿದು ತಂದವರಿಗೆ ...೦ ರೂಪಾಯಿ ಬಹುಮಾನ ಕೊಡುತ್ತೇನೆಂದು ಆ ದೊಡ್ಡ ಮ...ಷ್ಯನು ಪ್ರಕಟಿಸಿರುತ್ತಾನೆ.

* * * * *

ಮದರಾಸ್ ಪಟ್ಟಣದಲ್ಲಿ ದೇಹವಿಕ್ರಯದಿಂದ ಜೀವನಮಾಡತಕ್ಕ ...ವೇಶ್ಯಾಸ್ತ್ರೀಯರಿಗೆ ವಿದ್ಯೆಕಲಿಸುವವರ ಮೂಲಕ ಅವರನ್ನು ...ಗ್ಗಣೀಯರಾಗುವಂತೆ ಪ್ರೋತ್ಸಾಹ ಪಡಿಸುತ್ತಿರುವ ಸಂಘದ ...ು ಕಳೆದ ವಾರ ಮೂರನೇ ವಾರ್ಷಿಕ ಸಭೆಯನ್ನು ನಡೆಸಿದರು. ...ಸಭೆಗೆ ಬಹುಜನ ಯೂರೋಪ್ಯರ್ ಸ್ತ್ರೀಯರು ಹೋಗಿ ...ಲ್ಲಿಂದ ಸಂಘದವರ ಉದ್ದೇಶವೂ ಕಾರ್ಯಸಾಧನೆಯೂ ಕ್ಕೆ...ವೆಂಬ ಅರ್ಥದಲ್ಲಿ ಉಪನ್ಯಾಸಗಳನ್ನು ಮಾಡಿದ್ದಲ್ಲದೆ ಸಭೆ...ಲ್ಲಿ ಹಾಜರಾಗಿದ್ದ ಅನೇಕಮಂದಿ ವೇಶ್ಯಾಸ್ತ್ರೀಯರಿಗೆ ಒಳ್ಳೇ ...ಬುದ್ಧಿವಾದಗಳನ್ನೂ ತಿಳಿಸಿದರು.

* * * * *

ಹಿಂದುಸ್ಥಾನದ ಟಪಾಲ್ ಬಸ್ತುಗಳನ್ನು ವಿಲಾಯಿತಿಗೆ ಹೋ...ವ ರಸ್ತೆಯಲ್ಲಿ ಅಬಿಸೀನಿಯಾ ದೇಶದ ಬುಷೈರ್ ಪಟ್ಟಣದಲ್ಲಿ ...ಟ್ಟಿ ಹುಂಡನವರು ತಡೆದು ಇಟ್ಟುಕೊಂಡಿದಾರೆಂದೂ ಅವರು ...ಜ್ಯದವರ ತಾಬೇದಾರರೆಂದೂ ಹಿಂದೆ ಸಮಾಚಾರ ಪ್ರಕಟಿಸಿದ್ದೆವಷ್ಟೆ ...ಟಿಗೆ ಇಂಗ್ಲೀಷರು ಅವರ ಮೇಲೆ ಕಾರ್ಯಭಾಗ ನಡಿಸಿ, ಅವ...ನ್ನ ಶಿಕ್ಷಿಸುವುದಾಗಿ ತಿಳಿಸಿದ್ದರಿಂದ ಅವರು ಆ ಟಪಾಲ್ ಬಸ್ತುಗ...ಳನ್ನು ಇಂಗ್ಲೀಷರಿಗೆ ವಾಪಸು ತಂದು ಒಪ್ಪಿಸಿ, ಅವರ ಪ್ರಜಾದ...ವನ್ನು ಬೇಡಿದರು. ಈ ವಿಷಯವು ಇಷ್ಟರಲ್ಲೇ ಪರ್ಯವಸಾ...ನವಾದುದಕ್ಕಾಗಿ ಎಲ್ಲರೂ ಸಂತೋಷಪಡತಕ್ಕದ್ದಾಗಿದೆ.

* * * * *

ಕಳೆದ ೩೦ನೇ ಡಿಸೆಂಬರ್ ವರೆಗಿನ ಒಂದು ವಾರದಲ್ಲಿ ಇಂಡಿ...ಯಲ್ಲಿ ಪ್ಲೇಗಿನಿಂದ ೨೨,೪೫ ಜನರು ಮೃತಪಟ್ಟಿರುತ್ತಾರೆ. ...ಈ ಪ್ರಕಾರ ಆಗ್ರಾ ಮತ್ತು ಅಯೋಧ್ಯೆಗಳಲ್ಲಿ ೯,೫೭೪ ಜನರು, ...ಜಾಬ್‌ನಲ್ಲಿ ೫,೬೨೩ ಜನರು. ಬೊಂಬಾಯಿ ಪ.ತ್ತು ಅದರ ...ಸ್ವಾಮಿತ್ವದ ಪ್ರಾಂತ್ಯದಲ್ಲಿ ೩,೬೭೪ ಜನರು, ಬಂಗಾಳದಲ್ಲಿ ೨,೪೯೬ ಜನರು, ಹೈದರಾಬಾದ್ ಸಂಸ್ಥಾನದಲ್ಲಿ ೪೧೭ ಪ್ರಜೆಗಳು, ಮದರಾಸ್ ಡಿಸ್ಟ್ರಿಕ್ಟುಗಳಲ್ಲಿ ೩೬೭ ಜನರು, ರಾಜಪುಟಾನಾದಲ್ಲಿ ೩೧೪ ಜನರೂ, ಮೈಸೂರು ಸಂಸ್ಥಾನದಲ್ಲಿ ೨೮೨ ಜನರೂ, ಮಧ್ಯ ಇಂಡಿಯಾದಲ್ಲಿ ೧೨೧ ಜನಗಳೂ ಪ್ಲೇಗಿಗೆ ತುತ್ತಾದರು.

* * * * *

ಪಂಜಾಬ್ ದೇಶದಲ್ಲಿ ವೈಸರಾಯಿರವರ ಡಾಕ್ಟರಾದ ಖಾನ್ ಬಹದ್ದೂರ್ ರಹೀಂ ಖಾನರವರು ಅಕಸ್ಮಾತ್ತಾಗಿ ಮೊನ್ನೆ ೬ ನೇ ತಾರೀಖು ಬುಧವಾರ ಮೃತಪಟ್ಟರು. ಅವರು ಕಲ್ಕತ್ತಾದಲ್ಲಿರುವ ಮೆಡಿಕಲ್ ಕಾಲೇಜ್ ಎಂಬ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ವೈಸರಾಯಿಯವರ ಡಾಕ್ಟರ್ ಕೆಲಸಕ್ಕೆ ನೇಮಿಸಲ್ಪಟ್ಟು, ಪಂಜಾಬ್ ದೇಶಕ್ಕೆ ರಾಜಧಾನಿಯಾದ ಲಾಹೋರ್ ನಗರದಲ್ಲೇ ವಾಸಿಸುತ್ತಿದ್ದರು. ಇವರು ವೈದ್ಯಭಾಗದಲ್ಲಿ ಅನೇಕ ಪುಸ್ತಕಗಳನ್ನು ಬರೆದಿರುತ್ತಾರೆ. ಸಾಯುವಾಗ ೪೦ ವರುಷದವರಾಗಿದ್ದಾಗ್ಯೂ ಒಂದು ದಿನವಾದರೂ ರೋಗದಿಂದ ನರಳಲಿಲ್ಲ. ತಾವು ಸಾಯುವದಕ್ಕೆ ಮುಂಚೆಯೂ ಒಬ್ಬ ರೋಗಿಯನ್ನು ಹೋಗಿ ನೋಡಿ, ಅವನಿಗೆ ಔಷಧಿ ಕೊಟ್ಟು ಬಂದರು.

* * * * *

ಉತ್ತರ ಅಕಾರ್ಟಿಗೆ ಸೇರಿದ ಪುತ್ತೂರಿನಲ್ಲಿ ಮಿ॥ ಗ್ರೀಗ್ಸಾಸ್ ಎಂಬಾತನು ನಾಗರಹಾವು ಕಡಿದವರಿಗೆ ಔಷಧ ಹಾಕಿ ವಾಸಿಮಾಡುತ್ತಿದಾನೆ. ಹಾವುಕಡಿದ ಸ್ಥಳದ ಸ್ವಲ್ಪ ಮೇಲ್ಭಾಗದಲ್ಲಿ ಬಲವಾಗಿ ದಾರವನ್ನು ಕಟ್ಟಿ, ರಕ್ತಚಲನೆಯನ್ನು ತಡೆದು, ಕಡಿದ ಸ್ಥಳದಲ್ಲಿ ಚೂರಿಯಿಂದ ಸ್ವಲ್ಪ ಕೊಯಿದು ಆಳವಾಗಿ. ನಾಲ್ಟ್ ವಿನೆಗರ್ ಎಂಬ ದ್ರಾಕ್ಷೇರಸವನ್ನು ಆ ಗಾಯಕ್ಕೆ ಹಾಕಿ, ಸ್ವಲ್ಪಹೊತ್ತು ಹಾಗೇ ಬಿಟ್ಟದ್ದರೆ ಸುಮಾರು ಅರ್ಧಗಂಟೆಯೊಳಗಾಗಿ ವಿಷವೆಲ್ಲಾ ಕಾರಿಹೋಗಿ ವಾಸಿಯಾಗುವುದು. ಇದರ ಪ್ರಯೋಜನವನ್ನು ಸುತ್ತುಮುತ್ತಲಿನ ಗ್ರಾಮಸ್ಥರೆಲ್ಲಾ ತಿಳಿದುಕೊಂಡು, ಆ ದ್ರಾಕ್ಷೇರಸವನ್ನು ಕೊಂಡುತಂದು ಇಟ್ಟುಕೊಂಡು, ಹಾವು ಕಡಿದವರಿಗೆಲ್ಲಾ ಹಾಕಿ ಗುಣಮಾಡುತ್ತಿದಾರೆ.

* * * * *

ರಷ್ಯಾ ರಾಜ್ಯದವರು ಅಫ್ಘಾನಿಸ್ಥಾನದ ಪಶ್ಚಿಮೋತ್ತರ ಎಲ್ಲೆ ಕಟ್ಟುಗಳ ವರೆಗೂ ರೈಲುಹಾಕಿರುತ್ತಾರೆಂತಲೂ ಮೊದಲಿಗಿಂತಲೂ ಹೆಚ್ಚಾಗಿ ಸೈನ್ಯವನ್ನು ಕೂಡಿಸುತ್ತಿದ್ದಾರೆಂತಲೂ ಇಂಗ್ಲೀಷರು ತಿಳಿದು ೧,೮೮೩ರಲ್ಲಿ ಅಲ್ಲಿಗೆ ಕೆಲವು ಸೈನ್ಯವನ್ನು ಕಳುಹಿಸಿ, ಪರ್ಷಕ್ಕೆ ಪನ್ನೆರಡುಲಕ್ಷ ರೂಪಾಯಿಗಳನ್ನು ಸೈನ್ಯದ ಖರ್ಚಿಗಾಗಿ ಅಮೀರರವರಿಗೆ ಕೊಡುವುದಾಗಿ ಒಪ್ಪಿಕೊಂಡರು. ಹತ್ತುವರುಷವಾದಮೇಲೆ ತಿರಿಗಿ ರಷ್ಯನರು ಬರುವ ಸಂಭವ ತೋರಿದ್ದರಿಂದ ಬ್ರಿಟಿಷರು ವರುಷಕ್ಕೆ ೧೮ ಲಕ್ಷ ರೂಪಾಯಿ ಕೊಡುತ್ತೇವೆಂತಲೂ ಅಮೀರರು ಬೇಕಾದ ಸ್ಥಳದಿಂದ ಯುದ್ಧದ ಸಾಮಾನು ತರಿಸಿಕೊಳ್ಳುವದಕ್ಕೆ ತಮ್ಮ ಅಡ್ಡಿ ಏನೂ ಇಲ್ಲವೆಂತಲೂ ೧,೮೯೩ ರಲ್ಲಿ ಕರಾರು ಮಾಡಿಕೊಂಡರು. ಈಗಲಾದರೋ ತಿರಿಗಿ ಅಲ್ಲಿಗೆ ರಾಯಬಾರಿಗಳನ್ನು ಕಳುಹಿಸಿ, ಅಮೀರರನ್ನು ಅವರ ಸೈನ್ಯವನ್ನು ಬಲಪಡಿಸಿಕೊಳ್ಳುವಂತೆ ಸೂಚಿಸಿದ್ದಾರೆ. ಅಫ್ಘಾನಿಸ್ಥಾನವು ಸ್ವತಂತ್ರವಾಗಿಯೂ ಪರರಾಜ್ಯಗಳ ಸೈನ್ಯವನ್ನೂ ಹಿಮ್ಮೆಟ್ಟಿಸುವುದಕ್ಕೆ ಶಕ್ತಿಯುಳ್ಳದ್ದಾಗಿಯೂ ಆಗಿರಬೇಕೆಂಬುದೇ ಬ್ರಿಟಿಷರ ಉದ್ದೇಶವಾಗಿದೆ.

ವಿದೇಶ ವರ್ತಮಾನಗಳು.

ಜರ್ಮನ್ ರಾಜ್ಯದವರು ಒಂದು ದ್ವೀಪವನ್ನು ೩೦ ಸಮಭಾಗಗಳಾಗಿ ವಿಭಾಗ ಮಾಡಿ, ಅದರಲ್ಲಿ ಪ್ರತಿ ಒಂದಕ್ಕೂ ಒಂದೊಂದು ಪ್ರಾಣಿಯ ಹೆಸರನ್ನು ಇಟ್ಟಿದಾರೆ.

* * * * *

ಟ್ರಾನ್ಸ್‌ವಾಲ್ ಗಣಿಗಳಲ್ಲಿ ಕಳೆದ ವರುಷ ೨೨ ಕೋಟಿ ರೂಪಾಯಿನ ಚಿನ್ನವನ್ನು ಉತ್ಪತ್ತಿ ಮಾಡಿದರು. ೧೯೦೩ ನೇ ವರುಷದಲ್ಲಿ ೧೮ ಕೋಟಿಯೂ ೩೬ ಲಕ್ಷ ರೂಪಾಯಿನಷ್ಟು ಚಿನ್ನ ಮಾತ್ರ ಉತ್ಪತ್ತಿಯಾಗಿತ್ತು.

* * * * *

ಜರ್ಮನ್ ರಾಜ್ಯದವರು ಕೊರಿಯಾ ಎಂಬ ಪರ್ಯಾಯ ದ್ವೀಪವನ್ನೂ ಸ್ವಾಧೀನ ಪಡಿಸಿಕೊಂಡು, ಆ ಕೊರಿಯ ಜಲಸಂಧಿಗೆ ಪ್ರವೇಶಿಸುವ ದಾರಿಯಲ್ಲಿರುವ ಕ್ವೆಲ್‌ಪಾರ್ಟ್ ಎಂಬಲ್ಲಿ ಕೋಟೆಯನ್ನು ಭದ್ರಪಡಿಸುತ್ತಿದಾರೆಂದು ತಿಳಿದು ಬಂದಿದೆ.

* * * * *

ಪೋರ್ಚುಗಲ್ ರಾಜ್ಯದ ದೊರೆಯೂ, ಅವರ ಪತ್ನಿಯೂ ಲಂಡನ್ ನಗರವನ್ನು ನೋಡಿಕೊಂಡು ಬರಬೇಕೆಂದು ಹೋಗಿದ್ದಾಗ ಅಲ್ಲಿನ ಪ್ರಜೆಗಳು ಇವರನ್ನು ಸತ್ಕರಿಸುವುದಕ್ಕಾಗಿ ೬೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರು.

* * * * *

ರಷ್ಯಾ ದೇಶದ ಗಾರ್ಲಿಟ್ಜ್ ಎಂಬ ಪಟ್ಟಣದಲ್ಲಿ ಒಂದು ಹೆಣದ ಹಿಂದೆ ಒಬ್ಬನು ಬಣ್ಣದ ದಾರವನ್ನು ಕಟ್ಟಿ, ತನ್ನ ನಾಯಿಯನ್ನು ಕರೆದು ಕೊಂಡು ಹೋಗುತ್ತಿದ್ದನು. ಅದು ಆ ದೇಶ ಪದ್ಧತಿಗೆ ವಿರೋಧವಾದ್ದರಿಂದ ಅವನಿಗೆ ಒಂಬತ್ತು ತಿಂಗಳ ಸಜಾ ವಿಧಿಸಿದರು.

* * * * *

ಸರ್ವಿಯಾ ರಾಜ್ಯದ ಯುವರಾಜನು ಜರ್ಮನೀ ರಾಜ್ಯದ ನರ್ತನಗಾರಳಾದ ಬೆಲ್ಲ ವರ್ಮ್ಬ್ ಹೀಂ ಎಂಬುವಳಲ್ಲಿ ವಿಶೇಷವಾಗಿ ಮೋಹಗೊಂಡು, ಅವಳನ್ನು ನೋಡುವುದಕ್ಕೆ ವೆನಿಸ್ ಪಟ್ಟಣಕ್ಕೆ ಹೋಗಿದ್ದನು ಅವನ ರಾಜ್ಯದ ಮುಖ್ಯ ಮಂತ್ರಿಯು ಎಚ್ಚರಿಕೆಯಿಂದ ವಿಧವಾಗಿ ಹೇಳಿದ ಮೇಲೆ ಬೆಲ್‌ಗ್ರೇಡ್ ನಗರಕ್ಕೆ ಹಿಂತಿರುಗಿದನು.

ಅನ್ಯೋನ್ಯರಾಜ್ಯಗಳಲ್ಲಿ ಒಂದಾದ ಟೆಕ್ಸಾಸ್ ಎಂಬ ವಿಭಾಗದಲ್ಲಿ ಕೆಲವು ಎಣ್ಣೆಯ ಭಾವಿಗಳಿವೆ. ಕೆಲವು ದಿನಗಳಿಂದ ಅವು ಅಗ್ನಿಪರ್ವತಗಳಾಗಿ ಪರಿಣಮಿಸಿ ಕಲ್ಲುಮಣ್ಣುಗಳನ್ನು ಅಂತರಿಕ್ಷಕ್ಕೆ ಸಾವಿರಾರು ಅಡಿಗಳವರೆಗೂ ಕಳುಹಿಸುತ್ತಿವೆ. ಸುತ್ತುಮುತ್ತಲಿನ ಗ್ರಾಮಗಳ ಜನಗಳು ಮನೆಮಠಗಳನ್ನು ಬಿಟ್ಟು ಓಡಿಹೋಗಿದ್ದಾರೆ.

* * * * *

ಸ್ವೀಡನ್ ದೇಶದ ವರ್ತಮಾನ ಪತ್ರಿಕೆಗಳು ನಾರ್ವೆ ಮತ್ತು ಸ್ವೀಡನ್ ದೇಶಗಳ ಯುವರಾಜನಾದ ಗಸ್ಟಾವಸ್ ಎಂಬುವನು ಅಮೇರಿಕದ ಪ್ರೆಸಿಡೆಂಟರ ಪುತ್ರಿ ಮಿಸ್ ಆಲಿಸ್ ರೂಸ್‌ವೆಲ್ಟ್ ಎಂಬುವಳನ್ನು ಮದುವೆಮಾಡಿಕೊಳ್ಳುವದಕ್ಕೆ ಹುಡುಕುತ್ತಿದಾನೆಂದು ಪ್ರಕಟಿಸಿರುವುದನ್ನು ನೋಡಿ, ಅನ್ಯೋನ್ಯರಾಜ್ಯಗಳ ಮುಖ್ಯಪಟ್ಟಣವಾದ ವಾಷಿಂಗ್‌ಟನ್ ಎಂಬ ನಗರದ ಪ್ರಜೆಗಳು ತುಂಬಾ ಗಾಬರಿಪಡುತ್ತಿದಾರೆ.

* * * * *

ದಕ್ಷಿಣ ಅಮೇರಿಕದಲ್ಲಿರುವ ಕೊಲಂಬಿಯಾ ಎಂಬ ವಿದ್ಯಾವರ್ಧಕಸಂಘದಲ್ಲಿ ಬಹಳ ಹೆಸರುವಾಸಿಯನ್ನು ಪಡೆದಿರುವ ಜಾರ್ಜ್ ಗೌಲ್ಡ್ ಎಂಬಾತನ ಮಗ ಕಿಂಗ್‌ಡನ್ ಗೌಲ್ಡನು ಬಹಳ ಐಶ್ವರ್ಯವಂತನಾಗಿದ್ದದ್ದಕ್ಕಾಗಿ ಆ ದೇಶದ ಪದ್ಧತಿಯ ಪ್ರಕಾರ ವಿಚಾರಣೆ ಮಾಡಲ್ಪಟ್ಟು ಯಾವಾಗಲೂ ಒಂದು ಬಿಳೀ ಉಡುಪನ್ನು ಹಾಕಿಕೊಂಡಿರಬೇಕೆಂದು ವಿಧಿಸಿದರು. ಈ ಲಕ್ಷಾಧಿಪತಿಯು ಆ ಶಿಕ್ಷೆಯನ್ನು ಅನುಭವಿಸಬೇಕಾಗಿದೆ '

* * * * *

ಅನ್ಯೋನ್ಯ ರಾಜ್ಯಗಳಿಂದ ಮಲೇಷಿಯಾ ದ್ವೀಪಗಳಲ್ಲೊಂದಾದ ಸೊಲೊಲೊ ದ್ವೀಪಕ್ಕೆ ಒಂದು ಹಡಗು ಹೋಗುತ್ತಿದ್ದಾಗ ಸುಮಾರು ೬ ಮೈಲಿ ಅಳವಾದ ನೀರಿನ ಪ್ರದೇಶವು ಸಿಕ್ಕಿತು. ಪ್ರಪಂಚದಲ್ಲೆಲ್ಲಾ ಬಹಳ ಎತ್ತರವಾದ ಎವರೆಸ್ಟ್ ಎಂಬ ಪರ್ವತ ಶಿಖರವನ್ನು ತಿರುಗಿಸಿ. ಆ ಸ್ಥಳದಲ್ಲಿ ಮುಳುಗಿಸಿದರೂ ಇನ್ನೂ ಅರ್ಧ ಮೈಲಿಯಷ್ಟು ಸಾಲದೇ ಹೋಗುವುದು. ಇದೇ ಪ್ರಪಂಚದಲ್ಲೆಲ್ಲಾ ಅಳವಾದ ಪ್ರದೇಶ.

* * * * *

ಅಮೇರಿಕದಲ್ಲಿ ನೀಗ್ರೋ ಎಂಬ ಸ್ವದೇಶ ಜನಗಳ ಮುಖ್ಯ ಅಧಿಪತಿಯಾದ ವಾಷಿಂಗ್‌ಟನ್ ಎಂಬುವನು ಈಚೆಗೆ ತನ್ನ ಜಂತೆಯರು ಅನ್ಯರ ಉದ್ಯೋಗವನ್ನೂ ಕಲಿಯದಿದ್ದರೂ ವ್ಯಾಪಾರಕ್ಕೆ ಆಧಾರವಾದ ವ್ಯವಸಾಯವನ್ನೂ ಭೂಮಿಯನ್ನು ಉತ್ತು ಉತ್ತಮವಾದ ಪೈರು ತೆಗೆಯುವುದನ್ನೂ ತಮ್ಮ ಮನೆಗಳನ್ನು ಹ್ಯಾಗಿರಬೇಕೋ ಆ ಕ್ರಮಗಳನ್ನೂ ಕಲಿತು ಬುದ್ಧಿವಂತರಾದರೆ ಸಾಕೆಂದು ತಿಳಿಸಿರುತ್ತಾನೆ

* * * * *

ಪ್ರಪಂಚದಲ್ಲೆಲ್ಲಾ ಗುಲಾಮರನ್ನು ಕೊಂಡು ಇಟ್ಟುಕೊಳ್ಳುವುದರಲ್ಲಿ ಚೈನಾ ದೇಶವೇ ಬಹಳ ಹೆಸರಾಗಿದೆ. ಆ ದೇಶದಲ್ಲಿರುವ ೩೦ ಕೋಟಿ ಪ್ರಜೆಗಳ ಪೈಕಿ ೧೦ ಕೋಟಿಯ ವರೆಗೆ ಗುಲಾಮರೇ ಆಗಿದ್ದಾರೆ. ಸ್ವಲ್ಪ ಉಪವತ್ತಿಯುಳ್ಳ ಮನೆತನದವರು ಕೂಡ ಅನೇಕ ಗುಲಾಮರನ್ನು ಇಟ್ಟುಕೊಳ್ಳುತ್ತಾರೆ. ಆ ಮಕ್ಕಳಿಗೆ ಏಳು ಅಥವಾ ಎಂಟು ವರುಷವಾದಾಗ ಅವರನ್ನು ಅವರ ತಾಯಿತಂದೆಗಳು ಮನೆಯ ಕೆಲಸಗಳನ್ನು ಮಾಡುವುದಕ್ಕೆ ಕೊಂಡುಕೊಳ್ಳುವದೇ ಜಾಸ್ತಿ. ಆ ಗುಲಾಮರ ಬೆಲೆಯು ೩೦ ರೂಪಾಯಿನಿಂದ ಚನ್ನಾಗಿದ್ದರೆ ೬೦ ರೂಪಾಯಿ ವರೆಗೂ ಆಗುವುದು.

* * * * *

ಪ್ರಪಂಚದಲ್ಲಿ ಅನೇಕ ವಿಧಗಳಾದ ಆರ್ಕಿಡ್‌ಗಿಡಗಳಿರುವವು. ಅವುಗಳ ಪೈಕಿ ಯೂರೋಪ್ ಖಂಡದಲ್ಲಿ ಹತ್ತು ಸಾವಿರ ವಿಧಗಳೂ ಇಂಡಿಯಾದಲ್ಲಿ ಹದಿನೈದು ಸಾವಿರವೂ ಸಿಕ್ಕುತ್ತವೆ ಉತ್ತರ ಅಮೇರಿಕ ಖಂಡದಲ್ಲಿರುವ ಯೂರೋಪ್ ಖಂಡದಷ್ಟು ದೊಡ್ಡದಾದ ಬ್ರಿಟಿಷರ ಸ್ವಾಸ್ಥ್ಯಗಳಲ್ಲಿ ಐದು ಸಾವಿರ ಗಿಡಗಳು ಮಾತ್ರವೇ ಸಿಕ್ಕುತ್ತವೆ. ದಕ್ಷಿಣ ಆಫ್ರಿಕಾದಲ್ಲಿರುವ ಗುಡ್ ಹೋಪ್ ಭೂಶಿರ ಪ್ರಾಂತ್ಯದಲ್ಲಿಯೂ ನೇಟಾಲ್ ರಾಜ್ಯದಲ್ಲಿಯೂ ಅಮೂಲ್ಯವಾದ ಹತ್ತು ಸಾವಿರ ಗಿಡಗಳು ಬೆಳೆಯುತ್ತವೆ. ಆಸ್ಟ್ರೇಲಿಯಾ ದ್ವೀಪವು ಅನೇಕ ತರಹವಾದ ಗಿಡಗಳನ್ನುಳ್ಳದಾಗಿದ್ದಾಗ್ಯೂ ಹತ್ತು ಸಾವಿರ ಗಿಡಗಳು ಮಾತ್ರವೇ ಇದುವರೆಗೆ ಸಿಕ್ಕಿರುವವು.

* * * * *

೧೮೧೨ ರಲ್ಲಿ ಇಂಗ್ಲೀಷರಿಗೂ ಅಮೇರಿಕಾದವರಿಗೂ ನಡೆದ ಯುದ್ಧದಲ್ಲಿ ಪ್ರಸಿದ್ಧ ಪಡೆದ ಹೀರಾಂಕ್ಯಾಂಕ್ ಎಂಬುವನಿಗೆ ಈಗ ೧೧೨ ವಯಸ್ಸಾಗಿದೆ. ಅವನಿಗೆ ತಾನು ಸತ್ತ ಮೇಲೆ ತನ್ನ ಉತ್ತರಕ್ರಿಯಾದಿಗಳನ್ನು ಮಾಡುವುದು ಜ್ಞಾಪಕವಿರಲೆಂತಲೂ, ತನಗೆ ಬಹಳ ಅಲ್ಪವಾದ ಸ್ವರ್ಣ ಬರುವುದೆಂತಲೂ, ಅದು ಜೀವನಕ್ಕೆ ಸಾಲದೆಂತಲೂ ಆಲೋಚಿಸುತ್ತಿದ್ದನು. ಇದನ್ನು ಆ ಬ್ರೂಕ್ಲಿನ್ ನಗರದ ಆಲೋಚನಾ ಸಭೆಯ ಸೈನಿಕರುಗಳು ಚರ್ಚಿಸಿ, ಅವನ ಉತ್ತರಕ್ರಿಯಾದಿಗಳಿಗೆ ಬೇಕಾದಷ್ಟು ಹಣವನ್ನು ತಾವು ಕೊಡುವದಾಗಿಯೂ ಅವನೇನೂ ಯೋಚನೆಮಾಡುವ ಅವಶ್ಯಕವಿಲ್ಲವೆಂತಲೂ ಅವನಿಗೆ ತಿಳಿಸಿ ಅವನ ಚಿಂತೆಯನ್ನು ನಿವಾರಣೆ ಮಾಡಿದರು.

* * * * *

ಕಳೆದ ಶತಮಾನದಲ್ಲಿ ನಡೆದ ಯುದ್ಧಗಳಲ್ಲಿ ಮೃತಪಟ್ಟ ಜನಸಂಖ್ಯೆಯನ್ನು ಪ್ಯಾರಿಸ್ ಪಟ್ಟಣದ ಒಬ್ಬಾನೊಬ್ಬ ಪ್ರಸಿದ್ಧ ವೈದ್ಯನು ಪ್ರಕಟಿಸಿರುತ್ತಾನೆ. ಸತ್ತ ಜನಸಂಖ್ಯೆಯು ಸುಮಾರು ಐವತ್ತು ಲಕ್ಷ. ಅದರ ಪೈಕಿ ನೆಪೋಲಿಯನನು ನಡಿಸಿದ ಯುದ್ಧಗಳಲ್ಲಿ ೪೦ ಲಕ್ಷ ಜನರೂ, ಕ್ರಿಮಿಯಾ ಮತ್ತು ಇಟಲಿ ದೇಶಗಳಲ್ಲಿ ನಡೆದ ಯುದ್ಧದಲ್ಲಿ ೬ ಲಕ್ಷ ಜನರೂ, ಅಮೇರಿಕದ ಒಳದೇಶದ ಯುದ್ಧದಲ್ಲಿ ೭೦ ಲಕ್ಷ ಜನಗಳೂ, ಫ್ರೆಂಚರಿಗೂ ಜರ್ಮನರಿಗೂ

ನಡೆದ ಯುದ್ಧದಲ್ಲಿ ೪ ಲಕ್ಷ ಜನರೂ ರಷ್ಯನರಿಗೂ ಟರ್ಕಿಯವರಿಗೂ ನಡೆದ ಯುದ್ಧದಲ್ಲಿ ೩ ಲಕ್ಷ ಜನರೂ, ಇಂಡಿಯಾ, ಮೆಕ್ಸಿಕೋ, ಟ್ರಾನ್ಸ್ವಾಲ್, ಮತ್ತು ದಕ್ಷಿಣ ಅಫ್ರಿಕ ಮುಂತಾದ ಸ್ಥಳಗಳಿಗೆ ಅನೇಕಾವರ್ತಿ ಕಳುಹಿಸಿದ ಸೈನ್ಯದಲ್ಲಿ ೩೦ ಲಕ್ಷ ಜನರೂ ಮೃತಪಟ್ಟಿರುತ್ತಾರೆ.

* * * *

ರಷ್ಯಾ ಜಪಾನವರಿಗೆ ಮುಕ್ಡೆನ್ ಬಳಿ ಭೂಯುದ್ಧಗಳು ನಡೆಯುವದರಲ್ಲಿವೆ. ಆ ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳೂ ಹತ್ತಾರು ಸಹಸ್ರ ಪ್ರಜೆಗಳು ತಮ್ಮ ಕಸಬುಗಳನ್ನೆಲ್ಲಾ ತ್ಯಜಿಸಿ ಬಿಂ ಹೊರಟುಬಿಟ್ಟರು. ರೈಲ್ ಮಾರ್ಗದ ಉದ್ದಕ್ಕೂ ಉಭಯ ಪಾರ್ಟಿಗಳವರೂ ಬಹು ಹೋರಾಟ ತನಕ ಘರ್ಷಣೆಯಿಂದ ಫಲಭರಿತವಾಗಿದ್ದ ಪ್ರದೇಶಗಳೆಲ್ಲಾ ನಾಶ ಹೊಂದಿ ಬೈಲಾಗಿವೆ. ಪೈರು ಪಚ್ಚೆ ಎಂಬುದು ಹೆಸರು ಮಾತ್ರಕ್ಕೂ ಉಳಿದಿಲ್ಲ. ಮಂಚೂರಿಯದಲ್ಲಿ ವಿಶೇಷ ಜನಭರಿತವಾಗಿಯೂ ಅತ್ಯಂತ ಫಲಭರಿತವಾಗಿಯೂ ಇದ್ದ ಪಟ್ಟಣಗಳೂ ಗ್ರಾಮಗಳೂ ನಿರ್ಜನಪ್ರದೇಶಗಳಾದ ಕಾಡುಗಳಾಗಿವೆ. ಸಣ್ಣ ದೊಡ್ಡ ಗ್ರಾಮಗಳೂ ವ್ಯಾಪಾರಸ್ಥಾನಗಳೂ ಸಾವಿರಗಟ್ಟಲೆ ಹಾಗಿ ಮಾಳುಬಿದ್ದಿವೆ. ಮನೋಹರವಾದ ಉದ್ಯಾನವನಗಳೂ, ತೋಟಗಳೂ ಅದೃಶ್ಯವಾದವು. ಮನೆಗಳಲ್ಲಿರುವ ಸಾಮಾನುಗಳು ಬಾಗಿಲು ಕಿಟಕಿ ಮೊದಲಾದ ಸಮಸ್ತ ಮರಮುಟ್ಟುಗಳೂ ರಷ್ಯಾ ಸೈನಿಕರಿಗೆ ಸೌದೆಯಾಗಿ ಪರಿಣಮಿಸಿದವು. ಸಹಸ್ರಾರು ಎಕರೆ ಜಮೀನುಗಳಲ್ಲಿ ಬೆಳೆಯಾಗಿದ್ದ ಧಾನ್ಯಗಳ ತೆನೆಗಳೆಲ್ಲಾ ರಷ್ಯದವರ ಎರಡು ಮೂರು ಲಕ್ಷ ಸೈನಿಕರಿಗೂ ಕುದುರೆ ಎತ್ತುಗಳಿಗೂ ಆಹಾರವಾದವು. ರೈತರು ಕಣಗಳಲ್ಲಿ ಒಟ್ಟಿದ್ದ ಧಾನ್ಯದ ಮೆದೆಗಳನ್ನೆಲ್ಲಾ ರಷ್ಯಸೈನಿಕರು ಬಲಾತ್ಕಾರದಿಂದ ತೆಗೆದುಕೊಂಡು ಧ್ವಂಸ ಮಾಡಿದರು. ಅದಕ್ಕಾಗಿ ರೈತರಿಗೆ ಒಂದು ಕಾಸಾದರೂ ಕೊಡಲಿಲ್ಲ, ಕೊಡುವುದಾಗಿ ವಾಗ್ದಾನವನ್ನಾದರೂ ಮಾಡಲಿಲ್ಲ ಎಂಬುದಾಗಿ ಆ ಪ್ರಾಂತ್ಯದಿಂದ ವರ್ತಮಾನ ಬಂದಿರುವದು

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮೆ॥ ಮುಕಾಶೆಟ್ಟಿಯವರು ವೈಸ್‌ರಾಯ ಯವರನ್ನು ಕಂಡು ಬರುವುದಕ್ಕಾಗಿ ಕಲ್ಕತ್ತೆಗೆ ಹೋಗಿದ್ದಾರೆ.

* * * *

ನರಸನಹಳ್ಳಿಯ ಸಿದ್ಧಾಂತಿ ಶ್ರೀನಿವಾಸಶಾಸ್ತ್ರಿಗಳು ವಿಶ್ವಾವಸು ಸಂವತ್ಸರದ ಪಂಚಾಂಗವನ್ನು ರಚಿಸಿ, ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿದ್ದಾರೆ.

* * * *

ಇಲವಾಲದ ರಸ್ತೆಯಲ್ಲಿ ಒಬ್ಬ ಮಹಮ್ಮದೀಯನನ್ನು ಕಳೆದ ವಾರ ಕಳ್ಳರು ಹಿಡಿದು ಹೊಡೆದು ಆತನ ಬಳಿ ಇದ್ದ ಹಣವನ್ನು ಕಸಿದುಕೊಂಡರೆಂದು ಕೇಳುತ್ತೇವೆ.

* * * *

ಮಹಾರಾಣಿಯವರ ಕಾಲೇಜಿನಲ್ಲಿ ನಾಲ್ವರು ವಿದ್ಯಾರ್ಥಿನಿಯರು ಪಂಡಿತಪರೀಕ್ಷೆಗೆ ವ್ಯಾಸಂಗ ಮಾಡುತ್ತಿದ್ದಾರೆ. ಇವರಿಗೆ ತಲಾ ೧೦ ರೂಪಾಯಿ ವೇತನ ಕೊಡುವಂತೆ ಏರ್ಪಾಡಾಗಿದೆ.

* * * *

ಕೆಲವು ತಿಂಗಳ ಕೆಳಗೆ ಆದ ಭೂಕಂಪದ ದೆಸೆಯಿಂದ ಮಡಿಕೇರಿಯಲ್ಲಿ ಅನೇಕ ಕಟ್ಟಡಗಳು ಅಲ್ಲಾಡಿ ನಷ್ಟವಾಯಿತೆಂತಲೂ, ಒಂದು ಕಟ್ಟಡಕ್ಕೆ ರಿಪೇರಿ ಮಾಡಲು ೭,೦೦೦ ರೂಪಾಯಿ ಖರ್ಚಾಗಬೇಕಾಗಿದೆ ಎಂತಲೂ ಪ್ರಕಟವಾಗಿದೆ.

* * * *

ರಾಜಧಾನಿಯಲ್ಲಿ ಸಿಡುಬಿನ ಉಪದ್ರವು ಬಹಳ ಜೋರಾಗಿರುವುದರಿಂದ ಮಕ್ಕಳಿಗೆಲ್ಲಾ ತಂದೆ ತಾಯಿಗಳು ಸಿಡುಬುಹಾಕಿಸಿಬಿಟ್ಟರೆ ಅವರ ಕಷ್ಟನಷ್ಟಗಳು ತಪ್ಪುವುವೆಂದು ಮ್ಯುನಿಸಿಪಲ್ ವೈಸ್ ಪ್ರಸಿಡೆಂಟರು ಪ್ರಜೆಗಳಿಗೆಲ್ಲಾ ತಿಳಿಯಪಡಿಸಿರುತ್ತಾರೆ.

* * * *

ಮಹಾರಾಣಿಯವರ ಕಾಲೇಜ್ ಲೇಡಿ ಸೂಪರಿಂಟೆಂಡೆಂಟಾದ ಮಿಸ್ ಹಾಲಿವಾರ್ಟ್ ಯವರಿಗೆ ಸಿಡುಬು ಹತ್ತಿ ಸುಮಾರು ಎಂಟುದಿನಗಳಾದವು. ಡಾಕ್ಟರ್ ಸ್ಮಿತ್ ಸಾಹೇಬರೂ ಮೆ॥ ಕೃಷ್ಣಸ್ವಾಮಿ ಮೊದಲಿಯಾರರೂ ಅವರನ್ನು ನೋಡಿ ಚಿಕಿತ್ಸೆ ಮಾಡುತ್ತಿದ್ದಾರೆ. ಉಪದ್ರವು ನಿವಾರಣೆಯಾಯಿತೆಂದು ಹಾರೈಸುತ್ತೇವೆ.

* * * *

ಶಿವಮೊಗ್ಗೆಯಲ್ಲಿ ಬಹುಕಾಲದಿಂದ ವಿದ್ಯಾರ್ಥಿಗಳು ಎಫ್. ಎ. ಪರೀಕ್ಷೆಗೆ ಓದುವುದಕ್ಕೆ ಅನುಕೂಲವಾಗಿತ್ತು. ಸರ್ಕಾರದವರು ಈ ಅನುಕೂಲವನ್ನು ಇದೇ ಜನವರಿಯಿಂದ ತಪ್ಪಿಸಿದ್ದಾರೆ. ಆ ಪ್ರಾಂತ್ಯದಿಂದ ಮೈಸೂರಿಗಾಗಲಿ ಬೆಂಗಳೂರಿಗಾಗಲಿ ಬಂದು ಆ ಪರೀಕ್ಷೆಗೆ ಓದತಕ್ಕ ವಿದ್ಯಾರ್ಥಿಗಳಿಗೆ ತಲಾ ೧೦ ರೂಪಾಯಿ ಹಂತೆ ಒಂದು ವರುಷ ವೇತನ ಕೊಡಬೇಕೆಂದು ತೀರ್ಮಾನಿಸಿರುವಂತೆ ಕೇಳುತ್ತೇವೆ.

ಪ್ರಾದೇಶಿಕ ವರ್ತಮಾನಗಳು.

ದಾವಣಗೆರೆ.—ಇದೇ ದಾವಣಗೆರೆ ಟೌನಿಗೆ ಬಾಲಿಕೆಯರ ಪಾಠಶಾಲೆ ಇಲ್ಲದೆ ಬಾಲಿಕೆಯರುಗಳ ವಿದ್ಯಾಭ್ಯಾಸಕ್ಕೆ ತುಂಬಾ ಅಡಚಣೆಯಾಗಿತ್ತು. ಇದನ್ನು ತಿಳಿದು, ಇಲ್ಲಿಗೆ ವರ್ಗಹೊಂದಿ ಬಂದಿರುವ ನಮ್ಮ ಅಮಲ್ದಾರರು ಮತ್ತು ಅಸಿಸ್ಟೆಂಟ್ ಸರ್ಜನರು ಮೇಲ್ಕಂಡ ಬಾಲಿಕೆಯರುಗಳ ಪಾಠಶಾಲೆಯನ್ನು ಇದೇ ಮಾಹೆ ತಾರೀಖು ೧೫ ನೆ ಭಾನುವಾರ ಮಧ್ಯಾಹ್ನ ೩ ಘಂಟೆಗೆ ಸ್ಥಾಪನೆಮಾಡಿದರು. ಆ ಕಾಲದಲ್ಲಿ ಸಬ್ ಡಿವಿಜನ್ ಆಫೀಸರ್ ಮೆ॥ ಕಿಂಗ್‌ಯು ಪರು, ಶಿರಸ್ತೇದಾರರು ಇತರ ಆಫೀಸರುಗಳು, ಮುನಿಸಿಪಲ್ ಮೆಂಬರುಗಳು, ದೊಡ್ಡ ದೊಡ್ಡ ಮನುಷ್ಯರುಗಳು ಎಲ್ಲಾ ಸೇರಿದ್ದರು. ಆ ಕಾಲದಲ್ಲಿ ರಾ॥ ಗುರುಸ್ವಾಮಿನಾಯ್ಡು ಯವರ ಸಂಗೀತದಿಂದಲೂ ಗಡ ಮುಂತಾದ ವಾದ್ಯಘೋಷದಿಂದ ಕೂಡಿದ ಗಾನದಿಂದ ಸಭಾಸದರೆಲ್ಲರೂ ಅತ್ಯಾನಂದಪಟ್ಟರು. ಗಾನಾನಂತರ ಗಂಧ ಪುಷ್ಪ ತಾಂಬೂಲಂಗಳಿಂದಲೂ ಸುಗಂಧದ್ರವ್ಯಗಳಿಂದಲೂ ರಾ॥ ಸ್ಕೂಲ್ ಇನ್ಸ್ಪೆಕ್ಟರವರು ಬಹಳ ಸಂತೋಷ ಪಡಿಸಿದರು. ಮುಂದೆ ಸದ್ರಿ ಸ್ಕೂಲು ಅಭಿವೃದ್ಧಿ ಸ್ಥಿತಿಗೆ ಬರಲೆಂದು ಹಾರೈಸುತ್ತೇವೆ —ಇದೇ ದಾವಣಗೆರೆ ಛತ್ರದ ಸಮೀಪದಲ್ಲಿ ಕಟ್ಟಿ ಇರತಕ್ಕ ೬೦ ಅಡಿ ಆಳವುಳ್ಳ ಭಾವಿಯಲ್ಲಿ ಹಾಲಿ ೨ ಅಡಿ ನೀರು ಇದೆ ಈ ನೀರು ತುಂಬಾ ಹಾಳಾಗಿದೆ. ಇದೇ ಟೌನಿಗೆ ಸೇರಿದ ರಾಮಪುರವು ಎಂಬ ಭಾವಿಯಲ್ಲಿ ಯಾವಾಗ್ಯು ಜಲ ಇದ್ದೇ ಇರುತ್ತೆ. ಸರ್ವದಾ ಈ ಭಾವಿ ಆಧಾರವಲ್ಲದೆ ಬೇರೆ ಯಾವದೂ ಇಲ್ಲ.

ಚೆನ್ನಪಟ್ಟಣ.—ಇಲ್ಲಿ ಪ್ಲೇಗ್ ಇನ್ನು ಇದೆ ೨—೩ ದಿನಕ್ಕೆ ಒಂದೊಂದು ಮರಣ ಉಂಟು. ಗಂಡು ಹುಡುಗರ ಸ್ಕೂಲುಗಳು ತೆಗೆದು ಇದ್ದರೂ ಹುಡುಗರು ಬಹು ಕಡಿಮೆ.—೧೯೦೪ ನೇ ಡಿಸೆಂಬರ್ ೨೬ ರಲ್ಲಿ ಹೊಂಗನೂರಿನ ೩ ಜನ ಮುಸಲ್ಮಾನರು ರೇಷ್ಮೆ ವ್ಯಾಪಾರಕ್ಕಾಗಿ ಗರ್ಕಹಳ್ಳಿ ಮಾರ್ಗವಾಗಿ ಹೋಗುತ್ತಾ ಇದ್ದರು. ಇವರನ್ನು ಸೋಗಾಲದ ಮುದ್ದ ಮಲ್ಲಯ್ಯನ ಪುಟ್ಟಯ್ಯ, ಬಸವ ಮುಂತಾದವರು ಹುಣಸೇ ಮರದ ಹತ್ತಿರ ತಲೆ ಹೊಡೆಯುವ ಹಾಗೆ ಬಹಳವಾಗಿ ಹೊಡೆದು, ಗಾಯ ಮಾಡಿದ್ದಾರೆ. ಇವರನ್ನು ಆಸ್ಪತ್ರೆಗೆ ತಂದು ಇದ್ದಾರೆ. ಅಪರಾಧಿಗಳಲ್ಲಿ ಬಸವ, ಪೀರ್‌ಖಾ ಇಬ್ಬರು ಮಾತ್ರ ಸಿಕ್ಕಿ ಇದ್ದಾರೆ —ಚನ್ನಪಟ್ಟಣದಲ್ಲಿ ಎಂಡೋಮೆಂಟ್ ಇನ್ಸ್ಟಿಟ್ಯೂಷನ್ ಎಂಬ ಉತ್ಪತ್ತಿ ಕಲ್ಪನಾ ಸಂಘವನ್ನು ಮಾಕಂ ರಾಮಸಂಜೀವಶೆಟ್ಟರು ಮ್ಯಾನೇಜರಾಗಿ ನಡೆಸುವದಕ್ಕೆ ಯತ್ನ ಮಾಡುತ್ತಾ ಇದ್ದಾರೆ. ಮೈಸೂರು ದೇಶದಲ್ಲಿ ಇದು ಇದ್ದರೆ ಸಹಾಯವಾದೀತು. ಮಳೂರಲ್ಲಿ ಕಲ್ಕತ್ತಾ ಪ್ರಾವಿಡೆಂಟ್ ಫಂಡಿಗೆ ಕೆಲವು ಜನ ಸೇರಿದ್ದಾರೆ. ಹಣದ ರಸೀದಿ ಬರಲಿಲ್ಲವೆಂದು ಹಣ ಕಳುಹಿಸುವದಕ್ಕೆ ಸಂದೇಹಪಡುತ್ತಾರಂತೆ ಇಲ್ಲಿನ ಏಜೆಂಟರಾದ ಹೆಡ್ ಮಾಸ್ಟರು ಲಕ್ಷ್ಮೀನರಸಿಂಹಯ್ಯಂಗಾರ್ರು ಇವರಿಗೆ ತಿಳಿಸುವದೇನಂದರೆ—ಇವರ ಹಣದ ರಸೀದಿ ನನ್ನಲ್ಲಿ ಬಂದಿವೆ. ಕಲ್ಕತ್ತೆಯಲ್ಲಿ ಲೆಕ್ಕವನ್ನು ಕ್ರಮವಾಗಿ ಇಡುತ್ತಾ ಇದ್ದಾರೆ ಸಂದೇಹಪಟ್ಟು ತಮ್ಮ ಹಣವನ್ನು ಕಳಕೊಳ್ಳದೆ ಮುಂದೆ ಹಣವನ್ನು ಕ್ರಮ ಪ್ರಕಾರ ಕೊಡುತ್ತಾ ಬರಬೇಕೆಂದು ಹೇಳುತ್ತಾರೆ.

ಸಂತೆಸರಗೂರು.—ಈ ಊರಿನಲ್ಲಿ ಅಲ್ಲಲ್ಲಿ ಇಲಿಗಳು ಇನ್ನೂ ಸಾಯುತ್ತಾ ಇವೆ ಮೂರು ನಾಲ್ಕು ದಿವಸಕ್ಕೊಂದಾವರ್ತಿ ಮೂರು ನಾಲ್ಕು ಈ ರೋಗಕ್ಕೆ ಮರಣಗಳಾಗುತವೆ ಕಸಬಾದಲ್ಲಿದ್ದ ಜಮಾಲೆಕ್ಕದಾರು ಈ ರೋಗಕ್ಕೆ ತುತ್ತಾದರು ರೋಗವು ಇನ್ನೂ ತುಂಬಾ ಜಾಸ್ತಿಯಾಗಿಲ್ಲ —ಬಾವಲಿನ ಕಾಟ ಸಹಸಲಕ್ಷ್ಯವಾಗಿದೆ. ಮಳೆಯು ಪ್ರಸ್ತಾಪವೇ ಇಲ್ಲ. ಚಿತ್ತ ಪೈರು ಕೆಟ್ಟುಹೋಯಿತು, ಬಡಬಗ್ಗರಿಗೆ ಜೀವನಕ್ಕೆ ತುಂಬಾ ತೊಂದರೆಯಾಗಿದೆ —ಈ ಟವಿನ್ ಸಬ್ ಅಸಿಸ್ಟೆಂಟ್ ಸರ್ಜನರವರು ತುಂಬಾ ಸಮರ್ಥರು ಪ್ಲೇಗು ಕಾಲದಲ್ಲಿ ಜನರಿಗೆ ಔಷಧೋಪಚಾರಗಳನ್ನು ಬಹಳ ವಿಶ್ವಾಸದಿಂದ ಕೊಟ್ಟು ಉಪಚರಿಸುತ್ತಿದ್ದಾರೆ —ಇಲ್ಲಿನ ಅಮಲ್ದಾರವರು ಪ್ರತಿದಿನವೂ ಮುನಿಸಿಪಾಲಿಟಿ ವಿಷಯಗಳನ್ನು ಪರಿಶೀಲಿಸುತ್ತಲೂ ದೇವಸ್ಥಾನದ ನ್ಯೂನಾತಿರಿಕ್ತಗಳನ್ನು ಕ್ರಮಪಡಿಸುತ್ತಲೂ ಇದ್ದಾರೆ —ಇಲ್ಲಿನ ಸಬ್ ಡಿವಿಜನ್ ಆಫೀಸರವರು ಗುಂಡ್ಲುಪೇಟೆ ಪ್ರಾಂತ್ಯ ಸರ್ಕೀಟು ದಯಮಾಡಿಸಿರುತ್ತಾರೆ.—ಇಲ್ಲಿಗೆ ಸ್ಕೂಲಿನಲ್ಲಿ ಈ ವರ್ಷ ೧೨ ಜನ ವಿದ್ಯಾರ್ಥಿಗಳು ಅಪ್ಲಿಕೇಷನ್ ಮಾಡಿದ್ದರು ಈ ಪೈಕಿ ೧೦ ಜನರಿಗೆ ತೇರ್ಗಡೆಯಾಯಿತು ಇಲ್ಲಿನ ಹೆಡ್ ಮಾಸ್ಟರವರೂ ಅಸಿಸ್ಟೆಂಟ್ ಮಾಸ್ಟರುಗಳೂ ಕಷ್ಟಪಟ್ಟು ಕೆಲಸಗಳನ್ನು ಜರಗಿಸುತ್ತಾರೆ —ಸ್ಕೂಲಿನಲ್ಲಿ ವ್ಯವಸಾಯದ ಪೈಕಿ ಮುಳುಗಾಯಿಯನ್ನು ಕಿತ್ತು ಹರಾಜು ಮಾಡಿದ್ದಾಯಿತು ಇದರಿಂದ ಸುಮಾರು ೩—೪ ರೂಪಾಯಿ ಉತ್ಪತ್ತಿಯಾಯಿತು ಪೈರುಗಳೆಲ್ಲಾ ಬಹಳ ಚನ್ನಾಗಿವೆ. ಹೆಡ್ ಮಾಸ್ಟರವರ ಮತ್ತು ಎಲ್ಲಾ ಮಾಸ್ಟರುಗಳ ಮುತುವರ್ಜಿಯೇ ಇದಕ್ಕೆ ಕಾರಣವಾಗಿರುತ್ತೆ —ಈ ಕಾಲ್ನೇಕಿನ ಮುನಿಸಿಪಾಲಿಟಿ ಬಹಳ ಚನ್ನಾಗಿದೆ ಮುನಿಸಿಪಲ್ ಕಮೀಷನರುಗಳೂ ಬಹಳ ಕಷ್ಟಪಟ್ಟು ಸ್ವಲ್ಪವೂ ಗಲೀಜಾಗದಂತೆ ನೋಡಿಕೊಳ್ಳುತ್ತಾರೆ ಹವ ಬಹಳ ಚನ್ನಾಗಿದೆ ಇದರಿಂದಲೇ ಪ್ಲೇಗ್ ಜಾಡ್ಯವು ಈ ವರುಷ ಈ ಊರಿನಲ್ಲಿ ಜಾಸ್ತಿಯಾಗಿಲ್ಲ ಮುನಿಸಿಪಲ್ ಕಮೀಷನರವರ ಕಷ್ಟವನ್ನು ಹೇಳಲಶಕ್ಯ —ಹೊಸದಾಗಿ ದಯಮಾಡಿಸಿರುವ ಮುನ್ಸಿಫ್ ಮೆ॥ ಎಸ್ ಶೇಷಗಿರಿರಾಯರವರು ತುಂಬಾ ಸಮರ್ಥರು ಬಾಕಿ ಇದ್ದ ನೊಕದ್ದಮೆಗಳನ್ನು ಜಾಗ್ರತೆಯಾಗಿ ಫೈಸಲ್ ಮಾಡುತ್ತಿದ್ದಾರೆ.

ತಿಪಟೂರು.—ಈ ಟವನಿಗೆ ಪದೇ ಪದೆ ಸಂಭವಿಸುತ್ತಿರುವ ಪ್ಲೇಗು ಗಲಾಟೆ ಗಾಬರಿಗಾಗಿ ಊರುಬಿಟ್ಟು ಹೊರಗಡೆ ೩—೪ ಸ್ಥಳಗಳಲ್ಲಿ ಷೆಡ್ಡುಗಳನ್ನು ಹಾಕಿಕೊಳ್ಳುತ್ತಾರೆ. ಈ ಸಾರಿಯೂ ಊರು ಬಿಟ್ಟು ೨ ತಿಂಗಳಾಯಿತು. ಇಂಥಾ ಸಮಯದಲ್ಲಿ ಮಳೆ ಇಲ್ಲದೆ ದಿನಸಿ ಧಾನ್ಯ ತುಂಬಾ ಚಡಾವು ಆಗಿ ಬಡಬಗ್ಗರಿಗೆ ತುಂಬಾ ಕಷ್ಟವಾಗಿದೆ. ಮೇಲುಕೆರೆ ಭಾವಿಗಳು ಬತ್ತಿಹೋಗಿ ನೀರಿಲ್ಲದೆ ತುಂಬಾ ಬಾಧೆಪಡುವ ಬಡಬಗ್ಗರ ಕಷ್ಟನಿವಾರಣೆಗೆ ಇದೇ ಊರಿನಲ್ಲಿ ಬಹಳ ದಿವಸಗಳಿಂದ ಭಾರಿಯಾಗಿ ಕಂಪನಿ ವ್ಯಾಪಾರ ನಡೆಸುತ್ತಿರುವ ಮೆ॥ ಸಾ॥ ದಾವಣಗೆರೆ ಮಲ್ಲೇಶಪ್ಪನವರು ಬೆಂಗಳೂರು ಹೊನ್ನಾವರದ ರಸ್ತೆ ಪಕ್ಕದಲ್ಲಿರುವ ಚಂದ್ರಗಿರಿಯವರ ಹೊಲದಲ್ಲಿ ಚಂದರೂಪವಾಗಿ ಒಂದು ಭಾವಿಯನ್ನು ತೆಗೆಸಿದರು. ಇದಕ್ಕೆ ಮೆ॥ ಮಲ್ಲೇಶಪ್ಪನವರು ೧೦೦ ರೂ ಪಲಾಗಟ್ಟಿ ಚನ್ನೇಶಪ್ಪನವರು ೩೫ ರೂ ಕೋಳೆನೂರು ಮಡಿವಾಳಪ್ಪನವರು ೨೫ ರೂ. ಹುಂಡೇಕಾರ ಪುಟ್ಟಸಿದ್ದಪ್ಪನವರು ೨೫ ರೂ. ಹಕೀಂಸಾಬ್ರು ೨೫ ರೂ. ಹೀಗೆ ಜಮ್ಲ ೨೫೦ ರೂಪಾಯಿಗಳ ಖರ್ಚಿನಲ್ಲಿ ಕಲ್ಲುಕಟ್ಟು ಭಾವಿಯನ್ನು ತೆಗೆಸಿದರು. ಇದರ ಸೂಪರ್ವೈಜರು ಕೆಲಸವನ್ನು ಇಲ್ಲಿನ ಗ್ರಾಂಡಿಗೆ ಮೆ॥ ಬಂಡಯ್ಯನವರು ವಹಿಸಿಕೊಂಡು, ಮುತುವರ್ಜಿಯಿಂದ ಒಂದು ತಿಂಗಳೊಳಗಾಗಿ ಪೂರೈಸಿರುತ್ತಾರೆ. ಇದರಲ್ಲಿ ಕೆನ್ನೀರು ೩ ಆಳುದ್ದ ಇದೆ ಇದೇ ಸಾ. ದಾ. ಮಲ್ಲೇಶಪ್ಪನವರು ತಮ್ಮ ಸ್ವಂತ ಲಾಗುವದರಿಂದ ಸುಮಾರು ೫೦೦—೬ ರೂಪಾಯಿ ವೆಚ್ಚದಿಂದ ಇದೇ ರೋಡು ಪಕ್ಕದ ಬಡಗಿ ಇನಾಮು ಜಮೀನಿನಲ್ಲಿ ಒಂದು ದೊಡ್ಡ ಕಲ್ಲುಕಟ್ಟಡದ ಭಾವಿಯನ್ನು ತೆಗೆಸುತ್ತಿದ್ದಾರೆ. ಅದರಲ್ಲಿ ಜಲಕಂಡಿದೆ. ಕಲ್ಲುಕಟ್ಟಡವಾಗುತ್ತ ಇನ್ನು ೧೫ ದಿವಸಗಳೊಳಗೆ ಪೂರೈಸಬಹುದು. ಇದರ ಸ್ಟ್ರಾಜೆಂಗು ಕೆಲಸವನ್ನು ಇಲ್ಲಿನ ಮೆ॥ ನಷ್ಟದಾಗ ಮಹಮ್ಮದ್ ಸ್ವಾರ್ ಸಾಹೇಬರು ವಹಿಸಿಕೊಂಡು, ಇಷ್ಟು ದೊಡ್ಡ ಕಟ್ಟಡವನ್ನು ತುಂಬಾ ಚಟುವಟಿಕೆಯಿಂದ ಸುಮಾರು ಒಂದುವರೆ ತಿಂಗಳಿಗಾಗಿ ಪೂರೈಸಿದ್ದಕ್ಕಾಗಿ ಜನಗಳು ತುಂಬಾ ಕೊಂಡಾಡುತ್ತಾರೆ.

ಮೈಸೂರು.—ಈಗ ಸುಮಾರು ಆರು ತಿಂಗಳಿಂದ ಪ್ಲೇಗ್ ಉಪದ್ರವ ಹಾವಳಿಯು ಪ್ರಬಲವಾಗಿತ್ತು. ಈ ಉಪದ್ರವು ಕಡಿಮೆಯಾದ ಮೇಲೆ ಈಗ ಸಿಡುಬಿನ ಉಪದ್ರವು ಊರಿಗೆ ತಲೆಹಾಕಿ, ಅನೇಕ ಮಕ್ಕಳನ್ನು ತೊಂದರೆಪಡಿಸುತ್ತ ಇದೆ. ಇದು ಇನ್ನೂ ಹೆಚ್ಚಾಗಿ ಪ್ರಬಲವಾಗುವದಕ್ಕಿಂತ ಮೊದಲೇ ಜನರು ತಮ್ಮ ಮಕ್ಕಳಿಗೆ ಸಿಡುಬುಹಾಕಿಸಿಬಿಟ್ಟರೆ ಬಹು ಉತ್ತಮವಾಗಿರುವದು. ಈ ವಿಷಯದಲ್ಲಿ ಇಲ್ಲಿನ ಡಾಕ್ಟರವರು ಸ್ವಲ್ಪ ಪ್ರಯತ್ನ ತೆಗೆದುಕೊಂಡರೆ ತುಂಬಾ ಉಪಕಾರವಾಗುವದು ಮಾತ್ರವಲ್ಲ ಜನರಿಗೆ ಕ್ಷೇಮ ಉಂಟಾಗುವದು.—ಈ ವರೆಗೂ ಈ ತಾಲ್ಲೂಕಿಗೆ ಸಾಧಾರಣವಾಗಿ ಎರಡನೇ ಕ್ಲಾಸ್ ಮೊದಲನೇ ಕ್ಲಾಸ್ ಅಮಲ್ದಾರುಗಳು ಬರುತ್ತಿದ್ದದ್ದರಿಂದ ಜನರಿಗೆ ಬಹು ಕ್ಷೇಮಕರವಾಗಿತ್ತು. ಆದರೆ ಈಗ ಮೊದಲನೇ ಎರಡನೇ ಕ್ಲಾಸ್ ಮೊಕದ್ದಮೆಗಳೆಲ್ಲ ಮೈಸೂರಿಗೆ ವರ್ಗಾಯಿಸಲ್ಪಡುವದರಿಂದ ಸುಮಾರು ೫೦—೬೦ ಮೈಲಿ ದೂರದಿಂದ ಜನರು ಮೈಸೂರಿಗೆ ಹೋಗಿಬರುವದು ತುಂಬಾ ತೊಂದರೆಯೂ ಪ್ರಯಾಸವೂ ಆಗಿದೆ ಆದ್ದರಿಂದ ಪ್ರಜಾಹಿತಚಿಂತಕರಾದ ಸರ್ಕಾರದವರು ದೀರ್ಘಾಲೋಚನೆಮಾಡಿ, ಜನ ಕಷ್ಟವನ್ನು ನಿವಾರಣೆ ಮಾಡುವರೆಂದು ಹಾರೈಸುತ್ತೇನೆ —ಇದು ಮಾತ್ರವಲ್ಲದೆ ಈ ಪ್ರಾಂತ್ಯದಲ್ಲಿ ಒಂದು ಮುನ್ಸಿಫ್ ಕೋರ್ಟು ಇಲ್ಲದಿರುವದು ರೈತಾಪಿಜನರಿಗೆ ಮತ್ತೊಂದು ಕಷ್ಟ ಈ ತಾಲ್ಲೂಕಿನಲ್ಲಿ ಸರ್ಕಾರದವರು ಒಂದು ಮುನ್ಸಿಫ್ ಕೋರ್ಟ್ ಇಟ್ಟುದಾದರೆ ಯಳಂದೂರು, ಹೆಗ್ಗಡದೇವನ ಕೋಟೆ, ಪಿರಿಯಾಪಟ್ಟಣ, ಬಿಳಿಕೆರೆ ಪತ್ತರ ಮುಂತಾದ ಸ್ಥಳಗಳಿಂದ ಮೈಸೂರಿಗೆ ಹೋಗುವ ಜನರ ಕಷ್ಟವು ತಪ್ಪಿದಂತಾಗುವದು —ಈ ಟವನಿನಲ್ಲಿ ಪ್ರತಿ ಗುರುವಾರ ಸಂತೆ ನಡೆಯುತ್ತದೆ. ಈ ಸಂತೆಯಲ್ಲಿ ಕಪ್ಪ ಮೊಳಲವಾಡಿ ಮಲ್ಯಾಸರು ಜವಳಿ ತಂದು ವ್ಯಾಪಾರ ಮಾಡುತ್ತಾರೆ. ಕಳೆದ ೧೨ ತಾ॥ ಗುರುವಾರದ ಸಂತೆ ದಿವಸ ಈ ವ್ಯಾಪಾರಸ್ಥರು ಮಾಮೂಲು ಕೊಡದೆ, ಕೆಲವು ಜವಳಿಗಳನ್ನು ಇಟ್ಟುಕೊಂಡು, ಮಾರುತ್ತಾ ಇದ್ದು ಹೊಸದಾಗಿ ಬಂದಿರುವ ಪೊಲೀಸ್ ಗಾರ್ಡಿಯನ್ ಅಮಲ್ದಾರ್ ರಿಪೋರ್ಟು ಹೋಗಲು ಅವರು ಶಿರಸ್ತೇದಾರರನ್ನೂ ಪೋಲೀಸಿನವರನ್ನು ಕಳುಹಿಸಿದರು ಇವರು ಬಂದು ಮಾಮೂಲ್ ಇಲ್ಲದೆ ಜವಳಿ ವ್ಯಾಪಾರ ಮಾಡುತ್ತಿದ್ದವರನ್ನು ಹಿಡಿದು ಕಛೇರಿಗೆ ತಂದದ್ದರಿಂದ ೨೩ ಚಿಲ್ಲರೆ ರೂಪಾಯಿ ವಸೂಲಾಯಿತು ಇದಕ್ಕೆ ಹಿಂದೆ ೩—೪ ರೂ ವಸೂಲಾಗುವದು ಪ್ರಯಾಸವಾಗಿತ್ತು. ದೊಡ್ಡ ಅಧಿಕಾರಿಗಳು ಎಲ್ಲಾ ಬಾಬಿನಲ್ಲಿಯೂ ನಿಗಾ ಇಟ್ಟರೆ ಸರ್ಕಾರಕ್ಕೆ ತುಂಬಾ ಆದಾಯವಾಗುವದೆಂಬುವದರಲ್ಲಿ ಯಾವ ಸಂದೇಹವೂ ಇರಲಾರದು.

ಚಿಕ್ಕಮಗಳೂರು.—ಇದೇ ತಿಂಗಳು ೮ ನೆ ತಾರೀಖಿನ ದಿವಸ ರೆಸಿಡೆಂಟ್ ... ನಿಯರ್ ಕರ್ನಲ್ ಸಾಹೇಬರವರು ಬಾಳೆಹೊನ್ನೂರು ಕಡೆಯಿಂದ ಈ ಊರಿಗೆ ಬಂದರು. ಇಲ್ಲಿನ ಡೆಪ್ಯುಟಿ ಅಸಿಸ್ಟೆಂಟ್ ಕಮೀಷನರೇ ಮೊದಲಾದ ಎಲ್ಲಾ ದೊಡ್ಡ ಮನುಷ್ಯರು ಗಂಧದ ಕೋಠಿ ಬಳಿಯ ಚಪ್ಪರದಲ್ಲಿ ಕರ್ನಲ್‌ರವರನ್ನು ಎದುರುಗೊಂಡು ಕರೆದುಕೊಂಡು ಬಂದು ನಮ್ಮ [illegible] ಕಮಿಷನರ್ ಸಾಹೇಬರ ಮನೆಯಲ್ಲಿ ಇಳಿಸಿದರು. ಸೋಮವಾರ ಸಾಹೇಬರವರು ಊರನ್ನು ನೋಡುವದಕ್ಕೆ ಹೊರಡುವಾಗ ಅವರ ಜೊತೆಯಲ್ಲಿ ನಮ್ಮ ಸಿವಿಲ್ ಸರ್ಜನ್ ಡಾ॥ ನಂಜಪ್ಪನವರು, ಅ॥ ಕ ಮೆ. ವೆಂಕಟೇಶದೇಶಿಗ ಅಯ್ಯಂಗಾರ್ರು, ಅಮಲ್ದಾರ್ರು, ಫಾರೆಸ್ಟ್ ರೇಂಜರ್ ಮೆ॥ ಗುಲ್‌ಸಂ ಕೇಬರೂ, ೩. ಪಿ. ದ ಸಬ್ ಡಿವಿಜನ್ ಆಫೀಸರ್ ಮೆ॥ ಸ್ವಾಮಿನಾಥಯ್ಯನವರೂ, ಓವರ್‌ಸೀಯರ್ ಮೆ॥ ರಾಬರ್ಟ್ ಸಾಹೇಬರೂ ಪೊಲೀಸ್ ಇನ್ಸ್ಪೆಕ್ಟರ್ ಮೆ॥ ಸುಂದರರಾಜಯ್ಯಂಗಾರ್ರು ಮೊದಲಾದವರೆಲ್ಲಾ ಸೇರಿ, ಊರಿನ ಎಲ್ಲಾ ಭಾಗಗಳನ್ನು ನೋಡಿಕೊಂಡು ಬಂಗಲೆಗೆ ದಯಮಾಡಿಸಿದರು. ಮಧ್ಯಾಹ್ನದ ಮೇಲೆ ಡಿಸ್ಟ್ರಿಕ್ಟ್ ಆಫೀಸನ್ನು ನೋಡಿಕೊಂಡು ಅನಂತರ ಇನ್ನು ಒಂದೆರಡು ಕೋರ್ಟು ಕಛೇರಿಗಳಿಗೆ ಹೋಗಿ ಅಲ್ಲಿಂದ ಕನ್ನಡ ಗರ್ಲ್ಸ್ ಸ್ಕೂಲನ್ನು ನೋಡಿಕೊಂಡು, ಸುಮಾರು ೫ ಗಂಟೆ ಸಮಯದಲ್ಲಿ ಎಲೆಗಳಿಂದಲೂ ತೋರಣ ಕದಳೀಸ್ತಂಭಗಳಿಂದಲೂ ವಿಧವಿಧವಾಗಿ ಶೃಂಗರಿಸಲ್ಪಟ್ಟ ಇಲ್ಲಿನ ಇಂಗ್ಲಿಷ್ ಹೈ ಸ್ಕೂಲಿಗೆ ಹೋಗಿ ನೋ ... ರ್ ಮೆ॥ ಸುಬ್ರಹ್ಮಣ್ಯ ಅಯ್ಯರವರ ಸಂಗಡ ಮಾ ... ಸ್ಕೂಲಿನ ಬೈಲಿನಲ್ಲಿ ಹುಡುಗರು ಆಡುವ ಜಮ್ನಾಸ್ಟಿ ... ಗಳನ್ನು ಸ್ವಲ್ಪಹೊತ್ತು ನೋಡಿ, ಸುಮಾರು ೬॥ ಗಂ ... ಟೆಗೆ ಇಲ್ಲಿನ ಸಾರ್ವಜನಿಕ ವನದಲ್ಲಿ ಸಿದ್ಧವಾಗಿದ್ದ ಗಾರ್ಡನ್ ಪಾರ್ಟಿಗೆ ಹೊರಟರು. ಅಲ್ಲಿ ಸ್ವಲ್ಪ ಹೊತ್ತು ಟೆನ್ನಿಸ್ ಆಟವನ್ನು ನೋಡಿ, ನಂತರ ವೈಸ್ ಪ್ರಸಿಡೆಂಟರು ದೇಶೀಯರಿಗೂ ಯೂರೋಪಿಯನರಿಗೂ ಪ್ರತ್ಯೇಕವಾಗಿ ಸಿದ್ಧಮಾಡಿದ್ದ ಡೇರಾಗಳಲ್ಲಿ ಅವರವರು ಸೇರಿ, ಫಲಾಹಾರವನ್ನು ಮಾಡಿದರು. ಕರ್ನಲ್‌ರವರು ಯೂರೋಪಿಯನರ ಡೇರಾದಲ್ಲಿ ಬಂದಿದ್ದ ದೊಡ್ಡ ಮನುಷ್ಯ

ಡತ್ತು ದೊರೆಸಾನಿಗಳ ಸಂಗಡ ಪಾಠವಾದುವಾಗ ಇಲ್ಲಿನ ಹೈ ಸ್ಕೂಲ ಜಿಮ್ನಾಸ್ಟಿಕ್ ಮಾಸ್ಟರು ಕೆಲವು ಮಾಟವಾದೀಯ ಹುಡುಗ ರಿಂದ ಸರ್ಕಸ್ ಆಟವನ್ನು ನೋಡಿ, ನಂತರ ಮುದ್ರಿಸ ಲ್ಪಟ್ಟುದನ್ನು ನೋಡಿಕೊಂಡು, ೭ ಗಂಟೆಗೆ ತಮ್ಮ ಬಿಡಾರವನ್ನು ಸೇರಿದರು. ಆ ರಾತ್ರಿ ತಮ್ಮ ಬಿಡಾರದಲ್ಲಿ ಏರ್ಪಡಿಸಿದ್ದ ಔತಣಕ್ಕೆ ಬಂದಿದ್ದ ಸಬ್ ಡಿವಿಜನ್ ಆಫೀಸರು ಅಸಿಸ್ಟೆಂಟ್ ಕಮಿಷನರು ಹೈ ಸ್ಕೂಲ್ ಹೆಡ್ ಮಾಸ್ಟರು ಅಮಲ್ದಾರರು ಲಾಯರು ಮೊದಲಾದವರಲ್ಲಾ ಸುಮಾರು ೪೦ ಜನರ ಕೂಡ ಸೇರಿ, ಭೋಜನದ ನಂತರ ಇಂಜಿನಿಯರ್ ಆಫೀಸ್ ನ ಕ್ಲರ್ಕ್ ಚಿತ್ರದುರ್ಗದ ರಾಮಚಂದ್ರರಾಯರಿಂದ ಸ್ವಲ್ಪ ಸಂಗೀತವನ್ನು ಹಾಡಿಸಿ ಸಂತೋಷಪಟ್ಟು, ಸುಮಾರು ೧೧ ಗಂಟೆಗೆ ಅಲ್ಲಿ ಸೇರಿದ್ದವರೆಲ್ಲರೂ ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು. ಮಂಗಳವಾರ ಬೆಳಗ್ಗೆ ೭ ಗಂಟೆಗೆ ಕೌನ್ಸಲರವರು ಬೀರೂರು ಮಾರ್ಗವಾಗಿ ಮುಂದಕ್ಕೆ ಹೊರಟರು.

ಕೊಪ್ಪ —ಈ ಊರಲ್ಲಿ ನೆಲೆಗೊಂಡಿದ್ದ ಪ್ಲೇಗ್ ಉಪದ್ರವು ಕಡಿಮೆ ಆಗುವ ಕಡೆ ಪ್ರಯಾಣ ಮಾಡಿದಂತೆ ತೋರುತ್ತೆ. ಈ ಊರಲ್ಲಿ ಬಾಧೆಯು ನಿವಾರಣೆ ಆಗಿದೆ. ಜನಗಳು ಊರನ್ನು ಸೇರು ತ್ತಿದ್ದಾರೆ —ಇಲ್ಲಿ ತರಿಫಸ್ಲು ಕಟಾವ್ ಆಯಿತು. ಮಳೆ ಕಮ್ಮಿ ಯಿಂದ ಸುಗಿಗದ್ದೆ (ಬೆಟ್ಟ ಭೂಮಿ) ಗಳಲ್ಲಿ ಫಸಲು ಚೆನ್ನಾಗಿ ಇಲ್ಲ. ಇದರಿಂದ ರೈತರಿಗೆ ತುಂಬಾ ನಷ್ಟವಾದಂತೆ ತೋರು ತ್ತದೆ. ಬಾಗಾಯತು ಜಮೀನುಗಳಿಗೆ ಸಾಲಿಯಾನಾ ಬರುತ್ತಿದ್ದ ಕೊಳೆ ರೋಗವೆಂಬ ಮಾರಿಯು ಕಮ್ಮಿಯಾದ ರೈತರ ಸಂತೋಷವು ಪ ಕ್ಷದಲ್ಲೇ ಕಮ್ಮಿ. ಆದ ಪ್ರಯುಕ್ತ ಸಾರ್ಥಕವಾಗಿ ತುಂಬಾ ಉತ್ಸಾಹ ಹಾಗೂ ಪ್ರಯತ್ನದಲ್ಲಿರುತ್ತಾರೆ. ಅಡಕೆ ಫಸಲನ್ನು ದರೋ ಕ್ರಯ ಕೇಳುವವರೇ ದಿಕ್ಕಿಲ್ಲ. ಅದಕ್ಕೆ ಧಾರಣೆ ತುಂಬಾ ತಗ್ಗಿದೆ ಕಾರಣದಲ್ಲಿ ಸಾಹುಕಾರರು ಏನನ್ನೂ ಕೊಳ್ಳುವುದಿಲ್ಲ ಮೊದಲಾದ ಬಗ್ಗೆ ತೀರಾ ಹೆಚ್ಚಿಯಾದ್ದರಿಂದ ಬಡವರಿಗೆ ತೊಂದರೆ ಸಂಭವಿಸಿರುವುದು ಸಾಧ್ಯವಿಲ್ಲ. ಈ ತಾಲ್ಲೂಕಿನ ಕಂದಾಯದ ವಿಚಾರದಲ್ಲಿ ಆಮಲ್ದಾರರು ಗಡಲಾಲಿನಂತೆ ಕ್ರಮವಾಗಿ ಪರಿಶೀಲಿಸಿ ತಾಲ್ಲೂಕಿನಲ್ಲಿ ಅರೆನಾಸು ಜಮೀನು ಬಂಜರಾಗಿ ಸರ್ಕಾರಕ್ಕೆ ಸೇರ ಬೇಕೆಂದು ಅಮಲ್ದಾರರು ಸಾಲಿನಲ್ಲಿ ರೈತರ ಅಹವಾಲ್ ಅನ್ನು ಕೇಳಿ ತಿಳಿಸಿ, ವಸೂಲಿ ವಿಚಾರದಲ್ಲಿ ಕೋಚ ರಿಯಾಯಿತಿ ತೋರಿಸಿ ರೈತರಿಗೆ ಕಷ್ಟಗಳನ್ನು ಕಾಪಾಡಬಹುದಾಗಿ ನಂಬಲಾಗಿದೆ —ಇಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮಿ॥ ರಂಗಯ್ಯಂಗಾರ್ಯರಿಗೆ ಬಳ್ಳಾರಿ ಡಿಸ್ಟ್ರಿಕ್ಟಿಗೆ ವರ್ಗವಾಗಿ ಜನವರಿ ತಾ॥ ೧ ನೆ ಬಾನುವಾರ ಹೊರಟರು. ಇವರಿಗಾಗಿ ಊರು ಜನಗಳು (ಗ್ರಾಮಸ್ಥರು) ತುಂಬಾ ವ್ಯಸನಾ ಕ್ರಾಂತರಾಗಿದ್ದಾರೆ. ಡಿಸೆಂಬರ್ ತಾ॥ ೨೯ ನೆ ಗುರುವಾರ ಸದರಿ ಪೋಸ್ಟ್ ಮಾಸ್ಟರಿಗೆ ಕಸಬಾ ಬೇಲೀಹಳ್ಳಿ ಪಟೇಲ್ ಕಾಡಪ್ಪನವರು ಪ್ರಥಮ ಭಾಗ ನಂಜುಂಡಯ್ಯನವರು ಇಂಟಿನಿಯರ್ ಇಲಾಖಾ ಗುಮಾಸ್ತೆ ಲಕ್ಷ್ಮೀನಾರ್ಣರಾಯರು ಸಹ ತುಂಬಾ ಆದರಪೂರ್ವಕವಾಗಿ ಸ್ವಲ್ಪ ಉಪಯೋಗಿಗೆ ಕರೆದುಕೊಂಡು ಬಂದು, ಟಿಫನ್ ಸಮೀರ ಗಳಿಂದ ಉಪಚರಿಸಿದರು. ಇವರು ಜನಗಳಲ್ಲಿ ತುಂಬಾ ವಿ ಶ್ವಾಸಾಸ್ಪದರೂ, ಸ್ನೇಹಪರರಾಗಿಯೂ ಇದ್ದ ಪ್ರಯುಕ್ತ ಇವರ ಗಂತ್ತೆ ತುಂಬಾ ದುಃಖಕರವಾದ ಸಂಗತಿಯಾಗಿದೆ. ಇವರ ಜಾಗ ಕ್ಕೆ ಬಂದಿರತಕ್ಕ ಹೊಸ ಪೋಸ್ಟ್ ಮಾಸ್ಟರು ಇವರಂತೆಯೇ ಜನರ ಪ್ರೀತಿಗೆ ಪಾತ್ರರಾದವರಾಗಿ ನಂಬಲ್ಪಡುವರೆ —ಇಲ್ಲಿ ಸ್ಕೂಲಿನಲ್ಲಿದ್ದ ೨ ನೇ ಮಾಸ್ಟರವರನ್ನು ಒಬ್ಬರನ್ನು ಬಾಳೆಗದ್ದೆಯಲ್ಲಿ ಸ್ಕೂಲಿಟ್ಟು ಕೆಲಸ ಮಾಡಬೇಕಾಗಿ ಆರ್ಡರು ಬಂದಂತೆ ಇದೇ ಜನವರಿ ತಾ॥ ೯ ನೆ ಗುರುವಾರ ಸ್ಕೂಲ್ ಮಾಸ್ಟರು ಬಾಳೆಗದ್ದೆಯಲ್ಲಿ ಸ್ಕೂಲ್ ಮಾಡುತ್ತಾರಂತೆ. ಗ್ರಾಮಸ್ಥರೆಲ್ಲರು ಈ ಕಾಲದಲ್ಲಿ ಸುಮ್ಮನಿರು ವುದು ನ್ಯಾಯವೇ? ಅಲ್ಪ ಕಾಲದಲ್ಲಿ ಬಾಲಕರ ಸಂಖ್ಯೆ ಜಾ ಸ್ತಿ ಆಗಿ ಒಬ್ಬ ಮಾಸ್ಟರಿಂದ ಸ್ಕೂಲ್ ಕೆಲಸ ನಡೆಯಲು ಅಸಾಧ್ಯ ವಾಗಿ ಪರಿಣಮಿಸುತ್ತದೋ.—ಮೊನ್ನೆ ತಾ॥ ೭ ನೆ ಮಂಗಳ ವಾರ ಪಸ್ಟ್ ಕೌನ್ಸಿಲರ್ ಮಿ॥ ಸಿ. ಶ್ರೀನಿವಾಸಯ್ಯಂಗಾರ್ಯರವರು ಇಲ್ಲಿ ಗೆ ದಯಮಾಡಿಸಿ ಆಸ್ಪತ್ರೆ ಸ್ಕೂಲು ಪೋಲೀಸ್ ಸ್ಟೇಷನ್ ಮೊದಲಾ ದವುಗಳನ್ನು ಪರಾಂಬರಿಸಿ ತಾ॥ ೭ ನೆ ಬುಧವಾರ ಶೃಂಗೇರಿ ಕಡೆಗೆ ದಯಮಾಡಿಸಿದರು. ಸ್ಕೂಲ್ ಕಟ್ಟಡ ರೀತಿಯೂ ಬಾ ಲಕರ ವಿದ್ಯಾಭಿವೃದ್ಧಿಯೂ ಬಾಲಕರುಗಳನ್ನು ಪಾಠಮಾಡುವವರ ಶ್ರಮವೂ ಇವುಗಳ ಸ್ಥಿತಿಯನ್ನು ನೋಡಿ ಮಾಡಿಸಿದ ಅನೇಕ ವಿಷಯಗಳಿಂದಲೂ ಇಲ್ಲಿ ಶಾಲೆಯ ಆಫೀಸರುಗಳು ಗಮನ ಕೊಡದಿರುವಿಕೆಯೂ ಸಹ ಪಸ್ಟ್ ಕೌನ್ಸಿಲರ್ ಸಾಹೇಬರ ಚಿತ್ತಕ್ಕೆ ತುಂಬಾ ಕೊರತೆಯನ್ನುಂಟು ಮಾಡಿತೆಂದು ಕೇಳುತ್ತೇವೆ.

ಕೊರಟಗೆರೆ.—೧೯೦೩ ನೇ ಇಸವಿ ಡಿಸೆಂಬರ್ ತಾ॥ ೧೧ ನೇ ಶನಿವಾರ ಬೆಳಗ್ಗೆ ೯ ಗಂಟೆಗೆ ಕೊರಟಗೆರೆ ತಾಲ್ಲೂಕ್ ಕಚೇರಿ ಕಟ್ಟಡದಲ್ಲಿ ಒಂದು ದೊಡ್ಡ ಸಭೆಯು ನೆರವೇರಿತು. ಆ ಸಭೆಯು ಟಿಫ್ ಕೋರ್ಟ್ ಜಡ್ಜಿಗಳಾದ ಮಿ॥ ರಾ॥ ಎಚ್. ವಿ. ನಂಜುಂ ಡಯ್ಯ, ಎಂ. ಎ., ಎಂ. ಎಲ್. ಅವರು ಅಗ್ರಾಸನಾಧಿಪತ್ಯವಂ ಹಿಸಿದ್ದರು. ತುಮಕೂರು ಡಿಸ್ಟ್ರಿಕ್ಟ್ ಬ. ಆ ಶವಿವಾಹನರಾದ ಕೆ. ವರದಿಯ್ಯಂಗಾರ್ಯರೂ, ಪ್ರೋ॥ ಸೂಪರೆಂಟೆಂಡೆಂಟ್ ಮಿ॥ ಕೆ. ಕೃಷ್ಣರಾಯರೂ, ಮಧ್ಯಗಿರಿ ತಾಲ್ಲೂಕು ಅಮಲ್ದಾರರಾದ ವೆಂಕಟೆ ಕೃಷ್ಣರಾಯರೂ, ಈ ಸಬ್ ತಾಲ್ಲೂಕಿನ ಡೆಪ್ಯುಟಿ ಅ ಮಲ್ದಾರರಾದ ಮಿ॥ ಖಾದರ ಸಾಹೇಬರೂ, ಆಸ್ಪತ್ರೆ ಆಸಿ ಸ್ಟೆಂಟರೂ, ಮ್ಯುನಿಸಿಪಲ್ ಮೆಂಬರುಗಳೂ, ವರ್ತಕ ಶ್ರೀಮಂತರುಗ ಳೂ, ಇನ್ನೂ ಊರಲ್ಲಿರುವ ಅನೇಕ ದೊಡ್ಡಮನುಷ್ಯರೂ, ಪಂಡಿತ ರುಗಳೂ, ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ನಿಯರು ಸಹ ಸೇರಿದ್ದರು. ಮೇಲ್ಕಂಡ ಜಡ್ಜಿಗಳವರು ಸಭಾ ಸದರ ಅಪೇಕ್ಷೆಯಂತೆ ಅಗ್ರಾಸನಾರೋಹಣಂಗೈಯುತ್ತಲೇ ಎ. ವಿ. ಸ್ಕೂಲ್ ಅ॥ ಮಾಸ್ಟರ್ ಮಿ॥ ವೆಂಕಟಾಚಾರ್ಯರು ಸ್ಕೂಲಿನ ಸ್ಥಿತಿ ಯನ್ನು ಚೆನ್ನಾಗಿ ವ್ಯಕ್ತಪಡಿಸುವ ರಿಪೋರ್ಟನ್ನೂ, ಅನಂತರ ಗರ ಲ್ಸ್ ಸ್ಕೂಲ್ ಹೆಡ್ ಮಾಸ್ಟರು ಮಿ॥ ವೈಯಾಕರಣ್ಯನವರು ತಮ್ಮ ಸ್ಕೂಲಿನ ರಿಪೋರ್ಟನ್ನೂ ಪ್ರಕಟಿಸಿದರು. ತರುವಾಯ ಗರಲ್ಸ್ ಸ್ಕೂಲಿನ ಕೆಲವರು ವಿದ್ಯಾರ್ಥಿನಿಯರು ಮಂಗಳಕರವಾದ ಹಾಡುಗ ಳನ್ನೂ, ಎ. ವಿ. ಸ್ಕೂಲಿನ ಸಣ್ಣ ತರಗತಿಯ ಕೆಲವು ಬಾಲಕರು ಅಭಿನಯಿಸುತ್ತಾ ಕೆಲವು ಹಾಡುಗಳನ್ನೂ, ಇಬ್ಬರು ವಿದ್ಯಾರ್ಥಿಗಳು ಇಂಗ್ಲಿಷಿನಲ್ಲಿ ಸಂಭಾಷಣಾರೂಪವಾಗಿ ಕೆಲವು ಪದ್ಯಗಳನ್ನೂ, ಪಂ ಚಮರ ಸ್ಕೂಲಿನ ಕೆಲವರು ಬಾಲಕಿಯರು ಹಾಡುಗಳನ್ನೂ ಹೇಳಿ ಮುಗಿಸುತ್ತಲೇ ಹಿಂದುಸ್ತಾನಿ ಸ್ಕೂಲಿನ ಇಬ್ಬರು ವಿದ್ಯಾರ್ಥಿಗಳು ಅಗ್ರಾಸನಾಧಿಪತಿಗಳ ಮೇಲೆ ಕೆಲವು ಪದ್ಯಗಳನ್ನು ಆ ಭಾಷೆಯ ಲ್ಲಿಯೇ ಹೇಳಿದರು. ಅನಂತರ ಅಗ್ರಾಸನಾಧಿಪತಿಗಳು ಎದ್ದು ನಿಂ ತುಕೊಂಡು, ಮೃದು ಮಧುರ ಭಾಷಣದಿಂದ ಎಲ್ಲರ ಮನಸ್ಸಿಗೂ ಅತ್ಯಾನಂದವಾಗುವ ರೀತಿಯಲ್ಲಿ ಬಾಲಕರು ಹೇಗೆ ನಡೆದುಕೊಳ್ಳ ಬೇಕು? ಅದರಂತೆ ನಡೆಯುತ್ತಿದ್ದರೆ ಉಂಟಾಗುವ ಸತ್ಫಲಗಳ ರೀ ತಿ ಹೇಗೆ? ಎಂಬುದನ್ನು ಕುರಿತು ಅನುವಾದ ಮಾಡಿದರು. ಅಲ್ಲದೆ ಈ ಎಲ್ಲಾ ಪಾಠಶಾಲೆಗಳಲ್ಲಿನ ಉಪಾಧ್ಯಾಯರುಗಳ ಶ್ರದ್ಧೆಗೂ, ಪಾಠಶಾಲಾ ಮುಖ್ಯೋಪಾಧ್ಯಾಯರುಗಳ ಸುಶಿಕ್ಷಣಕ್ಕೂ, ಈ ರೀ ತಿಯಾಗಿ ಅಭಿವೃದ್ಧಿಗೆ ಬರಲು ಶಾಲೆಗಳಲ್ಲಿ ಮೇಲ್ವಿಚಾರಣೆಯ ನ್ನು ಮಾಡುತ್ತಿರುವ ತುಂಕೂರು ಇನ್ಸ್‌ಪೆಕ್ಟರ್ ಸಾಹೇಬರವರ ವಿಚಾ ಕ್ಷಣೆ ಮತ್ತು ಸಾಹಸಗಳಿಗೂ ಬಹಳವಾಗಿ ಅನಂದಿಸಿ, ೧೯೦೨ನೆ ಇ ಸವಿಯಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರ್ ಸಾಹೇಬರವರು ಈ ಊರಿನ ಸ್ಕೂಲು ಗಳನ್ನು ಪರೀಕ್ಷಿಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಬಹುಮಾನಾ ರ್ಥವಾಗಿ ಕೊಡಿಸೋಣವಾಗಿದ್ದ ಪುಸ್ತಕಗಳನ್ನು ಸ್ವಹಸ್ತದಿಂದ ದಿಂ ದ ಆಯಾ ಬಾಲಕರಿಗೆ ದಯಪಾಲಿಸಿದರು. ಬಳಿಕ ಅಗ್ರಾಸನಾಧಿಪ ತಿಗಳು ಈ ದಿನ ಇಲ್ಲಿನ ವರೆಗೆ ಸಭಾಸದರ ಕೋರಿಕೆಯಂತೆ ದಯ ಮಾಡಿದುದಕ್ಕಾಗಿ ಊರಿನ ಪರವಾಗಿ ವಿದ್ಯಾರ್ಥಿಗಳ ಪ್ರತಿನಿಧಿಯಾಗಿ ಎ. ವಿ. ಸ್ಕೂಲ್ ಅ॥ ಮಾಸ್ಟರು ಕೆ. ವೆಂಕಪ್ಪ ಜೋಯಿಸರು ಎ ಲ್ಲರ ಕೃತಜ್ಞತೆಯನ್ನು ತೋರ್ಪಡಿಸುವಂತೆ ಕೆಲವು ವಂದನೆಗಳನ್ನು ಉಪನ್ಯಸಿಸುವುದರ ಮೂಲಕ ಅರ್ಪಿಸಿದರು. ಅನಂತರ ವಿದ್ಯಾ ರ್ಥಿನಿಯರು ಮಂಗಳಗಳನ್ನು ಹಾಡಿ, ಸಭಿಕರೆಲ್ಲ ಆನಂದಗೊಳ್ಳ ಸಿದರು. ಕೂಡಲೆ ಅಗ್ರಾಸನಾಧಿಪತಿಗಳು, ಬಾಲಕ ಬಾಲಕಿಯರು ಗಳಿಗಾಗಿ ದಯಪಾಲಿಸಿದ ಪತ್ತು ರೂಪಾಯಿಗಳ ಮಿಠಾಯಿ ಮತ್ತು ಸಕ್ಕರೆಯು ಹಂಚಿಕೆಯಾಗಿ ತರುವಾಯ ಸಭಿಕರೆಲ್ಲ ಗಂಧಮಾಲ್ಯ ತಾಂಬೂಲಾದ್ಯುಪಚಾರಗಳು ನಡೆಯಲ್ಪಟ್ಟು, ಅಂದಿನ ದಿನದ ಉ ತ್ಸಾಹವನ್ನು ಸೂಚಿಸುವಂತೆ ಕರತಾಳ ಧ್ವನಿಗಳಿಯುತ್ತಾ ಸಭೆ ಯು ಮುಗಿಯಿತು.

ನೆಲಮಂಗಲ.—ಪ್ಲೇಗ್ ರೋಗವು ಕಡಿಮೆಯಾಗುತ್ತಾ ಬರು ತ್ತಿದೆ. ಹತ್ತು ಹದಿನೈದಕ್ಕೆ ಒಂದಾವರ್ತಿ ಮಾತ್ರ ತನ್ನ ದರ್ಶನ ವನ್ನು ಕೊಡುತ್ತಾ, ಮನೆಗಳಿಗೆ ಬಂದು ಸೇರಿಕೊಳ್ಳಲು ಅಪೇಕ್ಷಿ ಸುವ ಜನರನ್ನು ತಡೆಯುತ್ತಾ ಗಾಬರಿಪಡಿಸುತ್ತಾ ಇರುತ್ತದೆ. ಊರಿನಲ್ಲಿ ಕೆಲವು ಒಕ್ಕಲುಗಳು ಮಾತ್ರ ವಾಸವಾಗಿದ್ದಾರೆ. ಬೇರೆ ತಮ್ಮ ಮನೆಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ವಾಸವಾದ ಗ್ರಾಮ್ಯ ಜನರ ಸಂಪಾ ಗೊಳಿಸಿಕಳ್ಳನ್ನು ಸರಿಪಡಿಸಲೂ, ತುಂಬಾ ಜನಸಂದ ಣಿಯಿರುವ ಇಕ್ಕಟ್ಟಾದ ಕೊಳಕಾದ ಜಾಗಗಳಲ್ಲಿ ಇರುವ ಚಿಕ್ಕದ ಮನೆಗಳನ್ನು ಒಡೆದು ಹೊಸ ರಸ್ತೆಗಳನ್ನು ಹಾಕಲೂ ಇಂಥಾ ಒಳ್ಳೇ ಸಂದರ್ಭದಲ್ಲಿ ಸೀಕ್ವನಾಂದು. ಆದ್ದರಿಂದ ದಯಾಳುಗಳಾದ ಸರ್ಕಾ ರದವರು ಪ್ರಜೆಗಳ ಕ್ಷೇಮವನ್ನು ಕೋರತಕ್ಕ ಏರ್ಪಾಡುಗಳನ್ನು ತಕ್ಷಣವೇ ಪ್ರಾರಂಭಿಸಮಾಡುವರಾದರೆ ತುಂಬಾ ಕ್ಷೇಮವಾದೀತು.— ನಮ್ಮ ಅಮಲ್ದಾರರಾದ ಮಿ॥ ದಾಸಪ್ಪನವರು ಮೊನ್ನೆ ಪತ್ತನೇ ತಾರೀಖಿನಲ್ಲಿ ಹಳ್ಳಿಗಳ ಕಡೆ ಕುದುರೆ ಸವಾರಿ ಮಾಡಿಕೊಂಡು, ಗಸ್ತು ಬರುವಾಗ್ಗೆ, ಕುದುರೆ ಮೇಲಿನಿಂದ ಬಿದ್ದರೆಂತಲೂ ಬಲದ ಕೈಯ ಕೆನ್ನೆಯ ಮೇಲೆ ಗಾಯವಾಗಿರುವಂತೆಯೂ, ತಕ್ಷಣ ಮೆಡಿ ಕಲ್ ಆಫೀಸರು ಅಲಾಜ್ ಮಾಡುತ್ತಿರುವದರಿಂದ ಈಗ ಕ್ಷೇಮವಾ ಗುತ್ತಿರುವಂತೆಯೂ ಕೇಳುತ್ತೇವೆ.—ಈ ತಾಲ್ಲೂಕ್ ಕಸಬಾಕ್ಕೆ ಸೇರಿದ ಮಾದಪ್ಪನ ಪಾಳ್ಯದಲ್ಲಿ ಒಬ್ಬ ಹೊಲೆಯಂಬವನನ್ನು ಒಂದು ಎತ್ತು ಹೊಟ್ಟೆಯ ಮೇಲೆ ಹಾದದ್ದರಿಂದ ಅವನ ಕರುಳುಗಳು ಆಚೆಗೆ ಬಂದದ್ದರಿಂದ ತಕ್ಷಣವೇ ಮಧ್ಯರಾತ್ರಿಯಲ್ಲೇ ಆತನನ್ನು ಮೆಡಿಕಲ್ ಆಫೀಸರಾದ ಮಿ॥ ಕೃಷ್ಣಸಾಮಿ ಮೊದಲಿಯಾರ್ರ ಬಳಿಗೆ ಕರತಂದರು. ಅವರು ತುಂಬಾ ಮುತವರ್ಜಿ ತೆಗೆದುಕೊಂಡು, ಆ ಕರುಳುಗಳನ್ನು ಯಥಾ ಸ್ಥಾನಕ್ಕೆ ಸೇರಿಸಿ ಕೊಲಿದು, ಇಲಾಜು ಮಾಡುತ್ತಿರುವದರಿಂದ ಆತನು ಗುಣಹೊಂದುತ್ತಿರುತ್ತಾನೆ.—ಈ ಸ್ಥಳದಲ್ಲಿ ಕೆಲಸವಾಡುತ್ತಿದ್ದ ಸೂಪರಿಂಟೆಂಡೆಂಟ್ ಹದಿನೈದು ದಿವಸಗಳ ರಜಾ ತೆಗೆದುಕೊಂಡು ಹೋಗಿ ಈಗ ಎರಡು ತಿಂಗಳ ಮೇಲಾದರೂ ವಾಪಸ್ ಬಾರದೆ ಸೀನಿಯರ್ ಸರ್ಜನ್ ಅಫೀಸಿಗೆ ತನಗೆ ಸಂಭವಿ ಸಿದ ಅನಾರೋಗ್ಯತೆಯನ್ನು ತಿಳಿಸಿದ್ದೂ ಅವರು ಬಾರದೆ ಇದ್ದು ದಕ್ಕೆ ಕಾರಣ ವಿಚಾರಿಸಿದಾಗ್ಗೆ ತಕ್ಕ ಜವಾಬು ಕೊಡದಿರು ವ ತ್ತಾಸ್ತಾರ ಮಾಡಿಕೊಂಡಿರುವುದು ತುಂಬಾ ವ್ಯಸನಕರವಾದ ಸಂಗ ತಿಯು. ಆದರೂ ಗವರ್ನ ಮೆಂಟಿನವರು ತಕ್ಕ ಆಲೋಚನೆಮಾಡಿ, ಬೇರೊಬ್ಬರನ್ನಾದರೂ ಶೀಘ್ರವಾಗಿ ಕಳುಹಿಸುವುದಾದರೆ ತುಂಬಾ ಮೇಲಾದೀತು —ಈಗ ಸುಮಾರು ಎರಡು ತಿಂಗಳುಗಳಿಗೆ ಮುಂಚೆ ಈ ಊರಿಗೆ ಸಮೀಪವಾದ ಜಿಕ್ಕಸಂದ್ರವೆಂಬ ಹಳ್ಳಿಗೆ ಸೇರಿದ ಕೊಪ್ಪಲಲ್ಲಿದ್ದ ಕೆಲವು ಮನೆಗಳು ಸುಟ್ಟು, ಬಹಳಕಾಲದಿಂದ ಸೇರಿಸಿದ್ದ ಪದಾರ್ಥಗಳು ನಾಶವಾಗಿ ಮುಂಚಿನಂತೆ ಸುಮಾರು ಒಂದು ಸಾವಿರ ರೂಪಾ ಯಿನ ನಷ್ಟವಾಯಿತು ಸಾರ್ವಜನಿಕವಾಯಿತು. ಸರ್ಕಾರದವರು ಹೋಗಿ ಅದ ನ್ನೆಲ್ಲಾ ನೋಡಿಕೊಂಡು ಬಂದರೇ ಹೊರತು ಆ ಬಡಪಾಯಿಗಳಿಗೆ ಸ್ವಲ್ಪ ಸಹಾಯವಾಗುವ ಯಾವ ಆಲೋಚನೆಯನ್ನಾದರೂ ಈ ವರೆಗೂ ಮಾಡಿದಂತೆ ಕಾಣುವದಿಲ್ಲ. ಅವರು ತಿರಿಗಿ ಆ ಮನೆಗ ಳನ್ನು ಕಟ್ಟಿಕೊಳ್ಳಲು ಫಾರೆಸ್ಟಿನಿಂದ ಮರಮುಟ್ಟುಗಳನ್ನು ಕಡಿದುಕೊಳ್ಳುವಂತೆ ದಯತೋರಿಸುವರೆಂದು ಹಾರೈಸುತ್ತೇವೆ.— ಈ ತಾಲ್ಲೂಕ್ ಕಚೇರಿಯ ಖಜಾನೆಯಿಂದ ಸರ್ಕಾರಿಗೆ ರೂಪಾ ಯಿಗೆ ನೋಟುಗಳನ್ನೂ ನೋಟುಗಳಿಗೆ ರೂಪಾಯಿಗಳನ್ನೂ ಅವರು ಕೇಳಿದಾಗ ಕೊಡದೆ ತುಂಬಾ ಸುಸ್ತುಮಾಡುತ್ತಾರೆಂದೂ ತಾಲ್ಲೂಕ್ ಜವಾಬಂಧಿಯ ಕಾಲದಲ್ಲಿ ನಮ್ಮ ಅಮಲ್ದಾರರು ಹಳ್ಳಿ ಕೇಳಿಗೆ ಆಫೀಸಿಗೆ ಬಂದು ಕಾದಿರುವ ಹಳ್ಳಿ ಜನರ ಅಜೀ ಮುಚಾಹಿರೆಗ ಳನ್ನು ತೆಗೆದುಕೊಂಡು ಅವರ ಕಾರ್ಯಗಳನ್ನು ಇತ್ಯರ್ಥ ಮಾಡು ವವರಲ್ಲಿ ತುಂಬಾ ಸುಸ್ತು ಮಾಡುತ್ತಾರೆಂದೂ ಅನೇಕರು ಹೇಳು ಮುತ್ತಾರೆ. ಕಳೆದ ಜಮಾಬಂದಿಯ ಕಾಲದಲ್ಲಿ ೭—೮ ಮೈಲಿಗಳ ದೂರದಿಂದ ಬಂದಿದ್ದ ಹಳ್ಳಿ ಜನಗಳು ರಾತ್ರಿ ೧೧ ಗಂಟೆಯ ವೇಳೆ ಯಲ್ಲಿ ಕಚೇರಿಯನ್ನು ಬಿಟ್ಟು ಹೋಗುವಾಗ್ಗೆ ತುಂಬಾ ಗೋಳಾ ಡಿ ಹೋದರೆಂತ ಕೇಳಿ ಬಹಳವಾಗಿ ವಿಷಾದಿಸುತ್ತೇವೆ. ತಾಯಿ ಯಂತೆ ಇರುವ ಸರ್ಕಾರದವರು ಪ್ರಜೆಗಳಿಗೆ ಉಂಟಾಗುವ ಕೊ ರತೆಗಳನ್ನು ಇನ್ನರ ಮಟ್ಟಿಗೆ ಲಕ್ಷಿಸದೇ ಇರುವುದು ತುಂಬಾ ಆ ಶ್ಚರ್ಯ.

ಚೇಳೂರು.—ಪಸ್ಟ್ ಕೌನ್ಸಿಲರ್ ಮಿ॥ ಸಿ. ಶ್ರೀನಿವಾಸಯ್ಯಂಗಾರ್ಯರವರು ಕಳೆದ ೧೦ ನೆ ತಾ॥ ಪ್ರಾತಃಕಾಲ ಇಲ್ಲಿಗೆ ಬಂ ದು, ಈ ತಾಲ್ಲೂಕಿನ ಎಲ್ಲಾ ಬಾಬನ್ನು ಅವಲೋಕಿಸಿ ಮಾಡಿ, ಗಲ್ಲಿಯನ್ನೇ ಪ್ರಾಮುಖ್ಯವಾಗೆಣಿಸಿ, ಊರಿನ ಪ್ರತಿಯೊಂದು ಗಲ್ಲಿ ಯನ್ನು ಸುತ್ತಿ ನೋಡಿದರು. ಊರಿನವರೆಲ್ಲರೂ ಪ್ಲೇಗಿಗಾಗಿ ಸು ಮಾರು ೬—೭ ವರುಷಗಳಿಂದ ಊರಾಚೆ ಷೆಡ್ಡುಗಳಲ್ಲೇ ವಾಸಿಸುತ್ತಿ ರುವವರಿಂದಲೂ ಮುನಿಸಿಪಾಲಿಟಿಯವರಿಗೆ ಊರನ್ನೂ, ಷೆಡ್ಡನ್ನೂ, ಏಕಕಾಲದಲ್ಲಿ ಬಿಟ್ಟಿ ಮಾಡಿಸುವುದು ಅಸಾಧ್ಯವಾದುದರಿಂದಲೂ ಕೆಲವು ಗಲ್ಲಿಗಳು ವಿಶದಾ ಮಿಶ್ರ ರೋಗುಗಳಲ್ಲಿ ಬಿಟಿಬಾತಾಗಿದ್ದ ವು. ಆಗಿನಂತೆಯೇ ಮುನಿಸಿಪಾಲಿಟಿಯವರು ನಿತ್ಯವೂ ಕೆಲಸ ಮಾ ಡುವವರಾದರೆ ನಮ್ಮೂರು ಉತ್ತಮಸ್ಥಿತಿಗೆ ಬರುವದರಲ್ಲಿ ಸಂದೇಹ ವಿಲ್ಲ. ಪ್ರಜೆಗಳೆಲ್ಲರೂ ಈ ಸಾರಿ ಪ್ಲೇಗಿಗೆ ಬಂದು ೭—೮ ತಿಂಗ ಳಾಯಿತು. ಸುಮಾರು ೧—೨ ತಿಂಗಳಿಂದ ಪ್ಲೇಗು ಸಂಪೂರ್ಣವಾದ ಕಾಣಿಸಿಕೊಳ್ಳುವ ಕುರುಹು ಬರುವದಿಲ್ಲ. ಸುತ್ತುಮುತ್ತಲಿನ ಹಳ್ಳಿಗ ಳಲ್ಲಿ ಮಾತ್ರ ಇರುವದೆಂದು ತಿಳಿದು ಬರುವದು. ಈಗ ಷೆಡ್ಡುಗಳ ಲ್ಲಿ ನೀರಿನ ಅಭಾವವೂ, ಚಳಿಯ ಭಯವೂ, ಗಾಳಿಯ ಹೊಡೆತ ವೂ ಹೆಚ್ಚಾಗಿರುವದರಿಂದ ಗೌರ್ನಮೆಂಟಿನವರು ನಿತ್ಯವೂ ಕೆಲಕೆಲ ವು ಮನೆಗಳನ್ನು ಡಿಸಿಇನ್ಫೆಕ್ಟ್ ಮಾಡಿಸುವುದರ ಮೂಲಕ ಮನೆಗಳಿ ಗೆ ಹೋಗಲು ಅಪ್ಪಣೆ ಕೊಟ್ಟರೆ ಪಟ್ಟ ವಾಸದಲ್ಲಿ ಅನುಭವಿಸುತ್ತಿ ರುವ ಸುಖವಾಗುವದು. ಎಲ್ಲರೂ ೫೦—೬೦ ರೂಪಾಯಿ ಮುಟ್ಟಿ ಸಿ. ಷೆಡ್ಡು ಕಟ್ಟಿಕೊಳ್ಳತಕ್ಕವರಾದರೂ ತಮ್ಮ ಮನೆಯನ್ನು ರಿಪೇರಿ ಮಾಡಿಕೊಳ್ಳಲು ೧—೨ ರೂಪಾಯಿ ಖರ್ಚು ಮಾಡಲು ಹಿಂ ಜರಿಯತಕ್ಕವರು. ಈ ಊರಿನಲ್ಲಿ ಬಹು ಮಂದಿಯಾಗಿರುವದರಿಂದ ಕಳೆದ ೬ ವರುಷಗಳಿಂದಲೂ ಪ್ಲೇಗು ಇಲ್ಲಿ ಸ್ಥಾಯಿಯಾಗಿ ನಿಲ್ಲ ಲು ಅವಕಾಶವಾಯಿತು. ಅಲ್ಲದೆ ಈ ಊರು ಕೋಟೆಗೆ ಒಳ್ಳೇ ಗಾ ಳಿಗೆ ಅವಕಾಶವಿಲ್ಲದಂತೆ ಕೋಟೆಯ ಮೇಲೆಲ್ಲಾ ಲ್ಯಾಂಟಾನಾ ಗಿ ಡವು ಹಬ್ಬಿ ಅಭಿವೃದ್ಧಿಯಾಗಿ ಊರನ್ನೇ ಮುಚ್ಚುತ್ತಿರುವದು. ಸ ರ್ಕಾರದವರು ಅದನ್ನೆಲ್ಲಾ ನಿವರ್ತಿ ಮಾಡಿಸಿ, ಒಳ್ಳೇ ಗಾಳಿ ಬರು ವಂತೆ ನಾಲ್ಕು ಕಡೆಯಲ್ಲಿ ಕೋಟೆಯನ್ನು ಬಡಿಸಿ, ಪ್ರತಿಯೊಂದು ಗಲ್ಲಿಯನ್ನು ಚೆನ್ನಾಗಿ ಬಿಟಿ ಮಾಡಿಸಿ, ಸರಿಯಾದ ಅನುಕೂಲವಾರಿ ಯಿಂದ ಮನೆಗಳನ್ನೆಲ್ಲಾ ಡಿಸಿಇನ್ಫೆಕ್ಟ್ ಮಾಡಿಸಿದರೆ ದೇವರ ದಯೆ ಯಿಂದ ಪ್ಲೇಗು ಶಮನವಾಗಬಹುದು. ಈ ವಿಚಾರದಲ್ಲಿ ನಮ್ಮ ಪ್ರೆಸ್ ಪ್ರೆಸಿಡೆಂಟರು ಗಮನಿಸುವರೆಂದು ನಂಬಿರುವೆನು —ಈ ಊ ರು ಶ್ರೀಯುವ ದೇವಸ್ಥಾನದ ಧರ್ಮದರ್ಶಿಗಳು ಪಾರುಪತ್ಯದಾರರೂ ಜನಾನುರಾಗಿಗಳೂ ಆಗಿದ್ದ ಸಂಪತ್ಕುಮಾರ ಭಟ್ಟರಿಗೆ ಸುಮಾರು ೯ ವರುಷಗಳ ಕೆಳಗೆ ಶ್ರೀಕೇಶವದೇವರ ಅರ್ಚನೆಯು ಹಕ್ಕನ್ನು ತಪ್ಪಿಸಿ ಗೋವಿಂದಭಟ್ಟರಿಗೆ ಕೊಡಿಸಿದ್ದರಿಂದ ಭಕ್ತಾದಿಗಳಿಗೆ ದೇವರ ಸನ್ನಿಧಿಯೇ ಅಗುತ್ತಿರಲಿಲ್ಲವೆಂದು, ಪ್ರಜೆಗಳಲ್ಲಿ ಬಹು ಮಂದಿ ಸೇರಿ ಧರ್ಮದರ್ಶಿಗಳನ್ನು ಕೇಶವಭಟ್ಟರನ್ನು ಒಕ್ಕಲಿಸಿ, ಬಹು ಕಾಲ ದಿಂದ ತಪ್ಪಿಸಲ್ಪಟ್ಟಿದ್ದ ಸಂಪತ್ಕುಮಾರಭಟ್ಟರಿಗೆ ಭಾವರ್ಪ ಕೊಡಿಸಿ ದರು. ಈಗ ಸರ್ವತ್ರಸಮನಾಗಿ ದೇವರ ಸೇವೆಯು ಚೆನ್ನಾಗಿ ನಡೆ ಯುತ್ತಿರುವದು. ಅಲ್ಲದೆ, ಈ ಊರು ಶ್ರೀವೈಷ್ಣವರು ಧರ್ಮದ ರ್ಶಿಗಳು, ಪದ್ಧತಿಯಂದು ಆಳ್ವಾರ್ ಎಂಬಿರುವೂರಾರ್ಗಳ ವಿಷ ಯದಲ್ಲಿ ಪ್ರಜು ಮಾಡುತ್ತಿದ್ದ ಖರ್ಚೆಲ್ಲಾ ನಿಟ್ಟುಗಿರುವದು. ಇವ ರಿಗೆ ಬಾಧಿಯು ಆಗುವದಾದರೆ ಈ ಪದ್ಧತಿಗಳೆಲ್ಲಾ ನಿಯಮಿತವಾಗಿ ಸರ್ವತ್ರಸಮನಾಗಿ ದೇವರ ಸೇವೆಯಾಗುವದರಲ್ಲಿ ಸಂದೇಹವಿಲ್ಲ.— ಈ ಬಾರಿ ಬಹು ಮಂದಿ (ಅಂದರೆ, ಸುಮಾರು ೧೫೦ ಮಂದಿ) ಪ್ಲೇಗಿಗೆ ತುತ್ತಾದರು. ಕಳೆದ ಎರಡು ವರುಷಗಳಿಂದ ಇಲ್ಲಿ ಪ್ಲೇ ಗು ಪದೇಪದೇ ಬರುತ್ತಿರುವದರಿಂದ ತಿರುವೇಂಗಡಮುದಲಿ ಯೆಂಬುವನು ಪ್ಲೇ ಗು ಕಾಯಿಲೆಯವರಿಗೂ ಅವರ ಅನುಯಾಯಿಗಳಿಗೂ ಬಹಳ ಭಯ ವನ್ನು ಹುಟ್ಟಿಸುವನ್ನು ಉಂಟು ಮಾಡಿ ಅವರ ಮುಂಚಿತವನ್ನು ತನೆ ಯುತ್ತಾ, ಬಹು ಪ್ರಜಾಕಂಟಕನಾಗಿದ್ದನು. ಪಶ್ಚಾತ್ತಾಗಿ ಸಜಾ ಮತ್ತು ಜುಲ್ಮಾನೆಯನ್ನು ಸಹ ಅನುಭವಿಸಿ, ಕಡೆಗೆ ತನ್ನ ಕೆಲಸ ದಿಂದಲೂ ನಿವೃತ್ತನಾದನು. ಈತನಿಗೆ ಸದರಿ ಕೆಲಸಕ್ಕೆ ಪ್ಲೇಗು ವಿಚಾ ರಣೆಗಳಲ್ಲಿ ಎಂಬು ಆಕ್ಟಿಂಗ್ ಹವೇಲ್ದಾರನು ಊರಿನ ಪ್ರತಿಯೊಂದು ಮನೆಯನ್ನೂ ತಾಲ್ಲೂಕಿನ ಪ್ರತಿಯೊಂದು ಹಳ್ಳಿಯನ್ನೂ ಸುತ್ತಿ, ಪ್ಲೇಗು ಕಾಯಿಲೆಯವರನ್ನು ಕಂಡು ಹಿಡಿದು, ಡಾಕ್ಟರವರಲ್ಲಿ ಹೇ ಳಿ, ಅವರು ಬರುವದು ತಾವಕಾಶವಾದರೆ ಒಳ್ಳೇ ಔಷಧಿಯನ್ನು ಹೇಳಿ ತಾನೇ ತೆಗೆದುಕೊಂಡು ಹೋಗಿ ಕಾಯಿಲೆಯವರಿಗೆ ಕೊ ಟ್ಟು ಪ್ರೆಸ್ರ್ ಪೇಡಿತ್ತಲೂ, ಅಸಹಾಯರಿಗೆ ಸಹಾಯ ಮಾಡುತ್ತ ಲೂ ಕಾಯಿಲೆಯವರ ಸ್ವಂತ ಶ್ರೋತಕರಂತೆ ಉಪಚರಿಸುತ್ತಲೂ ಇದ್ದುಕೊಂಡು, ತನಗೆ ಬಂದಿದ್ದನು ಸಂಪಾದಿಸಿದ್ದ ಕೆಟ್ಟ ಹೆಸರ ನ್ನು ಹೋಗಲಾಡಿಸಿ ಕೆಟ್ಟದ ಪ್ರಜಾಮನೋಗನ್ನು ಸಂಪಾದಿಸು ತ್ತಿರುವನು.

ಜ್ವರಹರಿ. 10

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಂಡುಕ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಚ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬಳುತ್ತಿರು ವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ., ರೂ ೨—೧೨ ಆ., ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಧನುಂ ಕರ್ಪೂರ

Dhanum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಯುಹದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟು ಸರ್ಜನ್ ಗಣಪತಿಯವರು—ಹೆನ್ರಿಯ ಧನುಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ— ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ರೇಕಾಂಡ್ ಬೀಚ್ ಕ್ರಿಪ್. ಮದರಾಸ್.

ಪರೀಕ್ಷಿಸುವುದಕ್ಕೆ ಒಂದು ಸುಲಭ ಉಪಾಯವು.

ಆಂಗರೆ 11

ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ ಈ ರಕ್ತದ ಕ್ರಿಯೆಗೆ ವಿದ್ಯುಲ್ಲತೆಯು (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ ಅನೇಕ ದಾಕುಗಳ ಸಂಶೋಧನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ !!!

ಮಿಂಚಿನ ಪದಕವು. ಮಿಂಚಿನ ಉಂಗುರವು.





ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು —ಅಶಕ್ತಿ, ಅಜೀರ್ಣ, ಕ್ಷಯ ರೋಗ ಸಂಧಿವಾತ, ಕಟಿವಾತ ತಲೇನೋವು, ಅರತಲೇನೋವು, ಪಿತ್ತ ಮತ್ತು ಸೊಂಟದ ಅಶಕ್ತಿ, ಪಕ್ಷವಾತ ಮಲಬದ್ಧತೆ ಮೂಲವ್ಯಾಧಿ, ಉಬ್ಬಸ, ಕೆಮ್ಮು, ಕಫ, ಗಡತನ, ಜ್ವರ, ಉದರವಾತ, ಕಲಿಜದ ವ್ಯಾಧಿ ಸ್ತ್ರೀಯರ ಬಾಣಂತಿ ರೋಗ, ತಲೆತಿರುಗುವಿಕೆ, ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುನಷ್ಟವು, ಸ್ಮರಣಶಕ್ತಿಯು ಊನ ಈ ಇತ್ಯಾದಿ ಅನೇಕ ಉಪಕಾರಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ —ಪದಕವು ಎದೆಯ ಮೇಲೆ ತೋರುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವದು ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯವಾಗಿ ಇಟ್ಟುಕೊಳ್ಳಬೇಕು ಕ್ರಯ ಪ್ರತಿ ೧ ಪದಕಕ್ಕೆ ೧—೨—೦ ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟು ಖರ್ಚು ೪ ಆಣೆ ಒಮ್ಮೆಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗವನ್ನೂ, ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೬ ನಗಗಳನ್ನೂ ಕೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ —ಉಂಗುರದ ಅಳತೆಯನ್ನು ಕಾಗದ ಪಟ್ಟಿಯ ಅಳತೆ ಕಳುಹಿಸಬೇಕು. ಉಪಕರಣಗಳು ಗುಣಹೊಂದಿದ ನಂತರ ಮುಂದೆ ೧ ಯಾ ೨ ತಿಂಗಳು ವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ ವೈಲಕ್ಷಣ್ಯ ಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವ್ಹಿ ಪಿ ಯಿಂದಲೂ ಕಳುಹಿಸುವೆವು

ವಿಠಲದಾಸ ಮೂಡಗಾಂವ್ಕರ, ಮರ್ಚಂಟ,

ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ

Post Bilgi, North Kanara District

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ

ಬರೆದು ತರಿಸಿಕೊಳ್ಳಿ

11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ತರಿಸಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳುವದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಸೂರ್ಯಮೋಹಿನಿ ಮಾ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಅಲ್ಪಕಾಲದಲ್ಲಿ ದೇವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ದುರ್ನಾವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ಉಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ ೨—೮ ಆ , ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ರ ಟಾಬ್ಬು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮಿಯೋಪಥಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ರೋಗಗಳಿಗೆ ಉಪಯೋಗಿಸತಕ್ಕದ್ದು ಆರ್ನಿಕಾ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋಪಥಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಆರ್ನಿಕಾವು ಬಹು ಬೇಗನೆ ಸೇದಿಕೊಳ್ಳಲ್ಲದು. ಡಬ್ಬಿಗಳಲ್ಲಿ ಒಂದು ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಕ್ಯಾಟಲಾಗುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮಿಯೋಪಥಿಯಾ ಕಂಪೆನಿ ೨೩ ಸೆಕೆಂಡು ಬೀಚ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

೨೩—೧೨—೧೯೦೪ ರಿಂದ ೩೦—೧೨—೧೯೦೪ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೊಂದವರ ಈ ವಾರ ಸಂಖ್ಯೆ	[illegible]
ಬೆಂಗಳೂರು ಪಟ್ಟಣ	19	16	101	[illegible]
ಮೈಸೂರು ,,	32	26	46	[illegible]
ಬೆಂಗಳೂರು ಡಿಸ್ಟ್ರಿಕ್ಟು	50	37	90	[illegible]
ಮೈಸೂರು ,,	70	54	184	[illegible]
ಕೋಲಾರ್ ,,	31	17	80	[illegible]
ಕೋಲಾರ್ ಚಿನ್ನದ ಗಣಿಗಳು	18	10	10	[illegible]
ತುಂಕೂರು ಡಿಸ್ಟ್ರಿಕ್ಟು	47	42	58	[illegible]
ಹಾಸನ ,,	11	7	60	1
ಚಿತ್ರದುರ್ಗ ,,	16	15	59	[illegible]
ಕಡೂರ್ ,,	14	7	14	[illegible]
ಶಿವಮೊಗ್ಗ ,,	21	14	58	[illegible]
ಜುಮ್ಲಾ	318	247	696	13

ಶಾಲೀವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರ ಪುಷ್ಯ ಶುದ್ಧ ತ್ರಯೋದಶಿ ಗುರುವಾರದಿಂದ ಪುಷ್ಯ ಬಹುಳ ಚತುರ್ಥಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಜನವರಿ

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ತೇ ...
19	ಗುರು *	ತ್ರಯೋ	20 16	ಆರ್ದ್ರ	50 50	[illegible]
20	ಶುಕ್ರ	ಚತುರ್ದಶಿ	19	ಪುನ	54-15	8
21	ಶನಿವಾ	ಪೌರ್ಣ	16 6	ಪುಷ್ಯ	52 51	9
22	ರವಿವಾ ,,	ಪಾಡ್ಯ	12 12	ಆಶ್ಲೇ	50 11	1
23	ಚಂದ್ರ	ಬಿದಿಗೆ	7-39	ಮ	46 50	1
24	ಕುಜ ‡	ತದಿಗೆ	2-35	ಉಪರ	51 20	1
25	ಬುಧ	ಪಂಚಮಿ	50 54	ಉ	38 1	1

* ಮಾಗೂಡು ಹೊಂದೆ ತಿಥಿದ್ವಯಂ, ಶಾಕಾಂಬರೀ ವ್ರತ ಸ್ಥಿತಿಪತ್ತಿಥಿ, ಮಾಗೂರು ಬಂಡೀ ಉತ್ಸವ, ಬನಶಂಕರೀ ವ್ರ ‡ ಮಾಗೂರು ರಥ ‡ ಸಂಕಷ್ಟ ಚತುರ್ಥಿ, ಮಾಗೂರು ಬಗ ಕಡಿಯೇದು

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಳ್ಳ್ಯಾ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೦-೪-೦	೧೧-೮-
ಕೆಂಬೂತಿ ಅಕ್ಕಿ ಅವಲ್	..	೧೦-೨-೦	೧೧-೦-
,, ಮಧ್ಯಂ	..	೯—೮—೦	೧೯—೮—
ಬಾಸುಮತಿ ಅಕ್ಕಿ	..	೯—೪—೦	೧೨—೮—
ಸಣ್ಣಕ್ಕಿ ಅವಲ್		೧೨-೮—೦	೧೨—೮—
,, ಮಧ್ಯಂ	.	೧೧-೮-೦	೧೨-೦-
ತೊಗರೀ ಬೇಳೆ ಪಲ್ಲಾ ೧ಕ್ಕೆ	.	೧೦ ೮-೦	೧೦—೮—
,, ಮಧ್ಯಂ	..	೧೭—೮—೦	೧೦—೦—
ಹೈಗಾಗಿ ಪಲ್ಲಾ ೧ಕ್ಕೆ	..	೪ ೨—೬	೫—೫—
ಕಾರಾಗಿ	..	೪—೧೨-೦	೫—೦—
ಜೋಳ	..	೪—೪—೦	೩—೦—
ಹುರುಳಿ ಪಲ್ಲಾ ೧ಕ್ಕೆ	..	೮—೧೨—೦	೮—೦—
ಬಿಳೀ ಅವರೆ	.	೯ ೦-೦	೩—೦—
ಹೆಸರು	..	೯ ೮—೦	೯—೦—
ಉದ್ದು	..	೮-೧೪-	—೮—
ಕಡಲೆ	..	೧೦ ೦—೦	೭—೮—
ಎಳ್ಳು	..	೧೨ ೮ ೦	೧೦—೦೫
ಹುರುಳಿ	,,	೫—೧೨ ೦	೭—೦—
ಸಕ್ಕರೆ ೧೨೬ ಸೇರಿಗೆ	..	೯—೮—೦	೬—೪—
ಬೆಲ್ಲ ಮೂಟೆ ೧ಕ್ಕೆ	.	೨—೪—೦	೦—೧೨—
ಮೆಣಸಿನಕಾಯಿ	..	೪—೨—೦	೩—೦—
,, ಮಧ್ಯಂ	..	೩—೧೨-೦	೨—೮—
ಬೆಲ್ಲ ದೊಡ್ಡ ಅಚ್ಚು	..	೭—೪—೦	೧೧-೧೦-
ಒಳ್ಳೆಣ್ಣೆ ಮಣ ೧ಕ್ಕೆ	..	೪—೦ ೦	೩-೧೨-
ಹರಳೆಣ್ಣೆ ,,	..	೩—೧೨—೦	೩—೮—
ಗೆಣಸು ಬಿರಿ ಪಲ್ಲ ೧ಕ್ಕೆ	..	೫—೧೪—೦	೭—೧೪—
ಉಪ್ಪು ,,	..	೯—೦—೦	೮—೫—
ಹುಣಸೇ ಹಣ್ಣು	..	೧ ೪—೦	೩ ೧೪—
,, ಹಳೇದು	..	೦—೧೪—	—೧೨—
ತುಪ್ಪ	..	೧೨—೦—೦	೧೦—೦—
ಸೀಮೆಯಿಂದ ಕಟ್ಟು ೧ಕ್ಕೆ	..	೫—೩—೦	೪—೭—
ತೆಂಗಿನಕಾಯಿ ೧೦೦ ಕ್ಕೆ	..	೫—೦—೦	೬ ೧೨—
ಅಡಿಕೆಕಾಯಿ ಮಣ ೧ಕ್ಕೆ	..	೧—೦—೦	೧—೦—
ಅಂಟುವಾಳದಕಾಯಿ ಮಣ ೧ಕ್ಕೆ	..	೦—೧೪—	೦—೧೦—
ಹತ್ತಿ (ಪುರ) ಕಂಡಿ	..	೦೫—೮—೦	೦೫—೬—
,, ,, ಹಸಿಮ	.	೦೫-೧೦—೦	೦೫—೯—
,, ,, ಗಟ್ಟಿ ತೂಕ ೧ಕ್ಕೆ	..	೨೬—೦—೦	೨೪—೬—
ಬೆಣ್ಣೆ ಗಟ್ಟಿ ತೂಕ ೧೦೦ ಕ್ಕೆ	..	೩೨—೦—೦	೩೦—೧೨—

Printed and Published by the Rev W B T[illegible] the Proprietor and Manager, Wesleyan Mission Press, Mysore 19 1/1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು —————— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೮ — ಮೈಸೂರು—ಸನ್ ೧೯೦೫ ನೇ ಇಸವಿ ಜನವರಿ ತಾರೀಖು ೨೬ ನೇ ಗುರುವಾರ. — ಸಂಚಿಕೆ ೩೪

ಓಹೋ! ಗೊತ್ತೇ ಇಲ್ಲವೇ!

ಟಕ್ಕೆಗೆ ಸಿದ್ಧವಾಗಿವೆ — ಎಲ್ಲರಿಗೂ ಬೇಕಾದದ್ದು.

6

ವಿಶೇಷ ರೂಪಿಗೆ ಬಂದಿರುವ ೧೯೦೫ ನೇ ಇಸವಿ ಪಂಚಾಂಗ ಸಮೇತವಾದ ಎಸ್ ಜಿ ಎಲ್ ಪಾಕೆಟ್ ಡೈರಿಗಳು

ಇವು ವರ್ತಕರು, ಕಂಟ್ರಾಕ್ಟ್‌ದಾರರು, ದೊಡ್ಡ ಮನುಷ್ಯರು, ಲಾಯರು ವಗೈರೆ ಸಮಸ್ತರಿಗೂ ಅತ್ಯಂತ ಉಪಯೋಗವಾದ ಅನೇಕ ವಿಷಯ ಗರ್ಭಿತವಾಗಿಯೂ ಪ್ರತಿಪುಟಕ್ಕೂ ರೂಲು ಹಾಕಿ ಸೊಗಸಾಗಿ ಬೈಂಡು ಮಾಡಲ್ಪಟ್ಟು ಎಲ್ಲರಿಗೂ ಸಾಧ್ಯವಾಗುವಂತೆ ಬಹಳ ಕಮ್ಮಿ ಕ್ರಯಕ್ಕೆ ವಿಕರಿಯಾಗುತ್ತಿವೆ ತರಿಸಿ ನೋಡಿದಲ್ಲಿ ಮಾಯುತಿಯಾಗುತ್ತೆ.

ಎ ನಂಬರ್ — ಬಿ ನಂ॥

೩ ಅಂಗ್ಲ ೫ ಅಂಗ್ಲದ ಚಿಕ್ಕ ಮುಚ್ಚಳ ಹಾಕಿ ಪೆನಸಲ್ ಇಟ್ಟಿರುವ ಡೈರಿಗೆ ೦—೩—೦ — ರುವ ಫ್ಲಾಪ್ ಡೈರಿಗೆ ೦—೫—೦

ಒಂದೆ ನಂಬರು ೧೨ ಕಾಪಿ ಒಟ್ಟಾಗಿ ತರಿಸುವವರಿಗೆ ಪೋಸ್ಟು ಚಾರ್ಜ್ ಕಮ್ಮಿ ಬೀಳುವುದಲ್ಲದೆ ಆಬೇ ನಂಬರು ೧ ಡೈರಿ ಮುಫ್ತಾಗಿ ಧರ್ಮಾಸಿಸುವೆವು

ವಿಳಾಸ—ಎಂ ಪಿ ಮಲ್ಲಯ್ಯ, ಕರ್ನಾಟಕ ಬುಕ್ ಡಿಪೋ, ೨೧೧, ತಾಲ್ಲೂಕು ಕಚೇರಿ ರೋಡು, ಬೆಂಗಳೂರು ಸಿಟಿ

P. SUBBAROY'S

World Renowned and most Efficacious Ayurvedic Medicines.

ಪಿ ಸುಬ್ಬರಾಯಿಯವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

11

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಒರಳು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೩ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವೆವು ಕ್ರಯ — ನೂರು ೨೦೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ ೧ ರಿಂದ ೬ ಸೀಸೆಗೆ ವಿ ಪಿ. ಛಾರ್ಜಿ ೫ ಆಣೆ.

ಯೋಗ್ಯತಾ ಪತ್ರಿಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾದಾನಿ

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಯ ಸಂಗಡ ಹಾಕಿಕೊಂಡರೆ ಪಿತ್ಥ, ತಲೇನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರ ಸಹಗೆ ವಿಶೇಷ ಪ್ರಯೋಜನವಾಗಿರುವುದು —ಪುದುಕ್ಕೋಟ ಪೋಲೀಸ್ ಇನ್ಸ್ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ — ಕೃಷ್ಣಯ್ಯಂಗಾರ್, ಟೆಲಿಗ್ರಾಫ್ ದಿವಾನ್ ಪೇಷ್ಕಾರ್, ತ್ರೈಲಾರ್.

Apply to —P. SUBBAROY, Porto Novo, South Arcot.

ವಿಳಾಸ.—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಗಾದು ಗುಣಕಾರಿ.

29

ಪಾಣ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ ಮತ್ತು ರಾಮಾಪುರ. ಇವರ

೧. ಪ್ಲೇಗು ಪರೌಷಧ —ಈ ಪರಿಯಂತರ ಪ್ರತಿಯೊಬ್ಬ ಪ್ಲೇಗು ರೋಗಿಗೂ ಈ ಔಷಧಿಯಿಂದ ಗುಣವಾಗಿದೆ. ಧನಾರ್ಜನೆಗಾಗಿ ಪತ್ರಿಕಾಲಂಕಾರವಾಗಿಸಿಲ್ಲ. ಲೋಕೋಪಕಾರದಿಂದ ಕೀರ್ತಿಯು ಶರೀರವನ್ನಪೇಕ್ಷಿಸಿ, ಬಹು ಧನವ್ರಯದಿಂದ ಕಂಡುಹಿಡಿಯಲ್ಪಟ್ಟದು ಕೇವಲಾನುಭವದಿಂದ ನಂಬಿಕೆಯಾದೌಷಧಿ. ಗೆಡ್ಡೆಗೆ ಸವರುವ ಔಷಧಿ ಮತ್ತು ಸೇವಿಸುವ ಔಷಧಿ ಸಹಾ—೬ ದಿನಕ್ಕೆ ಸಾಕಾಗುವಷ್ಟಕ್ಕೆ ಕ್ರಯ ೫ ರೂ ಒಬ್ಬರಿಗಾದರೆ ೧।।। ರೂ. ವಿ ಪಿ ಚಾರ್ಜ್ ಬೇರೆ.

೨ ಕಸ್ತೂರೀ ಮಾತ್ರೆಗಳು - ಮಕ್ಕಳ ಎಳವು, ಜ್ವರಾದಿಗಳು, ಹೆಂಗಸರ ಮುಟ್ಟುಕಟ್ಟು, ಗರ್ಭಸ್ರಾವಾದಿಗಳು, ಎಲ್ಲರ ಜ್ವರ, ವಾತ, ಮೈಕೈ ನೋವು, ಜ್ವರದಗೆಡ್ಡೆ ಮೊದಲಾದ ೨೦ ರೋಗಗಳು ಗುಣವಾಗುತ್ತೆ ಅನುಪಾನ ಪತ್ರದಲ್ಲಿ ಎಲ್ಲಾ ಕಾಣಿಸಿರುತ್ತೆ. ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ೧ ರಿಂದ ೬ ರ ವರಿಗೆ ಭಾಂಗಿಛಾರ್ಜ್ ೫ ಆಣೆ. ೬ ಸೀಸೆಗೆ ೧ ಸೀಸೆ ಹೆಚ್ಚುಕೊಡುವೆವು.

೩. ಬಾಧಾಪಹಾರಿಣಿ —ಎಲ್ಲಾ ಬಗೆ ತಲೆ ನೋವು, ವಾಯುಗಳು, ಉಳಕು, ಛಳಕು, ಕೂಡ ಒಡನೇ ಗುಣವಾಗುತ್ತದೆ ಡಬ್ಬಿ ೧ಕ್ಕೆ ಕ್ರಯ ೮ ಆಣೆ ೬ ಡಬ್ಬಿಗೆ ೧ ಡಬ್ಬಿ ಹೆಚ್ಚು ದೊರೆಯುತ್ತೆ

೪. ದಂತಸಿತಚೂರ್ಣ —ಉಜ್ಜುತ್ತಾ ಬಂದರೆ ಹಲ್ಲಿನ ಪಾಚಿ, ರಕ್ತಸೋರುವುದು, ಬಾಯಿನಾತ, ಎಲ್ಲಾ ಬಗೆಯ ಹಲ್ಲು ನೋವೂ ಹೋಗುತ್ತದೆ ಡಬ್ಬಿಗೆ ೪ ಆಣೆ, ೪ ಡಬ್ಬಿಗೆ ೧ ಹೆಚ್ಚು.

ಏಜಂಟರು —೧ ಕೆ ಎಲ್ ಕೃಷ್ಣಶಾಸ್ತ್ರಿಗಳು, ಹಳ್ಳದಬೀದಿ, ಮೈಸೂರು ಅಥವಾ.

೨. ಹೆಚ್ ಎಲ್. ರಾವ್ ಅಂಡ್ ಬ್ರದರ್ಸ್, ಬೆಂಗಳೂರು ಸಿಟಿ.

ಸನ್ ೧೯೦೫ನೇ ಇಸವಿಯ

5

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಖುಷ್‌ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಚಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫಿಸಿನ ಎಲ್ಲಾ ವಿಷಯಗಳು, ದವಿರ್ಗಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ತ್ರಿಕ್ಕಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ದಮಾಖರ್ಚ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕೀಮು ಸಾಮಾನ್ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ

ಎ ನಂಬರ್ ಚಿಕ್ಕಸೈಜು ೩ ಆಣೆ ಸಿ. ನಂಬರ್ ದೊಡ್ಡಸೈಜು ೬ ಆ
ಎಫ್ ,, ,, ೪ ಎಚ್ ,, ,, ೩ ,,
ಬಿ ಮುಚ್ಚಳದ್ದು ,, ೫ ಡಿ ಮುಚ್ಚಳದ್ದು ,, ೮ ,,

ಪೋಸ್ಟ್ ಚಾರ್ಜ್ ಬೇರೆ. ಒಂದೇ ಸಮೂಕೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ ವಿ ಪಿ. ಮೂಲಕ ತರಿಸಿಕೊಳ್ಳಿ

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಪ್ರಪಂಚದಲ್ಲಿ ದೊಡ್ಡದು ಯಾವದು?

8

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ ಇದರ ಕ್ರಯ ೧೨ ಆಣೆ, ವಿ ಪಿ. ಮೂಲಕ ೧೪ ಆಣೆ.

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು ಕ್ರಯ ೨ ಆಣೆ

೩. "ಸ್ವಪ್ನಪ್ರವಾಸ ಫಲದೀಪಿಕೆ"

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪	"ರೋಮನರ ಚರಿತ್ರೆ"	ಕ್ರಯ ೦—೬—೦
೫.	"ಗ್ರೀಕರ ಚರಿತ್ರೆ"	,, ೦—೨—೦
೬.	"ಅನುಭವಾನಂದ."	,, ೦—೬—೦
೭	"ಗಣಿತ ಸಂದೇಪಿನಿ"	೧—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ"	೦—೧೨—೦
೧೦	"ಹಿಂದೂ ಧರ್ಮಶಾಸ್ತ್ರ (ಬಾ) ಸಂಗ್ರಹ."	೦—೧೭—೦
೧೧	"೧೯೦೫ನೇ ವರುಷದ ಡೈರಿಗಳು"	

ಫ್ಲಾಪ್, ಪೆನಸಿಲ್ ಸಹಿತ ೦—೬—೦, ಸಾದಾ ೦—೪—೦

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಶ್ರೀ ತಾಂಬೂಲ.

11

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದಾರೆ. ಅದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಚಳಿ. ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ, ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರಿಗೆ ವಿ. ಪಿ. ಛಾರ್ಜಿ ೫ ಆಣೆ. ನಮ್ಮ ವಿಳಾಸ —

ದೇವನಹಳ್ಳಿ ಟವ್ನ್, ಬೆಂಗಳೂರು ಡಿಸ್ಟ್ರಿಕ್ಟ್. — ಯಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್.

೧೯೦೫ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

5

ಜನವರಿ ತಾ. ೧೦ ರೊಳಗೆ ಸಿದ್ಧವಾಗುತ್ತೆ. ಪ್ರಶ್ನೋತ್ತರ ಸಹಿತ ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷೆಗಳಿಗೆ ತಕ್ಷಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಸರಿಯಾದ ಏರ್ಪಾಡು ಮಾಡಿದೆ.

ಬಾಲಬೋಧದ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೭ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ—೧ ಆಣೆ. ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈಚಿನ ಕಾಗದ ಬರೆದವರಿಗೆ ಕಳುಹಿಸಲಿಲ್ಲ ಇನ್ನುಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೬ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧॥ ಆಣೆ

ವಿಳಾಸ—ಯಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

ನೋಟೀಸು.

1

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಸುವುದೇನೆಂದರೆ —

೧೯೦೫ ನೆ ಜನವರಿ ೧೫ನೇ ತಾರೀಖು ಲಾಗಾಯಿತು ಇನ್ನೊಂದು ಹುಕುಂ ಕೊಡುವ ಪರಿಯಂತರ ನಾಯಿಗಳ ಬಾಯಿಯನ್ನು ಕಟ್ಟದೇನೂ ಮತ್ತು ಅವರ ಯಜಮಾನರ ಮನೆಯ ಆವರಣದ ಹೊರಭಾಗದಲ್ಲಿ ಪೋಲಿಯಾಗಿ ತಿರುಗುವ ನಾಯಿಗಳು ಕೊಂದುಹಾಕಲ್ಪಡುತ್ತ. ನಾಯಿಗಳನ್ನು ಬಂದೋಬಸ್ತಾಗಿ ಕಟ್ಟಿಹಾಕಿ, ಬಾಯಿಕಟ್ಟಿ ಇಟ್ಟುಕೊಳ್ಳಬೇಕೆಂದು ಕೋರಿಯಿದೆ

ಮೈಸೂರು ಸಿಟಿ ಮುನಿಸಿಪಲ್ ಆಫೀಸ್,
ತಾ॥ ೩—೧—೧೯೦೫.

C VENKATA RAO
Vice President.

WESLEYAN MISSION PRESS, MYSORE.

ಮೈಸೂರು ವೆಸ್ಲೀಯನ್ ಮಿಷನ್ ಪ್ರೆಸ್

2

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಚಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಮಿನಿಯನ್, ಪೈಕ, ಲಾಂಗ್ ಪ್ರೈಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು

ವಿಳಾಸ—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

3



ಕೆಳಹೊಟ್ಟೆಯ ನೋವು, ವಾಂತಿಭೇದಿ ಉಬ್ಬರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ.—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಅದೇ ಸರ್ವೋತ್ಕೃಷ್ಟವಾದ ಔಷಧ, ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ" ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ, ಪ್ರಾಣವನ್ನು ಬದುಕಿಸಿಕೊಳ್ಳಬಹುದು ಕ್ರಯ ೧ ಬಾಟ್ಲಿಗೆ ೧ ರೂ; ೨ ರೂ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮುಂದೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ವೃತ್ತಾಂತ ಪತ್ರಿಕೆ.

ಸ್ರ ೧೯೦೫ ನೇ ಇಸವಿ ಜನವರಿ ತಾ॥ ೨೬ ನೇ ಗುರುವಾರ.

ರಷ್ಯಾ ಪ್ರಜೆಗಳು ದಂಗೆಯೆದ್ದಿರುವರೋ?

ಕಳೆದ ೧೯ ನೆಯ ತಾ ಗುರುವಾರದಿಂದೀಚೆಗೆ ರಷ್ಯಾ ಚಕ್ರಾಧಿಪತ್ಯದ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಬಹಳ ಗಲಭೆಯುಂಟಾಗಿರುವುದು. ಸುಮಾರು ನಾಲ್ಕು ಲಕ್ಷ ಪ್ರಜೆಗಳು ಸುತ್ತುಮುತ್ತಿನ ಪ್ರದೇಶಗಳಿಂದ ರಾಜಧಾನಿಯಲ್ಲಿ ಸೇರಿ. ಫಾದರ್ ಗೇಪನ್ ಎಂಬೊಬ್ಬ ಪಾದ್ರಿಯನ್ನು ಮುಂದಾಳಾಗಿಟ್ಟುಕೊಂಡು, ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು, ಜಾರ್ ಚಕ್ರವರ್ತಿಯವರಿಗೆ ಒಪ್ಪಿಸಿರುತ್ತಾರೆ ಅದರಲ್ಲಿ ಪ್ರಜೆಗಳು ಚಕ್ರವರ್ತಿಯವರನ್ನು ಬೇಡಿಕೊಂಡಿರುವ ಮುಖ್ಯ ವಿಷಯಗಳೇನೆಂದರೆ—

ದೊಡ್ಡಮನುಷ್ಯರೆನಿಸಿಕೊಂಡು ಅಧಿಕಾರ ಮಾಡುವವರು ಪ್ರಜೆಗಳನ್ನು ಬಹಳ ಅವಮಾನಪಡಿಸುತ್ತಾರೆ, ಶಕ್ತಿ ಮೀರಿ ಕಷ್ಟಪಡಿಸುತ್ತಾರೆ ಅವರ ಕ್ರೂರತರವಾದ ಮತ್ತು ಸಹಿಸಕೂಡದ ಅಧಿಕಾರವು ಪ್ರಜೆಗಳನ್ನು ನಾನಾ ಸಂಕಟಗಳಿಗೆ ಗುರಿಮಾಡಿದೆ. ಈ ಅನ್ಯಾಯವನ್ನು ಇನ್ನು ಮುಂದೆ ಸಹಿಸಲಾರರು; ಅವರ ತಾಳ್ಮೆಯೆಲ್ಲಾ ನಿರರ್ಥಕವಾಯಿತು. ಈಗ ಕಷ್ಟನಷ್ಟಗಳನ್ನು ಅನುಭವಿಸುವುದಕ್ಕಿಂತಲೂ ಪ್ರಾಣಬಿಡುವುದೇ ಲೇಸೆನ್ನುವ ಸ್ಥಿತಿಯುಂಟಾಗಿದೆ. ಪ್ರಜೆಗಳೆಲ್ಲಾ ಸೇರಿ ಈಗ ಅರಿಕೆ ಮಾಡಿಕೊಳ್ಳದಿದ್ದರೆ ಮಾರ್ಗವೇ ಇಲ್ಲ, ಚಕ್ರವರ್ತಿಯವರು ಸಮಸ್ತ ಪ್ರಜೆಗಳಲ್ಲೂ ಪ್ರತಿನಿಧಿಗಳನ್ನು ಚುನಾಯಿಸಿ ಕರೆಯಿಸಿಕೊಂಡು, ಅವರ ಮೂಲಕ ಪ್ರಜೆಗಳ ಕಷ್ಟಗಳನ್ನು ವಿಚಾರಿಸಬೇಕು. ಹೀಗೆ ಮಾಡದಲ್ಲದ ಪ್ರಜೆಗಳ ಕೂಗು ಪರಿಹಾರವಾಗಲಾರದು ಹ್ಯಾಗಾದರೂ ಮಾಡಿ ಪ್ರಜೆಗಳ ಈ ಪ್ರಾರ್ಥನೆಗಳನ್ನು ನೆರವೇರಿಸಿ ಕೊಡಬೇಕು ಇದರಿಂದ ರಷ್ಯಾ ರಾಜ್ಯವು ಸಂತೋಷ ಸಮಾಧಾನಗಳಿಗೆ ಆವಾಸಸ್ಥಾನವಾಗಿ ಕೀರ್ತಿ ಪಡೆಯುವುದು. ಪ್ರಜೆಗಳು ಈಗ ಅರಿಕೆ ಮಾಡಿಕೊಂಡಿರುವ ಪ್ರಾರ್ಥನೆಗಳನ್ನು ಚಕ್ರವರ್ತಿಯವರು ತಿರಸ್ಕಾರ ಮಾಡಿದ ಅಲಕ್ಷ್ಯ ಮಾಡಿಬಿಟ್ಟಲ್ಲಿ ಪ್ರಜೆಗಳೆಲ್ಲಾ ಅರಮನೆಯ ಮುಂದಣ ಮೈದಾನಿನಲ್ಲೇ ಪ್ರಾಣಬಿಡುವುದಕ್ಕೆ ಸಿದ್ಧರಾಗಿದಾರೆ

ಈ ಪ್ರಕಾರ ರಷ್ಯಾ ಪ್ರಜೆಗಳು ಚಕ್ರವರ್ತಿಯವರಿಗೆ ತಮ್ಮ ಮನೋವ್ಯಥೆಯನ್ನು ಅರಿಕೆ ಮಾಡಿಕೊಂಡಿರುವರು ಇದರಿಂದ ರಾಜ್ಯದಲ್ಲಿ ಇದುವರೆಗೆ ನಡೆದು ಬಂದಿರುವ ಕ್ರಮಗಳು ಇನ್ನು ಮುಂದೆ ನಡೆಯುವುದು ಸಾಧ್ಯವೇ ಎಂದು ಬಹು ಜನರು ಅನುಮಾನಪಡಲಾರಂಭಿಸಿದಾರೆ. ರಷ್ಯಾ ರಾಜ್ಯದ ಮೂಲಸ್ಥಾಪಕನಾದ ಐವಾನ್ ಕ್ರೂರ ನೆಂಬ ದೊರೆಯು ತನ್ನ ಅಧಿಕಾರವನ್ನು ಕುರಿತು—"ನಾನು ದೇವರಿಂದ ನೇಮಕವಾದ ದೊರೆಯಾಗಿದೇನೆ ನಾನು ಚಂಚಲಚಿತ್ತರಾದ ಮನುಷ್ಯರ ಮಾತನ್ನು ಕೇಳತಕ್ಕವನಲ್ಲ" ಎಂಬುದಾಗಿ ಹೇಳಿದನು ಅಂದಿನಿಂದ ರಷ್ಯಾ ರಾಜ್ಯ ಪರಿಪಾಲಕರ ಅಧಿಕಾರವು ತಡೆಯಿಲ್ಲದ ಸ್ವೇಚ್ಛೆ ಯಾದ ನಿರಂಕುಶ ಪ್ರಭುತ್ವವಾಗಿರುವುದು. ಇಂಥಾ ಪ್ರಭುತ್ವವು ಮಹಾ ಕ್ರೌರ್ಯವಾದದ್ದೆಂದೂ ಪ್ರಜೆಗಳು ಅಂಥಾ ರಾಜನ ಕೈಕೆಳಗೆ ನರಳುವುದೇ ಸರಿ ಎಂದೂ ಅವರು ಎಂದಿಗೂ ನೆಮ್ಮದಿಯನ್ನು ಹೊಂದಿ ಅಭಿವೃದ್ಧಿ ಹೊಂದಲಾರರೆಂದೂ ನಾವು ಹೇಳಬೇಕಾದದ್ದಿಲ್ಲ.

ಕಳೆದವಾರ ರಷ್ಯಾ ರಾಜಧಾನಿಯಲ್ಲಿ ಪ್ರಜಾಪಕ್ಷದವರಿಗೂ ಸರ್ಕಾರಿ ಸೈನಿಕರಿಗೂ ಕದನಗಳಾದುವು. ಹೆಂಗಸರು ಮಕ್ಕಳು ಸಹಿತ ೧,೫೦೦ ಮಂದಿ ಮೃತರಾದರು. ಪ್ರಜೆಗಳು ರಾಜಧಾನಿಯನ್ನು ಆಕ್ರಮಿಸಿಕೊಂಡಿದಾರೆ ಚಕ್ರವರ್ತಿಯವರು ಅರಮನೆಯನ್ನು ಬಿಟ್ಟು, ಸಾರ್ಸ್ಕೊ ಸೇಲೋ ಎಂಬ ರಾಜಭವನದಲ್ಲಿರುತ್ತಾರೆ ಸಮಸ್ತ ಪಂಗಡಗಳ ಪ್ರಜೆಗಳೂ ಏಕವಾಗಿ ದಂಗೆ ಮಾಡಲಾರಂಭಿಸಿರುವರು. ರಾಜಧಾನಿಯಲ್ಲಿ ಪ್ರಕಟವಾಗುತ್ತಿದ್ದ ವರ್ತಮಾನ ಪತ್ರಿಕೆಗಳೆಲ್ಲಾ ನಿಂತುಹೋಗಿವೆ. ಹ್ಯಾಗೂ ಆ ರಾಜ್ಯದಲ್ಲಿ ದುಷ್ಟಾಧಿಕಾರವು ಕೊನೆಗಂಡೀತೆಂದು ಎಲ್ಲರೂ ನಿರೀಕ್ಷಿಸುತ್ತಾರೆ.

ಸ್ವದೇಶದ ವೃತ್ತಾಂತಗಳು.

ಬ್ರಿಟಿಷ್ ರೆಸಿಡೆಂಟರಾದ ಸರ್ ಜೇಂಸ್ ಬೋರ್ಡಿಲಾನ್ ರವರು ಈ ತಿಂಗಳ ಕಡೇ ತನಕ ಬೆಂಗಳೂರಿನಲ್ಲಿದ್ದು, ಫೆಬ್ರುವರಿ ಎರಡನೆ ವಾರದಲ್ಲಿ ಕೊಡಗಿನ ಕಡೆ ಸರ್ಕೀಟು ಹೊರಡುವರೆಂದು ತಿಳಿದು ಬಂದಿದೆ.

ರೆವಿನ್ಯೂ ಸರ್ವೆ ಕಮಿಷನರಾದ ಕರ್ನಲ್ ಜೆ. ಬಿ ಗ್ರಾಂಟ್ ಯವರು ಸದ್ಯ ಶೃಂಗೇರಿ ಜಹಗೀರಿಯಲ್ಲಿ ಸರ್ವೆ ಸೆಟ್ಲು ಕೆಲಸಗಳನ್ನು ನಡಸುತ್ತಿದಾರೆ

*****

ಕಡೂರು ಡಿಸ್ಟ್ರಿಕ್ಟಿನಲ್ಲಿ ಬಹು ಕಾಲ ಕಾಫಿ ಪ್ಲಾಂಟರಾಗಿದ್ದು ಶಿಮೊಗೆ ಹೋದ ಮಿ॥ ಫ್ರೆಡ್ರಿಕ್ ಕ್ಲಿಫರ್ಡ್ ಯವರು ಕಾಲವಾದರೆಂದು ವರ್ತಮಾನ ಬಂದಿದೆ

*****

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ವಿದ್ಯುಚ್ಛಕ್ತಿಯ ದೀಪವನ್ನು ಇಡಿಸುವುದಕ್ಕೆ ಪ್ರತಿವರುಷವೂ ಸರ್ಕಾರಕ್ಕೆ ೨೭,೦೦೦ ರೂಪಾಯಿ ಕೊಡುವುದಾಗಿ ಮಾತುಕೊಟ್ಟಿದಾರೆ.

*****

ಮೈಸೂರು ಸರ್ಕಾರದ ಸ್ಪೆಷಲ್ ಇಲಾಖೆಯ ಆಫೀಸರ್ ಮಿ॥ ಟ. ರಾಯಲುಚೆಟ್ಟಿ ಯವರನ್ನು ಅಸಿಸ್ಟೆಂಟ್ ಕಮಿಷನರಾಗಿ ಬಡ್ತಿ ಮಾಡಿ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುವಂತೆ ನೇಮಿಸಿದಾರೆ.

*****

ಬೆಂಗಳೂರು ಚೀಫ ಕೋರ್ಟಿನ ಛೀಫ್ ಜಡ್ಜರಾದ ಮಿ॥ ಸ್ಟೇಲಿಯವರು ನಾಳೆ ಸರ್ಕೀಟು ಹೊರಟು, ಎಲ್ಲೆಡೆ ಡಿವಿಜನಿನಲ್ಲಿರುವ ಕೋರ್ಟುಗಳನ್ನೆಲ್ಲಾ ಜಮಾಯಿಷಿ ಮಾಡಿಕೊಂಡು ಬರುವವರಾಗಿದಾರೆ.

*****

ರಾಜಧಾನಿಯ ಪಶ್ಚಿಮಪಾರ್ಶ್ವದಲ್ಲಿ ಇಲವಾಲದಹತ್ತಿರ ಒಂದು ಕಾಡು ಹಂದಿಯು ಕಳೆದ ಭಾನುವಾರ ಒಬ್ಬನ ಮೇಲೆ ಬಿದ್ದು ಕಚ್ಚಿ ಗಾಯ ಮಾಡಿತು ಅವನನ್ನು ಇಲ್ಲಿನ ಜನರಲ್ ಆಸ್ಪತ್ರೆಯಲ್ಲಿಟ್ಟು ಇಲಾಜು ಮಾಡುತ್ತಿದ್ದರು. ಆದರೆ ಅವನು ತೀರಿಹೋದನು

*****

ರೆವಿನ್ಯೂ ಕಮಿಷನರ್ ಮಿ॥ ಟ ಆನಂದರಾಯರು ನಾಕ್ಟರ್ ರಂಗಾಚಾರ್ಯರನ್ನು ಆ ಕ ಮಿ॥ ಅರುಣಾಮಯ ಐಯ್ಯಂಗಾರ್ಯರನ್ನೂ ಸಂಗಡ ಕರೆದುಕೊಂಡು ಬೆಂಗಳೂರಿನಿಂದ ಸರ್ಕೀಟು ಹೊರಟಿದಾರೆಂತಲೂ, ಇವರು ಹಾಸನ, ಶಿವಮೊಗ್ಗ, ಕಡೂರು ಡಿಸ್ಟ್ರಿಕ್ಟುಗಳ ಮೇಲೆ ಸಂಚಾರ ಮಾಡುತ್ತಾರೆಂತಲೂ ತಿಳಿದು ಬಂದಿದೆ.

*****

ಕೋಲಾರ್ ಚಿನ್ನದ ಗಣಿಗಳಿಗೆ ಕುಡಿಯುವ ನೀರನ್ನು ಸರಬರಾಯಿ ಮಾಡುವುದಕ್ಕೆ ಬೇ ಮಂಗಲದ ಕೆರೆ ಬಳಿ ಆಗುತ್ತಿರುವ ಕಾಮಗಾರಿ ನಡುಂತಾದ್ದು ಇನ್ನೂ ಪೂರೈಸಲಿಲ್ಲವಾದ್ದರಿಂದ ಅದನ್ನು ಪ್ರತಿಷೆ ಮಾಡುವುದು ನಾವಕಾಶವಾಗಿದೆ ಎಂದು ಕೇಳುತ್ತೇವೆ

*****

ಹದಿನೆಂಟು ವರುಷದೊಳಗಿರುವ ಅಪರಾಧಿಗಳು ಒಂದು ತಿಂಗಳಿಗಿಂತಲೂ ಜಾಸ್ತಿ ಸಜಾ ಅನುಭವಿಸಬೇಕಾಗಿದ್ದಲ್ಲಿ ಅಂಥಾ ಅಪರಾಧಿಗಳನ್ನು ಬೆಂಗಳೂರಿಗೆ ಕಳುಹಿಸಬೇಕೆಂತಲೂ, ಸೆಂಟ್ರಲ್ ಜೈಲಿನಲ್ಲಿ ಅವರಿಗೆ ವಿದ್ಯೆ ಹೇಳಿಕೊಡುವುದಕ್ಕೆ ಏರ್ಪಾಡು ಮಾಡಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದಾರೆ.

*****

ಲೇಟ್ ಸರ್ ಶೇಷಾದ್ರಿ ಐಯರವರ ಮೆಮೋರಿಯಲ್ ಫಂಡಿಗೆ ವಸೂಲಾಗಿರುವ ಚಂದಾ ಹಣವೂ ಅದರ ಬಡ್ಡಿಯೂ ಸೇರಿ ೧,೦೦,೭೩೬ ರೂಪಾಯಿ ಆಗಿದೆ, ಇದರಲ್ಲಿ ೨೨,೫೦೦ ರೂಪಾಯಿ ಅವರ ಪ್ರತಿಮೆಗೂ ೭೩,೦೦೦ ರೂಪಾಯಿ ಮೆಮೋರಿಯಲ್ ಹಾಲ್ ಬಂಗಲೆಯ ಕಟ್ಟಡಕ್ಕೂ ವಿನಿಯೋಗಿಸುವವರಾಗಿದಾರೆ

*****

ಕಳೆದ ಭಾನುವಾರ ಬೆಂಗಳೂರು ಕೋಟೆ ಸಂಸ್ಕೃತ ಪಾಠಶಾಲೆಯಲ್ಲಿ ದೊಡ್ಡಮನುಷ್ಯರು ಸಭೆ ಸೇರಿ, ಪರಸ್ಪರ ಸಹಾಯಾರ್ಥದ ಒಂದು ಸಂಘವನ್ನು ಸ್ಥಾಪಿಸುವುದಕ್ಕೆ ಕೆಲವು ರೂಲುಗಳನ್ನು ಮಾಡಿಕೊಂಡರು ಆ ದಿನ ನಮ್ಮ ದಿವಾನರವರು, ಆ ಸಂಘದ ಉದ್ದೇಶವನ್ನು ಹೊಗಳಿ. ಅದು ಶಾಶ್ವತವಾಗಿ ನಡೆಯಲೆಂದು ಬೈಪಿ ಒಂದು ಕಾಗದವನ್ನು ಬರದಿದ್ದರು.

ರಾಜಧಾನಿಯಲ್ಲಿರುವ ಗುರಿಕಾರ್ ಸಿ ಮಲ್ಲಪ್ಪನವರಿಗೆ ಶ್ರೀಮನ್ಮಹಾರಾಜರವರು ೧೦ ರೂಪಾಯಿ ವೇತನವನ್ನು ಖರಮನೆಯಿಂದ ಸ್ಯಾಂಕ್ಷನ್ ಮಾಡಿ, ಅವರು ಮದರಾಸಿನಲ್ಲಿದ್ದುಕೊಂಡು ವಿದ್ಯುಚ್ಛಕ್ತಿ ಮತ್ತು ಟೆಲಿಫೋನ್ ನಡೆಸುವ ಕ್ರಮಗಳನ್ನು ಚನ್ನಾಗಿ ಕಲಿತು ಬರಬೇಕೆಂದೂ, ಬಂದ ನಂತರ ಅರಮನೆಯಲ್ಲಿ ಕೆಲಸಕ್ಕೆ ನೇಮಿಸಲ್ಪಡಬಹುದೆಂದೂ ಹುಕುಂ ಕೊಟ್ಟಿದ್ದಾರೆ. ಸ್ವದೇಶೀಯರ ಶಿಲ್ಪ ಕೈಗಾರಿಕೆ ವಿದ್ಯೆಯನ್ನು ವೃದ್ಧಿಪಡಿಸುವುದಕ್ಕೆ ನಮ್ಮ ಮಹಾರಾಜರವರು ಪ್ರೋತ್ಸಾಹಪಡಿಸುತ್ತಿರುವುದು ತುಂಬಾ ಶ್ಲಾಘ್ಯವಾಗಿದೆ.

****

ಶ್ರೀಮನ್ಮಹಾರಾಜರವರು ಈ ದಿನ ರಾತ್ರಿ ಬೆಂಗಳೂರಿಂದ ರೈಲ್ ಹತ್ತಿ ಮದರಾಸಿಗೆ ಹೊರಡುವರು ಅಲ್ಲಿ ಒಂದುವಾರದ ತನಕ ಇದ್ದು, ಗವರ್ನರವರ ಭೇಟಿ ಮಾಡಿಕೊಂಡು, ಅಲ್ಲಿಂದ ನೆಟ್ಟಗೆ ಕಲ್ಕತ್ತಾ ಪಟ್ಟಣಕ್ಕೆ ದಯಮಾಡುವರು. ಅಲ್ಲಿ ರಾಜರುಗಳ ಸಮಾವೇಶವೊಂದು ಕೂಡುವುದೆಂತಲೂ, ಆಗ್ಗೆ ನಮ್ಮ ಮಹಾರಾಜರವರೂ ಇದ್ದು ವೈಸ್‌ರಾಯಿ ಪ್ರಭುಗಳ ಭೇಟಿ ಮಾಡಿಕೊಂಡು, ಹಾಗೆಯೇ ಲೇಟ್ ಚಾಮರಾಜೇಂದ್ರ ಒಡೆಯರವರ ಹೆಸರಿನ ಮೇಲೆ ಅಲ್ಲಿ ಕಟ್ಟುತ್ತಿರುವ ಧರ್ಮಶಾಲೆ ಮುಂತಾದ ಕಟ್ಟಡಗಳನ್ನು ನೋಡಿಕೊಂಡು, ವಾಪಸು ರಾಜಧಾನಿಗೆ ಬರುವವರಾಗಿದ್ದಾರೆಂತಲೂ, ಅವರ ಸಂಗಡ ದಿವಾನ್ ಸರ್ ಕೃಷ್ಣಮೂರ್ತಿಯವರೂ ದಯಮಾಡಬಹುದೆಂತಲೂ ವರ್ತಮಾನ ಕೇಳುತ್ತೇವೆ.

****

ಕೌನ್ಸಿಲರ್ ಮ॥ ಶ್ರೀನಿವಾಸಯ್ಯಂಗಾರ್ಯ ಶಾಸನದ ಡಿಸ್ಟ್ರಿಕ್ಟಿನಲ್ಲಿ ಸರ್ಕೀಟು ತೀರಿಸಿಕೊಂಡು ಅಲ್ಲಿಯ ವಿಚಾರಗಳನ್ನೆಲ್ಲಾ ಸರಿಯಾದ್ದು ವಿಚಾರಿಸಿಕೊಂಡು ಬಂದಿರುತ್ತಾರೆ. ಚಿಕ್ಕಮಗಳೂರಿನಲ್ಲಿ ಡಿಸ್ಟ್ರಿಕ್ಟ್ ಪ್ಲಾಂಟರ್ ಮ॥ ಶ್ರೀನಿವಾಸರಾಯರು ತಾವು ೧೯೦೩ ನೇ ಇಸವಿಯಲ್ಲಿ ಮೈಸೂರಿಗೆ ಬಂದು ದಸರಾ ಎಕ್ಸಿಬಿಷನಿನಲ್ಲಿ ಚರ್ಚಿಸಿದ ವಿಷಯಕ್ಕೆ ಸರಿಯಾದ ವೃತ್ತಾಂತಗಳನ್ನು ತೋರಿಸಿದರು. ಆ ವಿಷಯವ್ಯಾವುದೆಂದರೆ, ಆ ಊರಿನಲ್ಲಿರುವ ಬಹಳ ಭೂಮಿ ಮನೆಗಳನ್ನು ಬೆಳಕು ಮತ್ತು ಗಾಳಿಯ ಅವಶ್ಯಕತೆಗಾಗಿ ಕೆಡವಬೇಕೆಂಬುವುದೇ. ಆ ಮನೆಗಳ ಮಾಲೀಕರಿಗೆ ಕೊಟ್ಟ ಪರಿಹಾರವೋ ಬಹಳ ಸ್ವಲ್ಪವಾಗಿದೆ. ಅದೇ ಊರಿನಲ್ಲಿ ಅಸಹ್ಯಕರವಾದ ಭಾಗಗಳು ಬಹಳವಾಗಿವೆ. ಅದರ ಮೇಲೆ ಅಧಿಕಾರಿಗಳ ಗಮನವೇ ಇಲ್ಲ. ಮ॥ ಶ್ರೀನಿವಾಸಯ್ಯಂಗಾರ್ಯ ಈ ವಿಷಯಗಳನ್ನು ಚನ್ನಾಗಿ ಆಲೋಚಿಸತಕ್ಕದ್ದಾಗಿದೆ.

ರಷ್ಯಾ ಜಪಾನ್ ಯುದ್ಧ ವೃತ್ತ

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಷಾಹೋ ಬಳಿ ಯುದ್ಧಕಾರ್ಯ

ಲಂಡನ್, ಜನವರಿ ೧೮.—ಷಾಹೋ ನದಿಯ ಬಳಿ ಉಭಯಕಕ್ಷಿಯ ದಡಗಳಲ್ಲೂ ಶತ್ರುಗಳು ಬಹು ಚಟುವಟಿಕೆಯಿಂದ ಯುದ್ಧಕಾರ್ಯಗಳನ್ನು ನಡೆಸುತ್ತಿದ್ದಾರೆ. ಜರ್ಮಾನವರು ರಷ್ಯಾದವರ ರೈಲ್ ರಸ್ತೆಯನ್ನು ಕೆಡಿಸಿ ಹಾಳು ಮಾಡುವುದಕ್ಕಾಗಿ ಬಹಳ ಕಠಿಣವಾಗಿ ಫಿರಂಗಿಗಳನ್ನು ಹೊಡೆಯುತ್ತಿರುವರು. ಹವಾ ಸ್ವಲ್ಪ ಅನುಕೂಲವಾಗಿರುವುದರಿಂದ ಯುದ್ಧಕಾರ್ಯಗಳು ಪ್ರಾರಂಭವಾಗುವವೆಂದು ಹೇಳಬಹುದು.

ಜನರಲ್ ಮಿಶ್ಚೆಂಕೋಯವರು ಸೈನ್ಯಸಹಿತ ನುಗ್ಗಿ ಹೋಗಿ ಜರ್ಮಾನವರ ರಾಜ್ಯಕ್ಕೆ ಮುತ್ತಿಗೆ ಹಾಕಿ ಅವರನ್ನು ಅಲ್ಲಿಂದ ಓಡಿಸಬೇಕೆಂದು ಪ್ರಯತ್ನ ಪಟ್ಟರೆಂತಲೂ, ಆದರೆ ಜರ್ಮಾನವರು ಅವರಿಗೆ ಸ್ವಲ್ಪವೂ ಆಸ್ಪದ ಕೊಡದೆ ಹಿಮ್ಮೆಟ್ಟಿಸಿದರೆಂತಲೂ ವರ್ತಮಾನ ಬಂದಿದೆ.

ಪೋರ್ಟ್ ಆರ್ಥರಿನ ವಿಚಾರ.

ರಷ್ಯಾದವರು ಪೋರ್ಟ್ ಆರ್ಥರನ್ನು ಕೊಟ್ಟುಬಿಟ್ಟದ್ದು ಅವಮಾನಕರವಾಯಿತು. ಅವರಿಗೆ ಅಷ್ಟು ಕಷ್ಟವೇನೂ ಪ್ರಾಪ್ತವಾಗಿರಲಿಲ್ಲ. ಅವರು ಬೇಕೆಂದು ಒಪ್ಪಿಸಿದರೆಂದು ಹೇಳಬೇಕಾಗಿದೆ. ಆಹಾರಸಾಮಗ್ರಿಗಳು ಅಪಾರವಾಗಿದ್ದವು. ಇನ್ನೂ ಅನೇಕ ತಿಂಗಳ ಕಾಲದವರೆಗೂ ಅವರು ಕೋಟೆಯನ್ನು ಕಾಪಾಡಿಕೊಳ್ಳಬಹುದಾಗಿತ್ತು. ಕೋಟೆಯಲ್ಲಿ ಸಮರ್ಥರಾದ ಮತ್ತು ಯುದ್ಧ ಮಾಡುವುದಕ್ಕೆ ಮನಸ್ಸುಳ್ಳವರಾದ ೨೫,೦೦೦ ಸೈನಿಕರು ಸಿದ್ಧರಾಗಿದ್ದರು. ಆದರೂ ಕೋಟೆಯನ್ನು ಜರ್ಮಾನವರಿಗೆ ಕೊಟ್ಟು ಅವಮಾನ ಹೊಂದಿದ್ದಕ್ಕೆ ಜನರಲ್ ಸ್ಟೊಯೆಸೆಲ್ ಯವರೇ ಕಾರಣರೆಂದು ಅವರನ್ನು ದೂರುತ್ತಾರೆ. ಜನರಲ್ ಕೊಂಡ್ರಾಟೆಂಕೋಯವರು ಸತ್ತುಹೋದದ್ದೇ ಕೋಟೆಯು ಶತ್ರುವಶವಾಗಲು ಕಾರಣವಾಯಿತೆಂದು ಪೋರ್ಟ್ ಆರ್ಥರಿಂದ ತಂತೀ ವರ್ತಮಾನ ಬಂದಿದೆ.

ಭೂಯುದ್ಧದ ವಿವರಣೆ

ಲಂಡನ್, ಜನವರಿ ೧೭.—ಜನರಲ್ ಮಿಶ್ಚೆಂಕೋಯವರು ಕುದುರೆ ಸೈನ್ಯವನ್ನು ಜರ್ಮಾನವರ ಮೇಲೆ ನುಗ್ಗಿಸಿ ಯುದ್ಧಮಾಡಿ, ಹಿಂತಿರುಗಿ ಬರುವಾಗ್ಗೆ ತಮ್ಮ ಕಡೆ ಗಾಯಪಟ್ಟವರನ್ನೆಲ್ಲಾ ಜೊತೆಯಲ್ಲೇ ಸಾಗಿಸಿಕೊಂಡು ಬಂದರೆಂದು ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಹೇಳುತ್ತಾರೆ.

ಜನರಲ್ ಕುರೋಪಾಟ್ಕಿನರ ರಿಪೋರ್ಟು.

ರಷ್ಯಾ ಜನರಲ್ ಕುರೋಪಾಟ್ಕಿನವರು ಮೇಲ್ಕಂಡ ಕುದುರೆ ಸೈನ್ಯದ ಯುದ್ಧದ ವಿಷಯವನ್ನು ಕುರಿತು ರಿಪೋರ್ಟು ಕೊಟ್ಟರು. ಅದೇನೆಂದರೆ—ವಾಪಸು ಬರುತ್ತಿದ್ದ ರಷ್ಯಾ ಕುದುರೆ ಸೈನಿಕರನ್ನು ಜರ್ಮಾನವರು ಬೆನ್ನು ಹತ್ತಿ ಬಂದರು. ಯುದ್ಧವಾಯಿತು. ರಷ್ಯಾದವರ ಫಿರಂಗಿ ಏಟಿನಿಂದ ಜರ್ಮಾನವರ ಕಡೆ ತುಂಬಾ ನಷ್ಟವಾಯಿತು. ರಷ್ಯಾದವರು ಕಡೆಗೆ ಕ್ರಮವಾಗಿ ಹಿಮ್ಮೆಟ್ಟಿಬಂದರು.

ಅವರ ಕಡೆ ೫೯ ಜನ ಉದ್ಯೋಗಸ್ಥರೂ ೩೫೦ ಮಂದಿ ಸೈನಿಕರೂ ಕೊಲ್ಲಲ್ಪಟ್ಟರು, ಇಲ್ಲವೇ ಗಾಯಪಟ್ಟರು.

ಕೊರಿಯಾ ದಕ್ಷಿಣ ಭೂಶಿರದ ಬಳಿ ಇರುವ ಕಾರೇ ಎಂಬ ರೇವಿನಲ್ಲಿ ಜರ್ಮಾನವರು ತಮ್ಮ ಹಡಗಿನ ಸೈನ್ಯವನ್ನು ಬಲಪಡಿಸಿಕೊಳ್ಳುತ್ತಿದ್ದಾರೆ.

ಜನರಲ್ ಸ್ಟೊಯೆಸೆಲ್ ಯವರು ತಮ್ಮ ಕೈಕೆಳಗಣ ೨೫೫ ಮಂದಿ ರಷ್ಯಾ ಸೈನ್ಯಾಧಿಕಾರಿಗಳ ಸಹಿತ ನಾಗಸಕಿ ಎಂಬ ತೀರದ ಪಟ್ಟಣದಲ್ಲಿ ಹಡಗು ಹತ್ತಿ ವಾಪಸು ರಷ್ಯಾಕ್ಕೆ ಪ್ರಯಾಣ ಮಾಡುವರು.

ರಷ್ಯಾ ಹಡಗುಗಳು ಸಿಕ್ಕಿದವು.

ಲಂಡನ್, ಜನವರಿ ೧೯.—ಪೋರ್ಟ್ ಆರ್ಥರನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಂಡ ಮೇಲೆ ಅವರಿಗೆ ಅಲ್ಲಿದ್ದ ನಾಲ್ಕು ರಷ್ಯಾ ಹಡಗುಗಳು ಸಿಕ್ಕಿದವು. ಇವುಗಳನ್ನು ಅವರು ಅಲ್ಪಸ್ವಲ್ಪ ದುರಸ್ತು ಮಾಡಿರುತ್ತಾರೆ. ಎಲ್ಲಾ ಗಟ್ಟಿಯಾಗಿರುತ್ತವೆ. ಇನ್ನು ಮೂರು ಹಡಗುಗಳು ಮಾತ್ರ ಯಾವ ಕೆಲಸಕ್ಕೂ ಬಾರದಂತೆ ಕೆಟ್ಟು ಹೋಗಿವೆ.

ಭೂಯುದ್ಧದ ವಿವರಣೆ

ಜರ್ಮಾನವರು ರಷ್ಯಾ ಕುದುರೆ ಸೈನ್ಯವನ್ನು ಸಂಧಿಸಿ, ಸುತ್ತಿಕೊಂಡು ಯುದ್ಧಮಾಡಿ ಚದರಿಸಿಬಿಟ್ಟರೆಂತಲೂ, ರಷ್ಯಾ ಸೈನ್ಯದಲ್ಲಿ ಬಹು ಜನ ಚೀಣಾಯವರೂ ಸೈನಿಕರಾಗಿ ಬಂದಿದ್ದರೆಂತಲೂ, ಇದೆಲ್ಲಾ ನಿಯುಚ್ವಾಂಗಿನ ಪಶ್ಚಿಮಕ್ಕೆ ತಾ। ೧೪ರಲ್ಲಿ ನಡೆಯಿತೆಂತಲೂ, ರಷ್ಯಾದವರ ಕಡೆ ೩೦೦ ಜನ ನಷ್ಟವಾದರೆಂತಲೂ ಜರ್ಮಾನ ಸರ್ಕಾರದವರು ಪ್ರಕಟಿಸಿದಾರೆ.

ಒಂದು ಹಡಗು ಮುಳುಗಿತು.

ಜರ್ಮಾನಿಯ ವರ್ತಕರು ರಷ್ಯಾದವರಿಗೋಸ್ಕರ ಬೆಂಗಾಲಿಯಾ ಎಂಬ ಹಡಗಿನಲ್ಲಿ ಕಲ್ಲಿದ್ದಲನ್ನು ಭರ್ತಿಮಾಡಿಕೊಂಡು ಬರುತ್ತಿದ್ದರು. ಈ ಹಡಗು ಮಡಗಾಸ್ಕರಿನ ಬಳಿ ಬಂಡೆಗೆ ತಗಲಿ ಸಮುದ್ರದ ಪಾಲಾಯಿತು.

ಬಾಟ್ರಿ ಎಂಬೊಂದು ಇಂಗ್ಲಿಷ್ ಹಡಗು ವ್ಲಾಡಿವೊಸ್ಟಾಕಿಗೆ ರಷ್ಯಾದವರಿಗಾಗಿ ಕಲ್ಲಿದ್ದಲನ್ನು ತರುತ್ತಿತ್ತು. ಅದನ್ನು ನಡುದಾರಿಯಲ್ಲೇ ಜರ್ಮಾನವರು ಹಿಡಿದು ಸ್ವಾಧೀನಪಡಿಸಿಕೊಂಡರು.

ಲಂಡನ್, ಜನವರಿ ೧೯.—ಜರ್ಮಾನವರು ಓಕ್ಲೆ ಎಂಬ ಇನ್ನೊಂದು ಇಂಗ್ಲಿಷ್ ಹಡಗನ್ನು ಹಿಡಿದು ಸ್ವಾಧೀನ ಪಡಿಸಿಕೊಂಡರು. ಅದೂ ಕಲ್ಲಿದ್ದಲನ್ನು ಭರ್ತಿ ಮಾಡಿಕೊಂಡು, ವ್ಲಾಡಿವೊಸ್ಟಾಕಿಗೆ ಹೋಗುತ್ತಿತ್ತು.

ಜನರಲ್ ಸ್ಟೊಯೆಸೆಲ್ ಯವರು.

ಲಂಡನ್, ಜನವರಿ ೨೨.—ಜನರಲ್ ಸ್ಟೊಯೆಸೆಲ್ ಯವರೂ, ಅವರ ಪತ್ನಿಯವರೂ, ೩೦೦ ಜನ ರಷ್ಯಾದವರೂ ವೂಸಂಗ್ ಎಂಬಲ್ಲಿ ಒಂದು ಸೊನ್ನೆ ಇಳಿದರು. ಜನರಲ್ ಯವರು ಅಲ್ಲಿಗೆ ಬಿಟ್ಟಿಕೆಟ್ಟಿಕೊಂಡು ಹಡಗಿನೊಳಗೇ ಇದ್ದರು. ಅವರನ್ನು ಅಲ್ಲೀ ಜನರು ಹೋಗಿ ಅತ್ಯಂತ ಆದರ ಪೂರ್ವಕವಾಗಿ ಸತ್ಕರಿಸಿ ಬಂದರು.

ಕೋಟೆಯನ್ನು ಒಪ್ಪಿಸಿದ್ದು

ಜನರಲ್ ಸ್ಟೊಯೆಸೆಲ್ ಯವರು ತಾವು ಕೋಟೆಯನ್ನು ಜರ್ಮಾನವರಿಗೆ ಒಪ್ಪಿಸಿಕೊಟ್ಟ ವಿಷಯವನ್ನು ಕುರಿತು ಹೇಳಿದ್ದೇನೆಂದರೆ—ಜರ್ಮಾನವರ ೧೧ ಅಂಗುಲದ ಫಿರಂಗಿ ಗುಂಡುಗಳ ಏಟು ಸಹಿಸ ಕಷ್ಟವಾಗಿತ್ತು. ಕೋಟೆಯನ್ನು ಒಪ್ಪಿಸದೆ ಇರುವುದಕ್ಕೆ ಸಾಧ್ಯವಿರಲಿಲ್ಲ. ಇನ್ನು ಮೂರು ನಾಲ್ಕು ದಿನಗಳೊಳಗೇ ಅಂತ್ಯವು ಪ್ರಾಪ್ತವಾಗುವಂತಿತ್ತು. ಸೈನಿಕರೇನೋ ೯,೦೦೦ ಮಂದಿ ಇದ್ದರು. ಆದರೆ ಇವರೆಲ್ಲಾ ಯುದ್ಧಮಾಡಿ ದಣಿದು ಹೋಗಿದ್ದರು. ಮತ್ತು ಇಷ್ಟು ಸ್ವಲ್ಪ ಜನರು ೧೨ ಮೈಲಿ ಫಾಸಲೆಯುಳ್ಳ ಕೋಟೆಗಳನ್ನು ಕಾಪಾಡಿಕೊಳ್ಳುವುದು ಸಾಧ್ಯವಲ್ಲವೆಂದು ಕಂಡುಬಂತು. ಆ ಸೈನಿಕರಿಗೆ ದಿನದಿನಕ್ಕೆ ನಿದ್ರಾ ಆಹಾರಗಳಿಲ್ಲದೆ ತುಂಬಾ ಕಷ್ಟವಾಗಿತ್ತು. ಸಮುದ್ರದಲ್ಲಿ ಮುಳುಗಿಹೋದ ರಷ್ಯಾ ಯುದ್ಧದ ಹಡಗುಗಳನ್ನು ಎತ್ತುವುದು ಅಸಾಧ್ಯವಾಯಿತು. ಜಯಪ್ರದ ಹೊಂದಿದ ಜರ್ಮಾನವರನ್ನು ತುಂಬಾ ಹೊಗಳಬೇಕಾಗಿದೆ. ಕೋಟೆಯನ್ನು ಗೆದ್ದುಕೊಂಡ ಮೇಲೆ ಅವರಲ್ಲಿ ತುಂಬಾ ಕ್ರಮವಿತ್ತು. ಅವರಲ್ಲಿ ಯಾರೂ ಲೂಟಿ ಮುಂತಾದ್ದನ್ನು ಮಾಡಲಿಲ್ಲ. ಕೋಟೆಯನ್ನು ಒಪ್ಪಿಸಿ ಕೊಡುವಾಗ್ಗೆ ಅದರಲ್ಲಿ ಉಳಿದಿದ್ದ ರಷ್ಯಾ ಗುಂಡುಗಳು ಬಹಳ ಸಣ್ಣವು. ಅವುಗಳಿಂದ ಇನ್ನು ನಾಲ್ಕು ದಿನವೂ ಕೋಟೆಯನ್ನು ಕಾಪಾಡಿಕೊಳ್ಳುವುದಕ್ಕಾಗುತ್ತಿರಲಿಲ್ಲ. ತೋಟಾಗಳು ಬಹಳ ಸ್ವಲ್ಪವೇ ಉಳಿದಿದ್ದವು. ಕಡೆ ಕಡೆಗೆ ಸೈನಿಕರಿಗೆಲ್ಲಾ ಕುದುರೆಯ ಮಾಂಸವನ್ನೇ ಹಂಚುತ್ತಿದ್ದೆವು; ಅದೂ ವಾರಕ್ಕೆ ಎರಡಾವರ್ತಿ ಕೊಡುವುದೇ ಕಷ್ಟವಾಗಿತ್ತು. ತರಕಾರಿ ಸ್ವಲ್ಪವೂ ಇರಲಿಲ್ಲ. ಆದಕಾರಣ ನಮ್ಮ ಸೈನಿಕರು ರೋಗ ಹತ್ತಿ ಬಹಳವಾಗಿ ಕಷ್ಟಪಟ್ಟರು ಎಂಬುದೇ.

ಮೈಸೂರು ಪಟ್ಟಣದ ವರ್ಣನೆ.

[ಬರೆದು ಬಂದದ್ದು.]

ಚಾಮುಂಡಿ ಬೆಟ್ಟ.—ಕೆಲವು ವರ್ಷಗಳ ಪೂರ್ವದಲ್ಲಿ ನಮ್ಮ ದೇಶದಲ್ಲಿ ನಡೆಯುತ್ತಿದ್ದ ಗಟ್ಟೀ ದುಡ್ಡಿನ ಮೇಲೆ ಶ್ರೀ ಚಾಮುಂಡಿ ಎಂಬ ಶಬ್ದಗಳುಂಟು. ಈ ಹೆಸರಿನ ದೇವತೆಯೇ ಮೈಸೂರು ಮಹಾರಾಜರವರ ಕುಲದೇವತೆಯು. ಈ ದೇವಿಯು ನಗರದಿಂದ ೧॥ ಮೈಲು ದೂರವಿರುವ ಚಾಮುಂಡೀ ಬೆಟ್ಟದ ಮೇಲೆ ವಾಸವಾಗಿದ್ದಾಳೆ. ನಗರದಿಂದ ಬೆಟ್ಟದ ವರೆಗೆ ರಾಜಮಾರ್ಗ ಉಂಟು. ಬೆಟ್ಟವನ್ನೇರಿ ಹೋಗುವುದಕ್ಕೆ ದೇವಸ್ಥಾನದ ವರೆಗೆ ಮೆಟ್ಟಲುಗಳಿರುತ್ತವೆ. ಈ ಮೆಟ್ಟಲುಗಳನ್ನು ಹತ್ತುತ್ತ ಮುಕ್ಕಾಲು ಪಾಲಿಗಿಂತ ಹೆಚ್ಚು ಮಾರ್ಗವನ್ನು ಗಮಿಸಿದ ಬಳಿಕ ೧೬ ಅಡಿ ಉನ್ನತವಾದ ಒಂದು ವೃಷಭೇಶ್ವರನ ಶಿಲಾಪ್ರತಿಮೆಯನ್ನು ನೋಡಿ, ಅದರ ಪ್ರಚಂಡಸ್ವರೂಪಕ್ಕೂ ಸೌಂದರ್ಯಕ್ಕೂ ಮನುಷ್ಯನು ಬೆರಗಾಗುತ್ತಾನೆ. ಮುಂದೆ ಸುಮಾರು ಇನ್ನೂರು ಮುನ್ನೂರು ಮೆಟ್ಟಿಲುಗಳನ್ನು ಏರಿದ ತರುವಾಯ ಗಿರಿ ಶಿಖರದ ಮುಖ್ಯಸ್ಥಾನದಲ್ಲಿ ಶ್ರೀ ಚಾಮುಂಡಿಯ ದೇವಸ್ಥಾನವಿದೆ. ಸೂರ್ಯಪ್ರಕಾಶದಿಂದ ಥಳಥಳನೆ ಹೊಳೆಯುತ್ತಿರುವ ಸುವರ್ಣವರ್ಣದ ಸಪ್ತಕಲಶಗಳಿಂದಲೂ ಸಪ್ತಾಂತಸ್ತು (೯ನೆಲ) ಗಳಿಂದಲೂ ಯುಕ್ತವಾದ ಗೋಪುರದೊಡನೆ ದೇವಾಲಯವು ರಂಜಿಸುತ್ತಿರುವುದು. ಕೃಷ್ಣಶಿಲಾ ನಿರ್ಮಿತವಾದ ದೇವಿಯನ್ನು ಉತ್ತಮೋತ್ತಮವಾದ ರೇಶಿಮೆಯ ವಸ್ತ್ರಗಳಿಂದಲೂ ನವರತ್ನ ಖಚಿತವಾದ ಸುವರ್ಣಾಭರಣಗಳಿಂದಲೂ ಅಲಂಕರಿಸಿದ್ದರು. ದರಿದ್ರರು ಸಹ ತಮ್ಮ ದೇವರನ್ನು ಶೃಂಗರಿಸುತ್ತಾರೆ. ಈ ದೇವಿಯಂತೂ ಮಹಾರಾಜರವರ ಕುಲದೇವತೆ ಎಂದ ಮೇಲೆ ಯಾವದಕ್ಕೇನು ಕೊರತೆ?

ಈ ದೇವಾಲಯದ ಬಲಭಾಗಕ್ಕೆ ಇರುವ ಮಾಹೇಶ್ವರನ ಆಲಯವು ತಕ್ಕ ಮಟ್ಟಿಗೆ ದೊಡ್ಡದೂ ಸಾದಾ ರಚನೆಯುಳ್ಳದ್ದೂ ಇರುತ್ತದೆ. ಈ ಲೋಕದಲ್ಲಿ ಐಶ್ವರ್ಯದ ಹೆಚ್ಚಿನ ಭಾಗವು ಸ್ತ್ರೀ ಸಮೂಹವನ್ನಾಶ್ರಯಿಸಿರುತ್ತದೆ. ಈ ಮಾತಿನ ನಿಜತ್ವವು ಈ ಎರಡು ದೇವಾಲಯ ಸ್ಥಿತಿಗಳ ಪರ್ಯಾವಲೋಕನದಿಂದ ಸಹಜವಾಗಿ ಕಂಡುಕೊಳ್ಳಬಹುದು.

ಈ ಬೆಟ್ಟದ ಮೇಲೆ ನಿಂತುಕೊಂಡು ಕೆಳಗೆ ನೋಡಿದರೆ ಮೈಸೂರು ಪಟ್ಟಣವನ್ನೆಲ್ಲ ಅಂಗೈಯಲ್ಲಿಟ್ಟುಕೊಂಡು ನೋಡಿದಂತೆ ಕಾಣುತ್ತದೆ. ಅಂದರೆ, ತರತರದ ಬಣ್ಣಗಳಿಂದ ಕಾಗದದ ಮೇಲೆ ಬರೆದ ನಕ್ಷೆಯಂತೆ ಮೈಸೂರು ನಗರವು ತೋರುವದು.

ಗೋಶಾಲೆ.—ನಮ್ಮ ದೇಶದಲ್ಲಿ ಬ್ರಾಹ್ಮಣರಿಗೂ ಕ್ಷತ್ರಿಯ ಕುಲಜರಿಗೂ "ಗೋ ಬ್ರಾಹ್ಮಣ ಪ್ರತಿಪಾಲಕ" ಎಂಬೀ ಬಹುಮಾನ ಸೂಚಕವಾದ ಬಿರುದನ್ನು ಬರೆಯುವ ಪರಿಪಾಠ ಉಂಟು. ಆದರೆ ಇದು ಮೈಸೂರು ಮಹಾರಾಜರಿಗೆ ಮಾತ್ರ ಸರಸವಾಗಿ ಒಪ್ಪುತ್ತದೆ. ಏಕೆಂದರೆ, ಕೋಟೆಯ ಸಮೀಪದಲ್ಲಿರುವ ಬೈಲಲ್ಲಿ ಒಂದು ವಿಶಾಲ ಶಾಲೆಯನ್ನು ಕಟ್ಟಿಸಿ, ಅದರೊಳಗೆ ಸಾವಿರಾರು ಅನೇಕ ಜಾತಿಯ ಗೋವುಗಳನ್ನೂ ಎತ್ತುಗಳನ್ನೂ ಇರಿಸಿ, ರಕ್ಷಿಸುತ್ತಿರುವರು. ಪಟ್ಟದ ಗೋವುಗಳನ್ನು ಪೂಜಿಸುವರು. ರಕ್ಷಣೆಯ ಕ್ರಮವೂ ವ್ಯವಸ್ಥೆಯೂ ಬಹು ಚನ್ನಾಗಿರುವುದರಿಂದ ಇವು ಪುಷ್ಟವಾಗಿ ಕಾಮಧೇನುವಿನಂತೆ ಶೋಭಿಸುತ್ತವೆ. ಸುಮಾರು ೧। ಮೊಳ ಎತ್ತರವಿದ್ದ ಒಂದು ಹಸುವನ್ನು ನೋಡಿ ನನಗೆ ಬಲುಸೋಜಿಗ ತೋರಿತು. ಇದು ಎರಡು ಸೇರುಗಳನ್ನು ಕೊಟ್ಟಿದೆ ಎಂದು ಒಬ್ಬ ಕಾವಲುಗಾರನು ಹೇಳಿದನು.

ಜಗನ್ಮೋಹನೀ ಬಂಗಲೆ.—ಈ ಮಂದಿರವು ಮೂರು ಅಂತಸ್ತುಗಳುಳ್ಳದ್ದಾಗಿ ನಗರದ ಮಧ್ಯ ಭಾಗದಲ್ಲಿ ಶೋಭಿಸುತ್ತಿರುವುದು. ೧೮೬೧ನೇ ಇಸವಿಯಲ್ಲಿ ಕಟ್ಟಿಸಿದ್ದಾರೆ. ಮುಂಭಾಗದಲ್ಲಿರುವ ಓಲಗಶಾಲೆಯನ್ನು ೭—೮ ವರ್ಷಗಳ ಹಿಂದೆ ಸಾಂಪ್ರತಕ್ಕೆ ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಪಟ್ಟಾಭಿಷೇಕ ಸಮಾರಂಭವನ್ನು ಮಾಡುವವರ ಸಲುವಾಗಿ ಕಟ್ಟಿಸಿದ್ದಾರೆ. ೨೦೦ ಅಡಿ ಉದ್ದವೂ ೬೦ ಅಡಿ ಅಗಲವೂ ಆಗಿರುವ ಈ ದರ್ಬಾರ್ ಮಂಟಪದ ಶೋಭೆಯು ವರ್ಣಿಸತಕ್ಕಂಥಾದ್ದಿರುವದು. ಮುಖ್ಯ ಮಂದಿರದ ಮುಂಭಾಗದಲ್ಲಿ ಈ ಓಲಗ ಶಾಲೆಯ ನಡುವೆ ಮಹಾರಾಜರ ಸಿಂಹಾಸನ ಸ್ಥಳವಿದೆ. ಎಡಬಲದ ಬದಿಗಳಲ್ಲಿ ಸರಕಾರೀ ದೊಡ್ಡ ದೊಡ್ಡ ಅಧಿಕಾರಸ್ಥರು, ಧನವಂತರು, ಸಭಿಕರು, ಪ್ರತಿನಿಧಿಗಳು, ಸಾಹುಕಾರರು ಮುಂತಾದವರು ಕೂಡುವುದಕ್ಕೆ ಅನುಕೂಲವಾಗುವಂತೆ ಈ ದರ್ಬಾರ್ ಮಂಟಪವನ್ನು ಕಟ್ಟಿಸಿರುವರು. ಅಂದರೆ, ಮಹಾರಾಜರವರು ದರ್ಬಾರು ಕೂಡಿಸಿದಾಗ ಸಾವಿರಾರು ಜನರಿಗೆ ಪ್ರಶಸ್ತವಾಗಿ ಕೂತುಕೊಳ್ಳಲಿಕ್ಕೆ ಸ್ಥಳ ಉಂಟು.

ಮೂರಂತಸ್ತಿನ ಮುಖ್ಯ ಮಂದಿರದ ಕೆಳಗಿನ ಮನೆಯಲ್ಲಿ ಕಾಡುಮೃಗ, ಕಾಡುಕೋಣ, ಮುಸು, ಮಂಗ, ಸಿಂಗಳೀಕ ಮೊದಲಾದ ಮೃತ ಪ್ರಾಣಿಗಳ ಕಳೇಬರಗಳನ್ನು ತಕ್ಕ ರೀತಿಯಿಂದ ಸಜೀವ ಜೀವಿಗಳ ಹಾಗೆ ಕಾಣುವಂತೆ ಮಾಡಿ, ಅಲ್ಲಲ್ಲಿ ಇರಿಸಿದ್ದಾರೆ. ಒಂದು ಕೋಣೆಯಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಎಂಬ ಬಿಳೀ ದ್ರವ್ಯದಿಂದ ಮಾಡಿದ ಎಷ್ಟೋ ಪ್ರತಿಮೆಗಳನ್ನೂ ದೊಡ್ಡ ಕೃಷ್ಣರಾಜ ಒಡೆಯರವರ ಹಾಗೂ ಅವರ ಪತಿಯರ ಪ್ರತಿಮೆಗಳನ್ನೂ ಇಟ್ಟಿರುವರು. ಎರಡನೆಯ ಅಂತಸ್ತಿನಲ್ಲಿ ಮೈಸೂರ ಪೂರ್ವ ರಾಜರ ಚಿತ್ರಗಳನ್ನು ಗೋಡೆಯ ಮೇಲೆ ಬರೆಸಿರುವರು. ಕನ್ನಡಿಯಿಂದ ಅಚ್ಚಾದಿಸಲ್ಪಟ್ಟ ಉತ್ತಮೋತ್ತಮವಾದ ತಸಬೀರುಗಳೂ ರೇಶಿಮೆ ಕಿನಖಾಬುಗಳಿಂದ ಶೃಂಗರಿಸಿದ ಕೋಚು ಖುರ್ಚಿಗಳೂ ಮೂರು ಅಂತಸ್ತುಗಳಲ್ಲಿಯೂ ಉಂಟು. ಎಲ್ಲಕ್ಕೂ ಮೇಲಿನ ಅಂತಸ್ತಿನಲ್ಲಿ ಕಾಜಿನ ಕುರ್ಚಿ, ಮೇಜುಗಳೂ ತರತರದ ವಸ್ತುಗಳೂ ಇರುತ್ತವೆ. ಬಿಲ್ಲೋರಿನ ಹಂಡೆ, ಝುಮರು, ಪಾಲಸಟ, ವಿದ್ಯುದ್ದೀಪದ ಗೋಳಕಗಳು ಈ ಮಂದಿರದ ಎಲ್ಲ ಭಾಗಗಳಲ್ಲಿ ಕಾಣುವವು. ಸಾಂಪ್ರತದ ಮಹಾರಾಜರವರು ಎರಡು ದಿವಸಕ್ಕೊಮ್ಮೆಯಾದರೂ ಬಂದು ಇಲ್ಲಿ ಕೆಲವು ಹೊತ್ತು ವಿಶ್ರಾಂತಿ ತಕ್ಕೊಳ್ಳುವರು. ಈ ಮಂದಿರಕ್ಕೆ ಇಟ್ಟಿರುವ ನಾಮವು—ಜಗನ್ಮೋಹನಬಂಗಲೆ—ಯಥಾರ್ಥವಾಗಿರುತ್ತದೆಂದು ಹೇಳಲಿಕ್ಕೆ ಸಂದೇಹವಿಲ್ಲ.

ಕೋಟೆಯ ಎದುರಿನ ವಿಸ್ತಾರವಾದ ಬೈಲಲ್ಲಿ ಈಗಿನ ಮಹಾರಾಜರವರ ತಂದೆಯೂ ಪೂರ್ವದ ಮಹಾರಾಜರವರೂ ಆಗಿದ್ದ ಶ್ರೀ ಚಾಮರಾಜೇಂದ್ರ ಒಡೆಯರವರ ಪುತ್ಥಳಿಯು ಅಶ್ವಾರೂಢರಾಗಿ ಸವಾರಿಗೆ ಹೊರಟಂತೆ ಇದರ ರಚನೆಯದೆ. ಒಂದು ಪ್ರಕಾರದ ಧಾತುವಿನಿಂದ ಇದನ್ನು ವಿಲಾಯಿತೀ ಕಾರೀಗಾರರು ಮಾಡಿದ್ದಾರೆ. ಇದರ ಸುತ್ತಲೂ ಸಣ್ಣದೊಂದು ವನವನ್ನು ನಿರ್ಮಿಸಿ ಕಟಾಂಜನ ಹಾಕಿ ಕರ್ಸನ್ ಪಾರ್ಕ್ ಎಂಬ ಅಂಕಿತವನ್ನಿಟ್ಟಿದ್ದಾರೆ.

ಪುನರ್ಜನ್ಮ.

ಯೇಸುಸ್ವಾಮಿಯು ಪಸ್ಕಾ ಹಬ್ಬವನ್ನಾಚರಿಸುವದಕ್ಕಾಗಿ ಯೆರೂಸಲೇಮ್ ಪಟ್ಟಣಕ್ಕೆ ಹೋದನು. ಆ ಕಾಲದಲ್ಲಿ ಒಂದು ದಿನ ಆತನು ದೇವಾಲಯಕ್ಕೆ ಹೋಗಿರಲು, ಆ ಪರಿಶುದ್ಧಸ್ಥಾನದಲ್ಲಿ ಸರಾಫರೂ ವರ್ತಕರೂ ವ್ಯಾಪಾರವನ್ನು ನಡಿಸುತ್ತಾ ಇದ್ದುದರಿಂದ ಯೇಸುಸ್ವಾಮಿಯು ಇದನ್ನು ನೋಡಿ, ಬಹು ಕೋಪಗೊಂಡನು. ಆದಕಾರಣ ಇವರನ್ನೆಲ್ಲಾ ಆತನು ಓಡಿಸಿ—"ನನ್ನ ತಂದೆಯ ಮನೆಯನ್ನು ವ್ಯಾಪಾರದ ಮನೆಯನ್ನಾಗಿ ಮಾಡಬೇಡಿರಿ" ಎಂದು ಹೇಳಿದನು. ಬಹುಕಾಲದಿಂದ ನಡೆದು ಬರುತ್ತಲಿದ್ದ ಪದ್ಧತಿಯನ್ನು ಲಕ್ಷ್ಯಮಾಡದೆ, ಯೇಸು ವರ್ತಕರನ್ನೋಡಿಸಿದುದಕ್ಕಾಗಿ ಯೆಹೂದ್ಯರು ಆಕ್ಷೇಪಿಸಿ, ಈ ಕಾರ್ಯವನ್ನು ಮಾಡುವದಕ್ಕೆ ನಿನಗೇನು ಅಧಿಕಾರವಿದೆಯೆಂದು ಆತನನ್ನು ಕೇಳಿದರು. ಅದಕ್ಕಾತನು—"ಈ ದೇವಾಲಯವನ್ನು ಕೆಡಹಿಬಿಡಿರಿ, ಅದನ್ನು ತಿರುಗಿ ಮೂರು ದಿನಗಳಲ್ಲಿ ಕಟ್ಟುವೆನು" ಎಂದು ಭಾವಾರ್ಥವಾಗಿ ಹೇಳಿದನು. ಅದರ ಅಭಿಪ್ರಾಯವನ್ನು ಅವರು ಗ್ರಹಿಸಲಾರದೆ, ಈ ಹೊಸ ಬೋಧಕನ ವಿಷಯದಲ್ಲಿ ಹೆಚ್ಚಾಗಿ ತಿಳಿಯಬೇಕೆಂದು ಅಪೇಕ್ಷಿಸಿದರು.

ಇಂತಿರುವ ಕಾಲದಲ್ಲಿ ನಿಕೊದೇಮನೆಂಬೊಬ್ಬ ಮನುಷ್ಯನು ಯೇಸುವನ್ನು ನೋಡುವದಕ್ಕೆ ಬಂದನು ಈತನು ಯೆಹೂದ್ಯರಲ್ಲಿ ಧರ್ಮಾಧಿಕಾರಿಯಾದ್ದನು, ಅಂದರೆ ಸನ್ಹೆದ್ರಿನ್ ಎಂಬ ಮಂತ್ರಾಲೋಚನಾಸಭಿಕರಲ್ಲೊಬ್ಬನಾಗಿದ್ದನು. ಈ ದೊಡ್ಡ ಮನುಷ್ಯನು ರಾತ್ರಿವೇಳೆಯಲ್ಲಿ ಯೇಸುವಿನ ಬಳಿಗೆ ಬಂದನು. ಹಗಲಿನಲ್ಲಿ ಬಂದರೆ ಜನರು ಅರಿಕೊಳ್ಳುವರೆಂದು ಹೆದರಿಕೊಂಡು ರಾತ್ರಿಯಲ್ಲಿ ಬಂದನೆಂದು ತಿಳಿದುಬರುತ್ತದೆ (ಯೋಹಾ ೭, ೫೦; ೧೯ ೩೯ ನ್ನು ನೋಡಿರಿ). ಈತನು ಸ್ವಲ್ಪ ಭಯಗ್ರಸ್ತನಾಗಿದ್ದರೂ ಯೇಸುವನ್ನು ನಿಷ್ಕಪಟವಾಗಿ ಮೆಚ್ಚುವವನಾಗಿದ್ದನು. ಯೇಸುಸ್ವಾಮಿಯ ಮಹತ್ಕಾರ್ಯಗಳನ್ನು ಆತನು ನೋಡಿದ್ದನು, ಭಗವಂತನಿಂದ ಕಳುಹಿಸಲ್ಪಟ್ಟ ಬೋಧಕನೆಂದು ನಂಬಿದ್ದನು. ಆದುದರಿಂದ ಅವನು ಆತನಿಗೆ—ಗುರುವೇ! ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆವು, ಹ್ಯಾಗಂದರೆ ಒಬ್ಬನ ಸಂಗಡ ದೇವರು ಇಲ್ಲದಿದ್ದರೆ ನೀನು ಮಾಡುವಂಥ ಈ ಸೂಚಕಕಾರ್ಯಗಳನ್ನು ಅವನು ಮಾಡಲಾರನು ಎಂದು ಹೇಳಿದನು. ಯೇಸುಸ್ವಾಮಿಯು ಆ ಧರ್ಮಾಧಿಕಾರಿಗೆ ಪ್ರತ್ಯುತ್ತರವಾಗಿ—ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ತಿರಿಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು ಇದರ ಅರ್ಥವೇನಂದರೆ—ಆ ದೇವರ ರಾಜ್ಯವನ್ನು ಸೇರಬೇಕೆಂದಿರುವವನು ಹೊಸದಾಗಿ ಹುಟ್ಟಿದ ಮಗುವಿನಂತೆ ತನ್ನ ನಡತೆಯನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳಬೇಕು ಎಂಬುವದು. ಇದು ಬಹು ಕಷ್ಟಕರವಾದ ಕೆಲಸವೆಂದು ತಿಳಿಸುಕೊಂಡ ನಿಕೊದೇಮನು ಯೇಸುವಿಗೆ—ಇದು ಅಸಾಧ್ಯವಾದ ಕಾರ್ಯ. ಮುದುಕನು ಮಗುವಾಗಿ ಹುಟ್ಟುವದಕ್ಕಾದೀತೇ? ಅಂದರೆ ಮನುಷ್ಯನು ಬಹು ಕಾಲ ದುರ್ಮಾರ್ಗದಲ್ಲಿ ನಡೆಯುತ್ತಿದ್ದ ಬಳಿಕ ತನ್ನ ನಡತೆಯನ್ನು ತಿದ್ದಿಕೊಳ್ಳುವದಕ್ಕಾದೀತೇ? ಎಂದು ಕೇಳಿದನು.

ಸ್ವಾಮಿಯು ಅದಕ್ಕೆ—ಮನುಷ್ಯನು ತಾನಾಗಿ ತನ್ನನ್ನು ತಿದ್ದಿಕೊಳ್ಳುವದು ಅಸಾಧ್ಯವೇ ಸರಿ; "ಒಬ್ಬನು ನೀರಿನಿಂದಲೂ ಆತ್ಮದಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" ಅಂದನು. ಅಂದರೆ ಈ ನವೀನ ಜನ್ಮಕ್ಕೆ ಪವಿತ್ರಾತ್ಮನೇ ಕರ್ತೃವು. ಆತನು ಈ ಕಾರ್ಯವನ್ನು ಹ್ಯಾಗೆ ಮಾಡುತ್ತಾನೋ ಅದನ್ನು ಮನುಷ್ಯನು ತಿಳಿಯಲಾರನು. ಇದಕ್ಕೆ ಗಾಳಿಯು ಸಾದೃಶ್ಯವಾಗಿದೆ "ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ, ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು" ಎಂದು ಹೇಳಿದನು ಮನುಷ್ಯನೊಳಗೆ ಆ ನೂತನ ಜನ್ಮವನ್ನು ಪವಿತ್ರಾತ್ಮನು ಯಾವ ರೀತಿಯಲ್ಲಿ ಹುಟ್ಟಿಸುತ್ತಾನೆಂದು ವಿವರಿಸುವದಕ್ಕೆ ಆಗದಿದ್ದರೂ ಆತನು ಹಾಗೆ ಮಾಡಿದ್ದಾನೆಂಬುವದೇನೋ ಪ್ರತ್ಯಕ್ಷವಾಗಿದೆ. ಇಂಥ ಹೊಸ ಜನ್ಮವನ್ನು ಹೊಂದದೆ ಇರುವವನು ದೇವರ ರಾಜ್ಯವನ್ನು ಕಣ್ಣಿನಿಂದಲೂ ಕಾಣಲಾರನು.

ಅದಕ್ಕೆ ನಿಕೊದೇಮನು—ಇದು ಆಗುವದು ಹ್ಯಾಗೆ? ಅಂದನು.

ಸ್ವಾಮಿ—ಇಸ್ರಾಯೇಲ ಜನಕ್ಕೆ ಬೋಧಕನಾಗಿರುವ ನಿನಗೆ ಇದು ತಿಳಿಯುವದಿಲ್ಲವೋ? ನಾನು ಭೂಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ನೀವು ನಂಬುವದಿಲ್ಲ; ಇನ್ನು ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹ್ಯಾಗೆ ನಂಬೀರಿ? ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು, ತನ್ನ ಒಬ್ಬನೇ ಮಗನನ್ನು ಕೊಟ್ಟನು! ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ಯಾಕಂದರೆ ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಲೋಕಕ್ಕೆ ಕಳುಹಿಸಿಕೊಟ್ಟನೇ ಹೊರತು ಲೋಕಕ್ಕೆ ತೀರ್ಪುಮಾಡುವದಕ್ಕಾಗಿ ಕಳುಹಿಸಲಿಲ್ಲ. ಆತನನ್ನು ನಂಬುವವನಿಗೆ ತೀರ್ಪು ಆಗುವದಿಲ್ಲ ಆದರೆ ನಂಬದವನಿಗೆ ಆಗಲೆ ತೀರ್ಪು ಆಗಿ ಹೋಯಿತು. ಆ ತೀರ್ಪು ಏನಂದರೆ—ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರು ಆ ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು. ಯಾಕಂದರೆ ಅವರ ಕೃತ್ಯಗಳು ಕೆಟ್ಟವುಗಳು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವದಿಲ್ಲ, ತಮ್ಮ ಕೃತ್ಯಗಳು ದೂಷಣೆಗೆ ಗುರಿಯಾದಾವೆಂದು ಬೆಳಕಿಗೆ ಬರುವದಿಲ್ಲ; ಆದರೆ ಸತ್ಯವನ್ನು ಹಿಡಿದು ನಡೆಯುವವನು, ತಾನು ದೇವರನ್ನು ನೆನಸಿ ತನ್ನ ಕೃತ್ಯಗಳನ್ನು ಮಾಡಿದನೆಂದು ಪ್ರಕಟವಾಗುವಂತೆ ಬೆಳಕಿಗೆ ಬರುತ್ತಾನೆ.

ಯೇಸು ಸ್ವಾಮಿ ನಿಕೊದೇಮನಿಗೆ ಎರಡನೆಯ ಸಾರಿ ಪ್ರತ್ಯುತ್ತರವನ್ನು ಹೇಳುವಾಗ "ನೀರಿನಿಂದಲೂ" ಎಂಬ ಪದವನ್ನು ಸೇರಿಸಿ ಹೇಳುತ್ತಾನಷ್ಟೆ ಇದಕ್ಕೆ ಕಾರಣವೇನು? ಮನುಷ್ಯನು ತಾನು ಮಾಡಿರುವ ಪಾಪವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಎಷ್ಟೋ ಪ್ರಯಾಸಪಡುತ್ತಾನೆ ಸ್ನಾನಿಕನಾದ ಯೋಹಾನನು ತನ್ನ ಬಳಿಗೆ ಬಂದ ಜನಗಳಿಗೆ ದೀಕ್ಷಾಸ್ನಾನವನ್ನು ಹೊರಗಣ ಗುರುತಾಗಿ ಕೊಟ್ಟು, ಅದಕ್ಕಿಂತ ವಿಶೇಷವಾದಂಥ ಒಳಗಣ ಶುದ್ಧತ್ವವನ್ನು ಸೂಚಿಸುವ ಪವಿತ್ರಾತ್ಮಸ್ನಾನವನ್ನು ಕುರಿತು ತಿಳಿಸಿದನು. ಇವೆರಡು ವಿಷಯಗಳನ್ನು ನೋಡುವಾಗ ದೇವರ ರಾಜ್ಯವನ್ನು ಸೇರುವದಕ್ಕೆ ಎರಡು ನಿಬಂಧನೆಗಳುಂಟೆಂದು ತಿಳಿಯುತ್ತದೆ ಒಂದು ಬಹಿರಂಗವಾದ ಶುದ್ಧತೆ, ಮತ್ತೊಂದು ಅಂತರಂಗವಾದ ಶುದ್ಧತೆ; ಮೊದಲನೆಯದು ಆಚಾರಪ್ರಕರಣಕ್ಕೆ ಸೇರಿದ್ದು, ಎರಡನೆಯದು ಸದ್ಗುಣ ವಿಷಯವಾದದ್ದು, ಒಂದು ಮನುಷ್ಯನ ಕೆಲಸ, ಎರಡನೆಯದು ದೇವರ ಕೆಲಸ.

ನೀವು ತಿರುಗಿ ಹುಟ್ಟಲೇ ಬೇಕು ಎಂದು ಯೇಸುಸ್ವಾಮಿಯು ಆಜ್ಞೆ ಕೊಡುವಲ್ಲಿ ಅಸಾಧ್ಯವಾದ ಕಾರ್ಯವನ್ನು ಮಾಡಬೇಕೆಂದು ಹೇಳುತ್ತಾನೆಂಬುದಾಗಿ ತಿಳಿಯಲವಶ್ಯಕವಿಲ್ಲ. ನೀವು ಆತ್ಮನಿಂದ ಹುಟ್ಟಬೇಕೆಂದು ಆತನು ಹೇಳುವಾಗ್ಗೆ ಆ ಆತ್ಮನನ್ನು ನಮಗೆ ಕೊಡುವನೆಂಬುದೇ ಅಭಿಪ್ರಾಯ ಪವಿತ್ರಾತ್ಮನನ್ನು ಭೂಲೋಕಕ್ಕೆ ಕಳುಹಿಸುವದಕ್ಕಾಗಿಯೇ ಯೇಸುಸ್ವಾಮಿಯು ಅವತಾರ ಮಾಡಿದನು. ನಿಕೊದೇಮನಿಗೆ ಯೇಸುಸ್ವಾಮಿಯ ಮಾತು ಚನ್ನಾಗಿ ತಿಳಿಯಲಿಲ್ಲ. ಹತ್ತೊಂಭತ್ತು ಶತಮಾನಗಳ ತರುವಾಯ ಜೀವಿಸುವವರಾದ ನಮಗೆ ಆತನ ಅಭಿಪ್ರಾಯವು ಚನ್ನಾಗಿ ತಿಳಿಯುತ್ತಿದೆ. ಇಷ್ಟು ಕಾಲದಿಂದಲೂ ಪವಿತ್ರಾತ್ಮನು ಭೂಲೋಕದಲ್ಲಿದ್ದುಕೊಂಡು ನಡಸುತ್ತಿರುವ ಕೆಲಸದ ಫಲವನ್ನು ಯಾರು ಬೇಕಾದರೂ ನೋಡಬಹುದಾಗಿದೆ ಆದುದರಿಂದ ನಾವು ಧೈರ್ಯವಾಗಿ—ಒಬ್ಬನು ತಿರಿಗಿ ಹುಟ್ಟಿದರೆ ದೇವರ ರಾಜ್ಯವನ್ನು ಕಾಣಬಲ್ಲನು, ಅವನು ನೀರಿನಿಂದಲೂ ಆತ್ಮನಿಂದಲೂ ಹುಟ್ಟಿದರೆ ಅದರಲ್ಲಿ ಪ್ರವೇಶಿಸುವನೆಂಬುದಕ್ಕೆ ಸಂಶಯವೇ ಇಲ್ಲ" ಎಂದು ಹೇಳೋಣ!

ಇಂಡಿಯಾ ದೇಶದ ವೃತ್ತಾಂತಗಳು.

ಬರೋಡಾ ದೇಶದ ಮಹಾರಾಜರು ಮುಂದಿನ ವಸಂತಕಾಲದಲ್ಲಿ ಯೂರೋಪ್ ಖಂಡವನ್ನು ನೋಡುವದಕ್ಕಾಗಿ ಹೊರಡುವರು.

****

ಚಕ್ರವರ್ತಿಯವರು ಬರ್ಮಾ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರಾದ ಸರ್ ಹಗ್ ಬಾರ್ನೆಸ್ ಯವರನ್ನು ಇಂಡಿಯಾ ಕೌನ್ಸಿಲ್ ಸಭೆಯಲ್ಲಿ ಮೆಂಬರಾಗಿ ನೇಮಕರೂಪ ಮಾಡಿದಾರೆ.

****

ಬೊಂಬಾಯಿನಲ್ಲಿ ಜರ್ಮನಿಯವನೊಬ್ಬನು ಕಳೆದ ವಾರ ತನ್ನ ಅತ್ತೆಯನ್ನು ಕೊಂದು, ಹೆಂಡತಿಗೆ ಗುಂಡು ಹೊಡೆದು ಗಾಯ ಮಾಡಿ, ಪರಾರಿಯಾಗಿದ್ದನು. ಪೋಲೀಸಿನವರು ಅವನನ್ನು ಈಚೆಗೆ ಹಿಡಿದಿರುತ್ತಾರೆ.

****

ಹಿಂದೂಸ್ಥಾನದಲ್ಲಿ ಕೆಲವು ಕಾಲ ವೈಸರಾಯಿ ಕೆಲಸವನ್ನು ನೋಡಿ ಮೃತಪಟ್ಟ ಲಾರ್ಡ್ ನಾರ್ತಬ್ರೂಕ್‌ರವರ ಆಸ್ತಿಯು ಮೂವತ್ತು ಲಕ್ಷವೂ ಮೂವತ್ತು ಸಾವಿರ ರೂಪಾಯಿ. ಈಗ ಆ ಆಸ್ತಿಯು ಅವರ ಮಗನ ಸುಪರ್ದಿಗೆ ಬಂದಿದೆ.

****

ಕಲ್ಕತ್ತಾದಲ್ಲಿರುವ ಪ್ರಸಿದ್ಧ ಕಂಪನಿಯವರಾದ ಮೆಸ್ಸರ್ಸ್ ಆರ್ಲರವರು ತಮ್ಮ ಹತ್ತಿರವಿದ್ದ ಹನ್ನೊಂದು ಜೋಡಿನ ಕುದುರೆಗಳನ್ನು ಕಳೆದ ಸೋಮವಾರ ೬೦ ಸಾವಿರ ರೂಪಾಯಿಗಳಿಗೆ ಮಾರಿದರು. ಅವುಗಳಲ್ಲೆಲ್ಲಾ ಬಹಳ ಚನ್ನಾಗಿದ್ದ ಫ್ಯೆರ್‌ವಾಟರ್ ಎಂಬ ಕುದುರೆಯು ೭,೯೦೦ ರೂಪಾಯಿಗೆ ವಿಕರಿ ಆಯಿತು

****

ವೈಸ್‌ರಾಯಿ ಪ್ರಭುಗಳು ಢಾಕಾ ನಗರಕ್ಕೆ ದಯಮಾಡಿದ್ದಾಗ ಅವರನ್ನು ಸತ್ಕರಿಸುವುದಕ್ಕಾಗಿ ಅಲ್ಲಿನ ನವಾಬರು ಬೊಂಬಾಯಿನಿಂದ ಕೆಲವು ಸಾಮಾನು ತರಿಸಿಕೊಂಡಿದ್ದರು. ವರ್ತಕರು ೧೧ ಸಾವಿರ ರೂಪಾಯಿಗೆ ಈಗ ನವಾಬರ ಮೇಲೆ ದಾವಾ ತಂದಿದಾರೆ. ಜಡ್ಜಿಯವರು ನವಾಬರನ್ನು ವಿಚಾರಣೆ ಮಾಡುವುದಕ್ಕೆ ಕಮಿಷನ್ ಕಳುಹಿಸಿದಾರೆ.

****

ಪಂಜಾಬ್ ದೇಶದ ರಾಜಧಾನಿಯಾದ ಲಾಹೋರ್ ಪಟ್ಟಣದ ಸಮೀಪದಲ್ಲಿ ಎರಡು ಬೆಟ್ಟಗಳ ನಡುವೆ ಹೋಗುವ ಒಂದು ರಸ್ತೆಯಲ್ಲಿ ೧೫ ಜನ ಪಠಾಣರು ೭೨ ವಯಸ್ಸಿನ ಸುಬೇದಾರ್ ಮೇಜರ್ ಖಾನ್ ಸಿಂಗ್ ಎಂಬ ಸೈನ್ಯಾಧಿಕಾರಿಯನ್ನು ಕೊಂದು ಅವನ ಹತ್ತಿರವಿದ್ದದ್ದನ್ನೆಲ್ಲಾ ಕಸುಕೊಂಡರು. ಇವನು ಆಫ್ಘಾನಿಸ್ಥಾನದ ಯುದ್ಧದಲ್ಲಿ ರಾಯಭಾರಿಯಾಗಿದ್ದ ಸರ್ ಲೂಯಿ ಕಾವಗ್ನಾರಿ ಎಂಬವನ ಕೈಕೆಳಗೆ ಕೆಲಸ ಮಾಡಿದ್ದನು.

****

ಸಿಲೋನ್ ದ್ವೀಪದಲ್ಲಿರುವ ವೆಲ್ಲವಾಟ್ ಎಂಬ ಊರಿನಲ್ಲಿ ಅಹಮದ್ ಭಾಯಿ ಹಾಜಿಭಾಯಿ ಎಂಬುವರು ಒಂದು ನೇಯಿಗೆಯ ಕಾರ್ಖಾನೆಯನ್ನಿಟ್ಟಿರುತ್ತಾರೆ. ಈಗ ಅಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಗುಮಾಸ್ತನು ಬಹಳ ಹಣವನ್ನು ಸ್ವಂತ ಉಪಯೋಗಕ್ಕಾಗಿ ಖರ್ಚು ಮಾಡಿಕೊಂಡಿರುತ್ತಾನೆಂದು ತಿಳಿದುಬಂದಿರುತ್ತೆ. ಕಂಪನಿಯವರಿಗೆ ಇಷ್ಟೇ ನಷ್ಟವೆಂದು ಹೇಳುವದಕ್ಕಾಗುವದಿಲ್ಲ. ಲೆಕ್ಕಾಚಾರದಲ್ಲಿ ಸುಮಾರು ಹದಿನೈದು ಸಾವಿರ ರೂಪಾಯಿಯಷ್ಟು ಕಮ್ಮಿಯಾಗಿದೆ.

ಕೊಚ್ಚಿ ಸಂಸ್ಥಾನದ ತ್ರಿಚೂರ್ ಎಂಬ ಪಟ್ಟಣದಲ್ಲಿ ಮರಗಳನ್ನು ಕೊಯ್ಯುವ ಕಾರ್ಖಾನೆಯೊಂದನ್ನು ಸ್ಥಾಪಿಸುವಾಗ ಅಲ್ಲಿನ ಮಹಾರಾಜರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಬೇಕೆಂದಿರುತ್ತಾರೆ ಆ ಪೆಟ್ಟಿಗೆಯು ಲಂಡನ್ ನಗರದಲ್ಲಿರುವ ಪ್ರಸಿದ್ಧ ಶಿಲ್ಪಿಗಾರರಿಂದ ತಯಾರುಮಾಡಲ್ಪಟ್ಟಿದೆ. ಆ ಕಾರ್ಖಾನೆಯನ್ನಿಡುವದಕ್ಕೆ ಒಂದೂವರೆ ಲಕ್ಷ ರೂಪಾಯಿ ಖರ್ಚುಮಾಡಿ ಬಹಳ ನವೀನವಾದ ಯಂತ್ರಗಳನ್ನು ಇಡಿಸಿದಾರೆ.

****

ಹಿಂದುಸ್ಥಾನದಲ್ಲಿ ಕೈಗಾರಿಕೆ ಮತ್ತು ಶಾಸ್ತ್ರ ಸಂಬಂಧವಾದ ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುವದಕ್ಕಾಗಿ ಒಂದು ಸಂಘವು ಏರ್ಪಡಾಗಿರುವುದು. ಅವರು ವಿದ್ಯಾರ್ಥಿ ವೇತನಗಳನ್ನು ಕೊಡುವುದಾಗಿ ಪ್ರಕಟಿಸಿದ್ದರಿಂದ ೪೯ ಜನ ಅರ್ಜಿ ಬರೆದುಕೊಂಡರು. ಅವರಲ್ಲಿ ಬುದ್ಧಿವಂತರಾದ ೧೫ ಜನರನ್ನು ಆ ಸಂಘದವರು ಆರಿಸಿಕೊಂಡಿರುತ್ತಾರೆ. ಅವರಿಗೆ ೨೫ ರೂಪಾಯಿನಿಂದ ೧೨೫ ರೂಪಾಯಿಗಳ ವರಿಗೂ ಮಾಸವೇತನಗಳನ್ನು ಕೊಡುತ್ತಾರೆ. ಈ ಹದಿನೈದು ಜನದಲ್ಲಿ ಇಬ್ಬರನ್ನು ಶಾಸ್ತ್ರ ಕಲಿಯುವದಕ್ಕಾಗಿ ಎಡಿನ್‌ಬರ್ಗ್ ಮತ್ತು ಜರ್ಮನಿಗೂ, ಒಬ್ಬನನ್ನು ವ್ಯವಸಾಯಶಾಸ್ತ್ರ ಕಲಿಯುವದಕ್ಕೆ ಅಮೇರಿಕಾಕ್ಕೂ, ಇನ್ನು ಕೆಲವರನ್ನು ಇತರ ದೇಶಗಳಿಗೆ ನಾನಾ ವಿಧವಾದ ಕೈಗಾರಿಕೆಗಳನ್ನು ಕಲಿತುಕೊಂಡು ಬರುವದಕ್ಕಾಗಿಯೂ ಕಳುಹಿಸುತ್ತಾರೆ

****

ವೈಸ್‌ರಾಯಿ ಲಾರ್ಡ್ ಕರ್ಜನರವರನ್ನು ಸರ್ದಾರ್ ಇನಾಯತ್ ಉಲ್ಲಾ ಖಾನರವರು ಭೇಟಿ ಮಾಡಿದಾಗ ಅವರಿಗೆ ವೈಸರಾಯಿಯವರು ರತ್ನಖಚಿತವಾದ ಕತ್ತಿಯು ಮುಂತಾದ್ದನ್ನೆಲ್ಲಾ ಒಪ್ಪಿಸಿದರೆಂದು ತಿಳಿಸಿದೆವಷ್ಟೆ. ಪುನಹ ಅವರಿಗೆ ಒಂದು ಲಕ್ಷ ರೂಪಾಯನ್ನು ನಗದಾಗಿ ಕೊಟ್ಟರು. ಕಾಬೂಲಿನ ರಾಯಭಾರಿಗೂ ಒಂದು ಖಿಲ್ಲತ್ತನ್ನು ಒಪ್ಪಿಸಿದರು ಅದರಲ್ಲಿ ಒಂದು ಜೋಡಿನಲ್ಲಿ ಪಿಸ್ತೂಲೂ, ಒಂದು ಬಂದೂಕವೂ, ಕಾಶೀದೇಶದ ಬಹಳ ಬೆಲೆಯುಳ್ಳ ಒಂದು ಮಗುಟವೂ ಒಂದು ಕತ್ತಿಯೂ, ಕುದುರೆಯ ಜೀನು ಮುಂತಾದ್ದೂ ಇದಲ್ಲದೆ ನಗದು ನೂರು ಸಾವಿರ ರೂಪಾಯಿಯೂ ಇದ್ದವು. ಆಫ್ಘಾನಿಸ್ತಾನದಿಂದ ಯುವರಾಜರ ಜೊತೆಯಲ್ಲಿ ಬಂದಿರುವ ಇತರ ದೊಡ್ಡಮನುಷ್ಯರಿಗೆಲ್ಲಾ ಯೋಗ್ಯತಾನುಸಾರವಾಗಿ ಖಿಲ್ಲತ್ತುಗಳನ್ನು ಒಪ್ಪಿಸಿದರು ಹೀಗೆ ಇಂಡಿಯಾ ಗವರ್ನಮೆಂಟಿನವರು ನಗದಾಗಿ ಒಪ್ಪಿಸಿದ ಹಣವೆಲ್ಲಾ ೧ ಲಕ್ಷವೂ ೨೧ ಸಾವಿರ ರೂಪಾಯಿಗಳು.

****

ಬರ್ಮಾಕ್ಕೆ ರಾಜಧಾನಿಯಾದ ರಂಗೂನ್ ನಗರದಲ್ಲಿ ಒಬ್ಬ ಅಧಿಕಾರಿಯು ಒಬ್ಬ ಬ್ರಾಹ್ಮಣನನ್ನು ಅಡಿಗೆಮಾಡುವದಕ್ಕೆ ಇಟ್ಟುಕೊಂಡನು ಕಳೆದ ಗುರುವಾರ ಯಜಮಾನನು ಆ ಬ್ರಾಹ್ಮಣನನ್ನು ಕೆಲಸಬಿಟ್ಟು ಹೋಗುವಂತೆ ಹೇಳಿದನು ಅದಕ್ಕೆ ಆ ಬ್ರಾಹ್ಮಣನು ಇನ್ನೂ ಕೆಲವು ಕಾಲ ಕೆಲಸಮಾಡುತ್ತೇನೆಂದು ಬೇಡಿಕೊಂಡನು, ಯಜಮಾನನು ಕೊನೆಗೆ ಅದರಂತೆ ಒಪ್ಪಿದನು. ಕಳೆದ ಭಾನುವಾರ ಒಂದು ಹಬ್ಬವಾದ ಪ್ರಯುಕ್ತ ಯಜಮಾನನು ಕೆಲವರನ್ನು ಊಟಕ್ಕೆ ಕರೆದಿದ್ದನು. ಆ ಪರಿಚಾರಕನು ಅಡಿಗೆ ಮಾಡಿ, ಅವರಿಗೆಲ್ಲಾ ಬಡಿಸಿದನು. ಸ್ವಲ್ಪಹೊತ್ತಿನಲ್ಲೇ ಗರಿಕೆಯುಂತಿರುವ ಜನ್ನೇ ಎಲ್ಲರೂ ವಾಂತಿ ಮಾಡಿದರು ಆಸ್ಪತ್ರೆಯವರನ್ನು ಕರೆಯಿಸುವಾಗ್ಗೆ ಅವರೆಲ್ಲಾ ಗುಣಹೊಂದಿದರು. ಆ ಪರಿಚಾರಕನ ಪೆಟ್ಟಿಗೆಯನ್ನು ಶೋಧಿಸುವಾಗ್ಗೆ ಕೆಲವು ಗುಳಿಗೆಗಳೂ ಬೇರುಗಳೂ ಸಿಕ್ಕಿದವು. ಆದುದರಿಂದ ಈಗ ಆ ಪರಿಚಾರಕನನ್ನು ಪೋಲೀಸಿನವರು ವಿಚಾರಣೆಗೆ ಗುರಿಮಾಡಿದಾರೆ

****

ಮದರಾಸ್ ಪಟ್ಟಣದ ಹೈಕೋರ್ಟು ವಕೀಲರಾಗಿದ್ದ ಮೃತಪಟ್ಟ ಮೆ|| ಪಿ ಸುಬ್ರಹ್ಮಣ್ಯ ಅಯ್ಯರವರು ತಾವು ಮೃತಪಟ್ಟಾಗ ತಮ್ಮ ಹೆಸರಿನ ಮೇಲೆ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಅಭಿಪ್ರಾಯ ಪಟ್ಟರು. ಅವರ ಮರಣಾನಂತರ ಮದರಾಸ್ ಪಟ್ಟಣದ ಮೈಲಾಪೂರ್ ಎಂಬ ಭಾಗದಲ್ಲಿ ಒಂದು ವಿದ್ಯಾಶಾಲೆಯನ್ನು ಕಳೆದ ವಾರ ಹೈಕೋರ್ಟು ಜಡ್ಜ್ ಮೆ|| ಸರ್ ಟ ಸುಬ್ರಹ್ಮಣ್ಯ ಅಯ್ಯರವರು ಪ್ರತಿಷ್ಠಿಸಿದರು. ಅನಂತರದಲ್ಲಿ ಅವರು ಹೇಳಿದ್ದೇನಂದರೆ—ಹಿಂದೂಸ್ಥಾನದಲ್ಲಿ ಪ್ರಜೆಗಳು ವಿದ್ಯೆಯಿಲ್ಲದೆ ಮೌಢ್ಯದಲ್ಲಿ ಬಿದ್ದಿದ್ದರೂ ಹಣವನ್ನು ದೇವಸ್ಥಾನ, ಛತ್ರ, ಕೊಳ, ತೋಪುಗಳನ್ನು ಕಟ್ಟಿಸುವುದರಲ್ಲಿ ಅಥವಾ ಜೀರ್ಣೋದ್ಧಾರಪಡಿಸುವುದರಲ್ಲಿ ವ್ಯಯಮಾಡುತ್ತಾರೆ ನಾಟಕೋಟೆಗಳೆಂಬ ವರ್ತಕಮಂಡಲಿಯವರು ಇದೇ ಅಭಿಪ್ರಾಯದಿಂದ ಕೋಟ್ಯಾನುಕೋಟಿ ರೂಪಾಯಿಗಳನ್ನು ಖರ್ಚು ಮಾಡಿಯೂ ಮಾಡುತ್ತಲೂ ಇದಾರೆ. ಊರಿಂದೂರಿಗೆ ಸುಲಭವಾಗಿಯೂ ಜಾಗ್ರತೆಯಾಗಿಯೂ ಪ್ರಯಾಣಮಾಡುವುದಕ್ಕೆ ರೈಲುಗಾಡಿಗಳಿರುವ ಈಗಿನಕಾಲದಲ್ಲಿ ಛತ್ರಗಳಲ್ಲಿಯೂ ದೇವಸ್ಥಾನಗಳಲ್ಲಿಯೂ ತಂಗುವವರ್ಯಾರು? ಇದನ್ನು ಚನ್ನಾಗಿ ಆಲೋಚಿಸಿ, ಈ ಕಾಲಕ್ಕೆ ಸಹಜವಾಗಿರುವ ವಿದ್ಯಾಭ್ಯಾಸಕ್ಕೆ ಅನುಕೂಲಿಸುವಂತೆ ಪಾಠಶಾಲೆಗಳನ್ನು ಹೆಚ್ಚಿಸಿ ಯುವಕರಾಗಿರುವವರನ್ನು ಪರದೇಶಗಳಿಗೆ ಕಳುಹಿಸಿ ಕೈಗಾರಿಕೆಗಳನ್ನು ಉನ್ನತ ಸ್ಥಿತಿಗೆ ತರುವರೆಂಬ ಅಭಿಪ್ರಾಯಪಡುತ್ತೇನೆ ಎಂಬುವುದೇ.

****

ಗುಂತಕಲ್ ಜಂಕ್ಷನ್‌ಗೆ ಹನ್ನೊಂದು ಮೈಲಿ ದೂರದಲ್ಲಿರುವ ಅನಂತಪುರದ ಡಿಸ್ಟ್ರಿಕ್ಟಿನ ವಾಜ್ರಕರೂರ್ ಎಂಬ ಊರಲ್ಲಿ ಎರಡು ಕಂಪನಿಗಳವರು ವಜ್ರಗಳನ್ನು ತೆಗೆಯುವದಕ್ಕೆ ಬಂದು ಕೆಲವು ವರುಷಗಳಾದವು. ಅವರು ಭೂಮಿಯನ್ನು ಅಗೆಯದೇ ಇಷ್ಟಗ್ಗೆ

...ಬಹಳವಾಗಿ ಸಿಕ್ಕುತ್ತವೆ ಇಲ್ಲಿಯೇ ರೀಜಂಟ್ ಎಂಬ ...ವಾದ ವಜ್ರ ಸಿಕ್ಕಿತು. ೧೭೯೬ ರಲ್ಲಿ ಇದನ್ನು ಮದರಾಸ್ ...ನವರು ೨೦,೩೨,೫೦೦ ರೂಪಾಯಿಗೆ ಕೊಂಡುಕೊಂಡ ...ಈಗ ಅದು ೬೬,೯೦,೦೦೦ ರೂಪಾಯಿ ಬಾಳುತ್ತದೆ. ಈಗ ...ದೇಶದ ಕೆಳಗೆ ಮೆ॥ ಹೆನ್ರಿ ಅಬ್ರಹಾಂ ಎಂಬುವರ ಹೊಲದಲ್ಲಿ ...ಕೂಲಿಯವಳಿಗೆ ಒಂದು ವಜ್ರ ಸಿಕ್ಕಿತು. ಅವಳು ಅದನ್ನು ...ಸಾಹುಕಾರನಿಗೆ ೨,೭೦೦ ರೂಪಾಯಿಗೆ ಮಾರಿದಳು. ಅಬ್ರ...ವರು ಆ ಕೂಲಿಯವಳ ಮೇಲೆ ತಮ್ಮ ಹೊಲದಲ್ಲಿದ್ದ ವಜ್ರವ...ಕದ್ದುಕೊಂಡದ್ದಕ್ಕಾಗಿ ಮೊಕದ್ದಮೆ ಮಾಡಿರುತ್ತಾರೆ. ಬ...ಮ್ಯಾಜಿಸ್ಟ್ರೇಟರು ಸಾಕ್ಷಿ ಇಲ್ಲವೆಂದು ಈ ಮೊಕದ್ದಮೆಯು ...ವಜಾಮಾಡಿದರು. ಆ ವಜ್ರವನ್ನು ಕೊಂಡು ಕೊಂಡ ಸಾಹು...ರನ್ನು ವಿಚಾರಣೆ ಮಾಡುವಾಗ್ಗೆ ಅವನು ಬಹಳ ಕಾಲದಿಂದ ...ದ ವಜ್ರಗಳನ್ನು ಕೊಂಡುಕೊಳ್ಳುತ್ತಿದ್ದಾನೆಂತಲೂ ಗವರ್ನ...ಮೆಂಟಿನವರಿಗೆ ರಾಜಾದಾಯವೇನೂ ಕೊಡಬೇಕಾದ್ದಿಲ್ಲವೆಂತಲೂ ...ಳಿದನು. ಈ ರೀತಿಯಾಗಿ ವಜ್ರಗಳನ್ನು ಕೊಂಡುಕೊಳ್ಳುತ್ತಿದ್ದ ...ಗವರ್ನಮೆಂಟಿನವರಿಗೆ ಬಹಳ ನಷ್ಟವಾಗುವದು.

****

...ಳೆದ ಅಕ್ಟೋಬರ್ ತಿಂಗಳು ೯ನೇ ತಾರೀಖಿನದಿನ ...ಪಟ್ಟಣದಲ್ಲಿ ಬದ್ರಿ ಮಿಶ್ರನೆಂಬ ಬ್ರಾಹ್ಮಣನು ಸತ್ತನು. ...ದಹನ ಸಂಚಯನಾದಿಗಳಿಗೆ ಎಲ್ಲಾ ಸಿದ್ಧವಾಗಿತ್ತು. ಆ ಪಟ್ಟ...ಣದ ಹತ್ತಿರ ನದಿಯ ದಡದಲ್ಲಿದ್ದ ದೇವಸ್ಥಾನವೆಂಬ ಸ್ಥಳದಲ್ಲಿ ...ಯನ್ನು ತೆಗೆದರು. ಸೌದೆಯನ್ನು ಹರವಿ ಹೆಣವನ್ನು ಅದ...ರ ಮೇಲಿಟ್ಟರು. ಮೃತನಾದವನ ಹೆಂಡತಿಯು ಅಷ್ಟುಹೊತ್ತಿಗೆ ನದಿ...ಯಲ್ಲಿ ಸ್ನಾನಮಾಡಿ, ಮದುವೆಯ ಹೆಣ್ಣಿನ ಹಾಗೆ ಅಲಂಕರಿಸಿಕೊಂ...ಡು ಆ ಸೌದೆ ಒಟ್ಟಿದ್ದ ಚಿತಿಯ ಮೇಲೆ ಕೂತುಕೊಂಡು, ...ಮಗ ಜಗನ್ನಾಥ ಮಿಶ್ರನನ್ನು ಕರೆದು—ನಿನ್ನ ಕೆಲಸವನ್ನು ...ಮಾಡು ಎಂದಳು. ಅವನು ಕೆಲವು ಕಡ್ಡಿಗಳನ್ನು ಹಚ್ಚಿಕೊಂಡು, ...ಚಿತಿಗೆ ಮೂರು ಸಲ ಪ್ರದಕ್ಷಿಣೆ ಮಾಡಿ, ಹೆಣದ ಬಾಯಿಗೆ ಬೆಂಕಿ ...ಯಿಟ್ಟನು. ನಾಲ್ವರು ಬ್ರಾಹ್ಮಣರು ಚಿತಿಯು ಹತ್ತಿಕೊಳ್ಳುವ...ದಕ್ಕೂ ಹೋಮವನ್ನು ಮಾಡುತ್ತಾ ಬಂದರು. ಅಷ್ಟುಹೊತ್ತಿಗೆ ...ಬಹಳ ಜನರು ಸೇರಿದರು. ಉರಿಯು ಆ ಹೆಂಗಸಿನ ಹತ್ತಿರ ...ಬರಲು, ಅವಳೂ ಅವಳ ಪತಿಯ ಸಂಗಡ ಸಹಗಮನವನ್ನು ಮಾಡಿ...ದಳು. ಆಗ ಜನರು ಸೀತಾರಾಂ ಸೀತಾರಾಂ ಎಂದು ಘೋಷಿಸಿ...ದರು. ಅನೇಕ ವಾದ್ಯಗಳನ್ನು ಬಾರಿಸಿದರು. ತಮಟೆಗಳನ್ನು ಬಡಿ...ದರು. ಇಷ್ಟುಹೊತ್ತಿಗೆ ಎಲ್ಲಾ ಬೂದಿಯಾಗಿತ್ತು. ಈಗ ಮೊಕದ್ದ...ಮೆಯು ವಿಚಾರಣೆಯಾಗುತ್ತಿದೆ. ಈಚೆಗೆ ಈ ಸಹಗಮನಕ್ಕೆ ಸಹ...ಕಾರಿಗಳಾಗಿದ್ದ ೯ ಮಂದಿ ಹಿಂದುಗಳಿಗೆ ತಲಾ ೫ ವರುಷದಿಂದ ...ವರೆಗೆ ಕಠಿಣಸಜಾ ಆಯಿತೆಂದು ತಿಳಿದುಬರುವದು

****

ಬೊಂಬಾಯಿ ಪಟ್ಟಣದ ಪೋಲೀಸ್ ಕೋರ್ಟಿಗೆ ಒಂದು ...ದ್ದಮೆಯು ಇನ್ಸ್ಪೆಕ್ಟರಿಂದ ರಿಪೋರ್ಟು ಮಾಡಲ್ಪಟ್ಟಿತು ...ಲ್ಲಿ ಅತ್ತೆಯೂ ಮಾವನೂ ಸೇರಿ ಸೊಸೆಗೆ ಬರೆಹಾಕಿದ್ದರು. ...ರ್ದಿಯನ್ನು ವಿಚಾರಿಸಿದಾಗ ಅವಳು—ನಾನೂ ನನ್ನ ...ಯೂ ನನ್ನ ಅತ್ತೆ ಮಾವಂದಿರೂ ಒಂದೇ ಮನೆಯಲ್ಲಿ ವಾಸಿಸು...ವೆ. ನಾನು ಕಳೆದ ಸೋಮವಾರ ನನ್ನ ತೌರಿನವರ ಮನೆಗೆ ...ನನ್ನು ತೆಗೆದುಕೊಂಡುಹೋಗಿ ಬಂತಿರುಗಿ ಬಂದೆನು. ಆಗ ...ಅತ್ತೆಯು ಊಟಕ್ಕೆ ಕರೆದಳು. ನಾನು ಮೈಗೆ ಅಲಸ್ಯನಾ... ಊಟಮಾಡುವದಿಲ್ಲವೆಂದು ಹೇಳಿದೆನು. ಇದನ್ನು ಕೇಳಿದ ...ಮಾವನು ಕೊಠಡಿಯ ಬಾಗಿಲನ್ನು ಹಾಕಿಕೊಂಡು, ಒಂದು ...ದ ಸಲಾಕಿಯನ್ನು ಕೆಂಪಗೆ ಕಾಸಿದನು. ಅತ್ತೆಯು ನನ್ನ ...ಲು ಕಟ್ಟಿ ಕೆಳಕ್ಕೆ ಕೆಡವಿದಳು. ಮಾವನು ಕೈಕಾಲುಗಳ ...ರೆ ಬರೆಗಳನ್ನು ಎಳೆದನು. ಇದಾದಮೇಲೆ ನನ್ನನ್ನು ಒಂದು ...ಡಿಯಲ್ಲಿ ಹಾಕಿ, ತಾವು ಹೊರಕ್ಕೆ ಹೊರಟುಹೋದರು. ...ಹ್ನದ ಮೇಲೆ ಕೊಠಡಿಯ ಬಾಗಿಲನ್ನು ತೆಗೆದು, ಒಂದು ...ದ ತುಂಬಾ ಅಕ್ಕಿಯನ್ನಿಟ್ಟು ಬೀಸುವಂತೆ ಹೇಳಿದರು. ನಾನು ...ನ್ನು ನಾಲ್ಕುಗಂಟೆಯ ವರಿಗೂ ಬೀಸುತ್ತಿದ್ದೆನು. ಅಷ್ಟ...ತ್ತಿಗೆ ನನ್ನ ಅತ್ತೆ ಮಾವಂದಿರು ಹೊರಕ್ಕೆ ಹೋಗಿದ್ದರು. ...ತಮ್ಮ ತೌರುಮನೆಗೆ ಓಡಿಹೋಗಿ ನನಗೆ ಸಂಭವಿಸಿದ್ದನ್ನೆಲ್ಲಾ ...ದೆನು. ಎಂದುತಿಳಿಸಿದಳು. ಅವರು ಪೋಲೀಸಿಗೆ ರಿಪೋರ್ಟು ಮಾ...ಡಿದ ನನ್ನ ಅತ್ತೆ ಮಾವಂದಿರಿಬ್ಬರನ್ನೂ ಹಿಡಿದುಕೊಂಡು ...ಗಿ ವಿಚಾರಣೆ ಮಾಡಿ ಮಾವನಿಗೆ ಒಂದು ವರುಷ ಕಠಿಣವಾದ ...ಅತ್ತೆಗೆ ೨೫ ರೂಪಾಯಿ ಜುಲ್ಮಾನೆ ಇಲ್ಲದಿದ್ದರೆ ಒಂದು ತಿಂ...ಳು ಕಠಿಣಸಜಾ ವಿಧಿಸಿರುತ್ತಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಜಿ. ಎಸ್., ಹಾಸನ—ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲ.

ವಿದ್ಯಾರ್ಥಿಗಳಿಗೆ ಎಚ್ಚರಿಕೆ, ಚಿತ್ರದುರ್ಗ; ಸಂಭಾಷಣೆ, ತರೀಕೆರೆ—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು

ತೀರ್ಥಹಳ್ಳಿ ತಾಲೂಕ್ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಕೆಲಸಗಳು ನಡೆಯುವದು ಪ್ರಜೆಗಳಿಗೆ ಅನುಕೂಲವಾಗಿಲ್ಲವೆಂತಲೂ, ಬಹಳ ದೂರದಿಂದ ಬರತಕ್ಕ ಕಕ್ಷಿಗಾರರು ಪತ್ರಗಳನ್ನು ರಿಜಿಸ್ಟರು ಮಾಡಿಸುವದಕ್ಕೆ ನಾನಾ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿದೆ ಎಂತಲೂ ಒಬ್ಬ ಬಾತ್ಮಿದಾರರು ಬರೆದಿರುತ್ತಾರೆ. —ಎಡಿ.]

ಕರೆಸ್ಪಾಂಡೆನ್ಸ್.

ಅನ್ನಸತ್ರ.

ಅಯ್ಯಾ,

ಮೈಸೂರು ಸೀಮೆಯ ಚೀಫ್ ಕಮಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ ದೇಸರಾಜೇ ಅರಸಿನವರ ಸಂತತಿ ಪಾರಂಪರ್ಯವಾಗಿ ನಡೆದುಬಂದ ಛತ್ರವೊಂದು ರಾಜಧಾನಿಯಲ್ಲಿರುವದಷ್ಟೆ. ಇದು ಮೊದಲು ಮೈಸೂರು ಕೋಟೆಯಲ್ಲಿತ್ತು. ಅದನ್ನು ಮೆ॥ ಅರಸಿನವರು ತಮಗೆ ಚೀಫ್ ಕಮಾಂಡೆಂಟ್ ಪದವಿಯು ಬಂದನಂತರ ಅದನ್ನು ಈಗ ತಾವಿರುವ ಕಾರಂಜಿ ಪಾರ್ಕಿಗೆ ವರ್ಗಾಯಿಸಿಕೊಂಡರು. ಆಗಿನಿಂದಲೂ ಛತ್ರವು ತಕ್ಕಮಟ್ಟಿಗೆ ವಿತರಣೆಯಿಂದಲೇ ನಡೆಸುತ್ತಿದ್ದರು. ಈಗ ದ್ವಿತೀಯ ಕುಮಾರರಾದ ಕಾವಲ್ದಾರ್ಯಯವರಾದ ಪ್ರಿ॥ ಕೃಷ್ಣಾಜಮ್ಮಣ್ಣಿಯವರು ಸ್ವರ್ಗಸ್ಥರಾದ ನಂತರ ಮೆ॥ ಅರಸಿನವರು ಇನ್ನುಮೇಲೆ ಅನ್ನದಾನದಿಂದಲೇ ತಮ್ಮ ಕೀರ್ತಿಯನ್ನು ಅಭಿವೃದ್ಧಿಪಡಿಸಿ ಪರಲೋಕ ಸುಖವನ್ನು ಹೊಂದಬೇಕೆಂಬ ದೇವರ ಸತ್ಪ್ರೇರಣೆಯಿಂದ ಈಗ ತಮ್ಮ ಛತ್ರದಲ್ಲಿ ಬಡಬಗ್ಗರಿಗೆ ಆದರಣೆಯಿಂದಲೂ ಭಕ್ತಿಯಿಂದಲೂ ಪ್ರತಿದಿನವೂ ರುಚಿಕರವಾದ ಅಡಿಗೆಗಳನ್ನು ಮಾಡಿಸಿ ಭೋಜನಮಾಡಿಸಿ ಆಗಂತುಕರನ್ನು ಉಪಚರಿಸಿ, ಭಕ್ತಿಯಿಂದ ಆದರಿಸುತ್ತಿದಾರೆ. ಇವರ ಧರ್ಮಜ್ಞಾನವು ಯಾವಾಗಲೂ ಇದೇರೀತಿ ಇದ್ದುಕೊಂಡು, ಇವರ ಶ್ರೇಯಸ್ಸು ಕೀರ್ತಿಗಳು ಆಚಂದ್ರಾರ್ಕವಾಗಿರಲೆಂದು ದೇವರನ್ನು ಪ್ರಾರ್ಥಿಸುತ್ತೇವೆ ಇವರು ಮಾಡುವ ಧರ್ಮಖರ್ಚನ್ನು ಸರಿಯಾಗಿ ವಿನಿಯೋಗಿಸುವ ಅವರ ಬಳಿಯಲ್ಲಿರುವ ಅವರ ನೌಕರರಿಗೂ ಪಾಲಿ ಅಡಿಗೆ ಮಾಡುತ್ತಿರುವ ಸುಬ್ಬಯ್ಯನವರಿಗೂ ತುಂಬಾ ಗೌರವವನ್ನುಂಟುಮಾಡತಕ್ಕದ್ದಾಗಿದೆ ಮೆ॥ ಅರಸಿನವರಿಗೂ ಸ್ವಾಮಿ ಕಾರ್ಯಧುರೀಣರಾದ ಅವರ ನೌಕರರಿಗೂ ದೇವರು ಶ್ರೇಯೋಭಿವೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇವೆ

\- ಶ್ರೀಕಂಠಯ್ಯ, ಕೃಷ್ಣಪ್ಪ.

ಮಲೆನಾಡು ಸೀಮೆಯಲ್ಲಿ ನಡಿಯತಕ್ಕ ವಿವಾಹ ವಿಷಯ.

ಅಯ್ಯಾ,

ಈ ಮಲೆನಾಡು ಆಯಾಯ ಸೀಮೆಯಲ್ಲಿ ರಿವಾಜ್ ಪ್ರಕಾರ ವಿವಾಹ ಲಗ್ನ ಕೆಲಸ ಮಾಡಬೇಕೆಂದರೆ ಒಂದು ಹೆಣ್ಣಿಗೆ ನೂರು ಇನ್ನೂರು ರೂಪಾಯಿ ಮತ್ತು ಹತ್ತು ಇಪ್ಪತ್ತು ಬಂಡಗ ಭತ್ತ ಕೊಡಬೇಕೆಂಬಲೂ ಇಲ್ಲವಾದರೆ ಹೆಣ್ಣು ಸಿಕ್ಕುವದು ಕಷ್ಟವಾದ ಕಾರಣ ಬಡವರು ಬಗ್ಗರು ಎಂದರೆ ಗರೀಬ ಸ್ಥಿತಿಯಲ್ಲಿ ಇರುವ ಕಾರಣ ಅಂಥವರಿಗೆ ಲಗ್ನವೇ ಇಲ್ಲವಾಗುತ್ತೆ ಮತ್ತು ವಿವಾಹ ನಡಸಲು ಬಿಮವದಕ್ಕೆ ಅನುಮಾನ ಬರುವದಕ್ಕಾಗಿ ನಡಸಲು ಸ್ವಂತ ಹಣವಿಲ್ಲದೆ ಇರುವದರಿಂದ ಹಣ ತರಬೇಕಾದರೆ ತನ್ನ ಮನೆಯಲ್ಲಿ ಇರತಕ್ಕ ಜಿಂದಗಿ ಜಾನುವಾರು ದವಿಣು ಮನೆ ಸಹಾ ಹಣ ಕೊಟ್ಟ ಸಾವುಕಾರರು ಹೇಳಿದ ಹಾಗೆ ಕೇಳಿಕೊಂಡು ಅವರಿಗೆ ಕ್ರಯವೇ ಆಗಲಿ ಅಥವಾ ದೀಡು ಪತ್ರ ಆದರೂ ಮಾಡಿ ಕೊಟ್ಟೇ ತೀರಬೇಕು. ಹೀಗಿರುವಲ್ಲಿ ಈ ಮಲೆನಾಡು ಪ್ರಜೆಗಳೆಲ್ಲ ದರಿದ್ರ ಸ್ಥಿತಿಗೆ ಬರುತ್ತಾರಾದ್ದರಿಂದ ಸರ್ಕಾರದವರು ಈ ಮಲೆನಾಡು ಪ್ರಜೆಗಳ ಮೇಲೆ ದಯವಿಟ್ಟು ಇಂಥಾ ಕಷ್ಟಕರವಾದ ಕಾರ್ಯಕ್ಕೆ ಆಸ್ಪದ ಕೊಡಕೂಡದಾಗಿ ಆಯಾಯ ಸೀಮೆಯಲ್ಲಿ ತಕ್ಕ ಬಂದೋಬಸ್ತು ಇಡಿಸುವದಾದರೆ ಪ್ರಜೆಗಳೆಲ್ಲ ಅಭಿವೃದ್ಧಿ ಸ್ಥಿತಿಗೆ ಬರುತ್ತಾರಾಗಿಯೂ ಸರ್ಕಾರದವರು ಈ ಸಂದರ್ಭದ ವಿಷಯವನ್ನೇ ಮೊದಲು ಮಾಡಿಸಬೇಕಾಗಿಯೂ ಬೇಡುತ್ತೇವೆ.

ಬಿ. ಐ. ತಿಮ್ಮಪ್ಪಗೌಡ.

[ಹೆಣ್ಣನ್ನು ವಿಕ್ರಯ ಮಾಡುವುದಕ್ಕೆ ಸರಿಸಮಾನವಾದ ಪಾತಕವು ಮತ್ತೊಂದಿಲ್ಲವೆಂದು ಹಿಂದು ಶಾಸ್ತ್ರಗಳು ಹೇಳುತ್ತಿವೆ. ಅಲ್ಲದೆ ಪ್ರಜೆಗಳು ವಿವಾಹ ಮೊದಲಾದ ಶುಭ ಕಾರ್ಯಗಳನ್ನೂ ತಿಥಿ ಮೊದಲಾದ ಉತ್ತರಕ್ರಿಯಾದಿಗಳನ್ನೂ ಮಾಡುವದರಲ್ಲಿ ಆಸ್ತಿಪಾಸ್ತಿಯೆಲ್ಲಾ ಪರಾಧೀನ ಮಾಡಿ ನೆರವೇರಿಸಿ ದರಿದ್ರಾವಸ್ಥೆಗೆ ಬರಬೇಕೆಂದು ಯಾರೂ ಯಾವ ಕಾಲದಲ್ಲೂ ಹೇಳುವದಿಲ್ಲ. ಇಂಥಾದ್ದರಲ್ಲಿ ಹಣವಂತರು ಮಾಡುವ ದುಂದು ಖರ್ಚನ್ನು ನೋಡಿ ದರಿದ್ರರು ಅವರಂತೆಯೇ ಖರ್ಚು ಮಾಡುತ್ತಾ ಬರುವದು ಶ್ರೇಯಸ್ಕರವಾಗಲಾರದು.—ಎಡಿ.]

ಮತದ್ವೇಷ.

ಅಯ್ಯಾ,

ಎಡೇಹಳ್ಳಿಯು ಒಂದು ಸಬ್ ತಾಲ್ಲೂಕು ಇರುವ ಊರಿನ ಹೆಸರು. ಕ್ರೈಸ್ತಧರ್ಮಭರಣ ಭೂಷಿತ ಸಮಾಜದವರಿಂದ ರಚಿಸಲ್ಪಟ್ಟ ಗ್ರಂಥಗಳನ್ನು ವೈದುಮಾರುವವರೊಬ್ಬರು ಇಲ್ಲಿಗೆ ಬಂದು ಕೆಲವು ಪುಸ್ತಕಗಳನ್ನು ವಿಕ್ರಯಿಸಿದರು. ದೈವಪ್ರೇರಿತ ಭಕ್ತಾರ್ಥಿಗಳು ವಿದ್ಯಾರ್ಥಿಗಳು ಕೂಡ ಕೊಂಡುಕೊಂಡರು. ಸದರಿ ಪುಸ್ತಕಗಳನ್ನು ನೋಡಿದ ಕೆಲವು ಬ್ರಾಹ್ಮಣರು ಗುಂಪುಸೇರಿ ಪುಸ್ತಕ ವ್ಯಾಪಾರಿಯನ್ನು ಹೆದರಿಸಿ ಬೈದು, ಆತನ ಅನೇಕ ಪುಸ್ತಕಗಳನ್ನು ಹರಿದುಹಾಕಿ ನಷ್ಟಪಡಿಸಿದರು. ನಮ್ಮ ದಿಯ ಕಾಪಾಡುವಿಕೆಗೆ ಗೊತ್ತುಗಾರರಾದ ಒಬ್ಬ ಅಧಿಕಾರಿಗಳಿಗೆ ಇದು ಅರಿಕೆಯಾದರೂ ಇವರು ಮುಮುಚಕ್ರವರ್ತಿಯ ರಾಜ್ಯಭಾರದವರಾಗಿ ಪ್ರಯೋಜನವಾಗಲಿಲ್ಲ. ಮತಾಗ್ರಗಣ್ಯರಾದ ಬ್ರಾಹ್ಮಣರಿಗೆ ಇಂಥಾ ಕ್ರೂರಗುಣವ್ಯಾಪಕರಿಂದ ಬಂತೋ ಅದು ಬಹಳ ಪಶ್ಚಾತ್ತಾಪಕರವಾದುದು. ಬ್ರಾಹ್ಮಣರೂ ಹಿಂದೂಮತ ಪರಿಜ್ಞಾನ ಗ್ರಂಥಗಳನ್ನು ರಚಿಸಿ ವಿಕ್ರಯಿಸಿ, ಹಿಂದೂ ಧರ್ಮವನ್ನು ರಕ್ಷಿಸಬಾರದೇಕೆ? ಒಳ್ಳೇ ಮೇಲುಪದ್ಯವನ್ನು ಹಾಕಿಕೊಡುವವರು ಗುಣಾಭಿಮಾನಿಗಳಾಗಿರಬೇಕಲ್ಲವೇ? ಕ್ರೈಸ್ತಮತ ಸಮಾಜದವರು ಬರೆದಿರುವ ಪುಸ್ತಕಗಳನ್ನು ನೋಡಿ ಕೊರಳೆಳೆಂದರೆ ಅವನ್ನೇ ಪ್ರಕರ್ಷವಾದರೆ ಹಿಂದೂ ಮತಕ್ಕೂ ಪ್ರಾಶಸ್ತ್ಯ ಉಂಟಾಗುವದಿಲ್ಲವೇ? ಪೂರ್ವದ ಇಲ್ಲಿನ ಭೂಪಾಲರೆಲ್ಲರೂ ಹಿಂದೂ ಧರ್ಮಾಭಿವೃದ್ಧಿಗಾಗಿಯೇ ದೇಶಕೋಶಗಳನ್ನೆಲ್ಲಾ ಸೂರೆಮಾಡಿಲ್ಲವೇ? ಇದರಿಂದ ಮಠಗಳೂ ದೇವಸ್ಥಾನಗಳೂ ಬ್ರಹ್ಮಾದಾಯಗಳೂ ದೇವಾದಾಯಗಳೂ ಇನಾಮು ಜೋಡಿ ಜಹಗೀರಿ ಛತ್ರ ಮುಂತಾದ ಸೌಕರ್ಯಗಳೂ ಉಂಟಾಗಲಿಲ್ಲವೇ? ಇದಕ್ಕೆ ಹಂಗಿಗರಾದವರು ಕ್ರೂರ ಕೃತ್ಯರಾಗುವುದೇ ಬೇಡವೇ? ಹಿಂದೂ ದೇಶದಲ್ಲಿ ಕ್ರೈಸ್ತರು ತಮ್ಮ ದೇಶದಿಂದ ತಂದ ಹಣವನ್ನು ವಿನಿಯೋಗಿಸುವದೂ ಹಿಂದೂ ಜನರು ಇದಕ್ಕಾಗಿ ವ್ಯಯಮಾಡಿರುವ ಹಣಕ್ಕೆ ಸಾಟಿಯಾದೀತೇ? ತಮ್ಮ ಪೂಜ್ಯತೆಯನ್ನು ಕಾಪಾಡಿಕೊಳ್ಳಲಾರದೆ ಅಪಕೀರ್ತಿಯನ್ನು ಹೊರಬಹುದೇ? ಎಲ್ಲಾ ಮತದಲ್ಲಿಯೂ ಮರ್ಮವಾದ ವಿಷಯ ಒಂದೇ ಆಗಿದೆಯಲ್ಲವೇ? ಹಿಂದೂಗಳು ಮಾಡಿರುವ ಧರ್ಮವನ್ನು ಕ್ರೈಸ್ತರು ಸಾರ್ವಭೌಮರಾಗಿದ್ದಾಗ್ಯೂ ಕಾಪಾಡಿಕೊಂಡು ಬರುತ್ತಲಿಲ್ಲವೇ? ಇಂಥಾ ಉಪಕಾರವನ್ನು ಎಣಿಸದವರ ಗತಿಯೇನು? ಕ್ರಿಸ್ತನ ಕಾಲದಲ್ಲೂ ಕೆಲವರು ಆತನು ಜೀವನ್ಮುಕ್ತಿ ದಾಯಕನೆಂಬುದನ್ನು ಅರಿಯದೆ ಮೋಸಹೋದರು. ಈಗಿನ ಕಾಲದಲ್ಲೂ ಜ್ಞಾನಶೂನ್ಯತೆಯೇ ಅನ್ಯಾಯಕ್ಕೆ ಆಸ್ಪದವಲ್ಲವೋ? ಎಂಥಾ ದುರ್ಗಮವಾದ ಪ್ರದೇಶಗಳಲ್ಲಿ ಕೂಡ ಸುವಾರ್ತೆಯು ಸಾರಲ್ಪಟ್ಟು ದೇವಪ್ರಾರ್ಥನಾ ಮಂದಿರಗಳು ಸ್ಥಾಪಿತವಾಗಲಿಲ್ಲವೇ? ಇಲ್ಲಿಯಾದರೂ ಕ್ರೈಸ್ತಧರ್ಮ ಪರಿಜ್ಞಾನ ಗ್ರಂಥಗಳನ್ನು ಹಿಂದುಗಳು ಓದದಂತೆ ಮರೆಮಾಡಿದ್ದ ಪರದೆಯು ಸುಟ್ಟುಹೋಗಿಲ್ಲವೇ? ಹಿಂದೂ ಮತಾಗ್ರಗಣ್ಯರ ಬೋಧನೆಯೂ ತಮ್ಮನ್ನೇ ಸೇವಿಸಬೇಕೆಂಬುದಾಗಿಲ್ಲವೇ? ಮತವೈಷಮ್ಯವಿಲ್ಲದೆ ಸತ್ಕರ್ಮ ಬೋಧನೆಯಾಗುವಂತೆ ಸಂಗ್ರಹವಾಗಿರುವ ಪಾಮರರಂಜನೆಯಾದ ಹಿಂದೂ ಗ್ರಂಥವ್ಯಾವದಾದರೂ ಇದ್ದರೆ ಪುಣ್ಯಾತ್ಮರು ದಯಮಾಡಿ ತಿಳಿಸಲಿ. ಅಗ್ರವರ್ಣದವರು ಈ ಕೊರತೆಯನ್ನು ನಿವಾರಿಸುವವರೆಗೂ ನಮ್ಮವರು ಪಾಮರವೇದ್ಯವಾಗಿಯೂ ಸುನೀತಿ ದಾಯಕವಾಗಿಯೂ ಸನ್ಮಾರ್ಗ ಬೋಧಕವಾಗಿಯೂ ಸುಲಭ ಬೆಲೆಗೆ ಸಿಕ್ಕುವ ಅಮೂಲ್ಯ ರತ್ನವನ್ನು ದೊರಕಿಸಿಕೊಡುವ ಕ್ರೈಸ್ತಗ್ರಂಥಗಳನ್ನು ಓದುತ್ತಾ ಗುಣಗ್ರಾಹಿಗಳಾಗಿರಲಿ ಕ್ರೈಸ್ತಮತ ರಹಸ್ಯವು ದುರ್ಬಲವಾಗಿದೆ ದೆಂಬುದನ್ನು ಪ್ರಸಂಗವೆಂಬ ಪುಸ್ತಕದಲ್ಲಿಯೇ ಕಾಣುವಿರಿ.

ನಾಡವ ನಿಜಗುಣಾನುವರ್ತಿ.

ವಿದೇಶ ವರ್ತಮಾನಗಳು.

ಈಗ ಬ್ರಿಟಿಷರ ಸೈನ್ಯಕ್ಕೆ ಬೇಕಾಗಿರುವ ಪಿರಂಗಿಗಳು ಆಸ್ಟ್ರೇಲಿಯಾ ದ್ವೀಪದಿಂದ ಬರುತ್ತವೆ. ಅವುಗಳಿಂದ ಗುಂಡು ಹೊಡೆದರೆ ಒಂದು ಸೆಕೆಂಡಿಗೆ ೧,೬೦೦ ಅಡಿಗಳ ದೂರ ಹೋಗುವುದು.

****

ಜರ್ಮನೀ ರಾಜ್ಯದ ಯುವರಾಜನು ತನ್ನ ಹೆಂಡತಿಯಾದ ಸಿಸಿಲಿಯಾ ಎಂಬುವಳಿಗೆ ಮುತ್ತಿನ ಒಂದು ಅಮೂಲ್ಯವಾದ ಕಂಠಾಭರಣವನ್ನು ಕೊಟ್ಟಿರುತ್ತಾನೆ. ಅದರ ಬೆಲೆ ಸುಮಾರು ಮೂವತ್ತು ಲಕ್ಷ ರೂಪಾಯಿ.

****

ರಷ್ಯಾ ಗವರ್ನಮೆಂಟಿನವರು ತಮ್ಮ ಸೈನ್ಯಾಧಿಪತಿಯಾದ ಜನರಲ್ ಕುರೊಪಾಟ್ಕಿನ್ ಎಂಬವನಿಗೆ ಹ್ಯಾಗಾದರೂ ೭ ಲಕ್ಷ ಸೈನ್ಯವನ್ನು ಜೊತೆ ಮಾಡಿ ಕಳುಹಿಸಿಕೊಡಬೇಕೆಂದು ತಮ್ಮ ಕೈಲಾದ ಮಟ್ಟಿಗೆ ಶ್ರಮಪಡುತ್ತಿದಾರೆ.

****

ರಷ್ಯಾದವರಿಗೆ ಯುದ್ಧದ ಖರ್ಚಿಗಾಗಿ ಹಣ ಸಾಲದೆಂದು ಬರ್ಲಿನ್ ನಗರದಲ್ಲಿ ತಿಳಿದು ಬಂದು ಅಲ್ಲಿನ ಭಾರೀ ಸಾಹುಕಾರರು ಸಾಲ ಕೊಡುವದಕ್ಕೆ ಒಪ್ಪಿಕೊಂಡಿದ್ದರು. ಆದರೆ ರಷ್ಯಾದವರೇ ಕಾರಣಾಂತರದಿಂದ ತಿರಸ್ಕರಿಸಿರುತ್ತಾರೆ.

****

ಅಮೆರಿಕಾ ಖಂಡದ ದಕ್ಷಿಣ ಭಾಗದ ರಾಜ್ಯಗಳಲ್ಲಿ ರೈತರೂ ವರ್ತಕರೂ ಹತ್ತಿಯ ಬೆಳೆಯು ಬಹಳವಾಗಿರುವದರಿಂದ ಸುಮಾರು ೨೦ ಲಕ್ಷ ಮೂಟೆಗಳನ್ನು ಸುಡಬೇಕೆಂದಿದ್ದರು. ಈಗಾಗಲೇ ೩ ಲಕ್ಷ ರೂಪಾಯಿನಷ್ಟು ಸುಟ್ಟಿರುತ್ತಾರೆ.

****

ರಷ್ಯಾ ಜಪಾನಿನವರ ಯುದ್ಧವಾದ ಮೇಲೆ ರಷ್ಯಾದವರು ತಮ್ಮ ದೇಶಕ್ಕೆ ಈಶಾನ್ಯಭಾಗದಲ್ಲಿರುವ ಪ್ರಾಂತ್ಯವನ್ನು ಕಾಪಾಡುವದಕ್ಕಾಗಿ ೩೬೦ ಲಕ್ಷ ರೂಪಾಯಿನ್ನು ಖರ್ಚು ಮಾಡುವರು. ಇದುವರೆಗೆ ಹೋಗುತ್ತೇವೆಂಬ ಅಪ್ಪಣೆ ಕೇಳಿದವರನ್ನೆಲ್ಲಾ ತಿರಸ್ಕರಿಸುತ್ತಿದ್ದರು.

ಈಜಿಪ್ಟ್ ರಾಜ್ಯದಲ್ಲಿ ಪ್ರಾಚೀನ ಕಾಲದ ಅರಮನೆ ಆಸ್ಥಾನಗಳನ್ನೂ ನಾಗರೀಕ ವಿಷಯವಾದ ಮತ್ತು ಚರಿತ್ರೆಗೆ ಸಂಬಂಧಪಟ್ಟ ಸಂಗತಿಗಳನ್ನೂ ಕಂಡು ತಿಳಿಯುವುದಕ್ಕಾಗಿ ವಿಲಾಯತಿಯ ಕೆಲವು ದೊಡ್ಡ ಮನುಷ್ಯರು ಅಲ್ಲಿಗೆ ಹೋಗಿ ಭೂಮಿಯನ್ನು ಶೋಧನೆಮಾಡುತ್ತಿದಾರೆ. ಇವರಿಗೆ ಈಗ ಈಜಿಪ್ಟಿನ ಮೊದಲನೆಯ ದೊರೆಗಳ ಅರಮನೆಯು ಸಿಕ್ಕಿದೆ.

****

ರಷ್ಯಾ ಜಪಾನ್ ರಾಜ್ಯಗಳಿಗೆ ಈಗ ನಡೆಯುತ್ತಿರುವ ಯುದ್ಧದಲ್ಲಿ ಕಳೆದ ನವಂಬರ್ ತಿಂಗಳ ಕೊನೆಗೆ ರಷ್ಯಾ ಸರ್ಕಾರಕ್ಕೆ ೭ ಕೋಟಿಯೂ ೧೨॥ ಲಕ್ಷ ರೂಪಾಯಿ ಖರ್ಚಾಗಿದೆಯೆಂತಲೂ ಬರುವ ಫೆಬ್ರವರಿ ತಿಂಗಳ ೧೪ನೇ ತಾರೀಖಿನ ವರೆಗೆ ಸುಮಾರು ೧೦ ಕೋಟಿಯೂ ೯೫ ಲಕ್ಷ ರೂಪಾಯಿಗಳಾಗಬಹುದೆಂತಲೂ ಅಲ್ಲಿನ ಖಜಾನೆಯವರು ಪ್ರಕಟಿಸಿರುತ್ತಾರೆ.

****

ರಷ್ಯಾದವರು ಜಪಾನವರಿಗೆ ಪೊಗದಿಯಾಗಿ ಮೂರು ಕೋಟಿ ಯೂನಾನೂರಯುವತ್ತು ಲಕ್ಷ ರೂಪಾಯನ್ನು ಜಹಜಿನ ಮೂಲಕ ಕಳುಹಿಸಿದ್ದರು. ಆ ಜಹಜು ಸಮುದ್ರದಲ್ಲೇ ಮುಳುಗಿಹೋಗಿ ಬಹಳ ಕಾಲವಾಗಿತ್ತು. ಈಗ ಸ್ವೀಡನ್ ರಾಜ್ಯದ ಸಮುದ್ರ ಶೋಧಕರಿಗೆ ಆ ಹಡಗಿನಲ್ಲಿದ್ದ ಸ್ವಲ್ಪ ಭಾಗ ಚಿನ್ನವು ಸಿಕ್ಕಿರುತ್ತದೆ. ಇದರಿಂದ ಆ ಹಡಗಿನಲ್ಲಿದ್ದ ಹಣವೆಲ್ಲಾ ಸಿಕ್ಕಬಹುದೆಂದು ತೋರುತ್ತೆ.

****

ಫ್ರಾನ್ಸ್ ದೇಶದಲ್ಲಿ ಸ್ತ್ರೀಯರೆಲ್ಲಾ ಒಂದು ಸಂಘ ಸೇರಿ ರಷ್ಯಾದ ಪೋರ್ಟ್ ಆರ್ಥರ್ ಎಂಬ ಕೋಟೆಯನ್ನು ಬಹಳ ಕಾಲದ ವರೆಗೆ ಶತ್ರುಗಳಿಗೆ ಕೊಡದೆ ಕಾಪಾಡುತ್ತಿದ್ದ ಜನರಲ್ ಸ್ಟೊಯೆಸೆಲ್ ರವರ ಪತ್ನಿಯವರಿಗೆ ಮೆಡಲ್ ಎಂಬ ಚಿನ್ನದ ಬಿರುದನ್ನೂ, ಆ ಕೋಟೆಯಲ್ಲಿ ಯುದ್ಧದಲ್ಲಿ ಗಾಯಪಟ್ಟಿರುವ ಶಿಪಾಯಿಗಳ ಸಹಾಯಾರ್ಥವಾಗಿ ಸುಮಾರು ಒಂದು ಸಾವಿರ ರೂಪಾಯನ್ನೂ ಕೊಟ್ಟಿದಾರೆ.

****

ರಷ್ಯಾ ರಾಜ್ಯದ ಮುಖ್ಯ ಮುಖ್ಯವಾದ ಕೆಲವು ನಗರಗಳಲ್ಲಿ ನಾನಾ ತರದ ಭಾರೀ ಕಬ್ಬಿಣ ಕಾರ್ಖಾನೆಗಳಿರುತ್ತವೆ ಇವುಗಳಲ್ಲಿ ಕೆಲಸ ಮಾಡುವ ಸುಮಾರು ಒಂದುವರೆ ಲಕ್ಷ ಕೂಲಿಕಾರರು ಕೆಲಸಕ್ಕೆ ಬಾರದೆ ನಿಂತುಬಿಟ್ಟು, ತಾವು ೮ ಗಂಟೆ ಹೊತ್ತು ಮಾತ್ರ ಕೆಲಸ ಮಾಡುವುದಾಗಿಯೂ, ತಮಗೆ ಕೂಲಿಯ ದರವನ್ನು ಹೆಚ್ಚು ಮಾಡಿ ಕೊಡಬೇಕೆಂತಲೂ, ರಾಜಕೀಯ ವಿಚಾರಗಳು ಕ್ರಮಪಡಬೇಕೆಂತಲೂ ಕೇಳುತ್ತಿದಾರೆ ಇದರಿಂದ ಕಾರ್ಖಾನೆಗಳು ಮುಚ್ಚಿಹೋಗಿ ತುಂಬಾ ನಷ್ಟವಾಗುತ್ತಿದೆ.

****

ರಷ್ಯಾದವರ ಸೈನ್ಯಾಧಿಪತಿಯಾದ ಕುರೋಪಾಟ್ಕಿನ್ ಎಂಬುವನು ತನಗೆ ಹೊಸಸೈನ್ಯವನ್ನು ಒದಗಿಸಿಕೊಡುವುದಾದರೆ ಯುದ್ಧ ಮಾಡುವದಾಗಿ ತಿಳಿಸಿರುತ್ತಾನೆ. ಈಗ ಸೈಬೀರಿಯಾದಿಂದ ಮ್ಯಾಂಚೂರಿಯಕ್ಕೆ ೨೪ ರೈಲುಗಳು ಓಡುತ್ತಿವೆ ಇನ್ನು ಮೇಲೆ ೩೬ ರೈಲುಗಳು ಓಡುವವು ಈ ಯುದ್ಧವು ಶುರುವಾಗಿ ಸ್ವಲ್ಪ ದಿನವಾದಾಗ್ಯೂ ಇದುವರೆಗೆ ಅರ್ಧ ಲಕ್ಷ ಸೈನಿಕರನ್ನೂ ಹತ್ತು ಸಾವಿರ ಸೈನ್ಯಾಧಿಕಾರಿಗಳನ್ನೂ ೧ ಲಕ್ಷವೂ ೨೦ ಸಾವಿರ ಕುದುರೆಗಳನ್ನೂ ರಷ್ಯಾದವರು ಯುದ್ಧ ಭೂಮಿಗೆ ಈ ರೈಲು ಮೂಲಕ ಸಾಗಿಸಿದಾರೆ.

****

ಜಮೇಕಾ ದ್ವೀಪದ ಗವರ್ನರವರು ತಿಳಿಸುವದೇನೆಂದರೆ—ಇಂಡಿಯಾದಿಂದ ಬಂದು ಇಲ್ಲಿ ಮನೆಮಠಗಳನ್ನು ಮಾಡಿಕೊಂಡಿರುವ ಹಿಂದೂ ಜನಗಳು ಬಹಳ ಉತ್ತಮ ಸ್ಥಿತಿಯಲ್ಲಿರುತ್ತಾರೆ. ಈ ವರುಷ ಈ ದ್ವೀಪದ ಮೇಲೆ ಸೈಕ್ಲೋನ್ ಎಂಬ ಸುಂಟರ ಗಾಳಿಯು ಬೀಸಿ, ಸುಮಾರು ೩॥ ಲಕ್ಷ ರೂಪಾಯಿನಷ್ಟು ನಷ್ಟವನ್ನುಂಟು ಮಾಡಿತು. ಆಗ ಈ ಹಿಂದೂ ಜನರು ಬಹಳ ಉಪಾಯದಿಂದ ತಮ್ಮ ಸಂಸಾರಗಳನ್ನು ನಡಸುತ್ತಾ ಜೀವನ ಮಾಡಿದರು. ಇದನ್ನು ನೋಡಿ ಇಲ್ಲಿನ ರೈತರನೇಕರು ಇವರ ಪದ್ಧತಿಗಳನ್ನು ಕಲಿಯುವದಕ್ಕೆ ಕುತೂಹಲರಾಗಿದಾರೆ. ಅವರು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವಿಡುವದನ್ನು ಸುಮಾರು ೩೦ ಸಾವಿರ ರೂಪಾಯಿನಷ್ಟು ವರ್ಷಗಟ್ಟಲೆ ಹೆಚ್ಚಿಸಿದಾರೆ. ಈ ದ್ವೀಪದಲ್ಲಿರುವ ಹಿಂದುಗಳ ಆಸ್ತಿಯೆಲ್ಲಾ ಸುಮಾರು ನಾಲ್ಕೂವರೆ ಲಕ್ಷಕ್ಕೆ ಬರಬಹುದು.

*****

ಈಜಿಪ್ಟ್ ರಾಜ್ಯಕ್ಕೆ ಮುಖ್ಯಪಟ್ಟಣವಾದ ಕೈರೋ ಎಂಬ ನಗರದಲ್ಲಿ ಪ್ರಕಟಿಸಲ್ಪಡುವ ಒಂದಾನೊಂದು ಮಹಮ್ಮದೀಯ ವೃತ್ತಾಂತ ಪತ್ರಿಕೆಯು—ಇಲ್ಲಿಗೆ ಒಬ್ಬ ಹಿಂದೂ ಭೂಪ್ರಯಾಣಿಕನು ಬಂದಿರುತ್ತಾನೆ. ಅವನು ಜ್ಯೋತಿಷ ಶಾಸ್ತ್ರಜ್ಞನು. ಅವನ ಹೆಸರು ಸ್ವಾಮಿರಾಮ. ಇವನು ಒಂದು ಕಾಸಾದರೂ ಖರ್ಚು ಮಾಡದೆ ಪ್ರಪಂಚವನ್ನೆಲ್ಲಾ ಸುತ್ತುತ್ತಾನೆ ಇಂಡಿಯಾದಿಂದ ಹೊರಟು ಜಪಾನಿಗೂ ಅಲ್ಲಿಂದ ಕಾಲಿಫೋರ್ನಿಯಾ ರಾಜ್ಯದ ಸ್ಯಾನ್‌ಫ್ರಾನ್ಸಿಸ್ಕೊ ನಗರಕ್ಕೂ, ಅಮೆರಿಕದ ಮಾರ್ಗವಾಗಿ ಯೂರೋಪ್ ಖಂಡಕ್ಕೂ ಹೋಗಿದ್ದನು. ಅವನು ಎಲ್ಲೆಲ್ಲಿ ತಂಗಿದರೂ ಅವನನ್ನು ಎಲ್ಲರೂ ಪ್ರೀತಿ ವಿಶ್ವಾಸಗಳಿಂದ ಕಂಡು ಸತ್ಕರಿಸುತ್ತಿದ್ದರು. ಈ ಬ್ರಾಹ್ಮಣನು ಕೈರೋ ನಗರದಲ್ಲಿ ಅನೇಕ ಮಹಮ್ಮದೀಯರ ಮುಂದೆ ತನ್ನ ಮತವನ್ನು ಕುರಿತು ಧೈರ್ಯವಾಗಿ ಮಾತನಾಡಿದನು ಎಂದು ತಿಳಿಸುತ್ತದೆ.

****

ಫಿಲಿಫೈನ್ ದ್ವೀಪಗಳಲ್ಲಿ ಒಂದಾದ ಮಲಾಬಿ ದ್ವೀಪದಲ್ಲಿ ಅಮೇರಿಕದವರು ಅಪರಾಧಿಗಳನ್ನು ಜೈಲ್‌ಖಾನೆಯಲ್ಲಿಟ್ಟಿದ್ದರು. ಆ ಖೈದಿಗಳು ೫೦೦ ಮಂದಿ ದಂಗೆ ಮಾಡಿ, ಬಂದೀಖಾನೆಯೊಳಗಿದ್ದ ಕಬ್ಬಿಣ ಕೆಲಸಗಾರರನ್ನು ಹಿಡಿದು ಚೆನ್ನಾಗಿ ಮರ್ದನ ಮಾಡಿ, ಅವರ ಬಳಿ ಇದ್ದ ಚಮ್ಮಟಿಗೆ ಮೊದಲಾದ ಆಯುಧಗಳನ್ನು ಕಿತ್ತುಕೊಂಡು, ಜೈಲ್‌ಖಾನೆಯಿಂದ ಹೊರಕ್ಕೆ ಬರಬೇಕೆಂದು ಬಾಗಿಲನ್ನು ಒಡೆಯಲಾರಂಭಿಸಿದರು. ಪೋಲೀಸಿನವರೂ ಜೈಲ್ ಅಧಿಕಾರಿಗಳೂ ಅವರನ್ನು ಈಚೆಗೆ ಬಾರದಂತೆ ತಡೆದು, ಅವರ ಮೇಲೆ ಗುಂಡು ಹೊಡೆದರು. ಈ ಕಾದಾಟದಲ್ಲಿ ಬಂದೀವಾನರೊಳಗೆ ೧೫ ಮಂದಿ ಸತ್ತುಬಿದ್ದರು; ೩೭ ಮಂದಿಗೆ ಗಾಯಗಳಾದವು. ಕಡೆಗೆ ಉಳಿದ ಖೈದಿಗಳು ಹಿಂದಕ್ಕೆ ಹೋಗಿ ತಮ್ಮ ತಮ್ಮ ಕೊರಡಿಗಳನ್ನು ಸೇರಿಕೊಂಡರು.

ದೇಶೀಯ ಸಂಸ್ಥಾನಗಳು.

ಮಧ್ಯ ಹಿಂದುಸ್ಥಾನಕ್ಕೆ ಸೇರಿದ ದೇವಾಸ್ ಎಂಬ ಸಂಸ್ಥಾನದಲ್ಲಿ ವೃದ್ಧರಾಣಿ ಯಮುನಾಬಾಯಿ ಸಾಹಿಬಾ ಯವರ ಪರೋಪಕಾರ ಕಾರ್ಯಗಳನ್ನೂ ಸಾಮರ್ಥ್ಯಾದಿಗಳನ್ನೂ ನೋಡಿ ಮೆಚ್ಚಿ, ಇಂಡಿಯಾ ಗವರ್ನಮೆಂಟಿನವರು ಆಕೆಯವರಿಗೆ ಮಹಾರಾಣಿ ಎಂಬ ಬಿರುದನ್ನು ದಯಪಾಲಿಸಿದಾರೆ ಇವರು ಬರೋಡಾ ಸಂಸ್ಥಾನದ ರಾಜವರ್ಗಕ್ಕೆ ಸೇರಿದವರು; ಈಗ ಆಕೆಗೆ ೭೫ ವರುಷ ವಯಸ್ಸಾಗಿದೆ. ಈಗಿನ ರಾಜರಿಗೆ ಅಜ್ಜಿಯಾಗಬೇಕು. ಕಳೆದ ೧೮೬೦ ರಿಂದ ೭೭ರ ವರೆಗೆ ಆ ಸಂಸ್ಥಾನದ ರೀಜೆಂಟರಾಗಿದ್ದು, ಪ್ರಜಾ ಪ್ರೀತಿ ಗೌರವಗಳನ್ನೂ ಇಂಡಿಯಾ ಗವರ್ನಮೆಂಟಿನವರ ಮೆಚ್ಚಿಕೆಯನ್ನೂ ಸಂಪಾದಿಸಿಕೊಂಡಿದಾರೆ. ಸುಮಾರು ೫೦,೦೦೦ ರೂಪಾಯಿ ತನಕ ಖರ್ಚುಮಾಡಿ, ನಾನಾ ಧರ್ಮಕಾರ್ಯಗಳನ್ನು ಮಾಡಿಸಿ, ಕೀರ್ತಿಪಡೆದಿರುವರು. ಆಕೆಯವರಿಗೆ ಈಗ ಈ ಬಿರುದನ್ನು ದಯಪಾಲಿಸಿದ್ದು ಪ್ರಜೆಗಳಿಗೆಲ್ಲಾ ತುಂಬಾ ಸಂತೋಷಪ್ರದವಾಗಿದೆ.

****

ಸಭಾ ಸಂಸ್ಥಾನದಲ್ಲಿ ಲೇವಾದೇವಿ ಮಾಡುವ ಹಣಗಾರರು ರೈತ ಪ್ರಜೆಗಳಿಗೆ ಸಾಲ ಕೊಟ್ಟ ಪಕ್ಷದಲ್ಲಿ ಅಂಥಾ ಹಣಕ್ಕೆ ಶೇಕಡಾ ತಿಂಗಳಿಗೆ ೧೦ ಆಣೆಗಿಂತ ಜಾಸ್ತಿ ಬಡ್ಡಿ ವಸೂಲ್ಮಾಡಕೂಡದೆಂದು ಸರ್ಕಾರದವರು ಒಂದು ಕಾನೂನ್ ಮಾಡಿ ಜಾರಿಗೆ ತಂದಿರುತ್ತಾರೆ. ಈ ಕಾನೂನು ಇನ್ನು ಮುಂದೆ ಸಾಲ ಕೊಡುವವರಿಗೂ ಹಿಂದೆ ಇದುವರೆಗೆ ಸಾಲ ಕೊಟ್ಟಿರುವವರಿಗೂ ಅನ್ವಯಿಸತಕ್ಕದ್ದೆಂತಲೂ, ಈಗಿನ ರಾಜರು ಪಟ್ಟಕ್ಕೆ ಬಂದಾರಭ್ಯ ಇದುವರೆಗೆ ಜಮೀನ್ದಾರರಿಗೆ ಸಾಲ ಕೊಟ್ಟಿರುವ ಹಣಗಾರರು ಅವರ ಮೇಲೆ ಡಿಕ್ರಿ ಪಡಕೊಂಡಿದ್ದಾಗ್ಯೂ ಅವರು ಆ ಡಿಕ್ರಿಯಂತೆ ಬಡ್ಡಿಯನ್ನು ಪಾವತಿ ಮಾಡಿದ್ದಾಗ್ಯೂ ಅಂಥಾ ಬಡ್ಡಿ ಹಣದಲ್ಲಿ ಮೇಲ್ಕಂಡ ೧೦ ಆಣೆ ದರಕ್ಕಿಂತ ಜಾಸ್ತಿಯಾಗಿ ಪಾವತಿ ಮಾಡಿರುವ ಮೊಬಲಗನ್ನು ಜಮೀನ್ದಾರರು ಹಣಗಾರರಿಂದ ವಾಪಸು ಪಡೆಯಬಹುದೆಂತಲೂ ಈ ಕಾನೂನಿನಲ್ಲಿ ನಮೂದಾಗಿದೆ. ಈ ಕಾನೂನಿನಿಂದ ರೈತ ಪ್ರಜೆಗಳನ್ನು ಕಾಪಾಡಿ, ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂದು ಸಭಾ ಸಂಸ್ಥಾನದ ಸರ್ಕಾರದವರು ಕುತೂಹಲಪಟ್ಟಿರುವುದಕ್ಕಾಗಿ ಅಲ್ಲಿನ ಪ್ರಜೆಗಳು ತುಂಬಾ ಸಂತೋಷಪಟ್ಟಿರಬೇಕೆನ್ನುವುದಕ್ಕೆ ಸಂಶಯವಿಲ್ಲ ಆದರೆ ಹಣಗಾರರು ರೈತರಿಗೆ ಬೇಕಾಗುವ ಹಣವನ್ನು ಇಷ್ಟು ಸ್ವಲ್ಪ ಬಡ್ಡಿಗೆ ಕೊಡಲು ಒಪ್ಪುವುದೇ ಅನುಮಾನವಾಗಿದೆ. ಹಣಗಾರರಲ್ಲಿ ಸಾಲ ಸಿಕ್ಕದಿದ್ದರೆ ಸರ್ಕಾರದವರೇ ಸಾಲ ಕೊಡುವುದಾಗಿಯೂ ಅಷ್ಟೇ ಬಡ್ಡಿ ತೆಗೆದುಕೊಳ್ಳುವುದಾಗಿಯೂ ಏರ್ಪಾಡು ಮಾಡುವ ಪಕ್ಷದಲ್ಲಿ ರೈತರಿಗೆ ಅನುಕೂಲವಾಗುವುದು

ನಗರ್ ಡಿವಿಜನ್ನಿನ ಭೂತ ವರ್ತಮಾನ ಸ್ಥಿತಿ

[ಬರೆದು ಬಂದದ್ದು.]

ನಗರವು ಒಂದಾನೊಂದು ಕಾಲದಲ್ಲಿ ಬಹಳ ಉನ್ನತಸ್ಥಿತಿಯಲ್ಲಿದ್ದ ರಾಜಧಾನಿಯಾಗಿತ್ತೆಂಬುದರಲ್ಲೇನೂ ಸಂಶಯವಿಲ್ಲ. ಪ್ರಪಂಚದಲ್ಲಿ ಕಾಲಚಕ್ರದ ಗತಿಯಿಂದ ಸಕಲ ಕುಟುಂಬದವರಿಗೂ ಜನಾಂಗಕ್ಕೂ ಮಾತ್ರವಲ್ಲದೆ, ಪಟ್ಟಣಗಳಿಗೂ ದೇಶಗಳಿಗೂ ಉನ್ನತಾವಸ್ಥೆ, ಅವನತಾವಸ್ಥೆ ಸಹಾ ಬರುವದು ಸಹಜವಾಗಿದೆ. ಅದೇ ಪ್ರಕಾರ ಪೂರ್ವದಲ್ಲಿ ಪ್ರಸಿದ್ಧಿಯಾಗಿದ್ದ, ನಮ್ಮ ನಗರವೆಂಬ ಸ್ಥಳಕ್ಕೆ ಈಗ ಬಂದಿರುವ ದೀನಸ್ಥಿತಿಯನ್ನು ನೋಡಿ, ಈ ಪ್ರಾಂತ್ಯದ ಪ್ರತಿಒಬ್ಬನಿಗೂ ಒಂದು ವಿಧವಾದ ವಿಲಕ್ಷಣ ಖೇದ ಉಂಟಾಗದೇ ಇರಲಾರದು! ಒಂದು ಲಕ್ಷ ಗೃಹಗಳಿಂದಲೂ ಅರಮನೆಗಳಿಂದಲೂ ಅನೇಕ ಸರೋವರಗಳಿಂದಲೂ ಭಾವಿಗಳಿಂದಲೂ ನಾನಾ ವಿಧ ಸೃಷ್ಟಿಸೌಂದರ್ಯಾದಿಗಳಿಂದಲೂ ಅಲಂಕೃತವಾಗಿ ಶೋಭಿಸುತ್ತಿದ್ದ ನಗರವೆಂಬ ರಾಜಧಾನಿಯು ನಾಮಶೇಷ ಕೂಡ ಈಗ್ಯೆ ಇಲ್ಲದಂತೆ ಆದದ್ದು ಎಷ್ಟು ಆಶ್ಚರ್ಯಕರವಾಗಿದೆ? ಆದರೆ ಕುದ್ಧಾಂಗ ಇಲ್ಲವೆಂತ ಹೇಳದಹಾಗೆ ನಗರಸಭಾ ಎಂಬ ಹೆಸರಿನಿಂದ ಶಿವಮೊಗ್ಗಾದಲ್ಲಿ ಒಂದು ಸಂಘ ಮಾತ್ರ ಸ್ಥಾಪಿತವಾಗಿರೋಣದರಿಂದ ಈ ಪ್ರಾಂತ್ಯದ ಜನರಿಗೆ ಆ ಶ್ರೇಷ್ಠ ಸ್ಥಳದ ಹೆಸರು ಸ್ಮರಣೆಗೆ ಬರುವ ಹಾಗೆ ಇದೆ. ಈ ಮಹಾತ್ಮೆ ಉಳ್ಳ ಸ್ಥಳದ ವಿಷಯದಲ್ಲಿ ಈ ಪ್ರಾಂತ್ಯದ ಜನಗಳಿಗೆ ಈಗ್ಯೂ ಎಷ್ಟರಮಟ್ಟಿಗೆ ಅಭಿಮಾನ ಮತ್ತು ಪೂಜ್ಯ ಬುದ್ಧಿಯದೆ ಎಂದರೆ—ನಗರದಲ್ಲಿ ಆಳುತ್ತಿದ್ದ ಅರಸುಗಳ ಪೈಕಿ ಒಬ್ಬನಾದ ಶಿವಪ್ಪನಾಯಕನೆಂಬ ಮಹಾ ಪುರುಷನ ಸದ್ಗುಣಗಳನ್ನು ವೃದ್ಧರು ಈಗಲೂ ಗಾನ ಮಾಡಿ, ಆತನು ಅವತಾರ ಪುರುಷನೆಂದು ಭಾವಿಸುತ್ತಾರೆ. ಇಂಥಾ ಅರಸಿನ ಮತ್ತು ಆತನ ವಂಶೀಕರ ಚರಿತ್ರೆಯು ಈಗಿನ ನಾಗರಿಕ ಕಾಲದಲ್ಲಿ ಕೂಡ ಬರೆಯಲ್ಪಡದೆ ಇರುವದು ಕೇವಲ ವ್ಯಸನಕರವಾಗಿದೆ, ಅಂಥಾ ಸುಕಾಲವು ಯಾವಾಗ ಲಭಿಸುವದೋ? ಅದಂತಿರಲಿ; ಪ್ರಕೃತ ನನ್ನ ವಿಷಯವನ್ನು ಮುಂದರಿಸುತ್ತೇನೆ.

ಹೈದರನ ಕಾಲದಲ್ಲಿ ನಗರ ಸಂಸ್ಥಾನವು ನಾಶವಾಗಿ ಈ ಪ್ರಾಂತ್ಯವು ಮೈಸೂರು ರಾಜಧಾನಿಗೆ ಸೇರಿಸಲ್ಪಟ್ಟಿತು. ಕ್ರಮೇಣ ಕಾಲಾನುಸಾರವಾಗಿ ನಮ್ಮ ದೇಶದ ರಾಜಗೋತ್ರವು ಬ್ರಿಟಿಷ್ ಕಮಿಷನ್ ಆಡಳಿತಕ್ಕೆ ಬಂತು ಎಂಬುವದು ಎಲ್ಲರಿಗೂ ಗೋಚರವೇ ಇ ಆಗಿನ ಕಾಲದ ಔದಾರ್ಯ ಬುದ್ಧಿಯುಳ್ಳ ದೊಡ್ಡ ದೊಡ್ಡ ಇಂಗ್ಲಿಷ್ ಉದ್ಯೋಗಸ್ಥರು ತಮ್ಮ ಸಹಜವಾದ ಉದಾರಬುದ್ಧಿಯ ಅನುಸರಿಸಿ, ಪ್ರಸಿದ್ಧಿಯಾಗಿದ್ದ ನಗರವೆಂಬ ಪ್ರಾಚೀನ ಸ್ಥ ಒಂದು ಶ್ರೇಷ್ಠತ್ವವಿರಬೇಕೆಂಬ ಉದ್ದೇಶ್ಯದಿಂದ ಶ್ರೀಮನ್ಮಹಾರಾ ರವರ ಸಂಸ್ಥಾನದ ಮೂರು ಡಿವಿಜನ್‌ಗಳ ಪೈಕಿ ಒಂದಕ್ಕೆ ನ ಡಿವಿಜನ್ ಎಂಬ ಅಭಿಧಾನವನ್ನು ಕೊಟ್ಟು, ಶಿವಮೊಗ್ಗೆಯನ್ನು ಡಿವಿಜನ್ನಿಗೆ ಮುಖ್ಯಸ್ಥಾನವನ್ನಾಗಿ ಮಾಡಿ, ಅದಕ್ಕೆ ೩ ಡಿಸ್ಟ್ರಿ ಗಳನ್ನೂ ಸೇರಿಸಿದ್ದರು. ಇಷ್ಟೇ ಅಲ್ಲದೆ ಎಲ್ಲಾ ವಿಷಯದಲ್ಲಿ ಈ ಪಟ್ಟಣಕ್ಕೆ ಬೆಂಗಳೂರು ಮತ್ತು ಮೈಸೂರಿಗೆ ಸಮನಾಗಿ ಮು ತ್ವವನ್ನುಂಟುಮಾಡಬೇಕೆಂಬ ತಾತ್ಪರ್ಯದಿಂದ ಬಹಳ ಪ್ರ ವೆಚ್ಚ ಮಾಡಿ, ಸ್ವಂತ ಬಂಗಲೆಗಳನ್ನು ಕಟ್ಟಿಸಿದ್ದರು. ಅವು ಅ ಪಿ ಆಯಾ ಸರದಾರರ ಹೆಸರಿನಿಂದ ಇವೆ ಈ ಊರಿನಲ್ಲಿ ಒಂ ರಿಜಮೆಂಟ್ ಸವಾರರು ೧೦ ಕಂಪನಿ ಕಾಲ್ದಳ ಸೇನೆಯನ್ನಿಟ್ಟಿ ರು ಸೆಂಟ್ರಲ್ ಜೈಲು ಇತ್ತು. ಅದರಲ್ಲಿ ಕೆಲವು ವೇಳೆ ಒ ಸಾವಿರದ ವರೆಗೂ ಖೈದಿಗಳಿದ್ದು, ಅನೇಕ ಕೈಗಾರಿಕೆ ಕೆಲ ಕಾರಖಾನೆ, ತರಕಾರಿ ತೋಟದ ಕೆಲಸ ಸಹಾ ನಡೆಯುತ್ತಿ ಸಿವಿಲ್ ಸರ್ಜನ್ ರವರ ಆಫೀಸಿತ್ತು ಇನ್ನೂ ಅನೇಕ ಡಿಪಾ ಮೆಂಟುಗಳು ಇದ್ದದ್ದರಿಂದ ಪ್ರಜಾ ಸಂಖ್ಯೆ ಹೆಚ್ಚಾಗಿ, ಮತ್ತು ವ್ಯಾಪಾರ ಉತ್ತಮ ರೀತಿಯಿಂದ ನಡೆಯುತ್ತಾ ಇದ್ದು, ಶಿವಮೊಗ್ಗಾ ಪಟ್ಟಣಕ್ಕೆ ಒಂದು ವಿಧವಾದ ಶೋಭಾ ತೋರುತ್ತಿ ಆಗಿನ ಇಂಗ್ಲಿಷ್ ಉದ್ಯೋಗಸ್ಥರು ಪರಕೀಯರಾಗಿದ್ದಾಗ್ಯೂ ರವೆಂಬ ಶಬ್ದಕ್ಕೆ ಶಿವಮೊಗ್ಗದಲ್ಲಿ ಇಷ್ಟು ಪ್ರತಿಷ್ಠೆಯನ್ನು ಟ್ಟು, ಶೋಭಾಯಮಾನಗೊಳಿಸಿದ್ದರಿಂದ ಈ ಪ್ರಾಂತ್ಯದ ಜನ ಗೆ ಅತ್ಯಾನಂದ ತೋರುತ್ತಾ ಇದ್ದು, ಆ ಸರದಾರರುಗಳನ್ನು ಘಿಸುತ್ತಾ ಇದ್ದದ್ದೇನೂ ಆಶ್ಚರ್ಯವಲ್ಲ. ಆಗಿನ ಕಾಲದಲ್ಲಿ ನ ದಲ್ಲಿ ಒಂದು ತಾಲ್ಲೂಕ್ ಕಛೇರಿ ಮಾತ್ರ ಇತ್ತು, ಆದರೆ ಒಂದು ಸಬ್ ಡಿವಿಜನ್ ಆಫೀಸ್ ಇರಬೇಕೆಂತ ಆಗಿನ ಯೂರೋ ಪಿಯನ್ ಆಫೀಸರು ಯೋಚಿಸುತ್ತಾ ಇದ್ದರೆಂದು ತಿಳಿಯಬರುತ್ತ

ನಗರಡಿವಿಜನ್ನಿಗೆ ಮುಖ್ಯ ಪಟ್ಟಣವಾಗಿದ್ದ ಶಿವಮೊಗ್ಗ ಉನ್ನತಸ್ಥಿತಿಗೆ ಬರುತ್ತಿರುವಾಗ, ಒಮ್ಮಿಂದೊಮ್ಮೆ ಶನಿಮಹಾ ಯನ ವಕ್ರದೃಷ್ಟಿಯು ಈ ಊರಿನ ಮೇಲೆ ಬೀಳಲಿಕ್ಕೆ ಪ್ರಾರ ವಾಯಿತು ಎಂದು ಹೇಳಿದರೆ ನಡೆಯಬಹುದಾಗಿದೆ ಯಾಕೆಂ ಪ್ರಥಮತಃ ಸುಮಾರು ೧೮೮೯ ನೇ ಇಸ್ವಿಯಲ್ಲಿ ನಮ್ಮ ಡಿಸ್ಟ್ರಿ ನ ಡೆಪ್ಯುಟಿ ಕಮಿಷನರಾಗಿದ್ದ ಮೆ॥ ವಿ ಪಿ ಮಾಧವರಾಯ ಆ ದುಸ್ಸಾಗ್ರಹನು ಪ್ರೇರಣೆ ಮಾಡಿ, ಅವರ ಗದಾಪ್ರಹಾರದ ಮು ಕ ನಗರದಲ್ಲಿದ್ದ ತಾಲ್ಲೂಕ್ ಕಛೇರಿಯನ್ನು ಚೂರ್ಣ ಮಾ ಕಳೂರ್ ಕಟ್ಟೆಯಲ್ಲಿ ಬೇರೊಂದು ಹೊಸ ಕಛೇರಿಯನ್ನು ನಿ ಣ ಮಾಡಿಸಿದರು ಮೆ॥ ಮಾಧವರಾಯರು ಈ ಡಿಸ್ಟ್ರಿಕ್ಟಿನ ಜ ಗೆ ಅನೇಕ ಉಪಕಾರವನ್ನು ಮಾಡಿರುವದು ನಿಜ ಅದ್ಯಾಪಿ ಉಪಕಾರವು ಜನಗಳ ಸ್ಮರಣೆಯಲ್ಲಿದೆ ಆದರೆ ಅವರ ಕಾಲ ನಡೆದ ಮೇಲೆ ಹೇಳಿದ ಒಂದು ಕೆಲಸ ಮಾತ್ರ ಈ ಪ್ರಾಂತ್ಯದ ಗಳ ಮನಸ್ಸಿನಲ್ಲಿ ಚಿರಕಾಲ ಖೇದ ಉಂಟುಮಾಡತಕ್ಕದ್ದಾಗಿದೆ ಕಛೇರಿಯನ್ನು ತೆಗೆದು ಹಾಕಿದ್ದಕ್ಕಾಗಿ ಈ ಡಿಸ್ಟ್ರಿಕ್ಟಿನ ಪ್ರಜೆ ಮನಸ್ಸು ಎಷ್ಟರಮಟ್ಟಿಗೆ ಭಿನ್ನವಾಯಿತು ಎಂಬುವದು ಆ ಕಾಲದಲ್ಲಿ ಹೊರಡುತ್ತಿದ್ದ ದೇಶೀಯ ವರ್ತಮಾನ ಪತ್ರಿಕೆಗಳ ಓದೋಣದರಿಂದಲು ಮತ್ತು ಪ್ರಜಾಪ್ರತಿನಿಧಿ ಸಭೆಯಲ್ಲಿ ಯ ಪ್ರತಿನಿಧಿಗಳು ಆ ವಿಷಯವನ್ನು ಕುರಿತು ನಡಿಸಿದ ಯಿಂದಲು ತೋರಿಬರೋಣದರಿಂದ ಅದನ್ನು ಪುನಃ ಹೇಳಬೇ ದ್ದಿಲ್ಲ. ಈಚೆಗೆ ಶಿವಮೊಗ್ಗಾಕ್ಕೆ ಒಂದರಮೇಲೆ ಒಂದು ದು ಷ್ಟವು ಪ್ರಾಪ್ತವಾಗುತ್ತಾ ಬಂತು. ಈ ಪಟ್ಟದಲ್ಲಿದ್ದ ಸವಾರರ ಮೆಂಟನ್ನು ತೆಗೆದುಹಾಕಿ, ಸುಮಾರು, ೨೦ ಕುದುರೆಗಳನ್ನು ಬಿಟ್ಟರು. ೬೦೦ ಶಿಪಾಯಿಗಳು ಇದ್ದದ್ದನ್ನು ತೆಗೆದು ಸು ೨೫ ಶಿಪಾಯಿಗಳನ್ನು ಮಾತ್ರ ಇಲ್ಲಿ ಬಿಟ್ಟರು ಸಿವಿಲ್ ಸರ್ಜ ಇರುವದಕ್ಕೆ ಬದಲಾಗಿ ಅಸಿಸ್ಟೆಂಟ್ ಸರ್ಜನರನ್ನು ನೇಮಿಸಿದ ನಗರದಲ್ಲಿದ್ದ ಮ್ಯುನಿಸಿಪಾಲಿಟಿ ಹೋಗಿ ಯೂನಿಯನ್ ಆಗಿ ದರು. ನಗರವೆಂಬ ಶಬ್ದವನ್ನೇ ಅಡಗಿಸಬೇಕೆಂಬ ಪ್ರಯತ್ನದಿಂದಲೋ ನಗರ ಡಿವಿಜನ್, ಡಿಸ್ಟ್ರಿಕ್ಟ್, ಮತ್ತು ಸೆಷನ್ಸ್ ಕೋರ್ಟ್ ಎಂ ಹೆಸರನ್ನು ತೆಗೆದು, ಶಿವಮೊಗ್ಗಾ ಡಿವಿಜನ್ ಎಂಬ ನಾಮಧೇಯ ಕೊಡಲ್ಪಟ್ಟಿತು. ಸನ್ ೧೯೦೦ ನೇ ಇಸ್ವಿಯಿಂದ ಪ್ಲೇಗ್ ಪ್ರಾರಂಭವಾಗಿ ಈ ಪಟ್ಟಣದಲ್ಲಿದ್ದ ಒಟ್ಟು ಪ್ರಜೆಗಳಲ್ಲಿ ಸುಮಾರು ಅರ ಜನಗಳು ಲಯವಾದರು. ಪೂರ್ವದಲ್ಲಿ ಮಲೆನಾಡು ಪ್ರಾಂತ್ಯ ಸುಸ್ಥಿತಿಯಲ್ಲಿದ್ದ ಅಡಿಕೇ ತೋಟದವರು ಕೇವಲ ಶೋಚನೀ ಸ್ಥಿತಿಗೆ ಬಂದರು. ಇತ್ತಕಡೆ ಸಾಹುಕಾರರ ದ್ರವ್ಯ ಯಾವತ್ತು ಪ್ರಸಂಗಕ್ಕೆ ಬಂತು. ಒಂದು ಕಾಲದಲ್ಲಿ ಲಕ್ಷಕ್ಕೂ ಹೆ ಮನೆಗಳನ್ನು ಅಡಗಿಸಿಕೊಂಡಿದ್ದ ಈ ಪಟ್ಟಣದಲ್ಲಿ ಅದ್ಭು ಕಟ್ಟಡಗಳ ಅಸಂಖ್ಯಾತವಾದ ಕೂಪಗಳು ಅನೇಕ ಸರೋವರ ಶೇಷವನ್ನು ಈಗ ಹೋಗಿ ನೋಡುವ ಪ್ರೇಕ್ಷಕರಿಗೆ ಒಂದೇ ಸ ಯದಲ್ಲಿ ಆಹ್ಲಾದವು ಮತ್ತು ವ್ಯಾಕುಲವೂ ತೋರಿ, ಈಶ್ವರನ ರ್ಯವು ಎಷ್ಟು ಆಶ್ಚರ್ಯಕರವಾಗಿದೆ ಎಂದು ತೋಚದೆ ಇರ ರದು! ಅದೇ ರೀತಿಯಾಗಿ ನಗರ ಡಿವಿಜನ್ ಎಂಬ ಹೆಸರಿನಿಂದ ವೃದ್ಧಿಯನ್ನು ಹೊಂದುತ್ತಾ ಇದ್ದ ಶಿವಮೊಗ್ಗಾ ಪಟ್ಟಣವು ಅದೇ ಸ್ಥಿತಿಗೆ ಅಭಿಮುಖವಾಗುತ್ತಾ ಇರುವದು ಇನ್ನೂ ಆಶ್ಚರ್ಯವಲ್ಲವೇ? ಈ ಊರಿನಲ್ಲಿ ಪ್ರಥಮತಃ ನಮ್ಮ ಸಾ ಭೌಮ ಸರ್ಕಾರದವರ ಆಡಳಿತದಲ್ಲಿ ನಮ್ಮ ಶ್ರೀಮೆಯು ಒಂದು ಇಂಗ್ಲಿಷ್ ಸ್ಕೂಲನ್ನು ಸ್ಥಾಪಿಸಿದರು! ದಿನೇ ದಿನೇ ಅಭಿವೃದ್ಧಿಗೆ ಬರುತ್ತಾ ಇದ್ದು, ಅನೇಕ ವಿದ್ಯಾರ್ಥಿಗಳು

ಗವರ್ನಮೆಂಟಿನವರು ಇದನ್ನು ಹೈಸ್ಕೂಲಾಗಿ ಮಾಡಿದರು. ... ಸುಮಾರು ೧೮೭೫ನೇ ಇಸ್ವಿಯಲ್ಲಿ ಅದನ್ನು ೨ನೇ ... ಕಾಲೇಜ್ ಆಗಿ ಮಾಡಿದ್ದರಿಂದ ನಮ್ಮ ಪ್ರಾಂತ್ಯದವರು, ... ಮೈಸೂರಿನವರಂತೆ ವಿದ್ಯಾವಂತರಾಗುತ್ತಾ ಬಂದರು. ... ಈಗ ನಮಗೆ ಕೈ ತೊಳೆದುಕೊಂಡು ಬೆನ್ನಟ್ಟಿರುವ ಕನೇಶ್ವ... ರಾಯನಿಗೆ ಸಹನವಾಗದೆ ನಮ್ಮ ಸ್ವದೇಶಾಭಿಮಾನಿಗಳಾದ ... ಕಾಲದಲ್ಲಿಯೇ ಈ ಕಾಲೇಜಿಗೆ ಅಂತ್ಯಕಾಲವನ್ನು ... ಬಿಟ್ಟದ್ದು ಕೇವಲ ವ್ಯಸನಕರವಾಗಿದೆ

ಮೈಸೂರು ಗೆಜೆಟ್ ಸಂಗ್ರಹ.

... ಕಮಿಷನರ್ ಮೆ॥ ಎಸ್. ವೆಂಕಟರಾಯರಿಗೆ ಕೊಟ್ಟಿದ್ದ ... ತಿಂಗಳ ರಜವನ್ನು ಇನ್ನೂ ೨೩ ದಿನಗಳಿಗೆ ಜಾಸ್ತಿ ಮಾ...

... ಸೇಷನರಿ ಎಕ್‌ಸ್ಟ್ರಾ ಆ॥ ಕಮಿಷನರ್ ಮೆ॥ ಕಾಜ್... ಯವರನ್ನು ಇದೇ ಜನವರಿ ೧೭ರ ಲಾಗಾಯತು ಎಕ್‌ಸೈ... ಖಾತೆಯಲ್ಲಿ ಕೆಲಸಮಾಡುವಂತೆ ವರ್ಗಾಯಿಸಿದೆ

... ರುವೆಕೆರೆ ಸಬ್ ತಾಲ್ಲೂಕಿನಲ್ಲಿ ಟಪ್ಪಿ ಗುಮಾಸ್ತೆಯಾಗಿದ್ದ ... ಪ್ಪನೆಂಬವರನ್ನು ೧೯೦೪ನೆ ಆಗೇಷ್ಟು ೯ ರಿಂದ ಕೆಲಸ ... ವಜಾಮಾಡಿದೆ ಇವರು ಮತ್ತೆ ಗವರ್ನಮೆಂಟ್ ಸರ್ವಿಸಿಗೆ ... ಅರ್ಹತೆಯನ್ನು ಕಳೆದುಕೊಂಡಿದಾರೆ

ಮುಂದೆ ಹೇಳುವ ಆಕ್ಟಿಂಗ್ ಅಮಲ್ದಾರರುಗಳು ೧೯೦೪ನೆ ... ಗುರ್ರಿ ಲಾಗಾಯಿತು ಸಬ್ ಪ್ರೊಟೆಂ ಅಮಲ್ದಾರರಾಗಿರತಕ್ಕ...

... ಗಳಾದ ಬಿ ಎಸ್. ಚೆನ್ನಿಗಪ್ಪನವರು, ಎಚ್ ಕೇಶವಾ... ಷೇಕ್ ಅಬ್ದುಲ್ಲಾ ಯವರು, ಎಂ ಆರ್. ದಾಸಣ್ಣನವರು, ... ಕೋಬಾಲರಾಯರು, ಟಿ. ರಾಮಚಂದ್ರರಾಯರು, ಬಿ. ಟಿ. ... ರಾಮೈಯನವರು, ಕೆ ಶ್ರೀನಿವಾಸರಾಯರು.

ಮೈಸೂರು ಇಸ್‌ಫೆಂಟ್ರಿ ೧ನೆ ಬಟಾಲಿಯನ್ನಿನಲ್ಲಿ ರಾಜೋಜಿ... ೧ನೆ ಗ್ರೇಡ್ ದಫೇದಾರಿಯಿಂದ ೨ನೆ ಗ್ರೇಡ್ ಸುಬೇದಾ... ಮುನಿಸಂಜೀವನಾಯಕರಿಗೆ ಕಲರ್ ಹವಾಲ್ದಾರಿಯಿಂದ ... ಗ್ರೇಡ್ ಜಮಾದಾರಿಗೂ ೧೯೦೪ನೆ ಡಿಸೆಂಬರ್ ೧೦ ರಿಂದ ಬ... ಬಡಿದೆ.

ಕೋಲಾರದ ಚಿನ್ನದ ಗಣಿಗಳ ಆ॥ ಕಮಿಷನರ್ ಮೆ॥ ಬಿ ... ಬೌರಿಂಗ್ ಯವರಿಗೆ ಕೊಟ್ಟಿದ್ದ ರಜವನ್ನು ಅವರು ಉಪ... ಯೋಗಿಸಿಕೊಳ್ಳಲಿಲ್ಲವಾದ್ದರಿಂದ ರದ್ದು ಮಾಡಿದೆ

ಆಸ್ಪತ್ರೆ ಅಸಿಸ್ಟೆಂಟರಾದ ಬಿ ಆರ್ ಶ್ರೀನಿವಾಸಯ್ಯ ... ೨ನೆ ಕ್ಲಾಸಿಗೂ, ಎಚ್ ಕೃಷ್ಣಸ್ವಾಮಿ ಐಯರನ್ನೂ ... ಕೆ ನರಸಿಂಗರಾಯರನ್ನೂ ೧ನೆ ಕ್ಲಾಸಿಗೂ ಬಡ್ತಿ ಮಾಡಿದೆ.

ಕಂಟ್ರೋಲರವರ ಚೀಫ್ ಅಸಿಸ್ಟೆಂಟ್ ಮೆ॥ ... ವೈಕುಂಠರಾ... ಯರಿಗೆ ಡಿಸೆಂಬರ್ ೨೨ರ ಲಾಗಾಯಿತು ಇನ್ನೂ ೨ ತಿಂಗ... ಳಯಲಿ ರಜಾ ಕೊಟ್ಟಿದೆ

ಕಡೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆ॥ ಕನ್ಸರ್ವೇಟರ್ ಮೆ॥ ... ಡಿ ರಾಮರಾಯರಿಗೆ ಅವರು ಉಪಯೋಗಿಸಿಕೊಳ್ಳುವ ಕಾ... ಮಿಗಿಲಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

... ಆ ಕನ್ಸರ್ವೇಟರ್ ಮೆ॥ ಎಚ್. ರಾಮೈಯನವರು ತ... ಕೆಲಸದೊಂದಿಗೆ ಕಡೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನ ಭಾ... ರವನ್ನೂ ವಹಿಸಿರತಕ್ಕದ್ದು.

... ಗಣಿಗಳ ಡಿಪ್ಟಿ ಇನ್‌ಸ್ಪೆಕ್ಟರ್ ಮೆ॥ ಜಾರ್ಜ್ ನೆವಿಲ್ಲೆಯವರಿಗೆ ... ೭ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತಾಲ್ಲೋಕು ವರ್ತಮಾನಗಳು.

ಚಿಕ್ಕಮಗಳೂರು.—ಪ್ಲೇಗ್ ರೋಗದ ಹಾವಳಿ ಕಮ್ಮಿಯಾ... ದೆ. ಬೇರೆ ರೋಗವೇನೂ ಕಾಣುವದಿಲ್ಲ. ಊರಿನಲ್ಲಿ ಜನರು ... ಕ್ಕಟ್ಟಿಗೂ ನೆಮ್ಮದಿಯಾಗಿದ್ದಾರೆ. ವೆಸ್ಲಿಯನ್ ಮಿಷನ್ ಸಂಘದ ... ರು ತಿರಿಗಿ ಈ ಊರನ್ನು ಯೂರೋಪಿಯನ್ ಸ್ಟೇಷನ್ನಾಗಿ ಮಾಡಿ... ಕ್ಕೆಗೆ ಹೊಸದಾಗಿ ವಿಲಾಯಿತಿಯಿಂದ ಬಂದಿ ಧನ ಪಾದ್ರಿಗಳಾದ ... ಕೆ. ರಿಡ್ಮಂಡ್, ಬಿ ಎ. ಯವರನ್ನು ಕಳುಹಿಸಿಕೊಟ್ಟಿರುವದು ... ಕ್ಕಿನ ಸಭೆಯವರಿಗೆ ತುಂಬಾ ಸಂತೋಷವನ್ನುಂಟುಮಾಡಿತು. ... ಬೋಧಕರು ಈ ಡಿಸ್ಟ್ರಿಕ್ಟಿನ ಎಲ್ಲಾ ಕಡೆ ಇರುವ ಪ್ರೊಟೆಸ್ಟಾಂ... ಕ್ರೈಸ್ತರಿಗೆ ಆತ್ಮೀಯ ವಿಚಾರದಲ್ಲಿ ತುಂಬಾ ಸಹಾಯಕರಾ... ಗಿರುವದರಲ್ಲಿ ಸಂದೇಹವಿಲ್ಲವೆಂದು ತೋರುತ್ತೆ.—ನಮ್ಮ ಡೆಪ್ಯೂಟಿ ... ಕಮಿಷನರ್ ಸಾಹೇಬರವರು ಸರ್ಕೀಟು ಕೆಲಸವನ್ನು ತೀರಿಸಿಕೊಂ... ಇದೇ ೨೦ನೆ ತಾರೀಖಿನ ಬೆಳಿಗ್ಗೆ ಊರಿನಲ್ಲಿ ಸೇರಿದರು. ಇದೇ ... ನ ಸರ್ವೆ ಸೆಟ್ಲ್‌ಮೆಂಟ್ ಸೂಪರೆಂಟೆಂಡರಾದ ಕರ್ನಲ್ ಗ್ರಾಂಟ್ ... ಸಾಹೇಬರವರು ಅಲ್ಲೂರು ಮಾರ್ಗವಾಗಿ ಇಲ್ಲಿಗೆ ಬರುತ್ತಾರೆಂದು ... ಕೇಳಬರುವನಿದೆ. ಇದೇ ೨೫ನೆ ತಾರೀಖಿಗೆ ರೆವಿನ್ಯೂ ಕಮಿಷನರ ... ಮೆ॥ ಟಿ. ಆನಂದರಾಯರವರು ಈ ಊರಿಗೆ ಬಂದು ಒಂದೆರಡು ... ದಿವಿದ್ದು ಬೇರೆ ಕಡೆ ಪ್ರಯಾಣ ಮಾಡುತ್ತಾರೆಂದು ಜನರು ಮಾತ... ನಾಡಿಕೊಳ್ಳುತ್ತಾರೆ. ಈ ತಿಂಗಳ ಆದಿಯಿಂದಲೂ ಸಂಸ್ಥಾನದ ... ದೊಡ್ಡ ದೊಡ್ಡ ಅಧಿಕಾರಿಗಳು ಈ ಊರಿಗೆ ದರ್ಶನ ಕೊಡುತ್ತಿರು... ವದು ಸಂತೋಷವೇ —ಈ ಊರಿನಲ್ಲಿ ಕೆಲವು ವೇಳೆ ಮ್ಯಾಜಿಸ್ಟ್ರೇ... ಟರೆಲ್ಲರೂ ಏಕಕಾಲದಲ್ಲಿ ಸರ್ಕೀಟಿಗೆ ಹೋಗುವದರಿಂದ ಕಕ್ಷಿಗಾ... ರರಿಗೆ ತೊಂದರೆಯಾಗುವದೆಂದು ತೋರುತ್ತಿದೆ. ಸರ್ಕೀಟಿಗೆ ಹೋ... ಗುವ ಅಧಿಕಾರಿಗಳು ತಮ್ಮಲ್ಲಿ ಫೈಸಲ್ ಆಗಬೇಕಾಗುವ ಮೊಕದ್ದ... ಮೆಗಳನ್ನು ತಾವು ಸರ್ಕೀಟು ಕೆಲಸ ತೀರಿಸಿಕೊಂಡು ಬಂದನಂ... ತರ ವಿಚಾರಿಸುವದಾಗಿ ಮೊದಲೇ ಕಕ್ಷಿಗಾರರಿಗೆ ತಿಳಿಸುವದಾದರೂ ... ಇಲ್ಲವೇ ತಾವು ಇರುವ ಕಡೆಗೆ ಬರಮಾಡಿಕೊಂಡು ಫೈಸಲ್ ಮಾಡು... ವದಾದರೂ ಒಳ್ಳೆಯದಲ್ಲವೇ ?—ಈ ಊರಿಗೆ ಇದೇ ತಿಂಗಳು ೧೦ನೆ ... ತಾರೀಖಿಗೆ ಸರ್ಕಸ್ ಆಟದವರು ಬಂದು ಒಂದು ವಾರದಿಂದಲೂ ಪ್ರತಿನಿತ್ಯದಲ್ಲೂ ಆಡುತ್ತಾ ಸುಮಾರು ಮುನ್ನೂರು ರುಪಾಯಿ ಸಂಪಾದಿಸಿರಬಹುದೆಂದು ಕಾಣುತ್ತದೆ.—ಇಲ್ಲಿನ ಹವೆ ರಾತ್ರಿಯಲ್ಲಿ ಛಳಿ ಹೆಚ್ಚಾದರೂ ಹಗಲಿನಲ್ಲಿ ಬಿಸಲಾದರೋ ಬಹು ತೀಕ್ಷ್ಣವಾಗಿದೆ ಈ ಮಾಗೀ ಕಾಲದಲ್ಲಿ ಹೀಗಿದ್ದರೆ ಬರುವ ಮಾರ್ಚಿ ಏಪ್ರಿಲ್ ತಿಂಗಳಲ್ಲಿ ಇನ್ನು ಅಧಿಕವಾಗುವದಲ್ಲವೇ?

ಮಂಡ್ಯ.—ಒಂದು ತಿಂಗಳಿಂದಲೂ ಜನರು ಜೋಡುಗಳಲ್ಲಿಯೇ ವಾಸಮಾಡುತ್ತಾ ಇದ್ದಾರೆ. ಜನರು ಜಾಸ್ತಿ ಸಾಯಲಿಲ್ಲ. ಈಚೆಗೆ ಜೋಡುಗಳಲ್ಲಿ ಎಲ್ಲರೂ ಆರೋಗ್ಯವಾಗಿದಾರೆ. ಕೆಲವು ಜನರು ಊರಿನಲ್ಲೇ ವಾಸಿಸುತ್ತಾ ಇದ್ದಾರೆ. ಇಲ್ಲಿನ ಶ್ರೀನಿವಾಸಯ್ಯಂಗಾರ್ರು ಕಾಯಿಲೆಯಾಗಿದ್ದ ತಮ್ಮ ಕುಮಾರ್ತೆಯನ್ನು ಮದ್ರಾಸಿನಿಂದ ಇಲ್ಲಿಗೆ ಕರೆದುಕೊಂಡು ಬಂದರು. ಬರುವಾಗಲೇ ಕಾಯಿಲೆ ಇತ್ತು. ಅವರು ತಮ್ಮ ಮನೆಗೆ ಕರೆದುಕೊಂಡು ಹೋದರು. ಅವರನ್ನು ಸರ್ಕಾರದವರು ಊರಿಗೆ ಸೇರಿಸದ ಕಾರಣ ರೈಲ್ವೆ ಸ್ಟೇಷನ್ ಬಳಿ ಇರುವ ಷೆಡ್ಡುಗಳಲ್ಲಿರಲು ಹುಕ್ಕಿಸಿದರು. ಆಲ್ಲಿಯವರು ಕಾಯಿಲೆ ಎಂದು ತಿಳಿದು ಅಲ್ಲಿಂದ ಹೊರಡಿಸಿಬಿಟ್ಟರು. ಅನಂತರ ಸಿಂಗ್ರಯ್ಯಂಗಾರರ ತೋಟದಲ್ಲಿ ಇದ್ದರು ಅಲ್ಲಿ ಅವರ ಕುಮಾರ್ತೆ ತೀರಿಹೋದರು. ಅವರು ತಮ್ಮ ಕುಮಾರ್ತೆಯನ್ನು ಉಳಿಸಲು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು.—ಕೆಲವು ದಿನಗಳಿಗೆ ಹಂಗಾಮಿಯಾಗಿ ಒಬ್ಬ ಸಬ್ ಪೋಸ್ಟ್‌ಮಾಸ್ಟರು ಇಲ್ಲಿಗೆ ಬಂದಿರುತ್ತಾರೆ. ಇವರು ಕೆಲಸದ ಸಮಯದಲ್ಲಿ ಪೋಸ್ಟಾಫೀಸಿನಲ್ಲಿ ಇರುವದಿಲ್ಲ. ಜನರು ರಿಜಿಸ್ಟರು, ಮನಿ ಆರ್ಡರ್ ಮಾಡಲು ಬಹು ಕಾಲ ಕಾದಿರಬೇಕಾಗುತ್ತೆ. ಅವರು ಹೊತ್ತು ಮೀರಿ ಬಂದು ಮನಿ ಆರ್ಡರ್ ರಿಜಿಸ್ಟರ್ ಅವಸರವಾಗಿ ತೆಗೆದುಕೊಳ್ಳುತ್ತಾರೆ. ಇನ್ನು ಕೆಲವರು ತಂದರೆ—ಹೊತ್ತಾಯಿತು ಹೋಗಿರಿ; ನಾಳೆ ಬನ್ನಿ. ನಿಮ್ಮ ಕಾಗದಕ್ಕೆ ಚೆಂಕಿ ಹಾಕಿ ಎಂಬದಾಗಿ ಕೋಪದಿಂದ ಮಾತಾಡುತ್ತಾರೆ. ಇವರು ಜನರ ಪ್ರಯೋಜನಕ್ಕಾಗಿ ಸರ್ಕಾರದಿಂದ ನೇಮಿಸಲ್ಪಟ್ಟಿರುತ್ತಾರೆ. ಆದರೆ ಜನರಿಗೆ ಅನುಕೂಲವಾಗಿಲ್ಲದಿದ್ದರೆ ಉಪಯೋಗವೇನು?—ಇಲ್ಲಿ ಒಂದು ವರ್ಷದ ಲಾಗಾಯಿತು ಪೊ. ಇನ್ಸ್‌ಪೆಕ್ಟರಾಗಿ ಇದ್ದ ಅಬ್ದುಲ್ ಖಾದರ್ ಜನಾಬ್ ಯವರು ಮೈಸೂರಿಗೆ ವರ್ಗವಾದದ್ದು ಅನೇಕರಿಗೆ ತುಂಬಾ ವ್ಯಸನವಾಗಿದೆ ಇವರು ಸಕಲ ಗುಣವುಳ್ಳವರು. ಪ್ರೀತಿ ಕರುಣೆಯುಳ್ಳವರು. ತಮ್ಮ ಕೈಕೆಳಗಿನ ನೌಕರರನ್ನು ಹೊಟ್ಟೆಯಮೇಲೆ ಹೊಡೆಯದೆ ಚೆನ್ನಾಗಿ ಕಾಪಾಡಿಕೊಂಡು ಬಂದರು. ಇವರು ಹೋಗುವದು ಅನೇಕರಿಗೆ ವ್ಯಸನವಾದರೂ ಅವರ ಗುಣಗಳನ್ನು ಕುರಿತು ಎಲ್ಲರೂ ಕೊಂಡಾಡಬೇಕಾಗಿದೆ. ಅವರು ಹೋಗುವ ಸ್ಥಳದಲ್ಲಿಯೂ ಅವರಿಗೆ ಕೀರ್ತಿ ಬರುವದರಲ್ಲಿ ಸಂದೇಹವಿಲ್ಲ. ಅವರ ಬದಲಿ ಮೈಸೂರಿಂದ ಬಂದಿರುವ ಫೈಸುಲ್ಲಾಖಾನರು ಅವರಂತೆಯೇ ಕೆಲಸಗಳನ್ನು ನಡಿಸುತ್ತಾ ಜನರ ಪ್ರೀತಿ ಗೌರತೆಗಳನ್ನು ಸಂಪಾದಿಸುವರೆಂದು ನಂಬುತ್ತೇನೆ—ಈಗ ಶ್ರೀರಂಗಪಟ್ಟಣದಲ್ಲಿರುವ ಮುನಿಸಿಫ್ ಕೋರ್ಟನ್ನು ಮಂಡ್ಯಕ್ಕೆ ವರ್ಗ ಮಾಡುವಂತೆ ಚೀಫ್ ಕೋರ್ಟಿನವರು ಅಪ್ಪಣೆ ಕೊಟ್ಟಿದ್ದಾರೆಂದು ಕೇಳಿ, ಇಲ್ಲಿನ ಜನರೆಲ್ಲಾ ಸಂತೋಷಪಡುತ್ತಾರೆ. ಇದು ಆರೋಗ್ಯವಾದ ಸ್ಥಳವಾಗಿಯೂ, ನಾಗಮಂಗಲ ಮಳವಳ್ಳಿ ಶ್ರೀರಂಗಪಟ್ಟಣ ಇವುಗಳಿಗೆ ಮಧ್ಯವಾಗಿಯೂ ಇದೆ ಶ್ರೀರಂಗಪಟ್ಟಣ ಅನಾರೋಗ್ಯವಾಗಿಯೂ ಮಳವಳ್ಳಿ ಹಲಗೂರು ಮುಂತಾದ ಸ್ಥಳಗಳಿಗೆ ಬಹಳ ದೂರವಾಗಿಯೂ ಇದೆ. ಶ್ರೀರಂಗಪಟ್ಟಣ ಕೋರ್ಟನ್ನು ಅಲ್ಲೇ ಇರಿಸಬೇಕೆಂದು ಅಲ್ಲಿನ ರೈತಾಬಿ ಜನರು ಅರ್ಜಿ ಬರೆದುಕೊಂಡಿದ್ದಾರೆಂದು ವರ್ತಮಾನವಿದೆ. ಆದರೆ ಅದು ಬ್ರಾಹ್ಮಣರುಗಳ ವಿದ್ಯಾವಾಗಿರಬೇಕೇ ಹೊರತು ಜನರ ನಿಜವಾದ ಅಭಿಪ್ರಾಯವಲ್ಲವೆಂದು ತೋರುತ್ತೆ.

ತುಂಕೂರು.—ಬಿಸಲು ದಿನದಿನಕ್ಕೆ ಜೋರಾಗುತ್ತಿರುವದರಿಂದ ಛಳಿ ಕಡಮೆಯಾಗಿ ಹವೆ ಆರೋಗ್ಯಕರವಾಗಿದೆ. ಧಾನ್ಯಮಾಸಿಗಳು ಮೊದಲಿನಂತೆ ಇರುವದರಿಂದಲೂ ಈ ಪ್ರಾಂತ್ಯ ಭಳಲು ತುಂಬಾ ಕಮ್ಮಿಯಾಗಿರುವದರಿಂದಲೂ ಬಡಜನರನೇಕರು ಜೀವನಕ್ಕೆ ಮಾರ್ಗವಿಲ್ಲದೆ ಒಪ್ಪತ್ತಿನ ಆಹಾರಕ್ಕೆ ನೀಗಿರುತ್ತಾರೆ. ಇಂಥಾದ್ದರಲ್ಲಿ ಕಂಡಾಯದ ಭೀತಿಯು ಜನರಲ್ಲಿ ಗಾಬರಿಯನ್ನುಂಟುಮಾಡುತ್ತಲಿದೆ. ಪ್ಲೇಗ್ ಗಲಾಟೆ ಸಮನವೆಂದು ಹೇಳಬಹುದಾದರೂ ಅಲ್ಲಲ್ಲಿ ಇನ್ನೂ ಒಂದೆರಡು ಮರಣಗಳಾಗುತ್ತಲೇ ಇದೆ ರೋಗದ ಪ್ರಾರಂಭದಿಂದಲೂ ಊರಿನಲ್ಲಿ ವೊಂಟಿಟಪಾಗಿದ್ದ ದೇವಾಂಗದವರನ್ನೆಲ್ಲಾ ಈ ವಾರದಲ್ಲಿ ಸರ್ಕಾರದವರು ಊರು ಬಿಡುವಂತೆ ಬಲವಂತ ಮಾಡಿ ಊರು ಬಿಡಿಸುತ್ತಿರುವದಲ್ಲದೆ ಈ ಮಧ್ಯದಲ್ಲೇ ಹೊರಗಡೆಯಿಂದ ಊರಿಗೆ ವಾಸಕ್ಕೆ ಒಂದೆರಡು ಸಂಸಾರದವರು ಬರುವದರಲ್ಲೂ ಇಧ್ದಾರೆ.—ಈ ವಾರದಲ್ಲಿ ನಮ್ಮ ತುಂಕೂರು ಟರ್ವ ಮತ್ತು ಆಸ್‌ಖಸಿನಲ್ಲಿ ನಡೆದಿರತಕ್ಕ ಕಳ್ಳತನವೇ ಪ್ರಾಮುಖ್ಯವೆಂದು ಹೇಳಬೇಕಾಗಿದೆ. ಈಗ್ಯೆ ೧೦—೧೫ ದಿನಗಳಿಗೆ ಮುಂಚೆ ಟರ್ವ ಸಮೀಪದಲ್ಲಿರುವ ಏಗೇನಹಳ್ಳಿ ಎಂಬ ಗ್ರಾಮದಲ್ಲಿ ತೆಲಗರ ವೆಂಕಟಸ್ವಾಮಪ್ಪ ಎಂಬವನ ಮನೆಯಲ್ಲಿ ಕನ್ನಾ ಹಾಕಿ ಎರಡು ಸಾವಿರ ರೂಪಾಯಿವರೆಗೆ ದೋಚಿಕೊಂಡು ಹೋಗಿರುತ್ತಾರೆ. ಎತ್ತೀನಹಳ್ಳಿ ಗ್ರಾಮದಲ್ಲಿ ಕ್ಯಾಚುಗೌಡರ ಮನೆಯಲ್ಲಿ ಕಳುವಾಗಿರುತ್ತೆ. ಟರ್ವ ಹೊರಪೇಟೆಯಲ್ಲಿರುವ ಮುತ್ತಿನವರ ಚಿನ್ನ ಅಂಗಡಿಯಲ್ಲಿ ಸುಮಾರು ನಗದಾಗಿಯೇ ಇನ್ನೂರು ಮುನ್ನೂರು ರುಪಾಯಿ ವರೆಗೂ ಕಳುವಾಗಿರುವದಲ್ಲದೆ, ಕೋಟೆಯಲ್ಲಿ ಅನೇಕ ಮನೆಗಳನ್ನು ಬೀಗ ಮುರಿದು, ಜನರು ರೋಗದ ಅವಾಂತ್ರದಲ್ಲಿ ತೆಗೆದುಕೊಂಡು ಹೋಗುವದಕ್ಕಾಗದೆ ಬಿಟ್ಟಿರತಕ್ಕ ಸಾಮಾನುಗಳಲ್ಲಿ ಅನೇಕವನ್ನು ಅಪಹರಿಸಿಕೊಂಡು ಹೋಗಿರುತ್ತಾರೆ. ಸಾಮಾನ್ಯವಾಗಿ ಹಗಲು ಹೊತ್ತಿನಲ್ಲೇ ಕಳ್ಳತನ ನಡಿಯಲು ಮೊದಲಾಗಿರುತ್ತೆ. ಪೊಲೀಸ್ ಆಫೀಸರವರು ತುಂಬಾ ಮುತುವರ್ಜಿಯಿಂದ ಕೆಲವು ಜನರನ್ನು ಗುಮಾನಿಯ ಮೇಲೆ ಹಿಡಿದಿರುತ್ತಾರಲ್ಲದೆ ಅವರ ಮುಖಾಂತರವಾಗಿ ಅನೇಕ ಸಾಮಾನುಗಳು ಪತ್ತೆಯಾಗಿರುವದಾಕರೂ ಕೂಡ ಒಂದೊಂದು ರಾತ್ರಿಯಲ್ಲಿ ಎಂಟು ಹತ್ತು ಮನೆ ಬೀಗಗಳನ್ನು ಮುರಿದು ಮನೆಗಳಲ್ಲಿ ಗುಂಡಿಗಳನ್ನು ತೋಡಿ, ಹಣ ಕಾಸು ಸಿಕ್ಕದ್ದರಿಂದ ಪರಾರಿಯಾಗುತ್ತಿದಾರೆ ಪ್ರಕೃತದಲ್ಲಿ ಕಳ್ಳತನದ ಅವಾಂತ್ರದಿಂದ ಟೌನಿನ ಸ್ಥಿತಿಯು ತುಂಬಾ ಭಯಂಕರವಾಗಿರುತ್ತೆ. ಇಷ್ಟು ಅನಾಹುತ ನಡಿಯಲು ಕಾರಣವನ್ನು ಯೋಚಿಸಿದ್ದಾದರೆ ಕೆಲವು ಅಂಶಗಳು ತಿಳಿಯಬರುತ್ತೆ. ಯಾವನಂದರೆ:—ಮೊದಲನೇದಾಗಿ ಪೊಲೀಸ್ ಚಿಬ್ಬಂದಿ ಕಡಮೆ. ರಾತ್ರಿ ಹಗಲು ಈ ದೊಡ್ಡ ಪಟ್ಟಣದಲ್ಲಿ ಉಸ್ತುವಾರಿ ನಡಿಸಲು ಹನ್ನೆರಡು ಜನ ಕಾನ್ಸ್ಟೇಬಲ್‌ರಿಂದ ಯಾವ ಕೆಲಸ ಸಾಗಲಾದೀತು! ಎರಡನೇದು, ಇಲ್ಲಿ ಅನೇಕ ಜನರು ಜೂಜಾಟದಲ್ಲಿ ಜೀವನ ಮಾಡುತ್ತಿರುವದು. ಮೂರನೇದಾಗಿ ಊರಿನಲ್ಲಿ ವಿಶೇಷವಾಗಿ ಜನರು ಬಾಳಿಯಾಗಿರುವದು. ನಾಲ್ಕನೇದಾಗಿ ಕ್ಷಾಮ ಹಲವೋ ರುತ್ತಿರುವದರಿಂದ ಈ ಕಳ್ಳತನವು ಪ್ರಬಲ ದೆಸೆಯಲ್ಲಿರುವದೆಂದು ಧಾರಾಳವಾಗಿ ಹೇಳಬಹುದಾಗಿದೆ. ಈ ಭಯಂಕರವಾದ ಪ್ಲೇಗಿನಲ್ಲಿ ತಮ್ಮ ಪ್ರಾಣ ಬಚಾವಾದರೆ ಸಾಕೆಂದು ಹೊರಕ್ಕೆ ಹೋಗಿ ಅಲೆಯುತ್ತಿರುವ ಬಡ ಪ್ರಜೆಗಳನ್ನು ಈ ರೀತಿಯಾದ ಕಳ್ಳರ ಅವಾಂತ್ರದಿಂದ ಪಾರುಮಾಡಿ, ಆಸ್ತಿಪಾಸ್ತಿಗಳನ್ನು ಕಾಪಾಡಿಕೊಡಬೇಕಾಗಿ ದಯಾಳುಗಳಾದ ಸರ್ಕಾರದವರಿಗೆ ಬೇಡಿಕೊಳ್ಳುತ್ತೇನೆ.

ಸಕ್ಕರೇ ಪಟ್ಟಣ.—೧೪—೨೦ ದಿವಸಗಳಿಂದ ಪ್ಲೇಗ್ ಗಲಾಟೆ ನಿಂತು ಹೋಗಿದೆ. ೬—೭ ತಿಂಗಳಿಂದ ಸುತರಾಂ ಮಳೆ ಇಲ್ಲ. ಪೈರುಗಳೆಲ್ಲಾ ಒಣಗಿ ಹೋಯಿತು. ಧಾನ್ಯವಾಸಿಗಳಿಂತು ಬಹಳ ಭದ್ರವಾಗಿದೆ. ಇಲ್ಲಿ ಮಂಗಳವಾರ ಸಂತೆ ಆಗುತ್ತೆ. ಬಡವರ್ಗರಿಗೆ ದಿವಸಗಳು ಸಿಕ್ಕುವದೇ ಬಹಳ ಕಷ್ಟವಾಗಿದೆ. ರೂಪಾಯಿಗೆ ಅಕ್ಕಿ ೮—೯ ಸೇರು, ರಾಗಿ ೧೬ ಸೇರು, ಇಂಥಾ ಛಬಾವಾದ ಧಾರಣೆಯಲ್ಲಿಯೂ ಸಂತೆಗಳಲ್ಲೂ ಅಂಗಡಿಗಳಲ್ಲೂ ಕಮ್ಮಿ ಸೇರು ಪಾವು ಕಮ್ಮಿತೂಕ ಕೊಡುತ್ತಾರೆ. ಇದರಿಂದ ಬಡಜನಗಳು ಜೀವನ ಮಾಡುವದು ಬಹಳ ಪ್ರಯಾಸವಾಗಿದೆ ಪಕನಕರಗಳ ಗೋಳಂತು ಶ್ರೀಭಗವಂತನಿಗೇ ಗೊತ್ತು. ಈ ಸಕ್ಕರೇ ಪಟ್ಟಣದಲ್ಲಿ ಪ್ರತಿದಿವಸವು ರೂಪಾಯಿಗೆ ೧೦—೧೨ ಸೇರು ಭತ್ತದ ಹುಲ್ಲು ಸಿಕ್ಕುತ್ತಾ ಇತ್ತು. ಈ ವರುಷ ರೂಪಾಯಿಗೆ ೨ ಹೊರೆಗಳು ಸಿಕ್ಕುವದೇ ಬಹಳ ಪ್ರಯಾಸ ಇಂಥಾ ಸುಗ್ಗಿ ಕಾಲದಲ್ಲೇ ಹುಲ್ಲು ಕೂಡಾ ಇಷ್ಟು ದುಬಾರಿ ಧಾರಣೆಯಾದರೆ ಬಡರೈತರ ಪಾಡೇನೋ. ಪಕನಕರಗಳನ್ನು ಕಾಪಾಡುವದು ಬಹಳ ಅವಶ್ಯವಾಗಿರುತ್ತೆ.—ತಾ॥ ೧೨ನೆ ರಾತ್ರಿ ಸುಮಾರು ೧೦ ಗಂಟೆ ಸಮಯದಲ್ಲಿ ಊರು ಹೊರಗೆ ಷೆಡು ಹಾಕಿರತಕ್ಕ ಕಡೂರು ದೇವಾಮಂಡಿ ಅಬ್ದುಲ್ ಲತೀಫ್ ಸಾಹೇಬರ ೨ ಕ್ಯಾಂಪುಗಳಿಗೂ ಬೆಂಕಿಬಿದ್ದು ಸುಮಾರು ೧೯೦ ರೂಪಾಯಿನ ವರಿ ನಿಗೂ ಮಾಲ್ ನಷ್ಟವಾಯಿತು. ಒಳಗೆ ಇದ್ದ ೨ ಜನಗಳು ಈಚೆಗೆ ಬರುವದೇ ಬಹಳ ಕಷ್ಟವಾಯಿತು. ಕಳ್ಳರ ಕಾಟವಂತೂ ಹೇಳಲು ಅಸಾಧ್ಯ. ೧೫ ದಿವಸಗಳ ಮುಂದೆ ಬಾಲೀ ಆಗಿದ್ದ ಈ ಗ್ರಾಮಕ್ಕೆ ಕಳ್ಳರ ಸವಾರಿ ಚಿತ್ತೈಸಿ ೧೦—೧೨ ಮನೆಗಳ ಬಾಗಿಲಿನ ಬೀಗ ಮುರಿದು, ಮನೆಗಳಲ್ಲಿ ಜನರು ಗಾಬರಿಯಿಂದ ಬಿಟ್ಟು ಬಂದಿದ್ದ ಸಾಮಾನುಗಳನ್ನೆಲ್ಲಾ ಅಪಹರಿಸಿಕೊಂಡು ಹೋದರು. ಕಳ್ಳರು ಪತ್ತೆ ಇನ್ನೂ ಸಿಕ್ಕಿಯಿಲ್ಲ. ಪೊಲೀಸಿನವರು ಗ್ರಾಮದ ಪಟೇಲರು ಸಹ ಎಷ್ಟು ಮುತುವರ್ಜಿ ವಹಿಸಿ ಉಸ್ತುವಾರಿ ಮಾಡುತ್ತಿದ್ದರೂ ಆಗಾಗ್ಯೆ ಧರಾವೋಷೆಯಿಂದ ಕಳ್ಳತನವಾಗುತ್ತಲೇ ಇರುತ್ತದೆ. ಇಲ್ಲಿಗೆ ತಾ॥ ೧೧ ರಲ್ಲಿ ಅಂಚೆ ಇಲಾಖಾ ಇನ್ಸ್‌ಪೆಕ್ಟರವರ ಸವಾರಿ ಚಿತ್ತೈಸಿ, ಆಫೀಸ್ ಇನ್ಸ್‌ಪೆಕ್ಷನ್ ಕೆಲಸವನ್ನೆಲ್ಲಾ ಪೂರೈಸಿಕೊಂಡು ತಾ॥ ೧೩ ರಲ್ಲಿ ದೇವನೂರು ಮಾರ್ಗವಾಗಿ ಪ್ರಯಾಣ ಮಾಡಿದರು.—ಇಲ್ಲಿನ ಟ್ರಾವೆಲರ್ಸ್ ಬಂಗಲೆಯಲ್ಲಿ ನೌಕರರ ಜನ ರನ್ನ... ಎಲ್ಲರೂ ... ಕೋತ್ವಾಲ್ ದಂಡಿನವರ ... ಈ ಜನಗಳು ಬುಧವಾರ ರಾತ್ರಿ ಚಿಕ್ಕಮಗಳೂರು ಸಂತೆ ತೀರಿಸಿಕೊಂಡು ಬರುವ ಸಂತೆ ಗಾಡಿಗಳ ಮೇಲೆ ಬಹಳ ಉಸ್ತುವಾರಿ ಇರುತ್ತಾರೆ ಹರಿಕೆ ಕಾಣಿಕೆಯನ್ನು ಸಲ್ಲಿಸಿದ ಜೋರು ಮುಂದಕ್ಕೆ ಗಾಡಿಯನ್ನೇ ಬಿಡಲಾರರಂತೆ. ಈನಿಷೆಯಿಂದ ಇಂಥಾ ಮಹಾನುಭಾವರನ್ನು ಎಲ್ಲಿಗಾದರು ಬದಲಾಯಿಸಿದರೆ ಬಡಜನಗಳು ಬದುಕಿಕೊಳ್ಳುತ್ತಾರೆ ಸಂತೆ ದಿವಸವಂತು ಈ ಮಹಾನುಭಾವರಿಗೆ ಸಂತೆ ಪ್ರಾರಂಭಿಸಿದ ಲಾಗಾಯಿತು ಮುಗಿಯುವ ವರೆಗೂ ಹಸಿಗೆ ಎತ್ತುವ ಗಲಾಟೆ ಬಹಳ ಜೋರಾಗಿರುತ್ತದೆ. ಕೋತ್ವಾಲರ ಬಿಟ್ಟಿಗೆ ದಾವರೇ ಇಲ್ಲ. ಅಂತು ಕಾಣಿಕೆಕೊಟ್ಟಲ್ಲದೆ ಕಾಟ ತಪ್ಪಲಾರದೆಂಬ ಗಾದೆನೆ ನರಿಸಮಾಡುತ್ತಾರೆ.—ಇಲ್ಲಿನ ಸ್ಕೂಲನ್ನು ಊರ ಹೊರಗೆ ಷೆಡ್ಡಿನಲ್ಲಿ ಮಾಡುತ್ತಾರೆ. ಪ್ಲೇಗಿನ ಗಲಾಟೆಯಿಂದ ಬಾಲಕರ ಸಂಖ್ಯೆ ಕಮ್ಮಿಯಾಗಿರುತ್ತೆ. ಈ ವರುಷ ಇಲ್ಲಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ಕೆ. ಎಸ್. ಸೀತಾರಾಮಯ್ಯ ಎಂಬವನು ತೇರ್ಗಡೆ ಹೊಂದಿದನು —ಇಲ್ಲಿನ ಆಸ್ಪತ್ರೆ ಆ॥ ಮೆ॥ ಭಕ್ತವತ್ಸಲರು ಆಸ್ಪತ್ರೆಗೆ ದಿನವೂ ಬರುವ ರೋಗಿಗಳಿಗೆ ಬಹು ದಯಾಳುತನದಿಂದ ತಕ್ಕ ಔಷಧವನ್ನು ಕೊಟ್ಟು, ರೋಗಿಗಳನ್ನು ಗುಣಮಾಡುತ್ತಾರೆ.—ಈ ಊರು ಶ್ರೀಕಂಠನರಸಿಂಗರಾಯಸ್ವಾಮಿ ರಥೋತ್ಸವ ಜನವರಿ ತಾ॥ ೧೫ರ ಲಾಗಾಯಿತು ತಾ॥ ೨೬—೨೮ ವರೆಗೂ ನಡಿಯಿತು. ಭಕ್ತಾದಿಗಳು ಇಲ್ಲಿ ಪ್ಲೇಗ್ ಪ್ರಾರಂಭವಾದ ನಾಲ್ಕು ವರುಷದ ಲಾಗಾಯಿತು ಬರುವದಿಲ್ಲ.—ಇಲ್ಲಿಗೆ ಸಮೀಪದಲ್ಲಿರುವ ಪಿಳ್ಳೆನಹಳ್ಳಿ ಎಂಬ ಗ್ರಾಮದಲ್ಲಿ ತಾ॥ ೧೨ನೆ ಹಗಲು ೩ ಗಂಟೆ ಸಮಯದಲ್ಲಿ ದಕ್ಷಿಣ ಕನ್ನಡಾ ಜಿಲ್ಲಾ ಒಬ್ಬ ಕಳ್ಳನು ಒಂದು ಮನೆಗೆ ನುಗ್ಗಿ ಒಳಗೆ ಸೇರಿಕೊಂಡು ಅವನನ್ನು ಹಿಡಿಯುವದಕ್ಕೆ ಹೋಗಿದ್ದ ೨೦೦—೩೦೦ ಜನಗಳ ಪೈಕಿ ೩೦ ಜನಗಳಿಗೆ ಘೋರಗಾಯಮಾಡಿರುತ್ತಾನೆ. ಕೊನೆಗೆ ಪೊಲೀಸಿನವರ ಸ್ವಾಧೀನವಾದನು. ಈ ಊರು ಪೊಲೀಸ್ ರಾಣಿಗೆ ತಂದಿದ್ದು, ತಾ॥ ೧೬ ರಲ್ಲಿ ತಾಲ್ಲೋಕ್ ಪೊಲೀಸ್ ಆಫೀಸಿಗೆ ವಿಚಾರಣೆಗೆ ಕಳುಹಿಸಿಕೊಟ್ಟರು.

ಜ್ವರಹರಿ. 11



ಇದು ಸಾಧಾರಣ ಜ್ವರ, ಚಳೇಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮಿಲ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ೬ ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಪೇಡಾಕರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈಶ್ಯಕಾರರ ಕಡೆಯಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ.—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೆಂಚ್ ಜೀಜ್ ಲೈನ್, ಮದರಾಸ್.

ಶರೀರಸುಖಕ್ಕೆ ಒಂದು ಸುಲಭ ಉಪಾಯವು.

ಅಂದರೆ . 12

ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ ಈ ರಕ್ತದ ಕ್ರಿಯೆಗೆ ವಿದ್ಯುಲ್ಲತೆಯು (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ ಅನೇಕ ಧಾತುಗಳ ಸಮ್ಮೇಳನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು —ಅಶಕ್ತಿ, ಅಜೀರ್ಣ, ಕೈಕಾಲುಹರಡ, ಸಂಧಿವಾತ, ಕಟವಾತ, ತಲೇನೋವು, ಅರತಲೇನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ಕಜ್ಜಿ, ಗಡಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಣಂತಿ ರೋಗ, ತಲೆತಿರುಗುವಿಕೆ, ಅಪಸ್ಮಾರ, ಅರ್ಧಾಂಗ ವಾಯು, ತಿಳಿಯದೆ ಆಗುವ ಧಾತುನಷ್ಟವು, ಸ್ಮರಣಶಕ್ತಿಯು ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ —ಪದಕವು ಎದೆಯ ಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವದು ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು ಕ್ರಯ ಪ್ರತಿ ೧ ಪದಕಕ್ಕೆ ೧—೨—೦. ಪ್ರತಿ ಒಂದು ಉಂಗುರಕ್ಕೆ ಕ್ರಯ ೦—೨—೦. ಪೋಸ್ಟ್ ಖರ್ಚು ೪ ಆಣೆ ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗವನ್ನೂ, ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನೂ ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ —ಉಂಗುರ ತೆಗೆಯುವಾಗ ಬೆರಳಿನ ಅಳತೆ ಕಳುಹಿಸಬೇಕು. ಉಪಹತಿಯು ಗುಣಹೊಂದಿದ ನಂತರ ಮುಂದೆ ೧ ಯಾ ೨ ತಿಂಗಳು ವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ ವೈಲಕ್ಷಣ್ಯ ಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು ೬ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವ್ಹಿ. ಪಿ ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ
Post Bilgi, North Kanara District.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

12

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೋಮೋಸಿಯಾ.

ತಕ್ಷಣ ಪರಿಹಾರ



ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಕ್ವಾಪಿಯೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ದೇಹರಕ್ಷಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ಈ ರೂ. ೨—೮ ಆ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ ಸರ್ಟಿಫಿಕೇಟುಗಳೂ ಉಳ್ಳ ಕೋಟುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ —ಹೋಮೋಸಿಯಾ ಕಂಪೆನಿ. ೨೬ ಸೆಕೆಂಡ್ ಬೀಚ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

30—12—1904 ರಿಂದ 6—1—1905 ರ ವರೆಗೆ

ಸ್ಥಳ.	ಪ್ಲೇಗ್ ಹಗಲಿ ಪ್ರ	ಪ್ಲೇಗ್ ಸತ್ತ ಪ್ರ.	ಹೋದವಾರ ಸಂಖ್ಯೆ	
ಬೆಂಗಳೂರು ಪಟ್ಟಣ	26	28	105	6
ಮೈಸೂರು ,,	11	14	44	4
ಬೆಂಗಳೂರು ಡಿಸ್ಟ್ರಿಕ್ಟು	74	60	92	6
ಮೈಸೂರು ,,	74	69	155	1
ಕೋಲಾರ್ ,,	25	17	98	5
ಕೋಲಾರ್ ಚಿನ್ನದ ಗಣಿಗಳು	6	3	13	9
ತುಂಕೂರು ಡಿಸ್ಟ್ರಿಕ್ಟು	47	40	24	1
ಹಾಸನ ,,	6	6	50	1
ಚಿತ್ರದುರ್ಗ ,,	7	3	44	3
ಕಡೂರ್ ,,	1	1	18	1
ಶಿವಮೊಗ್ಗ ,,	24	19	65	4
ಜುಮ್ಲಾ.	310	254	693	53

ಕಾಲೀವಾಹನ ಶಕ ೧೮೨೭ ನೇ ಕ್ರೋಧಿನಾಮ ಸಂವತ್ಸರ ಪುಷ್ಯ ಬಹುಳ ದ್ವಿತೀಯ ಗುರುವಾರದಿಂದ ಪುಷ್ಯ ಬಹುಳ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಜನವರಿ, ಮತ್ತು ಫೆಬ್ರವರಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ತೆ...
26	ಗುರು *	ತ್ರಿತೀ	11 58	ಪ	31 18	14
27	ಶುಕ್ರ	ಸಪ್ತಮಿ	39 16	ಚಿತ್ತ	30 12	15
28	ಶನಿವಾ ;	ಅಷ್ಟಮಿ	31 10	ಸ್ವಾತಿ	27 10	16
29	ರವಿವಾ ,,	ನವಮಿ	29 29	ವಿ	23 51	17
30	ಚಂದ್ರ ‡	ದಶಮಿ	25 35	ಅ	21 52	18
31	ಕುಜ ¶	ಏಕಾದಶಿ	22 32	ಜೇ	20 20	19
1	ಬುಧ	ದ್ವಾದಶಿ	20 35	ಮೂ	20 10	20

* ದಗ್ಧಯೋಗ ; ಅಮೃತಯೋಗ ,, ಉತ್ಪಾತಯೋಗ
‡ ಮಹಾವ್ಯತಿಪಾತ ¶ ಸರ್ವತ್ರೈಕಾದಶಿ ಪ್ರದೋಷ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಕಣ್ಣೇ ಅಕ್ಕಿ ಪಲ್ಲ ೧ಕ್ಕೆ ರೂ.	೧೦-೪-೦	೧೧-೮-[illegible]
ಕೆಂಬೂತಿ ಅಕ್ಕಿ ಅವಲ್	೧೦-೨-೦	೧೧-೦-[illegible]
,, ಮಾಯಂ	೯-೮-೦	೧೦-೮-[illegible]
ಬಾಪಾತ್ರಿ ಅಕ್ಕಿ	೯-೪-೦	೧೨-೮-[illegible]
ಸಣ್ಣಕ್ಕಿ ಅವಲ	೧೨ ೮-೦	೧೨-೮-[illegible]
,, ಮಾಯಂ	೧೧ ೮-೦	೧೨-೦-[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	೧೧-೮-೦	೧೦-೮-[illegible]
,, ಮಾಯಂ	೧೧-೦-೦	೧೦-೦-[illegible]
ಹೈಕ ರಾಗಿ ಪಲ್ಲ ೧ಕ್ಕೆ	೪ ೬-೦	೫-೮-[illegible]
ಕಾರಾಗಿ	೪-೧೨-೦	೫-೨-[illegible]
ಜೋಳ	೪-೪-೦	೭-೦-[illegible]
ಕಲಸಂದೆ ಪಲ್ಲ ೧ಕ್ಕೆ	೮-೧೨-೦	೮-೦-[illegible]
ಬಿಳೇ ಅವರೆ	೯ ೦-೦	೭-೦-[illegible]
ಹೆಸರು	೯-೮-೦	೯-೦-[illegible]
ಉದ್ದು	೮ ೧೪-೦	೯-೮-[illegible]
ಕಡಲೆ	೧೦ ೦-೦	೭-೦-[illegible]
ಎಳ್ಳು	೧೨ ೮ ೦	೧೦-೧೨-[illegible]
ಹುರುಳಿ	೫-೧೨ ೦	೬-೧೫-[illegible]
ಹರಳು ೧೨೩ ಸೇರಿಗೆ	೯-೮-೧	೬-೪-೮
ಸೀಗೇಕಾಯಿ ಮಣ ೧ಕ್ಕೆ	೨-೪-೦	೧-೧೨-[illegible]
ಮೆಣಸಿನಕಾಯಿ	೪-೨-೦	೩-[illegible]
,, ಮಾಯಂ	೩-೧೨-೦	೨-೮-[illegible]
ಬೆಲ್ಲ ದೊಡ್ಡ ಅಚ್ಚು	೩-೪-೦	ಮು ೧ ೧೧-[illegible]
ಒಳ್ಳೆಣ್ಣೆ ಮಣ ೧ಕ್ಕೆ	೪-೦ ೦	೩-೧೨-[illegible]
ಹರಳೆಣ್ಣೆ ,,	೩-೧೨-೦	೩-೮-[illegible]
ಕೊತ್ತಂಬರಿ ಪಲ್ಲ ೧ಕ್ಕೆ	೫-೧೪-೦	೫-೧೪-[illegible]
ಉಪ್ಪು ,,	೯-೦-೦	೮-೫-೪
ಹುಣಸೇ ಹಣ್ಣು	೧ ೪-೦	೨-೧೪-[illegible]
,, ಹಳೇದು	೦-೧೪-೦	೦-೧೨-[illegible]
ಹುಪ್ಪ	೧೨-೦-೦	೧೦-೮-[illegible]
ಸೀಮೆಯಂಕ ಚಿಪ್ಪು ೧ಕ್ಕೆ	೫-೩-೦	೪-೨-[illegible]
ತೆಂಗಿನಕಾಯಿ ೧೦೦ ಕ್ಕೆ	೫-೦-೦	೩-೮-[illegible]
ಅಳಲೇಕಾಯಿ ಮಣ ೧ಕ್ಕೆ	೧-೦-೦	೦-[illegible]
ಅಂಟ್ವಾಳಕಾಯಿ ಮಣ ೧ಕ್ಕೆ	೦-೧೪-೦	೦-೧೦-[illegible]
ಹತ್ತಿ (ಪ್ಪ) ಕಂಡು	೧೫-೮-೦	೧೫-೩-[illegible]
,, ,, ಹಸಿವು	೧೫-೧೦-೦	೧೫-೯-[illegible]
,, ,, ಗಟ್ಟಿ ತೊಲ ೧ಕ್ಕೆ	೨೬-೦-೦	೨೪-೩-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩೨-೦-೦	೩೬-೧೨-[illegible]

Printed and Published by the Rev. W. B. Threlfall the Proprietor and Manager, Wesleyan Mission Press, Mysore 26/1/1905

ವೃತ್ತಾಂತ ಪತ್ರಿಕೆ.

REGISTERED M 20.

ಯ ೧ ಮ ಷ್ಟ ಕ್ರ ಯ ೧ ಮ ಷ್ಟ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ ಮೈಸೂರು—ಸನ್ ೧೯೦೫ ನೇ ಇಸವಿ ಫೆಬ್ರುವರಿ ತಾರೀಖು ೨ ನೇ ಗುರುವಾರ. ಸಂಚಿಕೆ ೩೫

ಹಿಪೋ ಗೊತ್ತೇ ಇಲ್ಲವೇ!

...ಗೆ ಸಿದ್ಧವಾಗಿವೆ. ಎಲ್ಲರಿಗೂ ಬೇಕಾದದ್ದು.

7

ವಿಶೇಷ ರೂಪಿಗೆ ಬಂದಿರುವ ೧೯೦೫ ನೇ ಇಸವಿ ಪಂಚಾಂಗ ...ವಾದ ಎಸ್. ಜಿ. ಎಸ್. ಪಾಕೆಟ್ ಡೈರಿಗಳು ...ತ್ರ ವರ್ತಕರು, ಕಂಟ್ರ್ಯಾಕ್ಟದಾರರು, ದೊಡ್ಡ ಮನು...ಷ್ಯರು, ಲಾಯರು ವಗೈರೆ ಸಮಸ್ತರಿಗೂ ಅತ್ಯಂತ ಉಪಯೋಗಿ... ಅನೇಕ ವಿಷಯ ಗರ್ಭಿತವಾಗಿಯೂ ಪ್ರತಿಪುಟಕ್ಕೂ ರೂಲು ... ಸೊಗಸಾಗಿ ಬೈಂಡು ಮಾಡಲ್ಪಟ್ಟು ಎಲ್ಲರಿಗೂ ಸಾಧ್ಯವಾಗಿ... ಬಹಳ ಕಮ್ಮಿ ಕ್ರಯಕ್ಕೆ ಬಿಕರಿಯಾಗುತ್ತಿವೆ ತರಿಸಿ ...ದಲ್ಲಿ ಮಾಯವಾಗುತ್ತೆ.

ಎ ನಂಬರ್ ಬಿ ನಂ॥

...ಗ್ಲ ೫ ಅಂಗ್ಲದ ಚಿಕ್ಕ ...ಡೈರಿಗೆ ೦—೩—೦ | ಮುಚ್ಚಳ ಹಾಕಿ ಪೆನಸಲ್ ಇಟ್ಟಿರುವ ಪಾಕೆಟ್ ಡೈರಿಗೆ ೦—೫—೦

ಒಂದೆ ನಂಬರು ೧೨ ಕಾಪಿ ಒಟ್ಟಾಗಿ ತರಿಸುವವರಿಗೆ ಪೋಸ್ಟು ...ರ್ ಕಮ್ಮಿ ಬೀಳುವುದಲ್ಲದೆ ಅದೇ ನಂಬರು ೧ ಡೈರಿ ಮುಫ...ತಾಗಿ ಕಳುಹಿಸುವೆವು.

...—ಎಂ. ಪಿ. ಮಲ್ಲಯ್ಯ, ಕರ್ನಾಟಕ ಬುಕ್ ಡಿಪೋ, ೨೧೧, ತಾಲ್ಲೂಕು ಕಚೇರಿ ರೋಡು, ಬೆಂಗಳೂರು ಸಿಟಿ.

P. SUBBAROY'S
World Renowned and most Efficacious Ayurvedic Medicines.

ಪಿ. ಸುಬ್ಬರಾಯಿಯವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

15

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ...ದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಆಕ್ಷೇಪಣೆಯಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ಒರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿ...ಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆ...ಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ...ಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ—...ರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೬ ...ಗೆ ವಿ. ಪಿ. ಛಾಂಗಿ ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದ...ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾದಾನಿ.

...ಳಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿ...ದರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತ... ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

...ನಿಮ್ಮ ಈ ಮಾತ್ರೆಗಳು ಸಂಪೂರ್ಣತೃಪ್ತವಾಗಿರುತ್ತವೆ; ಅದ...ು ಜನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ...ಸ್ ಇನ್ಸ್‌ಪೆಕ್ಟರ್.

...ತಿಳಿದ ಜನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರನೇ...ರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—...ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕೈಲಾರ್.

Apply to.—P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಇದು ಗುಣಕಾರಿ.

50

ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಕೊಳ್ಳೇಗಾಲ ಮತ್ತು ರಾಮಾಪುರ. ಇವರ

೧. ಪ್ಲೇಗು ಪರಾಜ್ಞೌಷಧ.—ಈ ಪರಿಯಂತರ ಪ್ರತಿಯೊಬ್ಬ ಪ್ಲೇಗು ರೋಗಿಗೂ ಈ ಔಷಧಿಯಿಂದ ಗುಣವಾಗಿದೆ. ಧನಾರ್ಜನೆಗಾಗಿ ಪತ್ರಿಕಾಲಂಕಾರವಾಗಿಸಿಲ್ಲ. ಲೋಕೋಪಕಾರದಿಂದ ಕೀರ್ತಿಯು ಶರೀರವನ್ನಪೇಕ್ಷಿಸಿ, ಬಹು ಧನವ್ಯಯದಿಂದ ಕಂಡುಹಿಡಿಯಲ್ಪಟ್ಟಿತು. ಕೇವಲಾನುಭವದಿಂದ ಸಂಪಾದಿಸಿದೌಷಧಿ. ಗೆಡ್ಡೆಗೆ ಸವರುವ ಔಷಧಿ ಮತ್ತು ಸೇವಿಸುವ ಔಷಧಿ ಸಹಾ—೬ ಜನಕ್ಕೆ ಸಾಕಾಗುವಷ್ಟಕ್ಕೆ ಕ್ರಯ ೫ ರೂ ಒಬ್ಬರಿಗಾದರೆ ೧॥ ರೂ. ವಿ. ಪಿ. ಚಾರ್ಜು ಬೇರೆ.

೨. ಕಸ್ತೂರೀ ಮಾತ್ರೆಗಳು:—ಮಕ್ಕಳ ಎಳವು, ಜ್ವರಾದಿಗಳು, ಹೆಂಗಸರ ಮುಟ್ಟುಕಟ್ಟು, ಗರ್ಭಸ್ರಾವಾದಿಗಳು, ಎಲ್ಲ ಜ್ವರ, ವಾತ, ಮೈಕೈ ನೋವು, ಜ್ವರದಗೆಡ್ಡೆ ಮೊದಲಾದ ೨೦ ರೋಗಗಳು ಗುಣವಾಗುತ್ತೆ. ಅನುಪಾನ ಪತ್ರದಲ್ಲಿ ಎಲ್ಲಾ ಕಾಣಿಸಿರುತ್ತೆ. ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ೧ ರಿಂದ ೬ ರ ವರಿಗೆ ಛಾಂಗಿಛಾರ್ಜು ೫ ಆಣೆ ೬ ಸೀಸೆಗೆ ೧ ಸೀಸೆ ಹೆಚ್ಚು ಕೊಡುವೆವು.

೩. ಬಾಧಾಪಹಾರಿಣಿ—ಎಲ್ಲಾ ಬಗೆ ತಲೆನೋವು, ವಾಯುಗಳು, ಉಳುಕು, ಛಳುಕು, ಕೂಡ ಒಡನೇ ಗುಣವಾಗುತ್ತದೆ. ಡಬ್ಬಿಗೆ ಕ್ರಯ ೮ ಆಣೆ ೬ ಡಬ್ಬಿಗೆ ೧ ಡಬ್ಬಿ ಹೆಚ್ಚು ದೊರೆಯುತ್ತೆ.

೪. ದಂತಸಿತಚೂರ್ಣ—ಉಜ್ಜುತ್ತಾ ಬಂದರೆ ಹಲ್ಲಿನ ಪಾಚಿ, ರಕ್ತಸೋರುವುದು, ಬಾಯಿನಾತ, ಎಲ್ಲಾ ಬಗೆಯ ಹಲ್ಲುನೋವೂ ಹೋಗುತ್ತದೆ. ಡಬ್ಬಿಗೆ ೪ ಆಣೆ; ೪ ಡಬ್ಬಿಗೆ ೧ ಹೆಚ್ಚು.

ಏಜಂಟರು—೧. ಕೆ. ಎಸ್. ಕೃಷ್ಣಶಾಸ್ತ್ರಿಗಳು, ಹಳ್ಳದಬೀದಿ, ಮೈಸೂರು. ಅಥವಾ,

೨. ಹೆಚ್. ಎಸ್. ರಾವ್ ಅಂಡ್ ಬ್ರದರ್ಸ್, ಬೆಂಗಳೂರು ಸಿಟಿ.

ಸನ್ ೧೯೦೫ನೇ ಇಸವಿಯ

6

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ ಡೈರಿ

ಎನಂಬರ ಬಿನಂ॥ ಸಿನಂ॥ ಡಿನಂ॥

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರ್ಯಾಕ್ಟರು, ದೊಡ್ಡಮನುಷ್ಯರು, ಬುಕ್‌ಬಾಕ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ವೃಕ್ಷಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲ, ದಿನಸಂಬಳದಪಟ್ಟಿ, ಬೋಬಿಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಲ್ಲದೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕ್ಷೇಮ ಪಾವರ್ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ

ಎ. ನಂಬರ್ ಚಿಕ್ಕದ್ದು ೩ ಆಣೆ ಸಿ. ನಂಬರ್ ದೊಡ್ಡದ್ದು ೬ ಆ.
ಎಫ್ ,, ,, ೪ ಎಚ್ ,, ,, ೭ ,,
ಬಿ. ಮುಚ್ಚಳದ್ದು ,, ೫ ಡಿ. ಮುಚ್ಚಳದ್ದು ,, ೮ ,,

ಪೋಸ್ಟು ಚಾರ್ಜು ಬೇರೆ. ಒಂದೇ ನಮೂನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಪ್ರಪಂಚದಲ್ಲಿ ದೊಡ್ಡದು ಯಾವದು?

9

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ:—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪	"ರೋಮನರ ಚರಿತ್ರೆ"	ಕ್ರಯ ೦—೨—೦
೫.	"ಗ್ರೀಕರ ಚರಿತ್ರೆ."	,, ೦—೨—೦
೬.	"ಅನುಭವಾನಂದ.",,	೦—೬—೦
೭.	"ಗಣಿತ ಸಂಜೀವಿನಿ."	೧—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ."	೦—೧೨—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೨—೦
೧೧	"೧೯೦೫ನೇ ವರುಷದ ಡೈರಿಗಳು."	

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಶ್ರೀ ತಾಂಬೂಲ.

12

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲ

ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಟವರ್, ಯಂ. ಗೋವಿಂದಶೆಟ್ಟಿ,
ಬೆಂಗಳೂರು ಸಿಟಿ.

ಸವಿಸುದಿ.

ಕನ್ನಡದಲ್ಲಿ ಇದೊಂದು ಹೊಸ ಪುಸ್ತಕವೆ.

ಕ್ರಯವಿಲ್ಲದೆ ದೊರೆವುದು.

ಕ್ಷಣವೇ ಯಾಗಸವಾಯವನ್ನು ಒತಲೀಸದೆ ಒಂದು ಸಲ ಓದಿನೋಡಿ.

ಒಹುತ ಒದುಕ ದೇಶಾಭಾಷಾಜ್ಞತೆ, ಲೋಕವ್ಯವಹಾರಾನುಭವ, ಜ್ಞಾನಾಭಿವೃದ್ಧಿಗಳು ಒಂದಕ್ಕೊಂದು ಹೆಚ್ಚುವುದೇ ಮುಖ್ಯವಾದ ಫಲವು ತಮ್ಮ ತಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬೇಗ ಬೇಗ ಬರೆಯಿರಿ ವಿಳಾಸ —ಭಾರತಿಸಂಘಂಗಿರಾವು, ಚಿಕ್ಕ ಸೇಟೆ, ಬೆಂಗಳೂರು ಸಿಟಿ.

೧೯೦೪ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

6

ಸಿದ್ಧವಾಗಿದೆ. ಡಿಸ್ಕೌಂಟು —೧೦ಕ್ಕೆ ೧. ೫೦ಕ್ಕೆ ೭. ೧೦೦ಕ್ಕೆ ೨೦. ಪ್ರಶ್ನೋತ್ತರಸಹಿತ. ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷಿಗಳಿಗೆ ತಕ್ಷಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಏರ್ಪಾಡುಮಾಡಿದೆ.

ಬಾಲಬೋಧದ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೭ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು ಕ್ರಯ—೧ ಆಣೆ. ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈಚೆಗೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನು ಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧॥ ಆಣೆ

ವಿಳಾಸ.—ಮೈಸೂರಲ್ಲಿ ದಿ. ಜನರಲ್ ಏಜನ್ಸಿ, ಸಿ. ಎಲ್. ಎಸ್. ಬುಕ್ ಡಿಪೊ, ಕೆ ನರಸಿಂಹಯ್ಯ ಅಂಡ್ ಕೋ, ಬೆಂಗಳೂರಲ್ಲಿ ಜೆ. ಗಣಪ್ಪ ಅಂಡ್ ಕೋ

ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

ಹಾಸನದ ಸಬ್ ಜಡ್ಜರವರ ಕೋರ್ಟಿನಲ್ಲಿ.

೧೯೦೪—೦೫ನೇ ಇಸವಿ ಅಸಲ್ ನಂಬರು ೨೧೫.

ವಾದಿ	ಪ್ರತಿವಾದಿಗಳು :
ಹಾಸನದಲ್ಲಿರು ಗುಂಡ ಶೆಟ್ಟಿ.	ಮೈಲಾರೈಯ್ಯ ವಗ್ಯೆರೆ ೫೦ ಜನಗಳು

ಹಾಸನದ ತಾಲ್ಲೂಕು ಜೈಲಹಳ್ಳಿ ಹೋಬಳಿ ಜೋಡಿ ಹಂದಿನ ಕೆರೆ ವೃತ್ತಿಗಳ ಅಧಿಕಾರದ ಮೇಲೆ ನೂರು ಸಾವಿರ ರೂಪಾಯಿ ಬರಮಾಡಿಕೊಳ್ಳಲು ವಾದಿಯು ದಾವಾತಂದಿರುವದರಿಂದ ಸದರಿ ವೃತ್ತಿಗೆ ಸಂಬಂಧಪಟ್ಟವರು ಯಾರಾದರೂ ಇದ್ದರೆ ಅಂಥಾವರು ಖುದ್ದಾಗಿಯಾಗಲಿ ಅಥವಾ ಲಾಯರ ಮೂಲಕವಾಗಲಿ ೧೯೦೫ನೆ ಇಸವಿ ಫೆಬ್ರುವರಿ ತಾರೀಖು ೨೩ನೇ ದಿವಿ ೧೧ ಗಂಟೆಗೆ ಹಾಸನ ಮೊಕ್ಕಾಂ ಈ ಕೋರ್ಟಿನ ರೂಬರೂ ಹಾಜರಾಗತಕ್ಕದ್ದು.

ಟ ತಾರೀಖು ೨೩ ನೆ ಜನವರಿ ೧೯೦೫ನೆ ಇಸವಿ

C B Seshagiri Rao,
ಸಬಾರ್ಡಿನೇಟ್ ಜಡ್ಜ್.

ಸುಲಭಕ್ರಯ : ಸುಗಂಧದ್ರವ್ಯಗಳು.

10

ಅಂಬರ್ ಕಡ್ಡಿ ಸೇರು ೧ಕ್ಕೆ	೫—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೮—೦
ಪುನುಗು ಕಡ್ಡಿ ,, ೧ಕ್ಕೆ	೨—೦—೦
ಮುಸಾಲಾ ಕಡ್ಡಿ ,, ೧ಕ್ಕೆ ..	೦—೧೨—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಅಷ್ಟ ಗಂಧ ತೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ ಡಬ್ಬಿ ೧ಕ್ಕೆ ..	೦—೪—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ .. .	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ತಂಬಾಕ್ ಷೋಕ್ ಡಬ್ಬಿ ೧ಕ್ಕೆ ..	೦—೨—೦
ಶೈವವೈಷ್ಣವ ಶಾಸ್ತ್ರೀಯ ದಶಾಂಗ ಸೇರು ೧ಕ್ಕೆ	೩—೧೨—೦
ಪಿಶ್ನಾ ತೋಲ ೧ಕ್ಕೆ	೨—೦—೦
ಡಿಟೊ .. .	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ —ಟಿ ಎಲ್ ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು.



4

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ಬಹಳ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಆದರಿಯಂತ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ; ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಹಿಡಿದಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೀನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವುಂಟ್ ರೋಡ್,
ಮದರಾಸ್.

ಜರೂರಾಗಿ ಬೇಕಾಗಿದೆ.

೧೦೦ ಜನ ಏಜಂಟರು. ತಲಬು ಮಾಹೆಯಾನ ೨೦ ರೂಪಾಯಿಲಾಗಾಯಿತು ೪೦ ರೂಪಾಯಿ ವರಿಗೆ ಕೊಡಲ್ಪಡುತ್ತೆ. ಅಪೇಕ್ಷೆಯುಳ್ಳವರು ಅರ್ಥಾಣೆ ಸ್ಟಾಂಪುವಿಟ್ಟು ಅರ್ಜಿ ಬರೆದುಕೊಳ್ಳತಕ್ಕದ್ದು

ವಿಳಾಸ —ಕಂಟ್ರೋಲರ್, ಯೂನಿವರ್ಸಲ್ ಪ್ರಾವಿಡೆಂಟ್ ಸಂಘ, ಬಸವಾಪುರ, ಬೆಂಗಳೂರು ಸಿಟಿ.

೧೯೦೫ನೆ ಇಸವಿ ಮೆಟ್ರಿಕ್ಯುಲೇಷನ್ ಕನ್ನಡ ಟೆಕ್ಸ್ಟಿನ ನೋಟ್ಸು.

ಕ್ರಯ, ೧ ರೂಪಾಯಿ. ಡಿಸ್ಕೌಂಟು ೧೦ಕ್ಕೆ ೧.

ಉಪೇಕ್ಷೆಮಾಡತಕ್ಕ ನೋಟ್ಸು ಅಲ್ಲ. ಪ್ರಶ್ನೋತ್ತರಗಳೊಡನೆ ರಚಿಸಿದೆ. ಫೆಬ್ರುವರಿ ೧೫ಕ್ಕೆ ಖಂಡಿತ ಸಿದ್ಧವಾಗುತ್ತೆ.

N R Venkata Subbacharya,
Subódha Granthalaya, Mysore.

WESLEYAN MISSION PRESS, MYSORE.
ಮೈಸೂರು ವೆಸ್ಲೀಯನ್ ಮಿಷನ್ ಪ್ರೆಸ್.

3

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂಲೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಸು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೫ ನೇ ಇಸವಿ ಫೆಬ್ರುವರಿ ತಾ॥ ೨ ನೇ ಗುರುವಾರ.

ರಷ್ಯಾ ಪ್ರಜೆಗಳು ದಂಗೆಯೆದ್ದಿರುವರೋ?

ರಷ್ಯಾ ರಾಜ್ಯದಲ್ಲಿ ಪ್ರಜೆಗಳ ದಾಂಧಳೆಯು ಇನ್ನೂ ಶಮನವಾಗಲಿಲ್ಲ. ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಪೋಲೀಸಿನವರೂ ಸೈನಿಕರೂ ಸಾಹಸಪಟ್ಟು ಬಹು ಜನರನ್ನು ದಸ್ತಗಿರಿ ಮಾಡಿ, ಪ್ರಜಾ ನೆಮ್ಮದಿಯನ್ನು ಕಾಪಾಡಿಕೊಂಡರು. ಮಾಸ್ಕೋ ನಗರದಲ್ಲೂ ಎಲ್ಲಾ ಸಮಾಧಾನವಾಗಿದೆ ಎಂದೂ ಜನರು ತಮ್ಮ ತಮ್ಮ ಕೆಲಸದ ಮೇಲೆ ಹೋಗುತ್ತಿದಾರೆಂದೂ ತಿಳಿಯುವುದು. ಆದರೆ ವಾರ್ಸಾ, ಲಾಡ್ಜ್, ಲೀಬೋ ಮೊದಲಾದ ಪಟ್ಟಣಗಳಲ್ಲಿ ಲಕ್ಷಾಂತರ ಪ್ರಜೆಗಳು ದಂಗೆಯೆದ್ದು ಬಹಳ ಹಾವಳಿಯನ್ನು ಮಾಡುತ್ತಿದಾರೆ ಕಾರ್ಖಾನೆಗಳಲ್ಲಿ ಕೆಲಸಗಳು ನಿಂತುಹೋಗಿವೆ. ವರ್ತಮಾನ ಪತ್ರಿಕೆಗಳು ಪ್ರಕಟವಾಗುವುದಿಲ್ಲ. ಆಮದು ರಫ್ತು ನಿಂತುಹೋಯಿತು. ಇಂಗ್ಲಿಷರು ದ್ರವ್ಯಸಹಾಯ ಮಾಡಿದ್ದರಿಂದಲೂ ಜಪಾನ್‌ನವರು ಚಿತಾವಣೆ ಕೊಟ್ಟದ್ದರಿಂದಲೂ ರಷ್ಯಾದಲ್ಲಿ ಪ್ರಜೆಗಳು ಈ ರೀತಿ ದಂಗೆಯೆದ್ದಿದಾರೆಂದು ರಷ್ಯಾ ಅಧಿಕಾರಿಗಳು ನೋಟೀಸುಗಳನ್ನು ಬೀದಿ ಬೀದಿಗಳಲ್ಲಿ ಅಂಟಿಸಿದ್ದಾರೆ. ರಷ್ಯಾದಲ್ಲಿರುವ ಇಂಗ್ಲಿಷ್ ರಾಯಭಾರಿಯಾದ ಸರ್ ಚಾರ್ಲಸ್ ಹಾರ್ಡಿಂಜ್ ಯವರು ಪ್ರತಿಭಟಿಸಿ, ಆ ನೋಟೀಸುಗಳನ್ನು ಕಿತ್ತುಹಾಕಬೇಕೆಂತಲೂ ಅದರಲ್ಲಿ ಪ್ರಕಟಿಸಿರುವ ಸಂಗತಿ ನಿಜವಲ್ಲವೆಂತಲೂ ನಿಷ್ಟುರದಿಂದ ರಷ್ಯಾ ಗವರ್ನಮೆಂಟಿಗೆ ಕಾಗದಗಳನ್ನು ಬರೆದಿರುವರು. ತಮ್ಮ ರಾಜ್ಯವನ್ನು ತಾವು ತಹಬಂದಿಯಲ್ಲಿಟ್ಟುಕೊಳ್ಳಲಾರದೆ ಪರರಾಜ್ಯಗಳವರ ಮೇಲೆ ಆಕ್ಷೇಪಣೆಮಾಡಿ ದುರಪವಾದಗಳನ್ನು ಹೊರಿಸುವುದನ್ನು ನೋಡಿ, ಯಾರೂ ಆಶ್ಚರ್ಯಪಡದಿರಲಾರರು. "ಎಳೆಯಲಾರದ ಎತ್ತು ಮೊಳದ ಮೇಲೆ ಬಿದ್ದಿತು" ಎಂಬ ಗಾದೆಯು ಈಗ ರಷ್ಯಾದವರಿಗೆ ಸಾರ್ಥವಾಯಿತು ಸೈನ್ಯದ ಮುದ್ದೇದಾರರು—ಈ ನೋಟೀಸುಗಳನ್ನು ದಂಗೆ ಶಮನವಾಗಲೆಂದು ಪ್ರಕಟಿಸಿದರೆಂತಲೂ ಇನ್ನೆರಡು ಮೂರು ದಿನಗಳೊಳಗಾಗಿ ಅವನ್ನು ತೆಗೆದುಹಾಕುತ್ತೇವೆಂತಲೂ ಇಂಗ್ಲಿಷ್ ರಾಯಭಾರಿ ಸಂಗಡ ಹೇಳಿದಾರೆ.

ರಾಜಧಾನಿಯಲ್ಲಿ ನೆಮ್ಮದಿಯು ಯಥಾಪ್ರಕಾರ ನೆಲೆಗೊಂಡದ್ದರಿಂದ ಮ್ಯುನಿಸಿಪಾಲಿಟಿಯವರು ಈ ಕಷ್ಟಕ್ಕೆ ಸಿಕ್ಕಿರುವ ಪ್ರಜೆಗಳಿಗೋಸ್ಕರ ೮೦ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಈ ದಂಗೆಯ ದೆಸೆಯಿಂದ ೨,೦೦೦ ಪ್ರಜೆಗಳು ಹತರಾದರು; ೫,೦೦೦ ಮಂದಿ ಗಾಯಪಟ್ಟರು; ಹೆಂಗಸರು ಮಕ್ಕಳು ನೂರಾರು ಮಂದಿ ಸತ್ತರು ಎಂದು ಹೇಳುತ್ತಾರೆ. ಸರ್ಕಾರದವರು ಕಳೆದ ಬುಧವಾರದ ತನಕ ೫,೦೦೦ ಜನರನ್ನು ದಸ್ತಗಿರಿ ಮಾಡಿದರು. ಈ ಪೈಕಿ ಲಾಯರುಗಳೇ ೧೦೦ ಮಂದಿಗಿಂತಲೂ ಹೆಚ್ಚಾಗಿದಾರೆ. ಇವರನ್ನೆಲ್ಲಾ ಗಡೀಪಾರು ಮಾಡಿ, ಸೈಬೀರಿಯಾಕ್ಕೆ ಸಾಗಿಸುವರೆಂದು ವರ್ತಮಾನವಿದೆ.

ಸ್ವದೇಶದ ವೃತ್ತಾಂತಗಳು.

ಕಾಶೀ ಮಹಾರಾಜರವರು ಮುಂದಿನ ತಿಂಗಳಲ್ಲಿ ಮೈಸೂರಿಗೆ ದಯಮಾಡುವವರಾಗಿದಾರೆಂದು ವರ್ತಮಾನವಿದೆ.

✱✱✱✱

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದ ಮೆ॥ ಆರ್. ರಘುನಾಥರಾಯರನ್ನು ಚಿತ್ರದುರ್ಗದ ಹೈಸ್ಕೂಲ್ ಹೆಡ್ ಮಾಸ್ಟರ್ ಕೆಲಸಕ್ಕೆ ವರ್ಗಮಾಡಿದಾರೆ.

✱✱✱✱

ರಾಜಧಾನಿಯಲ್ಲಿರುವ ಕಿವುಡ ಮೂಗರ ಮತ್ತು ಕುರುಡರ ಪಾಠಶಾಲೆಯಲ್ಲಿ ಹುಡುಗರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯವನ್ನು ಕಲ್ಪಿಸಿ ನೆನ್ನೆಯಿಂದ ನಡಿಸಲಾರಂಭಿಸಿದಾರೆ.

✱✱✱✱

ಫಾರೆಸ್ಟ್ ಅ॥ ಕನ್ಸರ್ವೇಟರಾಗಿದ್ದ ಮೆ॥ ಕೆ. ಶಾಮೈಯ್ಯಂಗಾರು ಕಳೆದವಾರ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೂತ್ರ ಜಾಡ್ಯದಿಂದ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

✱✱✱✱

ರಾಜಧಾನಿಯಲ್ಲಿ ಹೊಗೇಸೊಪ್ಪು (ತಂಬಾಕು) ಬಿಕರಿ ಮಾಡುವವರು ಎಂದರೆ ನಶ್ಯ, ಚುಟ್ಟಾ, ಸಿಗರೆಟ್ ಮುಂತಾದವುಗಳನ್ನು ಮಾರುವ ಅಂಗಡಿಯ ವರ್ತಕರು ಮ್ಯುನಿಸಿಪಾಲಿಟಿಯಿಂದ ಲೈಸೆನ್ಸ್ ಪಡೆಯಬೇಕೆಂತಲೂ, ತಮ್ಮ ಅಂಗಡಿಯಲ್ಲಿ ಹೊಗೇಸೊಪ್ಪಿನ ಜಮಾಖರ್ಚಿನ ಲೆಕ್ಕಗಳನ್ನು ಕ್ರಮವಾಗಿ ಇಡಬೇಕೆಂತಲೂ ನಿಬಂಧಿಸುವಂತೆ ಕಳೆದ ವಾರ ಮ್ಯುನಿಸಿಪಲ್ ಕಮಿಷನರು ತೀರ್ಮಾನಿಸಿರುತ್ತಾರೆ.

ಕೋಲಾರ್ ಚಿನ್ನದ ಗಣಿಯಲ್ಲಿ ಉತ್ಪತ್ತಿ ಮಾಡಿದ ಸುಮಾರು ೩೦೦ ರೂಪಾಯಿನ ಚಿನ್ನವು ವಾನಿಯಂಬಾಡಿಯ ಇಬ್ಬರು ಅಕ್ಕಸಾಲಿಗರಲ್ಲಿ ಸಿಕ್ಕಿತು. ಮದರಾಸ್ ಕೋರ್ಟಿನಲ್ಲಿ ಅವರ ಮೇಲೆ ಮೊಕದ್ದಮೆ ದಾಖಲಾಗಿದೆ.

*****

ನಮ್ಮ ಬ್ರಿಟಿಷ್ ರೆಸಿಡೆಂಟರಾದ ಸರ್ ಜೇಂಸ್ ಬೊರ್ಡಿಲ್ಲಾನ್ ರವರು ಕಳೆದ ವಾರ ಬೆಂಗಳೂರು ಪಟ್ಟಣದ ಶ್ರೀನಿವಾಸ ಮಂದಿರಕ್ಕೆ ಹೋಗಿ, ಅಲ್ಲಿನ ಕಾರುಕರ್ದಿಗಳನ್ನು ನೋಡಿ ಸಂತೋಷಪಟ್ಟುಕೊಂಡರೆಂದು ತಿಳಿದು ಬಂದಿದೆ.

*****

ಕಳೆದ ಗುರುವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರು ಮದರಾಸನ್ನು ತಲುಪಿದರು. ಮಧ್ಯಾಹ್ನ ಅವರಿಗೆ ಗವರ್ನರವರ ಭೇಟಿಯಾಯಿತು. ಶುಕ್ರವಾರ ಗವರ್ನರವರು ಶ್ರೀಮನ್ ಮಹಾರಾಜರ ಬಂಗಲೆಗೆ ಬಂದು ಮರುಭೇಟಿ ಕೊಟ್ಟರು.

*****

ಶ್ರೀಮನ್ ಮಹಾರಾಜರವರು ನಾಳೆ ಶನಿವಾರ ಮದರಾಸಿನಿಂದ ಸ್ಪೆಷಲ್ ರೈಲಿನಲ್ಲಿ ಕಲ್ಕತ್ತೆಗೆ ಹೋಗಿ ೧೧ನೆ ಮಾರ್ಚಿ ವರೆಗೆ ಅಲ್ಲಿರುತ್ತಾರೆಂತಲೂ ಅವರ ಸಂಗಡ ಮ॥ ಗೋಪಾಲಕೃಷ್ಣಯ್ಯನವರೂ ದಿವಾನರವರೂ ಹೋಗುತ್ತಾರೆಂತಲೂ ತಿಳಿದುಬಂದಿದೆ.

*****

ರೆಸಿಡೆಂಟರು ಮುಂದಿನ ವಾರ ಸರ್ಕೀಟುಹೊರಟು ಕೊಡಗಿನ ಕಡೆ ಪ್ರಯಾಣ ಮಾಡುತ್ತಾರೆಂದು ತಿಳಿಸಿದ್ದಾರೆ. ಶ್ರೀಮನ್ ಮಹಾರಾಜರವರು ಕಲ್ಕತ್ತೆಯಿಂದ ವಾಪಸು ಬೆಂಗಳೂರಿಗೆ ಬರುವ ತನಕ ರೆಸಿಡೆಂಟರು ಬಂಗಳೂರಿಂದ ಹೊರಡುವುದಿಲ್ಲವೆಂದು ಈಚಿಗೆ ತಿಳಿದುಬಂದಿದೆ.

*****

ಮೊನ್ನೆ ಮಂಗಳವಾರ ಸಾಯಂಕಾಲ ಮದರಾಸ್ ಗವರ್ನರವರು ಮೋಟಾರುಕಾರಿನಲ್ಲಿ ನಮ್ಮ ಮಹಾರಾಜರವರನ್ನು ತಮ್ಮ ಜೊತೆಯಲ್ಲಿ ಕೂಡಿಸಿಕೊಂಡು, ಮದರಾಸ್ ಪಟ್ಟಣದಲ್ಲಿರುವ ಮುಖ್ಯ ಮುಖ್ಯ ಸ್ಥಳಗಳನ್ನೂ ರಸ್ತೆಗಳನ್ನೂ ಕಟ್ಟಡಗಳನ್ನೂ ತೋರಿಸಿಕೊಂಡು ಬಂದರು.

*****

ಅನಂತಪುರ ಸಂಸ್ಥಾನದ ಚೀಫ್ ಜಡ್ಜಿಯವರು ಇನ್ನು ೨ ತಿಂಗಳೊಳಗಾಗಿ ಪೆನ್ಷನ್ ಪಡೆದು ಕೆಲಸ ಬಿಡುವವರಾಗಿ ಆ ಕೆಲಸಕ್ಕೆ ನಮ್ಮ ಚೀಫ್ ಕೋರ್ಟ್ ಜಡ್ಜರಾದ ಮೆ॥ ವಿ. ರಂಗಸ್ವಾಮಿ ಅಯ್ಯಂಗಾರ್ಯ ನೇಮಕವಾಗಿ ಹೋಗಬಹುದೆಂಬ ವರ್ತಮಾನವಿದೆ.

*****

ಈಗ ಇಲಾಖೆಯಲ್ಲಿ ಕಾಗದ ಮುಂತಾದ್ದನ್ನು ರಿಜಿಸ್ಟರ್ ಮಾಡಬೇಕಾದರೆ ಈಗ ೨ ಆಣೆ ಛಾರ್ಜು ಕೊಡಬೇಕಾಗಿದೆಯಷ್ಟೆ. ಇದನ್ನು ೧ ಆಣೆಗೆ ಇಳಿಸಿ ಮಾಡಬೇಕೆಂದು ಪೋಸ್ಟ್ ಇಲಾಖಾಧಿಕಾರಿಗಳು ಆಲೋಚನೆ ಮಾಡುತ್ತಿದ್ದಾರೆ. ಇದು ತುಂಬಾ ಅವಶ್ಯಕ ಬದಲಾವಣೆ ಎನ್ನುವದಕ್ಕೆ ಸಂಶಯವಿಲ್ಲ.

*****

ವೆಸ್ಲಿಯನ್ ಮಿಷನ್ ಸಂಘದ ಸೆಕ್ರೆಟರಿಗಳಾದ ಘನ ಫಿಂಡ್ಲೆ ಯವರೂ ಮೆ॥ ಬೂಥ್ ಯವರೂ ಈ ವಾರ ರಾಜಧಾನಿಗೆ ದಯಮಾಡಿ, ಇಲ್ಲಿನ ಮಿಷನ್ ಕಾರ್ಯಗಳನ್ನೆಲ್ಲಾ ನೋಡಿಕೊಂಡು ಹೋಗುವರೆಂಬುದಾಗಿ ಇಲ್ಲಿನ ಕ್ರೈಸ್ತಮಂಡಲಿಯವರು ಅವರಿಗೆ ಒಂದು ಅಭಿನಂದನಾ ಪತ್ರಿಕೆಯನ್ನು ಓದಿ ಒಪ್ಪಿಸುವರೆಂದು ಕೇಳುತ್ತೇವೆ.

*****

ನಮ್ಮ ಮಹಾರಾಜರವರ ಮಾನಂದಿರಾದ ಪೊಲಾರಾಣಾ ಯುವರಾಜ ನಮ್ಮ ಎರಡನೆ ಕುಮಾರಿಯನ್ನು ಗೊಂಡಾಲ್ ಸಂಸ್ಥಾನದ ಯುವರಾಜ ಮಹಾರಾಜರವರಿಗೆ ಕೊಟ್ಟು ಕಳೆದ ವಾರ ವಿವಾಹ ಮಾಡಿದರು. ನಮ್ಮ ಮಹಾರಾಜರವರು ಮೆ॥ ತುರುವೆಕೆರೆ ಸುಬ್ಬರಾಯ ಅರಸಿನವರನ್ನು ಬಿಲ್ಲತ್ತುಗಳ ಸಹಿತ ಅಲ್ಲಿಗೆ ಕಳುಹಿಸಿಕೊಟ್ಟರು.

*****

ಕಂಚಿನಗೂಡಿನ ಒಬ್ಬ ಕೊರಚರವನು ಕೋಲಾರ್ ಚಿನ್ನದ ಗಣಿಗೆ ಸೇರಿದ ರಾಬರ್ಟ್‌ಸನ್ ಪೇಟೆಗೆ ಹೋಗಿ ಒಬ್ಬ ಮಾರ್ವಾಡಿ ಅಂಗಡಿಯಲ್ಲಿ ೧,೯೦೦ ರೂ ಒಡವೆ ಇದ್ದ ಜವಾಹಿರಿ ಪೆಟ್ಟಿಗೆಯನ್ನು ಎತ್ತಿಕೊಂಡು ಹೋಗುತ್ತಿದ್ದನು. ಅವನನ್ನು ಮೂವರು ಪೋಲೀಸಿನವರು ಹಿಡಿದು, ವಿಚಾರಣೆ ಮಾಡಿಸಿದರು. ಅವನಿಗೆ ಮ್ಯಾಜಿಸ್ಟ್ರೇಟರು ೬ ತಿಂಗಳ ಸಜಾ ಹಾಕಿದಾರೆ.

*****

ಮಾರಿಕಣಿವೆ ತಲಾವಿನಿಂದ ನಾಲೆಗಳನ್ನು ತೆಗೆಯುವುದಕ್ಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮೆ॥ ಸಿ. ಟಿ. ಹಲ್ಲಾಳ್ ಯವರು ೧೯೦೪ನೆ ಜುಲೈ ೧ರ ವರೆಗೆ ೧,೦೧,೬೯೪ ರೂಪಾಯಿ ಖರ್ಚುಮಾಡಿದಾರೆ. ಎಡಪಾರ್ಶ್ವದ ನಾಲೆಯು ೩೭ ಮೈಲಿ ದೂರ ಬಲಪಾರ್ಶ್ವದ ನಾಲೆಯು ೪೦ ಮೈಲಿ ದೂರವೂ ಹೋಗಿರುವವು. ಇವೆರಡು ನಾಲೆಗಳ ಕೆಳಗೂ ೨೫,೦೦೦ ಎಕರೆ ತರೀ ಜಮೀನು ಆಗುತ್ತದೆ.

*****

ಮದರಾಸ್ ಅಧಿಪತ್ಯಕ್ಕೆ ಸೇರಿದ ಬಂಗನಪಲ್ಲಿಯ ಜಹಗೀರ್ ದಾರರಾದ ನವಾಬ್ ಸೈಯದ್ ಫತೇ ಅಲ್ಲಿಖಾನ್ ಬಹದೂರ್, ಕೆ ಸಿ ಎಸ್ ಐ. ಯವರು ತುಂಬಾ ಸಾಲಸೋಲಗಳನ್ನು ಮಾಡಿ, ಜಹಗೀರಿಯನ್ನು ಬಹಳ ಹೀನಸ್ಥಿತಿಗೆ ತಂದದ್ದರಿಂದಲೂ ಮದರಾಸ್ ಗವರ್ನಮೆಂಟಿನವರು ಆಗಿಂದಾಗ್ಯ ಹೇಳಿದ ಬುದ್ಧಿವಾದವನ್ನು ಕೇಳಿ ಆ ಪ್ರಕಾರ ನಡೆಯದೆಹೋದದ್ದರಿಂದಲೂ ಮದರಾಸ್ ಸರ್ಕಾರದವರು ಅವರಿಗೆ ಜಹಗೀರಿಯ ಅಧಿಕಾರವನ್ನು ತಪ್ಪಿಸಿರುತ್ತಾರೆ. ಈ ಹುಕುಮು ಇದೇ ಫೆಬ್ರವರಿ ೧ರಿಂದ ಜಾರಿಯಲ್ಲಿ ಬಂದಿದೆ. ನವಾಬರ ಖರ್ಚು ವೆಚ್ಚ ಮುಂತಾದ್ದಕ್ಕೆ ಸರ್ಕಾರದವರು ಅಲೋವೆನ್ಸು ಕೊಡುವುದಾಗಿ ತಿಳಿದುಬಂದಿದೆ.

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರ ಆಸ್ಥಾನ ಸಂಗೀತ ವಿದ್ವಾಂಸರು ರಾಜಧಾನಿಗೆ ಬಂದು, ರೆಸಿಡೆನ್ಸಿ ಬಂಗಲೆಯಲ್ಲಿ ಇಳುಕೊಂಡು, ಇಲ್ಲಿನ ವೈಣಿಕ ಶಿಖಾಮಣಿಗಳಾದ ಮೆ॥ ಶೇಷಣ್ಣನವರನ್ನು ಕರೆಸಿಕೊಂಡು, ಅವರಿಂದ ರಾಗಗಳನ್ನು ನುಡಿಸಿ ಕೇಳುತ್ತಿದಾರೆ. ಅವರಿಂದ ಕೆಲವು ವಟ್ಟುಗಳನ್ನು ಗುರುತು ಮಾಡಿಕೊಂಡು ಹೋಗುವುದಕ್ಕೇನೇ ಅವರು ಇಲ್ಲಿಗೆ ಬಂದಿರುವುದಾಗಿ ಕೇಳುತ್ತೇವೆ.

*****

ಬೊಂಬಾಯಿ ಪಟ್ಟಣದಲ್ಲಿರುವ ನರೋತ್ತಮ ಮುರಾರ್‌ಜಿ ಗೋಕುಲದಾಸ ಸೇಟರೆಂಬ ದೊಡ್ಡ ಸಾಹುಕಾರರು ನಮ್ಮ ಮಹಾರಾಜರವರ ಸ್ನೇಹಿತರಾಗಿದ್ದುಕೊಂಡು, ತಮ್ಮ ಮನೆಯಲ್ಲಿ ವಿವಾಹವಾಗುತ್ತದೆಂತಲೂ ಅದಕ್ಕಾಗಿ ಅರಮನೆಯ ಎರಡನೆ ದರ್ಜೆಯ ಬ್ಯಾಂಡ್ ವಾದ್ಯಗಾರರನ್ನು ಕಳುಹಿಸಿಕೊಡಬೇಕೆಂತಲೂ ಕೇಳಿದ್ದರ ಮೇಲೆ ಮಹಾರಾಜರವರು ಹುಕುಂ ಕೊಟ್ಟು ೧೫ ಮಂದಿ ವಾದ್ಯಗಾರರನ್ನು ಮೊನ್ನೆ ಭಾನುವಾರ ಬೊಂಬಾಯಿಗೆ ಕಳುಹಿಸಿದಾರೆ.

*****

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಛಾಂಪಿಯನ್ ರೀಫ್ ಎಂಬ ಗಣಿಯಿಂದ ಕಳೆದ ೨೦ ನೆ ಡಿಸೆಂಬರಿನಲ್ಲಿ ಚಿನ್ನದ ಗಟ್ಟಿಗಳನ್ನು ಪದ್ಧತಿಯ ಪ್ರಕಾರ ಸೀಮೆಗೆ ಕಳುಹಿಸಿದರು. ಈ ಕಟ್ಟನ್ನು ಲಂಡನ್ ಪಟ್ಟಣದಲ್ಲಿ ಬಿಚ್ಚಿ ನೋಡಿದಾಗ ೪೮,೦೦೦ ರೂಪಾಯಿ ಕ್ರಯಬಾಳುವ ಒಂದು ಗಟ್ಟಿಯೇ ಇರಲಿಲ್ಲ. ಅದಕ್ಕೆ ಬದಲಾಗಿ ಸೀಸದ ಗಟ್ಟಿ ಇತ್ತು. ಇದು ಎಲ್ಲಿ ಕಳುವಾಯಿತೋ ಪತ್ತೆ ಇಲ್ಲದೆ ಇದೆ. ಬ್ಯಾರಿಂಗ್ ಪೇಟೆಯಲ್ಲಿ ಈ ಕಳುವಿನ ವಿಷಯವಾಗಿ ಏನೋ ಸ್ವಲ್ಪ ಗೊತ್ತಾಗಿರುವಂತೆಯೂ ಪೋಲೀಸಿನವರು ಪತ್ತೆ ತರದೂದು ನಡೆಸುತ್ತಿದಾರೆಂತಲೂ ಪ್ರಕಟವಾಗಿದೆ.

ರಷ್ಯಾ ಜಪಾನ್ ಯುದ್ಧವು

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು

ರಷ್ಯಾದವರ ನಷ್ಟ.

ಲಂಡನ್, ಜನವರಿ ೨೪—ರಷ್ಯಾ ಜನರಲ್ ಮಿಶ್ಚೆಂಕೊ ಯವರು ಜಪಾನಿನವರ ಮೇಲೆ ಮಾಡಿದ ಯುದ್ಧದಲ್ಲಿ ೩೯೦ ಮಂದಿ ರಷ್ಯಾ ಸೈನಿಕರು ನಷ್ಟಪಟ್ಟರೆಂದು ಜನರಲ್ ಕುರೊಪಾಟ್ಕಿನ್ ರವರು ರಿಪೋರ್ಟು ಕೊಟ್ಟಿದಾರೆ.

ಜನರಲ್ ಸ್ಟೊಯೆಸೆಲ್ ಯವರು ಶರಣಾಗತರಾದ ಉದ್ಯೋಗದಾರರುಗಳ ಸಮೇತ ರಷ್ಯಾಕ್ಕೆ ಪ್ರಯಾಣ ಮಾಡಿದಾರೆ.

ಯುದ್ಧ ನಡೆಯುತ್ತಾ ಇದೆ.

ಲಂಡನ್, ಜನವರಿ ೨೭.—ಮ್ಯಾಂಚೂರಿಯಾದಲ್ಲಿ ರಷ್ಯಾ ಜಪಾನ್ ಸೈನಿಕರು ಪರಸ್ಪರ ಪಿರಂಗಿಗಳಲ್ಲಿ ಹೊಡೆದಾಡುತ್ತಿದಾರೆಂತಲೂ, ಇದನ್ನು ನೋಡಲಾಗಿ ಅನತಿವರಿಗೆ ಬಹು ಕಠಿಣವಾದ ಯುದ್ಧ ನಡೆಯುತ್ತಿರುವಂತೆ ಕಾಣುವುದೆಂತಲೂ ವರ್ತಮಾನ ಬಂದಿದೆ.

ರಷ್ಯಾ ಸೈನಿಕರು ಹುನ್‌ಹೊ ನದಿಯನ್ನು ದಾಟ ಬಂದು, ಜಪಾನಿನವರ ಎಡಪಾರ್ಶ್ವದಲ್ಲಿ ಠಾಣ್ಯ ಹಾಕಿಕೊಂಡರು. ಜಪಾನಿನವರು ಅವರ ಮೇಲೆ ಮುತ್ತಿಗೆ ಹಾಕಿ ಯುದ್ಧಮಾಡುತ್ತಿದಾರೆ.

ರಷ್ಯಾ ಸೈನಿಕರೇ ಜಪಾನಿನವರ ಮೇಲೆ ನುಗ್ಗಿ ಯುದ್ಧಾರಂಭ ಮಾಡುವುದಾಗಿಯೂ, ಜಪಾನಿನವರನ್ನು ಅವರ ಸ್ಥಾನದಿಂದ ಓಡಿಸಿಬಿಟ್ಟಿರುವಂತೆಯೂ, ಆದರೆ ರಷ್ಯಾದವರು ಇನ್ನೊಂದು ಭಾಗದಲ್ಲಿ ಸೋತು ಹಿಂದಕ್ಕೆ ಬಂದರೆಂತಲೂ ಜನರಲ್ ಕುರೊಪಾಟ್ಕಿನ್ ರವರು ರಿಪೋರ್ಟು ಕೊಟ್ಟಿದಾರೆ.

ಪೋರ್ಟ್ ಆರ್ಥರ್ ಕೋಟೆಯು ಜಪಾನಿನವರ ಸ್ವಾಧೀನವಾದುದನ್ನು ಕೇಳಿದ ಮೇಲೆ ರಷ್ಯಾದಿಂದ ಬಂದಿರುವ ಸೈನಿಕರು ಜಪಾನಿನವರ ಮೇಲೆ ನುಗ್ಗಿ ಯುದ್ಧ ಮಾಡುವುದಕ್ಕೆ ಹಿಂಜರೆಯುತ್ತಿದಾರೆಂತಲೂ, ಇದರಿಂದ ಯುದ್ಧಕಾರ್ಯಗಳನ್ನು ಸರಾಗವಾಗಿ ನಡಸಲು ತುಂಬಾ ಅಡಚಣೆಯಾಗಿದೆ ಎಂತಲೂ ಜನರಲ್ ಕುರೊಪಾಟ್ಕಿನ್ ರವರು ಜಾರ್ ಯವರಿಗೆ ಅರಿಕೆ ಮಾಡಿದಾರೆ.

ಲಂಡನ್, ಜನವರಿ ೨೯—ತಾ ೨೫ ರಿಂದ ಹೈಕಾನ್‌ತಾಯಿ, ಹುನ್‌ಹೊ, ಲಿಟಿಯೋಕು, ಸಾಂಡಿಪು ಎಂಬೀ ಸ್ಥಳಗಳಲ್ಲಿ ೩—೪ ದಿನ ಯುದ್ಧ ನಡೆಯಿತು. ೫೦೦ ಮಂದಿ ರಷ್ಯಾದವರು ಜಪಾನಿನವರಿಗೂ ೧೫೦ ಮಂದಿ ಜಪಾನಿನವರು ರಷ್ಯಾದವರಿಗೂ ಕೈಸೆರೆ ಸಿಕ್ಕಿದರು. ಕಡೆಗೆ ಜಪಾನಿನವರು ಸಾಂಡಿಪು ಎಂಬ ಠಾಣ್ಯವನ್ನು ಕಾಪಾಡಿಕೊಳ್ಳುವದಕ್ಕಾಗದೆ ಅಲ್ಲಿಂದ ಹಿಮ್ಮೆಟ್ಟಿ ಬಂದಿರುತ್ತಾರೆ.

ಬಾತ್ಮಿದಾರರಿಗೆ ಸೂಚನೆಯು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್‌ಸ್.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಕಳ್ಳತನವು

ಅಯ್ಯಾ,

ಈ ತಿಂಗಳೊಂದರಲ್ಲೇ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಹಾರನಹಳ್ಳಿ ತೀರ್ಥಹಳ್ಳಿ ಹೊನ್ನಾಳಿ ಬೆಂಕಿಪುರ ಚನ್ನಗಿರಿ ಮುಂತಾದ ನಾಲ್ಕೈದು ಸ್ಥಳಗಳಲ್ಲಿ ಕಳುವು ನಡೆದು, ಸಾವಿರಾರು ರೂಪಾಯಿನ ಮಾಲುಗಳು ಕಳುವಾಗಿವೆ. ಇದನ್ನು ನೋಡಿದರೆ ಹಳೇ ಕಾಲದ ಪಿಂಡಾರಿಗಳ ಬರುತ್ತದೆ. ಇಂಥಾ ಅನಾಹುತ ಸಂಗತಿಗಳು ನಡೆಯುವದು ಬೂದಿಯಾಗಿದ್ದಾಗ್ಯೂ ಮುಖ್ಯ ಡಿಸ್ಟ್ರಿಕ್ಟಿನ ಡಿಸ್ಟಿ ಕಮಿಷನರು ಜಾಗ್ರತೆಯಿಂದ ಮುತುವರ್ಜಿ ವಹಿಸಿಕೊಂಡು ಎಲ್ಲಾ ವಿಷಯಗಳಲ್ಲೂ ಚತುರರಾಗಿರಬೇಕೆಂದು ವ್ಯಕ್ತವಾಗುತ್ತದೆ. ಏನಾದರೂ ಆಗಲಿ, ಕ್ರಮವಾಗಿ ಕೋರ್ಟಿಗೆ ಹೋಗಿ ಕೆಲವು ಅರ್ಜಿಗಳನ್ನೇ ಕೂಗಿಸಿದರ ಸಾಕು, ಕಳ್ಳತನದ ಸುದ್ದಿ ಬಂದಾಗ ಪೋಲೀಸಿಗೆ ಕಾಗದದ ಮೇಲೆ ಬಂಡಿತವಾದ ಆರ್ಡರು ಕೊಡಿಸಿದರೆ ಸಾಕು, ಎಲ್ಲಾ ಮುಗಿಯಿತೆಂದು ಯೋಚಿಸಿದರೆ ಆದೀತೇ? ಪ್ರಜಾ ಕ್ಷೇಮಚಿಂತಕರು ಮುಖ್ಯವಾಗಿ ಕಾರ್ಯದಲ್ಲಿ ಯಾವಾಗಲೂ ಶ್ರದ್ಧೆ ಇಡದೆಹೋದರೆ ದುಷ್ಟರು ಇನ್ನೂ ಹೆಚ್ಚಾಗಿ ಅಕೃತ್ಯ ನಡಿಸ್ಯಾರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವೃದ್ಧಾಪ್ಯ ಸ್ಥಿತಿಗೆ ಬಂದವರೋ, ಇಲ್ಲವೇ ಪ್ರಕೃತ ಕಾರ್ಯವನ್ನು ಸಾಂಗೋಪಾಂಗವಾಗಿ ವಿಚಾರಿಸಿ ತಿಳಿಯುವದಿಲ್ಲವೋ. ಅಥವಾ ಪೋಲೀಸಿನವರ ಮೇಲೆ ಅಗ್ರಹವಾಗಿ ಸುಮ್ಮನಾಗಿದೆಯೋ ತಿಳಿಯದು. ಒಟ್ಟಾಗಿ ನೋಡಿದರೆ ಕಳ್ಳರಿಂದ ಸೊತ್ತು ಕಳಕೊಂಡವರ ಕಷ್ಟನಷ್ಟಗಳು ಬಹಳವಾಗಿವೆ. ಈ ಮಾತು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಬಂದಿದೆ. ಅಧಿಕಾರಿಗಳು ಈಗ ತಮ್ಮ ಪೌರುಷವನ್ನು ತೋರಿಸದೆ ಹೋದರೆ ಮತ್ಯಾವಾಗ ತೋರಿಸುವರು!

ಪ್ರಜಾ ಕ್ಷೇಮಚಿಂತಕ.

ಚನ್ನಪಟ್ಣ ಪ್ಲೇಗ್—ಅಮಲ್‌ದಾರ್ರವರ ಸಹೃದಯ.

ಅಯ್ಯಾ,

ಈ ಟವುನಿನಲ್ಲಿ ಪ್ಲೇಗ್ ಪ್ರಾರಂಭವಾಗಿ ೩ ತಿಂಗಳಾಯಿತು. ಆದ ಒಡನೆಯೇ ಅಮಲ್‌ದಾರ್ ಮೆ॥ ಟಿ. ರಾಮಚಂದ್ರರಾಯರು ಒಳ್ಳೆ ಮಾತುಗಳಿಂದಲೇ ಆ ಬೀದಿಯನ್ನು ಬಿಡಿಸಿಬಿಟ್ಟು, ನಂತರ ಎಲ್ಲಾ ಕಡೆಯಲ್ಲು ವ್ಯಾಪಿಸಬಹುದೆಂದು ಯೋಚಿಸಿ, ಸರ್ವರಿಗೂ ನಡತೆಯಿಂದಲೇ ಹೇಳಿ ಊರು ಬಿಡಿಸಿ, ನಿತ್ಯದಲ್ಲೂ ಪ್ರಜೆಗಳ ಕ್ಷೇಮವನ್ನೇ ಕೋರಿ, ಹೊರಗೆ ಇರತಕ್ಕವರ ಷೆಡ್ಡುಗಳಿಗೆ ಹೋಗಿ ಕ್ಷೇಮವನ್ನು ವಿಚಾರಿಸಿ, ಆರೋಗ್ಯವಾಗಿರುವದಕ್ಕೆ ಅನುಕೂಲತೆಯನ್ನು ಹೇಳಿಕೊಟ್ಟು ಬರುವದಲ್ಲದೆ, ಪ್ರಜೆಗಳು ದುಃಖದಲ್ಲಿ ಮನೆಗಳು ಬಿಟ್ಟು ಹೋಗುವಾಗ್ಯ ಸಾಮಾನುಗಳು ಅನೇಕವಾಗಿ ಬಿಟ್ಟಿರಬಹುದೆಂಬ ದಯೆಯಿಂದ ಯೋಚಿಸಿ, ಟವುನಿನಲ್ಲಿ ಹಗಲು ರಾತ್ರಿ ಪೋಲೀಸ್ ಬೀಟು ಮಾಡುವಂತೆಯೂ ಎಲ್ಲಾ ಷೆಡ್ಡುಗಳಲ್ಲೂ ರಾತ್ರಿ ವೇಳೆ ಮಾತ್ರ ಬೀಟು ಮಾಡುವಂತೆಯೂ ಏರ್ಪಾಡು ಮಾಡಿಕೊಟ್ಟು, ಪ್ರಜೆಗಳನ್ನು ಬಹು ಆದರಣೆಯಿಂದ ಕಾಪಾಡುತ್ತಿರುವರು. ಆದರೆ ಈ ರೀತಿ ಕಾಪಾಡುತ್ತಿರುವ ಅಮಲ್‌ದಾರ್ರ ಮಾತನ್ನು ಕೇಳದೆ ಕೆಲವು ಮುಸಲ್ಮಾನ ಜನಗಳು ಮೂರ್ಖತನದಿಂದ ಊರು ಬಿಡದೆಹೋದ ಸಬಬು ಈಗ ೮—೧೦ ದಿವಸದ ಲಾಗಾಯಿತು ಪ್ಲೇಗ್ ವ್ಯಾಪಿಸಿ, ದಿನವಹಿ ೭—೩ ಮರಣವಾಗುತ್ತಲೂ ಇಲಿಗಳು ವಿಶೇಷವಾಗಿ ಸಾಯುತ್ತಲೂ ಇರುವದರಿಂದ ಭೀತರಾಗಿ ಊರುಬಿಟ್ಟು ಹೊರಗೆ ಷೆಡ್ಡುಗಳಿಗೆ ಹೋಗುತ್ತಿದಾರೆ. ಮೊದಲೇ ಈ ಮೂರ್ಖತನವನ್ನು ಬಿಟ್ಟು ಹೊರಗೆ ಹೋಗಿದ್ದಲ್ಲಿ ಪ್ರಾಣ ನಷ್ಟಕ್ಕೆ ಕಾರಣವಾಗುತ್ತಿರಲಿಲ್ಲ.

ಮಂಡಿ ವ್ಯಾಪಾರಿ.

ಹೊಳೇನರಸೀಪುರದ ಜನರ ಪುರಪ್ರವೇಶ ಮಾಡಿದ್ದು.

ಅಯ್ಯಾ,

ಪ್ಲೇಗ್ ಗಲಾಟೆಯಿಂದ ಮೊದಲು ಕೋಟೆಯವರೂ ಆ ನಂತರ ಪೇಟೆಯವರೂ ಅತಿಜಾಗ್ರತೆಯಾಗಿ ತಮ್ಮ ಮನೆಗಳನ್ನು ಬಿಟ್ಟದ್ದರಿಂದ ಈ ಭಯಂಕರವಾದ ಉಪದ್ರದ ಬಾಯಿಗೆ ಅನೇಕರು ತುತ್ತಾಗಲಿಲ್ಲವು. ನಮ್ಮ ದಯಾಳುಗಳಾದ ಸರಕಾರದವರು ಜನಗಳ ಪರದಾಟವನ್ನು ನೋಡಿ, ತಿರಿಗಿ ಜನರು ಊರು ಸೇರಬಹುದೆಂದು ಹುಕುಂ ಕೊಟ್ಟರು. ನಮ್ಮ ಊರಿನ ಅಮಲ್ದಾರ್ ಸಾಹೇಬರವರೂ ಶಿರಸ್ತೇದಾರರೂ ಹೊಸದಾಗಿ ಬಂದಿರುವ ಆಸ್ಪತ್ರೆ ಅಸಿಸ್ಟೆಂಟರೂ ಬಹು ಮುತುವರ್ಜಿಯಿಂದ ಪ್ರತಿಯೊಂದು ಸಂದು ಗೊಂದಿನ ಮನೆಗಳನ್ನೂ ಪೂರ್ಣ ನಿಗಾದಿಂದ ಡಿಸಿನ್‌ಫೆಕ್ಷನ್ ಮಾಡಿಸಿ, ಸರ್ಟಿಫಿಕೇಟುಗಳನ್ನು ಕೊಟ್ಟು ಅನೇಕ ಬುದ್ಧಿವಾದ ಹೇಳಿ, ಅವಶ್ಯವಾದ ಸ್ಥಳದಲ್ಲಿ ತಕ್ಕ ಕಿಟಕಿಗಳನ್ನು ಇಡಿಸಿದಾರೆ. ಈ ಕಾರ್ಯ ಮೂರಾವರ್ತಿ ಜನರು ಊರು ಬಿಟ್ಟರೂ ಆಗದಿದ್ದದ್ದು ಈ ಸಲ ನಮ್ಮ ಡಾಕ್ಟರವರ ಸಹನ ಚಾತುರ್ಯದಿಂದ ಕೋಟೆ ಪೇಟೆಗಳಲ್ಲಿ ಸಾಧ್ಯಕ್ಕೆ ಬಂತು. ಇವರುಗಳೆಲ್ಲಾ ಪ್ಲೇಗ್ ದಫೇದಾರರಾದ ಇಸುಸಾಹೇಬರ ನೀತಿಯಿಂದಲೂ ದಯಾಪೂರ್ಣವಾದ ಮಾತುಗಳಿಂದಲೂ ರಾತ್ರಿ ಹಗಲೂ ಈ ಕಾರ್ಯದಲ್ಲಿ ಮುತುವರ್ಜಿಯಿಂದ ನಿಂತು, ಪೇಟೆ ಕೋಟೆಯ ಮನೆಗಳನ್ನು ಬಹು ನಿಗಾ ಕೊಟ್ಟು, ಜನರು ಬೇಸರಪಡದಂತೆ ಮೇಲ್ಪಟ್ಟ ಅಧಿಕಾರಿಗಳಿಂದ ಆಗಬೇಕಾದ ಸಹಾಯಗಳನ್ನು ಪಡೆದು, ಅನುಕೂಲಿಸ ಮಾಡಿದರು. ಇದರ ವಿಷಯವಾಗಿ ಅವರನ್ನು ಸಾಹುಕಾರರು ಮೊದಲುಗೊಂಡು ಬಡವರ ವರೆಗೂ ಕೊಂಡಾಡುವವರಾಗಿದಾರೆ. ಈ ವರುಷ ೮ ಆಣೆ ಕಾಣಿಕೆಯು ಯಾರಿಂದಲೂ ವಸೂಲಾಗಲಿಲ್ಲ. ಹೋದ ವರುಷ ಕೇಮುವಾರು ವಸೂಲಾಯಿತು. ತನಖಾ ಆನಿಕೆಯೂ ಸಹಾ ನಡೆದುಹೋಯಿತು. ಆದರೆ ಪ್ಲೇಗ್ ದಫೇದಾರರಾದ ಇಸುಸಾಹೇಬರು ಮಾಡಿರುವ ಈ ಮಹನತ್ತಿಗಾಗಿ ಅಧಿಕಾರಿಗಳು ಮೆಚ್ಚಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಸಾಹೇಬರವರಿಗೆ ಶಿಫಾರಸು ಮಾಡಿ ಬಕ್ಷಿ ಕೊಡುವದಾದರೆ ತುಂಬಾ ಪ್ರೋತ್ಸಾಹವಾದೀತು. ನಮ್ಮ ತಾಲ್ಲೂಕು ಅಮಲ್ದಾರರು ತಮ್ಮ ಕೆಲಸಗಳಲ್ಲಿ ಸದಾ ನಿರತರಾಗಿರುವದು ಮಾತ್ರವಲ್ಲ. ಸಂತೆಗೆ ಹಾಯುವ ಡಿಸಿ ಬಡಬಗ್ಗರಿಗೆಲ್ಲಾ ದವಸ ಸರಿಯಾದ ಧಾರಣೆಗೆ ಸಿಕ್ಕುವ ಹಾಗೆ ಕಳ್ಳ ತಕ್ಕಡಿಗಳನ್ನೂ ಕಮ್ಮಿ ಸೇರುಗಳನ್ನೂ ನಿಲ್ಲಿಸಿದಾರೆ. ಇವರನ್ನು ಎಲ್ಲಾ ಜನಗಳೂ ಕೊಂಡಾಡುವದು ಮಾತ್ರವಲ್ಲ; ಚಿರಕಾಲ ಇವರು ಇಲ್ಲಿಯೇ ಇದ್ದು ನಮ್ಮಗಳನ್ನು ಪಾಲಿಸಲಿ ಎಂದು ದೇವರನ್ನು ಪ್ರಾರ್ಥಿಸುವವರಾಗಿದಾರೆ. ಇದಲ್ಲವೇ ಅಧಿಕಾರಿಗಳ ಮಹಿಮೆ.

ಪುರವಾಸಿ.

ಕ್ವೈನೀನುಮೂಲಕ ಸ್ವತಃ ಚಿಕಿತ್ಸೆ ಮಾಡುವಬಗ್ಗೆ ಅನುಜ್ಞೆಗಳು.

ಕ್ವೈನೀನನ್ನು ಸೇವಿಸುವ ರೀತಿ.—ಮೂರು ಪೈ ಬೆಲೆಯುಳ್ಳ ಪ್ರತಿ ಒಂದು ಪೊಟ್ಟಣದಲ್ಲಿ ೬ ಗ್ರೈನು ಕ್ವೈನೀನು ಇರುವುದು. ಅದು ಒಮ್ಮೆ ತೆಗೆದುಕೊಳ್ಳುವಷ್ಟಾಗಿರುತ್ತದೆ. ಒಂದು ಪೊಟ್ಟಣದ ಪುಡಿಯನ್ನು ಬಾಯಿಯಲ್ಲಿ ಸುರಿದುಕೊಂಡು, ಕೂಡಲೇ ಸ್ವಲ್ಪ ತಣ್ಣೀರನ್ನು ಅಥವಾ ಹಾಲನ್ನು ಕುಡಿಯಬೇಕು. ಅಥವಾ ಪುಡಿಯನ್ನು ನೀರಿನಲ್ಲಾಗಲಿ ನಿಂಬೆಹಣ್ಣಿನ ರಸದಲ್ಲಾಗಲಿ ಅದನ್ನು ಬೆರಸಿ ತೆಗೆದುಕೊಳ್ಳಬಹುದು.

(೧) ಒಬ್ಬ ಪ್ರಾಯಸ್ಥನಿಗೆ ಜ್ವರಬರುವ ಪಕ್ಷದಲ್ಲಿ ಆತನು ಈ ಕೆಳಗಿನ ಅನುಜ್ಞೆಗಳನ್ನು ಜಾಗರೂಕತೆಯಿಂದ ಅನುಸರಿಸತಕ್ಕದ್ದು.—೬ ಗ್ರೈನ್ ಉಳ್ಳ ಒಂದೊಂದು ಪೊಟ್ಟಣವನ್ನು ಜ್ವರವು ಪೂರಾ ಗುಣವಾಗುವ ವರೆಗೆ ದಿನಂಪ್ರತಿ ಮೂರು ಸರ್ತಿ ಸೇವಿಸಬೇಕು. ಮೊದಲನೇ ಪೊಟ್ಟಣವನ್ನು ಪ್ರಾತಃಕಾಲದಲ್ಲಿಯೂ, ಎರಡನೆ ಪೊಟ್ಟಣವನ್ನು ಮಧ್ಯಾಹ್ನದಲ್ಲಿಯೂ, ಮೂರನೇದನ್ನು ಸಾಯಂಕಾಲದಲ್ಲಿಯೂ ತೆಗೆದುಕೊಳ್ಳಬೇಕು. ಕೆಲವು ಸರ್ತಿ ಜ್ವರವು ಒಂದೇ ದಿವಸದೊಳಗೆ ನಿಲ್ಲುತ್ತದೆ. ಕೆಲವು ಸರ್ತಿ ಎರಡು ದಿವಸಗಳೂ, ಇನ್ನು ಕೆಲವು ಸಂದರ್ಭಗಳಲ್ಲಿ ಒಂದು ವಾರವೂ ಬೇಕಾಗುವುದು. ಪರಂತು ಒಬ್ಬ ರೋಗಿಯು ಈಗ ವಿವರಿಸಿರುವ ರೀತಿಯಲ್ಲಿ ಮೂರು ಪೊಟ್ಟಣಗಳನ್ನು ದಿನಂಪ್ರತಿ ಮೂರು ಸರ್ತಿ ತೆಗೆದುಕೊಂಡಪಕ್ಷದಲ್ಲಿ ಆತನಿಗೆ ಬಹುಶಃ ಒಂದು ವಾರದೊಳಗೇನೇ ಜ್ವರವು ಶಾಂತವಾಗುವುದು. ಒಬ್ಬ ರೋಗಿಗೆ ಕ್ವೈನೀನು ಸೇವಿಸುತ್ತಿರುವ ಕಾಲದಲ್ಲಿ ಕಿವಿಯಲ್ಲಿ ಶಬ್ದ ಕೇಳುವುದಾದರೆ ಅಥವಾ ಕಿವಿಯು ಕಿವುಡಾದರೆ ಔಷಧವು ಚೆನ್ನಾಗಿ ಹಿಡಿಯುತ್ತದೆಂದೂ ಬೇಗ ಗುಣವಾಗುವುದೆಂದೂ ತಿಳಿಕೊಳ್ಳಬಹುದು. ಜ್ವರವು ಚೆನ್ನಾಗಿ ಗುಣವಾದನಂತರ (೬ ಗ್ರೈನ್ ಉಳ್ಳ) ಒಂದೊಂದು ಪೊಟ್ಟಣವನ್ನು ದಿನಂಪ್ರತಿ ಬೆಳಗ್ಗೆ ೩೦ ದಿವಸಗಳ ವರೆಗೆ ತೆಗೆದುಕೊಳ್ಳುವುದು ಬಹಳ ಉತ್ತಮ. ಈ ಮೇರೆಗೆ ತೆಗೆದುಕೊಂಡಪಕ್ಷದಲ್ಲಿ ಜ್ವರವು ಪುನಃ ಬರಲಾರದು.

(೨) ಒಂದು ವಾರದವರೆಗೆ ದಿನಂಪ್ರತಿ (೬ ಗ್ರೈನ್ ಉಳ್ಳ) ಒಂದೊಂದು ಪೊಟ್ಟಣವನ್ನು ತಪ್ಪದೆ ಮೂರು ಹೊತ್ತು ತೆಗೆದುಕೊಂಡ ಮೇಲೂ ಜ್ವರವು ಶಾಂತವಾಗದೆ ಹೋದರೆ ಆತನಿಗೆ ಕ್ವೈನೀನು ಮಾತ್ರ ಕೊಟ್ಟರೆ ಪರಿಹರವಾಗುವಂಥಾ ಬಹುಶಃ ಬೇರೆ ಯಾವದಾದರೂ ಕಠಿಣ ಅಸ್ವಸ್ಥವಿರಬಹುದಾದುದರಿಂದ ಆತನನ್ನು ಅತ್ಯಂತ ಸಮೀಪದ ಆಸ್ಪತ್ರೆಗೆ ಕರೆದುಕೊಂಡು ಹೋಗತಕ್ಕದ್ದು.

(೩) ಯಾವಾಗಲೂ ಜ್ವರವಿರುವ ಜಿಲ್ಲೆಗಳಲ್ಲಿ ವಾಸಮಾಡುವ ಜನರು ಜ್ವರ ಬಂದರೂ ಬಾರದಿದ್ದರೂ ಪ್ರತಿವಾರಕ್ಕೆ ಎರಡು ಯಾ ಮೂರುಸರ್ತಿ ಒಂದೊಂದು ಪೊಟ್ಟಣ ಕ್ವೈನೀನನ್ನು ತೆಗೆದುಕೊಳ್ಳುವುದು ಬಹಳ ಉತ್ತಮ. ಹೀಗೆ ತೆಗೆದುಕೊಂಡಪಕ್ಷದಲ್ಲಿ ಜ್ವರವನ್ನು ತಪ್ಪಿಸಿಕೊಳ್ಳಬಹುದು. ಈ ಬಗ್ಗಾಗಿ (೬ ಗ್ರೈನು ಉಳ್ಳ) ಒಂದು ಪೊಟ್ಟಣವನ್ನು ಬೆಳಗ್ಗೆ ಊಟಕ್ಕೆ ಮುಂಚಿತವಾಗಿ ವಾರಕ್ಕೆ ಎರಡು ಯಾ ಮೂರು ಸರ್ತಿ ತೆಗೆದುಕೊಳ್ಳತಕ್ಕದ್ದು.

(೪) ಚಿಕ್ಕ ಮಕ್ಕಳ ಜ್ವರಕ್ಕೂ ಪ್ರಾಯಸ್ಥರ ಸಂಗತಿಯಲ್ಲಿ ಹೇಳಿದ ಚಿಕಿತ್ಸೆಯೇ ಮಾಡಬಹುದು. ಆದರೆ (೬ ಗ್ರೈನ್ ಉಳ್ಳ) ಒಂದು ಪೊಟ್ಟಣವನ್ನು ಪೂರಾ ಒಂದೇ ಸರ್ತಿ ಬೆಳಗ್ಗೆ ಕೊಡುವುದಕ್ಕೆ ಬದಲಾಗಿ ಮೂರು ಭಾಗಗಳಾಗಿ ವಿಭಾಗಿಸಿ, ಪ್ರಾಯಸ್ಥರ ವಿಷಯದಲ್ಲಿ ಹೇಳಿದ ರೀತಿಯಲ್ಲಿ ಮೂರು ಹೊತ್ತು ಕೊಡಬೇಕು. ಮಗುವಿಗೆ ಜ್ವರ ಬಿಟ್ಟ ಮೇಲೆ ಜ್ವರವು ಪುನಃ ಬಾರದಂತೆ ಒಂದು ಪೊಟ್ಟಣದ ಮೂರನೇ ಒಂದೊಂದಂಶವನ್ನು ವಾರಕ್ಕೆ ಮೂರಾವರ್ತಿ ಬೆಳಗಿನ ಹೊತ್ತು ಒಂದು ತಿಂಗಳ ವರೆಗೆ ಕೊಡತಕ್ಕದ್ದು.

(೫) ಯಾವಾಗಲೂ ಜ್ವರವಿರುವ ಜಿಲ್ಲೆಗಳಲ್ಲಿ ಅನೇಕ ಮಕ್ಕಳಿಗೆ ರಕ್ತಚ್ಛಾಯೆ ಇರುವುದಿಲ್ಲ. ಗುಲ್ಮವು ದೊಡ್ಡದಾಗಿರುವುದು ಇದಕ್ಕೆ ಜ್ವರವೇ ಕಾರಣ. ಮಕ್ಕಳು ಬಲಿಷ್ಠರಾಗಿಯೂ, ಆರೋಗ್ಯವುಳ್ಳವರಾಗಿಯೂ ಬೆಳೆಯಬೇಕೆಂಬ ಅಪೇಕ್ಷೆಯುಳ್ಳ ಯಾವ ತಂದೆಯಾಗಲಿ ಅಂಥಾ ಗುಲ್ಮವು ಸಹಜಸ್ಥಿತಿಗೆ ಬರುವ ವರೆಗೆ (೬ ಗ್ರೈನ್ ಕ್ವೈನೀನಿನ) ಪೊಟ್ಟಣದ ಮೂರನೇ ಒಂದಂಶವನ್ನು ಹಪ್ತೆಗೆ ಮೂರಾವರ್ತಿ ಕೊಡತಕ್ಕದ್ದು. ಈ ಮೇರೆಗೆ ನಡಕೊಂಡ ಪಕ್ಷದಲ್ಲಿ ಮಕ್ಕಳು ಬಹಳ ಬಲಿಷ್ಠರಾಗಿಯೂ ಆರೋಗ್ಯವಂತರಾಗಿಯೂ ಇರುವರು.

ವಂಚನೆ.

ಹಿಂದೆ ಒಬ್ಬ ಹುಡುಗನು ಮದ್ರಾಸು ಯೂನಿವರ್ಸಿಟಿಯೆಂಬ ವಿದ್ಯಾನಿಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೊದಲನೆಯ ದರ್ಜೆಯಲ್ಲಿ ತೇರ್ಗಡೆಯನ್ನು ಹೊಂದಿದನು. ಆದರೆ ನಾಲ್ಕು ವರ್ಷಗಳ ಕೆಳಗೆ ಶ್ರೀನಿವಾಸನೆಂಬ ಹುಡುಗನು ಆ ಶ್ರೀನಿವಾಸನು ತಾನೇ ತೇರ್ಗಡೆ ಹೊಂದಿದವನು ಎಂತಲೂ ತನ್ನ ಸರ್ಟಿಫಿಕೇಟು ಕಳೆದು ಹೋಗಿರುವ ಕಾರಣ ಬೇರೊಂದು ಸರ್ಟಿಫಿಕೇಟನ್ನು ಕೊಡಬೇಕೆಂತಲೂ ಆ ವಿದ್ಯಾಪರೀಕ್ಷಕ ಸಮಾಜದ ಅಧಿಕಾರಿಗಳಿಗೆ ಬರೆದುಕೊಂಡನು. ಇವನ ವಂಚನೆಯು ಹೊರಪಟ್ಟು, ಕಪಲೂರಿನ ಮ್ಯಾಜಿಸ್ಟ್ರೇಟರ ಮುಂದೆ ಫೋರ್ಜರಿ ಎಂಬ ಅಪರಾಧವು ಇವನ ಮೇಲೆ ಹೊತ್ತಿತು. ಶಿಕ್ಷೆಯೂ ವಿಧಿಸಲ್ಪಟ್ಟಿತು. ಆ ಪ್ರಾಂತ್ಯದ ಸೆಷನ್ಸ್ ಜಡ್ಜರೂ ಈ ಶಿಕ್ಷೆಯನ್ನು ಸ್ಥಿರಪಡಿಸಿದರು. ಇದರ ಮೇಲೆ ಮದ್ರಾಸ್ ಹೈಕೋರ್ಟಿಗೆ [illegible] ಪುನರ್ವಿಚಾರಕ್ಕೆ ಬರಲಾಗಿ ಇಬ್ಬರು ಜಡ್ಜಿಗಳು ಕೆಳಕೋರ್ಟಿನ ನ್ಯಾಯವನ್ನು [illegible] ಮಾಡಿದರು. ಆದರೆ ಯೂನಿವರ್ಸಿಟಿಯ ರೆಜಿಸ್ಟ್ರಾರು ಇದನ್ನು ಅಷ್ಟಕ್ಕೇ ಬಿಡದೆ, ಹೈಕೋರ್ಟಿನ ನ್ಯಾಯಾಧೀಶರೆಲ್ಲರೂ ಕೂಡಿ ವಿಚಾರಿಸುವಂತೆ ಮಾಡಲು ಆ ಹುಡುಗನ ಮೇಲೆ ದೋಷಾರೋಪಣೆಯು ಸ್ಥಿರಪಟ್ಟದ್ದಲ್ಲದೆ, ಅವನಿಗೆ ಕಾರಾಗೃಹದಂಡನೆಯು ಯಥೋಚಿತವಾಗಿ ಅನುಭವಿಸುವಂತೆ ವಿಧಾಯಕವಾಯಿತು.

ಪುಣ್ಯದೇಶವೆನಿಸಿಕೊಳ್ಳುವ ಈ ನಮ್ಮ ಇಂಡಿಯಾದಲ್ಲಿ ಇಂಥ ವಂಚಕಕೃತ್ಯಗಳು ವರ್ಷವರ್ಷವೂ ಯೂನಿವರ್ಸಿಟಿ ಪರೀಕ್ಷೆಗಳ ಸಂಬಂಧದಲ್ಲಿ ನಡೆಯುತ್ತಲೆ ಬರುತ್ತಿರುವದನ್ನು ನಾವು ಕೇಳುತ್ತಲೆ ಇದ್ದೇವಷ್ಟೆ. ಹೀಗೆ ಈ ವಿದ್ಯಾನಿಲಯಗಳೂ ವಿದ್ಯಾವಂತರೂ ಅವಮಾನಕ್ಕೊಳಗಾಗುವಂತೆ ಬೇರೆ ಯಾವ ದೇಶದಲ್ಲೂ ಕೇಳಿ ಇಲ್ಲ. ಮದ್ರಾಸ್ ಯೂನಿವರ್ಸಿಟಿಯೊಂದರಲ್ಲಿ ಮಾತ್ರವೇ ಕಳೆದ ಮೂರು ವರ್ಷಗಳಲ್ಲಿ ಇದರಂತಹ ವಂಚಕಕೃತ್ಯಗಳ ದೆಸೆಯಿಂದ ಇನ್ನೂರು ಮಂದಿ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿಯೇ ಶಿಕ್ಷೆಯನ್ನು ಅನುಭವಿಸಿದ್ದಾರೆ. ಮೋಸಕೃತ್ಯಗಳನ್ನು ನಡೆಸಿರುವವರು ವಿದ್ಯಾರ್ಥಿಗಳು ಮಾತ್ರವೇ ಅಲ್ಲ. ಪಾಠಶಾಲೆಗಳ ಮುಖ್ಯೋಪಾಧ್ಯಾಯರು ಸಹ ಇಂಥ ದುಷ್ಕೃತ್ಯಗಳನ್ನು ಮಾಡುವವರಾಗಿದ್ದಾರೆಂಬುದಕ್ಕೆ ಕಳೆದ ವಾರ ಒಂದು ದೃಷ್ಟಾಂತವು ಹೊರಪಟ್ಟಿತು. ಅದರ ವಿವರವೇನಂದರೆ—ಒಬ್ಬ ಹುಡುಗನು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಚುನಾಯಿಸಲ್ಪಡಲಾರದಿರಲು ಮುಖ್ಯೋಪಾಧ್ಯಾಯನು ಅವನನ್ನು ಪ್ರೈವೇಟ್ ಕ್ಯಾಂಡಿಡೇಟಾಗಿ ಪರೀಕ್ಷೆಗೆ ಕಳುಹಿಸಬೇಕೆಂದುದ್ದೇಶಿಸಿ, ಅವನಿಗೆ ಸ್ಕೂಲ್ ರೆಜಿಸ್ಟರಿನ ಪ್ರಕಾರ ಇಪ್ಪತ್ತು ವಯಸ್ಸಾಗಿರದಿದ್ದಾಗ್ಗೂ ಅವನಿಗೆ ಇಪ್ಪತ್ತಕ್ಕಿಂತ ಹೆಚ್ಚು ವಯಸ್ಸಾಗಿದೆಯೆಂದು ಸರ್ಟಿಫಿಕೇಟು ಬರೆದುಕೊಟ್ಟನು. ಆ ಹುಡುಗನು ಆ ವರ್ಷ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲ. ಮಾರಣೆಯ ವರ್ಷದಲ್ಲಾದರೋ ಆ ಮುಖ್ಯೋಪಾಧ್ಯಾಯನು ಆ ಹುಡುಗನಿಗೆ ಹದಿನೈದು ವರ್ಷ ವಯಸ್ಸೆಂದು ನಮೂದಿಸಿ, ತನ್ನ ಸ್ಕೂಲಿನಿಂದ ಅವನನ್ನು ಪರೀಕ್ಷೆಗೆ ಕಳುಹಿಸಿಕೊಟ್ಟನು. ಯೂನಿವರ್ಸಿಟಿಯವರು ಆ ಹುಡುಗನ ವಂಚನೆಯನ್ನು ಗೊತ್ತುಮಾಡಿಕೊಂಡು, ಅವನನ್ನು ದಂಡಿಸಿದರು. ಆದರೆ ಅವನ ವಯಸ್ಸು ಇಷ್ಟೇ ಎಂದು ಬರೆದುಕೊಟ್ಟು ವಂಚಿಸಿದ ಆ ಉಪಾಧ್ಯಾಯನ ನಡವಳಿಕೆಯನ್ನು ಯಾರೂ ತನಿಖೆಮಾಡಿದಂತೆ ತೋರುವದಿಲ್ಲ. ಅವನಿಗೆ ದಂಡನೆಯಾಗುವ ಮಾತಿರಲಿ; ಅವನನ್ನು ಮೊನ್ನೆ ತಾನೆ ಆ ಯೂನಿವರ್ಸಿಟಿಯ ಸೆನೇಟೆಂಬ ಕಾರ್ಯಾಲೋಚನಾ ಸಂಘದವರೊಳಗೆ ಒಬ್ಬ ಸದಸ್ಯನನ್ನಾಗಿ ನೇಮಿಸಿಕೊಂಡಿದಾರೆ!! ಇದಲ್ಲವೇ ಪರಮಾಶ್ಚರ್ಯ!!!

ಈ ಪ್ರಕಾರ ವಂಚನೆಗೂ ಸುಳ್ಳಿಗೂ ಅವಕಾಶವನ್ನು ಕೊಡತಕ್ಕವರನ್ನೇ ವಿದ್ಯಾಭ್ಯಾಸದ ಇಲಾಖೆಯಲ್ಲಿ ಪ್ರೋತ್ಸಾಹಿಸತಕ್ಕ ಸ್ಥಿತಿಗತಿಗಳಿರುವ ಈ ದೇಶದ ದೌರ್ಭಾಗ್ಯವನ್ನು ಕುರಿತು ಯಾರಿಗೆ ಮೊರೆಯಿಡೋಣ! ಆದರೂ ಈ ದೇಶದ ವಿದ್ಯಾವಂತರಲ್ಲಿ ಹೆಚ್ಚುಪಾಲು ಜನಗಳು ಹೀಗೆ ವಂಚಕರಾಗಿರುತ್ತಾರೆಂದು ನಾವು ಎಷ್ಟುಮಾತ್ರಕ್ಕೂ ಹೇಳುವುದೂ ಇಲ್ಲ, ಯೋಚಿಸುವುದೂ ಇಲ್ಲ. ಅಂತೂ ಪ್ರತಿವರ್ಷದಲ್ಲೂ ಅನೇಕ ಮಂದಿ ವಿದ್ಯಾರ್ಥಿಗಳು ಯೂನಿವರ್ಸಿಟಿಯವರನ್ನು ವಂಚಿಸುತ್ತಾ ಬರುತ್ತಿದಾರೆಂಬುದೂ, ಅವರಲ್ಲಿ ಕೆಲವರಿಗಾದರೂ ಈ ದುಷ್ಟ ನಡತೆಯಲ್ಲಿ ಉಪಾಧ್ಯಾಯರು ಸಹಾಯಕರಾಗಿರುತ್ತಾರೆಂಬುದೂ ಅನುಭವವೇದ್ಯವಾಗಿದೆಯಷ್ಟೆ. ಈ ಸಂದರ್ಭದಲ್ಲಿ—"ಕುರುಡರು ಕುರುಡರನ್ನು ನಡೆಸಿದರೆ ಇಬ್ಬರೂ ಕೊಳ್ಳದಲ್ಲಿ ಬೀಳುವರಷ್ಟೆ" ಎಂಬ ಯೇಸುಸ್ವಾಮಿಯ ಮಾತು ನೆನಪಿಗೆ ಬಾರದಿರಲಾರದು.

ಈ ವಿಷಯದಲ್ಲಿ ನಾವು—ವಿದ್ಯಾಭ್ಯಾಸವೆಂದರೇನು? ಅದರ ಉದ್ದೇಶವೇನು? ಎಂದು ಯೋಚಿಸುವದು ಅತ್ಯವಶ್ಯಕವಾಗಿದೆ. ವಿದ್ಯಾಭ್ಯಾಸವೆಂದರೆ, ನೇಮಿಸಲ್ಪಟ್ಟ ಕೆಲವು ಪುಸ್ತಕಗಳನ್ನೋದಿ, ಕೆಲವು ಲೆಕ್ಕಗಳನ್ನು ಮಾಡಿ, ಹಲವು ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿ, ಸರ್ಕಾರದ ಉದ್ಯೋಗಗಳನ್ನು ಸಂಪಾದಿಸಿಕೊಳ್ಳುವುದೋ? ವಿದ್ಯಾರ್ಜನೆಯೆಂಬ ಮಹಾ ಘನವಾದ ವಿಚಾರದಲ್ಲಿ ಸ್ವಲ್ಪ ಮಟ್ಟಿಗಾದರೂ ಆಲೋಚಿಸತಕ್ಕವರು ನಾವು ಕೇಳಿರುವ ಈ ಪ್ರಶ್ನೆಗಳಿಗೆ 'ಹೌದು' ಎಂದು ಎಷ್ಟುಮಾತ್ರವೂ ಹೇಳಲಾರರು. ಯಾವದು ಸತ್ಯವಲ್ಲವೋ ಅಂಥ ನೀಚಕೃತ್ಯವನ್ನು ಮಾಡುವದಾಗಲಿ ಅಂಥ ಮಾತನ್ನು ಬಾಯಿಯಿಂದ ಹೇಳುವದಾಗಲಿ ಮಹಾ ಹೇಯವಾದುದೆಂದು ಹೇಳಿಕೊಡದ ಶಿಕ್ಷಾಕ್ರಮಕ್ಕೆ ವಿದ್ಯಾಭ್ಯಾಸವೆಂಬ ಹೆಸರು ಎಷ್ಟುಮಾತ್ರಕ್ಕೂ ಸಲ್ಲದು. ಸುಳ್ಳುಸುಳ್ಳಾಗಿ ಬರೆದಿರುವ ವಿಷಯಗಳಿಂದ ತುಂಬಿದ ಲೇಖನವೆಂಬುದಾಗಿ ತಿಳಿದಿದ್ದರೂ ಕೂಡ ನಂಬಿಕೆಗೆ ಅರ್ಹವೆಂಬುದಾಗಿ ರುಜು ಹಾಕಿಕೊಡುವ ಉಪಾಧ್ಯಾಯನ ಯೋಗ್ಯತೆಯನ್ನು ಏನೆಂದು ಹೇಳೋಣ! ಅವನು ಯೂನಿವರ್ಸಿಟಿಯ ಆಲೋಚನಾಸಂಘಕ್ಕೆ ಸೇರುವದಕ್ಕೆ ಯೋಗ್ಯನೂ ಅಲ್ಲ, ಹಳ್ಳಿಹಳ್ಳಿಗಳಲ್ಲಿರುವ ಒಂದು ಸಣ್ಣ ಪಾಠಶಾಲೆಯಲ್ಲಾಗಲಿ ವಿದ್ಯೆಯನ್ನು ಹೇಳುವದಕ್ಕೆ ಎಷ್ಟುಮಾತ್ರವೂ ಯೋಗ್ಯನಲ್ಲವೆಂದು ಸಂಶಯವಿಲ್ಲದೆ ಹೇಳಬಹುದು.

ವಿದ್ಯಾಭ್ಯಾಸವನ್ನು ಮಾಡುವ ಕಾಲದಲ್ಲಿ ಮತಸಂಬಂಧವಾದ ಪಾಠಗಳನ್ನು ಹೇಳುವದಕ್ಕೆ ಅವಕಾಶವಿರದಂತೆ ಕಾನೂನುಗಳನ್ನು ಏರ್ಪಡಿಸುವದರಲ್ಲಿ ಕೆಲವು ಸಂಸ್ಥಾನಗಳ ಅಧಿಕಾರಿಗಳು ಪ್ರಯತ್ನಿಸುತ್ತಿದಾರೆಂಬುದು ಸರ್ವರಿಗೂ ತಿಳಿದ ವಿಷಯವೇ. ಇತರ ಪಾಠಗಳೊಂದಿಗೆ ಮತಸಂಬಂಧವಾದ ಪಾಠಗಳನ್ನು ಹೇಳುವ ವಿಷಯದಲ್ಲಿ ಅನೇಕ ಆಕ್ಷೇಪಗಳು ಇವೆ. ಅವುಗಳನ್ನು ಕುರಿತು ಪ್ರಸ್ತುತ ವಿವರಿಸಲವಶ್ಯವಿಲ್ಲ. ಆದರೆ ಸುಳ್ಳು ಹೇಳುವದೂ [illegible] ಸುವದೂ ಹೇಯಕೃತ್ಯವೆಂದು ಹೇಳಿಕೊಡತಕ್ಕವರ ಕೆಲಸಕ್ಕೆ ಅಭ್ಯಂತರವನ್ನು ಕಲ್ಪಿಸುವದು ನ್ಯಾಯವಲ್ಲ. ಕ್ರಿಸ್ತಮತಸ್ಥರು ತಮ್ಮ ಸ್ಕೂಲುಗಳಿಗೆ ಬರುವ ವಿದ್ಯಾರ್ಥಿಗಳಿಗೆ ತಮ್ಮ ಮತವನ್ನು ಕುರಿತು ಬೋಧಿಸಬಾರದೆಂದು ಅಪೇಕ್ಷಿಸುವ ಯಾವ ಹಿಂದೂ ಸರ್ಕಾರದವರೇ ಆಗಲಿ, ಯಾವದಾದರೊಂದು ಮತದ ವಿಷಯವಾಗಿ ಬೋಧಿಸುವಂತೆ ಏರ್ಪಾಡು ಮಾಡಲಿ. ಸ್ಪಷ್ಟವಾಗಿ ವಂಚನೆ ಸುಳ್ಳು ಮೊದಲಾದವುಗಳನ್ನು ಅಕೃತ್ಯವೆಂದು ಖಂಡಿಸುವ ಮತತತ್ವವನ್ನು ಬೋಧಿಸುವದೇ ಅತ್ಯವಶ್ಯಕವಾಗಿದೆ.

ಶ್ರೀನಿವಾಸನು ಸುಳ್ಳುರುಜು ಹಾಕಿದರೆ ಯಾರಿಗೇನು ನಷ್ಟವಾಯಿತು? ಅವನನ್ನು ದಂಡಿಸುವದಕ್ಕೆ ಅವಶ್ಯವಿಲ್ಲವೆಂದು ಕೆಲವರು ಹೇಳುವರು. ಈ ಮಾತು ಸಲ್ಲದು. ಅಯೋಗ್ಯನಾದವನು ಯೂನಿವರ್ಸಿಟಿಯ ಸರ್ಟಿಫಿಕೇಟನ್ನು ವಂಚನೆಯಿಂದ ಪಡೆದುಕೊಳ್ಳುವುದರಲ್ಲಿ ಆ ಯೂನಿವರ್ಸಿಟಿಗೆ ನಷ್ಟವಿಲ್ಲವೋ? ಅಂಥ ವಂಚಕನು ಯಾವದಾದರೊಂದು ಉದ್ಯೋಗವನ್ನು ಸಂಪಾದಿಸಿಕೊಂಡರೆ ಜನರಿಗೆ ನಷ್ಟವಲ್ಲವೇ? "ಪ್ರತಿಯೊಬ್ಬನು ಸುಳ್ಳನ್ನು ಬಿಟುಬಿಟ್ಟು ತನ್ನ ನೆರೆಯವನ ಸಂಗಡ ಸತ್ಯವನ್ನೇ ಮಾತಾಡಲಿ, ಯಾಕಂದರೆ ನಾವು ಪರಸ್ಪರವಾಗಿ ಒಂದು ಶರೀರದ ಅವಯವಗಳಾಗಿರುತ್ತೇವೆ" ಎಂದು ಸತ್ಯವೇದವು ಹೇಳುತ್ತದೆ. ಇದರ ಅಭಿಪ್ರಾಯವೇನಂದರೆ—ಒಂದು ಅವಯವವು ರೋಗಪೀಡಿತವಾದರೆ ದೇಹದ ಸರ್ವಭಾಗವೂ ಅನಾರೋಗ್ಯವುಳ್ಳದ್ದಾಗುತ್ತದೆ. ಒಂದು ಜನಾಂಗದವರಲ್ಲಿರುವವರೆಲ್ಲರೂ ಒಬ್ಬರಿಬ್ಬರು ಸೇರಿದ ಅವಯವಗಳಾಗಿದ್ದಾರೆ. ಅವರಲ್ಲೊಬ್ಬನು ಸುಳ್ಳುಗಾರನಾಗಿದ್ದರೆ ಅಥವಾ ಇನ್ನಾವ ದುಷ್ಟ ಕಾರ್ಯವನ್ನು ಮಾಡಿದರೆ ಆ ಜನಾಂಗಕ್ಕೆಲ್ಲಾ ನಷ್ಟವಾಗುತ್ತದೆ. ಅಂಥ ದುಷ್ಕಾರ್ಯವನ್ನು ಯಾರು ಮಾಡಿದರೂ ಸರಿಯೇ ಅವನನ್ನು ವಿಧಿಗನುಸಾರವಾಗಿ ಖಂಡಿತವಾಗಿ ಶಿಕ್ಷಿಸುವದರಿಂದ ಒಟ್ಟು ಜನರಿಗೇನೆ ಲಾಭವೆಂದರಿಯಬೇಕು.

ಯಾವ ಸಮಾಜವಾದರೂ ಪರಿಶುದ್ಧವಾಗಬೇಕಾದಲ್ಲಿ ಸಮಾಜದಲ್ಲಿರುವ ಪ್ರತಿಯೊಬ್ಬನು ಅಸತ್ಯವನ್ನು ಬಿಟ್ಟು ನಡೆಯುವದಕ್ಕೆ ಪ್ರಯತ್ನಿಸತಕ್ಕದ್ದು. ಅಸತ್ಯವೆಂಬ ನೀಚಭಾವವು ನಮ್ಮಲ್ಲಿರುವದಾದರೆ ಅದನ್ನು ಹೊರಡಿಸಿ ಬಿಡಬೇಕು. ಈ ಕಾರ್ಯವು ಮಹಾ ಶ್ರೇಷ್ಠನಾದ ಸತ್ಯದ ಆತ್ಮನ ಮೂಲಕವೇ ಸಾಧ್ಯವಾಗುವದು. ಯೇಸುಸ್ವಾಮಿಯನ್ನು ನಂಬುವವರಿಗೆಲ್ಲಾ ಆತನು ಆ ಆತ್ಮನನ್ನು ಅನುಗ್ರಹಿಸುವದಾಗಿ ಮಾತು ಕೊಟ್ಟಿದ್ದಾನೆ. "ನಾನು ತಂದೆಯನ್ನು ಪ್ರಾರ್ಥಿಸುವೆನು ಆತನು ನಿಮಗೆ ಸತ್ಯಾತ್ಮನನ್ನು ಕೊಡುವನು, ಆ ಆತ್ಮನು ನಿಮ್ಮೊಂದಿಗೆ ಸದಾಕಾಲವೂ ಇರುವನು" ಎಂದು ಸ್ವಾಮಿಯು ಹೇಳಿರುವ ಮಾತನ್ನು ನಮ್ಮ ದೇಶದ ವಿದ್ಯಾಪಕ್ಷಪಾತಿಗಳು ಯಾವಾಗ ತಮ್ಮ ಅನುಭವಕ್ಕೆ ತಂದುಕೊಳ್ಳುವರೋ ಆ ಕಾಲಕ್ಕೆ ಯೂನಿವರ್ಸಿಟಿಯ ವಂಚನೆಗಳಾಗಲಿ ಇನ್ನಾವ ಅಕೃತ್ಯಗಳಾಗಲಿ ನಡೆಯದೆ, ಈ ದೇಶವು ನಿಜವಾಗಿ ಪುಣ್ಯದೇಶವಾಗಿರುವದು. ಆ ಸತ್ಯಾತ್ಮನನ್ನು ವಿದ್ಯಾವಂತರೂ ಇತರರೂ ಸಹಾ ಹೊಂದುವರಾಗಲಿ!

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನ್ ಪಟ್ಟಣದಲ್ಲಿ ಕಳೆದ ವಾರ ನದಿಯ ದಡದ ಮೇಲಿದ್ದ ಬಾರೀ ಭತ್ತದ ಕಾರ್ಖಾನೆಗೆ ಬೆಂಕಿಬಿದ್ದು, ೧,೨೯,೦೦೦ ರೂಪಾಯಿನ ಮಾಲ್ ಬೂದಿಯಾಯಿತು.

* * * *

ಬೊಂಬಾಯಿ ಪಟ್ಟಣದಲ್ಲಿ ಈ ಸಲ ಪ್ರಾರಂಭವಾಗಿ ನಡೆಯುತ್ತಿರುವ ಕಸಬುಗಳ ಪ್ರದರ್ಶನೋತ್ಸವದಿಂದ ಅದನ್ನು ಏರ್ಪಡಿಸಿದ ಸಂಘದವರಿಗೆ ಕಡೇ ಪಕ್ಷ ೫೦,೦೦೦ ರೂಪಾಯಿ ಲಾಭ ಬರುವದೆಂದು ಹೇಳುತ್ತಾರೆ.

* * * *

ಹಿಂದಿನ ವಾರ ಈ ರಾಷ್ಟ್ರದಲ್ಲಿ ೨೯,೬೧೯ ಜನರು ಪ್ಲೇಗ್ ಉಪದ್ರ ತಗಲಿ ಕಾಲವಾದರು. ಈ ಪೈಕಿ ವಾಯವ್ಯ ಪ್ರಾಂತ್ಯದಲ್ಲಿ ೧೧,೬೬೭ ಜನ, ಪಂಜಾಬ್ ೫,೫೬೯ ಜನರು, ಬಂಗಾಳ ೩,೩೧೮ ಮಂದಿ, ಬೊಂಬಾಯಿ ಆಧಿಪತ್ಯದಲ್ಲಿ ೨,೮೮೬ ಜನ ಕಾಲವಾಗಿದಾರೆ.

* * * *

ಕಳೆದ ವಾರ ಕಲ್ಕತ್ತೆಯಲ್ಲಿ ದೇವೇಂದ್ರನಾಥ ಟಾಗೋರ್ ಎಂಬ ದೊಡ್ಡ ಮನುಷ್ಯರು ಕಾಲವಾದರು. ಇವರು ಬ್ರಹ್ಮಸಮಾಜದವರಲ್ಲಿ ಬ್ರಹ್ಮರ್ಷಿ ಎಂಬ ಹೆಸರನ್ನು ಪಡೆದು, ದೈವಭಕ್ತಿ ಪರಿಪೂರ್ಣರಾಗಿದ್ದರು. ಆ ದಿನ ಗೌರವಾರ್ಥವಾಗಿ ಪಟ್ಟಣದ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟದ್ದವು.

* * * *

ಪಂಜಾಬ್ ಆಧಿಪತ್ಯದಲ್ಲಿ ದೇಶೀಯ ಪಾಠಶಾಲೆಗಳು ೪,೬೦[illegible] ಇರುತ್ತವೆಂತಲೂ, ಇವುಗಳಲ್ಲಿ ೬೭,೩೧೫ ಮಂದಿ ಬಾಲಕರು ವಿದ್ಯಾಭ್ಯಾಸ ಮಾಡುತ್ತಿದಾರೆಂತಲೂ, ಈ ಪೈಕಿ ಒಂದು ಪಾಠಶಾಲೆಗಾದರೂ ಸರ್ಕಾರದವರು ಸ್ವಲ್ಪವೂ ದ್ರವ್ಯಸಹಾಯಮಾಡುತ್ತಿಲ್ಲವೆಂತಲೂ ತಿಳಿದುಬಂದಿದೆ.

* * * *

ಕೊಡಗಿನ ದಕ್ಷಿಣ ಭಾಗದಲ್ಲಿರುವ ವೀರರಾಜೇಂದ್ರಪೇಟೆಯಲ್ಲಿ ಕಳೆದ ೧೪ನೇ ತಾರೀಖಿನ ದಿನ ಡಾಕ್ಟರ್ ಕರ್ನಲ್ ಬೇಯ್ಲಿಯವರು ಹೊಸದಾಗಿ ಕಟ್ಟುವ ಆಸ್ಪತ್ರೆಗೆ ಅಸ್ತಿಭಾರವನ್ನು ಹಾಕಿದರು. ಆಸ್ಪತ್ರೆಗಾಗಿ ಒಂಬತ್ತು ಬಂಗಲೆಗಳನ್ನು ಕಟ್ಟುವರು. ಅವುಗಳ ಖರ್ಚು ೮೦ ಸಾವಿರಕ್ಕೆ ಬರಬಹುದೆಂದು ತೋರುತ್ತೆ.

* * * *

ಪೂನಾದಲ್ಲಿ ಭಾವೆನಾರಾಯಣನೆಂಬುವನೂ, ವಿಠಲದೇವ್ ಎಂಬುವನೂ ಒಬ್ಬ ಹುಡುಗನನ್ನು ಹಿಡಿದುಕೊಂಡು ಹೋಗಿ, ಅವನ ಮೈಮೇಲಿನ ನಗಗಳನ್ನೆಲ್ಲಾ ತೆಗೆದುಕೊಂಡು, ಆ ಹುಡುಗನನ್ನು ಕೊಂದುಬಿಟ್ಟು ಅವನ ಶವ [illegible] ಹೋಗಿದ್ದರು. ಸೆಷನ್ಸ್ ಜಡ್ಜ್ ಲ್ಯೂಕಾಸ್ ಎಂಬುವರು ಇವರಿಬ್ಬರನ್ನೂ ಗಲ್ಲಿಗೆ ಹಾಕುವ ಶಿಕ್ಷೆ ವಿಧಿಸಿದರು. ಕಳೆದ ೮ನೇ [illegible] ದಿನ ಇವರಿಬ್ಬರನ್ನು ಗಲ್ಲಿಗೆ ಹಾಕಿದರು.

ಬೊಂಬಾಯಿ ಅಧಿಪತ್ಯದ ಗವರ್ನರ್ ಲಾರ್ಡ್ ಲಾಮಿಂಗ್ಟನ್‌ರ ಪತ್ನಿ ಪುತ್ರಾದಿಗಳು ಮಹಾಬಲೇಶ್ವರದಲ್ಲಿ ಇದ್ದರು. ಅವರ ಮಗನಿಗೆ ತುಂಬಾ ಕಠಿಣವಾದ ಚಳಿಜ್ವರ ಪ್ರಾಪ್ತವಾಯಿತು. ಅವರೆಲ್ಲಾ ಬೊಂಬಾಯಿಗೆ ಬಂದಿರುತ್ತಾರೆ. ಬೊಂಬಾಯಿನ ...ದ ಮುಖ್ಯ ಡಾಕ್ಟರುಗಳು ಸೇರಿ ಆಲೋಚನೆಮಾಡಿ, ಆ ...ನಿಗೆ ಚಿಕಿತ್ಸೆ ಮಾಡುತ್ತಿದ್ದಾರೆ. ಇದಕ್ಕಾಗಿ ಗವರ್ನರವರು ...ಲ್ಲಾ ಸಂತೋಷೋತ್ಸವಗಳನ್ನೂ ಸದ್ಯ ನಿಲ್ಲಿಸಿಬಿಟ್ಟರು.

* * * *

ಮದರಾಸ್ ಪಟ್ಟಣದಲ್ಲಿ ಕಳೆದ ವಾರ ೩—೪ ಜನರಿಗೆ ಪ್ಲೇಗ್ ತಗಲಿದ್ದರಿಂದ ಪಟ್ಟಣದವರಿಗೆಲ್ಲಾ ತುಂಬಾ ಗಾಬರಿಯಾಗಿ... ಚಿಂದಿಯಾರಪೇಟೆ, ಕಾಸ್ಸಿಂ, ಮೊದಲಾದ ಭಾಗಗಳಲ್ಲಿ ಇಲಿ... ಸತ್ತುಬಿದ್ದವು. ಆ ಭಾಗಗಳ ಜನರನ್ನೆಲ್ಲಾ ಮ್ಯುನಿಸಿಪಾಲಿಟಿ...ವರು ಕ್ಯಾಂಪುಗಳಿಗೆ ಕಳುಹಿಸಿ, ನೂರಾರು ಗುಡಿಸಲುಗಳನ್ನು ...ಹಾಕಿದರು. ಈಗ ಸುಮಾರು ೧,೦೦೦ ಜನರು ಹೆಲ್ತ್ ಕ್ಯಾಂಪಿ...ದ್ದಾರೆ. ಈಚೆಗೆ ಯಾರಿಗೂ ಪ್ಲೇಗ್ ತಗಲಿ ಇಲ್ಲವೆಂದು ತಿಳಿ...ಯಿತು.

* * * *

ಬೊಂಬಾಯಿ ಪಟ್ಟಣದ ವಿಕ್ಟೋರಿಯಾ ಡಾಕ್ ಎಂಬ ಬಂದ...ಲ್ಲಿ ವೇಪರಾಸ್ ಮಾಲುಗಳನ್ನೆಲ್ಲಾ ಭರ್ತಿಮಾಡಿದ್ದರು. ಅದ...ವೈನ್, ಬ್ರಾಂದಿ, ಚೀನಾ ಬಟ್ಟೆಗಳು, ಇವೇ ಮೊದಲಾದ ...ಪ್ರಕಾರ ಸರಕುಗಳೇ ತುಂಬಿದ್ದವು ಅಲ್ಲಿಗೆ ಹ್ಯಾಗೋ ಬೆಂಕಿ ...ದ್ದು, ಆ ಕಟ್ಟಡವೆಲ್ಲಾ ಸಂಪೂರ್ಣವಾಗಿ ಸುಟ್ಟು ಬೂದಿಯಾಯಿ... ಸುಮಾರು ನಾಲ್ಕುವರೆ ಲಕ್ಷ ರೂಪಾಯಿ ಸಾಮಾನು ಸುಟ್ಟು ಹೋಗಿದೆ ಎನ್ನುವುದಕ್ಕೆ ಅಡ್ಡಿಯಿಲ್ಲ. ಬೆಂಕಿ ಬೀಳುವುದಕ್ಕೆ ಕಾರಣವೇನೋ ತಿಳಿಯಲಿಲ್ಲ.

* * * *

ಹಿಂದಿನ ಬುಧವಾರದಿಂದ ಬೊಂಬಾಯಿ ಪಟ್ಟಣದಲ್ಲಿ ಸಹಸ...ವನ್ನು ಚಳಿ ಪ್ರಾಪ್ತವಾಗಿರುವುದರಿಂದ ಬಡಬಗ್ಗರಾದ ಸುಮಾರು ೧೦ ಲಕ್ಷ ಪ್ರಜೆಗಳು ನಾನಾ ಕಷ್ಟಗಳಿಗೆ ಸಿಕ್ಕಿ ಪ್ಲೇಗ್ ಮೊದಲಾದ ರೋಗಗಳಲ್ಲಿ ಸರಳ ವ್ಯಥಪಡುತ್ತಿದ್ದಾರೆ ಆ ಪಟ್ಟಣದ...ಲ್ಲಿ ...ಮಾಬಿನ ಉಪದ್ರವದ ದೆಸೆಯಿಂದ ಈಸಲ ಆಗಿರುವ ಮತ್ತು ಆಗುತ್ತಿರುವಷ್ಟು ಮರಣಗಳು ಹಿಂದೆ ಯಾವಾಗಲೂ ಇಲ್ಲವೆಂದೂ, ಮ್ಯುನಿಸಿಪಾಲಿಟಿಯವರು ಅದನ್ನು ಅಣಗಿಸುವುದಕ್ಕೆ ತುಂಬಾ ಸಾಹಸಪಡುತ್ತಿದ್ದಾರೆಂದೂ ತಿಳಿದುಬಂದಿದೆ.

* * * *

ವಿಲಾಯಿತಿಯ ಮಹಾರಾಜಾ ಚಕ್ರವರ್ತಿ ಯವರ ಜ್ಯೇಷ್ಠಪುತ್ರರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಪರಿವಾರ ಸಹಿತ ಈ ವರುಷ ಹಿಂದುಸ್ಥಾನಕ್ಕೆ ಬರುತ್ತಾರೆಂತಲೂ, ಮುಂದಿನ ಅಕ್ಟೋಬರ್ ನೊವೆಂಬರ್ ತಿಂಗಳಲ್ಲಿ ದಕ್ಷಿಣ ದೇಶದ ಸಂಸ್ಥಾನಗಳಿಗೂ ...ಮಾಡುವವರಾಗಿದ್ದಾರೆಂತಲೂ ಕಳೆದ ವಾರ ಒಂದು ತಂತೀ ವರ್ತಮಾನ ಬಂದಿತು. ತರುವಾಯ ೪—೫ ದಿನಗಳ ಮೇಲೆ ಅವರು ...ದಯಮಾಡುವುದು ಇನ್ನೂ ನಿಷ್ಕರ್ಷೆಯಾಗಿಲ್ಲವೆಂದೂ ಬಹುಶಃ ಬಂದರೂ ಬರಬಹುದೆಂದೂ ಇನ್ನೊಂದು ತಂತೀ ವರ್ತಮಾನ ಬಂದಿದೆ

* * * *

ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳ ...ಸ್ತ್ರೀಯವರಿಗೆ ವಿಲಾಯಿತಿಯಲ್ಲಿ ಕಾಯಿಲೆ ಚನ್ನಾಗಿ ವಾಸಿಯಾಗಿರುವುದು. ಅವರು ಈಗ ವಿಶೇಷ ದೀರ್ಘವಾದ ಸಮುದ್ರಯಾನ ಮಾಡಬೇಕೆಂದು ವೈದ್ಯರು ಹೇಳಿದ್ದಾರೆ ಆದಕಾರಣ ಆಕೆಯವರು ಇದೇ ಫೆಬ್ರವರಿ ೧೦ನೆಯ ತಾರೀಖು ಲಂಡನ್ ಪಟ್ಟಣದಲ್ಲಿ ತಮ್ಮ ಮಕ್ಕಳ ಸಹಿತ ಅರೇಬಿಯಾ ಎಂಬ ಜಹಜು ಹತ್ತಿ ಸುಮಾರು ೨೫ ದಿನಗಳ ತನಕ ಸಮುದ್ರಯಾನ ಮಾಡಿಕೊಂಡು, ಮುಂದಿನ ತಿಂಗಳ ಮೊದಲನೆಯ ವಾರ ಬೊಂಬಾಯಿಗೆ ಬಂದು, ಜಹಜು ಇಳಿಯುವವರಾಗಿದ್ದಾರೆ.

* * * *

ಪ್ರಪಂಚದಲ್ಲೆಲ್ಲಾ ಅನೇಕ ಡಾಕ್ಟರುಗಳು ಕುಷ್ಠ ರೋಗವು ವಾಸಿಯಾಗತಕ್ಕದ್ದಲ್ಲವೆಂದು ಅಭಿಪ್ರಾಯಪಟ್ಟಿದ್ದರು ಈಚೆಗೆ ಕ್ಯಾಪ್ಟನ್ ರೋಸ್ಟ್ ಎಂಬ ಡಾಕ್ಟರವರು ಕುಷ್ಠರೋಗಕ್ಕೆ ಔಷಧವನ್ನು ಕಂಡು ಹಿಡಿದು ರಂಗೂನ್ ಪಟ್ಟಣದಲ್ಲಿ ಆಸ್ಪತ್ರೆಯನ್ನಿಟ್ಟು ಸುಮಾರು ೬೦—೭೦ ಜನರನ್ನು ವಾಸಿಮಾಡಿದ್ದಾರೆ. ಇದೇ ಪ್ರಕಾರ ಎಲ್ಲಾ ಜನರನ್ನೂ ವಾಸಿಮಾಡಲೆಂಬದಾಗಿ ಸಿಂಲಾ ಪಟ್ಟಣದ ಹತ್ತಿರ ಕಸೌಲಿಯಲ್ಲಿಟ್ಟಿರುವ ಆಸ್ಪತ್ರೆಗೆ ಹೋಗಿ ಅಲ್ಲಿ ತಾವು ಕಂಡು ಹಿಡಿದಿರುವ ಔಷಧವನ್ನು ಎಲ್ಲರಿಗೂ ತಿಳಿಸುವುದಕ್ಕೆ ಕಲ್ಕತ್ತಾಕ್ಕೆ ಬಂದಿರುತ್ತಾರೆ.

* * * *

ಪೂನಾದಲ್ಲಿ ಕಳೆದ ವಾರ ಇಬ್ಬರು ಬ್ರಾಹ್ಮಣ ಸಹೋದರರು ಖೋಟಾ ನಾಣ್ಯ ಮಾಡುತ್ತಿದ್ದದ್ದರಿಂದ ಪೊಲೀಸಿನವರು ಅವರಿಬ್ಬರನ್ನೂ ಹಿಡಿದಿರುತ್ತಾರೆ. ಮುಂಚೆ ಹಿತ್ತಾಳೆ ಕೆಲಸ ಮಾಡುತ್ತಿದ್ದ ಇವರು ಕ್ರಮೇಣ ದೊಡ್ಡಾಣೆ, ನಾಲ್ಕಾಣೆ, ಅರ್ಧ ರೂಪಾಯಿಗಳನ್ನು ತಯಾರಿಸಿ, ಅಂಗಡಿಯಲ್ಲಿ ಚಲಾಯಿಸುತ್ತಾ ಇದ್ದರು. ಕಳೆದ ೨೩ನೇ ತಾರೀಖು ಭಾನುವಾರ ಅಣ್ಣನು ಒಂದು ರೂಪಾಯಿಯನ್ನು ...ಟ್ಟಿ ಹೊಗೇಸೊಪ್ಪಿನವನಿಗೆ ಕೊಟ್ಟು ಒಂದು ಪಟ್ಟಿಗೆಯನ್ನು ತೆಗೆದುಕೊಂಡನು. ನಾಯಿವನ ಇನ್ನೊಂದು ಪಟ್ಟಿಗೆಯನ್ನು ತೆಗೆದುಕೊಳ್ಳುವನಷ್ಟರಲ್ಲಿ ಹೊ ಬಾಗ ಪೊಲೀಸಿನವರು ಇವನನ್ನು ಹಿಡಿದು ... ಅವನ ಹತ್ತಿರ ಕೆಲವು ನಾಣ್ಯಗಳೂ, ದೊಡ್ಡಾಣೆಗಳೂ ಸಿಕ್ಕಿದವು. ಅವನ ಮನೆಯನ್ನು ಶೋಧಿಸಿದಾಗ್ಗೆ ನಾಣ್ಯಗಳನ್ನು ಮಾಡುವ ಕೆಲವು ಅಚ್ಚುಗಳು ಸಿಕ್ಕಿದವು. ಈಗ ವಿಚಾರಣೆ ಆಗುತ್ತಿದೆ.

* * * *

ಇಂಡಿಯಾದಿಂದ ಮಹಮ್ಮದೀಯರ ಯಾತ್ರಾಸ್ಥಾನವಾದ ಮಕ್ಕಾಕ್ಕೆ ರೈಲುಹಾಕುವುದಕ್ಕೆ ಇದುವರೆಗೆ ಬಂದಿರುವ ಚಂದಾ ಹಣವು ಒಂದು ಕೋಟಿಯೂ ಮೂವತ್ತು ಲಕ್ಷ ರೂಪಾಯಿಗಳು. ಕಳೆದ ವಾರ ಪಂಜಾಬ್ ದೇಶದ ರಾಜಧಾನಿಯಾದ ಲಾಹೋರ್ ನಗರದಲ್ಲಿ ಪ್ರಕಟವಾಗುವ ಒಂದಾನೊಂದು ಪತ್ರಿಕೆಯ ಎಡಿಟರವರು ೧,೧೨೫ ರೂಪಾಯಿಗಳನ್ನು ಚಂದಾ ಎತ್ತಿ ಕಳುಹಿಸಿರುತ್ತಾರೆ. ಇವರು ಕಳೆದ ಕೆಲವು ಕಾಲದಿಂದಲೂ ಕ್ರಮಪಟ್ಟು ಸುಮಾರು ೧೯,೭೬೫ ರೂಪಾಯಿಗಳನ್ನು ಕೂಡಿಸಿಟ್ಟಿರುತ್ತಾರೆ. ಕೆಲವು ದಿನದಲ್ಲೇ ಕಾಮಗಾರಿಯು ಪ್ರಾರಂಭವಾಗುವುದು.

* * * *

ಆಲೆಪ್ಪಿ ನಗರದಲ್ಲಿ ಸ್ವಾಮಿ ರಾಮಕೃಷ್ಣಾನಂದರವರು ೧೫,೦೦೦ ರೂಪಾಯಿ ಮುಟ್ಟಿಸಿ ತಯಾರಾಗಿದ್ದ ಹಿಂದೂ ಕಾಲೇಜನ್ನು ಪ್ರತಿಷ್ಠೆಮಾಡಿದರು. ಈ ವಿದ್ಯಾಶಾಲೆಯಲ್ಲಿ ಮೂರು ವಿಧವಾದ ವಿದ್ಯೆ ಕಲಿಸಬೇಕೆಂದು ಏರ್ಪಾಟಾಗಿದೆ (೧) ಹುಡುಗರಿಗೆ ಸಾಧಾರಣವಾದ ಪ್ರಾಪಂಚಿಕ ವಿದ್ಯೆಯನ್ನು ಹೇಳಿಕೊಡುವುದು, (೨) ಈ ರಾಷ್ಟ್ರದಲ್ಲಿ ಅನೂಚಾನವಾಗಿ ಬಂದಿರುವ ಆರ್ಯಮತ ತತ್ವಗಳನ್ನು ಕಲಿಸುವುದು, (೩) ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುವುದು ನೂರಾರುಮಂದಿ ವಿದ್ಯಾರ್ಥಿಗಳು ಅದೇ ದಿನ ಸ್ಕೂಲಿಗೆ ಸೇರಲು ಅರ್ಜಿಕೊಟ್ಟರು.

* * * *

ಹೈದರಾಬಾದ್ ಸಂಸ್ಥಾನದ ಔರಂಗಬಾದ್ ಎಂಬ ಪಟ್ಟಣದ ಮಾರ್ಗವಾಗಿ ಒಂದಾನೊಂದು ಸೈನ್ಯವು ಉತ್ತರದೇಶದಿಂದ ಬರುತ್ತೆಂದು ವರ್ತಮಾನವಿತ್ತು. ಇದನ್ನು ಯಾವನೋ ಒಬ್ಬನು ತಿಳಿದು, ಗವರ್ನಮೆಂಟ್ ಅಧಿಕಾರಿಯು ಹಾಗೆ ಬಟ್ಟೆಬರೆಗಳನ್ನು ಹಾಕಿಕೊಂಡು, ಕತ್ತಿಯನ್ನು ನಡುವಿಗೆ ಬಿಗಿದು, ಒಂದಾನೊಂದು ಕೋಳಿ ಮಾರುವ ಅಂಗಡಿಗೆ ಹೋಗಿ ಕೆಲವು ಕೋಳಿಗಳನ್ನೂ ಮೊಟ್ಟೆಗಳನ್ನೂ ಸ್ವಲ್ಪ ನಗದು ಹಣವನ್ನೂ ತೆಗೆದುಕೊಂಡು ಪರಾರಿಯಾದನು ಈ ವಿಷಯವು ಪೊಲೀಸಿನವರಿಗೆ ತಿಳಿದು ಅವನನ್ನು ರೈಲ್ವೆ ಸ್ಟೇಷನ್ನಲ್ಲಿ ಹಿಡಿದು ಸೈದುಮಾಡಿದ್ದಾರೆ. ಮೊಕದ್ದಮೆಯು ನಡೆಯುತ್ತಿದೆ.

* * * *

ಬೊಂಬಾಯಿ ಪಟ್ಟಣದ ಮಾಂಬಾದೇವೀ ಎಂಬ ಬೀದಿಯಲ್ಲಿ ರಾಜ ಬಹದೂರ್ ಅಮರಜಿತು ಎಂಬೊಬ್ಬ ಹಿಂದುವು ೧೦ ರೂಪಾಯಿ ಬಾಬತು ಸುಳ್ಳು ನೋಟುಗಳನ್ನು ಜನರಿಗೆ ಬಿಕರಿ ಮಾಡಿದ್ದುದನ್ನು ಪೊಲೀಸ್ ಕಮಿಷನರು ಪತ್ತೆಮಾಡಿದರು ಅವನನ್ನು ಕರೆದುಕೊಂಡು ಹೋಗುವಲ್ಲಿ ಎಲ್‌ಫಿನ್‌ಸ್ಟನ್ ರೋಡಿನಲ್ಲಿರುವ ಒಂದು ಚಾಳ್‌ನೊಳಗೆ ಅವನು ಕೊಠಡಿಮಾಡಿಕೊಂಡಿದ್ದುದೂ, ಅದರಲ್ಲಿ ಅವನು ಫೋರ್ಜರಿ ನೋಟುಗಳನ್ನು ಮಾಡುತ್ತಿದ್ದುದೂ ತಿಳಿಯಿತು. ಅದರೊಳಗಿದ್ದ ಸಾಮಾನುಗಳನ್ನೆಲ್ಲಾ ಜಪ್ತಿಮಾಡಿ ಕೋರ್ಟಿನಲ್ಲಿಟ್ಟಿದ್ದಾರೆ. ಈಗ ಅವನನ್ನು ಸೆಷನ್ ವಿಚಾರಣೆಗೆ ಗುರಿಮಾಡಿರುವರು.

* * * *

ಪಂಜಾಬ್ ಅಧಿಪತ್ಯದಲ್ಲಿ ಜೀಲಂ, ಚೀನಾಬು ಎಂಬೀ ಸಿಂಧು ನದಿಯ ಉಪನದಿಗಳಿಂದ ನಾಲ್ಕಾರು ಭಾರೀ ನಾಲೆಗಳನ್ನು ನೂರಾರು ಮೈಲಿಗಳ ದೂರ ತೆಗೆದು, ಲಕ್ಷಾಂತರ ಎಕರೆ ಜಮೀನನ್ನು ತರೀ ಸಾಗುವಳಿಗೆ ತರಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಕೊಟ್ಟಿದ್ದಾರೆ ಈ ಕಾಮಗಾರಿ ಪೂರೈಸುವುದಕ್ಕೆ ಕಡೇ ಪಕ್ಷ ಒಂಬತ್ತು ವರುಷಗಳು ಹಿಡಿಯುವವು. ಪ್ರತಿ ವರುಷವೂ ೧೧೫ ಲಕ್ಷ ರೂಪಾಯಿನಂತೆ ಅದರ ಕಾಮಗಾರಿಗೆ ಕೊಡಬೇಕೆಂದೂ, ಮುಂದಿನ ಮಾರ್ಚಿ ಏಪ್ರಿಲ್ ತಿಂಗಳಲ್ಲಿ ಕೆಲಸ ಪ್ರಾರಂಭಿಸುತ್ತಾರೆಂದೂ ತಿಳಿದು ಬರುವುದು. ಹತ್ತಾರು ವರುಷಗಳ ವರೆಗೆ ೧,೫೦,೦೦೦ ಜನರು ಅಲ್ಲಿದ್ದು ಕಾಮಗಾರಿ ನಡಿಸುವರು.

* * * *

ಬೊಂಬಾಯಿ ಪಟ್ಟಣದ ಕಾಳ್ಬಾ ದೇವಿ ರಸ್ತೆಯಲ್ಲಿರುವ ಜವಹಾರಾಸ್ ಚಗನ್‌ಲಾಲ್ ಎಂಬೊಬ್ಬ ವರ್ತಕನು ಅಂಚೆಯ ಮೇಲೆ ೨೬ ತೋಲಾ (ಬೆಲೆ ಸುಮಾರು ೬೪೦ ರೂ) ಚಿನ್ನವನ್ನು ಬಾಂಗಿಮಾಡಿ ಜಾಂನಗರಕ್ಕೆ ಮಾಘಾ ಜಯರಾಂ ಎಂಬುವವನಿಗೆ ಕಳುಹಿಸಿದನು. ಇವನು ಭಾಂಗಿಯನ್ನು ಒಡೆದು ನೋಡಿದಾಗ ಅದರಲ್ಲಿ ಸೀಸದ ಗಟ್ಟಿ ಇತ್ತೇ ಹೊರತು ಚಿನ್ನವಿರಲಿಲ್ಲ. ಪೊಲೀಸಿನವರು ತನಿಖೆ ಮಾಡಿದ್ದರಲ್ಲಿ ಆ ಭಾಂಗಿಯ ಮೊಹರುಗಳೆಲ್ಲಾ ಬೊಂಬಾಯಿನಿಂದ ಲಾಲ್‌ಪುರತನಕ ಹೋಗುವವರೆಗೂ ಸರಿಯಾಗಿದ್ದವೆಂತಲೂ ಅಲ್ಲಿಂದ ಜಾಂನಗರಕ್ಕೆ ಹೋಗುವಲ್ಲಿ ಬದಲಾಯಿಸಿ ಹೋಗಿದ್ದವೆಂತಲೂ ತಿಳಿದುಬಂದಕಾರಣ ಅದನ್ನು ಕುರಿತು ವಿಚಾರಣೆ ಮಾಡುತ್ತಿದ್ದಾರೆ.

* * * *

ಮದರಾಸಿನಲ್ಲಿ ಗವರ್ನಮೆಂಟಿನವರು ಕೆಲವು ಸರಕಾರೀ ಪರೀಕ್ಷೆಗಳನ್ನಿಟ್ಟು ಅದರಲ್ಲಿ ತೇರ್ಗಡೆ ಹೊಂದಿದವರಿಗೆ ದೊಡ್ಡ ಅಧಿಕಾರಗಳನ್ನೂ, ಕೆಲಸಗಳಿದ್ದರೆ ಬಡ್ತಿಯನ್ನೂ ಕೊಡುವ ಪದ್ಧತಿಯುಂಟು. ಆ ಪರೀಕ್ಷೆಗಳಿಗೆ ಕೊಡುವ ಪ್ರಶ್ನೆ ಪತ್ರಿಕೆಗಳನ್ನು ಬಹಳ ಗುಟ್ಟಾಗಿ ಅಚ್ಚು ಹಾಕಿಸುತ್ತಾರೆ. ಬಹಳ ಕಾಲದಿಂದ ಕೆಲವು ಪೊಲೀಸ್ ಅಧಿಕಾರಿಗಳೂ, ಕೆಲವು ಗುಮಾಸ್ತರೂ ಒಟ್ಟಾಗಿ ಸೇರಿ ಪ್ರಶ್ನೆ ಪತ್ರಿಕೆಗಳನ್ನು ಕೃತ್ರಿಮವಾಗಿ ಪಡೆದ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಅವುಗಳನ್ನು ಕೊಟ್ಟು [illegible] ಕಳೆದ ವಾರ ಕೆಲವು ಪೊಲೀಸಿನವರು [illegible] [illegible] ಪ್ರಕಾರ [illegible] [illegible] ವಿಚಾರಿಸುತ್ತಿದ್ದಾರೆ

* * * *

ಇಂಡಿಯಾ ಗವರ್ನಮೆಂಟಿನವರಿಗೂ ಟಿಬೆಟ್ ಸರ್ಕಾರದವರಿಗೂ ಕರಾರು ನಡೆದು ಕೆಲವು ತಿಂಗಳಾಯಿತಷ್ಟೆ. ಚೀನಾದವರು ಟಿಬೆಟ್ಟಿನ ಸಾರ್ವಭೌಮರಾದುದರಿಂದ ಅವರು ಈ ಕರಾರಿಗೆ ಒಪ್ಪಿ ದುದು ಹಾಕಬೇಕಾಗಿರುವುದು ಇದಕ್ಕಾಗಿ ಅವರ ಕಡೆಯ ರಾಯಭಾರಿಯು ಮುಂದಿನ ವಾರ ಕಲ್ಕತ್ತೆಗೆ ಬರುವನು. ಈತನ ಸಂಗಡ ಸೇರಿ ವಿಷಯವನ್ನು ಚರ್ಚೆಮಾಡುವುದಕ್ಕೆ ಮಿ॥ ಎಸ್. ಎಂ. ಫ್ರೇಸರ್, ಐ. ಸಿ. ಎಸ್., ಸಿ. ಐ. ಇ. ಯವರನ್ನು ಇಂಡಿಯಾ ಗವರ್ನಮೆಂಟಿನವರು ನೇಮಕ ಮಾಡಿದ್ದಾರೆ. ಇವರು ಈ ಮೊದಲು ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರ ವಿದ್ಯಾಬೋಧಕರಾಗಿದ್ದು, ಈಗ ಇಂಡಿಯಾ ಗವರ್ನಮೆಂಟ್ ಫಾರಿನ್ ಸೆಕ್ರೆಟರಿಯಾಗಿ ಕೆಲಸಮಾಡುವರು.

* * * *

ರಾಜಪುಟಾನಾ ಸಂಸ್ಥಾನಗಳಲ್ಲಿರುವ ಸಮಸ್ತ ದೇಶೀಯ ದೊಡ್ಡಮನುಷ್ಯರೂ ವಿದ್ಯಾವಂತರೂ ಸೇರಿ, ಸಂಘಪರಿಷ್ಕರಣ ಕಾರ್ಯಾರ್ಥವಾಗಿ ಹಿತಕಾರಿಣಿ ಎಂಬೊಂದು ಸಭೆಯನ್ನು ಏರ್ಪಡಿಸಿಕೊಂಡಿದ್ದಾರೆ. ಈ ಸಂಘದವರೂ ಅದಕ್ಕೆ ಸೇರಿರುವ ಮೆಂಬರುಗಳೂ ಕಳೆದ ವಾರ ಸಭೆಸೇರಿ ಸಂಕಲ್ಪ ಮಾಡಿಕೊಂಡಿರುವುದೇನೆಂದರೆ—ಹುಡುಗರಿಗೆ ೧೮ ವರುಷ, ಹುಡುಗಿಯರಿಗೆ ೧೪ ವರುಷ ತುಂಬುವುದರೊಳಗಾಗಿ ಯಾರೂ ವಿವಾಹ ಮಾಡಲೇಕೂಡದು ; ೪೫ ವರುಷ ತುಂಬಿದ ಗಂಡಸರು ಹೆಂಡತಿಯನ್ನು ಕಳೆದುಕೊಂಡರೆ ಅವರಿಗೆ ಗಂಡುಮಗು ಇದ್ದಪಕ್ಷಕ್ಕೆ ಎರಡನೆ ಮದುವೆ ಮಾಡಿಕೊಳ್ಳಲೇ ಕೂಡದು. ಇದಲ್ಲದೆ ವಿವಾಹಕಾಲದಲ್ಲಿ ಗಂಡಿನ ಮತ್ತು ಹೆಣ್ಣಿನ ಕಡೆಯವರ ಯೋಗ್ಯತೆಗೆ ಮೀರಿ ಹಣವನ್ನು ಖರ್ಚುಮಾಡಕೂಡದು ಎಂಬುದೇ.

* * * *

ಕಾಲ್ಯದ ಜಿಲ್ಲಾ ನಾಮಕಲ್ ತಾಲ್ಲೂಕಿನ ಹೆಡ್ ಅಕೌಂಟೆಂಟರಾಗಿದ್ದ ಮಿ॥ ಬಿ. ವೆಂಕೋಬರಾಯರು ಡಿಸ್ಟ್ರಿಕ್ಟ್ ಆಫೀಸಿನ ಕಾರುಕರ್ದಿಗಳು ಸಮರ್ಪಕವಾಗಿಲ್ಲವೆಂದು ಮದರಾಸ್ ಪಟ್ಟಣದ ಹಿಂದೂ ಎಂಬ ಪತ್ರಿಕೆಗೆ ಬರೆದು ಪ್ರಕಟಿಸಿದರೆಂದು ಅನುಮಾನ ಕಂಡುಬಂದುದರಿಂದ ಅವರನ್ನು ಆ ಕೆಲಸದಿಂದ ವಜಾ ಮಾಡಿಬಿಟ್ಟರು. ಅವರು ೨೭ ವರುಷ ಸರ್ವಿಸ್ ಮಾಡಿದವರೆಂತಲೂ, ತಾವು ಆ ಬಾತ್ಮಿಯನ್ನು ಬರೆಯದಿದ್ದರೂ ಅನುಮಾನದ ಮೇಲೆ ತಮಗೆ ಶಿಕ್ಷೆಯಾಗಿದೆ ಎಂತಲೂ ಮದರಾಸ್ ಗೌವರ್ನರವರಲ್ಲಿ ಅರಿಕೆ ಮಾಡಿಕೊಂಡರು. ಗವರ್ನರವರು ಆ ಮೊಕದ್ದಮೆಯ ಕಟ್ಟನ್ನೆಲ್ಲಾ ಚನ್ನಾಗಿ ಓದಿ ನೋಡಿ, ಅವರ ಮೇಲೆ ಯಾವ ತಪ್ಪೂ ರುಜುವಾತಾಗಿಲ್ಲವೆಂದು ತೀರ್ಮಾನಿಸಿ, ಅವರಿಗೆ ಮೊದಲಿದ್ದ ಕೆಲಸವನ್ನೇ ಮತ್ತೆ ಕೊಡಬೇಕೆಂತಲೂ, ಅವರನ್ನು ಮಧುರಾ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ ಎಂತಲೂ ಹುಕುಂ ಕೊಟ್ಟಿದ್ದಾರೆ.

* * * *

ನಮ್ಮ ದೇಶದಲ್ಲಿ ಈಗ ಟೆಲಿಗ್ರಾಫ್ ಇಲಾಖೆಯವರು ಹೊಸ ನಮೂನೆಯ ಫಾರಮುಗಳನ್ನು ಪ್ರಕಟಿಸಿದ್ದಾರೆ. ಇದನ್ನು ಪ್ರಜೆಗಳು ತಂತೀ ವರ್ತಮಾನ ಬರೆಯುವಾಗ್ಗೆ ಉಪಯೋಗಿಸಬೇಕಾಗಿದೆ. ಇದು ಮೊದಲಿದ್ದ ಫಾರಮಿಗಿಂತಲೂ ಸ್ವಲ್ಪ ದೊಡ್ಡದು ; ವರ್ತಮಾನ ಕೊಡುವವರ ಮತ್ತು ವಿಳಾಸದಾರರ ಹೆಸರು ಮುಂತಾದುದನ್ನು ಬರೆಯುವ ಸ್ಥಳವನ್ನು ಬದಲಾವಣೆ ಮಾಡಿದೆ ; ಯಾವ ಸ್ಥಳಕ್ಕೆ ವರ್ತಮಾನವನ್ನು ಕಳುಹಿಸಬೇಕೋ ಆ ಸ್ಥಳದ ಹೆಸರು ಬರೆಯುವ ಕಡೆಯಲ್ಲಿ ಮೇಲ್ಗಡೆ ದೊಡ್ಡ ಅಕ್ಷರದಿಂದ ಮೂರು ತರದ ತಂತೀ ವರ್ತಮಾನಗಳ ದರಗಳನ್ನೂ ಪ್ರಕಟಿಸಿದ್ದಾರೆ. ಈ ಕಡೇ ಬದಲಾವಣೆ ಪ್ರಜೆಗಳಿಗೆ ತುಂಬಾ ಉಪಕಾರವಾದುದಾಗಿದೆ. ಬರೆಯುವವನು ಆ ದರಗಳನ್ನು ನೋಡಿದ ಕೂಡಲೆ ತಾನು ಬರೆಯುವ ತಂತೀ ವರ್ತಮಾನಕ್ಕೆ ಚಾರ್ಜ್ ಎಷ್ಟಾದೀತೋ ಸುಲಭವಾಗಿ ತಾನೇ ಗೊತ್ತುಮಾಡಿಕೊಳ್ಳಬಹುದಾಗಿದೆ.

* * * *

ಕಲ್ಕತ್ತಾ ಪಟ್ಟಣದಲ್ಲಿ ಬ್ಯಾರಿಸ್ಟರಾಗಿ ಹೆಸರು ಹೋದ ಮಿ॥ ಕೋವೀ ಎಂಬಾತನು ಒಬ್ಬನ ಆಸ್ತಿಯಲ್ಲಿ ಲಕ್ಷಾಂತರ ದ್ರವ್ಯವನ್ನು ಅಪಹರಿಸಿ ದುರುಪಯೋಗ ಮಾಡಿದ್ದಕ್ಕಾಗಿ ಅವನಿಗೆ ಜಡ್ಜಿಗಳು ಕಠಿಣ ಸಜಾ ವಿಧಿಸಿದರಷ್ಟೆ. ಈತನು ವಿಲಾಯಿತಿಯಲ್ಲಿ ಸಂಸಾರ ಸಹಿತ ಇದ್ದಾಗಲೇ ಇವನ ಮೇಲೆ ಮೊಕದ್ದಮೆ ಹುಟ್ಟಿತು. ಅವನು ಅಲ್ಲಿಂದ ಹಿಂದುಸ್ಥಾನಕ್ಕೆ ಬರಬೇಕಾಯಿತು. ಅವನ ಹೆಂಡತಿ ಮಕ್ಕಳಿಗೆ ಜೀವನಕ್ಕೆ ಮಾರ್ಗವಿಲ್ಲದೆ ತುಂಬಾ ಕಷ್ಟಪಡುತ್ತಿದ್ದರು. ಇದನ್ನು ಅಲ್ಲಿಗೆ ಹೋಗಿದ್ದ ಜೋಹೋರ್ ಸಂಸ್ಥಾನದ ಸುಲ್ತಾನರು ಕೇಳಿ, ತುಂಬಾ ಕನಿಕರಪಟ್ಟು, ಅವನ ಹೆಂಡತಿಗೆ ೧,೫೦೦ ರೂಪಾಯಿ ಇನಾಂ ಕೊಟ್ಟದ್ದಲ್ಲದೆ, ಆಕೆಯ ಹಿರೀ ಮಗನ ವಿದ್ಯಾಭ್ಯಾಸಕ್ಕೆ ತಾವು ೬,೦೦೦ ರೂಪಾಯಿ ತಸರ್ ಕೊಡಲು ಸಿದ್ಧರಾಗಿದೇವೆಂದು ವಾಗ್ದಾನ ಮಾಡಿದರು. ಇಂಥಾ ಉಪಕಾರ ದೊರೆತುದರಿಂದ ಅವಳ ಕಷ್ಟವು ಬಹುಮಟ್ಟಿಗೆ ನಿವಾರಣೆಯಾಯಿತು. ಬೇರೇ ಜನಾಂಗದ ಈ ಸುಲ್ತಾನರು ಆಕೆಯ ಮೇಲೆ ಇಷ್ಟು ಕನಿಕರ ತೋರಿಸಿದ್ದನ್ನು ನೋಡಿ, ಅವರನ್ನು ಕೊಂಡಾಡುತ್ತಿದ್ದಾರೆ.

* * * *

ಅನಂತ[illegible] ಸಂಸ್ಥಾನದ ಉತ್ತರಭಾಗದಲ್ಲಿ ಈಗಿರುವ ಕೆಲವರು ರೈತರು ಸೇರಿ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡಿರುವುದೇನೆಂದರೆ—ನಮ್ಮ [illegible] ಬಹಳ ಪ್ರಯಾಸಪಟ್ಟು ಸುಮಾರು [illegible] ರೂಪಾಯಿ [illegible] ಭಾರೀ ಕೆರೆಯನ್ನು ಕಟ್ಟಿ[illegible] ಇದರಿಂದ ೬೦೦ ಎಕರೆ ಜಮೀನು ತರೀ ಸಾಗುವಳಿ [illegible] [illegible] ಉಪಕಾರವಾಗಿದೆ. ಈಗ ಈ ಕೆರೆಯ [illegible]

ಒಳಗೆರೆಯಲ್ಲೇ ಹರೀ ಫಸಲು ಬೆಳೆಯುತ್ತಿದ್ದಾರೆ. ಇದರಿಂದ ಪ್ರಜೆಗಳಿಗೆ ಇದುವರೆಗೆ ಉಂಟಾಗಿರುವ ಕಷ್ಟನಷ್ಟಗಳು ಅಪಾರವಾಗಿರುತ್ತವೆ ಎಂಬುದೇ. ಈ ರೈತರು ಈ ವಿಷಯದಲ್ಲಿ ಹಿಂದೆ ಅನೇಕ ವೇಳೆ ರಿಜಿಸ್ಟರ್ ಮೂಲಕವೂ ತಂತೀವರ್ತಮಾನದ ಮೂಲಕವೂ ತಮ್ಮ ಅಹವಾಲ್ ಹೇಳಿಕೊಂಡಿದ್ದಾಗ್ಯೂ ಸರ್ಕಾರದವರು ಇತ್ಯರ್ಥಮಾಡಿರುವುದಿಲ್ಲ. ಈಗ ಅವರು ರೆಸಿಡೆಂಟರ ಮೂಲಕ ಅರ್ಜಿ ಕೊಟ್ಟು, ಮದರಾಸ್ ಗವರ್ನಮೆಂಟಿಗೂ ತಿಳಿಸಿದಾರೆ. ಈ ಅರ್ಜಿಯನ್ನು ಅವರು ತನಿಖೆ ಮಾಡುವುದಕ್ಕೆ ದಿವಾನರಿಗೆ ಕಳುಹಿಸಿರುವರು.

****

ಉತ್ತರ ಆರ್ಕಾಟ್ ಜಿಲ್ಲೆಗೆ ಸೇರಿದ ತಿರುಪತಿ ಬೆಟ್ಟದ ಮೇಲಿರುವ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಪ್ರತಿ ವರುಷವೂ ಭಕ್ತಾದಿಗಳಿಂದ ತುಂಬಾ ದ್ರವ್ಯ ಕಾಣಿಕೆ ಕಪ್ಪಗಳ ರೂಪದಲ್ಲಿ ಶೇಖರವಾಗುತ್ತಿರುವುದು. ಆ ದೇವಸ್ಥಾನದ ಕಾರ್ಯಕರ್ತರಿಗಳನ್ನು ಮಹಂತರೆಂಬ ಸನ್ಯಾಸಿಯೇ ನಡಿಸುತ್ತಾ ಬಂದಿರುವುದರಿಂದ ಅವರ ಮೂಲಕ ದೇವಸ್ಥಾನದ ವರಮಾನವೆಲ್ಲಾ ದುರ್ವಿನಿಯೋಗವಾಗುತ್ತಿದೆ ಎಂದು ಒಂದು ಮೊಕದ್ದಮೆ ಆಯಿತು. ಮದರಾಸ್ ಹೈಕೋರ್ಟ್ ಜಡ್ಜಿಗಳಾದ ಮೆ॥ ಸುಬ್ರಹ್ಮಣ್ಯ ಐಯರವರೂ, ಮೆ॥ ಡೇವಿಸ್ ಯವರೂ ಈ ವಿಷಯವನ್ನು ವಿಚಾರಣೆ ಮಾಡಿ, ಕಳೆದ ವಾರ ಜಡ್ಜ್ಮೆಂಟು ಹೇಳಿದಾರೆ. ಈ ತೀರ್ಮಾನವು ಸರ್ವಸಮ್ಮತವಾದುದಾಗಿದೆ ಎಂದು ಹಿಂದುಸ್ಥಾನದ ಪ್ರಜೆಗಳೆಲ್ಲಾ ಅವರನ್ನು ಹೊಗಳುತ್ತಿರುವರು. ಅವರು ಕೊಟ್ಟಿರುವ ತೀರ್ಮಾನವೇನೆಂದರೆ— ತಿರುಪತಿ ದೇವಸ್ಥಾನವು ಹಿಂದುಸ್ಥಾನದಲ್ಲೆಲ್ಲಾ ಮಹಾ ಪ್ರಸಿದ್ಧವಾದುದು; ಲಕ್ಷಾಂತರ ಜನರು ಭಕ್ತಿಪೂರ್ವಕವಾಗಿ ಅಲ್ಲಿಗೆ ಹೋಗಿ ಸೇವೆ ಮಾಡುತ್ತಾರೆ. ಇದರಿಂದ ದೇವಸ್ಥಾನಕ್ಕೆ ಬಹಳ ಹಣ ಉತ್ಪತ್ತಿಯಾಗುವುದು. ಮಹಂತರು ಈ ಹಣವನ್ನು ಸದ್ವಿನಿಯೋಗ ಮಾಡುತ್ತಿರಲಿಲ್ಲ. ಆದಕಾರಣ ವಿದ್ಯಾವಂತರಾದ ಒಬ್ಬ ದೊಡ್ಡ ಮನುಷ್ಯನನ್ನು ಮಹಂತರ ಜೊತೆಗೆ ೫೦೦ ರೂ. ಸಂಬಳ ಕೊಟ್ಟು ಏಜಂಟಾಗಿ ನೇಮಿಸಿ, ಅವರು ಜಮಾ ಖರ್ಚನ್ನು ನೋಡಿಕೊಳ್ಳುವಂತೆ ಮಾಡಬೇಕು. ತಿಂಗಳಿಗೆ ೨,೦೦೦ ರೂಪಾಯಿ ಖರ್ಚಿಟ್ಟು ಅಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ನಡಿಸಬೇಕು. ಹಿಂದು ಶಾಸ್ತ್ರ ಪಂಡಿತರನ್ನು ಪ್ರತಿ ವರುಷವೂ ಪರೀಕ್ಷೆ ಮಾಡಿ, ಅವರಿಗೆ ೧೨,೦೦೦ ರೂಪಾಯಿ ಬಹುಮಾನಗಳನ್ನು ಕೊಡುತ್ತಾ ಬರಬೇಕು. ತಿರುಪತಿ ಬೆಟ್ಟದ ಮೇಲೆ ಸೇರುವ ಭಕ್ತಾದಿಗಳ ಆರೋಗ್ಯವನ್ನು ನೋಡಿಕೊಳ್ಳುವುದಕ್ಕೆ ಅಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನಿಟ್ಟು ನಡಸತಕ್ಕದ್ದು. ಮತ್ತು ಭಕ್ತಾದಿಗಳೇ ಮುಂತಾದವರು ಇಳಿದುಕೊಳ್ಳುವುದಕ್ಕೆ ತಕ್ಕಹಾಗೆ ದೊಡ್ಡ ಕಟ್ಟಡಗಳನ್ನು ಕಟ್ಟಿಸಬೇಕು. ಇದಲ್ಲದೆ ಬೆಟ್ಟದ ಮೇಲೆ ಒಳ್ಳೇ ಕುಡಿಯುವ ನೀರನ್ನು ತಂದು ಒದಗಿಸಬೇಕು; ಆ ಪ್ರಾಂತ್ಯದ ರಸ್ತೆಗಳನ್ನು ಕ್ರಮಪಡಿಸಿ ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡಬೇಕು. ಈ ಖರ್ಚನ್ನೆಲ್ಲಾ ಆ ದೇವಸ್ಥಾನದ ಹುಟ್ಟುವಳಿ ಹಣದಿಂದಲೇ ಮಾಡಬೇಕು ಎಂಬುದೇ. ಇಂಥಾ ತೀರ್ಮಾನವು ಎಲ್ಲರಲ್ಲೂ ಸಂತೋಷವನ್ನು ಹುಟ್ಟಿಸಿರುವುದೇನೂ ಆಶ್ಚರ್ಯವಲ್ಲ. ಇನ್ನು ಮೇಲೆ ಈ ದೇವಸ್ಥಾನದ ಕಾರುಬಾರುಗಳು ತೃಪ್ತಿಕರವಾಗಿದ್ದಾವೆನ್ನುವುದಕ್ಕೆ ಸಂಶಯವಿಲ್ಲ.

ತಾಲ್ಲೋಕು ವರ್ತಮಾನಗಳು.

ಕುಣಿಗಲ್.—ಈ ಊರಿಗೆ ಪ್ಲೇಗ್ ತಗಲಿ ೪ ತಿಂಗಳಾಯಿತು. ಈ ರೋಗಕ್ಕೆ ೬೦—೭೦ ಜನದ ವರೆಗೂ ತುತ್ತಾದರು. ೨—೩ ತಿಂಗಳು ಲಾಗಾಯ್ತು ಯಾವ ಗಲಾಟೆಯೂ ಇಲ್ಲ. ಬಿಸಲು ದಿನ ದಿನಕ್ಕೆ ಜೋರಾಗುತ್ತಿದೆ. ಹವ ಆರೋಗ್ಯಕರವಾಗಿರುವದು. ಪ್ಲೇಗ್ ರೋಗವು ನಿಂತ ಕೂಡ್ಲೆ ಬೆಂಕಿಯ ಕಾಟವು ಶುರುವಾಗಿ ೭—೮ ಜೋಪಡಿಗಳ ವರಿಗೂ ಸುಟ್ಟುಹೋದ್ದರಿಂದ ಪ್ರಜೆಗಳೆಲ್ಲರೂ ತುಂಬಾ ಗಾಬರಿಯಾಗಿರುವರು. ಇಂಥಾದ್ದರಲ್ಲಿ ಸುಂಟರಗಾಳಿಯು ಬಂದು ಜೋಪಡಿಗಳನ್ನು ಅನಾಮತ್ತು ಕಿತ್ತುಹಾಕಿ ಆಕಾಶಕ್ಕೆ ಹಾರಿಸುತ್ತಿರುವದು. ಪ್ರಜೆಗಳೆಲ್ಲಿಯಾದರೂ ಹಾಳಾಗಲಿ; ಅಧಿಕಾರಿಗಳು ಮಾತ್ರ ಹಳ್ಳಿಗಳಲ್ಲಿ ಸುಖವಾಗಿರುವರು. ಆಸ್ಪಿಟಲ್ ಅಸಿಸ್ಟೆಂಟರು ಆಸ್ಪತ್ರೆಯಲ್ಲೇ ಸುಖವಾಗಿರುವದರಿಂದ ಗ್ರಾಮ ಪ್ರವೇಶಕ್ಕೆ ಕೇಳಿಕೊಂಡ ಪ್ರಜೆಗಳ ಅಹವಾಲನ್ನು ಅಮಲ್ದಾರರವರು ವಿಚಾರಿಸಿದರೂ, ಮೇಲಿನ ಆಸ್ಪಿಟಲ್ ಅಸಿಸ್ಟೆಂಟರು ಊರಿಗೆ ಇನ್ನೂ ೨—೩ ತಿಂಗಳು ಬಿಡಕೂಡದೆಂದು ತಿಳಿಸಿರುತ್ತಾರಂತೆ. ತಾಲ್ಲೋಕಿಗೆ ಪ್ರಭುಗಳಾದವರೇ ಈ ರೀತಿ ವಿಚಾರಿಸದೇ ಹೋದರೆ ಇನ್ನು ಯಾರು ವಿಚಾರಿಸುವರು. ಈಗಲೂ ಜಾಗ್ರತ ಪ್ರಜೆಗಳನ್ನು ಊರಿಗೆ ಬಿಟ್ಟು ಪ್ರಜಾನೆಮ್ಮದಿಯನ್ನು ಕಾಪಾಡುವರೆಂದು ನಂಬಿರುತ್ತೇನೆ. ಧಾರಣೆ ವಾಸಿ ಜಾಸ್ತಿಯಾಗುತ್ತಲಿದೆ.

ತಿಪ್ಟೂರು.—ಪ್ಲೇಗ್ ಗಲಾಟೆಗೋಸ್ಕರ ಸುಮಾರು ೨—೩ ತಿಂಗಳಿಂದಲೂ ಎಲ್ಲರೂ ಹೊರಗೆ ವಾಸಮಾಡುವದರಿಂದ ಖಾಲೀ ಇರುವ [illegible] ಗಸ್ತಿಗಾಗಿಯೇ ಒಬ್ಬ ದಫೇದಾರನನ್ನೂ ಕೆಲವು ಮಂದಿ ಪೋಲೀಸಿನವರನ್ನೂ ಸಹ ನಮ್ಮ ಅಮಲ್ದಾರ್ರವರು ನೇಮಿಸಿದ್ದಾಗ್ಯೂ ಕೂಡ ಈ ಊರಿನ ಕೋಟೆಯಲ್ಲಿ ಕೆಲವು ದಿನಗಳ ಕೆಳಗೆ ೭—೮ ಮನೆಗಳ ಬಾಗಿಲನ್ನು ತೆರೆದು ಒಳಗಣ ಸಾಮಾನನ್ನೆಲ್ಲಾ ಪರೀಕ್ಷಿಸಿ ಹಾಗೆಯೇ ಬಿಟ್ಟು ಹೋಗಿರುವದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತೆ. ಆದರೆ ಇಷ್ಟು ಅವಕಾಶ ದೊರೆಯುವ ಪರಿಯಂತ ಪೋಲೀಸಿನವರು ಏನು ಮಾಡುತ್ತಿದ್ದರೋ ತಿಳಿಯದು. ಇನ್ನು ಮೇಲಾದರೂ ನಮ್ಮ ಅಮಲ್ದಾರ್ರವರೂ ಪೋಲೀಸ್ ಇನ್ಸ್ಪೆಕ್ಟರವರೂ ಇಂಥಾವುಗಳಿಗೆ ಅವಕಾಶವಿಲ್ಲದಂತೆ ತಕ್ಕ ಏರ್ಪಾಡುಗಳನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.—ಈ ವರ್ಷ ಮಳೆ ಹೆಚ್ಚಾಗಿ ಬೀಳದ್ದರಿಂದ ಇಲ್ಲಿಯ ಜನಗಳು ಮುಂದೆ ನೀರಿಗೆ ಬಹುವಾಗಿ ಕಷ್ಟ ಉಂಟಾಗಬಹುದೆಂದು ಯೋಚಿಸುತ್ತಿದ್ದರು. ಆದರೆ ಇಲ್ಲಿಯ ಸಾಹುಕಾರ್ ಮೆ॥ ಎಲ್. ಶಂಕರಪ್ಪನವರು ತಮ್ಮ ಕ್ಯಾಂಪಿನಲ್ಲಿ ನಾಲ್ಕು ಗಾಲಿಗಳುಳ್ಳ ದೊಡ್ಡ ಭಾವಿಯನ್ನು ಸಾವಿರಾರು ರೂಪಾಯಿ ಖರ್ಚಿಸಿ ತೆಗಿಸಿದ್ದರಿಂದ ಆ ಸ್ಥಳದಲ್ಲಿ ಕೆಲವು ಆಫೀಸರುಗಳೂ ಇತರ ದೊಡ್ಡಮನುಷ್ಯರುಗಳೂ ಸೇರಲು ಅವಕಾಶವಾಯಿತು. ಇದರಿಂದ ಅಲ್ಲಿನ ಜನಗಳಿಗೆಲ್ಲಾ ನೀರು ಸಮೃದ್ಧಿಯಾಗಿ ದೊರೆಯುತ್ತೆ. ಇದರಂತೆಯೇ ಈ ಊರಿನ ಸಾಹುಕಾರ್ ಮೆ॥ ಗ್ರಂಧಿಗೆ ನಂಜುಂಡಯ್ಯನವರು ತಮ್ಮ ಕ್ಯಾಂಪಿನಲ್ಲಿ ಒಂದು ಭಾವಿಯನ್ನು ತೆಗೆಸಿರುವದಲ್ಲದೆ, ಷೆಡ್ಡಿನಲ್ಲಿನ ಜನಗಳು ವೃಥಾ ಕಾಲಹರಣಮಾಡುವದನ್ನು ನೋಡಿ, ಇಟ್ಟಿಗೆಯಿಂದ ಸೊಗಸಾಗಿ ಒಂದು ಭಜನಾ ಮಂದಿರವನ್ನು ಕಟ್ಟಿಸಿ, ಕೆಲವು ದಿನಗಳ ಮುಂಚೆ ಅದರಲ್ಲಿ ಒಂದು ಚಿತ್ರಪಟವನ್ನು ಬಹು ಅಟ್ಟಹಾಸದಿಂದ ಪ್ರತಿಷ್ಠಿಸಿ, ಅಲ್ಲಿನ ಜನಗಳು ಅಹೋರಾತ್ರಿಯೂ ದೇವರ ಸ್ಮರಣೆಯಲ್ಲಿಯೇ ಕಾಲಹರಣ ಮಾಡುವಂತೆ ಮಾಡಿರುವರಲ್ಲದೆ, ಸ್ತ್ರೀ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಗೋಸ್ಕರ ತಮ್ಮ ಕ್ಯಾಂಪಿನಲ್ಲಿಯೇ ಷೆಡ್ಡನ್ನು ಹಾಕಿಸಿಕೊಟ್ಟಿರುವದರಿಂದ ಈಗ ಸುಮಾರು ೩ ತಿಂಗಳಿಂದಲೂ ಸ್ಕೂಲ್ ನಡೆಯುತ್ತದೆ. ಸಾಹುಕಾರ್ ಮೆ॥ ಹಂಪಾಪುರದ ಮಲ್ಲಪ್ಪನವರು ಬಂಗಲಾ ಕ್ಯಾಂಪಿನ ಕಡೆ ಇರುವ ತಮ್ಮ ತೋಟದಲ್ಲಿರುವ ಅಂಗಡಿಯಲ್ಲಿನ ಒಂದು ಭಾಗವನ್ನು ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯ ಉಪಯೋಗಾರ್ಥವಾಗಿ ಬಿಟ್ಟುಕೊಟ್ಟಿರುವದರಿಂದ ಆ ಭಾಗದ ಷೆಡ್ಡಿನಲ್ಲಿರುವ ಬಾಲಿಕೆಯರು ವಿದ್ಯಾಭ್ಯಾಸ ಮಾಡಲು ಅನುಕೂಲವಾಯಿತೆಂದು ಅಲ್ಲಿನವರೆಲ್ಲರೂ ಸಂತೋಷಪಡುತ್ತಾರೆ

ಫ್ರೆಂಚ್ ರಾಕ್ಸ್.—ಆಸ್ಪತ್ರೆ ಅಸಿಸ್ಟೆಂಟರಾದ ಮೆ॥ ಮಾಸಿಲಾಮಣಿಮೊದಲಿಯಾರ್ರು ಇಲ್ಲಿಗೆ ಬಂದು ೧ ವರುಷ ೮ ತಿಂಗಳಾಯಿತು. ಇಷ್ಟು ಸ್ವಲ್ಪ ಕಾಲದಲ್ಲಿ ಇವರು ಜನರಿಗೆ ಮಾಡಿದ ಕೆಲಸಗಳು ವಿಶೇಷವಾಗಿವೆ. ಈಗ ಇವರಿಗೆ ಬೆಂಗಳೂರಿಗೆ ವರ್ಗವಾಯಿತು. ಇವರಿಗೋಸ್ಕರ ನಮ್ಮ ಅಮಲ್ದಾರ್ ಮೆ॥ ನಾರಾಯಣಸ್ವಾಮಿಮೊದಲಿಯಾರ್ರು ವಿಶೇಷವಾದ ಪ್ರಯಾಸ ತೆಗೆದುಕೊಂಡು ೨೫ ನೇ ತಾ॥ ಬುಧವಾರ ಎಲ್ಲಾ ದೊಡ್ಡ ಮನುಷ್ಯರಿಂದಲೂ ಶೆಟ್ಟಿವರ್ತಕರಿಂದಲೂ ಸುಮಾರು ೫೦ ರೂ. ವರಿಗೂ ಚಂದಾ ವಸೂಲ್ ಮಾಡಿ, ಅದೇ ದಿವಸ ಸಾಯಂಕಾಲ ೫ ಗಂಟೆಯಿಂದ ರಾತ್ರಿ ೯॥ ಗಂಟೆಯ ವರಿಗೂ ಹೆಡ್ ಅಕೌಂಟೆಂಟರ ಮನೆಯಲ್ಲಿ ದೊಡ್ಡಮನುಷ್ಯರನ್ನೆಲ್ಲಾ ಫಲಹಾರದಿಂದ ಸಂತೋಷಪಡಿಸಿದರು. ಅನಂತರ ಮೆ॥ ಮಾಸಿಲಾಮಣಿ ಮೊದಲಿಯಾರ್ರಿಗೆ ಬೆಲೆಯುಳ್ಳ ವಸ್ತ್ರವನ್ನು ಉಡುಗೆರೆ ಮಾಡಿದ ತರುವಾಯ ಪೋಲೀಸ್ ಸೂಪ್ರೇಂಟ್ ಮೆ॥ ಸಿ. ಬಿ. ರಾಮಸ್ವಾಮಯ್ಯನವರೂ ಮೆ॥ ಕೃಷ್ಣಮೂರ್ತಿರಾಯರೂ ಮತ್ತು [illegible] ಎಲ್ಲೀಸ್ ಸಾಹೇಬರೂ ಮೆ॥ ಮಾಸಿಲಾಮಣಿಯವರ ಪರವಾಗಿ ಸಣ್ಣ ಉಪನ್ಯಾಸಗಳನ್ನು ಮಾಡಿದರು. ಅನಂತರ ದೊಡ್ಡಮನುಷ್ಯರಿಗೆಲ್ಲಾ ಹೂವು ಗಂಧ ತಾಂಬೂಲಗಳನ್ನು ಹಂಚಿದ ಮೇಲೆ ಸಭೆ ಬರಖಾಸ್ತಾಯಿತು. ಬ್ಯಾಂಡಿನೊಂದಿಗೆ ಮೆ॥ ಮಾಸಿಲಾಮಣಿ ಮೊದಲಿಯಾರ್ರನ್ನು ಅವರ ಬಿಡಾರಕ್ಕೆ ಕಳುಹಿಸಿದರು.—ಶ್ರೀರಂಗಪಟ್ಣದಿಂದ ಮುಫಸಿಲ್ ಕೋರ್ಟ್ ಈ ಫ್ರೆಂಚ್ ರಾಕ್ಸಿಗೆ ಬರುತ್ತೆಂದು ಬಹಳ ಕಾಲದಿಂದಲೂ ಜನರಲ್ಲಿ ವರ್ತಮಾನ ಉಂಟು. ಅದಕ್ಕೆ ಸರಿಯಾಗಿ ಈಗ ಕೋರ್ಟಿಗೆ ತಕ್ಕ ಸ್ಥಳ ಯಾವುದೆಂಬುದಾಗಿ ಸರ್ಕಾರದಲ್ಲಿ ಚರ್ಚೆ ನಡೆಯುತ್ತಿದೆ ಎಂದು ಜನರೆಲ್ಲಾ ಕೇಳಿ ತುಂಬಾ ಸಂತೋಷವುಳ್ಳವರಾಗಿದ್ದಾರೆ. ಈ ಸ್ಥಳವು ಬಹಳ ಆರೋಗ್ಯವುಳ್ಳದ್ದು, ನೀರು ನಿರ್ಮಲವಾದದ್ದು, ಖಾಯಿಲೆ ಮನುಷ್ಯರಿಗೆ ಬೇಗ ಸ್ವಸ್ಥಕೊಡುವ ಸ್ಥಳವಾಗಿದೆ. ಈ ಸ್ಥಳಕ್ಕೆ ಮುಫಸಿಲ್ ಕೋರ್ಟ್ ಬರುವದಾದರೆ ನಾಗಮಂಗಲ ಅತ್ತಿಕುಪ್ಪೆ ಮುಂತಾದ ಊರುಗಳ ಜನರಿಗೆಲ್ಲಾ ತುಂಬಾ ಅನುಕೂಲವಾಗಿದೆ. ಈ ವಿಷಯಕ್ಕೆ ಸರ್ಕಾರದವರು ಗಮನಕೊಟ್ಟರೆ ಎಲ್ಲಾ ಜನರಿಗೆ ಅನುಕೂಲವಾಗಿದೆ ಎಂದು ಪ್ರಜೆಗಳು ಹಾರೈಸುತ್ತಾರೆ.—೨೭ನೇ ತಾ॥ ಶುಕ್ರವಾರ ಮಧ್ಯಾಹ್ನ ೩ ಗಂಟೆ ಸಮಯದಲ್ಲಿ ರಾಮಕೃಷ್ಣಮೊದಲಿಯಾರ್ರ ತಂಗಿಯ ೨೧ ವರುಷದ ಹೆಣ್ಣುಮಗುವು ಎಲ್ಲಿಯೋ ಪರಾರಿಯಾಗಿದೆ.—ಇಲ್ಲಿ ಸರ್ಕಾರದ ಸೂಲಗಿತ್ತಿ ಇಲ್ಲದೆ ಜನರಿಗೆ ಬಹಳ ಕಷ್ಟ ಉಂಟು. ಈ ವಿಷಯದಲ್ಲಿ ನಮ್ಮ ಅಮಲ್ದಾರ್ರು ತುಂಬಾ ಮುತವರ್ಜಿಯನ್ನು ವಹಿಸಿ ಪ್ರಸ್ತಾಪ ಮಾಡಿದ್ದರ ಮೇಲೆ ಒಬ್ಬ ಸೂಲಗಿತ್ತಿಯನ್ನು ಇಡುವಂತೆ ಸ್ಯಾಂಕ್ಷನ್ ಆಗಿದೆ ಎಂದು ಅಮಲ್ದಾರ್ರು ಹೇಳುತ್ತಾರೆ. ಆದ್ದರಿಂದ ಸೂಲಗಿತ್ತಿಯು ಬೇಗನೆ ಬರುವದಾದರೆ ಜನರಿಗೆ ಬಹಳ ಉಪಕಾರವಾದೀತು.

ಶಿರಾ ತಾ. ಬುಕ್ಕಾಪಟ್ಣ.—೧೯೦೫ನೇ ಇಸವಿ ಜನವರಿ ೨೦ನೇ ತಾರೀಖಿನ ಸಾಯಂಕಾಲ ಬುಕ್ಕಾಪಟ್ಣದ ಹೋಬಳಿ ಜಮಾಬಂದಿಗೆ ನಮ್ಮ ಶಿರಾ ತಾಲ್ಲೋಕಿಗೆ ಹೊಸದಾಗಿ ಬಂದಿರುವ ಅಮಲ್ದಾರ್ ಮೆ॥ ವೆಂಕಟರಮಣ ಶ್ರೋತ್ರಿಯವರು ದಯಮಾಡಿಸಿದರು. ಅದಕ್ಕಾಗಿ ಬುಕ್ಕಾಪಟ್ಟಣದ ರೈತರೂ ವರ್ತಕರೂ ಸೇರಿ ಒಂದು ವಿಚಿತ್ರವಾದ ಚಪ್ಪರವನ್ನು ಬಹು ಸುಂದರವಾಗಿ ಕಟ್ಟಿ ಅಲಂಕರಿಸಿ ಮುಖರ ತಟ್ಟಿಗಳನ್ನು ಅಲಂಕರಿಸಿಕೊಂಡು ವಾದ್ಯ ಘೋಷದಿಂದ ಎದುರುಗೊಂಡು ಅಮಲ್ದಾರರನ್ನು ಮೇಲ್ಕಂಡ ಚಪ್ಪರಕ್ಕೆ ಕರೆದುಕೊಂಡು ಬಂದು ಯೋಗ್ಯವಾದ ಆಸನದ ಮೇಲೆ ಕುಳ್ಳಿರಿಸಿ ಹಾರತುರಾಯಿಗಳನ್ನು ಒಪ್ಪಿಸಿದರು. ಇದಕ್ಕಾಗಿ ನಮ್ಮ ಅಮಲ್ದಾರರು ಸಮಯೋಚಿತವಾಗಿ ಭಾಷಣ ಮಾಡಿ, ಊಟಕ್ಕೆ ಚಿತ್ತೈಸಿದರು. ಮಾರನೆ ಬೆಳಿಗ್ಗೆ ಬುಕ್ಕಾಪಟ್ಣಕ್ಕೆ ಸೇರಿದ ಕೆಲವು ಗ್ರಾಮಗಳ ಜಮಾಬಂದಿ ಮಾಡಿಕೊಂಡು ರೈತರ ಅಹವಾಲ್ ಅರ್ಜಿಗಳನ್ನು ಪರಾಂಬರಿಸಿ ಉದಾಹರಣೆಗಳನ್ನು ಆ ಅರ್ಜಿದಾರರಿಗೆ ತಿಳಿಸಿ ತಮ್ಮ ಶಾಂತತೆಯನ್ನು ಸಕಲ ಪ್ರಜೆಗಳಿಗೂ ಪ್ರದರ್ಶನ ಮಾಡಿದರು. ಈ ತಾಲ್ಲೋಕಿಗೆ ನಾವು ಬುದ್ಧಿ ಕಂಡ ಲಾಗಾಯಿತು ಇಂಥಾ ಸತ್ಯವಂತರೂ ವಿದ್ಯಾವಂತರೂ ನಿಸ್ಪೃಹರೂ ಬಂದಿರಲಿಲ್ಲವೆಂದು ಇಲ್ಲಿ ಪ್ರಜೆಗಳ ನಾಲಿಗೆಯಲ್ಲಾ ಹೊಗಳುತ್ತದೆ. ಮಾರನೆ ದಿನ ಚಿಕ್ಕನಾಯಕನಹಳ್ಳಿ ತಾಲ್ಲೋಕ್ ಅಮಲ್ದಾರ್ ಮೆ॥ ವಿಶ್ವನಾಥರಾಯರು ತಮ್ಮ ಸರಹದ್ದಿಗೂ ನಮ್ಮ ತಾಲ್ಲೋಕ್ ಅಮಲ್ದಾರರು ತಮ್ಮ [illegible]ಗೂ ಹೋಗಿ ಅಲ್ಲಿ ಉಭಯತ್ರರೂ ಸೇರಿ ಸಂಭಾಷಿಸತಕ್ಕದ್ದೆಲ್ಲಾ ಪೂರೈಸಿಕೊಂಡು ಅವರವರ ಸ್ಥಾನಗಳಿಗೆ ಹಿಂತಿರಿಗಿ ದಯಮಾಡಿಸಿದರು. ಆ ದಿನವೂ ಬಾಕಿ ನಿಂತಿದ್ದ ಗ್ರಾಮಗಳ ಜಮಾಬಂದಿ ತೀರಿಸಿಕೊಂಡು ತಾ॥ ೨೩ನೇ ಸೋಮವಾರ ಸಾಯಂಕಾಲ ಶಿರಾಕ್ಕೆ ವಾಪಸ್ ದಯಮಾಡಿಸಿದರು.—ನಮ್ಮ ಅಮಲ್ದಾರ್ರವರ ಪ್ರಥಮ ದರ್ಶನದಿಂದಲೇ ನಮ್ಮ ಗ್ರಾಮದ ಸಾಹುಕಾರ್ ದೊಡ್ಡ ಮಲ್ಲಣ್ಣನವರು ಇಲ್ಲಿನ ವಿದ್ಯಾಶಾಲೆಯನ್ನು ತಾವೇ ಎಲ್ಲಾ ಖರ್ಚನ್ನೂ ವಹಿಸಿ ಮಂಗಳೂರು ಹೆಂಚಿನ ಒಂದು ವಿಶಾಲವಾದ ಪಾಠಶಾಲೆಯನ್ನು ಕಟ್ಟಿಸಿ ಕೊಡಲು ಒಪ್ಪಿ ತಮ್ಮ ಉದಾರತ್ವವನ್ನು ಪ್ರಕಾಶಪಡಿಸಿರುವದಲ್ಲದೆ ನಮ್ಮ ಕರ್ನಾಟಕ ಧರ್ಮ ಕಾರ್ಯಕ್ಕೆ ಮೇಲುಪಟ್ಟಿಯಾಗಿರುತ್ತಾರೆಂಬುವದಕ್ಕೆ ಸಂದೇಹವಿಲ್ಲ.—ಈ ಬುಕ್ಕಾಪಟ್ಟಣದ ಗ್ರಾಮದಲ್ಲಿ ಆಗಾಗ ಮಹಾ ಹೇಯವಾದ ಕಾರ್ಯಗಳು ನಡಿಯುತ್ತಾ ಇರುತ್ತವೆ. ಈಗ ಒಂದು ವರ್ಷಕ್ಕೆ ಈಚೆಗೆ ಈ ಗ್ರಾಮದ ಗಣಾಚಾರಿ ಬಸ್ಸಯ್ಯನ ಅಡಿಕೆ ತೋಟದಲ್ಲಿ ೩೦ ಒಳ್ಳೇ ಫಲ ಮರಗಳನ್ನು ಒಂದೇ ರಾತ್ರೆ ಕಡಿದುಹಾಕಿದ್ದರು. ಕೊಂದವನೇ ಕೆಟ್ಟನೆಂಬಂತಾಯ್ತೇ ಹೊರತು ಅಯ್ಯನವರು ಯಾರಿಗೆ ದಿಕ್ಕೇ ಇಲ್ಲದೇ ಹೋಗಿದೆ.—ಈ ತಿಂಗಳ ಆದಿಭಾಗದಲ್ಲಿ ಈ ಗ್ರಾಮದ ಬಳಿ ರಂಗಯ್ಯನ ತೋಟದಲ್ಲಿದ್ದ ಬಾಳೆಯನ್ನೆಲ್ಲಾ ಉತ್ತರಿಸಿ ಬರೀ ತೋಟ ನಿಲ್ಲಿಸಿರುತ್ತಾರೆ. ಇವರು ಪೋಲೀಸ್ಗೆ ರಿಪೋರ್ಟ್ ಮಾಡಿರುತ್ತಾರೆ. ಇನ್ನೂ ಪತ್ತೆ ಇಲ್ಲ. ಈ ಪ್ರಾಂತ್ಯದಲ್ಲಿ ಇಂಥಾ ನೀಚ ಕಾರ್ಯವನ್ನು ಮಾಡುವವರು ಬಡವರಲ್ಲ, ದೊಡ್ಡವರು ಎಂದು ಮೇಲೆ ತೋರಿಸಿಕೊಂಡು, ಒಳಗೇನೇ ನೀಚ ಕಾರ್ಯಕ್ಕೆ ಪ್ರೋತ್ಸಾಹ ಕೊಟ್ಟು ಮಾಡಿಸುವಂತೆ ಹೇಳಬೇಕಾಗುತ್ತೆ. ಇಂಥಾ ನೀಚರನ್ನು ಸರ್ಕಾರದವರು ಗುಮಾನಿ ಮೇಲೆ ಹಿಡಿದು ತಕ್ಕ ಬಂದೋಬಸ್ತು ಮಾಡಿಸದೆ ಹೋದರೆ ಬಡವರ ಗತಿ ಕೇವಲ ಕಷ್ಟಕ್ಕೆ ಬರುತ್ತೆ.

ಹೊಳೆನರಸೀಪುರ.—ಬಿಸಲು ದಿನದಿನಕ್ಕೆ ಜೋರಾಗುತ್ತಿರುವದರಿಂದ ಛಳಿ ಕಡಿಮೆಯಾಗಿ ಹವ ಆರೋಗ್ಯಕರವಾಗಿದೆ. ೩—೪ ತಿಂಗಳಿಂದ ವನವಾಸವನ್ನು ಮಾಡುತ್ತಿದ್ದ ಜನಗಳು ಈಗೀಗ ಬಂದು ಊರು ಸೇರುತ್ತಿದ್ದಾರೆ.—ತಾ. ೨೬ನೇ ಗುರುವಾರ ಸಾಯಂಕಾಲದ ಘನ ಎಚ್. ಎಚ್. ನ್ಯೂಹಾಮ್ ಸಾಹೇಬರು ಇಲ್ಲಿಗೆ ಬಂದು ಇಲ್ಲಿನ ವೆಸ್ಲಿಯನ್ ಮಿಷನ್ ಸ್ಕೂಲುಗಳನ್ನು ಬರುವ ತಿಂಗಳು ತೆರೆಯಬೇಕೆಂದು ಮಾಸ್ಟರುಗಳಿಗೆಲ್ಲಾ ತಾಕೀತು ಮಾಡಿ, ಸಾಯಂಕಾಲ ಇಲ್ಲಿನ ಕ್ರೈಸ್ತ ಮಂಡಲಿಯವರ ಮನೆಗಳಿಗೆ ಬಂದು, ಅವರವರ ಯೋಗಕ್ಷೇಮಗಳನ್ನು ವಿಚಾರಿಸಿ, ನಂತರ ದೇವಾರಾಧನೆ ನಡಿಸಿ, ೩ ಘಂಟೆಗೆ ಹಾಸನವನ್ನು ಕುರಿತು ತೆರಳಿದರು. ಕಳೆದ ೮ರು ವರುಷಗಳಿಂದಲೂ ಇಲ್ಲಿ ಉಪದೇಶಿಗಳಾಗಿದ್ದ ದೇವದಾಯಂಟವರನ್ನು ಚನ್ನರಾಯಪಟ್ಣಕ್ಕೆ ವರ್ಗಮಾಡಿದರು. ಈ ಸಂಗತಿಯು ಇಲ್ಲಿನ ಎಲ್ಲಾ ಜನಗಳಿಗೂ ತುಂಬಾ ವ್ಯಸನವನ್ನುಂಟುಮಾಡುತ್ತಲಿದೆ. ಘನ ನ್ಯೂಹಾಂ ಸಾಹೇಬರು ಈ ಊರಿಗೆ ಬಂದಿದ್ದಾಗ್ಯೂ ಇಲ್ಲಿನ ಜವಳಿ ಅಂಗಡಿ ಸಾಹುಕಾರ್ ಕೋನೇರಿ ರಾಮಶೆಟ್ಟಿ ಕುಮಾರರು ರಂಗಪ್ಪಶೆಟ್ಟರೂ ಇನ್ನು ಅನೇಕ ದೊಡ್ಡ ವರ್ತಕರೂ ಬಡ ಜನರೂ ಉಪದೇಶಿಗಳನ್ನು ಇನ್ನು ಒಂದು ವರುಷ ಕಾಲ ಇಲ್ಲಿಯೇ ಇರಿಸಬೇಕೆಂದು ಬಹುವಾಗಿ ಕೇಳಿಕೊಂಡರು. ಅದಕ್ಕೆ ಘನ ಸಾಹೇಬರು ವೃದ್ಧಮನುಷ್ಯರುಗಳಿಂದ—ಇದು ಮಿಷನ್ ಕಮಿಟಿಯವರೆಲ್ಲರ ಅಪ್ಪಣೆಯ ಪ್ರಕಾರ ವರ್ಗಮಾಡಲ್ಪಟ್ಟಿದೆ. ಅದ್ದರಿಂದ ಬದಲಾಯಿಸುವದಕ್ಕಾಗುವದಿಲ್ಲವೆಂದು ಅಪ್ಪಣೆ ಮಾಡಿದರು.—ಊರಿನ ಪಾಕೀಜು ವಿಷಯದಲ್ಲಿ ನಮ್ಮ ಅಮಲ್ದಾರರೂ ಆಸ್ಪಿಟಲ್ ಅಸಿಸ್ಟೆಂಟರೂ ಬಹು ಮುತುವರ್ಜಿಯಿಂದ ಮನೆಮನೆಗೂ ಖುದ್ದಾಗಿ ಹೋಗಿ ಬೆಂಕಿ ಹಾಕಿ ದಲಾಯಿಸಿಸುವದಲ್ಲದೆ, ಅಕಾಚಿಯಾದ ಭಾಗಗಳನ್ನು ಶುಚಿಮಾಡಿಸುತ್ತಲೂ ಬೆಳಕಿಲ್ಲದ ಪ್ರದೇಶದ ಮನೆಗಳಿಗೆ ಕಿಟಕಿಗಳನ್ನು ಇಡಿಸುತ್ತಲೂ ಪ್ರತಿ ಮನೆಗಳಿಗೂ ಸುಣ್ಣ ವಗೈರೆ ಬಳಿಸಿ ಬಹು ಮಟ್ಟಿಗೆ ಊರನ್ನು ಶುಚಿಯಲ್ಲಿಡಿಸಿದ್ದಾರೆ. ದಣಿಗಳಾದ ನಮ್ಮ ಅಮಲ್ದಾರರು ಸಂತೆ ಸಂತೆಗಳಿಗೆ ಬಂದು, ಧಾರಣೆವಾಸಿಗಳ ವಿಷಯದಲ್ಲಿ ಮಾರುವವರಿಗೂ ಕೊಂಡುಕೊಳ್ಳುವವರಿಗೂ ನಷ್ಟವಾಗದ ರೀತಿಯಲ್ಲಿ ವಿವೇಕ ಹೇಳಿ ಬಹು ಮಟ್ಟಿಗೆ ಜನಗಳಿಗೆ ಉಪಕಾರಮಾಡುತ್ತಿದ್ದಾರೆ.—ಇಲ್ಲಿ ಹೊಸದಾಗಿ ಏರ್ಪಾಡಾಗಿರುವ ಸರ್ಕಾರಿ ಮರಗೆಲಸದ ಕಾರ್ಖಾನೆಯಲ್ಲಿ ಅನೇಕ ಬಡ ಹುಡುಗರು ಬಹು ಮಟ್ಟಿಗೆ ಕೆಲಸ ಕಲಿಯುತ್ತಿದ್ದಾರಲ್ಲದೆ ತಮ್ಮ ಜೀವನಕ್ಕೆ ಬೇಕಾದಷ್ಟು ದುಡ್ಡು ಸಂಪಾದಿಸುವ ಹಾಗೆ ಸರ್ಕಾರದವರು ಈ ಒಳ್ಳೇ ಏರ್ಪಾಡು ಮಾಡಿರುವರು. ಈ ಸ್ಕೂಲಿನ ವಿಷಯದಲ್ಲಿ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಮೆ॥ ಸಂಪತ್ತಯ್ಯಂಗಾರ್ರು ಕಳೆದ ತಿಂಗಳು ಬೊಂಬಾಯಿಯಲ್ಲಿ ನಡೆದ ವಸ್ತುಪ್ರದರ್ಶನಕ್ಕೆ ಹೋಗಿ ಅಲ್ಲಿನ ಹೊಸ ಕ್ರಮಗಳನ್ನು ನೋಡಿಕೊಂಡು ಬಂದು ಈ ಸ್ಕೂಲನ್ನು ಬಹು ಮಟ್ಟಿಗೆ ಅಭಿವೃದ್ಧಿ ಸ್ಥಿತಿಗೆ ತರುವದರಲ್ಲಿದ್ದಾರಲ್ಲದೆ ಈಗ ಈ ಸ್ಕೂಲಿನಲ್ಲಿ ಕಿಟಕಿಗಳನ್ನು ತಯಾರುಮಾಡಿಸಿ ಸುಲಭ ಬೆಲೆಗೆ ಬಡಜನಗಳಿಗೆಲ್ಲಾ ಮಾರುವರು.—ಈ ಊರಲ್ಲಿ ೩—೪ ಜನ ಹುಚ್ಚರು ಇದ್ದಾರೆ. ಇವರಿಗೆ ಅನ್ನವಿಲ್ಲದೆ ಇರುವದು ಒಂದು ಕಷ್ಟವಲ್ಲದೆ ಈ ಊರು ಹುಡುಗರ ಹಿಂಸೆಯು ಮಾತ್ರವಷ್ಟು ಹೆಚ್ಚಾಗಿದೆ. ಸರ್ಕಾರದವರು ಇವರನ್ನು ಬೆಂಗಳೂರಿನಲ್ಲಿರುವ ಹುಚ್ಚರ ಆಸ್ಪತ್ರೆಗೆ ಕಳುಹಿಸಿದರೆ ತುಂಬಾ ಉಪಕಾರವಾದೀತು. ಈ ಊರು ಸಂತೆಯಲ್ಲಿ ಫಕೀರರ ಮೊಂಡರ ಹಾವಳಿಯು ಬಹಳವಾಗಿದೆ. ಬಲವಂತ

…ದಷ್ಟು ಬಾಚುವದೂ, ಅತ್ತಿ ಪಾಡಿದರೆ ಜಗಳವಾಡುವದೂ …ಕಾರ ಪ್ರಿಂದುಮಾಡುತ್ತಿದಾರೆ. ಇಂಥಾ ವಿಷಯಗಳನ್ನು ಸ…ದವರು ನಿಲ್ಲಿಸಿ ಕ್ರಮಪಡಿಸುವರೆಂದು ನಂಬಿದೇನೆ.

ತೀರ್ಥಹಳ್ಳಿ —ಚೀಫ್ ಇಂಜನಿ… ರ ಸವಾರಿಯು ತೀರ್ಥ… ಪ್ರಾಂತ್ಯಕ್ಕೆ ಬಂದಾಗ ಹುಲಿಕಲ್ಲು ಮಾರ್ಗವಾಗಿ ಮೋಟಾ…ರ್ ಗಾಡಿಯನ್ನು ಸಂಗಡ ತೆಗೆದುಕೊಂಡು ಬಂದಿದ್ದರು …ಪ್ರಾಂತ್ಯಕ್ಕೆ ಅದು ಹೊಸದೇ ಸರಿ. ಆದರೆ ಅದರಲ್ಲಿ ಏನೋ …ಹೋಗಿದ್ದರಿಂದ ಎಳ್ಳಿಕೊಂಡು ಹೋಗಬೇಕಾಯಿತು. ಈ …ಂತ್ಯದ ರಸ್ತೆಗಳನ್ನು ನೋಡಿ ಕೆಲವು ಸ್ಥಳಗಳಲ್ಲಿ ಅವರು …ಪಟ್ಟರೆಂದು ತೋರುತ್ತೆ. ಅದು ನಿಜವೇ. ಅನೇಕ ರಸ್ತೆ… ಕಾಲುಹಜ್ಜೆ ಮುಚ್ಚಿಹೋಗುವಷ್ಟು ದೂಳಿನಿಂದ ತುಂಬಿವೆ …ವಾಗಿ ರಸ್ತೆಗೆ ಉಪಯೋಗಿಸಬೇಕಾದ ಹಣವು ಅನಾಯಕ…ವದರಿಂದಲೇ ರಸ್ತೆಗಳು ಈ ಅವಸ್ಥೆಯಲ್ಲಿವೆ. ಇದನ್ನು …ಇಂಜನೀರ್ ಇಲಾಖೆಯವರು ಮುತುವರ್ಜಿಯಿಂದ ಇಟ್ಟು…ದಿ ಹೋದರೆ ಪ್ರಜೆಗಳಿಂದ ಒಳ್ಳೇ ಹೆಸರು ಪಡೆಯುವರು …ಗಾದೀತು ! ಒಬ್ಬ ಮುಸಲ್ಮಾನರವನು ನಾಲ್ಕು ದಿನಗಳ ಹಿಂದೆ …ಯಲ್ಲಿ ಒಂದು ಬಾವಿಯಲ್ಲಿ ಬಿದ್ದು ಹಾಗೇ ಕಲ್ಲು ಹಿಡಿದು …ದು ನಿಂತಿದ್ದನು. ಆ ಕಾಲಕ್ಕೆ ಮೂರು ನಾಲ್ಕು ಜನರು …ಗಿ ಸಾಹಸಮಾಡಿ ಮೇಲಕ್ಕೆತ್ತಿ ಉಪಚರಿಸಿದರು. ಆ ಸಹಾಯ… ಪೋಲೀಸಿನವರಿಗೆ ತಿಳಿಸಲು ಹುಡುಕುತ್ತಿದ್ದಾಗ್ಯೂ ಪೋಲೀಸಿನ …ದರ್ಶನ ಕಾಣುವದೇ ಅಪರೂಪವಾಯಿತು. ಏನಾದರೂ ವಿಶೇ…ದರೆ ತಿಳಿಯುವದಕ್ಕೆ ಪೋಲೀಸ್ ಇನ್‌ಸ್ಪೆಕ್ಟರು ಶಿವಮೊಗ…ಲ್ಲಿರುವದರಿಂದ ಅಸಾಧ್ಯವಾಗಿದೆ ಎಂದು ಜನರು ಅಂದು…ತ್ತಾರೆ. ಇನ್‌ಸ್ಪೆಕ್ಟರು ಈ ಆಕ್ಷೇಪಣೆ ತಪ್ಪಿಸಿಕೊಳ್ಳುವದು …ವು —ಆಸ್ಪತ್ರೆ ರೋಡಿನಲ್ಲಿ ಒಬ್ಬ ಆಬ್ಕಾರಿ ಜವಾನನು ಬರು…ವನು ಹಾಗೇ ಎಡವಿ ಕೆಳಕ್ಕೆ ಬಿದ್ದು ಪ್ರಾಣವನ್ನು ಬಿಟ್ಟನು …ಕಾಲದ ತನಕ ಶವವು ಹಾಗೇ ಬಿದ್ದಿತ್ತು. ಕಡೆಗೆ ಹೊಲೆ…ರಕೈಯಿಂದ ದಹನ ಮಾಡಿಸಿದರು.—ಹೊಳೆ ಆಚೆ ಪ್ರತಿಗ… …ಪ್ಲೇಗ್ ಆಗಿತ್ತು. ಭಗವಂತನ ಅನುಗ್ರಹದಿಂದ ಯಾರೂ …ಯಲಿಲ್ಲ. ಮಠವನ್ನು ಖಾಲಿಮಾಡಿ ಬೇರೆ ಜಾಗದಲ್ಲಿ ವಾಸವಾ…ರಿಂದ ಎಲ್ಲರಿಗೂ ಗುಣವಾಗುತ್ತಿರುವದು ಬಹಳ ಸಂತೋಷ. …ಸ ಆಸ್ಪಿಟಲ್ ಅಸಿಸ್ಟೆಂಟರು ಆ ಪ್ಲೇಗಿನ ಜಾಗಗಳನ್ನೆಲ್ಲಾ …ಮುತುವರ್ಜಿಯಿಂದ ನೋಡಿಕೊಂಡು ಚಿಕಿತ್ಸೆ ಮುಂತಾದ…ಗಳನ್ನು ಮಾಡಿದಾರೆ. ಆಸ್ಪತ್ರೆಗೆ ಜನರು ವಿರಾಮವಿಲ್ಲದೆ ಹೋಗಿ …ಧಗಳನ್ನು ಪಡೆದು ಬರುತ್ತಾರೆ. ನಿರೀಕ್ಷೆ ಇಲ್ಲದ ರೋಗಿಗಳು …ರದಿಂದ ಬಂದವರು, ವಿಶೇಷವಾಗಿ ಬಡವರು, ಬಹು ಹರ್ಷ… ಆಸ್ಪತ್ರೆಗೆ ಹೋಗುತ್ತಾರೆ.—ತೀರ್ಥಹಳ್ಳಿಯಲ್ಲಿ ನಡೆದ …ರಿ ಕಳ್ಳತನ ಇನ್ನೂ ಪತ್ತೆ ಆದಂತೆ ತೋರಲಿಲ್ಲ. ಪತ್ತೆ ಮಾಡಿ…ಗೆ ೭೦೦ ರೂಪಾಯಿ ಕೊಡುತ್ತಾರೆ ಕೆಲವು ಪೋಲೀಸ್ ನೌಕ…ರ ಸಸ್ಪೆಂಡ್ ಮಾಡಿದ್ದರು. ಕೆಲವರನ್ನು ವರ್ಗಮಾಡಿ, ಕೆಲವ…ನ್ನು ವಜೇಗೆ ಹಾಕಿದಾರಂತೆ. ಇಲ್ಲಿನ ಜಮಾದಾರ್ರಿಗೆ ಬೇರೆ …ಗೆ ವರ್ಗವಾಯಿತು. ಆ ಜಮಾದಾರ್ರ ತಮ್ಮನನ್ನು ಬೆಂಗಳೂರ… ಗುಮಾನಿಯ ಮೇಲೆ ಹಿಡಿದಿದಾರೆಂದು ವದಂತಿಯಾಗಿದೆ …ಗಿರಿ ರಾಮಣ್ಣನವರಿಗೆ ಕಳ್ಳರಿಂದುಂಟಾದ ಗಾಯವನ್ನು …ಸ ಆಸ್ಪಿಟಲ್ ಅಸಿಸ್ಟೆಂಟರು ಮುತುವರ್ಜಿಯಿಂದ ಗುಣಪಡಿ…ಸಿದರು —ಇಲ್ಲಿನ ದೊಡ್ಡಮನೆ ತೋಟದಲ್ಲಿ ಭಯಂಕರವಾದ …ಜೂಜು ನಡೆಯುತ್ತದೆ. ಇದರಿಂದ ಅನೇಕ ಮನೆಗಳು ಹಾಳಾಗಿ…ಗಿವೆ. ಇದೇ ಕಾರಣದಿಂದ ಮೊನ್ನೆ ಒಬ್ಬ ಕೊಂಕಣಸ್ಥರು …ದಿವಾಳಿಯಾದರು. ದೊಡ್ಡ ಮನುಷ್ಯರೇ ಸೇರಿ ಆಡುವದೂ …ವರನ್ನು ಕೆಡಿಸುವದೂ ಒಳ್ಳೇದಲ್ಲ. ಪೋಲೀಸಿನವರು ಮೊನ್ನೆ …ರನ್ನು ಹಿಡಿದು, ಅವರಿಂದ ಮುಚ್ಚಳಿಕೆ ಬರೆಸಿಕೊಂಡು ಬಿಟ್ಟ…ರು ಹೇಳುತ್ತಾರೆ. ಆದರೆ ಮೂರು ನಾಲ್ಕು ದಿನಗಳ ಮುಂಚೆ …ಯೇ ಸ್ಥಳದಲ್ಲಿ ಸಿಕ್ಕ ೩೦ ರೂಪಾಯಿ ಕೊಟ್ಟರೆಂದೂ ಆ ರೂಪಾ…ಯಿಗಳನ್ನು ಪೋಲೀಸ್ ನೌಕರರು ತೆಗೆದುಕೊಂಡು ಹೋದರೆಂದೂ …ಳುತ್ತಾರೆ. ಕಂಡ ಜನರು ಧೈರ್ಯದಿಂದ ತಿಳಿಸಿದರೆ ಒಳ್ಳೇ …ಕ್ಷೆಯಾಗುವದು.

ವಿದೇಶ ವರ್ತಮಾನಗಳು.

ಜರ್ಮನಿ ರಾಜ್ಯದ ಕೆಲವು ಪಟ್ಟಣಗಳಲ್ಲಿ ೧೫ ವರುಷದೊಳ…ಗಿರುವ ಮಕ್ಕಳನ್ನು ಭಾರ್ಜಿಲ್ಲದೆ ರೈಲಿನಲ್ಲಿ ಕೂರಿಸಿಕೊಳ್ಳುವ …ಪದ್ಧತಿ ಇದೆ

****

ಅಮೇರಿಕಕ್ಕೆ ಸೇರಿದ ಕ್ಯಾನ್ಸಾಸ್ ಪಟ್ಟಣದಲ್ಲಿ ಮಕ್ಕಳು …ಟ್ಟಿದರೆ ಪ್ರತಿ ಮಗುವಿನ ಪೋಷಣೆಗೆ ಆ ಮ್ಯುನಿಸಿಪಾಲಿಟಿಯ…ರು ತಂದೆಗೆ ತಿಂಗಳಿಗೆ ೧೫ ರೂಪಾಯಿ ಸಂಬಳ ಕೊಡುವರು

****

ನೋರ್ವೇಜಿಯಾ ರಾಜ್ಯದ ವೆಸ್ಟರ್ ನಗರದಲ್ಲಿ ಯಾರೂ ಬೀದಿ…ಯಲ್ಲಿ ಚುಟ್ಟಾ ಮುಂತಾದ್ದನ್ನು ಸೇದಕೂಡದು. ಹಾಗೆ ಸೇದಿದ…ವರನ್ನು ಪೋಲೀಸಿನವರು ಹಿಡಿದು ಭಾರೀ ಜುಲ್ಮಾನೆ ವಿಧಿಸುವರು.

****

ದಕ್ಷಿಣ ಅಫ್ರಿಕಾದ ಕೇಪ್ ಕಾಲನಿಯಲ್ಲಿರುವ ೫ ಲಕ್ಷ …ಬಿಳೀ ಜನರಲ್ಲಿ ೨೦ ಸಾವಿರ ಜನರು ವಿದ್ಯವನ್ನು ಕಲಿಯದೆ …ಇದಾರೆ ಕಪ್ಪುಜನರ ಪೈಕಿ ಅನೇಕರು ವಿದ್ಯವನ್ನು ಕಲಿತು ಅಭಿ…ವೃದ್ಧಿಗೆ ಬರುತ್ತಾ ಇದಾರೆ.

****

ಪ್ರಷಿಯಾ ರಾಜ್ಯದ ಬರ್ಲಿನ್ ಎಂಬ ಪಟ್ಟಣದಲ್ಲಿ ಕಟುಕರ …ಇನ್‌ಸ್ಪೆಕ್ಟರವರು ಆ ಊರಿನಲ್ಲಿರುವ ನಾಯಿಗಳನ್ನೆಲ್ಲಾ ಪರೀಕ್ಷಿಸಿ ಅವುಗಳ ಪೈಕಿ ೩ ಸಾವಿರ ಮಾತ್ರ ಮನುಷ್ಯರು ತಿನ್ನುವದಕ್ಕೆ ಅರ್ಹವಾದವೆಂದು ತಿಳಿಸಿರುತ್ತಾರೆ.

****

ಜರ್ಮನಿಯ ರೂಹಾರ್ ಎಂಬ ಡಿಸ್ಟ್ರಿಕ್ಟಿನಲ್ಲಿ ಸುಮಾರು ೨॥ ಲಕ್ಷ ಕೂಲಿಯವರು ತಮಗೆ ಕೂಲಿ ಜಾಸ್ತಿ ಕೊಡಬೇಕೆಂತಲೂ ಕೆಲಸ ಮಾಡತಕ್ಕ ಗಂಟೆಗಳನ್ನು ಕಮ್ಮಿ ಮಾಡಿಕೊಡಬೇಕೆಂತಲೂ ಹಟಹಿಡಿದು ಕೆಲಸಕ್ಕೆ ಬಾರದೆ ನಿಂತಿರುತ್ತಾರೆ.

****

ಅನ್ಯೋನ್ಯ ರಾಜ್ಯಗಳ ಪ್ರಸಿಡೆಂಟರಾದ ಮಿ॥ ಕೋಟ್ ರವರು ೩೩ ವರುಷದವರಾದಗ್ಯೂ ನ್ಯೂಯಾರ್ಕ್ ಪಟ್ಟಣಕ್ಕೆ ಹೋಗಿ ಲಾಗಳನ್ನು ಕಲಿಯಬೇಕೆಂದಿರುತ್ತಾರೆ. ಅವರ ಬದಲಾಗಿ ಮಿ॥ ವೈಟ್‌ಲಾ ರೀಡ್ ರವರೇ ಪ್ರಸಿಡೆಂಟರಾಗುತ್ತಾರೆ.

****

ಇಂಗ್ಲೀಷರು ಟಿಬೆಟ್ಟಿಗೆ ದಂಡಯಾತ್ರೆಗಾಗಿ ಬರುತ್ತಾರೆಂದು ತಿಳಿದ ಕೂಡಲೆ ಅಲ್ಲಿನ ಮುಖ್ಯ ಗುರುವಾದ ದಳಾಯಿ ಲಾಮನೆಂಬುವನು ತಾನು ವಾಸಮಾಡಿಕೊಂಡಿದ್ದ ಉರ್ಗ ಪಟ್ಟಣವನ್ನು ಬಿಟ್ಟು ರಷ್ಯಾದವರ ಕಯಾಕ್ಟ ನಗರಕ್ಕೆ ಓಡಿ ಹೋದನು.

****

ಸೈಬೀರಿಯಾಕ್ಕೆ ಪೂರ್ವದಿಕ್ಕಿನಲ್ಲಿರುವ ಕಾಮಶ್ಚಟ್ಕಾ ಎಂಬ ಪರ್ಯಾಯ ದ್ವೀಪದ ಪೂರ್ವಭಾಗದ ಊರುಗಳಲ್ಲಿಯೂ ಹಳ್ಳಿಗಳಲ್ಲಿಯೂ ಕೆಲವು ದಿನಗಳಿಂದ ನೂರಾರು ಕರಡಿಗಳು ಆಹಾರವಿಲ್ಲದೆ ಬಂದು ಹಾವಳಿ ಮಾಡುತ್ತಿವೆ ಎಂದು ತಿಳಿದುಬಂದಿದೆ.

****

ಕ್ಷಯರೋಗಪೀಡಿತರನ್ನು ದಿನವೂ ಕೆಲವು ಗಂಟೆಗಳ ಹೊತ್ತು ಆಕಾಶಬುಟ್ಟಿಗಳಲ್ಲಿ ಕೂರಿಸಿ, ಅಂತರಿಕ್ಷದಲ್ಲಿ ತಿರುಗಿಸುತ್ತಾ ಬಂದರೆ ಅವರ ರೋಗವು ಬೇಗನೆ ನಿವಾರಣೆಯಾಗುತ್ತೆಂದು ಪ್ಯಾರಿಸಿನಲ್ಲಿರುವ ಪ್ರಸಿದ್ಧನಾದ ಆಲ್ಬರ್ಟ್ ರಾಬಿನ್ ಎಂಬ ವೈದ್ಯನು ತಿಳಿಸುತ್ತಾನೆ.

****

ಫ್ರಾನ್ಸ್ ರಾಜ್ಯದವರು ಒಂದು ಸಣ್ಣ ಸಂಘಸೇರಿ ಯುದ್ಧದಲ್ಲಿ ಮೃತಪಟ್ಟ ಶಿಪಾಯಿಗಳ ಮತ್ತು ಅಧಿಕಾರಿಗಳ ಹೆಂಡತಿ ಮಕ್ಕಳ ಪೋಷಣಾರ್ಥವಾಗಿ ಹಣ ಕೂಡಿಸುತ್ತಿದಾರೆ. ಪ್ರತಿಯೊಬ್ಬ ಅಧಿಕಾರಿಯೂ ಸುಮಾರು ೯ ರೂಪಾಯಿನಷ್ಟು ಚಂದಾ ಕೊಡಬೇಕಾಗುತ್ತೆ.

****

ನ್ಯೂಜೀಲೆಂಡ್ ಎಂಬ ದ್ವೀಪದಲ್ಲಿ ಈಚೆಗೆ ೨॥ ಲಕ್ಷ ರೂಪಾಯಿನಷ್ಟು ಬಾಳುವ ಮುತ್ತು ಒಂದು ಸಿಕ್ಕಿತು. ಇದನ್ನು ಆಸ್ಟ್ರೇಲಿಯಾ ದ್ವೀಪದ ಪಶ್ಚಿಮ ದಿಕ್ಕಿನಲ್ಲಿರುವ ಷಾರ್ಕ್ ಎಂಬ ಕೊಲ್ಲಿಯಲ್ಲಿ ತೆಗೆದರು. ಪ್ರಪಂಚದಲ್ಲಿ ಈಗಿರುವ ಮುತ್ತುಗಳಲ್ಲಿ ಇದು ಬಹಳ ಬೆಲೆಯುಳ್ಳದ್ದು.

****

ದಕ್ಷಿಣ ಅಫ್ರಿಕದಲ್ಲಿ ನಡೆದ ಬೋಯರರ ಯುದ್ಧದಲ್ಲಿ ಮುಖ್ಯ ದಳಪತಿಯಾದ ಕ್ರಾಂಜೆ ಯವರು—ಬೋಅರರ ಯುದ್ಧವಾದ ಮೇಲೆ ಪ್ರಪಂಚದಲ್ಲಿ ಯುದ್ಧಮಾಡುವ ಕ್ರಮವೂ ಬಂದೂಕುಗಳನ್ನು ಉಪಯೋಗಿಸುವ ಕ್ರಮವೂ ಬಹಳವಾಗಿ ಬದಲಾಯಿಸಿ ಹೋಗಿವೆ ಎಂದು ತಿಳಿಸಿರುತ್ತಾರೆ.

****

ಅಮೆರಿಕಾ ಖಂಡದಲ್ಲಿ ಕೆಲಸಮಾಡಿ ಕೋಟ್ಯಾಧೀಶ್ವರಿಯಾಗಿರುವ ಆನ್ನವಾಕರ್ ಎಂಬಾಕೆಗೆ ತನ್ನ ತಂದೆಯಾದ ಕ್ರಿಸ್ಟೈನ್ ಕಿಂಗ್ ಎಂಬುವನಿಂದ ೩೦ ಕೋಟಿ ರೂಪಾಯಿಗಳ ಆಸ್ತಿಯು ಕೂಡಲ್ಪಟ್ಟಿತು. ಅವಳು ತಾನು ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಸುಖವಾಗಿ ಜೀವನಮಾಡಿಕೊಂಡಿದಾಳೆ.

****

ಜರ್ಮನವರು ಕಾಲಿಂಗ್ ಎಂಬ ಕಣಿವೆಯಲ್ಲಿ ರಷ್ಯಾದವರ ಮೇಲೆ ಯುದ್ಧ ಮಾಡಿದಾಗ ಜರ್ಮನವರ ಕಡೆಯಲ್ಲಿ ೩೦೦ ಜನ ಚೀನಾ ಸೈನಿಕರು ಸೇರಿದ್ದರೆಂತಲೂ, ಚೀನೆಯವರು ಈ ಯುದ್ಧದಲ್ಲಿ ಸೇರಕೂಡದೆಂತಲೂ ರಷ್ಯಾದವರು ಚೀನಾ ಸರ್ಕಾರದವರ ಮೇಲೆ ಆಕ್ಷೇಪಣೆ ಮಾಡಲಾರಂಭಿಸಿದಾರೆ.

****

ಚೀನಾ ಚಕ್ರಾಧಿಪತ್ಯದ ವೃದ್ಧ ಚಕ್ರವರ್ತಿನಿಯವರು ಅಲ್ಲಿನ ಅಮೇರಿಕಾ ರಾಯಭಾರಿಯ ಪತ್ನಿಯವರ ಮೂಲಕ ಕ್ರೈಸ್ತಧರ್ಮಗಳನ್ನೆಲ್ಲಾ ಚನ್ನಾಗಿ ಕಲಿತುಕೊಂಡು, ಬಹು ವಿಶ್ವಾಸದೊಡನೆ ಆಚರಿಸುತ್ತಿದಾರೆಂತಲೂ, ಇಷ್ಟರಲ್ಲೇ ಅಕೆ ಆ ಮತವನ್ನು ಅವಲಂಬಿಸಿದಂತೆ ಪ್ರಕಟಿಸುವುದರಲ್ಲಿದಾರೆಂತಲೂ ಪ್ರಕಟವಾಗಿದೆ.

****

ವಿಲಾಯತಿಗೆ ಸೇರಿದ ಕ್ಯಾಂಟರ್‌ಬರಿ ಪಟ್ಟಣದಲ್ಲಿ ೮೫ ವರುಷ ಬದುಕಿದ್ದು ಕಾಲವಾದ ಎಮ್ಮಾ ಎಲಿಜಬೆತ್ ಟೆಂಪಲ್ ಎಂಬಾಕೆಯು ಲಂಡನ್ ಪಟ್ಟಣದ ನಾಲ್ಕು ಆಸ್ಪತ್ರೆಗಳ ಮೂಲಧನಕ್ಕೆ ೧,೨೦,೦೦೦ ರೂಪಾಯಿ ಧರ್ಮಕೊಟ್ಟಳು. ಆಕ್ಸ್‌ಫರ್ಡ್ ಪಟ್ಟಣದ ಆಲ್‌ಬರ್ಟ್ ವಾಟ್ಸನ್ ಎಂಬಾತನು ಒಂದು ವಿದ್ಯಾಶಾಲೆಗೆ ೬೦,೦೦೦ ರೂಪಾಯಿ ಕೊಟ್ಟನು.

****

ವಿಲಾಯತಿಗೆ ಸೇರಿದ ಹ್ಯಾಂಪಷೈರ್ ಡಿಸ್ಟ್ರಿಕ್ಟಿನಲ್ಲಿ ಜೇನ್ ವಾಟ್ಸನ್ ಎಂಬ ಸ್ತ್ರೀಯು ಮೂವತ್ತು ವರುಷಗಳ ತನಕ ಅಂಚೆ ಜವಾನಿ ಕೆಲಸ ಮಾಡಿ, ದಿನ ೧ ಕ್ಕೆ ಸರಾಸರಿ ೨೫ ಮೈಲಿಯಂತೆ ನಡೆಯುತ್ತಾ ಕಾಗದಗಳನ್ನು ವಿಳಾಸದವರಿಗೆ ತಲಪಿಸುತ್ತಿದ್ದು, ಈಗ ಪೆನ್ಷನ್ ಪಡೆದು ಸುಖವಾಗಿದಾಳೆ. ಈಕೆಗೆ ಈಗ ೬೫ ವರುಷ; ವಾರ ೧ ಕ್ಕೆ ೫ ರೂಪಾಯಿ ಪೆನ್ಷನ್ ಬರುವುದು.

****

ಆಸ್ಟ್ರೇಲಿಯಾ ದ್ವೀಪದ ಒಂದು ಭಾಗದಲ್ಲಿ ಹುಡುಗರು ಚುಟ್ಟಾ ಅಥವಾ ಸಿಗರೆಟ್ಟುಗಳನ್ನು ಸೇದಕೂಡದೆಂದು ಕಾನೂನು ಮಾಡುವವರಾಗಿದಾರೆ. ೧೬ ವರುಷದೊಳಗಿರುವವರು ಹೊಗೆಬತ್ತಿ ಸೇದಕೂಡದೆಂದು ವಿಧಿಸಿರುತ್ತಾರೆ. ನಮ್ಮ ದೇಶದಲ್ಲಿ ೬—೭ ವರುಷದ ಹುಡುಗರು ಕೂಡ ಸಿಗರೆಟ್ ಸೇದುವುದು ಅಪರೂಪವಲ್ಲ. ಮಕ್ಕಳ ಕ್ಷೇಮಾಭಿವೃದ್ಧಿಯನ್ನು ಬಯಸತಕ್ಕವರು ಈ ದುರಭ್ಯಾಸವನ್ನು ನಿಲ್ಲಿಸಬೇಕಾಗಿದೆ.

****

ಲಂಡನ್ ಪಟ್ಟಣದಲ್ಲಿ ಎಡ್‌ವರ್ಡ್ ಚಕ್ರವರ್ತಿಯವರ ಹೆಸರಿನ ಮೇಲೆ ಕಟ್ಟಿ ನಡಿಸುತ್ತಾ ಬಂದಿರುವ ಭಾರೀ ಆಸ್ಪತ್ರೆಯ ಮೂಲಧನಕ್ಕೆ ೩೦ ಲಕ್ಷ ರೂಪಾಯಿಗಳನ್ನು ಲಾರ್ಡ್ ಮೌಂಟ್ ಸ್ಟೀಫನ್ ಎಂಬಾತನು ಕೊಟ್ಟಿರುತ್ತಾನೆ. ಇದರಿಂದ ವರುಷಕ್ಕೆ ೧,೬೫,೦೦೦ ರೂಪಾಯಿನಂತೆ ಬಡ್ಡಿ ಉತ್ಪತ್ತಿಯಾಗುವುದು. ಚಕ್ರವರ್ತಿಯವರು ಆತನ ಧರ್ಮವನ್ನು ನೋಡಿ ತುಂಬಾ ಸಂತೋಷಪಟ್ಟು, ಬಹಳವಾಗಿ ವಂದಿಸಿ ಆತನಿಗೆ ಕಾಗದ ಬರೆದಿದಾರೆ.

****

ಬೆಲ್ಜಿಯಂ ರಾಜ್ಯದ ಲಿಯೊಪೋಲ್ಡ್ ದೊರೆಯು ತನ್ನ ತಾಯಿಗೆ ಆಳ್ವಿಕೆಯಾವ ಕಾಲದಲ್ಲಿ ಇನ್ನುಮೇಲೆ ಯಾವ ಪ್ರಜೆಯನ್ನೂ ಗಲ್ಲಿಗೆ ಹಾಕಿಸುವುದಿಲ್ಲ ಎಂಬುದಾಗಿ ವಾಗ್ದಾನ ಮಾಡಿದಾರೆ. ಆದಕಾರಣ ಆ ರಾಜ್ಯದಲ್ಲಿ ಅಪರಾಧಿಗೆ ಮರಣದಂಡನೆಯೇ ಇಲ್ಲ. ಜೀವಾಂತ್ಯದ ತನಕ ಬಂದೀಖಾನೆಯನ್ನು ಅನುಭವಿಸಬೇಕು. ಆದರೆ ಮರಣದಂಡನೆ ವಿಧಿಸಲ್ಪಡುವ ಅಪರಾಧಿಯ ಸ್ವರೂಪವನ್ನು ಕಾಗದ ಮುಂತಾದ್ದರಲ್ಲಿ ಮಾಡಿ, ಗಲ್ಲಿಗೆ ಹಾಕುವರು.

****

ಎಡ್ವರ್ಡ್ ಸಾರ್ವಭೌಮರ ಜ್ಯೇಷ್ಠ ಪುತ್ರರಾದ ಪ್ರಿನ್ಸ್ ಆಫ್ ವೇಲ್ಸ್ ರವರ ದೇಹಸ್ಥಿತಿಯನ್ನು ನೋಡಿಕೊಳ್ಳುವದಕ್ಕಾಗಿ ನೇಮಿಸಲ್ಪಟ್ಟಿದ್ದ ಹರ್ಬರ್ಟ್ ಆಲಿಂಗ್ಹಾಂ ರವರು ಕಳೆದ ನವಂಬರ್ ತಿಂಗಳಿನ ಅಂತ್ಯಕಾಲದಲ್ಲಿ ಕಾಬೆಸ್ಟ್ ಮೂಲಕ ಪ್ರಯಾಣ ಮಾಡುತ್ತಿದ್ದಾಗ ಮೃತಪಟ್ಟರು. ಅವರು ಸುಮಾರು ೬। ಲಕ್ಷ ರೂಪಾಯಿನಷ್ಟು ಆಸ್ತಿಯನ್ನು ಕೂಡಿಸಿರುತ್ತಾರೆ. ಅದರ ಪೈಕಿ ೩೦,೦೦೦ ರೂಪಾಯಿಗಳನ್ನು ವೈದ್ಯ ಕಲಿಯುವವರಿಗೆ ಸಹಾಯ ಮಾಡುವದಕ್ಕಾಗಿ ಕೊಡಬೇಕೆಂದು ಗೊತ್ತುಮಾಡಿದಾರೆ.

****

ಕಳೆದ ಜನವರಿ ೧೬ ನೇ ತಾರೀಖಿನ ದಿನ ಲಂಡನ್ ನಗರದಲ್ಲಿ ಭಯಂಕರವಾದ ಹಿಮಗಾಳಿಯು ಬೀಸಿತು. ಅದರಿಂದ ಥೇಮ್ಸ್ ನದಿಯಲ್ಲಿ ನೀರು ಬಹಳ ದೂರದ ವರೆಗೂ ಹೆಪ್ಪು ಕಟ್ಟಿಕೊಂಡಿರುವದು. ಅನೇಕಲ್ಲಿನ ಮಳೆಯು ಪಟ್ಟಣದಲ್ಲೆಲ್ಲಾ ಸುರಿಯಿತು. ಇದರಿಂದ ಆಮೇದು ರಸ್ತೆಗಳೂ ವ್ಯಾಪಾರವೂ ಬಹಳ ಮಟ್ಟಿಗೆ ಕಡಮೆಯಾಗಿವೆ. ಥೇಮ್ಸ್ ನದಿಯ ದಡದಲ್ಲಿ ಕಟ್ಟಿದ್ದ ದೋಣಿಗಳೂ ಹಡಗುಗಳೂ ಗಾಳಿಯಿಂದ ಛಿನ್ನಭಿನ್ನವಾದದ್ದಲ್ಲದೆ ಮತ್ತು ಅನೇಕ ಜನರು ಛಳಿಯನ್ನು ಸಹಿಸಲಾರದೆ ಪ್ರಾಣ ಬಿಟ್ಟಿರುವರು.

****

ಕೆಲವು ವರುಷಗಳ ಕೆಳಗೆ ಚೀನಾ ಚಕ್ರಾಧಿಪತ್ಯದಲ್ಲಿ ನಾಲ್ಕಾರು ವರ್ತಮಾನಪತ್ರಿಕೆಗಳು ಮಾತ್ರ ಪ್ರಕಟವಾಗುತ್ತಿದ್ದವು. ಈಗಲಾದರೋ ೭೦೦ ಕ್ಕಿಂತಲೂ ಹೆಚ್ಚಾಗಿಯೇ ಪ್ರಕಟವಾಗುತ್ತಿವೆ. ಸಾವಿರಾರು ಮಂದಿ ಚೀನೆಯವರು ಜಪಾನಿಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿದಾರೆ. ಇಂಗ್ಲಿಷ್, ಜಪಾನ್, ಈ ಭಾಷೆಗಳು ಚೀನೆಯಲ್ಲಿ ಹೆಚ್ಚುತ್ತಿರುವವು. ರೈಲ್ವೆ, ಅಂಚೆ, ಟೆಲಿಗ್ರಾಫ್, ಟೆಲಿಫೋನ್ ಎಂಬೀ ಪಾಶ್ಚಿಮಾತ್ಯರ ನಾಗರಿಕ ವಿಷಯಗಳು ಈಗೀಗ ಚೀನೆಯಲ್ಲಿ ರೂಢಿಗೆ ಬರುತ್ತಿರುವವು. ಈಗಿನ ಕಾಲಕ್ಕೆ ತಕ್ಕಂತೆ ಸೈನ್ಯವನ್ನೂ ತರಪೇತು ಮಾಡಿಕೊಳ್ಳುತ್ತಿದಾರೆ.

****

ಚೀನಾ ರಾಜ್ಯದ ಸಮುದ್ರತೀರದಲ್ಲಿ ಈಗ ಎರಡು ವರುಷಗಳ ಕೆಳಗೆ ಪ್ಲೇಗು ರೋಗವು ಬಹಳವಾಗಿತ್ತು. ಜರ್ಮನವರು ತಮ್ಮ ರಾಜ್ಯಕ್ಕೆ ರೋಗಬಾರದ ಹಾಗೆ ಅನೇಕ ಏರ್ಪಾಡು ಮಾಡಿದ್ದರು. ಅವರು ಇಲಿಗಳನ್ನೆಲ್ಲಾ ಸಂಹರಿಸಬೇಕೆಂದು ನಿಶ್ಚಯಿಸಿ, ಸತ್ತ ಇಲಿಗಳನ್ನು ತಂದು ಕೊಟ್ಟವರಿಗೆ ಇನಾಮುಗಳನ್ನು ಕೊಡುತ್ತೇವೆಂದು ಪ್ರಕಟಿಸಿದರು. ಚಿಕ್ಕ ಚಿಕ್ಕ ಹುಡುಗರೆಲ್ಲಾ ಇಲಿಗಳನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದರು. ಇನಾಮುಗಳಲ್ಲದೆ ಇಲಿ ತಂದವರಿಗೆ ಒಂದು ಟಿಕೆಟ್ಟನ್ನೂ ಕೊಡುತ್ತಿದ್ದರು. ಒಂದು ತಿಂಗಳಾದ ಮೇಲೆ ೪ ಟಿಕೆಟ್ಟುಗಳಿಗೆ ಕೊಟ್ಟ ಹಣ ಸುಮಾರು ೧೭,೦೦೦ ರೂಪಾಯಿ ತೆಗೆದುಕೊಂಡು ಹೋಗಿ ಕೊಟ್ಟ ಇಲಿಗಳನ್ನೂ ರಜಿಸ್ಟರು ಮಾಡುತ್ತಿದ್ದರಲ್ಲದೆ ಆ ಇಲಿಯು ಯಾವಸ್ಥಳದ್ದೆಂಬುವದನ್ನೂ ಬರೆದುಕೊಳ್ಳುತ್ತಿದ್ದರು. ಹೀಗೆ ಮಾಡುತ್ತಾ ಬಂದುದರಿಂದ ಅಲ್ಲಿ ಪ್ಲೇಗು ಕಡಮೆಯಾಯಿತು. ಜಪಾನಿನ ಹುಡುಗರೆಲ್ಲಾ ಇಲಿಗಳನ್ನು ಸಂಹರಿಸಿ ಬಹುಮಾನವನ್ನು ಪಡೆಯುವದರಲ್ಲಿ ಮಗ್ನರಾದರೇ ಹೊರತು ಒಬ್ಬರಾದರೂ ಅಷ್ಟು ಕೋಟ್ಯಂತರ ಇಲಿಗಳು ಏನಾದವೆಂಬುವದನ್ನು ಯೋಚಿಸಲಿಲ್ಲ. ಜಪಾನ್ ಗವರ್ನಮೆಂಟಿನವರು ಅವುಗಳನ್ನು ಎಸೆಯದೆ ಕಿವಿ ಚೀಲಗಳನ್ನಾಗಿ ಮಾಡಿ ರಷ್ಯ ಸೈನಿಕರ ಮೇಲೆ ಯುದ್ಧ ಮಾಡುತ್ತಿರುವ ಸೈನಿಕರಿಗೆ ಕಳುಹಿಸಿಕೊಟ್ಟರು. ರಷ್ಯಾ ರಾಜ್ಯವು ತುಂಬಾ ಛಳಿರಾಜ್ಯವಾದ್ದರಿಂದ ಈ ಸೈನಿಕರಿಗೆ ಅವುಗಳು ತುಂಬಾ ಉಪಯೋಗವಾಗಿವೆ. ಪ್ಲೇಗಿನಲ್ಲಿ ಸತ್ತ ಇಲಿಗಳ ಚರ್ಮಗಳು ರಣರಂಗದಲ್ಲಿ ಕಿವಿಚೀಲಗಳಾಗಿ ಪರಿಣಮಿಸಿದ್ದು ಆಶ್ಚರ್ಯವೇ ಸರಿ !

ಜ್ವರಹರಿ. 13

ಇದು ಸಾಧಾರಣ ಜ್ವರ, ಚಳಿಜ್ವರ, ಮೊರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್‌ಸೀಯರ್ ಅಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಟಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ. ೨—೧೨ ಆ , ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾವಿಧ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತನ್ನಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾವೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ — ಪ್ರೊಪ್ರೈಟರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ನೆಕಂಡ್ ಲೇನ್ ಲೈನ್. ಮದರಾಸ್.

ಶರೀರಸುಖಕ್ಕೆ ಒಂದು ಸುಲಭ ಉಪಾಯವು.

ಅಂದರೆ 13

ಮಿಂಚಿನ ವಸ್ತು ವ್ಯೆಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ತಿರುಗಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ ಈ ರಕ್ತದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ ಅನೇಕ ಧಾತುಗಳ ಸಮ್ಮೇಳನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ !!!

ಮಿಂಚಿನ ಪದಕವೂ ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು —ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೇನೋವು, ಅರತಲೇನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ಅಲ್ಪನಿದ್ರೆ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ಕಜ್ಜಿ, ಗಜಕರ್ಣ, ಜ್ವರ, ಉದರವಾತ, ಕರುಳಿನ ವ್ಯಾಧಿ, ಸ್ತ್ರೀಯರ ಬಾಣಂತಿ ರೋಗ, ತಲೆತಿರುಗುವಿಕೆ, ಅಪಸ್ಮಾರ, ಅರ್ಧಾಂಗ ವಾಯು, ತಿಳಿಯದೆ ಆಗುವ ಧಾತುನಷ್ಟವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ

ಉಪಯೋಗ —ಪದಕವು ಎದೆಯ ಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ವ್ಯಾಪ್ತವಾಗುವದು ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು ಕ್ರಯ ಪ್ರತಿ ೧ ಪದಕಕ್ಕೆ ೧—೨—೦ ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೪ ಆಣೆ ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗವನ್ನೂ, ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನೂ ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ —ಉಂಗುರ ಕೊಂಡುವಾಗ ಬೆರಳಿನ ಅಳತೆ ಕಳುಹಿಸಬೇಕು ಉಪಹತಿಯು ಗುಣಹೊಂದಿದ ನಂತರ ಮುಂದೆ ೧ ಯಾ ೨ ತಿಂಗಳು ವರೆಗೆ ಈ ವಸ್ತು ಮ್ಯೆಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ ವೈಲಕ್ಷಣ್ಯ ಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು ೭ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವ್ಹಿ. ಪಿ ಯಿಂದಲೂ ಕಳುಹಿಸುವೆವು

ವಿಠಲದಾಸ ಮೂಡಗಾವುಕರ, ಮರ್ಚಂಟ,

ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ

Post Bilgi, North Kanara District

ನಿಮ್ಮ ತಲೆಯ ಮೇಲಿರುವದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

13

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಹೋಮಿಯೋಸಿಯಾ

ಕಷ್ಟ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ಅತ್ಯಲ್ಪದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊದುಗಳು, ಗಡ್ಡೆಗಳು, ರಣಗಳು, ಮುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ ೨—೮ ಆ , ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ಪಟ್ಟು ಹೆಚ್ಚು ಔಷಧವಿರುತ್ತೆ ಈ ರೂ ೨—೮ ಆ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮಿಯೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ೯೦ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ —ಹೋಮಿಯೋಸಿಯಾ ಕಂಪನಿ. ೨೭ ಸೆಕಂಡ್ ಲೇನ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

13—1—1905 ರಿಂದ 20—1—1905 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದವರ್ಷ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	26	19	4 1	91
ಮೈಸೂರು ,,	21	17	22	1[illegible]
ಬೆಂಗಳೂರು ಡಿಸ್ಟ್ರಿಕ್ಟ್	70	50	106	81
ಮೈಸೂರು ,,	53	40	148	9[illegible]
ಕೋಲಾರ್ ,,	1[illegible]	19	107	1[illegible]
ಕೋಲಾರ್ ಚಿನ್ನದ ಗಣಿಗಳು	27	18	15	9
ತುಂಕೂರು ಡಿಸ್ಟ್ರಿಕ್ಟ್	31	28	43	2[illegible]
ಹಾಸನ ,,	3	0	15	15
ಚಿತ್ರದುರ್ಗ ,,	25	19	37	2[illegible]
ಕಡೂರ್ ,,	15	9	53	59
ಶಿವಮೊಗ್ಗ ,,	12	3	25	19
ಒಟ್ಟು.	30[illegible]	224	682	49[illegible]

ಶಾಲೀವಾಹನ ಶಕ ೧೮೨೭ ನೇ ಕ್ರೋಧಿನಾಮ ಸಂವತ್ಸರದ ಪುಷ್ಯ ಬಹುಳ ತ್ರಯೋದಶಿ ಗುರುವಾರದಿಂದ ಮಾಘ ಶುದ್ಧ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಫೆಬ್ರುವರಿ

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	[illegible]
2	ಗುರು *	ತ್ರಯೋ	20 0	ಪೂಷಾ	20 49	21
3	ಶುಕ್ರ	ಚತುರ್ದಶಿ	20 30	ಉತ್ತಾಷಾ	22-56	22
4	ಶನಿವಾ ¦	ಅಮಾ	22 29	ಶ್ರ	26 16	23
5	ರವಿವಾ ,,	ಪಾಡ್ಯ	25 26	ಧ	30 10	24
6	ಚಂದ್ರ ‡	ಬಿದಿಗೆ	29 18	ಶ	36 3	25
7	ಕುಜ ¶	ತದಿಗೆ	31 38	ಪೂಭಾ	12 10	26
8	ಬುಧ	ಚೌತಿ	39 19	ಉತ್ತಭಾ	48 11	27

* ಮಾಸಶಿವರಾತ್ರಿ ¦ ಸರ್ವತ್ರ ಅಮಾವಾಸ್ಯೆ, ಮಹೋದಯ ಪುಣ್ಯಕಾಲ, ಗರುಡಜಯಂತಿ ,, ಮಾಘ ಗೌರೀ ವ್ರತಾರಂಭ. ‡ ಚಂದ್ರೋದಯ ¶ ಮೌನಗೌರೀ ವ್ರತ ತಿಲಚತುರ್ಥಿ

ಪೇಟೆ ಧಾರಣೆ.

ಜಿನಸಿ.	ಮೈಸೂರು	ಬೆಂಗಳೂರು.
ಕಳ್ಳೇ ಅಕ್ಕಿ ಪಲ್ಲ ೧ಕ್ಕೆ .. ರೂ	೧೦-೮-೦	೧೧-೪-೦
ಕೆಂಬೂತಿ ಅಕ್ಕಿ ಅವಲ್	೧೦-೪-೦	೧೧-೦-೦
,, ಮುಯಂ	೯-೧೨-೦	೧೦-೪-೦
ಜಾಬ್ರಾಳಿ ಅಕ್ಕಿ	೯-೮-೦	೧೨-೪-೦
ಸಣ್ಣಕ್ಕಿ ಅವಲ್	೧೨-೦-೦	೧೨-೮-೦
,, ಮುಯಂ	೧೦-೮-೦	೧೨-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ ..	೧೦-೮-೦	೧೧-೦-೦
,, ಮುಯಂ	೧೧-೦-೦	೧೦-೦-೦
ಹೈ ರಾಗಿ ಪಲ್ಲ ೧ಕ್ಕೆ	೪-೧೨-೦	೫-೪-೦
ಕಾರ್ರಾಗಿ	೪-೭-೦	೫-೩-೦
ಜೋಳ	೪-೧೨-೦	೭-೦-೦
ತಲಸಂದೆ ಪಲ್ಲ ೧ಕ್ಕೆ	೮-೧೨-೦	೮-೦-೦
ಬಿಳೀ ಅವರೆ	೬-೧೨-೦	೭-೦-೦
ಹೆಸರು	೯-೧೨-೦	೯-೦-೦
ಉದ್ದು	೮-೧೪-೦	೮-೧೨-೦
ಕಡಲೆ	೯-೦-೦	೭-೮-೦
ಎಳ್ಳು	೧೬-೦-೦	೧೦-೧೬-೦
ಹುರುಳಿ	೮-೦-೦	೬-೧೪-೦
ಹರಳು ೧೨ ಸೇರಿಗೆ	೯-೮-೦	೬-೫-೦
ಸೀಗೇಕಾಯಿ ಮಣ ೧ಕ್ಕೆ ..	೨-೪-೦	೧-೧೨-೦
ಮೆಣಸಿನಕಾಯಿ	೪-೮-೦	೩-೩-೦
,, ಪುಡಿ	೩-೧೨-೦	೨-೮-೦
ಬೆಲ್ಲ ದೊಡ್ಡ ಅಚ್ಚು	೭-೪-೦	ಮು ೧ ೦೨
ಒಳ್ಳೆಣ್ಣೆ ಮಣ ೧ಕ್ಕೆ	೪-೦-೦	೩-೧೨-೦
ಹರಳೆಣ್ಣೆ ,, ...	೪-೦-೦	೩-೮-೦
ಕೊತ್ತಂಬರಿ ಪಲ್ಲ ೧ಕ್ಕೆ	೬-೦-೦	೫-೧೪-೦
ಉಪ್ಪು ,, ...	೮-೦-೦	೮-೫-೪
ಹುಣಸೇ ಹಣ್ಣು	೧-೪-೦	೦-೧೪-೦
,, ಚಿಗುರು	೦-೧೪-೦	೦-೧೨-೦
ತುಪ್ಪ	೧೨-೦-೦	೧೯-೩-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	೫-೩-೦	೪-೨-೦
ತೆಂಗಿನಕಾಯಿ ೧೦೦ಕ್ಕೆ ..	೫-೦-೦	೩-೦೮-೦
ಅಳಲೇಕಾಯಿ ಮಣ ೧ಕ್ಕೆ ..	೦-೦-೦	೦-೨೦-೦
ಅಂಟುವಾಳಕಾಯಿ ಮಣ ೧ಕ್ಕೆ ..	೦-೧೪-೦	೦-೧೦-೦
ಚಿನ್ನ (ಪೌನ) ಕೆಂಪು ..	೧೫-೮-೦	೧೫-೩-೦
,, ,, ಹಸಿವು ..	೧೫ ೧೦-೦	೧೫-೯-೦
,, ,, ಗಟ್ಟಿ ತೊಲ ೧ಕ್ಕೆ ..	೧೬-೦-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೭೨-೦-೦	೭೭-೧೨-೦

Printed and Published by the Rev W B Tillotson (?) the Proprietor and Manager Wesleyan Mission Press Mysore 2/2/1905

ವೃತ್ತಾಂತ ಪತ್ರಿಕೆ.

REGISTERED M 20.

ಯ೧ದ ಪ್ರ —— ಕ್ರ ಯ೧ದ ಪ್ರ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ | ಮೈಸೂರು—ಸನ್ ೧೯೦೫ ನೇ ಇಸವಿ ಫೆಬ್ರುವರಿ ತಾರೀಖು ೯ ನೇ ಗುರುವಾರ. | ಸಂಚಿಕೆ ೬೭

ಶ್ರೀ ತಾಂಬೂಲ.

ಓದಿ ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದ

ರೆ ಮುಖದ ಬಾಯಿಯ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯೂವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವದು. ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ —

ದೇವನಹಳ್ಳಿ ಟವರ್, ಯಂ. ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟೀಷನರ್

P. SUBBAROY'S

World Renowned and most Efficacious

Ayurvedic Medicines

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಲಕ್ಷ್ಮೀವಿಲಾಸ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ತಿಂದರೆ, ಬಾಯಿಯ ದುರ್ಗಂಧವು ಹೋಗುವದು. ಬೆಳಿಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ನಾಶವಾಗುವವು. ಇದರಲ್ಲಿ ಅಫೀಮುಮುಂತಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಒರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ — ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ರಿಂದ ೬ ಸೀಸೆಗೆ ವಿ. ಪಿ. ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾಚಾರ.

ಛಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಛಳಿ ಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದು ನನಗೆ ವಿಶೇಷ ಪ್ರಯೋಜನವಾಗಿರುವುದು.—ಪ್ರೊಫೆಸರ್ ಪೋಲೀಸ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.— ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕ್ಯಾಂಪ್.

Apply to.—P. SUBBAROY,

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಸವಿನುಡಿ.

ಕನ್ನಡದಲ್ಲಿ ಇದೊಂದು ಹೊಸ ಪುಸ್ತಕವು.

ಕ್ರಯವಿಲ್ಲದೆ ದೊರೆವದು.

ಕ್ಷಣವೇ ಯುಗಸಮಯವನ್ನು ಒತ್ತಲೀಸದೆ ಒಂದು ಸಲ ಓದಿನೋಡಿ.

ಓದುತ ಓದುತ ದೇಶಭಾಷಾಜ್ಞತೆ, ಲೋಕವ್ಯವಹಾರಾನುಭವ, ಜ್ಞಾನಾಭಿವೃದ್ಧಿಗಳು ಒಂದಕ್ಕೊಂದು ಹೆಚ್ಚುವದೇ ಮುಖ್ಯವಾದ ಫಲವು. ತಮ್ಮ ತಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬೇಗ ಬೇಗ ಬರೆಯಿರಿ. ವಿಳಾಸ —ಭಾರತಿಸಂಘಂಗಿರಾನು, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

೧೯೦೫ನೇ ಇಸವಿಯ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸ್.

ಸಿದ್ಧವಾಗಿದೆ. ಡಿಸ್ಕೌಂಟು — ೧೦ಕ್ಕೆ ೧. ೫೦ಕ್ಕೆ ೭. ೧೦೦ಕ್ಕೆ ೨೦. ಪ್ರಶ್ನೋತ್ತರಸಹಿತ, ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷಿಗಳಿಗೆ ತಕ್ಷಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಏರ್ಪಾಡುಮಾಡಿದೆ.

ಬಾಲಬೋಧದ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೩ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ—೧ ಆಣೆ. ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈವರೆಗೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನು ಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೨ನೇ ತರಗತಿಯ ಪದ್ಯಸಂಗ್ರಹದ ನೋಟ್ಸು—೯ ಆಣೆ

ವಿಳಾಸ —ಮೈಸೂರಲ್ಲಿ ದಿ ಜನರಲ್ ಏಜನ್ಸಿ, ಸಿ. ಎಲ್. ಎಸ್. ಬುಕ್ ಡಿಪೋ, ಕೆ. ನರಸಿಂಹಯ್ಯ ಅಂಡ್ ಕೋ, ಬೆಂಗಳೂರಲ್ಲಿ ಜಿ ಗಣಪ್ಪ ಅಂಡ್ ಕೋ

ಯಸ್ ಆರ್ ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ ಮೈಸೂರು.

ಸನ್ ೧೯೦೫ನೇ ಇಸವಿಯ

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ ಡೈರಿ

ಎನಾಮೆಲ್ ಬಿನಂ ನಿನಂ ಡಿನಂ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಖಷ್‌ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ॥ ಪಂಚಾಂಗ ಗ್ರಹ ಲಾಂಛನ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್‌ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾವಿಷಯಗಳು, ಜವಿಯ್ಯಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀಮೆ ಸಾವರ್ನ್ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ.

ಎ ನಂಬರ್ ಚಿಕ್ಕಸೈಜು ೩ ಆಣೆ ಸಿ. ನಂಬರ್ ದೊಡ್ಡಸೈಜು ೬. ೮

ಎಫ್ ,, ,, ೪ ಎಚ್ ,, ,, ೭ ,,

ಬಿ ಮುಕ್ಕಳದ್ದು ,, ೫ ಡಿ. ಮುಕ್ಕಳದ್ದು ,, ೮ ,,

ಪೋಸ್ಟ್ ಚಾರ್ಜು ಬೇರೆ. ಒಂದೇ ಸಮೂಹ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಅಗ್ಗ! ಅಗ್ಗ!! ಬಹಳ ಅಗ್ಗ!!!

ಇಂಥಾ ಸಮಯ. ಮುಂದೆ ಸಿಗಲಿಕ್ಕಿಲ್ಲಾ.

ರಾಸ್ಕೋಪ ಲಿವರ ಸಿಸ್ಟಂ ವಾಚ.

ಇದು ಬಹಳ ಮಜಬೂತ ಇದ್ದು ಕುದುರೆಯ ಮೇಲೆ ಸವಾರಿ ಮಾಡಿದರೂ ಕೂಡ ಬಂದ ಆಗುವದಿಲ್ಲ. ಇಂಥಾ ವಾಚನ್ನು ನಾವು ಬಡಜನರಿಗೂ ಕೂಡ ಸೋಯಿಯಾಗಬೇಕೆಂಬ ಇರಾದೆಯಿಂದ ೧೯೦೫ ನೇ ಆಗಸ್ಟ್ ಅಖೈರವರಿಗೆ ೧೦ ರೂಪಾಯಿ ಕಿಮ್ಮತ್ತು ಇದ್ದದ್ದು ೫ ರೂಪಾಯಿಗೆ ಕೊಡುತ್ತೇವೆ. ಗ್ಯಾರಂಟಿ ೫ ವರ್ಷ. ಪ್ರತಿ ವಾಚಿನ ಸಂಗಡ ಸ್ಪ್ರಿಂಗ್, ಪಟ್ಟಿಗೆ, ಕನ್ನಡಿ, ಹೀಗೆ ೩ ಸಾಮಾನು ಕಳುಹಿಸುತ್ತೇವೆ. ಟಪ್ಪಾಲ್ ಖರ್ಚ ಬೇರೆ.

ವಿಳಾಸ:—ಜೇ ಯಸ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರ ಕಾನಡಾ.

ತುಳಸೀ ರಾಮದಾಸ್ ಕಂಪನಿ,

ಸಾಹುಕಾರ್ ಪೇಟೆ. ಮದರಾಸು.

ಸವರಿನ್ ಚಿನ್ನದಿಂದಲು, ತಂಬಾಕೆಂಬ ಮಟ್ಟಚಿನ್ನದಿಂದಲು ತಯಾರು ಮಾಡಿದ ಆಭರಣಗಳು ಗ್ಯಾರಂಟಿ ಚೀಟಿಯೊಡನೆ ಕಳುಹಿಸುತ್ತೇವೆ. ಭಾಗ್ಯವಂತರಿಗೂ ಬಡವರಿಗೂ ಉಪಯೋಗವಾಗುವ ಹಾಗೆ ಅತ್ಯಂತ ಸುಲಭಕ್ರಯವನ್ನು ನಮೂದಿಸಿರುವದರಿಂದ ಲಕ್ಷಾಂತರ ವಿಕ್ರಯವಾಗುತ್ತಿದೆ. ವರ್ತಕರು ವ್ಯಾಪಾರ ಮಾಡಿ ದ್ರವ್ಯಾರ್ಜನೆಮಾಡುವದಕ್ಕೆ ಇದೇ ಒಳ್ಳೆ ತರುಣವೆಂದು ನಾವು ನಿಜವಾಗಿ ಹೇಳುತ್ತೇವೆ. ನಮ್ಮ ಮಾತನ್ನು ಪರೀಕ್ಷಿಸುವದಕ್ಕಾಗಿ ಈ ಕೆಳಗೆ ಕಂಡ ಯಾವದಾದರು ೧ನ್ನು ತರಿಸಿ ಪರೀಕ್ಷಿಸಿರಿ.

೧ ಕೆಂಪು ಹರಳಿನ ಬೆಂಡೋಲೆ. ಇದು ಮೇಲಾದ ೮ ಕೆಂಪುಗಳಿಂದಲೂ ಅಡಿಯ ಬಿರಡೆಯನ್ನು ಬೆಲ್‌ಮೆಟಲ್ ಲೋಹದಿಂದಲು ಕಟ್ಟಲ್ಪಟ್ಟರುತ್ತೆ. ನೋಡಿದವರು ಮೂವತ್ತು ರೂಪಾಯಿನ ಬೆಂಡೋಲೆಯೆಂದು ಹೇಳುವರು. ನಮ್ಮಲ್ಲಿ ನಂಬಿಕೆಯನ್ನಿಟ್ಟು, ಮೊದಲಿಗೆ ೧ ಜೊತೆ ತರಿಸಿ ನೋಡಿ ಆನಂದವನ್ನು ಹೊಂದಿರಿ. ಪುನಃ ವಾಪಸ್ ಮಾಡಿದಾಗ್ಯೂ ಇದರ ಮೊಬಲಗನ್ನು ವಾಪಸಾತರ್ ಮಾಡುತ್ತೇವೆ. ನೀವು ಎಷ್ಟು ಮೊದಲಾದ್ದು ತಗಲಿದರೂ ಎಷ್ಟು ವರುಷಗಳಾದರೂ ಕೆಡಲಾರದು. ಬೆಲೆ ಜೊತೆ ೧ಕ್ಕೆ ರೂ ೬.

೨. ತಳುಕುಪಟಿಕವನ್ನು ಹಾಕಿ ಅಚ್ಚ ಸವರಿನ್ ಚಿನ್ನದಿಂದ ಕಟ್ಟಲ್ಪಟ್ಟ ಮೂಗುಬಟ್ಟು. ಬೆಲೆ ರೂ. ೧—೮—೦ ಇದು ಅನೇಕ ವರುಷಗಳು ಉಪಯೋಗಿಸಿ ವಿಕ್ರಯಿಸಿದರು ಚಿನ್ನದ ಬೆಲೆಯೂ ತಳುಕುಪಟಿಕದ ಬೆಲೆಯೂ ಹೋಗಲಾರದು. ಬಹಳ ಮೇಲಾದದ್ದು.

೩. ಅಚ್ಚ ಕೆಂಪಿನಿಂದಲು, ಸವರಿನ್ ಚಿನ್ನದಿಂದಲು ಕಟ್ಟಿದ ಮೂಗುಬಟ್ಟು, ೧ಕ್ಕೆ ಕ್ರಯ ರೂ ೨.

೪ ತಂಬಾಕಾದಿಂದಲು, ತಳುಕುಪಟಿಕದಿಂದಲು ಕಟ್ಟಲ್ಪಟ್ಟ ಮೇಲಾದ ಹತ್ತುಕಡುಕು. ಕ್ರಯ ಜೋಡಿ ೧ಕ್ಕೆ ರೂ. ೪.

೫. ಕೆಳಭಾಗ ಅಚ್ಚ ಚಿನ್ನದಿಂದಲು, ಬೆಳ್ಳಿ ಬವೆಯಿಂದಲು ಕಟ್ಟಲ್ಪಟ್ಟ ತಳುಕುಪಟಿಕದ ಹತ್ತುಕಡುಕು. ಕ್ರಯ ರೂ. ೭.

೬. ತಂಬಾಕಿಂದ ಕಟ್ಟಲ್ಪಟ್ಟ ತಳುಕುಪಟಿಕವು ೩ ಕಲ್ಲುಗಳುಳ್ಳ ಬುಲಾಕು. ೧ಕ್ಕೆ ಕ್ರಯ ರೂ. ೩.



೭. ೧೪ ಕ್ಯಾರೆಟ್ ಉಳ್ಳ ಚಿನ್ನದಿಂದಲು ಸುತ್ತಲು ೩ ಸೀಮೆ ಕಲ್ಲುಗಳಿಂದಲು ಕಟ್ಟಲ್ಪಟ್ಟ ಬಹಳ ನಾಜೂಕಾದ ಉಂಗುರ, ಎಷ್ಟು ವರುಷಗಳಾದರು ಕೆಡಲಾರದು. ಇದರ ಕ್ರಯ ರೂ ೧—೮—೦.

ಜರೂರಾಗಿ ಬೇಕಾಗಿದೆ.

2
೧೦೦ ಜನ ಯೇಜಂಟರು. ಕೆಲಸ ಮಾಡಿದವರ್ಗೆ ೫೦ ರೂಪಾಯಿ ಯಿಂದ ೩೦ ರೂಪಾಯಿ ವರಿಗೆ ಕೊಡಲ್ಪಡುತ್ತೆ. ಅಪೇಕ್ಷೆಯುಳ್ಳವರು ಅರ್ಥಾಣೆ ಸ್ಟಾಂಪನ್ನಿಟ್ಟು ಅರ್ಜಿ ಬರೆದುಕೊಳ್ಳತಕ್ಕದ್ದು.
ವಿಳಾಸ—ಕಂಟ್ರೋಲರ್, ಯೂನಿವರ್ಸಲ್ ಪ್ರಾವಿಡೆಂಟ್ ಸಂಘ, ಬಸವಾಪುರ, ಬೆಂಗಳೂರು ಸಿಟಿ.

೧೯೦೫ನೆ ಇಸವಿ ಮೆಟ್ರಿಕ್ಯುಲೇಷನ್ ಕನ್ನಡ ಟೆಕ್ಸ್ಟಿನ ನೋಟ್ಸು

2
ಕ್ರಯ, ೧ ರೂಪಾಯಿ. ಡಿಸ್ಕೌಂಟು ೧೦ಕ್ಕೆ ೧
ಉಪೇಕ್ಷೆಮಾಡತಕ್ಕ ನೋಟ್ಸು ಅಲ್ಲ. ಪ್ರಶ್ನೋತ್ತರಗಳೂ ಹನೆ ರಚಿಸಿದೆ. ಫೆಬ್ರುವರಿ ೧೫ಕ್ಕೆ ಖಂಡಿತ ಸಿದ್ಧವಾಗುತ್ತೆ.

N. R VENKATA SUBBACHARYA
Subodha Granthálaya, Mysore

ಮಗುವಿನ ಪತ್ತೆಗೆ ೫ ರೂ. ಬಹುಮಾನ.

ಜನವರಿ ೨೭ನೆ ತಾ ಶುಕ್ರವಾರ ಮಧ್ಯಾಹ್ನ ಸುಮಾರು ೩ ಘಂಟೆ ಸಮಯದಲ್ಲಿ ಫ್ರೆಂಚ್‌ರಾಕ್ಸಿನಲ್ಲಿರುವ ನನ್ನ ತಂಗಿಯ ಹೆಣ್ಣುಮಗು ತಪ್ಪಿಹೋಯಿತು. ಆ ದಿನ ಸಾಯಂಕಾಲ ಪೋಲೀಸಿಗೆ ರಿಪೋರ್ಟು ಮಾಡಿದೆನು. ಅವರು ಡಂಗೂರ ಹಾಕಿಸಿದರು. ಇದುವರೆಗೂ ಮಗು ಪತ್ತೆಯಾಗಿಲ್ಲ. ಯಾರೇ ಆಗಲಿ ಪತ್ತೆಮಾಡಿ ಮಗುವನ್ನು ತಂದುಕೊಟ್ಟರೆ ೫ ರೂಪಾಯಿ ಇನಾಮು ಕೊಡುತ್ತೇನೆ. ಮಗುವಿನ ವಯಸ್ಸು ೭ ವರುಷ, ಬಣ್ಣ ಸ್ವಲ್ಪ ಕಪ್ಪು, ಕಾಲಿನಲ್ಲಿ ಬೆಳ್ಳಿ ಅಂದಿಗೆ. ನಡುವಿನಲ್ಲಿ ಬೆಳ್ಳಿ ಅರಳೆಲೆ ಉಂಟು.

ಫ್ರೆಂಚ್‌ರಾಕ್ಸ್. ರಾಮಕೃಷ್ಣ ಮೊದಲಿಯಾರ್.

WESLEYAN MISSION PRESS, MYSORE.
ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

4
ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಚಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂಪೈಸ್, ಮಿನಿಯನ್, ಪೈಕ್, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ವರಗಳನ್ನೂ ಅಕ್ಷರಗಳ ಮಾದರಿಯನ್ನೂ ತರಿಸಿಕೊಳ್ಳಬಹುದು.

ವಿಳಾಸ—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ಚೇಂಬರ್ಲೇನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.



5
ಶೀತ, ಕೆಮ್ಮು, ಗಂಟಲು ಗೂರಲು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಜಾಡ್ಯಕ್ಕೆ ಔಷಧವು ಬಹು ಪ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಲಕ್ಷ್ಯ ಮಾಡದಿದ್ದರೆ ಅದರ ಮೇಲೆ ಜ್ವರ ಹುಟ್ಟುವದು, ಎದೆಯು ಬಿಗಿದುಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಮನೆಯಲ್ಲಿ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧವು ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ವೃತ್ತಾಂತ ಪತ್ರಿಕೆ

—:o:—

ಸ೯ ೧೯೦೫ ನೇ ಇಸವಿ ಫೆಬ್ರುವರಿ ತಾ॥ ೯ ನೇ ಗುರುವಾರ.

ಡಾಕ್ಟರ್ ಮರ್ಡಾಕ್ ರವರ ಜ್ಞಾಪನಾರ್ಥವಾದ ಫಂಡು

ಮದ್ರಾಸಿನಲ್ಲಿ ಕ್ರೈಸ್ತ ಗ್ರಂಥ ಪ್ರಕಟನಾ ಸಮಾಜದ ಕಾರ್ಯದರ್ಶಿಯಾಗಿದ್ದು ಕಳೆದ ೧೯೦೪ ನೇ ಆಗಸ್ಟ್ ತಿಂಗಳಲ್ಲಿ ತೀರಿಹೋದ ಡಾಕ್ಟರ್ ಮರ್ಡಾಕ್ ರವರ ವಿಷಯವನ್ನು ನಮ್ಮ ಪತ್ರಿಕೆಯ ಮೂಲಕ ತಿಳಿಸಿದ್ದೇವಷ್ಟೆ. ಇವರು ನಮ್ಮ ಈ ಹಿಂದೂ ದೇಶಾಭಿವೃದ್ಧಿಯಲ್ಲಿ ಅಪೂರ್ವವಾದ ಆಸಕ್ತಿಯುಳ್ಳವರಾಗಿದ್ದರೆಂಬುದಕ್ಕೆ ಇಂದಿನ ಪರ್ಯಂತರ ನಮ್ಮಲ್ಲಿ ಪ್ರಚುರವಾಗಿರುವ ಅವರ ಗ್ರಂಥ ಪರಿವರ್ತನೆಗಳು ಸಾಕ್ಷಿಗಳಾಗಿವೆ. ಇವರು ೧೮೪೪ ರಲ್ಲಿ ಸಿಲೋನ್ ದ್ವೀಪದ ಸರ್ಕಾರದಲ್ಲಿ ಉಪಾಧ್ಯಾಯರಾಗಿ ಮೊದಲು ಬಂದು ನಿಂತು, ನಾಲ್ಕೈದು ವರ್ಷಗಳು ಕೆಲಸ ಮಾಡುತ್ತಿರುವಾಗ ಸರ್ಕಾರದಿಂದ ಸಂಬಳವನ್ನು ತೆಗೆದುಕೊಂಡು ಕ್ರೈಸ್ತ ಮತಗ್ರಂಥಗಳನ್ನು ಬೋಧಿಸುವದು ನ್ಯಾಯವಲ್ಲವೆಂದು ನಿರ್ಧರಿಸಿ, ಆ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು, ಪಾಠಶಾಲಾ ಪುಸ್ತಕಗಳನ್ನೂ ಸಾಮಾನ್ಯವಾಗಿ ಪ್ರಜೆಗಳಲ್ಲಿ ಇತರರಿಗೆ ಜ್ಞಾನಾಭಿವೃದ್ಧಿಗೆ ಯೋಗ್ಯವಾದ ಪುಸ್ತಕಗಳನ್ನೂ ಪ್ರಕಟಿಸುವುದಕ್ಕೆ ಪ್ರಾರಂಭಿಸಿದರು. ತಮ್ಮ ಕಾಲವನ್ನು ವಿಶೇಷ ಕ್ರಮದಿಂದ ವಿನಿಯೋಗಿಸಿದುದರಿಂದಲೂ ಗೃಹಸ್ಥಾಶ್ರಮದ ಗೋಜಿಗೆ ಹೋಗದೆ, ಸ್ವಯಾರ್ಜಿತ ದ್ರವ್ಯವನ್ನೆಲ್ಲಾ ಗ್ರಂಥಪ್ರಕಟನಾ ಕಾರ್ಯಕ್ಕಾಗಿಯೇ ಬಳಸುತ್ತಾ ಬಂದುದರಿಂದಲೂ ಸುಮಾರು ೫೦ ವರ್ಷಗಳಿಂದ ಅವರು ಸಾವಿರಾರು ಪುಸ್ತಕಗಳನ್ನು ಅನೇಕ ವಿಷಯಗರ್ಭಿತವಾಗಿ ಬರೆದು ಪ್ರಕಟಿಸುವುದಕ್ಕೆ ಅನುಕೂಲವಾಯಿತು.

ಇವರ ಹೆಸರು ಇಂಡಿಯಾ ಸಿಲೋನ್ ದೇಶಗಳಲ್ಲಿ ಮಾತ್ರವೇ ಅಲ್ಲ, ಬರ್ಮಾ ಚೀನ ಜಪಾನ್ ದೇಶಗಳಲ್ಲೂ ಪ್ರಸಿದ್ಧವಾಗಿದೆ. ಇವರು ಈ ದೇಶದ ಸಾಮಾಜಿಕ ಮತ್ತು ಮತಸಂಬಂಧವಾದ ಅಭಿವೃದ್ಧಿಯ ವಿಷಯದಲ್ಲಿಯೂ ಆರೋಗ್ಯ ಮತ್ತು ರಾಜಕೀಯ ವಿಷಯದಲ್ಲಿಯೂ ಸರ್ವಜ್ಞನಸ್ತುತ್ಯರ್ಹವಾದ ತಮ್ಮ ಅಭಿಪ್ರಾಯಗಳನ್ನು ಪುಸ್ತಕರೂಪವಾಗಿಯೂ ಇನ್ನು ನಾನಾವಿಧ ಲೇಖನರೂಪವಾಗಿಯೂ ಎಡೆಬಿಡದೆ ಪ್ರಕಟಿಸುತ್ತಾ ಬಂದು, ನಮ್ಮ ದೇಶೀಯರ ತಿಳುವಳಿಕೆಯನ್ನು ವಿಶೇಷವಾಗಿ ಹೆಚ್ಚಿಸಿದ್ದಾರೆ. ಇಂಥವರ ವಿಷಯದಲ್ಲಿ ಸಕಲ ಜನರೂ ಕೃತಜ್ಞರಾಗಿರತಕ್ಕದೆಂದು ಅನ್ಯ ಮತಸ್ಥರಾದ ಪತ್ರಿಕಾಕರ್ತರು ನಿಷ್ಪಕ್ಷಪಾತದಿಂದ ಹೇಳುವರು. ಆದಕಾರಣ ಇವರ ಹೆಸರನ್ನು ಚಿರಸ್ಮರಣೀಯವಾದುದನ್ನಾಗಿ ಮಾಡುವುದಕ್ಕೋಸ್ಕರವೂ ಅದರಿಂದಲೂ ಪ್ರಜೆಗಳಿಗೆ ಸಾಮಾನ್ಯವಾಗಿ ಇನ್ನೂ ಉಪಕಾರವಾಗುವುದಕ್ಕೋಸ್ಕರವೂ ಮದ್ರಾಸಿನಲ್ಲಿ ಒಂದು ನಿಲಯವನ್ನು ಕಟ್ಟಬೇಕೆಂದು ಕೆಲವು ಮಹನೀಯರು ನಿರ್ಣಯಿಸಿ, ಇದರ ನಿಮಿತ್ತ ಈ ಹಿಂದೂದೇಶದ ಎಲ್ಲಾ ಭಾಗಗಳಿಂದಲೂ ಚಂದಾ ಹಣವನ್ನು ಕೂಡಿಸಲು ಯತ್ನಿಸಿರುವರು. ಈ ಕಾರ್ಯಕ್ಕೆ ಮದ್ರಾಸ್ ಅಧಿಪತ್ಯದ ಗವರ್ನರವರಾದ ಘನವನ್ನತೆಯುಳ್ಳ ಲಾರ್ಡ್ ಆಂಪ್ಟಿಲ್ ದೊರೆಯವರು ಮುಖ್ಯ ಪೋಷಕರಾಗಿರುತ್ತೇವೆಂದು ಒಪ್ಪಿಕೊಂಡಿದ್ದಾರೆ. ಬಂಗಾಳಾ ಲೆಫ್ಟಿನೆಂಟ್ ಗವರ್ನರವರೂ, ಬೆಜವಾಡ, ಕಲ್ಕತ್ತಾ, ಅಲಹಾಬಾದ್, ಪೂನಾ, ಬೊಂಬಾಯಿ, ಹೈದರಾಬಾದ್, ಬಳ್ಳಾರಿ, ಮದ್ರಾಸು, ಇವೇ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ದೇಶೀಯರೂ ವಿದೇಶೀಯರೂ ಆದ ಬಹು ಮಂದಿ ಮಹನೀಯರು ಕಮಿಟಿಯ ಮೆಂಬರುಗಳಾಗಿ ನಿಂತಿರುವರು.

ಈ ನಿಲಯವನ್ನು ಕಟ್ಟಿಸುವ ಕಾರ್ಯಕ್ಕೆ ೨೫,೦೦೦ ರೂಪಾಯಿ ಬೇಕಾಗಿದೆಯೆಂದು ಗೊತ್ತಾಗಿದೆ. ನಮ್ಮ ಈ ವಿಸ್ತಾರವಾದ ಪೌರ್ವಾತ್ಯ ದೇಶಗಳ ಅಭಿವೃದ್ಧಿಗಾಗಿಯೇ ತನ್ನ ಜೀವಿತಕಾಲವನ್ನೆಲ್ಲಾ ವಿನಿಯೋಗಿಸಿದ ಈ ಮಹಾತ್ಮನ ಉಪಕಾರವನ್ನು ಸ್ಮರಿಸುವುದಕ್ಕೆ ಈ ಮೊಬಲಗು ದೊಡ್ಡದೆಂದು ಯಾರೂ ಹೇಳಲಾರರು. ಆದಕಾರಣ ಈ ಮಹಾ ಕಾರ್ಯವನ್ನು ನೆರವೇರಿಸುವುದಕ್ಕೆ ಪತ್ರಿಕಾ ವಾಚಕರೂ ಪ್ರೋತ್ಸಾಹಿತರಾಗಿ ಇತರರನ್ನೂ ಪ್ರೋತ್ಸಾಹಪಡಿಸುವರೆಂದು ನಂಬಿದ್ದೇವೆ. ಚಂದಾ ಹಣವನ್ನು ಕಳುಹಿಸುವವರು ಮದರಾಸ್ ಪಟ್ಟಣದ ಮೆಮೋರಿಯಲ್ ಹಾಲ್ ಕಾಂಪೌಂಡಿನಲ್ಲಿರುವ ರೆವ. ಎಚ್. ಗಲ್ಫರ್ಡ್ ದೊರೆಯವರ ವಿಳಾಸಕ್ಕೆ ರವಾನಿಸಿದಲ್ಲಿ ಅವರು ಸ್ವೀಕರಿಸುವವರಾಗಿದ್ದಾರೆ. ಈ ವಿಷಯಕ್ಕೆ ಬಹು ಮಂದಿ ಸಹಾಯಮಾಡುವರೆಂದು ಹಾರೈಸುತ್ತೇವೆ.

ರಷ್ಯಾದೇಶದ ಗಲಭೆಯು

ಕಳೆದ ಶನಿವಾರ ರಷ್ಯಾರಾಜ್ಯದ ವಾರ್ಸಾ ನಗರದಲ್ಲಿ ಜನರ ದೊಂಬಿಯು ವಿಶೇಷ ಹೆಚ್ಚಿತು. ದಂಗೆಯವರ ಬಹು ನೇತ್ರದಿಂದ ಕಳ್ಳರ ಸಾಮಾನು ಇದ್ದ ಅಂಗಡಿಗಳನ್ನು ನುಗ್ಗಿ ಕೊಳ್ಳೆಹೊಡೆದು ಸುಟ್ಟು ಹಾಕಿದರು. ಸರ್ಕಾರಿ ಸವಾರರ ದೊಂಬಿ ಜನರ ಮೇಲೆ ಗುಂಡು ಹೊಡೆದ ಸಂದರ್ಭದಲ್ಲಿ ಇಂಗ್ಲಿಷ್ ರಾಯಭಾರಿ ಕೈಕೆಳಗಿನ ಮುಖ್ಯ ನೌಕರನಿಗೆ ಗುಂಡು ತಗಲಿ ಪೂರಾ ಗಾಯವಾಗಿ ಪ ಕೋಪಗೊಂಡ ರಾಯಭಾರಿಯು—ಈ ವಿಷಯವನ್ನು ತಮಗೆ ವರದಿಮಾಡಬೇಕೆಂದೂ ಇಂಗ್ಲಿಷ್ ಸರ್ಕಾರದವರ ಮೇಲೆ ರಷ್ಯನವರು ಲೀಸಿನವರು —ಡಿಸೆಂಬರ್ ರಲ್ಲಿ ಮಾಡಿ ಪ್ರಕಟಿಸಿರುವ ನೋಟೀಸುಗಳನ್ನು ಕಿತ್ತು ಹಾಕಿಸಬೇಕೆಂದೂ ಖಂಡಿತವಾಗಿ ಮಂತ್ರಿಗಳಿಗೆ ಕಾಗದ ಬರೆದರು. ಮಂತ್ರಿಗಳು—ಈ ವಿಷಯವನ್ನು ತನಿಖೆ ಮಾಡಬೇಕಾಗಿಯೂ ಮೇಲ್ಕಂಡ ಸುಳ್ಳು ನೋಟೀಸುಗಳನ್ನು ಕಿತ್ತು ಹಾಕುವ ಕೆಲಸ ಕೊಟ್ಟಿರುವುದಾಗಿಯೂ ಜವಾಬು ಕೊಟ್ಟರು. ಈಚೆಗೆ ಟಿಫ್ಲಿಸ್ ನಗರದಲ್ಲಿ ದಂಗೆ ಪ್ರಾರಂಭವಾಯಿತು. ಪೋಲೀಸಿನವರು ಗುಂಪಿಗೆ ಗುರಿ ಕಟ್ಟಿ ಗುಂಡು ಹೊಡೆದು ನಾಲ್ವರು ದೊಡ್ಡವರನ್ನೂ ಒಬ್ಬ ಹುಡುಗಿಯನ್ನೂ ಕೊಂದುಬಿಟ್ಟರು.

ರಷ್ಯಾರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ೧೫೯ ಮಂದಿ ಹತರಾದರೆಂತಲೂ ೩೦೦ ಜನರಿಗೆ ಗಾಯವಾಗಿದೆ ಎಂತಲೂ, ವಾರ್ಸಾ ನಗರದಲ್ಲಿ ಮೃತಪಟ್ಟ ಪ್ರಜೆಗಳು ೫೦೦ ರಿಂದ ೧,೭೦೦ ವರೆಗೆ ಆಗಬಹುದೆಂತಲೂ ಸರ್ಕಾರದವರು ಪ್ರಕಟಿಸಿದಾರೆ. ಈಗ ವಾರ್ಸಾ ಪಟ್ಟಣದಲ್ಲಿ ದಂಗೆಯು ನಿಂತಿಲ್ಲ. ರಾಜಧಾನಿಯಲ್ಲಿ ಮೃತಪಟ್ಟವರ ಹೆಂಡರುಮಕ್ಕಳ ದುಸ್ಥಿತಿಯನ್ನು ನೋಡಿ, ಚಕ್ರವರ್ತಿನಿಯವರೂ ಅವರ ಅತ್ತೆಮ್ಮನವರೂ ತುಂಬಾ ಕನಿಕರಪಟ್ಟು ಅವರುಗಳ ಕಷ್ಟನಿವಾರಣೆಗಾಗಿ ೭೫,೦೦೦ ರೂಪಾಯಿ ಧರ್ಮ ಮಾಡಿದರು. ಚಕ್ರವರ್ತಿಯವರಾದರೋ ಅಂಥಾ ಅನಾಥರಿಗೂ ಅಂಗಹೀನರಿಗೂ ವರ್ಷಾಶನ ಕೊಟ್ಟು, ನಯವಿನಯಪೂರ್ವಕವಾಗಿ ದಂಗೆಯನ್ನು ಅಣಗಿಸಬೇಕೆಂದು ಅಧಿಕಾರಿಗಳಿಗೆಲ್ಲಾ ಅಪ್ಪಣೆ ಕೊಡಿಸಿದಾರೆ. ಇದಲ್ಲದೆ ರಾಜ್ಯದಲ್ಲಿ ಪ್ರಜೆಗಳ ಅಭಿಪ್ರಾಯದಂತೆ ಯಾವ ಯಾವ ಬದಲಾವಣೆಗಳನ್ನು ಮಾಡಬೇಕಾಗಿದೆಯೋ ಅಂಥ ವಿಷಯಗಳನ್ನು ಕುರಿತು ಚರ್ಚೆ ಮಾಡಿ, ತೀರ್ಮಾನವನ್ನು ತಮಗೆ ಅರಿಕೆಮಾಡತಕ್ಕದ್ದೆಂದು ಮಂತ್ರಿಗಳನ್ನೇ ಸೇರಿಸಿ ಒಂದು ಸಂಘವನ್ನು ಕೂಡಿಸಿದಾರೆ. ಇದರಿಂದ ಪ್ರಜೆಗಳಿಗೂ ಸರ್ಕಾರಕ್ಕೂ ಅನುಕೂಲವಾದ ಅನೇಕ ಬದಲಾವಣೆಗಳು ಬೇಗನೆ ಜಾರಿಯಲ್ಲಿ ಬಂದಾವೆಂದು ನಿರೀಕ್ಷಿಸಲ್ಪಟ್ಟಿದೆ.

ಡಾಂಬ್ರೋವಾ, ಸಾಸ್ನೋವಿಟ್ಜ್ ಎಂಬೀ ಡಿಸ್ಟ್ರಿಕ್ಟುಗಳಲ್ಲಿ ಗಣಿಗಳಿಂದ ಕಲ್ಲಿದ್ದಲನ್ನು ವಿಶೇಷವಾಗಿ ತೆಗೆಯುವರು. ಈ ಕಲ್ಲಿದ್ದಲೇ ವಾರ್ಸಾ ಲೋಡ್ಜ್ ನಗರಗಳಿಗೆ ಬೇಕಾದದ್ದು. ಇಂಥಾದ್ದರಲ್ಲಿ ಆ ಗಣಿಗಳ ಕೂಲಿಕಾರರು ಸುಮಾರು ೫೦,೦೦೦ ಜನರು ದಂಗೆಯೆದ್ದು, ಸರ್ಕಾರಿ ಸೈನಿಕರ ಮೇಲೆ ಯುದ್ಧ ಮಾಡಿದರು. ಬಹಳ ಮಂದಿ ಈ ಯುದ್ಧದಲ್ಲಿ ಹತರಾದರೆಂತಲೂ ಅನೇಕರು ಗಾಯ ಪಟ್ಟವರೆಂತಲೂ ತಂತಿ ವರ್ತಮಾನ ಬಂದಿದೆ. ಲೋಡ್ಜ್ ನಗರದಲ್ಲಿ ಸೈನಿಕರು ದಂಗೆಕೋರರ ಮೇಲೆ ಗುಂಡು ಹೊಡೆದು ೪ ಮಂದಿಯನ್ನು ಮಲಗಿಸಿದರು, ೫೦ ಜನರಿಗೆ ಗಾಯಗಳಾಗಿವೆ. ದಂಗೆಗೆ ಸೇರದೆ ಇದ್ದ ಕೂಲಿಕಾರರ ಐದು ಮಂದಿ ಪ್ರತಿನಿಧಿಗಳನ್ನು ಚಕ್ರವರ್ತಿಯವರು ಕರೆಸಿಕೊಂಡು, ಅವರ ಯೋಗಕ್ಷೇಮವನ್ನು ವಿಚಾರಿಸಿ, ನಿಮ್ಮ ಕಾರ್ಯದಲ್ಲಿ ನೀವು ಅಸಕ್ತರಾಗಿರುವುದನ್ನು ನೋಡಿ ನಾವು ಸಂತೋಷಪಡುತ್ತೇವೆಂದು ಅಪ್ಪಣೆ ಕೊಟ್ಟರು. ಮಾಸ್ಕೋ ಪಟ್ಟಣದ ಸ್ಥಳೀಯ ಮುನಿಸಿಪಲ್ ದವರೆಲ್ಲಾ ಎರಡು ಗುಂಪಾಗಿ, ಎರಡು ವಿಜ್ಞಾಪನಾ ಪತ್ರಿಕೆಗಳನ್ನು ಬರೆದು, ಚಕ್ರವರ್ತಿಯವರಿಗೆ ಒಪ್ಪಿಸುವಂತೆ ಗೊತ್ತು ಮಾಡಿದಾರೆ. ಒಂದು ಗುಂಪಿನವರು ಕ್ಷಮೆ ಕೇಳಬೇಕೆಂತಲೂ, ಇನ್ನೊಂದು ಗುಂಪಿನವರು ಈಗಿನ ಯುದ್ಧವು ತೀರ್ಮಾನವಾದ ಮೇಲೆ ರಾಜ್ಯಭಾರ ವಿಷಯವನ್ನು ಪ್ರಸ್ತಾಪಿಸುವುದು ಉತ್ತಮವೆಂತಲೂ ಹೇಳುವರು. ಚಕ್ರವರ್ತಿಯವರು ಹ್ಯಾಗೆ ನಡೆಸುವರೋ ಮುಂದೆ ತಿಳಿಯಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನದ ಹೊಸ ಪೋಲೀಸ್ ಕಾನೂನು ಸಿದ್ಧವಾಗಿದೆ. ಈಗ ಅದನ್ನು ಸ್ಪೆಷಲ್ ಕಮಿಟಿಯವರು ಶೋಧಿಸುತ್ತಿದ್ದಾರೆ. ಇದು ಸ್ವಲ್ಪ ಹೆಚ್ಚು ಕಡಿಮೆ ಬೊಂಬಾಯಿ ಪೋಲೀಸ್ ಕಾನೂನನ್ನೇ ಅನುಸರಿಸಿದ್ದಾಗಿರುವುದು.

ಯುವರಾಜರವರ ಉಪಾಧ್ಯಾಯರಾಗಿದ್ದ ಮಿ। ಎಂ. ಎ. ಕೃಷ್ಣಯಂಗಾರ್ಯರು ಇನ್ನು ಮೇಲೆ ದಿವಾನರವರ ಆಫೀಸಿನಲ್ಲಿ ಅವಶ್ಯಕತೆಯಂತೆ ಸರ್ಕಾರದ ಪರ ಪರ್ಯಾಯುಸಿರುತ್ತಾರೆ.

* * * *

ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರು ಕಳೆದ ವಾರ ಹಳೇ ಬೀಡು ಮುಕ್ಕಾಮುದಿದ್ದು ಮೊನ್ನೆ ಶನಿವಾರ ವಾಪಸು ಬೆಂಗಳೂರಿಗೆ ಬಂದರು ಅವರು ಈ ೧೭ನೇ ತಾರೀಖಿನ ಕಡೆ ಸಕಲೇಶಪುರದ ಕಡೆ ಹೋದರೆಂದು ಕೇಳುತ್ತೇವೆ

* * * *

ಶ್ರೀಮನ್ಮಹಾರಾಜರವರು ಮದರಾಸಿನಲ್ಲಿದ್ದಾಗ್ಗೆ ಅಲ್ಲಿನ ಯೂರೋಪಿಯನ್ ಹೆಂಗಸರ ಯಾತ್ರಾಮಂದಿರಕ್ಕೆ ದಯಮಾಡಿ, ಹೆಂಗಸರ ರಕ್ಷಣೆಯನ್ನು ಪರಾಂಬರಿಸಿ, ತುಂಬಾ ಸಂತೋಷಪಟ್ಟು ಆ ಸಂಸ್ಥೆಗೆ ೫೦೦ ರೂಪಾಯಿ ದಾನಮಾಡಿ ಬಂದರು

* * * *

ಶ್ರೀಮನ್ಮಹಾರಾಜರವರಿಗೆ ಈಗಿನ ಶಸ್ತ್ರಚಿಕಿತ್ಸೆಯು ಕ್ರಮವಾಗಿ ಅನುಕೂಲವಾಗಿರಲಾರದೆಂದು ಮದರಾಸ್ ಪಟ್ಟಣದಲ್ಲಿ ಡಾಕ್ಟರು ಅಭಿಪ್ರಾಯ ಕೊಟ್ಟದ್ದರಿಂದ ಅವರು ಶಸ್ತ್ರಚಿಕಿತ್ಸೆಯ ಪ್ರಯಾಣವನ್ನು ಸದ್ಯ ನಿಲ್ಲಿಸಿ, ಕಳೆದ ಭಾನುವಾರ ರಾತ್ರಿ ಪರಿವಾರ ಸಹಿತ ಮದರಾಸಿನಿಂದ ಸ್ಪೆಷಲ್ ರೈಲಿನಲ್ಲಿ ಹೊರಟು, ಸೋಮವಾರ ಬೆಳಗ್ಗೆ ವಾಪಸು ಬೆಂಗಳೂರಿಗೆ ದಯಮಾಡಿದರು ಮುಂದಿನ ವಾರ ಇವರು ರಾಜಧಾನಿಗೆ ಬರುವವರಾಗಿದ್ದಾರೆಂದು ಕೇಳುತ್ತೇವೆ

* * * *

ಬೆಂಗಳೂರಿನ ಹತ್ತಿರ ಸೊಣ್ಣತಿಮ್ಮನಹಳ್ಳಿ ಎಂಬ ಗ್ರಾಮದಲ್ಲಿ ಒಂದು ಪಾಠಶಾಲೆಯನ್ನಿಟ್ಟು, ಅದರಲ್ಲಿ ಬಾಲಕರಿಗೆ ವ್ಯವಸಾಯವನ್ನೇ ಪ್ರತ್ಯಕ್ಷವಾಗಿಯೂ ವಿಶೇಷವಾಗಿಯೂ ಕಲಿಸಬೇಕೆಂದು ತಿಂಬೂಶೆಟ್ಟರವರು ತಿಳಿಸಿ, ಅದಕ್ಕಾಗಿ ತಮ್ಮ ಆಸ್ತಿಯಿಂದ ೫,೦೦೦ ರೂಪಾಯಿ ಮೂಲಧನವನ್ನು ಕೊಟ್ಟುದಲ್ಲದೆ ೨೩೦ ಎಕರೆಯುಳ್ಳ ಜಮೀನನ್ನೂ ಬಿಟ್ಟುಕೊಟ್ಟಿರುತ್ತಾರೆ ಈ ಪಾಠಶಾಲೆಗೆ ತಿಂಬೂಶೆಟ್ಟರ ಸ್ಕೂಲ್ ಎಂಬ ಹೆಸರಿಟ್ಟು, ಈ ವರುಷ ಜೂನ್ ತಿಂಗಳಿಂದ ಪ್ರಾರಂಭ ಮಾಡುವರೆಂದು ಕೇಳುತ್ತೇವೆ

* * * *

ಈ ವಾರದ ಮೈಸೂರು ಗೆಜೆಟ್ಟಿನಲ್ಲಿ ಮೈಸೂರು ಪಟ್ಟಣದ ಅಭಿವೃದ್ಧಿಗಾಗಿ ಏರ್ಪಟ್ಟ ಟ್ರಸ್ಟ್ ಬೋರ್ಡಿನ ನಿಬಂಧನೆಯು ವಿಷಯವಾಗಿಯೂ ಭೂಮಿಯ ಹೊಂದುಕೊಳ್ಳುವುದಕ್ಕೂ ಬಿಕರಿ ಮಾಡುವುದಕ್ಕೂ ಅರ್ಜಿಗಳು ಮುಂತಾದ್ದು ಕೊಡುವುದಕ್ಕೂ ಬೋರ್ಡಿಗೆ ಅಧಿಕಾರವಿದೆ ಎಂಬ ವಿಷಯವಾಗಿಯೂ ಕೆಲವು ರೂಲುಗಳನ್ನು ಮಾಡಿ ಪ್ರಕಟಿಸಿದ್ದಾರೆ ಈ ರೂಲಸು ಗವರ್ನಮೆಂಟಿನ ಪ್ರಯೋಗಕ್ಕೆ ಬರುವಂತೆ ಅದನ್ನು ನೋಡಿದರೆ ಕಂಡು ಬರುವುದು, ಬೋರ್ಡಿನಿಂದಲೇ ಸ್ವಾತಂತ್ರ್ಯ ಆಗಿರುವಂತೆ ಅವರ ರೂಲುಗಳ ಮೇಲೆ ಪ್ರಕಟವಾಗಿದೆ

* * * *

ಮರಿಕಣಿವೆ ತಲಾವ್ ಕಾಮಗಾರಿಯ ಮೇಲ್ವಿಚಾರಣೆ ನೋಡುತ್ತಿದ್ದ ಸೂಪರಿಂಟೆಂಡಿಂಗ್ ಇಂಜನಿಯರ್ ಮಿ॥ ರಾಜಾಭಾ ಬೋಡಾಸ್ ಟಿ ಪಳ್ಳಾಳ್ ಯವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಪೆನ್ಶನ್ ಪಡೆದುಕೊಂಡರು ಇವರು ಮೈಸೂರು ಸಂಸ್ಥಾನದಲ್ಲಿ ೩೦ ವರುಷ ನೌಕರಿ ಮಾಡಿ, ಈ ತಿಂಗಳ ಪ್ರಾರಂಭದಿಂದ ನಿವೃತ್ತಿ ಸುಖವನ್ನು ಹೊಂದಿದ್ದಾರೆ ಈಗ ಇವರಿಗೆ ೫೦ ವರುಷವಾಗಿದ್ದಾಗ್ಯೂ ಬರೋಡಾ ಸಂಸ್ಥಾನದ ಗಾಯಕವಾಡ್ ಮಹಾರಾಜರವರು ಅವರನ್ನು ತಮ್ಮ ಬಳಿಗೆ ಕರೆಸಿಕೊಂಡು, ಆ ಸಂಸ್ಥಾನದ ಛೀಫ್ ಇಂಜನಿಯರ್ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆಂತಲೂ, ಅಲ್ಲಿ ಅವರಿಗೆ ತಿಂಗಳಿಗೆ ೧,೦೦೦ ರೂಪಾಯಿ ಸಂಬಳ ಗೊತ್ತಾಗಿದೆ ಎಂತಲೂ ತಿಳಿದುಬಂದಿದೆ

* * * *

ಬಾಲ್ಯವಿವಾಹವನ್ನು ನಿಲ್ಲಿಸುವ ಕಾನೂನಿನಲ್ಲೇ ಸ್ವಲ್ಪ ಬದಲಾವಣೆ ಮಾಡಿ ಪ್ರಜೆಗಳೆಲ್ಲಾ ಮಕ್ಕಳ ಜನನಕಾಲವನ್ನು ಸರ್ಕಾರಕ್ಕೆ ತಿಳಿಸುವಂತೆಯೂ ಹಾಗೆ ತಿಳಿಸದಿದ್ದವರನ್ನು ಹಿಡಿದು ಶಿಕ್ಷಿಸುವಂತೆಯೂ ಮಾಡಿದರೆ ಆ ಕಾನೂನು ಸಾರ್ಥಕವಾಗುವುದೆಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಸರ್ಕಾರಕ್ಕೆ ಬರೆದರು. ಸರ್ಕಾರದವರು ಈಗಿನ ಪ್ರಜೆಗಳ ಸ್ಥಿತಿಗತಿಯನ್ನು ನೋಡಿ, ಅಂಥಾ ಬದಲಾವಣೆ ಈಗಲೇ ಅವಶ್ಯವಿಲ್ಲವೆಂದೂ, ಪಟೇಲರ ಮುಖಾಂತರ ಜನನ ಮರಣ ರಿಜಿಸ್ಟರುಗಳನ್ನು ಇಡುವಂತೆ ಅವರಿಗೆ ಖಂಡಿತವಾದ ತಾಕೀತು ಮಾಡಿ, ಅಮಲ್ದಾರರುಗಳು ಆಗಾಗ್ಗೆ ರಿಜಿಸ್ಟರುಗಳನ್ನು ಚೆನ್ನಾಗಿ ತನಿಖೆಮಾಡುತ್ತಾ ಬಂದರೆ ಸಾಕಾದೀತೆಂದೂ ಜವಾಬು ಕೊಟ್ಟಿದ್ದಾರೆ.

* * * *

ದೇವನಹಳ್ಳಿ ತಾಲ್ಲೂಕಿನಲ್ಲಿ ಮಾಧ್ವ ಬ್ರಾಹ್ಮಣರಾದ ಇಬ್ಬರು ಸ್ಕೂಲ್ ಮಾಸ್ತರುಗಳು ಬಾಲ್ಯ ವಿವಾಹದ ಕಾನೂನಿಗೆ ವಿರೋಧವಾದ ಮದುವೆ ಮಾಡಿದರೆಂದು ತಿಳಿದುಬಂದದ್ದರಿಂದ ವಿದ್ಯಾಭ್ಯಾಸದ ಡಿಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ರವರು ಅವರಿಬ್ಬರನ್ನೂ ಕೆಲಸದಿಂದ ವಜಾಮಾಡಿದರೆಂದು ವರ್ತಮಾನವಿದೆ ಇದು ನಿಜವಾದ ಪಕ್ಷದಲ್ಲಿ ಅವರ ಜೀವನವೇ ತಪ್ಪಿಹೋದುದಕ್ಕಾಗಿ ತುಂಬಾ ವಿಷಾದಿಸಬೇಕಾಗಿದೆ ದೊಡ್ಡ ಅಧಿಕಾರಿಗಳು ಇಂಥಾ ಮದುವೆಗಳನ್ನು ಮಾಡಿದ್ದರೂ ಅವರಿಗೆ ಯಾವ ಶಿಕ್ಷೆಯಾದದ್ದೂ ಪ್ರಕಟವಾಗಲಿಲ್ಲ ಸರ್ಕಾರದವರು ಇವರಿಬ್ಬರ ಮೇಲೂ ಕಾನೂನ್ ಪ್ರಕಾರ ಮೊಕದ್ದಮೆ ತಂದು ಶಿಕ್ಷಿಸಬಹುದಾಗಿತ್ತು. ಹೀಗೆ ಮಾಡದೆ, ಅವರ ಜೀವನವನ್ನೇ ತಪ್ಪಿಸಿಕೊಂಡದ್ದು ಸಹಜವಾದುದಲ್ಲವೆಂದು ತೋರುತ್ತೆ ಇನ್ಸ್‌ಪೆಕ್ಟರ್ ಜನರಲ್ ಇವರು ಅವರ ವಿಷಯವನ್ನು ಪುನರಾಲೋಚನೆ ಮಾಡುವರೆಂದು ನಿರೀಕ್ಷಿಸುತ್ತೇವೆ.

ಸಬ್ ರೆಜಿಸ್ಟ್ರಾರುಗಳಿಗೆ ಇತರ ಅಧಿಕಾರಗಳನ್ನು ವಹಿಸುವ ವಿಷಯದಲ್ಲಿ ಮೈಸೂರು ಸರ್ಕಾರದವರು ಹುಕುಂ ಮಾಡಿರುವುದೇನೆಂದರೆ—ಸ್ಪೆಷಲ್ ಸಬ್ ರೆಜಿಸ್ಟ್ರಾರುಗಳನ್ನು ತಾಲ್ಲೂಕುಗಳಲ್ಲಿರುವ ಲೋಕಲ್ ಆಫೀಸರಾಗಿ ನೇಮಿಸಿ, ಅವರ ಆಫೀಸಿನ ಲೆಕ್ಕಗಳನ್ನು ಸ್ವಂತ ಲೋಕಲ್ ಲೆಕ್ಕವಾಗಿ ಇಡಬೇಕು. ಸ್ಪೆಷಲ್ ಸಬ್ ರೆಜಿಸ್ಟ್ರಾರುಗಳು ಆಯಾ ಸ್ಥಳದಲ್ಲಿರುವ ವ್ಯವಸಾಯ ಬ್ಯಾಂಕುಗಳನ್ನೂ ಇತರ ಬ್ಯಾಂಕುಗಳನ್ನೂ ಹೋಗಿ ತನಿಖೆ ಮಾಡುತ್ತಿರಬೇಕು. ಸ್ಪೆಷಲ್ ಸಬ್ ರೆಜಿಸ್ಟ್ರಾರುಗಳನ್ನೆಲ್ಲಾ ಮ್ಯುನಿಸಿಪಾಲಿಟಿಯು ಮತ್ತು ತಾಲ್ಲೂಕ್ ಬೋರ್ಡುಗಳಲ್ಲಿ ಒಬ್ಬ ಮೆಂಬರಾಗಿ ಸೇರಿಸಬೇಕು. ಈ ಏರ್ಪಾಡು ಒಂದು ವರುಷ ಜಾರಿಯಲ್ಲಿದ್ದು, ಅದರ ರಿಪೋರ್ಟು ಬಂದ ಮೇಲೆ ಮುಂದೆ ಬೇರೆ ಹುಕುಂ ಕೊಡಲಾದೀತು ಸರ್ವಕ್ಕೆ ಸಬ್ ರೆಜಿಸ್ಟ್ರಾರುಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ವಹಿಸುವುದು ಸರಿಯಲ್ಲವೆಂದು ತೋರುತ್ತೆ ಎಂಬುದೇ

ಮೈಸೂರು ಗೆಜೆಟ್ ಸಂಗ್ರಹ.

ಪೋಲೀಸ್ ಸೂಪರಿಂಟೆಂಡೆಂಟ್ ಮಿ॥ ಸಿ. ಹಾರ್ಡಿ ಯವರಿಗೆ ೧೯೦೪ನೇ ನೊವೆಂಬರ್ ೨೮ ಲಾಗಾಯಿತು ಒಂದು ತಿಂಗಳು ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಈ ರಜಾ ಪೂರೈಸಿದ ಮೇಲೆ ಅವರು ಕೆಲಸ ಬಿಟ್ಟು ಪೆನ್ಶನ್ ಪಡೆಯತಕ್ಕದ್ದು.

ಅ। ಸರ್ಜನ್ ಮಿ॥ ಎಸ್ ರಂಗಸ್ವಾಮಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ೨೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು, ದಕ್ಷಿಣ ಕನಡಾ ಮಧ್ಯೆ ಎಲ್ಲೆಕಟ್ಟನ್ನು ಗೊತ್ತುಮಾಡುವ ಸ್ಪೆಷಲ್ ಡ್ಯೂಟಿಯ ಮೇಲಿರುವ ಅ ಕಮಿಷನರ್ ಮಿ॥ ಟಿ ಚೊಕ್ಕಣ್ಣನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

೩॥ ಕೆಮಿಸ್ಟ್ ಮಿ॥ ಎಚ್ ವಿ ಕೃಷ್ಣಯ್ಯನವರಿಗೆ ಡಿಸೆಂಬರ್ ೨೮ ಲಾಗಾಯಿತು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಮಧುಗಿರಿ ತಾಲ್ಲೂಕ್ ಅಮಲ್ದಾರ್ ಮಿ॥ ವಿ. ಕೃಷ್ಣರಾಯರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ೨೦ ದಿನಗಳು ಜಾಸ್ತಿ ಮಾಡಿದೆ

ಹೊಸದುರ್ಗದ ಅಮಲ್ದಾರ್ ಮಿ॥ ಕೆ ಪದ್ಮನಾಭರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಚಿತ್ರದುರ್ಗದ ತಾಲ್ಲೂಕ್ ರೆವಿನ್ಯೂ ಪ್ರೊಬೇಷನರ್ ಮಿ॥ ಬಿ ನಾರಾಯಣಸ್ವಾಮಿ ಅಯ್ಯಂಗಾರ್ಯರು ಹೊಸದುರ್ಗದ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು

ತುಂಕೂರು ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಅ॥ ಕಮಿಷನರ್ ಮಿ॥ ಬಿ ಶ್ರೀನಿವಾಸರಾಯರಿಗೆ ಕಳೆದ ಡಿಸೆಂಬರ್ ೮ ರಿಂದ ೧೪ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರರಾಗಿದ್ದು ಈಚೆಗೆ ನಾಗಮಂಗಲದ ತಾಲ್ಲೂಕಿಗೆ ವರ್ಗಬಟ್ಟಿರುವ ಮಿ॥ ಎನ್ ಗೋಪಾಲಕೃಷ್ಣಯ್ಯಂಗಾರ್ಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಐದು ದಿನಗಳು ಜಾಸ್ತಿ ಮಾಡಿದೆ

ಗೋರಿಬಿದನೂರು ತಾಲ್ಲೂಕು ಅಮಲ್ದಾರ್ ಮಿ॥ ಡಿ ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೨೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅದೇ ತಾಲ್ಲೂಕ್ ಶಿರಸ್ತೆದಾರ್ ಕನ್ನಯ್ಯಶಾಸ್ತ್ರಿಯವರು ಗೋರಿಬಿದನೂರು ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು

ಮುಂದೆ ಹೇಳುವ ಎಕ್ಸೈಜ್ ಡಿವಿಜನ್ ಆಫೀಸರುಗಳ ವರ್ಗಾವರ್ಗಿ ಹುಕುಂ ಮಾಡಿದೆ —(೧) ಮಿ॥ ಬಿ ಕಾಮಣ್ಣನವರು—ಶಿವಮೊಗ್ಗೆಯಿಂದ ಕೋಲಾರಕ್ಕೆ, (೨) ಮಿ॥ ಜಾರ್ಜ್ ಡನ್ನಿಂಗ್ ಯವರು ಕೋಲಾರದಿಂದ ಮೈಸೂರಿಗೆ, (೩) ಮಿ॥ ಶ್ರೀಕಂಠಯ್ಯನವರು—ಮೈಸೂರಿನಿಂದ ಶಿವಮೊಗ್ಗೆಗೆ

ಮುಂದೆ ಹೇಳುವ ೧೭ ಗ್ರಾಮಗಳು ಮಾರಿಕಣಿವೆ ತಲಾವಿನ ಒಳಗೆರೆಗೋ ಅಥವಾ ಆಸ್‌ಪಾಸ್ ಗ್ರಾಮಗಳಿಗೋ ಸೇರಿಸಲ್ಪಟ್ಟಿರುವದರಿಂದ ಅವುಗಳ ಹೆಸರನ್ನು ಹೊಸ ದುರ್ಗದ ತಾಲ್ಲೂಕ್ ರಿಜಿಸ್ಟರಿನಿಂದ ತೆಗೆದುಹಾಕಿರುತ್ತೆ. ಆ ಗ್ರಾಮಗಳ್ಯಾವವೆಂದರೆ—

ಲಕ್ಕಿಹಳ್ಳಿ ಮಾಗಣೆಯಲ್ಲಿ — ತಮ್ಮೇನಹಳ್ಳಿ, ಮಾದಿಹಳ್ಳಿ, ಹೊಸಹಳ್ಳಿ, ಗುಟ್ಟಿಗಹಳ್ಳಿ, ಚನ್ನವೀರನಹಳ್ಳಿ, ಕಲ್ಲಹಳ್ಳಿ, ಚಳ್ಳಕೆರೆ

ಹೊಸದುರ್ಗದ ಮಾಗಣೆಯಲ್ಲಿ —ಇಟ್ಟಿಗೆಹೊಂದಿನಹಳ್ಳಿ, ಗೊಂಡಿಹಳ್ಳಿ, ಭಂಟನಹಳ್ಳಿ, ಅರಮೇರು, ಮುದಗೊಂಡನಹಳ್ಳಿ, ಕಚ..., ಹತ್ತಿ, ತೊಗರಿಗೊಂದಿ, ಯಕ್ಕಿಗೊಂದಿ

ಹೊಸ ದುರ್ಗದಲ್ಲಿ —ಹಗೇದಹಳ್ಳಿ.

ರಷ್ಯಾ ಜಪಾನ್ ಯುದ್ಧವು

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯ.

ಲಂಡನ್, ಜನವರಿ ೩೦ —ಮೊನ್ನೆ ನಡೆದ ಯುದ್ಧದಲ್ಲಿ ಜಪಾನಿನವರು ತಮ್ಮ ಕಡೆ ೬೦,೦೦೦ ಜನರು ನಷ್ಟಪಟ್ಟರೆಂತಲೂ ರಷ್ಯಾದವರಲ್ಲಿ ೧೦,೦೦೦ ಸೈನಿಕರು ಹತರಾದರೆಂತಲೂ ತಿಳಿಸುತ್ತಾರೆ

ಜಪಾನಿನವರು ಬಹಳ ಪರಾಕ್ರಮದಿಂದ ನುಗ್ಗಿ ಬಂದು ರಷ್ಯಾದವರನ್ನು ಸುತ್ತಿಕೊಂಡು ಯುದ್ಧಮಾಡಿ ಸೋಲಿಸಿ ಅವರನ್ನೆಲ್ಲಾ ಹುನ್ ಹೊ ನದಿಯಾಚೆಗೆ ಓಡಿಸಿಬಿಟ್ಟರೆಂದು ತಂತೀ ವರ್ತಮಾನ ಬಂದಿದೆ

ರಷ್ಯಾದವರ ದೊಡ್ಡ ನಷ್ಟ.

ಹೈಕೌತಾಯ ಎಂಬ ರಾಜ್ಯವನ್ನು ರಷ್ಯಾದವರು ಕಳೆದುಕೊಂಡದ್ದರಿಂದ ಅವರಿಗೆ ತುಂಬಾ ನಷ್ಟ ಉಂಟಾಗಿದೆ. ಆ ರಾಜ್ಯವನ್ನು ಈಗ ಜಪಾನಿನವರು ಆಕ್ರಮಿಸಿಕೊಂಡಿದ್ದಾರೆ.

ಲಂಡನ್, ಜನವರಿ ೩೧.—ರಣರಂಗದಲ್ಲಿ ೧,೨೦೦ ರಷ್ಯಾ ಸೈನಿಕರು ಹತರಾಗಿ ಬಿದ್ದಿದ್ದರು. ತಾ॥ ೨೫ ರಲ್ಲಿ ಯುದ್ಧ ನಡೆದಾಗ ರಷ್ಯಾದವರು ತಮ್ಮ ಕಡೆ ೧೦,೦೦೦ ಮಂದಿ ನಷ್ಟಹೊಂದಿದರೆಂದು ಹೇಳುತ್ತಾರೆ.

ರಷ್ಯಾದವರು ೩೦೦ ಮಂದಿಗಿಂತಲೂ ಹೆಚ್ಚಾಗಿಯೇ ಜಪಾನಿನವರನ್ನು ಕೈಸೆರೆ ಹಿಡಿದೆವೆಂದು ಹೇಳುವರು.

ನಷ್ಟದ ಲೆಕ್ಕಗಳು.

ತಾ॥ ೨೫ ರಿಂದ ತಾ॥ ೨೯ ರ ವರೆಗೆ ರಷ್ಯಾದವರ ಕಡೆ ೩೭,೦೦೦ ದಿಂದ ೪೨,೦೦೦ ಜನರ ತನಕ ನಷ್ಟವಾದರೆಂತಲೂ, ಜಪಾನಿನವರಲ್ಲಿ ೭,೦೦೦ ಮಂದಿ ನಷ್ಟಹೊಂದಿದರೆಂತಲೂ ಜಪಾನ್ ರಾಜಧಾನಿಯಿಂದ ಬಂದ ತಂತೀ ವರ್ತಮಾನ ಹೇಳುತ್ತಿದೆ

ಜಪಾನ್ ಸರ್ಕಾರಿ ರಿಪೋರ್ಟು.

ಲಂಡನ್ ಫೆಬ್ರವರಿ ೧ —ಜಪಾನ್ ಸರ್ವಸೇನಾಪತಿಯಾದ ಮಾರ್ಷಲ್ ಒಯಾಮಾಯವರು—ಕಳೆದ ೨೫ನೆ ತಾರೀಖಿನಿಂದೀಚೆಗೆ ಲಿಂಟಿಯಾಕೋ, ಹೈಕೌತಾಯ, ಸಂಡಿಪಾವೋ ಎಂಬೀ ರಣರಂಗಗಳಲ್ಲಿ ೧,೨೦೦ ರಷ್ಯಾ ಸೈನಿಕರ ಹೆಣಗಳು ಸಿಕ್ಕಿದವೆಂದು ತಿಳಿಸುತ್ತಾರೆ

ಇನ್ನೊಂದು ಹಡಗು ಹಿಡಿದರು

ಹೊಕ್ಕೈಡೋ ಎಂಬಲ್ಲಿಗೆ ರಷ್ಯಾದವರಿಗಾಗಿ ಸಾಮಾನು ತೆಗೆದುಕೊಂಡು ಗುಟ್ಟಾಗಿ ಹೋಗುತ್ತಿದ್ದ ವೈಫೀಲ್ಡ್ ಎಂಬ ಇಂಗ್ಲಿಷ್ ಹಡಗನ್ನು ಜಪಾನಿನವರು ತಡೆದು ಸ್ವಾಧೀನಪಡಿಸಿಕೊಂಡರು.

ಜಪಾನಿನವರ ಜಯಪ್ರದ.

ಲಂಡನ್, ಫೆಬ್ರವರಿ ೧ —ರಷ್ಯಾದವರು ನೆನ್ನೆ ಮೊನ್ನೆ ರಷ್ಯಾದವರ ನಾಲ್ಕು ರಾಜ್ಯಗಳ ಮೇಲೆ ನುಗ್ಗಿ ಬಂದು ದಿಗಂಗಿಗಳನ್ನು ಹೊಡೆಯಲಾರಂಭಿಸಿದರು ಜಪಾನಿನವರು ಅವರ ಮೇಲೆ ಬಿದ್ದು ಯುದ್ಧ ಮಾಡಿ, ಒಂದು ರಾಜ್ಯವನ್ನಾದರೂ ಬಿಟ್ಟುಕೊಡದೆ, ಅವರನ್ನೆಲ್ಲಾ ಸೋಲಿಸಿ ಓಡಿಸಿದರು.

ಹೈಕೌತಾಯ ಯುದ್ಧದ ವಿವರಣೆ

ಲಂಡನ್, ಫೆಬ್ರವರಿ ೩ —ಹೈಕೌತಾಯಿನಲ್ಲಿ ನಡೆದ ಯುದ್ಧವು ಮಹಾ ಭಯಂಕರವಾದದ್ದು ನಾಲ್ಕು ದಿನಗಳ ವರೆಗೆ ಜಯಪ್ರದವು ಯಾರಿಗೆ ಆಗುವುದೋ ಎಂದು ಅನುಮಾನವಾಗಿತ್ತು ಜಪಾನಿನವರು ಮಹಾ ಕಷ್ಟದಲ್ಲಿ ಸಿಕ್ಕಿಕೊಂಡಿದ್ದರು ; ಅವರಿಗಿಂತಲೂ ರಷ್ಯಾ ಸೈನಿಕರ ಸಂಖ್ಯೆಯೇ ತುಂಬಾ ಹೆಚ್ಚಾಗಿತ್ತು. ತಾ. ೨೮ ರಲ್ಲಿ ಮಾರ್ಷಲ್ ಒಯಾಮಾಯವರು ಜಪಾನ್ ಸೈನಿಕರಿಗೆಲ್ಲಾ ರಾತ್ರಿ ಹೊತ್ತು ನುಗ್ಗಿ ಶತ್ರುಗಳ ಮೇಲೆ ಯುದ್ಧ ಮಾಡಬೇಕೆಂದು ಅಪ್ಪಣೆಕೊಟ್ಟರು. ಈ ಯುದ್ಧದಲ್ಲಿ ರಷ್ಯಾದವರು ಎದುರು ನಿಲ್ಲಲಾರದೆ ಹೋದರು, ಶ್ರೇಣಿ ಹಿಮ್ಮೆಟ್ಟಬೇಕಾಯಿತು. ಕೂಡಲೇ ಜಪಾನಿನವರು ಅವರನ್ನು ಹಿಂದಟ್ಟಿಸಿಕೊಂಡು ಹೋಗಿ ತಾ ೨೯ ನೆ ಬೆಳಗ್ಗೆ ಹೈಕೌತಾಯ ರಾಜ್ಯವನ್ನು ಆಕ್ರಮಿಸಿಕೊಂಡರು.

ರಷ್ಯಾ ಸೇನಾಪತಿಯು ರಾಜೀನಾಮೆ ಕೊಟ್ಟನು

ಹೈಕೌತಾಯ ಯುದ್ಧದಲ್ಲಿ ರಷ್ಯಾದವರ ಸೈನ್ಯಾಧಿಪತಿಯಾಗಿದ್ದು ಅಪಜಯ ಹೊಂದಿದ ಜನರಲ್ ಗ್ರಿಪೆನ್‌ಬರ್ಗ್ ಯವರು ತಮ್ಮ ದೇಹಾರೋಗ್ಯವು ಕೆಟ್ಟಿದೆ ಎಂಬ ಕಾರಣವನ್ನು ಹೇಳಿ, ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂತಲೂ ಜನರಲ್ ಅಯುಲಾಫ್ ಯವರು ಅವರ ಸ್ಥಾನಕ್ಕೆ ನೇಮಕವಾದರೆಂತಲೂ ರಷ್ಯಾರಾಜಧಾನಿಯಲ್ಲಿ ವರ್ತಮಾನವಿದೆ

ಜಪಾನಿನವರ ನಷ್ಟ

ತಾ॥ ೨೫ ರಿಂದ ತಾ॥ ೨೯ ರ ವರೆಗೆ ಜಪಾನಿನವರ ಸೈನಿಕರಲ್ಲಿ ೭,೧೦೦ ಮಂದಿ ಮೃತಪಟ್ಟರು ರಷ್ಯಾದವರ ಕಡೆ ಕಡೇ ಪಕ್ಷ ೧೦,೦೦೦ ಜನ ನಷ್ಟವಾಗಿದ್ದಾರೆ. ಕೈಸೆರೆ ಸಿಕ್ಕಿರುವ ರಷ್ಯಾ ಸೈನಿಕರು—ರಷ್ಯಾದವರ ನಾಲ್ಕು ರಿಜಿಮೆಂಟಿನ ಕಾಲ್ಬಲವು ಸಂಪೂರ್ಣವಾಗಿ ಹತವಾಯಿತು ಎಂದು ಹೇಳುತ್ತಾರೆ

ಸಣ್ಣ ಸಣ್ಣ ಯುದ್ಧಗಳು

ಲಂಡನ್, ಫೆಬ್ರವರಿ ೪.—ಚಿನ್ನಯಿಂತಲೂ ಮತ್ತೆ ಯುದ್ಧಗಳು ಪ್ರಾರಂಭವಾಗಿವೆ ರಷ್ಯಾ ಸೈನ್ಯವು ನುಗ್ಗಿಬಂದು ಹೈಕೌತಾಯಿಯನ್ನು ಮುತ್ತಿಗೆ ಹಾಕಿಕೊಂಡರು. ಆದರೆ ಜಪಾನಿನವರು ಯುದ್ಧಮಾಡಿ, ಅವರಲ್ಲಿ ೧೬೦ ಮಂದಿಯನ್ನು ಕೊಂದುಬಿಟ್ಟು ಸೋಲಿಸಿ ಹಿಮ್ಮೆಟ್ಟಿಸಿರುತ್ತಾರೆ

ಲಿಯೂತಿಯಾಕಾನಲ್ಲಿ ಸಣ್ಣ ಯುದ್ಧವಾಯಿತು. ಆದರೆ ರಷ್ಯಾದವರೇ ಸೋತು ಹಿಮ್ಮೆಟ್ಟಿದರು ೭೦೦ ಮಂದಿ ರಷ್ಯಾದವರು ಈ ಯುದ್ಧದಲ್ಲಿ ನಷ್ಟಪಟ್ಟಿದಾರೆ

೨೫, ೩ನೆ ತಾರೀಖುಗಳಲ್ಲಿ ಸಣ್ಣ ಕದನಗಳಾದವೆಂತಲೂ ರಷ್ಯಾ ಮೇಜರ್ ಜನರಲ್ ಡಾಂಬ್ರೊವ್‌ಸ್ಕಿಯವರ ಕಾಲಿಗೆ ಗುಂಡೇಟು ಬಿದ್ದು ಗಾಯವಾಗಿದೆ ಎಂತಲೂ ಜನರಲ್ ಕುರೋಪಾಟ್ಕಿನ್ ರವರು ರಿಪೋರ್ಟು ಮಾಡಿದಾರೆ

ಬೆಂಗಳೂರು ಸವಾರ್ ಲೈನ್.

ಸ್ಕೂಲ್ ಬಹುಮಾನ.

ಈ ಸಭೆಯು ೧೯೦೫ ನೇ ಜನವರಿ ೨೦ ನೆ ಶುಕ್ರವಾರ ಸಾಯಂಕಾಲ ೪ ಗಂಟೆಗೆ ಸರಿಯಾಗಿ ಸವಾರ್ ಲೈನ್ ರೀಡಿಂಗ್ ರೂಮಿನಲ್ಲಿ ಪ್ರಾರಂಭವಾಯಿತು. ಸಭೆಯು ಅಗ್ರಾಸನವನ್ನು ಅಫೀಷಿಯೇಟಿಂಗ್ ಕಮ್ಯಾಂಡೆಂಟರವರಾದ ಮ॥ ರಾ॥ ಚಾಮರಾಜೇ ಅರಸಿನವರು ವಹಿಸಿದ್ದರು ಅಲ್ಲದೆ ೨೫ ಜನ ಮಿಲಿಟರಿ ಆಫೀಸರುಗಳು ಈ ಸಭೆಯನ್ನು ಅಲಂಕರಿಸಿದ್ದರು ಮೊದಲೇ ಏರ್ಪಾಡಾಗಿದ್ದ ಪ್ರೋಗ್ರಾಂ (ಅನುಕ್ರಮಣಿಕೆ) ನಂತೆ ವಿದ್ಯಾರ್ಥಿಗಳಿಂದ ದೇವರ ಸ್ತೋತ್ರ ರೂಪವಾದ ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಕೆಲವು ವೃತ್ತಗಳು ಹೇಳಲ್ಪಟ್ಟವು. ನಂತರ ಇಬ್ಬರು ಬಾಲಕರು ಇಂಗ್ಲೀಷ್ ಸಂಭಾಷಣೆಯನ್ನು ಅಭಿನಯಿಸಿದರು. ಅನಂತರ ವೀಣಾ ಗಾನವು ಕೆಲವು ಕಾಲ ಸಭೆಯವರ ಮನಸ್ಸನ್ನು ಆಕರ್ಷಿಸಿಕೊಂಡಿತ್ತು. ಸ್ಕೂಲ್ ಹೆಡ್ ಮಾಸ್ಟರವರ ರಿಪೋರ್ಟ್ ಓದಲ್ಪಟ್ಟ ನಂತರ ಪರೀಕ್ಷೆಯಲ್ಲಿ ತೇರ್ಗಡೆಯಾದ ಹುಡುಗರಿಗೆ ಪುಸ್ತಕಗಳು ಅಗ್ರಾಸನಾಧಿಪತಿಗಳಿಂದ ಕ್ರಮವಾಗಿ ಕೊಡಲ್ಪಟ್ಟವು ನಂತರ ಅಗ್ರಾಸನಾಧಿಪತಿಗಳು ಉಪನ್ಯಾಸ ಮಾಡಿದರು ಅದರ ಸಾರಾಂಶವೇನೆಂದರೆ —

ಈಗ ಸ್ಕೂಲಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯೂ ವಿದ್ಯಾಭಿವೃದ್ಧಿಯ ವಿಷಯವೂ ಹೆಡ್ ಮಾಸ್ಟರವರ ರಿಪೋರ್ಟಿನಿಂದಲೇ ವ್ಯಕ್ತಪಡುತ್ತೆ. ಸ್ಕೂಲ್ ಕಟ್ಟಡದ ವಿಷಯವಾಗಿ ಮಾಸ್ಟರುಗಳಿಗೂ ವಿದ್ಯಾರ್ಥಿಗಳಿಗೂ ಉಂಟಾಗಿರುವ ಅನನುಕೂಲ ದೊಡ್ಡದೇ ಹೌದು ಅದು ಬಾಲಕರ ಪುಣ್ಯವಶಾತ್ ಭಗವದನುಗ್ರಹದಿಂದ ಸದ್ಯದಲ್ಲಿಯೇ ಪರಿಹರವಾಗುತ್ತೆ ಈ ದೇಶದ ಪಾಠಶಾಲೆಗಳ ಅಭಿವೃದ್ಧಿಯು ಮೆ॥ ರೈಸ್ ಯವರಿಂದ ಉಂಟಾಯಿತು ಈಚೆಗೆ ೧೪ ವರುಷಗಳಿಂದ ಮೆ॥ ಭಾಭಾ ಯವರಿಂದ ಶಾಸ್ತ್ರಜ್ಞಾನ, ಕೈವಾಡ, ಕುಶಲ ವಿದ್ಯೆಗಳು ಇನ್ನೂ ಹೆಚ್ಚಾದವೆ ನಮ್ಮನ್ನಾಳುವ ಮಹಾಸ್ವಾಮಿಗಳಾದ ಶ್ರೀಮನ್ ಕೃಷ್ಣರಾಜ ಒಡೆಯರವರು ಕನ್ನಡ ಭಾಷಾಭಿವೃದ್ಧಿಯಲ್ಲಿ ಕುತೂಹಲರಾಗಿ ವಿದ್ವಾಂಸರನ್ನು ಬಹು ಮಾನಗಳ ಮೂಲಕ ಪ್ರೋತ್ಸಾಹಿಸುತ್ತಿದ್ದಾರೆ ಕನ್ನಡ ಉದ್ಗ್ರಂಥಗಳು ಮೆ॥ ರೈಸ್ ಯವರ ವಿದ್ಯಾನ್ವೇಷಣದಿಂದಲೂ ಕನ್ನಡ ಕಾವ್ಯಗಳ ಎಡಿಟರ್ ಮತ್ತು ಗ್ರಂಥಮಾಲಾ ಎಡಿಟರವರಿಂದಲೂ ಪ್ರಚಾರಕ್ಕೆ ಬರುತ್ತಿವೆ. ವಿದ್ಯಾಭ್ಯಾಸಕ್ಕೆ ಇದಕ್ಕಿಂತಲೂ ಉತ್ತಮ ಕಾಲ ದೊರೆಯಲಾರದು ಈಗಿನ ಜನಗಳಲ್ಲಿ ಕೆಲವರು—"ನಮ್ಮ ಹುಡುಗರಿಗೆ ಭೂಗೋಳ ಚರಿತ್ರೆಗಳಲ್ಲಿ ಪ್ರಯೋಜನವಿಲ್ಲ" ಎಂತಲೂ, ಕೆಲವರು "ಇಂಗ್ಲೀಷ್ ವಿದ್ಯೆಯು ಸಿವಿಲ ನೌಕರಿ ಮಾಡುವರಿಗೆ ಬೇಕು" ಎಂತಲೂ ಮತ್ತೆ ಕೆಲವರು "ಸ್ವವೃತ್ತಿ ತಿಳಿದಿದ್ದರೆ ಸಾಕು" ಎನ್ನುತ್ತಲೂ ಊಹಿಸುತ್ತಾರೆ. ಆದರೆ ಉತ್ತಮಶಿಕ್ಷಣದಿಂದ ಬುದ್ಧಿಕುಶಲತೆ, ಹೊಸ ಚಮತ್ಕಾರ, ನಾಗರೀಕತೆಗಳು ಹೆಚ್ಚುವವು. ನಮ್ಮ ದೇಶದ ಬಾರೀ ವ್ಯಾಪಾರ, ರೈಲು, ಬೆಲೆಯುಳ್ಳ ಜಿನಸುಗಳು, ನಾಗರಿಕ ಪದಾರ್ಥಗಳು, ಖನಿಜ ಕಾರ್ಯ, ಇವೆಲ್ಲವೂ ಇಂಗ್ಲೀಷರ ಹಸ್ತಗತವಾಗಿವೆ ನಾವು ಅವಿದ್ಯಾವಂತರಾದ್ದರಿಂದ ಪ್ರಬಲ ಕಾರ್ಯಗಳಿಗೆ ಪ್ರವರ್ತಿಸಲು ನಮಗೆ ಧೈರ್ಯ ಅರಿವು, ಸಾಹಸಗಳನ್ನು ಇಲ್ಲದವರಾಗಿದೇವೆ. ಅಲ್ಲದೆ ಪ್ರತಿ ಮನುಷ್ಯನೂ ದ್ರವ್ಯ ಮತ್ತು ಧರ್ಮ ಸಂಪಾದನೆಗೋಸ್ಕರವಾಗಿ ಸದಾ ಕೆಲಸಮಾಡಲೇ ಬೇಕು. ಕೆಲಸದಿಂದ ಬೇಸರಿಕೆ ಹುಟ್ಟುವುದು ಮನುಷ್ಯಸ್ವಭಾವ. ಇದರ ನಿವಾರಣೆಗೆ ವಿದ್ಯೆಯೇ ಔಷಧ ಇದನ್ನು ತಿಳಿದ ನೀವೆಲ್ಲರೂ ನಿಮ್ಮ ಮಕ್ಕಳ ಈ ರೋಗನಿವಾರಣೆ ಮಾಡದಿದ್ದರೆ ನೀವು ಮಕ್ಕಳ ರಕ್ಷಕರೆನ್ನಿಸಿಕೊಳ್ಳುವುದಕ್ಕೆ ಹ್ಯಾಗಾದೀತು ? ವಿದ್ಯಾರ್ಥಿಗಳೇ! ನೀವೆಲ್ಲರೂ ಚನ್ನಾಗಿ ವಿದ್ಯೆಯನ್ನು ಕಲಿಯಬೇಕು. ಆದರೆ ವಿದ್ಯಾವಂತರಾದರೂ ನಡತೆ ಸರಿಯಾಗಿಲ್ಲದಿದ್ದರೆ ಗೌರವವೂ ಸೌಖ್ಯವೂ ದೊರಲಾಗದು. ಅಂದರೆ, ಸತ್ಯವನ್ನು ಬಿಡದಿರುವುದು, ಎಂದಿಗೂ ಸುಳ್ಳನ್ನಾಡದಿರುವುದು, ಎಲ್ಲರಲ್ಲಿಯೂ ಪ್ರೀತಿಯನ್ನಿಡುವುದು, ಮೋಸದಿಂದ ಸ್ವಪ್ರಯೋಜನವನ್ನು ಹೊಂದಬೇಕೆಂದು ಆಲೋಚಿಸುವುದು, ಇವನ್ನು ಬಿಡಬೇಕು. ಕೈಲಾದಷ್ಟು ಪರಪ್ರಯೋಜನ ಮಾಡಬೇಕು ನಿಮ್ಮ ಪಾಠಗಳಲ್ಲಿ ಸೋಮಾರಿತನವನ್ನೂ, ಮೂರ್ಖತನವನ್ನೂ ಬಿಡಬೇಕು. ಹಿರಿಯರಿಗೂ ಉಪಾಧ್ಯಾಯರಿಗೂ ವಿಧೇಯರಾಗಿರಬೇಕು. ಇದರಿಂದ ನೀವು ವಿದ್ಯಾವಂತರಾಗಿ ಈ ದಿನ ಇನಾಂ ಪಡೆದ ಹುಡುಗರಂತೆ ನೀವೂ ಬಹುಮಾನಗಳನ್ನು ಸಂಪಾದಿಸಿದಾರೆ, ದೊಡ್ಡವರಾದ ಮೇಲೆ ಗೌರವವನ್ನೂ ಸುಖವನ್ನೂ ಹೊಂದುವಿರಿ

ಕೂಡಲೆ ಮ॥ ರಾ॥ ದಫೇದಾರ್ ಸುಬ್ಬರಾಜೇ ಅರಸಿನವರು ಬಾಲಕರಿಗೆ ವಿದ್ಯೆಯಿಂದುಂಟಾಗುವ ಪ್ರಯೋಜನವನ್ನು ಕುರಿತು ಇಂಗ್ಲೀಷಿನಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಕೂಡಲೇ ಸ್ಕೂಲ್ ಮಾಸ್ಟರ್ ಕೆ. ಶ್ರೀನಿವಾಸ್ಯಯಂಗಾರು ಸಭಾ ನಾಯಕರನ್ನು ಸಭಾಸದರ ಪರವಾಗಿಯೂ ಮಾಸ್ಟರುಗಳ ಕೃತಜ್ಞತಾಸೂಚಕವಾಗಿಯೂ ಒಂದು ಕನ್ನಡ ವೃತ್ತವನ್ನು ಹೇಳಿ, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು.

ನಗರ ಡಿವಿಜನ್ನಿನ ಭೂತ ವರ್ತಮಾನ ಸ್ಥಿತಿ.

[ಬರೆದುಬಂದದ್ದು]

ಈ ದೌರ್ಭಾಗ್ಯ ಡಿವಿಜನ್ನಿನ ಅದೃಷ್ಟವು ಹೇಗೆಹೇಗೆ ಬದಲಾವಣೆಯಾಗುತ್ತಾ ಬಂತೆಂಬುದನ್ನು ಕುರಿತು ಈ ಮುಂಚಿನ ಪತ್ರಿಕೆಯಲ್ಲಿ ವಿವರಿಸಲ್ಪಟ್ಟಿದೆ. ಈ ಪ್ರದೇಶಕ್ಕೆ ಯಾವ್ಯಾವ ಕಾಲದಲ್ಲಿ ಯಾವ್ಯಾವ ತರಹ ಬದಲಾವಣೆಗಳು ಆದವೆಂಬುವದನ್ನು ತೋರಿಸುವ ಉದ್ದೇಶ್ಯ ಅದನ್ನು ನಾಲ್ಕು ಭಾಗಗಳಾಗಿ ಇಟ್ಟುಕೊಳ್ಳಬೇಕಾಗಿದೆ.

ಪ್ರಥಮಕಾಲ (ಬ್ರಿಟಿಷ್ ಕಮಿಷನ್ ಕಾಲ)

ಸನ್ ೧೮೩೧ನೆ ಇಸ್ವಿಯಲ್ಲಿ ನಮ್ಮ ದೇಶದ ಆಡಳಿತವು ಬ್ರಿಟಿಷ್ ಕಮಿಷನರವರ ಅಧೀನಕ್ಕೆ ತೆಗೆದುಕೊಳ್ಳಲ್ಪಟ್ಟಿತು. ಆ ಕಾಲದಲ್ಲಿ ದೇಶವು ಕೇವಲ ಅನಾಯಕತ್ವದಲ್ಲಿದ್ದು, ಎಲ್ಲಾ ಕಡೆಯಲ್ಲಿಯೂ ದರೋಡೆ ಖೋರರು, ಕಳ್ಳರು, ಘಾತಕೋರರು ಮುಂತಾದ ದುಷ್ಟರು ತುಂಬಿದ್ದರು ಅವರ ಪ್ರಾಬಲ್ಯದಿಂದ ಜನಗಳ ಸ್ವತ್ತು, ಪ್ರಾಣ, ಮಾನ ಸಹ ಅವರ ಕೃಪೆಗೆ ಒಳಪಟ್ಟಿದ್ದವು. ಈಗಿನ ಹಾಗೆ ಪ್ರಯಾಣಕ್ಕೆ ಅನುಕೂಲವಾದ ಯಾವ ಸಲಕರಣೆಯೂ ಇರಲಿಲ್ಲ, ಬಾಪಿಗೆಯಿಂದ ನಡಸುತ್ತಾ ಇದ್ದ ಪೂರ್ವಪದ್ಧತಿಯ ಕೆಲವು ವಿದ್ಯಾಶಾಲೆಗಳ ಹೊರತು ವಿದ್ಯಾಭ್ಯಾಸಕ್ಕೆ ಬೇರೆ ಯಾವ ಸಲಕರಣೆಯೂ ಇರಲಿಲ್ಲ ಆಗಿನ ಕಾಲದ ವಿದ್ಯಾರ್ಥಿಗಳಿಗೆ ವ್ಯಾಕರಣ ಮತ್ತು ಭಾಷಾರೀತಿಯ ಗಂಧವೇ ಗೊತ್ತಾಗಿರಲಿಲ್ಲ ಅಧಿಕಾರಿಗಳು ನ್ಯಾಯವಿಮರ್ಶೆ ಮಾಡುವದಕ್ಕೆ ಈಗಿನಂತೆ ಕಾನೂನು, ರೂಲ್ಸು ಮುಂತಾದ ಯಾವ ನಿಯಮವೂ ಇರಲಿಲ್ಲ ಆಗಿನ ಉದ್ಯೋಗಸ್ಥರು ತಮ್ಮ ಬುದ್ಧಿ ಮತ್ತು ವಿವೇಕದ ಆಧಾರದ ಮೇಲೆನೇ ನ್ಯಾಯವಿಮರ್ಶೆ ಮಾಡಬೇಕಾಗಿತ್ತು ಹೇಳಬೇಕಾದ್ದೇನೆಂದರೆ, ವಿಶಿಷ್ಟವೂ ಗಲಭೆಯ ಸ್ಥಿತಿಯಲ್ಲಿತ್ತು ಅಂಥಾ ಸಂದರ್ಭದಲ್ಲಿ ಆಗಿನ ಒಳ್ಳೇ ಯೂರೋಪಿಯನ್ ಆಫೀಸರರು ಕಷ್ಟಪಟ್ಟು, ಶ್ರದ್ಧೆಯಿಂದ ಕಾರ್ಯಗಳನ್ನು ನೆರವೇರಿಸಿ, ದೇಶವನ್ನು ಶಾಂತಿಗೂ ಮತ್ತು ಅಭಿವೃದ್ಧಿಗೂ ತಂದುಬಿಟ್ಟದ್ದು ಅವರಿಗೆ ಭೂಷಣಕರವಾಗಿದೆ ಅವರ ಕಾಲದಲ್ಲಿಯೇ ಪ್ರಥಮತಃ ಪ್ರಯಾಣಿಕರಿಗೆ ಅನುಕೂಲವಾಗಿ ರಸ್ತೆಗಳು, ಸೇತುವೆಗಳು ಮುಂತಾದ ಅನೇಕ ಸಲಕರಣೆಗಳು ಮಾಡಲ್ಪಟ್ಟವು. ಸರ್ಕಾರಿ ಸ್ಕೂಲುಗಳು ಮತ್ತು ಕಾಲೇಜ್ ಗಳು ಸ್ಥಾಪಿಸಲ್ಪಟ್ಟವು. ಜನಗಳಿಗೆ ಉಪದ್ರವಕರರಾಗಿದ್ದ ದುಷ್ಟಜನಗಳ ಪ್ರಾಬಲ್ಯವನ್ನೆಲ್ಲಾ ಅಡಗಿಸಿದರು ಬ್ರಿಟಿಷ್ ಕಮಿಷನ್ನಿನ ೫೦ ವರುಷದ ಆಳಿಕೆಯು ಸಾಮಾನ್ಯವಾಗಿ ದೇಶಕ್ಕೂ ವಿಶೇಷವಾಗಿ ನಗರ ಡಿವಿಜನ್ನಿಗೂ ಬಹಳ ಸುಖಕರವಾಗಿತ್ತೆಂದು ಹೇಳುವರೆ ನಡೆಯಬಹುದಾಗಿದೆ ಬೆಂಗಳೂರು, ಮೈಸೂರು ಪ್ರಾಂತ್ಯಗಳವರಿಗೆ ಪಾಶ್ಚಿಮಾತ್ಯ ವಿದ್ಯೆಯ ಫಲವು ದೊರೆತ ಬಹಳ ಕಾಲದ ಮೇಲೆ ಶಿವಮೊಗ್ಗದಲ್ಲಿ ಇಂಗ್ಲೀಷ್ ಸ್ಕೂಲು ಸ್ಥಾಪಿತವಾದ್ದರಿಂದ ಆಗಲೇನೇ ಆ ಪ್ರಾಂತ್ಯದ ನಮ್ಮ ದೇಶಬಾಂಧವರು ಇಂಗ್ಲೀಷ್ ವಿದ್ಯಾಭ್ಯಾಸದಲ್ಲಿ ನಗರ ಡಿವಿಜನ್ನಿನವರಿಗಿಂತ ಬಹಳ ಮುಂದರಿಸುತ್ತಿದ್ದರು ! ಆದರೆ ಈ ಡಿವಿಜನ್ನಿನ ಆಗಿನ ಕಾಲದ ಔದಾರ್ಯ ಮನಸ್ಸಿನ ಸಹೃದಯದ ಬ್ರಿಟಿಷ್ ಆಫೀಸರರು ಸ್ಥಳೀಯ ಜನರ ಹಿತಚಿಂತನೆಯ ವಿಷಯದಲ್ಲಿ ಅನಾದರವನ್ನು ತೋರಿಸಲಿಲ್ಲ ಹೇಗೆಂದರೆ ಸರ್ಕಾರಿ ಉದ್ಯೋಗವನ್ನೆಲ್ಲಾ ವಿಶೇಷವಾಗಿ ಸ್ಥಳವಾಸಿಗರಿಗೇನೇ ಕೊಡುವ ಪದ್ಧತಿಯನ್ನನುಸರಿಸಿದ್ದರು ಆ ಕಾಲದಲ್ಲಿ ವಿದ್ಯಾವಂತರಾಗಿಯೂ ಯೋಗ್ಯರಾಗಿಯೂ ಇದ್ದವರು ಕಡಮೆಯಾಗಿದ್ದದ್ದರಿಂದ ಎಲ್ಲಾ ಬಾಬುಗಳ ಹುದ್ದೆ ಯೂರೋಪಿಯನ್ ರಿಗಿದ್ದು, ಉಳಿದ ಅಮಲ್ದಾರಿ ಕೆಲಸ ಆರಂಭಿಸಿಕೊಂಡು ಕೆಳಗಿನ ಉದ್ಯೋಗವೆಲ್ಲಾ ಸ್ಥಳೀಯರಿಗೆ ಬಿಡಲ್ಪಟ್ಟಿತ್ತು. ಅಸಿಸ್ಟೆಂಟ್ ಕಮಿಷನರ ಉದ್ಯೋಗಗಳ ಪೈಕಿ ಒಂದನ್ನು ಒಬ್ಬ ಸ್ಥಳೀಕರಿಗೋಸ್ಕರ ಬಿಟ್ಟಿದ್ದರು

ಕ್ರಮೇಣ ಸ್ಥಳೀಯ ಜನಗಳಿಗೆ ವಿದ್ಯಾಭ್ಯಾಸ ಮಾಡಿಸಿ, ತಮ್ಮಗಳ ಸ್ಥಾನಕ್ಕೆ ಬರುವಂತೆ ಯೋಗ್ಯರನ್ನಾಗಿ ಮಾಡುವ ಉದ್ದೇಶ್ಯದಿಂದಲೇ ಶಿವಮೊಗ್ಗದಲ್ಲಿ ಸುಮಾರು ೧೮೬೨—೬೩ ರಲ್ಲಿ ಇಂಗ್ಲೀಷ್ ಸ್ಕೂಲ್ ಸ್ಥಾಪನೆ ಮಾಡಿದರು ಎಂತ ಹೇಳುವದಕ್ಕೇನೂ ಬಾಧಕ ತೋರುವದಿಲ್ಲ ಕೆಲವು ಕಾಲದ ಬಳಿಕ ಈ ಸ್ಕೂಲನ್ನು ಹೈಸ್ಕೂಲಾಗಿ ಮಾಡಿ, ಆ ತರುವಾಯ ೧೮೭೫ ರಲ್ಲಿ ಅದನ್ನು ಎರಡನೇ ಗ್ರೇಡ್ ಕಾಲೇಜನ್ನಾಗಿ ಮಾಡಿದರು ಅದರಿಂದ ನಮ್ಮ ಪೂರ್ವದ ಮಹಾರಾಜ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್ ರವರಿಗೆ ರಾಜ್ಯವನ್ನು ವಹಿಸಿದ ತನಕ ಈ ಕಾಲೇಜಿನಲ್ಲಿ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ದಯಾಳುಗಳಾದ ಆಗಿನ ಆಫೀಸರುಗಳು ಪ್ರೋತ್ಸಾಹ ಕೊಟ್ಟು, ಸರ್ಕಾರಿ ಕೆಲಸಕ್ಕೆ ಸೇರಿಕೊಂಡವರ ಪೈಕಿ ಈಗಲೂ ಅನೇಕರು ಒಳ್ಳೇ ಹೆಸರನ್ನು ಪಡೆದು, ಜವಾಬ್ದಾರಿ ಕೆಲಸಗಳಲ್ಲಿ ಸರ್ಕಾರದ ಸೇವಾ ಮಾಡುತ್ತಿದ್ದಾರೆ. ಅದರಲ್ಲಿ ಇಂಗ್ಲೀಷ್ ಆಫೀಸರರಿಂದ ಪ್ರೋತ್ಸಾಹ ಪಡೆದು, ಪ್ರಾಮಾಣಿಕತೆಯಿಂದಲೂ ಆದರದಿಂದಲೂ ಸರ್ಕಾರದ ಸೇವಾ ಮಾಡಿ, ಪೂರ್ವದ ನಮ್ಮ ಮಹಾರಾಜರಿಗೂ ಕೂಡ ಪ್ರೀತ್ಯಾಸ್ಪದರಾಗಿದ್ದ ಮೆ। ಟಿ. ರಾಘವೇಂದ್ರರಾಯರ ಹೆಸರನ್ನು ಇಲ್ಲಿ ನಮೂದಿಸುವದು ನಗರ ಡಿವಿಜನ್ನಿನ ವರಿಗೆ ಭೂಷಣವಾಗಿದೆ ಎಂದು ತಿಳಿಯಬಹುದು.

ಎರಡನೆ ಕಾಲ (ದಿವಾನ್ ಸಿ. ರಂಗಾಚಾರ್ರು ಕಾಲ).

ಈ ದೊಡ್ಡಮನುಷ್ಯರ ಮಂತ್ರಿತ್ವವು ಸ್ವಲ್ಪಕಾಲವೆಂದರೆ ಮೂರುವರ್ಷ ಮಾತ್ರವಾದ್ದಾಗ್ಯೂ ಆ ಮಹಾ ಪುರುಷರ ಹೆಸರು ನಮ್ಮ ದೇಶದ ಪ್ರತಿ ಒಂದು ಸಂದಿ ಮೂಲೆ ಸ್ಥಳದಲ್ಲಿಯೂ ವ್ಯಾಪಿಸಿ ನೆಲೆಗೊಂಡಿದೆ. ಅವರ ಕಾರ್ಯನಿರ್ವಾಹಕ ಶಕ್ತಿ, ಪ್ರಾಮಾಣಿಕತೆ, ಯೋಗ್ಯತೆ ಮುಂತಾದ ಸುಗುಣಗಳು ಅಸದೃಶವಾದವುಗಳೆಂದ ಹೇಳಬಹುದು ಈಗ ನಾವು ಅನುಭವಿಸುತ್ತಾ ಇರುವ ಅಭಿವೃದ್ಧಿಯೂ ಸೌಖ್ಯವೂ ದೂರದರ್ಶಿ ಯಾದ ಆ ಮಂತ್ರಿಯು ಬಿತ್ತಿದ ಬೀಜದ ಫಲಗಳಾಗಿವೆ. ಅವರು ನಮ್ಮ ದೇಶಕ್ಕೆ ಮಾಡಿದ ಶಾಶ್ವತವಾದ ಉಪಕಾರಗಳ ಪೈಕಿ ಕೆಲವನ್ನು ಮಾತ್ರ ಉದಹರಿಸುತ್ತೇವೆ —

(೧) ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪನೆ ಮಾಡಿದರು, (೨) ಭಾರೀ ಸಂಬಳ ಪಡೆಯುತ್ತಾ ಇದ್ದ ಯೂರೋಪಿಯನ್ ಆಫೀಸರುಗಳ ಸ್ಥಾನಗಳಿಗೆ ಯೋಗ್ಯರಾಗಿದ್ದ ವಿದ್ಯಾವಂತರಾದ ದೇಶೀಯ ಜನಗಳನ್ನು ನೇಮಿಸಿ, ಹೆಚ್ಚು ಖರ್ಚನ್ನು ಕಡಮೆ ಮಾಡಿದ್ದಲ್ಲದೆ, ಅನವಶ್ಯವಾದ ಅನೇಕ ಬಾಬತಿನಲ್ಲಿ ವೆಚ್ಚವನ್ನು ಮಿತಿಗೆ ತಂದುಬಿಟ್ಟರು, (೩) ಪ್ರಬಲವಾಗಿದ್ದ ರುಷುವತ್ತನ್ನು ಶುದ್ಧಾಂಗವಾಗಿ ನಿರ್ಮೂ[ಲ]... ಪ್ರಾಮಾಣಿಕತೆಯನ್ನು ಪ್ರೋತ್ಸಾಹಪಡಿಸಿದರು

ಮೂರನೇ ಕಾಲ (ಪ್ರಖ್ಯಾತಿ ಪಡೆದ ಸರ್ ಕೆ. ಶೇಷಾದ್ರಿ ಐಯರವರ ಕಾಲ)

ಈ ಮಹರಾಯರೇ ನಮ್ಮ ಸೀಮೆಯನ್ನು ಉತ್ತಮಸ್ಥಿತಿಯಲ್ಲಿ ಮುಂದಕ್ಕೆ ತಂದು ಬಿಟ್ಟರೆಂತ ಅನ್ನಬಹುದಾಗಿದೆ ಈ ಮಂತ್ರಿಗಳ ಜನಾನುರಾಗಪೂರಿತವಾದ ಕಾರಬಾರಿನಲ್ಲಿ ದೇ[ಶವು] ಎಲ್ಲಾ ವಿಷಯದಲ್ಲಿಯೂ ಅಭಿವೃದ್ಧಿಗೆ ಬಂದು, ಸುಭಿಕ್ಷವಾಗಿ[...] ಅವರು ಪ್ರಜೆಗಳ ಹಿತಕ್ಕಾಗಿ ಘನವಾದ ಮನಸ್ಸಿನಿಂದ ಮಾ[ಡಿದ] ಉಪಕಾರಗಳನ್ನು ಅನೇಕ ತಿದ್ದುಪಾಟುಗಳನ್ನೂ ವಿವರಿಸು[ವ]ದಲ್ಲಿ ಒಂದು ದೊಡ್ಡ ಗ್ರಂಥವೇ ಆಗಬಹುದು ಆದ್ದರಿಂದ ಕೆ[ಲವು] ಮಟ್ಟಿಗೆ ಮಾತ್ರ ಇಲ್ಲಿ ಉದಹರಿಸಿದರೆ ಸಾಕು ಯಾವವೆಂದರೆ

(೧) ಸ್ತ್ರೀವಿದ್ಯಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹ ಕೊ[ಟ್ಟು] ದೇಶದ ಎಲ್ಲಾ ಕಡೆಗಳಲ್ಲಿಯೂ ಬಾಲಿಕೆಯರ ಪಾಠಶಾಲೆ ಮ[ತ್ತು] ಕಾಲೇಜ್ ಸಹ ಏರ್ಪಡಿಸಿದರು, (೨) ಅನೇಕವಾಗಿ ಪಾಠಶಾ[ಲೆ] ಹೈಸ್ಕೂಲು, ಕಾಲೇಜುಗಳನ್ನು ಸ್ಥಾಪಿಸಿ, ಮೈಸೂರು ದೇಶ[ದ]ವರನ್ನು ವಿದ್ಯಾವಂತರನ್ನಾಗಿ ಮಾಡಿ, ಸ್ಥಳೀಯರನ್ನು ಎಲ್ಲಾ [ಉ]ದ್ಯೋಗಕ್ಕೂ ಯೋಗ್ಯರನ್ನಾಗಿ ಮಾಡಿದರು, (೩) ಅವರ [...] ಇದ್ದ ದಿವಾನರಿಂದ ಸ್ಥಾಪಿತವಾದ ಪ್ರಜಾಪ್ರತಿನಿಧಿ ಸಭೆಗೆ ಪ್ರ[ತಿನಿ]ಧಿಗಳನ್ನು ಚುನಾಯಿಸಲು, ಜನಗಳಿಗೆ ಸ್ವತಂತ್ರ ಕೊಟ್ಟು ಮತ್ತು ಸಂಘಗಳನ್ನು ಅಂಗೀಕರಿಸಿದರು, (೪) ಕೋಲಾರ ಡಿಸ್ಟ್ರಿಕ್ಟಿನಲ್ಲಿ ಭಂಗಾರ ತೆಗೆವ ಕಾರ್ಖಾನೆಗಳನ್ನು ಏರ್ಪಾಟು ಮಾಡಿದರು, (೫) ಕಾವೇರಿ ವಿದ್ಯುಚ್ಛಕ್ತಿಯು ಪ್ರಯೋಜನವು ಜಾರಿಗೆ ಬರುವಂತೆ ಮಾಡಿದರು, (೬) ಮಾರಿಕಣಿವೇ ಕೆ[ರೆ] ಕಾಮಗಾರಿಯನ್ನಾರಂಭಿಸಿದರು ಇವು ಸಾರ್ವಜನಿಕ ಪ್ರಯೋಜನಕರವಾದವುಗಳಾಗಿವೆ.

ಮುಖ್ಯವಾಗಿ ನಗರ ಡಿವಿಜನ್ನಿನವರಿಗೆ ಅವರು ಮಾಡಿದ [ಉಪ]ಕಾರಗಳು ಯಾವವೆಂದರೆ —

(೧) ಶಿವಮೊಗ್ಗಕ್ಕೂ ಬೀರೂರಿಗೂ ರೈಲ್ವೆ ಹಾಕಿಸಿದ[ರು] (೨) ನಗರ ಸಭಾ ಎಂಬ ರಾಜಕೀಯ ಸಂಘವನ್ನು ಅಂಗೀ[ಕರಿ]ಸಿದರು, (೩) ಶಿವಮೊಗ್ಗದಲ್ಲಿ ಅನಾರೋಗ್ಯಕ್ಕೆ ಕಾರಣವಾ[ದ] ಕುಂಬಾರಗುಂಡಿ ಎಂಬ ಹಳ್ಳವನ್ನು ಸುಮಾರು ಎಪ್ಪತ್ತು ಸಾ[ವಿ]ರೂಪಾಯಿನ ಲಾಗವಾಡನ್ ಮುಚ್ಚಿಸಿ ಮಾಡಿಸಿದರು, (೪) [...] ತರಹದ ಕೆಲವು ತಾಲ್ಲೂಕುಗಳಲ್ಲಿನ ಅಡಿಕೆ ತೋಟ[ದವ]ರಿಗೆ ಸ್ವಲ್ಪ ಮಟ್ಟಿಗೆ ಕಂದಾಯವನ್ನು ಕಮ್ಮಿ ಮಾಡಿದರು; (೫) ವಿದ್ಯಾವಂತರಾಗಿಯೂ ಅರ್ಹರಾಗಿಯೂ ಇದ್ದ ಸ್ಥಳೀಕರ[ನ್ನು] ಕೆಲವು ಮಟ್ಟಿಗೆ ಸರ್ಕಾರದ ಉದ್ಯೋಗದಲ್ಲಿ ಸೇರಿಸಿ, ಪ್ರೋ[ತ್ಸಾ]ಹ ಕೊಟ್ಟರು

ನಾಲ್ಕನೆಯ ಕಾಲ (ಸರ್ ಪಿ ಎನ್ ಕೃಷ್ಣಮೂರ್ತಿಗಳ ಕಾ[ಲ])

ನಮಗೆ ತಿಳಿದಮಟ್ಟಿಗೂ ಈ ದೊಡ್ಡಮನುಷ್ಯರ ಮಂ[ತ್ರಿತ್ವ] ಪ್ರಾರಂಭವಾದ ಈಚೆಗೆ ನಮ್ಮ ಡಿವಿಜನ್ನಿನ ಜನಗಳಿಗೆ ಪ್ರಯೋ[ಜ]ನವಾದ ಯಾವ ಕೆಲಸವನ್ನೂ ಮಾಡಿಲ್ಲ, ಆದರೆ ಈ ಪ್ರಾಂ[ತ್ಯದ] ಪ್ರಜೆಗಳ ಅಭಿವೃದ್ಧಿಗೆ ಕೇವಲ ಹಾನಿಕರವಾದ ಅನುಭವ[ಗಳು] ಮಾತ್ರ ಪುಷ್ಕಳವಾಗಿವೆ ಎಂಬುವದರಲ್ಲೇನೂ ಸಂಶಯವಿಲ್ಲ. ಯಾವವೆಂದರೆ –

(೧) ಇವರ ಮಂತ್ರಿತ್ವವು ಆರಂಭವಾದ ಲಾಗಾಯಿತು ಡಿಸ್ಟ್ರಿಕ್ಟಿನ ಸ್ಥಳೀಕರಲ್ಲಿ ಒಬ್ಬನಿಗಾದರೂ ಒಂದು ಡೆಪ್ಟೀ ಅಮ[ಲ್ದಾ]ರಿ ಕೆಲಸ ಕೂಡ ದೊರೆತಿಲ್ಲ, (೨) ಕ್ಷಾಮದಿಂದಲೂ, ಪ್ಲೇಗಿನಿಂದಲೂ ಜನಗಳು ನಿರ್ಗತಿಕರಾಗಿ ಇರುವ ಕಾಲದಲ್ಲಿಯೇ ವಿದ್ಯಾರ್ಥಿಗಳ ಸ್ಕೂಲ್ ಫೀಯನ್ನು ಹೆಚ್ಚಿಸಿದರು; (೩) ಶಿವಮೊಗ್ಗದ[...]ಸ್ಥ ಜೈಲನ್ನು ತೆಗೆದು ಹಾಕಿ, ಲಾಕಪ್ ಮಾಡಿದರು, (೪) ಈ ಪ್ರಾಂತ್ಯದ ಜನಗಳ ವಿದ್ಯಾಭಿವೃದ್ಧಿಗೆ ಅನುಕೂಲವಾಗಿ ೩೦ ವರುಷದಿಂದ ಇದ್ದ ಕಾಲೇಜನ್ನು ನಿಷ್ಕಾರಣವಾಗಿ ತೆಗೆದುಹಾಕಿದರು

ಮೇಲೆ ಹೇಳಿದ ಅನುಪಕಾರಗಳ ಪೈಕಿ, ಬಾಕೀದನ್ನೆಲ್ಲಾ ಜನಗಳು ಮರೆತರೂ ಮರೆಯಬಹುದು, ಆದರೆ ಕೊನೇದು ಒಂದು ಮಾತ್ರ ಆಚಂದ್ರಾರ್ಕವಾಗಿ ಈ ಪ್ರಾಂತ್ಯದ ಜನಗಳ ಮನಸ್ಸನ್ನು ನೋಯಿಸುತ್ತಾ ಇರತಕ್ಕದ್ದಾಗಿದೆ

"ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ."

ನಮ್ಮ ಮೈಸೂರು ಸಂಸ್ಥಾನವೇ ಮುಂತಾದ ದೇಶಗಳಲ್ಲಿ ಕ್ರೀಸ್ತಮತ ಪ್ರಚಾರಕ ಕಾರ್ಯವನ್ನು ನಡಸುತ್ತಿರುವ ಬೋಧಕರನ್ನು ಅನ್ಯ ದೇಶಗಳಿಗೆ ಕಳುಹಿಸಿಕೊಡುವ ಸಮಾಜವೊಂದು ಇಂಗ್ಲಾಂಡಿನಲ್ಲಿರುವದು ವೆಸ್ಲಿಯನ್ ಮಿಷನರಿ ಸೊಸಯಿಟಿ. ಆ ಸಮಾಜದ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಘನ ಫಿಂಡ್ಲೆ ಬೋಧಕರು ಕಳೆದ ೧ನೆಯ ತಾರೀಖಿನಲ್ಲಿ ಮೈಸೂರು ರಾಜಧಾನಿಗೆ ದಯಮಾಡಿಸಿದ್ದರು ಇವರು ಇಲ್ಲಿರುವ ಮಿಷನ್ ಹೈಸ್ಕೂಲಿನ ಮೆಟ್ರಿಕ್ಯುಲೇಷನ್ ತರಗತಿಯ ವಿದ್ಯಾರ್ಥಿಗಳಿಗೆ ಒಂದು ಉಪನ್ಯಾಸವನ್ನು ಮಾಡಿದರು ಅದರ ಸಾರಾಂಶವನ್ನು ನಮ್ಮ ವಾಚಕರ ಪ್ರಯೋಜನಾರ್ಥವಾಗಿ ತಿಳಿಸುತ್ತೇವೆ

ಈ ಇಂಡಿಯಾ ದೇಶದ ಯಾವ ಭಾಗಕ್ಕೆ ಹೋದರೂ ಪಾಶ್ಚಾತ್ಯರ ವಿದ್ಯಾಭ್ಯಾಸವನ್ನು ಹೊಂದಿದ ಸ್ವದೇಶೀಯರು ಸಿಕ್ಕುವರು ಇವರ ಸಂಖ್ಯೆಯು ಅಷ್ಟು ಹೆಚ್ಚಾಗಿಲ್ಲ. ಈ ದೇಶದ ಅಧಿಕ ಭಾಗದ ಜನಗಳು ವಿದ್ಯಾಹೀನರು, ಮೂಢರು, ಅವರು ಹಿಡಿದಿರುವ ಅಭಿಪ್ರಾಯಗಳಾದರೋ ಕೇವಲ ಅಪೂರ್ವವಾದವುಗಳು, ತಪ್ಪಾದವುಗಳು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಿ ಎ, ಎಂ. ಎ ಮೊದಲಾದ ಬಿರುದಿನ ಮೂಲಾಕ್ಷರಗಳನ್ನು ಹೆಸರಿನ ಕೊನೆಯಲ್ಲಿ ...

...ಳ್ಳುವ ಮಹನೀಯರನ್ನು ಸಾಧಾರಣವಾಗಿ ನೋಡಬಹುದು. ಈ ಬಿರುದುಗಳನ್ನು ಪಡೆದವರು ತಮ್ಮ ದೇಶೀಯರಿಗಿಂತ ವಿಶೇಷವಾದ ವಿದ್ಯಾಸಾಮರ್ಥ್ಯಗಳನ್ನು ಹೊಂದಿದವರಾಗಿದ್ದಾರೆಂಬು ಸರ್ವರಿಗೂ ಗೊತ್ತಾಗಿದೆ ಇವರಿಗೆ ಈ ವಿದ್ಯೆಯು ಹ್ಯಾಗೆ ಬಂದಿತು ಸರ್ಕಾರದವರಿಂದಲೋ ಅಥವಾ ಮಿಷನರಿಗಳೇ ಮೊದಲಾದ ಇತರರಿಂದಲೋ ಸ್ಥಾಪಿಸಲ್ಪಟ್ಟ ಪಾಠಶಾಲೆಗಳಲ್ಲಿ ಇವರು ವಿದ್ಯಾವಂತರಾದರು ಈ ಪಾಠಶಾಲೆಗಳಲ್ಲಿ ಕೆಲವು ವಿದ್ಯಾರ್ಥಿಗಳು ಉಚಿತವಾಗಿ ಓದಿಕೊಂಡವರು ಇನ್ನು ಕೆಲವರು ಸ್ವಲ್ಪವಾಗಿ ವೇತನಗಳನ್ನು ಕೊಟ್ಟು ಓದಿದವರು. ಮತ್ತೆ ಅನೇಕರು ಪೂರಾ ಫೀ ಕೊಟ್ಟು ಓದಿದವರು ಎಷ್ಟಾದರೂ ಪಾಠಶಾಲೆಗಳ ಖರ್ಚೆಲ್ಲಾ ಇವರು ಕೊಟ್ಟ ಹಣದಿಂದ ಕಳೆದುಹೋಗಲಾರದು. ಆದಕಾರಣ ಸರ್ಕಾರದವರಿಂದಲೂ ಧರ್ಮ ಬುದ್ಧಿಯುಳ್ಳ ಮಹನೀಯರಿಂದಲೂ ಕೊಡಲ್ಪಟ್ಟ ಸಹಾಯ ದ್ರವ್ಯದಿಂದ ಈ ಪಾಠಶಾಲೆಗಳನ್ನು ನಡೆಸಬೇಕಾಗಿದೆ. ಇದನ್ನು ಪರ್ಯಾಲೋಚಿಸಿ ನೋಡುವಲ್ಲಿ ಇವರಿಗೆ ವಿದ್ಯೆಯು ಬಹು ಮಟ್ಟಿಗೆ ಉಚಿತವಾಗಿ ಬಂದದ್ದಾಗಿದೆಯೆಂದೇ ತಿಳಿಯ ಬರುವದು. ಹೀಗೆ ನಮ್ಮ ಈ ದೇಶದ ನಿವಾಸಿಗಳಲ್ಲಿ ಕೆಲವು ಮಂದಿ ವಿದ್ಯೆಯಲ್ಲಿ ಇತರರಿಗಿಂತ ಎಷ್ಟೋ ಶ್ರೇಷ್ಠವಾದ ಸ್ಥಾನವನ್ನು ಹೊಂದಿದವರಾಗಿರುತ್ತಾರೆ.

ಈ ವಿದ್ಯಾವಂತರಿಗೆ ಇಂಥ ಪದವಿಯು ಬಂದಿರುವದರಿಂದ ಇವರ ಕರ್ತವ್ಯವೇನೆಂದು ನಾವು ಯೋಚಿಸಬೇಕಷ್ಟೆ. ವಿದ್ಯೆಯನ್ನು ಹೊಂದಿದವನು ತನ್ನ ಕೈಯಲ್ಲಿ ಒಂದು ದೀಪವನ್ನು ಹಿಡಿದುಕೊಂಡಿರುತ್ತಾನೆ ಬಿ ಎ, ಎಂ. ಎ. ಎಂಬ ಬಿರುದುಗಳನ್ನು ಪಡೆದಿರುವವರು ಇಂಗ್ಲಿಷ್ ವಿದ್ಯಾಭ್ಯಾಸವನ್ನು ಮಾಡಿದವರಾಗಿಯೂ ಪಾಶ್ಚಾತ್ಯ ನಾಗರಿಕತೆಯನ್ನು ತಿಳಿದವರಾಗಿಯೂ ಇರುತ್ತಾರೆ. ಇವರಿಗೆ ನಿಜವಾದ ಶಾಸ್ತ್ರವಿಷಯವು ತಿಳಿದಿರುವದರಿಂದ ಮೂಢರಾದ ದೇಶೀಯರು ಹಿಡಿದಿರುವ ಅನೇಕ ಮೂಢಾಭಿಪ್ರಾಯಗಳನ್ನು ಇವರು ವರ್ಜಿಸಿದ್ದಾರೆ ಹೀಗೆ ತಾವು ವಿದ್ಯೆಯೆಂಬ ದೀಪವನ್ನು ಹಿಡಿದಿರುವಲ್ಲಿ ಅದರಿಂದ ಇವರು ಏನು ಉಪಯೋಗವನ್ನು ಮಾಡಬೇಕು ? ದೀಪವನ್ನು ಹಿಡಿದಿರುವವನು ಅದನ್ನು ಒಂದು ಮೂಲೆಯಲ್ಲಿ ಮುಚ್ಚಿಟ್ಟರೆ ಯಾರು ಒಪ್ಪುವರು ! ಎಲ್ಲರೂ ಬೆಳಕನ್ನು ಕಾಣುವಂತೆ ದೀಪವನ್ನು ಎತ್ತರವಾದ ಸ್ಥಳದಲ್ಲಿ ಇಡಬೇಕಲ್ಲವೇ ?

ನಮ್ಮ ಈ ದೇಶದ ವಿದ್ಯಾವಂತರ ಸ್ಥಿತಿಗತಿಗಳನ್ನು ಪರ್ಯಾಲೋಚಿಸಿರಿ. ಓದಿ ತೇರ್ಗಡೆಯನ್ನು ಹೊಂದಿ ಸರ್ಕಾರದ ಉದ್ಯೋಗಗಳನ್ನು ಹೊಂದಿಸಿಕೊಂಡು ಕೆಲವರು ಅಸಿಸ್ಟೆಂಟ್ ಕಮಿಷನರು ಗಳಾಗಿಯೋ ಬೇರೆ ಯಾವ ಉದ್ಯೋಗಸ್ಥರಾಗಿಯೋ ಯಾವದಾದರೊಂದು ಪಟ್ಟಣದಲ್ಲಿ ವಾಸ ಮಾಡುವವರಾಗುತ್ತಾರೆ. ಇವರು ಹೊಂದಿರುವ ವಿದ್ಯೆಯೂ ವಿದ್ಯಾಬಲದಿಂದ ಬಂದ ಪದವಿಯೂ ಸ್ವಂತ ಸ್ವಾರ್ಜಿತ ಧನವೆಂದು ತಿಳಿದು ಗರ್ವಿಸಿ ಜನರನ್ನು ತಿರಸ್ಕರಿಸುತ್ತಾರೆಯೇ ಹೊರತು, ಆ ವಿದ್ಯೆಯು ತಮಗೆ ಬಹು ಮಟ್ಟಿಗೆ ಉಚಿತಾರ್ಥವಾಗಿ ಬಂದದ್ದೆಂಬುದನ್ನು ಮರೆತು ಹೋಗುತ್ತಾರೆ ತಮ್ಮ ಸುತ್ತಲೂ ಜನರು ಎಷ್ಟೋ ಮೂಢರಾಗಿ ಎಷ್ಟೋ ಕಷ್ಟಕ್ಕೆ ಸಿಕ್ಕಿ ಸಂಕಟಪಡುತ್ತಿರುವಲ್ಲಿ ಅವರ ಅಜ್ಞಾನವನ್ನು ಪರಿಹರಿಸುವದಕ್ಕಾಗಿ ತಮ್ಮ ಕೈಯಲ್ಲಿರುವ ವಿದ್ಯೆಯೆಂಬ ದೀಪದ ಬೆಳಕನ್ನು ಅವರಿಗೆ ತೋರಿಸುವದಿಲ್ಲ ಇದೆಷ್ಟು ಪರಿತಾಪಕರವಾದ ವಿಷಯವಾಗಿದೆ ! ಕೆಲವು ವೇಳೆ ಅವರು ತಮ್ಮ ದೀಪದ ಲಾಂದ್ರವನ್ನು ಸ್ವಲ್ಪವಾಗಿ ತೆಗೆದು ಅದರ ಬೆಳಕು ತಮ್ಮ ಮೇಲೆ ಮಾತ್ರ ಪ್ರಕಾಶಿಸುವಂತೆ ಮಾಡಿ, ಅದನ್ನು ನೋಡುವವರೆಲ್ಲರೂ—ನಮ್ಮ ದಿವಾನ್ ಸಾಹೇಬರು ಎಂಥ ಮಹಾಪುರುಷರಪ್ಪಾ ! ಎಂದು ಸ್ತೋತ್ರ ಪಡುವ ಹಾಗೆ ಹೊಗಳಿಸಿಕೊಳ್ಳುತ್ತಾರೆ. ಅಥವಾ ಸಾರ್ವಜನಿಕ ಸಭೆಗಳಲ್ಲಿ ರೀಡಿಂಗ್ ರೂಮುಗಳೆಂಬ ವಾಚನಾಲಯಗಳನ್ನೂ ಕ್ಲಬ್ಬುಗಳೆಂಬ ಅನ್ಯೋನ್ಯನಿಲಯಗಳನ್ನೂ ಏರ್ಪಡಿಸಿಕೊಂಡು ಅಲ್ಲಿ ತಮ್ಮ ದೀಪಗಳನ್ನು ಪ್ರಕಾಶಿಸಮಾಡಿ, ಒಬ್ಬರ ಬೆಳಕನ್ನು ಮತ್ತೊಬ್ಬರು ನೋಡಿಕೊಂಡು ಸಂತೋಷ ಪಡುವವರಾಗಿದ್ದಾರೆ ಹೊರತು ತಮ್ಮ ಸುತ್ತಲು ಅಜ್ಞಾನವೆಂಬ ಕತ್ತಲು ಕವಿದಿರುವದನ್ನು ಕನಸಿನಲ್ಲಾದರೂ ಮನಸ್ಸಿಗೆ ತೆಗೆದುಕೊಳ್ಳುವದಿಲ್ಲ !

ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ವಿದ್ಯಾಧಿಕಾರಿಗಳು ಈ ದೀಪವನ್ನು ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯಲ್ಲಿಟ್ಟು ಕಳುಹಿಸುವವರಾಗಿದ್ದಾರೆ. ಈ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಗಿಸಿ ಜವಾಬ್ದಾರಿಯಾದ ಉದ್ಯೋಗಗಳನ್ನು ನಡಸುತ್ತಿರುವ ವೇಳೆಯಲ್ಲಿ "ಈ ದೀಪವನ್ನು ಹ್ಯಾಗೆ ಉಪಯೋಗಿಸಲಿ" ಎಂದು ಆಗಲೇ ತೀರ್ಮಾನ ಮಾಡುವದು ಅವಶ್ಯಕವಾಗಿದೆ ತಮ್ಮ ಕೈಯಲ್ಲಿ ಒಪ್ಪಿಸಿಕೊಟ್ಟಿರುವ ನಿಧಿಯನ್ನು ದುರ್ವ್ಯಯ ಮಾಡುವದು ದ್ರೋಹವೆಂದು ಅವರೂ ತಿಳಿದಿರುವದಾದರೆ ತಮ್ಮ ವಿದ್ಯಾಫಲಗಳನ್ನು ಸರ್ವಜನಗಳ ಉಪಭೋಗಗಳಿಗೆ ತರುವದರಲ್ಲಿ ಅತ್ಯಂತ ಆಸಕ್ತರಾಗಿರತಕ್ಕದ್ದು.

ವಿದ್ಯಾರ್ಥಿಗಳ ಕೈಯಲ್ಲಿ ಉಪಾಧ್ಯಾಯರು ಒಪ್ಪಿಸಿಕೊಡುವ ಈ ದೀಪವೆಂಬುವದೇನು ? ಮೊದಲನೇದು—ಅದು ತಿಳುವಳಿಕೆ. ಈ ದೇಶದಲ್ಲಿ ಲಕ್ಷೋಪಲಕ್ಷ ಜನಗಳು ಕೇವಲ ಮೂಢರಾಗಿದ್ದಾರೆ ಇಂಗ್ಲಿಷ್ ಸ್ಕೂಲುಗಳಲ್ಲಿ ಓದಿದವರು ವಿಸ್ತಾರವಾಗಿ ಗ್ರಂಥ ಪರಿಶೋಧನೆಯನ್ನು ಮಾಡಿರುತ್ತಾರೆ ಅವರಿಗೆ ಹಲವು ಭಾಷೆಗಳಲ್ಲಿ ಪರಿಚಯವುಂಟು ನವೀನ ಪಾಶ್ಚಾತ್ಯ ಶಾಸ್ತ್ರವನ್ನೂ ಗಣಿತ ಚರಿತ್ರೆ ಭೂಗೋಳ ಮೊದಲಾದ ಶಾಸ್ತ್ರಗಳನ್ನೂ ತಿಳಿದಿರುತ್ತಾರೆ. ಭೂಲೋಕದಲ್ಲಿ ಬೇರೆ ಬೇರೆ ಜನಗಳು ಯಾವ ಪರಿಯಾಗಿ ಅಭಿವೃದ್ಧಿಯಾಗುತ್ತಲಿದ್ದಾರೆಂದು ತಿಳಿಯಲಾಸಕ್ತರಾಗಿದ್ದಾರೆ.

ಎರಡನೆಯದು—ಇವರಿಗೆ ಕೊಡಲ್ಪಡುತ್ತಿರುವ ವಿದ್ಯೆಯೆಂಬ ದೀಪವು ಸದ್ಗುಣ ಸದಾಚಾರಗಳೆಂಬುದಾಗಿದೆ. ಇದು ಅಲ್ಲದೆ ಹೋದರೆ ಎಷ್ಟು ಓದಿ ತಿಳುಕೊಂಡರೆತಾನೆ ಪ್ರಯೋಜನವೇನು ? ಒಬ್ಬನು ವಿದ್ಯೆಯನ್ನು ಮಾತ್ರ ಅರ್ಜಿಸಿದವನಾಗಿ ಗುಣವಿಲ್ಲದವನಾಗಿದ್ದರೆ ಅವನಿಂದ ಸಮಾಜಕ್ಕೆ ಎಷ್ಟು ಅಪಾಯವುಂಟೋ ಹೇಳಬಲ್ಲವರಾರು ? ಇಂಗ್ಲಿಷನ್ನೂ ಇಂಗ್ಲಿಷ್ ಶಾಸ್ತ್ರಪರಿಚಯವನ್ನೂ ಪಡೆದ ವಿದ್ಯಾವಂತರು ಪವಿತ್ರರೂ ಸತ್ಯವಂತರೂ ದಯಾಶೀಲರೂ ಆದವರಾಗಿರತಕ್ಕದ್ದು ಭೂಷಣವಾಗಿದೆ. ತಾವು ಮಹಾ ಪದವಿಗೆ ಬಂದರೆ ಕಷ್ಟಪಡುವವರನ್ನು ಆದರಿಸುವವರಾಗಿಯೂ ತಮ್ಮ ಕೈಕೆಳಗಿನ ಸಕಲ ಜನಗಳಿಗೂ ನಿಷ್ಪಕ್ಷಪಾತವಾದ ನೀತಿಯನ್ನು ಅಳೆದುಕೊಡುವವರಾಗಿಯೂ ಇರತಕ್ಕದ್ದು. ಬಂದುಗ ಹಣವನ್ನು ಸಂಪಾದಿಸುವ ದುರ್ಗುಣಕ್ಕಿಂತ ಏಳೆಂಟು ರೂಪಾಯಿಗಳ ಸಂಪಾದನೆಯುಳ್ಳ ಸುಗುಣಿಯೇ ಮೇಲು.

ತಿಳುವಳಿಕೆಯೆಂಬ ದೀಪವನ್ನೂ ಸದ್ಗುಣವೆಂಬ ದೀಪವನ್ನೂ ಹಿಡಿದಿರುವವನು ದೇವಭಕ್ತಿಯೆಂಬ ದೀಪವನ್ನೂ ಹಿಡಿಯುವದು ಉತ್ತಮೋತ್ತಮವಾಗಿದೆ. ನಿಜವಾಗಿಯೂ ಶಾಶ್ವತವಾಗಿಯೂ ಇರುವ ಸದ್ಗುಣಕ್ಕೆ ದೇವಭಕ್ತಿಯೇ ಮೂಲ. ಇದನ್ನು ಕೇಳಿ ಕೆಲವರು—ನಮ್ಮ ಮತದಲ್ಲೇ ದೇವಭಕ್ತಿಯು ಉತ್ಕೃಷ್ಟವಾಗಿದೆ. ನಮ್ಮ ಮತಸಾಧನೆಯಿಂದ ಸದ್ಗುಣವು ಪರಿಪೂರ್ಣವಾಗಿ ಶಾಶ್ವತವಾಗಿ ಲಭಿಸುವದಾಗಿದೆ ನಮ್ಮ ಹಿಂದೂ ಮತವೇ ಸಾಕಾಗಿದೆ ಎಂದು ಹೇಳುವರು. ಅದಕ್ಕೆ ನಾವು ಹೇಳುವದೇನೆಂದರೆ—ಆಗಲಿ, ಹಿಂದೂ ಮತದ ಬೋಧನೆಗಳನ್ನೂ ಆಚಾರ ವ್ಯವಹಾರಗಳನ್ನೂ ನಡವಳಿಕೆಗೆ ತಂದು ಪರೀಕ್ಷಿಸಿರಿ. ಆ ಮತಸಾಧನೆಯಿಂದ ನಿಮ್ಮ ಗುಣದಲ್ಲಿರುವ ಪಾಪಸ್ವಭಾವವು ಹೋಗುತ್ತದೆಯೋ ಇಲ್ಲವೋ ನಿಮಗೇ ಗೊತ್ತಾಗುವದು. ಹೋಗದಿದ್ದರೆ ಯೇಸುಸ್ವಾಮಿಯ ಮತವನ್ನು ಪರೀಕ್ಷಿಸಿ ಅನುಭವಕ್ಕೆ ತಂದು ನೋಡಿರಿ.

ಯೇಸು ಕ್ರಿಸ್ತನು ಯಾವದೋ ಒಂದು ದೇಶದಲ್ಲಿ ಹುಟ್ಟಿ ಬೆಳೆದು ಗತಿಸಿಹೋದ ಒಬ್ಬ ಪುರುಷನೆಂತಲೂ ಆತನು ಬೋಧಿಸಿದ ವಿಷಯಗಳನ್ನು ಆಚರಣೆಗೆ ತರುವದೇ ಆತನ ಮತವೆಂತಲೂ ತಿಳಿಯಲಾಗದು ಯೇಸುಸ್ವಾಮಿಯು ಚಿರಂಜೀವಿಯಾಗಿದ್ದಾನೆ. ಶಾಶ್ವತವಾದ ಸದ್ಗುಣವನ್ನು ಪಡೆಯಬೇಕೆಂದು ಪ್ರಯಾಸಪಡುವವರಿಗೆಲ್ಲಾ ಆತನು—ನನ್ನ ಬಳಿಗೆ ಬನ್ನಿ ! ನಾನು ನಿಮಗೆ ವಿಶ್ರಾಂತಿಯನ್ನು ಕೊಡುತ್ತೇನೆ ! ಸನ್ಮಾರ್ಗದಲ್ಲಿ ನಡೆಯತಕ್ಕ ಬಲವನ್ನೂ ಪವಿತ್ರತ್ವವನ್ನೂ ಕೊಟ್ಟು ಸಲಹುತ್ತೇನೆಂದು ಹೇಳಿ ಕರೆಯುತ್ತಾ ಇದ್ದಾನೆ. ಆತನ ಮಾತನ್ನು ಅನುಭವಕ್ಕೆ ತಂದುಕೊಂಡವರಾದ ನಾವು ನಿಮಗೆ ಈ ವಿಷಯವನ್ನು ತಿಳಿಸುವದಕ್ಕೆ ಬಂದಿದ್ದೇವೆ.

ಸ್ಕೂಲಿನಲ್ಲಿ ನಿಮಗೆ ದೊರಕುತ್ತಿರುವ ಈ ದೀಪವನ್ನು ತಕ್ಕೊಂಡು ಭೂಲೋಕವನ್ನು ಪ್ರವೇಶಿಸಿರಿ ಇತರರಿಗೂ ನಿಮ್ಮ ದೀಪದಿಂದ ಬೆಳಕನ್ನು ತೋರಿಸುವದು ನಿಮ್ಮ ಮೇಲೆ ಬಿದ್ದ ಭಾರವೆಂಬುದನ್ನು ಮಾತ್ರ ಮರೆತುಹೋಗಬೇಡಿರಿ. ಇತರರ ಅಜ್ಞಾನವನ್ನು ಪರಿಹರಿಸುವದಕ್ಕೆ ನೀವು ದೇಶೀಯ ಭಾಷೆಗಳಲ್ಲಿ ಉಪನ್ಯಾಸಿಸ ಬಹುದು ನಿಮ್ಮ ಸುತ್ತಲೂ ಜೀವಿಸುತ್ತಿರುವ ಜನಗಳಲ್ಲಿ ಹೊಕ್ಕು ಅವರ ಸ್ಥಿತಿಯನ್ನು ಮೇಲ್ತರವಾಗಿ ಮಾಡುವಂತೆ ಪ್ರಯಾಸ ಪಡಬಹುದು ನೀವೆಷ್ಟು ತಿಳಿದವರಾಗಿದ್ದರೂ ನಿಮ್ಮಲ್ಲಿ ಸದ್ಗುಣವಿಲ್ಲದಿದ್ದರೆ ನಿಜವಾದ ಫಲವು ದೊರಕಲಾರದೆಂಬುದನ್ನು ಮಾತ್ರ ಮರೆಯಬಾರದು ಸದ್ಗುಣಕ್ಕೆ ಮೂಲನು ಯೇಸುಸ್ವಾಮಿಯೇ ಎಂದು ಪರೀಕ್ಷಿಸಿ ತಿಳಿಯಿರಿ

ಬಾತ್ಮಿದಾರರಿಗೆ ಸೂಚನೆ.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಕಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು — ಎಡಿ.

ಕರೆಸ್‍ಪಾಂಡೆನ್ಸ್.

ನೀರನ್ನು ಎತ್ತುವದಕ್ಕೆ ಹೊಸ ಮಾರ್ಗ.

ಅಯ್ಯಾ,

ತಿರುಮಕೂಡ್ಲು ನರಸೀಪುರದ ಕಸಬಾ ಗವರ್ನಮೆಂಟ್ ಎ ವಿ. ಸ್ಕೂಲ್ ಅಸಿಸ್ಟೆಂಟ್ ಮಾಸ್ತರು ಮ॥ ಕೆ. ವೆಂಕಟರಂಗೈಯ ಎಂಬುವವರು ನೀರನ್ನು ಮೇಲಕ್ಕೆ ತೆಗೆಯುವದಕ್ಕೆ ಒಂದು ಹೊಸ ಮಾರ್ಗವನ್ನು ಕಂಡು ಹಿಡಿದು, ಆ ಕ್ರಮಕ್ಕನುಸಾರವಾಗಿ ಒಂದು ಮಾದರಿಯನ್ನು ತಯಾರು ಮಾಡಿಸಿರುವರು. ಇದನ್ನು ಮೈಸೂರಿನಲ್ಲಿನ ಕೆಲವು ದಿನ ಇಂಜನೀರುಗಳೂ ಇನ್ನು ಕೆಲವು ಜನ ದೊಡ್ಡಮನುಷ್ಯರೂ ಪರೀಕ್ಷಿಸಿ ನೋಡಿ, ದೊಡ್ಡದಾಗಿ ಮಾಡಿದಲ್ಲಿ ಯಂತ್ರವು ಸರಿಯಾಗಿ ಕೆಲಸ ಮಾಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಇದರ ಕೆಲಸದ ವಿವರಣೆ ಹೇಗೆಂದರೆ—ಮನುಷ್ಯರು, ಇತರ ಪ್ರಾಣಿಗಳು, ನೀರಿನ ಆವಿ, ವಿದ್ಯುಚ್ಛಕ್ತಿ, ಸ್ವಭಾವವಾಗಿ ಹರಿಯುವ ನೀರು, ಇವುಗಳ್ಯಾವದರ ಸಹಾಯವೂ ಅವಶ್ಯಕವಿರುವದಿಲ್ಲ. ಸ್ವಲ್ಪ ಹೊತ್ತು ಒಬ್ಬನು ಕೆಲಸ ಮಾಡಿ, ಅದನ್ನು ಕೆಲಸಕ್ಕೆ ಪ್ರಾರಂಭಿಸುವಂತೆ ಮಾಡಿದಲ್ಲಿ, ಆ ಯಂತ್ರವು ತಾನೇ ಕೆಲಸಮಾಡುತ್ತಾ, ನಿಂತ ನೀರಿರುವ ಸ್ಥಳದಿಂದಲೂ, ಕೂಡ ೨೦ ಅಡಿ ಎತ್ತರಕ್ಕೆ ಬೇಕಾದಷ್ಟು ಗಾತ್ರಕ್ಕೆ, ನೀರನ್ನು ತೆಗೆದುಕೊಡುವುದು. ಈ ಪೊಂಪಿನ ಕೆಳಭಾಗಕ್ಕೆ ನೀರಿನ ಸಂಬಂಧವು ತಪ್ಪದೆ ಇದ್ದರೆ ಇದು ಕೆಲಸ ಮಾಡುವುದು ನಿಲ್ಲುವದಿಲ್ಲ. ಮುಖ್ಯವಾಗಿ ನೀರನ್ನು ಮೇಲಕ್ಕೆ ತೆಗೆಯುವದಕ್ಕಾಗಿ ದೇಹ ಶ್ರಮಪಡಬೇಕಾದ ಮತ್ತು ಪದೇ ಪದೇ ದ್ರವ್ಯ ವ್ಯಯ ಮಾಡಬೇಕಾದ ಆವಶ್ಯಕವಿಲ್ಲ. ಭೂವ್ಯವಸಾಯಕ್ಕೆ ಈ ಯಂತ್ರವು ತುಂಬಾ ಸಹಕಾರಿಯಾಗಿರುವುದು. ಇಂಥಾ ಉತ್ತಮವಾದ ಪದಾರ್ಥದ ತಯಾರಾತಿಯು ಪ್ರಸ್ಮ್ಯಭಾವದಿಂದ ಸಾವಕಾಶಕ್ಕೆ ಕಾರಣವಾಗಿದೆ. ಇದು ಶೀಘ್ರವಾಗಿ ತಯಾರಾಗುವದು ಉತ್ತಮವಲ್ಲವೇ ? ದೇಶಾಭಿಮಾನ ಉಳ್ಳ ಸರ್ಕಾರದವರಾಗಲಿ ದೊಡ್ಡಮನುಷ್ಯರುಗಳಾಗಲಿ ಇವರಿಗೆ ದ್ರವ್ಯ ಸಹಾಯ ಮಾಡಿ, ಈ ಮೈಸೂರು ದೇಶದಲ್ಲಿಯೂ ಕೈಗಾರಿಕೆಯನ್ನೂ ಭೂವ್ಯವಸಾಯವನ್ನೂ ಅಭಿವೃದ್ಧಿಪಡಿಸುವರೆಂದು ನಂಬಿಧೇನೆ.

ವ್ಯವಸಾಯ.

ಅವ್ಯವಸ್ಥೆಯು ವ್ಯವಸ್ಥೆಹೊಂದಿತು.

ಅಯ್ಯಾ,

ಮ॥ ಬಿ. ರಾಮಯ್ಯನೆಂಬುವರು ೧೯೦೫ನೆ ಜನವರಿ ೨೬ನೇ ತಾ. ವೃತ್ತಾಂತ ಪತ್ರಿಕೆಯ ೪ನೇ ಪುಟದಲ್ಲಿ ೧೯೦೪ನೇ ಡಿಸೆಂಬರು ೨೬ನೇ ತಾ. ವೃತ್ತಾಂತ ಪತ್ರಿಕೆಯ ೭ನೇ ಪುಟದಲ್ಲಿ ಬರೆದಿದ್ದ ನನ್ನ ಮೊಕದ್ದಮೆಯ ವಿಚಾರದಲ್ಲಿ ವ್ಯವಸ್ಥೆಯನ್ನು ಹೊಂದತಕ್ಕ ಮಾರ್ಗವನ್ನು ಸೂಚಿಸಿರುವುದನ್ನು ವಂದನಾ ಪೂರ್ವಕವಾಗಿ ಓದಿ ನೋಡಿಕೊಂಡೆನು. ಮನುಷ್ಯನಿಗೆ ಸಾಧ್ಯವೆಂದು ನನಗೆ ಕಂಡುಬಂದಷ್ಟನ್ನೂ ನಾನು ಮಾಡದೆ ಬಿಡಲಿಲ್ಲವು. ನನ್ನ ಅಹವಾಲಿನ ಕಾರ್ಯ ಕಾರಣಗಳನ್ನು ಹಜೂರ್ ರೆವಿನ್ಯೂ ಕಮಿಷನರ್ ಸಾಹೇಬರವರು ತನಿಖೆಯಿಂದ ತೀರ್ಮಾನಮಾಡಿ, ಒಂದು ವರುಷದ ಮೇಲಾದಾಗ್ಯೂ "ದೇವರು ವರವನ್ನು ಕೊಟ್ಟಾಗ್ಯೂ ಪೂಜಾರಿಯು ವರಕೊಡನು" ಎಂಬ ಸಾಮ್ಯತಿಯಂತೆ ತಾಲ್ಲೂಕು ಅಧಿಕಾರಿಗಳ ಹುಕುಂ ಜಾರೀಲಿ ತರದೆ ಹೋದುದಕ್ಕಾಗಿ ಮೇಲ್ಪಟ್ಟ ಸ್ಥಳಗಳಿಗೆಲ್ಲಾ ನನ್ನ ಅಹವಾಲ್ ಹೇಳಿಕೊಂಡದ್ದಲ್ಲದೆ, ಈ ಪತ್ರಿಕಾ ಮುಖೇನವೂ ಪ್ರಸಂಗವಮಾಡಿದೆನು. ಈ ಪತ್ರಿಕಾ ಪ್ರತಿಯ ಲೇಖನವು ಹಸ್ತಸ್ಪರ್ಶವ ಲೋಕನವಾದ ಮರುದಿವಸವೇ ರೆವಿನ್ಯೂ ಕಮಿಷನರ್ ಸಾಹೇಬರವರ ಆರ್ಡರಿನಂತೆ ಜಾರಿಯನ್ನು ಮಾಡಿಸಿ, ರಿಪೋರ್ಟನೋ ಆಗಿದೆ. ಇದು ಆಳುವವರ ಕಣ್ಣನ್ನು ಬಿಗಿಸಿದಂತೆ ಪರ್ಯವಸಾನವಾಗಿದೆಯೋ ಕ್ರಮಾಯ ಹುಕುಂ ಪ್ರಕಾರವಾಗಿ ನೂತನವಾದ ಹಳ್ಳವನ್ನು ಮುಚ್ಚಿಸದೆ, ಸರ್ವೆ ಹದ್ದುಬಸ್ತು ಪ್ರಕಾರ ಅಣೆಯನ್ನು ತೆಗೆಯಿಸಿ, ಹಳ್ಳವನ್ನು ಬಿಡಿಸದೆ ಮುಕ್ಕಾಲು ಅಥವಾ ಒಂದು ಗಜದ ಅಳತೆಯಷ್ಟು ಅಣೆ ತೆಗೆಯಿಸಿ, ಗವರ್ನಮೆಂಟು ಹುಕುಂ ಜಾರೀ ಮಾಡಿರುತ್ತೆಂದು ಮೇಲಕ್ಕೆ ರಿಪೋರ್ಟಾಗಿ ಹೋಗಿರಬಹುದೆಂದು ತೋರುತ್ತೆ. ಆದರೆ ನಮ್ಮ ಸ್ನೇಹಿತರಾದ ಮ॥ ಬಿ ರಾಮಯ್ಯನವರು ದಯವಿಟ್ಟು ತಿಳಿಸಿರುವದರಲ್ಲಿ ಗವರ್ನಮೆಂಟಿನವರು ಪ್ರಜೆಗಳ ಅಹವಾಲುಗಳೆಲ್ಲವನ್ನೂ ಖುದ್ದು ತನಿಖೆಯಿಂದ ನ್ಯಾಯವಾದ ಹುಕುಂ ದಯಪಾಲಿಸಿ, ತಾಲ್ಲೂಕು ಅಧಿಕಾರಿಗಳ ಅನ್ಯಾಯವನ್ನು ಸರಿಪಡಿಸಿ, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿ, ರೈತಾಪಿ ಜನಗಳಿಗೆ ತುಂಬಾ ಸಹಾಯ ಮಾಡುತ್ತಿರುವುದು ನಮ್ಮೆಲ್ಲರ ಅನುಭವದಲ್ಲಿರುವುದು ಸಹಜವಾದದ್ದೇ. ಆದರೆ "ಹೆತ್ತವರ ಅಪ್ಪೆ ಸತ್ತರೇನು ? ಗಂಡನವರ ಅಪ್ಪ ಸತ್ತರೇನು ? ಧಾರೆ ಎರೆಯುದಕ್ಕೆ ಹಣ ಬಂದರೆ ಸರಿ" ಎಂಬ ಪುರೋಹಿತರ ಮಾತಿನಂತೆ ಹುಕುಂ ಜಾರೀಲಿ ಬಂತೆಂದು ಮೇಲಕ್ಕೆ ತಿಳಿದರೆ ಸಾಕೆಂದು ರಿಪೋರ್ಟು ಮಾಡಿದರೆ ಮೇಲಿನವರುತಾನೇ ಏನುಮಾಡ್ಯಾರು ? ವಾಚಕ ಮಹಾಶಯರೇ, ತಿರುಪತಿ ಕ್ಷೌರದಂತೆ ಇರುವ ಈ ವ್ಯವಸ್ಥೆಯು ಕೂಲಂಕುಶವಾಗಿ ಮೊದಲಿನ ರೆವಿನ್ಯೂ ಕಮಿಷನರ್ ಸಾಹೇಬರವರ ಆರ್ಡರು ಪ್ರಕಾರ ಸಂಪೂರ್ಣವಾಗಿ ಜಾರೀಮಾಡಿಸುವ ಬಗ್ಗೆ ಏನುಮಾಡಬೇಕಾಗಿದೆಯೋ ಆ ವಿಷಯವನ್ನು ಈ ಪತ್ರಿಕಾ ಮುಖೇನವೇ ದಯವಿಟ್ಟು ತಿಳಿಸಬೇಕಾಗಿ ನಮ್ಮ ವಾಚಕ ಶಿರೋಮಣಿಗಳವರನ್ನು ಬೇಡಿಕೊಳ್ಳುವ

ಚನ್ನಪ್ಪಯ್ಯ.

ಆಗುಂಬೆಯ ಬಸವರ ಕಷ್ಟಗಳು.

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಈ ಆಗುಂಬೆಗೆ ಚನ್ನಗಿರಿ ಪ್ರಾಂತ್ಯದಿಂದ ೮—೧೦ ಜನ ಮುಸಲಮಾನರ ಜಾತಿ ಬಸವರು ಬಂದು ಇದ್ದಾರೆ. ಇವರುಗಳು ಮಾಡತಕ್ಕ ಕೆಲಸವೇನೆಂದರೆ—ಈ ಆಗುಂಬೆ ಫಿರ್ಕಾ ಸಾಹುಕಾರರು ಮತ್ತು ದೊಡ್ಡಮನುಷ್ಯರು ಮುಂತಾದವರು ತಮಗೆ ಬರತಕ್ಕ ಸಾಲ ೩೦—೪೦—೫೦ ವರುಷಗಳ ಬಾಕಿಯನ್ನು ಈಗ ವಸೂಲಿ ಮಾಡುವ ಬಗ್ಗೆ ಈ ಚನ್ನಗಿರಿ ಸಾಬರ ಕಡೆಗೆ ಕಂಟ್ರಾಕ್ಟು ಕೊಟ್ಟಿದ್ದಾರೆ. ಶೇಕಡಾ ೨೫ ರೂಪಾಯಿನಂತೆ ಇವರಿಗೆ ಮಾಮೂಲಿ ಯಾವ ಸಂಬಳ ನೇಮಕ ಮಾಡಿದಾರೆಂತ ಕೇಳುತ್ತೇನೆ. ಮೇಲಿನ ಮಹಾನುಭಾವರು ಕೋರ್ಟು ಮೂಲಕ ದಾವಾ ತಂದು ವಸೂಲು ಮಾಡಬಹುದು. ಅಲ್ಲದೆ ಈ ಊರಲ್ಲಿ ಇರುವ ಬಡಮನುಷ್ಯರನ್ನು ಈ ರೀತಿ ಗೋಳಾಟಕ್ಕೆ ಸಿಕ್ಕಿಸಿ ಸರಳಿಸುವದು ಯಾರಿಗೂ ದುಃಖಕರವಾಗಿದೆ ಸಾಹುಕಾರರಲ್ಲಿ ಕಂಟ್ರಾಕ್ಟು ಚೀಟು ತಕ್ಕೊಂಡು, ಸಾಬರು ೮—೧೦ ಜನರು ಗುಂಪುಗುಂಪಾಗಿ ದೊಣ್ಣೆ ಮುಂತಾದ್ದು ತಕ್ಕೊಂಡು, ಯಮನಾಳುಗಳು ಅಂತ್ಯಕಾಲವಾದ ಮನುಷ್ಯನಲ್ಲಿಗೆ ಬರುವಂತೆ ಬರುವದು. ಆ ಕ್ಷಣವೇ ಸಾಹುಕಾರರ ಅಪ್ಪಣೆಯಲ್ಲಿನ ಮೊದಲ ಮನುಷ್ಯನನ್ನು ಹಿಡಿದು ದಣಿಗಳ ಬಾಕಿ ಕೊಡು ಎಂತ ಕೇಳುವದು. ಆದರೆ ತಾತನ ಅಪ್ಪ ಅಜ್ಜನ ಕಾಲದ ಲೆಕ್ಕದ ವಿವಾದ ಇವರುಗಳು ಹೇಳುವದರಿಂದ ಈತನು ಕಂಗೆಟ್ಟು ತನಗೆ ಗೊತ್ತಿಲ್ಲ ಮತ್ತು ತಾನು ಕೊಡುವ ಸಾಲವೂ ಇಲ್ಲವಾಗಿ ಈ ಬಡಪ್ರಾಣಿಯು ಹೇಳಲು ಈ ಯಮನಾಳುಗಳು ಕೋಪಿಸಿಕೊಂಡು ಸಭರಿಯುವನಿಗೆ ಪಾಣಿದಕ್ಷ ಯಲ್ಲಿ ಹೊಡೆಯುವ ಹಾಗೆ ಭಯಪಡಿಸಿ ಕೆಳಗಿಂತ ಇವನು ಒಂಟಿರ

೩—೪ ಏಟು ಹೊಡ್ತಾ ಕೊಡುಯುತ್ತಲೂ ಈ ರೀತಿ ಅವನಿಗೆ ಷೋಡಶೋಪಚಾರವಾಂಗೈದು ನಂತರ ದಣಿಗಳಲ್ಲಿ ಬಾ ಎಂದು ಎಳೆದೊಯಿದು ಆ ಕಾಲದಲ್ಲಿ ಕ್ರಮಪ್ರಕಾರ ಸ್ಟಾಂಪುಗಳ ಮೂಲಕ ಖರಚ ಮಾಡಿಕೊಡು ಎಂದು ಹಿಂದು ಮುಂದಿನಿಂದ ಚನ್ನಾಗಿ ಮೈನೋವು ಆಗುವಂತೆ ದೊಣ್ಣೆ ಮತ್ತು ಪಾದರಕ್ಷೆಯಿಂದ ಆತಿಥ್ಯವಂಗೈದು, ನಂತರ ತಮ್ಮ ಇಷ್ಟದೊಂದಿಗೆ ಬಳಹಮೂಲಕ ಭದ್ರಪಡಿಸಿಕೊಂಡು ಆತನ ಜೊತೆಯಲ್ಲಿಯೇ ೨—೩ ಗಾಡಿಗಳು ೧೦—೧೨ ಜನಗಳ ಸಮೇತ ಬಂದು ಆ ಬಡಪಾಯಿಯ ಗೃಹಕೃತ್ಯದಲ್ಲಿ ಇರತಕ್ಕ ಏಳಿಷ್ಟು ಬತ್ತ ಅಕ್ಕಿ ಮುಂತಾಗ ದವಸವನ್ನೆಲ್ಲಾ ಸೆಳದೊಯ್ಯುವರು.

ಅಯ್ಯಾ, ಈ ವಿಷಯ ನಾವು ಪ್ರಕಟಿಸುವದು ಅಗತ್ಯವೇನು ಎನ್ನುವದಾಗಿ ತಮ್ಮ ಅಪ್ಪಣೆ ಆಗಬಹುದು. ಆದರೆ ಈ ಪ್ರಾಂತ್ಯ ಮಲೆನಾಡು ಆದ್ದರಿಂದ ಒಂದು ಮೈಲಿಗೆ ನಾಲ್ಕು ಮೈಲಿಗೆ ಒಂದು ಮನೆಗಳು ಮಾತ್ರ ಹಳ್ಳಿಗಳಲ್ಲಿ ಇರುತ್ತದೆ ಒಂದು ಮನೆಯಲ್ಲಿ ೨—೩ ಗಂಡಸರು ಇರುವದು ದುರ್ಲಭ. ಆವಾಗ ೧೦—೧೨ ಜನರು ಗುಂಪಾಗಿ ಬಂದು, ಮೇಲಿನ ರೀತಿ ಕೆಲಸ ಜಾರಿ ಮಾಡುತ್ತಾರೆ. ಆ ಕಾಲದಲ್ಲಿ ಅವರನ್ನು ಹಿಮ್ಮೆಟ್ಟಿಸುವದರ ಭರ್ತಿಗೆ ಜನರ ಕುಮ್ಮಕು ಸಾಲದು. ಹೋಗಿದರೆ ಜನಗಳಿಗೆ ಕೇಳಬಾರದು. ಹಾಗೂ ಕೇಳ ೩—೪—೫ ಜನರು ಬಂದಾಗ್ಯೂ ಅವರಿಗೂ ಇವರು ಕ್ರೂರತ್ವವನ್ನು ತೋರಲು ಅವರು ಗಾಬರಿಯಿಂದ ತಮ್ಮ ನಿವೇಶನವನ್ನು ಸೇರಲುದ್ದೇಶಿಸುವರು. ಸರ್ಕಾರಕ್ಕೆ ತಿಳಿಸಲು ಸಾಕ್ಷ್ಯ ಮುಂತಾದ್ದು ದೊರಕುವದು ಕಷ್ಟ. ಹಾಗೆ ತಿಳಿಸಿದಾಗ್ಯೂ ಈವಾಗಿನ ಸರ್ಕಾರ ಬಡವರ ಬಗ್ಗೆ ಎಷ್ಟು ಕುಮ್ಮಕು ಇರಬಹುದೋ ಕಾಣೆ ಈಗ ಸುಮಾರು ೮—೯ ತಿಂಗಳ ಹಿಂದೆ ಇದೇ ರೀತಿ ಅನ್ಯಾಯವಾಗಿ ಸಾಲ ಕೊಡು ಎನ್ನುವದಾಗಿ ಆಗುಂಬೆಯ ಮಾಗಣೆಯಲ್ಲಿ ಒಬ್ಬಳು ಹೆಂಗಸನ್ನು ಬಂಧೋಬಸ್ತು ಮಾಡಿದ ಆಗುಂಬೆ ಕಸಬಾದ ಸಾಪಕಾರರು ೩ ಜನರು ಅವರ ನೌಕರರು ೨ ಜನರ ಮೇಲೆ ಫಿರ್ಯಾದು ದಾಖಲಾಗಿ ಅಪರಾಧೀರಿಗೆ ೪೦ ರೂಪಾಯಿ ಜುರುಮಾನೆಯನ್ನು ಈವಾಗ ಶೀಯರ್ಗದಲ್ಲಿರುವ ಅಮಲ್ದಾರರವರು ಮ॥ ವೆಂಕಟರಮಣ ಶ್ರೋತ್ರಿಗಳು ವಿಧಿಸಿದರು. ಆ ಮಹಾಪ್ರಭುಗಳ ಕಾಲದಲ್ಲಿ ಇಂಥಾ ದುಷ್ಟ ಕೆಲಸಗಳು ನಡೆಯುತ್ತಾ ಇರಲಿಲ್ಲ. ಈವಾಗಲು ನಮ್ಮ ಹೊಸ ಅಮಲ್ದಾರರವರು ಈ ಬಗ್ಗೆ ಪೂರ್ಣ ನಿಗಾ ತೆಗದುಕೊಳ್ಳುವರಾಗಿ ನಂಬಿಧೇನೆ.

ನಿವಾಸಿ

ಮೈಸೂರು ಪಟ್ಟಣದ ವರ್ಣನೆ.

[ಬರೆದು ಬಂದದ್ದು]

ಲಾಲಬಾಗ್ —ಇದು ಮಹಾರಾಜರವರ ವಸಂತಮಂದಿರದ (ಬಾಸ್ ಬಂಗಲೆ) ಹತ್ತಿರ ಇರುತ್ತದೆ ಪ್ರವೇಶ ಫೀ ಅರ್ಧ ಆಣೆ ಕೊಡಬೇಕಾಗುವದು. ಇದರಲ್ಲಿ ಅನೇಕ ಜಾತಿಯ ಪಕ್ಷಿಗಳೂ, ಮರ್ಕಟಗಳೂ, ಸಿಂಹ, ಶಾರ್ದೂಲ, ಚಿರ್ತ, ಕರಡಿ ಮುಂತಾದ ವನ್ಯ ಪಶುಗಳೂ ಕೀರ, ಹಂಸ, ಮಯೂರ ಮುಂತಾದ ಸುಂದರ ಪಕ್ಷಿಗಳೂ ಇರುತ್ತವೆ ಈ ಜೀವಗಳಲ್ಲದೆ ತರತರದ ಹೂವಿನ ಗಿಡಗಳೂ ಸೌಂದರ್ಯವುಳ್ಳ ಲತೆಗಳೂ ಉಂಟು

ಈ ಪ್ರಾಣಿಸಂಗ್ರಹಾಲಯದಿಂದ ಬೋಧವಾಗುವ ಸಂಗತಿ ಏನೆಂದರೆ—ಸ್ವತಃ ಸಿದ್ಧವಾದ ಆಯುಧವಿಲ್ಲದ ಮಾನವನು ತನಗಿಂತ ಬಲಿಷ್ಠವಾದ ಪ್ರಾಣಿಗಳನ್ನೂ ಭಯಂಕರವಾದ ಆಯುಧದೊಡನೆ ಕೂಡಿದ ಕ್ರೂರಮೃಗಗಳನ್ನೂ ತನ್ನ ಬುದ್ಧಿ ಸಾಮರ್ಥ್ಯದಿಂದ ಅಂಕೆಯಲ್ಲಿಟ್ಟುಕೊಂಡು, ಅವುಗಳ ಮೇಲೆ ತನ್ನ ಅಧಿಕಾರ ನಡೆಸುತ್ತಾನೆಂತಲೂ ಅವುಗಳ ಸ್ವಾಮಿಯಾಗಿದ್ದಾನೆಂತಲೂ ಕಂಡು ಬರುತ್ತದೆ ಮತ್ತು ಈ ಸೃಷ್ಟಿಯಲ್ಲಿರುವ ಅನೇಕ ಪ್ರಾಣಿಗಳ ಭಿನ್ನಭಿನ್ನವಾದ ಆಕಾರ, ಗುಣ, ಧರ್ಮ, ಸಾಮರ್ಥ್ಯ, ಇವನ್ನೆಲ್ಲ ಲಕ್ಷ್ಯಕ್ಕೆ ತಂದರೆ ಪರಮೇಶ್ವರನ ಅಗಾಧಲೀಲೆಯೂ ಅವನ ಸಾಮರ್ಥ್ಯವೂ ಮನಸ್ಸಿನಲ್ಲಿ ಬಂದು. ಆ ಪರಮಾತ್ಮನ ವಿಷಯದಲ್ಲಿ ಭಕ್ತಿಯುಂಟಾಗುತ್ತದೆ.

ಸಮಾಧಿಸ್ಥಾನ.—ಕೋಟೆಯಿಂದ ಸುಮಾರು ೧½ ಮೈಲು ಅಂತರದ ಮೇಲೆ ಚಾಮುಂಡಿ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಬಲಗಡೆಗೆ ಈ ಸ್ಥಾನವುಂಟು. "ದೊಡ್ಡವರ ಎಲ್ಲ ಕೆಲಸಗಳೂ ದೊಡ್ಡವೇ" ಎಂದು ಹೇಳುವ ವೃದ್ಧವಚನಕ್ಕೆ ಸರಿಯಾಗಿ ರಾಜಮನೆತನದ ಸ್ಮಶಾನ ವನಭೂಮಿಯಾದರೂ ಬಹು ಮನೋಹರವಾಗಿಯೂ ಭವ್ಯವಾಗಿಯೂ ಇರುವದು ಪಿತೃವನದಂತೆ ಭಯಂಕರವಾಗಿಲ್ಲ ವನದಂತೆ ಸುಖಸಮಾಧಾನಗಳನ್ನು ಹುಟ್ಟಿಸುವ ಸ್ಥಾನವಾಗಿದೆ ಕೃಷ್ಣ ಶಿಲೆಗಳಿಂದ ಕಟ್ಟಲ್ಪಟ್ಟ ಸುಂದರವಾದ ಕಟ್ಟಡದಲ್ಲಿ ದೊಡ್ಡ ಕೃಷ್ಣರಾಜ ಒಡೆಯರವರ ಸಮಾಧಿಯುಂಟು. ಈ ಸಮಾಧಿಯ ಮೇಲೆ ಮುಂಭಾಗದಲ್ಲಿ ಸ್ಮಶಾನವಾಸಿಯಾದ ರುದ್ರನ ರಾಣಿಯಾದ ಮಹಾಸತಿಯ ಮೂರ್ತಿಯನ್ನು ಸ್ಥಾಪಿಸಿರುವರು. ಇದರ ಬಲಭಾಗದಲ್ಲಿ ಅನೇಕ ಸಮಾಧಿಗಳಿರುತ್ತವೆ. ಅವುಗಳಲ್ಲಿ ಪ್ರಮುಖ್ಯವಾದವುಗಳು ಕಟ್ಟಡಗಳಲ್ಲಿರುತ್ತವೆ.

ಬಲಭಾಗಕ್ಕೆ ಸಮೀಪದಲ್ಲಿ ಅಶ್ವಶಾಲೆಯುಂಟು ಅದರೊಳಗೆ ಅರಬ್ಬೀ, ಕಾಠೇವಾಡೀ, ಪೈಗೂ ಕುದುರೆಗಳು ಎಷ್ಟೋ ಉಂಟು.

ಈ ಪಟ್ಟಣದಲ್ಲಿ ಇನ್ನೂ ನೋಡತಕ್ಕ ಕೆಲವು ಕಟ್ಟಡಗಳುಂಟು ಅವು ಯಾವವಂದರೆ—ರಥಶಾಲೆ, ಮ್ಯುನಿಸಿಪಲ್ ಆಫೀಸು, ಜನರಲ್ ಆಸ್ಪಟಲು, ಶ್ರೀಕೃಷ್ಣನ ಗುರುಗಳ ಮಠ, ನಾರ್ಮಲ ಸ್ಕೂಲ ಇವೇ ಮುಂತಾದವು.

ತಾಲ್ಲೋಕು ವರ್ತಮಾನಗಳು.

ತಿಪ್ಟೂರು —ಹೊಸ ಪೋಸ್ಟು ಮಾಸ್ಟರು ಬಂದಾರಭ್ಯ ಕೃಷ್ಣ ಪಕ್ಷವನ್ನು ಕಷ್ಟದಿಂದ ಕಳೆದು ಸುಖವಾಗಿ ಅನುಭವಿಸುತ್ತಾ ಇರುವ ಶುಕ್ಲ ಪಕ್ಷದಂತೆ ಪೋಸ್ಟಾಫೀಸು ಜಂಗಗೋಕುಲ ಸ್ಮರಣೀಯವಾಗಿದೆ —ಗುಡಿಸಲುಗಳಲ್ಲಿ ಮಲಗಿರುವ ಜನಗಳಿಗೆ ನಿದ್ರಾಭಂಗವಾದೀತೆಂಬ ಪಾಪ ಶಂಕೆಯಿಂದ ಪೋಲೀಸ್ ಅಧಿಕಾರಿಗಳು ಗಸ್ತು ಮಾಡುವದನ್ನು ಕಮ್ಮಿ ಮಾಡಿದಾರೆ, ಇವರೇ ಪಾಪಭೀತರು ಸರಾಫರ ಕ್ಯಾಂಪಿನ ಬಳಿ ಕೆಲಕ ಸ್ತ್ರೀಸೂಳಾದ ಹೆಂಗಸೊಬ್ಬಳು ಕೊಂಚ ನೆಪ ಸಿಕ್ಕಿದರೂ ವ್ಯಾಜ್ಯಕ್ಕೆ ಪ್ರಾರಂಭಮಾಡಿ ಜನರಿಗೆ ಬೇಸರಿಕೆಯನ್ನು ಹರಿಸುವುದಲ್ಲದೆ, ಸದ್ಯಕ್ಕೆ ಆಕೆಯೇ ಪ್ರತಿನಿಧಿಯಾದ ಈ ಕ್ಯಾಂಪಿನ ಪೋಲೀಸು ಅಧಿಕಾರಿಯಾಗಿರುವಳು.—ಕಿಂಗೇಸಹಳ್ಳಿ ಬಳಿ ಇರುವ ಹುಲಿಯ ವಿಚಾರವನ್ನು ಅಮಲ್ದಾರರವರಾಗಲೀ ಇತರ ಅಧಿಕಾರಿಗಳಾಗಲೀ ಗಮನಕ್ಕೆ ತಾರದ್ದರಿಂದ ಆ ಪ್ರಾಂತ್ಯದ ಜನಗಳ ಭಯ ಬಹಳವಾಗಿದೆ. ಜನಗಳು ಊರಿಗೆ ಹೋಗಲು ಪ್ರಯತ್ನ ಪಡುತ್ತಾ ಇದ್ದಾರೆ. ಇವರ ಉದ್ದೇಶ ಅವರವರ ಮನೆ ಮದುವೆ ಪ್ರಸ್ತವಾದ ನಂತರ ಪುನಃ ಷೆಡ್ಡುಗಳಿಗೆ ಬರಬೇಕೆಂಬುವುದೆಂದು ಕಾಣುತ್ತೆ.—ಅಮಲ್ದಾರರವರ ಮನೆ ಮುಂದಿನ ರಸ್ತೆ ವಿನಹ ಬಾಕಿ ರಸ್ತೆಗಳೆಲ್ಲಾ ಅಷ್ಟಕೋಣ ಮತ್ತು ಷಟ್ಕೋಣ ಶಿಲೆಗಳು ಮೇಲಕ್ಕೆ ಹಾದು, ಮಾರ್ಗಸ್ಥರಿಗೆ ಮೆದುಳನ್ನು ನಡುಗುವಂತೆ ಮಾಡುವವು ದಯಾಪೂರ್ಣರೂ ನ್ಯಾಯಾನುವರ್ತಿಗಳೂ ಆದ ಅಮಲ್ದಾರರವರು ಇದನ್ನೆಲ್ಲಾ ಕ್ಷಮಿಸಿಸ್ಯಾರೆಂದು ಕೋರುತ್ತೇನೆ

ಚಿಕ್ಕಮಗಳೂರು.—ಊರಿನ ಸ್ಥಿತಿಯು ಆರೋಗ್ಯವಾಗಿದೆ ಬಿಸಲಿನ ತಾಪ ಬಲವಾಗಿದೆ ಸಂಸ್ಥಾನದ ರವಿನ್ಯೂ ಕಮಿಷನರು ಕಳೆದ ತಿಂಗಳು ೨೮ ನೆ ತಾರೀಖಿನಲ್ಲಿ ಬೇಲೂರು ಕಡೆಯಿಂದ ಇಲ್ಲಿಗೆ ಬಂದು ಸೋಮವಾರದ ವರಿಗೂ ಇದ್ದು ಇಲ್ಲಿನ ಡಿಸ್ಟ್ರಿಕ್ಟ ಆಫೀಸ್ ತಾಲ್ಲೋಕ್ ಕಚೇರಿಗಳಲ್ಲಿ ನೋಡಬೇಕಾಗಿದ್ದ ಲೆಕ್ಕ ಪತ್ರಗಳನ್ನು ನೋಡಿ ಎಲ್ಲವೂ ಕ್ರಮವಾಗಿದ್ದದ್ದರಿಂದ ಸಂತೋಷಪಟ್ಟು, ಮಂಗಳವಾರ ಬೆಳಗ್ಯೆ ಸಂತೆವೀರಿ ಮಾರ್ಗವಾಗಿ ತರೀಕೆರೆ ಕಡೆ ಪ್ರಯಾಣ ಮಾಡಿದರು.—ಸ್ವಾಮಿ ಯೋಗೀಶ್ವರಾನಂದರವರು ಇಲ್ಲಿಗೆ ಬಂದು, ೨೮ ನೆ ತಾರೀಖಿನಿಂದಲೂ ಇಲ್ಲಿನ ಹೈಸ್ಕೂಲಿನಲ್ಲಿ ಮತಸಂಬಂಧವಾಗಿ ಬೇರೆ ಬೇರೆ ವಿಷಯಗಳ ಮೇಲೆ ಉಪನ್ಯಾಸಮಾಡುತ್ತಿದಾರೆ ೨೮ ನೆ ಶನಿವಾರ ಪ್ರವೃತ್ತಿ ನಿವೃತ್ತಿಯ ವಿಷಯವಾಗಿಯೂ, ಆದಿತ್ಯವಾರ ಆತ್ಮದ ವಿಷಯವಾಗಿಯೂ, ಸೋಮವಾರ ದೇವರ ವಿಷಯವಾಗಿಯೂ, ಮಂಗಳವಾರ ಭಕ್ತಿ ಅಥವ ಪ್ರೀತಿಯ ವಿಷಯವಾಗಿಯೂ ಬುಧವಾರ ೧ ನೆ ತಾರೀಖಿನಲ್ಲಿ ಅವರ ಗುರುವಾದ ಶ್ರೀರಾಮಕೃಷ್ಣ [illegible] ವಿಷಯವಾಗಿಯೂ ಬಹು ಚನ್ನಾಗಿ ಇಂಗ್ಲೀಷಿನಲ್ಲಿ ಉಪನ್ಯಾಸ [illegible] ಈ ಉಪನ್ಯಾಸಗಳಲ್ಲಿ ಕೆಲವು ಭಾಗ ವಿನಹ ಉಳಿದ ಸಂಗತಿಗಳೆಲ್ಲಾ ಹೆಚ್ಚು ಕಡಿಮೆಯಾಗಿ ಎಲ್ಲರಿಗೂ ಅನುಕೂಲವಾಗಿದ್ದವು ಇವರು ತಮ್ಮ ಉಪನ್ಯಾಸಗಳಿಗೆ ಅನುಕೂಲವಾದಂತೆ ಯೇಸುಸ್ವಾಮಿಯು ಹೇಳಿದ ಸುವಾರ್ತೆಯ ವಾಕ್ಯಗಳನ್ನು ಎತ್ತಿ ಉದಾಹರಿಸುತ್ತಿದ್ದರು. ಸಾಧಾರಣವಾಗಿ ಪ್ರತಿನಿತ್ಯದಲ್ಲಿಯೂ ಕೆಲವು ಜನ ಯೂರೋಪಿಯರ್ನರೂ, ಉಳಿದ ಹಿಂದೂಜನರೂ ಸೇರಿ ಸುಮಾರು ೩೦೦ ಜನರ ವರಿಗೂ ಬಂದು ಕೇಳುತ್ತಿದ್ದರು. ಇವರು ೩ ನೆ ತಾರೀಖಿಗೆ ಇನ್ನೊಂದು ಉಪನ್ಯಾಸವನ್ನು ಮಾಡಿ, ೪ನೆ ತಾರೀಖಿಗೆ ಬೆಂಗಳೂರಿಗೆ ಹೊರಡುವವರಾಗಿದಾರೆ —ಮೈಸೂರಿನಿಂದ ಬಂದಿರುವ ಮ॥ ವೆಂಕಟಾಚಾರ್ಯರು ಇದೇ ಹೈಸ್ಕೂಲಿನಲ್ಲಿ ಫೋನೋಗ್ರಾಫ್ ಎಂಬ ಯಂತ್ರದ ಮೂಲಕ ಸಂಗೀತವನ್ನು ಹಾಡಿಸಿದರು. ಆ ಯಂತ್ರವು ಮನುಷ್ಯರು ಹಾಡುವಂತೆಯೇ ಹಾಡಿದ್ದನ್ನು ಬಂದಿದ್ದವರು ಕೇಳಿ ಸಂತೋಷಪಟ್ಟರು. ಮ॥ ವೆಂಕಟಾಚಾರ್ರಿಗೂ ಎರಡು ಅಥವ ಮೂರು ದಿವಸಗಳಲ್ಲಿ ಸುಮಾರು ಎಪ್ಪತ್ತು ರೂಪಾಯಿ ತನಕ ವಸೂಲಾಗಿರಬಹುದೆಂದು ಹೇಳುತ್ತಾರೆ.

ಚಿತ್ರದುರ್ಗ.—ಈಗ ಪ್ಲೇಗಿನ ಗಲಾಟೆ ಏನೂ ಇಲ್ಲ. ಅದರ ಭಯದಿಂದ ಊರು ಬಿಟ್ಟು ಷೆಡ್ಡುಗಳನ್ನು ಕಟ್ಟಿಕೊಂಡು ಹೊರಗೆ ವಾಸಮಾಡಿಕೊಂಡಿದ್ದವರಲ್ಲಿ ಅನೇಕರು ಪುನಃ ಅವರವರ ಮನೆಗಳನ್ನು ಸೇರಿಕೊಂಡರು. ಅಧಿಕಾರವಿರತಕ್ಕವರಲ್ಲಿ ಕೆಲವರು ಇನ್ನೂ ಷೆಡ್ಡುಗಳಲ್ಲೇ ಇದಾರೆ ಮುಂದೆ ಈ ಊರು ಸುರಕ್ಷಿತವಾಗಿರಬೇಕೆಂದು ಎಲ್ಲ ಜನರೂ ಹಾರೈಸುತ್ತಾರೆ. ಯಾಕೆಂದರೆ ಈ ಸಾರಿ ಆದ ಹಾವಳಿಯೂ ನಷ್ಟವೂ ಹಿಂದೆ ಯಾವಾಗಲೂ ಆಗಲಿಲ್ಲವೆಂದು ಹೇಳುತ್ತಾರೆ ಇಂಥ ಸಾಂಕ್ರಾಮಿಕ ಬಾಧೆಗಳು ತಲೆದೋರದಂತೆ ಮಾಡಬೇಕಾದರೆ ಮ್ಯುನಿಸಿಪಾಲಿಟಿಯು ಬಹು ಮಟ್ಟಿಗೆ ಜನರ ಆರೋಗ್ಯವನ್ನು ಕಾಪಾಡಬೇಕಾಗಿದೆಯಲ್ಲವೇ. ಅದು ಎಷ್ಟರಮಟ್ಟಿಗೆ ಹಿಂದೆ ಬಿದ್ದುಹೋಗುತ್ತೋ ಅಷ್ಟರಮಟ್ಟಿಗೆ ಜನರು ಸಂಕಟಪಡಬೇಕಾಗಿದೆಯಲ್ಲವೇ ಆದ್ದರಿಂದ ಜಾಡಮಾಲಿಗಳು ದೊಡ್ಡ ರಸ್ತೆಗಳಲ್ಲಿ ಮಾತ್ರವೇ ಅಲ್ಲದೆ ಸಂದುಗೊಂದುಗಳಲ್ಲೂ ಬಡಜನರು ವಾಸಮಾಡತಕ್ಕ ಪ್ರದೇಶಗಳಲ್ಲೂ ತೃಪ್ತಿಕರವಾಗಿ ಗುಡಿಸುತ್ತಾರೋ, ಬಚ್ಚಲು ಚರಂಡಿಗಳನ್ನು ಶುಚಿಮಾಡುತ್ತಾರೋ, ಇಲ್ಲವೋ ಎಂದು ಮ್ಯುನಿಸಿಪಲ್ ಅಧಿಕಾರಿಗಳು ಪೂರ್ಣ ಗಮನ ಕೊಟ್ಟು, ಪ್ರತಿನಿತ್ಯವೂ ನೋಡಿಕೊಳ್ಳುತ್ತಾರೆಂದು ನಂಬುತ್ತೇವೆ. ಅಲ್ಲದೆ ನೀರಿನ ಸರಬರಾಯಿಗಾಗಿ ಇಟ್ಟಿರುವ ನಲ್ಲಿಗಳನ್ನು ಸರಿಯಾಗಿ ಇಟ್ಟಿರುತ್ತಾರೋ, ಈಗ ಇಟ್ಟಿರುವ ನಲ್ಲಿಗಳೂ ಲಾಂದ್ರಗಳೂ ಈ ಊರಿಗೆ ಸಾಕಾಗಿವೆಯೋ ಇಲ್ಲವೋ ಎಂದು ವಿಚಾರ ಮಾಡಿ, ತಮ್ಮ ಕರ್ತವ್ಯವನ್ನು ನೆರವೇರಿಸುತ್ತಾ ಬಂದರೆ ಚಿತ್ರದುರ್ಗವೂ ಕೂಡ ಆರೋಗ್ಯಭಾಗ್ಯದ ಆನಂದವನ್ನು ಅನುಭವಿಸುವದು. ಕಾಲಸ್ಥಿತಿಯನ್ನು ನೋಡಿದರೆ ರಾತ್ರಿ ಕಾಲದಲ್ಲಿ ಛಳಿಯೂ ಹಗಲಲ್ಲಿ ಬಿಸಲೂ ಜಾಸ್ತಿಯಾಗಿದೆ. ಬಹು ಜನರು ಛಳಿ ಜ್ವರ ತಲೆನೋವಿನಿಂದ ಬಾಧೆಪಡುತ್ತಿದಾರೆ —ಜನಗಳಿಗೆ ಕಳ್ಳರ ಭೀತಿ ಬಹು ಜೋರಾಗಿದೆ. ಕಳೆದ ಜನವರಿ ೨೨ ನೆ ತಾ॥ ರಾತ್ರಿ ಈ ಗ್ರಾಮದ ಮಧ್ಯೆ ಇರತಕ್ಕ ಪಾಳೆಗಾರರ ಕಾಲದೇವತೆಯಾದ ಉಚ್ಚಂಗಮ್ಮನ ದೇವಸ್ಥಾನದಲ್ಲಿ ಭಾರಿ ಕಳುವು ನಡೆಯಿತು. ಆ ದೇವರನ್ನೇ ತೆಗೆದು ಹೊರಗೆ [illegible]ದ್ದರಂತೆ. ದೇವರ ಮೇಲೆ ಕೈ ಹಾಕುವ ಕಳ್ಳರು ಎಷ್ಟು ಪರಾಕ್ರಮಶಾಲಿಯಾಗಿರಬೇಕೋ, ಆ ದೇವರ ಸಾಮರ್ಥ್ಯವೆಷ್ಟಿರಬೇಕೋ ಅಂಥವುಗಳನ್ನು ನಂಬುವ ಜನರೇ ಯೋಚಿಸತಕ್ಕದ್ದಾಗಿದೆ —ಊರೊಳಗೆ ರಾತ್ರಿಯಲ್ಲಿ ಮನೆಗಳ ಮೇಲೆ ಕಲ್ಲು ಬೀಳುತ್ತದೆಂದು ಬಹು ತಕರಾರು ಇದೆ. ಪೋಲೀಸ್ ಅಧಿಕಾರಿಗಳೂ ಪೋಲೀಸಿನವರೂ ತುಂಬ ನಿಗಾ ಕೊಡಬೇಕಾಗಿದೆ ಜೂಜಾಟವೂ ಕೂಡ ದಿನದಿನ ಹೆಚ್ಚುತ್ತಿದೆ ವರ್ತಮಾನವಿದೆ ಹೀಗಿದ್ದರೆ ಊರು ಅಭಿವೃದ್ಧಿಯಾಗುವದು ಹ್ಯಾಗೆ. ಇದರಿಂದುಂಟಾಗತಕ್ಕ ಅನರ್ಥಗಳನ್ನು ಬರವಣಿಗೆಯ ಮೂಲಕ ವಿವರಿಸಲಾಗುವದೇ. ಇದು ಮುಖ್ಯ ವಿಷಯವಾದ್ದರಿಂದ ಸ್ಥಳಾಧಿಕಾರಿಗಳು ಇಂಥ ದುರಭ್ಯಾಸವನ್ನು ಅಡಗಿಸಬೇಕಾಗಿದೆ ಈ ಊರಲ್ಲಿರುವ ಸಾಹುಕಾರರಲ್ಲೊಬ್ಬರಾದ ಮ॥ ಕಾಡಪ್ಪನವರೂ ಅವರ ನೌಕರರೂ ಚೋರಿ ಮಾಡಿದ್ದಾರೆಂದು ಪೋಲೀಸಿನವರು ಅವರ ಮೇಲೆ ಚಾರ್ಜ್ ಮಾಡಿದಾರೆ. ಇಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇವರನ್ನೆಲ್ಲ ಜಾಮೀನ ಮೇಲೆ ಖುಲಾಸ್ ಮಾಡಿ, ಈ ತಿಂಗಳ ೬ ನೆ ತಾರೀಖಿಗೆ ವಿಚಾರಣೆ ಮಾಡುತ್ತಾರೆಂದು ವರ್ತಮಾನವಿದೆ

ತುಂಕೂರು.—ದಿನದಿನಕ್ಕೆ ಬಿಸಲು ಜೋರಾಗಿ ಕಾಯುತ್ತಿರುವದರಿಂದ ಛಳಿ ಕಡಮೆಯಾಗಿದೆ ಧಾರಣೆವಾಸಿಗಳು ಸಂತೆಯಲ್ಲಿ ರಾಗಿ ರೂಪಾಯಿಗೆ ೨೫ ಸೇರಿನಂತೆಯೂ ಅಕ್ಕಿ ೧೦ ಸೇರಿನಂತೆಯೂ ಬಾಕಿ ದಿನಸಿಗಳು ಯಥಾಪ್ರಕಾರವಾಗಿಯೂ ಮಾರಲ್ಪಟ್ಟವು. ಸುಗ್ಗಿಕಾಲದಲ್ಲೇ ಈ ರೀತಿಯಾದರೆ ಮುಂದೆ ತುಂಬ ಪ್ರಿಯವಾಗುವದರಲ್ಲಿ ಸಂಶಯವಿಲ್ಲ —ಪ್ಲೇಗ್ ಗಲಾಟೆ ವಿಷಯದಲ್ಲಿ ಈ ವಾರ ಟವರ್ ದಕ್ಷಿಣಭಾಗದ ಎಕ್ಸ್ಟೆನ್ಷನ್‌ನಲ್ಲಿ ಒಬ್ಬ ಬ್ರಾಹ್ಮಣರ ಮನೆಯಲ್ಲಿ ಅಕಸ್ಮಾತ್ತಾಗಿ ಉಪದ್ರ ತಗಲಿ ಮೂರು ದಿನಗಳ ಒಳಗಾಗಿ ಮೂರು ಜನ ಸತ್ತರು ಇನ್ನೊಬ್ಬರು ಕಾಯಿಲೆ ಇರುತ್ತಾರೆ. ಮತ್ತು ನೆನ್ನೆ ಗುರುವಾರ ಗುಬ್ಬಿಯಿಂದ ಸಂಸಾರ ಸಮೇತವಾಗಿ ಬಂದ ಬ್ರಾಹ್ಮಣರ ಸ್ತ್ರೀ ಒಂದು ಹೆಣ್ಣು ಹುಡುಗಿಯು ಮಾರನೇ ದಿನ ಪ್ಲೇಗಿನಿಂದ ತೀರಿಹೋಯಿತು ಅಕ್ಕಪಕ್ಕ ಗ್ರಾಮಗಳಲ್ಲಿ ಕಾಯಿಲೆ ಜೋರಾಗಿ ಮರಣಗಳಾಗುತ್ತಲಿವೆಯಲ್ಲದೆ, ಮಧುಗಿರಿ ಮುಂತಾದ ಕಡೆ ಈ ರೋಗ ಹುಟ್ಟಿರುವದರಿಂದ ಅಲ್ಲಿನ ನಿವಾಸಿಗಳು ಇಲ್ಲಿಗೆ ಬರುತ್ತಲೂ ಇದಾರೆ ಸದ್ಯದಲ್ಲಿ ಹೊರಗಿರತಕ್ಕ ಜನರನ್ನು ಊರಿನೊಳಕ್ಕೆ ವಾಸಕ್ಕೆ ಬಿಡದಿರುವಂತೆ ಸರ್ಕಾರದವರ ಅಪ್ಪಣೆ ಮಾಡುವವಾಗಿ ವರ್ತಮಾನ ಕೇಳುತ್ತಿವೆ ಇನ್ನು ರೋಗ ನಿಶ್ಶೇಷವಾಗುವ ವರಿಗೂ ಜನರು ವಾಸಕ್ಕೆ ಬಾರದಿರುವದು ಕ್ಷೇಮವಾಗಿದೆ.—ಈ ದಗಡೆ ಜೋಡಿಯಲ್ಲಿರತಕ್ಕವರಿಗೆ ಕಳ್ಳರ ಅವಾಂತ್ರವೂ ಬೆಂಕಿಯ ಬಾಧೆಯೂ ತುಂಬ ಇದೆ ಕಳೆದ ವಾರದಲ್ಲಿ ಟವರ್ ಸಮೀಪದಲ್ಲಿರುವ ಬಿಳ್ಳೂರೆಂಬ ಗ್ರಾಮದ ಹತ್ತಿರ ಜಮೀನು ಕಾಯಿಕೊಂಡಿರುವಾತನ ಸ್ತ್ರೀ ತಿಗಳರವನೊಬ್ಬನ ಗುಡಿಸಲಿಗೆ ರಾತ್ರಿ ಸುಮಾರು ೯ ಗಂಟೆ ಸಮಯದಲ್ಲಿ ಬೆಂಕಿ ಬಿದ್ದು ಸಾಮಾನೆಲ್ಲವೂ ಸುಟ್ಟುಹೋಯಿತು ಯಾರೋ ಹಗೆತನದಿಂದ ಬೆಂಕಿ ಇಟ್ಟರೆಂದು ಜನರು ಹೇಳಿಕೊಳ್ಳುತ್ತಾರೆ —ಬಹು ಕಾಲದಿಂದಲೂ [illegible]ರಿಜಿಸ್ಟ್ರಾಗಿದ್ದ ಮ॥ ವಿ ಮಹದೇವ ಮೊದಲಿಯಾರ್ರು ೬ ತಿಂಗಳಿಂದಲೂ ಕಾಯಿಲೆಯಾಗಿದ್ದು ಕಳೆದ ೨೯ನೇ ತಾರೀಖು [illegible] ಸ್ವಗೃಹದಲ್ಲಿ ಕಾಲವಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಇವರು ಇಲ್ಲಿನ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿ ಸರ್ಕಾರ ಕೆಲಸವನ್ನು ತುಂಬಾ ನಿಸ್ಪೃಹತೆಯಿಂದ ನೆರವೇರಿಸುತ್ತಿದ್ದರು ಇವರ ವಿಯೋಗ ದುಃಖವನ್ನು ಅನುಭವಿಸಲು ಒಬ್ಬ ಬಾಲಕನೂ ಇಬ್ಬರು ಕುಮಾರ್ತೆಯರೂ ಕುಟುಂಬವೂ ಇದಾರೆ —ಕಳ್ಳರ ಅವಾಂತ್ರವು ಇದ್ದೇ ಇದೆ. ತಾಲ್ಲೋಕಿನಿಂದಲೂ ರಿಜರ್ವಿನಿಂದಲೂ ಪೋಲೀಸಿನವರನ್ನು ಕುಮ್ಮಕ್ ತೆಗೆದುಕೊಂಡು, ಪೋಲೀಸ್ ಆಫೀಸರವರು ತುಂಬಾ ಮೆಹನತ್ತಿನಿಂದ ಕಳ್ಳರನ್ನು ತಲಾಷ್ ಮಾಡುತ್ತಿದ್ದಾರೆ. ಈ ಮೆಹನತ್ತಿನಿಂದ ದುಷ್ಟರ ಅವಾಂತ್ರ ಅಡಗಿದರೆ ತುಂಬ ಕೀರ್ತಿ ಬರುವದರಲ್ಲಿ ಸಂಶಯವಿಲ್ಲ —ಕಳೆದ ಬುಧವಾರ [illegible] ಮಿಷನ್ ಸೆಕ್ರೆಟರಿಗಳಾದ ಘನ ಫಿಂಡ್ಲೆಯವರೂ ಮ॥ ಖೂಫ್ ಯವರೂ ಬೇರ್‌ಮೋರ್ ಸಾಹೇಬರವರೂ ದಯಮಾಡಿಸಿ, ಇಲ್ಲಿನ ಮಿಷನ್ ಕಾರ್ಯದರ್ಗಳನ್ನು ಪರಾಂಬರಿಸಿ, ಅದೇ ದಿನ ಸಾಯಂಕಾಲ ಚರ್ಚಿನಲ್ಲಿ ಕ್ರೈಸ್ತ ಸಭಿಕರಿಂದ ಕೊಡಲ್ಪಟ್ಟ ವಂದನಾ ಪತ್ರಿಕೆಯನ್ನು ತುಂಬಾ ಸಂತೋಷದಿಂದ ಅಂಗೀಕರಿಸಿಕೊಂಡು ದಯಮಾಡಿಸಿದರು.—ಟವರ್ ಸೌದೆ ಸರಬರಾಯಿಗಾಗಿ ಕಂಟ್ರಾಕ್ಟ ತೆಗೆದುಕೊಂಡಿದ್ದ ಸಾಹುಕಾರರಿಗೆ ಕೈಸಲಾಗಿದ್ದದ್ದನ್ನು ಪುನಃ ಸರ್ಕಾರದವರು ಅವರ ವಾಯಿದೆ ಪೂರೈಸುವವರಿಗೂ ಸೌದೆ ಸರಬರಾಯಿ ಮಾಡುವಂತೆ ಕಳೆದ ವಾರ ಆರ್ಡರ್ ಕೊಟ್ಟದ್ದರಿಂದ ಸೌದೆಯು ಜನರಿಗೆ ಚಿಲ್ಲರೆಯಾಗಿ ದೊರೆಯಲು ಸೌಲಭ್ಯ ಉಂಟಾಯಿತೆಂದು ತಿಳಿಸಲು ಸಂತೋಷಿಸುತ್ತೇವೆ

ಇಂಡಿಯಾ ದೇಶದ ವೃತ್ತಾಂತಗಳು.

ಮದರಾಸ್ ಪ್ರಸಿಡೆನ್ಸಿಯಲ್ಲೊಂದರಲ್ಲೇ ೧೯೦೩ ರಲ್ಲಿ ರಾ[illegible]ಕೀಯ ಪೆನ್ಷನ್‌ದಾರರಿಗೆಲ್ಲಾ ಒಟ್ಟು ಸುಮಾರು [illegible] ರೂಪಾಯಿ ಸಲ್ಲುತ್ತಿತ್ತು. ಕಳೆದ ವರುಷ ಅದು [illegible] ರೂಪಾಯಿಗೆ ಇಳಿದಿದೆ

****

ಕಪೂರ್ಥಲದ ಮಹಾರಾಜರು ಕಳೆದ ೧೮೯೭ನೇ ಇಸವಿಯಲ್ಲಿ ನಡೆದ ಯುದ್ಧದಲ್ಲಿ ಮೃತಪಟ್ಟ ತಮ್ಮ ಕಡೆಯ ೬೦ ಜನ ಆಫೀ

ಹಣವನ್ನು ಶಾಶ್ವತಪಡಿಸುವುದಕ್ಕಾಗಿ ಒಂದು ಕಟ್ಟಡವನ್ನು ಕಟ್ಟಬೇಕೆಂದಿರುತ್ತಾರೆ

✱✱✱✱

ಸಿಲೋನ್ ದ್ವೀಪದಲ್ಲಿ ಭತ್ತದ ಬೆಳೆಯನ್ನು ಬಹಳ ಕಾಲದಿಂದ ಹಾಳುಮಾಡುತ್ತಿರುವ ಹುಳುಗಳು ಇನ್ನೂ ಹೆಚ್ಚುತ್ತಿವೆ. ಈ ದ್ವೀಪದ ಉತ್ತರದಿಕ್ಕಿನಲ್ಲಿರುವ ಬೆಳೆಯನ್ನೆಲ್ಲಾ ಹಾಳುಮಾಡಿದವು. [illegible] ಎಂಬ ವೈದ್ಯರು ಇವುಗಳನ್ನು ನಾಶಮಾಡುವುದಕ್ಕೆ ಪ್ರಯತ್ನಿಸಿದರೂ ನಿಷ್ಫಲವಾಗಿದೆ

✱✱✱✱

ವೈನಾಡಿನಲ್ಲೂ ನೀಲಗಿರಿಯಲ್ಲೂ ಪ್ಲಾಂಟರುಗಳು ಹೊಸದಾಗಿ ಟೀ ಬೆಳೆ ಮಾಡುತ್ತಿದ್ದಾರೆ. ವೈನಾಡಿನಲ್ಲಿ ಬೆಳೆ ಮಾಡಿರುವವರಿಗೆ ಮೂರು ವರುಷವೂ ನೀಲಗಿರಿಯಲ್ಲಿ ಬೆಳೆ ಮಾಡಿದವರಿಗೆ ಐದು ವರುಷವೂ ಕಂದಾಯವನ್ನು ಮಾಫಿ ಬಿಡಬೇಕೆಂಬುದಾಗಿ ಮದ್ರಾಸ್ ಗವರ್ನ್‌ಮೆಂಟಿನವರು ತೀರ್ಮಾನ ಮಾಡಿದಾರೆ

✱✱✱✱

ಬೊಂಬಾಯಿನಲ್ಲಿರುವ ಒಂದಾನೊಂದು ಕಂಪನಿಯವರು ದ ನವಾಬರ ಮೇಲೆ ದಾವಾ ನಡಿಸಿದ್ದರಷ್ಟೆ. ಈಗ ಆ ನವಾಬರು ಅವರಿಗೆ ೮,೦೦೦ ರೂಪಾಯನ್ನು ಕೊಟ್ಟಿರುತ್ತಾರೆ. ಆದ್ದರಿಂದ ಕೋರ್ಟಿನವರು ಆ ಕಂಪನಿಯವರು ಮಾಡಿದ್ದ ದಾವೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಿಳಿಸಿರುವರು

✱✱✱✱

ಬೊಂಬಾಯಿನ ಹಳೇ ನಾಗಪಾಡ ಎಂಬ ಭಾಗದಲ್ಲಿ ವಾಸವಾಗಿರುವ ಮುರಾರ್ಜಿಮಲ್ ಎಂಬವನು ತನ್ನ ಪೆಟ್ಟಿಗೆಯನ್ನು ತೆಗೆದು ನೋಡಿಕೊಂಡು, ಸಾವಿರ ರೂಪಾಯಿನ ನೋಟುಗಳು ಹದಿನಾರು ಹದಿನಾರು ಸಾವಿರ ರೂಪಾಯಿನ ನಗಗಳೂ ಕಳುವಾಯಿತೆಂದು ಪೋಲೀಸಿಗೆ ರಿಪೋರ್ಟು ಮಾಡಿದಾನೆ

✱✱✱✱

ಬರ್ಮಾ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರ್ ಕೆಲಸ ನೋಡುವ ಸರ್ ಹ್ಯೂ ಬಾರ್ನೆಸ್ ಎಂಬುವವರನ್ನು ಇಂಡಿಯಾ ಕೌನ್ಸಿಲ್ ಎಂಬ ಮಂತ್ರಾಲೋಚನಾ ಸಭೆಗೆ ಮೆಂಬರನ್ನಾಗಿ ನೇಮಿಸಿ ಅವರ ಕೆಲಸಕ್ಕೆ ರಂಗೂನ್ ಛೀಫ್ ಕೋರ್ಟ್ ಜಡ್ಜರಾಗಿರುವ ಸರ್ ಹರ್ಬರ್ಟ್ ಥರ್ಕಲ್ ವೈಟ್ ಎಂಬುವವರನ್ನು ನಿಯಮಿಸಿದ್ದಾರೆ

✱✱✱✱

ತಿರುವಾಂಕೂರು ಸಂಸ್ಥಾನದ ಮಹಾರಾಜರು ಮದರಾಸ್ ಪ್ರಾಂತ್ಯ ಸಂಚಾರಕ್ಕೆ ಹೊರಡಬೇಕೆಂದಿರುತ್ತಾರೆ. ಅವರ ಮಂತ್ರಿ ಕಾರ್ಯದ ಗೈರ್ಹಾಜರಿಯಲ್ಲಿ ದಿವಾನ್ ಪೇಷ್ಕಾರ್ ಮ॥ ವಿ. ನಾಗಯ್ಯರವರು ಸಂಸ್ಥಾನದ ಆಡಳಿತಗಳನ್ನು ನೋಡಿಕೊಳ್ಳುತ್ತಾರೆಂದು ಗೊತ್ತಾಗಿದೆ. ಹೀಗೆ ಇವರು ದಿವಾನರ ಕೆಲಸ ನೋಡಿದ್ದು ಇದೇ ಮೊದಲನೇ ಸಲವಾಗಿದೆ

✱✱✱✱

ವೈಸ್‌ರಾಯ್ ಲಾರ್ಡ್ ಕರ್ಸನ್‌ರವರೂ ಹಿಂದೂಸ್ಥಾನದ ಸೈನ್ಯಾಧಿಪತಿಯಾದ ಲಾರ್ಡ್ ಕಿಚ್ನರ್‌ರವರೂ ಬಂಗಾಳಾ ಗವರ್ನರ್ ಸರ್ ಆಂಡ್ರ್ಯೂ ಫ್ರೇಜರ್‌ರವರೂ, ಇವರುಗಳ ಸಿಬ್ಬಂದಿಯವರೂ ಭಾಸುವಾರ ಪ್ಲಾಸಿ ಎಂಬ ಯುದ್ಧರಂಗವನ್ನು ನೋಡುವುದಕ್ಕಾಗಿ ಹೋಗಿದ್ದರು. ಇಲ್ಲಿ ನಡೆದ ಯುದ್ಧದಿಂದಲೇ ಇಂಗ್ಲೀಷರಿಗೆ ಬಂಗಾಳದ ಮೇಲೆ ಅಧಿಕಾರವು ಉಂಟಾದದ್ದು.

✱✱✱✱

ಬರ್ಮಾದಲ್ಲಿ ಬತ್ತವನ್ನು ಬೆಳೆಯುವ ಹದಿನೈದು ಮುಖ್ಯ ಡಿಸ್ಟ್ರಿಕ್ಟುಗಳಲ್ಲಿ ಈ ವರುಷ ಸುಮಾರು ೬,೭೪೫,೫೧೦ ಎಕರೆಗಳಲ್ಲಿ ಭತ್ತದ ಬೆಳೆ ಮಾಡಿರುತ್ತಾರೆಂದು ತಿಳಿದುಬಂದಿದೆ. ಕಳೆದ ವರುಷ ೫,೪೪೬ ಎಕರೆಯನ್ನು ಜಾಸ್ತಿಯಾಗಿ ಇದೇ ಬೆಳೆ ಇಟ್ಟು ವ್ಯವಸಾಯ ಮಾಡಿದರು. ಇದರಿಂದ ಅಲ್ಲಿನ ಭತ್ತದ ಬೆಳೆಯು ಬಹಳ ಉತ್ತಮಸ್ಥಿತಿಯಲ್ಲಿದೆಯೆಂದು ತಿಳಿಯಬಹುದು.

✱✱✱✱

ಅಫ್ಘಾನಿಸ್ಥಾನದ ನಿಜರಾಬ್ ಎಂಬ ಭಾಗದಲ್ಲಿ ಅಮೀರರು ನೇಮಿಸಿರುವ ಗವರ್ನರು ಲಂಚ ತೆಗೆದುಕೊಳ್ಳುತ್ತಾನೆಂದು ತಿಳಿದು ಅವರು ಅವನನ್ನು ಸಸ್ಪೆಂಡ್ ಮಾಡಿ, ಅವನು ತೆಗೆದುಕೊಂಡಿರುವ ಹಣವನ್ನೂ ವಸೂಲ್ಮಾಡಿದರು. ಸಿಕಂದರ್ ಖಾನ್ ಸಿರ್ದಾರಿರವರ ಮಗನಾದ ಹಾಬಿಬುಲ್ಲಾ ಖಾನರವರು ಅಮೀರರಿಂದ ಅಪ್ಪಣೆ ಪಡೆದು ೧೨,೦೦೦ ಸೈನ್ಯವನ್ನು ಕೂಡಿಸುವುದಕ್ಕೆ ಹೊರಟು, ೯ ಸಾವಿರ ಜನವನ್ನು ಕೂಡಿಸಿ, ಜಲಾಲಾಬಾದಿನ ಮಾರ್ಗವಾಗಿ ಕಾಬೂಲಿಗೆ ಕಳುಹಿಸಿದರು

✱✱✱✱

ಹಿಂದೂಸ್ಥಾನದ ಪಶ್ಚಿಮ ರೇವಾದ ಕರಾಚಿ ನಗರದ ಉತ್ತರದಲ್ಲಿರುವ ಸೀಬಿ ಎಂಬ ಊರಿನಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಹೊಸದಾಗಿ ಒಂದು ಸೈನ್ಯವನ್ನು ಕೂಡಿಸಿ ತರಪೇತು ಮಾಡುತ್ತಿದ್ದಾರೆ. ಆ ಸೈನ್ಯಕ್ಕೆ ಈಗಾಗಲೇ ೬೦೦ ಜನ ಸೈನಿಕರು ಸೇರಿದ್ದಾರೆ. ಇವರೆಲ್ಲಾ ಪಟ್ಟಗರಾಗಿಯೂ ತರಪೇತು ಮಾಡಿದರೆ ಈಗಿನ ಸಿಪಾಯಿ ಸೈನಿಕರಿಗಿಂತಲೂ ಬಹಳ ಉತ್ತಮರಾಗಿಯೂ ಆಗಬಹುದೆಂದು ತಿಳಿದುಬಂದಿದೆ.

✱✱✱✱

ಮಧ್ಯ ಪ್ರಾಂತ್ಯದ ಅಮರಾವತಿ ಎಂಬ ಪಟ್ಟಣದಲ್ಲಿ ಒಂದು ಇಂಗ್ಲೀಷ್ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಅಲ್ಲಿನ ಛೀಫ್ ಕಮಿಷನರು ಮೇಲಕ್ಕೆ ಬರೆದಿದ್ದದ್ದರ ಮೇಲೆ ಇಂಡಿಯಾ ಗವರ್ನ್‌ಮೆಂಟಿನವರು ಒಡಂಬಡೆಂದು ಅನುಮತಿ ಕೊಟ್ಟಿದಾರೆ. ಸುಮಾರು ೩೦,೦೦೦ ರೂಪಾಯಿಗಳನ್ನು ಸ್ಕೂಲು ಕಟ್ಟಡ ಕಟ್ಟುವುದಕ್ಕೂ ಅದಕ್ಕೆ ಬೇಕಾದ ಕೆಲವು ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೂ ಹಣ ಕೊಡುವುದಾಗಿಯೂ ವರುಷಕ್ಕೆ ೧,೧೦೦ ರೂಪಾಯಿಗಳನ್ನು ಗ್ರಾಂಟು ಕೊಡುವುದಾಗಿಯೂ ವಾಗ್ದಾನ ಮಾಡಿದಾರೆ.

✱✱✱✱

ಬೊಂಬಾಯಿಯಲ್ಲಿ ಬಹಳ ದಿವಸದಿಂದ ವ್ಯಾಪಾರಮಾಡುತ್ತಾ ಪ್ರಸಿದ್ಧಿಯನ್ನು ಪಡೆದಿರುವ ಮ॥ ಸಸ್ಸೂನ್ ಜೆ ಡೇವಿಡ್ ಎಂಬುವರೂ ಮ॥ ಕರೀಂ ಭಾಯ್ ಇಬ್ರಾಹಿಂ ಎಂಬುವರೂ ಕಲ್ಕತ್ತಾದಲ್ಲಿ ಹಾರುಬಟ್ಟೆ ತಯಾರಾಗುವ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿರುವರು. ಮೇಲೆ ಹೇಳಿದ ವ್ರತಿಯೊಬ್ಬ ಸಾಹುಕಾರರೂ ಅರ್ಧಕೋಟಿ ರೂಪಾಯಿಗಳಷ್ಟು ದ್ರವ್ಯವಂತರು. ಇವರಿಬ್ಬರೂ ಸೇರಿ ಬೊಂಬಾಯಿನಲ್ಲಿ ಕೆಲವು ಹತ್ತಿ ಕಾರ್ಖಾನೆಗಳನ್ನಿಟ್ಟು ನಡಿಸುತ್ತಾ ಬಂದಿದಾರೆ. ಅವುಗಳು ಬಹಳ ಉತ್ತಮಸ್ಥಿತಿಯಲ್ಲಿವೆಯೆಂದು ತಿಳಿದುಬಂದಿದೆ

✱✱✱✱

ಕಳೆದ ಜನವರಿ ೨೧ನೇ ತಾರೀಖು ವರೆಗಿನ ಒಂದು ವಾರದಲ್ಲಿ ಇಂಡಿಯಾದಲ್ಲಿ ೨೮,೧೦೪ ಜನರು ಪ್ಲೇಗಿನಲ್ಲಿ ಮೃತಪಟ್ಟರು. ಅದರ ಪೈಕಿ ವಾಯುವ್ಯ ಪ್ರಾಂತ್ಯಗಳು ಮತ್ತು ಅಯೋಧ್ಯೆಯಲ್ಲಿ ೧೨,೪೩೫ ಜನರೂ, ಪಂಜಾಬಿನಲ್ಲಿ ೫,೬೦೬ ಜನರೂ, ಬಂಗಾಳಾದಲ್ಲಿ ೩,೮೦೮ ಪ್ರಜೆಗಳೂ, ಬೊಂಬಾಯಿನ ಸುತ್ತುಮುತ್ತಲಿನ ಪ್ರಾಂತ್ಯದಲ್ಲಿ ೨,೯೫೦ ಜನರೂ, ರಾಜಪುಟಾನದಲ್ಲಿ [illegible] ಜನರೂ, ಹೈದರಾಬಾದ್ ಸಂಸ್ಥಾನದಲ್ಲಿ [illegible] ಪ್ರಜೆಗಳೂ, ಮದರಾಸ್ ಮತ್ತು ಅದರ ಸುತ್ತುಮುತ್ತಲಿನ ಪ್ರಾಂತ್ಯದಲ್ಲಿ ೫೦೯ ಜನರೂ, ಮಧ್ಯ ಪ್ರಾಂತ್ಯಗಳಲ್ಲಿ [illegible] ಜನರೂ, ಬೊಂಬಾಯಿನಲ್ಲಿ ೨೬೧ ಜನರೂ, ಜನರೂ, ಮತ್ತು ಕಲ್ಕತ್ತಾದಲ್ಲಿ ೬೪ ಜನರೂ ಪ್ಲೇಗಿನಲ್ಲಿ ಪ್ರಾಣಬಿಟ್ಟರು.

✱✱✱✱

ಅಫ್ಘಾನಿಸ್ಥಾನದ ಅಮೀರರ ಜ್ಯೇಷ್ಠಪುತ್ರರಾದ ಸರ್ದಾರ್ ಇನಾಯತ್ ಉಲ್ಲಾ ಖಾನರವರ ಉಪಾಧ್ಯಾಯರಾದ ಮೀರ್ ಮಹಮದ್ ಖಾನರವರು ಕಳೆದ ಒಂಬತ್ತು ವರ್ಷಗಳಿಂದ ನಡೆಸುತ್ತಿದ್ದ ಕೃತ್ರಿಮ ಕಾರ್ಯಗಳಿಗಾಗಿ ಸಸ್ಪೆಂಡ್ ಮಾಡಲ್ಪಟ್ಟು ಜೈಲಿನಲ್ಲಿಡಲ್ಪಟ್ಟಿದಾರೆ. ನಿಜ್ರಾಬ್ ಎಂಬ ಭಾಗದ ಅಧಿಕಾರಿಯನ್ನು ಕೂಡ ಲಂಚ ತೆಗೆದುಕೊಂಡದ್ದಕ್ಕಾಗಿ ಅಫ್ಘಾನಿಸ್ಥಾನದ ಅಮೀರರು ಸಸ್ಪೆಂಡ್ ಮಾಡಿದಾರೆ. ಬ್ರಿಟೀಷರು ಕರಾರು ಮಾಡಿಕೊಂಡು ಬರುವುದಕ್ಕಾಗಿ ಹಿಂದೂಸ್ಥಾನದಿಂದ ಕಳುಹಿಸಿದ ಸಿಬ್ಬಂದಿಯು ಫೆಬ್ರವರಿ ೨೫ನೇ ತಾರೀಖಿನ ವರೆಗೆ ಅಲ್ಲೇ ಇರುವುದು. ಅಷ್ಟು ಹೊತ್ತಿಗೆ ಅಮೀರರ ಜ್ಯೇಷ್ಠಪುತ್ರರು ಇಂಡಿಯಾದಿಂದ ಹೋಗಿ ಕಾಬೂಲನ್ನು ಸೇರುತ್ತಾರೆ. ಅಮೀರರು ಲಾರ್ಡ್ ಕರ್ಸನರವರು ಹೇಳಿಕಳುಹಿಸಿರುವ ವಿಷಯಗಳನ್ನೆಲ್ಲಾ ಚನ್ನಾಗಿ ತಿಳಿದು ಈಗ ಹೋಗಿರುವವರಿಗೆ ಜವಾಬ್ ಹೇಳಿ ಕಳುಹಿಸುತ್ತಾರೆಂದು ತೋರುತ್ತೆ.

✱✱✱✱

ಬರ್ಮಾಕ್ಕೆ ರಾಜಧಾನಿಯಾದ ಮಾಂಡಲೆ ಪಟ್ಟಣದ ಕೆಲವು ಧರ್ಮಾತ್ಮರಾದ ಬೌದ್ಧರು ತಮ್ಮ ಗುರುವಾದ ಬುದ್ಧನ ವಿಗ್ರಹವನ್ನು ಸ್ಥಾಪಿಸಬೇಕೆಂದು ಬಹಳ ಇಷ್ಟವುಳ್ಳವರಾಗಿ ಬುದ್ಧನ ವಿಗ್ರಹವನ್ನು ಸ್ಥಾಪಿಸಬೇಕೆಂದು ಬಹಳ ಇಷ್ಟವುಳ್ಳವರಾಗಿ ಬುದ್ಧನ ವಿಗ್ರಹವನ್ನು ಕೆತ್ತುವುದಕ್ಕೆ ಆಗಲೇ ಕೆಲಸಗಾರರನ್ನು ನೇಮಿಸಿರುತ್ತಾರೆ ಕೆಲಸ ಮಾಡುವವರಿಗೆ ಕೆಲಸ ಮಾಡುವುದಕ್ಕೆ ಹರ್ಷವನ್ನುಂಟುಮಾಡುವುದಕ್ಕಾಗಿ ಬೇಕಾಗಿರುವ ದಾನಗಳನ್ನು ಆ ಪಟ್ಟಣದ ಜನರು ಆಗಾಗ ಕೊಡುತ್ತಾರೆ. ಅಲ್ಲಿನ ಒಬ್ಬ ವರ್ತಕನು ಹಾಕಿರುವ ಮರಗಳ ಬೆಲೆಯೇ ಸುಮಾರು ೪೦೦ ರೂಪಾಯಿ. ಅದರಿಂದ ಮಾಡುವ ಬುದ್ಧನ ವಿಗ್ರಹವು ೩೦ ಅಡಿ ಎತ್ತರವಾಗುವುದು. ಅದನ್ನು ಇಡುವುದಕ್ಕೆ ಮಾಂಡಲೆ ಬೆಟ್ಟದ ಮೇಲೆ ಸ್ಥಳ ಮಾಡಿದಾರೆ. ಆ ಬೆಟ್ಟಕ್ಕೆ ಹಂತಗಳನ್ನಿಟ್ಟು ಪ್ರಯಾಣಸ್ಥರಿಗೆ ಬಿಸಲು ಮಳೆಗಳಿಂದ ತೊಂದರೆಯುಂಟಾಗದಂತೆ ಮೇಲೆ ಅಂತಸ್ತನ್ನು ನಾರಿಯುದ್ಧಕ್ಕೂ ಕಟ್ಟುವರು. ಈ ಖರ್ಚೆಲ್ಲಾ ಒಟ್ಟು ಒಂದು ಲಕ್ಷಕ್ಕೆ ಬರುವುದು.

✱✱✱✱

ಪ್ಲೇಗ್ ರೋಗವು ಬಹು ಕಾಲದಿಂದ ಹಿಂದೂ ದೇಶದಲ್ಲಿ ವ್ಯಾಪಿಸಿಕೊಂಡು ಎಷ್ಟು ವಿಧವಾಗಿ ಸಾಧಿಸಲ್ಪಟ್ಟರೂ ಸ್ವಲ್ಪವೂ ಕಮ್ಮಿಯಾಗದೆ ವರ್ಷ ವರ್ಷಕ್ಕೆ ಮತ್ತಷ್ಟು ಪ್ರಬಲವಾಗುತ್ತಿರುವುದಷ್ಟೆ. ಇದನ್ನು ನೋಡಿ ಇದು ಸಾಮಾನ್ಯ ರೋಗವಲ್ಲವೆಂದೂ ದೈವಾಜ್ಞೆಯೆಂದೂ ನಿರ್ಧರಿಸಿ, ಅಲಹಾಬಾದ್ ಹೈ ಕೋರ್ಟ್ ಜಡ್ಜಿಗಳಾದ ರಾಯಬಹದೂರ್ ವಿಜಯಸಾರಥಿಯೆಂಬುವರು ನಿಶ್ಚಯಿಸಿ, ಇದಕ್ಕೆ ಒಂದು ಪ್ರತೀಕಾರವನ್ನು ಮಾಡಬೇಕೆಂದು ಉದ್ಯುಕ್ತರಾಗಿದಾರೆ. ಆದ್ದರಿಂದ ಹಿಂದೂ ದೇಶದಲ್ಲಿರುವ ಸಮಸ್ತ ಪ್ರಜೆಗಳೂ ಒಂದು ಶುಭದಿವಸ, ಶುಭಮುಹೂರ್ತದಲ್ಲಿ ಮತ್ತು ಏಕಕಾಲದಲ್ಲಿ ಜೀವಿತ ಸಮಸ್ತ ಕಡೆಯೂ ದೇವರನ್ನು ಸ್ತುತಿಸಿ, ಅವನ ಪ್ರಸಾದವನ್ನೂ ಆಶೀರ್ವಾದವನ್ನೂ ಬೇಡಿಕೊಳ್ಳುವುದು ಅವಶ್ಯಕವಾಗಿದೆ. ಈ ಮಹಾಕಾರ್ಯವನ್ನು ನೆರವೇರಿಸುವುದಕ್ಕೆ ಪ್ರತಿ ಊರು, ಗ್ರಾಮಗಳಲ್ಲೂ ಇರುವ ಮುಖಂಡರುಗಳು ಇದಕ್ಕೆ ತಕ್ಕ ಏರ್ಪಾಡನ್ನು ಮಾಡಿ ಮುಂದಿನ ೬ ಅಥವಾ ೯ ನೆರವೇರುವುದಕ್ಕೆ ಸಹಾಯ ಮಾಡಬೇಕೆಂದು ಅವರು ಎಲ್ಲರನ್ನೂ ಬೇಡಿಕೊಂಡಿದಾರೆ.

ವಿದೇಶ ವರ್ತಮಾನಗಳು.

ಇಂಗ್ಲೆಂಡಿಗೆ ಸೇರಿದ ಮೈರೋಸ್ ಎಂಬ ಡಿಸ್ಟ್ರಿಕ್ಟಿನಲ್ಲಿ ಜಾರ್ಜ್ ಫ್ಲೇಚರ್ ಎಂಬುವನೊಬ್ಬನು ಇದ್ದಾನೆ. ಅವನಿಗೆ ಕಳೆದ ಜನವರಿಗೆ ನೂರ ಹದಿನೇಳು ವರುಷ ತುಂಬಿತು. ಇಂಗ್ಲೆಂಡಿನಲ್ಲಿರುವ ಜನರಲ್ಲೆಲ್ಲಾ ಅವನೇ ವಯೋವೃದ್ಧನು.

ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲ್ ರಾಜ್ಯದಲ್ಲಿ ವಜ್ರದ ಗಣಿ ಇರುವುದಷ್ಟೆ. ಕಳೆದ ಜನವರಿ ೨೬ ನೇ ತಾರೀಖಿನ ದಿನ ಒಂದು ವಜ್ರವು ಸಿಕ್ಕಿರುವುದೆಂತಲೂ ಪ್ರಪಂಚದಲ್ಲಿ ಈಗಿರುವ ವಜ್ರಗಳಲ್ಲೆಲ್ಲಾ ಇದೇ ಭಾರಿಯಾದದ್ದೆಂತಲೂ ತಿಳಿದು ಬಂದಿದೆ.

✱✱✱✱

ಜಪಾನಿನವರು ಫ್ರೆಂಚರ ಸ್ವಾಧೀನದಲ್ಲಿರುವ ಇಂಡೋ ಚೈನಾ ಎಂಬ ಪರ್ಯಾಯದ್ವೀಪವನ್ನು ಅವರಿಂದ ಕಸುಕೊಳ್ಳಬೇಕೆಂದು ಯುದ್ಧ ಸನ್ನಾಹ ಮಾಡುತ್ತಿರುವಂತೆ ಫಾರ್ಮೋಸಾ ದ್ವೀಪದಲ್ಲಿರುವ ಜಪಾನ್ ಕಡೆಯ ವೈಸರಾಯಿಯು ತಮ್ಮ ಮಂತ್ರಿಗೆ ಬರೆದಿರುತ್ತಾನೆ.

✱✱✱✱

ಮಧ್ಯ ತುರ್ಕಿಸ್ಥಾನದಲ್ಲಿರುವ ಬೊಖಾರ ಪಟ್ಟಣದ ರಾಜನು ತನ್ನ ಹೆಸರಿನ ಮೇಲೆ ೪೫ ಸಾವಿರ ರೂಪಾಯನ್ನೂ ತನ್ನ ಮಗನ ಹೆಸರಿನ ಮೇಲೆ ೧೫ ಸಾವಿರ ರೂಪಾಯನ್ನೂ ತಮ್ಮ ರಾಜ್ಯದ ಎಲ್ಲಾ ಕಟ್ಟಡಗಳಲ್ಲಿರುವ ಜನರಿಗೆ ಶಾಖವಾದ ಬಟ್ಟೆಗಳನ್ನು ಸರಬರಾಯಿ ಮಾಡುವುದಕ್ಕಾಗಿ ಸ್ಯಾಂಕ್ಷನ್ ಮಾಡಿದಾರೆ.

✱✱✱✱

ಷಾನ್ ರಾಜ್ಯದ ಉತ್ತರ ಭಾಗದಲ್ಲಿರುವ ಲಾಷಿಯೋ ಎಂಬ ಡಿಸ್ಟ್ರಿಕ್ಟಿನಲ್ಲಿ ಗವರ್ನ್‌ಮೆಂಟಿನವರು ತಾತಮೇದ ಎಂಬ ತೆರಿಗೆಯನ್ನು ಪ್ರತಿಯೊಬ್ಬರ ಮೇಲೂ ಹಾಕಬೇಕೆಂದಿರುತ್ತಾರೆ. ಪ್ರತಿಯೊಬ್ಬ ಯೂರೋಪಿಯನನೂ, ಹಿಂದುವೂ, ಚೈನಾ ದೇಶಸ್ಥನೂ ೧೦ ರೂಪಾಯಿ ಮೇರಿಗೂ, ಉಳಿದವರಲ್ಲಿ ಷಾನ್ ದೇಶಸ್ಥನಿಗೂ ಬರ್ಮಾದವನಿಗೂ ೬ ರೂಪಾಯಿಯಂತೆಯೂ ತೆರಿಗೆಯನ್ನು ವಿಧಿಸಬೇಕೆಂದಿರುತ್ತಾರೆ. ಯೂರೋಪಿಯನ್ನರು ಈ ವಿಧವಾದ ತೆರಿಗೆ ಕೊಟ್ಟದ್ದು ಇದೇ ಮೊದಲು. ದಕ್ಷಿಣ ಬರ್ಮಾದಲ್ಲಿ ಇದೇ ವಿಧವಾದ ತೆರಿಗೆಯನ್ನು ಹಾಕಿದ್ದರೂ ಗವರ್ನ್‌ಮೆಂಟ್ ನೌಕರರಿಗೂ, ಸ್ಕೂಲು ಟೀಚರುಗಳಿಗೂ, ಇನ್ನೂ ಇತರರಿಗೂ ಮಾಫಿ ಬಿಟ್ಟಿರುತ್ತಾರೆ. ಷಾನ್ ರಾಜ್ಯದಲ್ಲಾದರೋ ಪ್ರತಿಯೊಬ್ಬನೂ ಕೊಡತಕ್ಕದ್ದೇ ಬೇಕೆಂದು ಖಂಡಿತವಾಗಿ ವಿಧಿಸಿರುತ್ತಾರೆ.

✱✱✱✱

ವೈಸ್‌ರಾಯ್ ಲಾರ್ಡ್ ಕರ್ಸನರವರ ಪತ್ನೀರವರಿಗೆ ಮೈಗೆ ಕಾಯಿಲೆ ಎಂದು ತಿಳಿದು ಬಂದಾಗ ಎಡ್ವರ್ಡ್ ಸಾರ್ವಭೌಮರು ಆ ಕೆಯವರಿಗೆ ಬಿಟ್ಟುಕೊಟ್ಟಿದ್ದ ವಾಲ್ಮರ್ ಕ್ಯಾಸಲ್ ಎಂಬ ತಮ್ಮ ಅರಮನೆಯನ್ನು ನೋಡುವುದಕ್ಕೆ ಅಕಸ್ಮಾತ್ತಾಗಿ ಬಂದರು. ಅದು ಬಹಳ ಕೊಳಕಾಗಿದ್ದದ್ದರಿಂದ ಆ ಸ್ಥಳದಲ್ಲಿ ವಾಸಮಾಡುವುದಿಲ್ಲವೆಂತಲೂ ಅಥವಾ ವಾಸಮಾಡಬೇಕಾದರೆ ಅದನ್ನು ಸರಿಮಾಡಿಸಬೇಕೆಂತಲೂ ಅಪ್ಪಣೆ ಕೊಟ್ಟು ಇರುತ್ತಾರೆ. ಎಡ್ವರ್ಡ್ ಮಹಾರಾಜರು ತಾವು ಚಿಕ್ಕಂದಿನಲ್ಲಿ ತಮ್ಮ ತಾಯಿ ವಿಕ್ಟೋರಿಯಾ ಮಹಾರಾಣಿಯವರೊಡನೆ ಇಲ್ಲಿ ವಾಸಿಸುತ್ತಿದ್ದರು. ಆ ಅರಮನೆಯಲ್ಲಿರುವ ಎಲ್ಲಾ ಕೊಠಡಿಗಳನ್ನೂ ಮುಖ್ಯವಾಗಿ ವಿಕ್ಟೋರಿಯಾ ರಾಣಿಯವರ ಕೊಠಡಿಯನ್ನೂ ಅಲ್ಲಿ ಈಗಲೂ ಇರುವ ಕೆಲವು ಪೂರ್ವಕಾಲದ ಸಾಮಾನುಗಳನ್ನೂ ನೋಡಿಕೊಂಡು ಬಂದರು.

✱✱✱✱

ಈಗ ನಾಲ್ವತ್ತು ವರುಷಗಳ ಕೆಳಗೆ ಲಾಸ್ಸನ್ ಮೋಲರ್ ಎಂಬಾತನು ಗ್ರೀನ್‌ಲೆಂಡ್ ದ್ವೀಪವನ್ನು ಬಿಟ್ಟು ಡೆನ್ಮಾರ್ಕ್ ರಾಜ್ಯಕ್ಕೆ ರಾಜಧಾನಿಯಾದ ಕೋಪನ್‌ಹೇಗನ್ ನಗರಕ್ಕೆ ಪ್ರಯಾಣ ಮಾಡಿದನು. ಅಲ್ಲಿಂದ ಹಿಂತಿರುಗಿ ತನ್ನ ಊರಿಗೆ ಹೋದಾಗಿನಿಂದ ಅವನು ಒಂದು ವರ್ತಮಾನಪತ್ರಿಕೆಯನ್ನು ಪ್ರಕಟಿಸುತ್ತಿದಾನೆ. ಆ ಪತ್ರಿಕೆಗೆ ವರ್ತಮಾನಗಳನ್ನು ತರುವವನೂ, ಅಕ್ಷರಗಳನ್ನು ಜೋಡಿಸುವವನೂ, ಕಾಗದದ ಮೇಲೆ ಪ್ರಿಂಟುಮಾಡುವವನೂ, ಹೊರಕ್ಕೆ ತೆಗೆದುಕೊಂಡು ಹೋಗಿ ಜನಗಳಿಗೆಲ್ಲಾ ಮಾರುವವನೂ ಅವನೊಬ್ಬನೇ. ಈಗ ಸ್ವಲ್ಪಕಾಲದಿಂದ ಅವನ ಮಗನೂ ಈ ಅಗಾಧವಾದ ಕೆಲಸಕ್ಕೆ ಸಹಾಯಮಾಡುತ್ತಿದಾನೆ. ಆ ಪತ್ರಿಕೆಯೂ ಹೆಚ್ಚಾಗಿ ಪ್ರಕಟಿಸಲ್ಪಡುತ್ತಿದೆ. ಹೀಗೆ ಒಂದು ವರ್ತಮಾನಪತ್ರಿಕೆಯನ್ನು ಜನಮೆಚ್ಚಿಕೆಯಾಗುವಂತೆ ಒಬ್ಬನೇ ಪ್ರಕಟಿಸುವುದು ಆಶ್ಚರ್ಯವೇ ಸರಿ !

✱✱✱✱

ಏಷ್ಯಾ ಖಂಡಕ್ಕೆ ಸೇರಿದ ತುರ್ಕಿ ರಾಜ್ಯಕ್ಕೆ ದಮಸ್ಕಸ್ ಎಂಬ ರೇವಿನಿಂದ ಮಹಮ್ಮದೀಯರ ಯಾತ್ರಾಸ್ಥಾನವಾದ ಮಕ್ಕಾ ಪಟ್ಟಣಕ್ಕೆ ರೈಲು ಹಾಕಬೇಕೆಂದು ಬಹಳ ಕಾಲದಿಂದಲೂ ಆಲೋಚನೆ ಇದೆಯಷ್ಟೆ. ಈಗ ಅದು ಪೂರೈಸುತ್ತಾ ಬಂದಿರುವುದು. ಈಗ ತಯಾರಾಗಿರುವ ರಸ್ತೆಯ ಮೇಲೆ ವಾರಕ್ಕೆ ನಾಲ್ಕು ರೈಲುಗಳು ಓಡುವವು. ಮೊದಲು ಪ್ರಾರಂಭಿಸಿದ ರೈಲು ಮಾರ್ಗವು ಪ್ರಸಿದ್ಧವಾದ ಮೆಡೀನಾ ಪಟ್ಟಣದ ತನಕ ಹೋಗುವುದಕ್ಕೆ ಎರಡು ವರುಷ ಬೇಕಾಗುವುದು. ಈಗ ಉಳಿದಿರುವ ಕಾಮಗಾರಿಯು ಜಾಗ್ರತೆ ನಡೆಯಲೆಂದು ಪ್ರಪಂಚದ ಎಲ್ಲಾ ಕಡೆಯಲ್ಲಿರುವ ಮಹಮ್ಮದೀಯರು ಚಂದಾ ಕಳುಹಿಸುತ್ತಿದಾರೆ. ಕಳೆದ ನವಂಬರ್ ತಿಂಗಳ ಕೊನೆಯ ವರೆಗೆ ಹೀಗೆ ಕೂಡಿಸಿದ ಚಂದಾ ಹಣವು ಒಂದು ಕೋಟಿಯೂ ಮೂವತ್ತು ಲಕ್ಷ ರೂಪಾಯಿಗಳು. ಹಿಂದೂಸ್ಥಾನದ ಬ್ರಿಟಿಷ್ ಮಹಮ್ಮದೀಯರನ್ನು ಆ ರೈಲ್ವೆ ಡೈರೆಕ್ಟರುಗಳಲ್ಲೊಬ್ಬನನ್ನಾಗಿ ನೇಮಿಸಿದರೆ ಬೊಂಬಾಯಿನಲ್ಲಿರುವ ಭಾರೀ ಸಾಹುಕಾರನೇಕರು ಈಗ ಉಳಿದಿರುವ ಭಾಗಕ್ಕೆ ಹಾಕುವ ರೈಲ್ ರಸ್ತೆಗೆ ಆಗುವ ಖರ್ಚನ್ನೆಲ್ಲಾ ತಾವೇ ವಹಿಸಿಕೊಂಡು ಕೊಡುತ್ತೇವೆಂದು ಒಪ್ಪಿರುತ್ತಾರೆ. ಈಗಲಾದರೋ ಅಲ್ಲಿ ರಸ್ತೆಯನ್ನು ಹಾಕುತ್ತಿರುವಾಗ್ಗೆ ಒಂದು ದೊಡ್ಡ ಪಟ್ಟಣವೂ ಅದರಲ್ಲಿ ಒಂದು ಭಾರೀ ಬಂಗಲೆಯೂ ಭೂಮಿಯ ಕೆಳಗೆ ಸಿಕ್ಕಿರುತ್ತವೆ. ಇದಲ್ಲದೆ ಕೆಲವು ಲೋಹದ ನಾಣ್ಯಗಳೂ ಸಿಕ್ಕಿವೆ. ಅಲ್ಲಿ ಕೆಲಸ ಮಾಡುವ ಪ್ರತಿಯೊಬ್ಬನು ದಿನ ಒಂದಕ್ಕೆ ಒಂದೂವರೆ ರೂಪಾಯನ್ನು ಸಂಪಾದಿಸುತ್ತಾನೆ.

ಜ್ವರಹರಿ. 13



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುದಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡ್ರಾಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಇದು ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರು ವುದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಅ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓ ಮಂ ಕ ರ್ಪೂ ರ ದ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಥಟ್ಟನೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಓಮಂ ಕರ್ಪೂರವನ್ನು ನಾನೂ ನನ್ನ ಕಾಂಪೌಂಡರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಬೇಧಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಷ್ಟಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

ಪಪ್ರಿಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್. ಮದರಾಸ್.

ಶರೀರಸುಖಕ್ಕೆ ಒಂದು ಸುಲಭ ಉಪಾಯವು.

ಅಂದರೆ 14

ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತದ ಕ್ರಿಯೆಗೆ ವಿದ್ಯುಲ್ಲತೆಯು (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ ಅನೇಕ ಧಾತುಗಳ ಸಮ್ಮೇಳನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!

ಮಿಂಚಿನ ಪದಕವೂ ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೇನೋವು, ಎರತಲೇನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ಅಸ್ವನಿದ್ರೆ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ಕಜ್ಜಿ, ಗಜಕರ್ಣ, ಜ್ವರ, ಉದರವಾತ, ಕಾಲಿಬದ ವ್ಯಾಧಿ, ಸ್ತ್ರೀಯರ ಬಾಣಂತಿ ರೋಗ, ತಲೆತಿರುಗುವಿಕೆ, ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುನಷ್ಟವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯ ಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವದು ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧—೨—೦ ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦ ಪೋಸ್ಟ್ ಖರ್ಚು ೪ ಆಣೆ ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗವನ್ನೂ, ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನೂ ಹೆಚ್ಚಾಗಿ ಕಳುಹಿಸುವವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ.—ಉಂಗುರ ತಯಾವಾಗ ಬೆರಳಿನ ಅಳತೆ ಕಳುಹಿಸಬೇಕು. ಉಪಹತಿಯು ಗುಣಹೊಂದಿದ ನಂತರ ಮುಂದೆ ೧ ಯಾ ೨ ತಿಂಗಳು ವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ ವೈಲಕ್ಷಣ್ಯ ಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವ್ಹಿ. ಪಿ ಯಿಂದಲೂ ಕಳುಹಿಸುವೆವು

ವಿಠಲದಾಸ ಮೂಡಗಾವ್ಕರ, ಮರ್ಚಂಟ,

ಪೋಸ್ಟ್ ಬೀಳಗಿ, ಉತ್ತರ ಕಾನಡಾ ಜಿಲ್ಲಾ

Post Bilgi, North Kanara District.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೊಪ್ಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಬುದ್ಧಿಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚೆನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೋ ಮೋ ಸಿ ಯಾ.

ತಕ್ಷಣ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಕ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಆದಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಚಾಳೀಸವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಅ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚ ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ಈ ರೂ. ೨—೮ ಅ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚ ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳ ಕ್ರಿ. ತಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚ ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಚೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪೆನಿ. ೨೭ ಸೆಕೆಂಡು ಬೀಚ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೦—೧—೧೯೦೫ ರಿಂದ ೨೭—೧—೧೯೦೫ ರ ವರೆಗೆ.

ಸ್ಥಳ.	ಪ್ಲೇಗ್ ಹಗಲಿ ಬಿದ್ದ.	ಪ್ಲೇಗ್ ಸತ್ತ ಬಿದ್ದ.	ಹೋದವಾರ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	52	53	125	9
ಮೈಸೂರು ,,	12	9	14	1
ಬೆಂಗಳೂರು ಡಿಸ್ಟ್ರಿಕ್ಟ್	94	67	170	1
ಮೈಸೂರು ,,	75	58	89	7
ಕೋಲಾರ್ ,,	26	18	78	6
ಕೋಲಾರ್ ಚಿನ್ನದ ಗಣಿಗಳು	38	28	19	1
ತುಮಕೂರು ಡಿಸ್ಟ್ರಿಕ್ಟ್	48	35	51	4
ಹಾಸನ ,,	6	2	31	2
ಚಿತ್ರದುರ್ಗ ,,	8	4	33	1
ಕಡೂರ್ ,,	18	9	79	4
ಶಿವಮೊಗ್ಗ ,,	10	1	44	2
ಜುಮ್ಲಾ	379	259	731	54

ಶಾಲೀವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರ ಮಾಘ ಶುದ್ಧ ಪಂಚಮಿ ಗುರುವಾರದಿಂದ ಮಾಘ ಶುದ್ಧ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಫೆಬ್ರುವರಿ

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ತೇ... ವಾ... ಪೂ...
9	ಗುರು	ಪಂಚಮಿ	[illegible]	ರೇ	55 7	2[illegible]
10	ಶುಕ್ರ	ಷಷ್ಠಿ	50 6	ಅ	60 6	29
11	ಶನಿವಾ ;	ಸಪ್ತಮಿ	51 1	ಅ	1-20	30
12	ರವಿವಾ ;;	ಅಷ್ಟಮಿ	57 17	ಭ	6 21	1
13	ಚಂದ್ರ	ನವಮಿ	59-2	ಕೃ	10 56	2
14	ಕುಜ	ದಶಮಿ	59-18	ರೋ	13 13	3
15	ಬುಧ	ಏಕಾದಶಿ	59 56	ಮೃ	15-2	4

; ರಥಸಪ್ತಮಿ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ರಥ, ಯತೊರೆ ಅರ್ಕೇಶ್ವರಸ್ವಾಮಿ ರಥ ,, ಮಹಾವೈಶ್ಯ, ಭೀಷ್ಮಾಷ್ಟಮಿ ¶ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ರಥ ಭೀಷ್ಮಾ... ದಶಿ, ಸ್ಮಾರ್ತರ ಏಕಾದಶಿ, ತಿಲಪದ್ಮವ್ರತ

ಪೇಟೆ ಧಾರಣೆ

ವಿವರ.		ಮೈಸೂರು.	ಬೆಂಗಳೂರು.
ಕಿಟ್ಟೀ ಅಕ್ಕಿ ಪಲ್ಲ ೧ಕ್ಕೆ		ರೂ ೧೦-೮-೦	೧೧-೦-
ಕೆಂಬೂತಿ ಅಕ್ಕಿ ಅವಲ್		೧೨ ೪ ೦	೧೧-೦-
,,	ಮಾಯಂ	೯-೧೨-೦	೧೦-೮-
ಜಾವಾಧ್ರ ಅಕ್ಕಿ		೯-೮-೦	೧೨-೮-
ಸಣ್ಣಕ್ಕಿ ಅವಲ್		೧೨ ೦-೦	೧೩-೦-
,,	ಮಾಯಂ	೧೧ ೮ ೦	೧೨-೮-
ತೊಗರೀ ಬೇಳೆ ಪಲ್ಲ ೧ಕ್ಕೆ		೧೬-೮-೦	೧೧-೬-
,,	ಮಾಯಂ	೧೭-೦-೦	೧೦-೦-
ಹೈರ ರಾಗಿ ಪಲ್ಲ ೧ಕ್ಕೆ		೪ ೧೬-೦	೫-೪-
ಕಾರ್ರಾಗಿ		೪-೧-೦	೪-೩-
ಜೋಳ		೪-೧೨-೦	೭-೦-
ಹಲಸಂದೆ ಪಲ್ಲ ೧ಕ್ಕೆ		೮-೧೨-೦	೭-೦-
ಬಿಳೇ ಅವರೆ		೬ ೧೨ ೦	೬-೪-
ಹೆಸರು		೯ ೧೨-೦	೮-೮-
ಉದ್ದು		೮ ೧೪ ೦	೯-೦-
ಕಡಲೆ		೯ ೦-೦	೭-೮-
ಎಳ್ಳು		೧೬ ೦ ೦	೧೦-೧೬-
ಹುರುಳಿ		೮-೦ ೦	೭-೬-೫
ಹರಳು ೧೨೭ ಸೇರಿಗೆ		೯-೮-೦	೬-೯-೫
ಸೀಗೇಕಾಯಿ ಮಣ ೧ಕ್ಕೆ		೨-೪-೦	೦-೧೨-೦
ಮೆಣಸಿನಕಾಯಿ		೪-೮-೦	೩-೦-೦
,,	ಮಾಯಂ	೩-೧೨-೦	೨-೮-೦
ಬೆಲ್ಲ ದೊಡ್ಡ ಅಚ್ಚು		೭-೪-೦	೫:೧.೮-೦
ಒಳ್ಳೆಣ್ಣೆ ಮಣ ೧ಕ್ಕೆ		೪-೦ ೦	೩-೧೨-೦
ಹರಳೆಣ್ಣೆ ,,		೪-೦-೦	೩-೪-
ಕೊತ್ತಂಬರಿ ಪಲ್ಲ ೧ಕ್ಕೆ		೬-೦-೦	೬-೧೯-೮
ಉಪ್ಪು ,,		೮-೦-೦	೮-೫-೦
ಹುಣಸೇ ಹಣ್ಣು		೧ ೪-೬	೦-೧೪-೦
,,	ಹಳೇದು	೦-೧೪-೦	೦-೧೩-೦
ಹುಷ್ಟ		೧೨-೦-೦	೧೦-೦-೦
ಸೀಮೆಯುಂಡೆ ಪೆಟ್ಟಿ ೧ಕ್ಕೆ		೫-೩-೭	೪-೨-೦
ತೆಂಗಿನಕಾಯಿ ೧೦೦ ಕ್ಕೆ		೫-೦-೦	೩-೦-೨-
ಅಳಲೇಕಾಯಿ ಮಣ ೧ಕ್ಕೆ		೧-೦ ೦	೦-೭-೨-
ಅಂಟ್ವಾಳಕಾಯಿ ಮಣ ೧ಕ್ಕೆ		೦-೧೪-೦	೦-೧೧-
ಹತ್ತಿ (ಪ್ರೆಸ್) ಕಂಡಿ		೧೫-೮-೦	೧೫-೩-೦
,, ,,	ಹಸಿಮ	೧೫-೧೦-೦	೧೫-೧೦-
,, ,,	ಗಟ್ಟಿ ತೊಲ ೧ಕ್ಕೆ	೨೬-೦-೦	೨೪-೪-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೨-೦-೦	೭೬-೦-

Printed and Published by the Rev. H Spencer, B.A. the Proprietor and Manager, Wesleyan Mission Press Mysore 9/2/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಫಬ್ರವರಿ ತಾರೀಖು ೧೬ ನೇ ಗುರುವಾರ. — ಸಂಚಿಕೆ ೭೩

ಶ್ರೀ ತಾಂಬೂಲ.

11

ಬ್ಬು ಬಿಡಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬಿವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ —

ಹೊನ್ನಹಳ್ಳಿ ಟರ್ನ, — ಯಂ. ಗೋವಿಂದಶೆಟ್ಟಿ,

ಮಂಗಳೂರು ಡಿಸ್ಟ್ರಿಕ್ಟ್. — ಮೆಡಿಕಲ್ ಪ್ರಾಕ್ಟಿಷನರ್.

P. SUBBAROY'S

World Renowned and most Efficacious Ayurvedic Medicines

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

17

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲವಸಂಗಡ ೧—೨ ಮಾತ್ರೆಗಳನ್ನು ತಿಂದರೆ, ಬಾಯಿಯ ದುರ್ಗಂಧವೆ ಹೋಗುವುದು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಅಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಪರಶು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ.—ನೂರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾಚಾರ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದರ ಜನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ಪೋಸ್ಟ್ ಮಾಸ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ವಿ. ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕರ್, ಶೈಲಾರ್.

Apply to.—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಸವಿನುಡಿ.

ಕ್ರಮವಿಲ್ಲದೆ ದೊರೆವುದು.

ಕನ್ನಡದಲ್ಲಿ ಇದೊಂದು ಹೊಸ ಪುಸ್ತಕವೆ.

ಕ್ಷಣವೇ ಯುಗ, ಸಮಯವನ್ನು ಬಿಡದೀಸಡೆ ಒಂದು ಸಲ ಓದಿನೋಡಿ.

ಓದುತ ಓದುತ ದೇಶಾಭಿಮಾನಾಭಿವೃದ್ಧಿ, ಲೋಕವ್ಯವಹಾರಾನುಭವ, ಜ್ಞಾನಾಭಿವೃದ್ಧಿಗಳು ಒಂದರಕ್ಕೊಂದು ಹೆಚ್ಚುವುದೇ ಮುಖ್ಯವಾದ ಫಲವು ತಮ್ಮ ತಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬೇಗ ಬೇಗ ಬರೆಯಿರಿ. ವಿಳಾಸ —

ಭಾರತಿಸಂಸಾಗಿರಾಮು, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

೧೯೦೫ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

8

ಸಿದ್ಧವಾಗಿದೆ. ಡಿಸ್ಕೌಂಟು —೧೦ಕ್ಕೆ ೧. ೫೦ಕ್ಕೆ ೭. ೧೦೦ಕ್ಕೆ ೨೦. ಪ್ರಶ್ನೋತ್ತರಸಹಿತ. ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷಿಗಳಿಗೆ ದಕ್ಷಿಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಏರ್ಪಡುಮಾಡಿದೆ.

ಬಾಲಬೋಧದ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೬ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ—೧ ಆಣೆ. ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈಚೆಗೆ ಈಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನು ಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧| ಆಣೆ.

ವಿಳಾಸ.—ಮೈಸೂರಲ್ಲಿ ವಿ. ಜನರಲ್ ಏಜಸಿ, ಸಿ ಎಲ್. ಎಸ್. ಬುಕ್ ಡಿಪೋ, ಕೆ ನರಸಿಂಹಯ್ಯ ಅಂಡ್ ಕೊ, ಬೆಂಗಳೂರಲ್ಲಿ ಜೆ ಗಣಪ್ಪ ಅಂಡ್ ಕೊ

ಯರ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

ಸನ್ ೧೯೦೫ನೇ ಇಸವಿಯ

8

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ ಡೈರಿ

ಎನಾಮೆಲ ಬಿನಂ! ಬಿನಂ!! ಬಿನಂ!

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಖುಷ್‌ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ದವಸಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಜಮಾಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಶ್ರೀಮ ಸಾವರ್ಜ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ. ಎ. ನಂಬರ್ ಚಿಕ್ಕಸೈಜು ೩ ಆಣೆ ಸಿ. ನಂಬರ್ ದೊಡ್ಡಸೈಜು ೬ ಆ

ಎಫ್.	,,	,, ೪	ಎಚ್	,,	,, ೭ ,,
ಬಿ. ಮುಚ್ಚಳದ್ದು	,,	೫	ಡಿ. ಮುಚ್ಚಳದ್ದು	,,	೮ ,,

ಪೋಸ್ಟು ಛಾರ್ಜು ಬೇರೆ. ಒಂದೇ ಸಮೂನೆ ೧೨ ಡೈರಿ ತರಿಸಿದವರಿಗೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಅಗ್ಗ! ಅಗ್ಗ!! ಬಹಳ ಅಗ್ಗ!!!

2

ಇಂಥಾ ಸಮಯ, ಮುಂದೆ ಸಿಗಲಿಕ್ಕಿಲ್ಲ.

ರೂಸ್ಕೋಪ ಲಿವ್ವರ ಸಿಷ್ಟಂ ವಾಚ.

ಇದು ಬಹಳ ಮಜಬೂತ್ ಇದ್ದು ಕುದುರೆಯ ಮೇಲೆ ಸವಾರಿ ಮಾಡಿದರೂ ಕೂಡ ಬಂದ ಆಗುವದಿಲ್ಲ. ಇಂಥಾ ವಾಚನ್ನು ನಾವು ಬಡವರಿಗೂ ಕೂಡ ಸೋಯಿಯಾಗಬೇಕೆಂಬ ಇರಾದೆಯಿಂದ ೧೯೦೫ ನೇ ಆಗಸ್ಟ್ ಅಖೈರವರಿಗೆ ೧೦ ರೂಪಾಯಿ ಕಿಮ್ಮತ್ತು ಇದ್ದದ್ದು ೫ ರೂಪಾಯಿಗೆ ಕೊಡುತ್ತೇವೆ. ಗ್ಯಾರಂಟಿ ೫ ವರ್ಷ. ಪ್ರತಿ ವಾಚಿನ ಸಂಗಡ ಸ್ಪ್ರಿಂಗ್, ಪೆಟ್ಟಿಗೆ, ಕನ್ನಡಿ, ಹೀಗೆ ೩ ಸಾಮಾನು ಕಳುಹಿಸುತ್ತೇವೆ. ಟಪ್ಪಾಲ್ ಖರ್ಚು ಬೇರೆ.

ವಿಳಾಸ:—ಜೀ. ಯಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರ ಕಾನಡಾ.

WESLEYAN MISSION PRESS, MYSORE.

ಮೈಸೂರು ವೆಸ್ಲೀಯನ್ ಮಿಷನ್ ಪ್ರೆಸ್.

5

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇವಲ್ಲದೆ ಕನ್ನಡ ಅಕ್ಷರಗಳು—ಟೂಪೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ರೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ಸುಲಭಕ್ರಯ: ಸುಗಂಧದ್ರವ್ಯಗಳು.

11

ಅಂಬರ್ ಕಡ್ಡಿ ಸೇರು ೧ಕ್ಕೆ	.. ..	೫—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	..	೨—೮—೦
ಪುನುಗು ಕಡ್ಡಿ ,, ೧ಕ್ಕೆ	.. ..	೨—೦—೦
ಮಸಾಲೆ ಕಡ್ಡಿ ,, ೧ಕ್ಕೆ	..	೦—೧೨—೦
ಕಸ್ತೂರಿ ಬಿಲ್ಲೆ ತೊಲ ೧ಕ್ಕೆ	.. ..	೧—೦—೦
ಕೇಸರಿ ಬಿಲ್ಲೆ ೧ಕ್ಕೆ	..	೦—೧—೬
ಪಚ್ಚೆ ಗಂಧ ತೊಲ ೧ಕ್ಕೆ	.. ..	೨—೦—೦
ಡಿಟೋ	..	೦—೧೨—೦
ಜಾಲುಮಡ್ಡಿ ಗಟ್ಟಿ ೧ಕ್ಕೆ	.. ..	೦—೨—೦
ತಾಂಬೂಲ ವಿಹಾರಿಣಿ ಡಬ್ಬಿ ೧ಕ್ಕೆ	..	೦—೪—೦
ಕೇಶೋಲ್ಲಾಸಿನಿ ಸೀಸೆ ೧ಕ್ಕೆ	.. ..	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ	..	೦—೨—೦
ಪನ್ನೀರು ಸೀಸೆ ೧ಕ್ಕೆ	.. ..	೦—೯—೦
ತಂಬಾಕ್ ಸ್ನೋಕ್ ಡಬ್ಬಿ ೧ಕ್ಕೆ	..	೦—೨—೦
ಶ್ರೀವೈಷ್ಣವ ನಾಮ್ತೀಯ ದಶಾಂಗ ಸೇರು ೧ಕ್ಕೆ		೦—೧೨—೦
ಫತ್ತಾ ತೊಲ ೧ಕ್ಕೆ	.. ..	೨—೧—೦
ಡಿಟೋ	.. ..	೧—೦—೦
ಅಭ್ಯಂಗಚೂರ್ಣ ಪಟ್ಟಿ ೧ಕ್ಕೆ	.. ..	೦—೦—೬

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ.—ಟಿ ಎಲ್. ಉಪಾಧ್ಯಾಯ ಅಂಡ್ ಕೋ
ಸುಗಂಧಕಾರಿ, ಮೈಸೂರು.

ಜರೂರಾಗಿ ಬೇಕಾಗಿದೆ.

೧೦೦ ದಿನ ಯೇಜಂಟರು. ತಲಾ ತಿಂಗಳೊಂದಕ್ಕೆ ೫೦ ರೂಪಾಯಿ ಲಾಗಾಯಿತು ೪೦ ರೂಪಾಯಿ ವರಿಗೆ ಕೊಡಲ್ಪಡುತ್ತೆ. ಅಪೇಕ್ಷೆಯುಳ್ಳವರು ಅರ್ಧಾಣೆ ಸ್ಟಾಂಪುಹಿಸಿ ಅರ್ಜಿ ಬರೆದುಕೊಳ್ಳತಕ್ಕದ್ದು. ವಿಳಾಸ —ಕಂಟ್ರೋಲರ್, ಯೂನಿವರ್ಸಲ್ ಪ್ರಾವಿಡೆಂಟ್ ಸಂಘ, ಬಸವಾಪುರ, ಬೆಂಗಳೂರು ಸಿಟಿ.

ಜೀರಿಗೆ ರಸಾಯನ.

ಇದು ಶರೀರದ ಅವಯುವಗಳ ವ್ಯಾಪಾರಗಳನ್ನು ಸ್ವಭಾವವಾಗಿ ನಡಿಸುವ ಔಷಧ. ಪಿತ್ತವಿಕಾರಗಳನ್ನು ಗುಣಮಾಡುವುದರಲ್ಲಿ ಸಂಶಯವಿಲ್ಲದ್ದು. ಅದ್ಭುತಶಕ್ತಿಯುಳ್ಳ ಮೂಲಿಕೆಗಳಿಂದ ತಯಾರಿಸಿರುವವು. ಅಜೀರ್ಣ ಮಲಬದ್ಧತೆ ಸಕಲ ವಿಧವಾದ ಕೆಮ್ಮುಗಳು ಕಫಾ ವಾಂತಿ ನಿಲ್ಲಿಸಿ ಎಂಥ ಪಿತ್ತವಿದ್ದರೂ ಗುಣಮಾಡುತ್ತೆ. ಸೀಸೆ ೧ ಕ್ಕೆ ಕ್ರಯ ೬ ಆಣೆ.

ವಿಳಾಸ.—ಸಿ. ಪಿ. ಅಂಡ್ ಕೋ, ಬೆಂಗಳೂರು ಸಿಟಿ

ತುಳಸೀ ರಾಮದಾಸ್ ಕಂಪನಿ,
ಸಾಹುಕಾರ್ ಪೇಟೆ, ಮದರಾಸು.

೨

ಸವರ್ಣ ಚಿನ್ನದಿಂದಲು, ತಂಬಾಕೆಂಬ ಮಟ್ಟಚಿನ್ನದಿಂದಲು ತಯಾರು ಮಾಡಿದ ಆಭರಣಗಳು ಗ್ಯಾರಂಟಿ ಚೀಟಿಯೊಡನೆ ಕಳುಹಿಸುತ್ತೇವೆ. ಭಾಗ್ಯವಂತರಿಗೂ ಬಡವರಿಗೂ ಉಪಯೋಗವಾಗುವ ಹಾಗೆ ಅತ್ಯಂತ ಸುಲಭಕ್ರಯವನ್ನು ನಮೂದಿಸಿರುವದರಿಂದ ಲಕ್ಷಾಂತರ ವಿಕ್ರಯವಾಗುತ್ತಲಿದೆ. ವರ್ತಕರು ವ್ಯಾಪಾರ ಮಾಡಿ ದ್ರವ್ಯಾರ್ಜನೆಮಾಡುವದಕ್ಕೆ ಇದೇ ಒಳ್ಳೆ ತರುಣವೆಂದು ನಾವು ನಿಜವಾಗಿ ಹೇಳುತ್ತೇವೆ. ನಮ್ಮ ಮಾತನ್ನು ಪರೀಕ್ಷಿಸುವದಕ್ಕಾಗಿ ಈ ಕೆಳಗೆ ಕಂಡ ಮಾದರಾಯಿರು ೧ ನ್ನು ತರಿಸಿ ಪರೀಕ್ಷಿಸಿರಿ.

೧. ಕೆಂಪು ಹರಳಿನ ಬೆಂಡೋಲೆ. ಇದು ಮೇಲಾದ ೮ ಕೆಂಪುಗಳಿಂದಲೂ ಅಡಿಯ ಬಿರಡೆಯನ್ನು ಬೆಲ್‌ಮೆಟಲ್ ಲೋಹದಿಂದಲು ಕಟ್ಟಲ್ಪಟ್ಟಿರುತ್ತೆ. ನೋಡಿದವರು ಮೂವತ್ತು ರೂಪಾಯಿನ ಬೆಂಡೋಲೆಯೆಂದು ಹೇಳುವರು. ನಮ್ಮಲ್ಲಿ ನಂಬಿಕೆಯನ್ನಿಟ್ಟು, ಮಾದರಿಗೆ ೧ ಜೊತೆ ತರಿಸಿ ನೋಡಿ ಆನಂದವನ್ನು ಹೊಂದಿರಿ. ಪುನಃ ವಾಪಸ್ ಮಾಡಿದಾಗ್ಯೂ ಇದರ ಮೊಬಲಗನ್ನು ಮಣಿಯಾರ್ಡರ್ ಮಾಡುತ್ತೇವೆ. ನೀರು ಎಣ್ಣೆ ಮೊದಲಾದ್ದು ತಗಲಿದರೂ ಎಷ್ಟು ವರುಷಗಳಾದರೂ ಕೆಡಲಾರದು. ಬೆಲೆ ಜೊತೆ ೧ ಕ್ಕೆ ರೂ ೬.

೨. ತಳುಕುಪಟಿಕವನ್ನು ಹಾಕಿ ಅಚ್ಚ ಸವರ್ಣ ಚಿನ್ನದಿಂದ ಕಟ್ಟಲ್ಪಟ್ಟ ಮೂಗುಬಟ್ಟು. ಬೆಲೆ ರೂ ೧—೮—೦ ಇದು ಅನೇಕ ವರುಷಗಳು ಉಪಯೋಗಿಸಿ ವಿಕ್ರಯಿಸಿದರು ಚಿನ್ನದ ಬೆಲೆಯೂ ತಳುಕುಪಟಿಕದ ಬೆಲೆಯೂ ಹೋಗಲಾರದು. ಬಹಳ ಮೇಲಾದದ್ದು.

೩. ಅಚ್ಚ ಕೆಂಪಿನಿಂದಲು, ಸವರ್ಣ ಚಿನ್ನದಿಂದಲು ಕಟ್ಟಿದ ಮೂಗುಬಟ್ಟು, ೧ ಕ್ಕೆ ಕ್ರಯ ರೂ ೨.



೪ ತಂಬಾಕಿನಿಂದಲು, ತಳುಕುಪಟಿಕದಿಂದಲು ಕಟ್ಟಲ್ಪಟ್ಟ ಮೇಲಾದ ಹತ್ತುಕಡುಕು. ಕ್ರಯ ಜೊತೆ ೧ ಕ್ಕೆ ರೂ. ೪.

೫. ಕೆಳಭಾಗ ಅಚ್ಚ ಚಿನ್ನದಿಂದಲು, ಬೆಳ್ಳಿ ಜವೆಯಿಂದಲು ಕಟ್ಟಲ್ಪಟ್ಟ ತಳುಕುಪಟಿಕದ ಹತ್ತುಕಡುಕು. ಕ್ರಯ ರೂ. ೩.



೬. ತಂಬಾಕಿನಿಂದ ಕಟ್ಟಲ್ಪಟ್ಟ ತಳುಕುಪಟಿಕದ ೩ ಕಲ್ಲುಗಳುಳ್ಳ ಬುಲಾಕು. ೧ಕ್ಕೆ ಕ್ರಯ ರೂ. ೩.

೭. ೧೪ ಕಾರೆಟ್ ಉಳ್ಳ ಚಿನ್ನದಿಂದಲು ಸುತ್ತಲು ೭ ಸೀಮೆ ಕಲ್ಲುಗಳಿಂದಲು ಕಟ್ಟಲ್ಪಟ್ಟ ಬಹಳ ಸಾದೂಕಾದ ಉಂಗರ, ಎಷ್ಟು ವರುಷಗಳಾದರು ಕೆಡಲಾರದು. ಇದರ ಕ್ರಯ ರೂ ೧—೮—೦.

ವೃತ್ತಾಂತ ಪತ್ರಿಕೆ.

—:೦.—

ಸನ್ ೧೯೦೪ ನೇ ಇಸವಿ ಫೆಬ್ರುವರಿ ತಾ॥ ೧೮ ನೇ ಗುರುವಾರ.

ಪ್ಲೇಗ್ ರೋಗಕ್ಕೆ ಪ್ರಾರ್ಥನೆಯು ಔಷಧವೋ?

ಉತ್ತರ ಹಿಂದುಸ್ಥಾನದಲ್ಲಿ ಮ॥ ವೈದ್ಯನಾಥ್ ಎಂಬವರು ಅಲಹಾಬಾದಿನಲ್ಲಿ ಪ್ರಕಟಿಸಲ್ಪಡುತ್ತಿರುವ ಪೈಯೊನೀರ್ ಪತ್ರಿಕೆಯಲ್ಲಿ ಪ್ಲೇಗ್ ರೋಗ ನಿವಾರಣಾರ್ಥವಾಗಿ ಈ ಇಂಡಿಯಾ ದೇಶದ ಸಕಲ ಸ್ಥಳಗಳಲ್ಲೂ ಪೈಸ್ರಾಯಿ ರವರು ಒಂದು ದಿನವನ್ನು ನೇಮಿಸಿ, ಆ ದಿನದಲ್ಲಿ ಸಕಲ ಜಾತಿಯ ಜನಗಳೂ ತಮ್ಮ ತಮ್ಮ ಮತ ಪದ್ಧತಿಗನುಸಾರವಾಗಿ ದೇವರ ಪ್ರಾರ್ಥನೆಯನ್ನು ಮಾಡುವಂತೆ ಆಜ್ಞಾಪಿಸಿದಲ್ಲಿ ಭಗವಂತನು ಚಿತ್ತೈಸಿ ಈ ಮಹೋಪದ್ರವನ್ನು ತೊಲಗಿಸುವನು ಎಂದು ಬರೆದಿರುತ್ತಾರೆ. ಇವರ ಅಭಿಪ್ರಾಯವನ್ನು ಇನ್ನು ಅನೇಕರು ಅನುಮೋದಿಸಿದ್ದಾರೆ. ಇನ್ನು ಕೆಲವರು— ಪ್ಲೇಗ್ ರೋಗವು ದೇವರ ಪ್ರಾರ್ಥನೆಯಿಂದ ಪರಿಹಾರವಾಗಲಾರದು; ಅವರ ಬುದ್ಧಿ ಸಮ್ಮತವಾಗಿರುವ ಆರೋಗ್ಯಸೂತ್ರಗಳನ್ನನುಸರಿಸಿ, ವರ್ಷ ವರ್ಷವೂ ಯಾವ ಸ್ಥಳಗಳಲ್ಲಿ ಪ್ಲೇಗು ಪ್ರಾರಂಭವಾಗುವುದೋ ಆಯಾ ಸ್ಥಳಗಳಲ್ಲಿ ರೋಗವೃದ್ಧಿಗೆ ಕಾರಣಗಳಾದ ಕ್ರಿಮಿಗಳನ್ನು ನಾಶಮಾಡಿದರೆ ಈ ಭಯಂಕರವಾದ ರೋಗವು ನಿರ್ನಾಮವಾಗುವುದರಲ್ಲಿ ಸಂದೇಹವಿಲ್ಲವೆಂದು ಹೇಳುತ್ತಾರೆ. ದೇವರ ಪ್ರಾರ್ಥನೆಯು ಫಲಪ್ರದವೆಷ್ಟೆಂದು ನಾವು ಪ್ರಕೃತದಲ್ಲಿ ವಿವರಿಸಬೇಕೆಂದಿಲ್ಲ; ಆದರೆ ವಿಷಯದಲ್ಲಿ ನಾವು ಹೇಳುವುದು ಇಷ್ಟೇ. ಸರ್ವ ಜೀವ ಸಂರಕ್ಷಕನಾದ ಆ ಮಹಾದೇವರ ಸಹಾಯವನ್ನು ನಾವು ಪ್ರಾರ್ಥಿಸಿಕೊಳ್ಳದೆ ಹೋದರೆ ಪ್ಲೇಗು ರೋಗವು ಪರಿಹಾರವಾಗುವ ಮಾರ್ಗವು ತೋರುವುದಿಲ್ಲ. ರೋಗವೂ ಮರಣವೂ ಮನುಷ್ಯ ಮಾತ್ರನಾದವನ ವಶವಲ್ಲವೆಂಬುದು ಸರ್ವ ಸಾಮಾನ್ಯವಾಗಿ ತಿಳಿದ ವಿಷಯವೇ ಸರಿ. ಪ್ಲೇಗ್ ರೋಗವನ್ನು ಸಂಪೂರ್ಣವಾಗಿ ನಾಶಮಾಡಬೇಕೆಂದು ಎಷ್ಟೋ ಮಂದಿ ಮಹಾ ಸಮರ್ಥರಾದ ಪಂಡಿತರು ತಮ್ಮ ಸಾಧನವನ್ನೆಲ್ಲಾ ಉಪಯೋಗಿಸಿ, ಕಂಡು ಕೇಳದ ಔಷಧಗಳನ್ನೆಲ್ಲಾ ಮಾಡಿ ನೋಡಿದಾಗ್ಯೂ ರೋಗವು ಪರಿಹಾರವಾಗದೆಹೋಗಿರುವುದೊಂದೇ ಅಲ್ಲ; ಕೆಲವು ಕಡೆಗಳಲ್ಲಿ ರೋಗವು ಮತ್ತೂ ಹೆಚ್ಚಾಗಿಯೂ ಇರುವುದನ್ನು ತಿಳಿದಿರುತ್ತೇವಷ್ಟೆ. ಇಂಥ ಸಂದರ್ಭದಲ್ಲಿ ಮನುಷ್ಯರು ಮಾಡತಕ್ಕುದೇನಿದೆ? ದೇವರ ಸಹಾಯವೇ ಮನುಷ್ಯನನ್ನು ಕಾಯಬೇಕಾಗಿದೆ. ಆದರೆ ಭಗವಂತನನ್ನು ಎಷ್ಟು ವಿಧವಾಗಿ ಪ್ರಾರ್ಥಿಸಿದರೂ ರೋಗದ ಸೋಂಕು ಇರುವ ಸ್ಥಳವನ್ನು ಬಿಡದೆ ಅಲ್ಲಿಯೇ ವಾಸಿಸುತ್ತಾ ತನ್ನನ್ನು ರೋಗವು ಮುಟ್ಟದಂತೆ ಮಾಡಿಕೊಳ್ಳುವ ಪ್ರಯತ್ನವನ್ನು ಕೈಗೊಳ್ಳದೆ ಜಡರಾಗಿದ್ದರೆ ಪ್ರಯೋಜನವುಂಟೇ? ಎಷ್ಟು ಮಾತ್ರವೂ ಇಲ್ಲ. ಅದೇ ಮೇರೆಗೆ ಯಾವ ದೇಶದವರೇ ಆಗಲಿ ಎಷ್ಟು ಐಕಮತ್ಯದಿಂದಲೇ ಆಗಲಿ ದೇಶ ಸಂರಕ್ಷಣೆಗೋಸ್ಕರ ಭಗವತ್ಪ್ರಾರ್ಥನೆಯನ್ನು ಮಾಡಿದಾಗ್ಯೂ ಎಲ್ಲರೂ ಒಟ್ಟಾಗಿ ತಮ್ಮ ಪಟ್ಟಣ ಗ್ರಾಮಗಳನ್ನು ಶುಚಿ ಮಾಡದೆಯೂ, ರೋಗಪೀಡಿತರಾದವರನ್ನು ಪ್ರತ್ಯೇಕವಾಗಿಟ್ಟು ಚಿಕಿತ್ಸೆ ಮಾಡದೆಯೂ, ರೋಗವನ್ನು ಹರಡುವ ಆ ವಿಷಕ್ರಿಮಿಗಳನ್ನು ನಾಶಪಡಿಸುವುದಕ್ಕೆ ಪ್ರಯತ್ನಿಸದೆಯೂ ಇದ್ದರೆ ಯಾವ ಪ್ರಯೋಜನವೂ ಆಗಲಾರದು.

ಹಾಗಾದರೆ ರೋಗ ನಿವಾರಣಾರ್ಥವಾಗಿ ಪ್ರಾರ್ಥಿಸಿ ಫಲವಿಲ್ಲವೆಂದು ಹೇಳಬಹುದೇ? ಹೇಳಕೂಡದು. ನಮ್ಮ ಕೈಲಾದುದನ್ನೆಲ್ಲಾ ಮಾಡಿ, ಭಗವಂತನ ಸಹಾಯವನ್ನು ಅಪೇಕ್ಷಿಸುವುದು ಸರ್ವ ಸಮ್ಮತವಾದ ಮಾರ್ಗವಾಗಿದೆ. ದೇವರನ್ನು ನಂಬಿದವರು ಈ ಎರಡು ಕಾರ್ಯಗಳನ್ನು ಮಾಡಬೇಕು:—ಮೊದಲನೆಯದು, ನಮ್ಮ ಸಂರಕ್ಷಣೆಗಾಗಿ ನಮ್ಮಿಂದ ಆಗಬಹುದಾದ ಸಾಧನವನ್ನೆಲ್ಲಾ ನಡಸುವುದು, ಎರಡನೆಯದು, ನಮ್ಮ ಪ್ರಯತ್ನಗಳು ಸಫಲವಾಗುವಂತೆ ಅನುಗ್ರಹಿಸುವಿಯೆಂದು ನಂಬಿದ್ದೇವೆಂಬುದಾಗಿ ಭಗವಂತನನ್ನು ನಂಬಿಕೆಯಿಂದ ಪ್ರಾರ್ಥಿಸುವುದು. ರೋಗದಿಂದ ತಪ್ಪಿಸಿ ಕಾಪಾಡೆಂದು ಬೇಡಿಕೊಳ್ಳುವುದೂ ತಪ್ಪಲ್ಲ; ಸ್ವಸಂರಕ್ಷಣೆಗೋಸ್ಕರ ಪ್ರಯಾಸಪಡದೆ ಪ್ರಾರ್ಥಿಸಿ ಫಲವೆಂದು ಸಾಧಿಸುವುದೂ ತಪ್ಪಲ್ಲ. ಸ್ವಪ್ರಯಾಸಿಗಳರುವ ಜನರಿಗೆ ಭಗವಂತನು ಎಷ್ಟು ಮಾತ್ರವೂ ಸಹಾಯಮಾಗುವುದಿಲ್ಲ. ಈ ದೇಶ ನಿವಾಸಿಗಳೆಲ್ಲರೂ ಪ್ರಾರ್ಥಿಸುವಂತೆ ಒಂದು ಸಾಮಾನ್ಯವಾದ ದಿನವನ್ನು ಇಂಡ್ಯಾ ಸರಕಾರದವರು ನಿಯಮಿಸುವರೆಂದು ನಾವು ಯೋಚಿಸುವುದಿಲ್ಲ. ಅವರು ಹಾಗೆ ನಿಯಮಿಸಲಾರರು. ಸರ್ಕಾರದವರು ನಿಯಮಿಸದಿದ್ದರೇನು! ಸಕಲ ವ್ಯಕ್ತಿಗಳು ತಮ್ಮ ತಮ್ಮ ಆಲಯಗಳಲ್ಲಿ ಮಾತ್ರವಲ್ಲದೆ ತಮ್ಮ ಮನಗಳಲ್ಲೇ ಭಗವಂತನನ್ನು ಈ ವಿಷಯವಾಗಿ ಪ್ರಾರ್ಥಿಸುವುದಕ್ಕೆ ಬೇಡವೇನು? ನಮ್ಮನ್ನು ಬಾಧಿಸುವ ಈ ಮಹೋಪದ್ರವನ್ನು ಸಂಪೂರ್ಣವಾಗಿ ತೊಲಗಿಸಿ ಸಂರಕ್ಷಿಸೆಂದು ಕೃಪಾನಿಧಿಯಾದ ಸ್ವಾಮಿಯನ್ನು ಎಲ್ಲರೂ ಪ್ರಾರ್ಥಿಸುವರಾಗಲಿ!

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

6



ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚ ಮತ್ತು ಬೇರೆ ಇಲ್ಲ. ಈಚಿಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ.—"ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವಿಕೆ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಶಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮುಖ್ಯ ಏಜೆಂಟರು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —.

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ರಷ್ಯಾ ರಾಜ್ಯದಲ್ಲಿ ಗಲಭೆಯು.

ರಷ್ಯಾರಾಜ್ಯದ ಕೆಲವು ದೊಡ್ಡ ಪಟ್ಟಣಗಳಲ್ಲಿ ಪ್ರಜೆಗಳು ಗೆಯಿದ್ದು ನೆಮ್ಮದಿಗೆ ಭಂಗವನ್ನುಂಟುಮಾಡುತ್ತಿದ್ದಾರೆ. ಈಗ ಬಂದಿರುವ ಕಂತೀ ವರ್ತಮಾನಗಳನ್ನು ನೋಡಲಾಗಿ ಈ ಗಲಭೆಯು ಇನ್ನೂ ಶಮನವಾಗಲಿಲ್ಲವೆಂದು ಕಾಣುತ್ತದೆ. ಲೋ... ಪಟ್ಟಣದಲ್ಲಿ ಸರ್ಕಾರದವರು ಇಬ್ಬರನ್ನು ಕೊಂದರು, ೧೫ ರಿಗೆ ಗಾಯಗಳಾಗಿವೆ. ಫಿನ್‌ಲೆಂಡಿನ ರಾಜಧಾನಿಯಾದ ಹೆಲ್ಸಿಂಗ್‌ಫರ್ಸ್‌ನಗರದಲ್ಲಿ ಒಬ್ಬನು ಸೈನಿಕನಂತೆ ವೇಷ ಧರಿಸಿಕೊಂಡು ಎಂ. ಜಾರ್ಜ್ ಎಂಬ ರಷ್ಯ ಅಧಿಕಾರಿಯನ್ನು ಕೊಂದು, ಅವನ ಮಗನಿಗೆ ಗಾಯಗೊಳಿಸಿದನು. ಈ ಅಧಿಕಾರಿಯು ಬಹಳ ಕ್ರೌರ್ಯವನ್ನು ವಹಿಸಿ, ಜನರ ಅಪ್ರೀತಿಯನ್ನು ಸಂಪಾದಿಸಿಕೊಂಡಿದ್ದನು. ಇವನನ್ನು ಕೊಂದ ಮನುಷ್ಯನು ಸಿಕ್ಕಿಬಿದ್ದಿದ್ದಾನೆ. ಟಿಫ್ಲಿಸ್ ಬೇಟೂಂ ನಗರಗಳಲ್ಲಿ ದಂಗೇಕೋರರ ಹಾವಳಿ ಹೆಚ್ಚುತ್ತಿದೆ. ಇದನ್ನು ನೋಡಿ ಇತರ ಕಡೆಗಳಲ್ಲೂ ಜನರು ದಂಗೆಯೇಳುತ್ತಲೂ ಜಾನೆಮ್ಮದಿಗೆ ಭಂಗಪಡಿಸುತ್ತಲೂ ಇದ್ದಾರೆ. ಪೋಲೀಸಿನವರು ಅವರ ಮೇಲೆ ಗುಂಡುಹೊಡೆದು ಕೊಲ್ಲುತ್ತಾ ಬಂದಿರುವರು. ರೈಲು ರಸ್ತೆಯನ್ನು ಕೆಲವು ಕಡೆ ಕಿತ್ತು, ಗಾಡಿಗಳ ಸಂಚಾರವನ್ನು ನಿಲ್ಲಿಸಿದರು. ರೇಡಂ, ಸ್ಕಾರ್‌ಗಿಸ್‌ಕ್ಕಾ, ಈ ಪಟ್ಟಣಗಳಲ್ಲಿ ೮೪ ದಂಗೆಯವರು ಮಡಿದುಹೋದರು. ರಾಜಧಾನಿಯಲ್ಲಿರುವ ದೊಡ್ಡ ಮನುಷ್ಯರು ಸಭೆ ಸೇರಿ, ಪ್ರಜಾಪ್ರತಿನಿಧಿಗಳನ್ನು ಕರೆಸಿಕೊಂಡು, ಅವರ ಅಭಿಪ್ರಾಯವನ್ನು ಚಕ್ರವರ್ತಿಯವರು ಕೇಳಬೇಕೆಂದು ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿದರು. ದಂಗೆಗೆ ಮುಖಂಡನಾದ ಫಾದರ್ ಗೇಪನ್ ಎಂಬುವನು ಸ್ವಿಟ್ಸರ್ಲಂಡಿಗೆ ಹೋಗಿ ಸೇರಿಕೊಂಡಿರುವನೆಂದು ಗೊತ್ತಾಗಿದೆ. ದಂಗೇಕೋರರ ದೆಸೆಯಿಂದ ಕಾರ್ಖಾನೆಗಳು ಮುಚ್ಚಲ್ಪಟ್ಟವು.

ವಿದ್ಯಾರ್ಥಿಗಳು ದಂಗೇಕೋರರ ಸಹವಾಸಕ್ಕೆ ಬೀಳದೆ ತಮ್ಮ ವಿದ್ಯೆಯಲ್ಲಿಯೇ ಆಸಕ್ತರಾಗಿರಬೇಕೆಂತಲೂ ಹೀಗೆ ಮಾಡದೆಹೋದಲ್ಲಿ ರಾಜಧಾನಿಯ ಸರ್ಕಾರಿ ವಿದ್ಯಾಶಾಲೆಗಳನ್ನು ಮುಚ್ಚಿಬಿಡುತ್ತೇವೆಂತಲೂ, ಉಪಾಧ್ಯಾಯರನ್ನೂ ವಿದ್ಯಾರ್ಥಿಗಳನ್ನೂ ಹೊರಬ್ರಷ್ಟರಾಗಿ ಕಳುಹಿಸುತ್ತೇವೆಂತಲೂ ಸರ್ಕಾರದವರು ತಿಳಿಸಿದಾರೆ. ವರ್ತಮಾನ ಪತ್ರಿಕೆಗಳಲ್ಲಿ ಯಾವ ತರಹ ಅಭಿಪ್ರಾಯಗಳನ್ನು ಪ್ರಕಟಿಸಬಹುದೆಂಬ ವಿಚಾರವನ್ನು ಗೊತ್ತುಮಾಡುವುದಕ್ಕೋಸ್ಕರ ಮಂತ್ರಿಗಳ ಸಭೆ ಸೇರಿಸಲ್ಪಟ್ಟಿದೆ. ಚಕ್ರವರ್ತಿಯವರು ಕೂಲಿಕಾರರಾದ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಸ್ವಲ್ಪ ಹೆಚ್ಚುಮಾಡಿ ಅವಶ್ಯಬಿದ್ದಾಗ ಕೂಲಿಯವರು ಕೆಲಸಕ್ಕೆ ಬಾರದೆ ನಿಲ್ಲಬಹುದೆಂದು ರಿಯಾಯತಿ ತೋರಿಸಿ, ಕಾನೂನ್ ಬದಲಾಯಿಸಿರುತ್ತಾರೆ. ... ಸಾರ್ ಪಟ್ಟಣದ ಆಸ್ಪತ್ರೆಗಳಲ್ಲೆಲ್ಲಾ ಗಾಯಪಟ್ಟವರೇ ತುಂಬಿಕೊಂಡಿದ್ದಾರೆ. ಅಲ್ಲಿ ೯ ಮಂದಿ ಪೋಲೀಸಿನವರೂ ೧೦೦ ಜನ ಪ್ರಜೆಗಳೂ ಲಯವಾದರು. ರಾಜಧಾನಿಯಲ್ಲಿ ಕಾರ್ಖಾನೆಗಳ ಕೂಲಿಕಾರರು ಮತ್ತೆ ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ತುಂಬಾ ಗಲಭೆಯುಂಟಾಗಿದೆ. ರಷ್ಯಾ ರಾಜ್ಯದಲ್ಲೆಲ್ಲಾ ವಿದ್ಯಾಭ್ಯಾಸದ ಇಲಾಖೆ

...ಯವರೂ ವಿದ್ಯಾರ್ಥಿಗಳೂ ಸ್ಕೂಲುಗಳಿಗೆ ಕೆಲಸ ಮಾಡಲು ...ದೆ ನಿಂತುಬಿಡುತ್ತಿದ್ದಾರೆ.

...ಸ್ಕೊವಿನಲ್ಲಿ ಭಾರೀ ಕಾರ್ಖಾನೆಗೆ ಬೆಂಕಿ ಹಾಕಿ ಸುಟ್ಟು... ಅಲ್ಲಿನ ಕೂಲಿಕಾರರು ೧,೫೦೦ ಮಂದಿ ಕೆಲಸಕ್ಕೆ ಬಾರ...ದರು. ಇವರ ಮೇಲೆ ಪೋಲೀಸಿನವರು ಗುಂಡು ಹೊಡೆದು ...ರನ್ನು ಕೊಂದಿರುತ್ತಾರೆ. ಶುಕ್ರವಾರ ರಾತ್ರಿ ಅಲ್ಲಿ ಮತ್ತೆ ...ಗಳಾದುವು. ಬೆಂಕಿಯನ್ನಾರಿಸುತ್ತಿದ್ದ ಕೂಲಿಕಾರರ ಮೇಲೆ ...ರು ಗುಂಡು ಹೊಡೆದದ್ದರಿಂದ ನೂರಾರು ಮಂದಿ ಸತ್ತು ಬಿ... ಸರ್ಕಾರಿ ಗವರ್ನರುಗಳ ಹೇಳಿಕೆ ಪ್ರಕಾರ ಕಾರ್ಖಾನೆಗಳ ...ನರು ವಾರ್ಸಾ, ಮಾಸ್ಕೊವಿಚ್ ಪಟ್ಟಣಗಳಲ್ಲಿ ಒಟ್ಟು ಸೇರಿ, ...ರರಿಗೆ ಕೆಲವು ರಿಯಾಯಿತಿ ತೋರಿಸುವವರಾಗಿದ್ದಾರೆ.

ರಾಜಧಾನಿಯಲ್ಲಿ ಶುಕ್ರವಾರ ೫,೦೦೦ ದಂಗೇಕೋರರು ...ಲ್ಲಿ ಕೂಡಿ, ಇನ್ನು ನಾಲ್ಕು ಕಾರ್ಖಾನೆಗಳ ಕೂಲಿಕಾ...ತಮ್ಮ ಜೊತೆಗೆ ಸೇರುವಂತೆ ಚಿತಾವಣೆ ಮಾಡುತ್ತಿದ್ದರು. ...ಸೈನಿಕರು ಬಂದುದನ್ನು ಕಂಡು, ಎಲ್ಲಾ ಚದರಿಹೋ... ಎಂಟು ಮೂರು ಭಾರೀ ಕಾರ್ಖಾನೆಗಳಲ್ಲಿ ಕೆಲಸ ಮಾಡು...ಕಾರರು ಒಗ್ಗಟ್ಟಾಗಿ ಸೇರಿ ದಿನಕ್ಕೆ ೮ ಗಂಟೆ ಹೊತ್ತು ಕೆಲಸ ಮಾಡುತ್ತೇವೆಂದು ತಿಳಿಸಿದರು. ಅಧಿಕಾರಿಗಳು ಇದ...ಪ್ಪದೆ ಹೋದ್ದರಿಂದ ೧೨,೦೦೦ ಕೂಲಿಕಾರರು ಕೆಲಸ ಬಿಟ್ಟು ಬಿಟ್ಟುಹೋದರು. ಇವರಿಂದ ಇತರರು ಕೆಲಸ ಬಿಟ್ಟಾರೆಂದು ...ಸೈನಿಕರು ಇವರನ್ನೆಲ್ಲಾ ಪಹರೆಯಲ್ಲಿಟ್ಟುಕೊಂಡಿದ್ದಾರೆ.

ಗಲಭೆ ಹೆಚ್ಚುತ್ತಿದೆ

ವಾರ್ಸಾ, ಲಾಡ್ಸ್, ಸೇಂಟ್ ಪೀಟರ್ಸ್ ಬರ್ಗ್, ಪೋಲಾಂಡ್ ಪ್ರಾಂತ್ಯಗಳಲ್ಲಿ ತಾ ೧೧ ರಿಂದ ಈಚೆಗೆ ಜನರ ದಾಂಧಲೆಯು ...ತ್ತಿದೆ. ಒಂದೇ ಪಟ್ಟಣದಲ್ಲಿ ಒಂದು ಲಕ್ಷ ಪ್ರಜೆಗಳು ಕೆಲಸ...ಹೋಗದೆ ಗಲಭೆ ಮಾಡುತ್ತಿದ್ದಾರೆ. ಈ ಗಲಭೆಗಳು ಮತ್ತೆ ಪ್ರಾ...ಗದಂತೆ ಸರಿಯಾದ ಏರ್ಪಾಡು ಮಾಡಬೇಕೆಂದು ಚಕ್ರವರ್ತಿಯವರು ಮಂತ್ರಿಗಳಿಗೆಲ್ಲಾ ಅಪ್ಪಣೆ ಮಾಡಿದರು. ತಾ|| ೧೩ನೆ ರಾತ್ರಿ ಒಂದು ನಾಟಕಶಾಲೆಯಲ್ಲಿ ನಾಟಕವಾಗುತ್ತಿದ್ದಾಗ ಸಾವಿರಾರು ಪ್ರಜೆಗಳು ಏಕಕಾಲದಲ್ಲಿ ಕೂಗಿ—"ಸ್ವತಂತ್ರಾಧಿಕಾರವು ನಮಗಾಗಲಿ!" ಎಂದು ಆರ್ಭಟಿಸಿದ್ದಲ್ಲದೆ, ಚಕ್ರವರ್ತಿಯವರನ್ನು ...ಬಗೆಯಾಗಿ ದೂಷಿಸಿದರು.

ಸ್ವದೇಶದ ವೃತ್ತಾಂತಗಳು

ಗಣಪತಿ ಎಂಬುವನೊಬ್ಬ ಹುಡುಗನು ಇಲ್ಲಿನ ಹೈಸ್ಕೂಲ್ ...ಮಾಸ್ತರ ರೂಮಿನ ಬಾಗ ಒಡೆದು, ಮೆಟ್ರಿಕ್ಯುಲೇಷನ್ ...ಕೆ ಹೋಗಿದ್ದನೆಂದು ಮೊಕದ್ದಮೆ ಆಗಿದೆ. ನಾಳೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವಿಚಾರಣೆಯಾಗುವುದು.

*****

ಕ್ಲೋಸ್‌ಪೇಟೆ, ಕಾನಕಾನಹಳ್ಳಿ, ಮಾಗಡಿ ತಾಲ್ಲೂಕುಗಳ ...ಗೆಲ್ಲಾ ಸಹಾಯವಾಗಿರುವಂತೆ ಒಂದು ಕರ್ನಾಟಕ ಆಸ್ಪತ್ರೆಯನ್ನು ಬಿಡದಿಯಲ್ಲಿ ಇಡುವುದು ಸಹಜವಾಗಿದೆ ಎಂದು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಶಿಫಾರಸು ಮಾಡಿದ್ದಾರೆ.

*****

ಕೋಲಾರ್ ಚಿನ್ನದ ಗಣಿಗಳ ಪೈಕಿ ಒರಿಯಂಟಲ್ ಕಂಪನಿಯವರು ತಮ್ಮ ಬಾಬಾತನ್ನೆಲ್ಲಾ ನಂದೀದುರ್ಗ ಮೈನ್ ಕಂಪನಿಯವರಿಗೆ ವಿಕರಿ ಮಾಡಿದರು. ಇವರು ೭೫,೦೦೦ ರೂ ನಗದಾಗಿ ...೭೧ ರೂ ಬಾಬತು ೧೨,೦೦೦ ಷೇರುಗಳನ್ನೂ ಕೊಟ್ಟು ...ಕೊಂಡರು.

*****

ಪುದುಕೋಟೆಯ ರಾಜರು ಈ ವಾರ ರಾಜಧಾನಿಗೆ ಬಂದು. ರಾಜಧಾನಿಯಲ್ಲಿ ಕೆಲವು ಕಾಲ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ, ಕಾಕನಕೋಟೆ ಪ್ರಾಂತ್ಯ ದಯಮಾಡಿ, ಆನೆ ಮುಂತಾದ ಕಾಡು ಮೃಗಗಳ ಶಿಕಾರಿ ಮಾಡಿಕೊಂಡು ಬರುವವರಾಗಿದ್ದಾರೆ.

*****

ಚಿಕ್ಕಮಗಳೂರಿನ ಅಗಸರು ಕತ್ತೆಗಳ ಮೇಲೆ ಧಾನ್ಯಾದಿಗಳನ್ನು [illegible] ಮಾಡುತ್ತಾರೆಂದು ಹೇಳಿ ಮ್ಯುನಿಸಿಪಾಲಿಟಿಯವರು ...ವರಿಗೆ ತೆರಿಗೆ ಹಾಕಿದರು. ಗವರ್ನಮೆಂಟಿನವರು ಹೀಗೆ ಕಸುಬಿನ ...ಯ ಹಾಕುವುದು ಸಹಜವಲ್ಲವೆಂದು ಹೇಳಿ ಆ ತೆರಿಗೆಯನ್ನು ರದ್ದು ಮಾಡಿಸಿದರು.

*****

ಕಳೆದ ಶನಿವಾರ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕವಾದ್ದರಿಂದ ಆ ದಿನ ಬೆಳಿಗ್ಗೆ ಕೋಟೆಕೊತ್ತಲಗಳಿಂದ ೨೧ ತೋಪುಗಳನ್ನು ಹಾರಿಸಿದರು. ಸಂಸ್ಥಾನದ ಎಲ್ಲಾ ಕೋರ್ಟು ಕಛೇರಿಗಳಿಗೂ ರಜಾ ಕೊಡಲ್ಪಟ್ಟಿತ್ತು. ಸಾಯಂಕಾಲ ರಾಜಧಾನಿಯಲ್ಲಿರುವ ಮುಖ್ಯ ಮುಖ್ಯ ಕಟ್ಟಡಗಳ ಮೇಲೆ ದೀಪಗಳನ್ನಿಟ್ಟು ...ಲಂಕಾರ ಮಾಡಿದ್ದರು.

*****

ಕೋಲಾರದಿಂದ ಶಿವಮೊಗ್ಗೆಗೆ ಕಳುಹಿಸಿದ ಚಿನ್ನದ ಗಟ್ಟಿಗಳಲ್ಲಿ ೫,೦೦೦ ರೂಪಾಯಿನ ಒಂದು ಗಟ್ಟಿ ಕಳುವಾಯಿತಷ್ಟೆ. ಈ ...ತಿ ೯,೦೦೦ ರೂ ಚಿನ್ನ ಪತ್ತೆ ಆಗಿದೆ. ಪೋಲೀಸ್ ಇನ್ಸ್‌ಪೆಕ್ಟರ್ ...ರವರೂ ಸರ್ ಜಾರ್ಜ್ ಲಾಂಬಟ್‌ರವರೂ ಪತ್ತೇದಾರಿ ಮಾಡುತ್ತಿದ್ದಾರೆ. ಜೋಲಾರ್‌ಪೇಟೆ, ಶೃಂಗಪೂರು, ಚಂಗಲ್ಪಟ್, ...ಪ್ರಾಂತ್ಯ ಮೂರು ಮಂದಿ ಸಿಕ್ಕಿದರು, ಇನ್ನೂ ತನಿಖೆ ನಡೆಯುತ್ತಾ ಇದೆ.

*****

ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನ ಬಡ್ಡಿ ದರವನ್ನು ಬರು...ದಲ್ಲಿಂದ ೩ ರೂಪಾಯಿಗೆ ಇಳಿಸುತ್ತಾರೆ. ೬ ತಿಂಗಳ ತನಕ ಹಣ ವಾಪಸು ತೆಗೆದುಕೊಳ್ಳುವುದಿಲ್ಲವೆಂದು ಬರೆದುಕೊಟ್ಟ ಪಕ್ಷದಲ್ಲಿ ಶೇಕಡಾ ೩| ರೂ ನಂತೆ ಬಡ್ಡಿ ಕೊಡುತ್ತೇವೆಂದು ಹೇಳುವರು. ಇದಲ್ಲದೆ ಕಾಗದಗಳನ್ನು ರಿಜಿಸ್ಟರ್ ಮಾಡುವಾಗ್ಗೆ ಕೊಡಬೇಕಾಗಿರುವ ರಿಜಿಸ್ಟರ್ ಛಾರ್ಜನ್ನು ೨ ಆಣೆಯಿಂದ ೧ ಆಣೆಗೆ ಇಳಿಸುವರೆಂದು ತಿಳಿದು ಬಂದಿದೆ. ಇದರಿಂದ ಪ್ರಜೆಗಳಿಗೆ ಬಹಳಾ ಅನುಕೂಲವಾದೀತೆನ್ನುವುದಕ್ಕೆ ಸಂಶಯವಿಲ್ಲ.

*****

ಬೊಂಬಾಯಿ ಪಟ್ಟಣದ ಪ್ರದರ್ಶನ ಶಾಲೆಯ ಕಮಿಟಿಯವರು ಮೈಸೂರಿನ ಪದಾರ್ಥಗಳಿಗೆ ಚಿನ್ನ ಬೆಳ್ಳಿಯ ಮೆಡಲ್ ಎಂಬ ಬಿರುದುಗಳನ್ನು ಕೊಟ್ಟಿರುತ್ತಾರೆ. ಅರಮನೆ ಹೊಸಬಾಗಿಲುಗಳಿಗೂ, ದಂತದ ಕೆಲಸಕ್ಕೂ, ಕಲ್ಲಿನ ಕೆಲಸಕ್ಕೂ ಅರಮನೆ ಇಲಾಖೆಗೆ ಚಿನ್ನದ ಬಿಲ್ಲೆಯೂ, ದಂತದ ಸಾಮಾನಿಗಾಗಿ ಮೆ|| ಗಣೇಶಯ್ಯನವರಿಗೆ ಚಿನ್ನದ ಬಿಲ್ಲೆಯೂ, ಕಂಬಳಿಯ ಜಮಖಾನೆ ಮುಂತಾದ್ದಕ್ಕೆ ಬೆಂಗಳೂರು ಜೈಲಿಗೆ ಬೆಳ್ಳಿ ಬಿಲ್ಲೆಯೂ, ಸೊಗಸಾದ ಮರಗೆಲಸಕ್ಕೆ ಮೆ|| ಯುಸುಫಲ್ಲಿ ಮತ್ತು ಮೆ|| ಮಹಮದಲ್ಲಿಯವರಿಗೆ ಬೆಳ್ಳಿಯ ಬಿಲ್ಲೆಗಳೂ, ಕೋಲುಗಳನ್ನು ತಯಾರ್ಮಾಡಿದ್ದಕ್ಕೆ ಮೆ|| ಬಿ ರಾಮಸ್ವಾಮಿಯವರಿಗೂ, ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲಿನ ಚಿತ್ರದ ಹೆಣಿಗೆ ಕೆಲಸಕ್ಕೂ ಬೆಳ್ಳಿ ಬಿಲ್ಲೆಗಳೂ, ರೇಷ್ಮೆಗಾಗಿ ಮೈಸೂರು ಜೂಬಿಲಿ ಇನ್ಸ್ಟಿಟ್ಯೂಟಿಗೆ ಬೆಳ್ಳಿ ಬಿಲ್ಲೆಯೂ ಬಹುಮಾನ ಬಂದಿವೆ.

ಮೈಸೂರು ಗೆಜೆಟ್ ಸಂಗ್ರಹ.

ಚಿತ್ರದುರ್ಗದ ಮುನ್ಸಿಫ್ ಕೋರ್ಟಿಗೆ ವಾರಸ್ ಸರ್ಟಿಫಿಕೇಟು ಮತ್ತು ಇನ್‌ಸಾಲ್ವೆನ್ಸಿ ಸರ್ಟಿಫಿಕೇಟುಗಳನ್ನು ಕೊಡುವ ಅಧಿಕಾರವನ್ನು ವಹಿಸಿರುತ್ತೆ.

ಮುಂದೆ ಹೇಳುವ ಸಬ್ ರೆಜಿಸ್ಟ್ರಾರುಗಳ ವರ್ಗಾವರ್ಗಿ ಮುಂತಾದ್ದು ಹುಕುಂ ಮಾಡಲ್ಪಟ್ಟಿದೆ—ಜನರಲ್ ರೆವಿನ್ಯೂ ಸೆಕ್ರೆಟೇರಿಯಟ್ ಸೂಪರ್ ನ್ಯೂಮರರಿ ಗುಮಾಸ್ತಾ ಎಸ್. ರಾಮಯ್ಯನವರನ್ನು ೭ನೇ ಕ್ಲಾಸ್ ಸಬ್ ರೆಜಿಸ್ಟ್ರಾರಾಗಿ ನೇಮಿಸಿದೆ.

ಟಿ ರಾಮಸ್ವಾಮಯ್ಯಂಗಾರ್ರನ್ನು ೭ನೇ ಕ್ಲಾಸಿನಿಂದ ೫ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಸುಬ್ಬರಾವ್ ವೆಂಕಟೇಶ ಬಾಪಟ್‌ಯವರು ೭ನೇ ಕ್ಲಾಸ್ ಸಬ್ ರೆಜಿಸ್ಟ್ರಾರಾಗಿರತಕ್ಕದ್ದು.

ಎಕ್ಸೈಜ್ ಕಮಿಷನರ್ರ ಆಫೀಸ್ ಅಕೌಂಟೆಂಟ್ ಎಂ ಶ್ರೀನಿವಾಸಮೂರ್ತಿಯವರು ೭ನೆ ಕ್ಲಾಸ್ ಸಬ್ ರೆಜಿಸ್ಟ್ರಾರಾಗಿರತಕ್ಕದ್ದು.

ಸಿ ಎಸ್. ರಾಮಯ್ಯನವರನ್ನು ಮೈಸೂರಿಗೂ, ಎನ್ ಟಿ. ನರಸಿಂಹಯ್ಯಂಗಾರ್ರನ್ನು ಚಾಮರಾಜ ನಗರದಿಂದ ಚನ್ನಪಟ್ಟಣಕ್ಕೂ, ಎ. ರಾಮರಾಯರನ್ನು ಚನ್ನಪಟ್ಟಣದಿಂದ ಚಾಮರಾಜನಗರಕ್ಕೂ, ಎಂ ವೆಂಕಟಾಚಲ ಅಯ್ಯಂಗಾರ್ರನ್ನು ಸಾಗರದಿಂದ ಕುಣಿಗಲಿಗೂ, ಸುಬ್ಬರಾವ್ ವೆಂಕಟೇಶ ಬಾಪಟ್ ಯವರನ್ನು ಸಾಗರಕ್ಕೂ, ಎಂ ಶ್ರೀನಿವಾಸಮೂರ್ತಿಯವರನ್ನು ಹರಿಹರಕ್ಕೂ ವರ್ಗ ಮಾಡಿದೆ.

ಶಿವಮೊಗ್ಗೆಯ ಸಬ್ ಜಡ್ಜುರವರಿಗೆ ಅಸಿಸ್ಟೆಂಟ್ ಸೆಷನ್ ಜಡ್ಜರ ಅಧಿಕಾರಗಳನ್ನು ವಹಿಸಿರುತ್ತೆ.

ಮಾ|| ಸಿ ನಾರಾಯಣಶಾಸ್ತ್ರಿಯವರನ್ನು ನೆಲಮಂಗಲದ ಮ್ಯುನಿಸಿಪಲ್ ಬೋರ್ಡಿನಲ್ಲಿ ಮೆಂಬರಾಗಿ ನೇಮಿಸಿದೆ.

ಪಟೇಲ್ ಲಿಂಗಪ್ಪನವರು ಹರಿಹರದ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ಚುನಾಯಿಸಲ್ಪಟ್ಟಿದ್ದಾರೆ.

ಕೋಲಾರ್ ಮರಾಮತ್ ಇಲಾಖೆ ೨ನೆ ಸಬ್ ಡಿವಿಜನ್ ಮುತ್ಸದ್ದಿ ಎಂ. ಎ. ಹೈದರ್ ಖಾನ್ ಯವರು ತಮ್ಮ ಹೆಸರನ್ನು ಎಂ ಎ. ಹೈದರ್ ಅಲಿಖಾನ್ ಎಂಬುದಾಗಿ ಬದಲಾಯಿಸಿಕೊಂಡಿದ್ದಾರೆ.

ಮೊಳಕಾಲ್ಮೂರು ತಾಲ್ಲೂಕು ಅವಲ್ದಾರ್ ಮೆ|| ಬಿ ಸಿ. ಕೇಶವಯ್ಯನವರಿಗೆ ಫೆಬ್ರುವರಿ ೬ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೆ|| ಬಿ ಸಿ. ಕೇಶವಯ್ಯನವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಾಲ್ಲೂಕ್ ಶಿರಸ್ತೇದಾರರು ಮೊಳಕಾಲ್ಮೂರು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಗವರ್ನಮೆಂಟ್ ಅ|| ಸೆಕ್ರೆಟರಿ ಮೆ|| ಪಿ ಜೆ ಡಿಸೋಜಾಯವರು ೨೪ ದಿನಗಳ ರಜಾ ಉಪಯೋಗಿಸಿಕೊಂಡು, ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳಬೇಕಾದ ರಜವನ್ನು ರದ್ದು ಮಾಡಿದೆ.

ಹಾಸನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮೆ|| ಕೆ ರಾಮಯ್ಯಂಗಾರ್ರಿಗೆ ಡಿಸೆಂಬರ್ ೨೧ ರಿಂದ ಜನವರಿ ೨೨ ರ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಸ್ಪೆಷಲ್ ಡ್ಯೂಟಿ ಫಾರೆಸ್ಟ್ ಅ|| ಕನ್ಸರ್ವೇಟರ್ ಮೆ|| ವಿ ಸೀತಾರಾಮಯ್ಯನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಾಸನದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸ್ ಛಾರ್ಜನ್ನು ವಹಿಸತಕ್ಕದ್ದು.

ಎಕ್ಸೈಜ್ ಇಲಾಖಾ ಅ|| ಕಮಿಷನರ್ ಮೆ|| ಟಿ ಬಾಪಾರಾಯರಿಗೆ ಕೊಟ್ಟಿದ್ದ ಮೂರು ವಾರಗಳ ಪ್ರಿವಿಲೆಜ್ ರಜಾ ಜೊತೆಗೆ ಇನ್ನೂ ಎರಡು ವಾರ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅರಮನೆ ಇಲಾಖೆಗಳ ಅಧಿಕಾರ ಮೇಲ್ವಿಚಾರಣೆಯಲ್ಲಿರುವ ಮುಜರಾಯಿ ಸತ್ರ ದೇವಸ್ಥಾನಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಮ|| ರಾ|| ರಾ|| ಪಂಡಿತರತ್ನಂ ಕಸ್ತೂರಿರಂಗಾಚಾರ್ರನ್ನು ಒಬ್ಬ ಮೆಂಬರಾಗಿ ನೇಮಕ ಮಾಡಿದೆ.

ರಷ್ಯಾ ಜಪಾನ್ ಯುದ್ಧವು.

ಕಳೆದವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಮ್ಯಾಂಚೂರಿಯಾದಲ್ಲಿ ಯುದ್ಧ ಕಾರ್ಯ.

ಲಂಡನ್, ಫೆಬ್ರುವರಿ ೬.—ರಷ್ಯಾ ಜನರಲ್ ಕುರೋಪಾಟ್ಕಿನ್ ರವರು ಸೈನ್ಯಾಧಿಪತಿಯಾಗಿರುವುದಕ್ಕೆ ಒಪ್ಪದೆ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂದು ವದಂತಿ ಹುಟ್ಟಿತ್ತು. ಇವರ ಅರ್ಜಿಯನ್ನು ಕೆಲವು ಕಾಲ ಚಕ್ರವರ್ತಿಯವರು ಹತ್ತಿರ ಇಟ್ಟುಕೊಂಡಿದ್ದು, ಜನರಲ್ ಗ್ರಿಪೆನ್‌ಬರ್ಗ್ ಯವರ ರಾಜೀನಾಮೆಯನ್ನು ತರಿಸಿಕೊಂಡು ಅಂಗೀಕರಿಸಿ, ಜನರಲ್ ಕುರೋಪಾಟ್ಕಿನ್ ರವರನ್ನು ಅದೇ ಕೆಲಸದಲ್ಲಿರುವಂತೆ ಅಪ್ಪಣೆ ಕೊಡಿಸಿರುತ್ತಾರೆ.

ರಷ್ಯಾದವರು ಸಾಲಮಾಡುವರು

ರಷ್ಯಾ ಸರ್ಕಾರದವರು ಯುದ್ಧದ ಖರ್ಚಿಗಾಗಿ ೬೦ ಕೋಟಿ ರೂಪಾಯಿಗಳನ್ನು ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ಸಾಹುಕಾರರಿಂದಲೂ ಬ್ಯಾಂಕುಗಳಿಂದಲೂ ಸಾಲಪಡೆಯಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಈ ಹಣಕ್ಕೆ ಶೇಕಡ ವರುಷಕ್ಕೆ ೫ ರೂ. ನಂತೆ ಬಡ್ಡಿಕೊಡುವರು.

ಜಪಾನ್ ಅಡ್ಮಿರಲ್ ಟೋಗೋ ಯವರು,

ಲಂಡನ್, ಫೆಬ್ರುವರಿ ೭.—ಅಡ್ಮಿರಲ್ ಟೋಗೋ ಯವರು ಜಪಾನ್ ರಾಜಧಾನಿಗೆ ಸ್ವಲ್ಪ ವಿಶ್ರಾಂತಿ ಹೊಂದುವುದಕ್ಕೂ ಚಕ್ರವರ್ತಿಯವರ ಅಪ್ಪಣೆ ಪಡೆಯುವುದಕ್ಕೂ ಕೆಲವು ದಿನ ಹೋಗಿದ್ದರು. ಅವರು ಮತ್ತೆ ಜಪಾನ್ ಹಡಗುಗಳ ಸೈನ್ಯವನ್ನು ಸೇರಿಕೊಳ್ಳುವ ಉದ್ದೇಶದಿಂದ ಪ್ರಯಾಣ ಮಾಡಿದ್ದಾರೆ.

ಅಡ್ಮಿರಲ್ ಟೋಗೋ ಯವರು ಕುರೇ ಎಂಬ ಠಾಣ್ಯವನ್ನು ತಲುಪಿ, ಮಿಕಾಸಾ ಎಂಬ ತಮ್ಮ ಜಹಜಿನ ಮೇಲೆ ಆ ಕೂಡಲೇ ಬಾವುಟಾ ಹತ್ತಿಸಿದರು.

ಜಪಾನವರು ಇಂಗ್ಲೀಷರ ಜಹಜನ್ನು ಹಿಡಿದರು.

ವ್ಲಾಡಿವೋಸ್ಟಾಕಿಗೆ ಕಲ್ಲಿದ್ದಲನ್ನು ಭರ್ತಿಮಾಡಿಕೊಂಡು ಗುಟ್ಟಾಗಿ ಹೋಗುತ್ತಿದ್ದ ಈಸ್ಟರ್ ಎಂಬ ಇಂಗ್ಲೀಷ್ ಹಡಗನ್ನು ಜಪಾನವರು ಹಾಕ್ಕಾಯಿಡೋ ಎಂಬಲ್ಲಿ ಹಿಡಿದು ಸ್ವಾಧೀನಪಡಿಸಿಕೊಂಡರು.

ರಷ್ಯಾ ಜನರಲ್‌ಗಳಲ್ಲಿ ಮನಸ್ತಾಪ.

ಜನರಲ್ ಗ್ರಿಪೆನ್‌ಬರ್ಗ್ ಯವರು ತಮ್ಮ ಕೈ ಕೆಳಗಿನ ಉದ್ಯೋಗದವರ ಸಂಗಡ ಹಿಂತಿರುಗಿ ಇರ್ಕುಟ್ಸ್ಕ್ ನಗರಕ್ಕೆ ಬಂದರು. ಅಲ್ಲಿಂದ ವಾಪಸು ಸೆಂಟ್ ಪೀಟರ್ಸ್‌ಬರ್ಗಿಗೆ ಪ್ರಯಾಣ ಮಾಡುತ್ತಾರೆ. ಇವರನ್ನು ಜನರಲ್ ಕುರೋಪಾಟ್ಕಿನವರು ಯುದ್ಧ ಭೂಮಿಯಲ್ಲಿ ಬಹಳಾ ಕಷ್ಟವಾದ ಸ್ಥಾನಗಳಲ್ಲಿ ಇಟ್ಟು, ತಾವು ಮಾತ್ರ ಸೋಮಾರಿತನದಲ್ಲಿ ಕಾಲಕಳೆದರೆಂಬುದಾಗಿ ಅವರ ಮೇಲೆ ದೋಷಾರೋಪಣೆ ಮಾಡುವವರಾಗಿದ್ದಾರೆಂದು ವರ್ತಮಾನವಿದೆ.

ಕರಾರಿನ ಯೋಚನೆ

ಜಪಾನವರೇ ಕರಾರಿನ ವಿಚಾರವನ್ನು ಪ್ರಾರಂಭಿಸಿದ ಹೊರತು ರಷ್ಯಾದವರು ಮುಂದಾಳಾಗಿ ಬರುವದಿಲ್ಲವೆಂದು ರಷ್ಯಾದವರು ಸರ್ಕಾರಿಯಾಗಿ ಹೇಳುತ್ತಿದ್ದಾರಾದಾಗ್ಯೂ ರಷ್ಯಾದವರು ಕರಾರಿನ ಕಲಮುಗಳನ್ನು ಚರ್ಚೆಯೇನೋ ಮಾಡುತ್ತಿರುವರು. ರಷ್ಯಾದವರು ಮ್ಯಾಂಚೂರಿಯಾವನ್ನು ಪೋರ್ಟ್ ಆರ್ಥರ್ ಸಹಿತ ಜಪಾನವರಿಗೆ ಬಿಟ್ಟುಕೊಡುವುದಕ್ಕೂ ಸಘಾಲಿಯನ್ ದ್ವೀಪದಲ್ಲಿ ಜಪಾನವರು ಕೇಳುವ ಸೌಲಭ್ಯಗಳನ್ನೂ ಜಪಾನವರ ಯುದ್ಧದ ಖರ್ಚನ್ನೂ ಕೊಡುವುದಕ್ಕೂ ಒಪ್ಪಿಕೊಂಡಿದ್ದಾರೆಂದು ಕಾಣುವುದು.

ಜಪಾನವರು ಸಾಲಮಾಡುವ ಪ್ರಯತ್ನ.

ಲಂಡನ್, ಫೆಬ್ರುವರಿ ೯.—ಜಪಾನ್ ರಾಜಧಾನಿಯಾದ ಟೋಕಿಯೋ ನಗರದ ಸರ್ಕಾರಿ ಬ್ಯಾಂಕಿನ ವೈಸ್ ಪ್ರೆಸಿಡೆಂಟ್ ಮೆ|| ತಕಹಾಷಿ ಎಂಬವರು ತಾ. ೧೭ಕ್ಕೆ ಜಹಜು ಹತ್ತಿ ಅಮೇರಿಕ, ವಿಲಾಯಿತಿಗಳಿಗೆ ಹೋಗಿಬರುವವರಾಗಿದ್ದಾರೆ. ಆ ರಾಜ್ಯಗಳಲ್ಲಿ ಇವರು ಜಪಾನ್ ಸರ್ಕಾರದ ಪರವಾಗಿ ಸಾಲಮಾಡುತ್ತಾರೆಂದು ವರ್ತಮಾನವಿದೆ.

ಜಪಾನವರ ಪ್ರಯತ್ನ.

ಲಂಡನ್, ಫೆಬ್ರುವರಿ ೧೧.—ಶೀತಕಾಲದ ದುಸ್ಸ್ಥಿತಿಯು ನಿವಾರಣೆಯಾದ ಕೂಡಲೇ ಜಪಾನ್ ಜನರಲ್ ಕಾಮಿಮೂರಾ ರವರು ಸೈನಿಕರನ್ನೂ ಯುದ್ಧ ಸಾಮಗ್ರಿಗಳನ್ನೂ ಒದಗಿಸಿಕೊಂಡು, ರಷ್ಯಾದವರಿಗೆ ವ್ಲಾಡಿವೋಸ್ಟಾಕಿಗೆ ಉತ್ತರಭಾಗದಿಂದ ಬರುತ್ತಿರುವ ಆಹಾರವನ್ನು ತಡೆದು, ಅಲ್ಲಿ ಯುದ್ಧಕಾರ್ಯವನ್ನು ಪ್ರಾರಂಭಿಸುವವರಾಗಿದ್ದಾರೆ.

ಜಪಾನವರ ಇನ್ನೊಂದು ಜಯಪ್ರದ.

ಜಪಾನೀಯರು ಗುರುವಾರದ ದಿನ ಟಾಂಗ್ ಚೆಚಿಯಾ ಎಂಬ ಸ್ಥಳದ ಬಳಿ ಇರುವ ಒಂದು ಪ್ರಾಮುಖ್ಯವಾದ ಠಾಣ್ಯದಿಂದ ಎರಡು ರಷ್ಯಾ ಕಂಪನಿಗಳ ಸೈನ್ಯವನ್ನು ಹಿಂದಕ್ಕೆ ಓಡಿಸಿ, ಆ ಠಾಣ್ಯವನ್ನು ಸ್ವಾಧೀನಪಡಿಸಿಕೊಂಡರು. ರಷ್ಯಾದವರು [illegible] ಯವರ ಸೈನಿಕರ ಮೇಲೆ ವಿರಾಮವಿಲ್ಲದೆ ಫಿರಂಗಿಗಳನ್ನು ಎತ್ತಿ ಕಟ್ಟಿ ಹೊಡೆಯುತ್ತಿದ್ದಾರೆ.

ಹೈಕೌತಾಯಿನಲ್ಲಿ ರಷ್ಯಾದವರ ನಷ್ಟ.

ಲಂಡನ್, ಫೆಬ್ರುವರಿ ೧೨.—ಜಪಾನ್ ಗವರ್ನಮೆಂಟಿನವರು ತಿಳಿಸುವುದೇನೆಂದರೆ—ಹೈಕೌತಾಯಿ ಯುದ್ಧಭೂಮಿಯಲ್ಲಿ ತಾ. ೧೦ರ ವರೆಗೆ ತಮ್ಮ ಸೈನಿಕರು ೨,೦೦೦ ರಷ್ಯಾ ಯುದ್ಧಭಟರ ಶವಗಳನ್ನು ಗುಣಿಗಳಿಗೆ ಹಾಕಿ ಹೂಣಿಟ್ಟರು.

ಕ್ರೈಸ್ತ ಶಿಷ್ಯಭಾವ.

ಯೇಸು ಸ್ವಾಮಿಯು ಜೀವವಾನ ಕಾಲದಲ್ಲಿ ಆತನೊಂದಿಗಿದ್ದು ಆತನ ಸೇವೆಯನ್ನು ಮಾಡುವದರಲ್ಲೇ ನಿರತರಾಗಿದ್ದ ಹನ್ನೆರಡು ಮಂದಿಗೆ ಶಿಷ್ಯರೆಂಬ ಹೆಸರು ಸಲ್ಲುತ್ತಿದ್ದಿತಷ್ಟೆ. ಇವರಲ್ಲದೆ, ಆ ಯೇಸುವನ್ನು ಸ್ವಾಮಿಯೆಂದು ಅಂಗೀಕರಿಸಿದವರಾದರೂ ತಮ್ಮ ತಮ್ಮ ಕೆಲಸಗಳನ್ನು ಬಿಡದೆ ತಮ್ಮ ಮನೆಗಳಲ್ಲಿ ವಾಸಮಾಡಿಕೊಂಡಿದ್ದವರೂ ಅನೇಕರಿದ್ದರು. ಅವರಿಗೂ ಈ ಹೆಸರು ಸಲ್ಲುತ್ತಿದ್ದಿತು. ಈ ಶಿಷ್ಯರನ್ನು ಸ್ವಾಮಿಯು ಯಾವ ರೀತಿಯಲ್ಲಿ ಆದುಕೊಂಡನೆಂಬುದನ್ನು ನಾವು ವಿಚಾರಿಸಿದರೆ ಕ್ರೈಸ್ತ ಶಿಷ್ಯಭಾವವೆಂಬುದೇನೆಂದು ತಿಳಿಯಬಹುದಾಗಿದೆ.

ಯೇಸು ಸ್ವಾಮಿಯು ಶಿಷ್ಯರಾದವರು ಮೊದಲು ಸ್ನಾನಿಕನಾದ ಯೋಹಾನನೆಂಬವನ ಶಿಷ್ಯರಾಗಿದ್ದರು. ಒಂದು ದಿನ ಆ ಯೋಹಾನನು ಯೇಸು ಸ್ವಾಮಿಯನ್ನು ತೋರಿಸಿ—ಅಗೋ, ದೇವರ ಯಜ್ಞಪಶು ! ಎಂದು ಹೇಳಿದ ಕೂಡಲೆ ಆತನ ಶಿಷ್ಯರೊಳಗೆ ಇಬ್ಬರಾದ ಅಂದ್ರೆಯನೂ ಯೋಹಾನನೂ ಯೇಸುವನ್ನು ಹಿಂಬಾಲಿಸುವವರಾದರು. ಅವರು ಹಿಂದೆ ಬರುವದನ್ನು ಯೇಸುವು ನೋಡಿ—ನೀವು ಹುಡುಕುವದೇನು ? ಎನ್ನಲು, ಅವರು ಆತನಿಗೆ—ಗುರುವೇ ! ತಾವು ವಾಸಿಸುವದೆಲ್ಲಿ ? ಎಂದು ಕೇಳಿದರು. ಆತನು ಅವರಿಗೆ—ಬಂದು ನೋಡಿರಿ ಅಂದನು. ಅವರು ಆತನ ಸಂಗಡ ಹೋಗಿ ಆ ದಿನವನ್ನೆಲ್ಲಾ ಆತನ ಜೊತೆಯಲ್ಲಿ ಕಳೆದರು. ಅವರಿಗೂ ಸ್ವಾಮಿಗೂ ಯಾವ ಸಂಭಾಷಣೆಯು ನಡೆಯಿತೋ ನಮಗೆ ತಿಳಿಯದು. ಆದರೆ ಆತನ ವಿಷಯದಲ್ಲಿ ಅವರಿಗುಂಟಾದ ಭಕ್ತಿಯು ಅತಿ ವಿಶೇಷವಾದುದೆಂದು ತರುವಾಯ ನಡೆದ ವಿಷಯದಿಂದ ಗೊತ್ತಾಗುತ್ತದೆ. ಅದು ಹ್ಯಾಗೆಂದರೆ ಆ ಸಾಯಂಕಾಲದಲ್ಲಿಯೇ ಅಂದ್ರೆಯನು ತನ್ನ ಅಣ್ಣನಾದ ಸೀಮೋನನ ಬಳಿಗೆ ಹೋಗಿ—ನಾವು ಮೆಸ್ಸೀಯನನ್ನು (ಅಂದರೆ ದೇವರಿಂದ ಅಭಿಷಿಕ್ತನಾದವನನ್ನು) ಕಂಡುಕೊಂಡಿದ್ದೇವೆ ಎಂದು ಹೇಳಿ, ಅವನನ್ನು ಯೇಸು ಸ್ವಾಮಿಯ ಬಳಿಗೆ ಕರೆದುಕೊಂಡು ಬಂದನು. ಮಾರಣೆಯ ದಿವಸ ಯೇಸು ಸ್ವಾಮಿಯು ಫಿಲಿಪ್ಪನೆಂಬವನನ್ನು ಸಂಧಿಸಿದಾಗ "ನನ್ನ ಹಿಂದೆ ಬಾ" ಎಂದು ಅಪ್ಪಣೆ ಕೊಟ್ಟನು. ಇವನೂ ಯೇಸುಸ್ವಾಮಿಯೊಂದಿಗೆ ಸ್ವಲ್ಪ ಹೊತ್ತನ್ನು ಕಳೆಯುವುದರೊಳಗಾಗಿ ಆತನ ವಿಷಯದಲ್ಲಿ ಅಂದ್ರೆಯನಿಗಿದ್ದ ಅಭಿಪ್ರಾಯವನ್ನೇ ಉಂಟಾದವನಾದನೆಂದು ಗೊತ್ತಾಗುತ್ತದೆ. ಹ್ಯಾಗೆಂದರೆ—ಫಿಲಿಪ್ಪನು ನತನಯೇಲನ ಬಳಿಗೆ ಹೋಗಿ, ಅವನಿಗೆ—ಯಾವನ ವಿಷಯವಾಗಿ ಮೋಶೆಯು ಧರ್ಮಶಾಸ್ತ್ರದಲ್ಲಿ ಬರೆದನೋ ಮತ್ತು ಪ್ರವಾದಿಗಳು ಬರೆದರೋ ಆತನು ನಮಗೆ ಸಿಕ್ಕಿದನು, ಆತನು ಯಾರಂದರೆ ನಜರೇತಿನ ಯೇಸು ಎಂದು ಹೇಳಿದನು. ಆ ನತನಯೇಲನು ಯೇಸುವನ್ನು ಕಂಡು ಕೆಲಹೊತ್ತು ಮಾತನಾಡಿದ ಬಳಿಕ—"ಸ್ವಾಮಿಯೇ ನೀನು ದೇವಕುಮಾರನು ನಿಜ, ನೀನು ಇಸ್ರಾಯೇಲಿನ ಅರಸನು" ಎಂದು ಹೇಳಿದನು.

ಈ ಪ್ರಕಾರ ಸ್ವಾಮಿಯ ಶಿಷ್ಯರಾದವರು ಬೆತ್ಸಾಯಿದವೆಂಬ ಊರಿನವರು. ಈ ಊರು ಗಲಿಲಾಯ ಸಮುದ್ರದ ಪಶ್ಚಿಮ ತೀರದಲ್ಲಿರುವದು. ಯೇಸುಸ್ವಾಮಿಯು ಯೂದಾಯವನ್ನು ಬಿಟ್ಟು, ಗಲಿಲಾಯವೆಂಬ ಪ್ರಾಂತ್ಯದಲ್ಲಿ ಬೋಧಕೋದ್ಯೋಗವನ್ನು ನಡಸುತ್ತಾ ಸಂಚರಿಸುತ್ತಿರುವಲ್ಲಿ ಮೇಲೆ ಹೇಳಿರುವ ಈ ಮನುಷ್ಯರನ್ನು ಆಗಾಗ್ಗೆ ಕಾಣುತ್ತಿದ್ದು ಅವರು ತಮ್ಮನ್ನು ಸಂಪೂರ್ಣವಾಗಿ ತನ್ನ ಸೇವೆಗೆ ಒಪ್ಪಿಸಿಕೊಡಬೇಕೆಂದು ಹೇಳಿ ಶಿಷ್ಯರನ್ನಾಗಿ ಮಾಡಿಕೊಂಡನು. ಹಾಗೆಯೇ ಸೀಮೋನನನ್ನೂ ಅಂದ್ರೆಯನನ್ನೂ ಯೋಹಾನನನ್ನೂ ಅವನ ಸಹೋದರನಾದ ಯಾಕೋಬನನ್ನೂ ಸ್ವಾಮಿಯು ಶಿಷ್ಯರನ್ನಾಗಿ ಮಾಡಿಕೊಂಡದ್ದರ ವಿಷಯವಾಗಿ ಮಾರ್ಕ ೧ ೧೬—೨೦, ಮತ್ತಾಯ ೪ ೧೮—೨೨, ಲೂಕ ೫ ೧—೧೧ ರಲ್ಲಿ ಹೇಳಿರುತ್ತದೆ. ಇದಾದ ಮೇಲೆ ಕಪೆರ್ನೌಮ ಊರಿನ ಸುಂಕದವನಾದ ಮತ್ತಾಯನನ್ನೂ ಕರೆದು ಶಿಷ್ಯನನ್ನಾಗಿ ಮಾಡಿಕೊಂಡನು.

ಸುವಾರ್ತಾ ಪುಸ್ತಕಗಳನ್ನು ಓದಿದಲ್ಲಿ ಮೇಲೆ ಸೂಚಿಸಿರುವಂತೆ ಕೆಲವರನ್ನು ಸ್ವಾಮಿಯೇ ಕರೆದು ಶಿಷ್ಯರನ್ನಾಗಿ ಮಾಡಿಕೊಂಡನೆಂತಲೂ ಇನ್ನು ಕೆಲವರು ತಾವೇ ಆತನ ಹಿಂಬಾಲಕರಾಗುವಂತೆ ಕೇಳಿಕೊಂಡರೆಂದೂ ತಿಳಿದು ಬರುತ್ತದೆ. ಗೆರಸವೆಂಬ ಸೀಮೆಯಲ್ಲಿ ದೆವ್ವ ಹಿಡಿದವನಾದ ಒಬ್ಬ ಮನುಷ್ಯನನ್ನು ಸ್ವಾಮಿಯು ಸ್ವಸ್ಥಮಾಡಲು ಅವನು ಆತನ ಜೊತೆಯಲ್ಲೇ ಇರಬೇಕೆಂದು ಅಪೇಕ್ಷಿಸಿದನು. ಆದರೆ ಆತನು ಒಪ್ಪದೆ—ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ, ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು ನಿನಗೆ ಎಂಥೆಂಥಾ ದೊಡ್ಡ ಉಪಕಾರಗಳನ್ನು ಮಾಡಿದನೋ ಅವನ್ನು ಹೇಳು ಅಂದನು. ಲೂಕನ ಸುವಾರ್ತೆಯಲ್ಲಿ ಮತ್ತೆ ಮೂರು ಮಂದಿಯ ವಿಷಯವಾಗಿದೆ ಹೇಳಿರುವದು ಇದು ಚನ್ನಾಗಿ ಅವರೊಳಗೊಬ್ಬನು ತಾನೇ ಆತನ ಬಳಿಗೆ ಬಂದು, ತನ್ನ ಶಿಷ್ಯನಾಗುತ್ತೇನೆಂದು ಹೇಳಲು, ಆತನು ಅವನಿಗೆ—ನರಿಗಳಿಗೆ ಗುದ್ದುಗಳಿವೆ, ಆಕಾಶದಲ್ಲಿ ಹಾರ್‍ಯಾಡುವ ಪಕ್ಷಿಗಳಿಗೆ ಗೂಡುಗಳಿವೆ. ಆದರೆ ಮನುಷ್ಯಕುಮಾರನು ಮಲಗೇನೆಂದರೆ ಆತನಿಗೆ ತಲೆಯಿಡುವದಕ್ಕೆ ಸ್ಥಳವೂ ಇಲ್ಲ ಅಂದನು. ಆತನು ಮತ್ತೊಬ್ಬನಿಗೆ—ನನ್ನ ಹಿಂದೆ ಬಾ ಎಂದು ಹೇಳಲು, ಅವನು—ಸ್ವಾಮೀ, ನಾನು ಹೋಗಿ ಮೊದಲು ನನ್ನ ತಂದೆಗೆ ಮಣ್ಣು ಕೊಟ್ಟು ಬರುವಂತೆ ನನಗೆ ಅಪ್ಪಣೆಯಾಗಬೇಕು ಅಂದನು. ಆದರೆ ಆತನು ಅವನಿಗೆ—ಸತ್ತವರೇ ಸತ್ತುಹೋದ ತಮ್ಮವರಿಗೆ ಮಣ್ಣು ಕೊಟ್ಟುಕೊಳ್ಳಲಿ ! ನೀನಾದರೋ ದೇವರ ರಾಜ್ಯದ ವಿಷಯವನ್ನು ಸಾರುತ್ತಾ ಇರು ಎಂದು ಹೇಳಿದನು. ಇನ್ನೊಬ್ಬನು ಆತನಿಗೆ—ಸ್ವಾಮೀ, ನಿನ್ನ ಹಿಂದೆ ಬರುತ್ತೇನೆ, ಆದರೆ ಮೊದಲು ನನ್ನ ಮನೆಯವರಿಗೆ ಹೇಳಿ ಬರುವದಕ್ಕೆ ನನಗೆ ಅಪ್ಪಣೆಯಾಗಬೇಕು ಅಂದನು. ಯೇಸು ಅವನಿಗೆ—ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು ಹೇಳಿದನು.

ಇನ್ನೊಂದು ಸಂದರ್ಭದಲ್ಲಿ ಬಹು ಯೋಗ್ಯನಾಗಿಯೂ ಐಶ್ವರ್ಯವಂತನಾಗಿಯೂ ಇದ್ದ ಒಬ್ಬ ಯೌವನಸ್ಥನು ಆತನ ಬಳಿಗೆ ಬಂದ—ನಿತ್ಯಜೀವವನ್ನು ಪಡೆಯ ತಕ್ಕ ಮಾರ್ಗವನ್ನು ತಿಳಿಸಬೇಕೆಂದು ಕೇಳಿಕೊಂಡನು. ಆಗ್ಗೆ ಯೇಸು—ನಿನಗೆ ಇನ್ನೂ ಒಂದು ಕೊರತೆಯಿದೆ. ಅದೇನೆಂದರೆ, ನಿನ್ನಲ್ಲಿರುವದನ್ನೆಲ್ಲಾ ಮಾರಿಬಿಟ್ಟು ಬಡವರಿಗೆ ದಾನಮಾಡು, ಆಗ ಪರಲೋಕದಲ್ಲಿ ನಿನಗೆ ಸಂಪತ್ತು ಇರುವದು ಮತ್ತು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು.

ಯೇಸುಸ್ವಾಮಿಯಲ್ಲಿ ತಕ್ಕ ಶಿಷ್ಯಭಾವವನ್ನು ಕುರಿತು ಆತನ ಅಭಿಪ್ರಾಯವೇನೆಂಬುದನ್ನು ವಿವರಿಸುವದಕ್ಕೆ ಸುವಾರ್ತಾ ಪುಸ್ತಕಗಳಿಂದ ಇನ್ನೂ ಅನೇಕ ನಿದರ್ಶನಗಳನ್ನು ಕೊಡಬಹುದು. ಆದರೆ ಈಗ ನಾವು ಕೊಟ್ಟಿರುವ ಈ ನಿದರ್ಶನಗಳಿಂದಲೆ ಕ್ರೈಸ್ತಶಿಷ್ಯಭಾವದ ವಿಷಯವಾಗಿ ಮುಖ್ಯವಾದ ಕೆಲವು ಅಂಶಗಳನ್ನು ತಿಳಿಯಬಹುದು. ಅವು ಯಾವವಂದರೆ—

೧—ಪ್ರೀತಿಯೇ ಶಿಷ್ಯಭಾವದ ಮೊದಲನೆಯ ನಿಬಂಧನೆ—ಆತನು ಒಂದು ಸಂದರ್ಭದಲ್ಲಿ ತನ್ನ ಶಿಷ್ಯರಿಗೆ—ನೀವು ನನ್ನನ್ನು ಆದುಕೊಳ್ಳಲಿಲ್ಲ, ನಾನೇ ನಿಮ್ಮನ್ನು ಆದುಕೊಂಡಿದ್ದೇನೆ ಅನ್ನುತ್ತಾನೆ. ಹಾಗೆಂದರೆ—ಆತನು ಅವರನ್ನು ಬಲವಂತವಾಗಿ ತನ್ನ ಸೇವೆಗೆ ಸೇರಿಸಿಕೊಂಡನೆಂಬರ್ಥವಾಗುವದಿಲ್ಲ. ಆತನು ಅವರನ್ನು ಆದುಕೊಂಡನು ನಿಜ, ಆದರೆ ಆಮೇಲೆ ಅವರೇ ಆತನನ್ನು ಆದುಕೊಳ್ಳತಕ್ಕವರಾದರು. ನಾವು ಮೊದಲ ಉದಾಹರಿಸಿದ ನಿದರ್ಶನದಲ್ಲಿ—ಯೋಹಾನನೂ ಅಂದ್ರೆಯನೂ ಕ್ರೀಸ್ತನೊಂದಿಗೆ ತಾವೇ ಹೊಕ್ಕುಬಳಕೆಮಾಡಿ ನೋಡಿ ಆತನ ವಿಷಯವಾಗಿ ತಿಳಿಯಬೇಕೆಂದು ಆಶಿಸಿದುದರಿಂದಲೆ ಅವರು ಆತನ ಶಿಷ್ಯರಾದರು. ಹೀಗೇ ಹೊಸ ಒಡಂಬಡಿಕೆಯೆಂಬ ವೇದಪುಸ್ತಕದ ಎರಡನೇ ಭಾಗದಲ್ಲಿ ಎಲ್ಲಿನೋಡಿದಾಗ್ಯೂ ಕ್ರೀಸ್ತನಿಗಾಗಿ ಯಾರಲ್ಲಿ ಪ್ರೀತಿಯುಂಟಾಗುತ್ತದೋ ಅವರೇ ಆತನ ಶಿಷ್ಯರಾಗತಕ್ಕವರೆಂಬುವದು ಪರಿಷ್ಕಾರವಾಗಿ ತಿಳಿದುಬರುತ್ತದೆ. ಕೆಲವರು ಆತನಿಂದ ಯಾವದೋ ಒಂದು ಐಹಿಕ ಪ್ರಯೋಜನವುಂಟೆಂದು ಭಾವಿಸಿ ಆತನ ಶಿಷ್ಯರಾಗಬೇಕೆಂಬು ಅಪೇಕ್ಷಿಸುವದುಂಟು. ಅಂಥವರು ಕ್ರೀಸ್ತನ ನಿಜವಾದ ಶಿಷ್ಯರಾಗಲಾರರು. ಇನ್ನು ಕೆಲವರು ಕ್ರೀಸ್ತ ಮತತತ್ವವು ಬಹು ಶ್ರೇಷ್ಠವಾದುದೆಂದು ಒಪ್ಪಿಯೂ, ಮತ್ತೆ ಕೆಲವರು ತಮ್ಮ ಮತಾಚರಣೆಗಳಲ್ಲಿ ನಿಜವಿಲ್ಲವೆಂದು ಹೇಳಿಯೂ ಕ್ರೀಸ್ತನ ಶಿಷ್ಯರಾಗುತ್ತಾರೆ. ಇಂಥ ಉದ್ದೇಶಗಳು ದೇವರ ರಾಜ್ಯದ ಬಾಗಿಲಿಗೆ ಸಾರುವ ವಿವಿಧ ದ್ವಾರಗಳಾಗಿವೆಯಾದರೂ ಕ್ರೀಸ್ತನಲ್ಲಿ ತಕ್ಕ ಪ್ರೀತಿಯೇ ಆ ಬಾಗಿಲಾಗಿದೆಯೆಂಬುದನ್ನು ನಾವು ಮರೆಯಬಾರದು. ಇದಕ್ಕೆ ಕಾರಣವೇನಂದರೆ—ನನ್ನ ಹಿಂದೆ ಬಾ ಎಂದು ಆತನೇ ಪದೇಪದೇ ಹೇಳುತ್ತಿದ್ದನು. ಮತ್ತು ತಾನೊಬ್ಬ ಕುರುಬನಿಗೆ ಸಮಾನನೆಂತಲೂ ತನ್ನ ಕುರಿಗಳನ್ನು ನಡಸುವವನು ತಾನೇ ಎಂತಲೂ ಹೇಳಿ—ಅವು ಅನ್ಯನ ಹಿಂದೆ ಹೋಗುವದೇ ಇಲ್ಲ ! ಬೇರೊಬ್ಬರ ಸ್ವರವನ್ನು ತಿಳಿಯದೆ ಇರುವದರಿಂದ ಅವು ಅವನನ್ನು ಬಿಟ್ಟು ಓಡಿಹೋಗುತ್ತವೆ ಎಂದು ತಿಳಿಸಿದ್ದಾನೆ.

[ಸಶೇಷ]

ಇಂಡಿಯಾ ದೇಶದ ವೃತ್ತಾಂತಗಳು

ಹಿಂದುಸ್ಥಾನದ ಕಳೆದ ವರುಷದ ಆದಾಯವ್ಯಯಗಳ ಲೆಕ್ಕಗಳು ತಯಾರಾಗುತ್ತಿವೆ. ಈ ಸಲ ಗವರ್ನಮೆಂಟಿನವರಿಗೆ ಖರ್ಚು ಜಾತಾ ಆರು ಕೋಟಿ ರೂಪಾಯಿ ನಿವ್ವಳ ಉಳಿಕೆಯಾಗುವಂತೆ ಕಾಣುವುದು.

*****

ಟಾಹಿರಿ ಸಂಸ್ಥಾನದ ರಾಜರಾದ ಮಲ್ಹಾರ್‍ರಾವ್ ಖಡಂಗ್ ಮಹಾರಾಯರು ಕಳೆದ ಜನವರಿ ೨೭ ರಲ್ಲಿ ಕಾಲವಾದರೆಂದೂ, ಇವರು ತಮ್ಮ ನಿರ್ದುಷ್ಟವಾದ ಆಳಿಕೆಯಿಂದ ಸಕಲಪ್ರಜೆಗಳಲ್ಲೂ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದರೆಂದೂ ತಿಳಿದು ಬಂದಿದೆ.

*****

ಮಧ್ಯ ಇಂಡಿಯಾಕ್ಕೆ ಸೇರಿದ ಹಜಾರಿಬಾಗ್ ಡಿಸ್ಟ್ರಿಕ್ಟಿನಲ್ಲಿ ಮನುಷ್ಯರನ್ನು ತಿನ್ನುವ ಎರಡು ಹುಲಿಗಳು ಸೇರಿಕೊಂಡು, ಬಹಳ ಹಾವಳಿ ಮಾಡುತ್ತಿವೆ. ಅವುಗಳನ್ನು ಕೊಂದವರಿಗೆ ಒಂದೊಂದು ಹುಲಿಗೆ ೫೦೦ ರೂಪಾಯಿನಂತೆ ಇನಾಮು ಕೊಡುವುದಾಗಿ ಸರ್ಕಾರದವರು ಸಾರಿಸಿರುತ್ತಾರೆ.

*****

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಡಿರಾ ಇಸ್ಮೈಲ್‍ಖಾನ್ ಡಿಸ್ಟ್ರಿಕ್ಟಿನಲ್ಲಿ ಪರಹರಪುರವೆಂಬ ನಾಲೆಯನ್ನು ಹೊಸದಾಗಿ ತೆಗೆಯಿಸಿ, ಆ ಪ್ರಾಂತ್ಯ ಕರೀ ವ್ಯವಸಾಯವನ್ನು ಹೆಚ್ಚಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೭ ಲಕ್ಷ ರೂಪಾಯಿನ ಅಂದಾಜು ಪಟ್ಟಿಯನ್ನು ಸ್ವೀಕಾರ ಮಾಡಿದ್ದಾರೆ.

*****

ಕಲ್ಕತ್ತಾ ಪಟ್ಟಣದಲ್ಲಿರುವ ಮಿಷನ್ ಸಂಗಡದ ಮಿಸಲ್ಮಾರ್ಸ್ಪ್ರೀಯರು ನೂರಾರುಮಂದಿ ಕಳೆದ ವಾರ ಡಾಕ್ಟರ್ ಮಾರ್ಕ ಎಂಬವರ ಬಂಗಲೆಯಲ್ಲಿ ಸಭೆಸೇರಿ, ವೈಸ್‍ರಾಯಿಯವರ ಪತ್ನೀಯವರಾದ ಲೇಡಿ ಕರ್ಸನರವರಿಗೆ ಕಾಯಿಲೆ ನಿವಾರಣೆಯಾಗಿ ಈಗ ಅವರು ಸುಖದಿಂದಿರುತ್ತಾರೆಂಬುದನ್ನು ಕೇಳಿ ಬಹಳ ಸಂತೋಷಪಟ್ಟು, ದೇವರಿಗೆ ಕೃತಜ್ಞತಾಸ್ತುತಿಗಳನ್ನು ಸಮರ್ಪಿಸಿದರು.

ಲಂಕಾ ದ್ವೀಪದ ಸುತ್ತುಮುತ್ತಲೂ ಇರುವ ರೀಫ್‌ಗಳನ್ನು ಸರ್ಕಾರದವರು ಕಂಟ್ರಾಕ್ಟು ಕೊಟ್ಟು, ಈ ತಿಂಗಳಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆಯಿಸುವವರಾಗಿದ್ದಾರೆ. ಈಗ ತೆಗೆದರೆ ಒಟ್ಟು ೮,೩೧,೩೦,೦೦೦ ಮುತ್ತಿನ ಚಿಪ್ಪುಗಳು ಮುತ್ತುಸಹಿತ ಸಿಕ್ಕುವವೆಂದು ಅಂದಾಜಾಗಿದೆ. ಕಂಟ್ರಾಕ್ಟರುಗಳು ಅವುಗಳನ್ನು ತೆಗೆಯುವದಕ್ಕೆ ೮ ದಿವಸದ ತನಕ ಪ್ರತಿ ದಿನವೂ ೮೦೦ ದೋಣಿಗಳನ್ನು ಉಪಯೋಗಿಸುವರು.

*****

ಬೊಂಬಾಯಿ ಪಟ್ಟಣದಲ್ಲಿ ಮಿ॥ ರತನ್ ಮುಲ್‍ಜಿ ಎಂಟ್ಟಿ ಖಾರೀ ಸಾಹುಕಾರನು ಒಂದು ಅನಾಥಾಲಯವನ್ನು ಸ್ವಹಣದಿಂದ ಕಟ್ಟಿಸಿಕೊಟ್ಟು, ಈ ಕಟ್ಟಡಕ್ಕೆ ಲೇಡಿ ನಾರ್ಥ್‍ಕೋಟ್‌ಯವರ ಹಿಂದೂ ಅನಾಥಾಲಯವೆಂಬ ಹೆಸರಿಟ್ಟನು. ಬೊಂಬಾಯಿ ಗವರ್ನರವರು ಕಳೆದ ವಾರ ಈ ಕಟ್ಟಡವನ್ನು ತಮ್ಮ ಪತ್ನೀಯರ ಹೆಸರಿನ ಮೇಲೆ ಕಟ್ಟಿದ್ದಕ್ಕಾಗಿ ಆ ಸಾಹುಕಾರನನ್ನು ಹೊಗಳಿ ಅದನ್ನು ಪ್ರತಿಷ್ಠೆ ಮಾಡಿದರು.

*****

ಆಗ್ರಾ ಪಟ್ಟಣದಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಜಗತ್ ಸಿಂಗ್ ಎಂಬವನೂ ಪೇರೋದ್ ವಿಲಿಯಮ್ ಎಂಬ ಪೋಲೀಸ ಜವಾನನೂ ಸೇರಿ ರಾಮಾ ಕೃಷ್ಣನೆಂಬೊಬ್ಬನನ್ನು ಹಿಡಿದು, ಅಕ್ರಮ ಬೈದು ಮಾಡಿ, ಅವನ ಮೈ ಇದ್ದ ಒಡವೆಗಳನ್ನು ಅಪಹರಿಸಬೇಕೆಂದು ಅವನನ್ನು ಹಿಂಸೆಪಡಿಸಿದರು. ಇದಕ್ಕಾಗಿ ಆ ಇನ್ಸ್‌ಪೆಕ್ಟರಿಗೆ ೧ ವರುಷ ಕಠಿಣ ಸಜಾ, ೧೦೦ ರೂ ದಂಡವೂ ಪೋಲೀಸ್ ಜವಾನನಿಗೆ ೬ ತಿಂಗಳ ಕಠಿಣ ಸಜಾವೂ ವಿಧಿಸಿದ್ದಾರೆ.

*****

ಕಾನೂರು ಪಟ್ಟಣದಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ತಂದೊದಗಿಸುವುದಕ್ಕೆ ಮ್ಯುನಿಸಿಪಾಲಿಟಿಯವರು ಕಾಮಗಾರಿ ನಡೆಸುತ್ತಿದ್ದಾರೆ. ಇದಕ್ಕೆ ಒಟ್ಟು ೧ ೬೮,೦೦೦ ರೂಪಾಯಿ ಖರ್ಚಾಗುವುದು. ಈ ಪೈಕಿ ೩೦,೮೯೦ ರೂಪಾಯಿಯನ್ನು ಗವರ್ನಮೆಂಟಿನಿಂದ ಸಾಲ ಪಡೆದುಕೊಂಡು, ೨೦ ವರುಷಗಳ ತನಕ ೪,೮೮೦ ರೂಪಾಯಿನಂತೆ ಬಡ್ಡಿ ಸಮೇತ ಸಾಲ ತೀರಿಸುವದು ಏರ್ಪಾಡು ಮಾಡಿ, ಗವರ್ನಮೆಂಟಿನವರನ್ನು ಸಾಲ ಕೇಳಿದ್ದಾರೆ.

*****

ಪಂಜಾಬ ಆಧಿಪತ್ಯಕ್ಕೆ ಸೇರಿದ ಮಾಲೇರ್‌ಕೋಟ್ಲಾ ಎಂಬ ಸಂಸ್ಥಾನದಲ್ಲಿ ನವಾಬ್ ಇಬ್ರಾಹಿಂ ಅಲಿ ಖಾನ್ ಯವರಿಗೆ ಚಿತ್ತಸ್ಥಿತಿಯು ಸಮಂಜಸವಾಗಿಲ್ಲವೆಂದು ಕಂಡುಬಂದ ಕಾರಣ ಆ ಸಂಸ್ಥಾನದ ಕಾರುಬಾರುಗಳನ್ನು ನೋಡಿಕೊಳ್ಳುವುದಕ್ಕೆ ಸರ್ ಅಬ್ದುರ್ ಖಾನ್, ಕೆ ಸಿ ಐ ಇ ಯವರನ್ನು ಸಂಸ್ಥಾನದ ಮಂತ್ರಿಯಾಗಿ ನೇಮಿಸಿದ್ದಾರೆ. ಆ ಸಂಸ್ಥಾನದ ಯುವರಾಜರಾದ ನವಾಬ್ ಅಹಮದ್ ಅಲಿ ಖಾನ್ ಯವರಿಗೆ ಸಿಂಹಾಸನವನ್ನು ವಹಿಸಿಕೊಟ್ಟರು.

*****

ಪಶುವೈದ್ಯವನ್ನು ದಕ್ಷಿಣ ದೇಶದಲ್ಲಿ ಹೇಳಿಕೊಡುವ ಪಾಠಶಾಲೆಯೊಂದೂ ಇರುವುದಿಲ್ಲ. ಅದನ್ನು ಕಲಿಯುವುದಕ್ಕೆ ಸದ್ಯ ಎಲ್ಲರೂ ಬೊಂಬಾಯಿ ಪಟ್ಟಣಕ್ಕೆ ಹೋಗಬೇಕಾಗಿದೆ. ಮದರಾಸು ಸರ್ಕಾರದವರು ಇದರಿಂದುಂಟಾಗುವ ತೊಂದರೆಗಳನ್ನು ತಿಳಿದು ಮದರಾಸ್ ಪಟ್ಟಣದಲ್ಲೇ ಪಶುವೈದ್ಯ ವಿದ್ಯಾಶಾಲೆಯನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿ, ಕಟ್ಟಡ ಮುಂತಾದ್ದು ತಯಾರಾಗುವದಕ್ಕೆ ಸದ್ಯದಲ್ಲಿ ೭೪,೦೦೦ ರೂಪಾಯಿ ತನಕ ಸ್ವೀಕಾರ ಮಾಡಿದ್ದಾರೆ.

*****

ಮುಜಫರಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಅಜೀಂಗಂಜ್ ಪಟ್ಟಣದಲ್ಲಿ ಬಾಬು ಧನಪತಿ ಸಿಂಗ್ ನೌಲಾಖಾ ಎಂಬ ಸಾಹುಕಾರನು ೧೫,೦೦೦ ರೂಪಾಯಿ ಧರ್ಮ ಮಾಡಿ, ಒಂದು ಧರ್ಮದ ಆಸ್ಪತ್ರೆಯನ್ನು ಕಟ್ಟಿಸುತ್ತಿದ್ದಾನೆ. ಈ ಆಸ್ಪತ್ರೆಗೆ ಬೇಕಾಗುವ ಸಾಮಗ್ರಿಗಳನ್ನು ತರಿಸಿಕೊಡುವುದಕ್ಕೆ ಈಗ ಮತ್ತೆ ೧,೦೦೦ ರೂಪಾಯಿ ಕೊಡುತ್ತೇನೆಂದು ವಾಗ್ದಾನ ಮಾಡಿರುವನು. ಲೆಫ್ಟಿನೆಂಟ್ ಗವರ್ನರರು ಈ ಧರ್ಮ ಕಾರ್ಯಕ್ಕಾಗಿ ಆತನನ್ನು ಬಹಳವಾಗಿ ವಂದಿಸಿರುತ್ತಾರೆ.

*****

ವಾಯುವ್ಯ ಪ್ರಾಂತ್ಯದಲ್ಲಿ ಆರ್ಯ ಸಮಾಜದ ಮೆಂಬರುಗಳು ಕೆಲವರು ಕ್ರೈಸ್ತ ಮತದ ಮತ್ತು ಮಹಮದೀಯ ಮತದ ಕೆಲವು ಮುಖ್ಯ ತತ್ವಗಳನ್ನು ಕುರಿತು ಬಹು ನಿಂದೆಯಾದ ಪುಸ್ತಕಗಳನ್ನು ಬರೆದು ಪ್ರಜೆಗಳಲ್ಲಿ ಹರಡುತ್ತಾ ಬಂದರು. ಇದರಿಂದ ಮತವಿಚಾರವಾಗಿ ಪ್ರಜೆಗಳಲ್ಲಿ ವಿರೋಧಗಳೂ ಕಲಹಗಳೂ ಉಂಟಾಗುತ್ತವೆಂಬ ಭಯ ಕಂಡುಬಂದ ಕಾರಣ ಸರ್ಕಾರದವರು ಆ ಸಮಾಜದ ಕೆಲವು ಮೆಂಬರುಗಳ ಮೇಲೆ ಮೊಕದ್ದಮೆ ಮಾಡಿ ತನಿಖೆಮಾಡುತ್ತಿದ್ದಾರೆ.

*****

ಈಚೆಗೆ ಬಂಗಾಳಾ ಆಧಿಪತ್ಯದ ಗಣಿಗಳಲ್ಲಿ ಉತ್ಪತ್ತಿಯಾಗುವ ಕಲ್ಲಿದ್ದಲು ಹೆಚ್ಚುತ್ತಾ ಬಂದಿರುವುದಲ್ಲದೆ ಅದನ್ನೇ ಹಿಂದುಸ್ಥಾನದ ರೈಲ್ ಗಾಡಿಗಳನ್ನು ನಡಿಸುವುದಕ್ಕೂ ಕಾರ್ಖಾನೆಗಳಲ್ಲಿ ಯಂತ್ರಗಳನ್ನು ನಡಸುವುದಕ್ಕೂ ವಿಶೇಷವಾಗಿ ಉಪಯೋಗಿಸುತ್ತಾ ಬಂದಿದ್ದಾರೆ. ಹಿಂದಿನ ವರುಷ ಬೊಂಬಾಯಿ ಪಟ್ಟಣ ಒಂದೇ ೬,೭೯,೪೫೫ ಟನ್ ಕಲ್ಲಿದ್ದಲನ್ನು ಕೊಂಡು ಉಪಯೋಗಿಸಿಕೊಂಡಿತು. ಕಳೆದ ವರುಷವಾದರೋ ಆ ಸಂಖ್ಯೆಯು ೮,೮೧,೮೦೬ ಟನ್‌ಗಳಷ್ಟಾಯಿತು. ಇದು ಈ ರಾಷ್ಟ್ರದ ಶ್ರೇಯೋಭಿವೃದ್ಧಿಗೆ ಸಹಕಾರಿಯಾಗಿರತ್ತದೆ.

ಅಪೋಲಿಲ ಮಂಳ್ಕೆ ಒಬ್ಬ ಉಪವಾಸಕನನ್ನು ಮದರಾಸ್ ಹೈಕೋರ್ಟಿನವರೇ ನೇಮಕ ಮಾಡುವವರಾಗಿದ್ದಾರೆ. ಈಗ ಅವರು ಈ ಮಠದ ಶಿಷ್ಯರಿಗೆಲ್ಲಾ ಒಂದು ನೋಟೀಸ್ ಕೊಟ್ಟು, ಶಿಷ್ಯರ ಪೈಕಿ ೧೮ ವರುಷಕ್ಕೆ ಮೇಲ್ಪಟ್ಟವರು ಸಮ್ಮತಿ ಹಾಕಿ ಯಾರ ನ್ನು ನೇಮಕಮಾಡಬೇಕೆಂದು ಅಪೇಕ್ಷಿಸುತ್ತಾರೋ ತಿಳಿಯಬೇಕೆಂದೂ, ಶಿಷ್ಯರು ಈ ಅರ್ಜಿಯನ್ನು ಏಪ್ರಿಲ್ ೧ ರೊಳಗಾಗಿ ವಕೀಲರ ಮೂಲಕ ಹೈ ಕೋರ್ಟಿಗೆ ಅರಿಕೆ ಮಾಡಿಕೊಳ್ಳಬೇಕೆಂದೂ ಅಪ್ಪಣೆಕೊಟ್ಟಿದ್ದಾರೆ.

❖❖❖❖❖

ಭಾವನಗರದ ಸಂಸ್ಥಾನದಲ್ಲಿ ಸರ್ಕಾರದವರು ೧೫ ಲಕ್ಷ ರೂಪಾಯಿ ಸಾಲ ಬೇಕೆಂದು ತಮ್ಮ ಸಂಸ್ಥಾನದಲ್ಲಿರುವ ಸಾಹುಕಾರರಿಗೆಲ್ಲಾ ತಿಳಿಯಪಡಿಸಿದರು. ಸಾಹುಕಾರರು ಕೂಡಲೇ ಹಣ ಕೊಡುವುದಾಗಿ ಅರ್ಜಿ ಹಾಕಿದರು. ಅರ್ಜಿಗಳನ್ನೆಲ್ಲಾ ಕೂಡಿಸಿ ನೋಡಿದಾಗ ಸರ್ಕಾರಕ್ಕೆ ಬೇಕಾಗಿದ್ದ ೧೫ ಲಕ್ಷಕ್ಕಿಂತಲೂ ಸಾಹುಕಾರರು ೧,೩೭,೦೦೦ ರೂಪಾಯಿ ಜಾಸ್ತಿ ಕೊಡುವುದಾಗಿ ವಾಗ್ದಾನ ಮಾಡಿದ್ದರು. ಆಗ ಸರ್ಕಾರದವರು ಈ ಜಾಸ್ತಿ ಸಾಲ ಅವಶ್ಯವಿಲ್ಲವೆಂದು ನಿರಾಕರಿಸಿ ೧೫ ಲಕ್ಷವನ್ನು ಮಾತ್ರ ಅಂಗೀಕರಿಸಿದರು.

❖❖❖❖

ಅಫ್ಘಾನಿಸ್ಥಾನದ ಅಮೀರರು ತಮ್ಮ ರಾಜ್ಯದ ಆಯುಧ ಶಾಲೆಗಳನ್ನೆಲ್ಲಾ ತನಿಖೆಮಾಡಿ, ಎಷ್ಟೆಷ್ಟು ಯುದ್ಧಸಾಮಗ್ರಿಗಳಿವೆ ಎಂಬುದನ್ನು ಗೊತ್ತುಮಾಡಿಸಿದರು. ಅಲ್ಲಿ ಈಗ ಬೇಕಾದಷ್ಟು ಸಾಮಗ್ರಿ ಇರುವುದೆಂದು ತಿಳಿದುಬಂದ ಕಾರಣ ಹೊಸ ಸಾಮಾನು ತಯಾರುಮಾಡುವುದನ್ನು ನಿಲ್ಲಿಸಿ, ಯೂರೋಪಿನಿಂದ ಯುದ್ಧ ಸಾಮಾನುಗಳನ್ನು ಇನ್ನು ತರಿಸಬೇಕಾದದ್ದಿಲ್ಲವೆಂದು ಹುಕುಂ ಕೊಟ್ಟು, ಊರಿಂದೂರಿಗೆ ಸೈನಿಕರ ಸಾಮಾನು ಯುದ್ಧ ಸಾಮಗ್ರಿಯನ್ನು ಸಾಗಿಸುವುದಕ್ಕೆ ಅನುಕೂಲಿಸುವಂಥಾ ಗಾಡಿ ಮೊದಲಾದ ವಾಹನಗಳನ್ನು ಸಿದ್ಧಪಡಿಸಬೇಕೆಂದು ಅಪ್ಪಣೆ ಮಾಡಿರುತ್ತಾರೆ

❖❖❖❖

ಪನ್ನಾ ಸಂಸ್ಥಾನದ ಮಹಾರಾಜರವರ ಮೇಲೆ ಅವರು ತಮ್ಮ ಚಿಕ್ಕಪ್ಪನಿಗೆ ವಿಷಹಾಕಿಸಿ ಕೊಲ್ಲಿಸಿದರೆಂಬ ಅಪವಾದ ಬಂದು, ಒಂದು ಸ್ಪೆಷಲ್ ಕೋರ್ಟಿನಲ್ಲಿ ವಿಚಾರಣೆ ಆದದ್ದರ ಮೇಲೆ ಅವರನ್ನು ಇಂಡಿಯಾ ಗವರ್ನಮೆಂಟಿನವರು ಸಿಂಹಾಸನ ಪದವನ್ನು ತಪ್ಪಿಸಿದ್ದಷ್ಟೆ. ಮಹಾರಾಜರವರು ಈ ತೀರ್ಮಾನದ ಮೇಲೆ ವಿಲಾಯಿತಿ ಪ್ರಿವಿ ಕೌನ್ಸಿಲ್ ಎಂಬ ನ್ಯಾಯಸ್ಥಾನದಲ್ಲಿ ಅಪೀಲ್ ದಾಖಲ್ ಮಾಡಿದರು. ಆದರೆ ಅಲ್ಲಿನ ಜಡ್ಜಿಗಳು ಈ ಮೊಕದ್ದಮೆಯು ಹಿಂದೂಸ್ಥಾನದ ಕೋರ್ಟುಗಳಲ್ಲಿ ತೀರ್ಮಾನವಾದುದಲ್ಲವೆಂತಲೂ, ಇಂಡಿಯಾ ಗವರ್ನಮೆಂಟಿನವರೇ ಅವರ ಹುಕುಮನ್ನು ಬದಲಾಯಿಸಬೇಕೆಂತಲೂ, ತಾವು ಈ ಮೊಕದ್ದಮೆಯನ್ನು ಕೈಹಿಡಿಯುವುದಿಲ್ಲವೆಂತಲೂ ತೀರ್ಮಾನ ಹೇಳಿಬಿಟ್ಟರು.

❖❖❖❖❖

ಕಲ್ಕತ್ತಾಪಟ್ಟಣದಲ್ಲಿ ಎಂಟಾಲಿ ಎಂಬ ಮೊಹಲ್ಲೆಯಲ್ಲಿ ಗೌರವವಾದ ಒಬ್ಬ ಜಮೀನ್ದಾರನ ಮನೆಯಲ್ಲಿ ಅತ್ತೆಯಾದವಳು ತನ್ನ ಸೊಸೆಯನ್ನು ಬಹಳವಾಗಿ ಹೊಡೆದು ಹಿಂಸೆ ಮಾಡಿದಳು. ಸೊಸೆ ಎದುರಿಗಿದ್ದರೆ ತನಗೆ ಇನ್ನೂ ಹಿಂಸೆಯಾದೀತೆಂದು ಹೆದರಿ, ೧೮ ತಿಂಗಳ ಕೂಸನ್ನು ಕಟ್ಟಿಕೊಂಡು, ಒಂದು ಕೋಣೆಗೆ ಹೋಗಿ ಬಾಗಿಲು ಭದ್ರಮಾಡಿಕೊಂಡು, ಒಳಗೇ ತನ್ನ ಮಗುವನ್ನು ಕೊಂದುಬಿಟ್ಟು, ತಾನೂ ಆತ್ಮಹತ್ಯ ಮಾಡಿಕೊಳ್ಳಲು ಅಷ್ಟರಲ್ಲೇ ಅವಳನ್ನು ಬಲವಂತವಾಗಿ ಆಚೆಗೆ ಕರೆತಂದು ನೋಡಿದಾಗ ಆಕೆಯ ಮೈಯೆಲ್ಲಾ ಗಾಯಗಳಾಗಿದ್ದುವು. ಪೊಲೀಸಿನವರು ತನಿಖೆಮಾಡುತ್ತಿದ್ದಾರೆ. ಈ ಪ್ರಕಾರ ಹಿಂದೂಸ್ಥಾನವು ಅತ್ತೆ ಸೊಸೆಯರ ದ್ವೇಷಾಸೂಯೆಗಳಿಂದ ತಲೆಯೆತ್ತದೆ ನರಳುತ್ತಿರುವುದು.

❖❖❖❖❖

ಮಿ॥ ವೆಂಕೋಬಾಚಾರ್ಯರು ಏಳು ವರುಷಗಳಿಂದ ಅನಂತಪುರ ಸಂಸ್ಥಾನದಲ್ಲಿ ಚೀಫ್ ಜಡ್ಜರಾಗಿ ಕೆಲಸ ಮಾಡಿ, ಈಗ ಕೆಲಸದಿಂದ ನಿವೃತ್ತಿ ಸುಖವನ್ನು ಹೊಂದುವವರಾಗಿದ್ದಾರೆ. ಆ ಸಂಸ್ಥಾನದವರು ಅವರಿಗೆ ತಿಂಗಳೊಂದಕ್ಕೆ ೧೦೦ ರೂಪಾಯಿನಂತೆ ಪೆನ್ಶನ್ ಕೊಡುವುದಕ್ಕೆ ಒಪ್ಪಿ, ಈ ವಿಷಯದಲ್ಲಿ ಮದರಾಸ್ ಗವರ್ನಮೆಂಟಿನವರ ಅನುಮತಿಯನ್ನು ಅಪೇಕ್ಷಿಸಿದರು. ಮದರಾಸ್ ಗವರ್ನಮೆಂಟಿನವರು ಅವರಿಗೆ ಪೆನ್ಶನ್ ಕೊಡಕೂಡದೆಂದು ಹುಕುಂ ಮಾಡಿದ್ದಾರೆ. ಇದಕ್ಕೇನು ಕಾರಣವೋ ತಿಳಿಯದು. ಇತ್ತ ಮೈಸೂರು ಸಂಸ್ಥಾನದಲ್ಲಿ ಚೀಫ್ ಜಡ್ಜರಾಗಿ ೬ ವರುಷ ಕೆಲಸ ಮಾಡಿ ಮೊನ್ನೆ ತಾನೇ ಹೋದ ಮಿ॥ ಬೆಸ್ಟ್ ರವರಿಗೆ ತಿಂಗಳಿಗೆ ೫—೭೦೦ ರೂಪಾಯಿ ಪೆನ್ಶನ್ ಸಲ್ಲುತ್ತಿದೆ ಮತ್ತು ಈಗ ಜಡ್ಜರಾಗಿರುವ ಮಿ॥ ಸ್ಟೀಲ್ ರವರು ಸಹ ಕೆಲಸ ಬಿಟ್ಟು ಹೋಗುವಾಗ್ಗೆ ಅವರಿಗೆ ಮೈಸೂರು ಸಂಸ್ಥಾನದವರು ಪೆನ್ಶನ್ ಕೊಡಬೇಕಾಗುವುದಕ್ಕೆ ಅಡ್ಡಿ ಕಾಣುತ್ತಿಲ್ಲ.

❖❖❖❖

ಸರ್ ಜೇಂಸ್ ಮಾಂಟ್ರೇತ್ ರವರು ಬೊಂಬಾಯಿನ ಕೈಗಾರಿಕೆ ವಸ್ತುಪ್ರದರ್ಶನಾಲಯವನ್ನು ಕಳೆದ ವಾರ ಉಪನ್ಯಾಸಮಾಡಿ ಪ್ರಾರಂಭಿಸಿದರು. ಆಗ ಅವರು ತಿಳಿಸಿದ ಮುಖ್ಯ ವಿಷಯವೇನೆಂದರೆ —ಈ ಸಲ ಈ ಭಾರೀ ಪಟ್ಟಣದಲ್ಲಿ ಸರ್ಕಾರದವರೂ ಜನ ಮುಖಂಡರೂ ಸಾಹಸಪಟ್ಟು ನಡಿಸಿದ ಈ ವಸ್ತುಪ್ರದರ್ಶನವು ಬಹಳ ತೃಪ್ತಿಕರವಾಗಿಯೂ ಚೆನ್ನಾಗಿಯೂ ನೆರವೇರಿದ್ದಕ್ಕೆ ಸಂದೇಹವಿಲ್ಲ. ಈ ಪ್ರದರ್ಶನಶಾಲೆಗೆ ಈ ಸಲ ೫ ಲಕ್ಷ ಜನರಿಗೆ ಕಮ್ಮಿ ಇಲ್ಲದಂತೆ ಬಂದು ನೋಡಿಕೊಂಡು ಹೋದರೆಂದರೆ ಅತಿಶಯೋಕ್ತಿಯು ಆಗಲ್ಲ. ಈ ಪೈಕಿ ಬಹುಮಂದಿ ನೋಡಿ ಸಂತೋಷ ಹೊಂದಬೇಕೆಂತಲೇ ಬಂದರು. ಆದರೂ ಅನೇಕಮಂದಿ ಕಸಬುದಾರರೂ ಬಂದು, ಪ್ರದರ್ಶನದವಸ್ತುಗಳನ್ನು ನೋಡಿರುತ್ತಾರೆಂತಲೂ, ಇಂಥವರು ನೋಡಿಹೋದ ವಸ್ತುಗಳನ್ನೇ ತಮ್ಮ ದೇಶಗಳಲ್ಲೂ ಮಾಡಲಾರಂಭಿಸಿರುತ್ತಾರೆಂತಲೂ ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಇಂಥಾ ಪ್ರದರ್ಶನಾಲಯವನ್ನು ಮುಂಬಾಳಿಗೆ ಏಂದು ತುಂಬಾ ಶ್ರಮಪಟ್ಟು ನಡಿಸಿದ್ದಕ್ಕಾಗಿ ಮಿ॥ ವಿಠಲದಾಸರನ್ನೂ ಖಾಂಖಧೂರ್ ಮುನರ್ಬಾರಯವರನ್ನೂ ಸಕಲರೂ ವಂದಿಸುವರು. ಕಸಬುದಾರರು ಬಂದು, ತಮ್ಮ ದೇಶಾಭ್ಯುದಯಕ್ಕೆ ಸಹಕಾರಿಗಳಾದ ವಸ್ತುವಿಶೇಷಗಳಾವೆಂಬುದನ್ನು ಕಣ್ಣಾರ ನೋಡಿಹೋದುದು ತುಂಬಾ ಸಂತೋಷಪ್ರದವಾಗಿದೆ ಎಂಬುದೇ.

❖❖❖❖❖

ಕಲ್ಕತ್ತಾ ಪಟ್ಟಣದ ಬಳಿ ಇರುವ ಷೋಬಜಾರ್ ರಾಜವಂಶ ಎಂಬ ಸಣ್ಣ ಸಂಸ್ಥಾನದಲ್ಲಿ ಕಳೆದ ಮಕರ ಸಂಕ್ರಾಂತಿ ಹಬ್ಬದ ದಿನ ಲೇಟ್ ಮಹಾರಾಜ ಯಾದವೇಂದ್ರ ಕೃಷ್ಣ ಬಹದೂರ್ ರವರ ಧರ್ಮಪತ್ನಿಯಾದ ರಾಜಕುಮಾರಿ ಶ್ರೀ ಮೋತೀ ಕೃಷ್ಣಕಾಮಿನಿಯವರು "ತುಲಾಪುರುಷ" ಮತ್ತು "ಅನ್ನಮೇರು" ಎಂಬೀ ಮಹಾದಾನಗಳನ್ನು ಹಿಂದೂ ಶಾಸ್ತ್ರ ವಿಧಿಗನುಸಾರವಾಗಿ ನಡಸಿದರು. ಇದಕ್ಕಾಗಿ ಠಾಕುರಬಟಿಯಲ್ಲಿ ಎರಡು ದೊಡ್ಡ ಮಂಟಪಗಳನ್ನು ಕಟ್ಟಿಸಿ, ವೇದ ಶಾಸ್ತ್ರ ಪಂಡಿತರಾದ ೫೦ ಮಂದಿ ಬ್ರಾಹ್ಮಣರನ್ನು ಬಂಗಾಳಾದಿಂದಲೂ, ೮ ಜನ ಪುರೋಹಿತರನ್ನು ಕಾಶೀ ಪಟ್ಟಣದಿಂದಲೂ, ಸುಮಾರು ೭,೦೦೦ ವೇದಾಧ್ಯಾಪಕರನ್ನು ಬಂಗಾಳದ ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ, ಸಾಲದ್ದಕ್ಕೆ ಮುಖ್ಯ ಮುಖ್ಯರಾದ ಮತ್ತು ಕೀರ್ತಿಸಂಪನ್ನರಾದ ಪಂಡಿತರುಗಳನ್ನು ಬೀಹಾರ್, ಒರಿಸಾ, ಕಾಶೀ ಮುಂತಾದ ಕಡೆಗಳಿಂದಲೂ ಕರೆಸಿದ್ದರು. ಕಲ್ಕತ್ತಾ ಪಟ್ಟಣದ ದೊಡ್ಡ ಮನುಷ್ಯರೂ ಶಾಸನಸ್ಥ ಮಂಡಲಿಯ ಸಾಲ್ಕು ಸಂಗಡಿಗಳ ಮುಖ್ಯಸ್ಥರೂ, ಮಹಾರಾಜಾ ಗಿರಿಜಾ ನಾಥ ರಾಯ ಬಹದೂರ್ ರವರೂ, ನ್ಯಾಯಾಧಿಪತಿಯಾದ ಚಂದ್ರ ಮಾಧವ ಮಹದೇವ ಘೋಷ್ ರವರೂ ಸಭಾಮಂದಿರದಲ್ಲಿ ಹಾಜರಾಗಿದ್ದರು. ಮಂಟಪದ ಮಧ್ಯೆ ಒಂದು ತಕಡಿಯನ್ನು ಕಟ್ಟಿ, ಅದರ ನೆತ್ತಿಯ ಮೇಲೆ ಭಂಗಾರ ಬೆಳ್ಳಿಯ ನಾನಾ ವಿಗ್ರಹಗಳನ್ನು ಇಟ್ಟು, ಪೂಜೆ ಮೊದಲಾದುದು ಆದ ತರುವಾಯ ರಾಜಕುಮಾರಿ ಕೃಷ್ಣಕಾಮಿನಿಯವರು ದಿವ್ಯಾಭರಣ ಭೂಷಿತರಾಗಿ ಬಂದು, ಒಂದು ತಕ್ಕಡಿಯಲ್ಲಿ ಕುಳಿತುಕೊಂಡರು. ಬ್ರಾಹ್ಮಣರು ವೇದ ಪಾರಾಯಣ ಮಾಡುತ್ತಲೂ ವಾದ್ಯಗಾರರು ಭಗವನ್ನಾಮ ಸಂಕೀರ್ತನೆಗಳನ್ನು ಹಾಡುತ್ತಲೂ ಇರುವಾಗ್ಗೆ ಆಕೆಯವರ ಎಂಟು ಮಂದಿ ಕುಮಾರರೂ ಇಬ್ಬರು ಮೊಮ್ಮಕ್ಕಳೂ ಉಡಿಗೆತೊಡಿಗೆಗಳಿಂದ ಥಳಥಳನೆ ಹೊಳೆಯುತ್ತಾ ಮಂಟಪದೊಳಕ್ಕೆ ಬಂದು, ಬೆಳ್ಳಿ ಭಂಗಾರದ ನಾಣ್ಯಗಳನ್ನೂ ಗಟ್ಟಿಗಳನ್ನೂ ಇನ್ನೊಂದು ತಕಡಿಯೊಳಕ್ಕೆ ಸುರಿದು, ಆಕೆಯವರ ಭಾರವು ಸರಿಯಾಗಿ ತ್ರಾಸಿನಲ್ಲಿ ತೂಗುವಂತೆ ಮಾಡಿದರು. ಕೂಡಲೇ ಅಲ್ಲಿ ಸೇರಿದ ಬ್ರಾಹ್ಮಣ ಸಮೂಹದಿಂದ ಹರಿನಾಮ ಸ್ಮರಣೆಯು ಉಚ್ಚೈಃ ದಿತು. ತರುವಾಯ ಆ ತೂಗಿದ ಚಿನ್ನ ಬೆಳ್ಳಿ ನಾಣ್ಯಗಳನ್ನೆಲ್ಲಾ ಅಲ್ಲಿ ಸೇರಿದ್ದ ಬ್ರಾಹ್ಮಣ ಮಂಡಲಿಗೆ ಅವರವರ ಯೋಗ್ಯತಾನುಸಾರ ದಾನ ಮಾಡಿದರು. ಅನಂತರ ಎಲ್ಲರೂ ಇನ್ನೊಂದು ಮಂಟಪಕ್ಕೆ ಹೋದರು. ಅದರೊಳಗೆ ಮುಖ್ಯವಾದ ಏಳು ಧಾನ್ಯಗಳನ್ನು ಏಳು ರಾಶಿ ಸುರಿದು, ಅವುಗಳ ಮೇಲೆ ನೂರಾರು ಚಿನ್ನ ಬೆಳ್ಳಿಯ ವಿಗ್ರಹಗಳನ್ನಿಟ್ಟು, ಬೆಟ್ಟದೋಪಾದಿಯಲ್ಲಿ ಅಲಂಕಾರ ಮಾಡಿದ್ದರು. ಇಲ್ಲಿ ಬ್ರಾಹ್ಮಣ ಮೂಲಕ ಪೂಜೆ ಮುಂತಾದ್ದು ನಡಸಿ, ಈ ರಾಶಿಗಳನ್ನೂ ದಾನ ಮಾಡಿದರು. ಈ ಕಾರ್ಯ ನಡೆದ ಒಂದು ವಾರವೂ ಸಾವಿರಾರು ಜನರಿಗೆ ಅನ್ನದಾನ ನಡೆಯುತ್ತಿತ್ತು.

ವಿದೇಶ ವರ್ತಮಾನಗಳು.

ಜರ್ಮನಿ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ರೈಲ್ ಗಾಡಿಗಳನ್ನು ಓಡಿಸಲಾರಂಭಿಸಿದ್ದಾರೆ. ಈಗ ಇಂಥಾ ರೈಲ್ ಗಾಡಿಗಳು ಎಂಟು ಪಟ್ಟಣಗಳಿಗೆ ಹೋಗಿ ಬರುತ್ತಿವೆ.

❖❖❖❖

ನಾರ್ವೆ ಸ್ವೀಡನ್ ರಾಜ್ಯಗಳ ದೊರೆಯಾದ ಆಸ್ಕಾರ್ ರವರಿಗೆ ದೇಹಾರೋಗ್ಯ ಚೆನ್ನಾಗಿಲ್ಲವಾದ್ದರಿಂದ ಅವರು ರಾಜ್ಯಾಧಿಕಾರವನ್ನು ತಮ್ಮ ಜ್ಯೇಷ್ಠಪುತ್ರರಿಗೆ ವಹಿಸಿದರೆಂದು ತಂತೀ ವರ್ತಮಾನ ಬಂದಿದೆ

❖❖❖❖❖

ಸಿಯಾಂ ರಾಜ್ಯದ ರಾಜಧಾನಿಯಾದ ಬ್ಯಾಂಕಾಕ್ ಪಟ್ಟಣದಲ್ಲಿ ದೊರೆಯವರು ಒಂದು ವಿಸ್ತಾರವಾದ ಉದ್ಯಾನವನವನ್ನು ಕಲ್ಪಿಸಿ, ಅದರ ಮಧ್ಯೆ ಯೂರೋಪಿಯನ್ ರಾಜ್ಯಗಳ ರಾಜಭವನದಂತೆ ನೇತ್ರಾನಂದಕರವಾದ ಅರಮನೆಯನ್ನು ಕಟ್ಟಿಸುತ್ತಿದ್ದಾರೆ.

❖❖❖❖❖

ಚೀನಾ ಚಕ್ರಾಧಿಪತ್ಯದಲ್ಲಿ ಸೈನ್ಯಗಳನ್ನು ಪಾಶ್ಚಾತ್ಯ ಸೀಮೆಗಳ ಸೈನ್ಯಗಳಂತೆ ತರಪೇತು ಮಾಡುತ್ತಿದ್ದಾರೆ. ಎಲ್ಲರಿಗೂ ಒಂದೇ ತರದ ದಿರಸು, ಮದ್ದು ಗುಂಡು ಮುಂತಾದವುಗಳನ್ನು ಕೊಡಬೇಕೆಂದು ಚಕ್ರವರ್ತಿಯವರು ಸಮಸ್ತ ಉದ್ಯೋಗಸ್ಥರಿಗೂ ಹುಕುಂ ಕಳುಹಿಸಿದ್ದಾರೆ.

❖❖❖❖❖

ಅಮೇರಿಕಕ್ಕೆ ಸೇರಿದ ಮಿಚಿಗಾನ್ ಡಿಸ್ಟ್ರಿಕ್ಟಿನಲ್ಲಿ ಹೋವಾರ್ಡ್ ಪಟ್ಟಣದೊಳಗೆ ೯೦ ವರುಷದ ಆಂಡ್ರ್ಯು ನೆಲ್ಸನ್ ಎಂಬ ವೃದ್ಧನು ೮೦ ವಯಸ್ಸಿನ ಎಲಿಸಬೆತ್ ಕ್ಯಾಸಲ್ ಎಂಬ ಮುದಿ ವಿಧವೆಯನ್ನು ವರಿಸಿ ಮದುವೆ ಮಾಡಿಕೊಂಡನು. ಇವರ ವಿವಾಹ ಕಾಲದಲ್ಲಿ ಇವರ ೪೩ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಹಾಜರಾಗಿದ್ದರು.

ಕೆನಡಾ ರಾಜ್ಯದಲ್ಲಿ ಪೆಸಿಫಿಕ್ ರೈಲ್ ರಸ್ತೆಯನ್ನು ಬದಲಾವಣೆ ಮಾಡಿ, ಪೋರ್ಟ್ ವಿಲ್ಲಿಯಂನಿಂದ ವಿನ್ನಿಪೆಗ್ ವರೆಗೆ ಜೋಡಿ ಕಂಬಿಗಳನ್ನು ೪೨೬ ಮೈಲಿ ದೂರ ಹಾಕಿಸಬೇಕೆಂದು ಗೊತ್ತುಮಾಡಿ, ಅದಕ್ಕಾಗಿ ೯ ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಅಂದರೆ ಮೈಲಿ ೧ ಕ್ಕೆ ೪೫,೦೦೦ ರೂಪಾಯಿನಂತೆ ಖರ್ಚಾಗುವುದು.

❖❖❖❖❖

ವಿಲಾಯಿತಿಗೆ ಸೇರಿದ ನಾಟಿಂಗ್ಹಾಂ ಡಿಸ್ಟ್ರಿಕ್ಟಿನ ಬಾಟ್ ವೆಲ್ ಎಂಬ ಊರಿನಲ್ಲಿ ಈಚೆಗೆ ಒಂದು ಮದುವೆ ನಡೆಯಿತು. ಮದುವೆಯ ಗಂಡು, ಮದುವೆಯ ಹೆಣ್ಣು, ಇವರಿಬ್ಬರ ತಂದೆತಾಯಿಗಳು, ಇವರೆಲ್ಲಾ ಕಿವುಡು ಮೂಕರು. ಈ ವಿಚಿತ್ರ ವಿವಾಹವನ್ನು ನೋಡುವುದಕ್ಕೂ ಆಗದಾಡಿಸುವುದಕ್ಕೂ ಸುತ್ತುಮುತ್ತಿನಿಂದ ಬಹು ಜನರು ಹೋಗಿದ್ದರು.

❖❖❖❖

ವಿಲಾಯಿತಿ ರಾಜ್ಯದ ವ್ಯಾಪಾರಗಾರರ ಹಡಗುಗಳಲ್ಲಿ ಪರರಾಜ್ಯಗಳ ಜನರು ಸುಮಾರು ೫೯,೬೦೦ ಮಂದಿ ಸಂಬಳಕ್ಕೆ ಸೇರಿಕೊಂಡಿದ್ದಾರೆಂತಲೂ, ಅವರನ್ನು ವಜಾಮಾಡಿ, ವಿಲಾಯಿತಿಯಲ್ಲಿ ಕೆಲಸವಿಲ್ಲದೆ ಅಲೆಯುವ ಪ್ರಜೆಗಳನ್ನೇ ನೇಮಿಸಿಕೊಳ್ಳುವುದು ನ್ಯಾಯವಾಗಿದೆ ಎಂತಲೂ ಅಡ್ಮಿರಲ್ ಸರ್ ಜಾರ್ಜ್ ಡಾಲ್ರಿಂಪಲ್ ರವರು ಬರೆದಿರುತ್ತಾರೆ

❖❖❖❖

ದಕ್ಷಿಣ ಆಫ್ರಿಕದ ಸ್ವದೇಶೀಯರೆಲ್ಲಾ ಅಲ್ಲಿನ ಜೋಹಾನಸ್ ಬರ್ಗಿನಲ್ಲಿ ಸೇರಿ ಭಾರೀ ಸಮಾಜವನ್ನು ನಡಸಿದರು. ಟ್ರಾನ್ಸ್ವಾಲ್ ರಾಜ್ಯವು ರಾಜ್ಯಭಾರ ವಿಷಯದಲ್ಲಿ ಏಕವಾಗಿರಬೇಕಾದರೆ, ಪ್ರಜೆಗಳಲ್ಲಿ ಮನಸ್ಸಮಾಧಾನ ಹುಟ್ಟಬೇಕಾದರೆ ಮತ್ತು ದೇಶವು ಅಭಿವೃದ್ಧಿಗೆ ಬರಬೇಕಾದರೆ ಇಂಗ್ಲಿಷ್ ಗವರ್ನಮೆಂಟಿನವರು ಅವರಿಗೆ ಸ್ವತಂತ್ರಾಧಿಪತ್ಯವನ್ನು ಕೊಡಬೇಕು ಎಂಬುದಾಗಿ ಆ ಸಮಾಜದವರು ತೀರ್ಮಾನ ಮಾಡಿಕೊಂಡಿದ್ದಾರೆ.

❖❖❖❖

ದಕ್ಷಿಣ ಆಫ್ರಿಕಾದಲ್ಲಿ ಯುದ್ಧ ನಡೆದಾಗ ಅಲ್ಲಿನ ಪ್ರಜಾ ಕೋಟುಗಳಿಗೆ ಸೈನಿಕರಿಂದ ನಾನಾತರದ ನಷ್ಟಗಳುಂಟಾದವಷ್ಟೆ. ಹೀಗೆ ನಷ್ಟಪಟ್ಟವರಿಗೆಲ್ಲಾ ಪರಿಹಾರ ದ್ರವ್ಯವನ್ನು ಕೊಡಬೇಕೆಂದು ಇಂಗ್ಲಿಷ್ ಗವರ್ನಮೆಂಟಿನವರು ತೀರ್ಮಾನಿಸಿ, ಅದಕ್ಕಾಗಿ ಮೂರು ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಈ ಹಣವನ್ನು ನಷ್ಟಪಟ್ಟವರಿಗೆ ಹಂಚಿಕೊಟ್ಟದ್ದಾಯಿತು. ೧೫ ರೂಪಾಯಿ ಕಳಕೊಂಡವನಿಗೆ ೧೩ ರೂಪಾಯಿನ ಪ್ರಕಾರ ಪರಿಹಾರ ದೊರಕಿತೆಂದು ಪ್ರಕಟವಾಗಿದೆ.

❖❖❖❖❖

ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲಿಷರಿಗೂ ಬೋಅರರಿಗೂ ನಡೆದ ಯುದ್ಧಗಳಲ್ಲೆಲ್ಲಾ ಇಂಗ್ಲಿಷರ ಸಂಗಡ ರಣರಂಗಗಳಲ್ಲಿ ಇದ್ದು, ಯುದ್ಧದ ವರ್ತಮಾನಗಳನ್ನು ವಿಲಾಯಿತಿಯ ಪತ್ರಿಕೆಗಳಿಗೆ ಬರೆದು ಕಳುಹಿಸುತ್ತಿದ್ದ ಬಾತ್ಮೀದಾರರುಗಳ ಪೈಕಿ ೧೩ ಮಂದಿ ಬಾತ್ಮೀದಾರರು ಯುದ್ಧಭೂಮಿಯಲ್ಲೇ ಗುಂಡಿನೇಟು ತಿಂದು ಪ್ರಾಣಬಿಟ್ಟರು. ಇವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ವಿಲಾಯಿತಿಯಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದ್ದಾರೆ. ಇದನ್ನು ಲಾರ್ಡ್ ರಾಬರ್ಟ್ಸ್ ರವರು ಪ್ರತಿಷ್ಠೆ ಮಾಡಿದರು

❖❖❖❖

ರಷ್ಯಾ ಸರ್ಕಾರದವರು ಮ್ಯಾಂಚೂರಿಯಾ ಸೀಮೆಗೆ ರೈಲ್ ಗಾಡಿಗಳಲ್ಲಿ ಕಳುಹಿಸಿದ ಸೈನಿಕರು ಸ್ಮೊಲೆನ್ಸ್ಕ್ ಪಟ್ಟಣದಲ್ಲಿ ಒಂದು ದಿನದ ಮಟ್ಟಿಗೆ ಬಿಡಾರ ಮಾಡಿದರು. ಅವರಿಂದ ಪಟ್ಟಣದ ಪ್ರಜೆಗಳಿಗೆ ಯಾವ ಅತಿಬಾಧೆಯೂ ಉಂಟಾಗಬಾರದೆಂದು ಅವರ ಮೇಲ್ಪಟ್ಟ ಉದ್ಯೋಗಸ್ಥರು ಯೋಚಿಸಿ, ಅವರಿದ್ದ ರೈಲ್ ಗಾಡಿಗಳ ಬಾಗಿಲುಗಳನ್ನೆಲ್ಲಾ ಮುಚ್ಚಿ ಬೀಗಮುದ್ರೆ ಮಾಡಿದರು. ಆದರೂ ಈ ಸೈನಿಕರು ಬಾಗಿಲುಗಳನ್ನು ಮುರುಕೊಂಡು ಹೊರಕ್ಕೆ ಬಂದು, ಪಟ್ಟಣದೊಳಗೆಲ್ಲಾ ನುಗ್ಗಿ, ಅಂಗಡಿ ಮನೆಗಳನ್ನು ಲೂಟಿ ಮಾಡಿ, ಬೆಂಕಿ ಹೊತ್ತಿಸುತ್ತಾ ಬಂದರು. ಆಗ ಅಲ್ಲಿನ ಗವರ್ನರವರು ತಮ್ಮ ಕೈಕೆಳಗಿದ್ದ ಸೈನ್ಯವನ್ನು ಕರೆಸಿ, ಈ ರಷ್ಯಾ ಸೈನಿಕರ ಮೇಲೆ ಗುಂಡು ಹೊಡೆಸಿದರು. ೬೦೦ ಮಂದಿ ರಷ್ಯಾ ಸೈನಿಕರು ಸತ್ತು ಬಿದ್ದರು, ನೂರಾರು ಮಂದಿಗೆ ಗಾಯಗಳಾದವು. ಈ ರಷ್ಯಾ ಸೈನಿಕರ ಮುಖ್ಯ ಉದ್ಯೋಗಸ್ಥನಾದರೋ ಅವರ ಧಾಂಧಲೆಯನ್ನು ನಿಲ್ಲಿಸಬೇಕೆಂದು ತುಂಬಾ ಸಾಹಸ ಪಟ್ಟನು. ಆದಾಗ್ಯೂ ಅವರು ಅಧಿಕಾರಿಯ ಮಾತಿಗೆ ಕಿವಿಗೊಡಲಿಲ್ಲ. ಇದನ್ನು ನೋಡಿ ಆ ಉದ್ಯೋಗಸ್ಥನು ಆತ್ಮಹತ್ಯ ಮಾಡಿಕೊಂಡು ಪ್ರಾಣ ಬಿಟ್ಟನು. ಇವನ ಕೈಕೆಳಗಿನ ನಾಲ್ಕಾರು ಸಣ್ಣ ಉದ್ಯೋಗಸ್ಥರು ಸಹ ಆತ್ಮಹತ್ಯ ಮಾಡಿಕೊಂಡರು.

ಪ್ರಾಸಂಗಿಕ ವರ್ತಮಾನಗಳು.

ಚೆನ್ನಪಟ್ಟಣ.—ಇಲ್ಲಿ ಪ್ಲೇಗ್ ಇನ್ನೂ ಇದೆ. ದೊಡ್ಡಮಳೂರು ಲಾಳಾಗಟ್ಟ, ತಿಮ್ಮಸಂದ್ರ, ಚಗನಕೆರೆ, ನೀಲಕಂಠನಹಳ್ಳಿ, ಮುಂತಾದ ಗ್ರಾಮಗಳವರು ಊರುಬಿಟ್ಟಿದ್ದಾರೆ. ಟವುನಿನಲ್ಲಿ ದೊಡ್ಡಬೀದಿಯಲ್ಲಿ ೪—೫ ಅಂಗಡಿ ಬೀಗಗಳನ್ನು ಕಳ್ಳರು ತೆಗೆದು ಇದ್ದಾರೆ. ಇವರನ್ನು ಪೊಲೀಸಿನವರು ಪತ್ತೆ ಮಾಡದೆ ಬಿಡಲಾರರು. ಕೆಲವು ದಿನಗಳಿಂದ ಜೋಡಿದಾರರ ಕಡೆ ಪೊಲೀಸಿನವರ ಬೀಟು ಕಾಣಲಿಲ್ಲ. ಇಲ್ಲಿನ ರೈಲ್ವೆ ಪೊಲೀಸ್ ಜಮೇದಾರ್ ಸ್ವಾಮಿಯವರು ೩—೫ ಮಂದಿ ವೈಶ್ಯರೂ ಸೇರಿ ಸ್ಟೇಷನ್ನಿನಲ್ಲಿ ರೈಲ್ ಪ್ರಯಾಣಿಕರಿಗೆ ನೀರು ಮಜ್ಜಿಗೆಯನ್ನು ಕೊಡಿಸುತ್ತಾ ಬಂದಿರುತ್ತಾರೆ. ಈಗ ನೀರು ಸಿಕ್ಕುವುದು ಕಷ್ಟವಾದರೂ ನೀರು ಮಜ್ಜಿಗೆ ಕೊಡುವುದು ಏನು ಒಳ್ಳೇದು

ಚನ್ನಪಟ್ಟಣದ ತಾಲೋಕಿನಲ್ಲಿ ಹೋಬಳಿ ಮೆಂಬರುಗಳನ್ನು ಚುನಾಯಿಸಬೇಕೆಂದು ೧೯೦೨ ರಲ್ಲಿ ಚರ್ಚೆಮಾಡಿ ಗೊತ್ತುಮಾಡಿದ್ದರಂತೆ. ಆದರೆ ಯಾವ ಕಾರಣದಿಂದಲೋ ಇನ್ನು ಚುನಾಯಿಸಲಿಲ್ಲ. ಇದನ್ನು ನೋಡಿದರೆ ಬಹಳ ಪ್ರಯೋಜನ ಉಂಟೆಂದು ಹೇಳುತ್ತಾರೆ. ಈಗಲಾದರೂ ಇದನ್ನು ಮನಸ್ಸಿಗೆ ತಂದುಕೊಂಡರೆ ಒಳ್ಳೇದೆಂದು ಅಭಿಪ್ರಾಯ ಪಡುತ್ತಾರೆ.

ಮಂಡ್ಯ —ಜನರು ಜೋಪಡಿಗಳಲ್ಲಿ ಯಾವ ತೊಂದರೆ ಇಲ್ಲದೆ ಇದ್ದರು. ಊರಿನಲ್ಲಿರುವ ಮನೆಗಳ ವಿಷಯ ತುಂಬಾ ಚಿಂತಿಸಬೇಕಾಗಿದೆ. ಪೊಲೀಸಿನವರು ತಮ್ಮ ಡ್ಯೂಟಿಯನ್ನು ಮಾಡುತ್ತಿರುವಾಗಲೆ ಮನೆಗಳ ಬೀಗಗಳು ಕಳುವಾಗಿವೆ ಇದಲ್ಲದೆ ಹೋದ ವಾರ ಒಬ್ಬ ಚಲುವಾಟಾರಿಯ ಮನೆಗೆ ರಾತ್ರಿ ವೇಳೆ ಯಾರೋ ಬಂದು ಹಂದನ್ನು ಮುರಿ ಅದಕ್ಕೆ ಬೆಂಕಿ ಹಚ್ಚಿದ್ದರು. ಅದು ಉರಿಯುತ್ತಿರುವಾಗ್ಗೆ ಅಕಸ್ಮಾತ್ತಾಗಿ ಕಂಡಸಬ್ಬೋಲ ಸುಬ್ಬಯ್ಯನವರು ರಾತ್ರಿ ಬೀಟಿನಲ್ಲಿ ಕಂಡು ಬೇಗ ಹೋಗಿ ಪೊ ಇನ್ಸ್ಪೆಕ್ಟರಿಗೆ ತಿಳಿಸಿದರು. ಅವರು ಬಹು ಬೇಗ ಕೆಲವರನ್ನು ಸಹಾಯಕ್ಕೆ ಕರೆದುಕೊಂಡು ಬಂದು ಬೆಂಕಿಯನ್ನು ಆರಿಸಿದರು ಪೊಲೀಸಿನವರು ಅದನ್ನು ಕಾಣದೆ ಇದ್ದರೆ ೪—೫ ಹೆಂಚಿನ ಮನೆಗಳು ಸುಟ್ಟುಹೋಗುತ್ತಿದ್ದವು. ಅದನ್ನು ಮಾಡಿದವರ ವಿಷಯ ಪತ್ತೆ ನಡೆಯುತ್ತಾ ಇದೆ. ದಿನಸಿ ಧಾರಣೆ ದಿನ ದಿನಕ್ಕೆ ಹೆಚ್ಚುತ್ತಿದೆ. ಬಡವರ ಕಷ್ಟ ಹೇಳುವದಕ್ಕೆ ಆಗದು. ಇಲ್ಲಿಗೆ ಪ್ರೋ ಸೂಪರಿಂಟೆಂಡೆಂಟರು ದಯಮಾಡಿಸಿ, ಗ್ರಾಮ ಪಾಕೀಜನ್ನು ಚನ್ನಾಗಿ ಮಾಡಿಸಿದರು. ಜನರು ತಮ್ಮ ಮನೆಗಳನ್ನು ಶುಚಿಮಾಡಿಸಿ ಬೆಳಕು ಗಾಳಿ ಮನೆಗಳಿಗೆ ಹೋಗುವ ಹಾಗೆ ತಕ್ಕ ಏರ್ಪಾಡನ್ನು ಮಾಡಬೇಕೆಂದು ತಿಳಿಸಿ ಹೋದರು ಇಲ್ಲಿಗೆ ೨ ಮೈಲಿ ದೂರದಲ್ಲಿರುವ ಗುತ್ತಲಿನಲ್ಲಿ ೭ ಜನರು ಪ್ಲೇಗಿನಿಂದ ಸತ್ತರು. ಜನರೆಲ್ಲಾ ತಮ್ಮ ಗುಡಿಸಲುಗಳನ್ನು ಹಾಕುತ್ತಿರುವಲ್ಲಿ ಕೆಲವರು ಊರಲ್ಲಿರುವ ಹುಲ್ಲು ತೆಂಗಿನಮರದಲ್ಲಿರುವ ಮಟ್ಟೆಗಳನ್ನು ಕನಿಕರವಿಲ್ಲದೆ ಕದಿಯುತ್ತಿದ್ದಾರೆ ಅಧಿಕಾರಿಗಳು ಅದನ್ನು ಬಂದೋಬಸ್ತು ಮಾಡಿದರೆ ಬಡವರಿಗೆ ಸುಖವಾಗುತ್ತೆ.

ನೆಲಮಂಗಲ —ಈಗ ಸುಮಾರು ಒಂದೂ ತಿಂಗಳಿಂದಲೂ ಪ್ಲೇಗ್ ಗಲಾಟೆಯು ಕಡಿಮೆಯಾದ ಹಾಗೆ ಕಂಡು ಬರುವದರಿಂದ ಜನರು ಊರಿಗೆ ಬಂದು ಸೇರಿಕೊಳ್ಳಲು ತವಕಪಡುತ್ತಿದ್ದಾರೆ. ಈ ತಾಲ್ಲೋಕ್ ಶಿರಸ್ತೆದಾರರಾಗಿದ್ದ ಮೆ॥ ನರಸಿಂಗ ರಾಯರು ದೇವನಹಳ್ಳಿ ತಾಲ್ಲೋಕಿಗೆ ವರ್ಗವಾಯಿತು ಅವರು ಮೊನ್ನೆ ೫ನೇ ತಾ॥ ದಿನ ಇಲ್ಲಿಂದ ಹೊರಟುಹೋದರು. ಅವರ ಬದಲಿ ಬರುವವರು ಜನಾನುರಾಗಿಗಳಾಗಿರುವರೆಂದು ಹಾರೈಸುತ್ತೇವೆ ಇದೇ ಊರಿನ ಸೇಠಿಪ ವೈಶ್ಯರ ಹಳೇಮನೆ ಸಾಹುಕಾರ್ ದಾಸಶೆಟ್ಟರ ಕುಮಾರ ನಂಜುಂಡ ಶೆಟ್ಟಿ ಎಂಬವನು ಬೆಂಗಳೂರು ದಂಡಿನಲ್ಲಿರುವ ಒಬ್ಬನೊಬ್ಬ ಸರಾಫ್ ಸೇಟನ ಅಂಗಡಿಯಲ್ಲಿ ಒಂದು ಸವರಿನ್ ನಾಣ್ಯವನ್ನು ಕಳವುಮಾಡಿದನೆಂತಲೂ, ಪೊಲೀಸ್ ಚಾರ್ಜ್ ಆದಂತೆಯೂ ಕೇಳುತ್ತೇವೆ. ಫಲಿತಾಂಶವು ಇನ್ನೂ ಗೊತ್ತಾಗಲಿಲ್ಲ. ನಮ್ಮ ತಾಲ್ಲೋಕಿನ ಪೊಲೀಸ್ ಇನ್ಸ್ಪೆಕ್ಟರವರು ಪ್ಲೇಗಿನ ಭಯಕ್ಕಾಗಿ ಇಲ್ಲಿಗೆ ಸುಮಾರು ಒಂದೂವರೆ ಮೈಲಿ ದೂರದಲ್ಲಿರುವ ವೀರಪಳ್ಳಿಯಲ್ಲಿ ಮನೆಮಾಡಿಕೊಂಡಿದ್ದರು ಅವರು ಗೈರ್ಹಾಜರಾಗಿರುವಾಗ ಹ್ಯಾಗೋ ಅವರು ವಾಸಮಾಡಿಕೊಂಡಿದ್ದ ಮನೆಗೆ ಬೆಂಕಿ ಬಿದ್ದು ಸುಮಾರು ೩೦೦—೪೦೦ ರೂಪಾಯಿನ ಸಾಮಾನೂ ಸರ್ಕಾರಿ ಡ್ರೆಸ್, ಕತ್ತಿ, ಒಂದು ನಾಯಿ ಮರಿ ಸಹಾ ಸುಟ್ಟು ಬೂದಿಯಾಯಿತೆಂದು ಕೇಳಿ ತುಂಬಾ ವಿಷಾದಿಸುತ್ತೇವೆ —ಇದೇ ಊರಿನಲ್ಲಿ ವಾಸಮಾಡಿಕೊಂಡಿರುವ ದೇವಾಂಗದ ಜಾತಿಯ ಮಾಗಡಿ ಶಂಕರಪ್ಪನವರು ಕರ್ನಾಟಕ ವೈದ್ಯ ಮಾಡುತ್ತಾ ಬಡ ಜನರಿಗೆ ತುಂಬಾ ಸಹಾಯಕರಾಗಿದ್ದಾರೆ. ಇವರು ಈಚಿನ ಪ್ಲೇಗ್ ರೋಗಿಗಳನ್ನು ಪರಾಂಬರಿಸಿ ಸುಮಾರು ಹದಿಮೂರು ಜನರಿಗೆ ಪ್ಲೇಗ್ ಔಷಧ ಕೊಟ್ಟು ಗುಣಮಾಡಿರುತ್ತಾರೆ ಎಂಥವರು ಕರೆದರೂ ತಾತ್ಸಾರ ಮಾಡದೆ ಹೋಗಿ ತುಂಬಾ ದಯೆಯಿಂದ ಇಲಾಜು ಮಾಡುತ್ತಾರೆ. ಮುಖ್ಯವಾಗಿ ಮಕ್ಕಳಿಗೆ ಉಂಟಾಗುವ ಎಳವು, ಮೂರ್ಛೆ ಮುಂತಾದ ರೋಗಗಳಿಗೆ ಧರ್ಮಾರ್ಥವಾಗಿ ಔಷಧ ಕೊಟ್ಟು ಗುಣಮಾಡಿರುತ್ತಾರೆ. ಇಂಥವರಿಗೆ ನಮ್ಮ ಮುನಿಸಿಪಾಲಿಟಿಯವರೂ, ಇತರ ದೊಡ್ಡ ಮನುಷ್ಯರೂ ಸ್ವಲ್ಪ ಪ್ರೋತ್ಸಾಹ ಕೊಡುವರೆಂದು ಹಾರೈಸುತ್ತೇವೆ

ಚಿತ್ರದುರ್ಗ —ಈಗ ಛಳಿ ಬಹು ಜಾಸ್ತಿಯಾಗಿರುವದರಿಂದ ಜನಗಳು ಛಳಿಜ್ವರ, ಕೆಮ್ಮು ನೆಗಡಿ ಮೊದಲಾದವುಗಳಿಂದ ಬಹು ಬಾಧೆಪಡುತ್ತಲಿದ್ದಾರೆ. ಮಧ್ಯಾಹ್ನಗಳಲ್ಲಿ ಶೆಖೆ ಜಾಸ್ತಿ ಈ ವರುಷ ಸಕಾಲದಲ್ಲಿ ಮಳೆ ಬೆಳೆಗಳು ತೃಪ್ತಿಕರವಾಗಿ ಆಗದೆ ಹೋದ್ದರಿಂದ ರೈತರಿಗೂ ಇತರರಿಗೂ ಬಹು ನಷ್ಟವಾಯಿತು ಧಾರಣೆಮಾಸಿಗಳು ಧಡಾವಾಗಿ ಕ್ಷಾಮಬಂದೀತೆಂತ ಜನರು ಹೆದರುತ್ತಾರೆ ಜನರ ಭೀತಿಗೆ ಆಸ್ಪದಕೊಡದಂತೆ ಇಲ್ಲಿನ ಅಧಿಕಾರಿಗಳು ನೋಡಿಕೊಳ್ಳುವದೂ, ವರ್ತಕರು ಅಳೆಯುವ ಸೇರುಗಳನ್ನೂ ಬಟ್ಟುಗಳನ್ನೂ ಆಗಾಗ್ಯೆ ಪರೀಕ್ಷಿಸುವದೂ ಬಹು ಅವಶ್ಯಕ ಜಾನುವಾರುಗಳಿಗೆ ಹುಲ್ಲು ಸಾಕಾದಷ್ಟು ಸಿಕ್ಕುವದಿಲ್ಲ. ಇಂಥಾದ್ದರಲ್ಲಿ ಕಳ್ಳರ ಕಾಟ ಜನಗಳಿಗೂ, ಹುಲಿ ಕಾಟ ದನಗಳಿಗೂ ಬಹಳವಾಗಿದೆ. ಊರಲ್ಲಿ ಪ್ಲೇಗ್ ಸೋಂಕು ಇಲ್ಲದೆ ಜನರು ಹರ್ಷಯುಕ್ತರಾಗಿದ್ದಾರೆ. ಈ ಡಿಸ್ಟ್ರಿಕ್ಟಿನಲ್ಲೇ ಬಹು ಕಮ್ಮಿ ಎಂದು ಹೇಳಬಹುದಾಗಿದೆ ಕ್ಯಾಂಪುಗಳಲ್ಲಿದ್ದವರೆಲ್ಲ ಊರಿಗೆ ಬಂದು ತಮ್ಮ ತಮ್ಮ ಮನೆಗಳಿಗೆ ಪ್ರವೇಶ ಮಾಡುವುದರಲ್ಲಿ ಆಸಕ್ತರಾಗಿರುತ್ತಾರೆ. ಆದರೆ ಪ್ಲೇಗ್ ಡ್ಯೂಟಿ ಮೇಲೆ ನಿಯಾಮಕರಾಗಿರತಕ್ಕ ಮೆಡಿಕಲ್ ಆಫೀಸರು ಜನಗಳ ಪ್ರಕಾರಿಗೆ ಅಸ್ಪದಕೊಡದಂತೆ ಪೂರಾ ಚಟುವಟಿಕೆಯಿಂದ ಕೆಲಸಮಾಡಬೇಕಾಗಿದೆ ಬಡವರನ್ನು ಆದರಪೂರ್ವಕವಾಗಿ ಕಂಡು ಅವರ ಕೆಲಸಗಳನ್ನು ಮಾಡಿಕೊಡುತ್ತಾ ಬಂದರೆ ಜನರ ಸನ್ಮಾನಕ್ಕೆ ಪಾತ್ರನಾಗುತಾರೆನು. ಪಹಳ್ಚೆ ಸಂಶಯವಿಲ್ಲ. ಡಿಸಿಂಫೆಕ್ಷನ್ ಮಾಡತಕ್ಕ ಜನಗಳು ಬಹು ಎಚ್ಚರಿಕೆಯಾಗಿರತಕ್ಕದ್ದು ಯಾಕೆಂದರೆ ಈ ತಿಂಗಳು ೪ನೆ ತಾ. ರಾತ್ರಿ ೭ ಘಂಟೆಯಲ್ಲಿ ಪ್ಲೇಗ್ ಮೆಡಿಕಲ್ ಆಫೀಸರಿಗಳ ಮೂಲಕ ಬೆರಣಿಯಿಂದ ತನ್ನ ಮನೆಯನ್ನು ಡಿಸಿಂಫೆಕ್ಷನ್ ಮಾಡಲು ತೆಲುಗರ ಜಾತಿ ದಾಸಪ್ಪನೆಂಬವನು ಬೆಂಕಿ ಹಾಕಿಸಿ ಬಾಗಲು ಮುಚ್ಚಿಕೊಂಡು ತನ್ನ ಕ್ಯಾಂಪಿಗೆ ಹೋಗಿಬಿಟ್ಟನು ಅದನ್ನು ಮನೆಯ ಮಾಲೀಕರಾಗಲಿ ಡಿಸಿಂಫೆಕ್ಷನ್‌ಗಾಗಿ ಏರ್ಪಟ್ಟಿರುವ ನೌಕರರಾಗಲಿ ನೋಡಿಕೊಳ್ಳಲಿಲ್ಲ ಅದೇ ರಾತ್ರಿ ಸುಮಾರು ೧ ಘಂಟೆಗೆ ಆ ಮನೆಗೆ ಬೆಂಕಿ ಹತ್ತಿತು. ಅದಕ್ಕೆ ಸೇರಿದಂತೆ ಅನೇಕ ಮನೆಗಳಿವೆ. ಜನರು ಸೇರುವದರೊಳಗಾಗಿ ಇತರ ಮನೆಗಳಿಗೆ ಬೆಂಕಿವ್ಯಾಪಿಸಿ ಅನಾಹುತ ಮಾಡೀತೇನೋ ಎಂತ ನೆರೆಹೊರೆ ಜನರು ಗಾಬರಿಪಡುತ್ತಿರುವ ವೇಳೆಯಲ್ಲಿ ಪೇಷ್ಕ ಪದವಿರತಕ್ಕ ಜೈಲ್ ಜವಾನ ಮೊದಿಕೆಂಪನೂ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಆಫೀಸಿನ ಜವಾನ ಹಂಡಿಗನೂ ಬಹು ಧೈರ್ಯದಿಂದ ಮನೆಯನ್ನು ನೆಲಕ್ಕೆ ಕೆಡಹಿ ಬೇರೆ ಕಡೆ ಜ್ವಾಲೆಯು ವ್ಯಾಪಿಸದಂತೆ ಮಾಡಿದರು. ಅಷ್ಟರಲ್ಲೇ ಟರ್ನ ದಫೇದಾರ್ ರಾಜಾಖಾನ್ ಸಾಬಿಯು ಬಂದು ಅವರಿಗೆ ಸಹಾಯ ಮಾಡಿದನು. ಈ ಅನಾಹುತವನ್ನು ಆ ಪೋಲಿಸ್ ಇನ್ಸ್ಪೆಕ್ಟರಾಗಲಿ ಜಮೇದಾರರಾಗಲಿ ನೋಡಿದ್ದಲ್ಲಿ ಅದರ ಕಷ್ಟಪಟ್ಟ ಆ ಮೂವರಿಗೂ ಇನಾಂ ಕೊಡಿಸುತ್ತಿದ್ದರೆಂದು ನಂಬುತ್ತೇವೆ ಮುಂದೆ ಬೇಸಿಗೆಕಾಲ. ಇನ್ನು ಮೇಲೆ ಅಧಿಕಾರಿಗಳು ಬೆಂಕಿಯಿಂದಾಗಬಹುದಾದ ನಷ್ಟಪರಿಹಾರಕ್ಕಾಗಿ ಪೂರ್ಣ ಗಮನದಿಂದ ಕೆಲಸ ಮಾಡುವರೆಂದು ನಿರೀಕ್ಷಣೆಯಾಗಿದೆ ಈ ಊರಲ್ಲಿ ಬಹು ಕಾಲದಿಂದ ಇದ್ದ ಸಬ್ ಜಡ್ಜಿ ಕೋರ್ಟ ಶಿವಮೊಗ್ಗಕ್ಕೂ ಹೊನ್ನಾಳಿಯಲ್ಲಿದ್ದ ಮುನ್ಸಿಫ್ ಕೋರ್ಟ ಈ ಊರಿಗೂ ಬದಲಾಯಿಸಲ್ಪಡಬೇಕೆಂತ ಗೌರ್ನಮೆಂಟ್ ಹುಕುಂ ಆದಂತೆ ಆಯಾ ಪ್ರೋಸೆಸ್ ಜವಾನರು ಹೋಗಲು ಅನುಕೂಲವಿಲ್ಲದೆ ಒಬ್ಬರಿಗೊಬ್ಬರು ದುಡ್ಡುಕೊಟ್ಟು ರಾಜೀಕಬೂಲಿಯಾಗತಕ್ಕ ಏರ್ಪಾಡು ಮಾಡಿದರು ಅಷ್ಟರಲ್ಲೇ ಆಯಾ ಸ್ಥಳದ ಪ್ರೋಸೆಸ್ ಸಿಬ್ಬಂದಿ ಅಲ್ಲಲ್ಲೆ ಇರಬೇಕೆಂದು ಹುಕುಂ ಆದ್ದರಿಂದ ಬಡವ ಕರರಿಗೆ ತುಂಬ ತೊಂದರೆಯೂ ನಷ್ಟವೂ ಆದಂತೆ ಆಯಿತು ಈ ಚಿತ್ರದುರ್ಗದ ಹೈಸ್ಕೂಲ್ ಹೆಡ್ಮಾಸ್ಟರಾಗಿದ್ದ ಮೆ॥ ಆರ್ಬತ್‌ನಾಟ್ ಸಾಹೇಬರು ೧೭ ವರುಷಗಳಿಂದ ಇಲ್ಲಿದ್ದುಕೊಂಡು ಜನರ ಪ್ರೀತಿ ಗೌರವಗಳನ್ನು ಬಹಳವಾಗಿ ಸಂಪಾದಿಸಿದ್ದರು ಇವರಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು ಇವರಲ್ಲಿ ಪಿತೃವಾತ್ಸಲ್ಯವುಳ್ಳವರಾಗಿದ್ದರು ಇವರಲ್ಲಿ ಹಿತಚಿಂತನೆ, ಸಜ್ಜನಗುಣ, ಸತತ ಮೊದಲಾದ ಸುಗುಣಗಳೇ ಮುಖ್ಯ ಲಕ್ಷಣ. ಇವರು ವರ್ಷ ಮೇಲೆ ನಿವೃತ್ತರಾದ್ದರಿಂದ ಬಹು ಜನರು ಸಂಕಟಪಡುತ್ತಾರೆ ಇವರ ಸ್ಥಾನಕ್ಕೆ ಬಂದಿರತಕ್ಕ ಈಗಿನ ಹೆಡ್ಮಾಸ್ಟರೂ ಕೂಡ ಹೀಗೆಯೇ ಇದ್ದುಕೊಂಡು, ಈ ಊರಿನ ನಿವಾಸಿಗಳಿಗೆ ತಮ್ಮ ಕೈಲಾದಷ್ಟು ಒಳ್ಳೇದನ್ನು ಮಾಡುವರೆಂದು ನಂಬುತ್ತೇವೆ.

ಬಾತ್ಮಿದಾರರಿಗೆ ಸೂಚನೆ

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಎನ್. ಎಸ್. ತಮ್ಮಣ್ಣ ಹೆಗ್ಗಡೆ, "ಮಲೆನಾಡಿನ ದೈಯಗಳ ಕಾಟವು" - ನೀವು ಹೇಳುವಂಥಾ ದೈವಗಳುಂಟೆಂದು ನಮಗೆ ನಂಬಿಕೆ ಇಲ್ಲವಾದಕಾರಣ ನಿಮ್ಮ ಈ ಬಾತ್ಮಿಗೆ ಸ್ಥಳ ಸಿಕ್ಕಲಾರದು

—ಎಡಿ.

ಕರೆಸ್ಪಾಂಡೆನ್ಸ್.

ಮಲೆನಾಡಿನ ಹಾವುಗಳ ಕಾಟವು.

ಅಯ್ಯಾ,

ನಾನು ಮೊದಲೊಂದು ಮಲೆನಾಡಿನ ಹಾವುಗಳ ಕಾಟವೆಂಬ ಬಾತ್ಮಿಯನ್ನು ಕೊಟ್ಟಲ್ಲಿ ತಮ್ಮ ಜನವರಿ ೫ನೇ ತಾರೀಖಿನ ವೃತ್ತಾಂತ ಪತ್ರಿಕೆಯಲ್ಲಿ ಫಾಯಿಷ್ ಮಾಡಿದ್ದಿರಿ. ಆದರೆ ನನಗೆ ನಾಗರಹಾವು ಕಾಳಿಂಗಸರ್ಪವು ಕಡಿದದ್ದಕ್ಕೆ ಔಷಧಿಯು ಗೊತ್ತಾಗಲಿಲ್ಲ. ಆದರೆ ತಮ್ಮ ಜನವರಿ ತಾ. ೧೯ನೇ ವೃತ್ತಾಂತ ಪತ್ರಿಕೆಯು ಇಂಡಿಯಾ ದೇಶದ ವೃತ್ತಾಂತದಲ್ಲಿ ನಾಗರಹಾವು ಕಡಿದದ್ದಕ್ಕೆ ಮೆ॥ ಗ್ರೀನ್ ಗ್ರಾಸ್ ಎಂಬಾತನು ವೂಲ್ಫ್ ವಿನೇಗರ್ ಎಂಬ ದ್ರಾಕ್ಷಿರಸವನ್ನು ಹಾಕಿ, ವಾಸಿಮಾಡುತ್ತಾನೆಂದು ತಿಳಿಸಿದಿರಿ. ಆದರೆ ಆ ದ್ರಾಕ್ಷಿರಸವು ಎಲ್ಲಿ ಸಿಕ್ಕುವದೋ ವಿಳಾಸವನ್ನು ಬೇಗ ತಿಳಿಸಬೇಕಾಗಿ ನಂಬಿದ್ದೇನೆ.

ಇದು ಅಲ್ಲದೆ ಕಾಳಿಂಗ ಸರ್ಪವು ಹೆಚ್ಚಿವೆ. ಇವುಗಳು ಕಡಿದದ್ದಕ್ಕೆ ಯಾವ ಪುಣ್ಯಾತ್ಮರಾದರೂ ಔಷಧಿಯನ್ನು ತಿಳಿಸುವರು ಎಂದು ಪ್ರಾರ್ಥಿಸುತ್ತೇನೆ.

ಎನ್. ಎಸ್. ತಮ್ಮಣ್ಣ ಹೆಗ್ಗಡೆ

[ವೂಲ್ಫ್ ವಿನೆಗರ್ ಎಂಬ ದ್ರಾವಕವನ್ನು ಇಂಗ್ಲಿಷ್ ಔಷಧ ಮಾರುವ ಅಂಗಡಿಗಳವರೆಲ್ಲಾ ಬಿಕರಿ ಮಾಡುತ್ತಾರೆ. ಮದ್ಯಪಾನಗಳನ್ನು ಇಟ್ಟು ಮಾರುವವರ ಅಂಗಡಿಗಳಲ್ಲಿ ಕ್ರಯಕ್ಕೆ ಪಡೆಯಬಹುದು.—ಎಡಿ.]

ನಾಲೂರಿನವರಿಗೆ ನೀರಿಗೆ ಕಷ್ಟ.

ಅಯ್ಯಾ,

ತೀರ್ಥಹಳ್ಳಿ ತಾಲ್ಲೋಕು ನಾಲೂರು ವಾಸಿಗಳಾದ ನಾವುಗಳು ನೀರಿಗೋಸ್ಕರವಾಗಿ ದುಃಖಪಡುವದನ್ನು ಯಾರ ಲಾಲಿಸಿ ಇಲ್ಲ. ಈ ಮೊದಲು ನಾವುಗಳು ತೀರ್ಥಹಳ್ಳಿ ತಾಲ್ಲೋಕು ಅಮಲ್‌ದಾರರವರಿಗೂ, ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಸಾಹೇಬರವರಿಗೂ ಎರಡು ಮೂರು ಸಾರಿ ಅರ್ಜಿ ಬರೆಕೊಂಡಾಗ್ಯೂ ನಮಗೆ ಯಾವ ವಿಧವಾದ ಜವಾಬ್ ದೊರೆಯಲಿಲ್ಲ ಈ ಊರಿಗೆ ಸಮೀಪವಾದ ಮೇಗರವಳ್ಳಿಯಲ್ಲಿಯಾದರು ಎರಡು ಮೂರು ಸರ್ಕಾರಿ ಭಾವಿಗಳು ಇರುತ್ತವೆ ಈ ಊರಲ್ಲಿ ಯಾದರೂ ಒಂದೂ ಇರುವದಿಲ್ಲ. ಇಲ್ಲಿ ಎರಡು ಭಾವಿಗಳಿರುತ್ತವೆ ಇವುಗಳಲ್ಲಿ ಬೇಸಿಗೆಯ ಕಾಲಕ್ಕೆ ನೀರು ಇರುವದೇ ಇಲ್ಲ ಆ ಕಾಲದಲ್ಲಿ ಈ ಊರಿಗೆ ಮುಕ್ಕಾಲು ಮೈಲು ದೂರದಲ್ಲಿ ಇರುವ ಹೊಳೆಯಿಂದ ನೀರನ್ನು ಹೊತ್ತುಕೊಂಡು ಬಂದು ಅವರವರ ಕೆಲಸ ತೀರಿಸಿಕೊಳ್ಳಬೇಕು. ಇದರ ಕೆಲಸವೇ ಅರ್ಧ ದಿವಸ ಹಿಡಿಯುತ್ತೆ ಕೂಲೀ ಮಾಡಿ ಜೀವನ ಮಾಡುವ ಬಡವರು ಯಾವಾಗ್ಗೆ ತಮ್ಮ ಕೆಲಸಕ್ಕೆ ಹೋಗಬೇಕು. ಇದನ್ನೆಲ್ಲಾ ತಿಳಿದ ನಮ್ಮ ಕರುಣಾಳುಗಳಾದ ಸರಕಾರದವರು ಬಡವರಾದ ನಮ್ಮ ತೊಂದರೆಯನ್ನು ನಿವಾರಣೆ ಮಾಡಬೇಕಾಗಿ ಬೇಡಿಕೊಳ್ಳುತ್ತೇವೆ

ಬಡರೈತ

ಗುಬ್ಬಿ ತಾಲ್ಲೋಕು ಹೊಸಕೆರೆ

ಅಯ್ಯಾ,

ಈ ವರುಷದಲ್ಲಿ ಈ ಪ್ರಾಂತ್ಯ ವೃಷ್ಟ್ಯಭಾವದಿಂದ ಪಾಪ್ರೈರು ಕೆಟ್ಟುಹೋಗಿ ದಿನಸು ಬಹಳ ಕಮ್ಮಿಯಾಗಿ ಬಡ ಜನಗಳ ರೋದನವು ಅತಿಯಾಗಿದೆ ರಾಗಿ, ಬೆಳೆಯು ಸಾಗಾಗಿದೆ ಆದರೆ ಇದಕ್ಕೂ ಈ ಗ್ರಾಮದ ತಲಾವಿನ ತುಂಬ ಒಡೆದು ನೀರು ಹಲಾಕಾಗುತ್ತಾ ಇರುವದರಿಂದ ಈ ಬೆಳೆಯಾಗುವದೂ ಅಸಂಭವ, ಈ ಗ್ರಾಮಕ್ಕೆ ಎರಡು ಫರ್ಲಾಂಗ್ ದೂರದಲ್ಲಿರುವ ಶಿವನೇಹಳ್ಳಿ ಎಂಬ ಗ್ರಾಮಕ್ಕೆ ಪ್ಲೇಗ್ ತಗಲಿ ಕೂಡಲೆ ಗ್ರಾಮವು ಖಾಲಿಯಾಯಿತು ನಿಮಗೆ ಯಾವ ಅಪಾಯವೂ ಇಲ್ಲವೆಂದು ಮಾರಮ್ಮನು ಬೋಧಿಸಲು ಆ ಮೂಢ ಜನಗಳು ಅದರ ಮಾತನ್ನು ನಂಬಿ ಮನೆಗಳನ್ನು ಶುದ್ಧಿಮಾಡದೆ ಪ್ರವೇಶ ಮಾಡಲು ೨—೩ ದಿವಸದ ಮೇಲೆ ರೋಗವು ಪ್ರಬಲವಾಗುತಾ ಇದುವರೆಗೆ ೮—೧೦ ಜನಗಳನ್ನೂ ೮—೧೦ ರಾಸುಗಳನ್ನೂ ಆಹುತಿಯಾಗಿ ಪಡೆಯಿತು ಈಗ "ಈಗ ಕೆಟ್ಟ ಮೇಲೆ ಬುದ್ಧಿ ಬಂತು" ಎಂಬ ಸಾಮತಿಗೆ ಸರಿಯಾಗಿ ಗ್ರಾಮವನ್ನು ಖಾಲಿಮಾಡಿದರು ಇನ್ನೂ ರೋಗವು ಪ್ರಬಲ ಸ್ಥಿತಿಯಲ್ಲಿ ಇರುತ್ತೆ. ಈ ಹೊಸ ಕೆರೆ ಗ್ರಾಮಕ್ಕೂ ಆ ಹಳ್ಳಿಗೂ ಕೇವಲ ಸಮೀಪವಾಗಿರುವದರಿಂದ ಇಲ್ಲಿನ ಪ್ರಜೆಗಳೂ ತಲ್ಲಣಿಸುವರು ಆಗಲೇ ಒಂದೆರಡು ಮನೆಗಳಲ್ಲಿ ಇಲಿಗಳು ಸಾಯುತ್ತವೆಂದು ಪುಕಾರಾಗಿರುತ್ತೆ ಜಗದೀಶನು ರಕ್ಷಿಸಬೇಕಾಗಿದೆ ಈ ಗ್ರಾಮದ ಅಕ್ಕಸಾಲೆಯವರಿಗೂ ಗ್ರಾಮಸ್ಥರಿಗೂ ಮೂರು ವರ್ಷಗಳಿಂದ ಗ್ರಾಮದೇವತೆಯ ಉತ್ಸವದ ವಿಷಯವಾಗಿ ಕಲಹ ನಡೆಯುತ್ತಾ ಉಭಯಪಾತ್ರರೂ ಬಹಳ ನಷ್ಟವನ್ನು ಹೊಂದುತ್ತಾ ಇದ್ದರು. ಈಗ ಕೆಲವು ದಿನಗಳ ಮುಂಚೆ ನಮ್ಮ ಅಮಲ್ದಾರರವರು ದಯಮಾಡಿ ಅಹವಾಲ್ ವಿಚಾರಿಸಿ ವ್ಯಾಜ್ಯಕ್ಕೆ ಕಾರಣವಾದ ಬಸವೇಶ್ವರ ದೇವಸ್ಥಾನದ ಬೀದಿಯಲ್ಲಿ ಅಕ್ಕಸಾಲೆಯವರು ಉತ್ಸವ ಹೋಗಕೂಡದೆಂದು ಬಯಸಿದವರು ತಕರಾರ್ ಪರೆಗೂ ಅರ್ಜಿ ದಯಪಾಲಿಸಲಿಲ್ಲ ಮತ್ತು ಗ್ರಾಮದಲ್ಲಿ ಐಕಮತ್ಯವಿಲ್ಲದಿರುವದರಿಂದ ಬಡವರು ಬಹಳ ನಷ್ಟಪಡುತ್ತಿದ್ದಾರೆ —ಈ ಗ್ರಾಮದಲ್ಲಿರುವ ಗೌ ಹೋಬಳಿ ಸ್ಕೂಲುಗಳನ್ನು ಕಟ್ಟದಿಲ್ಲದೆ ಸರ್ಕಾರಿ ಚಾವಡಿಯಲ್ಲಿಯೇ ಮಾಡುವರು. ಇದು ರಸ್ತೆ ಜಾಗವಾದ್ದರಿಂದ ಆಗಾಗ್ಯೆ ಆಫೀಸರುಗಳು ಮೊಕ್ಕಾಂ ಮಾಡುವದರಿಂದಲೂ ಈ ಗ್ರಾಮದ ಆ ಕೆಲಸಗಳಿಂದಲೂ ಕೆಲಸ ನಡೆಯಲು ತುಂಬಾ ಅಡಚಣೆಯಾಗಿದೆ ಇದಕ್ಕಾಗಿ ಸರ್ಕಾರದವರ ಅನುಮತಿ ಮೇರೆ ಕಟ್ಟಡಕ್ಕಾಗಿ ಗ್ರಾಮಸ್ಥರು ನೂರು ರೂಪಾಯಿ ಚಂದಾ ಕೂಡಿಸಿ ಸರ್ಕಾರಕ್ಕೆ ಪಾವತಿ ಮಾಡಿ ೩-೪ ವರ್ಷವಾಗುತ್ತಾ ಬಂದಾಗ್ಯೂ ಗವರ್ನಮೆಂಟಿನವರು ಬಡ ಪ್ರಜೆಗಳ ಅಹವಾಲನ್ನು ಚಿತ್ತಕ್ಕೆ ತಂದುಕೊಳ್ಳಲಿಲ್ಲ

ಸಜ್ಜನಪ್ರಿಯ

ಹಿರಿಯೂರು ಜಾತ್ರೆಯೂ ಪ್ರದರ್ಶನೋತ್ಸವವೂ

ಅಯ್ಯಾ,

ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೋಕು ಕಸಬಾ ಹಿರಿಯೂರಲ್ಲಿ ಶ್ರೀ ತೇರುಮಲ್ಲೇಶ್ವರ ದೇವರಿಗೆ ಈ ಕ್ರೋಧಿನಾಮ ಸಂವತ್ಸರದ ಮಾಘ ಬಹುಳ ೫ (ಫೆಬ್ರವರಿ ತಾ॥ ೯) ರೇವತಿ ನಕ್ಷತ್ರದಲ್ಲಿ ದೇವರ ಕಂಕಣೋತ್ಸವವೂ, ತಾ॥ ೧೨ ರ ಲಾಗಾಯತು ೧೮ ರ ವರಿಗೆ ಪ್ರತಿ ದಿವಸವೂ ನವಿಲು ಮುಂತಾದ ವಾಹನೋತ್ಸವವೂ, ತಾ॥ ೧೯—೨೦ ರಲ್ಲಿ ರಥೋತ್ಸವ ಮುಂತಾದ ಸೇವೆಗಳೂ ನಡೆಸಲ್ಪಡುತ್ತೆ. ತಾ॥ ೨೦ ರ ಲಾಗಾಯತು ವ್ಯಾಪಾರ ನಡೆಯತಕ್ಕದ್ದಾಗಿದೆ.

ಈ ಜಾತ್ರೆ ಕಾಲದಲ್ಲಿ ವಿಧ ವಿಧವಾದ ದನಗಳ ಪ್ರದರ್ಶನವೂ ಸಾಗುವಳಿ ಸಂಬಂಧದ ಸಾಧನಗಳೂ ಮತ್ತು ಧಾನ್ಯಾದಿಗಳೂ ಪ್ರದರ್ಶನ ನಡೆಸುವ ವಿಷಯದಲ್ಲಿ ಗೌರ್ನಮೆಂಟಿನಿಂದ ಮಂಜೂರಾಗಿರುತ್ತೆ.

ಆ ಮೇರೆ ಈ ತಿಂಗಳ ತಾ॥ ೨೫ ರಲ್ಲಿ ಪ್ರದರ್ಶನ ನಡೆಸಲು ನಿಶ್ಚಯಿಸಲ್ಪಟ್ಟಿರುತ್ತೆ.

ಈ ಪ್ರಾಂತ್ಯಕ್ಕೆಲ್ಲಾ ಇದು ದೊಡ್ಡ ಜಾತ್ರೆಯಾಗಿರುತ್ತೆ. ಊರ ಮುಂದೆಯೇ ವೇದಾವತಿ ನದಿ ಹರಿಯುವದರಿಂದ ಜಾತ್ರೆಗೆ ಬರತಕ್ಕ ಜನಗಳು ಎತ್ತುಗಳಿಗೆ ನೀರಿನ ಅನುಕೂಲ ಹೆಚ್ಚಾಗಿರುವದೆ, ಇಳಿಯುವದಕ್ಕೆ ಛತ್ರ, ದೇವಸ್ಥಾನ ಮುಂತಾದ ಸ್ಥಳಗಳ

ವೂ ಇದೆ. ವ್ಯಾಪಾರಸ್ಥರಿಗೆ ದಾರಿಯೂ ಸುಪಥವಾಗಿರುತ್ತೆ. ಜಾತ್ರೆಗೆ ಬಹು ಜನಗಳು ಸೇರುವದರಿಂದಲೂ ಈ ತಾಲ್ಲೂಕು ಮತ್ತು ...ಸ್' ಕಪ್ಪು ಭೂಮಿ, ಕಪಿಲ ನದಿಯ ಸಾಗುವಳಿ ಹೆಚ್ಚಾಗಿರುವದರಿಂದ ಒಳ್ಳೆ ಎತ್ತುಗಳು ಬೆಳೆಯುವದಕ್ಕೂ ಅನುಕೂಲವಾಗಿದೆ

ವ್ಯಾಪಾರಕ್ಕೂ ಮತ್ತು ಪ್ರದರ್ಶನಕ್ಕೂ ಒಳ್ಳೆ ಲಾಯಖಾದ ವಸ್ತುಗಳನ್ನೂ ಮತ್ತು ಸಾಮಾನುಗಳನ್ನೂ ಗೊತ್ತಾದ ತಾರೀಖಿಗೆ ಒಂದು ದಿನ ಮುಂಚಿತವಾಗಿ ತಂದು ಕೆಳಗೆ ಸ್ಟೇಟ್ ಮಾಡಿದವರಿಗೆ ಅಥವಾ ಕಮಿಟಿಯವರಿಗೆ ತೋರಿಸಿದರೆ ಗೊತ್ತು ಮಾಡಿರುವ ಸ್ಥಳ ಮುಂತಾದ್ದು ತಿಳಿಸಲ್ಪಡುತ್ತೆ.

ಇನಾಂ ಕೊಡಲು ನಿಷ್ಕರ್ಷೆಯಾಗಿರುವವು — (೧) ಉತ್ತಮ ತರಗತಿಯ ದನಗಳು ಅಂದರೆ ಬೀಜದ ಹೋರಿಗಳು, ಎತ್ತುಗಳು ಹೋರಿ ಕರುಗಳು, ಆಕಳುಗಳು ಸಹ. (೨) ಉತ್ತಮ ತರಗತಿಯ ಧಾನ್ಯಗಳು ಪ್ರತಿ ಒಂದು ದಿನಸಿಯೂ ೫ ಸೇರಿಗೆ ಕಮ್ಮಿಯಿಲ್ಲದೆ ತರಕಾರಿ ಹಣ್ಣುಗಳು ಸಹ. (೩) ವ್ಯವಸಾಯ ಸಂಬಂಧವಾದ ವಿಚಿತ್ರವಾದ ಯಂತ್ರಗಳು ಮತ್ತು ಸಾಧನಗಳು.

ಇವುಗಳಿಗೆ ಗವರ್ನಮೆಂಟಿನಿಂದ ಮಂಜೂರಾಗಿರುವ ಇನ್ನೂರು ರೂಪಾಯಿಗಳ ಬಹುಮಾನವನ್ನು ಪ್ರತಿ ಒಂದು ಕ್ಲಾಸಿನಲ್ಲಿಯೂ ಮೂರು ತರಗತಿಗಳಾಗಿ ವಿಂಗಡಿಸಿ, ಕಮಿಟಿಯವರು ನಿರ್ಣಯಿಸುವಂತೆ ಕೊಡಲ್ಪಡುವುದು. ಪ್ರದರ್ಶನ ಮುಗಿಸಿದ ನಂತರ ಮಾಲೀಕರು ಮಾರಾಟ ಮಾಡಿಕೊಳ್ಳಬಹುದಾಗಿರುವದರಿಂದ ಕ್ರಯಕ್ಕೆ ಒಳ್ಳೇ ಪದಾರ್ಥ ಯಾ ಜಾನುವಾರುಗಳನ್ನು ತರುವದು ಅನುಕೂಲ.

ಸರ್ಕಾರಕ್ಕೆ ಸ್ಥಳದ ಬಾಡಿಗೆ ಫೀ ವಗೈರೆ ಏನೂ ಕೊಡಬೇಕಾಗಿಲ್ಲ. ಆದ್ದರಿಂದ ಜನಗಳು ಯೋಗ್ಯವಾದ ಒಳ್ಳೇ ಪದಾರ್ಥಗಳನ್ನು ತಂದು ಇಲ್ಲಿನ ಪ್ರಜೆಗಳಿಗೆ ಪ್ರೋತ್ಸಾಹ ಉಂಟುಮಾಡುವದರ ಮೂಲಕ ಬಹುಮಾನವನ್ನು ಹೊಂದಿ ಫಾಯಿದೆಯನ್ನೂ ಪಡೆಯಬಹುದಾಗಿಯೂ ಪ್ಲೇಗ್ ಪ್ರದೇಶದಿಂದ ಬರತಕ್ಕ ಜನಗಳನ್ನು ತಪಾಸು ಮಾಡಿಸಿ ಕಳುಹಿಸಲ್ಪಡುತ್ತೆಂತಲೂ ಇದರಿಂದ ಸಮಸ್ತರಿಗೂ ...ಪಡಿಸಿದೆ.

ಈ ಮೂಲಕ ಹೆಚ್ಚಾಗಿ ಜನಗಳು ಸೇರುವದರಿಂದ ಇತರ ವ್ಯಾಪಾರಸ್ಥರಿಗೂ ಫಾಯಿದೆ ಉಂಟಾಗ ಬಹುಶಃ ಅನೇಕ ಕಡೆಯಿಂದ ವರ್ತಕರು ಬರುತ್ತಾರೆಂತಲೂ ನಂಬಿ ಇದೆ.

ತಾ|| ೬—೨—೦೫ | ಗುಲಾಂ ಮಹಮದ್ ಮೊಕ್ತಿ,
ಹಿರಿಯೂರು. | ಅಮಲ್ದಾರ್.

ಮೈಸೂರು ಸರ್ಕಾರಿ ಹುಕುಮುಗಳು.

ಮುಜರಾಯಿ ಇಲಾಖೆ

ಲೇಟ್ ಮಹಾರಾಜಾ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಯವರು ಖಾಸಾ ದೇವರ ಮನೆಯ ತಾತಾಚಾರ್ಯರವರ ಕೋರಿಕೆಯ ಪ್ರಕಾರ ತಿರುಮಕೂಡ್ಲು ನರಸೀಪುರದ ತಾಲ್ಲೂಕು ...ನ್ನಹಳ್ಳಿಯಲ್ಲಿರುವ ಶ್ರೀಲಕ್ಷ್ಮೀನಾರಾಯಣ ಸ್ವಾಮಿ (ವೇಣುಗೋಪಾಲಸ್ವಾಮಿ ಎಂಬ ಹೆಸರೂ ಉಂಟು) ದೇವಸ್ಥಾನಕ್ಕೋಸ್ಕರ ...ಗನಮುದ್ರದ ನಾಲೇ ಕೆಳಗೆ ಮೂರು ವೃತ್ತಿಗಳನ್ನು ಬಿಟ್ಟು ...ಟ್ಟು ಸನ್ನದು ದಯಪಾಲಿಸಿರುತ್ತಾರೆ ಇದು ೧೮೧೯ ನೆ ...ಮೈ ೨ ರಲ್ಲಿ ನಡೆದುದು. ತರುವಾಯ ೧೮೭೦ ರಲ್ಲಿ ಇನಾಂ ...ಟ್ಟು ಆವಾಗ ಆ ಜಮೀನುಗಳನ್ನು ದೇವಾದಾಯವೆಂದು ಗೊತ್ತುಮಾಡಿದರು. ಆ ದೇವಸ್ಥಾನದ ಆಡಳಿತವನ್ನೂ ಜಮೀನುಗಳ ಉತ್ಪನ್ನವನ್ನೂ ತಾತಾಚಾರ್ಯರು ಅವರ ವಂಶೀಕರೂ ನೋಡುತ್ತಿದ್ದರು. ಆಗ ೧೯೦೨ ರಲ್ಲಿ ಇನಾಂತಿ ಉದ್ದೇಶದ ಕಾರ್ಯಗಳು ನಡೆಯುತ್ತಿಲ್ಲವೆಂತಲೂ ದೇವಸ್ಥಾನವು ಶಿಥಿಲವಾಯಿತೆಂತಲೂ ಅಮಲ್ದಾರಿಗೆ ಅರ್ಜಿಗಳು ಬಂದವು. ಆನಂತರ ಅವುಗಳ ಮ್ಯಾನೇಜರನ್ನು ...ಖರ್ಚಿನ ಲೆಕ್ಕಗಳನ್ನು ಕೊಡಬೇಕೆಂದು ಕೇಳಿದಲ್ಲಿ ಅವರು ...ಸದೆ ಹೋದರು. ತರುವಾಯ ಇನಾಂ ಜಮೀನುಗಳ ಉತ್ಪತ್ತಿಯನ್ನು ಜಪ್ತಿಮಾಡಿ, ಗವರ್ನಮೆಂಟಿನಲ್ಲಿ ಇರಿಸಿಟ್ಟು ಇಡಲಾಯಿತು. ಇದರ ಮೇಲೆ ನರಸಿಂಹಾಚಾರ್ಯ ಗೋಪಾಲಾಚಾರ್ಯ ...ಜಮೀನುಗಳನ್ನು ತಮಗೆ ಬಿಟ್ಟುಕೊಡಬೇಕೆಂದು ಅಪೀಲ್ ಮಾಡಿಕೊಂಡರು

ಈ ವಿಷಯದಲ್ಲಿ ಡೆಪ್ಯುಟಿ ಕಮೀಷನರು ಶಿಫಾರಸು ಮಾಡುವುದೇನೆಂದರೆ—(೧) ಆ ಜಮೀನುಗಳನ್ನು ಸರ್ಕಾರಕ್ಕೇನೇ ಖಾಯಂಆಗಿ ಸೇರಿಸಿಕೊಳ್ಳಬೇಕು, (೨) ದೇವಸ್ಥಾನಕ್ಕೆ ಕೆಲವು ಹೆಚ್ಚು ನೌಕರಮಾನೆಯರನ್ನು ನೇಮಕಮಾಡಬೇಕು, (೩) ಅಮಲ್ದಾರರು ...ಸಿರುವ ಅಂದಾಜು ಪಟ್ಟಿಯ ಪ್ರಕಾರ ದೇವಸ್ಥಾನವನ್ನು ರಿಪೇರಿ ಮಾಡಿಸಬಹುದು.

ಗವರ್ನಮೆಂಟಿನವರು ಆಜ್ಞೆ ಕೊಡುವುದೇನೆಂದರೆ—ದೇವಸ್ಥಾನಕ್ಕೆ ೧೬೫ ರೂ ಮುಟ್ಟಿಸಿ, ಅಮಲ್ದಾರು ಮೇಲ್ವಿಚಾರಣೆಯಲ್ಲಿ ರಿಪೇರಿ ಮಾಡಿಸಬೇಕು ಈಗ ಇರಿಸಿಟ್ಟಲ್ಲಿರುವ ಹಣದಲ್ಲಿ ಈ ಖರ್ಚು ಮಾಡಬೇಕು ಉಳಿಯುವ ಹಣವನ್ನು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟಿರತಕ್ಕದ್ದು. ಜಮೀನುಗಳನ್ನು ...ದಾರರಿಗೆ ವಹಿಸಿಕೊಟ್ಟು, ದೇವಸ್ಥಾನದ ದಿಟ್ಟಖರ್ಚನ್ನು ...ವಾಗಿ ಇಡಬೇಕೆಂತಲೂ ದೇವಸ್ಥಾನವನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳಬೇಕೆಂತಲೂ ತಾಕೀತು ಮಾಡಬೇಕು.

ಜಮೀನುಗಳಲ್ಲಿ ಉತ್ಪತ್ತಿಯಾಗುವ ಹಣದಿಂದ ದೇವಸ್ಥಾನದ ...ರ್ ಜಾತಾ ಇನ್ನು ಉಳಿಯುವದರಿಂದ ದೇವಸ್ಥಾನದ ಶಿಬ್ಬಂದಿ ...ವನ್ನೂ ಇತರ ಖರ್ಚುಗಳನ್ನೂ ಹೆಚ್ಚಿಸಿ ಒಂದು ಪಟ್ಟಿ ತಯಾರಿಸಿ, ಗವರ್ನಮೆಂಟಿನ ಸ್ಯಾಂಕ್ಷನ್ ಬಗ್ಗೆ ಕಳುಹಿಸಬೇಕು.

ತಿರುಮಕೂಡ್ಲು ನರಸೀಪುರದಲ್ಲಿರುವ ಶ್ರೀ ಅಗಸ್ತ್ಯೇಶ್ವರ ಸ್ವಾಮಿ ದೇವಸ್ಥಾನದೊಳಗೆ ಕಳೆದ ೧೯೦೧ ನೆ ಆಗೀಸ್ಟು ೧೮ ನೆ ತಾರೀಖು ...ಕಳವು ನಡೆದು, ದೇವಸ್ಥಾನದ ಬಾಬತು ೩೦೫ ಚಿಲ್ಲರೆ ರೂಪಾಯಿನ ನಗಗಳು ಚೋರಿ ಆದವು. ದೇವಸ್ಥಾನದ ಸೇವಕರ ಪೈಕಿ ಕೆಲವರ ಮನೆಗಳಲ್ಲಿ ಕಳುವುಮಾಲ್ ಸಿಕ್ಕಿದ್ದರ ಮೇಲೆ ಮಂದಿಗೆ ಅಮಲ್ದಾರ್ ಮ್ಯಾಜಿಸ್ಟ್ರೇಟರು ಸಜಾ ವಿಧಿಸಿದ್ದಲ್ಲದೆ ೧೫೦ ರೂಪಾಯಿ ಜುಲ್ಮಾನೆ ಹಾಕಿ, ಆ ಪೈಕಿ ೫೦ ರೂಪಾಯಿ ದೇವಸ್ಥಾನಕ್ಕೆ ಕೊಡಬೇಕೆಂದು ಗೊತ್ತುಮಾಡಿದರು. ಕಡೆಗೆ ೫೦ ಚಿಲ್ಲರೆ ರೂಪಾಯಿನ ಮಾಲ್‌ಗಳು ಸಿಕ್ಕಿದವು. ಡೆಪ್ಯುಟಿ ಕಮೀಷನರು ಆಗ ದೇವಸ್ಥಾನದಲ್ಲಿ ಕಳುವಾದ ಹಣದ ಪೈಕಿ ಇನ್ನೂ ೨೦೦ ಚಿಲ್ಲರೆ ವಸೂಲಾಗ ಬೇಕಾಗಿದೆ ಎಂತಲೂ, ಅಲ್ಲಿನ ನೌಕರಮಾನೇಗಾರರ ಸಂಬಳದಲ್ಲಿ ದಾಮಾಷಾಯ ಪ್ರಕಾರ ಈ ಹಣವನ್ನು ಕಟಾಯಿಸಿ ಭರ್ತಿಮಾಡಬೇಕೆಂತಲೂ ಹುಕುಂ ಕೊಟ್ಟರು. ಇದನ್ನು ಕೊಡಲು ಕಾರಣವಿಲ್ಲವೆಂದು ಹೇಳಿ ಕೆಲವು ನೌಕರಮಾನೆಯರು ಶ್ರೀಮನ್ಮಹಾರಾಜರವರಿಗೆ ಅರ್ಜಿ ಬರೆದುಕೊಂಡರು ಗವರ್ನಮೆಂಟಿನವರು ಇದರ ಮೇಲೆ ಹುಕುಂ ಕೊಟ್ಟಿರುವುದೇನೆಂದರೆ—

ಡೆಪ್ಯುಟಿ ಕಮೀಷನರು ಕೊಟ್ಟಿರುವ ಹುಕುಮು ನ್ಯಾಯವಾದುದು ; ಮೈಸೂರು ಕಮೀಷನ್ ಕಾಲದಿಂದಲೂ ರೂಢಿಯಲ್ಲಿ ಬಂದದ್ದು. ಈ ಸಂಸ್ಥಾನದ ಮುಜರಾಯಿ ದೇವಸ್ಥಾನಗಳ ಸಮಸ್ತ ನೌಕರಮಾನೆಯರೂ ಇದರಂತೆ ಒಪ್ಪಿಕೊಂಡಿದಾರೆ. ದೇವಸ್ಥಾನದಲ್ಲಿ ಕಳುವಾದ ಹಣ ಮಾಪಸು ಭರ್ತಿಯಾಗಬೇಕು ಇದೇ ಮುಖ್ಯವಾದ ಭಾಗ ಆದ್ದರಿಂದ ಗವರ್ನಮೆಂಟಿನವರು ಡೆಪ್ಯುಟಿ ಕಮೀಷನರ ಹುಕುಮನ್ನು ಬದಲಾಯಿಸುವುದರಲ್ಲಿ ಅಭಿಪ್ರಾಯವುಳ್ಳವರಾಗಿಲ್ಲ. ಆದಕಾರಣ ಅರ್ಜಿದಾರರ ಮನವಿಯನ್ನು ವಜಾ ಮಾಡಿದೆ.

ರಿಜಿಸ್ಟ್ರೇಷನ್ ಇಲಾಖೆ

ರಿಜಿಸ್ಟ್ರೇಷನ್ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಶಿಫಾರಸು ಮಾಡಿರುವ ಪ್ರಕಾರ ಈ ಸಂಸ್ಥಾನದ ಸಮಸ್ತ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲೂ ೧೯೦೫ನೇ ಜನವರಿ ೧೫ ರಿಂದ ಆಚೆಗೆ ರಿಜಿಸ್ಟರ್ ಮಾಡುವುದಕ್ಕೆ ಪತ್ರಗಳನ್ನು ದಾಖಲು ಮಾಡುವರಷ್ಟೆ ಅಂಥಾ ಪತ್ರಗಳನ್ನು ಬರೆದದ್ದಾಗಿಯೆಂದು ಒಪ್ಪಿಕೊಳ್ಳುವವರಿಂದ ರಿಜಿಸ್ಟ್ರಾರ್‌ಗಳು ಅವರ ಹೆಬ್ಬೆರಳಿನ ಗುರುತನ್ನು ತೆಗೆದುಕೊಳ್ಳಬೇಕು. ಇದನ್ನು ತೆಗೆದುಕೊಳ್ಳುವ ಕ್ರಮ ಮುಂತಾದ್ದನ್ನು ತಿಳಿಯಪಡಿಸುವುದಕ್ಕೋಸ್ಕರ ಇನ್ಸ್‌ಪೆಕ್ಟರ್ ಜನರಲ್‌ರವರು ಅನುಭವಸ್ಥರಾದ ಒಬ್ಬ ಸ್ಪೆಷಲ್ ಸಬ್ ರಿಜಿಸ್ಟ್ರಾರನ್ನು ತಾಲ್ಲೂಕುಗಳ ಮೇಲೆ ಕಳುಹಿಸಬಹುದಾಗಿದೆ ಇವರಿಗೆ ತಿಂಗಳೊಂದಕ್ಕೆ ೬೦ ರೂಪಾಯಿನಂತೆ ಪ್ರಯಾಣದ ಖರ್ಚು ಕೊಡಬಹುದು.

ಹೊನ್ನಾಳಿಯಲ್ಲೂ ಚಿಕ್ಕನಾಯಕನಹಳ್ಳಿಯಲ್ಲೂ ಅಜಮಾಯಿಷಿ ತರೀಖು ಇಟ್ಟಿದ್ದ ಸಬ್ ರಿಜಿಸ್ಟ್ರಿ ಆಫೀಸುಗಳನ್ನು ಖಾಯಂಮಾಡಿದೆ. ಹರಿಹರದಲ್ಲಿರುವ ಸಬ್ ರಿಜಿಸ್ಟ್ರಿ ಆಫೀಸನ್ನು ಇನ್ನೂ ಮೂರು ವರುಷಗಳ ತನಕ ಇಟ್ಟಿರಬಹುದು.

ಕಳೆದ ಸಾಲಿನಲ್ಲಿ ೫೬,೯೦೦ ಪತ್ರಗಳು ರಿಜಿಸ್ಟರಾದವು. ಸರ್ಕಾರಕ್ಕೆ ಒಟ್ಟು ೧,೦೨,೯೩೮ ರೂಪಾಯಿ ಉತ್ಪತ್ತಿಯಾಯಿತು. ಪ್ಲೇಗ್ ಉಪದ್ರವು ಬಹು ಕಡೆಗಳಲ್ಲಿ ಸ್ವಲ್ಪ ಶಮನವಾಗಿದ್ದುದರಿಂದಲೂ ಕಾಲದೇಶ ವರ್ತಮಾನಗಳು ಸುಭಿಕ್ಷವಾಗಿದ್ದುದರಿಂದಲೂ ಈ ಸಾಲಿನ ಪತ್ರಗಳ ಸಂಖ್ಯೆಯೂ ಉತ್ಪತ್ತಿಯೂ ಹೆಚ್ಚಾಗಲು ಅನುಕೂಲವಾಯಿತು.

ರಿಜಿಸ್ಟ್ರೇಷನ್ ಇಲಾಖೆಯ ಕಳೆದ ಸಾಲಿನ ಒಟ್ಟು ಖರ್ಚು ೮೨,೧೬೫ ರೂಪಾಯಿ ಆಯಿತು. ಇದರಿಂದ ಖರ್ಚು ಜಾತಾ ಸಂಸ್ಥಾನಕ್ಕೆ ೩೦,೩೭೩ ರೂಪಾಯಿ ಉತ್ಪತ್ತಿಯಾಗಿದೆ ಕಳೆದ ವರುಷ ಒಬ್ಬ ಪತ್ರವನ್ನು ಒಬ್ಬನು ತಾನು ಬರೆದನೆಂದು ಸುಳ್ಳು ಸಾಕ್ಷಿ ಕೊಟ್ಟದ್ದು ಪತ್ತೆಯಾಗಿ ಅವನಿಗೆ ಶಿಕ್ಷೆ ವಿಧಿಸಲ್ಪಟ್ಟಿತು

ಇನ್ಸ್‌ಪೆಕ್ಟರ್ ಜನರಲ್‌ರವರು ೨೨ ಸಬ್ ರಿಜಿಸ್ಟ್ರಿ ಆಫೀಸುಗಳನ್ನೂ ೭ ಡಿಸ್ಟ್ರಿಕ್ಟ್ ರಿಜಿಸ್ಟ್ರಿ ಆಫೀಸುಗಳನ್ನೂ ಅಜಮಾಯಿಷಿ ಮಾಡಿ ಬಂದಿದಾರೆ. ಮತ್ತು ಡಿಸ್ಟ್ರಿಕ್ಟ್ ರಿಜಿಸ್ಟ್ರಾರುಗಳು ಕೂಡ ಅಜಮಾಯಿಷಿ ಕೆಲಸವನ್ನು ತಕ್ಕ ಮಟ್ಟಿಗೆ ಮಾಡಿರುತ್ತಾರೆ.

ಸಂಸ್ಥಾನದ ಆರೋಗ್ಯ ವಿಚಾರವು.

ಕಳೆದ ೧೯೦೩ ನೆ ಇಸವಿಯಲ್ಲಿ ಮೈಸೂರು ಸಂಸ್ಥಾನದೊಳಗೆಲ್ಲಾ ಒಟ್ಟು ೨,೦೪೨ ಮಂದಿ ಸಿಡುಬಿನಲ್ಲೂ, ೫೨,೩೮೪ ಜನ ಜ್ವರದಲ್ಲೂ, ೯೮ ಜನ ವಾಂತಿಭೇದಿ ಉಪದ್ರದಲ್ಲೂ ೨೦,೨೨೩ ಜನ ಪ್ಲೇಗ್ ಉಪದ್ರದಲ್ಲೂ ಕಾಲವಾದರು ಜ್ವರದಲ್ಲಿ ಸಾಯುವವರ ಸಂಖ್ಯೆ ತುಂಬಾ ಹೆಚ್ಚಾಗಿದೆ ಎಂದು ಗವರ್ನಮೆಂಟಿನವರು ವಿಷಾದಿಸುತ್ತಾರೆ ಒಂದು ವರುಷದೊಳಗಣ ಮಕ್ಕಳು ಸಾವಿರಕ್ಕೆ ೮೦ ಮಂದಿಯಂತೆ ಸಾಯುವರು. ಇದಲ್ಲದೆ ಹೆಂಗಸರಲ್ಲಿ ೧೫ ರಿಂದ ೩೦ ವರುಷದೊಳಗಿರತಕ್ಕವರು ಸಾಯುವದೇ ತುಂಬಾ ಹೆಚ್ಚಾಗಿರುವದರಿಂದ ಹೆರಿಗೆಯ ಕಷ್ಟ ಅವರಿಗೆ ಇನ್ನೂ ಸರಿಯಾಗಿ ಪರಿಹರವಾಗಲಿಲ್ಲವೆಂದು ಕಾಣುವದು. ಸರ್ಕಾರದವರು ಸಾಧ್ಯವಾದಷ್ಟು ಸೂಲಗಿತ್ತಿಗಳನ್ನು ಎಲ್ಲಾ ಕಡೆಗಳಿಗೂ ನೇಮಿಸಿ ಕಳುಹಿಸುವರು. ಇಷ್ಟೇ ಸಾಲದೆಂದು ಕಾಣುವದು. ಪ್ರಜಾ ಪ್ರೀತಿಪಾತ್ರರಾದ ಇತರರೂ ಈ ಭಾಗದಲ್ಲಿ ಜನರಿಗೆ ಬೇಕಾಗುವ ಸಹಾಯ ಸಂಪತ್ತನ್ನು ಒದಗಿಸಿಕೊಡಬೇಕೆಂದು ಸೂಚಿಸುತ್ತೇವೆ. ಮತ್ತು ಸೂಲಗಿತ್ತಿಯರ ಸಹಾಯವಿರುವ ಕಡೆಗಳಲ್ಲೂ ಜನರು ಅವರನ್ನು ಹೆರಿಗೆ ಕಾಲಗಳಲ್ಲಿ ಮನೆಗಳಿಗೆ ಕರೆತರದೆ ಮೌಢ್ಯಾಚಾರಗಳನ್ನು ಅವಲಂಬಿಸಿ ಮೂಢ ಸ್ತ್ರೀಯರನ್ನು ನೇಮಿಸಿಕೊಳ್ಳುವದರಿಂದ ಈ ಮರಣ ಸಂಖ್ಯೆಯು ಹೆಚ್ಚುತ್ತಿದೆ.

ಜ್ವರದಲ್ಲಿ ಸಾಯುವವರ ಸಂಖ್ಯೆಯು ಕಡಿಮೆಯಾಗಬೇಕಾದರೆ ಜನರು ಪೋಸ್ಟ್ ಆಫೀಸುಗಳಲ್ಲೂ ಪಟೇಲರುಗಳ ಬಳಿಯಲ್ಲೂ ಬಿಕರಿಗೆ ಇಟ್ಟಿರುವ ಕ್ವಿನೈನ್ ಪುಡಿಯನ್ನು ಕೊಂಡುತಂದು, ಜ್ವರ ಬಂದ ತರುಣದಲ್ಲೇ ಸೇವಿಸುತ್ತಾ ಬರಬೇಕಾಗಿದೆ. ಜ್ವರವನ್ನು ಅಣಗಿಸುವುದಕ್ಕೆ ಈ ಪುಡಿಯೇ ಸರ್ವೋತ್ತಮವಾದ ಔಷಧವೆಂದು ದೃಷ್ಟಾಂತಕ್ಕೆ ಬಂದಿದೆ. ಆದ್ದರಿಂದ ಪ್ರಜೆಗಳು ಈ ವಿಷಯಕ್ಕೆ ಹೆಚ್ಚು ಗಮನವನ್ನು ಕೊಟ್ಟಾರೆಂದು ನಿರೀಕ್ಷಿಸುತ್ತೇವೆ.

ಮೈಸೂರು ಸಂಸ್ಥಾನದ ವರ್ಣನೆಯು.

೮

[ಬರೆದು ಬಂದದ್ದು.]

ನಂಜನಗೂಡು.

"ನಂಜುಂಡನನಗೂಡು" ಎಂಬೀ ಶಬ್ದಗಳ ಅಪಭ್ರಂಶ ಅಥವಾ ಸಂಕ್ಷೇಪರೂಪವೇ ನಂಜನಗೂಡು. ಸಮುದ್ರ ಮಥನ ಕಾಲದಲ್ಲಿ ಕಟ್ಟಕಡೆಗೆ ಹುಟ್ಟಿದ ಹಾಲಾಹಲವೆಂಬ ವಿಷವುವನ್ನು ಪ್ರಾಶನ ಮಾಡಿದ ಶ್ರೀ ಪರಮೇಶ್ವರನ ಮನೆಯು. ಇದು ತಾಲ್ಲೂಕಿನ ಮುಖ್ಯ ಸ್ಥಳವಾಗಿದ್ದು ಕಸ್ಬಮಟ್ಟಿಗೆ ದೊಡ್ಡದಿದ್ದು, ಕಪಿಲಾ ನದಿಯ ದಂಡೆಯಲ್ಲಿರುತ್ತದೆ ಶ್ರೀ ನಂಜುಂಡೇಶ್ವರನ ದೇವಸ್ಥಾನವು ಬಹು ದೊಡ್ಡದೂ ಭವ್ಯವಾದದ್ದೂ ಸುಂದರವಾದದ್ದೂ ಇರುತ್ತದೆ ಈ ದೊಡ್ಡ ಗುಡಿಯೊಳಗೆ ಶ್ರೀ ನಂಜುಂಡೇಶ್ವರ, ಮಹಾ ವಿಷ್ಣು, ಪಾರ್ವತಿ, ಇವರುಗಳಿಗಾಗಿ ಬೇರೆ ಬೇರೆ ಗುಡಿಗಳಿರುತ್ತವೆ. ಈ ಗುಡಿಗಳ ಸುತ್ತಲು ದಕ್ಷಿಣಾಮೂರ್ತಿ ಮೃಕಂಡುಜನನ್ನು ಯಮನ ಕೈಯೊಳಗಿಂದ ಪಾರುಮಾಡಿ ರಕ್ಷಿಸಿದ ಶಂಕರಮೂರ್ತಿ ಮೊದಲಾದ ಅನೇಕ ಪೌರಾಣಿಕ ದೇವತೆಗಳ ಪ್ರತಿಮೆಗಳೂ ಅನೇಕ ಲಿಂಗಗಳೂ ದೊಡ್ಡ ಕೃಷ್ಣರಾಜ ಹಾಗೂ ಅವರ ಮಡದಿಯರ ಪ್ರತಿಮೆಗಳೂ ವಾಸವಾಗಿವೆ ಸಾಕ್ಷಾತ್ ಪರಮೇಶ್ವರನು ಸಕಲ ಸುರರಿಂದಲೂ ಭಕ್ತಗಣದಿಂದಲೂ ಸಹಿತನಾಗಿ ವಾಸಮಾಡಿರುವ ಕೈಲಾಸದಂತೆ ಈ ದೇವಸ್ಥಾನವು ಒಪ್ಪುತ್ತಿರುವದು. ಈ ದೇವರು ಮೈಸೂರು ಮಹಾರಾಜರವರ ಕುಲಸ್ವಾಮಿಯಾಗಿರುವದರಿಂದ ವಸ್ತ್ರಾಲಂಕಾರ ಪೂಜೋಪಚಾರ ವಿನಿಯೋಗಗಳಲ್ಲಿ ಅವುದಕ್ಕೂ ಏನೂ ಕೊರತೆ ಇರುವದಿಲ್ಲ

ಈ ದೇವಾಲಯದಲ್ಲಿ ಶ್ರೀ ನಂಜುಂಡೇಶ್ವರ, ಶ್ರೀ ವಿಷ್ಣು ಮೊದಲಾದ ದೇವರುಗಳು ಒಂದೇ ಸ್ಥಳದಲ್ಲಿ ವಾಸವಾಗಿರುವದನ್ನು ನೋಡಿದರೆ ಮತಾಭಿಮಾನಿಗಳು ಒಬ್ಬರಿಗೊಬ್ಬರು ಮಾತ್ಸರ್ಯದಿಂದ ಜಗಳವಾಡದೆ ಪ್ರೀತಿಯಿಂದ ಒಕ್ಕಟ್ಟಾಗಿರಬೇಕೆಂಬ ಸಾಮಾನ್ಯ ಸಿದ್ಧಾಂತವು ಹೊರಬೀಳುತ್ತದೆ. ಈ ದೇವಸ್ಥಾನದ ಬಳಿಯಲ್ಲಿಯೇ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠವುಂಟು

ಶ್ರೀರಂಗಪಟ್ಟಣ.

ವೆಲ್ಲೆಸ್ಲೀ ಸೇತುವೆ.—ಇದನ್ನು ನಮ್ಮ ದೇಶದ ಕಾರೀಗಾರರೇ ಕಟ್ಟಿದ್ದಾರೆ. ಇದರ ಹತ್ತಿರ ಇಂಗ್ಲಿಷ್ ಸರದಾರನಾದ ಬೇಯರ್ಡನನ್ನು ಇಟ್ಟ ಕತ್ತಲೆಯ ಸುರಂಗದ ಮನೆ ಉಂಟು. ಇವುಗಳನ್ನು ನೋಡಿಕೊಂಡು ದೊಡ್ಡಮಸೀದಿಗೆ ಬಂದೆವು. ಈ ಮಸೀದಿಯನ್ನು ಕಟ್ಟಿದ ಸ್ಥಳದಲ್ಲಿ ಮೊದಲು ಈಶ್ವರನ ದೇವಾಲಯವಿತ್ತಂತೆ. ಈ ಮಸೀದಿಯು ಸುಂದರವಾಗಿಯೂ ಮನೋಹರವಾಗಿಯೂ ಇರುತ್ತದೆ. ಇದಕ್ಕೆ ಎರಡು ಅಂತಸ್ತುಗಳುಂಟು. ಮೇಲ್ಭಾಗದಲ್ಲಿ ನಾಲ್ಕು ಮೂಲೆಗಳಲ್ಲಿಯೂ ಮಹಮ್ಮದೀಯ ತರದ ಎತ್ತರವಾದ ಗೋಪುರಾಕೃತಿಗಳುಂಟು. ಈ ಗೋಪುರಗಳ ಗರ್ಭದಲ್ಲಿ ಹೊಕ್ಕು ಮೇಲೆ ಹೋಗಲಿಕ್ಕೆ ತಿರುಗಣಿಯ ತರದ ೧೨೫ ಮೆಟ್ಟಿಗೆಗಳ ಸೋಪಾನ ಉಂಟು.

ದರಿಯಾದೌಲತ್‌ಬಾಗ್.—ಮಸೀದಿಯನ್ನು ನೋಡಿದ ಬಳಿಕ ಇದನ್ನು ನೋಡುವದಕ್ಕೆ ಹೊರಟೆವು. ಮಾರ್ಗದಲ್ಲಿ ಒಂದು ದೊಡ್ಡ ಅಗಳೆಯೂ ಅದರಾಚೆ ಕಾವೇರಿಯ ಆಳವಾದ ಕಾಲುವೆಯೂ ಇರುತ್ತವೆ ಈ ಅಗಳಿಗೆ ಇರುವ ಬಾಗಿಲುಗಳನ್ನು ಬೇಕಾದಾಗ ಬಾಗಿಲುಗಳಂತೆಯೂ ಬೇಕಾದಾಗ ಕಾಲುವೆಯು ಪೋಲಿನಂತೆಯೂ ಉಪಯೋಗಿಸಿಕೊಳ್ಳಲಿಕ್ಕೆ ಬರುವಂತೆ ಟೀಪುವು ಮಾಡಿಸಿದ್ದಾನೆ. ಈ ಕಾಲುವೆಯಲ್ಲಿ ನೀರಿರುವದಿಲ್ಲ ; ಮತ್ತು ಅದರ ಪ್ರಯೋಜನವೂ ಈಗ ಇಲ್ಲ.

ಕೋಟೆಯನ್ನು ದಾಟಿ ಒಂದು ಕೊಗಳತೆಯ ಮಾರ್ಗವನ್ನು ಸಾಗಿದರೆ ದರಿಯಾದೌಲತ್‌ಬಾಗ ಬರುವದು. ಇದರ ಅರ್ಥವೇನೆಂದರೆ, ಕಿನಾರೆಯಲ್ಲಿರುವ ಐಶ್ವರ್ಯದ ತೋಟವು. ಇದರಲ್ಲಿ ವಿಧವಿಧವಾದ ಕಂದ, ಮೂಲ, ಬಳ್ಳಿ ಗಿಡಗಳುಂಟು. ...ಸಣ್ಣ ಸಣ್ಣ ಗಿಡಗಳನ್ನು ಯುಕ್ತಿಯಿಂದ ಕತ್ತರಿಸಿ ಎರಡೆರಡು, ಮೂರು ಮೂರು ಅಂತಸ್ತುಗಳಾಗಿ ಕಾಣುವಂತೆ ಮಾಡಿದ್ದಾರೆ. ಈ ತೋಟದ ಸೌಂದರ್ಯವು ವರ್ಣಿಸತಕ್ಕಂಥಾದ್ದಿರುತ್ತದೆ. ಇದರ ಮಧ್ಯದಲ್ಲಿ ಹೆಸರಾದ ವಸಂತ ಮಂದಿರ (ದರಿಯಾದವಲತ್ತಿನೊಳಗಿನ ಬಂಗಲೆ) ಉಂಟು. ಇದಕ್ಕೆ ಎರಡಂತಸ್ತುಗಳಿವೆ. ಎದುರಿನ ಗೋಡೆಯ ಮೇಲೆ ಕುದುರೆ, ರಥ, ಕಾಲುದಳ, ರಾವುತರ, ತೋಪುಗಳು ಮುಂತಾದ ಸೇನಾಂಗಗಳ ಚಿತ್ರಗಳನ್ನು ಬರೆಸಿದ್ದಾನೆ. ಒಂದು ಕಡೆಗೆ ಪೋಲೀಲೂರು ಕದನದಲ್ಲಿ ಪರಾಜಯ ಹೊಂದಿ ಸೆರೆಯಲ್ಲಿ ಸಿಕ್ಕಿದ ಕರ್ನಲ್ ಬೇಲೀ ಸಾಹೇಬನ ಚಿತ್ರವನ್ನು ಬರೆಸಿದ್ದಾನೆ. ಎಡಬಲದ ಗೋಡೆಗಳ ಮೇಲೆ ತರತರದ ಸುಳುವುಗಳನ್ನೂ ಚಿತ್ರಗಳನ್ನೂ ಬಹು ಮನೋಹರವಾಗಿ ಬರೆದಿದ್ದಾರೆ. ಬೆಂಬದಿಯ ಗೋಡೆಯ ಮೇಲೆ ತನ್ನ ಸಮಕಾಲೀನರಾದ ಛತ್ರಪತಿ, ನರಪತಿ, ಪೇಶ್ವೆ, ಒಡೆಯರು, ನವಾಬರು ಮೊದಲಾದವರ ಚಿತ್ರಗಳನ್ನು ಸರಿಯಾಗಿ ಬರೆಸಿರುವನು. ಇವುಗಳನ್ನು ಲಕ್ಷ್ಯಪೂರ್ವಕವಾಗಿ ನೋಡಿ ವಿಚಾರ ಮಾಡಿದರೆ ಆ ಕಾಲದ ಇತಿಹಾಸವು ಕೆಲವು ಮಟ್ಟಿಗೆ ತಿಳಿಯುವದು. ಉಪ್ಪರಿಗೆಯ ಗೋಡೆಗಳ ಮೇಲೆ ಸಾದಾ ಚಿತ್ರಗಳಿರುತ್ತವೆ. ಆದರೆ ಮೇಲ್ಭಾಗದಲ್ಲಿರುವ ಚಿತ್ರಮಯವಾದ ಸುವರ್ಣ ವರ್ಣದ ವರ್ತುಲಾಕಾರದ ಮೇಲ್ಕಟ್ಟು ಅಂದವಾಗಿರುವದು. ಟೀಪೂಸುಲ್ತಾನನ ಮರಣಾನಂತರ ಈ ಮಂದಿರದಲ್ಲಿ ಆರ್ಥರ್ ವೆಲ್ಲೆಸ್ಲಿಯು ಎರಡು ಮೂರು ವರ್ಷ ವಾಸಮಾಡಿದ್ದನು. ಆದ್ದರಿಂದ ಇದಕ್ಕೆ ಒಮ್ಮೊಮ್ಮೆ "ವೆಲ್ಲೆಸ್ಲೀ ಬಂಗಲೆ" ಎಂದು ಕರೆಯುವ ವಾಡಿಕೆಯು ಸಹ ಉಂಟು. ಟೀಪುವಿನ ಮರಣದ ನಂತರ ಇದರೊಳಗಿನ ಚಿತ್ರಗಳು ಹುಸನಾಗಿ ಮಾಸಿದ್ದವು. ಬ್ರಿಟಿಷ್ ಸರ್ಕಾರದವರು ಅವುಗಳನ್ನು ಒಮ್ಮೆ ತಿದ್ದಿಸಿ ಬರೆಸಿದ್ದಾರೆ. ಹಿಂದುಸ್ಥಾನದ ಗವರ್ನರ್ ಜನರಲ್‌ರಾದ ಡಾಲ್‌ಹೌಸೀ ಪ್ರಭುಗಳು ಇದನ್ನು ನೋಡಲಿಕ್ಕೆ ಬಂದಾಗ ಇದರ ಸಂರಕ್ಷಣೆಯ ಬಗ್ಗೆ ದೊಡ್ಡ ನೇಮಣೂಕ ಮಾಡಿಕೊಟ್ಟಿದ್ದಾರೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಪುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ

೨. "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ"

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪	"ರೋಮನರ ಚರಿತ್ರೆ"	ಕ್ರಯ ೦—೬—೦
೫.	"ಗ್ರೀಕರ ಚರಿತ್ರೆ"	,, ೦—೨—೦
೬.	"ಅನುಭವಾನಂದ" ,,	೦—೬—೦
೭	"ಗಣಿತ ಸಂಜೀವಿನಿ."	೧—೮—೦
೮	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ."	೦—೧೨—೦
೧೦	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೬—೦
೧೧	"೧೯೦೫ನೇ ವರುಷದ ಡೈರಿಗಳು"	

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦, ಸಾದಾ ೦—೪—೦

ಮ್ಯಾನೇಜರ್,
ಸಿ ಎಚ್, ಎಸ್ ಬುಕ್ ಡಿಪ್ಪೋ,
ಮೈಸೂರು.

ಜ್ವರಹರಿ.



ಇದು ಸಾಧಾರಣ ಜ್ವರ, ಚಳೀಜ್ವರ, ಮರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡ್ರಾಮಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಮಿನ ಸೀಸೆಯನ್ನು ವಿ ಪಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂ ಕರ್ಪೂರ

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಓಮಂ ಕರ್ಪೂರವನ್ನು ನಾನೂ ನನ್ನ ಹಾಜೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ — ಪತ್ರಿಯುತ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ನೇಪಿಯರ್ ಪಾರ್ಕ್ ರೋಡ್. ಮದರಾಸ್.

೧೯೦೫ನೆ ಇಸವಿ ಮೆಟ್ರಿಕ್ಯುಲೇಷನ್ ಕನ್ನಡ ಟೆಕ್ಸ್ಟಿನ ನೋಟ್ಸು.

ಕ್ರಯ, ೧ ರೂಪಾಯಿ. ಡಿಸ್ಕೌಂಟು ೧೦ಕ್ಕೆ ೧

ಉಪೇಕ್ಷೆಮಾಡತಕ್ಕ ನೋಟ್ಸು ಅಲ್ಲ. ಪ್ರಶ್ನೋತ್ತರಗಳೂ ಇವೆ ಪಠಿಸಿದೆ ಫೆಬ್ರವರಿ ೨೫ಕ್ಕೆ ಖಂಡಿತ ಸಿದ್ಧವಾಗುತ್ತೆ.

N. R. Venkata Subbacharya,
Subodha Granthalaya, Mysore

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೋಮೋಸಿಯಾ

ಕಷ್ಟನಿವಾರಕ



ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಬೇನೆರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨—೮ ಆಣೆ ಖಾಬು ಡಬ್ಬಿದಲ್ಲಿ ೧ ರೂ ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು, ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ —ಹೋಮೋಸಿಯಾ ಕಂಪೆನಿ. ೬೬ ನೆಂಬು ಬೀಚ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

27—1—1905 ರಿಂದ 3—2—1905 ರ ವರೆಗೆ.

ಸ್ಥಳ.	ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು	ಕಳೆದವರ್ಷ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	37	32	98	90
ಮೈಸೂರು ,,	8	7	5	4
ಬೆಂಗಳೂರು ಡಿಸ್ಟ್ರಿಕ್ಟ್	82	64	144	126
ಮೈಸೂರು ,,	51	48	78	63
ಕೋಲಾರ್ ,,	25	24	81	58
ಕೋಲಾರ್ ಚಿನ್ನದ ಗಣಿಗಳು	27	16	12	9
ತುಮಕೂರು ಡಿಸ್ಟ್ರಿಕ್ಟ್	61	53	27	22
ಹಾಸನ ,,	6	2	16	11
ಚಿತ್ರದುರ್ಗ ,,	43	41	33	20
ಕಡೂರ್ ,,	9	2	54	42
ಶಿವಮೊಗ್ಗ ,,	5	2	30	20
ಒಟ್ಟು	354	291	578	485

ಶಾಲೀವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರದ ಮಾಘ ಶುದ್ಧ ದ್ವಾದಶಿ ಗುರುವಾರದಿಂದ ಮಾಘ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಫೆಬ್ರವರಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ	ತೇದಿ ವಾರ ಮಾಸ
16	ಗುರು †	ದ್ವಾದಶಿ	37 50	ಆ	15.45	5
17	ಶುಕ್ರ *	ತ್ರಯೋ	41 2	ಪು	15.0	6
18	ಶನಿವಾ	ಚತುರ್ದಶಿ	50 0	ಪು	13 11	7
19	ರವಿವಾ ,,	ಪೌರ್ಣ	45 5	,,	16 16	8
20	ಚಂದ್ರ	ಪಾಡ್ಯಮಿ	39 32	ಮ	7 27	9
21	ಕುಜ ¶	ಬಿದಿಗೆ	34.14	ಪು	3 18	10
22	ಬುಧ	ತದಿಗೆ	28 21	ಉ	53 0	11

† ಭೀಷ್ಮದ್ವಾದಶಿ, ಮಧ್ವರಾಮಾನುಜೀಯ ಭಾಗವತಾನಾಂ ಪ್ರಾದಶಿ ಹರಿ ಜಾಗರ. * ತ್ರಿಣೇಶ್ವರಸ್ವಾಮಿ ರಥ ,, ವ್ಯಾಸಪೂರ್ಣಿಮಾ, ಚಂದ್ರಗ್ರಹಣ, ಮಾರೀಸಾರು, ಉತ್ತನಹಳ್ಳೀ ಜಾತ್ರೆ ¶ ಕರಿಘಟ್ಟದ ಶ್ರೀನಿವಾಸಸ್ವಾಮಿ ರಥ. ದಗ್ಧಯೋಗ, ಸಂಕಷ್ಟ ಚತುರ್ಥಿ

ಪೇಟೆ ಧಾರಣೆ

ದಿನಸಿ.	ಮೈಸೂರು.	ಬೆಂಗಳೂರು
ಕಷ್ಣೇ ಅಕ್ಕಿ ಪಲ್ಲ ೧ಕ್ಕೆ	ರೂ. ೧೦—೮—೦	೧೦—೮—
ಕೆಂಬೂತಿ ಅಕ್ಕಿ ಅವಲ್ ..	.. ೧೦—೪—೦	೧೧—೦—
,, ಮಾಯಂ	.. ೯—೧೨—೦	೧೦—೧೨—
ಜಾಪಾನ್ ಅಕ್ಕಿ ..	.. ೯—೮—೦	೧೧—೪—
ಸಣ್ಣಕ್ಕಿ ಅವಲ್ ..	.. ೧೨ ೦—೦	೧೨—೪—
,, ಮಾಯಂ ..	.. ೧೧ ೮ ೦	೧೧—೮—
ತೊಗರೀ ಬೇಳೆ ಪಲ್ಲ ೧ಕ್ಕೆ	.. ೧೦—೮—೦	೧೦—೮—
,, ಮಾಯಂ ..	.. ೧೧—೦—೦	೧೦—೦—
ಕೈರ ರಾಗಿ ಪಲ್ಲ ೧ಕ್ಕೆ ..	.. ೪—೧೨—೦	೫—೫—
ಕಾರ್‌ರಾಗಿ ..	.. ೪—೧—೦	೪—೧೪
ಜೋಳ ..	.. ೪—೧೨—೦	೬—೦—
ಹಲಸಂದೆ ಪಲ್ಲ ೧ಕ್ಕೆ ..	.. ೮—೧೨—೦	೮—೮—
ಬಿಳೀ ಅವರೆ ..	.. ೬ ೧೨ ೦	೬—೦—
ಹೆಸರು ..	.. ೯—೧೨—೦	೮—೮—
ಉದ್ದು ..	.. ೮ ೧೪ ೧	೯—೦—
ಕಡಲೆ ..	.. ೯ ೦—೦	೬—೧೨—
ಎಳ್ಳು ..	.. ೧೬ ೦ ೦	೧೧—೧೬
ಹುರುಳಿ ..	.. ೮—೦ ೦	೬—೮—
ಅವಲು ೧-೨ ಸೇರಿಗೆ ..	.. ೯—೮—೦	೬—೪—
ಸೀಗೇಕಾಯಿ ಮಣ ೧ಕ್ಕೆ	.. ೨—೪—೦	೧—೧೪
ಮೆಣಸಿನಕಾಯಿ ..	.. ೪—೮—೦	೩—೮—
,, ಮಾಯಂ ..	.. ೩—೧೨—೦	೩—೦—
ಬೆಲ್ಲ ದೊಡ್ಡ ಅಚ್ಚು ..	.. ೭—೪—೦	ಮು ೧.೧೦
ಒಳ್ಳೆಣ್ಣೆ ಮಣ ೧ಕ್ಕೆ ..	.. ೪—೨ ೦	೩—೧೨—
ಹರಳೆಣ್ಣೆ ,, ..	.. ೪—೦—೦	೩—೪
ಕೊತ್ತುಂಬರಿ ಹಲ್ಲ ೧ಕ್ಕೆ ..	.. ೬—೦—೦	೬—೪
ಉಪ್ಪು ,, ..	.. ೮—೦—೦	೮—೫
ಹುಣಸೇ ಹಣ್ಣು ..	.. ೧ ೪—೦	೦—೧೨—
,, ಹಳೇದು ..	.. ೦—೧೪—೦	೬—೧೦
ತುಪ್ಪ ..	.. ೧೨—೦—೦	೧೦—೦
ಸೀಮೆಯೆಣ್ಣೆ ಟಿನ್ನು ೧ಕ್ಕೆ	.. ೫—೩—೦	೪—೪
ತೆಂಗಿನಕಾಯಿ ೧೦೦ ಕ್ಕೆ	.. ೫—೦—೦	೩—೧೨
ಅಳಲೇಕಾಯಿ ಮಣ ೧ಕ್ಕೆ	.. ೧—೦—೦	೦—೧೦
ಅಂಟ್ವಾಳಕಾಯಿ ಮಣ ೧ಕ್ಕೆ	.. ೦—೧೪—೦	೦—೧೦
ಚಕ್ಕ (ಬೆಳ್ಳ) ಕೆಂಪು	.. ೧೫—೮—೦	೧೫—೩
,, ,, ಹಸಿರು	.. ೧೫—೧೦—೦	೧೫—೦
,, ,, ಗಟ್ಟಿ ಕೊಲ ೧ಕ್ಕೆ	.. ೨೬—೦—೦	೨೪—೩
ಬೆಲ್ಲ ಗಟ್ಟಿ ಕೊಲ ೧೦೦ ಕ್ಕೆ	.. ೩೬—೦—೦	೨೬—೦

Printed and Published by the Rev. H. Spencer, the Proprietor and Manager, Wesleyan Mission Press, Mysore 16/2/1905

ವೃತ್ತಾಂತ ಪತ್ರಿಕೆ.

REGISTERED M. 20

ಯ ೧ ದು ಡ್ಡು ——— ಕ್ರ ಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ — ಮೈಸೂರು—ಸನ್ ೧೯೦೪ ನೇ ಇಸವಿ ಫೆಬ್ರವರಿ ತಾರೀಖು ೨೩ ನೇ ಗುರುವಾರ. — ಸಂಚಿಕೆ ೩೮

ಶ್ರೀ ತಾಂಬೂಲ.

15

ನ್ನು ಓದಿ ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಕೊಡುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲ

ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದ ರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೨ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವುದು. ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ವರಿಗೆ ವಿ. ಪಿ. ಛಾರ್ಜಿ ೫ ಆಣೆ. ನಮ್ಮ ವಿಳಾಸ.—

ಹಳ್ಳಿ ಪರ್ವ, ಯಂ. ಗೋವಿಂದಶೆಟ್ಟಿ,

ರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟಿಷನರ್.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬ ರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

18

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಿಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು. ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಒರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆ ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ — ೨೦೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ. ೧ ರಿಂದ ೬ ವಿ ಪಿ. ಛಾರ್ಜಿ ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದ ನ್ನುವ ಸಂಶಯವಿಲ್ಲ.—ದಿ ಮಹಮದ್ ನವಾಬಾನಿ.

ಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿ ಪಿತ್ತ, ತಲೇನೋವು, ಛಳಿ ಜ್ವರಗಳು ನಿವಾರಣೆಯಾಗುತ್ತೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದ ನನಗೆ ವಿಶೇಷ ಪ್ರಯೋಜನವಾಗಿರುವುದು —ಭಕ್ತಪ್ಪರು ಇನ್ಸ್ಪೆಕ್ಟರ್.

ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.— ಸ್ಮಯಂಗಾರ್, ಟೆಲಿಗ್ರಾಫ್ ರಿಟೈರ್ಡ್ ಪೆನ್ಷನರ್, ಕೈಲಾರ್.

Apply to —P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟೋ-ನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ನವಿನುಡಿ.

ಕ್ರಯವಿಲ್ಲದೆ ದೊರೆವುದು.

ಕನ್ನಡದಲ್ಲಿ ಇದೊಂದು ಹೊಸ ಪುಸ್ತಕವು.

1

ಕ್ಷಣವೇ ಯುಗ, ಸಮಯವನ್ನು ಓಡಲೀಸದೆ ಒಂದು ಸಲ ಓದಿನೋಡಿ.

ಓದುತ ಓದುತ ದೇಶಾಭಾಷಾಭಿಜ್ಞತೆ, ಲೋಕವ್ಯವಹಾರಾನುಭವ, ಜ್ಞಾನಾಭಿವೃದ್ಧಿಗಳು ಒಂದಕ್ಕೊಂದು ಹೆಚ್ಚುವುದೇ ಮುಖ್ಯವಾದ ಫಲವು. ನಿಮ್ಮ ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬೇಗ ಬೇಗ ಬರೆಯಿರಿ. ವಿಳಾಸ —

ಭಾರತಿಸಂಪಂಗಿರಾಮು, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

೧೯೦೪ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

9

ಸಿದ್ಧವಾಗಿದೆ. ಡಿಸ್ಟೆಂಟು —೧೦ಕ್ಕೆ ೦. ೫೦ಕ್ಕೆ ೭. ೧೦೦ಕ್ಕೆ ೨೦. ಪ್ರಶ್ನೋತ್ತರಸಹಿತ. ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೬ ಆಣೆ. ಪುಸ್ತಕಾಪೇಕ್ಷಿಗಳಿಗೆ ತಕ್ಷಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಏರ್ಪಾಡುಮಾಡಿದೆ.

ಬಾಲಬೋಧ (ಮೈಸೂರು ಸಂಸ್ಥಾನ) ಭೂವಿವರಣೆ.—ಈಗ ೬ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ —೧ ಆಣೆ. ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈಚೆಗೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನು ಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧॥ ಆಣೆ.

ವಿಳಾಸ —ಮೈಸೂರಲ್ಲಿ ದಿ. ಜೆನರಲ್ ಏಜನ್ಸಿ, ೩ ಎಲ್. ಎಸ್. ಬುಕ್ ಡಿಪೋ; ಕೆ ನರಸಿಂಹಯ್ಯ ಅಂಡ್ ಕೋ; ಬೆಂಗಳೂರಲ್ಲಿ ಜಿ. ಗಣಪ್ಪ ಅಂಡ್ ಕೋ

ಯಸ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ. ಮೈಸೂರು.

ಸನ್ ೧೯೦೪ನೇ ಇಸವಿಯ

9

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿ

ಎಸ್ಟೇಟ್ ಬಿನಾರಿ ಸಿನೆಂ॥ ಡಿನಾಂ॥

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಖಾಸ್‌ಬಾಸ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ೩೦॥ ಪಂಚಾಂಗ ಗ್ರಹ ಕಾಲಾವಳಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜಿ, ಕೋರ್ಟ್ ಫೀಜು, ಪ್ರೋಸೆಸ್ ರುಸುಂ ಸ್ಟಾಂಪು ರಿಜಿಸ್ಟರ್ ಫೀಜುಗಳು, ಫೋಟೋಗ್ರಾಫಿನ ಎಲ್ಲಾ ವಿಷಯಗಳು, ಜರೂರಿಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರದ ಕೂಲಿ, ದಿನಸಂಬಳದಪಟ್ಟಿ, ಡೋಬಿಲೆಕ್ಕ, ಜನಾಬರ್ತನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕ್ಲೀನ್ ಸಾವರ್ನ್‌ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ

ಎ ನಂಬರ್ ಚಿಕ್ಕದ್ದು ೩ ಆಣೆ ಸಿ. ನಂಬರ್ ದೊಡ್ಡದ್ದು ೬ ಆ.
ಎಫ್ „ „ ೪ ಎಚ್ „ „ ೭ „
ಬಿ. ಮುಚ್ಚಳದ್ದು „ ೫ ಡಿ. ಮುಚ್ಚಳದ್ದು „ ೮ „

ಪೋಸ್ಟ್ ಛಾರ್ಜಿ ಬೇರೆ. ಒಂದೇ ಸಮೂಲೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ, ವಿ. ಪಿ. ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ —ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಅಗ್ಗ ! ಅಗ್ಗ !! ಬಹಳ ಅಗ್ಗ !!!

3

ಇಂಥಾ ಸಮಯ, ಮುಂದೆ ಸಿಗಲಿಕ್ಕಿಲ್ಲಾ.

ರಾಸ್ಕೋಪ ಲಿವರ ಸಿಸ್ಟಂ ವಾಚ.

ಇದು ಬಹಳ ಮಜಬೂತ್ ಇದ್ದು ಕುದುರೆಯ ಮೇಲೆ ಸವಾರಿ ಮಾಡಿದರೂ ಕೂಡ ಬಂದ ಆಗುವದಿಲ್ಲ. ಇಂಥಾ ವಾಚನ್ನು ನಾವು ಬಡಬರಿಗೂ ಕೂಡ ಸೋಯಿಯಾಗಬೇಕೆಂಬ ಇರಾದೆಯಿಂದ ೧೯೦೪ ನೇ ಆಗಸ್ಟ ಅಖೈರವರಿಗೆ ೧೦ ರೂಪಾಯಿ ಕಿಮ್ಮತ್ತು ಇದ್ದದ್ದು ೬ ರೂಪಾಯಿಗೆ ಕೊಡುತ್ತೇವೆ. ಗ್ಯಾರಂಟಿ ೫ ವರ್ಷ. ಪ್ರತಿ ವಾಚಿನ ಸಂಗಡ ಸ್ಪ್ರಿಂಗ್, ಪೆಟ್ಟಿಗೆ, ಕನ್ನಡಿ, ಹೀಗೆ ೩ ಸಾಮಾನು ಕಳುಹಿಸುತ್ತೇವೆ. ಟಪಾಲ್ ಖರ್ಚು ಬೇರೆ.

ವಿಳಾಸ:—ಜೀ. ಯಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರ ಕಾನಡಾ.

ತುಳಸೀ ರಾಮದಾಸ್ ಕಂಪನಿ,

ಸಾಹುಕಾರ್ ಪೇಟೆ, ಮದರಾಸು.

3

ಸವರ್ನ ಚಿನ್ನದಿಂದಲು, ತಂಬಾಕೆಂಬ ಮಟ್ಟಚಿನ್ನದಿಂದಲು ತಯಾರು ಮಾಡಿದ ಆಭರಣಗಳು ಗ್ಯಾರಂಟಿ ಚೀಟಿಯೊಡನೆ ಕಳುಹಿಸುತ್ತೇವೆ. ಭಾಗ್ಯವಂತರಿಗೂ ಬಡವರಿಗೂ ಉಪಯೋಗವಾಗುವ ಹಾಗೆ ಅತ್ಯಂತ ಸುಲಭಕ್ರಯವನ್ನು ಸಮೂಡಿಸಿರುವದರಿಂದ ಲಕ್ಷಾಂತರ ವಿಕ್ರಯವಾಗುತ್ತಲಿದೆ. ವರ್ತಕರು ವ್ಯಾಪಾರ ಮಾಡಿ ದ್ರವ್ಯಾರ್ಜನೆಮಾಡುವದಕ್ಕೆ ಇದೇ ಒಳ್ಳೆ ಕರುಣವೆಂದು ನಾವು ನಿಜವಾಗಿ ಹೇಳುತ್ತೇವೆ. ನಮ್ಮ ಮಾತನ್ನು ಪರೀಕ್ಷಿಸುವದಕ್ಕಾಗಿ ಈ ಕೆಳಗೆ ಕಂಡ ಯಾವದಾದರು ೧ ನ್ನು ತರಿಸಿ ಪರೀಕ್ಷಿಸಿರಿ.

೧. ಕೆಂಪು ಹರಳಿನ ಬೆಂಡೋಲೆ. ಇದು ಮೇಲಾದ ೮ ಕೆಂಪುಗಳಿಂದಲೂ ಅಡಿಯ ಬಿರಡೆಯನ್ನು ಬೆಲ್‌ಮೆಟಲ್ ಲೋಹದಿಂದಲು ಕಟ್ಟಲ್ಪಟ್ಟಿರುತ್ತೆ ನೋಡಿದವರು ಮೂವತ್ತು ರೂಪಾಯಿನ ಬೆಂಡೋಲೆಯೆಂದು ಹೇಳುವರು. ನಮ್ಮಲ್ಲಿ ನಂಬಿಕೆಯನ್ನಿಟ್ಟು, ಮಾದರಿಗೆ ೧ ಜೊತೆ ತರಿಸಿ ನೋಡಿ ಆನಂದವನ್ನು ಹೊಂದಿರಿ ಪುನಃ ವಾಪಸ್ ಮಾಡಿದಾಗ್ಯೂ ಇದರ ಮೊಬಲಗನ್ನು ಮಣಿಯಾರ್ಡರ್ ಮಾಡುತ್ತೇವೆ. ನೀರು ಎಷ್ಟು ಮೊದಲಾದ್ದು ತಗಲಿದರೂ ಎಷ್ಟು ವರುಷಗಳಾದರೂ ಕೆಡಲಾರದು. ಬೆಲೆ ಜೊತೆ ೧ ಕ್ಕೆ ರೂ. ೬.

೨. ತಳುಕುಪಟಿಕವನ್ನು ಹಾಕಿ ಅಚ್ಚ ಸವರ್ನ ಚಿನ್ನದಿಂದ ಕಟ್ಟಲ್ಪಟ್ಟ ಮೂಗುಬಟ್ಟು. ಬೆಲೆ ರೂ. ೧-೮-೦ ಇದು ಅನೇಕ ವರುಷಗಳು ಉಪಯೋಗಿಸಿ ವಿಕ್ರಯಿಸಿದರು ಚಿನ್ನದ ಬೆಲೆಯೂ ತಳುಕುಪಟಿಕದ ಬೆಲೆಯೂ ಹೋಗಲಾರದು. ಬಹಳ ಮೇಲಾದದ್ದು.

೩. ಅಚ್ಚ ಕೆಂಪಿನಿಂದಲು, ಸವರ್ನ ಚಿನ್ನದಿಂದಲು ಕಟ್ಟದ ಮೂಗುಬಟ್ಟು ೧ ಕ್ಕೆ ಕ್ರಯ ರೂ ೨.



೪. ತಂಬಾಕುದಿಂದಲು, ತಳುಕುಪಟಿಕದಿಂದಲು ಕಟ್ಟಲ್ಪಟ್ಟ ಮೇಲಾದ ಪತ್ತುಕಡುಕು. ಕ್ರಯ ಜೊತೆ ೧ ಕ್ಕೆ ರೂ. ೪.

೫. ಕೆಳಭಾಗ ಅಚ್ಚ ಚಿನ್ನದಿಂದಲು, ಬೆಳ್ಳಿ ಜವೆಯಿಂದಲು ಕಟ್ಟಲ್ಪಟ್ಟ ತಳುಕುಪಟಿಕದ ಪತ್ತುಕಡುಕು. ಕ್ರಯ ರೂ. ೩.

೬. ತಂಬಾಕಿನದ ಕಟ್ಟಲ್ಪಟ್ಟ ತಳುಕುಪಟಿಕದ ೩ ಕಲ್ಲುಗಳುಳ್ಳ ಬುಲಾಕು. ೧ಕ್ಕೆ ಕ್ರಯ ರೂ. ೩.



೭. ೧೪ ಕಾರೆಟ್ ಉಳ್ಳ ಚಿನ್ನದಿಂದಲು ಸುತ್ತಲು ೭ ಸೀಮೆ ಕಲ್ಲುಗಳಿಂದಲು ಕಟ್ಟಲ್ಪಟ್ಟ ಬಹಳ ನಾಜೂಕಾದ ಉಂಗರ, ಎಷ್ಟು ವರು ಷಗಳಾದರು ಕೆಡಲಾರದು. ಇದರ ಕ್ರಯ ರೂ. ೧—೮—೦.

ಮೂರು ರೂಪಾಯಿ ಬಹುಮಾನ.

ಇದೇ ಫೆಬ್ರುವರಿ ತಾ. ೧೮ ನೆ ಶನಿವಾರ ಬೆಳಗ್ಗೆ ೭॥ ಗಂಟೆಯೊಳಗೆ ಮೈಸೂರು ಪಟ್ಟಣದಲ್ಲಿ ಹಾರ್ಡ್ವಿಕ್ ಕಾಲೇಜ್, ಮಹಾರಾಣಿಯವರ ಅಸ್ಪತ್ರೆ, ರೆವ್. ಸಾಡೇ ಸಾಹೇಬರ ಬಂಗಲೆ, ಈ ರಸ್ತೆಗಳಲ್ಲಿ ಕೆಂಪು ಕಾಗದದ ರಟ್ಟಿನ ಡಬ್ಬದಲ್ಲಿದ್ದ ಕಪ್ಪು ಕನ್ನಡಕ ಎಲ್ಲೋ ಬಿದ್ದು ಹೋಯಿತು. ಈ ಕನ್ನಡಕವನ್ನು ಈ ಪತ್ರಿಕೆ ಆಫಿಸಿಗೆ ತಂದು ಕೊಟ್ಟವರಿಗೆ ೩ ರೂ. ಬಹುಮಾನ ದೊರೆಯುತ್ತೆ.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಲೋಕವ್ಯವಹಾರಚತುರರಾಗಬೇಕೆಂದು ಇಚ್ಛಿಸುವವರು ಈ ಪುಸ್ತಕವನ್ನು ಅಗತ್ಯವಾಗಿ ಓದಬೇಕು.

ಎರಡನೆ ಭಾಗ. ಮಾರಿಗೆಗೆ ಸಿದ್ಧವಾಗಿರುತ್ತೆ.

ಬಿಳಿದಾಗಿ ಥಳಥಳಿಸುವ ದಪ್ಪನಾದ ಕಾಗದ, ಭದ್ರವಾದ ಬೈಂಡುಳ್ಳದ್ದು. ಕ್ರಯ ಒಂದು ರೂಪಾಯಿ ನಾಲ್ಕಾಣೆ.

ಪುಸ್ತಕದಲ್ಲಿರುವ ಸಂಗತಿಯನ್ನು ಸ್ವಲ್ಪ ಓದಿನೋಡಿ.

ಕ್ಷೇಮಸಮಾಚಾರ ಕಾಗದಗಳು: ಬರೆಯುವುದಕ್ಕೆ ನೋವಲಿಡುವುದು, ಪೂರೈಸುವುದು, ಸಂಗತಿಗಳನ್ನು ಅಡಗಿಸುವುದು, ಮರ್ಯಾದೆಗಳು, ಬಂಧುಗಳಿಗೆ, ಹಿರಿಯರು ಕಿರಿಯರಿಗೆ, ಕಿರಿಯರು ಹಿರಿಯರಿಗೆ, ಸಮಾನರಿಗೆ, ಐಶ್ವರ್ಯವಂತರು, ಮಠಾಧಿಪತಿಗಳು, ಗುರುಗಳು, ಜಗದ್ಗುರುಗಳು ಮುಂತಾದವರಿಗೆ ಆಯಾ ಮತಪದ್ಧತಿಯನುಸರಿಸಿ ಬರೆಯುವ ಒಕ್ಕಣೆಗಳು.

ರೆವೆನ್ಯೂ ಇಲಾಖಾ: ದರಖಾಸ್ತು, ರಾಜೀನಾಮೆ, ವರ್ಗಾವರ್ಗಿ, ರಿಮಿಷನ್, ಚಿಲ್ಲರೆ, ಇತರ ಅನೇಕ ಬಾಬಿನ ತಕರಾರುಗಳು, ಲ್ಯಾಂಡು ರೆವಿನ್ಯೂ ರೂಲ್ಸು ಅನುಸರಿಸಿ ರೈತರಿಗೆ ರಿಯಾಯಿತಿ ದೊರೆಯುವ ಬಗೆಬಗೆ ಸಂಗತಿಗಳು.

ಸಿವಿಲ್ ಕೋರ್ಟುಗಳು: ತಿಳುವಳಿಕೆ ನೋಟೀಸು, ಬಗೆಬಗೆ ದಾವಾ ಅರ್ಜಿಗಳು, ಸಮನ್, ಸಾಕ್ಷಿ ಮೆಮೋ, ಪ್ರತಿವಾದಿಯ ಎದುರುತ್ತರ, ತಕರಾರುಗಳು, ವಿಚಾರಣೆ, ತೀರ್ಮಾನ, ಡಿಕ್ರಿ, ಜಡ್ಜ್‌ಮೆಂಟ್, ಜಾರಿ, ತಕರಾರು, ತೀರ್ಮಾನ, ಬಿಟ್ಟಿ ಚಾರ್ಜ್, ಸ್ವತ್ತು ಸ್ವಾಧೀನ, ದಿವಾಳಿ, ವಾರ್ಡ್ಸ್, ಮೈನರು, ಗಾರ್ಡಿಯನ್, ದಾಯಭಾಗ ಮುಂತಾದ ಬಗೆಬಗೆ ವಿಷಯಗಳಲ್ಲಿ ಸಹ, ವಿಧಿ, ತೀರ್ಪು, ಸ್ಟಾಂಪು, ಸ್ಮಾಲ್ ಕಾಜ್, ಒರಿಜಿನಲ್, ಅಪ್ಪೀಲು, ಸ್ಪೆಷಲ್ ಅಪ್ಪೀಲು, ರಿವ್ಯೂ ಮುಂತಾದ ವಿಷಯಗಳು.

ಕ್ರಿಮಿನಲ್ ಇಲಾಖಾ: ಪೋಲೀಸು ಫಿರ್ಯಾದು, ಕೊಲೆ, ಮೋಸ, ವಿಶ್ವಾಸಘಾತುಕತೆ, ಕಳವು, ಅತಿಕ್ರಮಪ್ರವೇಶ, ಅಕ್ರಮಕಟ್ಟೆ, ದುಲುಂ, ದೊಂಬಿ, ಅಕ್ರಮಕೂಟ, ಮೇಜಿಸ್ಟ್ರೇಟರ ಬಳಿ ಫಿರ್ಯಾದಿ, ವಿಚಾರಣೆ, ಸಾಕ್ಷಿ, ತೀರ್ಮಾನ, ಪುನರ್ವಿಚಾರಣೆ, ಅಪ್ಪೀಲು, ಅಪರಾಧಿಗಳಿಗೆ ಸರ್ಕಾರದವರ ಸಹಾಯ, ಇಂಡಿಯನ್ ಪೀನಲ್ ಕೋಡಿನ ಯಾವ ಯಾವ ಸೆಕ್ಷನುಗಳು ಯಾವ ಯಾವ ತಪ್ಪಿತಗಳಿಗೆ ಲಗಾವಾಗುತ್ತಿದೆ ಎಂಬುವುದು, ಯಾವ ಯಾವ ಸೆಕ್ಷನ್ ತಪ್ಪಿತಗಳು ಯಾವ ಯಾವ ಮೇಜಿಸ್ಟ್ರೇಟರು ವಿಚಾರಿಸಬೇಕು, ಯಾವ ಯಾವ ಕೋರ್ಟು ಎಷ್ಟೆಷ್ಟು ಶಿಕ್ಷೆ ಕೊಡಬಹುದು, ಪೋಲೀಸಿನವರ ಅಧಿಕಾರದ ಪರಿಮಿತಿ, ಇತ್ಯಾದಿಗಳು.

ಇತರ ಇಲಾಖೆಗಳು: ಇಂಜನೀರ್, ಫಾರೆಸ್ಟ್, ಎಕ್ಸೈಜ್, ವಿದ್ಯಾಭ್ಯಾಸ, ವ್ಯವಸಾಯ, ಮುನಿಸಿಪಲ್, ಇನ್ನೂ ಅನೇಕ ಇಲಾಖೆಗಳಲ್ಲಿ ಆವಶ್ಯಬೀಳುವ ಬೇರೆಬೇರೆ ಸಂದರ್ಭದ ಅರ್ಜಿಗಳು.

ಲೇವಾದೇವಿ: ರಶೀದಿ, ಹುಂಡಿ, ಅಧಾರ, ಭೋಗ್ಯ, ಕ್ರಯ, ದಾನ, ಪರಿವರ್ತನೆ, ಗೇಣಿ, ಸಾಲು, ವ್ಯವಸ್ಥೆ, ಮರಣಶಾಸನ, ಪಾರೀಖತ್ತು, ಮುಂತಾದ ಬಗೆಬಗೆ ಪತ್ರಗಳು, ಅವವುಗಳಿಗೆ ಅಲ್ಲಲ್ಲಿಯೇ ವಿಧಿ, ಸ್ಟಾಂಪು, ರಿಜಿಸ್ಟ್ರೇಷನ್, ಸಹವಳಿಕೆ, ಅನುಭವ ಮುಂತಾದವುಗಳು.

ಕಾನೂನುಗಳು: ಸಿವಿಲ್ ಪ್ರೊಸಿಡ್ಯೂರ್ ಕೋಡು, ಪೀನಲ್ ಕೋಡು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು, ಹಿಂದೂ ಲಾ, ಮಹಮದೀಯ ಲಾ, ಕಂಟ್ರಾಕ್ಟು, ಡಾಮೇಜು, ವಾರ್ಡ್ಸ್, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟುಫೀಜು, ಪೋಲೀಸು, ಸಾನಿಟರಿ, ಮುನಿಸಿಪಲ್, ಫಾರೆಸ್ಟು, ಎಕ್ಸೈಜು, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡು ಇಂಪ್ರೂವ್, ಲ್ಯಾಂಡು ಅಕ್ವಿಜಿಷನ್, ದೊಂಬಿ, ಅರಂಸು ಮುಂತಾದ ಎಲ್ಲಾ ಆಕ್ಟುಗಳ ಸಾರಾಂಶ.

ಸಾನುಭಾವಿಕೆ ಮತ್ತು ವರ್ತಕರ ಲೆಕ್ಕಗಳು. ರವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವುದು, ರೋಜು ವಗೈರೆ ಮುಂತಾದ ಲೆಕ್ಕಗಳನ್ನು ಬರೆಯುವ ರೀತಿಗಳು, ಇವೇ ಮೊದಲಾದ ಅನೇಕ ಸಂಗತಿಗಳು ಸ್ವಲ್ಪಮಟ್ಟಿಗೆ ಓದುಬರಹ ಬಂದವರು ಕೂಡ ಸುಲಭವಾಗಿ ತಿಳಿವ ಹಾಗೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ. ಇದರಲ್ಲಿರುವ ಸಂಗತಿಗಳೆಲ್ಲವನ್ನೂ ವಿವರಿಸುವುದು ಸಾಧ್ಯವಲ್ಲವಾಗಿ ಸೂಕ್ಷ್ಮವಾಗಿ ತಿಳಿಸಿರುತ್ತೇವೆ. ಇದನ್ನು ಓದಿರುವ ಸಾವಿರಾರು ಮಂದಿಯು ಈ ಅಂಶವನ್ನು ಒಪ್ಪಿಕೊಳ್ಳುವರು. ಒಂದಾವರ್ತಿ ತರಿಸಿ ಓದಿನೋಡಿದರೆ ತಿಳಿದು ತಮ್ಮ ಪ್ರಯಾಸವು ಸಾರ್ಥಕವಾಗುವುದು.

ಕ್ರಯ ಒಂದು ರೂಪಾಯಿ ನಾಲ್ಕಾಣೆ.

ವಿಳಾಸ — ಭಾರತಿ ಸಂಪಂಗಿರಾಮು,

ಚಿಕ್ಕಪೇಟೆ, ಬೆಂಗಳೂರು ಸಿಟಿ.



ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

7

ಈ ಔಷಧವು ಪ್ರತಿ ಮನೆಯವರಿಗೂ ಅಗತ್ಯ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಜಾರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ, ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮವುಂಟ್ ರೋಡ್,

ಮದರಾಸ್.

ಜೀರಿಗೆ ರಸಾಯನ.

3

ಇದು ಶರೀರದ ಅವಯವಗಳ ವ್ಯಾಪಾರಗಳನ್ನು ಸ್ವಭಾವವಾಗಿ ನಡಿಸುವ ಔಷಧ. ಪಿತ್ತವಿಕಾರಗಳನ್ನು ಗುಣಮಾಡುವುದರಲ್ಲಿ ಸಂಬಿಕೆಯಾದದ್ದು. ಅದ್ಭುತಶಕ್ತಿಯುಳ್ಳ ಮೂಲಿಕೆಗಳಿಂದ ತಯಾರಿಸಿರುವವು. ಅಜೀರ್ಣ ಮಲಬದ್ಧತೆ ಸಕಲ ವಿಧವಾದ ಕೆಮ್ಮುಗಳು ಕಫಾ ವಾಂತಿ ನಿಲ್ಲಿಸಿ ಎಂಥ ಪಿತ್ತವಿದ್ದರೂ ಗುಣಮಾಡುತ್ತೆ. ಡಬ್ಬಿ ೧ಕ್ಕೆ ಕ್ರಯ ೭ ಆಣೆ.

ವಿಳಾಸ — ಸಿ. ಪಿ. ಅಂಡ್ ಕೋ, ಬೆಂಗಳೂರು ಸಿಟಿ

ಜಮಿನ್‌ಗೆ ದರಖಾಸ್ತು ಮಾಡಬಹುದು.

ಕೋಲಾರದ ಡಿ॥ ಬೌರಿಂಗ್‌ಪೇಟೆ ತಾ॥ ಜೋಡಿ ಮಾದ ಮುತ್ತನಹಳ್ಳಿ ಗ್ರಾಮವನ್ನು ಡಿಟೈಲ್ ಸರ್ವೆ ಮತ್ತು ಸೆಟ್ಲಮೆಂಟು ಬಗ್ಗೆ ಕೊಟ್ಟು ಗವರ್ನಮೆಂಟಿನಿಂದ ಮಂಜೂರಾಗಿರುತ್ತೆ. ಹಾಲಿ ಸದರಿ ಗ್ರಾಮದಲ್ಲಿ ಜಮೀನು ಉಳ್ಳವರು ತಮ್ಮ ಜಮೀನುಗಳಿಗೆ ಆಗಬೇಕಾದ ಬಾಂದು ವಗೈರೆ ಹಾಕಿಕೊಳ್ಳಲು ಬೇಕಾದ ಕುಮ್ಮಕ್ಕು ಮಾಡಲು ಸಿದ್ಧವಾಗಿರಬೇಕು. ಮತ್ತು ಬಾಕಿ ಇರತಕ್ಕ ಜಮೀನುಗಳು ವಿಶಿಷ್ಟವೂ ಕಂದಾಯಕ್ಕೆ ಕೊಟ್ಟುಬಿಡುತ್ತಾದ್ದರಿಂದ ಈ ಲಾಗಾಯಿತು ಬರತಕ್ಕ ದರಖಾಸ್ತುಗಳನ್ನು ಅಂಗೀಕರಿಸಿ ಯುಕ್ತಾನುಸಾರ ವ್ಯವಸ್ಥೆ ಮಾಡಿ ಫೈಸಲಾತಿಯನ್ನು ತಿಳಿಸುತ್ತೆ. ಮಂಜೂರಾದ ದರಖಾಸ್ತುದಾರರು ಕ್ರೋಧಿಸಂವತ್ಸರದ ಲಾಗಾಯಿತು ಕಂದಾಯಕೊಡಲು ಬದ್ಧರಾಗಿರುತ್ತಾರೆ. ಜಮೀನು ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ದರಖಾಸ್ತುಗಳನ್ನು ರವಾನಿಸಬೇಕು.

ತಾ॥ ೧೬—೨—೧೯೦೫, ಬೆಂಗಳೂರು ಸಿಟಿ

ಎಂ. ಎಸ್. ಸುಬ್ಬರಾವ್,
ಜೋಡಿದಾರ್,
೧೦೦ ಬಸವನಗುಡಿ ಬಡಾವಣೆ

ವೃತ್ತಾಂತ ಪತ್ರಿಕೆ.

—:೦:—

ಸನ್ ೧೯೦೫ ನೇ ಇಸವಿ ಫೆಬ್ರುವರಿ ತಾ॥ ೨೩ ನೇ ಗುರುವಾರ.

ಕರ್ಜನ್ ಪ್ರಭುಗಳು ವಿದ್ಯಾರ್ಥಿಗಳಿಗೆ ಹೇಳಿದ ಬುದ್ಧಿ.

ಕಲ್ಕತ್ತಾ ವಿದ್ಯಾಪರೀಕ್ಷಕ ಸಮಾಜದವರು ವಿದ್ಯಾಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದವರಿಗೆ ಕಳೆದ ೧೧ ನೆಯ ತಾರೀಖಿನಲ್ಲಿ ಬಿರುದುಗಳನ್ನು ಕೊಟ್ಟರು. ಆಗ್ಗೆ ಆ ಸಮಾಜಕ್ಕೆ ಸರ್ವಾಧಿಕಾರಿಗಳಾಗಿರುವ ನಮ್ಮ ವೈಸ್ರಾಯಿ ಕರ್ಜನ್ ಪ್ರಭುಗಳು ಹೊಸದಾಗಿ ಬಿರುದುಗಳನ್ನು ಹೊಂದಿದ ವಿದ್ಯಾವಂತರಿಗೆ ಒಂದು ಭಾಷಣವನ್ನು ಮಾಡಿದರು. ವಿದ್ಯಾವಿಷಯದಲ್ಲಾಗಲಿ ರಾಜಧರ್ಮದ ವಿಷಯದಲ್ಲಾಗಲಿ ಅವರಿಗೆ ಏನೂ ಹೇಳದೆ, ಅವರ ಮುಂದಣ ಬಾಳಿನ ವಿಷಯದಲ್ಲಿ ಉತ್ಕೃಷ್ಟವಾದ ಕೆಲವು ಬುದ್ಧಿವಾದಗಳನ್ನು ಹೇಳಿದರು.

ಮೊದಲನೆಯದಾಗಿ ಅವರು ಸತ್ಯವನ್ನೇ ನುಡಿಯತಕ್ಕ ಅಭ್ಯಾಸವುಳ್ಳವರಾಗಿರ ಬೇಕೆಂದು ಹೇಳಿದರು. ಅಸತ್ಯವನ್ನು ನುಡಿಯತಕ್ಕ ವಿಧವು ಹಲವು ಬಗೆಯದಾಗಿರುವುದು. ಅವುಗಳೊಳಗೊಂದು ವಿಧವು ಯಾವುದೆಂದರೆ— ಇದ್ದುದನ್ನು ಇದ್ದಹಾಗೇ ಹೇಳದೆ, ಉತ್ಪ್ರೇಕ್ಷಿಸಿ ಹೇಳುವುದು. ಇದರಿಂದ ತಾನು ನಿಜವೆಂದು ನಂಬದೆ ಇರುವಂಥಾದುದನ್ನೂ ನಿಜವೆಂದು ಹೇಳುವ ಅಭ್ಯಾಸವುಂಟಾಗುತ್ತದೆ. ಇನ್ನೊಂದು ಬಗೆ ಯಾವುದೆಂದರೆ—ಒಂದು ಕಾರ್ಯವು ನಿಜವಲ್ಲವೆಂದು ತಿಳಿದಿದ್ದಾಗ್ಗೂ ಬುದ್ಧಿಗೆ ಒಪ್ಪುವಂತೆ ಒಂದು ಕಾರಣವನ್ನು ಕಲ್ಪಿಸಿಕೊಂಡು ಅಸತ್ಯವನ್ನು ನುಡಿಯುವ್ರದೇ. ಇದಕ್ಕೊಂದು ದೃಷ್ಟಾಂತವನ್ನು ವೇದಾಂತಿಯರು ಸರ್ವಸಾಧಾರಣವಾಗಿ ಹೇಳುವುದುಂಟು. ಒಬ್ಬ ಕೊಲೆಗಾರನಾದವನು ಒಬ್ಬನನ್ನು ಕೊಲ್ಲಬೇಕೆಂದು ಹಿಡಿಸಿಕೊಂಡು ಹೋಗುತ್ತಾ, ದಾರಿಯಲ್ಲಿ ನಿಂತಿರುವ ನನ್ನನ್ನು ಕಂಡು, 'ಇಂಥಿಂಥವನು ಯಾವ ಮಾರ್ಗವಾಗಿ ಓಡಿಹೋದನೆಂದು ಕೇಳಿದರೆ, ನಾನು ಅವನಿಗೆ ನಿಜವನ್ನು ಹೇಳಬೇಕೇ? ಸುಳ್ಳನ್ನು ಹೇಳಬೇಕೇ? ನಿಜವನ್ನು ಹೇಳಿದರೆ ಅವನಿಗೆ ಪ್ರಾಣವು ಹೋಗುತ್ತದೆ; ಸುಳ್ಳನ್ನು ಹೇಳಿದರೆ ನನ್ನ ಮೇಲೆ ತಪ್ಪು ಹೊರುತ್ತೆ, ಇದಕ್ಕೇನು ಮಾಡಬೇಕು? ಸುಳ್ಳು ಹೇಳಿಯಾದರೂ ಒಬ್ಬನ ಪ್ರಾಣವನ್ನು ಉಳಿಸುವುದು ಧರ್ಮವು ಎಂದು ಹೇಳುವರು. ಇದಕ್ಕಿಂತ ಉತ್ತಮವಾದಂಥ ಧರ್ಮಮಾರ್ಗ ಬೇರೊಂದುಂಟೆಂಬುದನ್ನು ಇವರು ಮರೆತುಹೋಗಿರುವರು. ಅದೇನೆಂದರೆ, ತಿಳಿದಿದ್ದರೂ ಹೇಳಲೊಲ್ಲೆ ಎಂದು ಪ್ರತ್ಯುತ್ತರವನ್ನೀಯುವುದೇ. ಸತ್ಯವನ್ನು ಹೇಳುವ ವಿಷಯದಲ್ಲಿ ಯಾವುದಾದರೊಂದು ನಷ್ಟವನ್ನು ಅನುಭವಿಸುವುದಕ್ಕೂ ಸಿದ್ಧವಾಗಿರದಂಥವನು ಸತ್ಯವನ್ನು ಹೇಳತಕ್ಕವನೆಂದು ಹೇಳುವುದು ಹ್ಯಾಗೆ? ಇದಂತಿರಲಿ, ವೈಸ್ರಾಯರವರು ಮಾಡಿದ ಭಾಷಣದಲ್ಲಿ ಎರಡು ವಿಧವಾದ ಅಸತ್ಯವನ್ನು ತುರಿತು ಸೂಚಿಸಿದರು. ಅವು ಯಾವುವೆಂದರೆ ತನಗೆ ಹಿತರಾದವರನ್ನಾಗಲಿ ದೊಡ್ಡವರಾದವರನ್ನಾಗಲಿ ಮುಖಸ್ತುತಿ ಮಾಡುವುದು. ಎರಡನೆಯದು, ತನ್ನ ವಿರೋಧಿಗಳಾದವರನ್ನು ದೂಷಿಸುವುದು. ಇವೆರಡು ವಿಧವಾದ ಅಸತ್ಯವನ್ನು ವರ್ಜಿಸಿ, ತನ್ನ ಸ್ನೇಹಿತರಿಗೆ ಸಂಕಟಕಾಲಗಳಲ್ಲಿ ನಂಬಿಗೆಯುಳ್ಳವರಾಗಿರುತ್ತಾ, ಎದುರಾಳಿಗಳನ್ನು ಮರ್ಯಾದೆಯಿಂದ ಕಾಣುತ್ತಾ ಇರತಕ್ಕದ್ದೇ ಧರ್ಮವೆಂದು ಪ್ರಭುಗಳು ಹೇಳಿದರು.

ಎರಡನೆಯದಾಗಿ, ಯಾವ ವಿಷಯದಲ್ಲಾದರೂ ಇತರರ ಅಭಿಪ್ರಾಯವನ್ನೇ ಅನುಮೋದಿಸುವುದಕ್ಕೆ ಪ್ರಯತ್ನಿಸದೆ ಸ್ವಂತವಾಗಿ ಅಭಿಪ್ರಾಯಗಳನ್ನು ರೂಪಿಸುವ ಶಕ್ತರಾತಕ್ಕದು. ಇತರರು ಬಾಯಿಯಿಂದ ಹೇಳುವುದಾಗಲಿ, ವೃತ್ತಾಂತ ಪತ್ರಿಕೆಗಳಲ್ಲಿ ಬರೆಯುವ ಅಭಿಪ್ರಾಯವಾಗಲಿ ನಮಗೆ ಪ್ರಮಾಣವಾಗಿರಬಾರದು. ಯಾವುದಾದರೊಂದು ವಿಷಯವನ್ನು ಆದ್ಯಂತವಾಗಿ ಪರಿಶೀಲನೆ ಮಾಡಿ, ಬುದ್ಧಿಪೂರ್ವಕವಾಗಿ ಸಕಾರಣವಾದ ಅಭಿಪ್ರಾಯಗಳನ್ನು ತಿಳಿಸಲುಳ್ಳವರಾಗಿರಬೇಕೇ ವಿನಾ ಇತರರ ಅಭಿಪ್ರಾಯವೇ ಪ್ರಮಾಣವೆಂಬುದಾಗಿ ವರ್ತಿಸುವುದು ಶುದ್ಧ ಅವಿವೇಕ ಪ್ರವರ್ತನೆಯಾಗಿರುವುದು.

ಯಾವ ವಿಷಯದಲ್ಲಾಗಲಿ ಪರಿಷ್ಕರಣಮಾಡ ಬೇಕಾದಲ್ಲಿ ಸುಮ್ಮನೆ ಉಪನ್ಯಸಿಸುವುದರಿಂದ ಯಾವ ಲಾಭವೂ ಇರುವುದಿಲ್ಲ. ದೃಷ್ಟಾಂತವಾಗಿ ಸಂಘಸಂಸ್ಕರಣ ವಿಷಯದಲ್ಲಿ ಹಲವರು ಹಲವು ವಿಧಗಳಾದ ನಿಬಂಧನೆಗಳನ್ನು ಸಭಾಪರಿಮಂಡಲದಲ್ಲಿ ಉದ್ಘೋಷಿಸುವರು. ಆ ನಿಬಂಧನೆಗಳನ್ನು ರೂಪಿಸತಕ್ಕ ಮಹನೀಯರಾದರೋ ಹಲವರಲ್ಲ, ಕೆಲವರೂ ಅಲ್ಲ, ಕಡೆಗೆ ಒಬ್ಬರೂ ಇಲ್ಲವೆಂದು ಹೇಳಬೇಕಾಗುತ್ತದೆಯೋ ಏನೋ! ಮಹಾ ಪಟ್ಟಣಗಳಲ್ಲಿ ನೂರಾರು ಸಭೆಗಳನ್ನು ಆಗಮಾಡಿ, ಬ್ರಹ್ಮಾಂಡ

...ಸುವಂಥಾ ಕರತಾಳಗಳಿಂದ ಶಬ್ದವಾದ ಸಾವಿರಾರು ...ಷಣಗಳನ್ನು ಮಾಡುವುದಕ್ಕಿಂತ ಯಾವುದೋ ಒಂದು ...ಗ್ರಾಮದಲ್ಲೇ ಇದ್ದುಕೊಂಡು, ಊರಿನವರ ಕಷ್ಟನಿ...ರಣಾ ಕಾರ್ಯದಲ್ಲಿ ಸಹಾಯಮಾಡುತ್ತಾ ಜೀವಿಸು...ವು ಎಷ್ಟೋ ಉತ್ತಮವಾಗಿದೆ

ನಾಲ್ಕನೆಯದಾಗಿ, ವಿದ್ಯಾವಂತರಾದವರು ತಮ್ಮ ...ತ್ತುವುತ್ತಲಿರುವ ಮೂಢರಾದವರನ್ನು ವಿದ್ಯಾವಂತ...ನ್ನಾಗಿ ಮಾಡುವುದರಲ್ಲಿ ಎಷ್ಟು ಅಲ್ಪವಾದ ಸಂದರ್ಭವು ...ವಾದಿ ಬಂದರೂ ಬಿಡಲಾಗದು. ಪ್ರಜೆಗಳಿಗೆ ಸರ್ಕಾ...ರದವರ ಆಡಳಿತದ ವಿಷಯದಲ್ಲಿ ಯಾವ ಅಭಿಪ್ರಾಯವಿ...ದೆಯೋ ಎಂದು ತಿಳಿಯುವುದಕ್ಕೆ ಸರ್ಕಾರದವರು ಬಹು ...ತೂಹಲವುಳ್ಳವರಾಗಿದ್ದಾರೆ. ಆದರೆ ಈ ದೇಶೀಯರ ...ಸ್ತುತ ಸ್ಥಿತಿಯನ್ನು ನೋಡಿದರೆ ವಿದ್ಯಾವಂತರ ಸಂಖ್ಯೆ...ಯು ಕಡಮೆಯಾಗಿಯೂ ವಿದ್ಯಾಲಾಭಗಳಿಗೆ ಹೊರಗತ...ವಾಗಿರುವ ಪ್ರಜೆಗಳ ಸಂಖ್ಯೆಯು ಅಪಾರವಾಗಿಯೂ ...ದೆ. ಹೀಗಿರುವುದರಿಂದ ವಿದ್ಯೆಯನ್ನು ಹೊಂದಿದವರು ...ಳುವುದೆಲ್ಲಾ ಪ್ರಜಾಸಾಮಾನ್ಯಕ್ಕೆ ಒಪ್ಪುವ ಅಭಿಪ್ರಾ...ಯವೆಂದು ತೀರ್ಮಾನಿಸುವುದಕ್ಕೆ ಅವಕಾಶವಿರುವುದಿಲ್ಲ ...ಈ ಸಂದರ್ಭದಲ್ಲಿ ವಿದ್ಯೆಯ ಪ್ರಯೋಜನವನ್ನು ಅನು...ಭವಿಸುತ್ತಲಿರುವ ಪ್ರತಿಯೊಬ್ಬನು ತನ್ನ ತನ್ನ ಊರಿನ ...ಯೂ ಗ್ರಾಮದಲ್ಲಿಯೂ ಇರುವ ಮೂಢರಲ್ಲಿ ವಿದ್ಯಾ...ಪ್ರಕಾಶವನ್ನು ಬೆಳಗುತ್ತಾ ಬಂದರೆ ಅವರಿಂದ ಸ್ವಲ್ಪ ಕಾಲ...ದಲ್ಲಿಯೇ ಎಷ್ಟು ಪ್ರಯೋಜನವುಂಟಾಗುವುದೋ ಹೇಳ...[illegible]

ಈ ದೇಶೀಯರು ತಮ್ಮ ತಮ್ಮ ನಿವಾಸಸ್ಥಳಗಳನ್ನು ...ಗಣಿಸಿಕೊಂಡು, ತಾವು ಬಂಗಾಳಿಗಳು, ಕೆಲರು ಮ...ದ್ರಾಸಿಗಳು, ಇತರರು ಮರಾಠೆಯವರು ಮೈಸೂರಿನ...ವರು ಎಂಬ ಭೇದಗಳನ್ನು ಕಲ್ಪಿಸಿಕೊಳ್ಳದೆ, ತಾವೆಲ್ಲರೂ ...ಒಂದೇ ದೇಶದವರು ಎಂದು ತಿಳಿದವರಾಗಿ ವರ್ತಿಸತಕ್ಕದ್ದು. ...ಷ್ಟೇ ಅಲ್ಲದೆ ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿದ ...ವರು ಆಗಿದ್ದೇವೆಂಬ ಅಂಶವನ್ನು ಮರೆಯದೆ, ಆ ರಾಜ್ಯ... ಸ್ಥಿರಪಟ್ಟು ವಿಸ್ತರಿಸಿಕೊಳ್ಳುವ ಮಹಾ ಕಾರ್ಯದಲ್ಲಿ ...ತಾವೂ ಭಾಗಿಗಳಾಗತಕ್ಕದ್ದು

ಸ್ವದೇಶದ ವೃತ್ತಾಂತಗಳು.

ಪುದುಕೋಟೆಯ ರಾಜರು ಕಳೆದ ವಾರ ರಾಜಧಾನಿಯ ಮಾ...ರ್ಗವಾಗಿ ಕಾಕನಕೋಟೆ ಕ್ಯಾಂಪಿಗೆ ಶಿಕಾರಿ ಉದ್ದಿಶ್ಯ ದಯಮಾ...ಡಿದರೆ

*****

ನಮ್ಮ ರೆಸಿಡೆಂಟರು ಕಳೆದ ಶುಕ್ರವಾರ ಕೊಡಗಿಗೆ ದಯಮಾ...ಡಿದರು. ನಾಳೆ ಶನಿವಾರ ಅವರು ಮಡಿಕೇರಿಯಲ್ಲಿ ವಿಕ್ಟೋರಿಯಾ ...ಸ್ಪತ್ರೆಗೆ ಅಸ್ತಿಭಾರ ಹಾಕುವರು

*****

ಬೆಂಗಳೂರು ದಂಡಿಗೆ ಸೇರಿದ ಹೊಳೆ ಅಲಸೂರುಪೇಟೆಗಳ ...ಸಂತ ಮುಂತಾದ್ದರ ಕಾಮಗಾರಿಗಾಗಿ ಇಂಡಿಯಾ ಗವರ್ನಮೆಂ...ಟವರು ೧,೭ ,೦೧೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

*****

ಗಣಪತಿ ನಾಯರೆಂಬ ಹುಡುಗನು ರಾಜಧಾನಿಯಲ್ಲಿ ಪ್ರೀವರ್ಷರಿ ಯಿದು ಮಾಡಿ ಪರೀಕ್ಷೆಗೆ ಹೋದನೆಂದು ಮೊಕದ್ದಮೆ ಆಗಿದೆಯಷ್ಟೆ. ...ರ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ಸೆಷನ್ ವಿಚಾ...ರಣೆಗೆ ಗುರಿಪಡಿಸಿದಾರೆ

*****

ಬೆಂಗಳೂರು ಪೇಟೆಗೂ ದಂಡಿಗೂ ಮಧ್ಯೆ ಉದ್ಯಾನವನದಲ್ಲಿ ...ಡಬೇಕೆಂದು ಗೊತ್ತಾಗಿರುವ ಲೇಟ್ ವಿಕ್ಟೋರಿಯಾ ಚಕ್ರವರ್ತಿ...ನಿಯವರ ಪ್ರತಿಮೆಗೆ ಕಮಿಟಿಯವರು ಹಣ ಕಳುಹಿಸಿದಾರೆ. ಪ್ರತಿ...ಮೆಯು ಬೇಗ ಬಂದೀತೆಂದು ನಿರೀಕ್ಷಿಸುತ್ತಾರೆ.

*****

ಕೋಲಾರ್ ಚಿನ್ನದ ಗಣಿಗಳಲ್ಲಿರುವ ಚಾಂಪ್ಯನ್ ಕಂಪನಿಯ ...ಮ್ಯಾನೇಜರಾಗಿದ್ದ ಮಿ॥ ಸ್ಮಿತ್ ಎಂಬಾತನು ತಲೆತಪ್ಪಿಸಿಕೊಂಡು ...ಹೋದನು, ಇನ್ನೂ ಸಿಕ್ಕಿ ಇಲ್ಲ. ಈತ ಕಂಪನಿಯಲ್ಲಿ ೧೦,೦೦೦ ...ರೂಪಾಯಿ ತಿಂದುಬಿಟ್ಟನೆಂದು ವರ್ತಮಾನವಿದೆ.

*****

ಹಿಂದಿನ ವಾರ ದಿವಾನ್ ಸರ್ ಕೃಷ್ಣಮೂರ್ತಿಯವರು ಬೆಂಗ...ಳೂರು ಪಟ್ಟಣದ ವೈಸ್ ಪ್ರೆಸಿಡೆಂಟರನ್ನು ಕರೆದುಕೊಂಡು, ಊ...ರಿನ ಕೆಲವು ಭಾಗಗಳ ಆರೋಗ್ಯವಿಚಾರ ಮುಂತಾದ್ದನ್ನು ನೋಡಿ, ...ತೃಪ್ತಿಕರವಾಗಿಲ್ಲವೆಂದು ಅಸಮಾಧಾನ ಪಟ್ಟಂತೆಯೂ, ಈ ವಿಷಯ...ದಲ್ಲಿ ಅವರು ಹುಕುಂ ಕೊಡುವವರಾಗಿದಾರೆಂತಲೂ ಕೇಳುತ್ತೇವೆ.

*****

ಮೈಸೂರು ಸರ್ಕಾರದವರು ದೇಶೀಯ ಕಾಫಿಪ್ಲಾಂಟರುಗಳ ...ಗೋಸ್ಕರ ಸಕಲೇಶಪುರದಲ್ಲೂ ಚಿಕ್ಕಮಗಳೂರಿನಲ್ಲೂ ಸ್ಥಾಪಿಸಿ ...ದರುತ್ತಾ ಬಂದಿರುವ ಕಾಫಿ ಬ್ಯಾಂಕುಗಳಿಂದ ಸುಮಾರು ಮೂರು ...ಲಕ್ಷ ರೂಪಾಯಿ ತನಕ ಸರ್ಕಾರಕ್ಕೆ ನಷ್ಟವಾಗುವುದೆಂದು ಊಹಿಸ...ಲ್ಪಟ್ಟಿದೆ. ಈಗ ಈ ಬ್ಯಾಂಕುಗಳಿಗೆ ಆಧಾರವಾಗಿರುವ ಕಾಫಿ ದವಿಾನುಗಳನ್ನು ಹರಾಜು ಹಾಕಿಸಬೇಕೆಂದು ಪ್ರಯತ್ನಪಡುತ್ತಿರುವಂತೆ ವರ್ತಮಾನವಿದೆ

*****

ಕೌನ್ಸಲರಾದ ಮಿ॥ ಪಿ. ಮಾದೈಯನವರ ಜ್ಯೇಷ್ಠಪುತ್ರರಾದ ಮಿ॥ ಕಾರಿಯಪ್ಪನವರು ಮೈಸೂರು ಸರ್ಕಾರಿ ವೇತನವನ್ನು ಪಡೆದು, ಎಲೆಕ್ಟ್ರಿಕ್ ಇಂಜನಿಯರ್ ವಿದ್ಯೆ ಕಲಿತುಬರುವುದಕ್ಕೆ ಅಮೇರಿಕಕ್ಕೆ ಹೋಗಿದಾರಷ್ಟೆ. ಆ ಪರೀಕ್ಷೆಯಲ್ಲಿ ಇವರು ತೇರ್ಗಡೆ ಹೊಂದಿ, ಆಗೀಷ್ಟಿನಲ್ಲಿ ವಾಪಸು ಬರುವವರಾಗಿದಾರೆ. ಮಿ॥ ಮಾದೈಯನವರ ಎರಡನೇ ಕುಮಾರರಾದ ೧೭ ವಯಸ್ಸಿನ ಮಿ॥ ಸಿ. ಎಂ. ಗಣಪತಿಯವರು ವಿಲಾಯತಿಯಲ್ಲಿ ವೈದ್ಯವನ್ನು ಕಲಿತು ಬರುವುದಕ್ಕಾಗಿ ಕಳೆದ ವಾರ ಬೆಂಗಳೂರಿನಿಂದ ಪ್ರಯಾಣಮಾಡಿದರು.

ರಷ್ಯಾ ಜಪಾನ್ ಯುದ್ಧವು

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯ.

ಲಂಡನ್, ಫೆಬ್ರುವರಿ ೧೩ —ತಾ ೧೦ ರಲ್ಲಿ ಮುಕ್ಡೆನ್ ಬಳಿ ಇರುವ ಫಂಗ್‌ಸಿಟಂಗ್‌ನಲ್ಲಿ ೩೦೦ ಮಂದಿ ಜಪಾನ್ ಕುದುರೆ ಸವಾರರು ನುಗ್ಗಿ ಬಂದು ರೈಲ್ ಸೇತುವೆಯನ್ನು ಮುರಿಯಬೇಕೆಂದು ಪ್ರಯತ್ನ ಪಟ್ಟರು. ಆ ಲೈನಿನಲ್ಲಿ ಸುಮಾರು ೩೦ ಗಜ ದೂರ ಅವರಿಂದ ನಾಶವಾಯಿತು. ಈಚೆಗೆ ಅದು ಪತ್ತು ಸರಿಹೋಗಿದೆ ಎಂದು ಜನರಲ್ ಕುರೊಪಾಟ್ಕಿನ್‌ರವರು ತಿಳಿಸುತ್ತಾರೆ.

ರಷ್ಯಾ ಸೈನ್ಯಕ್ಕೆ ಫಿರಂಗಿ ಹೊಡೆದದ್ದು.

ಜಪಾನಿನವರು ತಾ ೧೧ ರಲ್ಲಿ ರಷ್ಯಾದವರ ಸೈನ್ಯದ ಮೇಲೆ ಭಾರಿ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದು, ಕಾಲ್ಬಲವೇ ನುಗ್ಗಿ ಬಂದು ಮುತ್ತಿಗೆ ಹಾಕಿದರು. ಆದರೆ ರಷ್ಯಾದವರು ಅವರ ಮೇಲೆ ಬಿದ್ದು ಯುದ್ಧಮಾಡಿ ಎಲ್ಲರನ್ನೂ ಹಿಂದಕ್ಕೆ ಓಡಿಸಿದರು.

ವ್ಲಾಡಿವೋಸ್ಟಾಕಿನ ಮುತ್ತಿಗೆಯ ಪ್ರಾರಂಭ.

ಜಪಾನಿನವರು ವ್ಲಾಡಿವೋಸ್ಟಾಕಿಗೆ ಮುತ್ತಿಗೆ ಹಾಕಿಕೊಂಡಿದಾರೆಂದು ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ಪ್ರಕಟವಾಗಿದೆ. ಆ ಪಟ್ಟಣದೊಳಗಿದ್ದ ಕೆಲವು ಪ್ರಜೆಗಳು ಬಹಳ ಆತುರವಾಗಿ ಇತರ ಕಡೆಗಳಿಗೆ ಹೊರಟುಹೋಗಿದಾರೆ

ಅಡ್ಮಿರಲ್ ಟೋಗೋ ಯವರು.

ಲಂಡನ್, ಫೆಬ್ರುವರಿ ೧೪ —ಅಡ್ಮಿರಲ್ ಟೋಗೋ ಯವರು ಕುರೇ ನಗರದಿಂದ ಪ್ರಯಾಣಮಾಡಿದರು, ಅವರು ಎಲ್ಲಿಗೆ ಹೋಗುತ್ತಾರೋ ತಿಳಿಯಲಿಲ್ಲ.

ಇಂಗ್ಲಿಷರ ಹಡಗನ್ನು ಬಿಟ್ಟರು

ಜಪಾನಿನವರು ಅನುಮಾನದ ಮೇಲೆ ತಡೆದು ಸ್ವಾಧೀನಪಡಿಸಿಕೊಂಡಿದ್ದ ಈಸ್ಟ್ರಿ ಎಂಬ ಇಂಗ್ಲಿಷ್ ಹಡಗನ್ನು ಬಿಟ್ಟುಬಿಟ್ಟರು

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯ.

ಲಂಡನ್, ಫೆಬ್ರುವರಿ ೧೫—ಜಪಾನ್ ಸೈನಿಕರು ಭೂಮಿಯನ್ನು ಕೊರೆದುಕೊಂಡು, ಡೈನಮೈಟಿನಿಂದ ಚರಂಡಿಗಳನ್ನು ತೋಡಿಕೊಂಡು, ರಷ್ಯಾ ಫಿರಂಗಿ ಗುಂಡುಗಳ ಏಟು ತಗಲದಂತೆ ನುಗ್ಗಿ ಹೋಗುತ್ತಾರೆ

ಲಿಯೋಯಾಂಗಿನ ಬಳಿ ರಷ್ಯಾ ಸೈನ್ಯ.

ನೆನ್ನೆ ಸಾಯಂಕಾಲ ಸುಮಾರು ೯,೬೦೦ ರಷ್ಯಾ ಕುದುರೇ ಸವಾರರು ಲಿಯೋಯಾಂಗಿನ ಪಶ್ಚಿಮಕ್ಕೆ ೩೦ ಮೈಲಿ ದೂರದಲ್ಲಿ ಕಾಣಿಸಿಕೊಂಡು, ಹುನ್ಹೋ ನದಿಯನ್ನು ದಾಟಬೇಕೆಂತಲೂ, ಜಪಾನ್ ಸೈನ್ಯಾಧಿಪತಿಯಾದ ಮಾರ್ಷಲ್ ಓಯಾಮಾಯವರ ಸೈನ್ಯದ ಮೇಲೆ ನುಗ್ಗಬೇಕೆಂತಲೂ ಪ್ರಯತ್ನಪಟ್ಟರು. ಅಂತು ರಷ್ಯಾದವರ ಸೈನ್ಯವು ತುಂಬಾ ಹೆಚ್ಚಾಗಿ ಬಂದು ಸೇರುತ್ತಿದೆ

ಜಪಾನಿನವರ ಹೊಸ ಹಡಗುಗಳು.

ಜಪಾನ್ ರಾಜ್ಯದಲ್ಲಿ ಯುದ್ಧದ ಮೂರು ಹೊಸ ಹಡಗುಗಳನ್ನು ಕಟ್ಟಿ ಸಿದ್ಧಪಡಿಸಿಕೊಂಡಿದಾರೆ. ಇವನ್ನು ಯುದ್ಧಭೂಮಿಗೆ ಇಷ್ಟರಲ್ಲೇ ರವಾನೆ ಮಾಡುವರು

ರಷ್ಯಾ ಸೈನ್ಯ ಹಿಮ್ಮೆಟ್ಟುತ್ತಿದೆ

ಲಂಡನ್, ಫೆಬ್ರುವರಿ ೧೬ —ನೆನ್ನೆ ನಮೂದು ಮಾಡಿದ ರಷ್ಯಾ ಕುದುರೆ ಸೈನ್ಯವು ಹಿಮ್ಮೆಟ್ಟಿ ಉತ್ತರಕ್ಕೆ ಹೋಗಲಾರಂಭಿಸಿದೆ. ಜಪಾನಿನವರು ಅವರನ್ನು ಹಿಂದಟ್ಟಿಸಿಕೊಂಡು ಹೋದರು. ರಷ್ಯಾದವರ ಕಡೆ ಸ್ವಲ್ಪ ನಷ್ಟವಾಯಿತು

ಜಪಾನಿನವರು ತಾ ೧೪, ೧೫ ರಲ್ಲಿ ಪೋರ್ಟ್ ಆರ್ಥರಿನಲ್ಲಿ ದೊಡ್ಡ ಫಿರಂಗಿಗಳನ್ನು ಎತ್ತಿಕಟ್ಟಿ ಪುಟಿಲಾಫ್ ಗುಡ್ಡಕ್ಕೆ ಹೊಡೆಯುತ್ತಿದ್ದರೆಂದು ಜನರಲ್ ಕುರೊಪಾಟ್ಕಿನ್‌ರವರು ತಿಳಿಸಿದಾರೆ

ಲಂಡನ್, ಫೆಬ್ರುವರಿ ೧೭ —ತಾ. ೧೬ ರಲ್ಲಿ ನಮೂದಾದ ರಷ್ಯಾ ಕುದುರೆ ಸೈನ್ಯಗಳೆಲ್ಲಾ ಸಂಪೂರ್ಣವಾಗಿ ಹಿಮ್ಮೆಟ್ಟಿದವೆಂದು ಮಾರ್ಷಲ್ ಓಯಾಮಾ ಯವರು ತಿಳಿಸುತ್ತಾರೆ

ರಷ್ಯಾದವರ ಕಡೆ ದೊಡ್ಡ ನಷ್ಟ.

ಲಂಡನ್, ಫೆಬ್ರುವರಿ ೧೮ —ಜಪಾನ್ ಸೈನಿಕರು ರೈಲ್ ರಸ್ತೆ ಹಾಳುಮಾಡುತ್ತಿದ್ದರು. ಇವರನ್ನು ರಷ್ಯಾ ಸೈನಿಕರು ತಾ ೧೩ ರಲ್ಲಿ ಓಡಿಸಿಕೊಂಡು ಹೋಗುತ್ತಿದ್ದರು. ತಾ. ೧೪ ರಲ್ಲಿ ಜಪಾನಿನವರು ಆ ರಷ್ಯಾ ಸೈನಿಕರನ್ನು ಸುತ್ತಿಕೊಂಡು ತುಂಬಾ ನಷ್ಟಮಾಡಿದರು. ರಷ್ಯಾದವರು ಒಂದು ಫಿರಂಗಿಯನ್ನು ಕಳೆದುಕೊಂಡರು

ಕರಾರಾಗುವ ಸುದ್ದಿ.

ಲಂಡನ್, ಫೆಬ್ರುವರಿ ೧೯.—ರಷ್ಯಾದವರಿಗೂ ಜಪಾನಿನವರಿಗೂ ನಡೆಯುವ ಯುದ್ಧವು ಇಷ್ಟರಲ್ಲೇ ಶಮನವಾಗಿ ಅವರವರಿಗೆ ಕರಾರಾಗುವುದೆಂಬ ಸುದ್ದಿಯು ಕೆಲವು ದಿನಗಳಿಂದ ಹುಟ್ಟಿದೆ. ಈ ಸುದ್ದಿ ಎಲ್ಲಿ ಹುಟ್ಟಿತು, ಯಾರು ಮಧ್ಯಸ್ಥಿಕೆ ಮಾಡುತ್ತಿದಾರೆ, ಕರಾರಿನ ಕಲಮುಗಳಾವು ಎಂಬೀ ವಿಷಯಗಳೊಂದೂ ಪ್ರಕಟವಾಗಿಲ್ಲ.

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಲಂಡನ್, ಫೆಬ್ರುವರಿ ೧೪—ರಷ್ಯಾ ರಾಜ್ಯದ ಮಂತ್ರಿಗಳ ಸಭೆಯು ಶನಿವಾರವೂ ನೆನ್ನೆಯೂ ನಡೆಯಿತು. ಇವರು ಏಕವಾಕ್ಯತೆಯಿಂದ ಖಜಾನೆ ಮಂತ್ರಿಗೆ ತಿಳಿಸಿರುವುದೇನೆಂದರೆ—ಕೂಲಿಯಿಂದ ಜೀವನ ಮಾಡತಕ್ಕ ಪ್ರಜೆಗಳ ಸ್ಥಿತಿ ಒಳ್ಳೇದಾಗುವಂತೆ ಒಂದು ಏರ್ಪಾಡು ಮಾಡಬೇಕು, ಅವರು ಕೂಲಿ ಮಾಡುವ ಗಂಟೆಗಳ ಹೊತ್ತನ್ನು ಕಡಿಮೆಮಾಡಬೇಕು. ಕೆಲಸಕ್ಕೆ ಬಾರದೆ ನಿಲ್ಲತಕ್ಕವರಿಗೂ ದಂಗೇ ಮಾಡತಕ್ಕವರಿಗೂ ಕಾಠಿಣ್ಯ ಕಂಡು ಬರುವಂತೆ ಏರ್ಪಾಡು ಮಾಡಬೇಕು. ಕೂಲಿಮಾಡತಕ್ಕ ಜನರಿಗೆ ವೈದ್ಯದ ಸಹಾಯ ದೊರಕುವಂತೆಯೂ, ಕಾರ್ಖಾನೆಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಇನ್ಸ್‌ಪೆಕ್ಟರುಗಳ ಅಧಿಕಾರವನ್ನು ಕಡಿಮೆಮಾಡುವಂತೆಯೂ ಕಾನೂನ್ ಬದಲಾಯಿಸಬೇಕು. ಇದನ್ನೆಲ್ಲಾ ಕೆಲವು ದೊಡ್ಡ ಮನುಷ್ಯರು ನಿಂತು ತನಿಖೆಮಾಡುವಂತೆ ಹುಕುಂ ಕೊಟ್ಟಿದೆ. ಅವರು ಕೆಲಸ ಮಾಡಿಸತಕ್ಕ ಯಜಮಾನರನ್ನೂ ಕೂಲಿ ಮಾಡುವ ಪ್ರಜೆಗಳನ್ನೂ ಕರೆಸಿಕೊಂಡು, ಅವರ ವಾಜ್ಮೂಲಗಳನ್ನು ಬರೆದುಕೊಳ್ಳುವರು.

ಲಾಡ್ಸ್ ನಗರದಲ್ಲಿ ದೊಂಬಿ ಸ್ವಲ್ಪ ಸಮಾಧಾನಕ್ಕೆ ಬಂದಿದೆ. ಕೂಲಿಯವರು ಕಾರ್ಖಾನೆಗಳಿಗೆ ಹೋಗಿ ಕೆಲಸ ಮಾಡಲಾರಂಭಿಸಿದಾರೆ.

ಚಕ್ರವರ್ತಿಯವರ ಹೊಸ ಏರ್ಪಾಡು.

ಲಂಡನ್, ಫೆಬ್ರುವರಿ ೧೬.—ಚಕ್ರವರ್ತಿಯವರು ತಮ್ಮ ಸಾರ್ಸ್ಕಿ ಸೇಲೋ ಎಂಬ ಅರಮನೆಗೆ ಮಂತ್ರಿಗಳನ್ನೆಲ್ಲಾ ಕರೆಸಿಕೊಂಡು, ಅವರನ್ನೇ ಒಂದು ಪ್ರತ್ಯೇಕ ಸಭೆಯನ್ನಾಗಿ ಮಾಡಿ, ರಾಜಕೀಯ ವಿಚಾರಗಳಲ್ಲಿ ಅವರ ಸಲಹೆಯನ್ನು ತೆಗೆದುಕೊಳ್ಳಬೇಕೆಂತಲೂ ಈ ಸಭೆಗೆ ಇನ್ನೂ ಕೆಲವು ಜನರನ್ನು ಸೇರಿಸಬೇಕೆಂದೂ ಹುಕುಂ ಕೊಟ್ಟಿದಾರೆ. ಇದರಿಂದ ಪ್ರಜೆಗಳ ಕಷ್ಟಗಳು ಬಹು ಮಟ್ಟಿಗೆ ಕಡಿಮೆಯಾದಾವೆನ್ನುವುದಕ್ಕೆ ಸಂಶಯವಿಲ್ಲ

ಚಕ್ರವರ್ತಿಯ ಬಂಧುವನ್ನು ಕೊಂದರು.

ಗ್ರ್ಯಾಂಡ್ ಡ್ಯೂಕ್ ಸರ್ಜಿಯಸ್ ಯವರು ಮಾಸ್ಕೋ ಪಟ್ಟಣದಲ್ಲಿ ಕ್ರೆಮ್ಲಿನ್‌ಗೆ ಗಾಡಿಸವಾರಿ ಹೋಗುತ್ತಿದ್ದಾಗ ಅವರ ಗಾಡಿಯ ಕೆಳಕ್ಕೆ ಯಾರೋ ದುಷ್ಟರು ಡೈನಮೈಟು ಹಾಕಿ ಹಾರಿಸಿದರು. ಅವರಿಗೆ ಬಡಿದು ಸತ್ತುಹೋದರು. ಸಂಗಡ ಬರುತ್ತಿದ್ದ ಗಾಡಿಯಲ್ಲಿ ಇಬ್ಬರು ಈ ಮದ್ದನ್ನು ಹಾಕಿದರೆಂದು ವರ್ತಮಾನವಿದೆ. ಡ್ಯೂಕರು ಕೂತಿದ್ದ ಗಾಡಿ ಕುದುರೆಗಳು ಛಿದ್ರಛಿದ್ರವಾಗಿ ಹಾರಿ ಹೋದವು. ಡ್ಯೂಕರೂ ತುಕಡ ತುಕಡವಾಗಿ ಕತ್ತರಿಸಲ್ಪಟ್ಟರು. ಕೊಲೆಗಾರರಿಬ್ಬರನ್ನೂ ದಸ್ತಗಿರಿ ಮಾಡಿದಾರೆ. ಇವರಲ್ಲಿ ಒಬ್ಬನಿಗೆ ಘೋರಗಾಯವಾಗಿದೆ. ಕೆಲವು ವಿದ್ಯಾರ್ಥಿಗಳನ್ನೂ ಹಿಡಿದು ಬಾಕಟ್ಟನಲ್ಲಿಟ್ಟಿದಾರೆ. ಈ ಗ್ರ್ಯಾಂಡ್ ಡ್ಯೂಕರು ಬಹು ಕಾಲದಿಂದಲೂ ಪ್ರಜೆಗಳ ಅಪ್ರೀತಿಯನ್ನೇ ಸಂಪಾದಿಸಿಕೊಂಡಿದ್ದರು. ಅವರ ಗಾಡಿ ನಡೆಸುತ್ತಿದ್ದವನನ್ನು ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಅವನು ದಾರಿಯಲ್ಲೇ ಸತ್ತುಹೋದನು. ಈ ದುಷ್ಕಾರ್ಯವನ್ನು ನಡಿಸಿದವರಲ್ಲಿ ಒಬ್ಬನು ದಸ್ತಗಿರಿ ಮಾಡಲ್ಪಟ್ಟ ಕೂಡಲೇ—"ಆದದ್ದಾಗಲಿ, ಇನ್ನು ಪರವಾ ಇಲ್ಲ, ನನ್ನ ಉದ್ದೇಶವನ್ನು ನೆರವೇರಿಸಿದೆ" ಎಂಬುದಾಗಿ ಕೂಗಿ ಹೇಳಿದನು

ಚಕ್ರವರ್ತಿಯವರ ಇಸ್ತಿಹಾರ್ನಾಮೆ.

ಲಂಡನ್, ಫೆಬ್ರುವರಿ ೧೮ —ಚಕ್ರವರ್ತಿಯವರು ತಮ್ಮ ಚಿಕ್ಕಪ್ಪಂದಿರಾಗಿಯೂ ತಮ್ಮ ಹಿತಚಿಂತಕರಾಗಿಯೂ ಇದ್ದ ಗ್ರ್ಯಾಂಡ್ ಡ್ಯೂಕರು ಕೊಲ್ಲಲ್ಪಟ್ಟ ವಿಚಾರವಾಗಿ ತುಂಬಾ ದುಃಖಪಟ್ಟು ಇಸ್ತಿಹಾರ್ನಾಮೆಯನ್ನು ಪ್ರಕಟಿಸಿದಾರೆ. "ಇವರು ನಮಗಾಗಿಯೂ ಈ ರಾಜ್ಯಕ್ಕಾಗಿಯೂ ತಮ್ಮ ಜೀವಮಾನ ಕಾಲವನ್ನೆಲ್ಲಾ ವಿನಿಯೋಗಿಸಿದರು" ಎಂಬುದಾಗಿಯೂ ಅದರಲ್ಲಿ ಬರೆದಿರುವರು

ಈ ಕೊಲೆಯಿಂದುಂಟಾದ ಸ್ಥಿತಿಯನ್ನು ಕುರಿತು ತನಿಖೆ ಮಾಡುವುದಕ್ಕೂ ಆಲೋಚನೆ ಮಾಡಿ ಹೊಸ ಏರ್ಪಾಡುಗಳನ್ನು ಮಾಡುವುದಕ್ಕೂ ಮಂತ್ರಿಗಳೆಲ್ಲಾ ಸೇರಿ ಈ ದಿನ ಒಂದು ವಿಶೇಷವಾದ ಸಭೆಯನ್ನು ನಡಿಸಿದರು.

ರಷ್ಯಾ ರಾಜಧಾನಿಯಲ್ಲೂ ಇತರ ಭಾರೀ ಪಟ್ಟಣಗಳಲ್ಲೂ ದಂಗೇಕೋರರಿಂದ ಪ್ರಕಟ ಮಾಡಲ್ಪಟ್ಟ ಕಾಗದಗಳು ಧಾರಾಳವಾಗಿ ಹರಡುತ್ತಿವೆ.

ಗಲಭೆ ಹೆಚ್ಚುತ್ತಿದೆ.

ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ಪ್ರಜೆಗಳ ದಾಂಧಲೆ ಮತ್ತೆ ಹೆಚ್ಚುತ್ತಿದೆ. ೩೦,೦೦೦ ಜನರು ದಂಗೇಕೋರರ ಸಂಗಡ ಸೇರಿಕೊಂಡಿದಾರೆ. ಇವರ ಉದ್ದೇಶವನ್ನೂ ಕಾರ್ಯವನ್ನೂ ನೋಡಿ ಸರ್ಕಾರದವರು ಗಾಬರಿ ಪಡುವಂತಿದೆ. ಪೋಲೀಸಿನವರನ್ನು ಕಾರ್ಖಾನೆಗಳಲ್ಲಿ ಪಹರೆ ನಿಲ್ಲಿಸಿ, ದಂಗೇಕೋರರಲ್ಲಿ ಮುಖಂಡರಾದವರನ್ನು ದಸ್ತಗಿರಿ ಮಾಡುತ್ತಿದಾರೆ.

ರೈಲ್ವೆಯವರು ದಂಗೆಯೆದ್ದರು.

ರಾಜ್ಯದಲ್ಲಿ ಮುಖ್ಯವಾಗಿರುವ ಬಾರೀ ರೈಲ್ವೆ ಕಂಪನಿಗಳಲ್ಲಿ ಕೂಲಿ ಮತ್ತು ನೌಕರಿ ಮಾಡುವವರೆಲ್ಲಾ ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ಕೆಲವು ರಸ್ತೆಗಳಲ್ಲಿ ರೈಲ್ ಗಾಡಿಗಳ ಸಂಚಾರವೇ ನಿಂತಿದೆ.

ವರ್ತಮಾನ ಪತ್ರಿಕೆಗಳ ನಿರ್ಬಂಧನೆ.

ಸರ್ಕಾರದವರು ರಾಜಧಾನಿಯಲ್ಲಿ ಪ್ರಕಟವಾಗುವ ಕೆಲವು ವರ್ತಮಾನ ಪತ್ರಿಕೆಗಳನ್ನು ಮೂರು ತಿಂಗಳು ಪ್ರಕಟಿಸ ಕೂಡದೆಂದು ಆಜ್ಞಾಪಿಸಿ, ನಿರ್ಬಂಧನೆಯನ್ನುಂಟುಮಾಡಿದಾರೆ.

ಕ್ರೈಸ್ತ ಶಿಷ್ಯಭಾವ.

[ಕಳೆದ ವಾರದ ಶೇಷ]

೨. ಕ್ರಿಸ್ತನ ಶಿಷ್ಯರಾಗುವವರು ತಮ್ಮ ಶಿಷ್ಯಭಾವಕ್ಕೆ ಯಾವ ಅಭ್ಯಂತರವಾದರೂ ಬಂದರೆ ಅದನ್ನೆಲ್ಲಾ ಬಿಟ್ಟುಬಿಡುತ್ತಾರೆ.

ಗಲಿಲಾಯುದವರಾದ ಆ ಬೆಸ್ತರು ಕ್ರಿಸ್ತಸ್ವಾಮಿಯ ಶಿಷ್ಯರಾಗಬೇಕೆಂದ ವೇಳೆಯಲ್ಲಿ ತಮ್ಮ ಉದ್ಯೋಗವನ್ನು ಬಿಟ್ಟುಬಿಟ್ಟರು. ಸುಂಕದಕಟ್ಟೆಯ ಮೇಲೆ ಕೂತುಕೊಂಡಿದ್ದ ಆ ಮತ್ತಾಯನು ತನ್ನ ಲಾಭವನ್ನೆಲ್ಲಾ ಬಿಟ್ಟಿದ್ದು ಹೋದನು. ಸ್ವಾಮಿಯ ಬಳಿಗೆ ನಿತ್ಯಜೀವವನ್ನು ಪಡೆಯುವುದಕ್ಕಾಗಿ ಬಂದ ಆ ಧನಿಕನಾದ ಯೌವನಸ್ಥನಿಗೆ ಸ್ವಾಮಿಯು—ನಿನ್ನ ಹಣವನ್ನೆಲ್ಲಾ ದಾನಮಾಡಿಬಿಡೆಂದು ಅಪ್ಪಣೆ ಕೊಟ್ಟಿದ್ದನು. ಮತ್ತೊಬ್ಬನು ಬಂದು ತಿರುವಿನ ಋಣವನ್ನು ಸಲ್ಲಿಸಿಬರುತ್ತೇನೆಂದು ಹೇಳಲು, ಆ ಕಾರ್ಯವನ್ನು ಇನ್ನೊಬ್ಬರಿಗೆ ಒಪ್ಪಿಸಿ ಬಾ ಎಂಬ ಪ್ರಭುವು ಅವನಿಗೆ ಆಜ್ಞಾಪಿಸಿದನು. ಇದೆಲ್ಲಾ ನೋಡುವಲ್ಲಿ ಕ್ರಿಸ್ತಸ್ವಾಮಿಯ ಶಿಷ್ಯನಾಗತಕ್ಕವನು ಯಾರೇ ಆಗಲಿ, ಎಂಥವನೇ ಆಗಲಿ, ತನಗೆ ಯಾವದು ಎಷ್ಟು ಅಮೂಲ್ಯವಾದುವೇ ಆಗಲಿ ಎಲ್ಲವನ್ನೂ ಬಿಟ್ಟು ಸ್ವಾಮಿಯ ಹಿಂದೆ ಹೊರಟುಹೋಗಬೇಕೆಂಬ ನಮಗೆ ಇಲ್ಲಿ ವ್ಯಕ್ತವಾಗುತ್ತದೆ.

ನಾವು ಇದುವರೆಗೂ ಹೇಳಿರುವ ನಿದರ್ಶನಗಳನ್ನು ಪರ್ಯಾಲೋಚಿಸಿದರೆ ಕ್ರಿಸ್ತನು ತನ್ನ ಹಿಂಬಾಲಕರಿಂದ ಅಪೇಕ್ಷಿಸುವ ವಿಧೇಯತ್ವವು ಎಷ್ಟು ಮುಖ್ಯವಾದುದೆಂದು ಗೊತ್ತಾಗುವದು. ಕ್ರಿಸ್ತಸ್ವಾಮಿಯ ವಿಷಯದಲ್ಲಿ ಯಾವನಾದರೂ ಅರ್ಧಮನಸ್ಸಿನಿಂದ ನಡೆದುಕೊಳ್ಳುವದಕ್ಕೆ ಆತನು ಅವಕಾಶಕೊಡುವದೇ ಇಲ್ಲ. ಆತನನ್ನು ಸಂಪೂರ್ಣವಾಗಿ ಅಂಗೀಕರಿಸಬೇಕು, ಇಲ್ಲವೆ ಸಂಪೂರ್ಣವಾಗಿ ತಿರಸ್ಕರಿಸಬೇಕು. ಆತನು ನಮ್ಮ ನಂಬಿಕೆಗೆ ಅರ್ಹನಾಗಿದ್ದುದೇ ಯಾದರೆ ಆತನನ್ನು ನಾವು ಸಂಪೂರ್ಣವಾಗಿಯೇ ನಂಬಬೇಕಾಗಿದೆ. ಆತನು ನಮ್ಮ ಸಂಪೂರ್ಣನಾದ ನಂಬಿಕೆಗೆ ಅರ್ಹನಾಗಿಲ್ಲದಿದ್ದರೆ ಆತನನ್ನು ನಾವು ಲವಲೇಶವಾದರೂ ಮರ್ಯಾದೆಯಿಂದ ಕಾಣುತಕ್ಕ ಅವಶ್ಯಕವಿಲ್ಲ.

ಇದಲ್ಲದೆ ಆತನು ಎಲರಿಂದಲೂ ಒಂದೇ ವಿಧವಾದ ಸೇವೆಯನ್ನು ಅಪೇಕ್ಷಿಸುವುದೂ ಇಲ್ಲ. ಆತನ ಶಿಷ್ಯರೆಲ್ಲರೂ ಅಪೊಸ್ತಲರಾಗಿರಲಿಲ್ಲ. ಎಲ್ಲರೂ ತಮ್ಮ ದ್ರವ್ಯವನ್ನು ದಾನಮಾಡಿಬಿಡಬೇಕೆಂಬ ಅಪ್ಪಣೆಯನ್ನು ಹೊಂದಲಿಲ್ಲ. ಕೆಲವರನ್ನು ಆತನ ನೆಂಟರಿಷ್ಟರಿಂದ ಅಗಲಿಸಿದನು. ಇನ್ನು ಕೆಲವರನ್ನು ನೆಂಟರಿಷ್ಟರೊಂದಿಗೇ ಇರಬೇಕೆಂದು ಅಪ್ಪಣೆಯನ್ನು ಕೊಟ್ಟನು. ಯಾರು ಯಾವ ಕೆಲಸವನ್ನು ಮಾಡಬೇಕಾದರೂ ಅವರು ಕ್ರಿಸ್ತನಿಗೆ ತಮ್ಮ ಭಕ್ತಿಯನ್ನು ಸಂಪೂರ್ಣವಾಗಿಯೇ ಸಲ್ಲಿಸಬೇಕೆಂದು ಆತನು ನಿರೀಕ್ಷಿಸುತ್ತಾನೆ. ತನ್ನ ಸೇವೆಯನ್ನು ಅವರು ನೆರವೇರಿಸಬೇಕಾದರೆ ಅವರು ಕ್ಷೇಮಕರ ಯಾವದನ್ನು ಬಿಡಬೇಕಾಗಿ ಬಂದರೂ ಬಿಟ್ಟುಬಿಡುವದಕ್ಕೆ ಸಂಪೂರ್ಣಮನಸ್ಸುಳ್ಳವರಾಗಿರಬೇಕು. ಒಂದು ವೇಳೆ ತಮ್ಮ ಪ್ರಾಣವನ್ನೇ ಒಪ್ಪಿಸಿಕೊಡಬೇಕಾದರೂ ಕೊಟ್ಟುಬಿಡುವದಕ್ಕೆ ಸಿದ್ಧರಾಗಿರಬೇಕು ಎಂದು ಆತನು ಹೇಳುತ್ತಾನೆ. ಇಷ್ಟಾದರೂ ಆ ಶಿಷ್ಯರು ಯಾವದನ್ನು ಒಪ್ಪಿಸಿಕೊಡುವದಕ್ಕೆ ಸಿದ್ಧವಾಗಿದ್ದಾಗ್ಯೂ ಕೂಡ ಸ್ವಾಮಿಯು ಅವರಿಂದ ಅದನ್ನು ಕಿತ್ತುಕೊಳ್ಳುವದಕ್ಕೆ ಆತುರಪಡುತ್ತಾನೆಂದು ಹೇಳಲಾಗದು. ಮತ್ತು ಆತನಲ್ಲಿ ನಿಜವಾದ ಶಿಷ್ಯಭಾವವನ್ನು ಇಟ್ಟುಕೊಂಡಿರುವವರು ಆತನು ಕೇಳಿದುದನ್ನೆಲ್ಲಾ ಸಮರ್ಪಿಸುವದಕ್ಕೆ ಎಷ್ಟುಮಾತ್ರವೂ ಗುಣುಗುಟ್ಟುವದಿಲ್ಲ. ಯಾಕಂದರೆ ನಾವು ಯಾರನ್ನು ಅತ್ಯಂತ ವಿಶೇಷವಾಗಿ ಪ್ರೀತಿಸುತ್ತೇವೋ ಅವರು ಏನಾದರೂ ಕೇಳಿಕೊಂಡರೆ ಅದನ್ನು ಕೊಡುವದಕ್ಕೆ ನಾವು ಹಿಂದೆಗೆಯುವದುಂಟೇ ? ಯೇಸುಸ್ವಾಮಿಯ ರಾಜ್ಯದಲ್ಲಿ ರಾಜನಿಗೂ ಪ್ರಜೆಗಳಿಗೂ ಪ್ರೀತಿಯೇ ಪರಮಪ್ರಮಾಣವಾಗಿರುವದರಿಂದ ಆತನು ಪ್ರಜೆಗಳಿಂದ ಎಷ್ಟು ಅಪೂರ್ವವಾದ ವಸ್ತುವನ್ನು ಕೇಳಿಕೊಂಡರೂ ಅವರು ಅದನ್ನು ಒಪ್ಪಿಸಿಕೊಡುವದರಲ್ಲಿ ಕಷ್ಟವೇನೂ ಇರುವದಿಲ್ಲ.

೩. ಕ್ರಿಸ್ತನಿಗೂ ಆತನ ಶಿಷ್ಯರಿಗೂ ಇರುವ ಸಂಬಂಧ—ಕ್ರಿಸ್ತನ ಶಿಷ್ಯರಿಗೆ ಬೇರೆ ಯಾವದು ಇಲ್ಲದೆ ಹೋದಾಗ್ಯೂ ಆತನೊಂದಿಗೆ ಅವರು ಸಹವಾಸವನ್ನು ಪಡೆಯಬೇಕೆಂದೇ ವಿಶೇಷವಾಗಿ ಬಯಸುತ್ತಾರೆ. ಅವರು ಹೊಂದಲಾಶಿಸುವ ಈ ಪರಸ್ಪರ ಸಂಬಂಧವೇನೆಂಬುದನ್ನು ಸ್ವಲ್ಪ ವಿವರವಾಗಿ ವಿಚಾರಿಸೋಣ.

ಕ್ರಿಸ್ತನು ತನ್ನ ಶಿಷ್ಯರಿಗೆ ಗುರುವಾಗಿದ್ದಾನೆ. ಅವರು ಆತನಲ್ಲಿ ವಿದ್ಯೆಯನ್ನು ಕಲಿಯತಕ್ಕವರಾಗಿದ್ದಾರೆ. ಸ್ವಾಮಿಯು ಯಾರನ್ನಾದರೂ ನೋಡಿ—ನನ್ನ ಹಿಂದೆ ಬಾ ಎಂದು ಹೇಳುವಲ್ಲಿ ಆತನ ಅಭಿಪ್ರಾಯವೇನಂದರೆ—ಅವರು ಏನು ತಿಳಿಯಬೇಕಾದರೂ ಆತನೇ ಅವರಿಗೆ ತಿಳಿಯಪಡಿಸುತ್ತಾನೆ. ಅವರು ಹ್ಯಾಗೆ ನಡೆದುಕೊಳ್ಳಬೇಕೆಂದು ಕೇಳಿದರೆ ಅವರ ನಡತೆಗೆ ಆತನ ಬೋಧನೆಯೇ ಪ್ರಮಾಣವಾಗಿರುತ್ತದೆ. ಹೀಗಿರುವಲ್ಲಿ ಕ್ರಿಸ್ತನ ಶಿಷ್ಯರು ಆತನಲ್ಲಿ ಪ್ರೀತಿಯನ್ನು ಮಾತ್ರವಲ್ಲದೆ ಬೇರೊಂದು ಭಾವವನ್ನು ವಹಿಸತಕ್ಕದೆಂಬ ಅಭಿಪ್ರಾಯವು ಇಲ್ಲಿ ವ್ಯಕ್ತವಾಗುತ್ತದೆ. ಆ ಭಾವವೇನಂದರೆ—ಆತನಲ್ಲಿ ಜ್ಞಾನವು ಸಂಪೂರ್ಣವಾಗಿದೆಯೆಂದೂ ದೈವಿಕ ವಿಷಯಗಳಲ್ಲಿ ಆತನಿಗೆ ಎಲ್ಲವೂ ತಿಳಿದಿದೆ ಎಂದೂ ಆತನ ಹಿಂಬಾಲಕರು ಗ್ರಹಿಸಬೇಕು. ಈ ವಿಷಯದಲ್ಲಿಯೂ ಸ್ವಾಮಿಯು ವಹಿಸುವ ಅಧಿಕಾರವು ಅಪೂರ್ವವಾಗಿದೆ. ಅದು ಹ್ಯಾಗಂದರೆ—ನೀವು ಗುರುಗಳೆನ್ನಿಸಿಕೊಳ್ಳಬೇಡಿರಿ. ನಿಮಗೆ ಗುರು ಒಬ್ಬನೇ ಎಂದು ತಾನೇ ಮತ್ತಾಯ ೨೩ : ೮ ರಲ್ಲಿ ಹೇಳಿರುತ್ತಾನೆ. ಹೀಗಿರುವದರಿಂದ ಯೇಸು ಸ್ವಾಮಿಯ ವಾಕ್ಯಕ್ಕೆ ಅನುಗುಣವಿಲ್ಲದ ಯಾವ ಬೋಧನೆಯಾದರೂ ಆತನ ನಿಜಶಿಷ್ಯನಾದವನಿಗೆ ಸತ್ಯವಾದುದೆಂದು ಒಪ್ಪಿತವಾಗಲಾರದು. ಇಷ್ಟೇ ಅಲ್ಲ. ಆತನ ಬೋಧನೆಯ ಬೆಲೆಯೆಷ್ಟೆಂದು ಕೇಳಿದರೆ ಒಬ್ಬ ಮನುಷ್ಯನು ತನ್ನ ಜೀವಕಾಲವನ್ನೆಲ್ಲಾ ಆತನ ಬೋಧನೆಯನ್ನು ಗ್ರಹಿಸುವದರಲ್ಲಿಯೂ ಅಭ್ಯಾಸಿಸುವದರಲ್ಲಿಯೂ ಪ್ರಯಾಸ ಪಟ್ಟರೂ ಸಾಲದು.

ಕ್ರಿಸ್ತನು ತನ್ನ ಶಿಷ್ಯರಿಗೆ ಮಾದರಿಯಾಗಿದ್ದಾನೆ.—ನನ್ನ ಹಿಂದೆ ಬಾ ಎಂಬುದಕ್ಕೆ ನನ್ನನ್ನು ಅನುಸರಿಸಿ ನಡೆಯೆಂದು ಅರ್ಥವಾಗುತ್ತದೆ. ಕ್ರಿಸ್ತನಲ್ಲಿ ಬೋಧನೆ ಬೇರೆಯಲ್ಲ ನಡತೆ ಬೇರೆಯಲ್ಲ. ಈ ವಿಷಯದಲ್ಲಿ ತನಗೂ ಆ ಕಾಲದ ಯೆಹೂದ್ಯ ಬೋಧಕರಿಗೂ ತಾರತಮ್ಯವಿದೆಯೆಂದು ಆತನು ಹೇಳಿದನು. ಆ ಶಾಸ್ತ್ರಿಗಳೂ ಫರಿಸಾಯರೂ ಆದ ಬೋಧಕರ ವಿಷಯದಲ್ಲಿ ಆತನು ಜನರಿಗೆ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ; ಆದರೆ ಅವರು ಮಾಡುವಂತೆ ಮಾಡಬೇಡಿರಿ, ಅವರು ಹೇಳುತ್ತಾರೆಯೇ ಹೊರ್ತು ಮಾಡುವದಿಲ್ಲ (ಮತ್ತಾಯ ೨೩ ೩.) ಎಂದು ಅಪ್ಪಣೆ ಕೊಟ್ಟನು. ತನ್ನ ವಿಷಯವಾಗಿ ಆತನು ಹೇಳಿರುವದೇನಂದರೆ— ನನ್ನ ನೊಗವನ್ನು ನಿಮ್ಮ ಮೇಲೆ ತಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ ಆಗ ನಿಮ್ಮ ಪ್ರಾಣಗಳಿಗೆ ವಿಶ್ರಾಂತಿ ಆಗುವದು ಎಂಬುದೇ. ಆತನು ದೇವರ ವಿಷಯವಾಗಿ ಏನೇನು ಸತ್ಯವನ್ನು ಬೋಧಿಸಿದ್ದಾನೋ ಅದನ್ನೆಲ್ಲಾ ತಾನೇ ನಡೆದು ತೋರಿಸಿದ್ದಾನೆ, ಆದಕಾರಣ—ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ ಎಂದು ಆತನು ಹೇಳಿರುವಲ್ಲಿ ನಮಗೆ ಆಶ್ಚರ್ಯವೇನೂ ಆಗುವದಿಲ್ಲ. ಯಾಕಂದರೆ ಆ ತಂದೆಯು ಎಂಥವನೆಂದು ಆತನು ಹೇಳಿರುವದೆಲ್ಲಾ ತನ್ನಲ್ಲೇ ಪ್ರತ್ಯಕ್ಷವಾಗುವಂತೆ ಆತನು ನಡೆದುಕೊಂಡನು. ಅದಲ್ಲದೆ ತಾನು ಶಿಷ್ಯರಿಗೆ ಯಾವ ಯಾವ ಕಟ್ಟಳೆಗಳನ್ನು ಕೊಟ್ಟನೋ ಅವುಗಳನ್ನೆಲ್ಲಾ ಆತನೇ ಸಂಪೂರ್ಣವಾಗಿ ನಡೆದು ತೋರಿಸಿದನು. ಇದಕ್ಕೆ ಸಾದೃಶ್ಯವಾಗಿ ಆತನು ದೈನ್ಯವನ್ನು ಕುರಿತು ಹೇಳಿದುದನ್ನು ಇಲ್ಲಿ ಉದಾಹರಿಸಿದರೆ ಸಾಕಾಗಿದೆ. ಅದೇನಂದರೆ—ನಿಮ್ಮಲ್ಲಿ ಮೊದಲನೆಯವನಾಗಬೇಕೆಂಬವನು ನಿಮ್ಮ ಸೇವಕನಾಗಿರಬೇಕು. ಹಾಗೆಯೇ ಮನುಷ್ಯಕುಮಾರನು ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು. ಈ ಪ್ರಕಾರ ಯಾರು ಕ್ರಿಸ್ತನು ತೋರಿಸಿ ಕೊಟ್ಟಿರುವ ಮಾದರಿಯನ್ನು ಸಂಪೂರ್ಣವಾಗಿ ಅನುಸರಿಸಿ ನಡೆಯುತ್ತಾರೋ ಅವರು ಆತನ ಕಟ್ಟಳೆಯನ್ನು ವಿಚಾರದೆ ನಡೆಯುವವರಾಗಿದ್ದಾರೆ.

ಕ್ರಿಸ್ತನು ಶಿಷ್ಯರಿಗೆ ಸ್ವಾಮಿಯಾಗಿದ್ದಾನೆ. ಕ್ರಿಸ್ತನ ಶಿಷ್ಯರು ಆತನಿಗೆ ಸಲ್ಲಿಸುವ ವಿಧೇಯತ್ವವು ಸರ್ವಸಂಪೂರ್ಣವಾದುದಾಗಿದೆ ಆತನ ಮಾತುಗಳಲ್ಲಿ ಒಂದಾದರೂ ಅವರಿಗೆ ಅಲಕ್ಷ್ಯವಾಗಿ ಕಾಣತಕ್ಕವುಗಳಾಗಿರುವದಿಲ್ಲ. ಅವನ ಶಿಷ್ಯರಲ್ಲಿ ಅಪ್ರತಿಮನಾದ ಆ ಪೌಲನು—ನಾನು ಯೇಸು ಕ್ರಿಸ್ತನ ದಾಸನು ದಾಸನೆಂದು ಹೇಳಿಕೊಳ್ಳುತ್ತಾ ಹಿಗ್ಗಿದನು ಆ ದಾಸತ್ವವಾದರೋ ನಿರ್ಬಂಧಕ್ಕೆ ಎಡೆಕೊಡುವಂಥಾದ್ದಲ್ಲ. ಯೇಸು ಸ್ವಾಮಿಯಲ್ಲಿ ಸೇವೆ ಮಾಡುವದು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವಂಥಾದ್ದು. ಆದದರಿಂದಲೇ ಆ ಸೇವೆಯನ್ನು ಮಾಡುವದಕ್ಕೆ ಭಕ್ತರು ನಿರ್ಬಂಧಿಸಲ್ಪಡುತ್ತಾರೆ.

ಕ್ರಿಸ್ತನು ಶಿಷ್ಯರ ರಕ್ಷಕನು—ಅವರನ್ನು ಸಂರಕ್ಷಿಸುವದಕ್ಕೆ ಆತನು ತನ್ನ ಪ್ರಾಣವನ್ನೇ ಕೊಟ್ಟನು. ಅವರು ಆತನನ್ನು ಮರೆಹೊಗಲು ಬರುವದಕ್ಕೆ ಇದೀಗ ವಿಶೇಷವಾದ ಕಾರಣ. ತಾನು ಅವರಿಗಾಗಿ ಪ್ರಾಣವನ್ನು ಕೊಟ್ಟು ವಿಮೋಚಿಸಿರುವದರಿಂದ ಅವರು ತನಗಾಗಿ ತಮ್ಮ ಪ್ರಾಣವನ್ನು ಪ್ರತಿಷ್ಠಿಸಿಕೊಡಿರಿ ಎಂದು ಆತನು ಕೇಳುವದು ನ್ಯಾಯವಾಗಿದೆ. ನಾವು ಎಷ್ಟೇ ಭಕ್ತಿಯಿಂದ ನಡೆದುಕೊಂಡರೂ ಆತನು ನಮಗಾಗಿ ಪ್ರಾಣ ಕೊಟ್ಟದ್ದಕ್ಕೆ ಸರಿಹೋಗುವದೇ ?

೪. ತಾನು ಆರಂಭಿಸಿದ ಕಾರ್ಯವನ್ನು ಆ ಶಿಷ್ಯರು ನಡಸಬೇಕೆಂದು ಕ್ರಿಸ್ತನು ಅಪೇಕ್ಷಿಸುತ್ತಾನೆ.—

ಅನೇಕ ದೆವ್ವಗಳಿಂದ ಬಾಧಿಸಲ್ಪಡುತ್ತಿದ್ದ ಆ ಮನುಷ್ಯನನ್ನು ಸ್ವಸ್ಥ ಮಾಡಿದ ಮೇಲೆ ಸ್ವಾಮಿಯು—ನಿನ್ನ ನೆಂಟರಿಷ್ಟರ ಬಳಿಗೆ ಹೋಗಿ ನಿನಗುಂಟಾದ ಉಪಕಾರವನ್ನು ಕುರಿತು ತಿಳಿಸಬೇಕು ಎಂದು ಅಪ್ಪಣೆ ಕೊಟ್ಟು ಕಳುಹಿಸಿದನು ಕೆಲವು ವಿಶೇಷ ಸಂದರ್ಭಗಳಲ್ಲಿ ಆತನು ತನ್ನ ಮಹತ್ಕಾರ್ಯಗಳನ್ನು ಕುರಿತು ಯಾರಿಗೂ ಹೇಳಬಾರದೆಂದು ಶಿಷ್ಯರಾದವರಿಗೆ ಅಪ್ಪಣೆಯನ್ನು ಕೊಟ್ಟರೂ ವಿಶ್ವ ವೇಳೆಗಳಲ್ಲಿ ಆತನು ತನ್ನನ್ನು ಕುರಿತು ತನ್ನ ಶಿಷ್ಯರು ಇತರರಿಗೆ ತಿಳಿಯಪಡಿಸಬೇಕೆಂದು ಹೇಳುತಿದ್ದನು. ಪೇತ್ರನೆಂಬ ಶಿಷ್ಯನು ಸ್ವಾಮಿಯ ಮಹತ್ಕಾರ್ಯವನ್ನು ನೋಡಿ ತನಗೂ ಆತನಿಗೂ ಇರುವ ಅಂತರವನ್ನು ಗ್ರಹಿಸಿ—ಸ್ವಾಮಿ, ನಾನು ಪಾಪಿ, ನನ್ನನ್ನು ಬಿಟ್ಟು ಹೋಗು ಎಂದು ಬೇಡಿಕೊಂಡಾಗ ಯೇಸು ಸ್ವಾಮಿಯು ಅವನಿಗೆ—ಹೆದರಬೇಡ, ಇನ್ನು ಮೇಲೆ ಮನುಷ್ಯರನ್ನು ಹಿಡಿಯುವವನಾಗುತ್ತೀ ಎಂದು ಅಭಯವನ್ನಿತ್ತನು. ಆ ಪೇತ್ರನೂ ಅವನ ಶಿಷ್ಯರೂ ಗಾಳವನ್ನಿಂದ ಮತ್ಸ್ಯಗಳನ್ನು ಹಿಡಿಯತಕ್ಕ ಉದ್ಯೋಗಿಗಳಾಗಿದ್ದರು. ಮುಂದೆ ಅವರು ಸತ್ಯವನ್ನೇ ತೋರಿಸಿ ಅದರ ಆಕರ್ಷಣಾ ಶಕ್ತಿಯಿಂದ ಮನುಷ್ಯರನ್ನು ಸನ್ಮಾರ್ಗಕ್ಕೆ ತರುವವರಾಗುವರೆಂದು ಸ್ವಾಮಿಯು ಹೇಳಿದನು. ನೀವು ಹೊರಟು ಹೋಗಿ ಬಹಳ ಫಲವನ್ನು ಕೊಡುವಂತೆ ನಾನು ನಿಮ್ಮನ್ನು ಆರಿಸಿಕೊಂಡಿದ್ದೇನೆ ಎಂದು ಯೇಸು ಕ್ರಿಸ್ತನು ಶಿಷ್ಯರಿಗೆ ಹೇಳಿದನು. ಕ್ರಿಸ್ತನೊಂದಿಗೆ ಸೇರಿ ಸತ್ಯವನ್ನು ಪ್ರಚುರಪಡಿಸುವ ಕೆಲಸವನ್ನು ಮಾಡುವದು ಎಷ್ಟು ಘನವಾದ ಉದ್ಯೋಗ ! ಹೀಗೆ ಆತನು ಮನುಷ್ಯರನ್ನು ತನ್ನೊಂದಿಗೆ ಉದ್ಯೋಗ ಮಾಡುವವರನ್ನಾಗಿಯೂ ಕಡೆಯಲ್ಲಿ ತನ್ನೊಂದಿಗೆ ಮಹಿಮೆಯನ್ನು ಹೊಂದುವವರನ್ನಾಗಿಯೂ ಮಾಡಿಕೊಳ್ಳುತ್ತಾನೆ. ಇದಲ್ಲವೇ ಮಹಾ ಧನ್ಯತೆ !

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದಲ್ಲಿ ಹಡಗುಗಳ ಕೂಲಿಕಾರರಿಗಾಗಿ ಕಟ್ಟಿಸಿದ್ದ ಛೈರ್ ಮನೆಗಳಿಗೆ ಬೆಂಕಿ ಬಿದ್ದು ಉರಿದು ಹೋದ್ದರಿಂದ ೧೦,೦೦೦ ರೂ ನಷ್ಟವಾಗಿದೆ.

*****

ಸೂರತ್ತಿನಲ್ಲಿ ಬೆಂಕಿಯು ದೆಸೆಯಿಂದ ೮೦ ಅಂಗಡಿಗಳೂ ೫೦ ಮನೆಗಳೂ ನೆಲಸಮನಾದವೆಂದೂ, ಎರಡು ಲಕ್ಷ ದ್ರವ್ಯ ನಷ್ಟವಾಯಿತೆಂದೂ ತಂತೀ ವರ್ತಮಾನ ಬಂದಿದೆ.

*****

ಕಂಜಾನಾ ಎಂಬೊಬ್ಬ ಬ್ಯಾರಿಸ್ಟರು ಬೊಂಬಾಯಿ ಪಟ್ಟಣದಲ್ಲಿ ಸುಳ್ಳು ತಂತೀ ವರ್ತಮಾನವನ್ನು ಸೃಷ್ಟನೆ ಮಾಡಿದನೆಂದು ವ್ಯಾಕದ್ದಮೆ ಆಗಿ ಸರ್ವ ವಿಚಾರಣೆ ನಡಿಯುತ್ತಿದೆ.

*****

ರಂಗೂನ್ ಪಟ್ಟಣದಲ್ಲಿರುವ ಬಂಗಾಳಾ ಬ್ಯಾಂಕಿನಲ್ಲಿ ೧,೦೦೦ ರೂಪಾಯಿನ ಹತ್ತು ಕರೆನ್ಸಿ ನೋಟುಗಳು ಕಳುವಾದವು. ಪೋಲೀಸಿನವರು ಏಳು ಜನರನ್ನು ದಸ್ತಗಿರಿ ಮಾಡಿದಾರೆ.

*****

ಅಸ್ಸಾಂ ಆಧಿಪತ್ಯಕ್ಕೆ ಸೇರಿದ ಲಕ್ಷ್ಮೀಪುರದಲ್ಲಿ ಸೀಮೆಯೆಣ್ಣೆಯನ್ನೂ ಮಾಕಂ ಎಂಬಲ್ಲಿ ಕಲ್ಲಿದ್ದಲನ್ನೂ ಗಣಿಗಳಿಂದ ತೆಗೆಯುತ್ತಾರೆ ಕಳೆದ ವರುಷ ೨೫ ಲಕ್ಷ ಗ್ಯಾಲನ್ ಯೆಣ್ಣೆಯೂ ೨ ಲಕ್ಷ ಟನ್ ತೂಕದ ಕಲ್ಲಿದ್ದಲೂ ಅಲ್ಲಿ ಉತ್ಪತ್ತಿಯಾಗಿರುತ್ತವೆ.

*****

ಕಲ್ಕತ್ತಾ ಪಟ್ಟಣದ ಬೆಳ್ಳಿಗಟ್ಟವೆಂಬ ಬಸ್ತಿಯಲ್ಲಿ ಒಂದು ದೊಡ್ಡ ನಾರಿನ ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು, ಒಂದು ಲಕ್ಷ ರೂಪಾಯಿನ ಸಾಮಾನಿಗಿಂತಲೂ ಹೆಚ್ಚಾಗಿ ನಾಶವಾಯಿತು ಸರ್ಕಾರಿ ಸಿಪಾಯಿಗಳು ಯಂತ್ರಗಳನ್ನು ತಂದು ತುಂಬಾ ಸಾಹಸಪಟ್ಟು, ಕೆಲವು ಮಂಡದ ಮನೆಗಳನ್ನು ಕಾಪಾಡಿದರು.

*****

ಅನಂತಪುರದ ಸಂಸ್ಥಾನದ ಮಹಾರಾಜರವರು ಇದುವರೆಗೆ ತಮ್ಮ ಛೀಫ್ ಜಡ್ಜರಾಗಿದ್ದು ಕೆಲಸ ಬಿಟ್ಟ ಮೆ॥ ಸಿ ವೆಂಕೋಬಾಚಾರಿಯವರಿಗೆ ಒಂದು ದಂತದ ಕೋಲನ್ನೂ ದಂತದಲ್ಲಿ ಕೆತ್ತಿದ ವಿಷ್ಣೇಶ್ವರ ವಿಗ್ರಹವನ್ನೂ, ಕಾಗದ ಕತ್ತರಿಸುವ ದಂತದ ಕತ್ತಿಯನ್ನೂ ಬಹುಮಾನವಾಗಿ ಕೊಟ್ಟರೆಂದು ಪ್ರಕಟವಾಗಿದೆ.

*****

ಮದರಾಸ್ ಪಟ್ಟಣದ ಇಂಜನಿಯರ್ ಆಫೀಸಿನಲ್ಲಿ ಅಕೌಂಟೆಂಟಾಗಿರುವ ಮೆ॥ ಕಾರ್ನಿಲಿಯಸ್ ಪಿಳ್ಳೆ ಎಂಬಾತನ ಕುಮಾರ್ತೆಯು ಈ ಸಲ ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾಳೆ ಈಕೆ ಇದುವರೆಗೂ ಪ್ರತಿ ಒಂದು ಪರೀಕ್ಷೆಯಲ್ಲೂ ಬಹಳ ಮೇಲ್ತರವಾಗಿ ಪ್ಯಾಸಾಗಿ, ಬಿರುದುಗಳನ್ನೂ ಬಹುಮಾನಗಳನ್ನೂ ಸಂಪಾದಿಸಿಕೊಂಡಿರುವಳು.

*****

ಜಬ್ಬಲ್‌ಪುರದ ಭಾರೀ ವರ್ತಕರಾದ ರಾಜಾ ಸೇಠ ಗೋಕುಲದಾಸ್ ಯವರು ಭೂಪಾಲದಿಂದ ಮೂರು ಕುದುರೆ ಗಾಡಿಗಳನ್ನು ಕೊಂಪು ರೈಲಿನ ಮೇಲೆ ತರುತ್ತಿದ್ದರು. ದಾರಿಯಲ್ಲಿ ಆ ಗಾಡಿಗಳಿಗೆ ಬೆಂಕಿಬಿದ್ದು ಸುಟ್ಟುಹೋದವು. ಆದಕಾರಣ ಆ ಸಾಹುಕಾರರು ರೈಲ್ ಕಂಪನಿಯವರ ಮೇಲೆ ೩,೦೦೦ ರೂಪಾಯಿ ನಷ್ಟಕ್ಕಾಗಿ ದಾವಾ ತಂದಿಸಾರೆ.

*****

ಕಳೆದ ವಾರ ರಂಗೂನ್ ಪಟ್ಟಣದ ಕಲ್ವರ್ಟ್ ಎಂಬ ಬೀದಿಗೆ ಬೆಂಕಿ ಬಿದ್ದು, ಅನುಕೂಲವಾದ ಬಿರುಗಾಳಿ ಇದ್ದದ್ದರಿಂದ ಮನೆಯಿಂದ ಮನೆಗೆ ಹಬ್ಬಿ ಬಹಳ ನಷ್ಟಮಾಡಿತು. ಅಗಸರಿಗೋಸ್ಕರ ಸರ್ಕಾರದವರು ಕಟ್ಟಿಸಿದ್ದ ಸುಮಾರು ೩೦೦—೪೦೦ ಮನೆಗಳು ಬೂದಿಯಾದವು. ಇದರಿಂದ ೫೦,೦೦೦ ರೂಪಾಯಿ ನಷ್ಟವಾಯಿತೆಂದು ತಿಳಿದು ಬಂದಿದೆ.

*****

ಬಂಗಾಳಾ ಆಧಿಪತ್ಯದಲ್ಲಿ ನಾರಿನ ವ್ಯವಸಾಯವು ಕಳೆದ ಹತ್ತು ವರುಷಗಳಲ್ಲಿ ಇದ್ದದ್ದಕ್ಕಿಂತಲೂ ಈಗ ನಾಲ್ಕುಪಾಲು ಹೆಚ್ಚಾಗಿದೆ. ಒಂದು ಎಕರೆಗೆ ೧೫ ಮಣದಷ್ಟು ನಾರನ್ನು ಬೆಳೆ ಮಾಡುವರು. ಒಂದು ವರುಷದಲ್ಲಿ ೧೬ ಲಕ್ಷ ಟನ್‌ಗಳ ನಾರು ಉತ್ಪತ್ತಿಯಾಗುವುದು ಸಾಧಾರಣ ಇದು ಹಿಂದುಸ್ಥಾನದ ರೈತನಿಗೆ ೨೦ ಕೋಟಿ ರೂಪಾಯಿ ಕ್ರಯ ತಂದು ಕೊಡುವುದು.

*****

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಗಿಲ್ಗಿಟ್ ಡಿಸ್ಟ್ರಿಕ್ಟಿನಲ್ಲಿ ರಾಜಾ ಮಹಮದ್ ಅಕ್ಬರ್ ಖಾನ್ ಎಂಬಾತನಿಗೆ ಇಂಡಿಯಾ ಗವರ್ನ್‌ಮೆಂಟಿನವರು ಖಾನ್ ಬಹದೂರ್ ಎಂಬ ಬಿರುದನ್ನು ದಯಪಾಲಿಸಿದ್ದರು. ಈಚೆಗೆ ಆತನು ದುರ್ನಡತೆಯುಳ್ಳವನಾಗಿ ಅಪಕೀರ್ತಿಪಡೆದ ಕಾರಣ ಗವರ್ನ್‌ಮೆಂಟಿನವರು ಆ ಬಿರುದನ್ನು ಕಿತ್ತುಕೊಂಡಿದ್ದೇವೆಂದು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ.

*****

ಕಳೆದ ೧೭೯೯ನೆ ಇಸವಿ ಫೆಬ್ರುವರಿ ೨೫ ರಲ್ಲಿ ಶ್ರೀರಂಗಪಟ್ಟಣದಿಂದ ಟೀಪೂಸುಲ್ತಾನನ ಇಬ್ಬರು ಗಂಡು ಮಕ್ಕಳನ್ನು ಇಂಗ್ಲೀಷ್ ಗವರ್ನ್‌ಮೆಂಟಿನವರು ಕರಾರಿನ ಪ್ರಕಾರ ಕಲ್ಕತೆಗೆ ಕರೆದುಕೊಂಡು ಹೋದರಷ್ಟೆ ಆಗ ನಡೆದ ತಹನಾಮೆಯಂತೆ ಅವರನ್ನು ಸಾಗಿಸಿಕೊಂಡು ಹೋದದ್ದನ್ನು ಚಿತ್ರದಲ್ಲಿ ಬರೆದು, ಕಲ್ಕತ್ತಾ ಪಟ್ಟಣದ ಗವರ್ನ್‌ಮೆಂಟ್ ಬಂಗಲೆಯಲ್ಲಿ ಕಟ್ಟಿದ್ದರು. ಈಗ ಈ ತಸ್ವೀರನ್ನು ವೈಸ್‌ರಾಯಿಯವರು ಅಲ್ಲಿನ ವಿಕ್ಟೋರಿಯಾ ಮೆಮೋರಿಯಲ್ ಬಂಗಲೆಗೆ ಕಳುಹಿಸಿಕೊಟ್ಟು, ಅಲ್ಲಿ ಕಟ್ಟಿಸಿರುತ್ತಾರೆ.

ಹಿಂದುಸ್ಥಾನದಿಂದ ಒಬ್ಬ ವರ್ತಕನು ಬರ್ಮಾ ರಾಜಧಾನಿಯಾದ ರಂಗೂನ್ ಪಟ್ಟಣದಲ್ಲಿ ಹೋಗಿ ನಿಂತು, ಸಾಬೂನು ತಯಾರಿ ಬಿಕರಿ ಮಾಡುತ್ತಾ ಬಂದನು. ಇದರಲ್ಲಿ ಆತನಿಗೆ ತುಂಬಾ ಲಾಭ ಉತ್ಪತ್ತಿಯಾಗಿದೆ. ಈಗ ಅದೇ ಸಾಹುಕಾರನು ಅಲ್ಲಿ ನಾಲ್ಕು ಎಕರೆ ಜಮೀನ್ ಕೊಂಡುಕೊಂಡು, ಅಲ್ಲಿ ಸಾಬೂನ್ ತಯಾರಿಗೆ ಭಾರೀ ಕಾರ್ಖಾನೆಯನ್ನು ಕಟ್ಟಿಸಬೇಕೆಂತಲೂ, ಸೀಮೆಯಿಂದ ಯಂತ್ರಸಾಮಗ್ರಿಗಳನ್ನು ತರಿಸಬೇಕೆಂತಲೂ ಗೊತ್ತುಮಾಡಿದ್ದಾನೆ.

****

ಹಿಂದುಸ್ಥಾನದಲ್ಲಿ ಹೋದ ವಾರ ೩೩,೦೮೭ ಮಂದಿ ಪ್ಲೇಗ್ ರೋಗದಲ್ಲಿ ಕಾಲವಾದರು. ಈ ವಾರವಾದರೋ ೩೬,೧೬೭ ಮಂದಿ ಮೃತಪಟ್ಟಿದ್ದಾರೆ. ಬೇರೆ ಬೇರೆ ಸ್ಥಳಗಳಲ್ಲಿ ಸತ್ತವರು ಎಷ್ಟು ಎಂದರೆ—ವಾಯುವ್ಯ ಪ್ರಾಂತ್ಯಗಳು ೧೫,೩೬೭, ಪಂಜಾಬ್ ೬,೪೭೨, ಬಂಗಾಳಾ ೫,೦೫೦, ಬೊಂಬಾಯಿ ಡಿಸ್ಟ್ರಿಕ್ಟುಗಳು ೧,೦೦೧, ಹೈದರಾಬಾದ್ ಸಂಸ್ಥಾನ ೫೭೬, ಮಧ್ಯ ಪ್ರಾಂತ್ಯಗಳು ೩೬, ಮದರಾಸ್ ಡಿಸ್ಟ್ರಿಕ್ಟುಗಳು ೪೧೩, ಬೊಂಬಾಯಿ ಪಟ್ಟಣ ೧೯೧, ಕಲ್ಕತ್ತ ೮೩, ಇತ್ಯಾದಿ

****

ಬರ್ಮಾ ಅಧಿಪತ್ಯದ ರಂಗೂನ್ ಪಟ್ಟಣದಲ್ಲಿ ಒಂದು ಭಾರೀ ಆಸ್ಪತ್ರೆಯು ಕಟ್ಟಲ್ಪಡುವುದು. ಇದಕ್ಕೆ ಸರ್ಕಾರದವರು ರೂಪಾಯಿ ೨೧,೫೧,೯೦೦ ಸ್ಯಾಂಕ್ಷನ್ ಮಾಡಿದ್ದಾರೆ. ಕಂಟ್ರಾಕ್ಟರುಗಳು ಕಟ್ಟುತ್ತಾ ಇದ್ದಾರೆ. ಈ ಆಸ್ಪತ್ರೆಯಲ್ಲಿ ಸಮಸ್ತ ವಿಧವಾದ ರೋಗಿಗಳಿಗೂ ಬೇರೆ ಬೇರೆ ಸ್ಥಳವನ್ನು ಮಾಡಿ, ಚಿಕಿತ್ಸೆ ಮಾಡಿಸುವರು. ವಿದ್ಯುಚ್ಛಕ್ತಿ ಮೊದಲಾದ ನೂತನ ಸಲಕರಣೆಗಳನ್ನೆಲ್ಲಾ ಉಪಯೋಗಿಸುತ್ತಾರೆ. ಇನ್ನೊಂದು ವರುಷದೊಳಗಾಗಿ ಆಸ್ಪತ್ರೆಯು ಪೂರ್ಣವಾಗಬೇಕೆಂದು ಗೊತ್ತು ಮಾಡಿದ್ದಾರೆ

****

ಬರ್ಮಾ ಅಧಿಪತ್ಯದಲ್ಲಿ ಕಾಡು ಮೃಗಗಳಿಂದ ಪ್ರಜೆಗಳಿಗೂ ವ್ಯಾಪಾರಿಗಳಿಗೂ ತುಂಬಾ ಕಷ್ಟನಷ್ಟಗಳುಂಟಾಗುತ್ತಿರುವುದನ್ನು ನೋಡಿ, ಸರ್ಕಾರದವರು ಶಿಕಾರಿ ಮಾಡುವವರಿಗೆ ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದಾರೆ. ಬಹುಮಾನಗಳ ಕ್ರಮ ಹ್ಯಾಗಂದರೆ—ದೊಡ್ಡ ಹುಲಿ ೧ ಕ್ಕೆ ೪೦ ರೂಪಾಯಿ, ಚಿಕ್ಕದಕ್ಕೆ ೨೦, ದೊಡ್ಡ ಚಿರತೆಗೆ ೨೦ ರೂ., ಚಿಕ್ಕದಕ್ಕೆ ೧೦, ಕರಡಿಗೆ ೧೦ ರೂ., ಕರಡಿ ಮರಿಗೆ ೫, ಇತ್ಯಾದಿ, ಇದಲ್ಲದೆ ಮನುಷ್ಯರ ಮೇಲೆ ಬೀಳುವ ಹುಲಿಗಳನ್ನಾಗಲಿ ಆನೆಯನ್ನಾಗಲಿ ಶಿಕಾರಿ ಮಾಡಿದವರಿಗೆ ೧೦೦ ರೂಪಾಯಿ ತನಕ ಇನಾಮು ಕೊಡುವರು

****

ಕಳೆದ ಎರಡು ಮೂರು ವಾರಗಳಿಂದಲೂ ಉತ್ತರ ದೇಶದಲ್ಲಿ ಚಳಿಯೂ ಅಧಿಕವಾಗಿ, ಶೀತ ಹವಾ ಪ್ರಬಲವಾಗಿ, ಅನೇಕ ಕಡೆಗಳಲ್ಲಿ ಪ್ರಜೆಗಳೂ ಪ್ರಾಣಿಗಳೂ ನಾನಾ ಕಷ್ಟಗಳಿಗೆ ಗುರಿಯಾಗಿವೆ. ಬೆಳೆಗಳೂ ಬಹುಮಟ್ಟಿಗೆ ಕೆಟ್ಟುಹೋಯಿತು. ಧಾನ್ಯಗಳ ಆಮದು ಕಡಿಮೆಯಾದುದನ್ನು ನೋಡಿ ಅನೇಕ ಬಸ್ತಿಗಳಲ್ಲಿ ವರ್ತಕರು ಕ್ರಯವನ್ನು ತುಂಬಾ ಹೆಚ್ಚಿಸಿಬಿಟ್ಟಿದ್ದಾರೆ. ಗೋಧಿಯು ರೂಪಾಯಿಗೆ ೧೬ ರಿಂದ ೧೧ ಸೇರಿಗೂ, ಬಾಜ್ರಿ ೩೦ ರಿಂದ ೧೮ ಸೇರಿಗೂ, ಜೋಳವು ೨೭ ರಿಂದ ೧೯ ಸೇರಿಗೂ ಇಳಿದುಹೋಗಿದೆ. ಸರ್ಕಾರದವರು ಅಲ್ಲಲ್ಲಿ ವರ್ತಕರಿಗೆ ಬುದ್ಧಿ ಹೇಳುತ್ತಿದ್ದಾರೆ.

****

ಬೊಂಬಾಯಿ ಗವರ್ನಮೆಂಟಿನವರು ಬೊಂಬಾಯಿ ಅಧಿಪತ್ಯದ ಸ್ಥಿತಿಯು ರಿಪೋರ್ಟನ್ನು ಕುರಿತು ಇಂಡಿಯಾ ಗವರ್ನಮೆಂಟಿಗೆ ಕಳುಹಿಸಿರುವ ರಿಪೋರ್ಟಿನಿಂದ ತಿಳಿದು ಬರುವುದೇನೆಂದರೆ—ಗುಜರಾತ್ ಪ್ರಾಂತ್ಯದಲ್ಲಿ ಸೈತನ ಸ್ಥಿತಿಯು ಸಾಮಾನ್ಯವಾಗಿ ತೃಪ್ತಿಕರವಾಗಿದೆ. ಆದರೆ ದಖ್ಖನಲ್ಲೂ ಕರ್ನಾಟಕ ದೇಶದಲ್ಲೂ ಕ್ಷಾಮವು ಬರಬಹುದೆಂಬ ಭೀತಿ ಕಾಣುವುದು. ಉತ್ತರ ಡಿವಿಜನಲ್ಲೂ ಅಹಮದ್‌ನಗರದಲ್ಲೂ ತಕ್ಕಾವಿ ಅಡ್ವಾನ್ಸಿಗಾಗಿ ಮತ್ತೆ ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದೆ. ಮುಂದಿನ ಸಾಲಿನಲ್ಲಿ ಬೊಂಬಾಯಿ ಗವರ್ನಮೆಂಟಿನವರು ೩ ಕೋಟಿಯೂ ೮೩ ಲಕ್ಷ ರೂಪಾಯಿ ಕಂದಾಯ ಕಾಲಿಗಳನ್ನು ಮಾಫಿ ಬಿಡಬೇಕಾಗುವುದೆಂದು ಊಹಿಸಲ್ಪಟ್ಟಿದೆ.

****

ವಿಲಾಯತಿಯ ಚಕ್ರವರ್ತಿ ಸಾರ್ವಭೌಮರವರ ಜ್ಯೇಷ್ಠಪುತ್ರರೂ ಯುವರಾಜರೂ ಆದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನೀಪರಿವಾರ ಸಹಿತ ಆಗೀಸ್ಟು ತಿಂಗಳ ಅಂತ್ಯಭಾಗದಲ್ಲಿ ಹಿಂದುಸ್ಥಾನಕ್ಕೆ ದಯಮಾಡುವವರಾಗಿದ್ದಾರೆಂದು ವಿಲಾಯತಿಯಿಂದ ಮತ್ತೆ ವರ್ತಮಾನ ಬಂದಿದೆ. ಅವರ ಆಗಮನವು ಇನ್ನೂ ಖಂಡಿತವಾಗಿಲ್ಲವೆಂದು ಕಲ್ಕತ್ತೆಯಲ್ಲಿ ಹೇಳುವರು. ಇಂಡಿಯಾ ಗವರ್ನಮೆಂಟಿಗೆ ಸರ್ಕಾರಿಯಾಗಿ ಯಾವ ಹುಕುಮೂ ಬಂದಿರುವುದಿಲ್ಲ. ಆದರೂ ಅವರು ದಯಮಾಡುವ ವಿಚಾರ ವಿಲಾಯತಿಯಲ್ಲಿ ಈಗ ಚರ್ಚೆಯಾಗುತ್ತಿದೆ ಎಂದು ಹೇಳಬಹುದು. ಅಂತು ಅವರು ಆಗೀಸ್ಟು ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬರುವುದಿಲ್ಲ, ನೊವೆಂಬರಿನಲ್ಲಿ ಬರಬಹುದೆಂದು ಕಾಣುತ್ತದೆ.

****

೧೯೦೩ನೇ ವರುಷ ಹರಿದ್ವಾರದಲ್ಲಿ ನಡೆದ ಕುಂಭಮೇಳದಲ್ಲಿ ೪ ಲಕ್ಷ ಹಿಂದೂ ಯಾತ್ರಿಕರು ಸೇರಿದ್ದರು. ಮೇಳಾ ಮುಗಿದ ಕೂಡಲೇ ಅವರಲ್ಲಿ ಮುಕ್ಕಾಲುಪಾಲು ಜನರು ಅಲ್ಲಿಂದ ಹೊರಟು ಹೋದರು. ಉಳಿದವರಲ್ಲಿ ವಾಂತಿಭೇದಿ ಉಪದ್ರ ಹುಟ್ಟಿ, ೧೯೦೨ ರಲ್ಲಿ ಸತ್ತ ಜನಸಂಖ್ಯೆಗಿಂತಲೂ ಹೆಚ್ಚಾಗಿ ೮೬,೭೦೮ ಜನರು ಸತ್ತುಹೋದರು. ಈ ರೋಗದ ಕ್ರಿಮಿಗಳನ್ನು ಸಂಗಡ ತೆಗೆದುಕೊಂಡು ಹೋದವರ ಮೂಲಕ ವಾಯುವ್ಯ ಪ್ರಾಂತ್ಯದಲ್ಲಿ ೪೭,೧೫೯ ಜನರು ಪ್ರಾಣ ಕೊಟ್ಟರು. ಪಂಜಾಬಿನಲ್ಲಾದರೋ ೧೪,೬೮೮ ಜನರು ಸತ್ತುಹೋದರು. ಇದರಿಂದ ಯಾತ್ರಾಸ್ಥಳಗಳಲ್ಲಿ ಜನರು ಆರೋಗ್ಯ ಸೂತ್ರಗಳನ್ನು ಅನುಸರಿಸದೆ ಅಲಕ್ಷ್ಯಮಾಡೋಣದರಿಂದ ಬಹುಮಂದಿ ಅಕಾಲಮರಣ ಹೊಂದುತ್ತಾರೆನ್ನುವುದು ದೃಢಪಡುತ್ತದೆ

****

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯವರ ಮೇಲೆ ಒಂದು ಮೊಕದ್ದಮೆ ಬಂದುದರಿಂದ ಮ್ಯುನಿಸಿಪಾಲಿಟಿಯವರು ಅದನ್ನು ನಡಿಸುವುದಕ್ಕೋಸ್ಕರ ಮ್ಯುನಿಸಿಪಲ್ ಹುಟ್ಟುವಳಿಯಿಂದ ೮,೦೦೦ ರೂಪಾಯಿ ತನಕ ಖರ್ಚು ಮಾಡಿದರು. ಕಲ್ಕತ್ತಾ ಹೈ ಕೋರ್ಟಿನ ಛೀಫ್ ಜಡ್ಜರು ಮ್ಯುನಿಸಿಪಾಲಿಟಿಯವರ ಈ ಕಾರ್ಯವನ್ನು ಕುರಿತು ಬರೆದಿರುವುದೇನೆಂದರೆ.—ರೈತರಿಂದ ಎತ್ತಿದ ಇಷ್ಟು ಹಣವನ್ನು ಮ್ಯುನಿಸಿಪಾಲಿಟಿಯವರು ಕೋರ್ಟಿಗೆ ಹಾಳೆ ಹಾಕಿದರೋ ಎಂದು ವ್ಯಸನಪಡಬೇಕಾಗಿದೆ ಹೀಗೆ ಪ್ರಜೆಗಳ ಹಣವನ್ನು ಖರ್ಚು ಮಾಡುವುದು ಸಹಜವಲ್ಲವೆಂದು ನನಗೆ ತೋರುವುದು. ಮ್ಯುನಿಸಿಪಾಲಿಟಿಯವರು ಸ್ವಲ್ಪ ವಿವೇಕವನ್ನೂ ಚಟುವಟಿಕೆಯನ್ನೂ ಪ್ರಕಾಶಪಡಿಸಿ, ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳುತ್ತಾ ಬರುವುದು ಒಳ್ಳೇದೆಂದು ಕಾಣುತ್ತದೆ.

****

ಮದರಾಸ್ ಪಟ್ಟಣದಲ್ಲಿ ವಾರೆನ್ ಎಂಬ ಸರ್ಕಸ್ ಕಂಪನಿಯವರು ಒಂದು ದಿನ ರಾತ್ರಿ ಟಿಕೆಟ್ ಹಾಕಿ ಚಪ್ಪರದಲ್ಲಿ ಆಟವಾಡುತ್ತಿದ್ದಾಗ ಒಬ್ಬ ಹುಡುಗನು ಹೊರಗಿನಿಂದ ಕಳ್ಳದಾರಿ ಮಾಡಿಕೊಂಡು ಚಪ್ಪರದೊಳಕ್ಕೆ ನುಗ್ಗಿದನು. ಆ ಸ್ಥಳದಲ್ಲಿ ಕಂಪನಿಯವರು ಸಿಂಹವಿದ್ದ ಬೋನನ್ನು ಇಟ್ಟಿದ್ದರು. ಅದು ಕೂಗಿಕೊಂಡು ಅವನನ್ನು ಹಿಡಿದು ಬಹಳ ಗಾಯಮಾಡಿತು. ಅದರ ಅರ್ಭಟಕ್ಕೆ ಚಪ್ಪರದ ತುಂಬಾ ಕೂತಿದ್ದ ನೋಟಕರು ಗಾಬರಿಬಿದ್ದು, ಸಿಂಹ ಬಂತೆಂದು ಚಲ್ಲಾಪಿಲ್ಲಿಯಾಗಿ ಎದ್ದು ಹೊರಗೆ ಹೊರಟರು. ಅಷ್ಟರಲ್ಲೇ ಕಂಪನಿಯವರು ಹೋಗಿ ಆ ಹುಡುಗನನ್ನು ಸಿಂಹದ ಕೈಯಿಂದ ಬಿಡಿಸಿಕೊಂಡು ಬಂದು ಆಸ್ಪತ್ರೆಗೆ ಕಳುಹಿಸಿ, ನೋಟಕರಿಗೆಲ್ಲಾ ನಡೆದ ಸಂಗತಿಯನ್ನು ಹೇಳಿ, ಅವರ ಗಾಬರಿಯನ್ನು ಸಮಾಧಾನಪಡಿಸಿ ಕೂಡಿಸಿ, ಆಟವಾಡಿ ಮುಕ್ತಾಯ ಮಾಡಿದರು.

****

ಬಂಗಾಳಾ ದೇಶದಲ್ಲಿ ಸಂಸ್ಕೃತ ವಿದ್ಯಾಭ್ಯಾಸವು ದಿನಕ್ರಮೇಣ ಕ್ಷೀಣಗತಿ ಬರುತ್ತಿದೆ ಎಂದು ಅಲ್ಲಿನ ವಿದ್ಯಾ ಇಲಾಖೆಯ ರಿಪೋರ್ಟಿನಲ್ಲಿ ಓದಿ, ಬಹುಮಂದಿ ಮರುಗುತ್ತಿದ್ದಾರೆ. ಸಂಸ್ಕೃತವನ್ನು ಕಲಿಯುವುದರಲ್ಲಿ ಬಂಗಾಳಿಗಳು ಮುಂದಾಳುಗಳಾಗಿದ್ದರು. ಈಗ ಅದನ್ನು ಕಲಿಯಬೇಕೆಂಬ ಕುತೂಹಲವೂ ಅದರ ಅಭಿರುಚಿಯು ಕಡಿಮೆಯಾಗಿರುವವು. ವಿದ್ಯೆಬರಬೇಕೆಂಬ ಉದ್ದೇಶದಿಂದಲೇ ಮೊದಲು ಅಲ್ಲಿನವರು ಕಲಿಯುತ್ತಿದ್ದರು. ಈಗ ದೇಶೀಯ ಸಂಸ್ಕೃತ ಶಾಲೆಗಳು ಅದೃಶ್ಯವಾಗುತ್ತಾ ಬಂದಿವೆ. ನಾಲ್ಕು ವರುಷಗಳ ಹಿಂದೆ ೧,೧೯೬ ಸಂಸ್ಕೃತ ಪಾಠಶಾಲೆಗಳಿದ್ದವು; ಹೋದ ವರುಷ ಅವುಗಳ ಸಂಖ್ಯೆ ೯೬೩ಕ್ಕೆ ಇಳಿಯಿತು. ಮೊದಲು ೧೦,೬೦೩ ಮಂದಿ ವಿದ್ಯಾರ್ಥಿಗಳು ಓದುತ್ತಿದ್ದರು; ಈಗ ೮,೭೪೦ ಮಂದಿ ಮಾತ್ರ ಸಂಸ್ಕೃತ ವಿದ್ಯವನ್ನು ಕಲಿಯುವರು.

****

ಬರ್ಮಾ ಅಧಿಪತ್ಯದ ಮುಖ್ಯಪಟ್ಟಣವಾದ ರಂಗೂನ್ ನಗರದಲ್ಲಿ ಪ್ಲೇಗ್ ಉಪದ್ರವು ಕಾಣಿಸಿಕೊಂಡು, ಸುಮಾರು ಎರಡು ವಾರಗಳಾದವು. ಅದನ್ನು ಅಡಗಿಸುವುದಕ್ಕೆ ಸರ್ಕಾರದವರು ಪ್ರಾರಂಭಿಸಿರುವ ಕಾರ್ಯಗಳನ್ನೂ ಅದರ ಸೋಂಕು ತಗಲದಂತೆ ಇರಬೇಕೆಂದು ಪ್ರಜೆಗಳು ಪಡುವ ಕಳವಳವನ್ನೂ ವಿವರಿಸಕೂಡದ್ದಾಗಿದೆ ಅದು ರಕ್ತ ಬಹುಮಟ್ಟಿಗೆ ನಿಂತಿದೆ. ಜನರು ದಿಕ್ಕುದಿಕ್ಕಿಗೆ ಚದರಿಹೋಗುತ್ತಿದ್ದಾರೆ. ಸೋಂಕುಳ್ಳ ಮನೆಗಳನ್ನು ಶುದ್ಧಿಮಾಡುವುದಕ್ಕಾಗಲಿ, ಹೆಣಗಳನ್ನು ದಹನಮಾಡುವುದಕ್ಕಾಗಲಿ ಜನರು ಸಿಕ್ಕದೆ ಸರ್ಕಾರದವರು ತುಂಬಾ ಕಷ್ಟಪಡುತ್ತಾರೆ. ಇದುವರೆಗೆ ಸುಮಾರು ೧೦೦ ಜನರಿಗೆ ಪ್ಲೇಗ್ ತಗಲಿ ೫೦ ಮಂದಿಯು ತನಕ ಕಾಲವಾದರು. ಹಿಂದುಸ್ಥಾನದಲ್ಲಿ ನಡೆದ ಹಾವಳಿಯೆಲ್ಲಾ ಅಲ್ಲಿಗೂ ವ್ಯಾಪಿಸುವುದೋ ಇಷ್ಟರಲ್ಲೇ ಶಮನವಾಗುವುದೋ ನೋಡಬೇಕು.

****

ಸಿಂಲಾ ಪಟ್ಟಣದ ಹತ್ತಿರ ಕಸೌಲಿ ನಗರದಲ್ಲಿ ಇಂಡಿಯಾ ಗವರ್ನಮೆಂಟಿನವರು ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಸಿಕೊಂಡವರಿಗಾಗಿ ಚಿಕಿತ್ಸೆ ಮಾಡುವಂಥಾ ಒಂದು ನವೀನವಾದ ಆಸ್ಪತ್ರೆಯನ್ನು ೧೯೦೦ ನೆ ಇಸವಿ ಆಗೀಸ್ಟು ೯ರಲ್ಲಿ ಇಟ್ಟು, ಅಂದಿನಿಂದ ನಡಿಸುತ್ತಾ ಬಂದಿದ್ದಾರೆ. ಈ ಆಸ್ಪತ್ರೆಯಲ್ಲಿ ಮೊದಲನೆ ವರುಷ ೩೨೧ ಜನರು, ೨ನೆ ವರುಷ ೫೪೩ ಜನರು, ೩ನೆ ವರುಷ ೫೮೩ ಜನರು, ೪ನೆ ವರುಷ ೬೧೨ ಜನರು ಹೋಗಿ ಚಿಕಿತ್ಸೆ ಹೊಂದಿದರು. ಕಳೆದ ವರುಷ ಚಿಕಿತ್ಸೆ ಹೊಂದಿದ ೬೧೨ ಜನ ರೋಗಿಗಳ ಪೈಕಿ ೫ ಮಂದಿಗೆ ಮಾತ್ರ ವಾಸಿಯಾಗಲಿಲ್ಲ. ನಾಯಿ ನರಿಗಳಿಂದ ಕಡಿಸಿಕೊಂಡ ಕೂಡಲೇ ತಾಮಸ ಮಾಡದೆ ಈ ಆಸ್ಪತ್ರೆಗೆ ಹೋದರೆ ರೋಗವು ಚನ್ನಾಗಿ ವಾಸಿಯಾಗಲು ಅವಕಾಶವಾಗುವುದು. ಚಿಕಿತ್ಸೆ ಹೊಂದುವ ಕಾಲದಲ್ಲಿ ರೋಗಿಗಳು ಪುಷ್ಟಿಯಾದ ಆಹಾರವನ್ನು ತಿನ್ನಬೇಕು. ಇವೆರಡೂ ಇಲ್ಲದಿದ್ದರೆ ರೋಗಿಗೆ ಹುಚ್ಚು ಹಿಡಿಯುತ್ತೆ.

****

ಬ್ರಿಟಿಷ್ ಇಂಡಿಯಾ ಸ್ಟೀಂ ಹಡಗುಗಳ ಕಂಪನಿಗೆ ಕಲ್ಕತ್ತೆಯಲ್ಲಿ ಮಿ॥ ಹಾಮಿಲ್ಟನ್ ಎಂಬಾತನು ಏಜಂಟನಾಗಿರುತ್ತಾನೆ. ಹಿಂದುಸ್ಥಾನದಿಂದ ವಿದ್ಯಾರ್ಥಿಗಳಾದ ದೇಶೀಯರು ವಿಲಾಯತಿಗೆ ಹಸಬು ದಾರಿಯು ಮತ್ತು ಶಾಸ್ತ್ರವಿಷಯವಾದ ವಿದ್ಯೆಯನ್ನು ಕಲಿತು ಬರಬೇಕೆಂದು ಇಷ್ಟಪಟ್ಟು, ತಮ್ಮ ಕಂಪನಿಯ ಹಡಗುಗಳಲ್ಲಿ ಪ್ರಯಾಣಮಾಡುವುದಾದರೆ ಅಂಥಾ ವಿದ್ಯಾರ್ಥಿಗಳಿಂದ ತಾವು ಅರ್ಧಚಾರ್ಜು ಮಾತ್ರ ತೆಗೆದುಕೊಂಡು, ಕರೆದುಕೊಂಡು ಹೋಗಿ ಬಿಡುತ್ತೇವೆಂದು ಆ ಏಜಂಟನು ಪ್ರಕಟಿಸಿರುತ್ತಾನೆ. ಸಾಮಾನ್ಯವಾಗಿ ಹಿಂದುಸ್ಥಾನದಿಂದ ವಿಲಾಯತಿಗೆ ಹೋಗುವುದಕ್ಕೆ ತಲೆಗೆ ೬೦೦ ರೂಪಾಯಿ ಡೆಕಿನ ಛಾರ್ಜ್ ಕೊಡಬೇಕು. ಈ ಕಂಪನಿಯವರು ನಮ್ಮ ದೇಶೀಯರ ಕ್ಷೇಮಾಭ್ಯುದಯಗಳನ್ನು ಬಯಸಿ, ಛಾರ್ಜನ್ನು ಅರ್ಧಮಟ್ಟಿಗೂ ಇಳಿಸಿರುವುದಕ್ಕಾಗಿ ಎಲ್ಲರೂ ಸಂತೋಷಪಡುತ್ತಾರೆ. ಇದರಿಂದ ನಮ್ಮ ದೇಶೀಯರು ಸೀಮೆಗೆ ಹೋಗಿ ವಿದ್ಯೆ ಕಲಿತು ಬರಲು ತುಂಬಾ ಪ್ರೋತ್ಸಾಹವಾಗಿದೆ.

****

ಹಿಂದುಸ್ಥಾನದಲ್ಲಿ ಫ್ರೆಂಚರಿಗೆ ಕೆಲವು ಪಟ್ಟಣಗಳು ಸೇರಿರುತ್ತವೆ. ಇವುಗಳನ್ನಾಳುವುದಕ್ಕೆ ಫ್ರೆಂಚರು ಗವರ್ನರ್ ಜನರಲ್ ಎಂಬೊಬ್ಬ ಅಧಿಕಾರಿಯನ್ನು ಕಳುಹಿಸುತ್ತಾರೆ. ಈಗಿರುವ ಫ್ರೆಂಚರ ಗವರ್ನರ್ ಜನರಲ್ ರವರು ಕೆಲವು ದಿನಗಳ ಕೆಳಗೆ ಮದರಾಸಿಗೆ ದಯಮಾಡಿ, ಮದರಾಸ್ ಗವರ್ನರವರನ್ನು ಕಂಡು ಕೆಲವು ರಾಜಕೀಯ ವಿಚಾರಗಳನ್ನು ಕುರಿತು ಮಾತನಾಡಿಕೊಂಡು ಹೋದರು. ಈಗ ಅವರು ವೈಸ್‌ರಾಯಿಯವರನ್ನು ಕಾಣುವುದಕ್ಕಾಗಿ ಕಲ್ಕತ್ತೆಗೆ ಹೋಗಿ ಬರುವವರಾಗಿದ್ದಾರೆ. ಈ ವಿಷಯದಲ್ಲಿ ಪುದುಚೇರಿಯ (ಇದೇ ಫ್ರೆಂಚರಿಗೆ ಹಿಂದುಸ್ಥಾನದಲ್ಲಿ ಮುಖ್ಯ ನಗರ) ಒಬ್ಬ ಬಾತ್ಮೀದಾರನು ತಿಳಿಸುವುದೇನೆಂದರೆ—ಯಾರ ಸಂಗಡ ಮಾತಾಡಿದರೂ ಎಲ್ಲಿ ಹೋದರೂ ಫ್ರೆಂಚರು ಹಿಂದುಸ್ಥಾನದಲ್ಲಿರುವ ತಮ್ಮ ಪಟ್ಟಣಗಳನ್ನು ಇಂಗ್ಲೀಷರಿಗೆ ವಹಿಸಿ ಕೊಡುತ್ತಾರೆಂದು ಎಲ್ಲರೂ ಹೇಳುವುದೇ ಸುದ್ದಿಯಾಗಿದೆ ಫ್ರೆಂಚರು ಪುದುಚೇರಿಯನ್ನೂ ಮಹಿಮನಗರವನ್ನೂ ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡು, ಚಂದ್ರನಗರ, ಯಾನಾಂ, ಕಾರಿಕಾಲ್ ಎಂಬೀ ನಗರಗಳನ್ನು ಇಂಡಿಯಾ ಗವರ್ನಮೆಂಟಿನವರಿಗೆ ವಹಿಸಿಬಿಡುವರೆಂತಲೂ. ಇವುಗಳಿಗೆ ಬದಲಾಗಿ ಇಂಡಿಯಾ ಗವರ್ನಮೆಂಟಿನವರು ದಕ್ಷಿಣ ಆರ್ಕಾಟ್ ಡಿಸ್ಟ್ರಿಕ್ಟಿನಲ್ಲಿ ಫ್ರೆಂಚರಿಗೆ ಕೆಲವು ರಿಯಾಯಿತಿಗಳನ್ನು ಕೊಡುವರೆಂತಲೂ ವರ್ತಮಾನವಿದೆ.

ವಿದೇಶ ವರ್ತಮಾನಗಳು.

ದಕ್ಷಿಣ ಆಫ್ರಿಕಾ ಸರ್ಕಾರದವರು ಟ್ರಾನ್ಸ್‌ವಾಲ್ ರಾಜ್ಯವನ್ನು ಅಭಿವೃದ್ಧಿಗೆ ತರುವುದಕ್ಕೆ ೧೫ ಕೋಟಿ ರೂಪಾಯಿ ಸಾಲ ಪಡೆಯುವವರಾಗಿದ್ದಾರೆಂದು ತಂತೀ ವರ್ತಮಾನ ಬಂದಿದೆ.

****

ಹಿಂದುಸ್ಥಾನದ ವೈಸ್‌ರಾಯಿಯವರ ಪತ್ನೀರವರಾದ ಲೇಡಿ ಕರ್ಜನ್‌ರವರು ಕಳೆದ ೧ನೆ ತಾರೀಖು ಲಂಡನ್ ಪಟ್ಟಣದಲ್ಲಿ ಅರೇಬಿಯಾ ಎಂಬ ಹಡಗು ಹತ್ತಿ, ಹಿಂದುಸ್ಥಾನಕ್ಕೆ ಪ್ರಯಾಣ ಮಾಡಿದರು.

****

ಲಂಡನ್ ಪಟ್ಟಣದ ಟಾಕ್ಸಿನ್‌ಸ್ಟ್ರೀಟ್ ಎಂಬ ಬೀದಿಯಲ್ಲಿದ್ದ ಮಿಸ್ ಹೋರ್ ಎಂಬಾಕೆಯು ಸ್ವಸಾಮರ್ಥ್ಯದಿಂದ ೩ ಲಕ್ಷ ರೂಪಾಯಿ ಸಂಪಾದನೆಮಾಡಿ, ಆ ಪೈಕಿ ೭೫,೦೦೦ ರೂಪಾಯಿಗಳನ್ನು ಧರ್ಮಕಾರ್ಯಕ್ಕೆ ವಿನಿಯೋಗಿಸಬೇಕೆಂದು ಬರೆದಿಟ್ಟು ಕಾಲವಾದಳು.

****

ಈ ದೇಶದಲ್ಲಿ ಬಟ್ಟೆ ಇಳಿಸುವ ಸಾರಾಯಿನಿಂದ ಉತ್ತಮ ತರದ ಮದ್ಯವನ್ನು ತಯಾರ್ಮಾಡುವುದು ಸಾಧ್ಯವೇ ಎಂಬುದನ್ನು ಪರೀಕ್ಷೆ ಮಾಡಿ ಗೊತ್ತು ಮಾಡುವುದಕ್ಕಾಗಿ ಲಂಕಾದ್ವೀಪದವರು ಕೆಲವು ಪೀಪಾಯಿಗಳ ತುಂಬಾ ಸಾರಾಯಿ ಭರ್ತಿ ಮಾಡಿ, ಲಂಡನ್ ಪಟ್ಟಣಕ್ಕೆ ಕಳುಹಿಸಿದ್ದಾರೆ.

****

ಹಿಂದುಸ್ಥಾನದಲ್ಲಿ ಅಪರಾಧಗಳನ್ನು ಮಾಡಿಯೋ ಬಂದೀಖಾನೆಗಳಿಂದ ತಪ್ಪಿಸಿಕೊಂಡೋ ಹೋಗಿರುವ ದುಷ್ಟ ಜನರು ಸಯಾಂ ರಾಜ್ಯದ ರಾಜಧಾನಿಯಾದ ಬ್ಯಾಂಕಾಕ್ ಪಟ್ಟಣದಲ್ಲಿ ಸೇರುತ್ತಿದ್ದಾರೆ. ಇವರಿಂದ ಅಲ್ಲಿ ಪ್ರಜಾ ನೆಮ್ಮದಿಗೆ ಭಂಗವಾದೀತೆಂದು ಈಗೀಗ ಅಲ್ಲಿನ ಸರ್ಕಾರದವರು ಚಿಂತೆಪಡಲಾರಂಭಿಸಿದ್ದಾರೆ. ಇಂಥಾ ಜನರನ್ನು ಊರೊಳಕ್ಕೆ ಸೇರಿಸದಂತೆ ಏರ್ಪಾಡು ಮಾಡಬೇಕೆಂದು ಚರ್ಚೆ ನಡೆಯುತ್ತಿದೆ.

****

ಅಮೇರಿಕ ರಾಜ್ಯದವರು ಔಷಧಗಳಿಗೆ ಉಪಯೋಗಿಸುವ ಅನೇಕ ವಿಷಪದಾರ್ಥಗಳನ್ನು ಪರರಾಜ್ಯಗಳಿಂದ ತರಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಅವರು ಪ್ರತಿ ವರುಷವೂ ಮೂರು ಕೋಟಿ ರೂಪಾಯಿ ಖರ್ಚು ಮಾಡುವರು. ಇನ್ನು ಮೇಲೆ ಆ ಪದಾರ್ಥಗಳನ್ನು ಪರರಾಜ್ಯಗಳಿಂದ ತರಿಸಕೂಡದೆಂದು ಗೊತ್ತುಮಾಡಿದರು. ವಾಷಿಂಗ್‌ಟನ್ ಪಟ್ಟಣದಲ್ಲಿ ವಿಸ್ತಾರವಾದ ಜಮೀನ್ ಕೊಂಡುಕೊಂಡು, ಅದರಲ್ಲಿ ಮೇಲ್ಕಂಡ ವಿಷ ಪದಾರ್ಥಗಳನ್ನೆಲ್ಲಾ ಬೆಳೆಯಲಾರಂಭಿಸಿದ್ದಾರೆ

****

ಟಿಬೆಟ್ಟಿನ ಮಹಾ ಗುರುವಾದ ದಲಾಯಿಲಾಮನು ತಲೆ ತಪ್ಪಿಸಿಕೊಂಡು ಹೊರಟು ಹೋಗಿದ್ದಾನಷ್ಟೆ. ಈ ಗುರುವು ಈಗ ಮಂಗೋಲಿಯಾ ಸೀಮೆಯ ರಾಜಧಾನಿಯಾದ ಉರ್ಗಾ ಪಟ್ಟಣದಲ್ಲಿ ಹತ್ತಾರು ಸಹಸ್ರ ಶಿಷ್ಯವರ್ಗದವರ ಸಂಗಡ ಇರುವುದಾಗಿ ವರ್ತಮಾನ ಬಂದಿದೆ ಈತನನ್ನು ಎದುರುಗೊಳ್ಳುವುದಕ್ಕೆ ಅಲ್ಲಿನ ಗುರುಗಳ ಗುಂಪು, ಚೀನಾ ಸೈನಿಕರು, ಸುಮಾರು ೨೦,೦೦೦ ಜನರು ಎಲ್ಲಾ ಬಂದು ಕಾದಿದ್ದರು. ಆತನಿಗೆ ತಮ್ಮ ಕಾಣಿಕೆಗಳನ್ನು ತಂದೊಪ್ಪಿಸುವುದಕ್ಕಾಗಿ ಸುತ್ತುಮುತ್ತಿನಿಂದಲೂ ಇನ್ನೂ ಲಕ್ಷಾಂತರ ಜನರು ಬರುತ್ತಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರೊಫೆಸರ್ ಮೆ॥ ಆರ್. ವೆಂಕಟರಾಮೈಯನವರಿಗೆ ಜನವರಿ ೧೯ ರಿಂದ ಅರ್ಧ ಸಂಬಳದ ಮೇಲೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ಹೆಲ್ತ್ ಆಫಿಸರ್ ಮೆ॥ ಪಲ್ಪುರವರಿಗೆ ಕ್ರಿಸ್‌ಮಸ್ ರಜಾ ಅನುಸರಿಸಿ ಕೊಟ್ಟಿದ್ದ ಆರು ವಾರಗಳ ಪ್ರಿವಿಲೆಜ್ ರಜಾವನ್ನು ಇನ್ನು ನಾಲ್ಕುವಾರ ಜಾಸ್ತಿ ಮಾಡಿದೆ.

ಕಂಟ್ರೋಲರವರ ಛೀಫ್ ಅಸಿಸ್ಟೆಂಟ್ ಮೆ॥ ಟಿ. ವೈಯಾಪುರಿ ಚೆಟ್ಟಿಯವರು ಫೆಬ್ರವರಿ ೧ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಅಫಿಸಿಯೇಟಿಂಗ್ ಡೆಪ್ಯುಟಿ ಕಮಿಷನರ್ ಮೆ॥ ಎಂ. ಕಾಂತರಾಜೇ ಅರಸಿನವರಿಂದ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮೆ॥ ಎನ್. ವೆಂಕಟರಾಯರು ಜನವರಿ ೪ ರಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಚಾರ್ಜನ್ನು ವಹಿಸಿಕೊಂಡರು.

ಹಾಸನದ ಡಿವಿಜನ್ ಎಕ್ಸಿಕ್ಯುಟಿವ್ ಇಂಜಿನಿಯರ್ ಮೆ॥ ಸಿ. ಎ. ಮಹಾದೇವ ಶಾಸ್ತ್ರಿಯವರಿಗೆ ಫೆಬ್ರವರಿ ೧೬ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧೭ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಜಿಯೋಲಾಜಿಕಲ್ ಇಲಾಖೆಯ ರಜಿಸ್ಟ್ರಾರ್ ಮೆ॥ ಬಿ ಸುಬ್ಬರಾಯರಿಗೆ ಇನ್ನು ಮೂರು ತಿಂಗಳ ತನಕ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ ಫರ್ಲೋ ರಜಾ ಕೊಟ್ಟಿದೆ. ಅ॥ ಜಿಯಾಲಜಿಸ್ಟ್ ಮೆ॥ ಎ. ಟಿ. ಸೆಟ್ಲೂರ್ ಯವರು ತಮ್ಮ ಕೆಲಸದೊಂದಿಗೆ ರಜಿಸ್ಟ್ರಾರ್ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು, ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಸಕಲೇಶಪುರದ ಬಾತ್ಮಿ.—ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ ಇಲ್ಲ.

ಬುಕ್ಕಾಪಟ್ಟಣದ ಬಾತ್ಮಿ.—ಡೆಪ್ಯುಟಿ ಕಮಿಷನರಿಗೆ ಈ ವಿಷಯವನ್ನು ತಿಳಿಸಿದರೆ ಅವರು ಕ್ರಮಪಡಿಸುತ್ತಾರೆ. —ಎಡಿ]

ಕರೆಸ್‌ಪಾಂಡೆನ್ಸ್.

ನಂದೀಜಾತ್ರೆಯು.

ಅಯ್ಯಾ,

ಚಿಕ್ಕಬಳ್ಳಾಪುರಕ್ಕೆ ನಾಲ್ಕು ಮೈಲಿ ದೂರದಲ್ಲಿ ನಂದೀಜಾತ್ರೆಯು ಪ್ರತಿ ಶಿವರಾತ್ರಿಯಲ್ಲಿಯೂ ಬಹು ವಿಜೃಂಭಣೆಯಿಂದ ನಡೆಸಲ್ಪಡುತ್ತಿತ್ತು. ಈ ಜಾತ್ರೆಗೆ ಅನೇಕ ಸಹಸ್ರ ಪ್ರಜೆಗಳೂ ಗೋಕಾಯಿಗಳೂ ಸೇರುತ್ತಿದ್ದುದರಿಂದ ಸರ್ಕಾರಕ್ಕೆ ಸುಮಾರು ೨—೩ ಸಾವಿರ ರೂಪಾಯಿಗಳ ವರಿವಿಗೂ ಉತ್ಪತ್ತಿಯೂ ಆಗುತ್ತಿತ್ತು. ಆದರೆ ಈಗ ನಾಲ್ಕು ವರ್ಷಗಳಿಂದಲೂ ಪ್ಲೇಗಿನ ದೆಸೆಯಿಂದ ಸಂಪೂರ್ಣವಾಗಿ ನಿಂತುಹೋಗಿತ್ತು. ಮೊನ್ನೆ ೬ ನೇ ತಾರೀಖಿನಲ್ಲಿ ಡೆಪ್ಯುಟಿ ಕಮಿಷನರ್ ಮೆ॥ ಕೃಷ್ಣ ಶೆಟ್ಟರವರ ಸವಾರಿಯು ಇತ್ತ ಕಡೆ ದಯಮಾಡಿಸಿದ್ದಾಗ ಈ ನಂದೀಜಾತ್ರೆಯು ಈ ಸಾರಿ ಪುನಃ ಆರಂಭ ಮಾಡಿಸುವಂತೆ ಅಪ್ಪಣೆ ದಯಪಾಲಿಸಿದರೆಂದು ವರ್ತಮಾನ ಕೇಳುತ್ತೇನೆ.

ಚಿಕ್ಕಬಳ್ಳಾಪುರ. ಬಾತ್ಮಿದಾರ್.

ಪ್ರಶ್ನೆ.

ಅಯ್ಯಾ,

ಮೈಸೂರು ಇಂಗ್ಲೀಷು ಲೋವರ್ ಸೆಕೆಂಡರೀ ಪರೀಕ್ಷೆ ಆದ ನಂತರ ರಿಜಿಸ್ಟ್ರೇಷನ್ ಪರೀಕ್ಷೆಗೆ ಓದಿ ಪ್ಯಾಸ್ ಮಾಡಬಹುದೆಂದು ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರಷ್ಟೆ. ಈ ಪರೀಕ್ಷೆಯು ಯಾವಾಗ ನಡೆಯುವದು ? ಇದಕ್ಕೆ ಬೇಕಾದ ಪುಸ್ತಕಗಳು ಯಾವವು ? ಇದರಿಂದ ಆಗತಕ್ಕ ಫಲಿತಾಂಶವೇನು ? ಈ ಮೊದಲಾದವುಗಳನ್ನು ತಿಳಿದುಕೊಳ್ಳಬೇಕಾದರೆ ಯಾವ ಆಫೀಸರುಗಳಿಗೆ ಬರೆಯಬೇಕೆಂಬುವುದನ್ನು ತಿಳಿಸಬೇಕೆಂದು ಕೋರುವ ತಮ್ಮ ವಿಧೇಯ

ನಂಜನಗೂಡು. ಬಾತ್ಮಿದಾರ್.

[ಈ ವಿಷಯಗಳನ್ನೆಲ್ಲಾ ಮೈಸೂರು ಸರ್ಕಾರದ ಪರೀಕ್ಷೆಗಳ ಕಮಿಟಿ ಸೆಕ್ರೆಟರಿ ಯವರಿಗೆ ಬರೆದುಕೊಂಡಲ್ಲಿ ಅವರು ಉತ್ತರ ಕೊಟ್ಟಾರೆಂದು ನಂಬುತ್ತೇವೆ.—ಎಡಿ]

ಪತ್ರಿಕೆ ಪಾರ್ಸೆಲೂ, ಶಿವಮೊಗ್ಗಾ ಪೋಸ್ಟಾಫೀಸೂ.

ಅಯ್ಯಾ,

ವೃತ್ತಾಂತ ಪತ್ರಿಕೆಯ ಪಾರ್ಸೆಲ್ ನಿಧಾನವಾಗಿ ಬರುವದಕ್ಕೆ ಶಿವಮೊಗ್ಗಾ ಪೋಸ್ಟಾಫೀಸೇ ಕಾರಣವೆಂದು ಕಂಡುಬರುತ್ತೆ. ವಿಪರೀತ ಪಾರ್ಸೆಲುಗಳು ಇರುವಾಗ್ಗೆ ರಸ್ತೆಯು ಹೂರುವದಕ್ಕೆ ಅಗದೆ ಇದ್ದರೆ ಕೆಲವು ಪಾರ್ಸೆಲ್‌ಗಳ ಜೊತೆಯಲ್ಲಿ ವೃತ್ತಾಂತ ಪತ್ರಿಕೆಯ ಪಾರ್ಸೆಲು ಸಹ ಉಳಿಸಿಬಿಡುತ್ತಾರೆ. ನಮ್ಮ ಪಾರ್ಸೆಲ್ ಸಣ್ಣದಾಗಿರುವದರಿಂದ ಅದು ಬಂದ ದಿನವೇ ಅವರು ಕಳುಹಿಸುವಂತೆ ದಯಮಾಡಿ ಅವರಿಗೆ ತಿಳಿಸಿದರೆ ಉತ್ತಮವಾದೀತು

ತೀರ್ಥಹಳ್ಳಿ. ನಿಮ್ಮ ಏಜಂಟ್.

[ನಾವು ಕಳುಹಿಸುವ ಪಾರ್ಸೆಲು ವರ್ತಮಾನ ಪತ್ರಿಕೆಯಾದ್ದರಿಂದಲೂ, ಅದನ್ನು ಕೂಡಲೆ ಕಳಿಸದೆ ನಿಲ್ಲಿಸಿಬಿಟ್ಟರೆ ಅದು ವಿನಿಯೋಗವಾಗುವದಕ್ಕೆ ತೊಂದರೆಯಾಗುತ್ತಾದ್ದರಿಂದಲೂ ಶಿವಮೊಗ್ಗೆಯ ಪೋಸ್ಟ್ ಮಾಸ್ಟರು ಈ ವಿಷಯದಲ್ಲಿ ಸರಿಯಾಗಿ ಬಾಪತಿ ಆಗುವಂತೆಯೂ ಮತ್ತೆ ಆಕ್ಷೇಪಣೆ ಹುಟ್ಟದಂತೆಯೂ ಏರ್ಪಾಡು ಮಾಡುವರೆಂದು ನಿರೀಕ್ಷಿಸುತ್ತೇವೆ.—ಮ್ಯಾನೇಜರ್.]

ಮಲೇರಿಯ (ಮಲೆನಾಡು ಜ್ವರ) ಮತ್ತು ಪ್ಲೇಗ್ ರೋಗಗಳ ಉತ್ಪತ್ತಿ ಮತ್ತು ಪರಿಣಾಮ. ಉಪನ್ಯಾಸಗಳು.

ಅಯ್ಯಾ,

ಕಡೂರಿನಲ್ಲಿ ೧೨ ವರ್ಷ ಆಸ್ಪಿಟಲ್ ಅಸಿಸ್ಟೆಂಟರಾಗಿದ್ದು, ಬಹಳ ಹೆಸರುವಾಸಿಯನ್ನು ಹೊಂದಿ, ಈಗ್ಯೆ ೨ ವರ್ಷಗಳ ಹಿಂದೆ ವಿಕ್ಟೋರಿಯ ಆಸ್ಪತ್ರೆಗೆ ವರ್ಗವಾಟ್ಟು, ಈಗ ಬೊಂಬಾಯಿಯಲ್ಲಿ ನಡೆದ ಸರ್ವವಸ್ತು ಪ್ರದರ್ಶನದ ಕಾರ್ಯಭಾಗಕ್ಕೆ ನಿಯಮಿಸಲ್ಪಟ್ಟಿದ್ದ ಮೆ॥ ಬಿ. ಯಸ್ ರಾಮಚಂದ್ರಯ್ಯರವರು ಬೆಂಗಳೂರಿಗೆ ಹಿಂದಿರುಗಿ ಹೋಗುವಾಗ ಕಳೆದ ವಾರ ಇಲ್ಲಿ ನಿಂತ ೨ ದಿವಸವೂ ಇಲ್ಲಿಯವರ ಕೋರಿಕೆಯಂತೆ ಮಲೇರಿಯ ಮತ್ತು ಪ್ಲೇಗ್ ರೋಗಗಳ ವಿಚಾರವಾಗಿ ಆಬಾಲವೃದ್ಧರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡದಲ್ಲಿ ಉಪನ್ಯಾಸಮಾಡಿದರು.

ಮೊದಲನೆಯ ದಿನ ಹೇಳಿದ್ದು ಮಲೇರಿಯ ಕ್ರಿಮಿಯ ವಿಷಯ. ಮಲೇರಿಯ ಜಾಡ್ಯವು ಮಲೆನಾಡಿನಲ್ಲಿ ಮಾತ್ರ ಇರುವುದೆಂದು ನಾವು ತಿಳಿದಿರುವುದು ಸರಿಯಲ್ಲವೆಂಬುದಕ್ಕೆ ಅವರು ಬೆಂಗಳೂರು ಮದರಾಸು ಮುಂತಾದ ಕಡೆಗಳಲ್ಲಿ ರಕ್ತಪರೀಕ್ಷೆ ಮಾಡಿದಾಗ ಮಲೇರಿಯ ಕ್ರಿಮಿಗಳು ಇದ್ದ ಉದಾಹರಣೆಯನ್ನು ವಿವರಿಸಿ ಹೇಳಿದರು. ಮಲೇರಿಯ ಕ್ರಿಮಿಯನ್ನು ಕನ್ನಡಿಯ ಮೇಲಿಟ್ಟು, ಸೂಕ್ಷ್ಮದರ್ಶಕ ಯಂತ್ರದಿಂದ ಅದನ್ನು ಎಲ್ಲರಿಗೂ ತೋರಿಸಿ, ಇವು ನೀರು ಬಳಸದೆ ಇರುವ ಹಳೇ ಬಾವಿಗಳಲ್ಲಿಯೂ ನೀರು ನಿಂತ ಗುಂಡಿಗಳಲ್ಲಿಯೂ ಇರುವವೆಂದೂ, ನೀರು ಅಲ್ಲಾಡದೆ ಇದ್ದಾಗ ಈ ಕ್ರಿಮಿಗಳು ಮೇಲೆ ತೇಲುತ್ತಿರುವುವೆಂದೂ, ಸ್ವಲ್ಪ ಮಾತ್ರ ಅಲ್ಲಾಡಿಸಿದರೂ ತಳಕ್ಕೆ ಹೋಗಿಬಿಡುವುವೆಂದೂ, ಈ ಕ್ರಿಮಿಗಳಲ್ಲಿ ಹೆಣ್ಣು ಜಾತಿಯವು ಮಾತ್ರ ಕಚ್ಚಿ ರಕ್ತವನ್ನು ಹೀರುವುವೆಂದೂ ಇವು ಶಬ್ದಮಾಡುವುದಿಲ್ಲವೆಂದೂ ಹೇಳಿ, ಇವು ರೋಗವನ್ನು ಉಂಟುಮಾಡ ರೀತಿಯನ್ನು ಇರಿಡು ಹಿಂದಣ ಮತ್ತು ಈಗಿನ ವೈದ್ಯರ ಅಭಿಪ್ರಾಯಗಳನ್ನೂ ಈಗ ಡಾಕ್ಟರುಗಳಾದ ಲ್ಯಾವರನ್, ಮೇಸನ್ ಮತ್ತು ರೋಸ್ ಇವರು ಕಂಡು ಹಿಡಿದಿರುವ ಸಂಗತಿಯನ್ನೂ ಇವುಗಳಿಗೆ ಮೊಟ್ಟೆಗಳೂ ಮರಿಗಳೂ ಆಗಿ ರೆಕ್ಕೆ ಬಂದು, ಹಾರುವ ಕ್ರಮವನ್ನೂ ತಿಳಿಸಿದ್ದಲ್ಲದೆ, ಈ ಮಲೇರಿಯ ರೋಗವು ಹಿಂದುಗಳಲ್ಲಿ ಬಹಳ ಮಟ್ಟಿಗೆ ಹರಡಿಕೊಂಡಿರುವುದೆಂದೂ, ಈ ವಿಷಕ್ರಿಮಿಗಳ ವಳಗೆಯಿಂದಲೇ ಇದೂ ಜನಗಳ ಬೆಳವಳಿಗೆಯೂ ಕುಗ್ಗಿರುವುದೆಂದೂ ವಿವರಿಸಿ, ಈ ಅಪಾಯವನ್ನು ದೂರಮಾಡುವುದಕ್ಕಾಗಿ ಪ್ರತಿಯೊಬ್ಬರೂ ಜ್ವರ ಇರಲಿ ಇಲ್ಲದಿರಲಿ ವಾರಕ್ಕೆರಡಾವರ್ತಿ ಸಲ ೧ ಕ್ಕೆ ದೊಡ್ಡವರು ೧೦ ಗ್ರೈನಿನಂತೆ ಕ್ವಿನೈನನ್ನು ತೆಗೆದುಕೊಳ್ಳಬೇಕಾದ ಕ್ರಮವನ್ನು ಕೂಡ ವಿವರಿಸಿದರು. ಇಷ್ಟೇ ಅಲ್ಲದೆ ಕ್ವಿನೈನ್ ಪಿತ್ತಕಾರಿಯೆಂದು ಮುಂತಾಗಿ ನಾವು ಅನೇಕ ವಿಧವಾಗಿ ಆರೋಪಿಸುವ ದೋಷಗಳೇನೂ ಅದರಲ್ಲಿಲ್ಲವೆಂದು ಮನಸ್ಸಿಗೆ ನಂಬಿಗೆಯಾಗುವಂತೆ ಮಾಡಿದರು.

ಮರುದಿನ ಸೂಕ್ಷ್ಮದರ್ಶಕ ಯಂತ್ರದಿಂದ ಪ್ಲೇಗು ಕ್ರಿಮಿಯನ್ನು ತೋರಿಸಿ, ಅದರ ಉತ್ಪತ್ತಿ ಮತ್ತು ಬೆಳುವಳಿಗೆಯನ್ನೂ ಅದರ ಹರಡುವಿಕೆಯನ್ನೂ ಅದರ ವಿಷಯವಾಗಿ ಪೂರ್ವದ ಮತ್ತು ಈಗಿನ ವೈದ್ಯರು ಹೇಳುವ ಅಭಿಪ್ರಾಯಗಳನ್ನೂ ಈ ವಿಷಯದಲ್ಲಿ ಡಾಕ್ಟರ್ ಹಾಫ್‌ಕಿನ್ನರು ಮುಂದೆ ಬಂದು ಪ್ಲೇಗು ಸಿಡಬು ಹಾಕುವ ಚಿಕಿತ್ಸೆಯನ್ನು ಕಂಡುಹಿಡಿದ ರೀತಿಯನ್ನೂ ಈವರೆಗೆ ಆ ಪದ್ಧತಿಯಲ್ಲುಂಟಾಗಿರುವ ಬದಲಾವಣೆಗಳನ್ನೂ ಈ ಕ್ರಿಮಿಗಳು ಕಲ್ಲಿನ ಮೇಲಿದ್ದಾಗ ಮಾತ್ರ ವಿಷಾಪಹಾರದ್ರವದಿಂದ ಸಾಯುವುವಾದುದರಿಂದ ರೋಗ ಸೋಂಕಿದ ಮನೆಗೆ ವಿಷಾಪಹಾರದ್ರವವನ್ನು ಹಾಕುವುದಕ್ಕಿಂತಲೂ ಶಾಖ ಪ್ರಸರಿಸುವಂತೆ ಬೆಂಕಿ ಸುಡುವುದು ಉತ್ತಮವೆಂದೂ ಮುಂತಾಗಿ ಅನೇಕ ವಿಷಯಗಳನ್ನು ಸೂಚಿಸಿದರು. ಈ ಉಪನ್ಯಾಸ ಮುಗಿಯುವುದಕ್ಕೆ ಮೊದಲು ಈ ಊರಿನವರು ಕುಡಿಯುವ ನೀರಲ್ಲಿ ಕ್ರಿಮಿಮಯವಾಗಿರುವುದೆಂದೂ ಕಾಸಿದ ನೀರಲ್ಲಿ ಕ್ರಿಮಿಗಳಿರುವುದಿಲ್ಲವೆಂದೂ ಆ ಎರಡು ನೀರುಗಳನ್ನೂ ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ತೋರಿಸಿದರು. ಇಂಡಿಯಾ ದೇಶವು ಪ್ರಕೃತ ಮಲೇರಿಯ ಮತ್ತು ಪ್ಲೇಗು ರೋಗಗಳೆರಡಕ್ಕೂ ತೌರು ಮನೆಯಾಗಿದೆ ಇದರ ನಿವಾರಣೆಯ ಉಪಾಯದಲ್ಲಿ ಇವರು ಇಷ್ಟರಮಟ್ಟಿಗೆ ಜ್ಞಾನವನ್ನೂ ವಿಸ್ತರಿಸಿಕೊಂಡಿರುವುದು ಬಹಳ ಶ್ಲಾಘ್ಯವಾಗಿದೆ.

ಈ ಎರಡು ಉಪನ್ಯಾಸಗಳೂ ಎ. ವಿ. ಸ್ಕೂಲ್ ಕಟ್ಟಡದಲ್ಲಿ ನಡೆದವು. ವಿದ್ಯಾರ್ಥಿಗಳು ಸರಕಾರದ ಅಧಿಕಾರಿಗಳು ವರ್ತಕರು ರೈತರು ಮುಂತಾದವರ ಗುಂಪು ಕಟ್ಟಡ ಹಿಡಿಯಲಾರದಂತೆ ಇತ್ತು. ಈ ಉಪನ್ಯಾಸಗಳ ಮೂಲಕ ಇಲ್ಲಿಯ ಜನರಿಗೆ ಅನೇಕ ಹೊಸ ಸಂಗತಿಗಳನ್ನು ತಿಳಿಸಿದುದಕ್ಕಾಗಿ ಮು॥ ರಾಮಚಂದ್ರಯ್ಯರನ್ನು ಎಲ್ಲರೂ ವಂದಿಸಿದರು.

ಕಡೂರು ನಿವಾಸಿ.

ಸ್ಥಾನಿಕ ವರ್ತಮಾನಗಳು.

ಮೈಸೂರು.—ಕಳೆದ ತಿಂಗಳು ೨೮ನೇ ತಾ. ವಿದ್ಯಾಭ್ಯಾಸದ ಇಲಾಖಾ ಡೆಪ್ಯುಟಿ ಇನ್ಸ್‌ಪೆಕ್ಟರವರ ಜೊತೆಯಲ್ಲಿ ಮೆ॥ ಎಂ. ಬಿ. ಕೃಷ್ಣ ಐಯಂಗಾರರು ಈ ಊರಿಗೆ ಬಂದು, ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಅದೇ ಸಾಯಂಕಾಲ ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಗಳಿಗೂ ಭೂತಕನ್ನಡಿಯಲ್ಲಿ ಬೇರೆ ಬೇರೆ ತರದ ಚಿತ್ರವಿಚಿತ್ರವಾದ ಪಟಗಳನ್ನು ತೋರಿಸಿದ್ದು ಮಾತ್ರವಲ್ಲದೆ ಅವುಗಳನ್ನು ವಿವರಿಸಿ, ಒಂದೊಂದು ಚಿತ್ರದಿಂದ ಕಲಿಯತಕ್ಕ ಬುದ್ಧಿವಾದಗಳ ತಿಳಿಯಪಡಿಸಿದರು. ಆ ದಿನ ಸಾಯಂಕಾಲ ಸ್ಕೂಲಿನ ಬಾಲ ಬಾಲಿಕಿಯರು ಮಾತ್ರವಲ್ಲದೆ ಕೆಲವು ದೊಡ್ಡ ಮನುಷ್ಯರು ಸಹ ಹಾಜರಾಗಿದ್ದರು.—ಈ ಊರಿಗೆ ಯಳಂದೂರು ಕಂಪನಿ ನಾಟಕದವರು ಬಂದು, ಈಗ ಸುಮಾರು ಒಂದು ತಿಂಗಳಾಯಿತು ಇವರಿಗೆ ಇಲ್ಲಿನ ಅಮಲ್ದಾರರು ಬಹು ದಯ ತೋರಿಸಿ, ಪ್ರಯಾಣಿಕರಿಗಾಗಿ ಸರ್ಕಾರದವರು ಕಟ್ಟಿಸಿರುವ ಧರ್ಮದ ಛತ್ರವನ್ನು ಬಿಟ್ಟುಕೊಟ್ಟಿದ್ದಾರೆ. ೧೬ನೇ ತಾ. ಹಿಂದುಸ್ಥಾನಿಯಲ್ಲಿಯೂ ಕನ್ನಡ ಭಾಷೆಯಲ್ಲಿಯೂ ಒಂದು ನಾಟಕವನ್ನು ಆಡಿದ್ದರಿಂದ ಆ ದಿನ ಮುಸಲ್ಮಾನರು ಹೆಚ್ಚಾಗಿ ಸೇರಿದ್ದರು ಆ ರಾತ್ರಿ ನಾಟಕ ಶಾಲೆಯಲ್ಲಿ ತುಂಬಾ ಗಲಾಟೆಯಾಯಿತೆಂದು ವರ್ತಮಾನವಿದೆ —ಪ್ಲೇಗ್ ರೋಗವು ನಿಂತ ಕೂಡಲೆ ಸಿಡುಬಿನ ಉಪದ್ರ ತಲೆಹಾಕಿ, ದಿನೇ ದಿನೇ ಹೆಚ್ಚುತ್ತಾ ಬರುತ್ತದೆ ಕೆಲವು ಮಕ್ಕಳು ಸತ್ತುಹೋದರು. ಇನ್ನೂ ಕೆಲವರಿಗೆ ತೊಂದರೆಪಡಿಸುತ್ತಾ ಇದೆ. ಬಿಸಲಿನ ತಾಪವು ಬಹು ಜೋರಾಗಿದೆ. ಎಲ್ಲಾ ಕಡೆಯಲ್ಲಿಯೂ ಹುಲ್ಲು ಒಣಗಿ, ಬರೀ ನೆಲ ಕಾಣುತ್ತಾ ಬರುತ್ತದೆ ದನಕರುಗಳಿಗೆ ತುಂಬಾ ತೊಂದರೆಯಾಗಿದೆ.—ಮೈಸೂರು ಗೌವರ್ನಮೆಂಟ್ ವಿದ್ಯಾಭ್ಯಾಸದ ಇಲಾಖೆಯ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಮೆ॥ ವೆಂಕಟಸ್ವಾಮಿ ನಾಯುಡು ಯವರು ೧೬ನೇ ತಾ. ಇಲ್ಲಿಗೆ ದಯಮಾಡಿ, ೧೯ನೇ ತಾ. ಪಿರಿಯಾಪಟ್ಟಣದ ಕಡೆ ಸರ್ಕೀಟ್ ಹೊರಟರು. ಗ್ರಾಮಗಳಲ್ಲಿರುವ ಹೋಬಳಿ ಸ್ಕೂಲ್‌ಗಳನ್ನು ಮುಖ್ಯವಾಗಿ ಇನ್ಸ್‌ಪೆಕ್ಟ್ ಮಾಡಲು ಸರ್ಕೀಟ್ ಹೊರಟದಾರೆಂದು ಕಾಣಬರುತ್ತದೆ.

ತೀರ್ಥಹಳ್ಳಿ.— ಹವ ಈವರಿಗೂ ವಿರೋಧವಾಗಿಯೇ ಇದೆ, ಎಂಟೊಂಭತ್ತು ಗಂಟೆಗಳ ವರಿಗೂ ಕೆಲವು ಸಾರಿ ಸೂರ್ಯನ ಪ್ರಕಾಶ ಕಾಣುವದ ಅಪರೂಪ. ಗಾಳಿ ಶೀತವಾಗಿದೆ ಅಲ್ಲಲ್ಲಿ ಜನರು ರೋಗಾದಿಗಳಿಂದ ಪೀಡಿತರಾಗಿದ್ದಾರೆ —ಇಲ್ಲಿನ ಹಳ್ಳಿಗಳಲ್ಲಿ ಎರಡು ಭಯಂಕರವಾದ ಖೂನಿಗಳು ಆದವು ಒಂದು, ಮಳೂರು ಹತ್ರ, ಮತ್ತೊಂದು, ಕಾಸರವಳ್ಳಿ ಸಮೀಪ ಮುತ್ತವಳ್ಳಿಯಲ್ಲಿ. ಮಳೂರು ಹತ್ರ ಹನುಮನೆಂಬ ಒಬ್ಬನು ಇನ್ನೊಬ್ಬ ೨೨ ವಯಸ್ಸಿನ ಯೌವನಸ್ಥನನ್ನು, ತನ್ನ ಮನಸ್ಸು ಬಂದ ಹಾಗೆ ಕತ್ತಿಯಿಂದ ಕಡಿದು, ಹತಮಾಡಿದನು ಸಂಗತಿ ವಿಚಾರಿಸುವಲ್ಲಿ ಖೂನಿ ಮಾಡಿದ ಹನುಮನ ಹೆಂಡತಿಗೂ ಆ ಯೌವನಸ್ಥನಿಗೂ ವಿಶೇಷ ಒಳಸ್ನೇಹವಿತ್ತೆಂತಲೂ ಇದರ ನಿಮಿತ್ತ ಒಂದೆರಡುಸಾರಿ ಎಚ್ಚರಿಸಿದಾಗ್ಯೂ ಸದರೀ ಯೌವನಸ್ಥನು ಎಚ್ಚರಿಕೆ ಹೊಂದದೆ ಒಂದು ದಿನ ಆ ಹನುಮನ ಮನೆಯ ಜಗಲಿಯಲ್ಲಿ ಕೂತು ಇರುವಾಗ್ಗೆ ಹನುಮನು ಹೊರಗಿನಿಂದ ಬಂದು ಇವನು ಕೂತಿರುವದನ್ನು ನೋಡಿ ಒಳಗೆ ಹೋಗಿ ನೀರು ಕುಡಿದು ಕತ್ತಿಯನ್ನು ತಂದು ಬಂದು, ಆ ಯೌವನಸ್ಥನ ಒಂದು ಪಾರ್ಶ್ವಕ್ಕೆ ಹೊಡೆದನು ಕೂಡ್ಲೆ ಹನುಮನ ಹೆಂಡತಿಯು ಕೊಲ್ಲಬೇಡಿರೆಂದು ಹಿಡಿದಾಗ್ಗೆ ಅಳಿಗೆ ತಲೆಗೆ ಹೊಡೆದನು ಅವಳು ಕೆಳಗೆ ಬಿದ್ದಳು. ಅಷ್ಟರಲ್ಲಿ ಯೌವನಸ್ಥನು ಒಂದು ಫರ್ಲಾಂಗ್ ದೂರ ಓಡಿಹೋದನು ಕಡೆಗೂ ಅಟ್ಟಿಕೊಂಡು ಹೋಗಿ ಹೊಡೆದು ಸಂಹಾರಮಾಡಿಬಿಟ್ಟನು. ನಂತರ ತಾನೇ ಹೋಗಿ ಪಟೇಲ್ ಮುಂತಾದವರಿಗೆ ತಿಳಿಸಿದನು. ಈಗ ಪೋಲೀಸಿನವರು ಅವನನ್ನು ಶಿವಮೊಗ್ಗಾಕ್ಕೆ ವಿಚಾರಣೆ ಕರೆದುಕೊಂಡು ಹೋಗಿದಾರೆ ಮುತ್ತವಳ್ಳಿಯವನು ಒಬ್ಬ ಪುರಾಣಿಯವನು ನಾಡೋರ ಗೌಡನಿಂದ ಕತ್ತಿನ ಶಿರದ ಮೇಲೆ ಕಡಿಯಲ್ಪಟ್ಟಿದ್ದನು. ಎರಡು ಶವಗಳನ್ನು ಇಲ್ಲಿನ ಆಸ್ಪಿಟಲ್ ಅಸಿಸ್ಟೆಂಟರು ಮಂಗಳವಾರ ಪರಮಾಯಿಷಿ ಮಾಡಿ, ದಫನ್ ಮಾಡಿಸಿದರು.- ಹುಮ್ಚಕಟ್ಟೆ ಕೋಣಂದೂರಿನಲ್ಲಿ ಒಬ್ಬ ರಂಗಾರೆ ಯೌವನಸ್ಥನು ಒಬ್ಬ ಗೌಡನನ್ನು ಪುಸಲಾಯಿಸಿ ಕರಕೊಂಡು ಹೋಗಿ ಅವನಿಗೆ ಉಪಾಯದಿಂದ ಅಫೀಮು ಮತ್ತು ಸಾರಾಯಿ ಸಹ ಕೊಟ್ಟು ನಂತರ ಕತ್ತಿ ತೆಗೆದು ಕತ್ತು ಕೊಯ್ಯುತ್ತಿರುವಾಗ್ಗೆ ಎಚ್ಚತ್ತು ಓಡುಕೊಂಡು ರಿಪೋರ್ಟ್ ಮಾಡಿದಾನೆಂದು ವರ್ತಮಾನ ಬಂದಿದೆ ಅವನು ಮಾಡಿದ ವಾಂತಿ ಮೊದಲಾದ್ದನ್ನು ಬೆಂಗಳೂರಿಗೆ ಕೆಮಿಕಲ್ ಪರೀಕ್ಷೆಗೆ ಕಳುಹಿಸಿದಾರೆ. ಹೀಗೆ ತೀರ್ಥಹಳ್ಳಿ ತಾಲೂಕಿನ ಸಂಗತಿಗಳು ಕೇಳುವದಕ್ಕೆ ವಿಚಿತ್ರಕರವಾಗಿಯೂ ಭಯಂಕರವಾಗಿಯೂ ಇವೆ.

ಚನ್ನಪಟ್ಣ.—ಇಲ್ಲಿನ ದಾಯರಕೇರಿಯ ಮುಸಲ್ಮಾನರು ಪೂರ್ಣವಾಗಿ ಊರು ಬಿಡದ ಕಾರಣ ಆಗಾಗ್ಯೆ ಒಂದೊಂದು ಪ್ಲೇಗ್ ಆಗುತ್ತಾ ಇದೆ. ಇವರಲ್ಲಿ ಕೆಲವರು ಬಹು ಬಡವರಾಗಿರುವದರಿಂದ ಜೋಪಡಿ ಕಟ್ಟಲು ಯತ್ನವಿಲ್ಲ. ಅಂಥವರಿಗೆ ಮಾತ್ರ ಸರ್ಕಾರದವರು ಸಹಾಯ ಮಾಡಿದರೆ ಒಳ್ಳೇದು.—ಇಲ್ಲಿ ಸಬ್ ಓವರ್ಸಿಯರಾಗಿದ್ದ ಮೆ॥ ಕೇಶವಲು ನಾಯಡರಿಗೆ ಬೆಂಗಳೂರಿಗೆ ವರ್ಗವಾಯಿತು ಇವರು ಭಕ್ತಿ ಕಾರ್ಯದಲ್ಲಿ ಆಸಕ್ತಿಯುಳ್ಳವರು. ಇಲ್ಲಿನ ಮಿಷನ್ ಪಂಚಮರ ಸ್ಕೂಲಿನಲ್ಲಿ ಹೊಲೆಯರು ಮಾದಿಗರು ಒಂದೇ ಕಡೆ ಸೇರಿ ವಿದ್ಯೆ ಕಲಿಯಲು ಯತ್ನಮಾಡುವದರಲ್ಲಿ ಸಹಾಯಕರಾಗಿದ್ದರು. ಇನ್ನು ಕೆಲವು ಕಾಲವಿದ್ದರೆ ಚನ್ನಾಗಿತ್ತು.—ಇಂಗ್ಲಿಷ್,

ಸ್ಕೂಲ್ ಮಾಸ್ತರರಾಗಿದ್ದ ಮ॥ ಕೆ. ಸುಬ್ರಾಯರು ಕೋಲಾರಕ್ಕೆ ಸಬ್ ಇನ್ಸ್‌ಪೆಕ್ಟರ ಕೆಲಸಕ್ಕೆ ಬದಲಿಯಾಗಿ ಹೋಗುವದು ಸಂತೋಷ. ಆದರೆ ಇವರನ್ನು ಬಿಟ್ಟು ಅಗಲುವದರಲ್ಲಿ ಸ್ಕೂಲ್ ಮಾಸ್ತರುಗಳಿಗೆ ತುಂಬಾ ವ್ಯಸನ. ಇವರ ಕೆಲಸಕ್ಕೆ ಚಿಕ್ಕಮಗಳೂರಿಂದ ಒಬ್ಬರು ಬಂದಿದಾರೆ.—ಈಗ ಟೌನ್ ಪೋಲೀಸಿನವರನ್ನು ಹೋಬಳಿಗೂ ಹೋಬಳಿಯವರನ್ನು ಟೌನಿಗೂ ವರ್ಗ ಮಾಡಿರುವದರಿಂದ ಸರಿಯಾಗಿ ಕೆಲಸ ನಡಿಸಲು ಅನುಭವವಿಲ್ಲ. ಅನುಭವದಾರರನ್ನೇ ನೇಮಿಸುವದು ಒಳ್ಳೇದು. ಕೋಟೆಪಾಸಲ್ಲಿ ಹತ್ತು ವೈಶ್ಯರ ಜೋಪಡಿಗಳ ಹತ್ತು ರಾತ್ರಿಯಲ್ಲಿ ಪೋಲೀಸಿನವನು ಮಲಗುವ ಹಾಗೆ ಮ॥ ತಂಗಮ್ಮ ಶೆಟ್ಟಿಯವರು ಏರ್ಪಾಡು ಮಾಡಿಸಿರುವರು. ಹೊಸ ಏರ್ಪಾಡಾದರೂ ಒಳ್ಳೇದೇ ಸರಿ. ಆದರೆ ಆಸ್ಪತ್ರೆ ಸ್ಕೂಲ್‌ಗಳ ಕಡೆ ಒಂದೆರಡು ಜೋಪಡಿಗಳಿದ್ದರೂ ರಾತ್ರಿಯಲ್ಲಿ ಪೋಲೀಸಿನವರ ಮುಖವನ್ನೇ ಕಾಣದ ಹಾಗೆ ಇರುವದು ಯಾವ ನ್ಯಾಯವೋ ತಿಳಿಯದು. ಮುಂಚಿನ ಪೋಲೀಸಿನವರು ಇದ್ದಾಗ ಈ ಭಾಗದಲ್ಲಿ ಬೀಟ್ ಮಾಡುತ್ತಾ ಇದ್ದರು. ಈಗ ಹೊಸಬರು ಬಂದ ಮೇಲೆ ಬಿಟ್ಟು ನಿಂತುಹೋಗಿರುವದನ್ನು ಕ್ರಮಪಡಿಸ್ಯಾರೆಂದು ನಂಬುತ್ತೇನೆ. ಪೋಲೀಸ್ ಇನ್ಸ್‌ಪೆಕ್ಟರಿಗೆ ಏನೋ ಕಾರಣದಿಂದ ಸಸ್ಪೆಂಡ್ ಆಗಿದೆಯಂತೆ. ಈಗ ಜಮಾದಾರರೇ ಬದಲಿ ನೋಡುತ್ತಾರೆ.—ಜಾಲಮಂಗಲದಲ್ಲಿ ಚನ್ನಬಸವನೆಂಬುವನನ್ನು ಅಲ್ಲಿನವರು ಖೂನಿಮಾಡಿದ್ದರಿಂದ ೮ ಮಂದಿಯನ್ನು ಹಿಡಿದು ಇದಾರೆ —ದೊಡ್ಡ ಮಳೂರಲ್ಲಿ ಪ್ಲೇಗ್ ಇದೆ. ಕಳ್ಳರು ಬಿಟ್ಟಿರುವ ಮನೆಗಳ ಹಿತ್ತಲು ಬಾಗಲುಗಳನ್ನು ತೆರೆಯಲು ಯತ್ನಮಾಡಿ, ೨—೩ ಮನೆಗಳನ್ನು ಹೀಗೆ ಮಾಡಬಿಟ್ಟು ಹೋಗಿದ್ದರಂತೆ —ದೊಡ್ಡ ಮಳೂರಲ್ಲಿ ಮ॥ ಲಕ್ಷ್ಮೀನರಸಿಂಹಯ್ಯಂಗಾರ್ರು ಕಲ್ಕತ್ತ ಪ್ರಾವಿಡೆಂಟ್ ಫಂಡಿಗೆ ಏಜೆಂಟರಾಗಿ, ಬಹಳ ಮುತುವರ್ಜಿಯಿಂದಲೂ ನಂಬಿಕೆಯಿಂದಲೂ ಕೆಲಸ ನಡಿಸುವದರಿಂದ ಬಹಳ ಜನರು ಇದಕ್ಕೆ ಸೇರಿದಾರೆ —ಕಳೆದ ಜನವರಿ ೩೧ರಲ್ಲಿ ಮಿಂಚಾಸ್ ಮಿಯಾ ಸಾಹೇಬರು ಚನ್ನಪಟ್ಟಣದಿಂದ ರಾಯಲ್ ಟಪಾಲಿಗೆ ೩೦೦ ರೂ. ಕ್ರಯದ ೧ ರೇಷ್ಮೆ ಮೂಟೆಯನ್ನು ರೈಲಿನಲ್ಲಿ ಕಳುಹಿಸಿ, ರಸೀತನ್ನು ಪಡೆದರು. ಇದು ಚೋರಿಯಾಗಿ ಹೋಗಿರುತ್ತೆ. ಧಾರವಾಡದ ಟ್ರಾಫಿಕ್ ಮ್ಯಾನೇಜರಿಗೆ ಕಳೆದ ೮ ರಲ್ಲಿ ಅರ್ಜಿ ಬರೆಕೊಂಡರೂ ಇದುವರಿಗೆ ಜವಾಬ್ ಇಲ್ಲ. ಹೀಗೆ ಮಾಡಿದರೆ ಕಂಪನೀರವರಲ್ಲಿ ವರ್ತಕರಿಗೆ ಹ್ಯಾಗೆ ನಂಬಿಕೆಯಾದೀತು. ಮೇಲಿನವರು ಗಮನಕ್ಕೆ ತಂದು ವರ್ತಕರ ನಷ್ಟವನ್ನು ನೀಗಿಸಬೇಕು —ಇಲ್ಲಿಗೆ ನಾಲ್ಕು ಮೈಲಿ ದೂರದಲ್ಲಿರುವ ಹೊಂಗನೂರಿನಲ್ಲಿ ೩೦೦ ಮನೆಗಳಿಗೆ ಹೆಚ್ಚಾಗಿವೆ. ೧೦೦ ಮನೆ ಮೇಲಿದ್ದರೆ ಸ್ಯಾನಿಟರಿ ಏರ್ಪಾಡು ಮಾಡಬೇಕೆಂದು ರೂಲ್ಸ್ ಇದ್ದರೂ ಇದನ್ನು ಯಾರೂ ಗಮನಕ್ಕೆ ತಂದುಕೊಂಡಿಲ್ಲ. ಇನ್ನು ಮೇಲಾದರೂ ನಮ್ಮ ಅಮಲ್ದಾರರು ಇದನ್ನು ಏರ್ಪಾಡು ಮಾಡಬೇಕೆಂದು ಇಲ್ಲಿನವರು ಕೋರುತ್ತಾರೆ. ಹೊಂಗನೂರಲ್ಲಿ ನೀರಿಗೆ ಬಹಳ ಕಷ್ಟ. ೧—೨॥ ಮೈಲಿನಲ್ಲಿ ಬಾವಿ ತೋಡಿ ನೀರು ತರುತ್ತಾರೆ. ಜನರ ತುಳಿತ ಕಾಟದಲ್ಲಿ ಒಂದು ಭಾವಿ ದರಿ ಕುಸಿದು, ಒಬ್ಬರಿಗೆ ಪ್ರಾಣ ಗಾಯವಾಗಿದೆ. ಸಂತೆ ಜನರಿಗೆ ಕೆಲವು ಬ್ರಾಹ್ಮಣರು ಅರವಟಿಗೆ ಇಟ್ಟು ನೀರು ಕೊಡುತ್ತಾರೆ. ಎರಡು ಸರ್ಕಾರಿ ಭಾವಿಗಳಿವೆ, ನೀರು ಇಲ್ಲ. ಇವುಗಳ ಹೂಳನ್ನು ಸರ್ಕಾರದವರು ತೆಗಿಸಿ, ಜನರ ಕಷ್ಟವನ್ನು ಪರಿಹರಿಸಬೇಕು.

ಚಿಕ್ಕಮಗಳೂರು.—ಕಳೆದ ವಾರ ಪ್ಲೇಗ್ ಕೇಸುಗಳು ಅಪರೂಪವಾಗಿ ಒಂದೆರಡು ಆದವು. ಕೆಲವು ಕಡೆ ಇಲಿಗಳು ಬೀಳುತ್ತಿವೆ. -ಇಲ್ಲಿನ ಸವೋಟ್ರು ಮಾಲಿ ಸಿದ್ದನೆಂಬುವನ ಗದ್ದೆಯಲ್ಲಿ ಕೆಲವು ದಿನಗಳಿಂದ ಕಬ್ಬು ಕಳವಾಗುತ್ತಾ ಇದ್ದದ್ದರಿಂದ ಕಳ್ಳರನ್ನು ಹಿಡಿಯಬೇಕೆಂದು ಸದರಿ ಸಿದ್ದನು ಇದೇ ತಿಂಗಳು ೫ನೇ ತಾ. ರಾತ್ರಿ ಗದ್ದೆಯ ಮಧ್ಯಭಾಗದಲ್ಲಿ ಕಾಯುತಿರಲು, ಮೂರು ಜನರು ಸುಮಾರು ರಾತ್ರಿ ಹತ್ತು ಗಂಟೆ ಸಮಯದಲ್ಲಿ ಗದ್ದೆಗೆ ಬಂದು, ಕಬ್ಬು ಮುರಿದು ತೆಗೆದುಕೊಂಡು ಹೊರಡುವ ಸಮಯಕ್ಕೆ ಮಾಲೀಕನು ಬಂದು ಮೂವರನ್ನು ಹಿಡಿದುಕೊಳ್ಳಲು, ಇಬ್ಬರು ತಪ್ಪಿಸಿಕೊಂಡು ಓಡಿಹೋದರು. ಒಬ್ಬನನ್ನು ಮಾತ್ರ ಬಲವಾಗಿ ಹಿಡಿದು ಕಳ್ಳನು ಎಷ್ಟು ಹೊಡೆದರೂ ಬಿಡದೆ ಪೋಲೀಸ್ ಸ್ಟೇಷನಿಗೆ ಎಳೆದು ತರಲು ಪೋಲೀಸಿನವರು ಆ ಕಳ್ಳನ ಮೇಲೆ ಚಾರ್ಜ್ ಮಾಡಿ, ವಿಚಾರಣೆಗೆ ಗುರಿಪಡಿಸಿದ್ದರಿಂದ ಇಲ್ಲಿನ ತಾಲ್ಲೋಕ್ ಅಮಲ್ದಾರರ ಕೋರ್ಟಿನಲ್ಲಿ ವಿಚಾರಣೆ ಆಗಿ ಅಪರಾಧಿಯು ಲಾಕಪ್ಪಿನಲ್ಲಿದ್ದುಕೊಂಡು, ವಿಚಾರಣೆಯ ಫಲಿತಾಂಶವನ್ನು ಎದುರು ನೋಡುತ್ತಿದಾರೆ. ಇವನು ಇಲ್ಲಿನ ಬಾಂಕ್ ಸಿಪಾಯಿಗಳಲ್ಲಿ ಒಬ್ಬನಾಗಿದಾನೆ. ಇದಕ್ಕೆ ಮೊದಲೇ ಕೆಲವು ಸಿಪಾಯಿಗಳೂ ಪೋಲೀಸಿನವರೂ ಸೇರಿ ಅದೇ ಗದ್ದೆಯಲ್ಲಿ ಕಬ್ಬು ಮುರಿದರೆಂಬುದಾಗಿಯೂ ಸಾಕ್ಷಿಗಳು ಸರಿಯಾಗಿ ಇಲ್ಲದ್ದರಿಂದ ಅವರನ್ನು ಬಿಟ್ಟುಬಿಟ್ಟರೆಂತಲೂ ಜನರು ಮಾತನಾಡಿಕೊಳ್ಳುತ್ತಾರೆ. ಪ್ರಜಾ ನೆಮ್ಮದಿಗಾಗಿ ಸರಕಾರದಿಂದ ನೇಮಿಸಲ್ಪಟ್ಟಿರುವ ಸಿಪಾಯಿಗಳೂ ಪೋಲೀಸಿನವರೂ ಪ್ರಜೆಗಳಿಗೆ ಹಿಂಸೆಯನ್ನೂ ನಷ್ಟವನ್ನೂ ಉಂಟುಮಾಡುವದು ಬೇಲಿ ಎದ್ದು ಹೊಲವನ್ನು ಮೇದಂತಾಗುವದು.—ಇದೇ ತಿಂಗಳು ೩ನೇ ತಾ॥ 'ರಾತ್ರಿ ಎಕ್ಸೈಸ್ ಅಸಿಸ್ಟೆಂಟ್ ಕಮಿಷನರ್ ಮ॥ ಮಾಧವರಾಯರ ಗುಡಿಸಲಿನಲ್ಲಿ ಒಂದು ಪೆಟ್ಟಿಗೆಯಲ್ಲಿಟ್ಟಿದ್ದ ನಗದು ರೂಪಾಯಿ ೩೩, ಮಕ್ಕಳಿಗೆ ಹಾಕುವ ಕಾವಂಚಿಗೆ ಹುನ್ನಿನ ಪದೇಲಿಲ್ಲೆ ನಾಲ್ಕು, ಮುಂತಾದ ಸಗನಾಣ್ಯಗಳು ಕಳುವಾದ ಸಂಗತಿ ಪೋಲೀಸಿಗೆ ರಿಪೋರ್ಟಾದ್ದರಿಂದ ಪೋಲೀಸಿನವರು ಪತ್ತೆಹಚ್ಚುವದರಲ್ಲಿದಾರೆಂಬ ವರ್ತಮಾನವಿದೆ. ಇದೇ ತಿಂಗಳು ೧೩ನೇ ತಾರೀಖಿನಲ್ಲಿ ಇಲ್ಲಿನ ಕೋಟೆಯ ಮುಂಭಾಗದ ಗುಡಿಸಲಿನಲ್ಲಿದ್ದ ಎಕ್ಸೈಸ್ ಹೆಡ್ ಕ್ಲಾರ್ಕ್ ಮ॥ ನರಸಿಂಹಯ್ಯಂಗಾರ್ರು ಗುಡಿಸಲಿಗೆ ರಾತ್ರಿ ಸುಮಾರು ಎರಡು ಗಂಟೆಯಲ್ಲಿ ಯಾರೋ ಒಬ್ಬ ಕಳ್ಳನು ಬಂದು, ತನಗೆ ಬೇಕಾದ ಗಂಟಿನ ಪದಾರ್ಥವನ್ನು ಹುಡುಕುತ್ತಿರುವಾಗ ಮಲಗಿದ್ದ ಮಗುವಿನ ಮೇಲೆ ಬೀಳಲು ಮಗುವು ಕೂಗಿಕೊಂಡಿತು. ಗುಡಿಸಲಿನಲ್ಲಿ ಮಲಗಿದ್ದವರೆಲ್ಲಾ ಎದ್ದರು ; ಕಳ್ಳನು ಇದನ್ನು ತಿಳಿದು ಗಾಬರಿಯಾಗಿ ತನ್ನ ತಲೆಯಮೇಲಿದ್ದ ಪೇಟವನ್ನು ಬಿಟ್ಟು ಓಡಿಹೋದನಂತೆ. ಹೋದ ವರುಷದಂತೆ ಮತ್ತೆ ಗುಡಿಸಲಿನಲ್ಲಿ ಕಳ್ಳತನ ಶುರುವಾಗಿರುವದರಿಂದ ಇದನ್ನು ಅಡಗಿಸುವ ಏರ್ಪಾಡು ಮಾಡುವದು ಪೋಲೀಸ್ ಅಧಿಕಾರಿಗಳಿಗೆ ಸೇರಿದ್ದಾಗಿದೆ.

ಹಾಸನ.—ದಿವಾ ಸದ್ಯಕ್ಕೆ ಆರೋಗ್ಯಕರವಾದ ಸ್ಥಿತಿಯಲ್ಲಿಯೇ ಇದೆ. ಸುತ್ತುಮುತ್ತ ಸಮೀಪವಾಗಿ ಎಲ್ಲಿಯೂ ಅಪಾಯಕರವಾದ ರೋಗಗಳು ಯಾವವೂ ಇಲ್ಲ. ಗುಡಿಸಲುಗಳಲ್ಲಿ ವಾಸಮಾಡುತ್ತಲಿರುವ ಇಲ್ಲಿನ ನಿವಾಸಿಗಳೆಲ್ಲರೂ ಊರಿನೊಳಗೆ ತಮ್ಮ ತಮ್ಮ ಮನೆಗಳನ್ನು ಸದ್ಯದಲ್ಲಿಯೇ ಸೇರಿಕೊಳ್ಳಬಹುದು ; ಆಗಲೇ ಈ ಊರಿನ ಉತ್ತರ ಭಾಗದ ನಿವಾಸಿಗಳೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಸೇರಿಕೊಂಡರು. ಈಗ ದಕ್ಷಿಣ ಭಾಗದ ಮನೆಗಳು ಶುದ್ಧಮಾಡಲ್ಪಡುತ್ತಲಿವೆ. ಅಂತು ಇನ್ನು ಒಂದು ತಿಂಗಳೊಳಗಾಗಿ ಊರಿನವರೆಲ್ಲ ಮನೆಗಳನ್ನು ಸೇರಿಕೊಳ್ಳುವುದರಲ್ಲಿ ಅಡ್ಡಿಯಿಲ್ಲ. ಆದರೇನು, ಮ್ಯುನಿಸಿಪಾಲಿಟಿಯವರು ಸ್ವಾರ್ಥತೆಯ ಆಲೋಚನೆಯನ್ನು ಬಿಟ್ಟು, ಕರ್ತವ್ಯವೇನೆಂದು ತಿಳಿದು, ನಡೆಸದೇ ಇದ್ದರೆ ಪ್ರಜೆಗಳು ಪುನಃ ೧—೨ ತಿಂಗಳಲ್ಲಿಯೇ ಗುಡಿಸಲುಗಳನ್ನು ಸೇರಬೇಕಾದೀತೆಂದು ವಿವೇಕಿಗಳೆಲ್ಲರೂ ಭಯಪಡುತ್ತಲಿರುವರು.—ನಮ್ಮ ಡೆಪ್ಯುಟಿ ಕಮಿಷನರವರೂ ಇವರ ಆಫಿಷಿಯಲ್‌ಗಳೂ ಸೇರಿ ಮಧ್ಯಾಹ್ನ ೧೨ ಗಂಟೆಯಿಂದ ರಾತ್ರಿ ೯—೧೦ ಗಂಟೆ ವರಿಗೂ ಆಫೀಸಿನಲ್ಲಿ ಸರ್ಕಾರದ ಕೆಲಸವನ್ನು ತಮ್ಮ ಸ್ವಂತ ಗೃಹಕೃತ್ಯದಂತೆ ಆಸಕ್ತಿಯಿಂದ ನಡಿಸುತ್ತಾ ಇರುವರು. ಇವರ ಪರಮ ಸಾತ್ವಿಕತೆಯೂ ತಾಳ್ಮೆಯೂ ಸ್ತೋತ್ರಾರ್ಹಗಳೇ. ಆದರೆ ಅವರ ನಿಗ್ರಹಾನುಗ್ರಹ ಶಕ್ತಿಗಳೂ ನಿಷ್ಪಕ್ಷಪಾತತೆಯೂ ಇಲ್ಲದ ಅಧಿಕಾರಿಗಳ ವಿಷಯದಲ್ಲಿ ಅಧೀನಸ್ಥರೂ ಇತರರೂ ಕೇವಲ ಲಾಘವವಾಗಿ ತಿಳಿದು ಸ್ವೇಚ್ಛಾಪ್ರವರ್ತನೆಗೆ ಬೀಳುತ್ತಾರೆಂಬುದನ್ನು ಇವರು ಯೋಚಿಸದೆ ಇರುವಂತೆ ಕಾಣುತ್ತದೆ. ಇವರ ಎಡೆಬಿಡದ ಕಾರ್ಯದಿಂದ ಅಲ್ಪವೇತನವುಳ್ಳ ಕೀಳು ನೌಕರರಿಗೆ ತುಂಬಾ ಕಷ್ಟವೂ, ಆಫೀಸಿನಲ್ಲಿ ರಾತ್ರಿ ದೀಪದ ಖರ್ಚೂ, ಕಕ್ಷಿಗಾರರಿಗೂ ಅವರ ಕಡೆಯ ವಕೀಲರಿಗೂ ಕಛೇರಿ ಮುಂದಿನ ಮರಗಳ ನೆರಳನ್ನು ಆಶ್ರಯಿಸಿ ಕಾಯುವ ವಿಳಂಬವೂ ಹೆಚ್ಚಾಗುತ್ತಾ ಬಂದಿದೆ. ಗುಡಿಸಲುಗಳಲ್ಲಿ ಒಂಟಿಒಂಟಿಯಾಗಿ ವಾಸಮಾಡುತ್ತಲಿರುವ ಬಡ ನೌಕರರ ಮೇಲೆಯೂ ಬಹುದೂರ ಸ್ಥಳಗಳಿಂದ ಬರುವ ಕಕ್ಷಿಗಾರರ ಮತ್ತು ರೈತರುಗಳ ಮೇಲೆಯೂ, ಈ ನಮ್ಮ ಡೆಪ್ಯುಟಿ ಕಮಿಷನರವರು ದಯವಿಟ್ಟು, ಇತರ ಡಿಸ್ಟ್ರಿಕ್ಟ್‌ಗಳ ಕ್ರಮದಂತೆಯೇ ಹಗಲು ೧೧ ಗಂಟೆಯಿಂದ ೫ ಗಂಟೆ ವರಿಗೆ ಆಫೀಸ್ ಕೆಲಸಗಳನ್ನು ಮಾಡುತ್ತಾ ಬಂದರೆ ಎಲ್ಲಾ ಜನಗಳಿಗೂ ಕೀಳು ನೌಕರರಿಗೂ ಕ್ಷೇಮವಾದೀತು —ಕಳೆದ ೫ನೇ ತಾ॥ ವೆಸ್ಲಿಯನ್ ಮಿಷನ್ ಸೆಕ್ರಟರಿಗಳಾದ ಘನ ಫಿಂಡ್ಲೆ ದೊರೆಯವರೂ, ಘನ ಬಿಷಪ್ ದೊರೆಯವರೂ ಈ ಊರಿಗೆ ದಯಮಾಡಿ, ಮಿಷನ್ ದೇವಾಲಯದಲ್ಲಿ ಇಲ್ಲಿನ ಕ್ರೈಸ್ತ ಮಂಡಲಿಯವರು ಅರ್ಪಿಸಿದ ವಂದನಾ ಪತ್ರಿಕೆಯನ್ನು ಅಂಗೀಕರಿಸಿ, ಅದೇ ರಾತ್ರಿ ಮ॥ ಗ್ರಾಹಂ ಅಂಪ್ರರ್ಸರವರ ಬಂಗ್ಲೆಯಲ್ಲಿ ಇಂಗ್ಲೀಷ್ ಪ್ರಾರ್ಥನಾ ಕೂಟವನ್ನು ನಡೆಸಿ, ಮರು ದಿನ ಇಲ್ಲಿನ ಮಿಷನ್ ಕಾರ್ಯಗಳನ್ನೆಲ್ಲಾ ಪರಾಮರ್ಶಿಸಿ, ಅರ್ಫನೇಜಿನ ಉಪಾಧ್ಯಾಯಿನಿಯರೂ ಬಾಲಕಿಯರೂ ಅರ್ಪಿಸಿದ ವಂದನಾ ಪತ್ರಿಕೆಯನ್ನು ಸ್ವೀಕರಿಸಿ, ಅವರ ಪಾಠಕ್ರಮಗಳನ್ನೂ ಸಣ್ಣ ಮಕ್ಕಳು ಡ್ರಿಲ್ ಮಾಡಿದ್ದನ್ನೂ ನೋಡಿ ಸಂತೋಷಪಟ್ಟು, ಅದೇ ಸಾಯಂಕಾಲ ಮುಂದಕ್ಕೆ ಪ್ರಯಾಣ ಬೆಳಸಿದರು. ಈ ಮಹನೀಯರ ಆಗಮನದಿಂದ ಇಲ್ಲಿನ ಕ್ರೈಸ್ತ ಮಂಡಲಿಗೆಲ್ಲಾ ಪರಮ ಹರ್ಷವಾಯಿತು. ಚಿಕ್ಕಮಗಳೂರು ಮತ್ತು ಈ ಡಿಸ್ಟ್ರಿಕ್ಟಿನ ಇತರ ಸ್ಥಳಗಳ ಕ್ರೈಸ್ತ ಬೋಧಕರೆಲ್ಲರೂ ಇವರ ಸಂದರ್ಶನಾರ್ಥವಾಗಿ ಇಲ್ಲಿಗೆ ಬಂದಿದ್ದರು. ಇಲ್ಲಿನ ಕ್ರೈಸ್ತ ದೇವಾಲಯವನ್ನು ಇನ್ನೂ ದೊಡ್ಡದು ಮಾಡಬೇಕೆಂತಲೂ ಇಲ್ಲಿ ಮಿಷನಿನವರೇ ಒಂದು ಆಸ್ಪತ್ರೆಯನ್ನು ಕಟ್ಟಿ ನಡೆಸುವವರಾಗಿರುವರೆಂತಲೂ ತಿಳಿದು ಎಲ್ಲರೂ ಸಂತೋಷಪಡುತ್ತಿದಾರೆ —ಇಲ್ಲಿನ ಗೌವರ್ನಮೆಂಟ್ ಕನ್ನಡ ಸ್ಕೂಲ್ ಉಪಾಧ್ಯಾಯರಾದ ಮ॥ ಎಂ ಬಾರ್ ಜಟಾವಲ್ಲಭ ಅಪ್ರಮೇಯ ಐಯ್ಯಂಗಾರ್ರವರು ಕಳೆದ ಭಾನುವಾರ ಗ್ರಾಮ ಎಂಬ ಊರಿಗೆ ದಯಮಾಡಿ, ಅಲ್ಲಿನ ನಿವಾಸಿಗಳ ಅಪೇಕ್ಷೆಯಂತೆ ಕನ್ನಡ ಸ್ಕೂಲಿನಲ್ಲಿ "ಆಸ್ತಿಕ ನಾಸ್ತಿಕ ಸಂವಾದವೆಂಬ" ವಿಷಯವನ್ನು ಕುರಿತು ಉಪನ್ಯಾಸ ಮಾಡಿ ಬಂದರು.

ಮಂಡ್ಯ.—ಈ ತಿಂಗಳು ೧೬ ನೇ ತಾರೀಖಿನಲ್ಲಿ ಡಿಪ್ಟಿ ಕಮಿಷನರ ಸಾಹೇಬರ ಸವಾರಿಯು ಈ ತಾಲ್ಲೋಕಿಗೆ ಚಿತ್ತೈಸಿತು. ಅವರು ಬರುವದಕ್ಕೆ ೮—೧೦ ದಿನಗಳ ಮುಂಚಿನಿಂದಲೂ ತಾಲ್ಲೋಕಿನ ಉದ್ಯೋಗಸ್ಥರು ಸಿದ್ಧರಾಗಿ ಕಛೇರಿಯ ಒಳಗೂ ಹೊರಗೂ ಶುಚಿಮಾಡಿಸಿದ್ದರು. ಅಲ್ಲದೆ ಮುಸಾಫರಿ ಬಂಗ್ಲೆಯನ್ನು ಕಸ ಕಡ್ಡಿಗಳಿಲ್ಲದಂತೆ ಗುಡಿಸಿಸಿ, ಒಳಗಿನ ಸಾಮಾನುಗಳನ್ನು ಕ್ರಮಪಡಿಸಿ, ಸರ್ವಭಾಗದಲ್ಲೂ ಒಬ್ಬ ಯೂರೋಪಿಯನ್ ಅಧಿಕಾರಿಯನ್ನು ಸಂತೋಷಪಡಿಸತಕ್ಕ ರೀತಿಯಲ್ಲಿ ಕ್ರಮಪಡಿಸಿಕೊಂಡಿದ್ದರು. ಡೆಪ್ಟಿ ಕಮಿಷನರ್ ಮ॥ ಸ್ಪಾರ್ಕ್ಸ್ ಸಾಹೇಬರು ಮಧ್ಯಾಹ್ನ ೧೨ ಗಂಟೆ ಮೇಲ್ ಗಾಡಿಯಿಂದ ಇಳಿದ ಕೂಡಲೆ ತಾಲ್ಲೋಕ್ ಅಮಲ್ದಾರರು ಅವರಿಗೆ ಹಾರ ತುರಾಯಿಯನ್ನು ಒಪ್ಪಿಸಿದರು. ಅವರು ಅದನ್ನು ತೆಗೆದುಕೊಂಡು ಅಮಲ್ದಾರರು, ಡಾಕ್ಟರು, ಪೋ. ಇನ್ಸ್‌ಪೆಕ್ಟರೊಡನೆ ಮುಸಾಫರಿ ಬಂಗ್ಲೆಯನ್ನು ಕುರಿತು ತೆರಳಿದರು. ಅನಂತರ ತಾಲ್ಲೋಕ್ ಕಛೇರಿಯನ್ನೂ ಅಲ್ಲಿನ ಗುಮಾಸ್ತರನ್ನೂ 'ನೋಡಿಕೊಂಡು, ಸಾಯಂಕಾಲ ಊರನ್ನು ನೋಡಿ ಬರುವದಕ್ಕಾಗಿ ಹೊರಟರು. ಅವರ ಜೊತೆಯಲ್ಲಿ ಅನೇಕ ಜನರು ಹೋದರು. ಮೊದಲು ಬ್ರಾಹ್ಮಣರ ಬೀದಿ, ಛತ್ರ ಮುಂತಾದವುಗಳನ್ನು ನೋಡಿಕೊಂಡು, ಜನರು ಗ್ರಾಮವನ್ನು ಬಿಟ್ಟಿರುವ ವಿಷಯಕ್ಕೆ ಅವರಿಗೆ ತಕ್ಕ ಬುದ್ಧಿವಾದಗಳನ್ನು ಹೇಳಿ, ತಿರಿಗಿ ಮನೆಗೆ ಸೇರಬೇಕಾದರೆ ಮನೆಯ ಒಳಭಾಗವನ್ನು ಬೆರಣಿಯಿಂದ ಚನ್ನಾಗಿ ಸುಟ್ಟು, ಅನಂತರ ಸುಣ್ಣ ಬಳಿಕೊಂಡು, ಕೆಲವು ದಿನಗಳೊಳಗಾಗಿಯೇ ಮನೆಗಳನ್ನು ಸೇರಿಕೊಳ್ಳಬಹುದೆಂದು ಹೇಳಿದರು. ಮತ್ತು ಜನರು ತಮ್ಮ ಫಿರ್ಯಾದುಗಳನ್ನು ಹೇಳಿಕೊಳ್ಳಲು ಇಷ್ಟರೆ ತಮಗೆ ಹೇಳಿಕೊಳ್ಳಲು ಅವಕಾಶ ಕೊಟ್ಟರು. ಆಗ ಇಲ್ಲಿನ ಹೊಲಗೇರಿ ಚಿಕ್ಕ ಎಂಬುವನ ೧೪—೧೫ ವರ್ಷದ ಫಿರ್ಯಾದು ಒಂದಿತ್ತು. ಅದನ್ನು ಕುರಿತು ಅವನು ಹೇಳಿಕೊಂಡನು ಅವನ ವ್ಯಾಜ್ಯ ವಿನಂದರೆ, ೧೪—೧೫ ವರ್ಷಗಳಿಂದಲೂ ಚಿಕ್ಕಮಂಡ್ಯ ಬೋರೇಗೌಡನು ಚಿಕ್ಕಿನಿಂದ ಕೆರೆಯ ನೀರು ಹೋಗುವ ರಾಜಕಾಲ್ವೆಯನ್ನು ಮುಚ್ಚಿಬಿಟ್ಟು, ತನ್ನ ಗದ್ದೆ ಕೆಳಗೆ ಗದ್ದೆ ಮಾಡಿರುವ ಚಿಕ್ಕ ಮುಂತಾದವರ ಗದ್ದೆಗೆ ನೀರನ್ನು ಕೊಡದೆ, ಅವರಿಗೆ ಬಹು ಲುಕ್ಸಾನು ಮಾಡುತಿರುವದಾಗಿಯೂ, ಈ ವಿಚಾರವನ್ನು ಅಮಲ್ದಾರರು, ಸಬ್ ಡಿವಿಜನ್ ಆಫೀಸರರು, ಹಿಂದೆ ಇದ್ದ ಡೆಪ್ಟಿ ಕಮಿಷನರು ಮುಂತಾದವರಿಗೆ ಅನೇಕ ಸಾರಿ ಹೇಳಿಕೊಂಡಿದ್ದಾಗ್ಯೂ ಇವರ ಪರವಾಗಿ ಯಾರೂ ಒಳ್ಳೇದನ್ನು ಮಾಡಿದ ಹಾಗೆ ತೋರಲಿಲ್ಲ. ಎಲ್ಲರೂ ಮಾಡಿದ ತೀರ್ಮಾನಗಳು ಗೌಡರಿಗೆ ಅನುಕೂಲವೂ ಪಂಚಮರಿಗೆ ಪ್ರತಿಕೂಲವೂ ಆಗಿತ್ತು. ಆದರೆ ಮ॥ ಸ್ಪಾರ್ಕ್ಸ್ ಸಾಹೇಬರ ಸವಾರಿಯಿಂದ ಪಂಚಮರು ೧೫ ವರ್ಷಗಳಿಂದ ತೆತ್ತ ಕಂದಾಯವೂ ಅವರಿಗೆ ಉಂಟಾದ ಧಾನ್ಯದ ಲುಕ್ಸಾನೂ ಬರುವದಕ್ಕೆ ಮಾರ್ಗವಾದಹಾಗಿದೆ. ಡೆಪ್ಟಿ ಕಮಿಷನರ್ ಸಾಹೇಬರು ಆ ಗದ್ದೆಯನ್ನೂ ರಾಜನಾಲೆಯನ್ನೂ ತನಿಖೆ(?) ಮಾಡಿ, ಗೌಡರು ನೀರು ಹೋಗದಂತೆ ಮಾಡಿದ್ದು ವಾಸ್ತವವೆಂದೂ ಇನ್ನು ಮುಂದೆ ಪಂಚಮರ ಗದ್ದೆ ನೀರು ಹೋಗಲು ರಾಜನಾಲೆಯನ್ನು ತೆರೆಯಬೇಕೆಂದೂ ಅಪ್ಪಣೆ ಮಾಡಿ, ಪಂಚಮರಿಗೆ ಸರಿಯಾದ ನ್ಯಾಯವನ್ನು ತೋರಿಸಿದ್ದಕ್ಕಾಗಿ ಇಲ್ಲಿನ ಪ್ರಜೆಗಳೆಲ್ಲರೂ ಮ॥ ಸ್ಪಾರ್ಕ್ಸ್ ಸಾಹೇಬರನ್ನು ಬಹಳವಾಗಿ ಕೊಂಡಾಡುತ್ತಾ ಇದಾರೆ. ಮಾರನೆ ಬೆಳಗ್ಗೆ ಹೊಲಗೆ ಹೋಗಿದ್ದರು. ಅಲ್ಲಿ ರೈತರಿಗೂ ಬೆಸ್ತರಿಗೂ ೧೦—೧೨ ವರ್ಷಗಳಿಂದ ಒಂದು ವ್ಯಾಜ್ಯವಿದೆ. ಅದೇನಂದರೆ—ಒಂದು ಮಾರಿಯ ಗುಡಿಯಲ್ಲಿ ಬೆಸ್ತರು ಬಹುಕಾಲದಿಂದ(?) ಪೂಜಾರಿಗಳಾಗಿದ್ದರು. ಈಗ ಅದನ್ನು ರೈತರು ತಾವೇ ಅದಕ್ಕೆ ಪೂಜಾರಿಗಳೆಂದು ಹೇಳಿಕೊಂಡು ವ್ಯಾಜ್ಯವಾಗಿ ಬಹು ದಿನಗಳಿಂದ ಪೂಜೆ ನಿಂತಿರುವದು ಮತ್ತು ಬೆಸ್ತರಾಗಲಿ ರೈತರಾಗಲಿ ಊರಲ್ಲಿ ಮದುವೆ ಮಾಡಿಕೊಂಡು ವಾದ್ಯದೊಂದಿಗೆ ಅವರ ಬೀದಿಗೆ ಇವರು ಹೋಗಬಾರದು. ಇವರ ಬೀದಿಗೆ ಅವರು ಬರಬಾರದು. ಈ ವ್ಯಾಜ್ಯ ಬಗೆಹರಿಸಿ ಊರಲ್ಲಿ ಮದುವೆ ಮಾಡುವಾಗ್ಯೆ ಲೈಸೆನ್ಸು ಕೊಡಿಸಬೇಕೆಂದು ಕೇಳಿಕೊಂಡರು. ಈಗ ಈ ಊರಲ್ಲಿ ಯಾರೂ ಮದುವೆ ಮಾಡುವದಿಲ್ಲ. ಎಲ್ಲರೂ ಬೇರೆ ಗ್ರಾಮದಲ್ಲಿ ಮಾಡಿಕೊಳ್ಳುತ್ತಾರೆ. ಈ ಹಳೇ ವ್ಯಾಜ್ಯವನ್ನು ಸಾಹೇಬರು ನೋಡಿ, ಬೆಸ್ತರು ಒಂದು ಕಡೆ ರೈತರು ಒಂದು ಕಡೆ ಮನೆಗಳನ್ನು ಕಟ್ಟಿಕೊಳ್ಳಿರೆಂದು ಅವರಿಗೆ ಹೇಳಿ ಬಂದರು. ಅದು ಇನ್ನೂ ಸರಿಯಾಗಿ ವ್ಯವಸ್ಥೆಯಾಗಿಲ್ಲ. ರೈತರೂ ಬೆಸ್ತರೂ ಎರಡು ಕಡೆಯವರೂ ಅಸಮಸ್ತರಾಗಿದಾರೆ. ಇವರು ಹಿಂದೆ ನಡಿಸಿದ ವ್ಯಾಜ್ಯದಿಂದ ಸಾವಿರಾರು ರೂಪಾಯಿಗಳನ್ನು ಕಳೆದುಕೊಂಡರೂ ವ್ಯಾಜ್ಯ ಹರಿಯಲಿಲ್ಲ. ಸಾಹೇಬರು ಯಾವ ಹುಕುಂ ಕೊಡುವರೋ ಗೊತ್ತಿಲ್ಲ. ಆ ದಿನ ಸಾಯಂಕಾಲ ಪೋಲೀಸ್ ಆಫೀಸನ್ನೂ, ಇಬ್ಬರು ವೈದಿಗಳನ್ನೂ ನೋಡಿಕೊಂಡು ಹೊಲಗೇರಿ, ಕೆಲವು ಜೋಪಡಿ ಮತ್ತು ರೈಲ್ ಸ್ಟೇಷನ್‌ಗಳನ್ನು ನೋಡಿ ಬಂದು, ಭಾನುವಾರ ಕೆಟ್ಟಹಳ್ಳಿ ಕಡೆಗೆ ದಯಮಾಡಿಸಿದರು.—ಇಲ್ಲಿ ೩—೪ ವರ್ಷಗಳಿಂದಲೂ ಸಬ್ ರಿಜಿಸ್ಟ್ರಾರಾಗಿದ್ದ ದೊರಸಾಮಯ್ಯಂಗಾರ್ರು ಬೇರೆ ಊರಿಗೆ ವರ್ಗವಾದದ್ದು ಅನೇಕರಿಗೆ ತುಂಬಾ ವ್ಯಸನವಾಗಿದೆ. ಅವರು ಬಹು ಸಾಧುಗಳೂ, ನಿಗರ್ವಶಿರೋಮಣಿಗಳೂ, ಬಹು ಸತ್ಯವಾಗಿ ತಮ್ಮ ಕೆಲಸ ನಡಿಸುವವರೂ, ಲಂಚ ರುಶುವತ್ತನ್ನು ಕಣ್ಣಿನಿಂದಲೂ ನೋಡದವರೂ ಆಗಿದ್ದರು. ಇಂಥವರು ಎಲ್ಲಿ ಹೋದರೂ ದೇವರ ದಯೆಕ್ಕೂ ಮನುಷ್ಯರ ಪ್ರೀತಿ ಗೌರವಗಳಿಗೂ ಪಾತ್ರರಾಗುತ್ತಾರೆ. ಅವರ ಕಾಲದಲ್ಲಿ ರಿಜಿಸ್ಟರಿಗೆ ಬಂದ ಜನರು ಯಾವ ಕಷ್ಟವನ್ನೂ ಹೊಂದದೆ ಸುಲಭವಾಗಿ ತಮ್ಮ ಕೆಲಸಗಳನ್ನು ಮಾಡಿಸಿಕೊಂಡು ಹೋದರು. ಇನ್ನು ಮೇಲೆ ಯಾರು ಬರುತ್ತಾರೋ ಗೊತ್ತಿಲ್ಲ.—ಕೆಲವು ದಿನಗಳ ಹಿಂದೆ ಇಲ್ಲಿಗೆ ಮ॥ ಭಾಭಾ ಸಾಹೇಬರ ಅಸಿಸ್ಟೆಂಟ್ ಮ॥ ವೆಂಕಟಸ್ವಾಮಿ ನಾಯುಡರು ದಯಮಾಡಿಸಿದ್ದರು. ಇಲ್ಲಿ ಸುತ್ತುಮುತ್ತು ಇರುವ ಸ್ಕೂಲುಗಳನ್ನು ಪರೀಕ್ಷಿಸಿಕೊಂಡು, ಮಂಡ್ಯದ ಕನ್ನಡ ಗೌರ್ನಮೆಂಟ್ ಸ್ಕೂಲನ್ನು ನೋಡಿ, ಈಗ ೨೦ ಹುಡುಗರ ವರಿಗೂ ಬರುತ್ತಾರಾದ್ದರಿಂದ ಸ್ಕೂಲನ್ನು ಮುಚ್ಚಬೇಕಾದ ಅವಶ್ಯವಿಲ್ಲವೆಂದು ಹೇಳಿದರು. ಮಾಸ್ತರುಗಳ ಸಂಬಳದ ವಿಚಾರ ಎತ್ತಲು ಅದಕ್ಕೆ ಸಾಹೇಬರು ಈಗಿನ ಏಳು ರೂಪಾಯಿ ಸಂಬಳದವರಿಗೆಲ್ಲಾ ಹತ್ತು ರೂಪಾಯಿ ಆಗುತ್ತದೆಂದು ತಿಳಿಸಿ ಹೋದರು. ಆದರೆ ಮಿಕ್ಕಾದ ಹತ್ತು ಹನ್ನೆರಡು ರೂಪಾಯಿಗಳನ್ನು ಪಡೆಯುವ ಮಾಸ್ತರಿಗೆ ಅವರು ಅನೇಕ ವರ್ಷಗಳಿಂದ ಇಜಾಫೆ ಇಲ್ಲದೆ ಇರುವದು ತುಂಬಾ ವ್ಯಸನವಾಗಿದೆ. ಅವರಿಗೂ ಸಹ ಸ್ವಲ್ಪ ಇಜಾಫೆ ಕೊಡುವ ಹಾಗೆ ಮ॥ ವೆಂಕಟಸ್ವಾಮಿ ನಾಯುಡರವರು ಗೌರ್ನಮೆಂಟಿಗೆ ಶಿಫಾರಸು ಮಾಡಿದರೆ ಮಾಸ್ತರುಗಳು ಅವರ ಕರುಣೆಯನ್ನು ಎಂದೆಂದಿಗೂ ಮರೆಯಲಾರರೆಂದು ನಂಬುತ್ತೇನೆ. ಈ ವಿಷಯದಲ್ಲಿ ಮೇಲ್ಪಟ್ಟ ಅಧಿಕಾರಿಗಳು ಗಮನಕೊಟ್ಟರೆ ಉತ್ತಮ.

ಜರೂರಾಗಿ ಬೇಕಾಗಿದೆ.

4

೧೦೦ ಜನ ಏಜೆಂಟರು. ಸಂಬಳ ಮಾಹೆಯಾನ ೨೦ ರೂಪಾಯಿ ಮೊದಲ್ಗೊಂಡು ೪೦ ರೂಪಾಯಿ ವರಿಗೆ ಕೊಡಲ್ಪಡುತ್ತೆ. ಅಪೇಕ್ಷೆಯುಳ್ಳವರು ಅರ್ಧಾಣೆ ಸ್ಟಾಂಪುವಿಸಿ ಅರ್ಜಿ ಬರೆದುಕೊಳ್ಳತಕ್ಕದ್ದು.

ವಿಳಾಸ —ಕಂಟ್ರೋಲರ್, ಯೂನಿವರ್ಸಲ್ ಪ್ರಾವಿಡೆಂಟ್ ಸಂಘ, ಬಸವಾಪುರ, ಬೆಂಗಳೂರು ಸಿಟಿ.

ಹಾಸನದ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ ೧೯೦೪—೫ನೆ ಇಸವಿ ಸಿವಿಲ್ ಸೂಟ್ ನಂಬರು ೫೨೩.

ವಾದಿಗಳು:—ಹಾಸನದ ತಾಲ್ಲೂಕು ಆಲೂರಿನಲ್ಲಿರುವ ೧ನೆ ನಂಜುಂಡಶೆಟ್ಟರ ಮಕ್ಕಳು ಪುರಿಬಸಪ್ಪಸೆಟ್ಟರು; ೨ನೆ ಪಟೇಲ್ ರಾಜೇಗೌಡನ ಮಗ ಪುಟ್ಟಸ್ವಾಮಿ ಗೌಡ.

ಪ್ರತಿವಾದಿಗಳು:—ಮಂಜರಾಬಾದು ತಾಲ್ಲೂಕು ಬೆಳಗೋಡು ಹೊಸಪೇಟೆಯಲ್ಲಿರುವ ಆಲೂರು ಕಪನಿಶೆಟ್ಟರ ಮಗ ನಂಜಶೆಟ್ಟಿ; ೨ನೆ ಆಲೂರಿನಲ್ಲಿರುವ ದ್ಯಾವೇಗೌಡನ ಮಗ ರವಿಸ್ವ್ಯಾ ಜವಾನ ದೊಡ್ಡೇ ಗೌಡ ಉರುಫ್ ದೊಡ್ಡ ನಾಯಕ.

ಸಿವಲ್ ಪ್ರೊಸಿಡ್ಯೂರು ಕೋಡು ೩೦ನೆ ಸೆಕ್ಷನ್ ಮೇರಿಗೆ ಇದರಿಂದ ಸಮಸ್ತ ಶಿವಾಚಾರದ ಮತಸ್ಥರಿಗೆಲ್ಲಾ ತಿಳಿಯಪಡಿಸುವದೇನೆಂದರೆ—

ಆಲೂರು ಕಸಬಾದಲ್ಲಿರುವ ಮಲ್ಲೇಶ್ವರ ದೇವರ ಪೂಜಾ ನಡಿಸಲು ವಿಚಾರಣೆಕರ್ತರಾಗಿ ವಾದೀರು ಸದರಿ ದೇವರ ಪೂಜೆ ಉದ್ದಿಶ್ಯ ೧ನೆ ಪ್ರತಿವಾದಿಗೆ ಕೊಟ್ಟದ್ದ ೨೫೨—೦—೦ ರೂಪಾಯಿಗಳನ್ನು ವಸೂಲ್ಮಾಡಿಕೊಳ್ಳುವ ಬಗ್ಗೆ ಮೇಲ್ಕಂಡ ದಾವಾ ದಾಖಲ್ ಮಾಡಿರುತ್ತಾರೆ. ಇದರಲ್ಲಿ ಹಕ್ಕು ಉಳ್ಳವರು ಈ ಕೋರ್ಟಿನ ರೂಬರೂಬು ಸನ್ ೧೯೦೫ನೆ ಇಸವಿ ಫೆಬ್ರುವರಿ ೨೭ನೆ ತಾರೀಖು ದಿವಿ ೧೧ ಗಂಟೆಗೆ ಹಾಜರಾಗಿ ತಿಳಿಸತಕ್ಕದ್ದಿದೆ.

ತಾ॥ ೧೪ನೆ ಫೆಬ್ರುವರಿ ೧೯೦೫ನೆ ಇಸವಿ.

C B. Seshagiri Rao,
Subordinate Judge

ಜ್ವರಹರಿ. 15



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೀ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೬ ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆನೋವು ಉಬ್ಬಸ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕೊಡಗಿನ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯವರ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮೈಸೂರು ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಬೇನೆ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

೧೯೦೫ನೆ ಇಸವಿ ಮೆಟ್ರಿಕ್ಯುಲೇಷನ್ ಕನ್ನಡ ಟೆಕ್ಸ್ಟಿನ ನೋಟ್ಸು.

1

ಕ್ರಯ, ೧ ರೂಪಾಯಿ. ಡಿಸ್ಕೌಂಟು ೧೦ಕ್ಕೆ ೧

ಉಪೇಕ್ಷಿಸತಕ್ಕ ನೋಟ್ಸು ಅಲ್ಲ. ಪ್ರತ್ಯೇಕ್ಷತಗಳೂ ಹಣ ಕಟ್ಟಿಸಿದೆ. ಫೆಬ್ರುವರಿ ೧೫ಕ್ಕೆ ಬಂದಿತ ಸಿದ್ಧವಾಗುತ್ತೆ.

N. R. Venkata Subbacharya,
Subódha Granthálaya, Mysore

ಸುಲಭಕ್ರಯ: ಸುಗಂಧದ್ರವ್ಯಗಳು.

12

ಅಂಬರ್ ಕಡ್ಡಿ ಸೇರು ೧ಕ್ಕೆ	೫—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	೨—೮—೦
ಕುಸುಗು ಕಡ್ಡಿ ,, ೧ಕ್ಕೆ	೨—೫—೦
ಮಸಾಲಾ ಕಡ್ಡಿ ,, ೧ಕ್ಕೆ	೦—೧೨—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ	೦—೧—೬
ಹಸೀ ಗಂಧ ತೋಲ ೧ಕ್ಕೆ	೨—೦—೦
ಡಿಟೋ	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೩—೦
ತಾಂಬೂಲ ವಿಹಾರಿಣಿ ಡಬ್ಬಿ ೧ಕ್ಕೆ	೦—೪—೦
ಕೇಶವಿಲಾಸಿನಿ ಶೀಶೆ ೧ಕ್ಕೆ	೦—೬—೦
ಟಾಯಿಲೆಟ್ ಪೌಡರ್ ಡಬ್ಬಿ ೧ಕ್ಕೆ	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ತಂಬಾಕ್ ಷೋಕ್ ಡಬ್ಬಿ ೧ಕ್ಕೆ	೦—೨—೦
ಶೈವವೈಷ್ಣವ ಶಾಸ್ತ್ರೀಯ ದಶಾಂಗ ಸೇರು ೧ಕ್ಕೆ	೦—೧೨—೦
ಘಿತ್ತಾ ತೋಲ ೧ಕ್ಕೆ	೨—೦—೦
ಡಿಟೋ	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ —ಟಿ ಎಲ್. ಉಪಾಧ್ಯಾಯ ಅಂಡ್ ಕೋ ಸುಗಂಧಕಾರಿ, ಮೈಸೂರು.

ಹೋಮೋಸಿಯಾ

ಕಷ್ಟ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ದೇವರಾಣೆಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡನೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮುತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಮುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇವಿಸಿಕೊಳ್ಳಬಲ್ಲದು ಡಬ್ಬಿಗಳಲ್ಲಿ ಡಜನ್ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಲೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪನಿ. ೨೭ ಸೆಕೆಂಡು ಬೀಚ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

3—2—1905 ರಿಂದ 10—2—1905 ರ ವರೆಗೆ.

ಸ್ಥಳ.	ಪ್ಲೇಗ್ ಹಗಲಿ ಪಟ್ಟ.	ಪ್ಲೇಗ್ ಸತ್ತ ಪಟ್ಟ.	ಹೋದವರ್ಷ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	38	27	84	36
ಮೈಸೂರು ,,	10	8	5	3
ಬೆಂಗಳೂರು ಡಿಸ್ಟ್ರಿಕ್ಟ್	62	53	158	131
ಮೈಸೂರು ,,	44	40	89	72
ಕೋಲಾರ್ ,,	47	31	83	63
ಕೋಲಾರ್ ಚಿನ್ನದ ಗಣಿಗಳು	22	19	16	12
ತುಂಕೂರು ಡಿಸ್ಟ್ರಿಕ್ಟ್	57	50	17	17
ಹಾಸನ ,,	6	6	16	12
ಚಿತ್ರದುರ್ಗ ,,	27	14	26	18
ಕಡೂರ್ ,,	18	10	46	40
ಶಿವಮೊಗ್ಗ ,,	5	3	41	31
ಒಟ್ಟು.	336	261	581	463

ಶಾಲೀವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರದ ಮಾಘ ಬಹುಳ ಚೌತಿ ಗುರುವಾರದಿಂದ ಮಾಘ ಬಹುಳ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಫೆಬ್ರುವರಿ ಮತ್ತು ಮಾರ್ಚಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶೇದಿ ಮಾ ವಾಸ
23	ಗುರು †	ಚೌತಿ	22-30	ಚಿತ್ತಾ	51 30	12
24	ಶುಕ್ರ *	ಪಂಚಮಿ	17 2	ಸ್ವಾತಿ	47-50	13
25	ಶನಿವಾ ‡	ಷಷ್ಠಿ	11-31	ವಿ	11-28	14
26	ರವಿವಾ ;;	ಸಪ್ತಮಿ	6 50	ಅ	12 12	15
27	ಚಂದ್ರ ¶	ಅಷ್ಟಮಿ	2 45	ಜ್ಯೇ	10-29	16
28	ಕುಜ	ನವಮಿ .	0-3	ಉಷರಿ	58 38	17
1	ಬುಧ .	ಏಕಾದಶಿ	57 24	ಪೂಷಾ	10-28	18

† ತಿಥಿದ್ವಯಂ. * ಷಷ್ಠೀತಿಥಿ ‡ ಮಹಾವ್ಯತಿ. ;; ಮೃತ್ಯುಯೋಗ. ¶ ಮಾರೀಮುದ ಸ್ಮಾರ್ತ ಏಕಾದಶಿ.

ಪೇಟೆ ಧಾರಣೆ.

ದಿನಸು.	ಮೈಸೂರು:	ಬೆಂಗಳೂರು.
ಕಡ್ಲೇ ಅಕ್ಕಿ ಪಲ್ಲ ೧ಕ್ಕೆ	ರೂ. ೧೦—೮—೦	೧೦—೮—೦
ಕೆಂಬೂತಿ ಅಕ್ಕಿ ಅವಲ್	೧೦—೪—೦	೧೧—೦—೦
,, ಮಧ್ಯಮ	೯—೧೨—೦	೧೦—೮—೦
ದಪ್ಪ ಅಕ್ಕಿ	೯—೮—೦	೧೧—೦—೦
ಸಣ್ಣಕ್ಕಿ ಅವಲ	೧೨—೦—೦	೧೨—೮—೦
,, ಮಧ್ಯಮ	೧೧ ೮—೦	೧೦—೮—೦
ತೊಗರೀ ಬೇಳೆ ಪಲ್ಲ ೧ಕ್ಕೆ	೧೦—೮—೦	೧೧—೦—೦
,, ಮಧ್ಯಮ	೧೦—೦—೦	೧೦—೦—೦
ಹೈರ ರಾಗಿ ಪಲ್ಲ ೧ಕ್ಕೆ	೪—೧೨—೦	೫—೫—೦
ಕಾರಾಗಿ	೪—೧—೦	೫—೦—೦
ಜೋಳ	೪—೧೨—೦	೭—೦—೦
ಹಲಸಂದೆ ಪಲ್ಲ ೧ಕ್ಕೆ	೮—೧೨—೦	೮—೮—೦
ಬಿಳೀ ಅವರೆ	೬ ೧೨ ೦	೭—೦—೦
ಹೆಸರು	೯—೧೨—೦	೯—೦—೦
ಉದ್ದು	೮—೧೪—೦	೯—೦—೦
ಕಡಲೆ	೯—೦—೦	೯—೦—೦
ಎಳ್ಳು	೧೬ ೦ ೦	೧೨—೮—೧೦
ಹುರುಳಿ	೮—೦ ೦	೭—೧೨—೦
ಹಳ್ಳು ೧೨೭ ಸೇರಿಗೆ	೯—೮—೦	೬—೪—೫
ಸೀಗೇಕಾಯಿ ಮಣ ೧ಕ್ಕೆ	೨—೪—೦	೧—೧೨—೦
ಮೆಣಸಿನಕಾಯಿ	೪—೮—೦	೭—೮—೦
,, ಮಧ್ಯಮ	೩—೧೨—೦	೩—೦—೦
ಬೆಲ್ಲ ದೊಡ್ಡ ಅಚ್ಚು	೭—೪—೦	ಮ ೧—೧೪—೦
ಒಳ್ಳೆಣ್ಣೆ ಮಣ ೧ಕ್ಕೆ	೪—೦ ೦	೩—೧೨—೦
ಹರಳೆಣ್ಣೆ ,,	೪—೦—೦	೩—೪—೦
ಕೊತ್ತುಂಬರಿ ಪಲ್ಲ ೧ಕ್ಕೆ	೬—೦—೦	೬—೧೦—೮
ಉಪ್ಪು ,,	೮—೦—೦	೮—೫—೪
ಹುಣಸೇ ಹಣ್ಣು	೧ ೪—೦	೦—೧೨—೦
,, ಹಳೇದು	೦—೧೪—೦	೦—೧೦—೦
ಹುಲ್ಲು	೧೨—೦—೦	೧೦—೨—೦
ಸೀಮೆಯೆಂಡೆ ಪಟ್ಟಿ ೧ಕ್ಕೆ	೫—೩—೦	೪—೨—೦
ತೆಂಗಿನಕಾಯಿ ೧೦೦ ಕ್ಕೆ	೫—೦—೦	೩—೧೨—೦
ಬಿಳಲೇಕಾಯಿ ಮಣ ೧ಕ್ಕೆ	೧—೦—೦	೦—೭—೦
ಅಂಬ್ಯಾಳದಕಾಯಿ ಮಣ ೧ಕ್ಕೆ	೦—೧೪—೦	೦—೧೦—೦
ಚಿನ್ನ (ಪವನ್) ತೊಂಡು	೧೫—೮—೦	೧೫—೩—೬
,, ,, ಪಸಿಮೆ	೧೫ ೧೦—೦	೧೫—೧೦—೦
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೨೪—೩—೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೨—೦—೦	೭೬—೦—೦

Printed and Published by the Rev H Spencer, the Proprietor and Manager, Wesleyan Mission Press, Mysore 23 2 1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ | ಮೈಸೂರು—ಸನ್ ೧೯೦೫ ನೇ ಇಸವಿ ಮಾರ್ಚಿ ತಾರೀಖು ೨ ನೇ ಗುರುವಾರ. | ಸಂಚಿಕೆ ೩೯

ಶ್ರೀ ತಾಂಬೂಲ.

15

ಓದಿ ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯುವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳುಳ್ಳವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ —

ಶಿವನಹಳ್ಳಿ ಟವರ್, ಯಂ. ಗೋವಿಂದಶೆಟ್ಟಿ,

ಕೋಲಾರ ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟಿಷನರ್.

P. SUBBAROY'S
World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

6

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ತಿಂದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಅಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಒರಳು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೩ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು ಕ್ರಯ — ೧೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ರಿಂದ ೬ ಕ್ಕೆ ವಿ ಪಿ. ಛಾಂಗಿ ಚಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮ್ಮದ್ ಸಮಾದಾನಿ

ಛಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಛಳಿ ಜ್ವರಗಳು ನಿವಾರಣೆಯಾಗುತ್ತೆ ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರ ನಸೆಗೆ ವಿಶೇಷ ಪ್ರಯೋಜನವಾಗಿರುವುದು.—ಪ್ರತಾಪ್ರಾವ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ — ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಸ್ಟೈಲರ್.

Apply to —P. SUBBAROY,
Porto Novo, South Arcot.

ವಿಳಾಸ.—ಪಿ. ಸುಬ್ಬರಾಯ್,

ಪೋರ್ಟೋನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ.

ಜೀರಿಗ ರಸಾಯನ.

4

ಇದು ಶರೀರದ ಅವಯವಗಳ ವ್ಯಾಪಾರಗಳನ್ನು ಸ್ವಭಾವವಾಗಿ ನಡಿಸುವ ಔಷಧ. ಪಿತ್ತವಿಕಾರಗಳನ್ನು ಗುಣಮಾಡುವುದರಲ್ಲಿ ನಂಬಿಕೆಯಾದದ್ದು. ಅದ್ಭುತಶಕ್ತಿಯುಳ್ಳ ಮೂಲಿಕೆಗಳಿಂದ ತಯಾರಿಸಿರುವವು. ಅಜೀರ್ಣ ಮಲಬದ್ಧತೆ ಸಕಲ ವಿಧವಾದ ಕೆಮ್ಮುಗಳು ಕಫಾ ವಾಂತಿ ನಿಲ್ಲಿಸಿ ಎಂಥ ಪಿತ್ತವಿದ್ದರೂ ಗುಣಮಾಡುತ್ತೆ. ಡಬ್ಬಿ ೧ಕ್ಕೆ ಕ್ರಯ ೬ ಆಣೆ

ವಿಳಾಸ —ಸಿ ಪಿ ಅಂಡ್ ಕೊ, ಬೆಂಗಳೂರು ಸಿಟಿ

೧೯೦೫ನೇ ವರ್ಷದ ಬೋರ್ಡ ಸೆಕೆಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

10

ಸಿದ್ಧವಾಗಿದೆ. ಡಿಸ್ಕೌಂಟು —೧೦ಕ್ಕೆ ೧ ೫೦ಕ್ಕೆ ೭ ೧೦೦ಕ್ಕೆ ೨೦ ಪ್ರಶ್ನೋತ್ತರಸಹಿತ ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ ಪುಸ್ತಕಾಪೇಕ್ಷಿಗಳಿಗೆ ತಕ್ಷಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಏರ್ಪಾಡುಮಾಡಿದೆ.

ಬಾಲಬೋಧ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೭ನೇ ಸಲ ತಿದ್ದಿ ಮುದ್ರಿಸಿದೆ ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ—೨ ಆಣೆ. ಪೂರ್ವಮುದ್ರಿತ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಆವಾಗ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನು ಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೭ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧ ಆಣೆ.

ವಿಳಾಸ —ಮೈಸೂರಲ್ಲಿ ದಿ ಜೆನರಲ್ ಏಜನ್ಸಿ ಸಿ ಎಲ್. ಎಸ. ಬುಕ್ ಡಿಪೋ, ಕೆ ನರಸಿಂಹಯ್ಯ ಅಂಡ್ ಕೋ. ಬೆಂಗಳೂರಲ್ಲಿ ಜಿ. ಗಣಪ್ಪ ಅಂಡ್ ಕೊ

ಯರ್ ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ ಮೈಸೂರು.

ಸನ್ ೧೯೦೫ನೇ ಇಸವಿಯ

10

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಬುಕ್‌ಬಾಪ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪ್ ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯ. ಇವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕ್ಲಾತ್ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ

ಎ. ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರ್ ದೊಡ್ಡಸೈಜು ೬ ಆ.
ಎಫ್ „ „ ೪ ಎಚ್ „ „ ೭ „
ಬಿ ಮುಚ್ಚಳದ್ದು „ ೫ ಡಿ ಮುಚ್ಚಳದ್ದು „ ೮ „

ಪೋಸ್ಟ್ ಚಾರ್ಜು ಬೇರೆ. ಒಂದೇ ಸಮೂನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ —ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಅಗ್ಗ ! ಅಗ್ಗ !! ಬಹಳ ಅಗ್ಗ !!!

4

ಇಂಥಾ ಸಮಯ. ಮುಂದೆ ಸಿಗಲಿಕ್ಕಿಲ್ಲಾ.

ರಾಸ್ಕೋಪ ಲಿವರ ಸಿಸ್ಟಂ ವಾಚ.

ಇದು ಬಹಳ ಮಜಬೂತ್ ಇದ್ದು ಕುದುರೆಯ ಮೇಲೆ ಸವಾರಿ ಮಾಡಿದರೂ ಕೂಡ ಬಂದ ಆಗುವದಿಲ್ಲ. ಇಂಥಾ ವಾಚನ್ನು ನಾವು ಬಡಜನರಿಗೂ ಕೂಡ ಸೋಯಾಗಬೇಕೆಂಬ ಇರಾದೆಯಿಂದ ೧೯೦೫ ನೇ ಆಗಸ್ಟ ಅಖೈರವರಿಗೆ ೧೦ ರೂಪಾಯಿ ಕಿಮ್ಮತ್ತು ಇದ್ದದ್ದು ೫ ರೂಪಾಯಿಗೆ ಕೊಡುತ್ತೇವೆ. ಗ್ಯಾರಂಟಿ ೫ ವರ್ಷ. ಪ್ರತಿ ವಾಚಿನ ಸಂಗಡ ಸ್ಪ್ರಿಂಗ್, ಪೆಟ್ಟಿಗೆ, ಚನ್ನಿ, ಹೀಗೆ ೩ ಸಾಮಾನು ಕಳುಹಿಸುತ್ತೇವೆ. ಟಪ್ಪಾಲ್ ಖರ್ಚು ಬೇರೆ.

ವಿಳಾಸ:—ಜೀ. ಯಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರ ಕಾನಡಾ.

WESLEYAN MISSION PRESS, MYSORE.
ಮೈಸೂರು ವೆಸ್ಲೆಯನ್ ಮಿಷನ್ ಪ್ರೆಸ್.

6

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಚಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂಸ್ಟೈನ್ ಮಿನಿಯನ್, ಪೈಕ್, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವು ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ—ಮ್ಯಾನೇಜರ್,

ಮಿಷನ್ ಪ್ರೆಸ್, ಮೈಸೂರು.

ನಿಮ್ಮ ತಲೆಯ ಮೇಲಿರುವದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

16

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಪಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದವು ಚನ್ನಾಗಿಲ್ಲದವು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

:o:

ಸನ್ ೧೯೦೫ ನೇ ಇಸವಿ ಮಾರ್ಚಿ ತಾ॥ ೨ ನೇ ಗುರುವಾರ.

ಪ್ರಿನ್ಸ್ ಆಫ್ ವೇಲ್ಸ್ ರವರ ಆಗಮನವು.

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರು ತಮ್ಮ ಜ್ಯೇಷ್ಠಪುತ್ರರೂ ಯುವರಾಜರೂ ಆದ ಪ್ರಿನ್ಸ್ ಆಫ್ ವೇಲ್ಸ್ ರನ್ನು ಅವರ ಪತ್ನಿಯರ ಸಹಿತ ಹಿಂದುಸ್ಥಾನಕ್ಕೆ ಕಳುಹಿಸಿಕೊಡುವುದಾಗಿ ಅಪ್ಪಣೆ ಕೊಡಿಸಿದರೆಂದು ಸರ್ಕಾರಿಯಾಗಿ ತಿಳಿದು ಬಂದಿದೆ. ಪ್ರಿನ್ಸ್ ಆಫ್ ವೇಲ್ಸ್ ರವರೂ ಅವರ ಪತ್ನೀರವರೂ ಈ ವರುಷ ನವಂಬರ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ದಯಮಾಡಿ, ೧೯೦೬ನೇ ಮಾರ್ಚಿ ತನಕ ಇಲ್ಲಿಯೇ ಇರುವವರಾಗಿದಾರೆಂದು ನಿರೀಕ್ಷಿಸಲ್ಪಟ್ಟಿದೆ. ಯುವರಾಜರವರು ಸಾಧ್ಯವಾದ ಮಟ್ಟಿಗೂ ಈ ರಾಷ್ಟ್ರದ ಮುಖ್ಯ ಮುಖ್ಯ ಪಟ್ಟಣಗಳಿಗೂ ದೊಡ್ಡ ದೊಡ್ಡ ದೇಶೀಯ ಸಂಸ್ಥಾನಗಳಿಗೂ ದಯಮಾಡಿ, ನೋಡಿಕೊಂಡು ಹೋಗಬೇಕೆಂಬ ಅಭಿಪ್ರಾಯವುಳ್ಳವರಾಗಿದಾರೆ. ಸಾರ್ವಭೌಮರ ಆಶ್ರಯಕ್ಕೆ ಸೇರಿದ ರಾಜರೇ ಮೊದಲಾದ ಈ ರಾಷ್ಟ್ರದ ಪ್ರಜಾಪಾಲಕರನ್ನೂ ಮುಖ್ಯ ಮುಖ್ಯರಾದ ದೊಡ್ಡ ಮನುಷ್ಯರುಗಳನ್ನೂ ಪ್ರಿನ್ಸ್ ಆಫ್ ವೇಲ್ಸ್ ರವರು ಅಲ್ಲಿ ನಡೆಯುವ ದರ್ಬಾರುಗಳಲ್ಲಿ ಕಂಡು ಪರಿಚಯಮಾಡಿಕೊಳ್ಳುವರು. ಇಂಥಾ ಭೇಟಿಗಳೂ ಮರು ಭೇಟಿಗಳೂ ಆಗುವಾಗ್ಗೆ ಪರಸ್ಪರ ಬಿಲ್ಲತ್ತು ಮುಂತಾದ್ದನ್ನು ಒಪ್ಪಿಸಬೇಕಾದ ಅಗತ್ಯವೇನೂ ಇಲ್ಲವೆಂದು ತೀರ್ಮಾನಿಸಿರುತ್ತಾರೆ.

ಯುವರಾಜರವರು ಈ ರಾಷ್ಟ್ರಕ್ಕೆ ದಯಮಾಡುವುದು ಇದೇ ಮೊದಲು. ಆದಕಾರಣ ಹಿಂದುಸ್ಥಾನದವರೆಲ್ಲಾ ಅವರನ್ನು ಅತ್ಯಂತ ಆದರಪೂರ್ವಕವಾಗಿಯೂ ವಿಶೇಷ ಮರ್ಯಾದೆಗಳಿಂದಲೂ ಎಲ್ಲಾ ಕಡೆಗಳಲ್ಲೂ ಸ್ವೀಕರಿಸಿ ಸತ್ಕರಿಸುತ್ತಾರೆನ್ನುವುದಕ್ಕೆ ಸಂದೇಹವಿಲ್ಲ

ಕೋಲಾರದ ಚಿನ್ನದಗಣಿಗಳು.

ಕೋಲಾರದ ಚಿನ್ನದ ಗಣಿಗಳಲ್ಲಿ ಚಿನ್ನವು ಇನ್ನು ಬಹುಕಾಲದವರಿಗೂ ದೊರಕಲಾರದೆಂದು ಈಗ್ಗೆ ಕೆಲವು ಕಾಲದಿಂದಲೂ ಜನಗಳು ಹೇಳಿಕೊಳ್ಳುತ್ತಿರುವರು. ಕಳೆದ ಸಂವತ್ಸರದ ಕಡೆಯಲ್ಲಿ ಎರಡು ಗಣಿಗಳ ಕಂಪೆನಿಯವರು ತಮ್ಮ ಗಣಿ ಕೆಲಸವನ್ನು ನಿಲ್ಲಿಸಿಬಿಟ್ಟರು. ಅವರು ಈ ದೇಶದ ದಕ್ಷಿಣಭಾಗದಲ್ಲಿ ಬೇರೆ ಗಣಿಗಳನ್ನು ಹುಡುಕುತ್ತಿದ್ದಾರೆಂದು ವದಂತಿಯಿದೆ. ಆದಾಯವ್ಯಯಗಳ ವಿಷಯದಲ್ಲಿ ಕೋಲಾರದ ಚಿನ್ನದಗಣಿಗಳನ್ನೂ ಭೂಮಂಡಲದ ಇತರ ಭಾಗಗಳಲ್ಲಿರುವ ಚಿನ್ನದ ಗಣಿಗಳನ್ನೂ ಹೋಲಿಸಿ ನೋಡಿದರೆ, ಕೋಲಾರದ ಗಣಿಗಳ ಸಾಹುಕಾರರಿಗೆ ದೊರಕುವ ಲಾಭವೇ ಹೆಚ್ಚೆಂದು ತಿಳಿದು ಬಂದಿರುವ ವಿಷಯವು ಕೆಲವು ಪತ್ರಿಕೆಗಳ ಮುಖಾಂತರ ಗೊತ್ತಾಗಿರುತ್ತದೆ. ಹೀಗಿರುವಲ್ಲಿ ಈ ಗಣಿಗಳ ಕೆಲಸವು ನಿಂತುಹೋದಮೇಲೆ ಆದರೆ ನಮ್ಮ ಮೈಸೂರು ಸರ್ಕಾರದ ರಾಜಾದಾಯವು ಬಹು ನಷ್ಟಕ್ಕೆ ಗುರಿಯಾಗುವುದೆಂದು ಹೇಳಬೇಕಾದುದಿಲ್ಲ. ಹಾಗಾದರೆ ಈ ಗಣಿಗಳ ಕೆಲಸವು ನಿಂತುಹೋಗುವುದಕ್ಕೆ ಯಾವ ಕಾರಣವಿರಬಹುದೆಂದು ಪ್ರಶ್ನಿಸಿದಲ್ಲಿ, ನಾವು ಮುಂದೆ ಸೂಚಿಸುವ ಎರಡು ಕಾರಣಗಳಲ್ಲಿ ಯಾವುದಾದರೊಂದು ಕಾರಣವಿರಬೇಕೆಂದು ನಿಶ್ಚಯಿಸಬೇಕಾಗುತ್ತದೆ. ಅವು ಯಾವುವೆಂದರೆ—(೧) ಗಣಿಗಳಲ್ಲಿ ಚಿನ್ನವೆಲ್ಲಾ ಮುಗಿಯುತ್ತಾ ಬಂದಿರಬೇಕು; ಅಥವಾ (೨) ಇನ್ನೂ ಉಳಿದಿರುವ ಭಾಗಗಳಲ್ಲಿ ಗಣಿಯವರು ಕೆಲಸ ನಡಸುವುದಕ್ಕೆ ಮೈಸೂರು ಸರ್ಕಾರದವರು ಅವರಿಗೆ ಬೇಕಾಗುವ ಸೌಲಭ್ಯಗಳನ್ನು ಕಲ್ಪಿಸಿ ಕೊಡದೆ ಇರುವರು. ಗಣಿಯ ಕೆಲಸವನ್ನು ಪ್ರಾರಂಭಿಸದೆ ಇರುವ ಭೂಮಿಯು ಇನ್ನು ಎರಡು ಭಾಗದಷ್ಟು ಹೆಚ್ಚಾಗಿ ಉಳಿದಿದೆ ಎಂದು ಹೇಳುತ್ತಾರೆ.

ಪರಂತು ಕೆಲಸ ನಿಂತುಹೋಗಿರುವ ಆ ಎರಡು ಗಣಿಗಳಲ್ಲಾದರೋ ಆದಾಯವು ಎಂದಿಗೂ ಹೆಚ್ಚಾಗಿಯೇ ಇರಲಿಲ್ಲವೆಂದೂ, ಈಗ ಕೆಲಸ ನಡೆಯುತ್ತಿರುವ ಗಣಿಗಳಲ್ಲಿ ಯಾವಾಗಲೂ ನಿಯಮವಾಗಿ ಆದಾಯ ಬರುತ್ತಿದ್ದೆಂದೂ, ಇವುಗಳಲ್ಲಿ ಚಿನ್ನವು ಮುಗಿಯುವುದಕ್ಕೆ ಇನ್ನೂ ಅನೇಕ ವರ್ಷಗಳು ಹಿಡಿಯುವುವೆಂದೂ ಸಾಧಿಸುವರು. ಆದ ಕಾರಣ ಈ ಗಣಿಗಳ ಕೆಲಸವು ಶೀಘ್ರದಲ್ಲೇ ನಿಂತುಹೋಗಿ, ಸಾಹುಕಾರರಿಗೂ ಸರ್ಕಾರಕ್ಕೂ ಹೇರಳವಾದ ನಷ್ಟ ಉಂಟಾಗುವುದೆಂದು ಹೇಳುವದಕ್ಕೆ ಎಷ್ಟು ಮಾತ್ರವೂ ಅವಕಾಶವಿಲ್ಲ.

ಈ ವಿಷಯವಾಗಿ ಮದರಾಸ್ ಮೇಲ್ ಎಂಬ ಪತ್ರಿಕೆಯಲ್ಲಿ ಕಾಣಿಸುವ ಕೆಲವು ವಾರ್ತೆಗಳನ್ನು ಪರೀಕ್ಷಿಸಿದರೆ, ಮೈಸೂರು ಗವರ್ನಮೆಂಟಿನವರು ಉಳಿಸಿಟ್ಟುಕೊಂಡಿರುವ ಗಣಿಗಳ ಭೂಮಿಯನ್ನು ಕಂಪೆನಿಯವರಿಗೆ ಬಿಟ್ಟುಕೊಡುವ ವಿಷಯದಲ್ಲಿ ಬಹು ತಟಸ್ಥರಾಗಿದ್ದಾರೆಂಬ ನೋಪಾರೋಪಣೆಗೆ ನಮ್ಮ ಸರ್ಕಾರದವರು ಗುರಿಯಾಗಿರುತ್ತಾರೆಂದು ಕಾಣುತ್ತದೆ. ಆದರೂ ಕೂಡ ಈ ವಿಷಯದಲ್ಲಿ ಹೊಸದಾಗಿ ನಿಬಂಧನೆಗಳನ್ನು ಮಾಡಿ ಪ್ರಕಟಿಸಿದ್ದಾರೆಂದೂ ಇವು ಸಾಹುಕಾರರಿಗೆ ಅನುಕೂಲವಾಗಿವೆಯೆಂದೂ ಹೊರಪಟ್ಟಿರುವುದರಿಂದ ಇದುವರೆಗೂ ಗಣಿಗಳನ್ನು ತೋಡದೆ ಇರುವ ಸ್ಥಳಗಳಲ್ಲಿಯೂ ಈ ಚಿನ್ನದ ಗಣಿಗಳ ಕೆಲಸವು ಬಹು ಆಸಕ್ತಿಯಿಂದ ಪ್ರಾರಂಭವಾಗುವುದೆಂದು ನಂಬಿದ್ದೇವೆ. ಮತ್ತು ನಮ್ಮ ಸರ್ಕಾರದವರಿಗೆ ಈ ಗಣಿಗಳಿಂದ ರಾಜಾದಾಯವು ಇನ್ನು ಅನೇಕ ಕಾಲದವರೆಗೂ ದೊರಕುತ್ತಲೇ ಇರುವದೆಂತಲೂ ಇಂಥಾ ಲಾಭವು ಯಾವ ಮುಖಾಂತರವಾಗಿ ಬರುವುದೋ ಆ ಸಾಹುಕಾರರಿಗೆ ನಮ್ಮ ಸರ್ಕಾರದವರಿಂದ ಸಕಲ ಭಾಗಗಳಲ್ಲಿಯೂ ಸಾಧ್ಯವಾದ ಮಟ್ಟಿಗೆ ಸಹಾಯ ದೊರಕುವುದರಲ್ಲಿ ಯಾವ ಅಭ್ಯಂತರವೂ ಇರಲಾರದೆಂತಲೂ ನಾವು ನಿರೀಕ್ಷಿಸುತ್ತೇವೆ.

ಚೇಂಬರ್ಲೆನ್ ಯವರು ಕಂಡುಹಿಡಿದ ಕೆಮ್ಮು ಔಷಧವು.



8

ಶೀತ, ಕೆಮ್ಮು, ಗಂಟ್ಲು ಗಾರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿಸಲ್ಕೆ ಈ ಔಷಧವು ಬಹುಪ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತಹಿಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕಾನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ಒಕ್ಕೆ ೧ ರೂ., ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಮುಂದಿನ ಬುಧವಾರ ಪರಿವಾರ ಸಹಿತ ರಾಜಧಾನಿಗೆ ದಯಮಾಡುತ್ತಾರೆಂದು ವರ್ತಮಾನವಿದೆ.

*****

ಹೇಮಾವತಿ ನದಿಯ ಅಣೆಕಟ್ಟೆ ಕಾಮಗಾರಿಗೆ ಮೈಸೂರು ಸರ್ಕಾರದವರು ೯೭ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

*****

ಕಳೆದ ಜನವರಿ ತಿಂಗಳಲ್ಲಿ ಮೈಸೂರು ಮ್ಯುನಿಸಿಪಾಲಿಟಿಗೆ ೧೧,೩೪೮ ಚಿಲ್ಲರೆ ರೂಪಾಯಿ ಹುಟ್ಟುವಳಿಯೂ ೪,೨೧೧ ಚಿಲ್ಲರೆ ರೂಪಾಯಿ ಖರ್ಚೂ ಆಗಿದೆ.

*****

ಸಿರಮೂರಿನ ರಾಣಿಯವರು ಕಳೆದ ವಾರ ರಾಜಧಾನಿಗೆ ಬರುತ್ತಾರೆಂದು ಅವರನ್ನು ಸತ್ಕರಿಸುವುದಕ್ಕೆ ಅಧಿಕಾರಿಗಳು ಸಿದ್ಧಪಡಿಸಿಕೊಂಡಿದ್ದರು ಆದರೆ ಅವರು ಬಾರಲಿಲ್ಲ.

*****

ಮೈಸೂರು ಡೆಪ್ಯುಟಿ ಕಮಿಷನರ್ ರ ಆಫೀಸ್ ಬಳಿ ೬೦೧ ಪೌಂಡು ತೂಕದ ದಂತವನ್ನು ಕಳೆದ ವಾರ ಹರಾಜು ಹಾಕಿದ್ದರಲ್ಲಿ ಸರ್ಕಾರಕ್ಕೆ ೨,೧೫೦ ಚಿಲ್ಲರೆ ರೂಪಾಯಿ ಹುಟ್ಟುವಳಿ ಆಗಿದೆ.

*****

ಧಾವತೊರೆ ತಾಲ್ಲೂಕಿನಲ್ಲಿ ನಡೆದ ಖೂನಿ ಮೊಕದ್ದಮೆಯಲ್ಲಿ ಸೆಷನ್ಸ್ ಜಡ್ಜರು ಅಪರಾಧಿಗಳಿಬ್ಬರಿಗೆ ಫಾಸೀ ಸಜಾವನ್ನೂ ಇನ್ನಿಬ್ಬರಿಗೆ ಜೀವಾಂತ್ಯದ ಸಜಾವನ್ನೂ ವಿಧಿಸಿರುತ್ತಾರೆ

*****

ಮೈಸೂರು ಮಹಾರಾಣಿಯವರ ಕಾಲೇಜಿನ ಲೇಡಿ ಸೂಪರಿಂಟೆಂಡೆಂಟರ ವಾಸಕ್ಕೆ ಅನುಕೂಲವಾದ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಸರ್ಕಾರದವರು ಸದ್ಯ ೧೨ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಅರಮನೆ ಸಿಪಾಯಿಗಳಿಗೂ ಬಾಡಿಗಾರ್ಡ್ ಸವಾರರಿಗೂ ಕಾರಂಜಿಕೆರೆಯ ಪಕ್ಕದ ಮೈದಾನದಲ್ಲಿ ಬೇರೆ ಲೈನ್ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸರ್ಕಾರದವರು ಮೂರುವರೆ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುವರು.

*****

ಈಗ ಅಂಚೇ ಇಲಾಖೆಯವರು ಅರ್ಧ ತೊಲೆ ಒಳಗಿರುವ ಕಾಗದಗಳಿಗೆ ಅರ್ಧಾಣೆ ಸ್ಟಾಂಪನ್ನು ಹಚ್ಚಬೇಕೆಂದು ವಿಧಿಸಿರುತ್ತಾರಷ್ಟೆ. ಇನ್ನು ಮುಂದೆ ಅರ್ಧಾಣೆಗೆ ಮೂರು ತೊಲಾ ತೂಕದ ಕಾಗದಗಳನ್ನು ಹಾಕಬಹುದೆಂದು ನಿಯಮಿಸಿ ತೋರಿಸುತ್ತಾರೆಂದು ತಿಳಿದು ಬಂದಿದೆ.

*****

ಕಾಶ್ಮೀರ ಮಹಾರಾಜರವರು ೨೪ ತಾರೀಖು ಮಂಗಳವಾರ ಮೈಸೂರು ಪಟ್ಟಣಕ್ಕೆ ದಯಮಾಡಿ, ಮೂರು ದಿನಗಳ ತನಕ ಇಲ್ಲಿನ ಗವರ್ನ್‌ಮೆಂಟ್ ಹೌಸಿನಲ್ಲಿ ನಮ್ಮ ಮಹಾರಾಜರವರ ಅತಿಥಿಗಳಾಗಿದ್ದು, ನಂಜನಗೂಡು ಶ್ರೀರಂಗಪಟ್ಟಣ ಮುಂತಾದ ಸ್ಥಳಗಳನ್ನು ನೋಡಿಕೊಂಡು ಹೋಗುವವರಾಗಿದಾರೆ

*****

ಬೆಂಗಳೂರು ಪೋಲೀಸ್ ಕೋರ್ಟಿನಿಂದ ಒಬ್ಬ ವಾದಿಯು ದಸ್ತಿ ವಾರಂಟು ತೆಗೆಸಿಕೊಂಡು ಸವಿಾಪದ ಗ್ರಾಮಕ್ಕೆ ಹೋಗಿ ಅವಿಾನರ ಮೂಲಕ ಜಫ್ತಿ ಮಾಡಿಸುತ್ತಿದ್ದಾಗ ಪ್ರತಿವಾದಿಯ ಕಡೆಯವರು ಆ ವಾದಿಯನ್ನು ಹೊಡೆದು ಕೊಂದುಹಾಕಿದರೆಂತಲೂ ಅವನ ಮಗನನ್ನೂ ಅವಿಾನ ಮುಂತಾದವರನ್ನೂ ಗಾಯ ಮಾಡಿದರೆಂತಲೂ, ಈಗ ಈ ವಿಚಾರ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತನಿಖೆ ಮಾಡುತ್ತಿದ್ದಾರೆಂತಲೂ ವರ್ತಮಾನ ಬಂದಿದೆ.

*****

ಪುದುಕೋಟೆಯ ರಾಜರು ತಮ್ಮ ಸಹೋದರರ ಸಂಗಡ ಮೋಟರ್ ಕಾರ್ ಎಂಬ ಸ್ವತಂತ್ರವಾಗಿ ಓಡುವ ಗಾಡಿಯಲ್ಲಿ ಕಳೆದ ಗುರುವಾರ ಮೈಸೂರಿಗೆ ಬಂದು, ಸ್ವಲ್ಪ ಹೊತ್ತು ಇಲ್ಲಿನ ಗವರ್ನ್‌ಮೆಂಟ್ ಹೌಸಿನಲ್ಲಿ ತಂಗಿದ್ದು, ಅದೇ ಗಾಡಿಯಲ್ಲಿ ಹೊರಟು, ನಿಸವೇಗೂರು ಹೊಸಳ್ಳಿ ಕಾಕನಕೋಟೆ ಮುಂತಾದ ಜಂಗಲುಗಳಿಗೆ ಹೋಗಿ, ಹತ್ತು ದಿನಗಳ ತನಕ ಷಿಕಾರಿ ಮಾಡುತ್ತಿದ್ದು, ಒಂದು ಆನೆಯನ್ನು ಕೊಂದರು, ಇನ್ನೆರಡಾನೆಗಳಿಗೆ ಗಾಯಮಾಡಿದರು. ಕಳೆದ ಭಾನುವಾರ ರಾತ್ರಿಗೆ ರಾಜಧಾನಿಗೆ ಬಂದು, ಒಂದು ಇದ್ದು, ಮರುದಿನ ತಮ್ಮ ಸ್ವಂತ ಗಾಡಿಯ ಮೇಲೆ ಕುಳಿತು ಪ್ರಯಾಣಮಾಡಿದರು.

*****

ಕಳೆದ ಶನಿವಾರ ಬೆಳಗ್ಗೆ ರಾಜಧಾನಿಯ ಮ್ಯುನಿಸಿಪಲ್ ಆಫೀಸಿನಲ್ಲಿ ಕಮಿಷನರರು ಸೇರಿ ತಿಂಗಳು ಜನರಲ್ ವಿಾಟಿಂಗ್ ನಡಸಿದರು. ಕಳೆದ ಜನವರಿ ತಿಂಗಳಲ್ಲಿ ಜನನ ೧೯೫, ಮರಣ—ಪ್ಲೇಗ್ ೬೨, ಜ್ವರ ೧೨೦, ಇತರ ಕಾರಣಗಳಿಂದ ೧೮೭ ಒಟ್ಟು ೩೫೪ ಎಂದು ಗೊತ್ತಾಯಿತು. ಇಟ್ಟಿಗೆಗೂಡಿನ ಬಳಿಯ ಸ್ಕೂಲಿಗೆ ಗ್ರಾಂಟು ಕೊಡತಕ್ಕ ವಿಷಯವನ್ನು ಸ್ಕೂಲ್ ಸ್ಟ್ಯಾಂಡಿಂಗ್ ಕಮಿಟಿಗೆ ತಿಳಿಸಿ ಅವರ, ರಿಪೋರ್ಟು ಎದುರು ನೋಡಬೇಕೆಂತ ತೀರ್ಮಾನ ಮಾಡಿದರು. ಮನೆಗೆ ನಲ್ಲಿ ಇಡಿಸಿಕೊಂಡವರು ಮುನಿಸಿಪಾಲಿಟಿಗೆ ಹೆಚ್ಚು ಹಣ ಕೊಟ್ಟರೇ ಹೊರತು ಅಂಥ ಹೆಚ್ಚು ಹಣವನ್ನೆಲ್ಲಾ ಅವರವರಿಗೆ ವಾಪಸು ಕೊಟ್ಟು ಬಿಡಬೇಕೆಂತಲೂ, ಮುಖ್ಯಮಾನ ಕಟ್ಟಿ ಪೂರ್ವಕ್ಕೆ ಇರುವ ದಾರಿ ಜಾಗವನ್ನು ಯಾರಿಗೂ ಬಿಕರಿಮಾಡಕೂಡದೆಂತಲೂ ಹೊಸದಾಗಿ ಕಟ್ಟಿಸುವ ಮನೆಗಳನ್ನು ಕಟ್ಟುವುದಕ್ಕೆ ನಲ್ಲಿಗಳ ನೀರನ್ನು ಉಪಯೋಗಿಸುವಂತೆ ನಲ್ಲಿಗಳನ್ನು ಕಟ್ಟಿಬಿಡಬೇಕೆಂತಲೂ ನಿಂತೇ ಹೋಯಿತು; ಖಾಜಿ ಮಹಮದ್ ಖಾನರು ತಮ್ಮ ಅಂಗಳದಲ್ಲಿಟ್ಟುಕೊಂಡಿರುವ ನಲ್ಲಿಗೆ ಅವರಿಂದ ನೀರಿನ ತೆರಿಗೆ ವಸೂಲ್ಮಾಡಕೂಡದೆಂತಲೂ ಅಡ್ವೊಕೇಟ್ ಮಿ॥ ಎಚ್. ಕೃಷ್ಣರಾಯರು ಮಾಡಿ ಪಕ್ಕದಲ್ಲಿರುವ ದಾರಿ ನಿವೇಶನವನ್ನು ಬಿಕರಿ ಮಾಡದ ಹಾಗೆ ಬಿಟ್ಟುಬಿಡಬೇಕೆಂತಲೂ ಕ್ಯಾಥಲಿಕ್ ಪಾದ್ರಿಯವರು ಕೇಳುವಂತೆ ಬಿನ್ನಿ ಮಿಲ್ಲಿನ ಬಳಿ ಇರುವ ಜಾಗದ ಬಾಬತ್ತು ಅವರಿಂದ ಬಾಕಿ ಬರಬೇಕಾಗಿರುವ ೬೫ ರೂಪಾಯಿ ರೂಪಾಯನ್ನು ಮಾಫಿ ಬಿಡಬೇಕೆಂತಲೂ, ಮಿ. ವ ಕಿ ಅಬ್ದುಲ್ ಕರೀಂ ಸಾಹೇಬರು ಕೇಳುವಂತೆ ಅವರ ಬಂಡಿ ಸ್ಟಾಂಡ್ ತೆರಿಗೆಯನ್ನು ಬಿಡುವುದಕ್ಕಾಗದೆಂತಲೂ ತೀರ್ಮಾನ ಮಾಡಿದರು

ಮೈಸೂರು ಗೆಜೆಟ್ ಸಂಗ್ರಹ.

ಮಿಸ್ ಜಿ ಎಲ್ ಬಲೆಕಾರ್ಗ ಯವರು ರಜದ ಮೇಲಿರ ವಾ ಅಸಿಸ್ಟಂಟ್ ಮಿಸ್‌ಟ್ರೆಸ್ ಕೆ ಡಿ ರುಕ್ಮಿಣಿ ಅಮ್ಮನವರು ಮೈಸೂರು ಮಹಾರಾಣಿ ಕಾಲೆಜ್ಜಿನ ಲೇಡಿ ಸೂಪರಿಂಟೆಂಡೆಂಟಾಗಿ ಕೆಲಸ ಮಾಡತಕ್ಕದ್ದು.

'ಬೆಂಗಳೂರ ಡಿಸ್ಟ್ರಿಕ್ಟ್ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ॥ ವೆಂಕಟಪತಿ ಅಯ್ಯಂಗಾರ್ರಿಗೆ ಜನವರಿ ೧೦ ನೆ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟದೆ. ರಜಾ ಪೂರೈಸಿದ ಮೇಲೆ ಅವರು ಪೆನ್ಷನ್ ಪಡೆಯತಕ್ಕದ್ದು.

ದಿವಾನರವರ ಪ್ರೈವೆಟ್ ಸೆಕ್ರೆಟರಿ ಮೆ॥ ಎಂ ಶ್ರೀನಿವಾಸ ಅಯ್ಯಂಗಾರ್ರವರಿಗೆ ಫೆಬ್ರುವರಿ ೧೫ ರಿಂದ ೨೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟದೆ.

ಗವರ್ನಮೆಂಟ್ ಡೆಪ್ಯುಟಿ ಸೆಕ್ರೆಟರಿ ಮೆ॥ ಕೆ ಎಸ್ ಚಂದ್ರಶೇಖರಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟದೆ.

ದಿವಾನರವರ ಲಾ ಸೆಕ್ರೆಟರಿ ಮೆ॥ ಎಂ ರಾಮರಾಯರು ತಮ್ಮ ಸ್ವಂತ ಕೆಲಸಗಳೊಂದಿಗೆ ಡೆಪ್ಯುಟಿ ಸೆಕ್ರೆಟರಿ ಕೆಲಸದ ಛಾರ್ಜನ್ನೂ ನೋಡತಕ್ಕದ್ದು.

ದಾವಣಗೆರೆ ತಾಲ್ಲೂಕ್ ಓವರ್‌ಸಿಯರ್ ಮೆ॥ ಬಿ. ಎಸ್ ವೆಂಕಟಕೃಷ್ಣಯ್ಯನವರಿಗೆ ಜನವರಿ ೧೧ ರಿಂದ ನಾಲ್ಕು ತಿಂಗಳ ಪ್ರಿವಿಲೆಜ ರಜಾ ಕೊಟ್ಟದೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನ ಎಲ್ಲಾ ಫಾರೆಸ್ಟ್ ಡಿಪೋಗಳಲ್ಲೂ ಶ್ರೀಗಂಧಕ್ಕೆ ೧೦೦ ಕ್ಕೆ ದರದಂತೆ ಬಿಕರಿ ಮಾಡಬೇಕೆಂದು ಹುಕುಂ ಮಾಡಿದೆ.

ಬೇಗೂರು ಫಾರೆಸ್ಟಿನಲ್ಲಿ ಆಗಲೇ ನಾಲ್ವರನ್ನು ಕೊಂದು ಹಾಕಿದ ಒಂದು ಆನೆ ಸಲಗವನ್ನು ಕೊಂದು ಹಾಕಿದವರಿಗೆ ೧೦೦ ರೂಪಾಯಿ ಬಹುಮಾನವನ್ನೂ ಬೇಗೂರ ಮತ್ತು ಕಾಕನಕೋಟೆ ಕಾಡುಗಳಲ್ಲಿ ಅಯಿನೂರು ಮಾರಿಗುಡಿಯಲ್ಲಿರುವ ನಾಲ್ಕು ಆನೆಗಳು ಪ್ರಜೆಗಳಿಗೂ ಅವರ ಆಸ್ತಿಗೂ ತುಂಬಾ ನಷ್ಟಪಡಿಸುತ್ತಿರುವುದರಿಂದ ಇವುಗಳನ್ನು ಕೊಂದವರಿಗೆ ಆನೆ ಒಂದಕ್ಕೆ ೭೫ ರೂ. ಗಳಂತೆ ಬಹುಮಾನವನ್ನೂ ಕೊಡಲಾಗುತ್ತದೆ.

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು

ಲಂಡನ್, ಫೆಬ್ರುವರಿ ೨೦.—ಚಕ್ರವರ್ತಿಯವರ ಚಿಕ್ಕಪ್ಪ ಗ್ರಾಂಡ್ ಡ್ಯೂಕ್ ಸರ್ಜಿಯಸ್ ರವರನ್ನು ಕಳೆದ ನಾಲ್ಕನೇ ತಾರೀಖು ಕೊಂದು ಹಾಕಿದರಷ್ಟೆ. ಈ ವಿಷಯದಲ್ಲಿ ವಿಲಾಯಿತಿಯ ದೊಡ್ಡ ಮನುಷ್ಯರೇ ಮೊದಲಾದವರು ಸ್ವಾಂತನಸೂಚಕವಾದ ಕಾಗದಗಳನ್ನು ಚಕ್ರವರ್ತಿಯವರಿಗೆ ಬರೆದಿರುತ್ತಾರೆ. ಚಕ್ರವರ್ತಿಯವರ ಸಂಸಾರಕ್ಕೆ ಸೇರಿದವರೆಲ್ಲಾ ತುಂಬಾ ದುಃಖಪಡುತ್ತಿರುವರು. ಅವರನ್ನು ಮಣ್ಣುಮಾಡಿದಗಳೊಡನೆ ದರ್ಬಾರ್ ನಡೆಸುವುದಕ್ಕೆ ಏರ್ಪಡಿಸುತ್ತಿದೆ.

ಕೂಲಿಕಾರರ ಕಷ್ಟನಿವಾರಣೆ

ರಷ್ಯಾ ರಾಜ್ಯದಲ್ಲಿ ಕೂಲಿಕಾರರ ಕಷ್ಟ ನಿವಾರಣೆ ಮಾಡುವುದಕ್ಕೋಸ್ಕರ ಚಕ್ರವರ್ತಿಯವರು ಕೆಲವು ದೊಡ್ಡ ಮನುಷ್ಯರನ್ನು ವಿಚಾರಣೆ ಮಾಡುವಂತೆ ಸೇರಿಸಿ ಒಂದು ಕಮಿಟಿ ಮಾಡಿದ್ದಾರೆ. ಈ ಕಮಿಟಿಯವರು ರಾಜಧಾನಿ ಸಾನ್ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಕಾರ್ಯಾರಂಭ ಮಾಡಿ, ಕಾರ್ಖಾನೆಗಳ ಯಜಮಾನರಿಂದಲೂ ಕೂಲಿಕಾರರಾದ ಪ್ರಜೆಗಳಿಂದಲೂ ಪ್ರತಿನಿಧಿಗಳನ್ನು ಆರಿಸಿಕೊಳ್ಳುತ್ತಿದ್ದಾರೆ.

ವಿದ್ಯಾರ್ಥಿಗಳ ದೊಡ್ಡ ಸಭೆ

ರಾಜಧಾನಿಯಲ್ಲಿ ಉದ್ಯೋಗಸ್ಥರಾದ ಜನರಲ್ ಟ್ರೆಪಾಫ್ ಯವರ ಅನುಮತಿಯನ್ನು ಪಡೆದು ವಿದ್ಯಾರ್ಥಿಗಳೆಲ್ಲಾ ಯೂನಿವರ್ಸಿಟಿ ವಿದ್ಯಾನಿಲಯದಲ್ಲಿ ಸೇರಿ ಉಪನ್ಯಾಸಗಳನ್ನು ಮಾಡಿದರು. ಸರ್ಕಾರದವರು ಕೂಲಿಕಾರರ ಗುಂಪುಗಳಿಗೆ ಗುಂಡು ಹೊಡೆದದ್ದು ಬಹಳ ಅನ್ಯಾಯ, ನ್ಯಾಯಾನುಸಾರವಾಗಿ ಪ್ರಜಾಪಾಲನ ಮಾಡುವಂತೆ ಸರ್ಕಾರದವರು ಏರ್ಪಾಡು ಮಾಡಬೇಕು ಎಂಬುದಾಗಿ ವಿದ್ಯಾರ್ಥಿಗಳು ತೀರ್ಮಾನ ಮಾಡಿದರು. ರೋಷಾವೇಶದ ಮಾತುಗಳಿಂದ ಆ ದಿನದ ಸಭೆಯಲ್ಲಿ ನಡೆದದ್ದು. "ಕೊಲೆಗಾರರಿಗೆ ಮರಣ ದಂಡನೆ" ಎಂಬ ಅಂಕಿತಗಳನ್ನು ಬರೆದಿದ್ದ ಬಾವುಟಗಳನ್ನು ಬಿಚ್ಚಿ ಹಾರಿಸಿದರು. ಚಕ್ರವರ್ತಿಯವರ ಭಾವಚಿತ್ರ ಪಟವನ್ನು ತುಂಡುತುಂಡಾಗಿ ಸೀಳಿಬಿಟ್ಟರು. ಬಹಳ ಕಠಿಣವಾದ ಶಬ್ದಗಳನ್ನು ಉಪಯೋಗಿಸಿ ರಾಜ್ಯಭಾರ ವಿಚಾರವನ್ನು ಅಲ್ಲಗಳೆದು, ಈ ಅಳಿಕೆ ಬೇಗನೆ ತಲೆಕೆಳಗಾಗುವುದೆಂದು ಹೇಳಿದರು. ಕೂಲಿಕಾರರೂ ತಮ್ಮ ಸಂಗಡ ಸೇರಿಕೊಂಡಲ್ಲಿ ಪ್ರಜೆಗಳೇ ಒಂದು ಸೈನ್ಯವನ್ನು ಕೂಡಿಸಿಕೊಂಡು, ಗವರ್ನಮೆಂಟಿನವರು ತಮ್ಮ ಗೋಜಿಗೆ ಬಾರದಂತೆಯೂ, ತಮ್ಮ ಉದ್ದೇಶಗಳನ್ನೆಲ್ಲಾ ನೆರವೇರಿಸಿಕೊಳ್ಳುವಂತೆಯೂ ಮಾಡಿಕೊಳ್ಳಬೇಕೆಂದು ಗೊತ್ತುಮಾಡಿಕೊಂಡರು.

ರಷ್ಯಾ ರಾಜ್ಯದ ರೈಲ್ವೇ ನೌಕರರೆಲ್ಲಾ ಕೀಫ್ ನಗರದಲ್ಲಿ ಸಭೆ ಸೇರಿ ಯಾರೂ ಕೆಲಸಕ್ಕೆ ಹೋಗಬಾರದೆಂದು ಗೊತ್ತುಮಾಡಿಕೊಂಡು ನಿಂತುಬಿಟ್ಟರು. ಬಹುಶಃ ಈ ತಿಂಗಳ ೭ಕ್ಕೆ ಜನಾಂಗದ ಪಾರ್ಲಿಮೆಂಟ್ ಸಭೆ ಸೇರುವುದೆಂದು ಹೇಳುತ್ತಾರೆ.

ಸಾಕೋಸೇಲೋ ಎಂಬ ರಾಜಧಾನಿಯಲ್ಲಿ ಬಹು ಕಠಿಣವಾದ ಅರ್ಜಿಗಳು ಅನೇಕವಾಗಿ ಬಂದದ್ದರಿಂದ ಆ ಪಟ್ಟಣದಲ್ಲಿ ಸರ್ಕಾರದವರು ಯುದ್ಧ ಕಾಲದ ಕಾನೂನನ್ನು ಜಾರಿಗೆ

ಪೋಲಾಂಡಿನಲ್ಲಿ ಗಲಭೆಯು.

ಲಂಡನ್, ಫೆಬ್ರುವರಿ ೨೩.—ರೈಲ್ವೆ ನೌಕರರೆಲ್ಲಾ ಕೆಲಸಕ್ಕೆ ಹೋಗದೆ ಹಟಹಿಡಿದು ನಿಂತುಬಿಟ್ಟದ್ದರಿಂದ ಪೋಲೆಂಡಿಗೂ ಜರ್ಮನಿ ಆಸ್ಟ್ರಿಯಾಗಳಿಗೂ ಇರುವ ರಸ್ತೆ ನಿಂತುಹೋಗಿದೆ. ವಾರ್ಸಾ ಪಟ್ಟಣದ ರೈಲ್ವೆ ಸ್ಟೇಷನಿನಲ್ಲಿ ಸೈನಿಕರು ಬಂದು ತುಂಬಿರುವರು.

ರಷ್ಯಾ ರಾಜ್ಯದ ಎಲ್ಲಾ ಕಡೆಗಳಲ್ಲೂ ಕೂಲಿಕಾರರು ಕೆಲಸಕ್ಕೆ ಹೋಗದೆ ನಿಂತುಬಿಟ್ಟರೆಂದು ತಿಳಿಯುವುದು. ವಾರ್ಸಾ ಪಟ್ಟಣದಲ್ಲಿ ರೈಲ್ವೆಯವರು ದಂಗೆಮಾಡಿ ಕಲಹಗಳನ್ನು ನಡೆಸಿದರು. ಪೋಲೀಸಿನವರು ದಸ್ತಗಿರಿ ಮಾಡಿದ ಜನರನ್ನು ಸೆರೆಯಿಂದ ಬಿಟ್ಟುಬಿಡಬೇಕಾಯಿತು. ಸೈನಿಕರು ಗುಂಪುಗಳ ಮೇಲೆ ಗುಂಡು ಹೊಡೆದರು. ಎಷ್ಟು ಜನ ಹತರಾದರೋ ಗೊತ್ತಾಗಲಿಲ್ಲ.

ಬಾಕೂ ಪಟ್ಟಣದಲ್ಲೂ ಪೇಟೂಂ ಪಟ್ಟಣದಲ್ಲೂ ಸೈನಿಕರು ಬಹು ಕ್ರೂರವಾಗಿ ಜನರನ್ನು ಹಿಂಸೆಗೆ ಗುರಿಪಡಿಸಿದ್ದರಿಂದ ಬಹಳ ಜನರು ಕೊಲ್ಲಲ್ಪಟ್ಟರು. ಆ ಪ್ರಾಂತ್ಯದ ಅವುದು ರಸ್ತೆ ನಿಂತಿರೋದರಿಂದ ಅಲ್ಲಿನ ಸಮಾಚಾರಗಳೇ ಪ್ರಕಟವಾಗಿಲ್ಲ. ಅಲ್ಲಿರುವ ಕೂಲಿಕಾರರೆಲ್ಲಾ ಜಾರ್ಜಿಯಾ ಜನರೆಂತಲೂ ಸುಮಾರು ೪೦,೦೦೦ ಜನರು ಕೆಲಸಗಳಿಗೆ ಹೋಗದೆ ಗಲಭೆ ಮಾಡಿದರೆಂತಲೂ, ಸರ್ಕಾರದವರು ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕೆ ಹಡಗುಗಳಿಂದ ಪೋಟಿ ಎಂಬ ಸ್ಥಳಕ್ಕೆ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದರೆಂತಲೂ ವರ್ತಮಾನ ಬಂದಿದೆ.

ಲಂಡನ್ ಫೆಬ್ರುವರಿ ೨೪.—ಗ್ರಾಂಡ್ ಡ್ಯೂಕ್ ಸರ್ಜಿಯಸ್ ರವರ ಶವವನ್ನು ಈ ದಿನ ದಫನಮಾಡಿದರು. ಈ ಉತ್ಸವಕ್ಕೆ ಪ್ರಜೆಗಳನ್ನು ಸೇರಿಸಲಿಲ್ಲ. ಪೋಲೀಸಿನವರನ್ನೂ ಸೈನಿಕರನ್ನೂ ನಿಲ್ಲಿಸಿದ್ದರು. ಚಕ್ರವರ್ತಿಯವರು, ಅವರ ಸಂಸಾರಕ್ಕೆ ಸೇರಿದವರು, ಪರರಾಜ್ಯಗಳ ರಾಯಭಾರಿಗಳು, ಇವರು ಮಾತ್ರ ಶವದ ಸಂಗಡ ಸಮಾಧಿಗೆ ಮೆರವಣಿಗೆಯಲ್ಲಿ ಹೋದರು.

ವಾರ್ಸಾ ಪಟ್ಟಣದಲ್ಲಿ ತುಂಬಾ ಗಲಭೆಯುಂಟಾಗಿದೆ. ಪೋಲೀಸಿನವರು ಕೆಲಸಬಿಟ್ಟವರಾಗಿದ್ದಾರೆ. ಸೈನಿಕರು ಕಾರ್ಖಾನೆಯನ್ನು ಕಾಪಾಡಿಕೊಳ್ಳುತ್ತಿರುವರು. ರಾಜಧಾನಿಯಲ್ಲಿ ಪೊಟಿಲಾಫ್ ಎಂಬ ಭಾರೀ ಕಾರ್ಖಾನೆಯ ಕೂಲಿಕಾರರು ಮತ್ತೆ ಕೆಲಸಕ್ಕೆ ಬಾರದೆ ನಿಂತುಬಿಟ್ಟದ್ದರಿಂದ ಸೈನಿಕರು ಬೊಂಬಿಯನ್ನು ಅಣಗಿಸುವುದಕ್ಕೆ ಬಂದುನಿಂತರು. ವಾರ್ಸಾ ಪಟ್ಟಣದಲ್ಲಿ ವಿದ್ಯಾವಂತರಾದ ೧೨ ಮಂದಿ ದೊಡ್ಡಮನುಷ್ಯರನ್ನು ಸರ್ಕಾರದವರು ಸಮರಾತ್ರಿಯಲ್ಲಿ ದಸ್ತಗಿರಿ ಮಾಡಿದರು.

ಲಂಡನ್, ಫೆಬ್ರುವರಿ ೨೫.—ಕಾಕಸಸ್ ಪ್ರಾಂತ್ಯದಿಂದಲೂ ಪ್ರೊ ಸೈಬೀರಿಯಾದಿಂದಲೂ ಯಾವ ವರ್ತಮಾನವೂ ಬರುತ್ತಾ ಇಲ್ಲವೆಂತಲೂ, ಆ ಪ್ರಾಂತ್ಯಗಳ ಅವುದು ರಸ್ತೆ ನಿಂತುಹೋಗಿದೆ ಎಂತಲೂ ರಾಜಧಾನಿಯ ವರ್ತಮಾನಪತ್ರಿಕೆಗಳು ತಿಳಿಸುತ್ತವೆ.

ಬಾಕೂ ಪಟ್ಟಣದಲ್ಲಿ ಕೊಲೆ

ಲಂಡನ್, ಫೆಬ್ರುವರಿ ೨೬.—ಬಾಕೂ ಪಟ್ಟಣದ ವರ್ತಕರೂ ಪ್ರಮುಖರೂ ಎಲ್ಲಾ ಊರು ಬಿಟ್ಟು ಹೋದರು. ಗಂಡಸರು, ಹೆಂಗಸರು, ಮಕ್ಕಳು ಮೊದಲಾದವರನ್ನು ಜನರು ಸುಟ್ಟುಹಾಕಿ, ಶವಗಳನ್ನು ತುಂಡುತುಂಡಾಗಿ ಕತ್ತರಿಸುತ್ತಿದ್ದಾರೆ. ಸುತ್ತಮುತ್ತ ಗ್ರಾಮಗಳಲ್ಲಿ ಜನರು ಆಯುಧಪಾಣಿಗಳಾಗಿ ಗುಂಪುಕಟ್ಟಿ ಸರ್ಕಾರದವರ ಮೇಲೆ ತಿರುಗಿ ಬೀಳುವರು. ಕೆಲವು ರೈಲ್ವೆ ನೌಕರರು ಈ ಯುದ್ಧವನ್ನು ಬೇಗ ನಿಲ್ಲಿಸಬೇಕೆಂದು ದಂಗೆಯೆದ್ದಿದ್ದಾರೆ.

ಚಕ್ರವರ್ತಿಯವರು ಮಂತ್ರಿಗಳ ಸಮಾಜವನ್ನು ಕೂಡಿಸಿ, ಪ್ರಜೆಗಳ ಅಪೇಕ್ಷೆಯಂತೆ ರಾಜ್ಯಭಾರ ಕ್ರಮಗಳನ್ನು ಬದಲಾಯಿಸಿ, ಪ್ರತಿನಿಧಿಗಳ ಆಳಿಕೆಯನ್ನು ಜಾರಿಗೆ ತರಬೇಕೆಂದು ಅಪ್ಪಣೆ ಕೊಡಿಸಿದ್ದಾರೆ.

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು

ಕರಾರಾಗುವ ವಿಷಯ

ಲಂಡನ್, ಫೆಬ್ರುವರಿ ೨೦.—ರಷ್ಯಾ ಗವರ್ನಮೆಂಟಿನವರ ಮತ್ತು ಚಕ್ರವರ್ತಿಯವರ ಕ್ಷೇಮ ಚಿಂತನೆಯಿಂದ, ಈ ಯುದ್ಧವು ಬೇಗನೆ ನಿಂತು ಬೇಗನೆ ಕರಾರಾಗಬೇಕೆಂದು ಆ ರಾಜ್ಯದ ಮುಖ್ಯ ದೊಡ್ಡ ಮನುಷ್ಯರೆಲ್ಲಾ ಅಭಿಪ್ರಾಯಪಡಲಾರಂಭಿಸಿದ್ದಾರೆ.

ಚಕ್ರವರ್ತಿಯವರು ಯುದ್ಧ ಭೂಮಿಯಿಂದ ವಾಪಸು ಬಂದ ಜನರಲ್ ಗ್ರಿಪ್ಪನ್‌ಬರ್ಗ್ ಯವರನ್ನು ಆದರಪೂರ್ವಕವಾಗಿ ಕಂಡು ವಿಶ್ವಾಸ ತೋರಿಸಿದರು.

ಜನರಲ್ ಕುರೋಪಾಟ್ಕಿನ್‌ರವರ ಸಾಹಸ ಚಮತ್ಕಾರಗಳನ್ನು ನಿಷ್ಫಲವಾಗುವಂತೆ ಮಾಡಬೇಕೆಂದು ಕೆಲವರು ಒಳಸಂಚು ನಡೆಸುತ್ತಿದ್ದಾರೆ.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯ.

ರಷ್ಯಾದವರ ದೊಡ್ಡ ಸೈನ್ಯಗಳು ಸಾಹೊ, ಹುನ್‌ಹೊ ನದಿಗಳ ಎದುರು ಪಾರ್ಶ್ವದಲ್ಲಿ ನುಗ್ಗಿ ಹೋಗುತ್ತಿರುವುದಾಗಿಯೂ, ರಷ್ಯಾದ ದಂಡಿನವರು ತಮ್ಮ ಸೈನ್ಯಗಳ ಸ್ಥಾನಗಳನ್ನು ಬದಲಾವಣೆ ಮಾಡಿ, ಹೊಸ ಹೊಸ ಏರ್ಪಾಡು ಮಾಡುತ್ತಿರುವುದಾಗಿಯೂ ಟೋಕಿಯೋದಿಂದ ಸಮಾಚಾರ ಬಂದಿದೆ.

ಜಪಾನಿನವರು ಎರಡು ಹಡಗುಗಳನ್ನು ಹಿಡಿದರು

ವ್ಲಾಡಿವೊಸ್ಟಾಕ್ ಪಟ್ಟಣಕ್ಕೆ ಆಹಾರಸಾಮಗ್ರಿ ಪದಾರ್ಥಗಳನ್ನು ಭರ್ತಿ ಮಾಡಿಕೊಂಡು ಹೋಗುತ್ತಿದ್ದ ಇಂಗ್ಲೀಷರಿಗೆ ಸೇರಿದ ಸಿಲ್ವಿಯಾನಾ, ಪೌಡರ್‌ಹಂ ಎಂಬೀ ಎರಡು ಹಡಗುಗಳನ್ನು ಜಪಾನಿನವರು ಮಧ್ಯ ಮಾರ್ಗದಲ್ಲಿ ತಡೆದು ಸ್ವಾಧೀನಪಡಿಸಿಕೊಂಡಿದ್ದಾರೆ.

ಕರಾರಿನ ಕಲಮುಗಳು.

ಲಂಡನ್, ಫೆಬ್ರುವರಿ ೨೦.—ಕರಾರು ಮಾಡಿಕೊಳ್ಳುವುದೇ ಇಲ್ಲವೆಂದು ರಷ್ಯಾದವರು ಸರ್ಕಾರಿಯಾಗಿ ಹೇಳುತ್ತಿದ್ದಾರೆ. ಆದರೂ ನಡವಳಿಕೆಯನ್ನು ನೋಡಿದರೆ ಕರಾರಿನ ಕಲಮುಗಳನ್ನು ಕುರಿತು ಚಕ್ರವರ್ತಿಯವರು ಚರ್ಚೆಮಾಡಿ ಗೊತ್ತುಮಾಡಿರುವಂತೆ ತಿಳಿದು ಬರುತ್ತದೆ. ರಷ್ಯಾ ಚಕ್ರವರ್ತಿಯವರು ನಿಶ್ಚಯ ಮಾಡಿಕೊಂಡಿರುವ ಕರಾರಿನ ಕಲಮುಗಳ್ಯಾವವೆಂದರೆ—ಕೋರಿಯಾ ರಾಜ್ಯವು ಜಪಾನಿನವರಿಗೆ ಸೇರತಕ್ಕದ್ದು, ಲಿಯೋಟಾಂಗ್ ಪರ್ಯಾಯ ದ್ವೀಪವೂ ಅವರೇ ವಶಮಾಡಿಕೊಳ್ಳತಕ್ಕದ್ದು. ವ್ಲಾಡಿವೊಸ್ಟಾಕ್ ಪಟ್ಟಣವು ಎಲ್ಲಾ ಜನಾಂಗಗಳಿಗೂ ಅಧೀನವಾಗಿ ಕೊಡತಕ್ಕದ್ದು. ಚೀನಾರಾಜ್ಯದ ಪೂರ್ವ ಭಾಗದಲ್ಲಿರುವ ರೈಲ್ವೆಯನ್ನು ಎಲ್ಲಾ ರಾಜ್ಯಗಳವರೂ ಸೇರಿ ನಡೆಸತಕ್ಕದ್ದು. ಹಾರ್ಬಿನ್ ಪಟ್ಟಣದಿಂದ ದಕ್ಷಿಣಕ್ಕಿರುವ ಮ್ಯಾಂಚೂರಿಯಾ ಸೀಮೆಯನ್ನೆಲ್ಲಾ ಚೀನಾಯವರಿಗೆ ವಹಿಸಿಕೊಡತಕ್ಕದ್ದು. ಈ ವಿಷಯಗಳನ್ನು ರಷ್ಯಾದವರು ಒಪ್ಪಿಕೊಂಡಿದ್ದಾರೆ. ಯುದ್ಧದ ನಷ್ಟಕ್ಕಾಗಿ ಜಪಾನಿನವರು ಎಷ್ಟು ಹಣ ಕೊಡಬೇಕೆಂದು ಕೇಳುವರೋ ಇನ್ನೂ ತಿಳಿಯಲಿಲ್ಲ. ಇದೊಂದು ವಿಷಯ ಮಾತ್ರ ಗೊತ್ತಾದರೆ ಬೇಗನೆ ಕರಾರಾಗಿ, ಯುದ್ಧದ ಕಷ್ಟಗಳೂ ಒಳದೇಶದ ಗಲಭೆಗಳೂ ರಷ್ಯಾಕ್ಕೆ ಬಿಡುಗಡೆಯಾಗಬೇಕೆಂದು ಹಾರೈಸುತ್ತಾರೆ.

ಜನರಲ್ ಸ್ಟೋಯೆಸೆಲ್‌ಯವರು ಕ್ರಿಮಿಯಾದಲ್ಲಿರುವ ಥಿಯೊಡೋಸಿಯಾ ಪಟ್ಟಣದಲ್ಲಿ ಹಡಗಿನಿಂದ ಇಳಿದರು. ಮ್ಯುನಿಸಿಪಾಲಿಟಿಯವರು ಇವರನ್ನು ಎದುರುಗೊಂಡು, ಸನ್ಮಾನಮಾಡಿದರು. ಅಲ್ಲಿ ಕೂಡಿದ್ದ ಅಪಾರವಾದ ಜನರನ್ನು ಕುರಿತು ಜನರಲ್ ಸ್ಟೋಯೆಸೆಲ್‌ಯವರು—ಪೋರ್ಟ್ ಆರ್ಥರನ್ನು ಜಪಾನಿನವರಿಗೆ ಒಪ್ಪಿಸಿಬಿಟ್ಟದ್ದು ನ್ಯಾಯವಾಗಿದೆ ಎಂದು ಸ್ಥಾಪಿಸಿ, ತಮ್ಮ ವಿಷಯವಾಗಿ ನಿಜವಲ್ಲದ ಸುದ್ದಿಗಳನ್ನು ಹಬ್ಬಿಸಿ ಪ್ರಕಟಿಸಿದ್ದು ಸರಿಯಲ್ಲವೆಂದು ಕೋಪಮಾಡಿದರು. ಪೋರ್ಟ್ ಆರ್ಥರಿನಲ್ಲಿ ಮಡಿದುಹೋದವರ ಹೆಂಡಿರು ಮಕ್ಕಳೇ ಅವರೆದುರಿಗೆ ನಿಂತು ಗೋಳಾಡಿದರು. ಜನರಲ್ ಸ್ಟೋಯೆಸೆಲ್‌ಯವರು ಅವರನ್ನೆಲ್ಲಾ ಸಂತೈಸಿ ದುಃಖ ಪರಿಹರಮಾಡಿದರು. ಬಹು ಜನರು ಅವರ ಕೈ ಹಿಡಿದು ಮುತ್ತಿಟ್ಟುಕೊಂಡರು.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯ.

ಕಳೆದ ೨೦ ತಾ. ಸುಮಾರು ೨೦೦ ರಷ್ಯಾ ಸೈನಿಕರು ಲೈಟುಂಗಿನಿಂದ ಟಾಷಿಹೀಲೋ ತನಕ ಇರುವ ರೈಲ್‌ರಸ್ತೆಯನ್ನು ಸ್ವಲ್ಪಮಟ್ಟಿಗೆ ಹಾಳುಮಾಡಿದ್ದಾರೆ.

ಕರಾರಿನ ಮಾತು.

ರಷ್ಯಾದವರು ಕರಾರಿನ ವಿಷಯವನ್ನು ಜಪಾನಿನವರಿಗೆ ಸಾಕ್ಷಾತ್ತಾಗಿ ತಿಳಿಸಿ ಕೇಳಲಿಲ್ಲ. ಆದರೂ ಜಪಾನಿನವರಲ್ಲೂ ಬಹು ಮಂದಿ ಕರಾರಾದರೆ ಒಳ್ಳೇದೆಂದು ಅಭಿಪ್ರಾಯಪಡುತ್ತಿದ್ದಾರೆ. ಬ್ಯಾರನ್ ಸುಯೆಮತ್ಸುಯವರು—ರಷ್ಯಾದವರು ತಿಳಿಸುವ ಕಲಮುಗಳನ್ನು ನಾವು ಒಪ್ಪುವುದಕ್ಕಾಗುವುದಿಲ್ಲವೆಂತಲೂ ಅದರಂತೆ ನಡೆಯುವುದಾದರೆ ರಷ್ಯಾದವರಿಗೇ ಲಾಭವಾಗುತ್ತದೆಂತಲೂ ಹೇಳಿದ್ದಾರೆ.

ಲಂಡನ್, ಫೆಬ್ರುವರಿ ೨೩.—ರಷ್ಯದವರು ಯುದ್ಧ ಭೂಮಿಯಿಂದ ಮಲಯಾ ಎಂಬ ಹಡಗಿನ ತುಂಬಾ ಕಾಯಿಲೆಯಾದವರನ್ನು ಕರೆದುಕೊಂಡು ಬಂದು ಸೂಯೆಸ್ ಪಟ್ಟಣದಲ್ಲಿ ತಂಗಿದ್ದಾರೆ.

ಜಪಾನಿನವರ ಸಾಲಕ್ಕಾಗುವದು

ಜಪಾನಿನವರು ತಮ್ಮ ರಾಜ್ಯದಲ್ಲೇ ನಾಲ್ಕನೇ ದಫಾ ೧೦ ಕೋಟಿ ದ್ರವ್ಯವನ್ನು ಸಾಹುಕಾರರಿಂದ ಸಾಲ ಮಾಡುವವರಾಗಿದ್ದಾರೆ. ಈ ಹಣಕ್ಕೆ ಏಳು ವರುಷ ವಾಯಿದೆ, ನೂರಕ್ಕೆ ೬ ರಂತೆ ಬಡ್ಡಿ ಕೊಡುತ್ತೇವೆಂದು ಪ್ರಕಟಿಸಿರುವರು.

ಫಿರಂಗಿಗಳ ಯುದ್ಧ

ಲಂಡನ್, ಫೆಬ್ರುವರಿ ೨೪.—ಆದಿವಾರವೂ ಗುರುವಾರವೂ ಸಾಹೋ ನದಿಯ ಬಳಿ ಶತ್ರುಗಳು ಫಿರಂಗಿಗಳನ್ನು ಎತ್ತಿ ಕಟ್ಟಿ ಒಬ್ಬರ ಮೇಲೊಬ್ಬರು ವಿರಾಮವಿಲ್ಲದೆ ಹೊಡೆದಾಡಿದರು. ಸೈನಿಕರೂ ಕೆಲವು ಸಲ ಕೈಕೈ ಕೂಡಿಸಿ ಯುದ್ಧ ಮಾಡಿದರು.

ಭಯಂಕರವಾದ ಯುದ್ಧ ನಡೆಯುತ್ತಿದೆ.

ಲಂಡನ್, ಫೆಬ್ರುವರಿ ೨೫.—ಜಪಾನಿನವರು ಪೇರಿಸ್ಕೋಫ್ ಗುಡ್ಡವನ್ನು ಗೆದ್ದುಕೊಳ್ಳಬೇಕೆಂದು ನುಗ್ಗಿ ಹೋದರು. ೨೩ನೆ ತಾರೀಖು ರಾತ್ರಿ ರಷ್ಯಾದವರು ಅವರಿಗೆ ಸ್ಥಳ ಕೊಡದೆ ಹಿಮ್ಮೆಟ್ಟಿಸಿದರು. ಜಪಾನಿನವರು ಮತ್ತೆ ನೆನ್ನೆ ನುಗ್ಗಿ ಹೋದರು. ರಷ್ಯಾದವರು ಯುದ್ಧ ಮಾಡಿ ಸಾಕಾಗಿ ಹಿಮ್ಮೆಟ್ಟುತ್ತಿದ್ದಾರೆ. ಈಗ ಆ ಸುತ್ತಿನಲ್ಲಿ ಬಹು ಕಠಿಣವಾದ ಯುದ್ಧ ನಡೆಯುತ್ತಾ ಇದೆ. ಜಯಾಪಜಯ ಇನ್ನೂ ನಿರ್ಧಾರವಾಗಲಿಲ್ಲ.

ಹೈಚೆಂಗಿನ ಬಳಿ ಒಂದು ರೈಲ್ವೆ ಸೇತುವೆಯನ್ನು ನಾಶ ಮಾಡಿದೆವೆಂತಲೂ ಇದರಿಂದ ಜಪಾನ್ ಸೈನ್ಯಗಳು ಎರಡು ಭಾಗಗಳಾಗಿವೆ ಎಂತಲೂ ಜನರಲ್ ಸಖರಾಫ್‌ಯವರು ತಿಳಿಸುತ್ತಾರೆ.

ಜಪಾನಿನಲ್ಲಿ ರಷ್ಯಾ ಖೈದಿಗಳು.

ಜಪಾನಿನವರು ಯುದ್ಧ ಭೂಮಿಯಲ್ಲಿ ಹಿಡಿದ ರಷ್ಯಾ ಖೈದಿಗಳ ಪೈಕಿ ಈಗ ೪೪ ೧೦೦ ಜನ ಜಪಾನ್ ರಾಜ್ಯದೊಳಗೆ ಇರುತ್ತಾರೆ.

ಹೈಚೆಂಗಿನಲ್ಲಿ ರಷ್ಯಾದವರು ಸೇತುವೆಯನ್ನು ನಾಶಪಡಿಸಬೇಕೆಂದು ಪ್ರಯತ್ನ ಪಟ್ಟರು. ಅಷ್ಟರಲ್ಲೇ ಜಪಾನ್ ಸೈನ್ಯಗಳು ಹೋಗಿ ಅವರ ಉದ್ದೇಶವನ್ನು ಹಾಳುಮಾಡಿ ಓಡಿಸಿದರೆಂದು ಟೋಕಿಯೋದಿಂದ ಸಮಾಚಾರ ಬಂದಿದೆ.

ಪೇರಿಸ್ಕೋಫ್ ಗುಡ್ಡವನ್ನು ಜಪಾನಿನವರು ಸನೀನುಗಳನ್ನು ಹಿಡಿದು ಯುದ್ಧಮಾಡುತ್ತಾ ನುಗ್ಗಿಹೋಗಿ ಗೆದ್ದರು. ತಮ್ಮ ಸೈನಿಕರ ಹೆಣಗಳನ್ನೇ ತುಳಿದುಕೊಂಡ, ರಷ್ಯಾದವರ ಮದ್ದು ಗುಂಡು ಮೊದಲಾದ ಆಟಂಕಗಳಲ್ಲಿ ಸಿಕ್ಕಿ ತುಂಬಾ ನಷ್ಟಪಟ್ಟು, ಕಡೆಗೆ ಗುಡ್ಡವನ್ನು ಗೆದ್ದುಕೊಂಡರು. ರಷ್ಯಾದವರ ಕಡೆ ಗಾಯಪಟ್ಟ ೧೨ ಮಂದಿ ಉದ್ಯೋಗಸ್ಥರನ್ನೂ ೩೦೦ ಜನ ಸೈನಿಕರನ್ನೂ ಆಸ್ಪತ್ರೆಗೆ ಸಾಗಿಸಿದರು. ಮಡಿದುಹೋದವರ ಸಂಖ್ಯೆಯೂ ತುಂಬಾ ಹೆಚ್ಚಾಗಿದೆ ಎಂದೂ, ಅವರ ಬಳಿ ತೋಟಾಗಳು ಮುಗಿಯುವ ತನಕ ಜಪಾನಿನವರಿಗೆ ಸ್ವಲ್ಪವೂ ಸ್ಥಳಕೊಡದೆ ಬಹು ಪರಾಕ್ರಮದಿಂದ ಕಾದಿದರೆಂತಲೂ ಜನರಲ್ ಕುರೋಪಾಟ್ಕಿನ್‌ರವರು ತಿಳಿಸುತ್ತಾರೆ.

ಈಗ ಜಪಾನಿನವರು ರಷ್ಯಾದವರ ಸ್ವಾಧೀನದಲ್ಲಿರುವ ಕಣಿವೆಗಳನ್ನು ಕಿತ್ತುಕೊಂಡು ಆಕ್ರಮಿಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿದ್ದಾರೆ.

ನಗರ ಡಿವೀಜನ್ನಿನ ಭೂತವರ್ತಮಾನ ಸ್ಥಿತಿ.

[ಬರೆದು ಬಂದದ್ದು.]

ಮೂವತ್ತು ವರ್ಷಗಳಿಂದ ಅವಿಚ್ಛಿನ್ನವಾಗಿ ಶ್ರೀಮನ್ಮಹಾರಾಜರವರ ಈ ಪ್ರಾಂತ್ಯದ ಪ್ರಜೆಗಳಿಗೆ ಬಹಳ ಉಪಯೋಗವಾಗಿದ್ದ ಶಿವಮೊಗ್ಗಾ ಕಾಲೇಜನ್ನು ನಮ್ಮ ಗೌರ್ನಮೆಂಟಿನವರು ಜನಗಳ ಇಷ್ಟಕ್ಕೆ ವಿರೋಧವಾಗಿ ಅಯುಕ್ತವಾದ ಕಾರಣಗಳ ಮೇಲೆ ತೆಗೆದುಹಾಕಿದ ವಿಷಯವನ್ನು ಕುರಿತು ಹೇಳುವುದಕ್ಕೆ ಮುಂಚೆ ನಗರ ಡಿವೀಜನ್ನಿನ ಜನಗಳು ಸ್ವದೇಶಿಗಳಾದ ಸರ್ ಪಿ. ಯನ್. ಕೃಷ್ಣಮೂರ್ತಿಗಳು ದಿವಾನ ಪದವಿಗೆ ಬರಬೇಕೆಂಬುವುದರಲ್ಲಿ ಎಷ್ಟು ಕಾತೂಹಲದಿಂದ ಲೋಕಪಾಲಕನಾದ ಭಗವಂತನನ್ನು ಪ್ರಾರ್ಥನೆಮಾಡಿ, ಸಾರ್ವಭೌಮ ಸರ್ಕಾರದವರನ್ನು ಬೇಡಿಕೊಂಡರೆಂಬುವುದು ೧೮೯೫ನೆ ಇಸ್ವಿಯಲ್ಲಿ ಶಿವಮೊಗ್ಗದಲ್ಲಿ ಸೇರಿದ್ದ ಒಂದು ಸಭಾದವರು ಮಾಡಿದ ಅರ್ಥ್ಯರ್ಥಗಳಿಂದ ತಿಳಿಯಬಹುದು. ಆ ಇರ್ಥ್ಯರ್ಥಗಳು ಯಾವುವೆಂದರೆ —

(೧) ನಮ್ಮ ಮಹಾರಾಜರವರ ಚಿಕ್ಕತನದಲ್ಲಿ ರಾಜ್ಯದ ಆಡಳಿತವನ್ನು ನಡಸುವುದಕ್ಕೋಸ್ಕರ ಅವರ ಮಾತೃಶ್ರೀಯರಾದ ಘನಹೊಂದಿದ ಮಹಾರಾಣೀ ವಾಣೀವಿಲಾಸ ಸನ್ನಿಧಾನ, ಸಿ. ಐ. ಯವರನ್ನು ರೀಜೆಂಟರನ್ನಾಗಿ ಮಾಡಿ, ಅವರ ಸಹಾಯಕ್ಕೋಸ್ಕರ ಎಗ್ಸಿಕ್ಯೂಟಿವ್ ಕೌನ್ಸಿಲನ್ನು ಏರ್ಪಾಟು ಮಾಡಿಕೊಡಬೇಕೆಂದು ಈ ಪ್ರಾಂತ್ಯದ ಜನಗಳ ಕಡೆಯಿಂದ ಅತ್ಯಂತ ಮರ್ಯಾದೆ ಪೂರ್ವಕವಾಗಿ ಗೌರ್ನರ್ ಜನರಲ್ ಸಾಹೇಬರನ್ನು ಪ್ರಾರ್ಥಿಸಿಕೊಳ್ಳಬೇಕು, (೨) ಮತ್ತು ಮೈಸೂರ್ ದೇಶೀಯರ ಹಿತಚಿಂತನೆಗಾಗಿ ಸ್ವದೇಶೀಯರನ್ನೇ ಆ ಕೌನಾಸ್ಲಿಗೆ ಮೆಂಬರುಗಳನ್ನಾಗಿ ನೇಮಿಸಿಕೊಡುವಂತೆ ವಿನಯಪೂರ್ವಕವಾಗಿ ಸಾರ್ವಭೌಮ ಸರ್ಕಾರದವರನ್ನು ಬೇಡಿಕೊಳ್ಳಬೇಕು.

ಮೇಲಿನ ಇರ್ಥ್ಯರ್ಥಗಳಿಂದ ಈ ಡಿಸ್ಟ್ರಿಕ್ಟಿನ ಜನಗಳು ಮಂತ್ರ್ಯ ಬದಲಾಯಿಸಿ, ಸ್ವದೇಶೀಯರು ಪದವಿಗೆ ಬರುವುದರಿಂದ ತಮಗೆ ವಿಶೇಷ ಶ್ರೇಯಸ್ಸಾಗುವುದು ಮತ್ತು ಅಭಿವೃದ್ಧಿಗೆ ಕಾರಣವಾಗುವುದು ಎಂಬ ಅಭಿಪ್ರಾಯವುಳ್ಳವರಾಗಿದ್ದರೆಂಬುವುದು ಪ್ರತ್ಯಕ್ಷವಾಗಿದೆ. ಅಯ್ಯೋ, ಅನುಭವದಲ್ಲಿ ಅವರ ಆಸೆಯು ಭಂಗವಾಗಿ ಅವರ ಸ್ಥಿತಿಯು 'ಕೆರೆಯಿಂದ ತೆಗೆದು ಭಾವಿಯಲ್ಲಿ ಒಗದನು' ಎಂಬಂತೆ ಆದದ್ದು ಕೇವಲ ಶೋಚನೀಯವಾಗಿದೆ.

ಈಗ ಗೌವರ್ನಮೆಂಟಿನವರು ನಮ್ಮ ಊರಿನಲ್ಲಿದ್ದ ಕಾಲೇಜನ್ನು ತೆಗೆದುಹಾಕುವುದಕ್ಕೆ ಕೊಟ್ಟಿರುವ ಕಾರಣಗಳು ಎಷ್ಟರಮಟ್ಟಿಗೆ ಸಮಂಜಸವಾದವುಗಳೆಂಬುವುದನ್ನು ಪರೀಕ್ಷಿಸಿ ನೋಡೋಣ. ಅವರು ತೋರಿಸಿರುವ ಕಾರಣಗಳು—(೧) "ಕಾಲೇಜಿನ ಎರಡು ತರಗತಿಗಳಿಗೆ ವರ್ಷ ಒಂದರ ೧೨,೦೯೦ ರೂಪಾಯಿಗಳು ಖರ್ಚಾಗುತ್ತದೆ." ಈ ಹೇಳಿಕೆಯು ವಾಸ್ತವ್ಯವಾದ್ದೆಂದು ಹೇಳಲು ಆಗುವುದಿಲ್ಲ ಹೇಗೆಂದರೆ, ಸನ್ ೧೯೧೪ನೆ ಇಸ್ವಿಯ ಲೆಕ್ಕದಂತೆ ಶಿವಮೊಗ್ಗಾ ಕಾಲೇಜ್ ಮತ್ತು ಹೈಸ್ಕೂಲ್ ಉಭಯವೂ ಸಹಾ ಸೇರಿ ೧೪,೭೭೨ ರೂಪಾಯಿಗಳು ಇತ್ತು, ಇದರಲ್ಲಿ ಕಾಲೇಜಿನ ರೀತಿಯಿಂದ ೨೫೪ ರೂಪಾಯಿ ವಜಾ ಜಾತಾ ೧೪,೫೧೮ ರೂಪಾಯಿಗಳು ಖರ್ಚು ಇತ್ತು ದೃಷ್ಟಾಂತಕ್ಕಾಗಿ ಹಾಸನದ ಹೈಸ್ಕೂಲ್ ಉಭಯವೂ ತೆಗೆದುಕೊಂಡು ನೋಡಿದಲ್ಲಿ ಶಿವಮೊಗ್ಗದಲ್ಲಿ ಹೈಸ್ಕೂಲ್ ಕಾಯಂ ಇರುವುದಕ್ಕೆ ಸಾಲೀಯಾನಾ ೧೨,೦೯೦ ರೂಪಾಯಿ ಉಭಯವೂ ಖರ್ಚಾಗಬಹುದು ಇದರಿಂದ ಕಾಲೇಜ್ ತೆಗೆದುಹಾಕಿದ ಸಮ್ಬಂಧವಾಗಿ ಸರ್ಕಾರಕ್ಕೇನಾದರೂ ಫಾಯಿದೆ ಆಯಿತೆಂದು ಹೇಳುವುದಾದರೆ, ವರ್ಷ ಒಂದರ ೨,೪೭೮ ರೂಪಾಯಿಗಳು ಮಾತ್ರ ಲಾಭ ತೋರಬಹುದೆಂದು ಸ್ಪಷ್ಟವಾಗಿದೆ ಆದರೆ ಇದೂ ಲಾಭವಾಯಿತೆಂದು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಯಾಕೆಂದರೆ, ಈ ಕಾಲೇಜಿನ ಪ್ರಿನ್ಸಿಪಲ್‌ರಾಗಿದ್ದ ಮಿ॥ ಕಿಂಗ್ ಸಾಹೇಬರ ಗ್ರೇಡ್ ೩೦೦ ರೂಪಾಯಿನಿಂದ ೫೦೦ ರೂಪಾಯಿ ವರಿಗೆ ಇದ್ದಾಗಿ ಇತ್ತು. ಕಾಲೇಜನ್ನು ಕಾಯಂ ಇಟ್ಟಿದ್ದ ಪಕ್ಷದಲ್ಲಿ ಅದೇ ದರ್ಜೆಯಂತೇನೇ ಅವರ ತರುವಾಯ ಅವರ ಸ್ಥಾನಕ್ಕೆ ಬಂದವರಿಗೆ ಸಿಕ್ಕುತ್ತಾ ಇತ್ತು. ಆದದರಿಂದ ನಿಜವಾಗಿ ನೋಡಿದರೆ ಕಾಲೇಜನ್ನು ತೆಗೆದುಹಾಕಿದ್ದರಿಂದ ಗೌರ್ನಮೆಂಟಿನವರಿಗೆ ಯಾವ ಲಾಭವೂ ಆಗಲಿಲ್ಲವೆಂತಲೇ ಹೇಳಬೇಕು.

(೨) "ಸನ್ ೧೯೧೨, ೧೯೧೩, ೧೯೧೪ ನೇ ಇಸ್ವಿಗಳಲ್ಲಿ ಎಫ್. ಎ. ಕ್ಲಾಸುಗಳಲ್ಲಿ ೩೨, ೩೩, ೨೯, ಈ ರೀತಿ ಸಂಖ್ಯೆ ಮಾತ್ರ ವಿದ್ಯಾರ್ಥಿಗಳು ಇದ್ದರೆಂದು." ಮೇಲಿನ ಸಂಖ್ಯೆಯನ್ನು ಬ್ರಿಟಿಷ್ ಇಂಡ್ಯಾದಲ್ಲಿ ಇರತಕ್ಕ ಕೆಲವು ಸೆಕೆಂಡ್ ಗ್ರೇಡ್ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿ ನೋಡಿದಲ್ಲಿ ಗೌರ್ನಮೆಂಟಿನವರು ಕೊಟ್ಟಿರುವ ಕಾರಣವು ಶಿವಮೊಗ್ಗದಲ್ಲಿದ್ದ ಕಾಲೇಜನ್ನು ಫಸ್ಟ್ ಗ್ರೇಡ್ ಕಾಲೇಜಾಗಿ ಮಾಡುವುದಕ್ಕೆ ಯೋಗ್ಯವಾದುದಾಗಿ ಇದೆಯೇ ಹೊರ್ತು ಅದನ್ನು ಹೀನಸ್ಥಿತಿಗೆ ತಂದುಬಿಟ್ಟದ್ದು ಸರಿಯಾದದ್ದಾಗಿಲ್ಲ ಉದಾಹರಣೆಗಾಗಿ ಬಳ್ಳಾರಿ ಕಾಲೇಜಿನ ಸ್ಥಿತಿಯನ್ನು ಈ ಕೆಳಗೆ ತೋರಿಸಿದೆ —

ವರುಷ	ವಿದ್ಯಾರ್ಥಿಗಳ ಸಂಖ್ಯೆ.	ತೇರ್ಗಡೆ
೧೯೧೧	೭	೧
೧೯೧೨	೬	೨
೧೯೧೩	೯	೩
೧೯೧೪	೮	ಗೊತ್ತಿಲ್ಲ

(೩) "ಶಿವಮೊಗ್ಗಾ ಕಾಲೇಜಿನ ವಿದ್ಯಾರ್ಥಿಗಳ ಪೈಕಿ ಅನೇಕರು ಬೇರೆ ಡಿಸ್ಟ್ರಿಕ್ಟಿನವರಾಗಿದಾರೆ" ಎಂತ ವಗೈರೆ. ಈ ಕಾರಣವನ್ನು ಬೆಂಗಳೂರು ಮತ್ತು ಮೈಸೂರಿನಲ್ಲಿರತಕ್ಕ ಫಸ್ಟ್ ಗ್ರೇಡ್ ಕಾಲೇಜುಗಳಿಗೆ ಅನ್ವಯಿಸುವ ಪಕ್ಷದಲ್ಲಿ ಅವುಗಳ ಸ್ಥಿತಿಯು ತತ್‌ಕ್ಷಣವೇ ನಮ್ಮದರಂತೆ ಬರಬೇಕು. ಯಾಕೆಂದರೆ, ಆ ಕಾಲೇಜ್‌ಗಳಲ್ಲಿನ ವಿದ್ಯಾರ್ಥಿಗಳು ಅದೇ ಡಿಸ್ಟ್ರಿಕ್ಟಿನ ನಿವಾಸಿಗಳೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದಲ್ಲದೆ ಶಿವಮೊಗ್ಗಾದಲ್ಲಿದ್ದ ಕಾಲೇಜ್ ಈ ಡಿಸ್ಟ್ರಿಕ್ಟಿನ ಜನಗಳಿಗೆ ಮಾತ್ರವಲ್ಲದೆ ನಗರಡಿವೀಜನ್ನಿನ ಮೂರು ಡಿಸ್ಟ್ರಿಕ್ಟುಗಳ ಪ್ರಯೋಜನಕ್ಕಾಗಿ ಸ್ಥಾಪಿಸಿದ್ದಾಗಿತ್ತು.

(೪) "ರೈಲ್ವೆ ಮುಂತಾದ ಪ್ರಯಾಣಸಲಕರಣೆಗಳು ಈಚೆಗೆ ಉಂಟಾಗಿರೋಣದರಿಂದ ಮಲ್ನಾಡಿನ ಜನಗಳಿಗೆ ವಿಶೇಷವಾದ ಸುಲಭ ತೋರಿಸತಕ್ಕದ್ದು ಅನಾವಶ್ಯಕವಾಗಿದೆ" ಎಂತ ವಗೈರೆ. ಈ ಕಾರಣದ ಮೇಲೆ ವಿಪರೀತ ಖರ್ಚು ಆಗತಕ್ಕ ಮೈಸೂರ್ ಬೆಂಗಳೂರ್ ಕಾಲೇಜ್‌ಗಳನ್ನು ಇಡತಕ್ಕದ್ದು ಅವಶ್ಯಕವೇ ಹ್ಯಾಗೆ? ಈ ಪಟ್ಟಣಗಳ ವಿದ್ಯಾರ್ಥಿಗಳಿಗೆ ಮದ್ರಾಸ್ ಮುಂತಾದ ಕಾಲೇಜಿಗೆ ಹೋಗಿ ಓದಲು ನಮಗಿಂತಲು ಪ್ರಯಾಣದ ಸಲಕರಣೆಗಳು ಹೆಚ್ಚಾಗಿಲ್ಲವೇ? ದರಿದ್ರಾವಸ್ಥೆಯಲ್ಲಿ ಇರತಕ್ಕ ವಿದ್ಯಾರ್ಥಿಗಳ ತಾಯಿತಂದೆಗಳು ರೈಲ್ವೆ ಛಾರ್ಜು ಮುಂತಾದ್ದನ್ನು ಸಹಿಸದೆ ಪ್ರಯಾಣ ಸಲಕರಣೆಯ ಪ್ರಯೋಜನವನ್ನು ಹೊಂದುವುದಿಲ್ಲ ಎಂಬುವದನ್ನು ಗೌರ್ನಮೆಂಟಿನವರು ಯೋಚಿಸದೇಹೋದದ್ದು ವ್ಯಸನಕರವಾದ ಮಾತಾಗಿದೆ

(೫) "ಮೈಸೂರ್ ಮತ್ತು ಬೆಂಗಳೂರಿನಲ್ಲಿ ಉತ್ತಮವಾದ ಭೋಜನಶಾಲೆಗಳಿವೆ." ಈ ವಿಷಯದಲ್ಲಿ ಶಿವಮೊಗ್ಗದಲ್ಲಿನ ಹಾಸ್ಟಲ್‌ಗಿಂತ ಯಾವದರಲ್ಲಿ ಬೆಂಗಳೂರ್ ಮತ್ತು ಮೈಸೂರಿನವು ಉತ್ತಮವಾಗಿವೆ ಎಂಬುವುದು ಗೊತ್ತಾಗುವುದಿಲ್ಲ ಅಲ್ಲಿ ಎಷ್ಟರಮಟ್ಟಿಗೆ ಮೇಲ್ವಿಗಾ ಮತ್ತು ವ್ಯವಸ್ಥೆ ಇದೆಯೋ ಅಷ್ಟರಮಟ್ಟಿಗೆ ಶಿವಮೊಗ್ಗದಲ್ಲಿಯೂ ಇದೆ ಇದರಲ್ಲಿ ವ್ಯತ್ಯಾಸವೇನಾದರೂ ಹೇಳಬೇಕಾದರೆ ಅಲ್ಲಿ ಖರ್ಚು ಜಾಸ್ತಿ, ಇಲ್ಲಿ ಖರ್ಚು ಕಡಮೆ. ಅಲ್ಲಿ ಸ್ಥಳಸಂಕೋಚ, ಇಲ್ಲಿ ಆ ಅನಾನುಕೂಲವಿಲ್ಲ. ಈ ಕಾರಣವನ್ನು ಪ್ರಧಾನವಾಗಿ ಇಟ್ಟುಕೊಂಡ ಪಕ್ಷದಲ್ಲಿ ಗೌರ್ನಮೆಂಟಿನವರು ನಮ್ಮ ಬಾಲಕರನ್ನು ವಿದೇಶಕ್ಕೆ ಅಂದರೆ ಜರ್ಮನಿ, ಅಥವಾ ಅಮೇರಿಕಾ ಮುಂತಾದ ಸ್ಥಳಗಳಿಗೆ ಕಳುಹಿಸಿ ಎಂದು ಅಪ್ಪಣೆ ಮಾಡಬಹುದು. ಯಾಕೆಂದರೆ, ಅಲ್ಲಿ ಅತ್ಯುತ್ತಮವಾದ ಹಾಸ್ಟಲ್‌ಗಳು ಇವೆ

(೬) "ಮೈಸೂರ್ ಮತ್ತು ಬೆಂಗಳೂರ್ ಕಾಲೇಜಿನ ತರಗತಿಗಳಿಗೆ ಕೆಲವು ಹುಡುಗರನ್ನು ಸೇರಿಸೋಣದರಿಂದ ಆ ಕ್ಲಾಸುಗಳ ಸಂಖ್ಯೆ ಹತೋಟಿಗೆ ಮೀರುವಷ್ಟು ಹೆಚ್ಚಾಯಿತೆಂಬ ಬರುವಿಲ್ಲ." ಈ ಕಾರಣವು ಯಾವ ರೀತಿ ಗೌರ್ನಮೆಂಟಿನವರ ಸಿದ್ಧಾಂತವನ್ನು ಪೋಷಿಸುವುದೆಂಬುವುದು ತಿಳಿಯುವದಿಲ್ಲ

(೭) "ಬೆಂಗಳೂರ್ ಮೈಸೂರಿನಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೇ ಹವಾದ ಪ್ರಯೋಜನ ಸಿಕ್ಕುವುದು." ಇದು ನಿಜ ಆದರೆ ಜನಗಳ ದರಿದ್ರಾವಸ್ಥೆ ಮುಂತಾದ ಅನೇಕ ಕಾರಣಗಳನ್ನೂ ಪ್ರತಿಕೂಲಗಳನ್ನೂ ಗೌರ್ನಮೆಂಟಿನವರು ಯೋಚಿಸತಕ್ಕದ್ದಾಗಿತ್ತು.

(೮) "ಬೆಂಗಳೂರ್, ಮೈಸೂರಿನಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆ ಸಹವಾಸ ದೊರಿಯುವದು" ಈ ಕಾರಣದ ಅಭಿಪ್ರಾಯವು ಸಾಧಾರಣವಾಗಿ ತಿಳಿಯುವುದು ಕಷ್ಟವಾಗಿದೆ ಇದಕ್ಕೆ ನಾನಾರ್ಥವನ್ನು ಊಹಿಸಬಹುದಾದ್ದರಿಂದ ಜಿಜ್ಞಾಸ ಬೆಳೆಸುವುದರಲ್ಲಿ ಪ್ರಯೋಜನವಿಲ್ಲ

ಶಿವಮೊಗ್ಗದಲ್ಲಿದ್ದ ಕಾಲೇಜನ್ನು ತೆಗೆದುಹಾಕುವುದಕ್ಕೆ ಗೌರ್ನಮೆಂಟಿನವರು ಕೊಟ್ಟ ಕಾರಣಗಳು ಮೇಲೆ ಹೇಳಿದವುಗಳಾಗಿವೆ ಅವು ಎಷ್ಟರಮಟ್ಟಿಗೆ ಸಮಂಜಸವಾದವುಗಳೆಂಬುವುದನ್ನು ದೇಶಾಭಿಮಾನಿಗಳ ಕಡೆಗೆ ಬಿಟ್ಟು ಇದೇನೆ.

ಯೇಸು ಸ್ವಾಮಿಯ ಸುಲಕ್ಷಣವು

ಭೂಲೋಕದಲ್ಲಿ ಅನೇಕಾನೇಕ ಮತಗಳಿವೆ, ಇವು ಒಂದಾನೊಂದು ಕೆಲವು ವಿಷಯಗಳಲ್ಲಿ ಹೋಲುವುವುಗಳಾಗಿವೆ. ಕೆಲವು ಮತಗಳು ಒಂದೊಂದು ದೇಶದಲ್ಲಿ ಮಾತ್ರವಿವೆ. ಇನ್ನು ಕೆಲವಾದರೋ ಹಲವು ದೇಶಗಳಲ್ಲಿ ಹಬ್ಬಿಕೊಂಡಿರುತ್ತವೆ ಈ ಮತಗಳನ್ನೆಲ್ಲಾ ನಾವು ಪರಿಶೀಲನೆ ಮಾಡುವಲ್ಲಿ ಭೂಲೋಕವನ್ನೆಲ್ಲಾ ವ್ಯಾಪಿಸಿ ಅದರೊಳಗಿರುವ ಪ್ರತಿಯೊಬ್ಬ ಮನುಷ್ಯನೂ ಪ್ರತಿಯೊಂದು ಜನಾಂಗವೂ ಸ್ವೀಕರಿಸುವ ಪರಿಯಂತವೂ ಹಬ್ಬುತ್ತಲಿರುವದಾಗಿ ಹೇಳಲ್ಪಟ್ಟಿರುವ ಮತವು ಒಂದೇ ಒಂದುಂಟೆಂದು ತಿಳಿದು ಬರುತ್ತದೆ. ಹೀಗಿರುವದರಿಂದ ಈ ಮತವು ಇತರ ಮತಗಳಿಗೆ ವ್ಯತ್ಯಾಸವಾಗಿರುವಂತೆ ಇದರಲ್ಲಿರುವ ವಿಶೇಷವೇನು ಎಂದು ನಾವು ವಿಚಾರಿಸುವದು ಒಳ್ಳೇದಲ್ಲವೇ?

ಯೇಸು ಸ್ವಾಮಿಯಿಂದ ಸ್ಥಾಪಿತವಾದ ಈ ಮತವು ಇತರ ಮತಗಳಿಗಿಂತ ವಿಶೇಷವಾದುದೆಂದೆನಿಸಿಕೊಳ್ಳುವದಕ್ಕೆ ಅದರಲ್ಲಿ ಸರ್ವಗುಣ ಸಂಪೂರ್ಣನಾದ ಒಬ್ಬ ಪುರುಷನನ್ನು ಚಿತ್ರಿಸಿ ತೋರಿಸುವದೇ ಒಂದು ಆಧಾರವಾಗಿದೆ ಯೇಸು ಸ್ವಾಮಿಯು ಭೂಲೋಕದಲ್ಲಿ ಜೀವಿಸುತ್ತಿಲಒಂದು ದಿನ ಆತನು ಶತ್ರುಗಳ ನಡುವೆ ನಿಂತಿರುವಾಗ ಅವರನ್ನು ನೋಡಿ—ನನ್ನಲ್ಲಿ ಪಾಪವನ್ನು ತೋರಿಸಿಕೊಡುವವನು ನಿಮ್ಮೊಳಗೆ ಯಾರಿದ್ದಾರೆ? ಎಂದು ಕೇಳಿದನು. ಅವರಲ್ಲಿ ಒಬ್ಬನಾದರೂ ಮುಂದೆ ಬಂದು, ನಾನು ನಿನ್ನಲ್ಲಿ ಇಂಥಿಂಥ ಪಾಪವನ್ನು ಕಂಡೆನೆಂದು ಹೇಳಲಾರದೆ ಹೋದರು. ಹೀಗೆ ಕಳೆದ ಎರಡು ಸಾವಿರ ವರ್ಷಗಳಿಂದಲೂ ಆ ಸ್ವಾಮಿಯ ಜೀವಮಾನದ ಚರಿತ್ರೆಯನ್ನು ಕೋಟ್ಯನುಕೋಟಿ ಜನಗಳು ಓದುತ್ತಾ ಬರುತ್ತಿದ್ದಾರೆ. ಅವರಲ್ಲಿ ಎಷ್ಟೋ ಮಂದಿ ಆತನಿಗೆ ಶತ್ರುಗಳೆನಿಸಿಕೊಂಡಿದ್ದರು. ಆದರೂ ಆತನಲ್ಲಿ ಒಬ್ಬನಾಗಲಿ ಒಂದು ದೋಷವನ್ನು ತೋರಿಸಬಲ್ಲರೇ? ಇಲ್ಲವೇ ಇಲ್ಲ. ಆತನ ಸ್ನೇಹಿತರಾಗಲಿ ಶತ್ರುಗಳಾಗಲಿ—ಆತನಂಥ ಪಾವನಮೂರ್ತಿಯನ್ನು ಭೂಲೋಕದಲ್ಲಿ ಯಾರೂ ಎಂದೂ ಕಂಡದಿಲ್ಲ ಎಂಬುದಾಗಿ ಹೇಳಿರುವರು. ಯೇಸು ಸ್ವಾಮಿಯ ಚರಿತ್ರೆಯನ್ನು ನೋಡುವಲ್ಲಿ ತಿಳಿಯಬರುವುದೇನಂದರೆ —

೧. ಮನುಷ್ಯನಾದವನು ಎಷ್ಟು ಅತಿಶಯವಾದ ಗುಣಪ್ರಸನ್ನನಾಗಿ ಜೀವಿಸಬಹುದೆಂದು ತಿಳಿದು ಬರುತ್ತದೆ

ಭೂಲೋಕದಲ್ಲಿ ಒಬ್ಬೊಬ್ಬರು ಒಂದೊಂದು ವಿಶೇಷ ಗುಣದಲ್ಲಿ ಅತಿ ಪ್ರಸಿದ್ಧರಾಗಿ ಇದ್ದದುಂಟು ಒಬ್ಬನು ಧೈರ್ಯದಲ್ಲಿಯೂ ಮತ್ತೊಬ್ಬನು ತಾಳ್ಮೆಯಲ್ಲಿಯೂ ಬೇರೊಬ್ಬನು ದೇವಭಕ್ತಿಯಲ್ಲಿಯೂ ಮತ್ತೊಬ್ಬನು ಉದಾರತ್ವದಲ್ಲಿಯೂ ಪ್ರಖ್ಯಾತಿಯನ್ನು ಪಡೆದಿರುವುದುಂಟು ಆದರೆ ಯೇಸು ಸ್ವಾಮಿಯು ಸಚ್ಚರಿತ್ರೆಯನ್ನು ವಿಮರ್ಶಿಸಿ ನೋಡಿದರೆ ಸಕಲ ಸುಲಕ್ಷಣಗಳೂ ಆತನಲ್ಲಿ ಇಂಬುಗೊಂಡಿವೆ ಎಂದು ಗೊತ್ತಾಗುತ್ತದೆ ಆತನಲ್ಲಿದ್ದ ಪವಿತ್ರತ್ವವಾದರೋ ಆತನಂತೆ ಜೀವಿಸಿದವನು ಭೂಲೋಕದಲ್ಲಿ ಒಬ್ಬನಾದರೂ ಇರಲಿಲ್ಲವೆಂದು ಹೇಳಬೇಕಾಗಿದೆ ಆತನಲ್ಲಿದ್ದ ಕನಿಕರವನ್ನು ನೋಡ್ಡದೆಂದರೆ ಆತನು ಪಾಪಿಗಳೂ ಅಪವಿತ್ರರೂ ಆದ ಮನುಷ್ಯರಿಗೆ ಸಹಾಯಮಾಡುವದರಲ್ಲಿ ತನ್ನ ಜೀವಕಾಲವನ್ನೆಲ್ಲ ನೆಚ್ಚಮಾಡಿದ್ದಲ್ಲದೆ ಅವರಿಗಾಗಿ ಸಾಯುವದಕ್ಕೆ ಹಿಂದೆಗೆಯದಷ್ಟು ಅತಿಶಯವಾದುದಾಗಿತ್ತು ನಾವು ಆ ಸ್ವಾಮಿಯ ಚರಿತ್ರೆಯನ್ನು ಓದುವಾಗ್ಗೆ ದೇವರು ಉದ್ದೇಶಿಸಿದಂತೆ ಯಾವ ಮನುಷ್ಯನೂ ಜೀವಿಸದಿದ್ದಾಗ್ಯೂ ಆ ಯೇಸುವಾದರೂ ಜೀವಿಸಿದನೆಂದು ಒಪ್ಪಿಕೊಳ್ಳಬೇಕಾಗುತ್ತದೆ ಇದಲ್ಲದೆ ದೇವರ ಚಿತ್ತವನ್ನು ಸಂಪೂರ್ಣವಾಗಿ ನೆರವೇರಿಸಿದವನು ಒಬ್ಬನಾಗಲಿ ಇಲ್ಲನೆಂದು ನಾವು ತಿಳಿಯುವದಲ್ಲದೆ, ಯೇಸು ಸ್ವಾಮಿಯು ನೆರವೇರಿಸಿದುದಕ್ಕಿಂತಲೂ ಹೆಚ್ಚಾಗಿ ನೆರವೇರಿಸಬಲ್ಲವನು ಬೇರೆ ಯಾವನಾದರೂ ಇದ್ದಾನೆಂದು ಊಹಿಸುವದಕ್ಕೂ ಸಾಧ್ಯವಲ್ಲ ಈ ಪ್ರಕಾರವಾಗಿ ಯೇಸುಸ್ವಾಮಿಯೊಬ್ಬನೇ ದೇವರ ಮುಂದೆಯೂ ಮನುಷ್ಯರ ಮುಂದೆಯೂ ಅತ್ಯಂತ ಸಮರ್ಪಕವಾಗಿ ಜೀವಿಸಿದ ಪುರುಷನೆಂಬುದು ವ್ಯಕ್ತವಾಗಿದೆ

೨. ಮನುಷ್ಯನು ಎಂಥವನಾಗಿರಬೇಕೆಂಬುದು ತಿಳಿಯಬರುತ್ತದೆ.

ಭೂಲೋಕದಲ್ಲಿ ಇದುವರೆಗೂ ಒಬ್ಬನೇ ಒಬ್ಬನು ಸರ್ವಗುಣ ಸಂಪನ್ನನಾಗಿ ಜೀವಿಸಿದನೆಂದು ಚರಿತ್ರೆಯಿಂದ ತಿಳಿದು ಬಂದಿದ್ದಾಗ್ಯೂ ಮನುಷ್ಯನು ದೇವರ ಚಿತ್ತವನ್ನು ನೆರವೇರಿಸುವದಕ್ಕೆ ಆಗುವದಿಲ್ಲವೆಂದು ಹೇಳುವದಕ್ಕೆ ಆಧಾರವಿಲ್ಲ ಅಸಂಪೂರ್ಣತೆಯು ಮನುಷ್ಯ ಸ್ವಭಾವಕ್ಕೇ ಬಂದದ್ದು ಆದಕಾರಣ ಸತ್ಯವಂತನಾಗಿಯೂ ನೀತಿವಂತನಾಗಿಯೂ ಜೀವಿಸುವದು ಅಸಾಧ್ಯವೆಂದು ಹೇಳಲು ಕಾರಣವಿಲ್ಲ ಹಾಗೆ ಹೇಳುವದಾದರೆ ನಿಜವಾಗಿ ಮನುಷ್ಯನಾದ ಯೇಸುವಿನ ವಿಷಯದಲ್ಲಿಯೂ ಈ ಮಾತು ಸರಿಸಲ್ಲದ್ದಾಗುವದು. ಆ ಮಾತನ್ನು ಬಿಡಿ ನಾವು ಎಷ್ಟು ಉತ್ಕೃಷ್ಟ ಗುಣಶಾಲಿಗಳಾಗಿ ಜೀವಿಸುವುದು ಸಾಧ್ಯವೋ ಅಷ್ಟು ಗುಣಸಂಪನ್ನರಾಗಿ ಜೀವಿಸುವದಕ್ಕೆ ಪ್ರಯತ್ನ ಮಾಡುವದು ನಮ್ಮ ಕರ್ತವ್ಯವಾಗಿದೆ ನಮ್ಮ ತಿಳುವಳಿಕೆಗೆ ಬಂದಿರುವ ಮಾನುಷ ಚರಿತ್ರೆಗಳಲ್ಲಿ ಯೇಸು ಸ್ವಾಮಿಯ ಜೀವಮಾನ ಚರಿತ್ರೆಯೇ ಅತ್ಯಂತ ಅತಿಶಯವಾದದ್ದಾಗಿದೆ ಆದಕಾರಣ ಆ ಕ್ರಿಸ್ತನು ಎಷ್ಟು ಪಾವನ ಪುರುಷನಾಗಿ ಜೀವಿಸಿದನೋ ಅಷ್ಟು ಪಾವನರಾಗಿ ಜೀವಿಸುವದು ನಮ್ಮ ಕರ್ತವ್ಯವಾಗಿದೆ ಯೇಸು ಸ್ವಾಮಿಯೊಬ್ಬನೇ ಮನುಷ್ಯರಿಗೆ ಸಹ ಈ ವಿಷಯದಲ್ಲಿ ಮಾದರಿಯಾಗಿರುವನು ಬೇರೊಬ್ಬರಿಲ್ಲ.

೩. ಮನುಷ್ಯನ ಕೊರತೆಯನ್ನು ವ್ಯಕ್ತಪಡಿಸುವಂಥಾದ್ದಾಗಿದೆ

ಮನುಷ್ಯರೆಲ್ಲರೂ ಸಾಮಾನ್ಯವಾಗಿ ತಾವು ಯೇಸುವಿನಂತೆಯೇ ಇರಬೇಕೆಂದು ತಿಳಿದಿದ್ದಾಗ್ಯೂ ಅದಕ್ಕೂ ತಮ್ಮ ನಡತೆಗೂ ಎಷ್ಟೋ ಅಂತರವುಂಟೆಂಬುದು ಸರ್ವರಿಗೂ ಅನುಭವಸಿದ್ಧವಾಗಿದೆ ನಮ್ಮ ಮನೆಗಳಲ್ಲಿರುವ ದೀಪಕ್ಕೂ ಸೂರ್ಯನಿಗೂ ಎಷ್ಟು ಅಂತರವಿದೆ ಹಾಗೆಯೇ ಯೇಸು ಸ್ವಾಮಿಯ ನಡತೆಗೂ ಭೂಲೋಕದಲ್ಲಿ ಇದುವರೆಗೂ ಜೀವಿಸಿರುವ ಅತಿ ಪರಿಶುದ್ಧನಾದ ಮನುಷ್ಯನ ನಡತೆಗೂ ಅಷ್ಟು ಅಂತರವಿದೆ ನಮ್ಮ ಅನುಸರಣೆಗಾಗಿಯೇ ಆತನು ತನ್ನ ಮಾದರಿಯನ್ನು ಕೊಟ್ಟಿದ್ದಾನೆ ನಾವಾದರೋ ಸ್ವಶಕ್ತಿಯಿಂದ ಆ ಮಾದರಿಯನ್ನು ಅನುಸರಿಸುವದಕ್ಕೆ ಯತ್ನಿಸಿದ್ದೇಯಾದರೆ ನಮ್ಮ ಪ್ರಯತ್ನವು ಎಂದಿಗೂ ಸಫಲವಾಗಲಾರದು. ಹಕ್ಕಿಯ ಮರಿಗೆ ತಾಯ ಹಕ್ಕಿಯು ಹಾರುವದನ್ನು ಕಲಿಸುವದಕ್ಕಾಗಿ ಗೂಡಿನ ಸುತ್ತಲೂ ಹಾರುತ್ತಾ ಇರುವದು ಮರಿಯು ಆ ತಾಯಿಯು ಮಾಡುವಂತೆಯೇ ರೆಕ್ಕೆಗಳನ್ನು ಬಡಿದುಕೊಳ್ಳುತ್ತಾ ಹಾರುತ್ತಾ ಕಲಿತುಕೊಳ್ಳುವದು. ಅದರಂತೆಯೇ ಯೇಸು ಸ್ವಾಮಿಯು ನಾವು ಹೇಗೆ ಜೀವಿಸಬೇಕೆಂಬುದನ್ನು ತಿಳಿಸುವದಕ್ಕಾಗಿ ತಾನೇ ನಡೆದು ತೋರಿಸುತ್ತಾನೆ ಮನುಷ್ಯನು ಪವಿತ್ರನಾಗಿಯೂ ದೇವಸಮಾನನಾಗಿಯೂ ಜೀವಿಸತಕ್ಕ ಶಕ್ತಿಯನ್ನು ಹೊಂದಿದ್ದಾನೆಂಬುದು ಸ್ವಾಮಿಯ ಚರಿತ್ರೆಯಿಂದ ನಮಗೆ ವ್ಯಕ್ತವಾಗುತ್ತದೆ. ಆದರೂ ನಮ್ಮ ಅನುಭವವನ್ನು ನೋಡಿಕೊಂಡರೆ ನಮ್ಮಲ್ಲಿ ವಿವರಿಸಲಾಗದ ಯಾವುದೋ ಒಂದು ಕೊರತೆಯು ಇದ್ದುಕೊಂಡು, ಆ ಸ್ವಾಮಿಯ ಸುಲಕ್ಷಣಗಳನ್ನು ಸಂಪಾದಿಸಿಕೊಳ್ಳದಂತೆ ನಮ್ಮ ಮುಂದೆ ಅಡ್ಡಿಯಾಗಿ ಬರುತ್ತದೆಂದು ತಿಳಿದುಕೊಳ್ಳುತ್ತೇವೆ. ಹಾರಬೇಕೆಂದಿರುವ ಹಕ್ಕಿಯ ಒಂದು ಕಾಲನ್ನು ಮರದ ಕೊಂಬೆಗೆ ಕಟ್ಟಿಹಾಕಿದಂತೆ ನಮ್ಮ ದೋಷವು ಆಗಿದೆ ಆ ಹಕ್ಕಿಗೆ ರೆಕ್ಕೆಗಳಿವೆ ತಾಯಿ ಹಕ್ಕಿಯು ಹಾರಿ ತೋರಿಸುತ್ತದೆ ಆದರೂ ಅದು ಹಾರಲಾರದು ಹಾಗೇ ನಾವೂ ಕ್ರಿಸ್ತನ ಹಾಗೆ ಆಗುವದಕ್ಕೆ ಏನೋ ಒಂದು ಅಭ್ಯಂತರವು ನಮ್ಮಲ್ಲಿರುತ್ತದೆ ಅದೇನೆಂದು ಯೋಚಿಸಿದರೆ ಅದು ನಮ್ಮ ಪಾಪಸ್ವಭಾವವೇ ಎಂದು ಗೊತ್ತಾಗುತ್ತದೆ ಆ ಪಾಪಸ್ವಭಾವವು ನಮ್ಮಲ್ಲಿರುವದರಿಂದಲೇ ನಮಗೆ ಯೋಗ್ಯವೆಂದು ತೋರಿದ ಕರ್ತವ್ಯವನ್ನು ಮಾಡಲಾರದವರಾಗಿದ್ದೇವೆ ದೇವರಲ್ಲಿ ನಮಗೆ ಸಹವಾಸವಾಸವಾದರೂ ಐಕ್ಯವಾದರೂ ದೊರೆಕದೆ ಹೋಗುತ್ತದೆ.

೪ ಮನುಷ್ಯನು ಆ ಉತ್ಕೃಷ್ಟ ಸ್ಥಿತಿಯನ್ನು ಪಡೆಯಬಹುದೆಂಬುವದೂ ಗೊತ್ತಾಗುತ್ತದೆ.

ಮೇಲೆ ಹೇಳಿದ ನಿದರ್ಶನದಲ್ಲಿ ಆ ಮರಿ ಹಕ್ಕಿಯನ್ನು ಯಾರಾದರೂ ಬಿಡಿಸಿಬಿಟ್ಟರೆ ಅದು ಸಹ ತಾಯಿ ಹಕ್ಕಿಯಂತೆಯೇ ಹಾರಬಲ್ಲದಾಗುತ್ತದೆಯಷ್ಟೆ. ಯೇಸು ಸ್ವಾಮಿಯವರದರೋ ಮನುಷ್ಯರನ್ನು ಬಂಧಿಸಿರುವ ಪಾಪ ಅಥವಾ ಕರ್ಮ ಬಂಧನವನ್ನು ಬಿಚ್ಚುವದಕ್ಕೆ ಭೂಲೋಕದಲ್ಲಿ ಅವತರಿಸಿದನು. ಆತನು ಈ ಮಹತ್ಕಾರ್ಯವನ್ನು ನೆರವೇರಿಸುವದಕ್ಕಾಗಿ ತನಗೋಸ್ಕರ ಸತ್ತನು. ಇದರ ವಿವರವು ಸುವಾರ್ತಾ ಪುಸ್ತಕಗಳಲ್ಲಿ ಬರೆದಿದೆ. ಇದನ್ನು ಈ ವಾರ ತಿಳಿಸುವದಕ್ಕೆ ಸ್ಥಳವಿಲ್ಲ. ಪ್ರಕೃತದಲ್ಲಿ ಇಷ್ಟು ಮಾತ್ರ ಹೇಳುತ್ತೇವೆ. ಅದೇನೆಂದರೆ, ಮನುಷ್ಯರನ್ನು ದೇವರಿಂದ ದೂರಮಾಡುವಂಥಾದ್ದು ಯಾವದೋ ಆ ಪಾಪವನ್ನು ಆತನು ತೆಗೆದುಹಾಕುತ್ತಾನೆಂಬುದರಲ್ಲಿ ಸಂಶಯವೇ ಇಲ್ಲ. ಮತ್ತು ಆತನು ತೋರಿಸಿಕೊಟ್ಟಿರುವ ಮಾದರಿಯನ್ನು ಹೆಚ್ಚು ಹೆಚ್ಚಾಗಿ ಅನುಸರಿಸುವದಕ್ಕೆ ಆತನು ಶಕ್ತಿಯನ್ನು ಕೊಡುತ್ತಾನೆಂಬುದೂ ಅನುಭವಸಿದ್ಧವಾಗಿದೆ. ಕ್ರೀಸ್ತನ ಸುವಾರ್ತೆಯು ಯಾವ ಯಾವ ದೇಶದಲ್ಲಿ ಸಾರಲ್ಪಟ್ಟಿದೆಯೋ ಅಲ್ಲಿರುವವರೆಲ್ಲರೂ ಕ್ರೀಸ್ತನು ಮನುಷ್ಯರನ್ನು ಪವಿತ್ರಮಾಡುವವನಾಗಿದ್ದಾನೆಂದೂ ದೇವರ ಸಹವಾಸದಲ್ಲಿ ಸೇರಿಸಬಲ್ಲವನಾಗಿದ್ದಾನೆಂದೂ ತಿಳಿದುಕೊಂಡಿದ್ದಾರೆ. ಆತನಲ್ಲಿ ನಂಬಿರುವವರಿಗೆ ಮನಸ್ಸಮಾಧಾನವೂ ಪವಿತ್ರಾಲೋಚನೆಯೂ ಸತ್ಯಪ್ರವರ್ತನೆಯೂ ಬರುತ್ತವೆ. ಆದಕಾರಣ ಆತನನ್ನು ಈ ವಿಷಯದಲ್ಲಿ ಉಪೇಕ್ಷಿಸಿದರೆ ಆತನ ಸಹಾಯವನ್ನು ಅಲಕ್ಷ್ಯ ಮಾಡುವದು ಯುಕ್ತವಲ್ಲ. ತನ್ನನ್ನು ಯಾರು ಎಂಥ ಸಮಯದಲ್ಲಿ ಪ್ರಾರ್ಥಿಸಿದರೂ ಅವರಿಗೆ ಸಹಾಯ ಮಾಡುವೆನಾಗಿ ಮಾತು ಕೊಟ್ಟಿರುತ್ತಾನೆ. ಆತನು ಹೇಳಿದ ಮಾತನ್ನು ಎಂದಿಗೂ ವಿಫಲಕ್ಕೆ ತರನಲ್ಲ.

ಇಂಡಿಯಾ ದೇಶದ ವೃತ್ತಾಂತಗಳು

ಹೌರಾ ಪಟ್ಟಣದಲ್ಲಿರುವ ಭಾರೀ ನಾರಿನ ಕಾರ್ಖಾನೆಗೆ ಕಳೆದ ವಾರ ಬೆಂಕಿಬಿದ್ದು, ಸುಮಾರು ಎರಡುವರೆ ಲಕ್ಷ ರೂಪಾಯಿನ ಸಾಮಾನು ಯಂತ್ರ ಮುಂತಾದ್ದು ನಷ್ಟವಾಯಿತು.

*****

ಕಲ್ಕತ್ತಾ ಹೈಕೋರ್ಟಿನಲ್ಲಿ ಮೆ॥ ಗಾರ್ಡನ್ ಎಂಬೊಬ್ಬ ವರ್ತಕರು ಭಾರತ ಮಿತ್ರ ಎಂಬ ವರ್ತಮಾನ ಪತ್ರಿಕೆಯ ಎಡಿಟರ ಮೇಲೆ ೧೮,೦೦೦ ರೂಪಾಯಿ ಪ್ರಾವಿಖಾಜಿಗೆ ದಾವಾ ತಂದಿದ್ದಾನೆ.

*****

ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಆರಂಭಿಸಿರುವ ದೊಡ್ಡ ಕಾಮಗಾರಿಯನ್ನು ಮಾಡಿಸುವದಕ್ಕೆ ಮೆ॥ ಬೆಲ್ಟ್ ಎಂಬ ಇಂಜನಿಯರರನ್ನು ತಿಂಗಳಿಗೆ ಮೂರು ಸಾವಿರ ರೂಪಾಯಿ ಸಂಬಳ ಕೊಟ್ಟು ನೇಮಿಸಿಕೊಂಡಿದಾರೆ.

*****

ರಂಗೂನ್ ಪಟ್ಟಣದಲ್ಲಿ ಪ್ರಾಪ್ತವಾಗಿರುವ ಪ್ಲೇಗ್ ಉಪದ್ರವು ಬೇಗ ನಿವಾರಣೆಯಾಗದಿದ್ದಲ್ಲಿ ಅಲ್ಲಿನ ಮಹಮದೀಯರು ಆ ರೋಗ ಚಿಕಿತ್ಸೆಗೋಸ್ಕರ ಬೇರೆ ಒಂದು ಆಸ್ಪತ್ರೆಯನ್ನು ಕಟ್ಟಿ ನಡೆಸುವಂತೆ ಗೊತ್ತುಮಾಡಿಕೊಂಡಿದಾರೆ.

*****

ಪುದುಕೋಟಾ ಸಂಸ್ಥಾನದಲ್ಲಿ ಸದ್ಯಕ್ಕೆ ಪ್ರಜಾ ಪ್ರತಿನಿಧಿ ಸಭೆಯಂತೆ ಕಾಣುತ್ತಾ. ಕಾಲಸ್ಥಿತಿ ಕೆಟ್ಟುಹೋಗಿರುವದರಿಂದ ಈ ಸಾರಿ ಅಲ್ಲಿನ ಪ್ರಜಾಪ್ರತಿನಿಧಿ ಸಮಾಜವನ್ನು ಯಾವಾಗ ಮಾಡುತ್ತಾರೋ ಇನ್ನೂ ಕಾಲ ನಿಷ್ಕರ್ಷೆ ಮಾಡದೆ ಇದ್ದಾರೆ.

*****

ಕಲ್ಕತ್ತೆಯಲ್ಲಿರುವ ಮಿಸ್ ಸರಳಾದೇವಿ ಘೋಷಾಲ್, ಬಿ. ಎ. ಎಂಬೊಬ್ಬ ಬಂಗಾಳಿ ಸ್ತ್ರೀಯು ಕಪೂರ್ಥಲ ಸಂಸ್ಥಾನದಲ್ಲಿ ಮುಖ್ಯ ದಿವಾನರಾಗಿರುವ ಪ್ಯಾರಲಾಲ್ ಎಂಬೊಬ್ಬ ಪಂಜಾಬಿ ದೇಶದ ಮನುಷ್ಯನನ್ನು ವರಿಸಿ ವಿವಾಹಮಾಡಿಕೊಳ್ಳುವವಳಾಗಿದಾಳೆ.

*****

ಅಫ್ಘಾನಿಸ್ಥಾನದ ಅಮೀರರು ಕಾಂದಹಾರಿನ ಗವರ್ನರಾದ ಸರ್ದಾರ್ ಅಹಮದ್ ಖಾನರವರನ್ನು ಆ ಕೆಲಸದಿಂದ ತೆಗೆದುಹಾಕಿ, ತಮ್ಮ ರಾಜಧಾನಿಗೆ ಕರೆಸಿಕೊಂಡಿದಾರೆಂತಲೂ ಅವರಿಬ್ಬರ ಮಕ್ಕಳನ್ನೂ ಬಂದೀಖಾನೆಯಲ್ಲಿ ಹಾಕಿದಾರೆಂತಲೂ ತಿಳಿದು ಬಂದಿದೆ.

*****

ಕಳೆದ ಜನವರಿ ೩೧ಕ್ಕೆ ಆಖೈರಾದ ೧೦ ತಿಂಗಳಲ್ಲಿ ಹಿಂದುಸ್ಥಾನದ ರೈಲ್ವೆ ಇಲಾಖೆಯಲ್ಲಿ ೩೨ ಕೋಟಿಯೂ, ೬ ಲಕ್ಷ ರೂಪಾಯಿ ಉತ್ಪತ್ತಿಯಾಗಿದೆ. ಆದರೆ ಹೋದವರುಷ ಅದೇ ಹತ್ತು ತಿಂಗಳಲ್ಲಿ ೨೯ ಕೋಟಿಯೂ, ೫೬ ಲಕ್ಷ ರೂಪಾಯಿಮಾತ್ರ ಉತ್ಪತ್ತಿಯಾಗಿತ್ತು.

*****

ರಾಯಚೂರಿನಿಂದ ಲಿಂಗಸೂಗೂರಿನ ತನಕ ೪೩ ಮೈಲಿ ದೂರ ರೈಲ್‌ರಸ್ತೆ ಹಾಕುವಂತೆ ಹುಕುಂ ಆಗಿದೆ. ಈ ಕಾಮಗಾರಿ ಕೊನೆ ಸಂಬಂಧವಾಗುವದು. ಇದರಿಂದ ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಪಟ್ಟಿ ಎಂಬ ಚಿಕ್ಕ ದ ಊರಿಗೆ ತುಂಬಾ ಸಹಾಯವಾದೀತೆನ್ನುವದಕ್ಕೆ ಸಂಶಯವಿಲ್ಲ.

*****

ಬೊಂಬಾಯಿ ಪಟ್ಟಣದಲ್ಲಿ ಶಾಪೂರ್ಜೀ ಕೋವಾಸ್ಜೀ ಸಂಜಾನಾ ಎಂಬ ದೊಡ್ಡ ವಕೀಲನು ಉಯಿಲನ್ನು ಫೋರ್ಜರಿ (ಸೃಷ್ಟನೆ) ಮಾಡಿದನೆಂದು ಪ್ರಾಸಿಕ್ಯೂಟ್ ಆದನು. ಹಾಗೂ ಅವನ ಮೇಲೆ ಮೊಕದ್ದಮೆ ಆಗಿ ವಿಚಾರಣೆ ನಡೆಯುತ್ತಿದೆ ಎಂತಲೂ ತಿಳಿಸಿದ್ದೇವಷ್ಟೆ. ಕಳೆದ ವಾರ ಸೆಷನ್ಸ್ ಜಡ್ಜರು ಅವನಿಗೆ ಏಳು ವರುಷ ಕಠಿಣ ಸಜಾ ವಿಧಿಸಿಬಿಟ್ಟರು.

ಆಲಿಘರ್ ಪಟ್ಟಣದಲ್ಲಿರುವ ಮಹಮ್ಮದೀಯ ಕಾಲೇಜಿನ ಮೂಲಧನಕ್ಕೆ ಘನವನ್ಯೈದಿದ ಆಗಾಖಾನ್ ಯವರು ಐದು ಸಾವಿರ ರೂಪಾಯಿ ಉಚಿತಾರ್ಥವಾಗಿ ಕೊಟ್ಟಿರುವದಲ್ಲದೆ, ಪ್ರತಿ ತಿಂಗಳಲ್ಲೂ ಅದೇ ವಿದ್ಯಾಶಾಲೆಗೆ ೫೦೦ ರೂಪಾಯಿನಾತೆ ಕೊಡುತ್ತಾ ಬರುವದಾಗಿ ವಾಗ್ದಾನ ಮಾಡಿದಾರೆ.

*****

ರಾಂನಾಡ್ ಜಮೀನ್ದಾರಿಗೆ ಸೇರಿದ ಮುದುಕುಲತ್ತೂರಿನಲ್ಲಿ ಸಬ್ ಮಾಜಿಸ್ಟ್ರೇಟರೂ ತಸ್ತು ತಹಶೀಲ್ದಾರರೂ ಆದ ಮೆ॥ ಸ್ವಾಮಿನಾಥೈಯರವರ ಮನೆಗೆ ಕಳ್ಳರು ಬಿದ್ದು ಸುಮಾರು ೩,೦೦೦ ರೂಪಾಯಿನ ನಗನಾಣ್ಯಗಳನ್ನೂ ಅವರ ಆಫೀಸ್ ಖಜಾನೆಯ ಬೀಗದಕೈಗಳನ್ನೂ ಕದ್ದುಕೊಂಡು ಹೋದರು.

*****

ಹಿಂದುಸ್ಥಾನದಿಂದ ವಿಲಾಯತಿಗೆ ಕಾಗದ ಬರೆಯಬೇಕಾದರೂ ಕಾರ್ಡು ಬರೆಯಬೇಕಾದರೂ ಸದ್ಯ ಒಂದಾಣೆ ಸ್ಟಾಂಪನ್ನು ಹಚ್ಚಬೇಕು. ಇನ್ನು ಮೇಲೆ ಕಾರ್ಡು ಬರೆದರೆ ಅದಕ್ಕೆ ಅರ್ಧಾಣೆ ಸ್ಟಾಂಪು ಮಾತ್ರ ಹಚ್ಚುವಂತೆ ಏರ್ಪಾಡಾಗುವದೆಂದು ಕಾಣುತ್ತದೆ. ಈ ವಿಷಯವನ್ನು ವಿಲಾಯತಿಯಲ್ಲಿ ಚರ್ಚೆ ಮಾಡುತ್ತಿದಾರೆ.

*****

ನಮ್ಮ ವೈಸ್‌ರಾಯಿಯವರ ಪತ್ನೀಯವರು ಈ ದಿನ ಬೊಂಬಾಯಿ ಪಟ್ಟಣವನ್ನು ತಲಪಿ ಅಲ್ಲಿ ಜಹಜು ಇಳಿಯುವವರಾಗಿದಾರೆ. ಮುಂದಿನ ೫ ನೆ ತಾರೀಖಿಗೆ ಕಲ್ಕತ್ತೆಗೆ ಪಯಣಮಾಡುವರು. ಇವರನ್ನು ಬೊಂಬಾಯಿನಿಂದ ಕರೆದುಕೊಂಡು ಹೋಗುವದಕ್ಕೆ ವೈಸ್‌ರಾಯಿ ತಾವರೇ ಬೊಂಬಾಯಿಗೆ ಬರುವರೆಂದು ಗೊತ್ತಾಗಿದೆ.

*****

ರಂಗೂನ್ ಪಟ್ಟಣದಲ್ಲಿ ಡಾಕ್ಟರ್ ರಾಸ್ಟ್ ಯವರು ಕುಷ್ಟರೋಗವನ್ನು ವಾಸಿಮಾಡುವದಕ್ಕೆ ಕಂಡು ಹಿಡಿದಿರುವ ನಿಜವಾದ ಔಷಧವನ್ನು ತಮಗೂ ತರಿಸಿಕೊಡಿಸಿ ತಮ್ಮ ಕುಷ್ಟರೋಗವನ್ನು ವಾಸಿಮಾಡಬೇಕೆಂಬುದಾಗಿ ಸಿಲೋನ್ (ಲಂಕಾ) ದ್ವೀಪದ ಕುಷ್ಟರೋಗಿಗಳೆಲ್ಲಾ ಸೇರಿ ಒಂದು ಅರ್ಜಿಯನ್ನು ಬರೆದು ಅಲ್ಲಿನ ಗವರ್ನರವರಿಗೆ ಒಪ್ಪಿಸಿರುತ್ತಾರೆ.

*****

ವಾಯುವ್ಯಪ್ರಾಂತ್ಯದ ಲೆಫ್ಟಿನೆಂಟ್ ಗವರ್ನರವರು ಈಗ ಅಲಹಾಬಾದಿನಲ್ಲಿ ತಮ್ಮ ಹೆಡ್ ಕ್ವಾರ್ಟರು ಆಫೀಸುಗಳನ್ನು ಇಟ್ಟುಕೊಂಡಿರುವರು. ಇದನ್ನು ತಪ್ಪಿಸಿ ಲಕ್ನೋ ಪಟ್ಟಣಕ್ಕೆ ಗವರ್ನಮೆಂಟ್ ಆಫೀಸುಗಳನ್ನು ವರ್ಗ ಮಾಡತಕ್ಕದೆಂತಲೂ, ರೈಲ್ವೇ ಕಂಪನಿಯವರು ಅಲಹಾಬಾದಿನ ಸರ್ಕಾರಿ ಆಫೀಸ್ ಕಟ್ಟಡಗಳನ್ನು ತಮ್ಮ ಉಪಯೋಗವಲ್ಲಿಟ್ಟುಕೊಳ್ಳತಕ್ಕದೆಂತಲೂ ನಿರ್ಣಯಮಾಡಿದೆ.

*****

ಬೊಂಬಾಯಿನಲ್ಲಿ ಪ್ಲೇಗಿನ ಉಪದ್ರವು ಪ್ರಬಲವಾಗಿರುವದರಿಂದ ಪ್ರಜೆಗಳೆಲ್ಲಾ ತಳಮಳಪಡುತ್ತಿದಾರೆ. ಪ್ರತಿ ವಾರವೂ ನೂರು ಮಂದಿಗೆ ಕಡಿಮೆ ಇಲ್ಲದೆ ಈ ಉಪದ್ರತಗಲಿ ಸಾಯುತ್ತಿರುವರು. ಆರ್ಥರ್ ರೋಡಿನಲ್ಲಿರುವ ಆಸ್ಪತ್ರೆಯೊಂದರಲ್ಲೇ ೨೪೦ ಮಂದಿ ಪ್ಲೇಗು ರೋಗಿಗಳು ಚಿಕಿತ್ಸೆ ಹೊಂದುತ್ತಿದಾರೆ. ಪಟ್ಟಣದಲ್ಲಿ ಅನೇಕಾನೇಕ ಮುಖ್ಯಸ್ಥರು ದೊಡ್ಡವರು ಸಹಿತ ಈ ರೋಗದಲ್ಲಿ ನರಳುತ್ತಿದಾರೆ.

*****

ದರ್ಭಾಂಗ ಸಂಸ್ಥಾನದ ರಾಜಧಾನಿಯಲ್ಲಿ ರಾಯ್ ಗಂಗಾಪ್ರಸಾದಸಿಂಗ್ ಬಹದೂರ್ ಎಂಬ ದೊಡ್ಡ ಜಮೀನ್ದಾರನು ಲೇಟ್ ವಿಕ್ಟೋರಿಯಾ ಚಕ್ರವರ್ತಿನಿಯವರ ಹೆಸರನ್ನು ಶಾಶ್ವತಪಡಿಸುವದಕ್ಕಾಗಿ ಟೌನ್ ಹಾಲ್ ಎಂಬ ಬಂಗಲೆಯನ್ನು ೩೫,೦೦೦ ರೂಪಾಯಿ ಮುಟ್ಟಿಸಿ ಕಟ್ಟಿಸಿರುತ್ತಾನೆ. ಈ ಕಟ್ಟಡವನ್ನು ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಕಳೆದ ವಾರ ಅಲ್ಲಿಗೆ ದಯಮಾಡಿ ಪ್ರತಿಷ್ಟೆ ಮಾಡಿದರು.

*****

ಆಸಾಂ ಪ್ರಾಂತ್ಯದ ಪ್ಲಾಂಟರುಗಳು ಟೀ ಸೊಪ್ಪನ್ನು ಬೆಳೆಯುವಷ್ಟು ಹಿಂದುಸ್ಥಾನದಲ್ಲಿ ಇನ್ಯಾರೂ ಬೆಳೆಯುವದಿಲ್ಲ. ಆದರೂ ೧೯೦೩ನೆ ಇಸವಿಯಲ್ಲಿ ೬೩೪ ತೋಟಗಳಲ್ಲಿ ಟೀ ಸೊಪ್ಪು ಬೆಳೆಯುತ್ತಿದ್ದುದು ಹಿಂದಿನ ವರುಷಕ್ಕಿಂತಲೂ ೧೩ತ್ತಾರು ತೋಟಗಳು ಪಾಳುಬಿದ್ದವು. ಅಲ್ಲಿನ ಪ್ಲಾಂಟರುಗಳಿಗೂ ತೋಟಗಳಲ್ಲಿ ಕೂಲಿ ಮಾಡುವ ಜನರಿಗೂ ಸೌಹೃದಯವಿಲ್ಲದಿರುವದೇ ಇದಕ್ಕೆ ಕಾರಣವೆಂದು ಹೇಳುತ್ತಾರೆ.

*****

ಮದರಾಸ್ ಗೌರ್ನಮೆಂಟಿನವರು ಫಾರೆಸ್ಟ್ ಇಲಾಖೆಯ ನೌಕರಿಗಾಗಿ ಪ್ರತಿ ವರುಷವೂ ೨೦ ಮಂದಿ ವಿದ್ಯಾರ್ಥಿಗಳನ್ನು ತರಬೇತು ಮಾಡಿ, ಡಿಪ್ಟಿ ರೇಂಜರ್ ಫಾರೆಸ್ಟರ್ ಎಂಬ ಉದ್ಯೋಗ ಕೊಡುವವರಾಗಿದಾರೆ. ವಿದ್ಯಾರ್ಥಿಗಳು ಆರು ತಿಂಗಳ ತನಕ ಓದಬೇಕು. ಈ ಪಾಠಶಾಲೆಯ ಏರ್ಪಾಡಿಗೆ ಮದರಾಸ್ ಸರ್ಕಾರದವರು ೧೯೦೪—೦೫ ನೆ ಸಾಲಿನಲ್ಲಿ ೧೦,೦೦೦ ರೂಪಾಯಿ ಖರ್ಚು ಮಾಡಬೇಕೆಂದು ಸ್ಯಾಂಕ್ಷನ್ ಮಾಡಿದಾರೆ.

*****

ಲಾಹೋರ್ ಪಟ್ಟಣದಲ್ಲಿರುವ ಮಹಮದೀಯ ವಿದ್ಯಾಶಾಲೆಯ ಮೂಲಧನಕ್ಕೆ ಅಫ್ಘಾನಿಸ್ಥಾನದ ಅಮೀರರವರು ಪ್ರತಿ ವರುಷವೂ ೮,೦೦೦ ರೂಪಾಯಿ ಕಳುಹಿಸುತ್ತಾ ಬಂದಿದಾರೆ. ಇದಲ್ಲದೆ ಕೆಲವು ದಿನಗಳ ಹಿಂದೆ ಅವರು ೩೦,೦೦೦ ರೂಪಾಯಿ ಒಂದೇ ಗಂಟಿನಲ್ಲಿ ಕೊಟ್ಟು ಸಹಾಯ ಮಾಡಿದರು. ಅವರು ತಮ್ಮ ರಾಜ್ಯದಲ್ಲೂ ವಿದ್ಯಾಶಾಲೆಯೊಂದನ್ನು ಇಡಿಸಿ ಕೆಲವು ತಿಂಗಳಾಯಿತು. ಈಗ ೧೫೦ ಮಂದಿ ಬಾಲಕರು ಹಿಂದುಸ್ಥಾನಿ ಓದುಬರಹ ಕಲಿಯುತ್ತಿದಾರೆ.

ಹಿಂದುಸ್ಥಾನದ ರಾಜ್ಯಭಾರ ವಿಚಾರಗಳನ್ನು ಕುರಿತು ವಿಲಾಯತಿಯಲ್ಲಿ ದೊಡ್ಡಮನುಷ್ಯರನ್ನು ಕಂಡು ಅವರಸಂಗಡ ಚರ್ಚೆ ಮಾಡಿ, ಬದಲಾವಣೆಗಳನ್ನು ಸೂಚಿಸಬೇಕೆಂದು ಕಳೆದ ನ್ಯಾಷನಲ್ ಕಾಂಗ್ರೆಸ್ ಮಹಾ ಸಭೆಯಲ್ಲಿ ತೀರ್ಮಾನವಾಯಿತಷ್ಟೆ. ಈ ಕಾರ್ಯಕ್ಕೆ ಬೊಂಬಾಯಿನಿಂದ ಮೆ॥ ಗೋಖಲೆಯವರೂ ಬಂಗಾಳದಿಂದ ಮೆ॥ ಸುರೇಂದ್ರನಾಥ ಬಾನರ್ಜಿಯವರೂ ಚುನಾಯಿಸಲ್ಪಟ್ಟಿದಾರೆ. ಮದರಾಸ್ ಮಹಾ ಜನ ಸಭೆಯವರೂ ತಮ್ಮಲ್ಲಿ ಒಬ್ಬ ಮೆಂಬರನ್ನು ಚುನಾಯಿಸುವದರಲ್ಲಿರುವರು.

*****

ಕಾಶಿಪುರದಲ್ಲಿ ಸರ್ಕಾರದವರು ಮದ್ದುಗುಂಡನ್ನು ತಯಾರು ಮಾಡುವದಕ್ಕೆ ಒಂದು ಭಾರೀ ಕಾರ್ಖಾನೆಯನ್ನಿಟ್ಟಿರುತ್ತಾರೆ. ಬೆಳಿಗ್ಗೆ ೮ ಗಂಟೆಯಿಂದ ಸಾಯಂಕಾಲ ೪ ಗಂಟೆಯ ತನಕ ಮಧ್ಯೆ ಅರ್ಧ ಗಂಟೆಯ ಹೊತ್ತು ಅವಕಾಶ ಕೊಟ್ಟು ಕೆಲಸ ಮಾಡಿಸುವದು ಪದ್ಧತಿಯಾಗಿದೆ. ಆದರೆ ಕಾರ್ಖಾನೆಯ ಯಜಮಾನರು ಕೂಲಿಯಾಳುಗಳನ್ನು ಬೆಳಿಗ್ಗೆ ೬॥ ಗಂಟೆಗೆ ಬಂದು ಸಂಜೆಯಲ್ಲಿ ೪॥ ಗಂಟೆಯ ತನಕ ಕೆಲಸ ಮಾಡಬೇಕೆಂದು ಹಿಂಸೆಪಡಿಸಿದ್ದರಿಂದ ೨,೬೦೦ ಮಂದಿ ಕೂಲಿಕಾರರು ಕೆಲಸಕ್ಕೆ ಬಾರದೆ ನಿಂತುಬಿಟ್ಟರು.

*****

ಆಗ್ರಾ ಪಟ್ಟಣದಲ್ಲಿ ಆರ್ಯ ಸಮಾಜದ ಕೆಲವು ಮೆಂಬರುಗಳು ತಮ್ಮ ಮತ ಪ್ರಸಾರಕ ಕಾರ್ಯ ನಡಸುವಾಗ್ಗೆ ಒಜ್ಜಿಸ್ಪದವಾದ ಕೆಲವು ಕಾಗದಗಳನ್ನು ಜನರಿಗೆ ಹಂಚಿದರೆಂದು ಅವರ ಮೇಲೆ ಮೊಕದ್ದಮೆ ಬಂದಿತು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮೆ॥ ಹಾಬ್‌ಕಿನ್ಸ್ ಯವರು ಈ ಮೊಕದ್ದಮೆಯನ್ನು ಪರ್ಯಾಲೋಚಿಸಿ ಮಾಡಿ ಒಬ್ಬ ಅಪರಾಧಿಗೆ ೧ ತಿಂಗಳ ಸಜವನ್ನೂ ಆರ್ಯಸಮಾಜದ ಪ್ರೆಸಿಡೆಂಟ ಮುಖಂಡನಿಗೆ ೩೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ಇದರ ಮೇಲೆ ಇವರು ಅಪೀಲ್ ಮಾಡುವವರಾಗಿದಾರೆ.

*****

ಟಿಬೆಟ್ಟಿನ ವಿಚಾರದಲ್ಲಿ ಇಂಗ್ಲಿಷರು ಮಾಡಿಕೊಂಡು ಬಂದಿರುವ ಕರಾರನ್ನು ಚೀನಾ ಗವರ್ನಮೆಂಟಿನವರು ಒಪ್ಪಿ ಆ ಕರಾರಿಗೆ ರುಜು ಹಾಕಿಕೊಡಬೇಕಾಗಿದೆ. ಇದಕ್ಕೋಸ್ಕರ ಚೀನಾದಿಂದ ಟಾಂಗ್‌ಷಿಯಾ ಎಂಬ ಕಮಿಷನರು ಕಳೆದ ವಾರ ಕಲ್ಕತ್ತೆಗೆ ಬಂದು, ಗ್ರಾಂಡ್ ಹೋಟೇಲಿನಲ್ಲಿ ಇಳುಕೊಂಡಿದಾರೆ. ಆ ಪಟ್ಟಣದಲ್ಲಿರುವ ಚೀನಾಯ ದೊಡ್ಡ ಮನುಷ್ಯರೆಲ್ಲಾ ಅವರಿಗೆ ಸುಸ್ವಾಗತವನ್ನು ಬಯಸಿ ಸನ್ಮಾನಮಾಡಿ ಬಂದರು. ಈ ರಾಯಭಾರಿಗೆ ಇಂಗ್ಲಿಷ್ ಭಾಷೆ ಪೂರ್ಣವಾಗಿ ಬರುತ್ತಿದ್ದರಿಂದ ಇಂಡಿಯಾ ಗವರ್ನಮೆಂಟಿನವರು ಸುಲಭವಾಗಿ ಕಾರ್ಯ ನೆರವೇರಿಸಿಕೊಳ್ಳಬಹುದಾಗಿದೆ.

*****

ಟಿಬೆಟ್ಟಿಗೆ ಇಂಗ್ಲಿಷ್ ಸರ್ಕಾರದವರು ದಂಡಯಾತ್ರೆ ಹೋಗಿ ಕರಾರು ಮಾಡಿಕೊಂಡು ಬಂದರಷ್ಟೆ. ಈ ದಂಡಯಾತ್ರೆಗೆ ಒಟ್ಟು ೧ ಕೋಟಿಯೂ ೨೦ ಲಕ್ಷ ರೂಪಾಯಿ ಖರ್ಚಾಯಿತು. ಈ ಖರ್ಚನ್ನೆಲ್ಲಾ ಹಿಂದುಸ್ಥಾನದ ಕ್ಷೇಮಕ್ಕೋಸ್ಕರವಾಗಿ ಮಾಡಿರುತ್ತೇನೆಂತಲೂ ಅದನ್ನು ಇಂಡಿಯಾ ಗವರ್ನಮೆಂಟಿನವರು ಕೊಡಬೇಕೆಂತಲೂ ವಿಲಾಯತಿ ಖಜಾನೆಯಿಂದ ಕೊಡಲು ಕಾರಣವಿಲ್ಲವೆಂತಲೂ ಇಂಡಿಯಾ ಸ್ಟೇಟ್ ಸೆಕ್ರೆಟರಿ ಮೆ॥ ಬ್ರಾಡ್ರಿಕ್‌ಯವರು ವಿಲಾಯತಿ ಪಾರ್ಲಿಮೆಂಟಿನಲ್ಲಿ ಹೇಳಿದರು. ವಿಲಾಯತಿ ರಾಜ್ಯದ ಮಂತ್ರಿಯವರಾದ ಮೆ॥ ಬಾಲ್ಫರ್‌ಯವರೂ ಇದೇ ಮಾತನ್ನು ಹೇಳಿದಾರೆ.

*****

೧೯೦೩ನೆ ಜನವರಿ ೧ನೆ ತಾರೀಖಿನದಿನ ದೆಹಲಿಯಲ್ಲಿ ನಡೆದ ದರ್ಬಾರು ಸಕಲರಿಗೂ ತಿಳಿದಿರುವಷ್ಟೆ. ಆ ಸಮಯದಲ್ಲಿ ಅಲ್ಲಿನ ಟೌನ್ ಹಾಲ್ ಬಂಗಲೆಯ ಮುಂಭಾಗದಲ್ಲಿ ಲೇಟ್ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆಯನ್ನು ಪ್ರತಿಷ್ಟೆ ಮಾಡಿದರು. ಈ ಪ್ರತಿಮೆಯ ತಲೆಯ ಮೇಲಿದ್ದ ಕಿರೀಟವನ್ನೂ ಕೈಕಾಲುಗಳಲ್ಲಿದ್ದ ಸಣ್ಣ ಬೆಂಬಗಳನ್ನೂ ದುರಾತ್ಮರ್ಯಾರೋ ತೆಗೆದುಹಾಕಿ ಅಪಜಾರು ಮಾಡಿದಾರೆ. ಈ ಪ್ರತಿಮೆಯ ಹಿಂಭಾಗದಲ್ಲಿ ಬಹು ಅಲ್ಪವಾದ ಮಾತುಗಳು ಬರೆದಿದ್ದ ಒಂದು ಕಾಗದವನ್ನೂ ನೇತುಹಾಕಿದ್ದರೆಂದು ಹೇಳುತ್ತಾರೆ. ಇಂಥಾ ಕ್ರೂರಕೃತ್ಯ ನಡಿಸಿದವರ್ಯಾರೆಂಬುದು ಇನ್ನೂ ಪತ್ತೆಯಾಗಿಲ್ಲ. ಪೊಲೀಸಿನವರು ಹುಡುಕುತ್ತಿದಾರೆ.

*****

ಅಲಹಾಬಾದಿನಲ್ಲಿ ಬಾಬುರಾಂ ನಾರಾಯಣನೆಂಬೊಬ್ಬ ವಕೀಲನು ಒಬ್ಬ ಅಪರಾಧಿಯಿಂದ ೧,೦೦೦ ರೂಪಾಯಿ ತೆಗೆದುಕೊಂಡು ಅವನಿಗೆ ವಿರೋಧವಾಗಿ ಸಾಕ್ಷಿ ಹೇಳುವವರಿಗೆ ಲಂಚ ಕೊಡುತ್ತೇನೆಂದು ಹೇಳಿ, ತಾನೇ ಅಪಹರಿಸಿದನು. ಇದಕ್ಕಾಗಿ ಆ ವಕೀಲನನ್ನು ಮ್ಯಾಜಿಸ್ಟ್ರೇಟರು ತನಿಖೆಮಾಡಿ, ಅವನಿಗೆ ಮೂರು ತಿಂಗಳ ಕಠಿಣ ಸಜಾ ವಿಧಿಸಿದರು. ಅಪೀಲ್ ಮಾಡಿಕೊಂಡಾಗ ಸೆಷನ್ಸ್ ಜಡ್ಜರು ಅದೇ ಶಿಕ್ಷೆಯನ್ನು ಖಾಯಂ ಮಾಡಿದರು. ತರುವಾಯ ಹೈಕೋರ್ಟಿನಲ್ಲಿ ರಿವಿಜನ್ ಮಾಡಿದನು. ಅಲ್ಲಿ ಜಡ್ಜಿಗಳು ಇವನ ಅರ್ಜಿಯನ್ನು ವಜಾಮಾಡಿಬಿಟ್ಟರು. ಅಲ್ಲದೆ ಹೈಕೋರ್ಟಿನವರು ಇವನು ಎರಡು ವರುಷಗಳ ತನಕ ಯಾವ ಮೊಕದ್ದಮೆಯನ್ನೂ ನಡಸಕೂಡದೆಂದು ಹುಕುಂ ಕೊಟ್ಟಿದಾರೆ.

*****

ಮಸೂಲಿಪಟಂ (ಮಚಲೀ ಬಂದರ್) ಎಂಬ ಪಟ್ಟಣದಲ್ಲಿ ಬ್ರಾಹ್ಮಣ ಬಾಲ್ಯ ವಿವಾಹ ಒಂದು ನಡೆಯಿತು. ಮೆ॥ ವೆಂಕಟಸುಬ್ಬರಾವ್ ಎಂಬ ವಕೀಲರ ಸಮೀಪ ಬಂಧುವಾದ ೧೪ ವರುಷದ ಹುಡುಗಿಯು ಎರಡು ವರುಷಗಳ ಕೆಳಗೆ ಮದುವೆಯಾದ ಒಂದೇ ವಾರದಲ್ಲಿ ತನ್ನ ಪತಿಯನ್ನು ಕಳೆದುಕೊಂಡಳು. ಈ ಹುಡುಗಿಯನ್ನು ಒಬ್ಬ ಬ್ರಾಹ್ಮಣನು ವರಿಸಿ ಮದುವೆಮಾಡಿಕೊಂಡನು. ಇವ

ನು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾನೆ. ಈ ಮದುವೆಗೆ ೩೦ ನೂರು ದೊಡ್ಡ ಮನುಷ್ಯರು ಒಪ್ಪಿ ರುಜು ಹಾಕಿಕೊಟ್ಟಿದ್ದಾರೆ. ಇವರೆಲ್ಲಾ ಬ್ರಾಹ್ಮಣರೇ. ವರ್ತಕರೂ, ವಕೀಲರೂ, ಪ್ಲೀಡರುಗಳೂ, ಜಮೀನ್ದಾರರೂ, ಸರ್ಕಾರಿ ನೌಕರರೂ ಈ ವಿವಾಹಕ್ಕೆ ಸಮ್ಮತಿ ಹಾಕಿ, ವಿವಾಹವನ್ನು ಬೆಳೆಸಿದರು.

* * * *

ಮದರಾಸ್ ಆಧಿಪತ್ಯಕ್ಕೆ ಸೇರಿದ ಭಾರೀ ಜಮೀನ್ದಾರರುಗಳೆಲ್ಲಾ ಒಂದು ಸಂಘವನ್ನು ಕಲ್ಪಿಸಿಕೊಂಡಿದ್ದಾರೆ. ಈ ಸಭೆಯ ಮೆಂಬರುಗಳು ಈಗ ಜಮೀನ್ದಾರರುಗಳಿಂದ ಚಂದಾ ಎತ್ತಲಾರಂಭಿಸಿರುವರು. ಅವರ ಉದ್ದೇಶಗಳೇನೆಂದರೆ—(೧) ಪರಾಧೀನವಾಗಿರುವ ಜಮೀನ್ದಾರಿಗಳನ್ನು ಬಿಡಿಸಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಒಂದು ಜಮೀನ್ದಾರಿ ಬ್ಯಾಂಕನ್ನು ಸ್ಥಾಪಿಸುವುದು, (೨) ರಾಜಕುಮಾರರ ವಿದ್ಯಾಭ್ಯಾಸಕ್ಕೋಸ್ಕರ ಒಂದು ಪಾಠಶಾಲೆಯನ್ನು ಸ್ಥಾಪಿಸುವುದು; (೩) ವಿಲಾಯತಿ ಮುಂತಾದ ಕಡೆಗಳಿಗೆ ವಿದ್ಯಾರ್ಥಿಗಳನ್ನೂ ಜಮೀನ್ದಾರರುಗಳ ಮಕ್ಕಳನ್ನೂ ಕಳುಹಿಸುವುದಕ್ಕೆ ಅವರಿಗೆ ಪ್ರಯಾಣದ ಖರ್ಚು, ವೇತನ ಮುಂತಾದ ಖರ್ಚುಗಳನ್ನು ವಹಿಸುವುದು. ಇಂಥಾ ಶ್ಲಾಘ್ಯವಾದ ಏರ್ಪಾಡು ಸಾರ್ಥಕವಾಗಲೆಂದು ಹಾರೈಸುತ್ತೇವೆ.

* * * *

ದಕ್ಷಿಣ ಕನ್ನಡಾ ಸೀಮೆಯಲ್ಲೆಲ್ಲಾ ಅಪೂರ್ವವೆನಿಸಿಕೊಂಡ ಒಂದು ವಿವಾಹವು ಕಳೆದ ತಿಂಗಳ ೪ನೆ ತಾರೀಖಿನ ಮಂಗಳೂರಿನಲ್ಲಿ ನಡೆದಂತೆ ವರ್ತಮಾನ ಬಂದಿದೆ. ವಾಯುವ್ಯ ಪ್ರಾಂತ್ಯದ ಲೆಫ್ಟಿನೆಂಟ್ ಗವರ್ನರವರ ಮಂತ್ರಾಲೋಚನಾ ಸಭೆಯ ಮೆಂಬರಾಗಿಯೂ ಶಾಜಹಾನ್‌ಪೂರ್ ರಾಜರಾಗಿಯೂ ಇರುವ ಧನವಂತ ರೈಧಿಸಿಂಗ್ ಸಿರ್ಸಾಯವರು ದಕ್ಷಿಣದೇಶದಲ್ಲಿರುವ ಮೆ॥ ಜೋಸೆಫ್ ಫ್ರಾನ್ಸಿಸ್ ಕೊಯಲೊ ಎಂಬವರ ಪುತ್ರಿಯಾದ ಮಿಸ್ ಮಾರ್ಗರೇಟ್ ಮೇರಿ ಫ್ರಾನ್ಸಿಸ್ ಎಂಬಾಕೆಯನ್ನು ವರಿಸಿ, ಕೊಡಿಯಾಲ್ ಬೈಲ್ ದೇವಸ್ಥಾನದಲ್ಲಿ ವಿವಾಹ ಮಾಡಿಕೊಂಡರು. ತರುವಾಯ ಈ ನೂತನ ದಂಪತಿಗಳು ಮಹಾನದಿ ಎಂಬ ಹಡಗನ್ನು ಹತ್ತಿ ಬೊಂಬಾಯಿಗೆ ಪ್ರಯಾಣಮಾಡಿದರು. ಅಲ್ಲಿಂದ ಅವರು ಶಾಜಪುರಕ್ಕೆ ಹೋಗುವವರಾಗಿದ್ದಾರೆ.

* * * *

ಚಿರ್ಹಿಲ್ ಎಂಬ ಗುಡ್ಡಗಳ ಪ್ರಾಂತ್ಯಕ್ಕೆ ಸೇರಿದ ಬೇಟಿ ಎಂಬ ಗ್ರಾಮದ ಯಜಮಾನನಾದ ಯಾಟಿಕ್ ಎಂಬುವನು ೧೨೦ ಮಂದಿ ಆಯುಧಪಾಣಿಗಳಾದ ಟಿಬೆಟಿಯರ ಸಹಿತ ಇಂಗ್ಲಿಷರ ಸ್ವಾಧೀನದಲ್ಲಿರುವ ಕೆಲವು ಗ್ರಾಮಗಳಿಗೆ ನುಗ್ಗಿ ತನಗೇನೋ ಸಲ್ಲಬೇಕೆಂದು ಜನರನ್ನು ಹಿಂಸೆಪಡಿಸಿ, ಪ್ರಜೆಗಳಿಂದ ೨೨೫ ರೂಪಾಯಿ ವಸೂಲುಮಾಡಿಕೊಂಡು ಹೋದನು. ಇಂಗ್ಲಿಷ್ ಸರ್ಕಾರದವರು ಈ ಸಂಗತಿಯನ್ನು ಕೇಳಿ, ಆ ಪ್ರಾಂತ್ಯದ ಸೂಪರೇಂಟ ರಾದ ಮೆ॥ ಫೌಲರ್‌ಯವರನ್ನು ೭೫ ಮಂದಿ ಸಿಪಾಯಿಗಳ ಸಹಿತ ಆ ಗ್ರಾಮಕ್ಕೆ ಕಳುಹಿಸಿದರು. ಇವರು ಬರುತ್ತಾರೆಂಬುದನ್ನು ಕೇಳಿದ ಒಡನೆಯೇ ಯಾಟಿಕ್ ಎಂಬ ಆ ಯಜಮಾನನು ಗಾಬರಿಬಿದ್ದು ಬಂದು ಅವರನ್ನು ಎದುರುಗೊಂಡು ತಾನು ಅಪಹರಿಸಿಕೊಂಡು ಬಂದಿದ್ದ ಸ್ವತ್ತುಗಳನ್ನೂ ಅದರ ಮೇಲೆ ಶೇಕಡಾ ೨೫ ರೂಪಾಯಿಯಂತೆ ಜುಲ್ಮಾನೆ ಹಣವನ್ನೂ ಅವರಿಗೆ ಒಪ್ಪಿಸಿದನು. ಇನ್ನು ಮುಂದೆ ಇಂಥಾ ಅಕೃತ್ಯಗಳನ್ನು ನಡಸದಂತೆ ಆ ಯಜಮಾನನಿಗೆ ಎಚ್ಚರಿಕೆ ಹೇಳಿ, ಸೈನಿಕರೆಲ್ಲಾ ವಾಪಸು ಬಂದರು.

* * * *

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳಲ್ಲಿ ತೀಯ್ಯರೆಂಬ ಕೀಳು ಜಾತಿಯವರು ನಾಯರರೇ ಮೊದಲಾದ ಉತ್ತಮ ಜಾತಿಯವರನ್ನು ಕಂಡ ಕೂಡಲೆ ತಾವು ಕೀಳು ಜಾತಿಯವರೆಂದು ಅವರಿಗೆ ಕೂಗಿ ಹೇಳಿ, ಅವರಿಂದ ಹತ್ತಿಪ್ಪತ್ತು ಗಜಗಳ ದೂರದಲ್ಲಿ ನಿಲ್ಲಬೇಕೆಂಬುದು ನೂರಾರು ವರುಷಗಳಿಂದ ನಡೆದು ಬಂದಿರುವ ಪದ್ಧತಿಯಾಗಿದೆ. ಕೆಲವು ದಿನಗಳ ಕೆಳಗೆ ತೀಯ್ಯರು ಒಂದು ದೇವಸ್ಥಾನದ ಬಳಿ ತಮ್ಮ ಹದ್ದು ಮೀರಿ ಒಳಗೆ ಹೋಗಬೇಕೆಂದು ಹಟ ಮಾಡಿದರು. ನಾಯರರು ಅವರನ್ನು ತಡೆಯುವುದಕ್ಕೆ ಪ್ರಯತ್ನಪಟ್ಟಾಗ ಉಭಯರಿಗೆ ಜಗಳವಾಗುವಂತಿತ್ತು. ಮ್ಯಾಜಿಸ್ಟ್ರೇಟರೂ ಪೊಲೀಸಿನವರೂ ತಕ್ಕ ಬಂದೋಬಸ್ತಿನಿಂದ ಗಲಾಟೆಯನ್ನು ತಪ್ಪಿಸಿದರು. ಈಚೆಗೆ ಈಪೂರು ಎಂಬ ದೇವಸ್ಥಾನದಲ್ಲಿ ನಾಯರರು ದೇವರುಗಳನ್ನು ಅಲಂಕರಿಸಿ ಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ಹೋಗುತ್ತಿದ್ದರು. ತೀಯ್ಯರು ಹೆಂಗಸರು ಗಂಡಸರು ಮಕ್ಕಳು ಸಹ ನಿಂತು ನೋಡುತ್ತಿದ್ದು ಪದ್ಧತಿಯ ಪ್ರಕಾರ ಹಿಂದಕ್ಕೆ ಹೋಗದೆ ಹಟಮಾಡಿದರು. ಕೂಡಲೇ ಅವರಿಗೂ ನಾಯರರಿಗೂ ಜಗಳವಾಗಿ ಎರಡು ಕಡೆಗಳಲ್ಲೂ ಕೆಲವರಿಗೆ ಗಾಯಗಳಾದವು. ಪಾಠಶಾಲೆಗಳಿಂದ ಬರುತ್ತಿದ್ದ ತೀಯ್ಯರ ಹುಡುಗರನ್ನು ನಾಯರರು ಹಿಡಿದು ದಾರಿಯಲ್ಲೇ ಹೊಡೆದರು. ಈಗ ತೀಯ್ಯರು ನಾಯರರ ಮೇಲೆ ಕೋರ್ಟುಗಳಲ್ಲಿ ಈ ವಿಷಯವಾಗಿ ಫಿರ್ಯಾದು ತಂದಿದ್ದಾರೆ.

* * * *

ಕಾರ್ಕಳದಲ್ಲಿರುವ ರಾಮನಾರಾಯಣನೆಂಬ ಯೋಗಶಾಸ್ತ್ರಿಯು ಜ್ಯೋತಿಷ್ಯ ಸಾಮುದ್ರಿಕಾಲಕ್ಷಣ ಭವಿಷ್ಯ ಮೊದಲಾದವುಗಳನ್ನು ಚೆನ್ನಾಗಿ ತಿಳಿದು ಹೇಳುತ್ತಾನೆಂದು ಹಿಂದುಗಳಲ್ಲಿ ಪ್ರಸಿದ್ಧನಾಗಿರುತ್ತಾನೆ. ಈತನು ಭವಿಷ್ಯ ವರ್ತಮಾನವನ್ನು ಕುರಿತು ಹೇಳಿರುವುದೇನೆಂದರೆ—ಮುಂದಿನ ಮಾರ್ಚಿ ೧೩ ರಿಂದ ರಷ್ಯಾದವರು ಜಪಾನಿನವರ ಮೇಲೆ ಜಯಪ್ರದಗಳನ್ನು ಹೊಂದುತ್ತಾ ಬರುವರು. ಮಾರ್ಚಿ ೨೫ ರಿಂದ ಅವರಿಗೆ ಗೆಲುವಾಗುವುದೇ ಹೊರತು ಸೋಲಾಗುವುದಿಲ್ಲ. ಆರು ತಿಂಗಳೊಳಗಾಗಿ ಮ್ಯಾಂಚೂರಿಯಾ ಸೀಮೆಯೂ ಪೋರ್ಟ್ ಆರ್ಥರ್ ಪಟ್ಟಣವೂ ಯಥಾಪ್ರಕಾರ ಸಂಪೂರ್ಣವಾಗಿ ರಷ್ಯಾದವರ ಸ್ವಾಧೀನವಾಗುವವು. ಆ ಕಾಲದೊಳಗಾಗಿ ರಷ್ಯಾದವರಿಗೆ ಭೂಯುದ್ಧಗಳಲ್ಲೂ ಸಮುದ್ರ ಯುದ್ಧಗಳಲ್ಲೂ ಜಯವಾಗುತ್ತಲೇ ಇರುವುದು. ಮುಂದಿನ ಮೇ ಅಥವಾ ಜೂನ್ ತಿಂಗಳೊಳಗಾಗಿ ಒಂದಾನೊಂದು ಕಾರಣ ಹುಟ್ಟಿ ಪ್ರಪಂಚವೆಲ್ಲಾ ಯುದ್ಧದಲ್ಲಿ ಬೆರೆಯುವಂತಾದೀತು. ಈ ವಿಷಯವು ೧೯೦೬ ನೆ ಫೆಬ್ರವರಿ ೧೪ ಕ್ಕೆ ಬಹಳ ಕಠಿಣವಾದ ಸ್ಥಿತಿಗೆ ಬಂದು, ಅಲ್ಲಿಂದಾಚೆಗೆ ೧೩ ವರುಷಗಳ ತನಕ ಕಮವಾಗದಂತೆ ಯುದ್ಧಗಳು ನಡೆಯುವವು. ಭೂಮಿಯ ಮೇಲೆಲ್ಲಾ ರಕ್ತಪ್ರವಾಹಗಳು ಹರಿಯುವವು. ಇದಲ್ಲದೆ ಹಿಂದುಸ್ಥಾನದೊಳಗೆ ಈ ವರುಷವೂ ಮುಂದಿನ ವರುಷವೂ ಅಕಾಲ ಮಳೆಗಳು ತುಂಬಾ ಆಗುವವು. ಹಿಂದುಸ್ಥಾನದ ಅನೇಕ ಪ್ರಾಂತ್ಯಗಳಲ್ಲೂ ಪ್ರಪಂಚದ ಇತರ ದೇಶಗಳಲ್ಲೂ ೧೯೦೬ ರಲ್ಲಿ ವೀರಕ್ಷಾಮವು ಪ್ರಾಪ್ತವಾಗುವುದು. ಮುಂದಿನ ಸೆಪ್ಟಂಬರಿನಿಂದ ಯೂರೋಪಿನಲ್ಲೂ ಜಪಾನಿನಲ್ಲೂ ಕೆಲವು ನವೀನ ವ್ಯಾಧಿಗಳು ಪ್ರಾಪ್ತವಾಗಿ ಮೂರು ವರುಷ ಪ್ರಜೆಗಳನ್ನು ಕಾಡಿಸುತ್ತವೆ. ಇವುಗಳ ದೆಸೆಯಿಂದ ಬಹು ಪ್ರಜೆಗಳು ಲಯವಾಗುವರು.

* * * *

ಹೈದರಾಬಾದ್ ಸಂಸ್ಥಾನದ ನೈಜಾಮರವರು ವಿಕ್ಟೋರಿಯಾ ಮಹಾರಾಣಿಯವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಒಂದು ಕೈಗಾರಿಕೆಯ ಪಾಠಶಾಲೆಯನ್ನು ಕಟ್ಟಿಸಿದರು. ಅದನ್ನು ಕಳೆದ ಫೆಬ್ರವರಿ ೧೫ನೇ ತಾರೀಖಿನ ದಿನ ಮಧ್ಯಾಹ್ನದಲ್ಲಿ ಹೈದರಾಬಾದಿನ ಬ್ರಿಟಿಷ್ ರೆಸಿಡೆಂಟರಾದ ಸರ್ ಡೇವಿಡ್ ಬಾರ್ ಎಂಬುವರು ಪ್ರತಿಷ್ಠಿಸಿದರು. ಅಲ್ಲಿಗೆ ನೈಜಾಮರವರು ಸುಮಾರು ೫॥ ಗಂಟೆಗೆ ಬಂದು ಸೇರಿದರು. ಗವರ್ನರವರು ಅವರನ್ನು ಎದುರುಗೊಂಡು ಸತ್ಕರಿಸಿ, ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಅದರ ಮುಖ್ಯ ಸಾರಾಂಶವೇನೆಂದರೆ—ಈಗ ನಾಲ್ಕು ವರುಷದ ಕೆಳಗೆ ನೈಜಾಮರವರು ಮಹಾರಾಣಿಯವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಒಂದು ತಕ್ಕ ಸಲಹೆಯನ್ನು ಸೂಚಿಸಿದ್ದು ತುಂಬಾ ಸಂತೋಷವಾಗಿ, ಆದರೆ ಅದನ್ನು ಯಾವ ರೂಪವಾಗಿ ಮಾಡಬೇಕೆಂಬುದು ಮಾತ್ರ ಆಲೋಚನೆ ಮಾಡಬೇಕಾಗಿತ್ತು. ಕೆಲವು ದಿನಗಳಾದ ಮೇಲೆ ನೈಜಾಮರವರು ತಂದೆತಾಯಿಗಳಿಲ್ಲದ ಹುಡುಗರಿಗೂ ಹುಡುಗಿಯರಿಗೂ ಒಂದು ಕೈಗಾರಿಕೆಯ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಸಮ್ಮತಿ ಕೊಟ್ಟರು. ಅದರ ಮೂಲಧನಕ್ಕೆ ತಾವು ೨ ಲಕ್ಷ ರೂಪಾಯಿ ಚಂದಾ ಕೊಟ್ಟದ್ದಲ್ಲದೆ ಆ ಪಾಠಶಾಲೆಯ ಖರ್ಚಿಗಾಗಿ ವರುಷ ಒಂದಕ್ಕೆ ೫೦,೦೦೦ ರೂಪಾಯಿಗಳನ್ನು ಕೊಡುತ್ತೇವೆಂಬುದಾಗಿ ವಾಗ್ದಾನ ಮಾಡಿರುತ್ತಾರೆ. ಸ್ಕೂಲಿನ ಕಟ್ಟಡಕ್ಕಾಗಿ ತಮ್ಮ ಒಂದು ಅರಮನೆಯನ್ನೇ ಬಿಟ್ಟು ಕೊಟ್ಟಿದ್ದಾರೆ. ಆ ಪಾಠಶಾಲೆಯಲ್ಲಿ ೧,೦೦೦ ಜನ ಅನಾಥ ಬಾಲಕ ಬಾಲಿಕೆಯರು ಇರತಕ್ಕದ್ದೆಂದು ನಿಯಾಮಕವಾಗಿದೆ. ಈಗಾಗಲೇ ೧೨೧ ಜನ ಹುಡುಗರೂ ೧೩೨ ಹುಡುಗಿಯರೂ ಇದ್ದಾರೆ. ಹಿಂದೂಗಳಿಗೂ, ಮುಸಲ್ಮಾನರಿಗೂ ಬೇರೆ ಬೇರೆ ವಿದ್ಯೆ ಕಲಿಸುವಿಕೆಯೂ, ಜಾತಿಸಂಪರ್ಕ ಉಂಟಾಗದಂತೆಯೂ ಏರ್ಪಾಡು ಮಾಡಿದ್ದಾರೆ. ಹುಡುಗರ ವಿದ್ಯಾಭ್ಯಾಸವು ಮುಗಿದ ಬಳಿಕ ಅವರು ಕಲ್ತ ವಿದ್ಯೆ ಕಲಿಯುತ್ತಿರುವ ಬಾಲಿಕೆಯರಲ್ಲಿ ತಮ್ಮಿಷ್ಟ ಬಂದವರನ್ನು ವಿವಾಹಮಾಡಿಕೊಂಡು, ಒಂದು ವರುಷದ ವರೆಗೂ ಉಪಾಧ್ಯಾಯರಾಗಿ ಯಾವ ಹಣವನ್ನೂ ತೆಗೆದುಕೊಳ್ಳದೆ ಕೆಲಸ ಮಾಡತಕ್ಕದ್ದು. ಅನಂತರ ಅವರ ಸಂಸಾರವು ಕುದುರುವವರೆಗೂ ಬೇಕಾದ ಸಾಮಾನು ಮುಂತಾದುದನ್ನು ಕೊಂಡುಕೊಳ್ಳುವುದಕ್ಕೆ ಅದೇ ಪಾಠಶಾಲೆಯವರು ಸ್ವಲ್ಪ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಈ ಹಣಕ್ಕೆ ಗಂಡಹೆಂಡರಿಬ್ಬರು ಹೋಗಿ ವಾಸಮಾಡುವ ಗ್ರಾಮದ ಪಟೇಲನೇ ಜವಾಬ್ದಾರನಾಗಿರತಕ್ಕದ್ದು. ಹೀಗೆ ಹುಡುಗರನ್ನು ತಯಾರ್ಮಾಡುವದರಿಂದ ದೇಶೋನ್ನತಿಯೂ ಪ್ರಜಾಲಾಭವೂ ಉಂಟಾಗುವದರಲ್ಲಿ ಸಂದೇಹವಿಲ್ಲ. ಇದರ ಮೂಲಕ ದೇಶೀಯ ಕೈಗಾರಿಕೆಗಳು ಅಭಿವೃದ್ಧಿಗೆ ಬರುವವು. ಇಷ್ಟು ಉತ್ತಮವಾದ ಮತ್ತು ಇಂಥಾ ಭಾರಿಯಾದ ಅನಾಥಶಾಲೆಯು ಈ ರಾಷ್ಟ್ರದಲ್ಲಿ ಅಪರೂಪವಾಗಿರುತ್ತದೆ. ಇಂಥಾ ಉತ್ತಮೋತ್ತಮವಾದ ಕೈಗಾರಿಕೆ ಪಾಠಶಾಲೆಯನ್ನು ವಿಕ್ಟೋರಿಯಾ ಚಕ್ರವರ್ತಿನಿಯವರ ಹೆಸರಿನ ಮೇಲೆ ಸ್ಥಾಪಿಸಿದ್ದನ್ನು ನೋಡಿ ಸಕಲರೂ ನೈಜಾಮರವರನ್ನು ಕೊಂಡಾಡುತ್ತಿದ್ದಾರೆ.

"ಪ್ರಿಯದರ್ಶಿಕಾನಾಟಿಕ"

ಮೇಲೆ ಕಂಡ ಹೆಸರಿನಿಂದ ಕೂಡಿದ ಒಂದು ನಾಟಿಕೆಯು ನಮ್ಮಲ್ಲಿಗೆ ಬಂದಿರುವುದು. ಬಹು ಪೂರ್ವ ಕವಿಯಾದ ಶ್ರೀಹರ್ಷನಿಂದ ಮೊದಲು ಸಂಸ್ಕೃತದಲ್ಲಿ ಬರೆಯಲ್ಪಟ್ಟುದಾಗಿಯೂ, ಈಗ ಮೈಸೂರಿನ ಕೃಷ್ಣರಾಜಮೊಹಲ್ಲಾ ನಿವಾಸಿಗಳಾದ ನಂಜನಗೂಡು ಮೆ॥ ಶ್ರೀಕಂಠಶಾಸ್ತ್ರಿ ಎಂ.ಎ. ರವರಿಂದ ಕನ್ನಡಿಗರ ಉಪಯೋಗಾರ್ಥವಾಗಿ ಹಳೆಗನ್ನಡಕ್ಕೆ ಪರಿವರ್ತಿಸಲ್ಪಟ್ಟುದಾಗಿಯೂ ಇರುತ್ತದೆ.

ನಮ್ಮ ದೇಶದ ಪುರಾತನ ಕವಿಗಳು ಲೋಕೋಪಯುಕ್ತವಾದ ತಮ್ಮ ಸಮಸ್ತ ವಿಷಯಗಳನ್ನೂ ದುರವಗಾಹವಾದ ಸಂಸ್ಕೃತಭಾಷೆಯಲ್ಲಿಯೇ ವಿಶೇಷವಾಗಿ ಬರೆದಿಟ್ಟಿರುವರು. ಅಲ್ಲದೆ ಕೆಲವರು ತಮ್ಮ ಪಾಂಡಿತ್ಯಪ್ರಚಾರಾರ್ಥವಾಗಿ ವಿಷಯಗಳನ್ನು ಕ್ಲಿಷ್ಟಪದಗಳಿಂದ ಬರೆದಿರುವರು. ಸಂಸ್ಕೃತ ಭಾಷೆಯು ಶ್ರಮಸಾಧ್ಯವಾದುದರಿಂದ ಸರ್ವರಿಗೂ ಸುಲಭವಲ್ಲವು. ಇತ್ಯಾದಿ ಕಾರಣಗಳಿಂದ ಉಪಯುಕ್ತಾಂಶಗಳೆಷ್ಟೋ ಅದ್ಯಾಪಿ ಪ್ರಚಾರಕ್ಕೆ ಬಂದಿಲ್ಲವೆಂದು ಊಹಿಸಬೇಕಾಗಿದೆ. ನಮ್ಮ ದೇಶೀಯರು ಕನ್ನಡಿಗರಾದುದರಿಂದ ಇಂಥಾ ವಿಷಯಗರ್ಭಿತಗಳಾದ ಗ್ರಂಥಗಳೆಲ್ಲವೂ ಸಂಸ್ಕೃತದಲ್ಲೇ ಅಲ್ಲ; ಕನ್ನಡದಲ್ಲೂ ಇರಬೇಕಾದುದು ಅತ್ಯುತ್ತಮಾಂಶವಾಗಿದೆ. ಯಾಕೆಂದರೆ ಸ್ವಭಾಷೆಯು ವಿಷಯ ಸಂಗ್ರಹಣಕ್ಕೆ ಸುಕರವಾಗಿದೆ. ವಿಷಯ ಸಂಗ್ರಹಣಾನಂತರದಲ್ಲಿ ಸಂಸ್ಕೃತವು ಭಾಷಾಮಾತ್ರಾಭ್ಯಸನೀಯವಾಗಿರುತ್ತದೆ. ಇದರಂತೆ ನಮ್ಮ ದೇಶೀಯರಾದ ವಿದ್ವಾಂಸರು ಈಗೀಗ ಸಂಸ್ಕೃತ ಗ್ರಂಥಗಳನ್ನು ದೇಶಭಾಷೆಗೆ ಪರಿವರ್ತಿಸುತ್ತಾ ಬರುವ ಕಾರ್ಯವು ಸ್ತೋತ್ರಾರ್ಹವಾಗಿಯೂ ದೇಶಭಾಷಾಭಿವೃದ್ಧಿಗೆ ಬೀಜವಾಗಿಯೂ ಇರುತ್ತದೆ.

ಮೇಲೆ ಕಂಡ ಮೆ॥ ಶ್ರೀಕಂಠ ಶಾಸ್ತ್ರಿಗಳು ಪ್ರಿಯದರ್ಶಿಕಾನಾಟಿಕೆಯನ್ನು ಲಕ್ಷಣಬದ್ಧವಾಗಿ ವೃತ್ತ ಕಂದ ವಾಕ್ಯಗಳಿಂದ ಹಳೆಗನ್ನಡಕ್ಕೆ ಪರಿವರ್ತಿಸಿರುವ ಕಾರ್ಯವು ಶ್ಲಾಘ್ಯವಾಗಿದೆ. ಈ ಪುಸ್ತಕವು ಪಂಡಿತ ಪರಿಗ್ರಾಹ್ಯವಾಗಿಯೂ ಅಭ್ಯಾಸಗಳಿಗೆ ಪಾಂಡಿತ್ಯಪ್ರದವಾಗಿಯೂ ಇರುವುದರಿಂದ ವಿದ್ವಾಂಸರೆಲ್ಲರೂ ಪುರಾತನಾಧ್ವನಿಕ ವಿಷಯಗಳನ್ನು ಸ್ವಭಾಷಾ ಮೂಲಕವಾಗಿ ಪ್ರಚಾರಕ್ಕೆ ತರುವುದು ದೇಶೋನ್ನತಿಗೆ ಬೀಜವಾಗಿರುವುದು.

ಪುಸ್ತಕ ಮುದ್ರಣದಲ್ಲಿ ಕುದ್ದಾ ಶುದ್ಧ ಪತ್ರವು ದೀರ್ಘವಾಗಿರುವುದಕ್ಕೆ ಅವಕಾಶ ಕೊಟ್ಟಿರುವುದರಿಂದಲೂ, ಶಬ್ದಸಾರಳ್ಯವಿಲ್ಲದೆ ಕೆಲವೆಡೆಗಳಲ್ಲಿ ಕವಿತಾಮಾಧುರ್ಯಕ್ಕೆ ಪ್ರತಿಕೂಲವಾಗಿರುವುದರಿಂದಲೂ ಪ್ರಕೃತ ಗ್ರಂಥವು ಕರ್ತೃವಿನ ಪ್ರಥಮ ಪ್ರಯತ್ನವಾಗಿರಬಹುದೆಂದು ನಾವು ಊಹಿಸುತ್ತೇವೆ. ಆದರೂ ಇದು ಗ್ರಂಥದಲ್ಲಿ ದೋಷವನ್ನಾರೋಪಿಸತಕ್ಕ ಮಾತಲ್ಲ. ಮಾಧುರ್ಯಯುಕ್ತವಾದ ಕವಿತೆಯು ವರಕವಿಗಳ ರಚನೆಯಲ್ಲಿಯೇ ತೋರುವುದು. ಹೀಗಿರಲಾಗಿ ಕಾವ್ಯರಚನೆಯಲ್ಲಿ ಕೈಹಾಕುವವರೆಲ್ಲರೂ ವರಕವಿಗಳಾಗಿಯೇ ಇರಲಾಗುವುದೇ? ಪ್ರಿಯದರ್ಶಿಕಾ ನಾಟಿಕೆಯ ಕರ್ತೃವು ವರಕವಿಯೆಂದು ನಾವು ಹೇಳದಿದ್ದರೂ, ಸ್ವಪ್ರಯತ್ನಪೂರ್ವಕವಾಗಿಯೇ ಇದನ್ನು ಇಷ್ಟು ಮಟ್ಟಿಗೆ ರಚಿಸಿರುವದರಿಂದ ಇವರ ಪ್ರಯತ್ನವು ಶ್ಲಾಘ್ಯವಾದುದೆಂದೂ, ಮುಂದೆ ಇವರ ಕವಿತೆಯೂ ಆಧುನಿಕ ಕವಿವರ್ಯರಲ್ಲಿ ವಿಖ್ಯಾತರಾಗಿದ್ದು ಮೃತಪಟ್ಟ ಇವರ ಸಹೋದರರ ಕವಿತೆಯನ್ನೇ ಅನುಸರಿಸುವುದಾಗುವುದೆಂದೂ ನಾವು ನಂಬಿದ್ದೇವೆ. ಮೇಲೆ ಕಂಡ ಗ್ರಂಥಕರ್ತರಲ್ಲಿ ೩ ಆಣೆಗೆ ದೊರಕುವ ಈ ಪುಸ್ತಕವನ್ನು ಭಾಷಾಭಿಮಾನಿಗಳೆಲ್ಲರೂ ತರಿಸಿಕೊಂಡು ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮೀಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಗಮನಿಸತಕ್ಕದ್ದು —ಎಡಿ.

ಕರೆಸ್ಪಾಂಡೆನ್ಸ್.

ದೊಡ್ಡಕೆರೆ ಕಾಮಗಾರಿ

ಅಯ್ಯಾ,

ಹುಣಸೂರು ತಾ॥ ಬಿಳಿಕೆರೆ ಹೋಬಳಿ ಹಳೇಬೀಡುಗ್ರಾಮದ ದೊಡ್ಡ ಕೆರೆಯು ಒಡೆದು ಸುಮಾರು ಎರಡು ವರುಷಕ್ಕೆ ಬಂತು. ಇದು ಈ ತಾಲ್ಲೋಕಿಗೆ ದೊಡ್ಡ ಕೆರೆಯಾಗಿಯೂ ಯಾವಾಗ್ಗೂ ನೀರು ಹೋಗದೆಯೂ ಇತ್ತು. ಈಗ ಈ ಕೆರೆ ಹೋಗಲಾಗಿ ಇಲ್ಲಿನ ಜನಗಳಿಗೂ ದನಕರುಗಳಿಗೂ ಮತ್ತು ಸುತ್ತಮುತ್ತಲ ಗ್ರಾಮಗಳಿಗೂ ನೀರೂ ಇಲ್ಲದೆ ಬಹಳ ತೊಂದರೆಯಾಗಿ ಸಂಕಟಪಡುತ್ತಾ ಇದ್ದಾರೆ. ಮೇಲ್ಕಂಡ ಕೆರೆ ವಿಷಯಕ್ಕಾಗಿ ಕೆರೆ ಕೆಳಗೆ ಇರತಕ್ಕ ಅಚ್ಚುಕಟ್ಟು ಎಕರೆ ಒಂದಕ್ಕೆ ಇಪ್ಪತ್ತು ರೂಪಾಯಿ ಕಂಟ್ರಿಬ್ಯೂಷನ್ ಕೊಡುವುದಕ್ಕೆ ಒಪ್ಪಿ ದಿವಾನ್‌ಸಾಹೇಬರವರಿಗೆ, ಡಿಸ್ಟ್ರಿಕ್ಟ್ ಮುದ್ದೂರಿಗೂ, ಚೀಫ್ ಇಂಜನಿಯರವರಿಗೂ ೪—೧೦ ಅರ್ಜಿ ಬರೆದದ್ದಕ್ಕೆ ಸರ್ಕಾರದವರು ತಹಲ್‌ವರೆಗೂ ಗಮನಕ್ಕೆ ತಂದುಕೊಂಡು ರೈತರ ಕಷ್ಟವನ್ನು ಪರಿಹಾರ ಮಾಡದೆ ಇರುವದು ನೋಡಿದರೆ ವ್ಯಸನಕ್ಕೆ ಕಾರಣವಾಗಿದೆ. ಈಗಲೂ ಸರ್ಕಾರದವರು ಗರೀಬ ರೈತರ ಆ ಮಾಲನ್ನು ಚಿತ್ತಕ್ಕೆ ತಂದುಕೊಂಡು ಈ ವರುಷವೇ ಈ ಕೆರೆ ಕಾಮಗಾರಿ ಮಾಡಿಸುತ್ತಾರೆಂದು ನಂಬುತ್ತೇನೆ.

ಚಂದಾದಾರ್

ಅರಸೀಕೆರೆ ತಾಲ್ಲೂಕು ಗಂಡಸಿ.

ಅಯ್ಯಾ,

ಈ ನಮ್ಮ ಹೋಬಳಿಗೆ ಈಗ ೨—೩ ತಿಂಗಳಲ್ಲಿ ಅರಸೀಕೆರೆಯಿಂದ ಬಂದ ಪೊಲೀಸ್ ಟ್ರೈಟರ್ ವಿಜಾರ್ ಹುಸೇನ್‌ಸಾಹೇಬರು ಈ ಮಾಹೇ ತಾರೀಖು ೧೬ನೆ ಗುರುವಾರ ಮಧ್ಯಾಹ್ನದಲ್ಲಿ ಇಲ್ಲಿಗೆ ೩ ಮೈಲಿ ಫಾಸ್ಲೆಯಲ್ಲಿರುವ ಗೊಲ್ಲರಹಳ್ಳಿ ಕಾಡಿನಲ್ಲಿ ಒಂದು ಭಾರಿ ಹುಲಿಯನ್ನು ಗುಂಡಿನಿಂದ ಹೊಡೆದು, ಗಾಡಿಯ ಮೇಲೆ ಹೇರಿಸಿಕೊಂಡು, ಸ್ಟೇಷನ್ ಬಳಿಗೆ ಬಂದರು. ಆ ದಿವಸ ಇಲ್ಲಿ ಸಂತೆಯಾಗಿತ್ತು. ಈ ಹುಲಿಯನ್ನು ನೋಡಲು ಸುಮಾರು ಎರಡು ಸಾವಿರ ಜನರವರಿಗೂ ಸೇರಿತ್ತು. ಇದೇ ಒಂದು ಮಹಾ ಅಗಾಧವಾದ ತಮಾಷೆಯಾಗಿತ್ತು. ಆಗ್ಗೆ ತಾಲ್ಲೋಕು ಇನ್‌ಸ್ಪೆಕ್ಟರು ಬಂದು ನೋಡಿ ಬಹಳ ಸಂತೋಷಪಟ್ಟರು. ಈ ಹುಲಿಯು ೧೦ ಹೆಜ್ಜೆ ಉದ್ದ ಇರುತ್ತೆ. ಇದು ಇಬ್ಬರ ಪ್ರಾಣ ಕೊಂದಂತೆಯೂ ಅನೇಕ ದನಕರುಗಳನ್ನು ಸಹಾ ತಿಂದುಹಾಕಿದೆಯೆಂತಲೂ ಕೇಳುತ್ತೇವೆ. ಮೇಲ್ಕಂಡ ಗುರುವಾರ ಸುತ್ತಮುತ್ತ ಗ್ರಾಮದ ಪಟೇಲರುಗಳು ಇವರಿಗೆ ಬಹುಮಾನವಾಗಿ ವಿಧವಾದ ಪುಷ್ಪಗಳು, ಹುವ್ವಿನ ಹಾರ, ಎಲೆ ಅಡಿಕೆ ವಿಪರೀತವಾಗಿ ಕೊಟ್ಟು ಸಂತೋಷಪಡಿಸಿದರು.

ಚಂದಾದಾರ.

ತಾಲ್ಲೋಕು ವರ್ತಮಾನಗಳು.

ತರೀಕೆರೆ.—ಇಲ್ಲಿ ಬಿಸಲು ಅಧಿಕವಾಗಿದ್ದಾಗ್ಯೂ ಪ್ಲೇಗ್ ವ್ಯಾಧಿ ತಿರಿಗಿ ಪ್ರಾರಂಭವಾದ ಹಾಗೆ ಕಾಣುತ್ತದೆ. ಕಳೆದ ವಾರ ... ಆ ವ್ಯಾಧಿಯಿಂದ ಸತ್ತು ಇರುತ್ತಾರೆ. ಇಷ್ಟು ಬೇಗನೆ ಈ ವ್ಯಾಧಿಯು ಪ್ರಾರಂಭವಾಯಿತಲ್ಲಾ ಎಂದು ಜನರು ಗಾಬರಿಪಡುತ್ತಾರೆ.—ಇಲ್ಲಿ ಕಳೆದ ೬ ವರುಷಗಳಿಂದ ಸಬ್ ರಿಜಿಸ್ಟ್ರಾರ್ ಆಗಿದ್ದ ಮ॥ ಶ್ರೀನಿವಾಸರಾವ್, ಬಿ. ಎ. ಯವರು ಈ ತಿಂಗಳು ೨೩ ... ದಾಗಡಿ ಕಡೆಗೆ ವರ್ಗವಾಗಿ ಹೊರಟುಹೋದರು. ಇವರು ಸತ್ಪುರುಷರು, ಗುಣಶಾಲಿಗಳು, ಸಹನ ಮತ್ತು ಪ್ರೀತಿಯುಳ್ಳವರು. ಸಮಸ್ತ ಜನರು ಇವರನ್ನು ಬಹಳವಾಗಿ ಕೊಂಡಾಡುತ್ತಾರೆ.—ಇಲ್ಲಿನ ಪೋಸ್ಟ್ ಮ್ಯಾಸ್ಟರ್ ಮ॥ ಸ್ವಾಮಿಪಿಳ್ಳೆ ಮುಂತಾದವರು ಅವರನ್ನು ತಮ್ಮ ಸ್ಥಳಕ್ಕೆ ಕರೆಸಿಕೊಂಡು ಬಹಳ ಮರ್ಯಾದೆ ಮಾಡಿ ಅವರಿಗೆ ಟೀಪಾರ್ಟಿ ಮುಂತಾದ್ದು ಇಟ್ಟಿದ್ದರು. ಇವರಿಗೆ ಬದಲಾಗಿ ಮ॥ ನಾರಾಯಣರಾಯರು ಸಬ್ ರಿಜಿಸ್ಟ್ರಾರಾಗಿ ಬಂದಿರುತ್ತಾರೆ.

ಬೀರೂರು.—ಈ ಊರಿನಲ್ಲಿ ಸದ್ಯಕ್ಕೆ ಕಾಯಿಲೆ ಏನೂ ಇಲ್ಲದಿದ್ದಾಗ್ಯೂ ಕೆಲವರು ಇನ್ನೂ ಗುಡಿಸಲುಗಳಲ್ಲಿ ವಾಸಮಾಡುತ್ತಾರೆ. ... ಅಧಿಕವಾಗಿದೆ. ಮ್ಯುನಿಸಿಪಾಲಿಟಿಯು ಉತ್ತಮಸ್ಥಿತಿಯಲ್ಲಿದೆ. ... ರಸ್ತೆಗಳು ಮತ್ತು ದೀಪಗಳು ಶುಚಿಯಾಗಿರುತ್ತವೆ.—ಇಲ್ಲಿನ ... ಅಸಿಸ್ಟೆಂಟ್ ಸರ್ಜನರವರು ತರೀಕೆರೆಗೆ ವರ್ಗಮಾಡಿಕೊಂಡು ಹೋಗುತ್ತಾರೆಂಬ ವರ್ತಮಾನವಿದೆ. ಇವರು ಇಲ್ಲಿಗೆ ಬಂದು ... ವರ್ಷವಾಯಿತು. ಇವರು ಒಳ್ಳೆ ಸಾತ್ವಿಕರು, ಗುಣಶಾಲಿಗಳು, ... ರೋಗಿಗಳಿಗೆ ಒಳ್ಳೆ ಔಷಧವನ್ನು ಕೊಟ್ಟು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಾ ಇದ್ದಾರೆ. ಇಂಥವರು ಈ ಊರು ಬಿಟ್ಟು ಹೋಗುವುದು ಪ್ರಜೆಗಳಿಗೆ ವ್ಯಸನವಾಗಿರತಕ್ಕದನ್ನು ಹೇಳಬೇಕಾದ್ದೇನೂ ಸಂದೇಹವಿಲ್ಲ.—ಇಲ್ಲಿನ ಕನ್ನಡ ಸ್ಕೂಲ್ ಮಾಸ್ಟರ್ ನರಸಿಂಹಾಚಾರ್ಯರು ... ಉಪಾಧ್ಯಾಯ ಕೆಲಸವನ್ನು ಸರಿಯಾಗಿ ನಡಸದೆ ಇಲ್ಲಿನ ಒಂದು ... ಏಜಂಟರಾಗಿದ್ದುಕೊಂಡು ಸ್ಕೂಲಿನ ಕಾಲವನ್ನು ಅದಕ್ಕೆ ಉಪಯೋಗಿಸುತ್ತಾರೆಂತಲೂ, ಹುಡುಗರ ವಿಷಯದಲ್ಲಿ ಬಹಳ ನಿಷ್ಕರುಣಿಗಳಾಗಿದ್ದಾರೆಂತಲೂ ವರ್ತಮಾನವಿದೆ.

ತುಂಕೂರು.—ಬಿಸಲು ಆಯುತ್ತಾ ಮೋಡವಾಡುವದರಿಂದ ... ಹವಾ ಅನುಕೂಲವಾಗಿರುತ್ತೆ. ಈ ಮಧ್ಯೆ ಆಕಸ್ಮಾತ್ ... ತಾರೀಖು ೧೩—೧೪ ರಲ್ಲಿ ಎರಡು ಹದ ಭಾರೀ ಮಳೆಯಾಗಿ ... ಒಂದು ಅಡಿ ನೀರು ಬಿದ್ದಿರುತ್ತದೆ. ಇದರಿಂದ ಹೊಗೆ ... ಮತ್ತು ತರೀ ಭೂಮಿಗೂ ಬಹಳ ಅನುಕೂಲವಾಯಿತು. ಈ ... ಮಳೆಗಾಲ ಸ್ವಲ್ಪವಾಗಿದ್ದದ್ದರಿಂದಲೂ ಪ್ರಕೃತದಲ್ಲಿ ಬೇಸಿಗೆ ... ವಾಗಿರೋಣವರಿಂದಲೂ ಹೊರಗಡೆಯಲ್ಲಿರುವ ಅನೇಕರು ... ಗಳಿಗೆ ಸರಿಯಾಗಿ ಹೊಲಿಕೆ ಇರುತಿರಲಿಲ್ಲವಾದ್ದರಿಂದ ... ಸಂಭವಿಸಿದ ಮಳೆಯಿಂದ ಉಂಟಾದ ತೊಂದರೆ ವಿಶೇಷವಿದೆ ಹೇಳಬೇಕಾಗಿದೆ. ಧಾರಣೆವಾಸಿಗಳು ಸುಗ್ಗಿ ಕಾಲವಾದ್ದರಿಂದ ... ಜಾಸ್ತಿಯಾಗದೆ ಒಂದೇ ಸಮನಾಗಿರುತ್ತದೆ.—ಈಗ ಎರಡು ... ದಿಂದಲೂ ಪ್ಲೇಗ್ ಮರಣಗಳು ಇಲ್ಲದಿರುವದರಿಂದ ಸರ್ಕಾರದವರು ... ಪಟ್ಟಣಕ್ಕೆ ಜನರನ್ನು ಊರೊಳಕ್ಕೆ ಬರಲು ಅಪ್ಪಣೆ ... ಕೊಟ್ಟಿರುವದರಿಂದ ಈಗಾಗಲೇ ಅನೇಕರು ವಾಸಕ್ಕೆ ಬಂದಿರುತ್ತಾರೆ. ... ಪ್ರಕೃತಿ ಸಲವೂ ಪ್ರಥಮತಃ ರೋಗೋತ್ಪತ್ತಿಗೆ ಆಕಾರವಾಗಿರುವ ... ಮನುಷ್ಯರ ಮಳಿಗೆಗಳಲ್ಲೇ ಪುನಃ ಈ ಸಾರಿಯೂ ವ್ಯಾಪಾರ ... ಲು ಆತುರಪಡುತ್ತಿರುವ ಈ ಊರಿನ ಮಂಡಿ ವರ್ತಕರ ವಿಷಯವು ಬಹಳ ವಿಷಾದಕರವಾಗಿದೆ. ಹಿಂದೆ ಸಂಭವಿಸಿದಂಥ ಕಷ್ಟಗಳನ್ನು ... ಕಾಲದಲ್ಲಿ ಸುಖಪ್ರದವಾಗಿ ಕಾಣಿಸಿದರೂ ಭವಿಷ್ಯದಲ್ಲಿ ಇವೇ ... ತೊಂದರೆ ಸಂಭವಿಸೋಣದರಲ್ಲಿ ಯಾವ ಸಂಶಯವೂ ಇರ... ಈಗಲಾದರೂ ಮುಂಜಾಲೋಚನೆ ಇಟ್ಟು ವರ್ತಕರು ... ಸರ್ಕಾರದವರು ಮಂಡಿ ವ್ಯಾಪಾರಕ್ಕೆ ಹೊರಗಡೆ ಏರ್ಪಾಡು ... ವದರಲ್ಲಿ ಈ ಊರಿಗೇನೇ ಸುಭಾಷ್ಯವೆಂದು ಧಾರಾಳವಾಗಿ ... —ನಗರಸಾಲಿನಲ್ಲಿ ಏರ್ಪಡಿಸ್ಟ್ ಮಾಡಿಸಿದ ನೊಬಲಿ... ಮ್ಯುನಿಸಿಪಾಲಿಟಿಯವರು ಜನರಿಗೆ ನೋಟೀಸುಗಳನ್ನು ... ಮಾಡುತ್ತಾರೆ. ಇದಕ್ಕಾಗಿ ಶ್ರೀಮನ್ಮಹಾರಾಜರವರ ದಿ... ಸ್ಥಾನಕ್ಕೆ ಜಾಹೀರು ಮಾಡಿಕೊಂಡ ಮನವೇ ಅರ್ಜಿಯ ಫಲಿ... ತಿಳಿಯದೆ, ಜನರು ಸಾಲೀ ಕೊಡಬೇಕಾಗಿರುವ ಕಂದಾಯ... ಒದಗಿಸಲು ನಿಶ್ಚಿಂತನ್ಯರಾಗಿರುವ ಇವರಿಗೆ ಇದೊಂದು ಸಂ... ಭಯಂಕರವಾಗಿದೆ.—ಚರ್ಚಿನಲ್ಲಿ ಕಳ್ಳತನವೇನೂ ಈ ವಾರ ... ಇದ್ದರೂ ವಿಜಾಪದ ದಿಬ್ಬೂರೆಂಬ ಗ್ರಾಮದಲ್ಲಿ ಕ್ಯಾತುಭೋ... ಮನೆಗೆ ಯಾರೋ ಕಳ್ಳರು ಕನ್ನಾ ಹಾಕುತ್ತಿರುವಾಗ ಉಂಟಾ... ದಿಂದ ಮನೆಯವರು ಎಚ್ಚತ್ತು ಹುಡುಕುವಾಗ ಆ ದುಷ್ಟರು ... ಯನವಾದರು. ಗುಮಾನೀ ಮೇಲೆ ಕೆಲವರನ್ನು ಸರ್ಕಾರದ ... ಹಿಡಿದು ವಿಚಾರಣೆ ನಡಸುತ್ತಿದ್ದಾರೆ.—ಈ ವಾರ ಬೆಂಕಿ ಅಪಾಯ ... ಟವರ್ನಿಗೆ ಉತ್ತರ ದಿಕ್ಕಿನಲ್ಲಿರುವ ಅರಳೀ ಮಂಡಿ ಬಾಳ್ಯದ ... ಎರಡು ಮನೆಗಳು ಮತ್ತು ಎರಡು ಹುಲ್ಲು ಬಣವೆಗಳೂ ... ಹೋದವು. ಈ ಮಾಸ್ಕಾಲದಲ್ಲಿ ನಷ್ಟಹೊಂದಿದ ಮಾಲೀಕರ ... ನಿವಾರಿಸಲಸಾಧ್ಯವಾಗಿದೆ.

ಚಿತ್ರದುರ್ಗ.—ಈಗ ೬—೭ ದಿವಸಗಳಿಂದ ಚಳಿ ಕಮ್ಮಿಯಾ... ಬಿಸಲು ಕಾವ ಜಾಸ್ತಿಯಾಗುತ್ತಲಿದೆ. ಆದರೂ ಶೀತದಿಂದ ಬರ... ಆಗಕ್ಕೆ ಕೆಮ್ಮು ನೆಗಡಿ ಮುಂತಾದ ಕಾಯಿಲೆಗಳು ಮಾತ್ರ ... ಟಿಲ್ಲ. ಆದರೆ ಪ್ಲೇಗ್ ಕೇಸುಗಳಾಗತಕ್ಕದ್ದು ಕಂಡುಬಂದಿರು... ದರಿಂದ ಜನರು ಇತರ ಕಾಯಿಲೆಗಳಿಗೆ ಅಷ್ಟು ಭಯ... ಹೊರಗೆ ವಾಸವಾಗಿದ್ದವರೆಲ್ಲಾ ಊರಲ್ಲಿ ಬಂದುಬಿಟ್ಟರು. ಪ್ಲೇಗಿನಿಂದ ಬಿಟ್ಟುಹೋಗಿದ್ದ ಸ್ಥಳಕ್ಕೆ ಪುನಃ ಜನರು ಬಂದು ತುಂಬಿರುತ್ತಾರಾದ್ದರಿಂದ ಈ ಕಾಲದಲ್ಲಿ ಮ್ಯುನಿಸಿಪಾಲಿಟಿಯವರು ಸರಿಯಾದ ನಿಗಾ ಕೊಟ್ಟು ಈ ಕೆಳಗಿನ ಲೋಪಗಳು ಜಾಗ್ರತೆಯಾಗಿ ಸರಿಪಡಿಸಿದರೆ ಮುಂದೆ ಜನರು ಸೌಖ್ಯವಾಗಿರುತ್ತಾರಾಗಿ ನಂಬಬೇಕಾಗಿದೆ.—ಈ ಊರಲ್ಲಿ ಅನೇಕ ಮನೆಗಳವರು ತಮ್ಮ ಮನೆಗಳಲ್ಲಿ ಪಾಯಿಖಾನೆ ಮನೆಗಳನ್ನು ಮಾಡಿಕೊಂಡಿಲ್ಲ. ಅವರೆಲ್ಲಾ ಸಿಕ್ಕಿದ ಕಡೆ ಹೇಸಿಗೆ ಮಾಡುತ್ತಿದ್ದಾರೆ. ಅದನ್ನು ಕೇಳುವವರೇ ಇಲ್ಲ. ಆ ಕೆಟ್ಟ ವಾಸನೆಯಿಂದ ಜನರಿಗೆ ರೋಗ ಪ್ರಾಪ್ತಿಯಾಗಲು ಕಾರಣವಾಗಿದೆ. ಮೊದಲಿದ್ದ ವೈಸ್ ಪ್ರೆಸಿಡೆಂಟ್ ಮ॥ ಬಿ. ವೆಂಕೋಬರಾಯರು ರಾತ್ರಿ ಕಾಲಗಳಲ್ಲೂ ಖುದ್ದು ಗಸ್ತು ಮಾಡುತ್ತಾ ಬೀದಿಯಲ್ಲಿ ಪಾಯಿಖಾನೆ ಮಾಡಿದವರನ್ನು ಹಿಡಿದು ಜುಲ್ಮಾನೆ ಹಾಕಿ ತಕ್ಷಣ ಆ ಸ್ಥಳವನ್ನು ಶುಚಿಮಾಡಿಸುತ್ತಿದ್ದರು. ಅವರು ಈ ಸ್ಥಳ ಬಿಟ್ಟುಹೋದನಂತರ ಈ ವಿಷಯ ವಿಚಾರಿಸತಕ್ಕದ್ದೇ ನಿಂತುಹೋಗಿದೆ. ಈಗ ಜನರು ನಿರ್ಭೀತಿಯಿಂದ ಸಿಕ್ಕಿದ ಕಡೆಯಲ್ಲಿ ಹೇಸಿಗೆ ಮಾಡುತ್ತಿದ್ದಾರೆ.—ಜನರು ವಾಸಮಾಡಲಿಕ್ಕೆ ನಲ್ಲಿಗಳ ನೀರು ವಿನಹ ಬೇರೆ ಅನುಕೂಲವೇ ಇಲ್ಲ. ಅದರಲ್ಲೂ ಬೇಕಾದಷ್ಟು ನಲ್ಲಿಗಳನ್ನು ಇಟ್ಟಿಲ್ಲ. ಆ ಸಂಕಟದಿಂದ ಜಾಠಮಾಧೀರ್ಕರಾದ ದೊಡ್ಡ ಮನುಷ್ಯರು ನಲ್ಲಿ ಇಡತಕ್ಕ ಲಾಗವದು ಅವರ ಸ್ವಂತದಿಂದ ಮ್ಯುನಿಸಿಪಾಲಿಟಿಗೆ ಕೊಟ್ಟು ನಲ್ಲಿ ಇಡಿಸಿಕೊಡಬೇಕೆಂತ ಕೇಳಿಕೊಂಡರೂ ಅದೂ ಸರಿಯಾಗಿ ನೆರವೇರುವುದಿಲ್ಲ. ಈಗಿರತಕ್ಕ ನಲ್ಲಿಗಳಲ್ಲೇನೇ ಜನರು ಮುಖ, ಕಾಲು, ಮೈ ಕೈಗಳನ್ನು ತೊಳೆಯತಕ್ಕದ್ದು, ಬಟ್ಟೆಗಳನ್ನು ಒಗೆಯತಕ್ಕದ್ದು, ಮುಸುರೆ ತೊಳೆಯತಕ್ಕದ್ದು, ಈ ಮುಂತಾದ ಕೆಲಸಗಳನ್ನು ಮಾಡಿ ನೀರು ಕೆಡಿಸುವುದಲ್ಲದೆ ಆ ಸ್ಥಳದಲ್ಲೆಲ್ಲಾ ಗಲೀಜು ಮಾಡುತ್ತಿದ್ದಾರೆ. ಇದನ್ನು ಮ್ಯುನಿಸಿಪಾಲಿಟಿಯವರು ತಪ್ಪಿಸಿದರೆ ಬಹಳ ಅನುಕೂಲವಾದೀತು. ಜಿನಸಿಗಳ ಧಾರಣೆ ದಿನೇ ದಿನೇ ಜಾಸ್ತಿಯಾಗುತ್ತಲಿದೆ. ಜನಗಳೆಲ್ಲಾ ಕ್ಷಾಮ ಬಂದೀತೆಂಬ ಭೀತಿ ಪಟ್ಟುಕೊಂಡಿದ್ದಾರೆ. ಈ ಊರು ಬೆಟ್ಟದಲ್ಲಿ ದನಗಳಿಗೆ ತಕ್ಕಮಟ್ಟಿಗೆ ಹುಲ್ಲಿದೆ. ಆದರೆ ಮಾಮೂಲಾಗಿ ನೀರು ಕುಡಿಯುತ್ತಿದ್ದ ಕೆರೆಯಲ್ಲಿ ಈಗ ನೀರು ಕಾಣಿಸಕೂಡದೇ ಬತ್ತಿಹೋದದ್ದಾಗಿ ತಿಳಿಯಬರುತ್ತೆ. ಈ ವಿಷಯ ಅಧಿಕಾರಿಗಳು ಮೂಗು ಪ್ರಾಣಿಗಳ ಸಂಕಟ ಪರಿಹರಿಸಿದರೆ ಬಹಳ ಉಪಕಾರವಾದೀತು.—ಈಗ ಕಳ್ಳರ ಭೀತಿ ಪ್ರಜೆಗಳಿಗೆ ಜಾಸ್ತಿಯಾಗಿದೆ. ಚಿತ್ರದುರ್ಗದ ತಾ॥ ಭರಮಸಾಗರದ ಊರಲ್ಲೇನೇ ಈಗ್ಯೆ ಹದಿನೈದು ದಿನಗಳ ಕೆಳಗೆ ದರೋಡೆ ನಡೆಯಿತು. ಇನ್ನೂ ಅಲ್ಲಲ್ಲಿ ಖೂನಿ, ಕಳವು, ಕನ್ನ ಕಳವು ನಡೆಯುತ್ತಲೇ ಇದೆ. ಶಿವಮೊಗ್ಗಾ ಜಿ॥ ನಲ್ಲಿ ನಡೆದಿದ್ದ ದರೋಡೆಗಳ ಮಾಲನ್ನು ಪೋಲೀಸಿನವರು ಹರಿಹರದ ಸರಹದ್ದಿನಲ್ಲಿ ಹಿಡಿದಿದ್ದಾರೆಂತ ತಿಳಿಯಬರುತ್ತೆ.—ಹಳ್ಳಕೆರೆ ತಾಲ್ಲೋಕು ಸಾಣೇಹಳ್ಳಿ ಸ್ಪೆಷಲ್ ದಫೇದಾರ್ ಮಹಮ್ಮದ್ ಅಲಿ, ಈತನ ಹೆಂಡತಿ, ನಾದಿನಿ ಇವರ ಜೋಡಿಮಾಡಿದಾರೆಂತ ಫಿರ್ಯಾದು ಬಂದ ಕೇಸು ವಿಚಾರಣೆ ಮಾಡುತ್ತಿದ್ದರಲ್ಲಿ ಆ ಇನ್ಸ್‌ಪೆಕ್ಟರ್ ವಗೈರೆಯ ಮೇಲೆ ಸದರಿ ಮಹಮ್ಮದರಾಯ ಫಿರ್ಯಾದು ತಂದಿರತಕ್ಕ ಕೇಸಿನ ವಿಷಯ ಮೊದಲೇ ತಿಳಿಸಿದೇವಷ್ಟೆ. ಆ ಕೇಸಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರು ಒಂದು, ಕಾನ್‌ಸ್ಟೇಬಲ್ಸ್ ಎರಡು, ಈ ಮೂರು ಜನರನ್ನು ಖುಲಾಸ್ ಮಾಡಿ, ಒಬ್ಬ ದಫೇದಾರ್ ಮೂರು ಜನ ಕಾನ್‌ಸ್ಟೇಬಲ್‌ರಿಗೆ ಶ್ರೀ ಇಸಂ ಒಂದು ವರ್ಷ ಕಠಿಣ ಸಜಾ ಮಾಡಿದರು. ಈ ಕೇಸಿನ ಫಿರ್ಯಾದಿ ಸಾಕ್ಷಿಗಳ ಮೇಲೆ ಬಂದಿದ್ದ ಜೋಡಿ ಕೇಸಿನ ವಿಷಯ ಏನಾದದ್ದೂ ಗೊತ್ತಿಲ್ಲ.—ಶಿಷ್ಯರನ್ನು ಪಾವನ ಮಾಡಲಿಕ್ಕೆ ೭—೮—೧೯೦೪ ನೇ ತಾ. ದಿನ ಈ ಗ್ರಾಮಕ್ಕೆ ಬಂದ ಕೂಡ್ಲಿ ಶೃಂಗೇರಿ ಸ್ವಾಮಿಗಳು ಇನ್ನೂ ಇಲ್ಲೇ ಮೊಕ್ಕಾಂ ಮಾಡಿಕೊಂಡಿದ್ದಾರೆ.—ಅರ್ಧಶಾಲಿಕ ಉತ್ಸವ ಈ ಊರಲ್ಲಿ ಮಾಡಿಸಿಕೊಂಡೇ ಈ ಸ್ಥಳ ಬಿಡುತ್ತೇವೆಂತ ನಿರ್ಧಾರ ಮಾಡಿಕೊಂಡಿದ್ದಾರಾಗಿ ತಿಳಿಯಬರುತ್ತೆ. ಅವರ ಆನೆಗಳಿಗಾಗಿ ತೋಪುಗಳಲ್ಲೂ ಸಾಲ್ ಮರಗಳಲ್ಲೂ ಸೊಪ್ಪೆಲ್ಲಾ ಕ್ಷೀಣವಾಗುತ್ತಾ ಬಂತು. ಬಾಕೀ ಅವರ ಸೇವಾ ವಿಷಯ ಅವರಿಗೂ ಅವರ ಶಿಷ್ಯರಿಗೇನೇ ಗೊತ್ತು.

ವಿದೇಶ ವರ್ತಮಾನಗಳು.

ಜಾಂಜಿಬಾರಿನ ಸುಲ್ತಾನರು ಕಳೆದ ವಾರ ಪಶ್ಚಿಮ ... ಲಂಡನ್ ಪಟ್ಟಣಕ್ಕೆ ಹೋಗಿ ಇಳಿದರು.

****

ಪ್ರಿಟೋರಿಯಾ ಪಟ್ಟಣದ ಪ್ರಿಮಿಯರ್ ಮೈನ್ ಎಂಬ ವಜ್ರದ ಗಣಿಯಲ್ಲಿ ಇನ್ನೊಂದು ಭಾರೀ ವಜ್ರ ಸಿಕ್ಕಿತೆಂತಲೂ ಇದು ೩೦೦ ಕ್ಯಾರೆಟ್ಟು ಇದೆಯೆಂತಲೂ ತಂತೀ ವರ್ತಮಾನ ಬಂದಿದೆ.

*****

ಆಸ್ಟ್ರಿಯಾ ರಾಜ್ಯದಲ್ಲಿ ಸರ್ಕಾರದವರು ಮುದುಕರಾಗಿರುವ ಪ್ರಜೆಗಳಿಗೆ ಪೆನ್ಷನ್ ಕೊಡುವುದಕ್ಕೋಸ್ಕರ ಟೀ ಸೊಪ್ಪಿನ ಮೇಲೂ ಕೀರೋಸಿನ್ ಎಣ್ಣೆಯ ಮೇಲೂ ಸ್ವಲ್ಪ ಸುಂಕವನ್ನು ಹಾಕಬೇಕೆಂದು ಆಲೋಚನೆ ಮಾಡಿರುತ್ತಾರೆ.

*****

ರಷ್ಯಾ ಚಕ್ರವರ್ತಿಯವರು ಬಾಲ್ಟಿಕ್ ಕಡಲಿನಲ್ಲಿರುವ ತಮ್ಮ ಯುದ್ಧದ ಹಡಗುಗಳನ್ನು ಯುದ್ಧ ಭೂಮಿಗೆ ಕಳುಹಿಸಬೇಕೆಂದು ಹುಕುಂ ಕೊಟ್ಟು, ಅದರ ಖರ್ಚಿಗಾಗಿ ತಮ್ಮ ಸ್ವಂತ ಹಣದಿಂದ ಹದಿನೈದು ಕೋಟಿ ರೂಪಾಯಿ ಕಳುಹಿಸಿರುತ್ತಾರೆ.

*****

ವಿಲಾಯತಿಗೆ ಸೇರಿದ ಮ್ಯಾಂಚೆಸ್ಟರ್ ಪಟ್ಟಣದಲ್ಲಿ ಮಿಸೆಸ್ ಇ. ಡೇನಿಯಲ್ ರೀಡ್ ಎಂಬಾಕೆ ಸಾಯುವ ತನಕ ಏಕಾಂಗಿಯಾಗಿದ್ದು, ಅಂತ್ಯ ಕಾಲದಲ್ಲಿ ತನ್ನ ಆಸ್ತಿಯನ್ನೆಲ್ಲಾ ಅಂದರೆ ಸುಮಾರು ೧೩ ಲಕ್ಷ ರೂಪಾಯಿಗಳನ್ನು ಅಲ್ಲಿನ ಆಸ್ಪತ್ರೆ ಫಂಡಿಗೆ ಕೊಟ್ಟು ಇರುತ್ತಾಳೆ.

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ಕ್ವೀನ್ಸ್ ಟೌನ್ ಪಟ್ಟಣದ ಸಮುದ್ರ ತೀರದಲ್ಲಿ ಒಂದು ಹಡಗಿನಲ್ಲಿದ್ದ ಪದಾರ್ಥಗಳು ಹತ್ತಿಕೊಂಡು ಉರಿದು ಹೋದ್ದರಿಂದ ಸುಮಾರು ಹತ್ತು ಮಂದಿ ಸತ್ತರೆಂತಲೂ ಇಪ್ಪತ್ತು ಮಂದಿಗೆ ಗಾಯಗಳಾದವೆಂತಲೂ ತಂತೀ ವರ್ತಮಾನ ಬಂದಿದೆ.

****

ಲಂಡನ್ ಪಟ್ಟಣದಲ್ಲಿ ಪ್ರಜೆಗಳಿಂದಲೇ ಇಟ್ಟು ನಡಸಲ್ಪಡುತ್ತಿರುವ ೯೩ ಆಸ್ಪತ್ರೆಗಳ ಆದಾಯ ವ್ಯಯ ಮುಂತಾದ್ದನ್ನು ಪ್ರಕಟಿಸಿದಾರೆ. ಈ ಆಸ್ಪತ್ರೆಗಳಿಗೆ ಪ್ರಜೆಗಳು ಬರೆದಿಟ್ಟ ಉಯಿಲುಗಳ ಪ್ರಕಾರ ೩೦ ಲಕ್ಷ ಪೌಂಡುಗಳೂ, ಐಶ್ವರ್ಯವಂತರ ಧರ್ಮದಿಂದ ೧೫೬ ಲಕ್ಷ ಪೌಂಡುಗಳೂ ಮೂಲಧನ ಕೂಡಿಸಲ್ಪಟ್ಟಿದೆ.

*****

ಆಫ್ರಿಕದಲ್ಲಿ ಫ್ರೆಂಚರಿಗೆ ಸೇರಿದ ಕಾಂಗೊ ಲಾಂಡ್ ಎಂಬ ಸೀಮೆಯಲ್ಲಿ ಪ್ರಜೆಗಳು ಸರ್ಕಾರದವರ ಮೇಲೆ ದಂಗೆಯೆದ್ದು ನಾಲ್ಕಾರು ಯುದ್ಧಗಳನ್ನು ನಡಸಿದರು. ಫ್ರೆಂಚ್ ಸೈನಿಕರು ಬಹುಮಂದಿ ಸತ್ತರು. ಈ ದಂಗೆಯನ್ನು ಅಡಗಿಸುವುದಕ್ಕೆ ಸರ್ಕಾರದವರು ಇತರ ಕಡೆಗಳಿಂದ ಹೊಸ ಸೈನ್ಯವನ್ನು ಕಳುಹಿಸಿದಾರೆ.

*****

ವಿಲಾಯತಿಗೆ ಸೇರಿದ ಹಾಲ್ ಬೋರ್ನ್ ಪಟ್ಟಣದ ಮ್ಯುನಿಸಿಪಲ್ ಆಫೀಸಿನಲ್ಲಿ ತಿಂಗಳಿಗೆ ೧,೮೭೫ ರೂಪಾಯಿ ಸಂಬಳ ಪಡೆಯುತ್ತಾ ಬಹಳ ನಂಬಿಗಸ್ಥನೆಂದೂ ಸತ್ಯವಂತನೆಂದೂ ಹೊಗಳಿಸಿಕೊಳ್ಳುತ್ತಾ ಇದ್ದ ಮಿ॥ ಹೆನ್ರಿ ಜೋನ್ಸ್ ಎಂಬುವನು ಪೋಲೀಸ್ ಕೋರ್ಟಿಗೆ ಹೋಗಿ ತಾನು ಕಳೆದ ಮಾರ್ಚಿ ಲಾಗಾಯಿತು ಆಗೋಷ್ಟು ವರೆಗೆ ಮ್ಯುನಿಸಿಪಾಲಿಟಿಯ ಹಣದ ಪೈಕಿ ಒಂದೂವರೆ ಲಕ್ಷ ರೂಪಾಯಿ ದುರುಪಯೋಗ ಪಡಿಸಿಕೊಂಡಿರುವುದಾಗಿ ಹೇಳಿದನು. ಇದರ ಮೇಲೆ ಮ್ಯಾಜಿಸ್ಟ್ರೇಟರು ಅವನನ್ನು ಚನಿಬೆ ಮಾಡಲಾರಂಭವಾಗಿದೆ.

****

ಜರ್ಮನಿ ಚಕ್ರವರ್ತಿಯವರ ೨೦ ವಯಸ್ಸಿನ ಎರಡನೆ ರಾಜಕುಮಾರರಾದ ಪ್ರಿನ್ಸ್ ಏಟೀಲ್ ಫ್ರೆಡ್ರಿಕ್ ಎಂಬಾತನಿಗೆ ಪ್ರಾಣಕೋಶವು ಕೆಟ್ಟು ತುಂಬಾ ಕಾಯಿಲೆಯಾಗಿದೆ. ಚಕ್ರವರ್ತಿಯವರು ಈ ವ್ಯಸನದ ನಿಮಿತ್ತ ತಮ್ಮ ಹುಟ್ಟಿದ ಹಬ್ಬವನ್ನು ರಾಜಧಾನಿಯಲ್ಲಿ ನಿಲ್ಲಿಸಿಬಿಟ್ಟರು. ಸರ್ಕಾರದವರೂ ಪ್ರಜೆಗಳೂ ಆ ದಿನ ಅನೇಕ ಉತ್ಸವಗಳನ್ನು ನಡಸಬೇಕೆಂದು, ತುಂಬಾ ಹಣ ಖರ್ಚು ಮಾಡಿ, ಏರ್ಪಾಡು ಮಾಡಿಕೊಂಡಿದ್ದರು. ಅದೆಲ್ಲಾ ನಿಂತುಹೋದುದಕ್ಕಾಗಿಯೂ ರಾಜಕುಮಾರನ ಕಾಯಿಲೆ ಉಲ್ಬಣವಾದ್ದರಿಂದಲೂ ಎಲ್ಲರೂ ವ್ಯಸನಾಕ್ರಾಂತರಾಗಿದ್ದಾರೆ.

*****

ಅಮೇರಿಕ ರಾಜ್ಯದ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಜನರು ವಿವಾಹ ಸಂಬಂಧವನ್ನು ಬಹು ಬೇಗನೆ ಮತ್ತು ಬಹಳ ಹೆಚ್ಚಾಗಿ ಪರಿತ್ಯಾಗ ಮಾಡುತ್ತಾ ಬಂದಿರೋಣದರಿಂದ ಪ್ರಜಾ ನೀತಿಗೂ ಏಳಿಗೆಗೂ ... ಗವರ್ನಮೆಂಟು ಗವರ್ನಮೆಂಟಿನವರಿಗೆ ಭೀತಿಯುಂಟಾಗಿ, ಇದುವರೆಗೆ ಎಷ್ಟು ವಿವಾಹಗಳಾಗಿವೆ, ಎಷ್ಟು ಜನರು ವಿವಾಹ ಸಂಬಂಧವನ್ನು ಬಿಟ್ಟಿರುತ್ತಾರೆ, ವಿವಾಹ ಸಂಬಂಧವನ್ನು ಪರಿತ್ಯಾಗ ಮಾಡುವುದಕ್ಕೆ ಸಹಕಾರಿಯಾದ ಕಾನೂನು ಯಾವ ರೀತಿಯಲ್ಲಿವೆ ಎಂಬೀ ವಿಷಯಗಳನ್ನು ಚನಿಬೆ ಮಾಡಿ ರಿಪೋರ್ಟು ಕೊಡಬೇಕೆಂದು ಕೆಲವು ಮಂದಿ ದೊಡ್ಡ ಮನುಷ್ಯರನ್ನು ನೇಮಕ ಮಾಡಿದಾರೆ.

*****

ರಷ್ಯಾ ರಾಜ್ಯದಲ್ಲಿ ಯಾರೂ ಮೆಚ್ಚಿ ಮದುವೆಮಾಡಿಕೊಳ್ಳದೆ ಬಿಟ್ಟಿರುವಂಥಾ ಸ್ತ್ರೀಯರನ್ನು ಚಕ್ರವರ್ತಿಯವರು ಒಂದು ಕಡೆ ಸೇರಿಸುತ್ತಾರೆ. ಇವರಿಗೆ ಗಂಡಂದಿರನ್ನು ಹುಡುಕಿ ಗಂಟು ಹಾಕುವುದು ಚಕ್ರವರ್ತಿಯವರ ಕೆಲಸವಾಗಿದೆ. ಇದಕ್ಕೆ ಅವರು ಮಾಡುವುದೇನೆಂದರೆ—ಆ ಸಂಘಗಳಲ್ಲಿರುವ ಬಂದೀಖಾನೆಯ ಪೈಕಿ ಯಾರಾದರೂ ಈ ಹೆಂಗಸರಲ್ಲಿ ಒಬ್ಬಳನ್ನು ಮದುವೆಮಾಡಿಕೊಳ್ಳುವುದಕ್ಕೆ ಒಪ್ಪಿದರೆ ಅಂಥವನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ, ವಿವಾಹ ಮಾಡಿಸುತ್ತಾರೆ. ಅವನು ಮತ್ತೆ ಜೈಲಿಗೆ ಹೋಗಬೇಕಾದದ್ದಿಲ್ಲ. ಅವನಿಗೆ ಮೊದಲನೆಯ ಹೆಂಡತಿ ಇದ್ದರೂ ಚಿಂತೆಯಿಲ್ಲ. ಒಬ್ಬನು ಆ ರಾಜ್ಯದಲ್ಲಿ ಎಷ್ಟು ಮಂದಿ ಹೆಂಗಸರನ್ನಾದರೂ ಮದುವೆಮಾಡಿಕೊಳ್ಳಬಹುದು.

*****

ವಿಲಾಯತಿ ರಾಜ್ಯದಲ್ಲಿರುವ ನೂರಾರು ಮಂದಿ ದೊಡ್ಡ ಮನುಷ್ಯರು, ಮಂತ್ರಿಗಳು, ಅಧಿಕಾರಿಗಳು, ರಾಜಕೀಯ ವಿಷಯಗಳಲ್ಲಿ ಪರಿಶ್ರಮವುಳ್ಳವರು, ವೈದ್ಯ ಮಂಡಲಿಯವರು ಮೊದಲಾದವರೆಲ್ಲಾ ಸೇರಿ, ವಿಲಾಯತಿಯ ಮತ್ತು ವೇಲ್ಸಿನ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಗೆ ಒಂದು ವಿಜ್ಞಾಪನೆಯನ್ನು ಬರೆದು ಕಳುಹಿಸಿರುತ್ತಾರೆ. ಅವರು ತಿಳಿಯಪಡಿಸುವುದೇನೆಂದರೆ—ವಿಲಾಯತಿಯ ಮತ್ತು ವೇಲ್ಸಿನ ವಿದ್ಯಾಶಾಲೆಗಳಲ್ಲಿ ಬಾಲಕರಿಗೆ ಸನ್ನಡತೆ, ಸದಾಚಾರ, ಸದ್ಗುಣಗಳನ್ನು ವಿಶೇಷವಾಗಿ ಕಲಿಸುವಂತೆ ಏರ್ಪಾಡು ಮಾಡಬೇಕು. ಇದಿಲ್ಲದೆ ಹುಡುಗರಿಗೆ ಯಾವ ತರದ ವಿದ್ಯೆಯನ್ನು ಎಷ್ಟು ಮಟ್ಟಿಗೆ ಕಲಿಸಿದಾಗ್ಯೂ ಅವರಿಂದ ಪ್ರಜೆಗಳಿಗೆ ಯಾವ ವಿಶೇಷವಾದ ಉಪಕಾರವೂ ಆಗಲಾರದು. ದೇಶಾಭ್ಯುದಯಕ್ಕೆ ಈ ಗುಣಗಳ ಅಭ್ಯಾಸವೇ ಮುಖ್ಯಕಾರಣವಾಗಿದೆ. ಆದ್ದರಿಂದ ಈ ವಿಷಯವನ್ನು ಸ್ಕೂಲುಗಳ ಅಧಿಕಾರಿಗಳು ವಿಶೇಷ ಗಮನವನ್ನು ಕೊಡಬೇಕು. ಎಂದಿದೆ.

ಪ್ರಪಂಚದಲ್ಲಿ ದೊಡ್ಡವನು ಯಾವನು?

11

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ.—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅಧ್ಯಾತ್ಮ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ|| ರಾ|| ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ನಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪ "ರೋಮನರ ಚರಿತ್ರೆ." ಕ್ರಯ ೦—೨—೦
೫. "ಗ್ರೀಕರ ಚರಿತ್ರೆ." ,, ೦—೨—೦
೬. "ಅನುಭವಾನಂದ",, ೦—೬—೦
೭ "ಗಣಿತ ಸಂಜೀವಿನಿ." ೦—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಘು) ಸಂಗ್ರಹ." ೦—೧೨—೦
೧೧. "೧೯೦೫ನೇ ವರುಷದ ಡೈರಿಗಳು."

ಪ್ಲಾಪ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಜ್ವರಹರಿ.

16

ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ದೌಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಯಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ದೌಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹಿಪ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:— ಹಿಪ್ರಿಯದ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೇಂಟ್ ಜೀಜ್ ಲೈನ್. ಮದರಾಸ್.

೧೯೦೫ನೆ ಇಸವಿ ಮೆಟ್ರಿಕ್ಯುಲೇಷನ್ ಕನ್ನಡ ಟೆಕ್ಸ್ಟಿನ ನೋಟ್ಸು.

5

ಕ್ರಯ, ೧ ರೂಪಾಯಿ. ಡಿಸ್ಕೌಂಟು ೧೦ಕ್ಕೆ ೧.

ಉಪೇಕ್ಷೆ ಮಾಡತಕ್ಕ ನೋಟ್ಸು ಅಲ್ಲ. ಪ್ರಶ್ನೋತ್ತರಗಳೂ ಸಹ ರಚಿಸಿದೆ. ಫೆಬ್ರವರಿ ೧೫ಕ್ಕೆ ಖಂಡಿತ ಸಿದ್ಧವಾಗುತ್ತೆ.

N. R VENKATA SUBBACHARYA,
Sulódha Granthálaya, Mysore

ಸುಲಭಕ್ರಯ: ಸುಗಂಧದ್ರವ್ಯಗಳು.

13

ಅಂಬರ್ ಕಡ್ಡಿ ಸೇರು ೧ಕ್ಕೆ	೫—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೮—೦
ಪುನುಗು ಕಡ್ಡಿ ,, ೧ಕ್ಕೆ	೨—೦—೦
ಮಸಾಲೆ ಕಡ್ಡಿ ,, ೧ಕ್ಕೆ ..	೦—೧೨—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಪಚ್ಚೆ ಗಂಧ ತೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ ಡಬ್ಬಿ ೧ಕ್ಕೆ ..	೦—೪—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ಕಂಟಾಕ್ ಷೋಕ್ ಡಬ್ಬಿ ೧ಕ್ಕೆ ..	೦—೨—೦
ಶ್ರೀವೈಷ್ಣವ ಶಾಸ್ತ್ರೀಯ ದಶಾಂಗ ಸೇರು ೧ಕ್ಕೆ	೦—೧೨—೦
ಧೂಪ ತೋಲ ೧ಕ್ಕೆ	೨—೦—೦
ಡಿಟೋ ..	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಹೆಚ್ಚಾಗಿ ತರಿಸುವವರಿಗೆ ಕಮೀಷನ್ ದೊರೆಯುತ್ತದೆ. ವಿಳಾಸ—ಟಿ ಎಲ್. ಉಪಾಧ್ಯಾಯ ಅಂಡ್ ಕೋ ಸುಗಂಧಕಾರ, ಮೈಸೂರು.

ಹೋಮೋಸಿಯಾ.

ಕಷ್ಟ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಾ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ.; ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಪ್ರಾನವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಒಂದು ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕ್ರಯ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೬ ಸೇಂಟು ಜೀಜ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

10—2—1905 ರಿಂದ 17—2—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವರ್ಷ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	44	37	96	74
ಮೈಸೂರು ,,	10	9	6	3
ಬೆಂಗಳೂರು ಡಿಸ್ಟ್ರಿಕ್ಟ್	94	70	96	81
ಮೈಸೂರು ,,	50	38	115	9[illegible]
ಕೋಲಾರ್ ,,	22	20	88	[illegible]
ಕೋಲಾರ್ ಚಿನ್ನದ ಗಣಿಗಳು	16	13	9	9
ತುಂಕೂರು ಡಿಸ್ಟ್ರಿಕ್ಟ್	48	34	18	9
ಹಾಸನ ,,	0	0	17	11
ಚಿತ್ರದುರ್ಗ ,,	23	22	25	16
ಕಡೂರ್ ,,	5	3	46	39
ಶಿವಮೊಗ್ಗ ,,	5	5	11	8
ಜುಮ್ಲಾ.	317	249	581	413

ಶಾಲೀವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರದ ಮಾಘ ಬಹುಳ ದ್ವಾದಶಿ ಗುರುವಾರದಿಂದ ಫಾಲ್ಗುಣ ಶುದ್ಧ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಮಾರ್ಚ್

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ	[illegible]
2	ಗುರು	ದ್ವಾದಶಿ	58-26	ಉತ್ತಾಷಾ	13 12	19
3	ಶುಕ್ರ *	ತ್ರಯೋ	60 0	ಶ್ರ	15-22	20
4	ಶನಿವಾ †	ತ್ರಯೋ	0 11	ಧ	19 48	21
5	ರವಿವಾ ,,	ಚತುರ್ದಶಿ	3 3	ಶ	51-31	22
6	ಸೋಮ ¶	ಅಮಾ	7 5	ಪೂಭಾ	60 0	23
7	ಕುಜ ‖	ಪಾಡ್ಯ	12-5	ಪೂಭಾ	0 30	24
8	ಬುಧ	ಬಿದಿಗೆ	17 27	ಉತ್ತಭಾ	6-7	25

* ಪ್ರದೋಷ. † ಮಹಾಶಿವರಾತ್ರಿ, ನಂಜನಗೂಡಿನಲ್ಲಿ ಶ್ರೀ... ಸಮಾಪನ. ,, ಸರ್ವತ್ರ ಅಮಾವಾಸ್ಯ. ¶ ಅಮಾಸೋಮವ್ರತ, ಮಾರೀಚಿಕಿ ‖ ದ್ವಿತೀಯಾ ತಿಥಿ, ಚಂದ್ರೋದಯ . ಚಂ... ತಿಥಿ, ಮೇಷರಂ ಪ್ರಾರಂಭ.

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಾಳ್ಮೇ ಅಕ್ಕಿ ಪಲ್ಲ ೧ಕ್ಕೆ	ರೂ. ೧೦—೮—೦	೧೦—೮—
ಕೆಂಬೂತಿ ಅಕ್ಕಿ ಅವಲ್	೧೦—೪—೦	೧೧—೦—
,, ಮಧ್ಯಮ ..	೯—೧೨—೦	೧೦—೮—
ಜಾವಾನ್ ಅಕ್ಕಿ	೯—೮—೦	೧೦—೮—
ಸಣ್ಣಕ್ಕಿ ಅವಲ್	೧೨—೦—೦	೧೩—೦—
,, ಮಧ್ಯಮ ..	೧೦ ೮ ೦	೧೦—೮—
ತೊಗರೀ ಬೇಳೆ ಪಲ್ಲ ೧ಕ್ಕೆ ..	೧೦—೮—೦	೧೦—೨—
,, ಮಧ್ಯಮ	೧೧—೦—೦	೧೦—೦—
ಹ್ಯೇ ರಾಗಿ ಪಲ್ಲ ೧ಕ್ಕೆ	೪ ೧೨—೦	೫—೨—
ಕಾರ್ದ್ರಾಗಿ	೪—/—೦	೫—೦—
ಜೋಳ	೪—೧೨—೦	೬—೦—
ಹಲಸಂದೆ ಪಲ್ಲ ೧ಕ್ಕೆ	೮—೧೨—೦	೮—/—
ಬಿಳೇ ಅವರೆ	೬ ೧೨ ೦	೭—೭—
ಹೆಸರು	೯ ೧೨—೦	೧೦—೦—
ಉದ್ದು	೮ ೧೪—೧	೯—೪—
ಕಡಲೆ	೯ ೦—೦	೮—೦—
ಎಳ್ಳು	೧೬ ೦ ೦	೧೧—೪—
ಹುರುಳಿ	೮—೧ ೦	೭—೬—
ಹರಳು ೧೨೭ ಸೇರಿಗೆ	೯—೮—೦	೭—೧೩—
ಸೀಗೇಕಾಯಿ ಮಣ ೧ಕ್ಕೆ ..	೨—೪—೦	೧—೧೨—
ಮೆಣಸಿನಕಾಯಿ	೪—೮—೦	೩—೮—
,, ಮಧ್ಯಮ	೩—೧೨—೦	೩—೦—
ಬೆಲ್ಲ ದೊಡ್ಡ ಅಚ್ಚು	೩—೪—೦	ಮ ೧.೧೧.
ಒಳ್ಳೆಣ್ಣೆ ಮಣ ೧ಕ್ಕೆ	೪—೦ ೦	೪—೦—
ಹರಳೆಣ್ಣೆ ,, ...	೪—೦—೦	೩—೧೪—
ಕೊತ್ತುಂಬರಿ ಪಲ್ಲ ೧ಕ್ಕೆ	೬—೦—೦	೬—೧೪—
ಉಪ್ಪು ,, ...	೮—೦—೦	೮—೫—
ಹುಣಸೇ ಹಣ್ಣು	೧ ೪—೦	೦—೧೪—
,, ಹಳೇದು	೦—೧೪—೦	೦—೧೩—
ತುಪ್ಪ	೧೨—೦—೦	೧೦—೦—
ಸೀಮೆಎಣ್ಣೆ ಪೆಟ್ಟಿ ೧ಕ್ಕೆ ..	೫—೩—೦	೪—೨—
ತೆಂಗಿನಕಾಯಿ ೧೦೦ ಕ್ಕೆ ..	೫—೦—೦	೪—೦—
ಅಡಕೇಕಾಯಿ ಮಣ ೧ಕ್ಕೆ ..	೧—೦—೦	೦—೧೦—
ಅಂಟ್ವಾಳದಕಾಯಿ ಮಣ ೧ಕ್ಕೆ ..	೦—೧೪—೦	೦—೯—
ಹತ್ತಿ (ಹಣ್ಣ) ಕೆಂಪು ..	೧೫—೮—೦	೧೫—೩—
,, ,, ಬಿಳುಪು ..	೧೫—೧೦—೦	೧೫—೯—
,, ,, ಗಟ್ಟಿ ತೊಲ ೧ಕ್ಕೆ ..	೨೬—೦—೦	೨೪—೪—
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೩೭—೦—೦	೩೫—೧೨—

Printed and Published by the Rev H. SPENCER, BA the Proprietor and Manager, Wesleyan Mission Press Mysore. 2/3,1905

ವೃತ್ತಾಂತ ಪತ್ರಿಕೆ.

REGISTERED M 2?

ಯ ೧ ಮ ಷ್ಟು — ಕ್ರಯ ೧ ಮ ಷ್ಟು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ — ಮೈಸೂರು—ಸನ್ ೧೯೦೫ ನೇ ಇಸವಿ ಮಾರ್ಚಿ ತಾರೀಖು ೯ ನೇ ಗುರುವಾರ — ಸಂಚಿಕೆ ೪೦

ಶ್ರೀ ತಾಂಬೂಲ.

17

ಕೊಳ್ಳಿ ಬಿಡಿ! ಬಿಡಬೇಡಿ!! ಗುಣ ನೋಡಿ!!! ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡುತ್ತಿದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲ

ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದ ರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ಆರು ಸೀಸೆಗೆ ಒಂದು ಜಾಸ್ತಿ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ—

ಹನಹಳ್ಳಿ ಟವರ್, — ಯಂ ಗೋವಿಂದಶೆಟ್ಟಿ,
ಮೈಸೂರು ಡಿಸ್ಟ್ರಿಕ್ಟ — ಮೆಡಿಕಲ್ ಪ್ರಾಕ್ಟಿಷನರ್

P. SUBBAROY'S

World Renowned and most Efficacious Ayurvedic Medicines

ಪಿ ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

7

ಶಕ್ತಿ ಶ್ರೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ತಿಂದರೆ, ಬಾಯಿಯ ದುರ್ಗಂಧವು ಹೋಗುವದು ಬೆಳಿಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು ಇದರಲ್ಲಿ ಅಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು ಕ್ರಯ — ನೂರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೬ ಸೀಸೆಗೆ ವಿ ಪಿ ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾದಾನಿ

ಚಳಿಗಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೇನೋವು, ಛಳಿ ಜ್ವರಗಳು ನಿವಾರಣೆಯಾಗುತ್ತವೆ ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು —ವೃತ್ತಾಂತ ಪ್ರೆಸ್ ಇನಸ್ಪೆಕ್ಟರ್

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ಕೃಷ್ಣಯಂಗಾರ್, ಶೇರಾಫ್ ದಿವಾನ್ ಪೇಷ್ಕಾರ್, ಕೈಲಾರ್.

Apply to —**P. SUBBAROY,**
Porto Novo, South Arcot

ವಿಳಾಸ—ಪಿ ಸುಬ್ಬರಾಯರ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಜೀರಿಗೆ ರಸಾಯನ.

1

ಇದು ಶರೀರದ ಅವಯವಗಳ ವ್ಯಾಪಾರಗಳನ್ನು ಸ್ವಭಾವವಾಗಿ ನಡಿಸುವ ಔಷಧ. ಪಿತ್ತ ವಿಕಾರಗಳನ್ನು ಗುಣಮಾಡುವುದರಲ್ಲಿ ಸಂಬಳೆಯಾದದ್ದು ಅಪ್ರತಿಹತಶಕ್ತಿಯುಳ್ಳ ಮೂಲಿಕೆಗಳಿಂದ ತಯಾರಿಸಿರುವವು ಅಜೀರ್ಣ ಮಲಬದ್ಧತೆ ಸಕಲ ವಿಧವಾದ ಕೆಮ್ಮುಗಳು ಕಫಾ ವಾಂತಿ ನಿಲ್ಲಿಸಿ ಎಂಥ ಪಿತ್ತವಿದ್ದರೂ ಗುಣಮಾಡುತ್ತೆ ಡಬ್ಬಿ ೧ಕ್ಕೆ ಕ್ರಯ ೬ ಆಣೆ

ವಿಳಾಸ—ಸಿ ಪಿ ಅಂಡ್ ಕೋ, ಬೆಂಗಳೂರು ಸಿಟಿ

೧೯೦೪ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

11

ಸಿದ್ಧವಾಗಿದೆ ಡಿಸ್ಕೌಂಟು —೧೦ಕ್ಕೆ ೧ ೫೦ಕ್ಕೆ ೭ ೧೦೦ಕ್ಕೆ ೨೦ ಪ್ರಶ್ನೋತ್ತರಸಹಿತ ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷಿಗಳಿಗೆ ತಕ್ಷಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಏರ್ಪಾಡುಮಾಡಿದೆ.

ಬಾಲಬೋಧ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೭ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು ಕ್ರಯ—೧ ಆಣೆ ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಹಿಂದೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ ಇನ್ನು ಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

—ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧॥ ಆಣೆ

ವಿಳಾಸ—ಮೈಸೂರಲ್ಲಿ ದಿ ಜನರಲ್ ಏಜನ್ಸಿ, ಸಿ. ಎಲ್ ಎಸ್. ಬುಕ್ ಡಿಪೊ, ಕೆ ನರಸಿಂಹಯ್ಯ ಅಂಡ್ ಕೋ, ಬೆಂಗಳೂರಲ್ಲಿ ಜಿ. ಗಣಪ್ಪ ಅಂಡ್ ಕೋ

ಯಸ್ ಆರ್ ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು

ಸನ್ ೧೯೦೫ನೇ ಇಸವಿಯ

11

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿ

ಎನಾಮಲ್ ಬೈಂಡ್! ಸಿನಂ!! ಬೈನಂ!

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಖಿಪ್‌ಬುಕ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕಾಲದ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫಿಸಿನ ಎಲ್ಲಾ ವಿಷಯಗಳು, ಜಮೀನ್ಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಜಮಾಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ ಕೆಂಪು ಕಾರ್ಡು ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದ

ಎ ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರ್ ದೊಡ್ಡಸೈಜು ೬ ಆ.
ಎಫ್ ,, ,, ೪ ಎಚ್. ,, ,, ೭ ,,
ಬಿ ಮುಚ್ಚಳದ್ದು , ೫ ಡಿ. ಮುಚ್ಚಳದ್ದು ,, ೮ ,,

ಪೋಸ್ಟು ಛಾರ್ಜು ಬೇರೆ. ಒಂದೇ ಸಮನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ ವಿ. ಪಿ ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ—ಎಂ ಆರ್ ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಅಗ್ಗ! ಅಗ್ಗ!! ಬಹಳ ಅಗ್ಗ!!!

5

ಇಂಥಾ ಸಮಯ. ಮುಂದೆ ಸಿಗಲಿಕ್ಕಿಲ್ಲಾ

ರಾಸ್ಕೋಪ ಲಿವರ ಸಿಲೈಂ ವಾಚ.

ಇದು ಬಹಳ ಮಜಬೂತ್ ಇದ್ದು ಕುದುರೆಯ ಮೇಲೆ ಸವಾರಿ ಮಾಡಿದರೂ ಕೂಡ ಬಂದ ಆಗುವದಿಲ್ಲ. ಇಂಥಾ ವಾಚನ್ನು ನಾವು ಬಡಜನರಿಗೂ ಕೂಡ ಸೋಯಿಯಾಗಬೇಕೆಂಬ ಇರಾದೆಯಿಂದ ೧೯೦೫ ನೇ ಆಗಸ್ಟ ಅಖೈರವರಿಗೆ ೧೦ ರೂಪಾಯಿ ಕಿಮ್ಮತ್ತು ಇದ್ದದ್ದು ೫ ರೂಪಾಯಿಗೆ ಕೊಡುತ್ತೇವೆ ಗ್ಯಾರಂಟಿ ೫ ವರ್ಷ. ಪ್ರತಿ ವಾಚಿನ ಸಂಗಡ ಸ್ಪ್ರಿಂಗ್, ಪೆಟ್ಟಿಗೆ, ಕನ್ನಡಿ, ಹೀಗೆ ೩ ಸಾಮಾನು ಕಳುಹಿಸುತ್ತೇವೆ ಟಪಾಲ್ ಖರ್ಚು ಬೇರೆ.

ವಿಳಾಸ—ಜೇ. ಯು ಜೋಶಿ ಮತ್ತು ಕಂಪನಿ,
ಪೋಸ್ಟ ಬನವಾಸಿ, ಜಿಲ್ಲಾ ಉತ್ತರ ಕಾನಡಾ.

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

7

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಚಾರ್ಜಿನ ದಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು

ಇದಲ್ಲದೆ ಕನ್ನಡ ಅಕ್ಷರಗಳು—ಬೋರ್ಜೈಸ್ ಮಿನಿಯನ್, ಪೈಕ, ಲಾಂಗ ಪ್ರೈಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು

ವಿಳಾಸ—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ನಿಮ್ಮ ತಲೆಯ ಮೇಲಿರುವದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

17

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬೀರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನೇದು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಕಾಣುವ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದವೂ ಚನ್ನಾಗಿಲ್ಲದವೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ನೋಟೀಸು.

ಬುಕ್ಕಾಪಟ್ಟಣದ ಸಮ್ಮತು ಜಾನುಕಲ್ಲುಗ್ರಾಮದಲ್ಲಿ ನನ್ನ ತಮ್ಮ ನಣ್ಣಾದಿಮ್ಮನೆಂಬುವವನಿಗೆ ಬುದ್ಧಿ ಸ್ವಾಧೀನವಿಲ್ಲದೆ ಈಗ ತಿಂಗಳಿಂದಲೂ ಮನೆ ಬಿಟ್ಟು ಇರುತ್ತಾನೆ. ಅವನಿಗೆ ಹೆಣ್ಣುಕೊಟ್ಟ ಮಾವನಾದ ಜಾನುಕಲ್ಲು ಕರೇಗೋವಿಂದನೆಂಬುವವನೂ ಅವನ ಅತ್ತೆ ನಾಗದೇವನಹಳ್ಳಿ ನಣ್ಣಾದಿಮ್ಮ ಎಂಬುವವಳೂ ಸೇರಿ ನನ್ನ ತಮ್ಮನಿಗೆ ದುರ್ಬೋಧನೆಮಾಡಿ, ಪಾಲುಗುತ್ತಾನೆಂದು ಜನಗಳಿಗೆ ತೋರಿಸಿ ತಿಳುವಳಿಕೆ ಹೇಳಿ ಸಾಲ ಮಾಡಿಸುತ್ತಾ ದುರುಪಯೋಗಪಡಿಸುತ್ತಾ ಇರುತ್ತಾರೆಂದು ತಿಳಿದುಬಂದಿರುತ್ತೆ. ನಣ್ಣಾದಿಮ್ಮನಿಗೆ ಬುದ್ಧಿ ಸ್ವಾಧೀನವಿಲ್ಲದ್ದರಿಂದ ಅವನಿಗೆ ಸಾಲನ್ನು ಕೊಡಲಾಗುವದಿಲ್ಲ. ಇವನಿಗೆ ಸ್ವಾಮಿ ಕೃಪೆಯಿಂದ ಮಕ್ಕಳಾದ್ಯಾಗ್ಯ ಅವರ ಮೈನಾರಟಿ ಕಳೆದ ಮೇಲೆ ಅಗ್ಗ ಸಾಲನ್ನು ಕೊಡಲು ಸಿದ್ಧವಾಗಿರುತ್ತೆ. ಅದುವರಿಗೂ ಅವನಿಂದ ನನ್ನ ಜೊತೆಯ ಖಾತೆಯಲ್ಲಿರತಕ್ಕ ಸ್ಥಿರ ಚರ ಸ್ವತ್ತುಗಳನ್ನು ಅಜ್ಞಾನದಿಂದ ಕ್ರಯ ಭೋಗ್ಯ ಪತ್ರಗಳ ಮುಂತಾದ್ದಕ್ಕೆ ನಾನಾದರೂ ನನ್ನ ಖಾತೆ ಸ್ಥಿರಚರ ಸ್ವತ್ತುಗಳು ಸರೂ ಈಡಾಗಲಾರವೆಂದು ಸರ್ವರೂ ತಿಳಿಯತಕ್ಕದ್ದು.

೫—೩—೧೯೦೫. ಶಿರಾ ತಾಲ್ಲೂಕು ಬುಕ್ಕಾಪಟ್ಟಣದ
ಹೋಬಳಿ ಜಾನುಕಲ್ಲು ಕಾಳಗಿಯಬ್ಬನ ಹಿರೆಮಗ ತಿಮ್ಮಯ್ಯ.

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ಮಾರ್ಚಿ ತಾ॥ ೯ ನೇ ಗುರುವಾರ.

ಬಾಲ್ಯವಿವಾಹ ವಿಷಯವಾದ ಕಟ್ಟಳೆಯನ್ನು ಮೀರಿದವರಿಗೆ ಶಿಕ್ಷೆಯಾದದ್ದು.

ದೇವನಹಳ್ಳಿಯ ಗವರ್ನಮೆಂಟು ಕನ್ನಡ ಬಾಲಿಕಾ ಪಾಠಶಾಲೆಯ ಹೆಡ್ ಮಾಸ್ಟರ್ ಶ್ರೀನಿವಾಸಾಚಾರ್ ಎಂಬಾತನು ಅದೇ ಊರಿನ ಎ. ವಿ. ಸ್ಕೂಲ್ ನಂ ೩ ರ ಉಪಾಧ್ಯಾಯ ಆನಂದತೀರ್ಥಾಚಾರ್ ಎಂಬಾತನ ಮಗಳನ್ನು ಕಳೆದ ವರ್ಷ ವಿವಾಹಿತನಾದನು. ವರನಿಗೆ ೩೪ ವರ್ಷ, ಕನ್ಯೆಗೆ ಇನ್ನೂ ಒಂಭತ್ತು ವರ್ಷ ತುಂಬಿರಲಿಲ್ಲ. ಇದು ಮೈಸೂರು ಸರ್ಕಾರದವರು ಬಾಲ್ಯವಿವಾಹದ ವಿಷಯದಲ್ಲಿ ಜಾರಿಗೆ ತಂದಿರುವ ಕಟ್ಟಳೆಗೆ ವಿರೋಧವಾಗಿರುವುದರಿಂದ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ರವರಾದ ಮೆ॥ ಭಾಭಾ ಸಾಹೇಬರವರ ತಿಳುವಳಿಕೆಗೆ ಬಂದಾಗಿ ಅವರು ಕಳೆದ ಡಿಸೆಂಬರ್ ೨೮ ರಲ್ಲಿ ಈ ವಿವರವನ್ನು ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರ ಅವಗಾಹನೆಗೆ ತಂದರು. ಅದರ ಮೇಲೆ ಶ್ರೀಮನ್ಮಹಾರಾಜರವರು ಕೊಟ್ಟಿರುವ ಆಜ್ಞೆಯೇನಂದರೆ—

ಈ ವಿವಾಹವು ನಮ್ಮ ಸರ್ಕಾರದವರಿಂದ ೧೮೯೪ನೇ ಇಸ್ವಿಯ ಬಾಲ್ಯವಿವಾಹ ವಿಷಯವಾದ ೧ನೇ ನಂಬರು ೩, ೪ನೇ ಸೆಕ್ಷನುಗಳಿಗೆ ವಿರೋಧವಾಗಿ ನಡೆದಿರುತ್ತದೆಂಬುದು ಪರಿಷ್ಕಾರವಾಗಿದೆ. ಅಪರಾಧಿಗಳಾದವರು ಮೈಸೂರು ಸಂಸ್ಥಾನದ ಈ ಕಟ್ಟಳೆಯನ್ನು ಮೀರುವದರಿಂದುಂಟಾಗುವ ದಂಡನೆಗೆ ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಮದ್ರಾಸಾಧಿಪತ್ಯದ ಪೋಲಿಂಗರೆಂಬ ಸ್ಥಳದ ಬಳಿಯಲ್ಲಿರುವ ಘಟಿಕಾಚಲ ಪರ್ವತದ ಮೇಲೆ ಈ ವಿವಾಹವನ್ನು ನಡಸಿದರು. ಇವರು ಸಂಸ್ಥಾನದ ವಿಧಿಯನ್ನು ಮೀರಿದ ಅಪರಾಧವು ದೊಡ್ಡದೆಂಬ ಮಹತ್ತು ಹಾಗಿರಲಿ. ಸರ್ಕಾರದ ಉದ್ಯೋಗದಲ್ಲಿದ್ದುಕೊಂಡು, ಆ ಸರ್ಕಾರದ ಕಟ್ಟಳೆಯನ್ನು ಮೀರಿದುದೂ ಅಲ್ಲದೆ ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳುವದಕ್ಕಾಗಿ ಸರ್ಕಾರದವರನ್ನು ವಂಚಿಸುವದಕ್ಕೆ ಪ್ರಯತ್ನಪಟ್ಟ ಈ ಶ್ರೀನಿವಾಸಾಚಾರ್ ಮತ್ತು ಆನಂದತೀರ್ಥಾಚಾರ್ರೆಂಬವರ ನಡತೆಯನ್ನು ಸರ್ಕಾರದವರು ಅವಗಾಹನೆಗೆ ತಂದುಕೊಳ್ಳದೆ ಬಿಡಲಾರರು. ತನಗೆ ಸಹಾಯಕರೊಬ್ಬರೂ ಇಲ್ಲವೆಂತಲೂ, ಮಾವನ ಮನೆಯಲ್ಲಿ ಊಟ ಉಪಚಾರಕ್ಕೆ ಅನುಕೂಲವಾಗಿರುವುದೆಂತಲೂ ತಿಳಿದು, ಹೀಗೆ ವಿವಾಹ ಮಾಡಿಕೊಂಡೆನೆಂಬುದಾಗಿ ಶ್ರೀನಿವಾಸಾಚಾರಿಯು ಹೇಳುವ ಕಾರಣದಿಂದ ಆತನ ಮೇಲೆ ದೋಷವು ಹೊರಟು ಹೋಗಲಾರದು. ಆನಂದತೀರ್ಥಾಚಾರಿಯ ನಡತೆಯೂ ದೋಷಾರೋಪಣೆಗೆ ಒಳಗಾಗುತ್ತದೆಯಲ್ಲದೆ ಆತನ ನಿರ್ದಯೆಯೂ ಪ್ರಕಟವಾಗುತ್ತದೆ. ಈ ಕಾರಣಗಳನ್ನು ಪರಿಶೀಲಿಸುವಲ್ಲಿ ಇವರಿಬ್ಬರೂ ಸಂಸ್ಥಾನದ ಉದ್ಯೋಗವನ್ನು ನಿರ್ವಹಿಸುವದಕ್ಕೆ ಅಯೋಗ್ಯರಾಗಿದ್ದಾರೆಂದು ಪ್ರಕಟವಾಗುವುದರಿಂದ ಇವರನ್ನು ಉದ್ಯೋಗದಿಂದ ನಿವೃತ್ತಿ ಮಾಡತಕ್ಕದ್ದೆಂದು ಇದರ ಮೂಲಕ ತಿಳಿಯಪಡಿಸಿದೆ.

ಬಾಲ್ಯವಿವಾಹದ ದೆಸೆಯಿಂದ ನಮ್ಮ ದೇಶೀಯರಿಗೆ ಉಂಟಾಗತಕ್ಕ ಅನರ್ಥಗಳನ್ನು ಸಕಲರೂ ತಿಳಿದಿರುತ್ತಾರೆ; ಆದಕಾರಣ ಸರ್ಕಾರದವರು ಇದನ್ನು ನಿಷೇಧಿಸುವ ಕಟ್ಟಳೆಯನ್ನು ಏರ್ಪಡಿಸದೆ ಇದ್ದರೂ ಪ್ರಜೆಗಳು ತಾವಾಗಿಯೇ ಈ ದುಷ್ಪ್ರವೃತ್ತಿಗೆ ಅವಕಾಶಕೊಡದೆ ದೇಶದ ಕ್ಷೇಮಲಾಭವನ್ನು ಸಂರಕ್ಷಿಸುವವರಾಗಿರಬೇಕೆಂದು ದೇಶಾಭಿಮಾನಿಗಳೆಲ್ಲರೂ ಅಪೇಕ್ಷಿಸುವರು. ಮೇಲೆ ಸೂಚಿತವಾಗಿರುವ ಆಚಾರ್ಯರಿಬ್ಬರ ನಡತೆಯು ರಾಜಶಾಸನಕ್ಕೆ ವಿರೋಧವಾದುದೆಂತಲೂ ವಂಚನೆಯುಳ್ಳದೆಂತಲೂ ದಯಾರಹಿತವಾದುದೆಂತಲೂ ಸರ್ಕಾರದವರು ಹೇಳಿರುವುದು ನ್ಯಾಯವೇ ಸರಿ. ಆ ನಿರ್ಭಾಗ್ಯಳಾದ ಕನ್ಯೆಯೇ ಈಗ ಈ ಅಪರಾಧಿಗಳಾದವರ ಅಯೋಗ್ಯ ಪ್ರವರ್ತನೆಯಿಂದ ವಿಶೇಷವಾದ ನಷ್ಟಕ್ಕೆ ಗುರಿಯಾಗಿರುವವಳು. ಈ ನಷ್ಟವನ್ನು ಪರಿಹಾರ ಮಾಡಿಕೊಡುವುದು ಸಾಧ್ಯವಾಗಿದ್ದಲ್ಲಿ ಸರ್ವರೂ ಸಂತೋಷಪಡಬಹುದಾಗಿತ್ತು. ಆದರೆ ನಡೆದುಹೋದ ಕಾರ್ಯಕ್ಕೆ ಈಗ ಸುಡಿದು ಫಲವಿಲ್ಲ. ಈ ಸಣ್ಣ ಹುಡುಗಿಯ ಮುಂದಿನ ಸ್ಥಿತಿಯು ತುಂಬಾ ಪರಿತಾಪಕರವಾಗಬಹುದೆಂದು ಸರ್ಕಾರದವರು ಸಹಜವಾಗಿ ಊಹಿಸಿ, ಅದಕ್ಕೆ ಕಾರಣರಾದ ಈ ಇಬ್ಬರು ಅಪರಾಧಿಗಳಿಗೂ ವಿಧಿಸಿರುವ ದಂಡನೆಯನ್ನು ಹೆಚ್ಚೆಂದು ನಾವು ಭಾವಿಸುವುದಿಲ್ಲ. ಸರ್ಕಾರದವರು ಇವರ ವಿಷಯದಲ್ಲಿ ತೋರಿಸಿರುವ ಕಾನೂನಿನ ದರ್ಪವನ್ನು ಸರ್ವತ್ರಸಮನಾಗಿ ತೋರಿಸುವದಾಗಬೇಕೆಂಬುದಾಗಿ ಕುತೂಹಲಪಡುತ್ತೇವೆ. ಇದುವರೆಗೆ ಕೆಲವು ಗಣ್ಯರಾದ ಪ್ರಜೆಗಳೂ ಇಂಥಾ ಅಪರಾಧವನ್ನೇ ಮಾಡಿರುತ್ತಾರೆಂಬುವುದೂ, ಅಂಥವರಿಗೆ ಮಾತ್ರ ಇಷ್ಟು ಕ್ರೂರವಾದ ಶಿಕ್ಷೆ ವಿಧಿಸಲ್ಪಡಲಿಲ್ಲವೆಂಬುವುದೂ ಜನರ ಆಡಿಕೆಯಾಗಿದೆ. ಹ್ಯಾಗೂ ಗವರ್ನಮೆಂಟಿನವರು ಪ್ರಜೆಗಳ ಮೇಲಣ ಪ್ರೀತಿಯಿಂದ ಜಾರಿಗೆ ತಂದಿರುವ ಈ ಬಾಲ್ಯವಿವಾಹದ ಕಾನೂನು ಸಾರ್ಥಕ ಹೊಂದಿ ದೇಶಕ್ಕೆ ಕ್ಷೇಮವಾಗಲೆಂಬುವುದೇ ನಮ್ಮ ಅಭಿಮತವು.

ವಿಶೇಷ ಸಮಾಚಾರಗಳು.

ದಕ್ಷಿಣ ಅಫ್ರಿಕದ ವಜ್ರದ ಗಣಿಗಳಲ್ಲಿ ಎರಡು ಭಾರೀ ವಜ್ರಗಳು ಸಿಕ್ಕಿವವೆಂದೂ ಇವಕ್ಕಿಂತ ಭಾರಿಯಾದ ವಜ್ರಗಳೇ ಈಗ ಪ್ರಪಂಚದಲ್ಲಿ ಇಲ್ಲವೆಂದೂ ಕಳೆದ ವಾರ ತಿಳಿಸಿದೆವಷ್ಟೆ. ಈ ವಜ್ರಗಳ ಗಣಿಯು ಪ್ರಿಟೋರಿಯಾ ಪಟ್ಟಣದ ಬಳಿ ೩,೩೦೦ ಎಕರೆ ಜಮೀನಿನಲ್ಲಿ ಇರುತ್ತದೆ ಈ ಹೊಲವನ್ನು ೧೯೦೨ ನೆ ಇಸವಿಯಲ್ಲಿ ಪ್ರಿನ್ಸ್ಲು ಎಂಬೊಬ್ಬ ಬೋಅರನು ಮೆ॥ ಎ. ಟ ಕಲ್ಲಿನ್ಗ ಎಂಬಾತನಿಗೆ ೪,೬೫,೦೦೦ ರೂಪಾಯಿಗೆ ಬಿಕರಿ ಮಾಡಿದನು. ಕೂಡಲೇ ವಜ್ರಗಳನ್ನು ತೆಗೆಯುವುದಕ್ಕೋಸ್ಕರ ಒಂದು ಕಂಪನಿ ಏರ್ಪಾಡಾಯಿತು ಷೇರು ೧ ಕ್ಕೆ ೧೫ ರೂಪಾಯಿನಂತೆ ೧೨ ಲಕ್ಷ ರೂಪಾಯಿ ಕೂಡಿತು ಈಗ ಆ ಪ್ರತಿ ಒಂದು ಷೇರೂ ೧,೩೫೦ ರೂಪಾಯಿನಂತೆ ಬಿಕರಿಯಾಗುತ್ತಿದೆ. ಈ ಕಂಪನಿಯವರಿಗೆ ಕಳೆದ ವರುಷ ಖರ್ಚು ಕಳೆದು ೧ ಕೋಟಿಯೂ ೧ ಲಕ್ಷ ರೂಪಾಯಿ ಲಾಭ ಬಂತು. ಈಗ ಸಿಕ್ಕಿರುವ ಎರಡು ಭಾರೀ ವಜ್ರಗಳ ಪೈಕಿ ಒಂದು ವಜ್ರಕ್ಕೆ ೧೫ ಲಕ್ಷದಿಂದ ಪ್ರಾರಂಭ ಮಾಡಿ ಖರೀದಿ ಕಟ್ಟುತ್ತಿದ್ದಾರೆ ವಿಲಾಯತಿ ರಾಜ್ಯದವರೆಲ್ಲಾ ತಲೆಗೆ ೧೨ ಆಣೆಯಂತೆ ಚಂದಾ ಕೊಟ್ಟು, ಈ ವಜ್ರವನ್ನು ಕೊಂಡು ಕೊಂಡು, ವಿಲಾಯತಿ ರಾಜ್ಯದ ಮಹಾರಾಜಾ ಚಕ್ರವರ್ತಿಯವರಿಗೆ ಒಪ್ಪಿಸಿ, ಅವರು ಅದನ್ನು ತಮ್ಮ ಕಿರೀಟದಲ್ಲಿ ಧರಿಸಿಕೊಳ್ಳುವಂತೆ ಕೇಳಿಕೊಳ್ಳಬೇಕೆಂದು ಒಂದು ಸಲಹೆ ಉಂಟಾಗಿದೆ.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚಿಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮುಕ್ಕಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಯೂರೋಪ್ ಖಂಡದಲ್ಲಿ ಸ್ವಿಟ್ಸರ್ಲೆಂಡಿಗೂ ಇಟಲಿಗೂ ನಡುವೆ ಇರುವ ಆಲ್ಪ್ಸ್ ಎಂಬ ಬೆಟ್ಟದಲ್ಲಿ ಸಿಂಪ್ಲಾನ್ ಎಂಬ ಎತ್ತರವಾದ ಕಣಿವೆ ಇರುತ್ತದೆ ಈ ಬೆಟ್ಟದಲ್ಲಿ ಉದ್ದಕ್ಕೂ ಕೊರೆದು ಎರಡು ಗುಹೆಗಳನ್ನು ಮಾಡಿದ್ದಾರೆ ಇಷ್ಟು ಉದ್ದವಾದ ಗುಹಾ ಮಾರ್ಗಗಳು ಇನ್ನೆಲ್ಲೂ ಮಾಡಿರುವದಿಲ್ಲ. ಪ್ರತಿ ಒಂದು ಗುಹಾ ಮಾರ್ಗವು ೬೬,೦೦೦ ಅಡಿ ಉದ್ದವಾಗಿದೆ ಇವೆರಡರ ಮಧ್ಯೆ ೫೭ ಅಡಿ ಬೆಟ್ಟದ ಅಂತರವಿರುವದು ಪ್ರತಿ ೬೬೦ ಅಡಿ ದೂರಕ್ಕೂ ಒಂದು ಗುಹಾ ಮಾರ್ಗದಿಂದ ಇನ್ನೊಂದು ಗುಹಾ ಮಾರ್ಗಕ್ಕೆ ಗಾಳಿ ಸಂಚಾರ ಮಾಡುವಂತೆ ಭಾರೀ ರಂಧ್ರಗಳನ್ನು ಕೊರೆದಿದ್ದಾರೆ ಪ್ರತಿ ಒಂದು ಸೆಕೆಂಡಿನಲ್ಲೂ ಈ ರಂಧ್ರಗಳ ಮೂಲಕ ೧,೩೦೦ ಘನ ಅಡಿಗಳ ಗಾಳಿಯು ಒಂದರಿಂದೊಂದಕ್ಕೆ ಹೋಗಿ ಬರುತ್ತಿದೆ. ಈ ವಾಯು ಸಂಚಾರದ ದೆಸೆಯಿಂದ ಈ ಗುಹಾ ಮಾರ್ಗಗಳೊಳಗೆ ಸೆಖೆಯು ಇಲ್ಲದೆ ತಂಪಾಗಿರುತ್ತದೆ. ಈ ಅಗಾಧವಾದ ಕಾಮಗಾರಿಯನ್ನು ೧೮೯೮ ನೆ ಅಗೋಸ್ಟ್ ೧೫ ರಲ್ಲಿ ಪ್ರಾರಂಭಿಸಿ ಆರು ವರುಷಗಳಲ್ಲಿ ಪೂರೈಸಿರುತ್ತಾರೆ ಇವೆರಡರ ಪೈಕಿ ಒಂದು ಗುಹಾ ಮಾರ್ಗದಲ್ಲಿ ರೈಲನ್ನು ಬಿಡುವರು ರೈಲ್ ಗಾಡಿಗಳಲ್ಲಿ ಕುಳಿತು ಗುಹೆಯಲ್ಲಿ ಹೋಗುವವರಿಗೆ ಗಾಳಿ ಬರುವಂತೆ ಮಾಡುವುದಕ್ಕೋಸ್ಕರವೇ ಇನ್ನೊಂದು ಗುಹಾ ಮಾರ್ಗವನ್ನು ಕಲ್ಪಿಸಿರುತ್ತಾರೆ. ಈ ಕಾಮಗಾರಿಗೆ ೬೭೦ ಲಕ್ಷ ರೂಪಾಯಿ ಖರ್ಚಾಯಿತು. ಈ ಪೈಕಿ ೩೦೦ ಲಕ್ಷ ರೂಪಾಯಿಗಳನ್ನು ಒಂದು ಕಂಪನಿಯವರೂ, ಸ್ವಿಟ್ಸರ್ಲ್ಯಾಂಡ್ ಸರ್ಕಾರದವರು ೯೦ ಲಕ್ಷ ರೂಪಾಯಿಗಳನ್ನೂ, ಇಟಲಿಯವರು ೩೦ ಲಕ್ಷ ರೂಪಾಯಿಗಳನ್ನೂ ಹಂಚಿಕೊಂಡು ಕೊಟ್ಟಿರುವರು.

ಸ್ವದೇಶದ ವೃತ್ತಾಂತಗಳು.

ನೆನ್ನೆ ಶ್ರೀಮನ್ಮಹಾರಾಜರವರು ಪರಿವಾರ ಸಹ ರಾಜಧಾನಿಗೆ ದಯಮಾಡುವವರಾಗಿದ್ದರು.

❖❖❖❖

ಕಳೆದ ವಾರ ಶ್ರೀಮನ್ಮಹಾರಾಜರವರು ಬೆಂಗಳೂರು ಕೋಟೆಗೆ ದಯಮಾಡಿ ಅಲ್ಲಿರುವ ಅರಮನೆಯನ್ನು ಪರಾಂಬರಿಸಿದರು.

❖❖❖❖

ಕಳೆದ ವಾರ ಚೆನ್ನಪಟ್ಟಣದ ಅಮಲ್ದಾರ್ ಮ॥ ರಾಮಚಂದ್ರರಾಯರ ಪತ್ನೀರವರು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

❖❖❖❖

ಕಾಶೀ ಮಹಾರಾಜರವರು ಮುಂದಿನ ವಾರ ರಾಜಧಾನಿಗೆ ಬರುವರು, ಕುಂಬಕೋಣದ ಮಹಾ ಯಾತ್ರೆಗೆ ಹೋಗುತ್ತಾರೆಂದು ವರ್ತಮಾನವಿದೆ.

❖❖❖❖

ಮೈಸೂರು ಸರ್ಕಾರಿ ಟ್ರಾವೆಲರ್ಸ್ ಬಂಗಲೆಗಳಲ್ಲಿ ಮರ ಸಾಮಾನುಗಳನ್ನೂ ಪಾತ್ರೆ ಪದಾರ್ಥಗಳನ್ನೂ ಕೊಂಡುವುದಕ್ಕೆ ಸರ್ಕಾರದವರು ೪,೭೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

❖❖❖❖

ಯುವರಾಜರವರ ವಿದ್ಯಾಗುರುಗಳಾಗಿದ್ದ ಮಿ॥ ಎಂ. ೭. ನಾಸ್ಸಿಯಂಗಾರ್ರನ್ನು ಸರ್ಕಾರದವರು ೧ನೇ ಕ್ಲಾಸ್ ಏಸ್ಸಿಸ್ಟೆಂಟ್ ಕಮಿಷನರಾಗಿ ನೇಮಿಸಿ, ಹಾಸನದ ಡಿಸ್ಟ್ರಿಕ್ಟ್ ಖಜಾನೆ ಕೆಲಸಕ್ಕೆ ವರ್ಗಮಾಡಿದಾರೆ.

❖❖❖❖

ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರು ಕಳೆದ ಶನಿವಾರ ಬೆಳಗ್ಗೆ ಪತ್ನಿ ಸಹಿತ ಕೊಡಗಿನ ಮರ್ಕರಾ ತೀರಿಸಿಕೊಂಡು ರಾಜಧಾನಿಗೆ ಬಂದು, ಆ ರಾತ್ರಿಯೇ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

❖❖❖❖

ಚಿತ್ರದುರ್ಗದಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರಾಗಿದ್ದ ಮೆ॥ ವೈ. ಶ್ರೀನಿವಾಸರಾಯರಿಗೆ ಫರ್ಲೋ ಕೊಟ್ಟು ಡಿಪ್ಯುಟಿ ಛೀಫ್ ಇಂಜನಿಯರ್ ಕೆಲಸಕ್ಕೆ ಬತ್ತಿ ಆಯಿತು. ಬೆಂಗಳೂರು ಸ್ಯಾನಿಟರಿ ಇಂಜನಿಯರಾದ ಮೆ॥ ಆರ್. ವಿ. ಸುಂದರಂ ಐಯ್ಯರವರನ್ನು ಚಿತ್ರದುರ್ಗಕ್ಕೆ ವರ್ಗಮಾಡಿದಾರೆ

"ಹಿತವಾದಿ."

ಪತ್ರಿಕೆಯ ಉದ್ದೇಶ —ನಮ್ಮ ದೇಶೀಯರಿಗೆ ವಿಚಾರಪರತೆಯನ್ನೂ ಸತ್ಪ್ರವೃತ್ತಿಯಲ್ಲಿ ಉತ್ಸಾಹವನ್ನೂ ಬೆಳೆಸಬೇಕೆಂಬುದೇ ಈ ಪತ್ರಿಕೆಯ ಮುಖ್ಯೋದ್ದೇಶವಾಗಿರುವದು. ಇದಕ್ಕೆ ಅನುಗುಣವಾಗಿ ಸಕಲರಲ್ಲಿಯೂ ಸೌಹಾರ್ದವು ಅವಿಚ್ಛಿನ್ನವಾಗಿರಬೇಕಾದ ಕಾರಣ, ಯುಕ್ತ ಮತವಿಚಾರದ ಚರ್ಚೆಗಳಿಗೂ ತನ್ಮೂಲಕ ಅನೇಕವೇಳೆ ಉಂಟಾಗುವ ವೈಮನಸ್ಯಗಳಿಗೂ ಈ ಪತ್ರಿಕೆಯಲ್ಲಿ ಅವಕಾಶ ದೊರೆಯಲಾರದು. ಸೌಜನ್ಯವು ಎಲ್ಲಿ ಗೋಚರವಾದರೂ ಅದನ್ನು ಜಾತಿಮತ ಭೇದವನ್ನೆಣಿಸದೆ, ಸಮದೃಷ್ಟಿಯಿಂದ ಗಣನೆಗೆ ತರಲಾಗುವುದು. ಹಿತವಾದಿಯು ಯಾವದೊಂದು ಮತದವರಿಗೂ ಸಂಬಂಧಪಟ್ಟ ಪತ್ರಿಕೆಯೆನ್ನಿಸಿಕೊಳ್ಳದೆ, ಸರ್ವರಿಗೂ ಪರಿಗ್ರಾಹ್ಯವಾಗಿರುವದು. ಈ ಪತ್ರಿಕೆಯಲ್ಲಿ ಬರೆಯಲ್ಪಡುವ ವಿಷಯಗಳಲ್ಲಿ ಮುಖ್ಯವಾದವು ಯಾವುವೆಂದರೆ —ಮಹನೀಯರ ಚರಿತ್ರೆ, ಸದ್ವಿಚಾರದ ಉಪನ್ಯಾಸಗಳು, ನಾನಾಭಾಷೆಗಳ ಸದ್ಗ್ರಂಥಗಳಿಂದ ಆರಿಸಲ್ಪಟ್ಟ ವಾಕ್ಯಗಳು. ಸುಬೋಧದೃಷ್ಟಾಂತಗಳು, ಸತ್ಕಾರ್ಯಗಳನ್ನು ಕುರಿತ ವರ್ತಮಾನಗಳು ಮತ್ತು ಮನೋರಂಜಕವಾದ ವಿವಿಧವಿಷಯಗಳು, ಇವೇ ಮೊದಲಾದುವು. ಗುಣಗ್ರಾಹಿಗಳು ಮೇಲ್ಕಂಡ ವಿಷಯಗಳಿಗೆ ಅನುಸಾರವಾದ ಲೇಖನಗಳನ್ನು ಕಳುಹಿಸುವುದರ ಮೂಲಕ ಈ ಪತ್ರಿಕೆಯ ಕಾರ್ಯಗಳಿಗೆ ಉತ್ತೇಜನಮಾಡಿ ನಮ್ಮ ಸಂತೋಷಕ್ಕೆ ಭಾಗಿಗಳಾಗಬೇಕೆಂದು ಅಪೇಕ್ಷಿಸುತ್ತೇವೆ. ಈ ಪತ್ರಿಕೆಯು ಬೆಂಗಳೂರು ದೇಶಾಭ್ಯುದಯ ಸಂಘದವರಿಂದ ಪ್ರಕಟಿಸಲ್ಪಡುವುದು. ಈ ಸಂಘದವರ ಪತ್ರಿಕೆಯೆನ್ನಿಸಿಕೊಂಡಾಗ್ಯೂ ಅವರ ಉದ್ದೇಶದಲ್ಲಿ ಒಂದು ಮಾತ್ರ ಎಂದರೆ, ನಾವು ಮೇಲೆ ಸೂಚಿಸಿರುವುದು ಈ ಪತ್ರಿಕೆಯ ಮುಖ್ಯೋದ್ದೇಶವಾಗಿರುವುದು. ಸಂಘದ ನಿಯಮಾನುಸಾರವಾಗಿ ಪತ್ರಿಕೆಯ ಅಡಳಿತಗಳಲ್ಲಿ ರಾಜಕೀಯ ವಿಷಯಗಳು ಸೇರಿಸಲ್ಪಡುವುವು. ಪತ್ರಿಕೆಯ ಉದ್ದೇಶಗಳಿಗೆ ಸಂಬಂಧಪಡುವ ಹೊಸ ಗ್ರಂಥಗಳನ್ನು ಗ್ರಂಥಕರ್ತರು ಅವರಿಗೆ ಕಳುಹಿಸಿಕೊಟ್ಟರೆ ಅವುಗಳನ್ನು ಆದರದಿಂದ ಬರಮಾಡಿಕೊಂಡು ವಾಚಕರಿಗೆ ಪರಿಚಯಪಡಿಸುವರು.

'ಬಾಲ್ಯವಿವಾಹ,' ವೆಂಬ ಒಂದು ಸಣ್ಣ ಪುಸ್ತಕವನ್ನು ದೇಶಾಭ್ಯುದಯ ಸಂಘದವರು ಪ್ರಕಟಿಸುತ್ತಾರೆ. ಈಗಿನ ವಿವಾಹಪದ್ಧತಿಯ ಗುಣಾವಗುಣಗಳನ್ನು ಯೋಚಿಸಿ, ದೇಶದ ಕ್ಷೇಮಲಾಭಕ್ಕೆ ಆವಶ್ಯಕವಾದ ತಿದ್ದುಪಾಟುಗಳನ್ನು ಮಾಡಬೇಕೆಂದು ಕುತೂಹಲವುಳ್ಳವರು ಈ ಪುಸ್ತಕದ ಪ್ರತಿಗಳನ್ನು ಹೆಚ್ಚಾಗಿ ತರಿಸಿಕೊಂಡು ಹೀಗೆ ಬೇಕಾದವರಿಗೆ ಹಂಚಿದರೆ ಚೆನ್ನಾಗಿರುವುದು. ಕ್ರಯವು ಅರ್ಧ ಆಣೆ ಮಾತ್ರವಾದ್ದರಿಂದ ಹತ್ತಾರು ಪ್ರತಿಗಳನ್ನು ಸುಲಭವಾಗಿ ಕೊಂಡುಕೊಳ್ಳಬಹುದು.

'ದೇಶಾಭ್ಯುದಯ ಗ್ರಂಥಮಾಲೆ' ಎಂಬ ಹೆಸರಿನಿಂದ ಪ್ರಕಟವಾಗುವ ಪುಸ್ತಕಗಳಲ್ಲಿ ಮೇಲ್ಕಂಡದ್ದು ಎರಡನೆಯದು. ಮೊದಲನೆಯದು ನಮ್ಮ ಇಂಡಿಯಾದೇಶದ ಸತ್ಪುರುಷರಲ್ಲಿ ಪ್ರಸಿದ್ಧನಾದ ಈಶ್ವರಚಂದ್ರ ವಿದ್ಯಾಸಾಗರನ ಚರಿತ್ರೆ. ಬಂಗಾಳದೇಶದಲ್ಲಿ ಈ ಮಹಾಪುರುಷನ ಜ್ಞಾಪಕಾರ್ಥವಾಗಿ ಯಾವುದಾದರೂ ಸತ್ಕಾರ್ಯವನ್ನು ಮಾಡಬೇಕೆಂದು ಕೆಲವು ದೊಡ್ಡಮನುಷ್ಯರು ಉದ್ದೇಶಿಸಿದಾರೆ.

ಮೈಸೂರು ಸರ್ಕಾರಿ ಹುಕುಮುಗಳು

ಮುಜರಾಯಿ ವಿಚಾರಗಳು

ಮೈಸೂರು ಸಂಸ್ಥಾನದಲ್ಲಿರುವ ಸತ್ರ ದೇವಸ್ಥಾನಗಳ ಪ್ರತಿನಿಧಿಯವರ ಹುಟ್ಟುವಳಿಯನ್ನು ಸರ್ಕಾರಿ ನೌಕರರು ವಸೂಲ್ಮಾಡುವದು ಕಷ್ಟ. ಈ ಹಣವನ್ನು ಅವರು ತಮ್ಮಲ್ಲಿ ಇಟ್ಟುಕೊಳ್ಳದೆ ವಸೂಲಾದ ಕೂಡಲೆ ಆಯಾ ಧರ್ಮ ಸತ್ರ ದೇವಸ್ಥಾನಗಳ ಹೆಸರಿನಲ್ಲಿ ಖಜಾನೆಗೆ ಕಟ್ಟಬೇಕು. ಅವರೇ ಯಾವ ಬಾಬಿಗೂ ಆ ಹಣವನ್ನು ಖರ್ಚುಮಾಡಕೂಡದು. ಮೇಲ್ಪಟ್ಟ ಅಧಿಕಾರಿಗಳ ಸ್ಯಾಂಕ್ಷನ್ ಪಡೆದು, ಹಣವನ್ನು ಆಮಗಾರಿ ಮುಂತಾದ್ದಕ್ಕೆ ವಿನಿಯೋಗಿಸಬೇಕು. ಇದಲ್ಲದೆ ಕೆಲವು ಸತ್ರ ದೇವಸ್ಥಾನಗಳ ಉತ್ಪತ್ತಿಯನ್ನು ಕೆಲವು ಬೇರೆ ಉದ್ಯೋಗಸ್ಥರು ಆರ್ಕೆಯಿಂದ ವಸೂಲ್ಮಾಡಿ ಖರ್ಚು ಮಾಡುವುದು ಪದ್ಧತಿಯಾಗಿದೆ. ಹೀಗೆ ವಸೂಲ್ಮಾಡಲು ಅವರಿಗೆ ಹಕ್ಕುಗಳ ಅಧಿಕಾರವಿರುತ್ತೆ. ಇವರು ವಸೂಲ್ಮಾಡಿದ ಹಣವನ್ನು ಸರಿಯಾಗಿ ವಿನಿಯೋಗಿಸದೆ ಸತ್ರ ದೇವಸ್ಥಾನಗಳ ಕಟ್ಟಡಗಳು ಹೀನಸ್ಥಿತಿಗೆ ಬರುವ ಪಕ್ಷದಲ್ಲಿ ಮತ್ತು ಜಮಾ ಖರ್ಚನ್ನು ಸರಿಯಾಗಿ ಇಟ್ಟು ಕೇಳಿದಾಗ ಲೆಕ್ಕ ಕೊಡದೆ ಹೋಗುವ ಪಕ್ಷದಲ್ಲಿ ಅಂಥಾ ಸತ್ರ ದೇವಸ್ಥಾನಗಳ ಮತ್ತು ಅವುಗಳ ಜಮೀನು ಮುಂತಾದವುಗಳ ಮೇಲ್ವಿಚಾರಣೆಯನ್ನು ಅವರಿಗೆ ತಪ್ಪಿಸಿ, ಸರ್ಕಾರದವರು ವಹಿಸಿಕೊಳ್ಳಬೇಕೆಂದು ನಿಶ್ಚಯ ಮಾಡಿದೆ. ಶಿರಾ ತಾಲ್ಲೂಕು ಶಿಬಿಯಲ್ಲಿರುವ ಶ್ರೀ ನರಸಿಂಹ ಸ್ವಾಮಿಯವರ ದೇವಸ್ಥಾನವನ್ನೂ ಅದಕ್ಕೆ ಬಿಟ್ಟಿರುವ ಜಮೀನುಗಳನ್ನೂ ಸನ್ನದಿನ ಪ್ರಕಾರ ಮಲ್ಲಪ್ಪನವರೂ ಅವರ ವಾರಿಸರೂ ಲಾಗಾಯಿತಿನಿಂದ ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಶಿರಾ ತಾಲ್ಲೂಕ್ ಅಮಲ್ದಾರರು ವಿಚಾರಣೆ ಮಾಡಿ ಆ ದೇವಸ್ಥಾನದ ಕಾರುಬಾರುಗಳ ವಿಷಯದಲ್ಲಿ ದೂರು ಪ್ರಶಂಸಿಸಿದರೋ ಗೊತ್ತಾಗಲಿಲ್ಲ. ಅವರು ಸರಿಯಾಗಿ ಲೆಕ್ಕಗಳನ್ನು ಇಟ್ಟುಕೊಳ್ಳದೆ ದೇವಸ್ಥಾನದ ಕೆಲಸಗಳು ಕ್ರಮವಾಗಿ ನಡೆಯದೇ ಇರುವ ಪಕ್ಷದಲ್ಲೂ ಸರ್ಕಾರಕ್ಕೆ ಆಗಿಂದಾಗ್ಗೆ ಜಮಾ ಖರ್ಚಿನ ಲೆಕ್ಕಗಳನ್ನು ಹಾಜರ್ಮಾಡದೆ ಹೋದ ಪಕ್ಷದಲ್ಲೂ ಆ ಜಮೀನುಗಳನ್ನೂ ದೇವಸ್ಥಾನವನ್ನೂ ಅವರ ಕೈ ತಪ್ಪಿಸಿ ಸರ್ಕಾರಕ್ಕೆ ಸೇರಿಸಿಕೊಳ್ಳಬೇಕಾದೀತೆಂದು ಅವರಿಗೆ ಖಂಡಿತವಾಗಿ ತಿಳಿಸತಕ್ಕದ್ದು.

ಸೋಸಲೆ ಮಠಕ್ಕೆ ಹೊಸ ಏಜಂಟರು.

ಹುಣಸೂರು ಡಿಪೋದಲ್ಲಿ ಸೂಪರಿಂಟೆಂಡೆಂಟರಾಗಿಯೂ ಟ್ರ್ಯಾನ್ಸ್‌ಪೋರ್ಟ್ ಏಜಂಟರಾಗಿಯೂ ಇದ್ದು ಪೆನ್ಷನ್ ಪಡೆಯುತ್ತಿರುವ ಮಿ॥ ಎಂ. ರಾಘವೇಂದ್ರರಾಯರನ್ನು ಶ್ರೀ ಸೋಸಲೆ ವ್ಯಾಸರಾಯ ಸ್ವಾಮಿಗಳ ಮಠದ ಏಜಂಟಾಗಿ ಹಂಗಾಮಿ ತರಿಕಾ ನೇಮಿಸಿದೆ. ಅವರಿಗೆ ತಿಂಗಳಿಗೆ ೫೦ ರೂಪಾಯಿ ಸಂಬಳವನ್ನೂ ೨೦ ರೂಪಾಯಿ ಭತ್ಯವನ್ನೂ ಮೊಕರರು ಮಾಡಿದೆ. ಇವರು ಬೆಂಗಳೂರಿನಲ್ಲಿರುವ ಮುಜರಾಯಿ ಸೆಕ್ರೆಟರಿಯವರ ಹುಕುಂ ಪ್ರಕಾರ ಕೆಲಸಗಳನ್ನು ನಡೆಸತಕ್ಕದ್ದು. ಇವರು ಸ್ವಾಮಿಗಳವರಿಂದಲೂ ಮುಜರಾಯಿ ಸೆಕ್ರೆಟರಿಯವರಿಂದಲೂ ಅಧಿಕಾರ ಹೊಂದಿ, ಕಾಂಪೆನಿ ಶೀಮೆಯಲ್ಲಿ ಆ ಮಠಕ್ಕೆ ಸೇರಿರತಕ್ಕ ಆಸ್ತಿಗಳನ್ನೆಲ್ಲಾ ಹೋಗಿ ನೋಡಿಕೊಂಡು ಬಂದು, ಅವುಗಳ ಜಮಾಖರ್ಚನ್ನೂ ಮೇಲ್ವಿಚಾರಣೆಯನ್ನೂ ಮುಜರಾಯಿ ಸೆಕ್ರೆಟರಿಯವರ ಹುಕುಂ ಅನುಸರಿಸಿ ನಡಿಸತಕ್ಕದ್ದು. ಇದಲ್ಲದೆ ಇವರು ಮೈಸೂರು ಸಂಸ್ಥಾನದಲ್ಲಿ ಆ ಮಠಕ್ಕೆ ಸೇರಿದ ಆಸ್ತಿಗಳನ್ನೂ ಹೋಗಿ ನೋಡಿಕೊಂಡು ಬರಬೇಕು. ಇವುಗಳ ವಿಚಾರದಲ್ಲಿ ಅವರು ಮುಜರಾಯಿ ಸೆಕ್ರೆಟರಿಯವರ ಹುಕುಮನ್ನು ಪಾಲಾಯಿಸಬೇಕು. ಇವರು ಹೆಡ್ ಕ್ವಾರ್ಟರನ್ನು ಬಿಟ್ಟು ಸಂಚಾರ ಮಾಡುವಾಗ್ಗೆ ದಿನಚರಿಯನ್ನು ಬರೆದಿಡುತ್ತಲೂ, ವಾರಕ್ಕೊಂದಾವರ್ತಿ ಅದರ ನಕಲನ್ನು ಮುಜರಾಯಿ ಸೆಕ್ರೆಟರಿಯವರಿಗೆ ಕಳುಹಿಸುತ್ತಲೂ ಬರಬೇಕು.

ಶಿವಗಂಗಾ ಕಂಬಾಳು ಮಠ

ನೆಲಮಂಗಲದ ತಾಲ್ಲೂಕು ಶಿವಗಂಗೆಯಲ್ಲಿ ಈ ಹೆಸರಿನ ಲಿಂಗಾಯತರ ಮಠವಿದೆ. ಈ ಮಠಕ್ಕೆ ೨೦॥ ರೂಪಾಯಿ ಜೋಡಿ ಉಳ್ಳ ಇನಾಂ ಜಮೀನು ಇರುವುದು. ಮತ್ತು ೧೮೧೮ ನೆ ಇಸವಿಯಲ್ಲಿ ಲೇಟ್ ಮಹಾರಾಜಾ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರವರು ಸನ್ನದು ಮೂಲಕ ಈ ಮಠಕ್ಕೆ ವರುಷಕ್ಕೆ ೬೦ ವರಹಾ ಧರ್ಮದಾಸೋಹ ಕೊಡುತ್ತಿದ್ದರು. ಈಚೆಗೆ ಯಾವದೋ ಒಂದು ಕಾರಣಕ್ಕಾಗಿ ೬೦ ವರಹಾವನ್ನು ೩೦ ಕ್ಕೆ ಈಚೆಗೆ ೧೫ ಕ್ಕೆ ಇಳಿಸಿ ಇನ್ನೂ ಈಚೆಗೆ ಅದನ್ನು ನಿಲ್ಲಿಸಿಬಿಟ್ಟರು. ಈಗ ಈ ಮಠದ ವ್ಯಾಪಾರಸ್ಥರಾದ ಚನ್ನಬಸವದೇವರವರು ಮೊದಲಿದ್ದ ೧೫ ವರಹಾ ನಗದೀಯಾತನ್ನು ಕೊಡಿಸಬೇಕೆಂದು ಕೇಳುತ್ತಾರೆ. ಈ ಮಠದಲ್ಲಿ ಸಿದ್ಧಲಿಂಗಸ್ವಾಮಿಗಳೆಂಬ ಗುರುಗಳು ಇದ್ದಾರೆಂತಲೂ, ಮಠದಲ್ಲಿ ಆಗಂತುಕರಿಗೆ ಅನ್ನದಾನ ನಡೆಯುತ್ತಿದೆ ಎಂತಲೂ, ಸರ್ಕಾರಿ ಇನಾಂತಿಗಳಲ್ಲಿ ಬರುವ ಹುಟ್ಟುವಳಿಗಿಂತಲೂ ಈ ಮಠದ ಖರ್ಚು ಬಾಬು ಜಾಸ್ತಿಯಾಗಿದೆ ಎಂತಲೂ ಡೆಪ್ಯುಟಿ ಕಮಿಷನರವರು ರಿಪೋರ್ಟ್ ಕಳುಹಿಸಿದ್ದಾರೆ. ಮಠದ ಕಾರುಬಾರಿಗಳು ತೃಪ್ತಿಕರವಾಗಿರುವವೆಂತಲೂ ಕ್ರಮವಾಗಿ ಆಗಂತುಕರಿಗೆ ಭೋಜನ ನಡೆಯುತ್ತದೆಂತಲೂ ತಿಳಿದುಬಂದಿರುವದರಿಂದ ಶ್ರೀಮನ್ಮಹಾರಾಜಾ ಸರ್ಕಾರದವರು ಈ ಮಠಕ್ಕೆ ೧೯೦೪ನೆ ಡಿಸೆಂಬರ್ ೧ ರಿಂದ ಲಾಗಾಯಿತು ತಿಂಗಳಿಗೆ ೩ ರೂ ೧—೮—೦ ಪ್ರಕಾರ ಗವರ್ನಮೆಂಟಿನಿಂದ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ.

ಕ್ರೈಸ್ತರ ಸಮಾಧಿಭೂಮಿ

ಮೈಸೂರು ಪಟ್ಟಣದಲ್ಲಿ ಕ್ರೈಸ್ತರ ಸಮಾಧಿಗಾಗಿ [illegible] ಉದ್ದ [illegible] ಅಗಲವುಳ್ಳ ಒಂದು ಸ್ಥಳ ಸರ್ವೆ ನಂಬರು ೧೯೩ನೆ ಜಮೀನನ್ನು ಶ್ರೀಮನ್ಮಹಾರಾಜಾ ಸರ್ಕಾರದವರು ಬಿಟ್ಟುಕೊಟ್ಟಿದ್ದಾರೆ. ಈ ಸ್ಥಳಕ್ಕೆ ಸರ್ಕಾರದವರೇ ಹಣ ಖರ್ಚುಮಾಡಿ ಕಾಂಪೌಂಡು ಗೋಡೆ ಕಟ್ಟಿರುವರು. ಮೈಸೂರಿಂದ ನಂಜನಗೂಡಿಗೆ ಹೋಗುವ ರಸ್ತೆಯಲ್ಲಿ ಚಾಮುಂಡಿ ಬೆಟ್ಟದ ಬುಡದಲ್ಲಿರುವ ಈ ಸ್ಥಳವನ್ನು ಗವರ್ನಮೆಂಟಿನವರು ಕ್ರೈಸ್ತಸಮಾಧಿಗಾಗಿ ಶಾಶ್ವತವಾಗಿ ಬಿಟ್ಟುಕೊಟ್ಟಿದ್ದಾರೆ. ಈ ಉದ್ದೇಶಕಾರ್ಯ ನಡೆಯುತ್ತಾ ಬರುವ ತನಕ ಈ ಜಮೀನನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳುವುದಿಲ್ಲ. ಈ ಸ್ಥಳವನ್ನು ಶುದ್ಧ ಮಾಡುವುದಕ್ಕೋಸ್ಕರ ಕ್ರೈಸ್ತಪ್ರಜೆಗಳು ಮದರಾಸಿನ ಆರ್ಚ್ ಬಿಷಪ್ಪರವರನ್ನು ಕರೆಸಿಕೊಳ್ಳಬಹುದೆಂದು ಸೂಚಿಸಿದ್ದಾರೆ.

ಲಾಕಪ್ಪಿನಲ್ಲಿರುವವರ ಸಂಗಡ ಸಂಭಾಷಣೆ

ದಸ್ತಗಿರಿ ಪೊಲೀಸಿನ ಲಾಕಪ್ಪುಗಳಲ್ಲಿ ಇರುವ ಖೈದಿಗಳ ಬಳಿಗೆ ಅವರ ನೆಂಟರೇ ಮೊದಲಾದವರೂ ಅವರ ಲಾಯರುಗಳೂ ಹೋಗಿ ಅವರ ಸಂಗಡ ಮಾತನಾಡಿಕೊಂಡು ಬರುವ ವಿಚಾರದಲ್ಲಿ ಸರ್ಕಾರದವರು ನಿಯಮಗಳನ್ನು ತೋರಿಸಿ ಕಾನೂನನ್ನು ಪ್ರಕಟಣ ಮಾಡಿದಾರೆ. ಸ್ನೇಹಿತರಾಗಲಿ ವಕೀಲರಾಗಲಿ ಖೈದಿಗಳ ಸಂಗಡ ಮಾತನಾಡುವಂತೆ ಅವರಿಗೆ ಪೊಲೀಸಿನವರು ಅನುಕೂಲ ಮಾಡಿಕೊಡಬೇಕು. ವಕೀಲರು ಅವರ ಸಂಗಡ ಮಾತನಾಡುವಾಗ್ಗೆ ಇನ್ಯಾರೂ ಅವರ ಬಳಿ ಇರಕೂಡದು. ಜೈಲಿನ ಬಂದೋಬಸ್ತಿಗೂ ನಿತ್ಯ ಕಟ್ಟಲೆ ನಡೆಯುವ ಕೆಲಸಗಳಿಗೂ ಲೋಪ ಬಾರದಂತೆಯೂ, ಅಂಥಾ ಖೈದಿಗಳು ತಪ್ಪಿಸಿಕೊಂಡು ಹೋಗದಂತೆಯೂ ನೋಡಿಕೊಳ್ಳಬೇಕಾಗಿದೆ. ಈ ಖೈದಿಗಳು ಲಾಕಪ್ ರೂಲನ್ನು ಮೀರುವುದಾದರೆ ಶಿಕ್ಷೆಗೆ ಗುರಿಮಾಡಲ್ಪಡುವರು. ಅನರು ಎಲ್ಲಾ ಭಾಗಗಳಲ್ಲೂ ಜಾರಿಯಾಗಿರತಕ್ಕದ್ದು.

ಪತ್ರಗಳ ರಿಜಿಸ್ಟರ್ ಛಾರ್ಜು ಮುಂತಾದ್ದು ಕಮ್ಮಿಮಾಡಿದ್ದು.

ಕಳೆದ ೧೯೦೩ ನೆ ಇಸವಿ ಅಕ್ಟೋಬರಿನಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಪತ್ರಗಳನ್ನು ರಿಜಿಸ್ಟ್ರಾರ್‌ಗಳ ಆಫಿಸುಗಳಿಗೆ ರಿಜಿಸ್ಟರ್ ಮಾಡುವಂತೆ ಪ್ರಜೆಗಳು ಹಾಜರ್ಮಾಡುವಾಗ್ಗೆ ಅಂಥಾ ಪತ್ರಗಳ ರಿಜಿಸ್ಟರ್ ಛಾರ್ಜಿನ ದರವನ್ನು ಕಡಿಮೆ ಮಾಡಿಕೊಡಬೇಕೆಂಬದಾಗಿ ಚರ್ಚೆ ಮಾಡಿದರು. ಗವರ್ನಮೆಂಟಿನವರು ಈ ವಿಷಯವನ್ನು ಆಲೋಚನೆ ಮಾಡಿ ಹುಕುಂ ಕೊಡುತ್ತೇವೆಂದು ತಿಳಿಸಿದ್ದರು.

೨. ಈ ವಿಷಯದಲ್ಲಿ ಎರಡು ವಿಧವಾದ ರಿಯಾಯಿತಿಯನ್ನು ಪ್ರಜೆಗಳು ಕೇಳುತ್ತಾರೆ —(೧) ಪತ್ರದಲ್ಲಿ ಮಾತುಗಳು ಹೆಚ್ಚಾಗಿದ್ದರೆ ಅಂಥಾ ಹೆಚ್ಚು ಮಾತುಗಳಿಗೆ ಛಾರ್ಜು ತೆಗೆದುಕೊಳ್ಳುವುದನ್ನು ವಜಾ ಮಾಡಿಕೊಡಬೇಕು (೨) ರಿಜಿಸ್ಟರ್ ಛಾರ್ಜಿನ ದರಗಳನ್ನು ಸಾಮಾನ್ಯವಾಗಿ ಕಡಿಮೆ ಮಾಡಿಕೊಡಬೇಕು. ಡಿಸ್ಟ್ರಿಕ್ಟ್ ರಿಜಿಸ್ಟ್ರಾರುಗಳು ಜಾಸ್ತಿ ಛಾರ್ಜನ್ನು ಮಾಫಿ ಬಿಡಕೂಡದೆಂದೇ ಹೇಳುತ್ತಾರೆ. ಆದರೆ ಹಾಸನದ ಮತ್ತು ಮೈಸೂರಿನ ಡಿಸ್ಟ್ರಿಕ್ಟ್ ರಿಜಿಸ್ಟ್ರಾರುಗಳು ಪ್ರತಿ ನೂರು ಮಾತಿಗೂ ಈಗಿರುವ ೪ ಆಣೆ ಛಾರ್ಜನ್ನು ೨ ಆಣೆಗೆ ಇಳಿಸಬಹುದೆಂದು ಹೇಳುವರು. ರಿಜಿಸ್ಟ್ರೇಷನ್ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಾದರೋ ಛಾರ್ಜನ್ನು ಕಡಿಮೆ ಮಾಡಲೇ ಕೂಡದೆಂತಲೂ ಹಾಗೆ ಕಡಿಮೆ ಮಾಡಿದಲ್ಲಿ ಈ ಇಲಾಖೆಯಲ್ಲಿ ಉತ್ಪತ್ತಿಯು ಬಹಳ ಕಮ್ಮಿಯಾಗುವುದೆಂತಲೂ ಹೇಳುವರು.

೩. ಈಗ ರಿಜಿಸ್ಟ್ರಾರುಗಳು ೩೦೦ ಮಾತುಗಳೊಳಗಿರುವ ಪತ್ರಗಳಿಗೆ ರಿಜಿಸ್ಟ್ರೇಷನ್ ಛಾರ್ಜು ಮಾತ್ರ ತೆಗೆದುಕೊಳ್ಳುವರು. ೩೦೦ ಮಾತಿಗಿಂತಲೂ ಹೆಚ್ಚಾಗಿದ್ದರೆ ಪ್ರತಿ ೧೦೦ ಜಾಸ್ತಿ ಮಾತುಗಳಿಗೂ ೪ ಆಣೆಯಂತೆ ರುಸುಂ ತೆಗೆದುಕೊಳ್ಳುವರು. ಮದರಾಸಿನಲ್ಲಾದರೋ ಮಾತುಗಳಿಗೆ ಛಾರ್ಜು ಇಲ್ಲವೇ ಇಲ್ಲ. ಬೊಂಬಾಯಿನಲ್ಲಿ ಪತ್ರಗಳಲ್ಲಿರುವ ಮಾತುಗಳನ್ನೆಲ್ಲಾ ಮೊದಲಿಂದ ಕೊನೆಯ ತನಕ ಕೂಡಿಸಿ, ಪ್ರತಿ ೧೦೦ ಮಾತುಗಳಿಗೂ ೨॥ ಆಣೆಯಂತೆ ಫೀಜು ತೆಗೆದುಕೊಳ್ಳುತ್ತಾರೆ. ಮಾತುಗಳಿಗೆ ಛಾರ್ಜೇ ಇಲ್ಲವೆಂದು ಬಿಟ್ಟುಬಿಡೋಣದರಿಂದ ಅನಾವಶ್ಯವಾದ ಅನೇಕ ಮಾತುಗಳನ್ನು ಪತ್ರಗಳಲ್ಲಿ ಬರೆಯುವುದಕ್ಕೆ ಅವಕಾಶವಾಗುತ್ತೆ. ಆದಕಾರಣ ಗವರ್ನಮೆಂಟಿನವರು ಹುಕುಂ ಕೊಡುವುದೇನೆಂದರೆ—ಇನ್ನು ಮುಂದೆ ಪತ್ರಗಳಲ್ಲಿರುವ ಮಾತುಗಳನ್ನೆಲ್ಲಾ ಲೆಕ್ಕಹಾಕಿ ಪ್ರತಿ ೧೦೦ ಮಾತಿಗೂ ೨ ಆಣೆಯಂತೆ ಫೀಜು ವಸೂಲ್ಮಾಡಬೇಕು. ಈಗಿರುವಂಥಾ ರಿಯಾಯಿತಿಯನ್ನು ವಜಾಮಾಡಿದೆ. ಈ ನಿರ್ಧಾರವು ಒಂದು ವರುಷದ ವರೆಗೆ ಜಾರಿಯಲ್ಲಿದ್ದು, ವರುಷಾಂತ್ಯದಲ್ಲಿ ಇನ್ಸ್‌ಪೆಕ್ಟರ್ ಜನರಲ್‌ರವರು ಹುಟ್ಟುವಳಿ ವಿಷಯದಲ್ಲಿ ರಿಪೋರ್ಟು ಕಳುಹಿಸಬೇಕಾಗಿದೆ.

೪. ಪತ್ರಗಳನ್ನು ಸುರಕ್ಷಿತವಾಗಿ ಕಾಪಾಡುವುದಕ್ಕೆ ಸರ್ಕಾರದವರು ತೆಗೆದುಕೊಳ್ಳುತ್ತಿರುವ ಫೀಜಿನ ದರವನ್ನು ಕಡಿಮೆಮಾಡಿದೆ. ೨೦೦ ರೂಪಾಯಿನ ಪತ್ರಕ್ಕಾಗಲಿ ಮೊಬಲಗೇನೂ ನಮೂದಾಗದಂಥಾ ಪತ್ರಕ್ಕಾಗಲಿ ಈಗ ತಿಂಗಳಿಗೆ ೧೦೦ ರೂಪಾಯಿಯಂತೆ ರುಸುಂ ಕೊಡಬೇಕಾಗಿದೆ. ಇದನ್ನು ತಿಂಗಳಿಗೆ ೮ ಆಣೆಗೆ ಇಳಿಸಲಾಗಿದೆ. ಯಾವ ಸಂದರ್ಭದಲ್ಲೂ ಒಂದೇ ಪತ್ರಕ್ಕೆ ತಿಂಗಳಿಗೆ ೫ ರೂಪಾಯಿಗಿಂತ ಹೆಚ್ಚು ಫೀಜು ವಸೂಲ್ಮಾಡಬೇಕಾದದ್ದಿಲ್ಲ.

ಕಾಮನ ಪೂಜೆಯೂ ಮೆರವಣಿಗೆಯೂ.

ಶಿವಮೊಗ್ಗ ಡಿಸ್ಟ್ರಿಕ್ಟ್ ಹೊಳೆಹೊನ್ನೂರಿನಲ್ಲೂ ಚನ್ನಗಿರಿಯಲ್ಲೂ ಪೂರ್ವಕಾಲದಿಂದಲೂ ಬ್ರಾಹ್ಮಣರು ಕಾಮನನ್ನು ಬಹಿರಂಗವಾಗಿ ಇಟ್ಟು ಪೂಜೆಮಾಡಿ ಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ಬರುತ್ತಿದ್ದಾರೆ. ಕಳೆದ ೧೮೯೮ನೇ ಇಸವಿಯಿಂದಲೂ ಲಿಂಗಾಯತರು ಬಹಿರಂಗ ಕಾಮನನ್ನು ಇಟ್ಟುಕೊಳ್ಳಬೇಕೆಂತಲೂ ಮೆರವಣಿಗೆ ಮಾಡಬೇಕೆಂತಲೂ ಪ್ರಯತ್ನ ಪಡುತ್ತಿದ್ದಾರೆ. ಆದರೆ ಇದಕ್ಕೆ ಬ್ರಾಹ್ಮಣರು ಆಕ್ಷೇಪಿಸುತ್ತಲೂ ಮ್ಯಾಜಿಸ್ಟ್ರೇಟರುಗಳು ಕೂಡದೆಂದು ಹೇಳುತ್ತಲೂ ಬಂದಿರುವರು.

೧೮೯೯ರಲ್ಲಿ ಹೊಳೆಹೊನ್ನೂರಿನಲ್ಲಿ ಲಿಂಗಾಯತರು ಅಂತರಂಗದಲ್ಲಿ ಕಾಮನನ್ನು ಇಟ್ಟುಕೊಳ್ಳುವುದಕ್ಕೆ ಅಪ್ಪಣೆ ಕೇಳಿದರು. ಡೆಪ್ಯುಟಿ ಕಮಿಷನರ್ ಮಿ॥ ಟಿ. ಪಿ. ನಂಜುಂಡಯ್ಯನವರು ಅವರಿಗೆ ಕಾಮನನ್ನು ಇಟ್ಟುಕೊಳ್ಳುವಂತೆ ಹುಕುಂ ಕೊಟ್ಟು ಪ್ರಜಾನೆಮ್ಮದಿಗೆ ಭಂಗ ಉಂಟಾಗದಂತೆ ನೋಡಿಕೊಂಡರು. ಅದರ ಮೇಲೆ ಬ್ರಾಹ್ಮಣರು ಗವರ್ನಮೆಂಟಿಗೆ ಅಪೀಲ್ ಮಾಡಿಕೊಂಡರು. ಗವರ್ನಮೆಂಟಿನವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ರಿಪೋರ್ಟನ್ನು ಅಪೇಕ್ಷಿಸಿದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಜೆಗಳಿಗೆ ಇರತಕ್ಕ ಹಕ್ಕಿನ ವಿಚಾರವನ್ನೂ ಲಿಂಗಾಯತರು ಅಂತರಂಗದಲ್ಲಿ ಕಾಮನನ್ನು ಇಟ್ಟುಕೊಳ್ಳೋಣದರಿಂದ ಬ್ರಾಹ್ಮಣರಿಗೆ ಯಾವ ವಿಧವಾದ ನಷ್ಟವೂ ಉಂಟಾಗಲಾರದೆಂಬ ವಿಚಾರವನ್ನೂ ಕುರಿತು ಗವರ್ನಮೆಂಟಿಗೆ ರಿಪೋರ್ಟು ಕೊಟ್ಟರು. ಗವರ್ನಮೆಂಟಿನವರು ಅರ್ಜಿದಾರರಿಗೆ ಯಾವ ಉಪಕಾರವನ್ನೂ ಕೊಡಲಿಲ್ಲವೆಂದು ಹೇಳಿ ಈಗ ಅವರು ಮತ್ತೆ ಅಪೀಲ್ ಮಾಡಿಕೊಂಡಿದ್ದಾರೆ.

ಅತ್ತಲಾಗಿ ಚನ್ನಗಿರಿಯಲ್ಲಿ ೧೮೯೩ ನೆ ಇಸವಿಯಲ್ಲಿ ಲಿಂಗಾಯತರು ಪೇಟೆಯೊಳಗೆ ಕಾಮನನ್ನು ಇಟ್ಟರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ॥ ಅಬ್ದುಲ್ ರಹಮಾನ್‌ರವರು ಪೂರ್ವದಲ್ಲಿ ಕೊಟ್ಟಿರುವ ಆರ್ಡರಿಗೆ ವಿರೋಧವಾಗಿ ಏನೂ ನಡೆಯಕೂಡದೆಂದು ೧೮೯೩ ನೆ ಫೆಬ್ರವರಿಯಲ್ಲಿ ಹುಕುಂ ಕೊಟ್ಟರು. ಈಚೆಗೆ ಲಿಂಗಾಯತರು ೧೯೦೨ ನೆ ಇಸವಿಯಲ್ಲಿ ಮತ್ತೆ ಕಾಮನನ್ನು ಇಟ್ಟುಕೊಂಡರು. ೧೯೦೨ ನೆ ಮಾರ್ಚಿಯಲ್ಲಿ ಬ್ರಾಹ್ಮಣರು ಅದು ಕೂಡದೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಫಿರ್ಯಾದು ಮಾಡಿದರು. ಆ ಫಿರ್ಯಾದನ್ನು ಅಸಿಸ್ಟೆಂಟ್ ಕಮಿಷನರೂ ೧ ನೆ ಕ್ಲಾಸ್ ಮ್ಯಾಜಿಸ್ಟ್ರೇಟರೂ ಆದ ಮಿ॥ ಆನಂದರಾಯರು ತನಿಖೆ ಮಾಡಿ, ಅಂತರಂಗದಲ್ಲಿ ಲಿಂಗಾಯತರು ಕಾಮನನ್ನು ಇಟ್ಟುಕೊಳ್ಳಬಹುದೆಂತಲೂ, ಬೀದಿಗಳಲ್ಲಿ ಮೆರವಣಿಗೆ ಮಾಡುವದು ಮಾಮೂಲಿಗೆ ವಿರೋಧವೆಂತಲೂ ತಿಳಿಸಿದರು. ತರುವಾಯ ಬ್ರಾಹ್ಮಣರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ॥ ಪುಟ್ಟಣ್ಣ ಚೆಟ್ಟಿಯವರಲ್ಲಿ ಅಪೀಲ್ ಮಾಡಿಕೊಂಡರು, ಅವರು ಅಪೀಲನ್ನು ವಜಾ ಮಾಡಿದರು. ಈಗ ಚನ್ನಗಿರಿಯ ಬ್ರಾಹ್ಮಣರು ಗವರ್ನಮೆಂಟಿನಲ್ಲಿ ಅಪೀಲ್ ಮಾಡಿಕೊಂಡಿದ್ದಾರೆ.

ಲಿಂಗಾಯತರು ಕಾಮನನ್ನಿಟ್ಟು ಮೆರವಣಿಗೆ ಮಾಡಕೂಡದೆಂಬುವುದಕ್ಕೂ ಬ್ರಾಹ್ಮಣರು ಮಾತ್ರ ಇಟ್ಟು ಮೆರವಣಿಗೆ ಮಾಡಬೇಕೆಂಬುವುದಕ್ಕೂ ಯಾವ ಆಧಾರವೂ ಇರುವುದಿಲ್ಲ. ಬ್ರಾಹ್ಮಣರ ಅಪೀಲು ನಿಷ್ಕಾರಣವಾದದ್ದಾಗಿರುತ್ತದೆ. ಆದದರಿಂದ ಅವರ ಅಪೀಲುಗಳನ್ನು ವಜಾ ಮಾಡಿರುತ್ತೇವೆ.

ಪ್ಲೇಗಿನ ಮೂಲಕ ದೇವರು ಇಂಡಿಯಾ ದೇಶಸ್ಥರಿಗೆ ತಿಳಿಸುವದೇನು?

ನಮ್ಮ ಈ ಇಂಡಿಯಾ ದೇಶದಲ್ಲಿ ಪ್ಲೇಗಿನ ಆವಾಂತ್ರವು ಬಂದು, ಬಹುಕಾಲದಿಂದ ಹಾವಳಿಮಾಡುತ್ತಾ ಇರುವದನ್ನು ನೋಡಿ, ನಮ್ಮ ದೇಶೀಯರು ಇದಕ್ಕೆ ನಮ್ಮ ಪಾಪವೇ ಕಾರಣವೆಂದು ಹೇಳಿ ಮರುಗುವದು ನ್ಯಾಯವಾಗಿದೆಯಷ್ಟೆ. ಈ ಕಾಲದಲ್ಲಿ ನಮ್ಮ ದೇಶೀಯರೊಳಗೆ ಅತ್ಯಂತ ಸಾಧಾರಣವಾಗಿರುವ ಪಾಪಗಳು ಯಾವವೆಂದು ವಿಚಾರಿಸುವದು ನಮ್ಮ ಪ್ರಕೃತೋದ್ದೇಶವಾಗಿದೆ. ನಮ್ಮ ದೇಶದಲ್ಲಿ ಪ್ರಬಲವಾಗಿರುವ ಪಾಪಗಳನ್ನೆಲ್ಲಾ ವಿವರಿಸುವದರಲ್ಲಿ ಫಲವಿಲ್ಲ. ಆದರೆ ಈಗ ನಮ್ಮ ದೇಶದಲ್ಲಿ ಇರುವ ಪ್ರಬಲವಾದ ಪಾಪವು ಒಂದುಂಟು ಅದರಿಂದಲೇ ಸಕಲ ಪಾಪಗಳೂ ಬರುವದಕ್ಕಾಸ್ಪದವಾಗಿದೆ. ಅದು ಯಾವದೆಂದರೆ—ದೇವರು ಕಳುಹಿಸಿಕೊಟ್ಟಿರುವ ಸತ್ಯಮತದ ವಿಷಯದಲ್ಲಿ ಕೇವಲ ಅಲಕ್ಷ್ಯಭಾವವನ್ನು ವಹಿಸಿರುವದೇ.

ದೇವರು ಪ್ರಕಟಪಡಿಸುವ ಸತ್ಯದ ವಿಷಯದಲ್ಲಿ ಕೆಲವು ವರ್ಷಗಳ ಹಿಂದೆ ನಮ್ಮ ಈ ದೇಶೀಯರಲ್ಲಿ ಕೇವಲ ಮೌಢ್ಯವು ಇದ್ದಿತು. ಈಗಲಾದರೋ ಭಗವಂತನ ಕೃಪೆಯಿಂದ ಹೆಚ್ಚು ವಿಷಯಗಳು ತಿಳುವಳಿಕೆಗೆ ಬಂದಿವೆ. ಯಾವದು ಸತ್ಯವೆಂದೂ, ಯಾವದು ಅಸತ್ಯವೆಂದೂ ಜನರು ಚೆನ್ನಾಗಿ ತಿಳಿಯಬಲ್ಲರು. ಈ ವಿಷಯದಲ್ಲಿ ಜನರ ತಪ್ಪೇನೂ ಇಲ್ಲ. ಆದರೆ ಮತದ ವಿಷಯದಲ್ಲಿ ಜನರು ಸಂಪೂರ್ಣವಾಗಿ ಅಲಕ್ಷ್ಯವುಳ್ಳವರಾಗಿದ್ದಾರೆ. ಇಂಥ ಅಲಕ್ಷ್ಯಭಾವವು ನಮ್ಮವರಿಗೆ ಬೇರೆ ವಿಷಯಗಳಲ್ಲಿಲ್ಲ. ಒಳ್ಳೇ ಉದ್ಯೋಗಗಳನ್ನು ಸಂಪಾದಿಸುವದರಲ್ಲಿಯೂ ಜ್ಞಾನವನ್ನು ಗ್ರಹಿಸುವದರಲ್ಲಿಯೂ ನಮ್ಮವರು ಎಷ್ಟು ಪ್ರಯಾಸಪಡುತ್ತಾರೆ! ಆದರೆ ದೇವರ ವಿಷಯದಲ್ಲಿ ಮಾತ್ರ ಅವರು ವಹಿಸಿರುವ ಅಲಕ್ಷ್ಯಭಾವವು ಬಹುಮಟ್ಟಿಗೆ ಆಶ್ಚರ್ಯಕ್ಕೆ ಹೇತುವಾಗಿದೆ ಇಷ್ಟೇ ಅಲ್ಲ. ಈ ಅಲಕ್ಷ್ಯವು ಭಗವಂತನ ಸನ್ನಿಧಾನದಲ್ಲಿ ಮಹಾ ಪಾಪವಾಗಿದೆಯೆಂದು ಗ್ರಹಿಸಬೇಕಾಗಿದೆ. ಇದೆಷ್ಟು ಹೇಯವಾದ ಪಾಪವೋ ಗ್ರಹಿಸಿನೋಡಿ.

ಜಗದೀಶನಾದ ದೇವರು ಎಷ್ಟು! ನಾವೆಷ್ಟು! ಹೀಗಿರುವಲ್ಲಿ ಆತನು ತನ್ನ ವಿಷಯವಾಗಿ ನಮಗೆ ತಿಳಿಯಪಡಿಸುವ ವಿಷಯವನು ಎಷ್ಟು ಘನವಾಗಿ ಇರತಕ್ಕದ್ದು! ನಾವಾದರೋ ಅದನ್ನು ಸ್ವಲ್ಪವೂ ಲಕ್ಷ್ಯಮಾಡದೆ ಇರುವದು ಸರಿಯೆ? ಅದಾಹಾಗಿರಲಿ ಕೆಲವರು ಅದನ್ನು ತುಚ್ಛೀಕರಿಸುತ್ತಾರೆ. ಇನ್ನು ಕೆಲವರು ಮತವಿಷಯವಾಗಿ ತಿಳಿಸುವದಕ್ಕೆ ಬರುವವರನ್ನು ನಾನಾ ವಿಧವಾಗಿ ಹಿಂಸಿಸುವರು ಲೋಕಭೋಗಗಳು ಅವರನ್ನು ಸಂಪೂರ್ಣವಾಗಿ ಸೆರೆಹಿಡಿದಿವೆ. ಹಿರಿಯರ ಸಂಪ್ರದಾಯಗಳೆಂಬ ಹಳೇ ರಸ್ತೆಯಲ್ಲಿ ಕಣ್ಣುಮುಚ್ಚಿಕೊಂಡು ನಡೆಯುವ ಗಾಣದೆತ್ತಿನ ಹಾಗೆ ನಡೆಯುತ್ತಾ ಹೊಟ್ಟೆಬಟ್ಟೆಗಳೆಂಬ ಎರಡು ವಿಷಯಗಳ ವಿನಾ ಮಿಕ್ಕ ಯಾವ ವಿಷಯಗಳನ್ನಾಗಲಿ ಮನಸ್ಸಿಗೆ ಹಚ್ಚಿಕೊಳ್ಳದೆ ಕಾಲಕ್ಷೇಪಮಾಡುತ್ತಿರುತ್ತಾರೆ.

“ನರಕಕ್ಕೆ ನವದ್ವಾರ, ನಾಕಕ್ಕೆ ಒಂದೇ ದ್ವಾರ” ಎಂಬ ಗಾದೆಯನ್ನು “ನಾಕಕ್ಕೆ ನವದ್ವಾರ, ನರಕಕ್ಕೆ ಒಂದೇದ್ವಾರ” ವೆಂಬದಾಗಿ ತಿರುಗಿಸಿಕೊಂಡು, ಯಾವ ಮತದ ಮೂಲಕ ಹೋದರೆ ತಾನೇ ಏನು? ಯಾವ ಮಾರ್ಗವಾಗಿ ಹೋದರೂ ಕಡೆಗೆ ದೇವರನ್ನೇ ಸೇರುತ್ತೇವೆ ಎಂದು ಮನಸ್ಸಿಗೆ ಸಮಾಧಾನಮಾಡಿಕೊಳ್ಳುವರು. ಇದೀಗ ಯಾರಿಗಾದರೂ ಬಹು ಸುಲಭವಾದ ಮಾರ್ಗವಲ್ಲವೇ? ಹೀಗೆ ಹೇಳುವುದೂ ನಂಬುವುದೂ ಬಹು ಸುಲಭವೆಂಬುದರಲ್ಲಿ ಸಂಶಯವೇ ಇಲ್ಲ. ಇದಲ್ಲದೆ ಮತಾಂತರವನ್ನು ಹೊಂದುವದರಿಂದ ಬರುವ ನಿಂದೆಯನ್ನೂ ಅವಮಾನವನ್ನೂ ತಪ್ಪಿಸಿಕೊಳ್ಳುವದಕ್ಕೆ ಇದು ಸುಲಭವಾದ ಮಾರ್ಗ. ಇಷ್ಟೇ ಅಲ್ಲ. ತಾವು ಹಿಡಿದಿರುವ ಮತದಷ್ಟೇ ಇತರರ ಮತವೂ ಸತ್ಯವೆಂದು ಒಪ್ಪಿಕೊಳ್ಳುವದರಿಂದ ಇತರರ ಮೆಚ್ಚಿಕೆಯನ್ನೂ ಸುಲಭವಾಗಿ ಸಂಪಾದಿಸಬಹುದಾಗಿದೆ ಆದಕಾರಣವೇ ಜನರು ಈಪ್ರಕಾರ ಸಕಲ ಮತಗಳನ್ನೂ ಏಕಪ್ರಕಾರವಾಗಿ ಭಾವಿಸುತ್ತೇವೆಂದು ಹೇಳಿಕೊಳ್ಳುತ್ತಾ ಕಡೆಗೆ ಮತವಿಷಯದಲ್ಲಿ ಉಪೇಕ್ಷೆಯನ್ನು ವಹಿಸುವದು ಸರ್ವಸಾಧಾರಣವಾಗಿ ಹೋಗಿದೆ

ಎಲೈ ವಾಚಕರೇ! ಇಲ್ಲಿ ಸ್ವಲ್ಪ ನಿಂತು ಯೋಚನೆಮಾಡಿರಿ. ಈ ಭಾವವು ದೇವರಿಗೆ ಮೆಚ್ಚಿಕೆಯಾದದ್ದಾಗಿರುವದೇ? ಸಕಲ ಮತಗಳೂ ಭಗವಂತನಿಗೆ ಒಂದೇಯಾಗಿರಬಹುದೇ? ದೇವರು ಸಕಲ ಲೋಕದ ಒಡೆಯನಾಗಿರಲು ಆತನ ರಾಜ್ಯದಲ್ಲಿ ಒಂದು ಬಗೆಯ ಪ್ರಜೆಗಳಿಗೆ ಒಂದು ವಿಧವಾದ ಕಟ್ಟಳೆಗಳೂ, ಮತ್ತೊಂದು ಬಗೆಯ ಪ್ರಜೆಗಳಿಗೆ ಬೇರೊಂದು ವಿಧವಾದ ಕಟ್ಟಳೆಗಳೂ ಹೀಗೆ ನಾನಾ ಜನಗಳಿಗೆ ನಾನಾ ಬಗೆಯ ಕಟ್ಟಳೆಗಳೂ ಉಂಟೇ? ದೇವರು ಭೂಲೋಕವೆಂಬ ಮನೆತನಕ್ಕೆ ತಂದೆಯಾಗಿರಲು ತನ್ನ ಮನೆಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ವಿಧವಾದ ನಡತೆಯ ಸೂತ್ರವನ್ನು ಆತನು ನೇಮಿಸುವನುಂಟೇ? ಹೀಗೆಂದಿಗೂ ಯೋಚಿಸುವದಕ್ಕೆ ಆಧಾರವೇ ಇಲ್ಲ. ಒಂದು ವೇಳೆ ಭಗವಂತನು ಪರಿಷ್ಕಾರವಾಗಿ ಅಪ್ಪಣೆಯನ್ನು ಕೊಡದೆ ಹೋಗಿದ್ದರೂ ಸತ್ಯವಾದ ಮತವು ಒಂದೇ ಒಂದಾಗಿರಬೇಕೆಂದು ನಾವು ಗ್ರಹಿಸುವದರಲ್ಲಿ ಕಷ್ಟವೇ ಇಲ್ಲ. ಆದದರಿಂದ ನಮ್ಮ ದೇಶೀಯರು ಸಕಲ ವಿಷಯಗಳಿಗಿಂತಲೂ ಹೆಚ್ಚಾಗಿ ಅವಗಾಹನೆಗೆ ತಂದುಕೊಳ್ಳಬೇಕಾದ ವಿಷಯವು ಯಾವದೆಂದರೆ—ದೇವರು ಅನುಗ್ರಹಿಸಿರುವ ಆ ಸತ್ಯವಾದ ಮತವು ಯಾವದೆಂದು ಕಂಡುಹಿಡಿಯುವದಕ್ಕೆ ಪ್ರಯಾಸಪಡುವದೇ. ಇದು ಅತಿ ಮುಖ್ಯವಾದ ವಿಷಯವೆಂದು ನಾವು ಸಿದ್ಧಾಂತಪಡಿಸಬೇಕೇ? ಅವಶ್ಯವಿಲ್ಲ. ಈ ವಿಷಯದಲ್ಲಿ ನಮ್ಮ ದೇಶೀಯರು ಆಸಕ್ತರಾಗಿರುವದನ್ನು ಬಿಟ್ಟು ಅಲಕ್ಷ್ಯವುಳ್ಳವರಾಗಿದ್ದರೆ, ಅಥವಾ ವಂಚಕರಾಗಿದ್ದರೆ, ಭಗವಂತನು ಕೋಪಗೊಂಡು ತಪ್ಪಿಹೋಗುವ ತನ್ನ ಈ ಮಕ್ಕಳನ್ನು ತಿದ್ದುವದಕ್ಕಾಗಿ ನಾನಾವಿಧ ರೋಗಾದ್ಯುಪದ್ರವಗಳನ್ನು ಕಳುಹಿಸಿ ದಂಡಿಸುವದು ಸಹಜವಾಗಿಯೇ ಇದೆ.

ಹೀಗಿರುವಲ್ಲಿ ವಿವೇಚನಾಪರರು ನಮ್ಮ ಕಾಲದಲ್ಲಿ ಪುರಾತನವಾಗಿಯೂ ಪ್ರಯೋಜನಕ್ಕೆ ಬಾರದವುಗಳಾಗಿಯೂ ಇರುವ ಹಲವು ಮತಗಳು ನೆಲೆಗೊಂಡಿರುವದನ್ನು ನೋಡುವಾಗ ಸುಮ್ಮನೆ ಕಾಲ ತಳ್ಳೊಂದು, ಯಾರದು ಹ್ಯಾಗಾದರೂ ಇರಲಿ ಎಂದು ಹೇಳುತ್ತಾ ಅಲಕ್ಷ್ಯವಾಗಿರಲಾದೀತೇ? ಎಷ್ಟುಮಾತ್ರಕ್ಕೂ ಇಲ್ಲ. ವಿವಿಧಗಳಾದ ಇಷ್ಟು ಮತಗಳೂ ಇರಗೊಡಿಸುವದು ಜಗದೀಶನ ಚಿತ್ತವಲ್ಲ. ನಾವು ಇದನ್ನು ನೋಡಿಕೊಂಡು ಸುಮ್ಮನಿರಬಾರದು. ಇಷ್ಟುಮತಗಳೆಲ್ಲವೂ ಸತ್ಯವಾಗಿರಲಾರವು. ಇವುಗಳಲ್ಲಿ ಯಾವದು ತಪ್ಪಾದದ್ದೋ ಅದನ್ನು ಅನುಸರಿಸುವವರು ಯಾರಾಗಲಿ ನಮ್ಮೆಲ್ಲರ ತಂದೆಯಾದ ದೇವರಿಗೆ ಕೋಪವನ್ನುಂಟುಮಾಡಿ ತಮಗೇ ನಷ್ಟವನ್ನು ಮಾಡಿಕೊಳ್ಳುವವರಾಗಿದ್ದಾರಲ್ಲ! ನಾವು ಕ್ಷಣಮಾತ್ರವಾದರೂ ಇದನ್ನು ನೋಡಿಕೊಂಡು ಸುಮ್ಮನೆ ಇರಲಾದೀತೇ? ಇದನ್ನು ಆಮೂಲಾಗ್ರವಾಗಿ ಪರಿಶೋಧಿಸೋಣ! ಸರಿಯಾದ ಮಾರ್ಗದಲ್ಲಿ ನಡೆಸುವಂತೆ ಭಗವಂತನನ್ನು ಕೇಳಿಕೊಳ್ಳೋಣ! ನಾವೂ ಆಸಕ್ತರಾಗಿರುವದಲ್ಲದೆ ಇತರರನ್ನೂ ಆಸಕ್ತರಾಗುವಂತೆ ಮಾಡೋಣ! ಇಲ್ಲದಿದ್ದರೆ ನಮ್ಮ ಸೃಷ್ಟಿಕರ್ತನಾದ ದಿವ್ಯರಾಜನಿಗೆ ದ್ರೋಹಿಗಳು ದೇವಲ್ಲಾ! ಎಂದು ನಾವು ಹೇಳಬೇಕಾಗಿದೆ.

ಸತ್ಯಮತವನ್ನು ಪರಿಗ್ರಹಿಸುವ ವಿಷಯದಲ್ಲಿ ಸಹಾಯವನ್ನು ಕೊಡುವದಕ್ಕೆ ಈ ದೇಶದಲ್ಲಿ ಬಹು ಕಾಲದಿಂದಲೂ ಕ್ರೈಸ್ತ ಪಾದ್ರಿಗಳೂ ಉಪದೇಶಿಗಳೂ ಸನ್ನದ್ಧರಾಗಿ ಹಲವು ಪರಿಯಿಂದ ಪ್ರಯಾಸಪಡುತ್ತಾ ಬಂದಿರುವದು ನಮ್ಮ ದೇಶೀಯರಿಗೆ ತಿಳಿಯದ ವಿಷಯವಲ್ಲ. ಈ ದೇಶೀಯರು ಕ್ರೈಸ್ತ ಮತಸ್ಥರ ಈ ಪ್ರಯಾಸವನ್ನು ಹ್ಯಾಗೆ ಕಾಣುತ್ತ ಬಂದಿದ್ದಾರೆ? ಅವರನ್ನೂ ಅವರ ಪುಸ್ತಕಗಳನ್ನೂ ಉಪದೇಶಗಳನ್ನೂ ಉಪನ್ಯಾಸಗಳನ್ನೂ ಕೇವಲ ಅಲಕ್ಷ್ಯದಿಂದಲೂ ಕೆಲವು ವೇಳೆ ಕೇವಲ ತುಚ್ಛೀಕಾರದಿಂದಲೂ ಕಾಣುತ್ತ ಬಂದಿರುತ್ತಾರಲ್ಲವೇ? ತಾವು ಮಾಡಬೇಕಾದದ್ದೇನೆಂದು ಕೆಲವರು ಚೆನ್ನಾಗಿ ತಿಳಿದಿದ್ದರೂ ಕೂಡ ನೆರೆಹೊರೆಯವರ ನಿಂದೆಗೋ ಅಥವ ದ್ರವ್ಯನಷ್ಟಕ್ಕೋ ಹೆದರಿಕೊಂಡು ಸತ್ಯವನ್ನವಲಂಬಿಸದೆ ಹಿಂದೆಗೆಯುತ್ತಿದ್ದಾರಲ್ಲವೇ?

ವಾಚಕರೇ, ನೀವು ಹಾಗೆ ಮಾಡಬೇಡಿ. ನಾವು ನಿಮ್ಮ ಅವಗಾಹನೆಗೆ ತರುವಂಥ ಈ ಮಹಾ ಘನವಾದ ವಿಷಯವನ್ನು ಅಲಕ್ಷ್ಯವಾಗಿ ಕಾಣಬೇಡಿರಿ. ಇದನ್ನು ಆಮೂಲಾಗ್ರವಾಗಿ ಶೋಧಿಸಿ ನೋಡಿರಿ ಗೊತ್ತು ಸಿಕ್ಕುವವರೆಗೂ ಬಿಡಬೇಡಿರಿ. ನಾವು ಹೇಳುವದನ್ನೆಲ್ಲಾ ನೀವು ಕಣ್ಣುಮುಚ್ಚಿಕೊಂಡು ನಂಬಬೇಕೆಂದು ಹೇಳುವದೂ ಇಲ್ಲ, ಬಲವಂತ ಮಾಡುವದೂ ಇಲ್ಲ. ಆದರೂ ಕೂಡ ನೀವು ಕಡೆಗೂ ಉಪೇಕ್ಷೆಯನ್ನು ವಹಿಸಿದರೆ ಭಗವಂತನು ಸುಮ್ಮನಿರಲಾರನು. ಏತಕ್ಕೆಂದರೆ—“ಮೋಸ ಹೋಗಬೇಡಿರಿ, ದೇವರು ಪರಿಹಾಸ್ಯಕ್ಕೆ ಗುರಿಯಾಗತಕ್ಕವನಲ್ಲ. ಬಿತ್ತಿದ ಬೀಜಕ್ಕನುಗುಣವಾಗಿಯೇ ಬೆಳೆಯನ್ನು ಕೊಯ್ಯಬೇಕಾಗುತ್ತದೆ” ಎಂದು ಕ್ರೈಸ್ತರ ವೇದವು ಹೇಳುವಂತೆ ಅಲಕ್ಷ್ಯವಂತರಾದವರಿಗೆ ತಕ್ಕ ಫಲವು ಬಂದೇ ಬರುವದು.

[ಸಶೇಷ.]

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನ್ ಪಟ್ಟಣದಲ್ಲಿ ಪ್ಲೇಗ್ ಉಪದ್ರ ಒಂದೇ ಅಲ್ಲ, ಸಿಡುಬಿನ ಉಪದ್ರವೂ ತಲೆಹಾಕಿ ಪ್ರಜೆಗಳನ್ನು ಕಷ್ಟಪಡಿಸುತ್ತಿದೆ.

****

ಪ್ಲೇಗ್ ಉಪದ್ರವು ಪ್ರಾರಂಭವಾದಾರಭ್ಯ ಕಳೆದ ಫೆಬ್ರವರಿ ೧೮ ನೆ ತಾರೀಖಿನ ವರೆಗೆ ಹಿಂದುಸ್ಥಾನದಲ್ಲಿ ೩೩,೫೭,೦೧೯ ಜನರು ಆ ರೋಗದಲ್ಲಿ ಸತ್ತರೆಂದು ಪ್ರಕಟವಾಗಿದೆ.

****

ಅಫ್ಘಾನಿಸ್ಥಾನದ ಅಮೀರರವರು ಹಿಂದುಸ್ಥಾನದಿಂದ ವಾಪಸು ಹೋದ ತಮ್ಮ ಕುಮಾರರಾದ ಸರ್ದಾರ್ ಇನಾಯತ್ ಉಲ್ಲಾಖಾನರವರಿಗೆ ಅಮೀನುಲ್ ದೌಲತಿ (ಎಂದರೆ, ಮತಸಂರಕ್ಷಕ) ಎಂಬ ಬಿರುದನ್ನು ದಯಪಾಲಿಸಿರುತ್ತಾರೆ.

****

ಕಾಶೀ ಮಹಾರಾಜರವರು ಕಳೆದ ವಾರ ಮದರಾಸಿಗೆ ಬಂದಿದ್ದಾಗ್ಗೆ ಅಲ್ಲಿನ ಪ್ರಸಿದ್ಧ ಜವಾಹರಿ ವ್ಯಾಪಾರಿಗಳಾದ ರಾ॥ ಟಿ. ರಂಗನಾಥ ಟಾಕರ್‌ಯವರ ಬಂಗಲೆಯಲ್ಲಿ ಇಳುಕೊಂಡಿದ್ದರು. ಇವರು ಅವರಿಗಾಗಿ ಬಹು ಶ್ರೇಷ್ಠವಾದ ಔತನವನ್ನು ಮಾಡಿದರು.

****

ಬ್ಯಾರಿಲೀ ನಗರದಲ್ಲಿ ಪ್ಲೇಗಿನ ಹಾವಳಿಯು ಹೆಚ್ಚಿಕೊಂಡದ್ದಾಗಿದೆ. ಪಟ್ಟಣಕ್ಕೆ ಪಟ್ಟಣವೇ ಖಾಲಿಬಿದ್ದಿತು. ಎಲ್ಲರೂ ಹೆದರಿ ಚೆಲ್ಲಾಪಿಲ್ಲಿಯಾಗಿ ಓಡಿಹೋದರು. ನೂರಾರು ಮನೆಗಳವರು ಪ್ಲೇಗ್ ಕ್ರಿಮಿಬನ್ನು ಹಾಕಿಸಿಕೊಂಡ, ಊರು ಮನೆ ಮಠಗಳನ್ನು ತ್ಯಜಿಸಿಬಿಟ್ಟರು.

****

ಆಗ್ರಾ ಪಟ್ಟಣದಲ್ಲಿ ಆರ್ಯಸಮಾಜದ ಪ್ರೆಸಿಡೆಂಟರಾದ ಮ॥ ರಾಮಪ್ರಸಾದ್ ಎಂಬವರಿಗೆ ಒಂದು ಮೊಕದ್ದಮೆಯಲ್ಲಿ ೫೦೦ ರೂಪಾಯಿ ಜುಲ್ಮಾನೆ ಆಯಿತೆಂದು ಕಳೆದ ವಾರ ತಿಳಿಸಿದೇವಷ್ಟೆ. ಇದು ನಿಜವಲ್ಲವೆಂದು ಈಚೆಗೆ ಒಬ್ಬ ಬಾತ್ಮೀದಾರರಿಂದ ತಿಳಿದು ಬಂದಿದೆ.

ಬೊಂಬಾಯಿ ಪಟ್ಟಣದಲ್ಲಿರುವ ಇಲಿ ಹೆಗ್ಗಣಗಳನ್ನೆಲ್ಲಾ ಸಂಪೂರ್ಣವಾಗಿ ಕೊಂದುಬಿಟ್ಟ ಪಕ್ಷದಲ್ಲಿ ಪ್ಲೇಗಿನ ಕಾಟ ತಪ್ಪುವದೆಂತಲೂ, ಆ ಪಟ್ಟಣದಲ್ಲಿ ಒಂದು ಕೋಟಿ ಹೆಗ್ಗಣಗಳನ್ನು ಕೊಲ್ಲುವುದಕ್ಕೆ ೧,೨೫,೦೦೦ ರೂಪಾಯಿ ಖರ್ಚಾಗುವುದೆಂತಲೂ ಅಲ್ಲಿನ ಹೆಲ್ತ್ ಆಫೀಸರಾದ ಡಾಕ್ಟರ್ ಟರ್ನರ್ ಎಂಬವರು ತಿಳಿಸುತ್ತಾರೆ.

****

ಸಿಲೋನ್ ದ್ವೀಪದ ಸಮುದ್ರ ತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆಯುವಂತೆ ಸರ್ಕಾರದವರು ಕಂಟ್ರಾಕ್ಟು ಕೊಟ್ಟರು. ಕಂಟ್ರಾಕ್ಟರುಗಳು ಮೂರು ದಿನ ಮುತ್ತಿನ ಚಿಪ್ಪುಗಳನ್ನು ಸಮುದ್ರದಿಂದ ತೆಗೆದಿರುತ್ತಾರೆ. ಅವರು ಇದುವರೆಗೆ ೨,೬೬,೩೪೧ ರೂಪಾಯಿನ ಮುತ್ತಿನ ಚಿಪ್ಪು ತೆಗೆದಿದಾರೆಂದು ಪ್ರಕಟವಾಗಿದೆ

****

ಮಂಡಲೇ ಪಟ್ಟಣದ ಮ್ಯುನಿಸಿಪಾಲಿಟಿಯವರು ಖಾತಕಾರಿಗಳಿರುವ ಕಟ್ಟಡಗಳಿಗೆ ಮ್ಯುನಿಸಿಪಲ್ ತೆರಿಗೆಯನ್ನು ವಜಾ ಮಾಡಿದ್ದಾರೆ. ಇದನ್ನು ನೋಡಿ ಅಲ್ಲಿನ ಪ್ರಜೆಗಳು ಕಂದಾಯವನ್ನು ಕೊಡದೆ ತಪ್ಪಿಸಿಕೊಳ್ಳಬೇಕೆಂದು ಮಠಗಳನ್ನು ಇಟ್ಟುಕೊಳ್ಳುತ್ತಾರು ಈಗ ಪ್ರತಿ ಬೀದಿಯಲ್ಲೂ ೨-೩ ಮಠಗಳಿವೆ ಎಂದು ತಿಳಿದು ಬಂದಿದೆ

****

ಕಲ್ಕತ್ತೆಯ ಹತ್ತಿರ ಸೀಲ್ದಾ ಪೋಲೀಸ್ ಸ್ಟೇಷನ್ನಲ್ಲಿ ಕೆಲವು ಮಹಮದೀಯರು ತಮ್ಮ ಮಂಜೂಲವನ್ನು ಧರಿಸಿ ಬರುತ್ತಿರುವಾಗ ಎದುರು ಕಕ್ಷಿಯವರು ಅವರನ್ನು ಸಂಧಿಸಿ ಅವರನ್ನು ಹೊಡೆದು ಜಗಳ ಮಾಡಿದರು. ಎರಡು ಕಡೆಗಳಲ್ಲೂ ಕೆಲವರಿಗೆ ಪೂರಾ ಏಟು ಬಿದ್ದಿದೆ ಪೋಲೀಸಿನವರು ಮುಖಂಡರನ್ನೆಲ್ಲಾ ಹಿಡಿದು ಲಾಕಪ್ಪಿನಲ್ಲಿ ಹಾಕಿದಾರೆ

****

ಅಸ್ಸಾಮಿಗೆ ಸೇರಿದ ಗೌಹಾಟಿ ಪ್ರಾಂತ್ಯದಲ್ಲೂ ಬರ್ಮಾ ಅಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದ ಕೆಲವು ಭಾಗಗಳಲ್ಲೂ ಕಳೆದ ವಾರ ಭೂಕಂಪವಾಯಿತು. ಸಾಯಂಕಾಲ ೭ ಗಂಟೆ ಸುಮಾರಿನಲ್ಲಿ ಮೂರು ನಿಮಿಷದಿಂದ ಹನ್ನೆರಡು ನಿಮಿಷಗಳ ತನಕ ಪೃಥ್ವಿಯು ಸ್ವಲ್ಪ ತೀಕ್ಷ್ಣವಾಗಿಯೇ ನಡುಗುತ್ತಿತ್ತು. ಆದರೆ ದೇವರ ದಯದಿಂದ ಪ್ರಾಣನಷ್ಟವಾಗಲಿ ಇನ್ಯಾವ ನಷ್ಟವಾಗಲಿ ಸಂಭವಿಸಲಿಲ್ಲ

****

ಹೈದರಾಬಾದಿಗೆ ಸೇರಿದ ಚಾದರಘಾಟನಲ್ಲಿ ಹಿಂದುಗಳು ಮಹಮದೀಯರು ಕ್ರೈಸ್ತರು ಎಲ್ಲಾ ದೊಡ್ಡ ಮನುಷ್ಯರೇ ಚಂದಾಹಾಕಿ ಭಾರೀ ಔತನ ಮಾಡಿ ಭೋಜನಾನಂತರ ಜಪಾನವರು ಪೋರ್ಟ್ ಆರ್ಥರ್ ಕೋಟೆಯನ್ನು ಗೆದ್ದುಕೊಂಡದ್ದಕ್ಕಾಗಿಯೇ ಈ ಸಂತೋಷೋತ್ಸವವನ್ನು ನಡಿಸಿದೆವೆಂದು ಉಪನ್ಯಾಸಗಳನ್ನು ಮಾಡಿದರು ಅದೇ ಜರ್ನಕ್ಕೆ ಜಪಾನ್ ಚಕ್ರವರ್ತಿಯವರಿಗೆ ಒಂದು ತಂತೀ ವರ್ತಮಾನವನ್ನು ಕೊಟ್ಟು ತಮ್ಮ ಸಂತೋಷವನ್ನು ತಿಳಿಸಿದರು

****

ಲಂಕಾ (ಸಿಲೋನ್) ದ್ವೀಪದ ಕಾಡುಗಳಲ್ಲಿ ಸಾರಂಗ ಜಿಂಕೆ ಮೊದಲಾದ ಸಾಧು ಪ್ರಾಣಿಗಳನ್ನು ಮೂರರೆಂಬ ಕಾಡು ಜನರು ಬಹುವಾಗಿ ಕೊಂದು, ಅವುಗಳ ಕೊಂಬು ಕೋದುಗಳನ್ನು ವಿಲಾಯಿತಿ ಮೊದಲಾದ ಪಶ್ಚಿಮರಾಜ್ಯಗಳಿಗೆ ರಫ್ತು ಮಾಡಿ ಬೆಳರಿ ಮಾಡುತ್ತಿದ್ದರೆಂದೂ, ಈ ಪ್ರಾಣಿಹಿಂಸೆಯನ್ನು ತಪ್ಪಿಸಬೇಕೆಂತಲೂ ಅಲ್ಲಿನ ಕೆಲವು ದೊಡ್ಡ ಮನುಷ್ಯರು ಗವರ್ನರವರಿಗೆ ಅರ್ಜಿ ಬರೆದುಕೊಂಡಾರೆ. ಇವರ ಪ್ರಯತ್ನವು ಫಲಕಾರಿಯಾಗಲೆಂದು ಪ್ರಾರ್ಥಿಸುತ್ತೇವೆ

****

ಮರ್ಮಗೋವೆಯಿಂದ ವಿಲಾಯಿತಿಗೆ ಹಡಗುಗಳೂ [illegible]ಗಳೂ ನೆಟ್ಟಗೆ ಹೋಗಿ ಬರುವಂತೆ ಇಷ್ಟರಲ್ಲೇ ಏರ್ಪಾಡಾಗುವದು. ಇದಕ್ಕಾಗಿ ಆಗಲೇ ಒಂದು ಕಂಪನಿ ಸ್ಥಾಪನೆಯಾಗಿದೆ. ತಿಂಗಳಿಗೊಂದು ಸಲ ತಪ್ಪದೆ ಜಹಜು ಹೋಗಿ ಬರಬೇಕೆಂತಲೂ, ಸಾಮಾನಿನ ಭಾಡಿಗೆ ಬೊಂಬಾಯಿನಿಂದ ಹೋಗತಕ್ಕ ಸಾಮಾನಿನ ಮಜೆರ್ನಷ್ಟೆ ಇರಬೇಕೆಂತಲೂ, ಪ್ರಯಾಣಿಕರಿಗೆ ಮಾತ್ರ ಬಹಳ ಕಮ್ಮಿ ದರದ ಭಾಡಿಗೆ ಗೊತ್ತು ಮಾಡಬೇಕೆಂತಲೂ ಏರ್ಪಾಡು ಮಾಡಿಕೊಂಡಿದಾರೆ

****

ರಂಗೂನ್ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಬೇರೂರಿಕೊಂಡಿತು. ಸರ್ಕಾರದವರು ರೋಗಿಗಳನ್ನೂ ಅವರ ಸಂಪರ್ಕದಲ್ಲಿರುವವರನ್ನೂ ಪ್ರತ್ಯೇಕಿಸಬೇಕೆಂದು ಮಾಡಿದ ಪ್ರಯತ್ನಗಳು ನಿಷ್ಪ್ರಯೋಜನವಾದದ್ದರಿಂದ ರೋಗಿಗಳನ್ನು ಪ್ರಜೆಗಳು ತಮ್ಮ ಮನೆಗಳಲ್ಲೇ ಇಟ್ಟುಕೊಂಡು ಉಪಚರಿಸಬಹುದೆಂತಲೂ, ಇಷ್ಟಪಟ್ಟವರು ರೋಗಿಗಳನ್ನು ಸರ್ಕಾರಿ ಆಸ್ಪತ್ರೆಗೆ ಕಳುಹಿಸಬಹುದೆಂತಲೂ ರಿಯಾಯಿತಿ ತೋರಿಸಿರುತ್ತಾರೆ. ಇದರಿಂದ ಜನರ ಗಾಬರಿಯೂ ಕಳವಳವೂ ಕಡಿಮೆಯಾಗಿವೆ.

****

ವಿಧವೆಯರಿಗೆ ಪುನರ್ವಿವಾಹ ಮಾಡಬೇಕೆಂಬುವರಲ್ಲಿ ನಭಾ ಸಂಸ್ಥಾನದ ರಾಜರು ತುಂಬಾ ಕುತೂಹಲವುಳ್ಳವರಾಗಿದಾರೆ. ಈ ಉದ್ದೇಶದಿಂದ ಕೆಲವು ದೊಡ್ಡ ಮನುಷ್ಯರನ್ನು ಪಂಜಾಬ್ ಆಧಿಪತ್ಯದ ಮುಖ್ಯಮುಖ್ಯ ನಗರಗಳಿಗೆಲ್ಲಾ ಹೋಗಿ ಅಲ್ಲಲ್ಲಿರುವ ಹಿಂದುಗಳ ಅಭಿಪ್ರಾಯವನ್ನು ತಿಳಿದು ಬರಬೇಕೆಂದು ಗೊತ್ತು ಮಾಡಿ ಕಳುಹಿಸಿರುವರು. ಇವರು ಆಗಲೇ ಲಾಹೋರ್, ಅಮೃತಸರ ಮೊದಲಾದ ಪಟ್ಟಣಗಳಿಗೆ ಹೋಗಿದ್ದರು. ನಭಾ ಸಂಸ್ಥಾನದ ಹಿಂದು ಜನರೆಲ್ಲಾ ತಮ್ಮ ರಾಜರ ಅಭಿಪ್ರಾಯವನ್ನೇ ಪ್ರೋತ್ಸಾಹಿಸುತ್ತಿದ್ದಾರೆ.

ಸಂಬಾಲ್‌ಪೂರ್ ಎಂಬುವ ಡಿಸ್ಟ್ರಿಕ್ಟಿನಲ್ಲಿ ಈಗ ಸುಮಾರು ಮೂರು ನಾಲ್ಕು ದಿವಸಗಳಿಂದ ವಿಪರೀತವಾದ ಛಳಿ ಮಳೆ ಇದೆ ಮತ್ತು ಇದೇ ಸೆಂಟ್ರಲ್ ಪ್ರಾವಿನ್ಸಸ್‌ಗೆ ಸೇರಿದ ಬಿಲ್ಲಾಸ್‌ಪೂರ್ ಸಿಂಗ್‌ಪೂರ್ ಎಂಬುವ ಡಿಸ್ಟ್ರಿಕ್ಟುಗಳಲ್ಲಿ ಹುಸೇನಾ ಎಂಬುವ ಒಟ್ಟು ಥಂಡಿಘಾಳಿಯಿಂದ ತೊಗರಿ ಗೋಧಿ ಕಡ್ಲೆ ಬೆಳೆ ಯಾವತ್ತು ಬಿಟ್ಟು ಒಣಗಿ ಹೋಯಿತು. ಮತ್ತು ಈ ದೇಶಕ್ಕೆ ಕ್ಷಾಮ ಬರುವ ಹಾಗೆ ಕಾಣುತ್ತೆ ಎಂದು ಒಬ್ಬ ಚಂದಾದಾರರು ಬರೆಯುತ್ತಾರೆ.

❖❖❖❖

ರಂಗೂನ್ ಪಟ್ಟಣದಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ತಂದು ಒದಗಿಸಿರುತ್ತಾರೆ. ಆ ಕೆರೆಯು ಏಳು ಮೈಲಿ ಉದ್ದವೂ ಎರಡು ಮೈಲಿಯು ತನಕ ಅಗಲವೂ ಉಳ್ಳದ್ದಾಗಿದೆ. ಅದು ಆ ಪಟ್ಟಣದ ೩॥ ಲಕ್ಷ ಪ್ರಜೆಗಳಿಗೆ ಸಾಕಾಗುವಷ್ಟು ನೀರನ್ನು ತಂದುಕೊಡುವುದು. ಈ ಕೆರೆಯ ಕಾಮಗಾರಿಗೆ ಇದುವರೆಗೆ ರೂಪಾಯಿ ೪೪,೭೫,೩೦೦ ಖರ್ಚಾಗಿದೆ. ಕಾಮಗಾರಿಯೆಲ್ಲಾ ಪೂರೈಸಿದ್ದರಿಂದ ಕಳೆದ ವಾರ ಲೆಫ್ಟಿನೆಂಟ್ ಗವರ್ನರವರು ಅದನ್ನು ಪ್ರತಿಷ್ಠೆ ಮಾಡಿ, ಪ್ರಜೆಗಳು ಅದರಿಂದಲೇ ನೀರು ಉಪಯೋಗಿಸಿಕೊಳ್ಳುವುದನ್ನು ಪ್ರಾರಂಭಮಾಡಿದರು.

❖❖❖❖

ಕೊಚ್ಚಿ ಸಂಸ್ಥಾನದ ಒಬ್ಬ ವರ್ತಕನು ತರಿಸಿದ ೧೭ ಪೆಟ್ಟಿಗೆ ಅಫೀಮನ್ನು ಮದರಾಸ್ ಸರ್ಕಾರದವರು ತಡೆದು ಇಟ್ಟುಕೊಂಡುಬಿಟ್ಟರೆಂದು ಅವನು ಮದರಾಸ್ ಹೈಕೋರ್ಟಿನಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮೇಲೆ ೩೨,೦೦೦ ರೂಪಾಯಿ ನಷ್ಟಕ್ಕೆ ದಾವಾ ತಂದನು. ಸರ್ಕಾರದವರು ಅವನಿಗೆ ಮೊದಲೇ ೨೦,೦೦೦ ರೂಪಾಯಿ ಕೊಡುವುದಾಗಿ ತಿಳಿಸಿದರೂ ಅವನು ಅದಕ್ಕೊಪ್ಪದೆ ಹೋದನು. ಈಗ ಹೈಕೋರ್ಟಿನವರು ಮೊಕದ್ದಮೆಯನ್ನು ವಾದಿಯಂತೆ ಫೈಸಲ್ ಕೊಟ್ಟು, ಸರ್ಕಾರದವರು ಅವನಿಗೆ ೩೧,೭೯೩ ರೂಪಾಯಿ ಪ್ರತಿಫಲ ಕೊಡಬೇಕೆಂದು ತೀರ್ಮಾನ ಮಾಡಿದರು.

❖❖❖❖

ಉತ್ತರ ದೇಶದ ಒಂದು ಪತ್ರಿಕೆಯು ಹೇಳುವುದೇನೆಂದರೆ— ಭಿಕ್ಷೆಯಿಂದ ಜೀವನ ಮಾಡತಕ್ಕವರ ಸಂಖ್ಯೆಯು ಹಿಂದುಸ್ಥಾನದಲ್ಲಿ ಈಚೆಗೆ ಹೆಚ್ಚಾಗುತ್ತಾ ಬಂದಿದೆ. ಬೀದಿಗಳಲ್ಲೂ ಸಂದುಗೊಂದುಗಳಲ್ಲೂ ಈ ಭಿಕ್ಷುಕರ ಕಾಟವನ್ನು ಪ್ರಜೆಗಳು ತಡೆಯಲಾರರು. ಕಾಲಾಂತರದಲ್ಲಿ ಆಹಾರ ದಿನಸಿಗಳ ಧಾರಣೆಯು ದಿನೇ ದಿನೇ ಹೆಚ್ಚುತ್ತಿದೆ. ಬಡಬಗ್ಗರು ತಮ್ಮ ಸಂಸಾರವನ್ನು ನಡಿಸಿಕೊಂಡು ಹೋಗುವುದೇ ಕಷ್ಟವಾಗಿದೆ, ಇಂಥಾದ್ದರಲ್ಲಿ ಈ ಭಿಕ್ಷುಗಾರರ ಹಿಂಸೆಯೂ ಹೆಚ್ಚಾದರೆ ಅವರಿಗೆ ತುಂಬಾ ಸಂಕಟವಾದೀತು. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರೂ ಮಹನೀಯರೂ ಪ್ರಯತ್ನಪಡತಕ್ಕದ್ದಾಗಿದೆ ಎಂಬುದೇ.

❖❖❖❖

ರಾಜಷಾಹಿ ಡಿಸ್ಟ್ರಿಕ್ಟಿಗೆ ಸೇರಿದ ನಾಲಿತರದಲ್ಲಿರುವ ಕುಮಾರ ಶರತ ನಿಧಿರಾಯಿ ಎಂಬಾತನು ರಾಜಷಾಹಿ ಕಾಲೇಜಿಗೆ ಒಂದು ಹಾಸ್ಟೆಲನ್ನು ಕಟ್ಟಿಸಿಕೊಡುತ್ತೇನೆಂತಲೂ ಅದಕ್ಕೆ ತನ್ನ ತಂದೆಯಾದ ರಾಜಕೃಷ್ಣೇಂದ್ರ ರಾಯಿಬಹದೂರ್ ಎಂಬಾತನ ಹೆಸರಿಡುತ್ತೇನೆಂತಲೂ, ಇದಕ್ಕೋಸ್ಕರ ಸರ್ಕಾರದವರು ಸಹ ೫೦೦೦ ರೂಪಾಯಿ ಚಂದಾ ಕೊಡುವುದಾದರೆ ತಾನೂ ೬,೦೦೦ ರೂಪಾಯಿ ಕೊಡುತ್ತೇನೆಂತಲೂ ತಿಳಿಸಿದನು. ಲೆಫ್ಟಿನೆಂಟ್ ಗವರ್ನರು ಆತನ ಧರ್ಮ ಬುದ್ಧಿಯನ್ನು ಪ್ರೋತ್ಸಾಹ ಪಡಿಸುವುದಕ್ಕಾಗಿ ಗವರ್ನಮೆಂಟಿನಿಂದ ಅಷ್ಟು ಹಣವನ್ನು ಕೊಡುವುದಾಗಿ ತಿಳಿಸಿ ಆತನಿಂದ ಹಣವನ್ನು ಬಿಗಮಾಡಿಕೊಂಡರು.

❖❖❖❖

ಮದರಾಸ್ ಅಧಿಪತ್ಯಕ್ಕೆ ಸೇರಿದ ಕೆಲವು ಹಿಂದು ದೊಡ್ಡ ಮನುಷ್ಯರು ಫಂಡನ್ನು ಪ್ರಾರಂಭಿಸಿ ಚಂದಾ ಎತ್ತುತ್ತಿದ್ದಾರೆ. ಅದಕ್ಕೆ ಹಿಂದೂ ವಿದ್ಯಾಪ್ರೋತ್ಸಾಹಕ ಫಂಡು ಎಂಬ ಹೆಸರು. ವರುಷಕ್ಕೆ ೨೦೦ ರೂಪಾಯಿಯಂತೆ ಚಂದಾ ಕೊಡತಕ್ಕವರು ಈ ಫಂಡಿನ ಮೆಂಬರುಗಳಾಗುತ್ತಾರೆ. ಈ ಫಂಡಿನಿಂದ ಹಿಂದೂ ಬಾಲಕರಿಗೆ ವೇತನಗಳನ್ನು ಕೊಟ್ಟು, ವಿಲಾಯತಿ ಅಮೇರಿಕ ಜರ್ಮನಿ ಮೊದಲಾದ ದೇಶಗಳಿಗೆ ಕಳುಹಿಸಿ, ಅಲ್ಲಿ ಕೈಗಾರಿಕೆ ವಿದ್ಯೆವನ್ನು ಕಲಿತು ಬರುವಂತೆ ಸಹಾಯ ಮಾಡುತ್ತಾರೆ. ಇಂಥಾ ಫಂಡಿಗೆ ೧೦೦ ರೂಪಾಯಿ ಕಂತಿ ಚಂದಾ ಕೊಡಲು ೪೦ ಮಂದಿ ದೊಡ್ಡ ಮನುಷ್ಯರು ಒಪ್ಪಿಕೊಂಡಿರಾಗಿರುವರು. ಇನ್ನೂ ಹೊಸ ಮೆಂಬರುಗಳು ಸೇರುವವರ ಸ್ಥಿತಿ.

❖❖❖❖

ಮಿ॥ ಶ್ಯಾಮಜಿ ಕೃಷ್ಣವರ್ಮನೆಂಬೊಬ್ಬ ಹಿಂದುವು ವಿಲಾಯತಿಗೆ ಹೋಗಿ ವಿದ್ಯಾಭ್ಯಾಸ ಮಾಡಿ ಎಂ. ಎ. ಪರಿಕ್ಷೆಯಲ್ಲಿ ತೇರ್ಗಡೆಯಾಗಿಕೊಂಡಿರುತ್ತಾನೆ. ಈತನು ಹಿಂದುಸ್ಥಾನದ ಯೌವನಸ್ಥರಿಗೆ ವೇತನಗಳನ್ನು ಕೊಟ್ಟು ವಿಲಾಯತಿಗೆ ಕಳುಹಿಸುತ್ತೇನೆಂತಲೂ, ಅವರು ಅಲ್ಲಿ ಕೈಗಾರಿಕೆಯನ್ನು ಕಲಿತು ಬಂದು ಸರ್ಕಾರಿ ನೌಕರಿಗೆ ಸೇರಿಕೊಳ್ಳದೆ ಸ್ವತಂತ್ರವಾಗಿ ಕೈಗಾರಿಕೆ ನಡಿಸಿ ಜೀವನ ಮಾಡಬೇಕೆಂತಲೂ ಇದಕ್ಕೆ ಇಷ್ಟಪಡುವವರು ತನಗೆ ಅರ್ಜಿ ಬರೆದುಕೊಳ್ಳಬೇಕೆಂದೂ ಪ್ರಕಟಿಸಿದನು. ಆತನು ಈ ಖರ್ಚನ್ನೆಲ್ಲಾ ತನ್ನ ಸ್ವಂತ ಆಸ್ತಿಯಿಂದಲೇ ಕೊಡುವವನಾಗಿದ್ದಾನೆ. ಇದುವರೆಗೆ ಹತ್ತು ಜನ ಹಿಂದು ಯೌವನಸ್ಥರು ಒಪ್ಪಿ ಆತನಿಗೆ ಅರ್ಜಿ ಬರೆದುಕೊಂಡಿದ್ದಾರೆ.

❖❖❖❖

ಇಂಗ್ಲಿಷ್ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಯಾವ ಯಾವ ತಾರೀಖಿನಲ್ಲಿ ಯಾವ ಯಾವ ಪಟ್ಟಣಕ್ಕೆ ಬರುವರೋ ಇನ್ನೂ ನಿಶ್ಚಯವಾಗಿಲ್ಲ. ಆದರೂ ಅವರು ದೆಹಲಿ ಪಟ್ಟಣದಲ್ಲಿ ಬಂದು ದರ್ಬಾರ್ ಮಾಡಿ, ಅಲ್ಲಿಗೆ ಪಂಜಾಬ್ ರಾಜರುಗಳನ್ನೂ ನವಾಬರುಗಳನ್ನೂ ದೊಡ್ಡ ಮನುಷ್ಯರನ್ನೂ ಕರೆಸಿಕೊಂಡು, ಅವರಿಗೆ ಭೇಟಿಕೊಡುತ್ತಾರೆಂತಲೂ, ವರುಷಾಂತ್ಯದಲ್ಲಿ ಅಂದರೆ ಕ್ರಿಸ್‌ಮಸ್ ಹಬ್ಬದ ಸಮಯಕ್ಕೆ ಅವರು ಕಲ್ಕತ್ತಾ ಪಟ್ಟಣದಲ್ಲಿದ್ದುಕೊಂಡು, ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆ ಕಟ್ಟುವುದಕ್ಕೆ ಅಸ್ತಿಭಾರ ಹಾಕುವರೆಂತಲೂ ಹೇಳಬಹುದಾಗಿದೆ. ಇವರು ಕಾಶ್ಮೀರ, ಮೈಸೂರು, ಹೈದರಾಬಾದ್, ಈ ಸಂಸ್ಥಾನಗಳಿಗೆ ದಯಮಾಡುತ್ತಾರೆಂದು ಸರ್ಕಾರಿಯಾಗಿ ಈಚೆಗೆ ಪ್ರಕಟವಾಗಿದೆ.

❖❖❖❖

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಒಬ್ಬಾನೊಬ್ಬ ಸಬ್ ಡೆಪ್ಯುಟಿ ಕಲೆಕ್ಟರು ತನ್ನ ಮೇಲ್ಪಟ್ಟ ಅಧಿಕಾರಿಗೆ ತಿಳಿಸದೇನೇ ಟಿಕೆಟ್ ಕೊಂಡುಕೊಳ್ಳದೆ ರೈಲು ಹತ್ತಿ ಎಲ್ಲಿಗೋ ಹೋಗಿ ಬಂದನು. ಇದಕ್ಕಾಗಿ ಅಧಿಕಾರಿಯು ಅವನನ್ನು ಸಸ್ಪೆಂಡ್ ಮಾಡಿ, ಕೆಲಸದಿಂದ ತೆಗೆದೇ ಹಾಕಬೇಕೆಂದು ಗವರ್ನರವರಿಗೆ ಬರೆದನು. ಅದರ ಮೇಲೆ ಲೆಫ್ಟಿನೆಂಟ್ ಗವರ್ನರವರು ಆ ಮನುಷ್ಯನನ್ನು ಕರೆಸಿ ಮೊಕ್ತಾ ಕೇಳಿದರು. ಅವನು ತಾನು ತಪ್ಪುಮಾಡಿದ್ದೇನೆಂದು ಒಪ್ಪಿಕೊಂಡು ಕ್ಷಮಿಸಬೇಕೆಂದು ಬಹಳ ಆರ್ತನಾಗಿ ಕೇಳಿಕೊಂಡನು. ಗವರ್ನರ ಮನಸ್ಸು ಕರಗಿ ಅವನಿಗೆ ಯಥಾಪ್ರಕಾರ ಕೆಲಸ ಕೊಡುವಂತೆ ಹುಕುಂ ಕಳುಹಿಸಿದರು. ಈ ವರ್ತಮಾನವನ್ನು ಕೇಳಿ ಸಕಲರೂ ಲೆಫ್ಟಿನೆಂಟ್ ಗವರ್ನರವರ ದಯಾಪೂರಿತವಾದ ಮನಸ್ಸನ್ನು ಕುರಿತು ಕೊಂಡಾಡುತ್ತಿದ್ದಾರೆ.

❖❖❖❖

ಈಚೆಗೆ ಸೂರ್ಯ ಬಿಂಬದಲ್ಲಿ ಅಗಾಧವಾದ ಕಪ್ಪು ಚುಕ್ಕೆಯು ಕಾಣಿಸಲಾರಂಭವಾಗಿದೆ. ಇದಕ್ಕೆ ಕಾರಣವೇನಾಗಿರಬಹುದೆಂದು ಪ್ರಪಂಚದ ಅನೇಕ ಜ್ಯೋತಿಷ ಶಾಸ್ತ್ರಜ್ಞರು ಪರಿಶೋಧನೆ ಮಾಡುತ್ತಿದ್ದಾರೆ. ಈ ಚುಕ್ಕೆಯು ಅನೇಕ ಸಹಸ್ರ ಚದರ ಮೈಲಿಗಳ ವಿಸ್ತಾರವುಳ್ಳದ್ದಾಗಿರುವದು. ಕೆಲವರು ಇದರಿಂದ ಪ್ರಪಂಚದಲ್ಲಿ ದುರ್ಭಿಕ್ಷಕಾಲ ಪ್ರಾಪ್ತವಾಗುವುದೆಂದು ಹೇಳುತ್ತಿದ್ದಾರೆ. ಬಿಸಲಿನ ತಾಪವು ಈಗಲೇ ಸಹಿಸುವುದಕ್ಕಾಗದೆ ಇದೆ. ಆ ಕಪ್ಪು ಚುಕ್ಕೆಯೂ ಇಲ್ಲದೆ ಸೂರ್ಯಬಿಂಬದಿಂದ ಸಂಪೂರ್ಣವಾದ ಶಕೆ ಪ್ರಪಂಚಕ್ಕೆ ಬಿಗಿದು ಬರುತ್ತಿದ್ದ ಪಕ್ಷದಲ್ಲಿ ಆ ಬಿಂಬಕ್ಕೆ ಸಮದೂರದಲ್ಲಿರುವ ಉಷ್ಣವಲಯ ರಾಜ್ಯಗಳಲ್ಲಿ ಧಗೆಯ ಹಾಹಾಕಾರವು ಸಹಿಸಲಶಕ್ಯವಾಗುತ್ತಿತ್ತು. ಹ್ಯಾಗೂ ಮುಂದಿನ ವರುಷದಲ್ಲಿ ಅಪಾರವಾದ ಮಳೆಗಳು ಬರುವವೆಂದು ಅನೇಕರು ಹೇಳುತ್ತಾ ಬಂದಿದ್ದಾರೆ. ಮುಂದೆ ನೋಡಬೇಕು.

❖❖❖❖

ತಿರುವಾಂಕೂರಿನಲ್ಲಿ ತಿಯ್ಯರಿಗೂ ನಾಯರರಿಗೂ ಕಲಹಗಳಾಗಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ದಾಖಲಾಗಿದೆ ಎಂದು ಕಳೆದ ವಾರ ತಿಳಿಸಿದೆವಷ್ಟೆ. ಕ್ವಿಲಾನ್ ಪಟ್ಟಣದ ಮ್ಯಾಜಿಸ್ಟ್ರೇಟರು ಕಳೆದ ವಾರ ಈ ಮೊಕದ್ದಮೆಯನ್ನು ಸ್ವಲ್ಪ ದೂರ ವಿಚಾರಣೆ ಮಾಡಿ, ಇನ್ನೊಂದು ದಿನ ಬರಬೇಕೆಂದು ಗೊತ್ತುಮಾಡಿದರು. ಉಭಯ ಕಕ್ಷಿಗಳೂ ಕೋರ್ಟಿನಿಂದ ಹೊರಕ್ಕೆ ಹೋದರು. ಸ್ವಲ್ಪ ದೂರದಲ್ಲಿ ನಾಯರರು ಆ ಸ್ಥಳಕ್ಕೆ ದೊಣ್ಣೆ ಕೂಡಿ ಮುಂಚಿದ್ದನ್ನು ಹಿಡಿದುಕೊಂಡು ಬಂದು, ತಿಯ್ಯರನ್ನು ಹಿಡಿದು ಹೊಡೆದರು. ಮಾರಾಮಾರಿ ನಡೆಯಿತು. ಎರಡು ಕಡೆಯಲ್ಲೂ ಕೆಲಕೆಲವರಿಗೆ ಗಾಯಗಳೂ ಆದವು. ಘೋರ ಗಾಯಗಳಾದವರನ್ನು ಆಸ್ಪತ್ರೆಗೆ ಸಾಗಿಸಿದರು. ಬಳಾಯ ಗ್ರಾಮಗಳಲ್ಲೂ ಈ ದ್ವೇಷ ಹೆಚ್ಚಿ ಪ್ರಜಾಕ್ಷೇಮಕ್ಕೆ ಭಂಗ ಉಂಟಾಗಿದೆ. ಕ್ವಿಲಾನ್ ತಾಲ್ಲೂಕಿಗೆ ಸೇರಿದ ಕಿಳಿಕೊಳ್ಳೂರಿನಲ್ಲಿ ಆ ಎರಡು ಗುಂಪಿನವರಿಗೂ ಕದನಗಳಾದವು. ಪ್ರಜೆಗಳು ತಲ್ಲಣಿಸುತ್ತಿದ್ದಾರೆ.

❖❖❖❖

ನೇಪಾಳ ಸಂಸ್ಥಾನದ ಮಂತ್ರಿ ಶ್ರೇಷ್ಠರಾದ ಛನವನ್ನೈದಿದ ಮಹಾರಾಜಾ ಸರ್ ಚಂದ್ರಸೋಮೇಶ್ವರ ಜಂಗ್ ಬಹದೂರ್ ಯವರ ಪತ್ನಿಯರವರು ಕಳೆದ ವಾರ ಕಾಲವಾದರು. ಈಕೆ ಕೆಲವು ಕಾಲದಿಂದ ಕಾಯಿಲೆ ಇದ್ದು, ಹಿಂದುಸ್ಥಾನದ ಡಾಕ್ಟರುಗಳಿಂದ ಔಷಧಗಳನ್ನು ಪಡೆಯುತ್ತಿದ್ದರು. ಆ ಸಂಸ್ಥಾನದಲ್ಲಿರುವ ಪದ್ಧತಿಯ ಪ್ರಕಾರ ಅವಸಾನ ಕಾಲದಲ್ಲಿ ಆಕೆಯನ್ನು ಪಟ್ಟಣದಲ್ಲೆಲ್ಲಾ ಮೆರವಣಿಗೆ ಮಾಡಿಕೊಂಡು, ಪಶುಪತಿ ಎಂಬ ದೇವಸ್ಥಾನದ ಹತ್ತಿರ ಇರುವ ಆರ್ಯಘಾಟಿಗೆ ಕರೆದುಕೊಂಡು ಹೋಗಿ ಮಲಗಿಸಿ, ಆಕೆಯ ಕೈಯಿಂದ ಬಡಬಗ್ಗರಿಗೂ ಬ್ರಾಹ್ಮಣಾದಿಗಳಿಗೂ ದಾನಧರ್ಮಗಳನ್ನು ಕೊಡಿಸಿದರು. ಮಹಾರಾಣಿಯವರು ವಿಶೇಷ ಪರೋಪಕಾರಿಗಳೆಂತಲೂ ಪತಿವ್ರತಾಶಿರೋಮಣಿಯೆಂತಲೂ ಹೆಸರು ಪಡೆದಿದ್ದರು. ಒಂದಾನೊಂದು ಕಾಲದಲ್ಲಿ ಒಬ್ಬನನ್ನು ಗಲ್ಲಿಗೆ ಹಾಕುತ್ತಾರೆಂಬ ವರ್ತಮಾನವನ್ನು ಕೇಳಿ, ಆ ಕೂಡಲೇ ಆಕೆ ೨೫,೦೦೦ ರೂಪಾಯಿ ಕೊಟ್ಟು ಬಿಡಿಸಿಕೊಂಡು ಬಂದು, ಅವನ ಪ್ರಾಣಸಂರಕ್ಷಣೆ ಮಾಡಿದ್ದಾರೆ.

❖❖❖❖

ಹಿಂದುಸ್ಥಾನದಲ್ಲಿ ಕ್ಷಾಮನಿವಾರಣೆಗಾಗಿ ಶಾಶ್ವತವಾದ ಒಂದು ಫಂಡು ಏರ್ಪಾಡಾಗಿರುವುದೂ, ಅದಕ್ಕೆ ಜಯಪುರದ ಮಹಾರಾಜರವರು ಇಪ್ಪತ್ತು ಲಕ್ಷ ರೂಪಾಯಿ ಕೊಟ್ಟಿರುವುದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಈಗ ಈ ಫಂಡಿನ ಆದಾಯವ್ಯಯಗಳನ್ನು ಪ್ರಕಟಿಸಿದ್ದಾರೆ. ಈ ಫಂಡು ೧೯೦೦ ನೆ ಇಸವಿ ಅಕ್ಟೋಬರಿನಲ್ಲಿ ಏರ್ಪಾಡಾಯಿತು. ೧೯೦೪ ನೆ ಡಿಸೆಂಬರ್ ಆಖೈರಿನಲ್ಲಿ ಈ ಫಂಡಿನಲ್ಲಿ ೨೪,೧೧,೦೦೦ ರೂಪಾಯಿ ಉಳಿದಿತ್ತು. ಇದಲ್ಲದೆ ೧,೩೭,೦೦೦ ರೂಪಾಯಿ ಬಂಗಾಳಾ ಖಜಾನೆಗಳಲ್ಲಿ ಕಾಪಿದಿರುತ್ತೆ. ಮೇಲ್ಕಂಡ ಮೂಲಧನಕ್ಕೆ ಪ್ರಾರಂಭದಿಂದ ೧೦,೯೦,೦೦೦ ರೂಪಾಯಿ ಬಡ್ಡಿ ಉತ್ಪತ್ತಿಯಾಯಿತು. ಈ ಪ್ರಕಾರ ೧೯೦೨ ನೆ ಇಸವಿಯಲ್ಲಿ ಬೊಂಬಾಯಿ, ಬರೋಡ, ರಾಜಪುಟಾನಾ ಸೀಮೆಗಳಲ್ಲಿ ಕ್ಷಾಮನಿವಾರಣೆಗೆ ೪,೨೧,೦೦೦ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಈ ಫಂಡಿಗೆ ಜಯಪುರದ ಜ್ಯೇಷ್ಠ ಮಹಾರಾಣಿಯವರು ಒಂದು ಲಕ್ಷ ರೂಪಾಯಿಯನ್ನೂ, ಭಾವನಗರದ ನವಾಬರವರು ಮೂರು ಲಕ್ಷ ರೂಪಾಯಿಯನ್ನೂ ಚಂದಾ ಕೊಟ್ಟಿದ್ದಾರೆ.

❖❖❖❖

ಬಂಗಾಳಾ ಅಧಿಪತ್ಯದಲ್ಲಿ ಗವರ್ನಮೆಂಟಿನವರು ಏರ್ಪಡಿಸಿರುವ ವ್ಯವಸಾಯ ಬ್ಯಾಂಕುಗಳ ಸ್ಥಿತಿಗತಿ ಹ್ಯಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಮಿ॥ ಗ್ಯಾರ್ಲೆ ಎಂಬ ಸಾಹೇಬರನ್ನು ತಪಸೀಲುಮಾಡುವಂತೆ ಕಳುಹಿಸಿಕೊಟ್ಟರು. ಇವರು ಎಲ್ಲಾ ಬ್ಯಾಂಕುಗಳನ್ನೂ ನೋಡಿ ಬಂದು ರಿಪೋರ್ಟು ಕೊಟ್ಟಿರುವುದೇನೆಂದರೆ— ನಾನು ಜರ್ಮನಿ, ಇಟಲಿ, ಈಜಿಪ್ಟ್ ಮೊದಲಾದ ರಾಜ್ಯಗಳಲ್ಲಿನ ಇಂಥಾ ಬ್ಯಾಂಕುಗಳನ್ನು ನೋಡಿ ಬಂದಿರುತ್ತೇನೆ. ಆ ದೇಶಗಳಲ್ಲಿರುವ ಬ್ಯಾಂಕುಗಳೂ ಈಗ ಈ ಅಧಿಪತ್ಯದಲ್ಲಿರುವ ಬ್ಯಾಂಕುಗಳೂ ಒಂದೇ ರೀತಿಯಾಗಿರುತ್ತವೆಂದು ಕಾಣುವುದು. ಇಂಥಾ ಬ್ಯಾಂಕುಗಳಿಂದ ಬಂಗಾಳಾ ಅಧಿಪತ್ಯಕ್ಕೆ ಇನ್ನು ಮುಂದೆ ತುಂಬಾ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. ಮಧ್ಯರಾಷ್ಟ್ರದಲ್ಲಿ ಒಂದು ದೊಡ್ಡ ಬ್ಯಾಂಕನ್ನು ಇಟ್ಟು, ಅದರ ಶಾಖೆಗಳನ್ನು ಸುತ್ತಮುತ್ತಲ ಗ್ರಾಮಾಂತರಗಳಲ್ಲಿ ಇಡಿಸಿದರೆ ಅದರ ಉದ್ದೇಶವು ಸಾರ್ಥಕವಾಗುವುದು. ಇವುಗಳ ಮೇಲ್ವಿಚಾರಣೆಯೆಲ್ಲಾ ಸರ್ಕಾರದವರೇ ನೋಡಿಕೊಳ್ಳಬೇಕು. ಈ ವಿಷಯಕ್ಕೆ ಗವರ್ನಮೆಂಟಿನವರು ಜಾಗ್ರತೆಯಾಗಿ ಗಮನ ಕೊಟ್ಟಾರೆಂದು ನಿರೀಕ್ಷಿಸಲ್ಪಟ್ಟಿದೆ ಎಂಬುದೇ.

ವಿದೇಶ ವರ್ತಮಾನಗಳು.

ಚೀನಾ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಲೇವಾದೇವಿ ನಡಸುತ್ತಿದ್ದ ನಾಲ್ಕಾರು ಭಾರೀ ಬ್ಯಾಂಕುಗಳು ದಿವಾಳಿಯಾದವು. ಈ ಬ್ಯಾಂಕುಗಳಿಗೆ ಹಣ ಕೊಟ್ಟಿದ್ದ ಪ್ರಜೆಗಳಿಗೆ ೫೦ ಲಕ್ಷ ರೂಪಾಯಿ ತನಕ ನಷ್ಟವಾಯಿತು.

❖❖❖❖

ಜರ್ಮನಿ ಚಕ್ರವರ್ತಿಯವರ ಆಜ್ಞಾನುಸಾರ ಪ್ರಷ್ಯಾ ರಾಜ್ಯದ ಲಿಯೊಪಾಲ್ಡ್ ರಾಜಕುಮಾರನು ರಷ್ಯಾಕ್ಕೆ ಹೋಗಿ ಅಲ್ಲಿಂದ ಸೈನಿಕರ ಸಂಗಡ ಮ್ಯಾಂಚೂರಿಯಾ ಯುದ್ಧಭೂಮಿಗೆ ಬಂದು, ರಷ್ಯಾದವರು ಯಾವ ರೀತಿಯಲ್ಲಿ ಯುದ್ಧಕಾರ್ಯಗಳನ್ನು ನಡಸುವರೋ ನೋಡಿ ಕೊಂಡು ಹಿಂದಿರುಗುವವನಾಗಿದ್ದಾನೆ.

❖❖❖❖

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್ ಯವರು ತಮ್ಮ ಕುವರಿಯಾದ ೨೩ ವಯಸ್ಸಿನ ಪ್ರಿನ್ಸ್ ಮಾರ್ಗರೆಟ್ ಯವರನ್ನು ಸ್ವೀಡನ್ ರಾಜ್ಯದ ಯುವರಾಜರಿಗೆ ಕೊಟ್ಟು ವಿವಾಹ ಮಾಡುವವರಾಗಿದ್ದಾರೆ. ಈ ಯುವರಾಜನ ವಯಸ್ಸೂ ೨೩ ವರುಷವೆಂದು ತಿಳಿಯುವುದು.

❖❖❖❖

ಐರ್ಲಿಂಗ್ಟನ್ ಪಟ್ಟಣದಲ್ಲೂ ಸೇಂಟ್ ಪಾನ್‌ಕ್ರಾಸ್ ನಗರದಲ್ಲೂ ಮಿ॥ ಆಂಡ್ರೂ ಕಾರ್ನೆಗಿ ಎಂಬ ಕೋಟ್ಯಾಧೀಶ್ವರನು ಸರಸ್ವತೀ ಭಂಡಾರಗಳನ್ನು ಸ್ಥಾಪಿಸುವುದಕ್ಕೆ ಒಪ್ಪಿ ಆರು ಲಕ್ಷ ರೂಪಾಯಿ ಕೊಟ್ಟಿರುತ್ತಾನೆ. ಆಯಾ ಪಟ್ಟಣದವರು ಬಂಗಲೆಗೆ ಸ್ಥಳವನ್ನು ಮುಫತ್ತಾಗಿ ಕೊಡಬೇಕೆಂತಲೂ, ವಾಚಕರಿಂದ ಒಂದಾಣೆಗಿಂತಲೂ ಹೆಚ್ಚು ದುಡ್ಡು ವಸೂಲ್ಮಾಡಕೂಡದೆಂತಲೂ ವಿಧಿಸಿದ್ದಾನೆ

❖❖❖❖

ಒಬ್ಬ ರಷ್ಯಾ ರಾಕ್ಷಸನು ಲಂಡನ್ ಪಟ್ಟಣಕ್ಕೆ ಹೋಗಿದ್ದಾನೆ. ಇವನು ಬರೀ ಕಾಲಿನಲ್ಲಿ ನಿಂತುಕೊಂಡಾಗ ೯ ಅಡಿ ೪ ಅಂಗುಲ ಎತ್ತರವಾಗಿಯೂ ೪೪೪ ಪೌಂಡ್ ತೂಕವುಳ್ಳವನಾಗಿಯೂ ಇರುವನು. ಇವನ ಎದೆಯು ಒಂದು ಪಕ್ಕದಿಂದ ಇನ್ನೊಂದು ಪಕ್ಕದ ವರೆಗೆ ೩೦ ಅಂಗುಲ ವಿಸ್ತಾರವಾಗಿದೆ. ಎದೆಯ ಸುತ್ತಳತೆ ೬೦ ಅಂಗುಲ. ನಡುವಿನ ಸುತ್ತು ೫೫ ಅಂಗುಲ. ಇವನು ಮೆಡುವ ಜೋಡು ಎರಡು ಅಡಿ ಉದ್ದವಾಗಿದೆ. ಕತ್ತು ೨೭ ಅಂಗುಲ ಸುತ್ತಳತೆ ಇದೆ

❖❖❖❖

ಮೈಸೂರ್ ಚಿನ್ನದ ಗಣಿ ಕಂಪನಿಯ ಅಧ್ಯಕ್ಷರಾದ ಸರ್ ಸಿ. ಬೆನ್ನೆಂಟ್ ಯವರ ಮನೆಯು ವಿಲಾಯತಿಗೆ ಸೇರಿದ ಡೀವನ್ ಷೈರೆಂಬ ಡಿಸ್ಟ್ರಿಕ್ಟಿನಲ್ಲಿದೆ. ಅವರೂ ಅವರ ಪತ್ನಿಯವರೂ ಬೊಂಬಾಯಿಟ್ಸ್ ಎಂಬಲ್ಲಿಗೆ ಹೋಗಿದ್ದಾಗ ಆ ಮನೆಗೆ ಬೆಂಕಿ ಬಿದ್ದು ಉರಿದು ಹೋಯಿತು. ಅವರ ಮಗನೂ ಕೆಲವರು ಸೇವಕರೂ ಆ ಮನೆಯಲ್ಲಿ ವಾಸವಾಗಿದ್ದರು. ಮನೆಯೊಳಗಿದ್ದ ಲಕ್ಷಾಂತರ ರೂಪಾಯಿನ ಸಾಮಾನ್ಯಗಳಲ್ಲದೆ ೧೨,೫೦,೦೦೦ ರೂಪಾಯಿ ಮುಟ್ಟಿ ಕಟ್ಟಿಸಿದ್ದ ಆ ಮನೆ ಸುಟ್ಟು ಹಾಳಾಯಿತು.

❖❖❖❖

ಆಸ್ಟ್ರೇಲಿಯಾ ದ್ವೀಪದ ಕಾಡುಗಳಲ್ಲಿ ಬೆಳೆಯುವ ಮರಗಳು ಬಹಳ ಹಳೆಯವೆಂತಲೂ ಅವುಗಳಲ್ಲಿ ರೈಲ್ ಕಂಬಿಗಳನ್ನು ಹಾಸುವುದಕ್ಕೆ ಸಣ್ಣ ಸಣ್ಣ ಸ್ಲೀಪರ್‌ಗಳೆಂಬ ದಿಮ್ಮಿಗಳನ್ನು ಮಾಡಿದರೆ ಬಹಳ ಗಟ್ಟಿಯಾಗಿರುತ್ತವೆಂತಲೂ ತುಂಬಾ ಬಾಳಿಕೆ ಬರುತ್ತವೆಂತಲೂ ತಿಳಿದು ಬಂದಿದೆ. ಇಂಡಿಯಾ ಗವರ್ನಮೆಂಟಿನವರು ಈ ವಿಷಯವನ್ನು ಖಂಡಿತ ಮಾಡಿಕೊಂಡು ಬರುವುದಕ್ಕೂ ಸರಿಯಾಗಿದ್ದಲ್ಲಿ ದಿಮ್ಮಿಗಳನ್ನು ಮಾಡಿಸಿ ಕಳುಹಿಸುವಂತೆ ಹೇಳಿ ಬರುವುದಕ್ಕೂ ಮಿ॥ ಜೆ. ಆಡಂಸ್ ಯವರನ್ನು ಹಿಂದುಸ್ಥಾನದಿಂದ ಆ ದ್ವೀಪಕ್ಕೆ ಕಳುಹಿಸಿದ್ದಾರೆ.

ಪ್ಲೇಗಿನ ಮೂಲಕ ದೇವರು ಇಂಡಿಯಾ ದೇಶಸ್ಥರಿಗೆ ತಿಳಿಸುವದೇನು?

ನಮ್ಮ ಈ ಇಂಡಿಯಾ ದೇಶದಲ್ಲಿ ಪ್ಲೇಗಿನ ಅವಾಂತ್ರವು ಬಂದು, ಬಹುಕಾಲದಿಂದ ಹಾವಳಿಮಾಡುತ್ತಾ ಇರುವದನ್ನು ನೋಡಿ, ನಮ್ಮ ದೇಶೀಯರು ಇದಕ್ಕೆ ನಮ್ಮ ಪಾಪವೇ ಕಾರಣವೆಂದು ಹೇಳಿ ಮರುಗುವದು ನ್ಯಾಯವಾಗಿದೆಯಷ್ಟೆ. ಈ ಕಾಲದಲ್ಲಿ ನಮ್ಮ ದೇಶೀಯರೊಳಗೆ ಅತ್ಯಂತ ಸಾಧಾರಣವಾಗಿರುವ ಪಾಪಗಳು ಯಾವುವೆಂದು ವಿಚಾರಿಸುವದು ನಮ್ಮ ಪ್ರಕೃತೋದ್ದೇಶವಾಗಿದೆ. ನಮ್ಮ ದೇಶದಲ್ಲಿ ಪ್ರಬಲವಾಗಿರುವ ಪಾಪಗಳನ್ನೆಲ್ಲಾ ವಿವರಿಸುವದರಲ್ಲಿ ಫಲವಿಲ್ಲ. ಆದರೆ ಈಗ ನಮ್ಮ ದೇಶದಲ್ಲಿ ಇರುವ ಪ್ರಬಲವಾದ ಪಾಪವು ಒಂದುಂಟು. ಅದರಿಂದಲೇ ಸಕಲ ಪಾಪಗಳೂ ಬರುವದಕ್ಕಾಸ್ಪದವಾಗಿದೆ. ಅದು ಯಾವದಂದರೆ—ದೇವರು ಕಳುಹಿಸಿಕೊಟ್ಟಿರುವ ಸತ್ಯಮತದ ವಿಷಯದಲ್ಲಿ ಕೇವಲ ಅಲಕ್ಷ್ಯಭಾವವನ್ನು ವಹಿಸುವದೇ.

ದೇವರು ಪ್ರಕಟಿಸಿರುವ ಸತ್ಯದ ವಿಷಯದಲ್ಲಿ ಕೆಲವು ವರ್ಷಗಳ ಹಿಂದೆ ನಮ್ಮ ಈ ದೇಶೀಯರಲ್ಲಿ ಕೇವಲ ಮೌಢ್ಯವು ಇದ್ದಿತು. ಈಗಲಾದರೋ ಭಗವಂತನ ಕೃಪೆಯಿಂದ ಹೆಚ್ಚು ವಿಷಯಗಳು ತಿಳುವಳಿಕೆಗೆ ಬಂದಿವೆ. ಯಾವದು ಸತ್ಯವೆಂತಲೂ, ಯಾವದು ಅಸತ್ಯವೆಂದೂ ಜನರು ಚೆನ್ನಾಗಿ ತಿಳಿಯಬಲ್ಲರು ಈ ವಿಷಯದಲ್ಲಿ ಜನರ ತಪ್ಪೇನೂ ಇಲ್ಲ. ಆದರೆ ಮತದ ವಿಷಯದಲ್ಲಿ ಜನರು ಸಂಪೂರ್ಣವಾಗಿ ಅಲಕ್ಷ್ಯವುಳ್ಳವರಾಗಿದ್ದಾರೆ. ಇಂಥ ಅಲಕ್ಷ್ಯಭಾವವು ನಮ್ಮವರಿಗೆ ಬೇರೆ ವಿಷಯಗಳಲ್ಲಿಲ್ಲ. ಒಳ್ಳೇ ಉದ್ಯೋಗಗಳನ್ನು ಸಂಪಾದಿಸುವದರಲ್ಲಿಯೂ ಹಣವನ್ನು ಗಳಿಸುವದರಲ್ಲಿಯೂ ನಮ್ಮವರು ಎಷ್ಟು ಪ್ರಯಾಸಪಡುತ್ತಾರೆ! ಆದರೆ ದೇವರ ವಿಷಯದಲ್ಲಿ ಮಾತ್ರ ಅವರು ವಹಿಸಿರುವ ಅಲಕ್ಷ್ಯಭಾವವು ಪರಮಾಶ್ಚರ್ಯಕ್ಕೆ ಹೇತುವಾಗಿದೆ. ಇಷ್ಟೇ ಅಲ್ಲ. ಈ ಅಲಕ್ಷ್ಯವು ಭಗವಂತನ ಸನ್ನಿಧಾನದಲ್ಲಿ ಮಹಾ ಪಾಪವಾಗಿದೆಯೆಂದು ಗ್ರಹಿಸಬೇಕಾಗಿದೆ. ಇದೆಷ್ಟು ಘೋರವಾದ ದೋಷವೋ ಗ್ರಹಿಸಿನೋಡಿ.

ಜಗದೀಶನಾದ ದೇವರು ಎಷ್ಟು? ನಾವೆಷ್ಟು! ಹೀಗಿರುವಲ್ಲಿ ಆತನು ತನ್ನ ವಿಷಯವಾಗಿ ನಮಗೆ ತಿಳಿಯಪಡಿಸಿರುವ ವಿಷಯವನ್ನು ಎಷ್ಟು ಘನವಾಗಿ ಕಾಣಬೇಕು! ನಾವಾದರೋ ಅದನ್ನು ಸ್ವಲ್ಪವೂ ಲಕ್ಷ್ಯಮಾಡದೆ ಇರುವದು ಸರಿಯೆ? ಅದುಹಾಗಿರಲಿ ಕೆಲವರು ಅದನ್ನು ತುಚ್ಛೀಕರಿಸುತ್ತಾರೆ. ಇನ್ನು ಕೆಲವರು ಮತವಿಷಯವಾಗಿ ತಿಳಿಸುವದಕ್ಕೆ ಬರುವವರನ್ನು ನಾನಾ ವಿಧವಾಗಿ ಹಿಂಸಿಸುವರು. ಲೋಕಭೋಗಗಳು ಅವರನ್ನು ಸಂಪೂರ್ಣವಾಗಿ ಸೆರೆಹಿಡಿದಿವೆ. ಹಿರಿಯರ ಸಂಪ್ರದಾಯಗಳೆಂಬ ಹಳೇ ರಸ್ತೆಯಲ್ಲಿ ಕಣ್ಣುಮುಚ್ಚಿಕೊಂಡು ನಡೆಯುವ ಗಾಣದೆತ್ತಿನ ಹಾಗೆ ನಡೆಯುತ್ತಾ ಹೊಟ್ಟೆಬಟ್ಟೆಗಳೆಂಬ ಎರಡು ವಿಷಯಗಳ ವಿನಾ ಮಿಕ್ಕ ಯಾವ ವಿಷಯಗಳನ್ನಾಗಲಿ ಮನಸ್ಸಿಗೆ ಹಚ್ಚಿಕೊಳ್ಳದೆ ಕಾಲಕ್ಷೇಪಮಾಡುತ್ತಿರುತ್ತಾರೆ.

"ನರಕಕ್ಕೆ ನವದ್ವಾರ, ನಾಕಕ್ಕೆ ಒಂದೇ ದ್ವಾರ" ಎಂಬ ಗಾದೆಯನ್ನು "ನಾಕಕ್ಕೆ ನವದ್ವಾರ, ನರಕಕ್ಕೆ ಒಂದೇದ್ವಾರ" ವೆಂಬದಾಗಿ ತಿರುಗಿಸಿಕೊಂಡು, ಯಾವ ಮತದ ಮೂಲಕ ಹೋದರೆ ತಾನೇ ಏನು? ಯಾವ ಮಾರ್ಗವಾಗಿ ಹೋದರೂ ಕಡೆಗೆ ದೇವರನ್ನೇ ಸೇರುತ್ತೇನೆ ಎಂದು ಮನಸ್ಸಿಗೆ ಸಮಾಧಾನಮಾಡಿಕೊಳ್ಳುವರು. ಇದೀಗ ಯಾರಿಗಾದರೂ ಬಹು ಸುಲಭವಾದ ಮಾರ್ಗವಲ್ಲವೇ? ಹೀಗೆ ಹೇಳುವದೂ ನಂಬುವದೂ ಬಹು ಸುಲಭವೆಂಬುದರಲ್ಲಿ ಸಂಶಯವೇ ಇಲ್ಲ. ಇದಲ್ಲದೆ ಮತಾಂತರವನ್ನು ಹೊಂದುವದರಿಂದ ಬರುವ ನಿಂದೆಯನ್ನೂ ಅವಮಾನವನ್ನೂ ತಪ್ಪಿಸಿಕೊಳ್ಳುವದಕ್ಕೆ ಇದು ಸುಲಭವಾದ ಮಾರ್ಗ. ಇಷ್ಟೇ ಅಲ್ಲ. ತಾವು ಹಿಡಿದಿರುವ ಮತದಷ್ಟೇ ಇತರರ ಮತವೂ ಸತ್ಯವೆಂದು ಒಪ್ಪಿಕೊಳ್ಳುವದರಿಂದ ಇತರರ ಮೆಚ್ಚಿಕೆಯನ್ನೂ ಸುಲಭವಾಗಿ ಸಂಪಾದಿಸಬಹುದಾಗಿದೆ. ಆದಕಾರಣವೇ ಜನರು ಈ ಪ್ರಕಾರ ಸಕಲ ಮತಗಳನ್ನೂ ಏಕಪ್ರಕಾರವಾಗಿ ಭಾವಿಸುತ್ತೇವೆಂದು ಹೇಳಿಕೊಳ್ಳುತ್ತಾ ಕಡೆಗೆ ಮತವಿಷಯದಲ್ಲಿ ಉಪೇಕ್ಷೆಯನ್ನು ವಹಿಸುವದು ಸರ್ವಸಾಧಾರಣವಾಗಿ ಹೋಗಿದೆ

ಎಲೈ ವಾಚಕರೇ! ಇಲ್ಲಿ ಸ್ವಲ್ಪ ನಿಂತು ಯೋಚನೆಮಾಡಿರಿ. ಈ ಭಾವನೆ ದೇವರಿಗೆ ಮೆಚ್ಚಿಕೆಯಾದದ್ದಾಗಿರುವದೇ? ಸಕಲ ಮತಗಳೂ ಭಗವಂತನಿಗೆ ಒಂದೇಯಾಗಿರಬಹುದೇ? ದೇವರು ಸಕಲ ಲೋಕದ ಒಡೆಯನಾಗಿರಲು ಆತನ ರಾಜ್ಯದಲ್ಲಿ ಒಂದು ಬಗೆಯ ಪ್ರಜೆಗಳಿಗೆ ಒಂದು ವಿಧವಾದ ಕಟ್ಟಳೆಗಳೂ, ಮತ್ತೊಂದು ಬಗೆಯ ಪ್ರಜೆಗಳಿಗೆ ಬೇರೊಂದು ವಿಧವಾದ ಕಟ್ಟಳೆಗಳೂ ಹೀಗೆ ನಾನಾ ಜನಗಳಿಗೆ ನಾನಾ ಬಗೆಯ ಕಟ್ಟಳೆಗಳೂ ಉಂಟೇ? ದೇವರು ಭೂಲೋಕವೆಂಬ ಮನೆತನಕ್ಕೆ ತಂದೆಯಾಗಿರಲು ತನ್ನ ಮನೆಯಲ್ಲಿ ಒಬ್ಬೊಬ್ಬನಿಗೆ ಒಂದೊಂದು ವಿಧವಾದ ನಡತೆಯ ಸೂತ್ರವನ್ನು ಆತನು ನೇಮಿಸುವದುಂಟೇ? ಹೀಗೆಂದಿಗೂ ಯೋಚಿಸುವದಕ್ಕೆ ಆಧಾರವೇ ಇಲ್ಲ. ಒಂದು ವೇಳೆ ಭಗವಂತನು ಪರಿಷ್ಕಾರವಾಗಿ ಅಪ್ಪಣೆಯನ್ನು ಕೊಡದೆ ಹೋಗಿದ್ದರೂ ಸತ್ಯವಾದ ಮತವು ಒಂದೇ ಒಂದಾಗಿರಬೇಕೆಂದು ನಾವು ಗ್ರಹಿಸುವದರಲ್ಲಿ ಕಷ್ಟವೇ ಇಲ್ಲ. ಆದದರಿಂದ ನಮ್ಮ ದೇಶೀಯರು ಸಕಲ ವಿಷಯಗಳಿಗಿಂತಲೂ ಹೆಚ್ಚಾಗಿ ಅವಗಾಹನೆಗೆ ತಂದುಕೊಳ್ಳಬೇಕಾದ ವಿಷಯವು ಯಾವದಂದರೆ—ದೇವರು ಅನುಗ್ರಹಿಸಿರುವ ಆ ಸತ್ಯವಾದ ಮತವು ಯಾವದೆಂದು ಕಂಡುಹಿಡಿಯುವದಕ್ಕೆ ಪ್ರಯಾಸಪಡುವದೇ. ಇದು ಅತಿ ಮುಖ್ಯವಾದ ವಿಷಯವೆಂದು ನಾವು ಸಿದ್ಧಾಂತಪಡಿಸಬೇಕೇ? ಅವಶ್ಯವಿಲ್ಲ. ಈ ವಿಷಯದಲ್ಲಿ ನಮ್ಮ ದೇಶೀಯರು ಅಸಕ್ತರಾಗಿರುವದನ್ನು ಬಿಟ್ಟು ಅಲಕ್ಷ್ಯವುಳ್ಳವರಾಗಿದ್ದರೆ, ಅಥವಾ ವಂಚಕರಾಗಿದ್ದರೆ, ಭಗವಂತನು ಕೋಪಗೊಂಡು ತಪ್ಪಿಹೋಗುವ ತನ್ನ ಈ ಮಕ್ಕಳನ್ನು ತಿದ್ದುವದಕ್ಕಾಗಿ ನಾನಾವಿಧ ರೋಗಾಪತ್ಪ್ರಸಂಗಗಳನ್ನು ಕಳುಹಿಸಿ ದಂಡಿಸುವದು ಸಹಜವಾಗಿಯೇ ಇದೆ.

ಹೀಗಿರುವಲ್ಲಿ ವಿವೇಚನಾಪರರು ತಮ್ಮ ಕಾಲದಲ್ಲಿ ಪುರಾತನವಾಗಿಯೂ ಪ್ರಯೋಜನಕ್ಕೆ ಬಾರದವುಗಳಾಗಿಯೂ ಇರುವ ಹಲವು ಮತಗಳು ನೆರೆಗೊಂಡಿರುವದನ್ನು ನೋಡುವಾಗ ಸುಮ್ಮನೆ ಕುಳಿತುಕೊಂಡು, ಯಾವದು ಹ್ಯಾಗಾದರೂ ಇರಲಿ ಎಂದು ಹೇಳುತ್ತಾ ಅಲಕ್ಷ್ಯವಾಗಿರಲಾದೀತೇ? ಎಷ್ಟುಮಾತ್ರಕ್ಕೂ ಇಲ್ಲ. ವಿವಿಧಗಳಾದ ಇಷ್ಟು ಮತಗಳೂ ಇರಗೊಡುವದು ಜಗದೀಶನ ಚಿತ್ತವಲ್ಲ. ನಾವು ಇದನ್ನು ನೋಡಿಕೊಂಡು ಸುಮ್ಮನಿರಬಾರದು. ಇಷ್ಟು ಮತಗಳೆಲ್ಲವೂ ಸತ್ಯವಾಗಿರಲಾರವು. ಇವುಗಳಲ್ಲಿ ಯಾವದು ಸತ್ಯವಾದದ್ದೋ ಅದನ್ನು ಅನುಸರಿಸುವವರು ಯಾರಾಗಲಿ ನಮ್ಮೆಲ್ಲರ ತಂದೆಯಾದ ದೇವರಿಗೆ ಕೋಪವನ್ನುಂಟುಮಾಡಿ ತಮಗೇ ನಷ್ಟವನ್ನು ವಡಿಕೊಳ್ಳುವವರಾಗಿದ್ದಾರಲ್ಲ! ನಾವು ಕ್ಷಣಮಾತ್ರವಾದರೂ ಇದನ್ನು ನೋಡಿಕೊಂಡು ಸುಮ್ಮನೆ ಇರಲಾದೀತೇ? ಇದನ್ನು ಆಮೂಲಾಗ್ರವಾಗಿ ಪರಿಶೋಧಿಸೋಣ! ಸರಿಯಾದ ಮಾರ್ಗದಲ್ಲಿ ನಡೆಸುವಂತೆ ಭಗವಂತನನ್ನು ಕೇಳಿಕೊಳ್ಳೋಣ! ನಾವೂ ಆಸಕ್ತರಾಗಿರುವದಲ್ಲದೆ ಇತರರನ್ನೂ ಆಸಕ್ತರಾಗುವಂತೆ ಮಾಡೋಣ! ಇಲ್ಲದಿದ್ದರೆ ನಮ್ಮ ಸೃಷ್ಟಿಕರ್ತನಾದ ದಿವ್ಯರಾಜನಿಗೆ ದ್ರೋಹಿಗಳಾದೇವಲ್ಲಾ! ಎಂದು ನಾವು ಹೇಳಬೇಕಾಗಿದೆ.

ಸತ್ಯಮತವನ್ನು ಪರಿಗ್ರಹಿಸುವ ವಿಷಯದಲ್ಲಿ ಸಹಾಯವನ್ನು ಕೊಡುವದಕ್ಕೆ ಈ ದೇಶದಲ್ಲಿ ಬಹು ಕಾಲದಿಂದಲೂ ಕ್ರೈಸ್ತ ಪಾದ್ರಿಗಳೂ ಉಪದೇಶಿಗಳೂ ಸನ್ನದ್ಧರಾಗಿ ಹಲವು ಪರಿಯಿಂದ ಪ್ರಯಾಸಪಡುತ್ತಾ ಬಂದಿರುವದು ನಮ್ಮ ದೇಶೀಯರಿಗೆ ತಿಳಿಯದ ವಿಷಯವಲ್ಲ. ಈ ದೇಶೀಯರು ಕ್ರೈಸ್ತ ಮತಸ್ಥರ ಈ ಪ್ರಯಾಸವನ್ನು ಹ್ಯಾಗೆ ಕಾಣುತ್ತ ಬಂದಿದ್ದಾರೆ? ಅವರನ್ನೂ ಅವರ ಪುಸ್ತಕಗಳನ್ನೂ ಉಪದೇಶಗಳನ್ನೂ ಉಪನ್ಯಾಸಗಳನ್ನೂ ಕೇವಲ ಅಲಕ್ಷ್ಯದಿಂದಲೂ ಕೆಲವು ವೇಳೆ ಕೇವಲ ತುಚ್ಛೀಕಾರದಿಂದಲೂ ಕಾಣುತ್ತಾ ಬಂದಿರುತ್ತಾರಲ್ಲವೇ? ತಾವು ಮಾಡಬೇಕಾದದ್ದೇನೆಂದು ಕೆಲವರು ಚೆನ್ನಾಗಿ ತಿಳಿದಿದ್ದರೂ ಕೂಡ ನೆರೆಹೊರೆಯವರ ನಿಂದೆಗೋ ಅಥವ ದ್ರವ್ಯನಷ್ಟಕ್ಕೋ ಹೆದರಿಕೊಂಡು ಸತ್ಯವನ್ನವಲಂಬಿಸದೆ ಹಿಂದೆಗೆಯುತ್ತಿದ್ದಾರಲ್ಲವೇ?

ವಾಚಕರೇ, ನೀವು ಹಾಗೆ ಮಾಡಬೇಡಿ ನಾವು ನಿಮ್ಮ ಅವಗಾಹನೆಗೆ ತರುವಂಥ ಈ ಮಹಾ ಘನವಾದ ವಿಷಯವನ್ನು ಅಲಕ್ಷ್ಯವಾಗಿ ಕಾಣಬೇಡಿರಿ ಇದನ್ನು ಆಮೂಲಾಗ್ರವಾಗಿ ಶೋಧಿಸಿ ನೋಡಿರಿ ಗೊತ್ತುಸಿಕ್ಕುವವರೆಗೂ ಬಿಡಬೇಡಿರಿ. ನಾವು ಹೇಳುವದನ್ನೆಲ್ಲಾ ನೀವು ಕಣ್ಣುಮುಚ್ಚಿಕೊಂಡು ನಂಬಬೇಕೆಂದು ಹೇಳುವದೂ ಇಲ್ಲ, ಬಲವಂತ ಮಾಡುವದೂ ಇಲ್ಲ ಆದರೂ ಕೂಡ ನೀವು ಕಡೆಗೂ ಉಪೇಕ್ಷೆಯನ್ನು ವಹಿಸಿದರೆ ಭಗವಂತನು ಸುಮ್ಮನಿರಲಾರನು. ಏತಕ್ಕಂದರೆ—"ಮೋಸಹೋಗಬೇಡಿರಿ, ದೇವರು ಪರಿಹಾಸ್ಯಕ್ಕೆ ಗುರಿಯಾಗತಕ್ಕವನಲ್ಲ. ಬಿತ್ತಿದ ಬೀಜಕ್ಕನುಗುಣವಾಗಿಯೇ ಬೆಳೆಯನ್ನು ಕೊಯ್ಯಬೇಕಾಗುತ್ತದೆ" ಎಂದು ಕ್ರೈಸ್ತರ ವೇದವು ಹೇಳುವಂತೆ ಅಲಕ್ಷ್ಯವಂತರಾದವರಿಗೆ ತಕ್ಕ ಫಲವು ಬಂದೇ ಬರುವದು.

[ಸಚೇತ.]

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನ್ ಪಟ್ಟಣದಲ್ಲಿ ಪ್ಲೇಗ್ ಉಪದ್ರ ಒಂದೇ ಅಲ್ಲ, ಸಿಡುಬಿನ ಉಪದ್ರವೂ ತಲೆದೋರಿ ಪ್ರಜೆಗಳನ್ನು ಕಷ್ಟಪಡಿಸುತ್ತಿದೆ.

* * * *

ಪ್ಲೇಗ್ ಉಪದ್ರವು ಪ್ರಾರಂಭವಾದಾರಭ್ಯ ಕಳೆದ ಫೆಬ್ರವರಿ ೧೮ ನೆ ತಾರೀಖಿನ ವರೆಗೆ ಹಿಂದುಸ್ಥಾನದಲ್ಲಿ ೩೩,೫೭,೧೯೯ ಜನರು ಆ ರೋಗದಲ್ಲಿ ಸತ್ತರೆಂದು ಪ್ರಕಟವಾಗಿದೆ.

* * * *

ಅಫ್ಘಾನಿಸ್ಥಾನದ ಅಮೀರರವರು ಹಿಂದುಸ್ಥಾನದಿಂದ ವಾಪಸು ಹೋದ ತಮ್ಮ ಕುಮಾರರಾದ ಸರ್ದಾರ್ ಇನಾಯತ್ ಉಲ್ಲಾಖಾನರವರಿಗೆ ಅಮೀನುಲ್ ದೌಲತ್ (ಎಂದರೆ, ಮತಸಂರಕ್ಷಕ) ಎಂಬ ಬಿರುದನ್ನು ದಯಪಾಲಿಸಿರುತ್ತಾರೆ.

* * * *

ಕಾಶೀ ಮಹಾರಾಜರವರು ಕಳೆದ ವಾರ ಮದರಾಸಿಗೆ ಬಂದಿದ್ದಾಗ ಅಲ್ಲಿನ ಪ್ರಸಿದ್ಧ ಜವಾಹಿರಿ ವ್ಯಾಪಾರಿಗಳಾದ ಮೆ॥ ಟಿ. ರಂಗನಾಥ ಚಾಕರ್‌ಯವರ ಬಂಗಲೆಯಲ್ಲಿ ಇಳುಕೊಂಡಿದ್ದರು ಇವರು ಅವರಿಗಾಗಿ ಬಹು ಶ್ರೇಷ್ಠವಾದ ಔತಣವನ್ನು ಮಾಡಿದರು.

* * * *

ಬ್ಯಾರಲೀ ನಗರದಲ್ಲಿ ಪ್ಲೇಗಿನ ಹಾವಳಿಯು ಸಹಿಸಕೂಡದ್ದಾಗಿದೆ. ಪಟ್ಟಣಕ್ಕೆ ಪಟ್ಟಣವೇ ಹಾಳುಬಿದ್ದಿತು. ಎಲ್ಲರೂ ಹೆದರಿ ಚೆಲ್ಲಾಬಿಲ್ಲಿಯಾಗಿ ಓಡಿಹೋದರು. ನೂರಾರು ಮನೆಗಳವರು ಪ್ಲೇಗ್ ಶಿಬಿರವನ್ನು ಹಾಕಿಸಿಕೊಂಡ, ಊರು ಮನೆ ಮಠಗಳನ್ನು ತ್ಯಜಿಸಿಬಿಟ್ಟರು.

* * * *

ಆಗ್ರಾ ಪಟ್ಟಣದಲ್ಲಿ ಆರ್ಯಸಮಾಜದ ಪ್ರೆಸಿಡೆಂಟರಾದ ಮೆ॥ ರಾಮಪ್ರಸಾದ್ ಎಂಬವರಿಗೆ ಒಂದು ಮೊಕದ್ದಮೆಯಲ್ಲಿ ೫೦೦ ರೂಪಾಯಿ ಜುಲ್ಮಾನೆ ಆಯಿತೆಂದು ಕಳೆದ ವಾರ ತಿಳಿಸಿದೆವಷ್ಟೆ ಇದು ನಿಜವಲ್ಲವೆಂದು ಈಚೆಗೆ ಒಬ್ಬ ಬಾತ್ಮೀದಾರರಿಂದ ತಿಳಿದುಬಂದಿದೆ.

ಬೊಂಬಾಯಿ ಪಟ್ಟಣದಲ್ಲಿರುವ ಇಲಿ ಹೆಗ್ಗಣಗಳನ್ನೆಲ್ಲಾ ಸಂಪೂರ್ಣವಾಗಿ ಕೊಂದುಬಿಟ್ಟ ಪಕ್ಷದಲ್ಲಿ ಪ್ಲೇಗಿನ ಕಾಟ ತಪ್ಪುವದೆಂತಲೂ, ಆ ಪಟ್ಟಣದಲ್ಲಿ ಒಂಬತ್ತು ಕೋಟಿ ಹೆಗ್ಗಣಗಳನ್ನು ಕೊಲ್ಲುವದಕ್ಕೆ ೧,೫೫,೦೦೦ ರೂಪಾಯಿ ಖರ್ಚಾಗುವುದೆಂತಲೂ ಅಲ್ಲಿನ ಹೆಲ್ತ್ ಆಫೀಸರಾದ ಡಾಕ್ಟರ್ ಟರ್ನರ್ ಯವರು ತಿಳಿಸುತ್ತಾರೆ.

* * * *

ಸಿಲೋನ್ ದ್ವೀಪದ ಸಮುದ್ರ ತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆಯುವಂತೆ ಸರ್ಕಾರದವರು ಕಂಟ್ರಾಕ್ಟ ಕೊಟ್ಟರು. ಕಂಟ್ರಾಕ್ಟರುಗಳು ಮೂರು ದಿನ ಮುತ್ತಿನ ಚಿಪ್ಪುಗಳನ್ನು ಸಮುದ್ರದಿಂದ ತೆಗೆದಿರುತ್ತಾರೆ. ಅವರು ಇದುವರೆಗೆ ೨,೬೬,೩೪೦ ರೂಪಾಯಿನ ಮುತ್ತಿನ ಚಿಪ್ಪು ತೆಗೆದಿದ್ದಾರೆಂದು ಪ್ರಕಟವಾಗಿದೆ.

* * * *

ಮದ್ರಾಸು ಪಟ್ಟಣದ ಮ್ಯುನಿಸಿಪಾಲಿಟಿಯವರು ಪಾಠಶಾಲೆಗಳಿರುವ ಕಟ್ಟಡಗಳಿಗೆ ಮ್ಯುನಿಸಿಪಲ್ ತೆರಿಗೆಯನ್ನು ವಜಾ ಮಾಡಿದ್ದಾರೆ. ಇದನ್ನು ನೋಡಿ ಅಲ್ಲಿನ ಪ್ರಜೆಗಳು ಕಂದಾಯವನ್ನು ಕೊಡದೆ ತಪ್ಪಿಸಿಕೊಳ್ಳಬೇಕೆಂದು ಮಠಗಳನ್ನು ಇಟ್ಟುಕೊಳ್ಳುವರು. ಈಗ ಪ್ರತಿ ಬೀದಿಯಲ್ಲೂ ೨—೩ ಮಠಗಳಿವೆ ಎಂದು ತಿಳಿದುಬಂದಿದೆ

* * * *

ಕಲ್ಕತ್ತೆಯ ಹತ್ತಿರ ಸೀಲ್ದಾ ಪೋಲೀಸ್ ಸ್ಟೇಷನಿನಲ್ಲಿ ಕೆಲವು ಮಹಮದೀಯರು ತಮ್ಮ ವಾಜ್ಯಬಲವನ್ನು ಬರೆಸಿ ಬರುತ್ತಿರುವಾಗ ಎದುರು ಪಕ್ಷದವರು ಅವರನ್ನು ಸಂಧಿಸಿ ಅವರನ್ನು ಹೊಡೆದು ಜಗಳ ಮಾಡಿದರು. ಎರಡು ಕಡೆಗಳಲ್ಲೂ ಕೆಲವರಿಗೆ ಪೂರಾ ಪೆಟ್ಟು ಬಿದ್ದಿದೆ ಪೋಲೀಸಿನವರು ಮುಖಂಡರನ್ನೆಲ್ಲಾ ಹಿಡಿದು ಲಾಕಪ್ಪಿನಲ್ಲಿ ಹಾಕಿದ್ದಾರೆ

* * * *

ಅಸ್ಸಾಮಿಗೆ ಸೇರಿದ ನಾಗಾಬೆಟ್ಟ ಪ್ರಾಂತ್ಯದಲ್ಲೂ ಬರ್ಮಾ ಅಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದ ಕೆಲವು ಭಾಗಗಳಲ್ಲೂ ಕಳೆದ ವಾರ ಭೂಕಂಪವಾಯಿತು. ಸಾಯಂಕಾಲ ೬ ಗಂಟೆ ಸುಮಾರಿನಲ್ಲಿ ಮೂರು ನಿಮಿಷದಿಂದ ಹನ್ನೆರಡು ನಿಮಿಷಗಳ ತನಕ ಭೂಮಿಯು ಸ್ವಲ್ಪ ತೀಕ್ಷ್ಣವಾಗಿಯೇ ನಡುಗುತ್ತಿತ್ತು. ಆದರೆ ದೇವರ ದಯದಿಂದ ಪ್ರಾಣನಷ್ಟವಾಗಲಿ ಇನ್ಯಾವ ನಷ್ಟವಾಗಲಿ ಸಂಭವಿಸಲಿಲ್ಲ

* * * *

ಹೈದರಾಬಾದಿಗೆ ಸೇರಿದ ಚಪಗಘಾಟಿನಲ್ಲಿ ಹಿಂದುಗಳು ಮಹಮದಿಯರು ಕ್ರೈಸ್ತರು ಎಲ್ಲಾ ದೊಡ್ಡ ಮನುಷ್ಯರೇ ಚಂದಾ ಹಾಕಿ ಭಾರೀ ಔತಣ ಮಾಡಿ ಭೋಜನಾನಂತರ ಜಪಾನವರು ಪೋರ್ಟ್ ಆರ್ಥರ್ ಕೋಟೆಯನ್ನು ಗೆದ್ದುಕೊಂಡದ್ದಕ್ಕಾಗಿಯೇ ಈ ಸಂತೋಷವನ್ನು ನಡಿಸಿದೆವೆಂದು ಉಪನ್ಯಾಸಗಳನ್ನು ಮಾಡಿದರು ಅದೇ ಅರ್ಥಕ್ಕೆ ಜಪಾನ್ ಚಕ್ರವರ್ತಿಯವರಿಗೆ ಒಂದು ತಂತೀವರ್ತಮಾನವನ್ನು ಕೊಟ್ಟು ತಮ್ಮ ಸಂತೋಷವನ್ನು ತಿಳಿಸಿದರು.

* * * *

ಲಂಕಾ (ಸಿಲೋನ್) ದ್ವೀಪದ ಕಾಡುಗಳಲ್ಲಿ ನಾಗ ಜಂಕೆ ಮೊದಲಾದ ಸಾಧು ಪ್ರಾಣಿಗಳನ್ನು ಮೂರರೆಂಬ ಕಾಡು ಜನರು ಬಹಳವಾಗಿ ಕೊಂದು, ಅವುಗಳ ಕೊಂಬು ಕೋರೆಗಳನ್ನು ವಿಲಾಯಿತಿ ಮೊದಲಾದ ಪಶ್ಚಿಮರಾಜ್ಯಗಳಿಗೆ ರಫ್ತು ಮಾಡಿ ಬೆಳರಿ ಮಾಡುತ್ತಿದ್ದಾರೆಂದೂ, ಈ ಪ್ರಾಣಿಹಿಂಸೆಯನ್ನು ತಪ್ಪಿಸಬೇಕೆಂದೂ ಅಲ್ಲಿನ ಕೆಲವು ದೊಡ್ಡ ಮನುಷ್ಯರು ಗವರ್ನರವರಿಗೆ ಅರ್ಜಿ ಬರೆದುಕೊಂಡಿದ್ದಾರೆ. ಇವರ ಪ್ರಯತ್ನವು ಫಲಕಾರಿಯಾಗಲೆಂದು ಪ್ರಾರ್ಥಿಸುತ್ತೇವೆ.

* * * *

ಮರ್ಮಗೋವೆಯಿಂದ ವಿಲಾಯಿತಿಗೆ ಹಡಗುಗಳೂ ಪಡವುಗಳೂ ನೆಟ್ಟಗೆ ಹೋಗಿ ಬರುವಂತೆ ಇಷ್ಟರಲ್ಲೇ ಏರ್ಪಾಡಾಗುವದು. ಇದಕ್ಕಾಗಿ ಆಗಲೇ ಒಂದು ಕಂಪನಿ ಸ್ಥಾಪನೆಯಾಗಿದೆ. ತಿಂಗಳಿಗೊಂದು ಸಲ ತಪ್ಪದೆ ಪಡವು ಹೋಗಿ ಬರಬೇಕೆಂತಲೂ, ಸಾಮಾನಿನ ಭಾಡಿಗೆ ಬೊಂಬಾಯಿನಿಂದ ಹೋಗತಕ್ಕ ಸಾಮಾನಿನ ಭಾಡಿಗೆಯಷ್ಟೆ ಇರಬೇಕೆಂತಲೂ. ಪ್ರಯಾಣಿಕರಿಗೆ ಮಾತ್ರ ಬಹಳ ಕಡಿಮೆ ದರದ ಭಾಡಿಗೆ ಗೊತ್ತು ಮಾಡಬೇಕೆಂತಲೂ ಏರ್ಪಾಡು ಮಾಡಿಕೊಂಡಿದ್ದಾರೆ.

* * * *

ರಂಗೂನ್ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಪ್ರಾರಂಭಿಸಿತು. ಸರ್ಕಾರದವರು ರೋಗಿಗಳನ್ನೂ ಅವರ ಸಂಪರ್ಕದಲ್ಲಿರುವವರನ್ನೂ ಪ್ರತ್ಯೇಕಿಸಬೇಕೆಂದು ಮಾಡಿದ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜನವಾದದ್ದರಿಂದ ರೋಗಿಗಳನ್ನು ಪ್ರಜೆಗಳು ತಮ್ಮ ಮನೆಗಳಲ್ಲೇ ಇಟ್ಟುಕೊಂಡು ಉಪಚರಿಸಬಹುದೆಂತಲೂ, ಇಷ್ಟವಿದ್ದವರು ರೋಗಿಗಳನ್ನು ಸರ್ಕಾರಿ ಆಸ್ಪತ್ರೆಗೆ ಕಳುಹಿಸಬಹುದೆಂತಲೂ ರಿಯಾಯಿತಿ ತೋರಿಸಿರುತ್ತಾರೆ. ಇದರಿಂದ ಜನರ ಗಾಬರಿಯೂ ಕಳವಳವೂ ಕಡಿಮೆಯಾಗಿವೆ.

* * * *

ವಿಧವೆಯರಿಗೆ ಪುನರ್ವಿವಾಹ ಮಾಡಬೇಕೆಂಬುವರಲ್ಲಿ ಸಂಸ್ಥಾನದ ರಾಜರು ಮುಂಬಾ ಕುತೂಹಲವುಳ್ಳವರಾಗಿದ್ದಾರೆ. ಈ ಉದ್ದೇಶದಿಂದ ಕೆಲವು ದೊಡ್ಡ ಮನುಷ್ಯರನ್ನು ಪಂಜಾಬ್ ಅಧಿಪತ್ಯದ ಮುಖ್ಯಮುಖ್ಯ ನಗರಗಳಿಗೆಲ್ಲಾ ಹೋಗಿ ಅಲ್ಲಲ್ಲಿರುವ ಜನಗಳ ಅಭಿಪ್ರಾಯವನ್ನು ತಿಳಿದು ಬರಬೇಕೆಂದು ಗೊತ್ತುಮಾಡಿ ಕಳುಹಿಸಿರುವರು. ಇವರು ಆಗಲೇ ಲಾಹೋರ್, ಅಮೃತಸರ ಮೊದಲಾದ ಪಟ್ಟಣಗಳಿಗೆ ಹೋಗಿದ್ದರು ಸಭಾ ಸಂಸ್ಥಾನದಲ್ಲಿ ೩.೫ ಹಿಂದು ಜನರೆಲ್ಲಾ ತಮ್ಮ ರಾಜರ ಅಭಿಮತದಷ್ಟೇ ಪ್ರೋತ್ಸಾಹಿಸುತ್ತಿದ್ದಾರೆ.

ಸಂಬಾಲ್‌ಪೂರ್ ಎಂಬುವ ಡಿಸ್ಟ್ರಿಕ್ಟಿನಲ್ಲಿ ಈಗ ಸುಮಾರು ಮೂರು ನಾಲ್ಕು ದಿವಸಗಳಿಂದ ವಿಪರೀತವಾದ ಘೋರ ಮಳೆ ಇದೆ ಮತ್ತು ಅದೇ ಸೆಂಟ್ರಲ್ ಪ್ರಾವಿನ್ಸಸ್‌ಗೆ ಸೇರಿದ ಜಬ್ಬಲ್‌ಪೂರ್ ಸಾಂಗ್‌ಪೂರ್ ಎಂಬುವ ಡಿಸ್ಟ್ರಿಕ್ಟುಗಳಲ್ಲಿ ತುಸಾರ ಎಂಬುವ ಹಿಮ ಘಂಡಿಫಾಳಿಯಿಂದ ತೊಗರಿ ಗೋಧಿ ಕಡ್ಲೆ ಬೆಳೆ ಯಾವತ್ತೂ ಒಣಗಿ ಹೋಯಿತು. ಮತ್ತೆ ಈ ದೇಶಕ್ಕೆ ಕ್ಷಾಮ ಬರುವ ಹಾಗೆ ಕಾಣುತ್ತೆ ಎಂದು ಒಬ್ಬ ಚಂದಾದಾರರು ಬರೆಯುತ್ತಾರೆ.

* * * * *

ರಂಗೂನ್ ಪಟ್ಟಣದಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ತಂದು ಒದಗಿಸಿರುತ್ತಾರೆ. ಆ ಕೆರೆಯು ಏಳು ಮೈಲಿ ಉದ್ದ ಮೂರು ಮೈಲಿಯು ತನಕ ಅಗಲವೂ ಉಳ್ಳದ್ದಾಗಿದೆ. ಅದು ಆ ಪಟ್ಟಣದ ೩ ಲಕ್ಷ ಪ್ರಜೆಗಳಿಗೆ ಸಾಕಾಗುವಷ್ಟು ನೀರನ್ನು ತಂದುಕೊಡುವುದು. ಈ ಕೆರೆಯ ಕಾಮಗಾರಿಗೆ ಇದುವರೆಗೆ ರೂಪಾಯಿ ೪೪,೭೯,೬೦೦ ಖರ್ಚಾಗಿದೆ. ಕಾಮಗಾರಿಯೆಲ್ಲಾ ಪೂರೈಸಿದ್ದರಿಂದ ಕಳೆದ ವಾರ ಲೆಫ್ಟಿನೆಂಟ್ ಗವರ್ನರವರು ಅದನ್ನು ಪ್ರತಿಷ್ಠೆ ಮಾಡಿ, ಪ್ರಜೆಗಳು ಅದರಿಂದಲೇ ನೀರು ಉಪಯೋಗಿಸಿಕೊಳ್ಳುವುದನ್ನು ಪ್ರಾರಂಭಮಾಡಿದರು.

* * * * *

ಕೊಚ್ಚಿ ಸಂಸ್ಥಾನದ ಒಬ್ಬ ವರ್ತಕನು ತರಿಸಿದ ೮೭ ಪೆಟ್ಟಿಗೆ ಅಫೀಮನ್ನು ಮದರಾಸ್ ಸರ್ಕಾರದವರು ತಡೆದು ಕಿತ್ತುಕೊಂಡುಬಿಟ್ಟರೆಂದು ಅವನು ಮದರಾಸ್ ಹೈಕೋರ್ಟಿನಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮೇಲೆ ೭೫,೦೦೦ ರೂಪಾಯಿ ನಷ್ಟದ ದಾವಾ ತಂದನು. ಸರ್ಕಾರದವರು ಅವನಿಗೆ ಮೊದಲೇ ೫೦,೦೦೦ ರೂಪಾಯಿ ಕೊಡುವುದಾಗಿ ತಿಳಿಸಿದರೂ ಅವನು ಅದಕ್ಕೊಪ್ಪದೆ ಹೋದನು. ಈಗ ಹೈಕೋರ್ಟಿನವರು ಮೊಕದ್ದಮೆಯನ್ನು ವಾದಿಯಂತೆ ಫೈಸಲ್ ಕೊಟ್ಟು, ಸರ್ಕಾರದವರು ಅವನಿಗೆ ೧೩,೯೭೭ ರೂಪಾಯಿ ಪ್ರತಿಫಲ ಕೊಡಬೇಕೆಂದು ತೀರ್ಮಾನ ಹೇಳಿದರು.

* * * * *

ಉತ್ತರ ದೇಶದ ಒಂದು ಪತ್ರಿಕೆಯು ಹೇಳುವುದೇನೆಂದರೆ— ಭಿಕ್ಷೆಯಿಂದ ಜೀವನ ಮಾಡತಕ್ಕವರ ಸಂಖ್ಯೆಯು ಹಿಂದುಸ್ಥಾನದಲ್ಲಿ ದಿನೇ ದಿನೇ ಹೆಚ್ಚಾಗುತ್ತಾ ಬಂದಿದೆ. ಬೀದಿಗಳಲ್ಲೂ ಸಂದುಗೊಂದುಗಳಲ್ಲೂ ಈ ಬಿಕ್ಷುಕರ ಕಾಟವನ್ನು ಪ್ರಜೆಗಳು ತಡೆಯಲಾರರು. ಕಾಲಾದರೋ ಆಹಾರ ದಿನಸಿಗಳ ಧಾರಣೆಯು ದಿನೇ ದಿನೇ ಹೆಚ್ಚುತ್ತಿದೆ. ಬಡಬಗ್ಗರು ತಮ್ಮ ಸಂಸಾರವನ್ನು ನಡೆಸಿಕೊಂಡು ಹೋಗುವುದೇ ಕಷ್ಟವಾಗಿದೆ, ಇಂಥಾದ್ದರಲ್ಲಿ ಈ ಭಿಕ್ಷುಗಾರರ ಹಿಂಸೆಯೂ ಹೆಚ್ಚಾದರೆ ಅವರಿಗೆ ತುಂಬಾ ಸಂಕಟವಾದೀತು. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರೂ ಮಹನೀಯರೂ ಪ್ರಯತ್ನಪಡಬೇಕಾದ್ದಾಗಿದೆ ಎಂಬುದೇ.

* * * * *

ರಾಜಶಾಹಿ ಡಿಸ್ಟ್ರಿಕ್ಟಿಗೆ ಸೇರಿದ ಬಾಲಿಹರದಲ್ಲಿರುವ ಕುಮಾರ ಶರತ್ ನಿಧಿರಾಯ ಎಂಬಾತನು ರಾಜಶಾಹಿ ಕಾಲೇಜಿಗೆ ಒಂದು ಹಾಸ್ಟೆಲ್ ಕೊಠಡಿಯನ್ನು ಕಟ್ಟಿಸಿಕೊಡುತ್ತೇನೆಂತಲೂ ಅದಕ್ಕೆ ತನ್ನ ತಂದೆಯಾದ ರಾಜಕೃಷ್ಣೇಂದ್ರ ರಾಯಬಹದೂರ್ ಎಂಬಾತನ ಹೆಸರನ್ನು ಇಡುತ್ತೇನೆಂತಲೂ, ಇದಕ್ಕೋಸ್ಕರ ಸರ್ಕಾರದವರು ಸಹ ೬,೦೦೦ ರೂಪಾಯಿ ಚಂದಾ ಕೊಡುವುದಾದರೆ ತಾನೂ ೬,೦೦೦ ರೂಪಾಯಿ ಕೊಡುತ್ತೇನೆಂತಲೂ ತಿಳಿಸಿದನು. ಲೆಫ್ಟಿನೆಂಟ್ ಗವರ್ನರವರು ಆತನ ಧರ್ಮಬುದ್ಧಿಯನ್ನು ಪ್ರೋತ್ಸಾಹ ಪಡಿಸುವುದಕ್ಕಾಗಿ ಗವರ್ನಮೆಂಟಿನಿಂದ ಅಷ್ಟು ಹಣವನ್ನು ಕೊಡುವುದಾಗಿ ತಿಳಿಸಿ ಆತನಿಂದ ಹಣವನ್ನು ಬರಮಾಡಿಕೊಂಡರು.

* * * * *

ಮದರಾಸ್ ಆಧಿಪತ್ಯಕ್ಕೆ ಸೇರಿದ ಕೆಲವು ಹಿಂದು ದೊಡ್ಡಮನುಷ್ಯರು ಫಂಡನ್ನು ಪ್ರಾರಂಭಿಸಿ ಚಂದಾ ಎತ್ತುತ್ತಿದ್ದಾರೆ. ಅದಕ್ಕೆ ಹಿಂದೂ ವಿದ್ಯಾಪ್ರೋತ್ಸಾಹಕ ಫಂಡು ಎಂಬ ಹೆಸರು. ವರುಷಕ್ಕೆ ೫೦ ರೂಪಾಯಿನಂತೆ ಚಂದಾ ಕೊಡತಕ್ಕವರು ಈ ಫಂಡಿನ ಮೆಂಬರುಗಳಾಗುತ್ತಾರೆ. ಈ ಫಂಡಿನಿಂದ ಹಿಂದೂ ಬಾಲಕರಿಗೆ ವೇತನಗಳನ್ನು ಕೊಟ್ಟು, ವಿಲಾಯಿತಿ ಅಮೇರಿಕ ಜರ್ಮನಿ ಮೊದಲಾದ ರಾಜ್ಯಗಳಿಗೆ ಕಳುಹಿಸಿ, ಅಲ್ಲಿ ಕೈಗಾರಿಕೆ ವಿದ್ಯೆಯನ್ನು ಕಲಿತು ಬರುವಂತೆ ಸಹಾಯ ಮಾಡುತ್ತಾರೆ. ಇಂಥಾ ಫಂಡಿಗೆ ೯೦೦ ರೂಪಾಯಿ ಚಂದಾ ಕೊಡಲು ೪೫ ಮಂದಿ ದೊಡ್ಡ ಮನುಷ್ಯರು ಒಪ್ಪಿಕೊಂಡಿರುವರು. ಇನ್ನೂ ಹೊಸ ಮೆಂಬರುಗಳು ಸೇರುವಹಾಗಿದೆ.

* * * * *

ಮಿ॥ ಶ್ಯಾಮಜಿ ಕೃಷ್ಣವರ್ಮನೆಂಬೊಬ್ಬ ಹಿಂದುವು ವಿಲಾಯಿತಿಗೆ ಹೋಗಿ ವಿದ್ಯಾಭ್ಯಾಸ ಮಾಡಿ ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾನೆ. ಈತನು ಹಿಂದುಸ್ಥಾನದ ಯೌವನಸ್ಥರಿಗೆ ವೇತನಗಳನ್ನು ಕೊಟ್ಟು ವಿಲಾಯಿತಿಗೆ ಕಳುಹಿಸುತ್ತೇನೆಂತಲೂ, ಅವರು ಅಲ್ಲಿ ಕೈಗಾರಿಕೆಯನ್ನು ಕಲಿತು ಬಂದು ಸರ್ಕಾರಿ ನೌಕರಿ ಸೇರಿಕೊಳ್ಳದೆ ಸ್ವತಂತ್ರವಾಗಿ ಕೈಗಾರಿಕೆ ನಡಿಸಿ ಜೀವನ ಮಾಡಬೇಕೆಂತಲೂ ಇದಕ್ಕೆ ಇಷ್ಟಪಡುವವರು ತನಗೆ ಅರ್ಜಿ ಬರೆದುಕೊಳ್ಳಬೇಕೆಂದೂ ಪ್ರಕಟಿಸಿದನು. ಆತನು ಈ ಖರ್ಚನ್ನೆಲ್ಲಾ ತನ್ನ ಸ್ವಂತ ಆಸ್ತಿಯಿಂದಲೇ ಕೊಡುವವನಾಗಿದ್ದಾನೆ. ಇದುವರೆಗೆ ೫೦ ಜನ ಹಿಂದು ಯೌವನಸ್ಥರು ಒಪ್ಪಿ ಆತನಿಗೆ ಅರ್ಜಿ ಬರೆದುಕೊಂಡಿದ್ದಾರೆ.

* * * * *

ಇಂಗ್ಲಿಷ್ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಯಾವ ಯಾವ ತಾರೀಖಿನಲ್ಲಿ ಯಾವ ಯಾವ ಪಟ್ಟಣಕ್ಕೆ ಬರುವರೋ ಇನ್ನೂ ನಿಶ್ಚಯ ಆಗಿಲ್ಲ. ಆದರೂ ಅವರು ದೆಹಲಿ ಪಟ್ಟಣದಲ್ಲಿ ಬಂದು ದರ್ಬಾರ್ ಮಾಡಿ, ಅಲ್ಲಿಗೆ ಪಂಜಾಬ್ ರಾಜರುಗಳನ್ನೂ ನವಾಬರುಗಳನ್ನೂ ದೊಡ್ಡ ಮನುಷ್ಯರನ್ನೂ ಕರೆಸಿಕೊಂಡು, ಅವರಿಗೆ ಭೇಟಿಕೊಡುತ್ತಾರೆಂತಲೂ, ವರುಷಾಂತ್ಯದಲ್ಲಿ ಅಂದರೆ ಕ್ರಿಸ್‌ಮಸ್ ಹಬ್ಬದ ಸಮಯಕ್ಕೆ ಅವರು ಕಲ್ಕತ್ತಾ ಪಟ್ಟಣದಲ್ಲಿದ್ದುಕೊಂಡು, ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆ ಕಟ್ಟುವುದಕ್ಕೆ ಅಸ್ತಿಭಾರ ಹಾಕುವರೆಂದೂ ಹೇಳಬಹುದಾಗಿದೆ. ಇವರು ಕಾಶ್ಮೀರ, ಮೈಸೂರು, ಹೈದರಾಬಾದ್, ಈ ಸಂಸ್ಥಾನಗಳಿಗೆ ದಯಮಾಡುತ್ತಾರೆಂಬುದು ಸರ್ಕಾರಿಯಾಗಿ ಈಚೆಗೆ ಪ್ರಕಟವಾಗಿದೆ.

* * * * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಒಬ್ಬನೊಬ್ಬ ಸಬ್ ಡಿಪ್ಟಿ ಕಲೆಕ್ಟರು ತನ್ನ ಮೇಲ್ಪಟ್ಟ ಅಧಿಕಾರಿಗೆ ತಿಳಿಸದೇನೇ ಟಿಕೆಟ್ ಕೊಂಡುಕೊಳ್ಳದೆ ರೈಲು ಹತ್ತಿ ಎಲ್ಲಿಗೋ ಹೋಗಿ ಬಂದನು. ಇದಕ್ಕಾಗಿ ಅಧಿಕಾರಿಯು ಅವನನ್ನು ಸಸ್ಪೆಂಡ್ ಮಾಡಿ, ಕೆಲಸದಿಂದ ತೆಗೆದೇ ಹಾಕಬೇಕೆಂದು ಗವರ್ನರವರಿಗೆ ಬರೆದನು. ಅದರ ಮೇಲೆ ಲೆಫ್ಟಿನೆಂಟ್ ಗವರ್ನರವರು ಆ ಮನುಷ್ಯನನ್ನು ಕರೆಸಿ ಮೊಕ್ತಾ ಕೇಳಿದರು. ಆತನು ತಾನು ತಪ್ಪುಮಾಡಿದ್ದೇನೆಂದು ಒಪ್ಪಿಕೊಂಡು ಕ್ಷಮಿಸಬೇಕೆಂದು ಬಹಳ ಆರ್ತನಾಗಿ ಕೇಳಿಕೊಂಡನು. ಗವರ್ನರ ಮನಸ್ಸು ಕರಗಿ ಅವನಿಗೆ ಯಥಾಪ್ರಕಾರ ಕೆಲಸ ಕೊಡುವಂತೆ ಹುಕುಂ ಕಳುಹಿಸಿದರು. ಈ ವರ್ತಮಾನವನ್ನು ಕೇಳಿ ಸಕಲರೂ ಲೆಫ್ಟಿನೆಂಟ್ ಗವರ್ನರವರ ದಯಾಪೂರಿತವಾದ ಮನಸ್ಸನ್ನು ಕುರಿತು ಕೊಂಡಾಡುತ್ತಿದ್ದಾರೆ.

* * * * *

ಈಚೆಗೆ ಸೂರ್ಯ ಬಿಂಬದಲ್ಲಿ ಅಗಾಧವಾದ ಕಪ್ಪು ಚುಕ್ಕೆಯು ಕಾಣಿಸಲಾರಂಭವಾಗಿದೆ. ಇದಕ್ಕೆ ಕಾರಣವೇನಾಗಿರಬಹುದೆಂದು ಪ್ರಪಂಚದ ಅನೇಕ ಜ್ಯೋತಿಷ ಶಾಸ್ತ್ರಜ್ಞರು ಪರಿಶೋಧನೆ ಮಾಡುತ್ತಿದ್ದಾರೆ. ಈ ಚುಕ್ಕೆಯು ಅನೇಕ ಸಹಸ್ರ ಚದರ ಮೈಲಿಗಳ ವಿಸ್ತಾರವುಳ್ಳದ್ದಾಗಿರುವದು. ಕೆಲವರು ಇದರಿಂದ ಪ್ರಪಂಚದಲ್ಲಿ ದುರ್ಭಿಕ್ಷಕಾಲ ಪ್ರಾಪ್ತವಾಗುವದೆಂದು ಹೇಳುತ್ತಿದ್ದಾರೆ. ಬಿಸಲಿನ ತಾಪವು ಈಗಲೇ ತಡೆಯುವುದಕ್ಕಾಗದೆ ಇದೆ. ಆ ಕಪ್ಪು ಚುಕ್ಕೆಯೂ ಇಲ್ಲದೆ ಸೂರ್ಯಬಿಂಬದಿಂದ ಸಂಪೂರ್ಣವಾದ ಶಕೆ ಪ್ರಪಂಚಕ್ಕೆ ತಗಿದು ಬರುತ್ತಿದ್ದ ಪಕ್ಷದಲ್ಲಿ ಆ ಬಿಂಬಕ್ಕೆ ಸಮಭೂಗದಲ್ಲಿರುವ ಉಷ್ಣವಲಯ ರಾಜ್ಯಗಳಲ್ಲಿ ಧಗೆಯ ಹಾಹಾಕಾರವು ಸಹಿಸಲಶಕ್ಯವಾಗುತ್ತಿತ್ತು. ಸ್ವಾಗಲ ಮುಂದಿನ ವರುಷದಲ್ಲಿ ಅಪೂರವಾದ ಮಳೆಗಳು ಬರುವವೆಂದು ಅನೇಕರು ಹೇಳುತ್ತಾ ಬಂದಿದಾರೆ. ಮುಂದೆ ನೋಡಬೇಕು.

* * * * *

ತಿರುವಾಂಕೂರಿನಲ್ಲಿ ತಿಯ್ಯರಿಗೂ ನಾಯರರಿಗೂ ಕಲಹಗಳಾಗಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ದಾಖಲಾಗಿದೆ ಎಂದು ಕಳೆದ ವಾರ ತಿಳಿಸಿದೆವಷ್ಟೆ. ಕ್ವಿಲಾನ್ ಪಟ್ಟಣದ ಮ್ಯಾಜಿಸ್ಟ್ರೇಟರು ಕಳೆದ ವಾರ ಈ ಮೊಕದ್ದಮೆಯನ್ನು ಸ್ವಲ್ಪ ದೂರ ವಿಚಾರಣೆ ಮಾಡಿ, ಇನ್ನೊಂದು ದಿನ ಬರಬೇಕೆಂದು ಗೊತ್ತು ಮಾಡಿದರು. ಉಭಯ ಪಕ್ಷಗಳೂ ಕೋರ್ಟಿನಿಂದ ಹೊರಕ್ಕೆ ಹೋದರು. ಸ್ವಲ್ಪ ದೂರದಲ್ಲಿ ನಾಯರರು ಆ ಸ್ಥಳಕ್ಕೆ ದೊಣ್ಣೆ ಚೂರಿ ಮುಂತಾದ್ದನ್ನು ಹಿಡಿದುಕೊಂಡು ಬಂದು, ತಿಯ್ಯರನ್ನು ಹಿಡಿದು ಹೊಡೆದರು. ಮಾರಾಮಾರಿ ನಡೆಯಿತು, ಎರಡು ಕಡೆಯಲ್ಲೂ ಕೆಲಕೆಲವರಿಗೆ ಗಾಯಗಳೂ ಆದವು. ಘೋರ ಗಾಯಗಳಾದವರನ್ನು ಆಸ್ಪತ್ರೆಗೆ ಸಾಗಿಸಿದರು. ಒಳನಾಡು ಗ್ರಾಮಗಳಲ್ಲೂ ಈ ದ್ವೇಷ ಹೆಚ್ಚಿ ಪ್ರಜಾನೆಮ್ಮದಿಗೆ ಭಂಗ ಉಂಟಾಗಿದೆ. ಕ್ವಿಲಾನ್ ತಾಲ್ಲೂಕಿಗೆ ಸೇರಿದ ಕಿಳಿಕೊಳ್ಳೂರಿನಲ್ಲಿ ಆ ಎರಡು ಗುಂಪಿನವರಿಗೂ ಕದನಗಳಾದವು. ಪ್ರಜೆಗಳು ತಲ್ಲಣಿಸುತ್ತಿದ್ದಾರೆ.

* * * * *

ನೇಪಾಳ ಸಂಸ್ಥಾನದ ಮಂತ್ರಿ ಶ್ರೇಷ್ಠರಾದ ಘನವನ್ನೈದಿದ ಮಹಾರಾಜಾ ಸರ್ ಚಂದ್ರಸೋಮೇಶ್ವರ ಜಂಗ್ ಬಹದೂರ್ ಯವರ ಪತ್ನೀರವರು ಕಳೆದ ವಾರ ಕಾಲವಾದರು. ಈಕೆ ಕೆಲವು ಕಾಲದಿಂದ ಕಾಯಿಲೆ ಇದ್ದು, ಹಿಂದುಸ್ಥಾನದ ಡಾಕ್ಟರುಗಳಿಂದ ಔಷಧಗಳನ್ನು ಪಡೆಯುತ್ತಿದ್ದರು. ಆ ಸಂಸ್ಥಾನದಲ್ಲಿರುವ ಪದ್ಧತಿಯ ಪ್ರಕಾರ ಅವಸಾನ ಕಾಲದಲ್ಲಿ ಆಕೆಯನ್ನು ಪಟ್ಟಣದಲ್ಲೆಲ್ಲಾ ಮೆರವಣಿಗೆ ಮಾಡಿಕೊಂಡು, ಪಶುಪತಿ ಎಂಬ ದೇವಸ್ಥಾನದ ಹತ್ತಿರ ಇರುವ ಆರ್ಯಘಾಟಿಗೆ ಕರೆದುಕೊಂಡು ಹೋಗಿ ಮಲಗಿಸಿ, ಆಕೆಯ ಕೈಯಿಂದ ಬಡಬಗ್ಗರಿಗೂ ಬ್ರಾಹ್ಮಣಾದಿಗಳಿಗೂ ದಾನಧರ್ಮಗಳನ್ನು ಕೊಡಿಸಿದರು. ಮಹಾರಾಣಿಯವರು ವಿಶೇಷ ಪರೋಪಕಾರಿಗಳೆಂತಲೂ ಪತಿವ್ರತೆಯರೆಂತಲೂ ಹೆಸರು ಪಡೆದಿದ್ದರು. ಒಂದಾನೊಂದು ಕಾಲದಲ್ಲಿ ಒಬ್ಬನನ್ನು ಗಲ್ಲಿಗೆ ಹಾಕುತ್ತಾರೆಂಬ ವರ್ತಮಾನವನ್ನು ಕೇಳಿ, ಆ ಕೂಡಲೇ ಆಕೆ ೫೦,೦೦೦ ರೂಪಾಯಿ ಕೊಟ್ಟು ಬಿಡಿಸಿಕೊಂಡು ಬಂದು, ಅವನ ಪ್ರಾಣಸಂರಕ್ಷಣೆ ಮಾಡಿದ್ದಾರೆ.

* * * * *

ಹಿಂದುಸ್ಥಾನದಲ್ಲಿ ಕ್ಷಾಮನಿವಾರಣೆಗಾಗಿ ಶಾಶ್ವತವಾದ ಒಂದು ಫಂಡು ಏರ್ಪಡಾಗಿರುವುದೂ, ಇದಕ್ಕೆ ಜಯಪುರದ ಮಹಾರಾಜರವರು ಇಪ್ಪತ್ತು ಲಕ್ಷ ರೂಪಾಯಿ ಕೊಟ್ಟಿರುವುದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಈಗ ಈ ಫಂಡಿನ ಆದಾಯವ್ಯಯಗಳನ್ನು ಪ್ರಕಟಿಸಿದಾರೆ. ಈ ಫಂಡು ೧೯೦೦ ನೆ ಇಸವಿ ಅಕ್ಟೋಬರಿನಲ್ಲಿ ಏರ್ಪಡಾಯಿತು. ೧೯೦೪ ನೆ ಡಿಸೆಂಬರ್ ಆಖೈರಿನಲ್ಲಿ ಈ ಫಂಡಿನಲ್ಲಿ ೫೪,೧೦,೦೦೦ ರೂಪಾಯಿ ಉಳಿದಿತ್ತು. ಇದಲ್ಲದೆ ೬,೫೦,೦೦೦ ರೂಪಾಯಿ ಬಂಗಾಳಾ ಖಜಾನೆಗಳಲ್ಲಿ ಉಳಿದಿರುತ್ತೆ. ಮೇಲ್ಕಂಡ ಮೂಲಧನಕ್ಕೆ ಪ್ರಾರಂಭದಿಂದ ೨೦,೯೦,೦೦೦ ರೂಪಾಯಿ ಬಡ್ಡಿ ಉತ್ಪತ್ತಿಯಾಯಿತು. ಈ ಪೈಕಿ ೧೯೦೩ ನೆ ಇಸವಿಯಲ್ಲಿ ಬೊಂಬಾಯಿ, ಬರೋಡ, ರಾಜಪುಟಾನಾ ಸೀಮೆಗಳಲ್ಲಿ ಕ್ಷಾಮನಿವಾರಣೆಗೆ ೪,೫೧,೦೦೦ ರೂಪಾಯಿಗಳನ್ನು ಖರ್ಚುಮಾಡಿದಾರೆ. ಈ ಫಂಡಿಗೆ ಜಯಪುರದ ಜ್ಯೇಷ್ಠ ಮಹಾರಾಣಿಯವರು ಒಂದು ಲಕ್ಷ ರೂಪಾಯನ್ನೂ, ಭಾವಲ್ಪುರದ ನವಾಬರವರು ಮೂರು ಲಕ್ಷ ರೂಪಾಯನ್ನೂ ಚಂದಾಕೊಟ್ಟಿದಾರೆ.

* * * * *

ಬಂಗಾಳಾ ಆಧಿಪತ್ಯದಲ್ಲಿ ಗವರ್ನಮೆಂಟಿನವರು ಏರ್ಪಡಿಸಿರುವ ವ್ಯವಸಾಯ ಬ್ಯಾಂಕುಗಳ ಸ್ಥಿತಿಗತಿ ಹ್ಯಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಮಿ॥ ಗೌರ್ ಎಂಬ ಸಾಹೇಬರನ್ನು ತನಿಖೆಮಾಡುವಂತೆ ಕಳುಹಿಸಿಕೊಟ್ಟರು. ಇವರು ಎಲ್ಲಾ ಬ್ಯಾಂಕುಗಳನ್ನೂ ನೋಡಿ ಬಂದು ರಿಪೋರ್ಟು ಕೊಟ್ಟಿರುವುದೇನೆಂದರೆ— ನಾನು ಜರ್ಮನಿ, ಇಟಲಿ, ಈಜಿಪ್ಟ್ ಮೊದಲಾದ ರಾಜ್ಯಗಳಲ್ಲಿನ ಇಂಥಾ ಬ್ಯಾಂಕುಗಳನ್ನು ನೋಡಿ ಬಂದಿರುತ್ತೇನೆ. ಆ ದೇಶಗಳಲ್ಲಿರುವ ಬ್ಯಾಂಕುಗಳೂ ಈಗ ಈ ಆಧಿಪತ್ಯದಲ್ಲಿರುವ ಬ್ಯಾಂಕುಗಳೂ ಒಂದೇ ರೀತಿಯಾಗಿರುತ್ತವೆಂದು ಕಾಣುವುದು. ಇಂಥಾ ಬ್ಯಾಂಕುಗಳಿಂದ ಬಂಗಾಳಾ ಆಧಿಪತ್ಯಕ್ಕೆ ಇನ್ನು ಮುಂದೆ ಬಹಳ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. ಮಧ್ಯರಾಷ್ಟ್ರದಲ್ಲಿ ಒಂದು ದೊಡ್ಡ ಬ್ಯಾಂಕನ್ನು ಇಟ್ಟು, ಅದರ ಶಾಖೆಗಳನ್ನು ಸುತ್ತುಮುತ್ತಲ ಗ್ರಾಮಾಂತರಗಳಲ್ಲಿ ಇಡಿಸಿದರೆ ಅದರ ಉದ್ದೇಶವು ಸಾರ್ಥಕವಾಗುವುದು. ಇವುಗಳ ಮೇಲ್ವಿಚಾರಣೆಯೆಲ್ಲಾ ಸರ್ಕಾರದವರೇ ನೋಡಿಕೊಳ್ಳಬೇಕು. ಈ ವಿಷಯಕ್ಕೆ ಗವರ್ನಮೆಂಟಿನವರು ಜಾಗ್ರತೆಯಾಗಿ ಗಮನ ಕೊಟ್ಟಾರೆಂದು ನಿರೀಕ್ಷಿಸಲ್ಪಟ್ಟಿದೆ ಎಂಬುದೇ.

ವಿದೇಶ ವರ್ತಮಾನಗಳು.

ಚೀನಾ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಲೇವಾದೇವಿ ನಡಸುತ್ತಿದ್ದ ನಾಲ್ಕಾರು ಭಾರೀ ಬ್ಯಾಂಕುಗಳು ದಿವಾಳಿಯಾದವು. ಈ ಬ್ಯಾಂಕುಗಳಿಗೆ ಹಣ ಕೊಟ್ಟಿದ್ದ ಪ್ರಜೆಗಳಿಗೆ ೯—೧೦ ಲಕ್ಷ ರೂಪಾಯಿ ತನಕ ನಷ್ಟವಾಯಿತು.

* * * * *

ಜರ್ಮನಿ ಚಕ್ರವರ್ತಿಯವರ ಆಜ್ಞಾನುಸಾರ ಪ್ರಷ್ಯಾ ರಾಜ್ಯದ ಲಿಯೊಪಾಲ್ಡ್ ರಾಜಕುಮಾರನು ಸಿರಿಯಾಕ್ಕೆ ಹೋಗಿ ಅಲ್ಲಿಂದ ಸೈನಿಕರ ಸಂಗಡ ಮ್ಯಾಂಚೂರಿಯಾ ಯುದ್ಧಭೂಮಿಗೆ ಬಂದು, ರಷ್ಯಾದವರು ಯಾವ ರೀತಿಯಲ್ಲಿ ಯುದ್ಧಕಾರ್ಯಗಳನ್ನು ನಡಸುವರೋ ನೋಡಿಕೊಂಡು ಹಿಂದಿರುಗುವವನಾಗಿದ್ದಾನೆ.

* * * * *

ವಿಲಾಯಿತಿಯ ಮಹಾರಾಜಾ ಚಕ್ರವರ್ತಿಯವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್ ಯವರು ತಮ್ಮ ಕುಮಾರ್ತೆಯಾದ ೨೩ ವಯಸ್ಸಿನ ಪ್ರಿನ್ಸ್ ಮಾರ್ಗರೆಟ್ ಯವರನ್ನು ಸ್ವೀಡನ್ ರಾಜ್ಯದ ಯುವರಾಜರಿಗೆ ಕೊಟ್ಟು ವಿವಾಹ ಮಾಡುವವರಾಗಿದ್ದಾರೆ. ಈ ಯುವರಾಜರ ವಯಸ್ಸೂ ೨೩ ವರುಷವೆಂದು ತಿಳಿಯುವುದು.

* * * * *

ಐಲಿಂಗ್ಟನ್ ಪಟ್ಟಣದಲ್ಲೂ ಸೇಂಟ್ ಪಾನ್‌ಕ್ರಾಸ್ ನಗರದಲ್ಲೂ ಮಿ॥ ಆಂಡ್ರು ಕಾರ್ನೆಗಿ ಎಂಬ ಕೋಟ್ಯಧೀಶ್ವರನು ಸರಸ್ವತೀ ಭಂಡಾರಗಳನ್ನು ಸ್ಥಾಪಿಸುವುದಕ್ಕೆ ಒಪ್ಪಿ ಆರು ಲಕ್ಷ ರೂಪಾಯಿ ಕೊಟ್ಟಿರುತ್ತಾನೆ. ಆಯಾ ಪಟ್ಟಣದವರು ಬಂಗಲೆಗೆ ಸ್ಥಳವನ್ನು ಮುಫತ್ತಾಗಿ ಕೊಡಬೇಕೆಂತಲೂ, ವಾಚಕರಿಂದ ಒಂದಾಣೆಗಿಂತಲೂ ಹೆಚ್ಚು ಶುಲ್ಕ ವಸೂಲ್ಮಾಡಕೂಡದೆಂತಲೂ ನಿರ್ಬಂಧಿಸುತ್ತಾನೆ.

* * * * *

ಒಬ್ಬ ರಷ್ಯಾ ರಾಕ್ಷಸನು ಲಂಡನ್ ಪಟ್ಟಣಕ್ಕೆ ಹೋಗಿರುತ್ತಾನೆ. ಇವನು ಬರೀ ಕಾಲಿನಲ್ಲಿ ನಿಂತುಕೊಂಡಾಗ ೯ ಅಡಿ ೪ ಅಂಗುಲ ಎತ್ತರವಾಗಿಯೂ ೪೪೮ ಪೌಂಡ್ ತೂಕವುಳ್ಳವನಾಗಿಯೂ ಇರುವನು. ಇವನ ಎದೆಯು ಒಂದು ಪಕ್ಕದಿಂದ ಇನ್ನೊಂದು ಪಕ್ಕದ ವರೆಗೆ ೩೦ ಅಂಗುಲ ವಿಸ್ತಾರವಾಗಿದೆ. ಎದೆಯ ಸುತ್ತಳತೆ ೬೦ ಅಂಗುಲ. ನಡುವಿನ ಸುತ್ತು ೫೬ ಅಂಗುಲ. ಇವನು ಮೆಟ್ಟುವ ಜೋಡು ಎರಡು ಅಡಿ ಉದ್ದವಾಗಿದೆ. ಕತ್ತು ೨೭ ಅಂಗುಲ ಸುತ್ತಳತೆ ಇದೆ.

* * * * *

ಮೈಸೂರ್ ಚಿನ್ನದ ಗಣಿ ಕಂಪನಿಯ ಅಧ್ಯಕ್ಷರಾದ ಸರ್ ಸಿ. ಟೆನ್ನೆಂಟ್ ಯವರ ಮನೆಯು ವಿಲಾಯಿತಿಗೆ ಸೇರಿದ ಪೀಬಲ್ ಷೈರ್ ಎಂಬ ಡಿಸ್ಟ್ರಿಕ್ಟಿನಲ್ಲಿದೆ. ಅವರೂ ಅವರ ಪತ್ನೀರವರೂ ಬಯಾರಿಟ್ಸ್ ಎಂಬಲ್ಲಿಗೆ ಹೋಗಿದ್ದಾಗ ಆ ಮನೆಗೆ ಬೆಂಕಿ ಬಿದ್ದು ಉರಿದು ಹೋಯಿತು. ಅವರ ಮಗನೂ ಕೆಲವರು ನೆಂಟರಿಷ್ಟರೂ ಆ ಮನೆಯಲ್ಲಿ ವಾಸವಾಗಿದ್ದರು. ಮನೆಯೊಳಗಿದ್ದ ಲಕ್ಷಾಂತರ ರೂಪಾಯಿನ ನಗನಾಣ್ಯಗಳಲ್ಲದೆ ೧೩,೫೦,೦೦೦ ರೂಪಾಯಿ ಮುಪ್ಪಿನಿಂದ ಕಟ್ಟಿಸಿದ್ದ ಆ ಮನೆ ಸುಟ್ಟು ಹಾಳಾಯಿತು.

* * * * *

ಆಸ್ಟ್ರೇಲಿಯಾ ದ್ವೀಪದ ಕಾಡುಗಳಲ್ಲಿ ಬೆಳೆಯುವ ಮರಗಳು ಬಹಳ ಹಳೆಯವೆಂತಲೂ ಅವುಗಳಲ್ಲಿ ರೈಲ್ ಕಂಬಿಗಳನ್ನು ಹಾಸುವುದಕ್ಕೆ ಸಣ್ಣ ಸಣ್ಣ ಸ್ಲೀಪರ್‌ಗಳೆಂಬ ದಿಮ್ಮಿಗಳನ್ನು ಮಾಡಿದರೆ ಬಹಳ ಗಟ್ಟಿಯಾಗಿರುತ್ತವೆಂತಲೂ ತುಂಬಾ ಬಾಳಿಕೆ ಬರುತ್ತವೆಂತಲೂ ತಿಳಿದು ಬಂದಿದೆ. ಇಂಡಿಯಾ ಗವರ್ನಮೆಂಟಿನವರು ಈ ವಿಷಯವನ್ನು ಖಂಡಿತ ಮಾಡಿಕೊಂಡು ಬರುವುದಕ್ಕಾಗಿ ಸರಿಯಾಗಿದ್ದಲ್ಲಿ ದಿಮ್ಮಿಗಳನ್ನು ಮಾಡಿಸಿ ಕಳುಹಿಸುವಂತೆ ಹೇಳಿ ಬರುವುದಕ್ಕಾಗಿ ಮಿ॥ ಜೆ. ಆಡಂಸ್ ಯವರನ್ನು ಹಿಂದುಸ್ಥಾನದಿಂದ ಆ ದ್ವೀಪಕ್ಕೆ ಕಳುಹಿಸಿದಾರೆ.

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಮ್ಯಾಂಚೂರಿಯಾದಲ್ಲಿ ದೊಡ್ಡ ಯುದ್ಧ.

ಲಂಡನ್, ಫೆಬ್ರವರಿ ೨೭.—ಮ್ಯಾಂಚೂರಿಯಾದಲ್ಲಿ ನಡೆಯುತ್ತಿರುವ ಯುದ್ಧಗಳ ವರ್ತಮಾನವು ಬಹು ಸಂಕ್ಷೇಪವಾದುದಾಗಿದೆ ಇದುವರೆಗೆ ಬಂದಿರುವ ಸುದ್ದಿಯಲ್ಲಾ ರಷ್ಯಾದವರ ಕಡೆಯಿಂದಲೇ. ಪೆರಿಸ್‌ನೆಫ್ ಗುಡ್ಡದ ಬಳಿ ನಡೆದ ಯುದ್ಧವು ದೊಡ್ಡ ಯುದ್ಧಕ್ಕೆ ಪ್ರಥಮಕಾರ್ಯವೆಂದಲೂ, ಜಪಾನಿನವರು ರಷ್ಯಾದವರ ಮೇಲೆ ಒಟ್ಟಾಗಿ ನುಗ್ಗಿಬರುತ್ತಿದ್ದಾರೆಂದಲೂ ತಿಳಿಯುವುದು. ಪೆರಿಸ್‌ನೆಫ್ ಗುಡ್ಡವನ್ನು ರಷ್ಯಾದವರು ಬಹಳ ಚನ್ನಾಗಿ ಕೋಟೆಕಟ್ಟಿ ಬಲಪಡಿಸಿಕೊಂಡಿದ್ದಾರೆ. ಇಲ್ಲಿಂದ ೧೮ ಮೈಲಿ ದೂರದಲ್ಲಿರುವ ಫೂಷನ್ ಎಂಬ ಕಣಿವೆಯನ್ನು ಪಾಟಕೋದಲ್ಲಿ ಜನರಲ್ ಕುರೋಪಾಟ್ಕಿನರವರು ತಮ್ಮ ಸೈನ್ಯವನ್ನೆಲ್ಲಾ ಇಟ್ಟುಕೊಂಡಿರುವ ಸ್ಥಳ ಸಿಕ್ಕುವುದು.

ಜಪಾನಿನವರ ಜಯಪ್ರದ.

ಜಪಾನಿನವರು ಹೊರಪ್ರದೇಶಗಳಲ್ಲಿರುವ ರಾಜ್ಯಗಳನ್ನೆಲ್ಲಾ ಗೆದ್ದುಕೊಂಡಿದ್ದಾರೆಂದಲೂ ಈಗ ರಷ್ಯಾದವರ ಮುಖ್ಯಸ್ಥಾನದ ಮೇಲೆ ನುಗ್ಗಿ ಹೋಗುತ್ತಿದ್ದಾರೆಂದಲೂ ತಿಳಿದುಬಂದಿದೆ ಹಿಮವೂ ಮಂಜೂ ತುಂಬಾ ಬಿರುಸಾಗಿ ಸುರಿಯುತ್ತಿರುವುದನ್ನೂ ಲಕ್ಷ್ಯಮಾಡದೆ ಶತ್ರುಗಳು ಕಾದಾಡುತ್ತಿದ್ದಾರೆ.

ರಷ್ಯಾದವರ ರಿಪೋರ್ಟು.

ಜನರಲ್ ಕುರೋಪಾಟ್ಕಿನರವರು—ಜಪಾನಿನವರಿಗೆ ಕೆಲವು ಕಡೆ ಜಯವಾಯಿತೆಂದಲೂ ಕೆಲವು ಕಡೆ ಅವರು ಸೋತು ಹಿಮ್ಮೆಟ್ಟಿದರೆಂದಲೂ ಮೊಗುಮ್ಮಾಗಿ ರಿಪೋರ್ಟು ಕೊಟ್ಟಿದ್ದಾರೆ

ರಷ್ಯಾದವರ ರೈಲಿನ ಕಷ್ಟ

ಚಳಿಗಾಲವಾದಕಾರಣ ರಷ್ಯಾದವರ ಸೈನ್ಯಗಳೂ ಯುದ್ಧದ ಮತ್ತು ಆಹಾರ ಸಾಮಗ್ರಿಗಳೂ ಯುದ್ಧಭೂಮಿಗೆ ಸಾಗಿ ಬರುವುದು ತುಂಬಾ ಕಷ್ಟವಾಯಿತು ಇವೆಲ್ಲಾ ಡಿಸೆಂಬರಿನಲ್ಲಿ ರಷ್ಯಾದಿಂದ ಹೊರಟವು. ರೈಲ್ ಮಾರ್ಗ ತುಂಬಾ ಕಠಿಣವಾದುದರಿಂದ ಅವು ಯುದ್ಧಭೂಮಿಗೆ ಏಪ್ರಿಲ್‌ತಿಂಗಳಿಗಿಂತ ಮುಂಚೆ ತಲುಪದ ಹಾಗಿಲ್ಲ.

ಜಪಾನಿನವರು ಮುಕ್ಡೆನ್ ಮೇಲೆ ನುಗ್ಗಿಹೋಗುತ್ತಾರೆ.

ಲಂಡನ್, ಫೆಬ್ರವರಿ ೨೮—ಜಪಾನಿನವರು ತಾಲಿಂಗ್ ಎಂಬ ಕಣಿವೆಯನ್ನು ಸ್ವಾಧೀನಪಡಿಸಿಕೊಂಡರು. ಈ ಕಣಿವೆ ದಾರಿಯು ಮುಕ್ಡೆನ್ ನಗರಕ್ಕೆ ಹೋಗುವುದು.

ರಷ್ಯಾದವರ ಸೋಲು

ಪೆಕೀಹೋದಿಂದ ೩೦ ಮೈಲಿ ದೂರದಲ್ಲಿರುವ ತೀಲಿಂಚೆನ್‌ನಲ್ಲಿ ರಷ್ಯಾದವರು ೧೫,೦೦೦ ಸೈನ್ಯವನ್ನೂ ೨೦ ಫಿರಂಗಿಗಳನ್ನೂ ಇಟ್ಟುಕೊಂಡಿದ್ದರು ಅವರ ಮೇಲೆ ಜಪಾನಿನವರು ನುಗ್ಗಿಹೋಗಿ ಮುತ್ತಿಗೆ ಹಾಕಿಕೊಂಡು ಯುದ್ಧಮಾಡಿದರು ರಷ್ಯಾದವರು ಎರಡು ದಿನಗಳ ತನಕ ತಮ್ಮ ಸ್ಥಾನಗಳನ್ನು ಬಿಡದೆ ಬಹು ಪರಾಕ್ರಮದಿಂದ ಕಾದಿದರು. ಅವರ ಕಡೆ ೨೦೩ ಮಂದಿ ಯುದ್ಧಭೂಮಿಯಲ್ಲಿ ಸತ್ತುಬಿದ್ದರು ಅವರ ೩ ಫಿರಂಗಿಗಳೂ ಮದ್ದುಗುಂಡೂ ಜಪಾನಿನವರ ಪಾಲಾದವು ಅವರ ಕಡೆಯಲ್ಲಿ ೨,೦೦೦ ಮಂದಿ ನಷ್ಟವಾಗಿರಬೇಕೆಂದು ಅಂದಾಜು ಹಾಕಲ್ಪಟ್ಟಿದೆ ಎಂಬುದಾಗಿ ಜಪಾನಿನವರು ತಿಳಿಸುತ್ತಾರೆ

ಜಪಾನಿನವರು ಆ ಸ್ಥಳವನ್ನು ಗೆದ್ದುಕೊಳ್ಳುವುದಕ್ಕೆ ಮುಂಚೆ ಹನ್ನೊಂದು ಸಲ ರಷ್ಯಾದವರ ಮೇಲೆ ನುಗ್ಗಿಹೋಗಿ ಯುದ್ಧಮಾಡಿದರು ಇವರ ಸೈನಿಕರಲ್ಲಿ ೧೦೦ ಮಂದಿ ಸತ್ತುಬಿದ್ದರು ಎಂಬುದಾಗಿ ಜನರಲ್ ಕುರೋಪಾಟ್ಕಿನರವರು ರಿಪೋರ್ಟು ಕೊಟ್ಟಿದ್ದಾರೆ

ಷಾಹೋ ನದಿಯ ಮೇಲೆಯುದ್ಧ

ಲಂಡನ್, ಮಾರ್ಚಿ ೧ —ಷಾಹೋನದಿಯ ಸೇತುವೆ ಬಳಿಯಲ್ಲಿ ದೊಡ್ಡ ಯುದ್ಧವಾಯಿತು ಉಭಯ ಪಕ್ಷದವರೂ ತಮಗೆ ಜಯವಾಯಿತೆಂದು ರಿಪೋರ್ಟು ಮಾಡಿದ್ದಾರೆ

ಚೆಂಚೊಚೇಂಗ್ ಯುದ್ಧ

ಈ ಯುದ್ಧದ ವಿಷಯದಲ್ಲಿ ಜಪಾನ್ ಸರ್ಕಾರಿ ರಿಪೋರ್ಟು ಪ್ರಕಟವಾಗಿದೆ —ಕಳೆದ ೨೩ ನೆ ತಾ॥ ನಮ್ಮ ಸೈನ್ಯವು ಚೆಂಚೊಚೆಂಗಿಗೆ ನುಗ್ಗಿ ಹೋಯಿತು ಆಗ ಮಂಜು ಗಡ್ಡೆ ಮಳೆಯು ಬಿರುಸಾಗಿ ಸುರಿಯುತ್ತಿತ್ತು. ಭೂಮಿಯು ಇಳಿಜಾರಾಗಿ ಹೋಗುವುದು ಕಷ್ಟವಾಯಿತು ಕೈತ್ಸೆಹೋ ನದಿಯ ಮೇಲೆ ಹೆಪ್ಪುಕಟ್ಟಿದ ಮಂಜುಗಡ್ಡೆ ಕರಗುತ್ತಾ ಇದ್ದದರಿಂದ ನಮಗೆ ತುಂಬಾ ಅನಾನುಕೂಲವಾಯಿತು ನಾವು ಜಾಗ್ರತೆಯಿಂದ ನುಗ್ಗಿ ಹೋಗಲು ಆಗಲಿಲ್ಲ. ಶತ್ರುಗಳ ಕಡೆ ೧೭ ಬಟಾಲಿಯನ್ ಸೈನ್ಯವೂ ೨೦ ದೊಡ್ಡ ಫಿರಂಗಿಗಳೂ ಇದ್ದವು. ಅವರು ಬಹು ಒಳ್ಳೇ ಸ್ಥಾನಗಳನ್ನು ಆಕ್ರಮಿಸಿಕೊಂಡು, ನಮ್ಮ ಮೇಲೆ ಬಹಳ ಕಠಿಣವಾಗಿ ಯುದ್ಧ ಮಾಡಿದರು. ತಾ॥ ೨೪ ನೆ ಬೆಳಿಗ್ಗೆ ನಾವು ಮತ್ತೆ ಅವರ ಮೇಲೆ ನುಗ್ಗಿಹೋದೆವು. ಬಹಳ ಘೋರವಾದ ಯುದ್ಧವಾಗಿ ಕಡೆಗೆ ಆ ಸ್ಥಳವನ್ನು ನಾವು ಗೆದ್ದುಕೊಂಡೆವು ಶತ್ರುಗಳು ಆ ಸ್ಥಳಕ್ಕೆ ಬೆಂಕಿ ಹಾಕಿ ಸುಟ್ಟುಬಿಟ್ಟು, ರಣರಂಗದಲ್ಲಿ ೧೫೦ ಶವಗಳನ್ನು ಬಿಟ್ಟು, ಉತ್ತರದಿಕ್ಕಿಗೆ ಓಡಿಹೋದರು ನಾವು ಅವರ ೩ ದೊಡ್ಡ ಫಿರಂಗಿಗಳನ್ನೂ ಅನೇಕ ಬಂದೂಕುಗಳನ್ನೂ ಮದ್ದುಗುಂಡನ್ನೂ ಕಿತ್ತುಕೊಂಡೆವು ಶತ್ರುಗಳ ಕಡೆ ತುಂಬಾ ನಷ್ಟವಾಗಿದೆ ಎಂದು ಹೇಳಬಹುದು ನಮ್ಮ ಸೈನ್ಯದಲ್ಲಿ ೪೦೦ ಹಿಡಿದು ಯಾರೂ ಸಾಯಲಿಲ್ಲ.

ಜನರಲ್ ಸ್ಟೊಯೆಸಲ್‌ಯವರು.

ಯುದ್ಧಭೂಮಿಯಿಂದ ವಾಪಸು ಹೋದ ಜನರಲ್ ಸ್ಟೊಯೆಸಲ್‌ಯವರು ಮಾಸ್ಕೋ ಪಟ್ಟಣವನ್ನು ತಲುಪಿದರು. ಪ್ರಜೆಗಳೆಲ್ಲಾ ಅವರನ್ನು ಬಹು ಸಂಭ್ರಮದಿಂದ ಎದುರುಗೊಂಡು, ಅವರಿಗಾಗಿ ಅನೇಕ ಸಂತೋಷೋತ್ಸವಗಳನ್ನು ಮಾಡುತ್ತಿದ್ದಾರೆ. ಅವರು ಮ್ಯುನಿಸಿಪಾಲಿಟಿಯವರು ಒಪ್ಪಿಸಿದ ಅಡ್ರೆಸ್ಸಿಗೆ ಪ್ರತ್ಯುತ್ತರ ಹೇಳುವಾಗ್ಗೆ—ಪೋರ್ಟ್ ಆರ್ಥರನ್ನು ಜಪಾನಿನವರಿಗೆ ಒಪ್ಪಿಸಿದ್ದೇ ಉತ್ತಮವಾಯಿತು. ಇಲ್ಲದೆ ಹೋಗಿದ್ದರೆ ಕೋಟೆಯೊಳಗಿದ್ದ ನಮ್ಮ ಸೈನಿಕರೆಲ್ಲಾ ಹತರಾಗಿ ಹೋಗುತ್ತಿದ್ದರು. ಜಪಾನಿನವರು ಮುಖ್ಯಮುಖ್ಯವಾದ ರಾಜ್ಯಗಳನ್ನೂ ಕೋಟೆಗಳನ್ನೂ ಗೆದ್ದುಕೊಂಡಿದ್ದರು. ಇದನ್ನೆಲ್ಲಾ ನೋಡಿ ನಾನು ಅವರಿಗೆ ಪೋರ್ಟ್ ಆರ್ಥರನ್ನು ಒಪ್ಪಿಸಿ, ಜನರ ಪ್ರಾಣವನ್ನು ಕಾಪಾಡಿದೆನು ಎಂಬುದಾಗಿ ತಿಳಿಸಿದರು. ಈಗ ಇವರು ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿಗೆ ಪ್ರಯಾಣ ಮಾಡುತ್ತಿದ್ದಾರೆ

ಜಪಾನಿನವರ ಸಾಲದ ವಿಷಯ

ಜಪಾನಿನವರು ಯುದ್ಧದ ಖರ್ಚಿಗಾಗಿ ತಮ್ಮ ರಾಜ್ಯದಲ್ಲೇ ಸಾಲ ಮಾಡಬೇಕೆಂದು ಪ್ರಕಟಿಸಿದರು ಅದನ್ನು ಕೇಳಿ ಆ ರಾಜ್ಯದ ಬ್ಯಾಂಕುಗಳವರೂ ಹಣಗಾರರೂ ರಾಜಧಾನಿಯಲ್ಲಿ ಸಭೆಸೇರಿ, ಸರ್ಕಾರದವರು ಈಗ ಕೇಳುವಷ್ಟಕ್ಕೆಂದಲೂ ಎರಡಷ್ಟು ಸಾಲ ಕೇಳಿದರೂ ನಾವೆಲ್ಲಾ ಕೊಡಲು ಸಿದ್ಧರಾಗಿದೇವೆಂದು ತಿಳಿಸಿದರು ಮಂತ್ರಿಗಳಾದ ಬ್ಯಾರನ್ ಒಕೂಮಾ ಯವರು ಅವರನ್ನು ಕುರಿತು ನಾವು ಈ ಯುದ್ಧಕ್ಕಾಗಿ ಇಷ್ಟು ಅಪಾರ ದ್ರವ್ಯವನ್ನು ಖರ್ಚುಮಾಡುತ್ತಿದ್ದಾಗ್ಯೂ ರಾಜ್ಯದಲ್ಲಿ ಜನರ ಖರ್ಚು ಸ್ವಲ್ಪವೂ ವ್ಯತ್ಯಸ್ತವಾಗುವುದಿಲ್ಲ. ಆದಾಯವ್ಯಯಗಳು ಒಂದೇ ಸಮನಾಗಿರುತ್ತವೆ ಎಂಬುದಾಗಿ ಹೇಳಿದ್ದಾರೆ.

ರಷ್ಯಾದವರು ಹಿಮ್ಮೆಟ್ಟಬೇಕಾಯಿತು

ಲಂಡನ್, ಮಾರ್ಚಿ ೨ —ಲಿಯಾಹೋ ವರೆಗೆ ಜಪಾನ್ ಸೈನ್ಯಗಳು ಉದ್ದಕ್ಕೂ ರಾತ್ರೆ ಹಾಕಿಕೊಂಡಿದ್ದಾವೆ ಇವರ ಮೇಲೆ ಅನೇಕ ದಫಾ ರಷ್ಯಾದವರು ನುಗ್ಗಿ ಬಂದು ಯುದ್ಧ ಮಾಡಿದರೆಂದಲೂ, ಪ್ರತಿ ಸಲವೂ ಸೋತು ಹಿಮ್ಮೆಟ್ಟಿ ಹೋದರೆಂದಲೂ ತಂತೀ ವರ್ತಮಾನ ಬಂದಿದೆ

ಜನರಲ್ ಸ್ಟೊಯೆಸಲ್‌ಯವರು

ಜನರಲ್ ಸ್ಟೊಯೆಸಲ್‌ಯವರು ಸೇಂಟ್ ಪೀಟರ್ಸ್‌ಬರ್ಗನ್ನು ತಲುಪಿದರು ಚಕ್ರವರ್ತಿ ಜಾರ್‌ರವರು ಅವರಿಗೆ ಭೇಟಿಕೊಟ್ಟು, ಅವರನ್ನು ಕರೆಸಿಕೊಂಡು ಸಹಭೋಜನಮಾಡಿದರು

ಜಪಾನಿನವರ ಯುದ್ಧಸನ್ನಾಹ

ಲಂಡನ್, ಮಾರ್ಚಿ ೩ —ಜಪಾನಿನವರ ೪೦೦ ಸವಾರರು ನುಗ್ಗಿಹೋಗಿ ಸಿನ್‌ಮಿಂಗ್‌ಟುಂಗ್ ಎಂಬ ಸ್ಥಳವನ್ನು ಕೊಳ್ಳೆಹೊಡೆದರು. ಕಾಮಾಂಟ್ಸಿಯ ಉದ್ದಕ್ಕೂ ೧೨,೦೦೦ ಜಪಾನ್ ಸೈನಿಕರು ರಾತ್ರೆ ಹಾಕಿಕೊಂಡಿದ್ದಾರೆ ಈ ಸೈನಿಕರೂ ಮಾರ್ಷಲ್ ಒಯಾಮಾಯವರ ಕೈಕೆಳಗಿನ ಸೈನಿಕರೂ ರಷ್ಯಾದವರ ರಾಜ್ಯವನ್ನೆಲ್ಲಾ ಸುತ್ತಿಕೊಳ್ಳುವವರಾಗಿದ್ದಾರೆ

ಜಪಾನಿನವರ ಜಯಪ್ರದಗಳು.

ಜಪಾನ್ ಸೈನ್ಯಗಳು ಉದ್ದಕ್ಕೂ ಜಯಶಾಲಿಗಳಾಗಿಯೇ ಬರುತ್ತಿದ್ದಾರೆಂದು ಯುದ್ಧಭೂಮಿಯಿಂದ ಬಾತ್ಮಿದಾರರು ತಿಳಿಸುವರು.

ಮುಕ್ಡೆನ್ ನಗರದ ಪಶ್ಚಿಮಕ್ಕೆ ೧೧ ಮೈಲಿ ದೂರದಲ್ಲಿ ಜಪಾನಿನವರ ನಾಲ್ಕು ಡಿವಿಜನ್ ಸೈನ್ಯಗಳು ಕಾದುಕೊಂಡಿವೆ ಅಲ್ಲಿದ್ದ ರಷ್ಯಾ ಸೈನಿಕರು ಬಲಗಡೆಗೆ ಹಿಮ್ಮೆಟ್ಟಿ ಹೋಗುವಂತೆ ಕಾಣುವುದು

ಫಿರಂಗಿಗಳ ಧ್ವನಿ

ರಷ್ಯಾದವರ ರಾಜ್ಯದ ನಡುಭಾಗದಲ್ಲಿರುವ ಪುಟಿಲಾಫ್ ಮತ್ತು ನೊಗೊರೋಡಾ ಎಂಬೀ ಗುಡ್ಡಗಳಿಗೆ ಜಪಾನಿನವರು ೧೦೦ ಫಿರಂಗಿಗಳನ್ನು ಎತ್ತಿಕಟ್ಟಿ ವಿರಾಮವಿಲ್ಲದೆ ಹೊಡೆಯುತ್ತಿದ್ದಾರೆ

ಜಪಾನಿನವರು ರಾತ್ರಿ ಕಾಲದಲ್ಲೇ ನುಗ್ಗಿ ಹೋಗುತ್ತಾ ರಷ್ಯಾದವರ ಎಡಭಾಗವನ್ನು ಆಕ್ರಮಿಸಿಕೊಂಡಿದ್ದಾರೆ.

ಮುಕ್ಡೆನ್ ಬರಿದಾಯಿತು

ರಷ್ಯಾದವರು ಮುಕ್ಡೆನ್ ಪಟ್ಟಣವನ್ನು ಬಿಟ್ಟು ಹೊರಟು ಹೋಗುತ್ತಿರುವಂತೆ ವರ್ತಮಾನ ಹುಟ್ಟಿದೆ

ಪುಟಿಲಾಫ್ ಗುಡ್ಡಕ್ಕೆ ಹಲ್ಲಾ ಹತ್ತುವುದು.

ಜಪಾನ್ ಸೈನಿಕರು ಪುಟಿಲಾಫ್ ಗುಡ್ಡವನ್ನು ಗೆದ್ದುಕೊಳ್ಳಬೇಕೆಂದು ಎರಡಾವರ್ತಿ ರಷ್ಯಾದವರ ಮೇಲೆ ನುಗ್ಗಿ ಹೋದರು. ಆದರೆ ಎರಡು ಸಲವೂ ಬಹು ಜನರನ್ನು ಕಳಕೊಂಡು ಹಿಂದಕ್ಕೆ ಬರಬೇಕಾಯಿತು ಎಂದು ರಷ್ಯಾದವರು ತಿಳಿಸುತ್ತಾರೆ ಜನರಲ್ ಕುರೋಪಾಟ್ಕಿನರವರಾದರೋ ಜಪಾನಿನವರಿಗೆ ಸ್ವಲ್ಪವೂ ಸ್ಥಳ ಕೊಡದೆ ಸೋಲಿಸಿ ಓಡಿಸುತ್ತಲೂ ಅವರಲ್ಲಿ ತುಂಬಾ ನಷ್ಟವನ್ನುಂಟುಮಾಡುತ್ತಲೂ ಬಂದಿದೇವೆಂದು ರಿಪೋರ್ಟು ಕೊಟ್ಟಿದ್ದಾರೆ

ದೊಡ್ಡಯುದ್ಧ, ಜಪಾನಿನವರ ಜಯಪ್ರದ.

ಲಂಡನ್, ಮಾರ್ಚಿ ೪ —ರಷ್ಯಾದವರು ತಮ್ಮ ರಾಜ್ಯಗಳನ್ನು ಬಹಳವಾಗಿ ಬಲಪಡಿಸಿಕೊಂಡಿದ್ದಾರೆ ಅವರು ಹುನ್‌ಹೋ ನದಿಯ ದಡದಲ್ಲಿ ರಷ್ಯಾದವರನ್ನು ಹಿಮ್ಮೆಟ್ಟಿಸಬೇಕೆಂದು ಎರಡಾವರ್ತಿ ನುಗ್ಗಿಬಂದು ಯುದ್ಧಮಾಡಿದರು ಎರಡು ಸಲವೂ ಜಪಾನಿನವರು ಅವರನ್ನು ಹಿಂದಕ್ಕೆ ಓಡಿಸಿದರು ಜಪಾನಿನವರು ಚಾಂಗ್‌ಟಾನ್ ಎಂಬ ಮುಖ್ಯ ರಾಜ್ಯವನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಅವರು ೯ ಮೈಲಿ ವಿಸ್ತಾರವುಳ್ಳ ಸ್ಥಳವನ್ನು ಗೆದ್ದುಕೊಂಡರು ಇದನ್ನು ಗೆಲ್ಲುವುದಕ್ಕಾಗಿ ಯುದ್ಧಮಾಡಿದ್ದರಲ್ಲಿ ಜನರಲ್ ಒಕೂಯವರ ಕಡೆ ೨,೦೦೦ ಜಪಾನಿನವರು ನಷ್ಟಪಟ್ಟರು. ರಷ್ಯಾದವರ ಕಡೆ ಇದಕ್ಕಿಂತಲೂ ಹೆಚ್ಚು ನಷ್ಟವಾಗಿದೆ. ಹಿಮಗಡ್ಡೆಗಳ ಮಳೆ ಸುರಿಯುತ್ತಿದ್ದಾಗ್ಯೂ ಜಪಾನಿನವರು ಲಕ್ಷ್ಯಮಾಡದೆ ರೈಲ್ವೆ ಉದ್ದಕ್ಕೂ ಫಿರಂಗಿಗಳನ್ನು ಎತ್ತಿಕಟ್ಟಿ ರಷ್ಯಾದವರ ಮೇಲೆ ಗುಂಡುಹೊಡೆಯುತ್ತಿದ್ದಾರೆ. ತಾ. ೨ ರಲ್ಲಿ ಗೊಟುಲಿಂಗಿನಲ್ಲಿ ಒಂದು ಭಾಗವು ಶತ್ರುಗಳ ವಶವಾಯಿತೆಂದು ಜನರಲ್ ಕುರೋಪಾಟ್ಕಿನರವರು ಅರಿಕೆ ಮಾಡಿದ್ದಾರೆ. ನೆನ್ನೆಯೂ ಮತ್ತೆ ಮುತ್ತಿಗೆ ಹಾಕಿದರು. ಯುದ್ಧ ನಡೆಯುತ್ತಿದೆ. ಎಡಭಾಗದಲ್ಲಿ ಯುದ್ಧವು ಅತ್ಯಂತ ಕಠಿಣವಾಗಿರುವುದು. ಜಪಾನಿನವರು ಮತ್ತೆ ಮತ್ತೆ ಸೋತು ಹಿಮ್ಮೆಟ್ಟುತ್ತಿದ್ದಾಗ್ಯೂ ಕೆಲ ಕಡೆ ತಮ್ಮ ಸೈನಿಕರ ಹೆಣಗಳ ರಾಶಿಯನ್ನು ಮುಂದಿಟ್ಟುಕೊಂಡು ಅದರ ಹಿಂಭಾಗದಲ್ಲಿ ನಿಂತು ಯುದ್ಧಮಾಡುತ್ತಾ ಬಂದಿದ್ದಾರೆ. ನೆನ್ನೆ ಕಾಂಡೊಲಿಸಾನಲ್ಲಿ ಜಪಾನಿನವರ ೨೦ ಬಟಾಲಿಯನ್ ಸೈನ್ಯಗಳಿಗಿಂತಲೂ ಹೆಚ್ಚಾಗಿಯೇ ವಿಪರೀತ ನಷ್ಟಪಟ್ಟು ಹಿಂದಕ್ಕೆ ಬರಬೇಕಾಯಿತು ಈ ದಿನ ಜಪಾನಿನವರು ಮತ್ತೆ ನುಗ್ಗಿ ಭಯಂಕರವಾಗಿ ಯುದ್ಧಮಾಡುತ್ತಿರುವರು ಇವರು ಕ್ರಮೇಣ ಸ್ವಲ್ಪಸ್ವಲ್ಪ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಾ ಮುಂದುಮುಂದಕ್ಕೆ ಹೋಗುತ್ತಿದ್ದಾರೆ.

ಕೊರಿಯಾ ಬಳಿ ಜಪಾನ್ ಸೈನ್ಯ.

ಕೊರಿಯಾ ರಾಜ್ಯದ ಉತ್ತರಕ್ಕಿರುವ ಪೆಂಗುಡ್‌ಷೀನ್ ಎಂಬಲ್ಲಿ ೨,೦೦೦ ಜಪಾನ್ ಸೈನ್ಯಗಳು ಬಂದಿಳಿದಿವೆ ಎಂದು ವ್ಲಾಡಿವೋಸ್ಟಾಕಿನಿಂದ ಸುದ್ದಿ ಬಂದಿದೆ

ಹುನ್‌ಹೊ ಬಳಿ ಜಪಾನಿನವರ ಜಯಪ್ರದ.

ಹೊಸದಾಗಿ ಯೂರೋಪಿನಿಂದ ಬಂದ ಎರಡು ಡಿವಿಜನ್ ರಷ್ಯಾ ಸೈನಿಕರ ಮೇಲೆ ಜಪಾನಿನವರು ಹುನ್‌ಹೊ ಬಳಿ ಯುದ್ಧಮಾಡಿ ಸಂಪೂರ್ಣವಾಗಿ ಸೋಲಿಸಿ, ಬಹು ಮಂದಿಯನ್ನು ಕೊಂದು, ಬಹಳ ಯುದ್ಧಸಾಮಗ್ರಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ

ಮುಕ್ಡೆನ್‌ಗೆ ಬೆಂಕಿಹಾಕಿ ಸುಡುತ್ತಿದ್ದಾರೆ.

ರಷ್ಯಾದವರು ಮುಕ್ಡೆನ್ ಪಟ್ಟಣವನ್ನು ಬಿಟ್ಟು ಹಿಮ್ಮೆಟ್ಟಿ ಹೋಗುತ್ತಾ, ಅದರಲ್ಲಿ ತಾವಿಟ್ಟಿರುವ ಸಾಮಗ್ರಿಗಳ ಉಗ್ರಾಣಗಳೇ ಮೊದಲಾದ ಕಟ್ಟಡಗಳಿಗೆ ಬೆಂಕಿಹಾಕಿ ಸುಡುತ್ತಿದ್ದಾರೆ

ಜಪಾನಿನವರು ರಷ್ಯಾದವರ ಬಲವಾದ ಸ್ಥಾನಗಳ ಮೇಲೆಲ್ಲಾ ಫಿರಂಗಿಗಳನ್ನು ಕಟ್ಟಿ ಹೊಡೆಯುತ್ತಿದ್ದಾರೆ

ಮುಕ್ಡೆನ್ ಬಳಿ ದೊಡ್ಡ ಯುದ್ಧವಾಗುತ್ತಿದೆ

ಮುಕ್ಡೆನ್ ಬಳಿ ರಷ್ಯಾದವರು ಜಪಾನಿನವರನ್ನು ಕಾಂಡಾಲಿಸಾನ್ ಎಂಬ ರಾಜ್ಯದಿಂದ ಹಿಮ್ಮೆಟ್ಟಿಸಬೇಕೆಂದು ಹತ್ತಾವರ್ತಿ ನುಗ್ಗಿಬಂದು ಯುದ್ಧಮಾಡಿ ಸೋತುಬಿಟ್ಟರು ರಷ್ಯಾದವರನ್ನು ಕಾಬಾಲಿನ್ ಕಣಿವೆಯಿಂದ ಓಡಿಸಬೇಕೆಂದು ಜಪಾನಿನವರು ಮೂರು ಸಲ ಅವರ ಮೇಲೆ ನುಗ್ಗಿ ಯುದ್ಧಮಾಡಿದರು ಜಯಪ್ರದವಾಗಲಿಲ್ಲ ಯುದ್ಧವೇನೋ ಭಯಂಕರವಾಗಿ ನಡೆಯುತ್ತಲೇ ಇದೆ.

ಮುಕ್ಡೆನ್ ಹತ್ತಿರಕ್ಕೆ ಬಂದರು.

ಜಪಾನ್ ಸೈನಿಕರು ಮುಕ್ಡೆನ್ ನಗರಕ್ಕೆ ನಾಲ್ಕು ಮೈಲಿ ಹತ್ತಿರ ಬಂದಿದ್ದಾರೆ ತಾ. ೪ ರಲ್ಲಿ ನಮ್ಮ ಬಲಭಾಗವನ್ನೆಲ್ಲಾ ಆಕ್ರಮಿಸಿಕೊಂಡರು ಎಂದು ಜನರಲ್ ಕುರೋಪಾಟ್ಕಿನರವರು ತಿಳಿಸಿದ್ದಾರೆ

ಮುಕ್ಡೆನ್‌ನಲ್ಲಿ ದೊಡ್ಡ ಗಲಭೆ

ಎರಡು ಕಡೆಗಳಿಂದಲೂ ಜಪಾನಿನವರು ನುಗ್ಗಿ ಹೋಗಿರುವುದನ್ನು ನೋಡಿ ಮುಕ್ಡೆನ್ ನಗರದಲ್ಲಿರುವ ರಷ್ಯಾದವರಲ್ಲಿ ತುಂಬಾ ಕಳವಳ ಉಂಟಾಗಿದೆ. ಪಟ್ಟಣದ ರಸ್ತೆಗಳೆಲ್ಲಾ ಗಲಾಟೆಯಿಂದ ತುಂಬಿವೆ. ರಷ್ಯಾ ಸೈನಿಕರು ಯುದ್ಧಸನ್ನಾಹ ಮಾಡಿಕೊಂಡು ಜನರಲ್ ನೋಗಿಯವರ ಮೇಲೆ ನುಗ್ಗಿ ಕಾದಾಡುವುದಕ್ಕೆ ಹೊರಟಿದ್ದಾರೆ

ಲಂಡನ್, ಮಾರ್ಚಿ ೬ —ತಾ॥ ೪ರಲ್ಲಿ ರಷ್ಯಾದವರು ಜನರಲ್ ನೋಗಿಯವರ ಮೇಲೆ ಯುದ್ಧವನ್ನು ಪುನಃ ಪ್ರಾರಂಭಿಸಿದರು. ಕಳೆದ ಮೂರು ದಿನಗಳಿಂದಲೂ ರಷ್ಯಾ ಸೈನಿಕರಿಗೆ ಸ್ವಲ್ಪವೂ ವಿರಾಮವಿಲ್ಲ ಎರಡು ದಿನಗಳಿಂದ ಅವರ ಆಹಾರದ ಮುಖವನ್ನೇ ಕಾಣರು ಇನ್ನೂ ಯುದ್ಧಮಾಡುತ್ತಾ ಇದ್ದಾರೆ

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ಎಂದೂ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳುಹಿಸಬೇಕು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಕಟಿಸಲಾಗದೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎ

ಪ್ರತ್ಯಕ್ಷದರ್ಶಿ —ತರೀಕೆರೆ, ಸತ್ಯವಾದಿ—ಚಿತ್ರದುರ್ಗ, ಪತ್ರ ಬರೆದಾತನಿಗೆ ಸಂಬಂಧಿಸಿ ಮೋಸಪಡಿಸಿದ ವಿಷಯ — ಈ ಟಂಕೆಗಳನ್ನು ಪ್ರಕಟಿಸಲಾರೆವು —ಎ]

ಕರೆಸ್‌ಪಾಂಡೆನ್ಸ್.

ಸರ್ಕಾರಿ ಕಾರ್‌ಪೆಂಟರ್ ಇಂಡಸ್ಟ್ರಿಯಲ್ ಸ್ಕೂಲ್‌ಗಳ ವಿಚಾರ

ಅಯ್ಯಾ,

ಸರ್ಕಾರದವರು ಏರ್ಪಡು ಮಾಡಿರುವ ಈ ಸ್ಕೂಲ್ ವಿಷಯದಲ್ಲಿ ಇನ್ನು ಅನೇಕರಿಗೆ ಇವುಗಳ ರುಚಿಯೂ ಮರ್ಮವೂ ತಿಳಿದಿಲ್ಲ. ಆದ್ದರಿಂದ ಈ ಸ್ಕೂಲ್‌ಗಳ ರೂಲ್ಸುಗಳು ಹ್ಯಾಗೆ? ಕಲಿಯುವ ಬಾಲಕರಿಗೆ ವೇತನಗಳು ಸಿಕ್ಕುವದು ಹ್ಯಾಗೆ? ಎಲ್ಲಾ ಜಾತಿಯವರೂ ಬಂದು ಕೆಲಸ ಕಲಿಯಬಹುದೋ? ಈ ಸ್ಕೂಲಿನಲ್ಲಿ ಕೆಲಸ ಕಲಿಯುವ ಹುಡುಗರಿಗೆ ಪರೀಕ್ಷೆ ಉಂಟೋ? ಈ ಸ್ಕೂಲಿನಲ್ಲಿ ಕೆಲಸ ಮಾಡುವವರಿಗೆ ಭಾನುವಾರ ರಜಾ ಉಂಟೋ? ಎಂಬೀ ವಿಷಯಗಳನ್ನು ತಿಳಿದವರಾಗಲೀ, ಕಾರ್ಖಾನೆ ಅಧಿಕಾರಿಗಳಾಗಲೀ, ಎಲ್ಲಾ ಜನಗಳ ತಿಳುವಳಿಕೆ ಬಗ್ಗೆ ಈ ಪತ್ರಿಕೆಯಲ್ಲಿ ತಿಳಿಸುವ ಹಾಗೆ ವಿಜ್ಞಾಪಿಸುವೆನು ಯಾಕೆಂದರೆ ಬಹು ಜನಗಳಿಗೆ ಈ ವಿಷಯವು ತಿಳಿದೇ ಇಲ್ಲ. ಅನೇಕ ಜನಗಳಿಗೆ ಇದರಿಂದ ಪ್ರಯೋಜನವಾದೀತು

ವೈ. ದೇವದತ್ತ.

ಪೋಸ್ಟು ಆಫೀಸಿನ ಮೇಲೆ ಆಕ್ಷೇಪಣೆ

ಅಯ್ಯ,

ಈಚೆಗೆ ೨—೩ ವಾರದಿಂದ ಇಲ್ಲಿಗೆ ಶನಿವಾರ ಬರತಕ್ಕ ವೃತ್ತಾಂತ ಪತ್ರಿಕೆ ಪಾರ್ಸೆಲ್‌ಗಳು ಸೋಮವಾರ ಮಂಗಳವಾರ ದಿವಸದಲ್ಲಿ ಬಟವಾಡೆಯಾಗುತ್ತಿವೆ. ಇಷ್ಟು ಸಾವಕಾಶವಾಗಿ ಬರುವದಕ್ಕೆ ಏನು ಕಾರಣವೋ ಗೊತ್ತಾಗಲಿಲ್ಲ. ಇದರಿಂದ ಇಲ್ಲಿನ ಚಂದಾದಾರರು ಬಹಳ ಹಿಂಸೆ ಮಾಡುತ್ತಾರೆ. ಇನ್ನಾದರೂ ಈ ರೀತಿ ಆಗದಂತೆ ಜಾಗ್ರತೆ ಕಳುಹಿಸಬೇಕಾಗಿ ಪ್ರಾರ್ಥಿಸುವ ತಮ್ಮ

ಸೊರಬ, ಶಿವಮೊಗ್ಗಾ ಡಿಸ್ಟ್ರಿಕ್ಟ್. ಪತ್ರಿಕೆ ಏಜಂಟ್.

["ಪತ್ರಿಕೆ" ಪಾರ್ಸೆಲುಗಳನ್ನು ಪ್ರತಿ ವಾರವೂ ನಾವು ಮೈಸೂರಿನಲ್ಲಿ ಬುಧವಾರ ಸಾಯಂಕಾಲವೇ ತಪ್ಪದೆ ಪೋಸ್ಟಿಗೆ ಕೊಡುತ್ತೇವೆ. ಅದು ಶನಿವಾರ ಸೊರಬಕ್ಕೆ ತಲುಪುತ್ತಿದ್ದದ್ದು ಈಗ ತಪ್ಪುವ ಕಾರಣವೇನೋ ಪೋಸ್ಟು ಇಲಾಖೆಯವರು ತನಿಖೆಮಾಡಬೇಕಾಗಿದೆ —ಎಡಿ.]

ಹೊಳೆನರಸೀಪುರದ ಹೊಲಗೇರಿಯವರಿಗೆ ನೀರಿನ ಕಷ್ಟ

ಅಯ್ಯ,

ಈ ಹೊಳೆನರಸೀಪುರದ ಹೊಲಗೇರಿ ಜನಗಳಿಗೆ ಮಳೆಗಾಲದಲ್ಲಿ ಆದರೋ ನಾಲಾದಿಂದಲೂ ಮತ್ತು ಕೆರೆಯಿಂದಲೂ ನೀರು ಲಭ್ಯವಾಗಿದೆ. ಈ ಬೇಸಿಗೆಯಲ್ಲಿ ಆದರೋ ನಾಲಾ ನೀರು ನಿಂತು ಹೋಯಿತು. ಕೆರೆಯು ಬತ್ತಿಹೋಯಿತು. ಈಗ ಜನಗಳು ಒಂದು ಮೈಲಿ ದೂರದಲ್ಲಿರುವ ಹೊಳೆಯಿಂದ ನೀರು ಹೊತ್ತು ತರಬೇಕು. ಕೂಲಿ ನಾಲಿ ಜೀವನ ಮಾಡುವ ಈ ಜನಗಳು ನೀರಿಗೆ ಯಾವಾಗ ಹೋಗುವರು? ಕೂಲಿ ಮಾಡುವದಕ್ಕೆ ಯಾವಾಗ ಹೋಗುವರು? ಮುದುಕರೂ ಅನಾಥರಾಗಿಯೂ ರೋಗಿಗಳಾಗಿಯೂ ಇರುವ ಬಡ ಜನಗಳು ಹ್ಯಾಗೆ ಇಷ್ಟು ದೂರದಿಂದ ನೀರು ತರುವರು? ಆದ್ದರಿಂದ ದಯಾಳುಗಳಾದ ನಮ್ಮ ಅಮಲ್ದಾರ್ ಸಾಹೇಬರು ಈ ಜನಗಳ ಮೇಲೆ ಕರುಣವಿಟ್ಟು, ಒಂದು ಬಾವಿಯನ್ನು ತೋಡಿಸಿಕೊಟ್ಟು, ಆ ಮೂಲಕ ಬಡ ಜನಗಳಿಗೆ ಉಪಕಾರ ಮಾಡುವರೆಂದು ನಿರೀಕ್ಷಿಸುತ್ತೇನೆ.

ಬಡ ಜನಗಳ ಹಿತಚಿಂತಕ.

ಆನೇಕಲ್ಲು ತಾ. ಹುಸ್ಕೂರು ಕಸಬಾ

ಅಯ್ಯ,

ಈ ಗ್ರಾಮದಲ್ಲಿ ಶ್ರೀ ಮದ್ದೂರಮ್ಮನವರೆಂಬ ದೇವತೆ ಇರುವ ಈ ದೇವರಿಗೆ ಅನಾದಿಯಾಗಿ ಈ ಗ್ರಾಮದ ಪ್ಯಾಟೇಲರು ಬೀಲರೇ ಧರ್ಮಕರ್ತರಾಗಿ ಇರುತ್ತಾರೆ. ಹಿಂದೆ ಟಿಪ್ಪೂ ಸುಲ್ತಾನ ಕಾಲದಲ್ಲಿ ಈ ದೇವರಿಗೆ ಬಂಗಾರದ ಪಚ್ಚಾಂಗಿ ಕೊಟ್ಟಿರುತ್ತಾರೆ. ಅದು ಸುಮಾರು ೫೦,೦೦೦—೬೦,೦೦೦ ರೂಪಾಯಿಗಳು ಬೆಲೆಯುಳ್ಳದ್ದಾಗಿರುತ್ತೆ. ಅದನ್ನು ಜಾತ್ರೆ ಕಾಲದಲ್ಲಿ ದೇವರಿಗೆ ಧರಿಸುತ್ತಾರೆ. ಈ ದೇವರಿಗೆ ಪ್ರತಿ ವರ್ಷವೂ ಮಾರ್ಚಿ ತಿಂಗಳಲ್ಲಿ ಒಂದು ವಾರ ದೊಡ್ಡ ಜಾತ್ರೆ ನಡೆಯುತ್ತೆ. ಈ ವರ್ಷದ ಜಾತ್ರೆ ಮಾರ್ಚ ೨೭ ನೆ ತಾರೀಖಿನಿಂದ ಪ್ರಾರಂಭವಾಗುವದು. ಈ ಜಾತ್ರೆಗೆ ಅನೇಕ ಪ್ರಾಂತ್ಯಗಳಿಂದ ರೈತರು ಎತ್ತುಗಳನ್ನು ಬಿಕರಿಗೆ ತರುತ್ತಾರೆ. ಸುಮಾರು ೩೦,೦೦೦ ಎತ್ತು ಸೇರುತ್ತೆ. ಈ ಜಾತ್ರೆಗೆ ಚಿತ್ರ ವಿಚಿತ್ರವಾಗಿ ಅಲಂಕರಿಸಿಕೊಂಡು ಗ್ರಾಮಾಂತ್ರಗಳಿಂದ ಸುಮಾರು ೨೦ ರಥಗಳು ತರುತ್ತಾರೆ. ನೋಟಕರಿಗೆ ಅತ್ಯಾನಂದವನ್ನು ಉಂಟುಮಾಡುವದು. ಇಷ್ಟು ದೊಡ್ಡ ಜಾತ್ರೆ ಜಮಾಯಿಸುವ ವಿಷಯದಲ್ಲಿ ಸರ್ಕಾರದವರು ಹೆಚ್ಚು ಮುತುವರ್ಜಿಯಿಂದ ಕಳ್ಳಕಾಕರಿಗೆ ಅವಕಾಶವಿಲ್ಲದಂತೆ ತಕ್ಕ ಏರ್ಪಾಡು ಮಾಡುತ್ತಿದ್ದಾರೆ.

ಇದೇ ತಾ. ಬನ್ನೇರುಘಟ್ಟವೆಂಬುವದು ಪುಣ್ಯಕ್ಷೇತ್ರವಾಗಿರುತ್ತೆ. ಅಲ್ಲಿಯೂ ಮಾರ್ಚ ೨೬ ನೆ ತಾರೀಖಿನಲ್ಲಿ ರಥೋತ್ಸವ ನಡೆಯುತ್ತೆ. ಇದು ದೊಡ್ಡ ಜಾತ್ರೆ.

ಈ ತಾಲ್ಲೂಕಿನ ಡಿಸ್ಟ್ರಿಕ್ಟ್ ಜಮಾಬಂದಿ ಇನ್ನೂ ಪೂರೈಸಿಲ್ಲ. ಡೆಪ್ಯುಟಿ ಕಮಿಷನರ್ ಸಾಹೇಬರವರು ಇನ್ನುರಲ್ಲೇ ದಯಮಾಡುವದಾಗಿ ವರ್ತಮಾನವಿರುತ್ತೆ.

ಬಾತ್ಮಿದಾರ್.

ಏನು ಮಾಡಬೇಕು?

ಅಯ್ಯ,

ನಾನು ತಾರೀಖು ೨೩—೭—೯೦೪ ರಲ್ಲಿ ಆದವಾನಿ ರೈಲ್ವೆ ಸ್ಟೇಷನ್ನಿಂದ ಮಾರ್ಕ ನಂ. ೭೪೭೦, ಪ್ಯಾಕ್ ನಂ. ೨, ತೂಕ ಮಣ, ಚಾರ್ಜ ರೂ. ೧—೭—೦, ಕಿಮ್ಮತ್ತು ರೂ ೧೬೦—೭—೦ ಕಿಮ್ಮತ್ತಿನ ಬಾಬತು ಜವಳಿಮೂಟೆ ಒಂದನ್ನು ಬಾಣಾವಾರದ ಸ್ಟೇಷನ್ನಿಗೆ ಪ್ಯಾಸ್ ಮಾಡಿಸಿ ತರಿಸಿಕೊಂಡೆನು. ಸದರಿ ಜವಳಿಯು ನನಗೆ ಬಂದು ಕಳುವು ಆಗಿ ಇರುತ್ತೆ. ಆದ್ದರಿಂದ ಸದರ್ನ ಮರಾಟ ರೈಲ್ವೆ ಟ್ರಾಫಿಕ್ ಮ್ಯಾನೇಜರವರಿಗೆ ಅರ್ಜಿ ಬರೆದುಕೊಂಡೆನು. ಸದರಿಯವರು ತಹಲ್‌ವರಿಗೂ ವಿಚಾರಣೆ ನಡೆಸುತ್ತೇವೆಂತ ತಿಳಿಸುತ್ತಾ ಬಂದರು. ಪ್ರಕೃತ ಸದರ್ನ ರೈಲ್ವೇ ಕಳುವು ಆಗಿ ಇಲ್ಲ, ಮದ್ರಾಸ್ ರೈಲ್ವೇಲಿ ಆಗಿದೆ. ನೀವು ಮದ್ರಾಸ್ ರೈಲ್ವೆಯವರಿಗೆ ತಿಳಿಸಬೇಕೆಂತ ನನಗೆ ಜನವರಿ ತಾ. ೨೬ ರಲ್ಲಿ ೭೭೮—೦೬ನೆ ಕಾಗದದ ಮೂಲಕ ತಿಳಿಸಿದರು. ನಾನು ಮದ್ರಾಸ್ ರೈಲ್ವೆಯವರಿಗೆ ಅರ್ಜಿ ಬರೆದುಕೊಂಡೆನು. ಸದರಿಯವರು ಬೆಂಗಳೂರು ಸಿಟಿ ಡಿಸ್ಟ್ರಿಕ್ಟ್ ಟ್ರಾಫಿಕ್ ಸುಪರಿಂಟೆಂಡೆಂಟರಿಗೆ ಅರ್ಜಿ ಬರೆದುಕೊಳ್ಳಿ ಎಂದು ತಿಳಿಸಿದರು. ನಾನು ಆ ಮೇರೆ ಟ್ರಾಫಿಕ್ ಸುಪರಿಂಟೆಂಡೆಂಟರಿಗೆ ಅರ್ಜಿ ಬರೆದುಕೊಂಡೆನು. ಸದರಿಯವರು ಪ್ರಕೃತ ಧಾರವಾಡ ಟ್ರಾಫಿಕ ಮ್ಯಾನೇಜರವರಿಗೆ ತಿಳಿಸಬೇಕೆಂತ ಹೇಳುತ್ತಾರೆ. ಈ ರೀತಿ ಈ ವರಿಗೂ ನನ್ನ ಜವಳಿ ಮೂಟೆ ಕ್ರಯದ ಹೊಬಳಿಗು ವಾಪಸ ಕೊಡದೆ ಕಾಲಹರಣ ಮಾಡುತ್ತಾರೆ. ನಿಮ್ಮ ಪತ್ರಿಕೆ ಮುಖಾಂತರವಾಗಿ ಅವರೂ ತಿಳಿಸಿದರೆ ಕೊನೆಗೆ ಹೊಬಳಿಗು ವಾಪತಿ ಮಾಡ್ಯಾರೆಂದು ನಂಬುತ್ತೇನೆ. ತಾವು ದಯವಿಟ್ಟು ಈ ವಿಷಯದಲ್ಲಿ ಏನು ಮಾಡಬೇಕು ಎಂಬುವ ವಿಷಯವನ್ನು ತಮ್ಮ ಪತ್ರಿಕೆ ಮುಖಾಂತರವಾಗಿ ತಿಳಿಸಬೇಕೆಂದು ಬೇಡುತ್ತೇನೆ.

ಬೆಳಗೂರು ನಾಗಪ್ಪ, ಜವಳಿ ಅಂಗಡಿ,

ಅರಸೀಕೆರೆ ತಾಲ್ಲೂಕು ಬಾಣಾವಾರ.

[ನಿಮಗೂ ರೈಲ್ವೆಯವರಿಗೂ ಇದುವರೆಗೆ ನಡೆದಿರುವ ಕಾಗದ ಪತ್ರಗಳನ್ನು ಒಬ್ಬ ವಕೀಲರಲ್ಲಿ ಕೊಟ್ಟು ತೋರಿಸಿ, ಅವರು ಹೇಳುವಂತೆ ನಡೆಯಬೇಕಲ್ಲದೆ ಇನ್ಯಾವ ಮಾರ್ಗವೂ ನಮಗೆ ಕಾಣುವದಿಲ್ಲ —ಎಡಿ.]

ಸಂಸ್ಕೃತ ಪಾಠಶಾಲಾಸ್ಥಾಪನೆಗೆ ಹಣವನ್ನು ಕೂಡಿಸಿದ್ದು.

ಅಯ್ಯ,

ಹೊನ್ನಾಳಿ ತಾಲ್ಲೂಕ್ ನ್ಯಾಮತಿಯಲ್ಲಿ ಹೋದ ಸಂವತ್ಸರ ಮೆ॥ ಗಳಾದ ಗುರುಸಿದ್ದಪ್ಪಯ್ಯನವರು, ದೊಡ್ಡ ಮನೆ ಸೊಂಡೂರ ಮುದ್ದಪ್ಪನವರು, ಕಲ್ಲಪ್ಪನವರ ದೊಡ್ಡ ಮುದ್ದಪ್ಪನವರು, ಈ ಮೂರು ಜನ ಮಹನೀಯರೂ ಸೇರಿ ಸಂಸ್ಕೃತಪಾಠಶಾಲಾಸ್ಥಾಪನೆಗೋಸ್ಕರ ನ್ಯಾಮತಿಯಲ್ಲಿಯೇ ವೀರಶೈವ ಮಹನೀಯರಲ್ಲಿ ಎರಡು ಸಾವಿರದ ಏಳ್ನೂರು ರೂಪಾಯಿಗಳ ಚಂದಾ ವಸೂಲು ಮಾಡಿ ಸಂಸ್ಕೃತ ಪಾಠಶಾಲಾಸ್ಥಾಪನೆ ಮಾಡುವ ಉದ್ದೇಶ್ಯ ಮೆ॥ ವೀರಪ್ಪ ಶಾಸ್ತ್ರಿಗಳನ್ನು ಕರೆಸಿ ಬೆಂಗಳೂರಿಂದ ಮುಹೂರ್ತ ನಿಶ್ಚಯಿಸುವದರಲ್ಲಿಯೇ ಪ್ಲೇಗ್ ತಗಲಿ ನೂರಾರು ಜನಗಳು ಮೃತಪಟ್ಟರು. ಇಷ್ಟರಲ್ಲಿಯೇ ಎಲ್ಲಾ ಜನಗಳು ಊರುಬಿಟ್ಟು ಕ್ಯಾಂಪಿನಲ್ಲಿ ಸೇರಿದರು. ಇಂಥಾ ಕಷ್ಟದಲ್ಲಿ ಸಂಸ್ಕೃತ ಪಾಠಶಾಲಾಸ್ಥಾಪನೆಗೆ ವಿಘ್ನವಾಯಿತು. ಸುಮಾರು ಮೂರು ತಿಂಗಳಾಗುತ್ತಾ ಬಂತು. ಈಗ ಪ್ಲೇಗ್ ರೋಗವು ಇಲ್ಲದೆ ಊರು ಸೇರಿದ್ದಾರೆ. ಈ ಸುಕಾಲ ಸಿಕ್ಕಿತು. ಸದರಿ ದೊಡ್ಡ ಮನುಷ್ಯರು ಸೇರಿ ಸಧ್ಯದಲ್ಲಿ ಸಂಸ್ಕೃತಪಾಠಶಾಲೆಯನ್ನು ಏರ್ಪಾಡು ಮಾಡಿಸಿ ಅವಿವೇಕಿಗಳನ್ನು ಜ್ಞಾನವಂತರನ್ನಾಗಿ ಮಾಡುತ್ತಾರೆಂದು ನಂಬಿರುವೆವು

ಬಾತ್ಮಿದಾರ್.

ಶ್ರೀ ಕೂಡಲಿ ಸ್ವಾಮಿಯವರು.

ಅಯ್ಯ,

ತಮ್ಮ ೨೬—೨—೧೯೦೫ನೇ ತಾರೀಖಿನ ವರ್ತಮಾನ ಪತ್ರದಲ್ಲಿ ಶ್ರೀ ಕೂಡಲಿ ಸ್ವಾಮಿಯವರು ಚಿತ್ರದುರ್ಗಕ್ಕೆ ಬಂದು ವಿಶ್ರಮಕಾಲವಾಯಿತೆಂದಲೂ ಅವರು ಅಷ್ಟಕಾಲಕಿ ಉತ್ಸವ ಮಾಡಿಸಿಕೊಂಡೇ ಅಲ್ಲಿಂದ ಮುಂದಕ್ಕೆ ಹೊರಡುವದಾಗಿಯೂ ವಗೈರೆ ನಮೂದಿಸಿರೋಣವಾಗಿದೆ. ಶ್ರೀ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಈ ಕೂಡಲಿ ಮಠದಲ್ಲಿ ೧೮೩೩ನೇ ಇಸವಿಯಲ್ಲಿ ಇದ್ದ ಶ್ರೀ ಶಂಕರ ಭಾರತಿ ಸ್ವಾಮಿ ಎಂಬ ಗುರುಗಳು ಒಬ್ಬ ಕೇಶವಶಾಸ್ತ್ರಿಗಳು ಎಂಬುವರಿಗೆ ಪರಂಪರಾಗತ ಕ್ರಮಪೂರ್ವಕವಾಗಿ ಪದವಿಸನ್ಯಾಸ ಕೊಟ್ಟು, ಶ್ರೀ ನರಸಿಂಹ ಭಾರತಿ ಎಂಬ ಸಾಂಪ್ರದಾಯ ರೀತ್ಯಾ ತಮ್ಮ ಗುರುಗಳ ಅಭಿಧಾನ ಇಟ್ಟು, ಶ್ರೀ ಮಠದ ಗಾದಿಗೆ ಪಟ್ಟಕ್ಕೆ ಕೂರಿಸಿದರು. ನಂತರ ಈ ನರಸಿಂಹ ಭಾರತಿಗಳೂ ಸಂಸ್ಥಾನ ಪದ್ಧತಿ ಪ್ರಕಾರ ಆಚಾರ ವಿಚಾರ ಪ್ರಾಯಶ್ಚಿತ್ತಗಳನ್ನು ನಡೆಸುತ್ತಾ ದೇಶಸಂಚಾರ ಹೊರಟು, ೧೮೪೭ ರಲ್ಲಿ ತಮ್ಮ ಗುರುಗಳಿಗೆ ದೇಹಾಲಸ್ಯವೆಂಬ ಸಂಗತಿ ಕೇಳಿ, ಶ್ರೀ ಕೂಡಲಿಗೆ ವಾಪಸು ಬರಲು, ಅಷ್ಟರಲ್ಲಿ ತಮ್ಮ ಗುರುಗಳು ಸಮಾಧಿಸ್ಥರಾಗಿದ್ದರು. ಆಗ ಶ್ರೀ ಸಂಸ್ಥಾನಗಾದಿಗೆ ವ್ಯತಿರಿಕ್ತವಾದ ನಾಮಾಂಕಿತರಾದ ಒಬ್ಬ ವಿದ್ಯಾಶಂಕರರೆಂಬುವರು ತಮಗೆ ದೇಹವಿಸ್ಮೃತಿಯಾಗಿದ್ದ ಕಾಲದಲ್ಲಿ ತಮ್ಮ ಮರಣಾತ್ಪೂರ್ವ ತಮಗೆ (ವಿದ್ಯಾಶಂಕರರಿಗೆ) ಮೇಲ್ಕಂಡ ಗುರುಶಂಕರ ಭಾರತಿಗಳು ಆಶ್ರಮ ಕೊಟ್ಟರೆಂದಲೂ ತಮಗೆ ಸಂಸ್ಥಾನ ಬರಬೇಕೆಂದಲೂ ತಕರಾರು ತೂಡಿದರು. ಮೊದಲೆ ಪಟ್ಟದ ಶಿಷ್ಯರು ಇದ್ದ ಹಾಗೆ ಇವರಿಗೆ ಆಶ್ರಮಕೊಟ್ಟರೂ ಹ್ಯಾಗೋ ಅಥವಾ ಕೊಟ್ಟಿದ್ದಾಗ್ಯೂ ಯಾತಕ್ಕೋಸ್ಕರವೋ ಮತ್ತು ಯಾರು ಆ ರೀತಿ ಕೊಟ್ಟರೋ ಹೇಳುವದು ಆಗುವದಿಲ್ಲ. ಮತ್ತು ಸದರಿ ಶ್ರೀ ಶಂಕರಭಾರತಿಗಳಿಗೆ ಆ ರೀತಿ ಇನ್ನೊಬ್ಬರಿಗೆ ಸಂಸ್ಥಾನದ ದೆಸೆಯಿಂದ ಆಶ್ರಮ ಕೊಟ್ಟು, ಶಿಷ್ಯರನ್ನು ಮಾಡಿಕೊಳ್ಳಲು ಅಧಿಕಾರವೂ ಇಲ್ಲ ಮತ್ತು ಅವರು ಆ ರೀತಿ ಮಾಡಲೂ ಇಲ್ಲವೆಂತ ತಿಳಿಯಬರುತ್ತೆ. ಅನಂತರ ಈ ನರಸಿಂಹ ಭಾರತಿಗಳ ಮತ್ತು ವಿದ್ಯಾ ಶಂಕರ ಭಾರತಿಗಳ ವಿವಾದವು ೧೮೭೮ರ ವರಿವಿಗೂ ನಡೆಯಿತು. ಈ ವಿವಾದದ ಕಾಲದಲ್ಲಿ ಬ್ರಿಟಿಷ್ ಸರ್ಕಾರದವರು ಮಠದ ಸ್ಥಿರ ಆಸ್ತಿಯನ್ನು ವಹಿಸಿಕೊಂಡು ಜಪ್ತಿ ಮಾಡಿದ್ದರು. ಆದರೆ ಚರ ಆಸ್ತಿ ಯಾವತ್ತೂ ಮೊದಲೆ ಸಂಚಾರ ಮಾಡುತ್ತಿದ್ದ ಪಟ್ಟಕ್ಕೆ ಕೂತಿದ್ದ ನರಸಿಂಹ ಭಾರತಿಗಳ ಸ್ವಾಧೀನದಲ್ಲಿತ್ತು. ಆಗ ೧೮೭೮ ರಲ್ಲಿ ಸದರಿ ನರಸಿಂಹ ಭಾರತಿಗಳು ತಮ್ಮ ಪೂರ್ವಾಶ್ರಮದ ಮಗ ರಂಗಶಾಸ್ತ್ರಿಗಳು ಎಂಬುವರಿಗೆ ವಿದ್ಯಾಶಂಕರರು ೬,೦೦೦ ರೂಪಾಯಿ ಕೊಡುವದಾಗಿ ವಗೈರೆ ಒಪ್ಪಿದ್ದರಿಂದ ತಮ್ಮ ಹಕ್ಕನ್ನು ಶ್ರೀ ವಿದ್ಯಾಶಂಕರರಿಗೆ ಕರಾರು ದ್ವಾರ ಬರೆದು ಕೊಟ್ಟರು. ಆದರೆ ಶ್ರೀ ವಿದ್ಯಾಶಂಕರರು ೧೮೭೯ ರಲ್ಲಿ ಸಮಾಧಿಸ್ಥರಾದ್ದರಿಂದ ಇವರ ಶಿಷ್ಯರಾದ ಶಂಕರ ಭಾರತಿಗಳೂ ಸಹ ಹಿಂದಿನ ಕರಾರಿನಂತೆ ಸದರಿ ನರಸಿಂಹ ಭಾರತಿಗಳಿಗೆ ಇನ್ನೊಂದು ಕರಾರು ಬರೆದುಕೊಟ್ಟು ಸಂಸ್ಥಾನ ವ್ಯವಸ್ಥಾ ಮಾಡುತ್ತಿದ್ದಾರೆ. ಆದರೆ ಗುರುತ್ವ ವಿಚಾರದಲ್ಲಿ ಈ ಗಾದಿಯಲ್ಲಿ "ಅನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ" ಎಂಬಿರುದಿರುವದರಿಂದ ಈ ನರಸಿಂಹ ಭಾರತಿಗಳ ಪರಂಪರಾ ಪಟ್ಟಾಧಿಕಾರಿಗಳು ಬಂದು, ಈಗ ಅವರ ಪರಂಪರಾದವರಾದ ಶ್ರೀ ಶಂಕರಭಾರತಿ ಸ್ವಾಮಿ ಗುರು ಶ್ರೀ ನರಸಿಂಹ ಭಾರತಿ ಸ್ವಾಮಿ ಎಂಬುವರು ಹಾಲಿ ಬೆಂಗಳೂರಿಗೆ ದಯಮಾಡಿರುತ್ತಾರೆ. ಇವರೇ ಶ್ರೀ ಕೂಡಲಿ ಸ್ವಾಮಿಗಳಿರುವರು. ಇಲ್ಲಿ ಜನಗಳಲ್ಲಿ ಇದೇ ತಿಳುವಳಿಕೆ ಇರುತ್ತೆ. ಮೇಲ್ಕಂಡಂತೆ ಕರಾರು ಬರೆದು ಕೊಟ್ಟ ಶ್ರೀ ನರಸಿಂಹ ಭಾರತಿಗಳು ೧೮೯೭ ರಲ್ಲಿ ಸಮಾಧಿಸ್ಥರಾದ್ದರಿಂದ ಗಾದಿ ವಾರಸುದಾರರಾದ ಶ್ರೀ ಶಂಕರಭಾರತಿ ಗುರುನರಸಿಂಹ ಭಾರತಿಯವರು ಮೇಲ್ಕಂಡ ವಿದ್ಯಾಶಂಕರರ ಶಿಷ್ಯರಾದ ಮತ್ತು ಹಾಲಿ ಚಿತ್ರದುರ್ಗದಲ್ಲಿರುವ ಶ್ರೀ ಶಂಕರ ಭಾರತಿಗಳಿಂದ ಮಠದ ಸ್ವತ್ತುಗಳೆಲ್ಲಾ ಸ್ವಾಧೀನವಾಗಬೇಕೆಂತ ವಗೈರೆ ಮೈಸೂರು ಸರ್ಕಾರದಲ್ಲೂ ಬ್ರಿಟಿಷ್ ಸರ್ಕಾರದಲ್ಲೂ ವ್ಯವಹಾರ ನಡೆಸಿದ್ದಾರೆ. ಆದ್ದರಿಂದ ಈ ನರಸಿಂಹ ಭಾರತಿಗಳ ಪರಂಪರಾದವರಾದ ಶ್ರೀ ಶಂಕರಭಾರತಿ ಸ್ವಾಮಿ ಗುರುನರಸಿಂಹ ಭಾರತಿ ಸ್ವಾಮಿಗಳೇ ಕೂಡಲೀ ಸ್ವಾಮಿಯವರಾಗಿರುತ್ತಾರೆ. ಹಾಲೀ ಚಿತ್ರದುರ್ಗದಲ್ಲಿರುವವರು ಉದ್ಭಟ್ಟ ಸ್ವಾಮಿಯವರೆಂತ ರೂಢಿಯಲ್ಲಿದೆ. ತಮ್ಮ ಭಾಷಾದಿಂದ ಇಲ್ಲಿ ಅನೇಕರಿಗೆ ಸಂಶಯ ಬಂದದ್ದರಿಂದಲೂ ಮತ್ತು ಕೂಡಲಿ ಮಠದ ಶಿಷ್ಯಮಂಡಲಿಯಲ್ಲಿ ಬಹಳ ಸಂಕಟ ಉಂಟಾದ್ದರಿಂದಲೂ ಅವರುಗಳ ಕೋರಿಕೆ ಮೇರೆ ಈ ವಿಷಯವನ್ನೆಲ್ಲಾ ವ್ಯಕ್ತಪಡಿಸುವದು ಮತ್ತು ಎಲ್ಲರಿಗೂ ಸರಿಯಾದ ತಿಳುವಳಿಕೆ ಕೊಡುವದು ಯುಕ್ತವೆಂದು ತಿಳಿದು, ತಮಗೆ ತಿಳಿಸುತ್ತೇನೆ.

ತಾ. ೭—೩—೦೫. ಧರ್ಮಾಭಿಮಾನಿ.

ತಾಲ್ಲೋಕು ವರ್ತಮಾನಗಳು.

ಚಿಕ್ಕಮಗಳೂರು.—ಊರಿನಲ್ಲಿ ರೋಗದ ಗಲಾಟೆಯೇನೂ ಇಲ್ಲ. ಬಿಸಲು ಮಾತ್ರ ದಿನದಿನಕ್ಕೂ ಹೆಚ್ಚುತ್ತಲಿದೆ. ಆದರೆ ಮಧ್ಯಾಹ್ನದಲ್ಲಿ ಗಾಳಿ ಬೀಸೋಣದರಿಂದ ಅದರ ತಾಪ ಹೆಚ್ಚಾಗಿ ಕಾಣುವದಿಲ್ಲ.—ಕಳೆದ ವಾರದಲ್ಲಿ ಪೋಸ್ಟಾಫೀಸುಗಳ ಸೂಪರೆಂಟರಾದ ಹಾಮಿಲ್ಟನ್ ಸ್ಮಿತ್ ಸಾಹೇಬರವರು ಬಂದು ಇಲ್ಲಿನ ಪೋಸ್ಟಾಫೀಸನ್ನು ಇನ್ಸ್‌ಪೆಕ್ಟ ಮಾಡಿಕೊಂಡು ೨೬ನೇ ತಾರೀಖಿಗೆ ಇಲ್ಲಿಂದ ಹೊರಟುಹೋದರು.—ಇಲ್ಲಿನ ವೆಸ್ಲಿಯನ್ ಮಿಷನ ಪಾದ್ರಿಗಳಾದ ಜೆ. ರೆಡ್ಮಂಡ್ ದೊರೆಯವರು ಕಳೆದ ತಿಂಗಳು ೭೦ನೇ ತಾರೀಖಿನಿಂದ ಈ ತಿಂಗಳ ೭ನೇ ತಾರೀಖಿನ ವರಿಗೆ ಸುಮಾರು ೧೧ ದಿನಗಳಲ್ಲಿ ಮೂಡಿಗೆರೆ ತಾಲೋಕಿನಲ್ಲಿ ಹದಿನೇಳು ಕಾಫಿ ತೋಟಗಳಿಗೆ ಹೋಗಿ ಅಲ್ಲಿನ ಪ್ಲಾಂಟರುಗಳನ್ನೂ ಸಂಧಿಸಿ ೩ನೇ ತಾರೀಖಿಗೆ ಚಿಕ್ಕಮಗಳೂರನ್ನು ಸೇರಿದರು.—ನಮ್ಮ ಡೆಪ್ಯುಟಿ ಕಮಿಷನರ್ ಮೆ। ನಾರಾಯಣ ರಾಯರು ಮೂರು ತಿಂಗಳು ಕಾಯಿಲೆ ರಜಕ್ಕಾಗಿ ಬರೆದುಕೊಂಡಿರುವ ಹಾಗೂ ಇವರ ಬದಲಿಗೆ ಮೆ॥ ಎಸ್. ವೆಂಕಟರಾಯರು ಬರುವಹಾಗೂ ವರ್ತಮಾನವಿದೆ.—ಕಳೆದ ೨೬ನೇ ತಾರೀಖಿನಲ್ಲಿ ಸಮುದ್ರ ಹಾದಿ ಸಿದ್ಧನ ಗದ್ದೆಯಲ್ಲಿ ಗನ್ನಾಕಳವು ಮಾಡಿದ ಶಿಪಾಯಿಯು ಕೋರ್ಟಿನ ಫಲಿತಾಂಶವನ್ನು ನಿರೀಕ್ಷಿಸುತ್ತಾ ಲಾಕಪ್ಪಿನಲ್ಲಿದ್ದನೆಂದು ಬರೆದೆನಷ್ಟೆ. ಆ ಶಿಪಾಯಿಗೆ ಐದು ರೂಪಾಯಿ ಜುಲ್ಮಾನೆ ಆಯಿತು.—ಈ ಟೌನಿನಲ್ಲಿ ಕೆಲವು ಕಡೆ ಲಾಂದ್ರಗಳು ಚನ್ನಾಗಿ ಉರಿಯುವದಿಲ್ಲವಾದ್ದರಿಂದ ಮುನಿಸಿಪಾಲಿಟಿಯ ಅಧಿಕಾರಿಗಳು ಇದನ್ನು ಕ್ರಮಪಡಿಸುವದು ಒಳ್ಳೇದಾಗಿದೆ.

ಹೊಳೆನರಸೀಪುರ.—ಬಿಸಲು ಬಹಳವಾದ್ದರಿಂದ ಶೆಕೆ ಹೆಚ್ಚು. ಜನ ಆರೋಗ್ಯಕರವಾಗಿದೆ. ಫೆಬ್ರವರಿ ತಾ॥ ೨೩ ನೆ ಗುರುವಾರ ಒಂದು ಹದ ಮಳೆಯಾಯಿತು. ಜನಗಳು ಊರಿಗೆ ಬಂದು ಸೇರಿದರು. ಮತ್ತು ೭ದುಬಿನ ಅಂಗಡಿ ಊರಿಗೆ ಹಲ ಜಾತಿ ಅನೇಕ ಮಕ್ಕಳನ್ನು ಆಹುತಿ ತೆಗೆದುಕೊಂಡಿತು. ಈಚೆಗೆ ಊರಿನಲ್ಲಿ ಈ ಅಮಾಂತ್ರವು ಬಹಳವಾಗಿರುವದರಿಂದ ಜನಗಳು ತಮ್ಮ ಮಕ್ಕಳಿಗೆ ಸಿಡುಬು ಹಾಕಿಸಿದರೆ ಮಾರಿಯು ಊರು ಬಿಟ್ಟು ಹೋಗುವದಕ್ಕೆ ಕಾರಣವಾದೀತು. ದೊಡ್ಡವರು ಸಹ ಸಿಡುಬು ಹಾಕಿಸಿಕೊಂಡರೆ ಒಳ್ಳೇದು.—ಈ ಊರಿಗೆ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರು ಬಂದು, ಎ. ವಿ. ಸ್ಕೂಲ್‌ಗಳನ್ನೂ, ಬ್ರಾಂಚ್ ಸ್ಕೂಲುಗಳನ್ನೂ, ಮಿಷನ್ ಬಾಯ್ಸ್, ಗರಲ್ಸ್ ಸ್ಕೂಲುಗಳನ್ನೂ ಪರೀಕ್ಷಿಸಿದರು. ಊರು ಬಿಟ್ಟು ಈಗಲೇ ಸ್ಕೂಲ್‌ಗಳನ್ನು ತೆರೆದಿರುವದರಿಂದ ಅಷ್ಟು ಒಳ್ಳೇ ರಿಸಲ್ಟ್ ಬಂದಿಲ್ಲವಾದೀತು.—ಪೊಲೀಸ್ ಬೀಟ್ ಬಹು ನಿಗಾ ಮೇಲೆ ನಡೆಯುವದರಿಂದ ಕಳ್ಳತನಗಳು ನಡೆಯುವದಕ್ಕೆ ಅವಕಾಶವಿಲ್ಲದೆ ಇದೆ. ಸರ್ಕಾರಿ ನೌಕರರು ಒಬ್ಬರನ್ನೊಬ್ಬರು ನೋಡಿ, ತುಂಬಾ ಆಸಕ್ತಿಯಿಂದ ಕೆಲಸ ಮಾಡುತ್ತಿರುವದನ್ನು ನೋಡಿ ತುಂಬಾ ಸಂತೋಷಪಡಬೇಕಾಗಿದೆ.—ಹಳ್ಳಿಯ ಕಾಗದಗಳು ಬಹು ತೊಂದರೆಯಿಂದ ರವಾನಿಸಲ್ಪಡುತ್ತವೆಯಾದ್ದರಿಂದ ನಮ್ಮ ಪೋಸ್ಟ್ ಮಾಸ್ಟರವರು ಇದರ ಮೇಲೆ ನಿಗಾ ಮಾಡುವರೆಂದು ನಂಬಿದ್ದೇನೆ. ಅಲ್ಲದೆ ಕಾರ್ಡು, ಕವರು, ಸ್ಟಾಂಪು ವಗೈರೆಗಳನ್ನು ಪೋಸ್ಟ್ ಪೀವನ್‌ಗಳ ಮೂಲಕವೂ ಕೊಟ್ಟು ವಿಕರಿ ಮಾಡಿಸಿದಲ್ಲಿ ಜನಗಳಿಗೆ ತುಂಬಾ ಅನುಕೂಲ.—ಈ ಊರಲ್ಲಿ ಅನೇಕ ದೊಡ್ಡ ವರ್ತಕಮಂಡಲಿಯವರು ಇರುತ್ತಾರೆ. ಈ ಬೇಸಿಗೆ ಕಾಲದಲ್ಲಿ ಮಜ್ಜಿಗೆ ನೀರಿನ ಅರವಟ್ಟಿಗೆ ಮಾಡಿಸಿದರೆ ಪರಸ್ಥಳದವರಿಗೆ ಅನುಕೂಲವಾದೀತು. ಊರು ಹೊರಗೆ ಇರುವ ಶೋಧಿಸಿದ ಬಂಗಾರದ ಹಾಗಿದೆ. ಅದರ ಒಂದು ಭಾಗ ಕೊರತೆಯಲ್ಲಿದೆ ಅದೇನಂದರೆ—ಪೇಟೆಯಲ್ಲಿರುವ ಚರ್ಮದ ಮಂಡಿಗಳ ರಸ್ತೆಯಲ್ಲಿ ದುರ್ವಾಸನೆಯು ಬಹಳವಾಗಿದೆ. ಈ ರಸ್ತೆಯಲ್ಲಿಯೇ ಹೆಚ್ಚು ಜನಗಳು ತಿರುಗುತ್ತಾರೆ. ಈ ದುರ್ವಾಸನೆಯು ಆರೋಗ್ಯಕ್ಕೆ ಬಹು ವಿರೋಧವಾಗಿದೆ ಎಂದು ಏನೂ ಅರಿಯದವರಾದರೂ ಹೇಳುವರು. ಆದ್ದರಿಂದ ನಮ್ಮ ಅಮಲ್ದಾರ್ ಸಾಹೇಬರು ಈ ಮಂಡಿಗಳನ್ನು ದುರ್ವಾಸನೆ ಬಾರದಂಥಾ ಸ್ಥಳಕ್ಕೆ ರವಾನಿಸಿದರೆ ಜನಗಳ ಆರೋಗ್ಯಕ್ಕೆ ತುಂಬಾ ಅನುಕೂಲವಾದೀತು. ಬೇಗನೆ ಇದಕ್ಕೆ ಏರ್ಪಾಡು ಮಾಡುವ ಹಾಗೆ ಪ್ರಾರ್ಥಿಸುತ್ತೇನೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

12

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ಶ್ರೇಷ್ಠವಾದವುಗಳಾಗಿವೆ. ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ.

೨ "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪ "ರೋಮನರ ಚರಿತ್ರೆ" ಕ್ರಯ ೦—೨—೦
೫. "ಗ್ರೀಕರ ಚರಿತ್ರೆ" ,, ೦—೨—೦
೬ "ಅನುಭವಾನಂದ",, ೦—೬—೦
೭ "ಗಣಿತ ಸಂಜೀವಿನಿ." ೦—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ." ೦—೧೬—೦
೧೧ "೧೯೦೫ನೇ ವರುಷದ ಡೈರಿಗಳು"
ಫ್ಲಾಪ್, ಪೆನ್ಸಿಲ್ ಸಹಿತ ೧—೬—೦, ಸಾದಾ ೧—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಜ್ವರಹರಿ.

17

ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜರಾಯಿ ತಾಲೂಕ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯಂಗಾರರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ., ೨೦ ಔ ೨—೧೨ ಆ, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ ಬಿಡಲಾಗುವದು

****

ಓ ಮಂ ಕ ರ್ಪೂ ರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ನೋವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಓಮಂ ಕರ್ಪೂರವನ್ನು ನಾನೂ ನನ್ನ ಕಾಪೇಷಂಟರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ಪ್ರಿಯವಾದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ನೆಂಬರ್ ಬೀಚ್ ಲೈನ್. ಮದರಾಸ್.

೧೯೦೫ನೆ ಇಸವಿ ಮೆಟ್ರಿಕ್ಯುಲೇಷನ್ ಕನ್ನಡ ಟೆಕ್ಸ್ಟಿನ ನೋಟ್ಸು.

ಕ್ರಯ, ೧ ರೂಪಾಯಿ. ಡಿಸ್ಕೌಂಟು ೧೦ಕ್ಕೆ ೧
ಉಪದೇಶಮಾಡತಕ್ಕ ನೋಟ್ಸು ಅಲ್ಲ. ಪ್ರಶ್ನೋತ್ತರಗಳೂ ಜತೆ ರಚಿಸಿದೆ. ಫೆಬ್ರವರಿ ೧೫ಕ್ಕೆ ಮುಂದಿನ ಸಿದ್ಧವಾಗುತ್ತೆ.

N. R VENKATA SUBBACHARYA,
Subodha Granthâlaya, Mysore.

ಸುಲಭಕ್ರಯ: ಸುಗಂಧದ್ರವ್ಯಗಳು.

11

ಅಂಬರ್ ಕಡ್ಡಿ ಸೇರು ೧ಕ್ಕೆ	೪—೦—೦
ವಸಂತಕುಸುಮಾಕರವರ್ತಿ ..	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೮—೦
ಪುನುಗು ಕಡ್ಡಿ ,, ೧ಕ್ಕೆ	೧—೮—೦
ಮಸಾಲಾ ಕಡ್ಡಿ ,, ೧ಕ್ಕೆ ..	೦—೧೦—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೬—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಪಚ್ಚೆ ಗಂಧ ತೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಹಾಲುಮತ್ತಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ ವರಕಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ ..	೦—೪—೦
ಕೇಶೋಲ್ಲಾಸಿನಿ ಸೀಸೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಸೀಸೆ ೧ಕ್ಕೆ	೦—೯—೦
ತಂಬಾಕ್ ಸ್ನೋಕ್ ಡಬ್ಬಿ ೧ಕ್ಕೆ ..	೦—೨—೦
ಶ್ರೀವೈಷ್ಣವ ಶಾಸ್ತ್ರೀಯ ದಶಾಂಗ ಸೇರು ೧ಕ್ಕೆ	೦—೧೨—೦
ಫಿರ್ದಾ ತೋಲ ೧ಕ್ಕೆ	೨—೦—೦
ಡಿಟೋ ..	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ವಸಂತಮಾನೀಯ ಘುಟಿಕಾ ೧೦೦ಕ್ಕೆ ..	೨—೦—೦

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಜಟ್ಟಾಗಿ ತರಿಸುವವರಿಗೆ ಕಮಿಷನ್ ಕೊಡಲಾಗುತ್ತದೆ. ವಿಳಾಸ—ಟಿ ಎಲ್ ಉಪಾಧ್ಯಾಯ ಅಂಡ್ ಕೋ,
ಸುಗಂಧಕಾರಿ, ಮೈಸೂರು.

ಹೋ ಮೋ ಸಿ ಯಾ.

ತಕ್ಷಣ ಪರಿಹಾರ



ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಶಾಕರ್ಣವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮುಂತಾದ ಜೇಳು ಕಡಿದದ್ದು, ಚುಚ್ಚಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಾ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ.; ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಖಾಬ್ತು ಡಬ್ಬಾದಲ್ಲಿ ೧ ರೂ ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಒಳ್ಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಾಗಳಲ್ಲಿ ತಾಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮೋಸಿಯಾ ಕಂಪನಿ. ೨೬ ನೆಂಬರು ಬೀಚ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

17—2—1905 ರಿಂದ 24—2—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವರ್ಷ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	49	32	105	6[illegible]
ಮೈಸೂರು ,,	10	11	5	[illegible]
ಬೆಂಗಳೂರು ಡಿಸ್ಟ್ರಿಕ್ಟ್	76	59	108	8[illegible]
ಮೈಸೂರು ,,	23	21	91	8[illegible]
ಕೋಲಾರ್ ,,	31	22	68	4[illegible]
ಕೋಲಾರ್ ಚಿನ್ನದ ಗಣಿಗಳು	20	16	39	1[illegible]
ತುಮಕೂರು ಡಿಸ್ಟ್ರಿಕ್ಟ್	10	10	26	[illegible]
ಹಾಸನ ,,	4	1	8	1[illegible]
ಚಿತ್ರದುರ್ಗ ,,	28	24	15	1[illegible]
ಕಡೂರ್ ,,	14	10	45	3[illegible]
ಶಿವಮೊಗ್ಗ ,,	13	8	44	2[illegible]
ಒಟ್ಟು.	278	214	531	3[illegible]

ಶಾಲಿವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರ ಫಾಲ್ಗುಣ ಶುದ್ಧ ತದಿಗೆ ಗುರುವಾರದಿಂದ ಫಾಲ್ಗುಣ ಶುದ್ಧ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಮಾರ್ಚಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ	[illegible]
9	ಗುರು	ತದಿಗೆ	22 40	ರೇ	13 24	26
10	ಶುಕ್ರ *	ಚೌತಿ	27-20	ಶ್ವ	19-3	27
11	ಶನಿವಾ	ಪಂಚಮಿ	31 12	ಭ	24 54	28
12	ರವಿವಾ	ಷಷ್ಠಿ	34 10	ಕೃ	29 30	29
13	ಚಂದ್ರ	ಸಪ್ತಮಿ	35 29	ರೋ	32 51	1
14	ಕುಜ	ಅಷ್ಟಮಿ	36-26	ಮೃ	34 44	2
15	ಬುಧ	ನವಮಿ	35 34	ಆ	35 23	3

* ಸಂಕಷ್ಟಚತುರ್ಥಿ ಶ್ರೀ ಪಂಚರಾತ್ರಕಾಲ ಪತ್ನಾದಮಾಂಬುಧ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ. ೧೦—೮	೯೧—೦
ಕಂಬೂತಿ ಅಕ್ಕಿ ಅವಲ್ .	೧೦-೪—೦	೧೧—೦-
,, ಮುಯಂ ..	೯—೧೨—೦	೧೦—೮-
ಜಾವಾನ್ ಅಕ್ಕಿ ..	೯—೮—೦	೧೨—೬-
ಸಣ್ಣಕ್ಕಿ ಅವಲ್ ..	೯೨ ೦—೦	೧೪—೬-
,, ಮುಯಂ ..	೧೦ ೮ ೦	೧೨—೮-
ತೊಗರೀ ಬೇಳೆ ಪಲ್ಲ ೧ಕ್ಕೆ	೧೬-೮ ೦	೧೧ ೦-
,, ಮುಯಂ ..	೧೧—೦—೦	೧೬—೦-
ಹೈರ ರಾಗಿ ಪಲ್ಲ ೧ಕ್ಕೆ ..	೪-೧೨—೦	೪—೯-
ಕಾರ್ರಾಗಿ	೪— —೦	೬—೬-
ಜೋಳ	೪—೧೨—೦	೩—೦-
ಹುಲಸಂದೆ ಪಲ್ಲ ೧ಕ್ಕೆ ..	೮—೧೨—೧	೮— —
ಬಿಳೀ ಅವರೆ ..	೬ ೧೨ ೦	೬—೮-
ಹೆಸರು . .	೯ ೧೨—೦	೯—೦-
ಉದ್ದು . .	೮ ೧೪-	೯—೦-
ಕಡಲೆ	೯ ೦—೦	೯—೦-
ಎಳ್ಳು . ..	೧೬ ೧ ೦	೧೩—೧೧-
ಹುರುಳಿ	೮—೦ ೦	೩—೮-
ಹರಳು ೧-೬೩ ಸೇರಿಗೆ	೯—೮—೦	೮—೧೦-
ಸೀಗೇಕಾಯಿ ಮಣ ೧ಕ್ಕೆ ..	೨—೪—೦	೧—೧೨-
ಮೆಣಸಿನಕಾಯಿ	೪—೮—೦	೩—೪-
,, ಮುಯಂ ..	೩—೧೨—೦	೩—೨-
ಬೆಲ್ಲ ದೊಡ್ಡ ಅಚ್ಚು	೭—೪—೦	ಪ. ೧ ೧೪-
ಒಳ್ಳೆಣ್ಣೆ ಮಣ ೧ಕ್ಕೆ	೪—೦ ೦	೪—೦-
ಹರಳೆಣ್ಣೆ ,, ...	೪—೦—೦	೩- ೧೨-
ಕೊತ್ತಂಬರಿ ಪಲ್ಲ ೧ಕ್ಕೆ ..	೬—೦—೦	೬—೧೬-
ಉಪ್ಪು ,, ..	೮—೦—೦	೮—೫-
ಹುಣಸೇ ಹಣ್ಣು ..	೧ ೪—೦	೦—೧೨-
,, ಒಳೇದು ..	೦—೧೪—೦	೦—೧೧-
ಹುಲ್ಲು ..	೦—೨-೦—೦	೧೦—೨-
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	೫—೩—೦	೪—೨-
ತೆಂಗಿನಕಾಯಿ ೧೦೦ ಕ್ಕೆ	೫—೦—೦	೪—೦-
ಅಡಿಕೇಕಾಯಿ ಮಣ ೧ಕ್ಕೆ	೧—೦- ೦	೬—೨೦-
ಅಂಬ್ಯಾಳದಕಾಯಿ ಮಣ ೧ಕ್ಕೆ ..	೦—೧೪—೦	೦—೧೪-
ಚಕ್ಕೆ (ಕಾಫಿ) ಕೆಂಪು ..	೧೫—೮—೦	೧೫—೩-
,, ,, ಹಸಿರು	೧೫-೧೦—೦	೬೭—೯-
,, ,, ಗಟ್ಟಿ ತೊಲ ೧ಕ್ಕೆ .	೨೬—೦—೦	೨೪—೩-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೭೦—೦—೦	೭೫—೦-

Printed and Published by the Rev H Sp[illegible], B A the Proprietor and Manager, Wesleyan Mission Press Mysore 9,3 1905

ವೃತ್ತಾಂತ ಪತ್ರಿಕೆ.

REGISTERED No. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೮ — ಮೈಸೂರು—ಸನ್ ೧೯೦೫ ನೇ ಇಸವಿ ಮಾರ್ಚಿ ತಾರೀಖು ೧೬ ನೇ ಗುರುವಾರ. — ಸಂಚಿಕೆ ೪೧

ಶ್ರೀ ತಾಂಬೂಲ.

15

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಟವುನ್, — ಯಂ. ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್. — ಮೆಡಿಕಲ್ ಪ್ರಾಕ್ಟಿಷನರ್.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

8

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಒರಳು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿ

ಹುಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ — ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾಂಗಿ ಚಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾದಾನಿ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೇನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ಪೋಲೀಸ್ ಇನ್ಸ್ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರೋಗಿಗಳಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ಕೆ. ಕೃಷ್ಣಯ್ಯಂಗಾರ್, ಟೆಲಿಗ್ರಾಫ್ ದಿವಾನ್ ಪೇಷ್ಕಾರ್, ಕೈಲಾಸ.

Apply to —P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಕಥಾಸಂಗ್ರಹ—ಮೊದಲನೆ ಭಾಗ.

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಮಾತಿನ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವುದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ —ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

೧೯೦೫ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಗದ್ಯಪದ್ಯ ಕಾವ್ಯಗಳ ನೋಟ್ಸು.

12

ಸಿದ್ಧವಾಗಿದೆ. ಡಿಸ್ಕೌಂಟು.—೧೨ಕ್ಕೆ ೧. ೫೦ಕ್ಕೆ ೭. ೧೦೦ಕ್ಕೆ ೨೦. ಪ್ರಶ್ನೋತ್ತರಸಹಿತ ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ರಚಿಸಿದೆ. ಕ್ರಯ—೭ ಆಣೆ. ಪುಸ್ತಕಾಪೇಕ್ಷಿಗಳಿಗೆ ತಕ್ಷಣ ಜವಾಬಿನ ಪುಸ್ತಕವನ್ನೂ ಕಳುಹಿಸಲು ಏರ್ಪಾಡುಮಾಡಿದೆ.

ಬಾಲಬೋಧ (ಮೈಸೂರು ಸಂಸ್ಥಾನ) ಭೂವಿವರಣೆ.—ಈಗ ೭ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು ಕ್ರಯ—೧ ಆಣೆ. ಪೂರ್ವಮುದ್ರಣದ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈವರೆಗೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನು ಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧½ ಆಣೆ.

ವಿಳಾಸ —ಮೈಸೂರಲ್ಲಿ ದಿ. ಜನರಲ್ ಏಜನ್ಸಿ, ಸಿ. ಎಲ್. ಎಸ್. ಬುಕ್ ಡಿಪೋ, ಕೆ. ನರಸಿಂಹಯ್ಯ ಅಂಡ್ ಕೋ; ಬೆಂಗಳೂರಲ್ಲಿ ಜೆ. ಗುಂಡಪ್ಪ ಅಂಡ್ ಕೋ

ಯಂ. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

ಸನ್ ೧೯೦೫ನೇ ಇಸವಿಯ

12

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ ಡೈರಿ

ಎರಡು ಆಣೆ! ಮೂರು!! ಆರು!

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಮುಷ್‌ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು.—ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಜಮಾಖರ್ಚುಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕ್ರೀಮ ಸಾವರ್ನ್ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ.

ಎ. ನಂಬರ್ ಚಿಕ್ಕಸೈಜು	೩ ಆಣೆ	ಸಿ. ನಂಬರ್ ದೊಡ್ಡಸೈಜು	೬ ಆ.
ಎಫ್. ,,	,, ೪	ಎಚ್. ,,	,, ೭ ,,
ಬಿ. ಮುಚ್ಚಳದ್ದು	,, ೫	ಡಿ. ಮುಚ್ಚಳದ್ದು	,, ೮ ,,

ಪೋಸ್ಟ್ ಚಾರ್ಜು ಬೇರೆ. ಒಂದೇ ಸಮೂನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಅಗ್ಗ! ಅಗ್ಗ!! ಬಹಳ ಅಗ್ಗ!!!

6

ಇಂಥಾ ಸಮಯ, ಮುಂದೆ ಸಿಗಲಿಕ್ಕಿಲ್ಲಾ.

ರಾಸ್ಕೋಪ ಲಿವರ ಸಿಸ್ಟಂ ವಾಚ.

ಇದು ಬಹಳ ಮಜಬೂತ್ ಇದ್ದು ಕಾಯಿಲೆಯು ಮೇಲೆ ಸವಾರಿ ಮಾಡಿದರೂ ಕೂಡ ಬಂದ ಆಗುವದಿಲ್ಲ. ಇಂಥಾ ವಾಚನ್ನು ನಾಳೆ ಬಡವರಿಗೂ ಕೂಡ ಸೋಯಿಯಾಗಬೇಕೆಂಬ ಇರಾದೆಯಿಂದ ೧೯೦೫ ನೇ ಆಗಸ್ಟ ಆಖೈರವರಿಗೆ ೧೦ ರೂಪಾಯಿ ಕಿಮ್ಮತ್ತು ಇದ್ದದ್ದು ೫ ರೂಪಾಯಿಗೆ ಕೊಡುತ್ತೇವೆ. ಗ್ಯಾರಂಟಿ ೫ ವರ್ಷ. ಪ್ರತಿ ವಾಚಿನ ಸಂಗಡ ಸ್ಪ್ರಿಂಗ್, ಪೆಟ್ಟಿಗೆ, ಕನ್ನಡಿ, ಹೀಗೆ ೩ ಸಾಮಾನು ಕಳುಹಿಸುತ್ತೇವೆ. ಟಪ್ಪಾಲ್ ಖರ್ಚು ಬೇರೆ.

ವಿಳಾಸ:—ಜೇ. ಯಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರ ಕಾನಡಾ.

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

9

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂ್ಲೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,

ಮಿಷನ್ ಪ್ರೆಸ್, ಮೈಸೂರು.

ನಿಮ್ಮ ತಲೆಯ ಮೇಲಿರುವದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

15

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ಮಾರ್ಚಿ ತಾ॥ ೧೬ ನೇ ಗುರುವಾರ.

ಜಪಾನ್‌ನವರ ಜಯಪ್ರದಗಳು.

ಈ ವಾರ ಯುದ್ಧಭೂಮಿಯಿಂದ ಬಂದಿರುವ ತಂತೀ ವರ್ತಮಾನಗಳು ಬಹು ಘೋರವಾಗಿರುತ್ತವೆ. ಜಪಾನ್‌ನವರ ಅಸದೃಶವಾದ ಪರಾಕ್ರಮವನ್ನೂ ಅವರ ಜಿತಮನಸ್ಸನ್ನೂ ನೋಡಿ, ಸಕಲ ರಾಜ್ಯಗಳವರೂ ಅವರನ್ನು ಹೊಗಳುತ್ತಿದ್ದಾರೆ. ರಷ್ಯಾದವರಿಗೆ ಸೋಲಿನ ಮೇಲೆ ಸೋಲು ಸಂಭವಿಸುತ್ತಿದ್ದಾಗ್ಯೂ ಅವರು ಕೂಡ ಸ್ವಲ್ಪಕ್ಕೆ ಸ್ವಲ್ಪ ಕೊಡದೆ ಶತ್ರುಗಳನ್ನು ತುಂಬಾ ದಣಿಸುತ್ತಿರುವುದು ಸ್ತೋತ್ರಾರ್ಹವಾಗಿದೆ. ರಷ್ಯಾದವರು ಪೂರ್ವದಿಗ್ದೇಶದಲ್ಲಿ ಇಟ್ಟುಕೊಂಡಿದ್ದ ಪೋರ್ಟ್ ಆರ್ಥರ್ ಪಟ್ಟಣವನ್ನು ಕಳೆದುಕೊಂಡರು. ಕೊರಿಯಾ ರಾಜ್ಯದ ಮೇಲಿದ್ದ ಅವರ ಕೈಯನ್ನು ಜಪಾನ್‌ನವರು ಕಿತ್ತುಹಾಕಿದರು. ಲಿಯೋಯಾಂಗ್ ಎಂಬ ಇನ್ನೊಂದು ದೊಡ್ಡ ಪಟ್ಟಣವೂ ರಷ್ಯಾದವರ ಕೈಬಿಟ್ಟಿತು. ಈಗ ಮುಕ್ಡೆನ್ ಎಂಬ ಮಧ್ಯರಾಷ್ಟ್ರ ನಗರವು ಜಪಾನ್‌ನವರ ವಶವಾಗಿರುತ್ತದೆ. ಪ್ರತಿ ಒಂದು ಸ್ಥಳದಲ್ಲೂ ರಷ್ಯಾದವರು ನಿಂತು ಯುದ್ಧಕೊಟ್ಟು, ಜಪಾನ್‌ನವರ ಮುತ್ತಿಗೆಗೂ ಅವರ ಫಿರಂಗಿ ಗುಂಡಿನೇಟಿಗೂ ಅವರ ಜಿತಮನಸ್ಸಿನ ಯುದ್ಧಕ್ಕೂ ಬೆದರಾಗಿ ಎದೆಗುಂದಿ ಸೈನಿಕರನ್ನೂ ಯುದ್ಧಸಾಮಗ್ರಿಗಳನ್ನೂ ಅಪಾರವಾಗಿ ಕಳೆದುಕೊಂಡು, ಹಿಂದು ಹಿಂದಕ್ಕೆ ಓಡಿಹೋಗುತ್ತಿದ್ದಾರೆ. ಹಿಂದೆ ಲಿಯೋಯಾಂಗ್ ಯುದ್ಧದಲ್ಲಿ ಮಡಿದ ರಷ್ಯಾ ಸೈನ್ಯಕ್ಕಿಂತಲೂ ಈಗ ಮುಕ್ಡೆನ್ ಯುದ್ಧಗಳಲ್ಲಿ ಹೆಚ್ಚು ಜನರು ಲಯವಾದರು. ರಷ್ಯಾದವರಲ್ಲಿ ಎರಡು ಲಕ್ಷ ಸೈನಿಕರೂ ಜಪಾನ್‌ನವರ ಕಡೆ ೪೧ ಸಹಸ್ರ ಸೈನಿಕರೂ ಹತರಾಗಿದ್ದಾರೆ. ಜಪಾನ್‌ನವರು ಶತ್ರು ಸೈನ್ಯದಲ್ಲಿ ೪೦ ಸಹಸ್ರ ಮಂದಿಯನ್ನು ಕೈಸೆರೆ ಹಿಡಿದುಕೊಂಡರು; ೫೦೦ ಫಿರಂಗಿಗಳೂ ಅಪಾರ ಮದ್ದುಗುಂಡೂ ಸಿಕ್ಕಿದವು. ಟೇಲಿಂಗಿನ ಬಳಿ ಉಭಯ ಸೇನೆಗಳೂ ಕೂಡಿರುವುದಾಗಿಯೂ ಇನ್ನೊಂದು ಮಹಾ ಘೋರವಾದ ಯುದ್ಧ ನಡೆಯುವುದೆಂತಲೂ ವರ್ತಮಾನ ಬಂದಿದೆ. ರಷ್ಯಾ ಜನರಲ್ ಕುರೋಪಾಟ್ಕಿನ್‌ರವರು ಸೈನ್ಯಾಧಿಪತ್ಯವನ್ನು ಸ್ವಲ್ಪ ಕಾಲ ಇನ್ಯಾರಿಗಾದರೂ ವಹಿಸುವಂತೆ ಚಕ್ರವರ್ತಿಯವರನ್ನು ಕೇಳಿಕೊಂಡಿದ್ದಾರೆ. ಅವರ ಸೈನ್ಯವಾದರೋ ಯುದ್ಧಮಾಡಿ ಸೋತು ದಣಿದು ನಿರಾಶೆಯಾಗಿ ತಹಬಂದಿ ತಪ್ಪಿ ಚದರಿಹೋಗುತ್ತಿರುವುದು.

ಕರಾರಿನ ವರ್ತಮಾನ ಇತರ ರಾಜ್ಯಗಳಲ್ಲಿ ಹುಟ್ಟಿ ಹಬ್ಬುತ್ತಿರುವುದನ್ನು ನೋಡಿ, ರಷ್ಯಾ ಸರ್ಕಾರದವರು ಆ ಸುದ್ದಿ ನಿಜವಲ್ಲವೆಂದು ತಿಳಿಸಿದ್ದಾರೆ. ರಷ್ಯಾ ಚಕ್ರವರ್ತಿಯವರು—ಎಷ್ಟು ಕಾಲದ ವರೆಗೆ ನಡೆದರೂ ಎಷ್ಟು ದ್ರವ್ಯ ನಷ್ಟವಾದರೂ ಈ ಯುದ್ಧವನ್ನು ತಮಗೆ ಜಯಪ್ರದವಾಗುವ ತನಕ ನಿಲ್ಲಿಸುವುದಿಲ್ಲವೆಂದು ತಿಳಿಸುತ್ತಾರೆ. ಅತ್ತಲಾಗಿ ಜಪಾನ್‌ನವರು ಪ್ರತಿ ಯುದ್ಧದಲ್ಲೂ ಜಯಶೀಲರಾಗುತ್ತಿರುವುದರಿಂದ ಅವರು ಕರಾರಿನ ಪ್ರಸ್ತಾಪವನ್ನೇ ಎತ್ತುವವರಾಗಿಲ್ಲ. ಇದನ್ನು ನೋಡಿ ಈ ಘೋರ ಯುದ್ಧವೂ ಈ ಮೂಲಕ ವಿಶೇಷ ಪ್ರಜಾಕ್ಷಯವೂ ಇನ್ನೂ ಕೊನೆಗಾಣುವಂತಿಲ್ಲವೆಂದು ದುಃಖಪಡಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನದ ರೆಸಿಡೆಂಟರವರು ಮುಂದಿನ ತಿಂಗಳು ೩ನೇ ತಾರೀಖಿಗೆ ಬೆಂಗಳೂರನ್ನು ಬಿಟ್ಟು ಬೇಸಿಗೆ ಕಳೆಯುವುದಕ್ಕಾಗಿ ನೀಲಗಿರಿಗೆ ಪಯಣಮಾಡುವವರಾಗಿದ್ದಾರೆ.

❖❖❖❖

ಮೈಸೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ ಶಿರಸ್ತೇದಾರರಾಗಿದ್ದ ಮ॥ ಸುಬ್ಬರಾಯರಿಗೆ ಬಡ್ತಿ ಕೊಟ್ಟು, ಬೆಂಗಳೂರು ಸೆಷನ್ ಕೋರ್ಟಿನ ಶಿರಸ್ತೇದಾರಿ ಕೆಲಸಕ್ಕೆ ವರ್ಗಮಾಡಿದ್ದಾರೆ.

❖❖❖❖

ಬರುವ ಜುಲೈ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಕುದುರೆ ಬಾಜಿನಲ್ಲಿ ಗೆದ್ದವರಿಗೆ ಬಹುಮಾನ ಕೊಡುವುದಕ್ಕಾಗಿ ನಮ್ಮ ಮಹಾರಾಜರವರು ೪,೦೦೦ ರೂಪಾಯಿನ ಒಂದು ಬಟ್ಟಲನ್ನು ದಯಪಾಲಿಸಿದ್ದಾರೆ.

❖❖❖❖

ನಮ್ಮ ರಾಜಧಾನಿಯಲ್ಲಿ ಬಿಸಲಿನ ತಾಪವೇ ಹೆಚ್ಚುತ್ತಿದೆ. ಮೋಡ ಮಾಡಲಾರಂಭವಾಗಿರೋದರಿಂದ ಇಷ್ಟರಲ್ಲೇ ಮಳೆ ಬಂದೀತೆಂದು ಕಾಣುವುದು. ಪ್ಲೇಗು ಕಮ್ಮಿಯಾಗಿದೆ. ಸಿಡುಬಿನ ಪ್ರಾಬಲ್ಯವು ಅಧಿಕವಾಗಿರುವುದು.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

10



ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವುದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ ಇದನ್ನು ಯಾರೂ ಮರೆಯಬಾರದು ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಮೈಸೂರು ಅಡಿಷನಲ್ ಮುನ್ಸಿಫ್ ಮ॥ ಶಿವಪ್ರಕಾಶಂಪಿಳ್ಳೆಯವರು ರಜಾ ಪಡೆದುಕೊಂಡದ್ದರಿಂದ ಸರ್ಕಾರದವರು ಅವರ ಕೆಲಸಕ್ಕೆ ತುಂಕೂರು ಅಡ್ವೋಕೇಟ್ ಮ॥ ಏ ಮಹದೇವಯ್ಯನವರನ್ನು ನೇಮಕಮಾಡಿ ಕಳುಹಿಸಿದ್ದಾರೆ

❖❖❖❖

ಬೌರಿಂಗ್‌ಪೇಟೆಯಲ್ಲಿ ಸಾಹೇಬ್ ಜನರು ಸೇರಿ ೧೦,೦೦೦ ರೂಪಾಯಿ ಮುಟ್ಟಿಸಿ ಒಂದು ಕ್ರೈಸ್ತ ದೇವಾಲಯವನ್ನು ಕಟ್ಟಿಸಿದರು. ಮದರಾಸಿನ ಬಿಷಪ್ಪರೆಂಬ ಕ್ರೈಸ್ತ ಅಧ್ಯಕ್ಷರುಗಳು ಕಳೆದ ವಾರ ಅಲ್ಲಿಗೆ ಬಂದು ಈ ಕಟ್ಟಡವನ್ನು ಪ್ರತಿಷ್ಠೆ ಮಾಡಿರುತ್ತಾರೆ

❖❖❖❖

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ರಾಬರ್ಟ್‌ಸನ್ ಪೇಟೆ ಪೊಲೀಸ್ ಸ್ಟೇಷನಿನಲ್ಲಿ ಪೊಲೀಸ್ ಸಿಬ್ಬಂದಿ ಸಾಲದೆಂದು ತಿಳಿದು ಬಂದದ್ದರಿಂದ ಸರ್ಕಾರದವರು ತಿಂಗಳಿಗೆ ಇನ್ನೂ ೩೨೩ ರೂಪಾಯಿ ಬಜೆಟ್ಟು ಹೆಚ್ಚಾಗಿ ಪೊಲೀಸಿನವರನ್ನು ನೇಮಿಸಿಕೊಳ್ಳುವಂತೆ ಸ್ಯಾಂಕ್ಷನ್ ಮಾಡಿದ್ದಾರೆ.

❖❖❖❖

ಬೆಂಗಳೂರು ಪಟ್ಟಣದಲ್ಲಿ ಮ್ಯಾಜಿಸ್ಟ್ರೇಟರು ಅಪರಾಧಿಗಳಿಗೆ ಛಡಿ ಸಜವನ್ನು ವಿಧಿಸಿ ಜೈಲಿನೊಳಕ್ಕೆ ಕಳುಹಿಸಬೇಕಾದಲ್ಲಿ ಮಧ್ಯಾಹ್ನ ೩ ಗಂಟೆಯೊಳಗಾಗಿ ಕಳುಹಿಸಬೇಕೆಂತಲೂ, ಕಳುಹಿಸದೆ ಹೋದಲ್ಲಿ ತಮ್ಮ ಇಷ್ಟ ಬಂದ ಕಡೆ ಛಡಿ ಸಜ ವಿಧಿಸಬಹುದೆಂತಲೂ, ಸರ್ಕಾರದವರು ತಿಳಿಸಿದ್ದಾರೆ.

❖❖❖❖

ಮದರಾಸ್ ಆಧಿಪತ್ಯದ ಪೋಸ್ಟಾಫೀಸುಗಳ ಮೇಲ್ವಿಚಾರಣಾಕರ್ತರಾದ ಪೋಸ್ಟ್ ಮಾಸ್ಟರ್ ಜನರಲ್‌ರವರು ಕಳೆದ ಶನಿವಾರ ಮಧ್ಯಾಹ್ನ ರಾಜಧಾನಿಗೆ ಬಂದು ಎರಡು ದಿನಗಳ ತನಕ ಇಲ್ಲಿನ ಪೋಸ್ಟ್ ಆಫಿಸ್ ವಿಚಾರಗಳನ್ನು ತನಿಖೆ ಮಾಡಿಕೊಂಡು, ಮೊನ್ನೆ ಹುಣಸೂರು ಕಡೆ ಸರ್ಕೀಟು ಹೋದರು.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರು ನೊವೆಂಬರ್ ತಿಂಗಳ ೨೯ಕ್ಕೆ ರಾಜಧಾನಿಗೆ ದಯಮಾಡಿ, ಒಂದುವರೆ ದಿನ ಮಾತ್ರ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ, ಕಾಕನಕೋಟೆ ಜಂಗಲಿಗೆ ದಯಮಾಡಿ, ೨—೩ ದಿನಗಳ ವರೆಗೆ ಶಿಕಾರಿಮಾಡಿಕೊಂಡು ಪ್ರಯಾಣ ಮಾಡುವರೆಂದೂ ಅದಕ್ಕಾಗಿ ಸರ್ಕಾರದವರು ಈಗಿನಿಂದ ಸನ್ನಾಹ ಮಾಡಲಾರಂಭಿಸಿದ್ದಾರೆಂದೂ ಕೇಳುತ್ತೇವೆ

❖❖❖❖

ಬರೋಡೆ ಮಹಾರಾಜರವರು ಪರಿವಾರ ಸಹಿತ ಮೊನ್ನೆ ಮಂಗಳವಾರ ಸಾಯಂಕಾಲ ಬೆಂಗಳೂರಿಗೆ ಸ್ಪೆಷಲ್ ರೈಲಿನಲ್ಲಿ ಬರುವರೆಂದೂ, ಗೌರವಾರ್ಥವಾದ ೧೩ ತೋಪುಗಳನ್ನು ಹಾರಿಸಬೇಕೆಂದೂ, ೫೦ ಮಂದಿ ಸೈನಿಕರು ಅವರನ್ನು ಸ್ಟೇಷನಿನಿಂದ ಕರೆದುತರಬೇಕೆಂದೂ, ನೆನ್ನೆ ಸಾಯಂಕಾಲ ಅವರು ಸ್ಪೆಷಲ್ ರೈಲು ಹತ್ತಿ ಮೈಸೂರಿಗೆ ಪ್ರಯಾಣ ಮಾಡುವವರಾಗಿದ್ದರೆಂದೂ ಬೆಂಗಳೂರಿನಲ್ಲಿ ಪ್ರಕಟವಾಗಿತ್ತು.

❖❖❖❖

ಶ್ರೀಮನ್ ಮಹಾರಾಜರವರು, ಮಹಾ ಮಾತೃಶ್ರೀಯವರು, ಯುವರಾಜರವರೇ ಮೊದಲಾದ ರಾಜವರ್ಗದವರೆಲ್ಲಾ ಕಳೆದ ಬುಧವಾರ ಸಾಯಂಕಾಲ ರಾಜಧಾನಿಗೆ ದಯಮಾಡಿದರು. ಪುರಾಧ್ಯಕ್ಷರೂ ಅರಸುಮಕ್ಕಳೂ ಅಧಿಕಾರಿಗಳೂ ಸ್ಟೇಷನಿನಲ್ಲಿ ಕಾದಿದ್ದು ಶ್ರೀಮನ್ ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿ ಸುಸ್ವಾಗತವನ್ನು ಬಯಸಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು.

❖❖❖❖

ಮದರಾಸ್ ಯುನಿವರ್ಸಿಟಿಯವರು ಗಣಪತಿ ಐಯರೆಂಬ ಹುಡುಗನ ಮೇಲೆ ಅವನು ಸುಳ್ಳುರುಜು ಮಾಡಿದ ಸರ್ಟಿಫಿಕೇಟನ್ನು ಹಾಜರುಪಡಿಸಿದನೆಂದು ಮೊಕದ್ದಮೆ ಮಾಡಿದ್ದಾರೆ. ಈ ಮೊಕದ್ದಮೆಯನ್ನು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿ, ಸೆಷನ್ ವಿಚಾರಣೆಗೆ ಗುರುತುಪಡಿಸಿದ್ದರು. ಕಳೆದ ೧೦ನೇ ತಾರೀಖಿನಿಂದ ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡಿದರು. ನಾಳೆ ಶನಿವಾರ ತೀರ್ಮಾನ ಹೇಳುವರೆಂದು ನಿರೀಕ್ಷಿಸುತ್ತೇವೆ.

ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟ್ ಸರ್ ಜೇಂಸ್ ಬೂರ್ಡಿಲ್ಲನ್‌ರವರ ಅಧಿಕಾರದ ಅವಧಿಯು ಮುಂದಿನ ನೊವೆಂಬರ್ ತಿಂಗಳಿಗೆ ಪೂರೈಸುವುದು. ಆಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಈ ಸಂಸ್ಥಾನಕ್ಕೆ ದಯಮಾಡುವವರಾಗಿದ್ದಾರಾದಕಾರಣ ಹೊಸಬರು ರೆಸಿಡೆಂಟರಾಗಿ ಬರುವುದು ಸಹಜವಲ್ಲವೆಂದು ಹೇಳಿ, ಇಂಡಿಯಾ ಗವರ್ನಮೆಂಟಿನವರು ಅವರ ಅಧಿಕಾರ ಕಾಲವನ್ನು ಬರುವ ವರುಷದ ಮಾರ್ಚಿಯ ವರೆಗೆ ಹೆಚ್ಚುಮಾಡಬಹುದೆಂದು ತೋರುತ್ತದೆ.

ರಷ್ಯಾ ರಾಜ್ಯದಲ್ಲಿ ಗಲಭೆಯು

ರಷ್ಯಾ ರಾಜ್ಯದಲ್ಲಿ ಜನರ ಗಲಭೆಯು ಇನ್ನೂ ಶಮನವಾಗಲಿಲ್ಲ. ಸರ್ಕಾರದವರು ರಾಜ್ಯದಲ್ಲಿರುವ ರೈಲ್ವೆ ನೌಕರರನ್ನೆಲ್ಲಾ ಸೈನಿಕರಂತೆ ಭಾವಿಸಿ, ಎಲ್ಲೆಲ್ಲೂ ಯುದ್ಧಕಾಲದ ಕಾನೂನನ್ನು ಜಾರಿಗೆ ತರಬೇಕೆಂದು ತಿಳಿಸಿದ್ದಾರೆ. ವಾರ್ಸಾ ನಗರದಲ್ಲಿ ಪೋಲೀಸಿನವರೆಲ್ಲಾ ದಂಗೆ ಏಳುತ್ತಾರೆಂದು ತಿಳಿದು ಸರ್ಕಾರದವರು ಸೈನ್ಯಗಳನ್ನಿಟ್ಟು ಅವರ ಮೇಲೆ ಉಸ್ತುವಾರಿ ಮಾಡುತ್ತಿದ್ದಾರೆ. ಪೋಲಾಂಡಿನಲ್ಲಿ ದಂಗೆ ಮಾಡುವ ಕೂಲಿಕಾರರ ಗುಂಪಿಗೆ ರೈತಪ್ರಜೆಗಳೂ ಹೋಗಿ ಸೇರಿಕೊಳ್ಳುತ್ತಿರುವರು. ರೈತಪ್ರಜೆಗಳು ಅಲ್ಲಿ ಎಂಟನೇ ಏಳುಪಾಲಿನಷ್ಟಿರುವದರಿಂದ ಅಲ್ಲಿನ ಸ್ಥಿತಿಯು ತುಂಬಾ ಭಯಂಕರವಾಗಿದೆ. ರಾಜಧಾನಿಯಲ್ಲಿ ದಂಗೆ ಎಬ್ಬಿಸಿದ ಮಾಕ್ಸಿಂ ಗೋರ್ಕಿ ಎಂಬಾತನನ್ನು ಗಡೀಪಾರು ಮಾಡಿ ಬಿಟ್ಟರು. ಆತನು ಜೈಲಿನಿಂದ ಬಿಡುಗಡೆ ಹೊಂದಿ ರೈಗಾಪಟ್ಟಣಕ್ಕೆ ಹೋದನು. ಪೋಲೆಂಡಿನಲ್ಲೆಲ್ಲಾ ಸರ್ಕಾರದವರು ಯುದ್ಧಕಾಲದ ಕಾನೂನನ್ನು ಜಾರಿಗೆ ತಂದು, ಬಹು ಕಠಿಣವಾಗಿ ಜನರನ್ನು ತಹಬಂದಿಗೆ ತರುತ್ತಿದ್ದಾರೆ. ರೈಲ್ ಗಾಡಿಗಳ ಸಂಚಾರವು ಸ್ವಲ್ಪ ಮಟ್ಟಿಗೆ ಪ್ರಾರಂಭವಾಗಿದೆ.

ರಾಜಧಾನಿಯಲ್ಲಿರುವ ಕೂಲಿಕಾರರೆಲ್ಲಾ ಸಭೆ ಸೇರಿ ೫೦೦ ಮಂದಿ ಪ್ರತಿನಿಧಿಗಳನ್ನು ಚುನಾಯಿಸಿದ್ದಾರೆ. ಇವರು ತಮ್ಮಲ್ಲೇ ಕೆಲವು ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿದೆ. ಅವರು ಸರ್ಕಾರದವರಿಗೆ ತಮ್ಮ ಕಷ್ಟಗಳನ್ನು ಅರಿಕೆ ಮಾಡಿಕೊಳ್ಳುವರು. ಸರ್ಕಾರದವರು ಕಳೆದ ಜನವರಿ ೨೨ ರಿಂದ ರಾಜಧಾನಿಯಲ್ಲಿ ಸೆರೆಯಲ್ಲಿ ಹಾಕಿರುವ ೩೦,೦೦೦ ಕೂಲಿಕಾರರನ್ನು ಬಿಡುಗಡೆ ಮಾಡದೆ ಹೋದರೆ ತಾವು ಯಾವ ಕೆಲಸಕ್ಕೂ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುವುದಿಲ್ಲವೆಂದು ಕೂಲಿಕಾರರು ಸರ್ಕಾರದವರಿಗೆ ತಿಳಿಸಿದರು. ಇದಲ್ಲದೆ ಪ್ರಜೆಗಳು ಕೇಳುವ ಇತರ ರಿಯಾಯಿತಿಗಳ್ಯಾವುವೆಂದರೆ—ಪ್ರಜೆಗಳನ್ನು ಸರ್ಕಾರದವರು ನಿಷ್ಕಾರಣವಾಗಿ ಹಿಡಿದು ನಿರ್ಬಂಧ ಪಡಿಸಕೂಡದು, ಜನರಿಗೆ ವಾಗ್ಬಂಧನೆ ಇರಕೂಡದು, ವರ್ತಮಾನ ಪತ್ರಿಕೆಗಳಿಗೆ ಅಭಿಪ್ರಾಯಗಳನ್ನು ಪ್ರಕಟಿಸುವ ಹಕ್ಕು ಕೊಡಬೇಕು. ಪ್ರಜೆಗಳು ರಷ್ಯಾರಾಜ್ಯದ ಅನೇಕ ಕಡೆಗಳಲ್ಲಿ ಅತೃಪ್ತರಾಗಿ ಸರ್ಕಾರದವರ ಮೇಲೆ ತಿರುಗಿ ಬೀಳುತ್ತಿದ್ದಾರೆ. ಕೂಲಿಕಾರರು ರಾಜಧಾನಿಯಲ್ಲಿ ಸಭೆ ಸೇರಿ, ಪ್ರತಿನಿಧಿಗಳನ್ನು ಚುನಾಯಿಸಿದ್ದಲ್ಲದೆ, ತಾವು ಕೇಳುವ ರಿಯಾಯಿತಿಗಳನ್ನು ಸರ್ಕಾರದವರು ಕೊಡಿಸದೆ ಹೋದಲ್ಲಿ ಪುನಃ ಕೆಲಸಕ್ಕೆ ಹೋಗದೆ ನಿಂತು ಬಿಡುವುದಾಗಿ ಗೊತ್ತು ಮಾಡಿಕೊಂಡರು. ರಾಜಧಾನಿಯಲ್ಲೂ, ವಾರ್ಸಾ, ಮಾಸ್ಕೋ ನಗರಗಳಲ್ಲೂ ಪ್ರಜೆಗಳು ದಂಗೆ ಏಳುತ್ತಾರೆಂಬ ಭೀತಿಯೂ ಸೂಚನೆಗಳೂ ಉಂಟಾಗಿರುತ್ತವೆ. ವಾರ್ಸಾ ಪಟ್ಟಣದಲ್ಲಿ ಸಕಲ ವಿಧವಾದ ವ್ಯಾಪಾರಗಳೂ ನಿಂತು ಹೋದವು. ದಂಗೆ ಮಾಡುವ ಕೂಲಿಕಾರರು ಬಂದೂಕುಗಳನ್ನೂ ಡೈನಮೈಟ್ ಹಾಕಿದ್ದ ಮದ್ದುಗುಂಡುಗಳನ್ನೂ ಪಿಸ್ತೂಲುಗಳನ್ನೂ ಹಿಡಿದು ಬೀದಿಬೀದಿಗಳಲ್ಲಿ ತಂಡತಂಡವಾಗಿ ಅಲೆಯುತ್ತಿದ್ದಾರೆ. ಸರ್ಕಾರದವರು ಬಲಾತ್ಕಾರದಿಂದ ದಂಗೆಯನ್ನು ನಿಲ್ಲಿಸಿ ಕೂಲಿಕಾರರನ್ನು ಕಾರ್ಖಾನೆಗಳಿಗೆ ಕಳುಹಿಸದೆ ಹೋದಲ್ಲಿ ರಾತ್ರಿ ಹೊತ್ತು ಪಟ್ಟಣಕ್ಕೆ ದೀಪಕ್ಕೆ ಮಾರ್ಗವಿಲ್ಲದೆ ಕತ್ತಲಲ್ಲಿ ಕಷ್ಟಪಡುವ ಕಾಲ ಬಂದೀತೆಂದು ಹೆದರುತ್ತಾರೆ.

ರಾಜ್ಯಭಾರ ವಿಚಾರಗಳನ್ನು ಕ್ರಮಪಡಿಸುವುದಕ್ಕಾಗಿ ಏರ್ಪಟ್ಟ ಸಭೆಯ ಮೆಂಬರುಗಳ ಮಾತಿನಲ್ಲಿ ಚಕ್ರವರ್ತಿಯವರು ಸಂಶಯಪಡಲಾರಂಭಿಸಿದರು. ಮುಖ್ಯಾಧಿಕಾರಿಗಳು ಮಾತ್ರ ಚಕ್ರವರ್ತಿಯವರ ಅತ್ಯಂತ ಸ್ನೇಹಿತರಾಗುತ್ತಿದ್ದಾರೆ. ಚಕ್ರವರ್ತಿಯವರು ಸೈನಿಕರೆಲ್ಲಾ ಒಟ್ಟುಗೂಡಿ ಒಳದೇಶದ ಗಲಭೆಯನ್ನೂ ಹೊರಗಿನ ಶತ್ರುಗಳನ್ನೂ ಸಂಪೂರ್ಣವಾಗಿ ಅಣಗಿಸಬೇಕೆಂದು ಇಸ್ತಿಹಾರ್‌ನಾಮೆಯನ್ನು

ಟ್ಟರು ಚಕ್ರವರ್ತಿಯವರ ಈ ಇಷ್ತಿಹಾರಿನಿಂದ ಪ್ರಜಾಕ್ಷೋಭೆಯು ಇನ್ನೂ ಕೆಟ್ಟಿತು ಮಾಸ್ಕೋ, ಲಾಡ್ಸ್ ಮುಂತಾದ ನಗರಗಳಲ್ಲಿ ಸರ್ಕಾರದವರು ಸೈನ್ಯಗಳನ್ನು ಜಾಗ್ರತೆಯಾಗಿ ಕೂಡಿಸಿಕೊಳ್ಳುತ್ತಿದ್ದಾರೆ

ಮರುದಿನ ಚಕ್ರವರ್ತಿಯವರು ಪುನರಾಲೋಚನೆ ಮಾಡಿ, ಪ್ರಜೆಗಳಲ್ಲಿ ಯೋಗ್ಯರಾಗಿರತಕ್ಕವರನ್ನೆಲ್ಲಾ ಕೂಡಿಸಿ ಸಭೆಯನ್ನು ಮಾಡಿ, ಅವರ ಇಷ್ಟಪ್ರಕಾರ ಕಾನೂನು ಬದಲಾವಣೆ ಮಾಡುತ್ತೇವೆಂದು ಪ್ರಕಟಿಸಿದರು. ಪ್ರಜೆಗಳು ಇದನ್ನು ನೋಡಿ ಆಶ್ಚರ್ಯಪಡುತ್ತಿದ್ದಾರೆ. ವರ್ತಮಾನ ಪತ್ರಿಕೆಗಳಾದರೋ ಬಹಳ ಅನುಕೂಲವಾಯಿತೆಂದು ತೃಪ್ತಿಪಟ್ಟು ಹೊಗಳುತ್ತಿವೆ ಆದರೂ ಪ್ರಜೆಗಳು ಇದೆಂದು ನಂಬದೆ ಸಂಶಯಪಟ್ಟು, ಇನ್ನ್ಯಾವ ಹುಕುಂ ಹೊರಡುತ್ತದೋ ಎಂದು ಎದುರುನೋಡುತ್ತಿದ್ದಾರೆ.

ಟಾಕೊ ಡಿಸ್ಟ್ರಿಕ್ಟಿನಲ್ಲಿ ದಂಗೆಕೋರರಾದ ಕೂಲಿಯವರಿಂದ ಮುತ್ತಿಗೆ ಹಾಕಲ್ಪಟ್ಟಿರುವುದು. ರಾಜಧಾನಿಯಲ್ಲಿ ದಂಗೆಯು ಹೆಚ್ಚಿ ೫೧,೦೦೦ ಜನರು ಕಾರ್ಖಾನೆಗಳಿಗೆ ಕೆಲಸಕ್ಕೆ ಹೋಗದೆ ನಿಂತು ಬಿಟ್ಟರು. ಇವರು ಪೂಟಿಲಾಫ್ ಎಂಬ ಭಾರೀ ಕಾರ್ಖಾನೆಯ ಎರಡು ಎಂಜಿನ್‌ಗಳನ್ನು ಒಡೆದು ಬಿಟ್ಟರು. ಅಲ್ಲೀ ಜಗಳವಾಯಿತು ೨೬ ಮಂದಿ ಮೃತಪಟ್ಟರು, ಕೆಲವರಿಗೆ ಗಾಯವಾದವು ಪ್ರಜೆಗಳಿಂದ ಚುನಾಯಿಸಲ್ಪಟ್ಟ ಕೆಲವು ಪ್ರತಿನಿಧಿಗಳನ್ನು ಸರ್ಕಾರದವರು ಹಿಡಿಸಿ, ಊರೂರುಗಳಿಗೆ ರವಾನೆ ಮಾಡಿದ್ದರಿಂದ ರಾಜಧಾನಿಯಲ್ಲೂ ಇತರ ಕಡೆಗಳಲ್ಲೂ ಗಲಭೆ ಹೆಚ್ಚುತ್ತಿದೆ. ಕೂಲಿಯವರಿಗೆ ಅವರ ಮುಖಂಡರ ಮುಖ ಕಾಣದಂತಾದರೆ ಎಲ್ಲಿದೆಂದು ಪೋಲೀಸಿನವರು ನಿರೀಕ್ಷಿಸುವರು. ಪೋಲೀಸ್ ಅಧಿಕಾರಿಯಾದ ... ಬೀಟೋಸ್ಕ್ಯಾಕ್ ಎಂಬಾತನನ್ನು ಗುಂಡು ಹೊಡೆದು ಕೊಂದು ಬಿಟ್ಟರು. ಆಗ ಆ ಅಧಿಕಾರಿಯು ದೊಂಬಿಯಲ್ಲಿ ನುಗ್ಗಿ ಗಲಭೆಯನ್ನು ಶಮನ ಮಾಡುತ್ತಿದ್ದನು ಕೂಲಿಕಾರರು ಪ್ರತಿನಿಧಿಗಳನ್ನು ಕಾಲಕ್ಕೆ ಸರಿಯಾಗಿ ನಿಯಮಿಸಲಿಲ್ಲವೆಂದು ಹೇಳಿ, ಅವರ ವಾದವನ್ನು ಸ್ವೀಕರಿಸಬೇಕಾದದ್ದಿಲ್ಲವೆಂದು ಚಕ್ರವರ್ತಿಯವರು ಅಪ್ಪಣೆ ಕೊಟ್ಟಿದ್ದಾರೆ.

ರಷ್ಯಾ ರಾಜ್ಯದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ರೈತಪ್ರಜೆಗಳು ಆಯುಧಪಾಣಿಗಳಾಗಿ ಗ್ರಾಮಾಂತರಗಳ ಮೇಲೆ ಗುಂಪು ಗುಂಪಾಗಿ ಹೊರಟು. ತಮಗೆ ಸಿಕ್ಕಿದ್ದನ್ನೆಲ್ಲಾ ಕೊಳ್ಳೆ ಹೊಡೆಯುತ್ತಾ ನಾಶಮಾಡುತ್ತಾ ಬಂದಿರುವರು. ಇದು ಬಹು ಭಯಂಕರವಾದ ವರ್ತಮಾನವಾಗಿದೆ. ಇದನ್ನು ನೋಡಿ ಸರ್ಕಾರದವರು ರೈತರ ದಂಗೆಯನ್ನು ಅಡಗಿಸಬೇಕೆಂದು ಸೈನ್ಯಗಳನ್ನು ಕೂಡಿಸಿ, ಓಲಾಂಡ್, 'ಚರ್ನಿಗಾವ್' ಎಂಬೀ ಅಧಿಪತ್ಯಗಳಿಗೆ ಕಳುಹಿಸಿಕೊಟ್ಟರು. ಆ ಪ್ರಾಂತ್ಯ ರೈತರು ಶ್ರೀಮಂತರುಗಳ ಗೋದ್ರಿ ಕೊಂಡು, ಜಮೀನುಗಳ ಫಸಲನ್ನೂ ಮನೆಮಠಗಳನ್ನೂ ಲೂಟಿ ಮಾಡುತ್ತಲೂ ಸುಡುತ್ತಲೂ ಬಂದಿದ್ದಾರೆ.

ರಷ್ಯಾ ಜಪಾನ್ ಯುದ್ಧವು

ಕಳೆದವಾರ ಬಂದ ಮುಖ್ಯ ತಂತೀ ವರ್ತಮಾನಗಳು

ಭಯಂಕರವಾದ ಭೂಯುದ್ಧ.

ಲಂಡನ್, ಮಾರ್ಚಿ ೬ ಭಾನುವಾರವೆಲ್ಲಾ ವಿರಾಮವಿಲ್ಲದೆ ಯುದ್ಧ ನಡೆಯಿತು. ಜಪಾನಿನವರು ಮಾಚಿಯಾಪು ಎಂಬಲ್ಲಿ ಸೈನ್ಯವನ್ನು ತಾವು ನಿಲ್ಲಿಸಿಕೊಂಡಿದ್ದಾರೆ, ಆದರೆ ರಷ್ಯಾದವರನ್ನು ಓಡಿಸಲು ಅವರಿಗೆ ಸಾಧ್ಯವಾಗಲಿಲ್ಲ ಮುಕ್ಡೆನಿಂದ ಪಶ್ಚಿಮ ಉತ್ತರ ದಿಕ್ಕುಗಳಲ್ಲಿ ಯುದ್ಧಾರಂಭವಾಯಿತು. ಜನರಲ್ ಕುರೊಪಾಟ್ಕಿನ್ನರು ಬಹು ಪರಾಕ್ರಮದಿಂದ ಜಪಾನಿನವರ ಮೇಲೆ ಮುತ್ತಿಗೆ ಹಾಕಿಕೊಂಡಿದ್ದಾರೆ. ಮಧ್ಯ ಭಾಗವು ಇನ್ನೂ ರಷ್ಯಾದವರ ಸ್ವಾಧೀನದಲ್ಲಿದೆ ಮುಕ್ಡೆನಿಂದ ರೈಲ್ ಗಾಡಿಗಳಲ್ಲೂ ಇತರ ವಿಧವಾಗಿಯೂ ಪ್ರಜೆಗಳೂ ರಷ್ಯಾದವರೂ ಸಾಮಾನು ಮುಂತಾದ್ದನ್ನು ಉತ್ತರ ಕಡೆಗೆ ವಿರಾಮವಿಲ್ಲದೆ ಸಾಗಿಸಿಕೊಂಡು ಹೋಗುತ್ತಿದ್ದಾರೆ

ಜಪಾನಿನವರ ಜಯಪ್ರದ.

ರಷ್ಯಾದವರ ಫಿರಂಗಿ ಗುಂಡುಗಳ ಮಳೆ ಸುರಿಯುತ್ತಿದ್ದರೂ ಲಕ್ಷ್ಯ ಮಾಡದೆ ಜಪಾನಿನವರು ನಾಲ್ಕಾರು ಸಲ ನುಗ್ಗಿಹೋಗಿ ಯುದ್ಧ ಮಾಡಿ, ಬಹು ಜನ ಸೈನಿಕರನ್ನು ಕಳೆದುಕೊಂಡಾಗ್ಯೂ ಕಡೆಗೆ ರಷ್ಯಾದವರನ್ನು ಅವರ ಠಾಣ್ಯದಿಂದ ಓಡಿಸಿ ಆಕ್ರಮಿಸಿಕೊಂಡರು ರಷ್ಯಾ ಸೈನಿಕರು ಗಾಬರಿಬಿದ್ದು ಸೋತು ತಮ್ಮ ಬಟ್ಟೆಬರೆಗಳನ್ನು ಕೂಡ ಬಿಟ್ಟು ಓಡಿಹೋದರು. ಜಪಾನಿನವರಿಗೆ ಕೆಲವು ಫಿರಂಗಿಗಳೂ ಮದ್ದು ಗುಂಡೂ ಸಿಕ್ಕಿರುತ್ತವೆ.

ಮುಕ್ಡೆನ್ ಬಳಿ ಯುದ್ಧ

ಲಂಡನ್, ಮಾರ್ಚಿ ೭ —ಜನರಲ್ ಕುರೊಪಾಟ್ಕಿನ್ನರವರು ಚಕ್ರವರ್ತಿ ಜಾರ್ ಯವರಿಗೆ ತಂತೀ ವರ್ತಮಾನ ಕೊಟ್ಟಿದ್ದೇನೆಂದರೆ—ಮುಕ್ಡೆನ್ ನಗರದ ಪಶ್ಚಿಮಕ್ಕಿರುವ ನಮ್ಮ ರಷ್ಯಾ ಸೈನಿಕರು ಜಪಾನಿನವರ ಮೇಲೆ ಬಿದ್ದು ಯುದ್ಧ ಮಾಡುತ್ತಾ ಅವರನ್ನು ೧೬ ದಫಾ ಸೋಲಿಸಿ ಹಿಮ್ಮೆಟ್ಟಿಸಿರುತ್ತಾರೆ. ಇದಲ್ಲದೆ ಇನ್ನೂ ಕೆಲವು ಕಡೆಗಳಲ್ಲೂ ನಮ್ಮ ಸೈನಿಕರಿಗೆ ಜಯಪ್ರದವಾಗಿದೆ ಕೌಟಾಲಿನ್ ಯುದ್ಧ ಭೂಮಿಯಲ್ಲಿ ೨,೦೦೦ ಹೆಣಗಳು ಬಿದ್ದಿದ್ದವು. ಈಗ ಶತ್ರುಗಳು ದಕ್ಷಿಣದಿಕ್ಕಿಗೆ ಹಿಮ್ಮೆಟ್ಟಿ ಹೋದರು ಎಂಬುದೇ. ಜನರಲ್ ಕುರೊಪಾಟ್ಕಿನ್ನರವರು ಫ್ರೂಷಾನ್ ನಗರವನ್ನು ಕಾಪಾಡಿಕೊಳ್ಳಬೇಕೆಂದು ನಿಶ್ಚಯ ಮಾಡಿದ್ದಾರೆ. ಈ ಸ್ಥಳವನ್ನು ಕೂಡ ಅವರು ಬಿಟ್ಟುಹೋಗುವರೋ ಏನೋ ಹೇಳಲಿಕ್ಕಾಗದು ಷಾಹೊ ನದಿಯ ಬಳಿ ಇರುವ ರಷ್ಯಾ ಸೈನ್ಯದ ಸಂರಕ್ಷಣಾರ್ಥವಾಗಿ ಅವರು ಫೂಷಾನ್ ನಗರವನ್ನು ಕಾಪಾಡಿಕೊಳ್ಳಬೇಕಾಗಿದೆ

ವಿರಾಮವಿಲ್ಲದೆ ಯುದ್ಧ ನಡೆಯುತ್ತಿದೆ

ಲಂಡನ್, ಮಾರ್ಚಿ ೮.—ಮುಕ್ಡೆನಿಂದ ಉತ್ತರದಲ್ಲಿ ಕೈಷಿ ... ಎಂಬಲ್ಲಿ ರಷ್ಯಾದವರು ೨೦ ಫಿರಂಗಿಗಳ ಸಹಿತ ಒಂದು ಡಿವಿಜನ್ ಸೈನ್ಯವನ್ನು ಇಟ್ಟುಕೊಂಡಿದ್ದರು. ಜಪಾನಿನವರು ಯುದ್ಧಮಾಡಿ, ಸೋಲಿಸಿ ಅವರನ್ನೆಲ್ಲಾ ಓಡಿಸಿರುತ್ತಾರೆ. ಇತರ ದಿಕ್ಕುಗಳಲ್ಲೂ ಯುದ್ಧಗಳು ನಡೆಯುತ್ತಲೂ ಜಪಾನಿನವರಿಗೇನೇ ಜಯಪ್ರದವಾಗುತ್ತಲೂ ಇದೆ.

ಮುಕ್ಡೆನ್ ಬಳಿ ಯುದ್ಧ ನಡೆಯುತ್ತಲೇ ಇದೆ.

ಮುಕ್ಡೆನ್ ಬಳಿಯಲ್ಲಿ ಶತ್ರುಗಳು ಯುದ್ಧ ಮಾಡಿ ಮಾಡಿ ದಣಿದುಹೋಗಿದ್ದರೂ ಯುದ್ಧವನ್ನು ನಿಲ್ಲಿಸಿಲ್ಲ. ಯಾರಿಗೆ ಜಯಪ್ರದವಾಗುವುದೋ ಹೇಳಲಿಕ್ಕಾಗದು

ಷಾಹೊ ನದಿಯ ಬಳಿ ಇದ್ದ ರಷ್ಯಾ ಸೈನಿಕರು ಕತ್ತಲಲ್ಲೇ ಹಿಮ್ಮೆಟ್ಟಿಹೋದರು. ಈಗ ಅವರು ಬಿಟ್ಟುಹೋಗಿರುವ ಠಾಣ್ಯಗಳಲ್ಲೂ ಉಗ್ರಾಣಗಳಲ್ಲೂ ಇದ್ದ ಸಾಮಾನೆಲ್ಲಾ ಹತ್ತಿಕೊಂಡು ಉರಿಯುತ್ತಿವೆ. ಅವರೇ ಸುಟ್ಟುಹೋದರೆಂದು ಗೊತ್ತಾಗಿದೆ.

ಮುಕ್ಡೆನ್ ಪಟ್ಟಣ ಸ್ವಾಧೀನವಾಗುವಂತಿದೆ.

ಜಪಾನಿನವರು ನಿಧಾನವಾಗಿ ಮುಂದು ಮುಂದಕ್ಕೆ ನುಗ್ಗಿಹೋಗುತ್ತಿದ್ದಾರೆ. ಮುಕ್ಡೆನ್ ಪಟ್ಟಣವು ಅವರಿಗೆ ಇನ್ನೇನು ಸ್ವಾಧೀನವಾಗುವ ಹಾಗಿದೆ ರಷ್ಯಾ ಸೈನ್ಯದವರೆಲ್ಲಾ ತುಂಬಾ ಗಾಬರಿಪಡುತ್ತಿದ್ದಾರೆ ಜಪಾನಿನವರು ವಿರಾಮವಿಲ್ಲದೆ ಅವರ ಮೇಲೆ ನುಗ್ಗಿ ಮುತ್ತಿಗೆಹಾಕುತ್ತಿರುವುದರಿಂದ ರಷ್ಯಾದವರ ಧೈರ್ಯ ಕೆಟ್ಟಿತು. ಕೆಲವು ರಿಜಿಮೆಂಟಿನವರು ಅಧಿಕಾರಿಗಳ ಹುಕುಮನ್ನು ಶಿರಸಾವಹಿಸದೆ ದಂಗೆ ಮಾಡುವ ಹಾಗಿದ್ದಾರೆ. ಜಪಾನಿನವರು ಈಗ ಹುನ್‌ಹೊ ನದಿಗೆ ಸೇತುವೆ ಕಟ್ಟುತ್ತಿರುವರು.

ಮುಕ್ಡೆನ್ ನಗರದ ಮುತ್ತಿಗೆ.

ಲಂಡನ್, ಮಾರ್ಚಿ ೯ —ಜಪಾನಿನವರು ಬಹು ಬಲವಾಗಿ ಮುಕ್ಡೆನ್ ಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡು, ಫಿರಂಗಿಗಳನ್ನು ಎತ್ತಿಕಟ್ಟಿ, ಪಟ್ಟಣದೊಳಕ್ಕೆ ಗುಂಡು ಹೊಡೆಯುತ್ತಿದ್ದಾರೆ. ಮನೆಗಳೆಲ್ಲಾ ಒಡೆದು ಬಿದ್ದುಹೋಗುತ್ತಿವೆ. ಮುಕ್ಡೆನ್ ಪಟ್ಟಣದ ಹೊರಗೆ ಹಿರಿಯರ ಸಮಾಧಿಯ ಬಳಿ ಯುದ್ಧ ನಡೆಯುತ್ತ ಇದೆ ಈ ಯುದ್ಧಾರಂಭವಾದಾರಭ್ಯ ಇಷ್ಟು ರಕ್ತ ಪ್ರವಾಹ ಹರಿದ ಭಯಂಕರವಾದ ಕದನವು ಇದುವರೆಗೆ ನಡೆದಿಲ್ಲ ಜನರಲ್ ಕುರೊಪಾಟ್ಕಿನ್ನರವರಿಗೆ ಬಹಳ ಕೆಟ್ಟ ಸೋಲಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ.

ರಷ್ಯಾದವರು ಸೋತು ಹಿಮ್ಮೆಟ್ಟುವರು.

ರಷ್ಯಾದವರು ಸೋತು ನೆನ್ನೆ ಬೆಳಗ್ಗೆಯಿಂದ ಹಿಮ್ಮೆಟ್ಟಿ ಹೋಗುತ್ತಿದ್ದಾರೆ. ಜಪಾನಿನವರ ಸೈನ್ಯವೆಲ್ಲಾ ಒಟ್ಟು ಸೇರಿ ರಷ್ಯಾದವರನ್ನು ಓಡಿಸಿಕೊಂಡು ಹೋಗುತ್ತಿರುವುದು. ಕಾರ್ಲೊಲಿಸಾನಲ್ಲಿ ಜಪಾನಿನವರ ಕಡೆಯ ಗಾರ್ಡ್ಸ್ ಎಂಬ ರಿಜಿಮೆಂಟಿನ ಸೈನಿಕರು ಸಂಪೂರ್ಣವಾಗಿ ಹತರಾದರು. ರಷ್ಯಾದವರ ಜನರಲ್ ಮೆಯರ್ ಡಾರ್ಫ್ ಯವರು ಕಾಂಟಾಲಿಂಗಿನ ಮೇಲೆ ಎರಡು ದಿನ ರಾತ್ರಿ ಮುವತ್ತೆರಡಾವರ್ತಿ ನುಗ್ಗಿ ಬಂದ ಜಪಾನ್ ಸೈನಿಕರನ್ನು ಮುವತ್ತೆರಡಾವರ್ತಿಯೂ ಸೋಲಿಸಿ, ಸಾವಿರಾರು ಸೈನಿಕರನ್ನು ಕೊಂದು ಹಿಂದಕ್ಕೆ ಓಡಿಸಿದರು. ಹೆಣದ ರಾಶಿಗಳು ಭಯಂಕರವಾಗಿವೆ. ಎರಡು ಕಡೆಯ ಸೈನಿಕರೂ ಕಾದಾಡಿ ದಣಿದು ಹೋಗಿದ್ದಾರೆ ಜಪಾನ್ ಸೈನಿಕರು ರಣಾವೇರಿ ದುರ್ಬಲರಾಗುತ್ತಿದ್ದಾರೆ. ಯುದ್ಧವು ಕೊನೆಗಾಣುವಂತಿದೆ

ಷಾಹೋ ಠಾಣ್ಯವನ್ನು ಬಿಟ್ಟುಹೋದರು

ಷಾಹೊ ನದಿಯ ಬಳಿ ಇದ್ದ ರಷ್ಯಾ ಸೈನಿಕರೆಲ್ಲಾ ತಮ್ಮ ಠಾಣ್ಯಗಳನ್ನು ಬಿಟ್ಟು ಉತ್ತರ ದಿಕ್ಕಿಗೆ ಹೊರಟುಹೋಗುತ್ತಿದ್ದಾರೆ. ಜನರಲ್ ಕುರೋಕಿಯವರು ಅವರ ಬೆನ್ನುಹತ್ತಿ ಓಡಿಸಿಕೊಂಡು ಹೋಗುತ್ತಿರುವರು.

ಇಂಗ್ಲೀಷರ ಎರಡು ಹಡಗುಗಳನ್ನು ಹಿಡಿದರು.

ವ್ಲಾಡಿವೋಸ್ಟಾಕಿಗೆ ಸಾಮಾನ್ ಬರ್ತಿಮಾಡಿಕೊಂಡು ಹೋಗುತ್ತಿದ್ದ ಎರಡು ಇಂಗ್ಲೀಷ್ ಹಡಗುಗಳನ್ನು ಜಪಾನಿನವರು ಹಿಡಿದು ಸ್ವಾಧೀನಪಡಿಸಿಕೊಂಡರು.

ರಷ್ಯಾದವರ ಹೆಸರಿಗೆ ಕುಂದಕ.

ರಷ್ಯಾದವರು ಫ್ರಾನ್ಸ್ ರಾಜ್ಯದ ಬ್ಯಾಂಕುಗಳಲ್ಲೂ ಹಣಗಾರರಲ್ಲೂ ಯುದ್ಧದ ಖರ್ಚಿಗೆ ೩೮ ಕೋಟಿ ರೂಪಾಯಿ ಸಾಲ ತೆಗೆದುಕೊಳ್ಳಬೇಕೆಂದು ಪ್ರಯತ್ನಪಟ್ಟರು. ಫ್ರೆಂಚರು ಈ ಸಲಕ್ಕೆ ೩೮ ಕೋಟಿಗೆ ಬದಲಾಗಿ ೨೦ ಕೋಟಿ ರೂಪಾಯಿ ಮಾತ್ರ ಸಾಲ ಕೊಡುತ್ತೇವೆಂತಲೂ, ಇನ್ನು ಮುಂದೆ ಕೆಲವು ವರುಷಗಳ ತನಕ ಸಾಲ ಕೇಳಕೂಡದೆಂತಲೂ ರಷ್ಯಾದವರಿಗೆ ತಿಳಿಸಿರುತ್ತಾರೆಂದು ಲಂಡನ್ ಪಟ್ಟಣದ ಟೈಂಸ್ ಪತ್ರಿಕೆಯು ಹೇಳುವುದು

ಮುಕ್ಡೆನ್ ಬಳಿ ಯುದ್ಧಗಳು.

ಜನರಲ್ ಕುರೊಪಾಟ್ಕಿನ್ನರವರು ತಿಳಿಸಿರುವುದೇನೆಂದರೆ— ಜಪಾನಿನವರು ಮುಕ್ಡೆನ್ ಬಳಿಯಲ್ಲಿ ಅಪಾರವಾದ ಸೈನ್ಯವನ್ನು ತಂದಿಟ್ಟಿದ್ದಾರೆ. ಇದರಿಂದ ನಮ್ಮ ಸೈನ್ಯಗಳನ್ನೆಲ್ಲಾ ಹಿಂದಕ್ಕೆ ಕಳುಹಿಸಬೇಕಾಗಿದೆ. ಆತುರವಾಗಿ ಹಿಮ್ಮೆಟ್ಟಿ ಹೋಗುತ್ತಿದ್ದೇವೆ.

ರಷ್ಯಾದವರ ನಷ್ಟವು.

ಈ ಯುದ್ಧದಲ್ಲಿ ಮೊದಲಿನಿಂದ ಹತ್ತು ದಿನಗಳೊಳಗೆ ರಷ್ಯಾದವರ ಕಡೆ ೩೩,೦೦೦ ಸೈನಿಕರು ನಷ್ಟಪಟ್ಟರೆಂತಲೂ, ಈ ಪೈಕಿ ೮೩೦ ಮಂದಿ ಹುದ್ದೆದಾರರೆಂತಲೂ ರಷ್ಯಾ ಸರ್ಕಾರದವರು ತಿಳಿಸಿದ್ದಾರೆ.

ರೈಲ್ ರಸ್ತೆಯನ್ನು ಮುರಿದರು.

ಮುಕ್ಡೆನ್ ಪಟ್ಟಣದ ಉತ್ತರ ದಿಕ್ಕಿನಲ್ಲಿ ಜಪಾನಿನವರು ರಷ್ಯಾ ರೈಲ್ ರಸ್ತೆಯನ್ನು ಮುರಿದು ಹಾಳುಮಾಡಿದ್ದಾಯಿತು.

ಮುಕ್ಡೆನ್ ಬಳಿ ಯುದ್ಧವು.

ಮುಕ್ಡೆನ್ ಪಟ್ಟಣದ ಉತ್ತರ ಭಾಗದಲ್ಲಿ ಮಾರ್ಷಲ್ ಓಯಾಮಾ ಯವರೂ ಜನರಲ್ ಕುರೋಪಾಟ್ಕಿನ್ನರವರೂ ಬಹು ಘೋರವಾಗಿ ಯುದ್ಧ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಅನೇಕ ವೇಳೆ ರಷ್ಯಾದವರು ಜಪಾನಿನವರ ಮೇಲೆ ನುಗ್ಗಿ ಯುದ್ಧಮಾಡಿದರೆಂತಲೂ ಪ್ರತಿ ಸಲವೂ ಜಪಾನಿನವರು ಅವರನ್ನು ಹಿಂದಕ್ಕೆ ಓಡಿಸಿದರೆಂತಲೂ, ರಷ್ಯಾದವರಲ್ಲಿ ಬಹು ಮಂದಿ ನಷ್ಟಪಟ್ಟರೆಂತಲೂ, ಸಿಯೋಟಿನ್ ಎಂಬ ಇನ್ನೊಂದು ಠಾಣ್ಯವು ಜಪಾನಿನವರ ಸ್ವಾಧೀನಕ್ಕೆ ಬಂದಿದೆ ಎಂತಲೂ ತಿಳಿಯುವುದು

ಮುಕ್ಡೆನ್ ಪಟ್ಟಣದ ರಕ್ಷಣೆ.

ಈಗ ಚೀನಾ ರಾಜ್ಯವನ್ನಾಳುತ್ತಿರುವ ಚಕ್ರವರ್ತಿಯವರ ಹಿರಿಯರು ಮುಕ್ಡೆನ್ ಪಟ್ಟಣದಲ್ಲಿ ಹುಟ್ಟಿ ಬೆಳೆದವರಾದ್ದರಿಂದ ಆ ಪಟ್ಟಣವು ಅವರಿಗೆ ಬಹಳ ಶ್ರೇಷ್ಠವೆನಿಸಿಕೊಂಡಿದೆ ಇದನ್ನು ಜಪಾನಿನವರು ಆಕ್ರಮಿಸಿಕೊಳ್ಳುವ ಪಕ್ಷದಲ್ಲಿ ಅವರ ಸೈನಿಕರ್ಯಾರೂ ಪಟ್ಟಣದ ಒಳಪ್ರದೇಶದಲ್ಲಿ ಠಾಣ್ಯ ಹಾಕಿಕೊಳ್ಳದೇನೂ ಒಳಗಿರುವ ಚೀನಾ ಪ್ರಜೆಗಳನ್ನು ಸ್ವಲ್ಪವೂ ಹಿಂಸೆಪಡಿಸದೇನೂ ಹೊರಪ್ರದೇಶದಲ್ಲೇ ಇರಬೇಕೆಂದು ಜಪಾನ್ ಚಕ್ರವರ್ತಿಯವರು ತಮ್ಮ ಸೈನಿಕರಿಗೆಲ್ಲಾ ಆಜ್ಞೆ ಮಾಡಿದ್ದಾರೆ

ಮುಕ್ಡೆನ್ ನಗರವು ಜಪಾನಿನವರಿಗೆ ಸಿಕ್ಕಿತು.

ಲಂಡನ್, ಮಾರ್ಚಿ ೧೧.—ಜಪಾನಿನವರು ಈ ದಿನ ಬೆಳಗ್ಗೆ ೧೦ ಗಂಟೆಯಲ್ಲಿ ಮುಕ್ಡೆನ್‌ಪಟ್ಟಣವನ್ನು ಗೆದ್ದು, ಪುರಪ್ರವೇಶ ಮಾಡಿದರು. ಇದಲ್ಲದೆ, ರಷ್ಯಾ ಸೈನಿಕರ ಎಡಪಾರ್ಶ್ವದಲ್ಲಿದ್ದ ಟೀಕಾ ಎಂಬ ಅವರ ಠಾಣ್ಯವನ್ನು ಸಹ ಗೆದ್ದುಕೊಂಡರು. ಈಗ ಓಡಿಹೋಗುತ್ತಿರುವ ರಷ್ಯಾ ಸೈನ್ಯವನ್ನು ಬಲವಾಗಿ ಹಿಂದಟ್ಟುತ್ತಿದ್ದಾರೆ.

ಫ್ರೂಷಾನ್ ಗೆದ್ದುಕೊಂಡರು.

ನೆನ್ನೆ ರಾತ್ರಿ ಫೂಷಾನ್ ನಗರವನ್ನು ಜಪಾನಿನವರು ಆಕ್ರಮಿಸಿಕೊಂಡರು. ಈ ಪಟ್ಟಣದ ಉತ್ತರ ಭಾಗದಲ್ಲಿ ಯುದ್ಧಗಳಾಗುತ್ತಲೇ ಇವೆ. ರಷ್ಯಾದವರ ಅನೇಕ ಬಂದೂಕುಗಳೂ ಅವರ ಸಮಸ್ತ ಯುದ್ಧಸಾಮಗ್ರಿಗಳೂ ಜಪಾನಿನವರ ಪಾಲಾದವು.

ಮಾರ್ಷಲ್ ಓಯಾಮಾಯವರು ರಷ್ಯಾ ಸೈನಿಕರನ್ನು ಸುತ್ತಿಕೊಂಡು, ಆಚೀಚೆ ಹೋಗದಂತೆ ಯುದ್ಧ ಮಾಡುತ್ತಲೂ, ಅನೇಕರನ್ನು ಕೈಸೆರೆ ಹಿಡಿದರು. ಮದ್ದು ಗುಂಡೂ ಇತರ ಸಾಮಾನೂ ಅಪಾರವಾಗಿ ಸಿಕ್ಕಿದವು

ಜನರಲ್ ಕುರೊಪಾಟ್ಕಿನ್ನರವರು ಸಿಕ್ಕಿಬಿದ್ದರೋ ?

ಲಂಡನ್, ಮಾರ್ಚಿ ೧೧ —ಜನರಲ್ ಕುರೋಪಾಟ್ಕಿನ್ನರವರು ಓಡಿಹೋಗುವುದಕ್ಕಾಗದೆ " ನನ್ನ ಸುತ್ತಲೂ ಜಪಾನ್ ಸೈನ್ಯ ಸುತ್ತಿಕೊಂಡಿದೆ " ಎಂದು ಆತುರವಾಗಿ ತಂತೀ ವರ್ತಮಾನ ಕಳುಹಿಸಿದ್ದಾರೆ.

ರಷ್ಯಾದವರ ಅಪಾರ ನಷ್ಟ

ಕಳೆದ ಗುರುವಾರದ ವರೆಗೆ ರಷ್ಯಾದವರ ಕಡೆ ೬೯,೦೦೦ ಸೈನ್ಯ ನಷ್ಟವಾಯಿತೆಂದು ರಷ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಈಗ ರಷ್ಯಾ ಸೈನಿಕರು ಜಪಾನಿನವರ [illegible]ಗಳ ಮೇಲೆಯೂ ಗಾಯಪಟ್ಟ ಸೈನಿಕರ ಮೇಲೆಯೂ ಗಾಡಿಗಳ ಮೇಲೆಯೂ ಗುಂಡು ಹೊಡೆಯುತ್ತಿದ್ದಾರೆಂತಲೂ, ಮುಕ್ಡೆನ್ ಉತ್ತರಕ್ಕಿರುವ ರೈಲ್ ರಸ್ತೆಯನ್ನು ಕಿತ್ತು ಹಾಳುಮಾಡಿದೆವೆಂತಲೂ ಜಪಾನ್ ಸೈನ್ಯಾಧಿಪತಿಯು ತಿಳಿಸುವರು.

ಕರಾರಿನ ವರ್ತಮಾನ

ಲಂಡನ್, ಮಾರ್ಚಿ ೧೨.—ರಷ್ಯಾದವರು ಕರಾರು ಮಾಡಿಕೊಳ್ಳುವುದಕ್ಕೆ ಇಷ್ಟಪಟ್ಟು ಮಧ್ಯಸ್ಥಿಕೆ ಮಾಡುವಂತೆ ಫ್ರಾನ್ಸ್ ಸರ್ಕಾರದವರಿಗೆ ತಿಳಿಸಿರುವುದಾಗಿ ವರ್ತಮಾನವಿದೆ. ವಿಲಾಯತಿಯವರು ಜಪಾನಿನವರ ಕಡೆನಿಂತು ಇರುವರು. ಈ ಕರಾರಿನ ವಿಷಯದಲ್ಲಿ ವಿಲಾಯತಿಯವರಿಗೂ ಫ್ರಾನ್ಸಿನವರಿಗೂ ಕಾಗದ ಪತ್ರಗಳು ನಡೆಯುತ್ತಿವೆ.

ಕರಾರಿನ ವರ್ತಮಾನ ನಿಜವಲ್ಲ.

ರಷ್ಯಾ ರಾಜ್ಯದ ಫಾರಿನ್ ಇಲಾಖೆಯವರು—ನಮ್ಮ ಗವರ್ನಮೆಂಟಿನವರು ಕರಾರು ಮಾಡಿಕೊಳ್ಳುವವರಾಗಿದ್ದಾರೆಂಬ ಸುದ್ದಿಯು ನಿಜವಲ್ಲ ಎಂದು ಪ್ರಕಟಿಸಿದ್ದಾರೆ. ರಷ್ಯಾ ಚಕ್ರವರ್ತಿಯವರು— ನಮಗೆ ಜಯಪ್ರದವಾಗುವ ತನಕಲೂ ಎಷ್ಟು ದೀರ್ಘಕಾಲದ ವರೆಗಾದರೂ ಈ ಯುದ್ಧವನ್ನು ನಿಲ್ಲಿಸುವುದಿಲ್ಲ ; ಬೇಕಾದಷ್ಟು ಹೊಸ ಸೈನ್ಯ ಸಾಮಾನುಗಳನ್ನು ಜನರಲ್ ಕುರೊಪಾಟ್ಕಿನ್ನರವರ ಸಹಾಯಕ್ಕೆ ಕಳುಹಿಸುತ್ತೇವೆ ಎಂಬುದಾಗಿ ಹೇಳಿದ್ದಾರೆಂದು ಅಮೇರಿಕದಲ್ಲಿರುವ ರಷ್ಯಾ ರಾಯಭಾರಿಯಾದ ಕೌಂಟ್ ಕಾಸಿನೀ ಯವರು ತಿಳಿಸುತ್ತಾರೆ.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯಗಳು

ಲಂಡನ್, ಮಾರ್ಚಿ ೧೩ —ರಷ್ಯಾ ಸೈನ್ಯಗಳು ದಿಕ್ಕಾಪಾಲಾಗಿ ಚದರಿ ಹಿಮ್ಮೆಟ್ಟುತ್ತಿವೆ. ಜನರಲ್ ಕುರೊಪಾಟ್ಕಿನ್ನರವರು ಸ್ವಲ್ಪ ಸುಧಾರಿಸಿಕೊಳ್ಳಬೇಕೆಂತಲೂ ಅನ್ಯರಿಗಾದರೂ ಕೆಲವು ಕಾಲ ಸೈನ್ಯಾಧಿಪತ್ಯವನ್ನು ವಹಿಸುವಂತೆ ಅಪ್ಪಣೆಯಾಗಬೇಕೆಂತಲೂ ಚಕ್ರವರ್ತಿಯವರಿಗೆ ಬರೆದುಕೊಂಡಿದ್ದಾರೆ. ಸೈನಿಕರು ಆಹಾರವಿಲ್ಲದೆ ದಣಿದು ಸ್ವೇಚ್ಛಾ ವಿಹಾರಿಗಳಾಗಿರುವರು. " ನಾವು ಹಿಮ್ಮೆಟ್ಟಿ ಬರುವುದು ಮಹಾ ಕಷ್ಟ ತುಂಬಾ ಸಾಹಸಪಟ್ಟಿದ್ದರಿಂದ ಸದ್ಯಕ್ಕೆ ನಮಗೆ ಅಪಾಯ ತಪ್ಪಿತು" ಎಂದು ಜನರಲ್ ಕುರೊಪಾಟ್ಕಿನ್ನರವರು ತಿಳಿಸುತ್ತಾರೆ.

ಉಭಯ ಪಕ್ಷದಲ್ಲೂ ನಷ್ಟಗಳು.

ಜಪಾನಿನವರ ಕಡೆ ೪೧,೦೦೦ ಮಂದಿ ನಷ್ಟಪಟ್ಟರು ; ಅವರು ೪೧,೦೦೦ ರಷ್ಯಾ ಸೈನಿಕರನ್ನು ಕೈಸೆರೆ ಹಿಡಿದುಕೊಂಡರು. ರಷ್ಯಾ ಸೈನಿಕರಲ್ಲಿ ೯೦,೦೦೦ ಮಂದಿ ನಷ್ಟವಾದರು ; ೨೬,೫೦೦ ರಷ್ಯಾ ಹೆಣಗಳು ರಣರಂಗದಲ್ಲಿ ಬಿದ್ದಿದ್ದವು ಎಂದು ಜಪಾನಿನವರು ತಿಳಿಸುತ್ತಾರೆ. ರಷ್ಯಾದವರು ತಮ್ಮ ಕಡೆ ೨,೦೦,೦೦೦ ಸೈನ್ಯ ನಷ್ಟವಾಯಿತೆಂದೂ ೫೦೦ ಫಿರಂಗಿಗಳನ್ನು ಕಳಕೊಂಡೆವೆಂತಲೂ ಹೇಳುವರು.

ತೇಲಿಂಗಿನ ಬಳಿ ಒಂದು ಭಾರೀ ಯುದ್ಧವಾಗುವ ಹಾಗಿದೆ. ಫೂಹೊ ಎಂಬಲ್ಲಿ ಜಪಾನಿನವರು ಒಂದು ರಿಜಿಮೆಂಟಿನಷ್ಟು ರಷ್ಯಾ ಸೈನಿಕರನ್ನು ಕೈಸೆರೆ ಹಿಡಿದರು.

ಪ್ಲೇಗಿನ ಮೂಲಕ ದೇವರು ಇಂಡಿಯಾ ದೇಶಸ್ಥರಿಗೆ ತಿಳಿಸುವದೇನು?

[ಕಳೆದ ವಾರದಿಂದ ಸಾಗಿ ಬಂದದ್ದು.]

ಭಗವಂತನು ತನ್ನ ಕೈಯಲ್ಲಿ ಪ್ಲೇಗೆಂಬ ಈ ಮಹಾ ವ್ಯಾಧಿಯನ್ನು ಹಿಡಿದು ಭೂಮಂಡಲದ ಮೇಲೆ ಅದರ ವಿಷವನ್ನು ಹೊಯ್ಯುತ್ತಿರಲು ಅದರ ರಭಸಕ್ಕೆ ನಿಲ್ಲುವವರ್ಯಾರಾದರೂ ಉಂಟೇ? ಗಗನಚುಂಬಿಗಳಾಗಿಯೂ ಸೂರ್ಯ ಕಿರಣದಿಂದ ಹೊಳೆಯುವವುಗಳಾಗಿಯೂ ಇರುವ ಉಪ್ಪರಿಗೆಗಳನ್ನು ಕಟ್ಟಿಕೊಂಡು ಅವುಗಳೊಳಗೆ ಬಿತುಕೊಂಡರೆ ದೇವದಂಡನೆಯು ನಮ್ಮನ್ನು ಬಿಟ್ಟೀತೇ? ಅಥವಾ ನಮ್ಮ ವಿದ್ಯೆಯಿಂದಲೂ ಸಾಮರ್ಥ್ಯದಿಂದಲೂ ಮಹೋನ್ನತ ಪದವಿಯನ್ನು ಹೊಂದಿ ನಮ್ಮನ್ನು ಪ್ಲೇಗು ಮುಟ್ಟಲಾರದು ಎಂದು ಹೇಳಿಕೊಂಡರೆ ಅದು ಬಿಟ್ಟೀತೇ? ಅಥವಾ ನಮ್ಮ ಪ್ರಯಾಸದಿಂದ ಅಪಾರವಾದ ದ್ರವ್ಯವನ್ನಾರ್ಜಿಸಿ ಪ್ಲೇಗಿಗೆ ಲಂಚ ಕಟ್ಟಿದರೆ ಓಡಿಹೋಗುವದೆಂದು ಆಲೋಚಿಸಿದರೆ ಅದು ಓಡಿ ಹೋದೀತೇ? ಭಗವಂತನು ನಮ್ಮನ್ನು ದಂಡಿಸಬೇಕೆಂದು ಚಿತ್ತಗೊಂಡಿದ್ದಲ್ಲಿ ಪ್ಲೇಗು ನಮ್ಮನ್ನು ಬಿಟ್ಟರೂ ಕ್ಷಾಮವು ನಮ್ಮನ್ನು ಬಿಡಲಾರದು. ಯಾವುದಾದರೊಂದು ಉಪದ್ರವು ಬಂದು ನಮಗೆ ಬುದ್ಧಿಗಲಿಸುವದಕ್ಕೆ ಸಿದ್ಧವಾಗಿಯೇ ಇದೆ. ದೇವರ ಕಯ್ಯಿಂದ ತಪ್ಪಿಸಿಕೊಂಡು ಹೋಗುವವರು ಯಾರಿದ್ದಾರೆ?

ಹಾಗಾದರೆ ದೇವರು ಅಷ್ಟು ಕ್ರೂರಸ್ವಭಾವನೋ? ಎಷ್ಟುಮಾತ್ರಕ್ಕೂ ಇಲ್ಲ. ಆತನು ಪ್ರೀತಿಸ್ವರೂಪನಾದ ದೇವರಲ್ಲವೇ? ಹೌದು. ಇದು ಹೇಗೆಂಬಿರಾ? ಮನುಷ್ಯ ಮಾತ್ರರಾದ ಜನರು ಕೆಲವು ವೇಳೆಗಳಲ್ಲಿ ಕೋಪಮಾಡುವಂತೆ ದೇವರು ಕೋಪ ಮಾಡಿಕೊಂಡು, ಈ ಉಪದ್ರಗಳನ್ನು ಕಳುಹಿಸುತ್ತಾನೆಂದು ಭಾವಿಸಬಾರದು. ಮನುಷ್ಯರು ಮಾಡುವ ಕೋಪವು ಬೇರೆ, ದೇವರು ಮಾಡುವ ಕೋಪವೇ ಬೇರೆ. ದೇವರು ಮನುಷ್ಯರ ಪ್ರಯೋಜನವನ್ನು ಬಯಸುವ ಪ್ರೀತಿ ಪೂರಿತನಾದ ಸ್ವಾಮಿಯಾಗಿರುವದರಿಂದಲೇ ಈ ದಂಡನೆಯನ್ನು ಕಳುಹಿಸಿಕೊಡುತ್ತಾನೆ. ಪ್ರೀತಿಯಿಂದಲೂ ದಯೆಯಿಂದಲೂ ತುಂಬಿದ ತಂದೆಯು ತನ್ನ ಮಗನನ್ನು ತಿದ್ದುವದಕ್ಕೋಸ್ಕರ ದಂಡನೆಯನ್ನು ವಿಧಿಸುವ ಪ್ರಕಾರವೇ ಭಗವಂತನು ತನ್ನ ಮಕ್ಕಳಾದ ನಮ್ಮನ್ನು ದಂಡಿಸುವವನಾಗಿರುತ್ತಾನೆ. ಆತನು ಕೇವಲ ನಯವಾಕ್ಯಗಳಿಂದ ನಮಗೆ ಬುದ್ಧಿಗಲಿಸುವದಕ್ಕೆ ನೋಡಿರಬಹುದು, ನಾವು ಆತನ ಮಾತನ್ನು ಅಲಕ್ಷ್ಯವಾಗಿ ಕಂಡಿರಬಹುದು. ಆದದರಿಂದಲೇ ಈಗ ಗದರಿಸಿ ಮಾತಾಡುವವನಂತೆ ನಮ್ಮೊಡನೆ ವಾದಿಸುತ್ತಿದ್ದಾನೆ. ಆದಕಾರಣ ನಾವು ನಮ್ಮ ಮನಸ್ಸನ್ನು ಗಟ್ಟಿಮಾಡಿಕೊಳ್ಳಬಾರದು.

ನಮ್ಮ ನಿರ್ಮಾಣಕರ್ತನಾದ ಭಗವಂತನ ವಿಷಯದಲ್ಲಿ ಅಲಕ್ಷ್ಯವನ್ನು ವಹಿಸಿರುವದರಿಂದ ನಮ್ಮ ಈ ದೇಶದಲ್ಲಿ ಲಂಚ ತೆಗೆದುಕೊಳ್ಳುವಿಕೆಯೂ, ಸುಳ್ಳೂ, ವಂಚನೆಯೂ, ಸೂಳೆಗಾರಿಕೆಯೂ, ಹಾದರವೂ, ಇನ್ನೂ ವಿವರಿಸಲಶಕ್ಯವಾದ ಅನೇಕ ಬಗೆಯ ಕೊಳಕತನವು ತುಂಬಿರುತ್ತದೆ. ಇಂಥ ಕಾರ್ಯಗಳು ಪಾಪಕೃತ್ಯಗಳಲ್ಲವೆಂದು ಯಾರಾದರೂ ಹೇಳಲಾಪರೇ? ಇಂಥ ಅಕೃತ್ಯಗಳನ್ನು ಮಾಡುವವರಿಗೆ ಭಗವಂತನು ದಂಡನೆಯನ್ನು ವಿಧಿಸದೆ ಬಿಡುವನೇ?

ಈ ದೋಷಗಳು ಈ ದೇಶದಲ್ಲಿರುವ ದೇಶೀಯ ಕ್ರೈಸ್ತರೊಳಗಾದರೂ ಐರೋಪ್ಯಕ್ರೈಸ್ತರೊಳಗಾದರೂ ಇಲ್ಲವೆಂದು ನಾವು ಹೇಳುವದಿಲ್ಲ. ಕ್ರಿಸ್ತಸ್ವಾಮಿಯ ಹೆಸರನ್ನು ತಕ್ಕೊಂಡಿದ್ದಾಗ್ಯೂ ಆತನು ಅನುಗ್ರಹಿಸಿರುವ ಮಂಗಳಕಟ್ಟಳೆಗಳ ಪ್ರಕಾರವಾಗಿ ನಡೆಯದೆಯೂ, ಆತನು ಅಪ್ಪಣೆ ಕೊಟ್ಟಿರುವಂತೆ ಆ ಒಬ್ಬನೇ ಸ್ವಾಮಿಯ ಹಿಂಬಾಲಕರೆಲ್ಲರು ಪರಸ್ಪರ ಒಂದೇ ಶಿಷ್ಯಮಂಡಲಿಯಾಗಿರದೆ ಭೇದಬುದ್ಧಿಯಿಂದ ಒಡಕೊಳ್ಳುತ್ತಾ ಬಂದಿರುವದರಿಂದಲೂ ಭಗವಂತನ ಸಮ್ಮುಖದಲ್ಲಿ ಅವರು ಸಹ ಕೇವಲ ದೀನರಾಗಿ ಆತನ ಕ್ಷಮಾಪಣೆಯನ್ನು ಪ್ರಾರ್ಥಿಸಿಕೊಳ್ಳತಕ್ಕದ್ದು. ಹೀಗೆ ಕ್ರೈಸ್ತರಿಗೂ ಇತರ ಮತಸ್ಥರಿಗೂ ಸಹ ಭಗವಂತನು ಈ ಪ್ಲೇಗಿನ ಉಪದ್ರದ ಮೂಲಕ ಶಿಕ್ಷೆಯನ್ನು ಕೊಡುತ್ತಿರಲು ಸರ್ವರೂ ಅದಕ್ಕೆ ಮಣಿದು ತಮ್ಮ ಆತ್ಮಸಂರಕ್ಷಣೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸತಕ್ಕದ್ದು.

ಹಾಗಾದರೆ ಈಗ ನಾವೆಲ್ಲರೂ ಏನುಮಾಡತಕ್ಕದ್ದು? ಈ ಮಹೋಪದ್ರಗಳು ನಮ್ಮ ಮೇಲೆ ಬಂದಿರಲು ಇವುಗಳಿಂದ ಬಿಡುಗಡೆಯಾಗುವಂತೆ ನಾವೇನುಮಾಡಬೇಕಾಗಿದೆ? ಈ ಪ್ಲೇಗಿಗೆ ಮೂಲ ಕಾರಣವೇನು? ಎಂದು ಯಾರಾದರೂ ಕೇಳಿದರೆ, ಕೆಲವರು— ಯಾರು ಬಲ್ಲರು? ದೇವರೇ ಬಲ್ಲ! ಎಂದಿಷ್ಟುಮಾತ್ರ ಹೇಳಿಬಿಟ್ಟು ಎಂದಿನಂತೆ ಅಲಕ್ಷ್ಯವನ್ನು ವಹಿಸುವವರಾಗಿರುವರು. ಇನ್ನು ಕೆಲವರು—ದೇವರು ಕೋಪವಾಗಿದ್ದಾನೆ. ನಾವು ಆತನಿಗೆ ಶಾಂತಿಯನ್ನು ಮಾಡಬೇಕು. ದೇವರ ಮುಂದೆ ಮನುಷ್ಯನ ಶಕ್ತಿಯೇನು ನಡೆದೀತು? ಆತನ ದಯೆಯನ್ನು ಸಂಪಾದಿಸುವದಕ್ಕಾಗಿ ದಾನಧರ್ಮಗಳನ್ನು ಹೆಚ್ಚಾಗಿ ಮಾಡಿರಿ. ಹರಿಕೆಗಳನ್ನು ಒಪ್ಪಿಸಿಕೊಳ್ಳಿರಿ. ದೇವತೆಗಳನ್ನು ಮೆರವಣಿಗೆ ಮಾಡಿಸಿರಿ ಎಂದು ಹೇಳುವರು. ಮತ್ತೆ ಕೆಲವರು ವೈದ್ಯಶಾಸ್ತ್ರವನ್ನೆಲ್ಲಾ ಪರಿಶೋಧಿಸಿ, ಸಕಲ ಮೂಲಿಕೆಗಳ ಗುಣಾವಗುಣಗಳನ್ನು ಪರೀಕ್ಷಿಸಿ, ಪಂಡಿತರೆನಿಸಿಕೊಂಡವರು ಕಂಡುಹಿಡಿದ ಔಷದೋಪಚಾರಗಳನ್ನು ನಂಬಿರೆಂದು ಹೇಳುವರು. ಏನುಮಾಡಿದರೂ ಇಲ್ಲ. ಸುತ್ತಲೂ ಕಾಡ್ಗಿಚ್ಚಿನಂತೆ ಉರಿದು ನಾಶಪಡಿಸುತ್ತ ಪ್ಲೇಗು ರೋಗವು ಪ್ರಬಲದೆಸೆಯಲ್ಲಿ ಇರುವದು.

ಎಲೈ ಕ್ರೈಸ್ತಭಕ್ತರೇ! ನೀವೇನು ಹೇಳುತ್ತೀರಿ? ಈ ಪ್ಲೇಗಿನ ಹಾವಳಿಗೆ ನೀವು ಭಯಪಡುವದಿಲ್ಲವೇ? ಎಂದು ಕೇಳುತ್ತೀರಾ? ಕೇಳಿ ಹೇಳುತ್ತೇವೆ. ಈ ವಿಷಯದಲ್ಲಿ ನಾವು ತಿಳಿದದ್ದನ್ನು ನೀವೂ ತಿಳಿಯಬೇಕೆಂತಲೂ ನಾವು ನಂಬುವಂತೆಯೇ ನೀವೂ ನಂಬಬೇಕೆಂತಲೂ ನಾವು ಅಪೇಕ್ಷಿಸಿ ಇದನ್ನು ಬರೆಯುತ್ತೇವೆ. ಸುತ್ತಲೂ ಕಾಡ್ಗಿಚ್ಚು ಬೇಯುತ್ತಿದ್ದರೂ ನಡುವೆ ಶಾಂತವಾಗಿ ನಿಂತಿರುವಂತೆ ಮಾಡುವಂಥಾದ್ದು ಏನೆಂದು ಕೇಳುತ್ತೀರಾ? ದೇವರು ನಮ್ಮನ್ನು ಪ್ರೀತಿಸುವವನಾಗಿದ್ದಾನೆಂಬ ಭರವಸವೇ. ನಾವೂ ಪಾಪಮಾಡಿರುತ್ತೇವೆ. ನಮಗೂ ಈ ಉಪದ್ರದಿಂದ ಕಷ್ಟವುಂಟು. ಆದರೂ ಕೂಡ "ದೇವರನ್ನು ಪ್ರೀತಿಸುವವರಿಗೆ ಸರ್ವವೂ ಒಳ್ಳೇದಕ್ಕಾಗಿಯೇ ಕೂಡಿಬರುತ್ತವೆ" ಎಂಬ ನಮ್ಮ ಸತ್ಯವೇದವು ಹೇಳುವ ವಾಕ್ಯವೇ ನಮಗೆ ಆಶ್ರಯವಾಗಿದೆ. ನಾವು ಭಯಪಡುವದಿಲ್ಲ. ನಮ್ಮ ಮನಸ್ಸು ತಲ್ಲಣಿಸುವದಿಲ್ಲ.

ಎಲೈ ದೇಶಾಭಿಮಾನಿಗಳೇ, ಸಮಾಜ ಸಂಸ್ಕರಣದಲ್ಲಿ ಬದ್ಧಕಂಕಣರಾಗಿರುವವರೇ! ಈ ವಿಷಯದಲ್ಲಿ ನೀವು ಮುಂದೆ ನಿಂತು, ಸಕಲ ಮತಸ್ಥರೂ ಒಗ್ಗಟ್ಟಾಗಿ ಸತ್ಯವಾದ ಒಂದೇ ಮತಾವಲಂಬಿಗಳಾಗುವಂತೆ ಮಾಡಲು ಯಾಕೆ ಪ್ರಯಾಸ ಪಡುವದಿಲ್ಲ? ಐರೋಪ್ಯರು ಅನಾಗರಿಕರಾದ ಕಿರಾತರಾಗಿದ್ದರು. ಈಗ ಅತ್ಯಂತ ನಾಗರಿಕರಾಗಿರುವರು. ಇದಕ್ಕೇನು ಕಾರಣ? ಈ ಮಹಾ ವ್ಯತ್ಯಾಸವುಂಟಾಗುವದಕ್ಕೆ ಅವರು ಸತ್ಯಮತಾವಲಂಬಿಗಳಾದುದೇ ಕಾರಣವಲ್ಲವೇ? ನೀವು ಕಾಲವಿಳಂಬ ಮಾಡದೆ ಅವರ ಮಾದರಿಯನ್ನು ಅನುಸರಿಸಬಾರದೇ? ನಿಮ್ಮ ನಂಬಿಕೆಗೂ ದೇಶಶ್ರೇಯಸ್ಸಿಗೂ ಒಂದೇ ಒಂದು ಸ್ಥಿರವಾದ ಆಸ್ತಿವಾರವುಂಟು. ಅದು ಸತ್ಯಸ್ವರೂಪಿಯಾದ ಕ್ರಿಸ್ತ ಸ್ವಾಮಿಯ ಮತವೇ. ಅದರ ನಿರೂಪಣವೇನಂದರೆ— ನಮ್ಮ ದೇವರು ಪ್ರೀತಿಸ್ವರೂಪನಾದ ದೇವರು. ಆತನನ್ನು ಪ್ರೀತಿಯಿಂದಲೇ ಸೇವಿಸತಕ್ಕದ್ದು. ನಮ್ಮ ದೇವರು ನೀತಿಸ್ವರೂಪನು. ಆತನಿಗೆ ಅವಿಧೇಯವಾಗಿ ನಡೆಯುವವರು ಆತನಿಂದ ದಂಡನೆಯನ್ನು ಹೊಂದಲೇಬೇಕು.

ಇನ್ನು ಕಾಲವಿಳಂಬವು ಬೇಡಿ. ಭಗವಂತನು ಪ್ರಕಟಿಸಿರುವ ಸತ್ಯವಾದ ಆ ಒಂದೇ ಒಂದು ಮತವನ್ನು ಸ್ವೀಕರಿಸಿ ಭಗವಂತನಿಗೆ ವಿಧೇಯರಾಗಿ ಇಹಪರ ಸಂಬಂಧವಾದ ಸಕಲ ಶ್ರೇಯಸ್ಸಿಗೆ ಬಾಧ್ಯರಾಗಿರಿ.

ಇಂಡಿಯಾ ದೇಶದ ವರ್ತಮಾನಗಳು.

ಬೊಂಬಾಯಿ ಪಟ್ಟಣದ ನೇಪಿಯರ್ ರೋಡಿನಲ್ಲಿರುವ ಮಾರ್ಕಮಿಲ್ ಎಂಬ ಭಾರೀ ಕಾರ್ಖಾನೆಗೆ ಬೆಂಕಿ ಬಿದ್ದು, ಮುಕ್ಕಾಲು ಭಾಗ ಉರಿದು, ಸುಮಾರು ನಾಲ್ಕು ಲಕ್ಷ ರೂಪಾಯಿ ನಷ್ಟವಾಗಿದೆ.

****

ಇಂಡಿಯಾ ಗವರ್ನಮೆಂಟಿನವರು ಕಳೆದ ವರುಷ ಸೈನ್ಯದ ಇಲಾಖೆಯ ಖರ್ಚಿಗಾಗಿ ತೆಗೆದಿಟ್ಟದ್ದ ಮೊಬಲಗಿಗಿಂತಲೂ ಒಂದು ಕೋಟಿ ರೂಪಾಯಿ ಜಾಸ್ತಿ ಖರ್ಚಾಗುತ್ತಿದೆಯೂ ಇದಕ್ಕೆ ಟಿಬೆಟ್ಟಿನ ದಂಡಯಾತ್ರೆಯ ಖರ್ಚು ಸೇರಿಕೊಂಡದ್ದೇ ಕಾರಣವೆಂದೂ ತಿಳಿದು ಬಂದಿದೆ.

****

ಹಿಂದುಸ್ಥಾನದಲ್ಲೆಲ್ಲಾ ಒಳ್ಳೆ ನ್ಯಾಯಾಧಿಪತಿಯೆಂದು ಪ್ರಸಿದ್ಧಿ ಹೊಂದಿರುವ ಲೇಟ್ ರೋಮೇಶ ಚಂದ್ರಮಿತ್ರರವರ ಹೆಸರನ್ನು ಶಾಶ್ವತ ಪಡಿಸುವುದಕ್ಕಾಗಿ ಕಲ್ಕತ್ತೆಯಲ್ಲಿ ಚಂದಾ ಕೂಡಿಸುತ್ತಿದಾರೆ. ಇದುವರಿಗೆ ಈ ಫಂಡಿಗೆ ಹತ್ತಾರು ಸಾವಿರ ರೂಪಾಯಿ ಜಮೆ ಬರವಾಗಿದೆ.

****

ಸುಮಾರು ನಾಲ್ಕಾರು ವಾರಗಳ ಕೆಳಗೆ ಕಲ್ಕತ್ತೆಯಲ್ಲಿ ಕಾಲವಾದ ಮಹಾರಾಜಾ ದೇವೇಂದ್ರನಾಥ ಟಾಗೋರ್ ಎಂಬ ಪ್ರಖ್ಯಾತ ಪುರುಷನ ಹೆಸರನ್ನು ಶಾಶ್ವತಪಡಿಸಬೇಕೆಂದು ಕಳೆದ ವಾರ ಅಲ್ಲಿನ ದೊಡ್ಡ ಮನುಷ್ಯರೆಲ್ಲಾ ಸಭೆ ಸೇರಿ ತೀರ್ಮಾನ ಮಾಡಿ, ಚಂದಾ ಕೂಡಿಸುತ್ತಿದಾರೆ.

****

ಕಪೂರ್ಥಲ ಸಂಸ್ಥಾನದ ಮಹಾರಾಜರವರು ತಮ್ಮ ಸಂಸಾರ ಮಕ್ಕಳ ಸಹಿತ ಕಳೆದ ಶನಿವಾರ ಬೊಂಬಾಯಿನಲ್ಲಿ ಹಡಗು ಹತ್ತಿ ವಿಲಾಯತಿಗೆ ಪ್ರಯಾಣಮಾಡಿದರು. ಇವರು ತಮ್ಮ ಕುಮಾರರನ್ನು ವಿಲಾಯತಿಯ ಸ್ಕೂಲುಗಳಲ್ಲಿ ವಿದ್ಯಾಭ್ಯಾಸಮಾಡುವಂತೆ ಬಿಟ್ಟು, ವಾಪಸು ಬರುವರು.

****

ಇಂಡಿಯಾ ಗವರ್ನಮೆಂಟಿನವರು ಪ್ರ್ಯಾಳಿ ಎಂಬ ಜಹಜಿನ ಮೇಲೆ ಪೋರ್ಸಿಯಾ ಪರಸ್ ಪಟ್ಟಣದಿಂದ ೪೫೯ ಹೇಸರ ಕತ್ತೆಗಳನ್ನು ತರಿಸಿದಾರೆ. ಇವು ಕಳೆದ ವಾರ ಕರಾಚಿ ಪಟ್ಟಣದಲ್ಲಿ ಜಹಜಿನಿಂದ ಇಳಿಸಲ್ಪಟ್ಟವು. ಸೈನಿಕರ ಸಾಮಾನು ಮುಂತಾದ್ದನ್ನು ಹೊರುವುದಕ್ಕಾಗಿ ತರಿಸಲ್ಪಟ್ಟವೆ.

****

ಪಿಷಾವರ್ ಪ್ರಾಂತ್ಯಕ್ಕೆ ಸೇರಿದ ಮಾಡನ್ನಿ ಎಂಬ ರಾಜ್ಯಕ್ಕೆ ಅಫ್ರಿದಿಗಳೆಂಬ ಮಹಮದಿಯರ ಗುಂಪು ಕಳೆದ ವಾರ ನುಗ್ಗಿದರು. ರಾಜ್ಯದಲ್ಲಿದ್ದ ಇಂಗ್ಲಿಷ್ ಪೋಲೀಸ್ ಪಹರೆಯವರ ೯ ಬಂದೂಕುಗಳು, ಕೆಲವು ಕುದುರೆಗಳು, ಇನ್ನು ಕೆಲವು ಸಾಮಾನುಗಳನ್ನೆಲ್ಲಾ ಲೂಟಿ ಮಾಡಿ ಹೊತ್ತುಕೊಂಡು ಹೋಗಿದಾರೆ.

****

ಧೋಲ್ಪುರ ಸಂಸ್ಥಾನದ ಮಹಾರಾಜಾರಾಣಾರವರು ಪ್ರಾಪ್ತವಯಸ್ಸಿನವರಾಗಿ ವಿದ್ಯಾದಿ ಸಾಮರ್ಥ್ಯವಂತರಾದುದನ್ನು ನೋಡಿ, ಇಂಡಿಯಾ ಗವರ್ನಮೆಂಟಿನವರು ಅವರಿಗೆ ಕಳೆದ ಗುರುವಾರ ಸಂಸ್ಥಾನವನ್ನಾಳುವ ಪದವಿಯನ್ನು ದಯಪಾಲಿಸಿದರು. ಕಳೆದ ವಾರವೆಲ್ಲಾ ಧೋಲ್ಪುರದಲ್ಲಿ ಪಟ್ಟಾಭಿಷೇಕೋತ್ಸವಗಳು ನಡೆದವು.

ತಂಜಾವೂರು ಜಿಲ್ಲೆಯಲ್ಲಿ ೧೯೦೪ನೇ ಇಸವಿ ಕಡೆಯ ಮೂರು ತಿಂಗಳಲ್ಲಿ ಗೋಕಾಯಿಗಳಿಗೆ ಕಾಲುಬಾಯಿ ಜ್ವರ ಹಿಡಿದು, ಸಾವಿರಾರು ದನಗಳು ಮೃತಪಟ್ಟವು. ಸರ್ಕಾರಿ ಪಶುವೈದ್ಯರು ಹೋಗಿ ರೈತ ಪ್ರಜೆಗಳಿಗೆ ವಿವೇಕ ಹೇಳಿ, ಸುಮಾರು ೬ ಸಾವಿರ ಪಶುಗಳಿಗೆ ಆ ರೋಗ ಬಾರದಂತೆ ಸಿದುಬು ಹಾಕಿ ಬಂದದ್ದರಿಂದ ಉಪದ್ರವೇ ನಿಂತುಹೋಯಿತು.

****

ಪರ್ಣ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಕಳೆದ ಡಿಸೆಂಬರ್ ತಿಂಗಳಲ್ಲಿ ಪ್ರಾರಂಭವಾಗಿ ಆ ಒಂದು ತಿಂಗಳಲ್ಲಿ ೧೬೦ ಜನರನ್ನು ಕೊಂದುಬಿಟ್ಟಿತು. ಅಲ್ಲಿಂದೀಚೆಗೆ ಜನವರಿಯಲ್ಲಿ ೩೫೦ ಜನರೂ ಫೆಬ್ರವರಿಯಲ್ಲಿ ೧೧,೦೦೦ ಜನರೂ ಸತ್ತು ಹೋಗಿದಾರೆ ಅಲ್ಲಿರುವ ಪ್ರಜಾಸಂಖ್ಯೆಯನ್ನು ನೋಡಲಾಗಿ ಉಪದ್ರವು ಬಹಳ ಕಠಿಣವಾಗಿದೆ ಎಂದು ಹೇಳಬಹುದಾಗಿದೆ.

****

ಕೆಳಗಿನ ಬರ್ಮಾದಲ್ಲಿ ೧೫ ಡಿಸ್ಟ್ರಿಕ್ಟುಗಳಲ್ಲಿ ಭತ್ತದ ಬೆಳೆ ಆಗುವುದು. ಈ ಸಲ ೬೨,೫೦,೭೦೮ ಎಕರೆ ಜಮೀನಿನಲ್ಲಿ ಪೈರೀ ಫಸಲಾಗಿದೆ, ಅಂದರೆ ಹಿಂದಿನ ವರುಷಕ್ಕಿಂತ ೯,೪೦,೦ ಎಕರೆ ಜಮೀನು ಹೆಚ್ಚು. ಈಗ ಬೆಳೆದಿರುವ ಬತ್ತದಲ್ಲಿ ಆ ದೇಶಕ್ಕೆ ಬೇಕಾಗುವಷ್ಟು ಭತ್ತ ಹೋಗಾ ೩೯,೬೩,೮೪೦ ಟನ್ನು ಅಕ್ಕಿ ಇತರ ಕಡೆಗಳಿಗೆ ರಫ್ತಾಗಲು ಸಿದ್ಧವಾಗುವುದು.

****

ನಾಗೂರ್ ನಾಗಪಟ್ಟಣದಲ್ಲಿ ಹಿಂದು ದೊಡ್ಡ ಮನುಷ್ಯರು ಒಂದು ಹೈಸ್ಕೂಲನ್ನು ಸ್ಥಾಪಿಸಿ, ಅದರ ಮೂಲಧನಕ್ಕೆ ಚಂದಾ ಕೂಡಿಸುತ್ತಿದಾರೆ. ಇದುವರೆಗೆ ೧೯,೦೦೦ ರೂಪಾಯಿ ಸೇರಿದೆ, ಪಕೀರ ಸ್ವಾಮಿಪಿಳ್ಳೆಯವರೊಬ್ಬರೇ ೧೦,೦೦೦ ರೂಪಾಯಿ ಕೊಟ್ಟಿದಾರೆ. ಈ ಸಂಘದವರು ನಾಟಕೋಟ ವರ್ತಕರಿಂದಲೂ ಚಂದಾ ಎತ್ತಬೇಕೆಂದು ಪ್ರಯತ್ನಪಡುತ್ತಿರುವರು.

****

ಸಿಲೋನ್ (ಲಂಕಾ) ದ್ವೀಪದ ಸಮುದ್ರ ತೀರದಲ್ಲಿ ಸರ್ಕಾರದವರು ಮುತ್ತುಗಳನ್ನು ತೆಗೆಯುವ ಕಂಟ್ರಾಕ್ಟನ್ನು ಅಲ್ಲಿನ ಕಂಟ್ರಾಕ್ಟದಾರರಿಗೇ ಕೊಡುತ್ತಾ ಬಂದಿದಾರಷ್ಟೆ. ಲಂಡನ್ ಪಟ್ಟಣದಲ್ಲಿ ಭಾರೀ ಮುತ್ತಿನ ವ್ಯಾಪಾರಸ್ಥರಾದ ಕಂಪನಿಯವರು ತಮ್ಮ ಕಡೆಯ ಏಜಂಟನ್ನು ಸಿಲೋನ್ ದ್ವೀಪಕ್ಕೆ ಕಳುಹಿಸಿದಾರೆಂತಲೂ, ಮುತ್ತು ತೆಗೆಯುವ ಕಂಟ್ರಾಕ್ಟನ್ನು ಇನ್ನು ಮೇಲೆ ತಮಗೇ ಕೊಡಬೇಕೆಂದು ಕೇಳಿಕೊಂಡಿದಾರೆಂತಲೂ ಪ್ರಕಟವಾಗಿದೆ.

****

ಹಿಂದುಸ್ಥಾನದ ವಾಯುವ್ಯ ಸರಹದ್ದಿನ ಬಳಿ ಇರುವ ಚಿತ್ರಾಲ್ ಪ್ರಾಂತ್ಯದಿಂದ ೧೫ ಜನ ಪಠಾಣರು ಕಳೆದ ತಿಂಗಳ ೨೭ನೆ, ೨೬ನೆ, ೨೪ನೆ ತಾರೀಖುಗಳ ಅಂಚೆ ಬಸ್ತುಗಳನ್ನು ಹಿಂದುಸ್ಥಾನಕ್ಕೆ ಹೊತ್ತು ತರುತ್ತಿದ್ದರು ಲಾವಾರಿ ಎಂಬ ಕಣಿವೆಯಲ್ಲಿ ಮೇಲಿನಿಂದ ಹಿಮಗಡ್ಡೆಗಳು ಉರುಳಿಕೊಂಡು ಬಂದು, ಅವರ ಮೇಲೆಲ್ಲಾ ಕವಿತುಕೊಂಡಿತು ಹದಿನಾಲ್ಕು ಜನರು ಸತ್ತುಹೋದರು. ಈಚೆಗೆ ಇವರ ಶವಗಳೂ, ಅವರು ಹೊತ್ತು ತರುತ್ತಿದ್ದ ಅಂಚೇ ಬಸ್ತುಗಳೂ ಸಿಕ್ಕಿದವು.

****

ಪೂನಾ ಪಟ್ಟಣದಲ್ಲಿದ್ದ ಮೇಜರ್ ಕ್ಲೀವಿಲಾಂಡ್ ಎಂಬೊಬ್ಬ ಇಂಗ್ಲಿಷ್ ಡಾಕ್ಟರನ್ನು ಇಂಡಿಯಾ ಗವರ್ನಮೆಂಟಿನವರು ಚುನಾಯಿಸಿ, ಆಫ್ಘನಿಸ್ಥಾನದ ಅಮೀರರ ಬಳಿ ಡಾಕ್ಟರಾಗಿರುವಂತೆ ಕಳುಹಿಸಿ ಕೊಟ್ಟರು. ಇವರು ಪತ್ನಿಸಹಿತ ಅಲ್ಲಿಗೆ ಹೋಗಿ ಸುಮಾರು ೮—೧೦ ತಿಂಗಳಾಗಿರಬಹುದು. ಇಷ್ಟರಲ್ಲೇ ಅವರ ಪತ್ನಿಯವರಿಗೆ ಅಲ್ಲಿನ ಹವಾ ಸರಿಹೋಗದೆ ಕಾಯಿಲೆ ಬಿದ್ದುಕೊಂಡದಾದಕಾರಣ ಅವರು ಅಲ್ಲಿನ ಕೆಲಸಕ್ಕೆ ರಾಜೀನಾಮೆ ಕೊಟ್ಟು ತಮ್ಮ ಹೆಂಡತಿಯನ್ನು ಕರೆದುಕೊಂಡು, ವಾಪಸು ಪೂನಾಕ್ಕೆ ಬರುವವರಾಗಿದಾರೆ.

****

ಮದರಾಸ್ ಗವರ್ನರಾದ ಲಾರ್ಡ್ ಅಂಟ್ಹಿಲ್ ಯವರ ಅಧಿಕಾರದ ಅವಧಿಯು ಈ ವರುಷದ ಡಿಸೆಂಬರಿಗೆ ಮುಗಿದು ಹೋಗುವುದು. ನ್ಯಾಯವಾಗಿ ನೋಡಿದರೆ ಅವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಡಿಸೆಂಬರಿನಲ್ಲಿ ವಾಪಸು ವಿಲಾಯತಿಗೆ ಪ್ರಯಾಣ ಮಾಡಬೇಕು. ಆದರೆ ಆ ಸಮಯಕ್ಕೆ ಸರಿಯಾಗಿ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಸಹಿತ ಈ ರಾಷ್ಟ್ರಕ್ಕೆ ದಯಮಾಡುತ್ತಾರಾದ್ದರಿಂದ ಆಗ್ಗ ಹೊಸಬರಾದ ಗವರ್ನರು ಇರುವುದು ಸರಿಯಲ್ಲವೆಂದು ಚಕ್ರವರ್ತಿಯವರು ಲಾರ್ಡ್ ಅಂಟ್ಹಿಲ್‌ರವರ ಅಧಿಕಾರದ ಅವಧಿಯನ್ನು ಮುಂದಿನ ವರುಷದ ಮಾರ್ಚಿಯ ತನಕ ಹೆಚ್ಚಿಸಬಹುದೆಂದು ಕಾಣುತ್ತದೆ.

****

ಕಲ್ಕತ್ತೆಯ ಬಳಿ ಇರುವ ನಾಷಿಪುರದಲ್ಲಿ ಒಂದು ಪಾತಕರವಾದ ಸಂಗತಿ ನಡೆಯಿತು. ಅಲ್ಲಿರುವ ರಾಜಾ ರಣಜಿತ ಸಿಂಗರವರ ಜ್ಯೇಷ್ಠಪುತ್ರನಿಗೆ ಕಳೆದ ಬುಧವಾರ ವಿವಾಹವಾಗಬೇಕಾಗಿತ್ತು. ಅವರು ಅದಕ್ಕೋಸ್ಕರ ತುಂಬಾ ಏರ್ಪಾಡು ಮಾಡಿಕೊಂಡು, ಅನೇಕರಿಗೆ ಉಡಿಗೆರೆ ಮುಂತಾದ್ದನ್ನು ಕೊಟ್ಟು, ನೆಂಟರಿಷ್ಟರನ್ನು ಕರೆಸಿಕೊಂಡು, ದರ್ಭಾಂಗಕ್ಕೆ ಹೋಗಿ ಬರುವುದಕ್ಕೆ ಸ್ಪೆಷಲ್ ರೈಲನ್ನೂ ಗೊತ್ತುಮಾಡಿಕೊಂಡಿದ್ದರು. ಇವರೆಲ್ಲಾ ಹೊರಡುವಷ್ಟರೊಳಗಾಗಿ ದರ್ಭಾಂಗದಲ್ಲಿ ಮದವಣಗಿತ್ತಿ (ಹೆಣ್ಣು ಮಗುವು) ಯು ಕಾಲವಾದಳೆಂದು ಅಲ್ಲಿಂದ ತಂತೀ ವರ್ತಮಾನ ಬಂದು, ಉತ್ಸವವನ್ನೆಲ್ಲಾ ಭಂಗಮಾಡಿತು.

ಲಂಕಾ (ಸಿಲೋನ್) ದ್ವೀಪದಲ್ಲಿ ಸರ್ಕಾರದವರು ಸಮುದ್ರದಲ್ಲಿ ಹಡಗುಗಳು ಬಂದು ನಿಲ್ಲುವುದಕ್ಕೂ ಸಾಮಾನ್ ಸಾಗಿಸುವುದಕ್ಕೂ ಭಾರೀ ಕಾಮಗಾರಿ ನಡಿಸುತ್ತಿದ್ದಾರೆ ಬಹು ಜನ ಅರಬ್ಬರು ಆಫ್ರಿಕ ದೇಶದಿಂದ ಹೋಗಿ ಅಲ್ಲಿನ ಊರೂರುಗಳಲ್ಲೆಲ್ಲಾ ಅಲೆಯುತ್ತಿರುವರು ಇದನ್ನು ಪ್ರಜೆಗಳು ನೋಡಿ, ಸರ್ಕಾರದವರು ನಡಿಸುವ ಕಾಮಗಾರಿ ಪೂರೈಸುವುದಕ್ಕೆ ಅವರು ...ದವರಿಗೆ ಅಪ್ಪಣೆ ಕೊಟ್ಟು, ಚಿಕ್ಕ ಚಿಕ್ಕ ಮಕ್ಕಳನ್ನು ಹಿಡಿಸಿಕೊಂಡು ಹೋಗಿ ಬಲಿ ಕೊಡುತ್ತಾರೆಂದು ಸುದ್ದಿ ಹುಟ್ಟಿಸಿ ಹರಡುತ್ತಾರೆ. ಇದರಿಂದ ನಾವಲಾಲೆ ಎಂಬ ಸ್ಥಳದಲ್ಲಿ ಜನರು ಮುಸಲ್ಮಾನರ ಒಂದು ಗುಂಪನ್ನು ತಡೆದು ಅವರನ್ನೆಲ್ಲಾ ಹೊಡೆದು ತುಂಬಾ ಗಾಯ ಮಾಡಿದರು. ಇನ್ನು ಕೆಲವು ಸ್ಥಳಗಳಲ್ಲೂ ಜನಗಳು ...ರಿ ಬಿಟ್ಟು ಪ್ರಜಾನೆಮ್ಮದಿಗೆ ಭಂಗವನ್ನುಂಟು ಮಾಡುತ್ತಿದ್ದಾರೆಂದು ವರ್ತಮಾನ ಬಂದಿದೆ

*****

ಬರ್ಮ ಅಧಿಪತ್ಯಕ್ಕೆ ಸೇರಿದ ಪ್ರೋಂನಗರದಿಂದ ಪೋಲೀಸಿನವರು ೭ ಜನ ಬಂದೀವಾನರನ್ನು ರೈಲಿನಲ್ಲಿ ಕೂರಿಸಿ, ರಂಗೂನ್ ಪಟ್ಟಣಕ್ಕೆ ಕರೆದುಕೊಂಡು ಬರುತ್ತಿದ್ದರು ರಂಗೂನ್ ಬಳಿ ಕೆಲವು ಮೈಲಿ ದೂರದಲ್ಲಿರುವ ಮಾಂಗ್ಯೆಬಿಟ್ ಎಂಬ ಸ್ಟೇಷನ್‌ಗೆ ರೈಲು ಬಂದಾಗ ಅದರಲ್ಲಿ ಐದು ಮಂದಿ ಖೈದಿಗಳೂ ತಮ್ಮ ಮೇಲೆ ಉಸ್ತುವಾರಿಗೆ ಇದ್ದ ಇಬ್ಬರು ಜನ ಪೋಲೀಸಿನವರ ಮೇಲೆ ಬಿದ್ದು ಅವರನ್ನು ಚೆನ್ನಾಗಿ ಹೊಡೆದು, ತಪ್ಪಿಸಿಕೊಂಡು ಪರಾರಿಯಾದರು ಅವರಿಗೆ ಕೈಕೋಳಗಳನ್ನು ಹಾಕಿರಲಿಲ್ಲ, ಕಾಲಿಗೆ ಮಾತ್ರ ಬೇಡಿ ಹಾಕಿದ್ದರು. ಆ ಇಬ್ಬ ಪೋಲೀಸಿನವರ ಹತ್ತಿರಲೂ ಒಂದು ಬಂದೂಕು, ಸನೀ ಹದಿನೈದು ತೋಟಾಗಳು ಇದ್ದವು. ಆದಾಗ್ಯೂ ಆ ಖೈದಿಗಳು ಸುಲಭವಾಗಿ ಅವರು ತಪ್ಪಿಸಿಕೊಂಡು ಹೋಗಿರುವುದು ಆಶ್ಚರ್ಯಕರವಾಗಿದೆ ಅವರನ್ನು ಹುಡುಕಿ ಹಿಡಿಯುವುದಕ್ಕೆ ಪೋಲೀಸಿನವರನ್ನು ಎಲ್ಲಾ ಕಡೆಗಳಿಗೂ ಕಳುಹಿಸಿದ್ದಾರೆ.

*****

ಕಲ್ಕತ್ತಾ ಪಟ್ಟಣದಲ್ಲಿರುವ ರಾಮಲಾಲದಾಸ್ ಎಂಬುವನು ...ದ ಚಂದ್ರನಾಲ್ ಎಂಬವನ ಬಳಿಯಲ್ಲಿ ೧೫,೦೦೦ ರೂಪಾಯಿ ...ಬೇಜಿಟ್ಟು ಇಟ್ಟಿದ್ದ ಹಾಗೂ ಅದನ್ನು ಅವನು ಕೊಡದೆ ಇರುವುದರಿಂದ ಹೈ ಕೋರ್ಟಿನಲ್ಲಿ ಅವನ ಮೇಲೆ ದಾವಾ ತಂದನು. ಪ್ರತಿವಾದಿಯಾದ ಪ್ರತಾಪ ಚಂದ್ರನಾದರೋ—ವಾದಿ ತನ್ನ ವಶಕ್ಕೆ ...೦೦೦ ರೂಪಾಯಿ ಕೊಟ್ಟದ್ದೇ ಇಲ್ಲವೆಂದು ಹೇಳಿದನು ಆಗ ...ಯು ಮುಂದೆ ಬಂದು—ಕೋರ್ಟಿನಲ್ಲಿ ಪ್ರತಿವಾದಿಯು ಗಂಗಾಜಲವನ್ನು ಹಿಡಿದುಕೊಂಡು, ನಾನು ಅವನ ಹತ್ತಿರ ರೂಪಾಯಿ ಇಲ್ಲವೆಂದು ಪ್ರಮಾಣ ಮಾಡಿ ಹೇಳುವುದಾದರೆ ದಾವಾ ವಾಪಸ್ ತೆಗೆದುಕೊಳ್ಳುತ್ತೇನೆಂದು ಪ್ರಮಾಣಕ್ಕೆ ಬಾಯಿನ್ ಮಾಡಿ ಪ್ರತಿವಾದಿಯು ಅದೇ ಪ್ರಕಾರ ಒಪ್ಪಿ ಗಂಗಾ ಜಲವನ್ನು ... ಕೋರ್ಟಿನಲ್ಲಿ ಪ್ರಮಾಣ ಮಾಡಿದ್ದರಿಂದ ಹೈ ಕೋರ್ಟಿನವರು ಮೊಕದ್ದಮೆಯನ್ನು ವಜಾ ಮಾಡಿದರು.

*****

ಬೊಂಬಾಯಿ ಆಧಿಪತ್ಯದ ಗವರ್ನರಾದ ಲಾರ್ಡ್ ಲಾಮಿಂಗ್ಟನ್‌ರವರು ಕಾಠ್ಯವಾಡಕ್ಕೆ ದಯಮಾಡಿ, ಆ ಪ್ರಾಂತ್ಯದ ದೇಶೀಯ ಸಂಸ್ಥಾನಗಳ ರಾಜರುಗಳನ್ನೆಲ್ಲಾ ಬರಮಾಡಿಕೊಂಡು, ಒಂದು ದಿನ ದರ್ಬಾರು ನಡಿಸಿದರು. ರಾಜರುಗಳು ಆಗ ಅವರಿಗೆ ಒಪ್ಪಿಸಿದ ಮಾನಪತ್ರಿಕೆಯನ್ನು ಗವರ್ನರವರು ಅಂಗೀಕರಿಸಿ ಪ್ರತ್ಯುತ್ತರವಾಗಿ ತಿಳಿಸಿದ್ದೇನೆಂದರೆ—ನಿಮ್ಮ ಸಂಸ್ಥಾನಗಳೆಲ್ಲಾ ೩—೬ ವರುಷಗಳಿಂದಲೂ ಕ್ಷಾಮದಲ್ಲಿ ನರಳುತ್ತಿದ್ದವು ಬೊಂಬಾಯಿ ಗವರ್ನಮೆಂಟಿನವರು ೧೮೯೯ನೇ ಇಸವಿಯಿಂದ ನಿಮ್ಮ ಸಂಸ್ಥಾನದ ದುಸ್ಥಿತಿಯನ್ನು ನಿವಾರಣೆ ಮಾಡುವುದಕ್ಕಾಗಿ ಇದುವರೆಗೆ ೧೦೬,೩೦೮ ರೂಪಾಯಿ ಕೊಟ್ಟಿದ್ದಾರೆ. ಡೆಹಲಿ ದರ್ಬಾರಿನ ಕಾಲದಲ್ಲಿ ತಿಳಿಯಪಡಿಸಿದ ಪ್ರಕಾರ ಈ ಹಣದ ಬಡ್ಡಿಯನ್ನು ಮೂರು ವರುಷಗಳ ವರೆಗೆ ಮಾಫಿ ಬಿಟ್ಟಿರುವರು. ಇದರಿಂದ ೫೧ ಲಕ್ಷ ರೂಪಾಯಿ ನಿಮ್ಮಗಳಿಗೆಲ್ಲಾ ಕೂಡಿಬಂದಿದೆ ಇಷ್ಟೆಲ್ಲಾ ಉಪಕಾರ ಮಾಡಿದರೂ ನೀವುಗಳು ಗವರ್ನಮೆಂಟಿನವರ ಕಾರುಬಾರುಗಳ ವಿಷಯದಲ್ಲಿ ಇನ್ನೂ ಸಂಶಯಪಡುತ್ತಿರುವುದು ಯಾವ ನ್ಯಾಯವೋ ತಿಳಿಯದು. ಆದರೂ ಗವರ್ನಮೆಂಟಿನವರು ನಿಮ್ಮಗಳ ಕ್ಷೇಮವನ್ನು ಬಯಸುವವರಾಗಿದ್ದಾರೆಂಬುದನ್ನು ಮರೆಯಬಾರದು ಎಂದರು.

*****

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಹಿತ ಹಿಂದುಸ್ಥಾನಕ್ಕೆ ದಯಮಾಡಿ, ಈ ರಾಷ್ಟ್ರದಲ್ಲಿ ಸಂಚಾರ ಮಾಡಿಕೊಂಡು ಹೋಗುವರಷ್ಟೆ. ಇವರ ಖರ್ಚಿಗೆ ಪಾರ್ಲಿಮೆಂಟಿನವರು ಮೂರು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ ಅವರು ನೋವೆಂಬರ್ ೯ಕ್ಕೆ ಬೊಂಬಾಯಿನಲ್ಲಿ ಬಂದು ಇಳಿದು, ಚಕ್ರವರ್ತಿಯವರ ಜನ್ಮ ದಿನದ ಉತ್ಸವವನ್ನು ನಡಿಸುವರು. ಅಲ್ಲಿಂದ ಕ್ರಿಸ್‌ಮಸ್ ಹಬ್ಬದ ಹೊತ್ತಿಗೆ ಕಲ್ಕತ್ತೆಗೆ ಬಂದು ಕುದುರೆಯ ಜೂಜು ಮುಂತಾದ ವಿಶೇಷಗಳನ್ನು ನೋಡಿಕೊಂಡು, ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಬಂಗಲೆಗೆ ಅಸ್ತಿಭಾರವನ್ನು ಹಾಕುವರು. ಅನಂತರ ಆಗ್ರ, ದೇಹಲಿ, ಲಾಹೋರ್, ಪೆಷಾವರ್, ರಾವಲ್‌ಪಿಂಡಿ, ಕೆಲವು ರಾಜಪುಟಾನಾ ಸಂಸ್ಥಾನಗಳು, ಬಿಕಾನೀರ್ ಸಂಸ್ಥಾನ, ಕಾನ್ಪೂರ್, ಲಕ್ನೋ ಮೊದಲಾದ ಕಡೆಗಳಲ್ಲಿ ಸಂಚಾರ ಮಾಡಿಕೊಂಡು, ಮದರಾಸ್, ಹೈದರಾಬಾದ್, ಮೈಸೂರು ಮುಂತಾದ ಕಡೆಗಳಿಗೆ ದಯಮಾಡುವರು. ...ಕಾಡುಗಳಲ್ಲಿ ಅವರಿಗಾಗಿ ಒಳ್ಳೇ ಷಿಕಾರಿ ಏರ್ಪಾಡು ... ನೇಪಾಳದಲ್ಲೋ ಅಸ್ಸಾಮಿನಲ್ಲೋ ಅವರಿಗೋಸ್ಕರ ಷಿಕಾರಿಯನ್ನು ಸಿದ್ಧಪಡಿಸುವವರಾಗಿದ್ದಾರೆ.

ಮೈಸೂರಿನ ಲಾರ್ಡ್ ಕರ್ಜನ್ ಪ್ರಭುಗಳು ವಿಲಾಯತಿಯಿಂದ ಬಂದ ತಮ್ಮ ಪತ್ನೀ ಪುತ್ರಿಯರನ್ನು ಎದುರುಗೊಳ್ಳುವುದಕ್ಕೆ ಕಳೆದ ವಾರ ಸ್ಪೆಷಲ್ ರೈಲಿನಲ್ಲಿ ಕಲ್ಕತ್ತೆಯಿಂದ ಬೊಂಬಾಯಿಗೆ ದಯಮಾಡಿದ್ದರು. ಹಡಗು ಇಳಿದ ಕೂಡಲೇ ತಮ್ಮ ಪತ್ನಿ ಪುತ್ರಿಯರನ್ನು ಕರೆದುಕೊಂಡು, ಅಪ್ಪೊಲ್ಲೋ ಎಂಬ ಬಂಗಲೆಗೆ ದಯಮಾಡಿ ಭೋಜನಾದಿಗಳನ್ನು ತೀರಿಸಿಕೊಂಡು, ಆ ದಿನ ಮಧ್ಯಾಹ್ನ ರೈಲು ಹತ್ತಿ ಕಲ್ಕತ್ತೆಗೆ ಎಲ್ಲರೂ ಪ್ರಯಾಣ ಮಾಡಿದರು ದಾರಿಯಲ್ಲಿ ರೈಲ್ ಗಾಡಿ ನಡಿಯುವುದು ಸ್ವಲ್ಪ ತಾಮಸವಾಯಿತು. ಆಗ ವೈಸ್‌ರಾಯಿ ಯವರು ಉಳಿದ ಸಾಮಾನ್ ಗಾಡಿಗಳನ್ನೆಲ್ಲಾ ಮಧ್ಯದಾರಿಯಲ್ಲಿ ಬಿಟ್ಟು, ಪತ್ನಿಸಹಿತ ತಾವು ಕೂತಿದ್ದ ಒಂದು ಗಾಡಿಯನ್ನು ಮಾತ್ರ ಎಂಜಿನ್ ಗಾಡಿಗೆ ಕಟ್ಟಿಸಿ, ೩೫೦ ಮೈಲಿ ದೂರವನ್ನು ಗಂಟೆಗೆ ೫೦—೬೦ ಮೈಲಿ ಪ್ರಕಾರ ಓಡಿಸಿಕೊಂಡು ಹೋಗಿ ಕಲ್ಕತ್ತೆಯಲ್ಲಿ ಇಳಿದರು. ಆದಾಗ್ಯೂ ಗೊತ್ತಾದ ಕಾಲಕ್ಕಿಂತ ೩೫ ನಿಮಿಷ ವಿಳಂಬವಾಯಿತು. ಸಾವಿರಾರು ಪ್ರಜೆಗಳೂ ಅಧಿಕಾರಿಗಳೂ ಲೇಡಿ ಕರ್ಜನ್‌ರವರನ್ನು ಕಂಡು ಜಯಘೋಷಗಳನ್ನು ಮಾಡಿದರು. ದಂಪತಿಗಳಿಬ್ಬರೂ ಅರಮನೆಯಲ್ಲಿ ಸಿಂಹಾಸನದ ದರ್ಬಾರ್ ಹಾಲಿಗೆ ಹತ್ತಿಹೋಗಿ ಕುಳಿತುಕೊಂಡರು. ಸುಮಾರು ೩೦೦ ದೊರೆಸಾನಿಗಳು ರುಜುಹಾಕಿದ್ದ ವಿಜ್ಞಾಪನಾ ಪತ್ರಿಕೆಯು ಓದಿ, ಲೇಡಿ ಕರ್ಜನ್‌ರವರಿಗೆ ಒಪ್ಪಿಸಲ್ಪಟ್ಟಿತು. ಪತಿಪತ್ನೀಯರುಗಳು ಸಮಸ್ತರನ್ನೂ ವಂದಿಸಿದರು. ವೈಸ್‌ರಾಯಿ ಯವರ ಮೂವರು ಹೆಣ್ಣು ಮಕ್ಕಳೂ, ಲೇಡಿ ಕರ್ಜನ್‌ರವರ ಅಕ್ಕಂದಿರಿಬ್ಬರೂ ಬಂದಿರುತ್ತಾರೆ.

ವಿದೇಶ ವರ್ತಮಾನಗಳು.

ಕಳೆದ ಜನವರಿ ತಿಂಗಳಲ್ಲಿ ಲಂಡನ್ ಪಟ್ಟಣಕ್ಕೆ ಇತರ ರಾಜ್ಯಗಳ ಜನರು ೧೨,೫೦೦ ಮಂದಿ ಹೋಗಿ ಇಳಿದರೆಂದು ಪ್ರಕಟವಾಗಿದೆ ನಿರ್ಗತಿಕರಾಗಿ ಬರತಕ್ಕವರನ್ನು ತಡೆಯಬೇಕೆಂದು ಆ ಪಟ್ಟಣದವರು ಒಂದು ಕಾನೂನ್ ಮಾಡುವವರಾಗಿದ್ದಾರೆ

*****

ದಕ್ಷಿಣ ಆಫ್ರಿಕಾ ಸ್ವಾಸ್ಥ್ಯದ ಹೈ ಕಮಿಷನರವರಾದ ಲಾರ್ಡ್ ಮಿಲ್ನರ್‌ಯವರು ಈ ತಿಂಗಳ ಕಡೆಯಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ವಿಲಾಯತಿಗೆ ಪ್ರಯಾಣಮಾಡುವರು. ಅವರ ಕೆಲಸಕ್ಕೆ ಲಾರ್ಡ್ ಸೆಲ್‌ಬೋರ್ನ್‌ಯವರು ನೇಮಕವಾಗಿದ್ದಾರೆ.

*****

ಬರ್ಮ ಅಧಿಪತ್ಯದಲ್ಲಿ ಪ್ರಸಿದ್ಧಿ ಪಡೆದಿರುವ ಒಬ್ಬ ಜೋಯಿಸನು ಈ ವರುಷ ಚೀನಾ ರಾಜ್ಯವನ್ನು ಪರರಾಜ್ಯಗಳವರೆಲ್ಲಾ ಸೇರಿ ಪರಿಪಾಲನೆ ಮಾಡಿಕೊಳ್ಳುತ್ತಾರೆಂತಲೂ, ಚೀನಾಯಲ್ಲಿ ಮಳೆ ಇಲ್ಲದೆ ದೊಡ್ಡ ಕ್ಷಾಮ ಬರುವುದೆಂತಲೂ ಹೇಳುತ್ತಾನೆ

*****

ವಿಲಾಯತಿ ಗವರ್ನಮೆಂಟಿನವರು ೧೯೦೪—೦೫ ನೆ ಸಾಲಿನಲ್ಲಿ ಹಡಗುಗಳ ಸೈನ್ಯಾಭಿವೃದ್ಧಿಗೆ ೫೭ ಕೋಟಿಯೂ ೩೪ ಲಕ್ಷ ರೂಪಾಯಿ ಖರ್ಚು ಮಾಡಿದರು ಈಗ ೧೯೦೫—೦೬ ನೆ ಸಾಲಿನಲ್ಲಿ ಈ ಇಲಾಖೆಗೆ ೭ ಕೋಟಿಯೂ ೮ ಲಕ್ಷ ರೂಪಾಯಿ ತೆಗೆದಿಡುತ್ತಾರೆ.

*****

ಚೀನಾ ಗವರ್ನಮೆಂಟಿನವರು ಲಂಡನ್ ಪಟ್ಟಣದಲ್ಲಿ ಒಂದೂವರೆ ಕೋಟಿ ರೂಪಾಯಿ ಸಾಲ ಮಾಡಬೇಕೆಂದು ಪ್ರಕಟ ಮಾಡಿದರು. ಈ ಸಾಲಕ್ಕೆ ಶೇಕಡಾ ವರುಷಕ್ಕೆ ೫ ರೂಪಾಯಿನಂತೆ ಬಡ್ಡಿ ಬರುತ್ತೆಂದು ಕೇಳಿದ ಕೂಡಲೇ ಅದರ ಇಪ್ಪತ್ತರಷ್ಟು ಹಣವನ್ನಾದರೂ ಸಾಲ ಕೊಡುತ್ತೇವೆಂದು ಬ್ಯಾಂಕುಗಳವರೂ ಸಾಹುಕಾರರೂ ತಿಳಿಸಿದರು.

*****

ಜರ್ಮನ್ ರಾಜ್ಯಕ್ಕೆ ಸೇರಿದ ಯೋಕೋಹಾಮಾ ನಗರದಲ್ಲಿ ಹೆಚ್. ಬಿ ಕಾರ್ಲಿಸ್ ಎಂಬ ವಿಲಾಯತಿಯವನು ಜಪಾನಿನವರ ಯುದ್ಧದ ಗುಟ್ಟುಗಳನ್ನು ರಷ್ಯಾದವರಿಗೆ ಪ್ರಕಾಶಪಡಿಸಿ ಹಣ ಸಂಪಾದನೆ ಮಾಡಿಕೊಂಡನು. ಇವನನ್ನು ಜಪಾನ್ ಸರ್ಕಾರದವರು ಹಿಡಿದು ವಿಚಾರಣೆ ಮಾಡಿ, ಹನ್ನೊಂದು ವರುಷಗಳ ಕಠಿಣಸಜಾ ವಿಧಿಸಿರುತ್ತಾರೆ. ಅವನು ಅದರ ಮೇಲೆ ಅಪೀಲ್ ಮಾಡಿಕೊಂಡಿದ್ದಾನೆ

*****

ಲಂಡನ್ ಪಟ್ಟಣದಲ್ಲಿ ಚಿನ್ನ ಬೆಳ್ಳಿ ಗಟ್ಟಿಗಳ ದಲ್ಲಾಳಿಯಾದ ಫ್ರೆಡ್ರಿಕ್ ಮೊಕಾಟ ಎಂಬಾತನು ೧೬ ಲಕ್ಷ ರೂಪಾಯಿಗಳನ್ನೂ, ಕ್ರಿಸ್ಟೊಫರ್ ವೆದರಾಲ್ ಎಂಬಾತನು ೧೬ ಲಕ್ಷ ರೂಪಾಯಿಗಳನ್ನೂ, ಜೇಂಸ್ ಲೂಕಿಂಗ್ ಎಂಬಾತನು ೧೫ ಲಕ್ಷ ರೂಪಾಯಿಗಳನ್ನೂ ನಾನಾ ಧರ್ಮಕಾರ್ಯಗಳಿಗೆ ತಮ್ಮ ತಮ್ಮ ಆಸ್ತಿಯಿಂದ ತೆಗೆದು ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿಟ್ಟಿದ್ದಾರೆ

*****

ಕನಡಾ ರಾಜ್ಯದ ಪಶ್ಚಿಮಭಾಗದಲ್ಲಿ ೫೭ ಲಕ್ಷ ಎಕರೆ ಜಮೀನು ಸಾಗುವಳಿಯಲ್ಲಿದೆ. ಇನ್ನೂ ೨೬ ಕೋಟಿಯೂ ೭೫ ಲಕ್ಷ ಎಕರೆ ಜಮೀನು ಖಂಡುಗ ಬಿದ್ದಿದೆ ಯೂರೋಪ್ಯ ಜನರು ಇತರ ಕಡೆಗಳಿಂದ ಅಲ್ಲಿಗೆ ಹೋಗುವುದಾದರೆ ಅವರಿಗೆ ಜಮೀನನ್ನು ಮುಫತ್ತಾಗಿ ಬಿಟ್ಟುಕೊಡುತ್ತೇವೆಂದು ಮಾತುಕೊಟ್ಟಿದ್ದಾರೆ. ಆ ಯೂರೋಪ್ಯ ಜನರಲ್ಲಿ ತುಂಬಾ ಐಶ್ವರ್ಯವಂತರಾಗಿರುವ ಲಾರ್ಡ್ ರಾತ್ಸ್‌ಚೈಲ್ಡ್‌ಯವರು ತಮ್ಮ ಜನರನ್ನು ಕನಡಾ ರಾಜ್ಯಕ್ಕೆ ಕಳುಹಿಸಿಕೊಡಬೇಕೆಂದು ಸಾಹಸಪಡುತ್ತಿದ್ದಾರೆ.

*****

ಚೀನಾ ಚಕ್ರಾಧಿಪತ್ಯಕ್ಕೆ ಸೇರಿದ ಸ್ವಾಟೋ ನಗರದಿಂದ ಜರ್ಮನಿನವರು ರೈಲ್‌ರಸ್ತೆಯನ್ನು ಹಾಕುವುದಕ್ಕೆ ಕಾಮಗಾರಿ ನಡಿಸುತ್ತಿದ್ದಾರೆ. ಪರರಾಜ್ಯಗಳವರು ಬಂದು ತಮ್ಮ ದೇಶದಲ್ಲಿ ರೈಲ್‌ಕೆಲಸ ಮಾಡುತ್ತಾರೆಂದು ಅಲ್ಲಿನ ಚೀನಾ ಪ್ರಜೆಗಳು ಕೋಪಿಸಿಕೊಂಡಿರುವಂತೆ ಕಾಣುತ್ತಿದೆ ಸುಮಾರು ೧,೦೦೦ ಚೀನಾಯವರು ಗುಂಪುಕೂಡಿ ನುಗ್ಗಿ, ಜರ್ಮನ್ ಕೂಲಿಕಾರರ ಮೇಲೆ ಬಿದ್ದು ಬಹು ಕಠಿಣವಾಗಿ ಕಾದಾಡಿದರು. ಜರ್ಮನಿನವರ ಒಬ್ಬ ಇಂಜನಿಯರೂ ಕೆಲವು ಕೂಲಿಕಾರರೂ ಮೃತಪಟ್ಟಿದ್ದಾರೆ.

*****

ಅಂತರಿಕ್ಷದಲ್ಲಿ ಸಂಚಾರ ಮಾಡತಕ್ಕವನೆಂದು ಪ್ರಸಿದ್ಧಿ ಹೊಂದಿರುವ ಮಿ॥ ಚಾರ್ಲ್ಸ್ ಫಾರ್ ಎಂಬೊಬ್ಬ ಫ್ರೆಂಚನು ಲಂಡನ್‌ಪಟ್ಟಣದ ಅರಮನೆಯ ಉಪ್ಪರಿಗೆ ಮೇಲಿನಿಂದ ಆಕಾಶಬುಟ್ಟಿಯಲ್ಲಿ ಕುಳಿತು ಅಂತರಿಕ್ಷದಲ್ಲೇ ಸಂಚಾರ ಮಾಡಿಕೊಂಡು ಹೋಗಿ ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ಇಳಿದನು ಅಲ್ಲಿಂದ ಲ್ಲಿಗೆ ೧೫೫ ಮೈಲಿ ದೂರವಿದೆ. ಅಲ್ಲಿಂದ ಹೊರಟು ಒಂದು ಸೇರುವುದಕ್ಕೆ ಆರು ಗಂಟೆ ಹೊತ್ತು ಹಿಡಿಯಿತು. ಇದುವರೆಗೆ ಅಂತರಿಕ್ಷ ಮಾರ್ಗದಲ್ಲಿ ಯಾರೂ ಈ ಪ್ರಕಾರ ಸಂಚಾರ ಮಾಡಿದ್ದಿಲ್ಲ.

*****

ಹತ್ತಿ ಬಟ್ಟೆಗಳನ್ನು ಅಪಾರವಾಗಿ ವ್ಯಾಪಾರ ಪ್ರಪಂಚಕ್ಕೆಲ್ಲಾ ಕಳುಹಿಸುತ್ತಿರುವ ವಿಲಾಯತಿಗೆ ಸೇರಿದ ಲಿವರ್‌ಪೂಲ್ ಪಟ್ಟಣದಲ್ಲಿ ಸಾಹುಕಾರರು ಈಗ ಇಟ್ಟಿರುವ ಹತ್ತಿ ಬಟ್ಟೆಗಳ ಕಾರ್ಖಾನೆಗಳ ಜೊತೆಗೆ ಇನ್ನೂ ೩೦ ಕಾರ್ಖಾನೆಗಳನ್ನು ಹೊಸದಾಗಿ ಇಡಬೇಕೆಂದು ಗೊತ್ತು ಮಾಡಿದ್ದಾರೆ. ಇವುಗಳಿಗೆ ಸುಮಾರು ನಾಲ್ಕೂವರೆ ಕೋಟಿ ದ್ರವ್ಯ ಖರ್ಚಾಗುವುದು; ೮,೦೦೦ ಕೂಲಿಕಾರರಿಗೆ ಕೆಲಸ ಸಿಕ್ಕುವುದು. ಈಜಿಪ್ಟ್ (ಐಗುಪ್ತ) ದೇಶದಿಂದ ಬರುವ ಹತ್ತಿಯನ್ನು ನೂಲುವುದಕ್ಕಾಗಿಯೇ ೨೬ ಕಾರ್ಖಾನೆಗಳನ್ನಿಡುತ್ತಾರೆ.

*****

ಅಮೇರಿಕಕ್ಕೆ ಸೇರಿದ ಬೆಕ್ಸಸ್ ಡಿಸ್ಟ್ರಿಕ್ಟಿನಲ್ಲಿ ೨೧ ವರುಷಕ್ಕಿಂತ ಹೆಚ್ಚು ವಯಸ್ಸಾದ ಪುರುಷರು ಮದುವೆಮಾಡಿಕೊಳ್ಳದಿದ್ದರೆ ಸರ್ಕಾರದವರು ಅಂಥವರಿಗೆ ತೆರಿಗೆಯನ್ನು ಹಾಕಬೇಕೆಂತಲೂ, ಮದುವೆಮಾಡಿಕೊಂಡು ಸಂಸಾರವಂದಿಗರಾಗಿದ್ದಲ್ಲಿ ಅಂಥವರು ತೆರಿಗೆ ಕೊಡಬೇಕಾದದ್ದಿಲ್ಲವೆಂತಲೂ ಹೊಸಕಾನೂನು ಮಾಡಿದ್ದಾರೆ. ಪ್ರಜಾಸಂಖ್ಯೆಯು ಅಲ್ಲಿ ಕಡಿಮೆಯಾಗಿರುವುದನ್ನು ಹೆಚ್ಚಿಸಬೇಕೆಂತಲೂ ಪ್ರಜೆಗಳಲ್ಲಿ ವಿವಾಹ ಮಾಡಿಕೊಂಡು ಸಂಸಾರವಂದಿಗರಾಗಿರಬೇಕೆಂಬ ಅಭಿಲಾಷೆಯನ್ನು ಹುಟ್ಟಿಸಬೇಕೆಂತಲೂ ಈ ಕಾನೂನು ಮಾಡಿರುವರು.

*****

ಅಮೇರಿಕ ರಾಜ್ಯಕ್ಕೆ ಸೇರಿದ ವಾಷಿಂಗ್ಟನ್ ನಗರದಲ್ಲಿ ಮಿ॥ ಜಾರ್ಜ್ ಡರ್ವಿಲ್ ಎಂಬಾತನು ಹೆಂಡತಿ ಮಕ್ಕಳ ಸಂಗಡ ಸಂಸಾರ ಮಾಡಿಕೊಂಡಿದ್ದಾನೆ. ಆತನಿಗೆ ಈಗ ೪೩ ವಯಸ್ಸು, ಆತನ ಹೆಂಡತಿಗೆ ೩೮ ವಯಸ್ಸು ಆಗಿದೆ ಆಕೆ ಇದುವರೆಗೆ ಒಂಬತ್ತುಸಲ ಗರ್ಭಧರಿಸಿ, ಪ್ರತಿಸಲವೂ ಮೂರು ಮೂರು ಅವಳಿ ಮಕ್ಕಳಂತೆ ಇಪ್ಪತ್ತೇಳು ಮಕ್ಕಳನ್ನು ಹೆತ್ತಿದ್ದಾಳೆ. ಈಗ ಆ ಮಕ್ಕಳೆಲ್ಲಾ ಜೀವವಂತರಾಗಿದ್ದಾರೆ ಇಂಥಾ ಅಪೂರ್ವ ತಂದೆತಾಯಿಗಳನ್ನು ಅಮೇರಿಕ ರಾಜ್ಯದ ಪ್ರೆಸಿಡೆಂಟರಾದ ಮಿ॥ ರೂಸ್‌ವೆಲ್ಟ್‌ಯವರು ನೋಡಬೇಕೆಂದು ಅಪೇಕ್ಷೆ ಪಟ್ಟಿದ್ದರಿಂದ ಅವರು ಸಂಸಾರಸಹಿತ ಅವರ ಬಳಿಗೆ ಹೋಗುತ್ತಿದ್ದಾರೆ.

*****

ಟ್ರಾನ್ಸ್‌ವಾಲಿನ ಲೇಟ್ ಪ್ರೆಸಿಡೆಂಟ್ ಕ್ರೂಗರ್‌ಯವರು ಇಂಗ್ಲಿಷರ ಮೇಲೆ ಯುದ್ಧಮಾಡಿದರಷ್ಟೆ. ಈ ಯುದ್ಧದಲ್ಲಿ ತಮ್ಮ ಕಡೆ ಸೇರಿಸಿಕೊಂಡು ಹೋರಾಡುವ ಬೋಅರ್ ಜನರಿಗೆಲ್ಲಾ ತಲಾ ದಿನ ಒಂದಕ್ಕೆ ೩॥ ರೂಪಾಯಿನಂತೆ ರುಸುಂ ಕೊಡುವುದಾಗಿ ಪ್ರೆಸಿಡೆಂಟರು ವಾಗ್ದಾನ ಮಾಡಿದ್ದರು. ಅದೇ ಪ್ರಕಾರ ಅನೇಕ ಮಂದಿ ಬೋಅರರು ಹಣದಾಸೆಯಿಂದ ಇಂಗ್ಲಿಷರ ಮೇಲೆ ಯುದ್ಧಮಾಡಿದರು. ಈಗ ಬೋಅರರು ಸೋತುಹೋದದ್ದಲ್ಲದೆ ಅವರ ಪ್ರೆಸಿಡೆಂಟರೂ ಕಾಲವಾದರು. ಆದ್ದರಿಂದ ಬೋಅರ್ ದಳಪತಿಯಾಗಿದ್ದ ಜನರಲ್ ಬೋಥಾಯವರು ಮೇಲ್ಕಂಡ ರುಸುಮನ್ನು ಇಂಗ್ಲಿಷ್ ಗವರ್ನಮೆಂಟಿನವರೇ ಬೋಅರರಿಗೆಲ್ಲಾ ಕೊಡಬೇಕಾಗಿದೆ ಎಂದು ಸೂಚಿಸಿದ್ದಾರೆ

*****

ರಷ್ಯಾ ಹಡಗಿನ ಸೈನ್ಯವು ಯುದ್ಧಭೂಮಿಗೆ ಹೋಗಬೇಕೆಂದು ಪ್ರಯಾಣಮಾಡುತ್ತಾ ಇರುವಲ್ಲಿ ಕೆಲವು ಇಂಗ್ಲಿಷ್ ಬೆಸ್ತರ ಹಡಗುಗಳನ್ನು ಕಂಡು, ಅವು ಜಪಾನಿನವರ ಹಡಗುಗಳೆಂದು ಭ್ರಮೆ ಹೊಂದಿ ಅವುಗಳ ಮೇಲೆ ಗುಂಡುಹೊಡೆದು ಕೆಲವು ಇಂಗ್ಲಿಷ್ ಬೆಸ್ತರನ್ನು ಕೊಂದುಹಾಕಿದರೆಂತಲೂ, ಕೆಲವರಿಗೆ ಗಾಯಗಳಾದವೆಂತಲೂ, ಕೆಲವು ಇಂಗ್ಲಿಷ್ ಹಡಗುಗಳು ಮುರಿದುಹೋದವೆಂತಲೂ, ಈ ಅವಿವೇಕ ಕಾರ್ಯವನ್ನು ತನಿಖೆಮಾಡುತ್ತಿದ್ದಾರೆಂತಲೂ ತಿಳಿಸಿದ್ದೆವಷ್ಟೆ. ಈ ತನಿಖೆಯು ಪೂರೈಸಿತು. ಜಡ್ಜಿಗಳು ರಷ್ಯಾದವರ ಹಡಗಿನ ಸೈನ್ಯದವರೇ ಅಪರಾಧಿಗಳೆಂದು ತೀರ್ಮಾನಮಾಡಿದರು. ರಷ್ಯಾ ಗವರ್ನಮೆಂಟಿನವರನ್ನು ೧೦ ಲಕ್ಷ ರೂಪಾಯಿ ತಾವಾನು ಕೊಡಬೇಕೆಂದು ಇಂಗ್ಲಿಷ್ ಸರ್ಕಾರದವರು ಕೇಳಿದ್ದಾರೆ. ಈಚೆಗೆ ರಷ್ಯಾದವರು ಲಂಡನ್ ಪಟ್ಟಣದಲ್ಲಿರುವ ತಮ್ಮ ರಾಯಭಾರಿಯ ಮುಖಾಂತರ ೯,೭೫,೦೦೦ ರೂಪಾಯಿಗಳನ್ನು ಇಂಗ್ಲೀಷರಿಗೆ ವಾಪತಿ ಮಾಡಿದ್ದಾರೆಂದು ತಂತೀ ವರ್ತಮಾನ ಬಂದಿದೆ

*****

ಅರಬ್ಬೀ ದೇಶದಲ್ಲಿ ಯೇಮೆನ್ ಎಂಬ ಒಂದು ದೊಡ್ಡ ಡಿಸ್ಟ್ರಿಕ್ಟಿನಲ್ಲಿ ಪ್ರಜೆಗಳು ತುರ್ಕಿ ಸುಲ್ತಾನರ ಮೇಲೆ ದಂಗೆಯೆದ್ದು ತುಂಬಾ ಗಲಭೆಯನ್ನುಂಟುಮಾಡಿದ್ದಾರೆ. ಎರಡು ದೊಡ್ಡ ಪಟ್ಟಣಗಳು ಅವರ ಸ್ವಾಧೀನವಾದವು ದಂಗೆಯು ಇತರ ಕಡೆಗಳಿಗೂ

ಹಬ್ಬಿಕೊಳ್ಳುತ್ತಿದೆ. ಆ ಪ್ರಾಂತ್ಯಕ್ಕೆ ತುರ್ಕಿ ಸೈನ್ಯವನ್ನು ಕಳುಹಿಸುವುದು ತುಂಬಾ ಕಷ್ಟವೆಂತಲೂ, ಸೈನಿಕರು ಕೂಡ ಸೈನ್ಯವನ್ನು ಬಿಟ್ಟು ಹೋಗುತ್ತಿದ್ದಾರೆಂತಲೂ ಸಮಾಚಾರ ಬಂದಿದೆ. ಯೇಮೆನ್ ನಗರದಲ್ಲಿ ತುರ್ಕಿ ಸೈನ್ಯದವರಿಗೂ ದಂಗೆಕೋರರಿಗೂ ಯುದ್ಧ ನಡೆದು ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿದರು. ಸಾನಾ ಎಂಬ ಪಟ್ಟಣದ ಬಳಿ ಐದು ದಿನಗಳಿಂತಲೂ ಬಹು ಭಯಂಕರವಾಗಿ ಯುದ್ಧನಡೆಯುತ್ತಿದೆ ಎಂದೂ ಫಲಿತಾಂಶ ಪ್ರಕಟವಾಗಲಿಲ್ಲವೆಂದೂ ತಿಳಿದು ಬಂದಿದೆ.

****

ಅರಬ್ಬಿ ದೇಶದಲ್ಲಿ ಒಂದು ಭಾರೀ ಏರ್ಪಾಡು ನಡೆಯುತ್ತಿರುವಂತೆ ಡಮಾಸ್ಕಸ್ ಪಟ್ಟಣದಿಂದ ವರ್ತಮಾನ ಬಂದಿದೆ. ಮೆಸೊಪೊಟೇಮಿಯಾ, ಸಿರಿಯಾ, ಪಾಲಸ್ತೀನ್, ಈ ಮೊದಲಾದ ಕಡೆಗಳಲ್ಲಿರುವ ಮುಹಮ್ಮದೀಯ ಮುಖಂಡರೆಲ್ಲಾ ತಮ್ಮ ತಮ್ಮ ಊರುಗಳಲ್ಲಿ ಸಭೆ ಸೇರಿ, ಅರಬ್ಬೀ ದೇಶವೆಲ್ಲಾ ಅರಬ್ಬಿಯವರ ಸ್ವಾಧೀನದಲ್ಲಿರಬೇಕೆಂದು ಮುಸಲತ್ತು ಮಾಡಿಕೊಂಡು ಕಾರ್ಯಭಾಗ ನಡಸುತ್ತಿದ್ದಾರೆ. ಅರಬ್ಬಿ ರಾಜ್ಯಕ್ಕೆ ಒಬ್ಬ ದೊರೆ ಆಗಬೇಕೆಂತಲೂ, ಆ ದೊರೆಯು ಪ್ರಜೆಗಳ ಪ್ರತಿನಿಧಿಗಳ ಸಹಾಯ ಹೊಂದಿ ರಾಜ್ಯಭಾರ ನಡಸಬೇಕೆಂತಲೂ, ಆ ದೊರೆಗೆ ಅರಬ್ಬಿ ಸುಲ್ತಾನನೆಂಬ ಹೆಸರಿಡಬೇಕೆಂತಲೂ, ಈಗ ತುರ್ಕಿ ರಾಜ್ಯದಲ್ಲಿ ಸಿಕ್ಕಿ ನರಳುತ್ತಿರುವ ಸಣ್ಣ ಸಣ್ಣ ಅಧಿಪತ್ಯಗಳನ್ನು ಬಿಡುಗಡೆ ಮಾಡಬೇಕೆಂತಲೂ ಗೊತ್ತು ಮಾಡಿಕೊಂಡಿದ್ದಾರೆ. ಈ ಹೊಸ ಏರ್ಪಾಡಿಗೆ ಕಾರಣರಾದವರು ಯೂರೋಪ್ ಮತ್ತು ಅಮೇರಿಕ ರಾಜ್ಯಗಳಿಗೆ—ನಮ್ಮ ಕಾರ್ಯದಲ್ಲಿ ನೀವುಗಳ್ಯಾರೂ ತಲೆ ಹಾಕಬೇಡಿ, ನಿಮ್ಮ ರಾಜ್ಯಗಳಿಗೆ ಅರಬ್ಬಿಯಲ್ಲಿರುವ ಹಕ್ಕು ಬಾಧ್ಯತೆಗಳನ್ನೆಲ್ಲಾ ಕಾಪಾಡಿಕೊಂಡು ಬರುತ್ತೇವೆ. ನೀವು ಬಂದು ವ್ಯಾಪಾರ ಮಾಡಲು ಅಡ್ಡಿ ಮಾಡುವುದಿಲ್ಲ ಎಂಬುದಾಗಿ ಕಾಗದಗಳನ್ನು ಬರೆದು ಹಾಕಿರುವರು. ಇವರ ಉದ್ದೇಶವು ಎಷ್ಟು ಮಟ್ಟಿಗೆ ಕೈಗೂಡುವುದೋ ಮುಂದೆ ತಿಳಿಯಬೇಕು

ನಮ್ಮ ಪುಸ್ತಕ ಭಂಡಾರವು.

"ಜೀವರಸಾಯನೀ ವೈದ್ಯಸಾರ"

ಮಂಗಳೂರು ಬಾಸಲ್ ಮಿಷನ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟು ಅದೇ ಹೆಸರಿನ ಪುಸ್ತಕಾಲಯದಲ್ಲಿ ಕ್ರಯಕ್ಕೆ ದೊರೆಯುವ "ಜೀವರಸಾಯನಿ ವೈದ್ಯಸಾರ" ವೆಂಬ ಒಂದು ಪುಸ್ತಕವು ನಮ್ಮಲ್ಲಿಗೆ ಬಂದಿರುವುದು ನಮ್ಮ ದೇಶದಲ್ಲಿ ಅನೇಕ ವೈದ್ಯಶಾಸ್ತ್ರಗಳು ಸಂಸ್ಕೃತದಲ್ಲಿರುವುದರಿಂದಲೂ ಇದರ ಜ್ಞಾನವು ಇಂಗ್ಲಿಷ್ ಭಾಷೆಯ ಪರಿಚಾರದೀಪ ಜನಗಳಲ್ಲಿ ಕಡಮೆಯಾದ್ದರಿಂದಲೂ ಎಲ್ಲರಿಗೂ ಸುಲಭಸಾಧ್ಯವಲ್ಲವು ಪೂರ್ವದಲ್ಲಿ ಓದುಬರಹ ಬಾರದ ಮನೆಯ ಯಜಮಾನಗಿತ್ತಿಯು ತನ್ನ ಹಿರಿಯರನ್ನು ನೋಡಿ ಅನುಭವ ಪಡೆದುಕೊಂಡು ಗಿಡಮೂಲಿಕೆಗಳ ಮದ್ದನ್ನು ತನ್ನ ಮಕ್ಕಳಿಗೆ ಖರ್ಚಿಲ್ಲದೆ ಕೊಡಬಲ್ಲವಳಾಗಿದ್ದಳು. ಈಗಿನವರಾದರೋ ಕಾಯಿಲೆ ಬಂದರೆ ಸೀಸೆಯನ್ನು ಹಿಡಿದುಕೊಂಡು ಆಸ್ಪತ್ರೆಗೂ ಪಂಡಿತರ ಮನೆಗಳಿಗೂ ಇಂಗ್ಲಿಷ್ ಔಷಧದ ಅಂಗಡಿಗೂ ಹೋಗುವ ವಾಡಿಕೆಯುಂಟು. ಕಾಯಿಲೆ ಕಠಿಣವಾದಲ್ಲಿ ನೂರಾರು ರೂಪಾಯಿ ವೆಚ್ಚ ಮಾಡಿ, ನಷ್ಟಕ್ಕೆ ಗುರಿಯಾಗುವರು. ಆದ್ದರಿಂದ ಪ್ರತಿಯೊಬ್ಬರೂ ಸಾಧಾರಣ ಔಷಧಪ್ರಯೋಗವನ್ನೂ ಅದರ ಪ್ರಯೋಜನವನ್ನೂ ತಿಳಿದಿರುವುದು ಆವಶ್ಯಕವು. ನಮ್ಮ ದೇಹವು ಸಮತೂಕದ ಹಲವು ವಸ್ತುಗಳು ಮತ್ತು ಧಾತುಗಳಿಂದ ರಚನೆಮಾಡಲ್ಪಟ್ಟಿದೆ ಇವುಗಳ ವ್ಯತ್ಯಾಸವೇ ರೋಗ. ಹೀಗೆ ವ್ಯತ್ಯಾಸವಾದ ಭಾಗವನ್ನು ಪುನಃ ದೇಹದೊಳಗೆ ಸೇರಿಸಿದರೆ ರೋಗ ಪರಿಹಾರವಾಗುವುದು ಈ ಸೂತ್ರವನ್ನು ಹಿಡಿದು ಜೀವರಸಾಯನ ಶಾಸ್ತ್ರಕಾರರು ದೇಹದ ರಚನೆಗೆ ಹನ್ನೆರಡು ಔಷಧಿಗಳು ಅಗತ್ಯವೆಂದು ನಿರ್ಣಯಿಸಿದ್ದಾರೆ ಇವೆಲ್ಲ ಲವಣಗಳು. ಇವು ಹಾನಿಕರವಾದವುಗಳಲ್ಲ. ಮೇಲೆ ಹೇಳಿದ ಪುಸ್ತಕದಲ್ಲಿ ಈ ಹನ್ನೆರಡೇ ಔಷಧಿಗಳು ಹೇಳಲ್ಪಟ್ಟಿರುವುವಲ್ಲದೆ, ದೇಹದ ಅನೇಕ ರೋಗಗಳ ವಿವರಣೆಯೂ ಆಯಾ ರೋಗಕ್ಕೆ ತಕ್ಕ ಚಿಕಿತ್ಸೆಯೂ ಹೇಳಲ್ಪಟ್ಟಿದೆ ಮತ್ತು ದೇಹದ ಸ್ವರೂಪವೂ ಅದರ ಕಾರ್ಯಗಳೂ ಸ್ವಲ್ಪಮಟ್ಟಿಗೆ ಸಕ್ಷೆಯಿಂದ ತೋರಿಸಿರುತ್ತೆ. ಈ ಪುಸ್ತಕವು ಮನವಿಟ್ಟು ಓದುವ ಜನರಿಗೆ ಒಬ್ಬ ವೈದ್ಯನೇ ಇದ್ದಂತಾಗುವುದು.

"ಪ್ರಬಂಧ ಮಂಜರಿ."¶

ಮೈಸೂರು ದೇಶೀಯ ಪರೀಕ್ಷೆಗಳಿಗೋದುವ ವಿದ್ಯಾರ್ಥಿಗಳಿಗೆ ಅತ್ಯಂತೋಪಯೋಗವಾಗುವಂತೆ ಮೈಸೂರು ಸರ್ಕಾರಿ ವಿದ್ಯಾ ಇಲಾಖೆಗೆ ಸೇರಿದ ಮ॥ ರಾ॥ ಎಸ್. ಟಿ. ರಾಘವಾಚಾರ್, ಬಿ. ಎ. ಯವರಿಂದ ಪ್ರಕಟಿಸಲ್ಪಟ್ಟು ಹೊಸಗನ್ನಡದಲ್ಲಿ ವಾಕ್ಯರಚನಾ ಕ್ರಮವನ್ನು ಬೋಧಿಸುವ "ಪ್ರಬಂಧಮಂಜರಿ" ಎಂಬ ಹೆಸರುಳ್ಳ ಒಂದು ಪ್ರತಿಯನ್ನು ಗ್ರಂಥಕರ್ತರು ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವರು. ಯೂನಿವರ್ಸಿಟಿ ಪರೀಕ್ಷೆಗಳ ಮುಖ್ಯ ವಿಷಯಗಳಲ್ಲಿ ಪ್ರಬಂಧರಚನೆಯೂ ಒಂದಾಗಿದೆ. ಅದರಂತೆ ದೇಶೀಯ ಪರೀಕ್ಷೆಗಳಲ್ಲಿಯೂ ಕನ್ನಡದಲ್ಲಿ ಪ್ರಬಂಧವನ್ನು ಬರೆವಂತೆ ಕೇಳುವರು. ಇಂಗ್ಲಿಷಿನಲ್ಲಿ ಈ ರಚನಾ ಕ್ರಮವನ್ನು ಬೋಧಿಸುವ ಪುಸ್ತಕಗಳು ಹೇರಳವಾಗಿದ್ದರೂ, ಕನ್ನಡದಲ್ಲಿ ಈತರದ್ದು ಇದೇ ಮೊದಲನೆಯದೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಗ್ರಂಥದ ಮೊದಲನೇ ಭಾಗದಲ್ಲಿ ಭಾಷಾಶೈಲಿಯ ಸ್ವರೂಪವೂ ಅದರ

ಜೀವರಸಾಯನಿ ವೈದ್ಯಸಾರ ಅಂದರೆ ಶುಸ್ಲರ್ ಪಂಡಿತರ ಹನ್ನೆರಡು ಲವಣ ಪ್ರಯೋಗ [ಶರೀರಶಾಸ್ತ್ರ ಸಂಬಂಧವಾದ ಸಂಕ್ಷಿಪ್ತ ವರ್ಣನೆ, ಸಚಿತ್ರಸಹಿತ], ಮಂಗಳೂರು ಬಾಸಲ್ ಮಿಷನ್ ಬುಕ್ ಡಿಪೋ. ಕ್ರಯ ೧ ರೂ.

¶ ಪುಸ್ತಕಾಪೇಕ್ಷಿಗಳು ಬೆಂಗಳೂರು ಹೈಸ್ಕೂಲಿನ ಅ॥ ಮಾಸ್ಟರಾದ ಗ್ರಂಥಕರ್ತರಿಂದ ಪಡೆಯಬಹುದು.

ಗುಣದೋಷಗಳೂ ತಿಳಿಸಲ್ಪಟ್ಟಿವೆ. ಎರಡನೆಯದರಲ್ಲಿ ಮಾದರಿಗಾಗಿ ನಾಲ್ವತ್ತು ವಿಷಯಗಳನ್ನು ಕುರಿತು ಪೂರ್ತಿಯಾಗಿ ರಚನಾಕ್ರಮವನ್ನು ಬರೆದು ತೋರಿಸಿರುವುದೂ ಅಲ್ಲದೆ, ವಿದ್ಯಾರ್ಥಿಗಳು ಸ್ವತಃ ಅಭ್ಯಾಸಿಸಲು ಪ್ರಬಂಧರಚನೆಗೆ ಯೋಗ್ಯವಾದ ಅರವತ್ತು ವಿಷಯಗಳ ಹೆಸರುಗಳನ್ನು ನಮೂದಿಸಿದೆ. ಈ ಗ್ರಂಥವು ಸಕಲರಿಗೂ ೧೨ ಅಣೆಗಿಂತಲೂ ಕಮ್ಮಿಯಾಗಿ ದೊರೆಯುವಂತೆ ಮಾಡಬೇಕೆಂದು ಗ್ರಂಥಕರ್ತರ ಅಭಿಪ್ರಾಯವಿದ್ದಂತೆಯೂ ಅಂದವಾದ ಮುದ್ರಣದಿಂದ ಹಾಗೆ ಮಾಡಲು ಅವಕಾಶವಿಲ್ಲದ ಹಾಗೂ ತೋರುವುದು. ಇದರಲ್ಲಿ ಅಡಕಿರುವ ವಿಷಯಗಳನ್ನು ಪರಿಶೀಲನೆ ಮಾಡಿದವರಿಗೆ ಈ ಕ್ರಯವು ಬಹಳ ಸುಲಭವೆಂದು ಗೊತ್ತಾಗುವುದು. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಏಳಿಗೆಯನ್ನು ಬಯಸುವ ಪ್ರತಿ ಒಬ್ಬ ಶಿಕ್ಷಕನೂ, ತನ್ನ ಮಕ್ಕಳ ಜ್ಞಾನಾಭಿವೃದ್ಧಿಯನ್ನು ಪೇಕ್ಷಿಸುವ ಪ್ರತಿಯೊಬ್ಬ ತಂದೆಯೂ ತಮ್ಮ ಬಾಲಕ ಬಾಲಕಿಯರಿಗೆ ಈ ಪುಸ್ತಕ ಒಂದರ ಪರಿಚಯವನ್ನು ಮಾಡಿಕೊಡಬೇಕೆಂದು ಕೋರುವೆವು. ಇದರಲ್ಲೊಳಗೊಂಡಿರುವ ಪ್ರಬಂಧ ವಿಷಯಗಳಲ್ಲೊಂದನ್ನು ಇದರ ಮಾದರಿಗಾಗಿ ತೋರಿಸಿರುವೆವು.

"ವೃತ್ತಾಂತ ಪತ್ರಿಕೆಗಳು.

"ಚರಿತ್ರೆಯು ಆಯಾ ದೇಶದಲ್ಲಿ ನಡೆದ ಪೂರ್ವಕಾಲದ ವೃತ್ತಾಂತವನ್ನು ತಿಳಿಸುತ್ತದೆಯೆನ್ನುವುದು ಎಲ್ಲರಿಗೂ ತಿಳಿದೇಯಿದೆಯಷ್ಟೆ. ಆದರೆ ವೃತ್ತಾಂತ ಪತ್ರಿಕೆಗಳಿಲ್ಲದಿದ್ದರೆ ನಮ್ಮ ಕಾಲದಲ್ಲಿ ಏನೇನು ನಡೆವುದೋ ನಮಗೆ ತಿಳಿಯದೆಯೇ ಹೋಗುತ್ತಿತ್ತು, ಏಕೆಂದರೆ, ವೃತ್ತಾಂತ ಪತ್ರಿಕೆಗಳು ತತ್ಕಾಲದಲ್ಲಿ ನಡೆವ ಸಂಗತಿಗಳನ್ನು ತಿಳಿಸುವ ಚರಿತ್ರೆಯಾಗಿವೆ.

"ವೃತ್ತಾಂತ ಪತ್ರಿಗಳನ್ನೋದುವುದು ಅನುಪಯುಕ್ತವೆಂತಲೂ, ಅವನ್ನೋದುವುದರಲ್ಲಿ ಕಳೆದ ಕಾಲವು ವ್ಯರ್ಥವೆಂತಲೂ ಕೆಲವರು ಹೇಳುವರು ಹೀಗೆ ಹೇಳುವುದು ಸರಿಯಲ್ಲ. ಪತ್ರಿಕೆಗಳಲ್ಲಿರುವ ಕೆಲವಂಶಗಳು ಕೆಲವರಿಗೆ ಮಾತ್ರ ಅನುಪಯುಕ್ತವಾಗಿರಬಹುದಾದರೂ, ಈ ಕೆಲವಂಶಗಳಿಗಾಗಿ ಪತ್ರಿಕೆಗಳನ್ನೋದುವುದನ್ನೇ ಸಂಪೂರ್ಣವಾಗಿ ಬಿಡುವುದನುಚಿತವು ವೃತ್ತಾಂತ ಪತ್ರಿಕೆಗಳಿಂದ ಹೊಸ ಸಮಾಚಾರಗಳೇ ಅಲ್ಲದೆ ಇನ್ನೂ ಹಲವು ಬಗೆಯ ವಿಷಯಗಳು ತಿಳಿಯಬರುವುವು. ಮೊದಲು ಮೊದಲು ಪ್ರಕಟಿಸಿದ ವೃತ್ತಾಂತಪತ್ರಿಕೆಗಳಿಗೆ ರಾಜ್ಯಭಾರದ ಆಡಳಿತಗಳು, ಅವುಗಳಲ್ಲಿ ನಡೆದ ವ್ಯತ್ಯಾಸಗಳು, ಇವುಗಳನ್ನು ಪ್ರಜೆಗಳಿಗೆ ಬೋಧಿಸುವುದೂ ಪ್ರಜೆಗಳ ಹೇಳಿಕೆಗಳು, ಅವರ ಕ್ಷೇಮಾರ್ಥವಾಗಿ ಮಾಡಬೇಕಾದ ಏರ್ಪಾಡುಗಳು ಇವುಗಳನ್ನು ಸರ್ಕಾರದವರಿಗೆ ತಿಳಿಯಪಡಿಸುವುದೂ ಮುಖ್ಯೋದ್ದೇಶಗಳಾಗಿದ್ದುವು ಈಗಿನ ಪತ್ರಿಕೆಗಳು ಈ ಕೆಲಸವನ್ನು ಮಾಡುವುದಲ್ಲದೆ, ರಾಜ್ಯತಂತ್ರ, ನೀತಿ ವಿದ್ಯೆ, ಜಾತಿ, ಮತ ಮುಂತಾದ ಅನೇಕ ವಿಷಯಗಳಲ್ಲಿ ತಿಳಿಯಬೇಕಾದುದನ್ನೂ ಬೋಧಿಸುತ್ತವೆ. ಈಗ ಶ್ರೇಷ್ಠವಾದ ಪತ್ರಿಕೆಗಳನ್ನು ನಡೆಸುವವರು ಸಕಲ ಶಾಸ್ತ್ರಗಳನ್ನೂ ತಿಳಿದ ಪಂಡಿತರು. ಆದಕಾರಣದಿಂದ ಅವರ ಪತ್ರಿಕೆಗಳಲ್ಲಿ ಬರೆದಿರುವ ಸಂಗತಿಗಳನ್ನು ಜನರೆಲ್ಲ ಓದಿ ತಿಳಿಯುತ್ತಾರೆ. ಇಂಥ ವೃತ್ತಾಂತ ಪತ್ರಿಕೆಗಳು ನಡೆಸುತ್ತಿರುವ ಕೆಲಸಗಳು ಅದ್ಭುತವಾಗಿವೆ. ಇವು ರಾಜ್ಯಭಾರಗಳನ್ನೇ ತಲೆಕೆಳಗಾಗಿ ಮಾಡಬಹುದು. ಇದಲ್ಲದೆ ಭೌತಿಕಶಾಸ್ತ್ರ, ಜ್ಯೋತಿಶ್ಶಾಸ್ತ್ರ ಮುಂತಾದವುಗಳಲ್ಲಿ ವಿದ್ವಾಂಸರು ಹೊಸದಾಗಿ ಕಂಡು ಹಿಡಿದ ವಿಷಯಗಳನ್ನರಿಯಬೇಕಾದರೂ, ಹೊಸದಾಗಿ ಪ್ರಚುರಪಡಿಸಲ್ಪಟ್ಟ ಗ್ರಂಥಗಳ ವಿಚಾರವಾಗಿ ತಿಳಿಯಬೇಕಾದರೂ, ವೃತ್ತಾಂತ ಪತ್ರಿಕೆಗಳನ್ನು ಬಿಟ್ಟು ಮತ್ತಾವುದೂ ಇಲ್ಲ. ಒಂದು ಪತ್ರಿಕೆಯಲ್ಲಿ ಯಾವುದೋ ಒಂದು ವಿಷಯವು ಒಂದು ಬಗೆಯಲ್ಲಿ ಚರ್ಚಿಸಿ ಬರೆದಿರಬಹುದು. ಮತ್ತೊಂದರಲ್ಲಿ ಅದೇ ವಿಷಯವು ಬೇರೆ ರೀತಿಯಲ್ಲಿ ಹೇಳಿರಬಹುದು. ಈ ಎರಡು ಪತ್ರಿಕೆಗಳನ್ನೂ ಓದಿ ಚರ್ಚಿತವಾದ ವಿಷಯವನ್ನು ಪರ್ಯಾಲೋಚಿಸಿ ಗ್ರಹಿಸುವುದರಿಂದ ನಮ್ಮ ಬುದ್ಧಿ ಕೌಶಲ್ಯವು ಹೆಚ್ಚುವುದು. ಒಂದು ದೇಶದ ಪತ್ರಿಕೆಯನ್ನು ಮತ್ತೊಂದು ದೇಶದಲ್ಲಿ ಓದುವುದರಿಂದ, ಎರಡು ದೇಶಗಳ ಆಡಳಿತಗಳನ್ನೂ ತಿಳಿಯಲು ಪರಸ್ಪರ ಅಭಿಲಾಷೆ ಹುಟ್ಟಿ ಸ್ನೇಹ ಹೆಚ್ಚುವುದು. ಈ ಕಾರಣಗಳಿಂದ ಪತ್ರಿಕೆಗಳನ್ನು ಸಾಮಾನ್ಯರು ಓದಬೇಕಾದುದಲ್ಲದೆ, ದೊರೆಗಳೂ ಅವರ ಮಂತ್ರಿಗಳೂ ಓದುವುದು ಅತ್ಯವಶ್ಯಕವು. ಇವರು ವೃತ್ತಾಂತ ಪತ್ರಿಕೆಗಳನ್ನೋದದಿದ್ದರೆ, ಜನರಂಜಕವಾದ ಏರ್ಪಾಡುಗಳನ್ನೂ ಬದಲಾವಣೆಗಳನ್ನೂ ಮಾಡಲು ಬದ್ಧಿ ಒಡದೆ ಪ್ರಜೆಗಳಿಗೆ ಕೆಟ್ಟದಾಗುವುದು.

"ವೃತ್ತಾಂತ ಪತ್ರಿಕೆಗಳು ಜನರಿಗೆ ಮಾಡುವ ಉಪಕಾರಗಳನ್ನೆಲ್ಲ ತಿಳಿಯಬೇಕಾದರೆ, ಯೂರೋಪ್ ಮತ್ತು ಅಮೇರಿಕ ದೇಶಗಳ ಚರಿತ್ರೆಗಳನ್ನೋದಬೇಕು. ಸುಮಾರು ಇನ್ನೂರು ವರ್ಷಗಳ ಕೆಳಗೆ ಇಂಗ್ಲೆಂಡಿನಲ್ಲಿ ಜನರ ನಡತೆ ಬಹಳ ಕೆಟ್ಟಿತ್ತು. ಇದನ್ನು ತಿದ್ದಬೇಕೆಂದು "ಆಡಿಸನ್" ಎಂಬ ಒಬ್ಬ ಮಹಾ ಪಂಡಿತನು "ಸ್ಪೆಕ್ಟೇಟರ್" ಎಂಬ ಪತ್ರಿಕೆಯನ್ನು ಹೊರಡಿಸಿ, ಪ್ರತಿ ಪ್ರಾತಃಕಾಲದಲ್ಲಿಯೂ ಒಂದೊಂದು ಪ್ರಬಂಧವನ್ನು ಜನರಿಗೆ ಜ್ಞಾನೋದಯವಾಗುವಂತೆ ಪ್ರಕಟಿಸುತ್ತಾ ಬಂದನು. ಇದರಿಂದ ಕೆಲವು ವರ್ಷಗಳಲ್ಲಿ ಜನರು ದುರ್ವ್ಯಾಪಾರಗಳನ್ನು ಬಿಟ್ಟು ಸನ್ಮಾರ್ಗವನ್ನು ಹಿಡಿದರು. ಮೊದಲು ಇಂಗ್ಲೆಂಡಿನಲ್ಲಿ ವೃತ್ತಾಂತ ಪತ್ರಿಕೆಗಳು ರಾಜ್ಯತಂತ್ರ ವಿಚಾರಗಳನ್ನು ಚರ್ಚಿಸಕೂಡದೆಂಬ ನಿರ್ಬಂಧವಿತ್ತು; ಆದರೆ ಕ್ರಿ. ಶ. 1771 ರಲ್ಲಿ ಮಾಡಿದ ಕಾನೂನಿನಿಂದ ಇದು ಹೋಯಿತು. ಅಂದಿನಿಂದ ಇಂಗ್ಲೆಂಡಿನಲ್ಲಿ ವೃತ್ತಾಂತ ಪತ್ರಿಕೆಗಳು ಲೋಕೋಪಕಾರಕ್ಕಾಗಿ ಸರ್ಕಾರದವರೊಡನೆ ಹೊಡೆದಾಡಿ, ತುಂಬಾ ಗೌರವವನ್ನೂ, ಜನರಂಜನೆಯನ್ನೂ, ಕೀರ್ತಿಯನ್ನೂ ಪಡೆದು, ಸರ್ಕಾರದವರು ಕೂಡ ಪತ್ರಿಕೆಗಳ ಅಭಿಪ್ರಾಯಗಳನ್ನು ಗೌರವಿಸಿ, ಹಲವು ವೇಳೆ ಅವುಗಳಂತೆ ಏರ್ಪಾಡುಗಳನ್ನು ಮಾಡುವಷ್ಟು ಪ್ರಾಮುಖ್ಯವನ್ನು ಹೊಂದಿವೆ.

"ಹಿಂದೂ ದೇಶದಲ್ಲಿಯೂ ವೃತ್ತಾಂತ ಪತ್ರಿಕೆಗಳಿಲ್ಲದ ದೊಡ್ಡ ಪಟ್ಟಣಗಳೇ ಇಲ್ಲ ಇಂಗ್ಲಿಷಿನಲ್ಲಿಯೇ ಅಲ್ಲದೆ, ತಮಿಳು, ಕನ್ನಡ, ಮರಾಟಿ, ಗುಜರಾತಿ, ಬಂಗಾಳಿ ಮುಂತಾದ ಎಲ್ಲ ದೇಶಭಾಷೆಗಳಲ್ಲಿಯೂ ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದಾರೆ. ಹಿಂದೂ ದೇಶದಲ್ಲಿ ಮೊಟ್ಟ ಮೊದಲು ಹೊರಟ ಪತ್ರಿಕೆಯಲ್ಲಿ ರಾಜ್ಯತಂತ್ರ ವಿಚಾರವನ್ನು ಚರ್ಚಿಸಲು, ಅದರ ಎಡಿಟರಿಗೆ "ಗವರ್ನರ್" ಮಾಡಿಸಿದರು ಈಗ ಅಂಥ ಭಯವೇನೂ ಇಲ್ಲ. ಯಾವ ವಿಷಯದಲ್ಲಿ ಬೇಕಾದರೂ ನ್ಯಾಯವನ್ನತಿಕ್ರಮಿಸದೆ ಚರ್ಚಿಸುವ ಸ್ವಾತಂತ್ರ್ಯವನ್ನು ಇಲ್ಲಿನ ಪತ್ರಿಕೆಗಳೂ ಕ್ರಮೇಣ ಹೊಂದಿವೆ. ನಮ್ಮ ದೇಶವನ್ನು ಅನ್ಯದೇಶೀಯರು ಆಳುತ್ತಿರುವುದರಿಂದ ಪ್ರಭುಗಳ ವಿಷಯವನ್ನು ಪ್ರಜೆಗಳಿಗೂ, ಪ್ರಜೆಗಳ ಸಂಗತಿಗಳನ್ನು ಪ್ರಭುಗಳಿಗೂ ತಿಳಿಯಪಡಿಸುವುದಕ್ಕೆ ವೃತ್ತಾಂತ ಪತ್ರಿಕೆಗಳೆಂಬ ಮಧ್ಯಸ್ಥಗಾರರಿರುವುದು ಅತ್ಯವಶ್ಯಕವು."

ಸರಗೂರು ಬಹುಮಾನ ಸಭೆ

ಕಳೆದ ಮಾಹೆ ೨೩ ನೇ ತಾರೀಖು ಗುರುವಾರ ಸಾಯಂಕಾಲ ೪ ಗಂಟೆಗೆ ಸ್ಕೂಲ್ ವಿದ್ಯಾರ್ಥಿಗಳಿಂದ ಸ್ಪೋರ್ಟ್ಸ್ ಎಂಬ ವಿನೋದಕರವಾದ ಆಟಗಳನ್ನು ಸರಗೂರು ಆಸ್ಪತ್ರೆ ಬಳಿಯಲ್ಲಿರುವ ರಸ್ತೆಯಲ್ಲಿ ಆಡಿಸಬೇಕೆಂದು ಮೆ ಬಿ. ಸುಬ್ಬರಾಯರು ಸಲಹೆ ಕೊಟ್ಟಂತೆ ಮ॥ ಟಿ. ವೆಂಕೋಬರಾಯರು ಮತ್ತು ಎಲ್ಲಾ ಮಾಸ್ಟರುಗಳು ಸಹ ಮಾಡಿದ್ದ ಏರ್ಪಾಡು ಬಹಳ ಶ್ಲಾಘನೀಯವಾಗಿತ್ತು. ಸ್ಕೂಲ್ ಪರೀಕ್ಷೆಗಾಗಿ ದಯಮಾಡಿಸಿದ್ದ ಮ॥ ರಾ॥ ಡೆಪ್ಟಿ ಇನ್ಸ್‌ಪೆಕ್ಟರ್ ಯಂ. ಶ್ರೀನಿವಾಸರಾಯರು ಸಭಿಕರ ಪ್ರಾರ್ಥನೆಯಂತೆ ಅಗ್ರಾಸನವನ್ನಲಂಕರಿಸಿದ್ದರು. ಸಭೆಯು ಅಧಿಕಾರಿಗಳಿಂದಲೂ, ಅನೇಕ ಪುರನಿವಾಸಿಗಳಿಂದಲೂ, ಇತರ ನೂರಾರು ಜನಗಳಿಂದಲೂ ಅಲಂಕರಿಸಲ್ಪಟ್ಟು ನೇತ್ರಾನಂದಕರವಾಗಿತ್ತು. ಅಗ್ರಾಸನಾಧಿಪತಿಗಳ ಅಪ್ಪಣೆಯಂ ಪಡೆದು, ಹೆಡ್ ಮಾಸ್ಟರು ಆಟಕ್ಕೆ ಷುರು ಮಾಡಿಸಿ, ಹತ್ತು ಹನ್ನೆರಡು ವಿಧವಾದ ಆಟಗಳನ್ನು ಸುಮಾರು ೭ ಗಂಟೆ ವರಿಗೂ ಆಡಿಸಿದರು. ಈ ಆಟಗಳು ಸಭಿಕರಿಗೂ ಬಾಲಕ ಬಾಲಕಿಯರುಗಳಿಗೂ ಪರಮಾಹ್ಲಾದವನ್ನುಂಟು ಮಾಡಿದವು.

ಅದೇ ಸಾಯಂಕಾಲ ೭॥ ಗಂಟೆಗೆ ಕದಳಿಸ್ತಂಭ ತೋರಣ ತಪ್ಪೇರುಗಳಿಂದ ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿದ್ದ ಇಲ್ಲಿನ ಸ್ಕೂಲ್ ಸ್ಥಳದಲ್ಲಿ ಬಹುಮಾನ ಸಭೆಯೊಂದು ಸೇರಿತ್ತು. ಈ ಸಭೆಗೂ ಘನವಂತರಾದ ಡೆಪ್ಟಿ ಇನ್ಸ್‌ಪೆಕ್ಟರವರೇ ಅಗ್ರಾಸನಾಧಿಪತಿಗಳಾಗಿದ್ದರು. ಸಭಾಧ್ಯಕ್ಷರ ಅಪ್ಪಣೆಯಂತೆ ಹೆಡ್ ಮಾಸ್ಟರು ೧೯೦೩—೦೪ ನೇ ಸಾಲಿನ ಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲಿನ ರಿಪೋರ್ಟನ್ನು ಓದಿದರು. ತರುವಾಯ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರಿಗೆ ಪುಸ್ತಕ ಬಹುಮಾನಗಳೂ ಸ್ಪೋರ್ಟ್ಸ್ ಎಂಬ ಆಟದಲ್ಲಿ ಜಯವನ್ನು ಹೊಂದಿದವರಿಗೆ ದ್ರವ್ಯರೂಪವಾದ ಬಹುಮಾನವೂ ಅಗ್ರಾಸನಾಧಿಪತಿಗಳಿಂದ ಕೊಡಲ್ಪಟ್ಟವು. ಪ್ರಾವೇಶಿಕ ಮೊದಲನೆಯವನಾಗಿ ಉತ್ತೀರ್ಣನಾದ ವಿದ್ಯಾರ್ಥಿಗೆ ವಿಶೇಷವಾಗಿ ಬಹುಮಾನ ಪುಸ್ತಕಗಳನ್ನು ಕೊಡುವಾಗ್ಯ ಹೆಡ್ ಮಾಸ್ಟರು ಸಂತೋಷದಿಂದ ಶ್ಲಾಘನ ಪುರಸ್ಸರವಾಗಿ ಪುಷ್ಪಮಾಲಿಕೆಗಳನ್ನು ಹಾಕಿದರು. ಇವುಗಳೆಲ್ಲಾ ನಡೆದ ಮೇಲೆ ಅಗ್ರಾಸನಾಧಿಪತಿಗಳು ತಿಳಿಸಿದ ಅಭಿಪ್ರಾಯವೇನೆಂದರೆ —

ಸ್ಕೂಲ್ ಉಪಾಧ್ಯಾಯಪದವಿಯು ಬಹು ಗೌರವವಾದ್ದೆಂದು ನಾಗರಿಕತೆಯುಳ್ಳ ದೇಶಗಳಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವುದು. ಈ ದೇಶದಲ್ಲಿ ಮಾತ್ರ "ಉಪಾಧ್ಯಾಯಾಗ್ರ ವೈಯಾಕರ್ಣ ಕಾರ್ಯಾರ್ಥೇ ಅಪ್ರಯೋಜಕಃ" ಎಂಬ ವಚನವು ರೂಢಿಯಲ್ಲಿರುವುದು. ವಿದ್ಯಾಭಿವೃದ್ಧಿಯ ಮೂಲಕ ನಾಗರಿಕತೆ ಹೆಚ್ಚಿದ ಹಾಗೆಲ್ಲ ಈ ವಚನವು ನಿರಾಧಾರವಾಗಿ ಇಲ್ಲಿಯೂ ಕ್ರಮೇಣ ಅಂಥಾ ಗೌರವ ಉಂಟಾಗುವುದರಲ್ಲಿ ಸಂಶಯವಿಲ್ಲ. ಉಪಾಧ್ಯಾಯರುಗಳನ್ನು ಉತ್ತಮ, ಮಧ್ಯಮ, ಅಧಮರೆಂದು ಮೂರು ದರ್ಜೆಯಾಗಿ ವಿಂಗಡಿಸಬಹುದು. ಮಾಸ್ಟರುಗಳು ತಾವು ಬೋಧಿಸತಕ್ಕ ವಿಷಯಗಳನ್ನು ಮೊದಲು ಚನ್ನಾಗಿ ವ್ಯಾಸಂಗ ಮಾಡಿಕೊಂಡು ಬರುವ ಪದ್ಧತಿಯು ಪಾಶ್ಚಿಮಾತ್ಯರಲ್ಲಿ ಚನ್ನಾಗಿ ನೆಲಗೊಂಡಿರುತ್ತದೆ. ಹಾಗೆ ಎಲ್ಲಾ ಮಾಸ್ಟರುಗಳು ಆಚರಣೆಯಲ್ಲಿಡುವದು ದೇಶೋನ್ನತಿಗೂ ವಿದ್ಯಾಭಿವೃದ್ಧಿಗೂ ಕಾರಣವಾಗುತ್ತದೆ. ಮಾಸ್ಟರುಗಳಲ್ಲಿ ಪರಸ್ಪರ ಐಕಮತ್ಯವೂ ಶ್ರದ್ಧೆಯಿಂದ ಕೆಲಸ ಮಾಡತಕ್ಕ ಸ್ವಭಾವವೂ ವಿದ್ಯಾಭಿವೃದ್ಧಿಗೆ ಮುಖ್ಯಕಾರಣಗಳು. ಈ ಸುಗುಣಗಳಿಲ್ಲದಿದ್ದರೆ ಯಾವ ಉದ್ದೇಶವೂ ನೆರವೇರುವುದಿಲ್ಲ. ಕೆಲವರು ವೇತನ ಅಲ್ಪವೆಂದು ಭಾವಿಸುತ್ತಾ ಶ್ರದ್ಧಾಶೂನ್ಯರಾಗಿರುತ್ತಾರೆ. ಇಂಥವರನ್ನು ಮೇಲೆ ಹೇಳಿದ ೩ ನೇ ದರ್ಜೆಗೆ ಸೇರಿಸಬಹುದಾಗಿರುತ್ತೆ. ಈ ಸ್ಕೂಲಿನ ವಿದ್ಯಾರ್ಥಿಗಳ ಉತ್ಕೃಷ್ಟವಾದ ಉತ್ತೀರ್ಣತೆಯೇ ಇಲ್ಲಿನ ಮಾಸ್ಟರುಗಳ ಐಕಮತ್ಯವನ್ನು ಸೂಚಿಸುವುದಲ್ಲದೆ ಈ ದಿನ ನಡೆದ "ಸಾಯಂಕಾಲದ ಆಟವು" ಐಕಮತ್ಯದ ಪ್ರಯೋಜನವನ್ನು ವ್ಯಕ್ತಗೊಳಿಸುತ್ತದೆ ಎಂಬುದಾಗಿ ತಿಳಿಸಿದರು

ಅನಂತರ ಬಾಲಕಿಯರ ಗಾನರೂಪವಾದ ಮಂಗಳವು ಆದ ಮೇಲೆ ಮೇಲಿನಂತೆಯೇ ಅಭಿವಾದನಗಳು ಸೂಚಿಸಲ್ಪಟ್ಟ ಬಳಿಕ ಸಭಿಕರಿಗೆ ಗಂಧ, ಪುಷ್ಪಹಾರ ತಾಂಬೂಲವೂ ವಿದ್ಯಾರ್ಥಿಗಳಿಗೆ ಸಕ್ಕರೆಯೂ ಸಹ ಕೊಡಲ್ಪಟ್ಟು ೯ ಗಂಟೆಗೆ ಸಭೆಯು ಬರಖಾಸ್ತು ಆಯಿತು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರೆದ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿ

...ತ್ತು, ಮತ್ತು ಚಾಕ್ಷಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಚಾಕ್ಷಿಗಳನ್ನು ನಾವು ...ಕ್ಷಿದಾರರಿಗೆ ವಾಪಸು ಕಳುಹಿಸಲಾರೆವು

ಚಾಕ್ಷಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

"ಗ್ರಂಥಕರ್ತ."—ನಿಮ್ಮ ವ್ಯವಹಾರವನ್ನು ಕೋರ್ಟಿನಲ್ಲಿ ಮಾಡಿಕೊಳ್ಳಬಹುದಾಗಿದೆ.

...ಮಾವ್ಕೂರು ತಾಲ್ಲೂಕು ಕೋಳಾಲಗ್ರಾಮದಲ್ಲಿ ಹುಚ್ಚು ನಾಯನ್ನು ಸರ್ಕಾರದವರು ಬಂದು ಕೊಲ್ಲಬಾರದೇ ಎಂದು ...ಕ್ಷಿದಾರರು ಕೇಳುತ್ತಾರೆ ಹಳ್ಳಿಗಳಲ್ಲಿ ನಾಲ್ಕಾರು ಜನ ...ಮಾಡಿಕೊಳ್ಳಬಹುದಾದ ಅಲ್ಪ ಕೆಲಸಕ್ಕೂ ಸರ್ಕಾರದವರ ...ವನ್ನಪೇಕ್ಷಿಸುವುದು ಯೋಗ್ಯವಾಗಿ ಕಾಣುವುದಿಲ್ಲ.

...ಬ್ಬಿ ಪೆಳ್ಳ ಪಲ್ಲಕ್ಕಿ ಉತ್ಸವ; ಚಳ್ಳಕೆರೆ ತಾಲ್ಲೂಕು ನಾ...ಕಟ್ಟ ಜಾತ್ರೆ —ಈ ಚಾಕ್ಷಿಗಳನ್ನು ಪ್ರಕಟಿಸಲಾರೆವು

ಕರೆಸ್‌ಪಾಂಡೆನ್ಸ್.

ಮಲೆನಾಡಿನ ಬಡ ರೈತರ ಮನೆಗಳ ಗೋಳಾಟ

ಮಲೆನಾಡಿನ ಪ್ರಜೆಗಳು ಮನೆ ಕಟ್ಟಿಕೊಳ್ಳುವದಕ್ಕೆ ಮು...ರಿ ಬೋಗಿನಾಟವೇ ಉತ್ತಮವಾದದ್ದೆನ್ನುವದರಲ್ಲಿ ಸಂದೇಹವಿಲ್ಲದೇಗಿರುವಲ್ಲಿ ನಮ್ಮ ಮೈಸೂರು ಸರಕಾರದವರು ಈಗ ...ಬ ಒಂದು ವರುಷದ ಲಾಗಾಯಿತು ಬೋಗಿನಾಟಕ್ಕೆ ಲೈಸೆನ್ಸ ...ಇದೆ ಫಾರೆಷ್ಟು ಇಲಾಖೆಯಿಂದ ಕಾನೇ ಖುದ್ದು ಕಡಿಸು...ತ್ತಾರೆ. ಇಲ್ಲಿಯ ಪ್ರಜೆಗಳೆಲ್ಲಾ ಬಂಟಾ ವ್ಯಸನದಿಂದ ...ಕಚೇರಿಗೆ—ತಮಗೆ ಬೋಗಿನಾಟ ಕೊಡದೆಹೋದಲ್ಲಿ ತಮ...ಗೆ ಮಾರ್ಗವಿಲ್ಲವೆಂತಲೂ ಸರಕಾರದವರು ಇದುವರೆಗೂ ಜಾರಿ...ಯಲ್ಲಿದ್ದ ರೂಲ್ಸನ್ನನುಸರಿಸಿ ರಿಯಾಯತಿ ಹಾಸನ್ನು ತೆಗೆದುಕೊಂಡು ಮನೆ ಕಟ್ಟಿಕೊಳ್ಳುವ ಬಗ್ಗೆ ಬೋಗಿನಾಟಕ್ಕೆ ಲೈಸೆನ್ಸು ಕೊಡಬೇಕೆಂತಲೂ ನೂರಾರು ಅರ್ಜಿಗಳನ್ನು ಬರೆದುಕೊಂಡರೂ ನಮ್ಮ ಸರಕಾರದವರ ದಿವ್ಯ ಚಿತ್ತಕ್ಕೆ ಬಾರದೆ ಇರುವದು ...ವ್ಯಸನವಾಗಿದೆ ಇದು ಕೇವಲ ಕ್ಷುಲ್ಲಕವೆಂದು ಸರ್ವಸಾಮಾನ್ಯ...ರೆಲ್ಲರೂ ತಿಳಿದಂಥ ವಿಷಯವೇ. ಈ ಸ್ಥಳಗಳಿಗೆ ಬೋಗಿನಾಟವಾಯಿ ಬೇರೆ ನಾಟ ಉಪಯೋಗವಾಗಲಾರದು. ಮೊದ...ಲ್ಲನ್ನೇ ನಮ್ಮ ಕರುಣಾಳುಗಳಾದ ಸರಕಾರದವರು ಜಾರಿ...ತಂದು, ಬಡ ಪ್ರಜೆಗಳ ವ್ಯಸನವನ್ನು ಹೋಗಲಾಡಿಸುವ್ಯರೆಂದು ನಂಬುತ್ತೇನೆ.

ಕೆ. ಬಿ. ಸಿದ್ದಪ್ಪಗೌಡ

ಮೈಸೂರು ಗೆಜೆಟ್ ಸಂಗ್ರಹ.

ಮುಂದೆ ಹೇಳುವ ಸಬ್ ರೆಜಿಷ್ಟ್ರಾರುಗಳ ವರ್ಗಾವರ್ಗಿ ಮಾಡಲಾಗಿದೆ —ಕೆ. ದೊರಸ್ವಾಮಿ ಐಯ್ಯಂಗಾರ್ಯ—ಮಾಂಡ್ಯದಿಂದ ...ಕೋರಿಗೆ, ಬಿ ಚನ್ನರಾಜೇ ಅರಸಿನವರು—ಹಾಸನದಿಂದ ...ಗೆ, ಸಿ ದಯಾರಾಯರು—ಮಾಗಡಿಯಿಂದ ಹಾಸನಕ್ಕೆ, ...ಶ್ರೀನಿವಾಸರಾಯರು—ಹರೀಕೆರೆಯಿಂದ ಮಾಗಡಿಗೆ, ಎಸ. ನಾ...ರಾಯರು—ಹರೀಕೆರೆಗೆ, ಮೈಸೂರ್ ರಜಿಸ್ಟ್ರಾರ್ ಆಫಿಸ್ ...ಕ್ಲಾರ್ಕ ಎಂ. ಶ್ರೀನಿವಾಸ್ಯಯ್ಯಂಗಾರ್ಯ ದಾವಣಗೆರೆ ಸಬ್ ...ಸ್ಟ್ರಾರಾಗಿ ನೇಮಿಸಲ್ಪಟ್ಟಿದ್ದಾರೆ.

...ರ ಸಬ್ ರೆಜಿಸ್ಟ್ರಾರುಗಳ ಬಡ್ತಿಗಳು ಈ ಕೆಳಂಡಮಾಡಿದೆ —...ನಾರಾಯಣರಾಯರು—೪ ನೆ ಕ್ಲಾಸಿನಿಂದ ೪ ನೆ ಕ್ಲಾಸಿಗೆ, ...ಬ್ ಇನ್ಸ್ಪೆಕ್ಟರ್‌ಯವರು—೬ ರಿಂದ ೫ ನೆ ಕ್ಲಾಸಿಗೆ, ಮೈ...ರಜಿಸ್ಟ್ರಾರ್ ಆಫಿಸ್ ಆಕ್ಟಿಂಗ್ ಹೆಡ್ ಕ್ಲಾರ್ಕ ಎಂ ಶ್ರೀನಿ...ವಾಸಯ್ಯಂಗಾರ್ಯ ೬ ನೆ ಕ್ಲಾಸ್ ಸ್ಪೆಷಲ್ ಸಬ್ ರಜಿಸ್ಟ್ರಾರಾಗಿದ್ದು.

ಮೈಸೂರು ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಮಿ ಎಫ್. ಇ. ...ರ್‌ಯವರಿಗೆ ಮೇ ೧೪ ರ ಲಾಗಾಯಿತು, ಅಥವಾ ಅವರು ...ಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ರಜಾ ...ಟ್ಟಿದೆ.

...ಪಡಶೇ ಕೌನ್ಸಲರ್ ರಾವ್ ಬಹದೂರ್ ಮಾ॥ ಸಿ. ಮಾಧ್ಯ...ವರು ತಮ್ಮ ಇತರ ಕೆಲಸಗಳೊಂದಿಗೆ ಮತ್ತೊಂದು ಹುಕುಂ ...ಕೊಡುವ ತನಕ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರಾಗಿ ಕೆ...ಲಸ ನೋಡತಕ್ಕದ್ದು.

...ರ್ ತಾಲ್ಲೂಕ್ ಅಮಲ್ದಾರ್ ಮಾ॥ ಜಿ ಆರ್. ಶ್ರೀನಿವಾಸ್ಯ...ಯ್ಯಂಗಾರ್ಯಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ...೧೫ ದಿನ ಜಾಸ್ತಿ ಮಾಡಿದೆ.

...ಪ್ಪೂರು ತಾಲ್ಲೂಕ್ ಅಮಲ್ದಾರ್ ಮಾ॥ ಸಿ. ವಿ. ನಾರಾಯಣ...ರಾಯರಿಗೆ ಫೆಬ್ರವರಿ ೫ ರಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊ...ಟ್ಟಿದೆ. ...ಶಿರಸ್ತೆದಾರರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

...ಯುವರಾಜರವರ ಉಪಾಧ್ಯಾಯರಾದ ಮಾ॥ ಎಂ. ಎ. ನಾರಾ...ಯಣಯ್ಯಂಗಾರ್ಯನ್ನು ೧ನೇ ಕ್ಲಾಸ್ ಎಕ್‌ಸ್ಟ್ರಾ ಅ॥ ಕಮಿಷನರಾಗಿ ...ನೇಮಿಸಿ, ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜಿನಲ್ಲಿರು...ವಂತೆ ವರ್ಗಮಾಡಿದೆ.

...ಇಂಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ...ಮಾಡಿದೆ.—ಚಿತ್ರದುರ್ಗದ ಡಿವಿಜನ ಎಕ್ಸಿಕ್ಯುಟಿವ್ ಇಂಜ...ನಿಯರ್ ಮಾ॥ ವೈ ಶ್ರೀನಿವಾಸರಾಯರನ್ನು ಸೂಪರಿಂಟೆಂಡಿಂಗ್ ...ಇಂಜನಿಯರಾಗಿ ಬಡ್ತಿ ಮಾಡಿ, ಪೂರ್ವ ಸರ್ಕಲ್ ಛಾರ್ಜಿಗೆ ವರ್ಗ...

ಬೆಂಗಳೂರು ಸ್ಯಾನಿಟರಿ ರೇಂಜ್ ಅ॥ ಇಂಜನಿಯರ್ ಮಾ॥ ಆರ್. ವಿ. ಸುಂದರಂ ಐಯ್ಯರನ್ನು ಎಕ್ಸಿಕ್ಯುಟಿವ್ ಇಂಜನಿಯರಾಗಿ ಬಡ್ತಿ ಮಾಡಿ, ಚಿತ್ರದುರ್ಗದ ಡಿವಿಜನ ಛಾರ್ಜಿಗೆ ವರ್ಗಮಾಡಿದೆ.

ಪೂರ್ವ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಮಾ॥ ಸಿ. ಟಿ. ದಳಾಳ್ ಯವರಿಗೆ ಫೆಬ್ರವರಿ ೨೪ ರಿಂದ ಅಥವಾ ಅವರು ಪ್ರಯಾಣ ಮಾಡುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಅನಂತರ ಒಂದು ವರುಷವೂ ಒಂಬತ್ತು ತಿಂಗಳ ಫರಲೋ ರಜವೂ ಕೊಟ್ಟಿದೆ.

ಮೈಸೂರ್ ಸ್ಟೇಟ್ ಟ್ರೂಪ್ಸ್ ಛೀಫ್ ಕಮ್ಯಾಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜೇ ಅರಸಿನವರಿಗೆ ಫೆಬ್ರವರಿ ೧೪ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮುಪತ್ನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಗವರ್ನಮೆಂಟ್ ಮಿಲಿಟರಿ ಅಸಿಸ್ಟೆಂಟರು ಛೀಫ್ ಕಮ್ಯಾಂಡೆಂಟರ ಆಫಿಸ್ ಛಾರ್ಜನ್ನು ವಹಿಸತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮಾ॥ ನರಸಿಂಗರಾವ್ ಪೂರ್ಣಯ್ಯನವರಿಗೆ ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಸೀನಿಯರ್ ಸರ್ಜನ ಮತ್ತು ಸ್ಯಾನಿಟರಿ ಕಮಿಷನರವರ ಪರ್ಸನಲ್ ಅಸಿಸ್ಟೆಂಟ್ ಮಾ॥ ಟ ಎಸ್. ನಂಜಪ್ಪನವರಿಗೆ ಮಾರ್ಚಿ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗವರ್ನಮೆಂಟ್ ನೇತ್ರವೈದ್ಯರಾದ ಡಾಕ್ಟರ್ ಎಸ್. ವಿ. ರಾಮಸ್ವಾಮಯ್ಯಂಗಾರ್ಯ ತಮ್ಮ ಇತರ ಕೆಲಸಗಳೊಂದಿಗೆ ಸೀನಿಯರ್ ಸರ್ಜನ ಮತ್ತು ಸ್ಯಾನಿಟರಿ ಕಮಿಷನರವರ ಪರ್ಸನಲ್ ಅಸಿಸ್ಟೆಂಟರಾಗಿ ಕೆಲಸ ನೋಡತಕ್ಕದ್ದು.

ಚಿತ್ರದುರ್ಗದ ಹೈಸ್ಕೂಲ್ ಹೆಡ್ ಮಾಸ್ಟರ್ ಮಾ॥ ಜೆ ಅರ್ಬತ್ನಾಟ್ ಯವರಿಗೆ ಜನವರಿ ೯ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ರಜಾ ಪೂರೈಸಿದ ಮೇಲೆ ಅವರು ಪೆನ್ಷನ ಪಡೆದು ಕೆಲಸ ಬಿಡತಕ್ಕದ್ದು.

ಕಡೂರ್ ಡಿಸ್ಟ್ರಿಕ್ಟ್ ಪೋಲೀಸ್ ಆಕ್ಟಿಂಗ್ ಅ॥ ಕಮಿಷನರ್ ಮಾ॥ ಮಹಮದ್ ರಸಾ ಯವರಿಗೆ ಒಂಬತ್ತು ದಿನಗಳ ರಜಾ ಕೊಟ್ಟಿತ್ತು.

ಮೈಸೂರು ದಿವಾನರವರ ಪ್ರೈವೆಟ್ ಸೆಕ್ರೆಟರಿ ಮಾ॥ ಎಂ. ಶ್ರೀನಿವಾಸಮೂರ್ತಿ ಯವರಿಗೆ ಕೊಟ್ಟಿದ್ದ ೨೦ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ೨೦ ದಿನಗಳು ಜಾಸ್ತಿಮಾಡಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಾ॥ ಬಿ. ವಿ ಲಕ್ಷ್ಮಣರಾಯರು ದಿವಾನರವರ ಪ್ರೈವೆಟ್ ಸೆಕ್ರೆಟರಿಯಾಗಿ ಕೆಲಸ ನೋಡತಕ್ಕದ್ದು

ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಾ॥ ಎಂ. ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸೀನಿಯರ್ ಅ॥ ಕಮಿಷನರ್ ಮಾ॥ ಎಸ ನೆಂಕಟರಾಯರು ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಕೆಲಸ ನೋಡತಕ್ಕದ್ದು

ತುಂಕೂರು ಡಿಸ್ಟ್ರಿಕ್ಟ್ ಎಕ್‌ಸ್ಟ್ರಾ ಅ॥ ಕಮಿಷನರ್ ಮಾ॥ ಬಿ ಶ್ರೀನಿವಾಸರಾಯರು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು

ಕಂಟ್ರೋಲರವರ ಜೂನಿಯರ್ ಅಸಿಸ್ಟೆಂಟ್ ಮಾ॥ ವೈಯಾಪುರಿ ಚಟ್ಟಿಯವರಿಗೆ ಫೆಬ್ರವರಿ ೬ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಂಟ್ರೋಲರವರ ಆಫೀಸ್ ಎಕ್ಸಾಮಿನರ್ ಮಾ॥ ಜಾರ್ಜ ವಾಟ್ಸನ್‌ಯವರು ಕಂಟ್ರೋಲರವರ ಛೀಫ್ ಅಸಿಸ್ಟೆಂಟರಾಗಿ ಕೆಲಸ ನೋಡತಕ್ಕದ್ದು.

ಅ॥ ಕಮಿಷನರ್ ಮಾ॥ ಕೆ. ಬಾಂಡಿಯವರನ್ನು ಹಾಸನದಿಂದ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಆಕ್ಟಿಂಗ್ ಎಕ್‌ಸ್ಟ್ರಾ ಅ॥ ಕಮಿಷನರ್ ಮಾ॥ ಬಿ ಸುಬ್ರಾಯಲು ನಾಯುಡು ಯವರು ಶಿಕಾರಿಪುರದ ತಾಲ್ಲೂಕ್ ಅಮಲ್ದಾರರಾಗಿ ವಾಪಸು ಹೋಗತಕ್ಕದ್ದು.

ಚಿತ್ರದುರ್ಗದ ಡಿವಿಜನ ಮಾರಿಕಣಿವೆಯ ಕಾಮಗಾರಿಯ ಅ॥ ಇಂಜನಿಯರ್ ಮಾ॥ ಕೆ. ಅನಂತಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೊಳಕಾಲ್ಮೂರು ಕಾಮಗಾರಿಯ ಸಬ್ ಅ॥ ಇಂಜನಿಯರ್ ಮಾ॥ ಕೆ. ಆರ್. ಕೇಶವಾಚಾರ್ಯರಿಗೆ ಫೆಬ್ರವರಿ ೪ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತಾಲ್ಲೂಕು ವರ್ತಮಾನಗಳು.

ತರೀಕೆರೆ.—ಮುಂದಿನ ಮೇ ತಿಂಗಳು ಬೆಂಗಳೂರಿನಲ್ಲಿ ನಡೆಯುವ ವೀರಶೈವ ಮಹಾಸಂಘದ ವಿಷಯವಾಗಿ ಈ ತಿಂಗಳು ೬ ರಲ್ಲಿ ಒಂದು ಸಭೆ ಮಿಟಿಯ ಇಲ್ಲಿನ ಆಸ್ಪತ್ರೆಯಲ್ಲಿ ಸಾಯಂಕಾಲ ೫ ಗಂಟೆಗೆ ನಡಿಸಲ್ಪಟ್ಟಿತು. ೫೦ ಜನರ ವರಿಗೂ ಸಭೆ ಸೇರಿತ್ತು. ಈ ಕೂಟದಲ್ಲಿ ಎಣ್ಣೆಹೊಳೆ ಮಠದ ಶ್ರೀಗುರುಪಾದಸ್ವಾಮಿಗಳು ಸಭಾಧ್ಯಕ್ಷರಾಗಿಯೂ, ಇಲ್ಲಿನ ೧ನೇ ಗ್ರೇಡ್ ಆಸ್ಪಿಟಲ್ ಅಸಿಸ್ಟೆಂಟರಾದ ಮಾ॥ ಕೆ. ಅಬ್ದುಲ್ ಕಾದೂಸ್ ಯವರು ಉಪಾಧ್ಯಕ್ಷರಾಗಿಯೂ, ಮಾ॥ ಗುಬ್ಬಿ ಕೆ. ರುದ್ರಾರ್ಯರು ಮಠದ ವಿಷಯದಲ್ಲಿಯೂ ವಿದ್ಯೆಯ ವಿಷಯದಲ್ಲಿಯೂ ಉಪನ್ಯಾಸಕರಾಗಿಯೂ ನೇಮಿಸಲ್ಪಟ್ಟಿದ್ದರು. ಮಾ॥ ರುದ್ರಾರ್ಯರು ವೀರಶೈವ ಮತವು ಅನಾದಿಯಿಂದ ಬಂದ್ದೆಂತಲೂ ಶಾಸ್ತ್ರಗಳನ್ನು ಪರೀಶೀಲನೆ ಮಾಡುವಾಗ ಕೆಲವರು ೪೦೦ ವರ್ಷ ಇನ್ನೂ ಕೆಲವರು ೭೦೦ ವರುಷದಲ್ಲಿ ಇದು ಪ್ರಚಾರಕ್ಕೆ ಬಂತೆಂತಲೂ ಉಪನ್ಯಾಸಿಸಿದರು. ಜನರು ಅಷ್ಟಾಗಿ ವಿದ್ಯೆಯನ್ನು ವ್ಯಾಸಂಗ ಮಾಡದೆ, ಶಾಸ್ತ್ರಗಳನ್ನು ಪರೀಕ್ಷಿಸದೆ ಮೌಢ್ಯತನದಿಂದ ಇದು ಬಸವೇಶ್ವರನ ಕಾಲದಲ್ಲಿ ಉಂಟಾಯಿತೆಂದು ಹೇಳುತ್ತಾರೆಂತಲೂ ತಿಳಿಸಿದರು. ಕಳೆದ ವರುಷ ಇದೇ ಮಠದ ವಿಷಯವಾಗಿ ಒಂದು ದೊಡ್ಡ ಸಭೆ ಧಾರವಾಡದಲ್ಲಿ ನಡಿಸಲ್ಪಟ್ಟಿತು. ಹ್ಯಾಗೂ ಮತವೂ ವಿದ್ಯೆಯೂ ಶಿವಮೊಗ್ಗರಲ್ಲಿ ಪ್ರಚಾರವಾಗಬೇಕೆಂಬುವದೇ. ಈಗ ಮುಂದೆ ಮೇ ತಿಂಗಳು ಬೆಂಗಳೂರಿನಲ್ಲಿ ನಡೆಯುವ ಈ ಸಂಘದಲ್ಲಿ ಸೇರುವ ಜನರಿಗೆ ಎಲ್ಲಾ ವಿಧವಾದ ಸೌಕರ್ಯಗಳು ಉಂಟಾಗುವ ಹಾಗೆ ಇಲ್ಲಿನವರು ೧೦೩ ರೂಪಾಯಿ ವರಿಗೂ ಚಂದಾ ಕೂಡಿಸಿ ಕೊಟ್ಟಿದಾರೆ. ಈ ಕೂಟದಲ್ಲಿ ಮಾ॥ ದೊಡ್ಡಮನೆ ರಾಚಪ್ಪಯ್ಯನವರು ಪ್ರೆಸಿಡೆಂಟರಾಗಿಯೂ ಮಾ॥ ಗುಬ್ಬಿ ಕೆ. ರುದ್ರಾರ್ಯರು ವೈಸ ಪ್ರೆಸಿಡೆಂಟರಾಗಿಯೂ, ದೊಡ್ಡ ಮನೆ ಕುಟ್ಟವೀರಪ್ಪ ಟ್ರೆಜರರಾಗಿಯೂ, ಪಟೇಲ್ ಮಾ॥ ಶಿವಪ್ಪನವರು, ದೊಡ್ಡಮನೆ ದೊಡ್ಡ ಗುರುವಪ್ಪನವರು, ಅಂಚಿನ ಮನೆ ಸಿದ್ದಪ್ಪನವರು, ಶರಣ್ಯಯ್ಯನ ಗುರುಶಾಂತಪ್ಪನವರು ಇವರುಗಳೆಲ್ಲರು ಸೆಕ್ರೆಟರಿಗಳಾಗಿಯೂ ನೇಮಿಸಿದರು. ಇವರಲ್ಲಿ ಐಕಮತ್ಯವು ಬಹಳ ಚನ್ನಾಗಿತ್ತು. ಇದನ್ನು ಕಾರಿತು ಸರ್ವರೂ ಸಂತೋಷಪಟ್ಟರು. ತರುವಾಯ ಈಗ ಹೊಸದಾಗಿ ಬಂದಿರುವ ಸಬ್ ರಿಜಿಸ್ಟ್ರಾರ್ ಮಾ॥ ನಾರಾಯಣರಾಯರು ಎಲ್ಲರಿಗ [illegible] ...ಗಳನ್ನಾಡಿ ಕೂಟವನ್ನು ಬರಖಾಸ್ತು

ಹಾಸನ.—ಈ ಪ್ರಾಂತ್ಯದಲ್ಲಿ ಪ್ಲೇಗ್ ರೋಗವೇ ಮೊದಲಾದ ಯಾವ ಬಾಧೆಯೂ ಇಲ್ಲದೆ ದೇವರ ಮಹಾ ಕೃಪೆಯಿಂದ ಎಲ್ಲಾ ಕ್ಷೇಮವಾಗಿರುವರು. ಈ ಊರಿನ ಉತ್ತರಭಾಗದ ನಿವಾಸಿಗಳೆಲ್ಲಾ ಬಂದು ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡರು ದಕ್ಷಿಣ ಭಾಗದಲ್ಲಿಯೂ ಸರ್ಕಾರದವರ ಉದ್ಧೀಕರಣ ಕಾರ್ಯವು ಮುಕ್ತಾಯವಾಗುತ್ತಾ ಬಂದಿದೆ. ನಮ್ಮ ಡಾಕ್ಟರ್ ಅಪ್ಪಾದೊರೆ ಮೊದಲಿಯಾರ್ರವರು ವಿಶೇಷವಾಗಿ ಜನಾನುರಾಗಿಗಳಾಗಿರುವುದರಿಂದ ಮನೆಗಳನ್ನು ಸೇರಿಕೊಳ್ಳುವವರಿಗೆ ಬೇಸರಿಕೆಪಡದೆ ಅವರವರ ಮನೆಗಳನ್ನು ಸ್ವತಃ ಪರಾಂಬರಿಸಿ, ಅಪ್ಪಣೆ ಚೀಟಿಗಳನ್ನು ಕೊಡುತ್ತಾ ಇರುವುದು ಸಂತೋಷಕರವಾಗಿದೆ. ಇವರು ಯಾವ ಮುಖದಾಕ್ಷಿಣ್ಯವನ್ನೂ ನೋಡದೆ ಯಾವ ಮನೆಯು ಆರೋಗ್ಯ ಶಾಸ್ತ್ರಾನುಸಾರವಾಗಿ ಗಾಳಿ ಬೆಳಕಿಗೆ ಅನ್ಯಾಯವಾಗಿ ಮಾಡಲ್ಪಟ್ಟು ಪರಿಶುದ್ಧವಾಗಿರುವುದೋ ಅಂತಹ ಮನೆಗೆ ಮಾತ್ರವೇ ಪ್ರವೇಶಕ್ಕೆ ಅಪ್ಪಣೆಯನ್ನು ಕೊಡುವದಕ್ಕೂ ಹಾಗಿಲ್ಲದ ಮನೆಗೆ ಯುಕ್ತವಾದ ಕಾಮಗಾರಿಗಳನ್ನು ಮಾಡಿಸಿಯೇ ತೀರಬೇಕೆಂದು ನಿರ್ಬಂಧಪಡಿಸಿ, ಅಪ್ಪಣೆಯನ್ನು ಕೊಡುವದಕ್ಕೂ ಹಿಂತೆಗೆಯಲಾರರೆಂದು ನಂಬುತ್ತೇನೆ. ಮತ್ತು ಮ್ಯುನಿಸಿಪಾಲಿಟಿಯ ಕಾರ್ಯಗಳು ಬಹು ಚನ್ನಾಗಿ ನಡೆಯುವೇ ಇದ್ದರೆ ನಿವಾಸಿಗಳಿಗೆ ಎಂದಿಗೂ ಕ್ಷೇಮವೇ ಇರಲಾರದಾದಕಾರಣ ನಮ್ಮ ವೈಸ್ ಪ್ರೆಸಿಡೆಂಟರವರೂ ಪ್ರೆಸಿಡೆಂಟರವರೂ [illegible] ವಿಷಯದಲ್ಲಿ ಬಹು ಹೆಚ್ಚಾದ ಗಮನವನ್ನು ಕೊಡಬೇಕಾಗಿದೆ.—ಈ ಸಂಸ್ಥಾನದ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರಾದ ಮಿ ಕಾರ್‌ಯವರು ಈ ತಿಂಗಳು ೧ ನೇ ತಾರೀಖಿನಲ್ಲಿ ಈ ಊರಿಗೆ ದಯಮಾಡಿದರು. ಡೆಪ್ಯುಟಿ ಕಮಿಷನರವರೇ ಮೊದಲಾಗಿ ಎಲ್ಲಾ ಅಧಿಕಾರಿಗಳೂ ಪ್ರಮುಖರಾದ ಪ್ರಜೆಗಳೂ ಅವರನ್ನು ತಕ್ಕ ಮರ್ಯಾದೆಯಿಂದ ಕರೆತಂದರು. ಘನ ನ್ಯಾಯಾಧೀಶರಾದ ದೊರೆಯವರು ಮಿ ಕಾರ್ ದಂಪತಿಗಳನ್ನು ಬಹು ಆದರದಿಂದ ಸತ್ಕರಿಸಿದರು. ನಮ್ಮ ಡೆಪ್ಯುಟಿ ಕಮಿಷನರ್ ಮೇ॥ ಮೆಡಲಾಲ್ ಸಾಹೇಬರವರು ಇಲ್ಲಿನ ಪ್ರಸಿದ್ಧ ಕಾಫಿ ಪ್ಲಾಂಟರ್ ಮಾ॥ ಗ್ರಾಹಂ ಆಂಡ್ರಸನ ಸಾಹೇಬರವರ ಬಂಗ್ಲೆಯ ಮುಂದಿನ ಮೈದಾನದಲ್ಲಿ ಅವರುಗಳ ಸಂತೋಷಾರ್ಥವಾಗಿ ಪೋಲೀಸಿನವರ ಮತ್ತು ಸ್ಕೂಲ್ ವಿದ್ಯಾರ್ಥಿಗಳ ಮೂಲಕ ಅಂಗಸಾಧನೆ ಆಟಪಾಟಗಳನ್ನು ಮಾಡಿಸಿದರು ಈ ಆಟಪಾಟಗಳಲ್ಲಿ ಹಗ್ಗ ಎಳೆಯುವಿಕೆಯಲ್ಲಿ ಪೋಲೀಸಿನವರನ್ನು ಸ್ಕೂಲ್ ವಿದ್ಯಾರ್ಥಿಗಳು ಸೋಲಿಸಿ ಜಯಹೊಂದಿದರು. ಬೈಸಿಕಲ್ ಸವಾರಿಯಲ್ಲಿ ಇಲ್ಲಿನ ಫಾರೆಸ್ಟ್ ರೇಂಜರ್ ಆದ ಮಾ॥ ಬಿ ವೆಂಕಟರಮಣಯ್ಯನವರು ಗೆದ್ದು ಮೊದಲನೇ ಬಹುಮಾನವನ್ನು ಪಡೆದರು. ಈ ವಿನೋದನೆಲ್ಲವೂ ನೋಟಕರಿಗೆ ಪರಮಾನಂದವನ್ನುಂಟು ಮಾಡಿತು. ಆ ರಾತ್ರಿ ಅದೇ ಬಂಗ್ಲೆಯಲ್ಲಿ ಮಾ॥ ಕಾರ್‌ದಂಪತಿಗಳಿಗೆ ಔತಣವೂ ತರುವಾಯ ಬಾಣಬಿರುಸುಗಳೂ ನಡೆದುವು —ಇಲ್ಲಿನ ಕಂಟ್ರಾಕ್ಟರ್ ಕೆಂಪ ಮೇಸ್ತ್ರಿ ಎಂಬಾತನು ಮಗಳ ಮದುವೆಗೋಸ್ಕರ ನಗದಾಗಿಯೂ ಒಡವೆ ರೂಪವಾಗಿಯೂ ಸುಮಾರು ಸಾವಿರಾರು ರೂಪಾಯಿಗಳವರಿವಿಗೆ ತೆಗೆದುಕೊಂಡು, ಕಳೆದ ಶನಿವಾರ ರಾತ್ರಿ ಬೆಂಗಳೂರಿಗೆ ಪ್ರಯಾಣವಾಗಿ ಹೊರಟು, ಅರಸೀಕೆರೆ ಮಾರ್ಗವಾಗಿ ಹೋಗುತ್ತಿರುವಾಗ ಮಾರ್ಗದಲ್ಲಿರುವ ದಾಳ್ದದ ಪೋಲೀಸ್ ಸ್ಟೇಷನಿಗೆ ಸುಮಾರು ೭ ಫರ್ಲಾಂಗ್ ದೂರದಲ್ಲಿ ಕಳ್ಳರು ಗುಂಪು ಕೂಡಿ, ಬಹಳವಾಗಿ ಹೊಡೆದು, ಇದ್ದ ಮಾಲುಗಳನ್ನೆಲ್ಲಾ ಕಿತ್ತುಕೊಂಡು ಹೋದರು. ಈ ಕೃತ್ಯ ನಡೆಯುವಾಗಲೇ ಸ್ಟೇಷನಿಗೆ ಓಡಿಬಂದು, ದಫೆದಾರ್ ಮೊದಲಾದವರಿಗೆ ತಿಳಿಸಿದರೂ ಅವರು ಜಾಗ್ರತೆಯಿಟ್ಟು ಹೋಗಿ ಆ ಕಳ್ಳರನ್ನು ಹಿಡಿಯದೆಯೂ, ಆ ಮೇಸ್ತ್ರಿಯ ಪ್ರಾಣ ಧನಗಳನ್ನು ಕಾಪಾಡಲಿಕ್ಕಸಡೆ ಹೋದರೆಂದು ವರ್ತಮಾನವಿದೆ ಮೇಸ್ತ್ರಿಯು ಇದ್ದುದನ್ನೆಲ್ಲಾ ಕಳೆದುಕೊಂಡು, ಅಪಾಯಕರವಾದ ಪೆಟ್ಟುಗಳನ್ನು ತಿಂದು, ಈಗ ಆಸ್ಪತ್ರೆಯಲ್ಲಿ ಔಷಧೋಪಚಾರವನ್ನು ಅನುಭವಿಸುತ್ತಾ ಇರುವನು. ಮತ್ತು ಇಲ್ಲಿನ ಪೋಸ್ಟ್ ಆಫೀಸ್ ಕಟ್ಟಡದ ಸ್ವಂತಗಾರರಾದ ಪುಟ್ಟಮ್ಮನೆಂಬವರ ಮನೆಗೆ ಕಳ್ಳರು ನುಗ್ಗಿ ನೂರಾರು ರೂಪಾಯಿಗಳ ವರಿವಿಗೆ ಸಿಕ್ಕಿದ ಮಾಲುಗಳನ್ನು ದೋಚಿಕೊಂಡು ಹೋದರು. ಪಶ್ಚಿಮ ಭಾಗದ ಗುಡಿಸಲುಗಳಲ್ಲಿ ಒಂದು ಗುಡಿಸಲಿಗೆ ಬೆಂಕಿ ಹತ್ತಿ, ಒಳಗೆ ಮಲಗಿದ್ದ ತಾಯಿ ಒಂದು ಮಗು ಸಹ ಸುಟ್ಟುಹೋದರು ಅಂತು ಈ ಪ್ರಾಂತ್ಯದಲ್ಲಿ ರೋಗಬಾಧೆಗಳೇನೂ ಸದ್ಯಕ್ಕೆ ಇಲ್ಲದಿದ್ದಾಗ್ಯೂ ಕಳ್ಳರ ಮತ್ತು ಬೆಂಕಿಯ ಭಯವು ಬಹು ಅಪಾಯಕರವಾಗಿಯೇ ಇವೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

13

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ದಾಗ್ರತ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮಾ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿದೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪ "ರೋಮನರ ಚರಿತ್ರೆ" ಕ್ರಯ ೦—೨—೦
೫. "ಗ್ರೀಕರ ಚರಿತ್ರೆ." ,, ೦—೨—೦
೬. "ಅನುಭವಾನಂದ.",, ೦—೬—೦
೭ "ಗಣಿತ ಸಂಜೀವಿನಿ." ೧—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ." ೦—೧೨—೦
೧೧ "೧೯೦೫ನೇ ವರುಷದ ಡೈರಿಗಳು"
ಫ್ಲಾಪ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪ್ಪೋ,
ಮೈಸೂರು.

ಜ್ವರಹರಿ.

15

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೩ರೂ. ೨—೧೨ ಅ., ೧೧ ರೂ.; ಇನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹಿಪ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇಪಾರರೂ ಮುನ್ಸಿಪಲ್ ಆಸ್ಪತ್ರೆಯಲ್ಲಿ ಅನೇಕ ಸಂದರ್ಭಗಳಲ್ಲಿಯೂ ಕಾಲರಾ, ಅಜೀರ್ಣ ಭೇದಿ. ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯರುಗಳ ಕಲ್ಲೂ, ದೊಡ್ಡ ಛಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—

ಹೆಪ್ರಿಯದ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೆಕಂಡ್ ಲೇನ್ ಲೈನ್. ಮದರಾಸ್.

೧೯೦೫ನೆ ಇಸವಿ ಮೆಟ್ರಿಕ್ಯುಲೇಷನ್ ಕನ್ನಡ ಟೆಕ್ಸ್ಟಿನ ನೋಟ್ಸ್.

7

ಕ್ರಯ, ೧ ರೂಪಾಯಿ. ಪಿಸ್ಕೌಂಟು ೧೦ಕ್ಕೆ ೧
ಉಪೇಕ್ಷಮಾಡತಕ್ಕ ನೋಟ್ಸ್ ಅಲ್ಲ. ಪ್ರಶ್ನೋತ್ತರಗಳೂ ಇವೆ ಅಚ್ಚಿಸಿದೆ. ಫೆಬ್ರವರಿ ೧೫ಕ್ಕೆ ಬಂದಿತ ಸಿದ್ಧವಾಗುತ್ತೆ.

N. R. VENKATA SUBBACHARYA,
Subodha Granthalaya, Mysore

ಸುಲಭಕ್ರಯ: ಸುಗಂಧದ್ರವ್ಯಗಳು.

15

ಅಂಬರ್ ಕಡ್ಡಿ ಕೇರು ೧ಕ್ಕೆ	೫—೦—೦
ವಸಂತಸುಕುಮಾರವರ್ತಿ ..	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೮—೦
ಪುನುಗು ಕಡ್ಡಿ ,, ೧ಕ್ಕೆ	೧—೮—೦
ಮಸಾಲಾ ಕಡ್ಡಿ ,, ೧ಕ್ಕೆ ..	೦—೧೦—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಪಚ್ಚೆ ಗಂಧ ತೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ ವರ್ತಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ ..	೦—೪—೦
ಕೇಶಪಲ್ಲವಿನಿ ಶೀಶೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ಪಂಟಾಕ್ ಪೋಕ್ ಡಬ್ಬಿ ೧ಕ್ಕೆ ..	೦—೨—೦
ಕೈವಲ್ಯಸ್ನಾನ ಶಾಸ್ತ್ರೀಯ ದಶಾಂಗ ಕೇರು ೧ಕ್ಕೆ	೦—೧೨—೦
ಧಿತ್ತಾ ತೋಲ ೧ಕ್ಕೆ	೨—೦—೦
ಡಿಟೋ	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ವಸಂತದಾನೀಯ ಘುಟಿಕಾ ೧೦೦ಕ್ಕೆ ..	೨—೦—೦

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ, ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ —ಟಿ ಎಲ್. ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ಹೋಮೋಸಿಯಾ.

ಚಕ್ಷಣ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಶೀಲವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳುವಲ್ಲದು. ಡಬ್ಬಿಗಳಲ್ಲಿ ಬುಂಟಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಛಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮೋಸಿಯಾ ಕಂಪೆನಿ. ೨೩ ಸೆಕಂಡು ಲೇನ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೪—೨—1905 ರಿಂದ ೩—3—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವರ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	28	23	40	4
ಮೈಸೂರು ,,	12	12	6	
ಬೆಂಗಳೂರು ಡಿಸ್ಟ್ರಿಕ್ಟ್	75	55	78	3
ಮೈಸೂರು ,,	34	31	48	4
ಕೋಲಾರ್ ,,	23	20	71	4
ಕೋಲಾರ್ ಚಿನ್ನದ ಗಣಿಗಳು	8	10	83	1
ತುಂಕೂರು ಡಿಸ್ಟ್ರಿಕ್ಟ್	45	31	16	1
ಹಾಸನ ,,	2	1	7	
ಚಿತ್ರದುರ್ಗ ,,	3	2	24	1
ಕಡೂರ್ ,,	4	4	42	3
ಶಿವಮೊಗ್ಗ ,,	4	2	84	3
ಜುಮ್ಲಾ.	238	191	439	33

ಶಾಲೀವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರ ಫಾಲ್ಗುಣ ಶುದ್ಧ ದಶಮಿ ಗುರುವಾರದಿಂದ ಫಾಲ್ಗುಣ ಬ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೫ ನೇ ಇಸವಿ ಮಾರ್ಚಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	
16	ಗುರು ‡	ದಶಮಿ	33-22	ಪು	34 18	
17	ಶುಕ್ರ *	ಏಕಾದಶಿ	30 33	ಪು	33-22	
18	ಶನಿವಾ ,,	ದ್ವಾದಶಿ	26 25	ಶ್ಲೇ	31-12	
19	ರವಿವಾ	ತ್ರಯೋ	21 50	ಮ	28 16	
20	ಚಂದ್ರ ¶	ಚತುರ್ದಶಿ	16-12	ಪು	24-24	
21	ಕುಜ	ಪೌರ್ಣಮಿ	10-20	ಉ	20 30	
22	ಬುಧ §	ಪಾಡ್ಯ	4 20	ಹಸ್ತ	53 53	

‡ ನಂಜನಗೂಡು ಶ್ರೀಕಂಠಮೂರ್ತಿ ಉತ್ಸವ * ಸರ್ವತ್ರ ಏಕಾದಶಿ, ಮೇಲುಗೋಟೆ ವೈರಮುಡಿ ಉತ್ಸವ ,, ರವಿಪ್ರದೋ ನಂಜನಗೂಡಿನಲ್ಲಿ ಪಂಚರಥ, ತಿರುಮಕೂಡ್ಲು ಅಗಸ್ತ್ಯೇಶ್ವರ ಶಿವನಸಮುದ್ರದ ಸೋಮೇಶ್ವರರಥ ¶ ಕಾಮದಹನ. ಹೋ ರದಲ್ಲಿ ಪ್ರಹ್ಲಾದೋತ್ಸವ. § ಮೇಷಾಯನ ಗತೋರವಿ

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಸ್ತೂರಿ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೦—೮—೦	೧೨—೦
ಕೆಂಪುಮೂತಿ ಅಕ್ಕಿ ಅವಲ್	೧೦ ೪—೦	೧೦—
,, ಮಾಯಂ ..	೯—೧೨—೦	೧೦—
ದಾಮ್ರಾಜ ಅಕ್ಕಿ ..	೯—೮—೦	೧೦—
ಸಣ್ಣಕ್ಕಿ ಅವಲ್	೧೨—೦—೦	೧೯—
,, ಮಾಯಂ	೧೧ ೮ ೦	೧೧—
ತೊಗರಿ ಬೇಳೆ ಪಲ್ಲಾ ೧ಕ್ಕೆ ..	೧೦—೮—೦	೧೧
,, ಮಾಯಂ	೧೧—೧—೦	೧೦—
ಜೈರ ರಾಗಿ ಪಲ್ಲಾ ೧ಕ್ಕೆ	೪—೧೨—೦	೪—೧
ಕಾರಾಗಿ	೪—/—೦	೪—
ಹುರುಳಿ	೪—೧೨—೦	೫—
ಕಡಲೆ ಪಲ್ಲಾ ೧ಕ್ಕೆ	೮—೧೨—೦	೮—
ಬಿಳೇ ಅವರೆ	೬ ೧೨ ೦	೬—೦
ಹೆಸರು	೯ ೧೨—೦	೮—೦
ಉದ್ದು	೮ ೧೪ ೦	೮—
ಅವರೆ	೯—೦—೦	೮—
ಎಳ್ಳು	೧೬ ೦ ೦	೧೨—
ಹುರುಳಿ	೯—೦ ೦	೬—
ಹರಳು ೧೨೬ ಸೇರಿಗೆ	೯—೮—೦	೬—೧
ತೆಂಗಿನಕಾಯಿ ಮಣ ೧ಕ್ಕೆ ..	೨—೪—೦	೧—೦
ಮೆಣಸಿನಕಾಯಿ	೪—೮—೦	೩—
,, ಮಾಯಂ	೩—೧೨—೦	೩—
ಬೆಲ್ಲ ದೊಡ್ಡ ಅಚ್ಚು	೬—೪—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೪—೦ ೦	೪—
ಹರಳೆಣ್ಣೆ ,, ...	೩—೦—೦	೬—೦
ಕೊತ್ತಂಬರಿ ಪಲ್ಲ ೧ಕ್ಕೆ	೬—೦—೦	೫—೦
ಉಪ್ಪು ,, ...	೮—೦—೦	೮—
ಹುಣಸೇ ಹಣ್ಣು	೧ ೪—೦	೦—೦
,, ಹಳೇದು	೦—೧೪—೦	೦—೦
ಜೀರಿಗೆ	೧೨—೦—೦	೧೦—
ಸೀಮೆಯಿಂದ ಪಟ್ಟ ೧ಕ್ಕೆ ..	೫—೨—೦	೪—
ತೆಂಗಿನಕಾಯಿ ೧೦೦ ಕ್ಕೆ ..	೫—೦—೦	೪—
ಅಡಕೆ ಕಾಯಿ ಮಣ ೧ಕ್ಕೆ ..	೧—೦—೦	೦—
ಅಂಬಾಡೀಕಾಯಿ ಮಣ ೧ಕ್ಕೆ ..	೦—೧೪—೦	೦—
ತುಪ್ಪ (ಬೆಣ್ಣೆ) ತೊಲೆ	೧೫—೮—೦	೧೫—
,, ,, ಪಸುವಿ	೧೫—೧೦—೦	೧೫—
,, ,, ಗಟ್ಟಿ ತೊಲ ೧ಕ್ಕೆ ..	೨೬—೦—೦	೨—
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೭೨—೦—೦	೭೪—೦

Printed and Published by the Rev H SPENCER the Proprietor and Manager, Wesleyan Mission Press, Mysore 16/3/1905

ವೃತ್ತಾಂತ ಪತ್ರಿಕೆ.

REGISTERED 20 M.

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೮ ಮೈಸೂರು—ಸನ್ ೧೯೦೫ ನೇ ಇಸವಿ ಮಾರ್ಚಿ ತಾರೀಖು ೨೩ ನೇ ಗುರುವಾರ. ಸಂಚಿಕೆ ೪೨

ಶ್ರೀ ತಾಂಬೂಲ.

19

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬಿವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಅಲಕ್ಷ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯೋಗಿಗಳೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಒಳ್ಳೆ ಗುಣಕಾಣುವದು. ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಾನ್ಯರಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೬ ಆಣೆ. ಆರು ಸೀಸೆಗೆ ಒಂದು ಜಾಸ್ತಿ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ—

ಶಿವನಹಳ್ಳಿ ಟವರ್, ಯಂ. ಗೋವಿಂದಶೆಟ್ಟಿ,

ಗುಲಿನ ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟೀಷನರ್.

P. SUBBAROY'S

World Renowned and most Efficacious Ayurvedic Medicines

ಪಿ. ಸುಬ್ಬರಾಯುಡುವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ತಿಂದರೆ, ಬಾಯಿಯ ದುರ್ಗಂಧವು ಹೋಗುವದು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು, ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು. ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ.—ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೬ ಆಣೆ ೧ ರಿಂದ ೬ ಸೀಸೆವರೆಗೆ ವಿ. ಪಿ. ಛಾರ್ಜು ೫ ಆಣೆ.



ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವದಕ್ಕೆ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮೂದ್ ಸಮಾಚಾರ.

ಆಳಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ಪೋಸ್ಟ್ ಮಾಸ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡುತ್ತಿರುತ್ತವೆ.—ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕೈವಾರ.

Apply to:—P. SUBBAROY,

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ

ಕಥಾಸಂಗ್ರಹ—ಮೊದಲನೆ ಭಾಗ.

2

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಸುಧಿಯ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಪದಗಳನ್ನೂ ಮಾತಿನ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

೧೯೦೫ನೇ ವರ್ಷದ ಲೋವರ್ ಸೆಕೆಂಡರಿ ಕನ್ನಡ ಗದ್ಯಪದ್ಯ ಭಾಗಗಳ ನೋಟ್ಸು.

11

ಸಿದ್ಧವಾಗಿದೆ. ರಿಪ್ರಿಂಟು —೧೯೦೫ ೧. ೧೯೦೫ ೭. ೧೦೦ ಕ್ಕೆ ೨೦. ಪ್ರಕೋತ್ತರಸಹಿತ ಎಲ್ಲಾ ವರ್ಷಗಳಿಗಿಂತಲೂ ಬಹು ಪ್ರಶಸ್ತವಾಗಿ ಬರೆಸಿದೆ. ಕ್ರಯ—೩ ಆಣೆ. ಪುಸ್ತಕಾಪೇಕ್ಷಿಗಳಿಗೆ ತಕ್ಷಣ ಜವಾಬನ್ನೂ ಪುಸ್ತಕವನ್ನೂ ಕಳುಹಿಸಲು ಏರ್ಪಾಡುಮಾಡಿದೆ.

ಬಾಲಬೋಧದ (ಮೈಸೂರು ಸಂಸ್ಥಾನ) ಭೂವಿವರಣೆ —ಈಗ ೩ನೇ ಸಲ ತಿದ್ದಿ ಮುದ್ರಿಸಿದೆ. ಇದರಿಂದಲೇ ಇದರ ಉಪಯೋಗವು ವ್ಯಕ್ತವಾಗಬಹುದು. ಕ್ರಯ—೧ ಆಣೆ. ಪೂರ್ವಮುದ್ರಿತ ಪುಸ್ತಕಗಳೆಲ್ಲಾ ಖರ್ಚಾದ್ದರಿಂದ ಈವರೆಗೆ ಕಾಗದ ಬರೆದವರಿಗೆ ಕಳುಹಿಸಲಿಲ್ಲ. ಇನ್ನು ಮೇಲೆ ಬೇಕಾದಷ್ಟು ಪ್ರತಿಗಳನ್ನು ತಕ್ಷಣವೇ ಕಳುಹಿಸುವೆವು.

೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು—೧ ಆಣೆ

ವಿಳಾಸ.—ಮೈಸೂರಿನಲ್ಲಿ ದಿ ಜೆನರಲ್ ಏಜನ್ಸಿ; ಸಿ. ಎಲ್. ಎಸ್. ಬುಕ್ ಡಿಪೋ; ಕೆ ನರಸಿಂಹಯ್ಯ ಅಂಡ್ ಕೋ; ಬೆಂಗಳೂರಲ್ಲಿ ಜಿ. ಗಣಪ್ಪ ಅಂಡ್ ಕೋ.

ಯಂ. ಆರ್ ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

ಸನ್ ೧೯೦೫ನೇ ಇಸವಿಯ

13

ಸಂಬಾಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ ಡೈರಿ

ಎಣಿಸುವ ಬಿನಂ!! ಟಿನಂ!! ಡಿನಂ!!

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಬುಕ್‌ಬಾಪ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕಾಂಡದಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ. ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜವಿನ್ಗಳ ಅಳತೆ, ತೂಕಗಳು. ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಶೂಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಬಡ್ಡಿಲೆಕ್ಕ ನಮೂನೆ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀಮೆ ಸಾಮಾನ್ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ. ಎ. ನಂಬರ್ ಚಿಕ್ಕಸೈಜು ೩ ಆಣೆ ಸಿ. ನಂಬರ್ ದೊಡ್ಡಸೈಜು ೬ ಆ.

ಎಫ್ " " ೪ ಎಚ್ " " ೭ "

ಬಿ ಮುಚ್ಚಳದ್ದು " ೫ ಡಿ. ಮುಚ್ಚಳದ್ದು " ೮ "

ಪೋಸ್ಟ್ ಛಾರ್ಜು ಬೇರೆ. ಒಂದೇ ಸಮಯಕ್ಕೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ.

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಅಗ್ಗ! ಅಗ್ಗ!! ಬಹಳ ಅಗ್ಗ!!!

7

ಇಂಥಾ ಸಮಯ, ಮುಂದೆ ಸಿಗಲಿಕ್ಕಿಲ್ಲಾ.

ರೋಸ್ಕೋಪ ಲಿವರ ಸಿಸ್ಟಂ ವಾಚ.

ಇದು ಬಹಳ ಮಜಬೂತ್ ಇದ್ದು ಕುದುರೆಯ ಮೇಲೆ ಸವಾರಿ ಮಾಡಿದರೂ ಕೂಡ ಬಂದ ಆಗುವದಿಲ್ಲ. ಇಂಥಾ ವಾಚನ್ನು ನಾವು ಬಡವರಿಗೂ ಕೂಡ ಸೋಯಿಯಾಗಬೇಕೆಂಬ ಇರಾದೆಯಿಂದ ೧೯೦೫ ನೇ ಆಗಸ್ಟ ಅಖೈರವರಿಗೆ ೧೦ ರೂಪಾಯಿ ಕಿಮ್ಮತ್ತು ಇದ್ದದ್ದು ೫ ರೂಪಾಯಿಗೆ ಕೊಡುತ್ತೇವೆ. ಗ್ಯಾರಂಟಿ ೫ ವರ್ಷ. ಪ್ರತಿ ವಾಚಿನ ಸಂಗಡ ಸ್ಪ್ರಿಂಗ್, ಪೆಟ್ಟಿಗೆ, ಕನ್ನಡಿ, ಹೀಗೆ ೩ ಸಾಮಾನು ಕಳುಹಿಸುತ್ತೇವೆ. ಟಪ್ಪಾಲ್ ಖರ್ಚು ಬೇರೆ.

ವಿಳಾಸ:—ಜೇ. ಯುಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರ ಕಾನಡಾ.

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

9

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನು ಸಂಪೂರ್ಣ ಜಾಗ್ರತೆಯಲ್ಲಿ ಬಹಳ ಸೌಕರ್ಯವಾಗಿ ಮಾಡಿ ಕೊಡುವೆವು.

ಇವಲ್ಲದೆ ಕನ್ನಡ ಅಕ್ಷರಗಳು—ಟೂಪೈನ್ ಪಿಕಾ, ಯಸ್, ಪೈಕ, ಲಾಂಗ್ ಪ್ರೈಮರ್ ಮೊದಲಾದವುಗಳೂ ಅಚ್ಚು ಕ್ಯಾಸ್ಟು ಮಾಡಿದವು ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ವರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ—ಮ್ಯಾನೇಜರ್,

ಮಿಷನ್ ಪ್ರೆಸ್, ಮೈಸೂರು.

ನಿಮ್ಮ ತಲೆಯು ಬೋಳಿರುವದೇನು? ಹಾಸನದ ಟೋಪಿ ಇಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ'

19

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು—ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಪಂ॥ ಇ. ವಾಸುದೇವಾಚಾರ್ಯರ ಕನ್ನಡ ಐದನೆಯ ಪುಸ್ತಕದ ಅತ್ಯುತ್ತಮವಾದ ನೋಟ್ಸು

ನಾಲ್ಕನೆ ತರಗತಿ ವಿದ್ಯಾರ್ಥಿಗಳಿಗೆ ಅನೇಕ ಹೊಸಸಂಗತಿಗಳು ಬೋಧೆಯಾಗುವಂತೆ ರಚಿಸಲ್ಪಟ್ಟದೆ ಏಪ್ರಿಲ್ ತಾ ೧೫ಕ್ಕೆ ಸಿದ್ಧವಾಗುವದು ಕ್ರಯ ೪ ಆಣೆ ೧೦ಕ್ಕೆ ಒಂದು ಡಿಸ್ಕೌಂಟು ವಿಳಾಸ—ಕರ್ಕಾರ್ಕಳ್ಳ ನಾರಾಯಣಶಾಸ್ತ್ರಿ, ಕನ್ನಡ ಪಂಡಿತ, ಆ ವಾ ಗೌರ್ನಮೆಂಟ್ ಕನ್ನಡಾ ಸ್ಕೂಲು, ಮೈಸೂರು

ವೃತ್ತಾಂತ ಪತ್ರಿಕೆ.

ಸರ್ ೧೯೦೫ ನೇ ಇಸವಿ ಮಾರ್ಚಿ ತಾ॥ ೨೩ ನೇ ಗುರುವಾರ

ಮೈಸೂರು ವಿದ್ಯಾಭ್ಯಾಸದ ಸಮಾಜವು

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುವುದಕ್ಕಾಗಿ ಕಳೆದ ಶುಕ್ರವಾರವೂ ಶನಿವಾರವೂ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮಿ॥ ಎಚ್ ಜೆ ಭಾಭಾ, ಎಂ ಎ ಯವರು ಅಧ್ಯಕ್ಷರಾಗಿ ನಿಂತು ಒಂದು ಸಭೆಯನ್ನು ನಡಿಸಿದರು ಈ ಸಭೆಗೆ ಮುಂದೆ ಹೇಳುವ ದೊಡ್ಡಮನುಷ್ಯರು ಹೋಗಿದ್ದರು

ಮೆ॥ ಗಳಾದ ಟಿ ಡೆನ್ಹಾಮ್, ಎಂ ಎ ಯವರು, ಆರ್. ಎಸ್ ಶೀಲ್ಲಿಯವರು, ಟಿ ಆರ್ ವೆಂಕಟಸಾಮಿ ನಾಯ್ಡು, ಬಿ ಎ. ಯವರು, ಸಿ ಕೃಷ್ಣರಾವ್, ಬಿ ಎ ಯವರು, ವಿ ಸುಬ್ರಹ್ಮಣ್ಯ ಐಯರ್, ಬಿ ಎ. ಯವರು, ಎಂ ಶ್ರೀನಿವಾಸರಾವ್, ಬಿ ಎ ಯವರು, ಕೆ ಎಸ್ ವೀರಭದ್ರಯ್ಯ, ಬಿ. ಎ ಯವರು ಎಚ್ ವಿ. ನಂಜುಂಡಯ್ಯ, ಎಂ ಎ, ಎಂ ಎಲ್ ಯವರು, ಎಂ ಶ್ರೀನಿವಾಸರಾವ್, ಎಂ ಎ, ಎಂ ಡಿ, ಬಿ ಎಸ್ ಸಿ ಯವರು, ಕೆ ಎಸ್ ಚಂದ್ರಶೇಖರ ಐಯರ್, ಬಿ ಎ, ಬಿ ಎಲ್ ಯವರು, ಎಂ ರಾಮರಾವ್, ಎಂ ಎ ಯವರು, ರೆವರೆಂಡ್ ಗಳಾದ ಡಿ ಎ ರೀಸ್ ಯವರು, ಇ ಪಿ ರೈಸ್, ಬಿ ಎ. ಯವರು, ಡಬ್ಲಿಯು. ಎಚ್ ಹಾರ್ಪ್ಸ್, ಬಿ ಎ ಯವರು, ಎಚ್ ಸ್ಪೆನ್ಸರ್, ಬಿ ಎ ಯವರು, ಮೆ॥ ಗಳಾದ ಕೆ ರಾಮಚಂದ್ರರಾವ್, ಬಿ ಎ. ಯವರು, ಎಂ ವೆಂಕಟಕೃಷ್ಣಯ್ಯನವರು ಸೀನಿಯರ್ ಕೌನ್ಸಿಲರ್ ಮೆ॥ ಸಿ ಶ್ರೀನಿವಾಸಯ್ಯಂಗಾರ್ರು ಎರಡನೆ ದಿನ ನಡೆದ ಸಮಾಜಕ್ಕೆ ಸ್ವಲ್ಪಹೊತ್ತು ದಯಮಾಡಿದ್ದರು

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಕ್ರಮಗಳನ್ನು ಕುರಿತು ಪರ್ಯಾಲೋಚನೆ ಮಾಡಿ ಚರ್ಚಿಸಿದ್ದೇ ಈ ಸಮಾಜದ ಮುಖ್ಯ ಕಾರ್ಯವಾಗಿರುತ್ತದೆ. ಆ ಕ್ರಮಗಳಲ್ಲಿ ವಿಶೇಷ ಭಾಗವನ್ನು ಮೆಂಬರುಗಳು ಚರ್ಚೆಮಾಡದೆ ಒಪ್ಪಿಕೊಂಡರು. ಆದರೆ ಯಾವ ಹುಡುಗನಾಗಲಿ ತನ್ನ ಸ್ವಭಾಷೆಯಲ್ಲಿ ಎರಡನೆಯ ಸ್ಟ್ಯಾಂಡರ್ಡ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದಕ್ಕೆ ಮೊದಲು ಇಂಗ್ಲಿಷ್ ಸ್ಕೂಲಿನ ಮೊದಲನೆಯ ತರಗತಿಗೆ ಸೇರಕೂಡದು ಎಂಬ ರೂಲನ್ನು ಕುರಿತು ಸಮಾಜದ ಮೆಂಬರುಗಳು ಮೊದಲನೆಯ ದಿನ ಸ್ವಲ್ಪ ದೀರ್ಘವಾಗಿ ಚರ್ಚೆ ಮಾಡಿದರು. ಈ ರೂಲನ್ನು ಬದಲಾವಣೆ ಮಾಡಿ, ಹುಡುಗನು ತನ್ನ ಸ್ವಭಾಷೆಯಲ್ಲಿ ಮೊದಲನೆ ಸ್ಟ್ಯಾಂಡರ್ಡ್ ತರಗತಿ ಕಳೆದ ಕೂಡಲೇ ಇಂಗ್ಲಿಷ್ ಕಲಿಯಬಹುದೆಂಬುದಾಗಿ ಕಾನೂನು ಮಾಡಬೇಕೆಂದು ಕೆಲವರು ಸೂಚಿಸಿದರು ಆದರೆ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ರವರು ಈ ಭಾಗದಲ್ಲಿ ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ ಮಕ್ಕಳ ತರಗತಿಯಿಂದ ಹಿಡಿದು ಮೆಟ್ರಿಕ್ಯುಲೇಷನ್ ವರೆಗೆ ಹತ್ತುವುದಕ್ಕೆ ಸರ್ಕಾರದವರು ಗೊತ್ತುಮಾಡಿರುವ ಕಾಲವು ದೀರ್ಘವಾಗಿಲ್ಲವೆಂತಲೂ ಇತರ ಆಧಿಪತ್ಯಗಳಲ್ಲಿ ಇಟ್ಟಿರುವುದಕ್ಕಿಂತಲೂ ಕಡಿಮೆಯಾಗಿರುತ್ತೆಂತಲೂ ಸಭಿಕರಿಗೆ ಪರಿಷ್ಕಾರವಾಗಿ ವಿವರಿಸಿ ಹೇಳಿದರು ಹುಡುಗರಿಗೆ ಸ್ವಭಾಷೆಯಲ್ಲಿ ಪರಿಷ್ಕಾರವಾದ ಅಭ್ಯಾಸವಾಗುವುದಕ್ಕೆ ಪ್ರತಿಕೂಲವಾದಂಥಾ ಯಾವ ಕಾರ್ಯವನ್ನೂ ಮಾಡಕೂಡದೆಂದು ಸಮಾಜದ ಮೆಂಬರುಗಳು ಒಪ್ಪಿಕೊಂಡರು ಮತ್ತು ಈ ವಿಷಯದಲ್ಲಿ ಈಗ ಜಾರಿಯಲ್ಲಿರುವ ಕ್ರಮವನ್ನು ಬದಲಾವಣೆ ಮಾಡಬೇಕಾದದಿಲ್ಲವೆಂದು ಬಹು ಮಂದಿ ಮೆಂಬರುಗಳು ಸಮ್ಮತಿಪಟ್ಟರು.

ಚೇಂಬರ್ಲಿನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು

11



ಶೀತ, ಕೆಮ್ಮು, ಗಂಟಲು ಗೂರನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಜಾಡ್ಯಗಳಿಗೆ ಈ ಔಷಧವು ಪ್ರಖ್ಯಾತಿಯಾಗಿರುತ್ತದೆ ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಾಗಿಯೂ ಸಂಪೂರ್ಣವಾಗಿಯೂ ಗುಣ ಕೊಡುವದು ಶೀತಹಿಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು, ಎದೆಯು ಒಣಗಿಹೋಗುವದು ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು ಇದರಿಂದ ರೋಗ ಸೂಚನೆಯು ಜಾಗ್ರತೆಯಾಗಿಯೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ ಕ್ರಯ ಶೀಸೆ ೧ಕ್ಕೆ ೧ ರೂ, ೨ ರೂ ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವ್ವುಂಟ್ ರೋಡ್,
ಮದರಾಸ್

ಇಂಡಿಯಾ ಗವರ್ನಮೆಂಟಿನವರು ಬಾಲಕರಿಗೆ ಪ್ರೈಮರಿ ಸ್ಟ್ಯಾಂಡರ್ಡ್ ಶಿಕ್ಷೆ ಕಳೆಯಿತೆನ್ನುವುದಕ್ಕೆ ಇನಸ್ಪೆಕ್ಟರ್ ಪರೀಕ್ಷೆ ಮಾಡಿ ಆದ ಮೇಲೆ ಮೆಟ್ರಿಕ್ಯುಲೇಷನ್ ಪರೀಕ್ಷೆಯ ತನಕ ಮಧ್ಯೆ ಯಾವ ಪರೀಕ್ಷೆಯನ್ನೂ ಇಡಕೂಡದೆಂದು ಸೂಚಿಸಿರುತ್ತಾರೆ ಈ ಸಲಹೆಯನ್ನು ರೂಢಿಗೆ ತರುವ ಪಕ್ಷದಲ್ಲಿ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಯನ್ನು ವಜಾ ಮಾಡಬೇಕಾಗುವುದು ಈ ಬದಲಾವಣೆಗೆ ಕಾರಣ ಹೇಳುವುದೇನೆಂದರೆ—ಚಿಕ್ಕ ಹುಡುಗರು ಪದಿನಾರನೆ ವಯಸ್ಸಿನಲ್ಲಿ ಪರೀಕ್ಷೆ ಕೊಡುವಷ್ಟು ದಾರ್ಢ್ಯವುಳ್ಳವರಾಗಿರುವುದಿಲ್ಲ, ಈ ಪರೀಕ್ಷೆಯಿಂದ ಅವರು ಕುರುಡುಬಾರ ಮಾಡಿ ಕೆಟ್ಟ ಅಭ್ಯಾಸಕ್ಕೆ ಬೀಳುತ್ತಾರೆ ಆದಕಾರಣ ಈ ಪರೀಕ್ಷೆಯನ್ನು ತೆಗೆದು ಹಾಕಬೇಕು ಎಂಬುದೇ ಆದರೆ ಮೈಸೂರಿನಲ್ಲಿ ಈ ಪರೀಕ್ಷೆಯ ಬಹು ಭಾಗವೆಲ್ಲಾ ಕನ್ನಡದಲ್ಲೇ ನಡೆಯುವುದು ಹುಡುಗರು ಕಷ್ಟಪಟ್ಟು ಅನ್ಯಭಾಷೆಯಲ್ಲಿ ಉತ್ತರಗಳನ್ನು ಬರೆಯಬೇಕಾದ ಅಗತ್ಯವೇನೂ ಇಲ್ಲ ಆದಕಾರಣ ಈಗಿರುವ ಲೋವರ್ ಸೆಕಂಡರಿ ಪರೀಕ್ಷೆಯನ್ನು ಯಥಾಪ್ರಕಾರ ನಡಿಸುತ್ತಾ ಬರುವುದೇ ಸಹಜವೆಂದು ಮೇಲ್ಕಂಡ ಸಮಾಜದವರು ತೀರ್ಮಾನ ಮಾಡಿರುತ್ತಾರೆ

ಮೈಸೂರು ಸಂಸ್ಥಾನದಲ್ಲಿರುವ ನಾನಾತರದ ಸ್ಕೂಲ್ ತರಗತಿಗಳಲ್ಲಿ ಬಾಲಕರಿಗೆ ಹೇಳಿಕೊಡಬೇಕಾದ ಪಾಠಗಳನ್ನು ಕುರಿತು ಅನೇಕವಾಗಿ ರೂಲ್ಸು ಮಾಡಿದಾರೆ ಪ್ರತಿ ತರಗತಿಯಲ್ಲೂ ಯಾವಯಾವ ಪುಸ್ತಕದಲ್ಲಿ ಎಷ್ಟೆಷ್ಟು ಭಾಗವನ್ನು ಮುಗಿಸಬೇಕೆಂಬುವುದನ್ನೂ ಪ್ರತಿ ವಾರವೂ ಯಾವಯಾವ ವಿಷಯಕ್ಕೆ ಎಷ್ಟೆಷ್ಟು ಗಂಟೆಗಳ ಹೊತ್ತು ವಿನಿಯೋಗಿಸಬೇಕೆಂಬುವುದನ್ನೂ ಕೂಡ ವಿಧಾಯಕಮಾಡಿರುತ್ತಾರೆ ಇದಲ್ಲದೆ ಈ ಕ್ರಮಗಳನ್ನೇ ಸಮಸ್ತ ಪಾಠಶಾಲೆಗಳಲ್ಲೂ—ಅಂದರೆ, ಗವರ್ನಮೆಂಟ್ ಮತ್ತು ಮ್ಯುನಿಸಿಪಲ್ ಸ್ಕೂಲುಗಳಲ್ಲೂ ಸರ್ಕಾರಿ ಗ್ರ್ಯಾಂಟು ಪಡೆಯುವ ಮತ್ತು ಗ್ರ್ಯಾಂಟುಪಡೆಯದೆ ಇರುವ ಸ್ಕೂಲುಗಳಲ್ಲೂ ರೂಢಿಸಬೇಕೆಂದೂ ವಿಧಿಸಿರುವರು, ಈ ಕ್ರಮಗಳನ್ನೆಲ್ಲಾ ನೋಡಿ ರೆವ್. ಇ. ಪಿ ರೈಸ್ ಯವರು—ಇಂಥಾ ಕ್ರಮಗಳು ಗವರ್ನಮೆಂಟ್ ಮತ್ತು ಮ್ಯುನಿಸಿಪಲ್ ಸ್ಕೂಲುಗಳಿಗೆ ಮಾತ್ರ ಅನ್ವಯಿಸುವ ಹಾಗೆ ಮಾಡಬೇಕೆಂತಲೂ, ಈ ಸಂಸ್ಥಾನದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪ್ರಾರಂಭ ಮಾಡಿದವರು ಪ್ರೈವೇಟ್ ಸ್ಕೂಲ್ ಮ್ಯಾನೆಜರುಗಳೇ ಹೊರತು ಸರ್ಕಾರಿ ಸ್ಕೂಲುಗಳಲ್ಲಿ ಪ್ರಾರಂಭವಾಗಲಿಲ್ಲವೆಂತಲೂ, ಇಷ್ಟೇ ಅಲ್ಲದೆ ವಿದ್ಯಾಭ್ಯಾಸದ ಕ್ರಮಗಳನ್ನು ಕಾಲಾನುಗುಣ್ಯವಾಗಿ ಬದಲಾವಣೆ ಮಾಡಿಕೊಂಡು ಬಂದಿರತಕ್ಕವರೂ ಗ್ರ್ಯಾಂಟು ಪಡೆಯುವ ಸ್ಕೂಲ್ ಮ್ಯಾನೆಜರುಗಳೇ ಆಗಿದಾರೆಂತಲೂ ತಿಳಿಸಿದರು ಈಗ ಗವರ್ನಮೆಂಟಿನವರು ಇಂಥಾ ಸ್ಕೂಲ್ ಮ್ಯಾನೆಜರುಗಳಿಗೆ—'ನಿಮ್ಮ ಸ್ಕೂಲುಗಳಲ್ಲಿ ಇಂಥಿಂಥಾ ವಿಷಯಗಳನ್ನೇ ಈ ಈ ಪ್ರಕಾರ ಬಾಲಕರಿಗೆ ಕಲಿಸಬೇಕು" ಎಂದು ವಿಧಿಸುವುದಾದ ಪಕ್ಷದಲ್ಲಿ ಅಂಥಾ ಮ್ಯಾನೆಜರುಗಳು ವಿದ್ಯಾಭ್ಯಾಸ ಕ್ರಮಗಳನ್ನು ಸಮಯಾನುಸಾರವಾಗಿ ಬದಲಾವಣೆ ಮಾಡಿಕೊಳ್ಳುವುದಕ್ಕಾಗಲಿ, ಇದರಿಂದುಂಟಾಗುವ ಫಲಗಳನ್ನು ಗವರ್ನಮೆಂಟಿನವರು ತಿಳಿದು ಸಹಾಯ ಹೊಂದುವುದಕ್ಕಾಗಲಿ ಅವಕಾಶವೇ ಇಲ್ಲದೆ ಹೋಗುವುದು ಆದಕಾರಣ ಗವರ್ನಮೆಂಟಿನಿಂದ ಸಹಾಯ ಹೊಂದುವ ಪಾಠಶಾಲೆಗಳಲ್ಲಿ ಮ್ಯಾನೆಜರುಗಳು ಸರ್ಕಾರದ ವಿಧಿಗನುಸಾರವಾದ ಪಾಠಗಳನ್ನೇ ನಡಸಬೇಕೆಂಬ ವಿಧಿಯನ್ನು ಸ್ವಲ್ಪ ಮಟ್ಟಿಗೆ ತಪ್ಪಿಸಿ, ಅಂಥಾ ಮ್ಯಾನೆಜರುಗಳಿಗೆ ಅನುಕೂಲ ತೋರುವ ಪ್ರಕಾರ ಬದಲಾವಣೆ ಮಾಡಿಕೊಳ್ಳುತ್ತಾ ಬರುವುದಕ್ಕೆ ಅವಕಾಶ ಕೊಡಬೇಕೆಂಬುದಾಗಿ ಮಿ ರೈಸ್ ಯವರು ಕೇಳಿಕೊಂಡರು ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ರವರು ಈಗ ಪಾಠಕ್ರಮಗಳನ್ನು ಬದಲಾವಣೆ ಮಾಡಿರುವದು ಸರ್ವೋತ್ತಮವಾಗಿದೆ ಇದಕ್ಕಾಗಿ ಗ್ರ್ಯಾಂಟ್ ಸ್ಕೂಲುಗಳ ಮ್ಯಾನೆಜರುಗಳು ಇನಸ್ಪೆಕ್ಟರ್ ಜನರಲ್ ರವರಿಗೆ ತುಂಬಾ ಕೃತಜ್ಞರಾಗಿರುತ್ತಾರೆ ಮತ್ತು ಸಾಧ್ಯವಾದಾಗಲೆಲ್ಲಾ ಮ್ಯಾನೆಜರುಗಳು ಸಾಮಾನ್ಯವಾಗಿ ಈ ಕ್ರಮಗಳಂತೆಯೇ ಪಾಠಪ್ರವಚನಗಳನ್ನು ನಡಸಲು ಬಹು ಸಂತೋಷಪಡುವರು ಎಂಬುದಾಗಿಯೂ ಮೆ॥ ರೈಸ್ ಯವರು ತಿಳಿಸಿದರು ಆದರೆ ಇವರ ಅಭಿಪ್ರಾಯವನ್ನು ಸಮಾಜದ ಮೆಂಬರುಗಳು ಒಪ್ಪಿಕೊಳ್ಳಲಿಲ್ಲ. ಆಗ ಆ ಜನ ಮೆಂಬರುಗಳು ಒಂದು ಕಾಗದಕ್ಕೆ ರುಜು ಹಾಕಿ ಮೇಲ್ಕಂಡ ತಮ್ಮ ಅಭಿಪ್ರಾಯಗಳನ್ನು ಗವರ್ನಮೆಂಟಿನವರ ಪರ್ಯಾಲೋಚನೆಗೆ ತರಬೇಕೆಂದು ಗೊತ್ತು ಮಾಡಿದರು

ವಿವೇಕಿಗಳಾಗಿಯೂ ಆಲೋಚನಾಪರರಾಗಿಯೂ ಇರುವಂಥಾ ವಿದ್ವಾಂಸರೆಲ್ಲಾ ಈ ವಿಷಯವನ್ನು ಕುರಿತು ಯೋಚಿಸಬೇಕಾಗಿದೆ ಈಗ ಹೇಳುವ ಹೊಸ ಮದಂತೆಯೇ ಸಮಸ್ತ ಪಾಠಶಾಲೆಗಳಲ್ಲೂ ಪಾಠ ಪ್ರವಚನಗಳು ನಡೆಯಬೇಕೆಂಬುದಾಗಿ ಗವರ್ನಮೆಂಟಿನವರು ಬಲಾತ್ಕಾರ ಮಾಡುವುದಾದರೆ ಈ ಸಂಸ್ಥಾನದ ಸಮಸ್ತ ಪಾಠಶಾಲೆಗಳೂ ಏಕರೂಪವನ್ನು ಪಡೆಯುವವು ಕೆಲವು ಈ ಹಿಂದುಸ್ಥಾನದ ಪಾಠಶಾಲೆಗಳಲ್ಲಿ ಸಾಮಾನ್ಯ ವಿದ್ಯೆಯನ್ನು ಕಲಿಸುವುದರ ಜೊತೆಗೆ ದೇಹವನ್ನು ದಂಡಿಸುವ ಶಿಕ್ಷಣವನ್ನೂ ಕಲಾಕೌಶಲ್ಯಗಳನ್ನೂ ಒಂದೇ ಕಡೆ ಹೇಳಿಕೊಡಬೇಕೆಂದು ಅಭಿಪ್ರಾಯಪಡುತ್ತಾರೆ ಆದರೆ ಮೈಸೂರು ಸಂಸ್ಥಾನದಲ್ಲಿ ಇಂಥಾ ಪ್ರಯತ್ನಕ್ಕೆ ಅವಕಾಶ ಇರದದಿಲ್ಲ. ಯಾಕಂದರೆ ಗವರ್ನಮೆಂಟಿನವರು ಈಗ ವಿಧಿಸಿರುವ ಕಾನೂನಿನಲ್ಲಿ ಇಂಥಾ ಬದಲಾವಣೆಗೆ ಅವಕಾಶವನ್ನೇ ಕಲ್ಪಿಸಿರುವುದಿಲ್ಲ ಮಿ ಭಾಭಾಯವರು ಈಗ ವಿಧಿಸಿರುವ ಪ್ರಕಾರ ಹೆಡ್ ಮಾಸ್ಟರುಗಳು ಪ್ರತಿ ಪಾಠಕ್ಕೂ ಇಷ್ಟೇ ಹೊತ್ತು ವಿನಿಯೋಗಿಸಬೇಕೆಂಬುದನ್ನು ಅನುಸರಿಸಬೇಕಾದದ್ದಿಲ್ಲವೆಂದು ಹರಾ ಬರೆದಿರುವುದನ್ನು ಒಪ್ಪಿಕೊಂಡದ್ದಲ್ಲದೆ, ಸಹಾಯ ಹೊಂದುವ ಪಾಠಶಾಲೆಗಳಲ್ಲಿ ಮ್ಯಾನೆಜರುಗಳು ವಿದ್ಯಾರ್ಥಿಗಳಿಗೆ ಶಕ್ತಿ ವಿಚಾರದ ಬೋಧನೆಯನ್ನು ಮಾಡಬಹುದೆಂದೂ ಇದಕ್ಕೆ ಈಗ ಮಾಡಿರುವ ರೂಲಿಸು ವಿರೋಧವಾಗಿಲ್ಲವೆಂದೂ ಹೇಳಿದರು. ಈ ಪಾಠಶಾಲೆಗಳಿಗೆ ಸರ್ಕಾರದವರು ಕೊಡುವ ದ್ರವ್ಯವು ಬಹಳ ಸ್ವಲ್ಪ ಮಾತ್ರವೇ ಆಗಿರುವುದು ಹೀಗಿರುವಲ್ಲಿ ಇಂಥಾ ಸ್ಕೂಲ್ ಮ್ಯಾನೆಜರುಗಳು ಹುಡುಗರ ಶಿಕ್ಷಣಕ್ಕೆ ತಕ್ಕಂತೆ ಆಗಿಂದಾಗ್ಯೆ ಬದಲಾವಣೆಗಳನ್ನು

ಕೊಳ್ಳುವುದರಲ್ಲಿ ಅವರಿಗೆ ಸ್ವತಂತ್ರವನ್ನು ವಹಿಸಿ, ಸ್ವಲ್ಪ ಕಟ್ಟಿಗೆ ಮಾತ್ರ ಸರ್ಕಾರದವರು ಮೇಲ್ವಿಚಾರಣೆ ನೋಡಿಕೊಳ್ಳುವುದು ಸಹಜವಾಗಿರುವಂತೆ ಕಾಣುತ್ತದೆ.

ಈ ಸಮಾಜದಲ್ಲಿ ನಡೆದ ಇತರ ವಿಷಯಗಳನ್ನು ಕುರಿತು ಇನ್ನೊಂದು ವೇಳೆ ಪ್ರಸ್ತಾಪಮಾಡುವೆವು.

ಬಹುದೇಶದ ವೃತ್ತಾಂತಗಳು

ಕಳೆದ ಭಾನುವಾರ ಶ್ರೀಮನ್ಮಹಾರಾಜರವರು ಮೋಟಾರ್ ಕಾರ್ ಎಂಬ ಗಾಡಿಯಲ್ಲಿ ಕೋಲಾರ ಚಿನ್ನದ ಗಣಿಗೆ ದಯಮಾಡಿದ್ದರು. ಅವರ ಸಂಗಡ ಕೆಲವು ಅರಸುಗಳೂ ಹೋಗಿದ್ದರು.

❖❖❖❖

ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಕಳೆದ ಗುರುವಾರ ಮಧ್ಯಾಹ್ನ ಪರಿವಾರ ಸಹಿತ ರಾಜಧಾನಿಗೆ ದಯಮಾಡಿದರು. ಈ ವಾರವೆಲ್ಲಾ ಅವರು ಇಲ್ಲೇ ಇರುತ್ತಾರೆಂದು ತಿಳಿದು ಬಂದಿದೆ.

❖❖❖❖

ಮೈಸೂರು ಇಂಜನಿಯರ್ ಇಲಾಖೆಯ ನೌಕರರಾಗಿದ್ದ ಮಿ॥ ಜೆ. ಸಿ. ಹಂಟರ್ ಯವರಿಗೆ ಕಾಶ್ಮೀರ ಸಂಸ್ಥಾನದಲ್ಲಿ ಇಂಜನಿಯರ್ ಕೆಲಸವಾಯಿತು. ಅವರು ಕಳೆದ ಶನಿವಾರ ಅಲ್ಲಿಗೆ ಪ್ರಯಾಣ ಮಾಡಿದರು.

❖❖❖❖

ಮಿ॥ ಹಾಜಿ ಇಸ್ಮೈಲ್ ಸೇಟರವರು ಕೃಷ್ಣರಾಜಪುರದ ಗಣಿಯ ಚಿನ್ನವನ್ನು ತೆಗೆಯುವುದಕ್ಕೆ ಮೈಸೂರ್ ಗವರ್ನಮೆಂಟಿನಿಂದ ಗುತ್ತಿಗೆ ಪಡೆದುಕೊಂಡಿದ್ದಾರೆ. ಈ ಗಣಿಯು ೧೮೯೮ ರಲ್ಲಿ ೧೨ ಲಕ್ಷ ರೂಪಾಯಿಗೆ ಬಿಕರಿ ಆಗಿತ್ತು.

❖❖❖❖

ಗಣಪತಿ ಐಯರೆಂಬ ಹುಡುಗನ ಮೇಲೆ ಮದರಾಸ ಯೂನಿವರ್ಸಿಟಿ ಯವರು ತಂದಿದ್ದ ಫೋರ್ಜರಿ ಮೊಕದ್ದಮೆಯನ್ನು ಇಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ರಾಮಸ್ವಾಮಯ್ಯನವರು ವಜಾಮಾಡಿ, ಈ ಅಪರಾಧಕ್ಕೆ ಶಿಕ್ಷೆಯಿಲ್ಲವೆಂದು ಗಣಪತಿ ಐಯರನ್ನು ಬಿಟ್ಟುಬಿಡುವಂತೆ ತೀರ್ಮಾನ ಹೇಳಿದರು.

❖❖❖❖

ಬೊಂಬಾಯಿ ಪಟ್ಟಣದ ವಿಕ್ಟೋರಿಯಾ ಜೂಬಿಲಿ ಇನ್ಸ್ಟಿಟ್ಯೂಟು ವಿದ್ಯಾಶಾಲೆಯಲ್ಲಿ ಕೈಗಾರಿಕೆಯನ್ನು ಕಲಿಯುತ್ತಿರುವ ಮೈಸೂರಿನ ೪ ಜನ ವಿದ್ಯಾರ್ಥಿಗಳಿಗೂ ಇನ್ನೊಂದು ವರುಷದ ತನಕ ತಲಾ ೨೦ ರೂಪಾಯಿ ವೇತನವನ್ನು ಕೊಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ.

❖❖❖❖

ಅರಸೀಕೆರೆ ರೈಲ್ವೆ ಸ್ಟೇಷನ್ನಿನಲ್ಲಿ ಕೆಲವು ತಿಂಗಳ ಕೆಳಗೆ ಪ್ಲೇಗ್ ಪ್ರಾರಂಭವಾದಾಗ ರೈಲ್ವೆ ಏಜಂಟರು ಅಲ್ಲಿಗೆ ಹೋಗಿ ಸ್ಟೇಷನ್ ನೌಕರರಿಗೆಲ್ಲಾ ಮುತುವರ್ಜಿಯಿಂದ ಕೆಲಸಮಾಡಿದರೆ ಬಹುಮಾನ ಕೊಡುತ್ತೇನೆಂದು ನಾಗ್ದಾನ ಮಾಡಿದರು. ನೌಕರರು ಅದೇ ಪ್ರಕಾರ ಕೆಲಸಮಾಡಿದರೆ ತುಂಬಾ ಶ್ರದ್ಧೆಯಿಂದ ಪ್ರಜೆಗಳಿಗೆ ಸಹಾಯಮಾಡಿದರು. ಈಗ ಸರ್ಕಾರದವರು ಅವರಿಗೆಲ್ಲಾ ಒಂದೊಂದು ತಿಂಗಳ ಸಂಬಳವನ್ನು ಇನಾಂ ಕೊಡತಕ್ಕದ್ದೆಂದು ಸ್ಯಾಂಕ್ಷನ್ ಮಾಡಿದ್ದಾರೆ.

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ವಿಳಾಸಕ್ಕೆ ಬರೆಯುವ ಕಾಗದಕ್ಕೆ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

ಮಿ॥ ರಾಮಜಿ ಕೃಷ್ಣಮೂರ್ತಿರವರ ವಿಳಾಸವಾಗಲಿ, ಅವರು ಕೊಡುವ ವೇತನಗಳ ವಿಚಾರವಾಗಲಿ ನಮಗೆ ಚೆನ್ನಾಗಿ ತಿಳಿದು ಬಂದಿಲ್ಲ.

ಮೂಡಿಗೆರೆ ಶೇಷಗಿರಿರಾಯರು —ನೀವು ಹೇಳುವ ವಿಚಾರವು ಸ್ವರ್ಗದ ಆಚಾರವಿಚಾರಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಇಂಥ ಬಾತ್ಮಿಗಳನ್ನು ನಾವು ಪ್ರಕಟಿಸಲಾರೆವು. ನಿಮಗೆ ಪರಿಹಾರಾಪೇಕ್ಷೆ ಇದ್ದಲ್ಲಿ ಅದೇ ವಿಷಯವನ್ನು ಕುರಿತು ಮಠಪತಿಗಳಿಗೂ ಅಧಿಕಾರಿಗಳಿಗೂ ಬರೆದುಕೊಳ್ಳತಕ್ಕದ್ದು.

ಕರೆಸ್ಪಾಂಡೆನ್ಸ್

ಆಗುಂಬೆ ಬಡವರ ಕಷ್ಟಗಳು.

ಅಯ್ಯಾ,

ತಮ್ಮ ತಾರೀಖು ೯ ನೇ ಫೆಬ್ರವರಿಯ ವೃತ್ತಾಂತಪತ್ರಿಕೆಯಲ್ಲಿ ಆಗುಂಬೆ ಬಡವರ ಕಷ್ಟಗಳಿಗೆ ಕಾರಣವಾದ ಚನ್ನಗಿರಿ ಸಾಹುಕಾರರನ್ನು ಫಾಯಿಷ್ ಮಾಡಿದ್ದಿರಿ. ಆದರೆ ಈ ಸಾಹುಗಳು ಉಂಬೆ ಫಿರ್ಕಾ ಸಾಹುಕಾರರ ವಸೂಲೀ ಚೀಟಿಯನ್ನು ತೆಗೆದು ಕೊಳ್ಳತಕ್ಕೇನೋ ನಿಜ. ಇವರು ಇತರವರಿಗೂ ಒಬ್ಬರಿಗೆ ಸಹ ಕೆಟ್ಟವನ್ನಾಗಲಿ, ಒಂದು ಬೈಗಳವನ್ನಾಗಲಿ, ಈ ಬಡಜನಗಳ ಮೇಲೆ ಪ್ರಯೋಗ ಮಾಡಲಿಲ್ಲ. ಹಾಗಾದರೆ ಸಾಲವನ್ನು ಕೊಟ್ಟ ಸಾಹುಕಾರರು ಕೂಳಗಳ ಹತ್ತಿರ ತಮ್ಮ ಹಣವನ್ನು ವಸೂಲು ಮಾಡಬಾರದೆಂದು ರೂಲ್ಸಿಂದಲೋ ಇಲ್ಲವೋ ಗೊತ್ತಾಗಲಿಲ್ಲ. ಸರ್ಕಾರಿ ಮೂಲಕ ದಾವಾ ತಂದು, ಈ ಬಡಜನಗಳ ಹತ್ತಿರ ವಸೂಲು ಮಾಡಬಹುದೆಂದು ತಮ್ಮ ಪತ್ರಿಕೆಯಲ್ಲಿ ಫಾಯಿಷ್ ಮಾಡಿದ್ದಿರಿ. ಹಾಗಾದರೆ ರಿಯಾಯಿತಿಯಿಂದ ಬಡಜನಗಳ ಹತ್ತಿರ ಸಾಲವನ್ನು ಕೇಳುವದು ಮೇಲೋ? ಇಲ್ಲವೇ, ದಾವಾ ತಂದು ಕೋರ್ಟುಖರ್ಚು ವಗೈರೆ ಬಡಜನಗಳ ಮೇಲೆ ಹಾಕಿ ಬಂದಕ್ಕೆರಡಾಗಿ ವಸೂಲು ಮಾಡುವದು ಮೇಲೋ? ರಿಯಾಯಿತಿಯಿಂದ ಕೇಳುವದೇ ಮೇಲಲ್ಲವೋ? ಹಾಗಾದರೆ ಈ ಸಾಹುಕರು ಏನು ತಪ್ಪಾಯಿತು? ಇವರು ಆ ಜನಗಳನ್ನು ಹೊಡೆದು ಹೆದರಿಸುತ್ತಾರೆಂಬುವದೊಂದಲ್ಲವೋ? ಈ ಊರಿನಲ್ಲಿ ಯಾರಿಗೆ ಹೊಡೆದಿದ್ದಾರೆ? ಹಾಗೆ ಹೊಡೆದಿದ್ದು ಇದ್ದರೆ ಈ ಬಾತ್ಮಿಯನ್ನು ಕೊಟ್ಟಂಥಾ ಬಾತ್ಮೀದಾರರು ರುಜುವಾತು ಪಡಿಸಿಕೊಡಬಲ್ಲರೋ? ಈಗ ೮—೯ ತಿಂಗಳ ಹಿಂದೆ ಆಗುಂಬೆಯಲ್ಲಿ ಒಬ್ಬ ಹೆಂಗಸನ್ನು ಅನ್ಯಾಯವಾಗಿ ಸಾಲ ಕೊಡು ಎಂಬದಾಗಿ ಹೇಳಿ ಅಕ್ರಮ ನಡೆಸಿದ್ದು ಈ ಚನ್ನಗಿರಿ ಸಾಹುಕರು ಬೇರೇ ಅಲ್ಲ. ಅಂಥಾ ಮಹಾ ಪುರುಷರು ಈ ಊರಿನವರೇ ಆಗಿದ್ದಾರೆ.

ಎನ್. ಎಸ್. ತಮ್ಮಣ್ಣಹೆಗ್ಗಡೆ.

ಚಾಮರಾಜನಗರದ ವಿಷಯಗಳು

ಅಯ್ಯಾ,

ಈ ತಾಲ್ಲೂಕು ಮುಖ್ಯವಾದ ತಾಲ್ಲೂಕುಗಳಲ್ಲಿ ಒಂದಾಗಿದೆ. ಇಂಥಾ ದೊಡ್ಡ ಊರಿನಲ್ಲಿ ೩೦ ಲಾಂದ್ರ ಕಂಬಗಳಿರುತ್ತವೆ. ಇದರಲ್ಲಿ ಕೆಲವನ್ನು ಹತ್ತಿಸುವದೇ ಇಲ್ಲ. ಈ ಊರಿನ ದೇವಾಂಗದ ಬೀದಿಯಲ್ಲಿ ವೆಂಕಣ್ಣನವರ ಮನೆಯ ಹತ್ತಿರ ಪುರುಷೋತ್ತಮಳ ಕಟ್ಟೆ ಭಾವಿ ಬಳಿ ಇರುವ ಲಾಂದ್ರ ಕಂಬವನ್ನು ಎರಡು ಮೂರು ತಿಂಗಳಿಂದ ಹತ್ತಿಸುವದೇ ಇಲ್ಲ. ಕಾರಣವೇನೆಂದು ವಿಚಾರಿಸುವಲ್ಲಿ ನೌಕರನು ಚಿಮಣಿಯು ಒಡೆದು ಹೋಯಿತು. ಗುತ್ತಿಗಾರರನ್ನು ಕೇಳಿದರೆ ಉತ್ತರವನ್ನೇ ಕೊಡುವುದಿಲ್ಲವೆಂದು ಹೇಳಿದನು. ಈ ವಿಷಯದಲ್ಲಿ ಗುತ್ತಿಗಾರರನ್ನು ಕೇಳಲು ಚಿಮಣಿಗಳು ಚೋರಿಯಾಗುತ್ತವೆ. ಹೀಗೆ ಚೋರಿ ಆದರೆ ನಾವು ಹತ್ತಿಸುವದಕ್ಕೆ ಆಗಲಾರದೆಂದು ಹೇಳುತ್ತಾರೆ. ಇವರಲ್ಲಿ ಯಾರ ಮಾತನ್ನು ನಂಬುವುದೋ ವಾಚಕರೇ ಊಹಿಸಿ. ಈ ಬಾವಿಯು ಸರ್ವಜನೋಪಕಾರಕ್ಕಾಗಿ ಧರ್ಮದಾರ್ಗಳಿಂದ ತೆರೆಯಲ್ಪಟ್ಟು ಸಮಸ್ತರಿಗೂ ಉಪಯುಕ್ತವಾಗಿದೆ. ಅಲ್ಲದೆ ರಾತ್ರಿ ವೇಳೆ ಕೆಲವರು ಬಡವರಾಗಿ ನೀರಿಗೆ ಬರುತ್ತಾರೆ. ಇಂಥಾ ಸ್ಥಳದಲ್ಲೇ ದೀಪವಿಲ್ಲದ ಮೇಲೆ ಏನು ಪ್ರಯೋಜನ? ಇನ್ನು ಮೇಲಾದರೂ ನಮ್ಮ ಮ್ಯುನಿಸಿಪಾಲಿಟಿಯವರು ಈ ವಿಷಯಕ್ಕೆ ಗಮನಿಸಿ ಭಾವಿ ಬಳಿ ಇರುವ ಬಚ್ಚಲು ವಗೈರೆಗಳನ್ನು ತೆಗೆದುಹಾಕುವ ಹಾಗೆ ಮಾಡಿ, ಭಾವಿಯ ಬಳಿ ಬೆಳಕನ್ನುಂಟುಮಾಡುತ್ತಾರೆಂದು ನಂಬುತ್ತೇನೆ.

ಈ ಟವುನ್ನಿನಲ್ಲಿ ಅನೇಕ ಗಾಡಿಗಳು ರಾತ್ರಿ ಕಾಲದಲ್ಲಿ ಸಂತೆ ಮೊದಲಾದ ಸ್ಥಳಗಳಿಗೆ ತಿರುಗಾಡುತ್ತವೆ. ಅವುಗಳಲ್ಲಿ ಒಂದಕ್ಕಾದರೂ ಲಾಂದ್ರ ಇರುವದಿಲ್ಲ. ನಮ್ಮ ಮ್ಯುನಿಸಿಪಾಲಿಟಿಯವರು ಇದಕ್ಕೆ ತಕ್ಕ ಬಂದೋಬಸ್ತು ಮಾಡಿ, ಲಾಂದ್ರ ಇಲ್ಲದ ಗಾಡಿಗಳನ್ನು ರಾತ್ರಿ ಕಾಲದಲ್ಲಿ ಟವುನ್ನೊಳಕ್ಕೆ ಬಿಡಕೂಡದ ಹಾಗೆ ಮಾಡಿದರೆ ತುಂಬಾ ಅನುಕೂಲ.

ಇಲ್ಲಿಗೂ ಮತ್ತು ತಿರುಮಕೂಡ್ಲು ನರಸೀಪುರಕ್ಕೂ ಇರುವ ರಸ್ತೆಯು ಬಹಳ ಕೆಟ್ಟು ಹೋಗಿರುತ್ತೆ. ಸಂತೆ ಮರಿವಿಗೂ ಅಂದರೆ ೯ ಮೈಲಿಗಳ ವರಿಗೂ ಅಡ್ಡಡ್ಡಲಾಗಿ ಹರಿಯುವ ಹಳ್ಳಗಳು ಈ ಬೇಸಿಗೆಯಲ್ಲೇ ಪ್ರಯಾಣಕ್ಕೆ ತುಂಬಾ ಅಡಚಣೆಯಾಗಿರುತ್ತೆ. ಮಳೆಗಾಲದಲ್ಲಂತೂ ಹೇಳಲಸಾಧ್ಯ. ಇದಕ್ಕೆ ನಮ್ಮ ಸರ್ಕಾರದವರಿಗೆ ಯಾವಾಗ ದಯ ಬರುತ್ತೋ ಕಾಣೆನು.

ಇಲ್ಲಿನ ನೆಯ್ಗೆಯವರ ಸ್ಕೂಲು ಬಹಳ ಹೀನಸ್ಥಿತಿಗೆ ಬಂದಿತ್ತು. ಈಚೆಗೆ ನೂರ್ನಾರಾಯಣರಾಯರು ಹೆಡ್ಮಾಸ್ಟರಾಗಿ ಕೆಲಸ ನೋಡುತ್ತಿರುವರೆ. ಇವರು ಚೆನ್ನಾಗಿ ಪಾಠ ಹೇಳುವುದರಿಂದಲೂ ಹುಡುಗರ ತಂದೆತಾಯಿಗಳಿಗೆ ಉತ್ತೇಜನ ಕೊಟ್ಟು ಪ್ರೀತಿ ಸಂಪಾದಿಸಿರುವದರಿಂದಲೂ ಸ್ಕೂಲು ಈಗ ಅಭಿವೃದ್ಧಿಸ್ಥಿತಿಯಲ್ಲಿದೆ.

ನಿನ್ನೆ ತಾ ೧೬ ನೇ ಗುರುವಾರ ಮೈಸೂರಿಂದ ಪ್ರಯಾಣ ಮಾಡಿಕೊಂಡು ಇಲ್ಲಿಗೆ ಬರುತ್ತಿದ್ದ ಇದೇ ಸ್ಥಳ ನಿವಾಸಿಗಳಾದ ಆರ್ಯ ವೈಶ್ಯ ನಂಜುಂಡಶೆಟ್ಟಿ, ಅವನ ತಾಯಿ, ಮಗನನ್ನು ಕಳ್ಳರು ಈ ಊರಿಗೆ ೨ ಮೈಲಿ ಫಾಸಲೆ ಇರುವ ಉಪ್ಪಹಳ್ಳದ ಸೇತುವೆಯ ಹತ್ತಿರ ಹೊಡೆದು, ಪೂರಾ ಘಾಯ ಮಾಡಿ ಓಡಿಹೋದರು. ಸುಮಾರು ೨೦—೨೫ ರೂಪಾಯಿನಷ್ಟು ಹೋಯಿತು. ಅವರು ಈಗ ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಿದ್ದಾರೆ. ಸರ್ಕಾರದ ಭಯವಿಲ್ಲದೆ, ಜನರು ಬಹಳ ಕೊಬ್ಬುತ್ತಿದ್ದಾರೆ. ಕೆಲವು ದಿವಸಗಳ ಹಿಂದೆ ಇದೇ ರಸ್ತೆಯಲ್ಲಿ ಧಕಾಯಿತಿ ನಡೆದದ್ದು ಇನ್ನೂ ಜನರಿಗೆ ಮರೆತಿಲ್ಲ. ಇಂಥಾದ್ದರಲ್ಲಿ ಈ ಹಿಂಸೆಯು ಜ್ಞಾಪಕಕ್ಕೆ ಬಂದರೆ ಗಾಯಕ್ಕೆ ಕಚ್ಚಿ ಹಾಕಿದಂತಾಗಿದೆ. ಸರ್ಕಾರದವರ ಕಾಯಿದೆಯು ಹೆಚ್ಚಾದ ಹಾಗೆಲ್ಲಾ ಧಕಾಯಿತಿಯೂ ಹೆಚ್ಚಾಯಿತೆಂದು ಹೇಳುತ್ತಿದ್ದಾರೆ.

ಈ ಊರಿನಲ್ಲಿ ಪೋಲೀ ನಾಯಿಗಳು ಹೆಚ್ಚಿವೆ. ಅಲ್ಲದೆ ಸಾಕುವವರು ತಮ್ಮ ನಾಯಿಗಳನ್ನು ಹಗಲು ಕಟ್ಟಹಾಕದೆ ಬಿಟ್ಟುಬಿಡುತ್ತಾರೆ. ಅವು ಹಾದಿಯಲ್ಲಿ ತಿರುಗಾಡುವವರನ್ನೆಲ್ಲಾ ಕಚ್ಚಿ ತೊಂದರೆಪಡಿಸುತ್ತವೆ. ಈಗಾಗಲೇ ಕೆಲವರಿಗೆ ಕಚ್ಚಿ ಗಾಯಗಳು ಮಾಡಿವೆ. ನಮ್ಮ ಮ್ಯುನಿಸಿಪಾಲಿಟಿಯವರು ತುಂಬಾ ಕೇಡು ಸಂಭವಿಸುವದಕ್ಕಿಂತ ಮುಂಚಿತವಾಗಿ ಬಂದೋಬಸ್ತು ಮಾಡಿದರೆ ಬಹಳ ಅನುಕೂಲ.

ಸಿ. ವಿ. ಆರ್.

ಶ್ರೀಮನ್ಮಹಾರಾಜರವರಿಗೆ ಅರ್ಜಿ.

ಅಯ್ಯಾ,

ಈ ಕೆಳಗಿನ ವಿಜ್ಞಾಪನೆಯನ್ನು ಪ್ರಕಟಿಸಿ ತಮ್ಮನ್ನು ಉಪಕರಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಚರಣಸನ್ನಿಧಾನಂಗಳಲ್ಲಿ ವಿಜ್ಞಾಪನೆಗಳು.—

ಮಹಾಸ್ವಾಮಿ, ೧೮೯೯ ನೇ ಇಸವಿ ಜನವರಿ ತಿಂಗಳಲ್ಲಿ ಪ್ಲೇಗ್ ಜಾಡ್ಯದಿಂದ ಅನೆಕಲ್ ಟವುನಿನಲ್ಲಿ ಮೃತಪಟ್ಟ ಕಸಬಾ ರಾಮಣ್ಣನೆಂಬಾತನು ತನ್ನ ಮರಣ ಕಾಲದ ಮೊದಲು ದಿವಸವೇ ತನ್ನ ಯಾವದ್ವಿಶಿಷ್ಟ ಆಸ್ತಿಯು ಖಾಸಾ ಭಾವಮೈದನಾದ ಹೊಸಕೋಟೆ ತಾಲ್ಲೂಕು ಕತ್ತಲೂರಿನಲ್ಲಿರುವ ಸುಬ್ರಾಯಪ್ಪನಿಗೆ ಸಲ್ಲತಕ್ಕದ್ದೆಂದು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ಟಪ್ಪಾಲ್ ರಿಜಿಸ್ಟರು ಮೂಲಕ ಜಾಹಿರು ಮಾಡಿಕೊಂಡ ವಿಲ್ ಅರ್ಜಿಯ ಕ್ರಮ ಎಂತೆಂದರೆ—ತನ್ನ ಮನೆಯಲ್ಲಿ ಪ್ಲೇಗಿನಿಂದ ತನ್ನ ಹೆಂಡತಿ ಮತ್ತು ತನ್ನ ಅಕ್ಕ ಅಷ್ಟರೂ ಮೃತಪಟ್ಟಿರುತ್ತಾರೆ. ಈಗ ತನಗೂ ಪ್ಲೇಗ್ ರೋಗ ಸಂಭವಿಸಿರುತ್ತೆ. ಆದುದರಿಂದ ತನ್ನ ಚರ ಸ್ಥಿರ ಆಸ್ತಿ ಯಾವದ್ವಿಶಿಷ್ಟ ಆಯುಷ್ಯದಲ್ಲಿ ನಾಲ್ಕನೇ ಭಾಗ ತಮ್ಮ ಹಿರಿಯರು ಪ್ರತಿಷ್ಠಿಸಿರತಕ್ಕ ಶ್ರೀಗಂಗಾಧರೇಶ್ವರ ಸ್ವಾಮಿಯ ದೇವಾಲಯಕ್ಕೂ ಉಳಿದ ಆಸ್ತಿಯಲ್ಲಿ ತನ್ನ ಮತ್ತು ತನ್ನ ಹೆಂಡತಿಯ ಉತ್ತರಕ್ರಿಯಾದಿಗಳಿಗೆ ಖರ್ಚು ನಿಂತ ಆಸ್ತಿ ಯಾವತ್ತೂ ತನ್ನ ಖಾಸಾ ಭಾವಮೈದನಾದ ಕತ್ತಲೂರು ಸುಬ್ರಾಯಪ್ಪನಿಗೆ ಸಲ್ಲತಕ್ಕದ್ದೆಂದು ತನ್ನ ಸ್ವಹಸ್ತದಿಂದ ರುಜು ಮಾಡಿ ಅರ್ಜಿಯನ್ನು ಗುಜರಾಯಿಸಿಕೊಂಡನು. ಈ ಅರ್ಜಿಯ ಮೇಲೆ ಆಗಿನ ಬೆಂಗಳೂರು ಡೆಪ್ಯುಟಿ ಕಮಿಷನರವರಾಗಿದ್ದ ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟರವರು ಇದರ ಫೈಸಲಾತಿಯ ಬಗ್ಗೆ ಅಮಲ್ದಾರ್ರವರಿಗೆ ರವಾನಿಸಿದ ಆರ್ಡರು ಏನೆಂದರೆ—ಕಸಬಾ ರಾಮಣ್ಣ ತಾನು ಪ್ಲೇಗು ವ್ಯಾಧಿಯಿಂದ ಮೃತಪಡುವನಾಗಿ ತನ್ನ ಹೆಸರಿನ ಪಟ್ಟೆ ಕತ್ತಲೂರು ಸುಬ್ರಾಯಪ್ಪನ ಹೆಸರಿಗೆ ಮಾಡಲು ಫೈಸಲ್‌ಬಗ್ಗೆ ನಿಮ್ಮಲ್ಲಿಗೆ ಕಳುಹಿಸಿದೆ ಎಂದು ಅಪ್ಪಣೆ ಮಾಡಿ, ಸದರಿ ಅರ್ಜಿಯನ್ನು ಆಗಿನ ಆನೆಕಲ್ ತಾಲ್ಲೂಕು ಅಮಲ್ದಾರ್ರವರಾಗಿದ್ದ ಮಿ॥ ಕೆ. ಶ್ರೀಕಂಠಯ್ಯನವರಲ್ಲಿಗೆ ಕಳುಹಿಸಿದರು. ಅದಕ್ಕೆ ಅಮಲ್ದಾರ್ರವರು ಮಾಡಿದ ಫೈಸಲಾತಿಯ ಆರ್ಡರು ಈ ದಿವಸದ ವರಿಗೂ ಹೊರಬಿದ್ದಿರುವದಿಲ್ಲ. ಇದರ ಮೇಲೆ ಈಚೆಗೆ ಡೆಪ್ಯುಟಿ ಕಮಿಷನರ್ ಸ್ಥಾನವನ್ನಲಂಕರಿಸಿದ್ದ ಮಿ॥ ಎಂ. ಎಸ್. ನಾರಾಯಣರಾಯರವರಲ್ಲಿ ಬೆಂಗಳೂರಲ್ಲಿರುವ ಅಡ್ವೊಕೇಟ್ ಮಿ॥ ಸಿ. ವಿ. ನರಸಿಂಹಯ್ಯಂಗಾರ್ರವರ ಮೂಲಕ ಅರ್ಜಿ ಗುಜರಾಯಿಸಿಕೊಂಡೆನು. ಅವರು ಈ ಬಾಬತು ರಿಕಾರ್ಡುಗಳನ್ನು ತರಿಸಿ ಫೈಸಲ್ಮಾಡುವುದಾಗಿ ಅಪ್ಪಣೆ ಕೊಡಿಸಿದರು. ಆದರೆ ಅದರಂತೆ ಸಾಹೇಬರು ಯಾವ ವಿಧವಾದ ಫೈಸಲಾತಿಯ ಆರ್ಡರೂ ಗರೀಬನಿಗೆ ಗೊತ್ತಿಲ್ಲ. ಇದರ ನಂತರ ಡೆಪ್ಯುಟಿ ಕಮಿಷನರಾಗಿ ಬಂದ ಮಿ॥ ಎಚ್. ಎಚ್. ಸ್ಮಾರ್ಟ್ ಸಾಹೇಬರವರಲ್ಲಿ ಪುನಃ ಅರ್ಜಿ ಕೊಡಲು ಅವರಾದರೂ ಯಾವ ವಿಧವಾದ ಫೈಸಲಾತಿಯ ಆರ್ಡರನ್ನೂ ಮಾಡಿರುವದಿಲ್ಲ. ಸದರಿ ಮೃತನ ೩೦—೪೦ ಸಾವಿರ ರೂಪಾಯಿಗಳ ಆಸ್ತಿಯಾವತ್ತೂ ಶ್ರೀಮನ್ಮಹಾರಾಜಾ ಸರ್ಕಾರದವರ ಸ್ವಾಧೀನದಲ್ಲಿಯೇ ಇರುತ್ತೆ. ಮೃತಪಟ್ಟ ರಾಮಣ್ಣನಿಗೆ ಮಕ್ಕಳು ಇತರ ದಾಯಾದಿಗಳು ಯಾರೂ ಇಲ್ಲದೆ, ತಾನು ತನ್ನ ಭಾವಮೈದನಾದ ಕತ್ತಲೂರು ಸುಬ್ರಾಯಪ್ಪನಾದ ನನ್ನ ಹೆಸರಿಗೆ ಬರೆದ ವಿಲ್ ಅರ್ಜಿಯಂತೆ ನಾನು ಕೋರ್ಟಿನಲ್ಲಿ ವ್ಯಾಜ್ಯ ಮಾಡುತ್ತಿರಲಾಗಿ ಸದರಿ ಮೃತನ ವಾರಸುದಾರರು ಯಾರೂ ಇಲ್ಲವೆಂದು ಆಸ್ತಿ ಯಾವತ್ತನ್ನೂ ಶೃಂಗೇರಿ ಶ್ರೀ ಜಗದ್ಗುರು ಸ್ವಾಮಿಗಳವರ ಮಠಕ್ಕೆ ಸೇರುವಂತೆ ಆನೆಕಲ್ ತಾಲ್ಲೂಕಿಗೆ ಆರ್ಡರು ಕೊಟ್ಟಿರುವುದಾಗಿ ಕೇಳುತ್ತೇನೆ. ಮೃತಪಟ್ಟ ರಾಮಣ್ಣನ ಖಾಸಾ ಭಾವಮೈದುನನಾದ ನಾನು ಇದ್ದೂ ಅಲ್ಲದೆ ಸದರಿಯವರ ಮರಣಶಾಸನದ ಅರ್ಜಿಯಂತೆ ನನಗೆ ಸೇರಬೇಕಾದದ್ದು ನ್ಯಾಯವಾಗಿದ್ದರೂ ಈಗ ನಡವಳಿಕೆಯಲ್ಲಿ ನಡೆದಿರುವ ಆರ್ಡರನ್ನು ನೋಡಿದರೆ ನಮ್ಮಂಥಾ ಬಡವರಿಗೆ ಮಹಾಸ್ವಾಮಿಯವರಾದ ಖಾವಂದರವರ ನ್ಯಾಯವಾದ ಆರ್ಡರು ದೊರೆಯುವದು ತುಂಬಾ ಕಷ್ಟವಾಗಿತೋರುತ್ತೆ.

ಆದುದರಿಂದ ಗರೀಬನಾದ ನನಗೆ ಮೃತಪಟ್ಟ ರಾಮಣ್ಣನು ಮಹಾರಾಜಾ ಸರ್ಕಾರಕ್ಕೆ ಬರೆದು ಬಿನ್ನೈಸಿಕೊಂಡಿರುವ ಮರಣಶಾಸನದ ಅರ್ಜಿಯ ಮೇರಿಗೆ ಆತನ ಆಸ್ತಿ ಯಾವತ್ತೂ ಸಲ್ಲಬೇಕಾಗಿರುವದರಿಂದಲೂ ಸದರಿ ಮೃತನೂ ನನ್ನ ಭಾವನೂ ಆದ ರಾಮಣ್ಣನಿಗೆ ನಾನೇ, ಉತ್ತರಕ್ರಿಯಾದಿಗಳಿಗಾಗಿ ಮಹಾರಾಜಾ ಗವರ್ನಮೆಂಟಿನವರ ಅಪ್ಪಣೆಯಂತೆ ಮೃತನ ಆಸ್ತಿಯಿಂದ ಕೊಡಲ್ಪಟ್ಟ ೪೫೦ ರೂಪಾಯಿ ತೆಗೆದುಕೊಂಡು ಸರಾಗವಾಗಿ ಉತ್ತರಕ್ರಿಯಾದಿಗಳನ್ನು ನಡಸಿ, ಪ್ರತಿವರ್ಷದಲ್ಲೂ ಶ್ರಾದ್ಧಗಳನ್ನು ನಡಸುತ್ತಿರುವದರಿಂದಲೂ ಗರೀಬನ ತಕ್ಕ ಬಾಧ್ಯತೆಗಳನ್ನು ದೃಢಪಡಿಸಿ, ರಾಮಣ್ಣನ ವಿಲ್ ಅರ್ಜಿ ಪ್ರಕಾರ ಆತನ ಹಿರಿಯರು ನೆಲೆಗೊಳಿಸಿರುವ ಶ್ರೀ ಗಂಗಾಧರೇಶ್ವರ ಸ್ವಾಮಿಯವರ ದೇವಾಲಯಕ್ಕೆ ಮೃತನ ಮನೋಭೀಷ್ಟದಂತೆ ಒಟ್ಟು ಆಸ್ತಿಯ ಚತುಷ್ಟಯದಲ್ಲೊಂದು ಭಾಗ ಜಾರಿ. ಉಳಿದ ಆಸ್ತಿ ಯಾವತ್ತೂ ತಮ್ಮ ಪಾದ ಸರೋಜಂಗಳ ದಾಸಾನುದಾಸನಾದ ಗರೀಬನಿಗೆ ಸೇರಬೇಕೆಂಬ ನ್ಯಾಯವಾದ ಅಪ್ಪಣೆ ಮಾಡಿ, ಯಾವದ್ವಿಶಿಷ್ಟ ಆಸ್ತಿಯನ್ನೂ ತನ್ನ ಸುಪರ್ದಿಗೆ ಕೊಡಿಸಿಕೊಡಬೇಕೆಂಬದಾಗಿ ಬೇಡುವ ತಮ್ಮ ದಾಸನಾದ

ಕತ್ತಲೂರು ಸುಬ್ರಾಯಪ್ಪ.

೮—೩—೧೯೦೫.

ದೇವರ ಪೂಜೆ ನಡೆಯುತ್ತಿದ್ದ ಗುಡಾರ.



ಸೂಚನೆ —
೧ ಸಾಕ್ಷಿ ಪೆಟ್ಟಿಗೆ.
೨ ಧೂಪಪೀಠ
೩ ಸಮುಖದ ರೊಟ್ಟಿಯ ಮೇಜು
೪ ಚಿನ್ನದ ದೀಪಸ್ತಂಭ
೫ ಬಲಿಪೀಠ.
೬ ನೀರಿನ ತೊಟ್ಟಿ

ಇಸ್ರಾಯೇಲ್ಯರು ಸೀನಾಯ್ ಪರ್ವತದ ಬಳಿಯಲ್ಲೇ ಕೆಲವು ಕಾಲ ಇಳುಕೊಂಡಿರುವಲ್ಲಿ ಮೋಶೆ ಅವರಿಗೆ ದೇವರು ಕೊಟ್ಟ ಧರ್ಮಶಾಸ್ತ್ರವನ್ನು ತಿಳಿಯಪಡಿಸುತ್ತಿದ್ದನು ಅವರು ಭಗವಂತನನ್ನು ಯಥೋಚಿತವಾಗಿ ಪೂಜಿಸುವಂತೆ ಒಂದು ಗುಡಾರವನ್ನು ಮಾಡಬೇಕೆಂದು ದೇವರು ಅವರಿಗೆ ಅಪ್ಪಣೆ ಕೊಟ್ಟನು [ಅವರು ಪ್ರಯಾಣದಲ್ಲಿದ್ದದರಿಂದ ಶಾಶ್ವತವಾದ ದೇವಾಲಯವನ್ನು ಕಟ್ಟುವದು ನಿಷ್ಪ್ರಯೋಜನವೆಂದು ತಿಳಿಯತಕ್ಕದ್ದು] ದೇವರ ಅಪ್ಪಣೆಯ ಪ್ರಕಾರ ಜನರು ಚಿನ್ನ ಬೆಳ್ಳಿಯ ಒಡವೆಗಳನ್ನು ತಂದು ಕೊಟ್ಟರು. ಹೆಂಗಸರು ತಮ್ಮ ಕರ್ಣಾಭರಣಗಳನ್ನೂ ಲೋಹದ ದರ್ಪಣಗಳನ್ನೂ ಕಾಣಿಕೆಯಾಗಿ ಕೊಟ್ಟದ್ದಲ್ಲದೆ ಸುಂದರವಾದ ಬಟ್ಟೆಗಳನ್ನು ನೇಯ್ದು ಕೊಟ್ಟರು ಕೆಲವರು ಕೈಗಾರಿಕೆ ಉದ್ಯೋಗಸ್ಥರು ಮರದ ಕಂಬಗಳನ್ನೂ ಅವುಗಳಿಗೆ ಹಚ್ಚುವ ತೆರೆಗಳನ್ನೂ ಗುಡಾರಕ್ಕೆ ಅವಶ್ಯವಾದ ಬೇರೆ ಎಲ್ಲಾ ಸಾಮಾನುಗಳನ್ನೂ ಮಾಡಿದರು ಎಲ್ಲವೂ ಸಿದ್ಧವಾದ ಮೇಲೆ ದೇವರ ಅಪ್ಪಣೆಯ ಮೇರೆಗೆ ಈ ದೇವರ ಪೂಜೆಯ ಗುಡಾರವನ್ನು ಸ್ಥಾಪಿಸಿದರು. ದೇವಾಲಯದಲ್ಲಿ ದೇವತಾರ್ಚನೆ ಕೆಲಸಕ್ಕೆ ಆರೋನನೆಂಬವನನ್ನೂ ಆತನ ಕುಮಾರರನ್ನೂ ನೇಮಿಸಿದರು

ಈ ಗುಡಾರದ ಅಳತೆ—ಉದ್ದ ೪೫ ಅಡಿಗಳು, ಅಗಲ ೧೫ ಅ ಇದರಲ್ಲಿ ೨ ಭಾಗಗಳಿದ್ದವು ಮೊದಲನೇ ಭಾಗಕ್ಕೆ (ಅಡಿ ೧೫×೧೫) ಮಹಾ ಪರಿಶುದ್ಧ ಸ್ಥಾನ ಅಂದರೆ ಗರ್ಭಗುಡಿಯೆಂಬ ಹೆಸರು. ಇದರೊಳಗೆ ಸಾಕ್ಷಿಯ ಪೆಟ್ಟಿಗೆಯೆಂಬುವದು ಮಾತ್ರವಿತ್ತು ಈ ಪೆಟ್ಟಿಗೆಯನ್ನು ಮರದಿಂದ ಮಾಡಿ ಚಿನ್ನದ ತಗಡು ಹೊದಿಸಿತ್ತು ಇದರೊಳಗೆ ಧರ್ಮಪ್ರಮಾಣವು ಬರೆದಿದ್ದ ಹಲಿಗೆಗಳಿದ್ದವು ಇದರ ಮುಚ್ಚಳದ ಮೇಲ್ಭಾಗಕ್ಕೆ ಕೃಪಾಸನವೆಂದು ಹೆಸರು. ಈ ಕೃಪಾಸನದ ಮೇಲ್ಗಡೆ ಎರಡು ಕಡೆಗಳಲ್ಲಿಯೂ ಆರಾಧಿಸುವವರಂತೆ ಬಗ್ಗಿ ಬೀಳುತ್ತಿರುವ ಕೆರೂಬಿಗಳೆಂಬ ದೇವದೂತರ ಎರಡು ಆಕಾರಗಳನ್ನಿಟ್ಟಿತ್ತು ಈ ಗರ್ಭಗುಡಿಯೊಳಕ್ಕೆ ಮಹಾ ಯಾಜಕನು ಮಾತ್ರ ವರ್ಷಕ್ಕೊಂದಾವರ್ತಿ ಹೋಗಬಹುದೆಂಬ ಕಟ್ಟಳೆ ಇತ್ತು. ಎರಡನೇ ಭಾಗಕ್ಕೆ (೧೫+೩೦ ಅಡಿ) ಪರಿಶುದ್ಧಸ್ಥಾನವೆಂಬ ಹೆಸರಿತ್ತು ಗರ್ಭಗುಡಿಗೂ ಇದಕ್ಕೂ ಮಧ್ಯದಲ್ಲಿ ಒಂದು ತೆರೆಯಿತ್ತು ಪರಿಶುದ್ಧಸ್ಥಾನದಲ್ಲಿ ವಸ್ತುಗಳು ಯಾವವೆಂದರೆ—ತೆರೆಗೆದುರಾಗಿ ಧೂಪಪೀಠವಿತ್ತು ಅದರ ಮೇಲೆ ನಿತ್ಯವೂ ಪ್ರಾತಃ ಕಾಲ ಸಾಯಂಕಾಲಗಳಲ್ಲಿ ಧೂಪ ಸುಡುತ್ತಿದ್ದರು ಅದರಲ್ಲಿ ಬೆಂಕಿ ಆರದೆ ಉರಿಯುತ್ತಲೇ ಇರಬೇಕೆಂಬ ಕಟ್ಟಳೆ ಇತ್ತು. ಪರಿಶುದ್ಧಸ್ಥಾನದ ಬಲಗಡೆ ಎರಡು ಪಟ್ಟಿಗಳಲ್ಲಿ ಆರಾರು ಮೇರೆಗೆ ಸೇರಿಸಿದ್ದ ಸಮುಖದ ರೊಟ್ಟಿಗಳನ್ನೂ ಬಟ್ಟಲುಗಳಲ್ಲಿ ದ್ರಾಕ್ಷಾರಸವನ್ನೂ ಇಟ್ಟಿದ್ದ ಮೇಜು ಇತ್ತು ಇದಕ್ಕೆದುರಾಗಿ ಎಡಗಡೆಯಲ್ಲಿ ಏಳು ಕವಲಾಗಿರುವ ಒಂದು ಚಿನ್ನದ ದೀಪಸ್ತಂಭವಿತ್ತು ಈ ಭಾಗಕ್ಕೆ ಯಾಜಕರು ಮಾತ್ರ ಬರಬೇಕೆಂಬ ಅಪ್ಪಣೆ ಇತ್ತು. ಈ ಗುಡಾರದ ಸುತ್ತಲೂ ೧೫೦ ಅಡಿ ಉದ್ದವೂ ೭೫ ಅಡಿ ಅಗಲವೂ ಆಗಿರುವ ಪ್ರಾಕಾರವಿತ್ತು ದೇವಾರಾಧನೆ ಮಾಡುವದಕ್ಕೆ ಬರುವವರೆಲ್ಲರೂ ಈ ಪ್ರಾಕಾರದಲ್ಲೇ ಇರಬೇಕು ಇದರೊಳಗೆ ಗುಡಾರಕ್ಕೆದುರಾಗಿ ದೊಡ್ಡ ಯಜ್ಞವೇದಿಯಿತ್ತು. ಇದರ ಮೇಲೆ ಪಶುಗಳನ್ನು ಯಜ್ಞವಾಗಿ ಅರ್ಪಿಸುತ್ತಿದ್ದರು. ಯಜ್ಞವೇದಿಯ ಬಳಿಯಲ್ಲಿ ಹಿತ್ತಾಳೆಯಿಂದ ಮಾಡಿದ್ದೊಂದು ತೊಟ್ಟಿಯಿತ್ತು ಇದರೊಳಗಿರುವ ನೀರು ತಕ್ಕೊಂಡು ಯಾಜಕರು ಕೈಕಾಲು ತೊಳಕೊಂಡು ಯಜ್ಞವನ್ನರ್ಪಿಸುತ್ತಿದ್ದರು.

ಈ ದೇವರ ಪೂಜೆಯ ಗುಡಾರದ ಅಭಿಪ್ರಾಯವೇನು ಎಂದು ಕೇಳುತ್ತೀರಾ ? ಇದರ ಪ್ರತಿಯೊಂದು ಭಾಗದಿಂದಲೂ ಇಸ್ರಾಯೇಲ್ಯರು ಒಂದೊಂದು ಪಾಠವನ್ನು ಕಲಿಯಬೇಕೆಂಬುವದೇ ಭಗವಂತನ ಉದ್ದೇಶ.

೧. ದೇವರು ಅವರ ನಡುವೆ ವಾಸಿಸಿದನು (ಕೊರ ೨೫ ೮, ೨೯ ೩೫). ಗರ್ಭಗುಡಿಯಲ್ಲಿ ದೇವರ ವಿಗ್ರಹವ್ಯಾವದೂ ಇರಲಿಲ್ಲ ಆದರೆ ಗುಡಾರದ ಮೇಲ್ಗಡೆ ನೆಲಸಿದ್ದ ಮೇಘವೇ ದೇವರು ಇಸ್ರಾಯೇಲ್ಯರ ನಡುವೆ ಇರುವವನೆಂಬರ್ಥ. ಆತನು ನಿರಾಕಾರಿಯಾಗಿಯೂ ಮನುಷ್ಯರ ಕಣ್ಣಿಗೆ ತೋರಕೂಡದಷ್ಟು ಮಹಿಮೆಯುಳ್ಳವನಾಗಿಯೂ ಇದ್ದಾನೆಂದು ಸೂಚಿಸುವದಾಗಿತ್ತು

೨. ದೇವರು ಪಾಪರಹಿತನು, ಮನುಷ್ಯನು ಪಾಪಮಯನು — ಯಜ್ಞವೇದಿ ಬಳಿಗೆ ಹೋಗುವದಕ್ಕೆ ಮುಂಚೆ ಯಾಜಕರು ಮಡಿಯುಟ್ಟುಕೊಳ್ಳಬೇಕು. ಸಾಧಾರಣ ಜನಗಳೊಬ್ಬರೂ ಗುಡಾರದೊಳಗೆ ಹೋಗಕೂಡದು. ದೇವರು ಅಷ್ಟು ಪರಿಶುದ್ಧನು, ಪಾಪರಹಿತನು.

೩. ಬಲಿಯರ್ಪಿಸುವದು ಅವಶ್ಯ. ಮಧ್ಯಸ್ಥಗಾರನೊಬ್ಬನು ಬೇಕು —ಯಾಜಕರು ಜನರ ಪಕ್ಷದಲ್ಲಿ ಮಧ್ಯಸ್ಥಗಾರರಾಗಿ ನಿಂತು ಬಲಿಯರ್ಪಿಸುತ್ತಿದ್ದರು. ಈ ಪ್ರಕಾರ ಮುಂದೆ ಅವತರಿಸುವದಕ್ಕಿದ್ದ ಮಹಾ ಯಾಜಕನೂ ತನ್ನ ದೇಹವನ್ನೇ ಯಜ್ಞವಾಗಿ ಅರ್ಪಿಸುವವನೂ ಆಗಿರುವ ಯೇಸುಸ್ವಾಮಿಯನ್ನು ಈ ಗುಡಾರವು ಸೂಚಿಸುವದಾಗಿತ್ತು ಇಬ್ರಿಯರಿಗೆ ಬರೆದ ಪತ್ರಿಕೆ ೯, ೧೦ ಅ ಓದಿರಿ

೪ ದೇವಾರಾಧನೆ ಅವಶ್ಯ —ನಿರಂತರವೂ ಉರಿಯುವ ಬೆಂಕಿಯಿದ್ದ ಧೂಪಪೀಠವು ನಿರಂತರವಾದ ಪ್ರಾರ್ಥನೆಯನ್ನು ಸೂಚಿಸುತ್ತದೆ ನಮಗೆ ನಿತ್ಯವೂ ಬೇಕಾದ ಅನ್ನವನ್ನು ಕೊಡುವವನು ದೇವರೇ ಎಂಬುವದಕ್ಕೆ ಸಮುಖದ ರೊಟ್ಟಿಯೂ ದ್ರಾಕ್ಷಾರಸವೂ ಗುರುತು (ಯೋಹಾನ ೬ ೪೮—೫೮) ದೀಪಸ್ತಂಭವು ಭೂಲೋಕದಲ್ಲಿ ದೇವರನ್ನು ಸನ್ಮಾನಪಡಿಸುವ ಸದಾಚಾರವಂತರಾದ ಭಕ್ತರ ಕೂಟವನ್ನು ಸೂಚಿಸುತ್ತದೆ (ಮತ್ತಾ ೫ ೧೪—೧೬)

ಭಗವಂತನು ಪೂರ್ವಕಾಲದಲ್ಲಿ ಆ ಇಸ್ರಾಯೇಲ್ ಜನರಿಗೆ ತನ್ನ ನಿವಾಸಕ್ಕಾಗಿ ಒಂದು ಆಲಯವನ್ನು ಸ್ಥಾಪಿಸುವಂತೆ ಹೇಳಿಕೊಟ್ಟದ್ದನ್ನು ನೋಡುವಾಗ್ಗೆ ನಮ್ಮ ಕಾಲದಲ್ಲಿಯೂ ಅಂಥಾದ್ದೊಂದು ಆಲಯವನ್ನು ತಾನೇ ಕಟ್ಟಿಸಿಕೊಟ್ಟು ಅದನ್ನು ನಾವು ನಿತ್ಯದಲ್ಲೂ ಪೂಜೆಗೈಯುವಂತೆ ಕಟ್ಟಳೆ ಮಾಡಿದ್ದಾನೆ ಆ ಆಲಯವು ಯಾವದಂದರೆ—ನಮ್ಮ ನಮ್ಮ ದೇಹಗಳೇ "ದೇವರಿಂದ ಬಂದು ನಿಮ್ಮೊಳಗೆ ಇರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಯೆಂದು ನಿಮಗೆ ತಿಳಿಯದೋ ?" ಎಂದು ಒಬ್ಬ ಭಕ್ತನು ಕೇಳುತ್ತಾನೆ ಆದಕಾರಣ ನಾವು ಈ ದೇಹವನ್ನು ಭಗವಂತನಿಗೆ ಪ್ರತಿಷ್ಠಿತಗಳಾದ ದೇವಾಲಯಗಳನ್ನಾಗಿ ಭಾವಿಸಿದರೆ ಯಾವ ಅಸತ್ಯಕಾರ್ಯಕ್ಕಾದರೂ ನಮ್ಮ ದೇಹಗಳಲ್ಲಿ ಅವಕಾಶವನ್ನು ಕೊಡಬಹುದೇ ? ನಮ್ಮ ಕೈಗಳಿಂದ ಕಳ್ಳತನ ಮಾಡಬಹುದೇ ? ಕಣ್ಣಿನಿಂದ ಪರರ ವಸ್ತುಗಳನ್ನು ನೋಡಿ ಆಶಿಸಬಹುದೇ ? ನಾಲಿಗೆಯಿಂದ ಸುಳ್ಳಾಡಬಹುದೇ ? ಕಿವಿಯಿಂದ ದುರ್ವಾರ್ತೆಗಳನ್ನು ಅಮೃತದಂತೆ ಭಾಸವಾಡಬಹುದೇ ? ಕಾಲಿನಿಂದ ದುಷ್ಟಸ್ಥಾನಗಳಿಗೆ ಹೋಗಬಹುದೇ ? ಎಷ್ಟುಮಾತ್ರಕ್ಕೂ ಕೂಡದು ನಾವು ನಮ್ಮ ನಮ್ಮ 'ದೇಹಗಳನ್ನು ಸಜೀವವೂ ಪವಿತ್ರವೂ ದೇವರಿಗೆ ಮೆಚ್ಚಿಕೆಯೂ ಆಗಿರುವ ಯಜ್ಞವಾಗಿ" ಅರ್ಪಿಸುತ್ತಿರಬೇಕು ಇದೇ ನಮ್ಮ ಬುದ್ಧಿಗನುಗುಣವಾದ ದೇವಾರಾಧನೆ.

ಇಂಡಿಯಾ ದೇಶದ ವೃತ್ತಾಂತಗಳು

ಸಿಲೋನ್ (ಲಂಕಾ) ದ್ವೀಪದ ಸಮುದ್ರ ತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆದುಕೊಳ್ಳುವಂತೆ ಸರ್ಕಾರದವರು ಕಂಟ್ರಾಕ್ಟು ವಹಿಸಿದ್ದರು ಇದರಿಂದ ಸರ್ಕಾರಕ್ಕೆ ೧೦,೯೨,೭೪೦ ರೂಪಾಯಿ ಉತ್ಪತ್ತಿ ಆಗಿದೆ

❖❖❖❖

ಕಳೆದ ಡಿಸೆಂಬರ್ ೩೧ಕ್ಕೆ ಅಖೈರಾದ ಪಸ್ಮಹಿಯಲ್ಲಿ ಹಿಂದುಸ್ಥಾನದೊಳಗೆಲ್ಲಾ ಒಟ್ಟು ೬೩ ಹೊಸ ಬ್ಯಾಂಕುಗಳು ರಿಜಿಸ್ಟ್ರಾರದವು ಇವುಗಳ ಮೂಲಧನ ೯,೮೪,೪೨,೮೦೦ ರೂಪಾಯಿಗಳೆಂದು ಗೊತ್ತಾಗುವುದು

❖❖❖❖

ಬೊಂಬಾಯಿ ಪಟ್ಟಣದಲ್ಲಿ ಪ್ಲೇಗಿನ ಹಾವಳಿಯಲ್ಲದೆ ಸಿಡುಬಿನ ಬೇನೆಯೂ ಹೆಚ್ಚಾಗಿದೆ ಪ್ರಜೆಗಳು ಸಿಡುಬಿನ ವಿಚಾರದಲ್ಲಿ ಸ್ವಲ್ಪವೂ ಜಾಗರೂಕರಾಗಿಲ್ಲ ದಿನಕ್ಕೆ ನೂರು ಮಂದಿಗೆ ಕಡಿಮೆ ಇಲ್ಲದೆ ಸಾಯುತ್ತಿದಾರೆ ಯೂರೋಪ್ಯನ್ ಜನರಿಗೂ ಸಿಡುಬು ತುಂಬಾ ತಗಲುತ್ತಿದೆ.

❖❖❖❖

ಪೋಸ್ಟ್ ಆಫಿಸ್ ಸೇವಿಂಗ್ಸ್ ಬ್ಯಾಂಕುಗಳ ಬಡ್ಡಿ ದರವನ್ನು ಇಂಡಿಯಾ ಗವರ್ನಮೆಂಟಿನವರು ೧೯೦೫ನೆ ಜುಲೈ ೧ ರಿಂದ ಶೇಕಡಾ ವರುಷಕ್ಕೆ ೩ ರೂಪಾಯಿಗೆ ಇಳಿಸುತ್ತಾರೆ ಆದರೆ ೬ ತಿಂಗಳ ತನಕ ಹಣವನ್ನು ತೆಗೆದುಕೊಳ್ಳುವದಿಲ್ಲವೆಂದು ಬರೆದುಕೊಡುವವರಿಗೆ ಶೇಕಡಾ ವರುಷಕ್ಕೆ ೩ ರೂಪಾಯಿನಂತೆ ಬಡ್ಡಿ ಕೊಡುವರು.

❖❖❖❖

ಮದರಾಸ್ ಹೈಕೋರ್ಟಿನ ಚೀಫ್ ಜಡ್ಜರಾದ ಸರ್ ಆರ್ನಾಲ್ಡ್ ವೈಟ್‌ಯವರು ಏಳುತಿಂಗಳ ಕಾಯಿಲೆ ರಜಾ ಪಡೆದು ವಿಲಾಯಿತಿಗೆ ಪ್ರಯಾಣವಾಗಿದರು ಸರ್ ಎಸ್ ಸುಬ್ರಹ್ಮಣ್ಯ ಅಯ್ಯರವರು ಅವರಿಗೆ ಬದಲಾಗಿ ಚೀಫ್ ಜಡ್ಜರಾಗಿ ನೇಮಿಸಲ್ಪಟ್ಟಿದಾರೆ ಇವರು ಚೀಫ್ ಜಡ್ಜರಾಗಿ ಬದಲಿ ನೋಡಿದ್ದು ಇದೂ ಸೇರಿ ಮೂರುಸಲವಾಯಿತು

❖❖❖❖

ಜಬ್ಬಲ್‌ಪುರದ ಸೇಟ್ ಭೋಳಾನಾಥ ಕಸ್ತೂರಚಂದರೆಂಬ ಸಾಹುಕಾರನು ಲೇಟ್ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆಯನ್ನು ಲೋಹದಿಂದ ವಿಲಾಯತಿಯಲ್ಲಿ ಮಾಡಿಸಿ ತರಿಸಿ, ಆ ಪಟ್ಟಣದಲ್ಲಿಡುವಂತೆ ಪುರಾಧ್ಯಕ್ಷರಿಗೆ ವಹಿಸಿಕೊಟ್ಟನು ಇದಕ್ಕಾಗಿ ಆತನಿಗೆ ೧೫—೨೦ ಸಾವಿರ ರೂಪಾಯಿ ತನಕ ಖರ್ಚಾಯಿತು. ಜಬ್ಬಲ್‌ಪುರದಲ್ಲಿ ಈ ಪ್ರತಿಮೆಯನ್ನು ಚೀಫ್ ಕಮಿಷನರವರು ಕಳೆದ ವಾರ ಸಾವಿರಾರು ಪ್ರಜೆಗಳ ಮಧ್ಯೆ ಪ್ರತಿಷ್ಠೆ ಮಾಡಿದರು

❖❖❖❖

ಕಳೆದ ಶನಿವಾರ ಸಾಯಂಕಾಲ ಕಲ್ಕತ್ತಾ ಪಟ್ಟಣದಲ್ಲಿರುವ ಸಾಲ್ಕಿಯಾ ಜೂಟ್ ಪ್ರೆಸ್ ಎಂಬ ನಾರಿನ ಕಾರ್ಖಾನೆಗೆ ಬೆಂಕಿ ಬಿದ್ದು ಎರಡು ಮೂರು ಭಾರೀ ಕೊಠಡಿಗಳು ಸಂಪೂರ್ಣ ನಾಶ ಹೊಂದಿಯಾದವು ಸಾಯಂಕಾಲ ೬ ಗಂಟೆಗೆ ಪ್ರಾರಂಭವಾದ ಉರಿಯನ್ನು ತಹಬಂದಿಗೆ ತಂದುಕೊಳ್ಳುವದಕ್ಕೆ ನೂರಾರು ಜನರು ಬೆಳಗಿನ ಝಾಮ ೧ ಗಂಟೆ ತನಕ ದುಡಿಯಿತು. ಸಾಹುಕಾರನಿಗೆ ಸುಮಾರು ಮೂರು ಲಕ್ಷ ರೂಪಾಯಿನ ನಾರಿನ ಗಟ್ಟಿಗಳು ಸುಟ್ಟು ನಷ್ಟವಾಗಿದೆ

ರಾಂಚಿಪಟ್ಟಣದಲ್ಲಿ ಮೆಡಿಕಲ್ ಕಾಲೇಜೆಂಬ ವಿದ್ಯಾಶಾಲೆಯನ್ನು ಸ್ಥಾಪಿಸುವದಕ್ಕೆ ಚಂದಾ ಎತ್ತುತ್ತಿದಾರೆ ಇದುವರೆಗೆ ಈ ಫಂಡಿಗೆ ೧,೧೯,೮೦೦ ರೂಪಾಯಿ ವಸೂಲಾಗಿದೆ ಇದಲ್ಲದೆ ರಾಯ ಸೀತಾನಾಥ ರಾಯಬಹದೂರ್ ಯವರು ೫೧,೦೦೦ ರೂಪಾಯಿ, ಮಹಾರಾಜಾ ಸರ್ ಜೋತೀಂದ್ರ ಮೋಹನ ಟಾಗೂರ್ ಯವರು ೧೨,೦೦೦ ರೂಪಾಯಿ, ರಾಯ ಕಮಲೇಶ್ವರಿ ಪ್ರಸಾದಸಿಂಗ್ ಬಹದೂರ್ ಯವರು ೧೦,೦೦೦ ರೂಪಾಯಿ, ಈ ಪ್ರಕಾರ ಚಂದಾ ಕೊಟ್ಟಿರುವರು

❖❖❖❖

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಕಳೆದ ವಾರ ಸಭೆ ಸೇರಿ, ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡುವದರಿಂದ ಅವರಿಗೆ ಅಡ್ರೆಸ್ಸನ್ನೂ ಬಹುಮಾನವನ್ನೂ ಒಪ್ಪಿಸುವದಕ್ಕೋಸ್ಕರ ೭೦,೦೦೦ ರೂಪಾಯಿ ಖರ್ಚುಮಾಡಬೇಕೆಂದು ತೀರ್ಮಾನ ಮಾಡಿದಾರೆ ಏಳು ಜನ ಮೆಂಬರುಗಳು ಪ್ರಜೆಗಳ ಹಣವನ್ನು ಒಗ್ಗಟ್ಟಾಗಿ ಹೀಗೆ ಖರ್ಚುಮಾಡುವದು ಸರಿಯಲ್ಲವೆಂದು ಪ್ರತಿಭಟಿಸಿದರು ಆದರೆ ಇವರ ಆಕ್ಷೇಪಣೆಯನ್ನು ಬಹುಮಂದಿ ಒಪ್ಪದೆಹೋದರು

❖❖❖❖

ತಿರುವಾಂಕೂರು (ಅನಂತಶಯನ) ಸಂಸ್ಥಾನದ ಕೆಲವು ಭಾಗಗಳಲ್ಲಿ ನಾಯರರಿಗೂ ತಿಯ್ಯರಿಗೂ ಮನಸ್ತಾಪ ಉಂಟಾಗಿ ಜಗಳ ಕದನಗಳು ಪ್ರಾರಂಭವಾಗುತ್ತಿರುವವು ಕೆಲವು ಕದನಗಳಲ್ಲಿ ಜನರು ಪ್ರಾಣಕಳೆದುಕೊಂಡೂ ಇದಾರೆ ಬ್ರಾಹ್ಮಣಕೇರಿಗಳಲ್ಲಿ ಮನೆಗಳು ಬೆಂದು ಹೋದವು ಸುಮಾರು ೫೦೦ ಮನೆಗಳು ಹೀಗೆ ನಷ್ಟಗೊಂಡಿದವೆಂತಲೂ ಇದರಿಂದ ೫೦೦ ಪ್ರಜೆಗಳು ನಿಲ್ಲುವದಕ್ಕೆ ನೆರಳಿಲ್ಲದೆ ಅಲೆಯುತ್ತಿದಾರೆಂತಲೂ ತಿಯ್ಯರೆಂಬ ಜನರು ಬ್ರಿಟಿಷ್ ರೆಸಿಡೆಂಟರಿಗೆ ಅರ್ಜಿ ಬರೆದು, ಕುಂಪಣಿ ಇಲಾಖೆಯವರು ತಲೆಹಾಕಿ ಈ ಗದ್ದಲಗಳನ್ನು ಅಣಗಿಸಬೇಕೆಂದು ಕೇಳಿಕೊಂಡಿದಾರೆ

❖❖❖❖

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸಿಂಧುದೇಶದಲ್ಲಿ ದೇಶೀಯ ಪ್ರಜೆಗಳು ಮದುವೆಯ ಕಾಲದಲ್ಲಿ ಹೆಣ್ಣಿಗೆ ೩೦ ರಿಂದ ೧೦೦ ರೂಪಾಯಿ ತರಹ ಕ್ರಯಬಾಳುವ ಹಾಥಿ ದಂತದ ಕೈಬಳೆಯನ್ನು ಒಪ್ಪಿಸುವದು ವಾಡಿಕೆಯಾಗಿತ್ತು. ಇದು ಬಂದೋಬಸ್ತು ಕೊಡುವ ತಂದೆಗೆ ಕಷ್ಟವಾಗಿರುವಲ್ಲಿ ಆ ಹುಡುಗಿ ಅದನ್ನು ಒಡೆದುಹಾಕಿಕೊಂಡರೆ ಮತ್ತೆ ಮತ್ತೆ ಕೊಡುತ್ತಿರುವದು ತುಂಬಾ ಕಷ್ಟವಾಗಿತ್ತು ಇದನ್ನು ನೋಡಿ ಅನೇಕ ಜನರು ಸಹಿಸಲಾರದೆ ಒಂದು ಸಭೆಯನ್ನು ಸೇರಿಸಿ, ಇನ್ನು ಮುಂದೆ ಯಾರೂ ಮದುವೆ ಹೆಣ್ಣಿಗೆ ಅಷ್ಟು ಬೆಲೆಯುಳ್ಳ ಬಳೆಗಳನ್ನು ಕೊಡಬೇಕಾದ್ದಿಲ್ಲವೆಂದು ಕಟ್ಟುಮಾಡಿಕೊಂಡಿರುತ್ತಾರೆ ಈ ಸಭೆಗೆ ಸೇಟ್ ವಿಷ್ಣುದಾಸರವರು ಅಧ್ಯಕ್ಷರಾಗಿದ್ದರು

❖❖❖❖

ಕಾಶ್ಮೀರ ಸಂಸ್ಥಾನದಲ್ಲಿ ರೈಲ್ ಹಾಕಬೇಕೆಂದು ಇದುವರೆಗೆ ಎಷ್ಟು ಪ್ರಯತ್ನಪಟ್ಟರೂ ಸಾಗಲಿಲ್ಲ ರೈಲ್‌ಗಾಡಿ ಓಡುವದಕ್ಕೆ ಕಲ್ಲಿದ್ದಲನ್ನು ಅಲ್ಲಿಗೆ ಸಾಗಿಸಿ ಒದಗಿಸುವದೇ ಮೊದಲನೇ ದೊಡ್ಡ ಕಷ್ಟ ಈಗ ಈ ಕಷ್ಟವನ್ನು ನಿವಾರಣೆ ಮಾಡುತ್ತಾರೆ. ಜೇಲಂ ನದಿಯು ವುಲರ್ ಕೆರೆಯ ಬಳಿ ಎತ್ತರದಿಂದ ದುಮುಕಿ ವ್ಯರ್ಥವಾಗಿ ಹರಿದುಹೋಗುವದು ಈ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ, ರೈಲ್‌ಗಾಡಿಗಳನ್ನು ಈ ವಿದ್ಯುಚ್ಛಕ್ತಿ ಪ್ರಯೋಗದಿಂದಲೇ ಓಡಬೇಕೆಂದು ಗೊತ್ತುಮಾಡಿದಾರೆ. ಇದಲ್ಲದೆ ಇನ್ನು ಕೆಲವು ಕಸಬುದಾರ ಕಾರ್ಖಾನೆಗಳನ್ನು ಕೂಡ ಆ ಸ್ಥಳದಲ್ಲಿ ನಿರ್ಮಿಸಿ, ವಿದ್ಯುಚ್ಛಕ್ತಿಯಿಂದಲೇ ಕಾರ್ಖಾನೆಯ ಯಂತ್ರಗಳನ್ನು ನಡಿಸುವವರಾಗಿದಾರೆ

❖❖❖❖

ಉತ್ತರದೇಶದಲ್ಲಿ ಪ್ಲೇಗಿನ ಹಾವಳಿಯು ದಿನೇದಿನೇ ವೃದ್ಧಿಹೊಂದುತ್ತಾ ಇದೆ ಹಿಂದುಸ್ಥಾನದಲ್ಲೆಲ್ಲಾ ಹೋದವಾರ ೨೯,೪೬೫ ಜನರು ಈ ರೋಗದಲ್ಲಿ ಮೃತಪಟ್ಟರು ಈ ವಾರದಲ್ಲಿ ದರೋ ೩೪,೧೩೯ ಜನರು ಮೃತಪಟ್ಟಿರುತ್ತಾರೆ ಮುಖ್ಯಸ್ಥಳಗಳೂ ಸಂಖ್ಯೆಗಳೂ—ವಾಯವ್ಯಪ್ರಾಂತ್ಯ ೧೫,೮೯೯, ಪಂಜಾಬ್ ೭,೯೫೨, ಬಂಗಾಳ ೫,೬೩೩, ಬೊಂಬಾಯಿ ಡಿಸ್ಟ್ರಿಕ್ಟುಗಳು ೨,೪೬೨, ರಾಜಪುತಾನಾ ೪೫೩, ಮಧ್ಯಪ್ರಾಂತ್ಯಗಳು ೪೨೯, ಹೈದರಾಬಾದ್ ಸಂಸ್ಥಾನ ೩೩೧, ಮೈಸೂರು ಸಂಸ್ಥಾನ ೨೧೮, ಮಧ್ಯ ಇಂಡಿಯಾ ೧೩೯, ಬೊಂಬಾಯಿಪಟ್ಟಣ ೮೨೮, ಕಲ್ಕತ್ತೆ ೧೩೦, ಇತರ ೧೮೨ ಹೋದ ವರುಷ ಈ ವಾರದಲ್ಲಿ ಒಟ್ಟು ೨೮,೯೧೯ ಜನರು ಪ್ಲೇಗಿನಲ್ಲಿ ಮೃತಪಟ್ಟರು

❖❖❖❖

ನಾಗರಹಾವಾಗಲಿ ಇತರ ಕೆಟ್ಟ ಸರ್ಪಗಳಾಗಲಿ ಯಾರನ್ನಾದರೂ ಕಡಿದರೆ ಅವರಿಗೆ ಮಾಡಬೇಕಾದ ಚಿಕಿತ್ಸೆಯನ್ನು ಕ್ಯಾಪ್ಟನ್ ಲೆನರ್ಡ್ ರಾಜರ್ಸ್ ಎಂಬೊಬ್ಬ ವೈದ್ಯನು ಅನುಭವಪೂರ್ವಕವಾಗಿ ತಿಳಿಸಿರುತ್ತಾನೆ ಆ ಚಿಕಿತ್ಸೆ ಏನೆಂದರೆ—ಸರ್ಪ ಕಡಿದ ಕೂಡಲೇ ಅದರ ಮೇಲ್ಭಾಗದಲ್ಲಿ ದಾರ ಅಥವಾ ಹುರಿಯಿಂದ ಬಲವಾಗಿ ಕಟ್ಟಿ ಹಾಕಿ, ಕಡಿದ ಸ್ಥಳವನ್ನು ಚೂರಿಯಿಂದ ಸ್ವಲ್ಪ ಕೊಯಿದು ಗಾಯಮಾಡಿ, ಈ ಗಾಯಕ್ಕೆ ಪರ್ ಮಾಂಗನೇಟ್ ಆಫ್ ಪೋಟಾಷ್ ಎಂಬ ಉಪ್ಪನ್ನು ತಂದು ತುಂಬಿದರೆ ಸ್ವಲ್ಪ ಹೊತ್ತಿನೊಳಗಾಗಿ ಈ ಉಪ್ಪು ವಿಷವನ್ನೆಲ್ಲಾ ಹೀರಿಕೊಳ್ಳುವದು ಮತ್ತು ಆ ವಿಷವನ್ನು ಕೆಂದುವದಕ್ಕೆ ಮಾರ್ಗ ಕೊಡುವದಿಲ್ಲ. ಮತ್ತು ಅದೇ ಉಪ್ಪನ್ನು ಇಟ್ಟು ಉಜ್ಜಬೇಕು ಎಂಬುದೇ ಈ ಉಪ್ಪನ್ನು ಔಷಧ ಮಾರುವ ಅಂಗಡಿಗಳಲ್ಲೆಲ್ಲಾ ಬಿಕರಿ ಮಾಡುತ್ತಾರೆ ಈ ಚಿಕಿತ್ಸೆಯಲ್ಲಿ ಖಂಡಿತವಾಗಿ ಪ್ರಾಣ ಉಳಿಕೊಳ್ಳುತ್ತದೆ ಆದಕಾರಣ ಪರನಾಡಿನ ಪ್ರಜೆಗಳೂ ಹಾವಿನ ಕಾಟವಿರುವ ಇತರ ಕಡೆಗಳ ಜನರೂ

...ರ್ ವೊಂಗನೇಟ್ ಆಫ್ ಪೋಟಾಷ್ ಎಂಬ ಉಪ್ಪನ್ನು ಪೊಡ ...ಕೊಂಡು ತರಿಸಿ ಇಟ್ಟುಕೊಂಡಿದ್ದಲ್ಲಿ ಹಾವು ಕಡಿದ ಕೂಡಲೇ ...ಪ್ರಯೋಗಿಸಬಹುದಾಗಿದೆ

****

...ಧಪುರದ ವಿಕ್ಟೋರಿಯಾ ಪಾರ್ಕ ಎಂಬ ಉದ್ಯಾನವನದ ...ಳೆದ ವಾರ ಒಂದು ದೊಡ್ಡ ಸಭೆ ನಡಿಯಿತು ಆ ಸಂಸ್ಥಾನ ...ನ್ಸಿಲ್ ಮೆಂಬರುಗಳು, ಯೂರೋಪಿಯರ್ ವಿವಾಸಿಗಳು, ...ರರು, ಸಂಸ್ಥಾನದ ದೊಡ್ಡ ದೊಡ್ಡ ಉದ್ಯೋಗಸ್ಥರು, ಇತರ ...ಮನುಷ್ಯರು ಮೊದಲಾದವರೆಲ್ಲಾ ಸಭೆಯಲ್ಲಿ ಹಾಜರಾಗಿದ್ದ ಬ್ರಿಟಿಷ್ ರೆಸಿಡೆಂಟ್ ಕರ್ನಲ್ ಫ್ರಾಗರ್ ಯವರು ಸಭಾನಾಯ...ಗಿ ನಿಂತು, ಸಂಸ್ಥಾನದ ನ್ಯಾಯದ ಕೌನ್ಸಿಲ್ ಮೆಂಬರುಗಳಾ...ದ ಬಹದೂರ ಪಂಡಿತ ಸೋಹನಲಾಲ್ ಯವರೂ ಬಾರ್ ...ಸ್ ಮೆಲ್ವಿಲ್ ರಜಿಯುದ್ದೀನ್ ಖಾನರವರೂ ಅವರ ಅಧಿಕಾರಾವಧಿಯು ಪೂರೈಸಿದ್ದರಿಂದ ಕೆಲಸ ಬಿಟ್ಟು ನಿವೃತ್ತಿ ಸುಖವ ...ಅನುಭವಿಸುತ್ತಾರೆಂತಲೂ, ಅವರಿಬ್ಬರೂ ಸಂಸ್ಥಾನದ ಕಾರು...ರ್ಯಗಳನ್ನು ಕ್ರಮಕ್ಕೆ ತಂದಿಟ್ಟು ತುಂಬಾ ವಿಶದವಾಗಿ ರಾಜ್ಯ ...ಪಾಲಿಸುತ್ತಾರೆಂತಲೂ, ಇಂಡಿಯಾ ಗವರ್ನಮೆಂಟಿನವರೂ ...ಪುರದ ಸಂಸ್ಥಾನದ ಪ್ರಜೆಗಳೂ ಇವರ ಸಾಹಸ ಕಾರ್ಯಗಳ ...ಪ್ರಜಾ ಪ್ರೀತಿಯನ್ನೂ ಮೆಚ್ಚಿ ಕೊಂಡಾಡುವರೆಂತಲೂ ಸಬಿ...ಹೇಳಿದರು ಅವರಿಬ್ಬರೂ ಕೆಲಸದಿಂದ ನಿವೃತ್ತರಾಗುವರೆಂ...ಬದ್ಧಿಯನ್ನು ಕೇಳಿ ಸಭಿಕರೆಲ್ಲಾ ತುಂಬಾ ವ್ಯಸನಪಟ್ಟರು

****

ವೈಸ್‌ರಾಯಿ ಲಾರ್ಡ್ ಕರ್ಜನರವರು ಕಲ್ಕತ್ತಾ ಪಟ್ಟಣದ ...ನಿವರ್ಸಿಟಿ ಎಂಬ ವಿದ್ಯಾನಿಲಯದಲ್ಲಿ ಹಿಂದುಸ್ಥಾನದ ಬಾಲಕ...ರ ಕುರಿತು ಬುದ್ಧಿಮಾತುಗಳನ್ನು ಹೇಳಿ ಉಪನ್ಯಾಸ ಮಾಡಿದಾ...ಆಗ ಅವರು ಹಿಂದುಸ್ಥಾನದ ಪ್ರಜೆಗಳ ಗುಣನಡತೆಯ ಬಗ ...ಅನ್ಯಾಯವಾಗಿ ಹೀಯಾಳಿಸಿದರೆಂತಲೂ, ಇದು ಸಹಜವಾದ...ವೆಂತಲೂ ಪ್ರತಿಭಟಿಸುವುದಕ್ಕಾಗಿ ಕಳೆದ ವಾರ ಕಲ್ಕತ್ತಾ ...ದ ಟೌನ್ ಹಾಲ್ ಬಂಗಲೆಯಲ್ಲಿ ಬಹುಜನ ಹಿಂದು ದೊಡ್ಡ...ವರೂ ವಿದ್ಯಾವಂತರು ಸಭೆ ಸೇರಿದ್ದರು ಡಾಕ್ಟರ್ ರಾಷ್...ಬಿಹಾರಿ ಘೋಷ್‌ಯವರು ಸಭಾನಾಯಕರಾಗಿದ್ದು ಲಾರ್ಡ್ ...ರ್ಜನರವರು ವೈಸ್‌ರಾಯಿ ಪದವಿಯನ್ನು ಸ್ವೀಕರಿಸಿ ಬಂದಾರಭ್ಯ ...ಹಿಂದುಸ್ಥಾನದ ವರ್ತಮಾನ ಪತ್ರಿಕೆಗಳ ವಾಗ್ಬಂಧನೆಮಾಡಿ...ತಲೂ, ವಿದ್ಯಾಭ್ಯಾಸದ ಇಲಾಖೆಯನ್ನು ಸರ್ಕಾರದಿಂದಾಗಿ ...ದಿಸಿ ಈ ದೇಶದ ಜನರಿಗೆ ವಿದ್ಯೆಯನ್ನು ಕಷ್ಟಸಾಧ್ಯವಾಗಿ...ಟ್ಟರೆಂತಲೂ, ಬಂಗಾಳಾ ಆಧಿಪತ್ಯವನ್ನು ವಿಭಾಗ ಮಾಡುವ...ರ್ಯ ಮಾಡಿದಾರೆಂತಲೂ ಉಪನ್ಯಾಸಮಾಡಿದರು ಆ ದಿನ ಈ ...ರು ಗೊತ್ತುಮಾಡಿದ ವಿಷಯಗಳನ್ನು ಇಂಡಿಯಾ ಸ್ಟೇಟ್ ...ರಿಯವರಿಗೂ ಕೂಡ ಅರಿಕೆಮಾಡಿಕೊಳ್ಳಬೇಕೆಂದು ತೀರ್ಮಾ...ಕೊಂಡರು

****

...ಹಿಂದು ದೇಶಕ್ಕೆ ಸೇರಿದ ಕೆಲವು ಜಮೀನ್ದಾರಿಗಳಲ್ಲಿ ಪಥಾ... ಸೇರಿಕೊಂಡು, ಇಟ್ಟಿಗೆಗಳನ್ನು ಮಾಡಿಕೊಡುವುದಾಗಿ ...ದಾರರಿಂದ ಕಂಟ್ರಾಕ್ಟ್ ಪಡೆದು ಒಪ್ಪಿಕೊಂಡಷ್ಟು ಇಟ್ಟಿಗೆ ...ಕೊಡದೇನೇ ಅವರಿಂದ ಹೆಚ್ಚು ಹಣ ತೆಗೆದುಕೊಳ್ಳುತ್ತಲೂ, ...ದಿದ್ದವರನ್ನು ಬಲಾತ್ಕಾರ ಮಾಡಿ ಹಿಂಸಿಸಿ ವಸೂಲ್ಮಾಡಿಕೊಳ್ಳು...ಇದ್ದರು ಜಮೀನ್ದಾರರು ಅವರ ಮೇಲೆ ಸರಿಯಾದ ...ರ್ಯ ಮಾಡುವುದಕ್ಕೆ ಹೆದರುತ್ತಲೂ ಸುಮ್ಮನಿದ್ದು ದುಃಖ ...ಪಡುತ್ತಲೂ, ಮನಸ್ಸಿನಲ್ಲಿಯೇ ಕೊರಗುತಲೂ ಇದ್ದರು. ...ಗಿ ಯುದ್ಧರಾಂ ಕೇವಲರಾಂ ಎಂಬೊಬ್ಬ ಜಮೀನ್ದಾರನು ...ವಾಗಿ ಅವರ ಮೇಲೆ ಫಿರ್ಯಾದು ಮಾಡಿದನು. ಇದು ಹ್ಯಾ...ಹೇಗೆಂದರೆ—ಇವನು ಸುಮಾರು ೩೦—೪೦ ಜನ ಪಥಾನರಿಗೆ ...೦೦೦ ಇಟ್ಟಿಗೆ ಮಾಡಿಕೊಡಬೇಕೆಂದು ಕಂಟ್ರಾಕ್ಟ ಕೊಟ್ಟ ...ಆ ಪಥಾನರು ೧೦,೦೦೦ ಇಟ್ಟಿಗೆ ಮಾಡಿಕೊಟ್ಟು, ೩೦,೦೦೦ ...ಟ್ಟಿಗೆಗೆ ದುಡ್ಡುಕೊಡಬೇಕೆಂದು ತಗಾದೆಮಾಡಿ, ಅವನ ಮನೆಗೆ ...ಗಲಾಟೆ ಮಾಡಲಾರಂಭಿಸಿದರು ಮ॥ ಯುದ್ಧರಾಮನು ...ಕೈಕರನ್ನೆಲ್ಲಾ ಮನೆಯ ಬಳಿ ಇರುವಂತೆ ಗುಟ್ಟಾಗಿ ಹೇಳಿ...ಹಿತ್ತಲಕದೆಯಿಂದ ಗೋಡೆ ಇಳಿದುಹೋಗಿ ಮ್ಯಾಜಿಸ್ಟ್ರೇಟ...ಗೆ ತಿಳಿಸಿದನು. ಒಡನೆಯೇ ಮ್ಯಾಜಿಸ್ಟ್ರೇಟರು ಅವನ ಮನೆ...ಗೆ ಬಂದು, ಆ ೩೦—೪೦ ಜನ ಪಥಾನರಿಗೆ ಬಳ್ಳೇಮಾಡು...ವೆ, ಅವರಿಗೆ ಕೈಕೋಳಗಳನ್ನು ತೊಡಿಸಿ ಕರೆದುಕೊಂಡು ...ಹೋದರು ಮೊಕದ್ದಮೆ ನಡಿಯುತ್ತಾ ಇದೆ.

****

ವೈಸ್‌ರಾಯಿ ಲಾರ್ಡ್ ಕರ್ಜನ್ ಯವರ ಪತ್ನೀಯರವರು ಬಹಳ ...ಘಾತಕವಾದ ರೋಗದಿಂದ ಬಿಡುಗಡೆ ಹೊಂದಿ ವಾಪಸು ಹಿಂ...ದುಸ್ಥಾನಕ್ಕೆ ಬಂದಕೂಡಲೆ ಕಳೆದ ವಾರ ಕಲ್ಕತ್ತಾ ಪಟ್ಟಣದ ಮಹಾ...ದೇವಾಲಯದಲ್ಲಿ ಸಾವಿರಾರು ಯೂರೋಪಿಯರ್ ದೊರೆಗಳೂ ದೊ...ರಸಾನಿಯರೂ ಸೇರಿ, ಆಕೆಯವರಿಗೆ ಕಾಯಿಲೆ ವಾಸಿಯಾದ್ದಕ್ಕೆ ...ಪರಮಾತ್ಮನಿಗೆ ಕೃತಜ್ಞತಾ ಪೂರ್ವಕವಾದ ಪ್ರಾರ್ಥನೆಗಳನ್ನು ...ಸಮರ್ಪಣೆ ಮಾಡಿದರು ವೈಸ್‌ರಾಯಿ ಯವರು, ಲೇಡಿ ಕರ್ಜನ್ ...ರು, ಬಂಗಾಳಾ ಲೆಫ್ಟಿನೆಂಟ್ ಗವರ್ನರವರ ಪತ್ನೀಯರವರು, ...ದುಸ್ಥಾನದ ಸೈನ್ಯಾಧಿಪತಿ ಲಾರ್ಡ್ ಕಿಚ್ನರ್‌ಯವರು, ಇನ್ನೂ ...ಅನೇಕರು ದೇವಾಲಯದಲ್ಲಿ ಹಾಜರಾಗಿದ್ದರು ಲಾರ್ಡ್ ...ಪ್ಪರೆಂಬ ಗುರುಗಳು ಭಗವದಾರಾಧನೆಯನ್ನು ನಡಿಸಿ, "ಪ್ರಾ...ರ್ಥನೆ, ಅದರ ಪ್ರಯೋಜನ, ಆದರಿಂದ ಜೀವಾತ್ಮಕ್ಕುಂಟಾಗುವ ...ಸುಖ" ಈ ವಿಷಯವನ್ನು ಕುರಿತು ಉಪನ್ಯಾಸ ಮಾಡಿ, ಸಭಿಕರ ...ಮನಗಳನ್ನು ಸೆಳೆದರು. ಸಮಸ್ತರೂ ಎಡೆಬಿಡದೆ ಪ್ರಾರ್ಥನೆ ಮಾಡುತ್ತಿರಬೇಕು. ಕಷ್ಟ ದುಃಖ ಸಂಕಟಗಳು ಮನಸ್ಸನ್ನು ಕರಗಿಸಿ ಪ್ರಾರ್ಥನೆ ಮಾಡುವಂತೆ ಮನುಷ್ಯನನ್ನು ಪ್ರೇರೇಪಿಸುವವು ಅನೇಕವೇಳೆ ಪರಮಾತ್ಮನು ಪ್ರಾರ್ಥನೆಗಳನ್ನು ಲಾಲಿಸಿ ನೆರವೇರಿಸಿ ಕೊಟ್ಟಿರುತ್ತಾನೆ. ಪ್ರಾರ್ಥನೆಯಲ್ಲಿ ಇಂಥಾ ಶಕ್ತಿಯುಂಟೆಂಬುದು ಮನುಷ್ಯನಿಗೆ ದೃಷ್ಟಾಂತವಾಗಿ, ಆತನ ಮಹಿಮೆಯನ್ನು ಹೊಗಳಿರುವರು ಪ್ರತ್ಯಕ್ಷದಲ್ಲಿ ಹಿಂದುಸ್ಥಾನದ ಪ್ರಜಾ ಕೋಟಿಗಳು ಭಗವಂತನಿಗೆ ಅರ್ಪಿಸಿದ ಮನಃಪೂರ್ವಕವಾದ ಪ್ರಾರ್ಥನೆಯನ್ನು ಆತನು ಅಲ್ಲಗಳೆಯದೆ, ಲೇಡಿ ಕರ್ಜನರವರಿಗೆ ಆರೋಗ್ಯಾಭಿವೃದ್ಧಿಯನ್ನು ದಯಪಾಲಿಸಿ, ತನ್ನ ಕರುಣೆಯನ್ನು ದೃಷ್ಟಾಂತಪಡಿಸಿರುತ್ತಾನೆ ಇದಕ್ಕಾಗಿ ನಾವುಗಳೆಲ್ಲಾ ಆತನ ಮಹಿಮೆಯನ್ನು ಕೊಂಡಾಡುವವರಾಗಿದೇವೆ ಮತ್ತು ನಾವು ಸರ್ವದಾ ಪ್ರಾರ್ಥನೆ ಮಾಡುವುದನ್ನು ಬಿಡಬಾರದು ಎಂಬೀ ರೀತಿಯಾಗಿ ಉಪನ್ಯಾಸ ಮಾಡಿದರು.

*****

ಮದರಾಸ್ ಪಟ್ಟಣಕ್ಕೆ ಸೇರಿದ ಗಿಂಡಿ ಎಂಬ ಭಾಗದಲ್ಲಿ ಒಂದು ಪರಿಶೋಧನಾ ವೈದ್ಯಶಾಲೆಯನ್ನು ಗವರ್ನರ್ ಲಾರ್ಡ್ ಆಂಪ್ಟಿಲ ಯವರು ಪ್ರತಿಷ್ಠೆ ಮಾಡಿದರು ಆ ಕಾಲದಲ್ಲಿ ಅವರು ತಿಳಿಸಿದ್ದೇನೆಂದರೆ—ವೈದ್ಯವು ಮೊದಲು ಈ ಪೂರ್ವದಿಗ್ದೇಶಗಳಲ್ಲೇ ಹುಟ್ಟಿ ಅಭ್ಯಾಸಿತವಾಯಿತು ತುಂಬಾ ಅಭಿವೃದ್ಧಿ ಸ್ಥಿತಿಗೆ ಬಂದಿತು ತರುವಾಯ ಅದು ಪಶ್ಚಿಮ ರಾಜ್ಯಗಳಿಗೆ ಹೋಗಿ ಕೆಲವು ನೂತನ ಉಡುಪುಗಳನ್ನು ಧರಿಸಿಕೊಂಡು ಯಥಾಪ್ರಕಾರ ತನ್ನ ತವರು ಮನೆಗೇ ಬಂದಿರುತ್ತದೆ. ಆರೋಗ್ಯ ಸೂತ್ರಗಳು ಸಕಲ ಮತಸ್ಥರಲ್ಲೂ ಉಂಟೇ ಉಂಟು ಪಶ್ಚಿಮ ರಾಜ್ಯಗಳವರು ಇನ್ನೂ ಅಂಧಕಾರದಲ್ಲೇ ತಪನಾಮುತ್ತಾ ಇರುವಾಗ್ಯೆ ಈ ರಾಷ್ಟ್ರದವರು ಬುದ್ಧಿಶಾಲಿಗಳಾಗಿ ಅನೇಕ ನೂತನ ಸಾಧನ ಸಂಪತ್ತುಗಳನ್ನು ಕಂಡು ಹಿಡಿದು, ಅಭ್ಯಾಸದಲ್ಲಿಟ್ಟುಕೊಂಡಿದ್ದರು ಪ್ಲೇಗ್ ಮುಂತಾದ ಸಾಂಕ್ರಾಮಿಕ ಜಾಡ್ಯಗಳು ಬಂದ ಕಾಲದಲ್ಲಿ ಅದಿಯಿಂದಲೂ ಈ ರಾಷ್ಟ್ರದ ಜನರು ಮನೆಮಠಗಳನ್ನು ಬಿಡುತ್ತಲೂ ವಸತಿ ಮಾಡಿಕೊಂಡೇ ಬಂದು ಸೇರುತ್ತಲೂ ಇದಾರೆ ಇಂಥಾ ಆರೋಗ್ಯ ವಿಚಾರಗಳನ್ನು ಕುರಿತು ಪರಿಶೋಧನೆ ಮಾಡುವುದಕ್ಕಾಗಿಯೇ ಈ ವೈದ್ಯಶಾಲೆಯನ್ನು ಪ್ರತಿಷ್ಟಿಸಲಾಗಿದೆ ಎಂಬುದೇ ಈ ವೈದ್ಯಶಾಲೆಯಲ್ಲಿ ನಡೆಯುವ ಕಾರ್ಯಗಳು ಮೂರು ವಿಧಗಳಾಗಿರುವವು. ಮೊದಲನೆಯದು, ಸಿಡುಬು ಏಳದಂತೆ ಶಿಶುಗಳಿಗೆ ಹಾಕುವ ಹಾಲನ್ನು ಈ ಆಸ್ಪತ್ರೆಯಲ್ಲಿ ತಯಾರುಮಾಡಿ, ಮದರಾಸ್ ಆಧಿಪತ್ಯಕ್ಕೆಲ್ಲಾ ಕಳುಹಿಸಿಕೊಡುತ್ತಾರೆ ಈಗ ಈ ಆಸ್ಪತ್ರೆಯಲ್ಲಿ ತಯಾರಾಗುವಷ್ಟು ಸಿಡುಬಿನ ಹಾಲು ಪ್ರಪಂಚದ ಇನ್ನಾವ ಆಸ್ಪತ್ರೆಯಲ್ಲೂ ಆಗುವುದಿಲ್ಲ. ತಿಂಗಳೊಂದಕ್ಕೆ ಒಂದುವರೆ ಲಕ್ಷ ಜನರಿಗೆ ಸಿಡುಬು ಹಾಕುವಷ್ಟು ಹಾಲು ಈಗ ತಯಾರಾಗುತ್ತಿದೆ ದಿನೇ ದಿನೇ ಇನ್ನೂ ಹೆಚ್ಚುಹೆಚ್ಚಾಗಿ ತಯಾರ್ಮಾಡುತ್ತಿದಾರೆ ಎರಡನೆಯದಾಗಿ, ಈ ಆಸ್ಪತ್ರೆಯಲ್ಲಿ ರೋಗ ಕ್ರಿಮಿಕೀಟಗಳನ್ನು ಶೋಧನೆ ಮಾಡಿ ಅವುಗಳ ಗುಣ ಲಕ್ಷಣಗಳನ್ನು ಕುರಿತು ಆಗಿಂದಾಗ್ಯೆ ಪ್ರಕಟಿಸುತ್ತಾ ಬರುವರು. ಪ್ಲೇಗ ಮಲೇರಿಯಾ ಜ್ವರ, ಹುಚ್ಚುನಾಯಿ ಕಚ್ಚಿದ್ದರ ಲಕ್ಷಣ, ವಿಷಮಶೀತ ಜ್ವರ, ನಾರುಹುಣ್ಣು, ಕುಷ್ಟ, ಈ ಮೊದಲಾದ ರೋಗಗಳನ್ನು ಕುರಿತು ಪರಿಶೋಧನೆ ಮಾಡುವರು, ನೊಣ, ಸೊಳ್ಳೆ, ಹುಳು, ಕ್ರಿಮಿಕೀಟಗಳು, ಈ ಪ್ರಾಣಿಗಳಿಗೂ ರೋಗಿಗಳಿಗೂ ಇರುವ ಸಂಬಂಧ ಮೊದಲಾದವುಗಳನ್ನು ಕಂಡು ಹಿಡಿದು ತಿಳಿಸುವುದು ಮೂರನೆಯದಾಗಿ, ಪ್ರಜೆಗಳ ಆರೋಗ್ಯಕ್ಕೆ ಕಾರಣವಾದ ಕುಡಿಯುವ ನೀರಿನ ಗುಣಲಕ್ಷಣಗಳನ್ನೂ, ಶುದ್ಧಿ ಮಾಡುವ ವಿಧಾನಗಳನ್ನೂ ರೋಗಜನ್ಯವಾದ ನೀರುಗಳನ್ನು ಆರೋಗ್ಯಕರವಾಗಿ ಮಾಡಿಕೊಳ್ಳುವ ವಿಧಾನಗಳನ್ನೂ ಪರಿಶೋಧನೆ ಮಾಡಿ, ತಿಳಿದು ಬಂದುದನ್ನು ಪ್ರಕಟಿಸುತ್ತಾ ಬರುತ್ತಾರೆ

ವಿದೇಶ ವರ್ತಮಾನಗಳು

ವಿಲಾಯಿತಿ ರಾಜ್ಯದ ಯುವರಾಜರವರು ಹಿಂದುಸ್ಥಾನದ ಪ್ರಯಾಣಕ್ಕೆ ರಿನೌನ್ ಎಂಬ ಹಡಗನ್ನು ಗೊತ್ತು ಮಾಡಿಕೊಂಡಿದಾರೆ

****

ಬಲ್ಗೇರಿಯಾರಾಜ್ಯದ ಯುವರಾಜರಾದ ಫರ್ಡಿನಾಂಡ್ ರಾಜಕುಮಾರರು ವಿಲಾಯಿತಿ ರಾಜ್ಯದ ದೊರೆಯವರನ್ನು ಕಂಡು ಹೋಗುವುದಕ್ಕೆ ಲಂಡನ್ ಪಟ್ಟಣಕ್ಕೆ ಹೋಗಿದಾರೆ

****

ಲಂಡನ್ ಪಟ್ಟಣದಲ್ಲಿ ಜೇಂಸ್ ಮೆಕ್ಕಾಣ ಎಂಬೊಬ್ಬ ಖಲಾಸಿನವನು ಮೊನ್ನೆ ತಾನೇ ೧೦೪ ನೆ ವಯಸ್ಸಿನ ಹುಟ್ಟಿದ ಹಬ್ಬವನ್ನು ಮಾಡಿಕೊಂಡನು ಅವನಿಗಿಂತ ಮುದುಕರು ಇನ್ಯಾರೂ ಲಂಡನ್ ಪಟ್ಟಣದಲ್ಲಿ ಇರುವುದಿಲ್ಲ.

*****

ರಷ್ಯಾ ಚಕ್ರವರ್ತಿ ಜಾರ್‌ಯವರ ಚಿಕ್ಕಪ್ಪಂದಿರಾದ ಗ್ರ್ಯಾಂಡ್ ಡ್ಯೂಕ್ ಸರ್ಜಿಯಸ್ ಯವರನ್ನು ಪ್ರಜೆಗಳಲ್ಲಿ ಒಬ್ಬನು ಕೊಂದು ಹಾಕಿದನಷ್ಟೆ ಸರ್ಕಾರದವರು ಆ ಮೊಕದ್ದಮೆಯಲ್ಲಿ ೬೦ ಜನರನ್ನು ಹಿಡಿದು ಸೆರೆಯಲ್ಲಿಟ್ಟಿದಾರೆ.

****

ಲಂಡನ್‌ಪಟ್ಟಣದ ಯೂನಿವರ್ಸಿಟಿ ಕಾಲೇಜೆಂಬ ವಿದ್ಯಾಶಾಲೆಯ ಮೂಲಧನಕ್ಕೆ ಫಿಷ್‌ಮಾಂಗರ್ ಕಂಪನಿಯವರು ೧೫,೦೦೦ ರೂಪಾಯನ್ನು ಕೊಟ್ಟರು ಈಗ ಆ ಫಂಡಿನಲ್ಲಿ ೩೦ ಲಕ್ಷ ರೂಪಾಯಿ ಕೂಡಿದೆ ಇನ್ನೂ ೨೦ ಲಕ್ಷ ರೂಪಾಯಿ ವಸೂಲ್ಮಾಡುತ್ತಿದಾರೆ.

ರಷ್ಯಾರಾಜ್ಯದ ವಾರ್ಸಾನಗರದಲ್ಲಿ ದಂಗೆ ಮಾಡುತ್ತಿದ್ದ ಪ್ರಜೆಗಳ ಮೇಲೆ ಗುಂಡು ಹೊಡೆದು ಚದರಿಸಬೇಕೆಂಬ ಪ್ರಿನ್ಸ್ ಆಂಡ್ರೊನಿಕಾಫ್ ಎಂಬ ರಾಜಕುಮಾರನನ್ನು ದಂಗೇಕೋರರೇ ಕೊಂದು ಹಾಕಿದರೆಂತಲೂ, ಅವರು ಆತ್ಮಹತ್ಯ ಮಾಡಿಕೊಂಡರೆಂಬ ವರ್ತಮಾನವು ನಿಜವಲ್ಲವೆಂತಲೂ ಪ್ರಕಟವಾಗಿದೆ.

****

ವಿಲಾಯಿತಿ ರಾಜ್ಯದಲ್ಲಿ ವ್ಯವಸಾಯವು ದಿನೇ ದಿನೇ ಕಡಿಮೆಯಾಗುತ್ತಿದೆ ಎಂತಲೂ, ಅದನ್ನು ವೃದ್ಧಿ ಮಾಡದಿದ್ದರೆ ರಾಜ್ಯವು ಕ್ಷೀಣಗತಿಗೆ ಬರುವುದೆಂತಲೂ, ಇದಕ್ಕಾಗಿ ಸರ್ಕಾರದವರು ಜಮೀನ್ ಕಂದಾಯ ಕೌಳಗಿಗಳನ್ನು ಕೆಲವು ಕಾಲದ ವರೆಗಾದರೂ ಕಡಿಮೆ ಮಾಡಿಕೊಡಬೇಕೆಂತಲೂ ಮ॥ ಇಂಗ್ಲಿಸ್ ಪಾಲ್‌ಗ್ರೇವ್ ಎಂಬಾತನು ಒಂದು ದೊಡ್ಡ ಸಭೆಯಲ್ಲಿ ಉಪನ್ಯಾಸ ಮಾಡಿದನು.

****

ವಿಲಾಯಿತಿ ರಾಜ್ಯದ ಜ್ಯೋತಿಷ ಶಾಸ್ತ್ರಜ್ಞರ ಸಭೆಯಲ್ಲಿ ಮ॥ ಮಾಂಡರ್ ಎಂಬ ಪಂಡಿತನು ಸೂರ್ಯ ಬಿಂಬದಲ್ಲಿ ಈಗ ಕಾಣುವ ಕಪ್ಪು ಚುಕ್ಕಿಯ ವಿಷಯವಾಗಿ ಉಪನ್ಯಾಸ ಮಾಡುತ್ತಾ ಈ ಚುಕ್ಕಿಯು ೩೫ ವರುಷಗಳಿಂದ ಇಷ್ಟು ವಿಸ್ತೀರ್ಣ ಉಳ್ಳದ್ದಾಗಿರಲಿಲ್ಲವೆಂತಲೂ, ಅದು ಸುಮಾರು ಒಂದು ಲಕ್ಷ ಮೈಲಿ ಉದ್ದವೂ ೬೦ ಸಾವಿರ ಮೈಲಿ ಅಗಲವೂ ಉಳ್ಳದ್ದಾಗಿದೆ ಎಂತಲೂ ತಿಳಿಸಿದನು

****

ರಷ್ಯಾರಾಜ್ಯದಲ್ಲಿ ವಾರ್ಸಾ—ವಿಯನ್ನಾ ರೈಲ್ವೆ ನೌಕರರು ಕೆಲಸಕ್ಕೆ ಬಾರದೆ ನಿಂತು ಬಿಟ್ಟರು. ರೈಲ್ವೆ ಮ್ಯಾನೆಜರು ಅವರಿಗೆ ಲಾಭ ಕೂಲಿಯನ್ನು ಹೆಚ್ಚಾಗಿ ಕೊಡುತ್ತೇವೆಂದು ಹೇಳಿ ೧೦ ಲಕ್ಷ ರೂಪಾಯಿ ಮ್ಯಾಂಕ್ಷನ್ ಮಾಡಿದ್ದಲ್ಲದೆ ಅವರಿಂದ ದಿನ ಒಕ್ಕೆ ೧೦ ಗಂಟೆ ಹೊತ್ತು ಮಾತ್ರ ತೆಗೆದುಕೊಳ್ಳಬೇಕೆಂದು ರಿಯಾಯಿತಿ ತೋರಿಸಿದುದುಂ ಕೊಟ್ಟರು ಕೂಲಿಕಾರರು ಅದನ್ನು ಒಪ್ಪಿಕೊಂಡು, ಮತ್ತೆ ಕೆಲಸದ ಮೇಲೆ ಹಾಜರಾದರು.

****

ಇಂಗ್ಲಿಷ್ ರಾಜ್ಯದ ಸ್ವಾಸ್ಥ್ಯವಾದ ಜನತಾ ಸಂಸ್ಥಾನದಲ್ಲಿ ದೇಶ ಸಂರಕ್ಷಣೆಗೋಸ್ಕರ ವಿಲಾಯಿತಿಯಿಂದ ಸೈನ್ಯವನ್ನು ಕಳುಹಿಸಿ ಇಟ್ಟಿದಾರೆ. ಈಗ ಆ ಸಂಸ್ಥಾನದವರು ತಮ್ಮ ದೇಶದ ರಕ್ಷಣೆಯನ್ನು ಗಳನ್ನೇ ನೇಮಿಸಿಕೊಳ್ಳುವುದಾಗಿಯೂ ಬೇಕಾದ ಯುದ್ಧ ಸಾಮಗ್ರಿಗಳನ್ನು ತಾವೇ ತಮ್ಮ ರಾಜ್ಯದಲ್ಲಿ ತಯಾರ್ಮಾಡಿಕೊಳ್ಳುತ್ತೇವೆಂತಲೂ ತಿಳಿಸಿದ್ದರಿಂದ ಅಲ್ಲಿರುವ ಇಂಗ್ಲಿಷ್ ಸೈನ್ಯವನ್ನೆಲ್ಲಾ ನಾಳೆ ಜುಲೈ ತಿಂಗಳಲ್ಲಿ ವಾಪಸು ವಿಲಾಯಿತಿಗೆ ಕರಿಸಿಕೊಳ್ಳುವರೆಂದು ತಿಳಿದುಬಂದಿದೆ.

*****

ಲಂಡನ್ ಪಟ್ಟಣದ ಒಂದು ದೊಡ್ಡ ರತ್ನದ ಅಂಗಡಿಯಲ್ಲಿ ಆಗ್ರಾ ವಜ್ರವೆಂಬುದನ್ನು ಹಿಂದಿನವಾರ ೨೬,೫೦೦ ರೂಪಾಯಿಗೆ ಹರಾಜು ಹಾಕಿದರು ಕಳೆದ ೧೫೨೬ ನೆ ಇಸವಿಯಲ್ಲಿ ಬಾಬರ್ ಎಂಬ ಮೊಗಲಾಯಿ ಚಕ್ರವರ್ತಿಯು ಆಗ್ರಾ ಯುದ್ಧದಲ್ಲಿ ಈ ವಜ್ರವನ್ನು ಸಂಪಾದಿಸಿದನು. ಆಚೆಗೆ ಅದು ಅನೇಕರ ಕೈತಪ್ಪಿ ದೆಹಲಿಯ ಕಡೇ ಮೊಗಲಾಯಿ ದೊರೆಯ ಬಳಿಗೆ ಬಂದಿತು ೧೮೫೭ ರಲ್ಲಿ ದಂಗೆಯವರು ಅರಮನೆಯನ್ನು ಲೂಟಿಮಾಡಿ, ಈ ವಜ್ರವನ್ನು ಅಪಹರಿಸಿದರು ತರುವಾಯ ಅದನ್ನು ವಿಲಾಯಿತಿಯಲ್ಲಿ ಡ್ಯೂಕ ಆಫ್ ಬ್ರನ್ಸ್ವಿಕ್‌ಯವರು ಕೊಂಡುಕೊಂಡು ಸಾಣೆಹಿಡಿಸಿ, ೪೬ ರಿಂದ ೩೧॥ ಕ್ಯಾರೆಟ್ಟಿಗೆ ಅದರ ತೂಕವನ್ನು ಕಡಿಮೆ ಮಾಡಿಸಿದರು

*****

ಸಯಾಂ ರಾಜ್ಯದ ರಾಜಧಾನಿಯಾದ ಬ್ಯಾಂಕಾಕ್ ಪಟ್ಟಣದಲ್ಲಿ ಪ್ಲೇಗ್ ಪ್ರಾರಂಭವಾಗಿ ಪ್ರಜೆಗಳಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ ಪರಂಗಿ ಡಾಕ್ಟರುಗಳು ಬೀದಿಬೀದಿಗಳಲ್ಲಿ ಪ್ರತಿದಿನವೂ ನೂರಾರು ಜನರನ್ನು ಜಬ್ಬನಾಗಿದ್ದಾರೆಂತಲೂ ಸಣ್ಣನಾಗಿದ್ದಾರೆಂತಲೂ ಆರೋಗ್ಯವಾಗಿಲ್ಲವೆಂದು ಕಂಡು ಬರುತ್ತಾರೆಂತಲೂ ಕಾರಣ ಹೇಳಿ ಹಿಡಿದುಕೊಂಡು ಹೋಗಿ ಪ್ಲೇಗ್ ಕ್ಯಾಂಪಿನಲ್ಲಿ ಹಾಕಿ, ಮೂರು ದಿನಗಳ ತನಕ ಅವರ ಎದೆಯ ಮೇಲೆ ಹಿಮಗಡ್ಡೆಯನ್ನು ಇಟ್ಟು, ಅಷ್ಟರೊಳಗೆ ಅವರಿಗೆ ವಾಸಿಯಾಗದಿದ್ದರೂ ಮರಣವಾಗದಿದ್ದರೂ ಬೇರೆ ಔಷಧ ಕುಡಿಸಿ ಸಮಾಪ್ತಿ ಮಾಡಿಬಿಡುತ್ತಾರೆಂಬುದಾಗಿಯೂ ಇದಕ್ಕೆಲ್ಲಾ ತಮ್ಮ ದೊರೆಯು ರಾಜ್ಯದಲ್ಲಿಲ್ಲದಿರುವುದೇ ಕಾರಣವೆಂಬುದಾಗಿಯೂ ಸಾವಿರಾರು ಪ್ರಜೆಗಳು ಹೇಳಿಕೊಂಡು ಗುಳೆ ಎದ್ದಿರುತ್ತಾರೆ

*****

ಮ॥ ಎಚ್ ಬಿ ಕಾರ್ಲಿಸ್ ಎಂಬೊಬ್ಬ ಇಂಗ್ಲಿಷ್ ಪ್ರಜೆಯು ಬಹು ಕಾಲದಿಂದ ಜಪಾನಲ್ಲೇ ಇದ್ದುಕೊಂಡಿದ್ದನು. ಅವನು ಕೆಲವು ಕಾಲಕ್ಕೆ ಮುಂಚೆ ಪೋರ್ಟ್ ಆರ್ಥರಿಗೂ ಟೇಂಟ್ಸಿನ್ ಪಟ್ಟಣಕ್ಕೂ ಹೋಗಿ ಬಂದು, ರಷ್ಯಾ ಸೈನ್ಯಾಧಿಪತಿಗಳಿಂದ ೧,೫೦೦ ರೂಪಾಯಿ ಲಂಚ ತೆಗೆದುಕೊಂಡು, ಯೋಕೊಹಾಮಾ ಎಂಬ ಜಪಾನ್ ಪಟ್ಟಣದಿಂದ ಜಪಾನ್ ಸೈನ್ಯಗಳು ಇಷ್ಟಿಷ್ಟು ಇಂಥಿಂಥಾ ಯುದ್ಧ ಭೂಮಿಗೆ ಈ ಈ ದಿನಗಳಲ್ಲಿ ಹೊರಟಿವೆ ಎಂಬುದಾಗಿ ಕಾಗದ ಬರೆದು ರಷ್ಯಾ ಸೈನ್ಯಾಧಿಪತಿಗಳಿಗೆ ಕಳುಹಿಸಿದನು. ಜಪಾನವರು ಆ ಕಾಗದವನ್ನು ದಾರಿಯಲ್ಲಿ ಹಿಡಿದು, ಒಡೆದು ನೋಡಿಕೊಂಡು, ಈಗ ಆ ಮನುಷ್ಯನನ್ನು ಹಿಡಿದು ದರ್ಯಾಪ್ತಿ ಮಾಡುತ್ತಿದಾರೆಂದು ತಿಳಿದು ಬಂದಿದೆ ಇಂಥಾ ಅಪರಾಧಕ್ಕೆ ಜಪಾನವರು ೭ ವರುಷ ಕಠಿಣ ಸಜಾ ವಿಧಿಸುವುದೇ ತುಂಬಾ ಹೆಚ್ಚು.

ರಷ್ಯಾ ಜಪಾನ್ ಯುದ್ಧವು.

ರಷ್ಯಾದವರ ನಷ್ಟವೂ ಹಿಮ್ಮೆಟ್ಟುವುದೂ.

ಲಂಡನ್, ಮಾರ್ಚಿ ೧೩.—ನಾನು ಸೈನ್ಯವನ್ನೆಲ್ಲಾ ಹಿಮ್ಮೆಟ್ಟಿಸಿಕೊಂಡು ತೇಲಿಂಗನ್ನು ಕುರಿತು ಬರುತ್ತಿದ್ದೇನೆ. ಕಳೆದ ತಿಂಗಳ ೨೮ ರಿಂದ ಈ ತಿಂಗಳು ೧೧ ರ ತನಕ ನಮ್ಮ ಸೈನಿಕರಲ್ಲಿ ಗಾಯಪಟ್ಟ ೪೭,೫೮೧ ಜನರನ್ನು ಉತ್ತರದಿಕ್ಕಿಗೆ ಕಳುಹಿಸಿಕೊಟ್ಟಿದ್ದೇನೆ ಎಂಬುದಾಗಿ ಜನರಲ್ ಕುರೋಪಾಟ್ಕಿನರವರು ತಿಳಿಸುತ್ತಾರೆ. ಇದಲ್ಲದೆ ಅವರು ತಮ್ಮ ಕಡೆ ೮೦,೦೦೦ ಮಂದಿ ಗಾಯಪಟ್ಟರೆಂದೂ ಹಿಮ್ಮೆಟ್ಟಿ ಹೋಗುವುದು ತುಂಬಾ ಕಷ್ಟವಾಗಿದೆ ಎಂದೂ ಶತ್ರುಗಳು ವಿರಾಮವಿಲ್ಲದೆ ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡು ಹೊಡೆಯುತ್ತಿದ್ದಾರೆಂದೂ ಎರಡು ರೆಜಿಮೆಂಟು ಸೈನಿಕರಲ್ಲಿ ೬೯ ಮಂದಿ ಮಾತ್ರವೇ ಉಳಿದುಕೊಂಡಿದ್ದಾರೆಂದೂ ತಾ. ೧೧ ರಲ್ಲಿ ಬರೆದಿರುವರು.

ಜಪಾನವರ ರಿಪೋರ್ಟು.

ಜಪಾನ್ ಜನರಲ್ ಮಾರ್ಷಲ್ ಓಯಾಮಾಯವರು ಯುದ್ಧಭೂಮಿಯಿಂದ ಬರೆಯುವುದೇನೆಂದರೆ—ಶತ್ರುವಾರದಿಂದ ಲೆಕ್ಕವಿಲ್ಲದಷ್ಟು ರಷ್ಯಾ ಸೈನಿಕರು ಸ್ವೇಚ್ಛೆಯಿಂದ ದಿಕ್ಕಾಪಾಲಾಗಿ ಚದರಿ ಹೋಗುತ್ತಿದ್ದಾರೆ. ಅವರ ಸ್ಥಿತಿಯು ತುಂಬಾ ಪರಿತಾಪಕರವಾಗಿದೆ. ನಮ್ಮ ಸೈನ್ಯವು ಸ್ವಲ್ಪವೂ ಅವರಿಗೆ ಸ್ಥಳಕೊಡದೆ, ಅವರ ಮೇಲೆ ಗುಂಡು ಹೊಡೆಯುತ್ತಾ ಹಿಂಬಟ್ಟಿಸಿಕೊಂಡು ಹೋಗುತ್ತಾ ಇದೆ. ಇದರಿಂದಲೂ ಅವರಲ್ಲಿ ಅನೇಕರು ನಷ್ಟಪಡುತ್ತಿರುವರು. ಮುಕ್ಡೆನ್ ಬಳಿ ಎಲ್ಲಾ ಕಡೆಗಳಲ್ಲೂ ಶತ್ರುಗಳ ಹೆಣದ ರಾಶಿಗಳು ಅನೇಕವಾಗಿ ಬಿದ್ದಿವೆ ಇವುಗಳನ್ನೆಲ್ಲಾ ಸಾಗಿಸಿ ದಫನ್ ಮಾಡುತ್ತಿದ್ದೇವೆ. ದಿನಾಲೂ ಶತ್ರುಗಳು ಬಹು ಮಂದಿ ಬಂದು ಶರಣಾಗತರಾಗುತ್ತಿದ್ದಾರೆ

ಜಪಾನಿನವರಿಗೆ ಸಿಕ್ಕಿದ ಕೊಳ್ಳೆ.

ಜಪಾನಿನವರಿಗೆ ಕಳೆದ ಬುಧವಾರದ ವರೆಗೆ ೬೦ ಫಿರಂಗಿಗಳು, ೨,೦೦,೦೦೦ ಷೆಲ್ ಎಂಬ ಗುಂಡುಗಳು. ೨,೫೦,೦೦,೦೦೦ ತೋಟಾಗಳು, ವಿಪರೀತ ಸಾಮಾನುಗಳು ಸಿಕ್ಕಿರುವವು. ಅವರ ಪೂರ್ವಭಾಗದ ಸೈನ್ಯಕ್ಕೆ ಸಿಕ್ಕಿರುವ ಪದಾರ್ಥಗಳು ಇಷ್ಟೆಂದು ಇನ್ನೂ ತಿಳಿಸಿಲ್ಲ. ರಷ್ಯಾ ಜನರಲ್ ನಾಕಿಯೊರ್ಹಾಫ್ ಯವರೂ ಜಪಾನಿನವರಿಗೆ ಕೈಸೆರೆ ಸಿಕ್ಕಿರುತ್ತಾರೆ. ರಷ್ಯಾದವರು ಗಾಬರಿಪಟ್ಟು ಫಿರಂಗಿ ಮೊದಲಾದ ಯುದ್ಧಸಾಮಗ್ರಿಗಳನ್ನೂ ಆಹಾರದ ಪದಾರ್ಥಗಳನ್ನೂ ಅಲ್ಲಲ್ಲೇ ಬಿಟ್ಟು ದಿಕ್ಕಾಪಾಲಾಗಿ ಓಡುತ್ತಿದ್ದಾರೆ.

ಮುಕ್ಡೆನ್ ಯುದ್ಧದ ವಿವರಣೆ.

ಮುಕ್ಡೆನ್ ಯುದ್ಧವನ್ನು ಕುರಿತು ಬರೆಯುವಲ್ಲಿ ವರ್ತಮಾನಪತ್ರಿಕೆಗಳೆಲ್ಲಾ—ಈ ಯುದ್ಧವು ಬಹು ಅಗಾಧವಾದುದೆಂತಲೂ ಪ್ರಪಂಚದ ಚರಿತ್ರೆಗಳಲ್ಲಿ ಇಂಥಾ ಯುದ್ಧ ನಡೆದ ವೃತ್ತಾಂತವೇ ಇಲ್ಲವೆಂತಲೂ ಹೇಳುತ್ತಿವೆ.

ಹಿರ್ಸಿಕಿಂಗ್ ಯುದ್ಧದಲ್ಲಿ ರಷ್ಯಾದವರ ನಷ್ಟ.

ಲಂಡನ್, ಮಾರ್ಚಿ ೧೪.—ಹಿಸಿಕಿಂಗ್ ಪ್ರಾಂತ್ಯದಲ್ಲಿ ರಷ್ಯಾ ಸೈನಿಕರಲ್ಲಿ ೨೦,೦೦೦ ಸೈನಿಕರು ನಷ್ಟಪಟ್ಟರು. ಅವರು ೧,೨೦೦ ಹೆಣಗಳನ್ನು ಬಿಟ್ಟುಹೋಗಿದ್ದಾರೆ. ೮ ಜನ ಮಾತ್ರ ಕೈಸೆರೆಯಾಗಿದ್ದಾರೆ ೬ ಫಿರಂಗಿಗಳೂ ಬಹಳ ಯುದ್ಧಸಾಮಗ್ರಿಗಳೂ ನಮಗೆ ಸಿಕ್ಕಿರುತ್ತವೆ ಎಂದು ಜಪಾನ್ ಜನರಲ್ ಮಾರ್ಷಲ್ ಓಯಾಮಾ ಯವರು ತಿಳಿಸುತ್ತಾರೆ

ಜಪಾನ್ ಸರ್ಕಾರಿ ರಿಪೋರ್ಟು.

೧೦ನೇ ತಾರೀಖಿನ ವರೆಗೆ ೨೦,೦೦೦ ರಷ್ಯಾ ಸೈನಿಕರು ಕೈಸೆರೆ ಸಿಕ್ಕಿದ್ದಾರೆ. ಈ ಸಂಖ್ಯೆಯು ಇನ್ನೂ ಹೆಚ್ಚುತ್ತಲೇ ಇದೆ. ಫೆಬ್ರವರಿ ೨೬ ರಿಂದ ಈ ತಿಂಗಳ ೧೨ನೇ ತಾರೀಖು ಪ್ರಾತಃಕಾಲದ ತನಕ ಜಪಾನಿನವರ ಕಡೆ ೪೧,೨೨೨ ಮಂದಿ ಸೈನಿಕರು ನಷ್ಟಹೊಂದಿದರು ಬುಧವಾರದ ವರೆಗೆ ಟೋಕಿಯೋ ಪ್ರಾಂತ್ಯದಿಂದ ಬಂದಿರುವ ವರ್ತಮಾನವೇನೆಂದರೆ—೪೦,೦೦೦ ರಷ್ಯಾ ಸೈನಿಕರು ಕೈಸೆರೆ ಸಿಕ್ಕಿದ್ದಾರೆ. ಬೈದಿಗಳಲ್ಲಿ ಮೇಜರ್ ಜನರಲ್ ನಾಚಿನಾಫ್ ಯವರೂ ಒಬ್ಬರು ಯುದ್ಧಭೂಮಿಯಲ್ಲಿ ೨೬,೫೦೦ ರಷ್ಯಾ ಹೆಣಗಳು ಇದ್ದುವು. ರಷ್ಯಾದವರ ಇತರ ನಷ್ಟ ೯೦,೦೦೦ ಮಂದಿ.

ಜಪಾನಿನವರಿಗೆ ಸಿಕ್ಕಿದ ಕೊಳ್ಳೆ

ಜಪಾನಿನವರಿಗೆ ೧೯ನೇ ತಾರೀಖಿನ ವರೆಗೆ ಸಿಕ್ಕಿರುವ ಪದಾರ್ಥಗಳೇನೆಂದರೆ—೬೨ ಫಿರಂಗಿಗಳು, ೬೦೦೦೦ ಬಂದೂಕುಗಳು, ೧೫೦ ಮದ್ದು ಭರ್ತಿಯಾದ ಮಾರ್ಗಿನ ಬಂಡಿಗಳು, ೧,೦೦೦ ಸೈನಿಕರ ಮಾರ್ಗಿನ ಬಂಡಿಗಳು, ೨,೬೦,೦೦೦ ಗುಂಡುಗಳು, ೨॥ ಲಕ್ಷ ಬಂದೂಕಿನ ತೋಟಾಗಳು, ೭೪,೦೦೦ ಬುಷೆಲ್ (ಅಳತೆ) ಧಾನ್ಯಗಳು, ೪೫ ಮೈಲಿ ದೂರ ರೈಲ್ ರಸ್ತೆ ಹಾಕುವಷ್ಟು ಸಾಮಾನುಗಳು, ೩೦೦ ರೈಲ್ವೆ ಮಾರ್ಗಿನ ಬಂಡಿಗಳು, ೨,೦೦೦ ಕುದುರೆ, ೨೩ ಲಕ್ಷ, ೧,೦೦೦ ಕುದುರು ರೊಟ್ಟಿಗಳನ್ನು ಭರ್ತಿಮಾಡುವ ಚೀಣಾ ಗಾಡಿಗಳು ೧೫ ಕೋಟಿ ಪೌಂಡು ತೂಕದಷ್ಟು ಸೌದೆ. ೨,೭೩,೦೦೦ ಬುಷೆಲ್ ಕುದುರೆ ರಾತೀಬು, ೧। ಲಕ್ಷ ಪೌಂಡು ತೂಕದಷ್ಟು ಹುಲ್ಲು. ಇದಲ್ಲದೆ ಹಿಸಿಂಗ್ ಕಿಂಗಿನಲ್ಲಿ ಸಿಕ್ಕಿರುವ ಪದಾರ್ಥಗಳ ತಪಶೀಲು ಇನ್ನೂ ತಿಳಿದು ಬರಲಿಲ್ಲ.

ತೈಲಿಂಗಿನ ರಕ್ಷಣೆಯ ಕಾರ್ಯಗಳು.

ರಷ್ಯಾದವರು ತೈಲಿಂಗ್ ಎಂಬ ಪಟ್ಟಣವನ್ನು ಕಾಪಾಡಿಕೊಳ್ಳುವುದಕ್ಕೆ ಹುಚ್ಚು ಹಿಡಿದವರಂತೆ ಮಹಾ ಆತುರದಿಂದ ಸನ್ನಾಹ ಮಾಡುತ್ತಿದ್ದಾರೆ. ಹೊಸ ಕಂದಕಗಳನ್ನು ತೋಡುತ್ತಲೂ ಕೋಟೆ ಕೊತ್ತಲಗಳನ್ನು ಕಟ್ಟುತ್ತಲೂ ಇರುವರು

ತೈಲಿಂಗ್ ಬಳಿ ಬೆಟ್ಟಗುಡ್ಡ ಪ್ರಾಂತ್ಯದಿಂದ ಬಹು ಜನ ರಷ್ಯಾ ಉದ್ಯೋಗಸ್ಥರೂ ಸೈನಿಕರೂ ಬಂದು ನಮಗೆ ಶರಣಾಗತರಾಗುತ್ತಿದ್ದಾರೆಂದು ಮಾರ್ಷಲ್ ಓಯಾಮಾ ಯವರು ತಿಳಿಸುತ್ತಾರೆ. ಜಪಾನವರು ಮುಕ್ಡೆನ್ ಪಟ್ಟಣದಲ್ಲಿ ರಾಯಭಾರಿಗಳ ಬಂಗಲೆಗಳನ್ನೂ ಇತರ ಕಟ್ಟಡಗಳನ್ನೂ ಸ್ವಾಧೀನಪಡಿಸಿಕೊಂಡರು. ರಷ್ಯಾ ಬೈದಿಗಳನ್ನು ಜಪಾನಿಗೆ ಸಾಗಿಸುವುದೇ ಜಪಾನ್ ಉದ್ಯೋಗಸ್ಥರಿಗೆ ಪ್ರಯಾಸವಾಗಿದೆ. ಅವರು ೩೦,೦೦೦ ರಷ್ಯಾ ಬೈದಿಗಳನ್ನು ಡಾಲ್ನಿ ಮಾರ್ಗವಾಗಿಯೂ ಇನ್ನೂ ಅನೇಕ ಬೈದಿಗಳನ್ನು ಇಂಕೌ ಮಾರ್ಗವಾಗಿಯೂ ಜಪಾನಿಗೆ ಸಾಗಿಸುವಂತೆ ಏರ್ಪಾಡು ಮಾಡುತ್ತಿದ್ದಾರೆ.

ಯುದ್ಧ ಮಾಡುವುದಿಲ್ಲವೆಂದು ಆಯುಧಗಳನ್ನೊಪ್ಪಿಸಿ ಭಾಷೆ ಕೊಟ್ಟು ಹೋದ ಅನೇಕ ರಷ್ಯಾ ಉದ್ಯೋಗಸ್ಥರು ಮತ್ತೆ ಯುದ್ಧದಲ್ಲಿ ಬಂದು ನಿಂತದ್ದರಿಂದ ಜಪಾನಿನವರು ಅವರನ್ನೆಲ್ಲಾ ಕೈಸೆರೆ ಹಿಡಿದುಕೊಂಡರು.

ಹಿಸಿಂಗ್‌ಕಿಂಗಿನಲ್ಲಿ ರಷ್ಯಾದವರ ನಷ್ಟ

ಹಿಸಿಂಗ್‌ಕಿಂಗಿನ ಯುದ್ಧದಲ್ಲಿ ರಷ್ಯಾದವರ ನಷ್ಟ ಇಷ್ಟೆಂದು ಇನ್ನೂ ಗೊತ್ತಾಗಲಿಲ್ಲ. ಯುದ್ಧಭೂಮಿಯಲ್ಲಿ ಅವರ ೮೦೦ ಹೆಣಗಳು ಸಿಕ್ಕಿರುತ್ತವೆ. ತಾ॥ ೧೧ ರಲ್ಲಿ ಜಪಾನ್ ಸೈನಿಕರು ಇಂಗ್‌ಪಾನ್ ಎಂಬ ರಾಜ್ಯದಲ್ಲಿದ್ದ ರಷ್ಯಾ ಸೈನಿಕರನ್ನು ಸೋಲಿಸಿ ಓಡಿಸಿ, ಸ್ವಾಧೀನ ಮಾಡಿಕೊಂಡರು ರಷ್ಯಾದವರ ಒಂದು ಡಿವಿಜನ್ ಸೈನ್ಯವೆಲ್ಲಾ ಸಂಪೂರ್ಣವಾಗಿ ನಾಶವಾದಂತೆ ಅವರ ಬೈದಿಗಳು ತಿಳಿಸುತ್ತಾರೆ. ಹಿಸಿಂಗ್‌ಕಿಂಗಿನಲ್ಲಿ ಜಪಾನಿನವರಿಗೆ ಸಿಕ್ಕಿದ ಪದಾರ್ಥಗಳೇನೆಂದರೆ—೨,೨೦೦ ಬಂದೂಕು, ೬ ಫಿರಂಗಿ, ೩,೨೦,೦೦೦ ಬಂದೂಕಿನ ತೋಟಾಗಳು, ೩೩ ಮೈಲಿ ರೈಲ್ ರಸ್ತೆ ಹಾಕುವಷ್ಟು ಸಾಮಾನು, ೪೫೦ ರೈಲ್ವೆ ಮಾರ್ಗಿನ ಬಂಡಿ ಮೊದಲಾದವು. ರಷ್ಯಾ ಹೆಣಗಳು ೧,೨೦೦ ಬಿದ್ದಿದ್ದವು, ೮೦ ಜನರನ್ನು ಕೈಸೆರೆ ಹಿಡಿದರು ಈ ಭಾಗದಲ್ಲಿ ರಷ್ಯಾದವರ ಕಡೆ ೨,೦೦೦ ಮಂದಿಗಿಂತ ಹೆಚ್ಚಾಗಿ ನಷ್ಟಪಟ್ಟಿದ್ದಾರೆ. ಮುಕ್ಡೆನಿಂದ ಉತ್ತರಕ್ಕೆ ೧೩ ಮೈಲಿ ಫಾಸಲೆಯಲ್ಲಿ ರಷ್ಯಾದವರು ಯುದ್ಧ ಸಾಮಗ್ರಿಗಳನ್ನು ಭರ್ತಿಮಾಡಿ ತೆಗೆದುಕೊಂಡು ಹೋಗುತ್ತಿದ್ದ ನೂರಾರು ಗಾಡಿಗಳು ಜಪಾನವರ ಸ್ವಾಧೀನವಾದವು

ರಷ್ಯಾದವರ ಸಾಲದ ವಿಚಾರ

ರಷ್ಯಾ ರಾಜ್ಯದವರು ಯುದ್ಧವನ್ನು ಇಷ್ಟರಲ್ಲೇ ನಿಲ್ಲಿಸಬೇಕೋ ಮುಂದರಿಸಬೇಕೋ ಎಂದು ಯೋಚನೆಮಾಡುತ್ತಿರುವುದರಿಂದ ಅವರು ಫ್ರಾನ್ಸ್ ರಾಜ್ಯದಲ್ಲಿ ಸಾಲಮಾಡಬೇಕೆಂದಿದ್ದುದನ್ನು ಸ್ವಲ್ಪ ಸಾವಕಾಶ ಮಾಡಿದರು. ಹಣಗಾರರು ರಷ್ಯಾಕ್ಕೆ ಸಾಲ ಕೊಡುವುದಿಲ್ಲವೆಂದು ನಿರಾಕರಿಸಿರುತ್ತಾರೆ

ಜಪಾನಿನವರ ಸೋಲು.

ಲಂಡನ್, ಮಾರ್ಚಿ ೧೬.—[illegible] ನದಿಯ ಬಳಿ ಜಪಾನಿನವರು ರಷ್ಯಾದವರ [illegible] ಯುದ್ಧ ಮಾಡಿದರು ಇದರಲ್ಲಿ ಜಪಾನಿನವರು ಸೋತು, ೧,೦೦೦ ಹೆಣಗಳನ್ನು ಯುದ್ಧಭೂಮಿಯಲ್ಲಿ ಬಿಟ್ಟು, ಹಿಂದಕ್ಕೆ ಹೋದರು ಎಂದು ಜನರಲ್ ಕುರೋಪಾಟ್ಕಿನರವರು ತಿಳಿಸುತ್ತಾರೆ.

ರಷ್ಯಾದವರು ಹೊಸ ಸೈನ್ಯವನ್ನು ಕಳುಹಿಸುವುದು

ರಷ್ಯಾ ಯುದ್ಧದ ಅಲಾಖೆಯವರು ಗಾರ್ಡ್ಸ್ ಎಂಬ ಸೈನಿಕರ ಪೈಕಿ ಎರಡು ಡಿವಿಜನ್ ಕಾಲ್ಬಲವನ್ನೂ ಎರಡು ಡಿವಿಜನ್ ಸವಾರರನ್ನೂ ಫಿರಂಗಿ ಸೈನ್ಯವನ್ನೂ ಕೂಡಿಸಿ ಯುದ್ಧಭೂಮಿಗೆ ಕಳುಹಿಸುವಂತೆ ಸನ್ನಾಹ ನಡೆಯುತ್ತಿದೆ ರಾಜ್ಯದಲ್ಲಿ ತಹಬಂದಿ ತಪ್ಪಿ ಗಲಭೆಯುಂಟಾಗಿರುವುದರಿಂದ ಪ್ರಜೆಗಳು ಹೊಸದಾಗಿ ಸೈನ್ಯಕ್ಕೆ ಸೇರುವವರಾಗಿಲ್ಲ

ರಷ್ಯಾದವರ ಒಟ್ಟು ನಷ್ಟ.

ಇದುವರೆಗೆ ರಷ್ಯಾಸೈನ್ಯದಲ್ಲಿ ಅರ್ಧಪಾಲಿಗಿಂತಲೂ ಹೆಚ್ಚಾಗಿಯೂ ಮೂರನೇ ಎರಡು ಭಾಗಕ್ಕೆ ಕಡಿಮೆಯಾಗಿಯೂ ಈ ಯುದ್ಧದಿಂದ ತೊಡೆದು ಹೋಯಿತು.

ಜಪಾನಿನವರು ತೈಲಿಂಗನ್ನು ಗೆದ್ದರು

ಲಂಡನ್, ಮಾರ್ಚಿ ೧೬.—ನೆನ್ನೆ ಅರ್ಧರಾತ್ರಿಯಲ್ಲಿ ಜಪಾನಿನವರು ತೈಲಿಂಗನ್ನು ಗೆದ್ದು ಸ್ವಾಧೀನಪಡಿಸಿಕೊಂಡದ್ದಲ್ಲದೆ, ಎಲ್ಲಾ ಕಡೆಗಳಲ್ಲೂ ರಷ್ಯಾದವರನ್ನು ಸುತ್ತಿಕೊಂಡು ಸೋಲಿಸಿ ಓಡಿಸುತ್ತಿದ್ದಾರೆ. ತಾ ೧೫ ರಲ್ಲಿ ತೈಲಿಂಗಿನಲ್ಲಿ ದೊಡ್ಡ ಯುದ್ಧ ನಡೆಯಿತೆಂದು ರಷ್ಯಾದವರೇ ಒಪ್ಪಿಕೊಳ್ಳುತ್ತಾರೆ ತಾ. ೧೩ ರಲ್ಲಿ ಜಪಾನಿನವರು ಸಿಂಕಿಂಗ್ ಪಟ್ಟಣವನ್ನು ಗೆದ್ದು ಆಕ್ರಮಿಸಿಕೊಂಡರು.

ಜನರಲ್ ಕುರೋಪಾಟ್ಕಿನರ ಅಧಿಕಾರ ತಪ್ಪಿತು

ಲಂಡನ್, ಮಾರ್ಚಿ ೧೭.—ಇದುವರೆಗೆ ಜನರಲ್ ಕುರೋಪಾಟ್ಕಿನರವರೇ ಯುದ್ಧಭೂಮಿಯಲ್ಲಿದ್ದ ಸಮಸ್ತ ರಷ್ಯಾ ಸೈನ್ಯಕ್ಕೂ ಸೇನಾಪತಿಯಾಗಿದ್ದರು ಈಗ ಈ ಅಧಿಕಾರವನ್ನು ಇವರಿಗೆ ತಪ್ಪಿಸಿದೆ ಎಂತಲೂ ಅವರ ಸ್ಥಾನಕ್ಕೆ ಜನರಲ್ ಲಿನೆವಿಚ್ ಯವರು ನೇಮಕವಾಗಿದ್ದಾರೆಂತಲೂ ರಷ್ಯಾ ರಾಜಧಾನಿಯಿಂದ ಸುದ್ದಿ ಬಂದಿದೆ.

ಯುದ್ಧ ನಿಲ್ಲಿಸಬೇಕೆಂಬ ಕಾಗದ

ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ವರ್ತಮಾನ ಪತ್ರಿಕೆಗಳು ಒಂದು ಕಾಗದವನ್ನು ಪ್ರಕಟಿಸಿರುವುದನ್ನು ನೋಡಿ ಪ್ರಜೆಗಳೆಲ್ಲಾ ತುಂಬಾ ಗಲಭೆ ಮಾಡಲಾರಂಭಿಸಿದ್ದಾರೆ. ಪ್ರಿನ್ಸ್ ಮೆಸ್ಚರ್ಸ್ಕಿ ಎಂಬ ರಾಜಕುಮಾರನು ಈ ಕಾಗದವನ್ನು ಪತ್ರಿಕೆಗಳಿಗೆ ಬರೆದಿರುತ್ತಾನೆ. ಅದರ ಮುಖ್ಯಾಭಿಪ್ರಾಯವೇನೆಂದರೆ—ಈ ಯುದ್ಧದಲ್ಲಿ ಫಲವಾಗುತ್ತೆಂದು ನಿರೀಕ್ಷಿಸಿ ಮುಂದರಿಸುವುದು ಸರಿಯಾದದ್ದಲ್ಲ ; ಒಳದೇಶದಲ್ಲಿ ಗಲಭೆಯುಂಟಾಗಿರುವುದರಿಂದ ಇದನ್ನು ತಹಬಂದಿಗೆ ತರುವುದೂ ಸಾಧ್ಯವೆಂದು ಯೋಚಿಸಲಾಗದು. ಈ ಯುದ್ಧವನ್ನು ಬೇಗನೆ ಕೊನೆಗಾಣಿಸಿದರೆ ಒಳದೇಶದ ಗಲಭೆಗಳನ್ನೆಲ್ಲಾ ನಿಲ್ಲಿಸಿಕೊಂಡು ನೆಮ್ಮದಿಯಾಗಿರುವುದಕ್ಕೆ ಅನುಕೂಲವಾದೀತು. ಇನ್ನೂ ಕೆಲವು ಕಾಲ ಸುಮ್ಮಗಿದ್ದು, ವ್ಲಾಡಿವೋಸ್ಟಾಕ್ ಪಟ್ಟಣವೂ ಸಖೋಲಿಯನ್ ದ್ವೀಪಗಳೂ ಜಪಾನಿನವರ ಪಾಲಾಗಿ ಹೋದರೆ ರಷ್ಯಾ ರಾಜ್ಯಕ್ಕೆ ತುಂಬಾ ಕಷ್ಟಗಳು ಪ್ರಾಪ್ತವಾದಾವು. ಆದಕಾರಣ ಅವೆರಡೂ ಹೋಗುವುದಕ್ಕೆ ಮೊದಲೇ ಯುದ್ಧವನ್ನು ನಿಲ್ಲಿಸುವುದು ಅವಶ್ಯವೆಂದು ಕಾಣುತ್ತದೆ ಎಂಬುದೇ

ತೈಲಿಂಗನ್ನು ಜಪಾನಿನವರು ಗೆದ್ದದ್ದು.

ಜಪಾನಿನವರು ತೇಲಿಂಗನ್ನು ಗೆದ್ದುಕೊಂಡರಷ್ಟೆ. ರಷ್ಯಾದವರು ಅಲ್ಲಿ ಕೂಡಿಸಿ ಇಟ್ಟುಕೊಂಡಿದ್ದ ತಮ್ಮ ಆಹಾರ ಸಾಮಗ್ರಿಗಳಿಗೂ ರಾತೀಬಿಗೂ ಹುಲ್ಲಿಗೂ ಬೆಂಕಿ ಹಾಕಿ ಸುಟ್ಟು ಓಡಿಹೋದರು. ಆ ಪೈಕಿ ಮೂರನೇ ಒಂದು ಪಾಲಿನಷ್ಟು ಮಾತ್ರ ಜಪಾನಿನವರಿಗೆ ಸಿಕ್ಕಿತು. ಅನೇಕ ರಷ್ಯಾ ಸೈನಿಕರು ಜಪಾನಿನವರಿಗೆ ಕೈಸೆರೆ ಸಿಕ್ಕಿದರು. ತೈಲಿಂಗ್ ಯುದ್ಧದಲ್ಲಿ ರಷ್ಯಾದವರ ಕಡೆ ೧೯,೦೦೦ ಸೈನಿಕರು ನಷ್ಟಪಟ್ಟರೆಂದು ಅವರ ರಾಜಧಾನಿಯಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳು ತಿಳಿಸುತ್ತವೆ. ಜನರಲ್ ಕುರೋಪಾಟ್ಕಿನರವರು ಸಾಮಗ್ರಿಗಳನ್ನೂ ೮೦ ಫಿರಂಗಿಗಳನ್ನೂ ಸಾಗಿಸಿಕೊಂಡು ಹೋಗುವುದಕ್ಕಾಗದೆ ಅಲ್ಲಲ್ಲೇ ಬಿಟ್ಟು ಹಿಮ್ಮೆಟ್ಟಿ ಹೋದರು. ಈ ಯುದ್ಧವು ಬಹು ಭಯಂಕರವಾಗಿ ನಡೆಯಿತು. ರಷ್ಯಾದವರು ಸೋತು ಎದೆಗುಂದಿ ದಿಕ್ಕಾಪಾಲಾಗಿ ಓಡಿಹೋಗಿದ್ದಾರೆ. ಜಪಾನಿನವರು ಹೆಜ್ಜೆ ಹೆಜ್ಜೆಗೂ ಯುದ್ಧಮಾಡುತ್ತಾ ಮುಂದೆ ಮುಂದೆ ನುಗ್ಗಿ ಹೋಗುತ್ತಾ ೧೫ ದಿನಗಳಲ್ಲಿ ೯೦ ಮೈಲಿ ಫಾಸಲೆಯನ್ನು ಆಕ್ರಮಿಸಿಕೊಂಡಿರುವರು. ರಷ್ಯಾ ಸೈನಿಕರು ಈಗ ಹಾರ್ಬಿನ್ ಎಂಬ ಪಟ್ಟಣದಲ್ಲಿ ನಿಂತು ಯುದ್ಧ ಕೊಡುವವರಾಗಿದ್ದಾರೆಂದು ಕಾಣುವುದು.

ಜನರಲ್ ಕುರೋಪಾಟ್ಕಿನರವರು ಆಗಲೇ ಹಿಂತಿರುಗಿ ಸೇಂಟ್ ಪೀಟರ್ಸ್‌ಬರ್ಗನ್ನು ಕುರಿತು ಪ್ರಯಾಣ ಮಾಡುತ್ತಿದ್ದಾರೆಂದು ವರ್ತಮಾನ ಬಂದಿದೆ.

ತೈಲಿಂಗಿನ ಬಳಿ ಯುದ್ಧ

ಲಂಡನ್, ಮಾರ್ಚಿ ೧೮—ತೈಲಿಂಗಿನಿಂದ ಉತ್ತರಕ್ಕೆ [illegible] ಮೈಲಿಯಲ್ಲಿ ವಿರಾಮವಿಲ್ಲದೆ ಯುದ್ಧ ನಡೆಯುತ್ತಿದೆ. ಜಪಾನಿನವರು ರಷ್ಯಾದವರನ್ನು ಹಿಂದಕ್ಕೆ ಹಿಂದಕ್ಕೆ ಓಡಿಸುತ್ತಿದ್ದಾರೆ ತೈಲಿಂಗಿನ ಉತ್ತರದಲ್ಲಿರುವ ಕಾಕಾಸೋನ್ ಎಂಬ ರಷ್ಯಾದವರ ಪಟ್ಟಣವನ್ನು ಗೆದ್ದುಕೊಂಡರು

ಜನರಲ್ ಕುರೋಪಾಟ್ಕಿನರವರು.

ಜನರಲ್ ಕುರೋಪಾಟ್ಕಿನರವರು ಹಿಂತಿರುಗಿ ಸೆಂಟ್ ಪೀಟರ್ಸ್‌ಬರ್ಗಿಗೆ ಪ್ರಯಾಣ ಮಾಡಿದರೆಂಬ ಸುದ್ದಿ [illegible] ಜನರಲ್ ಲಿನೆವಿಚ್ ಯವರು ರಷ್ಯಾ ಸೈನ್ಯಾಧಿಪತ್ಯವನ್ನು ವಹಿಸಿದ್ದಾರೆ. ಜನರಲ್ ಕುರೋಪಾಟ್ಕಿನರವರು ಛಾರ್ಜ್ ಕೊಟ್ಟುಬಿಟ್ಟೆನೆಂದೂ, ಜನರಲ್ ಲಿನೆವಿಚ್ ಯವರ ಸೈನ್ಯಾಧಿಪತ್ಯವನ್ನು ವಹಿಸಿಕೊಂಡೆನೆಂತಲೂ ತಾ. ೧೭ ರಲ್ಲಿ ಚಕ್ರವರ್ತಿಯವರಿಗೆ ತಿಳಿಯಪಡಿಸಿದರು.

ಜಪಾನಿನವರು ಸಾಲಮಾಡುವರು

ಜಪಾನಿನವರು ಜರ್ಮನಿಯಲ್ಲಿ ಸಾಲ ಮಾಡುವವರಾಗಿದ್ದಾರೆಂದು ಜರ್ಮನಿಯ ಮಂತ್ರಿಯವರು ತಿಳಿಸಿದ್ದಾರೆ ಅಮೇರಿಕಾ ಮತ್ತು ಜರ್ಮನಿಯ ಬ್ಯಾಂಕುಗಳವರೂ ಹಣಗಾರರೂ ಜಪಾನವರಿಗೆ ಸಾಲಕೊಡುವುದಕ್ಕೆ ಸಿದ್ಧರಾಗಿರುವರು

ರಷ್ಯಾದವರು ಸಾಲ ಮಾಡಿದರು

ರಷ್ಯಾದವರು ತಮ್ಮ ರಾಜ್ಯದ ಹಣಗಾರರಿಂದಲೇ ೨೦ ಕೋಟಿ ದ್ರವ್ಯವನ್ನು ಶೇಕಡಾ ವರ್ಷಕ್ಕೆ ೫ ರಂತೆ ಬಡ್ಡಿ ಗೊತ್ತು ಮಾಡಿ ಸಾಲ ತೆಗೆದುಕೊಂಡರು. ಫ್ರಾನ್ಸಿನ ಹಣಗಾರರು ಸಾಲಕೊಡದೆ ಹೋದರು

ಪೋರ್ಟ್ ಆರ್ಥರಿನ ವಿಚಾರ ತನಿಖೆ

ಪೋರ್ಟ್ ಆರ್ಥರ್ ಕೋಟೆಯನ್ನು ಜಪಾನಿನವರಿಗೆ ಬಿಟ್ಟುಕೊಡಲು ರಷ್ಯಾದವರಿಗೆ ಯಾವ ಯಾವ ಕಾರಣಗಳಿದ್ದವೆಂಬುವುದನ್ನು ಗೊತ್ತುಮಾಡಬೇಕೆಂತಲೂ ಜನರಲ್ ಸ್ಟೋಯೆಸಲ್ ಯವರನ್ನು ದರ್ಯಾಫ್ತು ಮಾಡಿ ಅವರ ಕೈಫಿಯತ್ತು ತೆಗೆದುಕೊಳ್ಳಬೇಕೆಂತಲೂ ರಷ್ಯಾ ಚಕ್ರವರ್ತಿಯವರು ಜನರಲ್ ರೂಪ್ ಎಂಬ ಅಧಿಕಾರಿಯನ್ನು ನೇಮಿಸಿರುತ್ತಾರೆ

ರಷ್ಯಾದವರು ತೈಲಿಂಗನ್ನು ಬಿಟ್ಟುಹೋದರು.

ಲಂಡನ್, ಮಾರ್ಚಿ ೨೦.—ಜಪಾನಿನವರು ಕೈಯೆನ್ ಪಟ್ಟಣವನ್ನು ತಲಪಿದರು. ಇಲ್ಲಿಂದ ೨೩ ಮೈಲಿ ದೂರದಲ್ಲಿ ತೈಲಿಂಗ್ ಪಟ್ಟಣವಿದೆ ಶನಿವಾರವೇ ರಷ್ಯಾದವರು ಈ ಪಟ್ಟಣಕ್ಕೆ ಬೆಂಕಿ ಹಾಕಿ ಸುಟ್ಟು, ಊರು ಬಿಟ್ಟು ಹಿಮ್ಮೆಟ್ಟಿ ಓಡಿಹೋದರು.

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು

ಲಂಡನ್, ಮಾರ್ಚಿ ೧೪.—ದಂಗೆಯೆದ್ದಿರುವ ರೈತಪ್ರಜೆಗಳು ಕುರಸ್ಕ್ ಪ್ರಾಂತ್ಯದಲ್ಲಿ ಒಂಬತ್ತು ಮಂದಿ ಭಾರಿ ಜಮೀನ್ದಾರರನ್ನು ಕೊಂದು ಹಾಕಿದರು. ರೈತರ ದಂಗೆಯು ಎಲ್ಲಾ ಕಡೆಗಳಿಗೂ ಹರಡಿಕೊಳ್ಳುತ್ತಿದೆ.

ಲಂಡನ್, ಮಾರ್ಚಿ ೧೫.—ಓರೆಲ್ ಮತ್ತು ಚೇರ್ನಿಗಾಫ್ ಎಂಬೀ ಪ್ರಾಂತ್ಯಗಳಲ್ಲಿ ಚಕ್ರವರ್ತಿ ಜಾರ್ ಯವರಿಗೂ ಚಕ್ರವರ್ತಿಯವರ ಬಂಧುವರ್ಗದವರಿಗೂ ಅನೇಕ ಪಟ್ಟಾ ಜಮೀನುಗಳಿರುತ್ತವೆ. ಈ ಜಮೀನುಗಳನ್ನೆಲ್ಲಾ ದಂಗೇಕೋರ ರೈತರು ನುಗ್ಗಿ ಕೊಳ್ಳೆ ಹೊಡೆದರು.

ಲಂಡನ್, ಮಾರ್ಚಿ ೧೬.—ಕಾಕಸಸ್ ಬೆಟ್ಟಪ್ರಾಂತ್ಯಕ್ಕೆ ಸೇರಿದ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಕೂಲಿಕಾರರು ದಂಗೆಯೆದ್ದು ತುಂಬಾ ಗಲಭೆಮಾಡಿದ್ದರಿಂದ ಸರ್ಕಾರದವರು ಅವರನ್ನೆಲ್ಲಾ ಮುತ್ತಿಗೆ ಹಾಕಿಕೊಂಡಿದ್ದಾರೆ. ಸರ್ಕಾರಿ ಸೈನ್ಯಕ್ಕೂ ದಂಗೇಕೋರರಾದ ಪ್ರಜೆಗಳಿಗೂ ಕಲಹಗಳಾಗಿವೆ.

ಲಂಡನ್, ಮಾರ್ಚ್ ೧೯ —ರಷ್ಯಾ ಸರ್ಕಾರದವರು ಜನರನ್ನು ಯುದ್ಧಕ್ಕೆ ಸೇರಿಸಿಕೊಳ್ಳುತ್ತಾ ಬಂದ ಸುದ್ದಿಯನ್ನು ಕೇಳಿ ಲೋಡ್ಸ್ ವಾರ್ಸಾ ಪಟ್ಟಣಗಳಲ್ಲಿ ಜನರ ಗಲಭೆಯೂ ದಂಗೆಯೂ ಆಗಿದೆ

ಲಂಡನ್, ಮಾರ್ಚ್ ೧೯ —ರಷ್ಯಾ ಗವರ್ನಮೆಂಟನ್ನು ತಲೆಕೆಳಗು ಮಾಡಬೇಕೆಂದು ಒಂದು ಗುಂಪಿನ ದಂಗೆಕೋರರು ಮಾಸ್ಕೋ ಪಟ್ಟಣದಲ್ಲಿ ಅಂತರಂಗದಲ್ಲೇ ಮಸಲತ್ತುಗಳನ್ನು ಮಾಡುತ್ತಾ ಅನೇಕವಾಗಿ ಯುದ್ಧ ಸಾಮಗ್ರಿಗಳನ್ನೂ ಮರಣಕರವಾದ ಗುಂಡು ಮುಂತಾದ ವಸ್ತುಗಳನ್ನೂ ಸಂಗ್ರಹ ಮಾಡಿಕೊಂಡಿದ್ದರು ಈ ಗುಂಪಿನವರನ್ನೆಲ್ಲಾ ಮಾಸ್ಕೋ ಪಟ್ಟಣದ ಅಂತರಂಗ ಶೋಧಿಸುವವರು ಪತ್ತೆಮಾಡಿ, ೩೦೦ ಜನರನ್ನೂ ಅವರ ಬಳಿ ಇದ್ದ ಅನೇಕ ಕಾಗದ ಪತ್ರಗಳು ಮುಂತಾದವುಗಳ ಸಹಿತ ಹಿಡಿದು ಕಸ್ಟಡಿಯಲ್ಲಿ ಹಾಕಿದ್ದಾರೆ. ಗ್ರ್ಯಾಂಡ್ ಡ್ಯೂಕ್ ಸರ್ಜಿಯಸ್ ಎಂಬವನನ್ನು ಕೊಂದುಹಾಕುವುದಕ್ಕೆ ಮುಂಚೆ ಈ ಗುಂಪಿನವರು ನಡಿಸಿದ ಕಾಗದ ಪತ್ರಗಳು ಸಹ ಈಗ ಸಿಕ್ಕಿರುವವು

ನಮ್ಮ ಪುಸ್ತಕ ಭಂಡಾರವು.

"ಮಾಯಾ ದೀಪ" *

ಅನೇಕ ಸಣ್ಣ ಸಣ್ಣ ಚಿತ್ರಗಳನ್ನೂ ಪದಾರ್ಥಗಳನ್ನೂ ಮಾಯಾ ದೀಪ ಅಥವಾ ಮ್ಯಾಜಿಕ್ ಲ್ಯಾಂಟರ್ನ್ ಮೂಲಕ ಅತ್ಯದ್ಭುತವಾಗಿ ಚಿತ್ರಗಳ ಪ್ರತಿ ಭಾಗಗಳೂ ವಿಶದವಾಗಿ ಕಾಣಬರುವಂತೆ ತೋರಿಸುವದು ಅನೇಕರಿಗೆ ಗೊತ್ತೇ ಇದೆ ಇಂಥಾ ಪ್ರದರ್ಶನಕ್ಕೆ ಹೋಗಿ ಬಂದ ನೋಟಕರು ಆಶ್ಚರ್ಯಯುಕ್ತರಾಗಿ ಹಾಗೆ ಮಾಡುವದನ್ನು ತಾವೂ ಕಲಿತುಕೊಳ್ಳಬೇಕೆಂದು ಕುತೂಹಲ ಪಡುವರಷ್ಟೆ ಈ ವಿಷಯಗಳನ್ನು ಕುರಿತು ಕನ್ನಡದಲ್ಲಿ ಮೇಲಿನ ಹೆಸರುಳ್ಳ ಈ ಗ್ರಂಥವು ಮೈಸೂರು ದಕ್ಷಿಣ ಸರ್ಕಲ್ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ॥ ಶ್ರೀನಿವಾಸರಾವ್, ಬಿ. ಎ. ಮತ್ತು ಮೆಡಿಕಲ್ ಗ್ರಾಜುಯೇಟ್ ಆಪುತೀಕರಿ ಮಿ. ಎಸ್. ವೆಂಕೋಬರಾವ್, ಬಿ. ಎ. ಇವರಿಂದಲೂ ಸಹ ರಚಿಸಲ್ಪಟ್ಟಿದೆ. ಈ ಮಾಯಾ ದೀಪಕ್ಕೆ ಬೇಕಾದ ಉಪಕರಣಗಳೂ ಬಹಳ ಚನ್ನಾಗಿಯೂ ವಿಸ್ತಾರವಾಗಿಯೂ ವಿವರಿಸಲ್ಪಟ್ಟಿವೆ ಅಲ್ಲಲ್ಲಿ ಇವುಗಳ ಚಿತ್ರಗಳು ಕೊಡಲ್ಪಟ್ಟಿವೆ

"ಮಾನುಷ ಶರೀರ ಧರ್ಮಶಾಸ್ತ್ರವು" ¶

ಪ್ರಪಂಚದ ಸೃಷ್ಟಿಯೊಳಗೆಲ್ಲಾ ಮಾನುಷ ಶರೀರ ಸೃಷ್ಟಿಯು ಅತ್ಯಂತ ಶ್ರೇಷ್ಠವಾದದ್ದಾಗಿಯೂ ಪರಮಾಶ್ಚರ್ಯವೆನ್ನಿಸುವಂತಹುದಾಗಿಯೂ ಇರುವುದು ಇಂಥಾ ಶರೀರಾವಿಷ್ಟನಾದ ಪ್ರತಿಯೊಬ್ಬನೂ ದೃಢಾಂಗನಾಗಿಯೂ ದೀರ್ಘಾಯುಷ್ಮಂತನಾಗಿಯೂ ಈ ಪ್ರಪಂಚದಲ್ಲಿ ಚಿರಕಾಲವಿರಬೇಕೆಂದು ಅಪೇಕ್ಷಿಸುವನು ರೋಗಿಯಾಗಿದ್ದು ದೀರ್ಘಾಯುಷ್ಮಂತನಾಗಿರಲು ಎಂದಿಗೂ ಇಚ್ಛೈಸ ಅಲ್ಲದೆ ದೃಢಾಂಗನಾಗಿ ಅಲ್ಪಾಯುವನ್ನೂ ಅಪೇಕ್ಷಿಸನು ದೇಹಾರೋಗ್ಯವನ್ನೂ ದೀರ್ಘಾಯುಸ್ಸನ್ನೂ ಕೋರುವನು. ಆರೋಗ್ಯ ಶಾಸ್ತ್ರಗಳಿಗನುಸಾರವಾಗಿ ಆಚರಿಸತಕ್ಕವನಾಗಿರಬೇಕು. ಶರೀರ ಧರ್ಮವನ್ನರಿಯದೆ ಬರೀ ಆರೋಗ್ಯಸೂತ್ರವನ್ನು ಅನುಸರಿಸುವದರಿಂದ ಮೇಲಿಸುವರಡೂ ಕೈಗೂಡವು. ಈ ಶರೀರ ಶಾಸ್ತ್ರವು ಇಂಗ್ಲೀಷು ಭಾಷೆಯಲ್ಲಿ ಹೇರಳವಾಗಿ ರಚಿಸಲ್ಪಟ್ಟು ವೈದ್ಯ ವಿದ್ಯಾಭ್ಯಾಸ ಮಾಡುವವರಿಂದ ಮಾತ್ರವೇ ಅಭ್ಯಾಸನೀಯವಾಗಿರುವುದು. ಇಂಥಾ ಒಂದು ಶಾಸ್ತ್ರವು ಮದರಾಸ್ ವ್ಯವಸಾಯ ಶಾಸ್ತ್ರದ ವಿದ್ಯಾಶಾಲೆಯಲ್ಲಿ ಕೃಷಿಶಾಸ್ತ್ರದೊಳಗೆ ಪ್ರಥಮ ತರಗತಿಯಲ್ಲಿ ತೇರ್ಗಡೆ ಹೊಂದಿ ಮೈಸೂರ್ ಅರಮನೆಯ ಪಂಡಿತರಲ್ಲೊಬ್ಬರಾದ ಮ. ರಾ॥ ಕೆ. ವಿ. ದೇಶಿಕಾಚಾರ್ಯರಿಂದ ಲೋಕೋಪಕಾರಾರ್ಥವಾಗಿ ಕೇವಲ ಕನ್ನಡಿಗರು ಅಭ್ಯಾಸಿಸಲು ಸುಲಭ ಕನ್ನಡ ಶೈಲಿಯಲ್ಲಿ ರಚಿಸಲ್ಪಟ್ಟಿರುವುದು ಗ್ರಂಥಾದ್ಯಂತವೂ ಶರೀರದ ಸ್ವರೂಪವನ್ನು ತೋರಿಸುವ ಚಿತ್ರಭಾಗಗಳಿಂದ ತುಂಬಲ್ಪಟ್ಟಿರುವದು ಕನ್ನಡದಲ್ಲಿ ಈ ಗ್ರಂಥವೇ ಮೊದಲನೆಯದಾಗಿದೆ. ಗ್ರಂಥವನ್ನು ಓದುತ್ತಾ ಓದುತ್ತಾ ಉಲ್ಲಾಸವೂ ಆಶ್ಚರ್ಯವೂ ಉಂಟಾಗುವುದು.

ಕಾಶೀ ಮಹಾರಾಜರವರು.

ರಾಜಧಾನಿಗೆ ಬಂದಿದ್ದುದು

ಕಳೆದ ಶುಕ್ರವಾರ ಬೆಳಗ್ಗೆ ಕಾಶೀ ಮಹಾರಾಜರಾದ ಸರ್ ಪ್ರಭುನಾರಾಯಣ ಸಿಂಗ್‌ಜಿ ಬಹದೂರ್, ಜಿ. ಸಿ. ಐ. ಇ. ಯವರು ಮೈಸೂರಿಗೆ ಪ್ರಯಾಣ ಮಾಡಿ ಬಂದು ಮೈಸೂರು ರೈಲ್ವೆ ಸ್ಟೇಷನ್ನಿನಲ್ಲಿ ಇಳಿದರು. ನಮ್ಮ ಶ್ರೀಮನ್ ಮಹಾರಾಜರವರು ಸ್ಟೇಷನ್ನಿಗೆ ಹೋಗಿದ್ದು ಕಾಶೀ ಮಹಾರಾಜರನ್ನು ಎದುರುಗೊಂಡು, ಅವರಿಗೆ ಸುಸ್ವಾಗತವನ್ನು ಬಯಸಿದರು ದಿವಾನರಾದ ಸರ್ ವಿ. ಪಿ. ಕೃಷ್ಣಮೂರ್ತಿ ಯವರು, ಮ॥ ಗಳಾದ ಕಾಂತರಾಜೇ ಅರಸಿನವರು, ಲಕ್ಷ್ಮೀಕಾಂತರಾಜೇ ಅರಸಿನವರು, ಪ್ರೈವೆಟ್ ಸೆಕ್ರೆಟರಿ ಮ॥ ಇ. ಮೆಕಾನಕೀ ಯವರು, ಡಾಕ್ಟರ್ ಮೆಗ್ಗ್ರೀ ರವರು, ಮುಂದಿ ರಾಜ ವರ್ಗದವರು, ಅಧಿಕಾರಿಗಳು, ಪುರಾಧ್ಯಕ್ಷರು ಮೊದಲಾದವರೆಲ್ಲಾ ಸ್ಟೇಷನಿನಲ್ಲಿ ಹಾಜರಾಗಿದ್ದರು. ನಮ್ಮ ಮಹಾರಾಜರವರು ಕಾಶೀ ಮಹಾರಾಜರಿಗೆ ದಿವಾನರೇ ಮೊದಲಾದವರನ್ನು ತೋರಿಸಿ ಪರಿಚಯ ಮಾಡಿಸಿದರು ಮ್ಯುನಿಸಿಪಲ್ ಪ್ರೆಸಿಡೆಂಟ್ ಮ॥ ಸಿ. ವೆಂಕಟರಾಯರು ಕಾಶೀ ಮಹಾರಾಜರಿಗೆ ಪುಷ್ಪ ಹಾರ ಹಾಕಿ ತಾಂಬೂಲ ಒಪ್ಪಿಸಿದರು ತರುವಾಯ ಉಭಯ ಮಹಾರಾಜರುಗಳೂ ಸ್ಟೇಷನಿನಿಂದ ಹೊರಕ್ಕೆ ದಯಮಾಡಿ, ನಾಲ್ಕು ಕುದುರೆ ಕಟ್ಟಿಸಿದ ದಿವ್ಯವಾದ ಸಾರೋಟಿನಲ್ಲಿ ಕುಳಿತುಕೊಂಡರು ಇವರ ಎದುರು ಪಾರ್ಶ್ವದಲ್ಲಿ ಕಾಶೀ ಮಹಾರಾಜರವರ ಏಡಿಕಾಂಗರವರೂ ನಮ್ಮ ಮಹಾರಾಜರವರ ಮಿಲಿಟರಿ ಭಕ್ಷಿ ಮ॥ ಬಸಪ್ಪಾಜಿ ಅರಸಿನವರೂ ಕುಳಿತುಕೊಂಡರು. ಮೈದಾನಿನಲ್ಲಿ ಕಿಬಯಿಗಳೂ ಸವಾರರೂ ಸಾಲಾಗಿ ನಿಂತು, ವಾದ್ಯಗಳು ಭೋರ್ಗರೆಯುತ್ತಿರುವಲ್ಲಿ ಸಲಾಮು ಮಾಡಿದರು ಕೂಡಲೇ ನಮ್ಮ ಮಹಾರಾಜರವರ ಕುದುರೆ ಸವಾರರು ಗಾಡಿಯ ಹಿಂದೆಯೂ ಮುಂದೆಯೂ ಹೊರಟರು ಇವರ ಹಿಂದೆ ಸಿಲ್ಲೆದಾರ್ ಕುದುರೆ ಸೈನ್ಯ ಹೊರಟಿತು. ನಂತರ ಉಭಯ ಮಹಾರಾಜರುಗಳೂ ಸ್ಟೇಷನಿನಿಂದ ಮೆರವಣಿಗೆಯಾಗಿ ಹೊರಟು, ಸಿಲ್ಲೇದಾರ್ ಲೈನ್, ಸಯ್ಯಾಜೀರಾವ್ ರಸ್ತೆಗಳ ಮೂಲಕ ಕರ್ಜನ್‌ಪಾರ್ಕಿನೊಳಕ್ಕೆ ಪ್ರವೇಶಿಸಿ, ಜಗನ್ಮೋಹನ ಬಂಗಲೆಗೆ ದಯಮಾಡಿದರು ಅಲ್ಲಿ ಅರಮನೆಯ ಅಧಿಕಾರಿಗಳು ಕಾದಿದ್ದು ಕಾಶೀ ಮಹಾರಾಜರಿಗೆ ಸುಸ್ವಾಗತವನ್ನು ಬಯಸಿ, ಒಳಕ್ಕೆ ಕರೆದುಕೊಂಡು ಹೋದರು. ಈ ಬಂಗಲೆಯನ್ನು ಅವರು ಇಳುಕೊಳ್ಳುವುದಕ್ಕಾಗಿ ನಾನಾ ಪ್ರಕಾರವಾಗಿಯೂ ಚಿತ್ರವಿಚಿತ್ರವಾಗಿಯೂ ಅಲಂಕರಿಸಿದ್ದುದಲ್ಲದೆ ರಸ್ತೆಗಳಲ್ಲೂ ಉದ್ದಕ್ಕೂ ತೋರಣಗಳನ್ನು ಕಟ್ಟಿದ್ದರು ಸಾವಿರಾರು ಪ್ರಜೆಗಳು ರಸ್ತೆಯ ಉದ್ದಕ್ಕೂ ಉಭಯ ಪಾರ್ಶ್ವಗಳಲ್ಲೂ ನಿಂತು ಕಾಶೀ ಮಹಾರಾಜರವರನ್ನು ನೋಡಿದರು ಕೋಟೆ ಕೊತ್ತಲದಿಂದ ಗೌರವಾರ್ಥವಾದ ೧೭ ತೋಪುಗಳು ಹಾರಿಸಲ್ಪಟ್ಟವು.

ಕಾಶೀ ಮಹಾರಾಜರ ಸಂಗಡ ೧೫ ಮಂದಿ ಸರ್ದಾರರೂ ೧೦೦ ಜನ ಪರಿವಾರದವರೂ ಬಂದಿದ್ದರು. ಆ ದಿನ ಬೆಳಗ್ಗೆ ೬ ಗಂಟೆಗೆ ಕ್ರಮಪ್ರಕಾರ ಎಂದಿನಂತೆ ಬರಬೇಕಾದ ರೈಲ್‌ಗಾಡಿಯು ಬಾರದೆ ಬಹಳ ತಾಮಸವಾಯಿತು ಮಹಾರಾಜರವರು ದಿವಾನರು ಮೊದಲಾದವರೆಲ್ಲಾ ಸ್ಟೇಷನಿನಲ್ಲಿ ಕಾದು ಕಾದು ಸಾಕಾದರು. ನಂತರ ೭॥ ಗಂಟೆಗೆ ರೈಲು ಗಾಡಿಯು ಸ್ಟೇಷನಿಗೆ ಬಂದಿತು.

ಕಾಶೀ ಮಹಾರಾಜರು ಭೋಜನವಾದನಂತರ ಸಂಗೀತವನ್ನು ಕೇಳಿದರು ನಾಟ್ಯಗಾತಿಯರ ನರ್ತನವೂ ಗಾನವೂ ನಡೆದವು ಸಾಯಂಕಾಲ ೫ ಗಂಟೆ ಹೊತ್ತಿಗೆ ಉಭಯಮಹಾರಾಜರುಗಳೂ ಸೇರಿ ಬಾಬ್ಬೆಯುನ ಹಬ್ಬದ ಗಿರಣೋವುಗಳನ್ನು ಪ್ರಾರಂಭಿಸಿದರು. ಈ ಸಲ ಪ್ಲೇಗಿನ ಭೀತಿಯೇನೂ ಇಲ್ಲದಿದ್ದ ಕಾರಣ ಮೋಹರಂ ಹಬ್ಬವು ಬಹಳ ಚನ್ನಾಗಿ ನಡೆಯಿತು. ತರುವಾಯ ಉಭಯಮಹಾರಾಜರುಗಳೂ ಸಾರೋಟಿನಲ್ಲಿ ಕುಳಿತು ಪಟ್ಟಣದ ಮುಖ್ಯಮುಖ್ಯ ಭಾಗಗಳನ್ನೆಲ್ಲಾ ಸುತ್ತಿ ಸವಾರಿ ಮಾಡಿಕೊಂಡು ಬಂದರು ಆ ರಾತ್ರಿ ಜಗನ್ಮೋಹನ ಬಂಗಲೆಯಲ್ಲಿ ಕಾಶೀ ಮಹಾರಾಜರವರಿಗೆ ಔತಣ ಮಾಡಿಸಿದರು. ಭೋಜನಾನಂತರ ನಾನಾ ತರದ ಬಾಣಬಿರುಸುಗಳನ್ನು ಹಚ್ಚಿ ಮಹಾರಾಜರ ಮನಸ್ಸಂತೋಷಪಡಿಸಿದರು.

ಶನಿವಾರ ಬೆಳಗ್ಗೆ ಕಾಶೀ ಮಹಾರಾಜರವರು ಸಾರೋಟಿನಲ್ಲಿ ಕುಳಿತು ಬಾಸ್ ಬಂಗ್ಲೆಗೆ ದಯಮಾಡಿ, ನಮ್ಮ ಮಹಾರಾಜರವರ ಅಶ್ವಶಾಲೆಯನ್ನೂ, ಪಕ್ಷಿಮೃಗಾದಿಗಳ ಆಲಯವನ್ನೂ ನೋಡಿಕೊಂಡು, ಕೋಟೆಗೆ ಬಂದು, ಹೊಸ ಅರಮನೆ ಕಾಮಗಾರಿಯ ಗುಡಿಸಲನ್ನು ಪ್ರಾರಂಭಿಸಿ, ಈ ಅಗಾಧವಾದ ಕಟ್ಟಡವನ್ನು ನೋಡಿ ಆಶ್ಚರ್ಯಯುಕ್ತರಾದರು.

ಮಧ್ಯಾಹ್ನದ ಮೇಲೆ ಸಂಗೀತ ಮೊದಲಾದ ಸಂತೋಷಕೂಟಗಳು ನಡೆದವು ಸಾಯಂಕಾಲ ನಮ್ಮ ಮಹಾರಾಜರವರು ಅರಮನೆಯಲ್ಲಿ ದರ್ಬಾರ್ ನಡಿಸಿ, ಕಾಶೀ ಮಹಾರಾಜರವರಿಗೆ ಸನ್ಮಾನಗಳನ್ನು ಒಪ್ಪಿಸಿದರು ಅದೇ ರಾತ್ರಿ ಭೋಜನಾನಂತರ ಕಾಶೀ ಮಹಾರಾಜರವರು ಪರಿವಾರ ಸಮೇತ ರೈಲ್ ಹತ್ತಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಪ್ರಾಂತ್ಯ ಪ್ರಯಾಣ ಮಾಡಿದರು. ಅಲ್ಲಿ ಇವರನ್ನು ಸತ್ಕರಿಸುವುದಕ್ಕಾಗಿ ಸರ್ಕಾರೀ ಟ್ರೈಲ್ ಕಾಂಪ ಬಂಗಲೆಗಳಲ್ಲಿ ಬಿಡಾರಿ ಕ್ಯಾಂಪನ್ನು ಏರ್ಪಾಡು ಮಾಡಿದ್ದಾರೆ

ತಾಲ್ಲೋಕು ವರ್ತಮಾನಗಳು.

ಚನ್ನಪಟ್ಟಣ.—ಈಗ ೧೫—೧೬ ದಿನಗಳಿಂದ ಪ್ಲೇಗಿನ ಗಲಾಟೆಯು ಇಲ್ಲವೆಂದು ಕಾಣುತ್ತದೆ. ೧೩ ನೇ ತಾ ಸೋಮವಾರ ರಾತ್ರಿ ಮಳೆ ಸುರಿದು, ವಿಪರೀತ ಗಾಳಿ ಬೀಸಿದ್ದರಿಂದ ಕೆಲವು ಜೋಪಡಿಯವರಿಗೆ ಬಹು ಕಷ್ಟವಾಗಿ ಜೋಪಡಿಗಳೇ ಬಿದ್ದುಹೋದವು. ಒಂದೆರಡು ಜೋಪಡಿಯವರು ಬಿದ್ದ ಜೋಪಡಿಯೊಳಗಿಂದ ಪ್ರಯಾಸದಿಂದ ತಪ್ಪಿಸಿಕೊಂಡು ಹೊರಗೆ ಬಂದರು. ಒಂದು ಎಮ್ಮೆ ಕರುವೂ, ನಾಯಿಯೂ ಜೋಪಡಿ ಬಿದ್ದು ಸತ್ತುವು. ಕುನ್ನೀರಕಟ್ಟೆಗೆ ೧ ತಿಂಗಳ ನೀರು ಬಂತು ಇಂಥಾ ಕಷ್ಟದಲ್ಲಿ ಜನರು ಜೋಪಡಿಗಳಲ್ಲಿರುವದಕ್ಕಾಗದೆ ಕಾಲು ಭಾಗದ ಜನರು ಊರಿಗೆ ಬಂದರು ಊರಿಗೆ ಇನ್ನು ಬರಕೂಡದೆಂದು ಮೇಲಿನ ಅಧಿಕಾರಿಗಳು ಹೇಳಿದರಂತೆ ಈ ಸಂದರ್ಭದಲ್ಲಿ ಹೀಗೆ ಅಪ್ಪಣೆ ಕೊಡುವದು ಅಷ್ಟು ಉಚಿತವಾಗಿ ಜನರಿಗೆ ಕಾಣುವದಿಲ್ಲ. ಈಗ ಮುಖ್ಯವಾಗಿ ಊರನ್ನು ಶುದ್ಧ ಮಾಡಿಸಿ ಮನೆಗಳನ್ನು ಸರಿಯಾಗಿ ಸುಟ ನಾಡಿಸಿಕೊಂಡು ಬರುವದನ್ನು ಅಧಿಕಾರಿಗಳು ನೋಡಬೇಕಾಗಿದೆ —ದೊಡ್ಡ ಮಳೂರು ಅಪ್ರಮೇಯಸ್ವಾಮಿಯ ತೆಪ್ಪಕೊಳದ ಬಳಿ ಮಂಟಪವನ್ನು ಕಟ್ಟಿಸಲು ಮ॥ ರಾಮಸ್ವಾಮಯ್ಯಂಗಾರ್ರು ಕಲ್ಲಿನ ಸಾಮಾನುಗಳನ್ನು ಒದಗಿಸಿದ್ದರು. ಅಷ್ಟರಲ್ಲಿ ಕಾಲವಾದರು. ಸದರಿಯವರ ಕೆಲಸವನ್ನು ಪೂರೈಸುವದಕ್ಕೆ ಬೀಟ್ ಶಿರಸ್ತೆದಾರ್ರು, ಅಪ್ರಮೇಯ್ಯಂಗಾರ್ರು, ಮತ್ತು ಧರ್ಮದರ್ಶಿಗಳಾದ ರಂಗಯ್ಯಂಗಾರ್ರು ಶುರುಮಾಡಿದರು. ತರುವಾಯ ಅಪ್ರಮೇಯ್ಯಂಗಾರ್ರು ಕಾಲವಾದರು ಈಗ ಮ॥ ರಂಗಯ್ಯಂಗಾರ್ರು ಪರಲೋಕದಲ್ಲಿ ಇದ್ದರೂ ಮುತುವರ್ಜಿಯಿಂದಲೂ ಲಾಗುವಾಡಿನಿಂದಲೂ ಮಂಟಪವನ್ನು ಕಟ್ಟಿಸಿದರು. ಇಲ್ಲಿರುವವರಿಗೆ ತುಂಬಾ ಸಂತೋಷ —ಫೆಬ್ರವರಿ ೧೯ ನೇ ತಾ ನ ರಾತ್ರಿ ಮ॥ ವೀರ ತಿರುಮಲಾಚಾರ್ರ್ರು ಮನೆಯವರು ಶೆಟ್ಟಿಹಳ್ಳಿಯಲ್ಲಿ ಶ್ರೀರಂಗಪಟ್ಟಣಕ್ಕೆ ರೈಲ್ ಹತ್ತಿದರು. ಅವರ ಬಾಬತು ಮುಗುಟ, ಕೆಂಪಂಚಿನ ಸೀರೆ, ಬಾಟು ಬದಿರುವ ಕವಚ, ಬೆಳ್ಳಿ ಬಟ್ಟಲು, ಇವು ರೈಲಿನಲ್ಲಿ ಕಳುವಾದವು

ತರೀಕೆರೆ.—ಇಲ್ಲಿ ಬಿಸಲು ಅಧಿಕವಾಗಿದ್ದಾಗ್ಯೂ ಪ್ಲೇಗ್ ವ್ಯಾಧಿಯು ಇನ್ನೂ ಹೆಚ್ಚುತ್ತಲೇ ಇದೆ ಇಲಿಗಳು ಸಾಯುವದು ತಪ್ಪಿಲ್ಲ. ಜನರು ಈಗೀಗ ಊರನ್ನು ಬಿಟ್ಟು ಷೆಡ್ಡುಗಳಲ್ಲಿ ವಾಸ ಮಾಡುವದಕ್ಕೆ ಹೋಗುವವರಾಗಿರುತ್ತಾರೆ ಧಾರಣೆವಾಸಿಗಳು ಬಹಳ ಕಮ್ಮಿಯಾಗಿರುತ್ತವೆ. ೭ ದಿವಸ ಮಾತ್ರ ಮೋಡ ಸ್ವಲ್ಪ ಮುಚ್ಚಿಕೊಂಡಿತ್ತು. ಮಳೆ ಹನಿಗಳು ಸಹಾ ಸ್ವಲ್ಪ ಬಿತ್ತು —ಈ ತಿಂಗಳು ೧೪ನೇ ತಾ. ಲಕ್ಕವಳ್ಳಿ ಗ್ರಾಮಸ್ಥರೆಲ್ಲಾ ಸೇರಿ ಮಾರಿ ಜಾತ್ರೆಯನ್ನು ನಡಿಸಿದರು. ಈ ಜಾತ್ರೆಯಲ್ಲಿ ೩,೦೦೦ ಜನರ ಮೇಲೆಗೂ ಸೇರಿದ್ದರು ಈ ಮಾರಿಯು ಪೀಠದಿಂದ ತಲೆವರೆಗೆ ೧೨ ಅಡಿ ಉದ್ದ ೫ ಅಡಿ ಅಗಲ. ತ್ಯಾಗದ ಮರದಲ್ಲಿ ಒಂದು ಪ್ರತಿಮೆಯನ್ನು ಈಗ್ಯೆ ೬ ತಿಂಗಳಿಂದಲೂ ಮಾಡಿ, ಬಣ್ಣ ಮುಂತಾದ್ದು ಹಾಕಿಟ್ಟಿದ್ದನ್ನು ರಾತ್ರಿ ೧೨ ಗಂಟೆಗೆ ಪೂಜೆ ಮುಂತಾದ್ದು ಮಾಡಿ, ಪದ್ದರು ಬೆಸ್ತರು ಸಹಾ ಹೊತ್ತು ತೇರಿಗೆ ಇಟ್ಟು ಅಲ್ಲಿಂದ ಕೊಂಚ ದೂರ ಹೊತ್ತು ಒಂದು ಸ್ಥಳದಲ್ಲಿ ನಿಲ್ಲಿಸಿ, ೧೦ ಕೋಣಗಳನ್ನೂ ಸುಮಾರು ೫೦೦ ಕುರಿಗಳನ್ನೂ ಕಡಿದರು. ಇಷ್ಟೆಲ್ಲಾ ನಡಿಯಲು ಗಾಬರಿಯಾಯಿತು ಇದಕ್ಕೆ ಮುಂಚೆ ೧ ತಿಂಗಳಿಂದ ೫೦೦ ಕೋಣಗಳು ಕಡಿದಿದ್ದರೆಂತಲೂ ಕುರಿಗಳು ಕಡಿದದ್ದು ಲೆಕ್ಕವೇ ಇಲ್ಲವೆಂತಲೂ ಹೇಳುತ್ತಾರೆ. ಈ ಮಾರಿಯಿಂದ ಪ್ಲೇಗ್ ಬರಕೂಡದೆಂತ ಬಂಡಿತವಾದ ಪೃಥಮ ನಮಸ್ಕಾರಗಳಾಗಿ ಬಹಳ ಭಕ್ತಿಯೊಡನೆ ಬಾಣಬಿರುಸುಗಳೊಂದಿಗೆ ವಿಜೃಂಭಣೆ ಮಾಡಿದರು ಇದರ ಫಲವನ್ನು ನಾವು ಮುಂದೆ ನೋಡಬೇಕು ಆದರೆ ಈ ಮಾರಿಯನ್ನು ಇಳಿಸುವದೂ ಹೊರುವದೂ ಅಸಾಧ್ಯ ಈ ಜನರು ತರೀಕೆರೆಯಿಂದ ಇಲ್ಲಿಗೆ ಬರುವಾಗ ಕುಡಿಯುವ ನೀರು ಸಿಕ್ಕದೆ ಪಟ್ಟ ಶ್ರಮವು ಬಹಳವಾಗಿತ್ತು. ಜಂಬದ ಹಳ್ಳದ ಹತ್ರ ಒಂದು ಭಾವಿಯನ್ನು ತೆಗಿಸುವದಕ್ಕಾಗಿ ಕಂಟ್ರಾಕ್ಟರ್ ಮ॥ ಕೃಷ್ಣಸ್ವಾಮಿ ಪಿಳ್ಳೆಯವರು ಲಕ್ಕವಳ್ಳಿ ದಫೇದಾರ್ ಹತ್ತು ಹತ್ತು ರೂಪಾಯಿಸಂತೆ ಸಹಾಯ ಮಾಡುವರೆಂದು ಹೇಳುತ್ತಾರೆ. ಇದಕ್ಕಾಗಿ ನಮ್ಮ ಅಮಲ್ದಾರರವರು ಆ ಕಡೆಯಲ್ಲಿ ಒಂದು ಭಾವಿ ತೆಗಿಸುವದಕ್ಕೆ ಸಹಾಯಮಾಡುವರೆಂದು ನಂಬಿರುತ್ತಾರೆ —ಈ ತಿಂಗಳಲ್ಲಿ ಶ್ರೀಮದ್ ಮನೋರಂಜಿನಿ ನಾಟಕದ ಕಂಪೆನಿಯವರು ಕಡೂರಿನಿಂದ ಇಲ್ಲಿಗೆ ಬಂದು ೧೦ನೇ ತಾರೀಖಿನಿಂದ ಸಾರಂಗಧರ, ಪ್ರಭಾವತಿ ದರ್ಬಾರು. ಚೋರ್‌ಕಥೆ ಸಾಂದು ವಿಜಯ, ಇಂದ್ರಸಭಾ ಈ ಮುಂತಾದ ನಾಟಕಗಳನ್ನು ಆಡಿ ಇಲ್ಲಿನ ಮಹನೀಯರ ಮನಸ್ಸುಗಳನ್ನೆಲ್ಲಾ ಸಂತೋಷಪಡಿಸಿದರು.

ಚಿಕ್ಕಮಗಳೂರು.—ನಮ್ಮ ಡೆಪ್ಯುಟಿ ಕಮಿಷನರ್ ಮಿ ನಾರಾಯಣರಾಯರು ಈಗ ದಿನದಿನಕ್ಕೂ ಆರೋಗ್ಯವನ್ನು ಹೊಂದುತ್ತಾ ಇದಾರೆಂದು ಜನರು ಹೇಳುತ್ತಾರೆ. ಸೀನಿಯರ್ ಸರ್ಜನ್ ಕರ್ನಲ್ ಸ್ಮಿತ್ ಸಾಹೇಬರವರ ಅಪ್ಪಣೆಯಂತೆ ಇಬ್ಬರು ಯೂರೋಪಿಯನ್ ನರ್ಸುಗಳು ಕಾಯಿಲೆಯಾಗಿರುವ ಡೆಪ್ಯುಟಿ ಕಮಿಷನರನ್ನು ಉಪಚಾರ ಮಾಡುತ್ತಾ ಒಬ್ಬರು ತಪ್ಪಿ ಒಬ್ಬರು ಅವರ ಸಮೀಪದಲ್ಲಿಯೇ ಇದಾರೆ. ಇವರ ಒಡಲಿಗೆ ಬಂದಿರುವ ಮ॥ ರ್ಯ ವೆಂಕಟರಾಯರು ಇದೇ ತಿಂಗಳು ೧೧ ನೆ ತಾರೀಖಿಗೆ ಇಲ್ಲಿಗೆ ಬಂದು ಡಿಸ್ಟ್ರಿಕ್ಟ್ ಖಜಾನೆಯನ್ನು ತನಿಖೆ ಮಾಡಿಕೊಂಡು ೧೩ ನೆ ತಾರೀಖಿಗೆ ಇಲ್ಲಿಂದ ಕಡೂರು ತಾಲ್ಲೋಕಿನ ಜಮಾಬಂದಿಗಾಗಿ ಹೋಗಿದಾರೆಂದು ತಿಳಿದು ಬಂದಿದೆ —ಕಳೆದ ಮಂಗಳವಾರ ಬುಧವಾರಗಳಲ್ಲಿ ಸುಮಾರಾಗಿ ಒಂದು ಅಂಗುಲದಷ್ಟು ಮಳೆಯಾಗಿದೆ. ಇನ್ನು ಮೋಡವಾಡುತ್ತಾ ಮಳೆ ಬರುವಂತೆಯೇ ತೋರುತ್ತಿದೆ.—ಕೆಲವರು ಈ ಊರಿನಲ್ಲಿ ಒಂದು ಸರ್ಕಸ್ ಆಟವನ್ನು ತಯಾರು ಮಾಡಿ ಇಲ್ಲಿನ ಛತ್ರದಲ್ಲಿ ನಾಲ್ಕೈದು ದಿನಗಳ ವರಿಗೂ ಆಡಿದರು. ಅನೇಕರು ಹೋಗಿ ನೋಡಿ ಸಂತೋಷಪಟ್ಟರೆಂದೂ ಇವರಿಗೆ ಕುದುರೆ ಮೊದಲಾದ ಮೃಗಜಾತಿಗಳಿಲ್ಲದೆ ಇದ್ದಾಗ್ಯೂ ಕಷ್ಟಪಟ್ಟು ಕಲಿತುಕೊಂಡಿರುವದರಿಂದ ಚನ್ನಾಗಿ ಆಡುತ್ತಾರೆಂದೂ ಹೇಳುತ್ತಾರೆ.—ಇದೇ ಊರಿನ ಬಸವನಹಳ್ಳಿ ಬ್ಯಾಸುಭೋಗರಾಜ ಶೀನಾರಾಮಯ್ಯನವರ ಮಗಳ ಮದುವೆ ಮೆರವಣಿಗೆಯು ಇದೇ ತಿಂಗಳು ೧೬ ನೆ ತಾರೀಖಿನಲ್ಲಿ ನಡೆಯಿತು. ಮೆರವಣಿಗೆಗಾಗಿ ತಂದ ಪಲ್ಲಕ್ಕಿಯನ್ನು ಶೃಂಗರಿಸಿದ್ದ ಬೆಳ್ಳಿಯ ಕುಚ್ಚು ಮೊದಲಾದ ಸುಮಾರು ಎಂಬತ್ತು ರೂಪಾಯಿ ಬಾಳತಕ್ಕ ಸಾಮಾನನ್ನು ಮೆರವಣಿಗೆಯಾದನಂತರ ತೆಗೆದು ಒಂದು ಚಿಕ್ಕ ಮನೆಯಲ್ಲಿ ಇಟ್ಟಿದ್ದರು. ಆ ಮನೆಗೆ ಕಾವಲಾಗಿದ್ದವರು ಯಾತಕ್ಕೋ ಹೊರಗೆ ಹೋಗಿದ್ದ ಸಮಯವನ್ನೇ ನಿರೀಕ್ಷಿಸುತ್ತಿದ್ದ ಕಳ್ಳನು ಆ ಒಡವೆಯ ಗಂಟನ್ನೇ ಎತ್ತಿಕೊಂಡು ಪರಾರಿಯಾದನು. ಈ ಸಂಗತಿಯು ನೆನ್ನೆ ೧೭ ನೆ ತಾರೀಖಿಗೆ ಪೊಲೀಸಿಗೆ ರಿಪೋರ್ಟಾಯಿತು. ಪೊಲೀಸ್ ಅಧಿಕಾರಿಗಳು ನೆನ್ನೆಯೆಲ್ಲಾ ತಲಾಷ್ ಮಾಡಿ, ಸುಮಾರು ರಾತ್ರಿ ಹನ್ನೆರಡು ಗಂಟೆಯ ಸಮಯದಲ್ಲಿ ಪತ್ತೆ ಮಾಡಿದರು. ಪಾಲ್ಕಿ ಹೊರುವದಕ್ಕೆ ಬಂದಿದ್ದ ಬೆಸ್ತರ ಪೈಕಿ ಅಯ್ಯಣ್ಣನೆಂಬವನು ಆ ಮಾಲನ್ನು ತೆಗೆದುಕೊಂಡು ಹೋಗಿ ಒಂದು ಸ್ಥಳದಲ್ಲಿ ಹೂತಿಟ್ಟಿದ್ದ ಹಾಗೂ ಪೊಲೀಸಿನವರ ತನಿಖೆ ಹೆಚ್ಚಾದ ಕಾರಣ ಸದರಿ ಇಟ್ಟಿದ್ದ ಗಂಟನ್ನೆಲ್ಲಾ ಸ್ವಲ್ಪವೂ ಲೋಪವಿಲ್ಲದಂತೆ ತಂದುಕೊಟ್ಟನೆಂತಲೂ ಇದರಿಂದ ಪೊಲೀಸ್ ಇಲಾಖೆಗೆ ಒಳ್ಳೇ ಹೆಸರು ಬಂತೆಂತಲೂ ಮಾಲನ್ನು ಅಪಹರಿಸಿದ ಬೆಸ್ತರವನು ತನ್ನ ಕೆಲಸದ ಫಲವನ್ನು ಮುಂದೆ ನಿರೀಕ್ಷಿಸುತ್ತಿದಾನೆಂತಲೂ ತಿಳಿದು ಬಂದಿದೆ —ಇಲ್ಲಿನ ಹೆಡ್ ಕ್ವಾರ್ಟರ್ ಇನ್‌ಸ್ಪೆಕ್ಟರ್ ನಿಜಾಮುದ್ದೀನ್ ಸಾಹೇಬರಿಗೆ ಹಾಸನಕ್ಕೆ ವರ್ಗವಾದಂತೆಯೂ ಇವರ ಬದಲಿಗೆ ಎಸ್. ಸುಬ್ಬರಾವ್ ಎಂಬವರು ಬರುತ್ತಾರೆಂದೂ ಹೇಳುತ್ತಾರೆ.

* "ಮಾಯಾದೀಪ"—ಸ್ಟ್ಯಾಂಡರ್ಡ್ ಪ್ರೆಸ್, ಬೆಂಗಳೂರು. ಕ್ರಯ ೧ ರೂಪಾಯಿ

¶ "ಮಾನುಷ ಶರೀರ ಧರ್ಮಶಾಸ್ತ್ರ"—ಜಿ. ಟಿ. ಎ. ಪ್ರೆಸ್, ಮೈಸೂರು. ಕ್ರಯ ೧೨ ಆಣೆ

ಪ್ರಪಂಚದಲ್ಲಿ ದೊಡ್ಡವನು ಯಾವನು?

14

ಜ್ಞಾನವೋ? ಧನವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧ "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ, ವಿ. ಪಿ. ಪೋಸ್ಟೇಜ್ ೧೪ ಆಣೆ.

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು ಕ್ರಯ ೨ ಆಣೆ

೩ "ಸ್ವಪ್ರಯಾಸ ಫಲದೀಪಿಕೆ"

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೪ ಆಣೆ

೪	"ರೋಮನರ ಚರಿತ್ರೆ" ಕ್ರಯ	೦—೨—೦
೫	"ಗ್ರೀಕರ ಚರಿತ್ರೆ" ,,	೦—೨—೦
೬	"ಅನುಭವಾನಂದ" ,,	೦—೬—೦
೭	"ಗಣಿತ ಸಂಜೀವಿನಿ"	೦—೮—೦
೮	"ಗಣಿತ ಚಿಂತಾಮಣಿ"	೦—೧೦—೦
೯	"ಚಾಮರಾಜೇಂದ್ರ ವಿಳಾಸ"	೦—೨—೦
೧೦	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ"	೦—೧—೬—೦
೧೧	"೧೯೦೫ನೇ ವರುಷದ ಡೈರಿಗಳು"	

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦, ಸಾದಾ ೦—೪—೦

ಮ್ಯಾನೇಜರ್,
ಸಿ ಎಚ್ ಎಸ್ ಬುಕ್ ಡಿಪೋ,
ಮೈಸೂರು

ಜ್ವರಹರಿ 19



ಇದು ಸಾಧಾರಣ ಜ್ವರ, ಚಳೆಜ್ವರ, ಮೋರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೫೦ ಡ್ರಾಮಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೫೦ ಡ್ರಾಮಿನ ಸೀಸೆಯನ್ನು ವಿ. ಪಿ. ಪೋಸ್ಟೇಜ್ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨—೦, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆಯು ಸಹ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯಔಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊಡೆ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಶಸ್ತ್ರದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಲೂಕುಗಳ ಮೈಸೂರಿನ ಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ, ಭೇದಿ, ಅಜೀರ್ಣ ರೋಗಿಗಳ್ಳಿಗೆ ಕೊಡುತ್ತೇನೆ ಕಟ್ಟಿಕೂಡಲೆ ಅನೇಕ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೆ ಔಷಧವೆಂದು ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಡಾಕ್ಟರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ಹೆಸ್ರಿಯುಳ್ಳ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಕೆಳಂತ್ ಜೇಡ್ ಲೈನ್. ಮದರಾಸ್. ಲೈವ್. ಕಾಕರಾಡ್

೧೯೦೫ನೆ ಇಸವಿ ಮೆಟ್ರಿಕ್ಯುಲೇಷನ್ ಕನ್ನಡ ಟೆಕ್ಸ್ಟಿನ ನೋಟ್ಸು

ಕ್ರಯ ೧ ರೂಪಾಯಿ. ಡಿಸ್ಕೌಂಟು ೧೦ಕ್ಕೆ ೧
ಉಪೇಕ್ಷೆಮಾಡತಕ್ಕ ನೋಟ್ಸು ಅಲ್ಲ ಪ್ರತ್ಯೇಕ್ಷತ್ವಗಳೂ ಹಣ ಕಳುಹಿಸಿದ ಫೆಬ್ರವರಿ ೧೫ಕ್ಕೆ ಖಂಡಿತ ಸಿದ್ಧವಾಗುತ್ತೆ

N. R. VENKATA SUBBACHARYA,
Subodha Granthalaya, Mysore

ಸುಲಭಕ್ರಯ ಸುಗಂಧದ್ರವ್ಯಗಳು.

16

ಅಂಬರ್ ಕಡ್ಡಿ ಸೇರು ೧ಕ್ಕೆ	೫—೦—೦
ವಸಂತಕುಸುಮಾಕರವರ್ತಿ	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	೨—೮—೦
ಧೂಪದ ಕಡ್ಡಿ ,, ೧ಕ್ಕೆ	೧—೮—೦
ಮಸಾಲಾ ಕಡ್ಡಿ ,, ೧ಕ್ಕೆ	೦—೧೦—೦
ಕಸ್ತೂರಿ ಬಿಲ್ಲೆ ಕೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ	೦—೧—೬
ಹರೀ ಗಂಧ ಕೋಲ ೧ಕ್ಕೆ	೨—೦—೦
ಡಿಟೋ	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ ಪತರಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ	೦—೪—೦
ಕೇಶೋಲ್ಲಾಸಿನಿ ಸೀಸೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ	೦—೨—೦
ಪನ್ನೀರು ಸೀಸೆ ೧ಕ್ಕೆ	೦—೯—೦
ತಂಬಾಕ್ ಸ್ನೋಫ್ ಡಬ್ಬಿ ೧ಕ್ಕೆ	೦—೨—೦
ಕೈವಲ್ಯ ಮುಕ್ತಿಯ ದಸಾಂಗ ಸೇರು ೧ಕ್ಕೆ	೦—೬—೦
ಫಿತ್ಯಾ ಕೋಲ ೧ಕ್ಕೆ	೨—೦—೦
ಡಿಟೋ	೦—೦—೦
ಅಭ್ಯಂಗಚೂರ್ಣ ಪಟ್ಟಿ ೧ಕ್ಕೆ	೦—೦—೬
ವಸಂತಮಾಲೀಯ ಘುಟಿಕಾ ೧೦೦ಕ್ಕೆ	೨—೦—೦

ಇನ್ನು ಅನೇಕ ತರಹ ಸುಗಂಧ ದ್ರವ್ಯಗಳು ಎಲ್ಲಾ ತರಹ ಅತ್ತರುಗಳು ದೊರೆಯುತ್ತವೆ ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ ವಿಳಾಸ —ಟಿ ಎಲ್ ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ಹೋಮಿಯೋಪಿಯಾ

ಪಕ್ಷಿಣ ಪರಿಹಾರ

ತಗಲುತ್ತಲೇ ನೋವು ವಾಸಿ ಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಶಾಲೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷದ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತಕ್ಷಣದಲ್ಲಿ ಬೇನೆರೋಗಿಗಳಿಗೆ ಮುಖ್ಯಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಉಂಟಾದ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವ್, ಬಾತರ್ವಾತು, ಚಳುವಾತ್ಯಾದಿ, ಉಬ್ಬಸ, ವಾಯುಗಳು, ನರ ಹೊರಳುವದು ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮಂಡಿನೋವು, ಗಾಯಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಜೇಳು ಕಡಿದದ್ದು, ಚಿಬ್ಬಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಮುಟ್ಟದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ —ಸಣ್ಣ ಡಬ್ಬಾ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨—೮ ಆಣೆ ಬಾಟ್ಲು ಡಬ್ಬಾದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೪ ಪಟ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮಿಯೋಪಿಯಾ ಯಂಬ್ರೋಕೇಷನ್

ಈ ತೈಲವು ಚಳಿ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋಪಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳಷ್ಟು ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇರಿಕೊಳ್ಳಬಲ್ಲದು ಡಬ್ಬಾಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷದಗಳ ವಿವರವೂ, ಸರ್ಟಿಫಿಕೇಟುಗಳೂ ಉಳ್ಳ ಕೇಟಲಾಗುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ —ಹೋಮಿಯೋಪಿಯಾ ಕಂಪೆನಿ ೨೩ ಕೆಳಂತು ಬೀಚ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

೪—೩—1905 ರಿಂದ 10—3—1905 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕೋಡಿ... ಈ ವಾ... ಸಂಖ್ಯೆ	
ಬೆಂಗಳೂರು ಪಟ್ಟಣ	30	28	54	[illegible]
ಮೈಸೂರು ,,	4	2	2	
ಬೆಂಗಳೂರು ಡಿಸ್ಟ್ರಿಕ್ಟು	56	32	107	[illegible]
ಮೈಸೂರು ,,	21	20	53	[illegible]
ಕೋಲಾರ್ ,,	20	18	[illegible]0	[illegible]
ಕೋಲಾರ್ ಚಿನ್ನದ ಗಣಿಗಳು	2	2	13	
ತುಂಕೂರು ಡಿಸ್ಟ್ರಿಕ್ಟು	21	21	14	[illegible]
ಹಾಸನ ,,	3	2	18	
ಚಿತ್ರದುರ್ಗ ,,	3	1	5	
ಕಡೂರ್ ,,	12	11	41	[illegible]
ಶಿವಮೊಗ್ಗ ,,	4	1	31	[illegible]
ಜುಮ್ಲಾ	172	157	384	30[illegible]

ಶಾಲೀವಾಹನ ಶಕ ೧೮೨೭ ನೇ ಕ್ರೋಧಿನಾಮ ಸಂವತ್ಸರ ಫಾಲ್ಗುಣ ಬಹುಳ ತದಿಗೆ ಗುರುವಾರದಿಂದ ಫಾಲ್ಗುಣ ಬಹುಳ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಮಾರ್ಚಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
23	ಗುರು	ತದಿಗೆ	[illegible] 30	ಚಿತ್ರಾ	12 11	[illegible]
24	ಶುಕ್ರ *	ಚೌತಿ	17 22	ಸ್ವಾತಿ	8 10	[illegible]
25	ಶನಿವಾ ,,	ಪಂಚಮಿ	43 1[illegible]	ವಿ	5 10	[illegible]
26	ರವಿವಾ	ಷಷ್ಠಿ	3[illegible] [illegible]	ಅ	2 25	1
27	ಚಂದ್ರ	ಸಪ್ತಮಿ	[illegible] 15	ಜೇ	0 32	1
28	ಭೌಮ	ಅಷ್ಟಮಿ	[illegible]	ಪೂ ಷಾ	[illegible] 29	[illegible]
[illegible]	ಬುಧ	ನವಮಿ	33 16	ಉ ಷಾ	[illegible]	[illegible]

* ಸಂಕಷ್ಟ ಚತುರ್ಥಿ

,, ಬೆಟ್ಟದಲ್ಲಿ ಮಹಾಬಲೇಶ್ವರ ರಥ

ವ್ಯತೀಪಾತ ಯೋಗ

ಪೇಟೆ ಧಾರಣೆ.

ದಿನಿಸಿ.	ಮೈಸೂರು	ಬೆಂಗಳೂರು
ಒಳ್ಳೇ ಅಕ್ಕಿ ಪಲ್ಲಾ ೧ಕ್ಕೆ	೧೦—೮—	೧೦—೮
ಕೆಂಪುಕಡಿ ಅಕ್ಕಿ ಅವಲ್	೧೦ ೪—೦	೧೦—
,, ಮಧ್ಯಂ	೯—೦—೦	೧೦—೮—
ಜಾವಾಣ ಅಕ್ಕಿ	[illegible]	[illegible]
ಸಣ್ಣಕ್ಕಿ ಅವಲ	[illegible]	[illegible]
,, ಮಧ್ಯಂ	೧೦ ೮ ೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	೯ ೮ ೦	[illegible]
,, ಮಧ್ಯಂ	೧೦—೦—೦	೧೦—೮—
ಹೈಗ್ ರಾಗಿ ಪಲ್ಲಾ ೧ಕ್ಕೆ	೪ ೦—೦	೪—೯—
ಕಾರಾಗಿ	೪—೭—೦	[illegible]
ಜೋಳ	೪—೦—೦	೬—೦—
ಹುರುಳಿ ಪಲ್ಲಾ ೧ಕ್ಕೆ	೮—೦—೦	೮—
ಬಿಳೀ ಅವರೆ	೬ ೦ ೦	೬—೦—
ಹೆಸರು	೯ ೦—೦	೯—೦—
ಉದ್ದು	೮ ೦೪ ೦	೧೦—೦—
ಕಡಲೆ	೯ ೦ ೦	೧೦—೦—
ಎಳ್ಳು	೧೦ ೦ ೦	೧೦—೦೪
ಹುರುಳಿ	೮—೦ ೦	೬—೮—
ಹರಳು ೧೨ ಸೇರಿಗೆ	೯—೮—೦	೬—೬—
ಸೀಗೇಕಾಯಿ ಮಣ ೧ಕ್ಕೆ	೨—೪—೦	೩—೮—
ಮೆಣಸಿನಕಾಯಿ	೩—೦—೦	೩—೬—
,, ಮಧ್ಯಂ	೩—೦—೦	೩—೬—
ಬೆಲ್ಲ ದೊಡ್ಡ ಅಚ್ಚು	೩—೪—೦	೪ ೦೪
ಒಳ್ಳೆಣ್ಣೆ ಮಣ ೧ಕ್ಕೆ	೪—೦ ೦	೪—೦೪
ಹರಳೆಣ್ಣೆ	೪—೦—೦	೩—೦೪
ಕೊಬ್ಬರಿ ಪಲ್ಲ ೧ಕ್ಕೆ	೬—೦—	[illegible]
ಉಪ್ಪು ,,	೮ ೦—೦	೮—೮—
ಹುಣಸೇ ಹಣ್ಣು ,,	೦ ೪—೦	೦—೧೦
,, ಹಳೇದು	೦—೧೦—೦	೦—೧೦—
ಜೀರಿಗೆ	೦—೧೦—೦	೦—೧೦—
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೪—೦—೦	೪—೬—
ತೆಂಗಿನಕಾಯಿ ೧೦೦ಕ್ಕೆ	೫—೭—೦	೪—೬—
ಅಡಿಕೆಕಾಯಿ ಮಣ ೧ಕ್ಕೆ	೧—೦—೦	೦—೯—
ಅಂಟ್ವಾಳಕಾಯಿ ಮಣ ೧ಕ್ಕೆ	೦—೧೨—೦	೦—೯—
ತುಪ್ಪ (ಹಸು) ಕಂಡ್ಗ	೧೪—೮—೦	೧೪—೯—
,, ,, ಹಸುವು	೧೪ ೧೦—೦	೧೪—೦—
,, ,, ಗಟ್ಟಿ ತೊಲ ೧ಕ್ಕೆ	೩೬—೦—೦	[illegible]
ಗೆಲ್ಡ ಗಟ್ಟಿ ತೊಲ ೧೦೦ಕ್ಕೆ	೩೬—೦—೦	೩೬—[illegible]

Printed and Published by the Rev. H. SPENCER, B.A., the Proprietor and Manager, Wesleyan Mission Press, Mysore. 23/3/1905

ವೃತ್ತಾಂತ ಪತ್ರಿಕೆ.

REGIS 20 M.

ಕ್ರಯ ೧ ದು ಡ್ಡು — ಕ್ರಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಮಾರ್ಚಿ ತಾರೀಖು ೩೦ ನೇ ಗುರುವಾರ. — ಸಂಚಿಕೆ ೪೩

ಶ್ರೀ ತಾಂಬೂಲ.

20

...ನ್ನು ಬಿಡಿ ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ...ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವದು. ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ...ರ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ...ಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ಶ್ರಮ್ಮ ವಿಳಾಸ.—

...ವನಹಳ್ಳಿ ಟವರ್, — ಯಂ. ಗೋವಿಂದಶೆಟ್ಟಿ,

...ಳೂರು ಡಿಸ್ಟ್ರಿಕ್ಟ್. — ಮೆಡಿಕಲ್ ಪ್ರಾಕ್ಟಿಷನರ್.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

10

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ತಿಂದರೆ, ಬಾಯಿಯ ದುರ್ಗಂಧವು ಹೋಗುವದು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುಬೇನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಅಫೀಮೇಯುವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಒರಳು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿ...ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆ...ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ...ತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ — ...ಕು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ...ಗೆ ವಿ. ಪಿ. ಛಾಂಗಿ ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದ ...ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮ್ಮದ್ ಸವೋದಾನಿ.

...ಳಗಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿ...ರೆ ಪಿತ್ತ, ತಲೇನೋವು, ಛಳಿ ಜ್ವರಗಳು ನಿವಾರಣೆಯಾಗುತ್ತ...ರೇ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

...ಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದ...ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುರುಷೋತ್ತಮ ...ಸ್ ಅಯ್ಯಂಗಾರ್.

...ಮ್ಮ ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರಿ...ಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ— ...ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಶ್ರೀಪಾಲ್.

Apply to.—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಕಥಾಸಂಗ್ರಹ—ಮೊದಲನೆ ಭಾಗ.

3

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಮಾಡಿಯ ಕಥಾಸಂಗ್ರಹದಲ್ಲಿ ೧, ೨, ೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಮಾತಿನ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ.—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಘನತೆಯುಳ್ಳ ಸ್ತ್ರೀಯರ ಚರಿತ್ರೆಯು.

ಚಿತ್ರ ಸಹಿತವಾದುದು.

ರಾಣಿವಾಸದವರು, ವಿದ್ಯಾರ್ಥಿನಿಯರು, ಸಾಮಾನ್ಯಸ್ತ್ರೀಯರು ಸಕಲರಿಗೂ ಸರ್ವೋತ್ತಮವಾದ ಮೇಲ್ಪಂಕ್ತಿಯನ್ನು ಹೇಳಿಕೊಡುವ ಪುಸ್ತಕ ಮೊದಲನೆ ಸಲ ಪ್ರಿಂಟಾದ ಪುಸ್ತಕಗಳೆಲ್ಲಾ ಬಿಕರಿಯಾಗಿಹೋದವೇ ಈ ಪುಸ್ತಕದ ಪ್ರಯೋಜನವನ್ನು ಪ್ರಕಾಶ ಪಡಿಸುತ್ತದೆ. ಈ ಪುಸ್ತಕವನ್ನು ಈಗ ಎರಡನೆಯ ಸಲ ಪ್ರಿಂಟುಮಾಡಿದೆ ಸೊಗಸಾದ ದಪ್ಪ ಗ್ಲೇಜುಳ್ಳ ಕಾಗದ, ಸುಂದರವಾದ ಬೈಂಡು, ನೇತ್ರಾನಂದಕರವಾದ ಸ್ತ್ರೀಯರ ಜೀವಚಿತ್ರಗಳು, ಮನೋಹರವಾದ ಅವರ ಚರಿತ್ರೆಗಳು—ಇವುಗಳಿಂದ ಕೂಡಿದ್ದಾಗಿದೆ. ಅತ್ಯಂತ ಬಡಬಗ್ಗರೂ ಕೊಂಡು ಓದುವುದಕ್ಕೆ ಅನುಕೂಲವಾಗಲೆಂದು ಈ ಪುಸ್ತಕದ ಕ್ರಯವನ್ನು ಬಹಳ ಅಗ್ಗವಾಗಿ ಮಾಡಿದೆ. ಕ್ರಯ ೦ ಪ್ರತಿಗೆ ೭॥ ಆಣೆಮಾತ್ರ. ವಿ. ಪಿ. ಮೂಲಕ ತರಿಸಿ ಕೊಂಡಲ್ಲಿ ೪ ಆಣೆ ಬೀಳುವುದು. ವಿಳಾಸ—

ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಸನ್ ೧೯೦೫ನೇ ಇಸವಿಯ

14

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ ಡೈರಿ

ಎಷ್ಟೋ ಚೆನಾ! ಚಿನಂ! ಚಿನಂ!

ಈ ಡೈರಿಗಳು ವರ್ತಕರು, ಲಾಯರುಗಳ ಕಂಟ್ರಾಕ್ಟರು, ದೊಡ್ಡಮನುಷ್ಯರು, ಖುಷ್‌ಬಾಷ್ ಸಮಸ್ತರಿಗೆ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ಹುಕುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ದವಿರ್ಜುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರಗೂಳೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಜಮಾಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾ ಕಾಗದ, ರೂಲು ಹಾಕಿದೆ, ಸೀಮೆ ಸಾವರ್ಜ್ ಬೈಂಡು, ಚಿನ್ನ ಬೆಳ್ಳಿ ಲೇಟು ಮಾಡಿದೆ.

ಎ. ನಂಬರ್ ಚಿಕ್ಕಸೈಜು ೩ ಆಣೆ ಸಿ. ನಂಬರ್ ದೊಡ್ಡಸೈಜು ೬ ಆ.

ಎಫ್. ,, ,, ೪ ಎಚ್. ,, ೭ ,,

ಬಿ. ಮುಚ್ಚಳವುಳ್ಳ ,, ೫ ಡಿ. ಮುಚ್ಚಳವುಳ್ಳ ,, ೮ ,,

ಪೋಸ್ಟ್ ಚಾರ್ಜು ಬೇರೆ. ಒಂದೇ ಸಲಕೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ಕಳುಹಿಸ್ತೇವೆ.

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಳಾಸ ಪ್ರೆಸ ಮೈಸೂರು.

ಅಗ್ಗ ! ಅಗ್ಗ !! ಬಹಳ ಅಗ್ಗ !!!

8

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲಾ

ರಾಸ್ಕೋಪ ಲಿವ್ಹರ ಸಿಷ್ಟಂ ವಾಚ.

ಇದು ಬಹಳ ಮಜಬೂತ ಇದ್ದು ಕುದುರೆಯ ಮೇಲೆ ಸವಾರಿ ಮಾಡಿದರೂ ಕೂಡ ಬಂದ ಆಗುವದಿಲ್ಲ. ಇಂಥಾ ವಾಚನ್ನು ನಾವು ಬಡಬಡವರಿಗೂ ಕೂಡ ಸಿಗಲಿಕ್ಕೆ ಬರುವಂತೆ ಮಾಡಬೇಕೆಂಬ ಇರಾದೆಯಿಂದ ೧೯೦೫ ನೇ ಆಗಸ್ಟ ಆಖೈರವರಿಗೆ ೧೦ ರೂಪಾಯಿ ಕಿಮ್ಮತ್ತು ಇದ್ದದನ್ನು ೫ ರೂಪಾಯಿಗೆ ಕೊಡುತ್ತೇವೆ. ಗ್ಯಾರಂಟಿ ೫ ವರ್ಷ. ಪ್ರತಿ ವಾಚಿನ ಸಂಗಡ ಸ್ಪ್ರಿಂಗ್, ಪೆಟ್ಟಿಗೆ, ಕನ್ನಡಿ, ಹೀಗೆ ೩ ಸಾಮಾನು ಕಳುಹಿಸುತ್ತೇವೆ. ಟಪ್ಪಾಲ ಖರ್ಚು ಬೇರೆ.

ವಿಳಾಸ:—ಜೇ. ಯಲ್. ಜೋಶಿ ಮತ್ತು ಕಂಪನಿ,

ಪೋಸ್ಟ ಬನವಾಸಿ, ಜಿಲ್ಲಾ ಉತ್ತರ ಕಾನಡಾ.

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

10

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುತ್ತೇವೆ.

ಇದಲ್ಲದೆ ಕನ್ನಡ ಅಕ್ಷರಗಳು—ಟೂಲ್ಟೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸ ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,

ಮಿಷನ್ ಪ್ರೆಸ್, ಮೈಸೂರು.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ

ಬರೆದು ತರಿಸಿಕೊಳ್ಳಿ!

20

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ? ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೊಸ ನೋಟ್ಸು.

ಮೆಕ್ಮಿಲ್ಲನ್'ರವರ ೫, ೬ನೆಯ ಕನ್ನಡ ಪುಸ್ತಕಗಳಿಗೆ ೪ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನಸಹಿತ ಈ ನೋಟ್ಸನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ. ೮ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಛಾಪು)	೦—೧—೦
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೧—೬
೧೯೦೫ನೆ ವರ್ಷದ ಲೋವರ್ ಸೆಕೆಂಡರಿ ನೋಟ್ಸು	೦—೭—೦

ವಿಳಾಸ—ಟಿ. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು

ಚೇಂಬರ್ಲೆನ್ ರವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

12



ಕೆಳಹೊಟ್ಟೆಯ ನೋವು ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲರಾ ಕರುಳುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಶಂಸಕರ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ, ಪ್ರಾಣವನ್ನು ಬದುಕಿಸಿಕೊಳ್ಳಬಹುದು ಕ್ರಯ ೧ ಬಾಟ್ಲಿಗೆ ೧ ರೂ ; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ನಮ್ಮ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ವೃತ್ತಾಂತ ಪತ್ರಿಕೆ.

ಕ್ರಿ॥ ೧೯೦೫ ನೇ ಇಸವಿ ಮಾರ್ಚಿ ತಾ॥ ೩೦ ನೇ ಗುರುವಾರ

ಸರ್ಕಾರಿ ಸ್ಕೂಲುಗಳ ಖರ್ಚಿನಬಾಬು.

ಹಿಂದಿನವಾರ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆದ ವಿದ್ಯಾಭ್ಯಾಸದ ಸಮಾಜದಲ್ಲಿ ಮೆಂಬರುಗಳು ಈ ಸಂಸ್ಥಾನದ ಗವರ್ನಮೆಂಟ್ ಸ್ಕೂಲುಗಳಿಗೆ ಸರ್ಕಾರಿ ಹಣ ಎಷ್ಟು ಖರ್ಚಾಗುತ್ತಿದೆ ಎಂಬ ವಿಷಯವನ್ನು ಕುರಿತು ಬಹಳ ಹೊತ್ತು ಚರ್ಚೆ ಮಾಡಿದರು. ಒಂದು ಪ್ರೈವೇಟ್ ಸ್ಕೂಲು ಗ್ರಾಂಟನ್ನು ಅಪೇಕ್ಷಿಸಿದರೆ ಸರ್ಕಾರದವರು ಆ ಸ್ಕೂಲಿನ ಒಟ್ಟು ಖರ್ಚಿನಲ್ಲಿ ಮೂರನೇ ಒಂದಂಶದಷ್ಟು ಫೀಜು ವಸೂಲಾಗುತ್ತಿದೆಯೋ ಎಂದು ನೋಡುತ್ತಾರೆ. ಫೀಜಿನ ಉತ್ಪತ್ತಿ ಅದಕ್ಕೆ ಕಡಿಮೆಯಾಗಿದ್ದಲ್ಲಿ ಸರ್ಕಾರು ಗ್ರಾಂಟು ಸಿಕ್ಕುವುದು ಕಷ್ಟವಾಗಿದೆ. ಇನ್ಸ್ಪೆಕ್ಟರ್ ಜನರಲ್ ರವರಿಂದ ಹೊಸದಾಗಿ ಪ್ರಕಟಿಸಲ್ಪಟ್ಟ ವಾರ್ಷಿಕ ರಿಪೋರ್ಟನ್ನು ಓದುವಲ್ಲಿ ಈ ಸಂಸ್ಥಾನದಲ್ಲಿ ಸಹಾಯ ಹೊಂದುವಂಥಾ ಮೂರು ಹೈಸ್ಕೂಲುಗಳಲ್ಲೂ ಫೀಜಿನ ಉತ್ಪತ್ತಿಯು ಒಟ್ಟು ಖರ್ಚಿನಲ್ಲಿ ಮೂರನೇ ಒಂದಂಶಕ್ಕಿಂತಲೂ ತುಂಬಾ ಹೆಚ್ಚಾಗಿದೆ ಎಂದೂ, ಸರ್ಕಾರದವರು ಅವುಗಳಿಗೆ ಕೊಡುತ್ತಿರುವ ಸಹಾಯ ದ್ರವ್ಯವು ಆ ಪೈಕಿ ಒಂದು ಹೈ ಸ್ಕೂಲಿನ ಒಟ್ಟು ಖರ್ಚಿನಲ್ಲಿ ಕಾಲು ಪಾಲಾಗುವುದೆಂದೂ ಇನ್ನುಳಿದ ಹೈ ಸ್ಕೂಲುಗಳ ಒಟ್ಟು ಖರ್ಚಿನಲ್ಲಿ ಕಾಲುಪಾಲಿಗಿಂತಲೂ ಕಡಿಮೆಯಾಗಿದೆ ಎಂದೂ ಕಂಡು ಬರುವುದು. ಇದು ಹಾಗಿರಲಿ. ಗವರ್ನಮೆಂಟ್ ಹೈ ಸ್ಕೂಲುಗಳ ಸ್ಥಿತಿ ಹ್ಯಾಗಿದೆ ಎಂದು ಸ್ವಲ್ಪ ನೋಡೋಣ. ಕೋಲಾರದ ಹೈ ಸ್ಕೂಲಿನಲ್ಲಿ ಫೀಜು ಉತ್ಪತ್ತಿಯಾಗುವುದು ಆ ಸ್ಕೂಲಿನ ಒಟ್ಟು ಖರ್ಚಿನಲ್ಲಿ ಐದನೇ ಒಂದಂಶಕ್ಕಿಂತಲೂ ಕಡಿಮೆಯಾಗಿದೆ; ಚಿಕ್ಕಮಗಳೂರು ಹೈ ಸ್ಕೂಲ್ ಉತ್ಪತ್ತಿ ಐದನೇ ಒಂದಂಶವೂ, ಚಿತ್ರದುರ್ಗದ ಹೈ ಸ್ಕೂಲಿನಲ್ಲಿ ಒಂಬತ್ತನೇ ಒಂದಂಶವೂ, ಹಾಸನದ ಹೈ ಸ್ಕೂಲ್ ಉತ್ಪತ್ತಿಯು ಅವರ ಖರ್ಚಿನಲ್ಲಿ ಐದನೇ ಒಂದಂಶಕ್ಕಿಂತ ಸ್ವಲ್ಪ ಕಡಿಮೆಯಾಗಿಯೂ ಇದೆ. ಅತ್ತಲಾಗಿ ಸಹಾಯ ಹೊಂದುವಂಥಾ ಮೇಲ್ಕಂಡ ಮೂರು ಹೈ ಸ್ಕೂಲುಗಳಲ್ಲೂ ಒಟ್ಟು ಖರ್ಚನ್ನು ಹಂಚಿ ಹಾಕಿದರೆ ಒಂದು ವರುಷಕ್ಕೆ ಒಬ್ಬ ಹುಡುಗನಿಗೆ ೨೮ ರೂಪಾಯಿಗಿಂತ ಹೆಚ್ಚು ಬೀಳುವುದಿಲ್ಲ. ಸರ್ಕಾರಿ ಹೈ ಸ್ಕೂಲುಗಳಲ್ಲಾದರೋ ಕೋಲಾರದಲ್ಲಿ ೭೮ ರೂ., ಚಿಕ್ಕಮಗಳೂರಿನಲ್ಲಿ ೪೪ ರೂ., ಚಿತ್ರದುರ್ಗದಲ್ಲಿ ೧೩೦ ರೂ., ಹಾಸನದಲ್ಲಿ ೮೧ ರೂ., ಈ ಪ್ರಕಾರ ಖರ್ಚಾಗುತ್ತಿದೆ. ಇದರಿಂದ ಸರ್ಕಾರಿ ಗ್ರಾಂಟು ಪಡೆಯುವ ಸ್ಕೂಲ್ ಮ್ಯಾನೇಜರುಗಳು ವಿದ್ಯಾಭ್ಯಾಸಕ್ಕೆ ಖರ್ಚುಮಾಡುವ ಹಣಕ್ಕಿಂತಲೂ ಸರ್ಕಾರದವರು ಗವರ್ನಮೆಂಟ್ ಸ್ಕೂಲುಗಳಿಗೆ ಖರ್ಚುಮಾಡುವ ಹಣವು ತುಂಬಾ ಹೆಚ್ಚಾಗಿದೆ ಎಂದೂ, ಗ್ರಾಂಟು ಪಡೆಯುವ ಸ್ಕೂಲುಗಳ ಉತ್ಪತ್ತಿಗಿಂತಲೂ ಸರ್ಕಾರಿ ಸ್ಕೂಲುಗಳ ಉತ್ಪತ್ತಿಯು ಬಹಳ ಕಡಿಮೆಯಾಗಿದೆ ಎಂದೂ ಸುಲಭವಾಗಿ ತಿಳಿದುಕೊಳ್ಳಬಹುದು. ಆದಕಾರಣ ಗವರ್ನಮೆಂಟಿನವರು ಕಂದಾಯ ತೆರಿಗೆಗಳ ರೂಪದಲ್ಲಿ ಪ್ರಜೆಗಳಿಂದ ವಸೂಲ್ಮಾಡುವಂಥಾ ಹಣವು ವಿವೇಕದಿಂದ ನ್ಯಾಯವಾಗಿ ಖರ್ಚಾಗುವುದೇ ಎಂದು ಕೇಳುತ್ತೇವೆ. ಗ್ರಾಂಟು ಪಡೆಯುವ ಸ್ಕೂಲುಗಳು ಮೂರನೇ ಒಂದು ಪಾಲು ಖರ್ಚನ್ನು ಫೀಜು ರೂಪದಲ್ಲಿ ಉತ್ಪತ್ತಿ ಮಾಡಿಕೊಂಡೂ ಬಾಲಕರಿಗೆ ಸಮರ್ಪಕವಾದ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿಸುವುದು ಸಾಧ್ಯವಾಗಿರುವಲ್ಲಿ ಗವರ್ನಮೆಂಟಿನವರು ಸರ್ಕಾರಿ ಸ್ಕೂಲುಗಳಲ್ಲಿ ಬಾಲಕರ ವಿದ್ಯಾಭ್ಯಾಸಕ್ಕೆ ಅದಕ್ಕಿಂತಲೂ ಹೆಚ್ಚು ಹಣವನ್ನು ಖರ್ಚುಮಾಡುವುದು ಯಾವ ಧರ್ಮ? ಇದರಿಂದ ಪ್ರಜೆಗಳಿಗೆ ಅನ್ಯಾಯವಾಗಿ ಹೆಚ್ಚು ಖರ್ಚಾಗುವುದಿಲ್ಲವೋ?

ಪ್ರಜೆಗಳಿಗೆ ಪಾಠಶಾಲೆಗಳನ್ನು ಇಟ್ಟುಕೊಟ್ಟು, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬುವುದು ಗವರ್ನಮೆಂಟಿನವರ ಕರ್ತವ್ಯವಲ್ಲ. ಪ್ರಜೆಗಳು ವಿದ್ಯಾವಂತರಾಗುವುದಕ್ಕೆ ಸ್ವತಃ ಪ್ರಯತ್ನಪಟ್ಟ ಪಕ್ಷದಲ್ಲಿ ಸರ್ಕಾರದವರು ಅಂಥಾವರಿಗೆ ಸಹಾಯ ಮಾಡಿ ಪ್ರೋತ್ಸಾಹ ಪಡಿಸುವುದೇ ಧರ್ಮವಾಗಿದೆ. ಇನ್ನು ಮುಂದೆ ಗವರ್ನಮೆಂಟ್ ಸ್ಕೂಲುಗಳೇ ತಪ್ಪಿಹೋಗಿ, ಸಮಸ್ತ ಪಾಠಶಾಲೆಗಳೂ ಸಾಹುಕಾರಿ ಆಗಿ, ಸರ್ಕಾರದಿಂದ ದ್ರವ್ಯ ಸಹಾಯ ಹೊಂದುವಂತೆ ಆಗುವುದನ್ನು ನಿರೀಕ್ಷಿಸುತ್ತೇವೆ. ಆದರೆ ಈಗಿನ ಸ್ಥಿತಿಯನ್ನು ನೋಡಲಾಗಿ ಇದಕ್ಕೆ ವಿರೋಧವಾಗಿಯೇ ಏರ್ಪಡುವಂತೆ ಕಾಣುವುದು. ಸರ್ಕಾರಿ ಸ್ಕೂಲುಗಳಿಗೆ ಅಪಾರವಾದ ದ್ರವ್ಯ ವಿನಿಯೋಗವಾಗುತ್ತಿದೆ. ಸಹಾಯ ಹೊಂದುವ ಪಾಠಶಾಲೆಗಳಿಗಾದರೋ ಸರ್ಕಾರದವರು ಬಹು ಸ್ವಲ್ಪ ಹಣ ಖರ್ಚುಮಾಡುವರು. ಸರ್ಕಾರಿ ಪಾಠಶಾಲೆಗಳಿಗೆ ಒಳ್ಳೊಳ್ಳೇ ಕಟ್ಟಡಗಳುಂಟು; ಅಲ್ಲಿ ಸ್ಕೂಲಿನ ಉಪಕರಣಗಳೂ ವಿಶೇಷವಾಗಿರುತ್ತವೆ. ಇಷ್ಟಾದರೂ ಅಲ್ಲಿ ನಡೆಯುವ ಪಾಠ ಪ್ರವಚನಗಳು ಸಹಾಯ ಹೊಂದುವಂಥಾ ಪಾಠಶಾಲೆಗಳಲ್ಲಿ ಆಗುವುದಕ್ಕಿಂತ ಉತ್ತಮವೆಂದು ಯಾರೂ ಹೇಳುವುದಿಲ್ಲ. ವಿಶೇಷ ಸೌಕರ್ಯಗಳನ್ನುಳ್ಳ ಈ ಸರ್ಕಾರಿ ಪಾಠಶಾಲೆಗಳಿಗೆ ಹೋಗಿ ಓದತಕ್ಕವರು ಅದಕ್ಕೆ ತಕ್ಕಂತೆ ಹೆಚ್ಚು ದರದ ಫೀಜನ್ನು ಕೊಡಬಾರದೋ? ಒಂದೇ ಪಟ್ಟಣದಲ್ಲಿ ಸರ್ಕಾರಿ ಸ್ಕೂಲೂ ಸಹಾಯ ಹೊಂದುವ ಸ್ಕೂಲೂ ಎರಡೂ ಇದ್ದಲ್ಲಿ ಸ್ಕೂಲ್ ಫೀ ದರವು ಎರಡನೆಯದಕ್ಕಿಂತ ಮೊದಲನೆಯದರಲ್ಲಿ ಸ್ವಲ್ಪ ಹೆಚ್ಚಾಗಿಯೇ ಇರಬೇಕೆಂದು ಕೆಲವು ವಿದ್ಯಾವಂತರು ಅಭಿಪ್ರಾಯ ಪಡುತ್ತಾರೆ. ಬೊಂಬಾಯಿ ಮೊದಲಾದ ಅನೇಕ ಸ್ಥಳಗಳಲ್ಲಿ ಈ ಕ್ರಮವು ರೂಢಿಯಲ್ಲಿದೆ. ಇನ್ನು ಕೆಲವರು ಸಹಾಯ ಹೊಂದುವಂಥ ಪಾಠಶಾಲೆಗಳಲ್ಲಿ ನಡೆಯುವ ವಿದ್ಯಾಭ್ಯಾಸದಿಂದ ಪ್ರಜೆಗಳು ಸಂತೋಷಪಟ್ಟುಕೊಳ್ಳುವಂತೆ ಏರ್ಪಡುವುದಕ್ಕೋಸ್ಕರ ಸರ್ಕಾರದವರು ಹೆಚ್ಚು ಹೆಚ್ಚು ದ್ರವ್ಯಸಹಾಯ ಮಾಡುತ್ತಾ ಬರಬೇಕೆಂದು ಅಭಿಪ್ರಾಯ ಪಡುತ್ತಾರೆ. ಮತ್ತೆ ಕೆಲವರು — ಗವರ್ನಮೆಂಟಿನವರು ಸರ್ಕಾರಿ ಸ್ಕೂಲುಗಳಿಗೆ ಇಷ್ಟು ವಿಶೇಷವಾಗಿ ಖರ್ಚುಮಾಡುವುದನ್ನು ನಿಲ್ಲಿಸಬೇಕೆಂದು ಹೇಳುವರು. ಮೇಲ್ಕಂಡ ಸಮಾಜದವರು ಸ್ಕೂಲುಗಳ ಈಗಿನ ಸ್ಥಿತಿಯನ್ನು ಬದಲಾವಣೆ ಮಾಡಿ, ಉತ್ತಮಸ್ಥಿತಿ ತರಬೇಕೆಂದು ಅಭಿಪ್ರಾಯ ಪಟ್ಟು, ಗವರ್ನಮೆಂಟಿನವರನ್ನು ಒಂದು ಕಮಿಟಿ ಏರ್ಪಾಡು ಮಾಡಬೇಕೆಂದೂ ಅದರ ಮೂಲಕ ಸ್ಕೂಲುಗಳ ಸ್ಥಿತಿಗಳನ್ನು ತನಿಖೆಮಾಡಿಸಿ, ಬದಲಾವಣೆಗಳನ್ನು ಸೂಚಿಸುವಂತೆ ಮಾಡಿಕೊಡಬೇಕೆಂತಲೂ ಕೇಳಿಕೊಂಡಿದಾರೆ. ಈ ಕಮಿಟಿಯವರು ಸೂಚಿಸುವಂಥಾ ಪರಿಹಾರವು ವಿದ್ಯಾಭಿವೃದ್ಧಿಗೆ ಸಹಕಾರಿಯಾಗಿಯೂ ಸರ್ಕಾರದ ಹಣವು ವೃಥಾ ಹೆಚ್ಚು ಖರ್ಚಾಗಿ ವಿನಿಯೋಗವಾಗದಂತೆಯೂ ಈ ಸಂಸ್ಥಾನದ ಪ್ರಜಾ ಕೋಟಿಯ ಹಿತಚಿಂತನೆಯಿಂದ ನಡೆಸಲ್ಪಡುತ್ತಿರುವ ಪ್ರೈವೇಟ್ ಪಾಠಶಾಲೆಗಳಿಗೆ ಯಥಾರ್ಥವಾದ ಸಹಾಯವಾಗುವಂತೆಯೂ ಪರಿಣಮಿಸಲೆಂದು ಪ್ರಾರ್ಥಿಸುತ್ತೇವೆ.

ಹಿಂದೂಸ್ಥಾನದ ಜಮಾ ಖರ್ಚು.

ಕಳೆದ ೨೨ನೆ ತಾರೀಖು ಬುಧವಾರ ವೈಸ್'ರಾಯರ ಮಂತ್ರಾಲೋಚನಾ ಸಭೆಯಲ್ಲಿ ಇಂಡಿಯಾ ಗವರ್ನಮೆಂಟ್ ಖಜಾನಾ ಛಕ್ಷಿಯ ಮೆಂಬರಾದ ಮಿ॥ ಇ. ಎನ್. ಬೇಕರ್'ಯವರು ಹಿಂದೂಸ್ಥಾನದ ಆದಾಯ ವ್ಯಯಗಳನ್ನು ಮೆಂಬರುಗಳಿಗೆ ತಂದೊಪ್ಪಿಸಿದರು. ಅದರಲ್ಲಿ ಮೂರು ಸಾಲುಗಳ ಜಮಾ ಖರ್ಚು ಕೆಳಗೆ ಹೇಳುವಂತೆ ವಿವರಿಸಲ್ಪಟ್ಟಿದೆ —(೧ ಪೌಂಡಿಗೆ ೧೫ ರೂಪಾಯಿ)

೧೯೦೩—೦೪ ನೆ ಸಾಲ್	ನಿಶ್ಚಿತ ಆದಾಯ	೮,೩೭,೫೬,೧೫೫ ಪೌ॥
,, ,,	ಖರ್ಚು	೮,೦೭,೫೯,೬೫೫,
	ನಿವ್ವಳ ಆದಾಯ	೨೯,೯೬,೫೦೦
೧೯೦೪—೦೫ ನೆ ಸಾಲ್	ಶೋಧನೀಯ ಜಮಾ	೮,೪೬,೯೯,೧೦೦
,, ,, ,,	ಖರ್ಚು	೮,೧೨,೧೩,೬೦೦
	ಆದಾಯ	೩೪,೮೫,೫೦೦,
೧೯೦೫—೦೬ ನೆ ಸಾಲ್	ಬಜೆಟ್ ಹುಟ್ಟುವಳಿ	೮,೩೪,೩೩,೦೦೦
,, ,, ,,	ಖರ್ಚು	೮,೨೫,೨೯,೨೦೦
	ನಿವ್ವಳ ಆದಾಯ	೯,೦೩,೮೦೦

ಮೇಲ್ಕಂಡ ಜಮಾ ಖರ್ಚಿನ ಗೋಷ್ವಾರೆಯಿಂದ ಗವರ್ನಮೆಂಟಿನವರಿಗೆ ಪ್ರತಿ ವರುಷವೂ ಆದಾಯವೇ ಹೆಚ್ಚಾಗಿ ಬರುತ್ತಿರುವುದು ಗೊತ್ತಾಗುವುದು. ಇದನ್ನು ನೋಡಿ ಅವರು ಪ್ರಜಾ ಪ್ರೀತಿಪೂರ್ವಕವಾಗಿ ಹಲವು ಬಾಬುಗಳಲ್ಲಿ ರಿಯಾಯಿತಿಗಳನ್ನು ತೋರಿಸುತ್ತಾರೆ. ಯಾವವೆಂದರೆ—(೧) ಉಪ್ಪಿನ ಮೇಲೆ ಹಾಕಿರುವ ಸುಂಕವನ್ನು ಮಣಕ್ಕೆ ರೂ ೨ ರಿಂದ ರೂ. ೧—೮—೦ಗೆ ಇಳಿಸಿದಾರೆ, (೨) ಸಂಯುಕ್ತ ಪ್ರಾಂತ್ಯಗಳು, ಮಧ್ಯ ಪ್ರಾಂತ್ಯಗಳು ಪಂಜಾಬ್, ಈ ಭಾಗದಲ್ಲಿ ಜಮೀನ್ ಕಂದಾಯದ ಮೇಲೆ ಸ್ಥಾನಿಕ ತೆರಿಗೆಗಳನ್ನು ಹಾಕಿ ವಸೂಲ್ಮಾಡುತ್ತಿದ್ದರು ಈ ತೆರಿಗೆಯನ್ನು ವಜಾ ಮಾಡಿದಾರೆ, (೩) ಅರ್ಧ ತೊಲೆಗೆ ವಿಸ್ತಾರವೆ ಇರುವ ಕಾಗದಗಳಿಗೆ ಅರ್ಧಾಣೆ ಅಂಚೆ ಹಾಸಲು ಇತ್ತು. ಇದನ್ನು ತಪ್ಪಿಸಿ, ಅರ್ಧಾಣೆಗೆ ಮುಕ್ಕಾಲು ತೊಲಾ ತೂಕದ ಕಾಗದಗಳನ್ನು ಅಂಚೆಗೆ ಹಾಕಬಹುದೆಂದು ವಿಧಿಸಿದಾರೆ, (೪) ಪೋಲೀಸ್ ಇಲಾಖೆಯ ಶಿಸ್ತಿ ಮುಂದಿನ ಸಾಲಿನಲ್ಲಿ ೫೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ; (೫) ಪ್ರೈಮರಿ ವಿದ್ಯಾಭಿವೃದ್ಧಿಗೆ ಈಗ ಕೊಡುವ ಹಣ ಇನ್ನು ಮುಂದೆ ಪ್ರತಿ ವರುಷವೂ ೩೫ ಲಕ್ಷ ರೂಪಾಯಿ ಹೆಚ್ಚಾಗಿ ಕೊಡುವುದಾಗಿ ಮಾತು ಕೊಟ್ಟಿದಾರೆ, (೬) ಈ ರಾಷ್ಟ್ರದಲ್ಲಿ ವ್ಯವಸಾಯವನ್ನು ಉತ್ತಮ ಸ್ಥಿತಿಗೆ ತರುವುದಕ್ಕೋಸ್ಕರ ೨೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ; (೭) ಡಿಸ್ಟ್ರಿಕ್ಟ್ ಬೋರ್ಡುಗಳವರಿಗೆ ಸರ್ಕಾರದವರು ಇದುವರೆಗೆ ಕೊಡುತ್ತಿದ್ದ ಹಣದಿಂದ ಅವರು ರಸ್ತೆ, ಸೇತುವೆ, ನೀರಿನ ಸರಬರಾಯಿ, ಈ ಮೊದಲಾದ ಪ್ರಜಾ ಹಿತಕರ ಕಾರ್ಯಗಳನ್ನು ಸಮರ್ಪಕವಾಗಿ ನಡಸಲು ಆಗುತ್ತಿರಲಿಲ್ಲ. ಇದನ್ನು ನೋಡಿ ಗವರ್ನಮೆಂಟಿನವರು ಆ ಬೋರ್ಡುಗಳ ಉತ್ಪತ್ತಿಯಲ್ಲಿ ಇನ್ನು ಮುಂದೆ ನಾಲ್ಕನೇ ಒಂದಂಶದ ಹಣವನ್ನು ಮೇಲ್ಕಂಡ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವಂತೆ ಹುಕುಂ ಕೊಟ್ಟಿದಾರೆ. ಈ ರಿಯಾಯಿತಿಗಳಿಂದ ಗವರ್ನಮೆಂಟಿನವರು ೨೪,೯೫,೦೦೦ ಪೌಂಡುಗಳನ್ನು ಪ್ರಜೆಗಳಿಗೆ ಬಿಟ್ಟುಕೊಟ್ಟಂತಾಗುವುದು. ಸೈನ್ಯದ ಹೊಸ ಏರ್ಪಾಡಿಗೆ ಹಾಲಿ ಸಾಲಿನಲ್ಲಿ ೨೪,೩೯,೯೦೦ ಪೌಂಡನ್ನು ಖರ್ಚುಮಾಡುತ್ತಾರೆ. ಇನ್ನು ಮುಂದೆ ಪ್ರತಿ ವರುಷವೂ ಈ ಇಲಾಖೆಗೆ ೨೦ ಲಕ್ಷ ಪೌಂಡು ಬೇಕಾಗಿರುತ್ತವೆಂದು ತಿಳಿಸಿದೆ. ೧೯೦೪—೦೫ನೇ ಸಾಲಿನಲ್ಲಿ

ಸ್ತು ಬಡಾವಣೆಗೋಸ್ಕರ ೩೪,೨೭,೯೩೪ ಪೌಂಡು ಖರ್ಚಾಯಿತು. ಚಾಲ್ತಿ ಸಾಲಿನಲ್ಲಿ ಈ ಬಾಬಿಗೆ ೪೩,೭೭,೩೩೧ ಪೌಂಡು ಕೇಳಿದ್ದಾರೆ. ಸೀಗಾವಿ ಕಾಮಗಾರಿಗೆ ೬ ದಶಲಕ್ಷ ಕೋಟು ರೂಪಾಯಿ ಖರ್ಚುಮಾಡುವರು, ಇನ್ನು ಮುಂದೆ ಪ್ರತಿ ವರುಷವೂ ಈ ಬಾಬಿಗೆ ೧೫ ಕೋಟಿ ರೂಪಾಯಿನಂತೆ ಸ್ಯಾಂಕ್ಷನ್ ಮಾಡುತ್ತೇವೆಂದು ಸೂಚಿಸಿದಾರೆ.

ಒಳದೇಶದ ವೃತ್ತಾಂತಗಳು.

ದಿವಾನರವರು ಕಳೆದ ಮಂಗಳವಾರ ರಾತ್ರಿ ರೈಲಿನಲ್ಲಿ ಬೆಂಗಳೂರಿಗೆ ದಯಮಾಡಿದರು.

✦✦✦✦

ಚಿತ್ರದುರ್ಗದ ಡೆಪ್ಟಿ ಕಮಿಷನರಾದ ಮಿ॥ ಎಚ್. ರಾಮಾನುಜಯ್ಯಂಗಾರ್ಯರಿಗೆ ಕಾಯಿಲೆ ಸಂಭವಿಸಿ, ಡಾಕ್ಟರ ಚಿಕಿತ್ಸೆಯಲ್ಲಿದ್ದಾರೆಂದು ತಿಳಿದು ಬಂದಿದೆ

✦✦✦✦

ರಾಜಧಾನಿಯಲ್ಲಿರುವ ಮಿಷನ್ ಹೈ ಸ್ಕೂಲನ್ನು ಈ ಬೇಸಿಗೆ ಕಾಲ ಪೂರೈಸಿದ ತರುವಾಯ ಮಧ್ಯಾಹ್ನ ೧೧ ರಿಂದ ೫ ಗಂಟೆಯ ವರೆಗೆ ನಡೆಯುವಂತೆ ಬದಲಾವಣೆ ಮಾಡುವರು.

✦✦✦✦

ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಇಡಿಸಿದ ಮೇಜರ್ ಲಾಬಿನಿಯರ್ ಎಂಬ ನಮ್ಮ ಸರ್ಕಾರದ ಇಂಜನಿಯರವರು ಕಾಶ್ಮೀರ ಸಂಸ್ಥಾನದಲ್ಲಿ ನೌಕರಿ ಪಡೆದು ಕಳೆದ ವಾರ ಪ್ರಯಾಣಮಾಡಿದರು

✦✦✦✦

ಕಳೆದ ವಾರ ನಂಜನಗೂಡಿನಲ್ಲಿ ನಡೆದ ರಥೋತ್ಸವಕ್ಕೆ ಮೋಟಾರ್ ಕಾರ್ ಎಂಬ ಗಾಡಿಯಲ್ಲಿ ಶ್ರೀಮನ್ ಮಹಾರಾಜರವರು ದಯಮಾಡಿ, ನೋಡಿಕೊಂಡು ಬಂದರು. ಮಹಾ ಮಾತೃಶ್ರೀಯವರೂ ದಯಮಾಡಿಸಿದ್ದರು.

✦✦✦✦

ಶ್ರೀ ಶಿವಗಂಗೆ ಮಠದ ಸ್ವಾಮಿಗಳು ಪರಿವಾರ ಸಹಿತ ನೆನ್ನೆ ರಾಜಧಾನಿಗೆ ದಯಮಾಡಿದರು. ಶ್ರೀಮನ್ ಮಹಾರಾಜರವರು ಅವರಿಗೆ ಕುದುರೆಗಳನ್ನೂ ವಾದ್ಯಗಳನ್ನೂ ದಯಪಾಲಿಸಿ, ಮೆರವಣಿಗೆಯಲ್ಲಿ ಪಟ್ಟಣಕ್ಕೆ ಕರೆಸಿಕೊಂಡರು. ಗೌರವಾರ್ಥವಾದ ಹನ್ನೊಂದು ತೋಪುಗಳು ಹಾರಿಸಲ್ಪಟ್ಟವು.

✦✦✦✦

ಫಾರೆಸ್ಟ್ ಕನ್ಸರ್ವೇಟರಾದ ಮಿ ಜೆ ಇ. ರಿಕ್ಕೆಟ್ಸ್ ಯವರು ಕಳೆದ ವಾರ ಅರಸೀಕೆರೆ ಜಂಗಲಿನಲ್ಲಿ ಶಿಕಾರಿ ಮಾಡುತ್ತಿರುವಾಗ ಗಾಯಪಟ್ಟ ಒಂದು ಹುಲಿ ಅವರ ಮೇಲೆ ಬಿದ್ದು ತೋಳಿನ ಮೇಲೂ ತಲೆಯ ಮೇಲೂ ಬಗರಿ ತುಂಬಾ ಗಾಯಮಾಡಿತು. ಈಗ ಅವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ತೋಳನ್ನು ಕತ್ತರಿಸಿ ಇಲಾಜು ಮಾಡುತ್ತಿರುವರು. ಗಾಯಗಳು ಬಹಳ ಕಠಿಣವಾದವುಗಳೆಂತಲೂ ಅವರು ಬದುಕುವುದು ಕಷ್ಟವೆಂತಲೂ ಕೇಳುತ್ತೇವೆ

✦✦✦✦

ಮೈಸೂರು ಸೆಷನ್ಸ್ ಜಡ್ಜಿ ಮಿ ಎಂ ರಾಮಸ್ವಾಮಿ ಐಯ್ಯರವರು ಸ್ಮಾರ್ತರಾಗಿದ್ದರೂ ತಮ್ಮ ಪುತ್ರಿಯನ್ನು ವೈಷ್ಣವ ಪಂಗಡಕ್ಕೆ ಸೇರಿದ ಮಿ ಬಿ ಟಿ. ರಾಘವೇಂದ್ರ ರಾಯರ ಕುಮಾರನಿಗೆ ಕೊಟ್ಟು, ರಾಜಧಾನಿಯಲ್ಲಿ ಕಳೆದ ವಾರ ವಿವಾಹ ಮಾಡಿದರು. ಇತರರೂ ಇವರಂತೆಯೇ ಅನುಸರಿಸುವುದಕ್ಕೆ ಒಳ್ಳೇ ಮೇಲ್ಪಂಕ್ತಿಯಾಯಿತು. ಕಡೂರು ಡೆಪ್ಟಿ ಕಮಿಷನರಾದ ಮಿ॥ ಎಸ್. ವೆಂಕಟರಾಮಯ್ಯನವರು ರಾಜಧಾನಿಗೆ ಬಂದು, ತಮ್ಮ ಕುಮಾರನಿಗೆ ಕಳೆದ ವಾರ ಉಪನಯನವನ್ನು ಬೆಳೆಸಿ, ನೆನ್ನೆ ಭಾನುವಾರ ಕಡೂರಿಗೆ ಪ್ರಯಾಣ ಮಾಡಿದರು.

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಲಂಡನ್, ಮಾರ್ಚಿ ೨೦. —ಬೈಕಾಲ್‌ನಿಂದ ಪೂರ್ವಭಾಗದಲ್ಲಿ ದಂಗೆಯೆದ್ದಿದ್ದ ರೈಲ್ವೆ ನೌಕರರು ಸಮಾಧಾನ ಹೊಂದಿ ಕೆಲಸದ ಮೇಲೆ ಹಾಜರಾದರು. ಈಗ ತಂತೀ ವರ್ತಮಾನದ ಇಲಾಖೆಯವರೆಲ್ಲಾ ಕೆಲಸಕ್ಕೆ ಬಾರದೆ ನಿಂತುಬಿಟ್ಟಿದಾರೆ.

ರಷ್ಯಾ ರಾಜಧಾನಿಯಲ್ಲಿ ದಂಗೆಯೆದ್ದ ಪ್ರಜೆಗಳಲ್ಲಿ ಮುಖಂಡನಾದ ಮಾಕ್ಸಿಂ ಗೋರ್ಕಿ ಎಂಬಾತನನ್ನು ಸರ್ಕಾರದವರು ಹಿಡಿದು, ರೈಗಾ ಪಟ್ಟಣದಲ್ಲಿ ಪೊಲೀಸ್ ಪಹರೆಯಲ್ಲಿಟ್ಟಿದಾರೆ. ಆತನನ್ನು ನೋಡಿ ಆತನ ಸಂಗಡ ಮಾತನಾಡಬೇಕೆಂಬುವರನ್ನು ಅಡ್ಡಿಮಾಡುತ್ತಾರೆ. ಈ ಬಂಧನದಲ್ಲಿ ಸಿಕ್ಕಿ ಅವನು ಕೃಶಾಂಗಿಯಾದನು.

ಲಂಡನ್, ಮಾರ್ಚಿ ೨೨ —ಫಿನ್‌ಲಾಂಡಿಗೆ ಸೇರಿದ ವೈಬರ್ಗಿನ ಗವರ್ನರಾದ ಎಂ. ಮಿಜಾಸೊ ಐಡಾಫ್ ಯವರನ್ನು ರೀನಿಕ್ಕಾ ಎಂಬೊಬ್ಬ ಯೌವನಸ್ಥನು ಗುಂಡುಹೊಡೆದು ಗಾಯಮಾಡಿದನು. ಆದರೆ ಅವರಿಗೆ ಪ್ರಾಣಭಯವೇನೂ ಆಗಲಿಲ್ಲ.

ವಾರ್ಸಾ ಪಟ್ಟಣದಲ್ಲಿ ಪೋಲೀಸಿನವರ ಕಾಲ್ಬಲವು ಬೀದಿಗಳಲ್ಲಿ ಗಸ್ತು ತಿರುಗುತ್ತಿದ್ದಾಗ ಒಂದು ಮನೆಯ ಮಹಡಿ ಕಿಟಕಿಯಿಂದ ಯಾರೋ ಒಂದು ಮದ್ದಿನ ಗುಂಡನ್ನು ಬೀದಿಗೆ ಬಿಸಾಟನು. ಇದು ಒಡೆದು ೬ ಜನ ಶಿಪಾಯಿಗಳನ್ನೂ ಇಬ್ಬರು ಪೋಲೀಸಿನವರನ್ನೂ ಪ್ರಾಣ ಹೋಗುವಂತೆ ಗಾಯಮಾಡಿತು. ಇದಕ್ಕೆ ಕಾರಣಭೂತನಾದವನು ತಲೆತಪ್ಪಿಸಿಕೊಂಡು ಹೋಗಿದಾನೆ

ದಂಗೆಗಳು ಎದ್ದಿರುವ ಪ್ರದೇಶಗಳಿಗೆ ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕೆ ಸೈನ್ಯಗಳು ತಂಡತಂಡವಾಗಿ ಹೋಗುತ್ತಿರುವವು. ಬಹು ರೈತರೂ ಜಮೀನ್ದಾರರೂ ತಮ್ಮ ಮನೆ ಮಠ ಹಳ್ಳಿಹಳ್ಳಿಗಳನ್ನು ಬಿಟ್ಟು, ಪ್ರಾಣಸಂರಕ್ಷಣೆಗಾಗಿ ಪಟ್ಟಣಗಳಿಗೆ ಬಂದು ಸೇರಿಕೊಂಡರು.

ಲಂಡನ್, ಮಾರ್ಚಿ ೨೩ —ವಾರ್ಸಾ ಅಧಿಪತ್ಯಕ್ಕೆ ಸೇರಿದ ಕೋಟ್ನೋ ಎಂಬ ಸ್ಥಳದಲ್ಲಿ ರೈತಪ್ರಜೆಗಳು ಬಹಳ ಗಲಭೆಮಾಡಿದರು. ಒಬ್ಲೋ ಡಿಸ್ಟ್ರಿಕ್ಟಿನಲ್ಲಿ ರೈತರಿಗೂ ಶಿಪಾಯಿಗಳಿಗೂ ತುಂಬಾ ಜಗಳ ಕದನಗಳು ನಡೆದವು. ಬಹುಮಂದಿ ಸತ್ತುಹೋದರು; ಅನೇಕರು ಗಾಯಪಟ್ಟಿದಾರೆ. ಕುಟ್ನೋ ಡಿಸ್ಟ್ರಿಕ್ಟಿನಲ್ಲಿ ಸೈನಿಕರು ಗುಂಡುಹೊಡೆದು, ೧೪ ಜನ ರೈತರನ್ನು ಕೊಂದು ಮಲಗಿಸಿದರು; ೩೦ ಜನರು ಗಾಯಪಟ್ಟರು. ಅವರೆಲ್ಲಾ ಬೆನ್ನುತಿರುಗಿಸಿಕೊಂಡು ಓಡಿಹೋಗುತ್ತಿದ್ದಾಗ ಶಿಪಾಯಿಗಳು ಗುಂಡುಹೊಡೆದು ಅವರನ್ನು ಕೆಡವಿದರು

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತೀವರ್ತಮಾನಗಳು.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯಗಳು.

ಲಂಡನ್, ಮಾರ್ಚಿ ೨೦ —ಟೈಲಿಂಗಿನ ಉತ್ತರಕ್ಕೆ ಕೈಯುಯನ್ ಎಂಬಲ್ಲಿಗೆ ರಷ್ಯಾದವರು ನುಗ್ಗಿಬಂದು ಯುದ್ಧಮಾಡಿ ಸೋತು ಓಡಿಹೋದರೆಂತಲೂ, ಅವರು ಈಗ ಅದಕ್ಕೆ ದಕ್ಷಿಣದಲ್ಲಿರುವ ಸೇತುವೆಗಳನ್ನು ಸುಡುತ್ತಿದ್ದಾರೆಂತಲೂ ಮಾರ್ಷಲ್ ಓಯಾಮಾರವರು ತಿಳಿಸಿದಾರೆ ಮುಕ್ಡೆನ್ ಪಟ್ಟಣದಲ್ಲಿ ರಷ್ಯಾದವರು ಭೂಸ್ಥಾಪನೆ ಮಾಡಿದ್ದ ಅನೇಕ ಪಿರಂಗಿಗಳು ಜಪಾನಿನವರಿಗೆ ಸಿಕ್ಕಿದವು.

ರಷ್ಯಾದವರ ಕಡೇ ಆಸೆ.

ಬಾಲ್ಟಿಕ್ ಕಡಲಿನಲ್ಲಿದ್ದ ರಷ್ಯಾ ಯುದ್ಧದ ಹಡಗುಗಳು ಯುದ್ಧಭೂಮಿಗೆ ಬರುತ್ತಿವೆ ಇವುಗಳಿಗೂ ಜಪಾನ್ ಹಡಗುಗಳಿಗೂ ಸಂಧಿಯಾಗಿ ಯುದ್ಧ ನಡೆಯಲ್ಲದೆ ಕರಾರಿನ ಮಾತು ಬಲಗೊಳ್ಳುವುದಿಲ್ಲವೆಂದು ಪ್ರಕಟವಾಗಿದೆ.

ಮುಕ್ಡೆನ್ ಯುದ್ಧದ ನಷ್ಟಗಳು.

ಲಂಡನ್, ಮಾರ್ಚಿ ೨೧ —ಮುಕ್ಡೆನ್ ಯುದ್ಧದಲ್ಲಿ ಜಪಾನಿನವರ ಕಡೆ ೫೦,೦೦೦ ಜನ ನಷ್ಟಹೊಂದಿದರು ರಷ್ಯಾದವರ ಕಡೆಯಲ್ಲಿ ಮುಕ್ಡೆನ್ ಯುದ್ಧಾರಂಭದಿಂದ ಟೈಲಿಂಗ್ ಯುದ್ಧದ ತನಕ ಬೈದಿಗಳಾಗಿ ಸಿಕ್ಕಿರುವವರೂ ಸೇರಿ ೧,೭೫,೦೦೦ ಮಂದಿ ಸೈನಿಕರು ನಷ್ಟಪಟ್ಟರೆಂದು ಟೋಕಿಯೋದಿಂದ ಸಮಾಚಾರ ಬಂದಿದೆ

ರಷ್ಯಾದವರು ಹಿಮ್ಮೆಟ್ಟಿ ಹೋಗುತ್ತಾ ದಾರಿಯಲ್ಲಿ ಸಿಕ್ಕಿದ ಸೇತುವೆಗಳನ್ನೆಲ್ಲಾ ಕಿತ್ತು ಹಾಳುಮಾಡಿರುವುದರಿಂದ ಅವರು ಸುಧಾರಿಸಿಕೊಳ್ಳುವುದಕ್ಕೆ ಅವಕಾಶ ಸಿಕ್ಕಿತು; ಜಪಾನಿನವರಿಗಾದರೋ ಶತ್ರುಗಳನ್ನು ಬೆನ್ನು ಹತ್ತಿ ಓಡಿಸಿಕೊಂಡು ಹೋಗದಂತೆ ಅಡ್ಡಿಯಾಗಿದೆ.

ರಷ್ಯಾ ಸೈನ್ಯಾಧಿಪತಿ ಜನರಲ್ ಲಿನೆವಿಚ್‌ಯವರು ಯಾವ ಊರಿನಲ್ಲಿ ಬಿಡಾರ ಮಾಡಿಕೊಂಡಿದಾರೆಯೋ ತಿಳಿಯದು. ಸಂಗಾರಿಯಲ್ಲಿ ರಷ್ಯಾ ಸೈನ್ಯವೆಲ್ಲಾ [illegible] ನೋಡಿ, ಆ ಸೈನ್ಯಾಧಿಪತಿಯೂ ಅಲ್ಲೇ ಇರಬಹುದೆಂದು ಊಹಿಸಲಾಗಿದೆ.

ಜನರಲ್ ಕುರೋಪಾಟ್ಕಿನ್‌ರವರು ಮ್ಯಾಂಚೂರಿಯಾದಲ್ಲೇ ಇರುವಂತೆ ಒಪ್ಪಿದ್ದರಿಂದ ಅವರಿಗೆ ಮೊದಲನೇ ಮ್ಯಾಂಚೂರಿಯಾ ಸೈನ್ಯದ ಆಧಿಪತ್ಯವನ್ನು ಚಕ್ರವರ್ತಿಯವರು ವಹಿಸಿದಾರೆಂದು ಪ್ರಕಟವಾಗಿದೆ

ರಷ್ಯಾದವರು ಹಿಮ್ಮೆಟ್ಟುವರು.

ಲಂಡನ್, ಮಾರ್ಚಿ ೨೨ —ರಷ್ಯಾ ಸೈನ್ಯಗಳು ಸುಧಾರಿಸಿಕೊಂಡು ನಿಧಾನವಾಗಿ ಹಿಮ್ಮೆಟ್ಟಿ ಹೋಗುತ್ತಿವೆ ಮಾರ್ಷಲ್ ಓಯಾಮಾಯವರು ಜಪಾನ್ ಸೈನ್ಯವನ್ನೆಲ್ಲಾ ಟೈಲಿಂಗಿನಲ್ಲಿ ಕೂಡಿಸಿ, ಅಗಾಧವಾದ ಕ್ಯಾಂಪು ಮಾಡಿಕೊಂಡಿದಾರೆ.

ಜನರಲ್ ಕುರೋಪಾಟ್ಕಿನ್‌ರವರು ಹಾರ್ಬಿನ್ ಪಟ್ಟಣದಿಂದ ವಾಪಸ್ ಬಂದಾಗ ಅವರನ್ನು ಅತ್ಯಂತ ಸಂಭ್ರಮಯುಕ್ತವಾಗಿ ಸೈನಿಕರು ಎದುರುಗೊಂಡರು. ಆಗ ಅವರು ಸೈನಿಕರನ್ನು ಕುರಿತು— ನಮ್ಮ ಸೈನ್ಯಕ್ಕೆ ಉಂಟಾಗಿರುವ ಅಪಜಯವನ್ನು ಇಷ್ಟರಲ್ಲೇ ಹೋಗಲಾಡಿಸಿಕೊಂಡೇವೆಂದು ನಿರೀಕ್ಷಿಸುತ್ತೇನೆ ಎಂಬದಾಗಿ ಹೇಳಿದರು.

ಚೀನೇಯವರ ಮೇಲೆ ಅಪವಾದ.

ಲಂಡನ್, ಮಾರ್ಚಿ ೨೩ —ಜಪಾನಿನವರು ಮುಕ್ಡೆನ್ ಪಟ್ಟಣವನ್ನು ಆಕ್ರಮಿಸಿಕೊಳ್ಳುವುದಕ್ಕೆ ಮೊದಲು ಅಲ್ಲಿದ್ದ ಗಾಯಪಟ್ಟ ರಷ್ಯಾ ಸೈನಿಕರನ್ನೂ ರಷ್ಯಾ ಡಾಕ್ಟರುಗಳನ್ನೂ ನರ್ಸ್ ಎಂಬ ಉಪಚಾರ ಸ್ತ್ರೀಯರನ್ನೂ ಚೀನೇಯವರು ಬಹು ಕ್ರೂರವಾಗಿ ಕೊಂದುಹಾಕಿದಾರೆಂದು ಅಪವಾದ ಹುಟ್ಟಿದೆ.

ಜಪಾನಿನವರ ಜಯ

ಜಪಾನಿನವರು ಕೈಯುಯೆನ್‌ನಿಂದ ೩೦ ಮೈಲಿ ಉತ್ತರದಲ್ಲಿರುವ ಚಾಂಗ್‌ಟು ಎಂಬ ಠಾಣ್ಯವನ್ನು ಮೊನ್ನೆ ದಿನ ಆಕ್ರಮಿಸಿಕೊಂಡರು

ರಷ್ಯಾದವರು ಸಾಲಮಾಡಿದರು.

ರಷ್ಯಾದವರು ಯುದ್ಧದ ಖರ್ಚಿಗೋಸ್ಕರ ತಮ್ಮ ರಾಜ್ಯದಲ್ಲೇ ೫೦ ವರುಷದ ವಾಯಿದೆ ಹಾಕಿ, ೯೬ ರೂಪಾಯಿ ತೆಗೆದುಕೊಂಡು ೧೦೦ ರೂಪಾಯಿಗೆ ಪತ್ರ ಬರೆದುಕೊಟ್ಟು, ಇಪ್ಪತ್ತುಕೋಟಿ ದ್ರವ್ಯವನ್ನು ಸಾಲ ಮಾಡಿದಾರೆ. ಸಾಲಕೊಟ್ಟ ವರ್ತಕರೆಲ್ಲಾ ಚಕ್ರವರ್ತಿಯವರು ಇಷ್ಟರಲ್ಲೇ ಕರಾರುಮಾಡಿಕೊಂಡು ಯುದ್ಧವನ್ನು ಮುಕ್ತಾಯಕ್ಕೆ ತರದಿದ್ದರೆ ತೀರದೆಂದು ಮಾತನಾಡುತ್ತಿದಾರೆ.

ರಷ್ಯಾದವರ ನಿರಾಶೆ

ಲಂಡನ್, ಮಾರ್ಚಿ ೨೪ —ಯುದ್ಧ ಭೂಮಿಯಲ್ಲಿ ರಷ್ಯಾದವರು ನಿರಾಶೆಯುಳ್ಳವರಾಗಿದಾರೆ. ಜಪಾನಿನವರು ಹಾರ್ಬಿನ್ ಪಟ್ಟಣದ ಮೇಲೆ ನುಗ್ಗಿ ಬರುವುದಕ್ಕೆ ವಿಪರೀತ ಸೈನ್ಯಗಳನ್ನು ಕರೆಸಿಕೊಂಡು, ಸನ್ನಾಹಮಾಡಿಕೊಳ್ಳುತ್ತಿದಾರೆಂತಲೂ, ಇನ್ನು ಕಡೇ ಪಕ್ಷ ಹೊಸದಾಗಿ ಎರಡು ಲಕ್ಷ ಸೈನ್ಯವಾದರೂ ತಮ್ಮ ಸಹಾಯಕ್ಕೆ ಬಾರದೆ ಹೋದಲ್ಲಿ ಹಾರ್ಬಿನ್ ಪಟ್ಟಣವನ್ನು ಕಾಪಾಡಿಕೊಳ್ಳುವುದು ದುರ್ಘಟವಾಗುತ್ತೆಂತಲೂ ರಷ್ಯಾದವರು ಗಾಬರಿಪಟ್ಟು ಕಾಗದ ಪತ್ರ ನಡೆಸುತ್ತಿದಾರೆ. ರಷ್ಯಾ ಜನರಲ್ ರನೆಂಕಾಂಫ್‌ಯವರ ಕೈಕೆಳಗಿದ್ದ ಸೈನ್ಯದಲ್ಲಿ ಮುಕ್ಕಾಲು ಭಾಗವೆಲ್ಲಾ ನಷ್ಟ ಹೊಂದಿತು.

ರಷ್ಯಾ ರಾಜ್ಯದಲ್ಲಿ ಯುದ್ಧದ ಖರ್ಚಿಗೋಸ್ಕರ ಸರ್ಕಾರದವರು ಹೊಸ ತೆರಿಗೆಗಳನ್ನು ವಿಧಿಸುವುದಕ್ಕಿದ್ದಾರೆ.

ಜಪಾನಿನವರ ಸಾಲವೂ, ಅವರ ನಿರೀಕ್ಷೆಯೂ.

ಲಂಡನ್, ಮಾರ್ಚಿ ೨೫.—ಜಪಾನಿನವರು ೪೫ ಕೋಟಿ ರೂಪಾಯನ್ನು ಶೇಕಡಾ ವರುಷಕ್ಕೆ ೪॥ ಯಂತೆ ಬಡ್ಡಿ ಗೊತ್ತುಮಾಡಿ, ಅರ್ಧ ಹಣ ಲಂಡನ್ ಪಟ್ಟಣದಲ್ಲೂ ಉಳಿದ ಅರ್ಧವನ್ನು ಅಮೇರಿಕಾದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲೂ ಸಾಲ ಮಾಡಿದರು. ಈ ಸಾಲಕ್ಕಾಗಿ ಅವರು ೧೦೦ ರೂಪಾಯಿನ ಪತ್ರಗಳನ್ನು ೯೦ ರೂಪಾಯಿಗಳಿಗೆ ವಿಕರಿ ಮಾಡಿದರು. ಈ ಸಾಲವನ್ನು ಕುರಿತು ಜಪಾನ್ ಮಂತ್ರಿಯವರು ತಿಳಿಸುವುದೇನೆಂದರೆ—ಈ ಹಣದಿಂದ ಇನ್ನು ಒಂದುವರೆ ವರುಷದ ತನಕ ಈ ಯುದ್ಧವನ್ನು ನಡಸಬಲ್ಲೆವು. ಅಗ್ಗ ಯುದ್ಧವು ಕೊನೆಗಾಣುವುದರಲ್ಲಿ ಅಡ್ಡಿಯಿಲ್ಲವೆಂದು ನಿರೀಕ್ಷಿಸುತ್ತೇವೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

ಚಾಮರಾಜನಗರದ ಬಾತ್ಮಿ, ತಿಪಟೂರು ತಾಲ್ಲೂಕು ಹಾಲ್ಕುರಿಕೆ ಬಾತ್ಮಿ, ದಾನಸಾಲೆ ಮಳಿಗೆ ಬಾತ್ಮಿ, ಬೆಂಗಳೂರು ಸಿಟಿ ಪ್ರಸ್ತುಗಳ ವಿಚಾರವಾದ ಬಾತ್ಮಿ.—ಇವನ್ನು ಪ್ರಕಟಿಸಲಾರೆವು.

ಕರೆಸ್‌ಪಾಂಡೆನ್ಸ್.

ಆಲೂರಿನಲ್ಲಿ ನೀರಿನ ಕಷ್ಟ.

ಅಯ್ಯಾ,

ಈ ಸಬ್ ತಾಲ್ಲೂಕಿನಲ್ಲಿ ಮುಖ್ಯ ಪಟ್ಟಣ ಅಂದರೆ ಆಲೂರು. ಈ ಆಲೂರು ಎಂಬುವದು ಮುನಿಸಿಪಾಲ್ಟೀ ಟವನ್ ಆಗಿರುತ್ತೆ. ಇಲ್ಲಿ ಪ್ರತಿ ಬುಧವಾರದಲ್ಲಿಯೂ ಸಂತೆ ನೆರೆಯುತ್ತೆ. ಈ ಸಂತೆಯ ಅಪ್ರಯದಿಂದ ಮುನಿಸಿಪಾಲ್ಟೀಗೆ ಬಹಳ ಉತ್ಪನ್ನಗಳು ನಾನಾವಿಧವಾಗಿ ದೊರೆಯುತ್ತವೆ.

ಈ ಸ್ಥಳದಲ್ಲಿ ನೀರಿನ ಅಭಾವ ವರ್ಣಿಸಲಸಾಧ್ಯವಾಗಿರುವುದು. ಇಂಥಾ ಸಂಭವದಲ್ಲಿ ಈ ಟವರ್ನಲ್ಲಿ ಒಂದು ಶೀನೀರಿನ ಭಾವಿಯು ಇರುವುದು. ಇದು ಮುನಿಸಿಪಾಲ್ಟಿಗೆ ಸೇರಿದ್ದಾಗಿರುತ್ತೆ. ಈ ಭಾವಿಯಲ್ಲಿ ಸಮೃದ್ಧಿಯಾಗಿ ನೀರು ಇರುತ್ತದೆ. ಆದಾಗ್ಯೂ ಜನಗಳಿಗೆ ನೀರು ಸಿಕ್ಕುವಂತೆ ಗಡಗಳು ಹಚ್ಚಿ ನೀರು ಸೇದುವಂತೆ ಏರ್ಪಾಡು ಮಾಡುವ ವಿಷಯದಲ್ಲಿ ತಾಲ್ಲೂಕು ಅಧಿಕಾರಿಗಳ ಮನಸ್ಸು ಗಮಿಸಲಿಲ್ಲ. ಎಷ್ಟೋ ಜನ ಹೇಳಿಕೊಂಡಾಗ್ಯೂ ಈ ಒಳ್ಳೇ ಕೆಲಸದಲ್ಲಿ ಪ್ರವರ್ತಿಸದೇ ಇರುವ ಅಧಿಕಾರಿಗಳ ಹೃದಯವು ಎಷ್ಟು ಸುಹೃದಯವಾಗಿರಬಹುದು. ವಿಶೇಷಿಸಲ್ಲಾ ಬರೆದಲ್ಲಿ ಏನು ಪ್ರಯೋಜನವಿದೆ ಇಲ್ಲಿಯ ನೀರಿನ ಕ್ಷಾಮ ತೀರುವಂತೆ ಈ ಡಿಸ್ಟ್ರಿಕ್ಟಿನ ಮೇಲಧಿಕಾರಿಗಳು ದಯವಿಟ್ಟು ಈ ಕಡೆ ಲಕ್ಷ್ಯ ಕೊಟ್ಟು, ಮಸೀದಿಯ ಮುಂದೆ ಇರುವ ಭಾವಿಗೆ ಗಡೆಗಳನ್ನು ಹಚ್ಚಿಸಿ, ಇಲ್ಲಿರುವ ಪ್ರಜೆಗಳಿಗೆ ಹಿತ ಉಂಟುಮಾಡುವರೆಂದು ನಂಬಿ ದೇವರನ್ನು ಪ್ರಾರ್ಥಿಸುತ್ತೇನೆ.

ಲೋಕಹಿತೈಷಿ

ಬಡ ಸ್ಕೂಲ್ ಮಾಸ್ಟರುಗಳ ಸ್ಥಿತಿ.

ಅಯ್ಯಾ,

ತಮ್ಮಲ್ಲಿಂದ ಪ್ರಕಾಶ ಪಡಿಸಲ್ಪಡುತ್ತಿದ್ದ ಈ ಮೊದಲಿನ ಕೆಲವು ಪತ್ರಿಕೆಗಳಲ್ಲಿ "ಹೋಬಳಿ ಸ್ಕೂಲ್ ಮಾಸ್ಟರುಗಳಿಗೆ ಈಗ ಸಲ್ಲುತ್ತಿರುವ ತಲಬು ಬಹಳ ಕಮ್ಮಿಯಾಗಿದೆ ಇದರಿಂದ ಅವರು ಜೀವನ ಮಾಡಲು ತುಂಬಾ ಕಷ್ಟವಾಗಿದೆ" ಎಂಬ ವಿಷಯ ಗವರ್ನಮೆಂಟಿನವರ ಚಿತ್ತಕ್ಕೆ ಬಂದು, ಅವರ ವೇತನವನ್ನು ಹೆಚ್ಚಿಸುವುದಕ್ಕಾಗಿ, ಆಳುವವರಾದ ದಯಾಳು ಶ್ರೀಮನ್ ಮಹಾರಾಜರವರು ವಿದ್ಯಾಭ್ಯಾಸದ ಇಲಾಖೆಯ ಖರ್ಚಿನಲ್ಲಿ ಶೇಕಡಾ ೨೪ ರಂತೆ ಕೊಡುತ್ತಿದ್ದುದನ್ನು ೩೩ರ ವರೆಗೆ ಹೆಚ್ಚಿಸಿದರೆಂತಲೂ ಇದಕ್ಕಾಗಿಯೇ ಹೋಬಳಿ ಸ್ಕೂಲ್‌ಗಳಲ್ಲಿ ಫೀ ವಸೂಲ್ಮಾಡುತ್ತಿರುವರೆಂದೂ ಪತ್ರಿಕೆ ನಮೂದಿತ್ತು. ಅನೇಕ ಜನ ಹೋಬಳೀ ಸ್ಕೂಲ್ ಮಾಸ್ಟರುಗಳು ಎಲ್ಲಾ ಇಲಾಖೆಗಿಂತಲೂ ಈ ಇಲಾಖೆಯಲ್ಲಿ ಕಷ್ಟವು ಜಾಸ್ತಿಯಾಗಿಯೂ ವೇತನವು ಅಲ್ಪವಾಗಿಯೂ ಇರುವುದೆಂತಲೂ ಈ ಕಷ್ಟವು ಎಂದಿಗೆ ನಿವಾರಣೆಯಾಬೇಕೋ? ದಯಾಳು ಸರ್ಕಾರದವರ ಉದಾರತ್ವವು ಎಂದಿಗೆ ತಮ್ಮಲ್ಲುಂಟಾದೀತೋ ಎಂದು ಹಾರೈಸುತ್ತಾರೆ. ಸ್ಕೂಲ್ ಫೀ ವಗೈರೆ ಪರ್ಮಾದಾಗಿ ಸುಮಾರು ಒಂದು ಪಾಲಿನಷ್ಟಂತಲೂ ಜಾಸ್ತಿಯೇ ಆಯಿತು. ಆದರೂ ಬಡ ಹೋಬಳೀ ಸ್ಕೂಲ್ಮಾಸ್ಟರುಗಳ ಅವ್ಯವಸ್ಥೆಯು ವ್ಯವಸ್ಥೆಗೆ ಬಾರದೇ ಇರುವುದು ನೋಡಿದರೆ ಮಕ್ಕಳಿಗೆ ಹಣ್ಣು ಕೊಡುತ್ತೇನೆಂದು ಬಾಳಿಸಿದಂತಾಯಿತು. ಈ ಬಡ ಸ್ಕೂಲ್ ಮಾಸ್ಟರುಗಳ ಕಷ್ಟವು ಇನ್ನೆಷ್ಟರವರೆಗೂ ನಡೆಯುವುದೋ ತಿಳಿಯದು.

ವಿದ್ಯಾಪಕ್ಷಪಾತಿ.

ಹನ್ನೆರಡನೆ ವೈಶ್ಯಮಹಾ ಸಭೆಯು.

ಕಾಶೀ ಪಟ್ಟಣದಲ್ಲಿ ನಡೆಯಿತು

ಕಾಶೀ ಪಟ್ಟಣದಲ್ಲಿ ವೈಶ್ಯಮಂಡಲಿಯ ೧೨ನೆ ಸಮಾಜವು ಕಳೆದ ೧೫, ೧೬, ೧೭ನೆ ತಾರೀಖುಗಳಲ್ಲಿ ನಡೆಯಿತು ಕೃಷ್ಣಘಡ ಸಂಸ್ಥಾನದ ದಿವಾನರಾದ ರಾಯ ಶ್ಯಾಮಸುಂದರ ಲಾಲ್ ಯವರು ಸಭಾಧ್ಯಕ್ಷರಾಗಿದ್ದರು. ಬಾಬೂ ಬಾಲೇಶ್ವರ ಪ್ರಸಾದರವರು ದೇವರ ಸಂಕೀರ್ತನೆಗಳನ್ನು ನಡಿಸಿದ ನಂತರ ಸಭಿಕರಿಗೆಲ್ಲಾ ಸುಖಾಗಮನವನ್ನು ಬಯಸಿ ಉಪನ್ಯಾಸಮಾಡಿದರು ರಾಯಬಹದೂರ್ ವೈದ್ಯನಾಥರವರೂ, ಲಾಲಾ ಕೇದಾರನಾಥರವರೂ, ರಾಯಸಾಹೆಬ್ ಮುರಳೀಧರರವರೂ, ಬಾಬು ವೈದ್ಯನಾಥರವರೂ, ಇನ್ನೂ ಕೆಲವು ದೊಡ್ಡಮನುಷ್ಯರೂ ಉಪನ್ಯಾಸಗಳನ್ನು ಮಾಡಿದರು.

ಮೊದಲನೆಯ ದಿನ ಸಭಿಕರು ತೀರ್ಮಾನಿಸಿದ್ದೇನೆಂದರೆ—ವೈಶ್ಯಮಂಡಲಿಯವರೆಲ್ಲಾ ಒಗ್ಗಟ್ಟಾಗಿರಬೇಕು, ಜಗಳ ಕದನಗಳುಂಟಾದರೆ ಪಂಚಾಯತರಿಂದ ಬಗೆಹರಿಸಿಕೊಳ್ಳಬೇಕು, ಸ್ತ್ರೀಯರಿಗೆ ವಿದ್ಯೆ ಕಲಿಸಬೇಕು, ವಿವಾಹಕಾಲದಲ್ಲಿ ದುಂದುಖರ್ಚು ಮಾಡಕೂಡದು; ಸಂಘದಲ್ಲಿ ದುಷ್ಟಪದ್ಧತಿ ಆಚಾರಗಳನ್ನು ವಜಾಮಾಡಬೇಕು, ನಾಗರಿವಿದ್ಯೆಯನ್ನು ಅಭಿವೃದ್ಧಿಗೆ ತರಬೇಕು ಇವೇ

ಎರಡನೆಯ ದಿನ ಈ ಸಮಾಜದವರು ತೀರ್ಮಾನಮಾಡಿಕೊಂಡಿದ್ದೇನೆಂದರೆ—ಬಾಲ್ಯವಿವಾಹಗಳನ್ನು ಮಾಡಲೇ ಕೂಡದು, ಸಣ್ಣ ವಯಸ್ಸಿನ ಮಕ್ಕಳನ್ನು ಬಹಳ ವಯಸ್ಸಾದ ಗಂಡಸರಿಗೆ ಕೊಟ್ಟು ವಿವಾಹಮಾಡಕೂಡದು ಅಷ್ಟರಲ್ಲೇ ಕೆಲವರು—ಹೆಣ್ಣು ಗಂಡಿಗೆ ಇಷ್ಟೇ ವಯಸ್ಸಾಗಿರಬೇಕೆಂಬುದಕ್ಕೆ ಶಾಸ್ತ್ರವಚನವಿಲ್ಲದೆ ಎಂದು ಆಕ್ಷೇಪಣೆ ಮಾಡಿದರು ಆ ಸಾಯಂಕಾಲ ಮುನ್ಷಿ ಮಹದೇವಲಾಲ್‌ರವರು ಪ್ರತಿನಿಧಿಗಳಿಗೆ ದೊಡ್ಡ ಔತಣ ಮಾಡಿದರು.

ಮೂರನೆಯ ದಿನ ಈ ಸಮಾಜದಲ್ಲಿ ತೀರ್ಮಾನವಾದ ವಿಷಯಗಳ್ಯಾವುವೆಂದರೆ—ವೈಶ್ಯರಿಗೆ ವ್ಯಾಪಾರ ವಿಷಯವಾದ ವಿದ್ಯೆಯನ್ನು ಹೆಚ್ಚಾಗಿ ಕಲಿಸಬೇಕು, ಸೀಮೆಯಿಂದ ಬರತಕ್ಕ ಬಟ್ಟೆಗಳನ್ನು ಯಾರೂ ಕೊಂಡುಕೊಳ್ಳಕೂಡದು, ನಮ್ಮ ದೇಶದಲ್ಲಿ ತಯಾರಾಗುವ ಬಟ್ಟೆಬರೆಗಳನ್ನೇ ಕೊಂಡು ಉಪಯೋಗಿಸಬೇಕು ಎಂಬುದೇ. ಈ ಸಮಾಜದವರು ಕಳೆದ ವರುಷ ಸ್ಥಾಪಿಸಿದ ನೆಯ್ಗೆ ಕಾರ್ಖಾನೆಗೆ ಎಲ್ಲರೂ ದ್ರವ್ಯಸಹಾಯ ಮಾಡುವಂತೆ ಒಪ್ಪಿಕೊಂಡರು. ವೈಶ್ಯಮಂಡಲಿಯ ಹುಡುಗರಿಗೋಸ್ಕರ ಒಂದು ಕೈಗಾರಿಕೆ ಪಾಠಶಾಲೆಯನ್ನು ಇಟ್ಟು ನಡಿಸಬೇಕೆಂದು ಸೂಚಿಸಿದ್ದಕ್ಕೆ ಈ ಸಮಾಜದವರೆಲ್ಲಾ ಸಂತೋಷಪಟ್ಟು ಅದರ ಮೂಲಧನಕ್ಕೆ ಕೆಲವು ಸಾವಿರ ರೂಪಾಯಿಗಳನ್ನು ಆ ದಿನ ಚಂದಾ ಹಾಕಿದರು. ಈ ಸಮಾಜದವರಿಂದ ವೇತನಕೊಂಡು ಜಪಾನಿಗೆ ಹೋಗಿದ್ದ ವೈಶ್ಯರು ಅಲ್ಲಿಂದ ವಿದ್ಯಾದಿ ಸಾಮರ್ಥ್ಯವನ್ನು ಸಂಪಾದಿಸಿಕೊಂಡು ಬಂದಿದಾರೆ ಇವರು ಸಮಾಜದವರ ಸಂಗಡ ಕಲೆತು ಮುಂದಿನ ವಿಚಾರದಲ್ಲಿ ಏರ್ಪಾಡು ಮಾಡುತ್ತಿದಾರೆ ಲಾಲಾ ಲಾಜಪತಿರಾಯರವರು ಯೂರೋಪಿಗೂ ಅಮೇರಿಕಕ್ಕೂ ಹೋಗಿ ಬರುವವರಾಗಿದ್ದಾರೆಂಬುದನ್ನು ಈ ಸಮಾಜದವರು ಕೇಳಿ, ಹಿಂದುಸ್ಥಾನಕ್ಕೆ ಅನುಕೂಲವಾದ ಮತ್ತು ಅವಶ್ಯವಾದ ಕಲೆಗಳ್ಯಾವುವೆಂಬುದನ್ನು ತಿಳಿದು ಬಂದು, ಈ ಸಮಾಜಕ್ಕೆ ರಿಪೋರ್ಟು ಬರೆದುಕೊಡಬೇಕೆಂದು ಅವರಿಗೆ ತಿಳಿಸಿದರು. ಕಾಶೀ ಪಟ್ಟಣದಲ್ಲಿರುವ ಹಿಂದೂ ಕಾಲೇಜ್ಜಿನವರು ಒಬ್ಬ ವಿದ್ಯಾರ್ಥಿಯನ್ನು ವಿದ್ಯಾ ಪರಿಪೂರ್ಣತೆಯನ್ನು ಹೊಂದಿ ಬರುವಂತೆ ಸೀಮೆಗೆ ಕಳುಹಿಸಿಕೊಡಬೇಕೆಂದು ಗೊತ್ತುಮಾಡಿದಾರೆ ಆ ಹುಡುಗನಿಗೆ ತಗಲುವ ಪ್ರಯಾಣದ ಖರ್ಚಿನಲ್ಲಿ ಅರ್ಧ ಹಣವನ್ನು ಈ ಸಮಾಜದವರು ಕೊಡುವುದಾಗಿ ಒಪ್ಪಿಕೊಂಡರು.

ಪಂಡಿತ ಮದನ ಮೋಹನ ಮಾಲವ್ಯರವರು ಸಂಸ್ಕೃತ ವಿದ್ಯೆಯಿಂದಾಗುವ ಅನೇಕ ಪ್ರಯೋಜನಗಳನ್ನು ಕುರಿತು ಪ್ರಸ್ತಾಪಮಾಡಿ, ಈ ವಿದ್ಯವನ್ನು ಪ್ರೋತ್ಸಾಹ ಪಡಿಸಬೇಕೆಂದು ಬಹಳ ಚನ್ನಾಗಿಯೂ ಮನೋಜ್ಞವಾಗಿಯೂ ಉಪನ್ಯಾಸಮಾಡಿ, ಸಮಾಜವನ್ನು ಮುಕ್ತಾಯಕ್ಕೆ ತಂದರು

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರು ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳು ಕಚ್ಚೆ ಮೀಟಿಂಗನ್ನು ನಡಿಸಿದರು ಕಳೆದ ಫೆಬ್ರವರಿ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ. ೧೧,೦೧೧—೩—೧ ಜಮಾ ಆಗಿದೆ, ಮತ್ತು ರೂ ೮,೧೭೩—೧೩—೦ ಖರ್ಚಾಗಿದೆ ಅದೇ ತಿಂಗಳಲ್ಲಿ ಜನನ ೮೭, ಮರಣ—ಪ್ಲೇಗ್ ೩೭, ಸಿಡುಬು ೧೬೩, ಜ್ವರ ೧೦, ಇತರ ಕಾರಣಗಳು ೧೪೮ ಒಟ್ಟು ೩೫೮.

೧೯೦೪—೦೫ನೇ ಸಾಲಿನ ಮ್ಯುನಿಸಿಪಲ್ ಜಮಾ ಖರ್ಚಿನ ಅಂದಾಜು ಪಟ್ಟಿ (ಬಡ್ಜೆಟ್ಟು) ಮೆಂಬರುಗಳು ಒಪ್ಪಿಕೊಂಡರು ಅದರಲ್ಲಿ ಕಂಡು ಬರುವ ಮುಖ್ಯ ವಿಷಯಗಳೇನೆಂದರೆ—ಹೆಡ್ ಅಕೌಂಟೆಂಟ್ ಮತ್ತು ಮುನ್ಷಿ ಎಂಬ ಗುಮಾಸ್ತೆಯರ ಸಂಬಳವನ್ನು ೨೦ ರಿಂದ ೨೫ ರೂಪಾಯಿಗೂ, ಸರಾಫರ ಸಂಬಳವನ್ನು ೧೫ ರಿಂದ ೨೦ ರೂಪಾಯಿಗೂ, ಜಮೇದಾರನ ಸಂಬಳವನ್ನು ೭ ರಿಂದ ೮ ರೂಪಾಯಿಗೂ ಜಾಸ್ತಿಮಾಡಿದಾರೆ ರಾತ್ರಿಹೊತ್ತು ಪಟ್ಟಣದಲ್ಲಿ ದೀಪ ಹಚ್ಚುವುದರ ಖರ್ಚನ್ನು ೯,೨೦೦ ರೂಪಾಯಿನಿಂದ ೧೦,೦೦೦ ರೂಪಾಯಿಗೆ ಹೆಚ್ಚಿಸಿದರು. ರಸ್ತೆಗಳ ರಿಪೇರಿಗಾಗಿ ೧೯,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಆ ಹಣವನ್ನು ಮೊದಲ್ಲಾಗಿ ಅವಶ್ಯವಿದ್ದಂತೆ ಹಂಚಿಹಾಕಿ ವಿನಿಯೋಗಿಸಬೇಕೆಂದು ಗೊತ್ತುಮಾಡಿದರು ದೇವರಾಜ ಮಾರ್ಕೆಟ್ಟಿನಲ್ಲಿ ಮೀನು ಮಾರುವ ಅಂಗಡಿಗಳನ್ನು ವಜಾ ಮಾಡಿ, ಅಲ್ಲಿರುವ ಕಕ್ಕಸನ್ನು ಬೇರೆಕಡೆ ಕಟ್ಟಿ, ಮಾರ್ಕೆಟ್ಟನ್ನು ಅಬಾದು ಮಾಡುವುದಕ್ಕೆ ೧,೫೦೦ ರೂಪಾಯಿ ತೆಗೆದಿಟ್ಟಿದಾರೆ.

ಮ್ಯುನಿಸಿಪಲ್ ತೆರಿಗೆಗಳನ್ನು ಪುನರ್ವಿಮರ್ಶೆಮಾಡಿದರು ಮೊದಲಿಗಿಂತಲೂ ಮೊಹತರ್ಫಾ ತೆರಿಗೆ ೩,೦೦೦ ರೂಪಾಯಿ ಜಾಸ್ತಿಯಾಗಿದೆ ಈ ವಿಷಯದಲ್ಲಿ ಪ್ರಜೆಗಳಿಂದ ಬಂದ ಅಪೀಲುಗಳನ್ನು ತನಿಖೆ ಮಾಡುವುದಕ್ಕೂ ವ್ಯವಸ್ಥೆ ಮಾಡುವುದಕ್ಕೂ ಕೆಲವು ಮ್ಯುನಿಸಿಪಲ್ ಕಮಿಷನರು ನೇಮಕವಾಗಿದ್ದರು ಅವರು ಶ್ರಮಪಟ್ಟದ್ದಕ್ಕಾಗಿ ಅವರಿಗೆ ಮ್ಯುನಿಸಿಪಾಲಿಟಿಯಿಂದ ದಿನ ೧ ಕ್ಕೆ ೧೦ ರೂಪಾಯಿನಂತೆ ರುಸುಮು ಕೊಡಬಹುದೆಂದು ಮ್ಯುನಿಸಿಪಲ್ ಕಾನೂನು ಹೇಳುವುದು ಆದರೆ ಸರ್ಕಾರದವರು ಬೆಂಗಳೂರು ಪಟ್ಟಣದಲ್ಲಿ ಇಂಥಾ ಕೆಲಸಕ್ಕೆ ಮ್ಯುನಿಸಿಪಲ್ ಕಮಿಷನರಿಗೆ ೫ ರೂಪಾಯಿನಂತೆ ರುಸುಮು ಕೊಟ್ಟರೆ ಎಂದು ತಿಳಿಸಿದರು. ಮ॥ ರಂಗೈಯಂಗಾರು—ಮ್ಯುನಿಸಿಪಲ್ ಕಮಿಷನರಾದ ನಾವು ಮ್ಯುನಿಸಿಪಲ್ ಕೆಲಸಗಳನ್ನು ಉಚಿತವಾಗಿ ಮಾಡುವುದು ಸಹಜವಾಗಿದೆ ಮ್ಯುನಿಸಿಪಾಲಿಟಿಯಿಂದ ರುಸುಮನ್ನು ತೆಗೆದುಕೊಳ್ಳುವುದು ನಮ್ಮ ಗೌರವಕ್ಕೂ ನಮ್ಮ ಹೆಸರಿಗೂ ನಮ್ಮ ಸ್ಥಾನಕ್ಕೂ ಯೋಗ್ಯವಾಗಿರಲಾರದು ಆದ್ದರಿಂದ ಈ ಕೆಲಸ ಮಾಡಿದ್ದಕ್ಕೆ ಮ್ಯುನಿಸಿಪಾಲಿಟಿಯವರು ಕಮಿಷನರಿಗೆ ಯಾವ ವಿಧವಾದ ಪ್ರತಿಫಲವನ್ನೂ ಕೊಡಬೇಕಾದದ್ದಿಲ್ಲವೆಂದು ಹೇಳಿದರು ಮ. ಎಂ ನರಸಿಂಹಸ್ವಾಮಿಯವರು ಈ ಅಭಿಪ್ರಾಯವನ್ನು ಅನುಮೋದಿಸಿದರು ಆದರೂ ಕೆಲವು ಮೆಂಬರುಗಳು ಕಾನೂನಿನಲ್ಲಿ ಕಂಡಂತೆ ಮ್ಯುನಿಸಿಪಾಲಿಟಿಯವರು ಕೆಲಸ ನಡೆಸಬೇಕೆಂತಲೂ, ಇನ್ನೂ ಕೆಲವರು ದಿನಕ್ಕೆ ೫ ರೂಪಾಯಿನಷ್ಟಾದರೂ ರುಸುಂ ಕೊಡಬೇಕೆಂತಲೂ ತಿಳಿಸಿದರು ಕಡೆಗೆ ದಿನಕ್ಕೆ ೧೦ ರೂಪಾಯಿಗೆ ಕಮ್ಮಿಯಿಲ್ಲದೆ ಮೆಂಬರುಗಳಿಗೆ ರುಸುಂ ಕೊಡತಕ್ಕದ್ದೆಂದು ತೀರ್ಮಾನವಾಯಿತು

ಸಬರ್ಬ ನೆಕಲೆಯಲ್ಲಿ ಮೊಹತರ್ಫಾ ಕಂದಾಯ ಸ್ವಲ್ಪ ವಸೂಲಾಗುವುದು ಕಷ್ಟವೆಂದೂ ರೂ ೩೮೭—೮—೦ ಯಷ್ಟನ್ನು ರಿಮಿಷನ್ ಮಾಡಬೇಕೆಂದೂ ಅಲ್ಲಿನ ಕಮಿಷನರುಗಳು ಶಿಫಾರಸು ಮಾಡಿದರು ಬೋರ್ಡಿನಲ್ಲಿ ಅದರಂತೆ ಹಣವನ್ನೂ ರಿಮಿಷನ್ ಮಾಡಿದರು

ಪಟ್ಟಣವು ಎರಡು ಭಾಗಗಳಾಗಿವೆ ಒಂದು ಭಾಗದ ಮೇಲೆ ಮ್ಯುನಿಸಿಪಾಲಿಟಿಯವರೂ ಇನ್ನೊಂದು ಭಾಗದ ಮೇಲೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರೂ ಅಧಿಕಾರ ಚಲಾಯಿಸಿ ಮಾಡುತ್ತಿದಾರೆ ಟ್ರಸ್ಟ್ ಬೋರ್ಡಿನವರು ಹೊಸಮನೆ ಕಟ್ಟತಕ್ಕವರಿಗೂ ರಿಪೇರಿ ಮಾಡತಕ್ಕವರಿಗೂ ಕೆಲವು ಪ್ಲೈನುಗಳನ್ನು ಮಾಡಿಟ್ಟುಕೊಂಡು, ಲೈಸೆನ್ಸು ಕೇಳುವ ಪ್ರಜೆಗಳನ್ನು ಆ ಪ್ಲೈನುಗಳ ಪ್ರಕಾರ ಕಟ್ಟಬೇಕೆಂದು ಬಲಾತ್ಕಾರ ಮಾಡುತ್ತಾರೆ ಮ್ಯುನಿಸಿಪಾಲಿಟಿಯವರು ಇಂಥಾ ಪ್ಲೈನುಗಳನ್ನು ಮಾಡಿಟ್ಟುಕೊಂಡಿಲ್ಲ ಆದ್ದರಿಂದ ಅವರು ಲೈಸೆನ್ಸು ಕೇಳುವವರನ್ನು ಯಾವ ರೀತಿಯಲ್ಲೂ ಬಲಾತ್ಕಾರ ಮಾಡುವುದಕ್ಕೆ ಅವಕಾಶವಿಲ್ಲ ಟ್ರಸ್ಟ್ ಬೋರ್ಡಿನವರು ಇಟ್ಟುಕೊಂಡಿರುವ ಪ್ಲೈನುಗಳನ್ನೇ ಮ್ಯುನಿಸಿಪಾಲಿಟಿಗೂ ಜಾರಿಗೆ ತರಬೇಕು ಎಂಬುದಾಗಿ ವೈಸ್ ಪ್ರೆಸಿಡೆಂಟರು ಸೂಚಿಸಿದರು ಮೆಂಬರುಗಳು ಇದಕ್ಕೆ ಒಪ್ಪದೆ, ಸರ್ಕಾರದವರು ಹೊಸ ಮ್ಯುನಿಸಿಪಲ್ ಕಾನೂನನ್ನು ಮಾಡುತ್ತಿದಾರೆಂತಲೂ, ಅದು ಜಾರಿಗೆ ಬಂದ ಮೇಲೆ ಈ ವಿಷಯವನ್ನು ಚರ್ಚಿಸಿ ಪ್ಲೈನುಗಳನ್ನು ಸರಿಯಾಗಿ ಮಾಡಿಕೊಳ್ಳಬೇಕೆಂತಲೂ ಅಭಿಪ್ರಾಯಪಟ್ಟರು.

ಬೆಳಗೊಳದಿಂದ ರಾಜಧಾನಿಗೆ ಕುಡಿಯುವ ನೀರನ್ನು ತಂದು ಬಿಟ್ಟಿದಾರಷ್ಟೆ. ಬೇಸಿಗೆಯೊಳಗೆ ನಾಲೆಯಲ್ಲಿ ನೀರು ಇರುವುದಿಲ್ಲ, ಇದಲ್ಲದೆ ನೀರನ್ನು ಕಬ್ಬಿನ ವ್ಯವಸಾಯಕ್ಕೆ ಕೊಡುತ್ತಾರೆ ಇದರಿಂದ ನೀರು ಪಟ್ಟಣಕ್ಕೆ ಸಾಕಾದಷ್ಟು ಬರುವದಿಲ್ಲ ಆದಕಾರಣ ಇದಕ್ಕೋಸ್ಕರಲೇ ಅಲ್ಲಿ ನದಿಯಿಂದ ಬೇರೇ ನಾಲೆಯನ್ನು ತೆಗೆಸಬೇಕು ಎಂದು ಮ॥ ಅಂಬಳೆ ಪಂಡಿತರು ಸೂಚಿಸಿದರು. ಈ ವಿಷಯವು ಸ್ವಲ್ಪ ಹೊತ್ತು ಚರ್ಚೆಯಾಯಿತು. ಮೈಸೂರು ಗವರ್ನಮೆಂಟಿನವರು ರಾಜಧಾನಿಗೆ ನೀರನ್ನು ಸರಬರಾಜು ಮಾಡುವುದಕ್ಕೂ ಪಟ್ಟಣದಲ್ಲಿ ರಾತ್ರಿ ದೀಪ ಹಚ್ಚುವದಕ್ಕೂ ಶಿವಸಮುದ್ರದಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ತಂದು ಬಿಡಬೇಕೆಂದು ಯೋಚನೆ ಮಾಡಿಕೊಂಡಿದಾರೆಂತಲೂ, ಇದನ್ನು ಸರ್ಕಾರದವರು ಜಾಗ್ರತೆಯಾಗಿ ಮಾಡಿಸಿ ತರಿಸುವ ಪಕ್ಷಕ್ಕೆ ಮ್ಯುನಿಸಿಪಾಲಿಟಿಯವರು ವರುಷಕ್ಕೆ ೧೫,೦೦೦ ರೂಪಾಯಿನಂತೆ ಕೊಡಲು ಒಪ್ಪಬಹುದೆಂತಲೂ ಪ್ರೆಸಿಡೆಂಟರು ತಿಳಿಸಿದರು. ಮೆಂಬರುಗಳೆಲ್ಲಾ ಈ ಅಭಿಪ್ರಾಯವನ್ನೇ ಅನುಮೋದಿಸಿದರು

ಚಾಮರಾಜ ಮೊಹಲ್ಲೆಯಲ್ಲಿ ೧೯೦೦ ನೆ ಇಸವಿಯಿಂದ ಎಷ್ಟು ಮನೆಗಳ ನಿವೇಶನಗಳನ್ನು ಬಿಕರಿಮಾಡಿದೆ; ಎಷ್ಟು ನಿವೇಶನಗಳಲ್ಲಿ ಮನೆ ಕಟ್ಟಿದಾರೆ ಇನ್ನೂ ಖಾಲಿ ಇರುವ ನಿವೇಶನಗಳೆಷ್ಟು, ಈ ಪೈಕಿ ಇನ್ನೂ ಎಷ್ಟನ್ನು ಬಿಕರಿಮಾಡಿಲ್ಲ ಈ ಸಂಗತಿಗಳನ್ನು ತಿಳಿಸುವಂತೆ ಒಂದು ಪಟ್ಟಿ ತಯಾರಾಗಬೇಕೆಂದು ಮ॥ ಅಂಬಳೆ ಪಂಡಿತರು ಕೇಳಿದರು. ವೈಸ್ ಪ್ರೆಸಿಡೆಂಟರು ಅದನ್ನು ತಯಾರುಮಾಡಿ ಬೋರ್ಡಿನಲ್ಲಿ ಹಾಜರುಮಾಡಿ, ಬಿಕರಿ ಆಗದೆ ಇರುವ ನಿವೇಶನ ಒಂದೂ ಇಲ್ಲವೆಂದು ತಿಳಿಸಿದರು ಆಗ ಮ॥ ಪಂಡಿತರು ಮ್ಯುನಿಸಿಪಲ್ ಬೋರ್ಡಿನ ಅನುಮತಿ ಪಡೆಯುವುದಕ್ಕೆ ಮೊದಲು ವೈಸ್ ಪ್ರೆಸಿಡೆಂಟರು ಯಾವ ಖಾಲಿ ನಿವೇಶನವನ್ನೂ ಬಿಕರಿ ಮಾಡಕೂಡದೆಂದು ಸೂಚಿಸಿದರು. ಮೆಂಬರುಗಳೆಲ್ಲಾ ಇವರ ಅಭಿಪ್ರಾಯದಂತೆಯೇ ಒಪ್ಪಿ ಪ್ರಕಾರ ತೀರ್ಮಾನ ಮಾಡಿದರು.

ಲೋಕದ ಬೆಳಕು.

ಪೂರ್ವಕಾಲದಲ್ಲಿ ಇಸ್ರಯೇಲ್ಯರೆಂಬ ಜನಗಳು ಈಜಿಪ್ಟ್ ದೇಶದವರಿಗೆ ಗುಲಾಮರಾಗಿದ್ದರು. ಹೀಗೆ ನಾನೂರು ವರ್ಷಗಳು ಗುಲಾಮರಾಗಿದ್ದ ಬಳಿಕ ಭಗವಂತನು ಅವರನ್ನು ಕಟಾಕ್ಷಿಸಿ, ಮೋಶೆಯೆಂಬ ಒಬ್ಬ ಮಹಾ ಪುರುಷನ ಮೂಲಕವಾಗಿ ಅವರನ್ನು ಸೆರೆಯಿಂದ ಬಿಡಿಸಿದನು ಭಗವಂತನ ಅಪ್ಪಣೆಯ ಪ್ರಕಾರ ಈ ಮೋಶೆಯು ಆ ಜನರನ್ನು ಪಾಲೆಸ್ತೀನ್ ಎಂಬುದಾಗಿ ಈಗ ಹೆಸರಾಗಿರುವ ದೇಶಕ್ಕೆ ಕರೆದುಕೊಂಡು ಹೋಗುತ್ತಿರಲಾಗಿ ದಾರಿಯಲ್ಲಿ ಕೆಂಪುಕಡಲು ಸಿಕ್ಕಿತು ಅದರ ಉತ್ತರದ ಕೊನೆಯಲ್ಲಿ ಒಂದು ಮಹಾರಣ್ಯವಿರುವುದು. ಈ ಅರಣ್ಯದಲ್ಲಿ ಜನರಿಗೆ ದಾರಿಯು ಗೊತ್ತಿಲ್ಲದೆ ಇದ್ದಕಾರಣ ಭಗವಂತನೇ ಅವರಿಗೆ ದಾರಿಯನ್ನು ತೋರಿಸಲುದ್ಯುಕ್ತನಾದನು ಅಪೂರ್ವವಾದ ಒಂದು ಮೇಘವು ಹಗಲೆಲ್ಲಾ ಅವರ ಮುಂದೆ ಹೋಗುತ್ತಲಿತ್ತು, ರಾತ್ರಿಯಾದಾಗ ಈ ಮೇಘವು ಆಶ್ಚರ್ಯಕರವಾದ ಕಾಂತಿಯಿಂದ ಪ್ರಕಾಶಿಸುತ್ತಲಿತ್ತು ಇದನ್ನು ಜನರು ನೋಡಿ, ಇದು ಭಗವಂತನ ಪ್ರಸನ್ನತೆಯೆಂದೇ ತಿಳಿದಿದ್ದರು ಈ ಪ್ರಕಾರ ಅವರು ಭಗವಂತನಿಂದ ಸಂರಕ್ಷಣೆಯನ್ನು ಹೊಂದುತ್ತಾ ನಲವತ್ತು ವರ್ಷ ಪ್ರಯಾಣಮಾಡಿ, ಕಡೆಗೆ ಪಾಲೆಸ್ತೀನ್ ದೇಶವನ್ನು ಸೇರಿ ಹಲವು ಶತಮಾನಗಳ ವರೆಗೂ ಅಲ್ಲಿ ವಾಸಿಸುತ್ತಿದ್ದರು ಅವರು ಅರಣ್ಯದಲ್ಲಿ ಆಶ್ಚರ್ಯ ವಿಧವಾಗಿ ನಡಸಲ್ಪಟ್ಟ ಈ ಕಾರ್ಯವನ್ನು ಎಂದಿಗೂ ಮರೆತುಹೋಗಲಿಲ್ಲ ತಮ್ಮನ್ನು ಸಂರಕ್ಷಿಸಿದಂತೆಯೇ ಸಕಲ ಲೋಕಕ್ಕೆಲ್ಲಾ ಸಂರಕ್ಷಣೆಯನ್ನು ಕೊಡತಕ್ಕ ಒಬ್ಬ ಮಹಾ ಪುರುಷನು ಮುಂದೆ ಬರುವವನಿದ್ದಾನೆಂದು ಅವರು ನಂಬಿ, ಆ ಕಾಲವನ್ನು ಬಹು ಆಶೆಯಿಂದ ನಿರೀಕ್ಷಿಸುತ್ತಿದ್ದರು. ಅವರು ಹಿಂದಣ ಕಾಲದಲ್ಲಿ ಹೊಂದಿದ ಸುಖೋಪಕಾರಗಳನ್ನೂ ಮುಂದೆ ಬರುವದಕ್ಕಿರುವ ಮೇಲುಗಳನ್ನೂ ಜ್ಞಾಪಕಮಾಡಿಕೊಳ್ಳುವದಕ್ಕೆ ಅನೇಕ ಹಬ್ಬಗಳನ್ನು ಏರ್ಪಡಿಸಿಕೊಂಡಿದ್ದರು. ಇಂಥ ಹಬ್ಬಗಳೊಳಗೊಂದರಲ್ಲಿ ಅವರು ತಮ್ಮ ದೇವಾಲಯದಲ್ಲಿ ಚಿನ್ನದ ನಾಲ್ಕು ದೊಡ್ಡ ದೀಪಗಳನ್ನು ಹೊತ್ತಿಸುತ್ತಿದ್ದರು ಈ ದೀಪಗಳ ಬೆಳಕು ಆ ಯೆರೂಸಲೇಮ್ ನಗರಕ್ಕೆಲ್ಲಾ ಚನ್ನಾಗಿ ತೋರುತ್ತಿತ್ತು ವರ್ಷವರ್ಷವೂ ಹಚ್ಚುತ್ತಿದ್ದ ಈ ಬೆಳಕನ್ನು ಜನರು ನೋಡಿ, ತಮ್ಮ ಪೂರ್ವಿಕರನ್ನು ಭಗವಂತನು ನಡಿಸಿದ ವಿಧವನ್ನು ಜ್ಞಾಪಕ ಮಾಡಿಕೊಂಡು ಆತನನ್ನು ಕೊಂಡಾಡಿದ್ದು ಮಾತ್ರವಲ್ಲದೆ ಮುಂದೆ ಸಕಲಲೋಕದವರನ್ನೆಲ್ಲಾ ಸಮಾಧಾನದಲ್ಲಿಯೂ ಸತ್ಯದಲ್ಲಿಯೂ ನಡಿಸುವದಕ್ಕೆ ಬರುವಂಥ ಆ ದಿವ್ಯ ಜ್ಯೋತಿರೂಪನನ್ನು ಸ್ಮರಿಸುತ್ತಲೂ ಇದ್ದರು.

ಈ ಪ್ರಕಾರ ಆ ಇಸ್ರಯೇಲ್ಯರು ಬಹುಕಾಲದ ವರೆಗೂ ಈ ಉತ್ಸವವನ್ನು ಆಚರಿಸುತ್ತಲಿದ್ದ ಬಳಿಕ ಅವರು ನಿರೀಕ್ಷಿಸುತ್ತಲಿದ್ದ ಆ ಮಹಾ ಜ್ಯೋತಿಯೆಂಬ ಪುರುಷನು ನರಾವತಾರವೆತ್ತಿ ನಜರೇತೂರಿನ ಯೇಸು ಎಂಬ ನಾಮಧೇಯದಿಂದ ಜನರಲ್ಲಿ ಕಾಣಿಸಿಕೊಂಡನು ಆತನ ಅಪೂರ್ವ ಬೋಧನಾ ರೀತಿಯನ್ನು ತಿಳಿದ ಆ ಜನರಲ್ಲನೇಕರು—ನಾವು ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಆ ಮಹಾ ಪುರುಷನು ಈತನೇ ಎಂದು ಯೋಚಿಸಿದರು. ಬೇರೆ ಕೆಲವರು ಈ ವಿಷಯದಲ್ಲಿ ಸಂಶಯಪಡುತ್ತಿದ್ದರು. ಇನ್ನು ಅನೇಕರು ಈ ದಿವ್ಯ ಬೋಧಕನ ಮಾತನ್ನು ಸಾಧಾರಣ ಜನಗಳು ಕೇಳದ ಹಾಗೆ ತಮ್ಮಿಂದಾದಮಟ್ಟಿಗೂ ಅಭ್ಯಂತರ ಪಡಿಸುತ್ತಿದ್ದರು.

ಹೀಗಿರಲಾಗಿ ನಾವು ಮೇಲೆ ಸೂಚಿಸಿರುವ ಉತ್ಸವಕ್ಕೆ ಯೇಸು ಸ್ವಾಮಿಯು ಒಂದು ಸಾರಿ ಹೋಗಿರುವಲ್ಲಿ ಆ ಚಿನ್ನದ ದೀಪಗಳ ಬಳಿಯಲ್ಲಿ ನಿಂತುಕೊಂಡು—ನಾನೇ ಲೋಕಕ್ಕೆ ಬೆಳಕು ನನ್ನನ್ನು ಅನುಸರಿಸುವವನು ಕತ್ತಲಲ್ಲಿ ನಡೆಯುವದಿಲ್ಲ. ಜೀವದ ಬೆಳಕನ್ನು ಹೊಂದುವನು ಎಂಬುದಾಗಿ ಗಟ್ಟಿಯಾಗಿ ಹೇಳಿದನು ಹೀಗೆ ಹೇಳಿ, ಆ ಇಸ್ರಯೇಲ್ಯರು ಯಾವಾತನಿಗಾಗಿ ಬಹುಕಾಲವು ನಿರೀಕ್ಷಿಸುತ್ತಲಿದ್ದರೋ ಆತನೇ ತಾನು ಎಂಬುದಾಗಿಯೂ ಯೆಹೂದ್ಯರಿಗೆ ಮಾತ್ರವಲ್ಲ, ಭೂಲೋಕದ ಸಕಲ ಜನಗಳಿಗಾಗಿ ಬೆಳಕನ್ನು ಕೊಡುವದಕ್ಕೆ ಬಂದೆನೆಂದೂ ಆತನು ಸೂಚಿಸಿದನು.

ಆ ಅರಣ್ಯದಲ್ಲಿ ಯೆಹೂದ್ಯರ ಮುಂದುಗಡೆ ಆ ಪ್ರಕಾಶಮಾನವಾದ ಮೇಘವು ಹೋದ ಹಾಗೆಯೇ ಈ ಲೋಕಯಾತ್ರೆಯಲ್ಲಿ ನಮ್ಮ ಮುಂದೆ ಯೇಸು ಸ್ವಾಮಿಯು ನಡೆಯುತ್ತಾ ದಾರಿಯನ್ನು ತೋರಿಸುತ್ತೇನೆಂದು ಹೇಳುತ್ತಾನೆ ಆ ಕಾಂತಿಯುಕ್ತವಾದ ಮೇಘವನ್ನು ನೋಡಿ ಯೆಹೂದ್ಯರು ದೇವರ ವಿಷಯದಲ್ಲಿ ಕೆಲವು ಅಭಿಪ್ರಾಯಗಳನ್ನು ತಿಳಿದರು ಆತನು ಬೆಳಕೆಂದೂ, ಆತನಲ್ಲಿ ಅವಿದ್ಯೆಯಾದರೂ ಕೆಟ್ಟತನವಾದರೂ ಇಲ್ಲವೆಂದೂ ಆ ಇಸ್ರಯೇಲ್ಯರು ತಿಳಿದುಕೊಂಡರು ಯೇಸು ಸ್ವಾಮಿಯ ಗುಣಚರ್ಯಗಳನ್ನು ನಾವು ವಿಮರ್ಶಿಸಿ ನೋಡಿದರೆ ಭಗವಂತನು ಎಷ್ಟು ಪವಿತ್ರನಾಗಿಯೂ ಪ್ರೀತಿಸ್ವರೂಪನಾಗಿಯೂ ಇದ್ದಾನೆಂದು ಪರಿಷ್ಕಾರವಾಗಿ ತಿಳಿದು ಬರುತ್ತದೆ ಯೇಸು ಸ್ವಾಮಿಯನ್ನು ಕಂಡವನು ಸಾಕ್ಷಾತ್ ಭಗವಂತನನ್ನೇ ಕಂಡಿದ್ದಾನೆಂದು ತಿಳಿಯಬೇಕು ಇಂಥ ಸ್ವಾಮಿಯನ್ನು ನಾವು ನಂಬಿ ಆತನ ಕೈಯಲ್ಲಿ ನಮ್ಮನ್ನು ಒಪ್ಪಿಸಿಕೊಟ್ಟರೆ ಆತನು ನಮ್ಮನ್ನು ಸರಿಯಾದ ದಾರಿಯಲ್ಲಿ ನಡಿಸುವನು, ಸರಿಯಾದ ತಿಳುವಳಿಕೆಯನ್ನು ಕೊಡುವನು, ನಮ್ಮ ಅಜ್ಞಾನವನ್ನೂ ಪಾಪವನ್ನೂ ನಿವರ್ತಿ ಮಾಡುವನು ಇದಲ್ಲದೆ ಆತನು ನಮ್ಮನ್ನು ಸಕಲ ವಿಧವಾದ ಕೇಡುಗಳಿಂದ ತಪ್ಪಿಸಿ ಕಾಪಾಡಿ, ಈ ಜೀವಮಾನವನ್ನು ಕಳೆಯುವಾಗ ಮರಣವೆಂಬ ಪ್ರವೇಶದ ಮೂಲಕ ದೇವಲೋಕಕ್ಕೆ ಸೇರಿಸುವನು.

ಮೇಲೆ ಹೇಳಿದ ಸಂಗತಿಯು ನಡೆದು ಕೆಲವು ದಿನಗಳ ತರುವಾಯ ಯೇಸು ಸ್ವಾಮಿಯು ಹುಟ್ಟು ಕುರುಡನಾದ ಒಬ್ಬ ಮನುಷ್ಯನನ್ನು ಕಂಡನು ಸ್ವಾಮಿಯು ಅವನ ಮುಂದೆ ನಿಂತುಕೊಂ

...ವಾನೇ ಲೋಕದ ಬೆಳಕು ಎಂದು ಹೇಳಿದನು. ಕುರುಡನಿಗೆ ...ರಿಂದ ಉಪಯೋಗವೇನು? ಎಂದು ಕೇಳುವಿರಿ. ಸೂರ್ಯನು ಎಷ್ಟು ಕಾಂತಿಯಿಂದ ಪ್ರಕಾಶಿಸಿದರೆ ತಾನೆ ಏನು? ಕುರುಡನ ಕಣ್ಣು ಕಾಣುವದೇ? ಆದರೆ ಯೇಸು ಸ್ವಾಮಿಯು ಹೀಗೆ ...ವಲ ಸುಮ್ಮನೆ ಹೇಳತಕ್ಕವನಲ್ಲ. ಆತನು ಆ ಕುರುಡನನ್ನು ...ದು ಅವನ ಕಣ್ಣುಗಳಿಗೆ ಕೆಸರನ್ನು ಹಚ್ಚಿ ಒಂದು ಕೊಳಕ್ಕೆ ...ತೊಳಕೊಂಡು ಬಾ ಎಂದು ಹೇಳಿದನು. ಆ ಮನುಷ್ಯನು ಅದೇ ಪ್ರಕಾರ ಮಾಡಿದನು. ಅವನಿಗೆ ಕಣ್ಣು ಬಂತು. ಯೇಸು ಸ್ವಾಮಿಯು ಕಣ್ಣುಂಟಾದವರಿಗೆ ತಿಳುವಳಿಕೆಯನ್ನು ಕೊಟ್ಟು ...ವನ್ನು ಕಾಣುವ ಹಾಗೆ ಮಾಡುತ್ತಾನೆ, ಕಣ್ಣಿಲ್ಲದವರಿಗಾದರೋ ...ಕೊಟ್ಟು ಕಣ್ಣು ಕಾಣುವ ಹಾಗೆ ಮಾಡುತ್ತಾನೆ.

ಯೇಸು ಸ್ವಾಮಿಯು ಈ ಸಚ್ಚರಿತೆಗೂ ನಮ್ಮ ಈ ದೇಶದಲ್ಲಿ ...ಬೋಧಕರೆಂದು ಹೆಸರುಗೊಂಡಿರುವ ಅನೇಕ ಜನರಿಗೂ ಎ...ಷ್ಟು ವ್ಯತ್ಯಾಸವಿದೆ ನೋಡಿದಿರಾ? ಮತ ಸಂಬಂಧವಾದ ಗ್ರಂಥಗಳೆಲ್ಲಾ ಸಾಧಾರಣ ಜನಗಳಿಗೆ ತಿಳಿಯದ ಸಂಸ್ಕೃತ ಭಾಷೆಯಲ್ಲಿ ...ರೆದಿಟ್ಟು, ಇಂಥ ವಿಷಯಗಳನ್ನು ಅಜ್ಞಾನಿಗಳು ತಿಳಿಯಲಯೋಗ್ಯರಾಗಿದ್ದಾರೆಂದು ಹೇಳಿ ಹೊಲೆ ಮಾದಿಗರೆಂಬ ಕೀಳು ಜಾತಿಯವರಿಗೆ ಬುದ್ಧಿ ಹೇಳದೆ ಇದ್ದಾರೆ. ಅವರು ವಿಗ್ರಹಗಳನ್ನು ಪೂಜಿಸುತ್ತಿದ್ದರೆ ಸಾಲದೇ? ಅವರಿಗ್ಯಾಕೆ ವೇದ ಶಾಸ್ತ್ರಾಭ್ಯಾಸ? ಎಂದು ...ಳಿ ಅವರನ್ನು ತಿರಸ್ಕರಿಸಿ ಬಿಟ್ಟಿದ್ದಾರೆ. ಯೇಸು ಕ್ರಿಸ್ತ ಸ್ವಾಮಿಯು ಹೀಗೆ ಮಾಡುವದಿಲ್ಲ. ಕುರುಡನನ್ನು ನೋಡಿ ಅವರೇನಾದರೂ ಆಗಲಿ ಎಂದು ಹೇಳದೆ ಅವರಿಗೆ ದೃಷ್ಟಿಯನ್ನು ಅನುಗ್ರಹಿಸುತ್ತಾನೆ. ಹಾಗೆಯೇ ಅಜ್ಞಾನರನ್ನು ಅಜ್ಞಾನದಲ್ಲೇ ಇರಗೊಡಿಸುವದಿಲ್ಲ, ಅವರಿಗೆ ಜ್ಞಾನವನ್ನು ದಯಪಾಲಿಸುತ್ತಾನೆ. ಯೇಸು ಸ್ವಾಮಿಯಲ್ಲಿ ಯಾರು ಎಂಥವರು ನಂಬಿಕೆಯಿಟ್ಟರೂ ಅವರೆಲ್ಲರಿಗೂ ಆತನು ತನ್ನ ಮತದಲ್ಲಿ ಅಡಗಿರುವ ಸತ್ಯವನ್ನು ಬಿಚ್ಚಿ ತೋರಿಸುತ್ತಾನೆ. ಒಂದನ್ನೂ ಮರೆಮಾಡಿಟ್ಟುಕೊಳ್ಳುವದಿಲ್ಲ. ಬಡವರಿಗೆ ಸುವಾರ್ತೆಯು ಪ್ರಸಂಗಿಸಲ್ಪಡುತ್ತಿದೆ. ಕ್ರಿಸ್ತನ ...ಗೆ ಬ್ರಾಹ್ಮಣರು ಮಾತ್ರವಲ್ಲದೆ ಹೊಲೆಮಾದಿಗರೂ ಬರಬಹುದು. ...ತನು ಕ್ರಿಸ್ತನಲ್ಲಿ ದೈವಭಾವವನ್ನು ವಹಿಸಿ ಸತ್ಯವನ್ನು ಗ್ರಹಿಸುವಂತೆಯೇ ಏನೂ ತಿಳಿಯದ ಅಜ್ಞಾನಿಯೂ ಕಲಿಯಬಹುದಾಗಿದೆ. ಯಾಕೆಂದರೆ ಕ್ರಿಸ್ತನು ಇಂಗ್ಲಿಷರಿಗಾಗಲಿ ಬ್ರಾಹ್ಮಣರಿಗಾಗಲಿ ...ಶ್ವರ್ಯವಂತರಿಗಾಗಲಿ ವಿದ್ಯಾವಂತರಿಗಾಗಲಿ ಸರ್ವರಿಗೂ ಏಕ ...ಕಾರವಾಗಿ ಬೆಳಕಾಗಿದ್ದಾನೆ. ಆತನು ಲೋಕಕ್ಕೇ ಬೆಳಕು. ...ದರೆ ಆತನನ್ನು ಹಿಂಬಾಲಿಸಿರಿ. ಆತನನ್ನು ಹಿಂಬಾಲಿಸುವವನು ಕತ್ತಲಲ್ಲಿ ನಡೆಯುವದಿಲ್ಲ, ಜೀವದ ಬೆಳಕನ್ನು ಹೊಂದುವನು.

ಹಿಂದುಸ್ಥಾನದ ಪೋಲೀಸ್ ಇಲಾಖೆಯ ವಿಸ್ತಾರ.

ಪೋಲೀಸಿನವರ ಸಂಬಳ ಬಿತ್ತಾದದ್ದು.

ಇಂಡಿಯಾ ಗವರ್ನಮೆಂಟಿನವರು ಪೋಲೀಸ್ ಶಿಬ್ಬಂದಿಯ ಕ್ರಮ ಸಂಬಳ ಮೊದಲಾದುವನ್ನು ಕಾಲಾನುಗುಣ್ಯವಾಗಿ ಬದಲಾವಣೆ ಮಾಡಬೇಕೆಂದು ಉದ್ದೇಶಪಟ್ಟು, ಕೆಲವು ಅಧಿಕಾರಿಗಳನ್ನು ...ರು ವರುಷಗಳ ಕೆಳಗೆ ನೇಮಕಮಾಡಿದರು. ಈ ಅಧಿಕಾರಿಗಳು ಹಿಂದುಸ್ಥಾನದ ಅನೇಕ ಪಟ್ಟಣಗಳಲ್ಲಿ ಸಂಚಾರಮಾಡಿ, ಪೋಲೀಸಿನವರಿಂದಲೂ ಇತರ ಅಧಿಕಾರಿಗಳಿಂದಲೂ ದೊಡ್ಡ ಮನುಷ್ಯರಾದ ...ಜೆಗಳಿಂದಲೂ ಅವರವರ ಅಭಿಪ್ರಾಯಗಳನ್ನು ಕೇಳಿ ವಾಜ್ಮೂಲಗಳನ್ನು ಬರೆದುಕೊಂಡು ಹೋಗಿ, ಅವುಗಳನ್ನೆಲ್ಲಾ ಕ್ರೋಢೀಕರಿಸಿ, ಅವುಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ಬರೆದು, ಇಂಡಿಯಾ ಗವರ್ನಮೆಂಟಿಗೆ ಒಪ್ಪಿಸಿದರು. ಈ ರಿಪೋರ್ಟಿನಲ್ಲಿ ವಿವರಿಸಿರುವಂತೆ ಪೋಲೀಸ್ ಇಲಾಖೆಯಲ್ಲಿ ಶಿಸ್ತುಗಳನ್ನು ಮಾಡಲು ಇಂಡಿಯಾ ಗವರ್ನಮೆಂಟಿನವರು ವಿಲಾಯಿತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೆ ತಿಳಿಸಿ ಅವರ ಅನುಮತಿಯನ್ನು ನಿರೀಕ್ಷಿಸುತ್ತಿದ್ದರು. ಸ್ಟೇಟ್ ಸೆಕ್ರೆಟರಿಯವರು ಅದರಂತೆ ಸ್ವೀಕಾರ ಮಾಡಿದಾರೆ. ಇಂಡಿಯಾ ಗವರ್ನಮೆಂಟಿನವರು ಪೋಲೀಸ್ ಇಲಾಖೆಯಲ್ಲಿ ಅದೇ ಪ್ರಕಾರ ಬದಲಾವಣೆ ಮಾಡಿದರು. ಬಾಬುಗಳು ಯಾವವೆಂದರೆ—

ಹೊಸ ಬದಲಾವಣೆಗಳು.

(೧) ಕಾನ್ಸ್ಟೆಬಲ್‌ಗಳನ್ನು ಈ ದೇಶದಲ್ಲೇ ಚುನಾಯಿಸಿ ಪೋಲೀಸಿಗೆ ಸೇರಿಸಿಕೊಳ್ಳಬೇಕು (೨) ಅವರನ್ನು ಪೋಲೀಸ್ ಸ್ಕೂಲುಗಳಲ್ಲಿ ತರಬೇತು ಮಾಡಬೇಕು (೩) ಅವರ ಕಡೇ ದರ್ಜೆಯ ಸಂಬಳವನ್ನು ಆಯಾ ಸ್ಥಳಕ್ಕೆ ಅವಶ್ಯ ಕಂಡುಬರುವಂತೆ ಗೊತ್ತು ಮಾಡಬೇಕು, ಸ್ಥಳಾನುಗುಣ್ಯವಾಗಿ ಕಾನ್ಸ್ಟೆಬಲ್‌ಗಳಿಗೆ ಅಲೋವೆನ್ಸು ಕೊಡಬಹುದು. (೪) ಕಾನ್ಸ್ಟೆಬಲ್‌ಗಳ ಸಂಬಳವನ್ನು ೩ ವರುಷ, ೧೦ ವರುಷ, ೧೫ ವರುಷ ಸರ್ವಿಸ್ ಮಾಡಿದಂತೆ ಒಂದೊಂದು ರೂಪಾಯಿ ಇಜಾಫೆ ಮಾಡತಕ್ಕದ್ದು. (೫) ಅವರಿಗೆ ದಿನ ಮುಂಚಾದ್ದನ್ನು ಛಾರ್ಜಿಲ್ಲದೆ ಸರ್ಕಾರದಿಂದಲೇ ಕೊಡಬೇಕು; ಒಳ್ಳೇ ನಡತೆಗಾಗಿ ಈಗ ಕೊಡುತ್ತಿರುವ ಬತ್ತೆಯನ್ನು ವಜಾ ಮಾಡಿದೆ. (೬) ಕಾನ್ಸ್ಟೆಬಲ್‌ಗಳಿಗೆ ಸ್ಥಳಕ್ಕೆ ತಕ್ಕಂತೆ ಸ್ಪೆಷಲ್ ಅಲೋವೆನ್ಸು ಕೊಡಬೇಕು. ಅವರಿರುವ ಇನ್ಸ್ಪೆಕ್ಟರ್ ಸರ್ಕಲಿನ ಹೊರಗೆ ಹೋಗಿ ಕೆಲಸ ಮಾಡುವ ಸಂದರ್ಭಗಳಲ್ಲಿ ಅವರಿಗೆ ...ಕ್ಕೆ ಎರಡು ಆಣೆಯಂತೆ ಭತ್ಯವನ್ನು ಕೊಡಬೇಕು.

ಹೆಡ್ ಕಾನ್ಸ್ಟೆಬಲ್‌ರೂ ಸಬ್ ಇನ್ಸ್ಪೆಕ್ಟರುಗಳೂ.

(೭) ಹೆಡ್ ಕಾನ್ಸ್ಟೆಬಲ್‌ಗಳ ಸಂಬಳ ರೂ. ೧೫, ರೂ. ೧೭, ...೨೦, ಈ ರೀತಿ ಮೂರು ದರ್ಜೆ ಇರತಕ್ಕದ್ದು. (೮) ಸಾ...ಮತ್ತು ಗೂ ಹೊರಬರನ್ನೇ ಸಬ್ ಇನ್ಸ್ಪೆಕ್ಟರಾಗಿ ನೇಮಕ ಮಾಡಬೇಕು; ಆದರೆ ಕೆಲವು ಹೆಡ್ ಕಾನ್ಸ್ಟೆಬಲ್‌ಗಳನ್ನು ಮಾತ್ರ ...ಕೊಟ್ಟು ಸಬ್ ಇನ್ಸ್ಪೆಕ್ಟರಾಗಿ ಇಟ್ಟುಕೊಳ್ಳಬಹುದು.

(೯) ಸಬ್ ಇನ್ಸ್ಪೆಕ್ಟರುಗಳನ್ನು ಸ್ಕೂಲುಗಳಿಗೆ ಕಳುಹಿಸಿ ತರಬೇತು ಮಾಡಬೇಕು. (೧೦) ಇವರ ಸಂಬಳವನ್ನು ರೂ. ೫೦ ರಿಂದ ೧೦೦ ರವರೆಗೆ ಹೆಚ್ಚಿಸಿ, ಐದು ದರ್ಜೆ ಮಾಡಿದೆ. ಇವರಿಗೆ ಸ್ಥಳಾನುಗುಣ್ಯವಾಗಿ ೧೫ ರೂಪಾಯಿಗೆ ಮೀರದಂತೆ ಕುದುರೇ ಅಲೋವೆನ್ಸನ್ನು ಸಹ ಕೊಡತಕ್ಕದ್ದು.

ಇನ್ಸ್ಪೆಕ್ಟರುಗಳ ಸಂಬಳ ಮುಂತಾದ್ದು.

ಸಾಮಾನ್ಯವಾಗಿ ಸಬ್ ಇನ್ಸ್ಪೆಕ್ಟರುಗಳನ್ನೇ ಇನ್ಸ್ಪೆಕ್ಟರ್ ಕೆಲಸಕ್ಕೆ ಬತ್ತಿ ಮಾಡಬೇಕು; ಶೇಕಡ ೧೦ ರಷ್ಟು ಹೊಸ ಜನರನ್ನು ಇನ್ಸ್ಪೆಕ್ಟರ್ ಕೆಲಸಕ್ಕೆ ತಂದು ನೇಮಿಸಿಕೊಳ್ಳಬಹುದು. ಕೆಲವು ಪೋಲೀಸ್ ಸ್ಟೇಷನುಗಳನ್ನು ಒಳಗೊಂಡಿರುವ ಸರ್ಕಲ್‌ಗಳಿಗೆ ಒಬ್ಬ ಇನ್ಸ್ಪೆಕ್ಟರು ಇರಬೇಕು. ಅವರು ತಮ್ಮ ಸರ್ಕಲ್ಲಿಗೆ ಸೇರಿದ ಪೋಲೀಸ್ ವಿಚಾರಗಳಿಗೂ ಟರ್ವ ಪೋಲೀಸ್ ವಿಷಯದಲ್ಲೂ ಮೇಲ್ಪಟ್ಟ ಸೂಪರಿಂಟೆಂಟರಿಗೆ ಜವಾಬ್ದಾರರಾಗಿರತಕ್ಕದ್ದು. ಇನ್ಸ್ಪೆಕ್ಟರುಗಳ ತಲಬು ೧೫೦ ರೂ. ನಿಂದ ೨೦೦ ರೂ. ವರೆಗೆ ಮೂರು ದರ್ಜೆಗಳಾಗಿರಬೇಕು. ಆದರೆ ಕೆಲವು ಇನ್ಸ್ಪೆಕ್ಟರನ್ನು ೨೫೦ ರೂ ತಲಬಿನ ಮೇಲೂ ನೇಮಿಸಕೊಳ್ಳಬಹುದು. ಇನ್ಸ್ಪೆಕ್ಟರು ತಮ್ಮ ಹೆಡ್ ಕ್ವಾರ್ಟರ್ಸ್ ಬಿಟ್ಟು ಹೊರಗೆ ಸಂಚರಿಸುವಾಗ್ಗೆ ಅವರಿಗೆ ದಿನಕ್ಕೆ ಒಂದು ರೂಪಾಯಿನಂತೆ ಭತ್ಯ ಕೊಡಬೇಕು. ಇವರಿಗೂ ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರಿಗೂ ರಿಸರ್ವ್ ಇನ್ಸ್ಪೆಕ್ಟರಿಗೂ ಕುದುರೆ ಅಥವಾ ಗಾಡಿಯ ಅಲೋವೆನ್ಸು ಕೊಡಲಾಗುತ್ತೆ.

ಯೂರೋಪ್ಯಿಯರ್ ಅಧಿಕಾರಿಗಳು.

ಡಿಸ್ಟ್ರಿಕ್ಟ್ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಟರುಗಳ ಅಧಿಕಾರಕ್ಕೆ ಯೂರೋಪ್ಯಿಯರನ್ನೇ ನೇಮಿಸಬೇಕು. [ಇವರ ವಿಚಾರ ನಮ್ಮ ದೇಶೀಯರಿಗೆ ಅಗತ್ಯವಿಲ್ಲವೆಂದು ಪ್ರಕಟಿಸಲಿಲ್ಲ.—ಎಡಿ.]

ಡಿಪ್ಟಿ ಸೂಪರಿಂಟೆಂಡೆಂಟರು.

ವಿದ್ಯಾವಂತರಾದ ದೇಶೀಯರನ್ನು (ಹಿಂದು, ಮುಸಲ್ಮಾನ್ ಮೊದಲಾದವರು) ಪೋಲೀಸ್ ಇಲಾಖೆಗೆ ಸೇರಿಸಿಕೊಂಡು, ಇವರು ತರಬೇತಾಗಿ ಪರಿಪೂರ್ಣರೆನ್ನಿಸಿಕೊಂಡ ಹಾಗೆಲ್ಲಾ ಇವರನ್ನೂ ಐರಿಂ ದ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಾಗಿ ಬತ್ತಿ ಮಾಡಬಹುದಾಗಿದೆ. ಇವರ ಅಧಿಕಾರವೂ ಜವಾಬ್ದಾರಿಯೂ ಯೂರೋಪ್ಯಿಯರ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಹಾಗೆಯೇ, ಈ ಡಿಪ್ಟಿ ಸೂಪರಿಂಟೆಂಡೆಂಟರ ತಲಬು ರೂ ೨೫೦, ರೂ. ೩೦೦, ರೂ ೪೦೦, ರೂ. ೫೦೦, ಈ ರೀತಿ ನಾಲ್ಕು ತರಗತಿಗಳಾಗಿ ಮಾಡಲ್ಪಟ್ಟಿದೆ

ಈ ದೇಶೀಯ ಡಿಪ್ಟಿ ಸೂಪರಿಂಟೆಂಡೆಂಟರನ್ನು ಕ್ರಮಶಃ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಾಗಿ ಬತ್ತಿ ಮಾಡಲಾಗುವುದು. ಹೀಗೆ ಬತ್ತಿ ಮಾಡಲ್ಪಟ್ಟಾಗ ಇವರಿಗೆ ರೂ. ೬೦೦ ರಿಂದ ರೂ. ೯೦೦ ವರೆಗೆ ಸಂಬಳ ನಾಲ್ಕು ದರ್ಜೆ ಮಾಡಿದೆ.

ರಿಸರ್ವ್ ಪೋಲೀಸು.

ಮದರಾಸ್, ಬಂಗಾಳಾ, ಪಂಜಾಬ್, ಬರ್ಮ, ಮಧ್ಯಪ್ರಾಂತ್ಯಗಳು, ಅಸ್ಸಾಂ, ಈ ಪ್ರಾಂತ್ಯಗಳಲ್ಲಿ ರಿಸರ್ವ್ ಪೋಲೀಸು ಇರಬೇಕು. ಅಸ್ಸಾಂ, ಬರ್ಮ, ಬಂಗಾಳಾ, ಈ ಪ್ರಾಂತ್ಯ ಮಿಲಿಟರಿ ಪೋಲೀಸನ್ನು ನೇಮಿಸಲಾಗುತ್ತೆ. ಸವಾರ್ ಪೋಲೀಸನ್ನು ದೊಡ್ಡ ಪಟ್ಟಣಗಳಲ್ಲೂ ದರೋಡೆ ವಿಶೇಷವಾಗಿ ನಡೆಯುವ ಪ್ರದೇಶಗಳಲ್ಲೂ ಇಟ್ಟುಕೊಳ್ಳಬೇಕು.

ಹೊಸ ಪೋಲೀಸ್ ಕಾನೂನು.

ಈ ಬದಲಾವಣೆಗಳನ್ನೂ ಇತರ ವಿಷಯಗಳನ್ನೂ ಒಳಗೊಂಡ ಒಂದು ಪೋಲೀಸ್ ಕಾನೂನು ತಯಾರಾಗುತ್ತಿದೆ. ಇತರ ಗವರ್ನಮೆಂಟುಗಳ ಅಭಿಪ್ರಾಯವನ್ನು ತರಿಸಿಕೊಂಡು, ಈ ಕಾನೂನನ್ನು ಚಲಾವಣೆಗೆ ತರಲಾಗುವುದು.

ಸಿಟಿ ಪೋಲೀಸ್ ಸಿಬ್ಬಂದಿ.

ದೊಡ್ಡ ಶಹರುಗಳಲ್ಲಿ ಹೀಗಿರುವ ಸಿಟಿ ಸುಪರಿಂಟೆಂಡೆಂಟರ ಕೆಲಸವನ್ನು ವಜಾ ಮಾಡಿ, ಅವರ ಸ್ಥಾನಕ್ಕೆ ಕೆಲವು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರನ್ನು ನೇಮಿಸಲಾಗುತ್ತೆ. ಇವರಿಗೆ ವಾಸಸ್ಥಳವೂ ಅಲೋವೆನ್ಸೂ ಕೊಡಲ್ಪಡುವವು.

ಸಿಟಿ ಇನ್ಸ್ಪೆಕ್ಟರು ಮತ್ತು ಸಬ್ ಇನ್ಸ್ಪೆಕ್ಟರು.

ಸಿಟಿ ಇನ್ಸ್ಪೆಕ್ಟರುಗಳನ್ನು ಮೂರು ದರ್ಜೆ ಮಾಡಿದೆ. ರೂ. ೨೦೦, ರೂ. ೨೫೦, ರೂ ೩೦೦ ಅವರ ಸಂಬಳ. ಇದಲ್ಲದೆ ಅವರಿಗೆ ಇರುವುದಕ್ಕೆ ಮನೆ, ಗಾಡಿ ಅಲೋವೆನ್ಸು ಸಹ ಕೊಡಬೇಕು. ಸಿಟಿ ಸಬ್ ಇನ್ಸ್ಪೆಕ್ಟರ ತಲಬು ರೂ ೭೫, ರೂ ೧೦೦, ರೂ. ೧೨೫, ಈ ರೀತಿ ಮೂರು ಕ್ಲಾಸ್ ಮಾಡಿದೆ. ಇವರಿಗೂ ಮನೆ, ಅಲೋವೆನ್ಸು ಕೊಡತಕ್ಕದ್ದು. ಡಿಪ್ಟಿ ಇನ್ಸ್ಪೆಕ್ಟರು ಯೂರೋಪ್ಯಿಯರ್ ಆಗಿದ್ದಲ್ಲಿ ಅವರಿಗೆ ೧೫೦ ರೂಪಾಯಿ ತಲಬು ಸಲ್ಲಬೇಕು. ಯೂರೋಪ್ಯಿಯರ್ ಸಾರ್ಜೆಂಟುಗಳಿಗೂ ಕಾನ್ಸ್ಟೆಬಲ್‌ಗಳಿಗೂ ತಲಬು ಮದರಾಸಿನಲ್ಲಿ ೪೦—೫—೧೦೦ರೂ, ಬೊಂಬಾಯಿ, ಕಲ್ಕತ್ತೆ, ರಂಗೂನಿನಲ್ಲಿ ೪೦—೫—೧೩೦ರೂ ಈ ಪ್ರಕಾರ ಕೊಡತಕ್ಕದ್ದು.

ಸಿಟಿ ಕಾನ್ಸ್ಟೆಬಲ್‌ಗಳು.

ಹೆಡ್ ಕಾನ್ಸ್ಟೆಬಲ್‌ಗಳಿಗೂ ಕಾನ್ಸ್ಟೆಬಲ್‌ಗಳಿಗೂ ಇಂಡಿಯಾ ಗವರ್ನಮೆಂಟಿನವರು ಕೊಡಬೇಕೆಂದು ಸ್ವೀಕಾರ ಮಾಡಿರುವ ಸಂಬಳದ ದರ ಹ್ಯಾಗೆಂದರೆ—(೧) ಮದರಾಸಿನಲ್ಲಿ ರೂ. ೯, ರೂ. ೧೦, ರೂ. ೧೧, ರೂ. ೧೨. (೨) ಬೊಂಬಾಯಿ ಪಟ್ಟಣದಲ್ಲಿ ರೂ. ೧೧, ರೂ. ೧೨, ರೂ. ೧೩, ರೂ ೧. (೩) ಕಲ್ಕತ್ತೆಯಲ್ಲಿ ರೂ. ೧೦, ರೂ. ೧೧, ರೂ ೧೨, ರೂ ೧೩. ಈ ಬತ್ತೆಗಳು ಮೂರು, ಹತ್ತು, ಹದಿನೇಳು ವರುಷಗಳ ಸರ್ವೀಸ್ ಆದಾಗ ಕೊಡಲ್ಪಡುತ್ತವೆ. ಡಿಸ್ಟ್ರಿಕ್ಟ್ ಪೋಲೀಸಿನವರಂತೆಯೇ ಸಿಟಿ ಕಾನ್ಸ್ಟೆಬಲ್‌ಗಳನ್ನೂ ಸ್ಕೂಲುಗಳಲ್ಲಿ ತರಬೇತು ಮಾಡಬೇಕು.

ಇದಕ್ಕೆ ತಗಲುವ ಖರ್ಚು.

ಮೇಲ್ಕಂಡ ಪ್ರಕಾರ ಬದಲಾವಣೆಗಳನ್ನು ರೂಢಿಸುವದಕ್ಕೆ ಈಗ ಈ ಇಲಾಖೆಯ ಖರ್ಚಿಗಿಂತಲೂ ಪ್ರತಿ ವರುಷವೂ ಕಡೇ ಪಕ್ಷ ಒಂದೂವರೆ ಕೋಟಿ ರೂಪಾಯಿನಂತೆ ಜಾಸ್ತಿ ಬೇಕಾಗುವುದು. ಈ ಬದಲಾವಣೆಗಳೆಲ್ಲಾ ಏಕ ಕಾಲದಲ್ಲಿ ರೂಢಿಸುವುದಕ್ಕೆ ದ್ರವ್ಯ ಸಹಾಯ ಸಾಲದು; ಒಂದುವೇಳೆ ದ್ರವ್ಯವನ್ನು ಒದಗಿಸಬಹುದಾದರೂ ರೂಢಿಸುವುದು ಸಾಧ್ಯವಲ್ಲ. ಆದುದರಿಂದ ಮುಂದಿನ ವರುಷ ಅಂದರೆ ೧೯೦೫—೦೬ ನೆ ಸಾಲಿನಲ್ಲಿ ಈ ಬದಲಾವಣೆಗಳಿಗಾಗಿ ಹುಟ್ಟುವಳಿಯಿಂದ ೫೦ ಲಕ್ಷ ರೂಪಾಯಿ ಕೊಡಲಾಗುವುದು. ಈ ಪೈಕಿ ಮದರಾಸಿಗೆ ೧೦ ಲಕ್ಷ, ಬೊಂಬಾಯಿಗೆ ೭ ಲಕ್ಷ, ಬಂಗಾಳಾಕ್ಕೆ ೧೨ ಲಕ್ಷ, ಸಂಯುಕ್ತ ಪ್ರಾಂತ್ಯಗಳಿಗೆ ೬½ ಲಕ್ಷ, ಮಧ್ಯಪ್ರಾಂತ್ಯಗಳಿಗೆ ೪ ಲಕ್ಷ, ಪಂಜಾಬಿಗೆ ೫ ಲಕ್ಷ, ಬರ್ಮಾವಿಗೆ ೫ ಲಕ್ಷ, ಬೀರಾರಿಗೆ ೧ ಲಕ್ಷ, ಅಸ್ಸಾಮಿಗೆ ಅರ್ಧ ಲಕ್ಷ, ಸಣ್ಣ ಅಧಿಪತ್ಯಗಳಿಗೆ ೧ ಲಕ್ಷ, ಈ ಪ್ರಕಾರ ಹಂಚಿಕೊಡುವರು.

ಆಯಾ ಅಧಿಪತ್ಯಗಳವರು ಮೇಲ್ಕಂಡ ಹಣದಲ್ಲಿ ಅವಶ್ಯಬಿದ್ದಂತೆ ಪೋಲೀಸ್ ಶಿಬ್ಬಂದಿಯನ್ನು ಸಿಸಲಾಯಿಸಿಕೊಳ್ಳಬಹುದು. ಹಿಂದುಸ್ಥಾನದಲ್ಲಿ ಈಗಿರುವ ಕೆಲವು ಸೈನ್ಯಗಳ ರಾಜ್ಯಗಳನ್ನು ಬದಲಾವಣೆ ಮಾಡಿ, ಸೈನ್ಯವನ್ನು ಇತರ ರಾಜ್ಯಗಳಿಗೆ ಕಳುಹಿಸಬೇಕಾಗಿರುವುದರಿಂದ ಆಯಾ ಅಧಿಪತ್ಯಗಳ ಅಧಿಕಾರಿಗಳು ಮೊದಲು ರಿಸರ್ವ್ ಪೋಲೀಸನ್ನೂ ಮಿಲಿಟರಿ ಪೋಲೀಸನ್ನೂ ಪ್ರಜಾ ನೆಮ್ಮದಿಗೆ ಭಂಗ ಉಂಟಾಗದಂತೆ ಕಾಪಾಡಿಕೊಳ್ಳುವುದಕ್ಕಾಗಿ ಮೊದಲು ಸಿದ್ಧಪಡಿಸಿಕೊಳ್ಳಬೇಕಾಗಿದೆ. ಅನಂತರ ಮೊದಲು ಕಾನ್ಸ್ಟೆಬಲ್‌ಗಳ ಸಂಬಳಗಳನ್ನು ಮೇಲ್ಕಂಡ ಹುಕುಮಿನಲ್ಲಿ ಕಂಡಂತೆ ಬತ್ತಿ ಮಾಡತಕ್ಕದ್ದು. ಇದಾದ ಮೇಲೆ ಸಬ್ ಇನ್ಸ್ಪೆಕ್ಟರ ದರ್ಜೆಯನ್ನು ಕ್ರಮಪಡಿಸಬೇಕು.

ಈ ಪ್ರಕಾರ ಪೋಲೀಸ್ ಶಿಸ್ತನ್ನು ರೂಢಿಗೆ ತಂದ ಮೇಲೆ ಈ ಇಲಾಖೆಗೆ ಒಳ್ಳೇ ನಂಬಿಗಸ್ಥರಾದ ಪ್ರಜೆಗಳು ಸೇರಲೂ ಕ್ರಿಮಿನಲ್ ಅಪರಾಧಗಳು ಕಡಿಮೆಯಾಗಿ ಪ್ರಜಾನೆಮ್ಮದಿಯು ವೃದ್ಧಿ ಹೊಂದಲೂ ತುಂಬಾ ಸಹಕಾರಿಯಾದೀತೆಂದು ಗವರ್ನಮೆಂಟಿನವರು ನಿರೀಕ್ಷಿಸುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಹಿಂದು ಹುಡುಗನು ಮೆಟ್ರಿಕ್ಯುಲೇಷನ್ ಪರೀಕ್ಷೆಯ ಲೆಕ್ಕಗಳ ಪ್ರಶ್ನಪತ್ರಿಕೆಯಲ್ಲಿ ಸರಿಯಾಗಿ ಉತ್ತರಗಳನ್ನು ಬರೆಯಲಿಲ್ಲವೆಂದು ದುಃಖಪಟ್ಟುಕೊಂಡು, ಮನೆಗೆ ಬಂದು ವಿಷಪಾನಮಾಡಿ, ಆತ್ಮಹತ್ಯ ಮಾಡಿಕೊಂಡನು.

****

ರಂಗೂನ್ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ತುಂಬಾ ಕಠಿಣವಾಗಿರುವಂತೆ ಕಾಣುವುದು. ಉಪದ್ರ ತಗಲಿದವರಲ್ಲಿ ನೂರಕ್ಕೆ ಒಬ್ಬಿಬ್ಬರು ಬದುಕುವುದೂ ಕಷ್ಟವಾಗಿದೆ. ಸಾಲದ್ದಕ್ಕೆ ಈಗ ಸಿಡುಬುಬೇನೆ ಪ್ರಾರಂಭವಾಗಿ ಜನರನ್ನು ಕೊಲ್ಲುತ್ತಿದೆ.

****

ಹಿಂದುಸ್ಥಾನದಲ್ಲಿ ಹೊಸದಾಗಿ ರೈಲ್ ರಸ್ತೆಗಳನ್ನು ಹಾಕುವುದಕ್ಕೂ ನೀರಾವರಿ ಕಾಮಗಾರಿಗಳನ್ನು ಮಾಡುವುದಕ್ಕೂ ಇಂಡಿಯಾ ಗವರ್ನಮೆಂಟಿನವರು ೧೯೦೫—೦೬ನೆ ಸಾಲಿನಲ್ಲಿ ನಾಲ್ಕು ಕೋಟಿ ರೂಪಾಯಿ ಸಾಲ ಮಾಡಬೇಕೆಂದು ಗೊತ್ತುಮಾಡಿದಾರೆ.

****

ಮದರಾಸ್ ಪಟ್ಟಣದೊಳಗೆ ಸಮುದ್ರದ ಕಾಲುವೆಗೆ ಕಟ್ಟಿರುವ ಸೇತುವೆಗಳಲ್ಲಿ ನೇಪಿಯರ್ ಎಂಬ ಸೇತುವೆಯು ತುಂಬಾ ಅಪಾಯಕರವಾಗಿರುವುದರಿಂದ ಅದನ್ನು ಮತ್ತೆ ಹೊಸದಾಗಿ ಕಟ್ಟಿಸುವುದಕ್ಕೆ ೧ ಲಕ್ಷ ೭೦ ಸಾವಿರ ರೂಪಾಯಿ ಅಂದಾಜು ಹಾಕಿದಾರೆ.

****

ರಂಗೂನ್ ಪಟ್ಟಣದಲ್ಲಿರುವ ಬಂಗಾಳಾ ಬ್ಯಾಂಕಿನಲ್ಲಿ ಒಂದು ಸಾವಿರ ರೂಪಾಯಿನ ಬಾಬತು ಹತ್ತು ನೋಟುಗಳು ಕಳುವಾದವಷ್ಟೆ. ಈಗ ಈ ನೋಟಿನ ಕಳುವು ಪತ್ತೆ ಆಗಿದೆ. ದೊಡ್ಡವರು ಸಹ ಇದಕ್ಕೆ ಕೆಲವರು ಸೇರಿರುವಂತೆ ಪ್ರಕಟವಾಗಿದೆ. ಇನ್ನು ಮುಂದೆ ಎಲ್ಲಾ ಬಯಲಾಗುವುದು.

****

ರಂಗೂನ್ ಪಟ್ಟಣದ ಪೋಲೀಸಿನವರು ಐದುಮಂದಿ ಅಪರಾಧಿಗಳನ್ನು ರೈಲಿನಲ್ಲಿ ಕರೆದುಕೊಂಡು ಬರುತ್ತಿರುವಲ್ಲಿ ಅವರು ಪೋಲೀಸಿನವರ ಮೇಲೆ ತಿರುಗಿಬಿದ್ದು ಅವರನ್ನು ಹೊಡೆದು ತಪ್ಪಿಸಿಕೊಂಡು ಹೋದರೆಂದು ತಿಳಿಸಿದೆವಷ್ಟೆ. ಈಚೆಗೆ ಪೋಲೀಸಿನವರು ಅವರನ್ನು ಹುಡುಕಿದ್ದರಲ್ಲಿ ನಾಲ್ವರು ಸಿಕ್ಕಿಬಿದ್ದರು.

****

ಪಿಷಾವರ್ ಪಟ್ಟಣದ ನಡುಪೇಟೆಯಲ್ಲಿ ಸಿಖ್ ಜನರ ದೊಡ್ಡ ಧರ್ಮಶಾಲೆಯೊಂದಿದೆ. ಈ ಧರ್ಮಸ್ಥಳಕ್ಕೆ ಕಳ್ಳರು ಬಿದ್ದು ಅನೇಕ ಪಟ್ಟರೂಪಾಯಿಗಳ ಪಗಡಿಗಳನ್ನೂ ಅನೇಕ ಸಿಖ್ ಮತಗ್ರಂಥಗಳನ್ನೂ ಅಪಹರಿಸಿಕೊಂಡು ಹೋದರು. ಗೋಡೆಗೆ ಕಟ್ಟಿದ್ದ ಸಿಖ್ ಗುರುಗಳ ಅನೇಕ ಚಿತ್ರಗಳನ್ನು ಒಡೆದುಹಾಕಿದಾರೆ.

****

ಬೊಂಬಾಯಿ ಗವರ್ನರವರು ಕಾಠ್ಯವಾಡಕ್ಕೆ ಸೇರಿದ ಗೀರ್ ಎಂಬ ಕಾಡಿನಲ್ಲಿ ಕಳೆದ ವಾರ ಶಿಕಾರಿ ಹೊರಟು, ಎರಡು ಸಿಂಹಗಳನ್ನು ಹೊಡೆದರು. ಅವರ ಸಂಗಡ ಹೋಗಿದ್ದ ಮೇಜರ್ ಕಾರ್ನೆಗಿ ಎಂಬೊಬ್ಬ ಸೈನ್ಯಾಧಿಪತಿಯು ಅದೇ ಕಾಡಿನಲ್ಲಿ ಇನ್ನೊಂದು ಕಡೆ ಶಿಕಾರಿ ಮಾಡುತ್ತಿರುವಲ್ಲಿ ಗಾಯಪಟ್ಟ ಒಂದು ಸಿಂಹವು ಅವರ ಮೇಲೆ ಬಿದ್ದು ಒಂದೇ ಕ್ಷಣದಲ್ಲಿ ಕೊಂದುಬಿಟ್ಟಿತು.

ರಂಗೂನ್ ಪಟ್ಟಣದ ಫ್ರೈರ್ ಬೀದಿಯಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆಯೊಳಗೆ ಬೆಂಕಿ ಹುಟ್ಟಿ ೩–೪ ಮನೆಗಳೂ ಯಂತ್ರಗಳೂ ಸುಟ್ಟು, ಸುಮಾರು ೬೦ ಸಾವಿರ ರೂಪಾಯಿ ನಷ್ಟವಾಗಿದೆ.

✤✤✤✤

ಬರ್ಮಾ ಅಧಿಪತ್ಯಕ್ಕೆ ಸೇರಿದ ಬೆಸ್ಸೀನ್ ಪಟ್ಟಣದಲ್ಲಿ ಕಳೆದ ಭಾನುವಾರ ರಾತ್ರಿ ೭ ಗಂಟೆ ಸಮಯದಲ್ಲಿ ಎರಡಾವರ್ತಿ ಸ್ವಲ್ಪ ತೀಕ್ಷ್ಣವಾಗಿ ಭೂಕಂಪವಾಯಿತು. ಮನೆಗಳೂ ಕಟ್ಟಡಗಳೂ ಗಲಗಲಾ ಎಂದು ಅಲ್ಲಾಡಿದವು. ದೇವರ ದಯದಿಂದ ಅಪಾಯವೇನೂ ಆಗಲಿಲ್ಲ.

✤✤✤✤

ಹಿಂದುಸ್ಥಾನದ ಸೈನ್ಯದಲ್ಲಿ ಸೇರಿದ್ದು ಈಗ ಪೆನ್ಷನ್ ಮೇಲೆ ಕೆಲಸಬಿಟ್ಟಿರುವ ಐದು ಮಂದಿ ಹಿಂದೂ ಮಹಮದಿಯರಿಗೆ ಇಂಡಿಯಾ ಗವರ್ನ್‌ಮೆಂಟಿನವರು ಕಲಾ ವರುಷಕ್ಕೆ ೫೦೦–೬೦೦ ರೂಪಾಯಿ ಉತ್ಪತ್ತಿ ಆಗುವಷ್ಟು ಜಮೀನುಗಳನ್ನು ಮಾನ್ಯವಾಗಿ ಬಿಟ್ಟುಕೊಡಬೇಕೆಂದು ಹುಕುಂ ಮಾಡಿದಾರೆ

✤✤✤✤

ರಂಗೂನ್ ಪಟ್ಟಣದಲ್ಲಿ ಕಳೆದ ವಾರ ಬೆಂಕಿ ಬಿದ್ದು ಸಾಗುವಾನಿಯಿಂದ ಕಟ್ಟಿದ ಹದಿಮೂರು ದೊಡ್ಡ ಮನೆಗಳು ಸುಟ್ಟುಹೋದವು. ಜನರೂ ಸರ್ಕಾರದವರೂ ತುಂಬಾ ಸಾಹಸಪಟ್ಟು ಮೂರು ಗಂಟೆಗಳ ಹೊತ್ತಿನಲ್ಲಿ ಬೆಂಕಿಯನ್ನು ಆರಿಸಿದರು. ಸುಮಾರು ಒಂದುವರೆ ಲಕ್ಷ ರೂಪಾಯಿ ನಷ್ಟವಾಯಿತೆಂದು ತಿಳಿದು ಬಂದಿದೆ.

✤✤✤✤

ಹಿಂದುಗಳು ಒಳಜಾತಿಗಳಲ್ಲೇ ಹೆಣ್ಣು ಕೊಟ್ಟು ತರುವ ಪದ್ಧತಿಗೆ ಬರುವಂತೆ ಏನು ಮಾಡಬೇಕಾಗಿದೆ ಎಂಬೀ ವಿಷಯವನ್ನು ಕುರಿತು ಯಾರಾದರೂ ಸರಿಯಾದ ಉಪನ್ಯಾಸವನ್ನು ಬರೆದು ಕಳಹಿಸಿದಲ್ಲಿ ಅಂಥಾವರಿಗೆ ೫೦ ರೂಪಾಯಿ ಇನಾಂ ಕೊಡುತ್ತೇವೆಂದು ಮದರಾಸ್ ಪಟ್ಟಣದ ಹಿಂದೂ ಸಂಘ ಪರಿಷ್ಕರಣ ಸಮಾಜದ ಸೆಕ್ರೆಟರಿಯವರು ಪ್ರಕಟಿಸಿದಾರೆ.

✤✤✤✤

ದೇಶೀಯ ಕ್ರೈಸ್ತರು ಅಲಹಾಬಾದಿನಲ್ಲಿ ಒಂದು ವಿದ್ಯಾಶಾಲೆಯನ್ನು ತಮ್ಮ ಮತಸ್ಥರಿಗೋಸ್ಕರ ಸ್ಥಾಪಿಸಿಕೊಳ್ಳಬೇಕೆಂದೂ ಅದಕ್ಕೆ ೬ ಲಕ್ಷ ರೂಪಾಯಿ ಬೇಕಾಗಿದೆ ಎಂದೂ ಪ್ರಕಟಿಸಿದಾರೆ. ಈ ಫಂಡಿಗೆ ಹಿಂದುಸ್ಥಾನದಲ್ಲಿರುವ ದೇಶೀಯ ಕ್ರೈಸ್ತರು ಒಂದು ತಿಂಗಳ ಸಂಬಳವನ್ನು ಕೊಟ್ಟರೆ ವಿದ್ಯಾಶಾಲೆಯನ್ನು ಸ್ಥಾಪಿಸಬಹುದೆಂದು ತಿಳಿಸಿ, ಚಂದಾ ಕೂಡಿಸುತ್ತಿರುವರು

✤✤✤✤

ಅಸಾಂ ಪ್ರಾಂತ್ಯದ ಟೀ ತೋಟಗಳಲ್ಲಿ ಕೂಲಿ ಮಾಡುವ ಜನರಿಗೆ ನಾನಾ ಭೇದಿ ಉಪದ್ರ ತಗಲದಂತೆ ಸರ್ಕಾರದವರು ಒಂದು ತರಹಾ ಹಾಲನ್ನು ಕೊಡುಬೂ ಹಾಕುತ್ತಿದ್ದರು ಇದರಿಂದ ಕೂಲಿಕಾರರು ಕೆಲಸಕ್ಕೆ ಹೋಗದೆ ಪ್ಲಾಂಟರುಗಳಿಗೆ ತುಂಬಾ ಕಷ್ಟ ನಷ್ಟಗಳು ಸಂಭವಿಸುತ್ತಿದ್ದವು ಗವರ್ನ್‌ಮೆಂಟಿನವರು ಇನ್ನು ಮುಂದೆ ಕೊಡಬಾರದೆಂದು ಹುಕುಂ ಕೊಟ್ಟಿದಾರೆ

✤✤✤✤

ಹಿಂದಿನ ವಾರ ಪ್ಲೇಗು ಉಪದ್ರದಲ್ಲಿ ಹಿಂದುಸ್ಥಾನದಲ್ಲಿ ೩೩,೧೪೯ ಜನರು ತೀರಿಹೋದರು ಕಳೆದ ವಾರ ೪೫,೫೪೧ ಜನರು ಮೃತಪಟ್ಟರು ಮುಖ್ಯ ಸಂಖ್ಯೆಗಳ್ಯಾವವೆಂದರೆ—ವಾಯವ್ಯ ಪ್ರಾಂತ್ಯಗಳು ೧೯,೯೩೮, ಪಂಜಾಬ್ ೧೧,೬೮೧, ಬಂಗಾಳಾ ೫,೯೨೮, ಬೊಂಬಾಯಿ ಡಿಸ್ಟ್ರಿಕ್ಟುಗಳು ೨,೭೫೬, ಬೊಂಬಾಯಿ ಪಟ್ಟಣ ೭೮೧, ಕಲ್ಕತ್ತೆ ೩೧೫, ಪಟ್ನ ೯೧, ಈ ಪ್ರಕಾರ ಮರಣಗಳಾಗಿವೆ

✤✤✤✤

ಸಿಂಧು ದೇಶದ ಬಳಿ ಇರುವ ಡಿರಾ ಇಸ್ಮೈಲ್ ಖಾನ್ ಪಟ್ಟಣದಲ್ಲಿ ಕೆಲವು ಕಾಲದಿಂದ ಬ್ಯಾರಿಸ್ಟರಾಗಿದ್ದ ಅಬ್ದುಲ್ ಹಕೀಂ ಖಾನ್ ಯವರನ್ನು ಅವರು ಕೋರ್ಟಿನಿಂದ ವಾಪಸು ಬರುತ್ತಿರುವಾಗ್ಗೆ ಒಬ್ಬ ಪಠಾಣ್ಯನು ದಾರಿಯಲ್ಲಿ ಹಿಡಿದು ಕತ್ತರಿಸಿ ಹಾಕಿದನು ಹಗಲು ಹೊತ್ತಿನಲ್ಲೇ ಈ ಕೊಲೆಯು ಕೋರ್ಟಿನ ಬಳಿ ನಡೆದಿರುವುದು. ಆದರೆ ಕೊಲೆಗಾರನನ್ನು ಪೊಲೀಸಿನವರು ಹಿಡಿದು ಬೈದಿನಲ್ಲಿ ಹಾಕಿದಾರೆ

✤✤✤✤

ಕಲ್ಕತ್ತೆಯ ಹತ್ತಿರ ರಾಂಚಿ ಪಟ್ಟಣದಲ್ಲಿ ಮಾದರಿ (ಮಾಡಲ್) ಕಾಲೆಜ್ಯೇಟ್ ವಿದ್ಯಾಶಾಲೆಯನ್ನು ಸ್ಥಾಪಿಸುವುದಕ್ಕೆ ಫಂಡನ್ನು ಕೂಡಿಸುತ್ತಿದಾರೆ. ಢಕ್ಕಾ ಪಟ್ಟಣದ ನವಾಬ್ ಖಾಜಾ ಸಾಲಿಮುಲ್ಲ ಬಹದೂರ್‌ಯವರು ಈ ಫಂಡಿಗೆ ೧೦,೦೦೦ ರೂಪಾಯನ್ನೂ ಅಲೀಂಗಂಜಿನ ರಾಯ ಸೇತು ಚಂದ್ ನೇತಾಯಿ ಬಹದೂರ್‌ಯವರು ೫,೦೦೦ ರೂಪಾಯನ್ನೂ ಚಂದಾ ಕೊಟ್ಟರು ಈಗ ಈ ಫಂಡಿನಲ್ಲಿ ೧,೬೧,೯೦೪ ರೂಪಾಯಿ ಕೂಡಿದ ಹಾಗಾಯಿತು.

✤✤✤✤

ಕಾಬೂಲ್ ನಗರದಲ್ಲಿ ಅಮೀರರವರು ಒಂದು ದೊಡ್ಡ ಚರ್ಮದ ಕಾರ್ಖಾನೆಯನ್ನಿಟ್ಟಿದಾರೆ. ಇದಕ್ಕೆ ಮಿ॥ ಫಾರ್ಟ್ರ್ ಎಂಬಾತನು ಮುಖ್ಯ ಅಧಿಕಾರಿಯಾಗಿರುವನು ಈತನು ಆ ಕಾರ್ಖಾನೆಗೆ ಬೇಕಾಗಿದ್ದ ಕೆಲವು ಯಂತ್ರ ಮೊದಲಾದ ಸಾಮಗ್ರಿಗಳನ್ನು ವಿಲಾಯಿತಿಯಿಂದ ತಗಿಸಿಕೊಂಡು, ಕಳೆದ ವಾರ ಹಿಂದುಸ್ಥಾನಕ್ಕೆ ಬಂದಿಳಿದನು. ಈ ರಾಷ್ಟ್ರದಿಂದ ಚರ್ಮಗಳನ್ನು ಬಹಳವಾಗಿ ಕೊಂಡುಕೊಂಡು ಹೋಗುವುದಕ್ಕೆ ಏರ್ಪಾಡು ಮಾಡುತ್ತಿದಾನೆಂದು ಪ್ರಕಟವಾಗಿದೆ.

✤✤✤✤

ಈ ವರುಷ ಹಿಂದುಸ್ಥಾನದ ಸಾರ್ವಜನಿಕ ಸಮಾಜವು (ನ್ಯಾಷನಲ್ ಕಾಂಗ್ರೆಸ್) ಡಿಸೆಂಬರ್ ತಿಂಗಳಲ್ಲಿ ಕಾಶೀ ಪಟ್ಟಣದಲ್ಲಿ ನಡೆಯುತ್ತದಷ್ಟೆ. ಕಳೆದ ವಾರ ಆ ಪಟ್ಟಣದಲ್ಲಿ ದೇಶೀಯ ದೊಡ್ಡ ಮನುಷ್ಯರು ಸಭೆಸೇರಿ, ಬೇಕಾದ ಏರ್ಪಾಡುಗಳನ್ನು ಈಗಿನಿಂದಲೂ ನಡಸುವಂತೆ ಗೊತ್ತುಮಾಡಿದ್ದಲ್ಲದೆ ೫೦೦ ಮಂದಿ ಪ್ರತಿನಿಧಿಗಳನ್ನು ಚುನಾಯಿಸಿದರು. ವಾಯುವ್ಯ ಪ್ರಾಂತ್ಯದಿಂದ ಪಂಡಿತ ವಿಷ್ಣು ನಾರಾಯಣಧರ ಎಂಬಾತನನ್ನು ವಿಲಾಯತಿಗೆ ಪ್ರತಿನಿಧಿಯಾಗಿ ಕಳುಹಿಸಬೇಕೆಂದು ಗೊತ್ತುಮಾಡಿದರು.

✤✤✤✤

ಹಿಂದುಸ್ಥಾನದಲ್ಲಿ ಈಗ ತಾಂಬ್ರದ ನಾಣ್ಯಗಳು ಚಲಾವಣೆಯಲ್ಲಿವೆಯಷ್ಟೆ ಇವನ್ನೆಲ್ಲಾ ತೆಗೆದುಹಾಕಿ ಕಂಚಿನ ನಾಣ್ಯಗಳನ್ನು ಚಲಾವಣೆಗೆ ತರಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಶಿಫಾರಸು ಮಾಡಿದ್ದರು. ಈ ಸಲಹೆಯನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿರುತ್ತಾರೆ ಇದಲ್ಲದೆ ನಿಕ್ಕಲ್ ಎಂಬ ಲೋಹದಲ್ಲಿ ಒಂದಾಣೆಯ ನಾಣ್ಯವನ್ನು ಹೊಸದಾಗಿ ಅಚ್ಚುಹಾಕಿ ಜಾರಿಗೆ ತರಬೇಕೆಂದು ಚರ್ಚನಡೆದಿದೆ. ಇದನ್ನೂ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದಾರೆ. ಇವೆಲ್ಲಾ ಈ ವರುಷದ ಅಂತ್ಯದೊಳಗಾಗಿ ಚಲಾವಣೆಗೆ ಬಂದಾವೆಂದು ನಿರೀಕ್ಷಿಸಬಹುದಾಗಿದೆ.

✤✤✤✤

ಅಫ್ಘಾನಿಸ್ಥಾನದ ಅಮೀರರ ಕುಮಾರರಾದ ಸರ್ದಾರ್ ಇನಾಯತ್ ಉಲ್ಲಾ ಖಾನರವರು ಹಿಂದುಸ್ಥಾನದಲ್ಲಿ ನೋಡಿಕೊಂಡು ಹೋದುದನ್ನೆಲ್ಲಾ ತಮ್ಮ ತಂದೆಗೆ ಅರಿಕೆಮಾಡಿದರು. ಇಂಗ್ಲೀಷರ ಸೈನ್ಯದ ಪರಾಕ್ರಮವನ್ನೂ ಅವರು ತಲಪೇತು ಆಗುತ್ತಿರುವುದನ್ನೂ ಕೇಳಿ ಅಮೀರರು ತುಂಬಾ ಸಂತೋಷಪಟ್ಟು, ಅಫ್ಘಾನಿಸ್ಥಾನದ ಸೈನಿಕರನ್ನೂ ಚೆನ್ನಾಗಿ ತಲಪೇತು ಮಾಡಬೇಕೆಂಬ ಅಭಿಲಾಷೆಯಿಂದ ರಾಜಧಾನಿಯಾದ ಕಾಬೂಲ್ ನಗರದಲ್ಲಿ ಒಂದು ವಿದ್ಯಾಶಾಲೆಯನ್ನು ಸೈನಿಕರಿಗಾಗಿ ಏರ್ಪಾಡು ಮಾಡಿದಾರೆ ಅವರಿಗೆ ಮೊದಲು ವಿದ್ಯೆ ಕಲಿಸಿ, ನಂತರ ಯುದ್ಧವಿಚಾರವನ್ನು ಹೇಳಿಕೊಡಬೇಕೆಂದು ಹುಕುಂ ಕೊಟ್ಟಿದಾರೆ

✤✤✤✤

ಬೊಂಬಾಯಿ ಪಟ್ಟಣದಲ್ಲಿ ಹೋದ ವರುಷ ಮೊಹರಂ ಹಬ್ಬದ ಕಡೇ ದಿನ ಸುನ್ನಿಗಳಿಗೂ ಷಿಯಾಗಳಿಗೂ ಮನಸ್ತಾಪ ಉಂಟಾಗಿ ಜಗಳವೂ ನಡೆಯಿತು. ಪೊಲೀಸಿನವರು ತುಂಬಾ ಉಸ್ತುವಾರಿ ಮಾಡಿದರು. ಎರಡು ಗುಂಪಿನವರೂ ತಾಬೂತುಗಳನ್ನು ಮೆರವಣಿಗೆ ಮಾಡಲಿಲ್ಲ. ಆದರೂ ಸಾಯಂಕಾಲ ಮಾರಾಮಾರಿ ನಡೆಯುವುದೆಂದು ಕಂಡು ಬಂದದ್ದರಿಂದ ಸರ್ಕಾರದವರು ಮಿಲಿಟರಿ ಶಿಪಾಯಿಗಳನ್ನು ಕರೆಸಿ ಬೀದಿ ಬೀದಿಗಳಲ್ಲಿ ನಿಲ್ಲಿಸಿದರು ಈ ವರುಷವೂ ಹಾಗೆಯೇ ಎರಡು ಗುಂಪಿನವರಿಗೂ ಕಲಹವಾಗುತ್ತದೆಂದು ಹೆದರಿ ಪೊಲೀಸಿನವರು ಮೊದಲೇ ಎಲ್ಲಾ [illegible] ಏರ್ಪಾಡು ಮಾಡಿದ್ದರು ಆದಕಾರಣ ಈ ಸಲ [illegible] ಇಲ್ಲದೆ ಸರಾಗವಾಗಿ ನೆರವೇರಿತು

✤✤✤✤

ಮದರಾಸ್ ಪಟ್ಟಣದ ರಾಯಪುರಂ ಎಂಬ ಭಾಗದಲ್ಲಿ ಒಬ್ಬ ಪ್ಲೇಗ್ ಇನ್ಸ್‌ಪೆಕ್ಟರು ಸೂರ್ಯನಾರಾಯಣ ಶೆಟ್ಟಿ ಬೀದಿಯಲ್ಲಿ ಇಲಿಗಳನ್ನು ಕೊಲ್ಲುವುದಕ್ಕೋಸ್ಕರ ಮ್ಯುನಿಸಿಪಾಲಿಟಿಯವರ ಅಪ್ಪಣೆ ಪ್ರಕಾರ ವಿಷ ಹಾಕಿದ್ದ ನಾನ್ ರೊಟ್ಟಿಯ ಚೂರುಗಳನ್ನು ಎಸೆಯುತ್ತಿದ್ದನು. ಅಲ್ಲಿನ ಜನರು ನೋಡಿ ಅದೇನೆಂದು ಅವನನ್ನು ಕೇಳಿದರು: ಅವನು ಸರಿಯಾದ ಉತ್ತರ ಕೊಟ್ಟು ಸಮಾಧಾನಪಡಿಸದೆ ಆ ಬೀದಿಯನ್ನೇ ಬಿಟ್ಟು ಓಡಿಹೋದನು ಜನರು ಗಾಬರಿಬಿದ್ದು ಕೋಪಿಸಿಕೊಂಡು ಅವನನ್ನು ಹಿಡಿದು ಹೊಡೆದರು. ಪ್ಲೇಗ್ ಇಲಾಖೆಯವರನ್ನು ತಮ್ಮ ಬೀದಿಗೆ ಬಾರದಂತೆ ಅಪ್ಪಣೆ ಮಾಡಬೇಕೆಂದು ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡರು ಮ್ಯುನಿಸಿಪಾಲಿಟಿಯವರು ಆ ಇನ್ಸ್‌ಪೆಕ್ಟರನ್ನು ಕರೆಸಿ ತಕ್ಕಹಾಗೆ ದಂಡಿಸಿ, ಜನರ ಗಾಬರಿಯನ್ನು ಪರಿಹರಿಸಿರುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಪೊಲೀಸ್ ಸೂಪರಿಂಟೆಂಡೆಂಟ್ ಮಿ॥ ನಗರ್ ಸುಬ್ಬರಾಯರಿಗೆ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪೊಲೀಸ್ ಸೂಪರಿಂಟೆಂಡೆಂಟ್ ಮಿ॥ ಎಲ್ ಕೃಷ್ಣರಾಯರು ರಜಾದಿಂದ ಬಂದ ಮೇಲೆ ಮಿ॥ ಎನ್. ಸುಬ್ಬರಾಯರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಅಸಿಸ್ಟೆಂಟ್ ಸರ್ಜನ್ ಮಿ॥ ಬಿ ಡಿ. ರಾಘವೇಂದ್ರರಾಯರಿಗೆ ಮಾರ್ಚಿ ೧೩ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೨೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರ ಮಹಾರಾಣಿಯವರ ಕಾಲೆಜ್ ಲೇಡಿ ಸೂಪರಿಂಟೆಂಡೆಂಟ್ ಮಿಸ್ ೭. ಎಲ್. ಪಲೆಕಾರ್ಡ್‌ಯವರಿಗೆ ಜನವರಿ ೧೦ ರಿಂದ ಒಂದು ತಿಂಗಳು ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಪ್ರೊಬೇಷನರಿ ಅ॥ ಕಮಿಷನರ್ ಮಿ॥ ನರಸಿಂಗರಾವ್ ಪೂರ್ಣಯ್ಯನವರು ಜನವರಿ ತಾರೀಖು ೨೭ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ

ಎಕ್ಸ್‌ಟ್ರಾ ಇಲಾಖೆ ಆಕ್ಟಿಂಗ್ ಎಕ್ಸ್‌ಟ್ರಾ ಅ॥ ಕಮಿಷನರ್ ಮಿ॥ ಕೆ ಶ್ರೀಕಂಠಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾಕೊಟ್ಟಿದೆ

ಗವರ್ನ್‌ಮೆಂಟ್ ಡಿಪ್ಟಿ ಸೆಕ್ರೆಟರಿ ಮಿ॥ ಕೆ. ಎಸ್. ಚಂದ್ರಶೇಖರೈಯರವರು ಮಾರ್ಚಿ ೧೬ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

೭೪ ಹುಂಜನಗೂಡು ತಾಲ್ಲೂಕ್ ಅಮಲ್ದಾರ್ ಮಿ॥ ಎ. ಕೃಷ್ಣ ಮೈಯಂಗಾರ್ರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಅವರ ಇಷ್ಟಪ್ರಕಾರ ರದ್ದುಮಾಡಿದೆ.

ಅ॥ ಕಮಿಷನರ್ ಮಿ॥ ಎ ಸುಬ್ರಹ್ಮಣ್ಯ ಐಯರಿಗೆ ಕೊಟ್ಟಿದ್ದ ಎರಡುವರೆ ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಮೂರು ದಿ ಜಾಸ್ತಿ ಮಾಡಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರ್ ಮಿ॥ ಎಂ. ಬಿ ವಿಶ್ವನಾಥರಾಯರಿಗೆ ಒಂದು ತಿಂಗಳು ೬ ದಿನಗಳ ಪ್ರಿವಿಲೆಜ್ ರಜವನ್ನೂ ಅನಂತರ ೪ ತಿಂಗಳು ೨೪ ದಿನಗಳ ಬೇರೇ ರಜವನ್ನು ಕೊಟ್ಟಿದೆ.

ಇನ್ಸ್‌ಪೆಕ್ಟರ್ ಗೋಪಾಲರಾಯರು ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಕೆಲಸ ನೋಡತಕ್ಕದ್ದು.

ಅಮಲ್ದಾರ್ ಮಿ॥ ಸುಬ್ಬರಾಯಲು ನಾಯ್ಡುಯವರನ್ನು ಮಂಗಲದ ತಾಲ್ಲೂಕಿಗೆ ವರ್ಗಮಾಡಿದೆ. ಶಿವಮೊಗ್ಗೆಯಲ್ಲಿ ಛಾರ್ಜು ಕೊಟ್ಟ ನಂತರ ಹೊಸ ಕೆಲಸದ ಮೇಲೆ ದಾಖಲಾಗತಕ್ಕದ್ದು.

ಎಕ್ಸ್‌ಟ್ರಾ ಅ॥ ಕಮಿಷನರ್ ಮಿ॥ ಸಿ. ನಾರಾಯಣರಾಯ ಗುಬ್ಬಿ ಸರ್ಕಲಿಗೆ ಸೇರಿದ ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪ್ಟೂರು ತುರುವೆಕೆರೆ, ಈ ತಾಲ್ಲೂಕುಗಳ ಛಾರ್ಜಿನಲ್ಲಿರತಕ್ಕದ್ದು.

ಎಕ್ಸಿಕ್ಯೂಟಿವ್ ಇಂಜನಿಯರ್ ಮಿ॥ ವಿ. ರಂಗಸ್ವಾಮಿ ಐಯಂಗಾರ್ರಿಗೆ ಮಾರ್ಚಿ ತಾರೀಖು ೧೧ರಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಸ್ಟೇಟ್ ಟ್ರೂಪ್ಸ್ ಚೀಫ್ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ ದೇಸರಾಜೇ ಅರಸಿನವರು ತಾರೀಖು ೧ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ

ತಾಲ್ಲೂಕು ವರ್ತಮಾನಗಳು.

ಪಾವಗಡ.—ಈ ಜಿಲ್ಲೆಗೆ ಪ್ಲೇಗು ಪ್ರಾರಂಭವಾಗಿ ಎರಡು ತಿಂಗಳುಗಳಾಗುತ್ತಾ ಬಂದಿದೆ. ಅಲ್ಲಲ್ಲಿ ಹಳ್ಳಿಗಳಲ್ಲಿ ೯–೧೦ ದಿವಸಗಳಿಗೊಂದೊಂದು ಪ್ಲೇಗು ಕೇಸುಗಳಾಗುತ್ತಾ ಇತ್ತು ಗ್ಯ ೧೫ ದಿವಸಗಳಿಂದಲೂ ಭಗವಂತನ ಕರುಣದಿಂದ ರೋಗದ ಗಲಾಟೆ ಯೇನೂ ಇಲ್ಲ—ಕಾಶೀ ಮದಾರಾವರವರು ಬಂಧುವಿನ ಮಂತಲಿಯವರೊಡನೊಂದು ತಾ ೧೬ ನೆ ಸಾಧ್ಯಾಶ್ನ ಒಂದು ಗ ಟಿಗೆ, ಶಿವಶಸಮುದ್ರಕ್ಕೆ ಹೋಗಿ ಬರುವ ಉದ್ದೇಶ್ಯ ದಯವಾ ದ್ದರು ತಾಲ್ಲೂಕು ಕಛೇರಿಯ ಬಳಿ ರೋಡಿನಲ್ಲಿ ಅಮ ದಾರ್ರವರು ಸಬ್ ರಿಜಿಸ್ಟ್ರಾರವರು ಆಸ್ಪತ್ರೆ ಡಾಕ್ಟರವರೇ ಮೊದ ದ ಕಛೇರಿ ನೌಕರ ಮಾನೆಯರೆಲ್ಲರೂ ಕಾದಿದ್ದು ಎದುರುಗೊ ಡು, ಹಾರಾ ತುರಾಯಿ ನಜರು ಒಪ್ಪಿಸಿದರು ಇವರನ್ನು ನೋ ಚ್ಛಿಸಿ ಸುತ್ತಮು ಲಿನ ಗ್ರಾಮದವರು ರಸ್ತೆಯ ಇಕ್ಕಡೆಗಳ ಕಿಕ್ಕಿರಿಯುವ ಹಾಗೆ ನೆರೆದಿದ್ದರು. ನಮ್ಮ ಅಮಲ್‌ದಾರ್ರವರು ರಿಗಾಗಿ ಮಾಡಿದ್ದ ಏರ್ಪಾಡು ಸರ್ವಸಮರ್ಪಕವಾಗಿತ್ತು —ಈ ಲ್ಲೂಕಿನಲ್ಲಿ ಅಲ್ಲಲ್ಲಿ ಅಲ ಸ್ವಲ್ಪ ಮಳೆ ನಡುತ್ತಾ ಇದೆ. ಕೆ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯನ್ನು ಬಾಯ ಕೇಳಲು ಅಸಾಧ್ಯವಾಗಿರುತ್ತೆ ನಮ್ಮ ಅಮಲ್‌ದಾರ್ರವರು ನೀರಿ ತೊಂದರೆ ಇರುವ ಕಡೆಗಳಿಗೆಲ್ಲಾ ದಯಮಾಡಿಸಿ ನೋಡಿ, ಪ್ರಜೆಗ ಸೌಕರ್ಯಕ್ಕಾಗಿ ಸರ್ಕಾರದಿಂದ ಒಂದೊಂದು ಬಲ ವಸತಿ ಬಾ ಸದೆ ಇರಲಾರರೆಂದು ನಂಬಿರುತ್ತೇನೆ ಬಿಸಲಿನ ತಾಪವಾದರೆ ಸಹಿಸಲಸಾಧ್ಯವಾಗಿರುತ್ತೆ [ಈ ಬಾತ್ಮಿದಾರರು ಬರೆದಿರುವ ನ್ನೊಂದು ವಿಷಯವನ್ನು ಪ್ರಕಟಿಸಲಾರೆವು —ಎಡಿ.]

ಕುಮಿಸಾಪೇಟೆ —ವಿಶೇಷ ಮಹಮ್ಮದೀಯರಿಂದ ವ್ಯಾಪ್ತವಾದ ಈ ಸ್ಥಳಕ್ಕೆ ಪ್ಲೇಗ್ ಪ್ರಾಪ್ತವಾಗಿ ಬಹಳ ಜನ ಮೃತರ ಇಲ್ಲಿನ ಡೆ॥ ಅಮಲ್‌ದಾರ್ ಮಿ॥ ಅನಂತರಾಮೈಯಂಗಾರು ದಯಾಳುಗಳಾದ್ದರಿಂದ ಪ್ರಜೆಗಳಿಗೆ ಯಾವ ವಿಧವಾದ ತೊಂದರೆ ಯೂ ಆಗದಂತೆ ತಕ್ಕ ಉಪಾಯಗಳಿಂದಲೂ ಸಹನದಿಂದಲೂ ಸರ ಪ್ರೀತಿಯನ್ನು ಸಂಪಾದಿಸಿದುದು ಸ್ತೋತ್ರಾರ್ಹವೇ ಹೀಗೆ ಮಹಮ್ಮದೀಯರು ಪ್ಲೇಗಿನ ದುಃಖಕ್ಕೆ ಈಡಾಗಿದ್ದರು ಊರಿಗೆ ಬಂದ ನಂತರ ಪ್ಲೇಗಿನ ಉಲ್ಬಣವು ನಿಂತಿತು ಮೊಹರಂ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಮಾಡಲು ಸಹಾಯ ದ್ದರಿಂದ ಈ ಹಬ್ಬದ ಸಂತೋಷದಲ್ಲಿ ಆ ಪ್ಲೇಗಿನ ದುಃಖವ ಮರೆತರೆಂದೇ ಹೇಳಬಹುದು. ಆದರೆ ಈ ಮೊಹರಂ ಹಬ್ಬ ದೊಂಬಿಗಳೂ ಕಲಹಗಳೂ ಸುತರಾಂ ನಿಂತುಹೋಗಿ ಜನ ತೆಯೂ ಪ್ರಜಾರಂಜನೆಯೂ ಉಂಟಾದುದು ಈ ಅಮಲ್ದಾರರಿ ಲೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಮಹ ದೀಯರಲ್ಲಿಯೇ ಇಷ್ಟು ಪ್ರೀತಿಯನ್ನು ಸಂಪಾದಿಸಿರುವ ಈ ಅ ಲ್ದಾರರು ಇತರರ ಪ್ರೀತಿಯನ್ನು ಎಷ್ಟು ಮಟ್ಟಿಗೆ ಸಂಪಾದಿಸಿರ ರೆಂಬುವುದು ಅವರ ಗುಣಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತ ಹವೆ ಬಹಳ ಶಖೆಯಾಗಿದೆ. ಪ್ರಜಾ ಕ್ಷೇಮ ಚೆನ್ನಾಗಿದೆ. ಹಬ್ಬದ ಕಾಲದಲ್ಲಿ ಜನರು ಬಹಳ ವಿನೋದಗಳನ್ನು ತೋಷ ಪಟ್ಟರು. ನಿಜವಾದ ದೇವರ ಭಕ್ತಿಯೂ ಸದ್ಗುಣ ಸನ್ಮಾರ್ಗವೂ ಮರ್ಯಾದೆಯೂ ಅತ್ಯುತ್ತಮವಾದ ಬುದ್ಧಿಯ ರಿಗೆ ಬಂದರೆ ಆಗ ವ್ಯರ್ಥ ಕೆಲಸಗಳೆಲ್ಲಾ ತೊಲಗುವವು —ಅ ಯಲ್ಲಿ ಅನೇಕಾನೇಕರು ಔಷಧ ಪಡೆದು, ಗುಣವಾಗುತ್ತಿ ಪೊಲೀಸ್ ಇನ್ಸ್‌ಪೆಕ್ಟರಿಗೆ ಮಾಗಡಿಗೆ ವರ್ಗವಾಗಿದೆಯಂತೆ. ಮಂಗಲದಲ್ಲಿ ಒಂದು ಖೂನಿ ನಡೆದು ನಪ್ಪಗೆ ಕಮಿಟ್ ಆಗಿ ದೆಟ್ಟಿ ಕಮಿಷನರ್ ಸಾಹೇಬರವರೂ ಸಬ್ ಡಿವಿಜನ್ ಅಧಿ ಬಹು ಮುತುವರ್ಜಿಯಿಂದ ಪ್ರಜಾಪಾಲನೆ ಮಾಡುವಂತೆ

...ರೆ॥ ವೈದ್ಯನಾಥೈಯನವರ ಮನೆಯಲ್ಲಿ ನಡೆದ ಭಾರೀ ...ದ ಕೊಠಡಿಯಲ್ಲಿ ಕೆಲವು ಮಾಲುಗಳು ಪತ್ತೆಯಾಗಿವೆ ... ಪ್ಲೇಗ್ ಬಾಧೆ ನಿಂತಿದೆ. ಸ್ಕೂಲುಗಳೆಲ್ಲಾ ತೆರೆಯಲ್ಪಟ್ಟು ... ಪ್ರಾರಂಭಿಸಿದೆ. ಧಾರಣೆಯಾಕಿ ಭಿಡಾವಾಗಿದೆ.

ಹೊಳೆನರಸೀಪುರ.—ಈಗಲೇ ಬಿಸಲಿನ ತಾಪವು ಸಹಿಸಕೂಡ ...ದಿರುವದರಿಂದ ಮುಂದೆ ಎಷ್ಟು ಹೆಚ್ಚಾಗುವದೋ ಎಂದು ಜನ ...ರು ಭಯಭ್ರಾಂತರಾಗಿದ್ದಾರೆ —ಪ್ಲೇಗಿನ ಭೀತಿಯು ಊರಲ್ಲಿ ಇಲ್ಲ ...ದ್ದರಿಂದ ಮೊಹರಂ ಹಬ್ಬವು ಈ ಊರಿಗೆ ತಕ್ಕಷ್ಟು ವಿಜೃಂಭಣೆ ...ದ ನಡೆಯಿತು. ಆದ್ದೈ ಈ ಊರಿನ ಹುಚ್ಚರಲ್ಲಿ ಒಬ್ಬನಾದ ...ಮಲನೆಂಬವನಿಗೆ ಕೆಲವು ಮುಸಲ್ಮಾನರು ಹುಲಿ ವೇಷ ಹಾಕಿ ...ರು. ಇಂಥಾ ಅಪೂರ್ವವಾದ ವೇಷವನ್ನು ಈ ಊರಿನವರು ...ನೋಡಿರಲಿಲ್ಲ. ಬಹು ಜನರ ಸಮೂಹವು ಈ ಹುಚ್ಚನ ...ಷವನ್ನು ನೋಡಿ ಮಹಾನಂದಪಟ್ಟರು. ಅಲ್ಲದೆ ಅಂಗಡಿ ...ಕಾರರಲ್ಲಿ ಅನೇಕರು ಕೊಟ್ಟ ಮಡ್ಡಿಗೆ ಈ ಹುಚ್ಚನಿಗೆ ಒಂ ...ಕಂಬಳಿ, ಒಂದು ಬಟ್ಟೆ, ಒಂದು ಚಡ್ಡಿ ಕೊಡಿಸಿದರು. ಆ ...ಅವನಿಗೆ ಸಿಕ್ಕಿದ ಬಾಳೇ ಹಣ್ಣುಗಳಿಂದ ಮೂರು ದಿನಗಳು ...ನಿಗೆ ಅನ್ನ ಬೇಕಾಗಲಿಲ್ಲ —ತಾ॥ ೨೭ನೇ ಮಂಗಳವಾರ ಹಾ ...ಂದ ಧನ ಶಾಸ್ತ್ರಿಗಳಾದ ನ್ಯೂಹಾಮ್ ಸಾಹೇಬರೂ ಅವರ ...ರಾನಿಯವರೂ ಈ ಊರಿನ ನರಸಿಂಹ ಸ್ವಾಮಿ ಜಾತ್ರೆಗೆ ...ರ್ಮ ಕೆಲಸಕ್ಕಾಗಿ ಬಂದಿದ್ದರು. ಆ ದಿನ ಬೆಳಗ್ಗೆ ೧೦ ಗಂಟೆ ...ಲ್ಲಿ ಪೋಸ್ಟ್ ಆಫೀಸ್ ಮುಂಭಾಗದಲ್ಲಿ ಒಂದು ದಿವ್ಯವಾದ ...ಖ್ಯಾನವನ್ನು ಮಾಡಿದರು. ಅದನ್ನು ಕೇಳಿದ ಜನಗಳು ಸಂ ...ತೋಷದಿಂದ ಒಪ್ಪಿಕೊಂಡು, ಮೆ॥ ಸಾಹೇಬರಿಗೆ ವಂದನೆ ಸಲ್ಲಿಸಿ ... ನಂತರ ಧೊರೆ ಧೊರೆಸಾನಿಯವರು ಇಲ್ಲಿನ ಕ್ರೈಸ್ತ ಮಂ ...ಡಲದ ಮನೆಗಳಿಗೆ ಬಂದು, ಅವರ ಯೋಗಕ್ಷೇಮಗಳನ್ನು ...ವಿಚಾರಿಸಿಕೊಂಡು, ಮುಸಾಫರೀ ಬಂಗ್ಲೆಯನ್ನು ಕುರಿತು ತೆರಳಿ ... ಸಾಯಂಕಾಲ ೪ ಗಂಟೆಗೆ ಕೋಟೆಗೆ ಬಂದು, ಜಾತ್ರೆಯ ...ವನ್ನು ನೋಡಿ, ಮಿಷನ್ ಗರಲ್ ಸ್ಕೂಲಿನ ವಿದ್ಯಾರ್ಥಿನಿಯರನ್ನು ...ಕ್ಷಿಸಿ, ೫ ಗಂಟೆಗೆ ಹೊಲಗೇರಿ ಸ್ಕೂಲಿಗೆ ಹೋಗಿ, ಅಲ್ಲಿನ ...ರ್ ವಿದ್ಯಾರ್ಥಿಗಳು ಹೇಳಿದ ಹಾಡುಗಳನ್ನು ಕೇಳಿ ತುಂಬಾ ...ತೋಷಪಟ್ಟು, ಆ ಜನಗಳಿಗೆ ಕೇಳತಕ್ಕ ಬುದ್ಧಿವಾದಗಳನ್ನು ...ಪ್ರೀತಿಪೂರ್ವಕವಾಗಿ ಹೇಳಿ, ಸುಮಾರು ೬ ಗಂಟೆಗೆ ಹಾಸ ...ನವನ್ನು ಕುರಿತು ತೆರಳಿದರು.—ಇಲ್ಲಿನ ಪೊಲೀಸ್ ಇನ್ಸ್ಪೆಕ್ಟರವ ...ರಿಗೆ ವರ್ಗವಾಯಿತು. ಇವರು ಬಹು ಶಕ್ತಿಶಾಲಿಗಳೂ ಜನಗಳ ...ಪ್ರೀತಿಗೆ ಪಾತ್ರರೂ ಆಗಿದ್ದರು ಈಗ ಹೊಸದಾಗಿ ಬಂದಿರುವ ಇನ್ ...ಸ್ಪೆಕ್ಟರೂ ಹಾಗೇ ಈ ಊರಿನ ಜನಗಳ ಪ್ರೀತಿಗೆ ಪಾತ್ರರಾಗುವರೆಂ ...ಕಾಣುತ್ತೆ.—ಈ ಟೌನಿನಲ್ಲಿಯೂ ಸಂತೆಗಳಲ್ಲಿಯೂ ಹೊಲಗೇರಿ ...ಯೂ ಮಾದಿಗರ ಹಟ್ಟಿಯಲ್ಲಿಯೂ ಜೂಜಾಟವು ಬಹಳವಾಗಿ ...ಯುತ್ತದೆ. ಅನೇಕ ಪೊಲೀಸಿನವರು ನೋಡಿಯೂ ನೋಡದವ ...ಹಾಗೆ ಸುಮ್ಮನಾಗುತ್ತಾರೆ ಆದ್ದರಿಂದ ನಮ್ಮ ... ಇನ್ಸ್ಪೆಕ್ಟರ ...ಅಮಲ್ದಾರರೂ ಇದಕ್ಕೆ ನಿಗಾ ಕೊಡುವರೆಂದು ನಂಬುತ್ತೇ ...ನಮ್ಮ ಪೋಸ್ಟ್ ಮಾಸ್ಟರು ಜನಗಳ ಪ್ರಯೋಜನಕ್ಕಾಗಿ ಕೋ ...ರ್ಟ್ ಫೀ, ಛಾಪಾಕಾಗದಗಳನ್ನು ವಿಕರಿಮಾಡುತ್ತಾರೆ. ಇದರಿಂದ ...ಗಳಿಗೆ ಯಾವ ಕಾಲದಲ್ಲಾದರೂ ಕೊಂಡುಕೊಳ್ಳಲು ಅನುಕೂ ...ವಾಗಿರುತ್ತದೆ.

ಕೊಪ್ಪ.—ಇದೇ ಮಾರ್ಚಿ ೧ನೇ ತಾ. ಭಾನುವಾರ ಸಾಯಂ ...ಲ ೬ ಗಂಟೆಯ ಸಮಯದಲ್ಲಿ ದಾಸರ ಮಠಕ್ಕೆ ಸಮೀಪವಾದ ...ಸ್ತೆಯ ಮಗ್ಗುಲಲ್ಲಿ ದುಗ್ಗನೆಂಬವನ ಭೋಜಾ ಎಂಬ ಮಧು ... ಅಂಗಡಿಯ ಮುಂದೆ ಅಪ್ಪಿ ಎಸ್ಟೇಟಿನ ಕೂಲಿಯಾಳುಗಳು ...೨೦ ಜನರೂ ನೇತ್ರಕಲ್ ಎಸ್ಟೇಟಿನ ಕಡೆಯ ೧೦—೧೨ ಜ ...ರೂ ಭೋಜಾ ಎಂಬುವದನ್ನು ಪಾನ ಮಾಡಿ, ಅದರ ಅಮಲಿನಿಂ ...ದೊಣ್ಣೆಗಳನ್ನು ತೆಗೆದು ಕೊಂಡು ಭಯಂಕರವಾಗಿ ಹೊಡೆದಾ ...ತ್ತಾ, ಒಂದೊಂದು ಪಟ್ಟಿನ ರಭಸಕ್ಕೆ ಪೆಟ್ಟು ತಿಂದವನು ಹಂ ...ಉರುಳಿದ ಹಾಗೆ ಭೂಮಿಯ ಮೇಲೆ ಬಿದ್ದು ದೀರ್ಘದಂಡ ನ ...ಸ್ಕಾರ ಮಾಡಿ ಮತ್ತೆ ಎದ್ದು ಹೊಡೆದಾಡುತ್ತಾ, ತಲೆಯೊಡೆದು ಬೆ ...ತೊಡೆ ತೋಳುಗಳಿಂದ ರಕ್ತ ಸೋರುತ್ತಿರುವದನ್ನು ಪ್ರತ್ಯಕ್ಷ ...ಕಂಡ ಗೌರವಸ್ಥರಾದ ಮಾನವ ವಿಹಾರ ಸಂಚಾರಿಗಳು ಸು ...ಸೇವನೆಯಿಂದ ಮದಾಂಧರಾದ ಆ ದುಷ್ಟರನ್ನು ನಯ ಭಯ ...ಂತ ಎದುರಿಸಿ ಬಿಡಿಸದಿದ್ದರೆ ಆ ಸ್ಥಳದಲ್ಲಿ ಇಬ್ಬರು ಮೂವ ...ಹೆಣಗಳು ಬಿದ್ದಿರುವದಕ್ಕೆ ಏನೂ ಅಡ್ಡಿ ಇರುತ್ತಿರಲಿಲ್ಲ. ಪತಂ ...ದೀಪವನ್ನು ಕಂಡು ಮೋಹಿಸಿ ಪ್ರಾಣ ಕಳೆದು ಕೊಳ್ಳುವ ...ಕಾರ ಜನರು ಮದ್ಯಪಾನದಿಂದ ತಮ್ಮ ಹಣವನ್ನು ಮಾತ್ರವಲ್ಲ ...ನವನ್ನೂ ಕಡೆಯಲ್ಲಿ ತಮ್ಮ ಅಮೌಲ್ಯವಾದ ಪ್ರಾಣಗಳನ್ನೂ ...ಹುಚ್ಚು ಹಿಡಿದವರ ಹಾಗೆ ಕಳೆದು ಕೊಳ್ಳುತ್ತಾರಲ್ಲಾ ಎಂದು ...ವಾಗಿ ವಿಷಾದಿಸ ಬೇಕಾಗಿರುತ್ತದೆ.—ಕೆಲವು ವಾರಗಳಿಂದ ...ಬೆಂಕಿಯು ಈ ಕೊಪ್ಪದ ಪೇಟೆಯ ನಾಲ್ಕೈದು ಬಾರಿ ಮನೆಗ ...ಹೊರ ಭಾಗದಲ್ಲಿ ಬೆಳೆದಿರುವ ಕಾಡಿನ ಹುಲ್ಲು ಗುತ್ತಿಗಳನ್ನೂ ...ವಾಗಿ ಬಿದ್ದಿರುವ ಬಿದಿರಿನ ಮತ್ತು ಮರಗಳ ತರಗೆಲೆಯ ...ದಹಿಸುತ್ತಾ, ಮನೆಗಳ ಸಮೀಪವನ್ನೈದಿ ಭೀಕರವಾಗಿ ಕಾಣಿಸಿ ...ಂಡು, ಜನರು ಮಾಡಿದ ಸಾಹಸ ಕೃತ್ಯಗಳಿಂದ ಶಾಂತವಾಗಿ ...ಹೋಯ ಹಾಕುತ್ತಿದ್ದು, ತಾ ೨೪ನೇ ಶುಕ್ರವಾರ ಮ ...ಹ್ನ ದಿವಿ ೨ ಗಂಟೆಯ ವೇಳೆಯಲ್ಲಿ ತೃಣ ಕಾಷ್ಟಗಳನ್ನು ದಹಿ ...ತ್ತಾ ವೇಗವಾಗಿ ಮನೆಗಳ ಸಮೀಪಕ್ಕೆ ಬರುತ್ತಿರುವದನ್ನು ಕಂ ...ಟ್ಟ ಮುಂತಾದ ಜನರೂ ಪೊಲೀಸಿನವರೂ ಸಹ ಅತ್ಯವಾಗಿ ನಿಂ ...ಕೊಡಗಳಲ್ಲಿಯೂ ಮಣ್ಣಿನ ಪಾತ್ರೆಗಳಲ್ಲಿಯೂ ಜಲವನ್ನು ತಂ ...ಎರಚಿ ಉರಿಯನ್ನು ಶಾಂತಗೊಳಿಸುತ್ತಾ, ಹುಲ್ಲಿನ ಮನೆಗಳ ಮೇಲೆ ಹತ್ತಿ ಹುಲ್ಲೆಲ್ಲಾ ಒದ್ದೆಯಾಗುವಂತೆ ನೀರನ್ನು ಚೆಲ್ಲುತ್ತಾ ಇದ್ದರು. ಅಲ್ಲಿಗೆ ಸಮೀಪದ ಮನೆಗಳ ವರ್ತಕ ಮುಂತಾದವರು ತಮ್ಮ ತಮ್ಮ ಮನೆಗಳಲ್ಲಿಟ್ಟುಕೊಂಡಿದ್ದ ಅಕ್ಕಿ ಹುರಳಿ ಅಡಿಕೆ ಮುಂತಾದ ಮೂಟೆಗಳನ್ನೆಲ್ಲಾ ಹೊರಗೆ ಸಾಗಿಸುತ್ತಾ ಬಹು ಶ್ರಮಪಡುತ್ತಿದ್ದರು. ಬೆಂಕಿಯಾದರೋ ಸಿಟ್ಟಿನಿಂದ ಗಗನವನ್ನು ಮುಟ್ಟುವ ಹಾಗೆ ಎದ್ದು ಒಂದು ದೊಡ್ಡ ಮರದ ರೆಂಬೆಯನ್ನು ಸುಟ್ಟು ೧೦—೧೨ ಗಜಗಳ ಸಮೀಪದಲ್ಲಿದ್ದ ಹುಲ್ಲಿನ ಮನೆಗಳನ್ನು ಸಹಾ ದಹಿಸಲು ಯತ್ನವಿಲ್ಲದೆ ಶಾಂತವಾಯಿತು. ಜನರು ಇಷ್ಟು ಸಾಹಸ ಪಡದೆ ಇದ್ದರೆ ಹುಲ್ಲಿನ ಮತ್ತು ಹೆಂಚಿನ ಚತ್ತಾರು ಮನೆಗಳೂ ಪೋಸ್ಟ್ ಫೀಸು ಸಹ ಬೆಂಕಿಗೆ ಆಹುತಿ ಆಗುತ್ತಿದ್ದವು. ಕಡೇ ಸಮಯಕ್ಕೆ ರಜದ ಮೇಲೆ ಹೋಗಿದ್ದ ಪೊ॥ ಇನ್ಸ್ಪೆಕ್ಟರು ಟ್ರಾಂಕಿಟ್ ಗಾಡಿಯನ್ನು ಇಳಿದು ಬೆಂಕಿಯನ್ನು ಆರಿಸುತ್ತಿದ್ದ ಜನರ ಸಮೀಪಕ್ಕೆ ಓಡಿಬಂದು, ಜಾಗ್ರತೆಯಾಗಿ ನಂದಿಸುವಂತೆ ಅವರನ್ನು ಪ್ರೋತ್ಸಾಹ ಪಡಿಸಿ, ಅದರ ಬಲವು ಕಡಿಮೆಯಾಗುವ ಪರ್ಯಂತವೂ ಇದ್ದು ನಂತರ ಮನೆಗೆ ಹೋದರು. ಈಗಲೂ ಅಲ್ಲಲ್ಲಿ ಬೆಂಕಿಯು ಹೊಗೆಯು ಕಾಣಿಸಿಕೊಳ್ಳುತ್ತಾ ಜನರನ್ನು ಭಯ ಪಡಿಸುತ್ತಾ ಇದೆ. ಆದದ್ದರಿಂದ ನಮ್ಮ ದಯಾಳುಗಳಾದ ತಾಲ್ಲೋಕ್ ಅಮಲ್ದಾರರವರು ಈ ಭಾಗದಲ್ಲಿ ತುಂಬಾ ನಿಗಾ ಇಟ್ಟು, ಊರಿನ ಸುತ್ತಲೂ ಒಂದು ನೂರು ಗಜಗಳ ದೂರದ ವರೆಗೂ ಇರುವ ಗಿಡ ಗೆಂಡೆ ಕಜಾರ ಮುಂತಾದ್ದನ್ನು ತೆಗಿಸಿ, ಅಗ್ನಿ ಬಾಧೆಯನ್ನು ತಪ್ಪಿಸಿ, ಪ್ರಜೆಗಳನ್ನು ಕಾಪಾಡುವರೆಂದು ಹಾರೈಸುತ್ತೇನೆ.

ವಿಶೇಷ ವರ್ತಮಾನಗಳು.

ವೇಲ್ಸಿಗೆ ಸೇರಿದ ಕಾರ್ಡಿಫ್ ಪಟ್ಟಣದಲ್ಲಿ ಒಂದು ಕಲ್ಲಿದ್ದಲ ಗಣಿಯಲ್ಲಿ ಅಕಸ್ಮಾತವಾಗಿ ಕೆಲಸ ಮಾಡುತ್ತಿದ್ದವರಲ್ಲಿ ೧೩ ಮಂದಿ ಮೃತಪಟ್ಟರು, ೧೩ ಜನರಿಗೆ ಗಾಯಗಳಾಗಿವೆ.

ಫ್ರಾನ್ಸ್ ರಾಜ್ಯದ ಪ್ರೆಸಿಡೆಂಟರಾದ ಎಂ. ಲೂಬೇ ಯವರು ಆ ಕೆಲಸವನ್ನು ಬಿಟ್ಟು, ತಮ್ಮ ಗ್ರಾಮದಲ್ಲಿ ಹೋಗಿ ವಾಸಮಾಡಿಕೊಂಡು, ತಮ್ಮ ದನಿಕರುಗಳನ್ನು ರಕ್ಷಿಸಿಕೊಳ್ಳಬೇಕೆಂದು ಗೊತ್ತು ಮಾಡಿಕೊಂಡಿದ್ದಾರೆ.

ಏಬ್ರಹಂ ನೀಸ್ ಎಂಬೊಬ್ಬ ಯೆಹೂದ್ಯನು ನೀಸ ಪಟ್ಟಣದಲ್ಲಿ ಚಿಕ್ಕತನದಿಂದಲೂ ಭಿಕ್ಷ ಬೇಡುತ್ತಿದ್ದು ಕಾಲವಾದನು ಇವನ ಬಳಿ ೧,೨೦,೦೦೦ ರೂಪಾಯಿನ ಆಸ್ತಿ ಇತ್ತು. ಈಗ ಈ ಹಣವನ್ನು ಅವನ ವಾರಸುದಾರರಿಗೆ ಹಂಚಿಕೊಟ್ಟರು.

ಅಮೇರಿಕಕ್ಕೆ ಸೇರಿದ ಬ್ರೂಕ್ಲಿನ್ ಪಟ್ಟಣದ ದೇವಾಲಯದಲ್ಲಿ ಕೆಲವರುಸೇರಿ ದೇವರ ಪ್ರಾರ್ಥನೆಮಾಡುತ್ತಿದ್ದಾಗ ಆ ಕಟ್ಟಡವು ಕಳಚಿ ಬಿದ್ದುಹೋಯಿತು ೧೨ ಜನರು ಹತರಾದರು ೧೦೦ ಜನರಿಗೆ ಗಾಯಗಳಾದವು ಕಟ್ಟಡವನ್ನು ಗಾರದಿಂದಲೇ ಕಟ್ಟಿದ್ದರು.

ವಿಲಾಯತಿರಾಜ್ಯದವರು ಈ ವರುಷ ಸೈನ್ಯದ ಇಲಾಖೆಗೆ ೨,೯೮,೧೩,೦೦೦ ಪೌಂಡುಗಳನ್ನು ತೆಗೆದಿಟ್ಟಿದ್ದಾರೆ. ಹಿಂದುಸ್ಥಾನಕ್ಕೆ ೧೨೬ ಫಿರಂಗಿಗಳನ್ನು ಮಾಡಿಸಿ ಕಳುಹಿಸುವುದಕ್ಕೋಸ್ಕರ ೯,೭೩,೦೦೦ ಪೌಂಡು ಖರ್ಚಮಾಡುತ್ತಾರೆ. ಇದಲ್ಲದೆ ಹಿಂದುಸ್ಥಾನದ ಹೊಸ ಕಾರ್ಖಾನೆಗಳಲ್ಲಿ ೪೮ ಫಿರಂಗಿಗಳನ್ನು ತಯಾರ್ಮಾಡುವರು.

ಅಮೇರಿಕದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಿಂದ ರೈಲ್ ಗಾಡಿಗಳಿಗೆ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿ ಓಡಿಸಬೇಕೆಂದು ೧೫ ಕೋಟಿ ರೂಪಾಯಿ ಸ್ಯಾಂಕ್ಷನ್ಮಾಡಿದ್ದಾರೆ. ಈ ರೈಲ್ ಗಾಡಿಯು ಗಂಟೆಗೆ ೬೫ ಮೈಲಿಯಿಂದ ೯೦ ಮೈಲಿವರೆಗೆ ಓಡುವದು. ಪ್ರತಿ ಎರಡು ನಿಮಿಷಗಳಿಗೂ ಒಂದಾವರ್ತಿಯಂತೆ ರೈಲನ್ನು ಬಿಡುವರು.

ಪ್ಯಾರಿಸ್ ಪಟ್ಟಣದಲ್ಲಿ ಪಾಲ್ ಪಾರ್ಸ್ ಎಂಬೊಬ್ಬ ಕಟ್ಟಿಯು ಕಾಲವಾದನು. ಇವನಿಗೆ ಕಾಳಗದ ದೊರೆ ಎಂಬ ಬಿರುದು ಬಂದಿತ್ತು. ಆವನಿಗೆ ಇನ್ನೂ ೪೧ ವರುಷ ಮಾತ್ರವೇ ವಯಸ್ಸಾಗಿತ್ತು. ೧೮೯೮ರಲ್ಲಿ ಪ್ರಪಂಚಕ್ಕೆಲ್ಲಾ ಇವನೇ ಕಾಳಗದಲ್ಲಿ ಗಟ್ಟಿಗನೆಂಬ ಹೆಸರು ಬಂತು. ಮತ್ತು ಈತನೇ ಮೂರು ಕಡೆಗಳಲ್ಲಿ ಕಾಳಗಗಳನ್ನು ಮಾಡಿ ಮೂರು ಬಿರುದು ಸಂಪಾದಿಸಿಕೊಂಡಿದ್ದನು.

ಮ್ಯಾಂಚೂರಿಯಾ ಸೀಮೆಯಲ್ಲಿ ಈಗ ರಷ್ಯಾದವರಿಗೂ ಜಪಾನವರಿಗೂ ನಡೆಯುತ್ತಿರುವ ಯುದ್ಧವು ಮುಕ್ತಾಯವಾದ ಮೇಲೆ ಚೀನಾದವರಿಗೆ ಕಷ್ಟ ಪ್ರಾಪ್ತವಾಗುವುದೆಂದು ಚೀನಾಚಕ್ರವರ್ತಿಯವರು ತಿಳಿದು, ತಮ್ಮ ಸೈನ್ಯಗಳನ್ನು ಎಲ್ಲಾ ಕಡೆಗಳಲ್ಲೂ ಬಹಳ ಚನ್ನಾಗಿ ತರಬೇತು ಮಾಡಿ, ಅವರಿಗೆಲ್ಲಾ ಈಗಿನ ಕಾಲದ ಮದ್ದು ಗುಂಡು ಬಂದೂಕು ಫಿರಂಗಿಗಳನ್ನು ಕೊಡ ಬೇಕೆಂದು ಹುಕುಂ ಮಾಡಿದ್ದಾರೆ.

ವಿಲಾಯತಿ ರಾಜ್ಯದ ಒಂದು ಭಾಗವಾದ ವೇಲ್ಸ್ ದೇಶದಲ್ಲಿ ಕಾರ್ಡಿಫ್ ಪಟ್ಟಣದ ಮ್ಯೂನಿಸಿಪಾಲಿಟಿಯವರು ಒಂದು ತಮಾಷಿಬಂಗಲೆ (ಮ್ಯೂಜಿಯಂ)ಯನ್ನು ಕಟ್ಟುವುದಕ್ಕೆ ಮೂರು ಲಕ್ಷರೂಪಾಯಿ ಕ್ರಯ ಬಾಳುವ ಜಮೀನನ್ನೂ, ಅದರ ಸಿಬ್ಬಂದಿ ಖರ್ಚಿಗೆ ೪೦ ಸಾವಿರ ರೂಪಾಯಿ ವರುಷಾಶನವನ್ನೂ, ಒಂದು ಪುಸ್ತಕ ಭಂಡಾರಕ್ಕೆ ೧೫ ಸಾವಿರ ರೂಪಾಯಿ ವರುಷಾಶನವನ್ನೂ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ.

ಪರರಾಜ್ಯಗಳಿಂದ ಪ್ರತಿವರುಷವೂ ೮೦ಕೋಟಿ ರೂಪಾಯಿನ ಪದಾರ್ಥಗಳು ಹಿಂದೂಸ್ಥಾನಕ್ಕೆ ಬರುತ್ತವೆ. ಈ ಪೈಕಿ ವಿಲಾಯತಿಯಿಂದಲೂ ಅದರ ಸ್ವಾಸ್ಥ್ಯಗಳಿಂದಲೂ ೬೦ ಕೋಟಿ ರೂಪಾಯಿನ ಪದಾರ್ಥಗಳು ಬರುವವು. ೧೯೦೨ ನೇ ಇಸವಿಯಲ್ಲಿ ೩೦ಕೋಟಿ ರೂಪಾಯಿನ ಹತ್ತಿ ಬಟ್ಟೆಗಳು ಬಂದವು. ಈ ಪೈಕಿ ೨೯ ಕೋಟಿ ರೂಪಾಯಿನ ಹತ್ತಿ ಬಟ್ಟೆಗಳು ವಿಲಾಯಿತಿಯ ಕಾರ್ಖಾನೆಯಲ್ಲಿ ತಯಾರಾದವು.

ಅಮೇರಿಕ ರಾಜ್ಯದ ಮುಖ್ಯಪಟ್ಟಣದಲ್ಲಿ ಸರ್ಕಾರದವರು ಪ್ರಜೆಗಳಿಂದ ಅವರ ಆದಾಯದ ಮೇಲೆ ತೆರಿಗೆ ಹಾಕಿ ವಸೂಲ್ಮಾಡುತ್ತಾರೆ. ಮೆ॥ ಫ್ರಾನ್ಸಿಸ್ ಡೌನ್ಸ್ ಎಂಬೊಬ್ಬ ಐಶ್ವರ್ಯವಂತನಾದ ಲಾಯರು ಈ ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ತನ್ನ ಕೆಲವು ಆಸ್ತಿಯನ್ನು ತಾನು ಸಾಕುತಿದ್ದ ನಾಯಿಯ ಹೆಸರಿಗೆ ವರ್ಗಮಾಡಿದ್ದನು. ಈ ನಾಯಿ ಅಕಸ್ಮಾತ್ತಾಗಿ ರೈಲ್ ಗಾಡಿಯ ಕೆಳಗೆ ಸಿಕ್ಕಿ ಮೃತಪಟ್ಟಿತು. ಈಗ ಆ ಆಸ್ತಿಯನ್ನು ವಾಪಸು ಪಡೆಯಬೇಕೆಂದು ಅರ್ಜಿಕೊಟ್ಟಿದ್ದಾನೆ.

ಮಾಸ್ಕೋಪಟ್ಟಣದ ಸ್ತ್ರೀಯರು ಸೇರಿ ರಷ್ಯಾ ಚಕ್ರವರ್ತಿನಿಯವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ಕೊಂಡು, ಈಗ ರಷ್ಯಾ ಒಳದೇಶದಲ್ಲಿ ಪ್ರಜಾನೆಮ್ಮದಿಗೆ ಭಂಗವುಂಟಾಗಿದೆ ಎಂತಲೂ ಹೊರಗಡೆಯಲ್ಲಿ ಜಪಾನವರ ಮೇಲೆ ತಮ್ಮ ಗಂಡಂದಿರೂ ಮಕ್ಕಳೂ ಸಹೋದರರೂ ಮಡಿದು ಜೋಗಿ ಸಂಸಾರಗಳೇ ನಷ್ಟಹೊಂದುತ್ತಿವೆ ಎಂತಲೂ ದೇಶದ ಒಳಗೂ ಹೊರಗೂ ರಷ್ಯಾಪ್ರಜೆಗಳು ಲಯವಾಗುತ್ತಿದ್ದಾರೆಂತಲೂ, ಈ ಶೋಕವನ್ನು ಹ್ಯಾಗಾದರೂ ಮಾಡಿ ನಿಲ್ಲಿಸುವಂತೆ ಚಕ್ರವರ್ತಿಯವರಿಗೆ ಅರಿಕೆ ಮಾಡಬೇಕೆಂತಲೂ ಕೇಳಿಕೊಂಡಿದ್ದಾರೆ. ಚಕ್ರವರ್ತಿನಿಯವರು ಚಕ್ರವರ್ತಿ ಜಾರ್ಯವರಿಗೆ ಈ ವಿಜ್ಞಾಪನಾ ಪತ್ರಿಕೆಯ ಅಭಿಪ್ರಾಯವನ್ನು ತಿಳಿಸುವುದರಿಂದ ಯಾವ ಫಲವಾಗುವುದೋ ಇನ್ನೂ ತಿಳಿಯಲಸಾಧ್ಯವಾಗಿದೆ.

ರಷ್ಯಾರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಎರಡು ವರ್ತಮಾನ ಪತ್ರಿಕೆಗಳು ಅಲ್ಲಿನ ಒಳದೇಶದ ಗಲಭೆಯನ್ನು ಕುರಿತು ಏನೂ ಬರೆಯದೆ ಮೌನವನ್ನು ಧರಿಸಿದ್ದುದರಿಂದ ಸರ್ಕಾರದವರು ಆವೆರಡು ಪತ್ರಿಕೆಗಳನ್ನೂ ಇನ್ನು ಮೂರು ತಿಂಗಳ ತನಕ ಪ್ರಕಟಿಸಕೂಡದೆಂದು ಹುಕುಂಕೊಟ್ಟು ನಿಲ್ಲಿಸಿದ್ದಾರೆ. ಇದಲ್ಲದೆ ಒಳದೇಶದ ದಂಗೆಗಳನ್ನಾಗಲಿ, ಸ್ವತಂತ್ರಾಧಿಕಾರಬೇಕೆಂದು ಪ್ರಜೆಗಳು ಅಪೇಕ್ಷಿಸುವುದನ್ನಾಗಲಿ, ಸೈನ್ಯದವಿಚಾರವಾಗಲಿ, ಈಗಿನ ರಾಜ್ಯಭಾರ ವಿಷಯವನ್ನಾಗಲಿ, ಈಚೆಗೆ ನಡೆಯುತ್ತಿರುವ ಸಮಾಚಾರಗಳನ್ನಾಗಲಿ ಕುರಿತು ಯಾವ ಪತ್ರಿಕೆಯಲ್ಲೂ ಒಂದು ಸಂಗತಿಯನ್ನೂ ಪ್ರಕಟಿಸಕೂಡದೆಂತಲೂ ಸರ್ಕಾರದವರು ಆಗಾಗ್ಗೆ ಬರೆದು ಕಳುಹಿಸುವ ಸಂಗತಿಗಳನ್ನು ಮಾತ್ರವೇ ಪ್ರಕಟಿಸಬೇಕೆಂತಲೂ ಮಂತ್ರಿಗಳು ಹುಕುಂಕೊಟ್ಟಿದ್ದಾರೆ.

ಆಫ್ರಿಕಾಖಂಡಕ್ಕೆ ಸೇರಿದ ಯುಗಾಂಡಾದೇಶದಲ್ಲಿ ನಿದ್ರಾರೋಗವೆಂಬ ಭಯಂಕರವಾದ ಜಾಡ್ಯ ಹುಟ್ಟಿ ಜನರನ್ನ ಕೊಲ್ಲುತ್ತಿರುವುದೂ ಕ್ಯಾಸ್ಟ್ಲ್ ಗ್ರೀನ್ ಎಂಬ ಡಾಕ್ಟರು ತುಂಬಾ ಸಹಸಪಟ್ಟು ಈ ರೋಗದ ಗುಣ ಲಕ್ಷಣಗಳನ್ನು ಪರಿಶೋಧನೆ ಮಾಡಿ ಪರಿಹಾರವನ್ನು ಕಂಡುಹಿಡಿಯ ಬೇಕೆಂದು ಕಷ್ಟ ಪಡುತ್ತಿರುವುದೂ ನಮ್ಮ ವಾಚಕರಿಗೆ ಗೊತ್ತಿದೆಯಷ್ಟೆ. ಈ ಉಪದ್ರದದೆಸೆಯಿಂದ ಇದುವರಿಗೆ ಒಂದು ಲಕ್ಷ ಪ್ರಜೆಗಳಿಗೆ ಕಮ್ಮಿ ಇಲ್ಲದೆ ಮೃತಪಟ್ಟರು. ಮತ್ತು ಇನ್ನೂ ತಿಂಗಳೊಂದಕ್ಕೆ ಒಂದು ಸಾವಿರ ಜನದಂತೆ ಲಯವಾಗುತ್ತಿದ್ದಾರೆ. ಈ ರೋಗವು ಒಂದು ಸಣ್ಣಕ್ರಿಮಿಯಿಂದ ಉಂಟಾಗುವುದೆಂತಲೂ, ಅದು ಅಂಟು ಜಾಡ್ಯವಲ್ಲವೆಂತಲೂ ತಿಳಿದು ಬಂದಿದೆ. ಈ ಹುಳವು ಜಂಗಲುಗಳಲ್ಲೂ ಒತ್ತಾದ ದೊಡ್ಡ ಕಾಡುಗಳಲ್ಲೂ ಇರುವುದನ್ನೂ ಅಪೇಕ್ಷಿಸುವುದಾದ್ದರಿಂದ ಆ ದೇಶವನ್ನು ಬಿಟ್ಟು ಈಜಿಪ್ಟಿಗಾಗಲಿ ಸೌಡಾನಿಗಾಗಲಿ ಹಬ್ಬಿಕೊಳ್ಳುವುದಿಲ್ಲವೆಂದು ಆ ಡಾಕ್ಟರು ತಿಳಿಸುತ್ತಾರೆ.

ಸಯಾಂರಾಜ್ಯದಲ್ಲಿ ಗವರ್ನಮೆಂಟಿನವರು ಜೂಜಿನ ಕಟ್ಟೆಗಳನ್ನು ರಿಜಿಸ್ಟರ್ ಮಾಡಿ, ಪ್ರತಿ ಕಟ್ಟೆಯಿಂದಲೂ ಸುಂಕವನ್ನು ವಸೂಲ್ಮಾಡುತ್ತಿದ್ದರು. ಇದರಿಂದ ಆ ರಾಜ್ಯದಲ್ಲಿ ಜೂಜಾಟವು ಬಹಳ ಅಭಿವೃದ್ಧಿಗೆ ಬಂದಿದೆ. ಪ್ರಜೆಗಳು ಕೆಟ್ಟುಹೋಗುವುದಕ್ಕೆ ಸರ್ಕಾರದವರೇ ಸಹಾಯ ಮಾಡಿದಂತಾಗಿದೆ. ಸಯಾಂ ರಾಜ್ಯದ ರಾಜಧಾನಿಯಾದ ಬ್ಯಾಂಕಾಕ್ ಎಂಬ ಒಂದು ಪಟ್ಟಣದಲ್ಲೇ ವರುಷಕ್ಕೆ ಈ ಜೂಜಿನ ಕಟ್ಟೆಗಳಿಂದ ೧೫ ಲಕ್ಷ ರೂಪಾಯಿ ಉತ್ಪತ್ತಿ ಆಗುತ್ತಿತ್ತು. ಆದರೆ ಗವರ್ನಮೆಂಟಿನವರು ಇಂಥಾ ಕೆಟ್ಟ ಪದ್ಧತಿಯನ್ನು ಪ್ರೋತ್ಸಾಹಪಡಿಸುವುದು ಸರಿಯಲ್ಲವೆಂದು ಈಗ ಆಲೋಚನೆ ಮಾಡಿ, ಕ್ರಮೇಣ ಈ ಕಟ್ಟೆಗಳನ್ನು ನಿರ್ನಾಮ ಮಾಡುವಂತೆ ಹುಕುಂ ಕೊಟ್ಟಿದ್ದಾರೆ. ಈ ವರುಷ ಐದು ದೊಡ್ಡ ಪಟ್ಟಣಗಳಲ್ಲೂ ೩೫,೦೦೦ ರೂಪಾಯಿ ಉತ್ಪತ್ತಿಯಾಗುವ ಇತರ ಕೆಲವು ಸಣ್ಣ ಸ್ಥಳಗಳಲ್ಲೂ ಈ ಜೂಜಿನ ಕಟ್ಟೆಗಳನ್ನು ತೆಗೆದುಹಾಕಬೇಕೆಂದು ಹುಕುಂ ಆಗಿದೆ. ಸಯಾಂ ದೊರೆಯವರು ಪ್ರಜೆಗಳನ್ನು ಕಾಪಾಡಿ ಅವರನ್ನು ಉತ್ತಮಸ್ಥಿತಿಗೆ ಬರುವಂತೆ ಏರ್ಪಾಡು ಮಾಡಿದ್ದು ಸ್ತೋತ್ರಾರ್ಹವಾಗಿದೆ.

ಪ್ರಪಂಚದಲ್ಲಿ ದೊಡ್ಡವು ಯಾವವು?

16

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ"

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಡಗುಣಿ ಯೋಗಿಗಳು ಬರೆದರು ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಶರಭಶಾಸ್ತ್ರಿಗಳು ಬರೆದಿದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ಶ್ರೇಷ್ಠವಾದವುಗಳಾಗಿವೆ ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ"

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೪ ಆಣೆ

೪	"ರೋಮನರ ಚರಿತ್ರೆ"	ಕ್ರಯ ೦—೨—೦
೫	"ಗ್ರೀಕರ ಚರಿತ್ರೆ"	,, ೦—೨—೦
೬	"ಅನುಭವಾನಂದ"	,, ೦—೬—೦
೭	"ಗಣಿತ ಸಂಜೀವಿನಿ"	೦—೮—೦
೮	"ಗಣಿತ ಚಿಂತಾಮಣಿ"	೦—೧೦—೦
೯	"ಚಾಮರಾಜೇಂದ್ರ ವಿಲಾಸ"	೦—೧೨—೦
೧೦	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ"	೦—೧೨—೦
೧೧	"೧೯೦೫ನೇ ವರುಷದ ಡೈರಿಗಳು"	

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦, ಸಾದಾ ೦—೪—೦

ಮ್ಯಾನೇಜರ್,
ಸಿ ಎಲ್ ಎಸ್ ಬುಕ್ ಡಿಪ್ರೋ,
ಮೈಸೂರು

ಜ್ವರಹರಿ.

20



ಇದು ಸಾಧಾರಣ ಜ್ವರ, ಚಳೀಜ್ವರ, ಮರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಲಾಮುಕ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ ೧ ರೂ, ೧—೮ ರೂ, ರೂ ೨—೧೨ ಅ, ೧೧ ರೂ, ಡಜನ್ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಬಿ ಮು ಂ ಕ ಪ್ರೂ ರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ನೋವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡೂರ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯ ಬಿಮುಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪುರುಷರಿಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಆದಿ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲು, ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—
ಹೆಪ್ರಿಯದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ನಂಬರ್ ಹೇಜ್ ಲೈನ್. ಮದರಾಸ್.

ಮೆ। ಇ. ಮಾರ್ಸ್‌ಡನ್‌ರವರ ಕನ್ನಡ ೫ನೆಯ ಪುಸ್ತಕದ
ಅತ್ಯುತ್ತಮವಾದ ನೋಟ್ಸು

2

ನಾಲ್ಕನೆ ತರಗತಿ ವಿದ್ಯಾರ್ಥಿಗಳಿಗೆ ಅನೇಕ ಹೊಸಸಂಗತಿಗಳು ಬೋಧೆಯಾಗುವಂತೆ ರಚಿಸಲ್ಪಟ್ಟಿದೆ ಏಪ್ರಿಲ್ ತಾ ೧ಕ್ಕೆ ಸಿದ್ಧವಾಗುವುದು ಕ್ರಯ ೪ ಆಣೆ ೧೦ಕ್ಕೆ ಒಂದು ಡಿಸ್ಕೌಂಟು. ವಿಳಾಸ— ಕಾರ್ಕಾರಹಳ್ಳಿ ನಾರಾಯಣಶಾಸ್ತ್ರಿ, ಕನ್ನಡ ಪಂಡಿತ, ಆ ಮಾ ಗೌರ್ನಮೆಂಟ್ ಕನ್ನಡಾ ಸ್ಕೂಲು, ಮೈಸೂರು

ಸುಲಭಕ್ರಯ ಸುಗಂಧದ್ರವ್ಯಗಳು.

17

ಅಂಬರ್ ಕಡ್ಡಿ ಸೇರು ೧ಕ್ಕೆ	೫—೦—೦
ವಸಂತಕುಸುಮಾರವರ್ತಿ	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	೨—೮—೦
ಪುನುಗು ಕಡ್ಡಿ ,, ೧ಕ್ಕೆ	೧—೮—೦
ಮಸಾಲಾ ಕಡ್ಡಿ ,, ೧ಕ್ಕೆ	೦—೧೦—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ	೦—೧—೬
ಅತೀ ಗಂಧ ತೊಲ ೧ಕ್ಕೆ	೨—೦—೦
ಡಿಟ್ಟೋ	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಬಂಗಾರ, ಬೆಳ್ಳಿ ಮರಕಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ	೦—೪—೦
ಕೇಶವೊಲ್ಲಾಸಿನಿ ತೈಲ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ತಂಬಾಕ್ ಷೋಕ್ ಡಬ್ಬಿ ೧ಕ್ಕೆ	೦—೨—೦
ಶೈವವೈಷ್ಣವ ಶಾಸ್ತ್ರೀಯ ಪ್ರಮಾಂಗ ಸೇರು ೧ಕ್ಕೆ	೦—೧೨—೦
ಫಿತ್ನಾ ತೋಲ ೧ಕ್ಕೆ	೨—೦—೦
ಡಿಟ್ಟೊ	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ವಸಂತಮಾಣಿಯ ಘುಟಿಕಾ ೧೦೦ಕ್ಕೆ	೨—೦—೦

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ ಜಟ್ಟಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ ವಿಳಾಸ—ಟಿ ಎಲ್ ಉಪಾಧ್ಯಾಯ ಅಂಡ್ ಕೋ, ಸುಗಂಧಕಾರ, ಮೈಸೂರು.

ಹೋ ಮೋ ಸಿ ಯಾ

ತಕ್ಷಣ ಪರಿಹಾರ — Homocea — ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಶೀಲವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ತುಳುಕಡ್ಡಿ, ಸೊಳ್ಳೆ ಮತ್ತು ಜೇನು ಕಚ್ಚಿದದ್ದು, ಬಿಸ್ಸಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಅ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ಈ ೧೨ ೨—೮ ಅ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ಕುಟಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುತ್ತದೆ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವನ್ನೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ—ಹೋಮೋಸಿಯಾ ಕಂಪನಿ ೨೬ ನಂಬರು ಬೀಚ್ ಲೈನ್ ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

10—3—1905 ರಿಂದ 17—3—1905 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	45	51	38	36
ಮೈಸೂರು ,,	7	7	6	1
ಬೆಂಗಳೂರು ಡಿಸ್ಟ್ರಿಕ್ಟ್	48	31	84	69
ಮೈಸೂರು ,,	10	6	45	37
ಕೋಲಾರ್ ,,	49	26	48	58
ಕೋಲಾರ್ ಚಿನ್ನದ ಗಣಿಗಳು	2	2	15	10
ತುಮಕೂರು ಡಿಸ್ಟ್ರಿಕ್ಟ್	9	8	27	18
ಹಾಸನ ,,	3	0	21	14
ಚಿತ್ರದುರ್ಗ ,,	4	4	10	10
ಕಡೂರ್ ,,	4	4	29	15
ಶಿವಮೊಗ್ಗ ,,	1	4	18	11
ಒಟ್ಟು	172	25	332	235

ಶಾಲಿವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರದ ಫಾಲ್ಗುಣ ಬಹುಳ ದಶಮಿ ಗುರುವಾರದಿಂದ ವಿಶ್ವಾವಸು ಸಂವತ್ಸರದ ಚೈತ್ರ ಶುದ್ಧ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಮಾರ್ಚಿ, ಮತ್ತು ಏಪ್ರಿಲ್

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ತೇದಿ [illegible]
30	ಗುರು	ದಶಮಿ	31 5[illegible]	ಉ.ಷಾ	1 15	18
31	ಶುಕ್ರ	ಏಕಾದಶಿ	30 3[illegible]	ಶ್ರ	1 2	19
1	ಶನಿ	ದ್ವಾದಶಿ	35 20	ಧ	5 12	20
2	ರವಿ ‡	ತ್ರಯೋದಶಿ	12 12	ಶ	3 13	21
3	ಚಂದ್ರ	ಚತುರ್ದಶಿ	17 30	ಪೂ.ಭಾ	15 5	22
4	ಕುಜ *	ಅಮಾ	52 7	ಉ.ಭಾ	[illegible]	23
5	ಬುಧ ,,	ಪಾಡ್ಯಮಿ	[illegible] 30	ರೇ	0 3	24

ಏಕಾದಶೀ (ಪಾಪಮೋಚನಿ) * ಸರ್ವತ್ರ ... ‡ ಪ್ರದೋಷ * ಸರ್ವತ್ರ ಅಮಾವಾಸ್ಯೆ ,, ಚಾಂದ್ರ ಸಂವತ್ಸರಾರಂಭ ಆರೋಗ್ಯಪ್ರತಿಪತ್ತು

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಕಗ್ಗೇ ಅಕ್ಕಿ ಪಲ್ಲ ೧ಕ್ಕೆ	ರೂ ೧೦ ೮—	೧೦—೪—೦
ಕಂಬೂತಿ ಅಕ್ಕಿ ಬಿಳಿ	೧೧ ೪—೦	೧೧—೪—೦
,, ಮಧ್ಯಮ	೯—೧೨—೦	೧೧—೯—೦
ಬಾಮಾತ್ರಿ ಅಕ್ಕಿ	೯—೮—೦	೧೧—೧—೦
ಸಣ್ಣಕ್ಕಿ ಅವಲ್	೧೨—೦—೦	೧೨—೪—೦
,, ಮಧ್ಯಮ	೧೦ ೮ ೦	೧೨—೦—೦
ತೊಗರಿ ಬೇಳೆ ಪಲ್ಲ ೧ಕ್ಕೆ	೧೦ ೮ ೦	೧೧ ೦—೦
,, ಮಧ್ಯಮ	೧೧—೧—೦	೧೦—೮—೦
ಹೈರ್ ರಾಗಿ ಪಲ್ಲ ೧ಕ್ಕೆ	೪ ೧೨—೦	೪—೧೧—೦
ಕಾರ್ರಾಗಿ	೪—೭—೦	೪—೪—೬
ಜೋಳ	೪—೧೨—೦	೬—೧೨—೦
ಹುಲಸಂದೆ ಪಲ್ಲ ೧ಕ್ಕೆ	೮—೧೨—೦	೮—೮—೦
ಬಿಳೇ ಅವರೆ	೬ ೧೨ ೦	೬—೧೨—೦
ಹೆಸರು	೯ ೧೨—೦	೮—೧೨—೦
ಉದ್ದು	೮ ೧೪ ೯	೮—೮—೦
ಕಡಲೆ	೯ ೦—೦	೮—೪—೦
ಎಳ್ಳು	೧೬ ೦ ೦	೧೩—೧೪ ೯
ಹುರುಳಿ	೮—೦ ೦	೭—೬—೬
ಹರಳು ೧೨೭ ಸೇರಿಗೆ	೯—೮—೦	೭—೦—೧೧
ಶೇಂಗೇಕಾಯಿ ಮಣ ೧ಕ್ಕೆ	೨—೪—೦	೧—೧೨—೦
ಮೆಣಸಿನಕಾಯಿ	೪—೮—೦	೩—೧೨—೦
,, ಮಧ್ಯಮ	೩—೧೨—೦	೩—೮—೦
ಬೆಲ್ಲ ದೊಡ್ಡ ಅಚ್ಚು	೭—೪—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೪—೦ ೦	೪—೦—೦
ಹರಳೆಣ್ಣೆ ,,	೪—೦—೦	೩—೧೪—೦
ಕೊತ್ತುಂಬರಿ ಪಲ್ಲ ೧ಕ್ಕೆ	೬—೦—೦	೭—೮—೦
ಉಪ್ಪು ,,	೮—೦—೦	೮—೫—೪
ಹುಣಸೇ ಹಣ್ಣು	೧ ೪—೦	೦—೧೪—೦
,, ಹಳೇದು	೦—೧೪—೦	೦—೧೨—೦
ಹುರುಳು	೧೨—೦—೦	೧೧—೦—೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫—೩—೦	೪—೫—೦
ತೆಂಗಿನಕಾಯಿ ೧೦೦ಕ್ಕೆ	೫—೦—೦	೪—೪—೦
ಅಡಿಕೇಕಾಯಿ ಮಣ ೧ಕ್ಕೆ	೧—೦—೦	೦—೧೦—೦
ಅಂಟ್ವಳಕಾಯಿ ಮಣ ೧ಕ್ಕೆ	೦—೧೪—೦	೦—೧೦—೦
ಹತ್ತಿ (ಬೀಜ) ಕಂಡಿ	೧೫—೮—೦	೧೫—೪—೦
,, ,, ಹಸಿದು	೧೫—೧೦—೦	೧೫—೯—೬
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೨೪—೩—೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೬೨—೦—೦	೬೫—೦—೦

Printed and Published by the Rev H Spencer BA, the Proprietor and Manager, Wesleyan Mission Press Mysore 30/3/1905

ವೃತ್ತಾಂತ ಪತ್ರಿಕೆ.

REGISTERED
M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೭ — ಮೈಸೂರು—ಸನ್ ೧೯೦೫ ನೇ ಇಸವಿ ಏಪ್ರೀಲ್ ತಾರೀಖು ೬ ನೇ ಗುರುವಾರ. — ಸಂಚಿಕೆ ೧೪

ಶ್ರೀ ತಾಂಬೂಲ.

21

ಕೊಳ್ಳಿ ಬಿಡಿ ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾರುತ್ತಾರೆ ಅದಗೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನು ಉಂಟುಮಾಡುತ್ತೆ ಭಳ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೨ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಉಳ್ಳ ಸೀಸೆಗೆ ೪ ಆಣೆ. ಕೆಲವು ಸೀಸೆಗೆ ಒಂದು ಜಾಸ್ತಿ. ೬ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ —

ಹಾಸನಳ್ಳಿ ಟವರ್, — ಯಂ. ಗೋವಿಂದಶೆಟ್ಟಿ,

ಕೋಲಾರ ಡಿಸ್ಟ್ರಿಕ್ಟ್ — ಮೆಡಿಕಲ್ ಪ್ರಾಕ್ಟಿಷನರ್.

P. SUBBAROY'S
World Renowned and most Efficacious
Ayurvedic Medicines.
ಪಿ. ಸುಬ್ಬರಾಯರವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ
ಆಯುರ್ವೇದ ಔಷಧಗಳು.

11

ಚಿತ್ತಾಕರ್ಷಕ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ತಿಂದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಆಕ್ಷೇಪಣೆಯಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದಕ್ಕೆ ತಯಾರಿಗೆ ಕಸ್ತೂರಿ, ಸುವರ್ಣ ಬರಳು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೨ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ — ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ವಿ. ಪಿ. ಛಾಂಗಿ ಚಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದು ನಿಸ್ಸಂಶಯವಿಲ್ಲ.—ಡಿ ಮಹಮದ್ ಸವಡಾನಿ

...ದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿ ...ಪಿತ್ತ, ಅಲೇನೋವು, ಚಳಿ ಜ್ವರಗಳು ನಿವಾರಣೆಯಾಗುತ್ತ ...ರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

...ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಆದ ...ಗೆ ವಿಶೇಷ ಪ್ರಯೋಜನವಾಗಿರುವುದು.—ಪುರುಷೋತ್ತಮ ...ರ್ ಆರ್ಸ್ವೆಡ್.

...ನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇ ...ಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.— ...ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕ್ವಿಲಾನ್.

Apply to.—P. SUBBAROY,
Porto Novo, South Arcot.
ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಕಥಾಸಂಗ್ರಹ—ಮೊದಲನೆ ಭಾಗ.

4

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಹಾಡಿಯ ಕಥಾಸಂಗ್ರಹದಲ್ಲಿ ೧, ೨, ೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ವಾಕ್ಯರಚನೆಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಹಾಕಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವದು ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ —ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಘನತೆಯುಳ್ಳ ಸ್ತ್ರೀಯರ ಚರಿತ್ರೆಯು.

ಚಿತ್ರ ಸಹಿತವಾದುದು.

2

ರಾಣೀವಾಸದವರು, ವಿದ್ಯಾರ್ಥಿನಿಯರು, ಸಾಮಾನ್ಯಸ್ತ್ರೀಯರು ಸಕಲರಿಗೂ ಸರ್ವೋತ್ತಮವಾದ ಮೇಲ್ಪಂಕ್ತಿಯನ್ನು ಹೇಳಿಕೊಡುವ ಪುಸ್ತಕ. ಮೊದಲನೆ ಸಲ ಪ್ರಿಂಟಾದ ಪುಸ್ತಕಗಳೆಲ್ಲಾ ಬಿಕರಿಯಾಗಿರುವುದೇ ಈ ಪುಸ್ತಕದ ಪ್ರಯೋಜನವನ್ನು ಪ್ರಕಾಶಪಡಿಸುತ್ತದೆ. ಈ ಪುಸ್ತಕವನ್ನು ಈಗ ಎರಡನೆಯ ಸಲ ಪ್ರಿಂಟುಮಾಡಿದೆ. ಸೊಗಸಾದ ದಪ್ಪ ಗ್ಲೇಜುಳ್ಳ ಕಾಗದ, ಸುಂದರವಾದ ಬೈಂಡು, ನೇತ್ರಾನಂದಕರವಾದ ಸ್ತ್ರೀಯರ ಛಾಯಾಚಿತ್ರಗಳು, ಮನೋಹರವಾದ ಅವರ ಚರಿತ್ರೆಗಳು—ಇವುಗಳಿಂದ ಕೂಡಿದ್ದಾಗಿದೆ. ಅತ್ಯಂತ ಬಡಬಗ್ಗರೂ ಕೊಂಡು ಓದುವುದಕ್ಕೆ ಅನುಕೂಲವಾಗಲೆಂದು ಈ ಪುಸ್ತಕದ ಕ್ರಯವನ್ನು ಬಹಳ ಅಗ್ಗವಾಗಿ ಮಾಡಿದೆ ಕ್ರಯ ೧ ಪ್ರತಿಗೆ ೨॥ ಆಣೆಮಾತ್ರ. ವಿ. ಪಿ. ಮೂಲಕ ತರಿಸಿ ಕೊಂಡಲ್ಲಿ ೪ ಆಣೆ ಬೀಳುವದು. ವಿಳಾಸ—

ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮೈಸೂರ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಿಂದ

೧೯೦೨—೦೩ ನೇ ಇಸವಿ ಸಿವಿಲ್ ನಂಬರ್ ನಂ ೧೧

ವಾದಿಗಳು.	ಪ್ರತಿವಾದಿಗಳು
೧ ನೇ ಯಜಮಾನ	೧ ನೇ ಸಿದ್ದಪ್ಪ ಧಣಿ.
ಚೆಟ್ಟಾಚಾರಿ	೨ ನೇ ಚಲುವಾಚಾರಿ.
೨ ನೇ ನರಸಿಂಹಾಚಾರಿ.	

ಇದರಿಂದ ತಿಳಿಯಪಡಿಸುವುದೇನೆಂದರೆ.—

ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಕಾಳಮ್ಮನ ದೇವಸ್ಥಾನದ ಆಡಳಿತಗಳನ್ನು ನಡಿಸತಕ್ಕ ಬಗ್ಗೆ ಹೊಸ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳನ್ನು ನೇಮಿಸಿಕೊಡಬೇಕೆಂತಲೂ ಹಾಗೆ ನೇಮಕವಾದ ಮೆಂಬರುಗಳ ಮೂಲಕವೇ ದೇವಸ್ಥಾನದ ಕೆಲಸ ನಡೆಗಬೇಕೆಂತಲೂ ಎರಡನೆ ಪ್ರತಿವಾದಿಯು ಈ ಕೆಲಸಗಳಿಗಾಗಿ ಪ್ರವರ್ತಿಸಕೂಡದೆಂದು ಆರ್ಡರಾಗಬೇಕೆಂತಲೂ ವಾದಿಗಳು ದಾವಾ ತಂದಿರುತ್ತಾರೆ. ಈ ರೀತಿ ಆರ್ಡರು ಕೊಡಿಸುವ ವಿಷಯದಲ್ಲಿ ತಕರಾರು ಉಳ್ಳ ಈ ದೇವಸ್ಥಾನಕ್ಕೆ ಸಂಬಂಧಪಟ್ಟ—ಈ ದೇವಸ್ಥಾನದಲ್ಲಿ ಅಭಿಮಾನವುಳ್ಳ—ಸಮಸ್ತ ಜನಗಳೂ ೧೯೦೫ ನೇ ಇಸವಿ ಏಪ್ರಿಲ್ ಮಾಹೆ ೧೭ ನೇ ತಾರೀಖಿನ ದಿವಿ ೧೧ ಗಂಟೆಗೆ ಈ ಕೋರ್ಟು ರೂಬರೂಬು ಹಾಜರಾಗತಕ್ಕದ್ದಿದೆ.

೨೩ ನೇ ಮಾರ್ಚಿ ೧೯೦೫ ನೇ ಇಸವಿ.

M. RAMASWAMI IYER,
District Judge.

೨ನೆ ಭಾಷೆ ಪ್ರಶ್ನೋತ್ತರ ಲೇಖ್ಯಬೋಧಿನಿ.

ಪ್ರತಿ ೧ಕ್ಕೆ ಕ್ರಯ, ೧ ರೂ ೪ ಆಣೆ.

ಮೆ॥ ಭಾರತಿಸಂಪಂಗಿರಾಮಯ್ಯನವರ ಲೇಖ್ಯಬೋಧಿನಿಯನ್ನು ಲೋಕವ್ಯವಹಾರಚತುರರಾಗಬೇಕೆಂಬ ಸಮಸ್ತರಿಗೂ ಕ್ಷೇಮಾರ್ಥ ಗಳ ಬರೆಯುವದು, ಸಿವಿಲ್, ಕ್ರಿಮಿನಲ್, ರೆವಿನ್ಯು, ಮುಳ್ಕಿ ವ್ಯಾಜ್ಯಗಳು ನಡಿಸತಕ್ಕ ಕ್ರಮ, ಲೇವಾದೇವಿ ವರ್ತಕರ ರೋಜುವರ್ಗ, ದೊಡ್ಡ ಅಕ್ಷು, ಆರಂಸ್ ಲೆಕ್ಕ, ಇತ್ಯಾದಿ ಸಾರಾಂಶಗಳನ್ನೆಲ್ಲಾ ತಿಳಿಸುತ್ತಿದೆ ಪುಸ್ತಕ ಮುಗಿದು ಹೋದೀತು. ಜಾಗ್ರತೆ ಕೆಳಗಿನ ಅಡ್ರಸ್ಸಿಗೆ ಬರೆಯಿರಿ

ಮೋಜಣಿ ಪುಸ್ತಕ.—ಪ್ರತಿ ೧ಕ್ಕೆ ಕ್ರಯ ೧ ರೂ ಮಾತ್ರ. ಸ್ವಲ್ಪಪ್ರತಿಗಳೇ ಉಳಿದಿವೆ ಶೇಕದಾರರಿಗೂ, ರಾಜಭಾಗರಿಗೂ ಜಮೀನ್ದಾರ್ರು ಮೊದಲಾದವರಿಗೆ ಸುಲಭವಾಗಿ ಮೋಜಣಿಮಾಡತಕ್ಕ ಕ್ರಮವನ್ನು ತಿಳಿಸುತ್ತೆ.

ಸುಗಂಧದ್ರವ್ಯಗಳು; ಬಹು ಹೊಸದಾಗಿವೆ.—ರಬಂವಾರ್ ಜವ್ವಾಜಿ ಗಂಧ, ಹಸಿಬಿಲ್ಲೆ ಮತ್ತು ಒಣಗಿದ್ದು, ಊದುಬತ್ತಿ ರಬಂವಾರ್ ಸಹ ಬಿಕರಿಗೆ ಸಿದ್ಧವಾಗಿದೆ. ಅಪೇಕ್ಷೆ ಉಳ್ಳವರು ಕೆಳಗಿನ ವಿಳಾಸದಾರರಿಂದ ವಿ ಪಿ ಮೂಲಕ ತರಿಸಿಕೊಳ್ಳಿ.

ಪಿ. ಕೆ. ಮೂರ್ತಿ ಅಂಡ್ ಕಂಪೆನಿ,
ಬಳೆಪೇಟೆ, ಬೆಂಗಳೂರು ಸಿಟಿ.

WESLEYAN MISSION PRESS, MYSORE.
ವೆಸ್ಲಿಯನ್ ಮಿಷನ್ ಪ್ರೆಸ್.

11

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂತ್ಸೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ಪಟಗಳನ್ನೂ ಅಕ್ಷರಗಳ ಸಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ
ಬರೆದು ತರಿಸಿಕೊಳ್ಳಿ!

21

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅನೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದವು ಚನ್ನಾಗಿಲ್ಲದವು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ. ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೊಸ ನೋಟ್ಸು.

ಮೆಕ್ಮಿಲನ್‌ರವರ ೪, ೬ನೆಯ ಕನ್ನಡ ಪುಸ್ತಕಗಳಿಗೆ
೪ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

2

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನೆಸಹಿತ ಈ ನೋಟ್ಸನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ. ೮ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (೬ನೆ ಭಾಷೆ) ೦—೧—೦
೬ನೆ ತರಗತಿಯ ಪದ್ಯಸಂಗ್ರಹದ ನೋಟ್ಸು ೦—೧—೬
೧೯೦೪ನೆ ವರ್ಷದ ಲೋವರ್ ಸೆಕಂಡರಿ ನೋಟ್ಸು ೦—೭—೦

ವಿಳಾಸ—ಯಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು

ಇಸ್ತಿಹಾರ್

ಮೈಸೂರು ಜಿಲ್ಲೆಯಲ್ಲಿ ೧೯೦೫ ನೇ ಇಸವಿ ಜುಲೈ ಗುತ್ತೆ ಆಗಾಯಿತು ೧೯೦೬ ನೇ ಇಸವಿ ಜೂನ್ ೩೦ ನೇ ತಾರೀಖಿಗೆ ಕೈದಾಗುವ ವರುಷದಲ್ಲಿ ಸರಾಯ್, ಸೇಂದಿ, ಬಿಯರ್, ಗಾಂಜಾ ಮತ್ತು ಅಫೀಂನ ಅಂಗಡಿಯಲ್ಲಿ ವ ಅಂಗಡಿಗಳ ಸಮುದಾಯದಲ್ಲಿ ವಿಕರಿಮಾಡುವ ಸ್ವಾತಂತ್ರ್ಯದ ಹಕ್ಕು ೧೯೦೫ ನೇ ಇಸವಿ ಮಾರ್ಚಿ ೩೧ ನೇ ತಾರೀಖಿನ ಮೈಸೂರು ಗೆಜೆಟ್‌ನಲ್ಲಿ ಪ್ರಾಯಿಸ್ ಆಗಿರುವ ಷರತ್ತುಗಳಿಗೆ ಒಳಪಟ್ಟು, ಅದರಲ್ಲಿ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವವು.

(ರುಜು ಆಗಿದೆ) ಪಿ. ಎನ್. ಪೂರ್ಣಯ್ಯ,
ಎಕ್ಸೈಜ್ ಕಮಿಷನರ್, ಮೈಸೂರು.

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ಏಪ್ರಿಲ್ ತಾ॥ ೬ ನೇ ಗುರುವಾರ

ಸಮುದ್ರಯಾನಕ್ಕೆ ವಿಚಿತ್ರ ಸೌಲಭ್ಯಗಳು.

ಹಿಂದುಗಳು ವಿಲಾಯಿತಿಗೆ ಹೋಗಿ ನಾನಾ ಕೈಗಾರಿಕೆ ವಿದ್ಯೆಗಳನ್ನು ಕಲಿತು ಬಂದು ಹಿಂದುಸ್ಥಾನವನ್ನು ಅಭಿವೃದ್ಧಿಗೆ ತರುವುದಕ್ಕೆ ಕುತೂಹಲಪಡುತ್ತಿದ್ದಾರಷ್ಟೆ. ಈ ಕುತೂಹಲವು ಸಾರ್ಥಕವಾಗುವುದಕ್ಕೆ ಜಾತಿಕಟ್ಟಲೆಯೇ ದೊಡ್ಡ ಪ್ರತಿಬಂಧಕವಾಗಿರುವುದು. ಜಾತಿಯನ್ನು ಉಳಿಸಿಕೊಂಡು, ಸಮುದ್ರಯಾನ ಜನ್ಯ ದೂಷಿಸಿವಾಗಗಳನ್ನೂ ಮಾಡಿ ಬರುವುದು ಸಾಧ್ಯವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇಂಥವರ ಅಭಿಮತವೇನೆಂದರೆ—ಹಿಂದುಸ್ಥಾನದಿಂದ ವಿಲಾಯಿತಿಗೆ ಹೋಗಿ ಬರುವ ಹಡಗುಗಳಲ್ಲಿ ಇಬ್ಬರು ಬ್ರಾಹ್ಮಣರನ್ನು ಸೇವಕರಾಗಿ ನೇಮಿಸಬೇಕು. ಈ ಹಡಗುಗಳು ತಂಗುವ ಸಮುದ್ರ ತೀರ ಪಟ್ಟಣಗಳಲ್ಲಿ ಬ್ರಾಹ್ಮಣರಿಂದ ಹೋಟೆಲುಗಳನ್ನು ಇಡಿಸಿರಬೇಕು. ಲಂಡನ್ ಪಟ್ಟಣದಲ್ಲಿ ಬ್ರಾಹ್ಮಣರ ಕೇರಿಯೊಂದನ್ನೂ, ಹನ್ನೆರಡು ಸಂಸಾರಗಳಿರುವುದಕ್ಕೆ ಸ್ಥಳಸತಿಯನ್ನೂ ಕಲ್ಪಿಸಿಕೊಡಬೇಕು. ಈ ಹನ್ನೆರಡು ಮನೆಗಳೂ ಬ್ರಾಹ್ಮಣರಿಂದಲೇ ನಡಸಲ್ಪಡುವ ಹೋಟೆಲುಗಳಾಗಿರಬೇಕು. ಶ್ರಾದ್ಧಾದಿ ಮತಕರ್ಮಗಳನ್ನು ಮಾಡಿಸುವುದಕ್ಕೆ ಇಬ್ಬರು ವೈದಿಕರನ್ನು ಸಂಬಳ ಕೊಟ್ಟು ಇಡಬೇಕು. ಒಂದು ವಿಷ್ಣು ದೇವಸ್ಥಾನವನ್ನೂ ಒಂದು ಶಿವದೇವಸ್ಥಾನವನ್ನೂ ಕಟ್ಟಿಸಿ, ಅಲ್ಲಿ ಯಥಾವಿಧಿಯಾಗಿ ಪೂಜೆ ಪುರಸ್ಕಾರಗಳು ನಡೆಯುವಂತೆ ಏರ್ಪಡಿಸಬೇಕು. ಹೀಗೆ ಹೋಟೆಲುಗಳಲ್ಲೂ ದೇವಸ್ಥಾನಗಳಲ್ಲೂ ನೇಮಕವಾಗುವ ಬ್ರಾಹ್ಮಣರಿಗೂ ಕರ್ಮಗಳನ್ನು ಮಾಡಿಸುವ ವೈದಿಕರಿಗೂ ಇಂಗ್ಲಿಷ್ ವಿದ್ಯೆಯು ಮಾತನಾಡುವುದಕ್ಕೂ ಓದುವುದಕ್ಕೂ ಬರೆಯುವುದಕ್ಕೂ ತಿಳಿದಿರಬೇಕು. ಲಂಡನ್ ಪಟ್ಟಣದಲ್ಲಿ ಇಷ್ಟುಮಾತ್ರ ಏರ್ಪಾಡಾದರೆ ಹಿಂದುಗಳು ಈಗಿಂತಲೂ ವಿಶೇಷವಾಗಿ ಸಮುದ್ರಯಾನ ಮಾಡುವುದಕ್ಕೂ ಈ ರಾಷ್ಟ್ರವನ್ನು ಉಚ್ಛ್ರಾಯ ಸ್ಥಿತಿಗೆ ತರುವುದಕ್ಕೂ ಅನುಕೂಲವಾಗುವುದು. ಈ ರಾಷ್ಟ್ರದಲ್ಲಿ ಮಹಾರಾಜರುಗಳೇ ಮೊದಲಾಗಿ ಮಹದೈಶ್ವರ್ಯವಂತರು ಬಹುಮಂದಿ ಇರುತ್ತಾರೆ, ಇವರೆಲ್ಲಾ ತಕ್ಕಮಟ್ಟಿಗೆ ಈ ಉದ್ದೇಶಕ್ಕೆ ಸಹಾಯಮಾಡಿಯಾರೆನ್ನುವುದಕ್ಕೆ ಸಂದೇಹವಿಲ್ಲ ಎಂಬುದೇ.

ಇಂಥಾ ಕಾರ್ಯವು ಸಾಧ್ಯವೇ? ಜಾತಿಯು ಈಗಲೂ ಹಿಂದುಗಳನ್ನು ಇಷ್ಟು ಬಲವಾಗಿ ಹಿಡಿದಿದೆಯೋ? ಹಿಂದುಗಳು ಅನ್ಯದೇಶಗಳಿಗೆ ವಿಶೇಷವಾಗಿ ಹೋಗದೆ ಇರುವುದಕ್ಕೆ ಜಾತಿಯೇ ಮುಖ್ಯ ಪ್ರತಿಬಂಧಕವೋ? ಎಂಬೀ ಪ್ರಶ್ನೆಗಳು ಹುಟ್ಟುವವು. ಇಂಥಾ ಅಗಾಧವಾದ ಏರ್ಪಾಡು ಹಡಗಿನಲ್ಲೂ ಮತ್ತು ಮಾರ್ಗದಲ್ಲೂ ಲಂಡನ್ ಪಟ್ಟಣದಲ್ಲೂ ಮಾಡುವುದು ಅಸಾಧ್ಯ, ಇದು ಎಂದಿಗೂ ಆಗತಕ್ಕುದಲ್ಲವೆಂದೇ ಖಂಡಿತವಾಗಿ ಹೇಳಬಹುದು. ಮತ್ತು ಜಾತಿಯು ಈಗ ಅಷ್ಟೇನೂ ಪ್ರತಿಬಂಧಕವಾಗಿಲ್ಲವೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ದೇಶಾಂತರಗಳಿಗೆ ಹೋಗಿ ಬರಬೇಕೆಂದು ಕುತೂಹಲಪಡತಕ್ಕವರ ಸಂಖ್ಯೆಯು ಬಹಳವಾಗಿದೆ. ಅವರಿಗೆ ಹೋಗಿ ಬರುವುದಕ್ಕೆ ತಕ್ಕ ಸಹಾಯ ಸಂಪತ್ತಿಗಳು ಮಾತ್ರ ವಿಶೇಷವಾಗಿ ಒದಗುವುದಿಲ್ಲವೆಂದು ಕಾಣುವುದು. ಆದಕಾರಣ ಅಂಥವರಿಗೆ ದ್ರವ್ಯಸಹಾಯವಾಗುವಂತೆ ಏರ್ಪಾಡು ಮಾಡಿದರೆ ಈ ಉದ್ದೇಶವು ಎಷ್ಟೋ ಸಾರ್ಥಕವಾದೀತು.

ಜೀವನ್ಮುಕ್ತಿ.

ಈ ಜೀವಮಾನವು ಒಳ್ಳೆಯದೋ? ಕೆಟ್ಟದ್ದೋ? ನಮ್ಮ ದೇಶದ ಹಿಂದೂ ತತ್ವಶಾಸ್ತ್ರಜ್ಞರನ್ನು ಕೇಳಿದರೆ—ಈ ಜೀವವು ಮಹಾ ದುಃಖಭರಿತವಾದದ್ದು! ಅದರಿಂದ ತಪ್ಪಿಸಿಕೊಂಡು ಹೋಗುವದೇ ಮನುಷ್ಯರಿಗೆ ಅತ್ಯವಶ್ಯವಾದ ಕರ್ತವ್ಯವು ಎಂದು ಹೇಳುವರು. ಅವರ ತಪ್ಪಿಸಿಕೊಳ್ಳುವ ಮಾರ್ಗವನ್ನು ಕಂಡು ಹಿಡಿಯುವದೇ ಮಹಾ ಕಷ್ಟವೆಂಬುದರಲ್ಲಿ ಸಂಶಯವೇ ಇಲ್ಲ. ಮನುಷ್ಯನ ಶರೀರವು ಸಾಯುವಾಗ್ಗೆ ಅವನು ಸಾಯುವದಿಲ್ಲ, ಅವನು ಇನ್ನೂ ಬದುಕುತ್ತಲೆ ಇದ್ದಾನೆ. ಯಾಕಂದರೆ, ಅವನು ಈ ಜೀವಮಾನದಲ್ಲಿ ಒಳ್ಳೇದು ಕೆಟ್ಟದ್ದು ಎಂಬ ಎರಡು ವಿಧವಾದ ಕೃತ್ಯಗಳನ್ನು ಮಾಡಿರುತ್ತಾನಷ್ಟೆ. ಅವನು ತನ್ನ ಬಳಿಕ ಒಳ್ಳೇ ಕೃತ್ಯಗಳಿಗಾಗಿ ಸುಖವನ್ನೂ ಕೆಟ್ಟ ಕೃತ್ಯಗಳಿಗಾಗಿ ದುಃಖವನ್ನೂ ಅನುಭವಿಸುವ ಪ್ರಯುಕ್ತ ಮುಂದೆ ಅನೇಕ ಜನ್ಮಗಳನ್ನು ಎತ್ತಬೇಕೆಂದೂ, ತನ್ನ ಕರ್ಮದ ಫಲವನ್ನು ನಿಶ್ಶೇಷವಾಗಿ ಅನುಭವಿಸುವ ಪರ್ಯಂತವೂ ಯಾವದಾದರೂ ಒಂದು ವಿಧವಾದ ಜನ್ಮವನ್ನು ಹೊಂದುತ್ತಿದ್ದು ಕಡೆಯಲ್ಲಿ ನಿಷ್ಕಾಮನಾಗಿ ಕರ್ಮವಿಮೋಚನಾಗಿ ಭಗವಂತನಲ್ಲಿ ಲೀನನಾಗಿ ತನ್ನ ಈ ಜೀವಮಾನವನ್ನು ಸಂಪೂರ್ಣವಾಗಿ ಮರೆತು ಹೋಗುವವನಾಗುತ್ತಾನೆಂದೂ ಹೇಳುವರು

ಅದಿರಲಿ ಈ ಭವದಿಂದ ತಪ್ಪಿಸಿಕೊಳ್ಳಲು ಅಪೇಕ್ಷಿಸುವದು ಯಾಕೆ? ಎಂದು ಕೇಳೋಣ. ಈ ಭವವು ದುಃಖಭರಿತವಾದುದರಿಂದಲೇ ಇಂಥ ಜೀವಮಾನದಿಂದ ತಪ್ಪಿಸಿಕೊಳ್ಳುವದುತ್ತಮವೆಂದು ಸರ್ವಸಾಧಾರಣವಾಗಿ ಹೇಳುವರಷ್ಟೆ. ಈ ಜೀವದಲ್ಲಿ ವ್ಯಥೆಯೂ ಬೇಸರಿಕೆಯೂ ಶ್ರಮೆಯೂ ಆಶಾಭಂಗವೂ ಇವೇ ಮನುಷ್ಯನ ಪಾಲಿಗೆ ಬಂದಿವೆ, ಮನುಷ್ಯನಿಗೆ ಆಶೆಯೆಂಬುದುಂಟು, ಆದರೆ ತೃಪ್ತಿಯಾಗುವದಂತೂ ಅಪರೂಪವೇ! ನಮ್ಮಲ್ಲಿರುವ ಷಡ್ವೈರಿಗಳು ನಮ್ಮನ್ನು ಕೆಟ್ಟತನದಲ್ಲಿ ಸಿಕ್ಕಿಸುತ್ತವೆ. ಆದದರಿಂದ ಈ ಜೀವವನ್ನು ಬಿಟ್ಟು ಬಿಡುವದರಿಂದಲ್ಲದೆ ಜೀವದ ಕಷ್ಟದಿಂದ ಬಿಡುಗಡೆಯಂತೂ ಇಲ್ಲವೇ ಇಲ್ಲ ಎಂದೀಪ್ರಕಾರ ಜನರು ಪ್ರಲಾಪಿಸುವದನ್ನು ಕೇಳಿದ್ದೇವಷ್ಟೆ. ಆದರೆ ಚಿಂತೆಯೂ ದುಃಖವೂ ವ್ಯಥೆಯೂ ರೋಗವೂ ಏನೂ ಇಲ್ಲದೆ ಸುಖಪಡುವವರು ಇಲ್ಲವೇ ಇಲ್ಲವೋ? ಇಂಥ ಸುಖವನ್ನನುಭವಿಸುವ ಎಳೇ ಮಕ್ಕಳು ಇಲ್ಲವೋ? ಸುಖಸಮಾಧಾನಗಳನ್ನು ಹೊಂದಿರುವ ಮಕ್ಕಳ ಜೀವಮಾನವನ್ನು ಕುರಿತು ನಾವೇನು ಹೇಳೋಣ! ಅವರು ಯಾವ ಪಾಪವನ್ನೂ ಅಪವಿತ್ರತೆಯನ್ನೂ ಕಾಣರು ಅವರು ಬಾಲ್ಯಾವಸ್ಥೆಯನ್ನು ಬಿಟ್ಟು ದೊಡ್ಡವರಾದ ಮೇಲೆಯೂ ಈ ಸ್ಥಿತಿಯಲ್ಲಿ ನೆಲೆಗೊಂಡಿರುವದಾದರೆ ಅವರು ಅಂಥ ಜೀವಮಾನದಿಂದ ತಪ್ಪಿಸಿಕೊಳ್ಳುವದಕ್ಕೆ ಆಶೆಪಟ್ಟಾರೋ? ಎಷ್ಟು ಮಾತ್ರವೂ ಇಲ್ಲ. ಇದನ್ನು ನಾವು ಆಲೋಚಿಸಿ ನೋಡಲಾಗಿ—ದುಃಖಭರಿತವಾದ ಬಾಳಿನಲ್ಲಿ ಸಿಕ್ಕಿಕೊಂಡು ತೊಳಲುತ್ತಿರುವ ಜನರಲ್ಲದೆ ದುಃಖವೆಂಬುದನ್ನೇ ಅರಿಯದ ಜನರೂ ಇದ್ದಾರೆಂಬುವದು ಗ್ರಹಿಕೆಗೆ ಬರುತ್ತದೆ. ಜೀವಮಾನದಲ್ಲಿ ದುಃಖವು ಬೆರೆದಿದೆಯೇ ಹೊರತು ಜೀವಮಾನವೇ ದುಃಖಮಯವಾಗಿದೆಯೆಂದು ಹೇಳಲಾಗುವದಿಲ್ಲ.

ಚಿಂತೆಯೂ ದುಃಖವೂ ದುಷ್ಕೃತ್ಯವೂ ಆಶಾಭಂಗವೂ ಇಲ್ಲದಿರುವಂಥ ಮತ್ತು ಮರಣಕಾಲದಲ್ಲಿ ಅಂತ್ಯವಾಗದಂಥ ಜೀವನವು ಇರುವದಾದರೆ ಅಂಥ ಜೀವಮಾನದಲ್ಲಿ ನೆಲೆಗೊಂಡಿರುವದು ಮನುಷ್ಯನಿಗೆ ಎಷ್ಟು ಉಲ್ಲಾಸಕರವಾಗಿರಬೇಕು! ಒಳ್ಳೇ ಜೀವಮಾನಕ್ಕೆ ತಪ್ಪಿಸಿಕೊಳ್ಳುವದು ಪ್ರಧಾನ ಕರ್ತವ್ಯವಲ್ಲ, ಜೀವಮಾನವನ್ನು ದುಃಖಭರಿತವಾದುದನ್ನಾಗಿ ಮಾಡುವಂಥ ಕಾರಣಗಳಿಂದ ಬಿಡುಗಡೆಯನ್ನು ಹೊಂದುವದು ವಿಶೇಷವಲ್ಲವೇ? ಜೀವಮಾನದ ಕಷ್ಟಗಳನ್ನೆಲ್ಲಾ ಹೋಗಲಾಡಿಸಿ ಯಾವ ಪುರುಷನು ನಮಗೆ ಪವಿತ್ರವಾದಂಥ ಸುಖಜೀವನವನ್ನು ಕೊಡುವನಾದರೆ ಆ ಪುರುಷನು ನರಕುಲಕ್ಕೇ ಮಹಾ ಸ್ನೇಹಿತನಾಗಿರುವನಲ್ಲವೇ?

ಹೌದು, ಅಂಥ ಸ್ನೇಹಿತನೊಬ್ಬನಿದ್ದಾನೆ. ಆ ಯೇಸುಸ್ವಾಮಿಯು—"ಮನುಷ್ಯರು ಜೀವವನ್ನು ಹೊಂದುವದಕ್ಕೂ ಅದು ಯೂ ಅದನ್ನು ಹೇರಳವಾಗಿ ಹೊಂದುವದಕ್ಕೂ ನಾನು ಬಂದಿನೆ" ಎಂದು ಹೇಳಿದ್ದಾನೆ. ಇದರ ತಾತ್ಪರ್ಯವೇನಂದರೆ—ಬೆರೆಯದ ಸುಖ ಜೀವನವನ್ನು ತಾನು ಕೊಡುವೆನೆಂದು ಹೇಳುತ್ತಾನೆ. ಯೇಸುಸ್ವಾಮಿಯು ವಾಗ್ದಾನ ಮಾಡಿರುವ ಜೀವವನ್ನು ಯಾವ ಮನುಷ್ಯನು ಹೊಂದುತ್ತಾನೋ ಅವನು ಆ ಜೀವಮಾನವನ್ನೇ ವಿಸರ್ಜಿಸುವದಕ್ಕೆ ಇಷ್ಟಪಡುವನೇ? ಎಂದಿಗೂ ಇಲ್ಲ. ದುಃಖಕ್ಕೆ ಕಾರಣವಾದ ಕಾರ್ಯವನ್ನೇ ಯೇಸುಸ್ವಾಮಿಯು ಸಮೂಲವಾಗಿ ನಾಶಮಾಡುವದರಿಂದ ಆ ನಿಂತ ಜೀವನವು ಸುಖಮಾನವಾಗಿರುತ್ತದೆ. ಅದು ಹ್ಯಾಗಂದರೆ—ಕಳೆದುಕೊಂಡಿರುವ ಪವಿತ್ರ ಸ್ಥಿತಿಯನ್ನು ಆತನು ನಮಗೆ ತಿರುಗಿ ಕೊಡಿಸುತ್ತಾನೆ. ದೇವರು ಪ್ರೀತಿಸ್ವರೂಪನಾಗಿದ್ದಾನೆಂದು ಅನುಭವಪೂರ್ವಕವಾಗಿ ತಿಳಿಯುವಂತೆ ಮಾಡುತ್ತಾನೆ. ಈ ಜೀವಮಾನದಲ್ಲಿ ನಮಗೆ ಅವಶ್ಯವಾಗಿರುವ ವಸ್ತುಗಳನ್ನೆಲ್ಲಾ ಭಗವಂತನು ಕೊಡುವನೆಂಬ ನಿಶ್ಚಯಾರ್ಥವನ್ನು ನಮ್ಮಲ್ಲಿ ಹುಟ್ಟಿಸುತ್ತಾನೆ. ಕ್ರಿಸ್ತನು ಕೊಡುವ ಜೀವದಲ್ಲಿ ಹೃದಯನಿರ್ಮಲತೆಯೂ ಸಂತೃಪ್ತಿಯೂ ಸಮಾಧಾನವೂ ಸಂತೋಷವೂ ಕೂಡಿವೆ. ಈ ಜೀವವು ಕ್ಷಯಿಸಿ ಹೋಗುವದೋ ನಾಶವಾಗಿ ಹೋಗುವದೋ ಎಂಬ ಭಯವು ನಮಗಿರುವದಿಲ್ಲ. ಇದಕ್ಕೆ ಕಾರಣವೇನಂದರೆ "ಆ ಜೀವವನ್ನು ಆತನು ನಮಗೆ ಹೇರಳವಾಗಿ ಕೊಡುವನು" ಹ್ಯಾಗಂದರೆ—ನಾನು ಕೊಡುವ ಆ ಜೀವನವು ಪ್ರೋತ್ಸಾಹಯನ್ನೂ ಅಭಿವೃದ್ಧಿಯನ್ನೂ ಸಂಪೂರ್ಣತ್ವವನ್ನೂ ಹೊಂದುವ ಹಾಗೆ ನೋಡಿಕೊಳ್ಳುತ್ತೇನೆ ಎಂದು ಆತನು ಹೇಳುತ್ತಾನೆ. ಹೀಗೆ ಆತನು ಮಕ್ಕಳಿಗೆ ಸ್ವಾಭಾವಿಕವಾಗಿರುವ ನಿರ್ಮಲತ್ವವನ್ನೂ ಸುಖವನ್ನೂ ಮಾತ್ರವಲ್ಲದೆ, ದೊಡ್ಡವರಾಗಿ ಬೆಳೆದವರ ಅಕ್ಕರೆಗಳಿಗೂ ಸರಿಹೋಗುವಂಥ ಸುಸಕ್ತಿಗಳನ್ನೂ ಕೊಡುತ್ತಾನೆ.

ಆದಕಾರಣ ಈ ಜೀವಮಾನವನ್ನು ದುಃಖಮಯವಾದದ್ದೆಂದು ತಿಳಿಯಬಾರದು. ರೋಗವೂ ಮರಣವೂ ಚಿಂತೆಯೂ ಕೂಡ ಜೀವಕ್ಕೆ ಭಾರವಾಗಿವೆ ನಿಜ. ಆದರೆ ಅವು ಜೀವವನ್ನು ಬಾಧಿಸತಕ್ಕವುಗಳೇ ಹೊರತು ಅವೇ ಜೀವವಲ್ಲ. ನಾವು ಕ್ರಿಸ್ತನಲ್ಲಿಗೆ ಬಂದು—ನೀನು ವಾಗ್ದತ್ತ ಮಾಡಿದ ಜೀವವನ್ನು ಕೊಡು ಎಂದು ಕೇಳಿದರೆ ಆತನು ಅದನ್ನು ನಮಗೆ ಕೊಡುವನು. ಆ ಜೀವವು ನಿತ್ಯವಾದುದರಿಂದ ಅದಕ್ಕೆ ಕೊನೆಯೇ ಇರುವದಿಲ್ಲ.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



13

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. (ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಪಟ್ಟು ಬಿದ್ದರೂ ಜಾರಿಯಂತ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕೆನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ತಕ್ಷಣ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ ; ೨ ರೂ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್

ಸ್ವದೇಶದ ವೃತ್ತಾಂತಗಳು.

ಮೊನ್ನೆ ಸೋಮವಾರ ಸಮಾರಾತ್ರಿಯಲ್ಲಿ ಮೈಸೂರಿನ ಈ ಭಾಗಕ್ಕೆ ಸ್ವಲ್ಪ ಮಳೆ ಆಯಿತು.

****

ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಜೇಮ್ಸ್ ಬೂರ್ಡಿಲನ್ ಅವರು ಬೇಸಿಗೆ ಕಳೆಯುವ ಉದ್ದೇಶ್ಯ ಬೆಂಗಳೂರಿಂದ ನೀಲಗಿರಿಗೆ ದಯಮಾಡಿದಾರೆ. .

****

ಮೈಸೂರು ಪಟ್ಟಣದ ಲಷ್ಕರ್ ಮಂಡಿ ಮೊಹಲ್ಲಾಗಳಲ್ಲಿ ... ಗಳನ್ನು ಒಡೆದು ಅಸ್ತಿಗಳನ್ನು ಹಾಕಿ ಪದಂತಿ ಮುಂತಾದ್ದಕ್ಕೆ ಸರ್ಕಾರದವರು ೫,೩೩,೩೧೯ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ರವಿನ್ಯೂ ಕಮಿಷನರಾದ ಮೆ॥ ಟಿ. ಆನಂದರಾಯರವರು ...ದ ವಾರ ಡಿಸ್ಟ್ರಿಕ್ಟುಗಳ ಸಂಚಾರವನ್ನು ತೀರಿಸಿಕೊಂಡು ಬೆಂಗ...ರಿಗೆ ವಾಪಸು ಬಂದರು

* * * *

ದಿವಾನರವರ ಅಸಿಸ್ಟೆಂಟ್ ಸೆಕ್ರೆಟರಿ ಮೆ॥ ಎಂ ಶಾಮರಾಯ... ವ್ಯವಸಾಯದ ಬ್ಯಾಂಕುಗಳ ಸೂಪರಿಂಟೆಂಡೆಂಟರಾಗಿ ...ರವರು ನೇಮಕವಾಗಿದಾರೆ.

* * * *

...ಪಟ್ಟಣದಲ್ಲಿರುವ ವೆ॥ ಬೆಳ್ಳೂರು ಸಿದ್ಧಾಂತಿ ರಾಮಶಾಸ್ತ್ರಿಗ...ಳೇ ವಿದ್ವಾಂಸರು ಸಂವತ್ಸರದ ಪಂಚಾಂಗವನ್ನು ತಯಾರುಮಾ...ಡಿ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿದಾರೆ.

* * * *

ಮೈಸೂರು ಸಿಟಿ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮೆ॥ ನಾಗ...ರ್ ಯವರಿಗೆ ಬೆಂಗಳೂರಿಗೆ ವರ್ಗವಾಯಿತು. ರೈಲ್ವೆ ಪೋಲೀಸ್ ...॥ ನಾರಿಸ್ ಯವರು ಸಧ್ಯ ಮೈಸೂರು ಪೋಲೀಸ್ ಇನ್ಸ್‌ಪೆಕ್ಟರಾ...ದಾರೆ

* * * *

...ಗಲೂರು ತಾಲ್ಲೂಕು ಬಿಳಚೋಡು ಗ್ರಾಮದಲ್ಲಿ ಕಳೆದ ...ಗಳ ಮೊದಲನೆ ವಾರ ವಂತಿ ಮುತ್ತೈನ ಕೃಷ್ಣಾಚಾರ್ರಿ ಮನೆಗ...ಳ್ಳರು ಬಿದ್ದು ಸುಮಾರು ೫,೦೦೦ ರೂಪಾಯಿ ನಗನಾಣ್ಯಗಳನ್ನು ...ಟಿಕೊಂಡು ಹೋದರು.

* * * *

ಅರಸೀಕೆರೆ ತಾಲ್ಲೂಕಿನಲ್ಲಿ ಹುಲಿಯಿಂದ ಗಾಯಪಟ್ಟ ಮೆ॥ ರಿಕ್ಸ್...ಯವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ...ಂದುತ್ತಿದಾರೆ ಅವರಿಗೆ ದಿನೇ ದಿನೇ ಸ್ವಲ್ಪ ಸ್ವಲ್ಪ ವಾಸಿಯಾ...ತ್ತು ನೊನ್ನೆ ಕಾಯಿಲೆ ತುಂಬಾ ಹೆಚ್ಚಾಗಿತ್ತೆಂದು ವರ್ತಮಾ...ನ ಬಂತು.

* * * *

ಮೈಸೂರು ಸಂಸ್ಥಾನದ ಕಂಟ್ರೋಲರಾದ ಮೆ॥ ಬಾಸು ಯವ...ರು ಬೆಂಗಳೂರಿನಲ್ಲಿರುವ ಹುಜೂರು ಖಜಾನೆಯನ್ನು ತೆಗೆದುಹಾಕ...ಬೇಕೆಂತಲೂ ಸರ್ಕಾರಿ ಹಣವನ್ನೆಲ್ಲಾ ಮದರಾಸ್ ಬ್ಯಾಂಕಿನ...ಲ್ಲಿ ಅವಶ್ಯಬಿದ್ದ ಹಾಗೆ ತೆಗೆದುಕೊಳ್ಳುತ್ತಾ ಬರಬಹುದೆಂತಲೂ ...ರ್ನಮೆಂಟಿಗೆ ಸಲಹೆ ಕೊಟ್ಟಿದಾರೆ.

* * * *

ಇದುವರೆಗೆ ಬೆಂಗಳೂರಿನಲ್ಲಿ ಗವರ್ನಮೆಂಟ್ ಪ್ರೆಸ್ ಸೂಪರ...ರಾಗಿದ್ದ ಮೆ॥ ಹ್ಯಾಂ ಡೈಟ್ ಯವರನ್ನು ಸರ್ಕಾರದವರು ...ಲೀಸ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟಾಗಿ ಕೆಲಸಮಾಡು...ಲು ವರ್ಗಮಾಡಿ, ಗವರ್ನಮೆಂಟ್ ಪ್ರೆಸ್ ಕೆಲಸಕ್ಕೆ ಮದರಾಸಿ...ನ ಮೆ॥ ಹೋಟ್ಸ್ ಎಂಬುವರನ್ನು ಕರೆಸಿ ನೇಮಿಸುತ್ತಾರೆ

* * * *

ರೇಟ್ ಅಬ್ದುಲ್ ರಹಮಾನ್ ಸಾಹೇಬ್, ಖಾನ್ ಬಹದೂರ್, ಯ...ರು ಈ ಸಂಸ್ಥಾನದಲ್ಲಿ ಬಹುಕಾಲ ಸರ್ವಿಸ್ ಮಾಡಿದವರೆಂಬು...ದನ್ನು ಪರಿಗಣಿಸಿ, ಮೈಸೂರು ಸರ್ಕಾರದವರು ಅವರ ಮೂರು ...ದ ಚಿಕ್ಕ ಮಕ್ಕಳಿಗೂ ೨೧ ವಯಸ್ಸಾಗುವ ತನಕ ತಲಾ ೩೦ ...ಯನಂತೆ ಮಾಸಾಶನವನ್ನು ಕೊಡುತ್ತಾ ಬರಬೇಕೆಂದು ...ಜ್ಞಾಪನೆ ಮಾಡಿದಾರೆ

* * * *

ಬಾಗೇಪಲ್ಲಿಯ ಅಮಲ್ದಾರ್ ಮೆ॥ ಅಬ್ದುಲ್‌ಜಲೀಲ್ ಯವರು ...ದಿನ ವಾರ ಉಬ್ಬಸ ರೋಗದಿಂದ ಕಾಲಗತಿಯನ್ನು ಹೊಂದಿದ...ರು ತಿಳಿಸಲು ವಿಷಾದಿಸುತ್ತೇವೆ. ಇವರು ಲೇಟ್ ಕೌನ್ಸಿಲರ್ ...ದ್ದರ್ ರಹಮಾನರವರ ಜೇಷ್ಠಪುತ್ರರು. ಇವರು ಕಳೆದ ೧೮೮೯ ...ಇಸವಿಯಲ್ಲಿ ಸರ್ವಿಸಿಗೆ ಸೇರಿ, ೧೮೯೮ ನೇ ಜುಲೈ ತಿಂಗಳಲ್ಲಿ ...ಮಲ್ದಾರಿಯನ್ನು ಪಡೆದರು ಅವರಿಗೆ ವಿವಾಹವಾಗಿರಲಿಲ್ಲ

* * * *

ಮೆ॥ ಮಾಧವಾನಂದರೆಂಬುವರು ಹುಬ್ಬಳ್ಳಿಯ ನೀರಕ್ಷವಿ... ಪ್ರೆಸ್ಸಿನಲ್ಲಿ "ಆರ್ಯಧರ್ಮ ಪತ್ರಿಕೆ" ಎಂಬ ವರ್ತಮಾನ ...ಕೆಯನ್ನು ವಾರಕ್ಕೊಮ್ಮೆ ಪ್ರಕಟಿಸಲಾರಂಭಿಸಿದಾರೆ. ದೇಶದ ...ಜೆಗಳು ವಿದ್ಯಾವಂತರಾದ ಹಾಗೆಲ್ಲಾ ವರ್ತಮಾನ ಪತ್ರಿಕೆಗ...ಳು ಹೆಚ್ಚುತ್ತಾ ಬರುವವು. ಈ ಪತ್ರಿಕೆಯು ಆಳುವವರಿಗೂ ಪ್ರಜೆ...ಗಳಿಗೂ ಹಿತಕಾರಿಯಾಗಿ ಅಭಿವೃದ್ಧಿಯಾಗಲೆಂದು ಹಾರೈಸುತ್ತೇವೆ

* * * *

...ರಾಜಧಾನಿಗೆ ಹೊರಗಿನಿಂದ ಬರತಕ್ಕ ಪ್ರಜೆಗಳನ್ನು ಡಾಕ್ಟರುಗ...ಳು ೫ ದಿನಗಳ ತನಕ ಪರಿಕ್ಷೆ ಮಾಡುತ್ತಿದಾರಷ್ಟೆ. ಈ ಪದ್ಧತಿ...ಯನ್ನು ಸಧ್ಯ ನಿಲ್ಲಿಸುವವರಾಗಿಲ್ಲ. ಇನ್ನೊಂದು ವರುಷ ನಡೆಯು...ತ್ತದೆ. ರಾಜಧಾನಿಯಲ್ಲಿ ಇಲಿಗಳಿಂದಲೇ ಪ್ಲೇಗ್ ಬರು...ವುದರಿಂದ ಅದನ್ನು ನಿರ್ಮೂಲಮಾಡಬೇಕೆಂದೂ ತೀರ್ಮಾನವಾಗಿ ...ದಕ್ಕೆ ಸರ್ಕಾರದಿಂದ ೧,೦೦೦ ರೂಪಾಯಿ ಸ್ಯಾಂಕ್ಷನ್ ಆಗಿದೆ

* * * *

ಶ್ರೀಮನ್ ಮಹಾರಾಜರವರು ತಾ ೧೧ನೇ ಸೋಮವಾರ ...ರ್ ಕಾರ್ ಎಂಬ ಗಾಡಿಯಲ್ಲಿ ಕುಳಿತು ರಾಜಧಾನಿಯನ್ನು ...ಟ್ಟು ನೀಲಗಿರಿ ಬೆಟ್ಟಕ್ಕೆ ಪ್ರಯಾಣ ಮಾಡುವವರಾಗಿದಾರೆ. ...ಸಂಗಡ ಯುವರಾಜರವರು, ಮೆ॥ ಗಳಾದ ಮೆಕಾನಕಿಯವ...ರು, ...ಹೀಲ್‌ಯವರು, ರಾಘವೇಂದ್ರರಾಯರು ಸಹ ಹೋಗುವರು. ...ಮಹಾತೃಶ್ರೀ ಯವರೇ ಮೊದಲಾದ ರಾಜವರ್ಗದವರು ರೈಲಿನ ...ಲ್ಲಿ ದಯಮಾಡುವರು.

* * * *

ಕೊನ್ನೆ ಸೋಮವಾರ ಸಾಯಂಕಾಲ ರಾಜಧಾನಿಯಲ್ಲಿ ಸಾ...ರ್ ಮೆ॥ ನೀಲಗಿರಿ ದೊಡ್ಡ ಬಾಪಣ್ಣನವರು ಸ್ವಗೃಹದಲ್ಲಿ ...ದರೆಂದು ತಿಳಿಸಲು ವಿಷಾದಿಸುತ್ತೇವೆ ಇವರಿಗೆ ಒಬ್ಬ ಕುಮಾರನೂ ಇಬ್ಬರು ದೊಡ್ಡ ಹೆಣ್ಣು ಮಕ್ಕಳೂ ಮೊಮ್ಮಕ್ಕಳೂ ಇರುತ್ತಾರೆ. ಅಂತ್ಯಕಾಲದಲ್ಲಿ ಅವರಿಗೆ ೫೬ ವಯಸ್ಸಾಗಿತ್ತು. ಆ ರಾತ್ರಿಯೇ ಶವವನ್ನು ಬಹಳ ಅಟ್ಟಹಾಸವಾಗಿ ಮೆರವಣಿಗೆ ಮಾಡಿಕೊಂಡು ಹೋಗಿ ದಹನ ಮಾಡಿದರು.

* * * *

ಹೊಳಲ್ಕೆರೆಯಲ್ಲಿ ಅಮಲ್ದಾರರು ಮುಸಾಫರಿ ಬಂಗಲೆಯ ಒಂದು ಭಾಗದಲ್ಲಿ ಇದ್ದುಕೊಂಡಿದಾರೆ. ಇನ್ನೊಂದು ಭಾಗವನ್ನು ಅಲ್ಲಿನ ಇಂಜನಿಯರ್ ಆಫಿಸರಿಗೆ ಯಾಕೆ ಬಿಟ್ಟುಕೊಂಡಬಾರದೆಂದು ಎಕ್ಸಿಕ್ಯುಟಿವ್ ಇಂಜನಿಯರು ಪ್ರಶ್ನೆಮಾಡಿದರು. ಡಿಸ್ಟ್ರಿಕ್ಟ್ ಬೋರ್ಡಿನವರು ಅದು ಆಗಲಾರದೆಂದು ತಿರಸ್ಕರಿಸಿ, ಪ್ರಯಾಣಿಕರಿಗೆ ತೊಂದರೆಯಾಗುವುದೆಂದು ಹೇಳಿದರು. ಯಂತೂ ಪ್ರಯಾಣಿಕರಿಗೆ ಅಡಚಣೆಯಾಗಿ ಅಧಿಕಾರಿಗಳು ಮುಸಾಫರಖಾನೆಗಳನ್ನು ಆಕ್ರಮಿಸಿಕೊಳ್ಳುವುದು ತರವಲ್ಲ.

* * * *

ದಾವಣಗೆರೆಯ ಅಮಲ್ದಾರ್ ಮೆ॥ ವೆಂಕಟೇಶಯ್ಯನವರು ಬೆಂಗಳೂರು ಸ್ವಯೋರ್ನದಯ ಪತ್ರಿಕಾ ಎಡಿಟರ ಮೇಲೆ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟದ ದಾವಾ ತಂದಿದ್ದರಷ್ಟೆ ಎಡಿಟರು ತಮ್ಮ ಪತ್ರಿಕೆಯಲ್ಲಿ ಮೆ॥ ವೆಂಕಟೇಶಯ್ಯನವರ ಮೇಲೆ ಪ್ರಕಟಿಸಿದ್ದ ವಿಷಯಗಳು ನಿಜವಲ್ಲವೆಂದೂ, ಅದಕ್ಕಾಗಿ ವಿಷಾದಪಟ್ಟು ಅವರ ಕ್ಷಮಾಪಣೆ ಕೇಳಿಕೊಳ್ಳುತ್ತೇವೆಂದೂ, ಈ ಸಂಗತಿಯನ್ನೇ ತಮ್ಮ ಪತ್ರಿಕೆಯಲ್ಲಿ ಮೂರು ವಾರ ಪ್ರಕಟಿಸಿ, ದಾಖಲೆ ಬಗ್ಗೆ ಪತ್ರಿಕೆಗಳನ್ನು ಗವರ್ನಮೆಂಟಿಗೆ ಕಳುಹಿಸಿಕೊಡುತ್ತೇವೆಂತಲೂ ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು ಮೆ॥ ವೆಂಕಟೇಶಯ್ಯನವರು ಅದರಂತೆ ಒಪ್ಪಿಕೊಂಡು, ತಮ್ಮ ಫಿರ್ಯಾದನ್ನು ವಾಪಸು ತೆಗೆದುಕೊಂಡಿರುತ್ತಾರೆ.

* * * *

ಶ್ರೀಶಿವಗಂಗಾ ಸ್ವಾಮಿಗಳವರು ರಾಜಧಾನಿಗೆ ದಯಮಾಡಿ ಮಹಾರಾಜರವರ ಸಂಸ್ಕೃತಕಾಲೇಜ್ಜಿನಲ್ಲಿ ಬಿಡಾರ ಮಾಡಿಕೊಂಡಿದಾರಷ್ಟೆ ಕಳೆದ ಗುರುವಾರ ಶ್ರೀಮನ್ಮಹಾರಾಜರವರು ಸ್ವಾಮಿಗಳನ್ನು ಅರಮನೆಗೆ ಕರೆಸಿಕೊಂಡು, ಪಾದಪೂಜೆ ಮಾಡಿದರು ಮಹಾರಾಜರವರೂ ರಾಜವರ್ಗದವರೂ ಸುಮಾರು ೧,೦೦೦ ರೂಪಾಯಿ ಕಾಣಿಕೆಯನ್ನೂ ಬಿಲ್ವತ್ತುಗಳನ್ನೂ ಒಪ್ಪಿಸಿ, ತೀರ್ಥಪ್ರಸಾದವನ್ನೂ ಆಶೀರ್ವಾದವನ್ನೂ ಪಡೆದರು. ಸ್ವಾಮಿಗಳವರು ಶನಿವಾರ ಸಾಯಂಕಾಲ ಅದೇ ಕಾಲೇಜು ಕಟ್ಟಡದಲ್ಲಿ ಪುರಜನರನ್ನು ಬರಮಾಡಿಕೊಂಡು, ಕರ್ಮಯೋಗವನ್ನು ಕುರಿತು ಎರಡುವರೆ ಗಂಟೆಯ ಹೊತ್ತು ಉಪನ್ಯಾಸ ಮಾಡಿದರು ಭಾನುವಾರ ಸಾಯಂಕಾಲ ೪ ಗಂಟೆಗೆ ಸ್ವಾಮಿಗಳು ಭಕ್ತಿ ಮತ್ತು ಜ್ಞಾನಯೋಗಗಳ ವಿಷಯವಾಗಿ ಭಾಷಣ ಮಾಡಿದರು ಆ ದಿವಸ ಶ್ರೀಮನ್ಮಹಾರಾಜರವರೂ ದಯಮಾಡಿ ೫॥ ಗಂಟೆಯ ತನಕ ಉಪನ್ಯಾಸವನ್ನು ಕೇಳಿದರು. ಬಹು ಮಂದಿ ಅರಸುಗಳೂ ಹಾಜರಾಗಿದ್ದರು ಸ್ವಾಮಿಗಳವರ ವಿದ್ಯಾಪ್ರೌಢಿಮೆಯೂ ವಾಗ್ಮಿಯೂ ಸ್ತೋತ್ರಾರ್ಹಗಳಾಗಿವೆ. ಸ್ವಾಮಿಗಳವರು ಇನ್ನು ೩—೪ ದಿನಗಳೊಳಗಾಗಿ ರಾಜಧಾನಿಯಿಂದ ಹೊರಟು, ಹಾಸನದ ಪ್ರಾಂತ್ಯ ಸಂಚಾರ ಮಾಡಿಕೊಂಡು, ಶ್ರೀ ಶೃಂಗೇರಿಗೆ ದಯಮಾಡುವವರಾಗಿದಾರೆಂದು ತಿಳಿಯುವುದು.

ರಷ್ಯಾ ಜಪಾನ್ ಯುದ್ಧವು.

ಕಳೆದವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಕರಾರಿನ ವಿಚಾರವು.

ಲಂಡನ್, ಮಾರ್ಚಿ ೨೫.—ರಷ್ಯಾ ರಾಜ್ಯದಲ್ಲಿ ದೊಡ್ಡ ಮನುಷ್ಯರು ಕರಾರಿನ ವಿಷಯಗಳನ್ನು ಚರ್ಚಿಸಿ ಮಾತನಾಡುತ್ತಿದಾರೆ. ಯಾವ ಯಾವ ರಿಯಾಯಿತಿಗಳನ್ನು ಅಪೇಕ್ಷಿಸುವರೋ ಎಂದು ಜಪಾನಿನವರನ್ನು ಇಷ್ಟರಲ್ಲೇ ಕೇಳುವವರಾಗಿದಾರೆ. ಕರಾರು ಮಾಡಿಕೊಳ್ಳಬೇಕೆಂಬುವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಇನ್ನೂ ಸಾವಕಾಶ ಮಾಡಿದಲ್ಲಿ ಜಪಾನಿನವರಿಗೆ ವಿಶೇಷವಾದ ರಿಯಾಯಿತಿಗಳನ್ನು ತೋರಿಸಬೇಕಾಗುವುದೆಂದು ಹೇಳುವರು. ಕರಾರಿನ ಕಲಮುಗಳ ಪ್ರಕಾರ ಉಭಯಪಕ್ಷದವರೂ ನಂಬಿಕೆಯಾಗಿ ನಡಕೊಳ್ಳುವುದನ್ನು ವಿಲಾಯಿತೀ ರಾಜ್ಯದವರೂ ಅಮೇರಿಕದವರೂ ಉಸ್ತುವಾರಿ ನೋಡಬೇಕು. ಜಪಾನಿನವರು ಯುದ್ಧದ ನಷ್ಟದ್ರವ್ಯಗಳನ್ನು ಕೇಳುವುದಿಲ್ಲವೆಂತಲೂ ಅವರು ಅಪೇಕ್ಷಿಸುವ ವಿಷಯಗಳಲ್ಲಿ ಅವರಿಗೆ ಶಾಶ್ವತವಾದ ರಿಯಾಯಿತಿ ತೋರಿಸಿದರೆ ಸಾಕೆಂದು ಒಪ್ಪುತ್ತಾರೆಂತಲೂ ವಿಲಾಯಿತಿಯ ಒಂದು ಪತ್ರಿಕೆ ಹೇಳುವುದು. ಜಪಾನಿನ ವರದಿಗಾರನು ಮಾರ್ಕ್ಸ್ ಓ ಯವರನ್ನು ಕೇಳಿದ್ದಕ್ಕೆ ಅವರು—ಕರಾರು ನಡೆಯುವ ಸಂಭವವಿಲ್ಲವೆಂತಲೂ ಕಡೇ ವರೆಗೂ ಯುದ್ಧ ಮಾಡಿಯೇ ಮುಕ್ತಾಯ ಮಾಡುವುದಕ್ಕೆ ಸಿದ್ಧರಾಗಿದೇವೆಂತಲೂ ಪರರಾಜ್ಯಗಳವರ ಕ್ಷೇಮಕ್ಕಾಗಿಯೂ ಜಪಾನಿನವರು ಈ ಯುದ್ಧವನ್ನು ಪ್ರಾರಂಭಿಸಿ ನಡಸಬೇಕಾಯಿತೆಂತಲೂ ರಷ್ಯಾ ಸೈನಿಕರು ಮಹಾ ಪರಾಕ್ರಮಿಗಳು ಅವರನ್ನು ತುಂಬಾ ಹೊಗಳಬೇಕಾಗಿದೆ ಎಂತಲೂ ಜಪಾನಿನವರ ಉದ್ದೇಶವು ಪರರಾಜ್ಯಗಳಿಗೂ ತೃಪ್ತಿಕರವಾಗಿ ಯುದ್ಧಕಾರ್ಯಗಳನ್ನು ನಡಿಸಿರುತ್ತಾರೆಂತಲೂ ಹೇಳಿದರು.

ರಷ್ಯಾದವರು ಹಿಮ್ಮೆಟ್ಟಿ ಹೋಗುವುದು.

ರಷ್ಯಾದವರು ನಿಧಾನವಾಗಿ ಹಿಮ್ಮೆಟ್ಟಿ ಹೋಗುತ್ತಿದಾರೆ. ಜಪಾನಿನವರಿಗೂ ರಷ್ಯಾದವರಿಗೂ ರೈಲ್ ರಸ್ತೆಯ ಬಳಿಯಲ್ಲಿ ಸಣ್ಣ ಸಣ್ಣ ಕದನಗಳಾಗುತ್ತಿವೆ

ಜನರಲ್ ಗ್ರಿಪ್ಪನ್‌ಬರ್ಗ್ ಯವರಿಗಿದ್ದ ಎರಡನೆ ಮಂಚೂರಿಯಾ ಸೈನ್ಯದ ಹುದ್ದೆಯನ್ನು ಕಿತ್ತುಕೊಂಡಿದೆ ಎಂದು ಹೇಳಲ್ಪಟ್ಟಿದೆ. ಜಾರ್‌ಯವರಿಗೆ ಏಡಿಕಾಂಗರಾಗಿದ್ದ ಕೆಲಸವೇನೋ ಅವರಿಗೆ ತಪ್ಪಲಿಲ್ಲ.

ಕರಾರಿನ ಸೂಚನೆಗಳು.

ಲಂಡನ್, ಮಾರ್ಚಿ ೨೬.—ಕಳೆದ ಶುಕ್ರವಾರ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಮಂತ್ರಿಸಮಾಜದವರು ಸಭೆ ಸೇರಿ ಕರಾರು ಮಾಡಿಕೊಳ್ಳುವ ವಿಷಯವನ್ನು ಚರ್ಚೆ ಮಾಡಿದರೆಂತಲೂ, ತೀರ್ಮಾನವನ್ನು ಮರುದಿನ ಚಕ್ರವರ್ತಿಯವರಿಗೆ ತಿಳಿಸಿದರೆಂತಲೂ ವರ್ತಮಾನ ಬಂದಿದೆ. ಯಾರು ನೋಡಿದರೂ ಕರಾರಿನ ಸಂಗತಿಯನ್ನೇ ಪ್ರಸ್ತಾಪಿಸುತ್ತಿದಾರೆ. ಅತ್ತಲಾಗಿ ಸ್ಕಾಂಡಿನೇವಿಯಾ ಪರ್ಯಾಯ ಪಟ ರಾಜಧಾನಿಯಲ್ಲಿ ರಾಯಭಾರಿಗಳು ಗುಟ್ಟಾಗಿ ಕರಾರಿನ ಕಲಮುಗಳನ್ನು ಕುರಿತು ಚರ್ಚೆ ಮಾಡುತ್ತಿದಾರೆ.

ಚೀಣೆಯವರ ಮೇಲೆ ಬಂದ ಅಪವಾದ ನಿಜವಲ್ಲ.

ಮುಕ್ಡೆನ್ ಪಟ್ಟಣದಲ್ಲಿ ಗಾಯಪಟ್ಟು ಬಿದ್ದುಕೊಂಡಿದ್ದ ರಷ್ಯಾ ಸೈನಿಕರೇ ಮುಂತಾದವರನ್ನು ಚೀಣೆಯವರು ಕೊಂದು ಹಾಕಿದರೆಂಬ ಸುದ್ದಿ ನಿಜವಲ್ಲ.

ಜಪಾನಿಗೆ ಕುದುರೆಗಳ ಸರಬರಾಯಿ.

ಆಸ್ಟ್ರೇಲಿಯಾದಿಂದ ಜಪಾನಿನವರು ೮ ಹಡಗುಗಳಲ್ಲಿ ಕುದುರೆಗಳನ್ನು ತೆಗೆದುಕೊಂಡು ಬರುವವರಾಗಿದಾರೆ. ಅವರ ಕಡೆಯ ಏಜಂಟರು ೧೦,೦೦೦ ಕುದುರೆಗಳನ್ನು ಕೊಂಡುಕೊಂಡಿರುವರು.

ರಷ್ಯಾದವರು ಸೈನ್ಯ ಕೂಡಿಸುವುದನ್ನು ಬಿಟ್ಟರು.

ಲಂಡನ್, ಮಾರ್ಚಿ ೨೮—ರಷ್ಯಾದವರು ಯುದ್ಧಭೂಮಿಗೆ ಅನೇಕ ಸೈನ್ಯವನ್ನು ಹೊಸದಾಗಿ ಕೂಡಿಸಿ ಕಳುಹಿಸಬೇಕೆಂದು ಏರ್ಪಾಡು ಮಾಡುತ್ತಿದ್ದುದನ್ನು ನಿಲ್ಲಿ ಬಿಟ್ಟರು. ಆಗಾಗ್ಗೆ ಅಲ್ಪ ಸ್ವಲ್ಪ ಸೈನ್ಯವನ್ನು ಕಳುಹಿಸುತ್ತಾ ಬರೋಣವೆಂದು ಗೊತ್ತು ಮಾಡಿಕೊಂಡಿದಾರೆ

ಜಪಾನಿನವರು ಸೈನ್ಯಗಳನ್ನು ಕೂಡಿಸಿಕೊಂಡು ರಷ್ಯಾದವರ ಮೇಲೆ ಮತ್ತೆ ನುಗ್ಗಿ ಹೋಗುತ್ತಿದಾರೆ. ರಷ್ಯಾದವರು ಇದನ್ನು ಕಂಡು ಹಿಮ್ಮೆಟ್ಟಲಾರಂಭ ಮಾಡಿದರು.

ಕರಾರಾಗುವ ಏರ್ಪಾಡು.

ಲಂಡನ್, ಮಾರ್ಚಿ ೨೯—ಫ್ರೆಂಚರೂ ಅಮೇರಿಕದವರೂ ಮಧ್ಯಸ್ಥಗಾರರಾಗಿ ನಿಂತು ರಷ್ಯಾ ಜಪಾನಿನವರಿಗೆ ಕರಾರು ಮಾಡಿಸಬೇಕೆಂದು ಪ್ರಯತ್ನ ಮಾಡಲಾರಂಭಿಸಿದಾರೆ ರಷ್ಯಾದವರು ಯಾವ ರೀತಿ ಕರಾರು ನಡೆಯಬೇಕೋ ಗೋಪ್ಯವಾಗಿ ತಿಳಿಸಿರುವರು

ಯುದ್ಧಕಾರ್ಯ.

ತಾ ೨೬ ರಲ್ಲಿ ಹುವಾಂಟಿಯನ್ ಎಂಬ ರಾಜ್ಯದಲ್ಲಿ ಶತ್ರುಗಳು ಸಂಧಿಸಿ ಸಣ್ಣ ಯುದ್ಧ ನಡೆಯಿತು. ಉಭಯ ಸೈನ್ಯಗಳೂ ಎದುರುಬದುರಾಗಿ ನಿಂತಿರುವವು ರಷ್ಯಾದವರು ಚಾಪೋಮಿಯಾಡ್ಸ್ ಎಂಬ ರಾಜ್ಯವನ್ನು ಬಿಟ್ಟು ಹಿಂದಕ್ಕೆ ಹೋದರೆಂದು ಪ್ರಕಟವಾಗಿದೆ.

ಕರಾರಿನ ವಿಚಾರ.

ಲಂಡನ್, ಮಾರ್ಚಿ ೩೦—ರಷ್ಯಾದವರು ಕರಾರು ಮಾಡಿಕೊಳ್ಳುವುದಾದರೆ ತಾವು ಜಪಾನಿನವರಿಗೆ ರಾಜ್ಯವನ್ನು ಬಿಟ್ಟು ಕೊಡುವದಿಲ್ಲವೆಂತಲೂ ಯುದ್ಧದ ನಷ್ಟದ್ರವ್ಯವನ್ನೂ ಕೊಡುವದಿಲ್ಲವೆಂತಲೂ ತಿಳಿಸಿರುವಂತೆ ವರ್ತಮಾನವಿದೆ

ಯುದ್ಧಕಾರ್ಯ ನಿಲ್ಲುವ ಸಂಭವ.

ಲಂಡನ್, ಮಾರ್ಚಿ ೩೦.—ರಷ್ಯಾದವರೂ ಜಪಾನಿನವರೂ ಅಮೇರಿಕದ ಪ್ರೆಸಿಡೆಂಟರಾದ ರೂಸ್‌ವೆಲ್ಟ್ ಯವರನ್ನು ಮಧ್ಯಸ್ಥಗಾರರನ್ನಾಗಿ ನೇಮಕ ಮಾಡಿದಾರೆ. ಅಗಲೇ ಕರಾರಾಗುವುದಕ್ಕೆ ಕಾಗದ ಪತ್ರಗಳು ನಡೆಯುತ್ತಿವೆ ಇಷ್ಟರಲ್ಲೇ ಯುದ್ಧಕಾರ್ಯಗಳನ್ನು ನಿಲ್ಲಿಸುವಂತೆ ಕಾಣುವುದು ಎಂಬುದಾಗಿ ರಷ್ಯಾರಾಜಧಾನಿಯಿಂದ ಒಬ್ಬ ಬಾತ್ಮೀದಾರನು ಲಂಡನ್, ಪಟ್ಟಣದ ಟೈಂಸ್ ಪತ್ರಿಕೆಗೆ ಬರೆದಿರುತ್ತಾನೆ.

ಲಂಡನ್, ಏಪ್ರೈಲ್ ೧.—ಅಮೇರಿಕದ ಪ್ರೆಸಿಡೆಂಟ್ ರೂಸ್ವೆಲ್ಟ್ ಯವರು ಮಧ್ಯಸ್ಥವನ್ನು ವಹಿಸಿ ಕರಾರು ಮಾಡಿಸುತ್ತಾರೆಂಬ ಮಾತು ನಿಜವಲ್ಲವೆಂದು ಅಮೇರಿಕದ ರಾಜಧಾನಿಯಲ್ಲಿ ಪ್ರಕಟವಾಗಿದೆ

ಯುದ್ಧಕಾರ್ಯಗಳು.

ರಷ್ಯಾ ಸೈನಿಕರು ಈಗ ಹೈಚಿಂಗಿನಲ್ಲಿ ರಾಜ್ಯಹಾಕಿಕೊಂಡಿದಾರೆಂತಲೂ ಇಷ್ಟರಲ್ಲೇ ಅವರೆಲ್ಲಾ ಹೊರಟು ೩೩ ಮೈಲಿ ದೂರದಲ್ಲಿರುವ ಕಿರಿನ್ ಪಟ್ಟಣಕ್ಕೆ ಹೋಗಿ ಸೇರಿ, ಅಲ್ಲಿ ನಿಂತು ಯುದ್ಧ ಕೊಡುತ್ತಾರೆಂತಲೂ ಮಾರ್ಷಲ್ ಓಯಮಾಯವರು ತಿಳಿಸುತ್ತಾರೆ.

ಕರಾರಾಗುವುದು ಖಂಡಿತ.

ಲಂಡನ್, ಏಪ್ರೈಲ್ ೩.—ರಷ್ಯಾ ಸರ್ಕಾರದವರು ಕರಾರುಮಾಡಿಕೊಳ್ಳುವುದಿಲ್ಲವೆಂದು ಹೊರಗಡೆ ತಿಳಿಸುತ್ತಿದ್ದಾಗ್ಯೂ ಸಮೀಪದಲ್ಲೇ ಕರಾರಾಗುವುದು ಖಂಡಿತವೆಂಬುದಾಗಿ ರಷ್ಯಾ ರಾಜಧಾನಿಯಲ್ಲೂ ಫ್ರೆಂಚಿನ ರಾಜಧಾನಿಯಲ್ಲೂ ಐಶ್ವರ್ಯವಂತರು ಹೇಳುತ್ತಿದಾರೆ.

ಜಪಾನಿನವರು ಸಾಲಮಾಡಿದ್ದು.

ಜಪಾನ್ ರಾಜ್ಯದವರು ಪರರಾಜ್ಯಗಳಲ್ಲಿ ಹತ್ತು ಕೋಟಿ ದ್ರವ್ಯವನ್ನೂ ತಮ್ಮ ಸ್ವಂತ ರಾಜ್ಯದಲ್ಲಿ ಹತ್ತು ಕೋಟಿಯನ್ನೂ ಸಾಲ ಮಾಡಿರುತ್ತಾರೆ.

ವ್ಲಾಡಿವೋಸ್ಟಾಕಿನ ಮುತ್ತಿಗೆ.

ರಷ್ಯಾದವರು ತಮ್ಮ ವ್ಲಾಡಿವೋಸ್ಟಾಕ್ ಎಂಬ ತೀರಪಟ್ಟಣಕ್ಕೆ ಜಪಾನಿನವರು ಮುತ್ತಿಗೆಹಾಕುವವರಾಗಿದಾರೆಂದು ಕೇಳಿ, ಅಲ್ಲಿಗೆ ಯುದ್ಧ ಸಾಮಗ್ರಿಗಳನ್ನೂ ಆಹಾರ ಪದಾರ್ಥಗಳನ್ನೂ ಬಹಳ ತ್ವರಿತದಿಂದ ಸಾಗಿಸುತ್ತಿದಾರೆ ರಷ್ಯಾದಿಂದ ಈ ಸಾಮಾನು ತುಂಬಿದ ಹತ್ತು ರೈಲ್ ಗಾಡಿಗಳು ಪ್ರತಿ ದಿವಸವೂ ಯುದ್ಧಭೂಮಿಗೆ ಹೋಗುತ್ತಿರುವವು.

ಇಂಡಿಯಾ ದೇಶದ ವೃತ್ತಾಂತಗಳು.

ಇಂಗ್ಲಿಷ್ ಸೈನ್ಯಗಳು ಟಿಬೆಟ್ಟಿಗೆ ಹೋಗಿ ಕದನ ಮಾಡಿಕೊಂಡು ಬಂದುದಕ್ಕೆ ಇಂಡಿಯಾ ಗವರ್ನಮೆಂಟಿನವರಿಗೆ ಒಂದು ಕೋಟಿ ರೂಪಾಯಿ ವರೆಗೆ ಖರ್ಚಾಯಿತು.

****

ಕಲ್ಕತ್ತಾ ಪಟ್ಟಣದಲ್ಲಿ ಪುರಾಭಿವೃದ್ಧಿ ಕಾರ್ಯಗಳನ್ನು ನಡಿಸುವುದಕ್ಕೆ ಅಲ್ಲಿನ ಮ್ಯುನಿಸಿಪಾಲಿಟಿಯವರು ಈ ವರುಷ ೨೩ ಲಕ್ಷ ರೂಪಾಯಿ ಸಾಲಮಾಡುವಂತೆ ಗೊತ್ತುಮಾಡಿಕೊಂಡಿದಾರೆ.

****

ಮಧ್ಯಪ್ರಾಂತ್ಯಗಳಿಗೆ ಸೇರಿದ ನಾಗಪುರದಲ್ಲಿ ಒಬ್ಬ ಹಿಂದು ಪುಣ್ಯಾತ್ಮನು ತನ್ನ ಆಸ್ತಿಯಿಂದ ೫೦ ಸಾವಿರ ರೂಪಾಯಿಯನ್ನು ಕಾಶೀ ಪಟ್ಟಣದಲ್ಲಿರುವ ಹಿಂದೂ ಕಾಲೇಜಿನ ಮೂಲಧನಕ್ಕೆ ಕೊಡಬೇಕೆಂದು ಉಯಿಲು ಬರೆದಿರುತ್ತಾನೆ.

****

ಹಿಂದುಸ್ಥಾನದಿಂದ ಪರ್ಶಾಗೂ ಪರ್ಶಾನಿಂದ ಹಿಂದುಸ್ಥಾನಕ್ಕೂ ಬಂದು ಹೋಗುವ ಸಮಸ್ತ ವ್ಯಾಪಾರ ಸರಕುಗಳ ಮೇಲೂ ಎರಡು ಗವರ್ನಮೆಂಟಿನವರೂ ಬಹಳ ಕನಿಷ್ಠ ದರದ ಸುಂಕವನ್ನು ಹಾಕಿ ವಸೂಲ್ಮಾಡಿಕೊಳ್ಳಬೇಕೆಂಬುದಾಗಿ ಈಗತಾನೇ ಒಂದು ಕರಾರು ನಡೆದಿದೆ.

****

ಹಿಂದುಸ್ಥಾನದಲ್ಲಿ ಈಗ ೭,೯೦೩ ಮಂದಿ ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳೂ ೧,೧೯,೦೦೦ ಜನ ಪೋಲೀಸ್ ಕಾನ್ಸ್ಟೇಬಲ್‌ಗಳೂ ಇರುತ್ತಾರೆ ಇವೆರಡು ಶ್ರೇಣಿಗಳನ್ನೂ ಗವರ್ನಮೆಂಟಿನವರು ೯,೪೯೯ ಕ್ಕೂ ೧,೩೩,೧೦೦ ಕ್ಕೂ ಕ್ರಮವಾಗಿ ಹೆಚ್ಚಿಸುವರು ಇದಕ್ಕೆ ೪೪ ಲಕ್ಷ ರೂಪಾಯಿ ಖರ್ಚಾಗುವುದು.

****

ಹಿಂದುಸ್ಥಾನದಲ್ಲಿ ಹೋದವಾರ ೪೨,೯೪೨ ಜನರು ಪ್ಲೇಗ್ ಉಪದ್ರದಲ್ಲಿ ಮೃತಪಟ್ಟರು. ಕಳೆದ ವಾರ ಈ ಸಂಖ್ಯೆಯು ೩೭,೮೪೪ ಕ್ಕೆ ಇಳಿಯಿತು. ಮುಖ್ಯ ಸಂಖ್ಯೆಗಳ್ಯಾವವೆಂದರೆ—ಸಂಯುಕ್ತ ಆಧಿಪತ್ಯಗಳು ೧೯,೩೭೬, ಪಂಜಾಬ್ ೧೦,೯೯೭, ಬಂಗಾಳಾ ೩,೭೧೯, ಬೊಂಬಾಯಿ ಡಿಸ್ಟ್ರಿಕ್ಟುಗಳು ೩,೭೭೪.

****

ಮೆ॥ ಸಿ. ಎಚ್. ಯಂಗ್ ಎಂಬೊಬ್ಬ ಕಾಫಿ ಪ್ಲಾಂಟರು ಲಂಕಾ ಸ್ಲೀಪದ ಬಂಗಲಿನಲ್ಲಿರುವಾಗ್ಗೆ ಕಳೆದ ವಾರ ಸಿಡಿಲುಬಡಿದು ಸತ್ತು ಹೋದನು. ಈತನು ಕಳೆದ ೧೮೯೦ ರಲ್ಲಿ ವಿಲಾಯತಿಯಿಂದ ಲಂಕಾ ದ್ವೀಪಕ್ಕೆ ಬಂದವನು. ಬಂಧುಜನ ಕೂಲಿಕಾರರೂ ಇತರರೂ ಆತನಿಗೆ ಸಂಭವಿಸಿದ ದುರ್ಮರಣವನ್ನು ಕೇಳಿ ದುಃಖಪಡುತ್ತಿದಾರೆ

****

ಅಫ್ಘಾನಿಸ್ಥಾನದ ಅಮೀರರು ಕಾಬೂಲ್ ನಗರದಲ್ಲಿ ಹೊಸ ಅರಮನೆಯನ್ನು ಕಟ್ಟಿಸುತ್ತಿದಾರೆ. ಹಿಂದುಸ್ಥಾನದಿಂದ ಮೆ॥ ಫ್ರೆಡರಿಕ್ ಎಂಬ ಇಂಜನಿಯರು ಅಲ್ಲಿಗೆ ಹೋಗಿ ಕಾಮಗಾರಿ ಮಾಡಿಸುತ್ತಾರೆ. ಇವರು ವಿನಹಾ ಅಲ್ಲಿರುವ ಯೂರೊಪ್ಪಿಯನ್ ಜನರ ಪೈಕಿ ಏಳು ಮಂದಿ ಅಲ್ಲಿಂದ ವಾಪಸು ಹಿಂದುಸ್ಥಾನಕ್ಕೆ ಬರುವವರಾಗಿದಾರೆಂದು ಪ್ರಕಟವಾಗಿದೆ

****

ನಮ್ಮ ಚಕ್ರವರ್ತಿ ಸಾರ್ವಭೌಮರಾದ ಎಡ್ವರ್ಡ್ ಪ್ರಭುಗಳ ಬಳಿ ಇದ್ದುಕೊಂಡು ಅವರ ಬೆಂಗಾವಲಾಗಿ ಇರುವುದಕ್ಕೆ ಹಿಂದುಸ್ಥಾನದಿಂದ ಸುಬೇದಾರ್ ಮೇಜರ್ ಕರಣಸಿಂಗ್ ಗುರುಂಗ್, ಜಪಾಲ್‌ಸಿಂಗ್ ರಾಣಾ, ಜಸ್ಲೆಟ್ ಎಂಬೀ ಮೂರು ಮಂದಿ ಉದ್ಯೋಗಸ್ಥರನ್ನು ವಿಲಾಯತಿಗೆ ಕಳುಹಿಸುವಂತೆ ಇಂಡಿಯಾ ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ.

****

ಮಧ್ಯ ಪ್ರಾಂತ್ಯಗಳಲ್ಲಿ ರಾಜಾ ಗೋಕುಲದಾಸ್ ಎಂಬ ಧನಾಢ್ಯನು ರೈಲಿನ ಮೇಲೆ ಮೂರು ಕುದುರೆ ಗಾಡಿಗಳನ್ನು ಕೊಂಡು ತರಿಸುವಾಗ್ಗೆ ಆ ಗಾಡಿಗಳು ಮುರಿದು ಹೋದವೆಂತಲೂ, ಇದಕ್ಕಾಗಿ ಆತನು ರೈಲ್ ಕಂಪನಿಯವರ ಮೇಲೆ ದಾವೆ ಮಾಡಿದ್ದನೆಂತಲೂ ತಿಳಿಸಿದೇವಷ್ಟೆ. ಈಚೆಗೆ ಪಂಚಾಯತರು ರೈಲ್ ಕಂಪನಿಯವರಿಂದ ಅವರಿಗೆ ಆ ಗಾಡಿಗಳ ಕ್ರಯವನ್ನು ಕೊಡಿಸಿದರೆಂದು ಪ್ರಕಟವಾಗಿದೆ.

****

ಕಳೆದ ಜುಲೈ ತಿಂಗಳಲ್ಲಿ ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದ ಸಮಸ್ತ ಕಡೆಗಳಲ್ಲೂ ಚಲಾವಣೆಗೆ ಬರುವಂಥಾ ಐದು ರೂಪಾಯಿಯ ಕರೆನ್ಸಿ ನೋಟುಗಳನ್ನು ತಯಾರ್ಮಾಡಿ ಪ್ರಸಿದ್ಧಿಗೆ ತಂದರು. ಈಗ ಈ ನೋಟುಗಳನ್ನು ವಾಪಸು ತೆಗೆದುಕೊಳ್ಳಬೇಕೆಂತಲೂ, ಅದಕ್ಕೆ ಬದಲಾಗಿ ಇನ್ನೊಂದು ತರಹ ಐದು ರೂಪಾಯಿಯ ನೋಟುಗಳನ್ನು ಚಲಾವಣೆಗೆ ತರುವವರಾಗಿದಾರೆಂತಲೂ ತಿಳಿದುಬಂದಿದೆ.

****

ಬರ್ದ್ವಾನ್ ಡಿಸ್ಟ್ರಿಕ್ಟಿಗೆ ಸೇರಿದ ಅಸನ್ಸೋಲ್ ಪಟ್ಟಣದಲ್ಲಿ ಮೊಹರಂ ಹಬ್ಬದ ಕಡೇ ದಿವಸ ಹಿಂದಿನ ರಾತ್ರಿ ಎರಡು ಗುಂಪಿನ ಮುಸಲ್ಮಾನರಿಗೆ ಮಾರಾಮಾರಿ ನಡೆಯಿತು. ಜಗಳವನ್ನು ಸಮಾಧಾನ ಪಡಿಸುವುದಕ್ಕೆಂದು ಹೋದ ಪೋಲೀಸ್ ಸಬ್ ಇನ್ಸ್ಪೆಕ್ಟರಿಗೆ ಘೋರ ಏಟುಗಳು ಬಿದ್ದವು. ಅಷ್ಟರಲ್ಲೇ ಪೋಲೀಸ್ ಸೈನ್ಯ ಹೋದ್ದರಿಂದ ದೊಂಬಿ ನಿಂತಿತು ಈಚೆಗೆ ಮಹಮದೀಯರು ಪೋಲೀಸಿನವರ ಮೇಲೆ ಫಿರ್ಯಾದು ತಂದರು. ಮ್ಯಾಜಿಸ್ಟ್ರೇಟರು ಈ ಫಿರ್ಯಾದನ್ನು ವಜಾಮಾಡಿರುತ್ತಾರೆ.

ಶೋಲಾಪುರದ ಬಳಿ ಇರುವ ಚಕ್ರಪಾಳ್ಯವೆಂಬ ಗ್ರಾಮದಲ್ಲಿ ಹಿಂದುಗಳು ಕಳೆದ ಶಿವರಾತ್ರಿಯಿಂದ ಹಿಡಿದು ಹತ್ತು ದಿನಗಳ ತನಕ ದೇವರ ಗುಡಿಯಲ್ಲಿ ಪುರಾಣ ಹೇಳುತ್ತಿದ್ದು, ಹನ್ನೊಂದನೆಯ ದಿನ ದೇವರ ಉತ್ಸವ ಮಾಡಿ, ತರುವಾಯ ಅಗ್ನಿಕುಂಡದಲ್ಲಿ ನಡೆದಾಡಿದರು. ಈ ಅಗ್ನಿಕುಂಡವು ೧೬ ಅಡಿ ಅಗಲವೂ ೧೨ ಅಡಿ ಉದ್ದವೂ ಇತ್ತು. ಇದರ ತುಂಬಾ ಐದು ಅಂಗುಲ ಆಳ ಬೆಂಕಿಯ ಕೆಂಡಗಳು ಭರ್ತಿಯಾಗಿದ್ದವು. ಸುಮಾರು ೩೬ ಜನರು ಈ ಕೊಂಡದಲ್ಲಿ ಇಳಿದು ನಡೆದಾಡಿದರು. ಅವರ ಕಾಲು ಸ್ವಲ್ಪವೂ ಗಾಯವಾಗಲಿಲ್ಲ.

****

ಕಲ್ಕತ್ತಾ ಪಟ್ಟಣದ ಬಳಿ ಇರುವ ಕಾಸಿಪುರದಲ್ಲೂ ಈಶಾಪುರದಲ್ಲೂ ಇಂಡಿಯಾ ಗವರ್ನಮೆಂಟಿನವರು ಕಾರ್ಖಾನೆಗಳನ್ನು ಇಟ್ಟು, ಯಂತ್ರಗಳನ್ನು ವಿಲಾಯತಿಯಿಂದ ತರಿಸಿ, ಹಿಂದುಸ್ಥಾನದ ಸೈನಿಕರಿಗೆ ಬೇಕಾಗುವ ಫಿರಂಗಿ, ಬಂದೂಕು, ತೋಟಾ, ಮದ್ದು, ಈ ಮೊದಲಾದವನ್ನು ತಯಾರ್ಮಾಡಿಸುವರು. ಹಿಂದುಸ್ಥಾನದಲ್ಲಿ ಇದುವರೆಗೆ ಫಿರಂಗಿಗಳನ್ನು ತಯಾರ್ಮಾಡುತ್ತಿರಲಿಲ್ಲ. ಆಗಾಗ್ಗೆ ಸೀಮೆಯಿಂದಲೇ ತರಿಸಿಕೊಳ್ಳುತ್ತಿದ್ದರು ವರುಷಕ್ಕೆ ೩೦ ರಿಂದ ೫೦ ಸಾವಿರದ ತನಕ ಬಂದೂಕುಗಳನ್ನು ತಯಾರ್ಮಾಡುವರು.

****

ಮದರಾಸ್ ಪಟ್ಟಣದಲ್ಲಿ ಔಷಧಗಳನ್ನು ಮಾರುವ ಸ್ಮಿತ್ ಎಂಬ ಇಂಗ್ಲಿಷ್ ಷಾಪಿನಲ್ಲಿ ಕೆಲವು ಕಾಲದಿಂದ ಔಷಧಗಳು ಕಳುವಾಗುತ್ತಿದ್ದವು ಪೋಲೀಸಿನವರು ಗುಟ್ಟಾಗಿ ಕಳ್ಳರನ್ನು ಪತ್ತೆಮಾಡುತ್ತಿದ್ದಾಗ ಇಬ್ಬರು ದೇಶೀಯ ವೈದ್ಯರು ಸಿಕ್ಕಿಬಿದ್ದರು. ಇವರ ಹತ್ತಿರ ಆ ಷಾಪಿನ ಸುಮಾರು ೬೦೦ ರೂಪಾಯಿಯ ಔಷಧಗಳು ಸಿಕ್ಕಿದವು. ಪೋಲೀಸಿನವರು ದಸ್ತಗಿರಿ ಮಾಡುವಾಗ್ಗೆ ಆ ಇಬ್ಬರ ಪೈಕಿ ಒಬ್ಬನು ವಿಷ ಕುಡಿದು ಪ್ರಾಣಬಿಡುವುದಕ್ಕೆ ಪ್ರಯತ್ನಪಟ್ಟನು. ಕೂಡಲೇ ಅವನನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡಿದರು ಆದರೂ ಅವನು ತೀರಿಹೋದನು.

****

ಈ ಸಾಲಿನಲ್ಲಿ ಹಿಂದುಸ್ಥಾನದೊಳಗೆ ೧,೨೩೪ ಮೈಲಿ ರೈಲ್ ರಸ್ತೆಯು ತಯಾರಾಗಿ ಗಾಡಿಗಳನ್ನು ಬಿಡುವುದು ಪ್ರಾರಂಭವಾಗುವುದು. ಇದಲ್ಲದೆ ಈಗ ಒಟ್ಟು ೨೬,೩೪೯ ಮೈಲಿ ರೈಲ್ ರಸ್ತೆ ಹಿಂದುಸ್ಥಾನದಲ್ಲಿದೆ ಈಗ ಮತ್ತೆ ೩,೧೩೯ ಮೈಲಿ ದೂರ ರೈಲ್ ರಸ್ತೆ ಕಾಮಗಾರಿ ನಡೆಯುತ್ತಿದೆ. ಎಲ್ಲಾ ಒಟ್ಟು ಸೇರಿದರೆ ಹಿಂದುಸ್ಥಾನದಲ್ಲಿ ೩೦,೪೪೪ ಮೈಲಿ ರೈಲ್ ರಸ್ತೆಯಾಗುವುದು. ಹೊಸ ರೈಲ್ವೆ ಕಾಮಗಾರಿಗೆ ಇಂಡಿಯಾ ಗವರ್ನಮೆಂಟಿನವರು ಈ ವರುಷ ೧೨ ಕೋಟಿ ೫೦ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಸ್ಯಾಂಕ್ಷನ್ ಮಾಡಿದಾರೆ.

****

ಬಳ್ಳಾರಿ ಜಿಲ್ಲೆಗೆ ಸೇರಿದ ಕೊಟ್ಟೂರಿನಿಂದ ಕೊಟ್ಟಿಗಿ ಊರಿಗೆ ಜವಾನನು ಅಂಚೆ ಬಸ್ತುಗಳನ್ನು ಹೊತ್ತುಕೊಂಡು ಹೋಗುತ್ತಿರುವಾಗ ಒಬ್ಬ ಮುಹಮದೀಯನು ಅವನನ್ನು ದಾರಿಯಲ್ಲಿ ತಡೆದು ಚನ್ನಾಗಿ ಹೊಡೆದು, ಅವನು ಜ್ಞಾನತಪ್ಪಿ ಬಿದ್ದುಕೊಂಡಾಗ ಅವನ ಬಳಿ ಇದ್ದ ಅಂಚೆ ಬಸ್ತುಗಳನ್ನು ಕಿತ್ತುಕೊಂಡು ಪರಾರಿಯಾದನು. ಪೋಲೀಸಿನವರು ಆ ಮುಹಮದೀಯನನ್ನು ಹಿಡಿದು ತಂದರು. ಆ ಜವಾನನಿಗೆ ಔಷಧ ಕೊಡಿಸಿ ವಾಸಿ ಮಾಡಿದರು. ಮೊಕದ್ದಮೆ ಆದದ್ದರಲ್ಲಿ ಬಳ್ಳಾರಿಯ ಸೆಷನ್ಸ್ ಜಡ್ಜರು ಆ ಮುಹಮದಿಯನಿಗೆ ಒಂಬತ್ತು ವರುಷ ಕಠಿಣ ಸಜೆಯನ್ನು ವಿಧಿಸಿರುತ್ತಾರೆ.

****

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಮಾಜವು ಈ ವರುಷದ ಅಂತ್ಯಕ್ಕೆ ಕಾಶೀ ಪಟ್ಟಣದಲ್ಲಿ ನಡೆಯತಕ್ಕದೆಂದು ತೀರ್ಮಾನವಾಗಿದೆಯಷ್ಟೆ. ಕಾಶೀ ಪಟ್ಟಣದಲ್ಲಿ ರಾಜಘಾಟ್ ಎಂಬ ಕೋಟೆಯ ಎತ್ತರವಾದ ಮತ್ತು ವಿಸ್ತಾರವಾದ ಮೈದಾನವನ್ನು ಈ ಸಮಾಜಕ್ಕೋಸ್ಕರ ಗೊತ್ತುಮಾಡಿಕೊಂಡು, ಅಲ್ಲಿ ಚಪ್ಪರ ಮೊದಲಾದವುಗಳನ್ನು ಹಾಕುವುದಕ್ಕೆ ಏರ್ಪಾಡು ಮಾಡುತ್ತಿದಾರೆ. ಕಾಶೀ ಪಟ್ಟಣದ ರೈಲ್ವೆ ಸ್ಟೇಷನ್ನಿಗೆ ಈ ಮೈದಾನವು ತುಂಬಾ ಸಮೀಪವಾಗಿಯೂ ಗಂಗಾನದಿಯೂ ಡಫ್ರಿನ್ ಸೇತುವೆಯೂ ಬಹಳ ಪ್ರಶಸ್ತವಾಗಿ ಕಾಣುವ ಸ್ಥಳವಾಗಿಯೂ ಇರುತ್ತದೆ.

****

ಇಂಡಿಯಾ ಗವರ್ನಮೆಂಟಿನವರು ಅಫ್ಘಾನಿಸ್ಥಾನಕ್ಕೆ ಮೆ॥ ಡೇನ್ ಯವರನ್ನು ಸೈನ್ಯಪರಿವಾರ ಸಹಿತ ಕಳುಹಿಸಿಕೊಟ್ಟು, ಅಮೀರರ ಸಂಗಡ ಕರಾರು ಮಾಡಿಕೊಂಡು ಬರುವಂತೆ ಅಪ್ಪಣೆ ಕೊಟ್ಟಿದಾರಷ್ಟೆ. ಮೆ॥ ಡೇನ್ ಯವರು ತಮಗೆ ವಹಿಸಲ್ಪಟ್ಟ ಕಾರ್ಯವನ್ನು ಪೂರೈಸಿರುತ್ತಾರೆಂತಲೂ, ಅವರು ಅಮೀರರ ಸಂಗಡ ಕರಾರುಮಾಡಿಕೊಂಡು ಅದಕ್ಕೆ ಅವರ ಅನುಮತಿ ಹಾಕಿಸಿರುತ್ತಾರೆಂತಲೂ, ಅವರು ಪರಿವಾರ ಸಹಿತ ಕಳೆದ ೨೯ ನೆ ತಾರೀಖಿನಲ್ಲಿ ಅಫ್ಘಾನಿಸ್ಥಾನದಿಂದ ಹಿಂತಿರುಗಿ ಪ್ರಯಾಣಮಾಡಿಕೊಂಡು, ಲಂಡಿಕೋಟಾಲನ್ನು ಈ ತಿಂಗಳ ೪ಕ್ಕೆ ಬಂದು ತಲುಪುವರೆಂತಲೂ ಇಂಡಿಯಾಗವರ್ನಮೆಂಟಿನವರು ಪ್ರಕಟಿಸಿದಾರೆ. ಅಮೀರರವರು ಇಂಗ್ಲಿಷ್ ಪ್ರತಿನಿಧಿಗಳಿಗೆಲ್ಲಾ ಕಳೆದ ತಾ. ೨ ರಲ್ಲಿ ದೊಡ್ಡ ಔತಣಮಾಡಿ ಸಂತೋಷಪಡಿಸಿದರು.

****

ಫಿರೋಜ್‌ಪುರದಲ್ಲಿ ಇಂಗ್ಲಿಷ್ ಸೈನ್ಯವಿರುವ ಭಾಗದಲ್ಲಿ ಸೈನಿಕರಿಗೋಸ್ಕರ ಸರ್ಕಾರದವರು ಒಂದು ಖಜಾನೆಯನ್ನಿಟ್ಟಿದಾರೆ. ಒಬ್ಬ ವಜೀರಿ ಮುಸಲ್ಮಾನನು ತನ್ನ ಇಬ್ಬರು ಮಕ್ಕಳನ್ನೂ ಇನ್ನೊಬ್ಬನನ್ನೂ ಕರೆದುಕೊಂಡು, ಒಂದು ಗಾಡಿ ಸಹಿತ ಆ ಖಜಾನೆಯೊಳಕ್ಕೆ ಹೋಗಿ, ಸುಮಾರು ೨೦,೦೦೦ ರೂಪಾಯಿ ಇಟ್ಟಿದ್ದ ಒಂದು ಪೆಟ್ಟಿಗೆಯನ್ನು ಗಾಡಿಯಲ್ಲಿ ಹಾಕಿಕೊಂಡು, ಹೊರಕ್ಕೆ ಬರುತ್ತಿದ್ದನು. ಅಷ್ಟರಲ್ಲೇ ಪಹರೆ ಇದ್ದ ಒಬ್ಬ ಸಿಪಾಯಿ ಅವರನ್ನು ತಡೆದು ಕೇಳಿದನು. ಅವರು ಅವನ ಮೇಲೆ ಬಿದ್ದು ಹೊಡೆದು ಗಾಯ ಮಾಡಿದರು. ಕಳ್ಳರ ಪೈಕಿ ಒಬ್ಬನಿಗೂ ಗಾಯವಾಯಿತು. ಈಗ ಸರ್ಕಾರದವರು ಅವರನ್ನೆಲ್ಲಾ ಹಿಡಿದು ತನಿಖೆ ಮಾಡುತ್ತಿದಾರೆ. ಸೈನಿಕರ ಸಂಗಡ ಜಗಳಾಡುವುದಕ್ಕೋಸ್ಕರ ಹೋಗಿದ್ದನೆಂದು ಆ ವಜೀರಿಯು ಹೇಳುತ್ತಿದಾನೆ.

****

ಬೊಂಬಾಯಿ ಪಟ್ಟಣದ ಒಂದಾನೊಂದು ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ಗಣಪತಿರಾವ್‌ಜಿ ಎಂಬಾತನು ತನ್ನ ಹೆಂಡತಿಯನ್ನು ಕಳುಹಿಸೆಂದು ಮಾವನನ್ನು ಕೇಳಿದನು ಅವನು ಕಳುಹಿಸದೆ ಹೋದ್ದರಿಂದ ಜಗಳವಾಡಿಕೊಂಡು ಗಣಪತಿಯು ಅಂಗಡಿಗೆ ಹೋಗಿ ಮದ್ಯವನ್ನು ಕುಡಿದು ಮತ್ತೆ ಅವನ ಮನೆಗೆ ಹೋದನು, ತಿರಿಗಿ ಜಗಳವಾಯಿತು. ಗಣಪತಿಯು ಒಂದು ಚೂರಿಯಿಂದ ತನ್ನ ಮಾವನನ್ನು ಮರಣಕರವಾಗಿ ತಿವಿದನು ಮಾವನು ಸತ್ತುಬಿದ್ದನು ಮಾವನ ಮಗ ಅಷ್ಟು ಹೊತ್ತಿಗೆ ಬಂದು ಗಲಭೆಯೆಬ್ಬಿಸಿದನು. ಅವನನ್ನೂ ಗಣಪತಿಯು ಹೊಡೆದು ಕೊಂದು ಮಲಗಿಸಿದನು. ಆ ಮೇಲೆ ಒಳಕ್ಕೆ ನುಗ್ಗಿ ತನ್ನ ಹೆಂಡತಿಯನ್ನು ಎಳೆದುತಂದು ಕೊಂದುಹಾಕಿದನು. ಅಷ್ಟರಲ್ಲಿ ಪೋಲೀಸಿನವರು ಬಂದು, ಅವನನ್ನು ಹಿಡಿದು ದರ್ಯಾಪ್ತುಮಾಡಿ, ಲಾಕಪ್ಪಿಗೆ ಹಾಕಿದರು ಈಚೆಗೆ ಅವನು ಸಹ ಲಾಕಪ್ಪಿನಲ್ಲಿದ್ದುಕೊಂಡೇ ಅಫೀಮು ತಿಂದು ಆತ್ಮಹತ್ಯ ಮಾಡಿಕೊಂಡುಬಿಟ್ಟನು.

****

ಒರಿಸ್ಸಾ ಪ್ರಾಂತ್ಯಕ್ಕೆ ಸೇರಿದ ಒಂದಾನೊಂದು ಮಹಾಲ್ ಎಂಬ ಸಣ್ಣ ಸಂಸ್ಥಾನದಲ್ಲಿ ಮನುಷ್ಯರನ್ನು ಬಲಿಕೊಟ್ಟರೆಂಬ ವರ್ತಮಾನ ಹುಟ್ಟಿ ತನಿಖೆಯಾಗುತ್ತಿದೆ. ಆ ಮಹಾಲಿನಲ್ಲಿ ಇತ್ತೀಚೆಗೆ ವಾಂತಿಭೇದಿ ಉಪದ್ರ ಪ್ರಾರಂಭವಾಯಿತು ಆಗ ಆ ಮಹಾಲಿನ ಧಣಿಯ ಮನೆಯಲ್ಲಿ ಆತನ ಸಂತತಿಗೂ ಕಾಯಿಲೆಯಾಯಿತು. ಅದು ವಾಸಿಯಾದರೆ ಯಾವುದೋ ಒಂದು ದೇವತೆಗೆ ರಾಜನು ನರಮನುಷ್ಯನ ರಕ್ತವನ್ನು ಒಪ್ಪಿಸುವುದಾಗಿ ಹರಕೆ ಕಟ್ಟಿಕೊಂಡನು. ಅದು ವಾಸಿಯಾಯಿತು. ಆಗ ಆ ದೇವತೆಗೆ ಹರಕೆ ಸಲ್ಲಿಸಿದ್ದಾಯಿತೆಂದು ಅಲ್ಲಿನ ಜನರು ಆಡಿಕೊಳ್ಳುತ್ತಿದಾರೆ ಹ್ಯಾಗೂ ಆಗಾಗ್ಗೆ ಅಲ್ಲಿ ಕೆಲವು ಜನರು ಅದೃಶ್ಯವಾಗಿ ಹೋದರು ಅವರನ್ನು ಹುಲಿಗಳು ಹಿಡಿದು ತಿಂದುಹಾಕಿದವೆಂದು ಸಮಾಧಾನ ಹೇಳುವರು. ಆದ ಮರಣಕ್ಕೆ ಕಾರಣಗಳೇನೋ ಈಗ ಸಂಶಯಪಡುವುದು ಸಹ ಪ್ರಯೋಜಕವಾಗಿದೆ, ಸರ್ಕಾರದವರು ನಡಸುತ್ತಿರುವ ತನಿಖೆಯ ಫಲಾಫಲಗಳು ಇನ್ನು ಮುಂದೆ ಪ್ರಕಟವಾಗಬಹುದು.

****

ಹಿಂದುಸ್ಥಾನದ ಅಂಚೆ ಇಲಾಖೆಯವರು ಬಿಕರಿ ಮಾಡುವ ಸ್ಟಾಂಪು (ತಲೆ ಚೀಟಿ) ಗಳನ್ನು ಜನರು ಕೊಂಡು, ಕಾಗದಗಳಿಗೂ ಭಾಂಗಿ ಮುಂತಾದವುಗಳಿಗೂ ಹಚ್ಚಿ, ಪೋಸ್ಟಿನಲ್ಲಿ ಹಾಕುತ್ತಾರಷ್ಟೆ. ಜನರು ಈ ಸ್ಟಾಂಪುಗಳನ್ನು ಹಚ್ಚಿದ ಮೇಲೆ ಅವುಗಳ ಮೇಲೆ ಶಾಯಿಯಿಂದ ನಾನಾ ರೀತಿಯಲ್ಲಿ ಗುರುತು ಮಾಡುತ್ತಾರೆ. ಹೀಗೆ ಯಾವುದೂ ಗುರುತು ಮಾಡಕೂಡದೆಂತಲೂ, ಶಾಯಿ ಗುರುತು ಮಾಡಿರುವ ತಲೆ ಚೀಟಿಗಳು ಕಾಗದಕ್ಕೆ ಅಂಟಿಸಿದ್ದರೆ ನಷ್ಟಪೈ (ದುಗುಣ ಚಾರ್ಜು) ವಸೂಲ್ಮಾಡಬೇಕೆಂತಲೂ ಇಂಡಿಯಾ ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ ಈ ಹುಕುಂ ಈ ಏಪ್ರಿಲ್ ತಿಂಗಳ ಗುರ್ರೆಯಿಂದ ಜಾರಿಗೆ ಬಂದಿರುವುದು. ಆದಕಾರಣ ಜನರು ಆಧಾಣೆ, ಒಂದಾಣೆ ಮೊದಲಾದ ಯಾವ ಚೀಟಿಗಳನ್ನು ಕಾಗದಗಳಿಗಾಗಲಿ ಭಾಂಗಿಗಾಗಲಿ ಹಚ್ಚಿ, ಶಾಯಿನಿಂದ ಅವುಗಳ ಮೇಲೆ ಗುರುತು ಮಾಡಬಾರದು. ಗುರುತು ಮಾಡಿದ ಪಕ್ಷದಲ್ಲಿ ಅಂಥ ಕಾಗದಗಳಿಗೂ ಭಾಂಗಿಗೂ ದುಗುಣ ಚಾರ್ಜು ವಸೂಲ್ಮಾಡುತ್ತಾರೆ.

****

ತಿರುವಾಂಕೂರು (ಅನಂತಶಯನ) ಸಂಸ್ಥಾನಕ್ಕೆ ಸೇರಿ ಕ್ವಿಲಾನ್ ಪಟ್ಟಣದಲ್ಲಿ ಎಳವರೂ ನಾಯರರೂ ಸಭೆ ಸೇರಿ ಒಂದು ದೊಡ್ಡ ಮೀಟಿಂಗ್ ಮಾಡಿದರು ಕವರ್ಕ ನೀಲಕಂಠಪಿಳ್ಳೆಯವರು ಅಗ್ರಾಸನವನ್ನು ವಹಿಸಿದ್ದರು ಆ ದಿನ ಸಭಿಕರು ತೀರ್ಮಾನಿಸಿದ ವಿಷಯಗಳ್ಯಾವವೆಂದರೆ—ನಾಯರರಿಗೂ ಎಳವರಿಗೂ ತಮ್ಮ ಜಾತಿ ಮತ್ಸರವೂ ದ್ವೇಷಾಸೂಯೆಗಳೂ ಉಂಟಾಗಿವೆ ಎಂಬ ಈ ವಾದವು ನಿರಾಧಾರವಾದದ್ದು ದುಷ್ಟ ಜನರು ಈ ರೀತಿ ವರ್ತನವನ್ನು ಹುಟ್ಟಿಸಿರುವುದಕ್ಕಾಗಿ ಸಭಿಕರೆಲ್ಲಾ ವಿಷಾದಿಸುವರು ಈ ಎರಡು ಪಂಗಡದವರಿಗೂ ಸರ್ಕಾರದವರು ಏರ್ಪಡಿಸಿರುವ ಶಾಲೆಗಳು ತುಂಬಾ ಸಹಾಯವಾಗಿವೆ. ಎಲ್ಲರೂ ವಿದ್ಯಾಬುದ್ಧಿವಂತರಾಗಬೇಕು. ಈಗ ಈ ಎರಡು ಗುಂಪಿನವರಿಗೂ ಸಂಬಂಧಪಟ್ಟ ಕೋರ್ಟು ಮೊಕದ್ದಮೆಗಳನ್ನು ಅವರು ವಾಪಸು ತೆಗೆದುಕೊಂಡು ರಾಜಿ ಆಗತಕ್ಕದ್ದು. ಇನ್ನು ಮುಂದೆ ಮಾತ್ಸರ್ಯವನ್ನು ತ್ಯಜಿಸಿ, ಎಲ್ಲರೂ ಸಹೋದರರಂತೆ ಕೆಲಸಕಾರ್ಯಗಳನ್ನು ಮಾಡುತ್ತಾ ಬರಬೇಕು ಎಂಬ ದೇ

****

ಕಲ್ಕತ್ತಾ ಪಟ್ಟಣದ ಜೆಸ್ಸೋಪ್ ಎಂಬ ಕಂಪನಿಯವರು ಒಂದು ತರಹ ಪಂಪನ್ನು ತಯಾರ್ಮಾಡಿ ಬಿಕರಿ ಮಾಡುತ್ತಾರೆ ಈ ಪಂಪನ್ನು ಅರವತ್ತು ಅಡಿ ಆಳವಾದಂಥಾ ಬಾವಿಗಳಲ್ಲಿ ಇಳಿಗಿಂದರೂ ಇಟ್ಟು ಕೆಲಸ ನಡಿಸಿದರೆ ಅದು ಗಂಟೆಗೆ ೧,೦೭೦ ಗ್ಯಾಲನ್ ಪ್ರಕಾರ ನೀರನ್ನು ಎತ್ತಿ ತಂದು ಮೇಲಕ್ಕೆ ಸುರಿಯುವುದು ಈ ಪಂಪಿಗೆ ೩೪ ರೂಪಾಯಿ ಕ್ರಯವೆಂತಲೂ ೧೦೫ ರೂಪಾಯಿ ಕೊಟ್ಟರೆ ಗಂಟೆಗೆ ೨,೧೬೦ ಗ್ಯಾಲನ್ ಪ್ರಕಾರ ನೀರು ಎತ್ತುವ ಪಂಪು ಸಿಕ್ಕುವುದೆಂತಲೂ, ಈ ಪಂಪುಗಳು ಬಹು ಸುಲಭವಾಯೂ, ನಾಲ್ಕಾರು ವರುಷಗಳ ತನಕ ಸ್ವಲ್ಪವೂ ಕೆಡದೆ ಕೆಲಸ ಕೊಡುತ್ತವೆಂತಲೂ, ಅವು ತರ ಸ್ವಲ್ಪ ಕೆಟ್ಟರೂ ಗ್ರಾಹಕರಿಗೆ

ಳವನ್ನಾದರೇ ಸುಲಭವಾಗಿ ರಿಪೇರಿ ಮಾಡಿಕೊಳ್ಳಬಹುದೆಂತಲೂ ಈ ಯಂತ್ರಗಳನ್ನು ತರಿಸಿ ಉಪಯೋಗಿಸುತ್ತಿರುವ ಮಿ॥ ಎಚ್ ಹಾರ್ವಿಸ್ಟರ್ ಎಂಬುವರು ತಿಳಿಸಿದಾರೆ. ನಮ್ಮ ದೇಶದ ಬವಿರ್ಭಾರ ಮಳೆಸೇರಿದ ಮೇಲೆಯೇ ಭೂಮಿಹಾಕಿಕೊಂಡಿರುವ ರೈತರೂ ಈ ಯಂತ್ರಗಳನ್ನು ತರಿಸಿಕೊಂಡು, ಭಾವಿಗಳಿಗೂ ಇತರ ಜಲಾಶಯಗಳಿಗೂ ಇಟ್ಟು, ಬೆಳೆ ಫಸಲು ಮಾಡಿಕೊಳ್ಳುವುದಕ್ಕೆ ಅನುಕೂಲವಾಗಿದೆ

❖❖❖❖

ಕಳೆದ ೧೮೯೬ ನೆ ಇಸವಿಯಿಂದ ಹಿಂದುಸ್ಥಾನದ ಪ್ರಜೆಗಳನ್ನು ಕೊಲ್ಲುತ್ತಿರುವ, ಯಾರಿಗೂ ಅಗೋಚರವಾದ ಪ್ಲೇಗ್ ಉಪದ್ರವ ಲಕ್ಷಣಗಳನ್ನೂ ಚಿಕಿತ್ಸೆ ಪರಿಹಾರಗಳನ್ನೂ ಕಂಡುಹಿಡಿಯಬೇಕೆಂದು ಇಂಡಿಯಾ ಗವರ್ನಮೆಂಟಿನವರು ಈ ಮೊದಲೇ ಮಹಾಪ್ರಯೋಜಕರಾದ ಡಾಕ್ಟರುಗಳನ್ನು ಕರೆಸಿ ಅವರಿಂದ ತನಿಖೆ ಮಾಡಿಸಿದರು. ಈ ತನಿಖೆಯು ಅಷ್ಟೇನೂ ಫಲಕಾರಿಯಾಗದೆ ಹೋಯಿತು. ಆ ಡಾಕ್ಟರುಗಳ ಅಭಿಪ್ರಾಯಗಳನ್ನು ಇತರ ವೈದ್ಯವಿದ್ಯಾವಿಶಾರದರು ಒಪ್ಪಿಕೊಳ್ಳಲಿಲ್ಲ. ಅವರು ಸೂಚಿಸಿದ ಪರಿಹಾರಗಳಿಂದ ಪ್ರಜೆಗಳಿಗೆ ವಿಶೇಷ ಪ್ರಯೋಜನವಾಗಲಿಲ್ಲ. ಈಚೆಗೆ ಈ ರೋಗದ ಮೂಲವನ್ನೂ ಅದಕ್ಕೆ ಪರಿಹಾರವನ್ನೂ ಪರಿಶೋಧನೆ ಮಾಡಿ ಕಂಡುಹಿಡಿಯುವುದಕ್ಕೆ ಬೇರೆ ಡಾಕ್ಟರುಗಳನ್ನು ಕರೆಸಿಕೊಳ್ಳಬೇಕೆಂದು ಪ್ರಜೆಗಳು ಅನೇಕ ಕಡೆಗಳಲ್ಲಿ ಸರ್ಕಾರದವರನ್ನು ಕೇಳಿಕೊಂಡ ಪ್ರಕಾರ ಇಂಡಿಯಾ ಗವರ್ನಮೆಂಟಿನವರು ಈಗ ಪ್ರಜೆಗಳ ಪ್ರಾರ್ಥನೆಯನ್ನು ನೆರವೇರಿಸಿರುತ್ತಾರೆ. ಯೂರೋಪ್ ಖಂಡದಲ್ಲಿ ಗಟ್ಟಿಗರೆಂಬ ಪ್ರಖ್ಯಾತಿ ಪಡೆದಿರುವ ವೈದ್ಯಶಿಖಾಮಣಿಗಳು ... ಮಂದಿ ಹಿಂದುಸ್ಥಾನಕ್ಕೆ ಬರುವವರಾಗಿದಾರೆ. ಇವರ್‍ಯಾರೆಂದರೆ—ಡಾಕ್ಟರುಗಳಾದ ಸಿ. ಜೆ. ಮಾರ್ಟಿನ್, ಕರ್ನಲ್ ಡಿ. ಬ್ರೂಸ್, ... ಸಂ ಮಿಶೇಲ್ ಫಾಸ್ಟರ್, ಜಾರ್ಜ್ ಬ್ರಾಡ್‌ಫರ್ಡ್, ಎಂ. ಬ್ರಾಸ್ಪಟ್ ಇವರು ಹಿಂದುಸ್ಥಾನದಲ್ಲಿ ಪ್ಲೇಗ್ ಇರುವ ಪ್ರದೇಶಗಳನ್ನೆಲ್ಲಾ ಸುತ್ತಿಕೊಂಡು, ಉತ್ತರದೇಶದಲ್ಲಿರುವ ಕಸೌಲಿ ಪಟ್ಟಣದ ಆಸ್ಪತ್ರೆಯಲ್ಲಿ ಪರೀಕ್ಷೆಗಳನ್ನು ನಡೆಸುತ್ತಾರೆಂದು ಪ್ರಕಟವಾಗಿದೆ. ಈಗಲಾದರೂ ಈ ಉಪದ್ರವದ ಮೂಲವೂ ಅದಕ್ಕೂ ಮನುಷ್ಯರಿಗೂ ಇರುವ ಸಂಬಂಧವೂ ಗೊತ್ತಾಗಲು ಸಹಾಯವಾದೀತೆಂದು ನಿರೀಕ್ಷಿಸಲ್ಪಟ್ಟಿದೆ

❖❖❖❖

ಜೋಧಪುರ ಸಂಸ್ಥಾನದಲ್ಲಿ ಒಂದು ವಿಚಿತ್ರವಾದ ಕೊಲೆ ನಡೆದಿದೆ. ಜೋಧಪುರವು ರಾಜಪುಟಾನಾಕ್ಕೆ ಸೇರಿದ ಒಂದು ಸಂಸ್ಥಾನ. ಅಲ್ಲಿನ ದೊರೆಯು ಇನ್ನೂ ಚಿಕ್ಕವಯಸ್ಸಿನಲ್ಲಿರುವುದರಿಂದ ಸಂಸ್ಥಾನದ ಕಾರುಬಾರು ನಡೆಸುವುದಕ್ಕೆ ಒಂದು ರೀಜೆನ್ಸಿ ಕೌನ್ಸಿಲ್ ನೇಮಕವಾಗಿದೆ. ಲೇಟ್ ಮಹಾರಾಜರವರ ಸಹೋದರ ಸರ್ದಾರ್ ಕಿಶೋರ್ ಸಿಂಗನ ಹತ್ತಿರ ಮಹಮ್ಮದ್ ಖಾನ್ ಎಂಬೊಬ್ಬನು ಮುಖ್ಯಸ್ಥನಾಗಿದ್ದನು. ಆ ಸರ್ದಾರ್ ಕಿಶೋರ್ ಸಿಂಗರು ಕಾಲವಾದ ಮೇಲೆ ಅವನು ಅವರ ಕುಮಾರನಾದ ಅರ್ಜುನ ಸಿಂಗನ ಪೋಷಣೆಯಲ್ಲಿದ್ದನು. ರೀಜೆನ್ಸಿ ಕೌನ್ಸಿಲ್ಲಿನವರು ಯಾವ ಕಾರಣಕ್ಕೋ ಆ ಮಹಮೂದ್ ಖಾನ್ ಎಂಬುವನನ್ನು ಜೋಧಪುರ ಸಂಸ್ಥಾನದ ಗಡೀಪಾರು ಮಾಡಬೇಕೆಂದು ಗೊತ್ತುಮಾಡಿಕೊಂಡು, ಅವನನ್ನು ಸರ್ಕಾರದವರ ವಶಕ್ಕೆ ಒಪ್ಪಿಸಬೇಕೆಂದು ಕಳೆದ ಫೆಬ್ರವರಿ ತಿಂಗಳಲ್ಲಿ ಅರ್ಜುನ ಸಿಂಗರಿಗೆ ಹುಕುಂ ಕೊಟ್ಟರು. ಈ ಸಿಂಗರು ಹುಕುಮನ್ನು ತಿರಸ್ಕಾರಮಾಡಿ, ಅವನನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಕಾಪಾಡುತ್ತಾ, ಏನುಮಾಡಿದರೂ ಅವನನ್ನು ಬಿಟ್ಟುಕೊಡುವುದಿಲ್ಲವೆಂದು ಹಟಹಿಡಿದರು. ಕೌನ್ಸಿಲ್‌ನವರು ತಮ್ಮ ಹುಕುಮನ್ನು ಜಾರಿಗೆ ತರುವುದಕ್ಕೆ ಇಷ್ಟಪಡದೆ, ಅರ್ಜುನ ಸಿಂಗರ ಮನೆಯ ಸುತ್ತಲೂ ಉಸ್ತುವಾರಿ ಇಟ್ಟರು. ಅರ್ಜುನ ಸಿಂಗರೂ ಮಹಮೂದ್ ಖಾನನೂ ಮನೆಯೊಳಗೇ ಇದ್ದು, ಸಾಕಾಗಿ ಕಳೆದ ತಿಂಗಳ ... ನೇ ತಾರೀಖು ರಾತ್ರಿ ಗಾಡಿಸವಾರಿ ಹೊರಟರು. ಗಾಡಿಯೊಳಗೆ ಕೆಲವು ಜನಾನಾ ಸ್ತ್ರೀಯರನ್ನು ಕೂರಿಸಿ, ತಾವು ಹೊರಗಡೆ ಗಾಡಿಯ ಮೇಲೆ ಕೂತುಕೊಂಡಿದ್ದರು. ಸ್ವಲ್ಪ ದೂರ ಹೋಗುವಷ್ಟರೊಳಗಾಗಿ ಸರ್ಕಾರಿ ರಿಸಾಲೆಯ ಕಿಶೋರ್ ಸಿಂಗ ಎಂಬುವನು ಕೆಲವು ಮಂದಿ ಸೈನಿಕರ ಸಹಿತ ಮುಂದೆ ಹೋಗಿ ನಿಂತುಕೊಂಡು, ಗಾಡಿಯನ್ನು ನಿಲ್ಲಿಸಿ ಇಳಿದುಬರುವಂತೆ ಅವರಿಬ್ಬರಿಗೂ ಅಜ್ಞೆಮಾಡಿದನು. ಅವರು ಗಾಡಿ ನಿಲ್ಲಿಸಲಿಲ್ಲ. ಕೂಡಲೇ ಗಾಡಿಯು ಕುದುರೆಗಳಿಗೆ ಗುಂಡುಹೊಡೆದು ಕೊಂದುಹಾಕಿದರು. ಗಾಡಿ ನಿಂತುಕೊಂಡಿತು. ಕಿಶೋರ್ ಸಿಂಗನು ಮಹಮೂದ್ ಖಾನನನ್ನು ದಸ್ತಗಿರಿ ಮಾಡುವುದಕ್ಕೆ ಹೋದನು. ಮಹಮೂದ್ ಖಾನನು ಪಿಸ್ತೂಲು ಎತ್ತಿ ಅವನಿಗೆ ಗುರಿಯಿಟ್ಟು ನಾಲ್ಕಾರುಸಲ ಹೊಡೆದು, ತುಂಬಾ ಗಾಯಮಾಡಿದನು. ಆದಾಗ್ಯೂ ಕಡೆಗೆ ಸ್ವಲ್ಪ ಕಾಲವಾದ ಮೇಲೆ ಕಿಶೋರ್ ಸಿಂಗನೂ ಗುಂಡುಹೊಡೆಯುತ್ತಾ ಬಂದನು. ಮಹಮೂದ್ ಖಾನನಿಗೆ ಪ್ರಾಣಾ ಗಾಯಗಳಾಗಿ ಅಲ್ಲೇ ಸತ್ತುಬಿದ್ದುಹೋದನು. ಅರ್ಜುನಸಿಂಗನಿಗೂ ಅವನ ಸಹಾಯಕ್ಕಾಗಿ ಬಂದೊದಗಿದ ಕೆಲವು ಜನರಿಗೂ ಗುಂಡೇಟುಬಿದ್ದು ಗಾಯಗಳಾದವು. ಅಲ್ಲಿಂದೀಚೆಗೆ ಏನಾಯಿತೋ, ರೀಜೆನ್ಸಿ ಕೌನ್ಸಿಲ್‌ನವರು ಏನುಮಾಡಿದರೋ, ಇಂಡಿಯಾ ಗವರ್ನಮೆಂಟಿನವರು ಈ ಸುದ್ದಿಯನ್ನು ಕೇಳಿ ಯಾವ ತರಹ ಹುಕುಂ ಕೊಟ್ಟಿರುವರೋ ಇನ್ನೂ ತಿಳಿದುಬರಲಿಲ್ಲ.

ವಿದೇಶ ವರ್ತಮಾನಗಳು.

ವಿಲಾಯಿತಿ ಗವರ್ನಮೆಂಟಿನವರಿಗೆ ೧೯೦೪ ನೆ ಮಾರ್ಚಿ ಆಖ್ಯೆರಿಗೆ ೩೩,೨೩,೨೯,೩೭೬ ಪೌಂಡುಗಳ ಸಾಲವಿತ್ತು. ಕಳೆದ ವರ್ಷ ಈ ಮೊಬಲಗಿನಲ್ಲಿ ೮೦ ಲಕ್ಷ ಪೌಂಡನ್ನು ತೀರಿಸಿದರು.

ಜರ್ಮನಿ ಚಕ್ರವರ್ತಿಯವರು ಆಫ್ರಿಕಕ್ಕೆ ಸೇರಿದ ಟಾಂಜೀರ್ ಪಟ್ಟಣಕ್ಕೆ ಪ್ರಯಾಣಮಾಡಿದಾರೆ. ಮೊರೊಕ್ಕೋ ಸಂಸ್ಥಾನದ ಸುಲ್ತಾನರ ಚಿಕ್ಕಪ್ಪನಾದ ಅಬ್ದುಲ್ ಮಾಲೀಕ್ ಎಂಬಾತನು ಚಕ್ರವರ್ತಿಯವರನ್ನು ಎದುರುಗೊಳ್ಳುವನು.

❖❖❖❖

ಅಮೇರಿಕಕ್ಕೆ ಸೇರಿದ ಮಸಾಚುಸೆಟ್ಸ್ ಡಿಸ್ಟ್ರಿಕ್ಟಿನಲ್ಲಿ ಬ್ರಾಕ್ಟನ್ ಪಟ್ಟಣದಲ್ಲಿ ಜೋಡು ತಯಾರಾಗುವ ಕಾರ್ಖಾನೆಯಲ್ಲಿ ಎಂಜಿನ್ ಗಾಡಿಯು ಭಯಂಕರವಾದ ಶಬ್ದದೊಡನೆ ಒಡೆದು ಹಾರಿತು. ಸುಮಾರು ೧೫೦ ಕೂಲಿಕಾರರು—ಆ ಪೈಕಿ ಬಹುಮಂದಿ ಹೆಂಗಸರು—ತಕ್ಷಣವೇ ಸ್ಮೃತಪಟ್ಟರು.

❖❖❖❖

ಸಯಾಂ ರಾಜ್ಯದವರು ಲಂಡನ್ ಪಟ್ಟಣದಲ್ಲಿ ೧೫೦ ಲಕ್ಷ ರೂಪಾಯಿ ಸಾಲಬೇಕೆಂದೂ ಇದಕ್ಕೆ ಶೇಕಡಾ ವರುಷಕ್ಕೆ ೪½ ರೂ ನಂತೆ ಬಡ್ಡಿ ಕೊಡುವುದಾಗಿಯೂ ವರ್ತಕರನ್ನು ಕೇಳಿದರು. ವರ್ತಕರು ನಾನು ಮುಂದು ತಾನು ಮುಂದು ಎಂದು ಪೈಪೋಟಿ ಮಾಡಿ, ೧೨ ಕೋಟಿ ರೂಪಾಯಿ ಸಾಲ ಕೊಡುವುದಾಗಿ ಅರ್ಜಿ ಕೊಟ್ಟರು.

❖❖❖❖

ಚೀನಾ ರಾಜ್ಯದ ಚಿಹಲಿ ಮತ್ತು ಪೀಕಿಂಗ್ ಎಂಬೀ ಅಧಿಪತ್ಯಗಳಲ್ಲಿ ಚಕ್ರವರ್ತಿಯವರು ಒಂದು ಲಕ್ಷ ಸೈನ್ಯವನ್ನು ಸಿದ್ಧಪಡಿಸಿ ಸರ್ವದಾ ಇಟ್ಟಿರಬೇಕೆಂದೂ, ಅವರಿಗೆಲ್ಲಾ ಈಗಿನ ಕಾಲಕ್ಕೆ ತಕ್ಕಂಥಾ ಮದ್ದು ಗುಂಡು ತೋಟಾ ಬಂದೂಕು ಮೊದಲಾದವುಗಳನ್ನು ಕೊಡಬೇಕೆಂದೂ ಹುಕುಂ ಕೊಟ್ಟಿದಾರೆ. ಇದಕ್ಕೆಲ್ಲಾ ಎಷ್ಟುವರೆ ಕೋಟಿ ದ್ರವ್ಯ ಖರ್ಚಾಗುವುದು.

❖❖❖❖

ಸಮುದ್ರದಲ್ಲಿರುವ ಉಪ್ಪುನೀರಿನಿಂದ ಚಿನ್ನವನ್ನು ತೆಗೆಯುವುದಕ್ಕೆ ಒಂದು ಕಂಪನಿ ಏರ್ಪಾಡಾಗಿ ಕೆಲಸ ನಡೆಯುತ್ತಿದೆ. ಈ ಕಂಪನಿಯ ಷೇರುದಾರರು ತಮ್ಮ ಷೇರುಗಳನ್ನು ಈಗ ಬಿಕರಿ ಮಾಡುವುದಾದರೆ ತುಂಬಾ ಐಶ್ವರ್ಯವಂತರಾದಾರೆನ್ನುವುದಕ್ಕೆ ಸಂಶಯವಿಲ್ಲ. ಈ ಕಂಪನಿಯ ೧೫ ರೂಪಾಯಿನ ಒಂದು ಷೇರಿಗೆ ಈಗ ೧,೦೫೦ ರೂಪಾಯಿನಂತೆ ಬೆಲೆ ಹೆಚ್ಚಾಗಿದೆ.

❖❖❖❖

ಅಫ್ಘಾನಿಸ್ಥಾನಕ್ಕೂ ತುರ್ಕಿಸ್ಥಾನಕ್ಕೂ ನಡುವೆ ಯಲ್ಲಿಕಟ್ಟನಲ್ಲಿ ತುಂಬಾ ಗಲಭೆಯಾಗಿದೆ ಎಂದು ಕಾಂದಾಹಾರಿನಲ್ಲಿರುವ ಅಫ್ಘಾನರು ಹೇಳುತ್ತಿದಾರೆ. ಜೀರತ್ತಿನಲ್ಲಿದ್ದ ವಯೋವೃದ್ಧರಾದ ಸಮಸ್ತ ಉದ್ಯೋಗದಾರರನ್ನೂ ನೌಕರರನ್ನೂ ಖಾಜಿ ಸಾದುಡ್ಡೀನ್ ಎಂಬ ಗುರುವನ್ನೂ ಹಿಡಿದು, ಈಗ ಬಂಧನದಲ್ಲಿ ಇಟ್ಟಿದಾರೆಂತಲೂ ಇವರ ಮೇಲೆ ರಾಜದ್ರೋಹ ಮಾಡಿದರೆಂಬ ಅಪವಾದ ಉಂಟಾಗಿದೆ ಎಂತಲೂ ಹೇಳುವರು.

❖❖❖❖

ಪರ್ಷಿಯಾ ರಾಜ್ಯದ ಮೇಷ್ಡ್ ಎಂಬ ಪಟ್ಟಣದಲ್ಲಿ ಮಹಮ್ಮದೀಯರು ಆಯುಧಪಾಣಿಗಳಾಗಿ ಅಲ್ಲಿರುವ ರಷ್ಯಾದವರ ಅಂಗಡಿ ಮಳಿಗೆಗಳಿಗೆ ನುಗ್ಗಿ ಲೂಟಿಮಾಡಿ, ತುಂಬಾ ಗಲಭೆಯುಂಟಾಗಿದೆ. ರಷ್ಯಾ ಪ್ರಜೆಗಳೆಲ್ಲಾ ಅಲ್ಲಿರುವ ತಮ್ಮ ರಾಯಭಾರಿಯ ಬಂಗಲೆಯೊಳಗೆ ಸೇರಿಕೊಂಡರು. ಮಹಮ್ಮದೀಯರು ಇವರನ್ನೆಲ್ಲಾ ಸಮೂಲವಾಗಿ ಕೊಲ್ಲಬೇಕೆಂದು ಡಿತೂರಿ ಮಾಡಿದಾರೆ. ಸರ್ಕಾರದವರಿಗೆ ಈ ಗಲಭೆಯನ್ನು ಅಡಗಿಸಲು ಸಾಮರ್ಥ್ಯ ಸಾಲದು ಎಂದು ತಂತೀ ವರ್ತಮಾನ ಬಂದಿದೆ

❖❖❖❖

ಅಮೇರಿಕದ ರಾಜಧಾನಿಯಲ್ಲಿ ಆಸ್ಟರ್ ಹೋಟೇಲ್ ಎಂಬ ಕಟ್ಟಡದೊಳಗೆ ಕೆಲವು ದೊಡ್ಡ ಮನುಷ್ಯರು ಕೆನೆಡಿಯನ್ ಕ್ಲಬ್ ಎಂಬ ಸಂಘವನ್ನು ಮಾಡಿಕೊಂಡಿದಾರೆ. ಈ ಸಂಘದವರಿಗೆ ಬಹುಮಾನರೂಪವಾಗಿ ಪ್ರಷ್ಯಾ ರಾಜ್ಯದ ರಾಜಕುಮಾರರು ೨,೫೦೦ ಪೌಂಡು ತೂಗುವ ಒಂದು ಫೇಂಡಾಮೃಗವನ್ನು ಕಳುಹಿಸಿದರು. ಆ ಸಂಘದವರೆಲ್ಲಾ ಸುಮಾರು ೩೦೦ ಮಂದಿ ಸೇರಿಕೊಂಡು ಆ ಫೇಂಡಾಮೃಗವನ್ನು ಕೊಯಿದು ಬೇಯಿಸಿ, ನಾನಾ ಭಕ್ಷ್ಯಗಳನ್ನು ಮಾಡಿಕೊಂಡು ಭೋಜನ ಮಾಡಿದರು.

❖❖❖❖

ಸೋಮಾಲಿಲಾಂಡಿನಲ್ಲಿ ಮುಲ್ಲಾ ಎಂಬ ಮಹಮ್ಮದೀಯ ಮುಖಂಡನ ಮೇಲೆ ಇಂಗ್ಲಿಷ್ ಸರ್ಕಾರದವರು ಹಿಂದುಸ್ಥಾನದಿಂದ ಸೈನ್ಯವನ್ನು ಕಳುಹಿಸಿ ಯುದ್ಧನಡಿಸುತ್ತಿದಾರಷ್ಟೆ. ಈಗ ಆ ಮುಲ್ಲಾ ಸಿಕ್ಕದೆ ಹೋದ್ದರಿಂದ ಅಲ್ಲಿ ಯುದ್ಧಕಾರ್ಯವನ್ನೆಲ್ಲಾ ನಿಲ್ಲಿಸಿಬಿಟ್ಟರು. ಕರಾರು ನಡೆಯಿತು. ಮುಲ್ಲನು ಒಂದು ಪ್ರಾಂತ್ಯದಲ್ಲಿ ಗಲಭೆಯೇನೂ ಮಾಡದೆ ಇದ್ದುಕೊಳ್ಳುವುದಾಗಿ ಒಪ್ಪಿಕೊಂಡನು. ವ್ಯಾಪಾರಸ್ಥರಿಗೆ ಯಾವ ತೊಂದರೆಯೂ ಆಗದಂತೆ ಕಟ್ಟಾಯಿತು. ಯಾರೂ ಯುದ್ಧಸಾಮಗ್ರಿಗಳನ್ನು ಅಲ್ಲಿ ಬಿಕರಿ ಮಾಡದಂತೆಯೂ ಗುಲಾಮರನ್ನು ಕೊಂಡು ವಿಕ್ರಯ ಮಾಡದಂತೆಯೂ ಕರಾರು ನಡೆದಿದೆ.

❖❖❖❖

ಮಡಗಾಸ್ಕರ್ ದ್ವೀಪದಲ್ಲಿ ಪ್ರಜೆಗಳು ಫ್ರೆಂಚ್ ಸರ್ಕಾರದವರ ಮೇಲೆ ದಂಗೆಯೆದ್ದು ತುಂಬಾ ಗಲಭೆ ಮಾಡುತ್ತಿದಾರೆ. ೩೭ ಜನ ಬಿಳೀ ಜನರನ್ನು ಕೊಂದರು. ಒಬ್ಬ ಫ್ರೆಂಚ್ ಉದ್ಯೋಗದಾರನನ್ನು ಆತನ ಹೆಂಡತಿಯ ಎದುರಿನಲ್ಲೇ ಕ್ರೂರವಾದ ಹಿಂಸೆಗೆ ಗುರಿಪಡಿಸಿ ಪ್ರಾಣ ತೆಗೆದು ಬಿಟ್ಟರು. ಇನ್ನೊಂದು ಜನ ಶಿಪಾಯಿಗಳು ಪ್ರಾಣ ಕಾಪಾಡಿಕೊಳ್ಳುವುದಕ್ಕೆ ಓಡಿ ಹೋಗಿ ಒಂದು ದೇವಸ್ಥಾನದಲ್ಲಿ ಸೇರಿಕೊಂಡು, ಹತ್ತು ದಿನಗಳ ತನಕ ದಂಗೇ ಕೋರರ ವಶವರ್ತಿಗಳಾಗಲಿಲ್ಲ. ಆಗ್ಗೆ ಅವರ ಬಳಿ ಇದ್ದ ಮದ್ದು ಗುಂಡು ಮುಗಿಯಿತು, ತುಂಬಾ ಹಸಿದು ಕಡೆಗೆ ಸಿಕ್ಕಿ ಬಿದ್ದರು. ದಂಗೇ ಕೋರರು ಅವರನ್ನೆಲ್ಲಾ ತುಂಡು ತುಂಡಾಗಿ ಕತ್ತರಿಸಿ ಹಾಕಿದಾರೆ.

ಜಪಾನ್ ರಾಜ್ಯದವರು ಯುದ್ಧಕ್ಕಾಗಿ ಸಾಲಮಾಡುತ್ತಿದಾರಷ್ಟೆ. ಅವರು ಇದನ್ನು ಹ್ಯಾಗೆ ತೀರಿಸಬಲ್ಲರೆಂದು ಯೋಚಿಸಬೇಕಾದದ್ದಿಲ್ಲ. ಯಾಕೆಂದರೆ ಜಪಾನ್ ರಾಜ್ಯದಲ್ಲಿರುವ ಗಣಿಗಳ ಉತ್ಪತ್ತಿ ಒಂದೇ ಅಪಾರವಾಗಿರುವುದು. ಕಳೆದ ೭ನೆ, ೮ನೆ ಶತಮಾನಗಳಲ್ಲಿ ಜಪಾನ್ ರಾಜ್ಯದ ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಕಲ್ಲಿದ್ದಲು, ಸೀಮೆಯೆಣ್ಣೆ ಮೊದಲಾದವನ್ನು ಪರರಾಜ್ಯಗಳಿಗೆ ರಫ್ತುಮಾಡುತ್ತಿದ್ದವು. ಕಳೆದ ೧೯೦೧ನೆ ಸಾಲಿನಲ್ಲಿ ೧೩॥ ಲಕ್ಷ ಪೌಂಡು ಬೆಲೆಬಾಳುವಷ್ಟು ಕಲ್ಲಿದ್ದಲನ್ನೂ ೧೩,೯೦ ಸಾವಿರ ಪೌಂಡು ಬೆಲೆಯಾಗುವಷ್ಟು ತಾಮ್ರವನ್ನೂ ಇತರ ರಾಜ್ಯಗಳಿಗೆ ರಫ್ತುಮಾಡಿದೆ. ಆ ವರುಷ ೭೨೨ ಗಣಿಗಳಿದ್ದವು. ಈ ಗಣಿಗಳ ಉತ್ಪನ್ನಗಳಿಂದ ಸರ್ಕಾರಕ್ಕೆ ೫೮,೩೪,೭೯೪ ಪೌಂಡುಗಳು ಆದಾಯವಾಗಿದೆ. ಈಚೆಗೆ ಈ ಕಸುಬೂ ಇತರ ಕಸುಬುಗಳೂ ಜಪಾನ್ ರಾಜ್ಯದಲ್ಲಿ ತುಂಬಾ ವೃದ್ಧಿಹೊಂದಿರುವವು. ಅವರು ಎಷ್ಟು ಸಾಲ ಮಾಡಿದಾಗ್ಯೂ ತೀರಿಸಬಲ್ಲರೆಂದು ಪರರಾಜ್ಯಗಳವರೆಲ್ಲಾ ಪೂರ್ಣಭರವಸವನ್ನಿಟ್ಟುಕೊಂಡಿದಾರೆ.

❖❖❖❖

ಒಬ್ಬಾನೊಬ್ಬ ಜ್ಞಾನಿಯು ವಿವೇಕ ಹೇಳಿರುವುದೇನೆಂದರೆ— ನಗಲಿಕ್ಕೆ ಕಲಿ. ಒಳ್ಳೇ ನಗುವಿಕೆ ಔಷಧಕ್ಕಿಂತ ಎಷ್ಟೋ ಉತ್ತಮ. ನಿನಗೆ ನೇಮಿಸಲ್ಪಟ್ಟ ಕೆಲಸವನ್ನು ಶುದ್ಧಮನಸ್ಸಿನಿಂದ ಮಾಡಲಿಕ್ಕೆ ಕಲಿ. ಇದು ಬಹು ವಿಶೇಷವಾದದ್ದು. ಮುಖ್ಯವಾಗಿ ಯೌವನಸ್ಥರನ್ನು ತಪ್ಪಿನಿಂದ ತಡಿಸುವವನೂ ಗುರು ತುಂಬಿಸುವವನೂ ಆಗಿರುವುದನ್ನು ಕಲಿ. ಸಿಟ್ಟಿನ ಸ್ವಭಾವದ ಲಕ್ಷಣಗಳನ್ನು ತೋರಿಸಿ, ಯಾವ ಗಲಿಬಿಲಿಯನ್ನಾದರೂ ಹುಟ್ಟಿಸದ ಹಾಗೆ ನೋಡಿಕೊಳ್ಳುವುದನ್ನು ಕಲಿ. ನಿನ್ನ ತೊಂದರೆಗಳನ್ನೆಲ್ಲಾ ನೀನೇ ಸರಿಮಾಡಿಕೊಳ್ಳುವುದಕ್ಕೆ ಕಲಿ. ಯಾಕೆಂದರೆ ನಿನ್ನ ಚಿಂತೆ ತೊಂದರೆಗಳನ್ನು ಕುರಿತು ಪ್ರಮಾದದ ಹಾಗೆ ಇತರರಿಗೆ ತುಂಬಾ ಕೆಲಸವುಂಟು ಗುರುಗುಟ್ಟದೆ ಇರುವುದನ್ನು ಕಲಿ. ಈ ಲೋಕದಲ್ಲಿ ಒಳ್ಳೇದೇನಾದರೂ ನೀನು ಕಂಡುಕೊಳ್ಳಲಾರಿಯಾದರೆ, ಕೆಟ್ಟದ್ದನ್ನು ನಿನ್ನ ಮಟ್ಟಿಗೇ ಇಟ್ಟುಕೊ. ಮುಗುಳುನಗೆಯುಳ್ಳವನಾಗಿ ನಿನಗೆ ಒದಗುವ ನೋವುಗಳನ್ನೂ ಕಷ್ಟಗಳನ್ನೂ ಅಡಗಿಸಿಕೊಳ್ಳುವುದಕ್ಕೆ ಕಲಿ. ಯಾವನಾದರೂ ನಿನಗಿರುವ ಶಿವಿನೋವು, ತಲೆನೋವು, ಸೊಂಟನೋವು ಇವುಗಳನ್ನು ಕುರಿತು ಚಿಂತಿಸಲಾರನು. ಮುಗುಳುನಗೆಯಿಂದ ನಿನ್ನ ಸ್ನೇಹಿತರನ್ನು ವಂದಿಸು. ಯಾಕೆಂದರೆ ನಿನ್ನ ವಿಷಯದಲ್ಲಿ ತೊಂದರೆಪಡುವುದಕ್ಕೆ ಮನಸ್ಸಾಗಿ ಬಹಳ ಗಟುಮೋರೆ ಮಾಡಿಕೊಳ್ಳುತ್ತಾರೆ. ಯಥಾರ್ಥವಾಗಿ ನಡೆಯಲಿಕ್ಕೂ ಅನ್ಯಾಯ ಮಾಡದಿರಲಿಕ್ಕೂ ಕಲಿ. ಯಾಕೆಂದರೆ ಹೃದಯಗಳು ಕೇಡಿನ ಕಡೆಗೆ ಬೇಗ ಓಡುತ್ತವೆ. ಒಂದೇ ಮನಸ್ಸಿನಿಂದ ಎಲ್ಲರನ್ನೂ ಪ್ರೀತಿಸಿ, ಮುಖದಾಕ್ಷಿಣ್ಯವನ್ನು ನಿನ್ನ ಬಳಿಯಿಂದ ಓಡಿಸಲಿಕ್ಕೆ ಕಲಿ. ಯಾಕೆಂದರೆ ಹೀಗೆ ಅನೇಕರ ಹೃದಯಗಳು ಪಿಶಾಚನಿಂದ ಪ್ರೇರೇಪಿಸಲ್ಪಟ್ಟು ಕೆಟ್ಟುಹೋಗಿವೆ. ಲೋಕಕ್ಕೆಲ್ಲಾ ಶ್ರೇಷ್ಠನಾದಂಥಾ ದೇವರಿಗೆ ಭಯ ಪಡುವುದನ್ನು ಕಲಿ. ಇದರಿಂದ ನಿನ್ನ ಹೃದಯವು ನವೀನವಾಗುತ್ತಾ ಸದ್ಗುಣಗಳು ನಿನ್ನಲ್ಲಿ ಬೇರೂರಿಕೊಳ್ಳುವವು ಎಂಬುದೇ.

ಸ್ಥಾನಿಕ ವರ್ತಮಾನಗಳು.

ಬೆಂಗಳೂರು.—ಈ ಊರು ನಗರ್ತರ ಪೇಟೆಯಲ್ಲಿರುವ ಮಿ॥ ದೊಡ್ಡ ಬಸಣ್ಣನವರ ಮಕ್ಕಳು ಸಂಬಂಡಪ್ಪನವರಿಗೆ ಸ॥ ದೊಡ್ಡ ಮುನಿಯಪ್ಪನವರ ಮಗಳನ್ನು ಕೊಟ್ಟು ೬—೭ ದಿನಗಳ ಕೆಳಗೆ ಸಂಬಂಡಪ್ಪನವರ ಮನೆಯಲ್ಲಿ ವಿವಾಹ ಮಹೋತ್ಸವವನ್ನು ಜರುಗಿಸಿದ ಪ್ರಯುಕ್ತ ಒಂದು ವಾರದಿಂತಲೂ ಅನೇಕ ಬಡಬಗ್ಗರಿಗೆ ಸಹಾ ಅನ್ನದಾನ ಮಾಡುತ್ತಲೂ ಬ್ರಾಹ್ಮಣಾದಿಗಳಿಗೆ ವಿವಾಹ ಮತ್ತು ನಾಗವಲ್ಲಿ ದಿನಗಳಲ್ಲಿ ಎಂಟಾಣೆಯಂತೆ ದಕ್ಷಿಣೆ ತಾಂಬೂಲ ಫಲ ಮೊದಲಾದವು ಕೊಟ್ಟು ಸಂತೋಷಪಡಿಸಿದರು. ಅಲ್ಲದೆ ಅನೇಕ ಆಫೀಸರುಗಳು ವರ್ತಕರು, ಅಡ್ವೋಕೇಟರು ಮೊದಲಾದ ದೊಡ್ಡ ಮನುಷ್ಯರು ನೆಂದಿದ್ದರು. ಬಹಳ ವಿನೋದಕರವಾದ ಉತ್ಸವವು ನಡೆಸಲ್ಪಟ್ಟಿತು. ಈ ಉತ್ಸವದ ಉಭಯಪಾರ್ಶ್ವಗಳಲ್ಲಿಯೂ ಬ್ಯಾಂಡ ವಾದ್ಯವು ಕಾಂಭೋಜಿಯಿಂದ ಈ ಮದುವೆಗಾಗಿ ಕರೆಯಲ್ಪಟ್ಟಿರುವ ಮೇಳಗಳವರು ನಡೆಸುತ್ತಿದ್ದ ಮೇಳವು ದಾರಿಯಲ್ಲಿ ಹೋಗುತ್ತಿರುವ ಪ್ರತಿಯೊಬ್ಬರಿಗೂ ತುಂಬಾ ಆನಂದವನ್ನು ಉಂಟುಮಾಡುತ್ತಾ ನಾಟ್ಯಗಾತಿಯರು ಹಾಡುಗಾರಿಕೆ ನಾಟ್ಯವ ಸಹಾ ಪ್ರತಿ ದಿನಗಳಲ್ಲಿಯೂ ನಡೆಸುತ್ತಿದ್ದರು. ನಿನ್ನೆ ರಾತ್ರಿ ವಧೂವರರ ಮೆರವಣಿಗೆಯು ಸುಮಾರು ೮ ಗಂಟೆಯಿಂದ ೧ ಗಂಟೆ ವರಿಗೂ ನಡೆಯಿತು. ಈ ವಧೂವರರನ್ನು ಕೂಡಿಸಿದ್ದ ಹೂವಿನ ಮೊಗ್ಗಿನಿಂದ ಅಲಂಕರಿಸಲ್ಪಟ್ಟಿದ್ದ ಪಲ್ಲಕ್ಕಿಯು ಬಹಳ ನೇತ್ರಾನಂದವನ್ನು ಉಂಟುಮಾಡಿತು. ಅನೇಕ ತರಹದ ಬಾಣಬಿರುಸುಗಳು, ಬಾಣದ ಗಿಡಗಳು, ಪದೇ ಪದೇ ಹಚ್ಚುತ್ತಿದ್ದ ಬಿರುಸುಗಳು ಬಹಳ ವಿನೋದಕರವಾಗಿದ್ದವು. ಈ ಊರಿನಲ್ಲಿ ನಡೆಯುವ ಧರ್ಮರಾಯನ ಕರಗದ ದಿನ ರಾತ್ರಿಯಲ್ಲಿ ಜನರು ವಿನೋದಗಳನ್ನು ನೋಡುವ ಉದ್ದೇಶ್ಯ ಬರುವ ಹಾಗೆ ಯಾವ ವಾಸೆಯ ಮಾಳಿಗೆ ಮೇಲೆ ನೋಡಿದಾಗ್ಯೂ ಜನರು ಸೇರಿಕೊಂಡು ಮೆರವಣಿಗೆಯ ವಿನೋದವನ್ನು ನೋಡುತ್ತಿದ್ದರು. ಜನರ ಗಲಾಟೆ ಬಹಳವಾಗಿದ್ದುದರಿಂದ ಪೋಲೀಸಿನವರು ಬಹಳವಾಗಿ ಉಸ್ತುವಾರಿಯನ್ನು ಇಟ್ಟು ಶ್ರಮಪಡಿಸಿದರು. ಜನರು ಮೇಳದಿಂದ ವಿನೋದವನ್ನು ನೋಡಿ ಬಹಳ ಆನಂದವನ್ನು ಹೊಂದಿ, ಈ ದಂಪತಿಗಳಿಬ್ಬರಿಗೂ ಭಗವಂತನು ದೀರ್ಘಾಯುಸ್ಸು ಕೊಟ್ಟು ಕಾಪಾಡಲಿ ಎಂದು ದೇವರನ್ನು ಪ್ರಾರ್ಥಿಸುತ್ತಾ, ಅವರವರ ಮನೆಗಳಿಗೆ ತೆರಳಿದರು. ಇಂಥಾ ಮೆರವಣಿಗೆ ಈ ಊರಿನಲ್ಲಿ ನಡೆದದ್ದು ಅಪರೂಪ.

ನೆಲಮಂಗಲ — ನೆಲಮಂಗಲ ತಾಲ್ಲೂಕ್ ಸೊಂಡೆಕೊಪ್ಪದ ಹೋಬಳಿ ಅವೇರಹಳ್ಳಿ ಗ್ರಾಮದ ತಿಮ್ಮಯ್ಯನೆಂಬವನ ಮನೆಗೆ ೧೧—೩—೧೯೦೪ ರಲ್ಲಿ ೪ ಜನ ಕಳ್ಳರು ಕನ್ನ ಹಾಕಿ ಸಾಮಾನುಗಳನ್ನು ಕಳವು ಮಾಡಿಕೊಂಡು ಹೋಗುವಾಗ ಪಟೇಲ್ ಚಿಕ್ಕಅರಸೇಗೌಡನು ಬಂದು ತನ್ನ ಸಹಾಯಕ್ಕೆ ಕಾವಲುಗಾರರನ್ನು ಕೂಗಿ ಕರೆದು ೩ ಜನರನ್ನು ಕರೆಕೊಂಡು ಕಳ್ಳರನ್ನು ಮಾಲು ಸಹಿತ ಹಿಡಿದು, ಸರ್ಕಾರದಿಂದ ಕಳ್ಳರಿಗೆ ೧ ವರುಷ ೬ ತಿಂಗಳಂತೆ ಶಿಕ್ಷೆ ಬಿದ್ದು ಕಳ್ಳನಿಗೂ ಸಜಾ ವಿಧಿಸಲ್ಪಟ್ಟದ್ದಕ್ಕಾಗಿ ಪಟೇಲ್ ಚಿಕ್ಕ ಅರಸೇಗೌಡನಿಗೆ ಗವರ್ನಮೆಂಟಿನಿಂದ ೧೦ ರೂಪಾಯಿ ಬಹುಮಾನವೂ ೩ ಜನ ಸಹಾಯಕರಿಗೆ ತಲಾ ೧ ಕ್ಕೆ ೨ ರೂಪಾಯಿ ಬಹುಮಾನವೂ ದೊರೆಯಿತು ಮುಂದೆಯೂ ಇದೇ ರೀತಿ ಮೋಸಕ್ಕೆ(?) ಮಾಡಿ ಕಳ್ಳತನವನ್ನು ಪತ್ತೆ ಮಾಡಿದವರಿಗೆ ಸರ್ಕಾರದವರು ಬಹುಮಾನ ಕೊಡಿಸಿದಲ್ಲಿ ಪತ್ತೇದಾರಿಗಳು ಕಮ್ಮಿಯಾದೀತೆಂದು ನಂಬಿದ್ದೇನೆ — ನೆಲಮಂಗಲದ ಜರ್ನಾಯಗಳು ಸೇರುವ ಕೊರಟಿಯಲ್ಲಿ ರಾಸುಗಳಿಗೆ ಸುಂಕ ರಾಂ ಹಾಲ್ಲು ಹಾಕುವದಿಲ್ಲವೆಂತಲೂ ತಾಲ್ಲೂಕು ಅಮಲ್ದಾರು ಈ ವಿಷಯದಲ್ಲಿ ತುಂಬಾ ನಿಗಾ ಕೊಟ್ಟಲ್ಲಿ ಹೀಗೆ ಅನ್ಯಾಯ ನಡೆಯಲಾರದೆಂತಲೂ ವರ್ತಮಾನವಿದೆ

ಮೇಲುಕೋಟೆ — ಫ್ರೆಂಚ್ ರಾಕ್ಸ್ ಸಬ್ ತಾಲ್ಲೂಕಿಗೆ ಸೇರಿದ ಮೇಲುಕೋಟೆಯಲ್ಲಿ ಕಳೆದ ತಿಂಗಳ ೧೪ ರಲ್ಲಿ ಜಾತ್ರೆಯೂ ಉತ್ಸವವೂ ಪ್ರಾರಂಭವಾಗಿ ೨೩ನೇ ತಾರೀಖು ವರೆಗೆ ನಡೆದವು ಈ ಸಲ ಈ ಜಾತ್ರೆಗೆ ಸುಮಾರು ೧೫—೨೦ ಸಾವಿರ ಜನರು ಸೇರಿದ್ದರೆಂದು ಹೇಳಬಹುದು ಡೆ॥ ಕಮಿಷನರ್ ಮೆ॥ ಕೆ. ಶ್ರೀನಿವಾಸರಾಯರೂ ಡೆಪ್ಟಿ ಅಮಲ್ದಾರ್ ಮೆ॥ ನಾರಾಯಣ ಸ್ವಾಮಿ ಮೊದಲಿಯಾರರೂ ಮಾರ್ಚ್ ೪ ರಲ್ಲಿ ಮೇಲುಕೋಟೆಗೆ ಬಂದು, ಸಾರೀಜಾ, ಆರೋಗ್ಯವಿಚಾರ, ನೀರು, ಪೋಲೀಸ್, ಈ ಮೊದಲಾದ ಬಾಬುಗಳನ್ನೆಲ್ಲಾ ಮೊದಲೇ ಏರ್ಪಾಡು ಮಾಡಿ ಹೋದರು ಮತ್ತೆ ಈ ಅಧಿಕಾರಿಗಳು ತಾ ೧೫ ರಲ್ಲೂ ಗವರ್ನಮೆಂಟ್ ಮುಜರಾಯಿ ಸೆಕ್ರೆಟರಿಯವರು ತಾ ೧೯ ರಲ್ಲೂ ವಾಪಸು ಹೋದರು ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಮಹಮದ್ ಜಾಫರ್ ಯವರು ತಾ ೧೭ ರಲ್ಲೂ ಮೇಲುಕೋಟೆಗೆ ಬಂದರು ಮುಜರಾಯಿ ಸೆಕ್ರೆಟರಿಯವರು ತಾ ೧೯ ರಲ್ಲೇ ವಾಪಸು ಹೋದರು ಪೋಲೀಸ್ ಸೂಪರಿಂಟೆಂಡೆಂಟರು ೨೧ ರ ವರೆಗೆ ಅಲ್ಲಿದ್ದರು ಡೆ॥ ಕಮಿಷನರು ೨೩ನೇ ತಾರೀಖಿನಲ್ಲಿ ವಾಪಸು ತೆರಳಿದರು ಕಳೆದ ೧೮೯೮ ರಲ್ಲಿ ಪ್ಲೇಗ್ ಪ್ರಾರಂಭವಾದ ಲಾಗಾಯಿತು ಇದುವರೆಗೆ ಈ ಜಾತ್ರೆಯಲ್ಲಿ ಇಷ್ಟು ಪ್ರಜೆಗಳು ಸೇರಿರಲಿಲ್ಲ ಮೇಲ್ಕಂಡ ಅಧಿಕಾರಿಗಳು ಮಾಡಿದ್ದ ಏರ್ಪಾಡುಗಳು ಸರ್ವಸಮರ್ಪಕವಾಗಿದ್ದವು ಡೆಪ್ಟಿ ಅಮಲ್ದಾರರು ತುಂಬಾ ಶ್ರಮಪಟ್ಟಿದ್ದಾರೆನ್ನುವುದಕ್ಕೆ ಸಂಶಯವಿಲ್ಲ ಯಾವ ತರಹಾ ಅನಾಹುತವಾಗಲಿ ಕಳುವಾಗಲಿ ನಡೆಯದೆ ಇರುವುದು ಅಧಿಕಾರಿಗಳ ಏರ್ಪಾಡಿನ ಬಿಗಿಯನ್ನು ಪ್ರಕಾಶಪಡಿಸುತ್ತದೆ ಈ ಜಾತ್ರೆಗೆ ಬಂದಿದ್ದ ಸಮಸ್ತರೂ ಎಲ್ಲಾ ಭಾಗಗಳಲ್ಲೂ ತೃಪ್ತಿಪಟ್ಟುಕೊಂಡು ಹಿಂತಿರುಗಿದರೆನ್ನುವುದಕ್ಕೆ ಸಂಶಯವಿಲ್ಲ

ಚಿಕ್ಕಮಗಳೂರು — ಬಿಸಲು ದಿನದಿನಕ್ಕೂ ಹೆಚ್ಚುತ್ತಲಿದೆ ರೈತರು ಮುಂಗಾರಿಯ ಬೆಳೆಗೆ ಭೂಮಿಯನ್ನು ಹಸನು ಮಾಡಲು ಮಳೆಯನ್ನು ಎದುರು ನೋಡುತ್ತಲಿದ್ದಾರೆ ಕೆಲವು ಕಡೆ ಕೆರೆಗಳು ಬತ್ತಿಹೋಗಿವೆ ಶೀಘ್ರದಲ್ಲಿ ಮಳೆ ಬಾರದೆ ಇದ್ದರೆ ಈಗ ಅಲ್ಪಸ್ವಲ್ಪ ನೀರು ಉಳಿದಿರುವ ಕೆರೆಗಳು ಕೂಡ ಬತ್ತಿ ಹೋಗಿ ನೀರಿನ ಕ್ಷಾಮ ಬರುವದರಲ್ಲಿ ಸಂದೇಹವಿಲ್ಲವೆಂದು ಹೇಳುತ್ತಾರೆ — ಕಾಯಿಲೆಯಾಗಿರುವ ನಮ್ಮ ಡೆಪ್ಟಿ ಕಮಿಷನರ ದೇಹಸ್ಥಿತಿಯು ಯಥಾಪ್ರಕಾರವಾಗಿದೆ ಎಂದೂ ಇಬ್ಬರು ಯೂರೋಪಿಯನ್ ನರ್ಸ್‌ಗಳು ಔಷಧೋಪಚಾರವನ್ನು ಮಾಡುತ್ತಾ ಅವರ ಸಮೀಪದಲ್ಲಿಯೇ ಈಗಲೂ ಕಾದಿರುತ್ತಾರೆಂದೂ ಹೇಳುತ್ತಾರೆ — ಸರ್ಕೀಟಿನಿಂದ ಹೊಸ ಡೆಪ್ಟಿ ಕಮಿಷನರು ಈ ಹೊತ್ತೋ ನಾಳೆಯೋ ಬರುವವರಾಗಿದ್ದಾರೆಂದು ವರ್ತಮಾನವಿದೆ ಜನರಲ್ ಅ॥ ಕಮಿಷನರು ಹರೀಹರ(?) ಪ್ರಾಂತ್ಯ ಸರ್ಕೀಟ್ ಹೋಗಿದ್ದಾರೆ — ಶ್ಯಾನುಭೋಗ ಸೀತಾರಾಮಯ್ಯನವರ ಮನೆಯಲ್ಲಿ ಪಾತ್ರೆಯ(?) ಆಭರಣಗಳನ್ನು ಕಳುವು ಮಾಡಿದ ಅಪರಾಧಿಗೆ ಇಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ವರುಷ ಕಠಿಣ ಸಜಾ ಆಯಿತು — ಈ ವರುಷ ಇಲ್ಲಿನ ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲಿನಲ್ಲಿ ಲೋವರ್ ಸೆಕೆಂಡರಿ ಕ್ಲಾಸನ್ನು ಇಟ್ಟಿದ್ದಾರೆ ಈ ಊರಿನ ಹೆಣ್ಣು ಮಕ್ಕಳು ಪರೀಕ್ಷೆಗೆ ಓದಬೇಕಾದರೆ ಈ ಮಿಷನ್ ಸ್ಕೂಲಿನಲ್ಲಿ ಅಭ್ಯಾಸ ಮಾಡುವುದು ಅನುಕೂಲ — ಇಲ್ಲಿನ ನೀರಿನ ಪೈಪುಗಳ ವಿಚಾರದಲ್ಲಿ ಪೈಪುಗಳಲ್ಲಿಯೇ ಮುಖ ಕೈಕಾಲುಗಳನ್ನು ತೊಳೆಯುವದೂ ಮುಸರೆ ಪಾತ್ರೆಗಳನ್ನು ತೊಳೆಯುವದೂ ಕೆಲವು ಕಡೆ ಸಿಕ್ಕಿದ ಹಾಗೆ ನೀರನ್ನು ಬಿಟ್ಟು ನಷ್ಟ ಮಾಡುವದೂ ಇಂಥಾ ಕೆಲಸಗಳು ನಡೆಯುತ್ತಿವೆ ಮ್ಯುನಿಸಿಪಾಲಿಟಿ ಅಧಿಕಾರಿಗಳು ನಿಗಾ ಇಡುವದು ಒಳ್ಳೇದು ಹಾಗೆಯೇ ಇಲ್ಲಿನ ಕಟುಕರು ಕೆಲಸಕ್ಕೆ ಬಾರದ ಮಾಂಸವನ್ನು ಮಾರಿ ದ್ರವ್ಯವನ್ನು ಕಟ್ಟಿಕೊಳ್ಳುತ್ತಿದ್ದಾರೆ ಇದನ್ನು ಅಧಿಕಾರಿಗಳು ತನಿಖೆ ಮಾಡಿ, ಒಳ್ಳೇ ರಾಸುಗಳನ್ನು ತಂದು ಕೊಯಿದು ವಿಕ್ರಯಿಸುವಂತೆ ಮಾಡಿದರೆ ಉಪಕಾರವಾದೀತು

ಹಾಸನ — ಈ ಟೌನಿನ ಪ್ರಜೆಗಳೆಲ್ಲಾ ಮನೆ(?)ಗಳನ್ನು ಬಿಟ್ಟು ಊರೊಳಗೆ ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡದ್ದಾಯಿತು ಹವಾ ಬದಲಾವಣೆಯಿಂದಲೂ ಯಾತಾಯಾತದ ಆಯಾಸದಿಂದಲೂ ಪ್ರಾಯಃ ಪ್ರತಿ ಮನೆಯಲ್ಲಿಯೂ ೨—೩ ಜನಗಳು ಜ್ವರಪೀಡಿತರಾಗಿ ಮಲಗಿರುತ್ತಾರೆ ಮಂಗಪುರಿ(?) ಸಾಹೇಬರವರ ಕೊಳದ ಹತ್ತಿರ ಸಂತೆಯಿಂದ ವ್ಯಾಪಾರ ಮಾಡಿಕೊಂಡು ಬಂದವರಲ್ಲಿ ಒಬ್ಬನು ಅಕಸ್ಮಾತ್ ಮೃತಪಟ್ಟದ್ದಾಗಿಯೂ ಮತ್ತೊಬ್ಬ ಚಿಕಿತ್ಸೆಯಲ್ಲಿರುವದಾಗಿಯೂ ತಿಳಿಯುತ್ತೆ.—ಈಗ್ಗೆ ೧೫ ದಿವಸ ಕೆಳಗೆ ದಾಟ್ಟದ(?) ಅಟ ನಡೆದ ದೊಡ್ಡ ಕಳುವಿನ ಪತ್ತೆ ಉದ್ದಿಶ್ಯ ನಮ್ಮ ಜನರಲ್ ಪೋಲೀಸ್ ಅ॥ ಸೂಪರಿಂಟೆಂಡೆಂಟರವರು ೮ ದಿನಗಳ ಕಾಲ ಇಲ್ಲೇ ಮೊಕ್ಕಾಂ ಮಾಡಿದ್ದರು ಇದುವರೆಗೂ ಇದು ಪತ್ತೆಯಾದಂತೆ ಕಾಣಬಂದಿಲ್ಲ ಬಟ್ಲರ್(?) ಆದ ಮನುಷ್ಯನಿಗೆ ಮೇಜನ ಮೇಲಿಂದ ಸ್ವಲ್ಪ ಗುಣವಾಗಿದೆ ಈಗ್ಗೆ ಸುಮಾರು ೬—೭ ತಿಂಗಳ ಹಿಂದೆ ಜನಗಳು ಪಟ್ಟಣದಲ್ಲಿರುವಾಗ್ಗೆ ಪೋಲೀಸ್ ಸೂಪರಿಂಟೆಂಡೆಂಟರು, ಹೆಡ್ ಮಾಸ್ಟರ್ ಇನ್ಸ್‌ಪೆಕ್ಟರು, ಅಮಲ್ದಾರರು ಮುಂತಾದವರ ಪಕ್ಕದ ಎದುರಿಗೇನೇ ಮತ್ತು ಇವರು ಊರಲ್ಲಿ ಇರುವಾಗಲೇನೇ ಹಜೂರು ಕಚೇರಿ ಮುನಸೀಫರು ಮೆ॥ ರಾಮರಾಯರ ಪಕ್ಕದಲ್ಲಿ ಆದ ಕಳುವೇ ಇನ್ನು ಪತ್ತೆ ಆಗುವದರಲ್ಲಿದೆ ಇಂಥಾದ್ದರಲ್ಲಿ ಇವರ ಪರೋಕ್ಷದಲ್ಲಿ ನಡೆದದ್ದು ಪತ್ತೆ ಆಗುವದು ಸುಲಭಸಾಧ್ಯವೇ ಎಂದು ಜನಗಳು ಅಲ್ಲಲ್ಲಿ ಆಡಿಕೊಳ್ಳುತ್ತಲಿರುವರು — ಇಲ್ಲಿನ ಡಿಸ್ಟ್ರಿಕ್ಟ್ ಆಫೀಸು ನೌಕರರ ಜನವರಿ ತಿಂಗಳ ಸಂಬಳ ಫೆಬ್ರವರಿ ಆಖೈರ್ ಭಾಗದಲ್ಲಿ ಬಟವಾಡೆ ಆಯಿತು ಫೆಬ್ರವರಿಯದು ಈ ತಿಂಗಳು ೨೬ ತಾರೀಖು ಆದಾಗ್ಯೂ ಇನ್ನು ಬಟವಾಡೆಯಾಗಲಿಲ್ಲವಾದ್ದರಿಂದ ಅಲ್ಪ ನೌಕರರೆಲ್ಲಾ ಹಾಹಾಕಾರಪಡುತ್ತಾ, ರಾತ್ರಿ ೧೦—೧೧ ಗಂಟೆಯ ವರಿವಿಗೂ ಆಫೀಸು ಆಗುತ್ತಿರುವದಕ್ಕಾಗಿ ಪರಿತಪಿಸುತ್ತಲಿರುವರು ಕೆಲವರು ಅವಕಾಶ ಹೆಚ್ಚಾಗಿ ಸಿಕ್ಕುವದರಿಂದ ಸರ್ಕಾರೀ ಕೆಲಸವು ನಡೆಯಲು ಅನುಕೂಲವಾಗಿರುತ್ತೆನ್ನುವರು ಮತ್ತೆ ಕೆಲವರು "ಬಟ್ಟಂಬಟ್ಟೆಗಳಲ್ಲ! ಏನು ಮಾಡೋಣ?" ಎಂದು ಪ್ರತಿವಾದಿಸುವರು — ಈಗ್ಗೆ ಕೆಲವು ದಿವಸಗಳ ಹಿಂದೆ "ಫರೇಲಾ" ಎಂಬ ಇಸ್ಪೀಟು ಆಟದ ಜೂಜಿಗಾಗಿ ಕೆಲವರಿಗೆ ಮೆ॥ ರಾಮಸ್ವಾಮಯ್ಯನವರ ಕೋರ್ಟಿನಲ್ಲಿ ಶಿಕ್ಷೆಯಾಗಿದ್ದಾಗ್ಯೂ ಸದರಿ ಆಟವು ಇನ್ನು ಕಮಿಯಾದೇ ಪ್ರಬಲಿಸುತ್ತಾ ಬರುತ್ತಿರುವದಕ್ಕೆ ಸದರೀ ಆಟದ ಅಭಿಮಾನದೇವತೆಯಾದವನೊಬ್ಬನಿಗೆ ಶಿಕ್ಷೆಯಾಗದೇ ಹೋದದ್ದೇ ಕಾರಣವೆಂದು ಜನಗಳು ಹೇಳಿಕೊಳ್ಳುತ್ತಿರುವರು

ಮೈಸೂರು ಗೆಜೆಟ್ ಸಂಗ್ರಹ

ದಾವಣಗೆರೆ ಅಮಲ್ದಾರ್ ಮೆ॥ ಮಹಮದ್ ಓಬಿದುಲ್ಲಾ ಯವರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿವೆ

ಕಡೂರ್ ಡಿಸ್ಟ್ರಿಕ್ಟ್ ಆಕ್ಟಿಂಗ್ ಪೋಲೀಸ್ ಅ॥ ಸೂಪರಿಂಟೆಂಡೆಂಟ್ ಮೆ॥ ಮಹಮದ್ ರಜಾ ಯವರು ತಾ ೨೬ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಹೋದ ರಜವನ್ನು ರದ್ದುಮಾಡಿದೆ

ಸಬ್ ಅ॥ ಸರ್ಜನ್ ಮೆ॥ ಎ [illegible] ಮೊದಲಿಯಾರ್ರಿಗೆ ಕೊಟ್ಟಿದ್ದ ೮ ತಿಂಗಳ ಸಿಕ್ [illegible] ರಜವನ್ನು ಇನ್ನೂ ನಾಲ್ಕು ತಿಂಗಳು ಜಾಸ್ತಿ ಮಾಡಿದೆ

ಕೋಲಾರ್ ಡಿಸ್ಟ್ರಿಕ್ಟ್ ಟ್ರೆಜರಿ ಅ॥ ಕಮಿಷನರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಟಿ ಜಿ ಸುಂದರರಾಜೈಯಂಗಾರ್ರಿಗೆ ಅವರು ವಿಚಾರಣೆ ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಠೇವಣಿಯತ್ತುಗಳನ್ನು ಸ್ವಹಸ್ತದಿಂದ ಇಂಗ್ಲಿಷಿನಲ್ಲಿ ಬರೆದುಕೊಳ್ಳುವಂತೆ ಅಧಿಕಾರ ಕೊಟ್ಟಿದೆ

ಮೈಸೂರು ಅಡಿಷನಲ್ ಮುನಸೀಫ ಮೆ॥ ಪಿ ಎ ಶಿವಪ್ರಕಾಶಂ ಪಿಳ್ಳೆ ಯವರಿಗೆ ಮಾರ್ಚಿ ೧ ರಿಂದ ಐದು ವಾರಗಳ ಕಾಯಿಲೆ ರಜಾ ಕೊಟ್ಟಿದೆ

ಮೆ॥ ಪಿ ಮಹದೇವಯ್ಯನವರು ಮೈಸೂರು ಅಡಿಷನಲ್ ಮುನಸೀಫರಾಗಿ ಕೆಲಸ ನೋಡತಕ್ಕದ್ದು

ಹೊಸದುರ್ಗದ ತಾಲ್ಲೂಕ್ ಅಮಲ್ದಾರ್ ಮೆ॥ ಕೆ ಹನುಮಂತರಾಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನ ಜಾಸ್ತಿ ಮಾಡಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮೆ॥ ಎಚ ರಾಮಾನುಜೈಯಂಗಾರ್ರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸೀನಿಯರ್ ಅ॥ ಕಮಿಷನರು ಚಿತ್ರದುರ್ಗದ ಡಿಸ್ಟ್ರಿಕ್ಟ್ ಛಾರ್ಜನ್ನು ವಹಿಸತಕ್ಕದ್ದು

ಚಿಕ್ಕಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮೆ॥ ಎಂ ಕೃಷ್ಣಸ್ವಾಮಿ ಐಯಂಗಾರ್ರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರೆವಿನ್ಯೂ ಪ್ರೊಬೇಷನರ್ ಮೆ॥ ಎಂ ಎಸ್ ರಾಮಚಂದ್ರರಾಯರು ಚಿಕ್ಕಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ರಾಗಿ ಕೆಲಸ ನೋಡತಕ್ಕದ್ದು

ಚನ್ನಪಟ್ಟಣದ ತಾಲ್ಲೂಕ್ ಅಮಲ್ದಾರ್ ಮೆ॥ ಟಿ ರಾಮಚಂದ್ರರಾಯರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿರಸ್ತೆದಾರ್ ಕಾಶೀನಾಥರಾಯರು ಚನ್ನಪಟ್ಟಣದ ತಾಲ್ಲೂಕ್ ಅಮಲ್ದಾರ್ರಾಗಿ ಕೆಲಸನೋಡತಕ್ಕದ್ದು.

ಎಕ್ಸೈಸ್ ಇಲಾಖಾ ಅ॥ ಕಮಿಷನರ್ ಮೆ॥ ಬಿ ಶಾಮಣ್ಣನವರು ಜನವರಿ ೬ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಹೋದ ರಜವನ್ನು ರದ್ದುಮಾಡಿದೆ

ಸರ್ವೆ ಇಲಾಖಾ ಅ॥ ಕಮಿಷನರ್ ಮೆ॥ ಡಿ ಜೆ ಡಾರಾಬಾಯನವರನ್ನು ಕಳೆದ ನವಂಬರ್ ೨೩ ರಿಂದ ೧ನೆ ಕ್ಲಾಸಿಗೆ ಬಡ್ತಿ ಮಾಡಿದೆ

ಸ್ಪೆಷಲ್ ಡ್ಯೂಟಿ ಎಕ್ಸಿಕ್ಯೂಟಿವ್ ಇಂಜನಿಯರ್ ಮೆ॥ ವಿ ಎಚ್ ಕರ್ವಿಯವರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತು ದಿನಗಳಿಗೆ ಜಾಸ್ತಿ ಮಾಡಿದೆ

ಮಾರಿಕಣಿವೆ ವರ್ಕ್ಸ್ ಸಬ್ ಅ॥ ಇಂಜನಿಯರ್ ಮೆ॥ ಕೆ ಆರ್ ಶೇಷಾಚಾರ್ರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅಸಿಸ್ಟೆಂಟ್ ಜಿಯಾಲಜಿಸ್ಟ್ ಮೆ॥ ಎ ಟಿ ಸೆಟ್ಲೂರ್ ಯವರನ್ನು ಇನ್ಸ್‌ಪೆಕ್ಟರಾಗಿಯೂ ಮೈನಿಂಗ್ ಸರ್ವೆಯರಾಗಿಯೂ ನೇಮಕ ಮಾಡಿದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು — ಎಡಿ

ಕರೆಸ್‌ಪಾಂಡೆನ್ಸ್.

ಸರ್ಕಾರಿ ಕಸಬು ದಾರಿ ಸ್ಕೂಲುಗಳ ವಿಚಾರ

ಅಯ್ಯಾ,

೯—೩—೧೯೦೫ ನೇ ಗುರುವಾರದ ಪತ್ರಿಕೆಯಲ್ಲಿ ಮೇಲ್ಕಂಡ ಸ್ಕೂಲಿನ ವಿಷಯದಲ್ಲಿ ಬಿನ್ನೈಸಿದ್ದೆನು ಅದಕ್ಕೆ ಯಾವ ಮಹನೀಯರಾಗಲೀ ಜವಾಬು ಕೊಡಲಿಲ್ಲ ಕಾರಣವೇನೋ ತಿಳಿಯಲಿಲ್ಲ ಏನು? ಇದರಲ್ಲಿ ಒಳಮರ್ಮವು ಏನಾದರೂ ಇದೆಯೋ! ಇದರ ವಿಷಯದಲ್ಲಿ ಯಾರಿಗೂ ಏನೂ ತಿಳಿಯದೋ? ಆದ್ದರಿಂದ ಎಡಿಟರವರೇ, ಈ ವಿಷಯದಲ್ಲಿ ನಾನು ಮೆ॥ ಭಾಭಾ ಸಾಹೇಬರಿಗೆ ಬರೆದರೆ ಅವರು ಇದಕ್ಕೆ ಜವಾಬು ಕೊಡುವರೋ? ಈ ಸಂಗತಿಯನ್ನು ತಿಳಿಸುವ ಹಾಗೆ ಪ್ರಾರ್ಥಿಸುತ್ತೇನೆ.

ಡಿ ಆರ್ ಯೇಸದಾಸಪ್ಪ.

[ಮೆ॥ ಭಾಭಾ ಸಾಹೇಬರು ಉತ್ತರ ಕೊಟ್ಟಾರೆಂದು ನಿರೀಕ್ಷಿಸುತ್ತೇವೆ — ಎಡಿ]

ರಸ್ತೆ ದುರಸ್ತು ಮಾಡಿಕೊಡಬೇಕು

ಅಯ್ಯಾ,

ತುಮಕೂರು ತಾಲ್ಲೂಕು ಕೋಳಾಲದ ಹೋಬಳಿ ನಾಗತ್ತೂರು(?) ಬಳಿ ಹೊಸದಾಗಿ ಸರ್ಕಾರದವರು ನಾಲ್ಕು ಲಕ್ಷ ರೂಪಾಯಿ ಖರ್ಚು ಇಟ್ಟು ಒಂದು ಬಾರಿ ಕೆರೆಯನ್ನು(?) ತಯಾರು ಮಾಡಿಸಿದರು. ಇದರಿಂದ ೨೦—೩೦ ಗ್ರಾಮಗಳಿಗೂ ಇನ್ನು ಅನೇಕ ರೈತರಿಗೂ ಬಹಳ ಅನುಕೂಲವಾಗಿದೆ ಇದು ಬೆಂಗಾಡು ಪ್ರದೇಶವಾಗಿತ್ತು ಈ ಕೆರೆಯಾದ್ದರಿಂದ ಜನಗಳಿಗೆ "ಕಂಗಳಿಗೆ ಕಣ್ಣು ಬಂದಂತೆ" ಪ್ರಕಾಶವಾಯಿತು ಒಂದು ಸರ್ಕಾರಿ ಬಂಗಲೆಯೂ ಪ್ರತಿ ಬಾಬು ವಾರ ಎರಡು ಮೂರು ಸಾವಿರ ರೂಪಾಯಿನ ಎಲ್ಲಾ ಜಿನಸಿಗಳ ವಿಶೇಷವಾದ ಸಂತೆಯೂ ನಡೆಯುತ್ತಾ ಇದೆ ತುಮಕೂರು, ಕೊರಟಗೆರೆ, ದಾವಸ್‌ಪೇಟೆ, ಗುಬ್ಬಿ, ಬೆಳ್ಳಾವಿ, ಮಧುಗಿರಿ, ಗೌರಿಬಿದನೂರು, ದೊಡ್ಡಬಳ್ಳಾಪುರ, ಈ ತಾಲ್ಲೂಕುಗಳ ಗ್ರಾಮಾಂತ್ರದ ಜನಗಳಿಗೆ ಈ ಸಂತೆಯಿಂದ ಈ ಪ್ಲೇಗ್ ಗಲಾಟೆಯಲ್ಲಿ ಬಹಳ ಅನುಕೂಲವಾಯಿತು ಇಂಥಾದನ್ನು ತಪ್ಪಿಸಬೇಕೆಂದು ನಾಗ್ಗೆರೆಯವರೂ ಇನ್ನೂ ಕೆಲವು ಜನಗಳೂ ಬಹಳ ಪ್ರಯತ್ನಪಟ್ಟರು ಆಗಿದ್ದ ತುಮಕೂರು ತಾಲ್ಲೂಕು ಅಮಲ್ದಾರ್ ಮೆ॥ ಹೇಸ್ ಸಾಹೇಬರವರೂ ನಮ್ಮ ಡೆಪ್ಟಿ ಕಮಿಷನರ್ ಸಾಹೇಬರವರೂ ಸಂತೆಯನ್ನು ನಡೆಯಲು ಖಾಯಂ ಮಾಡಿದರು ಈ ಸಂತೆಗೆ ಹೋಗಿ ಬರುವದಕ್ಕೆ ದಾವಸ್‌ಪೇಟೆಯಿಂದ ಕೊರಟಗೆರೆಗೆ ಹೋಗುವ ಅರ್ಧರಸ್ತೆಯಿಂದ ಮೊದಲು ಕೆರೆ ಕೆಲಸ ನಡೆಯುವಾಗ್ಗೆ ಇಂಜನಿಯರ್ ಇಲಾಖಾದವರು ಒಂದು ಒಂಟಿ ರಸ್ತೆ ಮಾಡಿಸಿದ್ದರು ಅದರಲ್ಲೇ ಇದುವರೆಗೂ ಸಂತೆ ಜನಗಳೂ ಆಫೀಸರುಗಳೂ ಬರುತ್ತಾ ಇದ್ದಾರೆ ಈ ರಸ್ತೆ ಕೆಲವು ಕಡೆ ಮಳೆಯಿಂದ ನೀರು ಹರಿದು ಕೊರಕಲು ಬಿದ್ದು ಸಂಚಾರಕ್ಕೆ ತುಂಬಾ ಅಡಚಣೆಯಾಗಿರುತ್ತೆ, ಸರ್ಕಾರದವರು ದಯವಿಟ್ಟು ಈ ರಸ್ತೆಯನ್ನು ಸರಿಯಾಗಿ ದುರಸ್ತು ಮಾಡಿಸಿದಲ್ಲಿ ಆಫೀಸರುಗಳಿಗೂ ತುಮಕೂರಿಗೆ ಜಿನಸಿ ಸಾಗಿಸುವವರಿಗೂ ಸಂತೆಗೆ ಬರತಕ್ಕ ಅನೇಕ ಪ್ರಜೆಗಳಿಗೂ ಈ ಕೆರೆ ಅಚ್ಚುಕಟ್ಟಿಗೆ ಗೊಬ್ಬರ ಸೊಪ್ಪು ವಗೈರೆ ಸಾಗಿಸಿಕೊಳ್ಳತಕ್ಕ ರೈತರಿಗೂ ಬಹಳ ಅನುಕೂಲವಾಗಿರುತ್ತೆ ಈ ಸಂಗತಿ ಕುರಿತು ಹಜೂರ್ ಡೆಪ್ಟಿ ಕಮಿಷನರ್ ಸಾಹೇಬರವರಿಗೂ ಎಕ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಗೂ ಈಗ್ಗೆ ೪—೬ ತಿಂಗಳ ಕೆಳಗೆ ಅನೇಕ ಜನ ಪ್ರಜೆಗಳು ಅರ್ಜಿಗಳನ್ನು ಗುದರಾಯಿಸಿಕೊಂಡರು ಇದುವರೆಗೂ ಯಾವ ಇತ್ಯರ್ಥವೂ ಅಪ್ಪಣೆ ಆಗಲಿಲ್ಲ

೩೦—೩—೦೫ ಮ. ರ ಯ

ಶಿವಮೊಗ್ಗೆಯಿಂದ ಬೈಂದೂರಿಗೆ ರೈಲು ಆಗಬೇಕು

ಅಯ್ಯಾ,

ಈ ಕೆಳಗಣ ಲೇಖಕ್ಕೆ ತಮ್ಮ ಪತ್ರಿಕೆಯಲ್ಲಿ ಕೊಂಚ ಎಡೆ ಕೊಡುವಿರಾಗಿ ನಂಬುತ್ತೇನೆ ಯಾಕಂದರೆ ದೇಶಾಭ್ಯುದಯಕ್ಕೆ ಕಾರಣವಾಗುವ ಅನೇಕಾನೇಕ ವಿಷಯಗಳು ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವದು ಕಂಡು ಈಗ ಬರೆಯಲಿಕ್ಕಿರುವ ವಿಷಯವೂ ಕೂಡ ಅಂಥಾದ್ದರಲ್ಲೊಂದಾಗಿರಬಹುದೆಂದು ನೆನಸುತ್ತೇನೆ.

ಈಗಿನ ಕಾಲಮಾನದ ಸ್ಥಿತಿಯ ಮೇಲೆ ಜನರು ಕೈಕೊಳ್ಳುವ ವೃತ್ತಿಗಳೊಳಗೆ ವ್ಯವಸಾಯ ಮತ್ತು ವ್ಯಾಪಾರ ಇವೆರಡೇ ಪ್ರಾಮುಖ್ಯವೆನ್ನಬಹುದು ಆದರೆ ಪ್ರಥಮದ ವ್ಯವಸಾಯಕ್ಕೆ ಮೊದಲೇ ಜನಗಳ ವಾಸಸ್ಥಾನ ಹೆಚ್ಚಾಗಿರುವಲ್ಲಿ ಅನುಕೂಲವಾಗಿ ಕಾಣ್ತೆ

ತ್ಪನ್ನವಾದ ಫಸಲು ಪ್ರಾಪ್ತವಾಗುವ ಜಮೀನು ಹೊಸಬರಿಗೆ ಇಷ್ಟ ವಾದ ಅನ್ಯರಿಗೆ ಸಿಗುವದು ದುರ್ಲಭವೇ. ಹಾಗಾದರೆ ವ್ಯವಸಾಯಕ್ಕೊಳ್ಳೆ ಭೂಮಿಯು ಸಿಗಲಾರದೆನ್ನಬಹುದೇ? ಇಲ್ಲವು. ಯಾಕಂದರೆ ಲಕ್ಷೋಪ ಜನರ ವೃದ್ಧಿಗೆ ಯೋಗ್ಯವಾದ, ಬೇಸಾಯಕ್ಕೆ ಪ್ರಥಮ ಕಾರಣೀಭೂತವಾದ ಗೊಬ್ಬರಕ್ಕೂ, ಜನರ ಉಪಯೋಗಕ್ಕೆ ಯಾವಾಗಲೂ ಬೇಕಾಗುವ ದವ್ಯವಾದ ಅರಣ್ಯದಿಂದ ಸ್ಮರಿತವಾಗಿಯೂ, ಅನೇಕ ಕೆರೆ, ಹಳ್ಳ, ಕಾಲುವೆ ಮುಂತಾದ್ದರಿಂದ ಸುಲಭ್ಯವುಳ್ಳದ್ದಾಗಿಯೂ ಇರುವ ಜಮೀನು ಶಿವಮೊಗ್ಗ ಜಿಲ್ಲೆಯ ಸಾಗರ, ನಗರ ಮುಂತಾದ ಸಮುದ್ರ ತೀರ ಸಮೀಪದ ಮಲೆನಾಡುಗಳಲ್ಲಿ ಇರುತ್ತದೆ. ಪರಂತು ಜನರಿಗೆ ಬೇಕಾಗುವ ಅನುಕೂಲತೆಗಳು ಸರ್ವಸಾಧಾರಣವೇ! ವ್ಯಾಪಾರಕ್ಕೂ ಇಲ್ಲ ದರಿಗೆ ಆಳುಕಾಳು ಮುಂತಾದ್ದರಿಂದ ತೊಂದರೆ; ಒಟ್ಟಿನ ಶ್ರೀ ಮಂತರಿಗಾದರೂ ಕಷ್ಟವಾಗುವದು. ಇಂಥ ಪ್ರದೇಶಗಳಲ್ಲಿ ವ್ಯಾಪಾರಾದಿ ವೃತ್ತಿಗಳಿಗೆ ಊರ್ಜಿತ ಸ್ಥಿತಿಯು ಎಂದೂ ಆಗಲಾರದು. ಹೀಗಿರುವಲ್ಲಿ ಈ ಕೊರತೆಗಳು ಇಲ್ಲದಂತಾಗಬೇಕಾದರೆ ಪ್ರಸ್ತುತ (ಸದರ್ನ ಮರಾಟಾ) ರೈಲ್ವೆ ಸ್ಟೇಷನ್ ಇರುವ ಶಿವಮೊಗ್ಗೆಯಿಂದ ಉದ್ಧ ಪಶ್ಚಿಮದಿಕ್ಕಿನಲ್ಲಿರುವ ಸಾಗರ ವ ನಗರ ತಾಲ್ಲೂಕುಗಳ ಮಲೆನಾಡಿನ ಹಾದಿಯಿಂದ ಸುಪ್ರಸಿದ್ಧ ಕೊಡಚಾದ್ರಿ, ಕೊಲ್ಲೂರು ಮಾರ್ಗವಾಗಿ ಅತ್ಯಂತ ಸಮೀಪ ಇರುವ ಬರೀ ೮೭ ಮೈಲು ಫಾಸಲೆಯುಳ್ಳ ಪಶ್ಚಿಮ ಸಮುದ್ರ ತೀರದ ಬಂದರವಾದ ಬೈಂದೂರಿಗೆ ರೈಲ್ವೆಯನ್ನು ಹಾಕಿಸುವ ವಿಷಯದಲ್ಲಿ ಪ್ರಜಾನ್ಯೂನತೆಗಳನ್ನು ದೂರಪಡಿಸುವ ರಾಜಕಾರ್ಯ ಧುರಂಧರರಾದ ಮೈಸೂರು ಸರ್ಕಾರದ ಅಧಿಕಾರಿಗಳು ವಿಶೇಷ ತಾತ್ಪರ್ಯ ಕೊಡುವದೇ ಮುಖ್ಯವಾದ ಉಪಾಯವು.

ಮೇಲೆ ಹೇಳಿದ ಈ ರೈಲ್ವೆಯು ಹಾಕಿಸೋಣದರಿಂದ ಸರ್ಕಾರ ದವರಿಗೆ ಬರುವ ಫಾರೆಸ್ಟ್, ರೆವೆನ್ಯೂ ಸೆಟ್ಲ್‌ಮೆಂಟ ಮುಂತಾದ ಬಿಕ್ಕಟ್ಟಿದ ಕಾಯಿದೆಗಳಿಂದ ನಿತ್ಯ ಜೀವನಕ್ಕೆ ತತ್ವಾರವಾಗಿ ನರಳುವ ಬಡ ಜನರಿಗೂ ವ ತ್ತು ಬೆಳ್ಳಿರೆ ರೈತರಿಗೂ ಇಂಥ ಮೈಸೂರು ಪ್ರೋವಿನ್ಸಿನ ಮಲೆನಾಡುಗಳ ವೃದ್ಧಿಗೆ ಅನುಕೂಲವಾದ ಪ್ರದೇಶಗಳಲ್ಲಿ ಬಹಳೇ ಸೌಲಭ್ಯ ಉಂಟಾಗಿ ಎಲ್ಲ ಪ್ರದೇಶವೂ ಕೃಷಿ, ವ್ಯಾಪಾರ, ಕೈಗಾರಿಕೆ ಮುಂತಾದ ವೃತ್ತಿಗಳಿಂದ ಕಾಲಕ್ಷೇಪ ಮಾಡುವ ಜನರಿಂದ ಭರಿತವಾಗಿ ಮೈಸೂರು ಗವರ್ನಮೆಂಟಿನವರಿಗೆ ಹೇರಳವಾದ ಉತ್ಪತ್ತಿಯಾಗಲಿಕ್ಕೆ ಸಂದೇಹವಿಲ್ಲ.

ಈ ರೈಲ್ವೆ ಹಾಕಿಸೋಣದರಿಂದ ಆ ಪ್ರದೇಶದಲ್ಲಿ ಉತ್ಪತ್ತಿಯಾಗುವ ಎಲ್ಲಾ ವಸ್ತುಗಳು ಬೇಕಾದಾಗ ಬೇಕಾದ ಊರಿಗೆ ಸುಲಭ ವೆಚ್ಚದಿಂದ ಒಯ್ಯಲಿಕ್ಕೂ ಇಲ್ಲದ ಜಿನಸುಗಳನ್ನು ತರಲಿಕ್ಕೆ ಈ ಘಟ್ಟದ ಉಪಾಯವಿರುವದು. ಕೊಡಚಾದ್ರಿಯು ಪರ್ವತದ ಮಾರ್ಗವಾಗಿ ಈ ರೈಲ್ವೆ ತರೋಣದರಿಂದ ಕಡುಬೇಸಿಗೆಯಲ್ಲಿ ಸೇವಿಸಿ ಪಡುವ ಜನರಿಗಂತೂ ಸುಪ್ರಸಿದ್ಧವಾದ ಸುಶೀತಳ ಕೊಡಚಾದ್ರಿ ಪರ್ವತದ ಭಾಗಗಳಲ್ಲಿ ಕೆಲವು ಕಾಲ ನಿಲ್ಲಲಿಕ್ಕೆ ಆಸ್ಪದವಾಗುವದರಿಂದಲೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಬ್ಬರು ಕಾಫಿ ಮುಂತಾಗಿ ಬೆಳಸಲಿಕ್ಕೆ ಯೋಗ್ಯವಿರುವದರಿಂದಲೂ ಅನೇಕರಿಗೆ ಬಹುತರದ ಅನುಕೂಲತೆಗಳಿಗೆ ಕಾರಣವಾಗುವದು. ಇದೇ ಕೊಡಚಾದ್ರಿಯಲ್ಲಿ ನಿಂತು ಪಶ್ಚಿಮಕ್ಕೆ ನೋಡಿದರೆ ಬೀಸುವ ತೆರೆಗಳಿಂದಲೂ ಸಮುದ್ರವೂ ಅತಿ ಸಮೀಪವಾಗಿ ಕಾಣುವ ಅದರಲ್ಲಿ ತಿರುಗುವ ಅನೇಕ ಹಡಗುಗಳ ಓಡ್ಯಾಟವೂ ಒಂದು ತಮಾಷೆಯಾಗಿಯೂ ಇದೇ ರೈಲ್ವೆಯಿಂದ ಸರ್ಕಾರ ಪ್ರಾಂತ್ಯಕ್ಕೆ ಬರಬೇಕಾದಾಗಿಯೂ ಕೊಡಚಾದ್ರಿಯು ಸುತ್ತುಮುತ್ತಲಿನ ಗಿರಿ, ಗಂಧರ, ಕಾಲುವೆ, ಹೊಳೆಗಳಿಂದಲೂ ರಮಣೀಯವಾದ ಅನೇಕ ಉದ್ಯಾನವನಪ್ರಂಪಚ ಅಟವಿಗಳಿಂದಲೂ ಶೋಭಿತವಾದ ಪ್ರದೇಶವು ಪ್ರಯಾಣಿಕರ ಮನಸ್ಸನ್ನು ಸೂರೆಗೊಳಿಸುವದಲ್ಲದೆ ಸಮೀಪದ ಕ್ಷೇತ್ರನಾದ ಶ್ರೀ ಕೊಲ್ಲೂರು ಯಾತ್ರೆಗೂ ವ ವ್ಯಾಪಾರಕ್ಕೂ ಬರುವ ಅನೇಕಾನೇಕ ಜನರಿಗೆ ತುಂಬಾ ಅನುಕೂಲವಾಗುವದು. ಈ ಕೊಲ್ಲೂರಿಂದ ಬೈಂದೂರ (ದಕ್ಷಿಣ ಕನ್ನಡ ಜಿಲ್ಲಾ) ಸಮುದ್ರ ಕಿನಾರೆಗೆ ಬರೀ ೧೮ ಮೈಲು ದೂರದಲ್ಲಿರುವದರಿಂದ ಈ ರೈಲ್ವೆಯು ಮುಖಾಂತರ ಬಳ್ಳಾರಿ, ಧಾರವಾಡ ಜಿಲ್ಲಾ ಮತ್ತು ಮೈಸೂರು ಸೀಮೆಯ ಅನೇಕ ಊರುಗಳಿಂದ ಬಹು ಖರ್ಚಿನಿಂದ ಬೇರೆ ಬಂದರಗಳಿಗೆ ಸಾಗಿಸಬೇಕಾದ ವಸ್ತುಗಳು ಗೋವಾ (ಪೋರ್ತುಗೀಸ) ರೈಲ್ವೆಯ ಅತಿ ಬಿಕ್ಕಟ್ಟಿನ ಕಾಯಿದೆಗಳಿಗೂ, ತೀರಾ ಹೆಚ್ಚಿನ ಸುಂಕಗಳಿಗೂ ಒಳಪಡದೇ ಸೀದಾ ಕಲ್ಲಿಕೋಟೆ, ಕೊಚ್ಚಿ, ಮಂಗಳೂರು, ಬೊಂಬಾಯಿ, ಕರಾಚಿ ಮುಂತಾದ ಬಂದರಗಳಿಗೆ ಹಡಗಿನ ಮೂಲಕ ಸಾಗಿಸಲಿಕ್ಕೆ ಬಹಳ ಸುಲಭವಾಗುವದು. ಈ ೮೭ ಮೈಲಿನ ರೈಲ್ವೆಯು ಸೀದಾ ಶಿವಮೊಗ್ಗೆಯಿಂದ ಸಮುದ್ರ ತೀರಕ್ಕೆ ಬಂದರೆ ಈಗ ಮಂಗಳೂರಿಗೆ ಬರುವ ಸಮುದ್ರ ತೀರದ ಮದರಾಸ ರೈಲ್ವೆಯು ಮುಂದರಿಸಿ ಬರುವ ಸಂಭವ ಉಂಟೆಂತ ಕೆಲವರು ಹೇಳುತ್ತಾರೆ. ಮಂಗಳೂರಿಗೆ ಇಲ್ಲಿಂದ ೭೫ ಮೈಲು ದೂರವಿರುವದು.

ಈ ಮೇಲಿನ ಎಲ್ಲಾ ಕಾರಣಗಳಿಂದ ಸರಾವಳಿಯ ಬಡ ಜನರ ಕಷ್ಟಗಳನ್ನು ದಯಾದ್ರ್ಯಹೃದಯರಾದ ಮೈಸೂರು ಸರ್ಕಾರದವರು ತಾತ್ಪರ್ಯಕೊಟ್ಟು ನಿವಾರಣೆ ಮಾಡುವರು ಎಂಬದಾಗಿ ನಿಜವಾಗಿ ನಂಬಲಿಕ್ಕೆ ಸಾಧ್ಯವುಂಟು.

ವರ್ಗಣೆದಾರ.

ಶ್ರೀ ಕೂಡಲಿ ಸ್ವಾಮಿಯವರು.

ಅಯ್ಯಾ,

ತಮ್ಮ ತಾ. ೯—೩—೧೯೦೫ನೇ ಸಂಚಿಕೆಯ ಪತ್ರಿಕೆಯ ೩ನೇ ಪುಟದಲ್ಲಿ ಸಮೂದಿಸಿರುವ ಶ್ರೀ ಕೂಡಲೀ ಸ್ವಾಮಿಗಳವರ ವಿಷಯದ ಸಂಶಯ ನಿವೃತ್ತಿ ಪಡಿಸುವ ಬಗ್ಗೆ ಇದರ ನಿಜತ್ವವನ್ನು ಪ್ರಕಟಿಸುತ್ತೇನೆ. ದಯವಿಟ್ಟು ಜನಗಳು ಮೋಸಕ್ಕೆ ಒಳಪಡದಕ್ಕೆ ಅವಕಾಶವಿಲ್ಲದಂತೆ ಮಾಡುವ ಬಗ್ಗೆ ಶೀಘ್ರದಲ್ಲಿ ತಮ್ಮ ಪತ್ರ ಮುಖಾಂತರ ಪ್ರಕಟಪಡಿಸಬೇಕಾಗಿ ಕೋರುತ್ತೇನೆ.

ಈ ಕೂಡಲೀ ಶೃಂಗೇರೀ ಶ್ರೀ ಮಠಕ್ಕೆ ಕ್ರಮವಾಗಿ ಸನ್ಯಾಸ ಹೊಂದಿ ಅಧಿಕಾರ ಮತ್ತು ಸ್ವಾಧೀನ ಅನುಭವಿಸುತ್ತಾ ಬರುವವರು ಹಾಲಿ ಚಿತ್ರದುರ್ಗದಲ್ಲಿ ಇರುವ ಶ್ರೀ ಶಂಕರಭಾರತೀ ಸ್ವಾಮಿಗಳು ವಿದ್ಯಾಶಂಕರ ಭಾರತೀ ಸ್ವಾಮಿಗಳಾಗಿರುತ್ತಾರಲ್ಲದೆ ಹಾಲಿ ಬೆಂಗಳೂರಿಗೆ ಬಂದಿರುವ ಹರಿಭಟ್ಟ ಯಾನೆ ಕಲ್ಯಾಣಮನುಳ್ಳ ಶಂಕರಭಾರತಿ ಗುರು ನರಸಿಂಹ ಭಾರತೀ ಎಂಬವರಲ್ಲ.

ಈ ಅಂಶವನ್ನು ಈ ಕೆಳಗೆ ವಿವರಿಸುವ ಸಂಗ್ರಹದಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿರುತ್ತೆ. ಈ ಕೂಡಲೀ ಶೃಂಗೇರೀ ಸಂಸ್ಥಾನದ ಆಶ್ರಮ ಪದವಿಯನ್ನು ಹೊಂದಿದ ಶ್ರೀ ಶಂಕರಭಾರತಿ ಸ್ವಾಮಿಗಳೆಂಬುವರು ೧೮೭೩ನೇ ಸಂವತ್ಸರದಲ್ಲಿ ಕೇಶವ ಶಾಸ್ತ್ರಿಗಳೆಂಬುವರಿಗೆ ಆಶ್ರಮ ಕೊಟ್ಟು, ಅವರಿಗೆ ನರಸಿಂಹ ಭಾರತಿ ಎಂಬ ಅಭಿಧಾನವನ್ನು ಇಟ್ಟಿದ್ದದ್ದು ನಿಜ. ಆದರೆ ಈ ನರಸಿಂಹ ಭಾರತಿಗಳೆಂಬುವರು ತಮ್ಮ ಗುರುಗಳಾದ ಶ್ರೀ ಶಂಕರ ಭಾರತೀ ಸ್ವಾಮಿಗಳವರ ಆಜ್ಞಾ ಉಲ್ಲಂಘನೆ ಮಾಡಿದ್ದರಿಂದಲೂ ಅವರ ಗುರುಗಳ ಕೇವಲ ದೇಹಾನಾರೋಗ್ಯ ಕಾಲದಲ್ಲಿ ಬಾರದೇ ಹೋದ್ದರಿಂದಲೂ ಸದರಿ ಶಂಕರಭಾರತೀ ಸ್ವಾಮಿಗಳವರು ವಿದ್ಯಾಶಂಕರ ಭಾರತಿಗಳೆಂಬ ಅಭಿಧಾನದಿಂದ ಮತ್ತೊಬ್ಬರಿಗೆ ಸಂಸ್ಥಾನದ ಕ್ರಮ ಆಶ್ರಮವನ್ನು ಕೊಟ್ಟು, ಈ ಸಮಸ್ತ ಸಂಸ್ಥಾನದ ಸ್ವತ್ತುಗಳನ್ನೂ ಅಧಿಕಾರವನ್ನೂ ಸ್ವಾಧೀನಪಡಿಸಿದರು. ಈ ಸಂಗತಿಯನ್ನು ಮೈಸೂರು ಮತ್ತು ಬ್ರಿಟಿಷ್ ಗವರ್ನಮೆಂಟಿಗೆ ತಿಳಿಸಿದ್ದರ ಮೇಲೆ ಅವರು ಶ್ರೀ ವಿದ್ಯಾಶಂಕರ ಭಾರತಿ ಸ್ವಾಮಿಗಳವರೇ ಈ ಮಠಾಧಿಪತಿಗಳೆಂತ ಅಂಗೀಕರಿಸಿ, ಸರ್ಕಾರದ ದಾಖಲೆ ಮೊದಲಾದ್ದರಲ್ಲೆಲ್ಲಾ ದಾಖಲಾಗಲ್ಪಟ್ಟವರಾಗಿರುತ್ತಾರೆ.

ಸದರಿ ವಿದ್ಯಾಶಂಕರ ಭಾರತಿಗಳವರಿಂದ ಕ್ರಮಸನ್ಯಾಸ ಮೂಲಕ ಅಧಿಕಾರ ಹೊಂದಿರತಕ್ಕ ಹಾಲಿ ಚಿತ್ರದುರ್ಗದಲ್ಲಿರುವ ಶ್ರೀಶಂಕರ ಭಾರತೀಸ್ವಾಮಿಗಳವರೇ ಈ ಮಠಕ್ಕೆ ಅಧಿಪತಿಗಳಾಗಿ ಮಠದ ಸಮಸ್ತ ಸ್ವತ್ತುಗಳ ಸ್ವಾಧೀನತೆಯುಳ್ಳವರಾಗಿಯೂ ಸಮಸ್ತ ಅಧಿಕಾರಗಳನ್ನು ನಡಸತಕ್ಕವರಾಗಿಯೂ ಇರುತ್ತಾರೆ.

ಹಾಲಿ ಬೆಂಗಳೂರಲ್ಲಿರುವ ಹರಿಭಟ್ಟರು ಯಾನೆ ಶಂಕರಭಾರತೀ ಎಂಬುವರಿಗೆ ಈ ಕೂಡಲೀ ಶೃಂಗೇರೀ ಮಠದ ವಿಷಯದಲ್ಲಿ ಯಾವ ಹಕ್ಕೂ ಇರುವುದಿಲ್ಲವೆಂಬುವದನ್ನು ಈ ಕೆಳಗೆ ನಮೂದಿಸಿರುವ ಸಂಗತಿಗಳಿಂದ ಸುಲಭವಾಗಿ ತಿಳಿದುಕೊಳ್ಳಬಹುದು.

ಮೇಲ್ಕಂಡ ಶಂಕರಭಾರತಿಗಳವರಿಂದ ಆಶ್ರಮ ಹೊಂದಿದ ಶ್ರೀ ನರಸಿಂಹ ಭಾರತಿಗಳವರಿಗೂ ಶ್ರೀವಿದ್ಯಾಶಂಕರ ಭಾರತಿಗಳೆಂಬುವರಿಗೂ ಮೈಸೂರು ವ ತ್ತು ಬ್ರಿಟಿಷ್ ರಾಜ್ಯದ ಸಿವಿಲ್ ಕೋರ್ಟುಗಳಲ್ಲಿ ವಿವಾದ ಜರಗಿ ಮೊದಲನೆಯವರು ಜಯಿಸಲಾರದೆ ಹೋದರು. ಆದರೆ ಅವರ ಜೀವಮಾನದ ವರಿಗೆ ತಿಂಗಳು ಒಂದಕ್ಕೆ ಒಂದು ನಿಯಾಮಕವಾದ ಮೊಬಲಗನ್ನು ತೆಗೆದುಕೊಳ್ಳಬೇಕೆಂತಲೂ ಈ ಸಂಸ್ಥಾನದ ವಿಶಿಷ್ಟ ಅಧಿಕಾರ ಸ್ವಾತಂತ್ರ್ಯವು ಶ್ರೀವಿದ್ಯಾಶಂಕರ ಭಾರತಿಸ್ವಾಮಿಗಳವರಿಗೆ ಇರತಕ್ಕದ್ದೆಂತಲೂ ಆಫೀಸು ಮೂಲಕ ಒಂದು ತಸನಾಮೆಯನ್ನು ಮಾಡಿಕೊಂಡರು. ಈ ಮೇಲಿನ ವಿದ್ಯಮಾನದಿಂದ ಸದರಿ ನರಸಿಂಹ ಭಾರತೀಸ್ವಾಮಿಗಳವರಿಗೆ ಈ ಸಂಸ್ಥಾನದಲ್ಲಿ ಯಾವ ಹಕ್ಕೂ ಇಲ್ಲವೆಂಬುದದು ಸ್ಪಷ್ಟವಾಗಿರುತ್ತೆ. ಹೀಗಿದ್ದರೂ ಸದರಿ ನರಸಿಂಹಭಾರತೀ ಸ್ವಾಮಿಗಳವರು ಸುಬ್ಬಾಭಟ್ಟರೆಂಬುವರಿಗೆ ಆಶ್ರಮ ಕೊಟ್ಟು ಶಂಕರಭಾರತಿಗಳೆಂತ ಕರೆಯಲ್ಪಟ್ಟರು. ಇವರು ಸಾಂಬದೀಕ್ಷಿತರೆಂಬುವರಿಗೆ ಆಶ್ರಮ ಕೊಟ್ಟದ್ದಾಗಿ ನಮೂದಿಸಿ, ನರಸಿಂಹ ಭಾರತಿಗಳೆಂತ ಕರೆಯಲ್ಪಟ್ಟರು. ಈ ಎರಡು ಜನರು ಈ ಸಂಸ್ಥಾನದ ಹಕ್ಕು ತಮ್ಮದೆಂಬುವ ವಿಷಯದಲ್ಲಿ ಅನೇಕ ಕೋರ್ಟುಗಳಲ್ಲಿ ವಿವಾದಿಸಿದರು. ಆಬ್ಬರಿಗೆ ಧಾರವಾಡದ ಸಬಾರ್ಡಿನೇಟ್ ಜಡ್ಜ ಕೋರ್ಟಿನಲ್ಲಿ ೧೮೯೦ನೇ ಇಸವಿ ಅಸಲ್ ೩೦ನೇ ನಂಬರು ಮೊಕದ್ದಮೆಯಲ್ಲಿ ಹಾಲಿ ಬೆಂಗಳೂರಲ್ಲಿರುವ ಹಾಲಿ ಶಂಕರಭಾರತಿಗಳೆಂತ ಹೆಸರು ಹೇಳುವ ಹರಿಭಟ್ಟರಿಗೆ ಆಶ್ರಮ ಕೊಟ್ಟವರೆಂತ ಹೇಳತಕ್ಕ ಸಾಂಬದೀಕ್ಷಿತರು ಯಾನೆ ನರಸಿಂಹ ಭಾರತಿಗಳವರು ವಾದಿಯಾಗಿಯೂ ಹಾಲಿ ಸಂಸ್ಥಾನದ ಸ್ವಾಧೀನ ಅನುಭವಿಸುತ್ತಿರುವ ಹಾಲಿ ಚಿತ್ರದುರ್ಗಕ್ಕೆ ಬಂದಿರುವ ಶ್ರೀಶಂಕರ ಭಾರತಿ ಸ್ವಾಮಿಗಳವರು ಪ್ರತಿವಾದಿಗಳಾಗಿಯೂ ಇತ್ಯರ್ಥವಾಗಿರುವದರಲ್ಲಿ ಈ ಪ್ರತಿವಾದಿಗಳಾದ ಶ್ರೀಶಂಕರ ಭಾರತೀ ಸ್ವಾಮಿಗಳವರೇ ಈ ಶ್ರೀಕೂಡ್ಲಿ ಶೃಂಗೇರೀ ಮಠಕ್ಕೆ ಹಕ್ಕುದಾರರೆಂತ ಸ್ಥಾಪನೆಯಾಗಿ ವಾದಿಗಳ ದಾವಾ ಡಿಸ್‌ಮಿಸ್ ಆಗಿರುತ್ತೆ. ಸದರಿ ಮೊಕದ್ದಮೆ ವಾದಿಗಳಾದ ನರಸಿಂಹ ಭಾರತಿಗಳೆಂಬುವರು ಈ ಹರಿಭಟ್ಟರು ಯಾನೆ ಶಂಕರಭಾರತಿಗಳೆಂಬುವರಿಗೆ ಆಶ್ರಮಕೊಟ್ಟದ್ದು ನಿಜವಲ್ಲ. ಈ ಅಂಶ ಧಾರವಾಡದ ಡಿಸ್ಟ್ರಿಕ್ಟ್ ಸೆಷನ್ಸ್ ಕೋರ್ಟ್ ೨೩—೧೯೦೦ನೇ ನಂಬರು ಜಡ್ಜ್‌ಮೆಂಟಿನಿಂದ ಗೊತ್ತಾಗುತ್ತೆ. ಅದಲ್ಲದೆ ಪೂರ್ವದ ಶ್ರೀನರಸಿಂಹ ಭಾರತಿ ಸ್ವಾಮಿಗಳವರು ಈ ಮೈಸೂರು ದೇಶದಲ್ಲಿ ಶ್ರೀ ಕೂಡ್ಲಿ ಶೃಂಗೇರೀ ಶ್ರೀಸಂಸ್ಥಾನದ ಹೆಸರನ್ನು ಇಟ್ಟುಕೊಂಡು ಸಂಚಾರ ಮಾಡಬಾರದೆಂತ ಚೀಫ್ ಕಮಿಷನರ್ ಸಾಹೇಬರವರ ೧೮೭೭ನೇ ಇಸವಿ ಆಕ್ಟೋಬರ್ ಪ್ರೊಸೀಡಿಂಗ್ಸಾಗಿ ಇರುತ್ತೆ. ಅದಲ್ಲದೆ ಮೇಲ್ಕಂಡ ತಮ್ಮ ಪತ್ರಿಕೆಯಲ್ಲಿ ಹಾಲಿ ಬೆಂಗಳೂರಿಗೆ ಬಂದಿರುವವರು ಈ ಮಠದ ಹಕ್ಕಿನ ವಿಷಯದಲ್ಲಿ ಮೈಸೂರು ಮತ್ತು ಬ್ರಿಟಿಷ್ ಗವರ್ನಮೆಂಟಿನಲ್ಲಿ ವಿವಾದಿಸುತ್ತಾ ಇರುವದಾಗಿ ವ್ಯಕ್ತವಾಗುತ್ತೆ. ಅದು ಫೈಸಲಾಗುವದಕ್ಕೆ ಮೊದಲೇ ಅವರು ಹಕ್ಕುದಾರರೆಂತ ಭಾವಿಸುವದು ಸರಿಯಾದದ್ದೇ? ಈ ಮೇಲ್ಕಂಡ ರಿಕಾರ್ಡುಗಳಿಗೆ ವಿರೋಧವಾಗಿ ಹಾಲಿ ಹರಿಭಟ್ಟರೆಂಬುವರು ಕೂಡ್ಲಿ ಶೃಂಗೇರೀ ಶ್ರೀ ಸಂಸ್ಥಾನಕ್ಕೆ ತಾವು ಹಕ್ಕುದಾರರೆಂತ ಹೇಳಿಕೊಳ್ಳುವದೇ ಅಗಲಿ, ಅದನ್ನು ನಂಬಿ ಜನರು ಮೋಸ ಹೋಗುವದೇ ಆಗಲಿ ಸರಿಯಾದದ್ದಲ್ಲವಾಗಿರುತ್ತೆ. ಈ ವಿಷಯದಲ್ಲಿ ಈ ಹರಿಭಟ್ಟರು ಈ ರೀತಿ ಹೇಳಿಕೊಂಡು ಸಂಚಾರ ಮಾಡತಕ್ಕದ್ದಲ್ಲವೆಂಬ ಬಗ್ಗೆ ಪೂರ್ವದಲ್ಲಿ ಶ್ರೀ ನರಸಿಂಹ ಭಾರತೀ ಸ್ವಾಮಿಗಳವರ ವಿಷಯದಲ್ಲಿ ಆಗಿದ್ದ ಚೀಫ್ ಕಮಿಷನರ್ ಸಾಹೇಬರವರ ಪ್ರೊಸೀಡಿಂಗ್ಸಿನಂತೆ ಮತ್ತೊಂದು ಪ್ರೊಸೀಡಿಂಗ್ಸ್ ಮೈಸೂರು ಗವರ್ನಮೆಂಟಿನಿಂದ ಆಗಬೇಕಾದದ್ದು ಮುಖ್ಯವಾಗಿರುತ್ತೆ. ಈ ವಿಷಯಗಳ್ಯಾವತ್ತೂ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

೨೭—೩—೧೯೦೫. ಸತ್ಯವಾದಿ.

[ಇನ್ನು ಮುಂದೆ ಈ ಮಠದ ವಿಷಯವಾಗಿ ಬರುವ ಬಾತ್ಮೀಗಳನ್ನು ಪ್ರಕಟಿಸಲಾರೆವು.—ಎ.]

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದವಾರ ಬಂದಿರುವ ಮುಖ್ಯ ತಂತೀ ವರ್ತಮಾನಗಳು.

ಲಂಡನ್, ಮಾರ್ಚಿ ೨೫.—ಮಾಕ್ಸಿಮ ಗೋರ್ಕಿ ಎಂಬ ಪಂಡಿತನು ಈಗ ರೈಗಾ ಪಟ್ಟಣದಲ್ಲಿ ಲಾಕಪ್ಪಿನಲ್ಲಿ ಬಿದ್ದಿರುತ್ತಾನಷ್ಟೆ. ಇವನು ಈಗಿನ ರಾಜ್ಯಭಾರವನ್ನು ತಲೆಕೆಳಗು ಮಾಡಬೇಕೆಂದ ಇಸ್ತಿಹಾರನಾಮೆಯು ಮಸೂದೆಯನ್ನು ತಯಾರು ಮಾಡಿಕೊಟ್ಟನೆಂದು ಹೇಳಿ ಅವನನ್ನು ತಯಾರ್ಕಿ ಮಾಡುವವರಾಗಿದ್ದಾರೆ. ಗೋರ್ಕಿಯು ಆರೋಗ್ಯ ತಪ್ಪಿ ಕಷ್ಟಪಡುತ್ತಿದ್ದಾನೆ. ಇವನಿಗೆ ಮೂರ ವರುಷಗಳ ಶಿಕ್ಷೆ ಕೊಟ್ಟು, ಕೋಟೆಯೊಳಗಿಡುತ್ತಾರೆಂದು ವರ್ತಮಾನವಿದೆ.

ವಾರ್ಸಾ ಪಟ್ಟಣದ ಸಮಾಧಿಭೂಮಿಯಲ್ಲಿ ಹೂತಿಟ್ಟಿದ್ದ ೮ ಮದ್ದಿನ ಗುಂಡುಗಳನ್ನು ಪೊಲೀಸಿನವರು ಪತ್ತೆ ಮಾಡಿ ಹೊರಕ್ಕೆ ತೆಗೆದರು. ಇದಕ್ಕಾಗಿ ಕೆಲವರನ್ನು ದಸ್ತಗಿರಿ ಮಾಡಿದ್ದಾರೆ.

ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಕೂಲಿಕಾರರು ಸಾಮಾನ್ಯವಾ ಕಾರ್ಖಾನೆಗಳಿಗೆ ಕೆಲಸಕ್ಕೆ ಹೋಗದೆ ಹಿಂದೆ ನಿಂತುಬಿಟ್ಟದ್ದಲ್ಲ ಅವರು ತಮ್ಮ ಆಸ್ತಿಪಾಸ್ತಿಗಳನ್ನೆಲ್ಲಾ ನಾಶಪಡಿಸಿಕೊಂಡರು. ೮,೦೦೦ ಕೂಲಿಯಾಳುಗಳು ಕೆಲಸ ಮಾಡುತ್ತಿದ್ದ ಎರಡು ಭಾರಿ ಕಾರ್ಖಾನೆಗಳು ಮುಚ್ಚಲ್ಪಟ್ಟವು.

ಲಂಡನ್, ಮಾರ್ಚಿ ೨೭.—ವಾರ್ಸಾ ಪಟ್ಟಣದ ಪೊಲೀಸ ಮೊಖ್ತೇಸರನಾದ ಬ್ಯಾರನ್ ನೋಲ್ಕನ್ ಎಂಬಾತನು ಗಾಡಿಯ ಹೋಗುತ್ತಿದ್ದಾಗ ಯಾರೋ ಮದ್ದಿನ ಗುಂಡನ್ನು ಗಾಡಿಯೊಳಗೆ ಎಸೆದರು. ಇದು ಗಾಡಿಯೊಳಗೆ ಒಡೆದು ಅವರಿಗೆ ತುಂಬಾ ಗಾಯಗಳಾಗಿವೆ. ವಿಸ್ತುಲಾ ನದಿಯ ದಡದಲ್ಲಿ ಪೊಲೀಸ್ ಸ್ಟೇಷನಿಗೆ ನುಗ್ಗಿ ೬ ಜನ ಪೊಲೀಸಿನವರನ್ನು ಗಾಯಪಡಿಸಿದ್ದರು. ಈ ಸಂಗತಿಯನ್ನು ತನಿಖೆ ಮಾಡಬೇಕೆಂದು ಆ ಮೊಖ್ತೇಸರರು ಅಲ್ಲಿ ಹೋಗುತ್ತಿದ್ದರು. ಇವರ ಮೇಲೆ ಗುಂಡು ಎಸೆದು ಓಡಿಹೋದ ಮನುಷ್ಯನನ್ನು ಹಿಡಿಯಬೇಕೆಂದು ಒಬ್ಬ ಪೊಲೀಸಿನವನು ಅಟ್ಟಿಕೊಂಡು ಹೋಗುತ್ತಿದ್ದಾಗ ಅವನು ಪೊಲೀಸಿನವನಿಗೆ ಗುಂಡು ಹೊಡೆದು ಕೊಂದುಹಾಕಿ, ತಲೆತಪ್ಪಿಸಿಕೊಂಡು ಓಡಿಹೋದನು.

ಹಿಂದೆ ಪೊಲೀಸ್ ಸ್ಟೇಷನಿಗೆ ಮದ್ದಿನ ಗುಂಡನ್ನು ಎಸೆದ ಮನುಷ್ಯನನ್ನು ಹಿಡಿದಿದ್ದಾರೆ. ಇವನಿಗೆ ಗಾಯಗಳಾಗಿವೆ.

ಕ್ರಿಮಿಯಾದಲ್ಲಿ ತುಂಬಾ ಗಲಭೆ

ಕ್ರಿಮಿಯಾ ದ್ವೀಪಕ್ಕೆ ಸೇರಿದ ಯಾಲ್ಟಾ ಎಂಬ ಪಟ್ಟಣದ ದಂಗೆಕೋರರು ಪೊಲೀಸಿನವರ ರೈಲ ಮನೆಗಳನ್ನೂ ಅಂಗ ಮುಂಗಟ್ಟುಗಳನ್ನೂ ಒಡೆದು ನಾಶಪಡಿಸಿದ್ದಲ್ಲದೆ ಪೊಲೀಸ್ ಅಧಿಕಾರಿಯನ್ನು ಹೊಡೆದು ಗಾಯ ಮಾಡಿದರು.

ಲಂಡನ್, ಮಾರ್ಚಿ ೨೮.—ಯಾಲ್ಟಾದಲ್ಲಿ ಭಾನುವಾರ ದಿವಸ ಭಯಂಕರ ಗಲಾಟೆಯು ಆರಂಭವಾಯಿತು. ಪಟ್ಟಣವನ್ನೇ ಸುಡಬೇಕೆಂದು ಐದು ಕಡೆಗಳಲ್ಲಿ ಬೆಂಕಿ ಹಾಕಿದರು. ಬೆಂಕಿಯನ್ನು ಆರಿಸುತ್ತಿದ್ದವರನ್ನು ದಂಗೆಕೋರರು ಮುಂದೆ ಬೀಳದೆ ಅಡ್ಡಗಟ್ಟಿದರು. ಪೊಲೀಸ್ ಸ್ಟೇಷನುಗಳನ್ನೆಲ್ಲಾ ನಾಶಮಾಡಿದರು. ಖೈದಿಗಳನ್ನೆಲ್ಲ ಬಂದಿಖಾನೆಯಿಂದ ಬಿಟ್ಟುಬಿಟ್ಟರು. ಮ್ಯುನಿಸಿಪಲ್ ಖಜಾನೆಯನ್ನು ಲೂಟಿಮಾಡಬೇಕೆಂದು ಪ್ರಯತ್ನಪಟ್ಟರು; ಆದರೆ ಅವರ ಉದ್ದೇಶಕ್ಕೆ ಭಂಗವುಂಟಾಯಿತು.

ಚಕ್ರವರ್ತಿಯವರ ಅಪ್ಪಣೆ.

ಲಂಡನ್, ಮಾರ್ಚಿ ೨೯.—ಪೋಲೆಂಡಿನ ಗವರ್ನರ್ ಜನರಲ್ ರವರಿಗೆ ಚಕ್ರವರ್ತಿಯವರು ಗಲಭೆಯನ್ನು ಜಾಗ್ರತೆಯಿಂದ ಅಡಗಿಸಬೇಕೆಂತಲೂ ರಾಜ್ಯದ ಬಗೆಯು ತಪ್ಪಿಹೋಗದಂತೆ ಸೂಕ್ಷ್ಮವಾಗಿ ಕಾಯುತ್ತಿರುವ ಬದಲಾವಣೆಗಳನ್ನು ಸೂಚಿಸಬೇಕೆಂತಲೂ ಅಪ್ಪಣೆ ಕೊಟ್ಟಿದ್ದಾರೆ.

ಕಾಕಸಸ್ ಪ್ರಾಂತ್ಯಕ್ಕೆ ಸೇರಿದ ಜಾರ್ಜಿಯಾದಲ್ಲಿ ದಂಗೆಯು ದಿನೇ ದಿನೇ ಹೆಚ್ಚುತ್ತಲೂ ಹರಡಿಕೊಳ್ಳುತ್ತಲೂ ಇದೆ. ಬೆಟ್ಟಗುಡ್ಡ ಪ್ರಾಂತ್ಯಗಳಲ್ಲಿರುವ ಅಧಿಕಾರಿಗಳನ್ನೆಲ್ಲಾ ಕೆಲಸ ಬಿಡಿಸಿ ಓಡಿಸಿ ಅವರು ಪ್ರಜೆಗಳೇ ಸೇರಿಕೊಂಡು ಒಂದು ಗವರ್ನಮೆಂಟ್ ಮಾಡಿಕೊಂಡಿದ್ದಾರೆ. ಟೀಟೂಂ, ಎರಿವಾನ್, ಕಾರ್ಸ್, ಈ ಪಟ್ಟಣಗಳ ಅನಾಯಕ ಪ್ರಭುತ್ವ ಪರ್ಯಾಯವಾಗಿದೆ.

ಲಂಡನ್, ಮಾರ್ಚಿ ೩೦.—ಕ್ರೀಟ ದ್ವೀಪದಲ್ಲಿ ಪ್ರಜೆಗಳಲ್ಲಿ ದಂಗೆ ಎದ್ದು ಅನಾಯಕತ್ವ ಉಂಟಾಗಿರುವುದನ್ನು ಕಂಡು ಪರರಾಜ್ಯಗಳವರು ಅದನ್ನು ಅಡಗಿಸುವುದಕ್ಕೆ ತಮ್ಮ ತಮ್ಮ ಸೈನ್ಯಗಳನ್ನೆಲ್ಲಾ ಅಲ್ಲಿಗೆ ಕಳುಹಿಸುವುದಾಗಿ ಗೊತ್ತುಮಾಡಿದರು. ಪ್ರಿನ್ಸ್ ಜಾರ್ಜರವರು ಪ್ರಜೆಗಳಿಗೆ ಇಸ್ತಿಹಾರನಾಮೆಯನ್ನು ಪ್ರಕಟಿಸಿ, ದಂಗೆಯನ್ನು ಮುಕ್ತಾಯ ಮಾಡದಿದ್ದರೆ ಪರರಾಜ್ಯಗಳವರು ಬರುತ್ತಾರೆಂತಲೂ, ಅದರಿಂದ ೨೪ ಗಂಟೆಗಳ ವರಸಿಗೆ ತೆಗೆದುಕೊಂಡು ಅಷ್ಟರೊಳಗೆ ದಂಗೆಯನ್ನು ನಿಲ್ಲಿಸಬೇಕೆಂತಲೂ, ಅಷ್ಟರೊಳಗೆ ಎಲ್ಲರೂ ತಮ್ಮ ಬಳಿಯಿರುವ ಆಯುಧಗಳನ್ನು ತಂದು ಕೊಟ್ಟುಬಿಡಬೇಕೆಂತಲೂ ಹೇಳಿಕೊಂಡಿದ್ದಾರೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

16

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ.—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅಧ್ಯಾತ್ಮ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮಾ॥ ರಾ॥ ಶಿವಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲಾ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪ "ರೋಮನರ ಚರಿತ್ರೆ" ಕ್ರಯ ೦—೨—೦
೫. "ಗ್ರೀಕರ ಚರಿತ್ರೆ." ,, ೦—೨—೦
೬. "ಅನುಭವಾಮೃತ.",, ೦—೬—೦
೭ "ಗಣಿತ ಸಂಜೀವಿನಿ." ೧—೮—೦
೮ "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧೩—೦
೧೧ "೧೯೦೫ನೇ ವರುಷದ ಡೈರಿಗಳು"
ಫ್ಲಾಪ್, ಪೆನ್ಸಿಲ್ ಸಹಿತ ೦—೬—೦ ; ಸಾದಾ ೦—೪—೦

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪ್ರೋ,
ಮೈಸೂರು.

ಜ್ವರಹರಿ

21

ಇದು ಸಾಧಾರಣ ಜ್ವರ, ಚಳೀಜ್ವರ, ಮರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೬ ರೂ ೨—೧೨ ೫, ೧೦ ರೂ.; ಎನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

⁂⁂⁂⁂

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಮುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವು ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಶಿವಮೊಗ್ಗ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆನ್ನಿಯ ಒಮಂ ಕರ್ಪೂರವನ್ನು ನಾನೂ ನನ್ನ ಕಾಂಪೌಂಡರೂ ಮ್ಯುನಿಸಿಪಲ್ ಅಸ್ಪತ್ರೆಯಲ್ಲಿ ಅನೇಕ ಪುರುಷರುಗಳಿಗೂ ಬಾಲರಿಗೂ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಪೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೆಲಂಡ್ ಪೇಟ್ ಲೈನ್. ಮದರಾಸ್.

ಮ॥ ಇ. ಮಕರ್ಸನ್‌ರವರ ಕನ್ನಡ ಐದನೆಯ ಪುಸ್ತಕದ ಅತ್ಯುತ್ತಮವಾದ ನೋಟ್ಸು.

3

ನಾಲ್ಕನೆ ತರಗತಿ ವಿದ್ಯಾರ್ಥಿಗಳಿಗೆ ಅನೇಕ ಹೊಸಸಂಗತಿಗಳು ಬೋಧೆಯಾಗುವಂತೆ ರಚಿಸಲ್ಪಟ್ಟಿದೆ ಏಪ್ರೆಲ್ ತಾ. ೧ಕ್ಕೆ ಸಿದ್ಧವಾಗುತ್ತದೆ. ಕ್ರಯ ೪ ಆಣೆ. ೧೦ಕ್ಕೆ ಒಂದು ಡಿಸ್ಕೌಂಟು. ವಿಳಾಸ— ಕಾರ್ಕಾರಹಳ್ಳಿ ನಾರಾಯಣಶಾಸ್ತ್ರಿ, ಕನ್ನಡ ಪಂಡಿತ, ಅ. ಮಾ. ಗೌರ್ನಮೆಂಟ್ ಕನ್ನಡಾ ಸ್ಕೂಲು, ಮೈಸೂರು.

ಸುಲಭಕ್ರಯ: ಸುಗಂಧದ್ರವ್ಯಗಳು.

18

ಅಂಬರ್ ಕಡ್ಡಿ ಸೇರು ೧ಕ್ಕೆ	೫—೦—೦
ಪಸಂದಮುಷ್ಕದಾರವತಿ ..	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೮—೦
ಪುನುಗು ಕಡ್ಡಿ ,, ೧ಕ್ಕೆ	೧—೮—೦
ಮಸಾಲಾ ಕಡ್ಡಿ ,, ೧ಕ್ಕೆ ..	೬—೧೦—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಪಚ್ಚೆ ಗಂಧ ತೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಜಾಲುಮುಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ ಪರತಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ ..	೦—೪—೦
ಕೇಶೊಲ್ಲಾಸಿನಿ ಶೀಶೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ತಂಬಾಕ್ ಷೋಕ್ ಡಬ್ಬಿ ೧ಕ್ಕೆ ..	೦—೨—೦
ಶೈವವೈಷ್ಣವ ಶಾಸ್ತ್ರೀಯ ದಶಾಂಗ ಸೇರು ೧ಕ್ಕೆ	೬—೧೨—೦
ಫಿಶ್ನಾ ತೋಲ ೧ಕ್ಕೆ	೨—೦—೦
ಡಿಟೋ ..	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ಪಳಂಪಾನೀಯ ಘುಟಿಕಾ ೧೦೦ಕ್ಕೆ ..	೨—೦—೦

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ ಜಾಸ್ತಿಯಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ —ಟಿ ಎಲ್ ಉಪಾಧ್ಯಾಯ ಅಂಡ್ ಕೋ,
ಸುಗಂಧಕಾರಿ, ಮೈಸೂರು.

ಹೋಮೋಸಿಯಾ.

ಕಷ್ಟ ಪರಿಹಾರ.

ತಗಲುತ್ತಲೇ ನೋವು ವಾಸಿ ಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತಕ್ಷಣದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ಹುಣ್ಣುಗಳು, ಮುಳುಕಚ್ಚು, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

⁂⁂⁂⁂

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇರಿಕೊಳ್ಳಬಲ್ಲದು. ಡಬ್ಬಾಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಬಿಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ. ೨೬ ಸೆಕೆಂಡು ಬೀಚ್ ಲೈನ್. ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

17—3—1905 ರಿಂದ 24—3—1905 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	38	22	29	15
ಮೈಸೂರು ,,	4	2	2	3
ಬೆಂಗಳೂರು ಡಿಸ್ಟ್ರಿಕ್ಟ್	50	21	39	24
ಮೈಸೂರು ,,	1	1	58	36
ಕೋಲಾರ್ ,,	15	13	40	35
ಕೋಲಾರ್ ಚಿನ್ನದ ಗಣಿಗಳು	2	2	14	19
ತುಮಕೂರು ಡಿಸ್ಟ್ರಿಕ್ಟ್	0	0	6	8
ಹಾಸನ ,,	0	0	8	8
ಚಿತ್ರದುರ್ಗ ,,	0	0	10	16
ಕಡೂರ್ ,,	2	6	39	21
ಶಿವಮೊಗ್ಗ ,,	1	0	24	21
ಮೊತ್ತ	87	61	259	206

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರದ ಚೈತ್ರ ಶುದ್ಧ ಬಿದಿಗೆ ಗುರುವಾರದಿಂದ ಚೈತ್ರ ಶುದ್ಧ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಏಪ್ರಿಲ್

ತಾ	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶೇದಿ ಮಾ. ಮಾಸ
6	ಗುರು *	ಬಿದಿಗೆ	60 0	ಕೃ	35 5	25
7	ಶುಕ್ರ	ಬಿದಿಗೆ	2 32	ಭ	1-2	26
8	ಶನಿವಾ †	ತದಿಗೆ	6 26	ಕೃ	18-22	27
9	ರವಿವಾ ‡	ಚೌತಿ	9 12	ರೋ	51-50	28
10	ಚಂದ್ರ	ಪಂಚಮಿ	10 16	ಮೃ	51-6	29
11	ಕುಜ	ಷಷ್ಠಿ	11-6	ಆ	53-5	30
12	ಬುಧ ¶	ಸಪ್ತಮಿ	10 8	ಪು	51 58	31

* ಚಂದ್ರೋದಯ † ಸೌಭಾಗ್ಯಗೌರೀವ್ರತ, ಲಕ್ಷ್ಮೀಗಣಪತೀ ವ್ರತ, ಡೋಲಾಗೌರೀವ್ರತ. ‡ ಮತ್ಸ್ಯಜಯಂತಿ, ಲಕ್ಷ್ಮೀ ಪಂಚಮಿ ¶ ಸಂತಾನಸಪ್ತಮಿ.

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲ ೧ಕ್ಕೆ	ರೂ. ೧೦-೮-೦	೯-೧೨-೦
ಕೆಂಪು ಅಕ್ಕಿ ಅವಲ್	೧೦-೪-೦	೧೦-೧೨-೦
,, ಮಧ್ಯಮ ..	೯-೧೩-೦	೧೦-೮-೦
[illegible] ಅಕ್ಕಿ ..	೯-೮-೦	೧೧-೪-೦
ಸಣ್ಣಕ್ಕಿ ಅವಲ್	೧೨-೦-೦	೧೨-೮-೦
,, ಮಧ್ಯಮ	೧೧-೮-೦	೧೯-೮-೦
ತೊಗರೀ ಬೇಳೆ ಪಲ್ಲ ೧ಕ್ಕೆ ..	೧೧-೮-೦	೧೨-೮-೦
,, ಮಧ್ಯಮ ..	೧೧-೦-೦	೧೯-೮-೦
ಹೈಗ ರಾಗಿ ಪಲ್ಲ ೧ಕ್ಕೆ ..	೪ ೧೨-೦	೪-೬-೦
ಸಾರಾಗಿ	೪-೧-೦	೪-೧-೦
ಜೋಳ	೪-೧೨-೦	೬-೦-೦
ಹುಲಸಂದೆ ಪಲ್ಲ ೧ಕ್ಕೆ ..	೮-೧೨-೦	೮-೦-೦
ಬಿಳೀ ಅವರೆ ..	೬ ೧೨-೦	೬-೧೪-೦
ಹೆಸರು	೯ ೧೨-೬	೮-೮-೦
ಉದ್ದು	೮ ೧೪-೬	೮-೮-೦
ಕಡಲೆ	೯-೦-೦	೮-೮-೦
ಎಳ್ಳು	೧೬ ೦ ೦	೧೪-೫-೦
ಹುರುಳಿ	೮-೦ ೦	೬-೬-೦
ಹರಳು ೧೨೬ ಸೇರಿಗೆ ..	೯-೮-೦	೬-೦-೦
ಸೀಗೇಕಾಯಿ ಮಣ ೧ಕ್ಕೆ ..	೨-೪-೦	೨-೦-೦
ಮೆಣಸಿನಕಾಯಿ ..	೪-೮-೦	೩-೧೨-೦
,, ಮಧ್ಯಮ ..	೩-೧೨-೦	೩-೮-೦
ಬೆಲ್ಲ ದೊಡ್ಡ ಅಚ್ಚು ..	೬-೪-೦	೫ ೧-೧೪-೦
ಒಳ್ಳೆಣ್ಣೆ ಮಣ ೧ಕ್ಕೆ ..	೪-೦ ೦	೪-೦-೦
ಹರಳೆಣ್ಣೆ ,, ..	೪-೦-೦	೩-೧೪-೦
ಕೊತ್ತಂಬರಿ ಪಲ್ಲ ೧ಕ್ಕೆ ..	೬-೦-೦	೬-೮-೦
ಉಪ್ಪು ,, ..	೮-೦-೦	೮-೫-೦
ಹುಣಸೇ ಹಣ್ಣು ..	೧ ೪-೦	೦-೧೩-೦
,, ಹಳೇದು ..	೦-೧೪-೦	೦-೧೧-೦
ತುಪ್ಪ	೧೨-೦-೦	೧೦-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	೫-೩-೦	೪-೩-೦
ತೆಂಗಿನಕಾಯಿ ೧೦೦ ಕ್ಕೆ ..	೫-೦-೦	೪-೦-೦
ಅಡಕೇಕಾಯಿ ಮಣ ೧ಕ್ಕೆ ..	೧-೦ ೦	೦-೮-೦
ಅಂಟ್ವಾಳಕಾಯಿ ಮಣ ೧ಕ್ಕೆ ..	೦-೧೪-೦	೦-೧೨-೦
ಚಿನ್ನ (ಪೌನ್) ಒಂದು ..	೧೫-೮-೦	೧೫-೪-೦
,, ,, ಪಮಿಡಿ ..	೧೫-೧೧-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ ..	೨೬-೦-೦	೨೪-೪-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೩೨-೦-೦	೩೨-೦-

Printed and Published by the Rev. H. Spencer, B.A. the Proprietor and Manager, Wesleyan Mission Press Mysore. 6/4/1905

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ — ಮೈಸೂರು—ಸನ್ ೧೯೦೫ ನೇ ಇಸವಿ ಏಪ್ರೈಲ್ ತಾರೀಖು ೧೩ ನೇ ಗುರುವಾರ. — ಸಂಚಿಕೆ ೪೫

ಶ್ರೀ ತಾಂಬೂಲ.

22

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೩ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾರಿಯಾವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ಆರು ಸೀಸೆಗೆ ಒಂದು ಜಾಸ್ತಿ. ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಟವರ್, ಯಂ. ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟಿಷನರ್.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

12

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬರಗು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ.—ಮಾತ್ರ ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ಡಿ ಮುಕುಂದ್ ಸವಾಮಿ.

ಚಳಿಗಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತೆ ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ಪೋಸ್ಟ್ ಮಾಸ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿವೆ.—ಕೃಷ್ಣಯ್ಯಂಗಾರ್, ಶೇರಾಫ್ ದಿವಾನ್ ಪೇಷ್ಕರ್, ಕ್ವೆಟಾ.

Apply to:—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೋಹಿನಿಪುಸ್ತಕ; ಸುಗಂಧದ್ರವ್ಯಗಳು.

2

ಮೋಹಿನಿ ಪುಸ್ತಕ.—ಪ್ರತಿ ೧ಕ್ಕೆ ಕ್ರಯ ೧ ರೂ. ಮಾತ್ರ. ಸ್ವಲ್ಪಪ್ರತಿಗಳೇ ಉಳಿದಿವೆ ಶೋಕದಾರರಿಗೂ, ಶಾಕಭೋಗರಿಗೂ, ದಮಿರ್ದಾರು ಮೊದಲಾದವರಿಗೆ ಸುಲಭವಾಗಿ ಮೋಹಿಸಮಾಡತಕ್ಕ ಕ್ರಮವನ್ನು ತಿಳಿಸುತ್ತೆ.

ಸುಗಂಧದ್ರವ್ಯಗಳು; ಬಹು ಪಸನಾಗಿವೆ.—ಕಬಂವಾರ್ ಜವ್ವಾದಿ ಗಂಧ, ಹಸಿಬಲ್ಲಿ ಮತ್ತು ಬಣಗಿನ್ನು, ಊದಬತ್ತಿ ಕಬಂವಾರ್ ಸಹ ಬೆಳರಿಗೆ ಸಿದ್ಧವಾಗಿದೆ ಅಪೇಕ್ಷೆ ಉಳ್ಳವರು ಕೆಳಗಿನ ವಿಳಾಸದಾರರಿಂದ ವಿ ಪಿ ಮೂಲಕ ತರಿಸಿಕೊಳ್ಳಿ.

ಬಿ. ಕೆ. ಮೂರ್ತಿ ಅಂಡ್ ಕಂಪೆನಿ,
ಬಳೆಪೇಟೆ, ಬೆಂಗಳೂರು ಸಿಟಿ.

ಮಾನವೆಯುಳ್ಳ ಸ್ತ್ರೀಯರ ಚರಿತ್ರೆಯು.

ಚಿತ್ರ ಸಹಿತವಾದುದು.

3

ರಾಣಿವಾಸದವರು, ವಿದ್ಯಾರ್ಥಿನಿಯರು, ಸಾಮಾನ್ಯಸ್ತ್ರೀಯರು ಸಕಲರಿಗೂ ಸರ್ವೋತ್ತಮವಾದ ಮೇಲ್ಪಂಕ್ತಿಯನ್ನು ಹೇಳಿಕೊಡುವ ಪುಸ್ತಕ. ಮೊದಲನೆ ಸಲ ಪ್ರಿಂಟಾದ ಪುಸ್ತಕಗಳೆಲ್ಲಾ ಬಿಕರಿಯಾಗಿರುವುದೇ ಈ ಪುಸ್ತಕದ ಪ್ರಯೋಜನವನ್ನು ಪ್ರಕಾಶ ಪಡಿಸುತ್ತದೆ ಈ ಪುಸ್ತಕವನ್ನು ಈಗ ಎರಡನೆಯ ಸಲ ಪ್ರಿಂಟುಮಾಡಿದೆ. ನೋಡಸಾದ ದಪ್ಪ ಗ್ಲೇಜು ಕಾಗದ, ಸುಂದರವಾದ ಬೈಂಡು, ನೇತ್ರಾನಂದಕರವಾದ ಸ್ತ್ರೀಯರ ಜೀವಚಿತ್ರಗಳು, ಮನೋಹರವಾದ ಅವರ ಚರಿತ್ರೆಗಳು—ಇವುಗಳಿಂದ ಕೂಡಿದ್ದಾಗಿದೆ. ಅತ್ಯಂತ ಬಡಬಗ್ಗರೂ ಕರಿಸಿ ಓದುವುದಕ್ಕೆ ಅನುಕೂಲವಾಗಲೆಂದು ಈ ಪುಸ್ತಕದ ಕ್ರಯವನ್ನು ಬಹಳ ಅಗ್ಗವಾಗಿ ಮಾಡಿದೆ. ಕ್ರಯ ೧ ಪ್ರತಿಗೆ ೭ ಆಣೆಮಾತ್ರ. ವಿ. ಪಿ. ಮೂಲಕ ತರಿಸಿ ಕೊಂಡಲ್ಲಿ ೪ ಆಣೆ ಬೀಳುವುದು. ವಿಳಾಸ—
ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಸುಲಭಕ್ರಯ: ಸುಗಂಧದ್ರವ್ಯಗಳು.

19

ಅಂಬರ್ ಕಡ್ಡಿ ಸೇರು ೧ಕ್ಕೆ	೫—೦—೦
ವಸಂತಕುಸುಮಾಕರವರ್ತಿ ..	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೮—೦
ಪುನುಗು ಕಡ್ಡಿ ,, ೧ಕ್ಕೆ	೧—೮—೦
ಮಸಾಲೆ ಕಡ್ಡಿ ,, ೧ಕ್ಕೆ ..	೦—೧೦—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಪಚ್ಚೀ ಗಂಧ ತೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಬಂಗಾರ, ಬೆಳ್ಳಿ, ವರಕಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ ..	೦—೪—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ಲೆಂಬಾಕ್ ಸೋಪ್ ಡಬ್ಬಿ ೧ಕ್ಕೆ ..	೦—೨—೦
ಕೈವವ್ಯಷ್ಟವ ಕಂಕೇಯ ದಶಾಂಗ ಸೇರು ೧ಕ್ಕೆ	೦—೧೨—೦
ಫಿತ್ನಾ ತೋಲ ೧ಕ್ಕೆ	೨—೦—೦
ಡಿಟೋ	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ವಸಂತಮಾನೀಯ ಘುಟಿಕಾ ೧೦೦ಕ್ಕೆ ..	೨—೦—೦

ಇನ್ನೂ ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ —ಟಿ. ಎಲ್. ಉಪಾಧ್ಯಾಯ ಅಂಡ್ ಕೋ,
ಸುಗಂಧಶಾಲಿ, ಮೈಸೂರು.

ಹೊಸ ನೋಟ್ಸು.

ಮೆಕ್ಮಿಲನ್‌ರವರ ೫, ೬ನೆಯ ಕನ್ನಡ ಪುಸ್ತಕಗಳಿಗೆ ೪ನೆಯ ತರಗತಿಯ ವಿದ್ಯಾರ್ಥಿಗಳಗೋಸ್ಕರ.

3

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನೆಸಹಿತ ಈ ನೋಟ್ಸನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೮ ರೊಳಗೆ ಸಿದ್ಧವಾಗುತ್ತೆ. ಕ್ರಯ. ೮ ಆಣೆ.

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೨
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೦—೬
೧೯೦೪ನೆ ವರ್ಷದ ಲೋವರ್ ಸೆಕೆಂಡರಿ ನೋಟ್ಸು	೦—೩—೬

ವಿಳಾಸ—ಯಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು

ಇಸ್ತಿಹಾರ್.

2

ಮೈಸೂರು ಸೀಮೆಯಲ್ಲಿ ೧೯೦೫ ನೇ ಇಸವಿ ಜುಲೈ ಗುರ್ರು ಲಾಗಾಯಿತು ೧೯೦೬ ನೇ ಇಸವಿ ಜೂನ್ ೩೦ ನೇ ತಾರೀಖಿಗೆ ಖೈದಾಗುವ ವರುಷದಲ್ಲಿ ಶರಾಬ್, ಸೇಂದಿ, ಬಿಯರ್, ಗಾಂಜಾ ಮತ್ತು ಅಫೀಮಿನ ಅಂಗಡಿಯಲ್ಲಿ ವ ಅಂಗಡಿಗಳ ಸಮುದಾಯದಲ್ಲಿ ಬಿಕರಿಮಾಡುವ ಸ್ವಾತಂತ್ರ್ಯದ ಹಕ್ಕು ೧೯೦೫ ನೇ ಇಸವಿ ಮಾರ್ಚಿ ೨೩ ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಛಾಪಿಸ್ ಆಗಿರುವ ಷರತ್ತುಗಳಿಗೆ ಒಳಪಟ್ಟು, ಅದರಲ್ಲಿ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

(ರುಜು ಆಗಿದೆ) ಪಿ. ಎಸ್. ಪೂರ್ಣಯ್ಯ,
ಎಕ್ಸೈಜ್ ಕಮಿಷನರ್, ಮೈಸೂರು.

ಕಥಾಸಂಗ್ರಹ—ಮೊದಲನೆ ಭಾಗ.

5

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಹಿರಿಯ ಕಥಾಸಂಗ್ರಹದಲ್ಲಿ ೧, ೨, ೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಮಾತಿನ ನಡತೆಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಕೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವುದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ:—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

12

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂಲೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳ ಬಹುದು.

ವಿಳಾಸ:—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ಪ್ರಶ್ನೋತ್ತರಲೇಖ್ಯಬೋಧಿನಿ.

ಎರಡನೆ ಭಾಗ. ಮಾರಿಗೆಗೆ ಸಿದ್ಧವಾಗಿರುತ್ತೆ. ಬಿಳಿದಾಗಿ ಥಳ ಥಳಿಸುವ ದಪ್ಪವಾದ ಕಾಗದ, ಭದ್ರವಾದ ಬೈಂಡುಳ್ಳದ್ದು

ಕ್ರಯ ಒಂದು ರೂಪಾಯಿ ನಾಲ್ಕಾಣೆ

ಲೋಕ ವ್ಯವಹಾರ ಚತುರರಾಗಬೇಕೆಂದು ಇಚ್ಛಿಸುವವರು ಅಗತ್ಯವಾಗಿ ಈ ಪುಸ್ತಕವನ್ನು ಓದಬೇಕು ಪುಸ್ತಕದಲ್ಲಿರುವ ಸಂಗತಿಯನ್ನು ಸ್ವಲ್ಪ ಓದಿನೋಡಿ

ಕ್ಷೇಮಸಮಾಚಾರ ಕಾಗದಗಳು —ಬರೆಯುವುದಕ್ಕೆ ಮೊದಲಿಡುವುದು, ಪೂರ್ವಸೂಚನೆ, ಸಂಗತಿಗಳನ್ನು ಅರಿಸುವುದು, ಮುಕ್ತಾಯಗಳು, ಬಂಧುಗಳಿಗೆ, ಹಿರಿಯರಿಗೆ ಕಿರಿಯರು, ಕಿರಿಯರಿಗೆ ಹಿರಿಯರು, ಸಮಾನರಿಗೆ, ಐಶ್ವರ್ಯವಂತರು, ಮಠಾಧಿಪತಿಗಳು, ಗುರುಗಳು, ಜಗದ್ಗುರುಗಳು ಮುಂತಾದವರಿಗೆ ಆಯಾ ಮತಪದ್ಧತಿಯನುಸರಿಸಿ ಬರೆಯುವ ಒಕ್ಕಣೆಗಳು

ರೆವೆನ್ಯೂ ಇಲಾಖಾ —ಹರಖಾಸ್ತು, ರಾಜೀನಾಮೆ, ದರ್ಖಾಸ್ತು, ರಿಮಿಷನ್, ಚಿಲ್ಲರೆ, ಇತರ ಅನೇಕ ಬಾಬಿನ ಅರ್ಜಿಗಳು, ಲ್ಯಾಂಡು ರೆವೆನ್ಯೂ ರೂಲ್ಸ ಅನುಸರಿಸಿ ರೈತರಿಗೆ ರಿಯಾಯಿತಿ ದೊರೆಯುವ ಬಗೆಬಗೆ ಸಂಗತಿಗಳು

ಸಿವಿಲ್ ಕೋರ್ಟುಗಳು —ತಿಳುವಳಿ ನೋಟೀಸು, ಬಗೆಬಗೆ ದಾವೆ ಅರ್ಜಿಗಳು, ಸಮನ್, ಸಾಕ್ಷಿ ಮೆಮೋ, ಪ್ರತಿವಾದಿಯ ಎದುರುತ್ತರ, ತಕರಾರುಗಳು, ವಿಚಾರಣೆ, ತೀರ್ಮಾನ, ಡಿಕ್ರಿ, ಜರಾಜ್, ರೋಕ್ತುಸ್ವಾಧೀನ, ದಿವಾಳಿ, ನಾಬಾಲಿಗ, ಮೈನರು, ಗಾರ್ಡಿಯನ್, ದಾಯಭಾಗ ಮುಂತಾದ ಬಗೆಬಗೆ ವಿಷಯಗಳಲ್ಲಿ ನಡೆ, ವಿಧಿ, ತಿಳಿವು ಸ್ಟಾಂಪು, ಸ್ಮಾಲ್‌ಕಾಜ್, ಒರಿಜನಲ್, ಅಪ್ಪೀಲ್, ರಿವ್ಯೂ ಮುಂತಾದ ವಿಷಯಗಳು.

ಕ್ರಿಮಿನಲ್ ಇಲಾಖಾ —ಪೋಲೀಸು ಫಿರ್ಯಾದು, ಕೊಲೆ, ಮೋಸ, ವಿಶ್ವಾಸ ಘಾತುಕತೆ, ಕಳವು, ಅತಿಕ್ರಮಪ್ರವೇಶ, ಅಕ್ರಮ ಬಂಧನ, ಜುಲುಂ, ದೊಂಬಿ, ಅಕ್ರಮಕೂಟ, ಮೇಜಿಸ್ಟ್ರೇಟರ ಬಳಿ ಫಿರ್ಯಾದಿ, ವಿಚಾರಣೆ, ಸಾಕ್ಷಿ, ತೀರ್ಮಾನ, ಪುನರ್ವಿಚಾರಣೆ, ಅಪ್ಪೀಲು, ಅಪರಾಧಿಗಳಿಗೆ ಸರ್ಕಾರದವರ ಸಹಾಯ ಇಂಡಿಯನ್ ಪೀನಲ್ ಕೋಡಿನ ಯಾವಯಾವ ಸೆಕ್ಷನುಗಳು ಯಾವಯಾವ ತಪ್ಪಿತಗಳಿಗೆ ಲಗಾವಾಗುತ್ತಿದೆ ಎಂಬುದು, ಯಾವಯಾವ ತಪ್ಪಿತಗಳನ್ನು ಯಾರಿಂದ ಯಾವಯಾವ ಮ್ಯಾಜಿಸ್ಟ್ರೇಟರು ವಿಚಾರಿಸಬೇಕು, ಯಾವಯಾವ ಕೋರ್ಟು ಎಷ್ಟೆಷ್ಟು ಶಿಕ್ಷೆ ಕೊಡಬಹುದು, ಪೋಲೀಸಿನವರ ಅಧಿಕಾರದ ಪರಿಮಿತಿ, ಇತ್ಯಾದಿಗಳು.

ಇತರ ಇಲಾಖೆಗಳು —ಅಬಕಾರಿ, ಫಾರೆಸ್ಟು, ಎಕ್ಸೈಜು, ವಿದ್ಯಾಭ್ಯಾಸ, ವ್ಯವಸಾಯ, ಮುನಿಸಿಪಲ್, ಅನೇಕ ಅನೇಕ ಇಲಾಖೆಗಳಲ್ಲಿ ಆವಶ್ಯಕವಾದ ಬೇರೆ ಬೇರೆ ಸಂದರ್ಭದ ಅರ್ಜಿಗಳು ಮುಂದಾದವು.

ಲೇವಾದೇವಿ —ರಶೀದಿ, ಹುಂಡಿ, ಆಧಾರ, ಭೋಗ್ಯ, ಕ್ರಯ, ದಾನ, ಪರಿವರ್ತನೆ, ಗೇಣಿ, ಸಾಲ, ವ್ಯವಸ್ಥೆ, ಮರಣಶಾಸನ, ಪಾಲುಪಟ್ಟಿ ಮುಂತಾದ ಬಗೆಬಗೆ ಪತ್ರಗಳು, ಅವುಗಳಿಗೆ ಅಲ್ಲಲ್ಲಿಯೇ ವಿಧಿ, ಸ್ಟಾಂಪು, ರಿಜಿಸ್ಟ್ರೇಷನ್, ನಡವಳಿಕೆ, ಅನುಭವ ಮುಂತಾದವು

ಕಾನೂನುಗಳು.—ಸಿವಿಲ್ ಪ್ರೊಸಿಡ್ಯೂರ್ ಕೋಡು, ಪೀನಲ್ ಕೋಡು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು, ಹಿಂದೂ ಲಾ, ಮಹಮದೀಯ ಲಾ, ಕಾಂಟ್ರಾಕ್ಟು, ದಾಮೇಜು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟುಫೀಜು, ಪೋಲೀಸು, ಸಾನಿಟರಿ, ಮುನಿಸಿಪಲ್, ಫಾರೆಸ್ಟು, ಎಕ್ಸೈಜು, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್, ಲ್ಯಾಂಡ್ ಅಕ್ವಿಜಿಷನ್, ದೊಡ್ಡ ಅರಸು, ಮುಂತಾದ ಎಲ್ಲಾ ಆಕ್ಟುಗಳ ಸಾರಾಂಶ

ನಾನುಭಾವಿಕ ಮತ್ತು ವರ್ತಕರ ಲೆಕ್ಕಗಳು —ಸವೆನ್ಯೂ ರೂಲ್ಸ್ ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವುದು, ರೋಜು ಪತ್ರ ಮುಂತಾದ ಲೆಕ್ಕಗಳನ್ನು ಬರೆವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪ ಮಟ್ಟಿಗೆ ಓದುಬರಹ ಬಂದವರು ಕೂಡ ಸುಲಭದಿಂದ ತಿಳಿವ ಹಾಗೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ ಇದರಲ್ಲಿರುವ ಸಂಗತಿಗಳೆಲ್ಲವನ್ನೂ ವಿವರಿಸುವುದು ಸಾಧ್ಯವಲ್ಲವಾಗಿ ಸೂಕ್ಷ್ಮದಿಂದ ತಿಳಿಸಿರುತ್ತೆ.

ಇದನ್ನು ಓದಿರುವ ಸಾವಿರಾರು ಮಂದಿಯು, ಈ ಅಂಶವನ್ನು ಒಪ್ಪಿಕೊಳ್ಳುವರು. ಒಂದಾವೃತ್ತಿ ತರಿಸಿ ಓದಿನೋಡಿದರೆ ತಿಳಿವು, ಪತ್ರ ಕ್ರಯವು ಸಾರ್ಥಕವಾಗುವುದು ಈ ಪುಸ್ತಕವು ಕೆಳಗಿನ ವಿಳಾಸದಾರರ ವಿನಾ ಇನ್ನಾರ ಬಳಿಯೂ ದೊರೆಯುವುದಿಲ್ಲ ಪ್ರತಿ ಪುಸ್ತಕದಲ್ಲಿ ಗ್ರಂಥಕರ್ತರ ಕೈ ಬರವಣಿಗೆ, ಮುದ್ರೆ, ಕಾರ್ಯಾಂಗಗಳುಂಟು.

ಕ್ರಯ, ಒಂದು ರೂಪಾಯಿ ನಾಲ್ಕಾಣೆ.

"ಸವಿನುಡಿ" —ಈ ಪುಸ್ತಕವನ್ನು ಬರ್ಪ ತಿಂಗಳಲ್ಲಿ ಕಳುಹಿಸಲ್ಪಡುವುದು.

ವಿಳಾಸ.—ಭಾರತಿ ಸಂಪಂಗಿರಾಮು,

ಹೊಸಕೋಟೆ, ಬೆಂಗಳೂರು

ಚೇಂಬರ್ಲಿನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.



ಶೀತ, ಕೆಮ್ಮು, ಗಂಟಲು ಗೂರಿಸುವುದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಹಳ ಪ್ರಖ್ಯಾತಿಯಾಗಿರುತ್ತದೆ ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು ಶೀತವೇನಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು, ಎದೆಯು ಬಿಗಿಹೋಗುವದು ಇದರಿಂದಲೇ ಅನೇಕನೇಕರು ಸತ್ತುಹೋಗುತ್ತಾರೆ ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ, ೨ ರೂ ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

WANTED WILD ANIMALS.

ಬೇಕಾಗಿದೆ ಬೇಕಾಗಿದೆ

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು

Apply to—Mr Hughes Mysore Zoo

ವೃತ್ತಾಂತ ಪತ್ರಿಕೆ.

೧೯೦೫ ನೇ ಇಸವಿ ಏಪ್ರಿಲ್ ತಾ॥ ೧೩ ನೇ ಗುರುವಾರ

ಉತ್ತರ ದೇಶದಲ್ಲಿ ಭಯಂಕರವಾದ ಭೂಕಂಪವು

ಕಳೆದ ಮಂಗಳವಾರ ಭೂಕಂಪದಿಂದುಂಟಾದ ಅನಾಹುತವನ್ನು ಮತ್ತೊಂದು ಕಡೆ ತಕ್ಕಮಟ್ಟಿಗೆ ವಿವರಿಸಿದೇವೆ. ಇಂಥಾ ಭಯಂಕರವಾದ ಭೂಕಂಪವು ಈ ದೇಶದಲ್ಲಾಗಲಿ ಇತರ ಕಡೆಗಳಲ್ಲಾಗಲಿ ಸಂಭವಿಸಿರುವುದಿಲ್ಲವೆಂದೇ ಹೇಳಬಹುದು. ಕಳೆದ ೩ನೇ ತಾ॥ ಭಾನುವಾರವೇ ಈ ಭೂಕಂಪದ ಸೂಚನೆಗಳು ಈ ರಾಷ್ಟ್ರದ ಅನೇಕ ಭಾಗಗಳಲ್ಲಿ ಕಾಣಿಸಿಕೊಂಡವು ಆದರೆ ೪ನೇ ತಾ॥ ಮಂಗಳವಾರ ಬೆಳಗ್ಗೆ ೬ ರಿಂದ ೭ ಗಂಟೆಯೊಳಗಾಗಿ ಏಕಕಾಲದಲ್ಲಿ ಸಿಂಲಾ, ಮಸೂರಿ, ಲಾಹೋರ, ಧರ್ಮಸಾಲಾ, ಈ ಮೊದಲಾದ ಅನೇಕ ಪಟ್ಟಣಗಳಲ್ಲೂ ಗ್ರಾಮಗಳಲ್ಲೂ ಅನಿರೀಕ್ಷ್ಯವಾಗಿ ಭೂಮಿಯು ಅಲ್ಲಾಡಿ, ಪಟ್ಟಣಗಳನ್ನೂ ಗ್ರಾಮಗಳನ್ನೂ ಸಮೂಲವಾಗಿ ನಾಶಪಡಿಸಿ, ಅನೇಕಾನೇಕರನ್ನು ತಕ್ಷಣ ಕೊಂದುಹಾಕಿ, ಬದು ಜನರಿಗೆ ಅಪಾಯವನ್ನುಂಟುಮಾಡಿತು ಅವರಲ್ಲಿ ನಮ್ಮ ವೈಸ್‌ರಾಯಿಯವರ ಪತ್ನೀರವರು ಅಪಾಯದಿಂದ ಬಿಡುಗಡೆ ಹೊಂದಿದರೆಂದು ಸಕಲರೂ ಸಂತೋಷಪಡುವರು ಮತ್ತು ಈ ಭಯಂಕರವಾದ ಅನಾಹುತಕ್ಕೆ ಸಿಕ್ಕಿ ಬಯವಾದ ಪ್ರಜೆಗಳ ವಿಷಯದಲ್ಲಿ ಎಷ್ಟು ದುಃಖಪಟ್ಟರು ತೀರದಾಗಿದೆ ಗಾಯಪಟ್ಟವರೂ ಗಾಯಪಡದೆ ಮನೆಮಠಗಳನ್ನೂ ಆಸ್ತಿಪಾಸ್ತಿಗಳನ್ನೂ ಕಳೆದುಕೊಂಡವರೂ ಈಗ ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿಯಲ್ಲಿದ್ದಾರೆ ಇಂಥವರ ಸಹಾಯಾರ್ಥವಾಗಿ ಸರ್ಕಾರದವರು ಆಗಲೇ ನಾನಾ ಏರ್ಪಾಡುಗಳನ್ನು ಮಾಡಿರುತ್ತಾರೆಂದು ತಿಳಿಸಲು ತುಂಬಾ ಸಂತೋಷಪಡುವೆವು ಧರ್ಮಶಾಲಾ, ಕಾಂಗ್ರಾ ಮೊದಲಾದ ಪಟ್ಟಣಗಳೇ ಸಂಪೂರ್ಣವಾಗಿ ನಿರ್ನಾಮವಾದುವೆಂದು ಹೇಳಿದರೆ ಈ ಅನಾಹುತವು ಎಷ್ಟು ಭಯಂಕರವಾಗಿರಬೇಕು! ಈ ವಿಚಾರದಿಂದ ಯಾವ ಗಳಿಗೆಯಲ್ಲಿ ಏನಾಗುವುದೋ ಮನುಷ್ಯನಿಗೆ ಗೋಚರವಾಗುವುದಿಲ್ಲವೆಂಬುವುದು ಸ್ಥಿರಪಡುತ್ತದೆ. ಆದುದರಿಂದ ಸಕಲರೂ ಆ ಅಪಾರ ಕಷ್ಟಕ್ಕೆ ಗುರಿಯಾದವರ ವಿಷಯದಲ್ಲಿ ಕನಿಕರಪಟ್ಟು, ಅವರ ಕಷ್ಟನಿವಾರಣೆಗೆ ತಮ್ಮಿಂದಾದ ಸಹಾಯಗಳನ್ನು ಮಾಡಿ, ಅವರಿಗೆ ಸಂಭವಿಸಿದಂಥಾ ಕಷ್ಟನಷ್ಟಗಳೂ ಅನಾಹುತಗಳೂ ತಮಗೂ ಪ್ರಾಪ್ತವಾಗುವ ಪಕ್ಷದಲ್ಲಿ ಹೆದರದೆ ಧೈರ್ಯದಿಂದ ಶರೀರವನ್ನೊಪ್ಪಿಸುವುದಕ್ಕೆ ಸಿದ್ಧರಾಗಿರಬೇಕೆಂದು ನಾವು ಹೇಳಬೇಕಾದುದಿಲ್ಲ. ಇದು ಸಮಸ್ತರಿಗೂ ಆವಶ್ಯಕರ್ತವ್ಯವಾಗಿರುವುದು.

ಬಹುದೇಶದ ವೃತ್ತಾಂತಗಳು

ಹುಲಿಯಿಂದ ಬಗರಿಸಿಕೊಂಡು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ ಮ॥ ರಿಕೆಟ್ಸ್ ಯವರು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ

* * * *

ಕಳೆದ ಭಾನುವಾರ ರಾತ್ರಿ ಮಹಾಮಾತೃಶ್ರೀ ಯವರು, ಯುವರಾಜರವರು, ಮಹಾರಾಣಿಯವರು ಮೊದಲಾದವರೆಲ್ಲಾ ಪರಿವಾರಸಹಿತ ಸ್ಪೆಷಲ್ ರೈಲ್ ಹತ್ತಿ ಬೆಂಗಳೂರಿಗೂ ಅಲ್ಲಿಂದ ನೀಲಗಿರಿಗೂ ದಯಮಾಡಿದರು

* * * *

ಶ್ರೀ ಶಿವಗಂಗಾ ಸ್ವಾಮಿಗಳಿಗೆ ಕಳೆದ ವಾರ ರಾಜಧಾನಿಯಲ್ಲಿ ಪ್ರಜೆಗಳು ಭಿಕ್ಷೆಗಳ ಮಾಡಿಸಿದರು ಅಡ್ವೋಕೇಟ್ ಮ॥ ಎ ರಾಮಣ್ಣನವರು ಮಾಡಿದ ಭಿಕ್ಷೆಯು ಅಪೂರ್ವವಾದದ್ದೆಂದು ಪ್ರಜೆಗಳೆಲ್ಲಾ ಹೊಗಳುತ್ತಿದ್ದಾರೆ.

* * * *

ಚಿಕ್ಕಮಗಳೂರಿನಲ್ಲಿದ್ದ ಸರ್ಕಾರಿ ವ್ಯವಸಾಯದ ಬ್ಯಾಂಕು ಮುಕ್ತಾಯವಾದ ವಿವರವನ್ನು ಮತ್ತೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ ಸರ್ಕಾರದವರು ಪ್ಲಾಂಟರುಗಳ ಮೇಲೆ ಅಭಿಮಾನವಿಟ್ಟು, ಹಣ ಕೊಟ್ಟದ್ದನ್ನು ಅವರು ವಸೂಲಿಸಿಕೊಳ್ಳದೆ ಹೋದರಲ್ಲಾ ಎಂದು ವಿಷಾದಿಸುವೆವು

* * * *

ಶ್ರೀರಂಗಪಟ್ಟಣದ ಮುನ್ಸಿಫ್ ಮ॥ ಸಿಸ್ಟಿ ಆನಂದರಾಯರನ್ನು ಅಸಿಸ್ಟೆಂಟ್ ಕಮಿಷನರ ಕೆಲಸಕ್ಕೆ ಬಡ್ತಿಮಾಡಿ, ಕೋಲಾರ್ ಪೇಟೆ ಡಿವಿಜನ್ ಛಾರ್ಜಿಗೆ ಕಳುಹಿಸಿ, ಮ॥ ಸತ್ಯಾಜಿ ರಾಯರನ್ನು ಶ್ರೀರಂಗಪಟ್ಟಣದ ಮುನ್ಸಿಫ್ ಕೆಲಸಕ್ಕೆ ನೇಮಿಸಿದ್ದಾರೆ ಮ॥ ಚಂಗಯ್ಯಶೆಟ್ಟರು ಚಿತ್ರದುರ್ಗದ ಡಿಸ್ಟ್ರಿಕ್ಟ್ ಛಾರ್ಜ ವಹಿಸುವುದಕ್ಕೆ ವರ್ಗಮಾಡಲ್ಪಟ್ಟರು.

* * * *

ರೆಸಿಡೆಂಟರಾದ ಸರ್ ಜೇಂಸ್ ಬೋರ್ಡಿಲ್ಲೋನರವರು ಬೇಸಿಗೆಗಾಗಿ ನೀಲಗಿರಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟು, ಪತ್ನಿಸಹಿತ ನೊನ್ನೆ ಶನಿವಾರ ಬೆಳಗ್ಗೆ ಏಕಾಏಕಿ ರಾಜಧಾನಿಗೆ ದಯಮಾಡಿ, ಶ್ರೀಮನ್ ಮಹಾರಾಜರವರನ್ನು ಕಂಡು ಮಾತನಾಡಿಕೊಂಡು, ಆ ರಾತ್ರಿಯೇ ಬೆಂಗಳೂರಿಗೆ ಪ್ರಯಾಣಮಾಡಿದರು ಇವರು ರೆಸಿಡೆಂಟ್ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಸೀಮೆಗೆ ಹೊರಟುಹೋಗುವುದಕ್ಕಾಗಿಯೇ ಬಂದಿದ್ದರೆಂದು ವರ್ತಮಾನವಿದೆ

* * * *

ಕಳೆದವಾರ ಒಬ್ಬ ಹುಂಬನು ಅರಮನೆ ಕಾಲಾವಧಿ ದೊಡ್ಡಿಗಳ ಮೇಲೆ ಹತ್ತಿ ಕೂತುಕೊಂಡು ನಡುರಾತ್ರಿಯಲ್ಲಿ ಎರಡು ಮೂರು ಸಲ ಶಂಖಧ್ವನಿ ಮಾಡಿದನು ಮಹಾಮಾತೃಶ್ರೀಯವರಿಗೂ ಶ್ರೀಮನ್ಮಹಾರಾಜರವರಿಗೂ ನಿದ್ರಾಭಂಗವಾಗಿ ಎಲ್ಲಿ ಹುಡುಕಿಸಿದರೂ ಆ ಹುಂಬನಿದ್ದ ಸ್ಥಳ ಗೊತ್ತಾಗಲಿಲ್ಲ ಬೆಳಗಿನ ಝಾಮದಲ್ಲಿ ಅವನನ್ನು ಹಿಡಿದು, ಪೋಲೀಸಿಗೆ ಒಪ್ಪಿಸಿದರು ಅವನಿಗೆ ಶ್ರೀಮನ್ಮಹಾರಾಜರವರ ಭೇಟಿ ದೊರಕುವುದಕ್ಕೋಸ್ಕರ ಹಾಗೆ ಮಾಡಿದನೆಂದು ವರ್ತಮಾನವಿದೆ.

* * * *

ನೊನ್ನೆ ಸೋಮವಾರ ಬೆಳಗ್ಗೆ ೬ ಗಂಟೆಗೆ ಶ್ರೀಮನ್ ಮಹಾರಾಜರವರು ಮೋಟರ್ ಕಾರ್ ಗಾಡಿಯಲ್ಲಿ ನಂಜನಗೂಡಿನ ಮೇಲೆ ನೀಲಗಿರಿಗೆ ದಯಮಾಡಿದರು ಅವರ ಸಂಗಡ ಪ್ರೈವೆಟ್ ಸೆಕ್ರೆಟರಿ ಮ॥ ಮೆಕಾನಕಿ ಯವರು, ಯುವರಾಜರವರ ಉಪಾಧ್ಯಾಯರಾದ ಮ॥ ಆರ್ ಜೆ ಡಬ್ಲ್ಯು ಹೀಲ್ ಯವರು ಅದೇ ಗಾಡಿಯಲ್ಲಿ ಕುಳಿತಿದ್ದರು. ಅನ್ಯೊಂದು ಗಾಡಿಯಲ್ಲಿ ಮಹಾರಾಜರವರ ಅಸಿಸ್ಟೆಂಟ್ ಪ್ರೈವೆಟ್ ಸೆಕ್ರೆಟರಿ ಮ॥ ಪಿ. ರಾಘವೇಂದ್ರರಾಯರೂ, ಬಾಡಿಗಾರ್ಡ್ ಕಮ್ಯಾಂಡೆಂಟ್ ಮ ಎಚ್. ಲಿಂಗರಾಜೇ ಅರಸಿನವರೂ ಪ್ರಯಾಣ ಮಾಡಿದರು ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು ಶ್ರೀಮನ್ ಮಹಾರಾಜರವರು ಬರ್ಪ ತಿಂಗಳ ಮೊದಲನೇ ವಾರದಲ್ಲಿ ನೀಲಗಿರಿಯಿಂದ ವಾಪಸು ರಾಜಧಾನಿಗೆ ದಯಮಾಡುವರಾಗಿದ್ದಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಬೆಲೆ ಕೊಡಲಾರೆವು. ಆದಕಾರಣ ಬಾತ್ಮಿದಾರರು ತಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಬೆಲೆ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಖಿಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು — ಎಡಿ.

ಪಂಡಿತ, ಶ್ರೀರಂಗಪಟ್ಟಣ.—ನೀವು ಡೆಪ್ಟಿ ಕಮಿಷನರವರಿಗೆ ಖುದ್ದಾಗಿ ಅರಿಕೆ ಮಾಡಿಕೊಳ್ಳುವುದೇ ಉಚಿತವಾಗಿದೆ.

ಎಂ ಎಸ್. ತಮ್ಮಣ್ಣ ಹೆಗ್ಗಡೆ.—ನೀವು ಸಂಭಾಷಣೆಯ ಉತ್ತರಭಾಗವನ್ನು ಕಳುಹಿಸಿದಲ್ಲಿ ಪ್ರಕಟಿಸತಕ್ಕ ವಿಚಾರವನ್ನು ಸಂಶಂಗೊತ್ತು ಮಾಡುವೆವು.

ಸನಾತನ ಸ್ವಧರ್ಮಾಭಿಮಾನಿ ಆಲೂರು.—ನೀವು ಬರೆದಿರುವ ಬಾತ್ಮಿಯು ಯಥಾರ್ಥವೆಂದು ನಂಬಿದರೂ ಅದನ್ನು ಪ್ರಕಟಿಸುವುದರಲ್ಲಿ ಅಷ್ಟೇನೂ ಪ್ರಯೋಜನವಾಗಲಾರದು. ಈ ವಿಷಯವನ್ನು ಕುರಿತು ಮುಜರಾಯಿ ಇಲಾಖಾ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಂಡಲ್ಲಿ ಅವರು ತನಿಖೆ ಮಾಡಿ ಕ್ರಮಪಡಿಸಿ ನಿಮಗೆಲ್ಲ ಮನಸ್ಸಮಾಧಾನವನ್ನುಂಟುಮಾಡಿಯಾರೆನ್ನುವುದಕ್ಕೆ ಸಂಶಯವಿಲ್ಲ.

ಅ. ಐ , ಹಾಸನ —ನೀವು ಬಾತ್ಮಿಯನ್ನು ವಿರಳವಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು

ಎಚ್. ಜಿ , ಬುಕ್ಕಾಪಟ್ಣ ; ಸಿ. ವಿ ಆರ್ , ಚಾಮರಾಜನಗರ ; ದೇಶಾಭಿಮಾನಿ, ಲಕ್ಷ್ಮೀನಾರಾಯಣ ಅಗ್ರಹಾರ, ಬೆಂಗಳೂರು, ಪ್ರೋಗ್ರೆಸ್, ಅಲಸೂರು, ಬೆಂಗಳೂರು — ಈ ಬಾತ್ಮಿಗಳನ್ನು ಪ್ರಕಟಿಸಲಾರೆವು. —ಎಡಿ.]

ಕರೆಸ್ಪಾಂಡೆನ್ಸ್.

ಬನ್ನೇರುಘಟ್ಟದಲ್ಲಿ ಸುಲಿಗೆಸೇವೆ

ಅಯ್ಯಾ,

ನಾವು ಮತ್ತು ೬—೭ ಜನ ಸ್ನೇಹಿತರು ಸಹಾ ಮೊನ್ನೆ ಬನ್ನೇರುಘಟ್ಟ ಜಾತ್ರೆಗೆ ಹೋಗಿದ್ದೆವು. ನಾವುಗಳು ತೆಂಗಿನಕಾಯಿ ಬಾಳೆಹಣ್ಣು ಕರ್ಪೂರ ವಗೈರೆ ತೆಗೆದುಕೊಂಡು ದೇವಾಲಯಕ್ಕೆ ಸ್ವಾಮಿ ಪೂಜೆಗೆ ಹೋಗಲು, ದೇವಾಲಯದ ಬಾಗಲಿನಲ್ಲಿ ಒಬ್ಬ ಪೋಲೀಸಿನವನು ಇಬ್ಬರು ಬ್ರಾಹ್ಮಣರು ನಿಂತುಕೊಂಡು, ಇಸಂಒಂದಕ್ಕೆ ೩ ಪೈ ಮೇರಿಗೆ ಕೊಟ್ಟು ಒಳಕ್ಕೆ ಹೋಗಬೇಕೆಂದು ಹೇಳಿದರು. ಅದರಂತೆ ನಾವುಗಳು ಕೊಟ್ಟು, ಮ್ಯಾದಬಾಗಲು ದಾಟಿ ಹೋದೆವು. ದೇವಸ್ಥಾನದ ಮಧ್ಯಬಾಗಲಿನಲ್ಲಿ ಇಬ್ಬರು ನಿಂತುಕೊಂಡು, ಎಷ್ಟು ತೆಂಗಿನಕಾಯಿ ಇವೆ ಎಂದು ಶೋಧನೆಮಾಡಿ ನಮ್ಮ ಕೈಗಳಲ್ಲಿ ಇದ್ದ ಕಾಯಿಗಳಿಗೆ ೩ ಪೈ ಮೇರಿಗೆ ವಸೂಲ್ ಮಾಡಿ ಒಂದು ತಟ್ಟೆಯಲ್ಲಿ ದುಡ್ಡುಗಳು ಹಾಕಿಕೊಂಡು, ಕಳುಹಿಸಿಕೊಟ್ಟರು. ಗರ್ಭದ ದೇವಸ್ಥಾನಕ್ಕೆ ಹೋಗಿ ನಿಂತುಕೊಂಡು, ಅರ್ಚಕರಿಗೆ ಪೂಜೆ ಮಾಡಿಕೊಡುವಂತೆ ಕೇಳಲು, ಕಾಯಿ ಒಡೆದುಕೊಡುವದಕ್ಕೆ ಕಾಯಿ ಒಂದಕ್ಕೆ ೩ ಪೈ ಮೇರಿಗೂ ಮಂಗಳಾರತಿ ಮಾಡುವದಕ್ಕೆ ೪ ಆಣೆಯಂತೆಯೂ ಕೊಟ್ಟರೆ ಪೂಜೆ ಮಾಡಿಕೊಡುತ್ತೇವೆಂದು ಹೇಳಿ, ಸ್ವಾಮಿ ದರ್ಶನವೂ ಆಗದಂತೆ ಕದವನ್ನು ಮುಚ್ಚಿಕೊಂಡರು. ಈ ರೀತಿ ಈ ಅರ್ಚಕರು ಮಾಡುವದರಿಂದ ಅನೇಕ ಜನರು ಹೊರಗೆ ಇರುವ ಗರುಡ ಕಂಭಕ್ಕೆ ತೆಂಗಿನಕಾಯಿ ಒಡೆದುಕೊಂಡು, ಹಂದೋಹಂದವಾಗಿ ಹೋದರು. ಈ ರೂಲ್ಸು ಸರ್ಕಾರದವರೇ ಮಾಡಿ ಇರುತ್ತಾರೋ, ಅಲ್ಲವೇ ಈ ಅರ್ಚಕರೇ ಈ ಮೇರಿಗೆ ರೂಲ್ಸು ಮಾಡಿ ಇರುತ್ತಾರೋ ತಿಳಿಯಲಿಲ್ಲ. ಜನರು ಬಹಳ ದೂರದಿಂದ ದೇವರ ಯಾತ್ರೆಗೆ ಹೋಗುತ್ತಾರಾದ್ದರಿಂದ ಸರ್ಕಾರದವರು ಈ ರೂಲ್ಸು ತೆಗೆಸಿ ಹಾಕಬೇಕೆಂದು ಬೇಡುತ್ತೇವೆ. ಸರ್ಕಾರಿ ರೂಲ್ಸು ಅಲ್ಲದೇ ಅರ್ಚಕರೇ ಈ ರೂಲ್ಸು ಮಾಡಿದ್ದರೆ ತಕ್ಕ ಬಂದೋಬಸ್ತು ಮುಂದಕ್ಕೆ ಮಾಡಿಸಬೇಕೆಂದು ಕೋರುತ್ತೇವೆ.

ತಾ॥ ೬—೪—೦೫, ಟಿ. ಬಾಲಾಜಿಸಿಂಗ್,
ಕಂಟೋನ್ಮೆಂಟ್, ಬೆಂಗಳೂರು. ಬಿ. ಎಸ್. ಕೃಷ್ಣಶೆಟ್ಟಿ.

ಸುಪಾರಿ ಕಂದಾಯ.

ಅಯ್ಯಾ,

ಮಲನಾಡಿನ ಜನಗಳು ತಮ್ಮ ಜೀವನಕ್ಕೋಸ್ಕರ ಮಲೆನಾಡಿನಲ್ಲಿ ಅಡಿಕೆ ಮುಂತಾದ್ದು ಬೆಳೆಯಬೇಕಾದರೆ ೭—೪—೫ ಸಾವಿರ ರೂಪಾಯಿ ಕಂದಾಯ ಕೊಟ್ಟು ಸರಕಾರದಿಂದ ಜಮೀನು ಪಡೆದು, ಅದರಲ್ಲಿ ಯಾವತ್ತು ಅಡಿಕೆ ಮುಂತಾದ್ದು ಬೆಳೆದು, ಅದರಲ್ಲಿ ಸರ್ಕಾರಿ ಕಂದಾಯ ಕೊಟ್ಟು ಉಳಿದಿರುವದರಲ್ಲಿ ತಮ್ಮ ಜೀವನಕ್ಕೆ ಆಗುತ್ತಾ ಇತ್ತು. ಈಗ ಹತ್ತು ಹನ್ನೆರಡು ವರುಷದ ಈಚೆಗೆ ಇದರಿಗೆ ಬಂದಿರುವ ಕಷ್ಟವು ಅಡಿಕೆಯ ಫಸಲು ಆಗುವದಕ್ಕೆ ಅನಿಷ್ಟವಾದ ಕೊಳೆ ಮಾರಿಯೆಂಬ ಒಂದು ಜಾತಿ ರೋಗವು ಉತ್ಪತ್ತಿ ಪ್ರಾಪ್ತವಾಗಿ ಯಾವತ್ತು ಫಸಲು ಕೊಳೆತು ಕೆಳಕ್ಕೆ ಉದುರಿ ಹೋಗಿ ನಾಶವಾಗಿ ಮತ್ತು ಅದೂ ಅಲ್ಲದೆ ಮರಗಳು ಕೂಡ ಇದೇ ರೋಗದಿಂದ ನಾಶವಾಗಿ ಹೋಗುತ್ತೆ. ಅದ್ದರಿಂದ ೧೦೦—೨೦೦—೩೦೦ ಮಣ ಬೆಳೆಯತಕ್ಕವರಿಗೆ ೪—೧೦ ಮಣ ಆಗುತ್ತೆ. ಒಂದೊಂದು ವರುಷ ಯಾವತ್ತು ಪೂರಾ ನಾಶವಾಗುವದುಂಟು ಹೀಗಿರುವದರಿಂದ ಜೀವನಕ್ಕೂ ಇಲ್ಲದೇ ಸರ್ಕಾರಿ ಕಂದಾಯಕ್ಕೂ ಕೂಡ ಸಾಲದೆ ಯಾವತ್ತು ಭೂಮಿ ಮನೆ ಜೆಂದಿಗೆ ಮುಂತಾದ್ದು ಸರ್ಕಾರದವರು ಹರಾಜು ಮಾಡಿಸುತ್ತಾರೆ. ಅದ್ದರಿಂದ ಮಲನಾಡಿನವರಿಗೆ ಬಾಧಿಸುವ ಕಷ್ಟವನ್ನು ದಯಾಳುಗಳಾದ ಸರ್ಕಾರದವರು ನನ್ನಗಳ ಮೇಲೆ ಕರುಣವಿಟ್ಟು ಕಂದಾಯ ಕಡಿಮೆ ಮಾಡಿಸಬೇಕೆಂದು ಬೇಡಿಕೊಳ್ಳುತ್ತೇನೆ.

ತಾ॥ ೧—೪—೦೫ ಬಿದ್ರೆಗೋಡು ಸಿ. ಎಸ್. ಕಾಡಪ್ಪ

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಬಳ್ಳಾಪುರದ ಡಿವಿಜನ್ ಅ॥ ಕಮಿಷನರ್ ಮೆ॥ ಸಿ. ರಾಮರಾಯರಿಗೆ ಕ್ರಿಮಿನಲ್ ಅಪೀಲ್ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತು ಮಾಡಲು ಅಧಿಕಾರ ಕೊಟ್ಟಿದೆ.

ಮುನ್ಸಿಫ್ ಮೆ॥ ಎಂ. ಎಲ್. ಶ್ರೀಕಂಠೇಶ ಗೌಡರನ್ನು ೩ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಎಚ್. ಕೃಷ್ಣರಾಯರಿಗೆ ಮಾರ್ಚಿ ೧೪ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ದಿವಾನರವರ ಪ್ರೈವೆಟ್ ಸೆಕ್ರೆಟರಿ ಮೆ॥ ಎಂ ಶ್ರೀನಿವಾಸಯ್ಯಂಗಾರ್ಯರಿಗೆ ಕೊಟ್ಟಿದ್ದ ೪೦ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ದಿನಗಳಿಗೆ ಜಾಸ್ತಿ ಮಾಡಿದೆ. ಮೆ॥ ಬಿ. ವಿ. ಲಕ್ಷ್ಮಣರಾಯರು ಅವರಿಗೆ ಬದಲಾಗಿ ಕೆಲಸ ನೋಡತಕ್ಕದ್ದು.

ಕಡೂರ್ ಡಿಸ್ಟ್ರಿಕ್ಟ್ ಅ॥ ಸರ್ಜನ್ ಮೆ॥ ಸಿ ಎ. ನಂಜಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ವಿಕ್ಟೋರಿಯಾ ಆಸ್ಪತ್ರೆಯ ಅ॥ ಸರ್ಜನ್ ಮೆ॥ ಬಿ. ಮಹಮದ್ ಉಸ್ಮಾನರವರು ಕಡೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ಕೆಲಸ ನೋಡತಕ್ಕದ್ದು.

ಕಡೂರು ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮೆ॥ ಕೆ. ಆರ್. ಶ್ರೀನಿವಾಸೈಯಂಗಾರ್ಯರಿಗೆ ಕಳೆದ ಸಂವತ್ಸರದ ರಜದ ಜೊತೆಗೆ ಆರು ದಿನಗಳ ಸಂಬಳವಿಲ್ಲದ ರಜಾ ಕೊಟ್ಟಿತ್ತು.

ತುಂಕೂರ್ ಡಿಸ್ಟ್ರಿಕ್ಟ್ ಎಕ್ಸೈಸ್ ಅ॥ ಕಮಿಷನರ್ ಮೆ॥ ಟಿ. ಬಾಬಾರಾಯರು ಜನವರಿ ೧ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಪ್ರೊಬೇಷನರಿ ಎಕ್‌ಸ್ಟ್ರಾ ಅ॥ ಕಮಿಷನರ್ ಮೆ॥ ಸೈಯದ್ ತಾಜ್ ಪೀರಾನ್ ಯವರಿಗೆ ಕೊಟ್ಟಿದ್ದ ರಜವನ್ನು ಇನ್ನೂ ೪ ದಿನ ಜಾಸ್ತಿ ಮಾಡಿದೆ.

ಹರಿಹರದ ಡಿಪ್ಟಿ ಅಮಲ್ದಾರ್ ಮೆ॥ ಮಹಮದ್ ಪೀರ್ ಯವರಿಗೆ ಫೆಬ್ರವರಿ ೨ ರಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಗೌರಿಬಿದನೂರು ತಾಲ್ಲೂಕ್ ಅಮಲ್ದಾರ್ ಮೆ॥ ಕೆ. ಸುಬ್ಬರಾಯರಿಗೆ ಕೊಟ್ಟಿದ್ದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನ ಜಾಸ್ತಿ ಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಪ್ರೊಬೇಷನರಿ ಎಕ್‌ಸ್ಟ್ರಾ ಅ॥ ಕಮಿಷನರ್ ಮೆ॥ ಎಂ. ಹುಸೇನ್ ಅಲಿಯವರಿಗೆ ಮೊದಲು ಕೊಟ್ಟಿದ್ದ ಜೊತೆಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಬೆಂಗಳೂರು ಡಿವಿಜನ್ ಅ॥ ಇಂಜನಿಯರ್ ಮೆ॥ ಎಂ. ಎ. ಅನಂದಾಳ್ವಾರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಡಿವಿಜನ್ ಅ॥ ಇಂಜನಿಯರ್ ಮೆ॥ ಪ್ರೋಮಥ್ ಭೂಷಣ ಘಂಗಷೀರಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗಳು ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರಷ್ಯಾ, ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಲಂಡನ್. ಏಪ್ರೆಲ್ ೨.—ನೌಗರಾಡ್ ಅಧಿಕಾರ್ಯದಲ್ಲಿರುವ ಜಪಾನ್ ಖೈದಿಗಳ ಪೈಕಿ ೭೦ ಮಂದಿ ಆತ್ಮಹತ್ಯ ಮಾಡಿಕೊಂಡರೆಂದು ರಷ್ಯಾ ಪತ್ರಿಕೆಗಳು ಹೇಳುವವು. ಆ ಸರ್ಕಾರದವರು ಒಬ್ಬನೇ ಆತ್ಮಹತ್ಯ ಮಾಡಿಕೊಂಡನೆಂದು ತಿಳಿಸಿದಾರೆ.

ಜಪಾನಿನವರು ಮುಂದೆ ನುಗ್ಗಿಹೋಗುತ್ತಾ ಕೀರಿನ್ ರೋಡಿನಲ್ಲಿರುವ ವಿಚುಮಾಚೆನ್ ಎಂಬ ರಾಜ್ಯವನ್ನು ಸ್ವಾಧೀನಪಡಿಸಿಕೊಂಡರು.

ಕಾಂತರಿಕ ವಿಚಾರ.

ನಾಸ್ಕಾನ್ ಸೇಲೋ ಎಂಬ ಅರಮನೆಯಲ್ಲಿ ಇಷ್ಟರಲ್ಲೇ ಮಂತ್ರಿಗಳ ಸಮಾಜ ಕೂಡುವದು. ಯುದ್ಧ ಭೂಮಿಯಲ್ಲಿರುವ ದವ್ಯಾಧ್ಯಕ್ಷರಿಂದಲೂ ರಷ್ಯಾ ರಾಯಭಾರಿಗಳಿಂದಲೂ ಅಭಿಪ್ರಾಯಗಳನ್ನು ತರಿಸಿಕೊಂಡು, ಮಂತ್ರಿ ಸಮಾಜದವರು ಯುದ್ಧವನ್ನು ಮುಂದರಿಸಬೇಕೋ ಶರಾರು ಮಾಡಿಕೊಳ್ಳಬೇಕೋ ಇತ್ಯರ್ಥ ಮಾಡುವವರಾಗಿದಾರೆ.

ಯುದ್ಧ ವಿಚಾರ.

ಲಂಡನ್, ಏಪ್ರೆಲ್ ೫.—ಕೈಯೂಯೇನಿಂದ ಜಪಾನ್ ಸೈನ್ಯವು ನೆಟ್ಟಗೆ ಮುಂದು ಮುಂದಕ್ಕೆ ಹೋಗುತ್ತಿದೆ. ದಾರಿಯಲ್ಲಿ ಸಿಕ್ಕುವ ಗ್ರಾಮಗಳಲ್ಲಿ ರಷ್ಯಾ ಸೈನಿಕರನ್ನು ಹಿಡಿದು ಓಡಿಸುತ್ತಿದಾರೆ. ಶತ್ರುಗಳ ಸೈನ್ಯಗಳು ಮಧ್ಯೆ ೪೦ ಮೈಲಿ ಫಾಸಲೆ ಬಿಟ್ಟಿದೆ.

ಲಂಡನ್, ಏಪ್ರೆಲ್ ೬ —ಕೈಲಿಂಗ್ ಕೀರಿನ್ ರೋಡಿನಲ್ಲಿ ಜಪಾನಿನವರು ಈಗ ೪೦ ಮೈಲಿ ದೂರ ನುಗ್ಗಿಹೋಗಿದಾರೆಂದು ಮಾರ್ಷಲ್ ಓಯಾಮಾ ಯವರು ತಿಳಿಸುತ್ತಾರೆ.

ರಷ್ಯಾದವರ ಸೋಲು.

೩ನೇ ತಾ. ಮಧ್ಯಾಹ್ನ ರಷ್ಯಾ ಸೈನಿಕರು ಚಂಟೌಟನ್ ಎಂಬ ರಾಜ್ಯಕ್ಕೆ ಮುತ್ತಿಗೆ ಹಾಕಿದರು. ಜಪಾನಿನವರು ಅವರ ಮೇಲೆ ಯುದ್ಧ ಮಾಡಿ, ರಷ್ಯಾದವರ ಕಡೆ ೨೦೦ ಮಂದಿಯನ್ನು ನಷ್ಟಪಡಿಸಿ ಚದರಿಸಿಬಿಟ್ಟರು. ಜಪಾನಿನವರ ಕಡೆ ೨೭ ಮಂದಿ ನಷ್ಟವಾದರು

ಜಪಾನಿನವರಿಗೆ ಅಪ ಜಯ

ಲಂಡನ್, ಏಪ್ರೆಲ್ ೭ —ಜಪಾನಿನವರನ್ನು ಎರಡನೆಯಿಂದ ಸುಳುಪು ಎಂಬಲ್ಲಿಗೆ ಓಡಿಸಿದೆವೆಂತಲೂ, ಜಪಾನಿನವರ ಸಂಗಡ ೬,೦೦೦ ದಂಡಿನ ಜನರು ಇದ್ದರೆಂತಲೂ, ಇವರ ಮೇಲೆ ನುಗ್ಗಿ ಯುದ್ಧ ಮಾಡಿದೆವೆಂತಲೂ ರಷ್ಯಾ ಜನರಲ್‌ರವರು ತಿಳಿಸುತ್ತಾರೆ.

ಜಪಾನಿನವರ ರಿಪೋರ್ಟು.

ಜಪಾನ್ ಸರ್ಕಾರದವರು ಪ್ರಕಟಿಸಿರುವುದೇನೆಂದರೆ—ಮಾರ್ಚಿ ೩೧ ರಲ್ಲಿ ನಮ್ಮ ಸೈನಿಕರು ಕೈಯೂಯೇನಿಂದ ಹೊರಟು, ವಿಂಗಾಟಿಚ್ ಎಂಬ ರಾಜ್ಯವನ್ನು ಆಕ್ರಮಿಸಿಕೊಂಡರು. ಏಪ್ರೆಲ್ ತಾ. ೪ ರಲ್ಲಿ ಕಾಯಿಯಾಪು ಎಂಬ ರಾಜ್ಯವು ನಮ್ಮ ವಶವಾಯಿತು. ಶತ್ರು ಸೈನಿಕರು ಬಹಳವಾಗಿ ಬಂದು ಪಿರಂಗಿ ಸಹಿತ ಷಾಂಗ್ ಟು ಬಳಿ ನಮ್ಮ ಮೇಲೆ ಮುತ್ತಿಗೆ ಹಾಕಿಕೊಂಡರು. ಅವರನ್ನೆಲ್ಲಾ ಸೋಲಿಸಿ ಓಡಿಸಿದೆವು. ನಮ್ಮ ಕಡೆ ೨೭ ಮಂದಿ ನಷ್ಟವಾದರು ; ಶತ್ರುಗಳ ಕಡೆ ೨,೦೦೦ ಜನ ನಷ್ಟಹೊಂದಿದಾರೆ ಎಂಬುದೇ.

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಲಂಡನ್, ಏಪ್ರೆಲ್ ೧.—ರಷ್ಯಾ ರಾಜಧಾನಿಯಲ್ಲಿ ಮುಷ್ಕರು ಸೇರಿ ಮದ್ದನ್ನೂ ಗುಂಡನ್ನೂ ತಯಾರು ಮಾಡುತ್ತಿದ್ದರು. ಅದು ಪತ್ತೆ ಆಯಿತು. ೧೭ ಮಂದಿ ಮುಖಂಡರನ್ನು ಕೈಸೆರೆ ಹಿಡಿದು ಹಾಕಿದಾರೆ. ಸ್ವಿಟ್ಸರ್ಲೆಂಡಿನಲ್ಲಿ ಒಂದು ಸಂಘವಿದೆ ಎಂತಲೂ, ಅದರ ಪ್ರೇರಣೆಯ ಮೇಲೆ ಇವರು ದುಷ್ಕಾರ್ಯಗಳನ್ನು ಮಾಡಲಾರಂಭಿಸಿದಾರೆಂತಲೂ ಕೆಲವು ಕಾಗದ ಪತ್ರಗಳು ಹೇಳುತ್ತವೆ

ಲೋಡ್ಜ್ ನಗರದಲ್ಲಿ ಪೋಲೀಸ್ ಸ್ಟೇಷನ್‌ರ ಮೇಲೆ ಮದ್ದಿನ ಗುಂಡು ಎಸೆದು ಗಾಯಮಾಡಿದ ದುಷ್ಟನನ್ನು ಪೋಲೀಸಿನವರು ತಕ್ಷಣ ಹಿಡಿದು ಕಡಿದುಹಾಕಿದರು.

ಅನೇಕರನ್ನು ಬಂಧನದಲ್ಲಿ ಹಾಕಿದರು.

ಲಂಡನ್, ಏಪ್ರೆಲ್ ೩.—ವಾರ್ಸಾ ನಗರದಲ್ಲಿ ೧,೦೦೦ ದಂಗೆಕೋರರಿಗೂ ೨೦ ಮಂದಿ ಆಯುಧಪಾಣಿಗಳಾದ ಪೋಲೀಸಿನವರಿಗೂ ನೆನ್ನೆ ಯುದ್ಧವಾಯಿತು ಪೋಲೀಸಿನವರು ಗುಂಡು ಹೊಡೆದು ೪ ಜನರನ್ನು ಕೊಂದು, ೪೦ ಮಂದಿಗೆ ಗಾಯಗೊಳಿಸಿ, ಅನೇಕರನ್ನು ಹಿಡಿದು ಜೈಲಿಗೆ ಕಳುಹಿಸಿದಂತೆ. ರಷ್ಯಾ ರಾಜ್ಯದಲ್ಲೆಲ್ಲಾ ಬಹು ಕಠಿಣವಾಗಿ ಸರ್ಕಾರದವರು ದಂಗೆಯನ್ನು ಅಡಗಿಸುತ್ತಿರುವರು.

ಫಿನ್‌ಲಾಂಡಿನಲ್ಲಿ ಪ್ರಜೆಗಳನ್ನು ಸಮಾಧಾನಪಡಿಸುವುದಕ್ಕೆ ಸರ್ಕಾರದವರು ೧೯೦೧ ರಲ್ಲಿ ಜಾರಿಗೆ ತಂದಿದ್ದ ಕಠಿಣತರವಾದ ಶಾಸನವನ್ನು ತೆಗೆದುಹಾಕಿದರು ಅದರಂತೆ ನಡೆಯದೆ ಹೋದರೆಂದು ಕೆಲಸದಿಂದ ವಜಾ ಮಾಡಿದ್ದ ಅಧಿಕಾರಿಗಳಿಗೆ ಮತ್ತೆ ಕೆಲಸ ಕೊಟ್ಟಿದಾರೆ.

ಡಾಕ್ಟರುಗಳ ಸಮಾಜವು.

ಲಂಡನ್, ಏಪ್ರೆಲ್ ೪ —ರಷ್ಯಾ ರಾಜ್ಯದಲ್ಲಿ ಈಗ ವಾಂತಿಭೇದಿ ಉಪದ್ರ ಪ್ರಾಪ್ತವಾಗಿದೆ ಈ ಉಪದ್ರವನ್ನು ಅಡಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಒಂದು ಸಾವಿರ ಮಂದಿ ಡಾಕ್ಟರುಗಳು ಮಾಸ್ಕೋ ಪಟ್ಟಣದಲ್ಲಿ ಸಭೆಸೇರಿ ತೀರ್ಮಾನಿಸಿದ್ದೇನೆಂದರೆ— ವಾಂತಿಭೇದಿ ಉಪದ್ರವನ್ನು ಅಡಗಿಸುವುದಕ್ಕೆ ಸರ್ಕಾರದವರು ಪೋಲೀಸಿನವರನ್ನು ಬಿಡಕೂಡದು. ರಾಜದ್ರೋಹಕ್ಕೆ ಸಿಕ್ಕಿ ಸೆರೆಮನೆಯಲ್ಲಿ ಬಿದ್ದಿರುವ ಡಾಕ್ಟರುಗಳನ್ನೆಲ್ಲಾ ಬಂದೀಖಾನೆಯಿಂದ ಬಿಡುಗಡೆ ಮಾಡಬೇಕು. ಜನವರಿ ೨೨ ರಲ್ಲಿ ತೀರ್ಮಾನವಾಗಿದ್ದಂಥಾ ರಿಯಾಯಿತಿಗಳನ್ನು ಕೂಲಿಕಾರರಿಗೆ ಬೇಗನೆ ತೋರಿಸಬೇಕು. ಪ್ರಜೆಗಳ ಮುಖಂಡರನ್ನೆಲ್ಲಾ ಕರೆಸಿ, ಒಂದು ಸಮಾಜವನ್ನು ಸೇರಿಸಬೇಕು. ಯುದ್ಧವನ್ನು ತಕ್ಷಣ ನಿಲ್ಲಿಸಬೇಕು ಎಂಬುದೇ.

ಪೋಲೀಸಿನವರ ಕಾರುಬಾರು.

ಲಂಡನ್, ಏಪ್ರೆಲ್ ೫.—ವಾರ್ಸಾ ಪಟ್ಟಣದಲ್ಲಿ ಮೊನ್ನೆ ರಾತ್ರಿ ಮುಷ್ಕರು ಸೇರಿ ಅಂತರಂಗದಲ್ಲಿ ಕೂಟ ಮಾಡುತ್ತಿದ್ದ ಸ್ಥಳವನ್ನು ಪತ್ತೆ ಮಾಡಿ, ಪೋಲೀಸಿನವರು ನುಗ್ಗಿ ೬೦ ಜನರನ್ನು ಹಸ್ತಗಿರಿ ಮಾಡಿದ್ದಲ್ಲದೆ, ದಂಗೆಯನ್ನು ಹುಟ್ಟಿಸುವಂಥಾ ಕಾಗದ ಪತ್ರಗಳನ್ನೂ ನೋಟಿಸ್ ಇಸ್ತಿಹಾರ್‌ನಾಮೆಗಳನ್ನೂ ಬಂದೂಕು ಪಿಸ್ತೂಲು ಮದ್ದು ಗುಂಡು ತೋಟಾ ಮುಂತಾದವುಗಳನ್ನೂ ಬಹಳವಾಗಿ ಕಿತ್ತುಕೊಂಡರು. ಇತರ ಪಟ್ಟಣಗಳಲ್ಲೂ ಹೀಗೇ ಮಾಡುತ್ತಿದಾರೆ.

ಕೊಲೆಗಾರರನ್ನು ಹಿಡಿದರು.

ಲಂಡನ್, ಏಪ್ರೆಲ್ ೬.—ಸೋಮವಾರ ರಾತ್ರಿ ಸಾಕೋನ್‌ಸೇಲೋ ಎಂಬ ಅರಮನೆಯಲ್ಲಿ ಯುದ್ಧದ ಇಲಾಖೆಯ ಅಧಿಕಾರಿಗಳೆಲ್ಲಾ ಸೇರಿ ಭೋಜನ ಮಾಡಿ ಸಂತೋಷಪಡುತ್ತಿದ್ದರು. ಅವರ ಮಧ್ಯೆ ಅಧಿಕಾರಿಯಂತೆ ವೇಷ ಹಾಕಿಕೊಂಡು ಒಬ್ಬ ಕೊಲೆಗಾರನು ಸೇರಿಕೊಂಡಿದ್ದನು. ಇವನನ್ನು ಸರ್ಕಾರದವರು ಪತ್ತೆಮಾಡಿ ಹಿಡಿದು ಬಂಧನದಲ್ಲಿಟ್ಟರು. ಇವನು ಎರಡು ಗುಂಡುಗಳನ್ನು ತನ್ನ ಅಂಗಿಯೊಳಗೆ ಬಚ್ಚಿಟ್ಟುಕೊಂಡಿದ್ದನು.

ನಮ್ಮ ಪುಸ್ತಕ ಭಂಡಾರವು

"ಅನುಭವಾನಂದ" ¶

ಪ್ರಪಂಚದಲ್ಲಿ ಸಕಲಾರ್ಜನೆಗಿಂತಲೂ ಜ್ಞಾನಾರ್ಜನೆಯು ಬಹಳ ಶ್ರೇಷ್ಠತರವು. ವಿವೇಚನಾ ವಿವೇಚಕ ಸಾಮರ್ಥ್ಯಗಳನ್ನರಿಯುವುದೇ ಜ್ಞಾನಕ್ಕೆ ಮುಖ್ಯ ಫಲವು; ಜ್ಞಾನಿಗಳು ಈ ಮನುಷ್ಯನ ಜೀವಿತವು ಜಲಬುದ್ಬುದದಂತೆ ಅಶಾಶ್ವತವೆಂದು ತಿಳಿದು, ಅವನು ಈ ಪ್ರಪಂಚದಲ್ಲಿ ಜೀವಿಸಿರುವ ಸ್ವಲ್ಪ ಕಾಲದೊಳಗಾಗಿಯೇ ಸಂತೋಷ ಸುಖಪ್ರದವಾದ ಜ್ಞಾನಾಭಿವೃದ್ಧಿಯಂ ಪಡೆಯಲೆಂದು, ತಮ್ಮ ಸ್ವಾನುಭವಂಗಳಂ ಪುರಾಣೇತಿಹಾಸ ನಾಟಕ ಕಥಾರೂಪಗಳಿಂದ ಬರೆದಿಟ್ಟಿರುವರು. ಮತ್ತೆ ಕೆಲವರು ತಾವು ಸಂಚರಿಸಿದ ಸ್ಥಳಗಳಲ್ಲಿ ಈ ವಿಷಯಗಳನ್ನು ಕುರಿತು ಉಪನ್ಯಾಸವಂ ಮಾಡಿರುವರು. ಸಮಸ್ತರೂ ಸನ್ಮಾರ್ಗಾವಲಂಬಿಗಳಾಗಬೇಕೆಂಬುದೇ ಅವರ ಉದ್ದೇಶವು. ಇದೇ ಅಭಿಪ್ರಾಯವುಳ್ಳ ಮೈಸೂರು ಪುರುಷಾರ್ಥ ವಿಚಾರ ರಾಜ್ಯೋತ್ಸ್ಯ ಕೋಟೆಸ್ಥಳದಲ್ಲಿ ಸೇರಿದ ಮ॥ರಾ॥ ರಂಗಸ್ವಾಮಿ ಶೆಟ್ಟರಿಂದ ಕೋಟೆಸ್ಥರ ಉಪಯೋಗಕ್ಕಾಗಿ ಕೊಟ್ಟ ಹಲವು ಉಪನ್ಯಾಸಗಳನ್ನು ಒಟ್ಟುಗೂಡಿಸಿ, ಮೇಲಿನ ಹೆಸರಿನಿಂದ ಒಂದು ತಮಿಳು ಗ್ರಂಥವು ರಚಿಸಲ್ಪಟ್ಟು, ಮ॥ರಾ॥ ಬಿ. ಯಂ ಸಿದ್ಧಲಿಂಗಶಾಸ್ತ್ರಿಗಳಿಂದ ಕನ್ನಡಕ್ಕೆ ಪರಿವರ್ತನೆ ಮಾಡಿಸಿ, ಗ್ರಂಥಕರ್ತರಿಂದ ಪ್ರಕಟಿಸಲ್ಪಟ್ಟಿರುತ್ತದೆ. ಈ ಗ್ರಂಥವು ಅನೇಕ ವಿನೋದವಾದ ಕಟ್ಟುಕಥೆಗಳಿಂದ ಕೂಡಿದುದಾಗಿ ವಾಚಕರಿಗೆ ಸನ್ಮಾರ್ಗ ಫಲವನ್ನು ವ್ಯಕ್ತಗೊಳಿಸುವುದು.

"ಕ್ಷೇತ್ರಗಣಿತ." *

ಮೈಸೂರು ದೇಶೀಯ ಪರೀಕ್ಷೆಗಳ ಪಾಠಪಟ್ಟಿಯಲ್ಲಿ ಕ್ಷೇತ್ರಗಣಿತವೊಂದು ಮುಖ್ಯಭಾಗವಾಗಿದೆಯಷ್ಟೆ. ಇಂಥಾ ಪರೀಕ್ಷೆಗಳಿಗೆ ಓದುವವರಿಗೆ ಅತ್ಯಂತ ಉಪಯುಕ್ತವಾದ ಒಂದು ಗ್ರಂಥವು ಮೈಸೂರಲ್ಲಿರುವ ಮ॥ ರಾ॥ ಟ್ಯಾಂಕ್ ಇನ್‌ಸ್ಪೆಕ್ಟರ್ ಸಿ. ಕಪ್ಪಣ್ಣನವರಿಂದ ರಚಿಸಲ್ಪಟ್ಟಿರುವುದು. ಕನ್ನಡದಲ್ಲಿ ಈ ವಿಷಯದಲ್ಲಿ ಇಷ್ಟು ವಿಸ್ತಾರವಾದ ಗ್ರಂಥವು ಇದೇ ಮೊದಲನೆಯದು. ಮೊದಲನೇ ಎರಡನೇ ಭಾಗಗಳು ಹನ್ನೊಂದು ಅಧ್ಯಾಯಗಳನ್ನು ಒಳಗೊಂಡಿವೆ. ಪ್ರತಿ ಒಂದು ಅಧ್ಯಾಯವೂ ಅನೇಕ ಅಭ್ಯಾಸೋದಾಹರಣೆಗಳಿಂದ ಕೂಡಿದೆ. ವಾಕ್ಯಗಳು, ಮಾದರಿಯ ಉದಾಹರಣೆಗಳು ಸುಲಭಗ್ರಾಹ್ಯವಾಗುವಂತೆ ತಕ್ಕ ಆಕೃತಿಗಳಿಂದಲೂ ನಿಯಮಗಳಿಂದಲೂ ಉದಾಹರಿಸಲ್ಪಟ್ಟಿವೆ. ಘನಫಲ ವಿಷಯವನ್ನು ತಿಳಿಸುವ ಮೂರನೆಯ ಭಾಗವು ಶೀಘ್ರದಲ್ಲಿಯೇ ಮುದ್ರಣದಿಂದ ಹೊರಗೆ ಬರುವುದೆಂದು ಕೋರುವೆವು. ಆದರೆ ಗ್ರಂಥಕರ್ತರು ಈ ಗಣಿತವನ್ನು ಎರಡು ಪುಸ್ತಕಗಳಾಗಿ ವಿಂಗಡಿಸುವುದಕ್ಕೆ ಬದಲು ಮೊದಲನೆಯ ಪುಸ್ತಕದಲ್ಲಿಯೇ ಹೆಚ್ಚು ವಿಷಯಗಳನ್ನು ತೆಗೆದುಹಾಕಿ ಘನಫಲ ವಿಷಯಗಳನ್ನು ಆಯಾಯ ಅಧ್ಯಾಯದಲ್ಲಿಯೇ ತಿಳಿಸಿದ್ದರೆ ಪರೀಕ್ಷೆಗಳಿಗೋದುವ ವಿದ್ಯಾರ್ಥಿಗಳಿಗೆ ಒಂದೇ ಪುಸ್ತಕವಾಗಿ ಬಹಳ ಅನುಕೂಲವಿತ್ತು. ಪುನರಾವರ್ತಿಯಲ್ಲಿ ಈ ನ್ಯೂನತೆಯನ್ನು ಕ್ರಮಪಡಿಸುವರೆಂದು ಕೋರುವೆವು. ಗ್ರಂಥವು ಬಹಳ ಅಂದವಾಗಿ ಮುದ್ರಿತವಾಗಿದೆ, ಇದರಲ್ಲಡಕಿರುವ ವಿಷಯಗಳನ್ನು ನೋಡಿದರೆ ಇದರ ಮೌಲ್ಯವು ಬಹಳ ಅಲ್ಪವೆಂದು ತೋರುವುದು. ಈ ಐಚ್ಛಿಕ ಭಾಗವನ್ನು ತೆಗೆದುಕೊಂಡಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ಈ ಪುಸ್ತಕ ಒಂದನ್ನು ಹೊಂದಿರಬೇಕೆಂದು ಅಪೇಕ್ಷಿಸುವೆವು.

"ಮೂರನೇ ತರಗತಿಯ ಗಣಿತ." ‡

ಕನ್ನಡದಲ್ಲಿ ಗಣಿತ ಪುಸ್ತಕಗಳು ಹೇರಳವಾಗಿದ್ದರೂ ವಿದ್ಯಾಭ್ಯಾಸದ ಇಲಾಖೆಯ ಪಾಠದ ಪಟ್ಟಿಗನುಸಾರವಾಗಿ ಆಯಾ ತರಗತಿಯ ಉದ್ದೇಶಕ್ಕೆ ಅನುಗುಣವಾದ ಗಣಿತ ಪುಸ್ತಕಗಳು ಸಿಕ್ಕುವುದು ಬಹು ವಿರಳ. ಕೆಲವು, ತರಗತಿಗಳಿಗೆ ತಕ್ಕವುಗಳಲ್ಲದ ಹೆಚ್ಚು ವಿಷಯಗಳನ್ನೂ ಮತ್ತೆ ಕೆಲವು, ಸ್ವಲ್ಪವೇ ವಿಷಯಗಳನ್ನೂ ಒಳಗೊಂಡಿವೆ. ಈ ಪಟ್ಟಿಗನುಸಾರವಾಗಿ ಆಂಗ್ಲೇಯ ಅಂಕಗಣಿತಗಳಂತೆ ಆಯಾ ತರಗತಿಗೆ ಬೇಕಾದ ಭಾಗಗಳನ್ನು ಸುಲಭವಾಗಿ ತಿಳಿಯುವ ಹಾಗೆ ಮೈಸೂರು ಮಹಾರಾಣಿ ಕಾಲೇಜ್ ಹೆ॥ ಮಾಸ್ಟರ್ ಮ॥ ರಾ॥ ಅಳ್ವಾರೈಯಂಗಾರ್, ಬಿ. ಎ ಯವರಿಂದ ಮೂರು ಪುಸ್ತಕಗಳು ವಿದ್ಯಾರ್ಥಿಗಳಿಗೋಸ್ಕರ ರಚಿಸಲ್ಪಟ್ಟಿವೆ. ಅವುಗಳಲ್ಲಿ ಮೇಲಿನ ಹೆಸರುಳ್ಳ ಗ್ರಂಥವೇ ಮೊದಲನೆಯದು. ಇದರಲ್ಲಿ ಎಂಟು ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯದಲ್ಲೂ ಲೆಕ್ಕ ಮಾಡುವ ವಿಧಾನವನ್ನು ವಿವರಿಸಿ, ಕೆಲವನ್ನು ಮಾಡಿ ತೋರಿಸಿಯೂ ಇರುವರು. ಪ್ರಾರಂಭದಲ್ಲಿ ರೂಪಾಂತರಕರಣವೇ ಮೊದಲುಗೊಂಡು, ವಿವಿಧಸಂಕಲನ, ವ್ಯವಕಲನ, ಗುಣಾಕಾರ, ಭಾಗಹಾರ, ಮಹತ್ತಮ ಲಘುತ್ತಮ ಸಾಧಾರಣ ಅಪವರ್ತನ, ಭಿನ್ನರಾಶಿ, ಮಾನಸಗಣಿತ, ಮಿಶ್ರೋದಾಹರಣೆಗಳು, ಪರೀಕ್ಷಾಪತ್ರಿಕೆಗಳು, ಕೋಷ್ಟಕಗಳು, ಇವುಗಳಿಂದ ಕೂಡಿದೆ. ಇಂಥಾ ಗ್ರಂಥಗಳಲ್ಲಿ ತಪ್ಪುಗಳಿಲ್ಲದೆ ಇರುವುದು ಅಪರೂಪವಾದ್ದರಿಂದ ಗ್ರಂಥಕರ್ತರು ಇದಕ್ಕೆ ಶುದ್ಧಾಶುದ್ಧ ಪತ್ರಿಕೆಯನ್ನು ಕೊಟ್ಟಿದ್ದರೆ ಚೆನ್ನಾಗಿತ್ತು.

"ಕನ್ನಡ ಸಂಗೀತ ವಸ್ತುಪಾಠ." †

ಈ ಪುಸ್ತಕವು ಗದಗ್ ತಾಲ್ಲೂಕು ಲಕ್ಕುಂಡಿ ಹೆಡ್ ಮಾಸ್ಟರ್ ಮ॥ ರಾ॥ ಜಗನ್ನಾಥ ಗೋಖಲೆಯವರಿಂದ ರಚಿಸಲ್ಪಟ್ಟದ್ದಾಗಿ ಇರುವುದು. ವಿಷಯ ಜ್ಞಾನವನ್ನಭಿವೃದ್ಧಿಪಡಿಸುವುದೇ ವಸ್ತುಪಾಠದ ಉದ್ದೇಶವು. ಪಾಠಶಾಲೆಗಳಲ್ಲಿ ಇಂಥಾ ಪಾಠಗಳನ್ನು ಬರೆಯಿಸುವ ಅಥವಾ ಕಂಠಪಾಠ ಮಾಡಿಸುವ ವಾಡಿಕೆಯುಂಟು. ವಚನರೂಪವಾದ ಪಾಠವು ಬಹು ಬೇಗನೆ ಮರೆಯಲ್ಪಡುವುದು; ಪದ್ಯರೂಪವಾದದ್ದು ಹಾಗಲ್ಲ. ಮತ್ತು ಕಲಿಯುವುದಕ್ಕೆ ಬೇಸರಿಕೆಯೂ ಇಲ್ಲ. ಈ ಆಶಯದಿಂದಲೇ ಗ್ರಂಥಕರ್ತರು ಬಾಲಕರಿಗೆ ಕೇವಲ ಪರಿಚಯವುಳ್ಳ ವಸ್ತುಗಳನ್ನು ಕುರಿತು ಸಂಗೀತ ರೂಪವಾಗಿ ಪಾಠವನ್ನು ಹೇಳಿರುವರು. ಇದರಲ್ಲಿರುವ ನೀತಿಯುಕ್ತವಾದ ಪಾಠಗಳು ಒಮ್ಮೆ ಬಾಲಕರ ಮನಸ್ಸಿಗೆ ಅಂಟಿದರೆ ಎಂದಿಗೂ ಮರೆಯಲ್ಪಡಲಾಗದು. ಗ್ರಂಥವು ಸುಲಭವಾದ ಹಳಗನ್ನಡ ಸರಣಿಯುಳ್ಳದ್ದಾಗಿರುವುದು.

¶ "ಅನುಭವಾನಂದ"—ಜಿ. ಟಿ. ಎ. ಮತ್ತು ಸ್ಟಾರ್ ಪ್ರೆಸ್ ಮೈಸೂರು, ಕ್ರಯ ೬ ಆಣೆ.

* "ಕ್ಷೇತ್ರಗಣಿತ: ೧, ೨ ನೇ ಭಾಗಗಳು"—ಜಿ. ಟಿ. ಎ ಪ್ರೆಸ್, ಮೈಸೂರು; ಕ್ರಯ ೧ ರೂ

‡ "ಮೂರನೇ ತರಗತಿಯ ಗಣಿತ"—ಜಿ. ಟಿ. ಎ. ಪ್ರೆಸ್, ಮೈಸೂರು, ಕ್ರಯ ೪ ಆಣೆ

† "ಕನ್ನಡ ಸಂಗೀತ ವಸ್ತುಪಾಠ"—ರಾಮಕೃಷ್ಣ ಪ್ರಕಾಶ ಪ್ರೆಸ್, ಬೆಳ್ಗಾವ, ಕ್ರಯ ೩ ಆಣೆ.

ಚಿಕ್ಕಮಗಳೂರು ಅಗ್ರಿಕಲ್‌ಚರಲ್ ಬ್ಯಾಂಕ್ (ಅನ್ ಲಿಮಿಟೆಡ್). ಮುಕ್ತಾಯದ ಪ್ರೊಸೀಡಿಂಗ್ಸ್.

ಜನರಲ್ ಮೀಟಿಂಗ್. ನಂ ೯ ತಾರೀಖು ೨೩—೩—೧೯೦೫ ಈ ದಿನ ೧೫ ಮೆಂಬರುಗಳು ಹಾಜರಿದ್ದರು; ಗೈರುಹಾಜರು ೮ ಮೆಂಬರುಗಳು. ಈ ದಿನ ಮೀಟಿಂಗ್ ಸೇರಲು ಕೊಟ್ಟಿದ್ದ ನೋಟೀಸು ಓದಲಾಯಿತು.

೧. ಬ್ಯಾಂಕು ಆಕ್ಟಿಂಗ್ ಪ್ರೆಸಿಡೆಂಟರು ಈ ಬ್ಯಾಂಕು ಶುರುವಾಗಾಯಿತು ಈ ವರೆಗಿನ ಜಮಾಖರ್ಚು ವಿಷಯದಲ್ಲಿ ಸಂಕ್ಷೇಪವಾಗಿ ಅಪ್ಪಣೆಕೊಡಿಸಿದರಲ್ಲದೆ, ಬ್ಯಾಂಕು ವೈಂಡಪ್ಪು ಮಾಡುವ ವಿಷಯದಲ್ಲಿ ಗೌರ್ನಮೆಂಟಿನಿಂದ ಕಳುಹಿದ ೫—೧—೦೫ ನೇ ಇಂಗ್ಲೀಷು ಪ್ರೊಸೀಡಿಂಗ್ಸ್ ಓದಿ, ಅದರ ಅರ್ಥವನ್ನು ಕನ್ನಡದಲ್ಲಿ ಅಪ್ಪಣೆ ಕೊಡಿಸಿದರು.

೨. ಬ್ಯಾಂಕು ಮೆಂಬರು ಮ॥ ಸಿ. ಶ್ರೀನಿವಾಸರಾಯರು ಹೇಳಿದ್ದೇನೆಂದರೆ—ಈ ತಾಲ್ಲೂಕಿನಲ್ಲಿ ದೊಡ್ಡ ವಂಶಸ್ಥರಾಗಿಯೂ ಮಹಾಜನರಾಗಿಯೂ ಇರತಕ್ಕವರುಗಳು ಸೇರಿ, ತಮಗೂ ಮತ್ತು ತಮ್ಮಂಥ ಇತರರಿಗೂ ಅನುಕೂಲವಾಗುವದಕ್ಕೋಸ್ಕರ ಈ ಬ್ಯಾಂಕನ್ನು ಸ್ಥಾಪನೆಮಾಡಿದರು. ಆಗ್ಯ ಸರ್ಕಾರದವರ ಮತ್ತು ಸ್ಥಳೀಯ ದೊಡ್ಡ ಮನುಷ್ಯರಾದ ಪಂಚಾಯಿತರಿಂದ ಮೆಂಬರುಗಳ ಸ್ಥಿರಾಸ್ತಿಯ ಬೆಲೆಕಟ್ಟಿದ್ದರಲ್ಲಿ ಬಾಗಮನೆ ಲಿಂಗೇಗೌಡರು ಮತ್ತು ನಂಜೇಗೌಡರುಗಳ ಆಸ್ತಿ ಹೊರತು ಬಾಕಿ ಮೆಂಬರುಗಳ ಬಾಬತು ಕಾಫಿ, ತರಿ, ಖುಷ್ಕಿ, ಅಡಿಕೆ ಬಾಗಾಯ್ತು ಒಟ್ಟು ೩,೯೮೦ ಎಕರೆಗಳಿಗೆ ಕ್ರಯ ೧೦,೩೬,೯೫೦ ರೂಪಾಯಿಗಳಾದವು. ಇದಕ್ಕೆ ಬಾಗಮನೆ ಮೆಂಬರುಗಳ ಆಸ್ತಿ ಅಂದಾಜು ಸೇರಿಸಿದರೆ ೧೯ ಲಕ್ಷ ರೂಪಾಯಿಗಳಾಗುತ್ತೆ. ಬಾಗಮನೆ ಲಿಂಗೇಗೌಡರು ಮತ್ತು ನಂಜೇಗೌಡರು, ಇವರಿಬ್ಬರ ಆಸ್ತಿಯ ಮೇಲೇನೇ ಬನ್ನಿ ಕಂಪನಿಯವರು ೨॥ ಲಕ್ಷ ರೂಪಾಯಿಗಳ ಮೇಲೆ ಸಾಲಕೊಟ್ಟಿರುತ್ತಾರಲ್ಲದೆ, ಪ್ರತಿ ತಿಂಗಳಲ್ಲಿಯೂ ತೋಟಗಳ ಕಾಮಗಾರಿಗೆ ಐದುಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚುಮಾಡುತ್ತಾ ಇರುತ್ತಾರಾಗಿ ಮಾತು ಬಹಳ ಜನರಿಂದ ತಿಳಿಯಬಂದಿದೆ. ಇದೆಲ್ಲಾ ಯೋಚಿಸಿದರೆ ನಾವುಗಳು, ಬ್ಯಾಂಕಿಗೆ ಅಡವಾಗಿರುವ ತರಿ, ಖುಷ್ಕಿ, ಬಾಗಾಯ್ತು ಮತ್ತು ಕಾಫಿ ಜಮೀನುಗಳಿಗೆ ಕಟ್ಟಿರುವ ಅಂದಾಜು ಯಾವ ಕಾಲದಲ್ಲಿಯೂ ಹೆಚ್ಚಾದ್ದಲ್ಲವಾಗಿ [illegible] ವಿಷಯ ತಿಳಿದವರು ಊಹಿಸತಕ್ಕದ್ದಾಗಿದೆ. ಈ ಆಸ್ತಿಗಳಲ್ಲಿ ೪ ಜನ ಮೆಂಬರುಗಳ ಆಸ್ತಿ ಹೊರತು ಬಾಕಿಯವರದು ಇತರರಿಗೆ ಅಡವು ವಗೈರೆ ಆಗಿರಲಿಲ್ಲ. ಗೌರ್ನಮೆಂಟಿನಿಂದ ಮುಂಜೂರಾದ ಮೂಲಧನ ೨ ಲಕ್ಷ ರೂಪಾಯಿಗಳ ಪೈಕಿ ೧,೮೧,೫೦೦ ರೂಪಾಯಿಗಳನ್ನು ಆಗ್ಯ ಇದ್ದ ಬ್ಯಾಂಕುಗಳ ಇನ್‌ಸ್ಪೆಕ್ಟರವರ ಅಪ್ಪಣೆ ಮೇರೆ ಮೆಂಬರುಗಳ ೬೦ ದಿನ ಸಾಲಕ್ಕೆ ಕೊಡಲ್ಪಟ್ಟಿತು. ಬಾಕಿ ರೂಪಾಯಿಗಳಿಂದ ಬ್ಯಾಂಕಿಗೆ ಸೇರಿದ ಮ॥ ಬಿ ಲಿಂಗೇಗೌಡರು ಮತ್ತು ನಂಜೇಗೌಡರಿಗೆ ಸಾಲಕೊಡುವದಕ್ಕೂ ಮತ್ತು ಇತರ ಮೆಂಬರುಗಳ ಸಾಲಾಬಾದು ಕಾಮಗಾರಿಗೆ ಚಳಕೊಡುವದಕ್ಕೂ ಆಗದೆಹೋದ್ದರಿಂದ ಪುನಃ ೨ ಲಕ್ಷ ರೂಪಾಯಿಗಳನ್ನು ಮೂಲಧನವಾಗಿ ದಯಪಾಲಿಸಬೇಕೆಂದು ಬ್ಯಾಂಕು ಪ್ರಾರಂಭವಾದ ೧೫ ದಿನಗಳ ತರುವಾಯ ತಾರೀಖು ೨೧—೫—೧೮೯೩ ರಲ್ಲಿ ಗೌರ್ನಮೆಂಟಿನವರನ್ನು ಪ್ರಾರ್ಥಿಸಿದ್ದರ ಮೇಲೆ ತಾರೀಖು ೩೦—೬—೧೮೯೮ ರಲ್ಲಿ ಬಂದ ಪ್ರೊಸೀಡಿಂಗ್ಸ್ ಪ್ರಕಾರ ಒಂದು ಲಕ್ಷ ರೂಪಾಯಿ ಮಾತ್ರ ದಯಪಾಲಿಸಿದರು. ಆದರೆ ಆಗ್ಯ ಇದ್ದ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಬ್ಯಾಂಕು ಮೆಂಬರುಗಳಲ್ಲಿ ಬಾಗಮನೆಯವರ ಆಸ್ತಿ ಹೊರತು, ಬಾಕಿ ಮೆಂಬರುಗಳ ಸ್ಥಿರಾಸ್ತಿಗಳನ್ನು ಪುನಃ ಅಂದಾಜು ಮಾಡಿ, ೭ ಲಕ್ಷ ರೂಪಾಯಿಗಳ ಬೆಲೆಕಟ್ಟಿ, ಕಾರಣಾಂತರಗಳಿಂದ ಮುಂಜೂರಾದ ಮೊಬಲಗನ್ನು ಬ್ಯಾಂಕಿಗೆ ದಯಪಾಲಿಸಲಿಲ್ಲ.

ಈ ಬ್ಯಾಂಕಿನಲ್ಲಿ ಸಾಲತೆಗೆದುಕೊಂಡ ಮೆಂಬರುಗಳು ಮರು ಅವರ ಸಾಲವನ್ನು ವಾಪಸು ಪಾವತಿಮಾಡಲು ಕ್ಲುಪ್ತಮಾಡಿಕೊಂಡ ಕಾಲದೊಳಗೆ ಹಣಗಾರರಾದ ಯಾರಾದರೂ ಒಬ್ಬ ಮೆಂಬರು ತನ್ನ ಸಾಲವನ್ನು ತೀರಿಸಿ, ಬಾಕಿಯವರಿಗೂ ಆ ವಾಯಿದೆ ಒಳಗೆ ಹಣ ತೀರಿಸಬೇಕೆಂತಲೂ ಇಲ್ಲವಾದರೆ ಹಣಕೊಟ್ಟ ಮೆಂಬರಿನ ಜವಾಬ್ದಾರಿಯು ಇತರರ ಸಾಲಕ್ಕೆ ಇಲ್ಲವೆಂಬದಾಗಿಯೂ ನೋಟೀಸು ಕೊಟ್ಟಲ್ಲಿ, ಅಂಥಾ ಮೆಂಬರ ಜಾಯಿಂಟ್ ಲೈಬಿಲಿಟಿಯು ತೀರಿಹೋಗುವದೆಂಬುದು ಸ್ವತಸ್ಸಿದ್ಧವಾಗಿರುತ್ತಾ, ಕೆಲವು ಆಫೀಸರುಗಳು ಮತ್ತು ಖುಷ್‌ಬಾಷ್ ಆದರೂ ಸರ್ಕಾರದಿಂದ ಬ್ಯಾಂಕಿನವರು ಪಡೆದಿರುವ ಮೂಲಧನ ಪೂರ್ತಿ ಪಾವತಿ ಆಗದೆ, ಒಬ್ಬ ಮೆಂಬರಿನ ಹಣಮಾತ್ರ ಪಾವತಿ ಆಗಿ, ಹಾಗೆ ಬಾಕಿ ಮೆಂಬರಿಂದಲೂ ಹಣ ಪಾವತಿ ಆಗಬೇಕು; ಇಲ್ಲವಾದಲ್ಲಿ ಇತರರ ಸಾಲಕ್ಕೆ ತನ್ನ ಜವಾಬ್ದಾರಿ ಇಲ್ಲ ಎಂದು ನೋಟೀಸುಕೊಟ್ಟಿದ್ದರಿಂದ ವಾಪಸು ಹಣಾ ಕೊಟ್ಟ ಮೆಂಬರ ಜಾಯಿಂಟ್ ಲೈಬಿಲಿಟಿಯು ತೀರುವದಿಲ್ಲವೆಂಬುದಾಗಿ ವಗೈರೆ ತಪ್ಪುತಿಳುವಳಿಕೆ ಹೇಳಿದ್ದರಿಂದ ಈ ಬ್ಯಾಂಕಿನಲ್ಲಿ ಹಣಗಾರರಾಗಿ ತಮ್ಮ ಸಾಲವನ್ನು ವಾಯಿದೆ ಒಳಗೆ ತೀರಿಸಲು ಇಷ್ಟವಿದ್ದವರೂ ಕೂಡ ಮೊಬಲಗು ಪಾವತಿಮಾಡಲಿಲ್ಲ.

ಮೇಲ್ಕಂಡ ವಿಷಯಗಳಿಂದಲೂ ಕಾಲಸ್ಥಿತಿಯಿಂದಲೂ ಈ ಬ್ಯಾಂಕು ಅಭಿವೃದ್ಧಿಗೆ ಬರದೆ ಇರುವದಕ್ಕೆ ಮುಖ್ಯ ಕಾರಣವಾಗಿರುತ್ತೆ. ಈ ಕಾರಣದಿಂದಲೂ ಮತ್ತು ಸಕಾಲದಲ್ಲಿ ಮಳೆಬಾರದೆ, ಆದ ಕಾಫಿ ಫಸಲಿಗೂ ಸರಿಯಾದ ಖರೀದಿ ಸಿಕ್ಕದೆ ಮೆಂಬರುಗಳಿಗೆ ತೊಂದರೆ ಜಾಸ್ತಿ ಆಯಿತು. ಮೆಂಬರುಗಳ ವಿಶಿಷ್ಟ ಆಸ್ತಿಯೂ ಬ್ಯಾಂಕಿಗೆ ಅಡವಾಗಿದ್ದರೂ ಅವುಗಳ ಸಾಲಾಬಾದ್ ಕಾಮಗಾರಿ ವಗೈರೆಗೆ ಬ್ಯಾಂಕಿನಿಂದ ಮೊಬಲಗು ದೊರೆಯದೆ, ಈ ಬ್ಯಾಂಕಿಗೆ ಈ ಆಸ್ತಿಗಳು ಅಡವಾಗಿರುತ್ತೆಂಬ ಕಾರಣದಿಂದ ಇತರ ಸಾಹುಕಾರರುಗಳಲ್ಲಿಯೂ ಹಣ ದೊರೆಯದೆ, ಆಸ್ತಿಗಳು ಕಾಮಗಾರಿ ಇಲ್ಲದೆ ಆರೂಪಕ್ಕೆ ಕಾರಣವಾಯಿತು. ಹೀಗಿರುತ್ತಾ ಮೆಂಬರುಗಳು ಸರಿಯಾಗಿ ಕೆಲಸ ನಡೆಸದೆ, ಆಸ್ತಿಗಳು ಆರೂಪಕ್ಕೆ ಬಂತೆಂದು ಹೇಳುವದು ಹ್ಯಾಗೆಂಬುದನ್ನು ಯೋಚಿಸತಕ್ಕದ್ದಾಗಿದೆ.

ಕೊನೆಗೆ ಗೌರ್ನಮೆಂಟಿನವರು ಈ ತೋಟಗಳ ಖರ್ಚಿಗೋಸ್ಕರ ೧೯೦೩ ನೇ ಏಪ್ರಿಲ್ ಆಗಾಯಿತು ೬೦,೦೦೦ ರೂಪಾಯಿ ದಯಪಾಲಿಸಿದರು. ಈ ಪೈಕಿ ಕೆಲವು ಹಣಗಾರರಾದ ಮೆಂಬರು, ಬ್ಯಾಂಕಿನಿಂದ ಮೊಬಲಗು ಪಡೆಯದೆ, ಬ್ಯಾಂಕನ್ನೇ ವೈಂಡಪ್ಪು ಮಾಡಿ, ಪ್ರತಿ ಒಬ್ಬ ಮೆಂಬರ ಸಾಲಕ್ಕೆ ಅವರವರನ್ನೇ ಜವಾಬ್ದಾರರನ್ನಾಗಿ ಮಾಡಿಕೊಡಬೇಕೆಂತ ಅರ್ಜಿ ಕೊಟ್ಟಿದ್ದರ ಮೇಲೆ ಗೌರ್ನಮೆಂಟಿನವರು ಈ ಬ್ಯಾಂಕಿನ ೪ ಜನ ಮೆಂಬರುಗಳ ತೋಟವನ್ನು ಹರಾಜುಹಾಕಿ, ಮೊಬಲಗು ಬರಮಾಡಿಕೊಳ್ಳಬೇಕೆಂದೂ ಬಾಕಿಯವರಿಗೆ ೨೦ ವರ್ಷಕ್ಕೆ ವಿಸ್ತರದ ಒಂದು ವಾಯಿದೆ ಕೊಟ್ಟು, ಕಂತು ಮೂಲಕ ಹಣ ಬರಮಾಡಿಕೊಳ್ಳಬೇಕಾಗಿ ವಗೈರೆ ಅಪ್ಪಣೆ ಕೊಡಿಸಿರುತ್ತಾರೆ. ಇದರ ಪ್ರಕಾರ ಮ॥ ಗಣೇಶರಾಯರು ರಾಜಾರಾಯರು, ಶಿವಾಜಿ ರಾಮಚಂದ್ರರಾವ್, ಜಗನ್ನಾಥರಾವ್, ಇವರುಗಳ ಕಾಫಿ ಎಸ್ಟೇಟನ್ನು ಹರಾಜುಹಾಕಿದರೆ ಇವರಿಂದ ಬರಬೇಕಾಗಿರುವ ಪೂರಾ ಮೊಬಲಗು ಸರ್ಕಾರಕ್ಕೆ ಬರುವದಿಲ್ಲ. ಮೆಂಬರುಗಳಿಗೇನೋ ಲುಕ್ಸಾನ್ ಆಗುತ್ತೆ.

ಹಾಲಿ ಬ್ಯಾಂಕಿನವರು ಶೇಖರ ಮಾಡಿರುವ ರಿಜರ್ವ್ ಫಂಡು ಹಣಾ ರೂ ೧೪,೨೯೯—೭—೯ ಗೌರ್ನಮೆಂಟ್ ಟ್ರೆಜರಿಯಲ್ಲಿರುತ್ತದೆ. ಮೆಂಬರುಗಳಿಂದ ವಸೂಲಾಗಬೇಕಾಗಿ ಬಾಕಿಯಲ್ಲಿರುವ ರಿಜರ್ವ್ ಫಂಡು ಸುಮಾರು ೧೬,೦೦೦ ರೂಪಾಯಿಗಳಾಗುತ್ತೆ. ಈ ಪೈಕಿ ಮೇಲ್ಕಂಡ ೪ ಜನ ಮೆಂಬರುಗಳಿಂದ ಬರತಕ್ಕ ರಿಜರ್ವ್ ಫಂಡು ಸುಮಾರು ೧,೫೦೦ ರೂಪಾಯಿ ಜಾತಾ ಬಾಕಿ ೧೪॥ ಸಾವಿರ ರೂಪಾಯಿ ಸೇರಿ ಸುಮಾರು ೨೯,೦೦೦ ರೂಪಾಯಿಗಳಾಗುತ್ತೆ. ಈ ೪ ಜನ ಮೆಂಬರುಗಳಿಂದ ಸುಮಾರು ೨೮,೦೦೦ ರೂಪಾಯಿ ಅಸಲ್ ಬಡ್ಡಿ ಸೇರಿ ಬರಬೇಕಾಗಿರುತ್ತೆ. ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ೫೬ನೇ ಸೆಕ್ಷನ್ ಮೇರೆ ಮೆಂಬರುಗಳಿಂದ ಒಂದು ವೇಳೆ ಹಣಾ ಬಾರದೆ ಲುಕ್ಸಾನ್ ಆಗುವ ಭಾಗದಲ್ಲಿ ರಿಜರ್ವ್ ಫಂಡು ಹಣವನ್ನು ಅಂಥಾ ನಷ್ಟಕ್ಕೆ ಭರ್ತಿಹಾಕಿಕೊಳ್ಳಬೇಕಾಗಿ ಇರುತ್ತೆ. ಆದ್ದರಿಂದ ಗೌರ್ನಮೆಂಟಿನವರು ಮೇಲ್ಕಂಡ ೪ ಜನರ ತೋಟವನ್ನು ಈಗಲೇ ಹರಾಜುಹಾಕದೆ, ಇವರಿಂದ ಬರುವ ಸಾಲಕ್ಕಾಗಿ ಮೇಲ್ಕಂಡ ರಿಜರ್ವ್ ಫಂಡು ಹಣವನ್ನು ಅಡವಾಗಿ ಇಟ್ಟುಕೊಂಡು, ಇತರ ಮೆಂಬರುಗಳಿಗೆ ಅವಧಿ ಕೊಟ್ಟಂತೆ ಈ ೪ ಜನರಿಗೂ ದಯಮಾಡಿ, ಸಾಲಾ ತೀರಿಸಲು ಅವಧಿ ಕೊಡಬೇಕೆಂತ ಗೌರ್ನಮೆಂಟಿನವರನ್ನು ಪ್ರಾರ್ಥಿಸಬೇಕಾಗಿಯೂ ಮತ್ತು ಇವರುಗಳ ಸಾಲ ತೀರಿದ ನಂತರ ಮೇಲ್ಕಂಡ ರಿಜರ್ವ್ ಫಂಡ್ ಹಣ ಗೌರ್ನಮೆಂಟಿನವರಿಗೆ ಯುಕ್ತ ತೋರಿದ ಧರ್ಮ ಖರ್ಚಿಗೆ ಉಪಯೋಗಿಸಬೇಕಾಗಿಯೂ ಬೇಡಿಕೊಳ್ಳಬೇಕೆಂತ ಮ॥ ಶ್ರೀನಿವಾಸರಾಯರು ಸೂಚಿಸಿದ್ದಕ್ಕೆ ಮ॥ ಷೇಕಲ್ಲಿ ಸಾಹೇಬರು ಅನುಮೋದಿಸಿದರು. ಬಾಕಿ ಎಲ್ಲರೂ ಒಪ್ಪಿದರು.

೩. ಹಾಲೀ ಬ್ಯಾಂಕ್ ಆಫೀಸಿನಲ್ಲಿರತಕ್ಕ ಕುರ್ಚಿ ಮೇಜಾ ವಗೈರೆ ಸಾಮಾನುಗಳನ್ನು ಚಿಕ್ಕಮಗಳೂರು ಕ್ಲಬ್ಬಿಗೆ ಉಚಿತವಾಗಿ ಕೊಟ್ಟುಬಿಡಬೇಕೆಂತ ಮ॥ ಚಂದ್ರೇಗೌಡರು ಸೂಚಿಸಿದ್ದಕ್ಕೆ ಮ॥ ಷೇಕಲ್ಲಿ ಸಾಹೇಬರೂ ವೀರಣ್ಣಗೌಡರೂ ಅನುಮೋದಿಸಿದರು. ಬಾಕಿ ಎಲ್ಲರೂ ಒಪ್ಪಿದರು.

೪. ಮ॥ ಸಿ. ವಿ. ಬಸವೇಗೌಡರು ತಮ್ಮ ಬಾಬತು ಅತ್ತಿಗಿರಿ ಕರಕನಹಳ್ಳಿ ಕಾಫಿ ಎಸ್ಟೇಟುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನೂ ಈಗಿರುವ ಬ್ಯಾಂಕು ಮ್ಯಾನೇಜಮೆಂಟಿನಿಂದ ತಮಗೆ ವಾಪಸು ಕೊಡಬೇಕಾಗಿ ವಗೈರೆ ಬರೆದ ತಾ॥ ೧೬—೩—೦೫ ನೇ ರಿಜಿಸ್ಟರು ಕಾಗದ ಓದಲಾಯಿತು. ಸದರೀ ತೋಟಗಳನ್ನು ಬ್ಯಾಂಕಿನವರು, ಮೆಂಬರು ಮ॥ ಕಳಲೂರು ಚಿಕ್ಕಬಸಪ್ಪ ಶೆಟ್ಟರ ಛಾರ್ಜಿನಿಂದ ವಾಪಸು ತೆಗೆದುಕೊಂಡು ಮ॥ ಬಸವೇಗೌಡರಿಗೆ ಕೊಡಿಸಬೇಕೆಂತ ಮ॥ ಚಂದ್ರೇಗೌಡರು ಸೂಚಿಸಿದ್ದಕ್ಕೆ ಮ॥ ರಂಗಣ್ಣನವರು ಅನುಮೋದಿಸಿದರು. ಬಾಕಿ ಎಲ್ಲರೂ ಒಪ್ಪಿದರು.

೫. ಬ್ಯಾಂಕು ವೈಂಡಪ್ಪು ಆದನಂತರ ಬ್ಯಾಂಕಿನ ಎಲ್ಲಾ ಲೆಕ್ಕಪತ್ರಗಳನ್ನೂ ಪ್ರೆಸಿಡೆಂಟ್ ಮ॥ ವಾಸುದೇವರಾಯರು, ಏಜಂಟ್ ಮ॥ ಅಬ್ದುಲ್ ಖಾದರ್ ಸಾಹೇಬರವರು ಮತ್ತು ರಂಗಣ್ಣನವರು, ಕೆ. ಚನ್ನಬಸಪ್ಪ ಶೆಟ್ಟರು ಪ್ರಮಾಣಿಸಿ, ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿ ಕೊಡಬೇಕಾಗಿಯೂ ಇದೆಲ್ಲಾ ತೀರುವ ವರೆಗೆ ಬ್ಯಾಂಕು ಎಸ್ಟಾಬ್ಲಿಷ್‌ಮೆಂಟ್ ಈಗಿರುವಂತೆ ಇರಬೇಕಾಗಿಯೂ ಮ॥ ಶ್ರೀನಿವಾಸರಾಯರು ಸೂಚಿಸಿದ್ದಕ್ಕೆ ಎಲ್ಲರೂ ಒಪ್ಪಿದರು.

೬. ಬ್ಯಾಂಕ್ ರೈಟರು ಸಿ. ಬಿ. ನರಸಿಂಗರಾಯರು ಈ ಬ್ಯಾಂಕಿನಲ್ಲಿ ೫—೬ ವರ್ಷಗಳಿಂದ ತೃಪ್ತಿಕರವಾಗಿ ಕೆಲಸ ಮಾಡಿ, ಇದನ್ನು ನಡಸಿಕೊಂಡು ಇದ್ದರು. ಹಾಲಿ ಬ್ಯಾಂಕು ಮೈಂದಕ್ಕೆ ಆಗೋದರಿಂದ ಇವರಿಗೆ ಏಕಾಏಕಿ ಕೆಲಸವಿಲ್ಲದೆಹೋಗುತ್ತೆ. ಆದ್ದರಿಂದ ಬ್ಯಾಂಕಿನವರು ಇದನ್ನೂ ಇವರ ಸರ್ವಿಸನ್ನೂ ಆಲೋಚಿಸಿ, ಇವರಿಗೆ ಒಂದು ವರ್ಷದ ಸಂಬಳ ೨೪೦ ರೂಪಾಯಿ ಆಫೀಸ್ ಸೆಟ್ಲ್‌ಮೆಂಟಗೋಸ್ಕರ ಬ್ಯಾಂಕು ಪ್ರೆಸಿಡೆಂಟರ ಹೆಸರಿನಲ್ಲಿ ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕು ಠೇವಾದಟ್ಟನಲ್ಲಿರುವ ರಿಜರ್ವ ಫಂಡಿನಿಂದ ಖರ್ಚು ಹಾಕಿ, ಬ್ಯಾಂಕು ರೈಟರಿಗೆ ಬೋನಸ್ಸಾಗಿ ಮೆಂಬರುಗಳು ದಯಮಾಡಿ ಕೊಡಬೇಕಾಗಿ ಮೆ॥ ಅನು...ರಾಯರು ಸೂಚಿಸಿದ್ದಕ್ಕೆ ಮೆ॥ ವಿ. ರಣ್ಣಾಗೌಡರು ಅನುಮೋದಿಸಿದರು. ಬಾಕಿ ಎಲ್ಲರೂ ಒಪ್ಪಿದರು.

೭. ಬಹು ದೊಡ್ಡ ಮನುಷ್ಯರಿಂದ ಈಗ್ಯೆ ೭ ವರ್ಷಗಳ ಕೆಳಗೆ ಸ್ಥಾಪಿತಲ್ಪಟ್ಟ ಈ ಬ್ಯಾಂಕನ್ನು, ಉದ್ದೇಶಿಸಿದ ಕಾರ್ಯವು ಸಫಲವಾಗುವದಕ್ಕೆ ಮುಂಚೆಯೇ, ಮೈಂದಕ್ಕೆ ಮಾಡುತ್ತೇವೆಂತ ಹೇಳುವ ಪತ್ರಿ ಕರ್ಮ ಭಾಗಕ್ಕೆ ಬಂದದ್ದಕ್ಕಾಗಿ ವ್ಯಸನದೊಡನೆ ಬ್ಯಾಂಕಿನ ವೈಸ್ ಪ್ರೆಸಿಡೆಂಟರು ಈ ದಿನದ ಲಾಗಾಯಿತು ಚಿಕ್ಕಮಗಳೂರು ಅಗ್ರಿಕಲ್ಚರಲ್ ಬ್ಯಾಂಕು ಮೈಂದಕ್ಕೆ ಮಾಡುತ್ತೇವೆಂತ ಅಪ್ಪಣೆ ಮಾಡಿಸಿದ್ದಕ್ಕೆ ಎಲ್ಲರೂ ಒಪ್ಪಿದರು.

ಸಿ. ವಾಸುದೇವರಾವ್,
ಆ. ಪ್ರೆಸಿಡೆಂಟ್.

ಜೀವನಪ್ರದಾಹಾರವು.

ಒಂದಾನೊಂದು ದಿನ ಯೇಸು ಸ್ವಾಮಿಯು ಒಂದು ಅರಣ್ಯದಲ್ಲಿ ಜನರಿಗೆ ಬೋಧಿಸುತ್ತಿದ್ದನು. ಆತನ ವಾಕ್ಯವನ್ನು ಕೇಳಬೇಕೆಂಬ ಆಸೆಯಿಂದ ಸುತ್ತ ಮುತ್ತಲೂ ಇದ್ದ ಪ್ರದೇಶಗಳಿಂದ ಜನರು ತಂಡತಂಡವಾಗಿ ಹೊರಟು ಬಂದು, ಒಂದು ದಿನವೆಲ್ಲಾ ಆ ಬೋಧನೆಯನ್ನು ಕೇಳುತ್ತಿದ್ದರು. ಹೀಗೆ ಸಾಯಂಕಾಲವಾಯಿತು, ಆತನ ಶಿಷ್ಯರು ಆತನ ಬಳಿಗೆ ಬಂದು—ಸ್ವಾಮಿ, ಇವರು ಬೆಳಗಿನ ಜೊತ್ತಿನಿಂದ ಊಟವಿಲ್ಲದೆ ಇದ್ದಾರೆ. ಸಾಯಂಕಾಲವಾಯಿತು. ಇದಾದರೋ ಅರಣ್ಯಸ್ಥಳವಾಗಿದೆ. ನಮ್ಮ ಊಟಕ್ಕೇ ಕೊಂಡಿಹೂಗಿದೆ. ಇವರಲ್ಲಿ ಅನೇಕರು ಬಹು ದೂರ ಸ್ಥಳಗಳಿಂದ ಬಂದಿದ್ದಾರೆ. ಇವರನ್ನು ಕಳುಹಿಸಿಬಿಟ್ಟರೆ ಉತ್ತಮವೆಂದು ಹೇಳಿದರು. ಆಗ ಯೇಸು ಸ್ವಾಮಿಯು ಶಿಷ್ಯರಿಗೆ—ನಾನು ಅವರನ್ನು ಕಳುಹಿಸಿಬಿಡಲಾರೆ, ನೀವೇ ಅವರಿಗೆ ಊಟಕ್ಕಿಡಬೇಕು ಎಂದು ಹೇಳಲಾಗಿ ಶಿಷ್ಯರು ಬೆರಗಾದರು. ಅವರು ಸ್ವಾಮಿಗೆ—ನಮ್ಮಲ್ಲಿ ಐದೇ ರೊಟ್ಟಿಗಳಿವೆ. ಇಲ್ಲಿರುವ ಜನರಾದರೋ ಹೆಂಗಸರು ಮಕ್ಕಳು ಬಿಟ್ಟು ಐದು ಸಾವಿರ ಮಂದಿಯಾಗಿದ್ದಾರೆ. ಇಷ್ಟು ಮಂದಿಗೆ ಊಟ ಕೊಡುವದಕ್ಕೆ ನಮ್ಮಿಂದಾದೀತೇ ? ಅಂದರು. ಬಳಿಕ ಯೇಸು ಸ್ವಾಮಿಯು ಆ ಜನಗಳನ್ನೆಲ್ಲಾ ಹುಲ್ಲಿನ ಮೇಲೆ ಕುಳ್ಳಿರಿಸಬೇಕೆಂದು ಶಿಷ್ಯರಿಗೆ ಆಜ್ಞಾಪಿಸಿ, ರೊಟ್ಟಿಗಳನ್ನು ಕೈಗೆ ತಕ್ಕೊಂಡು ದೇವರಿಗೆ ಸ್ತೋತ್ರ ಮಾಡಿ, ಮುರಿದು, ಶಿಷ್ಯರ ಕೈಯಲ್ಲಿ ಕೊಟ್ಟನು. ಅವರು ಅದನ್ನು ಜನರಿಗೆ ಹಂಚಿದರು. ಅವರು ತಮ್ಮ ಕೈಯಲ್ಲಿದ್ದ ರೊಟ್ಟಿಯನ್ನು ಹತ್ತಿಪ್ಪತ್ತು ಮಂದಿಗೆ ಕೊಟ್ಟರೂ ಕೈಯಲ್ಲಿ ರೊಟ್ಟಿ ಇದ್ದೇ ಇತ್ತು. ಈ ಪ್ರಕಾರ ಅವರು ಆ ದೊಡ್ಡ ಗುಂಪಿನಲ್ಲಿದ್ದ ಪ್ರತಿಯೊಬ್ಬರಿಗೂ ಹಂಚಿದರು. ತರುವಾಯ ಮಿಕ್ಕ ತುಂಡುಗಳನ್ನು ಸೇರಿಸಿದಾಗ ದೊಡ್ಡ ದೊಡ್ಡ ಹನ್ನೆರಡು ಪುಟ್ಟಿಗಳು ತುಂಬಿದವು.

ಇಂಥ ಅದ್ಭುತ ಕಾರ್ಯವನ್ನು ಸ್ವಾಮಿಯು ಮಾಡಲಾಗಿ ಜನರು ನಿರಂತರವೂ ಸ್ವಾಮಿಯನ್ನು ಬಿಡದೆ ಹತ್ತಿರದಲ್ಲೇ ಇರಬೇಕೆಂದು ಅಪೇಕ್ಷಿಸಿದ್ದು ಆಶ್ಚರ್ಯವಲ್ಲ. ಹೊಟ್ಟೆ ತುಂಬಾ ಅನ್ನವನ್ನು ಉಚಿತಾರ್ಥವಾಗಿ ಯಾರಾದರೂ ಕೊಡುವವರಿದ್ದರೆ ಜನರು ಅಂಥವನ ಶಿಷ್ಯರಾಗಿರುವದಕ್ಕೆ ಬಹಳ ಆಶಿಸುವರಷ್ಟೆ. ಸ್ವಾಮಿಯ ಕೈಯಿಂದ ತಿಂಡಿಯನ್ನು ತಿಂದು ಸವಿಗೊಂಡ ಈ ಜನರು ಆತನನ್ನು ತಮ್ಮ ರಾಜನನ್ನಾಗಿ ಮಾಡಬೇಕೆಂದು ಪ್ರಯತ್ನಿಸಿದರು. ಆದರೆ ಸ್ವಾಮಿಯು ಅವರ ಕೈಗೆ ತಪ್ಪಿಸಿಕೊಂಡು ಹೊರಟುಹೋದನು. ಮಾರಣೆಯ ದಿನ ಆತನು ಹತ್ತಿರದಲ್ಲಿದ್ದ ಒಂದು ಊರಿನಲ್ಲಿ ಬೋಧಿಸುತ್ತಿರಲಾಗಿ, ಆತನಿಂದ ಇನ್ನೂ ಏನಾದರೊಂದು ಪ್ರಯೋಜನವನ್ನು ಪಡೆಯಬೇಕೆಂಬ ಆಶೆಯಿಂದ ಪುನಃ ಜನರು ಆತನ ಬಳಿಗೆ ಬಂದರು. ಅವರನ್ನು ಸ್ವಾಮಿಯು ನೋಡಿ—ನಿಮಗೆ ಅನ್ನ ರೊಟ್ಟಿಗಳನ್ನು ಕೊಡುವುದಕ್ಕಾಗಿ ನಾನು ಈ ಲೋಕಕ್ಕೆ ಬಂದೆನೆಂದು ತಿಳಿದಿರೋ ? ಇದಕ್ಕಿಂತಲೂ ವಿಶೇಷವಾದ ವರವನ್ನು ಕೊಡುವದಕ್ಕೋಸ್ಕರವೇ ನಾನು ಬಂದಿರುವೆನು. ನೆನ್ನೆಯ ದಿನ ನಾನು ನಿಮಗೆ ತಿನ್ನಿಸಿದ ರೊಟ್ಟಿಯು ನಾನು ನಿಮಗೆ ಕೊಡಬಲ್ಲ ಬೇರೆ ಆಹಾರವನ್ನು ಸೂಚಿಸುತ್ತದೆ ಎಂದು ತಿಳಿಯಿರಿ. ಮನುಷ್ಯರಿಗೆ ಶರೀರದ ಹಸಿವೆಂಬುದು ಇರುವುದಲ್ಲದೆ ಆತ್ಮದ ಹಸಿವು ಸಹ ಉಂಟು. ಆ ಹಸಿವನ್ನು ಪರಿಹರಿಸುವದಕ್ಕಾಗಿಯೇ ನಾನು ಬಂದಿರುತ್ತೇನೆ. ನಾನು ಕೊಡುವ ಆಹಾರವು ಎಂದೆಂದಿಗೂ ನಾಶವಾಗಿ ಹೋಗುವದಿಲ್ಲ, ನಿತ್ಯಜೀವಕ್ಕೆ ಉಳಿಯುವಂಥಾದ್ದಾಗಿದೆ ಎಂದು ಹೇಳಿದನು.

ಹಾಗಾದರೆ ಸ್ವಾಮಿಯು ಸೂಚಿಸುವ ಈ ಆತ್ಮದ ಹಸಿವು ಯಾವದು ? ಆತನು ಒಂದು ಸಂದರ್ಭದಲ್ಲಿ—"ನೀತಿಗೆ ಹಸಿದು ಬಾಯಾರುವವರು ಧನ್ಯರು" ಎಂದು ಹೇಳಿದನು. ಆತ್ಮದ ಹಸಿವು ಏನೆಂದರೆ—ನೀತಿಯು ಬೇಕೆಂಬ ಕೊರತೆಯೇ. ನೀತಿವಂತರು ಯಾರು ? ಧರ್ಮಶಾಸ್ತ್ರವನ್ನು ಕೈಕೊಳ್ಳತಕ್ಕವನೇ ಧರ್ಮಶಾಸ್ತ್ರವನ್ನೆಲ್ಲಾ ತಪ್ಪದೆ ಕೈಕೊಳ್ಳತಕ್ಕ ಪುರುಷನು ಯಾರಾದರೂ ಇದ್ದಾರೆಯೋ ? ಇದ್ದರೆ ಅಂಥವನಿಗೆ ಈ ಆತ್ಮದ ಹಸಿವೆಯು ಇರಲಾರದು. ಯೇಸು ಸ್ವಾಮಿಯು ಜೀವಿಸಿದ ಕಾಲದಲ್ಲಿ ತಮ್ಮನ್ನು ನೀತಿವಂತರೆಂದು ಹೇಳಿಕೊಳ್ಳುತ್ತಿದ್ದ ಅನೇಕ ಜನರಿದ್ದರು. ಅವರು ತಮ್ಮ ಧರ್ಮಶಾಸ್ತ್ರದಲ್ಲಿ ಬರೆದಿರುವ ನೇಮನಿಷ್ಠೆಗಳನ್ನೆಲ್ಲಾ ಅತ್ಯಂತಾಸಕ್ತಿಯಿಂದ ನೆರವೇರಿಸುತ್ತಿದ್ದರು. ಆದಾಗ್ಯೂ ಅವರು ಬಡವರನ್ನು ಹಿಂಸಿಸುತ್ತಿದ್ದರು. "ಅನಾಥೆಯರಾದ ವಿಧವೆಯರ ಮನೆಗಳನ್ನು ತಿಂದುಹಾಕುತ್ತಿದ್ದರೆಂದು" ಅವರನ್ನು ಕುರಿತು ಬರೆದಿದೆ. ಅವರು ವಿಮಿತ್ಯ ಮಾತ್ರಕ್ಕೆ ದೀರ್ಘವಾದ ಪ್ರಾರ್ಥನೆಗಳನ್ನು ಮಾಡುತ್ತಿದ್ದರು. ಒಳ್ಳೇದು, ಶೀಲವಂತರಾದ ಇವರು ಇಂಥ ಅಕೃತ್ಯಗಳನ್ನು ಮಾಡುತ್ತಿದ್ದದ್ದಕ್ಕೆ ಕಾರಣವೇನು ? ಇಂಥ ಅಕೃತ್ಯಗಳನ್ನು ಮಾಡಲಾಗದೆಂದು ಪದಶಃ ತಮ್ಮ ಧರ್ಮಶಾಸ್ತ್ರದಲ್ಲಿ ಬರೆದಿರಲಿಲ್ಲವಾದುದರಿಂದಲ್ಲವೇ ? ಇವರನ್ನು ನೀತಿವಂತರೆಂದು ನಾವು ಹೇಳಲಾಗುವುದೋ ? ಕೂಡದು. ಯಾಕಂದರೆ ಅವರು ನೀತಿವಂತರಾಗಿದ್ದದ್ದೇಯಾದರೆ ಅವರ ಹೃದಯವು ಇಂಥ ಕಾರ್ಯಗಳನ್ನು ಮಾಡಗೊಡಿಸಲಾರದು. ನೀತಿವಂತನಾದವನು ದೇವರು ತನಗೆ ಬರೆಯಿಸಿಕೊಟ್ಟಿರುವ ಆಜ್ಞೆಗಳನ್ನು ಉಲ್ಲಂಘಿಸದೆ ನಡೆಯುವದಲ್ಲದೆ ತನ್ನೊಳಗೆ ಇರುವ ಮನಸ್ಸು ವಿಧಿಸುವ ಕಟ್ಟಳೆಗಳನ್ನೂ ಕೈಕೊಂಡು ನಡೆಯುವನು.

ಯೇಸು ಸ್ವಾಮಿಯು ಅಂಥ ನೀತಿವಂತನಾಗಿದ್ದನು. ಆತನು ದೇವರ ಕಟ್ಟಳೆಗಳಿಗೆ ಎಳ್ಳಷ್ಟಾದರೂ ವಿಚಾರದೆ ನಡೆಯುವವನಾಗಿದ್ದನು ಮತ್ತು ತನ್ನ ಅಂತರಾತ್ಮದಲ್ಲಿಯೂ ಗುಣದಲ್ಲಿಯೂ ತಪ್ಪಿಲ್ಲದೆ ನಡೆದುಕೊಂಡನು. ಆತನ ಕಾಲದಲ್ಲಿದ್ದ ಜನರಾದರೋ ಆತನನ್ನು ಅನುಸರಿಸಿ ನಡೆಯುವದನ್ನು ಬಿಟ್ಟು, ತಮ್ಮ ಸಹವಾಸಕ್ಕೆ ಆತನನ್ನು ದೂರಮಾಡಿ, ಬಹು ಕ್ರೂರವಾದ ರೀತಿಯಿಂದ ಆತನನ್ನು ಕೊಂದುಹಾಕಿದರು. ಅವರು ನೀತಿವಂತರಾಗಿದ್ದರೆ ಹೀಗೆ ಮಾಡುತ್ತಿರಲಿಲ್ಲ. ಆತನನ್ನು ಸಂತೋಷವಾಗಿ ಅಂಗೀಕರಿಸಿ ಆತನ ಶಿಷ್ಯರಾಗುತ್ತಿದ್ದರು. ಇದೇ ಪ್ರಕಾರ ಈಗಲೂ ಜನರು ಆತನನ್ನು ಬಹು ಕಷ್ಟಸಾಧ್ಯವಾದ ರೀತಿಯಿಂದ ಅನುಸರಿಸುವವರಾಗಿದ್ದಾರೆಯೇ ಹೊರತು, ಸಾಧಾರಣವಾಗಿ ಅನುಸರಿಸುವವರಾಗಿಲ್ಲ. ಇದಕ್ಕೇನು ಕಾರಣವೆಂದರೆ—ಆತನು ಮಹಾ ನೀತಿವಂತನು, ಅವರು ಅನೀತಿವಂತರು. ಅವರಲ್ಲಿ ಆತ್ಮಗಳು ನೀತಿಗೆ ಹಸಿದು ಬಾಯಾರುತ್ತಿದ್ದರೂ ಅವರಿಗೆ ತಿಳಿಯದೆ ಇದೆ. ಇವೀಗ ವಿಷಾದಕರವಾದ ಸಂಗತಿಯೇ ಸರಿ.

ನಮ್ಮಲ್ಲಿರುವ ಈ ಹಸಿವು ಪರಿಹಾರವಾಗುವದು ಹ್ಯಾಗೆ ? ಅನೀತಿವಂತರು ನೀತಿವಂತರಾಗುವದು ಹ್ಯಾಗೆ ? ನಾನು ಅನೀತಿವಂತನಾಗಿದ್ದರೆ ಅದರ ಫಲವನ್ನು ನಾನೇ ತಿನ್ನಬೇಕಲ್ಲವೇ ? ಈ ನಿರ್ಬಂಧದಿಂದ ನಾನೇ ಬಿಡುಗಡೆ ಮಾಡಿಕೊಳ್ಳುವದಂತೂ ಅಸಾಧ್ಯವೇ ! ಆದರೆ ಪಾಪವಿಲ್ಲದವನಾದ ಒಬ್ಬ ಪುರುಷನು ನನ್ನ ಪಾಪದ ಫಲವನ್ನು ತನ್ನ ಮೇಲೆ ತಕ್ಕೊಂಡು ತನ್ನ ಪುಣ್ಯವನ್ನು ನನಗೆ ಕೊಟ್ಟರೆ ನನಗೆ ಒಳ್ಳೇದಾಗುವದಲ್ಲವೇ? ಹೌದು, ಇಂಥ ಕಾರ್ಯವನ್ನು ಮಾಡಬಲ್ಲವನೊಬ್ಬನಿದ್ದಾನೆ. ಆತನೇ ಯೇಸು ಸ್ವಾಮಿ, ಆತನು ಮಾಡಿದ ಕಾರ್ಯವೇ ಇದು. ನಾನು ಅನೀತಿಯ ಕಾರ್ಯಗಳನ್ನು ಮಾಡಿದೆನು. ಆತನು ಶಿಲುಬೆಯ ಮೇಲೆ ಸತ್ತು ನನ್ನ ಅನೀತಿಯ ಫಲಗಳನ್ನು ತಾನು ತಿಂದನು. ಆತನು ಸಂಪೂರ್ಣ ನೀತಿವಂತನು, ಆತನಲ್ಲಿ ನಾನು ನಂಬಿಕೆ ಇಟ್ಟರೆ, ನನ್ನ ಪಾಪಕ್ಕೆ ಬದಲಾಗಿ ತನ್ನ ನೀತಿಯ ಫಲವನ್ನು ನನಗೆ ಕೊಡುತ್ತಾನೆ. ಆತನ ಮರಣದಿಂದ ಮನುಷ್ಯರು ಸಂರಕ್ಷಿತರಾಗುವದು ಹೀಗೆಯೇ. ಆದಕಾರಣ ಆತನು—ನಿಮ್ಮ ಆತ್ಮದ ಹಸಿವನ್ನು ತೃಪ್ತಿಪಡಿಸುವಂಥ ಆಹಾರವು ನನ್ನ ಶರೀರವೇ, ಇದನ್ನು ನಾನು ಲೋಕದವರ ಜೀವವನ್ನು ಉದ್ಧಾರಮಾಡುವದಕ್ಕಾಗಿಯೇ ಕೊಡುತ್ತೇನೆ ಎಂದು ಹೇಳುತ್ತಾನೆ.

ಆಹಾರವನ್ನು ಉಣ್ಣದೆ ಇಟ್ಟರೆ ಅದನ್ನು ಯಾರಾದರೂ ನಮಗೆ ಕೊಡುವದರಿಂದ ಪ್ರಯೋಜನವೇನು ? ಕ್ರಿಸ್ತನ ಮರಣದಿಂದ ನಾವು ಪ್ರಯೋಜನವನ್ನುಂಟುಮಾಡಿಕೊಳ್ಳದೆ ಹೋದರೆ ಆತನು ಸತ್ತದ್ದರಿಂದ ನಮಗೇನು ಫಲ ? ಯಾವಾತನು ಕ್ರಿಸ್ತನ ಬಳಿಗೆ ಬಂದು—ನಿನ್ನ ಮರಣದ ಪುಣ್ಯವನ್ನು ನನಗೆ ಕೊಡು ಎಂದೂ, ಪಾಪದ ಫಲವಾದ ಸಮಸ್ತ ನಷ್ಟವನ್ನೂ ಪರಿಹರಿಸೆಂದೂ ಕೇಳಿಕೊಳ್ಳುತ್ತಾನೋ ಅವನಿಗೆ ಸ್ವಾಮಿಯು ಜೀವವೆಂಬ ಆಹಾರವನ್ನು ಉಣ್ಣಿಸುತ್ತಾನೆ, ಅವನೇ ನೀತಿಯನ್ನೂ ನಿತ್ಯ ಜೀವವನ್ನೂ ಪಡೆದುಕೊಳ್ಳುತ್ತಾನೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ೧೯೦೪ನೆ ಸೆಪ್ಟಂಬರ್ ೩೦ ರಲ್ಲಿ ಹಿಂದುಸ್ಥಾನವು ವಿಲಾಯಿತಿಗೆ ರಾಜ್ಯಕ್ಕೆ ಕೊಡಬೇಕಾಗಿರುವ ಸಾಲದ ಮೊತ್ತವು ೧೩,೩೯,೬೫,೮೬೬ ಪೌಂಡು ಆಗಿತ್ತು.

❖❖❖❖

ಕಲ್ಕತ್ತಾ ಪಟ್ಟಣದ ಕೊಲುಟೋಲಾ ಎಂಬ ಮೊಹಲೆಯಲ್ಲಿ ಪ್ಲೇಗ್ ಉಪದ್ರವ ಹಾವಳಿಯೂ ಶಿಡುಬು ಏಳುವುದೂ ಬಹಳ ಜೆಟ್ಟಿದ್ದರಿಂದ ಪ್ರಜೆಗಳು ಗಾಬರಿಬಿದ್ದು ನಾನಾ ಕಡೆಗಳಿಗೆ ಚದರಿ ಹೋಗುತ್ತಿದ್ದಾರೆ.

❖❖❖❖

ಪಾಟಿಯಾಲಾ ಸಂಸ್ಥಾನದ ಬಾಲ್ಯ ವಯಸ್ಸಿನ ಮಹಾರಾಜರನ್ನು ಕಳೆದ ವಾರ ನಾಯಿ ಕಡಿದದ್ದರಿಂದ ಅವರನ್ನು ಚಿಕಿತ್ಸೆಗೋಸ್ಕರ ಕಸೌಲಿ ಆಸ್ಪತ್ರೆಗೆ ಕಳುಹಿಸಿದರು. ಅವರಿಗೆ ೧೫ ವರುಷ ವಯಸ್ಸಾಗಿರುವುದು.

❖❖❖❖

ಬ್ರಹ್ಮಸಮಾಜದ ಮುಖಂಡರೆಂದು ಪ್ರಸಿದ್ಧಿಗೆ ಬಂದಿರುವ ಮೆ॥ ಪ್ರತಾಪಚಂದ್ರ ಮೊಜುಂದಾರ್‌ರವರು ಕಾಯಿಲೆ ಬಿದ್ದುಕೊಂಡಿದ್ದಾರೆಂದೂ ಅವರಿಗೆ ಇಂಥಾ ರೋಗವೆಂದು ಹೇಳುವುದಕ್ಕಾಗುವುದಿಲ್ಲವೆಂದೂ ಪ್ರಕಟವಾಗಿದೆ. ಅವರು ಈಗ ಕಲ್ಕತ್ತೆಯಲ್ಲಿರುತ್ತಾರೆ.

❖❖❖❖

ಬೊಂಬಾಯಿ ಪಟ್ಟಣದ ಸಮುದ್ರ ತೀರದಲ್ಲಿ ಕೂಲಿ ಆಳುಗಳು ಹಡಗಿನಿಂದ ಸಾಮಾನು ಸಾಗಿಸುತ್ತಿರುವಲ್ಲಿ ಅವರು ಹೋಗಿ ಬರುವ ಮಣೆಯು ಮುರಿದು ಬಿದ್ದುಹೋಯಿತು. ಕೂಲಿ ಆಳುಗಳ ಪೈಕಿ ೧೫ ಜನರಿಗೆ ನಾನಾ ಗಾಯಗಳಾದವು. ಪ್ರಾಣನಷ್ಟವೇನೂ ಆಗಲಿಲ್ಲ.

❖❖❖❖

ಆಗ್ರಾ ಪಟ್ಟಣದ ಕೋಟೆಯೊಳಗೆ ಕೂಲಿಕಾರರು ಬಂಗಲೆಯನ್ನು ಕಟ್ಟುವುದಕ್ಕೆ ಅಡಿ ತೋಡುತ್ತಿರುವಾಗ ಭೂಮಿಯೊಳಗೆ ಬಹು ಪ್ರಶಸ್ತವಾದ ಗೋಲಿ ಕಲ್ಲು ಸಿಕ್ಕಿರುತ್ತದೆ. ಅದೆಲ್ಲಾ ಪೂರ್ವಕಾಲದ ಶಿಲ್ಪಿಗಳಿಂದ ಬಹು ಸುಂದರವಾಗಿ ಕೆತ್ತಿ ಸಿದ್ಧಪಡಿಸಿದವು. ಸರ್ಕಾರದವರು ಈ ಶಿಲೆಯನ್ನು ತೆಗಿಸಿ ಕಾಪಾಡಿಸುತ್ತಿದ್ದಾರೆ.

❖❖❖❖

ಬೊಂಬಾಯಿ ಅಧಿಪತ್ಯದ ಗವರ್ನರ್ ಲಾರ್ಡ್ ಲಾಮಿಂಗ್‌ಟನ್‌ರವರ ಪತ್ನೀರವರಿಗೆ ಶರೀರಸ್ಥಿತಿಯು ಕೆಟ್ಟಿರುವುದರಿಂದ ಅವರನ್ನು ಕೆಲವು ಕಾಲ ವಿಲಾಯಿತಿಯಲ್ಲಿದ್ದು ಬರುವಂತೆ ಡಾಕ್ಟರುಗಳು ತಿಳಿಸಿದರು. ಗವರ್ನರವರು ಆಕೆಯವರನ್ನು ಕಳೆದ ವಾರ ಪ್ರಯಾಣ ಮಾಡಿಸಿಕೊಂಡು, ಏಡನ್ ಪಟ್ಟಣದ ತನಕ ತಾವೂ ಹೋಗಿ ಸಾಗಕಳುಹಿಸಿ ವಾಪಸು ಬಂದರು.

❖❖❖❖

ಮುಜಫರ್‌ನಗರ್ ಡಿಸ್ಟ್ರಿಕ್ಟಿನಲ್ಲಿ ಇಪ್ಪತ್ತು ವರುಷಗಳಿಂದ ವಕೀಲನಾಗಿದ್ದು ಒಳ್ಳೇ ಹೆಸರು ಪಡೆದಿದ್ದ ಖಾಜಿ ಬಷಿರುದ್ದೀನ್ ಎಂಬಾತನು ಕಕ್ಷಿಗಾರರಿಂದ ಒಂದು ಸಾವಿರ ರೂಪಾಯಿ ತೆಗೆದುಕೊಂಡು ದುರುಪಯೋಗಪಡಿಸಿ ತಪ್ಪನ್ನು ತನ್ನ ಜವಾನನ ಮೇಲೆ ಹಾಕಿದ್ದರಿಂದ ಹೈಕೋರ್ಟಿನವರು ಅವನನ್ನು ಲಾಯರ್ ಕೆಲಸದಿಂದ ವಜಾ ಮಾಡಬೇಕೆಂದು ಹುಕುಂ ಕೊಟ್ಟರು.

❖❖❖❖

ವಿಲಾಯಿತಿ ರಾಜ್ಯದಲ್ಲಿ ಎಂಟು ಕೋಟಿ ಸವರಿನ್ ನಾಣ್ಯಗಳು ಚಲಾವಣೆಯಲ್ಲಿರುತ್ತವೆ. ಹಿಂದುಸ್ಥಾನದಲ್ಲಾದರೋ ೧೩೦ ಕೋಟಿ ರೂಪಾಯಿ ಚಲಾವಣೆಯಲ್ಲಿರುವವು. ಅದರಲ್ಲಿ ಕರೆನ್ಸಿ ನೋಟುಗಳು ಸೇರಿ ಇಲ್ಲ. ಇದರಿಂದ ಹಿಂದುಸ್ಥಾನದಲ್ಲೇ ವ್ಯಾಪಾರಾದಿಗಳು ವಿಶೇಷವಾಗಿ ನಡೆಯುತ್ತಿವೆ ಎಂತಲೂ ವಿಲಾಯಿತಿಯಲ್ಲಿ ಕೂಡ ಅಷ್ಟಿಲ್ಲವೆಂತಲೂ ಗೊತ್ತುಮಾಡಬಹುದಾಗಿದೆ

❖❖❖❖

ಹಿಂದಿನ ವಾರ ಬೊಂಬಾಯಿ ಪಟ್ಟಣದ ಗಿರ್ಗಾಮದಲ್ಲಿ ಮೆ॥ ತ್ರಿಭುವನದಾಸ್ ಮಂಗಳದಾಸ್ ನಾಥೂಭಾಯಿ ಎಂಬ ಸಾಹುಕಾರನು ತನ್ನ ಕುಮಾರನಿಗೆ ಬಹು ಅಟ್ಟಹಾಸದಿಂದ ವಿವಾಹ ಮಾಡಿದನು. ನೂರಾರು ಸಹಸ್ರ ದೊಡ್ಡಮನುಷ್ಯರೂ ಉದ್ಯೋಗಸ್ಥರೂ ಹೋಗಿದ್ದರು. ಗವರ್ನರಾದ ಲಾರ್ಡ್ ಲಾಮಿಂಗ್‌ಟನ್‌ರವರೂ, ಪತ್ನೀರವರೂ, ಜಡ್ಜಿಗಳು ಮುಂತಾದವರೆಲ್ಲಾ ಹಾಜರಾಗಿದ್ದರು.

❖❖❖❖

ರಂಗೂನ್ ಪಟ್ಟಣದಲ್ಲಿ ಬರ್ಮಾಯರು ಕಳೆದ ವಾರ ಒಂದು ದೊಡ್ಡ ದೇವರ ಗಂಟೆಯನ್ನು ಯರಕಹೊಯ್ದರು. ಅದು ೧,೨೫೦ ಮಣಗಳ ಭಾರವುಳ್ಳದ್ದಾಗಿರುವುದು. ಬರ್ಮಾದವರು ಇದಕ್ಕೋಸ್ಕರ ಆ ದಿನ ಉಪವಾಸವನ್ನು ಆಚರಿಸಿ, ಎಲ್ಲರೂ ತಮ್ಮ ಮೈಮೇಲಿದ್ದ ಒಂದೊಂದು ಆಭರಣವನ್ನು ತೆಗೆದು, ಯರಕಹೊಯ್ಯುವ ಮೂಸೆಗೆ ಹಾಕಿದರು. ಇದರಿಂದ ಅವರಿಗೆ ಇನ್ನೊಂದು ಜನ್ಮದಲ್ಲಿ ತುಂಬಾ ಪುಣ್ಯ ಉಂಟೆಂದು ನೆನಸುತ್ತಾರೆ.

❖❖❖❖

ವಿಶಾಖಪಟ್ಟಣಕ್ಕೆ ಸೇರಿದ ನಾಗವಲ್ಲಿಯಲ್ಲಿ ನದಿಯಿಂದ ಕಾಲುವೆಯನ್ನು ತೆಗೆದು, ಆ ಜಮೀನಿಗೆ ಹಾಯಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಗೊತ್ತು ಮಾಡಿ, ಇದಕ್ಕೆ ೧೧ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಅಲ್ಲಿ ಬರಿ ಜಮೀನು ಇಂದಾಯಿತು ನೀರಾವರಿ ಸಾಗುವಳಿಗೆ ಬರುವುದರಿಂದ ಕಂದಾಯ ೮ ರೂಪಾಯಿನಂತೆ ಬಡ್ಡಿಯು ಉತ್ಪತ್ತಿಯಾಗುವುದೆಂದು ಅಂದಾಜಾಗಿದೆ. ನಾಲೆಯು ೨೧ ಮೈಲಿ ದೂರ ಹೋಗುವುದು.

❖❖❖❖

ವೆಂಕಟಗಿರಿ ಸಂಸ್ಥಾನದ ಕುಮಾರರಾಜರವರ ಧರ್ಮಪತ್ನಿಯು ನೈಜಾಮರ ರಾಜ್ಯದಲ್ಲಿ ಇರುತ್ತಾಳೆ. ಆಕೆಯ ತಂದೆ ಜಾಟ್‌ಪ್ರೋಲೆ ಸಂಸ್ಥಾನದ ರಾಜರು. ಈ ಹುಡುಗಿ ೮ ನೆ ವಯಸ್ಸಿನಲ್ಲಿ ಶಿಕಾರಿ ಮಾಡುವುದಕ್ಕಾರಂಭಿಸಿ ಪ್ರಥಮದಲ್ಲಿ ಒಂದು ಹುಲಿಯನ್ನು ಕೊಂದಳು. ಈಗ ಆಕೆಗೆ ೧೭ ವರುಷವಾಗಿದೆ. ಆಕೆ ಇದುವರೆಗೆ ಒಂದು ಹುಲಿ, ೫೭ ಚಿರತೆ, ಅನೇಕ ಇತರ ಮೃಗಗಳನ್ನು ಕೊಂದಿರುತ್ತಾಳೆ ಎಂಬುದಾಗಿ ಕುಮಾರರಾಜರು ತಿಳಿಸುತ್ತಾರೆ.

❖❖❖❖

ಟಿಬೆಟ್ಟಿನ ವಿಷಯವಾಗಿ ಇಂಡಿಯಾ ಗವರ್ನಮೆಂಟಿನವರು ಮಾಡಿಕೊಂಡು ಬಂದಿರುವ ಕರಾರನ್ನು ನೋಡಿ, ವಿಷಯಗಳನ್ನು ಚರ್ಚಿಸಿ, ರುಜು ಹಾಕಿಕೊಡುವುದಕ್ಕೋಸ್ಕರ ಚೀನಾ ರಾಯಭಾರಿಯಾದ ಮೆ॥ ಟಾಂಗ್ ಎಂಬಾತನು ಬಂದು ಈಗ ಕಲ್ಕತ್ತೆಯಲ್ಲಿರುತ್ತಾನೆ. ಆತನು ಅಷ್ಟರಲ್ಲೇ ವೈಸ್‌ರಾಯರವರನ್ನು ಕಾಣುವುದಕ್ಕೋಸ್ಕರ ಸಿಮ್ಲಾ ಪಟ್ಟಣಕ್ಕೆ ಹೋಗುವನು. ಅಲ್ಲಿ ಆತನು ಕರಾರಿನ ಸಂಗತಿಗಳಿಗೆಲ್ಲಾ ರುಜು ಹಾಕಿಕೊಡುತ್ತಾನೆಂದು ತಿಳಿಯುವುದು.

❖❖❖❖

ಈ ರಾಷ್ಟ್ರದಲ್ಲಿ ಹಿಂದಿನ ವಾರ ೫೩,೮೯೧ ಜನರು ಪ್ಲೇಗು ಉಪದ್ರವದಿಂದ ಸತ್ತುಹೋದರು. ಈ ಸಂಖ್ಯೆಯು ಹಿಂದಿನ ಹ್ಯಾಗೆ

ವರೆ—ಸಂಯುಕ್ತ ಪ್ರಾಂತ್ಯಗಳು ೨೦,೧೬೦, ಪಂಜಾಬ್ ೧೯,೩೩೯, ಬಂಗಾಳ ೯,೬೩೦, ಬೊಂಬಾಯಿ ಡಿಸ್ಟ್ರಿಕ್ಟ್‌ಗಳು ೨,೫೪೯, ರಾಜಪುಟಾನಾ ೯೬೯, ಬೊಂಬಾಯಿಪಟ್ಟಣ ೬೦೯, ಕಲ್ಕತ್ತಾ ೫೩೦, ರಂಗೂನ್ ೯೫; ರಾಜಪುಟಾನಾಕ್ಕೆ ಸೇರಿದ ಭರತಪುರ ಸಂಸ್ಥಾನ, ಆಳ್ವಾರ್ ಸಂಸ್ಥಾನ, ಜಯಪುರಸಂಸ್ಥಾನ, ಅಜ್ಮೀರ—ಈ ಸ್ಥಳಗಳಲ್ಲಿ ಉಗ್ರವು ತಲೆಹಾಕಿದೆ.

❖❖❖❖

ಗೋಂಡಾ ಪಟ್ಟಣದಲ್ಲಿ ಕಳೆದ ಮಂಗಳವಾರ ಮಧ್ಯಾಹ್ನ ಬಹು ಅಪೂರ್ವವಾದ ಆನೆಕಲ್ಲಿನ ಮಳೆ ಸುರಿಯಿತು. ಸುಮಾರು ಅರ್ಧಗಂಟೆ ಹೊತ್ತು ಯಾರೂ ಬೀದಿಯಲ್ಲಿ ತಲೆಹಾಕುವುದಕ್ಕಾಗಲಿಲ್ಲ. ಆನೆಕಲ್ಲುಗಳು ದೊಡ್ಡದೊಡ್ಡ ಗೋಲಿ ಗಾತ್ರಕ್ಕೆ ಪಟ್ಟಣದ ರಸ್ತೆಗಳ ತುಂಬಾ ಬಹು ರಭಸವಾಗಿ ಸುರಿದುವು ಅನೇಕ ಮನೆಗಳ ಮೇಲಣ ಹೆಂಚುಗಳೆಲ್ಲಾ ಒಡೆದು ಹಾಳಾದುವು. ಅಲ್ಲಿನ ಜಡ್ಜಿಯವರ ಕೋರ್ಟಿನ ಕದಗಳೂ ಕಿಟಕಿ ಕನ್ನಡಿಗಳೂ ಒಡೆದು, ಗಲಭೆಯುಂಟಾಗಿ ಸ್ವಲ್ಪಹೊತ್ತು ಕೋರ್ಟಿನ ಕೆಲಸಗಳು ನಿಂತುಹೋದವು.

❖❖❖❖

ಮುರ್ಷಿದಾಬಾದಿನಲ್ಲಿರುವ ರಾಜಾ ಜೋಗೀಂದ್ರ ನಾರಾಯಣ ರಾಯ ಎಂಬ ಧರ್ಮಿಷ್ಟನು ಸರ್ಕಾರದವರ ವಶಕ್ಕೆ ಒಂದು ಲಕ್ಷ ರೂಪಾಯಿ ಕೊಟ್ಟು, ಅದರಿಂದ ಆ ಪ್ರಾಂತ್ಯ ಕೆಲವು ಊರುಗಳಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರು ಸಿಕ್ಕುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಂಡಿದ್ದನು. ಈಗ ಈ ಪುಣ್ಯಾತ್ಮನು ತಾನು ಮೊದಲು ಕೊಟ್ಟ ದ್ರವ್ಯ ಸಾಲದೆಂದು ತಿಳಿದು, ತನ್ನ ಪತ್ನಿಯ ಹೆಸರಿನ ಮೇಲೆ ಇನ್ನೂ ೫೦,೦೦೦ ರೂಪಾಯಿ ಕೊಟ್ಟಿರುತ್ತಾನೆ. ಈತನ ಉದಾರ ಬುದ್ಧಿಯನ್ನು ಸರ್ಕಾರದವರೂ ಪ್ರಜೆಗಳೂ ಹೊಗಳುತ್ತಿದ್ದಾರೆ

❖❖❖❖

ಧೋಲ್‌ಪುರ ಸಂಸ್ಥಾನದ ಅರಮನೆಗೆ ಸೇರಿದ ಕೆಲವು ಜವಾಹಿರಿ ನಗಗಳನ್ನು ಕಳೆದ ವಾರ ಹರಾಜು ಹಾಕಿದರು. ವಿಲಾಯಿತಿಯಿಂದ ಎಂ. ಜವಿ ಎಂಬೊಬ್ಬ ಪ್ರಖ್ಯಾತ ವ್ಯಾಪಾರಿಯು ಮೂರು ಲಕ್ಷ ರೂಪಾಯಿಗಿಂತಲೂ ಹೆಚ್ಚು ಜವಾಹಿರಿಗಳನ್ನು ಕೊಂಡುಕೊಂಡನು. ಆತನು ಲೇಟ್ ಮಹಾರಾಜರವರಿಗೆ ಕೆಲವು ವರುಷಗಳ ಹಿಂದೆ ೫೦ ಸಾವಿರ ರೂಪಾಯಿಗೆ ಬಿಕರಿ ಮಾಡಿದ್ದ ಒಂದೇ ಒಂದು ರತ್ನವನ್ನು ಅದೇ ಬೆಲೆಗೆ ಈಗ ವಾಪಸು ಕೊಂಡುಕೊಂಡನು. ಮಹಾರಾಜರವರು ಧರಿಸಿಕೊಳ್ಳುತ್ತಿದ್ದ ಕಿರೀಟವು ೫,೦೯,೦೦೦ ರೂಪಾಯಿಗೆ ಹರಾಜಾಯಿತು.

❖❖❖❖

ಕಲ್ಕತ್ತಾ ಪಟ್ಟಣದ ಉದ್ಯಾನವನದಲ್ಲಿ ಗವರ್ನಮೆಂಟಿನವರು ನಾನಾ ಮೃಗಗಳನ್ನೂ ಹಕ್ಕಿ ಪಕ್ಷಿಗಳೇ ಮೊದಲಾದ ಪ್ರಾಣಿಗಳನ್ನೂ ಬೋನು ಪಂಜರ ಗೂಡುಗಳಲ್ಲಿಟ್ಟು ಸಾಕುತ್ತಿದ್ದಾರೆ. ಈ ಉದ್ಯಾನವನಕ್ಕೆ ಆಫ್ರಿಕಾ ಖಂಡದಿಂದ ಎರಡು ಜಿರಾಫ್ ಎಂಬ ಮೃಗ ವಿಶೇಷಗಳನ್ನು ೧೦,೦೦೦ ರೂಪಾಯಿ ಖರ್ಚುಮಾಡಿ, ತರಿಸಿಟ್ಟಿದ್ದರು. ಇವು ಬಂದು ಇನ್ನೂ ಬಹಳ ದಿನಗಳಾಗಿರಲಿಲ್ಲ. ಇಷ್ಟರಲ್ಲೇ ಅಲ್ಲಿನ ಶೈತ್ಯವನ್ನು ತಡೆಯಲಾರದೆ ಎರಡು ಪ್ರಾಣಿಗಳಿಗೂ ಕಾಯಿಲೆ ಪ್ರಾಪ್ತವಾಗಿ ಎರಡೂ ಸತ್ತುಹೋದುವು. ಇದರಿಂದ ಗವರ್ನಮೆಂಟಿಗೆ ವೃಥಾ ನಷ್ಟವುಂಟಾಗಿರುವುದು.

❖❖❖❖

ಕಳೆದ ವಾರ ಬೊಂಬಾಯಿ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಗವರ್ನರವರು, ಛೀಫ್ ಜಡ್ಜರು, ಮೊದಲಾದ ದೊಡ್ಡ ದೊಡ್ಡ ಉದ್ಯೋಗಸ್ಥರೂ ವರ್ತಕ ಮಹಾ ಜನಗಳೂ ಸಾವಿರಾರು ಮಂದಿ ಸೇರಿ, ಗತಿಸಿದ ಪಾರ್ಸಿ ಲಕ್ಷಾಧೀಶ್ವರರಾದ ಮಿ. ಜೆ. ಎನ್. ಟಾಟಾ ಯವರ ಗುಣಕಥನವನ್ನು ಮಾಡಿ, ಆತನು ತನ್ನ ಆಸ್ತಿಯಿಂದ ೩೦ ಲಕ್ಷ ರೂಪಾಯಿಗಳನ್ನು ಜನಗಳ ವಿದ್ಯಾಭಿವೃದ್ಧಿಗೆ ಕೊಟ್ಟಿರುವುದನ್ನೂ ಆತನಲ್ಲಿದ್ದ ದೃಢವಾದ ದೇಶವಾತ್ಸಲ್ಯವನ್ನೂ ಕೊಂಡಾಡಿ, ಅಂಥಾ ಮಹಾ ಪುರುಷನ ಹೆಸರನ್ನು ಶಾಶ್ವತಪಡಿಸಬೇಕೆಂದು ಗೊತ್ತುಮಾಡಿ, ಚಂದಾ ಕೂಡಿಸಲಾರಂಭಿಸಿರುತ್ತಾರೆ.

❖❖❖❖

ಸಂಯುಕ್ತಪ್ರಾಂತ್ಯಗಳಲ್ಲಿ ಕೆಲವು ತಿಂಗಳ ಕೆಳಗೆ ಶೀತ ಹವಾ ಬಡಿದು ರೈತರ ಬೆಳೆಗೆ ತುಂಬಾ ಕೆಡಕಾಯಿತು. ಅಂಥಾ ಪ್ರದೇಶಗಳಲ್ಲಿ ರೈತರು ಬೆಳೆಯನ್ನು ಹಾಳುಮಾಡಿಕೊಂಡದ್ದರಿಂದ ಸರ್ಕಾರದವರು ನಾಲ್ಕುವರೆ ಲಕ್ಷ ರೂಪಾಯಿನ ಕಂದಾಯಗಳನ್ನು ರಿಮಿಷನ್ ಮಾಡಿದಾರೆ. ಮತ್ತು ಏಳೂವರೆ ಲಕ್ಷ ರೂಪಾಯಿ ಕಂದಾಯವನ್ನು ಈಗ ವಸೂಲ್ಮಾಡಬೇಕಾದದ್ದಿಲ್ಲವೆಂತಲೂ ಇನ್ನು ಮುಂದೆ ಸುಭಿಕ್ಷ ಕಾಲದಲ್ಲಿ ವಸೂಲ್ಮಾಡಬೇಕೆಂತಲೂ ರಿಯಾಯಿತಿ ತೋರಿಸಿರುತ್ತಾರೆ. ಇದಲ್ಲದೆ ರೈತರಿಗೆ ವ್ಯವಸಾಯ ಸಾಮಗ್ರಿಗಳನ್ನು ಕೊಂಡುಕೊಳ್ಳುವದಕ್ಕೆ ೩೦ ಲಕ್ಷ ರೂಪಾಯಿ ಅಡ್ವಾನ್ಸು ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಪೂನಾ ಪಟ್ಟಣದ ಬಳಿ ಇರುವ ಕಿರ್ಕಿ ನಗರದಲ್ಲಿ ಮದ್ದು ಕಾರ್ಖಾನೆಯ ಕೂಲಿಕಾರರು ಸುಮಾರು ೪೦೦ ಜನ ಏಕಕಾಲದಲ್ಲಿ ಕೆಲಸಕ್ಕೆ ಬಾರದೆ ನಿಂತುಬಿಟ್ಟರು. ಯಜಮಾನನು ಅವರನ್ನು ದಿನವಹಿ ಇನ್ನೂ ಅರ್ಧಗಂಟೆ ಹೊತ್ತು ಹೆಚ್ಚಾಗಿ ಕೆಲಸಮಾಡಬೇಕೆಂದು ಆಜ್ಞೆಮಾಡಿದ್ದೇ ಇದಕ್ಕೆ ಕಾರಣವಾಯಿತು. ಆಗ ಅಧಿಕಾರಿಗಳು ಮುಖಂಡರಾದ ಕೆಲವು ಕೂಲಿಕಾರರನ್ನು ಕೆಲಸದಿಂದ ವಜಾ ಮಾಡಿದರು. ಇದರಿಂದ ಸ್ವಲ್ಪ ಸಮಾಧಾನವಾದರೂ ಇನ್ನೂ ಕೂಲಿಯವರು ಸರಿಯಾಗಿ ಕೆಲಸಕ್ಕೆ ಬರುತ್ತಾ ಇಲ್ಲವೆಂತಲೂ ಸರ್ಕಾರದವರು ಕುಟೋರ್ಧನೆ ಮಾಡುವಂಥಾ ದುಷ್ಟರ ಮೇಲೆ ಕಣ್ಣಿಟ್ಟಿರುವರೆಂತಲೂ ತಿಳಿದುಬಂದಿದೆ.

ರಂಗೂನ್ ಪಟ್ಟಣದಲ್ಲಿ ಪ್ಲೇಗಿನ ಹಾವಳಿಯು ಭಯಂಕರವಾದದ್ದಾಗಿದೆ. ಉಪದ್ರವಗಳಿಂದ ೨—೩ ದಿವಸಗಳೊಳಗಾಗಿ ಮರಣವಾಗುವುದು. ಸಾವಿರಾರು ಜನರು ಮನೆಮಠಗಳನ್ನು ಬಿಟ್ಟು ಇತರ ಕಡೆಗಳಲ್ಲಿ ಅಲೆಯುತ್ತಿದ್ದಾರೆ. ವರ್ತಕರು ಅಂಗಡಿಗಳನ್ನು ಮುಚ್ಚಿಕೊಂಡು ಓಡಿಹೋದರು. ಸರ್ಕಾರದವರು ಒಂದು ತಿಂಗಳಲ್ಲಿ ೮,೦೦೦ ರೂಪಾಯಿ ಖರ್ಚುಮಾಡಿ ೩೦,೦೦೦ ಹೆಗ್ಗಣಗಳನ್ನು ಕೊಲ್ಲಿಸಿದಾರೆ. ಪ್ಲೇಗ್ ಇಲಾಖೆಯವರಿಂದ ನಾಶಪಡಿಸಲ್ಪಟ್ಟ ಆಸ್ತಿಗಳಿಗೆಲ್ಲಾ ಪ್ರಜೆಗಳಿಗೆ ಸರ್ಕಾರದವರು ಸಾವಿರಾರು ರೂಪಾಯಿ ಪ್ರತಿಫಲವನ್ನು ಕೊಟ್ಟರು. ಉಪದ್ರವು ವಿಶೇಷವಾಗಿ ವರ್ತಕರನ್ನೇ ಹಿಡಿದು ಕೊಲ್ಲುತ್ತಿದೆ.

❖❖❖❖

ಹಿಂದುಸ್ಥಾನದಲ್ಲಿರುವ ಸಮಸ್ತ ರೈಲ್ವೆ ಕಂಪನಿಗಳ ಕಾರುಬಾರನ್ನು ಮೇಲ್ವಿಚಾರಣೆ ಮಾಡುವುದಕ್ಕೋಸ್ಕರ ಇಂಡಿಯಾ ಗವರ್ನಮೆಂಟಿನವರು ಕೆಲವು ಅಧಿಕಾರಿಗಳನ್ನು ಸೇರಿಸಿ ಒಂದು ಸಂಘವನ್ನು ಮಾಡಿ, ಅದಕ್ಕೆ ರೈಲ್ವೆ ಬೋರ್ಡ್ ಎಂಬ ಹೆಸರನ್ನಿಟ್ಟಿದಾರೆ. ಕಳೆದ ವಾರ ಈ ಅಧಿಕಾರಿಗಳು ಈ ದೇಶದ ರೈಲ್ವೆ ಕಂಪನಿಗಳಿಗೆಲ್ಲಾ ಒಂದು ಹುಕುಮನ್ನು ಕೊಟ್ಟಿರುವರು. ಅದೇನೆಂದರೆ—(೧) ಸಮಸ್ತ ರೈಲ್ವೆ ಕಂಪನಿಗಳವರೂ ೩ನೇ ತರಗತಿಯ ಪ್ರಯಾಣಿಕರಿಗೆ ಗಾಡಿ ಹೊರಡುವುದಕ್ಕೆ ಸ್ವಲ್ಪ ಮುಂಚೆ ಟಿಕೇಟುಗಳನ್ನು ಬಿಕರಿಮಾಡುತ್ತಿದ್ದಾರೆ. ಇದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಇನ್ನು ಮುಂದೆ ಹೀಗೆ ಮಾಡಕೂಡದು ಗಾಡಿ ಹೊರಡುವುದಕ್ಕೆ ಇನ್ನೂ ಬಹಳ ಹೊತ್ತು ಇದೆ ಎನ್ನುವಾಗಲೇ ಜನರಿಗೆ ಟಿಕೇಟುಗಳನ್ನು ಬಿಕರಿಮಾಡುವಂತೆ ಏರ್ಪಾಡಾಗಬೇಕು. (೨) ೩ನೇ ತರಗತಿಯ ಪ್ರಯಾಣಿಕರನ್ನು ಹೆಚ್ಚು ಹೆಚ್ಚಾಗಿ ಗಾಡಿಗಳಿಗೆ ತುಂಬಕೂಡದು; ಅವಕಾಶವಿದ್ದಷ್ಟು ಹೆಚ್ಚು ಗಾಡಿಗಳನ್ನು ಹಾಕಿಸಬೇಕು. (೩) ಎಲ್ಲಾ ತರಗತಿಯ ಪ್ರಯಾಣಿಕರೂ ಏಕಕಾಲದಲ್ಲಿ ಸ್ಟೇಷನ್ ಒಳಕ್ಕೆ ನುಗ್ಗಿ ದೊಂಬಿ ಮಾಡಿ ಗಾಡಿಗಳಲ್ಲಿ ಒಬ್ಬರ ಮೇಲೊಬ್ಬರುಬಿದ್ದು ಸ್ಥಳವನ್ನು ಹುಡುಕಿಕೊಳ್ಳುತ್ತಾರೆ. ಇದನ್ನು ತಪ್ಪಿಸಿ ಪ್ರಜೆಗಳಿಗೆ ತೊಂದರೆಯಾಗದಂತೆ ಕೂಡಲೆ ಏರ್ಪಾಡು ಮಾಡಬೇಕು ಎಂಬುದೇ.

ತಾಲೂಕು ವರ್ತಮಾನಗಳು.

ಮಂಡ್ಯ.—ಈ ಪ್ರಾಂತ್ಯ ಮಳೆ ಇಲ್ಲ. ಪ್ರತಿ ಸಾಯಂಕಾಲವು ಆಕಾಶವು ಗುಡುಗು ಮಿಂಚು ಮೋಡಗಳಿಂದ ಕೂಡಿ ಮಳೆ ಸುರಿಯುವಂತೆ ಸೂಚಿಸುತ್ತದೆ ಆದರೆ ಒಂದು ಹದವಾದರೂ ಸುರಿಯಲಿಲ್ಲ. ಬಿಸಲಿನ ಝಳ ಜೋರಾಗಿದೆ. ಕೆರೆ ಕುಂಟೆಗಳೆಲ್ಲಾ ಬತ್ತಿಹೋಗಿವೆ. ದನಕರುಗಳಿಗೂ ಮನುಷ್ಯರಿಗೂ ಸಹ ನೀರಿನ ಕ್ಷಾಮ ಬಂದಿದೆ. ಈ ಊರಿನ ಜನರೆಲ್ಲಾ ಕುಡಿಯುವದಕ್ಕೆ ಒಂದು ದೊಡ್ಡ ಕೊಳವಿದೆ. ಅದರಲ್ಲಿರುವ ನೀರು ಕಮ್ಮಿಯಾಗುತ್ತಾ ಇದೆ. ಮತ್ತು ನೀರು ಬಣ್ಣವಾಗಿಯೂ ಕ್ರಿಮಿಗಳಿಂದ ಕೂಡಿದ್ದಾಗಿಯೂ ಇದೆ. ಜನರೆಲ್ಲಾ ಪ್ಲೇಗಿನ ಬಾಧೆಗೆ ತಪ್ಪಿಸಿಕೊಂಡು, ಹೊರಗೆ ಷೆಡ್ಡುಗಳಲ್ಲಿ ೩ ತಿಂಗಳು ಕಳೆದು, ಈಗತಾನೆ ಊರನ್ನು ಸೇರಿದಾರೆ. ಈ ಮಧ್ಯೆ ನೀರಿನ ದೋಷದಿಂದ ಸಾಂಕ್ರಾಮಿಕ ಜಾಡ್ಯ ಎಲ್ಲಿ ಬರುತ್ತೋ ಎಂದು ಚಿಂತಿಸುತ್ತಾ ಇದಾರೆ [ನೀರನ್ನು ಕಾಯಿಸಿ ಕುಡಿಯಬೇಕು, ಯಾವ ಜಲ ದೋಷವೂ ಮೈಗೆ ಹತ್ತಲಾರದು.—ಎಡಿ] ಇಂಥಾ ಕಾಲದಲ್ಲಿ ಸರ್ಕಾರದವರೂ ಊರಿನ ಮುಖ್ಯಸ್ಥರಾದವರೂ ಕೊಂಚ ದ್ರವ್ಯ ವ್ಯಯಮಾಡಿ ಮೇಲ್ಕಂಡ ಕೊಳವನ್ನು ಶೋಧಿಸ ಪ್ರಯತ್ನಿಸಿದರೆ ಅನೇಕರಿಗೆ ಉಪಕಾರವಾಗುತ್ತೆ. ಪರಸ್ಥಳಕರೂ ಅದೇ ನೀರನ್ನು ಕುಡಿಯುತ್ತಾರಾದಕಾರಣ ಅವರಿಗೂ ಉಪಕಾರ ಮಾಡಿದಂತೆ ಆಗುತ್ತೆ. ಆ ಕೊಳವನ್ನು ಕಟ್ಟಿಸಿದ ಮಹಾತ್ಮನಿಗೆ ಹ್ಯಾಗೆ ಒಳ್ಳೇ ಉದ್ದೇಶವಿತ್ತೋ ಅದನ್ನು ಶೋಧಿಸುವವರು ತೋರಿಸಿದರೆ ಉತ್ತಮವಾಗಿರುವದು.

ಸಕಲೇಶಪುರ.—ಸ್ಪೆಷಲ್ ಡ್ಯೂಟಿ ಮೇಲಿರುವ ಅಸಿಸ್ಟಂಟ್ ಕಮಿಷನರ್ ಮಿ॥ ಟಿ ಚೊಕ್ಕಣ್ಣನವರು ಮೂಡಿಗೆರೆ ಮತ್ತು ಸಕಲೇಶಪುರ ಈ ಎರಡು ತಾಲ್ಲೂಕುಗಳ ಸರಹದ್ದು ವ್ಯವಸ್ಥೆ ಮಾಡಿಕೊಂಡು ಈ ದಿವಸ ಇಲ್ಲಿಗೆ ಬಂದರು. ಇವರು ಹಿಂದಿನಲ್ಲಿ ೫—೬ ತಿಂಗಳು ಲಾಗಾಯತು ವಾಸವಾಗಿ ದಿನಂಪ್ರತಿ ಬೆಟ್ಟಗುಡ್ಡಗಳನ್ನು ಹತ್ತಿ ಸರಹದ್ದು ಗೊತ್ತು ಮಾಡಿದರು. ಅಂತರ ಬಹಳ ಶ್ರಮಸಾಧ್ಯವಾದ ಕೆಲಸವನ್ನು ಪೂರೈಸಿ ಇರುತ್ತಾರೆ. ಇವರು ದಕ್ಷಿಣ ಕನ್ನಡ ಮತ್ತು ಮೈಸೂರು ಸರಹದ್ದು ಗೊತ್ತು ಮಾಡುವದರಲ್ಲಿ ಮದ್ರಾಸು ಇಲಾಖೆಯಿಂದ ಬಂದು ಇರುವ ಮಿ॥ ಡಾಯಿಗ್ ಸಾಹೇಬರವರ ಸಂಗಡ ಸೇರಿ ಬಹಳ ಸರಿಯಾದ ವ್ಯವಸ್ಥೆ ಮಾಡಿರುತ್ತಾರೆ. ಇವರಿಬ್ಬರಿಗೂ ಅನುಮಾನ ಬಂದ ಸ್ಥಳ ಮಾತ್ರ ಉಭಯ ಗವರ್ನಮೆಂಟು ಫೈಸಲಿಗೆ ಇಟ್ಟು ಇರುತ್ತಾರೆ. ಸರಹದ್ದು ಪೂರ್ತಿ ಆಗಲಿಲ್ಲ. ಮಳೆಗಾಲ ಕಳೆದ ನಂತರ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕೆಲಸಕ್ಕೆ ಪ್ರಾರಂಭಿಸಬೇಕಾಗುತ್ತೆ.—ಈ ಪ್ರಾಂತ್ಯ ಬಿಸಲಿನ ತಾಪ ಹೆಚ್ಚು. ಧಾರಣೆವಾಸಿ ಚಲಾವಣೆಯಲ್ಲಿರುತ್ತೆ. ರೋಗಾದ್ಯುಪದ್ರಗಳೇನೂ ವಿಶೇಷವಾಗಿಲ್ಲ.—ಈ ತಿಂಗಳು ಗುರ್ರ ತಾರೀಖಿನಲ್ಲಿ ತಾಲ್ಲೂಕು ಕಛೇರಿ ಎದುರಿನಲ್ಲಿ ಒಂದು ಹುಲ್ಲು ಮನೆಗೆ ಬೆಂಕಿ ಬಿದ್ದು ಸುಟ್ಟುಹೋಯಿತು. ಅದರಲ್ಲಿ ಕಲ್ಲು ಕಾಲಿನ ಒಬ್ಬ ಮುದುಕಿ ಉರಿಯಲ್ಲಿ ಸಿಕ್ಕಿ ಸತ್ತುಹೋದಳು. ಈ ಮನೆ ಅಕ್ಕಪಕ್ಕದಲ್ಲೂ ವಿಶೇಷ ಹುಲ್ಲು ಮನೆಗಳು ಇದ್ದುವು. ತಾಲ್ಲೂಕು ಆಫೀಸರುಗಳು ಬಹಳ ಸಾಹಸದಿಂದ ಉರಿ ಹರಡದಂತೆ ನಂದಿಸಿದರು.

ಹೊಳೆನರಸೀಪುರ.—ಬಿಸಲು ಅಧಿಕವಾಗಿ ಮಳೆ ಬರುವ ಹಾಗೆ ಮೋಡವಾಗುತ್ತದೆ. ಜನಗಳೆಲ್ಲಾ ಮಳೆ ಬರುವದನ್ನೇ ನಿರೀಕ್ಷಿಸುತ್ತಾರೆ.—೧ ನೇ ತಾ. ಶನಿವಾರ ನಮ್ಮ ಊರಿನ ಕೋನೇರಿ ರಾಮಶೆಟ್ಟರಿಗೆ ದೇವರ ಅನುಗ್ರಹ ದೆಸೆಯಿಂದ ತಮ್ಮ ಹರಕೆಯ ಪ್ರಕಾರ ಅನೇಕ ದೇವರುಗಳನ್ನು ಹೊರಡಿಸಿದರು. ಅಗ್ಗಿ ಬಿರುಸು ವಗೈರೆ ಯಥೇಚ್ಛವಾಗಿ ಸುಡಿಸಿದ್ದಲ್ಲದೆ, ಅನೇಕರಿಗೆ ಧರ್ಮಾದಿಗಳು ಬಹು ಧಾರಾಳವಾಗಿ ಜರುಗಿಸಲ್ಪಟ್ಟವು. ಶೆಟ್ಟರೂ ಇವರ ಕುಮಾರರೂ ಬಹು ಧರ್ಮಿಷ್ಠರೂ, ದಯಾಳುಗಳಾದ್ದರಿಂದ ನಮ್ಮ ಊರಿನ ಅನೇಕ ಬಡವರಿಗೆ ಅನೇಕ ಬಗೆ ಉಪಕಾರವಾಗುತ್ತಿದೆ ಉತ್ಸವದ ದಿನ ಸುಮಾರು ೧೫೦ ಯವರೆಗೂ ಖರ್ಚು ಮಾಡಿದರು.—ಈಗ ಊರಿನಲ್ಲಿ ಭೇದಿ ವಾಂತ್ಯವು ಬಹು ಅಧಿಕವಾಗಿದೆ. ದಿನಕ್ಕೆ ೬—೭ ಜನರು ಸಾಯುತ್ತಾರೆ ಈ ಕಾಲದಲ್ಲಿ ಸಿಡುಬು ಹಾಕುವ ದೇವೀಪಂಡಿತರಾರೋ ತಿಳಿಯದು. ಮಕ್ಕಳಿಗೆ ಸಿಡುಬು ಹಾಕಿಸುವದ ಯುತ್ತಾರೆ. ಆದ್ದರಿಂದ ಅಧಿಕಾರಿಗಳು ಈ ವಿಷಯದಲ್ಲಿ ಮಾಡುವರೆಂದು ನಿರೀಕ್ಷಿಸುತ್ತೇವೆ.—ಅರಕಲಗೂಡು ಸಾಹು ವೆಂಕಟರಾಯಶೆಟ್ಟರು ತಮ್ಮ ದಿವಾನಿನಲ್ಲಿ ಅನೇಕ ಬಡಬಾ ಜೋಪಡಿ ಕಟ್ಟುವದಕ್ಕೆ ಸ್ಥಳ ಕೊಟ್ಟು, ಈ ಮೂಲಕ ಬ ಉಪಕಾರ ಮಾಡುತ್ತಾರೆ. ಇವರ ಪದ್ಧತಿಯನ್ನು ಎಲ್ಲರೂ ರಿಸಿದರೆ ಅನೇಕರಿಗೆ ಪ್ರಯೋಜನವಾದೀತೆನ್ನುವದಕ್ಕೆ ಸಂ ಲ್ಲ.—ಯುಗಾದಿ ಹಬ್ಬದ ದಿನ ಅನೇಕರು ಪದ್ಧತಿಯಂತೆ ಟವನ್ನು ಜನ ಸಂಚಾರವಿಲ್ಲದ ಸ್ಥಳದಲ್ಲಿ ಬಹು ಅಧಿಕವಾ ದರು. ಹಬ್ಬದ ದಿನ ದೇವರನ್ನು ಧ್ಯಾನಮಾಡುವದಕ್ಕೆ ಬ ದೂಟಾಡುವದರಿಂದ ದೇವರು ಮೆಚ್ಚುತ್ತಾನೋ?—ಈ ರುವ ಕಸುಬುದಾರಿ ಸರ್ಕಾರಿ ಸ್ಕೂಲಿನಲ್ಲಿ ಹುಡುಗರು ಬಹು ಗೆ ಕೆಲಸಗಳನ್ನು ಕಲಿಯುತ್ತಾ ಇದಾರೆ. ಈ ಕಾರ್ಖಾನೆ ಹುಡುಗರಿಗೆ ಕೆಲಸ ಕಲಿಸುವ ಮೇಸ್ತ್ರಿ ರಂಗಪ್ಪನವರು ಬ ದ್ಧಿಯಿಂದ ಕಷ್ಟಪಟ್ಟು ಕೆಲಸ ಕಲಿಸುತ್ತಾರೆ

ತುಂಕೂರು.—ದಿನದಿನಕ್ಕೆ ಬಿಸಲು ಜೋರಾಗುತ್ತಿರುವದರಿಂದ ಸಹಿಸಕೂಡದಷ್ಟು ಧಗೆಯಾಗುತ್ತಿದೆ. ಧಾರಣೆವಾಸಿ ಮಾತ್ರ ಹಾಲಿ ಕಂದಾಯ ವಸೂಲಿ ಕಾಲವಾದ್ದರಿಂದ ಜಾಸ್ತಿ ದೆಯ ಸ್ಥಿತಿಯಲ್ಲಿವೆ. ಸುಮಾರಾಗಿ ಎರಡು ತಿಂಗಳ ಪ್ಲೇಗ್ ಉಪದ್ರದ ಹೆಸರು ನಿರ್ನಾಮವಾಗಿರುವದರಿಂದ ಪ ಟ್ಟಣವಾಸಿಗಳಾಗಿ ತಮ್ಮ ಮನೆಗಳನ್ನು ಶುದ್ಧಿ ಮಾಡಿಕೊಂಡು ಬರುತ್ತಿದ್ದಾರೆ.—ಕಳೆದ ಎರಡು ತಿಂಗಳಿಂದಲೂ ಇದ್ದ ಪಾಠಶಾಲೆಗಳು ತೆರೆಯಲ್ಪಟ್ಟವೆಯಾದರೂ ಜನರು ಇನ್ನೂ ಗಿ ವಾಸಕ್ಕೆ ಬಾರದಿರುವದರಿಂದ ವಿದ್ಯಾರ್ಥಿಗಳ ಸಂಖ್ಯೆ ಪ ಗಿರುತ್ತೆ.—ನಮ್ಮ ಮ್ಯುನಿಸಿಪಾಲಿಟಿಯವರು ಹಿಂದೆ ಪ್ಲೇಗಿದ್ದ ಭಾಗಗಳಲ್ಲಿ ರಸ್ತೆ ಹಾಕಲು ಉದ್ದೇಶಿಸಿರುತ್ತಾರೆ ರ್ಭದಲ್ಲಿ ಹೊರಪೇಟೆ ಮತ್ತು ಕೋಟೆಯ ಅನೇಕ ಭಾ ಬೆಳಕು, ಗಾಳಿಗೆ ಅಭಾವವಾಗಿ ತುಂಬಾ ಅನಾರೋಗ್ಯವಾಗಿ ದ್ದರಿಂದ ಜನಗಳನ್ನು ಪರಾಂಬರಿಸಿ, ಪ್ರಜಾ ಕ್ಷೇಮದಾಯಕ ಕೊಳಪಡಿಸುವದಕ್ಕೆ ಇದೀಗ ತಕ್ಕ ಸಮಯವಾಗಿರುತ್ತೆ ಧಾಗಿ ಈ ತಿಂಗಳಿಂದ ಮೈಸೂರು, ಬೆಂಗಳೂರಿನಲ್ಲಿರುವಂತೆ ನಿಂದ ಬರುವ ಭರ್ತಿ ಮತ್ತು ಖಾಲಿ ಗಾಡಿಗಳಿಗೆ, ಜಾನುವಾ ಗೆ ಸುಂಕ ವಸೂಲ್ಮಾಡುವದಕ್ಕೆ ಏರ್ಪಾಡು ಮಾಡುತ್ತಾರಾ ಮೊದಲಿದ್ದವುಗಳ ಪೈಕಿ ವಿಳ್ಳೇದೆಲೆ, ತೆಂಗಿನಕಾಯಿ, ಮುಂ ಗಳಿಗೆ ಸುಂಕ ವಜಾ ಮಾಡುವದರಿಂದ ಅನೇಕ ಬಡಜನರಿ ಬಾ ಸಹಾಯ ಮಾಡಿದಂತಾಗುವದರಿಂದ ಈ ವಿಷಯವನ್ನು ವೈಸ್ ಪ್ರೆಸಿಡೆಂಟರು ಗಮನಿಸಬೇಕಾಗಿ ಪ್ರಾರ್ಥನೆ.—ವ ಯದಾಗಿ ನಾಯಿಗಳನ್ನು ಹೊಡಿಸುವದಕ್ಕೆ ಪ್ರಾರಂಭಿಸಿರು ಈ ಹೊಡಿಯುತ್ತವರು ಯುಕ್ತಾಯುಕ್ತ ಜ್ಞಾನವಿಲ್ಲದೆ ಪ ಕೊಲೆಯು ತುಂಬಾ ಹೇಸಿಕೆಯಾಗಿರುತ್ತದ್ದರಿಂದ ಬೇರೆ ಪ ಳಲ್ಲಿರುವ ರೂಲನ್ನು ಜಾರಿಗೆ ತರುವದು ಬಹಳ ಉತ್ತಮವಾ ತ್ತೆ.—ಬಹಳ ಕಾಲದಿಂದಲೂ ಇಲ್ಲಿ ಏರ್ಪಾಡಾಗಿದ್ದ ರಿ ಪೊಲೀಸನ್ನು ಬೆಂಗಳೂರಿಗೆ ವರ್ಗಾಯಿಸಿದ್ದರಿಂದ ಸ್ಥಳಕ ಕರರು ಅಲ್ಲಿಗೆ ಹೋಗಿ ವಾಸಮಾಡಲು ಉಂಟಾಗುವ ಅನಾ ಲಕ್ಕಾಗಿ ಅನೇಕರು ರಾಜೀನಾಮೆ ಕೊಟ್ಟಿರುತ್ತಾರೆ. ಈ ಕ್ಷ ಕಾಲದಲ್ಲಿ ಆ ಜನರ ಸ್ಥಿತಿಯು ತುಂಬಾ ಪರಿತಾಪಕರವ ಪದರಿಂದ ಜಾಗ್ರತೆಯಾಗಿ ನಮ್ಮ ಡೆ॥ ಕಮಿಷನರವರು ರಿ ತಿ ತೋರಿಸುವರೆಂದು ನಂಬಿದೇವೆ.—ಕಳೆದ ವಾರ ಇಲ್ಲಿಗೆ ಕೋರ್ಟು ಜಡ್ಜಿಯವರು ದಯಮಾಡಿಸಿ, ಹಿಂದೆ ಹೀರಂಗ ಪ್ಪ ಮುದಿಗೆರೆಯಲ್ಲಿ ವಿಷ ಹಾಕಿ ಕೊಂದ ಮೊಕದ್ದಮೆ ವಿಚಾರಣೆ ನಡಿಸಿ. ಅಪರಾಧಿಗಳಾದ ಒಬ್ಬ ಮಾದಿಗರವನಿಗೂ ಳು ತಿಗಳರವಳಿಗೂ ಕಠಿಣ ಸಜಾವನ್ನು ವಿಧಿಸಿದರೆಂದು ಬಂದಿದೆ.—ಇಲ್ಲಿ ಶಿರಾ, ಮಧುಗಿರಿ, ಕುಣಿಗಲಿಗೆ ಹೋಗು ಸಾಹುಕಾರರಿಂದ ಟ್ರ್ಯಾನ್ಸಿಟ್ ಇಡಲ್ಪಟ್ಟಿದೆ ಕೆಲವು ಸಂದರ್ಭ ಮಾಮೂಲ್ ರೇಟಿನಂತೆ ಕೊಡುವ ಜನರಿಗಿಂತಲೂ ಇತ ಜಾಸ್ತಿ ದುಡ್ಡು ವಸೂಲ್ಮಾಡಿಕೊಂಡು, ಕಮ್ಮಿ ಕೊಡುವವರಿಗೆ ಸಮಯಕ್ಕೆ ಗಾಡಿ ಒದಗಿಸುವದಿಲ್ಲವೆಂದು ತಿಳಿದುಬರುತ್ತೆ. ಆ ಕಂಪನಿಯವರು ಈ ವಿಷಯದಲ್ಲಿ ತಕ್ಕ ನಿಗಾ ಇಟ್ಟು, ಸೌಲಭ್ಯವನ್ನುಂಟುಮಾಡುವರೆಂದು ನಂಬಿದೇವೆ.

ಚಿತ್ರದುರ್ಗ.—ಈಗ ತಕ್ಕ ಮಟ್ಟಿಗೆ ಆರೋಗ್ಯಕರವಾ ರಾತ್ರಿಯಲ್ಲಿ ಗಾಳಿಯೂ ಹೊತ್ತಾರೆ ಚಳಿ ಮತ್ತು ಮಧ್ಯಾಹ್ನ ಉಷ್ಣ ಜಾಸ್ತಿ. ಒಂದು ಸಲ ಮಳೆಯಾದರೂ ಇನ್ನೂ ಬಾಕಿ ದರಿಂದ ದನಕರುಗಳಿಗೆ ತಕ್ಕ ಮೇವು ಸಿಕ್ಕದೆ, ಅವಸ್ಥೆಪಡ ಈಗಿನ ಧಾರಣೆವಾಸಿಗಳು ಜಡವಾಗಿರುವದನ್ನು ನೋಡಿದರೂ ಕೂಡ ಮಳೆಯನ್ನು ಬಹಳವಾಗಿ ಎದುರುನೋಡುತ್ತಿ ಸಲ್ಲಿಯೇ ಬರುವ ನೀರು ಜನರ ಉಪಯೋಗಕ್ಕೆ ಕೇವಲ ಕಠಿಣವೆಂದು ಹೇಳಬೇಕು. ಯೂನಿಯನ್, ಮ್ಯುನಿಸಿಪಾಲಿಟಿಯವರು ನೀರನ್ನು ಶುದ್ಧಿಮಾಡುವದಕ್ಕೆ ಬದಲಾಗಿ ಕೆರೆಯ ನೀರನ್ನು

ಬಲ್ಲಿಗಳಲ್ಲಿ ಬಿಡುವದರಿಂದ ನೀರಿನಲ್ಲಿ ವಿಪರೀತ ಹುಳಗಳು ಆಗುತ್ತವೆ. ಆದ್ದರಿಂದ ನಲ್ಲಿಯ ಬಾಯಿಗೆ ಬಟ್ಟೆ ಸುತ್ತಿ ಅದರ ಮುಖಾಂತರ ನೀರನ್ನು ಉಪಯೋಗಿಸಿಕೊಳ್ಳುತ್ತಾರೆ. ಈ ವಿಷಯಗಳನ್ನು ನೋಡುವವರು ಯಾರು ಇಲ್ಲವೇ. ಹಾಗೆ ಬಿಟ್ಟರೆ ಇದರಿಂದ ಅವಸ್ಥೆಪಟ್ಟವರಲ್ಲಿ ಜನಗಳು ಮುಂದೆ ಕೆಟ್ಟ ನೀರಿನ ಸಹಾಯಿಂದ ಕಾಲರ ಉಪದ್ರವಕ್ಕೆ ಸಿಕ್ಕಬಹುದಾಗಿದೆಯಲ್ಲವೇ. ಇಂಥಾ ನೀರನ್ನು ಚನ್ನಾಗಿ ಕಾದಿಸಿ ಆರಿಸಿ ಕುಡಿಯೋಣ ಯಾವ ಬಾಧಕವೂ ಉಂಟಾಗದು; ಆರೋಗ್ಯಕ್ಕೆ ಚ್ಯುತಿ ಆಗುವದಿಲ್ಲ —ಏಪ್ರಿಲ್ —ನೆಯ ಕಾಲಕ್ಕೆ ಮುಂಚೆ ಇಲ್ಲಿನ ಗ್ರಾಮದೇವತೆ ಉಚ್ಚಂಗಮ್ಮನ ದೇವಸ್ಥಾನದಲ್ಲಿ ಭಾರಿ ಕಳವು ಆಯಿತೆಂದು ತಿಳಿಸಿದೆಯಷ್ಟೆ. ಈಗ ಆ ಕೆಟ್ಟ ಕೃತ್ಯ ನಡಸಿದ ಮೂವರು ಮಂದಿ ಕಳ್ಳರನ್ನು ಕೆಲವು ಮಾಲುಗಳ ಸಮೇತ ಶಿವಮೊಗ್ಗದಲ್ಲಿ ಪತ್ತೆಮಾಡಿ, ಹಿಡಿದಿರುತ್ತಾರೆಂದು ಕೇಳುತ್ತೇವೆ —ರಾತ್ರಿ ಪೋಲೀಸಿನವರು ತಪ್ಪ ಮುಟ್ಟಿಗೆ ಬೀಟು ಮಾಡುತ್ತಾರೆ. ಈಗಿನ ಪೋಲೀಸ್ ದಫೆದಾರ್ ರಾಜಾ ಖಾನ್ ಸಾಹೇಬರು ಭಯದಿಂದ ಮುತುವರ್ಜಿಯಾಗಿಯೂ ಕೆಲಸ ನೋಡುವಂತೆ ತೋರುತ್ತೆ. ಡೆಪ್ಯುಟಿ ಕಮಿಷನರ್ ಮಿ॥ ರಾಮಾನುಜೈಯಂಗಾರ್ರಿಗೆ ದಿನಗಳಿಗೆ ಮುಂಚೆ ನ್ಯೂಮೋನಿಯ ಎಂಬ ವಿಷಮಶೀತ ಪ್ರಾಪ್ತವಾಗಿತ್ತು. ಆಗ್ಯೆ ಊರಿನ ಜನರೆಲ್ಲರು ಬಹಳ ಕಳವಳ ಅವರ ಕ್ಷೇಮಲಾಭವನ್ನು ಕುರಿತು ಬಯಸುತ್ತಿದ್ದರು. ಈ ಮತ್ತು ಬೆಂಗಳೂರಿನಿಂದ ಬಂದ ಡಾಕ್ಟರುಗಳು ನೋಡುತ್ತಿದ್ದರು. ಇಬ್ಬರು ನರ್ಸ್‌ಗಳು ಸಹ ಉಪಚಾರ ಮಾಡುವಗೆ ಕಳುಹಿಸಲ್ಪಟ್ಟಿದ್ದರು. ಈ ಮಹನೀಯರಿಗೆ ದೈವಾನುಗ್ರಹದಿಂದ ಗುಣವಾದದ್ದಕ್ಕಾಗಿ ಇಲ್ಲಿನ ಪ್ರಜೆಗಳು ಬಹಳ ಸಂತೋಷಪಡುತ್ತಾರೆ —ಈಗ್ಯೆ ಸುಮಾರು ೧೯ ವರುಷಗಳಿಂದ ವಿದ್ಯಾ ಇಲಾಖೆಯಲ್ಲಿದ್ದು ಬಹು ಚಟುವಟಿಕೆ, ಸಹನಗುಣ, ನಿಷ್ಠೆಯಿಂದ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಕೆಲಸ ನೋಡುತ್ತಿದ್ದ ಶ್ರೀ ಎಸ್ ವೀರಭದ್ರಯ್ಯನವರನ್ನು ಇಲ್ಲಿಂದ ಬೆಂಗಳೂರಿಗೆ ಸರ್ಕಾರದವರು ವರ್ಗಮಾಡಿದ್ದರಿಂದ ಇಂಥ ಉತ್ತಮ ಪುರುಷರು ಹೋದದ್ದು ಈ ಡಿಸ್ಟ್ರಿಕ್ಟಿಗೆ ದೊಡ್ಡ ನಷ್ಟವೆಂದು ಜನರು ಭಾವಿಸುತ್ತಾರೆ. ಇವರು ಈ ಸ್ಥಳವನ್ನು ಬಿಡುವಾಗ್ಯೆ ಈ ಊರಿನ ಸರ್ಕಾರೀ ನೌಕರರು ದೊಡ್ಡ ಮನುಷ್ಯರನೇಕರು ಇವರಿಗೆ ಪಕ್ಕ ಮರ್ಯಾದೆಗಳನ್ನು ಮಾಡಿದರು. ಆ ದಿನ ಮಧ್ಯಾಹ್ನ ಸಾಯಂಕಾಲದಲ್ಲಿ ಇಲ್ಲಿನ ಡಿವಿಷನ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರು ಮಿ॥ ಕೃಷ್ಣರಾಯರು ಅವರನ್ನು ತಮ್ಮ ಕುಟುಂಬ ಸಮೇತ ಔತಣಕ್ಕಾಗಿ ಕರೆದರು. ಮಿ॥ ವೀರಭದ್ರಯ್ಯನವರೂ ಕೃಷ್ಣರಾಯರೂ ಒಂದೇ ಕಡೆ ಕೂತು ಊಟ ಮಾಡಿದಂತೆ ಕಾಣುತ್ತೇವೆ. ಈ ರೀತಿ ಮಾಡಿದ್ದು ಇಷ್ಟರಿಗೆ ಒಳ್ಳೇ ಮೇಲ್ಪಂಕ್ತಿ ತೋರಿಸಿಕೊಟ್ಟಂತಾಯಿತು. ಮಿ॥ ವೀರಭದ್ರಯ್ಯನವರು ಈ ಡಿಸ್ಟ್ರಿಕ್ಟಿನಲ್ಲಿ ಜನಪ್ರಿಯರಾಗಿ ತಮ್ಮ ಕರ್ತವ್ಯವನ್ನು ನೆರವೇರಿಸಿದ್ದರಿಂದ ಇಲ್ಲಿನ ಪ್ರಜೆಗಳು ಅವರಿಗೆ ಆಯುರಾರೋಗ್ಯ ಭಾಗ್ಯಗಳನ್ನು ಕೋರುವವರಾಗಿರುತ್ತಾರೆ. ಈಗ ಬಂದಿರುವ ಮಿ॥ ಶಾಮರಾಯರು ಸಹ ಅದರಂತೆ ತಮ್ಮ ಕಾರ್ಯ ಗೌರವವನ್ನು ಪ್ರಕಟಿಸಿ ಕೆಲಸ ನೆರವೇರಿಸುವರೆಂದು ನಿರೀಕ್ಷಿಸುತ್ತೇವೆ.

ಭೂಕಂಪನಗಳೂ ಪ್ರಾಣನಷ್ಟವೂ

ಪಾಕ್ಪಟ್ಟನ (ಕರ್ನೂಲ್ ಡಿಸ್ಟ್ರಿಕ್ಟ್).

ಕಳೆದ ೨ನೇ ತಾ॥ ಭಾನುವಾರ ಬೆಳಿಗ್ಗೆ ೯ ಗಂಟೆಯಲ್ಲಿ ಪಾಕ್ಪಟ್ಟಣದಲ್ಲಿ ಸ್ವಲ್ಪ ಕಠಿಣವಾದ ಭೂಕಂಪವಾಯಿತು. ಮನೆಗಳ ಮೇಲ್ಭಾಗದ ಮತ್ತು ಗೋಡೆಗಳ ಕೆಲವು ಸೀಳಿಹೋದುವು ಎಂದು ಗೊತ್ತಾಗಿದೆ. ಮನೆಗಳೂ ಬಂಗಲೆಗಳೂ ಅಲ್ಲಾಡಿದವು. ಅಪಾಯವೇನೂ ಆಗಲಿಲ್ಲ.

ಒಂಗೋಲ್ (ನೆಲ್ಲೂರು ಡಿಸ್ಟ್ರಿಕ್ಟ್)

ಕಳೆದ ೨ನೇ ತಾ॥ ಭಾನುವಾರದಿಂದ ೨—೩ ದಿನಗಳ ವರೆಗೆ ಇಲ್ಲಿ ಭೂಕಂಪವಾಯಿತು. ಕಟ್ಟಡಗಳೆಲ್ಲಾ ಅಲ್ಲಾಡಿದವು. ದೇವಾಲಯಗಳು ಹಾಗು ಗರನ್ನು ಸ್ಥಳಗಳಿಗೆ ಕಳುಹಿಸದೆ ನಿಲ್ಲಿಸಿಕೊಂಡರು. ಪಟ್ಟಣಕ್ಕೆ ಪಟ್ಟಣವೇ ಗಾಬರಿಬಿದ್ದಿತು. ಯಾರೂ ಸಿದ್ಧ ಮಾಡಲಿಲ್ಲ. ಕೆಲವು ಕಟ್ಟಡಗಳು ಅದರ ಅಪಾಯಕರ ಆಸರೆ ಇಲ್ಲದೆ ನೆಟ್ಟಗೆ ಯಾರೂ ನಿಲ್ಲುವಂತೆಕ್ಕೆ ಆಗಲಿಲ್ಲ.

ಕಲ್ಕತ್ತಾ ಪಟ್ಟಣ.

ಕಳೆದ ೪ನೇ ತಾ॥ ಮಂಗಳವಾರ ಬೆಳಿಗ್ಗೆ ೭ ಗಂಟೆಯಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಕೆಲವು ಸೆಕೆಂಡುಗಳ ತನಕ ಭೂಮಿಯು ಗುಡುಗಿತು.

ಸಿಂಲಾ ಪಟ್ಟಣ.

ಸಿಂಲಾ ಪಟ್ಟಣದಲ್ಲಿ ತಾ॥ ೪ನೇ ಮಂಗಳವಾರ ಬೆಳಿಗ್ಗೆ ೬ ಗಂಟೆಗೆ ಭೂಮಿಯು ಜೋರಾಗಿ ಕಂಪಿಸಿತು. ಬೆಟ್ಟಗಳ ಮೇಲಿನ ಕಟ್ಟಡಗಳೆಲ್ಲಾ ಉರುಳಿಕೊಂಡವು. ಭಾರೀ ಹೋಟೇಲಿನ ಮೇಲಕ್ಕಸ್ತು ಕಳಚಿ ಬಿದ್ದು ಹೋಯಿತು. ಯಾರಿಗೂ ಅಪಾಯವೇನೂ ಆಗಲಿಲ್ಲ. ವೈಸ್‌ರಾಯರವರ ಅರಮನೆಯೂ ಕೆಲವು ಕಡೆ ಕುಸಿದು ಬಿದ್ದುಕೊಂಡಿತು.

ಆಗ್ರಾ ಪಟ್ಟಣ.

ಅದೇ ದಿನ ಆಗ್ರಾ ಪಟ್ಟಣದಲ್ಲಿ ಭೂಕಂಪವಾಯಿತು. ಕಟ್ಟಡಗಳಿಗೆ ಅಪಾಯ ಸಂಭವಿಸಿದೆ.

ಅಲಹಾಬಾದ್, ಮುಸೂರಿ.

ಅಲಹಾಬಾದಿನಲ್ಲೂ ಅದೇ ಸಮಯದಲ್ಲಿ ಭೂಕಂಪವಾಗಿದೆ. ಮುಸೂರಿಯಲ್ಲಿ ಅತಿ ಭೂಕಂಪವು ಅತೀವವಾಗಿತ್ತು. ಇಲ್ಲಿ ಸಮಸ್ತ ಮನೆಗಳೂ ಪೂರ್ವಕಟ್ಟೆ ಮಕ್ಕೆ ಅಲ್ಲಾಡಿ ಬಿದ್ದು ಹೋದವು. ಯೂರೋಪ್ಯರ ಅಧಿಕಾರಿಗಳೂ ದೇಶೀಯ ಪ್ರಜೆಗಳೂ ಬಹು ಕಷ್ಟಪಟ್ಟರು. ಮೂರು ನಿಮಿಷಗಳ ತನಕ ಭೂಮಿಯು ಬಹಳವಾಗಿ ಅಲ್ಲಾಡಿತು. ಅನೇಕ ಕಡೆ ಭೂಮಿಯು ಕುಸಿದು ಹೋಗಿದೆ. ಡೀರಾಡೂನ್, ರಾವಲ್ಪಿಂಡಿ ಡಿಸ್ಟ್ರಿಕ್ಟ್‌ಗಳಲ್ಲೂ ಭೂಕಂಪದಿಂದ ಅನಾಹುತವಾಗಿದೆ. ಬೆಟ್ಟಗಳ ಮೇಲಿಂದ ಭಾರೀ ಕಲ್ಲುಗಳು ಉರುಳಿ ಒಂದು ಪಟ್ಟಣದಲ್ಲಿ ಬಿದ್ದು ಅನಾಹುತವಾಯಿತು. ಸಮಸ್ತ ಪ್ರಜೆಗಳ ಮನೆಗಳೂ ಅಲ್ಲಾಡಿ ಬಿದ್ದು ಹೋಗಿವೆ. ರಸ್ತೆಗಳಲ್ಲಿ ಭೂಮಿಯು ಅಲ್ಲಲ್ಲಿಗೆ ಬಾಯಿಬಿಟ್ಟು, ಪುನಹ ಮುಚ್ಚಿಕೊಂಡಿತೆ ಕೂಡಿಕೊಂಡಿತು ಅಂತು ಮುಸೂರಿಯಲ್ಲಿ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚಾಗಿ ಆಸ್ತಿಗಳು ನಷ್ಟವಾಗಿವೆ. ಅದೆಷ್ಟೋ ಜನರ ಬಗೆ ಪ್ರಾಣ ಕಳೆದುಕೊಂಡರು. ಹೂರಾಡು ಮುಂದಿಗೆ ಗಾಯಗಳಾದುವು.

ಲಾಹೋರ್ ಪಟ್ಟಣ.

ಆ ದಿನ ಬೆಳಿಗ್ಗೆ ಲಾಹೋರ್ ಪಟ್ಟಣದಲ್ಲಿ ಭೂಕಂಪವು ಕಠಿಣವಾಗಿತ್ತು. ಪ್ರಜೆಗಳೆಲ್ಲಾ ಗಾಬರಿಬಿದ್ದು ಹಾಸಿಗೆಯಿಂದ ಎದ್ದು ಬೀದಿಗಳಿಗೆ ಓಡಿ ಬಂದು ನಿಂತರು. ಪಟ್ಟಣದಲ್ಲಿ ತುಂಬಾ ನಷ್ಟವಾಗಿದೆ. ಅನೇಕ ಕಟ್ಟಡಗಳು ಉರುಳಿಕೊಂಡವು. ಅನೇಕರು ಪ್ರಾಣ ಕಳೆದುಕೊಂಡರು. ಚಿನ್ನದ ಮಸೀತಿಯ ಶಿಖರವು ಕಳಚಿ ಬಿದ್ದುಹೋಯಿತು. ವಜೀರ್‌ಖಾನ್ ಮಸೀತಿಯೂ ಒಡೆದು ಸೀಳು ಬಿಟ್ಟಿದೆ. ಅನೇಕ ಸಣ್ಣ ದೇವಸ್ಥಾನಗಳೂ ಬಂಗಲೆಗಳೂ ಬಿರುಕು ಬಿಟ್ಟವು. ರೈಲ್ವೆ ಸ್ಟೇಷನ್ ಹಾಲು ಬಿದ್ದಂತಾಗಿದೆ. ಟೌನ್ ಹಾಲ್ ಕಟ್ಟಡವು ಅಪಾಯಕರವಾಗಿದೆ. ಲೆಪ್ಟಿನೆಂಟ್ ಗವರ್ನರವರು ಪಟ್ಟಣದಲ್ಲಿ ಸಂಚಾರಮಾಡಿ, ಸರ್ಕಾರಿ ಆಫೀಸುಗಳನ್ನು ಕಟ್ಟಡಗಳಲ್ಲಿ ಮಾಡಕೂಡದೆಂದು ಡೇರಾಗಳನ್ನು ಹೊಡಿಸಿಕೊಟ್ಟಿದ್ದಾರೆ.

ಧರ್ಮಶಾಲೆ

ಧರ್ಮಶಾಲೆ ಎಂಬ ಬೆಟ್ಟ ಪ್ರಾಂತ್ಯದ ಊರಿನಲ್ಲಂತೂ ಭೂಕಂಪದಿಂದ ಉಂಟಾದ ಅನಾಹುತವನ್ನು ವಿವರಿಸುವುದಕ್ಕಾಗದು. ಅನೇಕ ಮಂದಿ ಯೂರೋಪ್ಯರ ಸರ್ದಾರರು ಹೆಂಗಸರು, ಮಕ್ಕಳು ಪ್ರಾಣ ಕಳೆದುಕೊಂಡರು. ದೇಶೀಯ ಪ್ರಜೆಗಳು ಎಷ್ಟು ಮಂದಿ ಲಯವಾದರೋ ತಿಳಿಯಲಿಲ್ಲ. ಸೈನಿಕರು ಬಹು ಮಂದಿ ಲೈನ್ ಮನೆಗಳಲ್ಲಿ ಸಿಕ್ಕಿ ಸತ್ತರು. ಡಲ್‌ಹೌಸಿ, ಅಮೃತಸರ, ಡೀರಾಡೂನ್ ಎಂಬ ಪ್ರಾಂತ್ಯಗಳಲ್ಲೂ ತುಂಬಾ ಅನಾಹುತವಾಗಿದೆ. ಮಿಯಾನ್‌ಮೀರಿನಲ್ಲಿ ಬಹಳ ನಷ್ಟವಾಗಿರುವುದು. ಈ ಪಟ್ಟಣಗಳಲ್ಲೆಲ್ಲಾ ತಂತೀ ಆಫೀಸುಗಳೇ ಮುಚ್ಚಿಹೋದ್ದರಿಂದ ವರ್ತಮಾನ ಪೂರಾ ಬಂದಿಲ್ಲ. ಸಿಂಲಾ ಪಟ್ಟಣದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮುಟ್ಟಿಸಿ, ಈಗತಾನೇ ಕಟ್ಟಿ ಪೂರೈಸಿದ್ದ ಸೆಕ್ರೆಟೇರಿಯಟ್ ಎಂಬ ಭಾರೀ ಕಟ್ಟಡವು ಜಾಯಿತು. ಕಾಲ್ಕಾ ರೈಲ್ವೆ ಸ್ಟೇಷನ್ ನೆಲಸಮವಾಗಿದೆ.

ಅಪಾರವಾದ ನಷ್ಟ

ಅಮೃತಸರ, ಜಲಂಧರ, ಪೆರೋಜ್‌ಪುರ ಮುಲ್ತಾನ್, ರಾವಲ್ಪಿಂಡಿ, ಈ ಪಟ್ಟಣಗಳಲ್ಲೆಲ್ಲಾ ಭೂಕಂಪಕ್ಕೆ ಸಿಕ್ಕಿ ಬಹಳ ಕಟ್ಟಡಗಳು ಸ್ಥಳಗಳನ್ನು ಸಂಭವಿಸಿದವು. ಕಾಂಗ್ರಾವೆಲ್ಲಾ ನಿರ್ನಾಮವಾಯಿತು. ಸಾವಿರಾರು ಜನರು ಹತರಾದರು. ಕಾಂಗ್ರಾದಲ್ಲಿದ್ದ ೩,೫೦೦ ಪ್ರಜೆಗಳ ಪೈಕಿ ೩,೦೦೦ ಜನರೇ ಮೃತಪಟ್ಟರು. ಉಳಿದಿರುವ ಪ್ರಜೆಗಳೂ ಗಾಯಪಟ್ಟು ನರಳುತ್ತಿದ್ದಾರೆ. ಧರ್ಮಶಾಲೆಯಲ್ಲಿ ಯೂರೋಪ್ಯರು ಮತ್ತು ದೇಶೀಯ ಸೈನಿಕರು ೪೦೦—೫೦೦ ಮಂದಿಯ ವರೆಗೆ ಸತ್ತುಹೋದರು. ಪ್ರಜೆಗಳು ಸತ್ತಿರುವುದು ಇಷ್ಟೆಂದು ಲೆಕ್ಕವಾಗಿಲ್ಲ. ಮಂಡಿ, ಕುಲು, ಪಠಾಣ್‌ಕೋಟ್, ವೈದ್ಯನಾಥ್, ನಗರ್ ಮೊದಲಾದ ಪಟ್ಟಣಗಳೂ ಇನ್ನೂ ಸುತ್ತುಮುತ್ತು ಇರುವ ಗ್ರಾಮಾಂತರಗಳೂ ನಾಶವಾದವು. ಎಷ್ಟೆಷ್ಟು ಪ್ರಜೆಗಳು ಲಯವಾದರೋ ಊಹಿಸಲಾಗದು. ಎಲ್ಲಾ ಊರುಗಳಲ್ಲೂ ಅನೇಕಜನರೂ ಅಧಿಕಾರಿಗಳೂ ಬಾಳುಗೋಡೆಗಳ ಕೆಳಗೆ ಸಿಕ್ಕಿ ಪ್ರಾಣಸಂಕಟಪಡುತ್ತಿದ್ದಾರೆ. ಎಲ್ಲಿ ನೋಡಿದರೂ ಗೋಳಾಟ, ಮನೆಮಠ ಆಸ್ತಿಪಾಸ್ತಿಗಳ ನಾಶ, ಪ್ರಾಣನಷ್ಟ. ಸರ್ಕಾರದವರು ಸಾವಿರಾರು ಜನಗಳನ್ನು ಆಯಾ ಕಡೆಗಳಿಗೆ ಕಳುಹಿಸಿ, ಗೋಡೆಗಳನ್ನು ಅಗೆದು ತೆಗೆಯಿಸಿ, ಜನರನ್ನು ಬಿಡಿಸುತ್ತಲೂ, ಅನೇಕಾನೇಕರಿಗೆ ಅನ್ನ ಪಾನಗಳಿಗೆ ಏರ್ಪಾಡು ಮಾಡುತ್ತಲೂ ಇದ್ದಾರೆ. ಕಾಶ್ಮೀರದ ಪಾಡು ಏನಾಗಿದೆಯೋ ಇನ್ನೂ ತಿಳಿಯಬಂದಿಲ್ಲ. ಅಲ್ಲೂ ತುಂಬಾ ಅನಾಹುತವಾಗಿದೆ ಎಂದು ಮಾತ್ರ ವರ್ತಮಾನವಿದೆ. ಸಿಂಲಾಪಟ್ಟಣದಲ್ಲಿ ವೈಸ್‌ರಾಯರವರ ಪತ್ನಿ ಪುತ್ರಿಯರು ಮಲಗಿದ್ದ ಅರಮನೆ ಕೊಠಡಿಯಲ್ಲೂ ಗೋಡೆಗಳ ಗೊಲ್ಲ ಸೀಳಿಯೂ ಬಿದ್ದು ಹೋದವು. ದೈವ ದಯದಿಂದ ಯಾವ ಅಪಾಯವೂ ಸಂಭವಿಸಲಿಲ್ಲ. ಈಗ ಅವರೆಲ್ಲಾ ಇನ್ನೊಂದು ಗಟ್ಟಿಯಾದ ಬಂಗಲೆಯಲ್ಲಿರುತ್ತಾರೆ.

ಈ ದುಃಖಪೂರಿತವಾದ ವೃತ್ತಾಂತವನ್ನು ವಿಲಾಯತಿಗೆ ಪತ್ರಿಕೆಗಳಲ್ಲಿ ಪ್ರಕಟಿಸಿ, ತುಂಬಾ ಅನುಕರಿಸುತ್ತಿವೆ. ಚಕ್ರವರ್ತಿಯವರೂ ಪ್ರಿನ್ಸ್ ಆಫ್ ವೇಲ್ಸ್‌ರವರೂ ಮಹನೀಯರಿಂದ ಇನ್ನೂ ಅನೇಕಾನೇಕರೂ ಬಹಳ ವ್ಯಸನಪಟ್ಟು ತಮ್ಮ ಮನೋಭಾವವನ್ನು ತಂತೀವರ್ತಮಾನದ ಮೂಲಕ ವೈಸ್‌ರಾಯರವರಿಗೆ ತಿಳಿಸಿರುತ್ತಾರೆ. ಅನೇಕ ಜನನ್ನ ಪ್ರಜೆಗಳು ಲಯವಾದದರಿಂದಲೂ ನೂರಾರು ಪಟ್ಟಣ ಗ್ರಾಮಗಳು ಹಳ್ಳಿಗಳು ಸಮೂಲವಾಗಿ ನಾಶಹೊಂದಿದನಿಂದಲೂ ಹೇಳಬಹುದಾಗಿದೆ. ಅದನ್ನೆಲ್ಲಾ ವಿವರವಾಗಿ ತಿಳಿಸುವುದು ಸಾಧ್ಯವಿಲ್ಲವೆಂದು ಬಿಟ್ಟಿದೇವೆ.

ವಿದೇಶ ವರ್ತಮಾನಗಳು.

ಟ್ರಾನ್ಸ್‌ವಾಲಿನಲ್ಲಿರುವ ಸಾವಿರಾರು ಚೀನಾದವರು ಸಂಸಾರ ಸಹಿತ ಆ ಪ್ರಾಂತ್ಯವನ್ನೇ ಬಿಟ್ಟು ಹೋಗಿ ಅಮೇರಿಕಾವರಿಗೆ ಹೋಗಿ ಅದೇ ಪ್ರದೇಶದಲ್ಲಿ ನಿಲ್ಲಬೇಕೆಂದು ಪ್ರಯತ್ನಪಡುತ್ತಿದ್ದಾರೆ.

ವಿಲಾಯತಿಯಲ್ಲಿ ಪ್ರಸಿದ್ಧ ವಿದ್ಯಾಶಾಲೆ ಇರುವ ಕೇಂಬ್ರಿಡ್ಜ್ ಪಟ್ಟಣದಲ್ಲಿ ಹಾಜಿ ಮಿಸರ್ ಅಬ್ದುಲ್ ಹುಸೇನ್ ಖಾನ್ ಎಂಬವರನ್ನು ಪಾರಸೀ ಉಪಾಧ್ಯಾಯರಾಗಿರಬೇಕೆಂದು ಅಧಿಕಾರಿಗಳು ನೇಮಿಸಿಕೊಂಡಿದ್ದಾರೆ.

*****

ಚೀನಾರಾಜ್ಯಕ್ಕೆ ಸೇರಿದ ಕ್ಯಾಂಟನ್ ಡಿಸ್ಟ್ರಿಕ್ಟಿನಲ್ಲಿ ಬೆಂಕಿಯು ಬೆಸೆಯಿಂದ ಸುಮಾರು ಮುನ್ನೂರು ಮೈಲಿ ಫಾಸಲೆಯ ಭೂಮಿಯೆಲ್ಲಾ ಸುಟ್ಟು ನಾಶವಾಯಿತು. ಈ ಅನಾಹುತದಲ್ಲಿ ೩೦೦ ಜನರು ಪ್ರಾಣ ಕಳೆದುಕೊಂಡರೆಂದು ಪ್ರಕಟವಾಗಿದೆ.

*****

ದಕ್ಷಿಣ ಆಫ್ರಿಕದ ಇಂಗ್ಲಿಷ್ ಸಾಮ್ರಾಜ್ಯಗಳಿಗೆ ಎಂಟು ವರುಷಗಳಿಂದ ಹೈ ಕಮಿಷನರಾಗಿದ್ದ ಲಾರ್ಡ್ ಮಿಲ್ನರ್ ಎಂಬವರು ಕಳೆದ ವಾರ ಆ ಕೆಲಸವನ್ನು ಬಿಟ್ಟು, ಜಹಜು ಹತ್ತಿ ವಿಲಾಯತಿಗೆ ಪ್ರಯಾಣ ಮಾಡಿದರು. ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಕರ್ಜನರವರು ಕೆಲಸ ಬಿಟ್ಟ ಮೇಲೆಗೆ ಹೋದ ಮೇಲೆ ಅವರ ಸ್ಥಾನಕ್ಕೆ ಲಾರ್ಡ್ ಮಿಲ್ನರ್ ಎಂಬವರು ನೇಮಕವಾಗಿ ಬರಬಹುದೆಂದು ವರ್ತಮಾನ ಹುಟ್ಟಿ ಇದೆ.

*****

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ಎಂಬವರಿಗೆ ಏನೋ ಕಾಯಿಲೆಯಾಗಿತ್ತಂತಲೂ ಶಸ್ತ್ರ ಪ್ರಯೋಗ ಮಾಡಿದ್ದಾಯಿತೆಂದೂ ಗಾಬರಿಪಡಬೇಕಾದ ಆಗತ್ಯವೇನೂ ಇಲ್ಲವೆಂದೂ ಅವರು ಕೆಲವು ದಿನ ಕೊಠಡಿಯಲ್ಲೇ ಇದ್ದುಕೊಂಡು ಅಲ್ಲಿಯೆ ಮಾಡಿಕೊಂಡಲ್ಲಿ ಆರೋಗ್ಯವಾಗುತ್ತದೆಂದೂ ಸರ್ ಫ್ರಾನ್ಸಿಸ್ ಲಾಕಿಂಗ್ ಮತ್ತು ಸರ್ ಫ್ರೆಡ್ರಿಕ್ ಟ್ರೀವ್ಸ್ ಎಂಬೀ ಪ್ರಸಿದ್ಧರಾದ ಡಾಕ್ಟರುಗಳೂ ತಂತೀ ವರ್ತಮಾನ ಕೊಟ್ಟಿದ್ದಾರೆ.

*****

ಮೋಟರ್ ಕಾರ್ ಎಂಬ ಸ್ವತಂತ್ರವಾಗಿ ಓಡುವ ಗಾಡಿಗಳು ಪ್ರಪಂಚದ ಪಟ್ಟಣಗಳಲ್ಲಿ ರೂಢಿಗೆ ಬರುತ್ತಿವೆ. ಅವು ೨೦ರಿಂದ ೬೦—೭೦ ಕುದುರೆಗಳ ಬಲದಷ್ಟು ಶಕ್ತಿಯನ್ನು ಪಡೆದು, ಗಂಟೆಗೆ ೩೦ ಮೈಲಿಯ ವರೆಗೆ ಬಹು ವೇಗವಾಗಿ ಓಡುವವು. ಅಮೇರಿಕ ರಾಜ್ಯದ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ಸರ್ಕಾರದವರು ಈ ಗಾಡಿಗಳ ಸಂಖ್ಯೆ ಹೆಚ್ಚುತ್ತಿರುವದನ್ನು ನೋಡಿ, ಅದಕ್ಕೂ ತೆರಿಗೆ ಹಾಕಿ ವಸೂಲ್ಮಾಡಬೇಕೆಂದು ಕಾನೂನು ಮಾಡಿಕೊಂಡಿದ್ದಾರೆ. ಇದರಿಂದ ಒಂದು ವರುಷಕ್ಕೆ ೧೦ ಲಕ್ಷ ರೂಪಾಯಿ ತೆರಿಗೆ ಉತ್ಪತ್ತಿಯಾಗುತ್ತದೆ.

*****

ಕೊರಿಯಾ ರಾಜ್ಯವನ್ನು ಜಪಾನಿನವರು ವಶಪಡಿಸಿದವರಿಂದ ಗೆದ್ದು ಈಗತಾನೇ ಸ್ವಾಧೀನ ಪಡಿಸಿಕೊಂಡಿದ್ದಾರಷ್ಟೆ. ಆ ರಾಜ್ಯದ ಚಕ್ರವರ್ತಿಯವರ ಬಳಿಯಲ್ಲಿ ಕೆಲವು ಜನ ಅಧಿಕಾರಿಗಳು ಸೇರಿಕೊಂಡು, ಅಂತರಂಗದಲ್ಲೇ ರಷ್ಯಾದವರಿಗೆ ಸಹಾಯ ಮಾಡಬೇಕೆಂದು ಫಿತೂರಿ ನಡಿಸುತ್ತಿದ್ದಾರೆ. ಅವರು ಗುಟ್ಟಾಗಿ ಶಿಯುಲ್, ಪಾಂಗ್ಯಾಂಗ್, ಸೇಂಟ್ ಪೀಟರ್ಸ್‌ಬರ್ಗ್ ನಗರಗಳ ಸಂಗಡ ಕಾಗದಪತ್ರಗಳನ್ನು ನಡಸುತ್ತಿರುವುದು ಜಪಾನಿನವರಿಗೆ ತಿಳಿದು ಬಂದಿದೆ. ಜಪಾನಿನವರು ಅವರ ಮೇಲೆಲ್ಲಾ ಕಣ್ಣಿಟ್ಟು, ಬಹು ಕಠಿಣವಾಗಿ ಕಾರ್ಯಗಳನ್ನು ನಡಸುತ್ತಾ ಬಂದಿದ್ದಾರೆ.

*****

ಆಸ್ಟ್ರೇಲಿಯಾ ದ್ವೀಪದಲ್ಲಿ ಕಾಡ್ಗಿಚ್ಚುಗಳಿಂದ ಈ ವರುಷ ಅಪಾರವಾದ ನಷ್ಟಗಳುಂಟಾಗಿರುತ್ತವೆ. ನ್ಯೂಸೌತ್ ಡಿಸ್ಟ್ರಿಕ್ಟಿನಲ್ಲಿ ೨೦ ಮೈಲಿ ವಿಸ್ತಾರವುಳ್ಳ ಪ್ರದೇಶವೆಲ್ಲಾ ಬೆಂಕಿಯಿಂದ ಧ್ವಂಸವಾಯಿತು. ಕೊಲ್ಲಿಯಾಗಾನ್ ಪ್ರಾಂತ್ಯ ೧೫ ಮೈಲಿ ಪ್ರದೇಶವೂ ಸೋಸೇ ಎಂಬಲ್ಲಿ ೫೦,೦೦೦ ಎಕರೆ ಜಮೀನುಗಳೂ ಉರಿದು ಬೂದಿಯಾದವು. ಕುರಿ, ಗೋವುಗಳು, ಕುದುರೆ ಮೊದಲಾದ ಪ್ರಾಣಿಗಳು ಲಕ್ಷಗಟ್ಟಲೆ ಉರಿಯಲ್ಲಿ ಸಿಕ್ಕಿ ಲಯವಾಗಿವೆ. ಆ ಪ್ರಾಂತ್ಯ ಒಂದು ಕಡೆ ಅತ್ಯಧಿಕವಾದ ಹುಲ್ಲುಗಾವಲು ಪ್ರಾಪ್ತವಾಯಿತೆಂದೂ ಇದರಿಂದಲೇ ಕಾಡ್ಗಿಚ್ಚು ಉತ್ಪತ್ತಿಯಾಯಿತೆಂದೂ ವಿದ್ವಾಂಸರು ವಿವರಿಸುತ್ತಾರೆ.

*****

ವಾರ್ಸಾ ಪಟ್ಟಣದಲ್ಲಿ ಬರ್ನಾರ್ ಎಂಬೊಬ್ಬ ಪುಣ್ಯಾತ್ಮರು ಯಹೂದ್ಯ ಜನರಲ್ಲಿ ಅನಾಥರಾಗಿಯೂ ನಿರ್ಗತಿಕರಾಗಿಯೂ ಇರುವ ಗಂಡು ಹೆಣ್ಣು ಹುಡುಗರಿಗೋಸ್ಕರ ದೊಡ್ಡ ಅನಾಥಶಾಲೆಯನ್ನು ಏರ್ಪಡಿಸಿರುತ್ತಾರೆ. ಈ ಶಾಲೆಯಲ್ಲಿ ಮಕ್ಕಳಿಗೆ ಕಸಬುಗಳನ್ನು ಕಲಿಸಿ ಅಲ್ಲೇ ಸಾಕುತ್ತಾರೆ. ಈ ಮಕ್ಕಳಿಗೆ ಶನಿವಾರದ ದಿನ ಶಾಲೆಯಲ್ಲಿ ಅನ್ನ ಹಾಕುವದಿಲ್ಲ. ಅಲ್ಲಾ ಇಷ್ಟೇ ದುಡ್ಡು ಕೊಡುವರು. ಒಂದು ದಿನ ಈ ಹುಡುಗರೆಲ್ಲಾ ಒಟ್ಟಾಗಿ ಯುವರಾಜನ ಎದುರಿನಲ್ಲಿ ನಿಂತು—ತಮಗೆ ದುಡ್ಡು ಕೊಡುವುದು ತಮ್ಮ ತಿಂದಿಗೆ ಸಾಕಾಗುವದಿಲ್ಲವೆಂತಲೂ ಹೆಚ್ಚಾಗಿ ಕೊಡಬೇಕೆಂತಲೂ ಕೇಳಿಕೊಂಡರು. ಯುವರಾಜನು ಹಾಗೆ ಕೊಡಲಾಗದೆಂದು ಹೇಳಿದನು. ಇಷ್ಟಕ್ಕೇ ಆ ಮಕ್ಕಳೆಲ್ಲಾ ಕೋಪಿಸಿಕೊಂಡು, ಒಗ್ಗಟ್ಟಾಗಿ ಆ ಶಾಲೆಯನ್ನೇ ಪ್ರವೇಶಿಸದೆ ಹೊರಟು ಹೋದರು. ಧರ್ಮಶಾಲೆಗಳಲ್ಲೂ ಇಂಥಾ ವಿಚಿತ್ರ ನಡೆಯುವುದುಂಟೇ ಎಂದು ಅನೇಕರು ಆಶ್ಚರ್ಯಪಡುತ್ತಿದ್ದಾರೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

17

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ವಿದಗ್ಧ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ|| ರಾ|| ಶರಭಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲಾ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪ "ರೋಮನರ ಚರಿತ್ರೆ." ಕ್ರಯ ೦-೨-೦
೫. "ಗ್ರೀಕರ ಚರಿತ್ರೆ." ,, ೦-೨-೦
೬. "ಅನುಭವಾನಂದ",, ೦-೬-೦
೭ "ಗಣಿತ ಸಂಜೀವಿನಿ." ೧-೮-೦
೮. "ಗಣಿತ ಚಿಂತಾಮಣಿ" ೦-೧೦-೦
೯. "ಚಾಮರಾಜೇಂದ್ರ ವಿಲಾಸ." ೦-೧೨-೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ." ೦-೧೨-೦
೧೧. "೧೯೦೫ನೇ ವರುಷದ ಡೈರಿಗಳು."
ಪ್ಲೈನ್, ಪೆನ್ಸಿಲ್ ಸಹಿತ ೦-೬-೦; ಸಾದಾ ೦-೪-೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಜ್ವರಹರಿ, 22



ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಖಾಮ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧-೮ ರೂ., ರೂ. ೨-೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

◆◆◆◆◆◆◆◆◆

ಬಿ ಮಂ ಕ ಪೂ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಇವು ಎಲ್ಲಕ್ಕೂ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪ್ರಿಯ ಬಿಮಂಕರ್ಪೂರವನ್ನು ನಾನೂ ನನ್ನ ಕಾಬೇರಾದರೂ ಮ್ಯುನಿಸಿಪಲ್ ಅಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—

ಪತ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಲಂಡ್ ಪೇಟ್ ಸ್ಟ್ರೀಟ್, ಮದರಾಸ್.

ಮೆ|| ಇ. ಮಾರ್ಸ್‌ಡನ್‌ರವರ ಕನ್ನಡ ಐದನೆಯ ಪುಸ್ತಕದ ಅತ್ಯುತ್ತಮವಾದ ನೋಟ್ಸ್.

4

ನಾಲ್ಕನೆ ತರಗತಿ ವಿದ್ಯಾರ್ಥಿಗಳಿಗೆ ಅನೇಕ ಹೊಸಸಂಗತಿಗಳು ಬೋಧೆಯಾಗುವಂತೆ ರಚಿಸಲ್ಪಟ್ಟಿದೆ. ಏಪ್ರೆಲ್ ತಾ. ೧೫ಕ್ಕೆ ಸಿದ್ಧವಾಗುವುದು. ಕ್ರಯ ೪ ಆಣೆ. ೧೦ಕ್ಕೆ ಒಂದು ಡಿಸ್ಕೌಂಟು. ವಿಳಾಸ—ಕಾಗಲಗಲ್ಲ ನಾರಾಯಣಶಾಸ್ತ್ರಿ, ಕನ್ನಡ ಪಂಡಿತ, ಆ. ಟಿ. ಗೌರ್ನಮೆಂಟ್ ಕನ್ನಡಾ ಸ್ಕೂಲು, ಮೈಸೂರು.

ಹೋಮೋಸಿಯಾ.

ಕಷ್ಟ ಪರಿಹಾರ.

ಹಗಲುತ್ತಲೇ ನೋವು ವಾಸಿ ಯಾಗುತ್ತೆ.

2

ಈ ಔಷಧಿಯು ಮನೆ, ಆಪೀಸು, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಕಲ್ಯಾಣದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಶೀಲವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತುಗಳು, ಗೆಡ್ಡೆಗಳು, ಕಜ್ಜಿಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಜೇಳು ಕಡಿತದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨-೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨-೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨-೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

◆◆◆◆◆◆◆◆◆

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಕಳ್ಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಭಾಗಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ. ೨೬ ಸೆಲಂಡು ಪೇಟ್ ಸ್ಟ್ರೀಟ್. ಮದರಾಸ್.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ
ಬರೆದು ತರಿಸಿಕೊಳ್ಳಿ!

22

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

24—3—1905 ರಿಂದ 31—3—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ... ಈ ವಾರ ಸಂಖ್ಯೆ.	
ಬೆಂಗಳೂರು ಪಟ್ಟಣ	24	25	7	[illegible]
ಮೈಸೂರು ,,	4	4	1	[illegible]
ಬೆಂಗಳೂರು ಡಿಸ್ಟ್ರಿಕ್ಟು	27	23	59	[illegible]
ಮೈಸೂರು ,,	5	2	91	[illegible]
ಕೋಲಾರ್ ,,	3	3	18	[illegible]
ಕೋಲಾರ್ ಚಿನ್ನದ ಗಣಿಗಳು	2	2	8	[illegible]
ತುಂಕೂರು ಡಿಸ್ಟ್ರಿಕ್ಟು	11	10	3	[illegible]
ಹಾಸನ ,,	0	0	5	[illegible]
ಚಿತ್ರದುರ್ಗ ,,	8	6	46	[illegible]
ಕಡೂರ್ ,,	11	10	1	[illegible]
ಶಿವಮೊಗ್ಗ ,,	0	1	9	[illegible]
ಜುಮ್ಲಾ.	95	86	246	[illegible]

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಚೈತ್ರ ಶುದ್ಧ ಅಷ್ಟಮಿ ಗುರುವಾರದಿಂದ ಚೈತ್ರ ಶುದ್ಧ ಪೌರ್ಣ... ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಏಪ್ರೆಲ್

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶೇ...
13	ಗುರು *	ಅಷ್ಟಮಿ	8-2	ಪುಷ್ಯ	51 14	1
14	ಶುಕ್ರ ;;	ನವಮಿ	1-56	ಆಶ್ಲೇ	51-50	2
15	ಶನಿವಾ.	ದಶಮಿ	0-10	ಉಪರಿ	51-58	3
16	ರವಿವಾ †	ದ್ವಾದಶಿ	50 1	ಪುಬ್ಬ	45 5	4
17	ಚಂದ್ರ ‡	ತ್ರಯೋ	44 11	ಉತ್ತ	41 10	5
18	ಕುಜ ¶	ಚತುರ್ದಶಿ	35-5	ಹಸ್ತ	37-6	6
19	ಬುಧ §	ಪೌರ್ಣ	32-10	ಚಿತ್ತ	32-51	7

* ಶ್ರೀರಾಮನವಮಿ, ಸೌರಸಂವತ್ಸರಾರಂಭ ;; ಧರ್ಮರಾಜ ದಶಮಿ :: ಸ್ಮಾರ್ತೈಕಾದಶಿ. † ಮುಂಡ್ಯದಲ್ಲಿ ಜನಾರ್ಧನಸ್ವಾಮಿ ರಥ, ದಗ್ಧಯೋಗ, ಹರಿವಾಸರ. ‡ ಸೋಮಪ್ರದೋಷ, ಮಾ... ರಂಗನಾಥ ರಥ. ¶ ಅಪ್ರಮೇಯಸ್ವಾಮಿ ರಥ § ಚಿತ್ರಾಪೂರ್ಣಿಮಾ, ಹಂಪ ವಿರೂಪಾಕ್ಷ ರಥೋತ್ಸವ, ಬಿಳಿಗಿರಿ ರಂಗನಾಥ ... ಶ್ರೀರಂಗಪಟ್ಟಣದಲ್ಲಿ ಗಂಗಾಧರಸ್ವಾಮಿ ರಥ.

ಪೇಟೆ ಧಾರಣೆ.

ದಿನಸು.	ಮೈಸೂರು.	ಬೆಂಗಳೂ...
ಕಡ್ಲೇ ಅಕ್ಕಿ ಪಲ್ಲ ೧ಕ್ಕೆ	ರೂ. ೧೦-೮-೦	೧೧-೦
ಕೆಂಪು ಅಕ್ಕಿ ಅವಲ್ ..	.. ೧೦-೪-೦	೧೧-೦
,, ಮುರಿಯಂ	.. ೯-೧೨-೦	೧೦-೮
ಜಾಪಾನ್ ಅಕ್ಕಿ ..	.. ೯-೮-೦	೧೨-೮
ಸಣ್ಣಕ್ಕಿ ಅವಲ್ ..	.. ೧೨-೦-೦	೧೨-೮
,, ಮುರಿಯಂ ..	.. ೧೧-೮-೦	೧೭-೦
ತೊಗರೀ ಬೇಳೆ ಪಲ್ಲ ೧ಕ್ಕೆ	.. ೧೦-೮-೦	೧೨-೦
,, ಮುರಿಯಂ ..	.. ೧೧-೦-೦	೧೦-೮
ಪೈರ ರಾಗಿ ಪಲ್ಲ ೧ಕ್ಕೆ ..	.. ೪-೧೨-೦	೪-೧೦
ಕಾರಾಗಿ ..	.. ೪-೭-೦	೪-೬
ಜೋಳ ..	.. ೪-೧೨-೦	೩-೦
ಕಲಸಂದೆ ಪಲ್ಲ ೧ಕ್ಕೆ ..	.. ೮-೧೨-೦	೮-೦
ಬಿಳೇ ಅವರೆ ..	.. ೬-೧೨-೦	೬-೦
ಹೆಸರು ..	.. ೯-೧೨-೦	೯-೦
ಉದ್ದು ..	.. ೮-೧೪-೦	೯-೮
ಕಡಲೆ ..	.. ೯-೦-೦	೯-೦
ಎಳ್ಳು ..	.. ೧೬-೦-೦	೧೩-೫
ಹುರುಳಿ ..	.. ೮-೦-೦	೩-೧೦
ಹರಳು ೧೨೩ ಸೇರಿಗೆ ..	.. ೯-೮-೦	೩-೩
ಸೀಗೇಕಾಯಿ ಮಣ ೧ಕ್ಕೆ	.. ೨-೪-೦	೧-೧೨
ಮೆಣಸಿನಕಾಯಿ ..	.. ೪-೮-೦	೩-೮
,, ಮುರಿಯಂ ..	.. ೩-೧೨-೦	೩-೦
ಬೆಲ್ಲ ಹೊಸ್ಟ ಅಚ್ಚು ..	.. ೭-೪-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ ..	.. ೪-೦-೦	೪-೮
ಹರಳೆಣ್ಣೆ ,, ..	.. ೪-೦-೦	೩-೧೪
ಕೊತ್ತುಂಬರಿ ಪಲ್ಲ ೧ಕ್ಕೆ ..	.. ೬-೦-೦	೬-೧೦
ಸಾಸ್ವೆ ,, ..	.. ೮-೦-೦	೮-೫
ಮುಣಸೇ ಹಣ್ಣು ..	.. ೧-೪-೦	೧-೧೪
,, ಕಳೇದು ..	.. ೦-೧೪-೦	೦-೧೨
ಉಪ್ಪು	.. ೧.೨-೦-೦	೧೦-೮
ಸೀಮೆಯೆಣ್ಣೆ ಡಬ್ಬಿ ೧ಕ್ಕೆ	.. ೫-೩-೦	೪-೬
ತೆಂಗಿನಕಾಯಿ ೧೦೦ಕ್ಕೆ	.. ೫-೦-೦	೪-೦
ಅಡಿಕೇಕಾಯಿ ಮಣ ೧ಕ್ಕೆ	.. ೧-೦-೦	೦-೧೦
ಅಂಬ್ರೂತಕಾಯಿ ಮಣ ೧ಕ್ಕೆ	.. ೦-೧೪-೦	೦-೧೦
ತುಪ್ಪ (ಶೇರ) ಕೊಬ್ಬು	.. ೦೫-೮-೦	೦೫-೪
,, ,, ಹಸುವು	.. ೦೫-೧೦-೦	೦೫-೮
,, ,, ಗಟ್ಟಿ ತೊಲ ೧ಕ್ಕೆ ..	.. ೨೪-೦-೦	೨೪-೪
ಬೆಲ್ಲ ಗಟ್ಟಿ ತೊಲ ೧೦೦ಕ್ಕೆ ..	.. ೩೨-೦-೦	೩೦-೦

Printed and Published by the Rev. H. Spencer, B... the Proprietor and Manager, Wesleyan Mission Pre...
Mysore. 13/4/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಮೈಸೂರಿನಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ — ಮೈಸೂರು—ಸನ್ ೧೯೦೫ ನೇ ಇಸವಿ ಏಪ್ರೆಲ್ ತಾರೀಖು ೨೦ ನೇ ಗುರುವಾರ. — ಸಂಚಿಕೆ ೮೬

ಇ. ನರ್ಸ್‌ರವರ ಕನ್ನಡ ಬರೆಯ ಪುಸ್ತಕದ ಉತ್ಕೃಷ್ಟವಾದ ನೋಟ್ಸು.

5

ನಾಲ್ಕನೆ ತರಗತಿ ವಿದ್ಯಾರ್ಥಿಗಳಿಗೆ ಅನೇಕ ಹೊಸಸಂಗತಿಗಳು ಗೊತ್ತಾಗುವಂತೆ ರಚಿಸಲ್ಪಟ್ಟಿದೆ. ಏಪ್ರೆಲ್ ತಾ. ೧೫ಕ್ಕೆ ಸಿದ್ಧವಾಗುವದು. ಕ್ರಯ ೪ ಆಣೆ ೧೫ಕ್ಕೆ ಒಂದು ಡಿಸ್ಕೌಂಟು. ವಿಳಾಸ—ಗೋರೂರು ನಾರಾಯಣಶಾಸ್ತ್ರಿ, ಕನ್ನಡ ಪಂಡಿತ, ಆ. ವಿ. ಗೌರ್ನಮೆಂಟ್ ಕನ್ನಡ ಸ್ಕೂಲು, ಮೈಸೂರು

ಕಥಾಸಂಗ್ರಹ—ಮೊದಲನೆ ಭಾಗ.

6

ವಿಕ್ರಯಕ್ಕೆ ಬಂದಿರುವ ಕನ್ನಡ ನೀತಿಯ ಕಥಾಸಂಗ್ರಹದಲ್ಲಿ ೧, ೨, ೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಮಾತಿನ ರೀತಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಅಚ್ಚಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಕಮಿಷನ್ ಸಿಕ್ಕುವದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೇವೆ. ವಿಳಾಸ—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

P. SUBBAROY'S

World Renowned and most Efficacious

Ayurvedic Medicines

ಪಿ. ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

1

ಪಚ್ಚಕರ್ಪೂರ ಕಸ್ತೂರಿ ಮಾತ್ರೆ.

ಭೋಜನಾನಂತರ ತಾಂಬೂಲದ ಸಂಗಡ ೧–೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವದು. ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು. ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಮೊದಲಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ.—೧ರಿಂದ ೬ವರೆಗೆ ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ಸೀಸೆಗೆ ವಿ. ಪಿ. ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕಾರವಾದವುಗಳೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮ್ಮದ್ ಸಮಾಚಾರ.

ಆಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಯ ಸಂಗಡ ಹಾಕಿಕೊಂಡರೆ ಪಿತ್ಥ, ತಲೇನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುರಷೋತ್ತಮ ಪೋಲೀಸ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕೈಲಾಸ್.

Apply to—P. SUBBAROY, Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್, ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಫಾರೆಸ್ಟು ಇಲಾಖಾ.

ಇಸ್ತಿಹಾರ್. ೧೯೦೫ನೆ ಇಸವಿ ಏಪ್ರಿಲ್ ತಾರೀಖು ೧೧ ರಲ್ಲು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಜೌಬೀನೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಬೆಳಗ್ಗೆ ೮ ಗಂಟೆಗೆ ಹರಾಜು ಶುರು ಆಗುತ್ತೆ.

ಡಿಪೋ ಹೆಸರು	ಹರಾಜು ತಾರೀ	ಹರಾಜು ಮಾಡುವ ಆಫೀಸರ ಹೆಸರು	ಸಾಗ್ವಾನಿ ನಾಟ ಮತ್ತು ದಿಂಡಿ.		ಮನ್ನಾ ಜಾತಿ ನಾಟ ಮತ್ತು ದಿಂಡಿ.		ಕಾಡು ನಾಟ ಮತ್ತು ದಿಂಡಿ.		ಸಾಗ್ವಾನಿ ಸರ		ಮನ್ನಾ ಜಾತಿ ಸರ.		ಕಾಡಸರ.	
			ಅದದು	ಸಲಿಕಿ	ಅದದು	ಸಲಿಕಿ	ಅದದು	ಸಲಿಕಿ	ಅದದು	ಸಲಿಕಿ	ಅದದು	ಸಲಿಕಿ	ಅದದು	ಸಲಿಕಿ
ಮೈಸೂರು ಉಡ್ಯ ದುರ್ಗ.	5 5 1905	ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರು,	1009	20141	711	14635	43	714	,,	,,	,,	,,	,,	,,
ನಂಜನಗೂಡು ಡಿಪೋ	8 5 1905	ಮೈಸೂರ್ ಡಿಸ್ಟ್ರಿಕ್ಟು.	739	5556	1009	9309	271	3291	171	198	52	106	,,	,,

ಸದರಿ ೧೯೦೫ನೆ ಇಸವಿ ಮಾರ್ಚಿ ೧೦ನೆ ಮುಕ್ಕಾಂ ೧೪೨ ಆರ್. ಎಫ್. ೧೯೧೪—೦೫ನೆ ನಂಬರು ಇಸ್ತಿಹಾರ್ ನಾಮೆಯನ್ನು ೨೪— —೦೫ ಮುಕ್ಕಾಂ ೧೪ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಿ ಮಾಡಿರುತ್ತೆ.

ಹೊಸ ನೋಟ್ಸು.

ಪೆಕ್ಕಿ ಪ್ರಭಾಕರವರ ೩೧, ೬ನೆಯ ಕನ್ನಡ ಪುಸ್ತಕಗಳಿಗೆ ೬ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

4

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನಸಹಿತ ಈ ನೋಟ್ಸನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಭೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ ೮ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಷೆ)	೦—೧—೦
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೧—೬
೧೯೦೫ನೆ ವರ್ಷದ ಲೋವರ್ ಸೆಕಂಡರಿ ನೋಟ್ಸು	೦—೬—೦

ವಿಳಾಸ—ಡಾಕ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು

ಸುಲಭಕ್ರಯ · ಸುಗಂಧದ್ರವ್ಯಗಳು

20

ಅಂಬರ್ ಕಡ್ಡಿ ೪-೮ ೧ಕ್ಕೆ	೫—೦—೦
ವಸಂತಧಾರಾವಳೀಪತ್ರ	೮—೦—೦
ಕಸ್ತೂರಿ ಕಡ್ಡಿ . ೧ಕ್ಕೆ ..	೨—೮—೦
ಪುನುಗು ಕಡ್ಡಿ .. ೧ಕ್ಕೆ	೧—೮—೦
ಮಲ್ಲಿಗೆ ಕಡ್ಡಿ .. ೧ಕ್ಕೆ ..	೦—೧೦—೦
ಕಸ್ತೂರಿ ಬಿಲ್ಲೆ ತೊಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಅಷ್ಟಗಂಧ ತೊಲ ೧ಕ್ಕೆ	೨—೦—೦
೨ನೆ ..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ, ಮರ ಕಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ ..	೧—೪—೦
ಕೇಶಲ್ಲಾಸಿನಿ ತೈಲ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಸೀಸೆ ೧ಕ್ಕೆ	೦—೯—೦
ತಂಬಾಕ್ ಷೋಕ್ ಡಬ್ಬಿ ೧ಕ್ಕೆ ..	೦—೨—೦
ಶ್ರೀಮದ್ವೈಷ್ಣವ ಶಾಸ್ತ್ರೀಯ ದಶಾಂಗ ತೈಲ ೧ಕ್ಕೆ	೬—೧೨—೦
ಪುಷ್ಪಾ ತೊಲ ೧ಕ್ಕೆ	೨—೦—೦
೨ನೆ ..	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ವಸಂತಮಾಲಿನೀಯ ಘುಟಿಕಾ ೧೦೦ಕ್ಕೆ ..	೨—೦—೦

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಕೆಟಲಾಗ್ ತರಿಸುವವರಿಗೆ ಉಚಿತವಾಗಿ ದೊರೆಯುತ್ತದೆ. ವಿಳಾಸ —ಟಿ ಎಲ್. ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ಘನತೆಯುಳ್ಳ ಸ್ತ್ರೀಯರ ಚರಿತ್ರೆಯು.

ಚಿತ್ರ ಸಹಿತವಾದುದು.

1

ರಾಣಿವಾಸದವರು, ವಿದ್ಯಾರ್ಥಿನಿಯರು, ಸಾಮಾನ್ಯಸ್ತ್ರೀಯರು ಸಕಲರಿಗೂ ಸರ್ವೋತ್ತಮವಾದ ಮೇಲ್ಪಂಕ್ತಿಯನ್ನು ಹೇಳಿಕೊಡುವ ಪುಸ್ತಕ. ಮೊದಲನೆ ಸಲ ಪ್ರಿಂಟಾದ ಪುಸ್ತಕಗಳೆಲ್ಲಾ ಬಿಕರಿಯಾಗಿರುವದೇ ಈ ಪುಸ್ತಕದ ಪ್ರಯೋಜನವನ್ನು ಪ್ರಕಾಶಪಡಿಸುತ್ತದೆ. ಈ ಪುಸ್ತಕವನ್ನು ಈಗ ಎರಡನೆಯ ಸಲ ಪ್ರಿಂಟುಮಾಡಿದೆ. ಸೊಗಸಾದ ದಪ್ಪ ಗ್ಲೇಜುಳ್ಳ ಕಾಗದ, ಸುಂದರವಾದ ಬೈಂಡು, ನೇತ್ರಾನಂದಕರವಾದ ಸ್ತ್ರೀಯರ ಜೀವಚಿತ್ರಗಳು, ಮನೋಹರವಾದ ಅವರ ಚರಿತ್ರೆಗಳು—ಇವುಗಳಿಂದ ಕೂಡಿದ್ದಾಗಿದೆ. ಅತ್ಯಂತ ಬಡಬಗ್ಗರೂ ಕೊಳ್ಳಬಹುದಕ್ಕೆ ಅನುಕೂಲವಾಗಲೆಂದು ಈ ಪುಸ್ತಕದ ಕ್ರಯವನ್ನು ಬಹಳ ಅಗ್ಗವಾಗಿ ಮಾಡಿದೆ. ಕ್ರಯ ೦ ಪ್ರತಿಗೆ ೨॥ ಆಣೆಮಾತ್ರ. ವಿ. ಪಿ. ಮೂಲಕ ತರಿಸಿ ಕೊಂಡಲ್ಲಿ ೪ ಆಣೆ ಬೀಳುವುದು. ವಿಳಾಸ—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

WESLEYAN MISSION PRESS, MYSORE.

ಮೈಸೂರು ವೆಸ್ಲೀಯನ್ ಮಿಷನ್ ಪ್ರೆಸ್.

13

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುತ್ತೇವೆ.

ಇವಲ್ಲದೆ ಕನ್ನಡ ಅಕ್ಷರಗಳು—ಟೋಲ್ಸನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ಪಟಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್, ಮಿಷನ್ ಪ್ರೆಸ್, ಮೈಸೂರು.

ಇಸ್ತಿಹಾರ್.

3

ಮೈಸೂರು ಸೀಮೆಯಲ್ಲಿ ೧೯೦೫ ನೇ ಇಸವಿ ಜುಲೈ ಗುತ್ತಿಗೆ ಲಾಗಾಯಿತು ೧೯೦೬ ನೇ ಇಸವಿ ಜೂನ್ ೩೦ ನೇ ತಾರೀಖಿಗೆ ಪೈದಾಗುವ ವರುಷದಲ್ಲಿ ಶರಾಬ್, ಶೇಂದಿ ಬಿಯರ್, ಗಾಂಜಾ ಮತ್ತು ಅಫೀಂನ ಅಂಗಡಿಯಲ್ಲಿ ವ ಅಂಗಡಿಗಳ ಸಮುದಾಯದಲ್ಲಿ ವಿಕರಿಮಾಡುವ ಸ್ವಾತಂತ್ರ್ಯದ ಹಕ್ಕು ೧೯೦೫ ನೇ ಇಸವಿ ಮಾರ್ಚಿ ೨೩ ನೇ ತಾರೀಖಿನ ಮೈಸೂರು ಗೆಜೆಟ್‌ನಲ್ಲಿ ಥಾಯಿಷ್ ಆಗಿರುವ ಷರತ್ತುಗಳಿಗೆ ಒಳಪಟ್ಟು, ಅವರಲ್ಲಿ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

(ರುಜು ಆಗಿದೆ) ಪಿ. ಎನ್. ಪೂರ್ಣಯ್ಯ,
ಎಕ್ಸೈಜ್ ಕಮಿಷನರ್, ಮೈಸೂರು.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15



ಕೆಳಹೊಟ್ಟೆಯ ನೋವು ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಸೆಳೆತಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಈ ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ವೃತ್ತಾಂತ ಪತ್ರಿಕೆ.

ಸರ್ ೧೯೦೫ ನೇ ಇಸವಿ ಏಪ್ರಿಲ್ ತಾ|| ೨೦ ನೇ ಗುರುವಾರ.

ಕ್ರೈಸ್ತಮತಕ್ಕೆ ಸೇರಿಕೊಳ್ಳುವವರ ಹಕ್ಕು ಬಾಧ್ಯತೆಗಳು.

ಈ ಸಂಸ್ಥಾನದ ಮತ್ತು ಬ್ರಿಟಿಷ್ ರಾಜ್ಯಭಾರದ ಪ್ರಜೆಗಳಾದವರಿಗೆ ಇರುವ ಹಕ್ಕು ಬಾಧ್ಯತೆಗಳನ್ನೆಲ್ಲಾ ಕ್ರೈಸ್ತಮತವನ್ನು ಅಂಗೀಕರಿಸಿದವರಿಗೂ ಸಂಪೂರ್ಣವಾಗಿ ಕಲ್ಪಿಸಿಕೊಡಬೇಕೆಂಬ ವಿಚಾರವನ್ನು ಕುರಿತು ಚರ್ಚೆ ನಡೆಸುವುದಕ್ಕೋಸ್ಕರ ಕೆಲವು ಮಂದಿ ದೊಡ್ಡ ಮನುಷ್ಯರನ್ನೊಳಗೊಂಡ ಒಂದು ಕಮಿಟಿಯು ಈಚೆಗೆ ಸಭಾರ್ಣತಾಗಿದೆ ಎಂಬುವುದನ್ನು ತಿಳಿದು ಸಂತೋಷಪಡುತ್ತೇವೆ. ಈ ಕಾನೂನಿನ ಬದಲಾವಣೆಯು ಬಹುಕಾಲಕ್ಕೆ ಮುಂಚೆಯೇ ಆಗಬೇಕಾಗಿತ್ತು; ಇದುವರೆಗೂ ಬದಲಾವಣೆಯಾಗದೆ ಇರುವದು ಮೈಸೂರು ಸಂಸ್ಥಾನದ ರಾಜ್ಯಭಾರಕ್ರಮದಲ್ಲಿ ಪ್ರಮಾದಲೋಪವಾಗಿರುತ್ತದೆ. ಆದರೂ ಇಷ್ಟರಲ್ಲೇ ಈ ಭರತಖಂಡದಲ್ಲಿ ಬ್ರಿಟಿಷ್ ಪ್ರಜೆಗಳಾದ ಕ್ರೈಸ್ತರಿಗಿರುವಂಥಾ ಹಕ್ಕು ಬಾಧ್ಯತೆಗಳೆಲ್ಲಾ ಮೈಸೂರು ಸಂಸ್ಥಾನದ ಕ್ರೈಸ್ತಮತಾವಲಂಬಿಗಳಿಗೂ ಕೊಡಲ್ಪಟ್ಟವೆ ಎಂಬುವುದನ್ನು ತಿಳಿಯಪಡಿಸುವಂತಾದೀತೆಂದು ನಿರೀಕ್ಷಿಸುವವರಾಗಿದ್ದೇವೆ.

ಈ ವಿಷಯವನ್ನು ಕುರಿತು ಚರ್ಚಿಸುವುದಕ್ಕಾಗಿ ರಾಜಧಾನಿಯಲ್ಲಿ ಈಚೆಗೆ ಒಂದು ಸಭೆ ಕೂಡಿ ಇತ್ತೆಂದು ತಿಳಿದುಬಂದಿದೆ. ಈ ಸಭೆಯು ಪಬ್ಲಿಕ್ಕಾಗಿ ನಡೆಯಿತೆಂದೂ ಮೈಸೂರು ಪಟ್ಟಣದಲ್ಲಿರುವ ಸಮಸ್ತ ಪಂಗಡಗಳ ಪ್ರತಿನಿಧಿಗಳೂ ಅಪಾರವಾಗಿ ಬಂದು ಹಾಜರಾಗಿದ್ದರೆಂದೂ ಮೈಸೂರ್ ಹೆರಲ್ಡ್ ಎಂಬ ಪತ್ರಿಕೆಯು ಹೇಳುತ್ತದೆ. ಈ ಸಭೆಯು ಹೀಗೆ ಎಷ್ಟುಮಾತ್ರಕ್ಕೂ ನಡೆಯಲಿಲ್ಲವೆಂತಲೂ ಎಲ್ಲಾ ಕೋಮುಗಳವರೂ ಹಾಜರಾಗಿರಲಿಲ್ಲವೆಂತಲೂ ಅನುಮಾನಿಸದೆ ಹೇಳಬಲ್ಲೆವು. ಕ್ರೈಸ್ತ ಪ್ರಜೆಗಳ ಪೈಕಿ ಒಬ್ಬರಾದರೂ ಹೋಗಿರಲಿಲ್ಲ. ಕ್ರೈಸ್ತರಿಗಾಗಲಿ ಅವರಲ್ಲಿ ಹೋಗಿ ಬರುತ್ತಿರುವಂಥಾ ಇತರರಿಗಾಗಲಿ ಈ ಮೀಟಿಂಗಿನ ವಿಚಾರವನ್ನೇ ತಿಳಿಸದಂತೆಯೂ ಅಂಥವರ್‍ಯಾರೂ ಬಾರದಂತೆಯೂ ಏರ್ಪಡಿಸಿಕೊಂಡಿದ್ದರೋ ಏನೋ. ಈ ಮೀಟಿಂಗನ್ನು ನಡಿಸಿದ ಮುಖಂಡರು ತಮ್ಮ ತೀರ್ಮಾನಗಳನ್ನು ಮೈಸೂರು ಪುರನಿವಾಸಿಗಳ ಅಭಿಮತವೆಂದು ತಿಳುಕೊಳ್ಳಲೆಂದು ಎಣಿಸಿ, ಶ್ರೀಮನ್ ಮಹಾರಾಜರವರಿಗೂ ಮೈಸೂರು ಗವರ್ನಮೆಂಟಿಗೂ ಕಳುಹಿಸುತ್ತಾರೆ. ಹಾಗೆ ಮಾಡಲು ಅವರಿಗೆ ಯಾವ ಅಧಿಕಾರವೂ ಇರುವುದಿಲ್ಲ. ನಿಮ್ಮಂತೆ ಅಭಿಪ್ರಾಯಪಡದವರನ್ನೂ ಅಸಮಾನಸ್ಥರನ್ನೂ ಮೀಟಿಂಗಿಗೆ ಬಾರದಂತೆ ನೋಡಿಕೊಂಡ ಮೇಲೆ ಏಕಮತ್ಯವಾದ ತೀರ್ಮಾನವನ್ನು ಪಡೆಯುವುದು ಬಹಳ ಸುಲಭವಾಗಿಯೇ ಇರುತ್ತದೆ. ಒಂದು ವೇಳೆ ಕ್ರೈಸ್ತರನ್ನೂ ಮೀಟಿಂಗಿಗೆ ಬರಮಾಡಿಕೊಂಡಿದ್ದರೆಂದು ಇಟ್ಟುಕೊಳ್ಳೋಣ. ಆಗ್ಗೂ ಆ ಮುಖಂಡರ ಅಭಿಮತದಂತೆಯೇ ತೀರ್ಮಾನವಾಗುತ್ತಿದ್ದಿತು. ಯಾಕೆಂದರೆ ಮೈಸೂರು ಪ್ರಜಾಸಂಖ್ಯೆಯಲ್ಲಿ ಕ್ರೈಸ್ತರ ಸಂಖ್ಯೆಯು ಅತ್ಯಲ್ಪವಾಗಿರುವುದು. ಮೀಟಿಂಗನ್ನು ಏರ್ಪಡು ಮಾಡಿದವರಿಗೆ ಈ ಹಕ್ಕು ಬಾಧ್ಯತೆಗಳ ವಿಚಾರದಲ್ಲಿ ಪರಪಕ್ಷವೂ ಉಂಟು ಎಂಬುವುದು ಎಲ್ಲಿ ಪ್ರಕಾಶವಾಗುವುದೋ, ಪರಪಕ್ಷವನ್ನು ಹಿಡಿದು ಯಾರು ಏನು ಹೇಳುವರೋ ಎಂಬ ಹೆದರಿಕೆಯು ಇತ್ತೆಂದೂ ಊಹಿಸಬೇಕಾಗುತ್ತದೆ. ಹ್ಯಾಗೂ ಇಂಥಾ ಮೀಟಿಂಗಿನಲ್ಲಿ ಈ ಪ್ರಕಾರ ತೀರ್ಮಾನ ಮಾಡಿಕೊಂಡಿರುವ ಅಂಶಗಳನ್ನು ಶ್ರೀಮನ್ ಮಹಾರಾಜರವರೂ ಅವರ ಮಂತ್ರಾಲೋಚನಸಭೆ ಸೇರಿರುವವರೂ ಯಾವ ರೀತಿಯಲ್ಲಿ ಎಷ್ಟು ಮಟ್ಟಿಗೆ ಗಣ್ಯತೆಯಿಂದ ಕಾಣಬೇಕೆಂಬುವುದನ್ನು ಚೆನ್ನಾಗಿ ಬಲ್ಲರೆಂದು ನಾವು ತಿಳಿದಿರುತ್ತೇವೆ.

ಮೇಲ್ಕಂಡ ಮೀಟಿಂಗಿನಲ್ಲಿ ಮಾತನಾಡಿದವರು ಪಿತ್ರಾರ್ಜಿತವಾದ ಆಸ್ತಿಯು ಪಾರಲೌಕಿಕವಾದ್ದೆಂತಲೂ ಐಹಿಕವಲ್ಲವೆಂತಲೂ ಹೇಳಿದಂತೆ ಪ್ರಕಟವಾಗಿದೆ. ಹಾಗಾದ ಮೇಲೆ ಹಿಂದೂ ಮತವು ತನ್ನ ಆಶ್ರಿತರಿಗೆ— ನನ್ನನ್ನು ಬಿಟ್ಟು ಹೋಗಬೇಡ; ಇಗೋ, ಈ ಆಸ್ತಿಯನ್ನು ನೋಡು; ನನ್ನನ್ನೇ ನಂಬಿಕೊಂಡಿದ್ದರೆ ಇದನ್ನು ಬಹುಮಾನವಾಗಿ ನಿನಗೆ ಕೊಡುತ್ತೇನೆ ಎಂದು ಹೇಳುವ ಸ್ಥಿತಿಗೆ ಬಂದಿದೆಯೋ! ಹಿಂದೂ ಮತವು ಕ್ರೈಸ್ತ ಮತ ಮಹಮ್ಮದೀಯ ಮತಗಳಂತೆ ಒಂದೇ ರೀತಿಯಾಗಿರುವುದಕ್ಕಾಗದೋ? ಹಿಂದುಗಳು ಮಹಮ್ಮದೀಯರಾದರೂ ಇದೇ ಪ್ರತಿಬಂಧಕವಿರುವುದಲ್ಲಾ? ಈಗ ಈ ಸಂಸ್ಥಾನದಲ್ಲಿ ರೂಢಿಸುತ್ತಿರುವ ನ್ಯಾಯಾನುಸಾರವಾಗಿ ನೋಡಿದರೆ ಹಿಂದೂ ಮತವು ತನ್ನ ಆಶ್ರಿತರನ್ನು ಕರೆದು "ನೀವು ಇಷ್ಟಪಟ್ಟರೆ ಕ್ರೈಸ್ತಮತಾವಲಂಬಿಗಳಾಗಿ; ನಾನೇನೂ ಆಕ್ಷೇಪಣೆ ಮಾಡುವುದಿಲ್ಲ. ಆದರೆ ಒಂದನ್ನು ಮಾತ್ರ ಮರೆಯಬೇಡಿ, ನೀವು ಹಾಗೆ ಕ್ರೈಸ್ತರಾಗುವ ಪಕ್ಷದಲ್ಲಿ ನಿಮಗೆ ಪಿತ್ರಾರ್ಜಿತವೇನೂ ಸಿಕ್ಕಲಾರದು. ನಿಮ್ಮ ಸಂಸಾರದ ಮೇಲೆ ನಿಮಗಿರುವ ಹಕ್ಕು ಬಾಧ್ಯತೆಗಳನ್ನೆಲ್ಲಾ ಕಳೆದುಕೊಳ್ಳುವಿರಿ" ಎಂದು ಹೆದರಿಸುವ ಹಾಗಿದೆ. ಸತ್ಯಾರ್ಥಿಯಾಗಿ ತೊಳಲುವವನಿಗೆ ಇಂಥಾ ಪ್ರತಿಬಂಧಕಗಳನ್ನೂ ಸಂಕೋಲೆಗಳನ್ನೂ ಹಾಕಿ ಕಟ್ಟಿಹಾಕುವುದು ತರವಲ್ಲ. ಆದರೂ ಅಂಥಾ ಮಹನೀಯರನೇಕರು ಸತ್ಯವನ್ನು ಕಂಡುಹಿಡಿದು ನಂಬಿದ್ದರ ದೆಸೆಯಿಂದ ಅದಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡುವುದಕ್ಕೆ ಸಿದ್ಧರಾಗಿರುವರು. ಇಂಥಾ ಪ್ರತಿಬಂಧಕಗಳು ಅನೇಕವಾಗಿದ್ದಾಗ್ಯೂ ಕ್ರೈಸ್ತ ಮತವು ನಿಧಾನವಾಗಿಯೂ ಸ್ಥಿರವಾಗಿಯೂ ಹರಡಿಕೊಳ್ಳುತ್ತಲೇ ಇದೆ. ಈಗ ಕ್ರೈಸ್ತರಾಗುವವರಿಗೆ ಇಟ್ಟಿರುವಂಥಾ ಪ್ರತಿಬಂಧಕಗಳನ್ನು ತೆಗೆದುಹಾಕಿಬಿಟ್ಟರೆ ಕ್ರೈಸ್ತ ಮತವು ಇನ್ನೂ ಹೆಚ್ಚಾಗಿಯೂ ಶೀಘ್ರವಾಗಿಯೂ ಹಬ್ಬುವುದೆಂದು ಅನೇಕರು ಗಾಬರಿಬಿದ್ದು ಇಂಥಾ ಬದಲಾವಣೆಯಾಗಕೂಡದೆಂದು ಹೇಳಬಹುದು. ಗವರ್ನಮೆಂಟಿನವರು ಪ್ರಜೆಗಳ ಮತವಿಚಾರದಲ್ಲಿ ಪ್ರವರ್ತಿಸುವುದಿಲ್ಲವೆಂದು ಮಾತುಕೊಟ್ಟವರಷ್ಟೆ. ಈ ಮಾತಿಗೆ ಈ ಕಾನೂನಿನ ಬದಲಾವಣೆಯು ವಿರೋಧವಾಗುವುದು ಎಂಬುದಾಗಿ ಅನೇಕರು ಆ ದಿನ ಸಭೆಯಲ್ಲಿ ಹೇಳಿದರು. ಈಗಿರುವ ಕಾನೂನೇ ಆ ಮಾತಿಗೆ ವಿರೋಧವಾಗಿರುತ್ತದೆ. ಈಗಿನ ಕಾನೂನು ಬದಲಾವಣೆಯಾದರೇನೇ ಗವರ್ನಮೆಂಟಿನವರ ವಾಗ್ದಾನಕ್ಕೆ ಅನುಸಾರವಾದೀತು. "ನೀನು ಕ್ರೈಸ್ತನಾಗದೆಹೋದ ಪಕ್ಷದಲ್ಲಿ ನಿನಗೆ ಪಿತ್ರಾರ್ಜಿತ ಆಸ್ತಿ ಉಂಟು; ಇನ್ನು ಕೆಲವು ಹಕ್ಕು ಬಾಧ್ಯತೆಗಳನ್ನೂ ಅನುಭವಿಸಬಹುದು' ಎಂದು ಹೇಳಿದರೆ ಅದು ಎಂಥಾ ನಡತೆ ಎನ್ನಿಸಿಕೊಳ್ಳುವುದು? ಇದು ನಿಷ್ಪಕ್ಷಪಾತವೋ, ಪಕ್ಷಪಾತವೋ? ಈಗಿನ ನ್ಯಾಯಕ್ರಮದಂತೆ ಕ್ರೈಸ್ತರ ವಿಷಯದಲ್ಲಿ ಪ್ರತಿಬಂಧಕಗಳೇ ಇರುವುದಲ್ಲದೆ ನಿಷ್ಪಕ್ಷಪಾತವೇ ಇಲ್ಲ. ಪ್ರಜೆಗಳಲ್ಲಿ ಸಮಸ್ತ ಜಾತಿಯವರಿಗೂ ಕಾನೂನೂ ಹಕ್ಕು ಬಾಧ್ಯತೆಗಳೂ ತಾರತಮ್ಯವಿಲ್ಲದ ಸಕಲೀಕೃತವಾಗಿರುವಂತೆ ಆಗಬೇಕೆಂಬುದೇ ಕ್ರೈಸ್ತ ಸಮುದಾಯದವರ ಮುಖ್ಯ ಕೋರಿಕೆಯೂ ನಿರೀಕ್ಷೆಯೂ ಆಗಿದೆ.

ಬಗೆಬಗೆಯ ವೃತ್ತಾಂತಗಳು.

ನಮ್ಮ ಮಹಾರಾಜರವರು ಜುಲೈ ತಿಂಗಳಲ್ಲಿ ಕಲ್ಕತ್ತಾ ಪಟ್ಟಣಕ್ಕೆ ದಯಮಾಡಬಹುದೆಂದು ವ್ಯಕ್ತವಾಗಿದೆ.

* * * *

ಚೀಫ್ ಜಸ್ಟಿಸ್ ಮಿ|| ಸ್ಟೇಬಿಯವರು ಬೇಸಿಗೆ ರಜಾದೊಂದಿಗೆ ಇನ್ನೊಂದು ತಿಂಗಳ ರಜಾ ಪಡೆದು, ಪತ್ನಿಸಹಿತ ವಿಲಾಯಿತಿಗೆ ಪ್ರಯಾಣ ಮಾಡಿದಾರೆ.

* * * *

ಶಿವಮೊಗ್ಗಾ ಪ್ರಾಂತ್ಯಕ್ಕೆ ಮಿ|| ಭಾಭಾ ಯವರು ಸರ್ಕೀಟ್ ಹೋಗಿದ್ದಾರೆ. ಆ ಪ್ರಾಂತ್ಯ ವ್ಯವಸಾಯದ ಪಾಠಶಾಲೆಗಳನ್ನು ಸ್ಥಾಪಿಸಿ ಬರುವರೆಂದು ಕೇಳುತ್ತೇವೆ.

* * * *

ಮಧುರೆಯ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿದ್ದ ಮಿ|| ಎಚ್. ಪಿ. ರೈಸ್ ಯವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹಿಂದಿರುಗಿ ಮೈಸೂರಿನಲ್ಲಿ ತಮ್ಮ ಕೆಲಸಕ್ಕೆ ಬಂದರು.

* * * *

ಕಿಕ್ಕೇರಿಯಲ್ಲಿ ಸುಮಾರು ೧೩ ವರುಷದ ಒಬ್ಬ ಹುಡುಗನು ತನ್ನ ನೆಂಟನನ್ನು ಕತ್ತರಿಸಿ ಕೊಂದುಹಾಕಿದನು. ಸೆಷನ್ಸ್ ಜಡ್ಜರು ಈ ಹುಡುಗನಿಗೆ ಮೂರು ವರುಷ ಸಜಾ ವಿಧಿಸಿದಾರೆ.

* * * *

ಬೆಂಗಳೂರು ಕೋಟೆಯಲ್ಲಿರುವ ಸುಲ್ತಾನರ ಅರಮನೆಯನ್ನು ದುರಸ್ತು ಮಾಡಿ, ಸುತ್ತಮುತ್ತಲ ಮನೆಗಳನ್ನು ಕೊಂಡುಕೊಂಡು ಆಬಾದು ಮಾಡಿ ಶ್ರೀಮನ್ಮಹಾರಾಜರವರ ಅತಿಥಿಗಳು ಇಳುಕೊಳ್ಳುವದಕ್ಕೆ ಅನುಕೂಲಪಡಿಸಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.

* * * *

ಮೈಸೂರು ಸಂಸ್ಥಾನದಲ್ಲಿ ಆರೋಗ್ಯವಿಚಾರವನ್ನು ನೋಡಿಕೊಳ್ಳುವದಕ್ಕೆ ಮದರಾಸ್ ಸ್ಕೂಲಿನಲ್ಲಿ ಕಲಿತು ಬಂದವರನ್ನು ನೇಮಿಸಬೇಕೆಂತಲೂ ಮೊದಲು ಇದಕ್ಕಾಗಿ ೧೦ ರೂಪಾಯಿ ವೇತನ ಕೊಟ್ಟು ಯೋಗ್ಯರಾದವರನ್ನು ಮದರಾಸಿಗೆ ಕಳುಹಿಸಿ, ಆ ವಿದ್ಯವನ್ನು ಕಲಿಸಿ ಕರೆಸಿಕೊಳ್ಳಬೇಕೆಂತಲೂ ಸರ್ಕಾರದವರು ಈ ತಾನೇ ಸ್ಯಾಂಕ್ಷನ್ ಮಾಡಿದಾರೆ.

* * * *

ಕಳೆದ ವಾರ ಅರಮನೆ ಕಾಲಾವಧಿಗಳ ಮೇಲೆ ಹತ್ತಿ ಕಂಚಿನ ಜಾಗಟೆಗಳನ್ನು ಬಡಿದು ಶ್ರೀಮನ್ಮಹಾರಾಜರವರಿಗೆ ನಿದ್ರಾಭಂಗವನ್ನುಂಟು ಮಾಡಿದ ಮನುಷ್ಯನಿಗೆ ಸಿಟಿ ಮ್ಯಾಜಿಸ್ಟ್ರೇಟರು ೧೫ ದಿನಗಳ ಸಾದಾ ಸಜಾ ವಿಧಿಸಿದರು. ಮಹಾರಾಜರವರ ಭೇಟಿ ಆಗಬೇಕೆಂದು ಬಂದವನಿಗೆ ಕಾರಾಗೃಹವಾಸ ಲಭಿಸಿತು.

* * * *

ಶ್ರೀಶಿವಗಂಗಾ ಸ್ವಾಮಿಗಳವರು ಕಳೆದ ವಾರ ವರ್ಣಾಶ್ರಮ ಧರ್ಮವನ್ನು ಕುರಿತು ಉಪನ್ಯಾಸ ಮಾಡಿದರು. ಸ್ವಾಮಿಗಳು ರಾಜಧಾನಿಯಲ್ಲಿರುವ ಮುಖ್ಯರಾದ ಲೌಕಿಕರನ್ನೂ ವೈದಿಕರನ್ನೂ ಕರೆಸಿಕೊಂಡು, ಲೌಕಿಕರಿಗೆ ಫಲಮಂತ್ರಾಕ್ಷತೆಯನ್ನೂ ವೈದಿಕರಿಗೆ ಶಾಲು, ಧೋತ್ರ, ಪಂಚೆ, ದ್ರವ್ಯಗಳನ್ನೂ ವರ್ಣಾಶ್ರಮ ಭೇದವನ್ನನುಸರಿಸಿ ಬಹು ಧಾರಾಳವಾಗಿ ದಯಪಾಲಿಸಿದರು. ನೆನ್ನೆ ಬೆಳಿಗ್ಗೆ ಬಿರುದುಗಳ ಸಹಿತ ರಾಜಧಾನಿಯಿಂದ ಹಾಸನದ ಕಡೆ ದಯಮಾಡಿದರು. ಗೌರವಾರ್ಥವಾದ ೧೧ ತೋಪುಗಳು ಹಾರಿಸಲ್ಪಟ್ಟವು.

ಮೈಸೂರು ಗೆಜೆಟ್ ಸಂಗ್ರಹ.

ನಾಗಮಂಗಲದ ತಾಲ್ಲೂಕಿಗೆ ಸೇರಿದ ಬೆಳ್ಳೂರಿನಲ್ಲಿ ಏಡೆಡ್ ಡಿಸ್ಪೆನ್ಸರಿ ನಿರ್ಮಾಣ ಮಾಡಿದೆ.

ಮೈಸೂರು ಸಂಸ್ಥಾನದೊಳಗೆ ಆರೋಗ್ಯವಿಚಾರವನ್ನು ನೋಡಿಕೊಳ್ಳುವ ಇನ್‌ಸ್ಪೆಕ್ಟರ ಬೆಂಗಳೂರು ಸಿಟಿ ಹೆಲ್ತ್ ಆಫಿಸರ್ ಮಿ॥ ...ಪ್ಪಯವರನ್ನು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರ ಕೈಕೆಳಗೆ ಕೆಲಸಕ್ಕಾಗಿ ಕಳುಹಿಸಲಾಗಿದೆ

ತಾ. ೧೦ ಲಾಗಾಯಿತು ಬೆಂಗಳೂರು ಸಿಟಿ ಹೆಲ್ತ್ ಆಫಿಸರ್ ಕೆಲಸವನ್ನೇ ವಜಾ ಮಾಡಲಾಗಿದೆ

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟ್ ಮಿ॥ ನಾಗಪ್ಪರ್ ಯವರು ಇತರ ಕೆಲಸದ ಮೇಲಿರುವಾಗ್ಗೆ ಬೆಂಗಳೂರು ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮಿ॥ ಬಾಲಸುಂದರಂ ಐಯರವರು ತಮ್ಮ ಕೆಲಸಗಳೊಂದಿಗೆ ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟ್ ಆಫಿಸು ಛಾರ್ಜನ್ನು ವಹಿಸತಕ್ಕದ್ದು.

ಹಾಸನ ಡಿಸ್ಟ್ರಿಕ್ಟ್ ಎಕ್‌ಸ್ಟ್ರಾ ಅ॥ ಕಮಿಷನರ್ ಮಿ॥ ಎಂ. ಎ. ನಾರಾಯಣ ಐಯಂಗಾರ್ರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ದಿವಾನರವರ ಪ್ರೈವೆಟ್ ಸೆಕ್ರೆಟರಿ ಮಿ॥ ಎಂ. ಶ್ರೀನಿವಾಸಮೂರ್ತಿಯವರಿಗೆ ಇನ್ನೂ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ॥ ಬಿ. ವಿ. ಲಕ್ಷ್ಮಣರಾಯರೇ ಪ್ರೈವೆಟ್ ಸೆಕ್ರೆಟರಿಯಾಗಿ ಕೆಲಸ ನೋಡತಕ್ಕದ್ದು

ಎಕ್ಸೈಸ್ ಇಲಾಖಾ ಎಕ್‌ಸ್ಟ್ರಾ ಅ॥ ಕಮಿಷನರ್ ಮಿ॥ ಕೆ. ಶ್ರೀಕಂಠಯ್ಯನವರು ಮಾರ್ಚಿ ೧೩ ರಲ್ಲಿ ಕೆಲಸದ ಛಾರ್ಜನ್ನು ವಹಿಸಿದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ॥ ಎಚ್. ರಾಮಾನುಜೈಯಂಗಾರ್ರಿಗೆ ಕೊಟ್ಟಿದ್ದ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡುವರೆ ತಿಂಗಳಿಗೆ ಜಾಸ್ತಿ ಮಾಡಿದೆ.

ಸೀನಿಯರ್ ಅ॥ ಕಮಿಷನರ್ ಮಿ॥ ಎಂ. ಚಂಗಯ್ಯಚೆಟ್ಟಿಯವರನ್ನು ಚಿತ್ರದುರ್ಗದ ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿದೆ. ಕೂಡಲೇ ಕೆಲಸದ ಛಾರ್ಜನ್ನು ವಹಿಸತಕ್ಕದ್ದು

ದಾವಣಗೆರೆ ಡಿವಿಜನ್ ಅ॥ ಕಮಿಷನರ್ ಮಿ॥ ಸಿ. ಶ್ರೀಕಂಠೇಶ್ವರ ಐಯ್ಯರವರಿಗೆ ಒಂದು ತಿಂಗಳು ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮಿ॥ ಕೆ. ಮ[illegible]ರವರಿಗೆ ಎರಡುವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗೌರಿಬಿದನೂರು ತಾಲ್ಲೂಕು ಅಮಲ್ದಾರ್ ಮಿ॥ ಡಿ. ಸುಬ್ಬರಾಯರಿಗೆ ಕೊಟ್ಟಿದ್ದ ೩೫ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನಗಳಿಗೆ ಜಾಸ್ತಿ ಮಾಡಿದೆ

ನಗರ ತಾಲ್ಲೂಕು ಅಮಲ್ದಾರ್ ಮಿ॥ ಜಿ. ಆರ್. ಶ್ರೀನಿವಾಸೈಯಂಗಾರ್ರು ಫೆಬ್ರವರಿ ೧೪ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜನ್ನು ವಹಿಸಿರುವ ಎಕ್‌ಸ್ಟ್ರಾ ಅ॥ ಕಮಿಷನರ್ ಮಿ॥ ಎ. ವೇದಾಂತದೇಶಿಗಂ ಐಯಂಗಾರ್ರಿಗೆ ಕೊಟ್ಟಿದ್ದ ರಜವನ್ನು ಅವರ ಇಷ್ಟಪ್ರಕಾರ ರದ್ದು ಮಾಡಿದೆ.

ಶ್ರೀರಂಗಪಟ್ಟಣದ ಮುನ್ಸಿಫ್ ಮತ್ತು ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ॥ ಆನಂದರಾವ್ ಸಿಸ್ದಿಯವರನ್ನು ಎಕ್‌ಸ್ಟ್ರಾ ಅ॥ ಕಮಿಷನರಾಗಿ ನೇಮಿಸಿದೆ.

ಡಿಪ್ಯುಟಿ ಛೀಫ್ ಇಂಜನಿಯರ್ ಕ್ಯಾಪ್ಟನ್ ಡಬ್ಲ್ಯು. ಎಚ್. ಟ್ರೇಲ್ ಯವರನ್ನು ಏಪ್ರಿಲ್ ೧ ರಿಂದ ಪಶ್ಚಿಮ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರಾಗಿ ನೇಮಕ ಮಾಡಿದೆ.

ಇಂಡಿಯಾ ಗವರ್ನಮೆಂಟೂ ಅಫ್ಘಾನಿಸ್ಥಾನವೂ.

ಸಮರ್ಪಕವಾಗಿ ಕರಾರು ನಡೆಯಿತು.

ಇಂಡಿಯಾ ಗವರ್ನಮೆಂಟಿನವರು ಕಾಬೂಲ್ ಸಂಸ್ಥಾನದ ಅಮೀರರ ಸಂಗಡ ಕರಾರು ಮಾಡಿಕೊಂಡು ಬರಬೇಕೆಂದು ಮಿ॥ ಡೇನ್ ಮೊದಲಾದ ಕೆಲವು ಅಧಿಕಾರಿಗಳನ್ನು ಅಫ್ಘಾನಿಸ್ಥಾನಕ್ಕೆ ಕಳುಹಿಸಿದ್ದರಷ್ಟೆ. ಇವರೆಲ್ಲಾ ಕಳೆದ ೧೨ ನೇ ತಾರೀಖಿನ ದಿನ ಹಿಂತಿರುಗಿ ಸಿಂಲಾ ಪಟ್ಟಣಕ್ಕೆ ಬಂದು ತಲಪಿದರು. ಬರುವಾಗ್ಗೆ ಇವರನ್ನು ಚಳಿಯು ಬಹಳ ಕಷ್ಟಪಡಿಸಿತು. ಈಗ ಎಲ್ಲರೂ ಆರೋಗ್ಯವಾಗಿ ಹಿಂತಿರುಗಿ ಬಂದರೆಂದು ಸಂತೋಷಪಡಬೇಕಾಗಿದೆ. ಅಮೀರರವರು ತುಂಬಾ ಪ್ರೀತಿಯಿಂದ ಇವರನ್ನು ಕಂಡು, ಇವರಿಗೆ ಯಾವ ಭಾಗದಲ್ಲೂ ಸ್ವಲ್ಪವಾದರೂ ಕಷ್ಟ, ಮನೋವ್ಯಥೆ, ಅಥವಾ ಕೊರತೆಯುಂಟಾಗದಂತೆ ಬಹು ಅಚ್ಚುಕಟ್ಟಾದ ಏರ್ಪಾಡು ಮಾಡಿದ್ದರು. ಕಾಬೂಲಿನಲ್ಲಿ ಹಿಮವು ಸುರಿಯುತ್ತಿತ್ತು. ಭೂಮಿಯ ಮೇಲೆ ಹಿಮ ಹೆಪ್ಪು ಕಟ್ಟಿಕೊಳ್ಳುತ್ತಿತ್ತು.

ಲೇಟ್ ಅಮೀರ್ ಅಬ್ದುರ್ ರಹಮಾನರವರ ಸಂಗಡ ಮಾಡಿಕೊಂಡಿದ್ದ ಕರಾರಿಗೂ ಈಗಿನ ಅಮೀರರ ಸಂಗಡ ಮಾಡಿಕೊಂಡು ಬಂದಿರುವ ಕರಾರಿಗೂ ವ್ಯತ್ಯಾಸವೇನೂ ಕಾಣುವುದಿಲ್ಲ ಉಭಯ ಪಕ್ಷದವರೂ ತುಂಬಾ ಪ್ರೀತಿಯಿಂದ ವಿಷಯಗಳನ್ನು ಹಿಡಿದು ಚರ್ಚೆ ಮಾಡಿದರು ಕರಾರು ಬೇಗನೇ ಪೂರೈಸಬಹುದಾಗಿತ್ತು. ಆದರೆ ಅಮೀರರಿಗೆ ಆರು ವಾರಗಳ ತನಕ ಶೀತರೋಗ ಪ್ರಾಪ್ತವಾಗಿ ಅವರು ಹಾಸಿಗೆಯಿಂದ ಏಳುತ್ತಿರಲಿಲ್ಲ. ಆದರೂ ಇಂಗ್ಲಿಷ್ ರಾಯಭಾರಿಗಳನ್ನು ತಮ್ಮ ಶಯನಗೃಹಕ್ಕೇನೇ ಆಗಾಗ್ಗೆ ಕರೆಸಿಕೊಳ್ಳುತ್ತಲೂ ಅವರ ಸಂಗಡ ವಿಷಯಗಳನ್ನು ಚರ್ಚೆ ಮಾಡುತ್ತಲೂ ಇದ್ದರು. ತರುವಾಯ ಅಮೀರರಿಗೆ ಆರೋಗ್ಯವಾಯಿತು ಅವರು ದರ್ಬಾರ್ ನಡಿಸಿ, ಅಧಿಕಾರಿಗಳ ಎದುರಿಗೆ ಕರಾರಿಗೆ ರುಜು ಹಾಕಿಕೊಟ್ಟಿದ್ದಾರೆ. ಕಡೆಯಲ್ಲಿ ಸರ್ದಾರ್ ನಸ್ರುಲ್ಲಾಖಾನರವರ ಅರಮನೆಯಲ್ಲಿ ಇಂಗ್ಲಿಷ್ ಸರ್ದಾರರಿಗೆಲ್ಲಾ ದೊಡ್ಡ ಔತಣ ಮಾಡಿದರು ಅಮೀರರೂ ಅವರ ಆಸ್ಥಾನಕ್ಕೆ ಸೇರಿದ ಸಮಸ್ತ ಅಧಿಕಾರಿಗಳೂ ಆ ದಿನ ಭೋಜನ ಮಂದಿರದಲ್ಲಿ ಹಾಜರಾಗಿದ್ದು, ತುಂಬಾ ಸಂತೋಷದಿಂದಲೂ ಸರಸಸಲ್ಲಾಪಗಳಿಂದಲೂ ಔತಣವನ್ನು ಮುಗಿಸಿದರು

ಈ ಇಂಗ್ಲಿಷ್ ಸರ್ದಾರರು ಇನ್ನೂ ಕಾಬೂಲ್ ನಗರದಲ್ಲಿರುವಾಗಲೇ ಅಮೀರರ ಜ್ಯೇಷ್ಠಪುತ್ರರಾದ ಸರ್ದಾರ್ ಇನಾಯತ್ ಉಲ್ಲಾಖಾನರವರು ಹಿಂದುಸ್ಥಾನಕ್ಕೆ ಬಂದು, ವೈಸ್‌ರಾಯಿಯವರ ಅತಿಥಿಗಳಾಗಿದ್ದು ವಾಪಸು ಹೋದರಷ್ಟೆ ಸರ್ದಾರರು ಹಿಂದುಸ್ಥಾನದಲ್ಲಿ ನೋಡಿಕೊಂಡ ಸಂಗತಿಗಳನ್ನೆಲ್ಲಾ ಬಹು ಉತ್ಸಾಹದೊಡನೆ ತಮ್ಮ ತಂದೆಯವರಿಗೆ ತಿಳಿಸಿದರು. ಕಲ್ಕತ್ತೆಯ ಹೇಸ್ಟಿಂಗ್ಸ್ ಹೌಸ್ ಎಂಬ ರಾಜಭವನದಲ್ಲಿ ತಮಗೆ ವೈಸ್‌ರಾಯಿಯವರು ಮಾಡಿದ ಸಕಲ ಸತ್ಕಾರ್ಯಗಳನ್ನೂ ಜೂಜಿನಬೋರೆಯಲ್ಲಿ ನಡೆದ ಕುದುರೆ ಜೂಜಿನ ತಮಾಷೆಯನ್ನೂ ಪೆಷಾವರ್ ಮೊದಲಾದ ಪಟ್ಟಣಗಳಲ್ಲಿ ಇಂಡಿಯಾ ಗವರ್ನಮೆಂಟಿನವರು ಇಟ್ಟಿರುವ ಸೈನಿಕರ ಯೋಗ್ಯತಾ ಪಕ್ಷ ಮುಂತಾದವುಗಳನ್ನೂ ಅವರು ತಮ್ಮ ತಂದೆಯವರಿಗೆ ವಿವರಿಸಿ ಹೇಳಿದರು.

ಸರ್ದಾರ್ ನಸ್ರುಲ್ಲಾಖಾನರವರು ಅಫ್ಘಾನಿಸ್ಥಾನದ ಉತ್ತರ ಭಾಗದ ಎಲ್ಲೆಕಟ್ಟನಲ್ಲಿ ಸಂಚಾರ ಮಾಡುತ್ತಾ ಅಲ್ಲಲ್ಲಿರುವ ಸೈನಿಕರನ್ನು ಅದಲಾಯಿಷಿ ಮಾಡುತ್ತಾ ಇದಾರೆ. ಲೇಟ್ ಅಮೀರರವರ ಚಿಕ್ಕಕುಮಾರರಾದ ಉಮ್ಮರ್ ಜಾನರವರು ಕಾಬೂಲಿನಲ್ಲೇ ಇದ್ದುಕೊಂಡು, ಮರಮತ್ ಇಲಾಖೆಯ ಕೆಲಸಗಳನ್ನೂ ಕಾರ್ಖಾನೆಗಳ ಕಾರ್ಯಗಳನ್ನೂ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ.

ರಷ್ಯಾ ಜಪಾನ್ ಯುದ್ಧವು.

ಕಳೆದವಾರ ಬಂದ ಮುಖ್ಯ ತಂತೀವರ್ತಮಾನಗಳು.

ಸಮುದ್ರ ಯುದ್ಧಸನ್ನಾಹ.

ಲಂಡನ್, ಏಪ್ರಿಲ್ ೮.—ಸಿಂಗಪುರದಿಂದ ಉತ್ತರಕ್ಕೆ ೧೩೦ ಮೈಲಿ ದೂರದಲ್ಲಿ ರಷ್ಯಾದವರ ನಾಲ್ವತ್ತೇಳು ಜಹಜುಗಳೂ ಹಡಗುಗಳೂ ಪ್ರಯಾಣ ಮಾಡಿಕೊಂಡು ಹೋದವು. ಸಿಂಗಪುರದಲ್ಲಿರುವ ರಷ್ಯಾ ರಾಯಭಾರಿಯೊಬ್ಬನು ಮಾತ್ರ ಆ ಹಡಗುಗಳ ಬಳಿಗೆ ಹೋಗಿ ಮಾತನಾಡಿಕೊಂಡು ಬಂದನು. ಇತರರ್‍ಯಾರನ್ನೂ ಬಿಡಲಿಲ್ಲ.

ಜಪಾನ್ ಜಹಜುಗಳು.

ಪೀನಾಂಗಿನ ದಕ್ಷಿಣಕ್ಕೆ ಎಪ್ಪತ್ತು ಮೈಲಿ ದೂರದಲ್ಲಿ ಇಪ್ಪತ್ತೇಳು ಜಪಾನ್ ಹಡಗುಗಳೂ ಜಹಜುಗಳೂ ಬಂದು ಅಲ್ಲೇ ಸಂಚಾರ ಮಾಡುತ್ತಿರುವವು ರಷ್ಯಾ ಮತ್ತು ಜಪಾನ್ ಜಹಜುಗಳಿಗೆ ಸಂಧಿಯಾಗಿ ಯುದ್ಧನಡೆಯಬಹುದೆಂದು ಕಾಣುತ್ತೆ.

ಮ್ಯಾಂಚೂರಿಯಾದಲ್ಲಿ ಭೂಯುದ್ಧ.

ಚಾಂಗ್ಟುಫೂ ಉತ್ತರಕ್ಕೆ ತಾ. ೮ ರಲ್ಲಿ ೧೨ ಗಂಟೆ ಹೊತ್ತು ಯುದ್ಧವಾಯಿತೆಂತಲೂ ಜಪಾನವರ ಕಡೆ ತುಂಬಾ ನಷ್ಟವಾಗಿದೆ ಎಂತಲೂ ರಷ್ಯಾದವರ ಕಡೆ ೩೦ ಮಂದಿ ನಷ್ಟಪಟ್ಟರೆಂತಲೂ ಜನರಲ್ ಲಿನೆವಿಚ್‌ಯವರು ತಿಳಿಸಿದಾರೆ

ಜಪಾನವರು ಸೈನ್ಯವನ್ನು ಕೂಡಿಸುವುದು

ಲಂಡನ್, ಏಪ್ರಿಲ್ ೧೧.—ಮ್ಯಾಂಚೂರಿಯಾಕ್ಕೆ ರಷ್ಯಾದವರು ಸೈನ್ಯವನ್ನು ತಂದು ಜಮಾಯಿಸುತ್ತಿದಾರೆ. ಇದನ್ನು ನೋಡಿ ಜಪಾನವರು ಅವರ ಸೈನ್ಯಕ್ಕಿಂತಲೂ ಎರಡರಷ್ಟು ಇಲ್ಲವೇ ಮೂರರಷ್ಟು ಸೈನ್ಯವನ್ನಾದರೂ ಕೂಡಿಸಿ ಕಳುಹಿಸುವರು. ಇನ್ನು ಸ್ವಲ್ಪ ದಿನದೊಳಗಾಗಿ ಜಪಾನ್ ಸೈನ್ಯವು ಹತ್ತು ಲಕ್ಷ ಕೂಡುವುದೆಂತಲೂ ಈ ಪೈಕಿ ಯುದ್ಧ ಮಾಡತಕ್ಕವರೇ ೬,೦೦,೦೦೦ ಮಂದಿ ಆಗುತ್ತಾರೆಂತಲೂ ತಿಳಿದುಬಂದಿದೆ ಇದಲ್ಲದೆ ಜಪಾನವರು ಹಾರ್ಬಿನ್ ಪಟ್ಟಣವನ್ನೂ ಗೆದ್ದು ಕಾದಾಡಿಕೊಳ್ಳುತ್ತೇವೆಂತಲೂ, ಅಲ್ಲಿಂದ ಪೂರ್ವಕ್ಕೆ ಸೈನ್ಯವನ್ನು ಕಳುಹಿಸಿ, ರಷ್ಯಾದವರ ಮೇಲೆ ಯುದ್ಧಕಾರ್ಯಗಳನ್ನು ನಡಸುತ್ತೇವೆಂತಲೂ ತಿಳಿಸುತ್ತಾರೆ.

ಸಮುದ್ರ ಯುದ್ಧವು ನಡೆಯಲಿಲ್ಲ.

ಲಂಡನ್, ಏಪ್ರಿಲ್ ೧೩.—ಅನಂಬಾಸ್ ಎಂಬಲ್ಲಿ ರಷ್ಯಾ ಜಪಾನ್ ಜಹಜುಗಳು ಸೇರಿ ಯುದ್ಧವಾಡಿದವೆಂದು ಪ್ರಕಟವಾದ ಸುದ್ದಿಯು ನಿಜವಲ್ಲವೆಂದು ಆ ಪ್ರಾಂತ್ಯದ ಇಂಗ್ಲಿಷ್ ಜಹಜು ತಿಳಿಸುತ್ತದೆ.

ಭೂಯುದ್ಧ, ರಷ್ಯಾದವರ ಸೋಲು.

ಲಂಡನ್, ಏಪ್ರಿಲ್ ೧೪.—ಮುಕ್ಡೆನ್‌ಗೆ ಪೂರ್ವದಿಕ್ಕಿನಲ್ಲಿ ೩೦ ಮೈಲಿ ದೂರದಲ್ಲಿ ತಾ. ೧೨ ರಲ್ಲಿ ರಷ್ಯಾ ಜಪಾನ್ ಸೈನ್ಯಗಳಿಗೆ ಯುದ್ಧವಾಯಿತು. ರಷ್ಯಾದವರ ಕಡೆ ೨,೦೦೦ ಸವಾರರೂ ಕಾಲ್ಬಲವೂ ಇದ್ದವು. ಅವರನ್ನೆಲ್ಲಾ ಹೆಜ್ಜೆ ಹೆಜ್ಜೆಗೂ ಸೋಲಿಸುತ್ತಾ ಹಿಮ್ಮೆಟ್ಟಿಸಿದರು ಈಗ ರಷ್ಯಾದವರು ಕೀರಿನ್ ರಸ್ತೆಯನ್ನು ಹಿಡಿದು ಹಿಂದಕ್ಕೆ ಹೋಗುತ್ತಿದ್ದಾರೆ ಎಂದು ಮಾರ್ಷಲ್ ಓಯಮಾ ಯವರು ತಿಳಿಸಿದಾರೆ.

ರಷ್ಯಾ ಸವಾರರು ಕ್ಯಾಯುಯೋನ್ ಬಳಿ ರೈಲ್ವೆಯನ್ನು ಹಾಳುಮಾಡಿ, ಟೆಲಿಗ್ರಾಫ್ ತಂತಿಗಳನ್ನು ಕಿತ್ತುಹಾಕಿದರೆಂದು ಜನರಲ್ ಲಿನೆವಿಚ್ ಯವರು ವರ್ತಮಾನಕೊಟ್ಟಿದಾರೆ.

ಲಂಡನ್, ಏಪ್ರಿಲ್ ೧೫.—ಸೈಗಾನಿಂದ ಆಚೆ ರಷ್ಯಾ ಜಪಾನ್ ಜಹಜುಗಳಿಗೆ ಯುದ್ಧವಾದದ್ದು ನಿಜವಲ್ಲವೆಂದು ಜಪಾನ್ ಸರ್ಕಾರದವರು ಪ್ರಕಟಿಸಿದಾರೆ

ರಷ್ಯಾ ಜಹಜುಗಳು ಫಾರ್ಮೋಸಾ ದ್ವೀಪದ ಸಮೀಪದಲ್ಲೇ ನುಗ್ಗಿಹೋಗಿ ನಂತರ ಪೂರ್ವದಿಕ್ಕಿನಲ್ಲಿ ಜಪಾನಿಗೆ ಮುತ್ತಿಗೆಹಾಕಿ ಅಲ್ಲಿಂದ ವ್ಲಾಡಿವೊಸ್ಟಾಕಿಗೆ ಹೋಗುವುದೆಂಬು ಕೆಲವರು ಹೇಳುತ್ತಾರೆ.

ರಷ್ಯಾ ಹಡಗುಗಳು ಸಮುದ್ರದ ಮೇಲೆ ಪ್ರಯಾಣ ಮಾಡುವಾಗ್ಗೆ ಶತ್ರುಗಳು ಬಂದರೆಂದು ಭ್ರಮಿಸಿ ಎರಡನೆ ಸಲ ಅಲ್ಡಿಬಾರನ್ ಎಂಬ ದೋಣಿಗೆ ಗುಂಡು ಹೊಡೆದರೆಂದೂ ಇದು ಅನ್ಯಾಯವೆಂದೂ ರಷ್ಯಾ ಅಧಿಪತಿಯು ವ್ಯಸನಪಟ್ಟು ನಾರ್ವೆ ಸ್ವೀಡನ್ ರಾಜ್ಯಗಳಿಗೆ ತಿಳಿಸಿರುತ್ತಾನೆ.

ಭೂಕಂಪದ ಅನಾಹುತವು.

ಕಷ್ಟನಷ್ಟಗಳು.

ಧರ್ಮಶಾಲೆಯಲ್ಲಿ ೩,೦೦೦ ಪ್ರಜೆಗಳಿದ್ದರು. ಈ ಪೈಕಿ ೩೯೦ ಮಂದಿ ಮಾತ್ರ ಉಳಿದಿದಾರೆ. ಶಿಪಾಯಿಗಳು ಬಹಳ ಸಾಹಸಪಟ್ಟು ಗೋಡೆಗಳನ್ನು ಅಗೆದು ಕೆಳಗೆ ಸಿಕ್ಕಿರುವ ಹೆಣಗಳನ್ನು ಬಿಡಿಸಿ ದಹನಮಾಡಿಸುತ್ತಿರುವರು. ಗಾಯಪಟ್ಟವರನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದಾರೆ. ಕಷ್ಟಕ್ಕೆ ಗುರಿಯಾದವರನ್ನೆಲ್ಲಾ ಸರ್ಕಾರದವರು ಅನ್ನಬಟ್ಟೆ ಕೊಟ್ಟು ಸಾಕುತ್ತಿರುವರು. ಧರ್ಮಶಾಲೆಯ ಹತ್ತಿರಿರುವ ರೆಲ್‌ಬೊ ಎಂಬ ಕೋಟೆಯಲ್ಲಿ ಎಲ್ಲಾ ನೆಲಸಮವಾಯಿತು. ರಾಜಾ ಅಜಿಮುಲ್ಲಾಖಾನರವರು, ಅವರ ಚಿಕ್ಕಪ್ಪ, ಐದು ಮಂದಿ ದಾಯಾದಿಗಳು, ೨೮ ಮಂದಿ ಸೇವಕರು—ಎಲ್ಲರ ಸಹಿತ ಕೋಟೆಯೊಳಗೆ ಸಿಕ್ಕಿ ಮೃತಪಟ್ಟರು. ಆ ಗ್ರಾಮದಲ್ಲಿರುವ ಇತರ ಎಲ್ಲಾ ಮನೆಗಳೂ ಬಿದ್ದುಹೋದವು. ಅಮೃತಸರ ಡಿಸ್ಟ್ರಿಕ್ಟಿಗೆ ಸೇರಿದ ತಾರನ್ ತಾರನ್ ಎಂಬ ಊರಿನಲ್ಲಿ ಒಂದು ಮನೆಯಾದರೂ ಉಳಿಯಲಿಲ್ಲ. ಸಿಕ್ಕರ ದೇವಸ್ಥಾನದ ದೊಡ್ಡ ಚಿಕ್ಕದ ಗೋಪುರವು ಕಳಚಿ ಬಿದ್ದುಹೋಯಿತು. ಅಕ್ಕಪಕ್ಕಗಳ ಗೋಡೆಗಳು ಕಳಚಿಬಿದ್ದು ಹತ್ತಾರು ಜನರನ್ನು ಹತಮಾಡಿದವು. ಫಿರೋಜ್‌ಪುರ, ಮಸೂರಿ ಪಟ್ಟಣಗಳಲ್ಲಿ ಕಳೆದುಳಿದ ಪ್ರಜೆಗಳನ್ನು ಸರ್ಕಾರದವರು ಡೇರೆಗಳಲ್ಲಿಟ್ಟು ಪೋಷಣೆ ಮಾಡುತ್ತಿದಾರೆ ಸಿಂಲಾ ಪಟ್ಟಣದಲ್ಲಿ ಪ್ರತಿನಿತ್ಯವೂ ಭೂಮಿ ಗುಡುಗುತ್ತದೆ ಇನ್ನೂ ನಿಂತಿಲ್ಲ ಪ್ರಜೆಗಳು ಮನೆಗಳಲ್ಲಿ ಮಲಗುವುದಕ್ಕೆ ಹೆದರಿ ಬೈಲಿನಲ್ಲಿ ಚಳಿಗಾಳಿಯಲ್ಲೇ ಬಿದ್ದುಕೊಳ್ಳುತ್ತಿದ್ದಾರೆ. ಅನೇಕ ಕಟ್ಟಡಗಳು ಇನ್ನೂ ಹೆಚ್ಚಾಗಿ ಬಿರುಕು ಬಿಟ್ಟಿರುತ್ತವೆ. ಲೆಫ್ಟಿನೆಂಟ್ ಗವರ್ನರವರು ಖುದ್ದಾಗಿ ಸ್ಪೆಷಲ್ ರೈಲಿನಲ್ಲಿ ಧರ್ಮಶಾಲೆಗೆ ಹೋಗಿ ಕೆಲಸ ಮಾಡಿಸುತ್ತಿದಾರೆ. ಅಲ್ಲೂ ಭೂಕಂಪ ಇನ್ನೂ ಆಗುತ್ತಲೇ ಇದೆ. ಬೆಟ್ಟದಿಂದ ಕಲ್ಲುಗಳು ಉರುಳಿಬಂದು ಬೀಳುತ್ತಿವೆ. ಜನರೆಲ್ಲಾ ಡೇರಾಗಳಲ್ಲಿ ವಾಸವಾಗಿದಾರೆ. ಪಾಲಂಪೂರ್, ಕಾಂಗ್ರಾ, ಇವೆರಡು ತಾಲ್ಲೂಕುಗಳಲ್ಲೂ ೧೩ ೦೦೦ ಪ್ರಜೆಗಳು ಮೃತಪಟ್ಟರೆಂದು ಜಲಂಧರದ ಕಮಿಷನರವರು ರಿಪೋರ್ಟ್ ಮಾಡಿದಾರೆ. ಧರ್ಮಶಾಲೆಯಲ್ಲಿ ೩೬೩ ಹೆಣಗಳೂ ಪಾಲಂಪುರದಲ್ಲಿ ೩೦೦ ಹೆಣಗಳೂ ಸಿಕ್ಕಿದವು. ಅವನ್ನು ದಹನ ಮಾಡಿದ್ದಾಯಿತು. ಜ್ವಾಲಾಮುಖಿಯಲ್ಲಾದರೋ ೨೨ ಮಂದಿ ಪ್ರಜೆಗಳೂ ೨೦೦ ಮಂದಿ ಯಾತ್ರಾರ್ಥಿಗಳೂ ನಾಶವಾದರು. ಕಟ್ಟಡಗಳೆಲ್ಲಾ ನೆಲಸಮವಾದವು ದೇವಸ್ಥಾನದಲ್ಲಿ ಗರ್ಭಗುಡಿ ಮಾತ್ರ ಉಳಿದಿದೆ. ಆ ಊರಿನ ತುಂಬಾ ಯಾತ್ರಾರ್ಥಿಗಳೇ ತುಂಬಿದಾರೆ. ಜ್ವಾಲಾಮುಖಿಯಿಂದ ಪಾಲಂಪುರದ ತನಕ ಎಲ್ಲಾ ಗ್ರಾಮಗಳೂ ನಿರ್ನಾಮವಾಗಿವೆ ಧರ್ಮಶಾಲಾಪುರವು ಸಂಪೂರ್ಣವಾಗಿ ಹಾಳಾಯಿತು ಮಸೂರಿಯಲ್ಲಿ ಬೆಟ್ಟದ ಮೇಲಿದ್ದ ಒಂದು ದೊಡ್ಡ ಮನೆಯು ಆಕಸ್ಮಾತ್ತಾಗಿ ಎದ್ದುಬಂದು ಇನ್ನೊಂದು ಕಡೆ ನಿಂತಿದೆ ಅದರೊಳಗಿದ್ದ ಜನರಿಗೆ ಅದು ಗೊತ್ತೇ ಇಲ್ಲದೆ ಮಾರನೆ ಬೆಳಿಗ್ಗೆ ಎದ್ದು ನೋಡಿ ಪರಮಾಶ್ಚರ್ಯಪಟ್ಟರು. ಯಾರಿಗೂ ಯಾವ ಅಪಾಯವೂ ಆಗಲಿಲ್ಲ. ಹಿಂದುಸ್ಥಾನದಿಂದ ಟಿಬೆಟ್ಟಿಗೆ ಹೋಗುವ ರಸ್ತೆಯಲ್ಲಿನ ಭಾರೀ ಸೇತುವೆ ಮುರಿದು ತುಂಬಾ ಅಪಾಯಕರವಾಗಿದೆ. ಮಂಡಿಯಲ್ಲಿ ೩೦೦ ಜನರು ಹತರಾದರು. ಕೊಲುವಿನಲ್ಲೂ ಸೂಕೇತಿನಲ್ಲೂ ಮನೆಗಳೆಲ್ಲಾ ಹಾಳಾದವು; ಎಷ್ಟು ಜನ ಮೃತಪಟ್ಟರೋ ಇನ್ನೂ ಪ್ರಕಟವಾಗಿಲ್ಲ. ಭೂಕಂಪದಿಂದ ಇಷ್ಟು ಅನಾಹುತವಾದರೂ ಜ್ವಾಲಾಮುಖಿಯಲ್ಲಿ ಯಾತ್ರಾರ್ಥಿಗಳು ತುಂಬಿ ತುಳುಕುತ್ತಿದ್ದಾರೆ. ನಾದರ್ನ ರಾಜರೂ ಡಾಕ್ಟರ್ ಹತ್ತರವರೂ ಬಡಬಗ್ಗರಿಗೆ ಅನ್ನ ಹಾಕಿಸುತ್ತಿದಾರೆ

ರಿಲೀಫ್ ಫಂಡು.

ಈ ಅಪಾರವಾದ ಕಷ್ಟನಷ್ಟಗಳಿಗೆ ಗುರಿಯಾದ ಪ್ರಜೆಗಳಿಗೆ ಸಹಾಯಮಾಡಬೇಕೆಂದು ಲಾಹೋರ್ ಪಟ್ಟಣದ ಆರ್ಯಸಮಾಜದವರು ೫,೦೦೦ ರೂಪಾಯಿ ಚಂದಾ ಕೂಡಿಸಿ, ಕೂಲಿ ಆಳುಗಳನ್ನೂ ಆಹಾರ ಸಾಮಗ್ರಿಗಳನ್ನೂ ಪಾತ್ರೆ ಪದಾರ್ಥಗಳನ್ನೂ ಆ ಸ್ಥಳಗಳಿಗೆ ಕಳುಹಿಸಿದಾರೆ ವೈಸ್‌ರಾಯಿ ಲಾರ್ಡ್ ಕರ್ಜನರವರು ಪಂಜಾಬ್ ಲೆಫ್ಟಿನೆಂಟ್ ಗವರ್ನರವರ ಮೂಲಕ ಒಂದು ಫಂಡು ಸ್ಥಾಪಿಸಿ, ತಾವು ಅದಕ್ಕೆ ಹತ್ತು ಸಹಸ್ರ ರೂಪಾಯಿ ಚಂದಾ ಕಳುಹಿಸಿದಾರೆ ಲೇಡಿ ಕರ್ಜನರವರು ಗಾಯಪಟ್ಟವರನ್ನು ಆಸ್ಪತ್ರೆಗಳಲ್ಲಿಟ್ಟು ಚಿಕಿತ್ಸೆ ಮಾಡಬೇಕೆಂದೂ ಅಂಥಾವರಿಗೆಲ್ಲಾ ತಮ್ಮ ಸ್ವಂತ ಹಣದಿಂದ ಅನ್ನವಸ್ತ್ರ ಕೊಡುತ್ತೇವೆಂದೂ ಅಪ್ಪಣೆ ಕೊಡಿಸಿದಾರೆ ಇದಕ್ಕಾಗಿ ವಿಲಾಯತಿಯಲ್ಲಿ ಒಂದು ಫಂಡು ಏರ್ಪಡಬೇಕೇ ಎಂದು ಸ್ಟೇಟ್ ಸೆಕ್ರೆಟರಿಯವರು ವೈಸ್‌ರಾಯಿ ಯವರನ್ನು ಕೇಳಿದರು. ಅದಕ್ಕೆ ವೈಸ್‌ರಾಯಿ ಯವರು ತಿಳಿಸಿರುವುದೇನೆಂದರೆ—ನಾವು ಇಲ್ಲೇ ಇಂಡಿಯಾ ಗವರ್ನಮೆಂಟ್ ಖಜಾನೆಯಿಂದ ಕಾಯಿಗಳಿಗೂ ವ್ಯವಸಾಯ ಸಾಮಗ್ರಿಗಳಿಗೂ ಮನೆ ಕಟ್ಟಿಕೊಳ್ಳುವುದೇ ಮೊದಲಾದ ಕಾರ್ಯಗಳಿಗೂ ಹಣವನ್ನು ಕೊಡುತ್ತೇವೆ. ಇದಲ್ಲದೆ ಮೇಲೆ ೫೦,೦೦೦ ಪೌಂಡು ಇತರ ಖರ್ಚಿಗೆ ಬೇಕಾಗುತ್ತದೆ ಇಷ್ಟು ಹಣ ಹಿಂದುಸ್ಥಾನದಲ್ಲೇ ಚಂದಾ ಎತ್ತಿಕೊಳ್ಳಬಹುದೆಂದು ನಿರೀಕ್ಷಿಸುವೆವು. ಇದಕ್ಕಾಗಿ ವಿಲಾಯತಿಯಲ್ಲಿ ಬೇರೆ ಯಾವ ಫಂಡು ಮಾಡಬೇಕು. ಅಲ್ಲಿನವರು ಯಾರಾದರೂ ಚಂದಾ ಕಳುಹಿಸುವುದಾದರೆ ಇಲ್ಲಿಗೇನೇ ಸೀದಾ ಕಳುಹಿಸಲಿ ಎಂಬುದೇ.

ಈಗ ಈ ಫಂಡಿಗೆ ೩೯,೦೦೦ ರೂಪಾಯಿ ಚಂದಾ ವಸೂಲಾಗಿರುವುದು.

ವಿಶೇಷವಾದ ಎರಡು ಹಬ್ಬಗಳು.

ಬಿ

ಭೂಲೋಕದಲ್ಲಿ ಅತಿ ವಿಸ್ತಾರವಾಗಿ ಹಬ್ಬಿಕೊಂಡಿರುವ ಎರಡು ಮತಸ್ಥರು ಈ ವಾರದಲ್ಲಿ ಎರಡು ಹಬ್ಬಗಳನ್ನು ಆಚರಿಸುವವರಾಗಿದ್ದಾರೆ. ಆ ಎರಡು ಮತಗಳು ಯಾವವೆಂದರೆ—ಯೆಹೂದ್ಯರ ಮತವು ಒಂದು, ಕ್ರೈಸ್ತ ಮತವು ಮತ್ತೊಂದು. ಇತರ ಮತಗಳವರು ಸಂಖ್ಯೆಯಲ್ಲಿ ಹೆಚ್ಚಾಗಿದ್ದಾಗ್ಯೂ ಈ ಎರಡು ಮತಗಳಂತೆ ಸಕಲ ದೇಶಗಳಲ್ಲೂ ಹಬ್ಬಿಕೊಂಡಿರುವ ಮತವು ಬೇರೊಂದಿಲ್ಲ. ಆದಿಯಲ್ಲಿ ಯೆಹೂದ್ಯರು ಈ ವಾರದಲ್ಲಿ ಆಚರಿಸುವ ಹಬ್ಬವು ಪಸ್ಕ ಹಬ್ಬವೆಂಬುವದು. ಆ ಹಬ್ಬವು ಹುಟ್ಟಿದ ಕಾಲದಲ್ಲಿ ಈ ಕಾಲದ ಜನಾಂಗಗಳ ಚರಿತ್ರೆಯು ಹುಟ್ಟಲಿಲ್ಲ. ಯೆಹೂದ್ಯರ ಮತದಿಂದ ಹುಟ್ಟಿರುವ ಕ್ರೈಸ್ತ ಮತದವರೋ ಪಸ್ಕ ಹಬ್ಬದ ಕಾಲದಲ್ಲಿ ಯೇಸುಕ್ರಿಸ್ತಸ್ವಾಮಿಯ ಮರಣ ಪುನರುತ್ಥಾನಗಳ ಹಬ್ಬವನ್ನು ಆಚರಿಸುವವರಾಗಿದ್ದಾರೆ. ಭೂಲೋಕದ ಚರಿತ್ರೆಯಲ್ಲಿ ನಡೆದಿರುವ ಅತ್ಯಂತ ಆಶ್ಚರ್ಯಕರವಾದ ಕ್ರಿಸ್ತನ ಪುನರುತ್ಥಾನವೆಂಬ ಕಾರ್ಯವನ್ನು ಕುರಿತು ಬರುವ ವಾರದಲ್ಲಿ ತಿಳಿಸಬೇಕೆಂದಿರುತ್ತೇವೆ. ಈ ವಾರದಲ್ಲಾದರೋ ಸ್ವಾಮಿಯು ಮರಣ ಹೊಂದಿದ ಕಾರ್ಯವನ್ನು ಸ್ಮರಿಸುವದಕ್ಕಾಗಿ ಏರ್ಪಟ್ಟಿರುವ ಶುಭಶುಕ್ರವಾರವೆಂಬ ಹಬ್ಬವನ್ನು ಕುರಿತು ಇಲ್ಲಿ ಪ್ರಸ್ತಾಪಿಸಬೇಕೆಂದಿರುತ್ತೇವೆ.

ಯೇಸುಸ್ವಾಮಿಯು ಶಿಲುಬೆಯ ಮೇಲೆ ಸತ್ತನೆಂದು ವಾಚಕರಿಗೆ ತಿಳಿದಿದೆಯಷ್ಟೆ. ಯೆಹೂದ್ಯರ ಪಸ್ಕ ಹಬ್ಬಕ್ಕೂ ಕ್ರೈಸ್ತರ ಶುಭಶುಕ್ರವಾರವೆಂಬ ಕ್ರಿಸ್ತನ ಮರಣ ಸ್ಮಾರಕ ಹಬ್ಬಕ್ಕೂ ಬಹಳ ಸಂಬಂಧವಿದೆ. ಪಸ್ಕ ಹಬ್ಬವು ಉತ್ಪನ್ನವಾದಾಗ ಯೆಹೂದ್ಯರು ಐಜಿಪ್ಟ್ ದೇಶದಲ್ಲಿ ಗುಲಾಮರಾಗಿದ್ದರು. ಆ ದಾಸ್ಯದ ಕಷ್ಟಗಳನ್ನು ಆ ಜನರು ೪೦೦ ವರ್ಷಗಳ ವರೆಗೂ ಸಹಿಸಬೇಕಾಯಿತು, ಕಡೆಗೆ ಅದರಿಂದ ತಪ್ಪಿಸಿಕೊಳ್ಳಬೇಕೆಂದು ಪ್ರಯತ್ನಿಸಿದರು. ಆ ಐಜಿಪ್ಟಿನವರು ಅವರನ್ನು ಬಿಡುಗಡೆಮಾಡಿ ಕಳುಹಿಸಲೊಲ್ಲದೆಹೋದರು. ಆದರೆ ದೇವರು ಆ ಇಸ್ರಾಯೇಲ್ಯರೊಳಗೆ ಬಹು ಸಮರ್ಥನಾದ ಮೋಶೆಯೆಂಬೊಬ್ಬ ಪುರುಷನನ್ನು ಉತ್ಪನ್ನಮಾಡಿ, ಆತನ ಮೂಲಕವಾಗಿ ಆ ದೇಶದಲ್ಲಿ ಅನೇಕ ಆಶ್ಚರ್ಯಕರವಾದ ಕಾರ್ಯಗಳನ್ನು ನಡಿಸಿದನು. ಆ ಐಜಿಪ್ಟ್ ದೇಶದವರ ಮೇಲೆ ಅನೇಕ ಬಾಧೆಗಳು ಬಂದವು. ಆ ದೇಶದ ದೊರೆಯಾದ ಫರೋಹನು ಹೆದರಿ ಜನರನ್ನು ಕಳುಹಿಸಿಕೊಡುತ್ತೇನೆಂದು ಹೇಳಿದನು. ಬಾಧೆಗಳು ತೊಲಗಿದವು. ಕೂಡಲೆ ಆ ದೊರೆಯು ತನ್ನ ಮಾತನ್ನು ಮೀರಿ ಯಥಾಪ್ರಕಾರವಾಗಿ ಜನರನ್ನು ದಾಸ್ಯದಲ್ಲಿಟ್ಟುಕೊಂಡನು. ಹೀಗೆ ಕೆಲವು ಕಾಲವನ್ನು ಕಳೆದ ಬಳಿಕ ದೇವರು ಆ ಐಜಿಪ್ಟ್ ದೇಶಸ್ಥರನ್ನು ಅವರ ಪಾಪಗಳ ನಿಮಿತ್ತವಾಗಿ ದಂಡಿಸಬೇಕೆಂದು ನಿಶ್ಚಯಿಸಿ ಆ ನಿವಾಸಿಗಳಲ್ಲಿ ಪ್ರತಿಯೊಬ್ಬರ ಮನೆಯೊಳಗೂ ಚೊಚ್ಚಲ ಮಗನು ಸಾಯುವನೆಂದು ಮೋಶೆಯ ಮುಖಾಂತರ ಫರೋಹನಿಗೆ ಹೇಳಿಸಿದನು. ಯೆಹೂದ್ಯರಲ್ಲಿ ಯಾರಾದರೂ ಈ ಅನಾಹುತಕ್ಕೆ ತಪ್ಪಿಸಿಕೊಳ್ಳಬೇಕೆಂದಿದ್ದರೆ ಅವರು ನೇಮಕವಾದ ದಿವಸದಲ್ಲಿ ಒಂದು ಕುರಿಮರಿಯನ್ನು ಕೊಂದು, ಅದರ ರಕ್ತವನ್ನು ಬಾಗಿಲ ನಿಲುಗಳಿಗೆ ಹಚ್ಚಬೇಕೆಂತಲೂ ಅದರ ಮಾಂಸವನ್ನು ಪಾಕ ಮಾಡಿ ಯಜ್ಞಭೋಜನವಾಗಿ ಉಣ್ಣಬೇಕೆಂತಲೂ ದೇವರು ಅಪ್ಪಣೆ ಕೊಟ್ಟನು. ಅದೇ ಪ್ರಕಾರ ಯೆಹೂದ್ಯರೆಲ್ಲರೂ ಮಾಡಿ ಕಾದುಕೊಂಡಿರಲಾಗಿ ಒಂದೇ ರಾತ್ರಿಯಲ್ಲಿ ಐಜಿಪ್ಟ್ ದೇಶಸ್ಥರಲ್ಲಿ [illegible] ಮನೆಗಳಿಗೂ ಒಂದೊಂದು ಸಾವಾಯಿತು. ರಕ್ತವನ್ನು ಹಚ್ಚಿದ ಮನೆಗಳಲ್ಲಿ ಮಾತ್ರ ಏನೂ ಆಗಲಿಲ್ಲ. ಹೀಗೆ ಆ ರಾತ್ರಿಯಲ್ಲಿ ವಿಪರೀತವಾದ ಪ್ರಲಾಪವೂ ಗದ್ದಲವೂ ಉಂಟಾಗಲು ಐಜಿಪ್ಟಿನವರು ಯೆಹೂದ್ಯರನ್ನು ಅವಸರ ಮಾಡಿ ಕಳುಹಿಸಿಬಿಟ್ಟರು.

ಯೆಹೂದ್ಯರು ತಮಗುಂಟಾದ ಬಿಡುಗಡೆಯನ್ನು ಸ್ಮರಿಸುವದಕ್ಕೋಸ್ಕರ ವರ್ಷವರ್ಷವೂ ಪಸ್ಕ ಹಬ್ಬವನ್ನಾಚರಿಸುತ್ತಿದ್ದರು. ಹೀಗೆ ಕೆಲವು ಶತಮಾನಗಳು ಕಳೆದ ಬಳಿಕ ಒಂದಾನೊಂದು ವರ್ಷದಲ್ಲಿ ಯೆಹೂದ್ಯರು ಯಥಾಪ್ರಕಾರ ಕುರಿಮರಿಯನ್ನು ಯಜ್ಞಮಾಡಿದ ಹಬ್ಬಕಾಲದಲ್ಲಿ ಯೇಸುಕ್ರಿಸ್ತಸ್ವಾಮಿಯು ಶಿಲುಬೆಯಮೇಲೆ ತನ್ನ ಪ್ರಾಣವನ್ನು ಒಪ್ಪಿಸಿಕೊಟ್ಟನು. ಈ ಪ್ರಕಾರ ಯೆಹೂದ್ಯರೂ ಕ್ರೈಸ್ತರೂ ತಮ್ಮ ಮತಗಳಲ್ಲಿ ಅತಿ ಮುಖ್ಯವಾದ ಈ ಹಬ್ಬಗಳನ್ನು ಒಂದೇ ಕಾಲದಲ್ಲಿ ಆಚರಿಸುವ ಪದ್ಧತಿಯು ಹುಟ್ಟಿತು.

ಇವೆರಡು ಮತಗಳಲ್ಲಿಯೂ ಬಹು ವಿಶೇಷವಾದ ಈ ಹಬ್ಬಗಳಲ್ಲಿ ಮರಣದ ವಿಷಯವೇ ಹೆಚ್ಚು ಸಂಬಂಧವಿರುವದಕ್ಕೆ ಕಾರಣವೇನೆಂದು ಪ್ರಶ್ನಿಸುವದು ಸ್ವಾಭಾವಿಕವಾಗಿದೆಯಷ್ಟೆ. ಮನುಷ್ಯಜಾತಿಯನ್ನು ನೋಡುವಲ್ಲಿ ಸರ್ವಜನರಿಗೂ ಎರಡು ವಿಷಯಗಳಲ್ಲಿ ಒಂದೇ ಸ್ಥಿತಿಯುಳ್ಳವರಾಗಿದ್ದಾರೆಂದು ತಿಳಿಯಬರುತ್ತದೆ. ಹುಟ್ಟಿದ ಪ್ರಾಣಿಗೆ ಮರಣವು ಸಿದ್ಧವೆಂಬಲ್ಲಿಯೂ ತಪ್ಪು ಮಾಡದೆ ಇರುವ ಪ್ರಾಣಿಯು ಭೂಲೋಕದಲ್ಲಿಲ್ಲವೆಂಬಲ್ಲಿಯೂ ಸಕಲ ಮನುಷ್ಯರಿಗೂ ಈ ಎರಡು ಅವಸ್ಥೆಗಳು ಸ್ವಾಭಾವಿಕವಾಗಿವೆಯೆಂಬುದು ಪ್ರಕಟವಾಗುತ್ತದೆ. ಎಲ್ಲರೂ ಮರಣಾಧೀನರು, ಎಲ್ಲರೂ ಪಾಪಾಧೀನರು. ಪಾಪಾಧೀನತೆಯೂ ಮರಣಾಧೀನತೆಯೂ ಒಂದಕ್ಕೊಂದು ಕೇವಲ ಸಂಬಂಧವುಳ್ಳದ್ದಾಗಿದೆಯೆಂದು ಮೇಲೆ ಕಂಡ ಎರಡು ಮತಗಳಲ್ಲಿಯೂ ಹೇಳಿದೆ. ಮನುಷ್ಯರು ಪಾಪವನ್ನು ಮಾಡುವದರಿಂದ ಅವರು ಸಾಯತಕ್ಕವರಾಗಿದ್ದಾರೆಂಬುವದೇ ಇದರ ತಾತ್ಪರ್ಯ. ಭೂಲೋಕದ ಯಾವ ಭಾಗಕ್ಕೆ ಹೋದರೂ ಅಲ್ಲಿರುವ ಮನುಷ್ಯರೆಲ್ಲರೂ ಈ ಬಂಧಕ್ಕೆ ಕಟ್ಟುಬಿದ್ದಿದ್ದಾರೆ. ಪಾಪಮರಣಗಳ ಸಂಕೋಲೆಗಳನ್ನು ಕಿತ್ತು ಹಾಕಿ ತಪ್ಪಿಸಿಕೊಳ್ಳ ಬಲ್ಲ ಶಕ್ತರು ಯಾರಿದ್ದಾರೆ? ಪಾಪಕ್ಕೆ ಪ್ರಾಯಶ್ಚಿತ್ತವಾಗಿ ದಂಡನೆಯು ಬಂದೇ ಬರುವದೆಂದು ತೋರಿಸುವದಕ್ಕಾಗಿಯೇ ಪೂರ್ವಕಾಲದಲ್ಲಿ ಆ ಐಜಿಪ್ಟ್ ದೇಶದ ಮೇಲೆ ಆ ಅಘೋರವಾದ ದಂಡನೆಯು ಬಂತು.

ಆದರೂ ಕೂಡ ಆ ದಂಡನೆಗೆ ಕೆಲವರು ತಪ್ಪಿಸಿಕೊಂಡರೆಂಬುದನ್ನು ನಾವು ಮರೆಯಬಾರದು. ಅವರು ತಪ್ಪಿಸಿಕೊಂಡ ಮಾರ್ಗವ್ಯಾವದು? ಅವರಿಗೆ ಬದಲಾಗಿ ಒಂದು ಕುರಿಮರಿಯು ಸತ್ತುಹೋದದರಿಂದಲ್ಲವೇ ಅವರು ತಪ್ಪಿಸಿಕೊಂಡರು. ಇದೇ ಪ್ರಕಾರ ಪಾಪಿಷ್ಠನಾದವನಿಗೆ ಬದಲಾಗಿ ಮರಣದಂಡನೆಯನ್ನು ತೆಗೆದುಕೊಳ್ಳುವದಕ್ಕೆ ಯೋಗ್ಯನಾದ ಪುರುಷನು ಯಾವನಾದರೂ ಸಿಕ್ಕುವ ಹಾಗಿದ್ದರೆ ಆ ಪಾಪಿಯು ತನ್ನ ಮೇಲೆ ಬರತಕ್ಕ ದಂಡನೆಯಿಂದ ತಪ್ಪಿಸಿಕೊಳ್ಳಬಹುದೆಂಬುವದನ್ನು ಈ ನಿದರ್ಶನದಿಂದ ಸೂಚಿತವಾಗಿದೆ. ಕುರಿಯ ಪ್ರಾಣವು ಹೋದದರಿಂದ ಮನುಷ್ಯನ ಪ್ರಾಣವು ಉಳಿಕೊಂಡ ವಿಷಯವು ಬರೀ ಸೂಚನೆಯೆಂದೇ ನಾವು ತಿಳಿದಿರತಕ್ಕದ್ದು. ಕುರಿಯು ಪಾಪ ಪುಣ್ಯಗಳೆರಡನ್ನೂ ಅರಿಯದ ಪ್ರಾಣಿಯಾಗಿರುವ ಕಾರಣ ಅದರ ಸಾವಿನಿಂದ ಪಾಪನಿವಾರಣೆಯುಂಟಾಗುವದಕ್ಕೆ ಆಧಾರವಿಲ್ಲ. ಮುಂದೆ ನಿಜವಾಗಿ ಪಾಪ ಪರಿಹಾರಾರ್ಥ ಅರ್ಪಿತನಾಗುವವನಿಗಿದ್ದ ಒಂದು ಯಜ್ಞವನ್ನು ಈ ಕುರಿಯು ಸೂಚಿಸುವದಾಗಿತ್ತೆಂದು ತಿಳಿದಿರಬೇಕು. ಆ ಯಜ್ಞವು ಕ್ರಿಸ್ತನ ಮರಣದಲ್ಲಿಯೇ ನೆರವೇರಿತು.

ಯೇಸುಕ್ರಿಸ್ತನು ಪಾಪರಹಿತನಾಗಿದ್ದನು, ಆದಕಾರಣ ಆತನು ಪಾಪದ ಫಲವಾದ ಮರಣವನ್ನು ಹೊಂದಬೇಕೆಂಬ ನಿರ್ಬಂಧಕ್ಕೆ ಒಳಪಟ್ಟವನಾಗಿಲ್ಲ. ಆತನು ಯಾವದೋ ಪಾಪವನ್ನು ಮಾಡಿದ್ದರಿಂದಲೇ ಮರಣವೆಂಬ ಪ್ರಾಯಶ್ಚಿತ್ತವನ್ನು ಹೊಂದಿದನೆಂದು ನಾವು ಹೇಳಲಾಧಾರವಿಲ್ಲ. ಆತನು ಇಂಥ ಅಪೂರ್ವ ಪುರುಷನಾಗಿದ್ದದರಿಂದಲೆ ಪಾಪಿಷ್ಠರ ಬದಲಿಯಾಗಿ ನಿಲ್ಲುವದಕ್ಕೂ ಪಾಪದ ಫಲವನ್ನು ಅನುಭವಿಸುವದಕ್ಕೂ ಯೋಗ್ಯನಾಗಿದ್ದನು.

ಪಾಪಿಗಳಿಗಾಗಿ ಮರಣವನ್ನು ಹೊಂದುವಂತೆ ಪ್ರೇರಿಸಿದ ಯೇಸುಸ್ವಾಮಿಯ ಪ್ರೀತಿಯನ್ನು ಎಷ್ಟಾಗಿ ಶ್ಲಾಘನೆ ಮಾಡೋಣ! ತಾನು ನಿರ್ದೋಷಿಯಾಗಿದ್ದರೂ ತಾನು ಸ್ವಭಾವವಾಗಿ ದೇವರಾಗಿದ್ದರೂ ಪಾತಕಿಗಳಾದ ಮನುಷ್ಯರ ದೋಷದ ಫಲವನ್ನು ತಾನು ಹೊತ್ತುಕೊಳ್ಳುವದಕ್ಕೂ ಪಾಪದ ಫಲದಿಂದ ಅವರು ಬಿಡುಗಡೆಯನ್ನು ಹೊಂದುವದಕ್ಕೆ ಸಾಧ್ಯನೇ ಅಲ್ಲ, ಪಾಪವನ್ನೇ ವರ್ಜಿಸತಕ್ಕ ಶಕ್ತಿಯನ್ನು ಹೊಂದುವದಕ್ಕೂ ಆತನು ಒಪ್ಪಿದ್ದು ಎಂಥ ವಿಶೇಷವಾದ ದಯೆ! "ಯಾವನಾದರೂ ತನ್ನ ಸ್ನೇಹಿತನಿಗಾಗಿ ಪ್ರಾಣವನ್ನು ಒಪ್ಪಿಸಿಕೊಡುವದಕ್ಕಿಂತ ಹೆಚ್ಚಿನ ಪ್ರೀತಿಯು ಇಲ್ಲ." ಕ್ರಿಸ್ತನ ಪ್ರೀತಿಯಾದರೋ ಇದಕ್ಕಿಂತ ವಿಶೇಷವಾದದ್ದು ಯಾಕಂದರೆ ಆತನು ತನ್ನ ಶತ್ರುಗಳಿಗೋಸ್ಕರವೂ ಪ್ರಾಣವನ್ನು ಕೊಟ್ಟನು. ಆತನು ಈ ಪತ್ರಿಕಾ ವಾಚಕರಲ್ಲಿ ಪ್ರತಿಯೊಬ್ಬರನ್ನೂ ಪ್ರೀತಿಸುತ್ತಾನೆ. ಅವರ ಪಾಪದ ಫಲವನ್ನೂ ಅಪರಾಧವನ್ನೂ ಆತನು ತನ್ನ ಮೇಲೆ ತೆಗೆದುಕೊಂಡನು. ಆತನು ನಮ್ಮ ಮೇಲೆ ತೋರಿಸಿರುವ ಪ್ರೀತಿಯನ್ನೂ ಆ ಪ್ರೀತಿಯಿಂದ ಪ್ರೇರಿತನಾಗಿ ತಾನನುಭವಿಸಿದ ಶ್ರಮೆಗಳನ್ನೂ ನಾವು ಸ್ಮರಿಸಬೇಕೆಂದು ನಮಗೆ ಹೇಳುತ್ತಾನೆ. ಈ ಸ್ವಾಮಿಯು ಪ್ರೀತಿಸಿದ ಹಾಗೆ ಮನುಷ್ಯಜಾತಿಯನ್ನು ಬೇರೆ ಯಾರಾದರೂ ಪ್ರೀತಿಸಿದ್ದುಂಟೇ! ಆತನ ಪ್ರೀತಿಗೆ ಬದಲಾಗಿ ನಾವಾತನನ್ನು ಪ್ರೀತಿಸಬೇಡವೇ? ಆತನ ಮೇಲೆ ನಮಗೆ ಪ್ರೀತಿಯಿದ್ದರೆ ಅದನ್ನು ನಾವು ಹ್ಯಾಗೆ ತೋರಿಸಬೇಕು? ಆತನು ನಮಗೆ ಕೊಡಬೇಕೆಂದಿರುವ ಬಿಡುಗಡೆಯನ್ನೂ ಪರಿಶುದ್ಧತ್ವವನ್ನೂ ಕೇವಲ ಕೃತಜ್ಞತೆಯಿಂದಲೂ ಭಕ್ತಿಯಿಂದಲೂ ಸ್ವೀಕರಿಸಿ, ನಮ್ಮ ಜೀವಕಾಲವೆಲ್ಲಾ ಆತನ ಶಿಷ್ಯರಾಗಿ ನಡೆಯಬೇಕಲ್ಲವೇ?

ಇಂಡಿಯಾ ದೇಶದ ವೃತ್ತಾಂತಗಳು.

ಕಪೂರ್ಥಲ ಮಹಾರಾಜರವರು ಕಲ್ಕತ್ತೆಗೆ ಬಂದು, ಅಲ್ಲಿಂದ ಜಗನ್ನಾಥಕ್ಕೆ ಯಾತ್ರಾರ್ಥಿಗಳಾಗಿ ಹೋಗಿರುತ್ತಾರೆ.

◆◆◆◆

ಕಲ್ಲಿಕೋಟೆಯಲ್ಲಿ ಒಂದು ಹೊಸ ಮಾರ್ಕೆಟ್ಟನ್ನು ಕಟ್ಟುವದಕ್ಕೆ ಮದರಾಸ್ ಸರ್ಕಾರದವರು ೩೬,೭೦೦ ರೂಪಾಯಿ ಸಾಲ ಕೊಟ್ಟಿದ್ದಾರೆ.

◆◆◆◆

ಪುದುಕೋಟೆ ಸಂಸ್ಥಾನದಲ್ಲಿ ಈ ತಿಂಗಳ ೨೪ ಕ್ಕೆ ಅಲ್ಲಿನ ಪ್ರತಿನಿಧಿ ಸಮಾಜವು ಕೂಡುವದು. ಈ ಪ್ರತಿನಿಧಿ ಸಮಾಜವು ಅಲ್ಲಿ ಏರ್ಪಾಡಾಗಿ ನಾಲ್ಕು ವರುಷಗಳಾಗಿರುತ್ತವೆ.

◆◆◆◆

ಲಾರ್ಡ್ ಕರ್ಜನರವರು ವೈಸ್‌ರಾಯ್ ಪದವಿಯನ್ನು ಬಿಟ್ಟು ಸೀಮೆಗೆ ಹೊರಟುಹೋದ ಮೇಲೆ ಲಾರ್ಡ್ ಮಿಲ್ನರ್‌ರವರೇ ಹಿಂದುಸ್ಥಾನಕ್ಕೆ ವೈಸ್‌ರಾಯರಾಗಿ ಬರುತ್ತಾರೆಂದು ವರ್ತಮಾನವಿದೆ.

◆◆◆◆

ಹೈದರಾಬಾದ್ ಸಂಸ್ಥಾನದ ನೈಜಾಮರವರ ನವಾಬ ಬಂಧುವಾದ ಸಾಹೆಬ್ ಜಾದಾ ವಿಜಾರ್ ವಿಲ್ಯತ್ ಅಲಿಖಾನ್‌ಯವರು ಈ ಸಲ ಪಂಜಾಬ್ ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದಾರೆ.

◆◆◆◆

ರುರ್ಕಿ ಪಟ್ಟಣದ ಬಳಿ ಚಕ್ರಾರಪುರದಲ್ಲಿ ೪ ಮಂದಿ ಗ್ರಾಮಸ್ಥರು ಇಬ್ಬರು ಸೈನಿಕರನ್ನು ತಡೆದು, ಅವರನ್ನು ಬಹಳವಾಗಿ ಹೊಡೆದು, ಗಾಯಪಡಿಸಿದ್ದರಿಂದ ಸರ್ಕಾರದವರು ಅವರನ್ನು ಹಿಡಿದು [illegible] ಮಾಡಿ, ೩ ಮಂದಿಗೆ ತಲಾ ಒಂದು ವರುಷದಿಂದ ಎರಡು ವರುಷದ ವರೆಗೆ ಕಠಿಣ ಸಜವನ್ನು ವಿಧಿಸಿದರು. ಆಗ ಫಿರ್ಯಾದಿಗಳು ಈ ಶಿಕ್ಷೆಯನ್ನು ಕಡಿಮೆಮಾಡಬೇಕೆಂದು ಬೇಡಿಕೊಂಡರು.

ರಾವಲ್‌ಪಿಂಡಿ ಪಟ್ಟಣದಲ್ಲಿ ಈ ತಿಂಗಳು ೧೬ ರಿಂದ ೧೯ ನೆ ತಾರೀಖು ವರೆಗೆ ಒಂದು ಜೈನ ಮಹಾ ಸಭೆ ನಡೆಯುವದು. ಆ ಷಹರಿನಲ್ಲಿ ಭಾರೀ ಸಾಹುಕಾರರಾದ ಲಾಲಾ ದೇವಿ ಸಾಹಿ ಮತ್ತು ಸೋಹನ್ ಲಾಲ್ ಎಂಬಿಬ್ಬರು ಈ ಸಮಾಜಕ್ಕೆ ಬೇಕಾಗಿರುವ ಏರ್ಪಾಡನ್ನೆಲ್ಲಾ ಮಾಡುತ್ತಿದ್ದಾರೆ.

◆◆◆◆

ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ಸರ್ಕಾರದವರು ನದಿಯಿಂದ ನಾಲೆಯನ್ನು ತೆಗೆಯಬೇಕೆಂದು ತೀರ್ಮಾನಿಸಿ, ಅದಕ್ಕಾಗಿ ೩೩ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದರು. ಇದು ಸಾಲದೆ ಬಂದದ್ದರಿಂದ ಗವರ್ನಮೆಂಟಿನವರು ಇನ್ನೂ ೨ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

◆◆◆◆

ರಂಗೂನ್ ಪಟ್ಟಣದಲ್ಲಿ ಚೀನೆಯ ಮತ್ತು ಬರ್ಮಾದ ವರ್ತಕರು ವ್ಯಾಪಾರ ನಡಿಸುವ ದೊಡ್ಡ ಬಜಾರಿನಲ್ಲಿ ಬೆಂಕಿ ಬಿದ್ದು ಕೆಲವು ಮನೆಗಳು ಸಾಮಾನು ಸಹಿತ ಉರಿದುಹೋದವು. ೩—೪ ಜನರು ಬೆಂಕಿಯಲ್ಲಿ ಸಿಕ್ಕಿ ಮೃತಪಟ್ಟರು. ಸುಮಾರು ೧,೨೦,೦೦೦ ರೂಪಾಯಿನ ಸಾಮಾನು ಮುಂತಾದ್ದು ನಷ್ಟವಾಗಿದೆ.

◆◆◆◆

ಮದರಾಸ್ ಗವರ್ನಮೆಂಟಿನವರು ಆ ಪಟ್ಟಣದಲ್ಲಿರುವ ಆಸ್ಪತ್ರೆಯನ್ನು ಬಿಡಾವಣ ಮಾಡುವದಕ್ಕೆ ೨೬,೩೪೦ ರೂಪಾಯಿಯನ್ನೂ ಮಧುರೆಯಿಂದ [illegible] ರಸ್ತೆ ಹಾಕುವದಕ್ಕೆ ೨೬,೫೯೦ ರೂಪಾಯಿಯನ್ನೂ ಚಿತ್ತೂರಿನಲ್ಲಿ ಡಿಪ್ಟಿ ಕಲೆಕ್ಟರ್ ಆಫೀಸನ್ನು ಕಟ್ಟುವದಕ್ಕೆ ೧೬,೦೦೦ ರೂಪಾಯಿಯನ್ನೂ ಸ್ಯಾಂಕ್ಷನ್ ಮಾಡಿದಾರೆ.

◆◆◆◆

ಮಥುರಾ ರೈಲ್ವೆ ಸ್ಟೇಷನಿನಲ್ಲಿ ನಿಂತಿದ್ದ ರೈಲ್ವೆ ಸಾಮಾನು ಗಾಡಿಗಳಿಗೆ ಪ್ರಯಾಣಿಕರಿದ್ದ ಒಂದು ರೈಲ್ ಗಾಡಿಯು ಅತಿ ವೇಗವಾಗಿ ಬಂದು ಕಳೆದವಾರ ಬಡಿದು ತುಂಬಾ ಅನಾಹುತವಾಯಿತು. ದೇವರ ದಯದಿಂದ ಪ್ರಯಾಣಿಕರಿಗೆ ಅಪಾಯವೇನೂ ಆಗಲಿಲ್ಲ. ಆದರೆ ರೈಲ್ ಕಂಪನಿಯವರ ಕೆಲವು ಗಾಡಿಗಳು ಒಡೆದು ನಾಶವಾದವು.

◆◆◆◆

ತಾಂಜೋರಿನ ಮಹಾರಾಜರು ತಮ್ಮ ಸರಸ್ವತಿ ಭಂಡಾರದಲ್ಲಿ [illegible] ಮೊದಲಾದ ೧,೯೦೦ ಪ್ರಾಚೀನ ಗ್ರಂಥಗಳನ್ನು ಇಟ್ಟುಕೊಂಡಿದಾರೆ. ವೈಸ್‌ರಾಯ್ ಲಾರ್ಡ್ ಕರ್ಜನರವರು ಕಳೆದ ವಾರ ಆ ಸಂಸ್ಥಾನಕ್ಕೆ ದಯಮಾಡಿದ್ದಾಗ ಈ ಸರಸ್ವತಿ ಭಂಡಾರವನ್ನು ಪರೀಕ್ಷೆ ಮಾಡಿ, ತುಂಬಾ ಸಂತೋಷಪಟ್ಟುಕೊಂಡರು.

◆◆◆◆

ಜಯಪುರ ಸಂಸ್ಥಾನದ ಕುಮಾರರಾಜರಿಗೆ ಕಳೆದವಾರ ಉಪನಯನ ಮಹೋತ್ಸವವನ್ನು ಮಾಡಿದರು. ಸುಮಾರು ಹತ್ತು ಸಾವಿರ ಪ್ರಜೆಗಳು ಸೇರಿದ್ದರು. ನೂರಾರು ಮಂದಿ ದೊಡ್ಡ ಮನುಷ್ಯರೂ ಅಧಿಕಾರಿಗಳೂ ರಾಜಕುಮಾರರಿಗೆ ಬಿಲ್ಲತ್ತುಗಳನ್ನು ಒಪ್ಪಿಸಿದರು. ಒಂದು ವಾರದ ತನಕ ಆ ಸಂಸ್ಥಾನದಲ್ಲಿ ನಾನಾ ಉತ್ಸವಗಳು ನಡೆದವು.

◆◆◆◆

ರಂಗೂನ್ ಪಟ್ಟಣದಲ್ಲಿ ಪ್ಲೇಗಿನ ಅವಾಂತ್ರ ಬಹಳವಾಗಿದೆ. ಇದುವರೆಗೆ ೫೦೦ ಜನರ ತನಕ ಮೃತಪಟ್ಟರು. ಜನರು ಕೆಲಸ ಕಾರ್ಯಗಳನ್ನೂ ಮನೆಮಠಗಳನ್ನೂ ಗಾಬರಿಬಿದ್ದು ಬಿಟ್ಟು ಚದರಿಹೋಗುತ್ತಿದಾರೆ. ಸರ್ಕಾರದವರು ಈ ರೋಗಕ್ಕೆ ಮೂಲವಾದ ಹೆಗ್ಗಣಗಳನ್ನೂ ಇಲಿಗಳನ್ನೂ ಕೊಲ್ಲಿಸುತ್ತಿರುವರು. ಇದುವರೆಗೆ ೫೦,೦೦೦ ಕೊಂದದ್ದಾಯಿತು.

◆◆◆◆

ಷೋಲಾಪುರದಲ್ಲಿ ಕಳೆದವಾರ ಸಂತೆ ಪೇಟೆಗೆ ಬೆಂಕಿ ಬಿದ್ದು ಸುಮಾರು ನಾಲ್ಕು ಗಂಟೆಗಳ ವರೆಗೆ ಮನೆಗಳು ಉರಿದವು. ಎರಡು [illegible] ಅಂಗಡಿಗಳು ಧಾನ್ಯ ಸಹಿತ ಸುಟ್ಟುಹೋದವು. ಪ್ಲೇಗ್ ಉಪದ್ರವಕ್ಕಾಗಿ ಜನರೆಲ್ಲಾ ಅಂಗಡಿಗಳನ್ನೂ ಮನೆಗಳನ್ನೂ ಬಿಟ್ಟು ಹೋಗಿದ್ದರು. ಆದುದರಿಂದ ಯಾರೂ ಸಾಯಲಿಲ್ಲ. ಸುಮಾರು ಎರಡು ಲಕ್ಷ ರೂಪಾಯಿ ಸಾಮಾನು ಮುಂತಾದ್ದು ನಷ್ಟವಾಗಿರುವದು.

◆◆◆◆

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಹಿತ ಬೊಂಬಾಯಿನಲ್ಲಿ ಬಂದು ಇಳಿದಾಗ ಅವರನ್ನು ತಕ್ಕ ಹಾಗೆ ಎದುರುಗೊಂಡು ಮಾನಮರ್ಯಾದೆಗಳನ್ನು ನಡಿಸುವದಕ್ಕೂ ಅನೇಕ ವಿನೋದಗಳನ್ನು ಅವರಿಗಾಗಿ ಏರ್ಪಡಿಸುವದಕ್ಕೂ ಒಂದು ಸಂಘವು ಕೂಡಿದೆ. ಈ ಸಂಘಕ್ಕೆ ಬೊಂಬಾಯಿನಲ್ಲಿರುವ ಮುಖ್ಯ ಮುಖ್ಯ ಪ್ರಜೆಗಳೆಲ್ಲಾ ಮೆಂಬರುಗಳಾಗಿದಾರೆ.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಹೈಕೋರ್ಟ್ ಜಡ್ಜರಾಗಿದ್ದ ದೇಶವತ್ಸಲರಾದ ಮಿ॥ ಎಂ. ಜಿ. ರಾನಡೇಯವರ ಹೆಸರನ್ನು ಶಾಶ್ವತಪಡಿಸುವದಕ್ಕೆ ಚಂದಾ ಎತ್ತಿದರು. ೫೩,೩೦೦ ರೂಪಾಯಿ ಕೂಡಿದೆ. ಈ ಹಣದಲ್ಲಿ ಆ ಪುಣ್ಯಾತ್ಮನ ಪ್ರತಿಮೆಯನ್ನು ಮಾಡಿಸಿ ಇರಿಸಬೇಕೆಂತಲೂ ಇನ್ನೂ ಹಣ ಉಳಿದರೆ ಆತನ ಒಂದು ತಸ್ವೀರನ್ನು ಬರೆಸಬೇಕೆಂತಲೂ ಕಳೆದವಾರ ಕಮಿಟಿಯವರು ಗೊತ್ತುಮಾಡಿದಾರೆ.

◆◆◆◆

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಬಾಳೇನಾರಿನ ಉತ್ಪನ್ನಗಳನ್ನು ತಯಾರುಮಾಡುವ ಸರ್ಕಾರಿ ಕಸಬಿನ ಪಾಠಶಾಲೆ ಇರುವದಷ್ಟೆ. ಈ ಕಾರ್ಖಾನೆಯಲ್ಲಿ ನಡೆಯುವ ಕೆಲಸಗಳನ್ನೂ ಇನ್ನೂ ಕೆಲವು ರಾಜಕೀಯ ವಿಭಾಗಗಳನ್ನೂ ನೋಡಿ ತಿಳಿದುಕೊಂಡು ಹೋಗುವದಕ್ಕೋಸ್ಕರ ಬರೋಡಾ ಸಂಸ್ಥಾನದ ಇಬ್ಬರು ಅಧಿಕಾರಿಗಳು ಗಾಯಕವಾಡ ಮಹಾರಾಜರವರಿಂದ ಅಪ್ಪಣೆ ಪಡೆದು ಬಂದಿದಾರೆ.

ಅಲಹಾಬಾದಿನಲ್ಲಿ ಸಿಕ್ ಜನರ ಮುಖಂಡನಾಗಿದ್ದ ೬೩ ವಯಸ್ಸಿನ ಬಾಬಾ ಸರ್ ಖೇಂಸಿಂಗ್ ಎಂಬಾತನು ಕಳೆದವಾರ ಕಾಲವಾದನು. ಈತನು ಗವರ್ನಮೆಂಟಿನವರಿಗೆ ತುಂಬಾ ಸಹಾಯ ಮಾಡುತ್ತಿದ್ದನು. ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲೂ ಪಂಜಾಬ್ ಲೆಫ್ಟಿನೆಂಟ್ ಗವರ್ನರವರ ಮಂತ್ರಾಲೋಚನಾ ಸಭೆಯಲ್ಲೂ ಮೆಂಬರಾಗಿದ್ದು ೧೮೭೮ರಲ್ಲಿ ಕೆ. ಸಿ. ಐ. ಇ. ಎಂಬ ಬಿರುದನ್ನು ಸಂಪಾದಿಸಿಕೊಂಡಿದ್ದನು.

* * * *

ಕಲ್ಕತ್ತಾ ಪಟ್ಟಣದ ಕ್ಯಾನಿಂಗ್ ಸ್ಟ್ರೀಟ್ ಎಂಬ ಭಾಗದಲ್ಲಿ ಕಳೆದ ವಾರ ಒಂದು ದಿನ ರಾತ್ರಿ ಸುಮಾರು ೩೦ ಮಂದಿ ಕಳ್ಳರು ಒಬ್ಬ ಭಾರೀ ಸಾಹುಕಾರನ ಮನೆಗೆ ನುಗ್ಗಿ, ಮನೆಯವರನ್ನೆಲ್ಲಾ ಚಿತ್ರಹಿಂಸೆಗೆ ಗುರಿ ಮಾಡಿ, ಸಾಮಾನುಗಳನ್ನು ಅಪಹರಿಸಿಕೊಂಡು ಹೋದರು. ಸಬ್ ಪೋಲೀಸ್ ಇನ್ಸ್‌ಪೆಕ್ಟರು ತುಂಬಾ ಸಾಹಸಪಟ್ಟು ಆ ಪೈಕಿ ನಾಲ್ವರನ್ನು ಮಾಲ್ ಸಹಿತ ಪತ್ತೆ ಮಾಡಿದರು. ಇವರಲ್ಲಿ ಒಬ್ಬ ಕಳ್ಳನು ಕಳುವು ಮಾಡಿದ್ದುಂಟೆಂದು ಒಪ್ಪಿ ಮಾಫೀಸಾಕ್ಷಿಯಾಗಿದ್ದಾನೆ.

* * * *

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವು ಇನ್ನೂ ಬಹಳ ಹೆಚ್ಚಾಗಿಯೇ ಇದೆ. ಕಳೆದವಾರ ಈ ಉಪದ್ರದಲ್ಲಿ ೨೫,೦೦೦ ಪ್ರಜೆಗಳಿಗೆ ಕಡಿಮೆ ಇಲ್ಲದೆ ತೀರಿಹೋದರು. ಹಿಂದಿನ ವಾರಕ್ಕಿಂತಲೂ ೫,೦೦೦ ಮರಣಗಳು ಕಡಿಮೆ. ಆದರೂ ಉಪದ್ರವು ಇನ್ನೂ ಕಡಿಮೆಯಾಗುವಂತಿಲ್ಲವಲ್ಲಾ ಎಂದು ದುಃಖಪಡುವರು. ಪಂಜಾಬಿನಲ್ಲಿ ೨೦,೭೨೨ ಜನರೂ, ಸಂಯುಕ್ತ ಆಧಿಪತ್ಯದಲ್ಲಿ ೧೯,೯೩೯ ಜನರೂ, ಬಂಗಾಳ ೩೪೩೪, ಬೊಂಬಾಯಿ ೨,೫೬೭, ಬರ್ಮಾ ೯೦—ಈ ಪ್ರಕಾರ ಮರಣಗಳಾಗಿವೆ.

* * * *

ಗೋರಖಪುರ ಡಿಸ್ಟ್ರಿಕ್ಟಿನಲ್ಲಿ ಪಾದ್ರೌನಾ ರಾಯರವರು ಭಾರೀ ಜಮೀನ್‌ದಾರರು. ಇವರು ತಮ್ಮ ಜಮೀನ್‌ದಾರಿಯಲ್ಲಿ ರೈತರಿಗೋಸ್ಕರ ಒಂದು ವ್ಯವಸಾಯದ ಬ್ಯಾಂಕನ್ನು ಇಟ್ಟು, ಅದಕ್ಕೆ ತಮ್ಮ ಸ್ವಂತ ಖಜಾನೆಯಿಂದ ೭೦,೦೦೦ ರೂಪಾಯಿ ಮೂಲಧನ ಹಾಕಿ, ತಮ್ಮ ಸರಕಾರದಿಂದ ಯುಕ್ತ [illegible] ಮ್ಯಾನೇಜರಾಗಿ ನೇಮಿಸಿದ್ದಾರೆ. ಈ ಬ್ಯಾಂಕಿನಲ್ಲಿ ಅಲ್ಲಿನ ರೈತರಿಗೆ ಕೇವಲ ಒಂದು ರೂಪಾಯಿ ಬಡ್ಡಿಯಂತೆ ಸಾಲವನ್ನು ಕೊಡುವರು. ಮೂರು ವರುಷಗಳಿಂದಲೂ ಬ್ಯಾಂಕು ತುಂಬಾ ತೃಪ್ತಿಕರವಾಗಿ ನಡೆಯುತ್ತಿದೆ. ಇದುವರೆಗೆ ೩,೯೧೦ ರೈತರು ಬ್ಯಾಂಕಿನಲ್ಲಿ ೩೩,೭೭೭ ರೂಪಾಯಿನ ಲೇವಾದೇವಿ ನಡಸಿದಾರೆ.

* * * *

ಬೊಂಬಾಯಿ ಗವರ್ನಮೆಂಟಿನವರು ಶೋಲಾಪುರದ ಹತ್ತಿರ ಒಂದು ಗೋಶಾಲೆಯನ್ನಿಟ್ಟು ಒಳ್ಳೆ ಹೋರಿಗಳನ್ನೂ ದನಗಳನ್ನೂ ಆರಿಸಿ ಸಾಕಬೇಕೆಂತಲೂ ಜಮೀನ್‌ದಾರರಿಗೆ ವ್ಯವಸಾಯಕ್ಕೆ ಅನುಕೂಲಿಸುವಂಥಾ ರಾಸುಗಳನ್ನು ಅಲ್ಪ ಕ್ರಯಕ್ಕೆ ವಿಕರಿ ಮಾಡಬೇಕೆಂತಲೂ ಗೊತ್ತು ಮಾಡಿದಾರೆ. ಈ ಗೋಶಾಲೆಯನ್ನು ಏರ್ಪಡಿಸುವುದಕ್ಕೆ ಪ್ರಾರಂಭದಲ್ಲಿ ೨೭,೦೦೦ ರೂಪಾಯಿ ಖರ್ಚುಮಾಡಬೇಕೆಂತಲೂ ಅನಂತರ ಪ್ರತಿ ವರುಷವೂ ಅದರ ಕಟ್ಟಳೆ ಮುಂತಾದ್ದಕ್ಕೆ ೪,೦೦೦ ರೂಪಾಯಿ ಖರ್ಚುಮಾಡಬೇಕೆಂತಲೂ ಹುಕುಂ ಕೊಟ್ಟಿದಾರೆ. ಈಗ ಅಹಮದಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಬಾವ್ಳ ಎಂಬಲ್ಲಿ ಕೆಲವು ಜೈನ ವಾಣಿಯರು ಸೇರಿ ಇಂಥಾ ಒಂದು ಗೋಶಾಲೆಯನ್ನು ಇಟ್ಟು ನಡಸುತ್ತಿದಾರೆ. ಇದಕ್ಕೆ ಸರಕಾರದ ದ್ರವ್ಯಸಹಾಯ ಕೊಡುವುದಾಗಿ ಈಗ ಸ್ಯಾಂಕ್ಷನ್ ಮಾಡಿದಾರೆ.

* * * *

ದಕ್ಷಿಣ ಕನ್ನಡಾ ಜಿಲ್ಲಾ ಕಾಸರಗೋಡು ತಾಲ್ಲೂಕು ಕಸಬೆಯಿಂದ ಒಬ್ಬ ಬಾತ್ಮಿದಾರನು ತಿಳಿಯಪಡಿಸುವುದೇನೆಂದರೆ—ಕಾಸರಗೋಡಿನಲ್ಲಿ ಒಂದು ಸಮೂಹದ ಬಿರುಗಾಳಿ ಮಳೆ ಆಗಿ ಒಂದು ಸಮಯವು ಇದುವರೆಗೆ ನಿಲ್ಲಲಿಲ್ಲ. ಚಳಿ ಹೆಚ್ಚು. ಆ ಸುಂದ ಜನರು ೬—೭ ಗಂಟೆಯವರೆಗೆ ಬಾವಿಯಿಂದ ನೀರಿಳಿಸುವದಿಲ್ಲ. ಈಗ ೨—೩ ದಿವಸದಿಂದ ಒಳ್ಳೆ ಮಳೆ ಬಿದ್ದಿತು. ಮಂಗಳೂರಿನಲ್ಲಿ ಪ್ಲೇಗು ಉಪದ್ರವು ಕಾಸರಗೋಡು ತಾಲ್ಲೂಕಿನ ಮಂಜೇಶ್ವರ ಎಂಬ ಹಳ್ಳಿಯಲ್ಲಿ ಶುರು ಆಗಿ ೧೦—೧೫ ಜನ ತೀರಿಕೊಂಡರು. ಅದ್ದರಿಂದ ಸುತ್ತಮುತ್ತಲಿನ ಹಳ್ಳಿಯ ಜನಗಳು ಬೆದರಿಬಿಟ್ಟಿರುತ್ತಾರೆ. ಸ್ವಾಮಿ ಕರ್ತನಾದ ದೇವರು ಆ ಕಾಯಿಲೆಯನ್ನು ಅಲ್ಲಿಯೇ ಅಂತ್ಯ ಮಾಡಲಿ.—ಕಾಸರಗೋಡಿನಿಂದ ಹೋಗಿ ಅನೇಕ ದೇಶಗಳನ್ನು ಸಂಚಾರ ಮಾಡಿಕೊಂಡು ಮತ್ತು ಚಿತ್ರಗಾರಿಗೆ ಕೆಲಸದಲ್ಲಿ ಹುಷಾರಾಗಿ ಬಂದ ಖಾದ್ರಿಬ್ಯಾರಿ ಎಂಬುವ ಇಲ್ಲಿ ಒಂದು ದೊಡ್ಡ ಫಾಟಕವನ್ನು ಪ್ರಾರಂಭ ಮಾಡಿರುತ್ತಾರೆ.

* * * *

ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದಲ್ಲಿ ಹುಟ್ಟಿ ಮೆಟ್ರಿಕ್ ಪ್ಯಾಸ್ ಮಾಡಿರುವಂಥಾ ಕೆಲವು ವಿದ್ಯಾರ್ಥಿಗಳಿಗೆ ಇತರ ರಾಜ್ಯಗಳಿಗೆ ಹೋಗಿ ಈ ದೇಶದಲ್ಲಿ ಬಳಕೆಯಾಗುತ್ತಿರುವ ಕಸುಬುಗಳ ಕಲಿತು ಬಂದು ವೃದ್ಧಿಪಡಿಸುವುದಕ್ಕೋಸ್ಕರ ವರುಷಕ್ಕೆ ೧೫೦ ರಂತೆ ವೇತನಗಳನ್ನು ಕೊಡುವುದಾಗಿಯೂ, ಅವರ ಪ್ರಯಾಣ ಖರ್ಚನ್ನೂ ಅವರು ಓದಬೇಕಾದ ಪುಸ್ತಕಗಳ ಕ್ರಯ ಮತ್ತು ಫೀಜು ಮೊದಲಾದದ್ದನ್ನೂ ಕೊಡುವುದಾಗಿ ವಾಗ್ದಾನಮಾಡಿ ವಯಸ್ಸು ಇಷ್ಟೇ ಇರಬೇಕೆಂಬ ನಿಯಮವ ಮಾಡಿಲ್ಲ. [illegible]ಗಾರಿಕೆ, ನೈಪುಣ್ಯ, ಫಾರೆಸ್ಟ್ ವಿಚಾರ, ಪಶುವೈದ್ಯ, ನ್ಯಾಚ[illegible], ಇಂಜನಿಯರ್, ಈ ವಿದ್ಯೆಗಳನ್ನು ಕಲಿತು ಬರಬೇಕೆಂ[illegible]ರಿಗೆ ಈ ವೇತನಗಳು ದೊರಕಲಾರವು. ಇವುಗಳನ್ನು ಬಿಟ್ಟು [illegible] ಕಲಿಯದಾದ ವಿದ್ಯೆಗಳನ್ನು ಕಲಿತು ಬರಲು ಅಪೇಕ್ಷೆಪಡುವ[illegible] ಮಾತ್ರ ವೇತನ ಕೊಡುತ್ತಾರೆ.

ಹೈದರಾಬಾದ್ ಸಂಸ್ಥಾನದ ಪೊಲೀಸ್ ಕಮಿಷನರಾಗಿದ್ದು ಆ ಇಲಾಖೆಯನ್ನು ಬಹಳ ಉತ್ತಮಸ್ಥಿತಿಗೆ ತಂದಿರುವ ನವಾಬ್ ಅಕ್ಬರುಲ್‌ಮುಲ್ಕ್, ಸಿ. ಐ. ಇ. ಯವರು ಕಳೆದ ವಾರ ಕಾಲವಾದರು. ಇವರಿಗೆ ಅಂತ್ಯಕಾಲದಲ್ಲಿ ೩೧ ವರುಷ ವಯಸ್ಸಾಗಿತ್ತು. ಇವರು ಲಾರ್ಡ್ ನೇಪಿಯರ್ ಯವರ ಸಂಗಡ ಇದ್ದು ಅಬ್ಸೀನಿಯಾ ದೇಶದಲ್ಲಿ ತುಂಬಾ ಸಾಹಸಕಾರ್ಯಗಳನ್ನು ಮಾಡಿ, ಸಿ. ಐ. ಇ. ಎಂಬ ಬಿರುದನ್ನು ಸಂಪಾದಿಸಿಕೊಂಡರು. ತುಂಬಾ ಧರ್ಮಿಷ್ಠರೆಂತಲೂ ಪರೋಪಕಾರಿಗಳೆಂತಲೂ ಪ್ರಜಾವತ್ಸಲರೆಂತಲೂ ಕೀರ್ತಿ ಪಡೆದಿದ್ದರು.

* * * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಕೆಲವು ಜಮೀನ್‌ದಾರಿಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಇಂಡಿಯಾ ಗವರ್ನಮೆಂಟಿನವರು ಮೆ॥ ರೋಲ್ಟ್ ಎಂಬಾತನನ್ನು ಮ್ಯಾನೇಜರಾಗಿ ನೇಮಿಸಿದ್ದರು. ಈ ಮ್ಯಾನೇಜರು ಜಮೀನ್‌ದಾರಿಗಳ ದುಡ್ಡನ್ನು ಅಪಹರಿಸಿದನೆಂದು ಮೊಕದ್ದಮೆ ಆಯಿತು. ಮೊದಲು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ತರುವಾಯ ಅಪೀಲಿನಲ್ಲಿ ಹೈಕೋರ್ಟಿನವರೂ ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಆತನು ನಿರಪರಾಧಿ ಎಂದು ತೀರ್ಮಾನ ಕೊಟ್ಟರು. ಈಗ ಗವರ್ನಮೆಂಟಿನವರು ಆತನನ್ನು ಅದೇ ಕೆಲಸಕ್ಕೆ ನೇಮಕ ಮಾಡಿ, ನಿಂತಿದ್ದ ಸಂಬಳವೆಲ್ಲಾ ಆತನಿಗೆ ಪಾವತಿ ಆಗಬೇಕೆಂತಲೂ ಆತನು ತನ್ನ ಪಕ್ಷದಲ್ಲಿ ಲಾಯರಿಟ್ಟು ಮೊಕದ್ದಮೆ ನಡಸುವುದಕ್ಕೆ ಬಹಳ ದ್ರವ್ಯ ಖರ್ಚುಮಾಡಿರುತ್ತಾನಾದ್ದರಿಂದ ಆತನಿಗೆ ೧೫,೦೦೦ ರೂಪಾಯಿ ಪರಿಹಾರವನ್ನು ಕೊಡಬೇಕೆಂತಲೂ ಸ್ಯಾಂಕ್ಷನ್ ಮಾಡಿದಾರೆ.

* * * *

ಉತ್ತರದೇಶಕ್ಕೆ ಸೇರಿದ ಕಾತಿಹರ ನಗರದಲ್ಲಿ ಕಳೆದ ವಾರ ಹಿಂದುಗಳೂ ಮಹಮದೀಯರೂ ಸೇರಿ ಒಂದು ದೊಡ್ಡ ಸಭೆ ನಡಿಸಿದರು. ಸಾವಿರಾರು ಪ್ರಜೆಗಳು ಸೇರಿದ್ದರು. ಬ್ರಾಹ್ಮಣ ಸಭೆಯ ಸೆಕ್ರೆಟರಿಯವರಾದ ಆದಿತ್ಯ ಪ್ರಸಾದ ಸಿಂಹ ಎಂಬುವರೂ ಮಹಮದೀಯ ಸಭಾ ಸ್ಥಾಪಕರಾದ ಮೌಲ್ವಿ ಅಬ್ದುಲ್ ಲತೀಫ್ ಯವರೂ ಪ್ರಜೆಗಳೆಲ್ಲಾ ವ್ಯಾಜ್ಯಗಳನ್ನು ಫೈಸಲ ಮಾಡಿಕೊಳ್ಳುವುದಕ್ಕೆ ಕೋರ್ಟುಗಳಿಗೆ ಹೋಗಿ ದ್ರವ್ಯನಷ್ಟಮಾಡಿಕೊಳ್ಳಕೂಡದೆಂತಲೂ ಜನರು ತಮ್ಮ ತಮ್ಮಲ್ಲೇ ಪಂಚಾಯಿತರನ್ನು ಮಾಡಿಕೊಂಡು, ಅವರಿಗೆ ತಮ್ಮ ವ್ಯಾಜ್ಯಗಳನ್ನು ಹೇಳಿ, ಅವರ ತೀರ್ಮಾನದಂತೆ ನಡೆದುಕೊಳ್ಳುತ್ತಾ ಬರಬೇಕೆಂತಲೂ ಇದು ಆರ್ಷೇಯದಿಂದಲೂ ಈ ರಾಷ್ಟ್ರದಲ್ಲಿ ರೂಢಿ ಬಂದಿರುವ ಪದ್ಧತಿಯೆಂತಲೂ ಉಪನ್ಯಾಸ ಮಾಡಿದರು. ಸಮಸ್ತ ಪ್ರಜೆಗಳೂ ಹಾಗೇ ಆಗಲೆಂದು ಏಕವಾಕ್ಯತೆಯಿಂದ ಒಪ್ಪಿಕೊಂಡಿದಾರೆ.

* * * *

ದರ್ಭಾಂಗ ಸ್ಥಾನದ ಲೇಟ್ ಮಹಾರಾಜರವರ ಪತ್ನೀರುಗಳಿಗೂ ಅವರ ಕುಮಾರರಾದ ಈಗಿನ ಮಹಾರಾಜರವರಿಗೂ ಮನಸ್ತಾಪ ಉಂಟಾಗಿ ಕಲ್ಕತ್ತಾ ಪಟ್ಟಣದ ಹೈಕೋರ್ಟಿನಲ್ಲಿ ಮೊಕದ್ದಮೆ ದಾಖಲಾಗಿದೆ. ೧೯ ಕೋಟಿ ರೂಪಾಯಿನ ಕೆಲವು ಜಮೀನುಗಳು ಲೇಟ್ ಮಹಾರಾಜರವರಿಗೆ ಸೇರಿದ್ದವು. ಅವುಗಳಿಂದ ವರುಷಕ್ಕೆ ೫೦ ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತಿದೆ. ಇಂಥಾ ಜಮೀನುಗಳನ್ನು ಈಗಿನ ಮಹಾರಾಜರವರು ತಮ್ಮ ಸ್ವಂತವೆಂದೂ ತಮ್ಮ ತಾಯಿಂದಿರಾದ ಮಹಾರಾಣೀರುಗಳಿಗೆ ಅವುಗಳ ಮೇಲೆ ಸ್ವಲ್ಪವೂ ಹಕ್ಕು ಇರುವುದಿಲ್ಲವೆಂತಲೂ ಹೇಳುತ್ತಾರೆ. ಆ ಮಹಾರಾಣೀರುಗಳು ಈ ಜಮೀನುಗಳನ್ನು ಲೇಟ್ ಮಹಾರಾಜರವರು ತಮ್ಮಗಳ ಜೀವನಾಂಶಕ್ಕಾಗಿ ಕೊಟ್ಟರೆಂದೂ ಅವನ್ನು ಈಗಿನ ಮಹಾರಾಜರವರು ತಮಗೆ ಕೊಡದೆ ಇರುತ್ತಾರೆಂತಲೂ ದಾವಾ ತಂದಿದಾರೆ. ಆ ಸಂಸ್ಥಾನದಲ್ಲೂ ಕಲ್ಕತ್ತೆಯಲ್ಲೂ ಈ ಮೊಕದ್ದಮೆಯು ತುಂಬಾ ಗಲಭೆಯನ್ನುಂಟುಮಾಡಿದೆ.

* * * *

ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಗ್ರಾಮಾಂತರಗಳಲ್ಲಿರುವ ಪಾಠಶಾಲೆಗಳಲ್ಲಿ ಹುಡುಗರಿಗೆ ಕಿಂಡರ್‌ಗಾರ್ಟನ್ ಪಾಠಗಳನ್ನು ಕಲಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಒಂದು ಲಕ್ಷ ರೂಪಾಯಿ ಸಹ್ಯಕ್ಕೆ ಸ್ಯಾಂಕ್ಷನ್ ಮಾಡಿದಾರೆ. ಗ್ರಾಮಾಂತರಗಳ ಉಪಾಧ್ಯಾಯರುಗಳನ್ನು ತಯಾರುಮಾಡಬೇಕಾದದ್ದು ಪ್ರಥಮ ಕರ್ತವ್ಯವೆಂದು ತಿಳಿದು, ೭೦ ಟ್ರೇನಿಂಗ್ ಸ್ಕೂಲುಗಳನ್ನಿಟ್ಟು, ಪ್ರತಿ ವರುಷವೂ ಪ್ರತಿ ಸ್ಕೂಲಿನಲ್ಲೂ ೪೦ ಉಪಾಧ್ಯಾಯರನ್ನು ತಯಾರು ಮಾಡಬೇಕೆಂದು ಹುಕುಂ ಕೊಟ್ಟಿದಾರೆ. ಪ್ರೈಮರಿ ಪಾಠಶಾಲೆಗಳಲ್ಲಿ ಇರುವ ಉಪಾಧ್ಯಾಯರ ಪೈಕಿ ಬೇರೆ ಬೇರೆ ಆಧಿಪತ್ಯಗಳಲ್ಲಿ ತರಬೇತಾದ ಉಪಾಧ್ಯಾಯರು ಎಷ್ಟೆಂದರೆ—ನೂರಕ್ಕೆ ಪಂಜಾಬಿನಲ್ಲಿ ೪೮ ಜನ ತರಬೇತಾದವರು, ಸಂಯುಕ್ತ ಆಧಿಪತ್ಯಗಳಲ್ಲಿ ೩೯ ಮಂದಿ, ಬೊಂಬಾಯಿನಲ್ಲಿ ೩೪ ಜನರು, ಮದರಾಸಿನಲ್ಲಿ ೨೩ ಮಂದಿ. ಬಂಗಾಳದಲ್ಲಾದರೋ ಕೇವಲ ೪ ಮಂದಿ ಉಪಾಧ್ಯಾಯರು ಮಾತ್ರ ತರಬೇತಾದವರು. ಹೀಗಿರುವಲ್ಲಿ ಅಲ್ಲಿನ ವಿದ್ಯಾಭಿವೃದ್ಧಿಯು ತುಂಬಾ ಹೀನಸ್ಥಿತಿಯಲ್ಲಿರುವುದೇನೂ ಆಶ್ಚರ್ಯವಲ್ಲ.

* * * *

ವಿಜಯ ಪಟ್ಟಣದ ಮಹಾರಾಜಾ ಕಾಲೇಜಿನಲ್ಲಿ ಮುಂದಿನ ತಿಂಗಳ ೮,೯,೧೦ ನೇ ತಾರೀಖುಗಳಲ್ಲಿ ವಿದ್ಯಾರ್ಥಿಗಳ ಸಮಾಜವು ನಡೆಯುವುದು. ಕಾಕಿನಾಡ ಕಾಲೇಜಿನ ಅಧ್ಯಕ್ಷ ಉಪಾಧ್ಯಾಯರಾದ ಮಿ॥ ಆರ್. ವೆಂಕಟರತ್ನಂ ನಾಯುಡುಯವರು ಸಭಾಧ್ಯಕ್ಷರಾಗುವರು. ಗಂಜಾಂ, ವೈಜಾಗಪಟ್ಟಣ ಈ ಡಿಸ್ಟ್ರಿಕ್ಟುಗಳ ವಿದ್ಯಾರ್ಥಿಗಳ ಪ್ರತಿನಿಧಿಗಳು ಹೋಗಿ ಸಭೆಯನ್ನು ನಡಸುವರು. ಈ ಸಮಾಜದಲ್ಲಿ ವಿದ್ಯಾರ್ಥಿಗಳು ಚರ್ಚಿಸುವ ವಿಷಯಗಳ್ಯಾವವೆಂದರೆ—(೧) ಆಗಾಗ್ಗೆ ವಿದ್ಯಾರ್ಥಿಗಳು ಇಂಥಾ ಸಭೆಗಳನ್ನು ಮಾಡುವುದು ಕ್ಷೇಮಕರವಾಗಿದೆ; (೨) ವಿದ್ಯಾರ್ಥಿಗಳು ಶರೀರ ಸ್ಥಿತಿಯನ್ನು ಕಾಪಾಡಿಕೊಳ್ಳುವಂತೆ ಅಂಗಸಾಧನೆ ಮುಂತಾದವುಗಳಲ್ಲಿ ಆಸಕ್ತರಾಗಿರಬೇಕಾದದ್ದು ಆವಶ್ಯವಾಗಿದೆ, (೩) ವಿದ್ಯಾರ್ಥಿಗಳು ಪರೋಪಕಾರ ಕಾರ್ಯಗಳನ್ನು ಮಾಡದೆ ಇರಬೇಕು; (೪) ಜನಾಂಗಳೆಲ್ಲಾ ಸಂಬಂಧಪಡುವಂಥಾ ವಿಷಯಗಳನ್ನು ಗೊತ್ತು ಮಾಡಿ ತಿಳಿದುಕೊಳ್ಳುವುದು (೫) ಒಳದೇಶದ ಕಸುಬುಗಳನ್ನು ಪ್ರೋತ್ಸಾಹಪಡಿಸುವುದು, ದೇಶ ಭಾಷೆಗಳನ್ನು ಇನ್ನೂ ಚೆನ್ನಾಗಿ ಅಭಿವೃದ್ಧಿಗೆ ತರುವುದು, ಇವೇ.

* * * *

ಹಿಂದುಸ್ಥಾನದ ಪ್ರಜೆಗಳು ವ್ಯವಸಾಯದಿಂದಲೇ ಜೀವಿಸಬೇಕಾಗಿದೆ ಎಂಬುದನ್ನೂ ವ್ಯವಸಾಯ ವಿದ್ಯೆಯನ್ನು ಶಾಸ್ತ್ರರೀತ್ಯಾಗಿ ಪ್ರಜೆಗಳಿಗೆ ಕಲಿಸಿ ಕೊಡಬೇಕಾದುದು ಅವಶ್ಯವೆಂಬುದನ್ನೂ ಇಂಡಿಯಾ ಗವರ್ನಮೆಂಟಿನವರು ನಿರ್ಧರ ಮಾಡಿಕೊಂಡು, ಅದಕ್ಕೆ ತಕ್ಕ ಸಲಕರಣೆಗಳನ್ನು ಒದಗಿಸಬೇಕೆಂದು ಯೋಚಿಸುತ್ತಿರುವಲ್ಲಿ, ಅಮೇರಿಕದ ಮಿ॥ ಫಿಪ್ಸ್ ಎಂಬೊಬ್ಬ ಧನಾಢ್ಯನು ವೈಸ್‌ರಾಯಿ ಲಾರ್ಡ್ ಕರ್ಜನ್‌ರವರ ಸಂಗಡ ಮಾತನಾಡುತ್ತಿದ್ದಾಗ ಆತನು ವೈಸ್‌ರಾಯಿಯವರ ವಶಕ್ಕೆ ೩೦,೦೦೦ ಪೌಂಡುಗಳನ್ನು (ಸುಮಾರು ೪॥ ಲಕ್ಷ ರೂಪಾಯಿ) ಕೊಟ್ಟು, ಈ ಹಣವನ್ನು ಈ ರಾಷ್ಟ್ರದ ಪ್ರಯೋಜನಕ್ಕಾಗಿ ವಿನಿಯೋಗಿಸಬೇಕೆಂದು ತಿಳಿಸಿದನು. ವೈಸ್‌ರಾಯಿಯವರು ಪೂಸಾ ಪಟ್ಟಣದಲ್ಲಿ ವ್ಯವಸಾಯವನ್ನು ಶಾಸ್ತ್ರರೀತಿಯಾಗಿ ಪರಿಶೋಧನೆ ಮಾಡಿಸಿ ಪ್ರಜೆಗಳಿಗೆ ಕಲಿಸುವುದಕ್ಕೋಸ್ಕರ ಒಂದು ದೊಡ್ಡ ವಿದ್ಯಾಶಾಲೆಯನ್ನು ಕಟ್ಟಿಸಬೇಕೆಂದು ತೀರ್ಮಾನ ಮಾಡಿ, ಕಳೆದ ವಾರ ತಾವೇ ಅಲ್ಲಿಗೆ ದಯಮಾಡಿ, ಆ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿ ಬಂದಿರುತ್ತಾರೆ. ಈ ಏರ್ಪಾಡಿನಲ್ಲಿ ಕಟ್ಟಡ ಮುಂತಾದವುಗಳಿಗೇ ಗವರ್ನಮೆಂಟಿನವರು ೧೬। ಲಕ್ಷ ರೂಪಾಯಿ ಖರ್ಚುಮಾಡುವರು. ಈ ವಿದ್ಯಾಶಾಲೆಯ ಸುತ್ತಲೂ ಇರುವ ೧,೨೮೦ ಎಕರೆ ಜಮೀನಿನಲ್ಲಿ ಪರೀಕ್ಷಾರ್ಥವಾದ ವ್ಯವಸಾಯವನ್ನು ಮಾಡಿ ವಿದ್ಯಾರ್ಥಿಗಳಿಗೆ ಕಲಿಸಬೇಕೆಂದೂ, ಒಳ್ಳೊಳ್ಳೇ ಫಲಬೀಜಗಳನ್ನು ಬೆಳೆದು ರೈತ ಪ್ರಜೆಗಳಿಗೆಲ್ಲಾ ಬಿತ್ತನೆಗಾಗಿ ಹಂಚಿಕೊಡಬೇಕೆಂದೂ ತೀರ್ಮಾನವಾಗಿದೆ. ಈ ವಿದ್ಯಾಶಾಲೆಯು ಇನ್ನು ಒಂದು ವರುಷದೊಳಗಾಗಿ ಸಾಕ್ಷಾತ್ಕಾರವನ್ನು ಹೊಂದುವುದೆಂದು ನಿರೀಕ್ಷಿಸಲ್ಪಟ್ಟಿದೆ. ಇದರಿಂದ ಈ ರಾಷ್ಟ್ರದ ವ್ಯವಸಾಯವು ಉತ್ತಮ ಸ್ಥಿತಿಗೆ ಬಂದು, ರೈತನಿಗೆ ತುಂಬಾ ಲಾಭವಾದೀತೆನ್ನುವುದಕ್ಕೆ ಸಂಶಯವಿಲ್ಲ.

ವಿದೇಶ ವರ್ತಮಾನಗಳು.

ಟ್ರಾನ್ಸ್‌ವಾಲ್ ಗಣಿಗಳಲ್ಲಿ ಕೂಲಿ ಮಾಡುತ್ತಿರುವ ಚೀನೆಯವರನ್ನೆಲ್ಲಾ ಕಳೆದ ಫೆಬ್ರವರಿ ಕಡೇ ದಿನ ಗಣತಿ ಮಾಡಿದರು. ೩೩,೦೩೦ ಮಂದಿ ಚೀನೆಯವರು ಅಲ್ಲಿಹೋಗಿ ಸೇರಿಕೊಂಡಿದಾರೆಂದು ಗೊತ್ತಾಯಿತು.

* * * *

ಪರ್ಷಿಯಾ ರಾಜ್ಯದ ಷಾ ಸುಲ್ತಾನರವರು ಯೂರೋಪಿಯನ್ ರಾಜ್ಯಗಳ ಮೇಲೆ ದೇಶಸಂಚಾರ ಹೊರಡುವವರಾಗಿದಾರೆ. ಇವರು ಈ ತಿಂಗಳ ಕಡೆಯಲ್ಲಿ ರಾಜಧಾನಿಯನ್ನು ಬಿಟ್ಟು ಕಿವ್ಸ್, ಬಾಕೂ, ಈ ಪಟ್ಟಣಗಳ ಮೇಲೆ ಪ್ರಯಾಣ ಮಾಡುವರು.

* * * *

ವಿಲಾಯತಿಯ ಹೊಗೆಸೊಪ್ಪಿನ ವ್ಯಾಪಾರಿಯಾಗಿದ್ದು ಕಾಲವಾದ ರಾಬರ್ಟ್ ಮರ್ರೆ ಎಂಬಾತನು ೩೨ ಲಕ್ಷ ರೂಪಾಯಿ ಸಂಪಾದನೆ ಮಾಡಿ, ೨೨॥ ಲಕ್ಷ ರೂಪಾಯಿಯನ್ನು ಧರ್ಮಕಾರ್ಯಗಳಿಗೆ ಕೊಡಬೇಕೆಂದು ಉಯಿಲು ಬರೆದಿರುತ್ತಾನೆ.

* * * *

ಬಾರಾಬಾಕಾ ಎಂಬ ಡಿಸ್ಟ್ರಿಕ್ಟಿಗೆ ಸೇರಿದ ಸೈಕಾಗುವಾ ಎಂಬ ತೀರಪಟ್ಟಣದಲ್ಲಿ ಪ್ಲೇಗ್ ಉಪದ್ರ ಪ್ರಾಬಲ್ಯವಾಗಿ ನೂರಾರು ಜನರು ಮೃತಪಟ್ಟದ್ದರಿಂದ ಆ ಪಟ್ಟಣದಲ್ಲಿರುವ ೭೦,೦೦೦ ಪ್ರಜೆಗಳೂ ಏಕಕಾಲದಲ್ಲಿ ಊರುಬಿಟ್ಟು ಹೋದರು. ಈಗ ಉಪದ್ರವು ನಿಂತು ಹೋಯಿತು.

* * * *

ರಷ್ಯಾ ಜಪಾನ್ ಯುದ್ಧದಲ್ಲಿ ಕಳೆದ ಮೇ ೧ನೆ ತಾರೀಖಿನಿಂದ ೧೯೦೫ನೆ ಮಾರ್ಚಿ ೧೨ ರವರೆಗೆ ರಷ್ಯನವರ ಕಡೆಯಲ್ಲಿ ೩,೯೭,೧೪೦ ಜನ ಸೈನಿಕರು ನಷ್ಟಪಟ್ಟರೆಂದು ಪ್ರಕಟವಾಗಿದೆ. ಈ ಪೈಕಿ ಮುಕ್ಡೆನ್ ಯುದ್ಧ ಒಂದರಲ್ಲೇ ಅವರ ಎರಡು ಲಕ್ಷ ಸೈನ್ಯ ಲಯವಾಯಿತು.

* * * *

ವಿಲಾಯತಿ ರಾಜ್ಯದ ಚಕ್ರವರ್ತಿ ಸಾರ್ವಭೌಮರು ಮಹಾರಾಜ್ಞೀರವರ ಸಹಿತ ಫ್ರಾನ್ಸಿನ ದಕ್ಷಿಣ ಪ್ರಾಂತ್ಯದಲ್ಲಿ ದೇಹಾರೋಗ್ಯಕ್ಕೋಸ್ಕರ ಸಂಚಾರ ಮಾಡುತ್ತಿದಾರೆ. ಇವರು ಇಷ್ಟರಲ್ಲೇ ಪ್ಯಾರಿಸ್ ರಾಜಧಾನಿಗೆ ದಯಮಾಡುವರು. ಇವರನ್ನು ಎದುರುಗೊಳ್ಳುವುದಕ್ಕೋಸ್ಕರ ಅಲ್ಲಿ ಬಹಳ ಏರ್ಪಾಡುಗಳು ನಡೆಯುತ್ತಿವೆ.

* * * *

ರಷ್ಯಾ ಜಪಾನ್ ಯುದ್ಧವು ಪ್ರಾರಂಭವಾಗುವಾಗ್ಗೆ ಮ್ಯಾಂಚೂರಿಯದಲ್ಲಿ ೫೦,೦೦೦ ರಷ್ಯಾ ಸೈನ್ಯಗಳು ಇದ್ದವು. ಆಚೆಗೆ ರಷ್ಯಾದಿಂದ ೭,೭೫,೦೦೦ ಸೈನ್ಯವನ್ನು ಹಾರ್ಬಿನ್ ಪಟ್ಟಣಕ್ಕೆ ಕಳುಹಿಸಿದರು. ಈಗ ಯುದ್ಧಭೂಮಿಯಲ್ಲಿ ಜನರಲ್ ಲಿನೆವಿಚ್ ಯವರ ಕೈಕೆಳಗೆ ೨॥ ಅಥವಾ ೩॥ ಲಕ್ಷ ಸೈನ್ಯ ಉಳಿದಿದೆ ಎಂದು ತಿಳಿದುಬರುತ್ತೆ.

ನ್ಯೂಯಾರ್ಕ್ ಪಟ್ಟಣದಲ್ಲಿ ದೊಡ್ಡ ನಾಟಕಶಾಲೆಯನ್ನಿಟ್ಟಿರುವ ಒಬ್ಬ ಸಾಹುಕಾರನು ಒಬ್ಬ ಪ್ರಸಿದ್ಧ ಸಂಗೀತಗಾರಳನ್ನು ನೇಮಿಸಿಕೊಂಡಿರುತ್ತಾನೆ. ಈಕೆಯ ಸಂಗೀತವನ್ನು ಕೇಳುವುದಕ್ಕೇ ಬಹು ಜನರು ನಾಟಕಶಾಲೆಗೆ ಹೋಗುವರು. ಯಜಮಾನನು ಅವಳಿಗೆ ಒಂದು ವಾರಕ್ಕೆ ೯,೪೫೦ ರೂಪಾಯಿನಂತೆ ಸಂಬಳ ಕೊಡುತ್ತಿದ್ದಾನೆ.

* * * *

ಯುದ್ಧದ ಖರ್ಚನ್ನು ಹುಟ್ಟುವಳಿ ಮಾಡುವುದಕ್ಕೆ ರಷ್ಯ ಗವರ್ನಮೆಂಟಿನವರು ಸರ್ಕಾರಿ ಅಧಿಕಾರಿಗಳಿಂದ ಅವರ ಸಂಬಳದಲ್ಲಿ ಶೇಕಡಾ ೨ ರಂತೆ ಕಟಾಯಿಸಿಕೊಳ್ಳುತ್ತಿದ್ದಾರೆ. ಸತ್ತವರ ವಾರಸುದಾರರಿಂದ ವಸೂಲಾಗುವ ತೆರಿಗೆಯನ್ನು ಒಂದುವರೆಯಷ್ಟು ಹೆಚ್ಚಿಸಿದರು. ಆಹಾರಪದಾರ್ಥಗಳ ಮೇಲೆಯೂ ಸುಂಕವನ್ನು ತಕ್ಕ ಮಟ್ಟಿಗೆ ಜಾಸ್ತಿ ಮಾಡಿದ್ದಾರೆ.

* * * *

ಬೆಲ್ಜಿಯಂ ರಾಜ್ಯದಲ್ಲಿ ಸಮಸ್ತ ಕಾರ್ಖಾನೆಗಳೂ ನೌಕರ ಅಂಗಡಿ ಮುಂಗಟ್ಟುಗಳೂ ಭಾನುವಾರಗಳ ದಿನ ತೆರೆದು ಕೆಲಸ ನಡಸಕೂಡದೆಂತಲೂ ವಿಶ್ರಾಂತಿ ಪಡೆಯಬೇಕೆಂತಲೂ ಸರ್ಕಾರದವರು ಒಂದು ಕಾನೂನು ಮಾಡಿದ್ದಾರೆ. ರಸ್ತೆ, ರೈಲು, ನೀರು, ಇವುಗಳ ಮೇಲೆ ಜನವನ್ನು ಸಾಗಿಸುವವರೂ ವ್ಯವಸಾಯ ಮಾಡತಕ್ಕವರೂ ಈ ಕಾನೂನನ್ನು ಅನುಸರಿಸಬೇಕಾದ್ದಿಲ್ಲವೆಂದು ವಿನಾಯಿತಿ ಮಾಡಿದ್ದಾರೆ.

* * * *

ಚೀನಾಚಕ್ರಾಧಿಪತ್ಯದಲ್ಲಿ ಗುಲಾಮರನ್ನು ಕೊಂಡು ಮಾರುವುದು ಆಚಾರವಾಗಿದೆ ಅಲ್ಲಿರುವ ೪೦ ಕೋಟಿ ಪ್ರಜಾಸಂಖ್ಯೆಯಲ್ಲಿ ಗುಲಾಮರ ಸಂಖ್ಯೆಯು ಒಂದು ಕೋಟಿಗಿಂತಲೂ ಹೆಚ್ಚಾಗಿರುವುದು. ಧನ್ಯವಂತರೆಲ್ಲಾ ತಮ್ಮ ಮನೆಗಳಲ್ಲಿ ಗೌಡಿಯರನ್ನು ಕೊಂಡು ಇಟ್ಟುಕೊಂಡು ಚಾಕರಿ ಮಾಡಿಸುತ್ತಿದ್ದಾರೆ. ಗೌಡಿಯರನ್ನು ಬಾಡಿಗೆಗೆ ತಂದಿಟ್ಟುಕೊಳ್ಳುವುದೂ ಉಂಟು. ಆದರೆ ಕ್ರಯಕ್ಕೆ ತರುವುದೇ ವಿಶೇಷ.

* * * *

ಟರ್ಕಿ ಸುಲ್ತಾನರು ತಮ್ಮ ಕುಮಾರ್ತೆಯನ್ನು ತಮ್ಮ ರಾಜ್ಯದ ನ್ಯಾಯಾಧಿಪತಿಯ ಕುಮಾರನಿಗೆ ಕೊಟ್ಟು, ತುಂಬಾ ಅಟ್ಟಹಾಸವಾಗಿ ವಿವಾಹಮಾಡಿದರು. ವಿವಾಹಕಾಲದಲ್ಲಿ ರಾಜಕುಮಾರ್ತೆಗೆ ಧರಿಸಿದ್ದ ಪೋಷಾಕು ೧,೪೮,೦೦೦ ರೂಪಾಯಿ ಬಾಳುವುದಾಗಿತ್ತು. ಸುಲ್ತಾನರು ಈ ಪೋಷಾಕನ್ನು ಇಬ್ಬರು ದರ್ಜಿಗಳಿಂದ ಅರಮನೆಯಲ್ಲೇ ಮಾಡಿಸಿದರು ಇವರು ರತ್ನಗಳನ್ನಾಗಲಿ ಮುತ್ತುಗಳನ್ನಾಗಲಿ ಬದಲಾಯಿಸದಂತೆ ಇವರ ಮೇಲೆ ಹಮೇಷಾ ಮೂವರು ಸಿಪಾಯಿಗಳನ್ನು ಕಾವಲು ಇಟ್ಟಿದ್ದರು.

* * * *

ಅಮೇರಿಕದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ವಿಚಿತ್ರತರವಾದ ರೋಗವು ಹುಟ್ಟಿ ಅನೇಕರನ್ನು ಕೊಂದುಹಾಕಿದೆ. ರೋಗಿಗೆ ಇದ್ದಕ್ಕಿದ್ದ ಹಾಗೇ ಜ್ಞಾನಶೂನ್ಯ ಉಂಟಾಗಿ ಸ್ವಲ್ಪಹೊತ್ತಿನಲ್ಲೇ ಪ್ರಾಣಹೋಗುವುದು. ಇದುವರೆಗೆ ಅಂದರೆ ಐದು ದಿನಗಳಲ್ಲಿ ೧೪೮ ಜನರು ಈ ರೋಗತಗಲಿ ಮೃತಪಟ್ಟಂತೆ ಪ್ರಕಟವಾಗಿದೆ. ಸರ್ಕಾರದವರು ಇನ್ಸ್‌ಪೆಕ್ಟರುಗಳನ್ನು ನೇಮಿಸಿ, ಮನೆಮನೆಗೆ ಹೋಗಿ ಆ ರೋಗಕ್ಕೆ ಕಾರಣವೇನೆಂಬುದನ್ನು ತನಿಖೆ ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ.

* * * *

ವಿಲಾಯಿತಿ ರಾಜ್ಯದಲ್ಲಿ ೧೯೦೪—೦೫ನೆ ಸಾಲಿಗೆ ಖರ್ಚು ಜಾತಾ ಸರ್ಕಾರಕ್ಕೆ ೧೪,೧೪,೦೦೦ ಪೌಂಡು ನಿವ್ವಳ ಉತ್ಪತ್ತಿಯಾಯಿತು. ಇದನ್ನು ನೋಡಿ ಗವರ್ನಮೆಂಟಿನವರು ಟೀ ಸುಂಕವನ್ನು ೨ ಆಣೆಯಷ್ಟು ಕಡಿಮೆಮಾಡಿ, ಜುಲೈ ೧ ರಿಂದ ಜಾರಿಗೆ ಬರತಕ್ಕದ್ದೆಂದು ಹುಕುಂ ಕೊಟ್ಟಿದ್ದಾರೆ ಸಕ್ಕರೆಯ ಸುಂಕವನ್ನೂ ಆದಾಯದ ಮೇಲಣ ತೆರಿಗೆಯನ್ನೂ ಸ್ವಲ್ಪವೂ ಕಡಿಮೆ ಮಾಡಲಿಲ್ಲ. ಮುಂದೆ ೧೯೦೫—೦೬ನೆ ಸಾಲಿನಲ್ಲಿ ಖರ್ಚು ಜಾತಾ ೨೯,೬೨,೦೦೦ ಪೌಂಡು ಆದಾಯವಾಗುವುದೆಂದು ಅಂದಾಜು ಹಾಕಿದ್ದಾರೆ.

* * * *

ಚೀನಾ ಚಕ್ರವರ್ತಿಯು ಕಳೆದ ೬ನೇ ತಾರೀಖಿನ ದಿನ ಪದ್ಧತಿಯ ಪ್ರಕಾರ ವ್ಯವಸಾಯದ ದೇವತೆಯ ಉತ್ಸವಗಳನ್ನು ಮಾಡಿದರು. ಆಗ್ಗೆ ಚಕ್ರವರ್ತಿಯವರೇ ಅರಮನೆಯಿಂದ ಆ ದೇವಸ್ಥಾನಕ್ಕೆ ಹೋಗಿ, ಪೂಜೆ ನೈವೇದ್ಯಾದಿಗಳನ್ನು ಸ್ವಹಸ್ತದಿಂದ ಮಾಡಿ ಒಪ್ಪಿಸಿದರು. ತರುವಾಯ ದೇವಸ್ಥಾನದ ಮುಂದೆ ಇರುವ ಭೂಮಿಯನ್ನು ಚಕ್ರವರ್ತಿಯವರು ಸ್ವಲ್ಪಹೊತ್ತು ನೇಗಲು ಹಿಡಿದು ಹರತೆಹಾಕಿ ಉತ್ತು ಬಂದರು ಇದರಿಂದ ಪ್ರಜೆಗಳಿಗೆಲ್ಲಾ ವ್ಯವಸಾಯವು ಗೌರವಯುಕ್ತವಾದ ಕಸಬೆಂಬುದನ್ನು ಕಲಿಸಿಕೊಟ್ಟಂತಾಯಿತು.

* * * *

ಅಬಿಸ್ಸೀನಿಯಾ ಚಕ್ರವರ್ತಿಯವರಾದ ಮೆನಿಲಿಕ್ ಪ್ರಭುವು ತನ್ನ ರಾಜ್ಯದಲ್ಲಿ ಚಿನ್ನದ ಗಣಿಗಳನ್ನು ತೆಗೆದು, ಚಿನ್ನವನ್ನು ಉತ್ಪತ್ತಿ ಮಾಡುವುದಕ್ಕೆ ಅವಶ್ಯವಾದ ಯಂತ್ರ ಮೊದಲಾದ ಉಪಕರಣಗಳನ್ನೆಲ್ಲಾ ಕೊಂಡು ತರಿಸಬೇಕೆಂದು, ತನ್ನ ಆಪ್ತನೂ ಚರಿತ್ರಕಾರನೆಂದು ಪ್ರಖ್ಯಾತಿಪಡೆದಿರುವ ಹಾಜ್ಲಾ [illegible] ಎಂಬಾತನನ್ನು ಯೂರೋಪ್ಪಿಗೆ ಕಳುಹಿಸಿರುತ್ತಾನೆ. ಈತನು ಹಾಗೇ ವಯನ್ನು ಆ ಸ್ಥಾನದ ಪುಸ್ತಕಭಂಡಾರದಿಂದ ಕೆಲವು ಪ್ರಾಚೀನ ಗ್ರಂಥಗಳನ್ನು ನೋಡಿ, ನಕಲುಗಳನ್ನು ಬರೆದುಕೊಂಡು ಹೋಗುವವನಾಗಿದ್ದಾನೆಂದು ತಿಳಿಯುವುದು.

* * * *

ಫ್ರಾನ್ಸ್ ರಾಜ್ಯವನ್ನು ಪ್ರೆಸಿಡೆಂಟೊಬ್ಬ ಅಧ್ಯಕ್ಷನು ಪ್ರಜಾ ಪ್ರತಿನಿಧಿಗಳ ಸಹಾಯ ಹೊಂದಿ ಆಳುತ್ತಿರುವನು. ಈತನನ್ನೂ ಈತನ ಕೈಕೆಳಗಿರುವ ಮಂತ್ರಿಗಳನ್ನೂ ಹಿಡಿದು ಕೊಂದು ಹಾಕಿ, ದೊರೆಯನ್ನು ಇಟ್ಟುಕೊಳ್ಳಬೇಕೆಂದು ಕೆಲವು ಜನರು ಫಿತೂರಿಮಾಡಿ, ಬೇಕಾದ ಕತ್ತಿ ಮದ್ದು ಗುಂಡು ಮುಂತಾದ ಸಲಕರಣೆಗಳನ್ನೆಲ್ಲಾ ಒದಗಿಸಿಕೊಳ್ಳುತ್ತಿದ್ದರು. ಕಳೆದ ವಾರ ಈ ಸಂಘದವರ ಗುಟ್ಟು ರಟ್ಟಾಯಿತು. ಸರ್ಕಾರದವರು ಅವರ ಅಂತರಂಗ ಸ್ಥಳವನ್ನು ನುಗ್ಗಿ ಸ್ವಾಧೀನಪಡಿಸಿಕೊಂಡದ್ದಲ್ಲದೆ ಕೆಲವು ಫಿತೂರಿಗಾರರನ್ನೂ ದಸ್ತಗಿರಿ ಮಾಡಿದ್ದಾರೆ.

* * * *

ಸ್ಪೆಯಿನ್ ರಾಜ್ಯದ ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ಒಂದು ಭಾರೀ ಕೆರೆಯ ಕಾಮಗಾರಿಯನ್ನು ಮಾಡಿಸುತ್ತಿದ್ದರು. ಅದರ ಒಂದು ಭಾಗವು ಕುಸಿದುಹೋಯಿತು. ಸುಮಾರು ನಾನೂರು ಜನ ಕೂಲಿಕಾರರು ಮೃತಪಟ್ಟರೆಂದು ತಂತೀವರ್ತಮಾನ ಬಂದಿದೆ. ಆ ರಾತ್ರಿ ೧೨ ಗಂಟೆಯ ತನಕ ಮಣ್ಣು ಎತ್ತಿ ಸುರಿದು ೮೦ ಹೆಣಗಳನ್ನು ಹೊರಕ್ಕೆ ತೆಗೆದರು. ಸಮೀಪದಲ್ಲಿರುವ ಆಸ್ಪತ್ರೆಗಳ ತುಂಬಾ ಗಾಯಪಟ್ಟವರನ್ನು ಇಟ್ಟು ಇಲಾಜು ಮಾಡುತ್ತಿದ್ದಾರೆ. ದೊರೆಯವರೂ ಮಂತ್ರಿಗಳೂ ಆ ಸ್ಥಳಕ್ಕೆ ಕೂಡಲೇ ಹೋಗಿ ಅನಾಹುತವನ್ನು ನೋಡಿ ತುಂಬಾ ಕನಿಕರಪಟ್ಟು ಬೇಕಾದ ಸಹಾಯ ಸಂಪತ್ತುಗಳನ್ನು ಒದಗಿಸುವಂತೆ ಹುಕುಂ ಮಾಡಿದರು

* * * *

ರಷ್ಯ ಜಪಾನ್ ಯುದ್ಧದಲ್ಲಿ ಜಪಾನಿನವರು ೨೮,೦೦೦ ರಷ್ಯ ಖೈದಿಗಳನ್ನು ಹಿಡಿದು, ತಂದು ತಮ್ಮ ರಾಜ್ಯದಲ್ಲಿ ಸೆರೆಹಾಕಿಕೊಂಡಿದ್ದಾರೆ. ಪೋರ್ಟ್ ಆರ್ಥರ್ ಕೋಟೆ ಒಂದರಲ್ಲೇ ೪,೦೦೦ ರಷ್ಯ ಸೈನಿಕರು ಕೈಸೆರೆ ಸಿಕ್ಕಿದರು. ಅದೇ ಕೋಟೆಯ ಆಸ್ಪತ್ರೆಗಳಲ್ಲಿ ಇನ್ನೂ ೧೮,೫೦೦ ಮಂದಿ ರಷ್ಯ ಸೈನಿಕರು ಚಿಕಿತ್ಸೆ ಹೊಂದುತ್ತಿದ್ದಾರೆ. ಈ ಪೈಕಿ ೧೬,೦೦೦ ಮಂದಿಯನ್ನು ಜಪಾನಿಗೆ ಕಳಿಸುವರು. ಈ ಕೈಸೆರೆ ಸಿಕ್ಕಿರುವ ಸೈನಿಕರನ್ನೆಲ್ಲಾ ಜಪಾನಿನವರು ೬ ಪಟ್ಟಣಗಳಿಗೆ ಹಂಚಿಹಾಕಿ, ಅಲ್ಲಲ್ಲಿರುವ ಭಾರೀ ಬೌದ್ಧದೇವಸ್ಥಾನಗಳಲ್ಲಿ ಇಟ್ಟಿದ್ದಾರೆ. ಒಸಾಕಾ ಪಟ್ಟಣ ಒಂದರಲ್ಲೇ ೧೬,೦೦೦ ಖೈದಿಗಳಿರುವರು. ಈ ಸಮಸ್ತ ಖೈದಿಗಳಿಗೂ ಜಪಾನಿನವರು ಸ್ವಲ್ಪವೂ ಅಸಮಾಧಾನ ಉಂಟಾಗದಂತೆ ಅನ್ನವಸ್ತ್ರಗಳನ್ನು ಕೊಟ್ಟು ಸಾಕುತ್ತಿದ್ದಾರೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳುಪತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

ಅಭಿಮಾನಿ, ಬೆಂಗಳೂರು ; ಚಿಕ್ಕನಾಯಕನಹಳ್ಳಿಯ ಸ್ತೋತ್ರ; ಕಂದನಕೆರೆ ಚಂದಾದಾರು ; ಬಗಲೂರು ವೃತ್ತಾಂತ —ಈ ಬಾತ್ಮಿಗಳನ್ನು ಪ್ರಕಟಿಸಲಾರೆವು

ಎಸ್. ಆರ್. ವಿ.—ನೀವು ವರ್ತಮಾನಗಳನ್ನು ಮಾತ್ರ ಬರೆದರೆ ಪ್ರಕಟಿಸುತ್ತೇವೆ ಹೊಗಳಿಕೆ, ಊಳಿ, ಮೊದಲಾದ ವಿಚಾರಗಳಿಗೆ ಈ ಪತ್ರಿಕೆಯಲ್ಲಿ ಅವಕಾಶ ಸಿಕ್ಕಲಾರದು —ಎಡಿ.]

ಕರೆಸ್‌ಪಾಂಡೆನ್ಸ್.

ನೀರನ್ನು ಎತ್ತಿ ಸುರಿಯುವ ಪಂಪುಗಳು.

ಈ ತಿಂಗಳ ೬ ನೆ ತಾರೀಖಿನ ವೃತ್ತಾಂತ ಪತ್ರಿಕೆಯ "ಇಂಡಿಯಾ ದೇಶದ ವೃತ್ತಾಂತಗಳು" ಎಂಬ ಭಾಗದ ವರ್ತಮಾನಗಳೊಳಗೆ ನೀರನ್ನು ಜಮೀನುಗಳಿಗೆ ಹಾಯಿಸುವ ಪಂಪುಗಳ ವಿಚಾರವನ್ನು ಕುರಿತು ಬರೆದಿದ್ದೆವು. ಇದನ್ನು ಓದಿದ ಅನೇಕ ಚಂದಾದಾರರೂ ದೊಡ್ಡ ಮನುಷ್ಯರೂ ನಾವು ನಿರೀಕ್ಷಿಸಿದ ಪ್ರಕಾರ "ಆ ಪಂಪು ಎಲ್ಲಿ ಸಿಕ್ಕುತ್ತೆ ? ಯಾರು ಉಪಯೋಗಿಸುತ್ತಾರೆ" ಎಂಬೀ ರೀತಿಯಾಗಿ ನಮ್ಮನ್ನು ಕೇಳಿ ಕಾಗದಾ ಬರೆದಿರುವರು. ಈ ಪಂಪುಗಳನ್ನು ಕಲ್ಕತ್ತಾ ಪಟ್ಟಣದಲ್ಲಿರುವ ಮೆಸ್ಸರ್ಸ್ ಜೆಸ್ಸಾಪ್ ಅಂಡ್ ಕಂಪನಿಯವರು ತಯಾರ್ ಮಾಡಿ ಬಿಕರಿ ಮಾಡುತ್ತಾರೆ ಅವರಲ್ಲಿ ಎರಡು ತರದ ಪಂಪುಗಳಿರುವವು. ಮೊದಲನೆ ತರದ್ದು ೬೦ ಅಡಿ ಆಳದಿಂದ ಮೇಲಕ್ಕೆ ನೀರನ್ನು ಎತ್ತಿ ತಂದು ಗಂಟೆಗೆ ೧,೦೨೦ ಗ್ಯಾಲನ್ (ಗ್ಯಾಲನ್ ಅಂದರೆ ಸೀಮೆಯೆಣ್ಣೆ ಭರ್ತಿ ಆಗಿ ಬರುವ ಒಂದು ಟಿನ್ ಡಬ್ಬಾ) ಪ್ರಕಾರ ಸುರಿಯುತ್ತದೆ ಇದಕ್ಕೆ ೭೫ ರೂಪಾಯಿ ಕ್ರಯ. ಇನ್ನೊಂದು ರಬಿನ ಪಂಪಿಗೆ ೧೦೫ ರೂಪಾಯಿ ಕ್ರಯವಾಗುವುದು ; ಇದರಿಂದ ಗಂಟೆಗೆ ೨,೧೬೦ ಗ್ಯಾಲನ್ ಪ್ರಕಾರ ನೀರು ಎತ್ತಬಹುದು. ಮದರಾಸ್ ಪಟ್ಟಣಕ್ಕೆ ಹೋಗಿ ಅಲ್ಲಿನ ಕಾನಿಮಾರಾ ಹೋಟೇಲಿನಲ್ಲಿ ಇಳುಕೊಂಡಿದ್ದ ಮೆ॥ ಇ. ಎಚ್. ಹಾವಿಲ್ಟನ್ ಎಂಬೊಬ್ಬ ಪ್ಲಾಂಟರು ಈ ಪಂಪನ್ನು ತಮ್ಮ ಎಸ್ಟೇಟಿನಲ್ಲಿ ಇಟ್ಟುಕೊಂಡು ಉಪಯೋಗಿಸುತ್ತಿದ್ದೇನೆಂತಲೂ ಅದು ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ ಎಂತಲೂ ತಿಳಿಸಿದ್ದಾರೆ. ಇವರು ಯಾವ ಎಸ್ಟೇಟಿನವರೋ ಪ್ರಕಟವಾಗಿಲ್ಲ. ಪಂಪುಗಳ ವಿಚಾರ ತಿಳಿಯಬೇಕಾದವರು ಕಲ್ಕತ್ತೆಯಲ್ಲಿರುವ ಕಾರ್ಖಾನೆಗೆ ಬರೆದು ತಿಳಿದುಕೊಳ್ಳಬಹುದು .—Messrs. Jessop and Company, Calcutta—ಇದೇ ಆ ಕಂಪನಿಯವರ ವಿಳಾಸ

—ಎಡಿ.]

ಮಂಡ್ಯದಲ್ಲಿ ಹೊಸ ಕಟ್ಟಡಗಳು.

ಅಯ್ಯಾ,

ಈ ಊರನಲ್ಲಿ ಪೂರ್ವಪದ್ಧತಿಯಂತೆ ಕಟ್ಟಿದ ಮನೆಗಳೇ ಕೋಟೆಪೇಟೆಗಳಲ್ಲಿದ್ದವು. ಈಗ್ಯೆ ೫—೬ ವರ್ಷಗಳಿಗೆ ಮುಂಚೆ ಈ ಊರಿನ ಸಾಹುಕಾರ್ ಅಮ್ಮಣ್ಣಪ್ಪನವರು ಒಂದು ಇಂಗ್ಲಿಷ್ ಸಮೂನೆ ಮನೆಯನ್ನು ಈ ಊರಿನ ಮಧ್ಯದಲ್ಲಿ ಸುಟ್ಟ ಇಟ್ಟಿಗೆಯಿಂದಲೂ ಸುಣ್ಣದ ಗಾರೆಯಿಂದಲೂ ಕಟ್ಟಿಸಿದ್ದಾರೆ. ಇದರಿಂದ ಊರಿನ ಜನರಿಗೂ ಊರಿನ ಅಲಂಕಾರಕ್ಕೂ ಎಷ್ಟೋ ಸಂತೋಷವು ಆಗಿದೆ. ಇದೇ ಮೇರೆಗೆ ಮಂಡ್ಯಕ್ಕೆ ಎರಡು ಮೈಲಿ ಫಾಸಲೆಯಲ್ಲಿ ಕ್ಯಾತನಗೆರೆ ಗ್ರಾಮದ ಬೆಟ್ಟಸೆಟ್ಟರೆಂಬ ಸಾಹುಕಾರರು ಮಂಡ್ಯದ ಟೌನಿನಲ್ಲಿ ಒಂದು ಸಾವಿರ ಚಿಲ್ಲರೆ ರೂಪಾಯಿಗಳನ್ನು ಪುಟ್ಟಿಸಿ, ಭೂಮಿಯನ್ನು ಕೊಂಡು, ಈ ಊರಿಗೆ ಅಲಂಕಾರವಾಗಿ ಸುಟ್ಟ ಇಟ್ಟಿಗೆಯಿಂದಲೂ ಸುಣ್ಣದ ಗಾರೆಯಿಂದಲೂ ಕವಡು ಹೆಂಚುಗಳನ್ನು ಹೊದ್ದಿಸಿ ಇಂಗ್ಲಿಷ್ ಸಮೂನೆಯ ಮನೆಯನ್ನು ಕಟ್ಟುತ್ತಾ ಇದ್ದಾರೆ. ಹೀಗೆಯೇ ಸಾಹುಕಾರರೂ ಧರ್ಮಿಷ್ಠರೂ ಊರಿನಲ್ಲಿ ಹೆಚ್ಚಿದ ಹಾಗೆಲ್ಲಾ ಬಡಪ್ರಜೆಗಳಿಗೆ ಸ್ವಲ್ಪ ಸಹಾಯಕರವಾದ ಜೀವನವೂ ಕೂಡ ಸಿಕ್ಕುತ್ತದೆ ಮತ್ತು ಊರಿನ ವಿ[illegible]ಲಾಪ ಉಪದೇಶಗಳು ಇರುವದಕ್ಕೆ ಒಂದು ಒಳ್ಳೇ ಮನೆಯನ್ನು ಕಟ್ಟುವದಕ್ಕೋಸ್ಕರ ಘನ ಸಾಡೇ ಸಾಹೇಬರು ಇಟ್ಟಿಗೆಯನ್ನು ಸುಡಿಸುತ್ತಾ ಇದ್ದಾರೆ. ಇದು ಕೂಡ ಊರಿಗೆ ಅಲಂಕಾರವಾಗುವದು ಎಂಬುವದಕ್ಕೆ ಸಂದೇಹವಿಲ್ಲ. ಈ ಊರಿನಲ್ಲಿ ಇನ್ನೂ ಸಾಹುಕಾರರುಗಳು ಇರುವದರಿಂದ ಹೊಸ ಸಮೂನೆಯ ಮನೆಗಳನ್ನು ಕಟ್ಟಿಸಿ, ಅಲಂಕಾರ ಮಾಡಿದರೆ ಉತ್ತಮವಲ್ಲವೇ ? ಈ ಪ್ರಾಂತ್ಯದ ಕೆಲವು ಕಡೆಗಳಲ್ಲಿ ಒಂದು ಹದ ಮಳೆಯಾಯಿತು. ಬಿಸಲು ಜೋರಾಗಿದೆ. ರೋಗಾದಿ ಉಪದ್ರಗಳು ಏನೂ ಇಲ್ಲ.

ತಾ ೧೦—೪—೦೫ ಬಾತ್ಮಿದಾರ್.

ನ್ಯಾಮತಿಯ ಸಂಗತಿಗಳು

ಅಯ್ಯಾ,

ಹೊನ್ನಾಳಿ ತಾಲ್ಲೂಕು ನ್ಯಾಮತಿಯಲ್ಲಿ ಹೊಸ ಪ್ಲೇಗಿನ ಸ್ಥಿತಿಯಲ್ಲಿ ಬೇರೆ ಬೇರೆ ಮಠದವರು ಇವರ ಸ್ನೇಹಿತರು ಸೂಳೆ ಒಬ್ಬಳು ೪ ದಿವಸದಲ್ಲಿಯೇ ೬ ಜನಗಳು ಮೃತಪಟ್ಟು ಹೋದರು ಈಗ ಯೇನೂ ಗಲಭೆ ಇಲ್ಲ.

ಈ ಹಿಂದೆ ಸಂಸ್ಕೃತ ಪಾಠಶಾಲಾ ವಿಷಯದಲ್ಲಿ ಸೂಚಿಸಿದ್ದು ಸರಿಯಷ್ಟೆ ಈಗ, ಮಾ॥ ರಾ॥ ಗಳಾದ ಗುರುಸಿದ್ದಪ್ಪಯ್ಯನವರು, ಬೊಂದೂರು ದೊಡ್ಡಮನೆ ಮುದ್ದಪ್ಪನವರು, ಕಲ್ಲಪ್ಪನವರ ದೊಡ್ಡ ಮುದ್ದಪ್ಪನವರು, ನಗರದ ಚನ್ನಬಸಪ್ಪನವರು, ಕಂಚುಗಾರನಹಳ್ಳಿ ಶಾಸ್ತ್ರಿ ವೀರಪ್ಪನವರು, ಬಾ. ಮಲ್ಲಪ್ಪನವರು ಸಹ ಸೇರಿ ಮುಂದಿನ ತಿಂಗಳಿಗೆ ಶಾಸ್ತ್ರಿಗಳನ್ನು ಕರಿಸಿ, ಪಾಠಶಾಲಾ ಸ್ಥಾಪನೆ ಮಾಡುವದಾಗಿ ಏರ್ಪಾಡು ಮಾಡಿದ್ದು ಕಾಣಲೇ ಸಂತೋಷಪಡುತ್ತೇವೆ

ಊರಿನಲ್ಲಿ ಒಂದು ಕೆರೆ ಇದೆ ಇದರಿಂದ ಸಮಸ್ತ ಜನಗಳಿಗೂ ಅನುಕೂಲವಾಗಿತ್ತು. ಈಗ ಈ ಕೆರೆಯಲ್ಲಿ ಹುಳಗಳು ಬಿದ್ದು, ನೀರು ಪಾಪಾರ್‌ಸನೆ ಆಗಿ, ಜನಗಳಿಗೆ ನೀರಿನ ತೊಂದರೆ ಇಷ್ಟೆಂದು ಹೇಳಲು ವ್ಯಸನಪಡಬೇಕಾಗುತ್ತೆ. ಈ ಊರಿಗೆ ಸರ್ಕಾರಿ ಹುದ್ದೆದಾರರು ಯಾರೇ ಬಂದಾಗ್ಯೂ ಈ ನೀರನ್ನೇ ಉಪಯೋಗಿಸುತ್ತಿದ್ದರು. ಈ ಕೆರೆ ನೀರು ಇಷ್ಟು ಕೆಟ್ಟು, ಹುಳಗಳು ಬೀಳಲು ಕಾರಣವೇನೆಂದರೆ ಇದಕ್ಕೆ ಕಾಯುವದಕ್ಕೆ ಪಾಸನ ಒಬ್ಬನನ್ನು ಇಟ್ಟಿದ್ದಾರೆ ಇವನು ಸಾಹುಕಾರರು ಯಾರಾದರೂ ಬಂದು ನೀರು ಯಾವ ರೀತಿ ಕೆಡಿಸಿದರೂ ನೋಡಿಯೂ ನೋಡದವನ ಹಾಗೆ ಹೋಗುವನು ; ಬಡಜನಗಳು ಬಂದು ನೀರಲ್ಲಿ ತಂಬಿಗೆ ಬೆಳಗುವದು ಕೈಕಾಲು ತೊಳೆಯುವದು, ದನಕರುಗಳ ಮೈ ತೊಳೆವದು, ಈ ರೀತಿ ಮಾಡಿದರೆ ಅವರನ್ನು ಪೋಲೀಸಿಗೆ ಒಯ್ಯುವೆನು ದನಕರುಗಳನ್ನು ದೊಡ್ಡಿಗೆ ಕೊಡುವೆನು ಹೀಗೆ ಮಾಡುತ್ತಾನೆ. ಇದೆಲ್ಲ ನೋಡಿ, ಈ ಊರು ಮೆಂಬರುಗಳು ಸುಮ್ಮನೆ ಇದ್ದು, ರೋಗಕ್ಕೆ ಕಾರಣ ಮಾಡುತ್ತಾರೆ. ಬೇಗ ತಪ್ಪಿಸುತ್ತಾರೆಂದು ಹಾರೈಸುತ್ತೇನೆ.

ತಾ॥ ೧೫—೪—೦೫. ಬಾತ್ಮಿದಾರ್.

ದಾವಣಗೆರೆ ಪೋಸ್ಟಿನ ಅಕ್ರಮಗಳು.

ಅಯ್ಯಾ,

ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ವಾಸಸ್ಥ ಅರ್ಕಸಾಲಿ ಕಸಬು ಮಾಡುವ ವಿಶ್ವಬ್ರಾಹ್ಮಣ ವೀರಾಚಾರಿಯು ಬೇಡಿಕೊಳ್ಳುವುದೇನಂದರೆ—

ಈಗ ಸುಮಾರು ಐದು ತಿಂಗಳ ಕೆಳಗೆ ತಮ್ಮ ವೃತ್ತಾಂತ ಪತ್ರಿಕೆ ಆಫೀಸಿನಿಂದ ಸದರಿ ಪತ್ರಿಕೆ ಪಡೆಯಲು ಉಮೇದ್ವಾರನಾಗಿ ಬರೆದುಕೊಂಡೆನಷ್ಟೆ ಆ ಬಗ್ಗೆ ೧೯೦೪ ನೇ ಇಸವಿ ನವಂಬರ್ ತಾರೀಖು ೧೭ ನೇ ಗುರುವಾರದ ೨೫ ನೆ ಸಂಚಿಕೆ ವೃತ್ತಾಂತ ಪತ್ರಿಕೆ ಮುಟ್ಟಿತು. ಅದಕ್ಕೆ ಫೀ ೨ ರೂಪಾಯಿಗೆ ೧ ಆಣೆ ಕಮ್ಮಿ ಮೊಬಲಗನ್ನು ಪೋಸ್ಟ್ ಪಿವನ್ ಕೈಯಲ್ಲಿ ಕೊಟ್ಟು, ಪತ್ರಿಕೆ ಮೇಲೆ ಸಹಿ ಬರೆಸಿರುತ್ತೇನೆ. ಆ ಲಾಗಾಯತು ತಪಲ್ ಪರಿವಿಗೂ ತಿಂಗಳು ೪ ಗಳುವರೆ ಹೀಗೆ ದಿವಸಗಳು ಗತಿಸಿ, ೧—೨—೩ ಪೇಪರುಗಳು ಒಂದೇ ಸಲ, ಪೇಪರುಗಳು ಒಡದು ಕೊಡುತ್ತಲೂ ಅಲ್ಲದೆ ಊರಲ್ಲಿಗೆ ಪೋಸ್ಟ್ ಪಿವನ್ ಬಂದರೆ ಬಂದರು, ಬಾರದೆ ಇದ್ದರೆ ಈ ಊರು ಸ್ಕೂಲ್ ಮೇಷ್ಟರ ಕೈಯಲ್ಲಿ ಕೊಟ್ಟು ಕಳುಹಿಸುತ್ತಾರೆ. ಹೀಗೆ ನನಗೆ ಬರತಕ್ಕಂಥ ಪೇಪರನ್ನು ಅನ್ಯಾಯವಾಗಿ ನನಗೆ ತಲ್ಪಿಸುವುದಾದರೆ ಸರ್ಕಾರಿ ಸಾವಕಾರಿ ರೈತಾಬಿ ಸರ್ವರಿಗೂ ಮಧ್ಯಸ್ಥಗಾರರೆಂತಲೂ ಲೋಕರಕ್ಷಿತರಾಗಿಯೂ ಸರ್ವವಾರ್ತೆಗಳನ್ನು ತಿಳಿಪಡಿಸಲು, ಶಕ್ತಿಯುಳ್ಳ ಮಹಾ ಸನ್ನಿಧಿಯ ವೃತ್ತಾಂತ ಪತ್ರಿಕೆಯು ನನಗೆ ದೊರಿಯದೆ ಇರುವದು " ಹಾಲು ಸವ

ಪ್ರಕೊಳ್ಳರೆ ಪೋಣಕಾಲು ತೆಗೆಯಲ್ಲಿಲ್ಲ" ಎಂಬ ಗಾದೆಗೆ ತಕ್ಕಹಾಗೆ ನಮ್ಮ ದುರಾದೃಷ್ಟವೆಂದು ಯೋಚಿಸುತ್ತೇನೆ. ಅಲ್ಲದೆ ಈ ಊರಲ್ಲಿ ಸಾವಕಾರರು ಬೇರೆ ಬೇರೆ ಪತ್ರಿಕೆ ತರಿಸುತ್ತಾರೆ. ಅವರು ತಾರೀಖು ವಾರ ವಗೈರೆ ವರ್ತಮಾನಗಳು ಸರಿಯಾಗಿ ತಿಳಿಯಲು ಇಕ್ಕಂಥ ಪ್ರಿಂಟಿಂಗ್ ಆಫೀಸಿನವರು ದೇವರು ವರಕೊಟ್ಟಂತೆ ಪತ್ರಿಕೆಗಳನ್ನು ಜಾಗ್ರತೆ ಕಳುಹಿಸಿದಾಗ್ಯೂ ಪೂಜಾರಿ ವರ ಕೊಡಲಿಲ್ಲ ಎಂಬುವ ಗಾದೆಗೆ ತಕ್ಕ ಹಾಗೆ ಪೋಸ್ಟ್ ಮಾಸ್ಟರೋ ಅಥವಾ ಪೋಸ್ಟ್ ಪಿಯರ್ರೋ ಅವರ ಮೇಲೆ ಇವರು, ಇವರ ಮೇಲೆ ಅವರು, ಈ ರೀತಿ ಅಲ್ಲದೆ- "ನಮ್ಮ ಪೋಸ್ಟ್ ಆಫೀಸಿಗೆ ಬಂದೊಡನೆ ಪತ್ರಿಕೆ ಕೊಡುತ್ತೇವೆ, ಪ್ರಿಂಟಿಂಗಿನವರಿಗೆ ನೀವು ಕೇಳಿಕೊಳ್ಳತಕ್ಕದ್ದು" ಎಂದು ಪಿಯರ್ರು ಹೇಳುತ್ತಾರೆ ಅಲ್ಲದೆ ದೊಡ್ಡ ಮನುಷ್ಯರುಗಳು ಅವರ ಗೋಜಿಗೆ ಹೋಗಿ ಕೇಳದೆ ಬಿಡಲಿ, ಅಥವಾ ಸಾಹುಕಾರ ಬಂದಾಗ್ಯೂ ಚರ್ಚಿಸದೆ ಸಾವಕಾರ್ ವಗೈರೇರು ಸುಮ್ಮನಿರುತ್ತಾರೆ. ಏತಕ್ಕೆಂದರೆ ಇವರು ದಿನ ರೋಜು ವಗೈರೆ ಲಕ್ಷ್ಯ ಇಡತಕ್ಕ ಜನಗಳು "ಬಂದರೆ ಬರಲಿ ಹೋದರೆ ಹೋಗಲಿ; ಯಾರು ಜಗಳವಾಡುವರು" ಇನ್ನೊಂದಾವರ್ತಿ ಮುಂದೆ ಕೇಳಿದರೆ ಹಣ ಕಟ್ಟಿದರೇ ನೇಮವಿಲ್ಲ, ಸಾಕಾಗುತ್ತೆ" ಎಂದು ಹೇಳಿಕೊಳ್ಳುತ್ತಾರೆ. ಮೇಲ್ಕಂಡ ವೀರಾಚಾರಿಯಾದ ನನ್ನ ಬಾಬ್ತು ಪೇಪರು ೧೯೦೫ ನೇ ಇಸ್ವಿ ಮಾರ್ಚಿ ತಾರೀಖು ೨ ನೇ ಗುರುವಾರದ ಪತ್ರಿಕೆಯು ನನಗೆ ಮುಟ್ಟಿಸಿದ್ದಕ್ಕೆ ಪೋಸ್ಟ್ ಪಿಯರ್ರ ಸ್ವರ್ಣ ಪೇಪರಿಗೆ ಕಾಣಿಸಿ ತೆಗೆದುಕೊಂಡಿದ್ದೇನೆ. ಅಲ್ಲದೆ ಮೇಲ್ಕಂಡ ಸಾವಕಾರರ ಪೇಪರ್ ಬಡವು ಪೋಸ್ಟಿನವರು ತಂದು ಕೊಟ್ಟಾಗ್ಗೆ ಅವರು ಸದರಿ ಪಿಯರ್ ಇವರಿಂದ ಪರಾ ತೆಗಸಿ ಪೇಪರ್ ತೆಗೆದುಕೊಂಡಿದಾರೆ. ಈ ರೀತಿಯಾಗಿ ಪೋಸ್ಟ್ ಇಲಾಖೆಯವರು ತಾತ್ಸಾರವಾಗಿ ನಿರ್ಲಕ್ಷ್ಯದಿಂದ ರೂಢವಾಗಿ ಎಸೆಸಿ, ಪೇಪರ ಒಡೆಯುವುದು, ಮನೆಗೆ ಬಂದಾಗ ತಂದುಕೊಡುವುದು, ಇಲ್ಲದೆ ಇದ್ದರೆ ಬೇರ ಕೈಯ ಕೊಡುವುದು, ಅಲ್ಲಿಗೆ ಎಲ್ಲಿಂದಲಾದರೂ ಪುಸ್ತಕಗಳನ್ನು ತರಿಸಿ ಜರ್ನಲ್‍ಗಳು ಒಡೆಯುವುದು, ಈ ರೀತಿ ಮಾಡುವುದಾದರೆ ಪತ್ರಿಕೆಯನ್ನೇ ಆಗಲಿ, ಅಥವಾ ಪುಸ್ತಕಗಳನ್ನೇ ಆಗಲಿ ತರಿಸಕ್ಕಂಥಾ ಅಭಿಮಾನಿ ಜನಗಳಿಗೆ ಬೇಸರ ಉಂಟಾಗುತ್ತದೆ ಎಂಬ ಆಫೀಸ್ ಚಿತ್ತಕ್ಕೆ ವ್ಯಕ್ತಪಡಿಸುತ್ತೇನೆ. ಆದ್ದರಿಂದ ಮುಂದೆ ಇವರು ಇಂಥ ಧೂರ್ತತನಗಳನ್ನೂ ತುಂಟ ವಿಷಯಗಳನ್ನೂ ಸಮಾಧಾನ ಮಾಡಿಸಿ, ಮುಂದೆ ನಮಗೆ ಪೇಪರುಗಳು ಸಕಾಲಕ್ಕೆ ಸರಿಯಾಗಿ ಮುಟ್ಟಿಸುವ ಹಾಗೆ ಮಾಡುತ್ತಾರೆಂದು ನಂಬಿರುತ್ತೇನೆ. ಎರಡು ಗುರುವಾರದ ಪತ್ರಿಕೆ ಬಂದಿಲ್ಲ. ಈ ರೀತಿ ನಷ್ಟ ಆದ್ದಕ್ಕೆ ಯಾರ ಕಡೆ ತಪ್ಪು ಎಂಬುವದು ವಿಚಾರಿಸುತ್ತಾರೆಂತ ನಂಬುತ್ತೇನೆ.

೮—೪—೦೫. ವಿಶ್ವ. ವೀರಾಚಾರಿ

(ಗ್ರಾಮಾಂತರಗಳಲ್ಲಿರುವ ನಮ್ಮ ಚಂದಾದಾರರೂ ಈ ಬಾತ್ಮಿದಾರರಂತೆಯೇ ಪೋಸ್ಟಿನವರಿಂದ ತಮಗೆ ತೊಂದರೆಯುಂಟಾಗುವುದನ್ನು ನಮಗೆ ಆಗಾಗ್ಗೆ ತಿಳಿಯಪಡಿಸಿದರೆ ಪ್ರಕಟಿಸುವೆವು ಮತ್ತು ಬಾತ್ಮಿಯಲ್ಲಿ ಕಂಡು ಬರುವ ವಿಷಯಗಳು ಅಲ್ಲಿನ ಪೋಸ್ಟ್ ಇಲಾಖೆಯವರಿಗೆ ಗೌರವಯುಕ್ತವಾಗಿಲ್ಲ. ಇನ್ನು ಮುಂದೆ ಅವರು ಎಚ್ಚರಿಕೆಯಾಗಿಲ್ಲದಿದ್ದರೆ ಅದಕ್ಕಾಗಿ ವ್ಯಸನ ಪಡಬೇಕಾದೀತೆಂದು ಶಂಕಿಸುತ್ತೇವೆ. ಈಗಲೂ ಪೋಸ್ಟ್ ಇಲಾಖೆಯವರು ಈ ಅಂಶಗಳನ್ನು ಕುರಿತು ತನಿಖೆ ಮಾಡಿಯಾರೆನ್ನುವುದಕ್ಕೆ ಸಂಶಯವಿಲ್ಲ. —ಎಡಿ.)

ತಿಪಟೂರಿನ ದುರವಸ್ಥೆಯು

ಕಾಸ್ಯ.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ತಿಪಟೂರು ದೊಡ್ಡ ವ್ಯಾಪಾರದ, ಜನಭರಿತವಾದ ಟವುನ್. ಇಲ್ಲಿಗೆ ಬಹಳ ದೂರದೇಶಗಳಿಂದ ವ್ಯಾಪಾರಕ್ಕಾಗಿ ನೂರಾರು ಸಂಚಾರಿಗಳು ಬಂದು ಇರುತ್ತಾರೆ. ಸುಮಾರು ೧೫,೦೦೦—೩,೦೦೦ ಮನೆಗಳು ಇದೆ. ಈ ದೊಡ್ಡ ಮನುಷ್ಯರ, ಮೆಂಬರುಗಳ, ಇನ್ನು ಕೆಲವು ಉದ್ಯೋಗಸ್ಥರ ಮನೆಗಳಿಗೆ ವಿನಹಾ ಬೇರೆ ಒಂದಕ್ಕಾದರೂ ಕಕ್ಕಸೇ ಇಲ್ಲ. ಈ ನಿವಾಸಿಗಳಲ್ಲದೆ ಪರಸ್ಥಳದ ಹೆಂಗಸರು ಮಕ್ಕಳು ಸಹ ಈ ಜನಗಳು ತಿರುಗಾಡುವ ರೈಲುರಸ್ತೆಯ ಪಕ್ಕಗಳಲ್ಲೂ ರಾತ್ರಿ ಚರಂಡಿಗಳಲ್ಲೂ ರಸ್ತೆ ಪಕ್ಕದಲ್ಲೂ ಗಲೀಜು ಮಾಡುತ್ತಿರುವುದಲ್ಲದೆ, ಬೆಳಗಿನ ವೇಳೆ ಅವರ ಶ್ರಮವನ್ನು ನೋಡಲು ತುಂಬಾ ಲಜ್ಜಾಸ್ಪದವಾದದ್ದೇ. ಅಯ್ಯೋ ಯಾರಾದರೂ ಯತ್ನವಿಲ್ಲದ್ದಕ್ಕೆ ಏನು ಮಾಡ್ಯಾರು? ಇದೆಲ್ಲಾ ಇಲ್ಲಿನ ನಮ್ಮ ದಯಾಳು ಮುನಿಸಿಪಾಲಿಟಿಯವರ ಪರಾಂಬರಿಕೆಯಲ್ಲಿದ್ದರೂ ಯಾವ ಯೋಚನೆಯೂ ಮಾಡದೆ ಸ್ತಬ್ಧರಾಗಿರುವುದು ತುಂಬಾ ಶೋಚನೀಯವೇ? ಇಲ್ಲಿನ ಮ್ಯುನಿಸಿಪಲ್ ಮೀಟಿಂಗಿನಲ್ಲಿ ನಮ್ಮಂಥಾ ಬಡಜನಗಳು ಕಕ್ಕಸುಗಳನ್ನು ಅವಶ್ಯವಾಗಿ ಇಡಿಸಿಕೊಡಬೇಕೆಂದು ಅಂದರೆ "ನಾಯಿಕೂಗು ದೇವಲೋಕಕ್ಕೆ ಮುಟ್ಟೀತೇ" ಎಂಬ ಹಾಗೆ ಅಧಿಕಾರಸ್ಥರ ಕಿವಿಗೆ ಬೀಳುವುದೇ ಇಲ್ಲ. ಒಂದು ವೇಳೆ ಯಾರೂ ಮೆಂಬರುಗಳಿಗೆ ಅಥವಾ ದೊಡ್ಡ ಮನುಷ್ಯರಿಗೆ ಅವಶ್ಯವೆಂದು ವಿಚಾರಿಸಿದರೆ ಅವರು "ಹೊಟ್ಟೆ ತುಂಬಿದವರಿಗೆ ಅನ್ನವಿಟ್ಟ ಹಾಗೆ" ಮುಂದೆ ನೋಡೋಣ ಎಂಬ ಉತ್ತರ ಕೊಡುವುದು ಬೇರೆ ಇಲ್ಲ. ಇಲ್ಲಿನ ಮ್ಯುನಿಸಿಪಾಲಿಟಿಗೆ ಆಕ್ಟ್ರಾಯ್ ಬಾಬಿನಲ್ಲಿ ೩—೪ ವರುಷಗಳಿಂದ ಇತರ ಬಾಬು ಹುಟ್ಟುವಳಿ ಇದ್ದ ಫಲತ್ತು ಜಪ್ತಿ ಬಾಬು ಒಂದರಲ್ಲೇ ಸುಮಾರು ವರುಷ ೩—೪ ಸಾವಿರ ರೂಪಾಯಿಗಳ ಮೇಲೆ ಉತ್ಪತ್ತಿ ಇರಬಹುದು. ಆದ್ದರಿಂದ ಈಗಲಾದರೂ ನಮ್ಮ ಟವುನ್ ಹೊಸ ಅಮಲ್ದಾರ್ ಸಿ. ವಿ ನಾರಾಯಣರಾಯರು ಮೇಲ್ಕಂಡ ವಿಷಯಗಳೆಲ್ಲಾ ಗಮನಕ್ಕೆ ತಂದುಕೊಂಡು, ಈ ಪರಸ್ಥಳ ಪರಸ್ಥಳದ ಹೆಂಗಸು ಮಕ್ಕಳ ಮಾನಸಂರಕ್ಷಣೆ ಬಗ್ಗೆ ಸಧ್ಯಕ್ಕೆ ಸರಿಯಾದ ಜಾಗಗಳಲ್ಲಿ ನಾಲ್ಕು ಕಕ್ಕಸುಗಳನ್ನಾದರೂ ಕಟ್ಟಿಸಿಕೊಟ್ಟು, ಇವರ ಮಾಮೂಲಿಯಲ್ಲಾದ ಈ ಮಹಾ ಉಪಕಾರ ಕಾರ್ಯದ ಕೀರ್ತಿಯನ್ನು ಗಳಿಸಿ ಚಿರಸ್ಮರಣೀಯರಾಗಬೇಕೆಂದು ಕೋರುತ್ತೇನೆ.

ಜನರು ಊರಿಗೆ ಬಂದು ಒಂದು ತಿಂಗಳಾಯಿತು. ಬಿಸಲು ಜೋರಾಗಿದೆ. ನೀರಿಗೆ ತುಂಬಾ ಅಭಾವವಾಗಿದೆ. ಜನಗಳ ಗೋಳಾಟ ಹೇಳಲಸಾಧ್ಯ. ಸರ್ಕಾರಿ ಭಾವಿಯಲ್ಲಿ ನೀರಿಲ್ಲ. ಕೊಂಚವಿರುವುದರಿಂದ ದೊಡ್ಡ ಮನುಷ್ಯರ ಉಪಯೋಗಾರ್ಥವಾಗಿ ನೇದುವ ಗಾಲಿಗಳನ್ನು ತೆಗೆಸಿರುತ್ತಾರಂತೆ. ೧೧—೨ ಮೈಲಿ ಫಾಸಲೆಯಿಂದ ಒಂದು ಕೊಡ ನೀರು ತರಲಿಕ್ಕೆ ಎರಡು ಘಂಟೆಯಾಗುತ್ತೆ. ಈ ಬಿಸಲಿನ ಧಗೆಯಲ್ಲಿ ಹೆಂಗಸರಿಗುಂಟಾಗುವ ಕಷ್ಟವು ಜಗದೀಶನಿಗೇ ಗೊತ್ತು. ಅವರನ್ನು ನೋಡುವವರಿಗೆ ದುಃಖ ಬರದೆ ಇರಲಾರದು. ನಮ್ಮ ದಯಾಳು ಅಮಲ್ದಾರ್ರವರು ಮೇಲ್ಕಂಡದ್ದಕ್ಕೆ ಜಾಗ್ರತೆಯಲ್ಲಿ ಗಮನಕೊಟ್ಟು ಶೀಘ್ರ ಇಷ್ಟರಲ್ಲೇ ಒಂದು ಹೊಸ ಕಟ್ಟಡವೇ ಆಗಲಿ ಅಥವಾ ಈಗಿರುವ ಭಾವಿಗಳನ್ನೇ ಆಗಲಿ ಉಪಯೋಗಕ್ಕೆ ಬರುವಂತೆ ಕಾಂಗಾರಿ ಮಾಡಿಸಿಕೊಟ್ಟು, ಪುಣ್ಯ ಸಂಪಾದಿಸಿ, ಬಡಜನಗಳ ಗೋಳನ್ನು ನಾಶಪಡಿಸ್ಯಾರೆಂದು ನಂಬುತ್ತೇನೆ.

ಇಲ್ಲಿನ ಮೆ॥ ನಾ. ಗ್ರಾಂಧಿಗೆ ನಂಜುಂಡಯ್ಯಶೆಟ್ರು ತಮ್ಮ ಮಗಳು ಚನ್ನಮ್ಮನನ್ನು ಬೆಂಗಳೂರು ಚಿಂತನಪಲ್ಲಿ ಸಂಪಂಗಿ ರಾಮಯ್ಯಶೆಟ್ರು ತಮ್ಮ ಭಾಸ್ಕರಯ್ಯ ಶೆಟ್ಟಿಗೆ ಕೊಟ್ಟು ಇದೇ ಊರು ತಮ್ಮ ಗೃಹದ ಮುಂದೆ ತುಂಬಾ ವಿಜೃಂಭಣೆಯಿಂದ ದೊಡ್ಡದಾದ ಚಪ್ಪರವನ್ನು ಜಂಕು ಶೀಟಿನಿಂದಲೇ ಹಾಕಿಸಿ, ವಿವಾಹವನ್ನು ೧೦—೧೨ ದಿನ ಜರುಗಿಸಿದರು. ಗಂಡಿಗೆ ೧,೨೦೦ ರೂಪಾಯಿ ವರದಕ್ಷಿಣೆಯಾಗಿಯೂ ಬ್ರಾಹ್ಮಣಾದಿಗಳಿಗೆ ವಿವಾಹ ಮತ್ತು ನಾಗವಲ್ಲಿ ಕಾಲಗಳಲ್ಲಿ ಇಸಂ ಒಂದಕ್ಕೆ ೮ ಆಣೆ ಯಂತೆ ಭೂರಿ ದಕ್ಷಿಣೆಯೂ ಕೆಲವರಿಗೆ ಭೂರಿ ಉಡುಗೆರೆಗಳನ್ನೂ ಕೊಟ್ಟು ಸಂತೋಷಪಡಿಸಿದರು. ಜನರಲ್ ಅಸಿಸ್ಟೆಂಟು ಕಮಿಷನರ್ ಸಾಹೇಬರವರು, ಅಮಲ್ದಾರ್ರವರೇ ಮೊದಲಾದ ದೊಡ್ಡ ಆಫಿಸರುಗಳು, ಸರ್ಕಾರಿ ನೌಕರ ಮಾನೇಗಳು, ಲಾಯರುಗಳು, ಸ್ಥಳ ಪರಸ್ಥಳದ ವರ್ತಕರುಗಳು ಉಪ'ಒಂಪೆ ಜನಗಳು ಸಹಾ ಬಿಜಮಾಡಿಸಿದ್ದರು. ಸರ್ವರಿಗೂ ಮಾನ ಮರ್ಯಾದೆಗಳು ಸಮರ್ಪಕವಾಗಿ ನಡೆಯುತ್ತಿದ್ದವು. ಚಪ್ಪರದ ಉಭಯ ಪಾರ್ಶ್ವಗಳಲ್ಲೂ ಬ್ಯಾಂಡುವಾದ್ಯವು ಕಂಟಯಿಂದ ಕರೆಸಿದ ವಾದ್ಯಗಾರರ ಮೇಳಗಳ ಸಂಗೀತವು ಪ್ರತಿ ಒಬ್ಬರಿಗೂ ವಿಸ್ಮಯವನ್ನುಂಟು ಮಾಡುತ್ತಿತ್ತು. ತಾ. ೨೮ ನೆ ರಾತ್ರಿ ೧೨ ಘಂಟೆವರಿವಿಗೆ ಅಂದವಾಗಿ ಶೃಂಗರಿಸಿದ ಗಾಡಿಯಲ್ಲಿ ಆದ ಮೆರವಣಿಗೆಯು ವಾದ್ಯಗಳ ಘೋಷಣೆಗಳಿಂದಲೂ ಬಾಣ ಬಿರುಸು ಮೊದಲಾದ ನಾನಾ ವಿಧ ಮದ್ದಿನ ತಮಾಷೆಗಳಿಂದಲೂ ದೊಡ್ಡ ಮನುಷ್ಯರು ವರ್ತಕರು ಇತರ ಜನಗಳು ಸೇರಿ ತಂಡತಂಡವಾಗಿ ಮೆರವಣಿಗೆಯು ಉಭಯ ಪಾರ್ಶ್ವಗಳಲ್ಲೂ ಜನಗಳ ಗಲಾಟೆಗೆ ಅವಕಾಶ ಕೊಡದೆ ಬರುತ್ತಿರುವ ವಿನೋದವನ್ನು ನೋಡುವ ಜನಗಳ ಮನಸ್ಸಿಗೆ ತುಂಬಾ ಹರ್ಷಕರವಾಗಿತ್ತು. ಜಗದೀಶನು ಈ ನೂತನ ದಂಪತಿಗಳಿಗೆ ದೀರ್ಘಾಯುವನ್ನು ಕೊಟ್ಟು ಸಂತೋಷವಾಗಿ ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

೮—೪—೦೫ ನೆ. ಚನ್ನವೀರಯ್ಯ.

ತಾಲ್ಲೋಕು ವರ್ತಮಾನಗಳು.

ತರೀಕೆರೆ.—ಇಲ್ಲಿ ಪ್ಲೇಗ್ ವ್ಯಾಧಿಯು ತಕ್ಕಮಟ್ಟಿಗೂ ಕಡಮೆಯಾಗಿವೆ. ಆದರೆ ಜನರು ಇನ್ನೂ ಊರೊಳಗೆ ಬರಲು ಭಯಪಡುತ್ತಾರೆ. ಬಿಸಲು ಬಹಳ. ಹವಾ ಈಗ ಅಷ್ಟು ಚನ್ನಾಗಿಲ್ಲ. ಅನೇಕ ಜನರು ಛಳಿ ಜ್ವರದಿಂದ ಸಂಕಟಪಡುತ್ತಾ ಇದಾರೆ.—ಈ ತಿಂಗಳು ೧೪ನೇ ತಾರೀಖು ಶುಕ್ರವಾರ ಬೆಳಿಗ್ಯೆ ೮ ಗಂಟೆಯಲ್ಲಿ ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಬಹುಮಾನ ಕೊಡಲ್ಪಟ್ಟಿತು. ಆ ಸಮಯದಲ್ಲಿ ಸ್ಕೂಲನ್ನು ಚನ್ನಾಗಿ ಅಲಂಕರಿಸಿದ್ದರು. ಕೋಲಾರದ ಭಂಗಾರದ ಗಣಿಯಲ್ಲಿರುವ ಮೆ॥ ಬ್ರುಕ್‍ಬ್ಯಾಂಕ್ ದೊರೆಯವರು ಅಗ್ರಾಸನರಾಗಿದ್ದರು. ಈ ಸರ್ಕ್ಯೂಟಿನ ಸೂಪರಿಂಟೆಂಡೆಂಟರಾದ ಘನ ಬೋಧಕರಾದ ನೈಟಿಂಗೇಲ್ ದೊರೆಯವರು, ನಮ್ಮ ಅಮಲ್ದಾರ್ರು, ಆಸ್ಪಿಟಲ್ ಅಸಿಸ್ಟೆಂಟರಾದ ಮೆ॥ ಅಬ್ದುಲ್ ಖುದೂಸ್ ಯವರು, ಸಬ್ ರಿಜಿಸ್ಟ್ರಾರ್ರು, ಇನ್ನೂ ಅನೇಕ ದೊಡ್ಡ ಮನುಷ್ಯರು ಬಂದಿದ್ದರು. ಪಾಠಶಾಲೆಯ ಹೆಣ್ಣು ಮಕ್ಕಳು ದೇವರಿಗೆ ಸ್ತೋತ್ರ ಗೀತವನ್ನು ಹಾಡಿದರು. ಪ್ರಾರ್ಥನೆಯು ಇಲ್ಲಿನ ಉಪದೇಶಿಯವರಿಂದ ನಡಿಸಲ್ಪಟ್ಟಿತು. ಕಳೆದ ಮೂರು ವರ್ಷಗಳ ರಿಪೋರ್ಟು ಓದಲ್ಪಟ್ಟಿತು. ಎಲ್ಲಾ ಕಾರ್ಯಗಳು ಸಂಭ್ರಮವಾಗಿ ನಡಸಲ್ಪಟ್ಟಿತು. ಇಲ್ಲಿನ ನಮ್ಮ ಅಮಲ್ದಾರರಾದ ಮೆ॥ ಕೃಷ್ಣರಾಯರು ಮಕ್ಕಳಿಗೆ ಬಹುಮಾನಗಳನ್ನು ಕೊಟ್ಟರು. ವಿದ್ಯಾಭ್ಯಾಸದ ವಿಷಯವಾಗಿ ಸ್ವಲ್ಪ ಮಾತನಾಡಿದರು. ಅಗ್ರಾಸನರು ಸ್ಕೂಲಿನ ರಿಪೋರ್ಟನ್ನು ಕೇಳಿ ಬಹಳ ಸಂತೋಷಪಟ್ಟು, ಸ್ವಲ್ಪ ಹೊತ್ತಿನ ವರಿಗೂ ಮಾತನಾಡಿದರು. ಪಾಠಶಾಲೆಯ ಸೂಪರಿಂಟೆಂಡೆಂಟರು ಮತ್ತು ಇಲ್ಲಿನ ಆಸ್ಪಿಟಲ್ ಅಸಿಸ್ಟೆಂಟರು ಮಕ್ಕಳಿಗೆ ಸ್ವಲ್ಪ ಬುದ್ಧಿ ಮಾತುಗಳನ್ನು ಹೇಳಿದರು. ಇಲ್ಲಿನ ಕತ್ತಿಗೆ ಸರ್ಕಾರ್ ಮತ್ತು ಲಾಲ್ ಬಾಗ್ ತೋಟಗಳ ಸೂಪರಿಂಟೆಂಡೆಂಟ್ ಮತ್ತು ಮ್ಯಾನೇಜರಾದ ಮೆ॥ ಜಿ. ಎಚ್. ಕರ್ಕ್ ದೊರೆಯವರು ದೊಡ್ಡ ಜಾತಿ ಚಿಂತೆಯನ್ನು ಚೀನಿನಲ್ಲಿ ೧೫ ದಿನಗಳ ಕೆಳಗೆ ಹಿಡಿದರು.—ಆ ಚಿರತೆಯನ್ನು ತರೀಕೆರೆಯಲ್ಲಿ ಇರುವ ಎಲ್ಲಾ ಜನರು ನೋಡುವ ಹಾಗೆ ೧೪ನೇ ತಾರೀಖಿನಲ್ಲಿ ಕಳುಹಿಸಿದ್ದರು. ಇದನ್ನು ಈಗ ಬೆಂಗಳೂರಿನ ಲಾಲ್ ಬಾಗ್ ಉದ್ಯಾನವನಕ್ಕೆ ಕಳುಹಿಸಬೇಕೆಂದು ಲಾಲ್ ಬಾಗ್ ಸೂಪರಿಂಟೆಂಡೆಂಟರಿಗೆ ಕಾಗದ ಬರೆದಿದ್ದಾರೆ.

ಚನ್ನಪಟ್ಟಣ.—ಇಲ್ಲಿ ಪ್ಲೇಗ್ ಪೂರ್ಣವಾಗಿ ನಿಂತಿತು. ಜನರೆಲ್ಲಾ ಊರು ಸೇರಿದಾರೆ. ಸ್ಕೂಲುಗಳೆಲ್ಲಾ ತೆರೆಯಲ್ಪಟ್ಟಿವೆ. ೮ ದಿನದ ಹಿಂದೆ ಸ್ವಲ್ಪ ಮಳೆ ಬಂತು. ಕೆರೆಗೆ ನೀರು ಬರಲಿಲ್ಲ. ಕೆರೆಯಲ್ಲಿ ನೀರಿಲ್ಲದೆ, ಜನರಿಗೆ ಬಹಳ ಕಷ್ಟವಾಗಿದೆ. ಭಾವಿಗಳಲ್ಲಿ ಸಹ ಜಲವು ಕಮ್ಮಿಯಾಗಿದೆ.—ನಮ್ಮ ಅಮಲ್ದಾರರು ರಜಾದಿಂದ ಬಂದರು. ಇಲ್ಲಿದ್ದ ಜಮಾದಾರ್ರು ಕೋಡಿಹಳ್ಳಿಗೂ, ಇಲ್ಲಿಗೆ ಕೊಳ್ಳೇಗಾಲದವರೂ ಬಂದಿದಾರೆ.—ಕೋಡಿ ಹತ್ತಿರ ಇರುವ ಗಣೇಶನ ಗುಡಿಯನ್ನು ಇಲ್ಲಿನ ಕೆಲವು ಸಾಹುಕಾರರಾದ ಧರ್ಮಿಷ್ಟರು ಕಟ್ಟಿಸುತ್ತಾ ಇದಾರೆ. ಸರ್ಕಾರದವರು ಇದಕ್ಕೆ ಸ್ವಲ್ಪ ಸಹಾಯ ಮಾಡಿಯಾರೆಂದು ನಿರೀಕ್ಷಿಸುವರು.—ಚಕ್ಕೆರೆಯ ಒಬ್ಬ ಹುಡುಗನು ತೆಂಗಿನ ಮರದಿಂದ ಬಿದ್ದು ಕೈಕಾಲು ಮುರಿದು ಸತ್ತನು. ಇವನನ್ನು ಬದುಕಿಸಬೇಕೆಂದು ನಮ್ಮ ಡಾಕ್ಟರವರು ಬಹು ಸಾಹಸಪಟ್ಟರು. ನಮ್ಮ ಡಾಕ್ಟರವರು ಬಹಳ ಒಳ್ಳೇ ಮದ್ದನ್ನು ಕೊಟ್ಟು ಗುಣಮಾಡುತ್ತಾರೆ. ಬಹಳ ರೋಗಿಗಳು ಆಸ್ಪತ್ರೆಗೆ ಬಂದು ಔಷಧಿ ಸೇವನೆ ಮಾಡುತ್ತಾರೆ.—ಕೊಂಡಾಪುರದಲ್ಲಿ ಎರಡು ಪಾರ್ಟಿಯವರಿಗೆ ವ್ಯಾಜ್ಯವಾಗಿ ಮಂಚೇಗೌಡರ ಕಡೆಯವರು ಕೃಷ್ಣೇಗೌಡರ ಕಡೆಯ ಒಬ್ಬನಿಗೆ ಬಂದೂಕಿನಿಂದ ಹೊಡೆದು ಇದಾರಂತೆ. ಗುಂಡು ಏಟು ಬಿದ್ದವನನ್ನು ಆಸ್ಪತ್ರೆಗೆ ಕಳುಹಿದಾರೆ. ಗುಂಡು ಎಡತೋಳಿನ ಭುಜದ ಒಳಗೆ ತೂರಿ ಹೋಗಿದೆ. ಬದುಕ ಬಹುದು. ೩ ಮಂದಿಯನ್ನು ಲಾಕಪ್ಪಿನಲ್ಲಿ ಇರಿಸಿದಾರೆ. ಬಿಟ್ಟು ಹೋಗುವ ಈ ಲೋಕದ ಜಮೀನಿಗಾಗಿ ತಮ್ಮ ಪ್ರಾಣವನ್ನು ಕೊಟ್ಟು, ನಿತ್ಯ ನಿವಾಸವಾಗಿರುವ ದೇವಲೋಕವನ್ನು ಅಲಕ್ಷ್ಯದಿಂದ ನೋಡುವದು ಸರಿಯಲ್ಲ.—ಇಲ್ಲಿನ ಕೈಗಾರಿಕೆ ಸ್ಕೂಲಿನಲ್ಲಿ ಕೆಲಸಗಳು ಚನ್ನಾಗಿ ನಡೆಯುತ್ತವೆ. ಕಲಿಸತಕ್ಕ ಮೇಸ್ತ್ರಿಗಳು ಚನ್ನಾಗಿ ಕಲಿಸುವದಕ್ಕೆ ಯತ್ನ ಮಾಡುತ್ತಾ ಇದಾರೆ. ಚಿತ್ರದ ಸಾಮಾನುಗಳನ್ನು ಹುಡುಗರು ತಕ್ಕ ಮಟ್ಟಿಗೆ ಮಾಡುತ್ತಾರೆ. ಮುಂದಕ್ಕೆ ಇವರು ಬಹಳ ಅಭಿವೃದ್ಧಿಯನ್ನು ಹೊಂದುವರೆನ್ನುವದಕ್ಕೆ ಸಂದೇಹವಿಲ್ಲ.—೧೩.೨೨ ದಾವೂದ್ ಅಕ್ಬರ್ ಫಿದ್ವಿ ಯಾನೆ ಇಸ್ಲಾಂ ಎಂಬ ರೀಡಿಂಗ್ ರೂಮನ್ನು ಮುಸಲ್ಮಾನರ ದೊಡ್ಡ ಮನುಷ್ಯರು ಪ್ರಾರಂಭ ಮಾಡಿದಾರೆ. ಇದಕ್ಕೆ ಪ್ರೆಸಿಡೆಂಟರು ಸಾಹುಕಾರ್ ಮುಸ್ತಫಾ ಸಾಹೇಬರು, ವೈಸ್ ಪ್ರೆಸಿಡೆಂಟರು ಸಾಹುಕಾರ್ ಯಾಕೂಬ್ ಸಾಹೇಬರು, ಸೆಕ್ರೆಟರಿ ಸಬ್ ರಿಜಿಸ್ಟ್ರಾರ್ ಮಹಮ್ಮದ್ ಇಸ್ಮಾಯಿಲ್ ಯವರು ಮೆಂಬರುಗಳಾಗಿರುವವರು—ಗುಲಾಬ್ ಖಾನ್ ಸಾಹೇಬ, ಮುಹ್ಯುದ್ದೀನ್ ಸಾಹೇಬರು ಮುಂತಾದವರು ಸೇರಿದಾರೆ. ಇವರು ಮಾಡಿರುವ ಈ ಯತ್ನದಿಂದ ಅನೇಕರಿಗೆ ಜ್ಞಾನೋದಯವಾಗಲೆಂದು ಶಾಶ್ವತವಾಗಿ ನಡೆಯಲೆಂದೂ ಪ್ರಾರ್ಥಿಸುತ್ತೇನೆ.

ಚಿಕ್ಕಮಗಳೂರು.—ಬಿಸಲಿನ ಕಾವು ಸಹಿಸಲಸಾಧ್ಯವಾಗಿದೆ. ಅನೇಕ ಕೆರೆ ಕಟ್ಟೆಗಳು ಬತ್ತಿಹೋದವು. ಈ ಊರಿನಲ್ಲಿ ಕೆಲವು ಕಡೆ ಇರುವ ನಲ್ಲಿಗಳಲ್ಲಿ ನೀರೇ ಬರುವದಿಲ್ಲ. ಬಂದಾಗ್ಯೂ ಬಹು ಕೊಂಚವಾಗಿಯೇ ಬರುತ್ತಲಿದೆ. ಪಟ್ಟಣದ ಜನರಿಗೆ ನೀರಿನ ಕ್ಷಾಮವೇನಾದರೂ ಬಂದೀತೋ ಎಂಬ ಭಯವಿದೆ. ಯಾತಕ್ಕೆಂದರೆ ಈ ಪಟ್ಟಣಕ್ಕೆ ಹಿರೇ ಕೆರೆಯಿಂದ ನೀರು ಬರುತ್ತಲಿದೆಯೋ ಆ ಕೆರೆಯಲ್ಲಿ ಎಂಟು ದಿವಸಕ್ಕೆ ಸಾಕಾಗುವಷ್ಟು ನೀರು ಮಾತ್ರ ಇರುವದಾಗಿಯೂ ಅಷ್ಟರಲ್ಲಿ ಮಳೆ ಬಾರದೆ ಇದ್ದರೆ ಕಾಲುವೆಯ ಗಲೀಜಾದ ನೀರನ್ನು ನಲ್ಲಿಗಳ ಮೂಲಕ ಬಿಡುವದಾಗಿಯೂ ಹೇಳುತ್ತಾರೆ. ಮೋಡಗಳಾದರೋ ಆಕಾಶ ಮಂಡಲದಲ್ಲಿ ವ್ಯಾಪಿಸಿ, ಈಗಲೋ ಆಗಲೋ ಮಳೆ ಬರುವಂತೆ ತೋರುತ್ತಿದೆ. ಈ ಪಟ್ಟಣಕ್ಕೆ ನೀರಿನ ತೊಂದರೆ ಪ್ರಾಪ್ತವಾಗುವದಕ್ಕೆ ಮೊದಲೇ ಸರ್ವಸೃಷ್ಟಿಗಳ ಒಡೆಯನಾದ ಸ್ವಾಮಿಯು ಮಳೆಯನ್ನು ಬರಮಾಡುವನೆಂದು ನಿರೀಕ್ಷಿಸುತ್ತೇವೆ.—ಆಕ್ಟಿಂಗ್ ಡೆಪ್ಯುಟಿ ಕಮಿಷನರು ೮ನೇ ತಾರೀಖಿಗೆ ಮೂಡುಗೆರೆ ಪ್ರಾಂತ್ಯ ಸರ್ಕೀಟಿಗೆ ಹೋಗಿದ್ದು, ೧೫ನೇ ತಾರೀಖಿಗೆ ಹೆಡ ಕ್ವಾರ್ಟರಿಗೆ ಬಂದು, ಕೇಂದ್ರ ಹರಾಜು ತೀರಿಸಿಕೊಂಡು, ಕಡೂರು ಪ್ರಾಂತ್ಯಕ್ಕೆ ಹೋಗುತ್ತಾರೆಂದು ವರ್ತಮಾನವಿದೆ. ರಜಾಯಲ್ಲಿಯಾಗಿದ್ದ ಡೆಪ್ಯುಟಿ ಕಮಿಷನರು ೯ನೇ ತಾರೀಖಿನಲ್ಲಿ ಇಲ್ಲಿಂದ ಬೆಂಗಳೂರಿಗೆ ಹೋದರು. ಅವರ ಜೊತೆಯಲ್ಲಿ ನಮ್ಮ ಡಾಕ್ಟರ್ ಸಿ. ಎ. ನಂಜಪ್ಪನವರು ಬೆಂಗಳೂರಿನ ವರಿಗೂ ಹೋಗಿ ಬಿಟ್ಟು ಬಂದರು. ಈಗ ಮೆ॥ ಎಂ. ನಾರಾಯಣರಾಯರವರ ದೇಹಸ್ಥಿತಿ ಹ್ಯಾಗಿದೆಯೋ ತಿಳಿಯದು.—ಇದೇ ತಿಂಗಳು ೮ನೇ ತಾರೀಖಿನ ಘನ ರೆಡ್ಮಂಡ್ ಸಾಹೇಬರು ಇಲ್ಲಿನ ಹೈ ಸ್ಕೂಲಿನಲ್ಲಿ ಒಂದು ಉಪನ್ಯಾಸ ಮಾಡಿದರು. ಉಪನ್ಯಾಸದ ಕಡೆಯಲ್ಲಿ ಮೂರು ಮಾತುಗಳನ್ನು ಹೇಳಿದರು. ೧ನೇದು, ಯಾವ ವಿಧವಾದ ಕೆಟ್ಟತನವಾದರೂ ನಮ್ಮ ಅಂತರಂಗದಲ್ಲಿ ವ್ಯಾಪಿಸಿ, ನಮ್ಮನ್ನು ಕೆಡಿಸದಂತೆ ಎಚ್ಚರಿಕೆಯಾಗಿರಬೇಕು, ೨ನೇದು, ಒಳ್ಳೇದು ಯಾವದೋ ಅದನ್ನು ಮಾಡಲು ಮರೆಯಕೂಡದು, ೩ನೇದು, ಇವೆರಡನ್ನೂ ಮಾಡುವದಕ್ಕೆ ಮನಸ್ಸುಬೇಕು ಎಂದು ಹೇಳಿ, ಮುಗಿಸಿದರು.—ಶಿವಮೊಗ್ಗ ಮಿಷನ್‍ನ ಹಿಲ್ಡರವರು ೯ನೇ ತಾರೀಖಿಗೆ ಇಲ್ಲಿಗೆ ಬಂದು, ಇದ್ದ ಒಂದು ಮೊಕದ್ದಮೆಯನ್ನು ಫೈಸಲ್ ಮಾಡಿ, ೧೨ನೇ ತಾರೀಖಿಗೆ ಇಲ್ಲಿಂದ ಹೊರಟುಹೋದರು.—ಇಲ್ಲಿನ ಕ್ಷೌರ್ಸ ಸಾಹೇಬರಲ್ಲಿ ಕೆಲವು ಬ್ರಾಂದಿ ಶೀಸೆಗಳೂ ಬಿಸ್ಕತ್ ಟಿನ್ಗಳೂ ಕಳುವಾದ ಸಂಗತಿಯು ಇದೇ ತಿಂಗಳು ೧೦ನೇ ತಾರೀಖಿಗೆ ಪೋಲೀಸಿಗೆ ರಿಪೋರ್ಟಾದ್ದರ ಮೇರೆ ಪೋಲೀಸಿನವರು ಅಲ್ಲಿ ಕೆಲಸ ಮಾಡುತ್ತಿದ್ದ ಪೊನ್ನಸ್ವಾಮಿ ಎಂಬ ಸುಮಾರು ಹದಿನೇಳು ವರುಷದ ಹುಡುಗನನ್ನು ಹಿಡಿದು, ತನಿಖೆ ಮಾಡಿದಾಗ ಕಳುವಾದ ಮಾಲುಗಳ ಪೈಕಿ ಕೆಲವು ಆ ಹುಡುಗನ ಮನೆಯಲ್ಲಿ ಸಿಕ್ಕಿದವೆಂದೂ ಈಗ ಆ ಹುಡುಗನನ್ನು ಲಾಕಪ್ಪಿನಲ್ಲಿಟ್ಟುಕೊಂಡು, ಮುಂದೆ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಸಿದ್ಧಮಾಡುತ್ತಿದ್ದಾರೆಂತಲೂ ತಿಳಿಯಬರುತ್ತೆ.—ಇಲ್ಲಿ ವಿದ್ಯಾಭ್ಯಾಸದ ಇಲಾಖೆಗೆ ಸೇರಿದವರೆಲ್ಲ ಮಿ॥ ಭಾಭಾ ಸಾಹೇಬರನ್ನೂ ಅವರ ಅಸಿಸ್ಟೆಂಟರಾದ ಮೆ॥ ವೆಂಕಟಸ್ವಾಮಿ ನಾಯುಡುರನ್ನೂ ೨೦ನೇ ತಾರೀಖಿನಿಂದಲೂ ನಿರೀಕ್ಷಿಸುತ್ತಿದ್ದಾರೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

18

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ"

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ವಿರಾಗೀ ಯೋಗಿಗಳು ಬರೆದರು. ಅಧ್ಯಾತ್ಮ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ ಇದರ ಕ್ರಯ ೧೨ ಆಣೆ, ವಿ. ಪಿ. ಮಾಮೂಲ್ ೧೪ ಆಣೆ

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾವಬಹದ್ದೂರ್ ... ಬಹು ಶ್ಲಾಘ್ಯವಾದ ಅಭಿಪ್ರಾಯವನ್ನು ಕೊಟ್ಟಿರುವರು ಕ್ರಯ ೨ ಆಣೆ

೩. "ಸ್ವಪ್ರಯಾಣ ಫಲದೀಪಿಕೆ"

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೪ ಆಣೆ

೪ "ರೋಮನರ ಚರಿತ್ರೆ" ಕ್ರಯ ೦—೨—೦

೫ "ಗ್ರೀಕರ ಚರಿತ್ರೆ" ,, ೦—೨—೦

೬ "ಅನುಭವಾನಂದ", ೦—೬—೦

೭ "ಗಣಿತ ಸಂದೀಪಿನಿ" ೦—೮—೦

೮ "ಗಣಿತ ಚಿಂತಾಮಣಿ" ೦—೧೦—೦

೯ "ಚಾಮರಾಜೇಂದ್ರ ವಿಲಾಸ" ೦—೧—೦

೧೦ "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧—೦

೧೧ "೧೯೦೫ನೇ ವರುಷದ ಡೈರಿಗಳು" ಪ್ಲಾಫ್, ಪೆನ್ಸಿಲ್ ಸಹಿತ ೦—೬—೦, ಸಾದಾ ೦—೪—೦

ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ,

ಮೈಸೂರು

ಜ್ವರಹರಿ.

23

ಇದು ಸಾಧಾರಣ ಜ್ವರ, ಚಳಿಜ್ವರ, ನೋರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯ ಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ಸೀಸೆಯು ತೀರಿಹೋಯಿತು ಇನ್ನು ಸ್ವಲ್ಪ ಕಾಲದಲ್ಲೇ ತಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಇದರ ಬಳಿ ಬರುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡಾಸಿನ ಸೀಸೆಯನ್ನು ವಿ ಪಿ ಮಾಮೂಲ್ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ ೦—೮ ರೂ, ೫ ರೂ ೨—೧ ೮, ೧೧ ರೂ, ಡಜನ್‌ರು ಕೊಡ ಕರಿಸಿಕೊಂಡರೆ ಪೋಸ್ಟೇಜು ಮಾಫಿ ಬರಲಾಗುವದ.

****

ಓಮು೦ ಕ ರ್ಪೂ ರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಗ್ರಾಣಿಭೇದಿ, ಹೊಟ್ಟೆಉಳಿಯುವುದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮೊದಲಾದ ಎಲ್ಲಾ ಮಹೌಷಧವಾಗಿ ಪರಿಣಮಿಸಿ, ಶ್ಲಾಘನೀಯವಾಗಿದೆ ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ...ಅವರು—ಪ್ರಿಯರ ಮಾನ್ಯರೆ ಈ ಔಷಧವನ್ನು ನಾನೂ ನನ್ನ ಕಾಲೇಜಿನ ... ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದ ... ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ಹೆಚ್ಚಿನ ಕಂಡಿಶನ್ಸ್ ಇಂಡಿಯನ್ ಔಷಧಗಳ ಶಾಪ್

ವೆಂಕಟ್ ಟೀಪ್ ರ್ಸ್, ಮದರಾಸ್.

WANTED WILD ANIMALS

ಬೇಕಾಗಿದೆ ಬೇಕಾಗಿದೆ

3

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟ್ ಮೆ॥ ಹ್ಯೂಬರ್ ಯವರು ಕೊಂಡುಕೊಳ್ಳುವರು

Apply to—Mr Hughes, Mysore Zoo

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವ್ರೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ!

23

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರಣೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಧಾರಣೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕ ತರಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆದಾದ, ಚೆನ್ನಾಗಿ ಹೆಣಿದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದವರ ನಮಗೇ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ ಮ್ಯಾನೇಜರು, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೋಮಿಯೋಪತಿ

ತಕ್ಷಣ ಪರಿಹಾರ

ತಕ್ಷಣವೇ ರೋಗ ವಾಸಿಯಾಗುತ್ತೆ.

ಈ ಔಷಧಿಯು ಬಹಳ ... ಪ್ರಖ್ಯಾತವಾದ ... ದಿವಸ ಆಗಬೇಕು ಇದಕ್ಕೆ ... ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ಕೈಲವು ಕತ್ತಾಳೆಯನ್ನು ಜೇವರ್ಗಿರಿಗಳಿಗೆ ಮಹತ್ತಾಗಿ ಸಿಕ್ಕುವ ಶ್ರೇಷ್ಠ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅವರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ಕೈಲವು ಅರೆ ತಲೆನೋವು, ಸೊಂಟನೋವು ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಗಾಯಗಳು, ಗಡ್ಡೆಗಳು, ಕಜ್ಜಿಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಿಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಪಾರ್ಸಲ್ ಖರ್ಚು ಮಾಫಿ ಬರುತ್ತಾರೆ. ರೂ ೨—೮ ಆಣೆ ಬಾಟ್ಲು ಡಬ್ಬದಲ್ಲಿ ೧ ರೂ ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ಈ ರೂ ೨—೮ ಆ ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚ್ ಮಾಫಿ ಬರುತ್ತೆ.

****

ಹೋಮಿಯೋಪತಿಯಾ ಮಾಂಟ್ರೋಕ್ರೀಷನ್.

ಈ ಕೈಲವು ಹಳೇ ಹೋವುಗಳಿಗೆ ಉಪಯೋಗಿಸತಕ್ಕದ್ದು ಆಮೇಲೆ ಬರೆದ ಕಾಣ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಹಚ್ಚಿದರೆ ನೋವು ಬೇಗನೆ ನಿಲ್ಲುತ್ತೆ ಇದು ಡಬ್ಬಿಗಳಲ್ಲಿ ದುಂಡಿ ೮ ಆಣೆಗೂ, ೧ ರೂ ೧೮ ಉಂಟಾದರೆ ಬಾಕಿ ಮಾದರಿ ... ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ ಖರ್ಚ್ ಮಾಫಿ. ಎಲ್ಲಾ ಪಟ್ಟಣಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಚೀಟಿಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ —ಹೋಮಿಯೋಪತಿ ಕಂಪೆನಿ, ೨೩ ಸೆಕೆಂಡ್ ಬೀಚ್ ಲೈನ್, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

11—3—1905 ರಿಂದ 7—4—1905 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಸತ್ತದ್ದು	ಕೋಲೆರಾ ಈ ನಂಬರ ಸಂಖ್ಯೆ	
ಬೆಂಗಳೂರು ಪಟ್ಟಣ	17	15	9	10
ಮೈಸೂರು ,,	2	3	1	1
ಬೆಂಗಳೂರು ಡಿಸ್ಟ್ರಿಕ್ಟ್	15	11	19	16
ಮೈಸೂರು ,,	5	5	77	55
ಕೋಲಾರ್ ,,	9	9	21	14
ಕೋಲಾರ್ ಚಿನ್ನದ ಗಣಿಗಳು	1	4	8	4
ತುಮಕೂರು ಡಿಸ್ಟ್ರಿಕ್ಟ್	3	3	2	1
ಹಾಸನ ,,	0	0	2	
ಚಿತ್ರದುರ್ಗ ,,	0	0	5	4
ಕಡೂರ್ ,,	4	3	6	5
ಶಿವಮೊಗ್ಗ ,,	8	5	92	45
ಮೊತ್ತ	87	56	175	125

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರದ ಚೈತ್ರ ಬಹುಳ ಪಾಡ್ಯಮಿ ಗುರುವಾರದಿಂದ ಚೈತ್ರ ಬಹುಳ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಮಾಸ
20	ಗುರು	ಪಾಡ್ಯ	20.21	ಸ್ವಾತಿ	29.10	8
21	ಶುಕ್ರ ,,	ಬಿದಿಗೆ	20.45	ವಿ	25.10	9
22	ಶನಿವಾ	ತದಿಗೆ	16.12	ಅ	22.12	10
23	ರವಿವಾ	ಚೌತಿ	1.7	ಜ್ಯೇ	20.12	11
24	ಸೋಮ	ಪಂಚಮಿ	9.2	ಮೂಲ	19.38	12
25	ಮಂಗಳ	ಷಷ್ಠಿ	7.2	ಪೂರ್ವಾ	19.36	13
26	ಬುಧ	ಸಪ್ತಮಿ	6.12	ಉತ್ತರಾ	21.36	14

,, ತಿಥಿದ ಕ್ಷಯ

ಸಂಕಷ್ಟಚತುರ್ಥಿ

೭ ಮದೂರು ನೃಸಿಂಹಸ್ವಾಮಿ ರಥ

ಪೇಟೆ ಧಾರಣೆ.

ವಿವರ.	ಮೈಸೂರು	ಬೆಂಗಳೂರು
ಕೆಂಪು ಅಕ್ಕಿ ಪಲ್ಲ ೧ಕ್ಕೆ	೧೦ ೮	೧೧—೦
ಕೆಂಪುಸಿಕ್ಕಿ ಅಕ್ಕಿ ಅವಲ್	೧೦—೪—೦	೧೧—೦
,, ಮರ	೯—೧೨—೦	೧೦—೮
ಜಾಬ್ರಾ ಅಕ್ಕಿ	೯—೮—೦	೬—೦
ಸಣ್ಣಕ್ಕಿ ಅವಲ್	೧೨—೦—೦	೧೨—೮
,, ಮರಿಯ	೧೧—೮ ೦	೧೨—೦
ಕೋಗರಿ ಬೇಳೆ ಪಲ್ಲ ೧ಕ್ಕೆ	೧೦ ೮ ೦	೧೨ ೦
,, ಮರಿಯ	೧೧—೦—೦	೧೦—೮
ಕೈಗ ರಾಗಿ ಪಲ್ಲ ೧ಕ್ಕೆ	೪ ೧೨—೦	೪—೧೦
ಕಾರಾಗ್ರ	೪—೧—೦	೪—೬
ಹುರುಳಿ	೪—೧೨—೦	೭—೦
ಕಲಸಂದೆ ಪಲ್ಲ ೧ಕ್ಕೆ	೮—೧೨—೦	೮—೦
ಬಿಳೇ ಅವರೆ	೬ ೧೨—೦	೭—೦
ಹೆಸರು	೯ ೧೨—೦	೯—೪
ಉದ್ದು	೮ ೧೪ ೦	೯—೦
ತೊಗರಿ	೯ ೦—೦	೯—೦
ಎಳ್ಳು	೧೬ ೦ ೦	೧೩—೫
ಹುರುಳಿ	೮—೦ ೦	೭—೧೦
ಹರಳು ೧೨ ಸೇರಿಗೆ	೯—೮—೦	೭—೧
ಸೀಗೇಕಾಯಿ ಮಣ ೧ಕ್ಕೆ	೨—೪—೦	೨—೧೨
ಮೆಣಸಿನಕಾಯಿ	೪—೮—೦	೩—೪
,, ಮರಿಯ	೩—೧೨—೦	೩—೦
ನೆಲ್ಲ ದೊಡ್ಡ ಅಕ್ಕಿ	೩—೪—೦	ಮು ೧ ೦
ಒಳ್ಳೆಣ್ಣೆ ಮಣ ೧ಕ್ಕೆ	೪—೦ ೦	೪—೮
ಹರಳೆಣ್ಣೆ ,,	೪—೦—೦	೩—೧೪
ಕೊತ್ತಂಬರಿ ಪಲ್ಲ ೧ಕ್ಕೆ	೬—೦—೦	೬—೦೦
ಉಪ್ಪು ,,	೮—೦—೦	೮—೫
ಮೆಣಸೇ ಹಣ್ಣು	೧ ೪—೦	೦—೧೩
,, ಹಳೇದ.	೦—೧೪—೦	೦—೧೦
ಬೆಲ್ಲ	೧೨ ೦—೦	೧೦—೮
ಸೀಮೆಯೆಣ್ಣೆ ಟಿನ್ನು ೧ಕ್ಕೆ	೫—೩—೦	೪—೪
ತೆಂಗಿನಕಾಯಿ ೧೦೦ಕ್ಕೆ	೫—೦—೦	೪—೪
ಅಳಲೆಕಾಯಿ ಮಣ ೧ಕ್ಕೆ	೧—೮ ೦	೦—೧೦
ಅಂಟುವಾಳದಕಾಯಿ ಮಣ ೧ಕ್ಕೆ	೨—೧೪—೦	೦—೪
ಹತ್ತಿ (ಪಾರ) ಕಂಡಿ	೧೫—೮—೦	೧೫—೪
,, ,, ಹಸಿಮ	೧೫—೧೦—೦	೧೫—೮
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೨೪—೪
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೩೨—೦—೦	೩೦—೦

Printed and Published by the Rev H Spencer ... the Proprietor and Manager, Wesleyan Mission Press, Mysore 20/4/1905

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದು ಡ್ಡು ಕ್ರಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ ಮೈಸೂರು—ಸನ್ ೧೯೦೫ ನೇ ಇಸವಿ ಏಪ್ರಿಲ್ ತಾರೀಖು ೨೭ ನೇ ಗುರುವಾರ. ಸಂಚಿಕೆ ೪೭

ಮೆ|| ಇ. ಮಾರ್ಸ್‌ಡನ್‌ರವರ ಕನ್ನಡ ಐದನೆಯ ಪುಸ್ತಕದ ಅತ್ಯುತ್ತಮವಾದ ನೋಟ್ಸು.

6

ನಾಲ್ಕನೆ ತರಗತಿ ವಿದ್ಯಾರ್ಥಿಗಳಿಗೆ ಅನೇಕ ಹೊಸಸಂಗತಿಗಳು ಬೋಧೆಯಾಗುವಂತೆ ರಚಿಸಲ್ಪಟ್ಟದೆ ಏಪ್ರಿಲ್ ತಾ. ೧೫ಕ್ಕೆ ಸಿದ್ಧವಾಗುವದು ಕ್ರಯ ೪ ಅಣೆ. ೧೨ಕ್ಕೆ ಒಂದು ಡಿಸ್‌ಕೌಂಟು ವಿಳಾಸ—ಕಾರ್ಲೆಕಲ್ಲು ನಾರಾಯಣಶಾಸ್ತ್ರಿ, ಕನ್ನಡ ಪಂಡಿತ, ಆ ವಿ. ಗೌರ್ನಮೆಂಟ್ ಕನ್ನಡಾ ಸ್ಕೂಲು, ಮೈಸೂರು.

ವೃತ್ತಾಂತ ಪತ್ರಿಕೆ ಚಂದಾದಾರರು.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮುಖಾಂತರ ತರಿಸುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. . ರೂ ೧—೦—೦

ಹೆರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ . . .. ರೂ ೧—೧೪—೦

,, ,, ೬ ,, ,, ೦—೯—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕಥಾಸಂಗ್ರಹ—ಮೊದಲನೆ ಭಾಗ.

7

ವಿಶೇಷ ಪ್ರಖ್ಯಾತಿ.' ಬಂದಿರುವ ಕನ್ನಡ ನುಡಿಯ ಕಥಾಸಂಗ್ರಹದಲ್ಲಿ ೧, ೨, ೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚು ಹಾಕಿದೆ ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಮಾತಿನ ಕರಣಿಯನ್ನು ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಕೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವದು. ಬೇಗ ಬರೆದು ತರಿಸಿಕೊಳ್ಳಿ ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ :—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ದಿ ಯೆಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಉಪಜೀವಿತ್ತಿ ಕಲ್ಪನಾಸಂಘ, ಚನ್ನಪಟ್ಟಣ.

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸ್ ದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು. ಸಾಮಾನ್ಯ ಸಂಪತ್ತು ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಮಾಡೋಣದರಿಂದ ಮರಣಾನಂತರ ನಿಮ್ಮ ನೇಮಿತ ನಾಮಿನೇಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರವುಂಟು. ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಮ್ಯಾನೇಜರಿಗೆ ಬರದಲ್ಲಿ ಇತರ ವಿಷಯಗಳನ್ನು ತಿಳುಕೊಳ್ಳಬಹುದು. ಇಂಥಾ ಏಜಂಟರುಗಳಿಗೆ ಧಾರಾಳವಾದ ಸಂಬಳ ಸಿಕ್ಕುತ್ತೆ.

ವಿಳಾಸ:—ಆರ್. ಸ್ವಾಮಿ, ಮ್ಯಾನೇಜರ್.

ಫಾರೆಸ್ಟು ಇಲಾಖೆ.

ಇಸ್ತಿಹಾರ್. ೧೯೦೫ನೆ ಇಸವಿ ಏಪ್ರಿಲ್ ತಾರೀಖು ೧೧ ರಲ್ಲು

2

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅದರ ಬಾಜೂವಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಟಿಂಬರಿನ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಬೆಳಗ್ಗೆ ೮ ಗಂಟೆಗೆ ಹರಾಜು ಶುರು ಆಗುತ್ತೆ.

ಡಿಪೋ ಹೆಸರು	ಹರಾಜು ತಾ||	ಹರಾಜು ಮಾಡಿಸುವ ಆಫೀಸರ ಹೆಸರು	ಸಾಗ್ವಾನಿ ನಾಟ ಮತ್ತು ದಿಂಡಿ.		ಮತ್ತಿ ಜಾತಿ ನಾಟ ಮತ್ತು ದಿಂಡಿ.		ಕಾಡು ನಾಟ ಮತ್ತು ದಿಂಡಿ.		ಸಾಗ್ವಾನಿ ಸರ.		ಮತ್ತಿ ಜಾತಿ ಸರ.		ಕಾಡಸರ.	
			ಅದದು	ಸಲಿಕ	ಅದದು	ಸಲಿಕ	ಅದದು	ಸಲಿಕ	ಅದದು	ಸಲಿಕ	ಅದದು	ಸಲಿಕ		
ಮೈಸೂರು ಉದ್ಯಾನ.	5 5 1905	ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರು,	1009	20111	711	11635	43	711	,,	,	,		.	,,
ನಂಜನಗೂಡು ಡಿಪೋ	4 5 1905	ಮೈಸೂರ್ ಡಿಸ್ಟ್ರಿಕ್ಟು	739	5556	1009	9309	271	3291	171	198	59	106	.	,,

ಪರಶ. ೧೯೦೫ನೆ ಇಸವಿ ಮಾರ್ಚಿ ೧೨ನೆ ಮುಕ್ಕಾಂ ೧೫೭೮ ಆರ್. ಎಫ್. ೧೯೦೪—೦೫ನೆ ನಂಬರು ಇಸ್ತಿಹಾರ್ ನಾವೆಯನ್ನು ೨೫—೩—೦೫ ಮುಕ್ಕಾಂ ೧೫ನೆ ನಂಬರು ಮೈಸೂರು ಗಜೆಟ್ಟಿನಲ್ಲಿ ಛಾಪಿಸಿ ಪ್ರಕಟ ಮಾಡಿರುತ್ತೆ.

ಹೊಸ ನೋಟ್ಸು.

ಮೆಕ್ಲಿಲ್ಲಾಂಡರ ೫ನೆಯ ಕನ್ನಡ ಪುಸ್ತಕಗಳಿಗೆ ೫ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನಸಹಿತ ಈ ನೋಟ್ಸನ್ನು ಬರೆದು ಅನೇಕ ವಿಷಯವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ ೮ ಅಣೆ

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ) ೦—೧—೦

೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು ೦—೧—೬

೧೯೦೪ನೆ ವರ್ಷದ ಲೋವರ್ ಸೆಕೆಂಡರಿ ನೋಟ್ಸು ೦—೩—೦

ವಿಳಾಸ—ಯು. ಆರ್. ವೆಂಕಟಸುಬ್ಬಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು

ಸುಲಭಕ್ರಯ:ಸುಗಂಧದ್ರವ್ಯಗಳು.

21

ಅಂಬರ್ ಕಡ್ಡಿ ಸೇರು ೧ಕ್ಕೆ	.. ..	೫—೦—೦
ವಸಂತಕುಸುಮಾಕರಪತಿ	..	೪—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	..	೨—೪—೦
ಘಮಗು ಕಡ್ಡಿ ,, ೧ಕ್ಕೆ	.. ..	೧—೮—೦
ಮಸಾಲಾ ಕಡ್ಡಿ ,, ೧ಕ್ಕೆ	..	೦—೧೦—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	.. ..	೧—೦—೦
ಕೇಸರಿ ಬಿಲ್ಲೆ ೧ಕ್ಕೆ	..	೦—೧—೬
ಪಚ್ಚೆ ಗಂಧ ತೋಲ ೧ಕ್ಕೆ	.. ..	೨—೦—೦
ಡಿಟೋ	..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	.. ..	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ ವರ್ಕಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ	..	೦—೪—೦
ಕೇಶೋಲ್ಲಾಸಿನಿ ಸೀಸೆ ೧ಕ್ಕೆ	.. ..	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ	..	೦—೨—೦
ಪನ್ನೀರು ಸೀಸೆ ೧ಕ್ಕೆ	.. ..	೦—೯—೦
ಟಂಬಾಕ್ ಷೋಕ್ ಡಬ್ಬಿ ೧ಕ್ಕೆ	..	೦—೨—೦
ಕೈವಸ್ತ್ರಕ್ಕೆ ಹಾಕ್ತೇಯ ದಶಾಂಗ ಸೇರು ೧ಕ್ಕೆ		೦—೧೨—೦
ಫಿತ್ಯಾ ತೋಲ ೧ಕ್ಕೆ	.. ..	೨—೦—೦
ಡಿಟೋ	..	೧—೮—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	.. ..	೦—೦—೬
ವಸಂತಪಾನೀಯ ಘುಟಿಕಾ ೧೦೦ಕ್ಕೆ	..	೨—೦—೦

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ —ಟಿ ಎಲ್. ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ಘನತೆಯುಳ್ಳ ಸ್ತ್ರೀಯರ ಚರಿತ್ರೆಯು.

ಚಿತ್ರ ಸಹಿತವಾದುದು.

5

ಗೃಹವಾಸದವರು, ವಿದ್ಯಾರ್ಥಿನಿಯರು, ಸಾಮಾನ್ಯಸ್ತ್ರೀಯರು ಎಲ್ಲರಿಗೂ ಸರ್ವೋತ್ತಮವಾದ ಮೇಲ್ಪಂಕ್ತಿಯನ್ನು ಹೇಳಿ ಕೊಡುವ ಪುಸ್ತಕ ಮೊದಲನೆ ಸಲ ಪ್ರಿಂಟಾದ ಪುಸ್ತಕಗಳೆಲ್ಲಾ ಬಿಕರಿಯಾಗಿರುವುದೇ ಈ ಪುಸ್ತಕದ ಪ್ರಯೋಜನವನ್ನು ಪ್ರಕಾಶಪಡಿಸುತ್ತದೆ ಈ ಪುಸ್ತಕವನ್ನು ಈಗ ಎರಡನೆಯ ಸಲ ಪ್ರಿಂಟುಮಾಡಿದೆ. ನೋಗಸಾದ ದಪ್ಪ ಗ್ಲೇಜುಳ್ಳ ಕಾಗದ, ಸುಂದರವಾದ ಬೈಂಡು, ನೇತ್ರಾನಂದಕರವಾದ ಸ್ತ್ರೀಯರ ಜೀವಚಿತ್ರಗಳು, ಮನೋಹರವಾದ ಅವರ ಚರಿತ್ರೆಗಳು—ಇವುಗಳಿಂದ ಕೂಡಿದ್ದಾಗಿದೆ. ಅತ್ಯಂತ ಬಡಬಗ್ಗರೂ ಕೊಂಡು ಓದುವುದಕ್ಕೆ ಅನುಕೂಲವಾಗಲೆಂದು ಈ ಪುಸ್ತಕದ ಕ್ರಯವನ್ನು ಬಹಳ ಅಗ್ಗವಾಗಿ ಮಾಡಿದೆ ಕ್ರಯ ೧ ಪ್ರತಿಗೆ ೨೪ ಅಣೆಮಾತ್ರ. ವಿ. ಪಿ. ಮೂಲಕ ತರಿಸಿ ಕೊಂಡಲ್ಲಿ ೪ ಅಣೆ ಬೀಳುವುದು ವಿಳಾಸ—

ಮ್ಯಾನೇಜರ್, ಸಿ. ಎಲ್ ಎಸ್. ಬುಕ್ ಡಿಪೋ. ಮೈಸೂರು.

WESLEYAN MISSION PRESS, MYSORE.

ಮೈಸೂರು ವೆಸ್ಲೆಯನ್ ಮಿಷನ್ ಪ್ರೆಸ್.

14

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೊಲ್ಮೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,

ಮಿಷನ್ ಪ್ರೆಸ್, ಮೈಸೂರು.

ಹೊಸಕನ್ನಡ ಪುಸ್ತಕಗಳು.

ತತ್ವದರ್ಪಣ—Hindu Catechism—ಇದು ಶ್ರೀ ಶಂಕರ ರಾಮಾನುಜ ಮಧ್ವಾಚಾರ್ಯರುಗಳ ಸುಚರಿತ್ರೆಗಳನ್ನೂ, ಪ್ರಶ್ನೋತ್ತರ ರೀತಿ ಭಾಗವದ್ವಿಚಾರಗಳನ್ನೂ, ಚನ್ನಾಗಿ ಬೋಧಿಸುತ್ತದೆ. ಮತವಿಚಾರವನ್ನರಿಯಬೇಕೆಂಬ ಆಸ್ತಿಕರಿಗೆ ಅತ್ಯವಶ್ಯಕವಾದುದು ಕ್ರಯ ೪ ಆಣೆ

ಚಾಮರಾಜೇನ್ದ್ರ ರಾಜ್ಯವಿಲಾಸ—H. H. the late Maharaja's Biography—ಲೇಟ್ ಮಹಾರಾಜರವರ ಜೀವಿತ ಕಾಲದ ಸಕಲ ಸಂಗತಿಗಳನ್ನೂ ಆದ್ಯನ್ತವಾಗಿ ವಿವರಿಸಲ್ಪಟ್ಟ ೨೦ ಪ್ರಕರಣಗಳುಳ್ಳದಾಗಿದೆ. ಮೈಸೂರು ರಾಜಕೀಯ ವಿಚಾರಗಳನ್ನೆಲ್ಲಾ ತಿಳಿಯಬೇಕೆಂದಾಶಿಸುವವರಿಗೆ ಇದು ಅತಿ ಮುಖ್ಯವಾದುದು. ಕ್ರಯ ೧೨ ಆಣೆ.

ಆಂಗ್ಲೇಯ ಚರಿತ್ರಸಂಗ್ರಹ—History of England in Kanarese—ಆದಿಯಿಂದ ಈ ವರೆಗಿನ ಇಂಗ್ಲಿಷರ ಚರಿತ್ರೆಯನ್ನೂ, ಲೋಕವ್ಯವಹಾರಗಳನ್ನೂ ತಿಳಿಯಲಪೇಕ್ಷೆಯುಳ್ಳವರು ದೇಶೀಯ ಪರೀಕ್ಷೆಗೂ ಇಟ್ಟಿರುವ ಇದನ್ನು ಅಗತ್ಯ ಓದತಕ್ಕದಾಗಿದೆ ಕ್ರಯ ೮ ಆಣೆ

(ಶ್ರೀ) ಅನೇಕ ಮಹಾ ವಿದ್ವಾಂಸರ ಮತ್ತು ಸರ್ಕಾರದವರ ಸಹಾಯವನ್ನು ಪಡೆದು ಸರ್ವರಿಗೂ ಅತ್ಯಂತೋಪಯುಕ್ತವಾಗಿರುವ ಈ ೩ ಪುಸ್ತಕಗಳನ್ನೂ ೧೦೦ ರ ಮೇಲೆ ಕೊಂಡುಕೊಳ್ಳುವವರಿಗೆ ಕಮಿಷನ್ ೨೫ ರಂತೆ ಡಿಸ್ಕೌಂಟು ಕೊಡಲಾಗುವುದು

ಬಿ ಪಿ ಮೂಲಕವೂ ಸಿಕ್ಕುವ ಸ್ಥಳಗಳು —

ನಿ ಸರ್ಸ್ ಕೆ. ನರಸಿಂಹಯ್ಯ ಎಸ್ಟೇಟೋ, ಮೈಸೂರು

ವಿ ಜನರಲ್ ಏಜನ್ಸಿ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

16



ಈ ಔಷಧವು ಪ್ರತಿ ಮನೆಯವರಿಗೂ ಅಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು ಇದರಿಂದ ವಾಯುನೋವು ಅನ್ನಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್

ವೃತ್ತಾಂತ ಪತ್ರಿಕೆ.

ಶಕ ೧೯೦೪ ನೇ ಇಸವಿ ಏಪ್ರಿಲ್ ತಾ|| ೨೬ ನೇ ಗುರುವಾರ.

ಕ್ರೈಸ್ತ ಮತದ ಸಿದ್ಧಾಂತವೇನು?

ಕೆಲವು ವಾರಗಳಿಂದ ಈ ರಾಷ್ಟ್ರದ ಹಲವು ವರ್ತಮಾನ ಪತ್ರಿಕಾಧಿಪರು ಚಿತ್ರಕ್ಕೋಭಾ ಪೀಡಿತರಾಗಿ ಹಿಂದೂ ಮತಸ್ಥರು ಕ್ರೈಸ್ತ ಮತವನ್ನನುಸರಿಸುವ ವಿಷಯದಲ್ಲಿ ತಮ್ಮ ಮನಃಕ್ಲೇಶವನ್ನು ವಿಪರೀತವಾಗಿ ಪ್ರಕಟಿಸಲಾರಂಭಿಸಿರುವುದನ್ನು ನೋಡಿ ನಾವು ವಿಷಾದಪಡಬೇಕೋ ವಿನೋದಪಡಬೇಕೋ ತಿಳಿಯದವರಾಗಿದ್ದೇವೆ. ಇವರ ಲೇಖನಗಳನ್ನು ನೋಡಿದಲ್ಲಿ ಇವರಿಗೆ ಕ್ರೈಸ್ತ ಧರ್ಮದ ಸಿದ್ಧಾಂತ ಸಂಗತಿಯೇನೆಂಬುದು ತಿಳಿದೇ ಇಲ್ಲವೆಂದು ನಾವು ಊಹಿಸಬೇಕಾಗಿದೆ. ಅದು ಹಾಗಿರಲಿ ಇವರಿಗೆ ಧರ್ಮವೆಂಬುದರ ಸಾರವೇ ಗೊತ್ತಿಲ್ಲವೆಂದು ನಾವು ಹೇಳುವಂತಾಗಿದೆ. ಅದಕ್ಕೆ ದೃಷ್ಟಾಂತವಾಗಿ ನಾವು "ನಡೆಗನ್ನಡಿ" ಎಂಬ ಪತ್ರಿಕಾಕಾರರು ಕ್ರೈಸ್ತ ಮತಾವಲಂಬಿಗಳಿಗೆ ಪಿತ್ರಾರ್ಜಿತವೇ ಮುಂತಾದ ವಿಷಯಗಳಲ್ಲಿ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಿಕೊಡುವುದಕ್ಕೆ ನಮ್ಮ ಸರ್ಕಾರದವರು ಆಲೋಚಿಸುತ್ತಿರುವ ಕಾರ್ಯವನ್ನು ಕುರಿತು ಹೇಳಿರುವುದನ್ನು ಉದಾಹರಿಸಿದರೆ ಸಾಕಾಗಿದೆ.

"ಇದರ ಅಭಿಪ್ರಾಯವೇನೆಂದರೆ —ರಾಮಯ್ಯನೆಂಬ ಹಿಂದೂ ತಂದೆಗೆ ೧೨,೦೦೦ ರೂಪಾಯಿನ ಆಸ್ತಿಯೂ ಕೃಷ್ಣ, ಗೋವಿಂದರೆಂಬ ಇಬ್ಬರು ಗಂಡು ಮಕ್ಕಳೂ ಇರುವರು ಇವರೆಲ್ಲಾ ಒಟ್ಟಿಗೆ ವಾಸವಾಗಿರುತ್ತಾ ಇಬ್ಬರಿಗೂ ಮದುವೆಯಾಗಿ, ಒಬ್ಬೊಬ್ಬರಿಗೆ ಎರಡು ಮಕ್ಕಳಾಗಿರುವದು. ಹೀಗೆ ಇರುತ್ತಿರುವ ಸಂಸಾರಕ್ಕೆ ಒಂದು ತೊಂದರೆಯುಂಟಾಗುವದು. ಗೋವಿಂದನೆಂಬ ಕಿರೀ ಮಗನು ಕ್ರಿಸ್ತಪಾದ್ರಿಗಳ ಬೋಧನೆಯನ್ನು ಕೇಳಿ ಜಾತಿ ಕೆಟ್ಟು ಕ್ರಿಸ್ತಮತವನ್ನು ಅವಲಂಬಿಸುವನು. ತಂದೆತಾಯಿಗಳು ಅತ್ಯಂತ ವ್ಯಸನಪಟ್ಟವರಾದಾಗ್ಯೂ ಅವನನ್ನು ಮನೆಗೆ ಸೇರಿಸುವದಿಲ್ಲ. ಅವನು ಬೇರೆ ವಾಸವಾಗಬೇಕು. ಅವನ ಸಂಪ್ರದಾಯದ ಪ್ರಕಾರ ಮಾಂಸ, ಮೊಟ್ಟೆಗಳನ್ನು ತಿಂದು, ಬ್ರಾಂದಿಗಳನ್ನು ಕುಡಿಯುತ್ತಾ, ತಲೆ ಬೋಳಿಸಿ, ಇನ್ನೂ ಅನೇಕ ವಿಧವಾದ ಕ್ರಿಸ್ತ ವೇಷವನ್ನು ಧರಿಸಬೇಕಾಗುವದು. ಬೇಗಿರುವಲ್ಲಿ ಅವನಿಗೆ ತಂದೆಯ ಆಸ್ತಿಯಲ್ಲಿ ಅರ್ಧಭಾಗ ಬರಬೇಕೆಂದು ತಿಳಿದು ದಾವಾ ಹಾಕುವನು ಅಲ್ಲದೆ ತನ್ನ ಹಿಂದೂ ಹೆಂಡತಿಯು ತನ್ನ ಅಧೀನದಲ್ಲಿರಬೇಕೆಂದೂ ತನ್ನ ಮಕ್ಕಳೂ ಸಹ ತನ್ನಲ್ಲಿದ್ದು, ಅವರೆಲ್ಲಾ ತನ್ನಂತೆಯೇ ಕ್ರಿಸ್ತರಾಗಬೇಕೆಂದೂ ಅಪೇಕ್ಷಿಸುವನು. ಇದಕ್ಕೆ ಈಗಿನ ನ್ಯಾಯಪ್ರಕಾರ ಅವಕಾಶವಿಲ್ಲ. ಆದರೆ ಈಗ ಸರ್ಕಾರದವರು ಮಾಡಬೇಕೆಂದಿರುವ ಪ್ರಕಾರ ಜಾತಿಕೆಟ್ಟ ಗೋವಿಂದನಿಗೆ ಅವನ ತಂದೆಯು ತನ್ನ ಆಸ್ತಿಯಲ್ಲಿ ಅರ್ಧ ಭಾಗವನ್ನು ಕೊಡಬೇಕಾಗಿರುವದಲ್ಲದೆ, ಗೋವಿಂದನ ಹೆಂಡತೀ ಮಕ್ಕಳನ್ನು ಸಹ ಅವನ ಅಧೀನಕ್ಕೆ ಬಿಡಬೇಕಾಗುವದು. ರಾಮಯ್ಯನು ಕಾಲವಾದರೆ ಜಾತಿಕೆಟ್ಟ ಗೋವಿಂದನಿಂದ ಬೇರೆ ಉತ್ತರ ಕ್ರಿಯಾದಿಗಳು ನಡೆಯಲಿಕ್ಕಿಲ್ಲ. ಒಂದುವೇಳೆ ಆಸ್ತಿಯು ಸ್ಥಿರ ಆಸ್ತಿಯಾಗಿ ಮನೆಯು ರೂಪದಲ್ಲಿದ್ದರೆ, ತನಗೆ ಅರ್ಧ ಮನೆಯನ್ನು ಕೊಡಬೇಕೆಂದು ಕೇಳುವನು. ಆಗ ಒಂದು ಭಾಗದಲ್ಲಿ ಕೃಷ್ಣನು ಹಿಂದೂ ಪದ್ಧತಿಯ ಪ್ರಕಾರ ವಾಸವಾಗಿರುತ್ತಾ, ವಿಶೇಷ ದಿನಗಳಲ್ಲಿ ದೇವರುಗಳ ಪೂಜೆ ಮಾಡುತ್ತಾ ಇದ್ದರೆ, ಮನೆಯ ಮತ್ತೊಂದು ಭಾಗದಲ್ಲಿ ಜಾತಿಕೆಟ್ಟ ಗೋವಿಂದನು ಕುರಿಮಾಂಸವನ್ನು ಬೇಯಿಸುತ್ತಾ, ಚುಟ್ಟ ಸೇದಿ ದೂಪವನ್ನು ಹಾಕುವನು. ಇಂತಾ ಅಸಂದರ್ಭವಾದ ಸಂಗತಿಗಳಿಗೆ ಈಗ ಅವಕಾಶವನ್ನು ಸರ್ಕಾರದವರೇ ನಿಂತು ಮಾಡುತ್ತಿದ್ದಾರೆ ಎಂದು ಕೇಳಿ ನಮಗೆ ಅತ್ಯಂತ ಆಶ್ಚರ್ಯವಾಗಿದೆ "

ಕ್ರೈಸ್ತ ಮತಾವಲಂಬಿಯಾದವನು ಮಾಂಸವನ್ನೂ ಕೋಳಿಮೊಟ್ಟೆಗಳನ್ನೂ ತಿನ್ನಬೇಕೆಂದೂ ಬ್ರಾಂದಿಯನ್ನು ಕುಡಿಯಬೇಕೆಂದೂ ಸಿಗರೇಟುಗಳನ್ನು ಸೇದಬೇಕೆಂದೂ ತಲೆ ಬೋಳಿಸಿಕೊಳ್ಳಬೇಕೆಂದೂ ಈ ಪತ್ರಿಕಾಕರ್ತರು ಹೇಳಿದ್ದಾರೆ. ಹೀಗೆ ಬರೆದಿರುವವರಿಗೆ ನಾವು ಬರೆದುದಕ್ಕೆ ವಿಷಯವೇ ಇರದೆ ಗೊತ್ತಿಲ್ಲವೆಂದು ನಾವು ಸಾಧಿಸಬೇಕಾಗಿದೆ. ಅಥವಾ, ಆ ವಿಷಯವನ್ನು ತಿಳಿದಿದ್ದರೂ ಬೇಕಾಗಿ ಅಭಿಪ್ರಾಯವನ್ನು ತಿರುಚಿ ಮರೆಮಾಡಿ ಬರೆದಿದ್ದಾರೆಂದು ಹೇಳಬೇಕಾಗಿದೆ. ಕ್ರೈಸ್ತ ಮತಾವಲಂಬಿಯು ಯಾವ ಯಾವ ಪದಾರ್ಥಗಳನ್ನು ತಿನ್ನುವ ವಿಷಯದಲ್ಲಿ ಸ್ವತಂತ್ರನು ಎಂಬುದು ಸಕಲರಿಗೂ ತಿಳಿದಿರುವದು. ಹೇಳಬೇಕಿಲ್ಲ. ಅದರ ಉದ್ದೇಶವು ಅನ್ಯ ಜನಗಳ ಸಂಘಾದಿಗಳಿಗಿಂತ ಅತಿ ವಿಶೇಷವಾದ ಕಾರ್ಯವಾಗಿದೆ ಎಂದು ನಾವು ವಿಸ್ತರಿಸಿ ಹೇಳಬೇಕಾದುದಿಲ್ಲ. ಕ್ರೈಸ್ತ ಮತವನ್ನು ಸೇರುವುದಕ್ಕೆ ಬರುವವನಿಗೆ ಆ ಮತಾಧಿಕಾರಿಗಳು ಆಹಾರ ಪದಾರ್ಥಗಳ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾರೆ. ಬ್ರಾಂದಿಯನ್ನು ಕುಡಿಯುವ ವಿಷಯದಲ್ಲೋ ಎಂದರೆ ವಿಷವನ್ನು ಕಂಡ ಹಾಗೆ ಅದನ್ನು ಕಾಣಬೇಕೆಂದು ನಿರಂತರವಾಗಿಯೂ ಬುದ್ಧಿ ಹೇಳುವವರಾಗಿರುತ್ತಾರೆ. ಅದಕ್ಕೆ ಮಿಗಿಲು ಅವನು ಮದ್ಯಪಾನಾಸಕ್ತನಾಗಿದ್ದರೆ ಅವನನ್ನು ಸಭೆಯಿಂದ ಬಹಿಷ್ಕರಿಸುತ್ತಾರೆ. ಮೇಲೆ ಕಂಡ ಲೇಖನದಲ್ಲಿ ಸೂಚಿತನಾಗಿರುವ ಗೋವಿಂದನು ಕುರಿಯ ಮಾಂಸವನ್ನು ತಿನ್ನುವುದು ತಪ್ಪೆಂದು ತಿಳಿದಿದ್ದರೆ, ಅವನು ಕ್ರೈಸ್ತ ಮತಾವಲಂಬಿಯಾದನಂತರ ಅಂಥ ಪದಾರ್ಥವನ್ನು ಅವನು ತಿನ್ನಬೇಕೆಂಬ ನಿರ್ಬಂಧವೇನೂ ಇರುವುದಿಲ್ಲ. ಆದರೆ ಅವನು ಆ ಮತಾವಲಂಬಿಯಾದ ತರುವಾಯ ಮಾಂಸಾಹಾರವಾದರೂ ಉಪಯೋಗಿಸಿದರೆ ಅವನಿಗೆ ಮಾಂಸಾಹಾರದ ಮೇಲೆ ಮೊದಲೇ ಇಷ್ಟವಿತ್ತೆಂದೂ, ಆ ಇಷ್ಟವು ಕ್ರೈಸ್ತಮತ ಪ್ರವೇಶ ಕಾಲದಲ್ಲಿ ಅಂಕುರಿಸಲಿಲ್ಲವೆಂದೂ ವ್ಯಕ್ತವಾಗುವುದು. ಈ ಗೋವಿಂದನ ವಿಷಯವನ್ನು ಪರ್ಯಾಲೋಚಿಸುವಾಗ್ಗೆ ಅವನು ಬ್ರಾಹ್ಮಣನೋ! ತ್ಯಜಿಸಿದನಾಗಿರುವಾಗಲೇ ಮಾಂಸ ಭಕ್ಷಣೆಗಳನ್ನು ಬಯಸುವವನಾಗಿದ್ದನೆಂತಲೂ ಹಾಗೆ ಮಾಡುವುದಕ್ಕೆ ತನ್ನ ಜಾತಿಯ ಕಟ್ಟಳೆಗಳಲ್ಲಿ ಅವಕಾಶ ದೊರೆತಿರಲಿಲ್ಲವೆಂತಲೂ ನಾವು ಊಹಿಸಬೇಕಾಯಿತು. ಆದರೆ ಮಾಂಸಾಹಾರದ ಆಸೆಯು ಅವನಲ್ಲಿದ್ದುದರಿಂದಲೇ ಅವನು ಜಾತಿಭ್ರಷ್ಟನಾದನಷ್ಟೆ. ಇದಂತಿರಲಿ. ಕ್ರೈಸ್ತ ಮತಾವಲಂಬಿಗಳಾಗುವವರೆಲ್ಲರೂ ಮಾಂಸಾಹಾರ ಮಾಡದ ಇರುವ ಜಾತಿಯವರೇ ಆಗಿದ್ದಾರೆಂದು ಈ ಪತ್ರಿಕಾಕರ್ತರು ಅಭಿಪ್ರಾಯಪಡುವವರಾಗಿದ್ದಾರೆಂದು ತೋರುವುದು. ಕ್ರೈಸ್ತ ಮತವನ್ನು ಸೇರುವುದಕ್ಕೆ ಮುಂಚೆ ಗೋವಿಂದನು ಮಾಂಸಾಹಾರಿಯಾಗಿದ್ದನಾದರೆ ಅವನು ತಂದೆಯ ಮನೆಯೊಳಗೊಂದು ಭಾಗದಲ್ಲಿ ದೇವರ ವಾಕ್ಯದ ಪ್ರಕಾರ ಪ್ರಾರ್ಥನೆ ಮಾಡುವುದೂ ಇಲ್ಲ ಎಂದು ನಂಬಿದರೆ ಇತರ ಜನರಿಗೆ ಬಾಧಕವೇನೂ ತೋರುವುದಿಲ್ಲ. ಈ ಅಂಶವನ್ನು ಹಿಂದೂ ಕುಟುಂಬದಾ ಕಾರ್ಯದಲ್ಲಿ ದೀರ್ಘತರವಾಗಿ ಯೋಚಿಸಿರುವ ಈ ಮಹಾಸ್ಥಾನದವರು ಆಲೋಚಿಸುವರೆಂದು ನಂಬಿದ್ದೇವೆ. ಅಥವಾ, ಲೋಕವೇ ಭ್ರಷ್ಟವಾಯಿ ಹೋದ ಎಂದು [illegible] ತಿಳಿದಿರುವ ಈ ಬ್ರಾಹ್ಮಣನೋ [illegible] ಗೋವಿಂದನೇ ಮೋಸಹೋದನೆಂದು ಹೇಳಬೇಕೋ!

ಪಾಠಕರು ನಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಯಬೇಕೆಂದು ಕೋರುತ್ತೇವೆ. ತಿನ್ನುವುದು ಕುಡಿಯುವುದು ಮುಂತಾದ ಬಾಹ್ಯ ಕಾರ್ಯಗಳನ್ನು ನಾವು ಹಿಂದೂ ಮತದಂತೆ ಅಗತ್ಯವೆಂದು ಎಣಿಸುವುದಿಲ್ಲವೆಂದೂ ತಿಳಿಸುತ್ತೇವೆ. ಕ್ರೈಸ್ತ ಮತವಾದರೋ ಈ ವಿಷಯದಲ್ಲಿ ಬಹು ಸ್ಪಷ್ಟವಾಗಿ ಹೇಳುವುದನ್ನು ಇಲ್ಲಿ ಉದಾಹರಿಸುತ್ತೇವೆ. ಅದೇನೆಂದರೆ ತಿನ್ನುವುದೂ ಕುಡಿಯುವುದೂ ದೇವರ ರಾಜ್ಯದ ಸಾರವಲ್ಲ; ನೀತಿ, ಸಮಾಧಾನ, ಪವಿತ್ರಾತ್ಮನಿಂದಾಗುವ ಆನಂದ, ಇವೇ ಅದರ ಸಾರ.

ನಡೆಗನ್ನಡಿ ಪತ್ರಿಕೆಯ ಲೇಖಕರು ಸ್ವಮತ ಪರಿಪಾಲನೆಗಾಗಿ ಮರೆಯಲ್ಲೇ ಇರಿಸಿಕೊಂಡಿರುವ ಕೃಷ್ಣಸ್ವಾಮಿಯೂ ಜಾತಿಭ್ರಷ್ಟನಾಗಿ ಅನ್ಯ ಮತವನ್ನು ಸೇರಿಕೊಂಡ ಗೋವಿಂದಪ್ಪನೂ ತಮ್ಮ ತಮ್ಮ ಕಾರ್ಯಗಳಲ್ಲಿ ಆಸಕ್ತರಾಗಿರುವ ವಿವರವನ್ನು ಲೇಖಕರು ಯಥಾರ್ಥವಾಗಿ ತಿಳಿದಿರುವುದು ಒಳ್ಳೇದು. ಗೋವಿಂದನು ಕ್ರೈಸ್ತಮತದ ರೀತಿಯನ್ನನುಸರಿಸಿ ಭಗವಂತನ ಚಿತ್ತವೇನೆಂದು ತಿಳಿಯುವುದಕ್ಕೆ ಸಕಲ ಸಂದರ್ಭಗಳಲ್ಲಿಯೂ ಪ್ರಯತ್ನಿಸುತ್ತಿರುವನು. ದೇವರ ಸಹಾಯವನ್ನು ಪ್ರಾರ್ಥಿಸಿ ತನ್ನ ಮನೋವ್ಯಾಪಾರಗಳಲ್ಲಿ ದೇವರ ಚಿತ್ತವನ್ನನುಸರಿಸಿ ನಡೆಯುವುದರಲ್ಲಿ ಆಸಕ್ತನಾಗಿರುವನು ತನ್ನ ಮಕ್ಕಳನ್ನು ದೇವರ ಭಯಭಕ್ತಿಗಳಲ್ಲಿ ಬೆಳೆಸುವುದನ್ನು ಪರಮ ಕರ್ತವ್ಯವೆಂದು ತಿಳಿದು ನಡೆಯುವನು. ಇಷ್ಟೇ ಅಲ್ಲ ಅವನು ಸ್ವಮತಸ್ಥರ ಮತ್ತು ಸ್ವಜನಗಳ ಕ್ಷೇಮಾಭಿವೃದ್ಧಿಗಳ ವಿಷಯದಲ್ಲಿ ದೇವರ ಪ್ರಾರ್ಥನೆಯನ್ನು ಮಾಡುತ್ತಿರಬೇಕೆಂಬ ಪ್ರೀತಿಬಂಧಕ್ಕೆ ಒಳಪಟ್ಟವನಾಗಿರುವುದರಿಂದ ತನ್ನ ತಂದೆ ತಾಯಿಗಳ ಇತರ ಜನಗಳ ಶ್ರೇಯ ಪ್ರಾರ್ಥನೆಯಲ್ಲಿ ನಿರತನಾಗಿರುತ್ತಾ, ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದುಂಟಾಗುವ ಆನಂದವೂ ತನ್ನಲ್ಲಿಯೂ ಇತರರಲ್ಲಿಯೂ ಸಹಾ ನೆಲೆಗೊಳ್ಳಬೇಕೆಂದು ಪ್ರಯಾಸಪಡುತ್ತಾ ಇರುವನು. ಆದಕಾರಣ ಕೃಷ್ಣಸ್ವಾಮಿಯು ಯಾವದೋ ಕೇವಲ ಭಕ್ತಿಯಿಂದ ದೇವತಾರಾಧನೆಯನ್ನು ಮಾಡುವನು ಇದನ್ನು ಕೇಳಿ ನಮಗೆ ಸಂತೋಷವಾಯಿತು. ಆದರೂ ಆತನಿಗೆ ಸಂಸ್ಕೃತ ಭಾಷಾಭಿಜ್ಞತೆಯು ಸಂಪೂರ್ಣವಾಗಿದೆ ಎಂದು ಹೇಳಲಾಗುವುದಿಲ್ಲ ಆ ಕಾರಣ ತನ್ನ ಮತದ ವಿಷಯದಲ್ಲಿ ಅದು ಬೋಧಿಸುವ ಧರ್ಮಸೂತ್ರ ಒಂದೂ ಗೋಚರವಾಗುವುದು ಸ್ವಲ್ಪ ಕಷ್ಟವೇ. ಹೇಗೆಯಿಲ್ಲ. ಪಿತೃಪಾರಂಪರ್ಯವಾಗಿ ಕಲಿತಿರು

ಮಂತ್ರಗಳನ್ನು ಪಠಿಸುತ್ತಾನೆ ಅದರ ತಾತ್ಪರ್ಯವಾದರೂ ಆತನ ಮನಸ್ಸಿನೊಳಗೆ ಹೊಗುತ್ತದೆಯೋ? ಅದನ್ನು ಪಾಪಕರ್ಮ ಯೋಗ್ಯೆಯೆಂದು ದೇವತಾ ಮಾನವರಿಗೆ ನೈವೇದ್ಯ ಸಮರ್ಪಣೆಗಳನ್ನು ತನ್ನ ಸ್ವೇಚ್ಛೆಯಿಂದ ಯಾವ ಯಾವ ಫಲಗಳು ಸಿಗುತ್ತವೆಂದು ಬುದ್ಧಿಪೂರ್ವಕವಾಗಿ ಹೇಳಬಲ್ಲನೋ ವಿನಯ, ಸಂಶಯವಾಗಿ ಅಂತಹ ವಿಶೇಷ ದಿನಗಳಲ್ಲಿ (ಶರನ್ನವರಾತ್ರಿ ಮನಸ್ಸಿನ ವಿಸ್ತಾರ ಬಂದದ್ದೇ ಆಯುಷ್ಯ!) ಸೂರ್ಯನ ಜತೆಯಲ್ಲಿ ಬಟ್ಟೆಗಳನ್ನು ಹೊದ್ದು, ಮನಸ್ಸು ಭೋಜನವನ್ನುಂಡು, ಏಲಾ, ಫಲ ಎಂದು ಕೊಳ್ಳುತ್ತಾನೆ. ಈ ಅನ್ನಬುದ್ಧಿಯು ಸಾಧಕ ವಿಷಯದ ಭಂಗಕ್ಕೆ ಆತನಿಗೆ ಸಂಶಯವೇ ಇರುತ್ತದೆ ಈ ಪ್ರಕಾರವಾಗಿ ಈ ಉನ್ನತವನ್ನು ಬಿಟ್ಟು ಈ ಪಾಠವನ್ನು ಪಠನ ಬರಿಸುವುದು ಕೇಳುವವನಿಗೆ ಜಾತಿಗೆಟ್ಟವನೆಂದು ದೂಷಿಸುತ್ತಾನೆ ಗೋವಿಂದಪ್ಪನ ಸಂಬಂಧ ಸಹ ಸ್ಪಷ್ಟವಾಗಿ ತೋರುತ್ತದೋ! ಆತನು ತನ್ನ ಪರಂಪರಾಗತವಾದ ವೇದಗಳನ್ನು ಶ್ರೀ ಸ್ವಾಮಿಯ ಹೆಸರಿನಲ್ಲಿ ತನ್ನ ಪ್ರಸಾದಕ್ಕಾಗಿ ವಿನಿಯೋಗಿಸಿ ತನ್ನ ಸ್ವಾರ್ಥವನ್ನು ಸಾಧಿಸುತ್ತಾನೆ, ಮನಸ್ಸಿನ ಸ್ವಪ್ರಯೋಜನಕ್ಕಾಗಿ ಮಾತ್ರ ಯಾರ ವ್ಯರ್ಥವಾದ ಶ್ರಮವಿಲ್ಲದೆ ಗ್ರಂಥಗಳನ್ನು ಹೇಳಿಕೊಳ್ಳುವುದನ್ನು ನೋಡಿಯೇ ಇದ್ದೇವೆ ಇತ್ಯಾದಿ ಆತನು ತನ್ನ ಬಿಟ್ಟುಬಿಡುವುದು ಮುಕ್ತಿಗೆ ಹೇತುವಲ್ಲ ಎಂದು ನಿರ್ಣಯಿಸುವುದು ಯೋಗ್ಯವಲ್ಲವೆಂದು ಹೇಳುತ್ತೇವೆ.

ಜನಪದೀಯ ವರ್ತಮಾನಗಳು

ಕಳೆದ ಗುರುವಾರ ಮಿಸ್ಟರ್ ಸಿ. ಕೃಷ್ಣಮೂರ್ತಿ ಯವರು ಬೆಂಗಳೂರಿನಿಂದ ನೀಲಗಿರಿಗೆ ಹೊರಟಿರುವರು

*****

ಬೆಂಗಳೂರು ಗಾಣಿಗರ ಪೇಟೆಯಲ್ಲಿ ಕಳೆದ ಗುರುವಾರ ಒಬ್ಬ ಒಡೆಯರ ಹೆಂಗಸನ್ನು ಆವಳ ಸಂಬಂಧಿಯು ಕೊಂದುಹಾಕಿದನು ಪೋಲೀಸಿನವರು ತನಿಖೆಮಾಡುತ್ತಾರೆ.

*****

ಮಿ॥ ಜೆ ಇ ರಿಕೆಟ್ಸ್ ಯವರು ಹುಲಿ ಬೇಗೆಯ ಗಾಯದಿಂದ ಗುಣಹೊಂದಿರುವುದರಿಂದ ಸರ್ಕಾರದವರು ಆವರ ಕೆಲಸಕ್ಕೆ ನೇಮಿಸಿ ಉಲ್ ಕರೀಂ ಯವರನ್ನು ನೇಮಕಮಾಡಿದಾರೆ

*****

ಮಹಾರಾಜರವರ ದರ್ಶನಕ್ಕಾಗಿ ಬಂದ ಸಂಜೀವಪ್ಪನೆಂಬುವ ಇಲ್ಲಿನ ಟ್ರೆಸರಿ ಮ್ಯಾಜಿಸ್ಟ್ರೇಟರು ೧೫ ದಿನಗಳ ಕಾಲ ರಜಾ ತೆಗೆದುಕೊಂಡಿದ್ದಾರೆ ಈಚೆಗೆ ಸರ್ವೀಸ್ ನಿಂದ ಆತನನ್ನು ಜಾಮೀನಿನ ಮೇಲೆ ಬಿಟ್ಟು, ಆವನ ಮೊಕದ್ದಮೆಯ ಕಟ್ಟನ್ನು ಚೀಫ್ ಕೋರ್ಟಿಗೆ ಕಳುಹಿಸಿದಾರೆ

*****

ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಡೊನಾಲ್ಡ್ ರಾಬರ್ಟ್‌ಸನ್ ರವರು ಪತ್ನೀಸಹಿತ ಮೊನ್ನೆ ಮಂಗಳವಾರ ನೀಲಗಿರಿಗೆ ಹೊರಟಿರುವರು ಇವರು ಮುಂದಿನ ತಿಂಗಳು ೨೦ ರಂದ ಕೆಲಸ ಬಿಟ್ಟು ಸೀಮೆಗೆ ಪ್ರಯಾಣ ಮಾಡುವರು ಇವರ ಸ್ಥಾನಕ್ಕೆ ಇನ್ನಾರು ನೇಮಕವಾಗುವರೋ ಇನ್ನೂ ಹೊರಬಿದ್ದಿಲ್ಲ

*****

ಬೆಂಗಳೂರು ಪಟ್ಟಣದ ಮ್ಯುನಿಸಿಪಾಲಿಟಿಯ ವಿಚಾರಗಳನ್ನು ಇನ್ನೂ ಸ್ಥಿತಿಯಲ್ಲಿರುವುದಕ್ಕೋಸ್ಕರ ಸರ್ಕಾರದವರು ಮ್ಯುನಿಸಿಪಲ್ ಪ್ರಸಿಡೆಂಟ್ ಮಿ॥ ನಾಗಪ್ಪನವರ ಯವರನ್ನು ಪೂನಾ, ಬೊಂಬಾಯಿ, ಅಹಮದಾಬಾದು ಮುಂತಾದ ಪಟ್ಟಣಗಳಲ್ಲಿ ಸಂಚಾರ ಮಾಡಿ, ಮ್ಯುನಿಸಿಪಲ್ ವಿಚಾರಗಳನ್ನು ತಿಳಿದುಕೊಂಡು ಬರುವಂತೆ ಕಳುಹಿಸಿದಾರೆ

*****

ಹಿಂದೂ ಜಾತಿಗೆ ಸೇರಿದ ವಿಧ್ಯಾವತಿಯಾಗಿರುವ ಕನ್ನೆಯನ್ನು ಮದುವೆ ಮಾಡಿಕೊಳ್ಳುತ್ತೇನೆಂದೂ, ವಿಧವೆಯಾಗಿದ್ದರೂ ಚಿಂತೆಯಿಲ್ಲವೆಂತಲೂ, ಚಿಂತೆಯಿಲ್ಲವೆಂತಲೂ, ತನಗೆ ಈಗ ೩೦ ವಯಸ್ಸಾಗಿರುವುದೆಂದೂ, ವರುಷಕ್ಕೆ ೧೪ ಸಾವಿರ ರೂಪಾಯಿ ಬರುವ ಜಹಗೀರು ಇದೆ ಎಂತಲೂ ಒಬ್ಬ ಬ್ರಾಹ್ಮಣ ಜಹಗೀರದಾರನು ಮುಂಬಯಿ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾನೆ

*****

ಬೆಂಗಳೂರು ಮಲ್ಲೇಶ್ವರದ ಬಡಾವಣೆಯಲ್ಲಿ ನಿವೇಶನಗಳನ್ನು ಕೊಂಡುಕೊಂಡು ಹಣ ಪಾವತಿ ಮಾಡದಿದ್ದಕ್ಕೆ ಪ್ರಜೆಗಳು ಶ್ಲಿ ಅಮಲ್ದಾರ್ ಸುಬ್ಬರಾಯರ ಕುರು ಆಗಿರುವ ಕಛೇರಿಗಳನ್ನು ತೋರಿಸುತ್ತಾರೆ ಹಣ ಹಿಂತಿರುಗಿಸುವುದಕ್ಕೆ ಮ್ಯುನಿಸಿಪಲ್ ಆಫೀಸಿನ ಟ್ರೆಜರಿಯಲ್ಲಾಗಲಿ ಲೆಕ್ಕ ದಾಖಲೆ ಇಲ್ಲ ಮ್ಯುನಿಸಿಪಲ್ ನವರು ಅಂಥಾ ಕಛೇರಿಗಳನ್ನೆಲ್ಲಾ ಹಾಜರು ಮಾಡಬೇಕೆಂದು ಪ್ರಜೆಗಳಿಗೆ ನೋಟೀಸ್ ಕೊಟ್ಟಿದ್ದಾರೆ.

ಮೈಸೂರು ಗಜೆಟ್ ಸಂಗ್ರಹ

ಛಾಂಪಿಯನ್ ರೀಫ್ಸ್ ಗಣಿಯ ಚಿನ್ನ ಕಳುವಿನ ಮೊಕದ್ದಮೆಯಲ್ಲಿ ಕೋಲಾರ್ ಚಿನ್ನದ ಗಣಿಗಳ ಅಸಿಸ್ಟೆಂಟ್ ಕಮಿಷನರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರಿಂದ ಸೆಷನ್ ವಿಚಾರಣೆಗೆ ಗುರಿಮಾಡಲ್ಪಡುವ ಅಪರಾಧಿಗಳನ್ನು ಹಯರ್ ಆಫ್ ಮಾಡುವುದಕ್ಕೋಸ್ಕರ ಅಲ್ಲೇ ಒಂದು ಸ್ಪೆಷಲ್ ಸೆಷನ್ ಕೋರ್ಟನ್ನು ಮಾಡಲ್ಪಡುವುದು, ಚೀಫ್ ಕೋರ್ಟಿನಿಂದ ನೇಮಕವಾಗುವ ದಿನಗಳಲ್ಲಿ ವಿಚಾರಣೆ ನಡೆಯತಕ್ಕದ್ದು

ಮಿ॥ ಶಬರ್ ಮಿ॥ ಬಿ ಶಿ ರಾಘವೇಂದ್ರಾಚಾರ್ಯರಿಗೆ ಕೊಟ್ಟಿದ್ದ ೧೨ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಐದು ದಿನಗಳಿಗೆ ಜಾಸ್ತಿ ಮಾಡಿದೆ

ಅ॥ ಅ॥ ಸೆಕ್ರೆಟರಿ ಮಿ॥ ಟಿ ಸತ್ಯರಾವ ಚೆಟ್ಟಿಯಾರವರಿಗೆ ಈಸ್ಟರ್ ರಜಾದೊಂದಿಗೆ ಇನ್ನೂ ಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕೆಳಗೆ ಕಂಡಿರುವ ಅಮಲ್ದಾರರುಗಳ ವರ್ಗವರ್ಗ ಹುಕುಂ ಮಾಡಿದೆ —(೧) ಅಮಲ್ದಾರ್ ಮಿ॥ ಸಿ ಕೃಷ್ಣರಾಯರನ್ನು ಯಡತೊರೆಯಿಂದ ಚ ಮಂಗಳೂರು ಗಡದ ತಾಲ್ಲೂಕಿಗೆ ವರ್ಗಮಾಡಿದೆ, ರಜಾ ಪೂರೈಸಿದ ಮೇಲೆ ಕೆಲಸದ ಭಾರವನ್ನು ವಹಿಸತಕ್ಕದ್ದು (೨) ಅಮಲ್ದಾರ್ ಮಿ॥ ಶ್ರೀಕೃಷ್ಣರಾವ್‌ರವರನ್ನು ಚಾಮರಾಜನಗರದಿಂದ ಬಾಗೇಪಲ್ಲಿ ತಾಲ್ಲೂಕಿಗೆ ವರ್ಗ ಮಾಡಿದೆ, ಮಿ॥ ಸಿ. ಕೃಷ್ಣರಾಯರಿಗೆ ಛಾರ್ಜು ವಹಿಸಿದ ಮೇಲೆ ಹೋಗತಕ್ಕದ್ದು

ಮಿ॥ ನರಸಿಂಗರಾವ್ ಪ್ರೊಬೇಷನರನ್ನು ೪ನೆ ಕ್ಲಾಸ್ ಅ॥ ಕಮಿಷನರ ದರ್ಜೆಯಲ್ಲಿ ಖಾಯಂ ಮಾಡಿದೆ

ಸ್ಪೆಷಲ್ ಡ್ಯೂಟಿಯ ಮೇಲಿರುವ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಿ॥ ಎ ಎಚ್ ಕವಿಸ್ ಯವರಿಗೆ ಕೊಟ್ಟಿದ್ದ ಎರಡು ತಿಂಗಳು ಇಪ್ಪತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನಗಳಿಗೆ ಜಾಸ್ತಿ ಮಾಡಿದೆ

ಪತ್ರಿಕಾದಾರರಿಗೆ ಸೂಚನೆಗಳು

ಕೆಲವು ವಿಷಯಗಳಲ್ಲಿ ಪರಿಣಾಮಕಾರಿ ಟಿಪ್ಪಣಿಗಳು ಸಾಕ್ಷಿ ನಿಜಾಂಶ ಕೊಡಬೇಕೆಂದು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸದಿದ್ದರೆ ಅವರ ಪತ್ರಿಕೆಗಳನ್ನು ಪ್ರಕಟಿಸುವ ಪದ್ಧತಿಗಳಲ್ಲಿ ಬರೆಯಲಾಗದು, ಇಂತಹವುಗಳ ನಿಜ ಸಂಗತಿ ಕೊಡಬೇಕು.

ಪ್ರಕಟಿಸಲಾರದೆಂದು ಹೇಳಿ ಹಿಂದಿರುಗಿಸಿದ ಬಾತ್ಮಿಗಳನ್ನು ವಾಪಸು ಬಾತ್ಮೀದಾರರಿಗೆ ಕಳುಹಿಸಲಾರೆವು

ಬಾತ್ಮಿದಾರರು ಸೂಚಿಸುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂದೂ ಅದನ್ನು ಸಾಕಲ್ಯವಾಗಿ ತಿಳಿಯತಕ್ಕದ್ದು —ಎಡಿ

ಮಧ್ಯಗಿರಿಯಲ್ಲಿ ಮನೆಯನ್ನು ಇನ್‌ಸ್ಪೆಕ್ಟರ್ ಮಾಡುವಾಗ್ಗೆ ಒಬ್ಬನ ಮನೆಯ ಕೆಲವು ಭಾಗ ಸುಟ್ಟುಹೋಯಿತೆಂತಲೂ ಒಬ್ಬನಿಗೆ ಗಾಯವಾದವೆಂತಲೂ ಒಂದು ಬಾತ್ಮಿ ಬಂದಿರುವುದು ಅದನ್ನ ಅಧಿಕಾರಿಗಳೂ ವಿಧಾನವಾಗಿ ನೀತಿ, ಈ ಕಾರ್ಯಗಳನ್ನು ಸಾಧಿಸಿದರೆ ಇಂದು ಅನಾಥ ತಿಗಳಿಗೆ ಅನುಕೂಲವಾಗುವುದಿಲ್ಲ. ತಿಳಿಯಲಾಗಿ ಇಲ್ಲದ ಅಲ್ಪ ಬರಿಗೂ ಪ್ರಜೆಗಳಿಗೂ ಈ ಧರ್ಮ ಒಡನೆ ವಹಿಸುವುದು ನಮ್ಮ ಕರ್ತವ್ಯವೇ ಸರಿ

ಆಲೂರು ಸಬ್ ತಾಲ್ಲೂಕಿನಲ್ಲಿ ಅಧಿಕಾರಿಗಳು ಸತ್ಯ ದೇವಸ್ಥಾನಗಳಲ್ಲಿ ಅಕ್ಕತ್ಯಗಳನ್ನು ನಡಿಸಿ, ಪ್ರಜೆಗಳ ಅಪ್ರೀತಿಯನ್ನು ಸಂಪಾದಿಸಿಕೊಳ್ಳುತ್ತಿದಾರೆಂದು ಅಲ್ಲಿನ "ಸನಾತನ ಧರ್ಮಾಭಿಮಾನಿ" ಎಂಬ ಬಾತ್ಮಿದಾರರು ಬರೆದಿದಾರೆ ಇಂದಾ ವಿಷಯಗಳನ್ನು ಕ್ರಮಪಡಿಸುವುದಕ್ಕೆ ಸರ್ಕಾರದವರು ಧರ್ಮದರ್ಶಿಗಳನ್ನೂ, ಆಗಂ ಮೇರೆ ಡೆಪ್ಯುಟಿ ಕಮಿಷನರನ್ನೂ, ಅವರ ಮೇಲೆ ಮುಜರಾಯಿ ಸಕ್ರೇಟರಿಯವರನ್ನೂ ಗೊತ್ತುಮಾಡಿರುವರು ಪ್ರಜೆಗಳು ತಮ್ಮ ಕೋರಿಕೆಗಳನ್ನು ಈ ಅಧಿಕಾರಿಗಳಿಗೆ ತಿಳಿಸಿದಲ್ಲಿ ಇವರು ಅನುಕೂಲವಾಗಿ, ಕ್ರಮಪಡಿಸುತ್ತಾರೆಂದು ನಂಬಿದೇವೆ

ಕರೆಸ ಪಾಂಡೆನ್ಸ್.

ಶಿವಮೊಗ್ಗೆಯ ದ ಬ್ಯಾಂಡೂರಿಗೆ ರೈಲ್ ಆಗಬೇಕು.

ಅಯ್ಯಾ,

ತಮ್ಮ ಏಪ್ರಿಲ್ ೭ ನೇ ತಾರೀಕಿನ ವೃತ್ತಾಂತ ಪತ್ರಿಕೆಯಲ್ಲಿ ಶಿವಮೊಗ್ಗೆಯಿಂದ ಬೈಂದೂರಿಗೆ ರೈಲು ಆಗಬೇಕೆಂಬುದರ ವಿಷಯವಾಗಿ ಸೂಚಿಸೋಣಾಗಿದೆಯಷ್ಟೆ. ಇದನ್ನು ಸರ್ಕಾರದವರು ಗಮನಕ್ಕೆ ತಂದುಕೊಟ್ಟು ನಡಿಸೋಣದಲ್ಲಿ ಈ ಮಲೆನಾಡು ಶೀಮೆಯು ಇನ್ನೂ ಹೆಚ್ಚು ಅಭಿವೃದ್ಧಿಗೆ ಬಂದು, ಬಡವರುಗಳ ಕಷ್ಟನಿವಾರಣೆ ಆಗಿ ಹೆಚ್ಚು ಪರೋಪಕಾರಿಯಾಗಿ ರೈಲು ಕಂಪೆನಿಯವರಿಗೆ ತಕ್ಕ ಲಾಭ ಸಿಕ್ಕೀತು ಎಂಬುವುದಕ್ಕೆ ಏನೂ ಸಂಶಯವಿಲ್ಲ

ನಮ್ಮ ಚಂದಾದಾರ.

ಆಗುಂಬೆ ಪೋಸ್ಟ್ ವಿಚಾರ

ಅಯ್ಯಾ,

ಆಗುಂಬೆ ಪೋಸ್ಟ್ ಮ್ಯಾನ್ ವಿಚಾರವನ್ನು ತಮ್ಮಲ್ಲಿ ಏನೆಂದು ಹೊಗಳಲಿ ಅವರು ನನ್ನ ಮುಖವನ್ನು ನೋಡದೆ ಎಷ್ಟು ದಿವಸ ಸಾಯುತ್ತೋ ಏನೋ ಗೊತ್ತಾಗಲಿಲ್ಲ ನನಗೆ ಅಂಚೆ ಎಚ್ ಎಸ್. ತಮ್ಮಣ್ಣ ಹೆಗ್ಗಡೆ ಎ ಬಿ ವಿಳಾಸಕ್ಕೂ ಸಾಬಳದ ಶೀನಣ್ಣ ಹೆಗ್ಗಡೆ ಎಂಬ ವಿಳಾಸಕ್ಕೂ ಎಷ್ಟು ಕಾಗದಗಳು ಬಂದಾಗ್ಯೂ ನಾವು ಅವನ್ನು ನೋಡಲು ಆಸ್ಪದವಿಲ್ಲ ಪೂರ್ವದಲ್ಲಿ ಅಂದರೆ ೨—೩ ತಿಂಗಳ ಹಿಂದೆ ಪೋಸ್ಟ್ ಮ್ಯಾನನಾದ ರಾಮನೆಂಬುವನು ಎಂಟೆಂಟು ದಿವಸಕ್ಕೆ ಬಂದು, ನಮ್ಮ ಕಾಗದಗಳನ್ನು ತಂದು ಕೊಡುತ್ತಿದ್ದನು, ಮತ್ತು ಎಲ್ಲಾ ಗ್ರಾಮಗಳನ್ನೂ ಸುತ್ತಿ ಒಬ್ಬರಿಗೂ ಕಾಗದ ಗೈವಿಲೆರಾಗದಂತೆ ತಂದುಕೊಟ್ಟು, ರುಜು ಹಾಕಿಸಿಕೊಂಡು ಹೋಗುತ್ತ ಇದ್ದನ. ಈ ರಾಮೈಯನವರಿಗೆ ೧೯೦೪ ನೇ ಇಸವಿ ಏಪ್ರಿಲ್ ತಿಂಗಳಲ್ಲಿ ೯ ಚೆ. ಕಿರಿದಿತ್ತು ಈಗ ಅದು ಇನ್ನೂ ಲಭ್ಯವಾಗಿ ಬಿಟ್ಟಿಲ್ಲ. ಈ ಊರ ಹಳ್ಳಿಗಳಲ್ಲಿ ಕಾಗದಗಳನ್ನು ತಪ್ಪಿಸಿ, ರುಜು ಹಾಕಿಸಿಕೊಂಡು ಹೋಗುವ ಪದ್ಧತಿಯುಂಟು. ನಮಗೆ ವಾರಪತ್ರಿಕೆಗಳಾದ ಮೈಸೂರು ವೃತ್ತಾಂತ ಪತ್ರಿಕೆಯೂ ಮಂಗಳೂರು ಸತ್ಯದೀಪಿಕೆಯೂ ಬರುತ್ತವೆ ಪೋಸ್ಟ್ ಮುಕ್ಕಿಗೆ ನಾವು ರುಜು ಹಾಕದೆ ಎಷ್ಟು ದಿವಸವಾಯಿತೋ ಅದನ್ನಾದರೂ ನಮ್ಮ ಕರುಣಾಳುಗಳಾದ ಪೋಸ್ಟ್ ಇಲಾಖಾದವರು ನೋಡಿ, ಪೋಸ್ಟ್ ಮ್ಯಾನರಿಗೆ ಎಚ್ಚರಿಕೆ ಕೊಟ್ಟಾರೆಂದು ಹಾರೈಸುತ್ತೇನೆ ಇಲ್ಲವಾದರೆ ಮೊದಲಿದ್ದ ಪೋಸ್ಟ್ ಮ್ಯಾನನ್ನು ಇಟ್ಟರೆ ಎಷ್ಟೋ ಉತ್ತಮವಾಗುತ್ತೆ ಸತ್ಯದೀಪಿಕೆ, ವೃತ್ತಾಂತ ಪತ್ರಿಕೆ, ಕಾಗದ, ಕಾರ್ಡುಗಳ ಮುಖವನ್ನು ಕಂಡಿದ್ದ ಬದಲಿ ಪೋಸ್ಟ್ ಮ್ಯಾನನಾದ ರಾಮನಿದ್ದಾಗಲೇ ಸರಿ

ಎಚ್ ಎಸ್. ತಮ್ಮಣ್ಣ ಹೆಗ್ಗಡೆ

ತೀರ್ಥಹಳ್ಳಿ ವಿಚಾರಗಳು.

ಅಯ್ಯಾ,

ನಮ್ಮ ಶ್ರೀಮನ್ ಕೃಷ್ಣರಾಜ ಒಡೆಯರವರ ಅಭಿವೃದ್ಧಿಯೂ ಇವರ ಪ್ರಜಾಹಿತೈಷಿತ್ವವೂ ಸಹ ಬಹು ಪ್ರಸಿದ್ಧಿಯಾಗಿ ಇರತಕ್ಕ ವಿಚಾರ ಬಹು ಸಂತೋಷಕರವಾಗಿದೆ ಆದರೆ ಪ್ರಜೆಗಳ ಅಹವಾಲು ಇವರ ಪಾದಸೇವೆಗೆ ಹೋಗುವುದರಲ್ಲೇ ಮಧ್ಯೆ ಯಾವ ಸ್ಥಳದಲ್ಲೋ ಮುಕ್ತಿಯನ್ನು ಹೊಂದುತ್ತದೆಂದ ಗ್ರಹಿಸಬೇಕಾಗಿದೆ. ಇನ್ನಾದರೂ ಈ ಕೆಳಗಿನ ಸಂಗತಿಗಳನ್ನು ಕನ್ನಡ ಪೇಪರಿಂದ ಉದಾಸೀನವಿಸದ ನೋಡಿ ಸುಖಗಳನ್ನು ಉಂಟುಮಾಡಬೇಕೆಂದು ನಿರೀಕ್ಷಿಸುತ್ತೇವೆ

ನಮ್ಮ ಸರ್ಕಾರದವರು ಈ ಮಲೆನಾಡು ಪ್ರಾಂತ್ಯ ಇರುವ ಬಾಗಾಯತು ಎಂಬ ಅಡಕೆ ಮರಗಳಿಗೆ ಅದರ ಉತ್ಪತ್ತಿ ಮೇಲೆ ಕಂದಾಯವನ್ನು ಮಕರೂರು ಮಾಡಿರ ಪದಶಿಲ್ಲಿ ಸಹ ಬಹಳ ಹುಬಿದಯಾಗಿ ಕಂದಾಯ ದಾಖಲ್ ಮಾಡಿರುತ್ತಾರೆ ಇದೂ ಇಂಪಿಸಹರ ಬಾಗಾಯತಿನಲ್ಲಿ ಬೆಳೆಯುವ ಅಡಕೆ ಮೇಲೆ ಪ್ರತಿ ನೂರಕ್ಕೆ ವೆಂತ ಮನೂಲ್ ಮಾಡುತ್ತಾರೆ ಇದು ದುಬಾರಿಯಾದ ಕಂದಾಯವೆಂತ ಕ್ಕೆಂರು ಹೇಳಿದರೆ ಇದರಿಂದ ನಿನಗೆ ನಷ್ಟವಿಲ್ಲ, ವರ್ತಕರು ತೆಂತ್ತಾರೆಂತ ನಿಜಾರಿನಲ್ಲಿ ಬಂದ ವರ್ತಕರು ಹೇಳುತ್ತಾರೆ ಇದು ಯಾವ ನ್ಯಾಯ? ವರ್ತಕರು ಕೊಡತಕ್ಕ ಸುಂಕ ಮುಂತಾದ್ದೆಲ್ಲಾ ರೈತರ ಮೇಲೆ ಹಾಕಿ. ೧೦ ರೂಪಾಯಿ ಬದಲಿಗೆ ೯ ರೂಪಾಯಿಗೆ ಕೇಳುತ್ತಾರೆ ಈ ರೀತಿ ಕೊಡಬೇಕು ಆದರಿಂದ ಇದೂ ವ್ಯತಿರಿಕ್ತವಾಗಿದೆ ಈ ಸುಂಕದ ದೆಸೆಯಿಂದ ರೈತರಿಗೆ ಇರುವ ನಿರ್ಬಂಧವು ಬಹು ಹೆಚ್ಚಾದದ್ದರಿಂದ ಈಗ ಬೆಳೆದ ಫಸಲನ್ನೆಲ್ಲಾ ತೆತ್ತಿಸಿ ವ್ಯಾಪಾರ ನಡಿಸಲು ಸಹ ಅನೇಕ ಕಾರಣಗಳಿಂದ ತೊಂದರೆಯಾಗಿರುತ್ತೆ ಈಗ ಸರ್ಕಾರದವರು ಸುಂಕಾ ಹೇಳಿ ರೈತರ ಮೇಲೆ ಹೊರುತ್ತಲೇ ಬಹುದಿವಸವಾಯಿತು ಕಾಲದಿಂದ ಮಾಡುತ್ತಲೇ ರೈತರು ಕ್ಷೀಣರಾಗಿ ಬಂದರು ಇದು ನಮ್ಮ ದಾಕ್ಷಾಯ್ನ ನಿಯಮದ ಪರಾಂಬರಿಕೆಗೆ ಬಂದಿರುವೇ ಇಲ್ಲವೋ ತಿಳಿಯದು ವಿಚಾರದಿಂದ ಮುಂದಿನ ಸಾಲಿನಿಂದರೂ ಸುಂಕಾ ತೆಗೆದು, ರೈತರಿಗೆ ಸುಖವನ್ನು ಟುಂಟು ಮಾಡಲಿ ದುಬಾರಿ ಕಂದಾಯ ತೆರಲಾರೆವು

ನಮ್ಮ ತಾಲ್ಲೂಕಿಗೆ ಈಗ ನಾವು ಸಂಪಾದಿಸಿಕೊಂಡಿರುವ ಸಬ್ ರಿಜಿಸ್ಟ್ರಾರವರು ನಮ್ಮಗಳಿಗೆ ತೋರತಕ್ಕ ದಾಕ್ಷಿಣ್ಯವನ್ನು ಎಷ್ಟು ಹೇಳಿದರೂ ಸಾಲದಾಗಿದೆ ಇದಕ್ಕೆ ತಕ್ಕಂತೆ ಹೊಸದಾಗಿ ಗುಮಾಸ್ತರೊಬ್ಬರು ಬಂದಿದಾರೆ ಇವರು ಆಫೀಸಿಗೆ ಸಹ ಸರಿಯಾದ ಕಾಲಕ್ಕೆ ಬನ್ನಿ ವಿವರಿಸಬಾರದೆ? ನಾವು ನಾನೇ ಭೂಮಿಗಳನ್ನು ಮಾರಿಗಳಿಗೆ ಆದರೆ, ಕ್ರಯ, ಮುಂತಾದ್ದು ಮಾಡಿಕೊಟ್ಟು ಬೃಹಿಸಲಿಕ್ಕೆ, ರಿಜಿಸ್ಟ್ರರಿಂತ ಆಫೀಸಿಗೆ ಹೋದರೆ ಸ್ವಲ್ಪವೂ ಸಂಕೋಚವಿಲ್ಲದೆ ನಮ್ಮನ್ನು ನಮ್ಮನ್ನೇ ಗುರಿಪಡಿಸುತ್ತಾರೆ ಬಸವನ ಪುನಿರ್ವಾಹವಿಲ್ಲದೆ ಜೀಲ್ಲಿಕೆಂದರೆ ಬಂಗು ಘಂಟೆಗೆ ಹೊದವರಿಗೆ ಐದುಘಂಟೆಯ ವರಿಗೂ ಕಾದಿರಿಸಿ, ಆನಂತರ ನಾಳೆ ಬಾ ಎಂಬುವದು ಮತ್ತು ಬಂದಿತ ಕೆಲಸದ ದಸ್ತಾವೇಜು ಸರಿಯಿಲ್ಲ, ಬರಕೊಟ್ಟವರು ನಮಗಿಲ್ಲ ಎಂತ ನಗ್ಗರ ಹಂಟೆಗಳನ್ನು ಮಾಡಿ, ಇವರು ದಸ್ತಾವೇಜು ಹಾಕಿಯುವುದು, ಈ ರೀತಿ ಮಾಡುತ್ತಾರೆ ಈ ಸಂಗತಿಯನ್ನು ತಡೆಯಲಾರದೆಯೂ ಮೇಲು ಕೋರ್ಟಿಗೆ ಹೋಗಲಾರದ ಸಂಕಟದಿಂದಲೂ ಅವರು ಹೇಳುವಂತೆ ಮಾಡಿ, ಕೆಲಸ ಮಾಡಿಸಿಕೊಳ್ಳಬೇಕು. ಈ ಆಫೀಸಿನಲ್ಲಿ ನಡಿಯುತಕ್ಕ ಕೆಲಸಗಳನ್ನು ಮೇಲಿನಿಂದ ಪರಾಂಬರಿಸಿದರೆ ಅವರ ಪರಾಂಬರಿಸಿದರೆ ವೇದ್ಯವಾಗುತ್ತೆ.

ನಮ್ಮ ಸರ್ಕಾರದವರು ಬಾಲಸಂತೆಂಬುವನನ್ನು ಪಜಾ ಮಾಡಲು ಹುಕುಂ ಮಾಡಿದಾಗ್ಯೂ ಒಳಗಿರಿರುವ ಇದಕ್ಕೆ ಇಲ್ಲದ ಕಾಡುಗಳನ್ನು ಏರ್ಪಡಿಸಿ ಹಾಗೆ ಅಸ್ಪದ ಉಂಟುಮಾಡಿ, ಸರ್ಕಾರಿ ಹಣ ನಿರರ್ಥಕ ಸಂದಾಯವಾಗದಂತೆ ಮಾಡಿ, ಬಹಳ ಬಾಕಿ ಮುಂತಾದ್ದು ಆಗಿರುತ್ತದೆ. ಇದೇ ರೀತಿ ನಿಂತರೆ ಒಂದೇ ವರ್ಷ ಕೊಡಲಾರದೆ, ಬನರು ಉತ್ತಾರವನ್ನು ಕಳೆದುಕೊಳ್ಳಬೇಕಾಗುತ್ತೆ. ಆದ್ದರಿಂದ ಪ್ರಭುವಾದಯ ದೇವಾದಾಯವೇತ ನಂಬರುವಾತು ನಿಂಗಾಪುದಿದಾಗ್ಯೂ ಅಗ್ರಹಾರ ಕೇಸಂತ ಇಟ್ಟುಕೊಂಡು ಈ ಪಂಚಿ ಮಾಡುವರು. ಆದ್ದರಿಂದ ಇದನ್ನು ಕ್ರಮಪಡಿಸಿ, ಬಾಲ್ ಸಾಹ್ ಪಜಾ ಪಜಾದಿಂದ ನ್ಯಾಯವಾದ ಕಂದಾಯ ಪಡೆಯುವಂತೆ ಹುಕುಂ ಮಾಡುವುದೆಂದು ನಿರೀಕ್ಷಿಸುತ್ತೇವೆ ಇಲ್ಲವೇ ಮುಂದಿನ ಮುದ್ದೇಕಲ್ಲಿನ ಒಳಗೆ ಇರುವ ಸ್ಥಳವನ್ನೆಲ್ಲಾ ನಮಗೆ ಬಿಟ್ಟುಕೊಟ್ಟರೂ ಆದೀತು

ತೀರ್ಥಹಳ್ಳೀ ತಾಲ್ಲೂಕು   ನ್ಯಾಯಧರ್ಮಸತ್ಯವಾದಿ.

ಯೇಸು ಕ್ರಿಸ್ತನ ಪುನರುತ್ಥಾನವು.

ಯೇಸುಸ್ವಾಮಿಯು ಭೂಲೋಕದಲ್ಲಿ ಜೀವಿಸಿದ ಕಾಲವು ಮೂವತ್ಮೂರು ಸಂವತ್ಸರಗಳು. ಅದರಲ್ಲಿ ಆತನು ಬೋಧಕೋದ್ಯೋಗವನ್ನು ಮಾಡಿದ ಕಾಲವು ಮೂರೇ ಮೂರು ಸಂವತ್ಸರಗಳು. ಆತನು ಮಾಡಿಕೊಂಡಿದ್ದ ಶಿಷ್ಯರೂ ಕೆಲವರೇ ಆಗಿದ್ದರು. ಅವರಲ್ಲಿ ಆತನು ಹನ್ನೆರಡೇ ಮಂದಿಯನ್ನು ಆರಿಸಿಕೊಂಡು, ಅವರಿಗೆ ತನ್ನ ಬೋಧನೆಗಳನ್ನು ಹೇಳಿಕೊಟ್ಟನು ಇವರೋ ಬಡವರು, ಮೂಢರು, ಹಳ್ಳಿಗಾಡಿನ ಬೆಸ್ತರು. ಇಷ್ಟೇ ಅಲ್ಲ. ಸ್ವಾಮಿಯು ಬೋಧಕೋದ್ಯೋಗ ಕಾಲದಲ್ಲಿ ಜನರ ಧರ್ಮಾಧಿಕಾರಿಗಳೂ ದೊಡ್ಡ ಮನುಷ್ಯರೂ ಸರ್ಕಾರದವರೂ ನಗರವಾಸಿಗಳೂ ಆತನಿಗೆ ವಿರೋಧಿಗಳಾಗಿಯೇ ಇದ್ದರು. ಹಳ್ಳಿಗಳಲ್ಲಿದ್ದ ಬಡವರು ಮಾತ್ರ ಆತನಲ್ಲಿ ಅನುರಾಗವುಳ್ಳವರಾಗಿದ್ದರು ಕಡೆಗೆ ಆತನ ಹನ್ನೆರಡು ಮಂದಿ ಮುಖ್ಯ ಶಿಷ್ಯರಲ್ಲೇ ಒಬ್ಬನು ಸ್ವಾಮಿಗೆ ಎರಡು ಬಗೆದು, ಶತ್ರುಗಳಿಗೆ ಹಿಡುಕೊಟ್ಟನು, ಆಗ ಉಳಿದ ಹನ್ನೊಂದು ಮಂದಿಯೂ ಆತನನ್ನು ಬಿಟ್ಟು ಓಡಿಹೋದರು ಆ ಶತ್ರುಗಳಾದರೋ ಅವಸರವಸರವಾಗಿ ನ್ಯಾಯವಿಚಾರಣೆ ಮಾಡುವವರಂತೆ ನಟಿಸಿ ಆತನಿಗೆ ಮರಣದಂಡನೆಯನ್ನು ವಿಧಿಸಿ ಮಹಾಘಾತಕಿಯೆಂದು ಬಗೆದು ಕೊಂದುಹಾಕಿದರು.

ಈ ಪ್ರಕಾರ ಮರಣವನ್ನನುಭವಿಸಿದ ಆ ಯೇಸುವನ್ನು ಭೂಲೋಕದ ಪ್ರಜೆಗಳು ಮರೆತುಬಿಟ್ಟಿದ್ದಾರೋ ? ಇಲ್ಲವೇ ಇಲ್ಲ. ಆತನ ಹೆಸರು ಈಗ ಭೂಲೋಕದ ಸಕಲ ಭಾಗಗಳಲ್ಲಿಯೂ ಗೊತ್ತಾಗಿದೆ. ಆತನ ಶಿಷ್ಯವರ್ಗಕ್ಕೆ ಸೇರಿದ ಪ್ರಜೆಗಳೇ ಈಗ ಭೂಲೋಕದ ಜನಸಂಖ್ಯೆಯಲ್ಲಿ ಹೆಚ್ಚಾಗಿದ್ದಾರೆ. ಅವರಷ್ಟು ಪ್ರಸಿದ್ಧರಂತೂ ಬೇರೆ ಯಾವ ಜನವೂ ಇಲ್ಲ ಇವರ ಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತ ಬಂದಿರುವದರಿಂದ ಕೆಲವು ಕಾಲದಲ್ಲೇ ಭೂಲೋಕದ ಮುಖ್ಯ ಮತಗಳೊಳಗೆಲ್ಲಾ ಕ್ರೈಸ್ತಮತವೇ ಉತ್ಕೃಷ್ಟವಾದದ್ದಾಗಿರುವದು ಕಡೆಗೆ ಇದೊಂದು ಮತವೇ ನಿಲ್ಲುವದು ಕ್ರೈಸ್ತಮತದ ವಿಷಯದಲ್ಲಿ ನಡೆದಿರುವ ಇಷ್ಟು ಆಶ್ಚರ್ಯಕರವಾದ ಸಂಗತಿಗಳಿಗೆ ಕಾರಣವೇನು ? ಯೇಸುಕ್ರಿಸ್ತನ ಮರಣಕಾಲದಲ್ಲಿ ಆತನಿಂದ ಒಂದು ಮತವು ಸ್ಥಾಪಿಸಲ್ಪಡುವದೆಂದು ಕನಸಿನಲ್ಲಾದರೂ ಆಲೋಚಿಸುವದಕ್ಕೆ ಅವಕಾಶವಿರಲಿಲ್ಲ. ಆದರೆ ಈಗ ನೋಡಿದರೆ ಆ ಮತವು ವಿಶಾಲವಾದ ವೃಕ್ಷದಂತೆ ಇನ್ನೂ ಹಬ್ಬುತ್ತಲೇ ಇದೆ. ಇದಿಷ್ಟು ಅಪೂರ್ವ ಚರಿತ್ರೆಯನ್ನುಳ್ಳದ್ದಾಗಿರುವದಕ್ಕೆ ಕಾರಣವೇನು ? ಇದಕ್ಕೆ ಒಂದೇ ಒಂದು ಕಾರಣವುಂಟು ಅದೇನಂದರೆ—ಆತನು ಸತ್ತುಹೋಗಿದ್ದರೂ ಪುನಃ ಎದ್ದು ಬಂದನು.

ಯೇಸುಕ್ರಿಸ್ತನು ಪುನರುತ್ಥಾನನಾದನೆಂಬ ಒಂದೇ ಒಂದು ಆಧಾರದ ಮೇಲೆಯೇ ಕ್ರೈಸ್ತಮತವು ನಿಂತಿದೆ. ಕ್ರಿಸ್ತನು ಪುನರುತ್ಥಾನನಾಗಲಿಲ್ಲವೆಂದು ಯಾರಾದರೂ ಸ್ಥಾಪಿಸಬಲ್ಲರಾದರೆ ಕ್ರಿಸ್ತಮತವೆಂಬ ಭಾರೀ ಕಟ್ಟಡವನ್ನೇ ಒಂದೇ ಪೆಟ್ಟಿಗೆ ಕೆಡವಿಹಾಕಬಲ್ಲವರಾಗುವರು. ಯೇಸುಕ್ರಿಸ್ತನು ಸತ್ತುಹೋದವನು ಪುನಃ ಏಳಲೇ ಇಲ್ಲವೆಂದು ನಿಸ್ಸಂದೇಹವಾಗಿ ಸಿದ್ಧಾಂತಪಡಿಸಿದರೆ ಆ ಮರುದಿನವೇ ಕ್ರೈಸ್ತಮತದ ದೇವಾಲಯಗಳನ್ನೂ ಪಾಠಶಾಲೆಗಳನ್ನೂ ವೈದ್ಯಶಾಲೆಗಳನ್ನೂ ಅನಾಥಾಲಯಗಳನ್ನೂ ಮುಚ್ಚಬೇಕಾಗುವದು ಪಾದ್ರಿಗಳು ತಮ್ಮ ತಮ್ಮ ದೇಶಕ್ಕೆ ಹಿಂದಿರುಗಿ ಹೋಗಿಬಿಡುವರು. ಕ್ರೈಸ್ತಮತವೇ ಪುನಃ ತಲೆಯೆತ್ತದಂತೆ ನಿರ್ನಾಮವಾಗುವದು. ಆದರೆ ಯೇಸುಸ್ವಾಮಿಯು ಸತ್ತವರೊಳಗಿಂದ ಎದ್ದುಬಂದದರಿಂದಲೇ ಆತನ ಮತವು ಸ್ಥಾಪಿತವಾಯಿತು, ಅಲ್ಲದೆ ಆತನ ಮತದ ಮುಂದೆ ಇತರ ಎಲ್ಲಾ ಮತಗಳೂ ಸುಳಿಯದೆ ನಿರ್ನಾಮವಾಗಿ ಹೋಗಬೇಕಾದ ಆವಶ್ಯಕವೂ ಉಂಟಾಯಿತು.

ಆತನು ಪುನರುತ್ಥಾನನಾದನೆಂದು ನಂಬುವದಕ್ಕೆ ಆಧಾರವೇನು ?

೧ ಆತನ ಶಿಷ್ಯರು ಆತನನ್ನು ಕಂಡರು ಸುಮಾರು ಆರು ವಾರಗಳ ಸಮಯದಲ್ಲಿ ಆತನನ್ನು ಒಬ್ಬಿಬ್ಬರಲ್ಲ, ಐನೂರು ಮಂದಿಗಿಂತ ಹೆಚ್ಚಾಗಿಯೇ ಆತನನ್ನು ಕಂಡರು ಅವರು ಈ ವಿಷಯವನ್ನು ತಪ್ಪದೆ ಪರಿಷ್ಕಾರವಾಗಿ ಹೇಳುತ್ತಾ ಬಂದರೂ ಯಾರಾಗಲಿ ಅದನ್ನು ಸುಳ್ಳೆಂದು ಸ್ಥಾಪಿಸುವದಕ್ಕೆ ಪ್ರಯತ್ನಿಸಲಿಲ್ಲವೆಂದು ತೋರುತ್ತೆ. ಆ ಶಿಷ್ಯರಾದರೋ ಆತನನ್ನು ಸುಲಭವಾಗಿ ಕಂಡು ಬಳಿಕ ಹೊಸಬರಾದರು. ಅವರು ಯಾವ ಕಷ್ಟದಲ್ಲೂ ಸೋಲದಷ್ಟು ಬಲಿಷ್ಠರಾದರು, ಬಹು ಧೈರ್ಯಶಾಲಿಗಳಾದರು ; ಸ್ವಾಮಿಯು ಪುನರುತ್ಥಾನನಾಗಲಿಲ್ಲವೆಂದು ಹೇಳಿರೆಂಬುದಾಗಿ ಅಧಿಕಾರಿಗಳು ಅಪ್ಪಣೆ ಕೊಟ್ಟಾಗ ಸತ್ತರೂ ಸಾಯುವೆವು, ಹಾಗೆ ಹೇಳುವದಕ್ಕೆ ಮಾತ್ರ ಸಮ್ಮತಿಸಲಾರೆವು ಎಂದು ದೃಢವಾಗಿ ಹೇಳಿಬಿಟ್ಟರು

೨. ಆತನು ಸತ್ತವರೊಳಗಿಂದ ಏಳಲೇ ಇಲ್ಲವೆಂಬುದು ನಿಜವಾಗಿದ್ದರೆ ಶತ್ರುಗಳು ಇದನ್ನು ಸ್ಥಾಪಿಸುವದು ಬಹು ಸುಲಭವಾಗಿತ್ತು. ಶಿಷ್ಯರು ಕ್ರಿಸ್ತನ ಪುನರುತ್ಥಾನದ ವಿಷಯವನ್ನು ಪ್ರಕಟ ಮಾಡದಂತೆ ಅವರ ಬಾಯಿ ಮುಚ್ಚಬೇಕೆಂದು ಶತ್ರುಗಳು ಬಹು ಪ್ರಯಾಸ ಪಟ್ಟರು ಅವರು ಹೇಳುವದು ಸುಳ್ಳೆಂದು ಅವರು ಸ್ಥಾಪಿಸಿದ್ದರೆ ಅವರ ಬಾಯಿಯನ್ನು ನಿಮಿಷ ಮಾತ್ರದಲ್ಲಿ ಮುಚ್ಚಿಬಿಡಬಹುದಾಗಿತ್ತು. ಅವರು ಹಾಗೆ ಯಾಕೆ ಮಾಡಲಿಲ್ಲವೆಂದು ಕೇಳಿದರೆ ಉತ್ತರವು ಸುಲಭವಾಗಿಯೇ ಇದೆ. ನಿಜವಾಗಿ ನಡೆದದ್ದನ್ನು ಸುಳ್ಳೆಂದು ಸ್ಥಾಪಿಸುವದಕ್ಕೆ ಅವರ ಕೈಯಿಂದ ಆಗದೆಹೋಯಿತು.

೩. ಕ್ರಿಸ್ತನು ಪುನರುತ್ಥಾನನಾದನೆಂಬ ಬೋಧನೆಯನ್ನು ಬೋಧಿಸಿದ ಸ್ಥಳಗಳಲ್ಲೆಲ್ಲಾ ದಿನಗಳಲ್ಲಿ ಹೊಸ ಜೀವವು ಉತ್ಪತ್ತಿಯಾಗಿ ಬಹು ಮಟ್ಟಿಗೆ ಐಹಿಕ ಸುಖವೂ ಫಲವಾಗಿ ಬಂದಿದೆ. ಸುಳ್ಳನ್ನು ನಂಬುವದರಿಂದ ಉತ್ತರೋತ್ತರ ಒಳ್ಳೇದಾಗುವದೆಂದು ಹೇಳಲಾಸ್ಪದವಿಲ್ಲ. ಕ್ರೈಸ್ತ ಮತದ ಸ್ಥಿರತ್ವ, ಅಭಿವೃದ್ಧಿ, ಪರೋಪಕಾರ ಎಂಬೀ ಒಳ್ಳೇ ಫಲಗಳನ್ನು ನೋಡುವಲ್ಲಿ ಅದರ ಅಸ್ತಿವಾರವಾದ ಕ್ರಿಸ್ತನ ಪುನರುತ್ಥಾನವೆಂಬ ವಿಷಯವು ನಿಜವೆಂದು ಸಿದ್ಧಾಂತವಾಗುತ್ತದೆ.

ಕ್ರಿಸ್ತನ ಪುನರುತ್ಥಾನದಿಂದ ನಾವು ಗ್ರಹಿಸತಕ್ಕದ್ದೇನು ?

೧ ತಾನು ದಿವ್ಯಪುರುಷನೆಂದು ಯೇಸುಸ್ವಾಮಿಯು ಹೇಳಿದುದು ನಿಜವೆಂದು ನಾವು ತಿಳಿಯತಕ್ಕದ್ದು. ದೃಷ್ಟಾಂತವಾಗಿ ಈ ದೇಶದಲ್ಲಿ ಯಾರಾದರೂ ಒಬ್ಬನು ಊರಿಂದೂರಿಗೆ ಹೋಗುತ್ತಾ, ನಾನು ದೇವರೇ ಆಗಿದ್ದೇನೆಂದು ಹೇಳಿಕೊಳ್ಳುತ್ತಾ, ಸಂಚರಿಸಿದ ಪಕ್ಷದಲ್ಲಿ ಅವನನ್ನು ಕಂಡವರೆಲ್ಲರೂ ಇದಕ್ಕೆ ಸಾಕ್ಷಿಯೇನು ಎಂದು ಕೇಳುವರಲ್ಲವೇ ? ವೆಂಕಟೇಶ ನಗರದಲ್ಲಿ ಒಬ್ಬ ಮನುಷ್ಯನು ಮಾಡಿದಂತೆ ಹಿಡಿಯ ತುಂಬಾ ಮರಳನ್ನು ಮೇಲಕ್ಕೆ ಎಸೆಯಲು, ಅವು ರೂಪಾಯಿಗಳಾಗಿಯೂ ಸವರನುಗಳಾಗಿಯೂ ಕೆಳಕ್ಕೆ ಬೀಳುವದನ್ನು ಜನರು ನೋಡಿ—ನೀನೊಬ್ಬ ತಂತ್ರಗಾರ, ನೀನು ದೇವರಲ್ಲ ಎಂದು ಹೇಳುವರಲ್ಲವೇ ? ಒಂದು ವೇಳೆ ಅವರು ಆ ಮನುಷ್ಯನನ್ನು ಹಿಡಿದು ಕೊಂದು ಹೂಣಿಟ್ಟರೆಂದು ಹೇಳೋಣ ಅವನು ಎರಡು ದಿನಗಳಾದನಂತರ ಜೀವಿತನಾಗಿ ಎದ್ದುಬಂದು, ಶತ್ರುಗಳ ಕೈಯಿಂದ ತನ್ನ ಶರೀರದಲ್ಲುಂಟಾದ ಗಾಯಗಳನ್ನು ತೋರಿಸುತ್ತಾ, ಜನರಿಗೆ ಸದುಪದೇಶಮಾಡುತ್ತಾ ಇರುವನಾದರೆ, ಅವನು ತನ್ನ ವಿಷಯವಾಗಿ—ತಾನು ಮನುಷ್ಯಮಾತ್ರನಲ್ಲ, ತಾನು ದೇವರೇ ಎಂದು ಹೇಳಿಕೊಂಡದ್ದು ನಿಜವೆಂಬದಾಗಿ ಊಹಿಸುವದಕ್ಕೆ ಆಧಾರವಿರುವದಲ್ಲವೇ ? ಈ ದೃಷ್ಟಾಂತವು ಯೇಸುಸ್ವಾಮಿಯ ವಿಷಯದಲ್ಲಿ ಚನ್ನಾಗಿ ಒಪ್ಪುತ್ತದೆ.

೨. ಯೇಸುಕ್ರಿಸ್ತನು ದೇವರಾಗಿದ್ದರೆ ಆತನ ಬೋಧನೆಯೂ ಸತ್ಯವೇ ಆಗಿರಬೇಕು ದೇವರು ಹೇಳುವ ಮಾತನ್ನು ನಾವು ನಂಬಲೇಬೇಕು ಯೇಸುಕ್ರಿಸ್ತನಾದರೋ ಪುನರುತ್ಥಾನನಾದದರಿಂದ ಆತನು ದೇವರೇ ಎಂಬುವದು ನಿಸ್ಸಂದೇಹವಾಗಿ ಸ್ಥಾಪಿತವಾಗುತ್ತದೆ. ನಾವು ದೇವರ ಕಟ್ಟಳೆಗಳನ್ನು ವಿಧೇಯತೆಯಿಂದ ನಡೆಯುವದಕ್ಕೂ ದೇವರ ವಾಗ್ದಾನಗಳನ್ನು ನಂಬುವದಕ್ಕೂ ಬದ್ಧರಾಗಿದ್ದೇವೆ ಆದಕಾರಣ ಯೇಸುಸ್ವಾಮಿಯು ಮೂಲಕವಾಗಿ ದೇವರು ತಿಳಿಯಪಡಿಸಿರುವ ಮಾರ್ಗವನ್ನು ನಂಬಿ, ಆತನ ಮಾತಿಗೆ ವಿಧೇಯರಾಗಿ ನಡೆಯಲುಳ್ಳವರಾಗಿದ್ದೇವೆ

೩. ಆತನು ತನ್ನ ಮರಣದ ವಿಷಯದಲ್ಲಿ ಹೇಳಿರುವದನ್ನೂ ನಾವು ನಂಬುವದಕ್ಕೆ ಬದ್ಧರಾಗಿದ್ದೇವೆ. ಲೋಕದವರೆಲ್ಲರ ಪಾಪದ ನಿಮಿತ್ತವಾಗಿ ಆತನು ದೇವರಿಗೆ ಯಜ್ಞನಾದನೆಂದು ಹೇಳುತ್ತಾನೆ. ದೇವರು ಈ ಯಜ್ಞವನ್ನು ಅಂಗೀಕರಿಸಿದನೆಂಬುವದಕ್ಕೆ ಕ್ರಿಸ್ತನು ಪುನರುತ್ಥಾನನಾದ್ದೇ ಸಾಕ್ಷಿ. ನಾವ ಕ್ರಿಸ್ತನನ್ನು ಪಾಪವಿಮೋಚಕನೆಂದು ನಂಬುವದಕ್ಕೆ ಆತನು ಪುನರುತ್ಥಾನನಾದದ್ದೇ ನಮಗೆ ಆಧಾರವಾಗಿದೆ.

ಆದಕಾರಣ ಯಾವನು ಆತನಲ್ಲಿ ನಂಬಿಕೆಯಿಡದೆ ಧಿಕ್ಕರಿಸುವನೋ ಅವನು ಹೊತ್ತುಕೊಳ್ಳುವ ಉತ್ತರವಾದಿತ್ವವನ್ನು ಎಷ್ಟೆಂದು ಹೇಳೋಣ ! ದೇವಕುಮಾರನೇ ಈ ಲೋಕಕ್ಕೆ ಬಂದು ಪ್ರಕಟಿಸಿದಂಥ ಪುನರುತ್ಥಾನನೆಂಬೀ ಮಹತ್ಕಾರ್ಯವನ್ನೇ ಸಾಕ್ಷಿಯಾಗಿ ಕೊಟ್ಟಿರುವಂಥ ಈ ಮಹಾ ರಕ್ಷಣೆಯನ್ನು ಅಲಕ್ಷ್ಯಮಾಡುವದಾದರೆ ತಪ್ಪಿಸಿಕೊಳ್ಳುವದು ಹ್ಯಾಗೆ ? ಮಹೋನ್ನತನಾದ ಭಗವಂತನೇ ಹೇಳುವ ಮಾತನ್ನು ಧಿಕ್ಕರಿಸುವವರಿಗೆ ಎಷ್ಟು ಕಠಿಣವಾದ ದಂಡನೆಯು ತಾನೇ ಸಾಕಾಗಿರುವದು ; ಆ ಮಹೋನ್ನತವಾದ ಸ್ವಾಮಿಯು ನಮ್ಮ ಮೇಲೆ ಇಟ್ಟ ಮಹಾ ಪ್ರೀತಿಯಿಂದ ಪ್ರೇರಿತನಾಗಿ ನರಾವತಾರ ಮಾಡಿ ರಕ್ಷಣೆಯ ಕಾರ್ಯವನ್ನು ನೆರವೇರಿಸಿದುದಲ್ಲದೆ ಅದಕ್ಕೆ ಯಾರ್ಯಾರು ಭಾಗಿಗಳಾಗಿರುತ್ತದಿಲ್ಲವೋ ಅವರೆಲ್ಲರಲ್ಲಿ ಈಗಲೂ ಕಾರ್ಯವನ್ನೆಸಗುತ್ತಾ, ಸಕಲ ಜನರೂ ತನ್ನಲ್ಲಿ ಪಾಪವಿಮೋಚನೆಯನ್ನು ಹೊಂದತಕ್ಕವರಾಗಲಿ ಎಂದು ತನ್ನಾತ್ಮನ ಮೂಲಕ ಪ್ರೇರಿಸುತ್ತಲಿದ್ದಾನೆ

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದ ಆಡಾಂಸ್ ವೈಲಿ ಮೆಮೋರಿಯಲ್ ಆಸ್ಪತ್ರೆಯನ್ನು ಬಡಾವಣೆ ಮಾಡಿ, ತನ್ನ ಹೆಸರಿನಲ್ಲಿ ಕಟ್ಟಿಸಬೇಕೆಂದು ಫ್ರಾಮ್‌ಜಿ ಪೆಟಿಟ್ ಎಂಬಾತನು ೨೫,೦೦೦ ರೂಪಾಯಿ ದಾನಮಾಡಿದಾರೆ.

✤✤✤✤

ಕ್ವೆಟ್ಟಾ ಪಟ್ಟಣದಲ್ಲಿ ಸಿಪಾಯರು ಮದ್ದು ಗುಂಡು ಉಪಯೋಗಿಸಿ, ಕವಾತು ಮಾಡುತ್ತಿದ್ದಾಗ ಕಳೆದವಾರ ಒಂದು ಗುಂಡು ಆಕಸ್ಮಾತ್ತಾಗಿ ಹಾರಿ, ಒಬ್ಬ ಇಂಗ್ಲಿಷ್ ಸೈನಿಕನನ್ನೂ ಐದು ಜನ ಆಳುಗಳನ್ನೂ ಕೊಂದುಬಿಟ್ಟಿತು.

✤✤✤✤

ಕಾಯಿಲೆಯಾಗಿದ್ದ ಪತ್ನಿಯವರನ್ನು ವಿಲಾಯತಿಗೆ ಸಾಗ ಕಳುಹಿಸುವದಕ್ಕಾಗಿ ಏಡನ್ ಪಟ್ಟಣದ ತನಕ ಪಯಣಮಾಡಿದ್ದ ಬೊಂಬಾಯಿ ಗವರ್ನರ್ ಲಾರ್ಡ್ ಲಾಮಿಂಗ್ಟನ್‌ರವರು ಕಳೆದವಾರ ಅಲ್ಲಿಂದ ಹಿಂತಿರುಗಿ ಬೊಂಬಾಯಿಗೆ ಬಂದಿಳಿದರು

✤✤✤✤

ಸಂಯುಕ್ತ ಪ್ರಧಿನಗಳಿಗೆ ಸೇರಿದ ಹಾಮಿರ್‌ಪುರ ಡಿಸ್ಟ್ರಿಕ್ಟಿನಲ್ಲಿ ಧಾಸನ್ ಎಂಬ ನದಿಯಿಂದ ೬೦ ಮೈಲಿ ದೂರ ಕಾಲುವೆಯನ್ನು ತೆಗೆದು, ಜಮೀನಿಗೆ ನೀರು ಹಾಯಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೪೦॥ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಸಾಮಾನ್ಯವಾಗಿ ಈ ಕಾಲುವೆ ಕೆಳಗೆ ೫೩,೦೦೦ ಎಕರೆ ತರೀ ಫಸಲು ಆಗುವದೆಂತಲೂ ಕ್ಷಾಮಕಾಲಗಳಲ್ಲಿ ೬೩,೦೦೦ ಎಕರೆ ಜಮೀನು ತರೀಫಸಲಿಗೆ ಬಂದೀತೆಂತಲೂ ಅಂದಾಜಾಗಿದೆ.

ಭೂಕಂಪದ ದೆಸೆಯಿಂದ ಉತ್ತರ ದೇಶದಲ್ಲಿ ಉಂಟಾಗಿರುವ ಅನಾಹುತವನ್ನು ನೋಡಿ, ಲೆಫ್ಟಿನೆಂಟ್ ಗವರ್ನರವರು ಕಷ್ಟನಿವಾರಣೆಗಾಗಿ ಒಂದು ಫಂಡನ್ನು ಏರ್ಪಡಿಸಿರುತ್ತಾರಷ್ಟೆ. ಈ ಫಂಡಿಗೆ ಇದುವರೆಗೆ ಒಂದು ಲಕ್ಷ ರೂಪಾಯಿ ವಸೂಲಾಗಿರುವುದು.

✤✤✤✤

ಹೈದರಾಬಾದಿನ ಮಂತ್ರಿಶ್ರೇಷ್ಠರಾದ ಘನವನ್ನೈದಿದ ಸರ್ ಕೃಷ್ಣಪ್ರಸಾದರವರು ಆ ಸಂಸ್ಥಾನದ ರೆಸಿಡೆಂಟ್ ಮ॥ ಬೇಲೀಯವರಿಗಾಗಿ ದೊಡ್ಡ ಔತಣ ಮಾಡಿದರು ಆ ದಿನ ಸುಮಾರು ೧೫೦ ಮಂದಿ ಸರ್ದಾರರು ಸೇರಿ ಭೋಜನಮಾಡಿ, ಮಂತ್ರಿಗಳನ್ನು ಹೊಗಳಿದರು.

✤✤✤✤

ಮದರಾಸಿನಲ್ಲಿರುವ ಒಂದು ಕಂಪನಿಯವರು ಬನ್ನೂರ ಎಂಬ ರಾಜನಿಗೆ ಕೆಲವು ಸಾಮಾನುಗಳನ್ನು ಕಳುಹಿಸಿಕೊಟ್ಟು, ಅದಕ್ಕೆ ರಾಜರಿಂದ ಪ್ರಾಮಿಸರಿ ಪತ್ರ ಬರೆಸಿಕೊಂಡಿದ್ದರು ಈಗ ಆ ಕಂಪನಿಯವರು ಮದರಾಸ್ ಹೈಕೋರ್ಟಿನಲ್ಲಿ ಆ ರಾಜನ ಮೇಲೆ ದಾವಾ ದಾಖಲ್ ಮಾಡಿದಾರೆ.

✤✤✤✤

ಕಪೂರ್ಥಲದ ಮಹಾರಾಜರವರು ಸಂಸಾರ ಸಹಿತ ಈಗ ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿರುತ್ತಾರೆ. ಇವರಿಗೆ ಫ್ರೆಂಚರನ್ನು ಕಂಡರೆ ಬಹಳ ಪ್ರೀತಿ ಆ ಭಾಷೆಯನ್ನು ಬಹಳ ಚನ್ನಾಗಿ ಕಲಿತಿರುವರು ತಮ್ಮ ಮಕ್ಕಳನ್ನು ಸಾಕಿ ಬೆಳೆಸುವುದಕ್ಕೆ ಫ್ರೆಂಚ್ ಸ್ತ್ರೀಯನ್ನೇ ನೇಮಿಸಿಕೊಂಡಿದಾರೆ

✤✤✤✤

ಅಯೋಧ್ಯಾನಗರದಲ್ಲಿ ಈ ವರುಷ ರಾಮನವಮಿ ಜಾತ್ರೆಯು ಬಹಳ ಚನ್ನಾಗಿ ನಡೆಯಿತು ಎರಡು ಲಕ್ಷ ಜನ ಯಾತ್ರಿಕರುಗಳು ಈ ಸಲ ಸೇರಿದ್ದರು ಯಾತ್ರಿಕರುಗಳಿಂದ ಸರ್ಕಾರದವರು ತೆರಿಗೆಯನ್ನು ಈ ಸಲವೇ ಪ್ರಾರಂಭಿಸಿ, ವಸೂಲ್ಮಾಡಿದರು ಸರ್ಕಾರದವರು ಪ್ರಜೆಗಳ ಆರೋಗ್ಯ ವಿಚಾರವನ್ನು ಬಹಳ ಚನ್ನಾಗಿ ನೋಡಿಕೊಂಡದ್ದರಿಂದ ಅಂಟು ಜಾಡ್ಯಗಳ್ಯಾವೂ ಹುಟ್ಟಲಿಲ್ಲ.

✤✤✤✤

ರಾವಲ್ ಪಿಂಡಿಯ ಪಟ್ಟಣದಿಂದ ಒಬ್ಬ ಬಾತ್ಮೀದಾರನು ಬರೆಯುವದೇನೆಂದರೆ ಕೆಲವು ದಿನಗಳಿಗೆ ಮುಂಚೆ ನಾನು ಭೂಕಂಪ ಉಂಟಾಗುವದೆಂದು ತಿಳಿಸಿದ್ದೆನು ನಾನು ತಿಳಿಸಿದ್ದ ಮಾದರಿ ಭೂಕಂಪವಾಗಿದೆ ಈಗಲೂ ಇನ್ನು ಕೆಲವು ದಿನಗಳೊಳಗಾಗಿ (ಮೇ ೧೧ ರಿಂದ ೧೪ ರೊಳಗೆ) ಹಿಮಾಲಯ ಪರ್ವತದ ವಾಯವ್ಯ ಭಾಗದಲ್ಲಿ ಮತ್ತೆ ಭೂಕಂಪಗಳೂ ಭಯಂಕರವಾದ ಮಳೆಯೂ ಪ್ರಾಪ್ತವಾಗುವವು ಎಂಬುದೇ

✤✤✤✤

ಮದರಾಸ್ ಪಟ್ಟಣದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಎಂ ಏ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವ ಮ॥ ಟಿ ಸಂಜೀವರಾವ್, ಬಿ ಎ , ಎಂಬಾತನಿಗೆ ಇಂಡಿಯಾ ಗವರ್ನಮೆಂಟಿನವರು ವಿಲಾಯತಿಗೆ ಹೋಗಿ ಓದಿಕೊಂಡು ಬರುವುದಕ್ಕೆ ವೇತನವನ್ನು ದಯಪಾಲಿಸಿದಾರೆ ಈತನಿಗೆ ಇನ್ನೂ ೨೦ ವರುಷಗಳ , ತುಂಬಾ ಚುರುಕುಬುದ್ಧಿಯುಳ್ಳವನೆಂದು ತಿಳಿದು ಬಂದಿದೆ ಈತನು ಇಷ್ಟರಲ್ಲೇ ವಿಲಾಯತಿಗೆ ಪ್ರಯಾಣ ಮಾಡುವವನಾಗಿದಾನೆ

✤✤✤✤

ಜರ್ಮನ್ ಸೈನಿಕರಲ್ಲಿ ಮಡಿದುಹೋದವರ ಪತ್ನಿಪುತ್ರಾದಿಗಳಿಗೆ ಜೀವನ ನಡಿಸುವುದಕ್ಕೆ ಧರ್ಮದ ಫಂಡನ್ನು ಕೂಡಿಸುತ್ತಿದಾರೆ ಬೊಂಬಾಯಿ ಪಟ್ಟಣದಲ್ಲಿ ಈ ಫಂಡಿನ ಶಾಖೆಯೊಂದು ಸ್ಥಾಪಿಸಲ್ಪಟ್ಟಿರುವುದು. ಈ ಫಂಡಿಗೆ ಹಿಂದುಸ್ತಾನದ ಸಾಹುಕಾರರೂ ದೊಡ್ಡ ಮನುಷ್ಯರೂ ಸೇರಿ ಇದುವರೆಗೆ ೯೩,೬೯೫ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿದಾರೆ. ಇನ್ನೂ ಹಣ ಕೂಡುತ್ತಲೇ ಇದೆ ಎಂದು ತಿಳಿಸಲು ಸಂತೋಷಪಡುವೆವು.

✤✤✤✤

ಕಲ್ಕತ್ತೆಯ ಪ್ರಜೆಗಳು ಅಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ, ವೈಸ್‌ರಾಯಿ ಲಾರ್ಡ್ ಕರ್ಜನರವರ ಮೇಲೆ ಆಕ್ಷೇಪಣೆ ಮಾಡಿ, ತೀರ್ಮಾನಮಾಡಿಕೊಂಡ ಸಂಗತಿಯನ್ನು ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೆ ತಿಳಿಸಬೇಕೆಂದು ಪತ್ರಿಕೆ ಬರೆದು ಲಾರ್ಡ್ ಕರ್ಜನರವರಿಗೆ ಕಳುಹಿಸಿ ಕೊಟ್ಟರು. ವೈಸ್‌ರಾಯಿಯವರು ಈ ಕಾಗದವನ್ನು ವಿಲಾಯತಿಗೆ ಕಳುಹಿಸುವುದಕ್ಕಾಗುವದಿಲ್ಲವೆಂದು ಅಪ್ಪಣೆ ಕೊಟ್ಟು ವಾಪಸು ಮಾಡಿದಾರೆ

✤✤✤✤

ಪಂಜಾಬಿಗೆ ಸೇರಿದ ಲೂಧಿಯಾನಾ ಡಿಸ್ಟ್ರಿಕ್ಟಿನಲ್ಲಿ ಕಾಡಿಯ ವ ನೀರನ್ನು ನಾಲೆಗಳಲ್ಲಿ ತರಿಸುವುದಕ್ಕೆ ೫,೦೮,೦೦೦ ರೂಪಾಯಿ ಸ್ಯಾಂಕ್ಷನ್ ಆಗಿದೆ. ಈ ಪೈಕಿ ಮೂರು ಲಕ್ಷ ದ್ರವ್ಯವನ್ನು ಸರ್ಕಾರದವರು ಸಾಲ ಕೊಡುವರು. ಜಮೀನ್ ಬಿಕರಿಯಿಂದ ೩೦—೪೦ ಸಾವಿರ ರೂಪಾಯಿ ಹುಟ್ಟುವಳಿ ಆಗುತ್ತದೆ ಈಗ ೫೬,೦೦೦ ರೂಪಾಯಿ ಚಂದಾ ಕೂಡಿಸಿರುತ್ತಾರೆ ಇನ್ನು ಬಾಕಿ ಸ್ವಲ್ಪ ಹಣವನ್ನು ಇಷ್ಟರಲ್ಲೇ ವಸೂಲ್ಮಾಡುವರೆಂದು ಕಾಣುವುದು.

✤✤✤✤

ಕೃಷ್ಣಾನದಿಯು ಸಮುದ್ರಕ್ಕೆ ಸೇರುವ ಕಡೆಯಲ್ಲಿ ದಿವಿ ಎಂಬ ದ್ವೀಪವಿದೆ ಈ ದ್ವೀಪದೊಳಕ್ಕೆ ನೀರು ಹಾಯಿಸಿ ತರೀ ಫಸಲು ಮಾಡಬೇಕೆಂದು ಇಂಡಿಯಾ ಸ್ಟೇಟು ಸೆಕ್ರೆಟರಿಯವರು ೧೪,೯೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಈ ನೀರಿನಿಂದ ೫೦,೦೦೦ ಎಕರೆ ಜಮೀನು ತರೀ ಆಗುವುದು. ವರುಷಕ್ಕೆ ೧,೩೬,೬೭೪ ರೂಪಾಯಿ ಆದಾಯ ಉತ್ಪತ್ತಿಯಾಗುತ್ತೆ. ಮೂಲಧನಕ್ಕೆ ಶೇಕಡ ೯॥ ರೂಪಾಯಿಯಂತೆ ಬಡ್ಡಿ ಬರುವದೆಂದು ಅಂದಾಜು ಹಾಕಿದಾರೆ.

ಬೊಂಬಾಯಿ ಪಟ್ಟಣದ ಮುಖ್ಯ ಮುಖ್ಯರಾದ ಸ್ತ್ರೀಯರು ಸೇರಿ ಅಲ್ಲಿನ ಬಿಗಾರ್ ಕ್ಯಾಸಲ್ ಎಂಬ ಬಂಗಲೆಯಲ್ಲಿ ಸಭೆ ಸೇರಿ, ಪ್ರಿನ್ಸ್ ಆಫ್ ವೇಲ್ಸ್ ರವರ ಪತ್ನೀರವರು ದಯಮಾಡಿ ಬಂದಾಗ ಆಕೆಯವರನ್ನು ಯೋಗ್ಯವಾದ ರೀತಿಯಲ್ಲಿ ಎದುರುಗೊಂಡು ಸ್ತ್ರೀಯರೆಲ್ಲಾ ಸತ್ಕಾರಮಾಡಬೇಕೆಂದು ಗೊತ್ತುಮಾಡಿದರು.

❖❖❖❖

ಬೊಂಬಾಯಿನ ಹತ್ತಿರ ಘೋರಿಯಾ ಪಟ್ಟಣದಲ್ಲಿ ಒಂದು ಕಾರ್ಖಾನೆಯೊಳಗೆ ಅದರ ಯಜಮಾನನು ಯಂತ್ರಗಳ ಸುತ್ತ ಬೇಲಿ ಹಾಕಲಿಲ್ಲವೆಂದು ಹೇಳಿ ಸರ್ಕಾರದವರು ಆ ಮ್ಯಾನೇಜರ ಮೇಲೆ ದಾವಾ ತಂದರು. ಕೆಳಕೋರ್ಟಿನಲ್ಲಿ ಆ ಮ್ಯಾನೆಜರಿಗೆ ೩೦ ರೂಪಾಯಿ ಜುಲ್ಮಾನೆ ಆಯಿತು ಅತನು ಬೊಂಬಾಯಿ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು ಜಡ್ಜಿಗಳು ನೋಡಿದ್ದ ದಿಯ ಸಂಗತಿಗಳನ್ನೆಲ್ಲಾ ತಿಳಿದುಕೊಂಡು, ಕೆಳಕೋರ್ಟ ನವರು ಹಾಕಿದ್ದ ಜುಲ್ಮಾನೆಯನ್ನು ವಜಾಮಾಡಿದರು.

❖❖❖❖

ಜಿಲ್ಲೆಗೆ ಸೇರಿದ ಚಿತ್ತೂರಿನಲ್ಲಿ ಒಬ್ಬ ವರ್ತಕನು ಸಂತೆಗೆ ಹೋಗಿ ತನ್ನ ದನಗಳನ್ನು ಮಾರಿದಮೇಲೆ, ಹಣ ಸಹಿತ ಹಿಂತಿರುಗಿ ಬರುತ್ತಿದ್ದನು ದಾರಿಯಲ್ಲಿ ಮೂವರು ಮಾಪಿಳ್ಳೆಗಳು ಅವನನ್ನು ಹಿಡಿದು, ಅವನ ಬಳಿ ಇದ್ದ ಹಣವನ್ನೆಲ್ಲಾ ಕಳಕೊಂಡು, ಹದಿ ಯಲ್ಲಿ ಮರಳು ಬಗೆದು, ಆ ವರ್ತಕನನ್ನು ಕತ್ತಿನ ವರೆಗೆ ಮರಳು ಮುಚ್ಚಿ, ತಲೆಯನ್ನು ಮಾತ್ರ ಬಿಟ್ಟು ಹೊರಟುಹೋದರು. ಒಂದು ರಾತ್ರಿಯೆಲ್ಲಾ ಆ ವರ್ತಕನು ಈ ಸ್ಥಿತಿಯಲ್ಲಿದ್ದನು. ಮರುದಿನ ಬೆಳಗ್ಗೆ ದಾರಿಹೋಕರಾರೋ ಅವನನ್ನು ಕಂಡು, ಮರಳು ಬಗೆದು ಮೇಲಕ್ಕೆ ಎತ್ತಿದರೆಂದು ಪ್ರಕಟವಾಗಿದೆ.

❖❖❖❖

ಬೊಂಬಾಯಿ ಪಟ್ಟಣದ ಹೆಲ್ತ್ ಆಫೀಸರಾದ ಡಾಕ್ಟರ್ ಟರ್ನರ್ ರವರು ಪ್ಲೇಗನ್ನು ನಿಲ್ಲಿಸುವುದಕ್ಕೋಸ್ಕರ ಟೀಕಾ ಹಾಕಿಸಿ ಕೊಳ್ಳುವುದಕ್ಕೋಸ್ಕರ ಗವರ್ನಮೆಂಟಿಗೆ ಒಂದು ಉಪಾಯವನ್ನು ತಿಳಿಸಿದರು. ಅದೇನೆಂದರೆ—ಪ್ಲೇಗ್ ಟೀಕಾ ಹಾಕಿಸಿಕೊಂಡವರಲ್ಲಿ ಒಂದು ವರುಷದೊಳಗಾಗಿ ಯಾರಾದರೂ ಪ್ಲೇಗ್ ತಗಲಿ ಮೃತಪಟ್ಟರೆ ಅಂಥವರ ಸಂತತಿ ಮಕ್ಕಳಿಗೆ ತಲಾ ೧೦೦ ರೂಪಾಯಿ ಯಂತೆ ಸರ್ಕಾರದಿಂದ ಪ್ರತಿಫಲ ಕೊಡಬೇಕು ಎಂಬುದೇ. ಗವರ್ನಮೆಂಟಿನವರು ಈ ಸಲಹೆಯಂತೆ ಸರ್ಕಾರಿ ಹಣವನ್ನು ಖರ್ಚು ಮಾಡಲಾಗುವುದಿಲ್ಲವೆಂದು ಹುಕುಂ ಕೊಟ್ಟಿದ್ದಾರೆ.

❖❖❖❖

ರತ್ನಗಿರಿ ಡಿಸ್ಟ್ರಿಕ್ಟಿಗೆ ಸೇರಿದ ಮರಾಠೀ ಪ್ರಜೆಗಳು ಬೊಂಬಾಯಿನಲ್ಲಿ ಕಳೆದವಾರ ಒಂದು ದೊಡ್ಡ ಸಭೆಯನ್ನು ನಡಿಸಿ, ಗವರ್ನಮೆಂಟಿನವರು ಪ್ರಜಾವಾತ್ಸಲ್ಯದಿಂದ ಉಪ್ಪಿನ ಮೇಲಣ ತೆರಿಗೆಯನ್ನು ಕಡಿಮೆ ಮಾಡಿದ್ದಕ್ಕೆ ಅವರನ್ನು ಬಹಳವಾಗಿ ವಂದಿಸಿದ್ದದೆ, ಮನುಷ್ಯನ ದೇಹಕ್ಕೆ ಮುಖ್ಯ ಆಧಾರವಾಗಿರುವ ಈ ಉಪ್ಪಿನ ಮೇಲೆ ಸರ್ಕಾರದವರು ಹಾಕಿರುವ ಕಂದಾಯವನ್ನು ಇನ್ನೂ ಕಡಿಮೆ ಮಾಡಬೇಕೆಂತಲೂ ಗ್ರಾಮಾಂತರಗಳಲ್ಲಿ ಸಮಸ್ತ ಪ್ರಜೆಗಳ ಮಕ್ಕಳಿಗೂ ಫೀಜಿಲ್ಲದೆ ಸ್ಕೂಲಿಟ್ಟು ವಿದ್ಯಾದಾನ ಮಾಡಬೇಕೆಂತಲೂ ಗವರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂದು ಗೊತ್ತುಮಾಡಿದರು

❖❖❖❖

ಕೂಲಿಮಾಡುವ ಜನರು ಹಿಂದೂಸ್ಥಾನದಿಂದ ಲಂಕಾ (ಸಿಲೋನ್) ದ್ವೀಪದ ಕಾಫಿ ತೋಟಗಳಿಗೆ ಹೋಗುವುದು ಪದ್ಧತಿ. ವರುಷ ಬಹುಬೇಗ ಅನೇಕರು ಅಲ್ಲಿಗೆ ಹೊರಟು ಹೋಗುತ್ತಾರೆ. ಪ್ರತಿ ನಿತ್ಯವೂ ಮುನ್ನೂರು ನಾನೂರು ಜನರ ಪ್ರಕಾರ ಹಡಗುಗಳಲ್ಲಿ ಹೋಗಿ ಇಳಿಯುತ್ತಿರುವರು ಕಳೆದ ಒಂದು ತಿಂಗಳಲ್ಲಿ ೨,೦೦೦ ಜನರು ಹೀಗೆ ಹಿಂದೂಸ್ಥಾನದಿಂದ ಬಂದಿರುತ್ತಾರೆಂದೂ ಇಷ್ಟು ಹೆಚ್ಚಾಗಿ ಬಂದಿರುವುದು ದೊಡ್ಡ ಕ್ಷಾಮಕಾಲದಿಂದೀಚೆಗೆ ಇಲ್ಲವೇ ಇಲ್ಲವೆಂದೂ ಅಲ್ಲಿನ ಸರ್ಕಾರದವರು ಪ್ರಕಟಿಸಿದ್ದಾರೆ. ಇದರಿಂದ ದಕ್ಷಿಣ ದೇಶದಲ್ಲಿ ಜನರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಹೋಗಿದೆ ಎಂದು ಗೊತ್ತಾಗುವುದು.

❖❖❖❖

ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಆಫೀಸ್ ಕಟ್ಟಡದಲ್ಲಿ ಅಲ್ಲಿನ ದೊಡ್ಡಮನುಷ್ಯರೆಲ್ಲಾ ಸಭೆ ಸೇರಿದ್ದರು. ಚೀಫ್ ಜಡ್ಜರಾದ ಸರ್ ಲಾರೆನ್ಸ್ ಜಂಕಿನ್ಸ್ ಯವರು ಸಭಾ ನಾಯಕರಾಗಿದ್ದರು. ಪ್ರಿನ್ಸ್ ಆಫ್ ವೇಲ್ಸ್ ರವರು ಬೊಂಬಾಯಿನಲ್ಲಿ ಬಂದು ಇಳಿದಾಗ ಆ ಪಟ್ಟಣದಲ್ಲಿ ಒಂದು ತಮಾಷೆ ಬಂಗಲೆಯ ಕಟ್ಟಡಕ್ಕೆ ಅವರ ಕೈಯಿಂದ ಅಸ್ತಿಭಾರ ಹಾಕಿಸಿ ಕಟ್ಟಬೇಕೆಂದು ಗೊತ್ತುಮಾಡಿದಾರೆ ಅಂಥಾ ಮಹಾ ದೊಡ್ಡ ಪಟ್ಟಣವೆಂದು ಹೊಗಳಿಸಿಕೊಳ್ಳುವುದಾದರೂ ಬೊಂಬಾಯಿನಲ್ಲಿ ಒಂದು ಸರ್ವವಸ್ತು ಪ್ರದರ್ಶನಾಲಯವು ಇರುವುದಿಲ್ಲ. ಈ ಕೊರತೆಯನ್ನು ನೀಗಲಾಡಿಸಬೇಕೆಂದು ಮೆಂಬರುಗಳು ತೀರ್ಮಾನ ಮಾಡಿರುವುದು ತುಂಬಾ ಶ್ಲಾಘ್ಯಾರ್ಹವಾಗಿದೆ

❖❖❖❖

ಕಲ್ಕತ್ತಾ ಪಟ್ಟಣದ ವಿದ್ಯಾನಿಲಯದಲ್ಲಿ ವೈಸ್‌ರಾಯಿ ಲಾರ್ಡ್ ಕರ್ಜನ್ ರವರು ಉಪನ್ಯಾಸ ಮಾಡುತ್ತಾ, ಈ ರಾಷ್ಟ್ರದ ಜನರಿಗೆ "ಸತ್ಯವಂತರಾಗಿರಬೇಕು, ಧರ್ಮಿಷ್ಠರಾಗಿರಬೇಕು, ಸುಳ್ಳು ಹೇಳಬಾರದು" ಎಂಬೀ ವಿಷಯಗಳನ್ನು ಕುರಿತು ಬುದ್ಧಿವಾದ ಹೇಳಿದರಷ್ಟೆ. ಪಂಜಾಬಿನ ತಹಸಿಲ್ದಾರ್ ಗಂಗಾ ರಾಂ ಎಂಬೊಬ್ಬನು ಪತ್ರಿಕೆಯ ಚೌಕಗಳಲ್ಲಿ ಕೆಲವು ದಿನಗಳಿಂದಲೂ ಈ ವಿಷಯವನ್ನು ಕುರಿತು ಜನರಿಗೆ ಉಪನ್ಯಾಸ ಮಾಡುತ್ತಾ, ವೈಸ್‌ರಾಯಿಯನ್ನು ಬಯ್ಯುತ್ತಾ ಇದ್ದನು ಸಾವಿರಾರು ಜನರು ಇವನ ಸುತ್ತಲೂ ನಿಂತು ದೊಂಬಿ ಮಾಡಿ, ಪ್ರಜಾ ನೆಮ್ಮದಿಗೆ ಭಂಗವನ್ನುಂಟು ಮಾಡುತ್ತಿದ್ದರು ಸರ್ಕಾರದವರು ಅವನಿಗೆ ಹಾಗೆ ಉಪನ್ಯಾಸ ಮಾಡದಂತೆ ಆಜ್ಞೆಮಾಡಿ ಒಡಿಸಿರುತ್ತಾರೆ.

❖❖❖❖

ತಿರುಚನಾಪಲ್ಲಿಯಿಂದ ೧೦ ಮೈಲಿ ದೂರದಲ್ಲಿ ಸಮಯಪುರಂ ಎಂಬ ಗ್ರಾಮದೊಳಗೆ ಕಳೆದವಾರ ಒಂದು ದೊಡ್ಡ ಜಾತ್ರೆ ನಡೆಯಿತು. ಈ ಸಲ ಅಲ್ಲಿಗೆ ಸುಮಾರು ೩,೦೦,೦೦೦ ಜನರು ನಾನಾ ಕಡೆಗಳಿಂದ ಹೋಗಿದ್ದರು. ಅಲ್ಲಿರುವ ಮಾರಮ್ಮನೇ ಮುಖ್ಯ ದೇವತೆ. ಈ ದೇವತೆಗೆ ಭಕ್ತಾದಿಗಳೆಲ್ಲಾ ಬಹಳ ಭಕ್ತಿಯಿಂದ ಕೂಡಿ ಕಪ್ಪಕಾಣಿಕೆಗಳನ್ನು ತಂದೊಪ್ಪಿಸುತ್ತಾರೆ. ಅನೇಕಾನೇಕ ಕುರಿ, ಕೋಳಿ, ಆಡು, ಹಸು, ಕೋಣ ಮೊದಲಾದ ಪ್ರಾಣಿಗಳನ್ನು ತಂದು ಬಲಿಕೊಡುವರು. ಈ ದೇವಸ್ಥಾನದ ಕಾರುಬಾರಿಗಳನ್ನು ಶ್ರೀರಂಗದ ದೇವಸ್ಥಾನದ ಮ್ಯಾನೇಜರುಗಳೇ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ. ಇಲ್ಲಿ ಪ್ರತಿ ವರುಷವೂ ಭಕ್ತಾದಿಗಳಿಂದ ೧೦ ೦೦೦ ರೂಪಾಯಿಗೆ ಕಡಿಮೆ ಇಲ್ಲದೆ ದೇವಸ್ಥಾನಕ್ಕೆ ಕಪ್ಪಕಾಣಿಕೆಗಳ ರೂಪದಲ್ಲಿ ಉತ್ಪತ್ತಿಯಾಗುತ್ತಿದೆ.

❖❖❖❖

ಹಿಂದೂಸ್ಥಾನದ ಕಾಲಸ್ಥಿತಿಯ ರಿಪೋರ್ಟು ಪ್ರಕಟವಾಗಿದೆ. ಅದರಿಂದ ತಿಳಿದುಬರುವ ಮುಖ್ಯ ಸಂಗತಿಗಳು ಏನೆಂದರೆ—ಪಂಜಾಬ್ ಆಧಿಪತ್ಯದಲ್ಲಿ ಮೋಡಹಾಕಿಕೊಂಡು ಶೀತ ಹವಾ ಪ್ರಾಪ್ತವಾದುದರಿಂದ ಬೆಳೆಗಳೆಲ್ಲಾ ತುಂಬಾ ನಷ್ಟಹೊಂದಿರುತ್ತವೆ. ಮದರಾಸ್ ಆಧಿಪತ್ಯದಲ್ಲಿ ಬಹಳ ವಿಸ್ತಾರವಾದ ಪ್ರದೇಶದಲ್ಲಿ ನೋರಾಯುಗಳಿಗೆ ಮೇವಿಗೆ ಅಭಾವವಾಗಿದೆ. ಗೋದಾವರಿ, ಕರ್ನೂಲು, ನೆಲ್ಲೂರು, ಉತ್ತರ ಮತ್ತು ದಕ್ಷಿಣ ಆರ್ಕಾಟು, ಸೇಲಂ, ತಂಜಾವೂರು—ಈ ಡಿಸ್ಟ್ರಿಕ್ಟುಗಳಲ್ಲಿ ದನಗಳು ಮೇವಿಗೂ ನೀರಿಗೂ ಬಹಳ ಕಷ್ಟಪಡುತ್ತಿರುವವು. ಬೊಂಬಾಯಿ ಆಧಿಪತ್ಯದಲ್ಲಾದರೋ ಅಹಮದಾಬಾದ್, ಖೈರಾ, ಪಂಚಮಹಲ್ ಡಿಸ್ಟ್ರಿಕ್ಟುಗಳಲ್ಲಿ ಆಗಲೇ ಎರಡು ಸಾವಿರ ಜನರು ಸರ್ಕಾರದವರ ಪೋಷಣೆಯಲ್ಲಿದ್ದುಕೊಂಡು, ರಿಲೀಫ್ ಕಾಮಗಾರಿ ಮಾಡುತ್ತಿದ್ದಾರೆ. ಅಹಮದಾಬಾದ್, ಪಂಚ್ ಮಹಲ್, ಖಾಂದೇಶ್, ನಾಸಿಕ್, ಸಾತಾರೆ, ಕರ್ನಾಟಕ, ಬರೋಡಾ ಮೊದಲಾದ ಡಿಸ್ಟ್ರಿಕ್ಟುಗಳಲ್ಲಿ ಗೋಕಾಯಿಗಳಿಗೂ ಪ್ರಜೆಗಳಿಗೂ ನೀರಿನ ಕ್ಷಾಮ ಪ್ರಾಪ್ತವಾಗುವಂತಿದೆ

❖❖❖❖

ಅಜ್ಮೀರ್ ಕಾಲೇಜಿನ ಬಾಬೂ ಸ್ವರೂಪಚಂದನೆಂಬಾತನು ಬರೆಯುವುದೇನೆಂದರೆ—ಅಜ್ಮೀರಿಗೆ ೩೦ ಮೈಲಿ ದೂರದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಹಿಂದುವು ಮಾರ್ಚಿ ೧೯ ರಲ್ಲಿ ಸತ್ತುಹೋದನು. ಮನೆಯವರೆಲ್ಲಾ ಗೋಳಾಡುತ್ತಿರುವಲ್ಲಿ ಮೃತನ ಹೆಂಡತಿಯು ಒಳಕ್ಕೆ ಹೋಗಿ ಅಡಿಗೆ ಮಾಡಿದಳು. ಆಗ ಆದ ಮೇಲೆ ಒಂದು ತಟ್ಟೆಯಲ್ಲಿ ಅನ್ನವನ್ನು ಕಲಸಿ ತಂದು, ಮೃತನ ಬಳಿಯಲ್ಲಿ ಕುಳಿತು—ಪತಿಯೇ ನಾನು ಮಾಡಿದ ಅಡಿಗೆಯನ್ನು ಊಟಮಾಡುವುದಿಲ್ಲವೇ ಎಂದು ಕೂಗಿ ಎಬ್ಬಿಸಿದಳು. ಕೂಡಲೇ ಮೃತನು ನಿದ್ರೆಯಿಂದ ಎದ್ದಂತೆ ಎದ್ದು ಕೂತುಕೊಂಡು, ತನ್ನ ಹೆಂಡತಿಯ ಕೈಯಿಂದ ಒಂದೆರಡು ತುತ್ತು ಅನ್ನವನ್ನು ಬಾಯಿಗೆ ಹಾಕಿಸಿಕೊಂಡು ನುಂಗಿ, ಯಥಾಪ್ರಕಾರ ಬಿದ್ದು ಸತ್ತುಹೋದನು. ಇದನ್ನೆಲ್ಲಾ ಸುತ್ತಲೂ ನಿಂತು ನೋಡುತ್ತಿದ್ದವರು ಪರಮಾಶ್ಚರ್ಯಪಟ್ಟರು. ತರುವಾಯ ಆ ಹೆಂಡತಿಯು ಹೋಗಿ ಸ್ನಾನ ಮಾಡಿ, ಸಮೀಪದಲ್ಲಿರುವ ಗುಡಿಯಲ್ಲಿ ಪೂಜೆ ಮುಂತಾದ್ದು ಮಾಡಿಕೊಂಡು, ಮನೆಗೆ ಬರುವಷ್ಟರಲ್ಲಿ ಶವವನ್ನು ದಹನಕ್ಕೆ ಒಯ್ಯಲು ಸಿದ್ಧಪಡಿಸಿದ್ದರು ಅವಳೂ ಶವದ ಸಂಗಡ ಹೋದಳು. ಚಿತೆ ಹಾಕಿ ಶವವನ್ನು ಇಟ್ಟು ಉರಿಸಿದರು ಉರಿಯು ಚನ್ನಾಗಿ ಪ್ರಜ್ವಲಿಸಿದಾಗ ಆ ಹೆಂಡತಿಯು ಆಕಸ್ಮಿಕವಾಗಿ ಉರಿಯ ಮಧ್ಯೆ ನುಗ್ಗಿ ಪತಿಯ ಸಂಗಡ ಸಹಗಮನ ಮಾಡಿದಳು. ಒಂದೆರಡು ಗಂಟೆಗಳೊಳಗಾಗಿ ಇಬ್ಬರ ದೇಹಗಳೂ ಬೂದಿಯಾದುವು ಎಂಬುದೇ.

❖❖❖❖

ಬೊಂಬಾಯಿ ಪಟ್ಟಣದಲ್ಲಿ ಮಹಮದೀಯರು ಸಭೆ ಸೇರಿ, ವೈಸ್‌ರಾಯಿ ಲಾರ್ಡ್ ಕರ್ಜನ್ ರವರ ಪ್ರಜಾರಂಜನೆಯನ್ನೂ ಪ್ರಜಾವಾತ್ಸಲ್ಯವನ್ನೂ ಬಹಳವಾಗಿ ಕೊಂಡಾಡಿದರು. ಅವರು ಈ ರಾಷ್ಟ್ರದ ಏಳಿಗೆಯನ್ನು ಬಯಸಿ, ಮಾಡಿರುವಷ್ಟು ಪ್ರಜಾರಂಜಕ ಕಾರ್ಯಗಳನ್ನು ಪೂರ್ವದ ವೈಸ್‌ರಾಯಿಯವರೂ ಮಾಡಿರುವುದಿಲ್ಲವೆಂದೂ ಅವರು ಕಲ್ಕತ್ತಾ ಪಟ್ಟಣದ ವಿದ್ಯಾನಿಲಯದಲ್ಲಿ ಈ ರಾಷ್ಟ್ರದ ಜನರ ನಡೆನುಡಿಗಳನ್ನು ಕುರಿತು ಉಪನ್ಯಾಸ ಮಾಡಿದ್ದು ಸಹಜವಾಗಿದೆ ಎಂದೂ ಅಭಿಪ್ರಾಯಪಟ್ಟರು. ಬೊಂಬಾಯಿನ ಅಂಜುಮಾನಿ ಇಸ್ಲಾಮಿನ ಸೆಕ್ರೆಟರಿ ಮಿ ಹಾಜಿ ಯೂಸುಫ್ ಹಾಜಿ ಇಸ್ಮೈಲ್ ಯವರು ಕಡೆಯಲ್ಲಿ ಹೇಳಿದ್ದೇನೆಂದರೆ—ಬೊಂಬಾಯಿನಲ್ಲಿ ೧,೫೫,೦೦೦ ಮಹಮದೀಯರಿದ್ದಾರೆ ಈ ಸಭೆಯು ಮಹಮದೀಯ ಸಾರ್ವಜನಿಕಸಭೆ ಎನಿಸಿಕೊಳ್ಳುವುದಿಲ್ಲ. ಹಿಂದುಗಳೂ ಪಾರ್ಸಿಯವರೂ ಹೋದಂತೆ ನಾವೂ ಹೋಗಬೇಕಾಗಿದೆ ಈ ದಿನ ನೀವು ಮಾಡಿರುವಂಥಾ ತೀರ್ಮಾನಗಳು ಸಫಲವಾಗಲಾರವು ಹಿಂದೂಸ್ಥಾನಕ್ಕೆಲ್ಲಾ ಅನುಕೂಲವಾಗಿರುವ ವಿಷಯಗಳನ್ನೇ ಹಿಂದುಗಳೂ ಪಾರ್ಸಿಯವರೂ ಚರ್ಚಿಸಿರುತ್ತಾರಲ್ಲದೆ ಅನ್ಯಥಾ ಅಲ್ಲ. ಮಹಮದೀಯರೂ ಅವರಂತೆಯೇ ಅನುಸರಿಸುವುದು ಕ್ಷೇಮಕರವಾಗಿದೆ ಎಂಬುದೇ. ತರುವಾಯ ಮೌಲ್ವಿ ನಾಜರ್ ಹುಸೇನರವರು—ಈ ದಿನದ ನಮ್ಮ ಸಭೆಯು ಮಹಮದೀಯರ ಸಾರ್ವಜನಿಕ ಸಭೆಯಲ್ಲದಿರುವ ಪಕ್ಷಕ್ಕೆ ಕೆಲವು ದಿನಗಳ ಹಿಂದೆ ಹಿಂದು ಪಾರ್ಸಿಕರು ನಡಿಸಿದ ಸಭೆಯೂ ಸಾರ್ವಜನಿಕ ಸಭೆ ಎನ್ನಿಸಿಕೊಳ್ಳಬಾರದು. ಈ ಪಟ್ಟಣದಲ್ಲಿ ೬,೦೦ ೦೦೦ ಹಿಂದೂ ಪಾರ್ಸಿ ಜನರಿದ್ದಾರೆ. ಅವರೆಲ್ಲಾ ಸಭೆಸೇರಿದ್ದರೋ ಎಂದು ಪ್ರಶ್ನೆಮಾಡಿದರು. ಕಡೆಯಲ್ಲಿ ಮೇಲ್ಕಂಡ ಮಹಮದೀಯ ಸಭಾಪತಿಯ ತೀರ್ಮಾನವನ್ನು ಓಟಿಗೆ ಹಾಕಿ, ಸಭಿಕರ ಸಮ್ಮತಿ ಕೂಡಿಸಿದರು. ಇಪ್ಪತ್ತು ಜನರು ಆ ತೀರ್ಮಾನವನ್ನು ರದ್ದುಮಾಡಬೇಕೆಂತಲೂ ೬೩ ಮಂದಿ ಆ ತೀರ್ಮಾನವನ್ನೇ ಊರ್ಜಿತ ಪಡಿಸಬೇಕೆಂತಲೂ ಅಭಿಪ್ರಾಯಪಟ್ಟರು.

ವಿದೇಶ ವರ್ತಮಾನಗಳು.

ಅಮೇರಿಕದ ರಾಜಧಾನಿಯಾದ ನ್ಯೂಯಾರ್ಕ್ ನಗರದಲ್ಲಿ ಜನರಿಗೆ ಇದ್ದಕಿದ್ದ ಹಾಗೇ ಬುದ್ಧಿಮಾಂದ್ಯವಾಗಿ ಜ್ಞಾನ ತಪ್ಪಿ ಹಾಗೇ ಪ್ರಾಣ ಹೋಗುತ್ತಿದೆ. ಕಳೆದ ಮೂರು ತಿಂಗಳಲ್ಲಿ ಈ ವಿಚಿತ್ರ ರೋಗದಲ್ಲಿ ಏಳು ನೂರು ಪ್ರಜೆಗಳಿಗಿಂತಲೂ ಹೆಚ್ಚಾಗಿಯೇ ಮೃತಪಟ್ಟಿದಾರೆ.

❖❖❖❖

ವಿಲಾಯಿತಿ ರಾಜ್ಯದ ಎಡ್ವರ್ಡ್ ಚಕ್ರವರ್ತಿಯವರೂ ಮಹಾರಾಜ್ಞೀರವರೂ ಕಳೆದವಾರ ದೇಶ ಸಂಚಾರ ಹೊರಟು, ಅಫ್ರಿಕಾ ಖಂಡದ ಉತ್ತರ ಸಮುದ್ರ ತೀರದಲ್ಲಿರುವ ಅಲ್ಜೀರ್ಸ್ ಪಟ್ಟಣಕ್ಕೆ ಹೋಗಿ ನಾಲ್ಕಾರು ದಿನ ಇದ್ದರು ಈಗ ಅವರು ಹಿಂತಿರುಗಿ ಫ್ರಾನ್ಸಿಗೆ ದಯಮಾಡುತ್ತಾರೆ.

❖❖❖❖

ಸ್ಪೆಯಿನ್ ರಾಜ್ಯಕ್ಕೆ ಸೇರಿದ ಅಂಡಾಲೂಸಿಯಾ ಎಂಬ ಅಧಿಪತ್ಯದಲ್ಲಿ ಕ್ಷಾಮ ಪ್ರಾಪ್ತವಾಗಿದೆ. ೧೨,೦೦,೦೦೦ ಪ್ರಜೆಗಳು ಕ್ಷಾಮಬಾಧೆಯನ್ನು ಅನುಭವಿಸುತ್ತಿದಾರೆ. ಅನೇಕರು ಹೊಟ್ಟೆಗಿಲ್ಲದೆ ಪ್ರಾಣಬಿಟ್ಟರು. ಅನೇಕ ಪಟ್ಟಣಗಳಲ್ಲಿ ಕ್ಷಾಮ ಪೀಡಿತರಾದ ಜನರು ಕೊಳ್ಳೆ ಹೊಡೆಯುತಲೂ ದೊಂಬಿ ಕದನ ಮಾಡುತ್ತಲೂ ಇದಾರೆ.

❖❖❖❖

ಮಹಮದೀಯರ ಯಾತ್ರಾಸ್ಥಾನವಾದ ಮಕ್ಕೆಗೆ ರೈಲ್ ರಸ್ತೆ ಹಾಕುವುದಕ್ಕೆ ಇದುವರೆಗೆ ೧,೩೦,೯೦,೦೦೦ ರೂಪಾಯಿ ಚಂದಾ ವಸೂಲಾಗಿರುವುದು. ಮಕ್ಕೆಯಿಂದ ಜಡ್ಡಾ ಎಂಬ ತೀರಪಟ್ಟಣದ ವರೆಗೆ ೬೦ ಮೈಲಿ ರೈಲ್ ರಸ್ತೆ ಹಾಕುವುದನ್ನು ಇಷ್ಟರಲ್ಲೇ ಪ್ರಾರಂಭ ಮಾಡುತ್ತಾರೆ. ಇದು ಆದ ಪಕ್ಷದಲ್ಲಿ ಹಿಂದೂಸ್ಥಾನದಿಂದ ಅಲ್ಲಿಗೆ ಹೋಗುವ ಮಹಮದೀಯ ಯಾತ್ರಿಗಳಿಗೆ ತುಂಬಾ ಸರಾಗವಾಗುವುದು.

❖❖❖❖

ಪನಾಮಾ ಭೂಕಂಠವನ್ನು ಒಡೆದು ಹಡಗುಗಳು ಹೋಗಿ ಬರುವಂತೆ ಜಲಸಂಧಿ ಮಾಡಬೇಕೆಂದು ನಿರ್ಧಾರವಾಗಿದೆ. ಈ ಕಾಮಗಾರಿಗೆ ಜರ್ಮನ ಕೂಲಿಯವರು ೨,೦೦೦ ಮಂದಿಯೂ ಚೀನಾ ಕೂಲಿಯವರು ೭,೦೦೦ ಮಂದಿಯೂ ಬೇಕಾಗುವುದೆಂದು ಗೊತ್ತುಮಾಡಿದಾರೆ. ಇಷ್ಟರಲ್ಲೇ ಕಾಮಗಾರಿ ಪ್ರಾರಂಭವಾಗುವುದರಲ್ಲಿದೆ. ಈ ಎರಡು ಜನಾಂಗಗಳವರೂ ತುಂಬಾ ನಿಯಮವಾಗಿ ಕಷ್ಟಪಟ್ಟು ಕೆಲಸ ಮಾಡತಕ್ಕವರೆಂದು ಹೆಸರು ಪಡೆದುಕೊಂಡಿದಾರೆ.

❖❖❖❖

ಮ್ಯಾಸಿಡೋನಿಯಾದಲ್ಲಿ ಗ್ರೀಕರಿಗೂ ಬಲ್ಗೇರಿಯಾದವರಿಗೂ ಕಲಹಗಳುಂಟಾಗುತ್ತಿವೆ. ಗ್ರೀಕರು ಒಂದು ಗ್ರಾಮವನ್ನೇ ಲೂಟಿ ಮಾಡಿ, ಬಲ್ಗೇರಿಯಾ ಜನರನ್ನೆಲ್ಲಾ ಕೊಂದು ಹಾಕಿ, ಬೆಟ್ಟಗಳಿಗೆ ಓಡಿ ಹೋದರು ಬಲ್ಗೇರಿಯನ್ನರು ಒಂದು ಗುಡಿಯನ್ನು ಸುತ್ತಿಕೊಂಡು, ಗ್ರೀಕರಲ್ಲಿ ೧೯ ಮಂದಿಯನ್ನು ಕೊಂದುಹಾಕಿದಾರೆ. ಅಲ್ಲದೆ ತುರ್ಕಿಯವರು ಅಲ್ಬೇನಿಯಾ ಜನರನ್ನು ಪ್ರೀಸ್ರೆಂಡ್ ಎಂಬಲ್ಲಿ ಸಂಧಿಸಿ ಯುದ್ಧಮಾಡಿ, ೩೦ ಜನರನ್ನು ಕೊಂದುಬಿಟ್ಟರು.

❖❖❖❖

ಇದುವರೆಗೆ ಮಂಚೂರಿಯಾದ ವೈಸ್‌ರಾಯಿ ಎಂದು ಹೊಗಳಿಸಿಕೊಳ್ಳುತ್ತಿದ್ದ ಅಡ್ಮಿರಲ್ ಅಲೆಕ್ಸೀಫರು ಈಗ ಯುದ್ಧಭೂಮಿಯಿಂದ ಹಿಂದಕ್ಕೆ ಹೋಗಿ ರಷ್ಯಾ ರಾಜಧಾನಿಯಲ್ಲೇ ಪರಿವಾರ ಸಹಿತ ವಾಸಮಾಡಿಕೊಂಡು ಇದಾರಷ್ಟೆ. ಕೆಲಸ ಬಿಟ್ಟರೂ ಅವರಿಗೆ ಪ್ರತಿ ತಿಂಗಳಲ್ಲೂ ೩,೩೫,೦೦೦ ರೂಪಾಯಿಯಂತೆ ಮೊದಲಿದ್ದ ವೈಸ್‌ರಾಯಿ ಪದವಿಯ ಸಂಬಳವೇ ಸಲ್ಲುತ್ತಿದೆ. ಇದು ನ್ಯಾಯವಲ್ಲವೆಂದು ಅನೇಕರು ಪ್ರತಿಭಟಿಸಿ, ಜಾರ ಮೇಲೆ ಚಕ್ರವರ್ತಿಯವರಿಗೆ ಅರ್ಜಿಗಳನ್ನು ಕೊಟ್ಟಿದಾರೆ.

❖❖❖❖

ಚೀನಾ ಚಕ್ರಾಧಿಪತ್ಯದಲ್ಲಿ ಯಾರು ಬೇಕಾದರೂ ಅಫೀಮು ತಯಾರುಮಾಡಿ ವಿಕ್ರಯ ಮಾಡಬಹುದಾಗಿದೆ. ಈ ಬಾಬಿನಿಂದ ಇತರ ರಾಜ್ಯಗಳವರೆಲ್ಲಾ ತುಂಬಾ ಲಾಭ ಸಂಪಾದನೆ ಮಾಡುತ್ತಿದಾರೆಂದು ಚೀನಾ ಗವರ್ನಮೆಂಟಿನವರು ತಿಳಿದುಕೊಂಡು, ಇನ್ನು ಮೇಲೆ ತಮ್ಮ ಚಕ್ರಾಧಿಪತ್ಯದಲ್ಲೂ ಅಫೀಮನ್ನು ಸರ್ಕಾರದವರೇ ಬೆಳೆದು ವಿಕ್ರಯ ಮಾಡಬೇಕೆಂದು ಗೊತ್ತುಮಾಡಿರುವರು. ಇದರಿಂದ ಆ ರಾಜ್ಯದಲ್ಲಿ ಕಡೇ ಪಕ್ಷ ಪ್ರತಿ ವರುಷವೂ ಸರ್ಕಾರಕ್ಕೆ ೧೯ ಕೋಟಿ ರೂಪಾಯಿ ಉತ್ಪತ್ತಿಯಾಗಬಹುದೆನ್ನುವುದಕ್ಕೆ ಸಂಶಯವಿಲ್ಲ.

❖❖❖❖

ರಷ್ಯಾರಾಜ್ಯದ ಖಜಾನೆಯಲ್ಲಿ ಹಣವೇ ಇಲ್ಲವೆಂತಲೂ ಆ ರಾಜ್ಯವು ಯುದ್ಧದ ಖರ್ಚನ್ನು ಕೂಡಿಸುವುದಕ್ಕೆ ತುಂಬಾ ಕಷ್ಟಪಡುತ್ತಿದೆ ಎಂತಲೂ ಒಬ್ಬ ಬಾತ್ಮಿದಾರನು ಬರೆದನು. ಇದನ್ನು ರಷ್ಯಾರಾಜ್ಯದವರು ಕೇಳಿ, ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ ಪತ್ರಿಕೆಗಳ ಬಾತ್ಮಿದಾರರನ್ನು ಕರೆಸಿಕೊಂಡು, ಅವರಿಗೆ ತಮ್ಮ ಖಜಾನೆಯ ಮನೆಯನ್ನು ತೆರೆದು ತೋರಿಸಿದರು. ಈಗ ಈ ಬಾತ್ಮಿದಾರರು ಅನೇಕ ಕೋಠಿಗಳಲ್ಲಿ ಚಿನ್ನದ ಗಟ್ಟಿಗಳನ್ನೇ ಗವರ್ನಮೆಂಟಿನವರು ತುಂಬಿಸಿ ಇಟ್ಟಿರುತ್ತಾರೆಂತಲೂ ಅವರಿಗೆ ಅಪಾರವಾದ ದ್ರವ್ಯವಿರುತ್ತೆಂತಲೂ ಪ್ರಕಟಿಸಿದಾರೆ.

ಜರ್ಮನಿಯ ಡಾಕ್ಟರ್ ಪಿನ್ನರ್ ಎಂಬೊಬ್ಬ ವೈದ್ಯನು ಕೊಬ್ಬರಿ ಎಣ್ಣೆಯನ್ನು ಶೋಧನೆ ಮಾಡಿ, ತಿಳಿಸಿರುವುದೇನೆಂದರೆ—ಈ ಎಣ್ಣೆಯು ಮನುಷ್ಯನ ದೇಹಪೋಷಣೆಗೆ ತುಂಬಾ ಅನುಕೂಲವಾಗಿದೆ, ಇದರ ಹಾಲಿನಲ್ಲಿ ಬೆಣ್ಣೆಯನ್ನು ತೆಗೆದು ಭೋಜನ ಪದಾರ್ಥಗಳಿಗೆ ಉಪಯೋಗಿಸಬಹುದು. ಆಕಳ ಅಥವಾ ಎಮ್ಮೆಯ ಬೆಣ್ಣೆಯು ಸ್ವಲ್ಪದಿನಗಳಲ್ಲೇ ಹುಳಿಯಾಗಿ ಕೆಟ್ಟುಹೋಗುವುದು; ಆದರೆ ಕೊಬ್ಬರಿ ಹಾಲಿನ ಬೆಣ್ಣೆಯು ಬಹಳ ದಿನಗಳ ವರೆಗೆ ಕೆಡುವದಿಲ್ಲ. ಇದು ತುಂಬಾ ಅಗ್ಗವಾಗಿಯೂ ಸುಲಭವಾಗಿಯೂ ದೊರೆಯಬಹುದಾದ್ದರಿಂದ ಇದನ್ನು ಈಗ್ಗಿಂತಲೂ ಹೆಚ್ಚಾಗಿ ಜನರು ಉಪಯೋಗಿಸುವುದು ಒಳ್ಳೇದು ಎಂಬುದೇ.

****

ಫ್ರಾನ್ಸ್ ರಾಜ್ಯಕ್ಕೆ ಸೇರಿದ ಲೈಮೋಜಸ್ ಎಂಬ ಪಟ್ಟಣದಲ್ಲಿ ಒಂದು ಕಾರಖಾನೆಯ ಕೂಲಿಕಾರರು ತಮ್ಮ ಜೊತೆಗಾರರನ್ನು ಬಂದೀಖಾನೆಯಿಂದ ಬಿಡಿಸಿಕೊಳ್ಳಬೇಕೆಂದು ಬಹಳ ಪ್ರಯತ್ನ ಮಾಡಿದರು. ಪೋಲೀಸಿನವರೂ ಸಿಪಾಯಿಗಳೂ ಅವರನ್ನು ಬಹಳ ಪರಾಕ್ರಮದಿಂದ ಓಡಿಸಬೇಕಾಯಿತು. ಆ ಜೈಲಿನ ಹತ್ತಿರ ದೊಡ್ಡ ಕದನವಾಯಿತು. ಸರಕಾರಿ ಸೈನ್ಯಾಧಿಪತಿಗಳಲ್ಲಿ ೭ ಮಂದಿಗೂ ೬೩ ಜನ ಸಿಪಾಯಿಗಳಿಗೂ ಗಾಯಗಳಾಗಿವೆ. ಕೂಲಿಕಾರರಲ್ಲಿ ಅನೇಕರು ಸತ್ತರಂತೆ; ೭೩ ಮಂದಿ ಗಾಯಪಟ್ಟಿದ್ದಾರೆ. ಸರಕಾರಿ ಸೈನಿಕರಲ್ಲಿ ೨೦೦ ಮಂದಿಗಿಂತಲೂ ಹೆಚ್ಚಾಗಿಯೇ ಗಾಯಪಟ್ಟಿದ್ದಾರೆಂದು ಈಚೆಗೆ ಸಮಾಚಾರ ಬಂದಿದೆ.

****

ಚೀನಾರಾಜ್ಯಕ್ಕೆ ಸೇರಿದ ನಾರ್ಕಿಕ್ ಅಧಿಪತ್ಯದ ವೈಸ್‌ರಾಯಿ ಟ್ ಯುವಾನ್ ವರು ತಮ್ಮ ಕೈಕೆಳಗಿನ ಸಮಸ್ತ ಉದ್ಯೋಗಸ್ಥರಿಗೂ ತಿಳಿಸಿರುವುದೇನೆಂದರೆ—ಸರಕಾರಿ ಅಧಿಕಾರಿಗಳು ಪ್ರತಿ ಒಂದು ಪಟ್ಟಣದಲ್ಲೂ ಬುದ್ಧಿವಂತರಾಗಿರುವ ಒಬ್ಬಿಬ್ಬರು ವೈದ್ಯರನ್ನು ಚುನಾಯಿಸಿ, ನಾರ್ಕಿಕ್‌ಗೆ ಕಳುಹಿಸಬೇಕು. ಇವರನ್ನೆಲ್ಲಾ ಸರಕಾರದವರು ಜಪಾನ್ ವಹಿಸಿ, ಜಪಾನಿಗೆ ಕಳುಹಿಸಿ, ಅಲ್ಲಿ ಅವರಿಗೆ ವೈದ್ಯವನ್ನು ಚನ್ನಾಗಿ ಕಲಿಸುವರು. ಅಲ್ಲಿಂದ ವಾಪಸು ಬಂದ ಮೇಲೆ ಅವರನ್ನು ಅವರವರ ಊರಿನಲ್ಲೇ ವೈದ್ಯ ವಿದ್ಯಾಶೋಧಕರನ್ನಾಗಿ ನೇಮಕ ಮಾಡುವರು ಎಂಬುವದೇ. ಇದನ್ನು ನೋಡಲಾಗಿ ಚೀಣಿಯವರು ಈಗ ನವನಾಗರಿಕರಾಗಬೇಕೆಂದು ಕುತೂಹಲಪಡುತ್ತಿದ್ದಾರೆಂದು ಕಾಣುತ್ತೆ.

****

ಜಪಾನಿನ ದಕ್ಷಿಣದಲ್ಲಿರುವ ಜಾವೋ ದ್ವೀಪದ ಬಳಿಯಲ್ಲಿ ಹೋದ ವರುಷ ನೊವೆಂಬರ್ ತಿಂಗಳಲ್ಲಿ ಸಮುದ್ರವು ಅಲ್ಲಕಲ್ಲೋಲವಾಗುವುದನ್ನು ಕಂಡರು. ಸಮುದ್ರದೊಳಗೆ ಅಗಾಧವಾಗಿ ಗುಡುಗುತ್ತಿತ್ತು. ಹದಿನೈದು ದಿನಗಳ ತರುವಾಯ ಸಮುದ್ರಮಧ್ಯೆ ಬಹಳ ಹೊಗೆ ಎದ್ದಿತು. ಸಮುದ್ರವೇ ಸಿಟ್ಟು ಉರಿಯುವುದೋ ಎಂಬಂತೆ ಕಂಡಿತು. ಡಿಸೆಂಬರ್ ೫ ರಲ್ಲಿ ಆ ಹೊಗೆಯ ನಡುವೆ ಒಂದು ಭೂಮಿ ಎದ್ದಂತೆ ಕಾಣಿಸಿತು. ತರುವಾಯ ಅದು ನಾಲ್ಕು ಸಣ್ಣ ದ್ವೀಪಗಳಾಗಿ ಒಡೆಯಿತು. ಜಪಾನ್ ದ್ವೀಪದ ಪ್ರಜೆಗಳೆಲ್ಲಾ ಗಾಬರಿಯಿಂದ ತಮ್ಮ ಕೆಲಸಗಳನ್ನು ಬಿಟ್ಟು ಈ ಚಿತ್ರ ಸೃಷ್ಟಿಯನ್ನು ನೋಡುತ್ತಿದ್ದರು. ಡಿಸೆಂಬರ್ ೧೦ ರಲ್ಲಿ ಅಗ್ನಿಪರ್ವತ ಹುಟ್ಟಿ, ಎಲ್ಲಾ ಸೇರಿ ಒಂದೇ ದ್ವೀಪವಾಯಿತು. ಜನವರಿ ತಿಂಗಳಲ್ಲಿ ಜಪಾನ್ ದ್ವೀಪದ ಕೆಲವು ಧೈರ್ಯಶಾಲಿಗಳು ೩೦ ಅಡಿ ಉದ್ದವಾದ ಒಂದು ಭಾರೀ ದೋಣಿಯಲ್ಲಿ ಕುಳಿತುಕೊಂಡು, ಆ ಹೊಸ ದ್ವೀಪಕ್ಕೆ ಹೋಗಿ ನೋಡಿದಾಗ ಅದು ಸುಮಾರು ೧ ಮೈಲಿ ಸುತ್ತಳತೆಯುಳ್ಳ ದ್ವೀಪವಾಗಿಯೂ ಸಮುದ್ರದ ಮೇಲೆ ೪೮೦ ಅಡಿ ಎತ್ತರ ಉಳ್ಳದ್ದಾಗಿಯೂ ಇತ್ತು. ಅವರು ಅದರ ಮೇಲೆ ಹತ್ತಿ ಹೋಗಿ ಎತ್ತರವಾಗಿದ್ದ ಕಡೆ ಜಪಾನ್ ಬಾವುಟವನ್ನು ಕಟ್ಟಿ ಬಂದು, ಗವರ್ನಮೆಂಟಿಗೆ ಅರಿಕೆ ಮಾಡಿದರು. ಗವರ್ನಮೆಂಟಿನವರು ಅದಕ್ಕೆ ನೂತನ ದ್ವೀಪ ಎಂಬ ಹೆಸರನ್ನು ಇಟ್ಟಿದ್ದಾರೆ.

ರಷ್ಯಾ. ಜಪಾನ್ ಯುದ್ಧ.

ಕಳೆದವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಮ್ಯಾಂಚೂರಿಯಾದಲ್ಲಿ ಯುದ್ಧವೃತ್ತಾಂತ

ಲಂಡನ್, ಏಪ್ರಿಲ್ ೧೭.—ಮಾರ್ಷಲ್ ಓಯಾಮಾ ಯವರು ತಿಳಿಸುವದೇನೆಂದರೆ—ಜಪಾನ್ ಸೈನಿಕರು ಕ್ಸಿಂಗ್‌ಚಿಂಗ್‌ನಿಂದ ಉತ್ತರಕ್ಕೆ ನುಗ್ಗಿ ಹೋಗಿ ರಷ್ಯಾದವರನ್ನು ಹಿಂದಕ್ಕೆ ಓಡಿಸುತ್ತಾ, ೪೮ ಮೈಲಿ ದೂರದಲ್ಲಿರುವ ಯಾಂಗ್ ಚಂಗ್ ಎಂಬ ರಾಜ್ಯವನ್ನು ಮೊನ್ನೆದಿನ ಆಕ್ರಮಿಸಿಕೊಂಡರು.

ಅದೇ ಸೈನ್ಯದಲ್ಲಿ ಒಂದು ಭಾಗದವರು ಕುದುರೆ ಸವಾರರ ಸಂಗಡ ಸೇರಿ ಹೋಗಿ ಅದೇ ದಿನ ಸೂಚಿಯಾಟ್ಸ್ ಎಂಬ ರಾಜ್ಯವನ್ನು ಸ್ವಾಧೀನಪಡಿಸಿಕೊಂಡಾಗ ಶತ್ರುಗಳು ಅಲ್ಲಿಗೆ ಬಂದು, ಆ ರಾಜ್ಯವು ಜಪಾನಿನವರ ಸ್ವಾಧೀನದಲ್ಲಿದೆ ಎಂದು ಕಂಡು, ದಿಕ್ಕಾಪಾಲಾಗಿ ಓಡಿದರು. ಅವರು ಕಿರಿನ್ ಕಡೆಯ ಮಾರ್ಗವನ್ನು ಹಿಡಿದು ಹೋದರು.

ಜಪಾನಿನವರಿಗೆ ಹಡಗುಗಳು ಸಿಕ್ಕಿದವು

ಲಂಡನ್, ಏಪ್ರಿಲ್ ೧೭.—ವ್ಲಾಡಿವೋಸ್ಟಾಕಿಗೆ ಸಾಮಾನು ಕಲ್ಲಿದ್ದಲುಗಳನ್ನು ಭರ್ತಿಮಾಡಿಕೊಂಡು ಹೋಗುತ್ತಿದ್ದ ಕೆಲವು ಹಡಗುಗಳನ್ನು ಜಪಾನ್ನರು ತಡೆದು ಸ್ವಾಧೀನಪಡಿಸಿಕೊಂಡರು.

ಜಪಾನಿನವರಿಗೆ ಸೋಲಾಯಿತೆಂಬ ಸುದ್ದಿ

ರಷ್ಯಾ ಜನರಲ್ ಲಿನೆವಿಚ್ ಯವರು ತಿಳಿಸುವುದೇನೆಂದರೆ—ತಾ॥ ೧೧ ರಲ್ಲಿ ರಷ್ಯಾ ಸೈನಿಕರು ನುಗ್ಗಿ ಹೋಗಿ ಪೌಹೌಲ್ ಎಂಬ ಗ್ರಾಮವನ್ನು ಮುತ್ತಿಗೆ ಹಾಕಿಕೊಂಡರು. ಜಪಾನಿನವರು ಅಲ್ಲಿಂದ ಹಿಮ್ಮೆಟ್ಟಿ, ೫೦ ಮೈಲಿ ದೂರದಲ್ಲಿರುವ ವಿಷಕ್ಸಾ ಎಂಬ ರಾಜ್ಯಕ್ಕೆ ಓಡಿ ಸೇರಿದರು. ಈ ರಾಜ್ಯವು ಜಪಾನಿನವರ ಸ್ವಾಧೀನದಲ್ಲೇ ಇತ್ತು.

ಜಪಾನಿನವರ ಏಳನೇ ಸಾಲ

ಲಂಡನ್, ಏಪ್ರಿಲ್ ೧೮.—ಜಪಾನ್ ರಾಜ್ಯದವರು ತಮ್ಮ ದೇಶದ ಸಾಹುಕಾರರಲ್ಲೇ ಏಳನೆ ಸಾರಿ ಸಾಲ ಮಾಡುವವರಾಗಿದ್ದಾರೆ. ಈ ಸಲ ಮೇ ತಿಂಗಳ ೧ನೇ ತಾರೀಖಿನ ದಿನ ೧೫ ಕೋಟಿ ರೂಪಾಯಿಗೆ ಪತ್ರಗಳನ್ನು ಬರೆಯುತ್ತಾರೆ.

ರಷ್ಯಾದವರು ಹಿಮ್ಮೆಟ್ಟಿದರು

ಲಂಡನ್, ಏಪ್ರಿಲ್ ೨೦.—ಕ್ಸಿಂಕಿಂಗ್‌ಗೆ ಪೂರ್ವದಲ್ಲಿ ೧೫ ಮೈಲಿ ದೂರದಲ್ಲಿರುವ ಟಂಘುವಾ ಎಂಬ ಸ್ಥಳವನ್ನು ಆಕ್ರಮಿಸಿಕೊಂಡರು. ರಷ್ಯಾದವರು ಅಲ್ಲಿಂದ ಉತ್ತರಕ್ಕೆ ಹಿಮ್ಮೆಟ್ಟಿ ಹೋದರು ಎಂದು ಟೋಕಿಯೋ ನಗರದಿಂದ ತಿಳಿದುಬಂದಿದೆ.

ಜಪಾನಿನವರ ಚಮತ್ಕಾರ.

ರಷ್ಯಾದವರ ಗೂಢಚಾರರು ತಿಳಿಸಿರುವುದೇನೆಂದರೆ—ಜಪಾನಿನವರ ಕುದುರೆ ಸವಾರರೂ ಫಿರಂಗಿ ಸೈನಿಕರೂ ಫಾಂಗ್ ಚಂಗಿನಿಂದ ವಾಯುವ್ಯಕ್ಕೆ ನುಗ್ಗಿ ಹೋಗಿ ಜನರಲ್ ಲಿನೆವಿಚ್ ಯವರು ರಾಜ್ಯ ಹಾಕಿಕೊಂಡಿರುವ ಪ್ರದೇಶವನ್ನು ಸೇರುತ್ತಿದ್ದಾರೆ. ಅವರು ರಷ್ಯಾದವರ ಎಡಗಡೆಯಿಂದ ಬಂದು, ಸುತ್ತಿಕೊಳ್ಳಬೇಕೆಂದು ಪ್ರಯತ್ನಪಡುವರು. ಈ ಜಪಾನ್ ಸೈನ್ಯದಲ್ಲಿ ೨೦ ಫಿರಂಗಿಗಳಿರುವವು, ಅನೇಕ ಸಾಮಾನು ಭರ್ತಿಯಾದ ಗಾಡಿಗಳು ಇರುತ್ತವೆ, ಮತ್ತು ಜುಂಚೂಜನರು ೩,೦೦೦ ಮಂದಿ ಇದ್ದಾರೆ.

ರಷ್ಯಾದವರ ಯುದ್ಧಖರ್ಚು

ಲಂಡನ್ ಏಪ್ರಿಲ್ ೨೧ —ರಷ್ಯಾ ರಾಜ್ಯದಲ್ಲಿ ಪ್ರಜಾಸಾಮಾನ್ಯಕ್ಕೆ ವಿನಿಯೋಗವಾಗುವಂಥಾ ಅನೇಕ ಪಬ್ಲಿಕ್ ಫಂಡುಗಳು ಇರುತ್ತವೆ. ಗವರ್ನಮೆಂಟಿನವರು ಈ ಫಂಡುಗಳಲ್ಲಿರುವ ಹಣವನ್ನೆಲ್ಲಾ ಯುದ್ಧದ ಖರ್ಚಿಗೆ ಉಪಯೋಗಿಸಿಕೊಂಡು, ಆ ಹಣಕ್ಕೆ ಆಯಾ ಫಂಡಿನ ಕಮಿಟಿಯವರಿಗೆ ಕೇವಲ ೩ ಸೆಂತೆ ಬಡ್ಡಿ ಕೊಡುವುದಾಗಿ ಗೊತ್ತುಮಾಡಿಕೊಂಡಿದ್ದಾರೆಂದು ಆ ರಾಜಧಾನಿಯಲ್ಲಿ ಪ್ರಕಟವಾಗುವ ಒಂದು ಪತ್ರಿಕೆಯು ತಿಳಿಸುತ್ತದೆ.

ನಾವೆಯ ಯುದ್ಧ.

ಲಂಡನ್, ಏಪ್ರಿಲ್ ೨೨.—ರಷ್ಯಾ ರಾಜ್ಯದ ಬಾಲ್ಟಿಕ್ ಕಡಲಿನ ಯುದ್ಧದ ನಾವೆಗಳು ಜಪಾನಿನವರನ್ನು ಸಂಧಿಸುವುದಕ್ಕಾಗಿ ಪ್ರಯಾಣಮಾಡುತ್ತಿದ್ದವು. ಇವೆಲ್ಲಾ ಕಳೆದ ವಾರ ಅನ್ನಾಂ ಬಳಿ ಇರುವ ಕಾಮರ್ಾನ್ ಎಂಬ ಕೊಲ್ಲಿಯ ಬಳಿ ಬಂದಿರುತ್ತವೆ. ಜಪಾನಿನವರ ಹಡಗುಗಳೂ ಈ ನಾವೆಗಳನ್ನು ನೋಡಲ್ಲೇ ಹಿಡಿದು ಸೋಲಿಸಿ ಹಿಂದಕ್ಕೆ ಓಡಿಸಬೇಕೆಂದು ಅಲ್ಲಿಗೆ ಬಂದಿರುವವು. ರಷ್ಯಾದವರ ಕಡೆ ಯುದ್ಧದ ಹಡಗುಗಳು ೧೧ [illegible] ನೆ, ಜಪಾನಿನವರಲ್ಲಿ ೧೩ ಇರುವವು. [illegible] ದೋಣಿಗಳೂ [illegible] ಗಳೂ ರಷ್ಯಾದವರ ಕಡೆ ೨೧, ಜಪಾನಿನ [illegible] ಇರುವವು. ಆ ಸಮುದ್ರದ ಬಳಿ ಫ್ರೆಂಚರು [illegible] ತ್ತಾರೆಂದು ಜಪಾನಿನವರಿಗೆ ತುಂಬಾ ಆಕ್ಷೇಪವಿತ್ತು. [illegible] ತಾವು ರಷ್ಯಾದವರಿಗೆ ಸ್ವಲ್ಪವೂ ಸಹಾಯಮಾಡುವುದಿಲ್ಲವೆಂದು ಖಂಡಿತವಾಗಿ ಜಪಾನಿನವರಿಗೆ ಬರೆದು ತಿಳಿಸಿದರು. ಇದರಿಂದ ಜಪಾನಿನವರ ಕೋಪವು ನಿವೃತ್ತಿಯಾಗಿದೆ.

ಫಿರಂಗಿಗಳ ಶಬ್ದ

ಲಂಡನ್ ಏಪ್ರಿಲ್ ೨೩ —ಶನಿವಾರ ಮಧ್ಯಾಹ್ನ ರಷ್ಯಾದವರ ನಾವೆಯು ಕಾಮರ್ಾನ್‌ಬಂದರಿನಿಂದ ಸಮುದ್ರಕ್ಕೆ ಹೋಯಿತು. ಆ ಕೊಲ್ಲಿಯಲ್ಲಿ ಬಹಳ ದೂರದಲ್ಲಿ ಫಿರಂಗಿಗಳು ಹಾರಿದ ಶಬ್ದ ಕೇಳಿತಂತೆ. ಇವರಿಗೂ ಜಪಾನ್ ಹಡಗುಗಳಿಗೂ ನಾವೆಯ ಯುದ್ಧ ಪ್ರಾರಂಭವಾಗಿದೆ ಎಂದು ಕಾಣುವುದು.

ರಷ್ಯಾ ನಾವೆಯ ಅಧಿಪತಿಗೆ ಕಾಯಿಲೆ.

ಲಂಡನ್, ಏಪ್ರಿಲ್ ೨೪.—ರಷ್ಯಾ ಹಡಗುಗಳ ಅಧಿಪತಿಯಾದ ಅಡ್ಮಿರಲ್ ರೋಜೆಸ್ಟ್‌ವೆನ್‌ಸ್ಕಿಯವರಿಗೆ ಅನುಷಂಕೆ ಬಂದು ಬಿದ್ದುಕೊಂಡಿದ್ದಾರೆಂದು ಸೈಗಾನ್‌ನಲ್ಲಿ ವರ್ತಮಾನವಿದೆ.

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಲಂಡನ್, ಏಪ್ರಿಲ್ ೮.—ಮಾಸ್ಕೋ ಪಟ್ಟಣದಲ್ಲಿ ಸಭೆ ನಡಿಸಿದ ಡಾಕ್ಟರುಗಳ ಪೈಕಿ ಅನೇಕರನ್ನು ಸರಕಾರದವರು ಹಿಡಿದು ಬಂಧನದಲ್ಲಿಟ್ಟಿದ್ದಾರೆ.

ಬ್ಯಾರಿಸ್ಟರು (ಲಾಯರು) ಗಳ ಸಮಾಜವು.

ಲಂಡನ್, ಏಪ್ರಿಲ್ ೧೭.—ರಷ್ಯಾ ರಾಜ್ಯದಲ್ಲಿರುವ ಸಮಸ್ತ ಬ್ಯಾರಿಸ್ಟರು (ವಕೀಲರು) ಗಳೂ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ಸೇರಿ ದೊಡ್ಡ ಸಮಾಜವನ್ನು ನಡಿಸಿದರು. ಪೋಲೀಸಿನವರು ಎಷ್ಟು ವಿಧದಲ್ಲಿ ಅಡ್ಡಿಮಾಡಿದರೂ ಅವರು ಸಮಾಜವನ್ನು ನಿಲ್ಲಿಸಲಾರದೆಹೋದರು. ಈ ಸಮಾಜದವರು ತೀರ್ಮಾನಿಸಿದ್ದೇನೆಂದರೆ—ಈಗಿನ ಕಾಲಕ್ಕೆ ತಕ್ಕಂತೆ ರಾಜ್ಯಭಾರ ಕ್ರಮಗಳನ್ನು ಬದಲಾವಣೆ ಮಾಡಬೇಕು, ಪ್ರಜೆಗಳಿಗೆ ಇನ್ನೂ ಹೆಚ್ಚಾಗಿ ವಿದ್ಯಾಬುದ್ಧಿ ವಿವೇಕಗಳನ್ನು ಕಲಿಸಬೇಕು, ಪ್ರಜೆಗಳಿಂದಲೇ ರಾಜ್ಯದ ಕಾರುಭಾರುಗಳೆಲ್ಲಾ ನಡೆಯಲ್ಪಡುವಂತೆ ರಾಜ್ಯಭಾರ ಕ್ರಮಗಳು ಬದಲಾವಣೆಯಾಗಬೇಕು ಎಂಬುದೇ.

ವಕೀಲರು ಓಡಿಸಲ್ಪಟ್ಟರು

ಲಂಡನ್, ಏಪ್ರಿಲ್ ೧೩.—ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ಸಮಾಜವನ್ನು ನಡಿಸಿದ ಬ್ಯಾರಿಸ್ಟರುಗಳೆಲ್ಲಾ ಕೂಡಲೆ ರಾಜಧಾನಿಯನ್ನು ಬಿಟ್ಟು ಹೋಗಬೇಕೆಂತಲೂ ಹೋಗದಿದ್ದರೆ ಸರಕಾರದವರು ಅವರನ್ನು ಬಲಾತ್ಕಾರವಾಗಿ ಕಳುಹಿಸುವರೆಂತಲೂ ಇಸ್ತಿಹಾರು ಕೊಟ್ಟಿದ್ದಾರೆ.

ಸಮಾಧಾನಪಡಿಸುವ ಕಾರ್ಯಗಳು.

ಲಂಡನ್, ಏಪ್ರಿಲ್ ೧೫ —ಕಾಕಸಸ್ ಪ್ರಾಂತ್ಯಕ್ಕೆ ಹೊಸದಾಗಿ ನೇಮಕವಾಗಿ ಹೋಗಿರುವ ರಷ್ಯಾ ಗವರ್ನರ್ ಜನರಲ್‌ರವರು ಇಸ್ತಿಹಾರು ಕೊಟ್ಟು, ಪ್ರಜೆಗಳ ಮುಖಂಡರುಗಳನ್ನೆಲ್ಲಾ ತಮ್ಮ ಬಳಿಗೆ ಕರೆಸಿಕೊಂಡು, ಮುನಿಸಿಪಲ್ ಮತ್ತು ರಾಜಕೀಯ ವಿಚಾರಗಳನ್ನು ಕುರಿತು ಅವರ ಸಂಗಡ ಚರ್ಚೆಮಾಡಿ, ಪ್ರಜೆಗಳಿಗೆ ನಾನಾ ರಿಯಾಯಿತಿಗಳನ್ನು ತೋರಿಸಿ, ಸಮಾಧಾನಪಡಿಸುತ್ತಿದ್ದಾರೆ. ಸರಕಾರಿ ಜಮೀನುಗಳನ್ನು ಬಹಳವಾಗಿ ಜನರಿಗೆ ಹಂಚಿ ಕೊಟ್ಟರು. ಆರ್ಮೇನಿಯಾ ಜನರ ಮನಸ್ಸು ಸಮಾಧಾನವಾಗುವಂತೆ ಹೊಸ ಬದಲಾವಣೆಗಳನ್ನು ಕಲ್ಪಿಸುತ್ತೇವೆಂದು ಅವರಿಗೆ ತಿಳಿಸಿದ್ದಾರೆ.

ರಾಜಧಾನಿಯಲ್ಲಿ ಎಚ್ಚರಿಕೆಯ ಕಾರ್ಯಗಳು

ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಪ್ರಜೆಗಳು ಮತ್ತೆ ಗಲಭೆಯನ್ನು ಮಾಡಿದ್ದರಿಂದ ಗವರ್ನಮೆಂಟಿನವರು ಇತರ ಕಡೆಗಳಿಂದ ಹೆಚ್ಚು ಸೈನ್ಯಗಳನ್ನು ಅಲ್ಲಿಗೆ ಕರೆಸಿಕೊಂಡು, ಪಟ್ಟಣದಲ್ಲೆಲ್ಲಾ ತುಂಬಾ ಬಂದೋಬಸ್ತು ಮಾಡಿ ಕಾಯುತ್ತಿದ್ದಾರೆ.

ರೈತ ಪ್ರಜೆಗಳ ಗಲಭೆ

ರಷ್ಯಾರಾಜ್ಯದಲ್ಲಿ ರೈತರಾದ ಪ್ರಜೆಗಳು ದಂಗೆ ಎದ್ದು ಗವರ್ನಮೆಂಟಿನವರಿಗೆ ತುಂಬಾ ಕಳವಳವನ್ನು ಉಂಟುಮಾಡಿದ್ದಾರೆ. ಬಹು ಜನ ಜಮೀನುದಾರರೂ ದೊಡ್ಡ ಸಂಸಾರಿಗಳೂ ಗ್ರಾಮಗಳನ್ನು ಬಿಟ್ಟು, ಮಾಸ್ಕೋ ಪಟ್ಟಣದೊಳಗೆ ಆಶ್ರಯವನ್ನು ಪಡೆಯುತ್ತಿರುವರು.

ಒಬ್ಬ ಮಂತ್ರಿಗೆ ಅವಮಾನವಾಯಿತು.

ರಷ್ಯಾ ಚಕ್ರವರ್ತಿಯವರು ರೈತ ಪ್ರಜೆಗಳಿಗೆ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಿಕೊಡಬಹುದೆಂದು ಗೊತ್ತುಮಾಡಿ ತಿಳಿಸಬೇಕೆಂದು ಕೆಲವು ದೊಡ್ಡ ಮನುಷ್ಯರನ್ನು ನೇಮಿಸಿ, ಎಂ. ವಿಟ್ಟಿ ಎಂಬ ಮಂತ್ರಿಯನ್ನು ಆ ಕಮಿಟಿಗೆ ಮುಖಂಡನನ್ನಾಗಿ ಗೊತ್ತುಮಾಡಿದ್ದರು. ಕಳೆದ ವಾರ ಚಕ್ರವರ್ತಿಯವರು ಆ ಮಂತ್ರಿಯನ್ನು ಆ ಕೆಲಸದಿಂದ ಹಿಂದಕ್ಕೆ ಕರೆಸಿಕೊಂಡರು. ಇವರು ಚಕ್ರವರ್ತಿಯವರ ಕೋಪಕ್ಕೆ ಪಾತ್ರರಾದರೆಂದು ಪ್ರಕಟವಾಗಿದೆ.

ಪ್ರತಿನಿಧಿ ಸಮಾಜದ ಏರ್ಪಾಡು

ಲಂಡನ್. ಏಪ್ರಿಲ್ ೧೫ —ರಷ್ಯಾದಲ್ಲಿ ಮುಖ್ಯರಾದ ಕೆಲವು ಉದ್ಯೋಗಸ್ಥರೂ ಮುಖಂಡರೂ ಎಂ. ಬುಲಿಗಿನ್ ಎಂಬ ಮಂತ್ರಿಯವರೂ ಸೇರಿ ರಾಜಧಾನಿಯಲ್ಲಿ ಪ್ರಜೆಗಳ ಮುಖಂಡರನ್ನು ಕರೆಸಿಕೊಂಡು, ದೊಡ್ಡ ಸಭೆ ನಡಸಬೇಕೆಂದು [illegible] ನೋಟೀಸುಗಳನ್ನು ಎಲ್ಲಾ ಕಡೆಗಳಿಗೂ ಕಳುಹಿಸಿದ್ದಾರೆ. ಈ ಸಂಘದವರು ಪ್ರತಿನಿಧಿಗಳ ಸಮಾಜವನ್ನು ಏರ್ಪಡಿಸಬೇಕೆಂದು ಆಲೋಚನೆ ಮಾಡಿಕೊಂಡಿರುವರು.

ಪೋಲೆಂಡ್ ಪ್ರಜೆಗಳಿಗೆ ಸತ್ಕಾರ್ಯಗಳು

ಲಂಡನ್ ಏಪ್ರಿಲ್ ೧೮ —ಪೋಲೆಂಡಿಗೆ ಹೊಸದಾಗಿ ನೇಮಕವಾಗಿರುವ ಗವರ್ನರ್ ಜನರಲ್‌ರವರು ಪ್ರಜೆಗಳ ಮುಖಂಡರನ್ನು ಕರೆಸಿಕೊಂಡು, ಒಂದು ಸಭೆ ಮಾಡಿ ಅವರ ಅಭಿಪ್ರಾಯದಂತೆ ಬಳಸಬೇಕಾದ ಕಾರುಬಾರುಗಳಿಗೆ ಅನುಕೂಲವಾಗಿ ಮಾತು ಕೊಟ್ಟಿದ್ದಾರೆ. ಸರಕಾರಿ ಕೋರ್ಟು ಕಚೇರಿಗಳಲ್ಲಿ ಪೋಲಿಷ್ ಭಾಷೆಯನ್ನೇ ಉಪಯೋಗಿಸಬೇಕೆಂದು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿರುವರು.

ಕೊಲೆಗಾರನ ಕೊಲೆ

ಚಕ್ರವರ್ತಿಯವರ ಚಿಕ್ಕಪ್ಪಂದಿರಾದ ಗ್ರ್ಯಾಂಡ್ ಡ್ಯೂಕ್ ಸರ್ಜಿಯಸ್ ಯವರನ್ನು ಕೊಂದುಹಾಕಿದಂಥಾ ಕೊಲಿಯೆವ್ ಎಂಬ ಕೊಲೆಗಾರನನ್ನು ಗಲ್ಲಿಗೆ ಹಾಕಬೇಕೆಂದು ಗೊತ್ತಾಯಿತು. ಅವನು ತಾನು ಅಪರಾಧಗಳನ್ನು ಮಾಡಿದ ಸ್ಮೃತಿಯಿಲ್ಲವೆಂದು ಮರಣಕಾಲದಲ್ಲಿ ಹೇಳಿದನು.

ರಾಜಧಾನಿಯಲ್ಲಿ ಗಲಭೆ

ಲಂಡನ್, ಏಪ್ರಿಲ್ ೨೦ —ಸೆಂಟ್ ಪೀಟರ್ಸ್‌ಬರ್ಗ್‌ನ ಪುಟಿಲಾಫ್ ಎಂಬ ಭಾರೀ ಕಾರಖಾನೆಯಲ್ಲಿ ಎರಡು ಸಹಸ್ರ ಕೂಲಿಯವರುಗಳು ಬಾಗಿಲುಗಳಲ್ಲಿ ನಿಂತು ಯಾರೂ ಕೂಲಿ ಮಾಡುವುದಕ್ಕೆ ಕಾರಖಾನೆಯೊಳಕ್ಕೆ ಹೋಗಕೂಡದೆಂದು ಗಲಭೆ ಮಾಡಿದರು. ಸರಕಾರದ ಸವಾರರು ನುಗ್ಗಿ ಅವರನ್ನು ಚದರಿಸಿದ್ದಲ್ಲದೆ, ಒಂದು ರಿಜಿಮೆಂಟ್ ಸೈನಿಕರು ಆ ಕಾರಖಾನೆಯ ಒಳಗೂ ಹೊರಗೂ ಪಹರೆ ಕೊಡುವಂತೆ ನೇಮಿಸಲ್ಪಟ್ಟಿದ್ದಾರೆ.

ಸಭೆ ನಡೆಯದಂತೆ ಹುಕುಮು.

ಲಂಡನ್, ಏಪ್ರಿಲ್ ೨೧ —ಮೇ ತಿಂಗಳ ೫ ನೆ ತಾ॥ ರಾಜಧಾನಿಯಲ್ಲಿ ದೊಡ್ಡ ಸಭೆ ನಡೆಯಬೇಕೆಂದು ಗೊತ್ತುಮಾಡಿ, ಈ ಸಭೆಗೆ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ಬರುವಂತೆ ಆಹ್ವಾನ ಪತ್ರಿಕೆಗಳನ್ನು ಪ್ರಜೆಗಳ ಮುಖಂಡರು ಕಳುಹಿಸಿದ್ದರು. ಗವರ್ನಮೆಂಟಿನವರು ಈ ಸಭೆಯನ್ನು ನಡೆಯದಂತೆ ತಡೆ ಮಾಡಬೇಕೆಂತಲೂ ಆಯಾ ಆಧಿಪತ್ಯಗಳಿಂದ ಪ್ರತಿನಿಧಿಗಳು ಬಾರದಂತೆ ಉಸ್ತುವಾರಿ ಇಡಬೇಕೆಂತಲೂ ಎಲ್ಲಾ ಗವರ್ನರುಗಳಿಗೂ ಹುಕುಂ ಕಳುಹಿಸಿದ್ದಾರೆ.

ವರ್ತಮಾನಪತ್ರಿಕಾ ಕರ್ತರ ಮಹಾಸಭೆ

ಲಂಡನ್, ಏಪ್ರಿಲ್ ೨೨.—ರಷ್ಯಾರಾಜ್ಯದಲ್ಲಿ ಪ್ರಕಟವಾಗುವ ೧೨೦ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳು ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ಅಂತರಂಗದಲ್ಲೇ ಸಭೆ ಸೇರಿ, ನಾಲ್ಕುದಿನಗಳ ತನಕ ರಾಜಕೀಯ ವಿಷಯಗಳನ್ನು ಚರ್ಚಿಸಿ, ಎಲ್ಲಾ ಪತ್ರಿಕೆಗಳವರೂ ರಾಜಕೀಯ ವಿಚಾರಗಳಲ್ಲಿ ಏಕೀಭವಿಸಿ ಕಾರ್ಯಗಳನ್ನು ನಡಸಬೇಕೆಂದು ಒಪ್ಪಂದಮಾಡಿಕೊಂಡಿದ್ದಾರೆ.

ರೊಟ್ಟಿ ಗಡಂಗಿನವರ ಹಟ.

ಲಂಡನ್, ಏಪ್ರಿಲ್ ೨೬.—ವಾರ್ಸೋ ಪಟ್ಟಣದಲ್ಲಿ ನಾನ್ ರೊಟ್ಟಿಗಳನ್ನು ಮಾಡಿ ಬಿಕರಿಮಾಡತಕ್ಕ ಕಾರ್ಖಾನೆಗಳವರು ೧೫,೦೦೦ ಜನ ರೊಟ್ಟಿ ಮಾಡುವುದನ್ನು ಬಿಟ್ಟು ಬಿಟ್ಟರು. ಇದರಿಂದ ನಾನ್ ರೊಟ್ಟಿಯು ಕ್ರಯವು ಮೂರರಷ್ಟು ಹೆಚ್ಚಿಗಿದೆ ಪ್ರಜಾಸ್ವಾತಂತ್ರ್ಯದಿಗೆ ಭಂಗಪ್ರಾಪ್ತಿಸಿತೆಂದು ಸರ್ಕಾರದವರೂ ಇತರರೂ ಯೋಚಿಸುತ್ತಿದ್ದಾರೆ

ತಾಲ್ಲೂಕು ವರ್ತಮಾನಗಳು.

ಮುಂಡ.—ಬಾಲ್ಯವಿವಾಹದ ಮೊಕದ್ದಮೆಗಳು ಈ ಪ್ರಾಂತ್ಯದಲ್ಲಿ ನಡೆದು, ವಿಚಾರಣೆಯಾದವು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕೆಲವರಿಗೆ ಮೂವತ್ತು ರೂಪಾಯಿ, ಇನ್ನು ಕೆಲವರಿಗೆ ಐವತ್ತು ರೂಪಾಯಿ ಜುಲ್ಮಾನೆ ವಿಧಿಸಿದರು. ಹೀಗಿದ್ದರೂ ಜನರು ಇನ್ನೂ ಬಾಲ್ಯವಿವಾಹ ಮಾಡುವುದನ್ನು ಬಿಟ್ಟಿಲ್ಲ. ಹೇಗೆಂದರೆ ಬಾಲ್ಯವಿವಾಹದ ಮೊಕದ್ದಮೆಗಳು ನಡೆದು ವಿಚಾರಣೆಯಾಗುತ್ತಾ ಇವೆ. ಒಂದು ಸೇರು ಅಕ್ಕಿ, ಸ್ವಲ್ಪ ಬೇಳೆಕಾಳು, ೪ ಆಣೆ ದಕ್ಷಿಣೆಗಾಗಿ ಜೋಯಿಸರೂ ಪುರೋಹಿತರೂ ಆಶೆಪಟ್ಟು, ಇಂಥಾ ವಿವಾಹಗಳನ್ನು ಮಾಡುತ್ತಾರೆ. ಯಾವಾಗ ಇವರಿಗೆ ತಕ್ಕ ಬುದ್ಧಿ ಬರುತ್ತೋ ಗೊತ್ತಿಲ್ಲ.—ಮುಂಗಲ ಎಂಬ ಗ್ರಾಮದಲ್ಲಿ ೧೦—೧೫ ವರ್ಷದ ಒಬ್ಬ ಹುಡುಗನು ಒಂದು ಮಾವಿನ ಮರದ ಮೇಲೆ ಹತ್ತಿ ಕಾಯಿಗಳನ್ನು ಕೀಳುತ್ತಾ ಇರಲು, ಅಕಸ್ಮಾತ್ತು ಕಾಲಿಟ್ಟಿದ್ದ ಕೊಂಬೆ ಮುರಿದು, ಆ ಹುಡುಗನು ಕೆಳಗೆ ಬಿದ್ದು ಸತ್ತನು. ನಿನ್ನೆ ಬೆಟ್ಟದಲ್ಲಿ ಒಬ್ಬ ಹೆಂಗಸು ಕಾಡು ಹಣ್ಣುಗಳನ್ನು ಕೀಳುತ್ತಾ ಇರಲು, ಒಂದು ಸರ್ಪವು ಆಕೆಯ ಕೈಯನ್ನು ಕಚ್ಚಿತು. ಆಕೆಯು ಸತ್ತುಹೋದಳು.—ಅಲ್ಲಿಗೆ ಸಮೀಪದಲ್ಲಿ ಒಂದು ಹಸು ಹುಲ್ಲನ್ನು ಮೇಯಲು ಹುತ್ತದ ಬಳಿಗೆ ಬಂದು ಇದ್ದಾಗ ಹೊಂಗದ ಹುಲ್ಲು ಬೆಳೆದಿದ್ದ ಕಲ್ಲನ್ನು ತೆಗೆದುಕೊಂಡು ಅದನ್ನು ಹೊಡೆದು ಕೊಂದು ಹಾಕಿದರು. ಈ ಕಾರ್ಯವು ವಿಚಾರಣೆ ಮಾಡುತ್ತಾ ಇದೆ. ಸೈಥರದಲ್ಲಿ ರೈತರಿಗೂ ಗೌಡರಿಗೂ ಅನೇಕ ವರ್ಷಗಳಿಂದ ವಾಸ್ತವ್ಯ ನಡೆಯುತ್ತಾ ಬಂದಿದೆ. ಅದರ ಜೊತೆಗೆ ಈಗ ಇನ್ನೊಂದು ವ್ಯಾಜ್ಯ ಹುಟ್ಟಿದೆ ಅದೇನೆಂದರೆ. ಕೋರ್ಟಿನ ಒಳಗೆ ಹೋಗುವುದಕ್ಕೆ ತಿಪ್ಪರು ಉಪ್ಪಿನ ಮೂಟೆಗಳನ್ನು ಮಾಡಿಕೊಂಡು, ಕೆರೆಯ ಹತ್ತಿರ ಹೋಗುವಂತೆ ಮಾಡಿರುತ್ತಾರೆಂದು ಒಕ್ಕಲಿಗರು ಅರ್ಜಿಯನ್ನು ಒಪ್ಪಿಸಿರುತ್ತಾರೆ. ಈ ವಿಷಯದಲ್ಲಿ ಅಮಲ್ದಾರರು ಸದ್ಯ ಮೊಕದ್ದಮೆಯಲ್ಲಿ ಕೆಲಸ ಮಾಡದ ಹಾಗೆ ಅಪ್ಪಣೆ ಮಾಡಿರುತ್ತಾರೆ. ಆದರೆ ಸಬ್ ಡಿವಿಜನ್ ಆಫೀಸರು ತಾವೇ ಖುದ್ದು ಬಂದು ನೋಡುತ್ತಾರೆಂದು ವರ್ತಮಾನವಿದೆ. ಅವರು ಬಂದು, ಸ್ಥಳ ಮತ್ತು ರೈತರ ವ್ಯಾಜ್ಯ ಇತ್ಯರ್ಥಮಾಡುವರೆಂದು ನಂಬುತ್ತಾರೆ.—ಇಲ್ಲಿ ಮಳೆಯು ಸ್ವಲ್ಪವೂ ಇಲ್ಲ. ಕುಡಿಯುವ ನೀರಿಗೆ ಬಹು ತೊಂದರೆಯಾಗಿತ್ತು. ಆದರೆ ಕೋಟೆಯಲ್ಲಿ ಕಟ್ಟಿ ಹೋಗಿದ್ದ ಕೆರೆಯನ್ನು ಶೋಧಿಸಬೇಕಾಗಿ ಇಲ್ಲಿನ ಡಾಕ್ಟರವರು ಆಲೋಚಿಸಿ, ಅದಕ್ಕೆ ಚಂದಾ ಪಟ್ಟಿ ಮಾಡಿಸಿ, ಗ್ರಾಮಸ್ಥರಿಂದಲೂ ಉದ್ಯೋಗಸ್ಥರಿಂದಲೂ ಹಣ ವಸೂಲ್ಮಾಡಿದರು. ಅನಂತರ ಕೊಳದ ನೀರನ್ನು ಕಂಟ್ರಾಕ್ಟರ ಮೂಲಕ ಎತ್ತಿಸಿ ಅದರಲ್ಲಿದ್ದ ಕೆಸರನ್ನು ಸಹ ತೆಗೆಸಿದರು. ಈಗ ಎಲ್ಲರಿಗೂ ಕುಡಿಯುವುದಕ್ಕೆ ಒಳ್ಳೆ ನೀರು ಸಿಕ್ಕಿತು. ಈ ಕಾರ್ಯಕ್ಕಾಗಿ ಶ್ರಮಪಟ್ಟು ಮುಂತಾದವರು ಬಹು ಸಹಾಯ ಮಾಡಿದ್ದು ತುಂಬಾ ಸ್ತೋತ್ರಾರ್ಹವಾದದ್ದು

ತುಮಕೂರು.—ಬಿಸಲಿನ ತಾಪವು ಅಧಿಕವಾಗಿರುವುದರಿಂದ ಊರಲ್ಲಿ ಜನರಿಗೆ ಭಯವು ತಲೆದೋರುತ್ತಿರುವುದರಿಂದಲೂ ಪ್ಲೇಗು ಬಲವತ್ತರವಾಗಿದೆ ಎಂದು ಹೇಳಬಹುದು. ಸಂಪೂರ್ಣವಾಗಿ ಊರು ಆರೋಗ್ಯವಾಗಿರುವುದರಿಂದ ಜನರೆಲ್ಲರು ಈ ವಸಂತಕಾಲದಲ್ಲಿ ಯಾವ ತೊಂದರೆಯೂ ಇಲ್ಲದಿರುವುದರಿಂದ ಸಂತೋಷವಾಗಿರುತ್ತಾರೆ. ಉತ್ತರೋತ್ತರ ಸ್ವಾಮಿಯು ನಮ್ಮ ತಾಲ್ಲೂಕಿನ ಸ್ಥಿತಿಯನ್ನೂ ಈಗಿನಂತೆ ಸುಭಿಕ್ಷವನ್ನಾಗಿ ಮಾಡುವವನಾಗಲಿ ಎಂದು ಪ್ರಾರ್ಥಿಸುತ್ತೇವೆ.—ಈ ಬರ್ಗ ಕೆರೆಯ ಹಿಂಭಾಗದ ರೈತರ ಬೆಳೆ ತೆನೆಯಾಗಿ ಇನ್ನು ಒಂದು ತಿಂಗಳೊಳಗಾಗಿ ಕಟಾವಿಗೆ ಸಿದ್ಧವಾಗುತ್ತೆ. ಇಂಥಾದ್ದರಲ್ಲಿ ಇನ್ನು ಹದಿನೈದು ದಿವಸಗಳಿಗಾಗುವಷ್ಟು ಕೂಡಾ ಕೆರೆಯಲ್ಲಿ ನೀರಿರುವುದರಿಂದ ಈ ನಡುವೆ ಮಳೆ ಬಾರದಿದ್ದ ಪಕ್ಷದಲ್ಲಿ ಸಂಪೂರ್ಣವಾದ ಫಸಲು ದೊರೆಯಲು ಅವಕಾಶವಿಲ್ಲ.—ನಮ್ಮ ಮುನಿಸಿಪಾಲಿಟಿಯವರು ಈ ತಿಂಗಳು ೨೯ಕ್ಕೆ ಕೋಲ್ ಗೇಟಿನ ಕಂಟ್ರಾಕ್ಟಿನ ಟೆಂಡರುಗಳನ್ನು ಕೊಡುತ್ತಾರೆ. ಈ ಪ್ರವಾಹ ಸುಂಕ ವಸೂಲಾತಿಯಿಂದ ಕಂಟ್ರಾಕ್ಟರಿಂದಾಗಲಿ ಅಲ್ಪ ನೌಕರರಿಂದಾಗಲಿ ಜನರಿಗೆ ಉಪದ್ರವ ತೊಂದರೆಯುಂಟಾಗದಂತೆ ನೋಡಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ.—ಈ ಊರಿನ ಕಗ್ಗೆರೆ ಹಿಂಭಾಗದಲ್ಲಿರುವ ತೊಟ್ಟಿನಲ್ಲಿ ನೀರು ಸಮೃದ್ಧಿಯಾಗಿರುವುದರಿಂದ ಹೆಂಗಸರು, ಮಕ್ಕಳು ಮತ್ತು ದನಕರುಗಳು ಸ್ನಾನಕ್ಕೆ, ಬಟ್ಟೆ ಒಗೆಯಲೂ ಬಹುವಾಗಿ ಬರುತ್ತಾರೆ. ಈ ತೊಟ್ಟಿಗೆ ಹೋಗಬೇಕಾದರೆ ರಸ್ತೆ ಅಡಿಭಾಗದಿಂದ ಕೊರಕಲಾದ ಮತ್ತು ಇಳಿಜಾರಾದ ದಾರಿ ಇರುವುದರಿಂದ ರಾತ್ರಿ ಮತ್ತು ಹಗಲುಕಾಲದಲ್ಲಿ ತುಂಬಾ ಕಷ್ಟವಾಗಿರುತ್ತೆ. ನಮ್ಮ ಅಧಿಕಾರಿಗಳು ಆ ಪ್ರದೇಶವನ್ನು ರಿಪೇರಿ ಮಾಡಿಸಿದಲ್ಲಿ ಮೆಟ್ಟಲುಕಟ್ಟಿಸುವುದು ಅತ್ಯಂತಾವಶ್ಯಕವೆಂಬುದು ನಿವೇದ್ಯವಾಗಿರುತ್ತೆ. ಇಲ್ಲಿನ ಸರ್ಕಾರಿ ಪೌಂಡಿನಲ್ಲಿ ಹಾಳಿ ಬೀದಿಗಳಲ್ಲಿ ತಿರುಗುವ ದನಕರುಗಳನ್ನು ವಿಶೇಷವಾಗಿ ತುಂಬುತ್ತಾರೆ. ಮಾಲೀಕರುಗಳು ಅವುಗಳನ್ನು ಬಿಡಿಸಿಕೊಂಡು ಹೋಗುವ ಪರ್ಯಂತರ ದನಗಳು ಮೇವಿಲ್ಲದೆ ತುಂಬಾ ಕ್ಷೀಣದೆಸೆಯಲ್ಲಿರುತ್ತವೆ. ಈ ರೀತಿಯಾಗಿ ಮೂಗುಪ್ರಾಣಿಗಳನ್ನು ಆಹಾರವಿಲ್ಲದೆ ಶಿಕ್ಷಿಸುವ ಪೌಂಡು ಕೀಪರಿಗೆ ನಮ್ಮ ಅಮಲ್ದಾರರು ವಿವೇಕ ಹೇಳುವಂತೆ ಪ್ರಾರ್ಥಿಸುತ್ತೇವೆ.—ಇದೇ ತಾಲ್ಲೂಕಿಗೆ ಸೇರಿದ ಕೊಟ್ಟಿಕೆರೆ ಗ್ರಾಮದ ಸಮೀಪದಹಳ್ಳಿಯಾದ ರಾಮಗೊಂಡನಹಳ್ಳಿ ಎಂಬುವಲ್ಲಿರುವ ಅಕ್ಕಸಾಲೆ ಮಾತದ ಲಿಂಗಪ್ಪನೆಂಬುವನು ಬಹಳ ದಿನಗಳಿಂದಲೂ ಅನೇಕ ಶಾಸ್ತ್ರ ಮುಂತಾದವುಗಳನ್ನು ಶೋಧಿಸಿ, ಅನೇಕ ಸ್ಥಳಗಳನ್ನು ತಿರುಗಿ ಎಲ್ಲಿಯೂ ಆತನಿಗೆ ಆತ್ಮಸಮಾಧಾನ ದೊರಕದೆ ಹೋದ್ದರಿಂದ ಇದೇ ತಿಂಗಳು ತಾ ೨೩ನೇ ಭಾನುವಾರ ಇಲ್ಲಿನ ಕ್ರೈಸ್ತ ದೇವಾಲಯದಲ್ಲಿ ತಾನೂ ತನ್ನ ಕುಟುಂಬಕ್ಕೆ ಸೇರಿದ ಐದು ಜನರೂ ಜ್ಞಾನಸ್ನಾನ ಹೊಂದಿದರು.—ಈ ವರುಷದ ಪ್ಲೇಗಿನಲ್ಲಿ ಕಳ್ಳರ ಅವಾಂತರವು ವಿಶೇಷವಾಗಿತ್ತೆಂದು ಹಿಂದೆ ಅನೇಕಾವರ್ತಿ ಪ್ರಕಟವಾಗಿದ್ದದ್ದು ಸರಿಯಷ್ಟೆ. ಆಗ ಮಾಲುಸಹಿತವಾಗಿ ಸಿಕ್ಕಿದ ಪಸೇಬಾರ್ ಸಂಜುಂಡಿ, ಬಡಗಿ ವೇಂಕಟರಮಣ, ಲಕ್ಷ್ಮ, ಅಕ್ಕಸಾಲಿ ಮೈಲಾರಿ, ಇವರು ಕೇಡಿಮುಟಗರು, ಈ ಐವರುಗಳಿಗೆ ನಮ್ಮ ಅಮಲ್ದಾರರ ಕೋರ್ಟಿನಲ್ಲಿ ವಿಚಾರಣೆಯಾಗಿ ಇವರಿಗೆ ೧ಕ್ಕೆ ೬ ತಿಂಗಳ ಕಠಿಣಶಿಕ್ಷೆಯೂ, ೧೦೦ ರೂಪಾಯಿಗಳ ಜುಲ್ಮಾನೆಯೂ ವಿಧಿಸಲ್ಪಟ್ಟಿತು. ಈ ವಿಧವಾದ ಶಿಕ್ಷೆಯಿಂದ ಇಲ್ಲಿನ ಕುಟಿಲಜನರಿಗೆ ಭಯವೂ, ವಿವೇಕವೂ ಉಂಟಾಗಲು ತುಂಬಾ ಸಹಾಯವಾಯಿತು.—ಈ ವಾರದಲ್ಲಿ ಇಲ್ಲಿನ ಸ್ಕೂಲುಗಳನ್ನು ಡಿ॥ ಇನ್ಸ್ಪೆಕ್ಟರವರು ಪರೀಕ್ಷಿಸಲಾರಂಭಿಸಿರುತ್ತಾರೆ. ವರ್ಷ ಸ್ಕೂಲುಗಳು ಪ್ರಾರಂಭಿಸಿ ಇನ್ನೂ ಎರಡು ತಿಂಗಳು ಆಗಿಲ್ಲವಾದ್ದರಿಂದ ಸ್ಕೂಲುಗಳ ಸ್ಥಿತಿಯು ತುಂಬಾ ಅಸಮರ್ಪಕವಾಗಿರುವುದಕ್ಕೆ ಯಾವ ಸಂಶಯವು ವಿರಲಾರದು

ಹಾಸನ.—ಪೇಟೆಯಿಂದ ಬಂದವರ ಪೈಕಿ ಅನೇಕರು ಇದುವರೆಗೂ ರೋಗದಲ್ಲಿ ನರಳಿದ್ದಾಯಿತು. ಎಲ್ಲರೂ ಈಗೀಗ ಗುಣಹೊಂದುತ್ತಲಿದ್ದಾರೆ. ರೋಗ ಪೀಡಿತರಲ್ಲನೇಕರನ್ನು ಇಲ್ಲಿನ ಮುಪ್ಪಾನ್ ನಾಯನಾ ಪಂಡಿತರು ಮನೆ ಮನೆಗೂ ಹೋಗಿ ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಉತ್ತಮವಾದ ಔಷಧೋಪಚಾರಗಳಿಂದ ಗುಣಪಡಿಸಿದ್ದು ಬಹಳ ಸ್ತೋತ್ರಾರ್ಹವಾಗಿದೆ. ಇವರ ಸೌಲಭ್ಯ ಗುಣಕ್ಕಾಗಿ ಅನೇಕರು ಇವರನ್ನು ವಂದಿಸುತ್ತಾರೆ.—ವಿದ್ಯಾಭ್ಯಾಸದ ಇಲಾಖಾ ಇನ್. ಪ. ಸ್ವಾತೀಚಿರವರು ಈ ತಿಂಗಳು ೨೩ಕ್ಕೆ ಬಂದು, ಇಲ್ಲಿನ ಸ್ಕೂಲುಗಳನ್ನು ಪರೀಕ್ಷಿಸುತ್ತಾರಾದ ಕಾರಣ ಹೈಸ್ಕೂಲು ಮೊದಲುಗೊಂಡು ಯಾವ ಸ್ಕೂಲಿಗೂ ಬೇಸಿಗೆಯ ರಜಾವನ್ನು ಇನ್ನು ಕೊಟ್ಟಿಲ್ಲ.—ಈ ತಿಂಗಳು ೨೮ರ ಲಾಗಾಯ್ತು ೨೦ ದಿವಸಗಳು ಪ್ರೀಮಿಯಮ ವೇದಾಂತ ಪರೀಕ್ಷೆಯು ಈ ಊರಲ್ಲಿ ನಡೆಯುತ್ತಾದಕಾರಣ ನಡೆಯುವ ಪರೀಕ್ಷೆಗೆ ಸಂಬಂಧಪಟ್ಟವರಿಗೆಲ್ಲರಿಗೂ ಊಟೋಪಚಾರಗಳೇ ಮುಂತಾದವುಗಳನ್ನು ನೆರವೇರಿಸಲು ಈಗಿನಿಂದಲೇ ಅನೇಕ ಏರ್ಪಾಡುಗಳು ನಡೆಯುತ್ತಲಿವೆ. ಇಲ್ಲಿನ ಸನ್ಮಾರ್ಗ ಪ್ರವರ್ತಕ ಸಂಘದ ವಾರ್ಷಿಕ ಸಮಾರಂಭದ ವಿನೋದಗಳು ಈ ತಿಂಗಳು ೨೦ ರಲ್ಲಿ ನಡೆಯಿತು.—ಇಲ್ಲಿನ ಒಬ್ಬ ಅಧಿಕಾರಿಯು ಒಂದು ಸತ್ಕಾರ್ಯಕ್ಕೆಂದು ಚಂದಾ ಎತ್ತಿ ಅದರಿಂದ ಕೆಲವು ಸ್ವಾಂತಿಕ ಮಾಡಿಕೊಂಡದ್ದಾಗಿ ತಿಳಿಬರುತ್ತೆ.—ಇಲ್ಲಿನ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆಯು ಹೆಚ್ಚಾಗಿದ್ದರಿಂದಲೂ ಎಲ್ಲರಿಗೂ ಕ್ರಮವಾಗಿ ಔಷಧಿಗಳನ್ನು ಕೊಟ್ಟು ಸುಧಾರಿಸಿ ಕಳುಹಿಸುವುದು ಒಬ್ಬ ಕಾಂಪೌಂಡರಿಂದ ಕಷ್ಟವಾಗಿರುವುದರಿಂದಲೂ ಆಸ್ಪತ್ರೆಯಲ್ಲಿ ಮಧ್ಯಾಹ್ನ ೧–೨ ಗಂಟೆಯವರೆವಿಗೂ ರೋಗಿಗಳ ಗಲಾಟೆಯೂ ಕಾಯಿಲೆಯಲ್ಲಿರುವ ಚಿಕ್ಕ ಚಿಕ್ಕ ಮಕ್ಕಳ ಅಳುವಿಕೆಯೂ ಅಲ್ಲಿ ಕೆಲಸ ಮಾಡುವವರಿಗೆ ತುಂಬಾ ತೊಂದರೆಯನ್ನುಂಟುಮಾಡುತ್ತಲಿದೆ. ಇಂತಹ ದೊಡ್ಡ ಸ್ಥಳಗಳಲ್ಲಿ ಕಾಂಪೌಂಡರುಗಳ ಸಂಖ್ಯೆಯು ಹೆಚ್ಚಾಗಿದ್ದರೆ ಬಹಳ ಅನುಕೂಲ. ಇಂಡಿಯನ್ ಥಿಯಸಾಫಿಕಲ್ ಸೊಸೈಟಿ ಪ್ರಾವಿನ್ಸಿಯಲ್ ಸೆಕ್ರೆಟರಿಯವರಾದ ಮೆ॥ ಎ. ನಾರಣಸ್ವಾಮಿ ಅಯ್ಯರವರು ಚಿಕ್ಕಮಗಳೂರು ಮಾರ್ಗವಾಗಿ ಇಲ್ಲಿಗೆ ಈ ತಿಂಗಳು ಆದಿಯಲ್ಲಿ ದಯಮಾಡಿಸಿದ್ದರು. ಅವರು ಹಿಂದೂಮತಕ್ಕೋಸ್ಕರ ಪುತ್ರಕಳತ್ರ ಬಂಧುವರ್ಗಗಳನ್ನು ಪರಿತ್ಯಾಗ ಮಾಡಿ, ಪ್ರತಿಯೊಂದು ದೊಡ್ಡ ಸ್ಥಳಗಳಿಗೂ ಹೋಗಿ, ಅಲ್ಲಿನ ನಿವಾಸಿಗಳಿಗೆ ಅತ್ಯುತ್ತಮವಾದ ಅನೇಕ ಗೂಢಾರ್ಥಗಳನ್ನು ತಿಳಿಸುವುದರ ಮೂಲಕ ಉಪನ್ಯಾಸ ಕೊಡುತ್ತಾ ಅಲ್ಲಲ್ಲಿ ಇದನ್ನು ಪ್ರಚಾರ ಮಾಡಲೋಸುಗ ಥಿಯಸಾಫಿಕಲ್ ಸಂಘದ ಬ್ರಾಂಚ್ ಸಂಘಗಳನ್ನು ಸ್ಥಾಪಿಸುತ್ತಾ, ಇಲ್ಲಿಗೂ ಬಂದಿದ್ದರು. ಇಲ್ಲಿಗೆ ಬಂದ ದಿನವೇ ಹಿಂದೂಮತವು ಈ ಕಾಲದ ಸೈನ್ಸಿಗೆ ಅನುಸಾರವಾಗಿದೆ ಎಂತಲೂ ಎರಡನೆಯ ದಿನ ಥಿಯಸಾಫಿಕಲ್ ಸಂಘವನ್ನು ಯಾತಕ್ಕೆ ಸ್ಥಾಪಿಸಿರುತ್ತಾರೆಂಬ ವಿಚಾರದ ಮೇಲೆ ಎಲ್ಲರೂ ಏಕಮನಸ್ಸಿನಿಂದ ಭಗವಂತನನ್ನು ಪ್ರಾರ್ಥಿಸಬೇಕೆಂತಲೂ ಮೂರನೆಯ ದಿನ ಮನಸ್ಸಿನ ಯೋಚನಾಶಕ್ತಿಯ ಮೇಲೆಯೂ ನಾಲ್ಕನೆಯ ದಿನ ಪುನರ್ಜನ್ಮದ ವಿಚಾರವಾಗಿಯೂ ಐದನೆಯ ದಿನ ಎಲ್ಲರೂ ಯಾವ ದೇವರನ್ನು ಪೂಜಿಸಬೇಕೆಂಬ ವಿಚಾರವಾಗಿಯೂ ಆರನೆಯ ದಿನ ವಿಗ್ರಹಾರಾಧನೆಯ ವಿಷಯದಲ್ಲಿಯೂ ಏಳನೆಯ ದಿನ ಶ್ರೀಮದ್ಭಾಗವತದಲ್ಲಿರುವ ತತ್ವಾರ್ಥದ ವಿಚಾರವಾಗಿಯೂ ಇಲ್ಲಿನ ಜೂಬಿಲೀ ಹಾಲಿನಲ್ಲಿ ಉಪನ್ಯಾಸ ಮಾಡಿದರು. ಆಗ ಇಲ್ಲಿನ ಅಸಿಸ್ಟೆಂಟ್ ಕಮೀಷನರವರೂ ಸಬ್ ಜಡ್ಜರವರೂ ಡಾಕ್ಟರು ಅಡ್ವೋಕೇಟ್ ಮೊದಲಾದ ಅನೇಕಾನೇಕ ದೊಡ್ಡ ದೊಡ್ಡ ಅಧಿಕಾರಿಗಳೂ ಎಲ್ಲಾ ಪಬ್ಲಿಕ್ ಆಫೀಸಿನ ಉದ್ಯೋಗಸ್ಥರೂ, ಸ್ಕೂಲ್ ಮಾಸ್ಟರುಗಳೂ, ವರ್ತಕರೂ, ಇತರ ಲೌಕಿಕ ವೈದಿಕ ಮತಸ್ಥರೂ ಘನವನ್ನು ಪಡೆದ ರೆವರೆಂಡ್ ಸ್ಯಾಮ್ಯುಯೆಲ್ ಸಾಹೇಬರವರೂ ದಯಮಾಡಿಸಿದ್ದರು. ಏಪ್ರಿಲ್ ೭ ರಲ್ಲಿ ಇಲ್ಲಿಯೂ ಥಿಯಸಾಫಿಕಲ್ ಸೊಸೈಟಿಯ ಬ್ರಾಂಚ್ ಸಂಘವನ್ನು ಸ್ಥಾಪಿಸಿದರು. ಇದಕ್ಕೆ ದೊಡ್ಡ ಮನುಷ್ಯರು ೧೭ ಮಂದಿ ಸೇರಿದಾರೆ. ಹೈಸ್ಕೂಲ್ ಅ॥ ಮಾಸ್ಟರ್ ಮೆ॥ ಎನ್. ಸಿ. ಕೇಶವಯ್ಯಂಗಾರ್, ಬಿ. ಎ. ಯವರು ಸೆಕ್ರೆಟರಿಯಾದರು. ಇವೆಲ್ಲದ ಮೇಲೆ ಮೆ॥ ನಾರಾಯಣಸ್ವಾಮಿ ಅಯ್ಯರವರು ತುಮಕೂರಿಗೆ ದಯಮಾಡಿಸಿದರು.

ತೀರ್ಥಹಳ್ಳಿ.—ಕಾಲಸ್ಥಿತಿ ಜನಾ ಆರೋಗ್ಯವಿಲ್ಲ. ಬಿಸಲಿನ ತಾಪ ಜಾಸ್ತಿಯಾಗಿದೆ. ಅನೇಕ ಬಾವಿಗಳಲ್ಲಿ ನೀರಿಲ್ಲದೆ ಜನರು ಬಹು ಕಷ್ಟಪಡುತ್ತಿದ್ದಾರೆ. ಸರ್ವಭಾಗದಲ್ಲೂ ಮಳೆಯು ಮನುಷ್ಯರಿಗೂ ಜೀವರಾಶಿಗಳಿಗೂ ಬಹು ಅವಶ್ಯವಾಗಿದೆ. ಮಳೆಯು ಕಡಿಮೆಯಾದ್ದರಿಂದ ಭತ್ತದ ಬೆಳೆಯು ಕಡಮೆಯಾಗಿ ಧಾರಣೆಯು ಜಾಸ್ತಿಯಾಗಿದೆ. ಸುಮಾರಾದ ಅಕ್ಕಿ ಮಣ್ಣ ಹತ್ತು ರೂಪಾಯಿಗೆ ಇಳಿದಿದೆ. ಈ ಮಲ್ನಾಡಿನ ವಾಸಿಗಳಿಗೆ ಭತ್ತ ಹೊರ್ತು ಬೇರೆ ಯಾವ ಧಾನ್ಯಗಳೂ ಇಲ್ಲ. ಬಡವರ ಕಷ್ಟವನ್ನು ಹೇಳ ತೀರದು. ಅನೇಕರಿಗೆ ಮೂರು ನಾಲ್ಕು ತಿಂಗಳ ಮೇಲೆ ಊಟಕ್ಕೆ ಏನುಗತಿಯೋ ಗೊತ್ತಿಲ್ಲ ಎನ್ನುವಷ್ಟಾಗಿದೆ.—ಅಡಿಕೆಯು ಬೆಳೆ ಈ ಸಾರಿ ತೀರಾ ಕಡಿಮೆ. ಹೋದ ಸಾರಿ ಮಣಕ್ಕೆ ೧೦ ರೂ ಇದ್ದ ಧಾರಣೆ ಈ ಸಾರಿ ೭—೭॥ ರೂಪಾಯಿಗೆ ಇಳಿದಿದೆ. ಇಲ್ಲಿನ ಸಾಯರ್ ಬಾಬಿನಲ್ಲಿ ವಿಪರೀತ ಸುಂಕ ವಸೂಲ್ ಆದಾಗ್ಯೂ ಸರ್ಕಾರಕ್ಕೆ ಬಹು ಕೊರತೆ ಸಲ್ಲುತ್ತದೆಂದು ಆಗಾಗ್ಯೆ ಜನರು ಫಿರ್ಯಾದು ಮಾಡುತ್ತಾರೆ. ಮೇಲ್ಪಟ್ಟವರು ತುಂಬಾ ನಿಗಾಕೊಟ್ಟರೆ ಸರ್ಕಾರಕ್ಕೆ ಫಾಯಿದೆ ಉಂಟು.—ಇಲ್ಲಿನ ರಂಗಾರೆ ಜನರೆಲ್ಲರು ಕಾಮನಹಬ್ಬ ಮಾಡುವದು ಅವರ ಪದ್ಧತಿಯಂತೆ; ಹಾಗೆ ಈ ವರುಷವೂ ಮಾಡಿದರು. ಆದರೆ ಅವರ ಕಾಮಣ್ಣನು ಇನ್ನೂ ಚೌಕದಲ್ಲಿ ತಪಸ್ಸು ಮಾಡುತ್ತಿದೆ. ರಂಗಾರೆಯವರು ತಮ್ಮ ಕಾಮನನ್ನು ಮೆರವಣಿಗೆ ಮಾಡದಂತೆ ತಡೆದಿದ್ದಾರಂತೆ. ಹೋದ ಸಾರಿ ಯಾವ ರೀತಿ ಮಾಡಿದರೋ ಅದರಂತೆ ಈ ಸಾರಿ ಸರ್ಕಾರದವರ ಅಪ್ಪಣೆಯಿಂದ ಮೆರವಣಿಗೆ ಮಾಡಿಸುವುದಕ್ಕೆ ಆ ಜನರೆಲ್ಲರು ಅಪೇಕ್ಷಿಸಿ, ಡೆಪ್ಯುಟಿ ಕಮಿಷನರಿಗೆ ಅರ್ಜಿ ಕೊಟ್ಟಿದ್ದಾರೆಂದು ಹೇಳುವರು. ಕಳೆದ ವರುಷ ಅಮಲ್ದಾರರಾಗಿದ್ದ ಮೆ॥ ವೆಂಕಟರಮಣಜ್ಯೋತಿಗಳು ತಕ್ಕ ಪೋಲೀಸಿನವರನ್ನು ಏರ್ಪಡಿಸಿ, ಗಲಾಟೆಗೆ ಆಸ್ಪದಕೊಡದಂತೆ ಎಲ್ಲರಲ್ಲಿಯೂ ಏಕರೀತಿಯಾಗಿದ್ದು, ಕಾರ್ಯ ನಡೆಸಿದ ಮೇಲೆ ಈಗಿರುವ ಅಮಲ್ದಾರು ಎಲ್ಲರ ಪ್ರಯೋಜನಕ್ಕೋಸ್ಕರ ಅವರಂತೆ ಅನುಕೂಲ ಮಾಡಿ ನಡೆಸಿಕೊಡಬಾರದೇ ಎಂದು ಡೆಪ್ಯುಟಿ ಕಮಿಷನರಿಗೆ ಸೂಚಿಸಿದಾರಂತೆ. ಕಡೆಗೆ ಇನ್ನೆಷ್ಟು ದಿವಸಗಳಲ್ಲಿ ಈ ಮೆರವಣಿಗೆ ಆಗುವದೆಂದು ಆ ಜನರು ನಿರೀಕ್ಷಿಸುತ್ತಾ ಇದಾರೆ. ಮುಖ್ಯವಾಗಿ ಅಮಲ್ದಾರು ತಮ್ಮ ರಂಗಾರೆ ಜನಗಳ ಪ್ರೇಮವನ್ನು ಸಂಪಾದಿಸಿಕೊಂಡು, ಕಾರ್ಯ ನಡೆಸುವದು ಉತ್ತಮವಾಗಿಯೂ ಅವರ ದೇವತಾ ಕಾರ್ಯಗಳಲ್ಲಿ ಪ್ರೋತ್ಸಾಹ ಕೊಟ್ಟು, ಸಣ್ಣ ಕೆಲಸಗಳಲ್ಲಿ ಜನರು ಡೆಪ್ಯುಟಿ ಕಮಿಷನರವರಿಗೂ ಅರ್ಜಿಗಳನ್ನು ಟೆಲಿಗ್ರಾಮುಗಳನ್ನು ಕೊಡದಂತೆ ಕೆಲಸ ನಡೆಸಿದ್ದರೆ ಎಲ್ಲರೂ ಸಂತೋಷಪಡುವದರಲ್ಲಿ ಆಕ್ಷೇಪವಿರಲಿಲ್ಲ. ಹಜೂರ್ ಡೆಪ್ಯುಟಿ ಕಮಿಷನರು ಈ ಜನರ ಅರ್ಜಿ ನೋಡಿಕೊಂಡು, ಜೂನ್ ೧ಕ್ಕೆ ಹಿಯರಿಂಗು ಇಟ್ಟಿದ್ದೇವೆ, ಖುದ್ದು ಎಲ್ಲರೂ ಬರಬೇಕೆಂದು ತಿಳಿಸಿದಾರಂತೆ. ಈ ಜನರೋ—ನಮ್ಮ ಖರ್ಚಿನಿಂದ ಕಾಮನ ಉತ್ಸವ ಮಾಡುವದಕ್ಕೆ ಹೀಗೆಲ್ಲಾ ಯಾಕೆ ಕಷ್ಟಪಡಿಸುತ್ತಾರೆ? ಬಡವರಾದ ನಮಗೆ ಅಧಿಕಾರಿಗಳು ಬೇಗನೆ ಉತ್ತರ ಕೊಡಬಾರದೇ? ಜೂನ್ ತಿಂಗಳಲ್ಲಿ ನಮ್ಮ ಕಾಮನು ಮಳೆಯಿಂದಲೂ ಬಿಸಲಿನಿಂದಲೂ ಹಾಳಾದ ಮೇಲೆ ಅದರ ವಿಚಾರ ಬೇಡವಾಗುತ್ತದೆಂದು ನಿಟ್ಟುಸಿರು ಬಿಡುತ್ತಾರೆ.—ಈ ಊರಿನಲ್ಲಿ ಇಗಲೇ ಕೆಲವು ಸ್ಥಳಗಳಲ್ಲಿ ಇಲಿಗಳು ಬೀಳುವದಕ್ಕೆ ಪ್ರಾರಂಭವಾಗಿದೆ ಎಂದು ಕೆಲವರೂ ಇಲ್ಲವೆಂದು ಕೆಲವರೂ ಹೇಳುತ್ತಾರೆ. ಬೇರೆ ಕೆಲವರು ಇಲಿಗಳು ಸತ್ತು ಬಿದ್ದರೂ ನಿಜ ಹೇಳದೆ ಗೋಪ್ಯವಾಗಿದ್ದಾರೆ. ಊರಿನ ಅನೇಕ ಭಾಗಗಳಲ್ಲಿ ಕೊಳಕು ತುಂಬಿಹೋಗಿದೆ. ಯಾವಾಗ ಶುದ್ಧಮಾಡುತ್ತಾರೋ ಗೊತ್ತಿಲ್ಲ. ಅನೇಕ ಚರಂಡಿಗಳಲ್ಲಿ ನೀರು ಸಲೀಸಾಗಿ ಹೋಗುವದಕ್ಕೆ ಏರ್ಪಡಿಸಿಲ್ಲ. ಈಗಲಾದರೂ ಜಾಗ್ರತೆಯಿಂದ ಎಚ್ಚರಿಕೆ ತಕ್ಕೊಂಡರೆ ಉತ್ತಮವಾದೀತು.—ಇಲ್ಲಿನ ವಕೀಲರಲ್ಲಿ ಒಬ್ಬಾತನು ಯಾವಾಗಲೂ ಅಕ್ರಮ ರೀತಿಯಲ್ಲಿದ್ದಾನೆಂತಲೂ ಮಾನಿಷ್ಠರಾದ ಜನರ ಮೇಲೆಯೂ ದೊಡ್ಡಮನುಷ್ಯರ ಮೇಲೆಯೂ ಒಳಸಂಚು ಮಾಡಿಸಿ, ಕೇಸುಗಳನ್ನು ಮಾಡಿಸುತ್ತಾನೆಂತಲೂ ಕೇಸುಗಳಲ್ಲಿ ಬೇಕಾಗಿ ಸುಳ್ಳುಗಳನ್ನು ಕಲ್ಪಿಸಿಕೊಡುತ್ತಾನೆಂತಲೂ ಕೋರ್ಟಿಗೆ ಬರುವ ಜನರಲ್ಲಿ ಮರ್ಯಾದೆ ಇಲ್ಲದೆ ನಡೆಯುತ್ತಾನೆಂತಲೂ ಗ್ರಾಮಸ್ಥರಲ್ಲಿ ಕಲಹಗಳನ್ನು ಬೆಳೆಸುತ್ತಾನೆಂತಲೂ ಜನರೆಲ್ಲರು ಮಾತನಾಡುತ್ತಾರಲ್ಲದೆ, ತಾಲ್ಲೂಕು ಮ್ಯಾಜಿಸ್ಟ್ರೇಟರು ಬಹು ಸೂಕ್ಷ್ಮದಿಂದ ನೋಡಿದರೆ ಇಂಥಾ ಪುಣ್ಯಾತ್ಮರನ್ನು ಗದರಿಸಬಹುದಲ್ಲಾ ಎಂದು ಆಕ್ಷೇಪಿಸುತ್ತಾರೆ. ವಕೀಲರು ಸತ್ಯಪರರಾಗಿಯೂ ಮಾನವುಳ್ಳವರಾಗಿಯೂ ದೇವಭೀತಿಯುಳ್ಳವರು ಪಾಪಭೀತಿಯುಳ್ಳವರೂ, ಜನರ ಯೋಗ್ಯತೆ ಗೌರವಗಳನ್ನು ತಿಳುಕೊಳ್ಳುವವರಾಗಿಯೂ ಇರಬೇಕಲ್ಲದೆ, ಮಾನಹೀನರು, ಜಗಳಗಂಟಿಗಳು, ಕಕ್ಷಿಗಾರರಲ್ಲಿ ದುರಾಸೆಯಿಂದ ಹಣ ಸುಲಿಗೆಕೊಳ್ಳುವವರು, ಕುಡುಕರು, ಅನ್ಯತರು ಮುಂತಾದ ದುರಾಚಾರಿಗಳಾಗಿರಕೂಡದು. ಹೀಗಿದ್ದರೆ ಸರ್ಕಾರಕ್ಕೂ ಪ್ರಜೆಗಳಿಗೂ ನಷ್ಟ.—ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಮೆ॥ ಬಾಬಾ ಸಾಹೇಬರು ಮೊಗ್ರವಳ್ಳಿ ನಾಲೂರ ವರಿಗೂ ದಯಮಾಡಿಸಿ, ಎರಡು ಸ್ಕೂಲುಗಳನ್ನು ಪರೀಕ್ಷಿಸಿ ಹೋದರು. ಅಲ್ಲಿನ ವಿದ್ಯಾಭಿವೃದ್ಧಿಯು ಚನ್ನಾಗಿದೆ ಎಂದು ಸಂತೋಷಪಟ್ಟರೆಂದು ತೋರಿತು. ಹೊಳೆ ಆಚೆ ಬಾಳುವಳ್ಳಿ ಗ್ರಾಮದಲ್ಲಿ ಒಂದು ಸ್ಕೂಲು ಇದೆ. ಅದರಲ್ಲಿ ಕ್ರಮವಾಗಿ ಕೆಲಸ ನಡೆಯುವದಿಲ್ಲವೆಂದು ಅಲ್ಲಿನ ನಿವಾಸಿಗಳು ಕೊರಗುತ್ತಾರೆ. ಸಂಬಳ ತಕ್ಕೊಂಡ ಉಪಾಧ್ಯಾಯರು ಮಕ್ಕಳಿಗೆ ಮುತುವರ್ಜಿಯಿಂದ ಪಾಠ ನಡೆಸಿದರೆ ಅವರು ಸಂತೋಷಿಸುವರು

ಪ್ರಪಂಚದಲ್ಲಿ ದೊಡ್ಡದು ಯಾವದು?

19

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ:—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಹರಿಭಟ್ಟಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ಗ್ರಾಮಸುಬ್ಬಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುತಾರೆ. ಕ್ರಯ ೨ ಆಣೆ

೩. "ಸ್ವಪ್ರಯಾಣ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪. "ರೋಮನರ ಚರಿತ್ರೆ." ಕ್ರಯ ೦—೨—೦
೫. "ಗ್ರೀಕರ ಚರಿತ್ರೆ." ,, ೦—೩—೦
೬. "ಅನುಭವಾನಂದ.",, ೦—೬—೦
೭. "ಗಣಿತ ಸಂಜೀವಿನಿ." ೦—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧೨—೦
೧೧ "೧೯೦೫ನೇ ವರುಷದ ಡೈರಿಗಳು"
ಫ್ಲಾಪ್, ಪೆನ್ಸಿಲ್ ಸಹಿತ ೦—೬—೬; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಜ್ವರಹರಿ. 24

ಇದು ಸಾಧಾರಣ ಜ್ವರ, ಚಳೀಜ್ವರ, ಗಾರೇಜ್ವರ, ಪಿತ್ತಜ್ವರ, ತಿಳಿಜ್ವರ, ವಾತಜ್ವರ, ಚಳಿ ಹಿಡಿಯುವದು ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಸುಖ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೬—೧೨ ಆ., ೧೧ ರೂ.; ಹೆಚ್ಚಿರುವ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮಂ ಕ ರ್ಪೂ ರ.

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ನೋವು. ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಸುಖಪ್ರದವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಬಸ್ತಾ ಕರ್ಪೂರಗವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈಶ್ಯಕಾಲೆಗಳಲ್ಲೂ, ದೊಡ್ಡ ಜಾತ್ರೆಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಪತ್ರಿಯಾವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಲೇನ್ ಲೈನ್, ಮದರಾಸ್.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

3

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—MR. HUGHES, MYSORE ZOO.

ಶ್ರೀ ತಾಂಬೂಲ.

21

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲ



ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಒಡನೆ ಗುಣಕಾಣುವದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನನ್ನ ವಿಳಾಸ:—

ದೇವನಹಳ್ಳಿ ಟವನ್, ಯಂ. ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟೀಷನರ್.

ಹೋ ಮೋ ಸಿ ಯಾ.

ಕಷ್ಟ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅಂಗಡಿ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋಟು, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ದೇವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ದಾರ್ಕವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು. ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಛಾರ್ಜು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಛಾರ್ಜು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಹುಂಡಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಛಾರ್ಜು ಮಾಫಿ. ಎಲ್ಲಾ ಜಾತ್ರೆಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪೆನಿ. ೨೭ ಸೆಕೆಂಡು ಲೇನ್ ಲೈನ್. ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

7—4—1905 ರಿಂದ 14—4—1905 ರ ವರೆಗೆ.

ಸ್ಥಳ.	ಪ್ಲೇಗ್ ಆಗಲಿ ಬಿದ್ದ.	ಸತ್ತ ಬಿದ್ದ.	ಹೋದವಾರ ಈ ವಾರ ಸಂಖ್ಯೆ.	
ಬೆಂಗಳೂರು ಪಟ್ಟಣ	20	16	5	
ಮೈಸೂರು ,,	3	0	1	
ಬೆಂಗಳೂರು ಡಿಸ್ಟ್ರಿಕ್ಟ್	13	9	26	2
ಮೈಸೂರು ,,	9	6	49	3
ಕೋಲಾರ್ ,,	1	7	29	1
ಕೋಲಾರ್ ಚಿನ್ನದ ಗಣಿಗಳು	4	2	9	
ತುಂಕೂರು ಡಿಸ್ಟ್ರಿಕ್ಟ್	7	6	11	
ಹಾಸನ ,,	0	0	7	
ಚಿತ್ರದುರ್ಗ ,,	2	2	5	
ಕಡೂರ್ ,,	0	0	17	
ಶಿವಮೊಗ್ಗ ,,	6	0	45	1
ಜುಮ್ಲಾ.	73	48	208	12

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ಚೈತ್ರ ಬಹುಳ ಅಷ್ಟಮಿ ಗುರುವಾರದಿಂದ ಚೈತ್ರ ಬಹುಳ ಚತುರ್ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಏಪ್ರಿಲ್

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ.	ತೇ ಮಾ ಮಾ
27	ಗುರು	ಅಷ್ಟಮಿ	6-15	ಶ್ರ	23 18	15
28	ಶುಕ್ರ	ನವಮಿ	8 22	ಧ	27-0	16
29	ಶನಿವಾ	ದಶಮಿ	11-26	ಶ	31 48	17
30	ರವಿವಾ ,,	ಏಕಾದಶಿ	15 35	ಪೂಭಾ	37 26	18
1	ಚಂದ್ರ .	ದ್ವಾದಶಿ	20-2	ಉ.ಭಾ	43 41	19
2	ಕುಜ ⌐	ತ್ರಯೋ	25 15	ರೇ	50 20	20
3	ಬುಧ	ಚತುರ್ದಶಿ	30 18	ಅ	6 24	21

,, ದ್ವಾದಶೀ ತಿಥಿ
. ಶೂನ್ಯತಿಥಿ, ಪ್ರದೋಷ
⌐ ಶ್ರೀರಂಗದ ರಂಗನಾಥಸ್ವಾಮಿ ರಥ.

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಶಾಲಿ ಅಕ್ಕಿ ಪಲ್ಲ ೧ಕ್ಕೆ	೧೬ ೮-	೧೧-೮
ಕೆಂಬೂತಿ ಅಕ್ಕಿ ಜವಳ	೧೦-೪-೬	೧೦-೮
,, ಮಧ್ಯಮ	೯-೧೨-೦	೧೧-೪
ಜಾಬ್ರಾಣಿ ಅಕ್ಕಿ	೯-೮-೦	೧೨-೮
ಸಣ್ಣಕ್ಕಿ ಅವಲ್	೧೨ ೦-೦	೧೨-೮
,, ಮಧ್ಯಮ	೧೧ ೮	೧೨-೪
ತೊಗರಿ ಬೇಳೆ ಪಲ್ಲ ೧ಕ್ಕೆ	೧೬-೮ ೦	೧೨-೨
,, ಮಧ್ಯಮ	೧೧-೦-೦	೧೬-೮
ಹೈರ್ ರಾಗಿ ಪಲ್ಲ ೧ಕ್ಕೆ	೪-೧೨-೦	೪-೧೧
ಕಾರ್ರಾಗಿ	೪-೭-೦	೪-೬
ಜೋಳ	೪-೧೨-೬	೭-೮
ಕಲಸಂದೆ ಪಲ್ಲ ೧ಕ್ಕೆ	೮-೧೨-೦	೯-೦
ಬಿಳೀ ಅವರೆ	೬ ೧೨ ೦	೭-೦
ಹೆಸರು	೯ ೧೨-೦	೯-೮
ಉದ್ದು	೮ ೧೪ ೬	೯-೮
ಕಡಲೆ	೯-೦-೦	೮-೦
ಎಳ್ಳು	೧೬ ೦-೦	೧೩-೫
ಹುರುಳಿ	೮-೦ ೦	೭-೧೧
ಹರಳು ೧-೧೩ ಸೇರಿಗೆ	೯-೮-೬	೭-೭
ಸೀಗೇಕಾಯಿ ಮಣ ೧ಕ್ಕೆ	೨-೪-೦	೨-೧೨
ಮೆಣಸಿನಕಾಯಿ	೪-೮-೦	೩-೮
,, ಮಧ್ಯಮ	೩-೧೨-೦	೩-೦
ಬೆಲ್ಲ ದೊಡ್ಡ ಅಚ್ಚು	೭-೪-೬	ಮ ೧-೧೩
ಒಳ್ಳೆಣ್ಣೆ ಮಣ ೧ಕ್ಕೆ	೪-೦ ೬	೪-೮
ಹರಳೆಣ್ಣೆ ,,	೪-೦-೦	೪-೦
ಕೊತ್ತಂಬರಿ ಪಲ್ಲ ೧ಕ್ಕೆ	೬-೬-೦	೭-೮
ಉಪ್ಪು ,,	೮-೦-೦	೬-೧೧
ಹುಣಸೇ ಹಣ್ಣು	೧ ೪-೦	೦-೯-೬
,, ಹಳೇದು	೦-೧೪-೦	೦-೧೧
ತುಪ್ಪ	೧೨-೦-೦	೧೬-೦
ಸೀಮೆಯೆಣ್ಣೆ ಡಬ್ಬಿ ೧ಕ್ಕೆ	೫-೩-೦	೪-೬
ತೆಂಗಿನಕಾಯಿ ೧೦೦ಕ್ಕೆ	೫-೬-೦	೪-೦
ಅಡಿಕೇಕಾಯಿ ಮಣ ೧ಕ್ಕೆ	೧-೯-೦	೦-೧೦
ಅಂಟುವಾಳಕಾಯಿ ಮಣ ೧ಕ್ಕೆ	೦-೧೪-೦	೦-೪
ಹತ್ತಿ (ಕಾರ್) ಕೆಂಪು	೧೫-೮-೦	೧೫-೪
,, ,, ಹಸಿರು	೧೫-೧೦-೦	೧೫-೮
,, ,, ಗಟ್ಟಿ ತೊಲ ೧ಕ್ಕೆ	೨೬-೬-೦	೨೪-೪
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೭೨-೦-೦	೭೨-೦

Printed and Published by the Rev. H SPENCER, B.A. the Proprietor and Manager, Wesleyan Mission Press Mysore. 27/4/1905

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು —— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೮ | ಮೈಸೂರು—ಸನ್ ೧೯೦೫ ನೇ ಇಸವಿ ಮೇ ತಾರೀಖು ೪ ನೇ ಗುರುವಾರ. | ಸಂಚಿಕೆ ೪೮

ಫಾರೆಸ್ಟು ಹರಾಜು.

ಇಸ್ತಿಹಾರ್. ೧೯೦೫ನೆ ಇಸವಿ ಏಪ್ರಿಲ್ ತಾರೀಖು ೧೧ ರಲ್ಲು.

3

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಅವರ ಬಾಜೂದಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಚೌಜೀನೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಬೆಳಿಗ್ಗೆ ೮ ಗಂಟೆಗೆ ಹರಾಜು ಶುರು ಆಗುತ್ತೆ.

ಡಿಪೋ ಹೆಸರು.	ಹರಾಜು ತಾ||	ಹರಾಜು ನಡಸುವ ಆಫೀಸರ ಹೆಸರು	ಸಾಗ್ವಾನಿ ನಾಟ ಮತ್ತು ದಿಂತಿ.		ಮನ್ನಾ ಜಾತಿ ನಾಟ ಮತ್ತು ದಿಂತಿ.		ಕಾಡು ನಾಟ ಮತ್ತು ದಿಂತಿ		ಸಾಗ್ವಾನಿ ಸರ.		ಮನ್ನಾ ಜಾತಿ ಸರ		ಕಾಡಸರ.	
			ಅದದು	ಸಲಡಿ	ಅದದು	ಸಲಡಿ	ಅದದು	ಸಲಡಿ	ಅದದು	ಸಲಡಿ	ಅದದು	ಸಲಡಿ	ಅದದು	ಸಲಡಿ
ಮೈಸೂರು ಉದ್ಯಾ ೧೯.	೨ ೬ 1905	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು,	1009	20111	711	11635	43	714				,	,,	,,
ನಗೂರು ಡೀ	3 5 1905	ಮೈಸೂರ್ ಡಿಸ್ಟ್ರಿಕ್ಟ್.	730	5556	1009	9309	271	3291	171	198	89	106	.	,,

ಸರತ್ತು—೧೮೯೯ನೇ ಇಸವಿ ಮಾರ್ಚಿ ೧೦ ನೆ ಮುಕರ್ರ ೧೪೭೦ ಅರ್. ಎಫ್. ೧೪೪—೨೦ನೆ ನಂಬರು ಹಾರ್ ನಾಮುಮನ್ನ ... ೧೪೯ ಮುಕರ್ರ ೧೪೯ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಸ್ರಾಯಿಪ್ ಮಾಡಿರುತ್ತೆ.

ಹೊಸ ನೋಟ್ಸು.

ಎಸ್. ಬಿ. ಎನ್‌ರವರ ೪, ೫ನೆಯ ಕನ್ನಡ ಪುಸ್ತಕಗಳಿಗೆ ಐನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

6

ಶೀರ್ಷಿಕೆಗಳು ವಿಷಯಗಳೊಡನೆ, ಪ್ರಶ್ನಸಹಿತ ಈ ನೋಟ್ಸು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಾಟೆ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ ೮ ಆಣೆ

ಸಿರಿ ಕೃಷ್ಣನ ಜೂವಿವರಣೆ (೨ನೆ ಭಾಷೆ) ೦—೧—೦

ತರಗತಿಯ ಪದ್ಯಗಳ ಅರ್ಥ ನೋಟ್ಸು ೦—೧—೬

೫ನೆ ಪರಾಗ ಲೋವರ್ ಸೆಕೆಂಡರಿ ನೋಟ್ಸು ೦—೫—೦

ವಿಳಾಸ—ಎಂ. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

ಹೊಸಕನ್ನಡ ಪುಸ್ತಕಗಳು.

4

ತತ್ವದರ್ಪಣ—Hindu Catechism—ಇದು ಶ್ರೀ ಶಂಕರ ರಾಮಾನುಜ ಮಧ್ವಾಚಾರ್ಯರುಗಳ ಸುಚರಿತ್ರೆಗಳನ್ನೂ, ಪ್ರಶ್ನೋತ್ತರ ರೀತಿ ಭಾಗವದ್ವಿಚಾರಗಳನ್ನೂ, ಚೆನ್ನಾಗಿ ಬೋಧಿಸುತ್ತದೆ. ಆಚಾರವನ್ನರಿಯಬೇಕೆಂಬ ಆಸ್ತಿಕರಿಗೆ ಅತ್ಯವಶ್ಯಕವಾದುದು. ಕ್ರಯ ೩ ಆಣೆ.

ಚಾಮರಾಜೇಂದ್ರ, ರಾಜ್ಯವಿಲಾಸ—H. H the late Maharaja's Biography—ಲೇಟ್ ಮಹಾರಾಜರವರ ಜೀವಿತ ದ ಸಕಲ ಸಂಗತಿಗಳನ್ನೂ ಆದ್ಯಂತವಾಗಿ ವಿವರಿಸಲ್ಪಟ್ಟು ೭೦ ಚಿತ್ರಗಳುಳ್ಳದಾಗಿದೆ. ಮಹಿಸೂರು ರಾಜಕೀಯ ವಿಚಾರಗಳ ತಿಳಿಯಬೇಕೆಂದಾಪೇಕ್ಷಿಸುವವರಿಗೆ ಇದು ಅತಿ ಮುಖ್ಯವಾ ಕ್ರಯ ೧೨ ಆಣೆ.

ಆಂಗ್ಲೇಯ ಚರಿತ್ರಸಂಗ್ರಹ—History of England in Kannada—ಆದಿಯಿಂದ ಈ ವರೆಗಿನ ಇಂಗ್ಲಿಷರ ಚರಿತ್ರೆ ನ್ನೂ, ಲೋಕವ್ಯವಹಾರಗಳನ್ನೂ ತಿಳಿಯಲಪೇಕ್ಷೆಯುಳ್ಳ ದೇಶೀಯ ಪರೀಕ್ಷೆಗೂ ಇಟ್ಟಿರುವ ಇದನ್ನು ಅಗತ್ಯ ಓದತ ಕ್ಕದಾಗಿದೆ ಕ್ರಯ ೮ ಆಣೆ.

ಈ ಅನೇಕ ಮಹಾ ವಿದ್ವಾಂಸರ ಮತ್ತು ಸರ್ಕಾರದವರ ಪ್ರಶಂಸೆಯನ್ನು ಪಡೆದು ಸರ್ವರಿಗೂ ಅತ್ಯಂತೋಪಯುಕ್ತವಾಗಿ ಈ ೩ ಪುಸ್ತಕಗಳನ್ನೂ ೧೦೦ ರ ಮೇಲೆ ಕೊಂಡುಕೊಳ್ಳುವವರಿಗೆ ಶೇಕಡ ೨೫ ರಂತೆ ಡಿಸ್ಕೌಂಟು ಕೊಡಲಾಗುವುದು.

ಪಿ ಮೂಲಕವೂ ಸಿಕ್ಕುವ ಸ್ಥಳಗಳು —

ಮೆಸರ್ಸ್ ಕೆ. ನರಸಿಂಹಯ್ಯ ಎಣ್ಟ್ ಕೋ., ಮೈಸೂರು.,

ದಿ ಪಕರಲ್ ಪಬ್ಲಿ, ಲಕ್ಷ್ಮೀವಿಲಾಸ ರೋಡ್, ಮೈಸೂರು.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಲಕ್ಷ್ಮೀಕರ ಕಸ್ತೂರಿಮಾತ್ರೆ

ಭೋಜನಾನಂತರ ತಾಂಬೂಲದೊಂದಿಗೆ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಿಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ವಾಂತಿ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುತ್ತವೆ. ಇದರಲ್ಲಿ ಅಪೇಕ್ಷಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬರಹ ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೩ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ.—ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾರ್ಜಿ ಚಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆಂಬುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾದಾನಿ

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ಪೋಲೀಸ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ಜಿ. ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕ್ವೆಟಾ.

Apply to—P. SUBBAROY,

Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೆ|| ಇ. ಮೋರ್ಸ್‌ಹೆಡನ್‌ರವರ ಕನ್ನಡ ಐದನೆಯ ಪುಸ್ತಕದ ಅತ್ಯುತ್ತಮವಾದ ನೋಟ್ಸು.

ನಾಲ್ಕನೆ ತರಗತಿ ವಿದ್ಯಾರ್ಥಿಗಳಿಗೆ ಅನೇಕ ಹೊಸಸಂಗತಿಗಳು ಬೋಧೆಯಾಗುವಂತೆ ರಚಿಸಲ್ಪಟ್ಟಿದೆ. ಏಪ್ರಿಲ್ ತಾ. ೧೫ಕ್ಕೆ ಸಿದ್ಧವಾಗುವುದು. ಕ್ರಯ ೪ ಆಣೆ. ೧೦ಕ್ಕೆ ಒಂದು ಡಿಸ್ಕೌಂಟು. ವಿಳಾಸ—ಕಾರ್ಕಾಹಳ್ಳಿ ನಾರಾಯಣಶಾಸ್ತ್ರಿ, ಕನ್ನಡ ಪಂಡಿತ, ಅ. ಮಹ. ಗೌರ್ನಮೆಂಟ್ ಕನ್ನಡಾ ಸ್ಕೂಲು, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾನಿರ್ಣಯ.

2

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. . ರೂ ೧—೮—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ ೧—೧೪—೦

,, ,, ೬ .. ,, ೧—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ ಮೈಸೂರು.

ಕಥಾಸಂಗ್ರಹ—ಮೊದಲನೆ ಭಾಗ.

5

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ನುಡಿಯ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಸೇರಿಸಿ, ಪ್ರೈಮರಿಗಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಮಾತಿನ ನರಣೆಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವುದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ದಿ ಯೆಂಡೋಮೆಂಟ್ ಇನ್ಸ್ಟಿಟ್ಯೂಷನ್ ಎಂಬ ಉಪಪತ್ತಿ ಕಲ್ಪನಾಸಂಘ, ಚೆನ್ನಪಟ್ಟಣ.

2

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸುದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು. ಸಾಮಾನ್ಯ ಉಪಪತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ. ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತ ದಾರ ನೇಮಿತರಿಗೆ ದೊಡ್ಡದಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾತ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು. ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಮ್ಯಾನೇಜರಿಗೆ ಬರದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು. ಇಂಥಾ ಏಜಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ.

ವಿಳಾಸ:—ಆರ್. ಎಸ್. ಮಾಕಂ, ಮ್ಯಾನೇಜರ್.

ವೃತ್ತಾಂತ ಪತ್ರಿಕೆ.

—:೦:—

ಸಿ೯ ೧೯೦೫ ನೇ ಇಸವಿ ಮೇ ತಾ॥ ೪ ನೇ ಗುರುವಾರ.

ಚಿನ್ನದ ಹೊಸಗಣಿ ಸಿಕ್ಕಿದೆ

ಕೋಲಾರ್ ಚಿನ್ನದ ಗಣಿಗಳಲ್ಲಿ ಪ್ರತಿ ವರುಷವೂ ಹೆಚ್ಚು ಹೆಚ್ಚಾಗಿ ಚಿನ್ನವು ಉತ್ಪತ್ತಿಯಾಗುತ್ತಿರುವುದು ತುಂಬಾ ಸಂತೋಷಕರವಾಗಿದೆ. ಕಳೆದ ಮಾರ್ಚಿ ತಿಂಗಳಲ್ಲಿ ೫೧,೬೨೯ ಔನ್ಸು (ಔನ್ಸು ೧ಕ್ಕೆ ೭೨ ರೂಪಾಯಿ ತೂಕ) ಚಿನ್ನವನ್ನು ತೆಗೆದಿದಾರೆ; ಅಂದರೆ, ಫೆಬ್ರುವರಿ ತಿಂಗಳ ಉತ್ಪತ್ತಿಗಿಂತಲೂ ೨,೦೦೧ ಔನ್ಸು ಜಾಸ್ತಿಯಾಯಿತು. ೧೯೦೩ ನೆ ಇಸವಿಯಲ್ಲಿ ೫,೯೬,೪೮೬ ಔನ್ಸು ಚಿನ್ನವೂ ೧೯೦೪ ರಲ್ಲಿ ೬,೦೬,೨೪೪ ಔನ್ಸು ಚಿನ್ನವೂ ಉತ್ಪತ್ತಿಯಾಗಿದೆ ಈ ವರುಷ ಕಳೆದ ಮಾರ್ಚಿ ಆಖೈರು ವರೆಗೆ ಮೂರು ತಿಂಗಳಲ್ಲಿ ೧,೫೭,೨೫೪ ಔನ್ಸು ಚಿನ್ನವನ್ನು ಗಣಿಗಳಿಂದ ತೆಗೆದಿರುವರು

ಈಚಿಗೆ ಕೋಲಾರದ ಚಿನ್ನದ ಗಣಿಗಳ ಉತ್ತರ ಭಾಗದಲ್ಲಿ ಪೂರ್ವ ಕಾಲದ ಗಣಿಯೊಂದು ಸಿಕ್ಕಿರುತ್ತದೆ. ಈಗ ಕಂಡು ಹಿಡಿದ ಹಳೇ ಗಣಿಯೊಳಗೆ ಚಿನ್ನ ಸ್ಪಷ್ಟವಾಗಿ ಕಾಣಿಸುವಂಥಾ ಕಲ್ಲುಗಳು ಅಪಾರವಾಗಿರುವವು ಇದಲ್ಲದೆ ಅಲ್ಲಿ ಬಹಳ ಇಟ್ಟಿಗೆ ಒಡೆದುಹೋದ ಚೂರುಗಳೂ ಸಿಕ್ಕಿರುತ್ತವೆ. ಇನ್ನೂ ಈ ಗಣಿಯೊಳಗೆ ಹೋಗಿ ಶೋಧನೆ ಮಾಡಿದಾಗ ಪೂರ್ವಿಕರು ತೋಡಿ ಬಿಟ್ಟಿರುವ ಒಂದು ಕಂಭ ಇರುವುದು. ಈ ಕಂಭದಲ್ಲಿ ಚಿನ್ನವು ಚನ್ನಾಗಿ ಕಾಣುತ್ತಿದೆ. ಅಲ್ಲಿ ಸಿಕ್ಕಿದ ಭಂಗಾರದ ಶಿಲೆಗಳಲ್ಲಿ ಸ್ವಲ್ಪವನ್ನು ತೆಗೆದು, ಲಂಡನ್ ಪಟ್ಟಣಕ್ಕೆ ಆಜಮಾಯಿಷಿಗಾಗಿ ಕಳುಹಿಸಿದಾರೆ. ಪೂರ್ವಿಕರು ಬೆಂಕಿಯನ್ನು ಹಾಕಿ ಚಿನ್ನವನ್ನು ಕಲ್ಲುಗಳಿಂದ ಕರಗಿಸಿ ಕೂಡಿಸುತ್ತಿದ್ದರೆಂದು ಗೊತ್ತಾಗುತ್ತದೆ. ಈ ಹೊಸ ಗಣಿಯನ್ನು ನೋಡಲಾಗಿ ಇನ್ನೂ ಅನೇಕ ಸಂವತ್ಸರಗಳ ವರೆಗೆ ಕೋಲಾರದಲ್ಲಿ ಚಿನ್ನ ತೆಗೆಯುವ ಕೆಲಸವು ನಡೆಯುತ್ತಲೇ ಇದ್ದೀತೆಂದು ಕಾಣುವುದು.

ಭೂಕಂಪದಿಂದುಂಟಾದ ನಷ್ಟವು.

ಪಂಜಾಬ್ ಲೆಫ್ಟಿನೆಂಟ್ ಗವರ್ನರಾದ ಸರ್ ಛಾರ್ಲ್ಸ್ ರಿವಾಸ್ ಯವರು ಕಳೆದ ವಾರ ಲಾಹೋರ್ ಪಟ್ಟಣದಲ್ಲಿ ಒಂದು ದೊಡ್ಡ ಸಭೆಯನ್ನು ಕೂಡಿಸಿ, ಕಾಂಗ್ರಾ ಕಣಿವೆಯಲ್ಲಿ ಭೂಕಂಪದಿಂದುಂಟಾದ ಕಷ್ಟ ನಷ್ಟಗಳನ್ನು ಕುರಿತು ಉಪನ್ಯಾಸ ಮಾಡಿದರು. ಅವರು ತಿಳಿಸಿದ ಮುಖ್ಯ ವಿಷಯಗಳೇನಂದರೆ_ಧರ್ಮಶಾಲೆ, ಕಾಂಗ್ರಾ, ಕೂಲೂ, ಈ ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಮಾಡಿಕೊಂಡು ಬಂದದ್ದಾಯಿತು. ಸುಮಾರು ೩೦೦ ಮೈಲಿ ವಿಸ್ತಾರವಾದ ಮತ್ತು ೨,೫೦,೦೦೦ ಪ್ರಜಾ ಸಂಖ್ಯೆಯನ್ನೊಳಗೊಂಡ ಪ್ರದೇಶವು ಈ ಭೂಕಂಪಕ್ಕೆ ಸಿಕ್ಕಿ ಹಾಳಾಗಿದೆ. ೧೫,೦೦೦ ಪ್ರಜೆಗಳಗಿಂತಲೂ ಹೆಚ್ಚಾಗಿಯೇ ಈ ಅನಾಹುತದಿಂದ ಪ್ರಾಣ ಕಳೆದುಕೊಂಡಿದಾರೆನ್ನುವುದಕ್ಕೆ ಸಂಶಯವಿಲ್ಲ. ಪ್ರತಿ ಒಂದು ಗ್ರಾಮದಲ್ಲೂ ಪಟ್ಟಣದಲ್ಲೂ ಮನೆ, ರಸ್ತೆ, ಸೇತುವೆ ಮುಂತಾದವು ಸಂಪೂರ್ಣವಾಗಿ ಕೆಟ್ಟುಹೋದವು: ಇಲ್ಲವೇ, ನೆಲಸಮವಾದವು. ಸರ್ಕಾರಕ್ಕೂ ಪ್ರಜೆಗಳಿಗೂ ಕೋಟ್ಯಂತರ ರೂಪಾಯಿ ನಷ್ಟವಾಯಿತು ಗೋಕಾಯಿಗಳೇ ಮೊದಲಾದ ಪ್ರಾಣಿಗಳ ನಷ್ಟವನ್ನು ಅಷ್ಟಿಷ್ಟೆಂದು ವಿವರಿಸಿತೀರದು.

ಇಂಥಾ ಕಷ್ಟ ನಿವಾರಣೆಗಾಗಿ ಸರ್ಕಾರದವರು ಜಮೀನ್ ಕಂದಾಯಗಳನ್ನು ಮಾಫಿ ಬಿಡುವರು; ಗೋಕಾಯಿಗಳನ್ನೂ ವ್ಯವಸಾಯದ ಉಪಕರಣಗಳನ್ನೂ ಸಿದ್ಧಪಡಿಸಿಕೊಳ್ಳುವುದಕ್ಕೆ ಹಣ ಸಾಲಕೊಡುತ್ತಾರೆ; ಬೊಂಬುಗಳು ಮರಗಳನ್ನು ಫಾರೆಸ್ಟಿನಿಂದ ಉಚಿತವಾಗಿ ತರಿಸಿ ಕೊಡುವರು. ಅವರೆ ಇಷ್ಟು ಸಹಾಯ ಮಾಡಿದರೆ ಸಾಕೆಂದು ಯಾರುತಾನೇ ಊಹಿಸಬಹುದು? ವ್ಯವಸಾಯಗಾರರಲ್ಲದ ಇತರ ಲಕ್ಷಾಂತರ ಪ್ರಜೆಗಳಿಗೆ ಮನೆ, ಅಂಗಡಿಗಳನ್ನು ಕಟ್ಟಿಕೊಳ್ಳುವುದಕ್ಕೂ ಮನೆಸಾಮಾನನ್ನೂ ವ್ಯಾಪಾರ ಜಿನಸುಗಳನ್ನೂ ಕೂಡಿಸಿಕೊಳ್ಳುವುದಕ್ಕೂ ದ್ರವ್ಯಸಹಾಯ ಬೇಕಾಗಿದೆ. ಇದಕ್ಕೆ ಈ ರಾಷ್ಟ್ರದಲ್ಲೂ ವಿಲಾಯತಿಯಲ್ಲೂ ಧರ್ಮಾತ್ಮರು ಹಣವನ್ನು ಕೊಟ್ಟು, ಕೆಟ್ಟುಹೋಗಿರುವ ಈ ಪ್ರಜೆಗಳನ್ನು ಚೇತರಿಸಿಕೊಳ್ಳುವಂತೆ ಮಾಡಬೇಕು. ಸುಮಾರು ಐದು ಲಕ್ಷ ದ್ರವ್ಯ ಚಂದಾ ಕೂಡಿದರೆ ಈ ಕ್ಷಾಮ ಕಾರ್ಯವನ್ನು ಅಲ್ಪಸ್ವಲ್ಪ ಮಟ್ಟಿಗೆ ನಡಿಸಬಹುದು ಇದಕ್ಕಿಂತ ಎರಡರಷ್ಟು ಹಣ ಚಂದಾ ವಸೂಲಾಗುವ ಹಾಗಾದರೂ ಒಂದು ಕಾಸೂ ದುರ್ವಿನಿಯೋಗವಾಗುವುದಿಲ್ಲ ಇಂಥಾ ಪುಣ್ಯಕಾರ್ಯಕ್ಕೆ ಸಕಲರೂ ತಮ್ಮ ಕೈಲಾದಷ್ಟನ್ನು ಚಂದಾ ಕೊಟ್ಟಾರೆಂದು ನಿರೀಕ್ಷಿಸುತ್ತೇವೆ ಇದುವರೆಗೆ ಈ ಫಂಡಿಗೆ ಹಿಂದೂಸ್ಥಾನದಲ್ಲೂ ವಿಲಾಯತಿಯಲ್ಲೂ ಸ್ವಲ್ಪ ಕಡಿಮೆ ಎರಡು ಲಕ್ಷ ರೂಪಾಯಿ ಮಾತ್ರ ವಸೂಲಾಗಿರುವುದು.

ಚೇಂಬರ್ಲೇನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

17

ಶೀತ, ಕೆಮ್ಮು, ಗಂಟಲು ಗೂರಲು ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಹು ಶ್ರೇಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಬಾಗಿಹೋಗುವದು. ಇದರಿಂದಲೇ ಅನೇಕನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಬಂಧಿತವಾಗಿಯೂ ನಿವಾರಣೆಯಾಗುತ್ತ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಒಳದೇಶದ ವೃತ್ತಾಂತಗಳು.

ನಮ್ಮ ಸಂಸ್ಥಾನದ ೧ನೆಯ ಮತ್ತು ೨ನೆಯ ಕೌನ್ಸಿಲರುಗಳು ಕಳೆದ ವಾರ ಬೆಂಗಳೂರಿಂದ ನೀಲಗಿರಿಗೆ ಪ್ರಯಾಣ ಮಾಡಿದರು.

****

ಮೈಸೂರು ಸಿಟಿ ಟೋಲ್ ಗೇಟುಗಳ ಕಂಟ್ರಾಕ್ಟು ವಿಷಯವಾದ ಮ್ಯುನಿಸಿಪಲ್ ನೋಟೀಸನ್ನು ಈ ಪತ್ರಿಕೆಯ ೬ನೇ ಪುಟದಲ್ಲಿ ಪ್ರಕಟಿಸಿದೇವೆ

****

ಶ್ರೀರಂಗಪಟ್ಟಣದ ತಾಲ್ಲೂಕು ಹೊಸಹಳ್ಳಿಯಲ್ಲಿದ್ದ ಸಿದ್ಧಲಿಂಗೇಗೌಡನೆಂಬುವನು ಕಾಲವಾದನು ಇವನಿಗ ಮರಣ ಕಾಲದಲ್ಲಿ ೧೨೦ ವರುಷ ವಯಸ್ಸಾಗಿತ್ತೆಂದು ಹೇಳುವರು.

****

ಕಾಯಿಲೆ ಇರುವ ಇಬ್ಬರು ಡೆಪ್ಯುಟಿ ಕಮಿಷನರುಗಳಿಗೆ (ಮೆ॥ ಎಂ ನಾರಾಯಣಯ್ಯರವರು ಮತ್ತು ಮೆ॥ ಎಚ್ ರಾಮಾನುಜ್ಯಯಂಗಾರು) ಈಗ ಸ್ವಲ್ಪಮಟ್ಟಿಗೆ ಗುಣವಾಗುತ್ತಿದೆ ಎಂದು ತಿಳಿದು ಬಂದಿದೆ.

****

ಬೆಂಗಳೂರು ಡಿಸ್ಟ್ರಿಕ್ಟ್ ಮರಾಮತ್ ಇಲಾಖೆಯಲ್ಲಿ ಸರ್ಕಾರದ ೨೦,೦೦೦ ರೂಪಾಯಿ ದುರುಪಯೋಗವಾಗಿದೆ ಎಂದು ಕಂಡುಬಂದದ್ದರಿಂದ ಒಬ್ಬ ಗುಮಾಸ್ತೆಯನ್ನು ಹಿಡಿದು ತನಿಖೆಮಾಡುತ್ತಿದಾರೆ.

****

ನಮ್ಮ ಮಹಾರಾಜರವರ ವಿದ್ಯಾ ಗುರುಗಳಾಗಿದ್ದ ಮೆ॥ ಎಸ್. ಎಂ ಫ್ರೇಸರ್ ಯವರಿಗೆ ಇಂಡಿಯಾ ಗವರ್ನಮೆಂಟ್ ಫಾರಿನ್ ಇಲಾಖೆಯ ಡಿಪ್ಯುಟಿ ಸೆಕ್ರೆಟರಿ ಕೆಲಸವಾಯಿತು ಈಗ ಅವರು ಅದೇ ಇಲಾಖೆಯ ಸೆಕ್ರೆಟರಿ ಕೆಲಸವನ್ನು ಬದಲಿ ನೋಡುತ್ತಿದಾರೆ.

****

ನಮ್ಮ ರೆಸಿಡೆಂಟರಾದ ಸರ್ ಜೇಂಸ್ ಬೊರ್ಡಿಲಾನ್, ಕೆ. ಸಿ. ಎಸ್. ಐ. ರವರು ಈ ತಿಂಗಳ ೨೨ ರಿಂದ ರಜಾ ಉಪಯೋಗಿಸಿಕೊಂಡು, ಶೀಮೆಗೆ ಪ್ರಯಾಣಮಾಡುವರು. ಈಗ ಬೆಲೂಚಿಸ್ಥಾನದಲ್ಲಿ ರೆವಿನ್ಯೂ ಮತ್ತು ಜುಡಿಷಲ್ ಕಮಿಷನರಾಗಿರುವ ಮೆ॥ ಎ ವಿಲ್ಲಿಯಂಸ್, ಸಿ ಎಸ್. ಯವರು ರೆಸಿಡೆಂಟರಾಗಿ ಕೆಲಸ ನೋಡುವಂತೆ ನೇಮಕವಾಗಿದಾರೆ.

****

ಉತ್ತರ ಆರ್ಕಾಟ್ ಜಿಲ್ಲೆಗೆ ಸೇರಿದ ಒಬ್ಬ ರೆಡ್ಡಿ ಎಂಬೊಬ್ಬ ಭಾರೀ ಸಾಹುಕಾರನ ಮನೆಗೆ ಪೋಲೀಸಿನವರು ನುಗ್ಗಿ ಶೋಧನೆ ಮಾಡಿದಾಗ ಕೋಲಾರದ ಚಿನ್ನದ ಗಣಿಗಳಲ್ಲಿ ಉಪಯೋಗಿಸುವಂಥಾ ಕೆಲವು ನೋಟುಪುಸ್ತಕಗಳೂ ಸಿಕ್ಕಿದವು ಚಿನ್ನದ ಗಣಿಗಳ ಮ್ಯಾಜಿಸ್ಟ್ರೇಟರು ಆ ರೆಡ್ಡಿಯನ್ನು ವಿಚಾರಣೆ ಮಾಡಿ, ಚಿನ್ನದ ಕಳುವು ರುಜುವಾತಾಗಲಿಲ್ಲವೆಂದು ಬಿಟ್ಟುಬಿಟ್ಟರು. ತರುವಾಯ ಆತನನ್ನು ಹಿಡಿದು ಉತ್ತರ ಆರ್ಕಾಟಿನ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ, ಒಂದು ವರುಷ ಕಠಿಣ ಸಜಾ ೧,೦೦೦ ರೂ ಜುಲ್ಮಾನೆ ವಿಧಿಸಿದರು ಅಪೀಲ್ ಕೋರ್ಟಿನಲ್ಲಿ ಆ ಶಿಕ್ಷೆ ವಜಾ ಆಯಿತು. ಈ ಮೊಕದ್ದಮೆಗೆ ಚಿನ್ನದ ಗಣಿ ಕಂಪೆನಿಯವರು ೫೦,೦೦೦ ರೂಪಾಯನ್ನೂ ಆ ಸಾಹುಕಾರನು ೩೦,೦೦೦ ರೂಪಾಯನ್ನೂ ಖರ್ಚು ಮಾಡಿದಾರೆಂದು ತಿಳಿದು ಬಂದಿದೆ.

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದ ವಾರ ಬಂದ ಮುಖ್ಯ ತಂತೀವರ್ತಮಾನಗಳು.

ಲಂಡನ್, ಏಪ್ರಿಲ್ ೨೪—ರಷ್ಯಾ ರಾಜ್ಯದಲ್ಲಿ ರೈತಪ್ರಜೆಗಳ ದಂಗೆಯನ್ನು ಅಡಗಿಸುವದಕ್ಕೋಸ್ಕರ ಅಂಥಾ ದಂಗೇಕೋರರಾದವರನ್ನು ಹಿಡಿದು ಶಿಕ್ಷಿಸಬೇಕೆಂತಲೂ ಅವರಿಂದ ಅವರ ಯಜಮಾನರಿಗೆ ಉಂಟಾಗಿರುವ ನಷ್ಟಕ್ಕಾಗಿ ದಾವ್ತು ವಸೂಲಾಗಬೇಕೆಂತಲೂ ಎಲ್ಲಾ ಗ್ರಾಮಸ್ಥರಿಗೂ ಈ ಹುಕುಮನ್ನು ತಿಳಿಸಿ ನಷ್ಟದ್ರವ್ಯವನ್ನು ಎತ್ತಬೇಕೆಂತಲೂ ಚಕ್ರವರ್ತಿಯವರು ಆಜ್ಞೆಮಾಡಿದಾರೆ.

ರಾಜಧಾನಿಯಲ್ಲಿ ಗಾಬರಿ

ಲಂಡನ್, ಏಪ್ರಿಲ್ ೨೬ —ರಾಜಧಾನಿಯ ವರ್ತಮಾನ ಪತ್ರಿಕೆಗಳಲ್ಲಿ ೧೯,೦೦೦ ದಂಗೇ ಕೋರರು ಇಷ್ಟರಲ್ಲೇ ನಾನಾ ಕ್ರೂರಕೃತ್ಯಗಳನ್ನು ಮಾಡುವವರಾಗಿದಾರೆಂದು ಪ್ರಕಟವಾಯಿತು. ಇದರಿಂದ ಸರ್ಕಾರದವರೂ ದೊಡ್ಡ ಮನುಷ್ಯರೂ ಗಾಬರಿ ಬಿದ್ದಿರುವರು

ಸರ್ಕಾರದವರು ಬಹು ಜಾಗರೂಕತೆಯಿಂದ ರಾಜಧಾನಿಯಲ್ಲಿ ಬೀಗಗಳನ್ನಿಟ್ಟು ಬಂದೋಬಸ್ತು ಮಾಡುತ್ತಿದಾರೆ. ಡಾನ್ ಕಾಸ್ಸಾಕ್ ಎಂಬ ಸೈನಿಕರನ್ನು ಪ್ರಜಾನೆಮ್ಮದಿಯ ಕಾಪಾಡುವಿಕೆಗೋಸ್ಕರ ರಾಜಧಾನಿಗೆ ಕರೆಸಿಕೊಂಡಿದಾರೆ

ರಾಜಧಾನಿಯಲ್ಲಿರುವ ಶ್ರೀಮಂತರೂ ಐಶ್ವರ್ಯವಂತರೂ ದೊಡ್ಡ ಮನುಷ್ಯರೂ ಸಂಸಾರ ಸಹಿತ ಊರು ಬಿಟ್ಟು ಇತರ ಕಡೆಗಳಿಗೆ ಹೊರಟು ಹೋಗಲಾರಂಭವಾಗಿದೆ.

ಇತರ ಕಡೆಗಳಲ್ಲೂ ಇದೇ ಗಾಬರಿ.

ಈ ಗಾಬರಿಯುಂಟಾಗಿರುವುದು ರಾಜಧಾನಿಯಲ್ಲಿ ಮಾತ್ರವೇ ಅಲ್ಲ. ಬೇರೆ ಬೇರೆ ಸಂಸ್ಥಾನಗಳಲ್ಲೂ ಈ ದಂಗೆಯು ಹುಟ್ಟುವುದೆಂದು ಪ್ರಜೆಗಳು ಕಳವಳಪಡಲಾರಂಭಿಸಿದಾರೆ. ಮೇ ತಿಂಗಳ ೧ ನೆ ತಾರೀಖನ್ನು ಕಳೆದರೆ ಎಲ್ಲಾ ಕ್ಷೇಮವಾಗಬಹುದೆಂದು ಹೇಳುವರು.

ಮಂತ್ರಿಯವರ ಇಸ್ತಿಹಾರು

ಎಂ. ಟ್ರಿಪಾಫ್ ಎಂಬ ಮಂತ್ರಿಯವರು ಪ್ರಜೆಗಳಿಗೆಲ್ಲಾ ಸಾರಿಸಿರುವುದೇನೆಂದರೆ—ದಂಗೆಯುಂಟಾಗುವದೆಂದು ಯಾರೂ ಗಾಬರಿಪಡಬೇಕಾಗಿಲ್ಲ. ಅವಶ್ಯಬಿದ್ದರೆ ಸೈನಿಕರನ್ನು ಬಿಟ್ಟು ಪ್ರಜಾನೆಮ್ಮದಿಯನ್ನು ಬಂಧಿತವಾಗಿಯೂ ಕಾಪಾಡುತ್ತೇವೆ ಎಂಬುದೇ

ರಾಜಧಾನಿಯಲ್ಲಿ ಏರ್ಪಾಡುಗಳು.

ಲಂಡನ್, ಏಪ್ರಿಲ್ ೨೮ – ಜನರಲ್ ಟ್ರಿಪಾಫ್ ಯವರು ಇಸ್ತಿಹಾರನ್ನು ಪ್ರಕಟಿಸಿದ್ದಾಗ್ಯೂ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ವರ್ತಕರೆಲ್ಲಾ ತಮ್ಮ ಅಂಗಡಿಗಳನ್ನು ಮುಚ್ಚಿಕೊಂಡು ಆಸ್ತಿಪಾಸ್ತಿಗಳನ್ನು ಕಾಪಾಡಿಕೊಳ್ಳುವ ಏರ್ಪಾಡುಮಾಡುತ್ತಿದಾರೆ.

ಕಾಕಸಸ್ ಪ್ರಾಂತ್ಯ

ಕಾಕಸಸ್ ಪ್ರಾಂತ್ಯದಲ್ಲಿ ರೈತ ಪ್ರಜೆಗಳಿಗೂ ಸರ್ಕಾರದವರಿಗೂ ನಾನಾ ಕದನಗಳಾದವು. ಅನೇಕ ಪ್ರಜೆಗಳು ಮಡಿದುಹೋದರು, ಸೈನಿಕರು ಬಹು ಮಂದಿಯನ್ನು ಹಿಡಿದು ಬಂಧೀಖಾನೆಯಲ್ಲಿಟ್ಟಿದಾರೆ.

ಸೈಬೀರಿಯಾದಲ್ಲಿ ಗಲಭೆ.

ಸೈಬೀರಿಯಾ ರೈಲ್ವೆ ಲೈನಿನಲ್ಲಿರುವ ಚೆಲಿಯಾಬಿನ್ಸ್ಕ್ ಎಂಬ ಪಟ್ಟಣದಲ್ಲಿ ಪ್ರಜಾನೆಮ್ಮದಿಗೆ ಭಂಗ ಉಂಟಾಗಿದೆ. ರಷ್ಯಾ ಸೈನಿಕರನ್ನು ಆ ಪ್ರದೇಶಕ್ಕೆ ಕಳುಹಿಸುತ್ತಾರೆ

ಪರರಾಜ್ಯಗಳವರನ್ನು ಕರೆಸಿಕೊಂಡರು

ರಷ್ಯಾ ರಾಜ್ಯದಲ್ಲಿ ಯುದ್ಧ ಸಾಮಗ್ರಿಗಳು ತಯಾರಾಗುವ ಕಾರ್ಖಾನೆಗಳಲ್ಲಿ ಪರರಾಜ್ಯದವರೂ ಅನ್ಯರಾಜ್ಯದವರೂ ಬಂದು ಕೆಲಸಮಾಡಬಹುದೆಂದು ಹುಕುಂ ಆಗಿದೆ. ಮುಂದಿನ ವಾರದೊಳಗಾಗಿ ನಾಲ್ಕು ಸಾವಿರ ಮಂದಿ ಇತರ ಕಡೆಗಳಿಂದ ರಷ್ಯಾಕ್ಕೆ ಬರುವವರಾಗಿದಾರೆ

ಗಲಭೆಯೇನೂ ಆಗಲಿಲ್ಲ.

ಲಂಡನ್, ಏಪ್ರಿಲ್ ೨೯ —ಈ ದಿನ ರಾಜಧಾನಿಯಲ್ಲಿ ಗಲಭೆಯೇನೂ ಆಗಲಿಲ್ಲ. ಸರ್ಕಾರಿ ಸೈನಿಕರು ಬಹಳ ಎಚ್ಚರಿಕೆಯಿಂದ ಪಟ್ಟಣದಲ್ಲಿ ಗಸ್ತು ಮಾಡುತ್ತಿದ್ದರು.

ಚಕ್ರವರ್ತಿಯವರ ಅಪ್ಪಣೆ.

ರೈತ ಪ್ರಜೆಗಳಿಗೆ ರಿಯಾಯತಿ ತೋರಿಸಿದರು.

ಲಂಡನ್, ಏಪ್ರಿಲ್ ೩೦,—ಕಳೆದ ೧೮೦೫ನೇ ಇಸವಿಯಲ್ಲೂ ಬಡ ರೈತರಿಗೆ ವ್ಯವಸಾಯಾಭಿವೃದ್ಧಿಗೋಸ್ಕರ ಸರ್ಕಾರದ

ರು ಸಾಲ ಕೊಟ್ಟಿದ್ದರು ಈ ಸಾಲವು ೧೧ ಕೋಟಿಯೂ ೨೫ ಲಕ್ಷ ರೂಪಾಯಿ ತೀರಲಾಗದೆ ಬಾಕಿ ಉಳಿದಿತ್ತು. ಚಕ್ರವರ್ತಿಯವರು ಈ ಸಾಲವನ್ನು ಗ್ರೀಸಿಗೆ ಮಾಫಿ ಬಿಟ್ಟುದರಿಂದಾಗಿ ಅದನ್ನು ಕೊಟ್ಟಿದ್ದಾರೆ ... ಮತ್ತು ಬ್ರಿಟಿಷ್ ಪ್ರಜೆಗಳನ್ನು ಅಪ್ಪಣೆ ... ಅವರು ಮುಖ್ಯಸ್ಥರನ್ನು ಸರಾಗವಾಗಿ ನಡಿಸಿಕೊಳ್ಳ ... ಸರ್ಕಾರ ದವರ ನಿರ್ಬಂಧನೆ ಇಲ್ಲವೆಂತಲೂ ಇನ್ನೊಂದು ಹುಕುಂ ಕೊಟ್ಟಿದಾರೆ

ರಷ್ಯಾ ಜಪಾನ್ ಯುದ್ಧವು.

ಕಳೆದವಾರ ಬಂದ ಮುಖ್ಯ ತಂತೀ ವರ್ತಮಾನಗಳು

ರಷ್ಯಾ ಹಡಗುಗಳು.

ಲಂಡನ್, ಏಪ್ರಿಲ್ ೨೪ —ಪೋರ್ಟ್ ಆರ್ಥರ್ ಸಮುದ್ರ ತೀರದಲ್ಲಿರುವ ರಷ್ಯಾ ಹಡಗುಗಳೂ ಜಹಜುಗಳೂ ೫೦ ಎಂತಲೂ, ಇವೆಲ್ಲಾ ಆಸ್ಕಾಂ ತೀರದಲ್ಲಿ ಉತ್ತರ ದಿಕ್ಕಿಗೆ ಹೋಗುತ್ತಿವೆ ಎಂತಲೂ ತಿಳಿದುಬಂದಿದೆ

ಜಪಾನಿನವರ ಅಡ್ಮಿರಲ್ ಟೋಗೋರವರು ಮೂರು ಯುದ್ಧದ ಜಹಜುಗಳ ಸಮೇತ ಕಾರಿಜಿವರ್ ದ್ವೀಪದ ಬಳಿ ಇಳುಕೊಂಡಿದ್ದಾರೆ.

ರಷ್ಯಾ ಅಧಿಪತಿಗೆ ಖಾಯಿಲೆಯಾಗಿದೆ

ಲಂಡನ್, ಏಪ್ರಿಲ್ ೨೫ —ರಷ್ಯಾ ಜಹಜುಗಳ ಅಧಿಪತಿಯಾದ ಅಡ್ಮಿರಲ್ ರಾಸ್ಟ್‌ಡೆಸ್ಟ್ ವೆನ್ಸ್ಕಿಯವರಿಗೆ ಅಪಾಯಕರವಾದ ಸ್ವಲ್ಪ ಖಾಯಿಲೆಯಾಗಿದೆ. ಈಗ ಅವರು ಕ್ರಾಂಸ್ಟಾಟ್‌ನಲ್ಲಿರುತ್ತಾರೆ

ಜಪಾನ್ ಜಹಜುಗಳನ್ನು ಹಿಡಿದರು

ಜಪಾನ್ ಜಹಜುಗಳೆರಡು ವ್ಲಾಡಿವಾಸ್ಟಾಕ್‌ನಿಂದ ಆಕ್ರಮಿಸಿ ... ಮಾಡಿಕೊಂಡು, ಜಪಾನಿಗೆ ಪ್ರಯಾಣ ಮಾಡುತ್ತಿದ್ದವು ಇವೆರಡನ್ನೂ ರಷ್ಯಾದವರು ಹಿಡಿದು ಸ್ವಾಧೀನಪಡಿಸಿಕೊಂಡಿದಾರೆ.

ನ್ಯೂಚಾಂಗ್ ಮರಿಯಾದಲ್ಲಿ ಯುದ್ಧ ಕಾರ್ಯಗಳು

ಲಂಡನ್, ಏಪ್ರಿಲ್ ೨೬ —ಜಪಾನಿನವರು ಯಾಲೂ ನದಿಗೆ ಅಡ್ಡವಾಗಿ ಒಂದು ಸೇತುವೆ ಕಟ್ಟಿ, ಅದರ ಮೇಲೆ ರೈಲ ಗಾಡಿಯನ್ನು ಓಡಿಸಿ, ಮುಕ್ಡೆನ್‌ಗೆ ಹೋಗುವ ಮಾರ್ಗದಲ್ಲಿ ... ರೈಲನ್ನು ಕ್ರಮವಾಗಿ ವಶ ಮಾಡಿಕೊಂಡಿದಾರೆ

ರಷ್ಯಾದವರ ಸೋಲು

ಇದುವರೆವಿಗೆ ರಷ್ಯಾ ಸೈನಿಕರು ೬ ಪಿರಂಗಿಗಳ ಸಹಿತ ನುಗ್ಗಿ ಬಂದು ಕ್ಯಾಯುರ್ ಬಳಿ ಜಪಾನಿನವರ ರಾಜ್ಯಕ್ಕೆ ಮುತ್ತಿಗೆ ಹಾಕಿದರು ಆದರೆ ಜಪಾನಿನವರು ಅವರಲ್ಲಿ ೨೦೦ ಜನರನ್ನು ಕೊಂದು ಹಿಂದಕ್ಕೆ ಓಡಿಸಿದರು. ಅದೇ ಸಮಯದಲ್ಲಿ ಇನ್ನೂ ರಷ್ಯಾ ಸೈನ್ಯಗಳು ಚಾಂಗ್‌ಟು, ಅಯಾಪೋ ತಂಟ್ಸು ಎಂಬ ಪಟ್ಟಣಗಳಿಗೆ ಮುತ್ತಿಗೆ ಹಾಕಿಕೊಂಡು, ತಮ್ಮ ಸೈನಿಕರಿಗೆ ಕ್ಯಾಯುರ್‌ನಲ್ಲಿ ಸೋಲಾಯಿತೆಂದು ಕೇಳಿದ ಒಡನೆಯೇ ಹಿಮ್ಮೆಟ್ಟಿ ಓಡಿ ಹೋದರು

ಜಪಾನ್ ಸರ್ಕಾರಿ ರಿಪೋರ್ಟು

ಬೊಂಬಾಯಿ, ಏಪ್ರಿಲ್ ೨೭ – ಜಪಾನ್ ಸರ್ಕಾರದವರು ಬೊಂಬಾಯಿನಲ್ಲಿರುವ ತಮ್ಮ ರಾಯಭಾರಿಗೆ ತಿಳಿಸಿರುವುದೇನೆಂದರೆ—ರಷ್ಯಾ ಸೈನ್ಯದಲ್ಲಿ ಐದು ಪಟಾಲಂ ಕಾಲ್ಬಲವೂ, ಹದಿನಾರು ಸ್ಕ್ವಾಡ್ರನ್ ಸವಾರರೂ, ಆರು ಪಿರಂಗಿಗಳೂ ಇದ್ದವು ಈ ಸೈನಿಕರು ತಾ ೨೬ ರಲ್ಲಿ ಜಪಾನಿನವರ ಮೇಲೆ ನುಗ್ಗಿ ಬಂದು, ಕ್ಯಾಯುರ್ ಬಳಿ ಯುದ್ಧವಾಯಿತು ಜಪಾನಿನವರು ಅವರನ್ನೆಲ್ಲಾ ಸೋಲಿಸಿ ಓಡಿಸಿದರು ರಷ್ಯಾದವರು ೨೦೦ ಸೈನಿಕರ ಹೆಣಗಳನ್ನು ಯುದ್ಧ ಭೂಮಿಯಲ್ಲೇ ಬಿಟ್ಟು, ಹಿಮ್ಮೆಟ್ಟಿಹೋದರು. ಜಪಾನಿನವರ ಕಡೆ ೩೮ ಮಂದಿ ನಷ್ಟವಾದರು ರಷ್ಯಾ ಸೈನಿಕರೆಲ್ಲಾ ಅಲ್ಲಿಂದ ಉತ್ತರದಿಕ್ಕಿಗೆ ಹೋಗಿರುತ್ತಾರೆ.

ಫಾರ್ಮೋಸಾದಲ್ಲಿ ಯುದ್ಧದ ಕಾನೂನು.

ಜಪಾನಿನವರು ತಮಗೆ ಸೇರಿದ ಫಾರ್ಮೋಸಾ ದ್ವೀಪದಲ್ಲಿ ಯುದ್ಧ ಕಾಲದ ಕಾನೂನನ್ನು ಜಾರಿಗೆ ತಂದಿದೆ ಎಂದು ಪ್ರಕಟಿಸಿದಾರೆ.

ರಷ್ಯಾದವರ ಜಹಜುಗಳು.

ಲಂಡನ್, ಏಪ್ರಿಲ್ ೨೭ —ರಷ್ಯಾದವರ ಯುದ್ಧದ ಹಡಗುಗಳು ಇನ್ನೂ ಕ್ರಾಂಸ್ಟಾಟ್ ಬಳಿಯಲ್ಲೇ ಇವೆ ಎಂದು ಸೈಗಾನಿಂದ ವರ್ತಮಾನ ಬಂದಿದೆ

ಜಪಾನಿನವರು ಫಾರ್ಮೋಸಾ ದ್ವೀಪವನ್ನು ಬಹಳವಾಗಿ ಬಲಪಡಿಸಿಕೊಂಡಿದಾರೆ. ಕೋಟೆಕೊತ್ತಲಗಳನ್ನು ಅನೇಕವಾಗಿ ಕಟ್ಟಿ ಸೈನ್ಯವನ್ನು ಇಟ್ಟಿರುವರು ಜಪಾನ್ ಹಡಗುಗಳ ಅಧಿಪತಿಯಾದ ಅಡ್ಮಿರಲ್ ಟೋಗೋ ಯವರು ಈಗ ಎಲ್ಲಿದಾರೋ ಯಾರಿಗೂ ತಿಳಿಯಲಿಲ್ಲ. ಅವರ ಸಂಗಡ ಇರುವ ಹುದ್ದೆದಾರರೂ ಸೈನಿಕರೂ ಅವರವರ ಮನೆಗಳಿಗೂ ಯೋಗಕ್ಷೇಮ ಬರೆಯುವುದನ್ನು ನಿಲ್ಲಿಸಿಬಿಟ್ಟಿದಾರೆ. ಇದರಿಂದ ಈ ಜಪಾನಿನವರು ರಷ್ಯಾದವರನ್ನು ಗುಟ್ಟಾಗಿ ಹಿಡಿದು ಸೋಲಿಸಬೇಕೆಂದು ಹೊರಟಿರುವಂತೆ ಕಾಣುವುದು.

ರಷ್ಯಾದವರು ಜಹಜುಗಳನ್ನು ಹಿಡಿದರು.

ಆಕ್ರಮಿಸಿ ಭರ್ತಿಮಾಡಿಕೊಂಡು ಹೋಗುತ್ತಿದ್ದ ಇಂಗ್ಲೀಷರ ಬ್ರಿಟಿಷ್, ಓಕ್ ಲ್ಯಾಂಡ್ ಎಂಬೀ ಜಹಜುಗಳನ್ನು ರಷ್ಯಾ ಸೈನಿಕರು ಹಿಡಿದು ಸ್ವಾಧೀನಪಡಿಸಿಕೊಂಡಿದಾರೆ.

ರಷ್ಯಾದವರ ಸಾಲದ ಪ್ರಯತ್ನ.

ರಷ್ಯಾರಾಜ್ಯದಲ್ಲಿ ಚಕ್ರವರ್ತಿಯವರು ವರ್ತಕರಿಂದ ಹದಿನೈದು ಕೋಟಿ ರೂಪಾಯನ್ನು ಸಾಲ ಮಾಡಬೇಕೆಂದು ಪ್ರಕಟಿಸಿದರು ಒಳದೇಶದ ವರ್ತಕರು ಸಾಲ ಕೊಡುವುದಕ್ಕೆ ಅಷ್ಟೇನೂ ಮೇಲೆ ಬಿದ್ದು ಹೋಗಲಿಲ್ಲ. ಆದ್ದರಿಂದ ಸರ್ಕಾರದವರು ಒಳದೇಶದಲ್ಲಿ ಸಾಲ ಮಾಡುವುದನ್ನೇ ನಿಲ್ಲಿಸಿ, ಜರ್ಮನಿ ರಾಜಧಾನಿಯಲ್ಲಿ ಬ್ಯಾಂಕುಗಳವರಲ್ಲಿ ಸಾಲ ತೆಗೆದುಕೊಳ್ಳಬೇಕೆಂದು ಕಾಗದ ಪತ್ರಗಳನ್ನು ಬರೆದಿದಾರೆ.

ರಷ್ಯಾದವರ ಜಹಜು ಮುಂದಕ್ಕೆ ಹೋಯಿತು.

ಲಂಡನ್, ಏಪ್ರಿಲ್ ೨೮ —ರಷ್ಯಾ ಅಡ್ಮಿರಲ್ ರಾಜ್‌ಡೆಸ್ಟ್ ವೆನ್ಸ್ಕಿಯವರು ಕ್ರಾಂ ... ತಾ ೨೬ ರಲ್ಲಿ ೧೯ ಜಹಜುಗಳ ಸಮೇತ ಮುಂದಕ್ಕೆ ಪ್ರಯಾಣ ಮಾಡಿದರು

ರಷ್ಯಾದವರ ಇನ್ನೊಂದು ಗುಂಪಿನ ಜಹಜುಗಳು ಜಿಬ್ರಾಲ್ಟರಿನ ದಕ್ಷಿಣ ದಿಕ್ಕಿನಲ್ಲಿ ಸಿಂಗಪುರದ ಕಡೆಗೆ ಪ್ರಯಾಣ ಮಾಡಿಕೊಂಡು ಬರುತ್ತಿವೆ

ಅಮೇರಿಕದಲ್ಲಿ ಭಾರೀ ಉಕ್ಕಿನ ಕಾರ್ಖಾನೆಯನ್ನಿಟ್ಟಿರುವ ಮಿ॥ ಶ್ವಾಬ ಎಂಬಾತನು ರಷ್ಯಾ ರಾಜಧಾನಿಗೆ ಬಂದಿದ್ದು, ರಷ್ಯಾದವರಿಗೆ ಹೊಸ ನಮೂನೆಯ ಕೆಲವು ಯುದ್ಧದ ಹಡಗುಗಳನ್ನು ಮಾಡಿ ಕಳುಹಿಸಿ ಕೊಡುವುದಾಗಿ ಕಂಟ್ರಾಕ್ಟು ತೆಗೆದುಕೊಂಡು, ಅಮೇರಿಕಕ್ಕೆ ಪ್ರಯಾಣ ಮಾಡಿದನು.

ಯುದ್ಧವು ಇನ್ನೂ ನಿಲ್ಲುವಂತಿಲ್ಲ.

ಜಪಾನ್ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ಕೌಂಟ್ ಒಕೂಮಾ ಯವರು ಒಂದು ಸಭೆಯಲ್ಲಿ ನಿಂತು, ದೊಡ್ಡ ಮನುಷ್ಯರಾದ ಸಭಾಸದರನ್ನು ಕುರಿತು—ಯುದ್ಧವು ಇಷ್ಟಕ್ಕೇ ನಿಲ್ಲುವುದೆಂದು ಊಹಿಸಲಾಗದು; ಅದು ಇನ್ನೂ ದೀರ್ಘವಾಗಿ ನಡೆಯಲು, ಜಪಾನಿನವರು ಅದಕ್ಕೆ ಸನ್ನದ್ಧರಾಗಿರಬೇಕು ಎಂಬುದಾಗಿ ತಿಳಿಸಿದಾರೆ.

ರಷ್ಯಾದವರ ಸಾಲದ ಕ್ರಮ.

ರಷ್ಯಾದವರು ಯುದ್ಧದ ಖರ್ಚಿಗೆ ಬೇಕಾಗಿ ಸಾಲವಾದ ... ಪ್ರಸ್ತುತ ಪಟ್ಟಿರುವಷ್ಟು ಸ್ವಲ್ಪ ಬಡ್ಡಿ ಕೊಟ್ಟರೆ ಸಾಲ ಹುಟ್ಟುವುದಿಲ್ಲವೆಂದು ಗೊತ್ತಾದ್ದರಿಂದ ಶೇಕಡಾ ಐದುವರೆ ವರೆಯುಂತೆ ಬಡ್ಡಿ ಕೊಡುವುದಾಗಿ ಪ್ರಕಟಿಸಿದರು. ಇದನ್ನು ಕೇಳಿದ ಕೂಡಲೇ ಬರ್ಲಿನ್ ಪಟ್ಟಣದ ಬ್ಯಾಂಕುಗಳವರು ಕೆಲವು ಹಣವನ್ನು ಸಾಲ ಕೊಟ್ಟರು.

ಶಾಂತಿಯ ಏರ್ಪಾಡು

ಲಂಡನ್, ಏಪ್ರಿಲ್ ೨೯ —ಅಮೇರಿಕದ ಪ್ರೆಸಿಡೆಂಟರು ರಷ್ಯಾ ಜಪಾನಿನವರಿಗೆ ಮಧ್ಯಸ್ಥಿಕೆ ಮಾಡಿ ಕರಾರು ಮಾಡಬೇಕೆಂದು ತಿಳಿಸಿದರು. ಈ ಅಭಿಪ್ರಾಯವನ್ನು ವಿಲಾಯತಿ, ಜರ್ಮನಿ, ಫ್ರಾನ್ಸ್ ಈ ರಾಜ್ಯಗಳ ರಾಯಭಾರಿಗಳು ಕೇಳಿ, ಅಮೇರಿಕದಿಂದ ಮೂರು ರಾಜ್ಯಕ್ಕೂ ವಿಲಾಯತಿಗೆ ಪ್ರಯಾಣ ಮಾಡಿದಾರೆಂತಲೂ ಇವರು ವಿಲಾಯತಿ ಚಕ್ರವರ್ತಿಯವರಿಗೂ ಜರ್ಮನಿ ಚಕ್ರವರ್ತಿಯವರಿಗೂ ಫ್ರಾನ್ಸಿನ ಪ್ರೆಸಿಡೆಂಟ್ ಲೋಬೋ ಯವರಿಗೂ ತಿಳಿಸಿ, ಅವರೆಲ್ಲಾ ಏಕೀಭವಿಸಿ ಕಾರ್ಯಾರಂಭವಾಗುವಂತೆ ಪ್ರಯತ್ನ ಪಡುವರೆ ಎಂತಲೂ ಅಮೇರಿಕದ ರಾಜಧಾನಿಯಾದ ವಾಷಿಂಗ್ಟನ್ ಪಟ್ಟಣದಿಂದ ತಂತೀ ವರ್ತಮಾನ ಬಂದಿದೆ

ಜಪಾನಿನವರು ಹಿಂದಕ್ಕೆ ಓಡಿಸಲ್ಪಟ್ಟರು.

ಲಂಡನ್, ಏಪ್ರಿಲ್ ೩೦—ನೆನ್ನೆ ರಾತ್ರಿ ರಷ್ಯಾದವರು ಟಾಂಕೊಷಿ ನರ್ ಬಳಿಯಲ್ಲಿ ಜಪಾನಿನವರ ಮೇಲೆ ನುಗ್ಗಿ ಜಪಾನಿನವರನ್ನು ಓಡಿಸಿದ್ದಲ್ಲದೆ, ಅವರನ್ನು ಅಲ್ಲಿಂದ ಹಿಂದಕ್ಕೆ ಐದು ರಾಜ್ಯಗಳು ದೂರ ... ಹಿಮ್ಮೆಟ್ಟಿಸಿ, ಟಾಂಕೊಷಿಯರ್ ಪಟ್ಟಣವನ್ನು ರಷ್ಯಾದವರು ಆಕ್ರಮಿಸಿಕೊಂಡರೆಂದು ರಷ್ಯಾ ಜನರಲ್ ಲಿನೆವಿಚ್ ಯವರ ತಿಳಿಸಿದಾರೆ

ಸ್ಥಳೀಯ ಗೆಜೆಟ್ ಸಂಗ್ರಹ.

ದಾವಣಗೆರೆ ತಾಲ್ಲೂಕು ಹುಲಿಕಟ್ಟೆ ಇನಾಂದಾರ್ ಮಿ॥ ಧರ್ಮರಾಯಾಚಾರ್ಯರನ್ನು, ದಾವಣಗೆರೆ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಿಸಿದೆ.

ಸೂಪರಿಂಟೆಂಡೆಂಟ್ ಮಿ॥ ಪಿ ಬ್ರಾಸ್ಕಕ್‌ಸ್ಮಿತ್ ಯವರನ್ನು ಕೋಲಾರ್ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಿ॥ ಜಿ. ಸತ್ಯಾಜಿರಾಯರು ಶ್ರೀರಂಗಪಟ್ಟಣದ ಮುನ್ಸಿಫರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದಾರೆ.

ಮಾಲೂರು ತಾಲ್ಲೂಕ್ ಅಮಲ್ದಾರ್ ಮಿ॥ ಸಿ. ಮಹಾದೇವಯ್ಯನವರಿಗೆ ಪಾರಸ್ಟ್ ಮೊಕದ್ದಮೆಗಳನ್ನು ದರ್ಯಾಫ್ತು ಮಾಡುವ ಅಧಿಕಾರ ಕೊಟ್ಟಿದೆ

ತುಂಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ॥ ಕೆ ದೊರೆಸಾಮಿ ಅಯ್ಯರವರಿಗೆ ಕೊಟ್ಟಿದ್ದ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಅವರ ಇಷ್ಟಪ್ರಕಾರ ರದ್ದು ಮಾಡಿದೆ

ಆಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್ ಮಿ॥ ಎಂ. ವೆಂಗ್ಳಯ ಚೆಟ್ಟಿಯವರು ಮಿ॥ ಸಿ ಶ್ರೀಕಂಠೇಶ್ವರಯ್ಯರವರಿಂದ ಏಪ್ರಿಲ್ ೧೦ ರಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಭಾರವನ್ನು ವಹಿಸಿರುತ್ತಾರೆ.

ಮೈಸೂರು ಅರಮನೆ ಡಿವಿಜನ್ ಅ॥ ಇಂಜನಿಯರ್ ಮಿ॥ ಬಿ. ಎಸ್ ಕೇಶವಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ನೂತನ ಮಾಸ ಪತ್ರಿಕೆಗಳು.

"ವಿ. ಕೋದಯ."

ಹಿಂದೂ ಆರ್ಯರು ಭವಿಷ್ಯದಾಲೋಚನೆಯಿಂದ ಜನ ಸೌಖ್ಯಕ್ಕಾಗಿ ಬರೆದಿಟ್ಟಿರುವ ಸನಾತನ ಆರ್ಯ ಧರ್ಮಗಳು ಕೇವಲ ಗೀರ್ವಾಣ ಭಾಷಾಮಯವಾಗಿರುವುದರಿಂದ ಶ್ರೀರಂಗ ಪಟ್ಟಣದಲ್ಲಿರುವ ಮಿ॥ ಎಸ್. ವಿ. ವೆಂಕಟರಾಮಯ್ಯನವರು ಮೇಲ್ಕಂಡ ಹೆಸರುಳ್ಳ ಮಾಸ ಪತ್ರಿಕೆಯ ಮೂಲಕ ಸನಾತನ ಧರ್ಮಗಳನ್ನು ವಚನ ರೂಪವಾಗಿ ಕನ್ನಡಿಗರಿಗೆ ತಿಳಿಯಪಡಿಸಬೇಕೆಂಬ ಉದ್ದೇಶದಿಂದ ಪ್ರತಿ ಮಾಸದ ಕೊನೆಯ ವಾರದಲ್ಲಿ ಪ್ರಕಟಿಸುವರು. ಪ್ರಾಚೀನ ಮತ್ತು ನವೀನ ಕಾಲದ ತತ್ವ ಶಾಸ್ತ್ರಗಳು, ಪ್ರಸಿದ್ಧರಾದ ಗುರುಗಳಿಂದ ರಚಿಸಲ್ಪಟ್ಟ ಗ್ರಂಥಗಳು, ಶ್ರೀ ರಾಮಕೃಷ್ಣ ಸ್ವಾಮಿ ವಿವೇಕಾನಂದ, ಇವರ ಸದ್ಬೋಧೆ ಮತ್ತು ಉಪನ್ಯಾಸಗಳು, ಪುರಾತನ ಮತ್ತು ಆಧುನಿಕ ಮಹನೀಯರ ಜೀವನದ ಚರಿತ್ರೆಗಳು, ಭಕ್ತಿ ಜ್ಞಾನ ವೈರಾಗ್ಯಗಳಿಂದೊಡಗೂಡಿದ ಚಿಕ್ಕ ಕಥೆಗಳು, ನೀತಿ ಬೋಧಕವಾದ ವಿನೋದ ಸಂಭಾಷಣೆಗಳು, ಆಂಗ್ಲೇಯ ತತ್ವಜ್ಞಾನ ಸದುಕ್ತಿಗಳು, ವಿವಿಧ ವೃತ್ತಾಂತ ಮಂಜರಿ, ಇವೇ ಮೊದಲಾದ ವಿಷಯಗಳನ್ನೊಳಗೊಂಡಿರುವುದೇ ಈ ಪತ್ರಿಕೆಯ ಉದ್ದೇಶವು. ಇದು ರಾಜಕೀಯ ವ್ಯಾಪಾರಕ್ಕೆ ಅಷ್ಟು ಸಹಾಯಕವಾಗಿಲ್ಲದಿದ್ದರೂ ವೇದಾಂತಿಗಳಿಗೆ ಬಹಳ ಉಪಯೋಗಕರವಾಗಿರುವುದು ಇದರ ವಾರ್ಷಿಕ ಚಂದ ಒಂದುವರೆ ರೂಪಾಯಿ.

"ಭರತವರ್ಷ."

ಮೇಲ್ಕಂಡ ಮಾಸಪತ್ರಿಕೆಯು ಮೈಸೂರು ವಿದ್ಯಾನಿಧಿ ಮುದ್ರಾಲಯದಲ್ಲಿ ಅಚ್ಚಾಗಿ ಅದರ ಮ್ಯಾನೇಜರವರಿಂದ ಕಳುಹಿಸಿಕೊಟ್ಟ ಒಂದು ಪ್ರತಿಯು ನಮಗೆ ತಲಪಿರುವುದು. ಕರ್ನಾಟಕ ದೇಶದ ಪ್ರತಿ ಬಾಲ ಬಾಲಿಕೆಯರಿಗೂ ಪ್ರೌಢಪ್ರೌಢೆಯರಿಗೂ ಇತರರಿಗೂ ಉಪಯೋಗವಾಗುವಂತೆ ಪ್ರಪಂಚದ ನಾನಾ ಭಾಗಗಳಲ್ಲಿರುವ ಮಹನೀಯರು ಲೋಕೋಪಕಾರಕ್ಕಾಗಿ ಹೇಳಿರತಕ್ಕ ವಿಷಯಗಳನ್ನು ಕ್ರೋಢೀಕರಿಸಿ ಬರೆಯುವುದೇ ಈ ಪತ್ರಿಕೆಯ ಉದ್ದೇಶವೆಂದು ಸೂಚಿಸಲ್ಪಟ್ಟಿರುವುದು ಪ್ರಥಮ ಸಂಚಿಕೆಯಲ್ಲಿ ಪತ್ರಿಕಾಕರ್ತರ ಉದ್ದೇಶ, ಭರತಖಂಡಕ್ಕೆ ಆರ್ಯರ ಪ್ರವೇಶ, ಪುರಾತನ ಮತ್ತು ಈಗಿನ ಕಾಲದ ಜನಾಂಗದ ವಿದ್ಯಾಭ್ಯಾಸ, ಸ್ವಾಮಿ ವಿವೇಕಾನಂದರ ಜ್ಞಾನಸಾರ, ಏಷ್ಯಾಖಂಡದ ಜನಾಂಗಗಳ ಉತ್ಪತ್ತಿ ಧರ್ಮಗಳು, ಸ್ತ್ರೀವಿದ್ಯಾಭ್ಯಾಸ, ಬಾಲಶಿಕ್ಷೆ, ಹೃದಯಾಲಿ, ಈ ವಿಷಯಗಳನ್ನು ಕುರಿತು—ಕೇವಲ ಬಾಲಕರಿಗೂ ಬೋಧೆಯಾಗುವ ಶೈಲಿಯಲ್ಲಿ ಬರೆಯಲ್ಪಟ್ಟಿರುವುದು ಪತ್ರಿಕೆಯ ಪ್ರಥಮದಲ್ಲಿ ಕೊಟ್ಟಿರುವ ಸಂಸ್ಕೃತ ಶ್ಲೋಕಾಭಿಪ್ರಾಯ ವಿಂದ ಮತವಿಚಾರದ ಚರ್ಚೆಗಳಿಗೂ ಅದರಿಂದಾಗುವ ವೈಮನಸ್ಯಗಳಿಗೂ ಅವಕಾಶವಿಲ್ಲದಂತೆ ತೋರುವುದು ಯಾರಾದರು ಪತ್ರಿಕೆಗೆ ಸಹಾಯಕವಾಗಿ ದೇಶೋನ್ನತಿಗೆ ಅನುಗುಣವಾದ ಸಂಗತಿಗಳನ್ನು ಬರೆದು ಕಳುಹಿಸಿಕೊಟ್ಟರೆ ಅಂಥವರಿಗೆ ಕೃತಜ್ಞತೆಯನ್ನು ಸೂಚಿಸುವರು ಇದರ ವಾರ್ಷಿಕ ಚಂದಾ ಒಂದೂವರೆ ರೂಪಾಯಿ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರರು ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳು ಕಟ್ಟಲೆಯ ವಿಚಾರಣೆಯನ್ನು ನಡಸಿದರು

ಪ್ಲೇಗಿನ ಕೈದಿ ಮನೆಗಳಿಗೆ ಚರಂಡಿಗಳನ್ನು ಕಟ್ಟಿಸಿಕೊಡುವುದಕ್ಕೆ ಹಣ ಸ್ಯಾಂಕ್ಷನ್ ಆಗಿದೆ ಎಂತಲೂ ಆ ರಂತೆ ಇಷ್ಟರಲ್ಲೇ ಕಾಮಗಾರಿ ಪ್ರಾರಂಭಿಸುತ್ತೇವೆಂತಲೂ ವೈಸ್ ಪ್ರಸಿಡೆಂಟರು ತಿಳಿಸಿದರು.

ಕೃಷ್ಣರಾಜ, ದೇವರಾಜ, ಚಾಮರಾಜ ಮೊಹಲ್ಲೆಗಳಲ್ಲಿ ಮ್ಯುನಿಸಿಪಾಲಿಟಿಗೆ ಸೇರಿರುವ ಖಾಲಿ ನಿವೇಶನಗಳನ್ನು ವೈಸ್ ಪ್ರೆಸಿಡೆಂಟರು ಆಯಾ ಮೊಹಲ್ಲಾ ಮ್ಯುನಿಸಿಪಲ್ ಕಮಿಷನರರ ಅಭಿಪ್ರಾಯವನ್ನು ತೆಗೆದುಕೊಂಡು ಪ್ರಜೆಗಳಿಗೆ ಬಿಕರಿ ಮಾಡಬಹುದೆಂದು ಗೊತ್ತಾಯಿತು

ಸಾ ಟಿಪ್ಪಣ್ಣನವರ ಅಗ್ರಹಾರದವರಿಗೆ ಪ್ರತಿ ಮನೆಗೂ ಮುಂಭಾಗದಲ್ಲೂ ಹಿಂದುಗಡೆಯೂ ಇರುವ ಖಾಲಿ ಜಾಗವನ್ನು ಗಡಕ್ಕೆ ಒಂದಾಣೆಯಂತೆ ಕೊಡಬೇಕೆಂತಲೂ ಕಂಪೌಂಡು ಗೋಡೆ ಹಾಕಿಕೊಂಡು ಮೇಲು ಭಾವಣಿ ಹಾಕದೆ ಖಾಲಿಯಾಗಿ ಬಿಟ್ಟುಕೊಂಡಿರುವಂತೆ ಅವರಿಂದ ಕರಾರು ತೆಗೆದುಕೊಳ್ಳಬೇಕೆಂತಲೂ ತೀರ್ಮಾನ ಮಾಡಿದಾರೆ.

ಸುತ್ತೂರು ಮಠವಾನೆಯನ್ನು ಈಗಿರುವ ಸ್ಥಳದಿಂದ ತೆಗೆದು ಬೇರೆ ಕಡೆ ಇನ್ನೊಂದು ಕಡೆಇಡಬೇಕೆಂದು ಮೆಂಬರುಗಳೆಲ್ಲಾ ಅಭಿಪ್ರಾಯಪಟ್ಟು, ಈ ವಿಷಯವನ್ನು ಪ್ರೆಸಿಡೆಂಟರೇ ಇತ್ಯರ್ಥಮಾಡತಕ್ಕದ್ದೆಂದು ಅವರಿಗೆ ವಹಿಸಿರುತ್ತಾರೆ

ರಾಜಧಾನಿಗೆ ನೀರು ಸರಬರಾಜು ಆಗುವ ಬೆಳಗೊಳದ ಇಂಜನ್ ಕಟ್ಟಡದಲ್ಲಿ ಯಂತ್ರಗಳ ಬದಲಾವಣೆ ಮುಂತಾದ್ದರ ಕಾಮಗಾರಿಗೆ ೨,೯೩೮ ರೂಪಾಯಿ ಬೇಕಾಗಿದೆ ಎಂದೂ ಇದನ್ನು ಬಜೆಟ್ಟಿನಲ್ಲಿ ಕಾಣಿಸಿ ಸ್ಯಾಂಕ್ಷನ್ ಮಾಡಬೇಕೆಂದೂ ಇಂಜನಿಯರವರು ಬರೆದಿದ್ದರು. ಮೆಂಬರುಗಳು ಈ ಖರ್ಚಿನ ಬಾಬನ್ನು ಒಪ್ಪಿಕೊಂಡರು.

ದೇವರಾಜ ಮೊಹಲ್ಲಾದಲ್ಲಿರುವ ಕೃಷ್ಣವಿಲಾಸ ಅಗ್ರಹಾರದಲ್ಲಿ ಮ್ಯುನಿಸಿಪಾಲಿಟಿಯವರು ಒಂದು ಬಾವಿಯನ್ನು ಮುಚ್ಚಿಸಿ, ಒಂದು ತೆಂಗಿನ ಮರವನ್ನು ಕಡಿಸಿ ಹಾಕಿದರು. ಇವೆರಡಕ್ಕೂ ಪ್ರತಿಫಲ ಕೊಡಬೇಕೆಂದು ಅವುಗಳ ಮಾಲೀಕರು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಚರ್ಚೆಮಾಡಿ, ಮಾಲೀಕರಿಗೆ ೨೫೦ ರೂಪಾಯಿ ಪ್ರತಿಫಲ ಕೊಡಬಹುದೆಂದು ಒಪ್ಪಿಕೊಂಡಿದಾರೆ

ಮ್ಯುನಿಸಿಪಲ್ ಸ್ಕೂಲುಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಮ್ಯುನಿಸಿಪಾಲಿಟಿಯವರು ಒಬ್ಬ ಇನ್ಸ್‌ಪೆಕ್ಟರನ್ನು ನೇಮಿಸಿಕೊಂಡಿದ್ದರು. ಸ್ಕೂಲ್ ಕಮಿಟಿಯವರು ಆ ಇನ್ಸ್‌ಪೆಕ್ಟರಿಗೆ ೫ ವರುಷ ರಜಾ ಕೊಡಬಹುದೆಂತಲೂ, ಅವರ ಕೆಲಸ ಹಾದಿಂದ ಇನ್ನು ಕೆಲವು ಪಾಠಶಾಲೆಗಳಿಗೆ ವ್ಯವಸ್ಥೆಯು ಮಾಡಲೂ ಒಳ್ಳೇ ಬಾಡಿಗೆ ಮನೆಗಳನ್ನು ಸ್ಕೂಲುಗಳಿಗೆ ಮಾಡಿಕೊಡಲೂ ಸಹಾಯವಾಗುವುದೆಂತಲೂ ಬೋರ್ಡಿಗೆ ಶಿಫಾರಸು ಮಾಡಿದರು. ಮೆಂಬರುಗಳು ಸ್ಕೂಲ್ ಇನ್ಸ್‌ಪೆಕ್ಟರ ಆವಶ್ಯಕತೆಯೇ ಇಲ್ಲವೆಂತಲೂ ಆ ಕೆಲಸವನ್ನೇ ವಜಾ ಮಾಡಬಹುದೆಂತಲೂ ಆಯಾ ಮೊಹಲ್ಲೆಯ ಮ್ಯುನಿಸಿಪಲ್ ಮೆಂಬರುಗಳೇ ಪಾಠಶಾಲೆಗಳ ಮೇಲ್ವಿಚಾರಣೆ ನೋಡಿಕೊಳ್ಳತಕ್ಕದ್ದಾಗಿಯೂ ಅಭಿಪ್ರಾಯಪಟ್ಟರು. ಇದರಂತೆ ಒಂದು ನಿರ್ಣಯ ಪಡೆಯಿತು, ಮುಂದೆ ಆವಶ್ಯವಿದ್ದಂತೆ ನೋಡೋಣವೆಂದು ತೀರ್ಮಾನವಾಯಿತು.

ಮನಸ್ಸಾಕ್ಷಿ.

೧. ಮನಸ್ಸಾಕ್ಷಿಯೆಂದರೇನು ?

ದೇವರಿಗೂ ಮನುಷ್ಯನಿಗೂ ಇರುವ ಸಂಬಂಧವನ್ನು ಸೂಚಿಸುವಂಥಾದ್ದೇ ಮತ. ಆದಕಾರಣ ದೇವರ ಸ್ವಭಾವವನ್ನೂ ಮನುಷ್ಯನ ಸ್ವಭಾವವನ್ನೂ ಕುರಿತ ನಿಜತತ್ವಗಳನ್ನು ನಾವು ತಿಳಿದಿರಬೇಕಾದದ್ದು ಅವಶ್ಯವು. ಈ ತತ್ವಗಳ ವಿಷಯದಲ್ಲಿ ನಮಗಿರುವ ಅಭಿಪ್ರಾಯವು ಅಪೂರ್ಣವಾಗಿರುವದು ಸ್ವಭಾವ ಸಿದ್ಧವಾಗಿಯೇ ಇದೆ. ಆದರೆ ಅವು ನಿಜವಾಗಿಯೇ ಇರಬೇಕೆಂದು ಹೇಳಲವಶ್ಯವಿಲ್ಲವಷ್ಟೆ. ನಾವು ಈಗ ಬರೆಯುವದಕ್ಕಿರುವ ವಿಷಯವು ಮನುಷ್ಯನೊಳಗಿರುವ ಸರ್ವೋತ್ಕೃಷ್ಟವಾದ ಸ್ವಭಾವವನ್ನು ಕುರಿತದ್ದಾಗಿದೆ.

ನಮ್ಮ ಸ್ವಭಾವವನ್ನು ಇಂಥಾದ್ದೆಂದು ಆಲೋಚಿಸುವದೂ ತಿಳಿಯುವದೂ ಬಹು ಮುಖ್ಯವಾದ ವಿಷಯವಾಗಿದೆ. ಯಾಕಂದರೆ ತಾನು ತನ್ನ ವಿಷಯವಾಗಿ ಏನೇನು ನಿಜವೆಂದು ಮನುಷ್ಯನು ನಂಬಿದ್ದಾನೋ ಆ ನಂಬಿಕೆಯ ಪ್ರಕಾರವೇ ಅವನವನ ಜೀವಮಾನದ ರೀತಿಯು ಬಹುಮಟ್ಟಿಗೆ ಹೊಂದುವಂಥಾದ್ದಾಗಿದೆ. ಹ್ಯಾಗಂದರೆ—ಮನುಷ್ಯನು ತನಗೆ ಶರೀರವಿರುವದೆಂದು ತಿಳಿದಿರುವದರಿಂದಲೇ ಅದರ ಪೋಷಣೆಗೆ ಅವಶ್ಯವಾದ ಪದಾರ್ಥಗಳನ್ನು ಒದಗಿಸಿಕೊಳ್ಳುತ್ತಾನೆ. ಬುದ್ಧಿಶಕ್ತಿಯು ಇರುವದರಿಂದ ವಿದ್ಯಾಭ್ಯಾಸವನ್ನು ಮಾಡುತ್ತಾನೆ. ತನಗೆ ಸೌಂದರ್ಯವನ್ನು ಗ್ರಹಿಸುವ ಶಕ್ತಿಯುರುವದರಿಂದ ಚಿತ್ರ, ಗಾಯನ ಮುಂತಾದ ವಿದ್ಯೆಗಳನ್ನು ಅಭ್ಯಾಸ ಮಾಡುತ್ತಾನೆ. ಹೀಗೆ ತನ್ನ ಸ್ವಭಾವದಲ್ಲಿ ಯಾವ ಯಾವ ತತ್ವಗಳಿವೆಯೋ ಅವುಗಳ ಅವಶ್ಯಕತೆಗೆ ತಕ್ಕಂತೆ ತನ್ನ ಜೀವಮಾನವನ್ನು ನಡಿಸಿಕೊಂಡು ಹೋಗುತ್ತಾನೆ. ಆದಕಾರಣ ನಮ್ಮ ಸ್ವಭಾವವೇನೆಂದು ನಮ್ಮಿಂದಾದಮಟ್ಟಿಗೆ ಪರೀಕ್ಷಿಸಿ ತಿಳಿಯುವದು ಅವಶ್ಯಕರ್ತವ್ಯವಾಗಿದೆ.

ಮನುಷ್ಯ ಸ್ವಭಾವವನ್ನು ವಿಮರ್ಶಿಸಿ ನೋಡಲಾಗಿ ಅದೊಂದು ಏಣಿಯಂತಿರುವದು. ಅದರ ಕೆಳಭಾಗದಲ್ಲಿಯೂ ಮಧ್ಯಭಾಗದಲ್ಲಿಯೂ ಇರುವ ಮೆಟ್ಟಲುಗಳು ಗೋಚರಿಸುತ್ತವೆ. ಅದರ ತುದಿಯು ಮಾನವ ದೃಷ್ಟಿಗೆ ಕಾಣಲಾರದಂತೆ ಆಕಾಶದಲ್ಲಿ ನಿಂತಿದೆ. ಈ ಮೆಟ್ಟಲುಗಳನ್ನು ಏಳೆಂದು ಪರಿಗಣಿಸಬಹುದು. ಹ್ಯಾಗಂದರೆ—

೧. ಅವರವರು ತುಳಿದಾಡುವ ಈ ಭೂಮಿಯೂ ಒಂದೇ ಪದಾರ್ಥದಿಂದ ಉತ್ಪನ್ನವೆಂಬುವದು ವ್ಯಕ್ತವಾಗಿದೆ. "ನೀನು ಮಣ್ಣು" ಎಂದು ಭಗವಂತನು ಮನುಷ್ಯನಿಗೆ ಹೇಳಿದನೆಂಬದಾಗಿ ಸತ್ಯವೇದದಲ್ಲಿ ಉಂಟು. ಇದು ನಿಜವೆಂಬುವದು ಅನುಭವಸಿದ್ಧವಾಗಿದೆ.

೨. ಅವನಿಗೂ ಅವನ ಸುತ್ತಲಿರುವ ಸಸ್ಯಾದಿಗಳಿಗೂ ಸಂಬಂಧವುಂಟು. ಹ್ಯಾಗಂದರೆ, ಅವನಲ್ಲಿ ಬೆಳೆಯತಕ್ಕ ಶಕ್ತಿಯುಂಟು. "ಸಕಲ ಮನುಷ್ಯರೂ ಹುಲ್ಲೇ" ಎಂಬ ವೇದೋಕ್ತವಾದ ಮಾತು ನಿಶ್ಚಯವಾಗಿಯೇ ಇದೆ.

೩. ಇಲ್ಲಿಂದ ಇನ್ನು ಸ್ವಲ್ಪ ಮೇಲಕ್ಕೆ ನೋಡಿದರೆ ಮನುಷ್ಯನಲ್ಲಿ ಇಚ್ಛೆಬಂದಂತೆ ಚರಿಸುವ ಪ್ರಾಣಿ ವರ್ಗದ ಸಂಬಂಧವೊಂದು ತೋರುವದು. ಇದಕ್ಕೆ ಅನುಸಾರವಾಗಿ ಸತ್ಯಶಾಸ್ತ್ರವು—"ನಾವೆಲ್ಲರೂ ಆತನ ಮೇವಿನ ಮಂದೆಯೂ ಆತನ ಕೈಯಿಂದ ನಡಿಸಲ್ಪಡುವ ಕುರಿಗಳೂ ಆಗಿದ್ದೇವೆ" ಎಂದು ಹೇಳುತ್ತದೆ.

೪. ಮನುಷ್ಯನಲ್ಲಿ ಮೃಗಕ್ಕಿರುವ ಸ್ವಭಾವಕ್ಕಿಂತ ಹೆಚ್ಚಾದ ಸ್ವಭಾವವಿದೆ. ಅವನಲ್ಲಿ ಯುಕ್ತಾಯುಕ್ತ ಪರಿಜ್ಞಾನವಿದೆ. ತನ್ನ ಇಂದ್ರಿಯಗಳ ಮುಖಾಂತರವಾಗಿ ವಿಷಯಗಳನ್ನು ವಿಮರ್ಶಿಸಿ ತಿಳಿಯುವಂಥ ಅರಿವು ಅವನಲ್ಲುಂಟು. ತನಗಿಂತ ಪರಿಮಾಣದಲ್ಲಿ ದೊಡ್ಡವಾಗಿಯೂ ಬಲದಲ್ಲಿ ಹೆಚ್ಚಾಗಿಯೂ ಇರುವ ಮೃಗಗಳಿಗಿಂತ ತಾನು ಹೆಚ್ಚೆಂದು ಭಾವಿಸಿಕೊಳ್ಳುವದು ನ್ಯಾಯವಾಗಿದೆ. ಆದಕಾರಣ ಭಗವಂತನು ಅವನೊಡನೆ—"ಬಾ, ನಾವಿಬ್ಬರೂ ತರ್ಕಮಾಡೋಣ" ಎಂದು ಹೇಳುವದು ಸಹಜವಾಗಿದೆ.

೫. ಮನುಷ್ಯನಲ್ಲಿ ದೃಕ್ ಧ್ವನಿ ಮುಂತಾದ ರೀತಿಯಗಳಲ್ಲಿ ಇಂಥಾದ್ದು ಸುಂದರವಾಗಿದೆ, ಇಂಥಾದ್ದು ವಿಕಾರವಾಗಿದೆಯೆಂದು ಗ್ರಹಿಸುವ ಶಕ್ತಿಯುದೆ.

೬. ಮನುಷ್ಯನು ಬುದ್ಧಿಯುಳ್ಳ ಪ್ರಾಣಿಯಾಗಿರುವದರಿಂದ ಅವನು ಅರ್ಥಗರ್ಭಿತವಾದ ಭಾಷೆಯನ್ನಾಡುವವನಾಗಿದ್ದಾನೆ. ಭಾಷೆಯಲ್ಲಿ ಪದಾರ್ಥಗಳ ಹೆಸರುಗಳನ್ನೂ ಅಭಿಪ್ರಾಯಗಳನ್ನೂ ಪರಸ್ಪರ ಸಂಬಂಧಗಳನ್ನೂ ಸೂಚಿಸುವ ಪದಗಳುಂಟು. ಸರಿ, ತಪ್ಪು, ಮಾನ, ಅವಮಾನವೆಂಬೀ ಮೊದಲಾದ ಪದಗಳನ್ನು ಮನುಷ್ಯನು ತನ್ನ ಭಾಷೆಯಲ್ಲಿ ಉಪಯೋಗಿಸುವದರಿಂದ ಅವನು ಧರ್ಮಾಧರ್ಮ ವಿವೇಚನಾ ಪ್ರಪಂಚಕ್ಕೆ ಸೇರಿದವನೆಂಬುವದು ವ್ಯಕ್ತವಾಗುತ್ತದೆ.

೭. ಮನುಷ್ಯನ ಸ್ವಭಾವವು ಇಷ್ಟೇ ಅಲ್ಲ. ಅವನು ಒಳ್ಳೆಯತನ, ಸತ್ಯ, ಪ್ರೀತಿ ಎಂಬೀ ವಸ್ತುವಿಶೇಷಗಳನ್ನು ಅರಸತಕ್ಕವನಾಗಿದ್ದಾನೆ. ಅಂದರೆ, ಅವನು ದೇವರನ್ನರಸತಕ್ಕವನಾಗಿರುವದರಿಂದ ಆತ್ಮಿಕ ಪ್ರಪಂಚಕ್ಕೆ ಸೇರಿದ್ದಾನೆಂದು ಕಂಡುಬರುತ್ತದೆ.

ಹೀಗೆ ಮನುಷ್ಯನು ಮಣ್ಣಾಗಿ ಪ್ರಾರಂಭಿಸಿ, ದೇವರ ಬಳಿಯಲ್ಲಿ ಪರಿಣಾಮವನ್ನು ಹೊಂದತಕ್ಕವನಾಗಿದ್ದಾನೆ.

ಈ ಏಳು ಮೆಟ್ಟಲುಗಳಲ್ಲಿ ಮನಸ್ಸಾಕ್ಷಿಯು ಯಾವ ಭಾಗಕ್ಕೆ ಸೇರಿದ್ದು ? ಮನಸ್ಸಾಕ್ಷಿಯೆಂದರೇನು ? ಅದರ ಕರ್ತವ್ಯವೇನು ? ಎಂದು ನಾವು ಆಲೋಚಿಸಬೇಕಾಗಿದೆ.

ಮಣ್ಣಿನ ಉಂಡೆಗೂ, ಸಸ್ಯಾದಿಗಳಿಗೂ, ಪ್ರಾಣಿಮಾತ್ರವಾದ ಜೀವಿಗಳಿಗೂ, ಮನಸ್ಸಾಕ್ಷಿಗೂ ಏನೂ ಸಂಬಂಧವಿರಲಾರದು. ಅಥವಾ ಮನಸ್ಸಾಕ್ಷಿಯು ಸೌಂದರ್ಯವೇ ಥಾದ್ದೆಂದು ತಿಳಿಯುವದೆಂಬುದಾಗಿಯೂ ಅದರಲ್ಲಿ ಸಂತೋಷಿಸುವದೆಂಬುದಾಗಿಯೂ ನಾವು ಹೇಳಿದರೆ ಒಪ್ಪಲಾರದು. ಅಥವಾ ಮನಸ್ಸಾಕ್ಷಿಯೆಂಬುವದು ಬರೀ ಬುದ್ಧಿಗೆ ಸಂಬಂಧಪಟ್ಟದ್ದೆಂದೂ ಹೇಳಬಾರದು. ಮನಸ್ಸಾಕ್ಷಿರಹಿತವಾದ ಬುದ್ಧಿಶಾಲಿಯಿಲ್ಲವೇ ?

ಹೀಗೆ ಮನುಷ್ಯನ ಏಳು ವಿಧವಾದ ಸ್ಥಿತಿಗತಿಗಳನ್ನು ನೋಡುವಲ್ಲಿ ಅವನೊಳಗೆ ಮೊದಲಿನ ಐದು ಸ್ಥಿತಿಗಳಿಗೆ ಮನಸ್ಸಾಕ್ಷಿಯು ಪತಿಸದೆ ಕಡೇ ಎರಡು ಸ್ಥಿತಿಗಳಿಗೆ ಸಂಬಂಧಪಡುತ್ತದೆಯೆಂದು ನಾವು ತಿಳಿಯುತ್ತೇವೆ.

ಕೆಲವು ವಿಷಯಗಳನ್ನು ತಪ್ಪೆಂದೂ ಮತ್ತೆ ಕೆಲವನ್ನು ನೆಪ್ಪೆಂದೂ ನಾವು ಹೇಳುತ್ತೇವಲ್ಲ ; ಇದು ಯಾಕೆ ? ಈ ವಿಷಯದಲ್ಲಿ ಎರಡು ಸಿದ್ಧಾಂತಗಳುಂಟಾಗಿವೆ. ಒಂದು ಸ್ವಭಾವಾನುಗುಣವಾದದ್ದು, ಮತ್ತೊಂದು ಕ್ರೈಸ್ತ ಮತಾನುಸಾರವಾದದ್ದು. ಕೆಲವು ಕೃತ್ಯಗಳು ತನ್ನ ಪ್ರಯೋಜನಕ್ಕೂ ಸಮಾಜದ ಸುಖಕ್ಕೂ ಪ್ರತಿಕೂಲವಾಗಿರುತ್ತವೆಂದೂ ಇನ್ನು ಕೆಲವು ಅನುಕೂಲವಾಗಿರುತ್ತವೆಂದೂ ಮನುಷ್ಯರ ಅನುಭವಕ್ಕೆ ಬಂದಿದೆ. ಇದಕ್ಕುದಾಹರಣೆ—ಸುಳ್ಳುಹೇಳುವದು ಸಮಾಜದ ಸುಖಕ್ಕೆ ಪ್ರತಿಕೂಲವಾಗಿದೆಯೆಂದು ತಿಳಿದುಬಂದಿರುವದರಿಂದ ಸುಳ್ಳು ನುಡಿಯುವದಕ್ಕೆ ಅವಕಾಶವೇ ಸಿಕ್ಕದಂತೆ ಮಾಡುವದು ಮನುಷ್ಯನ ಕರ್ತವ್ಯವೆಂದು ಸ್ವಭಾವಾನುಗುಣವಾಗಿ ವಾದಿಸುವವರು ಸಿದ್ಧಾಂತ ಮಾಡಿಕೊಂಡಿರುತ್ತಾರೆ. ಈ ಪ್ರಕಾರ ಸರಿ, ತಪ್ಪು, ಒಳ್ಳೇದು, ಅಲ್ಲದ್ದು ಎಂಬ ಮಾತುಗಳನ್ನು ಮನುಷ್ಯರ ಸುಖಕ್ಕೆ ಅನುಕೂಲವಾದಂಥ ಇಲ್ಲವೆ ಪ್ರತಿಕೂಲವಾದಂಥ ಕೃತ್ಯಗಳೆಂದು ಸಾವಿರಾರು ವರ್ಷಗಳಿಂದ ಅನುಭವಕ್ಕೆ ಬಂದಿರುವ ಕೃತ್ಯಗಳಿಗೆ ಹೆಸರಾಗಿ ಉಪಯೋಗಿಸುತ್ತಾ ಬಂದಿದ್ದಾರೆ. ಕಾಲಕ್ರಮೇಣ ಈ ಕೃತ್ಯಗಳು ಸರಿಯೆಂಬುವದು ಯಾಕೆ ? ಸರಿಯಲ್ಲವೆಂಬುವದು ಯಾಕೆ ? ಎಂಬ ಕಾರಣಗಳನ್ನೇ ಮರೆತುಹೋದರು. ಈ ಸಿದ್ಧಾಂತದಲ್ಲಿ ಅಬದ್ಧವುಂಟು. ಕ್ರೈಸ್ತ ಸಿದ್ಧಾಂತದಲ್ಲಾದರೋ ಪ್ರಯೋಜನವಿರುವದರಿಂದ ಒಂದು ಕಾರ್ಯವು ಸರಿ ಅಥವಾ ಒಳ್ಳೇದೆಂದು ಹೇಳದೆ, ಅದು ಸ್ವಭಾವತಃ ಅಂಥಾದ್ದಾಗಿದೆಯೆಂದು ಸಾಧಿಸುತ್ತದೆ. ಸುಳ್ಳು ಹೇಳುವವರಿಂದ ಭೂಲೋಕಕ್ಕೆ ಕೋಟ್ಯಂತರ ರೂಪಾಯಿ ಲಾಭ ಸಿಗುವದಾಗಿದ್ದರೆ ಸುಳ್ಳು ಒಳ್ಳೇದೆಂದು ಕ್ರೈಸ್ತ ಮತ ಸಿದ್ಧಾಂತವು ಎಷ್ಟು ಮಾತ್ರಕ್ಕೂ ಹೇಳಲಾರದು. ಪಾರ್ಲಿಮೆಂಟು ಸಭೆಯಲ್ಲಿ ಕಟ್ಟಳೆಗಳನ್ನು ವಿಧಿಸುವಂತೆಯೇ ದೇವರು ಕೆಲವು ವಿಷಯಗಳನ್ನು ಸರಿಯೆಂತಲೂ ಕೆಲವು ವಿಷಯಗಳನ್ನು ತಪ್ಪೆಂತಲೂ ವಿಧಿಸಿರುವದರಿಂದ ನಾವು ಆಯಾ ವಿಷಯಗಳನ್ನು ಸರಿಯೆಂತಲೂ ತಪ್ಪೆಂತಲೂ ನಿರ್ಣಯಿಸುತ್ತೇವೆಂಬುದಾಗಿ ಕೆಲವರು ವಾದಿಸುವದುಂಟು. ಇದೂ ಸರಿಯಲ್ಲ. ಒಳ್ಳೇದೆಂಬುವದು ದೇವರ ಸ್ವಭಾವವೇ ಆಗಿದೆ. ಕೆಟ್ಟದ್ದೆಂಬುವದು ಅದಕ್ಕೆ ವಿರೋಧವಾದದ್ದಾಗಿದೆ.

ರಮ್ಯವಾದವುಗಳನ್ನೂ ಸುಂದರವಾದವುಗಳನ್ನೂ ಅಥವಾ ಅಸಹ್ಯವಾಗಿಯೂ ವಿಕಾರವಾಗಿಯೂ ಇರುವ ವಸ್ತುಗಳನ್ನು ಗ್ರಹಿಸುವದಕ್ಕಾಗಿ ನಮ್ಮ ಕೆಲವು ಇಂದ್ರಿಯಗಳಿರುತ್ತವಷ್ಟೆ. ಇದೇ ಪ್ರಕಾರ ಮನುಷ್ಯನ ಧರ್ಮವಿವೇಚನೆಯ ಭಾಗದಲ್ಲೂ ಆತ್ಮವಿಚಾರದ ಭಾಗದಲ್ಲೂ ಯಾವ್ಯಾವದು ಸರಿ, ಯಾವ್ಯಾವದು ತಪ್ಪು ಎಂಬುವದನ್ನು ಗ್ರಹಿಸತಕ್ಕ ಒಂದು ಇಂದ್ರಿಯವು ಇರಬೇಕಷ್ಟೆ. ಅಂಥಾ ಇಂದ್ರಿಯವೊಂದುಂಟು. ಅದೇ ನಮ್ಮ ಆತ್ಮಕ್ಕೆ ಕಣ್ಣು ಕಿವಿ ಮೂಗು ಕೈಗಳಂತಿರುತ್ತದೆ. ಆ ಇಂದ್ರಿಯವೇ ಮನಸ್ಸಾಕ್ಷಿ.

"ಕಣ್ಣು ಶರೀರದ ಬೆಳಕು" ಎಂದು ಸ್ವಾಮಿಯು ಹೇಳಿದನು. ಕಣ್ಣು ನೋಡಬೇಕಾದರೆ ಬೆಳಕೂ ವಸ್ತುಗಳೂ ಇರಬೇಕಲ್ಲವೇ ? ಬೆಳಕನ್ನು ಕಾಣದ ಕಣ್ಣು ಕೆಟ್ಟುಹೋಗಿ ನಿಷ್ಪ್ರಯೋಜನವಾಗುವದು. ವಸ್ತುಗಳಿಲ್ಲದಿದ್ದರೆ ಬೆಳಕಿದ್ದೂ ಪ್ರಯೋಜನವಿಲ್ಲ. ಬೆಳಕನ್ನೇ ಪ್ರತ್ಯೇಕವಾಗಿ ನೋಡುವದಸಾಧ್ಯವು. ಈ ನಿದರ್ಶನವು ಮನಸ್ಸಾಕ್ಷಿಯ ವಿಷಯದಲ್ಲಿ ಚನ್ನಾಗಿ ಒಪ್ಪುವದು. ನಮ್ಮಲ್ಲಿರುವ ಮನಸ್ಸಾಕ್ಷಿಯೆಂಬ ಇಂದ್ರಿಯವ್ಯಾಪಾರವು ಚನ್ನಾಗಿ ನಡೆಯಬೇಕಾದರೆ ಅದಕ್ಕೆ ಎರಡು ವಿಷಯಗಳು ಅವಶ್ಯವಾಗಿವೆ. ಅವು ಯಾವವಂದರೆ—ಅದರಿಂದ ಯಾವದನ್ನು ಗ್ರಹಿಸಬೇಕೋ ಆ ವಸ್ತುವೂ, ಆ ವಸ್ತುವನ್ನು ಗ್ರಹಿಸುವಂತೆ ಬೆಳಕೂ, ಇವೇ.

[ಸಶೇಷ]

ಇಂಡಿಯಾ ದೇಶದ ವೃತ್ತಾಂತಗಳು.

ಪುದುಕೋಟೆ ಸಂಸ್ಥಾನದ ಪ್ರಜಾ ಪ್ರತಿನಿಧಿ ಸಭೆಯನ್ನು ಜುಲೈ ೩ನೇ ತಾರೀಖಿನಿಂದ ನಡೆಯುವಂತೆ ರಾಜರು ಅಪ್ಪಣೆ ಕೊಟ್ಟಿದ್ದಾರೆ.

*****

ರಂಗೂನ್ ಪಟ್ಟಣದಲ್ಲಿರುವ ಬಂಗಾಳಾ ಬ್ಯಾಂಕಿನಲ್ಲಿ ಇಬ್ಬರು ಸೇವಕರು ಬ್ಯಾಂಕಿನ ೧೦,೦೦೦ ರೂಪಾಯಿಗಳನ್ನು ಅಪಹರಿಸಿದರು. ಇವರನ್ನು ಮ್ಯಾಜಿಸ್ಟ್ರೇಟರು ತನಿಖೆಮಾಡಿ, ಸೆಷನ್ ವಿಚಾರಣೆಗೆ ಗುರಿಪಡಿಸಿರುತ್ತಾರೆ.

*****

ಬೊಂಬಾಯಿ ಹೈಕೋರ್ಟಿನ ಜಡ್ಜರಾದ ಮೆ॥ ಎಸ್. ಎಲ್. ಬ್ಯಾಚಿಲರ್‌ಯವರು ಅದೇ ಹೈಕೋರ್ಟಿನಲ್ಲಿ ಜೊತೆ ಜಡ್ಜಿಯಾದ ಮೆ॥ ಜಸ್ಟಿಸ್ ಬ್ಯಾಟ್ಟಿಯ ಯವರ ಕುಮಾರ್ತೆಯನ್ನು ವರಿಸಿ ಕಳೆದ ವಾರ ಮದುವೆಮಾಡಿಕೊಂಡರು.

*****

ಟಿಬೆಟ್ ರಾಜ್ಯದಲ್ಲಿ ಅಲ್ಲಿನ ಜನರು ಸೇರಿ ಕೆಲವು ಫ್ರೆಂಚರನ್ನೂ ಚೀಣಾದಿಂದ ಬಂದಿದ್ದ ಕಮಿಷನರೆಂಬ ಅಧಿಕಾರಿಯನ್ನೂ ಈತನ ಹಿಂಬಾಲಕರನ್ನೂ ಹಿಂದಿನವಾರ ನಿಷ್ಕರುಣವಾಗಿ ಕೊಂದು ಹಾಕಿರುತ್ತಾರೆಂದು ತಂತೀ ವರ್ತಮಾನಬಂದಿದೆ.

*****

ಲಾಹೋರ್ ಪಟ್ಟಣದಲ್ಲಿ ವ್ಯಾಪಾರ ವಿಷಯವನ್ನು ಕಲಿಸುವದಕ್ಕೆ ಒಂದು ವಿದ್ಯಾಶಾಲೆಯನ್ನು ಈಗತಾನೇ ಏರ್ಪಾಡು ಮಾಡಿದಾರೆ. ಅಂಗಡಿಗಳ, ಬ್ಯಾಂಕುಗಳ, ವರ್ತಕರ ಲೆಕ್ಕಗಳನ್ನೂ ಕಾಗದ ಪತ್ರ ನಡಸುವ ಕ್ರಮಗಳನ್ನೂ ಕಲಿಸುವರು.

*****

ಮುರ್ಷಿದಾಬಾದಿನ ಲೇಟ್ ನವಾಬರವರ ಪತ್ನಿಯಾದ ಘಸಿದನ್ನೈಸಿದ ನವಾಬ್ ಷಾಂಸಿ ಜಹಾನ್ ಬೇಗಂ ಯವರು ಕಳೆದ ಶುಕ್ರವಾರ ರಾತ್ರಿ ಕಾಲವಾದರು. ಈಕೆ ದಾನಧರ್ಮಗಳನ್ನು ಅಪಾರವಾಗಿ ಮಾಡಿ, ತುಂಬಾ ಕೀರ್ತಿಯನ್ನು ಸಂಪಾದಿಸಿಕೊಂಡಿದ್ದರು.

*****

ಪಂಜಾಬ್ ಲೆಫ್ಟಿನೆಂಟ್ ಗವರ್ನರಾದ ಸರ್ ಛಾರ್ಲ್ಸ್ ರಿವಾಸ್ ಯವರು ಆರು ತಿಂಗಳ ರಜಾ ಪಡೆದು, ಕಳೆದ ಗುರುವಾರ ಕೆಲಸ ಬಿಟ್ಟು, ಸೀಮೆಗೆ ಪ್ರಯಾಣ ಮಾಡಿದರು. ಅವರ ಕೆಲಸಕ್ಕೆ ಸರ್ ಡೆನ್ಸಿಲ್ ಐಬೆಟ್ಸನ್‌ರವರು ನೇಮಕವಾಗಿ ಬದಲಿ ನೋಡುತ್ತಿದಾರೆ.

*****

ಅಲಹಾಬಾದಿನಲ್ಲಿ ಪೋಲೀಸಿನವರು ಒಂದು ಮನೆಗೆ ಆಕಸ್ಮಾತ್ತಾಗಿ ನುಗ್ಗಿ ಶೋಧಮಾಡಿ ನೋಡಿದಾಗ ೫೦ ಖೋಟಾ ರೂಪಾಯಿಗಳೂ ರೂಪಾಯಿ ತಯಾರ್ಮಾಡುವದಕ್ಕೆ ಅಚ್ಚು ಮೊದಲಾದ ಸಲಕರಣೆಗಳೂ ಸಿಕ್ಕಿದವು. ಮೂರು ಮಂದಿಯನ್ನು ಹಿಡಿದು ತನಿಖೆಮಾಡುತ್ತಿದಾರೆ.

*****

ಆಗ್ರಾ ಪಟ್ಟಣದಲ್ಲಿರುವ ವಿದ್ಯಾಶಾಲೆಗೆ ಸಂಬಂಧಪಟ್ಟ ಹಾಗೆ ಒಂದು ದೊಡ್ಡ ವಿದ್ಯಾರ್ಥಿ ನಿಲಯವನ್ನು ಕಟ್ಟಬೇಕೆಂದು ಒಂದು ಕಮಿಟಿ ಏರ್ಪಾಡಾಗಿ ದೊಡ್ಡ ಮನುಷ್ಯರಿಂದ ತಲೆ ೧೦೦ ರೂಪಾಯಿಯಂತೆ ಚಂದಾ ವಸೂಲ್ಮಾಡುತ್ತಿದಾರೆ. ಈ ಫಂಡಿಗೆ ಇದುವರೆಗೆ ೧ ಲಕ್ಷ ರೂಪಾಯಿ ಕೂಡಿದೆ.

*****

ದಕ್ಷಿಣ ಮರಾಟಾ ರೈಲ್ ರಸ್ತೆಯನ್ನು ಗದಗ್ಗಿನಿಂದ ಲಕ್ಷ್ಮೇಶ್ವರದ ಮೂಲಕ ಬೈಲಹೊಂಗಲವರೆಗೆ ಬಿಡಾವಣೆ ಮಾಡಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ. ಆ ಪ್ರಾಂತ್ಯ ಪಟ್ಟಣಗಳು ಸಿಕ್ಕಿರುವದರಿಂದ ಅಲ್ಲಿನ ವ್ಯಾಪಾರಿಗಳಿಗೆ ಇದು ರಸ್ತೆಗೆ ತುಂಬಾ ಸಹಾಯವಾಯಿತು.

*****

ಬೊಂಬಾಯಿ ಪಟ್ಟಣದ ಬಾಂದ್ರಾ ಎಂಬ ಭಾಗದಲ್ಲಿ ಕಳೆದ ವಾರ ಮಹಮದೀಯರು ಸೇರಿ, ಅಗ್ನಿಕುಂಡವನ್ನು ಮಾಡಿ, ೨—೩ ಅಡಿ ಆಳ ಕುಂಡಗಳನ್ನು ಅಗಲವಾಗಿ ತೋಡಿ, ಸಾವಿರಾರು ಜನರು ನಿಂತು ನೋಡುವಾಗ್ಗೆ ಮಹಮದೀಯರು ಬೆಂಕಿಯ ಮೇಲೆ ತಿರುಗಾಡಿ, ನೋಟಕರಲ್ಲಿ ಪರಮಾಶ್ಚರ್ಯವನ್ನುಂಟುಮಾಡಿದರು.

*****

ಗುಜರಾತ್ ಡಿಸ್ಟ್ರಿಕ್ಟಿಗೆ ಸೇರಿದ ವಿಹಾರ್ವಾಲ್ ಎಂಬ ಗ್ರಾಮದಲ್ಲಿ ಪ್ರಜಾ ನೆಮ್ಮದಿಗೆ ಭಂಗ ಉಂಟಾದದ್ದನ್ನು ನೋಡಿ, ಸರ್ಕಾರದವರು ಆ ಗ್ರಾಮವನ್ನೇ ಶಿಕ್ಷಿಸುವದಕ್ಕಾಗಿ ಕೆಲವು ಜನ ಪೋಲೀಸಿನವರನ್ನು ನೇಮಿಸಿ ಕಳುಹಿಸಿ, ಇವರ ಖರ್ಚನ್ನು ಆ ಗ್ರಾಮದ ಪ್ರಜೆಗಳಿಂದ ವಸೂಲ್ಮಾಡಬೇಕೆಂದು ಹುಕುಂ ಮಾಡಿದಾರೆ.

*****

ಸಿಲೋನ್ (ಲಂಕಾ) ದ್ವೀಪದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆಯುವದಕ್ಕೆ ಸರ್ಕಾರದವರು ಕಂಟ್ರಾಕ್ಟು ಕೊಟ್ಟರು. ಕಂಟ್ರಾಕ್ಟರುಗಳು ಕೂಲಿ ಆಳುಗಳಿಂದ ೩೩ ದಿನಗಳವರೆಗೆ ಕೆಲಸ ಮಾಡಿಸಿ, ಮುತ್ತಿನ ಚಿಪ್ಪುಗಳನ್ನು ಸಮುದ್ರದೊಳಗಿಂದ ತೆಗೆದರು. ಇದರಲ್ಲಿ ಸರ್ಕಾರಕ್ಕೆ ೨೬,೩೦,೪೭೦ ರೂಪಾಯಿ ಉತ್ಪತ್ತಿಯಾಗಿದೆ.

*****

ಕಾಶ್ಮೀರ ಸಂಸ್ಥಾನದ ಸೆಟ್ಲಮೆಂಟ್ ಆಫೀಸರ್ ಮಹಾರಾಜ ರಾಯ್‌ಬಿಂದಿ ದಾಸ್‌ಯವರಿಗೆ ಪ್ರಮೋಶನವಾಯಿತು. ಈ ಸಂಭ್ರಮವನ್ನು ಖ್ಯಾತಪಡಿಸುವದಕ್ಕೆ ಮಹಾರಾಜರವರು ಅಲ್ಲಿನ ವಿದ್ಯಾಶಾಲೆಗಳಲ್ಲಿ ಓದತಕ್ಕ ನಾಲ್ವರು ಬಡಹುಡುಗರಿಗೆ ತಲಾ ೫ ರೂಪಾಯಿಯಂತೆ ವಿದ್ಯಾರ್ಥಿ ವೇತನಗಳನ್ನು ಕೊಡುವದಾಗಿ ವಾಗ್ದಾನ ಮಾಡಿದರು.

*****

ಪಾರ್ಸಿ ಜನರು ಬೊಂಬಾಯಿ ಪಟ್ಟಣದಲ್ಲಿ ತುಂಬಾ ವಿಶೇಷವಾಗಿದಾರಷ್ಟೆ. ಅವರ ಮುಖಂಡರು ಕಳೆದ ವಾರ ಸಭೆ ಸೇರಿ, ಪರಮತದಿಂದ ಯಾರನ್ನೂ ಪಾರ್ಸಿ ಮತಕ್ಕೆ ಸೇರಿಸಿಕೊಳ್ಳಕೂಡದೆಂತಲೂ ಈಗ ಸೇರಿಕೊಂಡಿರುವವರನ್ನು ಆ ಮತದ ಸಂಘಗಳಿಗಾಗಲಿ ಮತಾಚಾರ ಕಾರ್ಯಗಳಿಗಾಗಲಿ ಸೇರಿಸಿಕೊಳ್ಳಕೂಡದೆಂತಲೂ ಗೊತ್ತುಮಾಡಿಕೊಂಡಿದಾರೆ.

*****

ಶಿವಸಾಗರದಲ್ಲಿ ಕಳೆದ ವಾರ ಭೂಕಂಪವಾಯಿತು. ನಾರೆಯ ಕಟ್ಟಡಗಳೆಲ್ಲಾ ಬಿರುಕು ಬಿಟ್ಟವೆ. ಮನೂರಿಯಲ್ಲಾದರೋ ಪ್ರಚಂಡ ಗಾಳಿಯೂ ನಾರೋದ್ಧರವಾದ ಮಳೆಯೂ ಪ್ರಾಪ್ತವಾದವು. ಭೂಕಂಪದಿಂದ ಬಿರಿದು ಹೋದ ಮನೆಮಾರುಗಳೆಲ್ಲಾ ಮಳೆಯ ನೀರಿನಲ್ಲಿ ಕೊಚ್ಚಿಹೋದವು. ಬಿರುಕು ಬಿಟ್ಟಿರುವ ಭೂಪ್ರದೇಶವು ಬಹಳ ಚನ್ನಾಗಿ ಕಾಣಿಸಿಕೊಳ್ಳುತ್ತದೆ.

*****

ಮದರಾಸ್ ಅಧಿಪತ್ಯದ ಗವರ್ನರಾದ ಲಾರ್ಡ್ ಆಂಪ್ಟಿಲ್ ಯವರು ತಮ್ಮ ಆಳಿಕೆಯಲ್ಲಿ ಮಹಮ್ಮದೀಯ ಸಂಘದವರಿಗೆ ನಾನಾ

...ನ್ಯಾಸಗಳನ್ನು ಕಲ್ಪಿಸಿಕೊಟ್ಟಿರುವುದನ್ನು ನೋಡಿ, ಆ ಸಂಘದವರು ಅವರ ಹೆಸರನ್ನು ಶಾಶ್ವತಪಡಿಸಬೇಕೆಂತಲೂ ಮದರಾಸ್ ಪಟ್ಟಣದಲ್ಲಿ ಅವರ ಹೆಸರಿನ ಮೇಲೆ ಒಂದು ಬಂಗಲೆಯನ್ನು ಕಟ್ಟಬೇಕೆಂತಲೂ ಗೊತ್ತು ಮಾಡಿಕೊಂಡಿದ್ದಾರೆ

*****

ಹರಿತಾಳದ ಪುಡಿಯನ್ನು ನೀರಿನಲ್ಲಿ ಚೆನ್ನಾಗಿ ಅರೆದು, ನೀರಿನಲ್ಲಿ ಕಲಸಿ, ಮರ, ಪೆಟ್ಟಿಗೆ ತೊಲೆ, ಮುಂತಾದವುಗಳಿಗೆ ಬಳಿದರೆ ಹುಳು ಹಿಡಿಯುವುದೇ ಇಲ್ಲವೆಂತಲೂ ಇದು ಮಹಾ ಸುಲಭೋಪಾಯವಾದುದರಿಂದ ಎಲ್ಲರೂ ಇದನ್ನು ಮಾಡಿ, ಗೆದ್ದಲು ಹಾವಳಿಯನ್ನು ಪರಿಹರಿಸಿಕೊಳ್ಳಬಹುದೆಂತಲೂ ಒಬ್ಬಾನೊಬ್ಬ ಸರ್ದಾರನು ಅನುಭವಪೂರ್ವಕವಾಗಿ ಬರೆದಿರುತ್ತಾನೆ

*****

ಕಲ್ಕತ್ತಾ ಪಟ್ಟಣದ ಕಾರ್ಖಾನೆಗಳಲ್ಲಿ ಕೂಲಿ ಮಾಡುವ ಕೆಲವು ಸ್ತ್ರೀಯರು ಕತ್ತಲು ಹೊತ್ತಿನಲ್ಲಿ ಗಂಗಾ ನದಿಯನ್ನು ದಾಟಬೇಕೆಂದು ಕಳೆದ ವಾರ ದೋಣಿಗಳಲ್ಲಿ ಕುಳಿತು ಸ್ವಲ್ಪ ದೂರ ಹೋಗುವಷ್ಟರೊಳಗಾಗಿ ಆ ದೋಣಿಗಳು ಬಂಡೆಗಳಿಗೆ ಬಡಿದು, ಅನಾಯಾಸವಾಗಿ ತಲೆಕೆಳಗಾದವು. ಹತ್ತು ಮಂದಿ ನದಿಯ ಪಾಲಾದಂತೆ ತಂತೀ ವರ್ತಮಾನ ಬಂದಿದೆ.

*****

ಕಳೆದ ವಾರ ಪೆಷಾವರ್ ಪಟ್ಟಣದಲ್ಲಿ ಬಹಳ ದೊಡ್ಡ ಆನೆಕಲ್ಲಿನ ಮಳೆ ಸುರಿಯಿತು. ಬಿರುಗಾಳಿಯು ಸಹಿಸಲಸಾಧ್ಯವಾಗಿತ್ತು. ಒಬ್ಬ ಮನುಷ್ಯನು ಮೃತಪಟ್ಟನು. ಅನೇಕ ಪ್ರಜೆಗಳಿಗೆ ಪೆಟ್ಟುಗಳಿಂದ ತುಂಬಾ ಗಾಯಗಳಾಗಿವೆ. ಅನೇಕ ಕೋಳಿಗಳು ನಾಶವಾದವು. ವೃಕ್ಷಗಳು ಕೆಟ್ಟುಹೋದವು. ಆನೆಕಲ್ಲುಗಳು ಕೆಲವು ಕೋಳಿ ಮೊಟ್ಟೆಯ ಗಾತ್ರ ಇದ್ದುವು.

*****

ಪಂಜಾಬ್ ಗವರ್ನಮೆಂಟಿನವರು ಆ ಪ್ರಾಂತ್ಯದಲ್ಲಿ ಸ್ತ್ರೀವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸಬೇಕೆಂಬುದನ್ನು ಗೊತ್ತುಮಾಡುವುದಕ್ಕೋಸ್ಕರ ಆ ಇಲಾಖೆಯ ಮುಖ್ಯಸ್ಥರನ್ನೂ ಕೆಲವು ಸ್ತ್ರೀವಿದ್ಯಾಭಿಮಾನಿಗಳನ್ನೂ ಸೇರಿಸಿ, ಒಂದು ಕಮಿಟಿ ಮಾಡಿದ್ದಾರೆ. ಈ ಕಮಿಟಿಯವರು ಈ ತಿಂಗಳ ೮ನೆ ತಾರೀಖು ಸೋಮವಾರದಿಂದ ಸೇರಿ ವಿಷಯಗಳನ್ನು ಚರ್ಚಿಸುತ್ತಾರೆ.

*****

ಟಿಬೆಟ್ ರಾಜ್ಯದ ಪ್ರಭುವೂ ದೊರೆಯೂ ಆದ ದಲಾಯಿಲಾಮನು ಇಂಗ್ಲೀಷರ ಆಗಮನವನ್ನು ಕೇಳಿ, ಊರುಬಿಟ್ಟು ತಲೆತಪ್ಪಿಸಿಕೊಂಡು ಓಡಿಹೋದನಷ್ಟೆ. ಈಗ ಈತನು ಪರಿವಾರ ಸಹಿತ ಚೀಣಾ ರಾಜ್ಯಕ್ಕೆ ಹೋಗಿ ಚಕ್ರವರ್ತಿಯವರ ದರ್ಶನವನ್ನು ಮಾಡಿ ಆದಮೇಲೆ ಹಿಂತಿರುಗಿ ಟಿಬೆಟ್ಟಿಗೆ ಬಂದು, ಯಥಾಪ್ರಕಾರ ಅಧಿಕಾರ ನಡಸಬೇಕೆಂದಿರುತ್ತಾನೆಂದು [illegible]ಯಿಂದ ಸಮಾಚಾರ ಬಂದಿದೆ.

*****

ವಾಯವ್ಯ ಪ್ರಾಂತ್ಯಕ್ಕೆ ಸೇರಿದ ಡೀರ್ ಎಂಬ ಸಂಸ್ಥಾನದಲ್ಲಿ ಬಾದ್‌ಷಹಾ ಖಾನರವರಿಗೆ ಪಟ್ಟಾಭಿಷೇಕವಾಯಿತು. ಚೀಫ್ ಕಮಿಷನರಾದ ಕರ್ನಲ್ ಡೀನ್ ಯವರೂ ಡೀರ್ ಮತ್ತು ಅಪ್ಪರ್ ಸ್ವಾಟ್ ಪ್ರಾಂತಗಳಲ್ಲಿರುವ ಮಹಮದೀಯ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಬಾದ್‌ಷಹಾ ಖಾನರವರು ಪಟ್ಟಾಭಿಷೇಕೋತ್ಸವದಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಫಂಡಿಗೆ ೧,೨೦೦ ರೂಪಾಯಿ ಕೊಟ್ಟರು.

*****

ಬೊಂಬಾಯಿ ಪಟ್ಟಣದ ಟಂಕಸಾಲೆಯಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ೧೦೮ ಡಾಲರ್ ಎಂಬ ಸ್ಟ್ರೇಟ್ ಸೆಟ್ಲಮೆಂಟಿನ ನಾಣ್ಯಗಳನ್ನೂ ೪ ಲಕ್ಷ ರೂಪಾಯಿನ ಅರ್ಧ, ಕಾಲು, ಅರೆಕಾಲು ರೂಪಾಯಿ ನಾಣ್ಯಗಳನ್ನೂ ಅಚ್ಚುಹಾಕಿದರು. ಕಳೆದ ಫೆಬ್ರವರಿ ಆಖೈರ್ ವರೆಗೆ ೧೧ ತಿಂಗಳಲ್ಲಿ ಹಿಂದುಸ್ಥಾನಕ್ಕೆ ೨೧ ಕೋಟಿ [illegible] ಲಕ್ಷ ರೂಪಾಯಿನ ಚಿನ್ನವೂ ಬೆಳ್ಳಿಯೂ ರಫ್ತಾಗಿ ಬಂದಿದೆ.

*****

ರಂಗೂನ್ ಪಟ್ಟಣದ ಫಯೀರ್ ಬೀದಿಯಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆಗೆ ಬೆಂಕಿ ಬಿದ್ದು ಸುಟ್ಟುಹೋಯಿತಷ್ಟೆ. ಈ ಕಾರ್ಖಾನೆಯ ಮ್ಯಾನೆಜರಾಗಿದ್ದ ಮಿ|| ರಾಜೇಶ್ ಎಂಬಾತನೇ ಬೆಂಕಿ ಹಾಕಿದನೆಂದು ತಿಳಿದುಬಂದ ಕಾರಣ ಅವನನ್ನು ಹಿಡಿದು ವಿಚಾರಣೆ ಮಾಡಿ ೨,೫೦೦ ರೂಪಾಯಿ ಜಾಮೀನಿನ ಮೇಲೆ ಬಿಟ್ಟಿದ್ದಾರೆ. ಈ ಮೊಕದ್ದಮೆಯು ಬರುವ ಸೋಮವಾರ ದರ್ಯಾಪ್ತಿಯಾಗುವುದು.

*****

ಬಳ್ಳಾರಿಯಲ್ಲಿರುವ ಮಿ|| ಕೆ. ವೆಂಕಟರಾಯರೂ ಇವರ ತಮ್ಮ ಮಿ|| ಶ್ರೀನಿವಾಸರಾಯರೂ ಸೇರಿ, ಸುಮಾರು ೧೦,೦೦೦ ರೂಪಾಯಿ ಖರ್ಚುಮಾಡಿ, ನೇತ್ರಾನಂದಕರವಾದ ದೊಡ್ಡ ನಾಟಕಶಾಲೆಯನ್ನು ಕಟ್ಟಿಸಿದಾರೆ. ಮಿ|| ಬಾಲಗಂಗಾಧರ ತಿಲಕರವರು ಕಳೆದ ವಾರ ಅಲ್ಲಿಗೆ ಬಂದು, ಈ ಕಟ್ಟಡವನ್ನು ಪ್ರತಿಷ್ಠೆಮಾಡಿ, ನಾಟಕಗಳ ಉಪಯೋಗವನ್ನೂ ಅವುಗಳ ಪ್ರಯೋಜನಗಳನ್ನೂ ಕುರಿತು ಉಪನ್ಯಾಸ ಮಾಡಿದರು.

*****

ಹಿಂದುಸ್ಥಾನದಲ್ಲಿ ಕಳೆದ ವಾರ ೬೧,೩೬೬ ಜನರಿಗೆ ಪ್ಲೇಗ್ ತಗಲಿತು. ಈ ಪೈಕಿ ೫೧,೭೮೬ ಜನರು ಮೃತಪಟ್ಟರು. ಪಂಜಾಬಿನಲ್ಲಿ ೨೩,೯೪೭ ಜನರು, ಸಂಯುಕ್ತ ಅಧಿಪತ್ಯದಲ್ಲಿ ೧೫,೮೮೪ ಜನರು, ಬಂಗಾಳ ೭,೩೬೦, ರಾಜಪುಟಾನಾ ೨,೨೦೬, ಬೊಂಬಾಯಿ ಅಧಿಪತ್ಯ ೧೩೯೬, ಮದರಾಸ್ ಅಧಿಪತ್ಯ ೮೯, ಬರ್ಮಾ ೫೭, ಕಾಶ್ಮೀರ ೨೮೩, ಬೊಂಬಾಯಿಪಟ್ಟಣ ೮೮೯, ಕಲ್ಕತ್ತಾ ಪಟ್ಟಣ ೬೬೨, ಈ ಪ್ರಕಾರ ಜನರು ಕಾಲವಾದರು.

ಮಂಡಿ ಸಂಸ್ಥಾನದ ಸೂಪರಿಂಟೆಂಡೆಂಟರಾದ ಮಿ|| ವಿಲ್ಲರ್ ಯವರು ಭೂಕಂಪವಾದ ಸಂದರ್ಭದಲ್ಲಿ ಬಾಲ್ಯ ವಯಸ್ಸಿನ ರಾಜರನ್ನು ಅನಾಮತ್ತು ಬೀಳುತ್ತಿದ್ದ ಅರಮನೆಯಿಂದ ಎತ್ತಿಕೊಂಡು ಬಂದು ಬದುಕಿಸಿದರು. ಅರಮನೆಯು ಬಿದ್ದು ನೆಲಸಮವಾಯಿತು. ಆ ಸಾಹೇಬರಿಗೆ ಎದೆಯ ಮೂಳೆಯೊಂದು ಮುರಿದುಹೋಗಿ ಇನ್ನು ಕೆಲವು ಕಡೆಗಳಲ್ಲಿ ಗಾಯಗಳಾಗಿವೆ. ರಾಜರನ್ನು ಬದುಕಿಸಿದ್ದನ್ನು ಕೇಳಿ, ಆ ಸಂಸ್ಥಾನದ ಪ್ರಜೆಗಳೆಲ್ಲ ಅವರನ್ನು ತುಂಬಾ ಹೊಗಳುತ್ತಿದ್ದಾರೆ.

*****

ಹಿಂದುಸ್ಥಾನದ ಖಜಾನಾ ಭಕ್ಷಿಯವರಾದ ಮಿ|| ಬೇಕರ್ ಯವರು ಹೋದ ವರುಷಕ್ಕಿಂತ ಈ ವರುಷ ೨೩,೮೧,೫೦೦ ಪೌಂಡು ಜಾಸ್ತಿಯಾಗಿ ರೈಲ್ವೆ ಇಲಾಖೆಯಲ್ಲಿ ಸರ್ಕಾರಕ್ಕೆ ಉತ್ಪತ್ತಿಯಾಗುವುದೆಂದು ಅಂದಾಜು ಕಟ್ಟಿದ್ದರು. ಈಗ ಆಖೈರ್ ಲೆಕ್ಕಗಳು ಪ್ರಕಟವಾಗಿರುವುದನ್ನು ನೋಡಲಾಗಿ ೧೯೦೩—೪ನೇ ಸಾಲಿನಲ್ಲಿ ಉತ್ಪತ್ತಿಯಾದುದಕ್ಕಿಂತಲೂ ೧೯೦೪—೦೫ನೇ ಮಾರ್ಚಿ ಆಖೈರ್ ವರೆಗೆ ೧೨ ತಿಂಗಳಲ್ಲಿ ೨೬,೫೯,೪೬೦ ಪೌಂಡು ಹೆಚ್ಚು ಉತ್ಪತ್ತಿಯಾಗಿದೆ ಎಂದು ಗೊತ್ತಾಗುವುದು.

*****

ಗೊಂಡಾಲ್ ಸಂಸ್ಥಾನದ ಮಹಾರಾಜರವರು ತಮ್ಮ ರಾಜಧಾನಿಯಲ್ಲಿ ಆರು ಕಚೇರಿಗಳನ್ನು ಕಟ್ಟಿಸಬೇಕೆಂದು ಗೊತ್ತುಮಾಡಿ, ಅದರ ನಮೂನೆಯನ್ನು ಬರೆದು ಕಳುಹಿಸುವವರಿಗೆ ಇನಾಂ ಕೊಡುವುದಾಗಿ ಪ್ರಕಟಿಸಿದರು. ಅನೇಕರು ಹಿಂದುಸ್ಥಾನದಲ್ಲೂ ವಿಲಾಯತಿ, ಫ್ರಾನ್ಸ್ ಕಡೆಗಳಿಂದಲೂ ನಕ್ಷೆಗಳನ್ನು ಬರೆದು ಕಳುಹಿಸಿದರು. ಅವುಗಳಲ್ಲೆಲ್ಲಾ ಒಬ್ಬ ಫ್ರೆಂಚನು ಬರೆದಿದ್ದ ನಕ್ಷೆಯೇ ಬಹಳ ಚೆನ್ನಾಗಿದ್ದುದರಿಂದ ಅವನಿಗೆ ೫,೦೦೦ ರೂಪಾಯಿ ಬಹುಮಾನ ಕೊಟ್ಟು, ಈಗ ಅದೇ ನಕ್ಷೆಯ ಪ್ರಕಾರ ೧೫ ಲಕ್ಷ ರೂಪಾಯಿ ಮುಟ್ಟಿಸಿ, ಮಹಾರಾಜರವರು ಕಚೇರಿಗಳನ್ನು ಕಟ್ಟಿಸುತ್ತಿದ್ದಾರೆ.

*****

ಬುಲಂದ್ ಷಹರ್ ಡಿಸ್ಟ್ರಿಕ್ಟಿಗೆ ಸೇರಿದ ಪಹಾಸು ನವಾಬರಾದ ನವಾಬ್ ಮುಂತಾಜುದ್ ದೌಲಾ ಮಹಮದ್ ಫೈಜಲ್ಲಿ ಖಾನ್ ಬಹದೂರ್, ಸಿ. ಎಸ್. ಐ. ಯವರು ಈ ೪ ತಿಂಗಳಲ್ಲಿ ಸುಮಾರು ೭೫,೦೦೦ ರೂಪಾಯನ್ನು ಧರ್ಮ ಕಾರ್ಯಗಳಿಗೆ ವಿನಿಯೋಗಿಸುತ್ತಾರೆ. ಹ್ಯಾಗೆಂದರೆ, ಕಾಂಗ್ರಾ ಕಣಿವೆಯ ಭೂಕಂಪದ ರಿಲೀಫ್ ಫಂಡಿಗೆ ೧,೦೦೦, ಆಲಿಘರ್ ಮಹಮದೀಯ ವಿದ್ಯಾಶಾಲೆಯಲ್ಲಿ ಒಂದು ಬೋರ್ಡಿಂಗ್ ಹೌಸ್ (ವಿದ್ಯಾರ್ಥಿನಿಲಯ)ಕ್ಕೆ ೨೦,೦೦೦, ಕಾಳಿ ನದಿಗೆ ಒಂದು ಸೇತುವೆ ಕಟ್ಟುವುದಕ್ಕಾಗಿ ಸರ್ಕಾರದವರ ವಶಕ್ಕೆ ೫೦,೦೦೦, ಆಗ್ರಾ ಪಟ್ಟಣದ ಎರಡು ವಿದ್ಯಾಶಾಲೆಗಳಿಗೂ ೧,೦೦೦, ಈ ಪ್ರಕಾರ ಕೊಟ್ಟಿದ್ದಾರೆ

*****

ಟಿಪ್ಪೆರಾ ಸಂಸ್ಥಾನಕ್ಕೆ ಸೇರಿದ ಪಾಕ್ಟಿಂಗಂ ಎಂಬ ಊರಿನಲ್ಲಿ ಕಳೆದ ವಾರ ಮಹಮದೀಯ ದೊಡ್ಡ ಮನುಷ್ಯರು ಸಭೆ ಸೇರಿ, ತಮ್ಮ ಜನರ ವಿದ್ಯಾಭಿವೃದ್ಧಿಯು ತೃಪ್ತಿಕರವಾಗಿಲ್ಲವೆಂತಲೂ ಅದಕ್ಕಾಗಿ ಒಂದು ಫಂಡು ಕೂಡಿಸಿ, ಪಾಠಶಾಲೆಗಳನ್ನೂ ವಿದ್ಯಾರ್ಥಿನಿಲಯಗಳನ್ನೂ ಏರ್ಪಾಡು ಮಾಡಬೇಕೆಂತಲೂ ಗೊತ್ತು ಮಾಡಿದರು. ಆ ದಿನ ೧೦,೦೦೦ ರೂಪಾಯಿ ಚಂದಾ ಕೂಡಿತು. ಆ ದಿನ ಸಭೆಯಲ್ಲಿ ಮಿಸೆಸ್ ಆಟಿಫ್ ಎಂಬೊಬ್ಬ ಮಹಮದೀಯ ಸ್ತ್ರೀಯು ಮುಂದೆ ನಿಂತು, ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದಳು. ಈಕೆ ವಿಲಾಯತಿಯಿಂದ ವಾಪಸು ಬಂದು ಕೆಲವು ದಿನಗಳು ಮಾತ್ರ ಆಗಿವೆ. ಈಕೆ ಸಭೆಗೆ ಬಂದಾಗ ಸಭಿಕರೆಲ್ಲರೂ ಎದ್ದು ನಿಂತುಕೊಂಡು, ಆಕೆಗೆ ಸನ್ಮಾನ ಮಾಡಿದರು.

*****

ಕಲ್ಕತ್ತೆಯಿಂದ ಮಿ| ಸಿ ಆರ್ಚೆಸಿರ್ ಎಂಬಾತನು ಒಬ್ಬ ಗುಜ್ಜಾರಿಯನ್ನು ಬೊಂಬಾಯಿಗೆ ಕರೆದುಕೊಂಡು ಬಂದಿದಾನೆ. ಈ ಗುಜ್ಜಾರಿಗಿಂತ ಕುಳ್ಳ ಮನುಷ್ಯನನ್ನು ಯಾರೂ ನೋಡಿಲ್ಲವೆಂದು ಹೇಳುತ್ತಾರೆ. ಬೊಂಬಾಯಿನಲ್ಲಿ ಲಕ್ಷಾಂತರ ಜನರು ಹೋಗಿ ನೋಡಿಕೊಂಡು ಬಂದರು. ಈ ಗುಜ್ಜಾರಿಯು ಆರೋಗ್ಯವಾಗಿಯೂ ದೃಢಕಾಯನಾಗಿಯೂ ಇದ್ದಾನೆ; ಎಲ್ಲರ ಸಂಗಡಲೂ ಬಹು ಸಂತೋಷದಿಂದ ಚೆನ್ನಾಗಿ ಸಂಭಾಷಣೆ ಮಾಡುತ್ತಾನೆ. ಇವನು ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬರುವುದಕ್ಕಾಗಿ ಕಳೆದ ವಾರ ಅವನ ಪೋಷಕನ ಜೊತೆಯಲ್ಲಿ ಹೊರಟಿರುತ್ತಾನೆ. ಈ ಗುಜ್ಜಾರಿಗೆ ತಕ್ಕಂಥಾ ಹೆಂಡತಿಯನ್ನು ಯಾರಾದರೂ ಹುಡುಕಿಕೊಟ್ಟರೆ ಅಂಥವರಿಗೆ ೨೫,೦೦೦ ರೂಪಾಯಿ ಬಹುಮಾನ ಕೊಡುವೆನೆಂದು ಆ ಪೋಷಕನು ತಿಳಿಸಿರುತ್ತಾನೆ

*****

ಬಂಗನಪಲ್ಲಿಯ ನವಾಬ್ ಸಯ್ಯದ್ ಫತೆ ಅಲ್ಲಿ ಖಾನ್ ಬಹದೂರ್, ಸಿ. ಎಸ್. ಐ ರವರು ಸುಮಾರು ಎರಡು ವರುಷಗಳಿಂದ ಖಾಯಿಲೆ ಇದ್ದು, ಕಳೆದ ವಾರ ಕಾಲವಾದರು. ಇವರಿಗೆ ಮರಣ ಕಾಲದಲ್ಲಿ ೫೭ ವರುಷ ವಯಸ್ಸಾಗಿತ್ತು. ೩೭ ವರುಷಗಳ ತನಕ ಅವರು ನವಾಬರಾಗಿದ್ದು ಬಂಗನಪಲ್ಲಿ ಜಹಗೀರಿಯನ್ನು ಆಳಿದರು. ಇವರಿಗೆ ೩ ಮಂದಿ ಗಂಡುಮಕ್ಕಳೂ ಒಬ್ಬ ಹೆಣ್ಣುಮಗುವೂ ಕೆಲವು ಮೊಮ್ಮಕ್ಕಳೂ ಇರುತ್ತಾರೆ. ಕಳೆದ ೭೭ನೆ ಇಸವಿಯಲ್ಲಿ ಡೆಹಲಿ ದರ್ಬಾರಿನಲ್ಲಿ ಇವರಿಗೆ ಸಿ. ಎಸ್. ಐ. ಎಂಬ ಬಿರುದೂ, ೭೬ ನೆ ಇಸವಿಯಲ್ಲಿ ನವಾಬ್ ಎಂಬ ಅಂಕಿತವೂ ಕೊಡಲ್ಪಟ್ಟವು. ಒಂದು ವರುಷದ ಕೆಳಗೆ ಸರ್ಕಾರದವರು ಇವರಿಗೆ ಆಳುವ ಪದವಿಯನ್ನು ತಪ್ಪಿಸಿದ್ದರು. ಇನ್ನು ಮುಂದೆ ಆ ಪದವಿಯನ್ನು ಅವರ ಹಿರೀ ಮಗನಾದ ಸೈಯದ್ ಗುಲಾಂ ಅಲ್ಲಿ ಖಾನರವರಿಗೆ ಕೊಡಬಹುದೆಂದು ಕಾಣುತ್ತದೆ.

ಉತ್ತರ ದೇಶದಲ್ಲಿ ಭೂಕಂಪಕ್ಕೆ ಸಿಕ್ಕಿ ಕಷ್ಟಪಡುತ್ತಿರುವ ಪ್ರಜೆಗಳ ಸಹಾಯಕ್ಕಾಗಿ ಒಂದು ಫಂಡು ಏರ್ಪಾಡಾಗಿದೆಯಷ್ಟೆ. ಈ ಫಂಡಿಗೆ ಈ ವಾರದಲ್ಲಿ ಕಾಶೀ ಮಹಾರಾಜರವರು ೫,೦೦೦ ರೂ., ಕಲ್ಕತ್ತೆಯ ರಾಲಿ ಕಂಪನಿಯವರು ೨೦,೦೦೦ ರೂ., ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ೧೦,೦೦೦ ರೂ., ಕಪೂರ್ಥಲದ ಮಹಾರಾಜರವರು ೧೫,೦೦೦ ರೂ., ಭಾವಲ್‌ಪುರದ ನವಾಬರವರು ೨೫,೦೦೦ ರೂ., ವಿಲಾಯತಿಯಲ್ಲಿ ೪೫,೦೦೦ ರೂ., ಹೈದರಾಬಾದಿನ ನೈಜಾಮರವರು ೧೦,೦೦೦ ರೂ., ಶ್ರೀಮಂತ ಶಾಲಿಕ್ ಸಾಹೇಬ್ ಹೋಲ್ಕರ್ ಯವರು ೧,೦೦೦ ರೂ., ಸರ್ ಮೇಸ್ಗರವರು ೧,೦೦೦ ರೂ., ಪಂಜಾಬ್ ಬ್ಯಾಂಕಿಂಗ್ ಕಂಪನಿಯವರು ೨,೦೦೦ ರೂ., ಜಿಂದ್ ಸಂಸ್ಥಾನದ ರಾಜರವರು ೧೦,೦೦೦ ರೂ., ಈ ಪ್ರಕಾರ ಚಂದಾ ಕೊಟ್ಟಿದ್ದಾರೆ. ಇದುವರೆಗೆ ಒಟ್ಟು ಒಂದೂವರೆ ಲಕ್ಷ ರೂಪಾಯಿಗಿಂತಲೂ ಜಾಸ್ತಿಯಾಗಿ ಕಂಡಣಾಯಿತು.

*****

ಬೊಂಬಾಯಿ ಪಟ್ಟಣದ ಎಲ್ಲಾ ಕಾರ್ಖಾನೆಗಳ ಮ್ಯಾನೆಜರುಗಳೂ ಸಭೆ ಸೇರಿ, ಕಳೆದ ವರುಷದ ಆದಾಯ ವೆಚ್ಚಗಳನ್ನು ಕುರಿತು ಚರ್ಚೆ ಮಾಡಿದರು. ಅದರಿಂದ ತಿಳಿದುಬರುವುದೇನೆಂದರೆ— ಬೊಂಬಾಯಿ ಪಟ್ಟಣದಲ್ಲಿ ೬೯ ನೆಯ್ಗೆ ಕಾರ್ಖಾನೆಗಳಿವೆ; ಒಟ್ಟು ೮೯,೯೧೫ ಜನರು ಆ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ಆ ಕಾರ್ಖಾನೆಗಳನ್ನೆಲ್ಲಾ ೨೫,೩೪,೨೭೨ ರಾಟೆಗಳೂ ೨೪,೧೩೬ ಮಗ್ಗಗಳೂ ಇರುವವು. ಅಂದರೆ, ಹೋದ ವರುಷ ಇದ್ದುದಕ್ಕಿಂತ ೧,೦೧೧ ಮಗ್ಗಗಳು ಹೆಚ್ಚು. ೧೯೦೪ನೇ ವರುಷದಲ್ಲಿ ಈ ಕಾರ್ಖಾನೆಗಳಿಂದ ಪೂರ್ವ ದಿಗ್ದೇಶಗಳಿಗೆ ೨೭,೯೮,೬೨೫ ಗಜಗಳ ಬಟ್ಟೆಗಳು ರಫ್ತಾದವು. ಚೀಣಾ ದೇಶದವರು ಹಿಂದುಸ್ಥಾನದ ಬಟ್ಟೆಗಳನ್ನೇ ವಿಶೇಷವಾಗಿ ಅಪೇಕ್ಷಿಸಿ ತರಿಸಿಕೊಳ್ಳುತ್ತಾರೆ. ವಿಲಾಯತಿಯ ಬಟ್ಟೆಗಳ ಮೇಲೆ ಅವರಿಗೆ ಅಷ್ಟು ಪ್ರೀತಿ ಇಲ್ಲ. ಜಪಾನವರು ಯುದ್ಧದಲ್ಲಿ ಆಸಕ್ತರಾಗಿರೋಣದರಿಂದ ಹಿಂದುಸ್ಥಾನದ ಸರಕುಗಳು ಚೀಣಾದಲ್ಲಿ ತುಂಬಾ ಹೆಚ್ಚಾಗಿ ಬಿಕರಿ ಆದವು. ಇದರಿಂದ ಈ ಪಟ್ಟಣದ ವರ್ತಕರಿಗೆ ವ್ಯಾಪಾರ ತುಂಬಾ ಚೆನ್ನಾಗಿ ಆಗಿ ಎಲ್ಲರೂ ಸಂತೋಷಪಡುತ್ತಿದ್ದಾರೆ.

*****

ಬರ್ದವಾನ್ ಪಟ್ಟಣದಲ್ಲಿ ಸರ್ಕಾರದವರು ಏರ್ಪಡಿಸಿರುವ ಪರೀಕ್ಷಾರ್ಥವಾದ ಜಮೀನಿನೊಳಗೆ ವ್ಯವಸಾಯ ಮಾಡಿದ್ದರ ಫಲಿತಾಂಶವನ್ನು ಸರ್ಕಾರದವರು ಪ್ರಕಟಿಸಿದಾರೆ. ಇದರಿಂದ ನಮ್ಮ ದೇಶದ ರೈತರು ಪ್ರಯೋಜನಹೊಂದುವರೆಂದು ಪ್ರಕಟಿಸುವೆವು. ಗೊಬ್ಬರ ಹಾಕದೇನೇ ಉತ್ತು ಬಿತ್ತಿದ ಜಮೀನಿನಲ್ಲಿ ಎಕರೆ ೧ಕ್ಕೆ ಖರ್ಚು ಜಾತಾ ೧೯ ರೂಪಾಯಿ ಹುಟ್ಟುವಳಿ ಆಯಿತು. ಮೂಳೆ ಪುಡಿಯನ್ನೂ ಕಸ್ತುಪ್ಪನ್ನೂ ಬೆರೆಸಿ ಹಾಕಿ ಜಮೀನಿಗೆ ಎರಚಿ, ಉತ್ತು ಬಿತ್ತಿ ಬೆಳೆಮಾಡಿದ್ದರಿಂದ ಎಕರೆ ೧ಕ್ಕೆ ಖರ್ಚು ಜಾತಾ ೩೯ ರೂಪಾಯಿ ಉತ್ಪತ್ತಿ ಆಗಿದೆ. ಇದು ಭತ್ತದ ಬೆಳೆ ಮಾಡಿದ್ದರ ಫಲಿತಾಂಶವಾಗಿರುವುದು. ಮೂಳೆ ಗೊಬ್ಬರವನ್ನು ಹ್ಯಾಗೆ ಹಾಕಬೇಕೆಂದರೆ—ಮುಕ್ಕಿಗೆ ಮೂಳೆಯನ್ನು ಪುಡಿಮಾಡಿ, ಜಮೀನಿನ ಮೇಲೆಲ್ಲಾ ಒಂದೇ ಸಮನಾಗಿ ಎರಚಿ, ಮೊದಲನೆ ಸಲವೋ ಎರಡನೆ ಸಲವೋ ಉತ್ತಬೇಕು. ಇದರಿಂದ ಈ ಗೊಬ್ಬರವು ಚೆನ್ನಾಗಿ ಮಣ್ಣಿನಲ್ಲಿ ಕಲೆತುಕೊಳ್ಳುವುದು. ಅನಂತರ ನಾಟಿ ಹಾಕಿದ ಮೇಲೆ ಪೈರಿಗೆ ನಾಲ್ಕೈದು ಸಲ ಕಸ್ತುಪ್ಪನ್ನು ಪುಡಿಮಾಡಿ ಜಮೀನಿಗೆಲ್ಲಾ ಚೆಲ್ಲಬೇಕು. ಹೀಗೆ ಮಾಡಿದರೆ ಬೆಳೆಯು ತುಂಬಾ ಹುಲುಸಾಗುವುದಕ್ಕೆ ಸಂಶಯವಿಲ್ಲ.

*****

ಚರಣಾರಾಯ ದೇವಭ್ರಾಮ ಭೂಚಂದ್ ಎಂಬುವನು ಮಹಾ ಕ್ರೂರಿಯಾಗಿಯೂ ಅನೇಕ ದರೋಡೆ ಕನ್ನ ಕಳುವುಗಳನ್ನು ನಡಿಸಿದವನಾಗಿಯೂ ಇದ್ದುದರಿಂದ ಸರ್ಕಾರದವರು ಅವನಿಗೆ ಯಾವಜ್ಜೀವವೂ ಸಜಾ ಅನುಭವಿಸುವಂಥಾ ಶಿಕ್ಷೆಯನ್ನು ವಿಧಿಸಿ ಸೂರತ್ ಪಟ್ಟಣದ ಜೈಲಿನಲ್ಲಿ ಇಟ್ಟಿದ್ದರು. ಅವನು ಎರಡು ವರುಷಗಳ ಕೆಳಗೆ ಬಂದೀಖಾನೆಯಿಂದ ಹ್ಯಾಗೋ ತಪ್ಪಿಸಿಕೊಂಡು ಹೊರಕ್ಕೆ ಬಂದು, ೨೦ ಮಂದಿಯನ್ನು ತನ್ನ ಜೊತೆಗೆ ಸೇರಿಸಿಕೊಂಡು, ಎರಡು ವರುಷಗಳಿಂದಲೂ ಜಾಂನಗರ, ದುವಾರಕಾ, ಜೇತ್‌ಪುರ, ಗೊಂಡಾಲ್, ಈ ಮೊದಲಾದ ಪ್ರಾಂತ್ಯಗಳಲ್ಲಿ ಪ್ರಜೆಗಳನ್ನು ನಾನಾಪ್ರಕಾರವಾಗಿ ಹಿಂಸಿಸಿ, ಅಪಾರವಾದ [illegible] ಅಪಹರಿಸುತ್ತಲೂ ಜನರನ್ನು ಗೋಳಾಡಿಸುತ್ತಲೂ ಇದ್ದನು. ಇವನನ್ನು ಅವನ ೬ ಜನ ಸಹಪಾಟಿಗಳ ಸಮೇತ ಕಳೆದ ವಾರ ಪೋಲೀಸಿನವರು ಜಾಂನಗರದಲ್ಲಿ ಹಿಡಿಯುವುದಕ್ಕೆ ಪ್ರಯತ್ನಪಟ್ಟರು. ಅವರು ಸಗ್ಗದೆ ಪೋಲೀಸಿನವರ ಮೇಲೆ ನುಗ್ಗಿ ಭಯಂಕರವಾಗಿ ಕಾದಿದ್ದರಿಂದ ಪೋಲೀಸಿನವರಲ್ಲಿ ಒಬ್ಬ ಸತ್ತನು; ಮೂರು ಮಂದಿಗೆ ಗಾಯಗಳಾಗಿವೆ. ಕಳ್ಳರ ಮುಖಂಡನು ಕೊಲ್ಲಲ್ಪಟ್ಟನು; ಅವನ ಮೂರು ಮಂದಿ ಹಿಂಬಾಲಕರು ಗಾಯಪಟ್ಟರು

ತಾಲ್ಲೂಕು ವರ್ತಮಾನಗಳು.

ಮೋಗರವಳ್ಳಿ.—ಏಪ್ರಿಲ್ ತಾ. ೮ನೇ ಸೋಮವಾರ ಮಿ|| ಭಾಭಾರವರ ಸವಾರಿಯು ಹುಲಿಗಲ್ ರಸ್ತೆ ಮಾರ್ಗವಾಗಿ ಮೋಗರವಳ್ಳಿಗೆ ದಯಮಾಡಿಸಿತು. ಮಾರುದಿನ ಬೆಳಗ್ಗೆ ಅಲ್ಲಿನ ಕನ್ನಡ ಸ್ಕೂಲಿಗೆ ದಯಮಾಡಿಸಿದ್ದರು. ಆ ಕಾಲದಲ್ಲಿ ೧೫ ಹುಡುಗರು ಮಾತ್ರ ಹಾಜರಿದ್ದರೆಂತಲೂ ಇಂಥಾ ಊರಿಗೆ ಇಷ್ಟು ಸ್ವಲ್ಪ ಹುಡುಗರು ಇರಲಿಕ್ಕೆ ಕಾರಣವೇನೆಂದು ಮಿ|| ಭಾಭಾರವರು ಕೇಳಿದ್ದಕ್ಕೆ ಸ್ಕೂಲ್ ಮಾಸ್ಟರು ಈ ಊರಲ್ಲಿ ಶಿಡುಬಿನ ಉಪದ್ರ ಜಾಸ್ತಿ ಇದ್ದದ್ದರಿಂದ ಹುಡುಗರು ಬರಲಿಕ್ಕೆ ಅನಾನುಕೂಲವಾಯಿತು ಎಂತ ಹೇಳಿದರಂತೆ, ನಂತರ ದೊರೆಯವರು ಮಾಸ್ತರವರಿಗೆ ನೀವು ಹೋ

ಸ್ಪೆಷಲಿಸಿನ ಕೆಲಸವನ್ನೂ ಸ್ಕೂಲ್ ಕೆಲಸವನ್ನೂ ಒಟ್ಟಿಗೇ ನೋಡು ವದರಿಂದ ಸ್ಕೂಲಿಗೆ ತೊಂದರೆಯಾಗುತ್ತೆ ಎಂದೂ ಈ ಎರಡು ಕೆಲಸಗಳಲ್ಲಿ ಒಂದನ್ನು ಬಿಡಬೇಕು ಎಂದೂ ಹೇಳಿದರಂತೆ ಆ ಮೇಲೆ ಸಾಹೇಬರವರು ಆಗುಂಬೆ ಮಾರ್ಗವಾಗಿ ನಾಲೂರಿಗೆ ದಯಮಾಡಿಸಿದರು. ಆ ಕಾಲದಲ್ಲಿ ೯ ಘಂಟೆ ಸಮಯ ಆಗಿತ್ತು ಇಲ್ಲಿರುವ ಮಿಷನ್ ಪಾಠಶಾಲೆಗೆ ದಯಮಾಡಿ ಹುಡುಗರನ್ನು ಪರೀಕ್ಷಿಸಿ, ಸಂತೋಷಪಟ್ಟಿರಲ್ಲದೆ ಹೊಸದಾಗಿ ಕಟ್ಟಿಸಿರುವ ಪಾಠಶಾಲಾ ಕಟ್ಟಡವನ್ನು ನೋಡಿ ಸಂತೋಷಪಟ್ಟರು ಮೆ॥ ಘಾಘಾರವರು ಮರ ನಾಡುಪ್ರಾಂತ್ಯ ಸಕೀರ್ಟ್ ನೋಡಿದ್ದು ಅಪರೂಪವೇ ಸರಿ ಸಂಜೆ ೧೧ ಘಂಟೆ ಸಮಯದಲ್ಲಿ ಆಗುಂಬೆಗೆ ದಯಮಾಡಿದರು.

ಚಿಕ್ಕಮಗಳೂರು —ಬಿಸಲು ಜೋರಾಗಿದೆ, ಮಳೆಯು ಬರಲಿಲ್ಲ. ಊರಿನಲ್ಲಿ ಮಕ್ಕಳಿಗೆ ಸಿಡುಬು ಏಳುವದಕ್ಕೆ ಪ್ರಾರಂಭವಾಗಿದೆ ಶೀಘ್ರದಲ್ಲಿಯೇ ಮಳೆ ಬಾರದೆ ಇದ್ದರೆ ನೀರಿನ ವಿಷಯ ಕೊಂಚ ತೊಂದರೆಯಾದೀತೆಂದು ಕಾಣುತ್ತದೆ ಕೋಟೆಯ ಕೆರೆಯು ಬತ್ತಿಹೋಯಿತು ಅಲ್ಲಿನ ಜನರಿಗೆ ಈ ಕಾಲದಲ್ಲಿ ನಲ್ಲಿಗಳಲ್ಲಿನ ನೀರು ಸಾಲದೆ ಇರುವದಾಗಿಯೂ ಬಾವಿ ಧಾಕ ನಲ್ಲಿ ನಲ್ಲಿಗಳಲ್ಲಿ ನೀರನ್ನು ಕಟ್ಟುವದರಿಂದ ಮತ್ತೂ ತೊಂದರೆಯಾಗಿರುವದಾಗಿಯೂ ಈ ಕಾಲಕ್ಕೆ ಅನುಕೂಲವಾಗುವಂತೆ ಕೋಟೆಯಲ್ಲಿರುವ ಒಂದು ಕೊಳಕ್ಕೆ ನಾಲೆಯಿಂದ ನೀರು ಬಿಟ್ಟುಕೊಳ್ಳುವದಕ್ಕೆ ಅಪ್ಪಣೆ ಕೊಡಬೇಕೆಂದು ಡೆಪುಟಿ ಕಮೀಷನರಿಗೆ ಕೋಟೆಯ ನಿವಾಸಿಗಳು ಅರ್ಜಿ ಬರೆದುಕೊಂಡಿರುವದಾಗಿಯೂ ವರ್ತಮಾನವಿದೆ ಕೋಟೆಯ ಕೆರೆಗೆ ನೀರು ಬರುವ ವರೆಗೂ ಮುನಿಸಿಪಾಲಿಟಿಯವರು ಆ ಕೊಳಕ್ಕೆ ನೀರು ಬಿಟ್ಟುಕೊಳ್ಳುವಂತೆ ಅಪ್ಪಣೆ ಕೊಡುವದು ಒಳ್ಳೇದೆಂದು ತೋರುತ್ತದೆ —ಡೆಪುಟಿ ಕಮೀಷನರು ಸರ್ಕೀಟಿನಲ್ಲಿದ್ದಾರೆ ಡಾಕ್ಟರ್ ಸಿ ಎ ಸಂಜಪ್ಪನವರು ರಜಾದ ಮೇಲೆ ಹೊರಟುಹೋದರು ಅವರ ಬದಲಿಗೆ ಡಾಕ್ಟರ್ ಉಸ್ಮಾನರವರು ಬಂದಿದಾರೆ —ಮೆ॥ ಘಾಘಾ ಸಾಹೇಬರವರು ೧೯ ನೆ ತಾರೀಖಿಗೆ ಇಲ್ಲಿಗೆ ಬಂದು, ಮೂರು ದಿನಗಳಿದ್ದು, ಎಲ್ಲಾ ಸ್ಕೂಲುಗಳನ್ನೂ ನೋಡಿಕೊಂಡು, ೨೧ ನೆ ತಾರೀಖಿಗೆ ಇಲ್ಲಿಂದ ಕಡೂರು ಮಾರ್ಗವಾಗಿ ಹಾಸನಕ್ಕೆ ಹೋದರು —ಕ್ಲಿಫರ್ಡ್ ಪಾಠಶಾಲೆಯಲ್ಲಿ ಕಳವು ಮಾಡಿದ ಪೊನ್ನಸ್ವಾಮಿ ಎಂಬ ಹುಡುಗನಿಗೆ ಇಲ್ಲಿನ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಆರು ತಿಂಗಳ ಸಜಾ ಆಯಿತು —ಇಲ್ಲಿನ ಕಲ್ಲಾಪುರದಮ್ಮನ ಜಾತ್ರೆಯಲ್ಲಿ ಕೊಂಡವನ್ನು ಹಾಯುತ್ತಿದ್ದ ಒಬ್ಬ ಹೆಂಗಸು ಮೊದಲನೇ ಸಾರಿ ಹಾದುಹೋಗಿ ಆಯಾಸದಿಂದಿರುವಾಗ ಎರಡನೆ ಸಾರಿಯೂ ಹಾಯುವಂತೆ ಆಕೆಯ ಬಂಧುಗಳಿಂದ ಬಲಾತ್ಕರಿಸಲ್ಪಟ್ಟು ಹಾಯುವಾಗ ಕೊಂಡದಲ್ಲಿ ಬಿದ್ದು, ಕೈಕಾಲುಗಳನ್ನು ಸುಟ್ಟುಕೊಂಡು, ಕಷ್ಟವನನುಭವಿಸುತ್ತಿದ್ದಾಳೆ —ಇಲ್ಲಿಗೆ ಅರಸಿಕೆರೆಯ ನಾಟಕದ ಕಂಪನಿಯವರು ಬಂದು, ಒಂದು ತಿಂಗಳಾಯಿತು ಇದುವರೆಗೆ ಸುಮಾರು ಸಾವಿರ ರೂಪಾಯಿ ತನಕ ಸಂಪಾದಿಸಿದಾರೆಂದು ಹೇಳುತ್ತಾರೆ ಇನ್ನೆಷ್ಟು ದಿನಗಳು ಇಲ್ಲಿಯೇ ಇದ್ದು ಸಂಪಾದಿಸಬೇಕೆಂದಿರುವರೋ ತಿಳಿಯದು ಅವರಿಗೆ ಸಂಪಾದನೆ ಹೆಚ್ಚಿದ ಹಾಗೆಲ್ಲಾ ಬಡಬಗ್ಗರಿಗೆ ನಷ್ಟವಲ್ಲವೇ

ತೀರ್ಥಹಳ್ಳಿ —ಈಚೆಗೆ ಆಕಾಶದಲ್ಲಿ ಮಾಗುವದ ಮಿಂಚು ಗುಡುಗು ಪ್ರಾರಂಭವಾಗಿವೆ ಪ್ರತ್ಯೇಕವಾದ ಸಾಯಂಕಾಲ ಒಂದೆರಡು ಮಳೆ ಹನಿಗಳು ಬೀಳುವದು ಮಾತ್ರವಾಗಿತ್ತು ದನಕರುಗಳಿಗೆ ಮೇವಿಲ್ಲದೆ ಕಂಗಾಲಾಗಿವೆ ಬಿಸಲಿನ ತಾಪ ಸಹಿಸಲಸಾಧ್ಯವಾಗಿದೆ ಎಲ್ಲಾ ರಸ್ತೆಗಳು ಧೂಳಿನಿಂದ ತುಂಬಿಹೋಗಿವೆ ಈ ಪ್ರಾಂತ್ಯ ಸಾವಿರಾರು ಗಾಡಿಗಳು ರಾತ್ರಿ ಹಗಲು ವಿರಾಮವಿಲ್ಲದೆ ತಿರುಗುತ್ತಾ ಇರುವದರಿಂದ ರಸ್ತೆಗಳು ಬಹು ಹೀನಸ್ಥಿತಿಯಲ್ಲಿವೆ ಮುಂದಿನ ವರುಷದಿಂದ ಎಲ್ಲಾ ರಸ್ತೆಗಳಿಗೂ ಕಲ್ಲುಗಳನ್ನು ಹಾಕಿ, ಚನ್ನಾಗಿ ರಿಪೇರಿ ಮಾಡದಿದ್ದರೆ ಪರಿಣಾಮವಾಗುವಂತಿಲ್ಲ ಮಲ್ನಾಡಿನ ಕಂಕರದಿಂದ ರಸ್ತೆಗಳು ಬಹು ಬೇಗ ಹಾಳಾಗುತ್ತವೆ —ಕಳೆದ ವಾರ ಇಲ್ಲಿಗೆ ಅನೇಕ ಸರ್ಕಾರಿ ಆಫೀಸರುಗಳು ದಯಮಾಡಿಸಿ, ಮಲ್ನಾಡನ್ನು ಸುತ್ತಿಕೊಂಡು ಹೋದರು ಸಿವಿಲ್ ಸರ್ಜನರು ಆಗುಂಬೆ ತನಕ ಹೋಗಿ, ಅಲ್ಲಿನ ಜನರು ತೀರ್ಥಹಳ್ಳಿ ಆಸ್ಪಿಟಲ್ ಅಸಿಸ್ಟಂಟರಿಂದ ಕ್ರಮವಾಗಿ ಔಷದ ಪಡೆಯುವದನ್ನು ಖುದ್ದು ನೋಡಿಕೊಂಡು ಎಂದರು ಮತ್ತು ಸಿವಿಲ್ ಸರ್ಜನರು ತೀರ್ಥಹಳ್ಳಿ ಎ ವಿ ಸ್ಕೂಲಿನಲ್ಲಿ ಜನರು ಆರೋಗ್ಯವನ್ನು ಕಾಪಾಡಿಕೊಳ್ಳುವದರ ವಿಷಯವಾಗಿ ಸ್ವಲ್ಪ ಉಪನ್ಯಾಸ ಮಾಡಿ, ಜನಗಳನ್ನು ಪ್ರೋತ್ಸಾಹಪಡಿಸಿದರು ಸಾನಿಟೇರಿ ಹೆಲ್ತ್ ಆಫಿಸರ್ ಮೆ॥ ಪಲ್ಪ ಯವರು ದಯಮಾಡಿಸಿ, ಊರನ್ನು ನೋಡಿಕೊಂಡು ಮುಂದಕ್ಕೆ ಹೋದರು ಪೋಲೀಸ್ ಸೂಪರಿಂಟೆಂಡೆಂಟರು ಬಂದು, ಇಲ್ಲಿನ ಪೋಲೀಸ್ ಠಾಣೆಗಳನ್ನು ನೋಡಿಕೊಂಡು, ಹುಂಚದ ಕಟ್ಟೆ, ಆಗುಂಬೆ, ಯಗೂರ ಈ ಪ್ರಾಂತಗಳನ್ನು ಸುತ್ತುತ್ತಿದ್ದಾರೆ ಇನ್ನು ಮಳೆಗಾಲ ಬರುವದು ಸಮೀಪವಾಯಿತು ಅದಕ್ಕೆ ಮುಂಚೆ ತಮ್ಮ ಪ್ರಯಾಣಗಳನ್ನು ಮುಗಿಸಿಕೊಂಡು, ಒಳ್ಳೇ ಅಲೋವೆಗಸು ತೆಗೆದುಕೊಂಡು ಮಳೆಗಾಲದಲ್ಲಿ ಸುಖವಾಗಿ ಶಿವಮೊಗ್ಗೆಯಲ್ಲಿರುತ್ತಾರೆ ಪಿರಿಯ ಆಫೀಸರುಗಳ ದರ್ಶನ ನಮ್ಮ ಮಲ್ನಾಡು ನಿವಾಸಿಗಳಿಗೆ ಆಗುವದು ಮುಂದಿನ ಅಕ್ಟೋಬರ್ ನವಂಬರ್ ತಿಂಗಳಿಗೇ ಸರಿ ಸ್ಟರಲ್ಲಿ ಮಲ್ನಾಡಿನ ಇತರ ಚಿಲ್ಲರೆ ಅಧಿಕಾರಿಗಳು ವಿರಾಮ ತಕ್ಕೊಂಡು, ಎಲ್ಲಾ ಡಂಟೆ ತೀರಿಸಿಕೊಂಡು ಬೆಚ್ಚಗೆ ಕಂಬಳಿ ಹೊದ್ದುಕೊಂಡು, ಗೊರಕಿಸುತ್ತಾರೆ —ಮೆ॥ ಘಾಘಾ ಸಾಹೇಬರ ಸವಾರಿ ಮೇಗ್ರವಳ್ಳಿ ಸ್ಕೂಲಿಗೆ ದಯಮಾಡಿಸಿದ್ದಾಗ್ಯೂ ಅಲ್ಲಿನ ಹುಡುಗರು ಬಹಳ ಕೊಂಚವಾಗಿದ್ದರಿಂದ ಕ್ರಮವಾಗಿ ಕೆಲಸ ನಡೆಯುತ್ತಿಲ್ಲವೆಂದೂ ಆಕ್ಷೇಪಣೆ ಮಾಡಿದರೆಂದು ತೋರುತ್ತದೆ. ಪೋಸ್ಟ್ ಆಫೀಸಿನ ಗುಮಾಸ್ತ, ಮಾಸ್ಟರ್ ಕೆಲಸ ಎರಡೂ ನೋಡುವದು ಉಪಾಧ್ಯರಿಗೆ ತೊಂದರೆಯೋ, ಇಲ್ಲವೇ ನಾಮಧಾರಿ ಗೌಡರ ಮಕ್ಕಳು ಕಾಣೆ, ನಾಲ್ಕಕ್ಷರ ಹೇಳಿದರೆ ಆಯಿತು ಎನ್ನುವ ನಿಶ್ಚಿಂತೆಯೋ ಊಹಿಸಬೇಕಾಗುತ್ತದೆ ಇನ್ನಾದರೂ ಆ ಶಾಲೆ ಅಭಿವೃದ್ಧಿಗೆ ಬರದಿದ್ದರೆ ಸಾಹೇಬರು ಸುಮ್ಮನಿರಲಾರರು —ಕಳೆದ ವಾರ ಮಹಿಷಿ ಜಾತ್ರೆಯಲ್ಲಿ ಕೆಲವು ಅನಾಹುತಗಳು ಉಂಟಾಗಿ ಒಬ್ಬೊಬ್ಬರಿಗೆ ಕೈಕಾಲುಗಳು ಜಖಂ ಆಯಿತೆಂದೂ, ಒಬ್ಬ ಹೆಂಗಸು ಜಾರಿಬಿದ್ದು, ಕಾಲು ಹಾಯಮಾಡಿಕೊಂಡಳೆಂದೂ ತಿಳಿದಿದೆ ಇದಲ್ಲದೆ ತೇರು ಸರಿಯಾಗಿ ಹರಿಯದೆ ನಿಂತುಹೋಯಿತು ಕೆಲವು ಅಂಗಡಿಗಳಿಗೆ ಕೇಡಿನಿಂದ ನಷ್ಟವಾಯಿತು, ಮತ್ತು ಒಬ್ಬರ ಹೊಲಿಗೆ ಯಂತ್ರ ಒಡೆದುಹೋಯಿತು ಪಾರುಪತ್ಯಗಾರರ ಆಕಳು ಜಾವು ಕಡಿದು ಸತ್ತಿತು ಕಾರಣವೇನಾಗಿರಬಹುದು ?—ಈ ವರುಷ ಇಲ್ಲಿನ ಕೆಲವು ಜನಗಳು ಸೇರಿ, ಮಾರಿಯ ಹಬ್ಬ ಮಾಡಿದರು ಹೊಸದಾಗಿ ಒಂದು ಕೋಣನನ್ನು ಕಡಿದರು ಇನ್ನೂ ಅನೇಕರು ಕುರಿ ಕೋಳಿ ಮುಂತಾದವುಗಳನ್ನು ಮಾರಿಗೆ ಬಲಿ ಕೊಟ್ಟರು ಆದರೆ ಮಾರಿಯ ಗದ್ದಿಗೆಯು ಇರುವ ಕಟ್ಟದ ಊರಿನ ಮಧ್ಯೆಯಾದದರಿಂದ ಜನರ ಆರೋಗ್ಯಕ್ಕೆ ಬಹು ಸಂಕಟವಾಗಿದೆ ಅಂಥಾ ಕಿಷ್ಕಿಂಧವಾದ ಜಾಗದಲ್ಲಿ ಇಷ್ಟು ಪ್ರಾಣಿಗಳನ್ನು ಹ್ಯಾಗೆ ಹತ ಮಾಡಿದರೋ ? ಜನರ ವಾಸಕ್ಕೆ ಪಕ್ಕದ ಮನೆ ಹತ್ತಿರವೇ ಇಂಥಾ ಕೆಲಸಗಳು ನಡೆಯುವದಕ್ಕೆ ಈ ಊರಿನ ಮುನಿಸಿಪಾಲಿಟಿಯವರು ಹ್ಯಾಗೆ ಒಪ್ಪಿದರೋ ? ವೈಸ್ ಪ್ರೆಸಿಡೆಂಟರಿಗೆ ಏನಾದರೂ ಆರೋಗ್ಯ ಸೂತ್ರಗಳು ಗೊತ್ತುಂಟೋ ? ಹಾಗೆ ಗೊತ್ತಿದ್ದರೆ ಮನೆಗಳ ಪಕ್ಕದಲ್ಲಿ ಇಂಥಾ ಕೆಲಸಗಳು ನಡೆಯುತ್ತಿರುವಲ್ಲಿ ವಿಚಾರವಿಲ್ಲದೆ ಹ್ಯಾಗಿದ್ದರೋ ತಿಳಿಯದು ಯಾವ ಮುನಿಸಿಪಲ್ ಪ್ರೆಸಿಡೆಂಟಾದರೂ ಅಂಥಾ ಕಿಷ್ಕಿಂಧವಾದ ಜಾಗದಲ್ಲಿ ಪ್ರಜೆಗಳ ಕ್ಷೇಮವನ್ನು ನೋಡದಲೆ ಸುಮ್ಮನಿರುತ್ತಿರಲಿಲ್ಲ ಪ್ರಜೆಗಳ ಮತ್ತು ಪಟ್ಟಣದ ಆರೋಗ್ಯ ನೋಡಲು ನೋಡಿ, ನಂತರ ಬೇರೆ ಕೆಲಸಕ್ಕೆ ಅವಕಾಶ ಕೊಡುವದೇ ವೈಸ್ ಪ್ರೆಸಿಡೆಂಟರ ಮುಖ್ಯ ಕೆಲಸ ಇದಲ್ಲದೆ ಊರಿನ ಮಧ್ಯೆ ಹೀಗೆ ಮಾರಿಗೆ ಕೋಣನನ್ನು ಕಡಿದದ್ದು ಹಿಂದೆ ಅನೇಕ ವರುಷಗಳಿಂದ ನಿಂತುಹೋಗಿತ್ತೆಂಬುವದನ್ನು ಎಲ್ಲರೂ ಒಪ್ಪಿಕೊಂಡು ಹೇಳುತ್ತಾರೆ ಇನ್ನು ವಿನಾಶ ಕೇರಿ ಒಂದು ಜನರಿಗೆ ಅಸಹ್ಯವಾಗಿದೆ ಅದಕ್ಕೋಸ್ಕರ ವೈಸ್ ಪ್ರೆಸಿಡೆಂಟರು ಬೇರೆ ಸ್ಥಳ ಗೊತ್ತು ಮಾಡಿಕೊಟ್ಟರೆ ಸರ್ಕಾರದವರು ಏನೂ ಆಕ್ಷೇಪಣೆ ಮಾಡುವದಿಲ್ಲ ಮೊದಲು ಒಂದೆರಡು ಅಂಗಡಿಗಳು ಇದ್ದದ್ದು ಈಗ ೧೦ ೧೨ ಆಗಿವೆ ಈ ಸ್ಥಳದಲ್ಲಿ ಇಂಥಾ ಜನೋಪಕಾರಕ್ಕೆ ಅವಶ್ಯವಾದ ಕೆಲಸಗಳನ್ನು ಮುತುವರ್ಜಿಯಿಂದ ನೋಡದೆ, ವೈಸ್ ಪ್ರೆಸಿಡೆಂಟರು ಬೇರೆ ಯಾವ ಕೆಲಸ ಮಾಡುತ್ತಿರುವರೋ ತಿಳಿಯದು

ಬಾತ್ಮೀದಾರರಿಗೆ ಸೂಚನೆ

ಹೆಸರು ವಿಳಾಸಗಳಿಲ್ಲದ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಬಾತ್ಮೀದಾರರು ತಮ್ಮ ಪೂರ್ಣ ವಿಳಾಸದೊಂದಿಗೆ ತಮ್ಮ ಸರಿಯಾದ ಹೆಸರು ವಿಳಾಸ ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಒಂದು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು ಎಡಿ

ಸಂಜೀವರಾವ್, ದಾವಣಗೆರೆ, ಬಿ. ಗುರುಶಿದ್ಧಪ್ಪ, ನಾದೂರು —ಈ ಬಾತ್ಮಿಗಳನ್ನು ಪ್ರಕಟಿಸಲಾರೆವು

ವೆಂಕಟದಾಸಪ್ಪ, ಬೆಳವಾಡಿ —ನಿಮ್ಮ ಬಾತ್ಮಿ ಬಹು ದೀರ್ಘವಾಗಿದೆ.

ನಾರಾಯಣಸಿಂಗ್, ಬೆಂಗಳೂರು —ನಿಮ್ಮ ಬಾತ್ಮಿಯನ್ನು ಜವಾಬು ಸಹಿತವಾಗಿ ಮುಂದೆ ಪ್ರಕಟಿಸುವೆವು

ಕರೆಸ ಪಾಂಡೆನ್ಸ್

ಮಾಯಾದೀಪಕ್ಕೆ ಸಾಮಾನುಬೇಕು

ಅಯ್ಯಾ,

ಕಳೆದ ತಿಂಗಳ ೨೩ನೇ ತಾರೀಕಿನ ವೃತ್ತಾಂತ ಪತ್ರಿಕೆಯಲ್ಲಿ ವಿವರಿಸಿದ್ದ "ಮಾಯಾದೀಪ" ವೆಂಬ ಪುಸ್ತಕವನ್ನು ಬೆಂಗಳೂರು ಸ್ಟಾಂಡರ್ಡ್ ಪ್ರೆಸ್ಸಿಗೆ ಬರದು ತರಿಸಿಕೊಂಡಿದ್ದೇನೆ ಆದರೆ ಅದಕ್ಕೆ ಉಪಯೋಗಿಸುವ ಲಾಂದ್ರಗಳು ಚಿತ್ರಕನ್ನಡಿಗಳು ವಗೈರೆ ಸಾಮಾನುಗಳನ್ನು ಎಲ್ಲಿ ವಿಕ್ರಯಿಸುತ್ತಾರೆಂಬುದನ್ನು ನಿಮ್ಮ ವೃತ್ತಾಂತ ಪತ್ರಿಕೆಯಲ್ಲಿ ನೀವಾಗಲೀ ವೃತ್ತಾಂತ ಪತ್ರಿಕೆಯ ವಾಚಕರು ಯಾರಾದರೂ ತಿಳಿಸಿದರೆ ಬಹಳ ಉಪಕಾರವಾಗುವದು

ಸು ವೀರಪ್ಪಾಚಾರಿ.

ದೊಡ್ಡ ಸಂತೆಯನ್ನು ನಿಲ್ಲಿಸಿಬಿಟ್ಟಿದಾರೆ.

ಅಯ್ಯಾ,

ಅರಕಲಗೂಡು ತಾಲ್ಲೂಕು ಮಲ್ಲಿಪಟ್ಟಣದ ಹೋಬಳಿ ಹೊಳಲಿಗೋಡು ಸೋಮವಾರ ಸಂತೆಯು ಬಹು ಪುರಾತನವಾದದ್ದು ಲೇಟ್ ಕೃಷ್ಣರಾಜ ಒಡೆಯರವರ ಮತ್ತು ಪೂರ್ಣಯ್ಯನವರ ದಿವಸದಲ್ಲಿ ಸುಮಾರು ೧೦೦ ವರುಷಗಳ ಕೆಳಗೆ ಸ್ಥಾಪನೆಯಾಗಿ ಈ ದೇಶಕ್ಕೂ ಕೊಡಗು ದೇಶಕ್ಕೂ ಪ್ರಜಾನುಕೂಲವಾಗಿತ್ತು . . . . . ಚಾಲ್ತಿ ಮಾಹೆ ಏಪ್ರಿಲ್ ತಾರೀಖು ೩ ರಲ್ಲಿ ಮಲ್ಲಿಪಟ್ಟದ ಪೋಲೀಸಿನವರೂ ಶೇಕದಾರರೂ ಪೂರ್ತಿಯಾಗಿ ತುಂಬಿ ೨—೩ ಸಾವಿರ ರೂಪಾಯಿನ ವ್ಯಾಪಾರ ನಡೆಯುವ ಕಾಲಕ್ಕೆ ಬಂದು, ಆಡಿನ ಹಿಂಡಿಗೆ ತೋಳಬಿದ್ದಂತೆ ಎಲ್ಲ ಜನರನ್ನೂ ದುಮ್ಮಿನಿಂದ ಓಡಿಸಿಬಿಟ್ಟರು. ಇದು ಉಗಾದಿ ಹಬ್ಬದ ಸಂತೆಯಾಗಿತ್ತು. ಅದು ಮೊದಲು ಇಲ್ಲಿನ ಬಡ ಪ್ರಜೆಗಳಿಗೆ ಉಪ್ಪು ಅಕ್ಕಿ ವಗೈರೆ ಯಾವದೂ ಸಿಕ್ಕಲಿಲ್ಲ ಇವರ ಪಾಡು ದೇವರಿಗೆ ಪ್ರೀತಿ ಆಗಿದೆ ಹ್ಯಾಗೆಂದರೆ ಈ ಹೊಳಲಿಗೋಡು ಸೋಮವಾರ ಸಂತೆಯನ್ನು ದಿವಾನರವರು ವಜಾ ಮಾಡಿರುವದಾಗಿ ಹುಕುಂ ಬಂದಿದೆ ಎಂದು ಇಲ್ಲಿನ ಬಡ ಜನರಿಗೆ ನಮಗೆ ತಿಳಿಸಿದರು ೧೦೦ ವರುಷದಿಂದಲೂ ನಡೆದುಬರುತ್ತಿರುವ ಈ ಸಂತೆಯನ್ನು ದಿವಾನರವರು ಯಾವ ಕಾರಣದಿಂದ ತಪ್ಪಿಸಿದರೋ ನಮಗೆ ತಿಳಿಯದು ಇದನ್ನು ಅನ್ಯಾಯವಾಗಿ ತೆಗೆದಿರುವದರಿಂದ ಪ್ರಜೆಗಳಿಗೆ ಉಂಟಾಗಿರುವ ತುಂಬಾ ದುಃಖವನ್ನು ಕುರಿತು ಹಾಸನದ ಡಿಸ್ಟ್ರಿಕ್ಟ್ ಡೆಪ್ಟಿ ಕಮೀಷನರವರಿಗೆ ಅರ್ಜಿ ಕೊಟ್ಟು ಇದ್ದುದಕ್ಕೆ ಇದುವರೆಗೂ ಹುಕುಂ ಆಗಲಿಲ್ಲ ಈ ಸಂತೆ ಯಾವತ್ತು ಕಟ್ಟುವದೋ ಎಂತಲೂ ಎಂದಿಗೆ ನಾಳೆ ಬರುವದೋ ಎಂತಲೂ ನಾವುಗಳೆಲ್ಲಾ ಪ್ರಾರ್ಥಿಸುತ್ತೇವೆ

೨೯—೪—೦೫ ತಮ್ಮಯ್ಯ

ಔಷಧ ಬೇಕಾಗಿದೆ

ಅಯ್ಯಾ,

ನಾಟಕದಲ್ಲಿ ರಾಜಪಾರ್ಟ ಮುಂತಾದ್ದನ್ನು ಮಾಡುತ್ತಿದ್ದವನೊಬ್ಬನಿಗೆ ಆಕಸ್ಮಿಕವಾಗಿ ಸ್ವರಕ್ಕೆ ರೋಗ ಬಂದು ಮಾತನಾಡುವದಕ್ಕೂ ಹಾಡಿಕೆಯನ್ನು ಹಾಡುವದಕ್ಕೂ ಆಗದೆ ಇರುತ್ತದೆ ಇದು ಯಾತರಿಂದಲೋ ಗೊತ್ತಾಗುವದಿಲ್ಲ. ಇದನ್ನು ಗುಣಮಾಡಿ ಮೊದಲಿನಂತೆಯೇ ಸ್ಟೇಜಿನಲ್ಲಿ ಹಾಡುವದಕ್ಕೂ ಮಾತನಾಡುವದಕ್ಕೂ ಆಗುವ ಹಾಗೆ ಗುಣಪಡಿಸತಕ್ಕ ಔಷದವು ಯಾವ ಕಂಪನಿಯಲ್ಲಿ ದೊರೆಯುವುದು ಎನ್ನುವದನ್ನು ತಾವಾಗಲಿ ತಮ್ಮ ಪತ್ರಿಕಾ ವಾಚಕರಾಗಲಿ ದಯವಿಟ್ಟು ತಿಳಿಸಬೇಕಾಗಿ ಕೋರುತ್ತೇನೆ

೨೩—೪—೦೫ ಎಚ್ ವಿ ಎಚ್ ಭಟ್ಟ

ನ್ಯಾಯಾಂಗ ವಿಷಯ

ಅಯ್ಯಾ

[illegible] ಇರುತ್ತೆ [illegible] ಇರುವದಾಗಿ ತಿಳಿಯಬರುತ್ತೆ [illegible] ಅಲ್ಲಿ [illegible] ಗೊತ್ತಿಲ್ಲ [illegible] ವಿಳಾಸ ತಮಗೆ ತಿಳಿದು ಇದ್ದಲ್ಲಿ ನಾಳೆ [illegible] ಪತ್ರಿಕೆ [illegible] ವಿಳಾಸ ತಿಳಿಸಬೇಕು ಇಲ್ಲದ ಪಕ್ಷದಲ್ಲಿ ಈ ಸಂಗತಿಯ [illegible] ಪತ್ರಿಕೆಯಲ್ಲಿ ಪ್ರಕಟಿಸಿದರೆ [illegible] ನಂಬಿ ತಮ್ಮಗಳಿಗೆ ಕೃತಜ್ಞನಾಗುವೆನು

[illegible] ಕಾಳಪ್ಪ

ತೀರ್ಥಹಳ್ಳಿಯಲ್ಲಿ ನೀರಿನ ಕ್ಷಾಮ

ಅಯ್ಯಾ,

ಬಿಸಲು ಜೋರಾಗಿದೆ [illegible] ಈ ವರುಷ ಮಳೆ ಇಲ್ಲ [illegible] ಈ ಊರಿನಲ್ಲಿ ನೀರಿಗೆ ತುಂಬಾ ಅಭಾವ ದಾರುಣ ಸಮಾನಾಗಿದೆ [illegible] ನೀರು [illegible] ಜನಗಳು [illegible] ಗಳಿಗೆ ಗುರಿಯಾಗಿದ್ದಾರೆ

ಇಲ್ಲಿ ೩೦ ೦೦೦ ರೂಪಾಯಿ ಮೊದಲ್ಗೊಂಡು ೧ ೦೦,೦೦೦ ರೂಪಾಯಿಗೆ ಮೇಲ್ಪಟ್ಟ ಆಸ್ತಿವಂತರನೇಕರು ಕಾಫಿ, ಕೊಬರಿ, ಅಡಿಕೆ ವಗೈರೆ ವ್ಯಾಪಾರದ ಕಂಪನಿಗಳನ್ನಿಟ್ಟುಕೊಂಡು, ವಾರ ಒಂದಕ್ಕೆ ಇತರ ಬಾಬು ಹುಟ್ಟುವಳಿ ಅಲ್ಲದೆ ಘತ್ತು ದಳ್ಳಾಳಿ ಒಂದರಲ್ಲೇ ೫೦ ರೂಪಾಯಿ ಮೊದಲ್ಗೊಂಡು ೧೦೦ ರೂಪಾಯಿ ವರಿವಿಗೆ ಸಂಪಾದಿಸುತ್ತಾರೆ ಸುಗ್ಗಿ ಕಾಲಗಳಲ್ಲಿ ಇದು ಎರಡರಷ್ಟು ಉತ್ಪತ್ತಿ ಇದೆ ಸಂತೆ ತುಂಬಾ ದೊಡ್ಡದು ೩೦೦—೪೦೦ ಬಂಡಿಗಳು ಸೇರುತ್ತವೆ ಎತ್ತುಗಳಿಗೆ ನೀರಿಗೆ ತುಂಬಾ ತೊಂದರೆ ನೀರೇ ಸಿಕ್ಕುವದಿಲ್ಲ ಸಂತೆ ದಿನ ಒಬ್ಬೊಬ್ಬರು ೨—೩ ಸಣ್ಣ ಸಣ್ಣ ಪಾತ್ರೆಗಳಲ್ಲಿ ನೀರನ್ನು ಇಡಿಸುತ್ತಾರೆ ೧೦ ಜತೆ ಎತ್ತಿಗೂ ಸಹಾ ಆಗಲಾರದು. ಇದಕ್ಕಾಗಿ ಮೇಲ್ಕಂಡವರು ತಮ್ಮ ಘನವಾದ ಚಿತ್ತಕ್ಕೆ ತಂದುಕೊಂಡು, ತಮ್ಮ ತಮ್ಮ ಕಂಪನಿಗಳ ಮುಂದೆ ಎತ್ತುಗಳಿಗಾಗಿ ನೀರನ್ನು ತಕ್ಕ ಏರ್ಪಾಡು ಕಲ್ಪಿಸಿ, ಈ ಮೂಕ ಪ್ರಾಣಿಗಳ ಕಷ್ಟವನ್ನು ನಾಶಪಡಿಸಿ ಪುಣ್ಯ ಸಂಪಾದಿಸಿಕೊಳ್ಳಬೇಕಾಗಿ ಪ್ರಾರ್ಥನೆ.

ಇಲ್ಲಿ ಕೆಲವರು ಪುಣ್ಯ ಸಂಪಾದನೆ ಬಗ್ಗೆ ಜನ ಮತ್ತು ಜಾನುವಾರುಗಳಿಗಾಗಿ ಕೆರೆಯಲ್ಲಿ ೫—೬ ಮುಕ್ಕ ಬಾವಿಗಳನ್ನು ಸ್ವಲ್ಪ ಮೊಬಲಗಿನಿಂದ ೩—೪ ಗಜ ಆಳುದ್ದ ತೆಗಿಸುತ್ತಾರೆ ಪಾಪ, ಏನುಮಾಡ್ಯಾರು ? ಹಾಸಿಗೆ ಇದ್ದಷ್ಟು ಕಾಲು ನೀಡಬೇಕೆಂಬದಕ್ಕೆ ಸಮನಾಗಿದೆ ನೀರಿಗೆ ಅವಸ್ಥೆಪಡುವ ಬಡ ಜನಗಳ ಅನ್ಯಸ್ಥಿತಿ "ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲುದ್ದ ನೀರೇ" ಎಂಬದಕ್ಕೆ ಸರಿಯಾಗಿ, ೯—೧೦ ಕೊಡ ನೀರಿಗೇನೇ ಬಾವಿಗಳು ಕೊನೆಗಾಣಿಸಿಕೊಳ್ಳುತ್ತವೆ ಇದೆಲ್ಲಾ ಮೇಲ್ಕಂಡವರ ಪರಾಂಬರಿಕೆಯಲ್ಲಿದ್ದರೂ ಕೂಡ ತಕ್ಕ ಏರ್ಪಾಡು ಮಾಡಿಸದೆ ಸ್ತಬ್ಧರಾಗಿರುವದು ತುಂಬಾ ಶೋಚನೀಯವೇ. ಈಗಲಾದರೂ ಮೇಲ್ಕಂಡವರಲ್ಲಿ ಧರ್ಮದೃಷ್ಟಿಯುಳ್ಳವರು ಸಧ್ಯಕ್ಕೆ ೫೦ ರೂಪಾಯಿಗಳಿಗೆ ಕಮ್ಮಿ ಇಲ್ಲದ ಲಾಗವಾಡಿನಿಂದ ೬ ಗಜ ಆಳವುಳ್ಳ ಒಂದು ಬಾವಿಯನ್ನು ಜಾನುವಾರುಗಳು ಇಳಿದು ನೀರು ಕುಡಿಯುವ ಹಾಗೆ ಒಂದು ದೊಡ್ಡ ಬಾವಿಯನ್ನೂ ತೆಗಿಸಿ, ಪುಣ್ಯ ಸಂಪಾದಿಸಿ ಶ್ರೇಯೋವಂತರಾಗಬೇಕಾಗಿ ಹಾರೈಸುತ್ತೇನೆ.

ಕ್ಷೇಮಚಿಂತಕ

ವಿದೇಶ ವರ್ತಮಾನಗಳು.

ಜಪಾನಿನವರ ಕಡೆ ಏಜೆಂಟರು ಆಸ್ಟ್ರೇಲಿಯಾದಿಂದ ೮,೦೦೦ ಯುದ್ಧದ ಇಲಾಖೆಗಾಗಿ ಕುದುರೆಗಳನ್ನು ಕೊಂಡು ತಂದರು.

* * * * *

ಲಂಡನ್ ಪಟ್ಟಣದ ಗೈ ಆಸ್ಪತ್ರೆಯ ಮೂಲ ಧನಕ್ಕೆ ಮಿ॥ ಎ ವೆಟ್ ಎಂಬ ಸಾಹುಕಾರನು ೬೦,೦೦೦ ರೂಪಾಯಿ ಧರ್ಮ ಕೊಟ್ಟಿರುತ್ತಾನೆ

* * * * *

ವಿಲಾಯಿತಿಗೆ ಸೇರಿದ ವ್ಯಾಟ್ಲಾಕ್, ಡಾನ್ ಕ್ಯಾಸ್ಟರ್, ಸ್ಕಾರ್ ಬರೋ ಎಂಬ ಮಧ್ಯ ಮತ್ತು ಉತ್ತರ ಭಾಗಗಳಲ್ಲಿ ಕಳೆದ ವಾರ ಸ್ವಲ್ಪ ಕಾಲವಾಗಿಯೇ ಭೂಕಂಪವಾಯಿತು

* * * *

ನ್ಯೂಫೌಂಡ್‌ಲ್ಯಾಂಡ್‌ ಸಮೀಪದ ಹತ್ತಿರ ಗವಗೆ ಎಂಬ ಊರಿನ ಸ್ಥಿರವಾದ ತುರ್ಕಿ ಸೈನಿಕರು ಬಲ್ಗೇರಿಯದ ಪ್ರಜೆಗಳನ್ನೆಲ್ಲಾ ಹಿಡಿದು ಕೊಂದುಹಾಕಿದರೆಂದು ತಂತೀ ವರ್ತಮಾನ ಬಂದಿದೆ

* * * *

ಜೇಮ್ಸ್ ಬ್ಯಾಗೋ ಯಾವರ ಪತ್ನಿಯು ಲಿವರ್‌ಪೂಲ್ ಪಟ್ಟಣ ವಿದ್ಯಾಶಾಲೆಯಲ್ಲಿ ಫ್ರೆಂಚ್ ಭಾಷೆಯನ್ನೂ ಕಲಿಸಬೇಕೆಂದು ಆಶಿಸಿ, ಅದಕ್ಕಾಗಿ ಬಂದುವರೆ ಲಕ್ಷ ರೂಪಾಯಿ ಮೂಲಧನ ಕೊಟ್ಟಿದ್ದಾಳೆ ವಿಲಾಯತಿಯವರು ಆಕೆಯನ್ನು ಕೊಂಡಾಡುವರು

* * * *

ವಿಲಾಯತಿಗೆ ಸೇರಿದ ಹಾಲ್‌ಬೋರ್ನ್ ಪಟ್ಟಣದಲ್ಲಿ ಹೆನ್ರಿ ಫ್ರಾನ್ಸಿಸ್ ಎಂಬ ವಕೀಲನಿಗೆ ತಿಂಗಳಿಗೆ ೧,೫೦೦ ರೂಪಾಯಿನ ಕೆಲಸ ಇತ್ತು ಇವನು ೧,೩೫೦೦೦ ರೂಪಾಯನ್ನು ತಿಂದು ಹಾಕಿದನೆಂಬ ನೋಕದ್ದಮೆ ಆಗಿ ಅವನಿಗೆ ಏಳು ವರುಷದ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು

* * * *

ಆಸ್ಟ್ರೇಲಿಯದಿಂದ ವಿಲಾಯತಿಗೆ ಹದಿನೈದು ದಿನಕ್ಕೊಂದಾವರ್ತಿ ಡಾಕಿನ ಮೇಲೆ ಟಪ್ಪಾಲನ್ನು ಸಾಗಿಸುವುದಕ್ಕೋಸ್ಕರ ಆಸ್ಟ್ರೇಲಿಯಾ ಸರ್ಕಾರದವರು ಒಂದು ಕಂಪನಿಗೆ ಕಂಟ್ರಾಕ್ಟು ಕೊಟ್ಟಿದಂತೆ ಟಪ್ಪಾಲ ಸಾಗಿಸುವಿಕೆಗೆ ವರುಷಕ್ಕೆ ೧೮ ಲಕ್ಷ ರೂಪಾಯಿ ಸರ್ಕಾರದವರು ಕಂಪನಿಗೆ ಕೊಡುವರು

* * * *

ಹ ಬರ್ಗ ಪಟ್ಟಣದ ಆಸ್ಪತ್ರೆಗಳಲ್ಲಿ ರಷ್ಯಾ ಸೈನಿಕರ ಪೈಕಿ ೫೦,೦೦೦ ಮಂದಿ ಗಾಯಪಟ್ಟವರಾಗಿಯೂ ೧೨,೦೦೦ ಮಂದಿ ರೋಗಿಗಳಾಗಿಯೂ ಇದ್ದಾರೆ ಇಷ್ಟು ಜನರನ್ನು ನೋಡಿಕೊಂಡ ಸಂಗಳಲ್ಲಿ ಔಷಧೋಪಚಾರ ಸಹಾಯಕ್ಕೆ ೬೦ ಜನ ಡಾಕ್ಟರುಗಳೂ ೧೪೦ ಮಂದಿ ನರ್ಸುಗಳೂ ಇರುತ್ತಾರೆ ಔಷಧ ಕೊಡತಕ್ಕವರೂ ಉಪಚಾರ ಮಾಡತಕ್ಕವರೂ ಸಾಲದ್ದರಿಂದ ಸುಮಾರು ೫,೦೦೦ ಜನರು ಪ್ರಾಣ ಬಿಡುವರು ಎಂದು ಪ್ರಕಟವಾಗಿದೆ

* * * *

ಪ್ಯಾರಿಸ್ ಪಟ್ಟಣದಲ್ಲಿ ಸರ್ವವಸ್ತು ಪ್ರದರ್ಶನ ಶಾಲೆಯ ನಡೆಯುತ್ತಿದ್ದ ಕಾಲದಲ್ಲಿ ತುರ್ಕಿ ಸುಲ್ತಾನರು ತಮ್ಮ ರಾಜ್ಯದ ಸಾಮಾನುಗಳನ್ನು ಪ್ರದರ್ಶನ ಶಾಲೆಗೆ ಕಳುಹಿ, ಒಂದು ಪ್ರತ್ಯೇಕವಾದ ಕಟ್ಟಡದಲ್ಲಿ ಇರಿಸಿದ್ದರು ಈ ಕಟ್ಟಡವನ್ನು ಪ್ಯಾರಿಸ್ಸಿನಲ್ಲಿರುವ ಒಬ್ಬ ಕಂಟ್ರಾಕ್ಟರು ಕಟ್ಟಿದನು ಅದು ಬಹಳ ಚನ್ನಾಗಿತ್ತೆಂದು ಪ್ರದರ್ಶನಕ್ಕೆ ಹೋಗಿದ್ದವರೂ, ಸುಲ್ತಾನರೂ ಹೊಗಳಿದರು ಮತ್ತು ಸುಲ್ತಾನರು ಆ ಕಂಟ್ರಾಕ್ಟರಿಗೆ ಒಂದು ಬಿರುದನ್ನೂ ದಯಪಾಲಿಸಿದರು ಆದರೆ ಆ ಕಂಟ್ರಾಕ್ಟರು ಈಗ ಆ ಕಟ್ಟಡದ ಹಣಕ್ಕಾಗಿ ಅಂದರೆ ೧೮ ಲಕ್ಷ ರೂಪಾಯಿಗೆ ಸುಲ್ತಾನರ ಮೇಲೆ ದಾವಾ ತಂದಿರುತ್ತಾನೆ

* * * *

ಇಟಲಿ ರಾಜ್ಯಕ್ಕೆ ಸೇರಿದ ರೋಮ್‌ನಗರದಲ್ಲಿ ಒಂದು ದೊಡ್ಡ ಕಲಾ ಶಾಲೆಯನ್ನು ಸ್ಥಾಪಿಸಿ, ಅದರಲ್ಲಿ ಚುರುಕು ಬುದ್ಧಿಯುಳ್ಳಂಥಾ ವಿದ್ಯಾರ್ಥಿಗಳಿಗೆ ಕಟ್ಟಣಗಳ ವಿಧಾನ, ಶಿಲ್ಪವಿದ್ಯೆ, ಚಿತ್ರ ಬರೆವುದು, ಸಂಗೀತ ಈ ಗ್ರೌಢ ಕಲೆಗಳನ್ನು ಕಲಿಸಬೇಕೆಂದು ಏರ್ಪಾಡಾಗಿದೆ ಈ ವಿದ್ಯಾಶಾಲೆಯ ಮೂಲ ಧನಕ್ಕೆ ೩೦ ಲಕ್ಷ ರೂಪಾಯಿ ಸಾಲಲಿಲ್ಲ ಇದನ್ನು ಕೇಳಿ, ಅಮೇರಿಕದಲ್ಲಿರುವ ಕೋಟ್ಯಾಧೀಶ್ವರರಾದ ಮೆ॥ ಗಳಾದ ಪಿಯರ್‌ಪಾಂಟ್ ಮಾರ್ಗನ್, ಹೆನ್ರಿ ವಾಲ್ಟರ್ಸ್, ವ್ಯಾಂಡರ್‌ಬಿಲ್ಟ್, ಹಿಗ್ಗಿನ್ಸನ್, ಸ್ಟೈಲ್‌ಮ್ಯಾನ್, ಜೆನ್ನಿಂಗ್ಸ್, ಈ ಪ್ರಕಾರ ಆರು ಮಂದಿ ತಲಾ ಮೂರು ಮೂರು ಲಕ್ಷ ರೂಪಾಯಿನಂತೆ ಚಂದಾ ಕಳುಹಿಸಿದಾರೆ

* * * *

ದಕ್ಷಿಣ ಆಫ್ರಿಕಕ್ಕೆ ಸೇರಿದ ಪ್ರಿಮಿಯರ್ ಮೈನ್ ಎಂಬ ವಜ್ರದ ಗಣಿಯಲ್ಲಿ ಈಚೆಗೆ ಒಂದು ಭಾರೀ ವಜ್ರವು ಸಿಕ್ಕಿತೆಂತಲೂ ಇದನ್ನು ಲಂಡನ್ ಪಟ್ಟಣಕ್ಕೆ ಕಳುಹಿಸಿದಾರೆಂತಲೂ ತಿಳಿಸಿದೆವಷ್ಟೆ ಈ ವಜ್ರವನ್ನು ವಿಶೇಷವಾದ ಪಹರೆ ಇಟ್ಟು ಲಂಡನ್ ಪಟ್ಟಣಕ್ಕೆ ತೆಗೆದುಕೊಂಡು ಬಂದರು ಅಲ್ಲಿ ಬ್ಯಾಂಕಿನ ಮ್ಯಾನೆಜರು ಬಹು ಎಚ್ಚರಿಕೆಯಿಂದ ಅದನ್ನು ಹಡಗಿನಿಂದ ಇಳಿಸಿಕೊಂಡಾಗ ಸುತ್ತಲೂ ವಿಶ್ವಾಸದ ಪಹರೆ ಇತ್ತು ಅವರು ಅದನ್ನು ತೆಗೆದು ಗಾಡಿಯಲ್ಲಿಟ್ಟುಕೊಂಡು ಪಟ್ಟಣದೊಳಕ್ಕೆ ಪೊಲೀಸ್ ಪಹರೆಯಲ್ಲಿ ಹೋದರು ಅದನ್ನು ಗಾಡಿಯಿಂದ ಇಳಿಸಿ ಬಹು ಜೋಪಾನವಾಗಿ ಪೊಲೀಸಿನವರನ್ನು ಅತ್ತಿತ್ತ ಇಟ್ಟುಕೊಂಡು ತಮ್ಮ ಬ್ಯಾಂಕಿನೊಳಕ್ಕೆ ಸಾಗಿಸಿದರು ಈ ವಜ್ರದಷ್ಟು ಭಾರಿಯಾದದ್ದು ಪ್ರಪಂಚದಲ್ಲೆಲ್ಲೂ ಇಲ್ಲವೆಂದು ಹೇಳುತ್ತಾರೆ ಈಗ ಈ ಭಾರೀ ವಜ್ರ ಹೋದರೆ ಅದಕ್ಕೆ ೩೫ ಲಕ್ಷ ರೂಪಾಯಿ ಪ್ರತಿಫಲ ಕೊಡುತ್ತೇವೆಂದು ವಿಮಾ ಕಂಪನಿಯವರು ಒಪ್ಪಿಕೊಂಡಿರುವರು

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು ೨ನೇ ಮಾಹೆ ಮೇ ೧೯೦೫

ಸನ್ ೧೯೦೫ನೇ ಇಸವಿ ಜುಲೈ ಮಾಹೆ ತಾರೀಖು ೧ರ ಲಾಗಾಯತು ೧೯೦೬ನೇ ಇಸವಿ ಜೂನ್ ಮಾಹೆ ತಾರೀಖು ೩೦ರ ವರೆಗೆ ಈ ಕೆಳಗಿನ ಎ ಷೆಡ್ಯೂಲಿನಲ್ಲಿ ನಮೂದಿಸಿರುವ ಮೈಸೂರು ಸಿಟಿಗೆ ಸೇರಿದ ತವಾಂ ಟೋಲ್ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿಗಳು, ಜಾನವಾರುಗಳು ವಗೈರೆಗಳ ಮೇಲೆ ಬಿ ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ ೪೯ ಮತ್ತು ೫೧ನೇ ಸೆಕ್ಷನ್‌ಗಳಲ್ಲಿ ನಮೂದಿರುವ ಷರತ್ತುಗಳಿಗೆ ಒಳಪಡಿಸಿ, ಟೋಲ ಅಥವಾ ಸುಂಕವನ್ನು ವಸೂಲ್ಮಾಡುವ ಬಾಬನ್ನು ೧೯೦೫ನೇ ಇಸವಿ ಮೇ ಮಾಹೆ ತಾರೀಖು ೨೦ನೇ ಮಧ್ಯಾಹ್ನ ೧ ಘಂಟೆಯ ಲಾಗಾಯತು ರಂಗಾಚಾರ್ಲುರವರ ಮೆಮೋರಿಯಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ವಪಲ್ಲಾಗಿ ನೇಮಿಸಲ್ಪಟ್ಟ ಇತರ ಅಧಿಕಾರಿಯವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

೨ ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ ಷೆಡ್ಯೂಲಿನಲ್ಲಿ ನಮೂದಾಗುವ ರೇಟನಂತೆಯೇ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು ಹೆಚ್ಚು ರೇಟನ್ನು ವಸೂಲ್ಮಾಡ ಕೂಡದು ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಕಿ, ಟೋಲು ಪಾವತಿ ದಾರರಿಗೆ ತಸ್ದೀಕುಗಳಿಗೆ ರಶೀದಿ ಕೊಡಬೇಕು

೩ ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ನುಕ್ಸಾನ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ

೪ ಪ್ರತಿ ತಿಂಗಳು ೧೦ನೇ ತಾರೀಖು ಒಳಗಾಗಿ ಹಿಂದಣ ಮಾಹೆಯ ಕಿಸ್ತು ಮೊಬಲಗನ್ನು ಪಾವತಿ ಮಾಡಬೇಕು ಹರಾಜು ಆಖೈರಾದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಕಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಕಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ

೫ ಹರಾಜು ಆಖೈರಾದ ಕೂಡಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೇ ಇದ್ದರೆ, ಖರ್ಚುಗಳೂ ಮತ್ತು ಲುಕ್ಸಾನಗಳೂ, ಅವ್ವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಿಸುತ್ತೆ ಕಿಸ್ತು ಮೊಬಲಗನ್ನು ವಾಯಿದೆ ಒಳಗೆ ಹಾಜರ್ಮಾಡಲು ತಪ್ಪಿದರೆ, ಡಿಪಾಜಿಟ್ ಮೊಬಲಗನ್ನು ಜಪ್ತಾಗಿ ತೆಗೆದುಕೊಂಡು, ಬಾಬನ್ನು ಮರು ಹರಾಜು ಮಾಡಿಸಿ, ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ಪರವಾನ್ಗಿದಾರನನ್ನು ಗುರಿಪಡಿಸುತ್ತೆ. ಎರಡನೇ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ

೬ ಪ್ರತಿ ಒಬ್ಬ ಕಂಟ್ರಾಕ್ಟುದಾರನು ರೋಜೀನಾ ಟೋಲುಗೇಟುಗಳ ಮುಖಾಂತರ ಪ್ರವೇಶ ಮಾಡುವ ತರಹಾವರಿ ಗಾಡಿ ಯಾ ಜಾನವಾರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪಶೀಲು ತೋರಿಸುವ ಲೆಖ್ಖವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು, ಅಂಥಾ ಲೆಖ್ಖವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರೆಸಿಡೆಂಟರವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ ಮಾಡಬೇಕು ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು

೭ ಪ್ರತಿ ಒಬ್ಬ ಕಂಟ್ರಾಕ್ಟುದಾರನು ಟೋಲುಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನವಾರುಗಳ ತಪಶೀಲು ಲೆಖ್ಖವನ್ನು ೬ನೇ ಕಲಂನಲ್ಲಿ ನಮೂದಿಸಿರುವಂತೆ ಇಡತಕ್ಕ ಬಗ್ಗೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲು ಗೇಟಿನಲ್ಲಿಯೂ ಒಬ್ಬೊಬ್ಬ ಗುಮಾಸ್ತನನ್ನು ಇಡುವದಕ್ಕೆ ಬದ್ಧನಾಗಿರತಕ್ಕದ್ದು

೮ ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು, ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು

೯ ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕಂಟ್ರಾಕ್ಟು ಬಾಬನ್ನು ಸರಿಯಾಗಿ ನಡಸಿಕೊಂಡು ಹೋಗತಕ್ಕ ವಿಚಾರದಲ್ಲಿ ಪ್ರತಿ ಒಬ್ಬ ಕಂಟ್ರಾಕ್ಟುದಾರನು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾ ಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದು ಕೊಡಬೇಕು

೧೦ ಈ ಕೆಳಗೆ ನಮೂದಾಗುವವುಗಳ ಮೇಲೆ ಕಂಟ್ರಾಕ್ಟುದಾರನು ಟೋಲ್ ಯಾನೆ ಸುಂಕವನ್ನು ವಸೂಲ್ಮಾಡಕೂಡದು

(೧) ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ, ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವಾರುಗಳು ಮತ್ತು ಗವರ್ನಮೆಂಟ್ ಯಾ ಮ್ಯುನಿಸಿಪಲ್ ಕಮಿಷನರ್‌ಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರ್ರುಮಾಡಲ್ಪಟ್ಟ ಕ್ಯಾರೇಜುಗಳು ಗಾಡಿಗಳು, ಮತ್ತು ಜಾನವಾರುಗಳ ಮೇಲೆ ಮತ್ತು ಒಂದು ದಿವಸದಲ್ಲಿ ೨೪ ಘಂಟೆಯ ಕಾಲದೊಳಗಾಗಿ ಅಂದರೆ ಒಂದು ಮಧ್ಯ ರಾತ್ರಿಯಿಂದ ಇನ್ನೊಂದು ಮಧ್ಯ ರಾತ್ರಿಯ ವರಿಗೂ ಯಾವ ಕ್ಯಾರೇಜು ಗಾಡಿ ಅಥವಾ ಜಾನವಾರುಗಳ ಮೇಲೆಯೇ ಆಗಲಿ, ಒಂದು ಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡ [illegible]

(೨) ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವಾರುಗಳ ಮೇಲೆ ಮಿಲಿಟರಿ ಅಥವಾ ಗವರ್ನಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವಾರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೋಲೀಸು ಆಫೀಸರರು ವಗೈರೆ ಯಾನೇರು ಅವರು ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವಾರುಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿ ಗಾಡಿಗಳು, ಕ್ಯಾರೇಜುಗಳು, ಜಾನವಾರುಗಳು ಇವುಗಳ ಮೇಲೆ ಸಹಾ

ಷೆಡ್ಯೂಲ್ ಎ

ನಂಬರು		
೧	ಗೈಲ್ಸ್ ಸ್ಟೇಷನ್ ರಸ್ತೆ	ಬೆಳಗೊಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ
೨	ಬೆಳಗೊಳದ ರಸ್ತೆ	ಕೆಂಪನಕಟ್ಟೆ ಉಕ್ಕಡ
೩	ಶ್ರೀರಂಗಪಟ್ಟಣದ ರಸ್ತೆ	ಎರೆಕಟ್ಟೆ ಉಕ್ಕಡ
೪	ಬೆಂಗಳೂರು ರಸ್ತೆ	ವೀರನಗರೆ ಉಕ್ಕಡ
೫	ಸಮಿಟರಿ ರಸ್ತೆ	ಬಂಗ್ಲಿಸಂತ್ರಿ ಉಕ್ಕಡ
೬	ಮಹದೇವಪುರದ ರಸ್ತೆ	ಬಲಪುರಿ ಉಕ್ಕಡ
೭	ಆಲನಹಳ್ಳಿ ರಸ್ತೆ	ಇಟ್ಟಿಗೆ ಗೂಡು ಉಕ್ಕಡ
೮	ರೇಸುಕೋರ್ಸು ರಸ್ತೆ	ರೋಣಸಂತ್ರಿ ಉಕ್ಕಡ
೯	ನಂಜನಗೂಡು ರಸ್ತೆ	ನಂಜನಗೂಡು ಉಕ್ಕಡ
೧೦	ಡಿಟೋ	ಹಾಲಿ ಉಕ್ಕಡದ ಬಳಿ ವಿಧಾಯಕ ಮಾಡುವಂತೆ ನಾಚನಹಳ್ಳಿ ಉಕ್ಕಡ
೧೧	ಮಾಸಂದವಾಡಿ ರಸ್ತೆ	ಚಟ್ಟನಹಳ್ಳಿ ಉಕ್ಕಡ
೧೨	ಮೈಸೂರು ರಾಯ ರಸ್ತೆ	ಕೊಲಗೇರಿ ಉಕ್ಕಡ
೧೩	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ	ಡಿಟೋ
೧೪	ಜ್ಯೂಬಿಲಿ ರಸ್ತೆ	ಕುಕ್ಕರಹಳ್ಳಿ ಉಕ್ಕಡ
೧೫	ಇಲವಾಲದ ರಸ್ತೆ	ಮುನಿಸಿಪಲ್ ಸರಹದ್ದು ಬೈದಾಗುವ ಬಳಿ ಹಾಲಿ ಈ ರಸ್ತೆಯ ಪಕ್ಕದಲ್ಲಿ ವಿಧಾಯಕ ಮಾಡಿರುವ ಉಕ್ಕಡ

ಷೆಡ್ಯೂಲ್ ಬಿ

ನಂಬರು.	ಟೋಲ್ ಗೇಟಿನಲ್ಲಿ ವಸೂಲ್ಮಾಡತಕ್ಕ ದರಗಳ ತಪಶೀಲು.	ರೂ	ಆ	ಪೈ
೧	ಸ್ಪ್ರಿಂಗು ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ	೦	೩	೦
೨	ಡಿಟೋ ೨ ಚಕ್ರದ ಕ್ಯಾರೇಜಿಗೆ	೦	೨	೦
೩	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಕೋಣಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿ ಗಾಡಿಗಳು ಅಥವಾ ಜಟಕಾ ಗಾಡಿ ೧ ಕ್ಕೆ	೦	೨	೦
೪	ಡಿಟೋ ಖಾಲಿ ಇರತಕ್ಕ ಪ್ರತಿ ಒಂದು ಗಾಡಿಗೆ	೦	೧	೦
೫	ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು ೧ ಕ್ಕೆ	೦	೦	೬
೬	ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ ೧೩ ಹಿಡಿಗಳಿಗಿಂತಲು ಮಿಗಿಲಾದ ಕುದುರೆ ೧ ಕ್ಕೆ	೦	೧	೦
೭	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ ೧ ಕ್ಕೆ	೦	೦	೬
೮	೧೩ ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ ೧ ಕ್ಕೆ.	೦	೦	೬
೯	ಡಿಟೋ ಆನೆ ೧ ಕ್ಕೆ	೦	೮	೦
೧೦	ಡಿಟೋ ಒಂಟೆ ೧ ಕ್ಕೆ	೦	೧	೦

(VENKATA RAO,
for President.

ಪ್ರಪಂಚದಲ್ಲಿ ದೊಡ್ಡದು ಯಾವದು?

20

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿ ಸಿರಿ ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ --

೧ "ಅನುಭವಸಾರ"

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾ ರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆ ದಿದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ಶೋಭಾಯಮಾನವಾಗಿವೆ ಇದರ ಕ್ರಯ ೧೨ ಆಣೆ, ವಿ ಪಿ. ಮುಖಾಂತರ ೧೪ ಆಣೆ

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಘವಾಚಾರ್ಯಂಗಾ ರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರು ವರು ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ"

ಎಲ್ಲ ರ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೪ ಆಣೆ

೪ "ರೋಮನರ ಚರಿತ್ರೆ" ಕ್ರಯ ೦—೨—೦
೫ "ಗ್ರೀಕರ ಚರಿತ್ರೆ" ೦—೨—೦
೬ "ಅನುಭವಾನಂದ" ೦—೩—೦
೭ "ಗಣಿತ ಸಂಜೀವಿನಿ" ೦—೮—೦
೮ "ಗಣಿತ ಚಿಂತಾಮಣಿ" ೦—೧೦—೦
೯ "ಚಾಮರಾಜೇಂದ್ರ ವಿಲಾಸ" ೦—೧೨—೦
೧೦ "ಬಂಧೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧೨—೦
೧೧ "೧೯೦೫ನೇ ವರುಷದ ಡೈರಿಗಳು"

ಕ್ಲಾತ್, ಪೆನ್ಸಿಲ ಸಹಾ ೦—೬—೦, ಸಾದಾ ೦—೪—೦

ಮ್ಯಾನೇಜರ್,
ಸಿ. ಎಲ್ ಎಸ್ ಬುಕ್ ಡಿಪ್ಪೋ,
ಮೈಸೂರು

ಜ್ವರಹರಿ.

25

ಇದು ಸಾಧಾರಣ ಜ್ವರ, ಚಳೀಜ್ವರ, ಕೆಮ್ಮೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಕ್ಕೆರೆಯಲ್ಲಿರುವ ಮುಲಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಶಾಹಿಲೇ ಬಿಳುತ್ತಿರು ದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಪಿ ಮುಖಾಂತರ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುವ'

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓ ಮ ಂ ಕ ರ್ಪೂ ರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆ ಒಳ್ಳೆ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಚೆಂಗಸರು ತಿಂಗಳಿಗೆ ಬಿಹಾವತಿಗೆ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯು ನವಂಬರ್‌ನನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪುರುಷರಿಗೂ ಹೆಂಗಸರಿಗೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದೆ ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇನ್ನಲ್ಲದೆ ಕೆಳಗಿನ ವಿಳಾಸದಾತ್ರರಲ್ಲಿ ವಿಶೇಷ — ಪಶ್ಚಿಮದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ನೆಂಬ ನೇಟ್ ಲೈನ್ ಮದರಾಸ್.

WANTED WILD ANIMALS

ಬೇಕಾಗಿದೆ ಬೇಕಾಗಿದೆ

4

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ ಹ್ಯೂಬಸ್ ರವರು ಕೊಂಡುಕೊಳ್ಳುವರು

Apply to—Mr Hughes, Mysore Zoo

ಶ್ರೀ ತಾಂಬೂಲ.

2

ಇದನ್ನು ಓದಿ! ಬಿಡಬೇಡಿ!! ನೀವೇ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾರಿ ಮಾಡುತ್ತಿದ್ದಾರೆ ಅದರ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲ ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ವಿವರಿಸ ದುರ್ಗಂಧ ನಾಶವಾಗುತ್ತೆ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಚಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ಆಗ ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರೆಗೆ ವಿ ಪಿ ಛಾರ್ಜು ೫ ಆಣೆ ನಮ್ಮ ವಿಳಾಸ —

ದೇವನಹಳ್ಳಿ ಟವ್ನ್, ಯಂ ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟಿಷನರ್

ಹೋಮೋಸಿಯಾ

ಕಷ್ಟ ಪರಿಹಾರ

ತಗಲುತ್ತಲೇ ನೋವು ವಾಸಿ ಯಾಗುತ್ತೆ

ಈ ಔಷಧಿಯು ಮನೆ, ಬಂದರು, ಅಂಗಡಿ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ ಕೋರ್ಟು ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಡಬೇಕು ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ಈಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕಿದ ಶ್ರೇಷ್ಠ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಮಂಡೀ ವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಬಿಸ್ಸಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಟ್ಲು ಡಬ್ಬಿದಲ್ಲಿ ೧ ರೂ ಡಬ್ಬಿದಲ್ಲಿರುವದಕ್ಕಿಂತ ೪ ದಷ್ಟು ಹೆಚ್ಚು ಔಷಧವಿರುತ್ತೆ ಈ ರೂ ೨—೮ ಆ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಪಶು ರೋಗಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡುತ್ತಿರುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ —ಹೋಮೋಸಿಯಾ ಕಂಪನಿ. ೨೬ ನೆಂಬರು ನೇಟ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

೧೪—೪—೧೯೦೫ ರಿಂದ ೨೧—೪—೧೯೦೫ ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಸತ್ತದ್ದು	ಕೇವಲವಾರ್ಷಿಕ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ		7	4	6	6
ಮೈಸೂರು	,,	1	2	1	1
ಬೆಂಗಳೂರು ಡಿಸ್ಟ್ರಿಕ್ಟು		11	11	24	17
ಮೈಸೂರು	,,	2	2	6	53
ಕೋಲಾರ್	,,	4	3	11	17
ಕೋಲಾರ ಚಿನ್ನದ ಗಣಿಗಳು		1	0	4	5
ತುಂಕೂರು ಡಿಸ್ಟ್ರಿಕ್ಟು		1	2	16	11
ಹಾಸನ	,,	0	0	13	11
ಚಿತ್ರದುರ್ಗ	,,	0	0	0	7
ಕಡೂರ್	,,	5	5	15	10
ಶಿವಮೊಗ್ಗ	,,	10	7	39	22
	ಜುಮ್ಲಾ	44	36	24'	160

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರದ ಚೈತ್ರ ಬಹುಳ ಅಮಾವಾಸ್ಯೆ ಗುರುವಾರದಿಂದ ವೈಶಾಖ ಶುದ್ಧ ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಮಾಸ
4	ಗುರು	ಅಮಾ	31 51	ಅ	60 0	22
5	ಶುಕ್ರ	ಪಾಡ್ಯ	38 15	ಭ	2 30	23
6	ಶನಿವಾ ‡	ಬಿದಿಗೆ	1 35	ಕೃ	7 17	24
7	ರವಿವಾ ,,	ತದಿಗೆ	13 ,	ರೋ	11 30	25
8	ಸೋಮ	ಚೌತಿ	13 22	ಮೃ	13 30	26
9	ಮಂಗ	ಪಂಚಮಿ	1 16	ಆ	1 11	27
10	ಬುಧ	ಷಷ್ಠಿ	10 18	ಪು	10 10	28

ಮೇಷೆ ಪಂಚಗ್ರಹಯೋಗ, ಕರಗದ ಅಮಾವಾಸ್ಯ
‡ ಚಂದ್ರೋದಯ ,, ಅಕ್ಷತ್ರಿತೀಯ, ಬಲರಾಮಜಯಂತಿ
ಮದ್ಗ್ಯೋಗ, ಶ್ರೀರಾಮಾನುಜಾಚಾರ್ಯರ ತಿರುನಕ್ಷತ್ರ

ಪೇಟೆ ಧಾರಣೆ.

ವಿಸಸಿ	ಮೈಸೂರು	ಬೆಂಗಳೂರು
ಕಳ್ಳೀ ಅಕ್ಕಿ ಪಲ್ಲ ೧ಕ್ಕೆ	೧೦ ೮	೧೦—೮—೦
ಕೆಂಬೂತಿ ಅಕ್ಕಿ ಅಗಲ	೧೧ ೪	೯—೮—೦
,, ಮಧ್ಯಮ	೯—೧೩—೦	೧೯—೦—೦
ಜಾಮಾಲೆ ಅಕ್ಕಿ	೯—೮—೦	೧೨—೮—೦
ಸಣ್ಣಕ್ಕಿ ಅವಲ	೯ ೦—೦	೧೪—೦—೦
,, ಮಧ್ಯಮ	೧೦ ೮ ೦	೧೨—೦—೦
ತೊಗರಿ ಬೇಳೆ ಪಲ್ಲ ೧ಕ್ಕೆ	೧೦ ೮ ೦	೧೨ ೦—೦
,, ಮಧ್ಯಮ	೧೧—೦—೦	೧೦—೮—೦
ಹೈಗ ರಾಗಿ ಪಲ್ಲ ೧ಕ್ಕೆ	೪ ೧೨—೯	೪—೬—೦
ಕಾರ್ರಾಗಿ	೪ ೧—೦	೪—೩—೦
ಜೋಳ	೪—೧೨—೦	೨—೦—೦
ಹಲಸಂದೆ ಪಲ್ಲ ೧ಕ್ಕೆ	೮—೧೨—೦	೯—೦—೦
ಬಿಳೀ ಅವರೆ	೬ ೧೨—೦	೨—೦—೦
ಹೆಸರು	೯ ೧೨—೦	೯—೦—೦
ಉದ್ದು	೮ ೦೪ ೯	೯—೪—೦
ಕಡಲೆ	೯ ೦—೦	೮—೦—೦
ಎಳ್ಳು	೧೬ ೦ ೦	೦೩—೫ ೪
ಹುರುಳಿ	೮—೦ ೦	೨—೧೧—೦
ಹರಳು ೧೨ ಸೇರಿಗೆ	೯—೮—೦	೭—೬—೨
ಬೆಲ್ಲೆಕಾಯಿ ಮಣ ೧ಕ್ಕೆ	೨—೪—೦	೨—೧೨—೦
ಮೆಣಸಿನಕಾಯಿ	೬—೮—೦	೪—೦—೦
,, ಮಧ್ಯಮ	೩—೧೨—೦	೩—೮—೦
ಬೆಲ್ಲ ದೊಡ್ಡ ಅಚ್ಚು	೭—೪—೦	೫ ೧ ೧೨ ೦
ಒಳ್ಳೆ ಮಣ ೧ಕ್ಕೆ	೬—೦ ೦	೪—೮—೦
ಸಕ್ಕರೆ ,,	೪—೦—೦	೪—೦—೦
ಕೊಬ್ಬರಿ ಪಲ್ಲ ೧ಕ್ಕೆ	೬—೦—೦	೭—೮—೦
ಉಪ್ಪು ,,	೮—೦—೦	೭—೦—೦
ಹುಣಸೇ ಹಣ್ಣು	೧ ೪—೦	೦—೧೪—೦
,, ಒಳೆಯ	೦—೧೪—೦	೦—೧೨—೦
ಹುಚ್ಚು	೧೨ ೦—೦	೧೦—೮—೦
ಸೀಮೆಯೆಣ್ಣೆ ಪಟ್ಟೆ ೧ಕ್ಕೆ	೫ ೩—೦	೪—೬—೦
ತೆಂಗಿನಕಾಯಿ ೧೦೦ ಕ್ಕೆ	೫—೦ ೦	೪—೦—೦
ಅಡಿಕೆಕಾಯಿ ಮಣ ೧ಕ್ಕೆ	೧—೦—೦	೦—೮—೦
ಅಂಟ್ಯೆಳೆಕಾಯಿ ಮಣ ೧ಕ್ಕೆ	೦—೧೪—೦	೧—೪—೦
ಹತ್ತಿ (ಹೇಗ) ಕೆಂಪು	೧೫—೮—೦	೧೫—೪—೦
,, ,, ಹಸಿರು	೦೫ ೦೦—೦	೧೫—೮—೦
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೨೪—೪—೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೧—೦—೦	೭೦—೧೨—೦

Printed and Published by the Rev H Sentner, B A the Proprietor and Manager, Wesleyan Mission Press Mysore 4/5/1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಮೇ ತಾರೀಖು ೧೧ ನೇ ಗುರುವಾರ. — ಸಂಚಿಕೆ ೬೯

"ವೃತ್ತಾಂತ ಪತ್ರಿಕೆ" ಚಂದಾಹಣವು

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . . ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್

ಸೇರಿ . . . . ರೂ ೧—೦೪—೦

" " " " ೦—೧೫—೦

ಚಂದಾದಾರರಾಗತಕ್ಕವರು ತಪ್ಪ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ರವಾನೆ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಹೊಸ ನೋಟ್ಸು

ಮೆಟ್ರಿಕ್ಯುಲೇಷನ್ ೫, ಒನೇ ಕನ್ನಡ ಪುಸ್ತಕಗಳಿಗೆ ೬ನೇ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನೆಸಹಿತ ಈ ನೋಟ್ಸನ್ನು ಬರೆದು ಅನೇಕ ವಿವರವಾದವಾಗ್ಯೂ ಇತರ ನೋಟ್ಸುಗಳ ಗಾತ್ರದಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ ೮ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಛಾಪೆ) ೦—೧—೦

೧ನೆ ತರಗತಿಯ ಪದ್ಯಸಂಗ್ರಹದ ನೋಟ್ಸು ೦—೧—೬

೧೯೦೪ನೆ ವರ್ಷದ ಲೋವರ್ ಸೆಕಂಡರಿ ನೋಟ್ಸು ೦ ೩—೦

ವಿಳಾಸ—ಯಸ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು

ಬಿ. ಕೆ. ಮೂರ್ತಿ ಕಂಪನಿ, ಬಳೇಪೇಟೆ, ಬೆಂಗಳೂರು ಸಿಟಿ.

೨ನೆ ಛಾಪೆ ಪ್ರಶ್ನೋತ್ತರಲೇಖ್ಯಬೋಧಿನಿ ಕ್ರಯ ಪ್ರತಿ ೧ಕ್ಕೆ ೧ ರೂ ೪ ಆಣೆ ಮಾತ್ರ ಸುಲಭ ಕ್ರಯ ಲಾಪ್ರಸ್ತಕವು ಗ್ರಂಥಕರ್ತರ ಸೇ ವೆಂಕಟ ಈಚಿನ ಸಹಾ ಇದೆ ಕ್ರಯ ೧ ರೂ ೪ ಆಣೆ ಮಾತ್ರ ೧ ಬೇಗ ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳೇ ಉಳಿದಿವೆ ಬಂಗಾಳಿ ಸುಗಂಧ ನಶ್ಯಪುಡಿ ಕ್ರಯ ಡಬ್ಬಿ ೧ಕ್ಕೆ ೪ ಆಣೆ ಮಾತ್ರ ಉಂಡೆ ತೋಲೆ ೧ಕ್ಕೆ ೩ ಆಣೆ ನೆಗಡಿ ಕಣ್ಣು ಉರಿ ಮುಂತಾದವುಗಳನ್ನು ಹೋಗಲಾಡಿಸಿ ಸದಾ ಸುವಾಸನೆ ಉಂಟು ಮಾಡುತ್ತೆ. ನೋಡಿರಿ ಪುಸ್ತಕ —ಕ್ರಯ ಪ್ರತಿ ೧ಕ್ಕೆ ೧ ರೂ ಮಾತ್ರ ವಿನ್ಯಾಸ ಇವನ್ನು ಸ್ತ್ರೀಯರ ಅಭಿವೃದ್ಧಿ ಹೊಂದತಕ್ಕ ಸಮಸ್ತ ಲೇಖಕರಿಗೂ, ಭಾವಿಕೋಗರಿಗೂ ಅತ್ಯಂತ ಉಪಯೋಗ ಹಸರ ಮಾಜಿ ಗಂಧ ತೊಲೆ ೧ಕ್ಕೆ ೨ ರೂ. ಲಂಗಾಯಿತು ೧ ರೂ ವರಿಗೆ ಇದೆ ಅತ್ತರ್ ಪುನುಗು ಪನ್ನೀರ ನೋಡಲಾದ ರಖಂ ಊದಬತ್ತಿ ಪಟ್ಟಿ ಸಹ ದೊರೆಯುತ್ತೆ. ಅಪೇಕ್ಷಿಸುವವರು ವಿ. ಪಿ. ಮೂಲಕ ತರಿಸಿಕೊಳ್ಳಿ

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಚಾರ್ಜಿಗೆ ಜಾಗ್ರತೆಯಲ್ಲಿ ಬಹಳ ಸಂತೃಪ್ತಿಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಇಂಗ್ಲಿಷ್—ಟೈಪ್ಸ್ ಮಿಸಿನ್, ಪ್ರೆಸ್, ರೂಲ್ಸ್ ಮೊದಲಾದವುಗಳೂ, ಬೈಂಡಿಂಗ್ ಸಾಮಾನುಗಳು ಸುಲಭ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಬಹಳ ಸುಂದರವಾದ ದಿನ ಉಪಯೋಗಕ್ಕೆ ಬರುವಪುಸ್ತಕಗಳೂ ಇರುತ್ತವೆ ಕೆಳಗಿನ ವಿಳಾಸಕ್ಕೆ ಬರೆದು ಕ್ರಯದ ಪಟ್ಟಿಯನ್ನು ಉಚಿತವಾಗಿ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,

ಮಿಷನ್ ಪ್ರೆಸ್, ಮೈಸೂರು.

ದಿ ಯೂಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಉಪವೃತ್ತಿ ಕಲ್ಪನಾಸಂಘ, ಚನ್ನಪಟ್ಟಣ.

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸ್‌ದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು ಸಾಮಾನ್ಯ ಉಪವೃತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತ ನಾಮನಿರ್ದೇಶಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಮ್ಯಾನೇಜರಿಗೆ ಬರೆದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು ಇಂಥಾ ಏಜಂಟರುಗಳಿಗೆ ಧಾರಾಳವಾಗಿ ಬಹುಮಾನ ಸಿಕ್ಕುತ್ತೆ.

ವಿಳಾಸ — ಆರ್. ಎಸ್. ವೆಂಕಟಂ, ಮ್ಯಾನೇಜರ್.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಪಚ್ಚ ಕರ್ಪೂರ ಕಸ್ತೂರಿಮಾತ್ರೆ

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವದು ಬೆಳಿಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುತ್ತವೆ ಇದರಲ್ಲಿ ಅಫೀಮು ಮುಂತಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಕೆ ಕಸ್ತೂರಿ, ಸುವರ್ಣ ಬರಕು ಮುಂತಾದ ಬೆಲೆಯುಳ್ಳವಸ್ತುಗಳು ಸೇರಿರುವುದರಿಂದ ಎಲ್ಲಾ ವಯಸ್ಸಿನವರಿಗೂ ಎಲ್ಲಾ ಕಾಲಗಳಲ್ಲಿಯೂ ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ಇದರ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು ಕ್ರಯ — ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾರ್ಜಿ ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ.—ಟಿ ಮಹಮದ್ ಸಮಾದಾನಿ

ಬಹುಕಾಲದಲ್ಲ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಹಲ್ಲು ತಲೆನೋವು, ಹಲ್ಲು ನೋವುಗಳು ನಿವಾರಣೆಯಾಗುತ್ತವೆ ಬೇರೆ ಔಷಧ ಅವಶ್ಯವಿಲ್ಲ.—ಡೆಪ್ಯುಟಿ ತಹಶೀಲ್ದಾರ್.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದ - ಪೃಥ್ವಿ ಪೊಲೀಸ್ ಇನ್ಸ್‌ಪೆಕ್ಟರ್.

ಸುಮಾರು ೩ನೆ ತಿಂಗಳಿನಿಂದ ಕಳುಹಿಸಿದ ಮಾತ್ರೆಗಳು ಅನೇಕರಿಗೆ ಬಹಳ ಪ್ರಯೋಜನವನ್ನುಂಟುಮಾಡಿರುತ್ತವೆ.—ಶ್ರೀ ಕೃಷ್ಣ ರಾವ್, ಟೆಲಿಗ್ರಾಫ್ ಡಿಪಾರ್ಟ್‌ಮೆಂಟ್, ಕ್ಲಾರ್ಕ್

Apply to —P. SUBBAROY, Porto Novo, South Arcot.

ವಿಳಾಸ.—ಪಿ. ಸುಬ್ಬರಾಯರ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಕಥಾಸಂಗ್ರಹ—ಮೊದಲನೆ ಭಾಗ.

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಮುದ್ರಿಯ ಕಥಾಸಂಗ್ರಹದಲ್ಲಿ ೧, ೨, ೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ವಾಕ್ಯರಚನೆಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವದು ಬೇಗ ಬರೆದು ತರಿಸಿಕೊಳ್ಳಿ. ಗಂಡುಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ.—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ತುಳಸೀ ರಾಮದಾಸ್ ಕಂಪನಿ

ಸಾಹುಕಾರ್ ಪೇಟೆ, ಮದರಾಸು.

ಸುವರ್ಣ ಚಿನ್ನದಿಂದಲು, ತಬ್ಬಿಕೆಂಪು ಮತ್ತು ಚಿನ್ನದಿಂದಲು ತಯಾರು ಮಾಡಿದ ಆಭರಣಗಳು ಗ್ಯಾರಂಟಿ ಬೀಟಿನೊಡನೆ ಕಳುಹಿಸುತ್ತೇವೆ. ಭಾಗ್ಯವಂತರಿಗೂ ಬಡವರಿಗೂ ಉಪಯೋಗವಾಗುವ ಹಾಗೆ ಅತ್ಯಂತ ಸುಲಭಕ್ರಯವನ್ನು ನಮೂದಿಸುವದರಿಂದ ಲಕ್ಷಾಂತರ ವಿಕ್ರಯವಾಗುತ್ತಲಿದೆ ಇತರರು ವ್ಯಾಪಾರಮಾಡಿ ದ್ರವ್ಯಾರ್ಜನೆ ಮಾಡುವದಕ್ಕೆ ಏನೇ ಒಳ್ಳೆ ತರಗತಿ ನಾವೆ ನಿಜವಾಗಿ ಹೇಳುತ್ತೇವೆ ನಮ್ಮ ಮಾತನ್ನು ಪರೀಕ್ಷಿಸುವದಕ್ಕಾಗಿ ಈ ಕೆಳಗೆ ಕಂಡ ಯಾವದಾದರು ಒಂದನ್ನು ತರಿಸಿ ಪರೀಕ್ಷಿಸಿರಿ.



೧. ಕೆಂಪು ಹರಳಿನ ಬೆಂಡೋಲೆ ಇದು ಮೇಲಾದ ೮ ಕೆಂಪುಗಳಿಂದಲೂ ಅಡಿಯ ಬಿಂದೆಯನ್ನು ತಂಬಾಕೆಂಪು ಮತ್ತು ಚಿನ್ನದಿಂದಲೂ ಕಟ್ಟಲ್ಪಟ್ಟಿರುತ್ತೆ. ನೋಡಿದವರು ಮಾತ್ರ ರೂಪಾಯಿನ ಬೆಂಡೋಲೆಯೆಂದು ಹೇಳುವರು. ನಮ್ಮಲ್ಲಿ ನಂಬಿಕೆಯನ್ನಿಟ್ಟು, ಮಾದರಿಗೆ ೧ ಜೊತೆ ತರಿಸಿ ನೋಡಿ ಆನಂದವನ್ನು ಹೊಂದಿರಿ ಪುನಃ ವಾಪಸ್ ಮಾಡಿದಾಗ್ಯೂ ಇದರ ಮೊಬಲಗನ್ನು ವಹಿಸಾವರ್ ಮಾಡುತ್ತೇವೆ ನೀವು ಎಷ್ಟು ಮೊದಲಿದ್ದು ತಗಲಿದರೂ ಎಷ್ಟು ವರುಷಗಳಾದರೂ ಕೆಡಲಾರದು ಬೆಲೆ ಜೊತೆ ೧ಕ್ಕೆ ರೂ. ೮

೨. ಥಳುಕುಪಟಿಕವನ್ನು ಹಾಕಿ ಅಚ್ಚ ಸುವರ್ಣ ಚಿನ್ನದಿಂದ ಕಟ್ಟಲ್ಪಟ್ಟ ಮೂಗುಬಟ್ಟು ಬೆಲೆ ರೂ ೮ ೧—೦. ಇದು ಅನೇಕ ವರುಷಗಳು ಉಪಯೋಗಿಸಿ ವಿಕ್ರಯಿಸಿದರೂ ಚಿನ್ನದ ಬೆಲೆಯೂ ಥಳುಕುಪಟಿಕದ ಬೆಲೆಯೂ ಹೋಗಲಾರದು. ಬಹಳ ಮೋಟದನ್ನು

೩. ಅಚ್ಚ ಕೆಂಪಿನಿಂದಲೂ, ಸ್ವರ್ಣ ಚಿನ್ನದಿಂದಲೂ ಕಟ್ಟಿದ ಮೂಗಬಟ್ಟು, ೧ಕ್ಕೆ ಕ್ರಯ ರೂ ೨



೪ ತಂಬಾಕೆಂ. ಚಿನ್ನದಿಂದಲು, ಥಳುಕುಪಟಿಕದಿಂದಲು ಕಟ್ಟಲ್ಪಟ್ಟ ಮೇಲಿಂದ ಹತ್ತು ಕಮಲು ಕ್ರಯ ಜೊತೆ ೧ಕ್ಕೆ ರೂ. ೪

೫ ಕೆಳಭಾಗ ಅಚ್ಚ ಚಿನ್ನದಿಂದಲ, ಬೆಳ್ಳಿ ಜವೆಯಿಂದಲು ಕಟ್ಟಲ್ಪಟ್ಟ ಥಳುಕುಪಟಿಕದ ಹತ್ತು ಕಡುಕು ಕ್ರಯ ರೂ ೨.

೬ ತಂಬಾಕೆಂದ ಕಟ್ಟಲ್ಪಟ್ಟ ಥಳುಕುಪಟಿಕದ ೩ ಕಲ್ಲುಗಳುಳ್ಳ ಬುಲಾಕು ೧ಕ್ಕೆ ಕ್ರಯ ರೂ ೩.



೭ ೧೪ ಕ್ಯಾರೆಟ್ ಉಳ್ಳ ಚಿನ್ನದಿಂದಲು ಸುತ್ತಲು ೩ ಸೀಮೆ ಕಲ್ಲುಗಳಿಂದಲು ಕಟ್ಟಲ್ಪಟ್ಟ ಬಹಳ ನಾಜೂಕಾದ ಉಂಗರ ಎಷ್ಟು ವರುಷಗಳಾದರೂ ಕೆಡಲಾರದು. ಇದರ ಕ್ರಯ ರೂ. ೨—೦—೦.

ಮೆ|| ಇ. ಮಾರ್ಸ್‌ಡನ್‌ರವರ ಕನ್ನಡ ಐದನೆಯ ಪುಸ್ತಕದ
ಅತ್ಯುತ್ತಮವಾದ ನೋಟ್ಸು.

೪

ನಾಲ್ಕನೆ ತರಗತಿ ವಿದ್ಯಾರ್ಥಿಗಳಿಗೆ ಅನೇಕ ಹೊಸಸಂಗತಿಗಳು ಬೋಧೆಯಾಗುವಂತೆ ರಚಿಸಲ್ಪಟ್ಟದೆ ಈಗ ಬಿಕರಿಗೆ ಸಿದ್ಧವಾಗಿರುವುದು ಕ್ರಯ ೪ ಆಣೆ ೧ಂಕ್ಕೆ ಒಂದು ಡಿಸ್ಕೌಂಟು. ವಿಳಾಸ— ಕಾರ್ಕಾರ್ಹಳ್ಳಿ ನಾರಾಯಣಶಾಸ್ತ್ರಿ, ಕನ್ನಡ ಪಂಡಿತ, ಅ. ವಾ ಗೌರ್ನಮೆಂಟ್ ಕನ್ನಡಾ ಸ್ಕೂಲು, ಮೈಸೂರು

ಸುಲಭಕ್ರಯ: ಸುಗಂಧದ್ರವ್ಯಗಳು.

೨೨

ಅಂಬರ್ ಕಡ್ಡಿ ಕೇರು ೧ಕ್ಕೆ ..	೫—೦—೦
ವಸಂತಕುಸುಮಾಕರವರ್ತಿ ..	೪—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೪—೦
ಘಮಗು ಕಡ್ಡಿ ,, ೧ಕ್ಕೆ	೧—೪—೦
ಮಸಾಲಾ ಕಡ್ಡಿ ,, ೧ಕ್ಕೆ ..	೦—೧೦—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಹಳೀ ಗಂಧ ತೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ ..	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ ಮದಕಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ ..	೦—೪—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ	೦—೬—೦
ಟಾಯ್ ಪೌಡರ್ ಡಬ್ಬಿ ೧ಕ್ಕೆ .	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ತಂಬಾಕ್ ಪೋಕ್ ಡಬ್ಬಿ ೧ಕ್ಕೆ ..	೦—೨—೦
ಕೃಪಮೈಸೂರ ಬಾಕ್ಸ್ ಯ ದಶಾಂಗ ಕೇರು ೧ಕ್ಕೆ	೦—೧೨—೦
ಫಿತ್ನಾ ತೋಲ ೧ಕ್ಕೆ ..	೨—೦—೦
ಡಿಟೋ	೧—೦—೦
ಅಭ್ಯಂಗಚೂರ್ಣ ಡಬ್ಬ ೧ಕ್ಕೆ	೦—೦—೬
ವಸಂತಮಾನೀಯ ಘುಟಿಕಾ ೧೦೦ಕ್ಕೆ ..	೭—೦—೦

ಇನ್ನೂ ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ ಜಟ್ಟಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ ವಿಳಾಸ ಎಸ್. ಎಲ್. ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

೧೯



ಈ ಔಷಧವು ಪ್ರತಿ ಮನೆಯವರಿಗೂ ಅಗತ್ಯ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು ಶರೀರಕ್ಕೆ ಮೂಗು ಏಟು ಬಿದ್ದರೂ ಜೋರಿಯಂತ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರನೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು ಕ್ರಯ ಬಾಟ್ಲಿ ೧ಕ್ಕೆ ೧ ರೂ , ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರುತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್

ವೃತ್ತಾಂತ ಪತ್ರಿಕೆ.

ಸ ೧೯೦೫ ನೇ ಇಸವಿ ಮೇ ತಾ|| ೧೧ ನೇ ಗುರುವಾರ

ಹೊಸ ಶೇಕ್ದಾರಿಸ್ತು

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದ ಶೇಕ್ದಾರಿ ಎಂಬ ನೌಕರಿಗೆ ವಿದ್ಯಾವಂತರಾಗಿಯೂ ರೆವಿನ್ಯೂ ಸರ್ವೆ ಮೊದಲಾದ ಕಾನೂನು ತಿಳಿದವರಾಗಿಯೂ ಕಾರ್ಯದಕ್ಷರಾಗಿಯೂ ಇರುವಂಥಾವರನ್ನೇ ಸೇರಿಸಿಕೊಳ್ಳಬೇಕೆಂತಲೂ ಇದ ವರೆಗ ಇದ್ದ ಶೇಕ್ದಾರಿ ಫಿರ್ಕಾಗಳನ್ನು ಬದಲಾವಣೆ ಮಾಡಬೇಕೆಂತಲೂ ಕೆಲವು ರೂಲಸು ಮಾಡಿ ಜಾರಿಗೆ ತಂದಿರುತ್ತಾರೆ ಈ ರೂಲಿಸಿನ ಪ್ರಕಾರ ಕೆಲವು ಡಿಸ್ಟ್ರಿಕ್ಟುಗಳ ಶೇಕದಾರಿ ಫಿರ್ಕಾಗಳನ್ನು ಬದಲಾಯಿಸಿ, ಒಂದೊಂದು ಫಿರ್ಕಾಕ್ಕೆ ೩೫ ರಿಂದ ೬೦ ಗ್ರಾಮಗಳ ತನಕ ಸೇರಿಸಿ, ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಕೆಲವು ಕಡೆ ಈ ರೂಲಸನ್ನು ಜಾರಿಗೆ ತಂದು, ಹಿಂದೆ ಇದ್ದ ಶೇಕ್ದಾರರುಗಳನ್ನು ತೆಗೆದುಹಾಕಿ, ಹೊಸ ಫಿರ್ಕಾಗಳಿಗೆ ಹೊಸ ನೌಕರರು ದೊರಕದೆ ಇರೋಂದರಿಂದ ಹಳಬರನ್ನೇ ನೇಮಕಮಾಡಿದಾರೆ. ಈ ಹಳಬರಾದ ಶೇಕ್ದಾರರಿಗೆ ಈಗಿನ ಹೊಸರೂಲಿಸಿನಂತೆ ಸಂಬಳವಾಗಲಿ ಕುದುರೆ ಅಲೋವೆನ್ಸಾಗಲಿ ದೊರೆತಿಲ್ಲ ಆದರೆ ಅವರ ಕೆಲಸದ ಜವಾಬ್ದಾರಿಯೂ ಸುತ್ತಬೇಕಾದ ಗ್ರಾಮಗಳ ಸಂಖ್ಯೆಯೂ ಬದಲಾಗಿರುತ್ತವೆ ಇದರಿಂದ ಕೆಲಸವೂ ಕಾಗದ ಪತ್ರಗಳ ಇತ್ಯರ್ಥವೂ ನಿಧಾನವಾಗುವುದೆಂದು ನಿರಾತಂಕವಾಗಿ ಹೇಳಬಹುದು. ಹೊಸ ರೂಲಸು ಪ್ರಕಾರ ಯೋಗ್ಯತಾ ಸಿದ್ಧಿಯನ್ನು ಪಡೆದಿರುವವರು ಸಿಕ್ಕುವ ತನಕ ಮೊದಲಿದ್ದ ಏರ್ಪಾಡನ್ನೇ ಇಟ್ಟು, ಹೊಸಬರು ದೊರೆತ ಹಾಗೆಲ್ಲಾ ಹಳಬರನ್ನು ತೆಗೆದುಹಾಕುತ್ತಾ ಬಂದಿದ್ದರೆ ಸಮರ್ಪಕವಾಗಿತ್ತು. ಆದರೆ ಹೊಸಬರು ಸಿಕ್ಕುವುದಕ್ಕೆ ಮೊದಲೇ ಹಳಬರನ್ನು ಕಿತ್ತುಹಾಕಿದ್ದರಿಂದ ಇವರ ಜೀವನಕ್ಕೂ ಸರ್ಕಾರಿ ಕೆಲಸಕ್ಕೂ ತುಂಬಾ ಕಷ್ಟನಷ್ಟಗಳನ್ನು ತಂದಿಟ್ಟುಕೊಂಡಂತಾಗಿದೆ. ಹತ್ತಾರು ಗ್ರಾಮಗಳ ಶೇಕ್ದಾರರಿಂದಲೇ ತೃಪ್ತಿಕರವಾಗಿ ಸಾಗದೆ ಇದ್ದ ಕೆಲಸಕಾರ್ಯಗಳು ೪೦–೫೦–೬೦ ಗ್ರಾಮಗಳ ಶೇಕ್ದಾರನಿಂದ ಎಷ್ಟುಮಟ್ಟಿಗೆ ತೃಪ್ತಿಕರವಾಗಿ ನಡೆಯಬಹುದೋ ನಾವರಿಯೆವು. ಈ ವಿಷಯಗಳನ್ನೆಲ್ಲಾ ಸರ್ಕಾರದವರು ಗಮನಕೊಟ್ಟು, ಸರಿಯಾದ ಏರ್ಪಾಡು ಮಾಡುವರೆಂದು ನಿರೀಕ್ಷಿಸುತ್ತೇವೆ.

ಪೋಲೀಸ್ ಇಲಾಖೆಯು

೧೯೦೪ನೆ ಇಸವಿ ಜೂನ್ ಆಖೈರ್ ವರಗೆ ನಡೆದ ಒಂದು ವರುಷದಲ್ಲಿ ಮೈಸೂರು ಸಂಸ್ಥಾನದ ಪೋಲೀಸ್ ಇಲಾಖೆಯವರು ನಡಿಸಿರುವ ಕಾರ್ಯಗಳನ್ನು ಕುರಿತು ಗವರ್ನಮೆಂಟಿನವರು ಬರೆಯುವುದೇನಂದರೆ—ಆ ವರುಷ ೨,೫೬೩ ಕ್ರಿಮಿನಲ್ ಮೊಕದ್ದಮೆ ನಡೆದವು, ೨,೦೯,೧೦೪ ರೂಪಾಯಿನ ಮಾಲುಗಳು ಕಳುವು ಹೋದವು ಈ ಪೈಕಿ ೮೬,೬೩೩ ರೂಪಾಯಿನಷ್ಟು ಮಾತ್ರ ಸಿಕ್ಕಿತು. ಕಳ್ಳರು, ಕೊಲೆಗಾರರು, ಮುಂತಾದವರು ೨,೫೫೬ ಮಂದಿ ಮಾತ್ರ ಅಪರಾಧಗಳಲ್ಲಿ ಸಿಕ್ಕಿ ಶಿಕ್ಷಿಸಲ್ಪಟ್ಟರು. ಇದರಿಂದ ಈ ಇಲಾಖೆಯ ಮಹತ್ಕಾರ್ಯಗಳನ್ನು ತಿಳಿಯುತ್ತಲೂ, ಸ್ವಲ್ಪವಾದರೂ ಮೊದಲಾದ ಕಳವುಗಳನ್ನು ಅವಲಂಬಿಸಿಕೊಳ್ಳುತ್ತಲೂ ಇದ್ದಾರೆಂದು ತಿಳಿದು ಸಂತೋಷಪಡಬೇಕಾಗಿದೆ.

೧೯೦೩ನೆ ಸಾಲಿನಲ್ಲಿ ಈ ಸಂಸ್ಥಾನದಲ್ಲಿ ಬಾಲ್ಯವಿವಾಹದ ಕಾನೂನಿಗೆ ವಿರೋಧವಾಗಿ ೧೩ ವಿವಾಹಗಳು ಮಾತ್ರ ನಡೆದಿದ್ದವು. ೧೯೦೪ನೆ ಸಾಲಿನಲ್ಲಿ ೨೯ ಮೊಕದ್ದಮೆಗಳು ಬಂದವು. ಈ ಪೈಕಿ ೧೩ ಮೊಕದ್ದಮೆಗಳಲ್ಲಿ ಬಾಲ್ಯವಿವಾಹ ನಡಿಸಿದ್ದರ ಅಪರಾಧ ರುಜುವಾತಾಗಿ ೫೩ ಜನರಿಗೆ ಶಿಕ್ಷೆ ಮಾಡಲ್ಪಟ್ಟಿದೆ. ಈ ಬಾಲ್ಯವಿವಾಹಗಳ ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಬಹಳ ಅಲ್ಪ ಶಿಕ್ಷೆಯನ್ನು ವಿಧಿಸುವುದೇ ಆ ವಿವಾಹಗಳು ಹೆಚ್ಚುವುದಕ್ಕೆ ಕಾರಣವೆಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರು ಹೇಳುವುದನ್ನು ಗವರ್ನಮೆಂಟಿನವರು ಒಪ್ಪಿಕೊಳ್ಳುತ್ತಾರೆ. ಸುಮ್ಮನೆ ನಾಲ್ಕಾರು ರೂಪಾಯಿ ಜುಲ್ಮಾನೆಯನ್ನು ಮಾತ್ರ ವಿಧಿಸುವುದರಿಂದ ಜನರಲ್ಲಿ ಆ ಕಾನೂನಿನ ಭೀತಿಯುಂಟಾಗಲಾರದು ಆದರೂ ಒಂದೆರಡು ಬಾಲ್ಯವಿವಾಹದ ಮೊಕದ್ದಮೆಗಳಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಪರಾಧಿಗಳಿಗೆ ಕೊಟ್ಟಿರುವ ಶಿಕ್ಷೆ ಸಾಲದೆಂದು ಗವರ್ನಮೆಂಟಿನವರೇ ಆಕ್ಷೇಪಣೆ ಮಾಡಿರುತ್ತಾರೆ ಇಂಥಾದ್ದರಲ್ಲಿ ಬಾಲ್ಯ ವಿವಾಹಗಳನ್ನು ನಡಿಸುವವರಿಗೆ ಭಾರೀ ಜುಲ್ಮಾನೆಯನ್ನೋ ಇಲ್ಲವೇ ಕೆಲವು ದಿನಗಳ ಸಾದಾ ಸಜವನ್ನೋ ವಿಧಿಸುವಂತೆ ಯಾಕೆ ಆಗಬಾರದೋ ಗೊತ್ತಾಗುವುದಿಲ್ಲ

ಮೈಸೂರು ಸಂಸ್ಥಾನದಲ್ಲಿ ೧೯೦ ಮಂದಿ ಪೋಲೀಸ್ ಆಫೀಸರುಗಳೂ ೪,೩೩೯ ಮಂದಿ ಪೋಲೀಸ್ ಕಾನ್ಸ್ಟೇಬಲರೂ ಇರುತ್ತಾರೆ. ಈ ಪೈಕಿ ೨೦ ಮಂದಿ ಆಫೀಸರುಗಳಿಗೂ ೨,೪೫೧ ಮಂದಿ ಕಾನ್ಸ್ಟೇಬಲುಗಳಿಗೂ ವಿದ್ಯೆ ಇಲ್ಲವೆಂದು ತಿಳಿದುಬರುವುದು ಇದು ತುಂಬಾ ದುಃಖಕರವಾದ ವಿಷಯವಾಗಿದೆ ಪ್ರಜಾಸಮ್ಮತಿಯನ್ನು ಕಾಪಾಡುವವರಲ್ಲಿ ವಿದ್ಯೆ ಬುದ್ಧಿ ವಿವೇಕಗಳನ್ನು ಪಡೆದಿರುವ ನೌಕರರೇ ಅನೇಕ ವೇಳೆ ನಾನಾ ತಪ್ಪುಗಳನ್ನು ಮಾಡಿ, ಪ್ರಜಾಕಂಟಕರಾಗಿರುವುದೂ ಉಂಟು. ಇಂಥಾದ್ದರಲ್ಲಿ ಮೂರ್ಖರಾಗಿರುವ ಪೋಲೀಸಿನವರು ಗ್ರಾಮಾಂತರಗಳಲ್ಲಿ ಎಂಥಾ ಕಾರ್ಯಗಳನ್ನು ನಡಿಸಬಹುದೋ ಹೇಳಲಾಗುವುದಿಲ್ಲ. ಅಕ್ಷರಸ್ಥರಾಗಿಯೂ ಪ್ರಜೆಗಳಲ್ಲಿ ನಂಬುಗೆಯನ್ನೂ ಪ್ರೀತಿಯನ್ನೂ ಸಂಪಾದಿಸಿಕೊಂಡವರಾಗಿಯೂ ಇರುವಂಥಾ ಜನರನ್ನೇ ಪೋಲೀಸ್ ಇಲಾಖೆಗೆ ಸೇರಿಸಿಕೊಳ್ಳುತ್ತಾರೆಂದು ಸರ್ಕಾರದವರಿಗೆ ತಿಳಿಸಬೇಕಾಗಿಲ್ಲ. ಪರಂತು ಸರ್ಕಾರದವರೇ ಈ ಇಲಾಖೆಯಲ್ಲಿ ವಿದ್ಯಾಹೀನರ ಸಂಖ್ಯೆಯನ್ನು ಕಡಮೆಮಾಡಬೇಕೆಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ತಿಳಿಸಿದಾರೆ. ಬೆಂಗಳೂರಿನಲ್ಲಿ ಪೋಲೀಸ್ ಸ್ಕೂಲನ್ನು ೧೯೦೧ ರಲ್ಲಿ ಮುಚ್ಚಿ, ಪುನಃ ೧೯೦೪ ನೆ ಇಸವಿಯಲ್ಲಿ ತೆರೆಸಿದರು. ಈ ಸ್ಕೂಲಿನಲ್ಲಿ ೧೨ ಮಂದಿ ಇನ್ಸ್‌ಪೆಕ್ಟರ್ ಪರೀಕ್ಷೆಯಲ್ಲಿಯೂ ೧೫ ಮಂದಿ ಸ್ಟೇಷನ್ ಹೌಸ್ ಆಫೀಸರ್ (ಪಿಸ್ಕಾಲು) ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿರುತ್ತಾರೆ ಇದುವರೆಗೆ ಈ ಸ್ಕೂಲಿನಲ್ಲಿ ತೇರ್ಗಡೆ ಹೊಂದಿರುವವರಿಗೆಲ್ಲಾ ಸರ್ಕಾರದವರು ಪೋಲೀಸ್ ಇಲಾಖೆಯಲ್ಲಿ ಕೆಲಸಗಳನ್ನು ಕೊಟ್ಟಿರುವರೆ ಕಾಣುವುದು ಬಾರೀ ಬೇಕಾದ ಸಂತೋಷ ... ರಾದವರಿಗೇ ಕೆಲಸ ಸಿಕ್ಕೀತೆಂದು ನಿರೀಕ್ಷಿಸಿಕೊಳ್ಳುವ ಇಲ್ಲವಾದರೆ ಈ ಸ್ಕೂಲಿಗೆ ಸರ್ಕಾರದವರು ... ಸಾರ್ಥಕವಾಗಿಸಿಕೊಳ್ಳುವುದಿಲ್ಲ ಅಲ್ಲಿ ಓದಿ ತೇರ್ಗಡೆ ಹೊಂದಿದವರಿಗೂ ಉತ್ತರರಿಗೂ ಯಾವ ಪ್ರೋತ್ಸಾಹವೂ ಆಗುವುದಿಲ್ಲ

ಮೈಸೂರು ಸರ್ಕಾರದವರು ಪೋಲೀಸ ಇಲಾಖೆಗಾಗಿ ೧೯೦೪ನೆ ಸಾಲಿನಲ್ಲಿ ೯,೭೪,೦೫೨ ರೂಪಾಯಿ ಖರ್ಚುಮಾಡಿದರು; ಅಂದರೆ, ಹಿಂದಿನ ಸಾಲಿನ ಖರ್ಚಿಗಿಂತಲೂ ೩೩೭೨ ರೂಪಾಯಿ ಕಡಿಮೆ. ಅಪರಾಧಿಗಳನ್ನು ಪತ್ತೆಮಾಡಿ ಹಿಡಿಯುವುದರಲ್ಲಿ ತುಂಬಾ ಸಾಹಸಪಟ್ಟ ಪೋಲೀಸ್ ನೌಕರರಿಗೆ ಸರ್ಕಾರದವರು ೧,೭೯೯ ರೂಪಾಯಿ ಬಹುಮಾನ ಕೊಡಿಸಿರುತ್ತಾರೆ ಇದರಿಂದ ಪೋಲೀಸ್ ಇಲಾಖೆಯ ನೌಕರರಿಗೆ ತುಂಬಾ ಪ್ರೋತ್ಸಾಹವಾಗುವುದಕ್ಕೆ ಸಂದೇಹವಿಲ್ಲ ಆದರೂ ಸರ್ಕಾರದವರು ಈ ಇಲಾಖೆಯೊಳಗೇ ಪ್ರಜಾಸಮ್ಮತಿಯನ್ನು ಕಾಪಾಡಬೇಕಾಗಿರುವುದರಿಂದ ಅಲ್ಪ ನೌಕರರಾದ ಕಾನ್ಸ್ಟೇಬಲ್ ಮೊದಲಾದವರ ಸಂಬಳದ ದರಗಳನ್ನು ಹೆಚ್ಚಿಸಿ, ಒಳ್ಳೆಯವರು ಬಂದು ಸೇರುವುದಕ್ಕೆ ಪ್ರೋತ್ಸಾಹವಾಗುವಂತೆ ಅವಕಾಶ ಮಾಡಿಕೊಡಬೇಕು. ಈಗ ಅವರು ಕೊಡತಕ್ಕ ಸಂಬಳಗಳು ನೌಕರರ ಜೀವನಕ್ಕೂ ಬಟ್ಟೆಬರೆಗಳಿಗೂ ಕಷ್ಟಸುಖಕ್ಕೂ ಸಾಕಾಗುವುದಿಲ್ಲವೆನ್ನುವುದು ನಿರಾಕ್ಷೇಪಣೀಯವಾಗಿದೆ

ಒಳದೇಶದ ವೃತ್ತಾಂತಗಳು.

ಈ ತಿಂಗಳ ಕಡೇ ವಾರದಲ್ಲಿ ಶ್ರೀಮನ್ಮಹಾರಾಜರವರು ಮಹಾ ಮಾತೃಶ್ರೀಯವರ ಸಹಿತ ನೀಲಗಿರಿಯಿಂದ ರಾಜಧಾನಿಗೆ ಚಿತ್ತೈಸುವರೆಂದು ಕೇಳುತ್ತೇವೆ

*****

ಪ್ರಿನ್ಸ್ ಆಫ್ ವೇಲ್ಸರವರನ್ನು ಸತ್ಕರಿಸುವುದಕ್ಕಾಗಿ ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯವರು ೯,೦೦೦ ರೂ ಚಂದಾ ಕೊಟ್ಟು ಪ್ರಜೆಗಳಿಂದ ಹಣ ಕೂಡಿಸುತ್ತಿದ್ದಾರೆ.

*****

ಒಕ್ಕಲಿಗ ನಂಜೊಟ್ಟಿ ಕೊಂಚರವನೂ ಅವನ ಹೆಂಡತಿಯೂ ಖೋಟಾನಾಣ್ಯಗಳನ್ನು ಮಾಡಿ ಚಲಾವಣೆ ಮಾಡಿದ್ದಕ್ಕೆ ಅವರಿಬ್ಬರಿಗೂ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ನಾಲ್ಕು ವರುಷ ಕಠಿಣ ಸಜಾ ಆಗಿದೆ.

*****

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ|| ಎಫ್. ಇ. ಓ ಕಾರ್ ರವರು ಈ ತಿಂಗಳ ೧೯ ನೇ ತಾರೀಖಿನಿಂದ ಒಂದು ವರುಷ ರಜಾ ಪಡೆದು ಸೀಮೆಗೆ ಹೋಗುವವರಾಗಿದ್ದಾರೆ. ಕರ್ನಲ್ ಮೆ|| ಸಿ. ಮಾಪಯ್ಯನವರೇ ಪೋಲೀಸ್ ಅಧಿಕಾರವನ್ನೂ ವಹಿಸುವರು.

ಕೋಲಾರ್ ಚಿನ್ನದ ಗಣಿಗಳ ಕಂಪನಿಯವರು ತೆಗೆದು ಕಳುಹಿಸಿದ ಅದಾಯದ ಚಿನ್ನವು ಕಳುವಾಯಿತಷ್ಟೆ. ಈ ಮೊಕದ್ದಮೆಯನ್ನು ಧರ್ಮಾರ್ಥ ಮಾಡುವುದಕ್ಕೆ ಮೆ॥ ಸುಬ್ರಾಯ ಐಯರವರು ಅಲ್ಲಿಗೆ ಹೋಗಿರು. ನೆನ್ನೆ ಸೋಮವಾರ ಶುರುವಾದ ಪ್ರಾರಂಭವಾಯಿತು ಮುಂದಿನ ವಾರ ತೀರ್ಮಾನ ಗೊತ್ತಾಗುವುದು

* * * *

ಮದರಾಸ್ ಪಟ್ಟಣದ ಓಕ್ಸ್ ಕಂಪನಿಯಲ್ಲಿರುವ ಮೆ॥ ಯೇಟ್ಸ್ ಎಂಬ ಸಾಹೇಬರನ್ನು ಮೈಸೂರು ಸರ್ಕಾರದವರು ಬೆಂಗಳೂರಿನಲ್ಲಿರುವ ಸರ್ಕಾರಿ ಪ್ರಿಂಟಿಂಗ್ ಆಫೀಸಿಗೆ ಸೂಪರಿಂಟೆಂಡೆಂಟರಾಗಿ ನೇಮಿಸಿಕೊಳ್ಳಬೇಕೆಂದು ಗೊತ್ತುಮಾಡಿ, ಇದಕ್ಕೆ ಇಂಡಿಯಾ ಗವರ್ನಮೆಂಟಿನವರ ಅನುಮತಿಯನ್ನು ಕೇಳಿದ್ದರು. ಗವರ್ನಮೆಂಟಿನವರು ನೇಮಿಸಿಕೊಳ್ಳಬಹುದೆಂದು ಸ್ವೀಕರಿಸಿದ್ದಾರೆ ಅವರ ಸಂಬಳ ತಿಂಗಳಿಗೆ ೬೫೦ ರೂ ನೋಕರಾಗಿದೆ

* * * *

ಶ್ರೀಮನ್ಮಹಾರಾಜರವರು ನೀಲಗಿರಿ ಬೆಟ್ಟದ ಮೇಲೆ ಫರ್ನ್ ಹಿಲ್ ಎಂಬ ತಮ್ಮ ಅರಮನೆಯಲ್ಲಿ ತಾ. ೧೯ನೇ ಶುಕ್ರವಾರ ಯೂರೋಪಿಯನ್ ಸರದಾರರಿಗೆಲ್ಲಾ ಭಾರೀ ಔತಣವನ್ನು ಮಾಡಿಸುವರು ಇದಕ್ಕಾಗಿ ಒಂದು ದಿವಾನ್ ಖಾನೆಯನ್ನು ೬೦—೭೦ ಸಹಸ್ರ ರೂಪಾಯಿ ಮುಟ್ಟಿಸಿ, ಈಗ ತಾನೇ ಪೂರೈಸಿರುತ್ತಾರೆ. ಈ ಔತಣದ ಏರ್ಪಾಡಿಗೋಸ್ಕರ ಶ್ರೀಮನ್ಮಹಾರಾಜರವರು ಕರ್ನಲ್ ಜೋನ್ಸ್ ಯವರನ್ನು ಬೆಂಗಳೂರಿನಿಂದಲೂ ಗವರ್ನಮೆಂಟ್ ಹೌಸ್ ಸೂಪರಿಂಟೆಂಡರನ್ನು ಮೈಸೂರಿನಿಂದಲೂ ಕರೆಸಿಕೊಂಡಿದ್ದಾರೆ.

ಮೈಸೂರು ಗಜೆಟ್ ಸಂಗ್ರಹ.

ಬೆಂಗಳೂರು ಸಿಟಿಯಲ್ಲಿ ಸರ್ಕಾರಿ ಆಫೀಸಿನಲ್ಲಿ ದಸ್ತಾವೇಜು ಮಾಡಿಕೊಳ್ಳುವುದಕ್ಕೆ ಸಿಟಿ ಮ್ಯಾಜಿಸ್ಟ್ರೇಟರಿಗೆ ಡೆಪ್ಯುಟಿ ಕಮಿಷನರ ಅಧಿಕಾರಗಳು ಕೊಡಲ್ಪಟ್ಟಿವೆ.

ತುಮಕೂರು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಪಿ ನಾರಾಯಣರಾಯರಿಗೆ ಅವರು ಧರ್ಮಾರ್ಥ ಮಾಡುವ ಮೊಕದ್ದಮೆಗಳಲ್ಲಿ ಕೈಫಿಯತ್ತುಗಳನ್ನು ಸ್ವಹಸ್ತದಲ್ಲಿ ಇಂಗ್ಲೀಷಿನಲ್ಲಿ ಬರೆದುಕೊಳ್ಳುವ ಅಧಿಕಾರ ಕೊಟ್ಟಿದೆ.

ನೊ ರೀಬಿಸನೂರು ತಾಲ್ಲೂಕು ಅಮಲ್ದಾರ್ ಮೆ॥ ಡಿ. ಸುಬ್ಬರಾಯರಿಗೆ ಕೊಟ್ಟಿದ್ದ ಐವತ್ತು ದಿನಗಳ ಪ್ರಿವಿಲೆಜ ರಜವನ್ನು ಇನ್ನೂ ಹತ್ತು ದಿನ ಜಾಸ್ತಿ ಮಾಡಿದೆ

ಚನ್ನಪಟ್ಟಣದ ತಾಲ್ಲೂಕು ಅಮಲ್ದಾರ್ ಮೆ॥ ಪಿ. ರಾಮಚಂದ್ರರಾಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ವಾರ ಜಾಸ್ತಿ ಮಾಡಿದೆ

ಏಕ್ಸ್ಟ್ರಾ ಅ॥ ಕಮಿಷನರ್ ಮೆ॥ ಎ ಅನಂತರಾಯರಿಗೆ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಅನೇಕಲ್ ತಾಲ್ಲೂಕು ಅಮಲ್ದಾರ್ ಮೆ॥ ಟ ರಾಮಚಂದ್ರರಾಯರಿಗೆ ಒಂದು ವಾರದ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಗೌರ್ನಮೆಂಟ್ ಅ. ಅ॥ ಸೆಕ್ರೆಟರಿ ಮೆ॥ ಟ ಸತ್ಯರಾಜಚೆಟ್ಟಿಯವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ದಿನ ಜಾಸ್ತಿ ಮಾಡಿದೆ

ರೆವಿನ್ಯೂ ಪ್ರೊಬೇಷನರ್ ಮೆ॥ ಎನ್. ರಾಮರಾಯರು ಯಡತೊರೆ ತಾಲ್ಲೂಕ್ ಛಾರ್ಜನ್ನು ವಹಿಸಿಕೊಂಡ ಬಾಗಾಯಿತು ಅವರನ್ನು ಅಮಲ್ದಾರರನ್ನಾಗಿ ನೇಮಿಸಿದಂತೆ ಎಣಿಸತಕ್ಕದ್ದು.

ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆ॥ ಜಿ ಜೆ. ಮಾಂಟರೋ ಯವರನ್ನು ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಫಾರೆಸ್ಟರನ್ನಾಗಿ ನೇಮಕಮಾಡಿದೆ.

ಮೈಸೂರು ಲೋಕಲ್ ಸರ್ವಿಸ್ ರಿಜಿಮೆಂಟಿನ ಕಮಿಷನ್ಡ ದರ್ಜೆಯಲ್ಲಿ ಮುಂದೆ ಹೇಳುವ ಬಡ್ತಿಗಳು ಮಾರ್ಚಿ ೨೫ ರಿಂದ ಜಾರಿಗೆ ಬರತಕ್ಕದ್ದೆಂದು ಹುಕುಂ ಮಾಡಿದೆ —ಜಮೆದಾರ್ ಖಾಜಾ ಹುಸೇನ್ ಯವರನ್ನು ೩ನೇ ಗ್ರೇಡಿಗೆ, ಜಮಾದಾರ್ ಶಂಕರರಾಯರನ್ನು ೨ನೇ ಗ್ರೇಡಿಗೆ, ಜಮಾದಾರ್ ಮಹಮದ್ ನಸೀರು ದ್ದೀನರವರನ್ನು ೧ನೇ ಗ್ರೇಡಿಗೆ.

ನಮ್ಮ ಪುಸ್ತಕ ಭಂಡಾರವು.

"ಚಂದ್ರಹಾಸೋಪಾಖ್ಯಾನ."

ಈ ಸಣ್ಣ ಗ್ರಂಥವು ಮ॥ ರಾ॥ ಬಿ. ಪದ್ಮನಾಭ ಪಂಡಿತರವರ ಶ್ರೀಭಾರತೀ ಭವನ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟು, ಕಾಸು ಪ್ರಕರ, ಮಹೀಮಂಡನ, ಇವೇ ಮೊದಲಾದ ಗ್ರಂಥಕರ್ತರಾದ ಮ॥ ರಾ॥ ಅಣ್ಣಾಜಿರಾಯರಿಂದ ರಚಿಸಲ್ಪಟ್ಟಿದ್ದಾಗಿರುವುದು ಭಾರತದ ಅಶ್ವಮೇಧಪರ್ವ ಮತ್ತು ಲಕ್ಷ್ಮೀಶನ ಜೈಮಿನಿಭಾರತದಲ್ಲಿ ಸೂಚಿಸಿರುವ ಪರಮಭಾಗವತಶಿರೋಮಣಿಯಾದ ಚಂದ್ರಹಾಸನ ಕಥೆಯು ಕನ್ನಡ ವಚನರೂಪವಾಗಿ ಹೇಳಲ್ಪಟ್ಟಿರುತ್ತೆ. ಇದರ ರಚನೆಯು ಮೇಲೆ ಹೇಳಿದ ಗ್ರಂಥಗಳಲ್ಲಿರುವ ಪದ್ಯಗಳ ಅರ್ಥಕ್ಕೆ ಅನುಸಾರವಾಗಿದೆ. ಬೆಂಗಳೂರು ಮಲ್ಲೇಶ್ವರ ನಿವಾಸಸ್ಥರಾದ ಗ್ರಂಥಕರ್ತರಿಂದ ಇದನ್ನು ೬॥ ಆಣೆಗೆ ಪಡೆಯಬಹುದು.

"ಅಶೋಕ."

"ಸುವಾಸಿನೀ" ಗ್ರಂಥಮಾಲೆಗಳಲ್ಲೊಂದಾದ ಮೇಲಿನ ಹೆಸರುಳ್ಳ ಈ ಚಿಕ್ಕ ಪುಸ್ತಕವು ಮ॥ ರಾ॥ ರಾಘವೇಂದ್ರ ಕೃಷ್ಣ ಇನಾಮತಿ ಅಣ್ಣಿಗೇರಿ ಇವರಿಂದ ಕನ್ನಡದಲ್ಲಿ ರಚಿಸಲ್ಪಟ್ಟಿರುವುದು. ಆರ್ಯಾವರ್ತದ ಸಾರ್ವಭೌಮ ಪದವಿಯನ್ನನುಭವಿಸಿದವರಲ್ಲಿ ಬಹಳ ಪ್ರಖ್ಯಾತನಾದ ಬೌದ್ಧಮತಾವಲಂಬಿಯಾದ ಅಶೋಕ ಮಹಾರಾಜನ ಜೀವಮಾನದ ಚರಿತ್ರೆಯು ಇದರಲ್ಲಿ ಹೇಳಲ್ಪಟ್ಟಿರುವುದು. ಅಂಥಾ ಕ್ರೂರ ಸ್ವಭಾವಿಯಾದ ಈ ಚಕ್ರವರ್ತಿಯು ಕ್ರಮಾನುಗತಿ ದಯಾಳುವಾಗಿ, ದೇಹವು ಅಶಾಶ್ವತವೆಂದೂ ಐಶ್ವರ್ಯವು ನಶ್ವರವೆಂದೂ ತಿಳಿದು, ತನ್ನಾಳ್ವಿಕೆಗೆ ಒಳಪಟ್ಟ ಪ್ರಜೆಗಳೂ ಅದಕ್ಕೆ ಒಳಪಡದೆ ಇರುವ ಇತರರೂ ಸಹೋದರ ಭಾವದಿಂದ ಏಕೀಭವಿಸಿ, ದುಃಖಮಯವಾದ ಈ ಪ್ರಪಂಚದಲ್ಲಿ ತಾವು ಬದುಕಿರುವ ವರೆವಿಗೂ ಅಪಾರವಾದ ಸುಖಸಂತೋಷಗಳನ್ನು ಹೊಂದಲೆಂದು ಹೇಳಿ, ಏರ್ಪಡಿಸಿದ ಅನೇಕ ವಿಧವಾದ ಕೆಲಸಗಳು ವರ್ಣಿಸಲ್ಪಟ್ಟಿರುವವು ಗ್ರಂಥವು ಕೇವಲ ಬಾಲರಿಗೂ ಬೋಧೆಯಾಗಿರುವಂತೆ ಬರೆಯಲ್ಪಟ್ಟಿದೆ ಇದು ಮಂಗಳೂರು "ಸುವಾಸಿನಿ" ಆಫೀಸಿನಲ್ಲಿ ೩ ಆರು ಆಣೆ ಬೆಲೆಗೆ ದೊರೆಯುವುದು.

"ಮನಶ್ಶಾಸ್ತ್ರ"

ಅಂತರೇಂದ್ರಿಯಕ್ಕಧಿಷ್ಠಾನವಾದ ಮನಸ್ಸಿನ ವಿಷಯವಾಗಿ ಪ್ರತಿಯೊಬ್ಬರೂ ಅದರ ವ್ಯಾಪಾರಗಳನ್ನು ತಿಳಿದುಕೊಳ್ಳಲು, ಮೇಲಿನ ಹೆಸರುಳ್ಳ ಒಂದು ಗ್ರಂಥವನ್ನು ಮೈಸೂರು ವೈದ್ಯ ಇಲಾಖೆಗೆ ಸೇರಿದ ಮ॥ ರಾ॥ ವೆಂಕೋಬರಾವ್, ಬಿ. ಎ. ಯವರು ಕನ್ನಡದಲ್ಲಿ ರಚಿಸಿರುವರು ಇದನ್ನು ವ್ಯಾಸಂಗಮಾಡುವ ರೀತಿ, ಮನಸ್ಸಿಗೂ ದೇಹಕ್ಕೂ ಇರುವ ಸಂಬಂಧ, ಮನೋವೃತ್ತಿಗಳ ವಿಭಾಗ, ಮನೋಮೂಲಗಳು, ಬೋಧೆಗಳು, ಪ್ರತಿಮೆಗಳು, ಬುದ್ಧಿ, ಗ್ರಹಣ, ಸ್ಮೃತಿ, ಕಲ್ಪನೆ ಭಾವನೆ, ವಿಭಾವನೆ, ಊಹೆ, ಸ್ವಜ್ಞಾನ ವಿಜ್ಞಾನಗಳು, ವೇದನೆ ಮತ್ತು ಇವುಗಳು ಹುಟ್ಟುವ ರೀತಿ, ವೇದನೆಯ ವಿಭಾಗವಾದ ರಸ ವಿಶೇಷಗಳು, ಇವೇ ಮೊದಲಾದ ಅನೇಕ ಸಂಗತಿಗಳನ್ನು ಕುರಿತು ಸರ್ವರಿಗೂ ವಿದಿತವಾಗುವಂತೆ ಬರೆದಿರುವರು. ಎಲ್ಲಾ ಶಾಸ್ತ್ರಗಳಿಗಿಂತಲೂ ಮನಶ್ಶಾಸ್ತ್ರವು ಶ್ರೇಷ್ಠವಾದುದರಿಂದಲೂ ಗಣಿತ, ಜ್ಯೋತಿಷ, ರಸವಾದ ಮೊದಲಾದ ವಿದ್ಯೆಗಳನ್ನು ವ್ಯಾಸಂಗ ಮಾಡಲು ಸಹಕಾರಿಯಾಗಿರುವದರಿಂದಲೂ ದೇಹ ಮನೋವ್ಯಾಪಾರಗಳೂ ಅವುಗಳ ನಿಯಮಗಳೂ ಶಿಕ್ಷಣವಿಲ್ಲದೆ ಪರಿಪೂರ್ಣವಾಗಿ ಮಾಡುವುದಕ್ಕಿಲ್ಲವಾದುದರಿಂದಲೂ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ತಾಯಿತಂದೆಗಳೂ ಉಪಾಧ್ಯಾಯರೂ ಇದರ ಪರಿಚಯವನ್ನು ತಕ್ಕ ಮಟ್ಟಿಗೆ ಮಾಡಿಕೊಂಡಿರ ಬೇಕಾದದ್ದು ಆವಶ್ಯಕವು ಕನ್ನಡದಲ್ಲಿ ಇಂಥಾ ಗ್ರಂಥವನ್ನು ಯಾರೂ ರಚಿಸಿಲ್ಲ. ಇದು ತಪ್ಪಿಲ್ಲದೆ ಅಂದವಾಗಿ ಮುದ್ರಿಸಲ್ಪಟ್ಟಿದೆ ಪುಸ್ತಕವು ಮೈಸೂರು ಗ್ರ್ಯಾಜ್ಯುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ ಒಂದೂವರೆ ರೂಪಾಯಿ ಕ್ರಯಕ್ಕೆ ದೊರೆಯುವುದು.

"ಆಂಗ್ಲೇಯ ವೈದ್ಯಶಾಸ್ತ್ರ."

ಎಲ್ಲಾ ಭಾಗ್ಯಗಳಿಗೂ ಆರೋಗ್ಯ ಭಾಗ್ಯಕ್ಕೆ ಸಮಾನವಾದುದು ಯಾವುದೂ ಇಲ್ಲ ಇಂತಹ ಆರೋಗ್ಯ ಭಾಗ್ಯವನ್ನು ಕಾಪಾಡಿಕೊಳ್ಳಲು ವ್ಯಾಧಿಗಳಿಗೆ ಅವಕಾಶ ಕೊಡದಂತಿರುವುದೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆಮಾಡಿಕೊಳ್ಳುವುದೂ ಮುಖ್ಯ ಕೆಲಸಗಳಾಗಿವೆಯಲ್ಲವೇ? ಈಗಿನ ಕಾಲದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ರೋಗಿಗಳೂ ಆಂಗ್ಲೇಯ ವೈದ್ಯವನ್ನಪೇಕ್ಷಿಸುವುದೂ ನಾಟುವೈದ್ಯರಲ್ಲಿ ಅನೇಕರೂ ಕೂಡ ಈ ವೈದ್ಯದ ಕೆಲವು ಚಿಕಿತ್ಸೆಗಳನ್ನು ರೂಢಿಗೆ ತರುತ್ತಿರುವುದೂ ಎಲ್ಲರೂ ಬಲ್ಲರು ಈ ಕಾರಣದಿಂದ ಆಂಗ್ಲೇಯ ವೈದ್ಯಸ್ವರೂಪವನ್ನು ಕೂಡಿದ ಮಟ್ಟಿಗೂ ಸಕಲರಿಗೂ ತಿಳಿಯಪಡಿಸಬೇಕೆಂಬ ಉದ್ದೇಶದಿಂದ ಅನೇಕ ಇಂಗ್ಲಿಷ್ ವೈದ್ಯ ಗ್ರಂಥಗಳನ್ನು ಶೋಧಿಸಿ, ಮೇಲಿನ ಹೆಸರುಳ್ಳ ಒಂದು ಗ್ರಂಥವನ್ನು ಮೈಸೂರು ವೈದ್ಯ ಇಲಾಖೆಗೆ ಸೇರಿದ ಮ॥ ರಾ॥ ಯಂ ಗುರುರಾವ್ ಯವರು ರಚಿಸಿರುತ್ತಾರೆ ಈ ಪುಸ್ತಕದಲ್ಲಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿದಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು ಸರ್ವರಿಗೂ ಸುಲಭಗ್ರಾಹ್ಯವಾಗುವಂತೆ ವಿವರಿಸಿರುವುದೂ ಅಲ್ಲದೆ, ಪುಸ್ತಕದ ಕೊನೆಯಲ್ಲಿ ಪ್ರತಿಯೊಂದು ವ್ಯಾಧಿಗೂ ಆಂಗ್ಲೇಯ ಮತ್ತು ಹಿಂದೂ ವೈದ್ಯಗಳ ಔಷಧ ಪಟ್ಟಿಯೂ ಕೊಡಲ್ಪಟ್ಟಿದೆ. ಪುಸ್ತಕದ ಬೆಲೆ ಒಂದೂವರೆ ರೂಪಾಯಿ. ಬೇಕಾದವರು ಗ್ರ್ಯಾಜ್ಯುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಲಂಡನ್, ಮೇ ೧—ರಾಜಧಾನಿಯಾದ ಸೆಂಟ್ ಪೀಟರ್ಸ್ ಬರ್ಗಿನಲ್ಲಿ ಈಸ್ಟರ್ ಎಂಬ ಹಬ್ಬವು ಸರಾಗವಾಗಿ ಜರುಗಿತು. ಪ್ರಜೆಗಳು ಗಲಭೆ ಮುಂತಾದ್ದನ್ನು ಮಾಡಲಿಲ್ಲ. ರಾಜ್ಯದ ಇತರ ಅಧಿಪತ್ಯಗಳಿಂದಲೂ ದೊಂಬಿ ಕಲಹಗಳ ಸುದ್ದಿಯೇನೂ ಬರಲಿಲ್ಲ.

ಚಕ್ರವರ್ತಿಯವರ ಅಪ್ಪಣೆ—ಪ್ರಜೆಗಳ ಸಂತೋಷ.

ಚಕ್ರವರ್ತಿಯವರು ಪ್ರಜೆಗಳನ್ನು ಮತ ಭಕ್ತಿ ಆಚಾರಗಳ ವಿಷಯದಲ್ಲಿ ಯಾವ ನಿರ್ಬಂಧಕ್ಕೂ ಗುರಿಪಡಿಸುವುದಿಲ್ಲವೆಂದೂ ಆಯಾ ಮತದವರು ತಮ್ಮ ಇಷ್ಟಬಂದಂತೆ ಮತ ಕೃತ್ಯಗಳನ್ನು ಮಾಡಿಕೊಳ್ಳುವುದರಲ್ಲಿ ಸರ್ಕಾರದವರ ಅಡ್ಡಿಯೇನೂ ಇರುವುದಿಲ್ಲವೆಂತಲೂ ಪ್ರಕಟಿಸಿದರಷ್ಟೆ. ಈ ಅಪ್ಪಣೆಯನ್ನು ಕೇಳಿದ ಪ್ರಜೆಗಳೆಲ್ಲಾ ಸಂತೋಷಪರವಶರಾಗಿರುತ್ತಾರೆ ಇನ್ನು ಮುಂದೆ ಚಕ್ರವರ್ತಿಯವರು ರಾಜಕೀಯ ವಿಚಾರದಲ್ಲಿ ಪ್ರಜೆಗಳಿಗೆ ಇನ್ನು ಹೆಚ್ಚು ರಿಯಾಯತಿಗಳನ್ನು ತೋರಿಸುತ್ತಾರೆಂಬ ಅಭಿಪ್ರಾಯವು ಆ ರಾಜ್ಯದಲ್ಲೆಲ್ಲಾ ಹರಡಿಕೊಂಡಿರುತ್ತದೆ.

ವಾರ್ಸಾ ಪಟ್ಟಣದಲ್ಲಿ ಅನಾಹುತವು

ವಾರ್ಸಾ ಪಟ್ಟಣದಲ್ಲಿ ಈ ದಿನ ಕೂಲಿಕಾರರೆಲ್ಲಾ ಗುಂಪುಕೂಡಿ, ಕೆಂಪು ಬಾವುಟಗಳನ್ನು ಹಿಡಿದು, ರಾಜಬೀದಿಗಳಲ್ಲಿ ಮೆರವಣಿಗೆ ಹೋಗುತ್ತಿದ್ದರು ಈ ಗುಂಪನ್ನು ಚದರಿಸುವುದಕ್ಕೋಸ್ಕರ ಸರ್ಕಾರಿ ಕುದುರೆಸವಾರರು ಗುಂಪಿನ ಮೇಲೆ ಕುದುರೆಗಳನ್ನು ನುಗ್ಗಿಸಿದರು; ಸಿಪಾಯಿಗಳು ಗುಂಪಿಗೆ ಗುಂಡು ಹೊಡೆದರು ಮೂವತ್ತೊಂದು ಜನರು ಸತ್ತು ಬಿದ್ದರು, ೧೫ ಜನರಿಗೆ ಪ್ರಾಣಗಾಯಗಳಾದ್ದರಿಂದ ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಇನ್ನೂ ಅನೇಕರು ಗಾಯಪಟ್ಟು ತಮ್ಮ ತಮ್ಮ ಮನೆಗಳಿಗೆ ಹೋದರು.

ತರುವಾಯ ಇನ್ನೊಂದು ಸಲ ಪ್ರಜೆಗಳಿಗೂ ಸರ್ಕಾರಿ ಸೈನಿಕರಿಗೂ ಕದನವಾಯಿತು. ಇದರಲ್ಲಿಯೂ ಇಪ್ಪತ್ತು ಮಂದಿ ಜಖ್ಮಪಟ್ಟರು.

ವಾರ್ಸಾ ಪಟ್ಟಣದಲ್ಲಿ ಅನಾಹುತವು.

ಲಂಡನ್, ಮೇ ೨—ನೆನ್ನೆ ರಾತ್ರಿ ೧೦ ಗಂಟೆಗೆ ಮತ್ತೆ ವಾರ್ಸಾ ಪಟ್ಟಣದಲ್ಲಿ ಗಲಭೆಯುಂಟಾಯಿತು. ಕುದುರೆ ಸವಾರರು ಗುಂಪಿಗೆ ಗುಂಡು ಹೊಡೆದು, ೪ ಮಂದಿಯನ್ನು ಕೊಂದರು; ಅನೇಕರು ಗಾಯಪಟ್ಟರು.

ಸಾಯಂಕಾಲ ೯ ಗಂಟೆಯಲ್ಲಿ ಜನರಿಗೂ ಸೈನಿಕರಿಗೂ ಕದನವಾಗಲಾಗಿ ಸೈನಿಕರು ಗುಂಪಿಗೆ ಗುಂಡು ಹೊಡೆಯದಲ್ಲದೆ ಬಂದೂಕು ಮಾಗುಟಕೊಂದು ಹೊಡೆಯುತ್ತಾ ಬಂದರು. ಹೆಂಗಸರು ಮಕ್ಕಳೆಂಬ ತಾರತಮ್ಯವನ್ನು ಕೂಡ ನೋಡಲಿಲ್ಲ. ಜನರು ಬಾಂಬ್ ಎಂಬ ಗುಂಡನ್ನು ಎಸೆದು, ಕೆಲವು ಸವಾರರನ್ನೂ ಸಿಪಾಯಿಗಳನ್ನೂ ಕೊಂದರು ಅನೇಕ ಪ್ರಜೆಗಳು ಗಾಯಪಟ್ಟರು. ೫೦ ಮಂದಿ ಅಲ್ಲಿ ಸತ್ತುಬಿದ್ದರು.

ಅಪಾರವಾದ ಕೊಲೆಗಳು.

ಲಂಡನ್, ಮೇ ೩—ವಾರ್ಸಾ ಪಟ್ಟಣದಲ್ಲಿ ನೆನ್ನೆ ರಾತ್ರಿ ನಡೆದ ಗಲಭೆಯಿಂದ ೬೭ ಮಂದಿ ಹತರಾದರೆಂತಲೂ ೨೦೦ ಮಂದಿ ಗಾಯಪಟ್ಟರೆಂತಲೂ ತಂತೀ ವರ್ತಮಾನ ಬಂದಿದೆ. ಈ ದಿನ ಏನಾಗುವುದೋ ಎಂದು ಗಾಬರಿಪಡುತ್ತಿದ್ದಾರೆ. ಕೂಲಿಕಾರರೆಲ್ಲಾ ಕೆಲಸಕ್ಕೆ ಕಾರ್ಖಾನೆಗಳಿಗೆ ಹೋಗಲಿಲ್ಲ. ಕಾರ್ಖಾನೆಗಳ ಬಾಗಿಲು ಮುಚ್ಚಲ್ಪಟ್ಟವು.

ಪೋಲೆಂಡಿನ ದೇವಾಲಯದಲ್ಲಿ ಕಲಹ.

ಪೋಲೆಂಡಿಗೆ ಸೇರಿದ ಕಾಲಿಸ್ಜ್ ಎಂಬ ನಗರದ ದೇವಾಲಯದಲ್ಲಿ ದಂಗೇಕೋರರು ಸೇರಿ ರಾಜದ್ರೋಹಕರವಾದ ಹಾಡುಗಳನ್ನು ಹಾಡುತ್ತಿದ್ದರು. ಅವರನ್ನು ಚದರಿಸುವುದಕ್ಕಾಗಿ ಸರ್ಕಾರಿ ಸೈನಿಕರು ಒಳಕ್ಕೆ ನುಗ್ಗಿ ಜಗಳವಾಡಿದರು. ಕೆಲವು ಹೆಂಗಸರು ಮೃತಪಟ್ಟರು. ಲಿಥುವಾನಿಯಾದಲ್ಲೂ ಪೋಲೆಂಡಿನಲ್ಲೂ ಪ್ರಜೆಗಳೆಲ್ಲಾ ದಂಗೆ ಎದ್ದಿದ್ದಾರೆ. ಕೂಲಿಕಾರರು ಕಾರ್ಖಾನೆಗಳಿಗೆ ಹೋಗಲಿಲ್ಲ.

ಲೋಡ್ಜ್ ನಗರದಲ್ಲಿ ದಂಗೆಯು.

ಲೋಡ್ಜ್ ನಗರದಲ್ಲಿ ಜನರು ಪೊಲೀಸಿನವರ ಮೇಲೆ ಕಲ್ಲುಗಳನ್ನು ಹೊಡೆದರು. ಅವರು ಗುಂಡು ಹಾರಿಸಿ, ಇಬ್ಬರನ್ನು ಕೊಂದರು; ಒಬ್ಬ ಹುಡುಗನಿಗೆ ಗಾಯವಾಯಿತು ಇನ್ನೊಂದು ಬೀದಿಯಲ್ಲಿ ಪ್ರಜೆಗಳಲ್ಲಿ ಇಬ್ಬರು ಸತ್ತರು, ಮತ್ತೊಂದು ಕಡೆ ಪೊಲೀಸಿನವರ ಗುಂಡೇಟು ತಿಂದು ಮೂವರು ಸತ್ತರು, ಇಬ್ಬರಿಗೆ ಗಾಯಗಳಾದವು ಲೋಡ್ಜ್ ಪಟ್ಟಣದಲ್ಲಿ ದಂಗೆ ಎದ್ದಿರುವ ಕೂಲಿಕಾರರು ೩೫,೦೦೦ ಜನರೆಂದು ಗೊತ್ತಾಗಿದೆ

ಮಿನ್ಸ್ಕ್ ಎಂಬಲ್ಲಿ ನಡೆದ ಕಲಹವು.

ನೆನ್ನೆ ಸಾಯಂಕಾಲ ಮಿನ್ಸ್ಕ್ ಎಂಬ ಪಟ್ಟಣದಲ್ಲಿ ದಂಗೇಕೋರರು ಪೊಲೀಸ್ ಸ್ಟೇಷನ್ ಒಳಕ್ಕೆ ಬಾಂಬ್ ಎಂಬ ಹಾರುವ ಗುಂಡನ್ನು ಎಸೆದರು. ಇದರಿಂದ ಕೆಲವು ಪೊಲೀಸಿನವರಿಗೆ ಗಾಯಗಳಾದವು. ಸೈನಿಕರಿಗೂ ದಂಗೇಕೋರರಿಗೂ ಕಲಹವಾಯಿತು. ಫಲಿತಾಂಶ ಹೊರಪಡಲಿಲ್ಲ.

ಲೋಂಡ್ಜ್ ಪಟ್ಟಣದಲ್ಲಿ ನೆನ್ನೆ ಸಾಯಂಕಾಲ ಮತ್ತೆ ಕಲಹವಾಯಿತು. ಸೈನಿಕರು ಪ್ರಜೆಗಳ ಗುಂಪಿನ ಮೇಲೆ ಗುಂಡು ಹೊಡೆದು ಅನೇಕ ಜನರನ್ನು ಕೊಂದುಹಾಕಿದಾರೆ

ಗ್ರೋಡ್ನೊ ಎಂಬಲ್ಲಿಯೂ ದಂಗೆಯುಂಟಾಯಿತು ಸರ್ಕಾರದ ಸೈನ್ಯವು ಜನರ ಮೇಲೆ ಗುಂಡು ಹೊಡೆದು, ಹುಟು ಗಲಭೆಯಾಗಿದೆ ಪ್ರಜೆಗಳೆಲ್ಲಾ ಸಾಮಾನ್ಯವಾಗಿ ದಂಗೇಕೋರರ ಗುಂಪಿಗೆ ಸೇರಿಕೊಂಡಿದಾರೆ.

ಅಂಗಡಿಗಳೂ ಕಚೇರಿಗಳೂ ಮುಚ್ಚಲ್ಪಟ್ಟವು.

ಲಂಡನ್, ಮೇ ೪—ದಂಗೇಕೋರರಾದ ಕೂಲೀಜನರು ಗುಂಪಾಗಿ ಹೊರಟು, ವಾರ್ಸಾ ಪಟ್ಟಣದ ಎಲ್ಲಾ ಅಂಗಡಿಗಳನ್ನೂ ಸರ್ಕಾರಿ ಕೋರ್ಟು ಕಚೇರಿಗಳನ್ನೂ ಬಲಾತ್ಕಾರದಿಂದ ಮುಚ್ಚಿಸಿದರು ಅವುಗಳ ರಸ್ತೆಗಳನ್ನು ತಡೆದಿರುತ್ತಾರೆ. ಪ್ರಜೆಗಳೆಲ್ಲಾ ಒಟ್ಟಾಗಿ ದಂಗೆ ಏಳುವರೋ ಎಂದು ಕಾಣುವುದು

ಕಾಕಸಸ್ ಪ್ರಾಂತ್ಯ ಅನಾಯಕತ್ವವು.

ಲಂಡನ್, ಮೇ ೫.—ಕಾಕಸಸ್ ಅಧಿಪತ್ಯದಲ್ಲಿ ಬಹಳ ಗಲಿಬಿಲಿಯುಂಟಾಗಿದೆ. ಸರ್ಕಾರದವರ ದರ್ಪ ನಿರ್ನಾಮವಾಯಿತು ಅನಾಯಕತ್ವ ನೆಲೆಗೊಂಡಂತೆ ಕಾಣುವುದು.

ರಷ್ಯಾ ಮಂತ್ರಿಯವರಿಗೆ ಅವಮಾನ.

ಲಂಡನ್, ಮೇ ೬.—ರಷ್ಯಾ ರಾಜ್ಯದ ಸಾರಶಾಲೆಗಳ ವಿಚಾರವನ್ನು ಕ್ರಮಪಡಿಸುವುದಕ್ಕೆ ಚಕ್ರವರ್ತಿಯವರ ಅಪ್ಪಣೆಯಂತೆ ಎಂ. ವಿಟ್ಟೆ ಎಂಬ ಮಂತ್ರಿಯವರು ಪ್ರಧಾನರಾಗಿದ್ದುಕೊಂಡು, ಪ್ರತಿನಿಧಿಗಳ ಕೈಫಿಯತ್ತುಗಳನ್ನು ಬರೆದುಕೊಳ್ಳುತ್ತಿದ್ದರು. ಈಗ ಚಕ್ರವರ್ತಿಯವರು ಈ ಸಭೆಯನ್ನು ವಜಾ ಮಾಡಿದೆ ಎಂದು ಅಕಸ್ಮಾತ್ತಾಗಿ ಹುಕುಂ ಕೊಟ್ಟಿದಾರೆ ಕೆಲವು ದಿನಗಳಿಗೆ ಮುಂಚೆ ಏರ್ಪಾಡಾಗಿದ್ದ ರೈತ ಪ್ರಜೆಗಳ ಪ್ರತಿನಿಧಿಗಳ ಸಂಘಕ್ಕೂ ಇವರನ್ನೇ ಪ್ರೆಸಿಡೆಂಟರಾಗಿ ನೇಮಿಸಿದ್ದು, ಆ ಸಂಘವನ್ನೂ ವಜಾಮಾಡಿದರು ಇವೆರಡು ಸಂಗತಿಗಳನ್ನೂ ನೋಡಲಾಗಿ ಆ ಮಂತ್ರಿಗಳ ಮೇಲೆ ಚಕ್ರವರ್ತಿಯವರಿಗೆ ಏನೋ ಅಸಮಾಧಾನ ಉಂಟಾಗಿದೆ ಎಂದು ಗೊತ್ತಾಗುವುದು.

ಅಂತರಂಗದಲ್ಲಿ ನಡೆದ ಸಭೆ.

ಮಾಸ್ಕೋ ಪಟ್ಟಣದಲ್ಲಿ ಎಲ್ಲಾ ಅಧಿಪತ್ಯಗಳಿಂದಲೂ ಬಂದ ಪ್ರತಿನಿಧಿಗಳು ಗುಟ್ಟಾಗಿ ಸಭೆ ಸೇರಿ, ಪ್ರಜೆಗಳ ದೊಡ್ಡ ಸಭೆಯೊಂದನ್ನು ಸ್ಥಾಪಿಸಬೇಕೆಂದು ನಿಶ್ಚಯ ಮಾಡಿಕೊಂಡರು. ಪೊಲೀಸಿನವರು ಈ ಸಭೆ ನಡೆಯದಂತೆ ಮಾಡಬೇಕೆಂದು ಎಷ್ಟೆಷ್ಟೋ ಪ್ರಯತ್ನ ಪಟ್ಟರೂ ಸಾರ್ಥಕವಾಗದೆಹೋಯಿತು.

ಪೋಲೆಂಡಿನ ಗಲಭೆಯ ವಿಚಾರ.

ಪೋಲೆಂಡಿನಲ್ಲಿ ಸರ್ಕಾರಕ್ಕೆ ವಿರೋಧಿಗಳಾಗಿರುವ ಸಂಘದವರು ದಂಗೇಕೋರರಾದ ಕೂಲಿಯವರನ್ನು ಕರೆಸಿಕೊಂಡು ಅವರಿಗೆ ಅವರವರ ಕೆಲಸಗಳಿಗೆ ಹೋಗಬೇಕೆಂತಲೂ ರಾಜ್ಯಭಾರ ವಿಚಾರಗಳನ್ನು ಚಳವಳಿಗೆ ಮಾಡುವುದಕ್ಕೆ ಈಗಿನ ಕಾಲವು ಸಹಜವಾದದ್ದಲ್ಲವೆಂತಲೂ ಇನ್ನುಮುಂದೆ ಅಂಥಾ ಸಮಯವು ಒದಗುವುದರಲ್ಲಿ ಸಂಶಯವಿಲ್ಲವೆಂತಲೂ ಹೇಳಿದರು.

ಮನಸ್ಸಾಕ್ಷಿ.

II. ಮನಸ್ಸಾಕ್ಷಿ ನುಡಿಯುವ ಸಾಕ್ಷಿ.

ಸಾಕ್ಷಿಯೆಂದರೆ ತನ್ನ ತಿಳುವಳಿಕೆಗೆ ವಿಷಯವಾದ ಸಂಗತಿಯ ವಿಷಯದಲ್ಲಿ, ನಮಗೆ ತಿಳುವಳಿಕೆಯನ್ನು ಕೊಡುವ ಪುರುಷನಾಗಲಿ ವಸ್ತುವಾಗಲಿ ಸಾಕ್ಷಿಯೆನಿಸಿಕೊಳ್ಳುವದು. ನಮ್ಮೊಳಗಿರುವ ಮನಸ್ಸಾಕ್ಷಿಯೆಂಬ ಇಂದ್ರಿಯದಿಂದ ಸತ್ಯವನ್ನು ಪರಿಗ್ರಹಿಸತಕ್ಕವರಾಗಿದ್ದೇವೆ. ಇದನ್ನೊಂದು ದೃಷ್ಟಾಂತದಿಂದ ವಿಶದಪಡಿಸಬಹುದು ನಮ್ಮಲ್ಲಿ ಕಣ್ಣಿರುವದರ ಮೂಲಕವಾಗಿ ಬೆಳಕೂ ಮತ್ತು ಬೆಳಕಿನ ಸಹಾಯದಿಂದ ಕಾಣಬಹುದಾದ ವಸ್ತುಗಳೂ ಇವೆಯೆಂದು ತಿಳಿದುಬರುತ್ತದೆ. ಬೆಳಕಾದರೂ ವಸ್ತುಗಳಾದರೂ ಇಲ್ಲದಿದ್ದರೆ ಕಣ್ಣಿನಿಂದ ಯಾವ ಪ್ರಯೋಜನವೂ ಇರಲಾರದಷ್ಟೆ.

ಯಾವದೋ ಒಂದು ಲೋಕದಿಂದ ವಿಜಾತೀಯವಾದ ಒಂದು ವಸ್ತುವು ಬಂದು ಬಿದ್ದಿದೆಯೆಂದು ಹೇಳೋಣ. ಅದನ್ನು ಕಂಡಂಥ ಶಾಸ್ತ್ರಜ್ಞನು ಅದರ ಸ್ವಭಾವವನ್ನೂ ಅದು ಯಾವ ಸ್ಥಳದಿಂದ ಬಂತೋ ಅದರ ಸ್ಥಿತಿಗತಿಗಳೇನೆಂಬುದನ್ನೂ ಕಂಡು ಹಿಡಿಯುವದಕ್ಕೆ ಪ್ರಯತ್ನಿಸುವನು. ಆ ವಸ್ತುವಿಗೆ ಕಣ್ಣುಗಳು ಇರುವದಾದರೆ ಅದು ಬಂದ ಸ್ಥಳದಲ್ಲಿ ಬೆಳಕು ಇರುವದೆಂದು ಊಹಿಸುವನು. ಅದು ಮೀನುಗಳಂತೆ ಆಕಾರವನ್ನುಳ್ಳದ್ದಾಗಿದ್ದರೆ ಆ ಲೋಕದಲ್ಲಿ ನೀರುಂಟೆಂದು ನಿರ್ಧರಿಸುವನು. ಒಂದು ವೇಳೆ ಆ ಪ್ರಾಣಿಯು ತಿಮಿಂಗಿಲದಂತಿದ್ದರೆ ಆ ಪ್ರಾಣಿಯ ಅವಯವಗಳನ್ನು ಪರೀಕ್ಷಿಸಲಾಗಿ ಅದು ವಾಸಿಸುತ್ತಿದ್ದ ಸ್ಥಳದಲ್ಲಿ ನೀರು ಮಾತ್ರವಲ್ಲದೆ ವಾಯುವೂ ಇರುವದೆಂದು ನಿಶ್ಚಯಿಸುವನು. ಈ ನಿದರ್ಶನವನ್ನು ನಮ್ಮ ಅಂತರ್ಸ್ಥಿತಿಗೆ ಹೋಲಿಸಿ ನೋಡಿಕೊಂಡರೆ ನಮ್ಮಲ್ಲಿರುವ ಯಾವದೋ ಒಂದು ಅವಯವದ ಮೂಲಕವಾಗಿ ಕೆಲವು ವಿಷಯಗಳನ್ನು ಗ್ರಹಿಸಿ, ಅವುಗಳನ್ನು ಕುರಿತು ನಮ್ಮ ಅಭಿಪ್ರಾಯಗಳನ್ನು ತಿಳಿಸಿ, ಇಂಥಿಂಥಾದ್ದು ಸರಿಯೆಂತಲೂ ಇಂಥಿಂಥಾದ್ದು ತಪ್ಪೆಂತಲೂ ನಿರ್ಧರಿಸುತ್ತೇವೆ. ನಾವು ಸರ್ವಸಾಧಾರಣವಾಗಿ ಕರ್ತವ್ಯ ಎಂಬ ಪದವನ್ನೂ ತಪ್ಪಿದ್ದು ಎಂಬ ಪದವನ್ನೂ ಉಪಯೋಗಿಸುತ್ತೇವಷ್ಟೆ. ಈ ಪದಗಳನ್ನು ಮನಸ್ಸಾಕ್ಷಿಯುಳ್ಳವರು ಮಾತ್ರ ಉಪಯೋಗಿಸಬಲ್ಲರು. ಇದು ಯಾವದಕ್ಕೆ ಸಾಕ್ಷಿಯೆಂದು ಕೇಳಿದರೆ, ನಮ್ಮಲ್ಲಿಯೂ ಈ ಅವಯವವು ಉಂಟೆಂತಲೂ, ನಾವು ಯಾವ ಕಾರ್ಯವನ್ನು ಮಾಡಿದಾಗ್ಯೂ ಅದನ್ನು ಈ ಪ್ರಮಾಣಕ್ಕೆ ಹೋಲಿಸಿ ನೋಡಿಕೊಳ್ಳುತ್ತಿರುತ್ತೇವೆಂತಲೂ ಹೇಳಬೇಕಾಗಿದೆ. ಕಣ್ಣು ಬೆಳಕಿಗೂ ವಿವಿಧ ವಸ್ತುಗಳಿಗೂ ಸಾಕ್ಷಿಯಾಗಿರುವ ಪ್ರಕಾರ ಮನಸ್ಸಾಕ್ಷಿಯು ಯಾವದನ್ನು ತಿಳಿಯಪಡಿಸುತ್ತದೆ? ಮೊದಲನೇದಾಗಿ—ಯಾವ ವಿಷಯದಲ್ಲಾಗಲಿ ತನಗೆ ತಿಳಿದಿರತಕ್ಕ ಸಂಗತಿಯನ್ನು ಮತ್ತೊಬ್ಬನೂ ತಿಳಿದಿದ್ದಾನೆಂಬದನ್ನು ಮನಸ್ಸಾಕ್ಷಿಯು ವ್ಯಕ್ತಪಡಿಸುತ್ತದೆ. ಯೋಹಾನನ ಸುವಾರ್ತೆ ೮: ೩—೧೧ ನ್ನು ಓದಿ ನೋಡುವಲ್ಲಿ ಈ ಅಭಿಪ್ರಾಯವು ಪರಿಷ್ಕಾರವಾಗಿ ತಿಳಿಯುತ್ತದೆ ಆ ವೃತ್ತಾಂತವೇನಂದರೆ—ವ್ಯಭಿಚಾರಿಣಿಯಾದ ಒಬ್ಬ ಹೆಂಗಸನ್ನು ಫರಿಸಾಯರು ಹಿಡಿದುಕೊಂಡು ಯೇಸುವಿನ ಬಳಿಗೆ ತಂದು, ಅವಳನ್ನು ಯಾವ ರೀತಿಯಿಂದ ದಂಡಿಸಬೇಕೋ ತಿಳಿಸೆಂದು ಕೇಳಿದರು. ಆತನು ಅವರಿಗೆ—ನಿಮ್ಮಲ್ಲಿ ಯಾವನು ಪಾಪವಿಲ್ಲದವನೋ ಅವನೇ ಮೊದಲು ಅವಳ ಮೇಲೆ ಕಲ್ಲನ್ನು ಹಾಕಲಿ ಎಂದು ಹೇಳಲು ಅವರು ಬದಲುತ್ತರವನ್ನು ಹೇಳದೆ ಹೊರಟು ಹೋದರು. ಯಾಕೆ ಹೊರಟು ಹೋದರು? ಅವರು ಬೇರೆ ಸಮಯಗಳಲ್ಲಿ ಮಹಾ ಪವಿತ್ರಪುರುಷರೆಂದು ನಟಿಸಬಲ್ಲವರಾದಾಗ್ಯೂ ಈಗ ಸ್ವಾಮಿಯು ಹೀಗೆ ನುಡಿದ ಬಳಿಕ ತಮ್ಮ ಗುಟ್ಟೆಲ್ಲಾ ತಮಗೆ ಮಾತ್ರವಲ್ಲದೆ ಬೇರೊಬ್ಬ ಪುರುಷನಿಗೂ ಚನ್ನಾಗಿ ಗೊತ್ತಾಗಿದೆಯೆಂದು ಅವರು ತಿಳಿದುಕೊಂಡರು ಆದಕಾರಣ ಆತನ ಮುಂದೆ ನಿಂತುಕೊಳ್ಳುವದಕ್ಕೆ ಅವರು ಧೈರ್ಯಪಡಲಿಲ್ಲ. ಆ ತಿಳುವಳಿಕೆಯಿಂದಲೆ ಅವರಲ್ಲಿ ಮನಸ್ಸಾಕ್ಷಿಯುಂಟೆಂಬುದು ಪ್ರಕಟವಾಗುತ್ತದೆ.

ಮನುಷ್ಯನಲ್ಲಿ ರಹಸ್ಯವಾಗಿಟ್ಟುಕೊಂಡಿರುವ ಪಾಪವು ಯಾರಿಗೆ ಗೊತ್ತಾಗಿದೆಯೆಂದು ಕೇಳಿದರೆ ಏನು ಹೇಳೋಣ? ಅದು ದೇವರಿಗಲ್ಲದೆ ಮತ್ಯಾರಿಗೆ ಗೊತ್ತು? ಮನುಷ್ಯನಲ್ಲಿ ಮನಸ್ಸಾಕ್ಷಿಯಿರುವಂಥಾದ್ದರಿಂದಲೇ ದೇವರ ಇರುವಿಕೆಯೂ ಸ್ಥಾಪಿತವಾಗುತ್ತದೆಯಷ್ಟೆ. "ಇಂಥಿಂಥ ಕಾರ್ಯವು ನನ್ನ ಕರ್ತವ್ಯವಾಗಿದೆಯೆಂದು ಒಬ್ಬನು ಹೇಳುವ ಮಾತಿನಿಂದಲೆ ದೇವರು ಇದ್ದಾನೆಂಬ ಸಿದ್ಧಾಂತಕ್ಕೆ ಪ್ರಧಾನವಾದ ಸಾಕ್ಷಿಯುಂಟಾಯಿತು"

ಆಕಾಶವು ದೇವರ ಮಹಿಮೆಯನ್ನು ಪ್ರಕಟಿಸುತ್ತದೆ ಎಂದು ಸತ್ಯವೇದವು ಹೇಳುತ್ತದೆ. ಆದರೂ ಈ ವಿಷಯವನ್ನು ಮನಸ್ಸಾಕ್ಷಿಯು ಪ್ರಕಟಿಸುವಷ್ಟು ಪರಿಷ್ಕಾರವಾಗಿ ಆಕಾಶದ ಜ್ಯೋತಿರ್ಮಂಡಲವು ಪ್ರಕಟಿಸಲಾರದು. ಇದೇ ಮನಸ್ಸಾಕ್ಷಿಯು ನುಡಿಯುವ ಮೊದಲನೇ ಸಾಕ್ಷಿ.

ಮನಸ್ಸಾಕ್ಷಿಯು ದೇವರ ಇರುವಿಕೆಗೊಂದು ಸಾಕ್ಷಿಯಾಗಿದೆಯಷ್ಟೆ. ಇಷ್ಟುಮಾತ್ರದಿಂದ ಅದರ ಪ್ರಯೋಜನವು ಪೂರ್ಣವಾಗುವದಿಲ್ಲ. ದೇವರು ಇದ್ದರೂ ಕೂಡ ತನ್ನ ದಾರಿಗೆ ತಾನಿರುತ್ತಾನೆಂದೂ, ನನ್ನ ಪಾಪಪುಣ್ಯಗಳ ವಿಷಯದಲ್ಲಿ ಆತನಿಗೆ ತಿಳಿದಿದ್ದರೂ ಅದರಿಂದ ನನಗೆ ಯಾವ ಫಲವೂ ಉಂಟಾಗುವದಿಲ್ಲವೆಂದೂ ನಾವು ಯಾಕೆ ತಿಳಿಯಬಾರದು? ಕೃಷ್ಣನು ಒಂದು ಅಪಾಯಕರವಾದ ರಸ್ತೆಯಲ್ಲಿ ಹೋಗುತ್ತಿದ್ದಾನೆಂದು ಹೇಳೋಣ ರಾಮನು ಅದನ್ನು ತಿಳಿದಿದ್ದಾನೆ ಆತನು ಅದನ್ನು ಕುರಿತು ಕೃಷ್ಣನಿಗೆ ಹೇಳಿದರೆ ಅದನ್ನು ಗ್ರಹಿಸತಕ್ಕ ಸಾಮರ್ಥ್ಯವು ಕೃಷ್ಣನಿಗೆ ಉಂಟೆಂದು ತಿಳಿದರೂ ರಾಮನು ಆ ವಿಷಯವನ್ನು ಕೃಷ್ಣನಿಗೆ ತಿಳಿಸದೆ ತನ್ನಷ್ಟಕ್ಕೆ ತಾನಿರಬಹುದು. ದೇವರಿಗೂ ಮನುಷ್ಯರಿಗೂ ಈ ಪ್ರಕಾರ ಯಾಕೆ ಇರಬಾರದು? ಎಂದು ಯಾರಾದರೂ ಆಕ್ಷೇಪಿಸಬಹುದಷ್ಟೆ ಆದರೆ ಮನಸ್ಸಾಕ್ಷಿಯು ಕರ್ತವ್ಯವನ್ನು ಪರೀಕ್ಷಿಸುವಲ್ಲಿ ದೇವರು ನಮ್ಮ ವಿಷಯದಲ್ಲಿ ಯಾವ ಸಂಗತಿಯನ್ನು ತಿಳಿದಿದ್ದಾನೋ ಅದು ನಮಗೂ ತಿಳಿದಿದೆ. ಆತನು ಮಾತಾಡುತ್ತಾನೆ, ಆತನ ಧ್ವನಿಯು ನಮಗೆ ಕೇಳಬರುತ್ತದೆಯಾದಕಾರಣ ಮನಸ್ಸಾಕ್ಷಿಗೆ ದೇವರ ಶಬ್ದವೆಂಬ ಹೆಸರು ಸಲ್ಲುತ್ತಿರುವದು.

ದೇವರು ಇದ್ದಾನೆಂದೂ, ಆತನು ಮನುಷ್ಯರೊಂದಿಗೆ ಮಾತಾಡುತ್ತಾನೆಂದೂ ಮನಸ್ಸಾಕ್ಷಿಯು ಸಾಕ್ಷಿಕೊಡುತ್ತದೆ ಕಿವಿಯು ಶಬ್ದವಿದೆಯೆಂಬ ವಿಷಯವನ್ನು ತಾರ್ಕಣಿಗೆ ತಂದುಕೊಡುವಂತೆಯೇ ಮನಸ್ಸಾಕ್ಷಿಯು ದೇವರ ಶಬ್ದವನ್ನು ನಮ್ಮ ಅಂತರಿಂದ್ರಿಯಕ್ಕೆ ಗೋಚರಪಡಿಸುವಂಥಾದ್ದಾಗಿದೆ ಸಂಭಾಷಣೆಯಲ್ಲಿ ನಾವು ಕರ್ತವ್ಯವೆಂಬ ಪದವನ್ನು ಉಪಯೋಗಿಸುತ್ತೇವಷ್ಟೆ. ಅದರಿಂದ ನಾವು ಜವಾಬ್ದಾರರಾಗಿದ್ದೇವೆಂಬ ವಿಷಯವು ಪ್ರಕಟವಾಗುತ್ತದೆಯಷ್ಟೆ. ದೊಡ್ಡ ಹುದ್ದೆಯಲ್ಲಿರುವ ಒಬ್ಬ ಮನುಷ್ಯನು ಆ ಹುದ್ದೆಯಲ್ಲಿ ತಾನು ನಡಿಸುವ ಕಾರ್ಯಾಕಾರ್ಯಗಳ ವಿಷಯದಲ್ಲಿ ತನ್ನ ಮೇಲ್ಪಟ್ಟ ಅಧಿಕಾರಿಗಳಿಗೆ ಲೆಕ್ಕ ಒಪ್ಪಿಸಬೇಕಷ್ಟೆ. ಹಾಗೆಯೇ ನಾವು ಇಂಥಿಂಥಾ ಕಾರ್ಯವನ್ನು ಮಾಡಲುಳ್ಳವರಾಗಿದ್ದೇವೆ ಎಂದು ಹೇಳುವಾಗ ನಾವು ಉಗ್ರಾಣಿಕರಂತಿದ್ದೇವೆಂತಲೂ ನಮ್ಮನ್ನು ಲೆಕ್ಕ ಕೇಳುವವರು ಬೇರೊಬ್ಬರು ಇರುತ್ತಾರೆಂತಲೂ ಅಭಿಪ್ರಾಯವುಂಟಾಗುತ್ತದೆ.

ಮನಸ್ಸಾಕ್ಷಿಯು ಸೂಚಿಸುವ ವಿಷಯವು ಮತ್ತೊಂದುಂಟು ಇದನ್ನು ಕುರಿತು ಸತ್ಯವೇದವು ಹೇಳುವದೇನಂದರೆ—'ಅವರ ಅಂತರಾತ್ಮವು (ಮನಸ್ಸಾಕ್ಷಿ) ಸಹ ಸಾಕ್ಷಿ ನುಡಿಯುತ್ತದೆ, ಅವರ ಯೋಚನೆಗಳು ಪರಸ್ಪರವಾಗಿ ವಾದಿ ಪ್ರತಿವಾದಿಗಳಂತೆ ಇದು ತಪ್ಪು ಇದು ತಪ್ಪಲ್ಲ ಎಂದು ಸೂಚಿಸುತ್ತವೆ'' (ರೋಮ ೨: ೧೫) ಇದರಿಂದ ತಿಳಿದುಬರುವದೇನಂದರೆ—ನಾವು ಯಾವದಾದರೊಂದು ಕಾರ್ಯವನ್ನು ಮಾಡಿದ ಕೂಡಲೆ ಮನಸ್ಸಾಕ್ಷಿಯು ಅದರ ವಿಷಯದಲ್ಲಿ ತಪ್ಪೋ ಸರಿಯೋ ಎಂಬುದಾಗಿ ತೀರ್ಪುಕೊಡುತ್ತದೆ. ಈ ತೀರ್ಪು ದೇವರೇ ನಮ್ಮ ಮನಸ್ಸಾಕ್ಷಿಯ ಮುಖಾಂತರ ಕೊಡತಕ್ಕ ತೀರ್ಪೆಂದು ನಾವು ನಿರ್ಧರಿಸುವದಕ್ಕೆ ಅಡ್ಡಿಯೇನು? ಕೆಲವು ಕಾರಣಗಳಿಂದ ಈ ತೀರ್ಪು ಪರಿಷ್ಕಾರವಾಗಿ ಕೇಳಿಸುವದಿಲ್ಲ, ಅಥವಾ ಸರಿಯಾದ ತೀರ್ಪಾಗಿಯೂ ಇರುವದಿಲ್ಲ ಈ ಕಾರಣಗಳನ್ನು ಮುಂದೆ ಪ್ರಸ್ತಾಪಿಸುವೆವು ಪ್ರಕೃತವೇನಂದರೆ—ದೇವರು ನಮ್ಮ ಕೃತ್ಯಗಳ ವಿಷಯದಲ್ಲಿ ಇದು ತಪ್ಪು, ಇದು ತಪ್ಪಲ್ಲ ಎಂದು ತೀರ್ಪು ವಿಧಿಸುವದು ಮನಸ್ಸಾಕ್ಷಿಯ ಮೂಲಕವೇ ಎಂದೂ, ಮುಂದೆ ನಡೆಯುವದಕ್ಕಿರುವ ಕಡೇ ನ್ಯಾಯತೀರ್ಪಿನ ವಿಷಯಕ್ಕೆ ಸಿದ್ಧಪಡಿಸಿಕೊಳ್ಳುವಂತೆ ಎಚ್ಚರಿಸುತ್ತಾನೆಂಬುದಾಗಿಯೂ ನಾವು ಸ್ಪಷ್ಟವಾಗಿ ತಿಳಿದಿರಬೇಕು

ಇನ್ನು ಮುಂದೆ ದೇವರು ಮನುಷ್ಯರನ್ನು ಅವರವರ ಕೃತ್ಯಗಳ ಪ್ರಕಾರವಾಗಿ ನ್ಯಾಯ ತೀರ್ಪನ್ನು ಮಾಡುವದಕ್ಕೆ ಬರುವವನಿದ್ದಾನೆಂದು ಯೇಸು ಸ್ವಾಮಿಯು ಎಷ್ಟೋ ಸಾರಿ ಬೋಧಿಸುತ್ತಿದ್ದನು ಇದನ್ನು ಕೇಳುವಾಗಲೆಲ್ಲಾ ನಮ್ಮ ಅಂತರಾತ್ಮವು ಸಹ—ಹೌದು, ನೀನು ನಮ್ಮ ನ್ಯಾಯಾಧಿಪತಿಯಾಗಿ ಬರುವಿಯೆಂದು ನಂಬುತ್ತೇವೆ ಎಂಬುದಾಗಿ ಹೇಳುತ್ತದೆ

[ಸಶೇಷ]

ಇಂಡಿಯಾ ದೇಶದ ವೃತ್ತಾಂತಗಳು.

ಇದಾರ್ ಸಂಸ್ಥಾನದ ಮಹಾರಾಜಾ ಸರ್ ಪ್ರತಾಪಸಿಂಹರವರು ಕಳೆದ ವಾರ ಲಾಹೋರ್ ಪಟ್ಟಣಕ್ಕೆ ಹೋಗಿದ್ದು, ಅಲ್ಲಿ ದಯಾನಂದರವರ ಹೆಸರಿನ ಮೇಲೆ ಕಟ್ಟುವ ಹಿಂದೂಕಾಲೇಜಿಗೆ ಅಸ್ತಿಭಾರವನ್ನು ಹಾಕಿದರು.

*****

ಉತ್ತರದೇಶದಲ್ಲಿ ಭೂಕಂಪದಿಂದುಂಟಾದ ನಷ್ಟಕಷ್ಟಗಳ ನಿವಾರಣೆಗೋಸ್ಕರ ಕಡೇ ಪಕ್ಷ ಏಳೂವರೆ ಲಕ್ಷ ರೂಪಾಯಿಯಾಗುವದೆಂತಲೂ ಈ ಹಣ ಕೊಡುವಂತೆ ಬೇಗನೆ ಧರ್ಮಾತ್ಮರು ಚಂದಾ ಕಳುಹಿಸಬೇಕೆಂತಲೂ ಲೆಫ್ಟಿನೆಂಟ್ ಗವರ್ನರವರು ತಿಳಿಸಿದಾರೆ.

*****

ಲಾಹೋರ್ ಪಟ್ಟಣದಲ್ಲಿ ಕಟ್ಟುವ ವಿಕ್ಟೋರಿಯಾ ಡೈಮಂಡ್ ಜೂಬಿಲಿ ಕೈಗಾರಿಕೆಗಳ ವಿದ್ಯಾಶಾಲೆಗೆ ಗವರ್ನಮೆಂಟಿನವರು ೧೨,೦೦೦ ರೂಪಾಯಿ ಮೊತ್ತವಾಗಿಯೂ ಪ್ರತಿ ತಿಂಗಳಲ್ಲೂ ೧೦೦ ರೂಪಾಯಿ ಮಾಸಾಶನವೂ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ

*****

ಕಲ್ಕತ್ತಾ ಪಟ್ಟಣದಲ್ಲಿ ರಾಜಾಕ್ ಎಂಬೊಬ್ಬ ಬೀಡಿ ಮಾಡುವವನು ಅವನ ಹೆಂಡತಿಯ ಮೂಗನ್ನು ಕತ್ತರಿಸಿ ಹಾಕಿದನು. ಡಿಪ್ಟಿ ಮ್ಯಾಜಿಸ್ಟ್ರೇಟ್ ಮಿ ಮೌಲ್ವಿ ಸಿರಾಜುಲ ಹಕ್ ಎಂಬವರು ಅವನನ್ನು ದಸ್ತಗಿರಿ ಮಾಡಿ, ಅವನಿಗೆ ಒಂದು ವರುಷ ಕಠಿಣ ಸಜೆಯನ್ನು ವಿಧಿಸಿದರು.

*****

ಹಿಂದುಸ್ಥಾನದಲ್ಲಿರುವ ರಾಜಕುಮಾರರುಗಳ ವಿದ್ಯಾಶಾಲೆಗಳ ಇನ್ಸ್‌ಪೆಕ್ಟರ್ ಮಿ ಪೆಲ್ ಎಂಬವರು ಕಳೆದ ವಾರ ರಾಜಕೋಟೆಯಲ್ಲಿರುವ ರಾಜಕುಮಾರರ ವಿದ್ಯಾಶಾಲೆಯನ್ನು ತನಿಖೆ ಮಾಡಬೇಕೆಂದು ಹೋದರು. ಅಲ್ಲಿ ಪ್ಲೇಗ್ ಉಪದ್ರದ ಹಾವಳಿ ಹೆಚ್ಚಾದದ್ದರಿಂದ ಎಲ್ಲಾ ಪಾಠಶಾಲೆಗಳೂ ಮುಚ್ಚಲ್ಪಟ್ಟಿದ್ದವು.

*****

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಈಗ ದೇಶೀಯ ವರ್ತಮಾನ ಪತ್ರಿಕೆಗಳು ಇಪ್ಪತ್ತು ಪ್ರಕಟವಾಗುತ್ತಿರುವವು. ಇದರಿಂದ ಅಲ್ಲಿನ ಪ್ರಜೆಗಳು ಎಷ್ಟು ವಿದ್ಯಾವಂತರಾಗಿಯೂ ಪ್ರಪಂಚದಲ್ಲಿ ನಡೆಯುವ ಕಾರ್ಯಗಳನ್ನು ತಿಳಿದುಕೊಳ್ಳುವದಕ್ಕೆ ಎಷ್ಟು ಆತುರದವರಾಗಿಯೂ ಇದ್ದಾರೆಂಬುವದು ಗೊತ್ತಾಗುವದು.

ಹಿಂದುಸ್ಥಾನದ ಕಷ್ಟಸುಖಗಳನ್ನು ಸಾಕ್ಷಾತ್ತಾಗಿ ವಿಲಾಯತಿಯ ಪ್ರಜೆಗಳಿಗೂ ರಾಜ್ಯಾಧಿಕಾರಿಗಳಿಗೂ ಉಪನ್ಯಾಸಗಳ ಮೂಲಕ ತಿಳಿಯಪಡಿಸುವದಕ್ಕೋಸ್ಕರ ಬೊಂಬಾಯಿ ಅಧಿಪತ್ಯದಿಂದ ಮಿ॥ ಜಿ. ಕೆ. ಗೋಖಲೆ, ಸಿ. ಐ. ಇ. ಅವರೂ ಮಿ॥ ಮಹಮ್ಮದ್ ಅಲಿ ಜಿನ್ನಾ ಎಂಬವರೂ ಪ್ರಯಾಣ ಮಾಡಬೇಕೆಂದು ಚುನಾಯಿಸಲ್ಪಟ್ಟಿದಾರೆ. ಹೀಗೆಯೇ ಹಿಂದುಸ್ಥಾನದ ಇತರ ಅಧಿಪತ್ಯಗಳಿಂದಲೂ ಸ್ವದೇಶಿಗಳು ವಿಲಾಯತಿಗೆ ಹೋಗಲು ಚುನಾಯಿಸಲ್ಪಟ್ಟಿರುವರು.

*****

ಕಲ್ಕತ್ತಾ ಪಟ್ಟಣದಲ್ಲಿ ಕಾಹಿಲ್ ರಾಂ ಎಂಬುವನು ಒಂದು ಕೆರೆಯ ಪಕ್ಕದಲ್ಲಿ ನಿಂತುಕೊಂಡ, ವೈಸ್‌ರಾಯಿ ಲಾರ್ಡ್ ಕರ್ಸನ್‌ರವರು ಹಿಂದುಗಳ ನಡೆನುಡಿಗಳನ್ನು ಜರಿದದ್ದರ ವಿಷಯವಾಗಿ ಅವರನ್ನು ನಾನಾ ರೀತಿಯಿಂದ ಅಳಿಗಳೆಯುತ್ತಾ, ಜನರ ದೊಂಬಿಯನ್ನು ಕೂಡಿಸುತ್ತಿದ್ದನು. ಪೊಲೀಸಿನವರು ಇವನ ಮೇಲೆ ಮೊಕದ್ದಮೆ ಮಾಡಿದರು ಈ ಉಪನ್ಯಾಸದಿಂದ ಪ್ರಜಾ ನೆಮ್ಮದಿಗೆ ಕುಂದಕವೇನೂ ಆಗುವದಿಲ್ಲವೆಂದು ಕಂಡುಬಂದದ್ದರಿಂದ ಮ್ಯಾಜಿಸ್ಟ್ರೇಟರು ಅವನನ್ನು ಬಿಟ್ಟುಬಿಟ್ಟರು.

*****

ಭಾವನಗರದ ಮಹಾರಾಜರವರು ಲಂಕೇರಿಯಾ ಬೆಟ್ಟಪ್ರಾಂತ್ಯದಲ್ಲಿ ಶಿಕಾರಿ ಮಾಡುವದಕ್ಕೆ ಹೋಗಿ ಒಂದು ಭಾರಿ ಹೆಣ್ಣು ಹುಲಿಯನ್ನು ಕಂಡು, ಅದಕ್ಕೆ ಗುಂಡು ಹೊಡೆದರು. ಅದಕ್ಕೆ ಗುಂಡೇಟು ಬಿದ್ದರೂ ಹಿಮ್ಮೆಟ್ಟದೆ ರೋಷದಿಂದ ಮಹಾರಾಜರ ಮೇಲೆ ನುಗ್ಗಿತು ಅದು ಇನ್ನೇನು ಅವರನ್ನು ಹಿಡಿಯುವದೋ ಎನ್ನುವಷ್ಟರೊಳಗಾಗಿ ಅವರು ಅದಕ್ಕೆ ಇನ್ನೊಂದು ಗುಂಡು ಹೊಡೆದು, ಹಿಂದಕ್ಕೆ ಸರಿದರು. ಅದು ಆ ಏಟನ್ನು ಸಹಿಸಲಾರದೆ ಅವರ ಕಾಲಿನ ಹತ್ತಿರ ಬಿದ್ದು ಪ್ರಾಣ ಬಿಟ್ಟಿತು

*****

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವು ದಿನೇದಿನೇ ಹೆಚ್ಚುತ್ತಲೇ ಇರುವದು ಹಿಂದಿನ ವಾರ [illegible] ಜನರು ಈ ಉಪದ್ರದಲ್ಲಿ ಮೃತಪಟ್ಟರು ಕಳೆದ ವಾರವೇ [illegible] ಜನರು ತೀರಿಹೋಗಿದಾರೆ. ಪ್ರಾಂತವಾರು—ಪಂಜಾಬ್ [illegible], ಸಂಯುಕ್ತ ಅಧಿಪತ್ಯ [illegible], ಬಂಗಾಳಾ [illegible], ರಾಜಪುತಾನಾ [illegible], ಬೊಂಬಾಯಿ ಅಧಿಪತ್ಯ [illegible], ಕಲ್ಕತ್ತೆ [illegible], ಕಾಶ್ಮೀರ [illegible], ಬರ್ಮಾ [illegible], ಈ ರೀತಿ ಮರಣಗಳಾಗಿರುತ್ತವೆ

*****

ಕಳೆದ ಶನಿವಾರ ಬೊಂಬಾಯಿ ಪಟ್ಟಣದಲ್ಲಿರುವ ಬಾಂದ್ರಾ ಎಂಬ ಭಾಗದಲ್ಲಿ ನುಸರ್ವಾನ್‌ಜಿ ಮಾಣೆಕ್‌ಜಿ ಪೆಟಿಟ್ ಎಂಬ ಮ್ಯುನಿಸಿಪಲ್ ಸ್ಕೂಲ್ ಕಟ್ಟಡಕ್ಕೆ ಮಿ॥ ಜೆನಿಷಯವರು ಅಸ್ತಿಭಾರವನ್ನು ಹಾಕಿದರು ಈ ಕಟ್ಟಡಕ್ಕೆ ೪೦,೦೦೦ ರೂಪಾಯಿ ಬೇಕಾಗುತ್ತೆ. ಈ ಪೈಕಿ ಮಿ॥ ಮಾಣೆಕ್‌ಜಿ ಎಂಬಾತನು ಅರ್ಧಮೊಬಲಗನ್ನು ಧರ್ಮಮಾಡಿದನು, ಕಾಲು ಭಾಗವನ್ನು ಬಾಯಿ ಆವಾಬಾಯಿ ಪೆಟಿಟ್ ಎಂಬಾಕೆಯೂ ಉಳಿದ ಕಾಲುಭಾಗವನ್ನು ಮ್ಯುನಿಸಿಪಾಲಿಟಿಯವರೂ ಕೊಟ್ಟಿದಾರೆ.

*****

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಥಾಣಾ ಡಿಸ್ಟ್ರಿಕ್ಟಿನಲ್ಲಿ ಜಾಹರ್ ಎಂಬ ಸಣ್ಣ ಸಂಸ್ಥಾನವಿರುವದು ಆ ಸಂಸ್ಥಾನದ ರಾಜರಿಗೆ ಕಳೆದ ವಾರ ಪಟ್ಟಾಭಿಷೇಕವಾಯಿತು. ಪೊಲಿಟಿಕಲ್ ಏಜಂಟ್ ಮಿ॥ ಜೆ ಪಿ ಆರ್ ಎಂಬವರೂ ಆ ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲಾ ಕೋರ್ಟಿನ ಸಿಬ್ಬಂದಿಯರೂ ಹಾಜರಾಗಿದ್ದು, ಪಟ್ಟಾಭಿಷೇಕವನ್ನು ನೆರವೇರಿಸಿದರು ಸಾವಿರಾರು ರೂಪಾಯಿಯನ್ನು ರಾಜರು ಬಡಬಗ್ಗರಿಗೆ ಹಂಚಿ ಅನ್ನದಾನವನ್ನೂ ವಿಶೇಷವಾಗಿ ಮಾಡಿದರು ಸರದಾರರುಗಳಿಗೆಲ್ಲಾ ಭಾರೀ ಔತಣವೂ ಉಡುಗೆರೆಗಳೂ ನಡೆದವು

*****

ಲಾಹೋರ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಬಂಗಾಳಾ ಬ್ಯಾಂಕಿನಿಂದ ೧೯೦೨ ನೇ ಇಸವಿ ಅಕ್ಟೋಬರ್ ೧೫ ರಲ್ಲಿ ೩,೬೦,೦೦೦ ರೂಪಾಯಿಯನ್ನೂ ೧೯೦೩ ನೇ ಅಕ್ಟೋಬರ್ ೧೫ ರಲ್ಲಿ ೪೦,೦೦೦ ರೂಪಾಯಿಯನ್ನೂ ಸಾಲ ತೆಗೆದುಕೊಂಡರು. ಈಗ ಈ ಸಂಗತಿಯನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಮಾಡಿರತ್ತಾರೆ ಈ ಹಣವನ್ನು ಅವರು ಯಾವ ಕಾರ್ಯಗಳಿಗೆ ವಿನಿಯೋಗಿಸಿದರೋ ಇದುವರೆಗೆ ಈ ಸಂಗತಿಯನ್ನು ಯಾಕೆ ಪ್ರಕಟಿಸಲಿಲ್ಲವೋ ತಿಳಿಯದೆ ಅನೇಕರು ಆಶ್ಚರ್ಯಪಡುತ್ತಾರೆ

*****

ಹಿಂದುಸ್ಥಾನದ ನದಿಗಳಲ್ಲೆಲ್ಲಾ ಇಂಡಸ್ ಎಂಬ ನದಿಯು ಬಹಳ ವಿಸ್ತಾರವಾದದ್ದು. ಈ ನದಿಗೆ ಕುಶಾಲ್‌ಘರ್ ಪಟ್ಟಣದ ಹತ್ತಿರ ಒಂದು ಭಾರೀ ಸೇತುವೆಯನ್ನು ಕಟ್ಟುತ್ತಾರೆ ಸೇತುವೆಯ ಮೇಲ್ಭಾಗದಲ್ಲಿ ರೈಲ್ ಗಾಡಿಗಳು ಓಡುವದಕ್ಕೂ ಕೆಳಗಡೆ ಜನರ ಚಾರಕ್ಕೂ ಅನುಕೂಲವಾಗುವದು. ಈ ಸೇತುವೆಗೆ ಹಾಕುವ ಸಾಮಾನೆಲ್ಲಾ ವಿಲಾಯತಿಯ ಕಾರ್ಖಾನೆಗಳಲ್ಲಿ ಯಂತ್ರ ಹೊಯ್ಯಲ್ಪಟ್ಟು. ಅವುಗಳಲ್ಲಿ ಭರ್ತಿಯಾಗಿ ಬರುವಂತೆ ಗೊತ್ತುಮಾಡಿದಾರೆ ಒಂದೆರಡು ವರುಷಗಳಲ್ಲಿ ಎಲ್ಲಾ ಸಾಮಾನು ಬರುವವೆಂದು ಪ್ರಕಟವಾಗಿದೆ

*****

ಡೆಹಲಿ ಪಟ್ಟಣದಲ್ಲಿ ಲಾರ್ಡ್ ಕರ್ಸನ್ ಪ್ರಭುಗಳು ಎರಡು ವರುಷಗಳ ಹಿಂದೆ ಹಿಂದುಸ್ಥಾನದ ಸಾಮಂತರಾಜರುಗಳನ್ನೆಲ್ಲಾ ಬರಮಾಡಿಕೊಂಡು, ಭಾರೀ ದರ್ಬಾರು ನಡಿಸಿದರಷ್ಟೆ. ಅದಕ್ಕಾಗಿ ಆಗ ಕಟ್ಟಿಸಿದ್ದ ಹಂಗಾಮಿಯಾದ ದರ್ಬಾರ್ ಹಾಲ್ ಎಂಬ ಕಟ್ಟಡವನ್ನು ಕೀಳಿಸಿ ಹಾಕಿ, ಅದೇ ಸ್ಥಾನದಲ್ಲಿ ನೇತ್ರಾನಂದಕರವಾದ ಒಂದು

ದೊಡ್ಡ ಸ್ತಂಭವನ್ನು ಕಟ್ಟಿಸಬೇಕೆಂತಲೂ ಅದರ ನಾಲ್ಕು ಕಡೆಗಳಲ್ಲಿ ಶಾಸನಗಳನ್ನು ಬರೆಸಬೇಕೆಂತಲೂ ತೀರ್ಮಾನವಾಗಿದೆ. ಈಗ ಇಂಜಿನಿಯರ್ ಇಲಾಖೆಯವರು ಆ ಸ್ತಂಭವನ್ನು ಕಟ್ಟಿಸುತ್ತಾ ಇದಾರೆ.

◆◆◆◆

ರಂಗೂನ್ ಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ೧೫,೦೦೦ ರೂಪಾಯಿನ ಒಂದು ಮಾನನಷ್ಟದ ಮೊಕದ್ದಮೆಯನ್ನು ನಡಸುವುದಕ್ಕೆಂದು ಹೋಗಿದ್ದ ಮಿ॥ ಪೆಸಲ್, ಮಿ॥ ಮೆಕ್ಕಾನೆಲ್ ಎಂಬೀ ಇಬ್ಬರು ಬ್ಯಾರಿಸ್ಟರುಗಳೂ ಪರಸ್ಪರ ವಾಗ್ವಾದ ಮಾಡಿಕೊಂಡು ಕಡೆಗೆ ಕೈಕೈ ಕೂಡಿಸಿ ಹೊಡೆದಾಡಿದರು. ಪೊಲೀಸಿನವರು ಅಲ್ಲಿ ಸೇರಿ, ಅವರ ಜಗಳವನ್ನು ನೋಡಿ ಸಾಕಾಗಿ, ಕಡೆಗೆ ಇಬ್ಬರನ್ನೂ ಬಿಡಿಸಿ, ಅವರವರ ಮನೆಗಳಿಗೆ ಕಳುಹಿಸಿದರು. ಈಗ ಒಬ್ಬರ ಮೇಲೊಬ್ಬರು ಫಿರ್ಯಾದು ಮಾಡುವವರಾಗಿದಾರೆಂದು ತಂತಿವರ್ತಮಾನ ಬಂದಿದೆ.

◆◆◆◆

ಲಾಹೋರ್ ಪಟ್ಟಣದ ಮಹಮ್ಮದಿಯ ಕಾಲೇಜಿನ ೨೦ನೆಯ ವಾರ್ಷಿಕ ರಿಪೋರ್ಟು ಪ್ರಕಟವಾಗಿದೆ. ಕಳೆದ ವರುಷ ಈ ವಿದ್ಯಾಶಾಲೆಗೆ ೭೦,೦೦೦ ರೂಪಾಯಿ ಜಮಾ ಆಗಿ ೬೯,೦೦೦ ರೂಪಾಯಿ ಖರ್ಚಾಯಿತು. ಈ ವಿದ್ಯಾಶಾಲೆಯ ಮೂಲಧನವು ೩ ಲಕ್ಷ ರೂಪಾಯಿ ಆಗುತ್ತದೆ. ೭೮ ಮಂದಿ ಅನಾಥ ಹುಡುಗರನ್ನೂ ೩೫ ಮಂದಿ ಅನಾಥ ಹುಡುಗಿಯರನ್ನೂ ಈ ಸಂಘದವರು ಪೋಷಣೆ ಮಾಡಿ, ವಿದ್ಯೆ ಕಲಿಸುತ್ತಿದಾರೆ. ೪೦೦ ಹುಡುಗಿಯರಿಗೆ ವಿದ್ಯಾಭ್ಯಾಸ ಮಾಡಿಸುವರು. ಆ ವಿದ್ಯಾಶಾಲೆಯಲ್ಲಿ ಈಗ ೧,೬೦೦ ಜನ ವಿದ್ಯಾರ್ಥಿಗಳಿರುತ್ತಾರೆ.

◆◆◆◆

ಹಿಮಾಲಯಪರ್ವತ ಪ್ರಾಂತ್ಯದಲ್ಲಿ ಎರಡು ಸಲ ಈ ವರುಷದ ಅಂತ್ಯದೊಳಗಾಗಿ ಬಹು ಭಯಂಕರವಾದ ಭೂಕಂಪವಾಗುತ್ತದೆಂತಲೂ ಇದರಿಂದ ಪ್ರಾಣನಷ್ಟವಾಗದಂತೆ ಪ್ರಜೆಗಳನ್ನು ಎಚ್ಚರಿಸುವುದಕ್ಕಾಗಿ ಇದುವರೆಗೆ ೫೦,೦೦೦ ನೋಟೀಸುಗಳನ್ನು ಹಂಚಿಸಿಬಿಟ್ಟನೆಂತಲೂ, ಗವರ್ನಮೆಂಟಿನವರು ಈ ವಿಷಯದಲ್ಲಿ ಕೊಂಚ ಎಚ್ಚರಿಕೆಯಿಂದಿದ್ದು ಪ್ರಜೆಗಳ ಪ್ರಾಣಗಳನ್ನು ಅಧಿಕಾರಿಗಳ ಸಂಸಾರಗಳನ್ನು ಕಾಪಾಡುವುದಕ್ಕೆ ಏರ್ಪಾಟು ಮಾಡಬೇಕೆಂತಲೂ ಮಿರ್ಜಾ ಗುಲಾಂ ಅಹಮದ ಖಾದಿಯಾನಿ ಎಂಬೊಬ್ಬ ಉತ್ತರದೇಶದ ಮೌಲ್ವಿಯು ಪ್ರಕಟಿಸಿರುತ್ತಾನೆ.

◆◆◆◆

ಪಂಜಾಬ್ ಡಿಸ್ಟ್ರಿಕ್ಟಿಗೆ ಸೇರಿದ ಜಾಫ್ರಂದಲ್ಲಿ ಪ್ರಜೆಗಳು, ಸರ್ಕಾರದವರು ಪ್ಲೇಗ್ ನಿವಾರಣೆಗಾಗಿ ಮಾಡುತ್ತಿರುವ ಕಾರ್ಯಗಳನ್ನು ನೋಡಿ, ಗಾಬರಿಬಿದ್ದು, ಗವರ್ನಮೆಂಟಿನವರು ದೇಶೀಯರ ಶ್ರೈಷ್ಠ್ಯವನ್ನು ಬಿಟ್ಟು, ಅವರ ಮೇಲೆ ಪ್ಲೇಗನ್ನು ಹರಡುತ್ತಾರೆಂದು ಅಸಮಾಧಾನ ಪಡುತ್ತಿದ್ದರು. ಅಲ್ಲಿನ ಕೆಲವು ದೊಡ್ಡ ಮನುಷ್ಯರೂ ಪ್ರಜಾಪ್ರತಿನಿಧಿಗಳೂ ಒಂದು ದೊಡ್ಡ ಸಭೆ ಮಾಡಿ, ಪ್ರಜೆಗಳನ್ನೆಲ್ಲಾ ಬರಮಾಡಿಕೊಂಡು, ಸರ್ಕಾರದವರ ಉದ್ದೇಶವನ್ನೂ ಪ್ಲೇಗ್ ನಿವಾರಣೆಗಾಗಿ ಅವರು ಮಾಡುವ ಕಾರ್ಯಗಳನ್ನೂ ಸ್ಪಷ್ಟವಾಗಿ ವಿವರಿಸಿ, ಪ್ರಜೆಗಳ ಸಂಶಯವನ್ನು ನಿವಾರಣೆ ಮಾಡಿದರು.

◆◆◆◆

ಕಲ್ಕತ್ತಾ ಪಟ್ಟಣದ ಕಾಳಿಘಾಟಿನಲ್ಲಿದ್ದ ಪಂಡಿತ ಕೃಷ್ಣದಾಸ ವೇದಾಂತವಾಗೀಶನೆಂಬ ಪ್ರಸಿದ್ಧ ಸಂಸ್ಕೃತಪಂಡಿತನು ಕಳೆದ ವಾರ ಕಾಳಿಗಂಗಾದಲ್ಲಿ ಕಾಲವಾದನು. ಈತನಷ್ಟು ಪಾಂಡಿತ್ಯವನ್ನು ಪಡೆದಿದ್ದವರು ಹಿಂದೂಸ್ಥಾನದಲ್ಲೆಲ್ಲೂ ಇಲ್ಲ. ಈತನ ವಾಗ್ಮಿತೆಯೂ ಪಾಂಡಿತ್ಯವೂ ಅತ್ಯದ್ಭುತಗಳಾಗಿದ್ದುವು. ಬಂಗಾಳಾ ಆಧಿಪತ್ಯದ ಅನೇಕಾನೇಕ ಗ್ರಾಮಗಳಲ್ಲಿ ಕೂಡ ಈ ಪಂಡಿತನು ಶಾಸ್ತ್ರಸಂಘಗಳನ್ನು ಏರ್ಪಡಿಸಿ, ಶಾಸ್ತ್ರವಿಷಯಗಳನ್ನು ಚರ್ಚೆ ಮಾಡುತ್ತಿದ್ದನು. ಇಂಥಾ ಸಂಸ್ಕೃತಪಂಡಿತನು ಕಾಲವಾದದ್ದರಿಂದ ಹಿಂದೂಸ್ಥಾನಕ್ಕೆಲ್ಲಾ ಕೊಂಚ ನಷ್ಟವಾಯಿತೆನ್ನುವುದಕ್ಕೆ ಸಂಶಯವಿಲ್ಲ.

◆◆◆◆

ತಿರುಚನಾಪಳ್ಳಿಯ ಹತ್ತಿರ ಕೋಟಾ ರಾಮಲಿಂಗಶೆಟ್ಟರು ಕುತ್ತಲಾಯಿ ಎಂಬ ಗ್ರಾಮದಲ್ಲಿ ೬೦೦ ಎಕರೆ ಜಮೀನನ್ನು ಪಡೆದಿರುತ್ತಾರೆ. ಈ ಜಮೀನಿಗೆ ಅಮರಾವತಿ ಎಂಬ ನದಿಯ ಕಾಲುವೆ ನೀರು ಹಾಯುವುದು. ಈ ನೀರು ಸಾಕಾಗುವುದಿಲ್ಲವೆಂದು ಶೆಟ್ಟರು ಅಲ್ಲೇ ಒಂದು ಇಂಜಿನ್ ಇಟ್ಟು ನೀರು ಎತ್ತಿಸಿ, ಜಮೀನಿಗೆಲ್ಲಾ ಹಾಯಿಸಿಕೊಳ್ಳತಕ್ಕ ವ್ಯವಸ್ಥೆಯು ಮಾಡಿಸಲಾರಂಭಿಸಿರುತ್ತಾರೆ. ಇದರಿಂದ ಅವರಿಗೆ ತುಂಬಾ ಆದಾಯವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ. ಸುತ್ತಮುತ್ತಿನ ಜಮೀನ್ದಾರರೂ ಮಿರಾಸಿದಾರರೂ ಈ ಶೆಟ್ಟರವರ ಪ್ರಯತ್ನವನ್ನೂ ಇದರಿಂದುಂಟಾಗುವ ಫಲವನ್ನೂ ಬಹು ಆಸೆಯಿಂದ ನಿರೀಕ್ಷಿಸುತ್ತಿದಾರೆ.

◆◆◆◆

ಉತ್ತರದೇಶದಲ್ಲಿ ಭೂಕಂಪವಾಗಿ ಮನೆ ಮಠಗಳು ನಾಶಹೊಂದಿದ ಪ್ರದೇಶದಲ್ಲಿ ಈಗ ಯಥಾಪ್ರಕಾರ ಮನೆ ಮಠ ಬಂಗಲೆ ಮುಂತಾದವುಗಳನ್ನು ಕಟ್ಟಬಹುದೋ ಇಲ್ಲವೇ ಆ ಪ್ರಾಂತ್ಯ ಮತ್ತೆ ನಾಶ ಉಂಟಾಗುವುದೋ ಎಂಬುದನ್ನು ಪರೀಕ್ಷೆಯ ಮೂಲಕ ಗೊತ್ತುಮಾಡುವುದಕ್ಕೆ ಇಂಡಿಯಾ ಗವರ್ನಮೆಂಟಿನವರು ಭೂಶೋಧನಾ ಇಲಾಖೆಯ ಅಧಿಕಾರಿಗಳನ್ನು ಕಳುಹಿಸಿದಾರೆ. ಜಪಾನ ದೇಶದಲ್ಲಿ ಭೂಕಂಪದ ವಿಷಯವಾಗಿ ತುಂಬಾ ಪರಿಶ್ರಮವನ್ನು ಪಡೆದಿರುವ ಒಮೋರಿ ಎಂಬ ಪಂಡಿತನು ಜಪಾನಿಯೇ ಹಿಂದೂಸ್ಥಾನಕ್ಕೆ ಬಂದು ಆ ಪ್ರಾಂತ್ಯವನ್ನು ಪರೀಕ್ಷೆಮಾಡುವುದಕ್ಕೆ ಒಪ್ಪಿಕೊಂಡಿದಾನೆ. ಈತನು ಈ ವಾರ ಇಲ್ಲಿಗೆ ಬಂದು ಸೇರುವನು.

ಕಲ್ಕತ್ತಾ ಪಟ್ಟಣದ ಸಂಸ್ಕೃತಕಾಲೇಜಿನಲ್ಲಿಯೇ ವಿದ್ಯಾಭ್ಯಾಸ ಮಾಡುವಂಥಾ ಬಾಲಕರು ಇರುವುದಕ್ಕೂ ಅವರ ಅನ್ನವಸ್ತ್ರಗಳಿಗೂ ಅಲ್ಲಿನ ಸಾಹುಕಾರರು ಈಚೆಗೆ ಕೊಂಚ ವಸತಿಗಳನ್ನು ಕಲ್ಪಿಸಿಕೊಡುತ್ತಿದಾರೆಂದು ಎಲ್ಲರೂ ಸಂತೋಷಪಡುವರು. ಕೊಳ್ಳತೋಲಾ ಬಾಬು ಚಂದ್ರದತ್ತನೆಂಬ ಐಶ್ವರ್ಯವಂತನೂ ಧರ್ಮಾತ್ಮನೂ ಒಂದು ಲಕ್ಷ ರೂಪಾಯಿ ಬಾಳುವ ತನ್ನ ಮನೆಯನ್ನೆಲ್ಲಾ ಸಂಸ್ಕೃತ ವಿದ್ಯಾರ್ಥಿಗಳ ವಾಸಕ್ಕೋಸ್ಕರ ಬಿಟ್ಟು ಕೊಟ್ಟಿದಾನೆ. ಇದಲ್ಲದೆ ವಿದ್ಯಾರ್ಥಿಗಳ ಅನ್ನಬಟ್ಟೆಯ ಖರ್ಚಿಗೆ ಪ್ರತಿ ತಿಂಗಳಲ್ಲೂ ೧೫೦ ರೂಪಾಯಿ ಹುಟ್ಟುವಳಿ ಆಗುವಂತೆ ೫೦,೦೦೦ ರೂಪಾಯಿ ಫಂಡು ಹಾಕಿದಾನೆ. ಹಿಂದೂಸ್ಥಾನದಲ್ಲಿ ಬಿಲವಾಗುತ್ತಿರುವ ಸಂಸ್ಕೃತ ವಿದ್ಯೆಯು ಇಂಥಾ ಧರ್ಮಿಷ್ಠರಿಂದ ಉಜ್ಜೀವಿಸಬೇಕೇ ಹೊರತು ಅನ್ಯಥಾ ಇಲ್ಲವೆಂದು ಹೇಳಬೇಕಾಗಿದೆ.

◆◆◆◆

ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರಾದ ಮಹಾ ಘನವನ್ತ್ರಿದಿವ ಮಹಾರಾಜಾ ಚಂದ್ರಸೋಮೇಶ್ವರಜಂಗ್ ರಾಣಾಬಹದೂರ್ ಯವರು ಇಂಡಿಯಾ ಗವರ್ನಮೆಂಟಿನವರಿಗೆ ಟಿಬೆಟ್ ರಾಜ್ಯಕ್ಕೆ ಹೋಗುವುದಕ್ಕೆ ತುಂಬ ಸಹಾಯ ಮಾಡಿದ್ದರಿಂದ ಇಂಗ್ಲಿಷ್ ದೊರೆಯವರು ಅವರಿಗೆ ಜಿ ಸಿ ಎಸ್. ಐ ಎಂಬ ಘನತರವಾದ ಬಿರುದನ್ನು ದಯಪಾಲಿಸಿದರು. ನೇಪಾಳದ ರಾಜಧಾನಿಯಾದ ಖಾಟ್ಮಂಡು ಪಟ್ಟಣದಲ್ಲಿ ಬ್ರಿಟಿಷ್ ರೆಸಿಡೆಂಟರವರು ದೊಡ್ಡ ಸಭೆ ಮಾಡಿ, ಮಂತ್ರಿಯವರಿಗೆ ಆ ಬಿರುದನ್ನು ಒಪ್ಪಿಸಿದರು. ಕವಾಯಿ ಮೈದಾನಕ್ಕೆ ಎಲ್ಲರೂ ಬಿಜಯಮಾಡಿ, ೧೧,೦೦೦ ನೇಪಾಳದ ಸೈನಿಕರ ಕವಾತನ್ನು ನೋಡಿದರು. ಎಲ್ಲಾ ಘೋಷಿಸಿದ ಕೂಡಲೇ ಬಹು ಬಲವಾದ ಮಳೆ ಸುರಿಯಿತು. ಆ ರಾತ್ರಿ ಮಂತ್ರಿಯವರು ತಮ್ಮ ಅರಮನೆಯನ್ನು ದೀಪಗಳಿಂದ ಅಲಂಕಾರ ಮಾಡಿ, ರೆಸಿಡೆಂಟರೇ ಮುಂತಾದವರನ್ನೆಲ್ಲಾ ಕರೆಸಿಕೊಂಡು, ದೊಡ್ಡ ಔತಣ ಮಾಡಿ, ಸಂತೋಷಪಡಿಸಿದರು.

◆◆◆◆

ಬೊಂಬಾಯಿ ಪಟ್ಟಣಕ್ಕೆ ಮಿ. ಕರೋಲ್ ಎಂಬಾತನು ಆಫ್ರಿಕಾದಿಂದ ಬಂದು, ಸಾವಿರಾರು ರೋಗಿಗಳನ್ನು ವಾಸಿ ಮಾಡುತ್ತಾ ಕೊಂಚ ಪ್ರಸಿದ್ಧಿಗೆ ಬಂದಿರುತ್ತಾನೆ. ಇವನು ಯಾವ ಔಷಧವನ್ನೂ ಯಾವ ತರದ ಚಿಕಿತ್ಸೆಯನ್ನೂ ಮಾಡುವುದಿಲ್ಲವಂತೆ. ರೋಗಿಗಳನ್ನು ತನ್ನ ಕೈಯಿಂದ ಮುಟ್ಟುವನು, ಇಲ್ಲವೇ, ಅವರ ಶರೀರದ ಮೇಲೆ ಊದುವನು. ಇಷ್ಟಕ್ಕೆ ಎಲ್ಲಾ ರೋಗಗಳೂ ವಾಸಿಯಾಗುವವೆಂದು ಹೇಳುತ್ತಾರೆ. ಅವನು ತನ್ನ ಬಳಿಗೆ ಬರುವವರಿಂದ ಯಾವ ತರದ ಪ್ರತಿಫಲವನ್ನೂ ತೆಗೆದುಕೊಳ್ಳುವುದಿಲ್ಲ. ಕೆಲವರಿಗೆ ಕೂಡ್ಲೆ ಗುಣವಾಗುವುದು, ಇನ್ನು ಕೆಲವರಿಗೆ ಒಂದು ದಿನದಲ್ಲೂ, ಮತ್ತೆ ಕೆಲವರಿಗೆ ಒಂದು ವಾರದಲ್ಲೂ, ಒಂದು ತಿಂಗಳಲ್ಲೂ ವಾಸಿಯಾಗುವುದಂತೆ. ಅವನು ದೇವರ ಪ್ರಾರ್ಥನೆ ಮಾಡಿ, ರೋಗಿಗೆ ರೋಗ ಬಿಟ್ಟು ಹೋಗಲೆಂದು ಹೇಳುತ್ತಾನೆ. ಇಷ್ಟು ಮಾತ್ರಕ್ಕೇ ಅದು ನಿವಾರಣೆಯಾಗುವುದೆಂದು ಒಬ್ಬ ಬಾತ್ಮಿದಾರನು ಬೊಂಬಾಯಿನಲ್ಲಿ ಪ್ರಕಟವಾಗುವ ಒಂದು ಪತ್ರಿಕೆಯಲ್ಲಿ ಬರೆದಿದಾನೆ.

◆◆◆◆

ಸಿಯಾಲ್ಕೋಟ್ ಡಿಸ್ಟ್ರಿಕ್ಟಿಗೆ ಸೇರಿದ ಕೋಟಿಡಾಸು ಎಂಬ ಗ್ರಾಮದಲ್ಲಿ ಒಬ್ಬ ಮಹಮ್ಮದೀಯ ಸ್ತ್ರೀಯು ಮಾಡಿರುವ ಕ್ರೂರಕೃತ್ಯವು ಬಹು ಅಪೂರ್ವವೆಂದು ತೋರುವುದು. ಒಬ್ಬ ಮಹಮ್ಮದೀಯನು ತನ್ನ ಮೊದಲನೆ ಹೆಂಡತಿಯ ೪–೫ ವರುಷದ ಮಗನನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಎರಡನೆ ಹೆಂಡತಿಯು ಇದನ್ನು ಸಹಿಸಲಾರದೆ, ಗಂಡನು ಹೊರಗೆ ಹೋಗಿದ್ದಾಗ ಆ ಹುಡುಗನನ್ನು ಮನೆಯಲ್ಲೇ ಕೊಂದುಹಾಕಿ, ಮಾಂಸವನ್ನು ತೆಗೆದು ಗಂಡನಿಗೆ ಬಡಿಸುವುದಕ್ಕಾಗಿ ಅಡಿಗೆ ಮಾಡಿಟ್ಟಳು. ಗಂಡನು ಮನೆಗೆ ಬಂದು ಊಟಕ್ಕೆ ಕುಳಿತುಕೊಂಡು ಮಗು ಎಲ್ಲಿ ಎಂದು ಕೇಳಿದನು. ಅವಳು ಗಾಬರಿಬಿದ್ದು ಏನೋ ಗೊಣಗಿದಳು. ಕೂಡಲೆ ಗಂಡನಿಗೆ ಅನುಮಾನ ಉಂಟಾಗಿ ಊಟ ಮಾಡದೆ ಎದ್ದು ಮನೆಯಲ್ಲೆಲ್ಲ ಹುಡುಕಿದನು. ತನ್ನ ಮಗನ ಕೈಕಾಲು ಮುಂತಾದ ಅಂಗಗಳ ತುಂಡುಗಳು ಒಂದು ಮೂಲೆಯಲ್ಲಿ ಸಿಕ್ಕಿದವು. ಪೊಲೀಸಿಗೆ ರಿಪೋರ್ಟಾಯಿತು. ತನಿಖೆ ಆಗಿ ಸೆಷನಲ್ಲಿ ದರ್ಯಾಫ್ತು ನಡೆದು ಆ ಖಿಲಾಯಿಗೆ ಮರಣದಂಡನೆ ವಿಧಿಸಲ್ಪಟ್ಟದೆ.

ವಿದೇಶ ವರ್ತಮಾನಗಳು.

ಬೆಲ್ಜಿಯಂ ರಾಜ್ಯದವರು ಆಂಟ್ವರ್ಪ್ ಪಟ್ಟಣದ ಬಂದರನ್ನು ವಿಸ್ತಾರಣೆ ಮಾಡುವುದಕ್ಕೆ ಹತ್ತುವರೆ ಕೋಟಿ ದ್ರವ್ಯವನ್ನು ಖರ್ಚು ಮಾಡುವರು.

◆◆◆◆

ವಿಲಾಯತಿ ರಾಜ್ಯದ ಯುವರಾಜರವರು ಈಗ ಆರೋಗ್ಯದಿಂದಿರುವರು. ಎಂದಿನಂತೆ ದಿನಾ ಗಾಳಿಸವಾರಿ ಹೋಗುತ್ತಾರೆ, ಮತ್ತು ಕೆಲಸ ಕಾರ್ಯಗಳನ್ನು ಮಾಡುತ್ತಿದಾರೆ.

◆◆◆◆

ಫ್ರಾನ್ಸ್ ರಾಜ್ಯದ ಪ್ರೆಸಿಡೆಂಟರಾದ ಲೋಬೇ ಯವರು ಕಳೆದ ತಿಂಗಳ ೧೮ನೆ ತಾರೀಖಿನದಿನ ಕಪೂರ್ಥಲದ ಮಹಾರಾಜರವರನ್ನು ಎಲಿಸೀ ಎಂಬ ತಮ್ಮ ರಾಜಭವನಕ್ಕೆ ಕರೆಸಿಕೊಂಡು, ಅವರಿಗೆ ಭೇಟಿಕೊಟ್ಟರು.

◆◆◆◆

ಜರ್ಮನಿಯಲ್ಲಿ ಕ್ರೂಪ್ ಎಂಬ ಸಾಹುಕಾರನು ಸ್ಥಾಪಿಸಿದ ಫಿರಂಗಿಗಳ ಕಾರ್ಖಾನೆಯು ಲೋಕಪ್ರಸಿದ್ಧವಾಗಿದೆಯಷ್ಟೆ. ತುರ್ಕಿ ಸುಲ್ತಾನರು ತಮ್ಮ ರಾಜ್ಯಕ್ಕೆ ಈ ಕಾರ್ಖಾನೆಯಿಂದ ೫೪೬ ಫಿರಂಗಿಗಳನ್ನು ಮಾಡಿ ಕಳುಹಿಸುವಂತೆ ಕಂಟ್ರಾಕ್ಟು ಒಪ್ಪಿದಾರೆ.

ರಷ್ಯಾ ಚಕ್ರವರ್ತಿ ಜಾರ್ ರವರ ಚಿಕ್ಕಪ್ಪನಾದ ಗ್ರಾಂಡ್ ಡ್ಯೂಕ್ ಸರ್ಜಿಯಸ್ ರವರನ್ನು ಕೊಂದುಬಿಟ್ಟರಷ್ಟೆ. ಇವರು ೩೦ ಕೋಟಿ ರೂಪಾಯಿನ ಆಸ್ತಿವಂತರಾಗಿದ್ದರೆಂತಲೂ ಈ ಪೈಕಿ ೪೫೦ ಲಕ್ಷ ದ್ರವ್ಯವನ್ನು ತಮ್ಮ ಪತ್ನಿಯವರ ಜೀವನಕ್ಕಾಗಿ ಕೊಟ್ಟಿದಾರೆಂತಲೂ ತಿಳಿದುಬಂದಿದೆ.

◆◆◆◆

ಲೈಬೀರಿಯಾದಲ್ಲಿ ದಂಗೆಕೋರರಾದ ಪ್ರಜೆಗಳು ಗಲಭೆಯನ್ನೆಬ್ಬಿಸಿ, ಪ್ರಜೆಗಳಲ್ಲಿ ೬೦ ಮಂದಿ ಗಂಡಸರನ್ನೂ ೪೦ ಮಂದಿ ಹೆಂಗಸರನ್ನೂ ಕೊಂದು ಹಾಕಿದರು. ಈಗ ಸರ್ಕಾರದವರಿಗೂ ಈ ದಂಗೆಕೋರರಿಗೂ ವೈಷಮ್ಯಗಳು ಉಂಟಾಗಿ ಉಭಯಪಕ್ಷದವರೂ ಯುದ್ಧಸನ್ನಾಹ ಮಾಡಿಕೊಳ್ಳುತ್ತಿದಾರೆ.

◆◆◆◆

ಅಮೇರಿಕಕ್ಕೆ ಸೇರಿದ ಮಿಲ್ವಾಕಿ ಪಟ್ಟಣದಲ್ಲಿ ಮೊದಲನೆಯ ನ್ಯಾಷನಲ್ ಬ್ಯಾಂಕಿನ ಪ್ರೆಸಿಡೆಂಟಾಗಿದ್ದ ಮಿ॥ ಬಿಜೆಲೋ ಎಂಬಾತನು ಗೋಧಿಯ ವ್ಯಾಪಾರವನ್ನು ಗುಟ್ಟಾಗಿ ಮಾಡುತ್ತಿದ್ದನು. ಇದಕ್ಕೋಸ್ಕರ ಅವನು ಬ್ಯಾಂಕಿನ ೪೫,೦೦,೦೦೦ ರೂಪಾಯಿಗಳನ್ನು ತಿಂದುಬಿಟ್ಟನು. ಈಗ ಅವನನ್ನು ಹಿಡಿದು ತನಿಖೆ ಮಾಡುತ್ತಿದಾರೆ.

◆◆◆◆

ವಿಲಾಯತಿ ರಾಜ್ಯದಲ್ಲಿ ಪಾರ್ಲಿಮೆಂಟ್ ಮೆಂಬರಾದ ಮಿ॥ ಎಫ್. ಎ. ಚಾನ್ನಿಂಗ್ ಎಂಬಾತನು ಆ ರಾಜ್ಯದಲ್ಲೂ ಇಪ್ಪತ್ತೈದು ವರುಷಗಳಿಂದಲೂ ವಾಸ ಮಾಡಿಕೊಂಡಿರುವಂಥಾ ೬೫ ವರುಷದ ಮುದುಕರಿಗೆಲ್ಲಾ ತಲಾ ವಾರ ಒಂದಕ್ಕೆ ೫ ಶಿಲಿಂಗು ಮುಕ್ಕಾಲು ರೂಪಾಯಿನಂತೆ ಪೆನ್ಷನ್ ಕೊಡಬೇಕೆಂದು ಒಂದು ಕಾನೂನಿನ ಮಸೂದೆಯನ್ನು ಬರೆದು ಪಾರ್ಲಿಮೆಂಟಿಗೆ ಒಪ್ಪಿಸಬೇಕೆಂದಿರುತ್ತಾನೆ.

◆◆◆◆

ಮಿ॥ ನಸರ್ವಾನ್ಜಿ ಎಂ. ಕೂಪರ್ ಎಂಬೊಬ್ಬ ಪಾರ್ಸಿಯವನು ಲಂಡನ್ ಪಟ್ಟಣದಲ್ಲಿ ಒಂದು ವರ್ತಮಾನಪತ್ರಿಕೆಯನ್ನು ಪ್ರಕಟಿಸುತ್ತಿದಾನೆ. ಇವನ ತಂಗಿಯಾದರೋ ಇವನ ಹತ್ತಿರ ಇದ್ದುಕೊಂಡು, ವೈದ್ಯ ಮಾಡುತ್ತಾಳೆ. ಇವರಿಬ್ಬರೂ ಅಲ್ಲಿನ ಜನರ ಪ್ರೀತಿ ವಿಶ್ವಾಸಗಳನ್ನು ತುಂಬಾ ಸಂಪಾದಿಸಿಕೊಂಡಿರುವರು. ಪಾರ್ಸಿ ಜನರು ಲಂಡನ್ ಪಟ್ಟಣದಲ್ಲಿ ನಿಂತು ಇಂಥಾ ಕಾರ್ಯಗಳನ್ನು ಮಾಡಿದ್ದು ಇದೇ ಮೊದಲು.

◆◆◆◆

ದಕ್ಷಿಣ ಆಫ್ರಿಕದ ಬೋಯರ್ ಮತ್ತು ಇತರ ದೇಶೀಯ ಪ್ರಜೆಗಳು ಸಭೆಸೇರಿ, ರಾಜ್ಯಭಾರ ವಿಚಾರವನ್ನು ಚರ್ಚೆಮಾಡಿ, ವಿಲಾಯತಿ ದೊರೆಯವರು ತಮಗೆ ಸ್ವತಂತ್ರರಾಜ್ಯಭಾರಾಧಿಕಾರಗಳನ್ನು ಕೊಡಿಸಬೇಕೆಂಬುದಾಗಿ ಒಂದು ಅರ್ಜಿಯನ್ನು ಬರೆದು, ಅದಕ್ಕೆ ಪ್ರಜೆಗಳಿಂದ ರುಜು ಹಾಕಿಸುತ್ತಿದಾರೆ. ಇದುವರೆಗೆ ಈ ಅರ್ಜಿಗೆ ೩೩,೦೦೦ ರುಜುಗಳು ಬಿದ್ದಿರುವವು. ಇದನ್ನು ಚಕ್ರವರ್ತಿಯವರಿಗೆ ಒಪ್ಪಿಸುವರು.

◆◆◆◆

ಮ್ಯಾಂಚೂರಿಯಾ ರಾಜಧಾನಿಯಾದ ಮುಕ್ಡೆನ್ ಪಟ್ಟಣವು ರಷ್ಯಾದವರ ಕೈತಪ್ಪಿ ಹೋಯಿತಷ್ಟೆ. ಇದು ಪ್ರಾಚೀನ ಕಾಲದಿಂದಲೂ ಚೀನಾ ರಾಜ್ಯಕ್ಕೆ ಸೇರಿ, ಆ ಕಾಲದಲ್ಲಿ ಅವರ ರಾಜಧಾನಿಯಾಗಿತ್ತು. ಈಗ ಚೀನಿಯರು ಆ ಪಟ್ಟಣವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಳ್ಳಬೇಕೆಂದೂ, ಅಲ್ಲಿಗೆ ತಮ್ಮ ಸೈನ್ಯವನ್ನು ಕಳುಹಿಸಿ, ಪಟ್ಟಣವನ್ನು ಕಾಪಾಡಿಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕೆಂದೂ ಹರದೂದು ಮಾಡುತ್ತಿದಾರೆ.

◆◆◆◆

ಸಿಂಗಪುರದಲ್ಲಿ ರಷ್ಯಾದವರ ಒಬ್ಬ ಗೂಢಚಾರನು ಫ್ರೆಂಚರ ಕೋಟೆ ಕೊತ್ತಲಗಳನ್ನೂ ಇತರ ಕಟ್ಟಡ ಮುಂತಾದವುಗಳನ್ನೂ ನೋಡಿ, ಅವುಗಳ ನಕ್ಷೆ ಬರೆದುಕೊಳ್ಳುತ್ತಿದ್ದ ಹಾಗೂ ಅವನನ್ನು ಫ್ರೆಂಚ್ ಸರ್ಕಾರದವರು ಹಿಡಿದು ದರ್ಯಾಫ್ತು ಮಾಡುತ್ತಿರುವ ಹಾಗೂ ವರ್ತಮಾನವಿತ್ತು. ಈಚೆಗೆ ಇದು ನಿಜವೆಂದು ತಿಳಿದು ಬಂದಿದೆ. ದರ್ಯಾಫ್ತು ಮಾಡುವಾಗ್ಗೆ ಆ ರಷ್ಯಾದವನು—ನಾನು ರಷ್ಯಾ ಸೈನ್ಯಕ್ಕೆ ಸೇರಿದ್ದು ತಪ್ಪಿಸಿಕೊಂಡು ಬಂದಿರುತ್ತೇನೆ. ರಾಜದ್ರೋಹ ಮಾಡಿದವನೆಂದು ಸರ್ಕಾರದವರು ನನ್ನನ್ನು ಸೈಬೀರಿಯಾದಲ್ಲಿ ಬಂದೀಖಾನೆಯಲ್ಲಿಟ್ಟಿದ್ದರು. ನಾನು ಕೋಟೆ ಕೊತ್ತಲಗಳ ನಕ್ಷೆ ಬರೆಯುತ್ತಿದ್ದುದು ನಿಜವಲ್ಲ ಎಂಬೀ ರೀತಿಯಾಗಿ ಕೈಫಿಯತ್ತು ಬರೆಸಿದಾನೆ. ಜಡ್ಜಿಗಳು ಇವನಿಗೆ ಯಾವ ಶಿಕ್ಷೆ ಕೊಡುವರೋ ತಿಳಿಯಲಿಲ್ಲ.

◆◆◆◆

ಕೋರಿಯಾ ರಾಜ್ಯದಲ್ಲಿ ಜಪಾನಿನವರು ಸಂಪೂರ್ಣವಾದ ಸ್ವಾತಂತ್ರ್ಯವನ್ನು ಪಡೆದು ಅನುಭೋಗಿಸುತ್ತಿದಾರೆ. ಜಪಾನ್ ಸಂಸಾರಗಳು ಅನೇಕವಾಗಿ ಕೋರಿಯಾಕ್ಕೆ ಬಂದು ನೆಲಸಿಬಿಟ್ಟವು. ಇದುವರೆಗೆ ಆರು ಸಾವಿರ ಸಂಸಾರಗಳು ಬಂದಿವೆ ಎಂದು ಹೇಳಬಹುದು. ಪೂರ್ವದಿಂದ ಯಾಲೂ ನದಿಯ ತನಕ ಉದ್ದಕ್ಕೂ ಜಪಾನಿನವರೇ ವಾಸಮಾಡುತ್ತಿದಾರೆ. ಪರರಾಜ್ಯಗಳಿಂದ ಬಂದು, ಕೋರಿಯಾದವರಿಗೆ ಸಲಹೆ ಕೊಡುತ್ತಿದ್ದವರ ಪೈಕಿ ಅನೇಕಾನೇಕರನ್ನು ಜಪಾನಿನವರು ಕೋರಿಯಾದಿಂದ ಹೊರಡಿಸಿಬಿಟ್ಟರು. ಕೋರಿಯಾ ಚಕ್ರವರ್ತಿಯ ಬಳಿಯಲ್ಲಿ ಜಪಾನ್ ದೊಡ್ಡ ಮನುಷ್ಯರನ್ನು ತಂದಿಟ್ಟರು. ಪ್ರಥಮವಾದ ಒಂಬತ್ತು ಸಾವಿರ ಕೋರಿಯಾ ಸೈನಿಕರನ್ನು ವಜಾ ಮಾಡಿ, ಅರಮನೆಯ ಕಾವಲಿಗೆ ಸಾವಿರದ ಎನೂರು ಮಂದಿಯನ್ನು ಮಾತ್ರ ನೇಮಿಸಿರುತ್ತಾರೆ. ಇಷ್ಟಾದರೂ ಕೋರಿಯಾ ಚಕ್ರವರ್ತಿಯೂ ಅವರ ಆಸ್ಥಾನಕ್ಕೆ ಸೇರಿದವರೂ ಇನ್ನೂ ರಷ್ಯಾದವರಿಗೇ ಜಯವಾಗಬಹುದೆಂದು ಎದುರುನೋಡುತ್ತಿದಾರೆ.

ದಕ್ಷಿಣ ಆಫ್ರಿಕಾದಲ್ಲಿ ಸ್ವದೇಶಿಗಳು ಜಮೀನು ಮುಂತಾದ ಸ್ಥಿರಾಸ್ತಿಗಳನ್ನು ಪಡೆಯಲೇ ಕೂಡದೆಂದು ಇದುವರೆಗೆ ನಿಷೇಧವಾಗಿತ್ತು. ಈಚೆಗೆ ಇಂಥಾ ನೋಕದ್ದಮೆಯೊಂದು ಟ್ರಾನ್ಸ್‌ವಾಲ್ ಛೀಫ್ ಕೋರ್ಟಿನಲ್ಲಿ ತನಿಖೆಗೆ ಬಂದು, ದಯರ್ಾಪ್ತಿ ಆದಪ್ಪರಲ್ಲಿ ಛೀಫ್ ಕೋರ್ಟಿನವರು ಅಂಥಾ ನಿರ್ಬಂಧವ್ಯಾವದೂ ಇರಕೂಡ ದೆಂದು ತೀರ್ಮಾನ ಮಾಡಿದಾರೆ. ಇದರಿಂದ ಸ್ವದೇಶಿಗಳು ಅಲ್ಲಿ ಸ್ಥಿರ ಆಸ್ತಿಗಳನ್ನ ಇನ್ನು ಮೇಲೆ ಸಂಪಾದಿಕೊಂಡು ಅನುಭವಿಸು ವಂತಾಯಿತು.

****

ಅರಬ್ಬಿ ದೇಶಕ್ಕೆ ಸೇರಿದ ಯೇಮೆನ್ ಎಂಬ ಪ್ರಾಂತ್ಯದಲ್ಲಿ ತುರ್ಕಿ ಸುಲ್ತಾನರು ೫೦,೦೦೦ ಸೈನ್ಯವನ್ನಿಟ್ಟು ಆಳುತ್ತಾ ಬಂದಿದಾರೆ. ಈಚೆಗೆ ಆ ಪ್ರಾಂತ್ಯದಲ್ಲಿ ಪ್ರಜೆಗಳು ದಂಗೆಯೆದ್ದು ತುಂಬಾ ಗಲಭೆಯನ್ನುಂಟುಮಾಡಿದರು. ಈ ದಂಗೆಯನ್ನು ಅಡಗಿಸಿ ಪ್ರಜಾ ನೆಮ್ಮದಿಯನ್ನು ಕಾಪಾಡಲು ಆ ಸೈನಿಕರಿಂದಾಗಲಿಲ್ಲ. ತುರ್ಕಿ ಯಿಂದ ಹೊಸ ಸೈನ್ಯಗಳೂ ಬರಲಿಲ್ಲ. ಇದನ್ನು ದಂಗೇಕೋರರು ಸ್ವತಂತ್ರಗಳಾಗಿ ಕಾರ್ಯಗಳನ್ನು ನಡಸುತ್ತಾ, ಜಾಮಾರ್, ಯೇರಿಂ, ಅನೇಸಾ, ಹೊಡಿಯೆ ಎಂಬೀ ಪಟ್ಟಣಗಳನ್ನು ಗೆದು ಕೊಂಡು, ಏಪ್ರಿಲ್ ತಿಂಗಳಂದಲೂ ಸಾನಾ ಎಂಬ ದೊಡ್ಡ ಪಟ್ಟಣ ವನ್ನ ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ತುಂಬಾ ಸಾಹಸ ಪಡುತ್ತಿದಾರೆ. ಇದರಿಂದ ಆ ಪ್ರಾಂತ್ಯದಲ್ಲಿ ಮತ್ತೆ ತುರ್ಕಿಯವರ ಅಧಿಕಾರವು ನೆಲೆಗೊಳ್ಳುವದು ತುಂಬಾ ಪ್ರಯಾಸವೆಂದು ಕಾಣುವದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

ಪ್ರತ್ಯಕ್ಷದರ್ಶಿ, ಬೆಂಗಳೂರು —"ವಿಶ್ರಾಂತಿಪರ್ಯಟನ" ಎಂಬ ನಿಮ್ಮ ಬಾತ್ಮಿಯಲ್ಲಿ, ಓದಲು ಕುತೂಹಲವನ್ನು ಹುಟ್ಟಿಸುವಂಥಾ ಸಂಗತಿಗಳ್ಯಾವೂ ಕಂಡುಬರುವದಿಲ್ಲವಾಗಿ ಈ ಬಾತ್ಮಿಯನ್ನು ಪ್ರಕಟಿಸಲಾರೆವು

ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಸ್ಕೂಲಿನ ಉಪಾಧ್ಯಾಯರಿಂದ ಈ ಸಲ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯುಂಟಾಗಿದೆ ಎಂದು ಒಬ್ಬ ಬಾತ್ಮಿದಾರರು ಬರೆದಿದಾರೆ. ಅವರು ಈ ವಿಷಯವನ್ನು ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರಿಗೂ ಮೆ॥ ಭಾಭಾ ಯವರಿಗೂ ಬರೆದುಕೊಂಡಲ್ಲಿ ಅವರು ಕಷ್ಟ ನಿವಾರಣೆ ಮಾಡುತ್ತಾರೆನ್ನುವದಕ್ಕೆ ಸಂಶಯವಿಲ್ಲ. ಅದಕ್ಕಿಂತ ಮೊದಲು ನಾವು ಇಂಥಾ ಬಾತ್ಮಿಯನ್ನ ಪ್ರಕಟಿಸಲಾರೆವು

ಕೃಷ್ಣರಾಜಪೇಟೆಯ ಉತ್ಸವಗಳು, ತಿಪಟೂರು ತಾಲ್ಲೂಕು ಬೆಸಿಗೆ ಬಾತ್ಮಿ, ಗುಡಿಬಂಡೆ ವಿಚಾರ—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು —ಎಡಿ]

ಕರೆಸ್‌ಪಾಂಡೆನ್ಸ್.

ವ್ಯಾಪಾರವಿಷಯ—ಜವಾಬು.

ಅಯ್ಯಾ,

ತಮ್ಮ ವೃತ್ತಾಂತ ಪತ್ರಿಕೆ ತಾ॥ ೪ನೇ ಮೇ ೬ ನೇ ಪುಟದಲ್ಲಿ ವೆಂಕಟರಮಣಪ್ಪನು ಕೇಳುವ ಅಡ್ರೆಸ್ಸಿನ ವಿಷಯದಲ್ಲಿ ಪತ್ರಿಕೇ ಮೂಲಕ ತಿಳಿಯುವದಕ್ಕಿಂತ ಕೊಯಂಬತ್ತೂರಿಗೆ ರೂಬ್‌ರೂಬ್ ಹೋಗಿ ಹೂಲ್ ವ್ಯಾಪಾರಸ್ಥರನ್ನು ಗೊತ್ತುಮಾಡಿಕೊಂಡು ಬರುವದೂ ಉತ್ತಮ ಎಂಬದಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರಿಕೆ.

೬—೫—೦೫. ಬಾತ್ಮಿದಾರ್.

ಔಷಧ ಬೇಕಾದ—ಜವಾಬು.

ಅಯ್ಯಾ,

ತಾ॥ ೮—೫—೦೫ ರ ಪತ್ರಿಕೆಯಲ್ಲಿ ಎಚ್. ವಿ ಎಸ್. ಭಟ್ಟ ಎಂಬುವರು ತಿಳಿಯಪಡಿಸಿರುವ ಅಕಸ್ಮಾತ್ತಾಗಿ ರಾಜಾ ಪಾರ್ಟು ಮಾಡತಕ್ಕವರಿಗೆ ಸ್ವರ ಹೋಗಿ ಮಾತನಾಡುವದಕ್ಕೂ ಹಾಡಿಕೆ ಹಾಡುವದಕ್ಕೂ ಸಹಾ ನಮ್ಮಲ್ಲಿ ಸ್ವರ ನಿಂತಿರುವುದಕ್ಕೆ ತಕ್ಕ ಔಷಧಗಳು ತಯಾರಾಗಿರುತ್ತೆ. ದೇಹಸ್ಥಿತಿ ನೋಡಿ ಗುಣಪಡಿಸಲು ಸಿದ್ಧನಾಗಿರುತ್ತೇನೆ.

ಯಲಹಂಕದ ಬಾಗಲು ಕೆ. ರಂಗಸ್ವಾಮಪ್ಪ,
ಅಂಚೇಪೇಟೆ, ಬೆಂಗಳೂರು ಸಿಟಿ. ಹಿಂದೂ ವೈದ್ಯಶಾಲಾ.

ಕ್ರಯವಿಲ್ಲದೆ ದೊರೆಯುವ ಇದೊಂದು ಪುಸ್ತಕ.

ಅಯ್ಯಾ,

ಈಗ ನಾಲ್ಕಾರು ವಾರಗಳ ಕೆಳಗೆ ತಮ್ಮ ವೃತ್ತಾಂತ ಪತ್ರಿಕೆಯ ೧—೪ ನೆಯ ಪುಟಗಳಲ್ಲಿ ಸವಿನುಡಿಯೆಂಬ ಪುಸ್ತಕವು ಕ್ರಯವಿಲ್ಲದೇನೇ ಭಾರತಿಸಂಪಂಗಿ ರಾಮೈಯನವರಲ್ಲಿ ದೊರೆಯುತ್ತೆ ಎಂದು ಸೂಚಿಸಿರುತ್ತೀರಿ. ಸಹರಿಯವರಿಗೆ ಪುಸ್ತಕಕ್ಕೋಸ್ಕರ ಕಾಗದ ಬರದರೆ ಪುಸ್ತಕ ಹೋಗಲಾಗಿ ನಮಗೆ ಜವಾಬ್ ದೊರೆಯುವದೇ ಕಷ್ಟವಾಗುತ್ತೆ. ಇದರ ಅಂತರಂಗವು ನಮಗೆ ಗೊತ್ತಾಗುವದಿಲ್ಲ. ಆದ್ದರಿಂದ ಇದರ ನಿಜಸ್ಥಿತಿಯನ್ನೆಲ್ಲಾ ವಿವರವಾಗಿ ತಮ್ಮ ಪತ್ರಿಕೆಯ ಮೂಲಕ ತಿಳಿಸೋಣವಾಗಬೇಕಾಗಿ ಅಪೇಕ್ಷಿಸುತ್ತೇನೆ

೫—೫—೦೫, ಕೆ. ಟಿ. ದೇವಪ್ಪ

ತೀರ್ಥಹಳ್ಳಿ ಟವರ್ ಮ್ಯುನಿಸಿಪಾಲ್ಟಿ ಸುಂಕವು

ಅಯ್ಯಾ,

ಈ ಟವರ್‌ನಲ್ಲಿ ಕೆಲವು ಮಾಲಿಗೆ ಸುಂಕ ವಸೂಲ್ ಆಗುತ್ತೆ. ಅದು ಈಚೆಗೆ ನೌಕರರು ಜಿದ್ದು ಆಗಿ ಕೆಲವು ಮಾಲಿಗೆ ದುಡ್ಡು ಕೆಗೆದುಕೊಂಡು ಇಳಿಸುವದು, ಕೆಲವು ಮಾಲಿಗೆ ಹಾಸಲು ವಸೂಲು ಮಾಡುವದು, ಹೀಗೆ ಮಾಡಿ ಹುಟ್ಟುವಳಿ ಕಡಮೆ ಆಗುವದಾಗಿ ತಿಳಿಯುತ್ತೆ. ಇದು ವಿಚಾರಣೆ ಬಗ್ಗೆ ಅರೇಳುದಿನ ಮುಂಬರುಗಳು ಇರುವದಾಗಿ ತಿಳಿಯುತ್ತೇನೆ ಅವರು ಒಂದು ದಫಾಸೂ ವಿಚಾರಣೆಗೆ ಬಂದಂತೆ ತಿಳಿಯುವದಿಲ್ಲ ಅಧಿಕಾರರಿಗೆ ಈ ಸಂಗತಿ ತಿಳಿಯ ಬಂದರೆ ಅವರುನು ಗಮನಕೊಡುವುದೇ ಇಲ್ಲ. ಇದು ನೋಡಿದರೆ ಅನುಮಾನಕ್ಕೆ ಆಸ್ಪದವಾಗಿದೆ ಇದು ಏನುಕಾರಣದಿಂದ ಹೀಗೆ ಆಗುತ್ತೋ ತಿಳಿಯುವದಿಲ್ಲ. ಇದೂ ಅಲ್ಲದೆ ಕೆಲವು ಅಂಗಡಿಕಾರರು ನೌಕರರಿಗೆ ವರ್ತಮಾನವಿಲ್ಲದ ಹಾಗೆ ಕೆಲವು ಮಾಲು ತಂದು ಅವರೇ ಇಳಿಸಿಕೊಂಡು ಬಿಡುವದಾಗಿ ತಿಳಿಯುತ್ತೆ. ಆದ್ದರಿಂದ ಈ ರೋಡ್ ಕಾವಲುಗಾರನಿಗೆ ಕೂರಲಿಕ್ಕೆ ಸ್ಥಳವಿಲ್ಲ ಆದ್ದರಿಂದ ಸ್ಥಳ ಮಾಡಿಸಿ ಕೊಟ್ಟು ರೋಡಿನಲ್ಲಿ ತಡೆಯ ಗೇಟ್ ಇಡಿಸಿದರೆ ಕಟ್ಟಿನ ವಂಚನೆ ನಡೆಯಲಾರದಾಗಿ ನಾವು ನಂಬಿದ್ದೇವೆ

೩—೫—೦೫. ಚಂದಾದಾರ.

ಕುಂಟರಿಗೆ ಶಿಕ್ಷೆಯಾದದ್ದು

ಅಯ್ಯಾ,

ತುಮಕೂರು ತಾಲ್ಲೂಕು ಕೋಲಾಳವೆಂಬ ಗ್ರಾಮದಲ್ಲಿ ಕಳೆದ ಮಾರ್ಚಿ ೩೦ ನೇ ತಾರೀಖು ಸೋಮವಾರ ರಾತ್ರಿ ಕಸಬಾ ಶ್ಯಾನುಭೋಗ್ ವೆಂಕಟರಮಣಯ್ಯ, ಚಿಕ್ಕಳ್ಳಿ ಶ್ಯಾನುಭೋಗ್ ಟೆಂಕಟರಾಮಯ್ಯ, ಬ್ಯಾಟರಾಯಸ್ವಾಮಿ ಅರ್ಚಕ ವೆಂಕಟಾಚಾರ್ರು, ಪಂಚಾಂಗದ ವೆಂಕಟಪತ್ಯಯ್ಯ, ರಾಮಸುಬ್ಬಯ್ಯ, ಇವರುಗಳು ಆ ದಿನ ರಾತ್ರಿ ಕಾಮಣ್ಣನನ್ನು ಸುಟ್ಟು, ಪಟೇಲ ಸಬ್ಬಯ್ಯರಾದ ಮೆ॥ ದಫೇದಾರ್ ರಾಮಯ್ಯನವರನ್ನು ಬಲಾತ್ಕಾರದಿಂದ ಮಾನಭಂಗಮಾಡಿ, ಕಾಮಣ್ಣನ ಸುತ್ತಲೂ ತಿರಿಗಿಸಿದ್ದಲ್ಲದೆ. ಆ ದಿನ ಬೆಳಿಗ್ಗೆ ಸುಣ್ಣಕಲ್ಲು ಜಾತಿಗೆ ಸೇರಿದ ರಾಮುಲ್ಲಿ ಎಂಬ ಒಬ್ಬ ಹೆಂಗಸಿನ ಮನೆಗೆ ನುಗ್ಗಿ, ಅವಳ ತಲೆಗೂ ಮೇಲೆ ಬೂದಿ ಸವರಿ, ಅಂತರ್ಯ ಇಂದ್ರಿಯಗಳಿಗೆಲ್ಲ ಬೂದಿ ಸವರಿ, ಹೇಗನ್ನು ಮಾನಭಂಗ ಪಡಿಸಿದರು. ಇಂಥ ದುಷ್ಕೃತ್ಯವನ್ನು ನಡಿಸಿದ ಅಪರಾಧಿಗಳನ್ನು ಹಿಡಿದು ಪೋಲೀಸಿನವರು ಕೇಸ್ ಕೊಟ್ಟರು. ಕಡೆಲಾಗಿ ತುಮಕೂರು ತಾಲ್ಲೂಕು ಮ್ಯಾಜಿಸ್ಟ್ರೇಟರವರು ಸದರಿ ಅಪರಾಧಿಗಳಿಗೆ ೭ ದಿನಕ್ಕೆ ಕಡಮೆ ಇಲ್ಲದೆ ೧೫ ದಿವಸಕ್ಕೆ ಹೆಚ್ಚಿಲ್ಲದೆ ಕಠಿಣ ಸಜಾವೂ ರಾಮಸುಬ್ಬಯ್ಯನಿಗೆ ವಿನಹ ಉಳಿದ ಅಪರಾಧಿಗಳಿಗೆ ಅವರವರುಗಳ ತಪ್ಪಿತಕ್ಕನುಗುಣವಾಗಿ ೧೦ ರೂ ಲಾಗಾಯತು ೭೦ ರೂ ವರೆಗೆ ಜುಲ್ಮಾನೆಯೂ ವಿಧಿಸಿದರು. ಮ್ಯಾಜಿಸ್ಟ್ರೇಟರವರು ಸದರಿ ಅಪರಾಧಿಗಳಿಗೆ ಶಿಕ್ಷೆ ಕೊಡದಿದ್ದರೆ ಗ್ರಾಮದಲ್ಲಿ ಬಡವರ ಗತಿ ಏನಾಗುತ್ತಿತ್ತೋ ವಾಚಕರೇ ಆಲೋಚಿಸಬೇಕು

೩೦—೪—೦೫. ಚಂದಾದಾರ.

ಮಲೆನಾಡಿನ ಭೂಗುಣಿ ಕಂದಾಯ.

ಅಯ್ಯಾ,

ಮಲನಾಡಿನಲ್ಲಿ ಅಡಿಕೆ ಬೆಳೆಯತಕ್ಕ ಭೂಮಿಗೆ ಯಕರೆ ಒಂದರ ೧೦—೧೫ ರೂಪಾಯಿ ಕಂದಾಯ ದಾಖಲ್ ಮಾಡಿರುತ್ತಾರೆ ಅಲ್ಲದೆ ಅಡಿಕೆ ಬೆಳೆಯತಕ್ಕ ಭೂಮಿ ಕಂದಾಯವಲ್ಲದೆ ಅಡಿಕೆಗೆ ಮಣ ಒಂದಕ್ಕೆ ಮುಕ್ಕಾಲು ರೂಪಾಯಿ ಸುಂಕ ದಾಖಲ್ ಮಾಡಿರುತ್ತೆ. ಒಂದು ಬಾಗಕ್ಕೆ ಕೊಡುವ ಕಂದಾಯಕ್ಕಿಂತ ಅದರಲ್ಲಿ ಬೆಳದಿರತಕ್ಕ ಫಸಲಿಗೆ ದಾಖಲ್ ಮಾಡಿರುವ ಸುಂಕವು ಭೂಮಿಯ ಕಂದಾಯದ ಎರಡರಷ್ಟು ಆಗುತ್ತೆ. ಇದು ನಿಜವೋ ಸುಳ್ಳೊ ಎಂಬುವುದು ಸರ್ಕಾರದಲ್ಲಿ ದಾಖಲೆ ನೋಡಿಸಿದರೆ ತಿಳಿಯುತ್ತೆ. ಈಚೆಗೆ ಕೊಳೆ ರೋಗದಿಂದ ಕಂದಾಯ ಕೊಡದೆ ಕೆಲವರು ಜಮೀನು ಬಿಟ್ಟು, ಸಾಲಕ್ಕೆ ಮನೆಮಾರಿ ಊರು ಬಿಟ್ಟು ಹೋಗಿದ್ದಾರೆ. ಕೆಲವರು ಜಮೀನು ಬೀಡುಮಾಡಿ ಸಾಲ ತೆಗೆದುಕೊಂಡು ಸಾಲ ತೀರಿಸಲಿಕ್ಕೆ ಭೂಮಿಯ ಅಡಿಕೆಯಿಂದ ಸಾಲ ತೀರಿಸುತ್ತಾರೆ. ಕೆಲವರು ಸಾಲ ಮಾಡಿ ಸಾಲ ಮತ್ತು ಅದರ ಜಮೀನು ಕಂದಾಯ ಕೊಡಲಿಕ್ಕೆ ಶಕ್ತಿಯಿಲ್ಲದೆ ಇದ್ದವರು ಕಂದಾಯ ಕೊಡಲಿಲ್ಲವೆಂತ ಜಮೀನು ಹರಾಜು ಮಾಡಿಸುತ್ತಾರೆ. ಅಗ್ಗ ಸಾಲ ಕೊಟ್ಟವರು ಬೀಡುಮಾಡಿಕೊಂಡ ಜಮೀನು ಕಂದಾಯದ ಹಣ ತೀರಿಸಿ, ಜಮೀನು ಉಳಿಸಿಕೊಂಡು, ಸಾಲದ ಹಣವಿನ ಜೊತೆಗೆ ಈ ಜಮೀನು ಕಂದಾಯದ ಹಣವು ಸೇರಿಸಿ, ದಾವಾ ಮಾಡಿ ಮನೆ ಜಂಗಿಗೆ ವಗೈರೆ ಕೋರ್ಟು ಮೂಲಕ ಜಫ್ತಿ ಹರಾಜು ಮಾಡಿಸಿ, ವಹಿಸಿಕೊಂಡು, ಖಾತೆದಾರರಿಗೆ ಯಾ ಗುತ್ತಿಗೆ ಮಾಡಿಕೊಂಡವರಿಗೆ ಏನೂ ಇಲ್ಲದ ಹಾಗೆ ಮಾಡಿ ಧ್ವಂಸಮಾಡಿಸುತ್ತಾರೆ. ಈ ಸಂಗತಿಗೆ ನಿಜವೋ ಸುಳ್ಳೋ ಎಂಬುವುದು ಸರ್ಕಾರದವರು ಯೋಚನೆ ಮಾಡದೆ ಇರುವದಿಲ್ಲ ಎಂತ ತೋರುತ್ತೆ. ಆದ್ದರಿಂದ ಇನ್ನಾದರೂ ಸರ್ಕಾರದವರು ಯೋಚನೆ ಮಾಡಿ, ಜಮೀನು ಕಂದಾಯ ಕಾಯಂ ಇಟ್ಟು, ಫಸಲು ಮೇಲೆ ಮಾಡಿರುವ ಸುಂಕವನ್ನು ವಜಾ ಮಾಡಿಸಿದರೆ ಪ್ರಜೆಗಳು ಸುಖದಿಂದ ಇದ್ದಾರಾಗಿ ನಂಬುತ್ತೇನೆ.

೩—೫—೦೫ ಚಂದಾದಾರ.

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರದ ಮುಖ್ಯ ತಂತೀ ವರ್ತಮಾನಗಳು.

ಯುದ್ಧದ ಜಹಜುಗಳ ಓಡಾಟವು.

ರಷ್ಯಾದವರ ಬಾಲ್ಟಿಕ್ ಯುದ್ಧದ ಜಹಜುಗಳು ಕ್ಯಾನ್ರ್ಯಾ, ಸ್ಟೆಗಾನ್, ಈ ಪ್ರಾಂತ್ಯಗಳಲ್ಲಿ ಬಂದು, ಪೋರ್ಟ್ ದಾಯತ್ ನೋಟಾಸ ಬಂದರುಗಳಲ್ಲಿ ನಿಂತಿವೆ. ಈ ರಷ್ಯಾದವರ ಜಹಜುಗಳಿಗೆ ಇಂಡೂ ಚೀನಾ ಎಂಬ ಫ್ರೆಂಚರ ಸ್ವಾಸ್ಥ್ಯದಿಂದ ರಷ್ಯಾದವರು ಗುಟ್ಟಾಗಿ ಕಲ್ಲಿದ್ದಲನ್ನೂ ಇತರ ಪದಾರ್ಥಗಳನ್ನೂ ತರಿಸಿಕೊಳ್ಳುತ್ತಿದಾರೆಂದು ಜಪಾನಿನವರು ಫ್ರೆಂಚರ ಮೇಲೆ ಆಕ್ಷೇಪಣೆ ಮಾಡಿದರು ಈ ವಿಷಯವನ್ನು ತನಿಖೆಮಾಡಿ ಫ್ರೆಂಚರು ತಮ್ಮ ಕಡೆಯ ಅಧಿಕಾರಿಗೆ ಹಾಗೆ ರಷ್ಯಾದವರಿಗೆ ಸಾಮಾನು ಒದಗಿಸಿಕೊಡದಂತೆ ನೋಡಿಕೊಳ್ಳಬೇಕೆಂದು ಹುಕುಂ ಕೊಟ್ಟಿದಾರೆ. ಆದರೂ ಈ ವಾಗ್ವಾದವು ನಿಂತಿಲ್ಲ.

ಚೀಣೆಯವರು ಈ ಶತ್ರುಗಳ ಪೈಕಿ ಒಬ್ಬರಿಗೆ ಸಹಾಯ ಮಾಡುತ್ತಿದಾರೆಂದು ತಿಳಿದು ಬಂದಕಾರಣ ಅಮೇರಿಕದವರೂ ಸಿಯಾಮಿಯವರೂ ಚೀಣೆಯವರಿಗೆ ಖಂಡಿತವಾದ ಕಾಗದ ಬರೆದು, ಯಾರಿಗೂ ಸಹಾಯ ಮಾಡಕೂಡದೆಂದು ಎಚ್ಚರಿಸಿದಾರೆ.

ಕಾಂರಾನ್ ಎಂಬ ಬಂದರಿನಲ್ಲಿದ್ದ ರಷ್ಯಾ ಯುದ್ಧದ ಜಹಜುಗಳೆಲ್ಲಾ ಫ್ರೆಂಚರ ಬಂದರುಗಳನ್ನು ಬಿಟ್ಟು, ಅನ್ನಾಂ ರಾಜ್ಯದ ಬಳಿಗೆ ಪ್ರಯಾಣ ಮಾಡಿದವು ಇದುವರೆಗೆ ಈ ಜಹಜುಗಳಿಗೂ ಸೈನಿಕರಿಗೂ ಬೇಕಾಗಿದ್ದ ಕಲ್ಲಿದ್ದಲನ್ನೂ ಅಕ್ಕಿ, ಹಿಟ್ಟು, ಮಾಂಸ, ತರಕಾರಿ, ಗೋಕಾಯಿಗಳು, ಬ್ರಾಂದಿ, ವೈನ್, ಮೊದಲಾದ ಪದಾರ್ಥಗಳನ್ನೂ ಫ್ರೆಂಚರೇ ಒದಗಿಸಿ ಕೊಡುತ್ತಿದ್ದರೆಂದು ಪ್ರಕಟವಾಗಿದೆ.

ವ್ಲಾಡಿವೋಸ್ಟಾಕಿನ ಜಹಜುಗಳು.

ಲಂಡನ್, ಮೇ ೬.—ವ್ಲಾಡಿವೋಸ್ಟಾಕಿನಲ್ಲಿರುವ ರಷ್ಯಾ ಜಹಜುಗಳು ನೆನ್ನೆ ಹೊಕ್ಕೈಡೋ ಎಂಬಲ್ಲಿಗೆ ಬಂದು, ಜಪಾನಿನವರ ಹಡಗುಗಳ ಮೇಲೆ ನುಗ್ಗಿ ಸ್ವಲ್ಪ ಹೊತ್ತು ಹೊಡೆದಾಡಿ, ಹಿಂದಕ್ಕೆ ಹೋದವು ಒಂದು ಜಹಜನ್ನು ಸುಟ್ಟುಹಾಕಿದರು. ಅದರಲ್ಲಿದ್ದವರೆಲ್ಲಾ ಹೊಡೆಯೇ ತಲೆ ತಪ್ಪಿಸಿಕೊಂಡರು

ರಷ್ಯಾ ಚಕ್ರವರ್ತಿಯವರು ೧,೦೦೦ ಮಂದಿ ಸೈನ್ಯದ ಹಾಡ್ಡೇದಾರರನ್ನು ಅರಮನೆಗೆ ಕರೆಸಿಕೊಂಡು, ಅವರಿಗೆ ಬುದ್ಧಿಮಾತು ಹೇಳಿ, ಬಹುಮಾನ ಕೊಟ್ಟು, ಯುದ್ಧಭೂಮಿಗೆ ಕಳುಹಿಸಿದರು

ಭೂಯುದ್ಧವು

ಲಂಡನ್, ಮೇ ೭ —ಜಪಾನಿನವರು ಟಾಂಘಾವಾ ಎಂಬ ಪ್ರಾಂತ್ಯದಿಂದ ಉತ್ತರದಿಕ್ಕಿಗೆ ನುಗ್ಗಿ ಹೋಗಿ, ರಷ್ಯಾದವರ ಕಾವಲಿನ ಸೈನ್ಯವನ್ನು ಸೋಲಿಸಿ ಓಡಿಸಿ, ವೇಯಾಕಾಲು ಎಂಬ ರಾಜ್ಯವನ್ನು ಆಕ್ರಮಿಸಿಕೊಂಡರು. ತಾ. ೧ ರಲ್ಲಿ ಅವರು ಮತ್ತೆ ಘಾಸಮಾನಿಂದ ಪಂಚಾಪಾಕ್ಕೆ ನುಗ್ಗಿ ಹೋಗಿ, ತಾ ೪ ರಲ್ಲಿ ರಷ್ಯಾದವರನ್ನು ಎರಡು ಸ್ಥಳಗಳಿಂದ ಓಡಿಸಿ, ಆ ದಿನ ಸಾಯಂಕಾಲವೇ ಪಾಪಾಸ್ಯಂ ಎಂಬ ರಾಜ್ಯವನ್ನು ಸ್ವಾಧೀನಪಡಿಸಿಕೊಂಡಾರೆಂದು ಜಪಾನ್ ಸರ್ಕಾರದವರು ತಿಳಿಸಿದಾರೆ

ತಾಲ್ಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರ —ಇಲ್ಲಿ ಪ್ಲೇಗ್ ನಿಂತು ಇದೆ ಮುಕ್ಕಾಲುಭಾಗದಷ್ಟು ಜನರು ಊರು ಸೇರಿದಾರೆ ಇನ್ನು ಕಾಲು ಪಾಲು ಜನರು ಸೇರಬೇಕಾಗಿದೆ. ಈಗ ಹೆಚ್ಚಾಕಡಿಮೆ ಪ್ರತಿ ಮನೆಯಲ್ಲಿಯೂ ಜ್ವರ, ಛಳಿಯಿಂದ ಒಬ್ಬಿಬ್ಬರು ಕಾಯಿಲೆ ಬಿದ್ದಿದಾರೆ. ಸ್ಕೂಲುಗಳೆಲ್ಲಾ ತೆರೆಯಲ್ಪಟ್ಟು, ಬೇಸಿಗೆ ರಜವನ್ನು ಸಹ ಕೊಡದೆ ಮುತುವರ್ಜಿಯಿಂದ ಕೆಲಸಗಳನ್ನು ಉಪಾಧ್ಯಾಯರು ನಡಿಸುತ್ತಾರೆ.—ಇಲ್ಲಿ ಕೈಗಾರಿಕೆ ಸ್ಕೂಲು ಸ್ಥಾಪಿತವಾಗಿ ಒಂದು ವರುಷವಾದರೂ ಇಲ್ಲಿಂದ ಬೊಂಬಾಯಿಗೆ ಕಳುಹಿಸಿದ ಪದಾರ್ಥಗಳಿಗೆ ಒಂದೇ ಒಂದು ಮೆಡಲನ್ನು ಕಳುಹಿಸಿದಾರೆ. ನೆಯಿಗೆ ಮತ್ತು ಮರಗೆಲಸ ಮಾಡುತ್ತಾರೆ. ಮರಗೆಲಸದಲ್ಲಿ ಹುಡುಗರು ತಕ್ಕಮಟ್ಟಿಗೆ ತಯಾರಾಗಿ ಇರುವರು ಮೆ॥ ಕೊಂಗಾಡಿಯಪ್ಪನವರ ಮತ್ತು ಮೆ॥ ಡೇವಿಡ್ ಅಯ್ಯನವರ ತುಂಬಾ ಮುತುವರ್ಜಿಯಿಂದ ಇಷ್ಟು ಕ್ಷಿಪ್ರದಲ್ಲಿ ನಮ್ಮ ಮೈಸೂರು ದೇಶದಲ್ಲಿ ಹೆಸರುವಾಸಿಯನ್ನು ಹೊಂದಿತು ಇಲ್ಲಿ ಹೆಂಗಸರು ಸಹ ನೆಯಿಗೆಯನ್ನು ಕಲಿಯುವದು ಮತ್ತೂ ವಿಶೇಷವಾಗಿದೆ ಇನ್ನು ಮುಂದಕ್ಕೆ ಇನ್ನೂ ಬೇರೆ ಕೆಲಸಗಳನ್ನು ಕಲಿಸುವದಕ್ಕೆ ಯತ್ನಮಾಡುತ್ತಾರೆ.—ನೀರಿಗೆ ಕಷ್ಟವಾಗಿದೆ. ೧೨—೧೩ ಆಳುದ್ದದ ಭಾವಿಯಿಂದ ನೀರು ಸೇದುವದು ಕಷ್ಟ ನೀರಿನ ನಲ್ಲಿಗಳನ್ನು ಇಡಬೇಕೆಂದು ಇಲ್ಲಿನವರು ಅರ್ಜಿ ಬರೆದುಕೊಂಡು ಇದಾರೆ. ಮೇಲಿನವರು ಇದಕ್ಕೆ ಗಮನ ಕೊಡುವರು ಧರ್ಮ ನೀರಿಗೆ ಕಷ್ಟವಾಗಿರುವ ಸಮಯದಲ್ಲಿ, ದೇವಾಂಗದ ಚೌಡಯ್ಯ ಎಂಬುವರು ಸ್ಕೂಲಿನ ಮುಂಭಾಗದಲ್ಲಿ ಅರವಟ್ಟಿಗೆ ಇಡಿಸಿ, ಪ್ರತಿ ಸಂಜೆಯ ದಿನವೂ ನೀರುಮಜ್ಜಿಗೆಯನ್ನು ಸಹ ಕೊಡಿಸುತ್ತಾರೆ. ಇನ್ನೊಂದು ಕಡೆಯೂ ಇನ್ನೊಬ್ಬರು ಹೀಗೆ ಅರವಟ್ಟಿಗೆ ಇಡಿಸಿದಾರೆ

ತಿಪಟೂರು.—ಬಿಸಲು ಜೋರು ನೀರಿನ ಅಭಾವ ತುಂಬಾ ಮಳೆ ಇಲ್ಲ. ಧಾರಣೆ ಚಡಾವು. ಜನಗಳಿಗೆ ಭಯ ಸಂಕಟ. ಇಲ್ಲಿನ ನಮ್ಮ ಅಮಲ್‌ದಾರ್ ಮೆ॥ ಸಿ. ವಿ. ನಾರಾಯಣರಾಯರವರು ಇಲ್ಲಿಗೆ ಬಂದು ಸುಮಾರು ೬—೭ ವರುಷಗಳಾಯಿತು. ತುಂಬಾ ನಾಹಿಯತ್ತು ಮತ್ತು ಸರ್ವಿಸುದಾರರು. ಈ ಮಹನೀಯರು ಇಲ್ಲಿಗೆ ಬಂದನಂತರ ತುಂಬಾ ಉಪಕಾರದ, ಚಿರಸ್ಮರಣೀಯವಾದ ಕೆಲಸಗಳನ್ನು ಮಾಡಿಸಿದರು. ಕೆಲಸವನ್ನು ಮಾತ್ರ ಸೂಚಿಸಿದೆ ಇದೇ ತಾಲ್ಲೂಕು ಪಡ್ಡೆಹಳ್ಳಿ ದೇವಸ್ಥಾನಕ್ಕೆ ಧರ್ಮದರ್ಶಿಗಳು

ವಾಸುಕಾನೆಂಬು ಗಡ್ಡಾಬಿಕೊಂಡು, ದೇವಸ್ಥಾನದ ಉತ್ಪತ್ತಿಯು ಕೈಲ್ಲಾ ಸಿಕ್ಕಿದವರು ದುಂದುಮಾಡಿ, ದುರುಪಯೋಗ ಪಡಿಸುತ್ತಾ ಇದ್ದ ಕೆಟು ಬ್ಯಾಲೆಷ್ಟುಗಳನ್ನು ಇಟ್ಟು, ಇದೇ ತಾಲ್ಲೂಕ್ ಹಿಂದಿನ ಅಮಲ್ದಾರ್ ಮ॥ ರಂಗನಾಥರಾಯರ ಕಾಲದಿಂದ ಸುಮಾರು ... ಖರ್ಚು ಮಾಡಿದರು. ಈ ಅಮಲ್ದಾರರು ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಿ, ಮೇನೇಜರನ್ನು ನೇಮಿಸಿ, ಒಳ್ಳೇ ಸ್ಥಿತಿಗೆ ತಂದರು. ಈಗ ತಿಂಗಳಿಗೆ ಇದರಿಂದ ೫೦—೬೦ ರೂಪಾಯಿ ಉತ್ಪತ್ತಿ ಖಜಾನೆಗೆ ಸೇವಿಂಗ್ಸ್ ಇರಸಾಲು ಬರುತ್ತಿದೆ —ಇದೇ ತಾಲ್ಲೂಕು ಅಕ್ಕಿಹಾಳುಪೆಟ್ಟ ನರಸಿಂಹಸ್ವಾಮಿ ದೇವಸ್ಥಾನವು ಪ್ರಖ್ಯಾತವಾದದ್ದು. ಭಕ್ತಾದಿಗಳಿಂದ ಬರುವ ಅನೇಕ ಕಾಣಿಕೆ ಉತ್ಪತ್ತಿಯು ಸದುಪಯೋಗವಿಲ್ಲದೆ ದುರುಪಯೋಗವಾಗುತ್ತಿದ್ದದ್ದನು ನಿಲ್ಲಿಸಿ, ಮುಜರಾಯಿ ಇಲಾಖೆಗೆ ಸೇರಿಸಿ, ಒಬ್ಬ ಗುಮಾಸ್ತೆ, ಒಬ್ಬ ಗೋಲ್ಲನನ್ನು ಇರಿಸಿ, ಶಿಥಿಲವಾಗಿದ್ದ ಪಲ್ಲಕ್ಕಿ ವಗೈರೆ ಸಾಮಾನುಗಳನ್ನು ಜೀರ್ಣೋದ್ಧಾರ ಮಾಡಿಸಿ, ತುಂಬಾ ಅಭಿವೃದ್ಧಿಗೆ ತಂದರು. ಇದರಿಂದ ತಿಂಗಳಿಗೆ ೧೫೦ ... ೨೦ ರೂಪಾಯಿಗಳಂತೆ ಉತ್ಪತ್ತಿ ಸೇವಿಂಗ್ಸ್ ಇರಸಾಲು ಬರುತ್ತಿದೆ —ಇದೇ ತಾಲ್ಲೂಕಿಗೆ ಸೇರಿದ ಕೆರಗೋಡುಯಲ್ಲಿರುವ ಶಂಕರೇಶ್ವರ ದೇವಸ್ಥಾನವು ತುಂಬಾ ಪ್ರಖ್ಯಾತವಾದದ್ದು. ಇಲ್ಲಿ ನಂಜನಗೂಡು ಶ್ರೀನಂಜುಂಡೇಶ್ವರ ದೇವರಿಗೆ ಸಲ್ಲತಕ್ಕ ಹರಿಕೆಗಳನ್ನೂ ಭಕ್ತಾದಿಗಳು ಅನೇಕ ದೂರದಿಂದ ಬಂದು, ಅಲ್ಲಿಗೆ ಬದಲಾಗಿ ಇಲ್ಲಿಯೇ ಕಪ್ಪ, ಕಾಣಿಕೆ, ಮುಂಡಿ, ವಗೈರೆ ಸಲ್ಲಿಸುತ್ತಾರೆ. ಈ ದೇವರ ಹೆಸರಿಗೆ ಅನೇಕ ಇನಾಮತಿ ಜಮೀನುಗಳು ಇವೆ. ಅಂದರೆ ೩,೭೦೦—೪೦೦ ತೆಂಗಿನ ಮರಗಳ ತೋಟವು, ತರಿ, ಖುಷ್ಕಿ, ಜಮೀನುಗಳು, ೬—೭ ಸಿಪ್ಪೆ ವಗೈರೆ ತೋಪುಗಳು ಇವೆ. ಇವುಗಳನ್ನೆಲ್ಲಾ ಅಲ್ಲಿನ ಕೆಲವು ಗೌಡರು ತಮ್ಮ ಸ್ವಂತಕ್ಕಂಥ ಜಾಸ್ತಿಯಾಗಿ ಭಾವಿಸಿ, ಅದರಿಂದ ಆಗುವ ಉತ್ಪತ್ತಿಯನ್ನು ತಮ್ಮ ಕುಟುಂಬ ಸಂರಕ್ಷಣೆಗೂ ವಿಶ್ವಾಸನ್ನು ಪಟ್ಟಿಗಗೂ ಸೇರಿಸಿಕೊಂಡರು. ಇದನ್ನು ಅಮಲ್ದಾರರು ತಿಳಿದು, ಕಳೆದ ಜಾತ್ರೆಗೆ ಸವಾರಿ ಖುದ್ದು ದಯಮಾಡಿಸಿ, ಅಲ್ಲಿನ ಉತ್ಪತ್ತಿ ವಗೈರೆಗಳನ್ನು ಖುದ್ದು ಪರಾಂಬರಿಸಿ, ಇದರ ದುರುಪಯೋಗವನ್ನು ನಿಲ್ಲಿಸಿ, ಅಭಿವೃದ್ಧಿಗೆ ತರುವ ಉದ್ದೇಶ್ಯ ಅದರ ಹಳೇ ರಿಕಾರ್ಡುಗಳನ್ನೆಲ್ಲಾ ತರಿಸಿ, ನೋಡುತ್ತಿದ್ದಾರೆ —ಇವರು ತಮ್ಮ ಬಳಿಗೆ ಬರುವ ಅರ್ಜಿಗಾರರನ್ನು ತಿರುಗಿಸಿ ದಣಿಸದೆ, ನಿಷ್ಪಕ್ಷಪಾತವಾಗಿ ಫೈಸಲ್‌ಗಳನ್ನು ಕೊಟ್ಟು, ಕಕ್ಷಿಗಾರರಿಂದ ಹೊಗಳಿಸಿಕೊಳ್ಳುತ್ತಾರೆ. ಅಲ್ಲದೆ ಇಲ್ಲಿನ ಜನಗಳು ಕಸಬ ಕೆರೆ ...ಗಳಲ್ಲದ ತೊಂದರೆ ಬಗ್ಗೆ ಮತ್ತು ನೀರಿನ ತೊಂದರೆ ಬಗ್ಗೆ ನಿವಾರಣಾರ್ಥವಾಗಿ ನಮ್ಮ ದಯಾಳು ಅಮಲ್ದಾರರವರು ಇದೇ ಊರು ಕೆರೆ ಮಧ್ಯೆ ಶಾಶ್ವತವಾದ ಕಟ್ಟಡವನ್ನು ಕಟ್ಟಿಸಲು ಎಷ್ಟಿಮೇಟು ಶಾಂಕ್ಷನ್ ಬಗ್ಗೆ ಡಿಸ್ಟ್ರಿಕ್ಟಿಗೆ ಕಳುಹಿಸಿರುವರಾಗಿ ಕೇಳಿ, ಇಲ್ಲಿನ ಜನರೆಲ್ಲಾ ತುಂಬಾ ಸಂತೋಷಪಡುತ್ತಾರೆ —ನಮ್ಮ ತಾಲ್ಲೂಕು ಶಿರಸ್ತೇದಾರ್ ಮತ್ತು ವೈಸ್ ಪ್ರೆಸಿಡೆಂಟರಾದ ಮ॥ ಬಿ. ಸಂಜೀವರಾಯರು ತುಂಬಾ ಒಳ್ಳೇವರು, ಸಹನೆ, ನಿಧಾನ, ನಿಗರ್ವಿಗಳು, ದೊಡ್ಡವರು, ಚಿಕ್ಕವರು ಎಂಬ ಅಸೂಯೆಗಳಿಲ್ಲದೆ ಎಲ್ಲರನ್ನೂ ಒಂದೇ ಸಮನಾಗಿ ಭಾವಿಸಿ, ಪ್ರತಿ ಒಬ್ಬರ ಪ್ರೀತಿಗೂ ಪಾತ್ರರಾಗಿರುತ್ತಾರೆ. ದವಖಾನೆ ವಗೈರೆ ಮುಂತಾದ ... ತೀರ್ಮಾನ ಬಗ್ಗೆ ಹೋದ ಜನಗಳನ್ನು ಆದರಿಸಿ, ಜಾಗ್ರತೆ ಅವರವರ ಕೆಲಸಗಳನ್ನು ಮಾಡಿಕೊಡುತ್ತಾರೆ. ಊರೊಳಗೆ ದಯಮಾಡಿಸಿ, ಊರು ಪಾಕೀ... ವಿಷಯವೂ ಇತರ ವಿಷಯ ಮೇಲುಸ್ತುವಾರಿ ವಿಚಾರಣೆ ಮಾಡುತ್ತಿರು.

ಹಾಸನ.—ಮಳೆಯಿಲ್ಲದೆ, ಜನರ ಹಾಹಾಕಾರವೂ ದನಕರುಗಳಿಗೆ ನೀರಿನ ಕ್ಷಾಮವೂ ಪ್ರಬಲಿಸುತ್ತಾ ಇದ್ದಿತು. ಈಚೆಗೆ ಒಂದು ವಾರದಿಂದ ಸ್ವಲ್ಪಸ್ವಲ್ಪ ಮೋಡವಾಗುತ್ತಾ, ಪತ್ತಾರು ಮಳೆ ಹನಿಗಳು ಬೀಳುತ್ತಾ ಇದ್ದು, ನೆನ್ನೆ ಮೊನ್ನೆ ಸ್ವಲ್ಪಮಟ್ಟಿಗೆ ಭೂಮಿಯು ಹದಗೊಳ್ಳುವಂತೆ ಬಿದ್ದಿತು. ಊರಿನ ಯಾವ ಭಾಗದಲ್ಲಿ ನೋಡಿದರೂ ಕಣ್ಣೋಡಿದ್ರವು ಬಹು ಜೋರಾಗಿದೆ. ಮತ್ತು ಅಲ್ಲಲ್ಲಿ ...ರೋಗವೂ ಸ್ವಲ್ಪಮಟ್ಟಿಗೆ ಇರುವುದಾಗಿ ತಿಳಿದು ಬಂದಿದೆ. ...ವಾಸಿಸುವವರು ಊರನ್ನು ಸಾಧ್ಯವಾದ ಮಟ್ಟಿಗೂ ಪರಿಶುದ್ಧವಾಗಿ ಇಟ್ಟುಕೊಂಡಿರುವರು. ಆದರೆ ಕೆಲವು ಭಾಗದಲ್ಲಿ ರಸ್ತೆಗಳು ...ದೀಪಗಳು ಸರಿಯಾಗಿ ಉರಿಯುವುದಿಲ್ಲ. ಮತ್ತು ಕೆಲವು ಸಂದುಗಳನ್ನು ಚನ್ನಾಗಿ ಗುಡಿಸುವುದಿಲ್ಲ. ಇವೇ ಮೊದಲಾದ ಇನ್ನೂ ಕೆಲವು ಲೋಪಗಳನ್ನು ಸರಿಮಾಡಿದರೆ ದೇವರ ಕೃಪೆಯಿಂದ ಎಲ್ಲರೂ ಆರೋಗ್ಯಶಾಲಿಗಳಾಗಿರಬಹುದು. —ಈ ಸಂಸ್ಥಾನ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಾದ ... ಬಾಬು ಸಾಹೇಬರವರು ಇಲ್ಲಿಗೆ ದಯಮಾಡಿ, ಇಲ್ಲಿನ ...ದ ಸ್ಕೂಲು, ಹೈಸ್ಕೂಲು, ಮತ್ತು ಕನ್ನಡ ಸ್ಕೂಲುಗಳನ್ನು ...ಪರಿಶೀಲಿಸಿ, ಅರಕಲಗೂಡಿಗೆ ಹೋಗಿ, ಅಲ್ಲಿಂದ ಹೊಳೆನರಸೀಪುರವನ್ನು ನೋಡಿಕೊಂಡು, ಪುನಃ ಹಾಸನಕ್ಕೆ ಬಂದು, ...ಕೆರೆ ಮಾರ್ಗವಾಗಿ ಪ್ರಯಾಣ ಬೆಳಸಿದರು. ಇವರು ದಯಮಾಡಿದುದರಿಂದ ಈ ವರ್ಷದ ಬೇಸಿಗೆ ರಜಾಕಾಲವು ಇಲ್ಲಿನ ಸ್ಕೂಲುಗಳಿಗೆಲ್ಲಾ ಏಪ್ರಿಲ್ ತಾ ೨೭ ರಿಂದ ಮೇ ೨೫ ರ ವರೆಗೆ ...ಲ್ಪಟ್ಟಿದೆ. ಅಸಿಸ್ಟೆಂಟ್ ಕಮಿಷನರ್ ಮ॥ ಚಾಂಡಿಯವರು, ... ರಾಮಸ್ವಾಮಯ್ಯನವರಿಗೆ ಚಾರ್ಜನ್ನು ಒಪ್ಪಿಸಿ, ಶಿವಮೊಗ್ಗಕ್ಕೆ ಪ್ರಯಾಣ ಮಾಡಿದರು. ಇನ್ನು ಮೇಲೆ ಮ॥ ನಾರಣ್ಣಯ್ಯಂಗಾರ್ಯರ, ಇಲ್ಲಿನ ಮ್ಯುನಿಸಿಪಾಲಿಟಿ ವೈಸ್ ಪ್ರಸಿಡೆಂಟ್ ಆಗಿರು. —ಏಪ್ರಿಲ್ ೨೯—೩೦ ನೇ ತಾ ಗಳಲ್ಲಿ ಶ್ರೀಮದುಭಯವೇದಾಂತ ಪ್ರವರ್ತನ ಸಭೆಯ ವಾರ್ಷಿಕ ಪರೀಕ್ಷೆಯು ಶ್ರೀಕೇಶವ...ನ ಆಲಯದಲ್ಲಿ ಕ್ರಮವಾಗಿ ನಡೆಸಲ್ಪಟ್ಟಿತು. ಈ ಪರೀಕ್ಷೆಗೆ ...ದಿಂದ ಒಬ್ಬರೂ, ಗ್ರಾಮದಿಂದ ೧೧ ಮಂದಿಯೂ, ರಾಮನಾಥಪುರದಿಂದ ಇಬ್ಬರೂ, ಹೀಗೆ ಒಟ್ಟು ೧೪ ಮಂದಿ ವಿದ್ಯಾರ್ಥಿಗಳೂ, ಇವರ ಉಪಾಧ್ಯಾಯರುಗಳೂ ಬಂದಿದ್ದರು. ಪರೀಕ್ಷಾಕಾಲದಲ್ಲಿ ಅಸಿಸ್ಟೆಂಟ್ ಕಮಿಷನರ್ ಮ॥ ನಾರಣ್ಣಯ್ಯಂಗಾರ್ಯ ಆದಿಯಾಗಿ ಅನೇಕ ದೊಡ್ಡ ಉದ್ಯೋಗಸ್ಥರೂ, ವಕೀಲರೂ, ವಿದ್ವಾಂಸರೂ, ಉಪಾಧ್ಯಾಯರೂ, ಇತರರೂ ಸಭಾಲಂಕೃತರಾಗಿದ್ದರು. ೨೯ ನೇ ತಾ ಬೆಳಗ್ಗೆ ಲೇಖನ ಪರೀಕ್ಷೆಯೂ, ಆ ಮಧ್ಯಾಹ್ನ ಮತ್ತು ಮಾರನೆಯ ದಿನ ವಾಚಾಪರೀಕ್ಷೆಯೂ ನಡೆದವು. ಲೇಖನ ಪರೀಕ್ಷೆಯಲ್ಲಿ ಇಲ್ಲಿನ ಉಭಯಭಾಷಾಪಂಡಿತರು ಶ್ರೀಮಾನ್ ಪಟ್ಟವಲ್ಲಭ ಅಪ್ರಮೇಯ ಐಯಂಗಾರ್ಯರು, ವಾಚಾಪರೀಕ್ಷೆಯಲ್ಲಿ ವೇದಮೂರ್ತಿಗಳು ವೆಂಕಟಕೃಷ್ಣಶಾಸ್ತ್ರಿಗಳೂ, ನರಸಿಂಹಾವಧಾನಿಗಳೂ, ಶ್ರೀ. ಪ್ಲೀಡರ್ ಲಕ್ಷ್ಮೀನರಸಿಂಹಾಚಾರ್ಯರು, ರಿ ಅ ಕ. ಶ್ರೀ. ತಿರುಮಲಾಚಾರ್ಯರು ಪರೀಕ್ಷಕರಾಗಿದ್ದರು. ಡೆ. ಇ. ಮ॥ ತಿರುಮಲಾಚಾರ್ಯರಿಂದ ಪರೀಕ್ಷಾಕಾರ್ಯವು ವಿಶದವಾಗಿ ನಡೆಸಲ್ಪಟ್ಟಿತು. ಗ್ರಾಮದವರಾದ ೩ ಮಂದಿ ವಿನಃ ಉಳಿದ ೧೧ ಮಂದಿ ವಿದ್ಯಾರ್ಥಿಗಳೂ ಪರೀಕ್ಷೆಯಲ್ಲಿ ತೇರ್ಗಡೆಯಾದರು. ತಾ ೩೦ ರಲ್ಲಿ ಪರೀಕ್ಷಾಕಾರ್ಯವು ಮುಗಿದ ಮೇಲೆ ಡೆ. ಇ. ಮ॥ ತಿರುಮಲಾಚಾರ್ಯರು ಶ್ರೀಮದುಭಯವೇದಾಂತ ಪ್ರವರ್ತನ ಸಭೆಯ ಈ ನಾಲ್ಕನೇ ವರ್ಷದ ಪರೀಕ್ಷೆಯ ವಿಷಯವಾಗಿ ಕೆಲವಂಶಗಳನ್ನು ಉಪನ್ಯಾಸ ಮಾಡಿ, ಮುಂದಿನ ವರ್ಷದಲ್ಲಿ ಈ ಕಾಲದಲ್ಲಿಯೇ ಮಾತ್ರಯದಲ್ಲಿಯೂ ಬ್ರಹ್ಮವಿದ್ಯಾಭ್ಯಾಸ ಪರೀಕ್ಷೆ ನಡೆಯುವಂತಾದರೆ ಪರಮಸಂತೋಷವೆಂಬುದಾಗಿ ಹೇಳಿ, ವಿರಮಿಸಿದರು. ಈ ಪರೀಕ್ಷೆಗಾಗಿ ಬಂದಿದ್ದವರಿಗೆಲ್ಲಾ ತೃಪ್ತಿಕರವಾಗಿ ಊಟ ಉಪಚಾರಗಳು ಈ ಸಭೆಯವರಿಂದ ನಡೆಸಲ್ಪಟ್ಟಿತು. —ಶ್ರೀ ಶಿವಗಂಗೆ ಮಠದ ಸ್ವಾಮಿಗಳವರು ಅರಕಲಗೂಡು ಮಾರ್ಗವಾಗಿ ಇಲ್ಲಿಗೆ ಈ ಪ್ರಾತಃಕಾಲ ಪರಿವಾರಸಹಿತ ದಯಮಾಡಿದರು. ಈ ಮಠನೀಯರು ಈ ಊರಿನಲ್ಲಿ ಕೆಲವು ದಿನಗಳ ವರಿವಿಗೆ ಇದ್ದು, ಭಗವದ್ವಿಷಯವಾಗಿಯೂ ಸರ್ವಸಾಮಾನ್ಯವಾದ ಸತ್ಯನೀತಿಗಳ ವಿಷಯವಾಗಿಯೂ ಉಪನ್ಯಾಸ ಮಾಡುವವರಾಗಿರುವರೆಂದು ಕೇಳಿದೆವು. ಇದು ಒಳ್ಳೇ ಕಾರ್ಯವೇ ಸರಿ. ಇಂತಹ ಗುರುಗಳು ಪ್ರಜೆಗಳಿಗೆಲ್ಲಾ ಸಾಮಾನ್ಯವಾಗಿ ಯಾವಾಗಲೂ ಶಾಸ್ತ್ರ, ಸತ್ಯ ಮತ್ತು ನೀತಿಬೋಧನೆಗಳನ್ನು ಒಳಗೊಂಡಿರುವ ಒಂದೆರಡು ವಾರಪತ್ರಿಕೆಗಳನ್ನು ಪ್ರಾರಂಭಿಸಿ, ಅತಿ ಸುಲಭವಾದ ವಾರ್ಷಿಕ ಚಂದಾ ಹಣವನ್ನು ಗೊತ್ತು ಮಾಡಿ, ನಡೆಸುತ್ತಾ ಬರುವರಾದರೆ ಪ್ರಜೆಗಳಲ್ಲಿ ಸದ್ಭಕ್ತಿಯು ಹೆಚ್ಚುವುದಕ್ಕೆ ಅವಕಾಶವಾದೀತೆಂದು ಅನೇಕಾನೇಕರು ಅಪೇಕ್ಷಿಸುತ್ತಾರೆ. ಇಂತಹ ಅಪೇಕ್ಷೆಯುಳ್ಳವರು ಸ್ವಾಮಿಗಳವರ ಸಂಗಡ ಪ್ರತ್ಯಕ್ಷವಾಗಿ ಹೇಳಿಕೊಳ್ಳುವ ಪಕ್ಷದಲ್ಲಿ ಅವರು ಈ ಸತ್ಕಾರ್ಯವನ್ನು ಅಗತ್ಯವಾಗಿ ಮಾಡಿಯೇ ಮಾಡುವರು —ವೆಸ್ಲೀಯನ್ ಮಿಷನ್ ಸಂಘದವರು ಈ ಊರಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಲೋಸುಗ ಪ್ರಾರಂಭಿಸಿರುವರು. ಈ ಕಟ್ಟಡವು ಪೂರ್ತಿಯಾಗುವುದಕ್ಕೆ ಸುಮಾರು ೩೦ ಸಾವಿರ ರೂಪಾಯಿಗಳ ವರಿವಿಗೂ ಖರ್ಚಾಗುವುದೆಂದು ಗೊತ್ತಾಗಿದೆ. ಪರದೇಶಸ್ಥರಾದ ಇವರು ನಮ್ಮ ದೇಶದ ಪ್ರಜೆಗಳಿಗಾಗಿ ಎಷ್ಟರಮಟ್ಟಿಗೆ ಪ್ರಯಾಸಪಡುವರೆಂಬುವುದನ್ನು ನಾವು ಯೋಚಿಸಿದರೆ ನಮಗೂ ಇಂತಹ ಪರೋಪಕಾರ ಬುದ್ಧಿಯು ಹುಟ್ಟುವುದಕ್ಕೆ ಅಡ್ಡಿ ಇಲ್ಲ. ನಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನಾದರೂ ಪರೋಪಕಾರ ಕಾರ್ಯಕ್ಕೆ ವಿನಿಯೋಗಿಸೋಣ.

ಬರೋಡಾ ಸಂಸ್ಥಾನದಲ್ಲಿ ಸ್ಥಾನಿಕ ಸ್ವರಾಜ್ಯದ ಬೆಳವಣಿಗೆಯು.

ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿಗಳ ಸಭೆಯು ಸ್ಥಾಪನವಾಗಿ ೨೦ ವರ್ಷ ಮೀರಿಹೋಯಿತು. ಮೊದಲಿನ ಮಹಾರಾಜರವರು ಈ ಸಭೆಯನ್ನು ಸ್ಥಾಪಿಸಿದರು. ಅವರು ಬದುಕಿದ್ದರೆ ಈ ಸಭೆಯು ಅಧಿಕಾರವೂ ಯೋಗ್ಯತೆಯೂ ಬೆಳೆಯಬಹುದಾಗಿತ್ತು. ಆದರೆ ಅವರು ಬೇಗ ತೀರಿಕೊಂಡರಾದ್ದರಿಂದ ಶೇಷಾದ್ರಿ ಅಯ್ಯರವರ ಕಾರಬಾರದಲ್ಲಿ ಸಭೆಗೆ ಗ್ರಹಚಾರ ಬೆಂಬಳಿಸಿತು. ಪ್ರತಿನಿಧಿಗಳ ಸಭೆಯು ಒಂದೊಂದು ವರ್ಷ ಕೂಡುತ್ತೇ ಇದ್ದಿಲ್ಲ; ಕೂಡಿದರೂ ಪ್ರತಿನಿಧಿಗಳ ಪ್ರಶ್ನೆಗಳಿಗೂ ಅವರ ಸೂಚನೆಗಳಿಗೂ ಅಷ್ಟಕಷ್ಟೇ ಮಾನವಾಗುತ್ತಿತ್ತು. ಈಗಿನ ಮಹಾರಾಜರು ಸಭೆಯನ್ನು ಕೆಲವು ಮಟ್ಟಿಗೆ ಗೌರವಿಸುತ್ತಾರೆಂದು ತೋರುತ್ತದೆ. ಮುಂದೆ ಸಭೆಯು ಗೌರವ ಬೆಳೆಯಬಹುದು. ಆದರೆ ಪ್ರಕೃತಕ್ಕೆ ಸಭೆಗೆ ಪ್ರಥಮ ದಿವಸವೇ ಇರುತ್ತದೆಂಬದೊಂದು ಇಲ್ಲಿ ಪ್ರಾಮುಖ್ಯವಾಗಿ ಹೇಳಬೇಕಾದ ಸಂಗತಿಯು. ಆದರೆ ಹೀಗೆ ಹಿಂದೂದೇಶದಲ್ಲಿ ಮೊದಲು ಜನಿಸಿದ ಪ್ರತಿನಿಧಿ ಸಭೆಯು ಮೂಲೆಗೆ ಬಿದ್ದಾಗ್ಯೂ ಅದನ್ನು ನೋಡಿ ಪುದುಕೋಟಾ, ಮೋಂಡೂರು, ಈ ಪುಟ್ಟಸಂಸ್ಥಾನಗಳಲ್ಲಿಯೂ ತ್ರಾವಣಕೋರ ಸಂಸ್ಥಾನದಲ್ಲಿಯೂ ಅದರಂಥ ಸಭೆಗಳು ಹುಟ್ಟಿದವು. ಇದೇ ಪ್ರಕೃತಿಸ್ಥಿತಿಯಲ್ಲಿ ಲಾಭವೆಂದೆಣಿಸಬೇಕಾಗಿದೆ.

ಪ್ರಜೆಗಳಿಗೆ ಸ್ವಬುದ್ಧಿಯಿಂದ ಪ್ರತಿನಿಧಿಗಳನ್ನು ಚುನಾಯಿಸುವ ಅಭ್ಯಾಸ, ಚುನಾಯಿಸಲ್ಪಟ್ಟ ಮೆಂಬರರಿಗೆ ನ್ಯಾಯದಿಂದಲೂ ತಿಳುವಳಿಕೆಯಿಂದಲೂ ತಮ್ಮ ಕೈಯಲ್ಲಿ ಬಂದ ಅಧಿಕಾರವನ್ನು ನಡಿಸುವ ಯೋಗ್ಯತೆ, ಇವೇನೂ ಇಲ್ಲದೆ ಒಮ್ಮೇಲೆ ರಾಜ್ಯಕಾರಭಾರದಲ್ಲಿ ಕೈ ಹಾಕುವಂಥ ಪ್ರತಿನಿಧಿ ಸಭೆಯನ್ನು ಏರ್ಪಡಿಸಿದರೆ ಅದಕ್ಕೆ ಕ್ಷಯರೋಗ ಹತ್ತುವ ಸಂಭವ ಬಹಳವಿರುತ್ತದೆ. ಯಾಕೆಂದರೆ ಈ ಬಗೆಯಾಗಿ ಕೂಡಿಸಿದ ಪ್ರತಿನಿಧಿಗಳಿಗೆ ರಾಜ್ಯಕಾರಭಾರದ ಸ್ವರೂಪವನ್ನು ಪೂರಾ ಅರಿತುಕೊಂಡು, ಅದರಲ್ಲಿ ಸಹಾಯ ಮಾಡುವಷ್ಟು ಯೋಗ್ಯತೆ ಇರುವದಿಲ್ಲ.

ಆದರೆ ಬರೋಡೆಯ ಬುದ್ಧಿಶಾಲಿಗಳಾದ ಮಹಾರಾಜರವರು ಹಿಡಿದ ಮಾರ್ಗವು ಬೇರೆ ಇರುತ್ತದೆ. ಇವರು ಬಹಳ ಸಾರಿ ಯೂರೋಪಕ್ಕೆ ಹೋಗಿ ಅಲ್ಲಿಯ ಬೇರೆ ಬೇರೆ ದೇಶಗಳಲ್ಲಿ ಸಂಚಾರ ಮಾಡಿ ಬಂದಿರುವರು. ಇವರ ವಿಶ್ವವ್ಯಾಪಕ ಪಾಠವುಗಳು ಹೊಗಳತಕ್ಕಂಥವಿರುತ್ತವೆ. ಇವರು ಒಮ್ಮೇಲೇ ಶಿಖರ ಹತ್ತಲಿಕ್ಕೆ ಹೋಗದೆ, ಬುಡದಿಂದ ಪ್ರಜೆಗಳಿಗೆ ಕಾರಭಾರದ ಅಭ್ಯಾಸ ಮಾಡಿಸುವ ಕ್ರಮವನ್ನಾರಂಭಿಸಿರುವರು. ಅದರ ವಿವರ ಹ್ಯಾಗೆಂದರೆ —

ಪ್ರತಿ ಒಂದು ಹಳ್ಳಿಯಲ್ಲಿ ಗೌಡ ಕುಲಕರ್ಣಿಗಳಿರುವಂತೆ ಒಬ್ಬೊಬ್ಬ ಮಾಸ್ತರನನ್ನೂ ನೇಮಿಸಿರುವರು. ಒಂದು ಸಾವಿರ ಅಥವಾ ಹೆಚ್ಚು ವಸ್ತಿ ಇರುವ ಗ್ರಾಮಗಳಿಗೆ ಒಂದೊಂದು ಪಂಚಾಯತಿಯನ್ನು ನೇಮಿಸಿರುವರು. ಸಣ್ಣ ಹಳ್ಳಿಗಳಲ್ಲಿ ನಾಲ್ಕು ಐದು ಹಳ್ಳಿಗಳಿಗೆ ಒಂದು ಪಂಚಾಯತಿಯನ್ನು ನೇಮಿಸಿರುವರು. ಈ ಪಂಚಾಯತಿಗಳಲ್ಲಿ ೫ ರಿಂದ ೯ ರ ವರೆಗೆ ಪಂಚಾಯತರು ಇರುವರು. ಇವರಲ್ಲಿ ಅರ್ಧ ಜನರನ್ನು ಹಳ್ಳಿಯ ಜನರು ಚುನಾಯಿಸಿಕೊಡಬೇಕು; ಮಿಕ್ಕ ಅರ್ಧ ಜನರನ್ನು ಜಿಲ್ಲೆಯ ಅಮಲ್ದಾರನು ನೇಮಿಸಬೇಕು. ಊರ ಗೌಡನು ಪಂಚಾಯತಿಯ ಅಧ್ಯಕ್ಷನಾಗುವನು. ಕುಲಕರ್ಣಿಯೂ ಸ್ಕೂಲು ಮಾಸ್ತರನೂ ಸರ್ಕಾರೀ ಮೆಂಬರರಾಗುವರು. ಈ ಪ್ರಕಾರ ಏರಿಸಲ್ಪಟ್ಟ ಪಂಚಾಯತಿಯವರು, ಅಥವಾ ಗ್ರಾಮ ಸಭೆಯವರು, ಊರೊಳಗಿನ ಬೀದಿಗಳನ್ನು ನಿರ್ಮಲಪಡಿಸಬೇಕು; ಬಾವಿ, ಕೆರೆ, ಶಾಲೆ, ಧರ್ಮಶಾಲೆ, ಚಾವಡಿ, ದೇವಸ್ಥಾನ, ಮುಂತಾದ ಸಾರ್ವಜನಿಕ ಸಂಸ್ಥೆಗಳೆಲ್ಲ ಈ ಗ್ರಾಮ ಸಭೆಯವರಿಗೆ ಅಂಕಿತವಾಗಿರುವವು. ಇದರಂತೆ ರೋಗಿಗಳಿಗೆ ಔಷಧ ದೊರೆಯುವ ಹಾಗೆ ಈ ಪಂಚಾಯತರು ವ್ಯವಸ್ಥೆಯನ್ನು ಮಾಡಬೇಕು. ಈ ಪಂಚಾಯತರಲ್ಲದೆ ಹಳ್ಳಿಗಳಲ್ಲಿಯ ಕಿರುಕುಳ ಕೊಡಕೊಳ್ಳುವ ವ್ಯಾಜ್ಯಗಳನ್ನು ನಿರ್ಣಯಿಸಲಿಕ್ಕೆ ಮುನಸೀಫರು, ಕಿರುಕುಳ ಫೌಜುದಾರೀ ಮೊಕದ್ದಮೆಗಳನ್ನು ವಿಚಾರಿಸಲಿಕ್ಕೆ ಸಬ್ ಮ್ಯಾಜಿಸ್ಟ್ರೇಟರು ನೇಮಿಸಲ್ಪಡುವರು. ಈ ಮುನಸೀಫರಿಗೂ ಮ್ಯಾಜಿಸ್ಟ್ರೇಟರಿಗೂ ಪಂಚಾಯತರು ಸಹಾಯ ಮಾಡಬೇಕು. ಹೊಲಗಳ ಮೇರೆಗಳನ್ನು ಕಾಯುಕೊಳ್ಳುವದಾದರೂ ಈ ಗ್ರಾಮ ಸಭೆಯವರ ಕರ್ತವ್ಯವೇ.

ಸರ್ಕಾರೀ ರಾಜ್ಯದಲ್ಲಿಯಂತೆ ಬರೋಡಾ ಸಂಸ್ಥಾನದಲ್ಲಿ ತಾಲೂಕಾ ಲೋಕಲ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಸ್ಥಾಪಿಸಲ್ಪಟ್ಟಿರುತ್ತವೆ. ಇವುಗಳಲ್ಲಿಯೂ ಸರ್ಕಾರೀ ಪದ್ಧತಿಯಂತೆ ಅರ್ಧ ಜನ ಮೆಂಬರರನ್ನು ಪ್ರಜೆಗಳು ಚುನಾಯಿಸುವರು; ಮಿಕ್ಕ ಅರ್ಧ ಜನರನ್ನು ಡಿಸ್ಟ್ರಿಕ್ಟಿನ ಅಮಲ್ದಾರರು ನೇಮಿಸುವರು. ನಾಯಬ ಸುಭಾ ಎಂಬ ಅಮಲ್ದಾರನು ತಾಲೂಕ ಬೋರ್ಡಿನ ಅಧ್ಯಕ್ಷನಾಗುವನು; ಸುಭಾ ಅಥವಾ ಸುಭೇದಾರನೆಂಬ ಅಮಲ್ದಾರನು ಡಿಸ್ಟ್ರಿಕ್ಟ ಬೋರ್ಡಿನ ಅಧ್ಯಕ್ಷನಾಗುವನು. ಇದೆಲ್ಲ ಸರ್ಕಾರೀ ರಾಜ್ಯದಲ್ಲಿ ನಡೆಯುವಂತೆ ಇರುತ್ತದೆ. ವೈಲಕ್ಷಣ್ಯವೇನಂದರೆ, ಯಾವ ಸಂಸ್ಥೆಯಲ್ಲಿಯೂ ಚುನಾಯಿಸಿದ ಮೆಂಬರರುಗಳ ಸಂಖ್ಯೆಯು ಅರ್ಧಕ್ಕಿಂತ ಕಡಿಮೆ ಇರಕೂಡದು; ಮತ್ತು ಅಧಿಕಾರಸ್ಥರಿಂದ ನೇಮಿಸಲ್ಪಟ್ಟ ಮೆಂಬರರಲ್ಲಿ ಅರ್ಧಕ್ಕಿಂತ ಹೆಚ್ಚು ಸಂಸ್ಥಾನದ ನೌಕರರಿರಕೂಡದು. ಈ ಬೋರ್ಡುಗಳ ಮತ್ತು ಮ್ಯುನಿಸಿಪಾಲಿಟಿಗಳ ಅಧಿಕಾರಗಳು ಸರ್ಕಾರೀ ರಾಜ್ಯದಲ್ಲಿ ನಡೆಯುವಂತೆಯೇ ಇರುತ್ತವೆ. ಆದರೆ ಇವರ ಕೆಲಸಗಳಲ್ಲಿ ಅಮಲ್ದಾರ ಜನರು ವಿಶೇಷ ಮಾತ್ರವೂ ಕೈ ಹಾಕುವದಿಲ್ಲ.

ಕಾಯಿದೆಗಳನ್ನು ಮಾಡುವ ಅಧಿಕಾರವು ಪ್ರಕೃತಕ್ಕೆ ಸಂಸ್ಥಾನದ ಆಫೀಸರರ ಕೈಯಲ್ಲಿಯೇ ಇರುತ್ತದೆ. ಇಂಥಾದ್ದೊಂದು ಕಾಯಿದೆಯನ್ನು ಮಾಡಿರೆಂದು ಮಹಾರಾಜರವರು ಆಫೀಸರರಿಗೆ ಆಜ್ಞಾಪಿಸುವರು. ಅವರು ಆ ಕಾಯಿದೆಯ ಮಸೂದೆಯನ್ನು ವಿಚಾರಪೂರ್ವಕವಾಗಿ ಬರೆದು, "ಆಜ್ಞಾಪತ್ರ"ವೆಂಬ ಸಂಸ್ಥಾನದ ಪತ್ರಿಕದಲ್ಲಿ ಅದನ್ನು ಪ್ರಜೆಗಳ ಅಭಿಪ್ರಾಯಕ್ಕೋಸ್ಕರ ಪ್ರಸಿದ್ಧಪಡಿಸುವರು. ಆ ಅಭಿಪ್ರಾಯಗಳು ವರ್ತಮಾನ ಪತ್ರಗಳಲ್ಲಿ ಇಲ್ಲವೇ ಬೇರೆ ರೀತಿಯಿಂದ ಪ್ರಸಿದ್ಧವಾದ ಬಳಿಕ ಅವುಗಳಲ್ಲಿ ಗ್ರಾಹ್ಯವಾದವುಗಳನ್ನು ಸ್ವೀಕರಿಸಿ, ಸದರೀ ಆಫೀಸರರು ಮಸೂದೆಯನ್ನು ದುರಸ್ತು ಮಾಡಿದ ಬಳಿಕ ಮಹಾರಾಜರವರು ಅದಕ್ಕೆ ರುಜು ಹಾಕುವರು.

ಆದರೆ ಈ ಪದ್ಧತಿಯನ್ನು ಮಹಾರಾಜರು ತೆಗೆದುಹಾಕಿ, ಚುನಾವಣೆಯಿಂದ ಕಾಯಿದೆ ಕೌನ್ಸಿಲು ಸ್ಥಾಪಿಸುವ ವಿಷಯದಲ್ಲಿ ಹೊಸ ಕಾಯಿದೆಯ ಮಸೂದೆಯನ್ನು ಈಗ ಮಾಡಿಸಿದ್ದಾರೆ. ಈ ಕೌನ್ಸಿಲಿನಲ್ಲಿ ೧೪ ಜನ ಮೆಂಬರರನ್ನು ಗೊತ್ತುಪಡಿಸಿ, ಅವರಲ್ಲಿ ಅರ್ಧ ಜನ ಚುನಾಯಿಸಲ್ಪಡಬೇಕೆಂತಲೂ ದಿವಾನರು ಕೌನ್ಸಿಲಿನ ಅಧ್ಯಕ್ಷರಾಗಬೇಕೆಂತಲೂ ಸದರೀ ಮಸೂದೆಯಲ್ಲಿ ಬರೆಸಲ್ಪಟ್ಟಿದೆ. ಆದರೆ ಈ ಕೌನ್ಸಿಲಿನ ವಿಚಾರವು ಇನ್ನೂ ಪೂರಾ ಮುಗಿದಿಲ್ಲ.

ನಾವು ಆರಂಭದಲ್ಲಿ ತಿಳಿಸಿದಂತೆ ಮಹಾರಾಜರು ಸ್ವತಃ ವಿದ್ವಾಂಸರೂ ಬಹು ಚತುರರೂ ಆಗಿರುವದಲ್ಲದೆ, ಅವರಿಗೆ ತಕ್ಕ ಮಂತ್ರಿಯೂ ದೊರೆತಿರುವನು. ಈಗ ನಾಲ್ಕೈದು ವರ್ಷ ಹಿಂದುಸ್ಥಾನದ ಸ್ಥಿತಿಗತಿಗಳನ್ನು ಕುರಿತು ಅಸಂಖ್ಯಾತವಾದ ಲೇಖಗಳನ್ನು ಬರೆದು, ಇಂಗ್ಲೆಂಡಿನಲ್ಲಿಯೂ ಹಿಂದುಸ್ಥಾನದಲ್ಲಿಯೂ ಖ್ಯಾತಿಹೊಂದಿದವರಾದ ಮ॥ ರಮೇಶಚಂದ್ರದತ್ತರವರು ಹೋದ ವರ್ಷದಿಂದ ಮಹಾರಾಜರ ದಿವಾನರಾಗಿರುವರು. ಆದ್ದರಿಂದ ಪ್ರಜೆಗಳಿಗೆ ಕೊಂಡ ಹಾಕಿದ ಹಾಗಾಗಿದೆ. ಮೇಲೆ ಬರೆದಂತೆ ತಿದ್ದುಪಡಿಯು ಕಾಲಕ್ಕೆ ನಡೆದರೆ ಹುಸ ... ಬರೋಡಾ ಸಂಸ್ಥಾನವು ಮೈಸೂರು ಸಂಸ್ಥಾನವನ್ನು ಹಿಂದಕ್ಕೆ ಹಾಕುವದೆಂದು ಹೇಳಬಹುದಾಗಿದೆ. —ಕ. ಪ.

ಪ್ರಪಂಚದಲ್ಲಿ ದೊಡ್ಡದು ಯಾವದು?

21

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಬಿರಿ ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ಓದಿ ನೋಡಿರಿ —

೧ "ಅನುಭವಸಾರ"

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ವಿದಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮಾ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ ಪ್ರಿಂಟಿಂಗ್ ವ ತ್ತು ಬೈಂಡಿಂಗ್ ಬಹು ಶ್ರೇಷ್ಠವಾದವುಗಳಾಗಿವೆ ಇದರ ಕ್ರಯ ೧-೨ ಆಣೆ, ವಿ. ಪಿ. ಮೂಲಕ ೧೪ ಆಣೆ

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು ಕ್ರಯ ೨ ಆಣೆ

೩ "ಸ್ವಪ್ರಯಾಸ ಫಲದೀಪಿಕೆ"

ಎಲ್ಲಾ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೩ ಆಣೆ

೪ "ರೋಮನರ ಚರಿತ್ರೆ" ಕ್ರಯ ೦—೨—೦

೫ "ಗ್ರೀಕರ ಚರಿತ್ರೆ" ,, ೦—೨—೦

೬ "ಅನುಭವಾನಂದ" ,, ೦—೬—೦

೭ "ಗಣಿತ ಸಂಜೀವಿನಿ" ೧—೮—೦

೮ "ಗಣಿತ ಚಿಂತಾಮಣಿ" ೦—೧೦—೦

೯ "ಚಾಮರಾಜೇಂದ್ರ ವಿಲಾಸ" ೦—೨—೦

೧೦ "ಹಿಂದೂ ಧರ್ಮಶಾಸ್ತ್ರ (ಅ) ಸಂಗ್ರಹ" ೦—೨—೦

೧೧ "೧೯೦೫ನೇ ವರುಷದ ಡೈರಿಗಳು"

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦, ಸಾದಾ ೦—೪—೦

ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪೋ,

ಮೈಸೂರು

ಜ್ವರಹರಿ

26



ಇದು ಸಾಧಾರಣ ಜ್ವರ, ಚಳಿಜ್ವರ, ಮರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ನಾನಾವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಸಬ್ ಡಿವಿಜನ್ ಆಫೀಸರ್ ಎಸ್ ಬಿ ವೆಂಕಟಪತಿ ಅಯ್ಯರವರು —ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ೨ ಬಾಟಲ ಜ್ವರಹರಿ ... ಸ್ವಲ್ಪ ಕಾಲದಲ್ಲೇ ... ಔಷಧದಿಂದ ಅನೇಕ ಮಂದಿ ... ಇನ್ನೂ ... ಬಾಟಲ ಜ್ವರಹರಿಯನ್ನು ... ಕಳುಹಿಸಿರಿ ... ಬರೆಯುತ್ತಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ... ೧೧ ರೂ., ... ಪೋಸ್ಟೇಜು ... ಬೇರೆ

ಓಮುಂ ಕರ್ಪೂರ

Omum Carpoor

ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ನೋವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು— ... ಗುಣ ಕೊಡುವುದು ... ಬೇರೆ ಔಷಧದಂತೆಯೇ ... ದೊರಕುವದು

... ಗಣಪತಿಯವರು—ಇನ್ನೂ ... ಕಾಯಿಲೆ ... ಗುಣವಾ ... ಬಹು ಬಹು ಒಳ್ಳೇ ... ಬರೆದಿದ್ದಾರೆ

ಈ ... ರುವ ವೈದ್ಯಶಾಲೆಗಳಲ್ಲಿ ... ವ್ಯಾಪಾರಿಗಳಲ್ಲಿ ಕ್ರಯ ... ಕನ್ನಡಿಗರ ... ಇದು ... ವಿಕ್ರಯ — ... ಬಿಷಧಗಳ ಡಿಪೋ,

ಕೆಲಂಡ ಹಾಕ್ ಟೈನ್, ಮದರಾಸ್. ಲೈನ್, ಮದರಾಸ್.

WANTED WILD ANIMALS

ಬೇಕಾಗಿದೆ ಬೇಕಾಗಿದೆ

5

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂವಾಜಿಕಲ್ ಗಾರ್ಡನ್ಸ್‌ಗೆ ಬೇಕು ...

Apply to—Mr. Hegmins Mysore Zoo

ಶ್ರೀ ತಾಂಬೂಲ.

16

ಇದನ್ನು ಓದಿ! ಬರಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಅಂಥಾ ತಾಂಬೂಲದ ಮಾತ್ರೆಗಳನ್ನು ಮಾರುತ್ತಿದ್ದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧-೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ, ವಾತ ಕಫ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನು ಬರಮಾಡುತ್ತೆ ಕಳ್ಳಿ, ಬ್ರವ, ಶೆಗಡಿ, ಕೆಮ್ಮು ಮುಂತಾದ್ದಕ್ಕೆ ೧-೩ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮುಕ್ಯಾದರುವ ಮುನಿಗಳಲ್ಲಿ ಅವಶ್ಯ ಇದನ್ನು ಇಡತಕ್ಕದ್ದು ... ೨೦೦ ಮಾತ್ರೆ ಉಳ್ಳ ಸೀಸೆಗೆ ೩ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರೆಗೆ ವಿ. ಪಿ. ಛಾರ್ಜ ೫ ಆಣೆ. ಸನ್ಮ ವಿಳಾಸ —

ದೇವನಹಳ್ಳಿ ಟವರ್, ಎಂ. ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟಿಷನರ್

ಹೋಮೋಸಿಯ

ಕಷ್ಟ ಪರಿಹಾರ — Homocea — ತಗಲುತ್ತಲೇ ನೋವೆ ವಾಸಿಯಾಗುತ್ತೆ

ಈ ಔಷದಿಯು ಮನೆ, ... ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ... ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತಕ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ವಾಗಿ ಸಿಕ್ಕುವಷ್ಟು ಔಷಧ ಇದನ್ನು ಉಪಯೋಗಿಸಿದ ವಿಶಿಷ್ಟ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಬಂದಕೂಡ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಆರೆ ತಲೆನೋವು, ಸೊಂಟನೋವು, ಮೊಣಕಾಲು, ದಂತಬಾಧೆ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲು ವಾಯು, ಗುಳ್ಳೆಗಳು, ಹಲ್ಲುನೋವು, ಮುಖ ಬೊಪ್ಪು, ಊತಗಳು, ಗಾಯಗಳು, ರೋಗಗಳು, ಹುಳುಕಡ್ಡಿ, ಸೊಳ್ಳೆ ಮುತ್ತು, ಚೇಳು ಕಡಿದದ್ದು, ಬಿಟ್ಟಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ, ಒಂದೇ ಸಲ ೧-೨ ಡಬ್ಬ ತರಿಸಿಕೊಂಡರೆ ಟಪ್ಪಾಲ್ ಛಾರ್ಜ ಮಾಫಿ ಮಾಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ ಡಬ್ಬದಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ ಈ ರೂ ೨—೮ ಆ ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಛಾರ್ಜ ಮಾಫಿ ಮಾಡುತ್ತೆ.

****

ಹೋಮೋಸಿಯಾ ಎಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಇದರ ಬದಲು ಕಡೆ ಇದನ್ನು ಹಚ್ಚಿಕೊಂಡರೆ ಇದರಲ್ಲಿ ಹೋಮೋಸಿಯಾ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಆದಕ್ಕಿಂತಲೂ ಇದರಲ್ಲಿ ಇನ್ನೂ ಅನೇಕ ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇರಿಕೊಳ್ಳುವುದು ಡಬ್ಬಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧-೨ ಡಬ್ಬ ತರಿಸಿಕೊಂಡರೆ ಟಪ್ಪಾಲ್ ಛಾರ್ಜ ಮಾಫಿ. ಎಲ್ಲಾ ವಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪುಸ್ತಕಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ —ಹೋಮೋಸಿಯಾ ಕಂಪೆನಿ, ... ಬಜಾರ್, ... ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

೧೪—೪—೧೯೦೫ ರಿಂದ ೨೧—೪—೧೯೦೫ ರ ವರೆಗೆ

ಸ್ಥಳ.	ಪ್ಲೇಗ್ ಹಿಡಿದ	ಪ್ಲೇಗ್ ಸತ್ತ	ರೋಗವಿದ್ದ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	7	4	8	6
ಮೈಸೂರು ,,	1	2	1	1
ಬೆಂಗಳೂರು ಡಿಸ್ಟ್ರಿಕ್ಟು	13	11	24	17
ಮೈಸೂರು ,,	2	2	70	53
ಕೋಲಾರ್ ,,	4	3	31	17
ಕೋಲಾರ್ ಚಿನ್ನದ ಗಣಿಗಳು	1	0	4	5
ತುಂಕೂರು ಡಿಸ್ಟ್ರಿಕ್ಟು	1	2	16	11
ಹಾಸನ ,,	0	0	13	11
ಚಿತ್ರದುರ್ಗ ,,	0	0	[illegible]	7
ಕಡೂರ್ ,,	5	5	15	10
ಶಿವಮೊಗ್ಗ ,,	10	7	39	22
ಜುಮ್ಲಾ.	44	36	2[illegible]5	160

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ಸಪ್ತಮಿ ಗುರುವಾರದಿಂದ ವೈಶಾಖ ಶುದ್ಧ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಡಿ ವಾ ವಾವು
11	ಗುರು	ಸಪ್ತಮಿ	36 ೦೫	ಪುಷ್ಯ	11 32	29
12	ಶುಕ್ರ	ಅಷ್ಟಮಿ	33 4[illegible]	ಶ್ಲೇಷ	1 28	30
13	ಶನಿ.	ನವಮಿ	[illegible]	ಮಘ	[illegible] 10	31
14	ರವಿವಾ ,,	ದಶಮಿ	22 25	ಪುಬ್ಬ	[illegible]	1
15	ಚಂದ್ರ	ಏಕಾದಶಿ	16 [illegible]	ಉತ್ತರ	–	2
16	ಕುಜ	ದ್ವಾದಶಿ	10 2[illegible]	ಚಿತ್ರ	11 [illegible]	3
17	ಬುಧ	ತ್ರಯೋದಶಿ	[illegible]	ಸ್ವಾತಿ	[illegible]	4

೧ ದಗ್ಧಯೋಗ, ಗಂಗಾಸಪ್ತಮಿ , ಅದಿವ್ಯಾ ದಗ್ಧಯೋಗ, ದ್ವಾದಶೀ ತಿಥಿ, ಸರ್ವತ್ರಏಕಾದಶಿ, ಶ್ರೀರಂಗಪಟ್ಟಣದಲ್ಲಿ ಸ್ವಾಮಿ ... ದಗ್ಧಯೋಗ ... ಮಂತ್ರ ...

ಪೇಟೆ ಧಾರಣೆ.

ಕಸ್ತೂರಿ ಅಕ್ಕಿ ಪಲ್ಲ ೧ಕ್ಕೆ	[illegible]	[illegible]	[illegible]
ಕಿಂಪಾಡಿ ಅಕ್ಕಿ ಪಲ್ಲ		[illegible]	[illegible]
,, ,, ಮಧ್ಯಮ		[illegible]	[illegible]
ಜೀರಿಗೆ ಸಣ್ಣ ಅಕ್ಕಿ		[illegible]	[illegible]
ಸಣ್ಣಕ್ಕಿ ಅಗಲ		[illegible]	[illegible]
,, ಮಧ್ಯಮ		[illegible]	[illegible]
ಕಾಳಿಗೆ ಬೇಳೆ ಪಲ್ಲ		[illegible]	[illegible]
,, ,, ಮಧ್ಯಮ		[illegible]	[illegible]
ಹೊಸ ರಾಗಿ ಪಲ್ಲ ೧ಕ್ಕೆ		[illegible]	[illegible]
ಹಳೇರಾಗಿ		[illegible]	[illegible]
ಜೋಳ		[illegible]	[illegible]
ಅಲಸಂದೆ ಪಲ್ಲ ೧ಕ್ಕೆ		[illegible]	[illegible]
ಸಿಪ್ಪೆ ಅವರೆ		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ತೊಗರಿ		[illegible]	[illegible]
ಎಳ್ಳು		[illegible]	[illegible]
ಹುರುಳಿ		[illegible]	[illegible]
ಕಡಲೆ ...		[illegible]	[illegible]
ತೆಂಗಿನಕಾಯಿ ಮಣ ೧ಕ್ಕೆ		[illegible]	[illegible]
ಕೊಬ್ಬರಿ ...		[illegible]	[illegible]
,, ಮಧ್ಯಮ		[illegible]	[illegible]
ಬೆಲ್ಲ ದೊಡ್ಡ ಅಚ್ಚು		[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ		[illegible]	[illegible]
ಹರಳೆಣ್ಣೆ ,,		[illegible]	[illegible]
...		[illegible]	[illegible]
ಉಪ್ಪು ,,		[illegible]	[illegible]
ಹುಣಸೇ ಹಣ್ಣು		[illegible]	[illegible]
,, ಹಳೇದು		[illegible]	[illegible]
ತುಪ್ಪ		[illegible]	[illegible]
ಸೀಗೆಪುಡಿ ...		[illegible]	[illegible]
ತೆಂಗಿನಕಾಯಿ ೧೦೦ಕ್ಕೆ		[illegible]	[illegible]
ಅಡಿಕೆ ...		[illegible]	[illegible]
ಚಿಂತಾಮಣಿ ... ಮಣ ೧ಕ್ಕೆ		[illegible]	[illegible]
ಪಿಸ್ತ (ಬೀಜ) ...		[illegible]	[illegible]
,, ,, ...		[illegible]	[illegible]
,, ,, ಗಟ್ಟಿ ...		[illegible]	[illegible]
... ಗಟ್ಟಿ ... ೧೦೦		[illegible]	[illegible]

Printed and Published by the Rev. ... the Proprietor and Manager, Wesleyan Mission Press Mysore 11,5 1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರದ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೮ — ಮೈಸೂರು—ಸನ್ ೧೮೯೩ ನೇ ಇಸವಿ ಮೇ ತಾರೀಖು ೧೮ ನೇ ಗುರುವಾರ. — ಸಂಚಿಕೆ ೫೦

"ವೃತ್ತಾಂತ ಪತ್ರಿಕೆ" ಚಂದಾಸಿನ ದರವು

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜೆಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. .. ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ .. .. ರೂ. ೧—೧೪—೦
" " " " " ೦—೧೪—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು
ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಹೊಸ ನೋಟ್ಸು.

ಮೆಟ್ರಿಕ್ಯುಲೇಶನ್ ೪, ೫ನೇಯ ಕನ್ನಡ ಪುಸ್ತಕಗಳಿಗೆ ಕನಿಷ್ಠ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

ಬೆ ... ವಿಷಯಗಳಿರುವದೆ, ಪ್ರಶ್ನೆಸಹಿತ ಈ ನೋಟ್ಸು ನು ಬರದ ಅನೇಕ ದಿನಗಳಾದಾಗ್ಯೂ ಇತರ ನೋಟ್ಸುಗಳು ಇದುವರೆಯಿಂದ ಬೇಗ ಪ್ರಸಿದ್ಧಿಗೊಳಗಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೇ. ಕ್ರಯ ೮ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (ಎರಡನೆ ಭಾಷೆ) ೦—೧—೦
ಎನ ತರಗತಿಯ ಪದ್ಯಸಂಗ್ರಹದ ನೋಟ್ಸು ೦—೧—೬
೧೮೯೨ನೆ ವರ್ಷದ ಲೋಯರ್ ಸೆಕಂಡರಿ ನೋಟ್ಸು ೦ ೬—೦

ವಿಳಾಸ—ಯಂ. ಆರ್. ವೆಂಕಟಸುಬ್ಬಾಚಾರ್ಯರ್,
ಸುಬೋಧ ಗ್ರಂಥಾಲಯ, ಮೈಸೂರು

ಘನತೆಯುಳ್ಳ ಸ್ತ್ರೀಯರ ಚರಿತ್ರೆಯು.
ಚಿತ್ರ ಸಹಿತವಾದುದು.

6

ರಾಣಿವಾಸದವರು, ವಿದ್ಯಾರ್ಥಿನಿಯರು, ಸಾಮಾನ್ಯಸ್ತ್ರೀಯರು ಸಕಲರಿಗೂ ಸರ್ವೋತ್ತಮವಾದ ಮೇಲ್ಪಂಕ್ತಿಯನ್ನು ಹೇಳಿಕೊಡುವ ಪುಸ್ತಕ. ಮೊದಲನೆ ಸಲ ಪ್ರಿಂಟಾದ ಪುಸ್ತಕಗಳೆಲ್ಲಾ ಬಿಕರಿಯಾಗಿರುವುದೇ ಈ ಪುಸ್ತಕದ ಪ್ರಯೋಜನವನ್ನು ಪ್ರಕಾಶ ಪಡಿಸುತ್ತದೆ ಈ ಪುಸ್ತಕವನ್ನು ಈಗ ಎರಡನೆಯ ಸಲ ಪ್ರಿಂಟುಮಾಡಿದೆ. ಸೊಗಸಾದ ದಪ್ಪ ಗ್ಲೇಜುಳ್ಳ ಕಾಗದ, ಸುಂದರವಾದ ಬೈಂಡು, ನೇತ್ರಾನಂದಕರವಾದ ಸ್ತ್ರೀಯರ ಜೀವಚಿತ್ರಗಳು, ಮನೋಹರವಾದ ಅವರ ಚರಿತ್ರೆಗಳು—ಇವುಗಳಿಂದ ಕೂಡಿದ್ದಾಗಿದೆ. ಅತ್ಯಂತ ಬಡಬಗ್ಗರೂ ಕೊಂಡು ಓದುವುದಕ್ಕೆ ಅನುಕೂಲವಾಗಲೆಂದು ಈ ಪುಸ್ತಕದ ಕ್ರಯವನ್ನು ಬಹಳ ಅಗ್ಗವಾಗಿ ಮಾಡಿದೆ ಕ್ರಯ ೧ ಪ್ರತಿಗೆ ೧೨ ಆಣೆಮಾತ್ರ ವಿ ಪಿ. ಮೂಲಕ ತರಿಸಿ ಕೊಂಡಲ್ಲಿ ೪ ಆಣೆ ಬೀಳುತ್ತದೆ ವಿಳಾಸ—
ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು.

WESLEYAN MISSION PRESS, MYSORE.
ಮೈಸೂರು ವೆಸ್ಲೀಯನ್ ಮಿಷನ್ ಪ್ರೆಸ್.

16

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂಲ್ಯಿನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ದಿ ಯೆಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ
ಉಪವೃತ್ತಿ ಕಲ್ಪನಾಸಂಘ, ಬೆನ್ನಿಫಿಟ್ಸ್.

4

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸ್‌ದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು. ಸಾಮಾನ್ಯ ಉತ್ಪತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವೇ ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ. ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣವರಿಂದ ಮರಣಾನಂತರ ನಿಮ್ಮ ನೇಮಿತ ... ನೇಮಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಬಂದೋಬಸ್ತು ಉಂಟು ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಮ್ಯಾನೇಜರಿಗೆ ಬರದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು ಇಂಥಾ ಏಜಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ

ವಿಳಾಸ:—ಆರ್. ಎಸ್. ಪೂರಂ, ಮ್ಯಾನೇಜರ್

P. SUBBAROY'S
World Renowned and most Efficacious Ayurvedic Medicines.
ಪಿ. ಸುಬ್ಬರಾಯುಡುವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಲಕ್ಷ್ಮೀಶ ಕಸ್ತೂರಿಮಾತ್ರೆ

ಭೋಜನಾನಂತರ ತಾಂಬೂಲದೊಂದಿಗೆ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಅಫೀಮಿನಂಥ ಮಾದಕ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು ಕ್ರಯ.... ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ ಛಾರ್ಜಿ ಚಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ.—ಪಿ ಮಹಮದ್ ಸಮದಾನಿ

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ —ದೇಶೋದ್ಧಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುತ್ತದು —ಪುತ್ತೂರು ಪೋಲೀಸ್ ಇನ್ಸ್‌ಪೆಕ್ಟರ್

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ಪಿ. ಕೃಷ್ಣಯ್ಯಂಗಾರ್, ಶೆರಾಫ್ ದಿವಾನ್ ಮೆಷ್ನರಿ, ಕ್ವೆಟ್ಟ

Apply to.—P. SUBBAROV,
Porto Novo, South Arcot
ವಿಳಾಸ—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಕಥಾಸಂಗ್ರಹ—ಮೊದಲನೆ ಭಾಗ.

10

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡಸುಬೋಧ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಪಾಠಗಳನ್ನೂ ಪಾಠದ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ ೧ ಪ್ರತಿಗೆ ಕ್ರಯ ೮ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವದು. ಬೇಗ ಬರೆದು ತರಿಸಿಕೊಳ್ಳಿ ಗಂಡುಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ.—ಮ್ಯಾನೇಜರ್,
ಸಿ. ಎಲ್ ಎಸ್. ಬುಕ್ ಡಿಪೋ, ಮೈಸೂರು.

ತುಳಸೀ ರಾಮದಾಸ್ ಕಂಪನಿ,
ಸಾಹುಕಾರ್ ಪೇಟೆ, ಮದರಾಸು.

2

ಸವರನ್ ಚಿನ್ನದಿಂದಲು, ತಂಬಾಕೆಂಬ ಮಟ್ಟಚಿನ್ನದಿಂದಲು ತಯಾರು ಮಾಡಿದ ಆಭರಣಗಳು ಗ್ಯಾರಂಟಿ ಚೀಟಿಯ ಸಹ ಕಳುಹಿಸುತ್ತೇವೆ ಭಾಗ್ಯವಂತರಿಗೂ ಬಡವರಿಗೂ ಉಪಯೋಗವಾಗುವ ಹಾಗೆ ಅತ್ಯಂತ ಸುಲಭಕ್ರಯವನ್ನು ನಮೂದಿಸಿರುವದರಿಂದ ಲಕ್ಷಾಂತರ ವಿಕ್ರಯವಾಗುತ್ತಲಿದೆ. ವರ್ತಕರು ವ್ಯಾಪಾರಪಡಿಸುವ ದ್ರವ್ಯಾರ್ಜನೆಮಾಡುವದಕ್ಕೆ ಇದೇ ಒಳ್ಳೇ ತರುಣವೆಂದು ನಾವು ನಿಜವಾಗಿ ಹೇಳುತ್ತೇವೆ ನಮ್ಮ ಮಾತನ್ನು ಪರೀಕ್ಷಿಸುವದಕ್ಕಾಗಿ ಈ ಕೆಳಗೆ ಕಂಡ ಸಾಮಾನುಗಳು ಒಂದನ್ನು ತರಿಸಿ ಪರೀಕ್ಷಿಸಿರಿ.

೧. ಕೆಂಪು ಹರಳಿನ ಬೆಂಡೋಲೆ. ಇದು ಮೇಲಾದ ೮ ಕೆಂಪುಗಳಿಂದಲೂ ಆಣಿಯ ಬಿರಡೆಯನ್ನು ತಂಬಾಕೆಂಬ ಮಟ್ಟ ಚಿನ್ನದಿಂದಲೂ ಕಟ್ಟಲ್ಪಟ್ಟಿರುತ್ತೆ. ನೋಡಿದವರು ನೂರಕ್ಕು ರೂಪಾಯಿನ ಬೆಂಡೋಲೆಯೆಂದು ಹೇಳುವರು. ನಮ್ಮಲ್ಲಿ ನಂಬಿಕೆಯುಳ್ಳಷ್ಟು, ಮಾದರಿಗೆ ೧ ಜೊತೆ ತರಿಸಿ ನೋಡಿ ಆನಂದವನ್ನು ಹೊಂದಿರಿ ಪುನಃ ವಾಪಸ್ ಮಾಡಿದಾಗ್ಯೂ ಇದರ ನೋಬಲಗನ್ನು ವಾಪಸಾರ್ಥ ಮಾಡುತ್ತೇವೆ. ನೀವು ಎಷ್ಟೋ ಮೊದಲುಮಾಡ್ದು ತಗಲಿದರೂ ಎಷ್ಟು ವರುಷಗಳಾದರೂ ಕೆಡಲಾರದು. ಬೆಲೆ ಜೊತೆ ೧ಕ್ಕೆ ರೂ. ೬.



೨. ಹಳುಕುಪಟಿಕವನ್ನು ಹಾಕಿ ಅಚ್ಚ ಸವರನ್ ಚಿನ್ನದಿಂದ ಕಟ್ಟಲ್ಪಟ್ಟ ಮೂಗುಬಟ್ಟು. ಬೆಲೆ ರೂ. ೧—೮—೦. ಇದು ಅನೇಕ ವರುಷಗಳು ಉಪಯೋಗಿಸಿ ವಿಕ್ರಯಿಸಿದರೂ ಚಿನ್ನದ ಬೆಲೆಯೂ ಫಳುಕುಪಟಿಕದ ಬೆಲೆಯೂ ಹೋಗಲಾರದು. ಬಹಳ ಮೇಲಾದದ್ದು.

೩. ಅಚ್ಚ ಕೆಂಪಿನಿಂದಲೂ, ಸವರನ್ ಚಿನ್ನದಿಂದಲೂ ಕಟ್ಟಿದ ಮೂಗುಬಟ್ಟು, ೧ಕ್ಕೆ ಕ್ರಯ ರೂ. ೨



೪ ತಂಬಾಕೆಂಬ ಚಿನ್ನದಿಂದಲು, ಫಳುಕುಪಟಿಕದಿಂದಲು ಕಟ್ಟಲ್ಪಟ್ಟ ಮೇಲಾದ ಹತ್ತುಕಡುಕು ಕ್ರಯ ಜೊತೆ ೧ಕ್ಕೆ ರೂ. ೪

೫ ಕೆಳಭಾಗ ಅಚ್ಚ ಚಿನ್ನದಿಂದಲು, ಬೆಳ್ಳಿ ಪವಳದಿಂದಲು ಕಟ್ಟಲ್ಪಟ್ಟ ಫಳುಕುಪಟಿಕದ ಹತ್ತುಕಡುಕು. ಕ್ರಯ ರೂ. ೬.



೬. ತಂಬಾಕಿನದ ಕಟ್ಟಲ್ಪಟ್ಟ ಫಳುಕುಪಟಿಕದ ೩ ಕಲ್ಲುಗಳುಳ್ಳ ಬುಲಾಕು. ೧ಕ್ಕೆ ಕ್ರಯ ರೂ. ೩.

೭. ೧೪ ಕಾರೆಟ್ ಉಳ್ಳ ಚಿನ್ನದಿಂದಲು ಸುತ್ತಲು ೭ ಸೀಮೆ ಕಲ್ಲುಗಳಿಂದಲು ಕಟ್ಟಲ್ಪಟ್ಟ ಬಹಳ ನಾಜೂಕಾದ ಉಂಗರ. ಎಷ್ಟು ವರುಷಗಳಾದರೂ ಕೆಡಲಾರದು. ಇದರ ಕ್ರಯ ರೂ. ೬—೦—೦.

ಪ್ರಶ್ನೋತ್ತರಲೇಖ್ಯಬೋಧಿನಿ.

ಎರಡನೆಯ ಛಾಪೆ. ಕ್ರಯ . ಒಂದು ರೂಪಾಯಿ ನಾಲ್ಕಾಣೆ.
ಬೇಗ ಬರೆಯಿರಿ ! ಬೇಗ ಬರೆಯಿರಿ !! ಬೇಗ ಬರೆಯಿರಿ !!!

ಭೂಮಿಯ ಅಳತೆ.

ಎಂಬೀ ಐದನೇ ಪೋಷಣೆ ಕಲಿಸುವ ಪುಸ್ತಕದಿಂದ ಇತರರ ಸಹಾಯ ಸ್ವಲ್ಪವೂ ಇಲ್ಲದೆ ಸ್ವಲ್ಪಮಟ್ಟಿಗೆ ಓದುಬರಹ ಕಲಿತಿರುವ ಪರೂ ಕೂಡ ಭೂಮಿಯನ್ನು ಅಳೆಯುವುದಕ್ಕೆ ಚೆನ್ನಾಗಿ ತಾವಾಗಿಯೇ ಕಲಿಯಬಹುದು ಒಂದು ಸಲ ತರಿಸಿ, ಓದಿನೋಡಿ. ಕ್ರಯ ಹನ್ನೆರಡು ಆಣೆ. ವಿಳಾಸ —
ಭಾರತಿ ಸಂಪಂಗಿರಾಮು, ಹೊಸಕೋಟೆ, ಬೆಂಗಳೂರು.

ಶ್ರೀಚಾಮರಾಜೇಂದ್ರ ರಾಜ್ಯವಿಲಾಸ.

H. H. THE LATE MAHARAJA'S BIOGRAPHY.

ಎಪ್ಪತ್ತೈದು ಪ್ರಕರಣಗಳುಳ್ಳ ಈ ಕನ್ನಡ ಪ್ರೋಸ್ ಪುಸ್ತಕದಲ್ಲಿ—ಶ್ರೀ ಚಾಮುಂಡೇಶ್ವರೀ ಅವತಾರ ಕಥೆಯೂ, ಯದುವಂಶಾವಳಿಯೂ, ಲೇಟ್ ಮಹಾರಾಜರವರ ಜೀವಕಾಲದ ಆದ್ಯಂತ ಚರಿತೆಯೂ, ಮಹಾರಾಣಿ ರೀಜೆಂಟರವರ ಚರಿತ್ರೆಯೂ, ಈಗಿನ ಶ್ರೀ ಶೃಂಗೇರಿ ಶ್ರೀ ಜಗದ್ಗುರುಗಳ ಚರಿತ್ರೆಯೂ, ಪೂರ್ವದ ಮತ್ತು ಈಗಿನ ದಿವಾನರವರ ಚರಿತ್ರೆಯೂ, ರಾಜಧಾನಿಗೆ ದಯಮಾಡಿದ್ದ ವೈಸ್‌ರಾಯಿರ ಸ್ಪೀಚ್‌ಗಳೂ ರಾಜ್ಯಾಡಳಿತಗಳ ವಿಚಾರವೂ, ರೀಜನ್ಸಿ ಏರ್ಪಾಡಾಗುವ ವರಿಗಿನ ಈ ದೇಶದ ಪ್ರತಿಯೊಂದು ಇಲಾಖೆಯ ಸಂಗತಿಗಳೂ, ಖಚಿತ ಮುಂತಾದವೂ—ಚೆನ್ನಾಗಿ ವಿವರಿಸಲ್ಪಟ್ಟವೆ ಪ್ರಭುಗಳ ಭಾವಚಿತ್ರವೂ ವ್ಯತ್ಯಾಸವಿಲ್ಲದೆ ಇದೆ. ಸರ್ಕಾರದವರ ಪ್ರೋತ್ಸಾಹವನ್ನೂ ಹೊಂದಿದೆ ಸಕಲಜನೋಪಯೋಗವಾದುದು ಸ್ವಲ್ಪ ಪ್ರತಿಗಳೇ ಉಳಿದಿವೆ ನಮ್ಮ ರಾಷ್ಟ್ರದ ನಮ್ಮ ದೊರೆಗಳ ಚರಿತ್ರೆಯನ್ನು ಪೂರ್ತಿ ತಿಳಿಯಬೇಕೆಂದಾಶಿಸುವವರಿಗೆ ಇದನ್ನು ಬಿಟ್ಟರೆ ಬೇರೆ ಪುಸ್ತಕ ದೊರೆಯಲಾರದು. ಕ್ರಯ, ೧೨ ಆಣೆ ಮಾತ್ರ ಜಾಗ್ರತೆ ಈ ವಿಳಾಸಕ್ಕೆ ಬರೆಯಿರಿ
೧. ದಿ ಜನರಲ್ ಏಜನ್ಸಿ, ಲಕ್ಷ್ಮೀವಿಲಾಸ ರೋಡ್, ಮೈಸೂರು.
೨. ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.
೩. ಮೆಸರ್ಸ್. ಕೆ. ನರಸಿಂಹೈಯ ಅಂಡ್ ಕೋ . ಮೈಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೪ ನೇ ಇಸವಿ ಮೇ ತಾ॥ ೧೮ ನೇ ಗುರುವಾರ.

ತಾತಾರವರ ಶಾಸ್ತ್ರ ವಿದ್ಯಾಶಾಲೆಯು.

ಬೊಂಬಾಯಿ ಪಟ್ಟಣದಲ್ಲಿ ಕೋಟ್ಯಾಧೀಶ್ವರರಾಗಿಯೂ ನಾನಾ ಪುಣ್ಯ ಕಾರ್ಯಗಳನ್ನು ಮಾಡಿ ತುಂಬಾ ಮಹೋನ್ನತರಾಗಿಯೂ ಇರುತ್ತಿದ್ದ ಮಿ ಜೆ. ಎನ್. ತಾತಾರವರು ಹಿಂದುಸ್ಥಾನದ ಶ್ರೇಯೋಭಿವೃದ್ಧಿಯನ್ನು ಬಯಸಿ, ಗವರ್ನಮೆಂಟಿನವರ ವಶಕ್ಕೆ ೩೦ ಲಕ್ಷ ರೂಪಾಯಿನ ಆಸ್ತಿಯನ್ನು ಪಟಿಸಿರುವುದು ಲೋಕಪ್ರಸಿದ್ಧವಾಗಿದೆ. ಬಿ. ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಶಾಸ್ತ್ರ ಪರಿಶೋಧನಾ ಕಾರ್ಯದಲ್ಲಿ ಉದ್ಯುಕ್ತರಾಗುವುದಕ್ಕೆ ಹಿಂದುಸ್ಥಾನದಲ್ಲಿ ಅವಕಾಶವಿರಲಿಲ್ಲ. ಮೇಲ್ಕಂಡ ಫಂಡಿನ ಹಣದಿಂದ ಒಂದು ಶಾಸ್ತ್ರ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಗೊತ್ತುಮಾಡಿ, ಅದಕ್ಕೆ ಹಿಂದುಸ್ಥಾನದೊಳಗೆ ಯಾವ ನಗರವು ಎಲ್ಲಾ ಭಾಗಗಳಲ್ಲೂ ಅನುಕೂಲವಾಗಿರುತ್ತದೆಂದು ಅಧಿಕಾರಿಗಳನ್ನು ಕಳುಹಿಸಿ, ಪರೀಕ್ಷೆ ಮಾಡಿಸಿದ್ದರಲ್ಲಿ ಮೈಸೂರು ಸಂಸ್ಥಾನದೊಳಗೆ ಮುಖ್ಯ ಪಟ್ಟಣವೆನಿಸಿಕೊಂಡಿರುವ ಬೆಂಗಳೂರನ್ನು ಆ ಅಧಿಕಾರಿಗಳು ಸಮರ್ಪಕವಾಗಿರುತ್ತದೆಂದು ತಿಳಿಸಿದರು. ಈ ಪಟ್ಟಣದ ಹವಾ, ಆರೋಗ್ಯ ವಿಚಾರ ಮುಂತಾದವು ಇಂಡಿಯಾ ಗವರ್ನಮೆಂಟಿನವರ ಮೆಚ್ಚಿಕೆಯನ್ನೂ ಆ ಫಂಡಿನ ಸೆಕ್ರಟರಿಯವರ ಮೆಚ್ಚಿಕೆಯನ್ನೂ ಸಂಪಾದಿಸಿಕೊಂಡಿರುತ್ತವೆ. ಇದಕ್ಕೆ ಸಹಕಾರಿಯಾಗಿ ಮೈಸೂರು ಸರ್ಕಾರದವರು ಈ ವಿದ್ಯಾಶಾಲೆಯನ್ನು ಬೆಂಗಳೂರಿನಲ್ಲೇ ಸ್ಥಾಪಿಸುವುದಾದರೆ ಅದಕ್ಕಾಗಿ ೩೦ ಎಕರೆಗಳ ವಿಸ್ತಾರವುಳ್ಳ ಜಮೀನನ್ನು ಬಿಟ್ಟುಕೊಡುತ್ತೇವೆಂತಲೂ ಅದರ ಬಂಗಲೆ ಮುಂತಾದ ಕಟ್ಟಡಗಳಿಗಾಗಿ ೫ ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಡುತ್ತೇವೆಂತಲೂ ಅನಂತರ ಈ ವಿದ್ಯಾಶಾಲೆಗೆ ೩೫,೦೦೦ ರೂಪಾಯಿನಂತೆ ವರ್ಷಾಶನವನ್ನೂ ಕೊಡುತ್ತೇವೆಂತಲೂ ತಿಳಿಸಿದಾರೆ. ಇಂಡಿಯಾ ಗವರ್ನಮೆಂಟಿನವರಾದರೋ ಈ ವಿದ್ಯಾಶಾಲೆಗೆ ಮಟ್ಟುವಳಿ ಆಗುವ ಒಟ್ಟು ಹಣದಲ್ಲಿ ಅರೆವಾಸಿಯನ್ನು ಗವರ್ನಮೆಂಟಿನಿಂದ ಗ್ರಾಂಟು ಕೊಡುತ್ತೇವೆಂದು ತಿಳಿಸಿ, ಮೈಸೂರು ಸರ್ಕಾರದವರನ್ನು ಇನ್ನು ಸ್ವಲ್ಪ ಹೆಚ್ಚಾಗಿ ವರ್ಷಾಶನ ಕೊಡಬಾರದೇ ಎಂದು ಕೇಳಿದಾರೆ. ಇದನ್ನೆಲ್ಲಾ ನೋಡುವಲ್ಲಿ ಈ ಶಾಸ್ತ್ರ ವಿದ್ಯಾಶಾಲೆಯು ಬೆಂಗಳೂರಿನಲ್ಲೇ ಏರ್ಪಾಡಾಗಬೇಕೆಂದು ಖಂಡಿತವಾಗಿರುವುದು.

ಈಚಿಗೆ ಬೊಂಬಾಯಿನಲ್ಲಿರುವ ಕೆಲವು ಗೃಹಸ್ಥ ಮನುಷ್ಯರು ಈ ವಿದ್ಯಾಶಾಲೆಯನ್ನು ಏನಾದರೂ ಮಾಡಿ ಆ ಪಟ್ಟಣದ ಸಮೀಪದಲ್ಲೇ ಇಡಿಸುವಂತೆ ಮಾಡಿಕೊಳ್ಳಬೇಕೆಂದು ತುಂಬಾ ಸಾಹಸ ಪಡುತ್ತಿದಾರೆ. ಅದಕ್ಕೆ ಮಹಾಬಲೇಶ್ವರದಾದ ತಾತಾರವರು ಬೆಂಗಳೂರಿನಲ್ಲೇ ಅದನ್ನು ಸ್ಥಾಪಿಸಬೇಕೆಂದು ಅಪೇಕ್ಷಪಟ್ಟಿದ್ದರೂ ಈಗ ಕೆಲವರು, ಈ ಹಣವನ್ನು ಕೊಟ್ಟವರು ಬೊಂಬಾಯಿನವರಾದ್ದರಿಂದಲೂ ಅದಕ್ಕೆ ಬೇಕಾಗುವ ಇತರ ಸಹಾಯಗಳನ್ನೂ ತಾವೇ ಒದಗಿಸಿ ಕೊಡಲು ಸಿದ್ಧರಾಗಿರೋಣದರಿಂದಲೂ ಆ ವಿದ್ಯಾಶಾಲೆಯು ಅಲ್ಲೇ ಅಂದರೆ ಬೊಂಬಾಯಿನಲ್ಲೇ ಏರ್ಪಾಡಾಗಬೇಕಾದದ್ದು ನ್ಯಾಯವಾಗಿದೆ ಎಂದು ಹೊರವಾದಿಸಲಾರಂಭಿಸಿದಾರೆ. ಇದು ಎಷ್ಟು ಮಾತ್ರಕ್ಕೂ ಸಾಧ್ಯವಲ್ಲ. ಈ ವಿದ್ಯಾಶಾಲೆಗೆ ಬೇಕಾಗಿರುವುದು ದ್ರವ್ಯಸಹಾಯ ಒಂದೇ ಆಗಿರುವ ಪಕ್ಷಕ್ಕೆ ಬೊಂಬಾಯಿ ಪಟ್ಟಣದವರು ಕೊಡತಕ್ಕಷ್ಟು ಹಣವನ್ನು ಇತರ ಕಡೆಗಳವರೂ ಒದಗಿಸಲಾರರೆಂದು ಹೇಳುವರೂ ಹೇಳಬಹುದು. ಆದರೆ ಆ ವಿದ್ಯಾಶಾಲೆಯು ಪ್ರಯೋಜನದಿಗೆ ಹವಾ, ಆರೋಗ್ಯ, ಇವೇ ಮುಂತಾದ ಇತರ ಸ್ವಾಭಾವಿಕವಾದ ಸಹಾಯಗಳು ಅವಶ್ಯವಾಗಿರುವವು. ಇಂಥಾ ಮುಖ್ಯ ಸಹಾಯವು ಬೆಂಗಳೂರಿನಲ್ಲಿ ಬಿಟ್ಟರೆ ಇನ್ನೆಲ್ಲೂ ದೊರಕಲಾರದೆಂದು ಆಗಲೇ ಸಿದ್ಧಾಂತಮಾಡಿರುವುದು ಸಹಜವಾಗಿರುತ್ತದೆ. ಅದ್ದರಿಂದ ಈ ವಿದ್ಯಾಶಾಲೆಯು ಬೆಂಗಳೂರಿನಲ್ಲೇ ಏರ್ಪಾಡಾಗುವುದು.

ಈಚಿಗೆ ಬೊಂಬಾಯಿನವರು ಈ ವಿಷಯದಲ್ಲಿ ಸೋಲ ಬಹುತ್ತಿರುವಂತೆಯೇ ಗೊಂಡಾಲ್ ಎಂಬ ದೇಶೀಯ ಸಂಸ್ಥಾನದ ಮಹಾರಾಜರವರಾದ ಥಾಕೂರ್ ಸಾಹೇಬ್‌ರವರು ಈ ವಿದ್ಯಾಶಾಲೆಯನ್ನು ತಮ್ಮ ಸಂಸ್ಥಾನದಲ್ಲೇ ಇಡಿಸುವಂತೆ ಮಾಡಿಕೊಳ್ಳಬೇಕೆಂದು ಬಹು ವಿಶೇಷವಾದ ಆತೋತ್ತರವನ್ನು ತೋರಿಸಿರುತ್ತಾರೆ. ಈ ತಾತಾರವರ ಶಾಸ್ತ್ರ ಪರಿಶೋಧನಾ ವಿದ್ಯಾಶಾಲೆಯನ್ನು ಗೊಂಡಾಲಿನಲ್ಲಿ ಇಟ್ಟು ನಡಿಸುವುದಾದರೆ ಅದಕ್ಕೆ ೩೦೦ ಎಕರೆಯಷ್ಟು ಜಮೀನನ್ನು ಬಿಟ್ಟುಕೊಟ್ಟು, ಬಂಗಲೆ ಮೊದಲಾದ ಕಟ್ಟಡಗಳ ಫಂಡಿಗೆ ೫,೦೦,೦೦೦ ರೂಪಾಯಿಯನ್ನೂ ಕೊಡುವುದಲ್ಲದೆ, ತರುವಾಯ ಆ ವಿದ್ಯಾಶಾಲೆಗೆ ೩೫ ಸಾವಿರ ರೂಪಾಯಿನಂತೆ ವಾರ್ಷಿಕ ಚಂದಾ ಒದಗಿಸಿಕೊಡುತ್ತಾ ಬರುವೆವೆಂದು ಆವ ಮುಟ್ಟಿಸಿದ್ದಾರೆ. ನಾವು ಮೇಲೆ ಹೇಳಿದಂತೆ ಈ ವಿದ್ಯಾಶಾಲೆಗೆ ಬೇಕಾಗಿರುವುದು ದ್ರವ್ಯವೇ ವಿಶೇಷವಾಗಿಲ್ಲವಾದುದರಿಂದ ಗೊಂಡಾಲ್ ಸಂಸ್ಥಾನದವರ ಕುತೂಹಲವು ನಿರರ್ಥಕವಾಗಿರುತ್ತದೆ. ಆದರೆ ಮೈಸೂರು ಗವರ್ನಮೆಂಟಿನವರು ಇಂಡಿಯಾ ಸರ್ಕಾರದವರ ಅಪೇಕ್ಷೆಯಂತೆ ಹೆಚ್ಚು ದ್ರವ್ಯಸಹಾಯವನ್ನು ಮಾಡಿ, ಹಿಂದುಸ್ಥಾನದಲ್ಲೆಲ್ಲಾ ಅದ್ವಿತೀಯವಾದ ಇಂಥಾ ವಿದ್ಯಾಶಾಲೆಯನ್ನು ಬೆಂಗಳೂರಿನ ಹತ್ತಿರದಲ್ಲೇ ಇಡಿಸಿಕೊಳ್ಳುವಂತೆ ಮಾಡಿಕೊಂಡಾರೆಂದು ನಿರೀಕ್ಷಿಸುತ್ತೇವೆ.

ಚೇಂಬರ್ಲೆನ್ಸ್‌ರವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

19



ಕೆಳಹೊಟ್ಟೆಯ ನೋವು ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತು ಬೇರೆ ಇಲ್ಲ. ಈಚಿಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ ; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಸ್ವದೇಶದ ವರ್ತಮಾನಗಳು.

ರಾಜಧಾನಿಯಲ್ಲಿರುವ ಅಡ್ವೊಕೇಟ್ ಮಿ॥ ವಿ ರಾಘವಾಚಾರ್ಯರ ಮನೆಯಲ್ಲಿ ಕಳ್ಳರು ನೂರು ಬೆಲೆಯ ಚಿನ್ನವನ್ನು ಕಳುವು ಮಾಡಿ, ಗಾಡಿಗಳ ಮೇಲೆ ತಂದು ಹೋದರೆಂದು ತಿಳಿಯುವದು. ಇಂಥಾ ಕಳ್ಳತನ ಮಾಡಿದವರು ಇನ್ನೂ ಸಿಕ್ಕದೆ ಇರುವುದು ತುಂಬಾ ಆಶ್ಚರ್ಯವಾಗಿದೆ.

*****

ಶ್ರೀಮನ್ ಮಹಾರಾಜರವರು ಈ ತಿಂಗಳ ೨೮ ನೆ ತಾರೀಖು ಭಾನುವಾರ ನೀಲಗಿರಿ ಬೆಟ್ಟದಿಂದ ಪೋರ್ಟ್ ಕಾರ್ ಎಂಬ ಗ್ರಾಮದಲ್ಲಿ ಹಿಂತಿರುಗಿ ರಾಜಧಾನಿಗೆ ದಯಮಾಡುವರಾಗಿದಾರೆ. ಮಹಾಮಾತೃಶ್ರೀಯವರು ಪರಿವಾರ ಸಹಿತ ರೈಲಿನ ಮೇಲೆ ಬೆಂಗಳೂರಿನ ಮೂಲಕ ಮರುದಿನ ರಾಜಧಾನಿಗೆ ದಯಮಾಡುವರೆಂದು ಕೇಳುತ್ತೇವೆ

****

ಮುಂದಿನ ತಿಂಗಳ ಎರಡನೆಯ ವಾರದಲ್ಲಿ ಶ್ರೀಮನ್ ಮಹಾರಾಜರವರ ವರ್ಧಂತೀ ಉತ್ಸವಗಳು ನಡೆಯುವವು. ಈ ಸಲ ಈ ಉತ್ಸವಕ್ಕೆ ಸುಮಾರು ೨೦೦ ಸರ್ದಾರರೂ ದೊರೆಸಾನಿಗಳೂ ಬರುವರು. ಚಾಮುಂಡೀ ಬೆಟ್ಟದ ಮೈದಾನದಲ್ಲಿ ವಿಶೇಷ ಕುದುರೆ ಪಂದ್ಯಗಳೂ ಪೋಲೋ ಎಂಬ ಕುದುರೆ ಚೆಂಡಾಟದ ಪಂದ್ಯಗಳೂ ಇತರ ವಿನೋದಗಳೂ ನಡೆಯುತ್ತವೆ.

****

ದಾವಣಗೆರೆ ತಾಲ್ಲೂಕು ಆನಗೋಡು ಎಂಬ ಗ್ರಾಮದಲ್ಲಿ ಕಳೆದ ತಿಂಗಳ ೨೩ ನೆ ತಾರೀಖಿನಲ್ಲಿ ಸುಮಾರು ೩—೪ ಸಾವಿರ ಜನರು ಪ್ರಾರ್ಥಿಸಿಕೊಂಡು ಮಾಡಿ, ೨೦೦ ಕುರಿಗಳನ್ನೂ ೫೦ ಮೇಕೆಗಳನ್ನೂ ೨೦ ಕೋಣಗಳನ್ನೂ ಕಡಿದು ಹಾಕಿದರು. ಮರುದಿನ ಆ ಗ್ರಾಮದವರು ಸೋಮಶೇಖರ, ಚಂದ್ರಶೇಖರವಿಲಾಸವೆಂಬ ನಾಟಕವನ್ನು, ಆಡಿಸಿ ನೋಡಿದರು ಎಂಬುದಾಗಿ ಒಬ್ಬ ಬಾತ್ಮೀದಾರರು ಬರೆದಿದಾರೆ

****

ಸಬ್ ರಿಜಿಸ್ಟ್ರಾರುಗಳು ನೇಮಕವಾಗದೆ ಇರುವ ತಾಲ್ಲೂಕುಗಳಲ್ಲಿ ಶಿರಸ್ತೇದಾರರೇ ಪತ್ರಗಳನ್ನು ರಿಜಿಸ್ಟರ್ ಮಾಡುವುದೂ ಇದಕ್ಕಾಗಿ ಅವರಿಗೆ ಸರ್ಕಾರದವರು ಅಲವೆನ್ಸು ಕೊಡುವುದೂ ಪದ್ಧತಿಯಾಗಿದೆಯಷ್ಟೆ. ಈಗ ಗವರ್ನಮೆಂಟಿನವರು ಕೊಟ್ಟಿರುವ ಹುಕುಂ ಪ್ರಕಾರ ಇನ್ನು ಮೇಲೆ ಅಂಥಾ ಅಲವೆನ್ಸು ಶಿರಸ್ತೇದಾರರಿಗೆ ಸಲ್ಲುವುದಿಲ್ಲ. ಇದಕ್ಕೆ ಪ್ರತಿಯಾಗಿ ಅವರಿಗೆ ತಿಂಗಳಿಗೆ ೧೦ ರೂಪಾಯಿ ನಂತೆ ಅಲೋವೆನ್ಸು ಕೊಡುವರು.

****

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರಟರಿ ಮಿ॥ ಇ ಮೆಕಾನಿಕಿಯವರು ಕಳೆದ ವಾರ ನೀಲಗಿರಿಯಿಂದ ರಾಜಧಾನಿಗೆ ಬಂದು, ನಾಳೆ ಸಾಯಂಕಾಲ ನೀಲಗಿರಿ ಬೆಟ್ಟದ ಮೇಲೆ ನಡೆಯಬೇಕಾಗಿರುವ ಯೂರೋಪ್ಯರ ಭಾರೀ ಔತನಕ್ಕೆ ಕೆಲವು ಸಾಮಗ್ರಿಗಳನ್ನು ಒದಗಿಸಿಕೊಂಡು, ಕಳೆದ ಶನಿವಾರ ನೀಲಗಿರಿಗೆ ವಾಪಸು ಪ್ರಯಾಣ ಮಾಡಿದರು. ನಾಳೆ ನಡೆಯುವ ಔತನಕ್ಕೆ ಸುಮಾರು ೩೦೦ ಮಂದಿ ಸರ್ದಾರರೂ ದೊರೆಸಾನಿಗಳೂ ಕರೆಯಲ್ಪಟ್ಟಿದಾರೆಂದು ತಿಳಿಯುವುದು.

*****

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯನ್ನು ಡಾಕ್ಟರ್ ಸ್ಮಿತ್ ರವರು ನೋಡಿಕೊಳ್ಳುತ್ತಿದ್ದರು ಇವರಿಗೆ ಈ ಸಂಸ್ಥಾನದ ವೈದ್ಯ ವಿಚಾರವನ್ನೂ ಆರೋಗ್ಯ ವಿಚಾರವನ್ನೂ ನೋಡುವುದೇ ಸಾಕಾಗಿದೆಯಾದ್ದರಿಂದ ಈ ಆಸ್ಪತ್ರೆಯಲ್ಲೂ ಕೆಲಸ ಮಾಡುವುದಕ್ಕೆ ಅವಕಾಶವಿಲ್ಲ. ಆದದರಿಂದ ಡಾಕ್ಟರ್ ಟಿ. ವಿ ಆರುಮುಗಂ ಮೊದಲಿಯಾರವರನ್ನೇ ಆ ಆಸ್ಪತ್ರೆಯ ಮುಖ್ಯ ಅಧಿಕಾರಿಯಾಗಿ ನೇಮಿಸಿದಾರೆ. ಇವರು ಎಲ್ಲಾ ವಿಷಯಗಳಲ್ಲೂ ಗವರ್ನಮೆಂಟಿನವರ ಮತ್ತು ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿರುತ್ತಾರಾದಕಾರಣ ಇವರಿಗೆ ಈಗ ಬತ್ತ ಆದದ್ದು ಸಂತೋಷಕರವಾಗಿದೆ.

*****

ಛಾಂಪಿಯನ್ ರೀಫ್ ಚಿನ್ನದ ಗಣಿಯಿಂದ ವಿಲಾಯಿತಿಗೆ ರವಾನೆಮಾಡಿದ ಚಿನ್ನದ ಗಟ್ಟಿಗಳ ಪೈಕಿ ೩೮,೦೦೦ ರೂಪಾಯಿನ ಚಿನ್ನವು ಕಳುವಾಯಿತು. ಪೋಲೀಸಿನವರು ನಾಲ್ಕು ಜನರನ್ನು ಹಿಡಿದು,

ಕಳೆದ ವಾರ ಸೆಷನ್ಸ್ ಕೋರ್ಟಿನಲ್ಲಿ ದರ್ಯಾಫ್ತಿ ಮಾಡಿದರು. ಕಳುವಾದ ಚಿನ್ನದ ಪೈಕಿ ೨೧,೦೦೦ ರೂಪಾಯಿನ ಚಿನ್ನವು ಸಿಕ್ಕಿದೆ. ಜಡ್ಜರು ೧ ನೇ, ೩ ನೇ ಅಪರಾಧಿಗಳಿಗೆ ತಲಾ ಐದು ವರುಷ ಕಂತೆ ಕಾಲ ಶಿಕ್ಷೆ ವಿಧಿಸಿ, ೨ ನೇ ಅಪರಾಧಿಯನ್ನು ಬಿಡಿಸಿ ಬಿಟ್ಟರು. ಈ ಅಪರಾಧಿಗಳು ಅಪೀಲ್ ಮಾಡುವವರಾಗಿದ್ದಾರೆ. ಕಂಪನಿಯವರ ಅಜಾಗರೂಕತೆಯಿಂದಲೇ ಇಷ್ಟು ಭಾರೀ ಚಿನ್ನ ಕಳುವಾಗುವುದಕ್ಕೆ ಕಾರಣವಾಯಿತೆಂದು ಜಡ್ಜರು ಹೇಳಿದಾರೆ

****

ಮೈಸೂರು ಗವರ್ನಮೆಂಟಿನವರು ಮುಂದೆ ಹೇಳುವ ಅಧಿಕಾರಿಗಳಿಗೆ ೧೯೦೬ ನೇ ಇಸವಿ ಜೂನ್ ಆಖೈರು ವರೆಗೆ ಕೆಲಸದಲ್ಲಿರಬಹುದೆಂದು ಸರ್ವೀಸನ್ನು ಹೆಚ್ಚಿಸಿರುತ್ತಾರೆ. ಸೆಷನ್ಸ್ ಜಡ್ಜ ಮೆ॥ ಎಸ್. ಆರ್. ಸುಬ್ಬಾರಾಯರವರು, ಪೊಲೀಸ್ ಆಕ್ಟಿಂಗ್ ಅ॥ ಸೂಪರೀಂಟ್ ಮೆ॥ ಗುಲಾಂ ಮಹಮದ್ ಖಾನರವರು, ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಜೆ. ಜೆ. ಮಾಂಟೇರೋ ಯವರು, ಅ॥ ಪ್ರಿವಿಟರಿ ಸೆಕ್ರಿಟರಿ ಮೆ॥ ಎಚ್. ಡಾರ್ನರವರು, ಹುಜೂರು ಖಜಾನಾ ಆಫೀಸರ್ ಮೆ॥ ಬಿ. ಗೋಪಾಲೈಯಂಗಾರ್ಯರು, ಸಬ್ ಅ॥ ಸರ್ಜನ್ ಮೆ॥ ಎಸ್. ಜಿ. ವೆಸ್ಲಿಯವರು, ಡೆಪ್ಯುಟಿ ಅಮಲ್ದಾರ್ ಮೆ॥ ನರಸಿಂಹಲು ನಾಯ್ಡುಯವರು, ಆಕ್ಟಿಂಗ್ ಅಮಲ್ದಾರ್ ಮೆ॥ ಎಸ್. ರಾಮರಾಯರು, ಅಮಲ್ದಾರ್ ಮೆ॥ ಆರ್. ರಾಘವೇಂದ್ರ ರಾಯರು, ಕೌನ್ಸಲರ್ ಮೆ॥ ಶ್ರೀನಿವಾಸೈಯಂಗಾರ್ಯರು.

ರಷ್ಯಾ ರಾಜ್ಯದಲ್ಲಿ ಗಲಭೆಯು.

ಕಳೆದ ವಾರ ಬಂದ ಮುಖ್ಯ ತಂತೀವರ್ತಮಾನಗಳು.

ಲಂಡನ್, ಮೇ ೮ —ವಾರ್ಸಾ ಪಟ್ಟಣದಲ್ಲಿ ದಂಗೆಕೋರರಾದ ಪ್ರಜೆಗಳಲ್ಲಿ ಎರಡು ಗುಂಪುಗಳಾದವು ಒಂದು ಗುಂಪಿನವರು ಎದುರುಗುಂಪಿನವರ ಮತವನ್ನು ಅಲಕ್ಷ್ಯಮಾಡಿದ್ದರಿಂದ ಅವರವರಿಗೇ ಮನಸ್ತಾಪಗಳುಂಟಾಗಿ, ಕೆಲವರು ಸರ್ಕಾರಿ ಅಧಿಕಾರಿಯಾದ ಗವರ್ನರು ಬಳಿಗೆ ಹೋಗಿ, ೧ನೆ ತಾರೀಖಿನದಿನ ನಡೆದ ದಂಗೆಯನ್ನು ಕುರಿತು ತನಿಖೆಮಾಡುವಂತೆ ಒಳಸಂಚು ಕೇಳಿಕೊಟ್ಟಿದಾರೆ

ಬೆಂಕಿಯ ನಷ್ಟ.

ನ್ಯೂಸ್ಕಿ ಎಂಬ ತೀರಪಟ್ಟಣದಲ್ಲಿ ನೆನ್ನೆ ರಾತ್ರಿ ಹಡಗುಗಳನ್ನು ತಯಾರುಮಾಡುವ ಭಾರೀ ಕಾರ್ಖಾನೆಗೆ ಬೆಂಕಿಬಿದ್ದು, ೧೭ ಬಂಗಲೆಗಳೂ ಒಳಗಿದ್ದ ಸಾಮಾನುಗಳೂ ಸುಟ್ಟು ಬೂದಿಯಾದವು, ಇನ್ನು ಆರು ಕಟ್ಟಡಗಳಲ್ಲಿ ಕೆಲವು ಭಾಗಗಳು ನಾಶಹೊಂದಿದವು

ದೊಡ್ಡ ಸಮಾಜವು.

ಲಂಡನ್ ಮೇ ೧೦.—ಮಾಸ್ಕೋ ಪಟ್ಟಣದಲ್ಲಿ ಪ್ರಜೆಗಳೆಲ್ಲಾ ಸೇರಿ ದೊಡ್ಡ ಸಭೆಯನ್ನು ನಡಿಸಿದರು. ಎರಡು ಸಭಾಮನೆಗಳು ಏರ್ಪಾಡಾಗಬೇಕೆಂತಲೂ ಒಂದಕ್ಕೆ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಮೆಂಬರುಗಳಾಗಬೇಕೆಂತಲೂ ಇನ್ನೊಂದಕ್ಕೆ ಸ್ವತಂತ್ರಸಂಘಗಳ ಪ್ರತಿನಿಧಿಗಳು ಮೆಂಬರುಗಳಾಗಬೇಕೆಂತಲೂ ಗೊತ್ತುಮಾಡಿದರು.

ಪಾರ್ಲಿಮೆಂಟ್ ಸಭೆಗಳು.

ರಷ್ಯಾ ರಾಜ್ಯದ ಒಬ್ಬ ಮಂತ್ರಿಯಾದ ಎಂ. ಬುಲಿಗಿನ್ ಯವರು ಒಂದು ಸಲಹೆಯನ್ನು ಬರೆದು ಚಕ್ರವರ್ತಿಯವರಿಗೆ ಒಪ್ಪಿಸಿದಾರೆ ರಷ್ಯಾ ರಾಜ್ಯದಲ್ಲಿ ಎರಡು ಸಭೆಗಳು ಏರ್ಪಾಡಾಗುವವು. ಮೊದಲನೆಯ ಸಭೆಮನೆಯಲ್ಲಿ ಡಿಪ್ಯುಟಿಗಳೆಂಬ ಚುನಾಯಿಸಲ್ಪಟ್ಟ ೫೫೦ ಮೆಂಬರುಗಳು ಇರುವರು, ಅದಕ್ಕಿಂತ ಮೇಲ್ಪಟ್ಟ ಎರಡನೆ ಸಭೆಮನೆಯಲ್ಲಿ ಈಗ ಆ ಚಕ್ರಾಧಿಪತ್ಯದ ಮೇಲ್ವಿಚಾರಣೆಯ ಸಭಿಕರೇ ಮೆಂಬರುಗಳಾಗಿರುವರು ಇಂಥಾ ಸಲಹೆಯನ್ನು ಚಕ್ರವರ್ತಿಯವರು ಒಪ್ಪುವರೋ ಅದರಲ್ಲಿ ಬದಲಾವಣೆ ಮಾಡುವರೋ ಮುಂದೆ ತಿಳಿಯತಕ್ಕದ್ದಾಗಿದೆ

ಭಯಂಕರವಾದ ಕಲಹ.

ಜಿತೋಮಿರ್ ಎಂಬ ಪಟ್ಟಣದಲ್ಲಿ ರಷ್ಯಾದವರು ಜ್ಯೂ (ಯೆಹೂದ್ಯ) ಪ್ರಜೆಗಳ ಮೇಲೆ ಬಿದ್ದು ಕಲಹ ಮಾಡುತ್ತಾರೆಂದು ಗೊತ್ತಾಯಿತು. ಯೆಹೂದ್ಯರು ಆಯುಧ ಪಾಣಿಗಳಾಗಿ ಹೊರಟು, ರಷ್ಯಾದವರ ಮೇಲೆ ಬಹು ಕಠಿಣವಾಗಿ ಜಗಳವಾಡಿದರು. ಈ ಕಲಹದಲ್ಲಿ ೧೨ ಮಂದಿ ಪ್ರಾಣ ಬಿಟ್ಟರು, ೫೦ ಜನರಿಗೆ ಗಾಯಗಳಾದವು.

ವಿಶೇಷ ಪ್ರಾಣಹಾನಿ.

ಲಂಡನ್, ಮೇ ೧೧ —ಜಿತೋಮಿರ್ ಪಟ್ಟಣದಲ್ಲಿ ನಡೆದ ಕಲಹದ ವೃತ್ತಾಂತವು ಅಲ್ಪಸ್ವಲ್ಪ ಮಾತ್ರ ತಿಳಿದು ಬಂದಿದೆ. ಇದರಲ್ಲಿ ಯಹೂದ್ಯರೂ ಕೊಲ್ಲಲ್ಪಟ್ಟರು. ಆದರೆ ಈ ವಿಷಯದಲ್ಲಿ ಸೆಂಟ್ ಪೀಟರ್ಸ್‌ಬರ್ಗಿನಿಂದ ಬಂದಿರುವ ಸುದ್ದಿ ತಿಳಿಸುವುದೇನೆಂದರೆ—ಈ ಕಲಹದಿಂದ ಪ್ರಾಣ ಕಳಕೊಂಡವರೂ ಗಾಯ ಪಟ್ಟವರೂ ೧೨೦ ಮಂದಿ ಆಗಿರ ಬಹುದು. ಕಡೆಗೆ ಈ ದೊಂಬಿ ಕಲಹವನ್ನು ನಿಲ್ಲಿಸುವುದಕ್ಕೆ ಮೂರು ದಿನಗಳು ಹಿಡಿದವು. ಸರ್ಕಾರದ ಮೂರು ರೆಜಿಮೆಂಟಿನ ಸವಾರರು ಆರು ಫಿರಂಗಿಗಳನ್ನು ತೆಗೆದುಕೊಂಡು ಹೋಗಿ, ತುಂಬಾ ಧಾಂಧಳೆ ನಡಿಸಿ, ಪ್ರಜಾನೆಮ್ಮದಿಯನ್ನು ಕಾಪಾಡಿದರು ಮೈದಾನದಲ್ಲೇ ಬಹು ಭಯಂಕರವಾದ ಕೃತ್ಯಗಳು ನಡೆದವು; ಅನೇಕ ಮನೆಗಳನ್ನು ಲೂಟಿಮಾಡಿರುತ್ತಾರೆ.

ರೈತರನ್ನು ಸಮಾಧಾನ ಪಡಿಸುವುದು.

ಲಂಡನ್, ಮೇ ೧೨.—ರಷ್ಯಾ ಚಕ್ರಾಧಿಪತ್ಯದಲ್ಲಿರುವ ರೈತ ಪ್ರಜೆಗಳೆಲ್ಲಾ ಸರ್ಕಾರದವರಿಗೆ ವಿರೋಧವಾಗಿ ಎದ್ದಿರುತ್ತಾರೆ. ಅವರನ್ನು ಸಮಾಧಾನ ಪಡಿಸುವುದಕ್ಕೋಸ್ಕರ ಗವರ್ನಮೆಂಟಿನವರು ಸರ್ಕಾರಕ್ಕೆ ಸೇರಿರುವ ೨೫ ಕೋಟಿ ಯಕರೆಗಳ ಜಮೀನನ್ನು ರೈತರಿಗೆ ಸುಲಭವಾದ ಕಂದಾಯಕ್ಕೆ ಸಿಕ್ಕುವಂತೆ ಒಂದು ಹೊಸ ಕ್ರಮವನ್ನು ಮಾಡಿದಾರೆ.

ರಾಜಧಾನಿಯಲ್ಲಿ ಗಲಭೆಯು.

ಲಂಡನ್, ಮೇ ೧೩ —ರಷ್ಯಾ ರಾಜಧಾನಿಯಲ್ಲಿ ಸೈನ್ಯದಿಂದ ಡಿಸ್‌ಮಿಸ್ ಮಾಡಲ್ಪಟ್ಟ ಒಬ್ಬ ಸೈನಿಕನು ಈ ದಿನ ಅಡ್ಮಿರಲ್ ವಾಜೆಮಾಫ್ ಎಂಬ ಹಡಗಿನ ಅಧಿಪತಿಗೆ ಪಿಸ್ತೂಲು ಬಾರುಮಾಡಿ ಹೊಡೆದು, ಆತನನ್ನು ಕೊಂದುಬಿಟ್ಟನು.

ರೈತರ ದೊಂಬಿ.

ನಿಜನಿ ನೌಗರಾಡ್ ಅಧಿಪತ್ಯಕ್ಕೆ ಸೇರಿದ ಸೀಗಾಟ್ ಡಿಸ್ಟ್ರಿಕ್ಟಿನಲ್ಲಿ ರೈತಪ್ರಜೆಗಳು ದಂಗೆಯೆದ್ದು, ಅನೇಕ ಜಮೀನುಗಳಿಗೂ ಮನೆಗಳಿಗೂ ಬೆಂಕಿಹಾಕಿ ಸುಟ್ಟುಬಿಟ್ಟಿದಾರೆ.

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಬಾಲ್ಟಿಕ್ ಹಡಗುಗಳ ಗಲಾಟೆ.

ಲಂಡನ್, ಮೇ ೮ —ರಷ್ಯಾದವರ ಬಾಲ್ಟಿಕ್ ಜಹಜುಗಳು ಜಪಾನಿನವರ ಮೇಲೆ ಯುದ್ಧ ಮಾಡುವುದಕ್ಕಾಗಿ ಪ್ರಯಾಣ ಮಾಡಿಕೊಂಡು ಅನ್ನಾಂ, ಸಯಾಂ, ಮುಂತಾದ ರಾಜ್ಯಗಳ ಸಮುದ್ರ ತೀರದಲ್ಲಿ ಬಂದು ನಿಂತು, ಫ್ರೆಂಚರ ಹಡಗುಗಳಿಂದ ತಮಗೆ ಬೇಕಾಗುವ ಆಹಾರ ಜಿನಸುಗಳನ್ನೂ ಕಲ್ಲಿದ್ದಲನ್ನೂ ತರಿಸಿಕೊಳ್ಳುತ್ತಿದ್ದವು ಈ ಸಂಗತಿಯನ್ನು ಜಪಾನಿನವರು ತಿಳಿದು, ಫ್ರೆಂಚರು ರಷ್ಯಾದವರಿಗೆ ಹೀಗೆ ಸಹಾಯ ಮಾಡುವುದು ಯುದ್ಧದ ಕ್ರಮಕ್ಕೆ ವಿರೋಧವಾದದ್ದೆಂದು ಆಕ್ಷೇಪಣೆ ಮಾಡಿದರು ಜಪಾನ್ ರಾಜ್ಯಕ್ಕೆ ರಾಜ್ಯವೇ ಫ್ರೆಂಚರ ಮೇಲೆ ಆಗ್ರಹ ಪಟ್ಟು, ಫ್ರೆಂಚರು ರಷ್ಯಾದವರ ಕಡೆ ನಿಲ್ಲುವಹಾಗಿದ್ದರೆ ಇಂಗ್ಲೀಷರು ತಮ್ಮ ಕಡೆ ಸಹಾಯ ಮಾಡುವರು ಎಂದು ತಿಳಿಸಿದರು. ಇಂಗ್ಲಿಷ್ ಗವರ್ನಮೆಂಟಿನ ಮಂತ್ರಿಗಳೂ ಇದೇ ಅರ್ಥಕ್ಕೆ ಫ್ರೆಂಚರಿಗೆ ಕಾಗದ ಬರೆದರು. ಫ್ರಾನ್ಸಿನಲ್ಲಿರುವ ಜಪಾನ್ ರಾಯಭಾರಿಯು ಫ್ರೆಂಚರ ಪ್ರೆಸಿಡೆಂಟರನ್ನು ಕಂಡು ಇದೇ ವಿಷಯವಾಗಿ ಸುಮಾರು ಅರ್ಧ ಗಂಟೆಯ ಹೊತ್ತು ಚರ್ಚೆ ಮಾಡಿದರು ಫ್ರೆಂಚರಾದರೋ—ತಾವು ಎಷ್ಟು ಮಾತ್ರಕ್ಕೂ ರಷ್ಯಾದವರಿಗೆ ಸಹಾಯ ಮಾಡುತ್ತಾ ಇಲ್ಲವೆಂತಲೂ, ಆಯಾ ಸ್ಥಳಗಳಲ್ಲಿರುವ ತಮ್ಮ ಕಡೆಯ ಅಧಿಕಾರಿಗಳಿಗೆ ಈ ವಿಷಯದಲ್ಲಿ ಖಂಡಿತವಾದ ಹುಕುಮುಗಳನ್ನು ಕಳುಹಿಸಿದೇವೆಂತಲೂ, ಈ ಯುದ್ಧದಲ್ಲಿ ತಾವು ಯಾವ ಪಕ್ಷವನ್ನೂ ವಹಿಸುವದಿಲ್ಲವೆಂತಲೂ ಭರವಸೆ ಹೇಳಿದಾರೆ.

ರಷ್ಯಾ ಹಡಗುಗಳ ಪ್ರಯಾಣ.

ರಷ್ಯಾ ಯುದ್ಧದ ಜಹಜುಗಳೂ ಹಡಗುಗಳೂ ಹಾರ್ನ್‌ಕೋ ಎಂಬ ತೀರಪಟ್ಟಣದಿಂದ ಮುಂದಕ್ಕೆ ಪ್ರಯಾಣ ಮಾಡಿ, ಈಗ ಫ್ರೆಂಚರು ಇರುವಂಥಾ ಇನ್ನೊಂದು ತೀರಪಟ್ಟಣದಲ್ಲಿ ಹೋಗಿ ಇಳುಕೊಂಡಿವೆ. ರಷ್ಯಾ ಹಡಗುಗಳ ಅಧಿಪತಿಯಾದ ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿಯವರು ಒಡನೆಯೇ ಆ ಸ್ಥಳವನ್ನೂ ಬಿಟ್ಟು ಮುಂದಕ್ಕೆ ಪ್ರಯಾಣ ಮಾಡುವುದಾಗಿ ತಿಳಿಸಿದಾರೆ.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯಗಳು.

ಜಪಾನ್ ಕುದುರೆ ಸವಾರರು ತಾ. ೬ ರಲ್ಲಿ ನಮ್ಮ ಸೈನ್ಯವನ್ನು ಸಂಧಿಸಿ, ಸೋಲಿಸಿ, ಓಡಿಸಿರುತ್ತಾರೆಂಬುದಾಗಿ ಜನರಲ್ ಲಿನೆವಿಚ್ ಯವರು ತಂತೀ ವರ್ತಮಾನ ಕೊಟ್ಟಿದಾರೆ.

ಜಪಾನಿನವರು ಮುಂದರಿಸಿ ಹೋಗುತ್ತಿದಾರೆ.

ಲಂಡನ್, ಮೇ ೯ —ಜಪಾನಿನವರು ನಿಧಾನವಾಗಿ ಮುಂದು ಮುಂದಕ್ಕೆ ನುಗ್ಗಿಹೋಗುತ್ತಲೂ ತಮ್ಮ ಸ್ಥಾನಗಳನ್ನು ಬಲಪಡಿಸಿಕೊಳ್ಳುತ್ತಲೂ ಬಂದಿರುವುದು ನಿಜವೆಂಬುದಾಗಿ ಮ್ಯಾಂಚೂರಿಯಾದಲ್ಲಿರುವ ರಷ್ಯಾದವರು ಒಪ್ಪಿಕೊಳ್ಳುತ್ತಾರೆ. ಅವರು ಮುಂದರಿಸಿ ಬರುತ್ತಿರುವುದು ಸ್ವಲ್ಪವೂ ಗೋಚರವಾಗದಂತೆ ಇದೆ. ಅವರ ಲೈನುಗಳ ಸೈನ್ಯವನ್ನು ಭೇದಿಸಿಕೊಂಡು ಹೋಗುವುದು ಸಾಧ್ಯವಲ್ಲ.

ಬಾಲ್ಟಿಕ್ ಜಹಜುಗಳು.

ಲಂಡನ್ ಮೇ ೧೧.—ರಷ್ಯಾ ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿಯವರು ಕೆಲವು ದಿನಗಳಿಂದ ಬ್ಯಾನ್‌ಫಾಂಗ್ ಕೊಲ್ಲಿಯಲ್ಲೇ ಸಂಚಾರ ಮಾಡಿಕೊಂಡಿದ್ದು, ತಮ್ಮ ಜಹಜುಗಳನ್ನೆಲ್ಲಾ ಕಟ್ಟಿಕೊಂಡು, ಅಲ್ಲಿಂದ ಮುಂದಕ್ಕೆ ತಾ. ೯ ರಲ್ಲಿ ಪ್ರಯಾಣಮಾಡಿದರು.

ಇವರ ಬೆಂಬಲಕ್ಕಾಗಿ ರಷ್ಯಾದಿಂದ ಹೊರಟ ಇನ್ನೊಂದು ಜಹಜುಗಳ ಗುಂಪು ಬಂದು, ಆ ಜಹಜುಗಳ ಸಂಗಡ ಸೇರಿಕೊಂಡಿತು. ಈ ಎರಡನೇ ಹಡಗಿನ ಸೈನ್ಯಕ್ಕೆ ಅಡ್ಮಿರಲ್ ನೆಬೊಗಾಟಾಫ್‌ಯವರು ಅಧಿಪತಿಯಾಗಿದಾರೆ.

ಬಾಲ್ಟಿಕ್ ಜಹಜುಗಳ ಮೂರನೇ ಗುಂಪು ಕಳೆದ ವಾರ ಮಲಾಕಾ ಜಲಸಂಧಿಯ ಬಳಿ ಕಾಣಿಸಿಕೊಂಡಿತು ಇದರಲ್ಲಿ ನಾಲ್ಕು ಯುದ್ಧದ ಜಹಜುಗಳೂ ೬ ಇತರ ಹಡಗುಗಳೂ ಇವೆ.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯಗಳು.

ರಷ್ಯಾದವರು ಹಾರ್ಬಿನ್ ಪಟ್ಟಣವನ್ನೂ ಬಿಡುವದಕ್ಕೆ ಸನ್ನಾಹ.

ಹಾರ್ಬಿನ್ ಪಟ್ಟಣದಲ್ಲಿ ರಷ್ಯಾದವರು ಇಟ್ಟುಕೊಂಡಿರುವ ತಮ್ಮ ಭಾರೀ ಆಸ್ಪತ್ರೆಯನ್ನು ಸಾಮಾನು ಸಹಿತ ಅಲ್ಲಿಂದ ಟ್ರಾನ್ಸ್ ಬೈಕೇಲಿಯಾ ಎಂಬ ರಾಜ್ಯಕ್ಕೆ ಕಳುಹಿಸುತ್ತಿದಾರೆ ಅವರು ಇಷ್ಟರಲ್ಲೇ ಆ ಪಟ್ಟಣವನ್ನು ಬಿಟ್ಟು, ಹಿಂದಕ್ಕೆ ಹೋಗಬೇಕೆಂದು ಏರ್ಪಾಡು ಮಾಡುತ್ತಿರುವರು.

ಮೂವರು ಗೂಢಚಾರರನ್ನು ಹಿಡಿದರು.

ಜಪಾನ್ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ಎಂ. ಬೌಡೋವಿನ್ ಎಂಬುವನು, ಇವನ ಬಲನುಗ, ಇನ್ನೊಬ್ಬ ಇಂಗ್ಲಿಷಿನವನು, ಈ ಮೂರು ಜನರೂ ಗೂಢಚಾರರೆಂದೂ ರಷ್ಯಾದವರ ಕಡೆಯವರೆಂದೂ ತಿಳಿದು ಬಂದದ್ದರಿಂದ ಜಪಾನ್ ಸರ್ಕಾರದವರು ಅವರನ್ನು ಹಿಡಿದು ಬಂಧನದಲ್ಲಿ ಹಾಕಿದಾರೆ.

ಬೈಕಾಲ್ ರೈಲ್ ರಸ್ತೆ.

ಸರ್ಕಂ ಬೈಕಾಲ್ ರೈಲ್ ರಸ್ತೆಯು ಮಂಜು ಗಡ್ಡೆಗಳ ಪ್ರವಾಹ ಬಂದದ್ದರಿಂದ ಮುಚ್ಚಿ ಹೋಗಿದೆ ರಷ್ಯಾದಿಂದ ಯುದ್ಧ ಭೂಮಿಗೆ ಬರುವ ಪದಾರ್ಥಗಳಿಗೂ ಸೈನ್ಯಕ್ಕೂ ತಡೆಯಾಯಿತು.

ಬಾಲ್ಟಿಕ್ ಹಡಗುಗಳಿಗೆ ಸಂಧಿಯಾಗಲಿಲ್ಲ.

ಲಂಡನ್, ಮೇ ೧೦ —ಬಾಲ್ಟಿಕ್ ಕಡಲಿನ ಒಂದನೇ ಎರಡನೇ ಜಹಜುಗಳು ಸಂಧಿಯಾಗಿ ಒಟ್ಟು ಸೇರಿದವು ಎಂದು ತಿಳಿಸಿದ ತಂತೀ ವರ್ತಮಾನವು ನಿಜವಲ್ಲವೆಂದು ರಷ್ಯಾ ರಾಜಧಾನಿಯಿಂದ ತಿಳಿದು ಬಂದಿದೆ

ದ್ರೋಹಮಾಡಿದ ಜಪಾನ್ ಉದ್ದೇದಾರನು.

೧೯೦೪ ರಲ್ಲಿ ಜಪಾನಿನವರು ತಮ್ಮ ಜಹಜುಗಳ ಸೈನ್ಯದಲ್ಲಿದ್ದ ಲೆಫ್ಟಿನೆಂಟ್ ಐವಸಕಿ ಎಂಬ ಉದ್ದೇದಾರನನ್ನು ರಾಜದ್ರೋಹ ಮಾಡಿದನೆಂದು ಹಿಡಿದು ಗಡೀಪಾರು ಮಾಡಿದ್ದರು. ಇವನು ಈಗ ಟೋಕಿಯೋ ನಗರದಲ್ಲಿ ಹಿಡಿಯಲ್ಪಟ್ಟ ಬೌಡೋವಿನ್ ಎಂಬುವನ ಸಹಪಾಟಿಯಾಗಿ ಸೇರಿಕೊಂಡಿದ್ದನು. ಇವನೂ ಸಿಕ್ಕಿ ಸೆರೆಮನೆಯಲ್ಲಿ ಬಿದ್ದಿದಾನೆ.

ರಾಯಭಾರಿಗಳ ಬದಲಾವಣೆ

ಅಮೇರಿಕದಲ್ಲಿದ್ದ ರಷ್ಯಾ ರಾಯಭಾರಿಯನ್ನು ಸ್ಪೆಯಿನಿಗೂ ಸ್ಪೇಯಿನಿನಲ್ಲಿದ್ದ ರಷ್ಯಾ ರಾಯಭಾರಿಯನ್ನು ಅಮೇರಿಕಕ್ಕೂ ರಷ್ಯಾ ಗವರ್ನಮೆಂಟಿನವರು ವರ್ಗಮಾಡಿದಾರೆ ಈಗ ಅಮೇರಿಕಕ್ಕೆ ವರ್ಗಮಾಡಲ್ಪಟ್ಟ ಬಾರನ್ ರೋಜನ್ ಎಂಬ ರಷ್ಯಾ ರಾಯಭಾರಿಯು ಮೊದಲು ಜಪಾನ್ ರಾಜಧಾನಿಯಲ್ಲಿ ರಷ್ಯಾ ರಾಯಭಾರಿಯಾಗಿದ್ದನು. ಈತನಿಗೆ ಜಪಾನಿನವರನ್ನು ಕಂಡರೆ ತುಂಬಾ ಪ್ರೀತಿ. ಆದ ಕಾರಣ ಇನ್ನು ಮುಂದೆ ಈತನೂ ಅಮೇರಿಕದ ಪ್ರೆಸಿಡೆಂಟರೂ ಕೂಡಿ, ಯುದ್ಧ ನಿಲ್ಲಿಸಿ ಸಂಧಾನ ಮಾಡಿಸಬಹುದೆಂದು ತೋರುತ್ತಿದೆ.

ವ್ಲಾಡಿವೊಸ್ಟಾಕಿನ ರಷ್ಯಾ ಹಡಗುಗಳು.

ಲಂಡನ್, ಮೇ ೧೨.—ವ್ಲಾಡಿವೊಸ್ಟಾಕ್ ತೀರಪಟ್ಟಣದಲ್ಲಿರುವ ರಷ್ಯಾದವರ ರೋಸಿಯಾ, ಗ್ರಾಮೋಬಾಯ ಎಂಬೀ ಯುದ್ಧದ ಜಹಜುಗಳು ತಾ॥ ೯ ರಲ್ಲಿ ಅಲ್ಲಿಂದ ಹೊರಕ್ಕೆ ಬಂದು, ಅಮೋರಿ ಎಂಬ ಜಪಾನಿನವರ ರಾಜ್ಯವನ್ನು ಸುತ್ತಿಕೊಂಡು, ಹಿಂತಿರುಗಿ ಹೋದರೆಂತಲೂ, ಅವು ಜಪಾನಿನವರ ಹಡಗುಗಳ್ಯಾವದನ್ನೂ ಕೈಸೆರೆ ಹಿಡಿಯಲಾರದೆಹೋದವೆಂತಲೂ ಜಪಾನ್ ರಾಜಧಾನಿಯಿಂದ ಸಮಾಚಾರ ಬಂದಿದೆ.

ರಷ್ಯಾದವರ ಹೊಸ ಜಹಜುಗಳು.

ರಷ್ಯಾದವರು ಹೊಸದಾಗಿ ತಯಾರುಮಾಡಿಸಿದ ಮೂರು ಜಹಜುಗಳನ್ನು ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಪ್ರದರ್ಶನಮಾಡಿ ತೋರಿಸಿದರು.

ಮ್ಯಾಂಚೂರಿಯಾದಲ್ಲಿ ಯುದ್ಧಕಾರ್ಯಗಳು.

ತಾ ೩ ರಲ್ಲಿ ಜಪಾನ್ ಸೈನಿಕರು ನುಗ್ಗಿಬಂದು, ರಷ್ಯಾದವರ ಬಲಭಾಗದ ಮೇಲೆ ಮುತ್ತಿಗೆ ಹಾಕಿಕೊಂಡರು ಘನತರವಾದ ಯುದ್ಧವಾಯಿತು ಅವರನ್ನೆಲ್ಲಾ ಸೋಲಿಸಿ, ಹಿಂದಕ್ಕೆ ಓಡಿಸಿರುತ್ತೇವೆಂದು ಜನರಲ್ ಲಿನೆವಿಚ್‌ಯವರು ತಾ ೧೦ ರಲ್ಲಿ ತಂತೀವರ್ತಮಾನ ಕೊಟ್ಟರು.

ಬಾಲ್ಟಿಕ್ ಜಹಜುಗಳು.

ಲಂಡನ್, ಮೇ ೧೪.—ರಷ್ಯಾದವರ ಬಾಲ್ಟಿಕ್ ಜಹಜುಗಳು ಹೈನಾನ್ ದ್ವೀಪದ ಪಕ್ಕದಲ್ಲೇ ನುಗ್ಗಿ ಹೋಗಿ, ಯೂಲಿನ್ ಕೊಲ್ಲಿಯಲ್ಲಿ ಇಳುಕೊಂಡದ್ದನ್ನೂ ಅನಂತರ ಅವೆಲ್ಲಾ ಉತ್ತರ ದಿಕ್ಕಿಗೆ ನಿಧಾನವಾಗಿ ಹೋಗುತ್ತಾ ಇದ್ದದ್ದನ್ನೂ ದೂರದಲ್ಲಿ ಕಂಡೆವೆಂದು ಆ ಪ್ರಾಂತದಿಂದ ಬಂದ ಒಂದು ಜಹಜಿನ ಜನರು ಹೇಳುತ್ತಾರೆ.

ಫ್ರೆಂಚರ ವಿಚಾರ.

ಜಪಾನಿನವರು ಫ್ರೆಂಚರಿಗೆ—ನೀವು ರಷ್ಯಾದವರಿಗೆ ಸಹಾಯ ಮಾಡುವುದನ್ನು ನಿಲ್ಲಿಸಬೇಕೆಂದು ಎಷ್ಟು ಖಂಡಿತವಾಗಿ ಹೇಳಿದರೂ ಫ್ರೆಂಚರು ಅದಕ್ಕೆ ಸರಿಯಾದ ಪ್ರತ್ಯುತ್ತರವನ್ನು ಕೊಡಲಿಲ್ಲ. ಅವರು ಸರ್ಕಾರಿಯಾಗಿ ತಮ್ಮ ಕಡೆಯ ಅಧಿಕಾರಿಗಳಿಗೆ ಎಚ್ಚರಿಕೆಯನ್ನೂ ಹೇಳಲಿಲ್ಲ. ರಷ್ಯಾದವರಾದರೋ—ಫ್ರೆಂಚರು ನಮಗೆ ಬೇಕಾಗುವ ಕಲ್ಲಿದ್ದಲನ್ನೂ ಆಹಾರ ದಿನಸುಗಳನ್ನೂ ಸರಬರಾಯಿ ಮಾಡಲೇ ಬೇಕು ಎಂಬುದಾಗಿ ಹಟವನ್ನು ಹಿಡಿದಿರುತ್ತಾರೆ

ಎಂ. ಬೌಡೋವಿನ್ ಎಂಬುವನನ್ನು ಖೈದಿಸಲ್ಪಟ್ಟದ್ದು.

ಫ್ರೆಂಚರ ಆಕ್ಷೇಪಣೆ.

ಜಪಾನ್ ರಾಜಧಾನಿಯಾದ ಟೋಕಿಯೋ ನಗರದಲ್ಲಿ ಫ್ರೆಂಚ್ ಸರ್ಕಾರದವರು ಎಂ ಬೌಡೋವಿನ್ ಎಂಬೊಬ್ಬ ಫ್ರೆಂಚ್ ಪ್ರಜೆಯನ್ನು ರಾಜದ್ರೋಹ ಮಾಡಿದನೆಂದು ಹಿಡಿದು, ಖೈದಿನಲ್ಲಿ ಹಾಕಿದಾರೆಂಬ ವರ್ತಮಾನವನ್ನು ಕೇಳಿ, ಫ್ರೆಂಚ್ ಸರ್ಕಾರದವರು ಟೋಕಿಯೋದಲ್ಲಿರುವ ತಮ್ಮ ಕಡೆಯ ರಾಯಭಾರಿಗೆ ಆ ಸಂಗತಿಯನ್ನು ವಿಚಾರಿಸಬೇಕೆಂತಲೂ ಅವನ ಮೇಲೆ ಸರಿಯಾದ ಅಪರಾಧ ತೋರಿಸದೆ ಹೋದಲ್ಲಿ ಅವನನ್ನು ಖೈದಿಸಲ್ಪಟ್ಟ ವಿಷಯದಲ್ಲಿ ಜಪಾನಿನವರ ಮೇಲೆ ಆಕ್ಷೇಪಣೆ ಮಾಡಬೇಕೆಂತಲೂ ತಿಳಿಸಿದಾರೆ.

ನೆನ್ನೆ ಫ್ರಾನ್ಸ್ ರಾಜಧಾನಿಯಲ್ಲಿ ಫ್ರೆಂಚರ ಮಂತ್ರಿಯೂ ಜಪಾನ್ ರಾಯಭಾರಿಯೂ ಸಂಧಿಸಿ, ಸ್ವಲ್ಪ ಹೊತ್ತು ಮೇಲ್ಕಂಡ ವಿಷಯವನ್ನು ಚರ್ಚೆ ಮಾಡಿದರು.

ಜಪಾನಿಗೆ ಹೋಗುತ್ತಿದ್ದ ಯುದ್ಧಸಾಮಗ್ರಿ.

ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದ ಸುಂಕದ ಕಚೇರಿಯವರು, ಹಾಂಬರ್ಗಿನಿಂದ ಜಪಾನಿನವರು ಯುದ್ಧಕ್ಕಾಗಿ ಗುಂಡುಗಳನ್ನು ಭರ್ತಿಮಾಡಿಕೊಂಡು ಹೋಗುತ್ತಿದ್ದ ಸಯೋತ್ಸುಮಾರು ಎಂಬ ಜಪಾನ್ ಹಡಗನ್ನು ತಡೆದು, ಅದನ್ನು ಮುಂದಕ್ಕೆ ಬಿಡುವುದಿಲ್ಲವೆಂದು ನಿಲ್ಲಿಸಿಕೊಂಡಿದಾರೆ. ಈ ಹಡಗಿನಲ್ಲಿ ಗುಂಡುಗಳು ತುಂಬಿದ ೨,೫೦೦ ಪೆಟ್ಟಿಗೆಗಳಿದ್ದವು.

ಯೇಸುಕ್ರಿಸ್ತನ ಪುನರುತ್ಥಾನ

ಆಕ್ಷೇಪಣೆಯೂ ಸಮಾಧಾನವೂ

ಕಳೆದ ತಿಂಗಳ ೨೦ ನೆ ತಾರೀಖಿನ "ವೃತ್ತಾಂತ ಪತ್ರಿಕೆ" ಯಲ್ಲಿ "ಯೇಸುಕ್ರಿಸ್ತನ ಪುನರುತ್ಥಾನವು" ಎಂಬ ವಿಷಯವನ್ನು ಕುರಿತು ನಾವು ಬರೆದಿದ್ದೇವಷ್ಟೆ. ಇದರ ಮೇಲೆ ಬೆಂಗಳೂರು ಪಿಟ ವೊಕೇಟ್ ಮಿ॥ ನಾರಾಯಣ ಶಿಂಗರು ಆಕ್ಷೇಪಣೆ ಮಾಡಿ ನಮಗೆ ಬರೆದಿದ್ದರು. ಈ ವಾರ ಅವರ ಆಕ್ಷೇಪಣೆಯನ್ನೂ ಅದಕ್ಕೆ ತಕ್ಕ ಸಮಾಧಾನವನ್ನೂ ಈ ಕೆಳಗೆ ಪ್ರಕಟಿಸುತ್ತೇವೆ.

ಅಯ್ಯಾ,

ತಾನ ಕಳೆದ ವಾರದಲ್ಲಿ ಪ್ರಕಟಿಸಿದ "ಕ್ರಿಸ್ತನ ಪುನರುತ್ಥಾನದ" ವಿಷಯವನ್ನು ಪತ್ರಿಕೆಯಲ್ಲಿ ಓದಿ ನೋಡಿದೆನು. ಕೆಲವು ಸಂದೇಹಗಳಾಗಿದ್ದರಿಂದ, ಈ ಎಥದಿಂದ ನಿಮ್ಮ ಪತ್ರಿಕೆಯಲ್ಲಿ ಕ್ರಿಸ್ತನ ಪುನರುತ್ಥಾನವನ್ನು ಸ್ಥಾಪಿಸಬೇಕೆಂದ ಪ್ರಯತ್ನ ಪಡುವದು, ಸತ್ಯವಾದ ನಿಮ್ಮ ಧರ್ಮಕ್ಕೆ ಕೇವಲ ವಿರೋಧವಾಗಿರತ್ತದೆ.

೧ ಒಳ್ಳೇದು, ಒಂದು ವೇಳೆ ಕ್ರಿಸ್ತನು ಪುನಃ ಹುಟ್ಟಿದನು ಎಂದು ನಂಬೋಣ. ಇದರಿಂದ ನಮಗೆ ಆಗುವ ಫಲವೇನು? ಅಪಾರವಾದ ಭಗವಂತನ ಮಹಿಮೆಯ ತೇಜಃಪುಂಜವಾದ ಆತನ ಮಂಗಳಸ್ವರೂಪವು ಎಳ್ಳಷ್ಟಾದರೂ ವಿಕೃತವಾದೀತೇ? ಎಂದಿಗೂ ಆಗಲಾರದು. ಕೇವಲ ಜಡ ಮತ್ತು ಅಲ್ಪಜೀವಿಯಾದ ಮಾನವ ಆತ್ಮವು ಭಗವಂತನ ಅವತಾರವಾಗಲಾರದು.

೨ ಬೈಬಲ್‌ನ್ನ ಹೇಳಲಾದ ವಾಕ್ಯಗಳೆಲ್ಲವು ಸತ್ಯವೆ ನ್ನು ಹೇಳಲು ಏನು ಆಧಾರವು? ಕ್ರಿಸ್ತನನ್ನು ಕುರಿತು ಹೇಳುವ ನಾಲ್ಕು ಪುಸ್ತಕಗಳು ಆತನಿಂದಲೇ ಬರೆಯಲ್ಪಟ್ಟವೋ? ಇಲ್ಲವೇ ಆತನ ಶಿಷ್ಯವರ್ಗದವರಾದ ಅಪೋಸ್ತಲರು ಪ್ರತ್ಯಕ್ಷವಾಗಿ ಕಂಡಂತೆ ಕೇಳಿದಂತೆ ಯೇಸುವಿನ ಚರಿತ್ರೆಯನ್ನು ಬರೆದಿದ್ದಾರೆಯೇ? ಕ್ರಿಸ್ತನು ಸತ್ತು ಎಷ್ಟು ವರ್ಷಗಳ ನಂತರ ಬಂದೊ ಈ ಪುಸ್ತಕವು ಬರೆಯಲ್ಪಟ್ಟಿತು? ಯೂರೋಪ್ ಖಂಡದಲ್ಲಿಯೂ ಇಂಗ್ಲೆಂಡಿನಲ್ಲಿಯೂ ಇರುವ ಮಹಾ ಪಂಡಿತರು ತತ್ವಜ್ಞರು ಇವರೊಳಗಿನ ಸ್ವಲ್ಪ ಜನರು ಇವನು ಒರೆದಿರುವನು ಎಂದರೆ ಬೈಬಲ್‌ನಲ್ಲಿರುವ ಸಕಲ ವಾಕ್ಯಗಳೂ ಸತ್ಯವಾದದ್ದಲ್ಲವೆಂತಲೂ ಅನೇಕ ತಪ್ಪುಗಳು, ಆತನ ಶಿಷ್ಯರು ಬರೆದ ಮಾರ್ಕ, ಮತ್ತಾಯ ಲೂಕ ಯೋಹಾನರ ಈ ನಾಲ್ಕನೆಯ ಪುಸ್ತಕವು ಜಾನ್ ಎಂಬುವನು ಬರೆದುದಲ್ಲವೆಂತಲೂ ನಿದರ್ಶನವಾಗುತ್ತದೆ. ಈ ವಿಷಯವನ್ನು ಚರ್ಚಿಸುವದಕ್ಕೆ ಆ ಕಾಲದಲ್ಲಿ ಇದ್ದಂಥ ಮತ್ತು ವಿದ್ಯಾವಂತರಾದ ಶಿಷ್ಯರನ್ನು ಎಷ್ಟರಮಟ್ಟಿಗೆ ಕ್ರಿಸ್ತನನ್ನು ಹೊಗಳ ಬೇಕೆಂದಿರುವ ಮನಸ್ಸನ್ನು ಆತನಿಗೆ ಕೀರ್ತಿ ಬರುವುದೆಂದು ಸ್ವಲ್ಪ ಊಹಿಸಬಹುದು. ಈ ನಾಗರೀಕತೆಯ ಕಾಲದಲ್ಲಿಯೇ, ಎಷ್ಟೋ ಜನರು ಎಷ್ಟು ಜನರನ್ನು ಅವತಾರಿಗಳೆಂದು ನಂಬಲಿಲ್ಲವೇ?

೩ ಕ್ರಿಸ್ತನು ಜೀವಂತನಾಗಿರುವಾಗ ಆನೇಕ ವೇಳೆಯಲ್ಲಿ ಆತನ ಮುಖದಿಂದ ಹೊರಟ ವಾಕ್ಯಗಳೇ ಆತನ ದೇವರಲ್ಲವೆನ್ನುವದಕ್ಕೆ ಪ್ರಮಾಣಗಳಾಗಿವೆ. ಆತನು ಮರಣಾವಸ್ಥೆಯಲ್ಲಿಯೂ ಸಂಧ್ಯಾಕಾಲದಲ್ಲಿಯೂ ಪರ್ವತ ಪ್ರದೇಶಗಳಿಗೆ ಹೋಗಿ, ಭಗವಂತನಿಗೆ—'ತಂದೆಯೇ, ತಂದೆಯೇ, ನನ್ನನ್ನು ಕಾಪಾಡು, ನನ್ನನ್ನು ಏಕೆ ಈಗ ಕೈಬಿಟ್ಟಿರುತ್ತೀ' ಎಂದು ಮನಸ್ಸು ಕರಗುವಂತೆ ಯಾಕೆ ಮೊರೆಯಿಟ್ಟನು? ಆಗ ಹೀಗೆ ಅಸ್ವಸ್ಥನಾಗಿದ್ದನೋ? ಅಥವಾ, ದೇವರಾಗಿದ್ದನೋ? ಆತನು ಮನುಷ್ಯನಾಗಿಲ್ಲದಿದ್ದರೆ ಇಂಥ ದೈನ್ಯದಿಂದ ಬೇಡಲಾರನು. ಮನುಷ್ಯನಾಗಿದ್ದರೆ ದೇವರಾಗಲಾರನು.

೪ ಪ್ರಕೃತಿಯಲ್ಲಿ ಯಾವ ಮಾನವನೇ ಆಗಲಿ ಸಹಜವಾಗಿ ಸಾಯಬೇಕು. ಸತ್ತನಂತರ ಹುಟ್ಟಿದನೆಂಬುವದು ಯಾವ ಪ್ರಾಜ್ಞನಿಯುಳ್ಳ ಮನುಷ್ಯನೂ ನಂಬಲಾರನು, ಕಾಣಲೂ ಇಲ್ಲವು. ಇದು ಅಸಾಧ್ಯ ಮತ್ತು ಅವಮಾನುಷವಾದದ್ದೇ ಸರಿ. ಆದರೆ ಕ್ರಿಸ್ತನು ಮೂರು ದಿನಗಳ ಮೇಲೆ ಹುಟ್ಟಿದನು ಎಂಬುವದು ತತ್ವಶಾಸ್ತ್ರಕ್ಕೂ ಲೋಕದ ಕಟ್ಟಳೆಗೂ ಅತಿ ವಿರುದ್ಧವಾದ್ದರಿಂದ ಹಾಸ್ಯಾಸ್ಪದವಾದ ತರ್ಕವೇ ಹೊರ್ತು ಅನ್ಯಥಾ ಅಲ್ಲವು. ಸ್ವಲ್ಪನಷ್ಟು ಮಾತ್ರ ಈ ಕಾಯವು ಪುನಃ ಸ್ಥೂಲರೂಪದಿಂದಲೇ ಸತ್ತನಂತರ ಹುಟ್ಟಿತು ಎಂಬ ನಂಬಿಕೆಯಲ್ಲಿ 'ಮನುಷ್ಯನು ತಲೆಕೆಳಗಾಗಿ ನಡೆದನು' ಎಂಬುವಷ್ಟು ನಿಶ್ಚಯವಿರುತ್ತದೆ. ಏನು, ಭಗವಂತನೆಯೇ ಕಟ್ಟಳೆ (ಧರ್ಮ) ಯಾಗಿರುವದರಿಂದ ತನ್ನ ಕಟ್ಟಳೆಗಳನ್ನೇ ತಾನು ಧ್ವಂಸಮಾಡಿ, ಮಾನುಷಿಕ ಅವತಾರದಿಂದ ದೇವರು ಎಂದು ಸಾದೃಶ್ಯಪಡಿಸುವದಕ್ಕೆ ಹೀಗೆ ಪ್ರಯತ್ನ ಪಟ್ಟನೋ? ತತ್ವಶಾಸ್ತ್ರವು ಇದು ಶುದ್ಧ ಸುಳ್ಳೆಂದು ಚೆನ್ನಾಗಿ ಸ್ಥಾಪಿಸಿರುತ್ತದೆ. ಆದ್ದರಿಂದ "ಕ್ರಿಸ್ತನ ಮತವು ಇದೊಂದರ ಆಧಾರದ ಮೇಲೆ ನಿಂತಿರುವದು" ಎನ್ನುವದು ಪರಮಾಶ್ಚರ್ಯವು.

ಉತ್ತರ

೧ ಕ್ರಿಸ್ತನ ಪುನರುತ್ಥಾನವೇ ಕ್ರಿಸ್ತಮತಕ್ಕೆ ಆಧಾರವಾಗಿರುವದರಿಂದ ಅದನ್ನು ಸ್ಥಾಪಿಸುವದಕ್ಕಿಂತ ವಿಶೇಷವಾದ ಕಾರ್ಯವು ಆತನ ಭಕ್ತರೂ ಮತಪ್ರಸಾರಕರೂ ಆದವರಿಗೆ ಬೇರೆಯಾವದೂ ಇರಲಾರದು. ಆದದರಿಂದ ಹಾಗೆ ಮಾಡುವದು "ಸತ್ಯವಾದ ಧರ್ಮಕ್ಕೆ ಕೇವಲ ವಿರುದ್ಧವಾಗಿದೆ" ಎಂದು ಹೇಳುವದು ಒಪ್ಪುವದಿಲ್ಲ.

೨ ಭಗವಂತನು ಮನುಷ್ಯವತಾರಿಯಾಗಲಾರನೆಂಬುದು ಕೆಲವು ಜನಗಳು ಮಾತ್ರ ಹಿಡಿದಿರುವ ಅಭಿಪ್ರಾಯವಾಗಿದೆ. ಇದಂತಿರಲಿ ಭಗವಂತನ "ಅಪಾರವಾದ ಮಹಿಮೆ" ಯಾಗಿರುವ ಆತನ ಪ್ರೀತಿಯನ್ನೂ "ಕೇವಲ ಜಡ ಮತ್ತು ಅಲ್ಪಜೀವಿಯಾದ ಮನುಷ್ಯನ ನಿರ್ಭಾಗ್ಯಸ್ಥಿತಿಯನ್ನೂ ಸಾವಧಾನವಾಗಿ ಆಲೋಚಿಸಲಾಗಿ ಮನುಷ್ಯನನ್ನು ಉದ್ಧಾರ ಮಾಡುವದಕ್ಕಾಗಿ ಭಗವಂತನು ನರಾವತಾರಿಯಾಗುವದೊಂದೇ ಮಾರ್ಗ; ಬೇರೆಯೊಂದು ಮಾರ್ಗವೂ ಕಾರ್ಯಕ್ಕೆ ಬಾರದು. ಹೋಗಲಾರದು. ಮೇಲೆ ಕಂಡ ಲೇಖನದಲ್ಲೇ ಲೇಖಕರು 'ಈ ನಾಗರೀಕತೆಯ ಕಾಲದಲ್ಲಿಯೇ ನಾವು ಎಷ್ಟು ಜನರನ್ನು ಅವತಾರಿಗಳೆಂದು ನೋಡಲಿಲ್ಲವೇ' ಎಂದು ಪ್ರಶ್ನಿಸಿರುವದನ್ನು ಆಲೋಚಿಸಿದರೆ ನರಾವತಾರದ ಪರಮಪುರುಷರು ಭೂಲೋಕಕ್ಕೆ ಬರುವದು ಅವಶ್ಯಕವೆಂಬ ನಂಬಿಕೆ ಜನರ ಮನಸ್ಸಿನಲ್ಲಿ ಸ್ಥಾಪಿತವಾಗಿರುತ್ತದೆಯಲ್ಲವೇ?

'ಕ್ರಿಸ್ತಸ್ವಾಮಿಯ ಪುನರುತ್ಥಾನದಿಂದ ಬರುವ ಫಲವೇನು?' ಎಂಬ ಪ್ರಶ್ನೆಗೆ ನಾವು ಪುನಃ ಉತ್ತರ ಕೊಡುವ ಅವಶ್ಯಕವಿರುವದಿಲ್ಲ. ನಾವು ಕಳೆದ ವಿಷಯದಲ್ಲಿ ಬರೆದ ವಿವರವನ್ನು ಮರು ಓದಿ ಯೋಚಿಸಿದರೆ ಮನುಷ್ಯನು ಉದ್ಧಾರವಾಗಬೇಕಾದರೆ ದಿವ್ಯಪುರುಷನಾದ ಯೇಸುಸ್ವಾಮಿಯು ಸತ್ತು ಹುಟ್ಟುವದೇ ಅತ್ಯವಶ್ಯಕವೆಂದು ಗೊತ್ತಾಗುವದು.

೩ ಯೇಸುಸ್ವಾಮಿಯು ಮನುಷ್ಯನಾಗಿದ್ದನೆಂಬದನ್ನು ನಾವು ಇಲ್ಲವೆನ್ನುವದಿಲ್ಲ. ಆತನು ನಿಜವಾಗಿಯೂ ಮಾನವನಾಗಿದ್ದನೆಂದು ಯಾವ ಸುವಾರ್ತಾ ಗ್ರಂಥಗಳು ಖಾತ್ರಿಯಾಗಿ ತಿಳಿಸುವವೋ ಅವುಗಳೇ ಆತನು ನಿಜವಾಗಿಯೂ ದೇವರಾಗಿದ್ದಾನೆಂದು ನಿಸ್ಸಂದೇಹವಾದ ಪ್ರಮಾಣಗಳನ್ನು ಕೊಡುತ್ತವೆ. ಯೇಸುಕ್ರಿಸ್ತನಲ್ಲಿ ಈ ಎರಡು ಸ್ವಭಾವಗಳೂ ಸಂಪೂರ್ಣವಾಗಿ ಒಟ್ಟುಗೂಡಿದ್ದವೆಂಬುದು ಸಂದೇಹವಿಲ್ಲದೆ ಕಂಡುಬರುವದನ್ನು ಆತನ ಶಿಷ್ಯರು ತಾವೇ ಕಂಡದ್ದನ್ನು ಕಂಡಹಾಗೆ ಬರೆದ ಪ್ರಕಾರ ಅಲಂಕಾರವಿಲ್ಲದೆ ಉತ್ಪ್ರೇಕ್ಷೆಯಿಲ್ಲದೆ ಬರೆದಿರುವದರಿಂದ ಆ ಗ್ರಂಥಕರ್ತರು ಹೇಳುವದನ್ನು ಸಂದೇಹಿಸುವದಕ್ಕೆ ನಮಗೆ ಯಾವ ಆಧಾರವೂ ಕಾಣಬರುವದಿಲ್ಲ. ಭಗವಂತನು ನರಾವತಾರವನ್ನು ಧರಿಸಿದ್ದು ಸ್ಥಾಪಿತವಾದ ಬಳಿಕ ಆತನಲ್ಲಿ ಇವೆರಡು ಸ್ವಭಾವಗಳೂ ಒಟ್ಟಾಗಿ ಇರುತ್ತವೆಂಬುದು ಸಹಜವಾಗಿದೆ.

೪ ಹುಟ್ಟಿ ಸತ್ತವನು ಸಾಯದೆ ಉಳಿದನೆಂಬ ಕಥೆಯನ್ನು ಸತ್ತವನು ಪುನಃ ಜೀವಿತನಾಗಿ ಎದ್ದುಬಂದನೆಂಬುದ ಅಪೂರ್ವ ಸಂಗತಿಯೆಂದು ಹೇಳಬೇಕೇ ವಿನಾ ಪ್ರಕೃತಿಗೆ ಮನುಷ್ಯನ ತಿಳಿವಳಿಕೆಗೆ ಮೀರಿದ ವಿಷಯವಾದ್ದರಿಂದ ಪ್ರಕೃತಿ ವಿರುದ್ಧವಾದ ಸಂಗತಿಯೆಂದು ಹೇಳಬಾರದು. ಸತ್ತವನು ಜೀವಿತನಾಗಿ ಎದ್ದುಬಂದದ್ದನ್ನು ಕಣ್ಣಾರೆ ಕಂಡಾತನ ಸಾಕ್ಷಿಗೆ ಆಕರವಾದ ಮನುಷ್ಯನು ಕಂಡದನ್ನು ಅಪ್ರಾಮಾಣಿಕವಾಗಿ ಸ್ಥಾಪಿಸಲ್ಪಟ್ಟಿರುವದನ್ನೂ ಸುಶಿಕ್ಷಿತರಾದ ಮನುಷ್ಯನನ್ನು ಪ್ರಾಜ್ಞನೆಂದು ಕರೆಯುವದು ಹ್ಯಾಗೆ? ಕ್ರಿಸ್ತನ ಪುನರುತ್ಥಾನವು ಅವಮಾನುಷವಾದ್ದೇ ಸರಿ. 'ಅಸಾಧ್ಯ' ವೆಂಬುದು ಮಾತ್ರ ಸರಿಯಲ್ಲ. ಭೂಮಿಯಲ್ಲಿ ಬಿದ್ದ ಬೀಜವು ಸತ್ತು ಹುಟ್ಟುತ್ತದೆಂಬುದು ಪ್ರಕೃತಿಯಲ್ಲಿ ಸತ್ಯವಾಗಿ ತಿಳಿಯಬರುವ ವಿಷಯವಾಗಿದೆ. ಇದು ಭಗವಂತನು ಏರ್ಪಡಿಸಿದ ವ್ಯವಸ್ಥೆಯಾಗಿ ಸ್ಥಾಪಿಸಿದ ಕಟ್ಟಳೆಯಾಗಿದೆ. ಇದಕ್ಕೆ ಜಗತ್ತಿನಲ್ಲಿ ಅನೇಕ ನಿದರ್ಶನಗಳುಂಟು. ಇಂಥ ಕಟ್ಟಳೆಗಳು ರಚಿಸಿದಾತನಾದ ಭಗವಂತನ ಸರ್ವಾಧಿಕಾರಿಯೂ ಸರ್ವಶಕ್ತನೂ ಆದ್ದರಿಂದ ಅವನ್ನು ನಿರ್ವಹಿಸುವದು ಸ್ವಾಭಾವಿಕ. ಕ್ರಿಸ್ತನ ಪುನರುತ್ಥಾನವು ಮಾನವನ ಮರಣದಿಂದ ಮೃತ್ಯುವನ್ನು ಗೆದ್ದಿರುವವರೆಲ್ಲರಿಗೆ ಜಯವಂತನು ನಿರೀಕ್ಷೆಯನ್ನು ಕಲ್ಪಿಸುವವನಾಗಿ ತಾನೇ ಕಾರ್ಯತಃ ಪುನರುತ್ಥಾನನಾದ ನಿಜವಾದ ಅದ್ವಿತೀಯನ ಸಾಮರ್ಥ್ಯರೂಪವಾಗಿದ್ದಾನೆ. ಭಗವಂತನನ್ನು ನಂಬುವವರಿಗೆ ಜೀವಪ್ರದವಾಗಿದೆ. ಇದು ಅನುಭವವೂ ಆಗಿರುವ ವಿಷಯವು.

ಹಿಂದೂಸ್ಥಾನದ ವೃತ್ತಾಂತಗಳು

ಆಘ್ಘಾನಿಸ್ಥಾನದ ಅಮೀರರು ಉಬ್ಬಸರೋಗದಿಂದ ನರಳುತ್ತಿದ್ದಾರೆ. ಈ ರೋಗವು ಅವರಿಗೆ ಹಿರಿಯರಿಂದಲೂ ಬಂದದ್ದಾಗಿದೆ.

* * * * *

ರಾಜಪುಟಾನಾ ಸಂಸ್ಥಾನಗಳಿಗೆ ಸೇರಿದ ಬಿಕಾನೀರ ಸಂಸ್ಥಾನದಲ್ಲಿ ಮಹಾರಾಜರವರು ಕಳೆದ ವಾರ ಕಾಲವಾದರೆಂದು ತಿಳಿದುಬಂದಿದೆ.

* * * * *

ಕೂಚ ಬೇಹಾರಿನ ಮಹಾರಾಜರವರು ಆ ಪಟ್ಟಣದಲ್ಲಿ ವಿಕ್ಟೋರಿಯಾ ಮಹಾರಾಜ್ಞೀಯವರ ಹೆಸರಿನ ಮೇಲೆ ಒಂದು ವಿದ್ಯಾಶಾಲೆಯನ್ನು ಕಟ್ಟುವದಕ್ಕೆ ಕಳೆದವಾರ ಅಸ್ತಿಭಾರ ಹಾಕಿದರು.

* * * * *

ಬಂಗಾಳ ಆಧಿಪತ್ಯಕ್ಕೆ ಸೇರಿದ ಟಿಪ್ಪೆರ್ ಡಿಸ್ಟ್ರಿಕ್ಟಿನಲ್ಲಿ ಕೆಲವು ವರ್ತಕರು ಹೊಸದಾಗಿ ಒಂದು ಹತ್ತಿಯ ಗಿರಣಿಯನ್ನು ಕಟ್ಟಿದ್ದಾರೆ. ಅಲ್ಲಿ ಸಿಕ್ಕುವ ಹತ್ತಿಯು ತುಂಬಾ ಉತ್ಕೃಷ್ಟವಾದುದೆಂದು ತಿಳಿದುಬಂದಿದೆ.

* * * * *

ಲಾಹೋರ್ ಪಟ್ಟಣದಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವ ಪ್ರಯತ್ನಕ್ಕೆ ಮ್ಯುನಿಸಿಪಾಲಿಟಿಯವರು ಕಾಮಗಾರಿ ಪ್ರಾರಂಭಿಸಿದ್ದಾರೆ. ಇದಕ್ಕೋಸ್ಕರ ಅವರು ಸರಕಾರದಿಂದ ೩೭,೦೦೦ ರೂಪಾಯಿ ಸಾಲ ಪಡೆದಿರುವರು.

* * * * *

ಬೊಂಬಾಯಿ ನಿಂದ ಉತ್ತರ ದೇಶಕ್ಕೆ ಹೋಗುವ ರೈಲ್ ಗಾಡಿಗಳಲ್ಲಿ ಪ್ರಯಾಣಿಕರು ಅತಿಗೆ ಮಿಂತವಾದ್ದು ಇರಾದೆ ಕೆಲವು ಸ್ಥಳಗಳಿಗೆ ಅನುಕೂಲವಾಗಿರುವಂಥಾ ಕೆಲವು ರೈಲ್‌ಗಾಡಿಗಳನ್ನು ಹೊಸದಾಗಿ ನಡಿಸಬೇಕೆಂದು ಗವರ್ನಮೆಂಟಿನವರು ೧,೩೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಕರಾಚಿ ಮ್ಯುನಿಸಿಪಾಲಿಟಿಯವರೂ ಸಮುದ್ರತೀರದಲ್ಲಿರುವ ಹಡಗುಗಳ ಅಧಿಕಾರಿಗಳೂ ಪ್ಲೇಗ್ ಉಪದ್ರವನ್ನು ಅಡಗಿಸುವದಕ್ಕೆ ಇಲಿಕಾಟದಿಗಳನ್ನು ಹಿಡುವನ್ನು ಹಾಕಿಸಬೇಕೆಂದು ಗೊತ್ತುಮಾಡಿ ಈ ಸಾರಸಹಿತ ಬಂದು ಹಿಡುವು ಹಾಕಿಸಿಕೊಳ್ಳುವವರಿಗೆಲ್ಲಾ ಒಂದೊಂದು ತಿಂಗಳ ಸಂಬಳ ಇನಾಮು ಕೊಡುತ್ತೇವೆಂದು ತಿಳಿಸಿದಾರೆ.

* * * * *

ಗಂಜಾಂ ಡಿಸ್ಟ್ರಿಕ್ಟಿಗೆ ಸೇರಿದ ಪಾಲಕಿಮಿಡಿ ಎಂಬ ಭಾರೀ ಜಮೀನ್ದಾರಿಯ ರಾಜರವರು ಕಳೆದ ವಾರ ಕಾಲವಾದರೆಂದು ತಿಳಿದುಬಂದಿದೆ. ಇವರಿಗೆ ಇಂಡಿಯಾ ಗವರ್ನಮೆಂಟಿನವರು ಸಿ. ಐ. ಇ. ಎಂಬ ಬಿರುದನ್ನು ದಯಪಾಲಿಸಿದ್ದರು. ಈ ರಾಜರು ತಮ್ಮ ಜಮೀನ್ದಾರಿಗೆ ತಮ್ಮ ಸ್ವಂತ ಖರ್ಚಿನಿಂದ ರೈಲುರಸ್ತೆ ಹಾಕಿಸಿಕೊಂಡು ನಡಿಸುತ್ತಿದ್ದರು.

* * * * *

ಬೊಂಬಾಯಿ ಪಟ್ಟಣದಲ್ಲಿ ಜಹಜುಗಳಿಂದ ಹೊಸದಾಗಿ ಬರುವ ವ್ಯಾಪಾರ ಸಾಮಾನುಗಳಿಗೆ ಸುಂಕವನ್ನು ತೀರಿಸುವ ದಕ್ಕಾಗಿ ಸರಕಾರದವರು ಸಮುದ್ರತೀರದಲ್ಲಿ ಒಂದು ಭಾರೀ ಸಾಮಾನು ಕಟ್ಟೆಯನ್ನು ಕಟ್ಟುತ್ತಿದ್ದಾರೆ. ಈ ಕೆಲಸವು ಪೂರೈಸಿದ ಮೇಲೆ ಈ ಕಾಮಗಾರಿ ಪ್ರಾರಂಭವಾಗಿ ಇಲ್ಲಿಗೆ ಎರಡು ವರುಷಗಳಾದವು. ಒಟ್ಟು ಎರಡು ಕೋಟಿ ರೂಪಾಯಿ ಖರ್ಚಾಗಿದೆ.

* * * * *

ಬಂಗಾಳಕ್ಕೆ ಸೇರಿದ ಕಾಳಿಕಾಪುರ ಎಂಬ ಊರಿನ ಒಂದು ಭಾರೀ ಕೆರೆ ನಿರ್ಮಾಣವಾಗಿದೆ. ಇದು ಬಹಳ ವಿಸ್ತಾರವಾಗಿಯೂ ಆಳವಾಗಿಯೂ ಇರುವುದು. ಈ ಕೆರೆಯ ನೀರು ತುಂಬ ರುಚಿಕರವಾಗಿದೆ. ಇದು ಇಷ್ಟರಲ್ಲೇ ನೀರು ಹೋಗುವಂತೆ ಮಾಡಬೇಕೆಂದು ಯೋಚಿಸುತ್ತಿದ್ದಾರೆ. ಇದರಿಂದ ಒಂದು ದೇಶ ನದಿ ಹುಟ್ಟಿದೆ.

* * * *

ಆಸಾಮ ಸೀಮೆಯ ನದಿಗಳಲ್ಲಿ ಚಿತಗಾಂವು ಹತ್ತಿರ ಯಾವ ಹೊಸಗಾಲುವೆಯ ಕೆಲಸ ನಡೆಯುತ್ತಿದೆ. ಇದನ್ನು ಮಾಡಲಿಕ್ಕೆ ಬಹಳ ಹಣವು ಬೇಕಾಗಿದೆ. ಅದರಿಂದ ಜೀವನಕ್ಕಾಗಿ ಬಹಳ ಜನರು ಕೆಲಸಕ್ಕೆ ಸೇರಿದ್ದಾರೆ. ಈಗ ಅವಿಸಾಗರ ಬಳಿ ಪ್ರಕಾರ ಬಂಗಾರದ ಅದಿರನ್ನು ತೆಗೆಯುವಂತೆ ಕಂಡುಬರುತ್ತದೆ. ಹಣವನ್ನು ಕೂಲಿ ಕೊಟ್ಟು, ಇದರಿಂದ ಕೆಲಸವನ್ನು ನಡಿಸಬೇಕೆಂದು ಹೇಳುತ್ತಾರೆ.

* * * * *

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಕೂಲಿಯವನೂ ಅವನ ಹೆಂಡತಿಯೂ ಒಂದು ಮನೆಯಲ್ಲಿ ವಾಸವಾಗಿದ್ದರು. ಕಳೆದ ವಾರ ಆರಂಭದಲ್ಲಿ ಒಂದು ದಿನವೆಲ್ಲಾ ಆ ಮನೆಯ ಬಾಗಿಲು ತೆರೆಯದೆ ಇದ್ದುದರಿಂದ, ನೆರೆಹೊರೆಯವರು ಬಾಗಿಲನ್ನು ಒಡೆದು ಒಳಕ್ಕೆ ಹೋಗಿ ನೋಡುವಲ್ಲಿ ಗಂಡಹೆಂಡತಿಬ್ಬರೂ ಕ್ಲೋರೋಫಾರ್ಮ್‌ದಿಂದ ಸತ್ತು ಬಿದ್ದಿದ್ದರು. ಗಂಡನು ಮೊದಲು ಹೆಂಡತಿಯನ್ನು ಕೊಂದುಹಾಕಿ, ತಾನೂ ಆತ್ಮಹತ್ಯವನ್ನು ಮಾಡಿಕೊಂಡಿರಬೇಕೆಂದು ತಿಳಿದುಬಂದಿದೆ.

* * * * *

ಬೊಂಬಾಯಿ ಪಟ್ಟಣದ ಬಳಿ ಒಂದು ಬೆಟ್ಟದ ಮೇಲಿರುವ ಜೈನರ ದೊಡ್ಡ ದೇವಸ್ಥಾನದ ಒಳಗೆ ಮಹಮ್ಮದೀಯ ಸಂಸ್ಥಾನದ ಧಾಕೂರ ಸಾಹೇಬ ಯವರು ಹೋಗಿ, ಮೋಜಿನ ಕಾಲದಲ್ಲೇ ತಮ್ಮನ್ನು ಒಳಕ್ಕೆ ಬಿಡಬೇಕೆಂದು ದೇವಸ್ಥಾನದವರನ್ನು ಬಲಾತ್ಕಾರ ಮಾಡಿದರು. ಅಲ್ಲಿನವರು ಅವರನ್ನು ಒಳಗೆ ಬಿಡದೆ ಹೊರಕ್ಕೆ ತಳ್ಳಿದರು. ಈ ವಿಷಯವನ್ನು ಜೈನರ ಮಹಾ ಸಭೆಯವರು ಚರ್ಚೆ ಮಾಡಿ, ಬೊಂಬಾಯಿ ಗವರ್ನಮೆಂಟಿನವರಿಂದ ಅವರಿಗೆ ಶಿಕ್ಷೆ ಮಾಡಿಸಬೇಕೆಂದು ಅರ್ಜಿಯನ್ನು ಕಳುಹಿಸಿಕೊಂಡರು.

* * * * *

ಕಾಂಗ್ರಾ ಡಿಸ್ಟ್ರಿಕ್ಟಿನಲ್ಲಿ ಧರ್ಮಶಾಲೆ ಎಂಬ ಪಟ್ಟಣವು ಮುಖ್ಯ ನಗರವಾಗಿದ್ದು, ಭೂಕಂಪದ ದೆಸೆಯಿಂದ ನಾಶವಾಯಿತು. ಈಗ ಆ ಸ್ಥಳದಲ್ಲೇ ಮತ್ತೆ ಕಟ್ಟಡಗಳನ್ನು ಕಟ್ಟಿ, ಕಚೇರಿಗಳನ್ನು ಮಾಡಬಹುದೋ ಕೂಡದೋ ಎಂಬುದನ್ನು ಗೊತ್ತುಮಾಡುವದಕ್ಕೆ ಇದು ಮುಂದೆ ಭಾರೀ ಸರ್ಕಾರದವರ ಸಭೆ ಸೇರಿ ಚರ್ಚೆ ಮಾಡಿದರು. ಇನ್ನು ಮುಂದೆ ಬರುವ ಮಳೆಗಾಲವು ತೀರಿದ ನಂತರ ಹೊಸ ಪಟ್ಟಣವನ್ನು ಕಟ್ಟುವ ಯೋಚನೆ ಮಾಡಬೇಕೆಂದು ಅವರು ತೀರ್ಮಾನ ಮಾಡಿರುತ್ತಾರೆ.

* * * * *

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ವಾರ ಪ್ರಚಂಡ ಗಾಳಿಯುಂಟಾಗಿ ವಿಶೇಷ ಗುಡುಗು ಮಿಂಚುಗಳ ಸಹಿತ ಕೂಡಿದ ಮಳೆಯು ಎರಡು ಮೂರು ವೇಳೆ ಬಂದಿತ್ತು. ಇದರ ದೆಸೆಯಿಂದ ಕಾಲುವೆಯ ತೀರದಲ್ಲಿ ಕಟ್ಟಿಹಾಕಿದ್ದ ಹಲವು ವರ್ತಕರ ದೋಣಿಗಳೂ ಅವುಗಳ ಮೇಲಾದ ಅಕ್ಕಿಯೇ ಮೊದಲಾದ ಧಾನ್ಯಗಳು ಕಲ್ಲಿದ್ದಲೇ ಮೊದಲಾದ ವ್ಯಾಪಾರ ಸರಕುಗಳೂ ಮುಳುಗಿ ಹೋಗಿ ಸಾಹುಕಾರರಿಗೆ ತುಂಬಾ ನಷ್ಟವನ್ನುಂಟು ಮಾಡಿದೆ. ಊರಿನಲ್ಲಿ ಅನೇಕ ಮರಗಳು ಮನೆಗಳು ಕೊಚ್ಚಿ ಹೋದವು. ಗೋಡೆಗಳು ಬಿದ್ದು ನಷ್ಟ ಭವಿಸಿತು.

* * * * *

ಟಿಬೆಟ್ಟಿನ ಪ್ರಜೆಗಳು, ಚೀನಾ ರಾಜ ಭಟರನ್ನೂ ಆತನ ಪರಿವಾರದವರನ್ನೂ ನಾಲ್ವರು ಫ್ರೆಂಚ್ ಪಾದ್ರಿಗಳನ್ನೂ ಕೊಂದುಹಾಕಿದರೆಂದು ತಿಳಿಸಿರುತ್ತೇವಷ್ಟೆ. ಈಚೆಗೆ ಬಟಾಂಗ್ ಎಂಬ ಪಟ್ಟಣಗಳಲ್ಲಿರುವ ಜನರು ಸಶಸ್ತ್ರಧಾರಿಗಳಾಗಿ ಒಟ್ಟಾಗಿ, ಇಂಗ್ಲೀಷರು ಟಿಬೆಟ್ ರಾಜ್ಯವನ್ನು ಆಕ್ರಮಿಸಿಕೊಳ್ಳುತ್ತಾರೆಂತಲೂ ಚೀನಾ

ಕಾರವನ್ನು ಟಿಬೆಟ್ಟಿಗೆ ಒಪ್ಪಿಸಬೇಕೆಂತಲೂ ಮುಸಲತ್ತು ಮಾಡಿಕೊಂಡಿದ್ದಾರೆ ಈ ಸುದ್ದಿಯನ್ನು ಕೇಳಿ, ಸ್ಜೀಚುವಾನ್ ಪ್ರಾಂತ್ಯದ ಚೀನಾ ವೈಸ್‌ರಾಯರವರು ದಂಗೆಯನ್ನು ಅಡಗಿಸುವುದಕ್ಕೆ ಸೈನ್ಯವನ್ನು ಕೂಡಿಸಿ ಕಳುಹಿಸುವವರಾಗಿದ್ದಾರೆ

◆◆◆◆

ಲಾಹೋರ್ ಪಟ್ಟಣದಲ್ಲಿ ದಯಾನಂದರವರ ಹೆಸರಿನ ಮೇಲೆ ಇಟ್ಟು ನಡೆಸುತ್ತಿರುವ ವಿದ್ಯಾಶಾಲೆಯಲ್ಲಿ ಇದುವರೆಗೆ ಇಂಗ್ಲೀಷು, ವೇದ, ಸಂಸ್ಕೃತ, ಇಷ್ಟನ್ನೇ ಹೇಳಿಕೊಡುತ್ತಿದ್ದರು. ಈಗ ಈ ಪಾಠಶಾಲೆಯಲ್ಲಿ ಫ್ರೆಂಚ್ ಭಾಷೆಯನ್ನೂ ಜರ್ಮನ್ ಭಾಷೆಯನ್ನೂ ಕಲಿಸುವುದಕ್ಕೆ ಉಪಾಧ್ಯಾಯರನ್ನು ನೇಮಿಸಿದ್ದಾರೆ. ಹಿಂದುಸ್ಥಾನದಿಂದ ಕಸಬುಗಳನ್ನು ಕಲಿತು ಬರುವುದಕ್ಕೆ ಜರ್ಮನ್ ರಾಜ್ಯಕ್ಕೆ ಹೋದವರಿಗೆ ಅಲ್ಲಿನ ಭಾಷೆಯನ್ನು ಕಲಿತುಕೊಳ್ಳುವುದಕ್ಕೇ ಒಂದು ವರುಷ ಹಿಡಿಯುತ್ತಿತ್ತು. ಇದರಿಂದ ಅಂಥವರು ಹಿಂದುಸ್ಥಾನದಲ್ಲೇ ಆ ಭಾಷೆಯನ್ನು ಕಲಿಯುವಂತೆ ಅನುಕೂಲವಾಗುತ್ತೆ.

◆◆◆◆

ಇಂಡಿಯಾ ಗವರ್ನ್‌ಮೆಂಟಿನ ಭೂಗರ್ಭ ಶೋಧನಾ ಇಲಾಖೆಯ ಸುಪರಿಂಟೆಂಡೆಂಟ್ ಮಿ॥ ಹಾಲೆಂಡ್‌ಯವರು ಮುಸೂರಿ ಪ್ರಾಂತ್ಯದಲ್ಲಿ ಮತ್ತೆ ಅಂದರೆ ಈ ತಿಂಗಳ ೧೪ ನೆ ತಾರೀಖಿನೊಳಗೆ ಇನ್ನೊಂದು ಸಲ ಭೂಕಂಪ ಉಂಟಾಗುವುದೆಂಬು ಹೇಳಿರುವಂತೆ ಒಂದು ಸುದ್ದಿ ಹುಟ್ಟಿ, ಅನೇಕ ಪ್ರಜೆಗಳನ್ನೂ ಸರ್ಕಾರದವರನ್ನೂ ಕಳವಳಪಡಿಸುತ್ತಿತ್ತು ಈ ಸುದ್ದಿಯನ್ನು ಆ ಹುದ್ದೆದಾರರು ಕೇಳಿ, ಪರಿಹಾಸ್ಯ ಮಾಡಿದರೆಂತಲೂ ಅವರು ಆ ಸುದ್ದಿಯನ್ನು ಎಂದಿಗೂ ಯಾರ ಸಂಗಡ ಹೇಳಲಿಲ್ಲವೆಂತಲೂ ಪ್ರಕಟಮಾಡುತ್ತಾರೆ ಇಂಥಾ ಗಾಬರಿ ಹುಟ್ಟಿಸುವ ಸಮಾಚಾರಗಳಿಗೆ ಈ ಹಿಂದುಸ್ಥಾನವೇ ಮೂಲಸ್ಥಾನವೆನ್ನಬಹುದು.

◆◆◆◆

ಹಿಂದುಸ್ಥಾನದಲ್ಲಿ ಏಪ್ರೀಲ್ ೨೯, ೧೯೦೫ ವರೆಗೆ ಪ್ಲೇಗ್ ಬಾಧೆ ತಾಳಿ ಮೃತಪಟ್ಟವರ ಒಳಗಿನ ವಾರ ೬೬,೭೪೩ ಜನರು [illegible]—ಪಂಜಾಬ್ ಅಧಿಪತ್ಯ ೫೮,೬೫೮, ಸಂಯುಕ್ತ ಪ್ರಾಂತ್ಯ ೧೦,೭೨೦, ಬಂಗಾಳ ಅಧಿಪತ್ಯ ೬,೧೭೮, ರಜಪುಟಾನಾ ೨,೫೯೮, ಬೊಂಬಾಯಿಯ ಅಧಿಪತ್ಯಗಳಲ್ಲಿ ೧,೪೪೩, ಬರ್ಮಾ ಅಧಿಪತ್ಯ ೧೩೩, ಕಾಶ್ಮೀರಸಂಸ್ಥಾನ ೩೯, ಬೊಂಬಾಯಿ ಪಟ್ಟಣ ೯೩೫, ಕಲ್ಕತ್ತಾ ಪಟ್ಟಣ ೭೫೪, ರಾಜಪುಟಾನಾ ಸಂಸ್ಥಾನಗಳ ಪೈಕಿ ಜಯಪುರ, ಭರತಪುರ, ಅಲ್ವಾರ್, ಅಜ್ಮೀರ್ ಮೇರ್ವಾರಾ, ಈ ಮೊದಲಾದ ಸ್ಥಳಗಳಲ್ಲಿ ಪ್ಲೇಗ್ ಉಪದ್ರವ ಜೋರಾಗಿಯೇ ಇರುತ್ತದೆ

◆◆◆◆

ಪಂಢರಾಪುರ ಪಟ್ಟಣದಲ್ಲಿ ಪಂಡಿತ ತ. ಗೋಪಾಲಾಚಾರ್ಯರು ಶ್ರೀಧನ್ವಂತರಿವೈದ್ಯ ಆಯುರ್ವೇದ ವೈದ್ಯಶಾಲೆಯನ್ನು ಕಳೆದ ೧೮೯೮ ನೆ ಇಸವಿಯಿಂದ ನಡೆಸುತ್ತಾ ಬಂದಿದ್ದಾರೆ ವೈಶ್ಯ ಮಹಾಜನರೂ ಇತರ ಧರ್ಮಾತ್ಮರೂ ಈ ವೈದ್ಯಶಾಲೆಗೆ ತಿಂಗಳಿಗೆ ೨೦೦ ರೂಪಾಯಿನಂತೆ ಚಂದಾ ಕೊಡುತ್ತಿದ್ದಾರೆ. ಈಗ ಈ ಪಂಡಿತರು ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿ, ಇಂಗ್ಲಿಷ್ ಮತ್ತು ಆಯುರ್ವೇದ ವೈದ್ಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲಾರಂಭಿಸಿದ್ದಾರೆ. ನಾನಾ ಮೂಲಿಕೆಗಳನ್ನು ಬೆಳೆಯುವುದಕ್ಕೆ ಒಂದು ಉದ್ಯಾನವನವನ್ನೂ ಮಾಡಿಕೊಂಡಿರುವರು ಈಗ ೧೫ ಮಂದಿ ವಿದ್ಯಾರ್ಥಿಗಳು ವೇತನಗಳನ್ನು ಪಡೆದು ವೈದ್ಯವನ್ನು ಕಲಿತುಕೊಳ್ಳುತ್ತಾ ಇದ್ದಾರೆ.

◆◆◆◆

ಬರ್ಮಾ ಅಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದಿಂದ ಪ್ರೋಂಪಟ್ಟಣಕ್ಕೆ ರೈಲು ಹೋಗಿಬರುವುದು. ಮಧ್ಯಮಾರ್ಗದಲ್ಲಿ ಪೇಗೂ ಎಂಬ ಸ್ಟೇಷನಿನಲ್ಲಿ ರೈಲ್ವೆ ಆಸ್ಪತ್ರೆ ಅಸಿಸ್ಟೆಂಟಾಗಿದ್ದ ಮಿ॥ ಥಾಮಸ್ ಎಂಬಾತನು ಪೋಲೀಸಿನವರಿಂದ ಮೂರು ಮಂದಿ ಕೂಲಿಯವರನ್ನು ಹಿಡಿಸಿ, ಮ್ಯಾಜಿಸ್ಟ್ರೇಟರಲ್ಲಿ ದರ್ಖಾಸ್ತು ಮಾಡಿಸಿದನು ಅವರು ಜಾಮೀನು ಕೊಟ್ಟು, ಸೆರೆಯಿಂದ ಬಿಡಿಸಿಕೊಂಡು ಹೋದರು. ಪ್ರತಿದಿನವೂ ಆ ಡಾಕ್ಟರ ಮನೆ ಮೇಲೆ ಕಲ್ಲುಗಳು ಬೀಳುತ್ತಿದ್ದವು. ನಾಲ್ಕನೇ ದಿನ ಆ ವೈದ್ಯನು ಪೋಲೀಸಿನವರಿಗೆ ತಿಳಿಸಬೇಕೆಂದು ಮನೆಯಿಂದ ೫೦ ಗಜ ದೂರ ಹೋಗುವಷ್ಟರೊಳಗಾಗಿ, ಘಾತಕರು ಅವನನ್ನು ಹಿಡಿದು ಹೊಡೆದು ಕೊಂದು ಹಾಕಿದರು. ಅಪರಾಧಿಗಳು ಸಿಕ್ಕಲಿಲ್ಲ.

◆◆◆◆

ಕರಾಚಿ ಪಟ್ಟಣದ ಸಮುದ್ರ ತೀರದಲ್ಲಿ ಕಳೆದ ವಾರ ಕೋಟ್ಯಾನುಕೋಟಿ ಮೀನುಗಳೂ ಸಮುದ್ರ ಜಲಚರಗಳೂ ತೇಲಿ ಬಂದು ಸತ್ತು ಬಿದ್ದವು. ಸಮುದ್ರ ತೀರದಲ್ಲಿ ಸುಮಾರು ಅರ್ಧಕ್ಕೂ ಹೆಚ್ಚು ಮೈಲಿ ದೂರದ ತನಕ ಹರಡಿಕೊಂಡಿತ್ತು ಆರು ಅಂಗುಲ ಆಳದ ತನಕ ಜಲಚರಗಳು ಇದ್ದದ್ದನ್ನು ಜನರು ನೋಡಿ ಆಶ್ಚರ್ಯಪಟ್ಟರು ಸರ್ಕಾರದವರು ಹೋಗಿ ನೋಡಿ, ದೊಡ್ಡ ದೊಡ್ಡ ಗುಂಡಿಗಳನ್ನು ಮಾಡಿಸಿ, ಆ ಸತ್ತ ಪ್ರಾಣಿಗಳನ್ನು ಸುರಿದು ಮಣ್ಣು ಮಾಡಿಸಿದರು. ಸಮುದ್ರದೊಳಗೆ ಏನೋ ಒಂದು ಭೂಕಂಪವೋ ಇಲ್ಲವೇ ಅಗ್ನಿಪರ್ವತವೋ ಪ್ರಜ್ವಲಿಸಿದ್ದರಿಂದಲೇ ಇಷ್ಟು ಅಸಂಖ್ಯಾತವಾದ ಜಲಚರಗಳು ಭೂಮಿಗೆ ಎರಚಲ್ಪಟ್ಟು ಪ್ರಾಣ ಕಳಕೊಂಡವೆಂದು ಹೇಳುತ್ತಾರೆ.

◆◆◆◆

ರಂಗೂನ್ ಪಟ್ಟಣದಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಬೇಕೆಂದು ಗವರ್ನ್‌ಮೆಂಟಿನವರು ಕಳೆದ ೧೪ ವರುಷಗಳಿಂದಲೂ ಯೋಚಿಸುತ್ತಿದ್ದು, ಮೊನ್ನೆ ತಾನೆ ಅದಕ್ಕಾಗಿ ಇಪ್ಪತ್ತೇಳು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಕಳೆದ ವಾರ ಲೆಫ್ಟಿನೆಂಟ್ ಗವರ್ನರ್ ಸರ್ ಹೂ ಬಾರ್ನೆಸ್‌ರವರು ಅಲ್ಲಿಗೆ ಹೋಗಿ, ಆ ಆಸ್ಪತ್ರೆಗೆ ಅಸ್ತಿಭಾರವನ್ನು ಹಾಕಿಬಂದರು. ಈ ಆಸ್ಪತ್ರೆಯು ಕಟ್ಟಡವೇ ೭೦೦ ಅಡಿ ಉದ್ದವೂ ಮೂರು ಅಂತಸ್ತುಗಳುಳ್ಳದ್ದಾಗಿಯೂ, ೧೮೭ ಯೂರೋಪಿಯನ್ ರೋಗಿಗಳಿಗೂ ೩೩೭ ಮಂದಿ ದೇಶೀಯ ರೋಗಿಗಳಿಗೂ ೫೦ ಮಂದಿ ದಿಕ್ಕಿಲ್ಲದ ರೋಗಿಗಳಿಗೂ ೬೮ ಮಂದಿ [illegible] ರೋಗಿಗಳಿಗೂ ಅನುಕೂಲವಾಗಿಯೂ ಆಗುವುದು. ಆಸ್ಪತ್ರೆಯ ಹಣದಲ್ಲೇ ೧೪ ಮಂದಿ ಡಾಕ್ಟರುಗಳೂ ೫೦ ಮಂದಿ ನರ್ಸುಗಳೂ, ೧೬೭ ಜನ ಸೇವಕರೂ ವಾಸಮಾಡುವುದಕ್ಕೆ ಯೋಗ್ಯವಾದ ಕಟ್ಟಡಗಳಾಗುವವು

◆◆◆◆

ಅಫ್ಘಾನಿಸ್ಥಾನದ ಅಮೀರರವರ ಜ್ಯೇಷ್ಠಪುತ್ರರಾದ ಸರ್ದಾರ್ ಇನಾಯತ್ ಉಲ್ಲಾಖಾನರವರು ಪರಿವಾರ ಸಹಿತ ಹಿಂದುಸ್ಥಾನಕ್ಕೆ ಬಂದಿದ್ದಾಗ್ಗೆ ಅವರ ಬೆಂಗಾವಲಿನವರಲ್ಲಿ ಒಬ್ಬ ಸಿಪಾಯಿಯು ಅವರ ಸಂಗಡ ರೈಲ್ ಗಾಡಿಯಲ್ಲಿ ಕುಳಿತು ಪ್ರಯಾಣ ಮಾಡುತ್ತಿರುವಲ್ಲಿ ಅವನ ಕೈಲಿದ್ದ ಬಂದೂಕು ಜಾರಿ ಹೊರಕ್ಕೆ ಬಿದ್ದು ಹೋಯಿತು. ಕೂಡಲೇ ಅವನು ಗಾಡಿಯಿಂದ ಧುಮುಕಿ, ತನ್ನ ಬಂದೂಕನ್ನು ಎತ್ತಿಕೊಂಡನು ಗಾಡಿಯು ಮುಂದಕ್ಕೆ ಹೋಯಿತು. ಸರ್ಕಾರದವರು ಅವನಿಗೆ ಏನೂ ಅಪಾಯವಾಗಲಿಲ್ಲವೆಂದು ತಿಳಿದು, ಅವನನ್ನು ಬೇರೆ ಗಾಡಿಯಲ್ಲಿ ಕಳುಹಿಸಿಕೊಟ್ಟರು. ಈಚೆಗೆ ಇವನು ಸರ್ದಾರರ ಸಂಗಡ ಹಿಂದಿರುಗಿ ಅಫ್ಘಾನಿಸ್ಥಾನಕ್ಕೆ ಹೋದಾಗ ಇವನು ಮಾಡಿದ ಕಾರ್ಯವನ್ನು ಕೇಳಿ, ಅಮೀರರವರು ಬಹಳ ಸಂತೋಷಪಟ್ಟು, ಅವನಿಗೆ ನೂರಾರು ರೂಪಾಯಿ ಬಹುಮಾನ ಕೊಡಿಸಿದ್ದಲ್ಲದೆ, ಸೈನ್ಯದಲ್ಲಿ ಅವನಿಗೆ ಸುಬೇದಾರಿ ರ್ಯಾಂಕ್ ಕೊಟ್ಟರು ಇದಲ್ಲದೆ ಅವನ ಜಾತಿಯ ಜನರಲ್ಲಿ ಎರಡು ಕಂಪನಿ ಸಿಪಾಯಿಗಳನ್ನು ತರಪೇತು ಮಾಡಿ, ಅವನನ್ನು ತಮ್ಮ ಯುವರಾಜರವರ ಅಂಗರಕ್ಷಕರನ್ನಾಗಿ ನೇಮಿಸಿರುತ್ತಾರೆ

◆◆◆◆

ಕಾಂಗ್ರಾ ಪಟ್ಟಣದ ಸರ್ಕಾರಿ ಕಚೇರಿಯಲ್ಲಿ ನೌಕರನಾಗಿರುವ ಒಬ್ಬ ದೊಡ್ಡ ಮನುಷ್ಯನು ಭೂಕಂಪದ ವಿಷಯದಲ್ಲಿ ತಿಳಿಸಿರುವುದೇನೆಂದರೆ—ಕಾಂಗ್ರಾ ಪಟ್ಟಣದಲ್ಲಿ ತಮ್ಮ ಮನೆಯಿಂದ ೩—೪ [illegible] ದ್ದನು ಇವನು ಭೂಕಂಪವಾಗುವುದಕ್ಕೆ ಕೆಲವು ದಿನಗಳ ಮುಂಚೆಯಿಂದಲೂ ಬೀದಿ ಬೀದಿಗಳಲ್ಲಿ ತಿರುಗುತ್ತಾ, ಈ ಪಟ್ಟಣ ನಾಶವಾಗುತ್ತೆಂದು ಗಟ್ಟಿಯಾಗಿ ಅರಚಿಕೊಳ್ಳುತ್ತಾ ಇದ್ದನು ಜನರು ಅವನಿಗೆ ಬುದ್ಧಿಭ್ರಮಣೆಯುಂಟಾಗಿದೆ ಎಂದು ಹೇಳಿ, ಅವನ ಮಾತಿಗೆ ಲಕ್ಷ್ಯಕೊಡದೆ ಇದ್ದರು. ೩ ನೆ ತಾರೀಖು ಸಾಯಂಕಾಲ ಅವನು ದೇವಸ್ಥಾನಕ್ಕೆ ಹೋಗಿ ಪೂಜಾರಿಗಳಿಗೂ ಸೇವಕರಿಗೂ ಈ ಗುಡಿಯು [illegible] ನಾಶವಾಗುವುದೆಂದು ಹೇಳಿದನು. ಅವರೆಲ್ಲಾ ಸೇರಿ ಅವನನ್ನು ಹೊಡೆದು ಓಡಿಸಿಬಿಟ್ಟರು. ಅವನು ಅಲ್ಲಿಂದ ಮನೆಗೆ ಬಂದು, ಆ ರಾತ್ರಿ ತನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು, ಮೈದಾನದಲ್ಲೇ ಆ ರಾತ್ರಿ ಕಳೆದನು ಬೆಳಗಾಗುವ ಹೊತ್ತಿಗೆ ಭೂಕಂಪವಾಗಿ ಊರೆಲ್ಲಾ ನಾಶವಾಯಿತು. ಅವನು ಬದುಕಿಕೊಂಡಿದ್ದಾನೆ ಇನ್ನೂ ದೊಡ್ಡ ಅನಾಹುತ ಇಷ್ಟರಲ್ಲೇ ಆಗುತ್ತೆಂದು ಹೇಳಿಕೊಂಡು ತಿರುಗುತ್ತಾ ಇದ್ದಾನೆ ಎಂಬುದೇ.

◆◆◆◆

ಪಂಜಾಬ್ ಗವರ್ನ್‌ಮೆಂಟಿನವರು ಲಾಹೋರ್ ಪಟ್ಟಣದಲ್ಲಿ ಒಂದು ದೊಡ್ಡ ಪಶುವೈದ್ಯ ವಿದ್ಯಾಶಾಲೆಯನ್ನಿಟ್ಟು, ಪಶುವೈದ್ಯ ಮತ್ತು ಚಿಕಿತ್ಸೆಯನ್ನು ವಿದ್ಯಾರ್ಥಿಗಳಿಗೆ ಕಲಿಸಿ, ತೇರ್ಗಡೆ ಮಾಡುತ್ತಾರೆ ಕಳೆದ ವರುಷ ಈ ವಿದ್ಯಾಶಾಲೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಲೆಫ್ಟಿನೆಂಟ್ ಗವರ್ನರವರು ಬಹುಮಾನಗಳನ್ನು ಕೊಟ್ಟರು ಆಗ ಅವರು ಈ ಪಾಠಶಾಲೆಯ ಪ್ರಯೋಜನವನ್ನು ಕುರಿತು ಉಪನ್ಯಾಸ ಮಾಡಿದರು. ಅದರ ಸಾರಾಂಶವೇನೆಂದರೆ—ಅಲ್ಲಿ ತೇರ್ಗಡೆ ಹೊಂದಿರುವ ವೈದ್ಯರು ಈಗ ದಕ್ಷಿಣ ಆಫ್ರಿಕ, ಚೀನಾ, ಸೋಮಾಲಿ ಲ್ಯಾಂಡ್, ರೊಡೇಸಿಯಾ, ಮೊಂಬಾಸ, ಸ್ಟ್ರೇಟ್ಸ್ ಸೆಟ್ಲ್‌ಮೆಂಟ್, ಅಂಡಮಾನ್ ದ್ವೀಪಗಳು, ಟಿಬೆಟ್, ಬರ್ಮಾ, ಸೈಬೀರಿಯಾ, ಈ ಮೊದಲಾದ ಕಡೆಗಳಲ್ಲಿ ನೌಕರಿ ಪಡೆದು, ಪಶುವೈದ್ಯವನ್ನು ತೃಪ್ತಿಕರವಾಗಿ ಮಾಡುತ್ತಿದ್ದಾರೆ. ಪಂಜಾಬ್ ಅಧಿಪತ್ಯದಲ್ಲಾದರೋ ೧೮೩ ಮಂದಿ ಪಶು ವೈದ್ಯರಿರುವರು. ಇವರಿಂದ ೧,೩೩,೩೭,೭೫೮ ಗೋವುಗಳನ್ನು ನೋಡಿಕೊಳ್ಳುವುದು ಅಸಾಧ್ಯವಾಗಿದೆ ಪ್ರತಿ ಒಂದು ಪಟ್ಟಣದಲ್ಲೂ ಪಶುಗಳ ರೋಗ ಚಿಕಿತ್ಸೆಗೆ ಒಂದೊಂದು ವೈದ್ಯಶಾಲೆ ಇಡಬೇಕು. ಆದ್ದರಿಂದ ಇನ್ನೂ ಅನೇಕ ವೈದ್ಯರು ಈ ಚಿಕಿತ್ಸೆಯನ್ನು ಕಲಿತವರಾಗಬೇಕು. ಇದು ಹಾಗಿರಲಿ ಈಗ ಪಶುವೈದ್ಯದಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ನಾನು ಹೇಳುವುದೇನೆಂದರೆ—ನೀವು ಗ್ರಾಮಾಂತರಗಳಲ್ಲಿರುವ ಗೋವುಗಳನ್ನು ನೋಡಿಕೊಳ್ಳಬೇಕು. ಇದೆ ನಿಮ್ಮ ಮುಖ್ಯ ಕರ್ತವ್ಯವಾಗಿರುತ್ತದೆ ಅವು ನೀವಿರುವ ಸ್ಥಳಕ್ಕೆ ನಿಮ್ಮನ್ನು ಹುಡುಕಿಕೊಂಡು ಬರಲಾರವು ನೀವೇ ದೇಹದಂಡನೆ ಮಾಡಿ, ಗ್ರಾಮಗಳ ಮೇಲೆ ಸುತ್ತಿ, ಗೋವುಗಳಿಗೆ ಚಿಕಿತ್ಸೆ ಮಾಡಿ ಕಾಪಾಡಬೇಕು. ಈ ರಾಷ್ಟ್ರದಲ್ಲಿ ವ್ಯವಸಾಯವೇ ಪ್ರಜೆಗಳ ಮುಖ್ಯ ಕಸಬು. ಈ ವ್ಯವಸಾಯಕ್ಕೆ ದನಗಳೇ ಮೂಲಾಧಾರ. ಅವುಗಳನ್ನು ಕಾಪಾಡುತ್ತಾ ಬಂದರೆ ವ್ಯವಸಾಯವೂ ವ್ಯವಸಾಯದಿಂದ ಪ್ರಜೆಗಳೂ ಅಭಿವೃದ್ಧಿಹೊಂದುವರು ಎಂಬುದೇ.

ವಿದೇಶ ವರ್ತಮಾನಗಳು.

ವಿಲಾಯತಿ ರಾಜ್ಯದ ಮಂತ್ರಿಗಳಾಗಿದ್ದ ಲಾರ್ಡ್ ರೋಸ್‌ಬರಿಯವರು ನಾಲ್ಕೈದು ಲಕ್ಷ ರೂಪಾಯಿಗೆ ಒಂದು ಓಟದ ಕುದುರೆಯನ್ನು ಕೊಂಡುಕೊಂಡಿದ್ದಾರೆ. ಇದುವರೆಗೆ ಈ ಕುದುರೆಯು ೩೬ ಪಂದ್ಯಗಳಲ್ಲಿ ಮುಂದಾಗಿ ಓಡಿ, ಬಹುಮಾನಗಳನ್ನು ಸಂಪಾದಿಸಿರುವುದು

ರಷ್ಯಾ ರಾಜ್ಯದವರು ೩೩೭ ಯುದ್ಧದ ಹಡಗುಗಳನ್ನು ಹೊಸದಾಗಿ ಕಟ್ಟಿಸುವುದಕ್ಕೆ ೧೧೫ ಕೋಟಿಯೂ ೫೦ ಲಕ್ಷ ರೂಪಾಯಿ ಸಾಲಮಾಡುವವರಾಗಿದ್ದಾರೆ.

◆◆◆◆

ಟುರ್ಕಿಸ್ಥಾನದಲ್ಲಿರುವ ಮನೆಗಳಿಗೆಲ್ಲಾ ರಷ್ಯಾದವರು ಮನೆ ೧ಕ್ಕೆ ೧೦ ಅಣೆಯಂತೆ ತೆರಿಗೆಯನ್ನು ಹಾಕಿ ವಸೂಲ್ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಯುದ್ಧದ ಖರ್ಚಿಗೆ ಎಷ್ಟು ಹಣ [illegible] ಸಾಲದೆ ಹೋಗಿದೆ ಎಂಬುದು ಪ್ರಕಾಶವಾಗುವುದು.

◆◆◆◆

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಟೌನ್ ಪಟ್ಟಣದಲ್ಲಿ ಎಡ್ವರ್ಡ್ ಸಾರ್ವಭೌಮರವರ ಪ್ರತಿಮೆಯನ್ನು ಮೊನ್ನೆ ತಾನೇ ನಿಲ್ಲಿಸಿ ಪ್ರತಿಷ್ಠೆ ಮಾಡಿದರು. ಚಕ್ರವರ್ತಿಯವರ ಪ್ರತಿಮೆಯು ದಕ್ಷಿಣ ಆಫ್ರಿಕದಲ್ಲಿ ನಿಲ್ಲಿಸಿರುವುದು ಇದೇ ಮೊದಲು.

◆◆◆◆

ಬೆಲ್ಜಿಯಂ ರಾಜ್ಯದವರು ಆಂಟ್ವರ್ಪ್ ನಗರದ ಕೋಟೆಕೊತ್ತಲಗಳನ್ನೆಲ್ಲಾ ಕೆಡವಿ ಬಿಟ್ಟು, ಇನ್ನೂ ವಿಸ್ತಾರವಾಗಿಯೂ ಬಲವಾಗಿಯೂ ಕಟ್ಟಬೇಕೆಂದು ಗೊತ್ತುಮಾಡಿ, ಅದರ ಕಾಮಗಾರಿಗೆ ಏಳೂವರೆ ಕೋಟಿ ದ್ರವ್ಯವನ್ನು ಸ್ಯಾಂಕ್ಷನ್ ಮಾಡಿದ್ದಾರೆ.

◆◆◆◆

ಅಮೇರಿಕದಲ್ಲಿ ಈ ವರುಷ ಹತ್ತಿಯ ಬೆಳೆಯು ಅಪಾರವಾದ್ದರಿಂದ ವರ್ತಕರು ಹತ್ತಿಯ ಧಾರಣೆ ಇಳಿದು ಅಗ್ಗವಾಗಿ ತಮಗೆಲ್ಲಾ ನಷ್ಟವಾಗುತ್ತೆಂದು ಯೋಚಿಸಿ, ಧಾರಣೆಯನ್ನು ತಗ್ಗದ್ದೇ ಇಟ್ಟಿರಬೇಕೆಂದು ೬೦ ಲಕ್ಷ ಹತ್ತಿಯ ಗಟ್ಟುಗಳನ್ನು ಬೆಂಕಿ ಹಾಕಿ ಸುಟ್ಟಿರುತ್ತಾರೆ.

◆◆◆◆

ವಿಲಾಯಿತಿಯಲ್ಲಿ ಕಾಲವಾದ ಮಿ॥ ಜೇಂಸ್ ಫೋರ್ಡ್ ಎಂಬಾತನು ತನ್ನ ಆಸ್ತಿಯಲ್ಲಿ ೩ ಲಕ್ಷ ರೂಪಾಯಿಗಳನ್ನೂ [illegible] ಫರ್ಗುಸನ್ ಎಂಬಾತನು ತನ್ನ ಆಸ್ತಿಯಲ್ಲಿ ೩ ಕೋಟಿ ರೂಪಾಯಿಗಳನ್ನೂ ಸರ್ ಎಡ್ವರ್ಡ್ ಸ್ಕಾಟ್ ಎಂಬಾತನು ತನ್ನ ಆಸ್ತಿಯಲ್ಲಿ ೫ ಲಕ್ಷ ರೂಪಾಯಿಗಳನ್ನೂ ಧರ್ಮಕಾರ್ಯಗಳಿಗೆ ಕೊಟ್ಟಿದ್ದಾರೆ.

◆◆◆◆

ಇಟಲಿ ರಾಜ್ಯಕ್ಕೆ ಸೇರಿದ ರೋಮ್ ನಗರದಲ್ಲಿ ಮುಂದಿನ ತಿಂಗಳು ಒಂದು ದೊಡ್ಡ ವ್ಯವಸಾಯ ಸಭೆಯು ಕೂಡುವುದು. ಎಲ್ಲಾ ರಾಜ್ಯಗಳಿಂದಲೂ ವ್ಯವಸಾಯದ ಇಲಾಖೆಯ ಅಧಿಕಾರಿಗಳು ಈ ಸಭೆಗೆ ಹೋಗಿ ವ್ಯವಸಾಯ ವಿಚಾರವನ್ನು ಕುರಿತು ಚರ್ಚೆ ಮಾಡುವರು. ಹಿಂದುಸ್ಥಾನದಿಂದಲೂ ಸರ್ ಎಡ್ವರ್ಡ್ ಬಕ್ ಎಂಬ ಅಧಿಕಾರಿಯು ಪ್ರತಿನಿಧಿಯಾಗಿ ಹೋಗುತ್ತಾರೆ.

◆◆◆◆

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಸಂಸಾರ ಸಹಿತ ಕಳೆದ ವಾರ ಲಂಡನ್ ಪಟ್ಟಣವನ್ನು ತಲುಪಿದರು. ವಿಲಾಯಿತಿ ಗವರ್ನ್‌ಮೆಂಟಿನ ಪರವಾಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಪರಿಕಾರಿಗರಾದ ಸರ್ ಕರ್ಜನ್ ವೈಲಿಯವರು ಹೋಗಿ ಮಹಾರಾಜರವರನ್ನು ಮರ್ಯಾದೆಗಳೊಡನೆ ಎದುರುಗೊಂಡು, ಅವರ ಬಿಡಾರಕ್ಕೆ ಕರೆದುಕೊಂಡು ಹೋದರು

◆◆◆◆

ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಒಂದಾನೊಂದು ಸಂಗೀತ ವಿದ್ಯಾಶಾಲೆಯಲ್ಲಿ ಹುಡುಗರೂ ಹುಡುಗಿಯರೂ ಸೇರಿ, ರಾಜಕೀಯ ವಿಚಾರಗಳನ್ನು ಕುರಿತು ಚರ್ಚಿಸಿ, ಅಧಿಕಾರಿಗಳನ್ನು ಅಲ್ಲಗಳೆದರೆಂದು ತಿಳಿದು ಬಂದದ್ದರಿಂದ ಸರ್ಕಾರದವರು ೧೬೨ ಮಕ್ಕಳನ್ನು ಹಿಡಿದು, ಅವರಿಗೆ [illegible]ದೊಂದು ತಿಂಗಳ ಸಜಾ ಅನುಭವಿಸಬೇಕೆಂದು ಶಿಕ್ಷೆ ವಿಧಿಸಿದ್ದಾರೆ.

◆◆◆◆

ಅಮೇರಿಕದಲ್ಲೂ ಕೆನಡಾ ರಾಜ್ಯದಲ್ಲೂ ಪಾಠಶಾಲೆಗಳಲ್ಲಿ ವಿದ್ಯಾಬೋಧಕರಾಗಿರುವ ಉಪಾಧ್ಯಾಯರಿಗೆಲ್ಲಾ ಅವರ ಮುಪ್ಪಿನ ಕಾಲದಲ್ಲಿ ಪೆನ್ಷನ್ ಕೊಡಬೇಕೆಂದು ತೀರ್ಮಾನ ಮಾಡಿ, ಕೋಟ್ಯಾಧೀಶ್ವರನಾದ ಮಿ॥ ಆಂಡ್ರು ಕಾರ್ನೆಗಿ ಎಂಬಾತನು ಮೂರು ಕೋಟಿ ರೂಪಾಯಿಗಳನ್ನು ತನ್ನ ಆಸ್ತಿಯಿಂದ ತೆಗೆದು ಒಂದು ಫಂಡು ಹಾಕಿದ್ದಾನೆ. ಈ ಪುಣ್ಯಪುರುಷನ ಧರ್ಮಕಾರ್ಯಗಳು ಲೋಕಪ್ರಸಿದ್ಧವಾಗಿರುವವು.

◆◆◆◆

ಪೂರ್ವಕಾಲದಲ್ಲಿ ಫ್ರಾನ್ಸಿನ ಚಕ್ರವರ್ತಿಯಾಗಿದ್ದ ನೆಪೋಲಿಯನ್ ಎಂಬ ಮಹಾ ಪರಾಕ್ರಮಿಯು ತನ್ನ ಅಧಿಕಾರದಲ್ಲಿ ಕೆಲವರಿಗೆ ಪೆನ್ಷನ್ ಕೊಡಬೇಕೆಂದು ಆಜ್ಞೆಮಾಡಿ ಕೊಡುತ್ತಿದ್ದನು. ಅವರಿಗೆ ಈಗಲೂ ಸರ್ಕಾರದಿಂದ ಅದೇ ಆಧಾರದ ಮೇಲೆ ಪೆನ್ಷನ್ ಸಲ್ಲುತ್ತಿದೆ ಇನ್ನು ಮುಂದೆ ಇದನ್ನು ತಪ್ಪಿಸಬೇಕೆಂತಲೂ ಅವರಿಗೆಲ್ಲಾ ಗ್ರ್ಯಾಂಟು ಕೊಡಬೇಕೆಂತಲೂ ಫ್ರಾನ್ಸಿನ ಪಾರ್ಲಿಮೆಂಟಿನಲ್ಲಿ ಗೊತ್ತಾಗಿ, ಅದಕ್ಕೋಸ್ಕರ ೭೭ ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿರುತ್ತದೆ.

◆◆◆◆

ಪರ್ಷಿಯಾ ರಾಜ್ಯಕ್ಕೆ ಸೇರಿದ ನಾಲ್ಕೈದು ಪಟ್ಟಣಗಳಲ್ಲೂ ಕಳೆದ ವಾರ ಪ್ರತಿನಿತ್ಯವೂ ಎರಡು ಸಲದಂತೆ ಭೂಕಂಪಗಳಾಗುತ್ತಿದ್ದವು ಅನೇಕ ಮನೆಗಳೂ ಸರ್ಕಾರಿ ಕೋರ್ಟು ಕಛೇರಿಗಳೂ ದೇವಸ್ಥಾನಗಳೂ ಬಿದ್ದು ಹೋದವು. ಬಹು ಜನರೂ ಗೋವುಗಳೂ ಪ್ರಾಣ ಕಳಕೊಂಡರೆಂದು ತಂತೀ ವರ್ತಮಾನ ಬಂದಿದೆ. ಜನರು ದೋಣಿಗಳಲ್ಲೂ ಹಡಗುಗಳಲ್ಲೂ ಪ್ರಾಣಸಂರಕ್ಷಣೆಗೋಸ್ಕರ ಸೇರಿಕೊಂಡಿದ್ದು ಭೂಕಂಪವಾದದ್ದನ್ನು ನೀರಿನ ಮೇಲೂ ಅನುಭವಿಸಿದರೆಂದು ತಿಳಿಯುವುದು.

ಪ್ರಪಂಚದಲ್ಲಿರುವ ಪ್ರತಿಯೊಂದು ರಾಜ್ಯದಲ್ಲಿಯೂ ಗಂಡಸರ ಸಂಖ್ಯೆಗಿಂತಲೂ ಹೆಂಗಸರದೇ ಹೆಚ್ಚಾಗಿದೆ. ಆದರೆ ಈಜಿಪ್ಟ್ ದೇಶದಲ್ಲಿ ಹೆಂಗಸರಿಗಿಂತಲೂ ೧,೬೦,೦೦೦ ಜನ ಗಂಡಸರು ಹೆಚ್ಚಾಗಿರುತ್ತಾರೆ.

* * * *

ಬ್ರೆಸ್ಲ್ಯಾ ಮತ್ತು ಜರ್ಮನಿಯ ಇತರ ಪಟ್ಟಣಗಳಲ್ಲಿ ಬೆಕ್ಕುಗಳಿಗೆ ತೆರಿಗೆಯನ್ನು ವಿಧಿಸಿರುತ್ತಾರೆ. ಮೊದಲನೇ ಸಲ ವಿಧಿಸಿದಾಗ ಅನೇಕರು ತೆರಿಗೆಯನ್ನು ಕೊಡಲಾರದೆ, ಸಾವಿರಾರು ಬೆಕ್ಕುಗಳನ್ನು ಕೊಂದು ಹಾಕಿದರು.

* * * *

ಉತ್ತರ ಸಾಗರದಲ್ಲಿರುವ ಹೆಲಿಗೋ ಲೆಂಡ್ ದ್ವೀಪದಲ್ಲಿ ಇದಿನಾರು ವರುಷಕ್ಕೆ ಕಡಿಮೆಯಾದವರೊಬ್ಬರೂ ನಾಟಕಶಾಲೆಗೂ, ಮದ್ಯ ಮಾರುವದನ್ನು ಬಳಕೆ ಮಾಡುವ ಸ್ಥಳಕ್ಕೂ ಹೋಗಕೂಡದೆಂದು ವಿಧಿಸಿರುತ್ತಾರೆ.

* * * *

ಅಮೇರಿಕಕ್ಕೆ ಸೇರಿದ ಅನ್ಯೋನ್ಯ ರಾಜ್ಯಗಳಲ್ಲಿ ಒಂದಾದ ಕೆಂಟಕಿ ಎಂಬ ಡಿಸ್ಟ್ರಿಕ್ಟಿನಲ್ಲಿ ಪ್ರಪಂಚದಲ್ಲೆಲ್ಲಾ ದೊಡ್ಡದಾಗಿರುವ ಜೇನಿನ ಗೂಡ ಇರುತ್ತದೆ ಅದನ್ನು ನೋಡಿದರೆ ದೊಡ್ಡ ಗುಹೆಯ ಹಾಗೆ ಕಾಣುತ್ತದೆ. ಅದರ ಬುಡದ ಸುಮಾರು ೧೦ ಎಕರೆಗಳನ್ನು ಆವರಿಸಿಕೊಂಡಿದೆ. ಅಳವಾಗಿರುವ ಪ್ರದೇಶವು ಸುಮಾರು ೧೫೦ ಅಡಿ ಎತ್ತರವಾಗಿದೆ.

* * * *

ಆಸ್ಟ್ರಿಯಾ ಹಂಗೇರಿ ರಾಜ್ಯದ ಗ್ಯಾಲಿಷಿಯಾ ಎಂಬ ಭಾಗದ ಹತ್ತಿರ ಜನಗಳು ವಾಸಿಸುವ ಭೂಮಿಯ ಕೆಳಗಿರುವ ಒಂದು ಪಟ್ಟಣವು ಸಿಕ್ಕಿರುತ್ತದೆ. ಆ ಪಟ್ಟಣದಲ್ಲಿ ಒಂದು ಸಾವಿರಕ್ಕಿಂತ ಹೆಚ್ಚಾಗಿ ಹೆಂಗಸರು, ಗಂಡಸರು, ಮಕ್ಕಳು ಇರುತ್ತಾರೆ ಅದಕ್ಕೆ ಉಪ್ಪಿನ ಗಣಿಗಳಿರುವ ದೇಶವೆಂದು ಹೆಸರು. ಅದರಲ್ಲಿ ಒಂದು ಟೌನ್ ಹಾಲ್ ಬಂಗಲೆಯೂ, ಒಂದು ಕ್ರೈಸ್ತರ ಪ್ರಾರ್ಥನಾ ಮಂದಿರವೂ, ಆ ಮಂದಿರದಲ್ಲಿ ಕಲ್ಲುಪ್ಪಿನಿಂದ ಕೆತ್ತಿರುವ ಅನೇಕ ಪ್ರತಿಮೆಗಳೂ ಇರುತ್ತವೆ.

* * * *

ಪ್ರಪಂಚದಲ್ಲಿರುವ ದೊರೆಗಳಲ್ಲೆಲ್ಲಾ ಡಹೊಮೀ ರಾಜ್ಯದ ಚಕ್ರವರ್ತಿ ಒಬ್ಬನೇ ಹೆಂಗಸರ ಸೈನ್ಯವನ್ನು ಇಟ್ಟುಕೊಂಡಿರುತ್ತಾನೆ ಕೆಲವು ವರುಷಗಳ ಕೆಳಗೆ ಚಕ್ರವರ್ತಿಯು ಬೇಟೆಯಾಡುವುದಕ್ಕೆ ಹೋಗಿದ್ದಾಗ ೮೦೦ ಜನ ಉದ್ದವಾದ ಮತ್ತು ಘಟ್ಟಿಯಾದ ಹೆಂಗಸರು ಕುದುರೆಗಳ ಮೇಲೆ ಹತ್ತಿಕೊಂಡು, ಆತನ ಸಹಾಯಾರ್ಥವಾಗಿ ಹೋಗಿದ್ದರು. ಈತನಿಗೆ ಆ ಹೆಂಗಸರ ಸೈನ್ಯವನ್ನು ೩೦೦ ಜನಕ್ಕೆ ಇಳಿಸಿದಾನೆ. ಅವರಿಗೆಲ್ಲರಿಗೂ ನೀಲಿ ಬಣ್ಣದ ಉಡುಪುಗಳನ್ನು ಹೊಲಿಸಿ ಕೊಟ್ಟಿರುವರು.

* * * *

ಜಪಾನ ಜಹಗಿನ ಸೈನ್ಯದಲ್ಲಿ ಒಬ್ಬ ಅಧಿಕಾರಿಯು ರಾಜದ್ರೋಹ ಮಾಡಿದ್ದರಿಂದ ಜಪಾನಿನವರ ಹಿತಾಚಿ ಮೋರು ಎಂಬ ಹಡಗು ಹಾಳಾಯಿತೆಂದು ಗೊತ್ತಾಯಿತು ಆಗ ಆ ಅಧಿಕಾರಿಯನ್ನು ಇತರ ಅಧಿಕಾರಿಗಳೆಲ್ಲಾ ಹಿಡಿದು, ತಮ್ಮ ಮಧ್ಯೆ ಕೂರಿಸಿಕೊಂಡು, ಅವನ ಮುಂದೆ ಒಂದು ಚೂರಿಯನ್ನು ಇಟ್ಟರು. ಆ ಅಪರಾಧಿಯಾದ ಅಧಿಕಾರಿಯು ತನ್ನ ಸಹಪಾಠಿಗಳು ಸುತ್ತಲೂ ನೋಡುತ್ತಿರುವಲ್ಲಿ ಆ ಚೂರಿಯನ್ನು ತೆಗೆದುಕೊಂಡು, ತನ್ನನ್ನು ತಾನೇ ತಿವಿದು ಕೊಂದುಕೊಂಡನು. ಇದೆಂಥಾ ಅಪಮಾನಕರವಾದ ಕೃತ್ಯ!

* * * *

ಸ್ವಿಟ್ಸರ್‌ಲೆಂಡ್ ದೇಶದ ಜ್ಯೂರಿಚ್ ಎಂಬ ಪಟ್ಟಣದಲ್ಲಿ ಈಚೆಗೆ ಒಂದು ಹೊಸ ಏರ್ಪಾಡು ಮಾಡಿರುತ್ತಾರೆ ಆ ದೇಶದ ಜನರಿಗೆಲ್ಲಾ ತಲಾ ಎರಡೂವರೆ ರೂಪಾಯಿಯಂತೆ ವರ್ಷಕ್ಕೆ ತೆರಿಗೆ ಹಾಕಿ, ಉತ್ಪತ್ತಿಯಾಗುವ ಮೂರು ಲಕ್ಷ ರೂಪಾಯಿನಲ್ಲಿ ಪ್ರತಿಯೊಬ್ಬ ಡಾಕ್ಟರಿಗೂ ವರುಷ ಒಂದಕ್ಕೆ ೨,೫೦೦ ರೂಪಾಯಿನಂತೆ ಸಂಬಳ ಕೊಟ್ಟು, ೪೦ ಜನ ಡಾಕ್ಟರುಗಳನ್ನು ನೇಮಕ ಮಾಡಿರುತ್ತಾರೆ. ಆ ಪಟ್ಟಣದಲ್ಲಿ ಯಾರು ಹೋಗಿ ಔಷಧಿಯನ್ನು ಕೇಳಿದಾಗ್ಯೂ ಆ ಡಾಕ್ಟರುಗಳು ರುಸುಂ ತೆಗೆದುಕೊಳ್ಳದೆ ಚಿಕಿತ್ಸೆ ಮಾಡುವರು.

* * * *

ಅರಬ್ಬಿ ದೇಶದಲ್ಲಿ ತುರ್ಕಿ ಸುಲ್ತಾನರು ಯೇಮೆನ್ ಎಂಬ ಅಧಿಪತ್ಯವನ್ನು ಆಳುತ್ತಾರೆ ಈ ಅಧಿಪತ್ಯದಲ್ಲಿ ತುಂಬಾ ಗಲಭೆಯುಂಟಾಗಿದೆ ಎಂದು ಕಳೆದ ವಾರ ಸೂಚಿಸಿದೆವಷ್ಟೆ. ಅಲ್ಲಿ ಸುಲ್ತಾನರು ಇಟ್ಟಿದ್ದ ೨೮ ಪಟಾಲಂ ಸೈನ್ಯಗಳೆಲ್ಲಾ ದಂಗೆಕೋರರಿಗೆ ಸ್ವಾಧೀನವಾಗಿ, ಅವರಿಗೇ ಸಹಾಯ ಮಾಡುತ್ತಿದಾರೆ. ಇದರಿಂದ ದಂಗೆಯು ಅಷ್ಟಕ್ಕೆ ಅಡಗುವಂತೆ ಕಾಣುವುದಿಲ್ಲ. ದಂಗೇಕೋರರು ಮನಾಖಾ ಎಂಬ ಪಟ್ಟಣವನ್ನು ಸುಟ್ಟುಹಾಕಿ, ಕೆಂಪು ಸಮುದ್ರದ ಕಡೆ ನುಗ್ಗಿ ಹೋಗುತ್ತಿದಾರೆ. ಈ ಅಧಿಪತ್ಯವು ತುರ್ಕಿ ಸುಲ್ತಾನರ ಕೈಬಿಟ್ಟು ಹೋಗುವಂತೆ ಕಾಣುತ್ತದೆ

* * * *

ಈಕ್ವಡೋರ್ ರಾಜ್ಯಕ್ಕೆ ಸೇರಿದ ಗಲಪೆಗೋಸ್ ದ್ವೀಪಗಳಿಗೆ ಸಮುದ್ರದ ಆಳವನ್ನು ಕಂಡು ಹಿಡಿಯುವುದಕ್ಕಾಗಿ ಕಳುಹಿಸಿದ್ದ ಕ್ಯಾಪ್ಟನ್ ರೀವ್ಸ್ ಎಂಬುವನು ಅಲ್ಲಿನ ವರ್ತಮಾನವನ್ನು ತಿಳಿಸಿರುವದೇನೆಂದರೆ—ಇಲ್ಲಿ ಇರುವ ಬೆಕ್ಕುಗಳೆಲ್ಲಾ ಕರೀ ಬಣ್ಣದವು ಇವುಗಳು ಕಲ್ಲು ಪೊಟರೆಗಳಲ್ಲಿ ವಾಸಮಾಡುತ್ತಾ ಇದ್ದು, ಇಲಿಗಳನ್ನು ತಿನ್ನದೆ ನೀರಿನಲ್ಲಿ ವಾಸಿಸುವ ಮೀನು, ನಳ್ಳಿ ಮುಂತಾದವನ್ನು ತಿಂದು ಜೀವಿಸುವವು ಈ ದ್ವೀಪದ ಮೇಲಿರುವ ಇತರ ಪ್ರಾಣಿಗಳ್ಯಾವವೆಂದರೆ ಕುದುರೆ, ಕತ್ತೆಗಳು, ನಾಯಿ ಮತ್ತು ಕೋಳಿ. ಇವುಗಳೆಲ್ಲಾ ಕಾಡಿನಲ್ಲಿರುವ ಹಾಗೆಯೇ ಇರುತ್ತವೆ.

ಕಳೆದ ೧೯೦೧ ನೇ ವರುಷದ ಸೆನ್ಸಸ್ ರಿಪೋರ್ಟಿನಿಂದ ತಿಳಿದುಬರುವುದೇನೆಂದರೆ—ಇಂಡಿಯಾದಲ್ಲಿ ೧೪೭ ತರದ ಭಾಷೆಗಳಿವೆ. ೨,೫೩,೩೪೮ ಜನರು ಇಂಗ್ಲೀಷು ಭಾಷೆಯನ್ನಾಡುತ್ತಾರೆ. ಇಂಡಿಯಾದಲ್ಲಿರುವ ಜನಸಂಖ್ಯೆಯಲ್ಲೆಲ್ಲಾ ಹತ್ತು ಜನಕ್ಕೆ ಒಬ್ಬ ಗಂಡಸೂ ಹೆಂಗಸರಲ್ಲಿ ೧೪೪ ಜನರಲ್ಲಿ ಒಬ್ಬಳಾದರೂ ಓದುಬರಹವನ್ನು ಕಲಿತಿರುತ್ತಾರೆ ಇಂಗ್ಲೀಷು ಭಾಷೆಯನ್ನು ಕಲಿತಿರುವವರಲ್ಲಿ ಪಾರ್ಸಿ ಜನರನ್ನು ಬಿಟ್ಟರೆ ಇಲ್ಲ. ಬರ್ಮಾದಲ್ಲಿ ಹೆಚ್ಚಾಗಿ ಜನರು ಓದುಬರಹವನ್ನು ಕಲಿತಿರುತ್ತಾರೆ ದೇಶೀಯ ಸಂಸ್ಥಾನಗಳಾದ ಕೊಚ್ಚಿ, ತಿರುವಾಂಕೂರು, ಮತ್ತು ಬರೋಡಾಗಳು ಹೆಚ್ಚು ಜನ ವಿದ್ಯಾವಂತರನ್ನು ಪಡೆದಿವೆ

* * * *

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಪಟ್ಟಣದಲ್ಲಿ ಒಂದು ಪಾಠಶಾಲೆಯ ಮುಖ್ಯ ಉಪಾಧ್ಯಾಯಿನಿಯಾಗಿದ್ದ ಮಿಸ್ ಅನಾ ಮಿಲ್ಲರ್ ಎಂಬಾಕೆಯು ತನ್ನ ಮೇಲ್ಪಟ್ಟವರಿಗೆ ಅಗೌರವವಾದ ಕಾಗದಗಳನ್ನು ಬರೆದಳೆಂದೂ ಇನ್ನೂ ಕೆಲವು ಮರ್ಯಾದೆಯನ್ನು ಪ್ರಕಾಶಪಡಿಸಿದಳೆಂದೂ ಕೆಲಸದಿಂದ ವಜಾಮಾಡಲ್ಪಟ್ಟಳು. ಆಕೆ ಈಚೆಗೆ ಸ್ಕೂಲ್ ಬೋರ್ಡಿನ ಪ್ರೆಸಿಡೆಂಟರಾದ ಡಾಕ್ಟರ್ ಹಾರ್ವಿ ಎಂಬ ಅಧಿಕಾರಿಯ ಮೇಲೆ ಮಾನನಷ್ಟಕ್ಕೆ ದಾವಾ ತರಬೇಕೆಂದು ಗೊತ್ತುಮಾಡಿಕೊಂಡು, ಎರಡು ವರುಷಗಳ ತನಕ ಅಮೇರಿಕದ ಕಾನೂನುಗಳನ್ನೆಲ್ಲಾ ಚನ್ನಾಗಿ ಓದಿಕೊಂಡು, ಲಾಯರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಲಾಯರಾಗಿ, ಸ್ಕೂಲಿನ ಪ್ರೆಸಿಡೆಂಟರ ಮೇಲೆ ಒಂದೂವರೆ ಲಕ್ಷ ರೂಪಾಯಿ ಡ್ಯಾಮೇಜಿಗೆ ದಾವಾ ತಂದಳು. ಕಳೆದ ತಿಂಗಳ ೧೩ ನೆ ತಾರೀಖಿನಲ್ಲಿ ಈ ಮೊಕದ್ದಮೆ ದರ್ಯಾಪ್ತಿ ಆದಾಗ ಆಕೆ ತನ್ನ ಮೊಕದ್ದಮೆಯನ್ನು ಬಹಳ ಚನ್ನಾಗಿ ವಾದಿಸಿದಳು ಜಡ್ಜಿಯು ಆಕೆಗೆ ೫೨೫,೦೦೦ ರೂಪಾಯಿ ಡ್ಯಾಮೇಜು ಕೊಡಿಸಿ, ಆಕೆಯ ಸಾಹಸತನವೂ ಬುದ್ಧಿಕ ಬಲಹೆಯನ್ನೂ ನಾಚಾಳತ್ವವನ್ನೂ ಬಹಳವಾಗಿ ಕೊಂಡಾಡಿದರು.

ಮೈಸೂರು ಗೆಜೆಟ್ ಸಂಗ್ರಹ.

ಮೆ॥ ಗಪಿಂಗ್ ಸಂಜೀವಪ್ಪನವರನ್ನು ಬೌರಿಂಗ್‌ಪೇಟೆ ತಾಲೂಕ್ ಬೋರ್ಡಿನ ಮೆಂಬರಾಗಿ ನೇಮಿಸಿರುತ್ತೆ

ಮಾಲೂರು ತಾಲ್ಲೂಕಿಗೆ ಸೇರಿದ ಮೂಷ್ಟಿಗ್ರಾಮವನ್ನೂ ನರಸಾಪುರ ಗ್ರಾಮವನ್ನೂ ಯೂನಿಯನ್ ಆಗಿ ಎಣಿಸತಕ್ಕದ್ದು.

ಮೆ॥ ಮಿರ್ಜಾ ಮಹಮ್ಮದ್ ಇಸ್ಮೈಲ್, ಬಿ ಎ ಯವರನ್ನು ಪ್ರೊಬೇಷನರಿ ಪೋಲೀಸ್ ಅ॥ ಸೂಪರಿಂಟೆಂಡರಾಗಿ ನೇಮಿಸಿದೆ.

ಅ॥ ಕಮೀಷನರ್ ಮೆ॥ ಎಸ ಕೃಷ್ಣನಾಥ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳದ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಆಕ್ಟಿಂಗ್ ಎಕ್‌ಸ್ಟ್ರಾ ಅ॥ ಕಮಿಷನರ್ ಮೆ॥ ವೇದಾಂತ ದೇಶಿಗಂ ಐಯ್ಯಂಗಾರ್ಯ ನಂಜನಗೂಡು ಸಬ್ ಡಿವಿಜನ್ ತಾಲ್ಲೂಕುಗಳ ಚಾರ್ಜನ್ನು ವಹಿಸಿರುವಂತೆ ವರ್ಗಮಾಡಲ್ಪಟ್ಟಿದಾರೆ.

ಹೊನ್ನಾಳಿ ತಾಲ್ಲೂಕು ಅಮಲ್ದಾರ್ ಮೆ॥ ಎಂ ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ಹೆಡ್ ಕ್ಲಾರ್ಕ್ ತಿ. ನರಸಿಂಗರಾಯರು ಹೊನ್ನಾಳಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದಾರೆ

ಎಕ್‌ಸ್ಟ್ರಾ ಅ॥ ಕಮಿಷನರ್ ಮೆ॥ ಸಿ ಕೃಷ್ಣರಾಯರನ್ನು ಫೆಬ್ರವರಿ ೨೨ ರಿಂದ ೨ ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಚಿತ್ರದುರ್ಗದ ಹೆಡ್ ಮಾಸ್ಟರ್ ಮೆ॥ ಜೆ ಅರ್ಬತ್ನಾಟ್ ಯವರು ಕೆಲಸದಿಂದ ನಿವೃತ್ತರಾದ್ದರಿಂದ ತುಮಕೂರು ಹೈಸ್ಕೂಲ್ ಹೆಡ್ ಮಾಸ್ಟರ್ ಮೆ॥ ಸಿ ಕೃಷ್ಣರಾಯರನ್ನು ೧ ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೈಸೂರು ಡಿವಿಜನ್ ಓವರ್‌ಸಿಯರ್ ಮೆ॥ ಇ. ರೂಬನ್ ಯವರನ್ನು ೨ ನೆ ಕ್ಲಾಸ್ ಓವರ್‌ಸಿಯರಾಗಿ ಖಾಯಂ ಮಾಡಿದೆ.

ಮೈಸೂರು ಇನ್‌ಫೆಂಟ್ರಿ ೩ ನೆ ಬೆಟಾಲಿಯನ್ ಜಮೆದಾರ್ ಮಹಮ್ಮದ್ ಹರ್ಸ್‌ಖಾನ್‌ರವರನ್ನು ಲೋಕಲ್ ಸರ್ವಿಸ್ ರಿಜಿಮೆಂಟಿನ ೪ ನೇ ಗ್ರೇಡ್ ಟ್ರೂಪ್ ಕಮ್ಯಾಂಡರಾಗಿ ವರ್ಗಮಾಡಿದೆ.

ಸ್ಟೇಟ್ ಜಿಯಾಲಜಿಸ್ಟ್ ಡಾಕ್ಟರ್ ಪಬ್ಲಿಯು. ಎಫ್ ಸ್ಮೀತ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜವೂ ತರುವಾಯ ಹದಿನೈದು ತಿಂಗಳ ಫರ್ಲೋ ರಜವೂ ಕೊಡಲ್ಪಟ್ಟಿವೆ

ಇವರು ರಜದ ಮೇಲಿರುವಾಗ್ಗೆ ಮುಂದೆ ಹೇಳುವ ಏರ್ಪಾಡುಗಳು ಜಾರಿಯಲ್ಲಿರತಕ್ಕದ್ದು.

(೧) ಮೆ॥ ಇ ಡಬ್ಲಿಯು ನೆಪರಾಲ್ ಯವರು ಸ್ಟೇಟ್ ಜಿಯಾಲಜಿಸ್ಟರಾಗಿಯೂ, (೨) ಮೆ॥ ಆರ್ ಬೊಸೇಯವರು ಗಣಿಗಳ ಛೀಫ್ ಇನ್‌ಸ್ಪೆಕ್ಟರಾಗಿಯೂ, (೩) ಮೆ॥ ಎ ಟಿ ಸೇಟ್ಲೂರ್ ಯವರು ಛೀಫ್ ಇನ್‌ಸ್ಪೆಕ್ಟರಾಗಿಯೂ, (೪) ಮೆ॥ ಎಚ್. ಕೆ ಸ್ಲೇಟರ್ ಯವರು ೨ ನೆ ಸ್ಟೇಟ್ ಜಿಯಾಲಜಿಸ್ಟರಾಗಿಯೂ ಕೆಲಸ ನೋಡತಕ್ಕದ್ದು.

ಮೈಸೂರು ಭೂಗರ್ಭಶೋಧನಾ ಇಲಾಖೆಯ ರಜಿಸ್ಟ್ರಾರ್ ಮೆ॥ ಬಿ. ಸುಬ್ಬರಾಯರಿಗೆ ಇನ್ನೂ ಮೂರು ತಿಂಗಳ ಅಥವಾ ನಡೆಸಿದ್ದು ದಿನಗಳ ರಜವನ್ನು ಕೊಟ್ಟಿದೆ

ಮೆ॥ ಎ. ಟಿ. ಸೇಟ್ಲೂರ್ ಯವರು ತಮ್ಮ ಇತರ ಕೆಲಸಗಳೊಂದಿಗೆ ರಜಿಸ್ಟ್ರಾರ್ ಕೆಲಸದ ಚಾರ್ಜಿ ಕೆಲಸಗಳನ್ನೂ ನೋಡುತ್ತಾ ಬರತಕ್ಕದ್ದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗ[...] ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ[...]ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿ[...]ಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾ[...] ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾ[...]ರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿ.

ಕರೆಸ್‌ಪಾಂಡೆನ್ಸ್.

ಸೂರ್ಯ ಬಿಂಬದಲ್ಲಿ ಕಪ್ಪು ಚುಕ್ಕೆಗಳು.

ಅಯ್ಯಾ,

ತಮ್ಮ ಒಂದು ಪತ್ರಿಕೆಯಲ್ಲಿ—ಸೂರ್ಯನಲ್ಲಿ ಒಂದು ಚುಕ್ಕೆ[...] ಆಗಿದೆ. ಇದು ದಿನೇ ದಿನೇ ದೊಡ್ಡದಾಗುತ್ತಾ ಬಂದಿದೆ ಎಂದು ಬ[...]ದಿತ್ತು ಆದ್ದರಿಂದ ನಾವುಗಳು ಸೂರ್ಯನನ್ನು ಪರೀಕ್ಷಿಸಿ ನೋ[...]ದ್ದರಲ್ಲಿ ಸೂರ್ಯನಲ್ಲಿ ಮೂರು ಗುಂಪು ಚುಕ್ಕೆಗಳೂ ಉದ್ದವಾ[...] ಮತ್ತು ಬಿಳಿ ಕಪ್ಪಾದ ಎರಡು ಗುರುತುಗಳೂ ಕಾಣಲ್ಪಡುತ್ತವೆ ಇದು ಏನಾಗಿರಬಹುದೋ ತಿಳಿಸಿಯಾರೆಂದು ನಂಬಿದೇವೆ

ಹುಳಿಯಾರ್. ಜವಿಹರ್‌ಖಾನ್.

ಮಹಾಮಾ ದೀಪಕ್ಕೆ ಪ್ರಮಾಣುಗಳು.

ಅಯ್ಯಾ,

ನಿಮ್ಮ ೧೯೦೫ ನೆ ಇಸ್ವಿ ಮೇ ತಾರೀಖು ೪ ನೆ ಪತ್ರಿಕೆಯ[...] "ಮಹಾಮಾ ದೀಪದ" ವಿಷಯವಾಗಿ ಅಪೇಕ್ಷಿಸುವ ಸು. ವೇದವ[...]ಚಾರಿ ಎಂಬುವರ ಕೋರಿಕೆಯಂತೆ ವಿಷಯಗಳನ್ನು ತಿಳಿದುಕೊ[...]ಳ್ಳುವ ಅಪೇಕ್ಷೆ ಇದ್ದಲ್ಲಿ ಮೈಸೂರು ಮ ರಾ॥ ವಿ ತಿರುವೆಂಗಳ[...] ಮೊದಲಿಯಾರ್ಯ ಷಾಪಿನಲ್ಲಿ ಇರುವ ರಾಮಣ್ಣನವರ ಬಳಿಯ[...] ಅನೇಕ ಮಹಾಮಾ ದೀಪದ ಪ್ರಮಾಣಗಳು ಇರುವದರಿಂದ ಅ[...]ಯಾವರೂ ಹಾಗಿಲ್ಲದ ಪಕ್ಷದಲ್ಲಿ ಈ ಕೆಳಗೆ ನಮೂದಿಸುವವರ ಬ[...]ಯಲ್ಲಿಯೂ ಮೊಖ್ತಾವಾದರೂ ಅಲ್ಲದೆ ಕಾಗದದ ಮೂಲಕವಾ[...]ದರೂ ಬರೆದು ತಿಳಿದುಕೊಳ್ಳಬಹುದು.

ಟಿ ನಾರಾಯಣರಾವ್,

ಟಿ. ನರಸೀಪುರ ಮ್ಯಾಜಿಕ್ ಲ್ಯಾಂಟ್ರನ್ ಪ್ರದರ್ಶಕ.

ಪಂಚಾಂಗವೂ, ಉತ್ಸವವೂ.

ಅಯ್ಯಾ,

ನಿಮ್ಮ ೧೧—೫—೧೯೦೫ ನೆಯ ಪತ್ರಿಕೆಯ ಕಡೇ ಭಾಗದ[...] ಕೊಟ್ಟಿರುವ ಪಂಚಾಂಗದಲ್ಲಿ ೧೫ ನೆ ತಾರೀಖಿನ ದಿವಸ ಇಲ್ಲಿ ಅ[...]ವರೆ, ಶ್ರೀರಂಗಪಟ್ಟಣದಲ್ಲಿ ನೃಸಿಂಹ ಸ್ವಾಮಿಯವರ ರಥೋತ್ಸ[...]ವೆಂದು ಪ್ರಕಟಮಾಡಿರುತ್ತೀರಿ. ಇಲ್ಲಿ ಆ ರಥೋತ್ಸವವು ಕಾರಣಾ[...]ತರಗಳಿಂದ ನಿಂತುಹೋಗಿ ೪ ವರ್ಷಗಳ ಮೇಲಾದರೂ ತಾ[...] ಅದನ್ನು ವಿಚಾರಿಸದೆ ಪ್ರಕಟ ಮಾಡಿರುವದು ಅತ್ಯಂತ ವಿಷಾದಕ[...]ವಾದುದೇ ಸರಿ. ಇದನ್ನು ನೋಡಲು ಯಾರಾದರೂ ಯಾತ್ರಾರ್ಥಿ[...]ಗಳು ಇಲ್ಲಿಗೆ ಬಂದರೆ ಅವರು ಅನೇಕ ಕಷ್ಟನಷ್ಟಗಳಿಗೆ ಒಳ[...]ಗುವರೆಂಬುವದಕ್ಕೆ ಯಾವ ಸಂದೇಹವೂ ಕಾಣಬರುವದಿಲ್ಲ. ಇಂ[...] ವಿಷಯಗಳನ್ನು ಸ್ವಲ್ಪ ವಿಚಾರಾನಂತರ ಇನ್ನು ಮೇಲೆ ನಿಮ್ಮ ಪ[...]ಕೆಯಲ್ಲಿ ಪ್ರಕಟ ಮಾಡುವಿರಿ ಎಂದು ನಂಬಿದೇನೆ.

ಶ್ರೀರಂಗಪಟ್ಣ. ಯುಲ್. ಶೀಲಾಕ.

[ಉತ್ಸವಗಳು ನಡೆಯುವವೋ ಇಲ್ಲವೋ ನಮಗೆ ತಿಳಿಯದು ಪಂಚಾಂಗಕಾರರು ಆಯಾ ದಿನಗಳಿಗೆ ಬರೆದಿರುವ ವಿಶೇಷಗಳನ್ನು ಪ್ರಕಟ ಮಾಡುತ್ತಾ ಬರುವೆವು —ಎಡಿ.]

ಆಗುಂಬೆ ಪೋಸ್ಟು ವಿಚಾರ ನಿಜವಲ್ಲ.

ಅಯ್ಯಾ,

ತಮ್ಮ ತಾರೀಖು ೨೭ ನೆ ಏಪ್ರೆಲ್ ೬ ನೆ ಸಂಪುಟದಲ್ಲಿ ಕ[...] ಆಗುಂಬೆ ಪೋಸ್ಟುಮಾಸ್ಟರ್ ಕಾಮೈಯನವರು ಎನ್. ಎಸ್. ತಮ[...]ಣ್ಣ ಹೆಗ್ಗಡೇರಿಗೂ ನಾವೊಳದ ಶೇಷಣ್ಣ ಹೆಗ್ಗಡೆರವರಿಗೂ ಸರಿಯಾ[...] ವಾರಪತ್ರಿಕೆಗಳನ್ನು ಬಟವಡೆಮಾಡಿಲ್ಲವೆಂತ ಪಗ್ಗೈರೆ ನಮೂದಿ[...] ಈ ಸಂಗತಿಗಳನ್ನು ಪೋಸ್ಟುಮಾಸ್ಟರು ವಿಚಾರ ಮಾಡುವಲ್ಲಿ ಎ[...] ಎಸ್. ತಮ್ಮಣ್ಣ ಹೆಗ್ಗಡೇರವರು ಈಗ ಹಾಲಿ ಕೊಪ್ಪದ ತಾಲ್ಲೂ[...] ಶೃಂಗೇರಿಯಲ್ಲೂ, ನಾವೊಳದ ಶೇಷಣ್ಣ ಹೆಗ್ಗಡೆರವರು ಸಂಚಾ[...]ಲಲ್ಲಿ ಈಗ ಸುಮಾರು ಎರಡು ತಿಂಗಳ ಲಾಗಾಯ್ತು ವಾಸಮಾ[...]ತ್ತಾರೆ. ವಿಳಾಸದಾರರು ಒಂದು ಸ್ಥಳದಲ್ಲಿದ್ದರೆ ಕಾಗದ ಬಟ[...]ವಾಡ ಬಹುದು. ೧೯೦೪ ರಲ್ಲಿ ಕಾಮೈಯನವರಿಗೆ ಹಿಡಿದ ಹುಚ[...] ಎನ್. ಎಸ್ ತಮ್ಮಣ್ಣ ಹೆಗ್ಗಡೇರವರ ಕಡೆಗೆ ತಿರಿಗಿದ ಹಾಗೆ ತೋ[...]ರುತ್ತೆ. ಸುಮಾರು ೨೫ ಜವರ ಮೈಲ್ ವಿಸ್ತೀರ್ಣವುಳ್ಳ ಸ್ಥಳಗಳಿ[...] ಒಬ್ಬನೇ ಪಿಯನ್ನು ಸುತ್ತಿ, ಸಾವಿರಾರು ಮನೆಗಳಿಗೆ ಕಾಗದ ಬ[...]ವಾಡೆ ಮಾಡಬೇಕಾಗಿದೆ ಹೀಗಿರುವಲ್ಲಿ ಒಂದು ವಾರದಲ್ಲಿ ಕಾ[...] ಮನೆಯಲ್ಲಿ ತಪ್ಪಿದ ಒಡನೆ ತಾವು ಇರತಕ್ಕ ಸ್ಥಳಕ್ಕೆ ತಮಗೆ ಬ[...]ತಕ್ಕ ಕಾಗದದ ವಾರ ಪತ್ರಿಕೆ ಬರತಕ್ಕ ಸ್ಥಳಗಳಿಗೆ ಸೀದಾ ಬ[...] ಕೊಳ್ಳತಕ್ಕದ್ದು ವಿಳಾಸದಾರರ ಮುಖ್ಯೋದ್ದೇಶ. ಇಂಥಾದ್ದರ[...] ಪಾಮರರಾದ ಬಡ ನೌಕರರನ್ನು ಪೋಸ್ಟು ಇಲಾಖೆಯವರ ಅ[...]ಷಣೆಗೆ ಗುರಿಮಾಡುವದು ಅನುಚಿತ. ಅಂಥಾ ತಪ್ಪಿತ ಕಾಮೈಯನ[...]ರಿಗೆ ಅನಲಿಕ್ಕಿಲ್ಲ. ಈಗ ಸುಮಾರು ೨೦ ವರ್ಷದ ಲಾಗಾಯ[...]

ಬುದ್ಧಿವಂತಿಕೆಯಿಂದ ಕೆಲಸ ಮಾಡುತ್ತಿರುತ್ತಾರೆ. ಅವರವರ ಹುಳುಕು ಅವರಿಗೆ ಗೊತ್ತಿಲ್ಲ. ಆತ್ಮದೋಷಕ್ಕೆ ಅನ್ಯರೇ ಕನ್ನಡಿ.

ಮೇಗರವಳ್ಳಿ. ಕೆ. ಟಿ. ಸಿದ್ದಪ್ಪಗೌಡ.

ತಿಪಟೂರು ವಿಚಾರಗಳು

ಅಯ್ಯಾ,

ಸಧ್ಯಕ್ಕೆ ನಮ್ಮ ತಿಪಟೂರಿಗೆ ಬಂದಿರುವ ನೀರಿನ ಅಭಾವವೂ ಜಾನವಾರುಗಳಿಗೆ ಹುಲ್ಲಿಗೆ ಬಂದಿರುವ ಅಭಾವವೂ ವರ್ಣಿಸಲು ಅಸದಳವಾಗಿರುತ್ತೆ. ದೇವರು ಈ ಭೀತಿಯನ್ನು ಎಂದಿಗೆ ಪರಿಹಾರ ಮಾಡುತ್ತಾನೋ ಎಂಬುದಾಗಿ ರೈತರು ಬಹಳವಾಗಿ ಹಂಬಲಿಸುತ್ತಿದ್ದಾರೆ. ಈ ಜಾನವಾರುಗಳ ಕಷ್ಟಕ್ಕಾಗಿಯೇ ಈಚಲು ಗರಿ ಕಡಿಯುವ ಉದ್ದೇಶ್ಯ ಹೊನ್ನವಳ್ಳಿ ಸಮ್ಮತಿಸ ರೈತಾಪಿ ಜನಗಳೆಲ್ಲರೂ ಸೇರಿ, ನಮ್ಮ ಶ್ರೀಮನ್ಮಹಾರಾಜರವರಿಗೂ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರಿಗೂ ಟೆಲಿಗ್ರಾಂ ಮೂಲಕ ಅರಿಕೆಮಾಡಿಕೊಂಡಿದ್ದರ ಮೇಲೆ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರು ಫಸ್ಟ್ ಕ್ಲಾಸ್ ಜನರಲ್ ಅ. ಕ. ಮೆ॥ ಸಿ ನಾರಾಯಣರಾಯರನ್ನು ಇಲ್ಲಿನ ಸ್ಥಿತಿಯನ್ನು ಖುದ್ದು ಅಪಮಾಯಿಷಿ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದರು. ನಮ್ಮ ಅಮಲ್ದಾರ್ ಮೆ॥ ಸಿ. ವಿ ನಾರಾಯಣರಾಯರೂ ಜನರಲ್ ಅ ಕ ಸಾಹೇಬರೂ ಖುದ್ದು ಜೊತೆಯಲ್ಲಿ ಬಂದು, ಹೊನ್ನವಳ್ಳಿ, ಹಾಲುಕುರಿಕೆ, ಬೆನ್ನಾಯ್ಕನಹಳ್ಳಿ, ಕಿಬ್ಬನಹಳ್ಳಿ, ಈ ಪ್ರಾಂತ್ಯವೆಲ್ಲಾ ಖುದ್ದು ಅಪಮಾಯಿಷಿ ಮಾಡಿ, ಅಲ್ಲಿಯೇ ಈಚಲು ಗರಿಗಳನ್ನು ಕುಯ್ದುಕೊಳ್ಳುವುದಕ್ಕೆ ಅಪ್ಪಣೆ ಕೊಡಿಸಿ, ಕಿಬ್ಬನಹಳ್ಳಿ ಮಾರ್ಗವಾಗಿ ತಮ್ಮ ಹೆಡ್ ಕ್ವಾರ್ಟರಿಗೆ ಬಂದರು. ಪುನಃ ಜನರಲ್ ಅ. ಕ. ಸಾಹೇಬರವರ ಸವಾರಿಯು ೫ ೬ ಅಥವಾ ೬ ೭ ಕ್ಕೆ ಕೇಂದ್ರ ಹರಾಜು ಮಾಡಿಸುವುದಕ್ಕೆ ಬರಬಹುದಾಗಿದೆ.

ಈ ಟವರ್‌ನಲ್ಲಿ ನಮ್ಮ ಅಮಲ್ದಾರರವರು ತಮ್ಮ ಮನೆ ಮುಂದೆ ಒಂದು ಯಾವ ಪ್ರಕಾರವಿದೆಯೋ ಆ ಪ್ರಕಾರವೇ ಟವರ್ ಎಲ್ಲಾ ಕಡೆಗಳನ್ನೂ ಜಾಗ್ರತೆಯಾಗಿ ದುರಸ್ತು ಮಾಡಿಸಿ, ಕೇರಿಗಳಿಂದ ಬಂದೇ ? ಟವರ್ ದಫೇದಾರ್ ಸರಸೋಜಿಗೆ ಬೇರೆ ಕಡೆಗೆ ವರ್ಗ ಮಾಡಿದಂತೆ ಇದಕ್ಕಿಂತ ಇನ್‌ಸ್ಪೆಕ್ಟರನ್ನು ಪ್ರಾರ್ಥಿಸಿದ್ದರೆ ಬಹಳ ಚನ್ನಾಗಿತ್ತು.

ತಾ ೧೨ ರಲ್ಲಿ ತಮ್ಮ ಸ್ವಂತ ಮನೆಗಿಂತಲೂ ಕೆಟ್ಟಾಗಿ ಇಟ್ಟುಕೊಂಡಿರುವ ತಾಲ್ಲೋಕು ಹೆಡ್ ಮುನಷಿ ತಿರುಮಲಾಚಾರ್ಯರ ಸ್ಥಳದಲ್ಲಿ ದೇಶ ಬಳ್ಳಾಪುರದಿಂದ ಬಂದಿದ್ದ ಒಬ್ಬ ಹರಿಕಥೆ ವಿದ್ವಾಂಸರು ಕಥೆಯನ್ನು ನಡೆಸಿದರು. ಸದರೀ ವಿದ್ವಾಂಸರಿಗೆ ಪಿಟೀಲಿನಲ್ಲಿ ಬಹಳ ಪರಿಶ್ರಮ ಇರುವ ಹಾಗೆ ಕಾಣುತ್ತೆ. ಯಾಕೆಂದರೆ ಇವರು ಹಸ್ತದಿಂದ ಪಿಟೀಲ್ ತೆಗೆದುಕೊಂಡು, ಕಾಲಿನ ಸಂದಿನಲ್ಲಿಯೇ ಮೇಲೆಯೂ ಬೆನ್ನಿನ ಹಿಂದುಗಡೆಯೂ ಭುಜದ ಮೇಲ್ಭಾಗದಲ್ಲಿಯೂ ಇಟ್ಟುಕೊಂಡು, ಪಿಟೀಲನ್ನು ನುಡಿಸಿದರು. ಆ ಕಾಲದ ಸಭೆಯಲ್ಲಿ ಸೇರಿದ್ದ ತಾಲ್ಲೋಕು ಅಮಲ್ದಾರ್ ಮೆ॥ ಸಿ. ವಿ. ನಾರಾಯಣರಾಯರು, ಶಿರಸ್ತೇದಾರ್ ಮೆ॥ ಪಿ ಸಂಜೀವರಾಯರು, ಸಬ್ ರಿಜಿಸ್ಟ್ರಾರ್ ಮೆ॥ ಕೆ ರಾಘವೇಂದ್ರರಾಯರು, ಸ್ಟೇಷನ್ ಮಾಸ್ಟರ್ ಮೆ॥ ರಾಮರಾಯರು, ಡಿ ಪಿ. ಡಬ್ಲ್ಯು ಇಲಾಖಾ ಸಬ್ ಓವರ್‌ಸಿಯರ್ ಆಫೀಸರ್, ಎಕ್ಸೈಜು ಸೂಪರ್‌ವೈಸರ್, ತಾಲ್ಲೋಕು ಗುಮಾಸ್ತೆಗಳು, ಸ್ಕೂಲ್ ಮಾಸ್ಟರು, ವರ್ತಕ ಮುಂತಾದ ಜನರು, ಎಲ್ಲಾ ನೋಡಿ ಸಂತೋಷ ಪಟ್ಟರು.

ತಿಪಟೂರು ಬ ರಾ

ತಾಲ್ಲೋಕು ವರ್ತಮಾನಗಳು.

೧೧

ತೀರ್ಥಹಳ್ಳಿ —ಇದೇ ತಾಲ್ಲೋಕು ಆಗುಂಬೆ ಕಸಬಾದಲ್ಲಿರುವ ಭಿಮನ್ಯ ಎನ್ನುವವನ ಗಾಡಿ ಚೋರಿ ಮಾಡಿದ ಕೊಂಕಣಿ ತಿಂಡಪ್ಪನ ಮೇಲೆ ಪೋಲೀಸ ದಫೇದಾರನು ಕೇಸು ಚಾರ್ಜುಮಾಡಿ, ತೀರ್ಥಹಳ್ಳಿ ತಾಲ್ಲೋಕು ಮ್ಯಾಜಿಸ್ಟ್ರೇಟರವರು ವಿಚಾರಣೆಯಿಂದ ಅಪರಾಧಿ ತಿಂಡಪ್ಪನಿಗೆ ಒಂದು ದಿನ ಸಜಾ ೨೫ ರೂಪಾಯಿ ಜುಲ್ಮಾನೆ ವಿಧಿಸಿದರು.—ಈಗ ಸುಮಾರು ೪ ತಿಂಗಳಲ್ಲಿ ತೀರ್ಥಹಳ್ಳಿ ಕಸಬಾದಲ್ಲಿ ಚನ್ನಗಿರಿ ರಾಮಣ್ಣನವರಲ್ಲಿ ನಡೆದ ಡಕಾಯಿತಿ ಕೇಸು ಏನಾಯಿತೋ ಈ ವರೆವಿಗೂ ನಾವು ಅರಿಯೆವು —ಈ ಪ್ರಾಂತ್ಯದಲ್ಲಿ ಮಳೆಯು ಚನ್ನಾಗಿ ಹದಭರಿತವಾಗಿ ಬಾರದೆ ಇರುವುದರಿಂದ ವ್ಯವಸಾಯಗಾರರು ಬಹಳವಾಗಿ ವ್ಯಸನಪಡುತ್ತಾ ಇದ್ದಾರೆ. ಕೆಲವು ಕಡೆ ಕೆರೆಗಳು ಕುಡಿಯುವದಕ್ಕೆ ನೀರು ಇಲ್ಲದೆ ಸಂಕಟಪಡುವದು ಕಲಸಾಧ್ಯ —ತೀರ್ಥಹಳ್ಳಿಯಲ್ಲಿ ಇರುವ ಒಬ್ಬ ವಕೀಲರು ಇಲ್ಲಿ ಮಾಡಪ್ಪನಿಗೆ ತಾ। ೨೪, ೨೫ ಏಪ್ರಿಲ್ ತಿಂಗಳಲ್ಲಿ ಹಬ್ಬಮಾಡಿ, ಕೋಣವನ್ನು ೧೦—೨೦ ಕುರಿಗಳನ್ನೂ ಕಡಿದು, ಚಿನ್ನಹಬ್ಬ ಎಂಬ ಗಲಾಟೆಯನ್ನು ಪೂರೈಸಿದರು.

ಚಾಮರಾಜನಗರ —ಈ ಊರಿಗೆ ಸಮೀಪದಲ್ಲೇ ಕೋಟೆಕಾಡು, ಗುಡ್ಡಗಳೂ ಇರುವುದರಿಂದ ಚಿರತೆಗಳು ಊರೊಳಕ್ಕೆ ಬಂದು, ಗೋಕರುಗಳನ್ನು ಕೊಂಡುಹೋಗುತ್ತವೆ ದಿವಸಗಳ ಹಿಂದೆ ಎಂದಿನಂತೆ ಚಿರತೆ ಊರೊಳಕ್ಕೆ ಬಂದು, ಕತ್ತೆಗಳನ್ನು ಹೊಡೆದು, ಒಂದನ್ನು ತಿಂದು, ಮತ್ತೊಂದ ಹೊತ್ತುಕೊಂಡು, ಊರಿಗೆ ಸಮೀಪದಲ್ಲೇ ನೈರುತ್ಯದಲ್ಲಿರುವ ದೊಡ್ಡಪ್ಪನವರ ಹೊಲದಲ್ಲಿರುವ ದೊಡ್ಡ ಬೇವಿನ ಮರಕ್ಕೆ ಹೋಯಿತು. ಬೇವಿನ ಮರದ ಸುತ್ತಲೂ ೨—೩ ಗಜ ಸುತ್ತಳತೆಯಲ್ಲಿ ಮನೆಗಳಿಲ್ಲ ಇರುವುದಲ್ಲದೆ, ಯಾರಿಗೂ ಕಾಣದ ಸ್ಥಳವಾಗಿರುತ್ತೆ. ಅಲ್ಲದೆ ನೇರವಾಗಿರುವ ರೆಂಬೆಗೂ ಭೂಮಿಗೂ ಬಹಳ ಎತ್ತರವಿರುತ್ತೆ, ಕಾಡು ಮೃಗಗಳ ಯುಕ್ತಿ ಸಾಹಸಗಳನ್ನು ಕುರಿತು ಸಮಸ್ತರೂ ಆಶ್ಚರ್ಯ ಪಡುತ್ತಿದ್ದಾರೆ —ಈ ಊರಿನಲ್ಲಿರುವ ಮಿಡ್ಲ್ ಸ್ಕೂಲು ದಿನೇ ದಿನೇ ಅಭಿವೃದ್ಧಿ ಸ್ಥಿತಿಗೆ ಬರುತ್ತಿರುವುದು ತುಂಬಾ ಸಂತೋಷಕರವಾಗಿದೆ. ಈ ಸಲ ಡೆಪ್ಯುಟಿ ಇನ್‌ಸ್ಪೆಕ್ಟರವರು ಪರೀಕ್ಷೆ ಮಾಡಿ, ತುಂಬಾ ಸಂತೋಷಪಟ್ಟು, ಒಳ್ಳೇ ರಿಪೋರ್ಟು ಬರೆದಿದ್ದಾರೆ. ಸ್ಕೂಲ್ ಕಟ್ಟಡವು ಅತ್ಯಂತ ಚಿಕ್ಕದಾಗಿ ಅನಾರೋಗ್ಯ ಸ್ಥಳದಲ್ಲಿರುವುದರಿಂದ ಇನ್ನು ಮುಂದಕ್ಕೆ ಸ್ಕೂಲನ್ನು ಒಳ್ಳೇ ಸ್ಥಳದಲ್ಲಿ ಮಾಡಿದರೆ ನೆಮ್ಮದಿಯಾಗಿರುತ್ತೆ —ಈ ಊರಿನಲ್ಲಿ ಪೋಲೀಸಿನವರು ಬೀಟು ಮಾಡುವ ಕಾಲದಲ್ಲಿ ಘಟ್ಟಿಯಾಗಿ ಸೀಟಿ ಹೊಡೆಯುತ್ತಲೂ, ಕಾಲಿನ ಜೋಡು ಶಬ್ದಮಾಡುತ್ತಲೂ, ಬಾಯಿಯಲ್ಲಿ ದೀಪ್ತಾವಳಿಯಾಗಿ ಕೂಗಿಕೊಳ್ಳುತ್ತಲೂ ಬರುತ್ತಾರೆ. ಹೀಗೇ ಅಲ್ಲವೇ ಕಳ್ಳರನ್ನು ಹಿಡಿಯುವ ಲಕ್ಷಣ ? ಸಂತೆ ಕಟ್ಟೆಯ ಸ್ಥಳದಲ್ಲಿ ಪೋಲೀಸಿನವರು ಭಿಕ್ಷವೆತ್ತುವುದಕ್ಕಾಗಿ ಇರುವರೆಂದು ನನಗೆ ತೋರುತ್ತೆ. ಯಾಕೆಂದರೆ ಅನೇಕರು ಸುಳ್ಳು ತೂಕ, ಬಟ್ಟುಗಳನ್ನು ಉಪಯೋಗಿಸುತ್ತಾರೆ. ಇದರಿಂದ ಗಿರಾಕಿಗಳಿಗೂ ವರ್ತಕರಿಗೂ ಜಗಳ ಬರುತ್ತೆ. ಆ ಕಾಲದಲ್ಲಿ ಪೋಲೀಸಿನವರು ಗಮನವೇ ಕೊಡುವುದಿಲ್ಲ. ಹಾಗೆ ಕೊಟ್ಟರೂ ಬಡವರಾದ ಗಿರಾಕಿಗಳನ್ನು ಹೊಡೆದು, ತಳ್ಳಿಬಿಡುವುದನ್ನು ನಾನು ಅನೇಕಾವರ್ತಿ ನೋಡಿರುತ್ತೇನೆ. ಈ ವಿಷಯಗಳಿಗೆಲ್ಲಾ ಮೇಲ್ಪಟ್ಟ ಅಧಿಕಾರಿಗಳು ಗಮನಕೊಡುವುದು ಉತ್ತಮ.

ಮೈಸೂರು.—ಮಾರ್ಚಿ ತಿಂಗಳು ೧೩ ನೆ ತಾರೀಖಿನ ಸರ್ಕಾರಿ ಟಪಾಲನ್ನು ಯಾರೋ ಸರ್ಕಾರದ ಕೆಲಸದವರೇ ಪತ್ತೆ ಇಲ್ಲದಂತೆ ಮಾಡಿದ್ದರಿಂದ ಈ ವರೆಗೂ ಅಮಲ್ದಾರರಿಗೆ ವಿನಃ ಮತ್ತೆ ಯಾರಿಗೂ ಸಂಬಳವನ್ನು ಕೊಡದೆ ನಿಲ್ಲಿಸಿರುತ್ತಾರೆ. ಕೊಂಚ ಸಂಬಳದ ನೌಕರರ ಗೋಳಾಟವನ್ನು ನೋಡುವುದಕ್ಕಾಗುವದಿಲ್ಲ. ಗುಮಾಸ್ತೆ ವೆ ಬೆ ಕಛೇರಿಯಲ್ಲಿರುವ ಇಬ್ಬರು ನೌಕರರನ್ನು ಸಸ್ಪೆಂಡ್ ಮಾಡಿರುತ್ತಾರೆ. ಆ ಟಪಾಲ್ ಯಾವಾಗ ಪತ್ತೆಯಾಗುತ್ತದೋ ಬಡ ನೌಕರರ ಗೋಳಾಟ ಯಾವಾಗ ಪರಿಹಾರವಾಗುತ್ತದೋ ತಿಳಿಯದು. ಕಛೇರಿಯಲ್ಲಿ ಡಾಕ್ಯುಮೆಂಟುಗಳು ಸಹ ಕಾಣೆಯಾದುದು ವರ್ತಮಾನ. ಹೀಗಿದ್ದರೆ ಸರ್ಕಾರಿ ಕೆಲಸಗಳಿಗೆ ಯಾವಾಗಲೂ ಊನವೇ ಬಂದೀತೆಂಬ ವಿಷಯದಲ್ಲಿ ಯಾವ ಸಂಶಯವೂ ಇರಲಾರದು —ಈ ಟವರ್‌ನಿಗೆ ಯಾವಾಗಲೂ ಒಬ್ಬನೇ ಮ್ಯುನಿಸಿಪಲ್ ಮಣೇಗಾರನು ಇರುವದು ಸರ್ಕಾರಕ್ಕೆ ತಿಳಿಯದ ಸಂಗತಿಯಲ್ಲ. ಈ ಟವರ್ ದೊಡ್ಡದಾಗಿರುವುದರಿಂದ ಟವರ್ ಕಾಯುವದು ಒಬ್ಬ ಮಣೇಗಾರನ ಕೈಯಿಂದಾಗುವದಿಲ್ಲವೆಂದು ಇಲ್ಲಿನ ಅಮಲ್ದಾರರು ತಿಳಿದು, ಮ್ಯುನಿಸಿಪಾಲಿಟಿಯನ್ನು ಎರಡು ಭಾಗ ಮಾಡಿ, ಇಬ್ಬರು ಮಣೇಗಾರರನ್ನು ನೇಮಿಸಿ, ಇಬ್ಬರಿಗೂ ಆಳುಗಳನ್ನು ಕೊಟ್ಟರು. "ಒಬ್ಬನಿಗಿಂತ ಇಬ್ಬರು ಲೇಸು" ಎಂಬ ಗಾದೆ ಬದ್ಧ ವಿರೋಧವಾಗಿದೆ. ಒಬ್ಬನೇ ಮಣೇಗಾರನು ಇದ್ದರೆ ಟವರ್ ಎಷ್ಟೋ ನಾಕೀಟ್ ಆಗುತ್ತದೆ. ಇಬ್ಬರು ಸೇರಿದ್ದರಿಂದ ಊರಿನ ಗಲೀಜು ಹೆಚ್ಚಿತೇ ಹೊರತು ಕಡಮೆ ಆಗಲಿಲ್ಲ. ಈ ವಿಷಯಕ್ಕೆ ಮೇಲ್ಪಟ್ಟ ಅಧಿಕಾರಿಗಳು ನಿಗಾ ಕೊಡುವದು ಅವಶ್ಯ —ಇಲ್ಲಿನ ಮ್ಯುನಿಸಿಪಲ್ ದೀಪಗಳನ್ನು ಹಚ್ಚುವ ಕೆಲಸ ಪೂರ್ವದಲ್ಲಿ ಮಣೇಗಾರನೇ ನೋಡುತ್ತಿದ್ದನು. ಆಗ್ಗೆ ತಕ್ಕಮಟ್ಟಿಗೂ ದೀಪಗಳು ರಾತ್ರಿ ಕಾಲದಲ್ಲಿ ಚನ್ನಾಗಿ ಪ್ರಕಾಶ ಕೊಡುತ್ತಿದ್ದವು. ಆದರೆ ಈಗ ಈ ಕೆಲಸವನ್ನು ಯಾರು ವಹಿಸಿಕೊಂಡಿರುತ್ತಾರೋ ತಿಳಿಯದು.—ಈಗ ಸುಮಾರು ೧೫—೨೦ ದಿನಗಳಿಂದ ಮ್ಯುನಿಸಿಪಲ್ ದೀಪಗಳ ಬೆಳಕೇ ಅಪರೂಪವಾಗಿದೆ. ಒಂದೊಂದು ಸಾರಿ ಹಚ್ಚಿದಾಗ್ಯೂ ದೀಪಗಳಿಗೆ ಗ್ರಹಣ ಹಿಡಿದಿರುವಂತೆ ಕಾಣುತ್ತವೆ. ಇಲ್ಲದಿದ್ದರೆ ಎಲ್ಲಿ ಎಣ್ಣೆ ಮುಗಿದೀತೋ ಎಂಬುವ ರೀತಿಯಲ್ಲಿ ದೀಪಗಳು ಬೆಳಗುವವು. ಈ ವಿಷಯಕ್ಕೂ ಮೇಲ್ಪಟ್ಟ ಅಧಿಕಾರಿಗಳು ನಿಗಾ ಕೊಡುವುದು ತುಂಬಾ ಅವಶ್ಯಕವಾಗಿದೆ.—ಬಿಸಿಲಿನ ತಾಪವು ಬಹು ಜೋರಾಗಿದೆ. ಪ್ರತಿ ದಿನವೂ ಮೋಡ ವಿಪರೀತವಾಗಿರುತ್ತದೆ ಆದರೆ ಮಳೆಯೇ ಇಲ್ಲ. ಕಳೆದವಾರ ಒಂದು ದಿನ ಮಾತ್ರ ಸುಮಾರಾಗಿ ಸುರಿಯಿತು.

ಚಿಕ್ಕಮಗಳೂರು —ಮಳೆ ಈ ವಾರದಲ್ಲಿ ಶುರುವಾದಂತೆ ಇದೆ. ಇದುವರಿಗೂ ಮಳೆಯನ್ನು ಕಾದುಕೊಂಡಿದ್ದ ರೈತರು ಇನ್ನು ಮೇಲೆ ತಮ್ಮ ಜಮೀನುಗಳನ್ನು ಹಸನು ಮಾಡಿ, ಮುಂಗಾರು ಪೈರಿಡಬೇಕಾಗಿದೆ. ಇದುವರಿಗೂ ಮಳೆಯಿಲ್ಲದೆ ಇದ್ದುದ್ದರಿಂದ ದಿನಸಿ ಧಾರಣೆಯು ಏರಿತು. ನೆನ್ನೆ ವಾರದ ಸಂತೆಯಲ್ಲಿ ಅಕ್ಕಿ ರೂಪಾಯಿಗೆ ೭॥—೮ ಸೇರಿನಂತೆ ಮಾರಿತು. ಅದರಲ್ಲಿಯೂ ಅಳತೆ ಸೇರುಗಳನ್ನೂ ತೂಕದ ಬಟ್ಟುಗಳನ್ನೂ ಕೇಳುವವರೇ ಇಲ್ಲ. ಸಂತೆಯಲ್ಲಿ ಇಪ್ಪತ್ತೈದು ಸೇರು ಅಕ್ಕಿಯನ್ನು ಅಳಸಿಕೊಂಡು ಬಂದು, ಮನೆಯಲ್ಲಿ ಅಳತೆ ಮಾಡಿದರೆ ಇಪ್ಪತ್ತೊಂದು ಸೇರು ಮಾತ್ರ ಆಗುತ್ತೆ. ತುಂಬೇರು ಬೆಲ್ಲವನ್ನು ಮಾರುವವರು ೫॥ ಸೇರು ಎಂದು ತೂಕಮಾಡಿ ಕೊಟ್ಟಿದ್ದನ್ನು ಮನೆಯಲ್ಲಿ ತಂದು ತೂಗಿದರೆ ೪ ಸೇರಿಗೂ ಕಮ್ಮಿಯಾಗುತ್ತದೆ. ಆದ್ದರಿಂದ ಅನೇಕರು ಸಂತೆಯಲ್ಲಿ ತೆಗೆದುಕೊಳ್ಳುವದಕ್ಕಿಂತ ಅಂಗಡಿಯಲ್ಲಿ ತೆಗೆದುಕೊಳ್ಳುವದು ಒಳ್ಳೇದೆಂದು ಹೇಳುತ್ತಾರೆ. ಸಂತೆಯಲ್ಲಿ ನಡೆಯುವ ಇಂಥಾ ಕೊರತೆಗಳನ್ನು ಆಗಿಂದಾಗ್ಗೆ ಮ್ಯುನಿಸಿಪಾಲಿಟಿಯ ಅಧಿಕಾರಿಗಳು ಕಂಡು ಹಿಡಿದು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಮಾಡಿ, ಖರಾ ಸೇರು, ತೂಕಗಳನ್ನಿಡುವಂತೆ ಮಾಡುವುದು ಪ್ರಜೆಗಳಿಗೆ ದೊಡ್ಡ ಉಪಕಾರಮಾಡಿದಂತಾಗುವದಲ್ಲವೇ ?—ಮೈಸೂರು ಸೀಮೆಯ ಫಾರೆಸ್ಟುಗಳ ಕನ್ಸರ್ವೇಟರಾದ ಮೆ॥ ಮುತ್ತಣ್ಣನವರು ೬ ನೇ ತಾ ಇಲ್ಲಿಗೆ ಬಂದು, ಇಲ್ಲಿ ನೋಡಬೇಕಾಗಿದ್ದ ಕೆಲಸಗಳನ್ನು ನೋಡಿಕೊಂಡು, ೭ ನೇ ತಾ. ಇಲ್ಲಿಂದ ಲಿಂಗದ ಹಳ್ಳಿ ಕಡೆ ಪ್ರಯಾಣಮಾಡಿದರು.—ಇಲ್ಲಿಂದ ಸುಮಾರು ೭ ಮೈಲಿ ದೂರದಲ್ಲಿರುವ ಕಣಿವೆಹಳ್ಳಿ ಸಮೀಪದಲ್ಲಿ ಯಾರೋ ಒಬ್ಬ ಗೌಡನು ಒಂದು ಹುಲಿಯನ್ನು ಹೊಡೆದು ಹಾಕಿದ್ದಾಗಿಯೂ ಅದು ಹಳ್ಳಿ ಹಳ್ಳಿಗಳ ಕಡೆಯಿಂದ ಬರುವ ಜನರನ್ನು ಕೊಂದರೆದಾಗಿಸುತ್ತಿದ್ದುದಾಗಿಯೂ ವರ್ತಮಾನವಿದೆ. ಯಾರಾದರೂ ಅದನ್ನು ಹೊಡೆದು ಹಾಕಿ, ಅದರಿಂದ ತಿರುಗಾಡುವ ಜನರಿಗುಂಟಾಗಿರುವ ಭಯವನ್ನು ಹೋಗಲಾಡಿಸುವುದು ಒಳ್ಳೇದಲ್ಲವೇ ?—ಇದೇ ತಿಂಗಳು ೯ ನೇ ತಾ ರಾತ್ರಿ ಹೊಸಮನೆಯಲ್ಲಿರುವ ಒಂದು ಮನೆಗೆ ಕಳ್ಳರು ಬಿದ್ದು, ಹಿತ್ತಲ ಕಡೆಯ ಕದವನ್ನು ಉಪಾಯಾಂತರದಿಂದ ತೆಗೆದು, ಒಳಗೆ ಪ್ರವೇಶಿಸಿ, ದೇವರ ಮನೆಯಲ್ಲಿಟ್ಟಿದ್ದ ಒಂದು ಭರಣಿ, ಅದರಲ್ಲಿದ್ದ ನಾಲ್ಕು ರೂಪಾಯಿ, ಒಂದು ಕರಡಿಗೆ, ಒಂದು ಹಳೇ ಸೀರೆ, ಒಂದು ಗಡಿಗೆಯಲ್ಲಿದ್ದ ರಾಗೀ ಹಿಟ್ಟು ಮುಂತಾದ್ದನ್ನು ಹೊರಗೆ ಸಾಗಿಸಿ, ಒಳಗಿನ ಇನ್ನೊಂದು ಮನೆಗೆ ಹೋಗುವಷ್ಟರಲ್ಲಿ ಮಲಗಿದ್ದ ಹೆಂಗಸೂ ಹುಡುಗನೂ ಎಚ್ಚತ್ತು, ಗಲಾಟೆ ಮಾಡಲು ಕಳ್ಳರು ಸಿಕ್ಕಿದಷ್ಟೇ ಸಾಕೆಂದು ಮೇಲ್ಕಂಡ ಪದಾರ್ಥಗಳನ್ನು ತೆಗೆದುಕೊಂಡು ಪರಾರಿಯಾದರು.

ಕುಣಿಗಲ್ ಪೇಟೆ.—ಮಳೆ ಒಂದೆರಡು ಸಾರಿ ಚನ್ನಾಗಿ ಸುರಿಯಿತು. ಆದರೆ ಮೊದಲನೇ ಸಾರಿ ಸುರಿದಾಗ ಕಲ್ಮಳೆ ಬಿದ್ದು, ತೆಂಗುಗಳಿಗೆ ತುಂಬಾ ನಷ್ಟವಾಯಿತು. ಜನರ ಕ್ಷೇಮ ಚನ್ನಾಗಿದೆ. ಹವ ಅತ್ಯುಷ್ಣವಾಗಿದೆ. ದನಕರುಗಳಿಗೂ ಜನರಿಗೂ ನೀರು ಸಾಧಾರಣವಾಗಿದೆ. ಧಾರಣೆವಾಸಿಗಳು ಚಡಾವಾಗಿದೆ. ಪ್ಲೇಗ್ ರೋಗವು ಸಂಪೂರ್ತಿಯಾಗಿ ನಿಂತಿದೆ —ಮ್ಯುನಿಸಿಪಲ್ ಲಾಂದ್ರಗಳ ವಿಷಯ ತುಂಬಾ ಆಕ್ಷೇಪಣೆಯಾಗಿದೆ. ಯಾಕೆಂದರೆ ಈ ಲಾಂದ್ರಗಳು ಒಳ್ಳೇ ಸ್ಥಿತಿಯಲಿಲ್ಲ. ಎಣ್ಣೆ ಚನ್ನಾಗಿಲ್ಲ. ಬೆಳಕು ಕತ್ತಲೆಯ ಹಾಗೇ ಇರುತ್ತೆ. ಆದ್ದರಿಂದ ಈ ಲಾಂದ್ರಗಳಿಗೂ ಎಣ್ಣೆಗೂ ಕೊಡುವ ಹಣ ಅರ್ಧಮಟ್ಟಿಗೂ ವ್ಯರ್ಥವೇ ಸರಿ. ಇಲ್ಲಿನ ಲಾಂದ್ರಗಳ ಕತ್ತಿಮೆಯಾಗಿದೆ ಅಲ್ಲದೆ, ಸಂದುಗೊಂದುಗಳಲ್ಲಿ ಬಹು ಬೇಗ ನಂದಿ ಹೋಗುತ್ತವೆ. ಮಧ್ಯ ಬೀದಿಯ ಲಾಂದ್ರಗಳು ಸಹ ಕಷ್ಟವಾಗಿ ಹೊಗೆ ಮುಚ್ಚಿ ಪ್ರಕಾಶ ಕೊಡುವದಿಲ್ಲ. ಆದರೂ ಪ್ರತಿ ದಿನ ಸರ್ಕಾರಿ ಉದ್ಯೋಗಸ್ಥರೂ ವರ್ತಕರೂ ತಿರುಗಾಡುವ ಮುಖ್ಯ ರಸ್ತೆಯಲ್ಲಿಯೇ ಕೇಳುವವರಿಲ್ಲದಾಗಿ ತುಂಬಾ ಅಸಮಾಧಾನವಾಗಿದೆ. ಈ ವಿಧವಾದ ಕೆಟ್ಟ ಎಣ್ಣೆಯನ್ನು ಯಾಕೆ ಮ್ಯುನಿಸಿಪಾಲಿಟಿಯವರು ಒಪ್ಪುತ್ತಾರೋ. ಪ್ರಜೆಗಳ ಹಣವು ಈ ರೀತಿ ವ್ಯರ್ಥವಾಗುವುದರೆ ಡಿ॥ ಅಮಲ್ದಾರರು ದಯವಿಟ್ಟು ಖುದ್ದು ಪರಾಂಬರಿಸಿ ಕರೆಸಿ ಮಾಡಿ ಅವಶ್ಯವಾದರೆ ಮತ್ತೊಬ್ಬರಿಗೆ ಕಂಟ್ರಾಕ್ಟು ಯಾಕೆ ಕೊಡಬಾರದೋ ತಿಳಿಯದು. ಮುಖ್ಯವಾಗಿ ಹಾಲಿ ಸಬ್ ಡಿವಿಜನ್ ಆಫೀಸರಾಗಿರುವ ಮೆ॥ ಆನಂದರಾವ್ ಸಿಸ್ಟರಿಯವರು ಚಿಕ್ಕಮಗಳೂರಲ್ಲಿ ಬಹು ತೃಪ್ತಿಕರವಾಗಿ ಪ್ರಜಾರಂಜಕರಾಗಿ ಕೆಲಸ ಮಾಡಿದಂತೆ ಇಲ್ಲಿಯೂ ಎಲ್ಲಾ ವಿಷಯಗಳಲ್ಲೂ ಯಾವಾಗಲೂ ಜನರ ಹಿತವನ್ನೇ ಅತ್ಯಧಿಕವಾಗಿ ಮಾಡ್ಯಾರೆಂತ ಅವರ ಚಟುವಟಿಕೆಯೂ ಸೌಮ್ಯಗುಣಗಳೂ ಪ್ರಜಾರಂಜಕತ್ವವೂ ಸಾಹಸವೂ ಪ್ರಕಟಮಾಡುವದರಲ್ಲಿ ಸಂಶಯವಿಲ್ಲ.—ಮ್ಯುನಿಸಿಪಾಲಿಟಿಯಿಂದ ನಲ್ಲಿನೀರಿಗೋಸ್ಕರ ಪ್ರತಿ ತಿಂಗಳೂ ಹೆಚ್ಚು ಹಣ ವೆಚ್ಚಮಾಗುತ್ತಿದ್ದರೂ ಕೆಲವು ಕಡೆ ನೀರಿನ ಸರಬರಾಯಿ ಸಾಲದು. ಕೆಲವು ಕಡೆ ನೀರಿನ ನಲ್ಲಿಗಳು ಒಡೆದು ಸುರಿಯುತ್ತಿರುವವು. ಜನರು ತಿರುಗುವ ಮುಖ್ಯ ಬೀದಿಗಳಲ್ಲಿ ನಲ್ಲಿಗಳಿಗೋಸ್ಕರ ದೊಡ್ಡ ಗುಂಡಿಗಳನ್ನು ಉದ್ದವಾಗಿ ಅಗೆದು, ರಾತ್ರಿ ಅಲ್ಲಿ ಬೆಳಕನ್ನಾಗಲೀ ಅಡ್ಡಕಟ್ಟೆಯನ್ನಾಗಲೀ ಇಡದೆ ಇರುವದು ಅನೇಕರು ಮುಗ್ಗರಿಸಿ ಬಿದ್ದು ಅಪಾಯಮಾಡಿಕೊಳ್ಳಲಿಕ್ಕೆ ಆಸ್ಪದವಾಗಿದೆ — ಸದಿ ನೀರಿನ ಆಚೆ ರೈಲ್ವೆ ಕಂಬಿಗಳನ್ನು ಹಾಕಿಸುತ್ತಿದ್ದಾರೆ. ಇದು ಒಳ್ಳೇ ಸಹಾಯ ರಾತ್ರಿ ಕಾಲದಲ್ಲಿ ಗಾಡಿಯವರು ಬೀಳದಂತೆ ಅನುಕೂಲವಾಯಿತು.—ಇಲ್ಲಿನ ಇನ್‌ಸ್ಪೆಕ್ಟರ್ ರುದ್ರಪ್ಪನವರಿಗೂ ಜಮಾದಾರ್ ಕೆಂಪನಂಜಪ್ಪನವರಿಗೂ ವರ್ಗವಾಗಿ ಒಬ್ಬರು ಮಾಗಡಿಗೂ ಇನ್ನೊಬ್ಬರು ಚನ್ನಪಟ್ಟಣಕ್ಕೂ ಹೋದರು. ಅವರಿಗೆ ಬದಲಾಗಿ ಬಂದಿರುವ ಆಫೀಸರುಗಳು ಎಷ್ಟರಮಟ್ಟಿಗೆ ಪ್ರಜಾಹಿತೈಷಿಗಳಾಗಿರುವರೋ ಮುಂದೆ ನೋಡಬೇಕಾಗಿದೆ —ಈ ಸ್ಥಳದ ಹವ ಚನ್ನಾಗಿರುವದರಿಂದ ಜನರು ಬಹಳವಾಗಿ ಹೊಸೆದಾಡುತ್ತಾ ಯಾವಾಗಲೂ ಕೋರ್ಟುಗಳಿಗೆ ಬರುವದು ತುಂಬಾ ದುಃಖಕರವಾಗಿದೆ —ಇಲ್ಲಿನ ಕನ್ನಡ ಸ್ಕೂಲ್ ಹೆಡ್ ಮಾಸ್ಟರ್ ಬಿ. ಸೂರಪ್ಪನವರು ೩೯ ವರ್ಷಕಾಲ ಒಳ್ಳೇ ಸರ್ವಿಸ್ ಮಾಡಿದ್ದರಿಂದ ಇವರು ಮುಂದಿನ ಜೂಲೈ ೧ ನೇ ತಾರೀಖಿನಿಂದ ಪೆನ್ಷನ್ ಮೇಲೆ ಕೆಲಸ ಬಿಡುವರು. ಇವರ ಸ್ಥಳಕ್ಕೆ ಅದೇ ಸ್ಕೂಲಿನಲ್ಲಿರುವ ಶಕ್ತರೂ ಅನುಭವಸ್ಥರೂ ಆದ ಅಪ್ಪರ್ ಸೆಕೆಂಡರಿ ಪ್ಯಾಸುಮಾಡಿರುವ ಮತ್ತು ಬಡ್ತಿಗೆ ಅರ್ಹರಾದ ಇಬ್ಬರು ಸಹಾಯಕ ಉಪಾಧ್ಯಾಯರಿದ್ದಾರೆ. ಆದ್ದರಿಂದ ಡೆ॥ ಇನ್‌ಸ್ಪೆಕ್ಟರವರು ತಮ್ಮ ಚಿರಪರಿಚಿತ ಬಹುಕಾಲದ ಒಳ್ಳೇ ಯಶಸ್ಸನ್ನು ಇಲ್ಲಿಯೂ ಪ್ರಕಟಿಸುವರೆಂದು ನಿರೀಕ್ಷಿಸಲ್ಪಟ್ಟಿದೆ —ವರ್ನಾಕ್ಯುಲರ್ ಮಿಡ್ಲ್ ಇಂಗ್ಲಿಷ್ ಸ್ಕೂಲ್ ಬಹಳ ಒಳ್ಳೇ ಸ್ಥಿತಿಗೆ ಬರುತ್ತಿದೆ. ಈ ಸ್ಥಳದಲ್ಲಿ ಮಧ್ಯಪಾನ ಜೂಜಾಟಗಳು ಬಹಳವಾಗಿಲ್ಲವಾದರೂ ಹೊಡೆದಾಟ ಜಗಳಗಳು ಪ್ರಬಲವಾಗಿವೆ. ವಿದ್ಯಾಭಿವೃದ್ಧಿ ಹೊಂದಿ ಜನರು ಸಭ್ಯರಾಗಬೇಕಾಗಿದೆ —ಇಲ್ಲಿನ ಎಕ್ಸೈಜ್ ಆಫೀಸಿನಲ್ಲಿ ಮಡಗಿದ್ದ ಅಲ್ಲಿನ ನೌಕರಮಾನೇರ ಬಾಕಿ ಸಂಬಳ ಸುಮಾರು ೧೩೦ ರೂಪಾಯಿಗಳು ಕಳುವಾಗಿ ಅಲ್ಲಿನ ಸಬ್ ಇನ್‌ಸ್ಪೆಕ್ಟರ್ ವೆಂಕಟಸಾಮಿ ನಾಯ್ಡು ಯವರು ಕೈಯಿಂದ ಕೊಟ್ಟರಂತೆ. ಈ ಆಫೀಸು ಬಲವಾದ ತಾಲ್ಲೋಕು ಮತ್ತು ಸಬ್ ಡಿವಿಜನ್, ಪೋಲೀಸ್, ಫಾರೆಸ್ಟ್ ಆಫೀಸುಗಳ ಕಟ್ಟಡದ ಕೊಠಡಿಯಲ್ಲಿದ್ದು ಕಳುವಾಗಿರುವದು ಆಶ್ಚರ್ಯವಾಗಿದೆ. ಇನ್ನೂ ಪತ್ತೆ ಆಗಿಲ್ಲ. ವೈಶ್ಯಮಾಧ್ವನವರ ಮನೆಯಲ್ಲಿ ನಡೆದ ಕಳುವು ಈ ವರೆಗೂ ತೃಪ್ತಿಕರವಾಗಿ ಪತ್ತೆ ಆಗಲಿಲ್ಲವೆಂದು ಕೇಳುತ್ತೇವೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

22

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ:—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅಧ್ಯಾತ್ಮ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಶಾಂತಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ.

೩. "ಸ್ವಪ್ನಪ್ರವಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪. "ರೋಮನರ ಚರಿತ್ರೆ" ಕ್ರಯ ೧—೨—೦
೫. "ಗ್ರೀಕರ ಚರಿತ್ರೆ" ,, ೦—೨—೦
೬. "ಅನುಭವಾಮೃತ" ,, ೦—೬—೦
೭. "ಗಣಿತ ಸಂಜೀವಿನಿ." ೧—೮—೦
೮. "ಗಣಿತ ಚಿಂತಾಮಣಿ." ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ." ೦—೧೨—೦
೧೧. "೧೯೦೫ನೇ ವರುಷದ ಡೈರಿಗಳು"

ಫ್ಲಾಪ್, ಪೆನ್ಸಿಲ್ ಸಹಿತ ೧—೬—೦; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಜ್ವರಹರ.

27



ಇದು ಸಾಧಾರಣ ಜ್ವರ, ಚಳೀಜ್ವರ, ಘೋರಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯನ್ನು ತರಿಸಿಕೊಂಡು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಗೈರೆ ಬಿಡಲಾಗುವದು.

✽✽✽✽✽✽✽✽✽

ಸಿ ಮಂ ಕ ಪ್ರ ಕಾ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವಿಕೆಯು, ಮಂತಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಾಂತ್ರಿಕವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡಾ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಸಬದ ಅಸಿಸ್ಟೆಂಟ್ ಸರ್ಜನ್ ಗಳಾದವರು—ಹೆನ್ರಿಯು ಬಹು ಅನುಭವವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಇದೇ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವುಗಳ ಕೆಳಗಿನ ವಿಳಾಸದಲ್ಲಿ ವಿಶೇಷ.—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ನೆಳಂತ್ ಪೇಟ್ ಸ್ಟ್ರೀಟ್, ಮದರಾಸ್.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

6

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂಸೂಪರಿಂಟೆಂಡೆಂಟ್ ಮಿ॥ ಹ್ಯೂದಸ್ ಯವರು ಕೊಂಡುಕೊಳ್ಳುವರು.

Apply to—Mr. H[illegible]s, Mysore Zoo.

ಶ್ರೀ ತಾಂಬೂಲ.

27

ಇದನ್ನು ಓದಿ! ಬಿಸಾಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಜಾಹೀರು ಮಾಡುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನು ಕೊಡುವದು. ಚಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು. ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ೬ ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಪೇಟೆ, ಯಂ. ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟೀಷನರ್.

ಹೋಮೋಸಿಯಾ

ಕಷ್ಟ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, [illegible], ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣೆ, ವಿದ್ಯಾಶಾಲೆ, [illegible], ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ದೇವರಾಶಿಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಮರ್ಮನಾಳು, ಮೂಲವ್ಯಾಧಿ, ಉಬ್ಬಸ, ಗಾಯಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ತುಳುಕಜ್ಜಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ಪಾಲು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

✽✽✽✽✽✽✽✽✽

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಪಟ್ಟಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರಕುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಕರಪತ್ರಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ. ೨೩ ನಂಬರು ಪೀಟ್ ಲೈನ್. ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

28—4—1905 ರಿಂದ 4—5—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಹೊರಟುಹೋದ ಸಂಖ್ಯೆ.	
ಬೆಂಗಳೂರು ಸಿಟಿ	6	4	2	7
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	4	5	31	5
ಮೈಸೂರು ,,	0	0	9	18
ಕೋಲಾರ್ ,,	0	0	8	6
ಕೋಲಾರ್ ಚಿನ್ನದ ಗಣಿಗಳು	0	0	6	6
ತುಮಕೂರು ಡಿಸ್ಟ್ರಿಕ್ಟ್	1	1	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	6	4
ಕಡೂರ್ ,,	0	0	10	10
ಶಿವಮೊಗ್ಗ ,,	0	0	15	10
ಜುಮ್ಲಾ	11	10	60	58

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ಪೌರ್ಣಮಿ ಗುರುವಾರದಿಂದ ವೈಶಾಖ ಬಹುಳ ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಮೇ

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರ ಮಾ. ದಿನ
18	ಗುರು †	ಪೌರ್ಣಮಿ	53 2	~	11 35	5
19	ಶುಕ್ರ ‡	ಪಾಡ್ಯ	17-5[illegible]	ಜ್ಯೇ	13-30	6
20	ಶನಿವಾರ	ಬಿದಿಗೆ	[illegible]	ಜ್ಯೇ	11 10	7
21	ರವಿವಾರ	ತದಿಗೆ	10 58	ಮೂ	10 2	8
22	ಚಂದ್ರ	ಚೌತಿ	5-10	ಪೂರ್ವಾ	[illegible]	9
23	ಕುಜ	ಪಂಚಮಿ	57-1[illegible]	ಉತ್ತರಾ	10 19	10
24	ಬುಧ	ಷಷ್ಠಿ	[illegible]	ಶ್ರ	[illegible]	11

† ಕಂಚೀ [illegible] ಗರುಡೋತ್ಸವ. ‡ ಲಕ್ಷ್ಮೀದೇವಮ್ಮನವರ [illegible] ಕಂಚೀ ವರದರಾಜಸ್ವಾಮಿ ರಥ, ಗಾಣದಳ್ಳಿ ನೃಸಿಂಹಸ್ವಾಮಿ ರಥ, ಸಂಕಷ್ಟ ಚತುರ್ಥಿ [illegible] ಯೋಗ

ಪೇಟೆ ಧಾರಣೆ.

ಜಿನಸಿ.	ಮೈಸೂರು.	ಬೆಂಗಳೂರು.
ಶೇಖ ಅಕ್ಕಿ ಪಲ್ಲ ೧ಕ್ಕೆ	ರೂ. ೧೧—೮—೬	೧೧—೦—
ಕೆಂಪುಸಾಂಬ ಅಕ್ಕಿ ಜವಲ್	೧೦-೪—೦	೧೧—೦—
,, ಮಧ್ಯಮ	೯—೧೨—೦	೧೦—೮—
ಜಾಜಿಸಾಂಬ ಅಕ್ಕಿ	೯—೮—೦	೧೨—೦—
ಹುಚ್ಚೆಳ್ಳು ಅಕ್ಕಿ ಜವಲ್	೧೨—೯—೦	೧೨—೮—
,, ಮಧ್ಯಮ	೧೧-೮ ೦	೧೨—೦—
ತೊಗರೀ ಬೇಳೆ ಪಲ್ಲ ೧ಕ್ಕೆ	೧೧-೮-೦	೧೧ ೧೨—
,, ಮಧ್ಯಮ	೧೧—೦—೦	೧೧—೦—
ಕ್ಯಾಶ್ ರಾಗಿ ಪಲ್ಲ ೧ಕ್ಕೆ	೪ ೧೨—೦	೫—೬—
ಕಾರಾಗಿ	೪—೮—೦	೪—೬—
ಹುರುಳಿ	೪—೧೨—೦	೬—೮—
ಹಲಸಂದೆ ಪಲ್ಲ ೧ಕ್ಕೆ	೮—೧೨—೦	೯—೦—
ಬಿಳೀ ಅವರೆ	೬ ೧೨ ೦	೬—೦—
ಹೆಸರು	೯ ೧೨—೬	೯—೪—
ಉದ್ದು	೮ ೧೪ ೦	೯—೪—
ಕಡಲೆ	೯—೦—೦	೮—೪—
ಎಳ್ಳು	೧೬ ೯—೦	೧೪—೫
ಹುರಳಿ	೮—೦ ೦	೬—೧೩—
ಕಡಲೆ ೧೨ ಸೇರಿಗೆ	೯—೮—೦	೮—೩—
ಸೀಗೇಕಾಯಿ ಮಣ ೧ಕ್ಕೆ	೨—೪—೨	೨—೧೨—
ಮೆಣಸಿನಕಾಯಿ	೪—೮—೦	೩—೦೨—
,, ಮಧ್ಯಮ	೩—೧೨—೦	೬—೮—
ನೆಲ್ಲು ದೊಡ್ಡ ಅಕ್ಕಿ	೬—೪—೦	೫ ೨—೦
ಬೆಳ್ಳುಳ್ಳಿ ಮಣ ೧ಕ್ಕೆ	೪—೦ ೦	೪—೮—
ಈರುಳ್ಳಿ ,,	೪—೦—೦	೪—೦—
ಕೊತ್ತುಂಬರಿ ಪಲ್ಲ ೧ಕ್ಕೆ	೬—೦—೦	೮—೦—
ಉಪ್ಪು ,,	೮—೧—೦	೬—೦—
ಕಾಳುಮೆಣಸು ಹಣ್ಣು	೧ ೪—೦	೦—೧೨—
,, ಹಳೇದು	೧—೧೪—೦	೦—೧೦—
ಜೀರಿಗೆ	೧೨—೦—೦	೧೬—೮—
ಸೀಮೆಯೆಣ್ಣೆ ಟಿನ್ನು ೧ಕ್ಕೆ	೫—೩—೦	೪—೬—
ತೆಂಗಿನಕಾಯಿ ೧೦೦ಕ್ಕೆ	೭—೦—೦	೪—೦—
ಅಡಕೇಕಾಯಿ ಮಣ ೧ಕ್ಕೆ	೧—೦—೦	೦—೧೦—
ಬೆಲ್ಲ ಒಳ್ಳೇದಕಾಯಿ ಮಣ ೧ಕ್ಕೆ	೦—೧೪—೦	೦—೩—
ತುಪ್ಪ (ದರ್ಜ) ಕೆಂಪು	೧೫—೮—೦	೧೫—೪—
,, ,, ಮಧ್ಯಮ	೧೫—೧೦—೦	೧೫—೮—
,, ,, ಗಟ್ಟಿ ತೂಕ ೧ಕ್ಕೆ	೨೬—೦—೦	೨೪—೫—
ಬೆಳ್ಳಿ ಗಟ್ಟಿ ತೂಕ ೧೦೦ಕ್ಕೆ	೭೨—೦—೦	೭೧—೮—

Printed and Published by the Rev. H. Spencer, B the Proprietor and Manager, Wesleyan Mission Pre
Mysore. 18/5/1905

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಮೇ ತಾರೀಖು ೨೫ ನೇ ಗುರುವಾರ. — ಸಂಚಿಕೆ ೫೧

ದಿ ಯೆಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ

ಉಪವೃತ್ತಿ ಕಲ್ಪನಾಸಂಘ, ಚನ್ನಪಟ್ಟಣ.

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ಮೆಂಬರ್ ದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು. ಸಾಮಾನ್ಯ ಉಪವೃತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನು ಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ. ಈ ಕೊರತೆ ಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿ ಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತ ಯಾ ನೇಮಿತ ರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ಸಲ್ಲತಕ್ಕ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರ ತೆ ಉಂಟು. ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜೆಂಟ ರುಗಳು ಸಂಘದ ಮ್ಯಾನೇಜರಿಗೆ ಬರೆದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು. ಇಂಥಾ ಏಜೆಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ.

ವಿಳಾಸ:—ಆರ್. ಎಸ್. ಮಾಕಂ, ಮ್ಯಾನೇಜರ್.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

ಲಕ್ಷ್ಮೀಕರ ಕಸ್ತೂರಿಮಾತ್ರೆ

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವದು. ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮ ವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಟ್ಟೆನೋವು, ಕೆಟ್ಟ ಉರಿ, ಇವುಗಳು ವಾಸಿಯಾಗುವವು. ಇದರಲ್ಲಿ ಅಪೇಕ್ಷಣೀಯವಾ ದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಬರಕು ಮುಂ ತಾದ ಅಮೂಲ್ಯವಸ್ತುಗಳು ಸೇರಿರುವುದರಿಂದ ಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲ ರೂ, ತಾಂಬೂಲದೊಂದಿಗೆ ಅಥವ ಬರಿ ಬಾಯಿ ಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಚೆಟ್ಟರ ಕೂಸಲೆ ಗುಣ ಕಾಣುವದು. ಕ್ರಯ.—ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾಂಗಿ ಚಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆಂಬುದ ಕ್ಕೆ ಸ್ವಲ್ಪವೂ ಸಂಶಯವಿಲ್ಲ.—ದಿ ಮಹಮದ್ ಸಮಾಚಾರಿ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಯ ಸಂಗಡ ಹಾಕಿ ಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತ ವೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದ ರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ಪೋಲೀಸ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕರಿ ಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ಟಿ. ಕೃಷ್ಣಯ್ಯಂಗಾರ್, ಟೆಲಿಗ್ರಾಫ್ ಡಿವಿಜನ್ ಮೇಷ್ಟರ್, ಸೈಲಾನ್.

Apply to:—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಫಾರೆಸ್ಟು ಇಲಾಖಾ.

ನೋಟೀಸು ೧೯೦೫ ನೆ ಇಸವಿ ಮೆ ತಾ. ೧೮ ರಲ್ಲು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟಿನ ಡಿಪ್ಪೋ ಗಳಲ್ಲಿ ಅವುಗಳ ಎದುರಿನಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಚೌಬೀನ ಸಾಮಾನುಗಳನ್ನು ಹರಾಜು ಮಾಡಲ್ಪಡುತ್ತೆ.

ಡಿಪ್ಪೋ ಹೆಸರು.	ಹರಾಜು ತಾರೀಖು.	ಹರಾಜು ಮಾಡಿಸುವ ಆಫೀಸರ ಹೆಸರು.	ಚೌಬೀನಾ ಸುಮಾರು ಮೊತ್ತ.							
			ಸಾಗವಾನಿ ನಾಟಾ ಮತ್ತು ದಿಂಡಿ.		ಮತ್ತಿ ಜಾತಿ ನಾಟಾ ಮತ್ತು ದಿಂಡಿ		ಕಾಡು ನಾಟಾ ಮತ್ತು ದಿಂಡಿ		ಕಾಡು ಸರ.	
ಮೈಸೂರು ಉತ್ತ್ಯಾಡುರ್.	10 6 1905	ಮೈಸೂರು ಡಿ॥ ಫಾ॥	39	1018	413	5904	...	...	..	
ಸಂಜನಗೂಡು ಡಿಪ್ಪೋ.	12 6 1905	ಆಫೀಸರು.	740	4586	1270	9097	6	146	40	70

ಹರಾಜು ಷರತ್ತು.—೧೯೦೫ ನೆ ಇಸವಿ ೨೫ ನೇ ಏಪ್ರಿಲ್ ೧೫ ನೆ ನಂಬರು ಗೆಜೆಟ್ಟಿನಲ್ಲಿ ಛಾಪಾಗಿ ಆಗಿರುವ ೧೯೦೫ ನೆ ಇಸವಿ ಮಾರ್ಚಿ ೧೬ ನೆ ಮರ್ತ್ಯ ೧೪೨೯—R. F. ೧೫೬—೯೨ ನೇ ನಂಬರು ಗವರನ್‌ಮೆಂಟು ನೋಟಿ ಫಿಕೇಷನ್ ನೋಡಿ.

ಚೌಬೀನೆ ಪಡವನರು ಹರಾಜು ತಾರೀಖು ದಾಗಾಯ್ತು ಮೂರು ದಿವಸದ ಒಳಗಾಗಿ ಕಾಲು ಹಿಸ್ಸೆ ಮೊಬಲಗು ಪಾವತಿ ಮಾಡಬೇಕು. ಮುಕ್ಕಾಲು ಹಿಸ್ಸೆ ಮೊಬಲಗನ್ನು ೧೯೦೫ ನೆ ಜೂನ್ ಮಾಹೆ ಆಖ್ಯೇರ್ ಒಳಗಾಗಿ ಪಾವತಿ ಮಾಡಬೇಕು.

By Order,
H. P. GANGADHARAPPA,
District Forest Office, Mysore.

ಪ್ರಶ್ನೋತ್ತರಲಕ್ಷ್ಯಬೋಧಿನಿ

ಎರಡನೆಯ ಛಾಪು ಕ್ರಯ: ಒಂದು ರೂಪಾಯಿ ನಾಲ್ಕಾಣೆ

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭೂಮಿಯ ಅಳತೆ.

ಎಂಬೀ ಜಮೀನ್ ಮೋಜಣೀ ಕಲಿಸುವ ಪುಸ್ತಕದಿಂದ ಇತರರ ಸಹಾಯ ಸ್ವಲ್ಪವೂ ಇಲ್ಲದೆ ಸ್ವಲ್ಪಮಟ್ಟಿಗೆ ಓದುಬರಹ ಕಲಿತಿರುವ ವರೂ ಕೂಡ ಭೂಮಿಯನ್ನು ಅಳೆಯುವುದಕ್ಕೆ ಚೆನ್ನಾಗಿ ತಾವಾ ಗಿಯೇ ಕಲಿಯಬಹುದು. ಒಂದು ಸಲ ತರಿಸಿ, ಓದಿನೋಡಿ. ಕ್ರಯ ಹನ್ನೆರಡು ಆಣೆ ವಿಳಾಸ:—

ಭಾರತಿ ಸಂಪಂಗಿರಾಮ, ಹೊಸಕೋಟೆ, ಬೆಂಗಳೂರು.

ಶ್ರೀಚಾಮರಾಜೇಂದ್ರ ರಾಜ್ಯವಿಲಾಸ.

H. H. THE LATE MAHARAJA'S BIOGRAPHY.

ಎಪ್ಪತ್ತೈದು ಪ್ರಕರಣಗಳುಳ್ಳ ಈ ಕನ್ನಡ ಪ್ರೋಸ್ ಪುಸ್ತಕ ದಲ್ಲಿ—ಶ್ರೀ ಚಾಮುಂಡೇಶ್ವರೀ ಅವತಾರ ಕಥೆಯೂ, ಯದುವಂ ಶಾವಳಿಯೂ, ಲೇಟ್ ಮಹಾರಾಜರವರ ಜೀವಕಾಲದ ಆದ್ಯಂತ ಚರಿತೆಯೂ, ಮಹಾರಾಣಿ ರೀಜೆಂಟರವರ ಚರಿತ್ರೆಯೂ, ಈಗಿನ ಶ್ರೀ ಶೃಂಗೇರಿ ಶ್ರೀ ಪರಕಾಲ ಗುರುಗಳ ಚರಿತ್ರೆಯೂ, ಪೂರ್ವದ ಮತ್ತು ಈಗಿನ ದಿವಾನ್ ರವರ ಚರಿತ್ರೆಯೂ, ರಾಜಧಾನಿಗೆ ದಯ ಮಾಡಿದ್ದ ವೈಸ್‌ರಾಯರ ಸ್ಪೀಚ್‌ಗಳೂ ರಾಜ್ಯಾಡಳಿತಗಳ ವಿಚಾರ ವೂ, ರೀಜನ್ಸಿ ಏರ್ಪಡಾಗ ರ ವರೆಗಿನ ಈ ದೇಶದ ಪ್ರತಿಯೊಂದು ಇಲಾಖೆಯ ಸಂಗತಿಗಳೂ, ಖರೀತ ಮುಂತಾದವೂ—ಚೆನ್ನಾಗಿ ವಿವ ರಿಸಲ್ಪಟ್ಟಿವೆ. ಪ್ರಭುಗಳ ಭಾವಚಿತ್ರವೂ ವ್ಯತ್ಯಾಸವಿಲ್ಲದೆ ಇದೆ. ಸರ್ಕಾರದವರ ಪ್ರೋತ್ಸಾಹವನ್ನೂ ಹೊಂದಿದೆ. ಸಕಲಜನೋಪ ಯೋಗವಾದುದು. ಸ್ವಲ್ಪ ಪ್ರತಿಗಳೇ ಉಳಿದಿವೆ. ನಮ್ಮ ರಾಷ್ಟ್ರದ ನಮ್ಮ ದೊರೆಗಳ ಚರಿತ್ರೆಯನ್ನು ಪೂರ್ತಿ ತಿಳಿಯಬೇಕೆಂದಾಶಿಸು ವವರಿಗೆ ಇದನ್ನು ಬಿಟ್ಟರೆ ಬೇರೆ ಪುಸ್ತಕ ದೊರೆಯಲಾರದು. ಕ್ರಯ, ೧೨ ಆಣೆ ಮಾತ್ರ. ಜಾಗ್ರತೆ ಈ ವಿಳಾಸಕ್ಕೆ ಬರೆಯಿರಿ.

೧. ದಿ ಜನರಲ್ ಏಜನ್ಸಿ, ಲಕ್ಷ್ಮೀವಿಲಾಸ ರೋಡ್, ಮೈಸೂರು.

೨. ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

೩. ಮೆಸರ್ಸ್. ಕೆ. ನರಸಿಂಹಯ್ಯ ಅಂಡ್ ಕೋ., ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. .. ರೂ ೧—೮—೦

ವರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦

" " " " ೧—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟ ವಾಗಿ ಬರೆಯಬೇಕು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸಂಗೀತ ವಿದ್ವಾನ್ ಮಹದೇವಯ್ಯನವರು.

ಚಾಮರಾಜನಗರದ ತಾಲ್ಲೂಕು ರಾಮಸಮುದ್ರದ ಸಂಗೀತ ವಿದ್ವಾನ್ ಮಹದೇವಯ್ಯನವರು ವೀರಶೈವ ಮತಸ್ಥರು.

ಇವರು ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕ ಮಹೋ ತ್ಸವ ಕಾಲದಲ್ಲಿ ಹಾಡುಗಾರಿಕೆಯು ಆಗಿ ಬಹುಮಾನವನ್ನು ಹೊಂ ದಿ, ಮದ್ರಾಸ್, ಕಂಚಿ, ಕೊಯಮುತ್ತೂರು ಪ್ರಾಂತ್ಯಗಳಲ್ಲೂ ಪ್ರಸಿದ್ಧಿಯನ್ನು ಹೊಂದಿ, ಕಳೆದ ತಿಂಗಳು ಬೆಂಗಳೂರಿಗೆ ದಯ ಮಾಡಿಸಿ, ಹುಣಸೂರು ಪ್ರಿಂಟರ್ ಸದಾಶಿವರ ಮನೆಯಲ್ಲಿಯೂ ವಿದ್ವಾನ್ ವೈಣಿಕ ಅನ್ನಮಲ್ಲಪ್ಪನವರ ಮನೆಯಲ್ಲಿಯೂ ಇನ್ನೂ ಅನೇಕ ದೊಡ್ಡ ಮನುಷ್ಯರುಗಳಲ್ಲಿಯೂ ಹಾಡುಗಾರಿಕೆಯು ನಡೆ ಯಿತು. ಅಗ್ಗೆ ಅಲ್ಲಿರತಕ್ಕ ಸಂಗೀತ ವಿದ್ವಾಂಸರೂ ಬಹು ಜನ ದೊಡ್ಡ ಮನುಷ್ಯರುಗಳೂ ದಹ ಈ ಮಹದೇವಯ್ಯನವರ ಗಾನ ಬಹಳ ಇಂಪಾದದ್ದು ಎಂದು ಶ್ಲಾಘನೆ ಮಾಡಿರುತ್ತಾರೆ. ಇವರು ಮೇ ತಿಂಗಳು ೧ನೇ ತಾ. ಸೋಮವಾರದ ದಿವಸ ನಾಗಡಿಗೆ ದಯ ಮಾಡಿಸಿ, ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಕಾಲಕ್ಷೇಪವಾ ಯಿತು. ಅಲ್ಲಿಗೆ ಅನೇಕ ಜನ ಶಾಸ್ತ್ರಜ್ಞರೂ ಸಂಗೀತಜ್ಞರೂ ಬಹು ಜನ ದೊಡ್ಡ ಮನುಷ್ಯರೂ ಸೇರಿ, ಇವರ ಗಾನ ವೈಖರಿಗೆ ಸಮಸ್ತರೂ ತಲೆಯನ್ನು ತೂಗುತ್ತಾ, ಚಿತ್ರದಲ್ಲಿ ಬರೆದ ಪ್ರತಿಮೆಗ ಳಂತೆ ತೋರಿದರು. ಅಗ್ಗೆ ಈ ಸಂಗೀತಕಲಾವಿಶಾರದರಾದ ಮಹ ದೇವಯ್ಯನವರಿಗೆ ವಿಶೇಷವಾದ ಸನ್ಮಾನಗಳನ್ನು ಮಾಡಿರುತ್ತಾರೆ.

ಈಗ ಇವರು ಮುಂದೆ ಧಾರವಾಡ, ಗದ್ವಾಲ, ಬರೋಡ, ಈ ಪ್ರಾಂತ್ಯ ತಮ್ಮ ವಿದ್ಯಾ ಪ್ರಭಾವವನ್ನು ತೋರಲು ಹೊರಟ ದ್ದಾರೆ.

ಕೋಟೆ, ಜೆ. ಎಸ್. ಕಲ್ಲಯ್ಯ,

ತುಂಕೂರು. [illegible]

ಗಂಜಾಂ ಕುರಾವಲ್ಲಿ ಸ್ಥಿರಾಸ್ತಿ ಪರಿವರ್ತನೆ

ಶ್ರೀರಂಗಪಟ್ಟಣದ ಅಂಚೇ ಬೀದಿಯಲ್ಲಿರುವ ಚನ್ನಪ್ಪನವರ ಮಗ ಮಾಳಿಗೆ ತಮ್ಮಯ್ಯನು ತಿಳಿಸುವದೇನೆಂದರೆ— ಗಂಜಾಂ ಕುರಾವಲ್ಲಿರುವ ಚನ್ನಪ್ಪನವರ ಕಿರೀಮಗ ಚನ್ನಯ್ಯನು ಬಿಟ್ಟೋ ಕುರಾವಲ್ಲಿರುವ ಮಠದಿನ ಸೆಯನ್ನು ಕ್ರಯ ಮಾಡುವದಾಗಿ ತಿಳಿಯಬಂದದ್ದರಿಂದ ನನಗೆ ೫ ರಲ್ಲಿ ೧ ಹಿಸ್ಸೆ ಬರಬೇಕಾಗಿದೆ ಕ್ರಯಕ್ಕೆ ತೆಗೆದುಕೊಳ್ಳುವವರು ನನ್ನ ಹಿಸ್ಸೆ ಬಿಟ್ಟು ತೆಗೆದುಕೊಳ್ಳತಕ್ಕದ್ದು

ಹೊಸ ನೋಟ್ಸು

ಮೆಟ್ರಿಕ್ಯುಲೇಷನ್‌ರವರಿಗೆ, ೩ನೆಯ ಕನ್ನಡ ಪುಸ್ತಕಗಳಿಗೆ ೪ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನಸಹಿತ ಈ ನೋಟ್ಸನ್ನು ಬರೆದು ಅನೇಕ ದಿನವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ. ೪ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೦
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೧—೬
೧೯೦೫ನೆ ವರ್ಷದ ಲೋಯರ್ ಸೆಕಂಡರಿ ನೋಟ್ಸು	೦—೭—೦

ವಿಳಾಸ—ಯಸ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು

ಸ್ವಲ್ಪ ಕ್ರಯ : ಸುಗಂಧದ್ರವ್ಯಗಳು

23

ಅಂಬರ್ ಕಟ್ಟಿ ಶೇರು ೧ಕ್ಕೆ	೫ ೨—೦
ವಸಂತಕುಸುಮಾಕರವರ್ತಿ	೪—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	೨—೪—೦
ಘಮಗು ಕಡ್ಡಿ ,, ೧ಕ್ಕೆ	೧—೪—೦
ಮಸಾಲಾ ಕಡ್ಡಿ ,, ೧ಕ್ಕೆ	೦—೧೨—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ	೨—೧—೬
ಪಚ್ಚೇ ಗಂಧ ತೋಲ ೧ಕ್ಕೆ	೨—೦—೦
ತಿಟೋ	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಕೆ (ಭಂಗಾರ, ಬೆಳ್ಳಿ ವರಕದಿಂದ ತಯಾರಾಗಿದೆ) ಡಬ್ಬಿ ೧ಕ್ಕೆ	೦—೮—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ಟಂಬಾಕ್ ಪೋಕ್ ಡಬ್ಬಿ ೧ಕ್ಕೆ	೦—೨—೦
ಶ್ರೀವೈಷ್ಣವ ಬಾಕ್ಸೀಯ ದಶಾಂಗ ಶೇರು ೧ಕ್ಕೆ	೬—೧೨—೦
ಫಿರ್ಕಾ ತೋಲ ೧ಕ್ಕೆ	೨—೦—೦
ತಿಟೋ	೧—೮—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ವಸಂತಮಾಲೀಯ ಘುಟಿಕಾ ೧೦೦ಕ್ಕೆ	೨—೦—೦

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ ಹೆಚ್ಚಾಗಿ ತರಿಸುವವರಿಗೆ ಕಮೀಷನ್ ದೊರೆಯುತ್ತದೆ. ವಿಳಾಸ —ಟಿ ಎಲ್ ಉಪಾಧ್ಯಾಯ ಅಂಡ್ ಕೋ,

ಸುಗಂಧಕಾರಿ, ಮೈಸೂರು.

ಚೇಂಬರ್ಲೇನ್ ಯವರು ಕಂಡುಹಿಡಿದ ಕೆಮ್ಮಿನ ಔಷಧ

20

ಶೀತ, ಕೆಮ್ಮು, ಗಂಟಲು ಗೂರಲು ಮೊದಲಾದ ಇವೇ ಮೊದಲಾದ ಎದೆಯ ಮತ್ತು ಗಂಟಲಿನ ರೋಗಕ್ಕೆ ಈ ಔಷಧವು ಬಹಳ ಶ್ರೇಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು ಶೀತವನ್ನು ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಉಪೇಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು, ಎದೆಯು ಬಾಗಿಹೋಗುವದು ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ ಅದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಅದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ ಕ್ರಯ ಶೀಸೆ ೧ಕ್ಕೆ ೧ ರೂ ; ೨ ರೂ ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು ಕಾಗದ ಬರೆಯುವವರು ಸಂಗತಿಗಳನ್ನು ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

ಮೊನ್ನೆ ೧೯ನೇ ತಾ ರಾತ್ರಿ ನೀಲಗಿರಿ ಬೆಟ್ಟದ ಮೇಲೆ ಮಹಾರಾಜರವರು ಸುಮಾರು ೬೦೦ ಯೂರೋಪಿಯನ್ ಸಭಿಕರನ್ನು ತಮ್ಮ ರಾಜಭವನಕ್ಕೆ ಕರೆಸಿಕೊಂಡು, ಭಾರೀ ಔತಣವನ್ನಿತ್ತರು ಇಷ್ಟು ದೊಡ್ಡ ಔತಣವು ಅಲ್ಲಿ ಇದುವರೆಗೆ ನಡೆದಿಲ್ಲ ಅದರ ಸರ್ವರೆಲ್ಲಾ ಶ್ರೀಮನ್ ಮಹಾರಾಜರವರಿಗೆ ಸರ್ವರಿಗೂ ಸಂಪೂರ್ಣ ತೃಪ್ತಿ ಆದಾಗಿತ್ತೆಂದು ತಿಳಿದು ಬಂದಿದೆ ಈ ರಾಜಭವನಕ್ಕೆ ಶ್ರೀಮನ್ ಮಹಾರಾಜರವರು ಎರಡು ಲಕ್ಷ ರೂಪಾಯಿಗಳ ವರೆಗೂ ಖರ್ಚುಮಾಡಿದಾರೆಂದು ಹೇಳುವಲ್ಲಿ ಕಟ್ಟಡವು ಎಷ್ಟು ಶ್ರೇಷ್ಠವಾಗಿರಬಹುದೋ ತಿಳಿಯಬಹುದಾಗಿದೆ

*****

ಮೈಸೂರು ರಾಯವರ ಪತ್ನಿಯರಾದ ಲೇಡಿ ಕರ್ಜನ್ ರವರಿಗೆ ಇಲ್ಲಿಯಲ್ಲಿ ಪ್ರಾಪ್ತವಾಗಿದ್ದ ಕಾಯಿಲೆಯು ನಿವಾರಣೆಯಾಗಿದ್ದರ ಜ್ಞಾಪಕಾರ್ಥವಾಗಿ ಬೆಂಗಳೂರು ದಂಡಿನಲ್ಲಿ ಆರೆಯ ಹೆಸರಿನ ಮೇಲೆ ಮೂರು ವರ್ಷಗಳ ಕೆಳಗೆ ಕಟ್ಟಿಸಿರುವ ಆಸ್ಪತ್ರೆ ಅಲ್ಲಿನ ಸಂಸ್ಕಾರಂದ ರಾಯಬಹದೂರ್ ಮ|| ಅಣ್ಣಾಸ್ವಾಮಿ ಮೊದಲಿಯಾರ್ ರವರು ಒಂದು ಚಿಕಿತ್ಸಾ ಮಂದಿರವನ್ನು ಸ್ವಂತ ಹಣದಿಂದ ಕಟ್ಟಿಸುತ್ತಿರುವರಾಗಿದ್ದಾರೆ ನಮ್ಮ ರೆಸಿಡೆಂಟರವರ ಪತ್ನಿಯರಾದ ಲೇಡಿ ರಾಬರ್ಟ್‌ಸನ್ ರವರು ಮೊನ್ನೆ ಸೋಮವಾರ ಬೆಳಗ್ಗೆ ೧೧ ಗಂಟೆಯಲ್ಲಿ ಅದಕ್ಕೆ ಅಸ್ತಿಭಾರವನ್ನು ಹಾಕಿದರು ಸರ್ ಜೇಮ್ಸ್ ಬೂರ್ಡಿಲ್ಲನ್ ರವರು, ಸರ್ ಕೃಷ್ಣಮೂರ್ತಿಯವರು, ಮೊದಲಾದ ಅನೇಕ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರು ಹಾಜರಾಗಿದ್ದರು ರೆಸಿಡೆನ್ಸಿ ಸರ್ಜನ್ ರಾದ ಕ್ಯಾಪ್ಟನ್ ಸ್ಟೇಜರವರು ಆ ಆಸ್ಪತ್ರೆಯ ಪೂರ್ವ ವೃತ್ತಾಂತವನ್ನು ತಿಳಿಸಿದರು ಈಗಿನ ಕಟ್ಟಡಕ್ಕೆ ದ್ರವ್ಯ ಸಹಾಯ ಮಾಡುವ ಮ|| ಅಣ್ಣಾಸ್ವಾಮಿ ಮೊದಲಿಯಾರರೂ ಉಪನ್ಯಾಸ ಮಾಡಿದರು ಲೇಡಿ ರಾಬರ್ಟ್‌ಸನ್ ರವರು ಅಸ್ತಿಭಾರವನ್ನು ಹಾಕಿದ ಮೇಲೆ ಬ್ರಿಟಿಷ್ ರೆಸಿಡೆಂಟರವರ ಪ್ರೈವೇಟ್ ಸೆಕ್ರೆಟರಿಯವರಿಂದ ಮ|| ಅಣ್ಣಾಸ್ವಾಮಿ ಮೊದಲಿಯಾರರಿಗೆ ಬಂದಿದ್ದ ಕಾಗದವನ್ನು ಓದಿ ಹೇಳಿದರು ಲೇಡಿ ಕರ್ಜನ್ ರವರು ಮ|| ಮೊದಲಿಯಾರ್‌ರವರ ಉದಾರ ಕಾರ್ಯವನ್ನು ಸಂತೋಷದಿಂದ ಮೆಚ್ಚಿ ಅಂಗೀಕರಿಸಿರುತ್ತಾರೆ ಮತ್ತು ಈ ಕಟ್ಟಡಕ್ಕೆ ಲೇಡಿ ರಾಬರ್ಟ್‌ಸನ್ ರವರು ಅಸ್ತಿಭಾರ ಹಾಕುವದನ್ನು ಕೇಳಿ, ತುಂಬಾ ಸಂತೋಷಪಡುವರು ಎಂಬುದಾಗಿ ಆ ಕಾಗದದಲ್ಲಿ ಬರೆದಿತ್ತು

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ಮೇ ತಾ|| ೨೪ ನೇ ಗುರುವಾರ

ಕಾಂಗ್ರಾ ರಿಲೀಫ್ ಫಂಡು.

ಹಿಮಾಲಯ ಪರ್ವತ ಶ್ರೇಣಿಯಲ್ಲಿರುವ ಕಾಂಗ್ರಾ ಕಣಿವೆಯಲ್ಲಿ ಭೂಕಂಪ ಉಂಟಾಗಿ, ಅನೇಕ ಸಂಸಾರಗಳಿಗೆ ಅಪಾರವಾದ ಕಷ್ಟ ನಷ್ಟಗಳು ಪ್ರಾಪ್ತವಾಗಿರುವುದೂ ಅಂಥವರಿಗೆಲ್ಲಾ ಸಾಧ್ಯವಾಗುವ ಮಟ್ಟಿಗೂ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಲೆಫ್ಟಿನೆಂಟ್ ಗವರ್ನರಾದ ಸರ್ ಛಾರ್ಲಸ್ ರಿವಾಸ್ ಯವರು ಇಂಡಿಯಾ ಗವರ್ನಮೆಂಟಿನವರ ಅನುಮತಿಯನ್ನು ಪಡೆದು, ಒಂದು ರಿಲೀಫ್ ಫಂಡನ್ನು ಪ್ರಾರಂಭಿಸಿ, ಚಂದಾ ಕೂಡಿಸುತ್ತಿರುವುದೂ ಈ ಫಂಡಿಗೆ ಹಿಂದುಸ್ಥಾನದಲ್ಲೂ ಪರರಾಜ್ಯಗಳಿಂದಲೂ ಕೆಲವು ಮಟ್ಟಿಗೆ ಹಣ ವಸೂಲಾಗಿಯೂ ವಸೂಲಾಗುತ್ತಲೂ ಇರುವುದೂ ನಮ್ಮ ವಾಚಕರಿಗೆ ತಿಳಿದಿದೆ. ಈ ಪುಣ್ಯಕಾರ್ಯಕ್ಕೆ ಐದು ಲಕ್ಷ ರೂಪಾಯಿ ಕೂಡಿದರೆ ಸಾಕಾಗುವುದೆಂದು ಮೊದಲು ಅಂದಾಜು ಕಟ್ಟಿದ್ದರು ಇದುವರೆಗೆ ಸುಮಾರು ನಾಲ್ಕು ಲಕ್ಷ ರೂಪಾಯಿ ಈ ಫಂಡಿಗೆ ವಸೂಲಾಗಿರುತ್ತದೆ. ಈಗ ನೋಡುವಲ್ಲಿ ಮೊದಲು ಕಟ್ಟಿದ್ದ ಅಂದಾಜು ಸಾಕಾಗುವುದಿಲ್ಲವೆಂದೂ ಕಡೇ ಪಕ್ಷ ಹತ್ತು ಲಕ್ಷ ರೂಪಾಯಿಯಾದರೂ ಕೂಡಿದರೆ ಈ ಫಂಡಿನ ಉದ್ದೇಶವು ಸಾರ್ಥಕವಾಗುವುದೆಂದೂ ಈ ಫಂಡಿನ ಪ್ರೆಸಿಡೆಂಟ್ ಸರ್ ಡೆನ್‌ಜಿಲ್ ಐಬೆಟ್‌ಸನ್‌ರವರು ತಿಳಿಸುತ್ತಾರೆ. ಈ ಭೂಕಂಪದ ದೆಸೆಯಿಂದ ಉಂಟಾಗಿರುವ ನಷ್ಟವು ಇಷ್ಟೇ ಎಂದು ವಿವರಿಸಿ ತೀರದು ಈ ಅನಾಹುತದಲ್ಲಿ ೧೯,೮೦೦ ಪ್ರಾಣಿಗಳು ಬಲಿಯಾಗಿರುತ್ತಾರೆಂದು ಹೇಳುವರಲ್ಲದೆ ಎಷ್ಟು ಮಂದಿ ಮಂಗಸರು ... ಬಲಿಯೂ ಅನ್ನಪಾನಗಳಿಗೆ ... ಕಳೆಯುತ್ತಿರುವುದೋ ಇಂಥವರಿಗೆ ಸಹಾಯ ಮಾಡುವುದು ಎಷ್ಟು ಅವಶ್ಯವೂ ಪುಣ್ಯಕರವೂ ಆಗಿರುವುದೆಂದು ಗ್ರಹಿಸಿಕೊಳ್ಳಬಹುದಾಗಿದೆ ಈ ಫಂಡಿನ ಹಣವನ್ನು ಕಷ್ಟನಿವಾರಣೆ ಮಾಡುವುದಕ್ಕಾಗಿಯೇ ವಿನಿಯೋಗಿಸುವರು. ಯಾರಿಗೂ ಆಸ್ತಿಪಾಸ್ತಿಗಳನ್ನು ಸಂಪಾದಿಸುವುದಕ್ಕೆ ಹಣ ಕೊಡುವುದಿಲ್ಲ ಜಾತಿ ಮತ ಕುಲ ಗೋತ್ರಗಳ ತಾರತಮ್ಯವಿಲ್ಲದೆ, ಕಷ್ಟಕ್ಕೆ ಗುರಿಯಾದವರೆಲ್ಲರಿಗೂ ಈ ದ್ರವ್ಯದಿಂದ ಅನ್ನಬಟ್ಟೆ ... ಈ ಫಂಡಿನ ಮುಖ್ಯೋದ್ದೇಶವಾಗಿರುತ್ತದೆ.

ಇಂಥಾ ಪುಣ್ಯಕರವಾದ ಕಾರ್ಯಕ್ಕೆ ನಮ್ಮ ಸಂಸ್ಥಾನದವರೂ ಅಲ್ಲಲ್ಲಿ ಸಭೆ ಸೇರಿ, ಸ್ಥಲಾನುಸಾರ ದ್ರವ್ಯವನ್ನು ಕೂಡಿಸಿ, ಕಳುಹಿಸಿಕೊಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇವೆ

ಸ್ವದೇಶದ ವೃತ್ತಾಂತಗಳು

ಹಿಮಾಚಲದ ತಪ್ಪಲಲ್ಲಿ ಭೂಕಂಪದ ದೆಸೆಯಿಂದ ಕಷ್ಟಪಡುವ ಪ್ರಜೆಗಳ ಸಹಾಯಾರ್ಥವಾಗಿ ನಮ್ಮ ಮಹಾರಾಜರವರು ೫,೦೦೦ ರೂಪಾಯಿ ದಯಪಾಲಿಸಿರುತ್ತಾರೆ

*****

ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನ ಸೂಪರಿಂಟೆಂಡೆಂಟ್ ಮ|| ಯೇಟ್ಸ್‌ಯವರು ಇನ್ನೂ ಎರಡು ತಿಂಗಳ ತನಕ ಕೆಲಸದ ಮೇಲೆ ಬರುವವರಾಗಿಲ್ಲವೆಂದು ತಿಳಿದು ಬಂದಿದೆ

*****

ಹೊಸ ರೆಸಿಡೆಂಟರಾದ ಮ|| ಎ ವಿಲ್ಲಿಯಂಸ್ ಯವರು ಶ್ರೀಮನ್ ಮಹಾರಾಜರವರ ಭೇಟಿಗೋಸ್ಕರ ಮುಂದಿನ ಸೋಮವಾರ ನೀಲಗಿರಿ ... ರಾಜಧಾನಿಗೆ ದಯಮಾಡುವವರಾಗಿದಾರೆ.

*****

ಯುವರಾಜರವರ ವರ್ಧಂತಿ ಉತ್ಸವವು ೨೯ನೆ ತಾ ಸೋಮವಾರ ನಡೆಯಬೇಕು ಮಹಾಮಾತೃಶ್ರೀಯವರು ರಾಜಧಾನಿಗೆ ದಯಮಾಡಿದ ನಂತರ ಮುಂದಿನ ವಾರ ಅವರು ಗೊತ್ತು ಮಾಡುವ ದಿನ ನೆರವೇರೀತೆಂದು ಕಾಣುತ್ತೆ.

*****

ಶ್ರೀಮನ್ ಮಹಾರಾಜರವರು ನಾಳೆ ಭಾನುವಾರ ಬೆಳಿಗ್ಗೆ ನೀಲಗಿರಿ ಬೆಟ್ಟದಿಂದ ಮೋಟರ್ ಕಾರ್ ಎಂಬ ಗಾಡಿಯಲ್ಲಿ ಕುಳಿತು, ಸೀಗೂರಿಗೆ ಬಂದು, ಅಲ್ಲಿ ಸ್ನಾನಾದಿಗಳನ್ನು ತೀರಿಸಿಕೊಂಡು, ಅದೇ ಗಾಡಿಯಲ್ಲಿ ಹೊರಟು ಮಧ್ಯಾಹ್ನ ೨—೩ ಗಂಟೆ ಹೊತ್ತಿಗೆ ರಾಜಧಾನಿಗೆ ದಯಮಾಡುವರು. ಮಹಾಮಾತೃಶ್ರೀಯವರು ಪರಿವಾರ ಸಹಿತ ಭಾನುವಾರ ಬೆಳಿಗ್ಗೆಯೇ ಬೆಟ್ಟದಿಂದ ಹೊರಟು, ರೈಲ್ ಮಾರ್ಗವಾಗಿ ಬೆಂಗಳೂರಿಗೆ ಬಂದು, ಸೋಮವಾರ ಸಾಯಂಕಾಲ ರಾಜಧಾನಿಯನ್ನು ತಲುಪುವರು

*****

ಮ ಎ. ವಿಲ್ಲಿಯಂಸ್, ಐ ಸಿ ಎಸ್ ಯವರು ಮೊನ್ನೆ ಸೋಮವಾರ ಬೆಂಗಳೂರಿಗೆ ಬಂದು, ಸರ್ ಜೇಂಸ್ ಬೂರ್ಡಿಲ್ಲನ್ ರವರಿಂದ ಆ ದಿನವೇ ಮೈಸೂರು ಸಂಸ್ಥಾನದ ರೆಸಿಡೆಂಟ್ ಕೆಲಸದ ಛಾರ್ಜನ್ನು ವಹಿಸಿಕೊಂಡರು ದಿವಾನರೇ ಮುಂತಾದ ಅಧಿಕಾರಿಗಳು ರೈಲ್ವೆ ಸ್ಟೇಷನ್‌ನಲ್ಲಿ ಮ|| ವಿಲ್ಲಿಯಂಸ್ ಯವರನ್ನು ಎದುರುಗೊಂಡರು ಸರ್ ಜೇಂಸ್ ಬೂರ್ಡಿಲ್ಲನ್ ರವರು ಪತ್ನಿ ಪರಿವಾರ ಸಹಿತ ವಿಲಾಯಿತಿಗೆ ದಯಮಾಡುವುದಕ್ಕಾಗಿ ನೆನ್ನೆ ಸಾಯಂಕಾಲ ಬೊಂಬಾಯಿಗೆ ಪ್ರಯಾಣಮಾಡುವವರಾಗಿದ್ದರು.

ಮೈಸೂರು ಗಜೆಟ್ ಸಂಗ್ರಹ.

ಮೈಸೂರು ಸಂಸ್ಥಾನದ ಘನವನ್ನೈದಿದ ರೆಸಿಡೆಂಟರವರು ಒಂದನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟ್ ಟಿ ವೀರರಾಘವಪಿಳ್ಳೆಯವರನ್ನು ಬೌರಿಂಗ್ ಪೇಟೆಯ ರೈಲ್ವೆ ಸ್ಟೇಷನ್‌ನಲ್ಲಿ ಪ್ರಯಾಣಿಕರ ದೇಹಸ್ಥಿತಿಯನ್ನು ಪರೀಕ್ಷೆ ಮಾಡತಕ್ಕ ಆಫೀಸರಾಗಿ ನೇಮಿಸಿದಾರೆ

ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಮೈಸೂರು ಸರ್ಕಾರು ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಉಪಮಾಯಿಷಿಗಾಗಿ ಸ್ಥಾಪಿಸಿದ ಎರಡನೇ ಅಡಿಷನಲ್ ಮುನ್ಸಿಫ್ ಕೋರ್ಟುಗಳು ಈ ವರುಷ ಅಂತ್ಯದ ವರೆಗೆ ಅಂದರೆ ಕ್ರಿಸ್‌ಮಸ್ ರಜಾ ಪ್ರಾರಂಭವಾಗುವ ವರೆಗೆ ನಡೆಯುವಂತೆ ಸ್ಯಾಂಕ್ಷನ್ ಮಾಡಿದೆ.

ಮುನ್ಸಿಫ್ ಮ|| ಆನಂದರಾವ್ ಎಸ್ ಸಿನ್ಹಯವರನ್ನು ಕ್ಟಿಂಗ್ ಎಕ್‌ಸ್ಟ್ರಾ ಅ|| ಕಮಿಷನರಾಗಿ ನೇಮಿಸಿದ್ದರಿಂದ ಮುನ್ಸಿಫ್ ಮ|| ಕೆ ಲಕ್ಷ್ಮೀನಾರಣಯ್ಯನವರನ್ನು ೩ ನೆ ಕ್ಲಾಸಿಗೆ ಮಾಡಿದೆ

ಮ|| ಸಿ ಎಚ್ ಯೇಟ್ಸ್ ಯವರನ್ನು ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ ಸೂಪರಿಂಟೆಂಡೆಂಟರಾಗಿ ನೇಮಿಸಲಾ

ಅ|| ಕಮಿಷನರ್ ಮ|| ಕೆ. ಚಾಂತ್ರಯವರಿಗೆ ಎರಡು ... ಗಳ ಸಂಬಳವಿಲ್ಲದ ರಜಾ ಕೊಟ್ಟಿತ್ತು

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಅ|| ಕನ್ಸರ್ವೇಟರ್ ಎಚ್ ಶ್ರೀನಿವಾಸರಾಯರಿಗೆ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು

ಕಂಟ್ರೋಲರವರ ಚೀಫ್ ಅಸಿಸ್ಟೆಂಟ್ ಮ|| ಟಿ ವೆಂಕಟಾಚಲ ಶೆಟ್ಟಿಯವರಿಗೆ ಫೆಬ್ರವರಿ ೬ ರಿಂದ ಐದು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ನಮ್ಮ ಪುಸ್ತಕ ಭಂಡಾರವು.

ನವರತ್ನ ಪಕ್ಷಿಯ ಚರಿತ್ರೆ. ೩ ಆಣೆ (ಮನೋಹರವಾದ ಕಥೆ), ಬಾಲಬೋಧಿನಿ. ೧ ಆಣೆ (ಅಕ್ಷರಾಭ್ಯಾಸಕ್ಕೆ ಅತ್ಯವಶ್ಯಕವಾಗಿರುವ ಪುಸ್ತಕ), ಮಗ್ಗೀ ಕೋಷ್ಟಕ ಚಂದ್ರಿಕೆ. ೪ ಕಾಸು (ಮಗ್ಗಿಯ ವಿಷಯವೆಲ್ಲಾ ಇದರಲ್ಲಿ ಸಂಪೂರ್ಣವಾಗಿರುವುದು); ಬಾಲಬೋಧ ತತ್ವಮಾಲೆ ೬ ಕಾಸು (ಮೊದಲ ತರಗತಿಗೆ ಉಪಯೋಗವಾದುದು), ಇಂಗ್ಲೀಷ ಸಂಖ್ಯಾದರ್ಶಿನಿ ೬ ಕಾಸು (ಇಂಗ್ಲಿಷ್ ಸಂಖ್ಯೆಗಳನ್ನು ಬೋಧಿಸುವ ಚಿಕ್ಕ ಪುಸ್ತಕ—ಈ ಎರಡು ಕನ್ನಡ ಪುಸ್ತಕಗಳೂ ಕೋಣಿಗಲ್ ಗರಲ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಸ್. ಸಂಜೀವಯ್ಯನವರಿಂದ ರಚಿಸಲ್ಪಟ್ಟಿರುತ್ತದೆ. ನವರತ್ನ ಪಕ್ಷಿಯ ಚರಿತ್ರೆ ವಿನಹಾ ಮಿಕ್ಕ ಪುಸ್ತಕಗಳು ಬಾಲಕರ ಮತ್ತು ಬಾಲಿಕೆಯರ ಉಪಯೋಗಾರ್ಥವಾಗಿ ಬರೆಯಲ್ಪಟ್ಟಿರುವವು ಪುಸ್ತಕಗಳ ಬೆಲೆಯು ಕಡಿಮೆಯಾಗಿರುವದರಿಂದ ಅನೇಕ ಬಡ ವಿದ್ಯಾರ್ಥಿಗಳು ಕೊಂಡುಕೊಳ್ಳುವುದಕ್ಕೆ ಅನುಕೂಲವಾಗಿದೆ ಪ್ರಿಂಟ್ ಮತ್ತು ಪೇಪರ್ ವಿಷಯದಲ್ಲಿ ಯಾವ ಆಕ್ಷೇಪಣೆಯೂ ಇಲ್ಲ. ನವರತ್ನ ಪಕ್ಷಿಯ ಚರಿತ್ರೆಯು ಓದುವವರಿಗೆ ಮನೋಹರವಾಗಿರುವುದರಿಂದ ಓದಲು ಬಲ್ಲ ಬರುವಂಥ ಪ್ರತಿ ಒಬ್ಬ ಗಂಡಸೂ ಹೆಂಗಸೂ ಇದನ್ನು ಕೊಂಡು ಓದುವರೆಂದು ನಂಬಿರುತ್ತೇವೆ.

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತಿ ವರ್ತಮಾನಗಳು

ಫ್ರೆಂಚರು ರಷ್ಯಾಜನರಿಗೆ ಸಹಾಯ ಮಾಡುವುದು.

ಲಂಡನ್, ಮೇ ೧೫.—ರಷ್ಯಾದವರ ಬಾಲ್ಟಿಕ್ ಜಹಜುಗಳು ಕಾಂಕೋಹೆ ಎಂಬ ತೀರಪಟ್ಟಣವನ್ನು ಫ್ರೆಂಚರ ಬಲಾತ್ಕಾರದಿಂದ ಕೆಲವು ಕಾಲಕ್ಕೆ ಮಾತ್ರ ಬಿಟ್ಟು ಹೊರಗೆ ಹೋಗಿದ್ದವೆಂದೂ ಈಚೆಗೆ ಅವು ಮತ್ತೆ ಬಂದು ಅದೇ ತೀರಪಟ್ಟಣದಲ್ಲಿ ಇಳಿದುಕೊಂಡು, ತಮಗೆ ಬೇಕಾಗಿರುವ ಸಾಮಾನುಗಳನ್ನೆಲ್ಲಾ ಫ್ರೆಂಚರಿಂದ ಒದಗಿಸಿಕೊಳ್ಳುತ್ತಿವೆಯೆಂತಲೂ ಜಪಾನಿನವರು [illegible] ಹೇಳುತ್ತಿದ್ದಾರೆ.

ಸೈಗಾನ್‌ಗೆ ಕಲ್ಲಿದ್ದಲು

ರಷ್ಯಾದವರು ಇಂಡೋ ಚೀನಾ ಸಮುದ್ರದಲ್ಲಿರುವ ತಮ್ಮ ಕಲ್ಲಿದ್ದಲನ್ನು ಸೈಗಾನ್ ಪಟ್ಟಣಕ್ಕೆ ರವಾನೆ ಮಾಡಬೇಕೆಂದು ಜಪಾನಿನವರು ಹುಕುಂ ಮಾಡಿದ್ದಾರೆ.

ಜಪಾನಿನವರ ಜಹಜು ಮುಳುಗಿತು.

ಟೇಬಿಲಿ ಕೊಲ್ಲಿಯಲ್ಲಿ ರಷ್ಯಾದವರು ಸಮುದ್ರದೊಳಗೆ ಇಟ್ಟಿದ್ದ ಮದ್ದಿನ ಪೆಟ್ಟಿಗೆಯಿಂದ ಜಪಾನಿನವರ ಎರಡು ಹಡಗುಗಳು ಬಡಿದು ಏಕಕಾಲದಲ್ಲಿ ಮುಳುಗಿಹೋದವು

ಬಾಲ್ಟಿಕ್ ಜಹಜುಗಳ ಪ್ರಯಾಣ

ಲಂಡನ್, ಮೇ ೧೬.—ರಷ್ಯಾದವರ ಬಾಲ್ಟಿಕ್ ಜಹಜುಗಳು ಕಾಂಕೋಹೆ ಎಂಬ ತೀರಪಟ್ಟಣದಿಂದ ಮೇಲಕ್ಕೆ ಹೋದವು. ಆಡಿಮಿರಲ್ ಅವರ ಹಡಗುಗಳು ಕಾಣುವುದಿಲ್ಲ ಎಂದು ಸೈಗಾನಿನಿಂದ ತಿಳಿಯುವುದು. ರಷ್ಯಾ ಹಡಗುಗಳು ಮತ್ತೆ ಬೇಕಾದರೆ ಅಲ್ಲಿಗೆ ಬರುವುದಕ್ಕೆ ಹಕ್ಕುಂಟೆಂದು ರಷ್ಯಾ ರಾಜಧಾನಿಯಲ್ಲಿ ಹೇಳುತ್ತಾರೆ

ಫ್ರೆಂಚರ ಪಾರ್ಲಿಮೆಂಟಿನಲ್ಲಿ [illegible]—ನಮ್ಮ ಗವರ್ನಮೆಂಟಿನವರು ಈ ಯುದ್ಧದಲ್ಲಿ ಇರುವಂತೆ ತಟಸ್ಥರಾಗಿರಬೇಕೆಂತಲೂ ಪೂರ್ವದಿಗ್ಭಾಗದಲ್ಲಿರುವ ಫ್ರೆಂಚ್ ಅಧಿಕಾರಿಗಳು ಫ್ರೆಂಚ್ ಗವರ್ನಮೆಂಟಿನವರ ಹುಕುಮಿನಂತೆ ನಡೆಯದೆ ಉಲ್ಲಂಘನೆ ಮಾಡಿದಾರೆಂತಲೂ ಆಕ್ಷೇಪಣೆ ಮಾಡಿದರು. ಗವರ್ನಮೆಂಟಿನವರ ಪರವಾಗಿ ಎಂ. ರೋಲಿಯರ್ ಎಂಬ ಮಂತ್ರಿಯು—ನಮ್ಮ ಸರ್ಕಾರದವರು ಯಾವ ಪಕ್ಷವನ್ನೂ ವಹಿಸಿರುವುದಿಲ್ಲ. ಈ ವಿಷಯದಲ್ಲಿ ಅಧಿಕಾರಿಗಳಿಗೆ ಖಂಡಿತವಾದ ಹುಕುಂ ಕಳುಹಿಸಲಾಗಿದೆ ಸದ್ಯ ಇದನ್ನು ಇಲ್ಲಿ ಚರ್ಚೆಮಾಡಕೂಡದು ಎಂದು ಹೇಳಿದರು.

ಮುಳುಗಿಹೋಯಿತೆಂದು ಹೇಳಿದ ಜಹಜಿನಲ್ಲಿದ್ದ ಜಪಾನಿನವರೆಲ್ಲಾ ಬದುಕಿಕೊಂಡರು.

ಗಾಯಪಟ್ಟ ರಷ್ಯಾ ಸೈನಿಕರು.

ಪೋರ್ಟ್ ಆರ್ಥರಿನಲ್ಲಿ ಗಾಯಪಟ್ಟ ರಷ್ಯಾ ಸೈನಿಕರು ಸಿಲೋನ್ ದ್ವೀಪದ ಮುಖಾಂತರ ರಷ್ಯಾಕ್ಕೆ ಹೋಗುತ್ತಿದ್ದರು. ಇವರನ್ನು ಸಂಧಿಸಿ, ಪ್ರಶ್ನೆ ಮಾಡಿದ್ದರಲ್ಲಿ ತಿಳಿದು ಬಂದಿರುವುದೇನೆಂದರೆ—ಜಪಾನಿನವರು ಗಾಯಪಟ್ಟ ಮತ್ತು ಸೆರೆಯಾದ ರಷ್ಯಾದವರನ್ನು ಬಹಳ ಚೆನ್ನಾಗಿ ಆದರಿಸುತ್ತಿದ್ದರು. ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿ ಯವರು ಈಗ ಸಮುದ್ರ ಯುದ್ಧದಲ್ಲಿ ಜಪಾನಿನವರನ್ನು ಗೆಲ್ಲುವುದಾದರೆ ಈ ಯುದ್ಧವು ಬೇಗನೆ ರಷ್ಯಾಜನರಿಗೆ ಅನುಕೂಲವಾಗಿಯೇ ಮುಕ್ತಾಯವಾಗುವುದು. ಹಾಗಿಲ್ಲದೆ, ಈ ಸಮುದ್ರ ಯುದ್ಧದಲ್ಲಿ ಜಪಾನ್ ಅಡ್ಮಿರಲ್ ಟೋಗೋರವರು ಗೆಲ್ಲುವ ಪಕ್ಷಕ್ಕೆ ಈ ಯುದ್ಧವು ತುಂಬಾ ದೀರ್ಘವಾಗಿಯೇ ನಡೆಯುತ್ತಾ ಬರುವುದು ರಷ್ಯಾ ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿಯವರು ತುಂಬಾ ಪರಾಕ್ರಮಿಗಳು, ಅವರು ಕಡೇ ತನಕ ಯುದ್ಧಕ್ಕೆ ನಿಲ್ಲುತ್ತಾರೆನ್ನುವುದಕ್ಕೆ ಸಂಶಯವಿಲ್ಲ ಎಂಬುದೇ.

ಹೊಸ ರಷ್ಯಾ ಹಡಗುಗಳು.

ಲಂಡನ್, ಮೇ ೧೭ —ರಷ್ಯಾದವರ ನಾಲ್ಕನೇ ಬಾಲ್ಟಿಕ್ ಜಹಜುಗಳು ಜೂನ್ ೧೪ಕ್ಕೆ ಯುದ್ಧಭೂಮಿಗೆ ಹೊರಡಲು ಸಿದ್ಧವಾಗಿರಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ

ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿ ಯವರು ತಮ್ಮ ಇಷ್ಟಬಂದಂತೆ [illegible] ಬೇಕಾದ ಕಡೆ ಸಾಮಾನುಗಳನ್ನು ಒದಗಿಸಿಕೊಳ್ಳುತ್ತೇವೆಂತಲೂ, ಇದಕ್ಕೆ ಯಾವ ಗವರ್ನಮೆಂಟಿನವರ ಪ್ರತಿಬಂಧವೂ ಇಲ್ಲವೆಂತಲೂ ಹೇಳುತ್ತಾರೆ.

ರಷ್ಯಾದವರ ಉದ್ದೇಶ.

ರಷ್ಯಾದವರ ಬಾಲ್ಟಿಕ್ ಹಡಗುಗಳು ವ್ಲಾಡಿವೊಸ್ಟಾಕಿನಿಂದ ಉತ್ತರಕ್ಕೆ ಹೋಗಿ ಪೆಟ್ರೋಪಾವ್ಲೋವ್ಸ್ಕ್ ಎಂಬ ತೀರಪಟ್ಟಣದಲ್ಲಿ ರಾಜ್ಯ ಸ್ಥಾಪಿಸಿಕೊಳ್ಳಬೇಕೆಂದು ಉದ್ದೇಶಪಟ್ಟಿರುವರು ಇದಕ್ಕೋಸ್ಕರ ರಷ್ಯಾದವರು ಆಗಲೇ ಆ ಪಟ್ಟಣಕ್ಕೆ ಕಲ್ಲಿದ್ದಲನ್ನೂ ಆಹಾರ ಪದಾರ್ಥಗಳನ್ನೂ ಕಳುಹಿಸಿ ಶೇಖರ ಮಾಡುತ್ತಿದ್ದಾರೆ.

ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿ ಯವರು ಉತ್ತರ ದಿಕ್ಕಿಗೆ ರಷ್ಯಾ ಹಡಗುಗಳ ಸಮೇತ ಪ್ರಯಾಣ ಮಾಡಿರುವುದನ್ನು ನೋಡಿದರೆ ಇಷ್ಟರಲ್ಲೇ ಅವರಿಗೂ ಜಪಾನಿನವರಿಗೂ ಸಮುದ್ರ ಯುದ್ಧ ಪ್ರಾರಂಭವಾಗುತ್ತದೆಂದು ಕಾಣುವದು ರಷ್ಯಾ ಹಡಗುಗಳು ಮೊದಲು ಪೆಸ್ಕಾಡೋರಿಸ್‌ನಲ್ಲೋ ಫಾರ್ಮೋಸಾದಲ್ಲೋ ತಂಗಿ ಅನಂತರ ಪೆಸಿಫಿಕ್ ಸಾಗರದ ಮಾರ್ಗವಾಗಿ ವ್ಲಾಡಿವೊಸ್ಟಾಕನ್ನು ಸೇರುವುವೆಂದು ತಿಳಿದುಬಂದಿದೆ

ರಷ್ಯಾ ಅಡ್ಮಿರಲ್ ಬಿರಿಲೆಫ್ ಯವರು

ಲಂಡನ್, ಮೇ ೧೯ —ರಷ್ಯಾ ಚಕ್ರವರ್ತಿಯವರು ಅಡ್ಮಿರಲ್ ಬಿರಿಲೆಫ್ ಯವರನ್ನು ಕರೆಸಿಕೊಂಡು, ಅವರಿಗೆ ಭೇಟಿಕೊಟ್ಟು, ರಷ್ಯಾ ನೌಕಾಸೈನ್ಯದ ಸರ್ವಾಧಿಕಾರವನ್ನು ಅವರಿಗೆ ವಹಿಸಿದರು ಈ ಅಧಿಪತಿಯು ವ್ಲಾಡಿವೊಸ್ಟಾಕಿಗೆ ಪ್ರಯಾಣಮಾಡುವರು

ಇವರಿಗೆ ಬಾಲ್ಟಿಕ್ ಜಹಜುಗಳ ಅಧಿಕಾರ ವಹಿಸಲ್ಪಡುವುದೆಂಬ ಮಾತಿನಲ್ಲಿ ನಿಜವಿಲ್ಲ ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿಯವರೇ ಯುದ್ಧ ಕಾರ್ಯಗಳನ್ನು ನಡೆಸುವರು

ವ್ಲಾಡಿವೊಸ್ಟಾಕಿನ ಸ್ಥಿತಿ

ವ್ಲಾಡಿವೊಸ್ಟಾಕ್ ಎಂಬ ರಷ್ಯಾದವರ ತೀರಪಟ್ಟಣದಲ್ಲಿ ಪರರಾಜ್ಯಗಳ ವರ್ತಕರು ಬಹು ಮಂದಿ ಸಂಸಾರ ಸಹಿತ ವಾಸಮಾಡುತ್ತಿದ್ದರು ಇವರಿಗೆಲ್ಲಾ ಪಟ್ಟಣದಿಂದ ಹೊರಕ್ಕೆ ಹೋಗಬೇಕೆಂದು ಆಜ್ಞೆ ಬಂದಿದೆ. ಪೋರ್ಟ್ ಆರ್ಥರಿನ ಮುತ್ತಿಗೆ ಪ್ರಾರಂಭವಾಗ [illegible] ಹಾಗೆಯೇ ಈ ವ್ಲಾಡಿವೊಸ್ಟಾಕಿನಲ್ಲೂ ಆಗಿದೆ. ಈಗ ಈ ಪಟ್ಟಣಕ್ಕೆ ಜಪಾನಿನವರು ಮುತ್ತಿಗೆ ಹಾಕುವಹಾಗಿದೆ

ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿ ಯವರ ಕಾಯಿಲೆ.

ರಷ್ಯಾ ಬಾಲ್ಟಿಕ್ ಜಹಜುಗಳ ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿ ಯವರ [illegible] ಕೆಟ್ಟುಹೋಗಿದೆಯೆಂತಲೂ ಅವರು [illegible] ಸೇರಿಕೊಳ್ಳಬೇಕೆಂದು ಕಾತರಪಡುತ್ತಿದ್ದಾರೆಂತಲೂ ರಷ್ಯಾ ರಾಜಧಾನಿಯಲ್ಲಿ ವರ್ತಮಾನ ಹುಟ್ಟಿದೆ

ಭೂಯುದ್ಧ ಸನ್ನಾಹ.

ಜಪಾನ್ [illegible] ಸೈಬೀರಿಯನ್ ರೈಲ್ ರಸ್ತೆಯನ್ನು ಹಾಳುಮಾಡಿದ್ದಾಯಿತು ಪಶ್ಚಿಮದಿಕ್ಕಿನಿಂದ ಅಲ್ಲಿಗೆ ರೈಲ್ ಗಾಡಿಗಳು ನೆಟ್ಟಗೆ ಹೋಗಿಬರುತ್ತಿವೆ ಆದರೆ ಈಗ ಅಲ್ಲಿಂದ ಮುಂದಕ್ಕೆ ಮುರಿದುಹೋಗಿರುವ ಸೇತುವೆಗಳನ್ನೆಲ್ಲಾ ಪುನಃ ಕಟ್ಟುತ್ತಲೂ ರೈಲ್ ಕಂಬಿಗಳನ್ನು ಹಾಕುತ್ತಲೂ ಇದ್ದಾರೆ

ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿಯವರು.

ರಷ್ಯಾ ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿಯವರಿಗೆ ದೇಹದಲ್ಲಿ [illegible] ಪ್ರಾಪ್ತವಾಗಿದೆ ಎಂತಲೂ [illegible] ಎಂತಲೂ ರಷ್ಯಾ ರಾಜಧಾನಿಯಲ್ಲಿ ಜನಜನರು ಸಾಧಿಸುತ್ತಾರೆ. ರಾಸ್‌ಡೆಸ್‌ವೆನ್ಸ್ಕಿಯವರು ಬಾಲ್ಟಿಕ್ ಹಡಗುಗಳನ್ನು ವ್ಲಾಡಿವೊಸ್ಟಾಕಿಗೆ ಬೇಗ ತೆಗೆದುಕೊಂಡುಹೋಗಿ ತಲುಪಿಸಿ, ನಂತರ ಕೆಲಸಕ್ಕೆ ರಾಜೀನಾಮೆ ಕೊಟ್ಟು, ರಷ್ಯಾಕ್ಕೆ ಪ್ರಯಾಣಮಾಡುವವರಾಗಿದ್ದಾರೆ

ಭೂಯುದ್ಧ ಸನ್ನಾಹ.

ಲಂಡನ್, ಮೇ ೨೦ —ಜಪಾನಿನವರು ತಮ್ಮ ಸೈನ್ಯವನ್ನೆಲ್ಲಾ ಕೂಡಿಸಿಕೊಂಡು, ತಾವೇ ರಷ್ಯಾದವರ ಮೇಲೆ ಬಿದ್ದು ಯುದ್ಧವನ್ನು ಪ್ರಾರಂಭಿಸುವವರಾಗಿದ್ದಾರೆ ಎಂದು ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ತಂತೀ ವರ್ತಮಾನಗಳು ಪ್ರಕಟವಾಗಿವೆ.

ಭೂಯುದ್ಧ. ಜಪಾನಿನವರ ಜಯ.

ಜಪಾನ್ ರಾಜಧಾನಿಯಾದ ಟೋಕಿಯೋ ನಗರದಲ್ಲಿ ಸರ್ಕಾರದವರು ಪ್ರಕಟಿಸಿರುವುದೇನೆಂದರೆ—ರಷ್ಯಾದವರ ಮೂರು ಸೈನ್ಯಗಳು ಜಪಾನಿನವರ ರೈಲ್ ರಸ್ತೆಯ ಮೇಲೆ ನುಗ್ಗಿ ಬರುತ್ತಿದ್ದವು. ಜಪಾನಿನವರು ಅವರನ್ನು ತಾ. ೧೮ರಲ್ಲಿ ಸಂಧಿಸಿ, ಅವರ ಮೇಲೆ ಯುದ್ಧ ಮಾಡಿದರು ಅದೇ ಸಮಯದಲ್ಲಿ ೫೦೦ ಮಂದಿ ರಷ್ಯಾ ಕುದರೆ ಸವಾರರು ಲಿಯೋ ನದಿಯ ಬಲ ಪಾರ್ಶ್ವದಲ್ಲಿರುವ ಕಾಂಗ್‌ಪಿನ್ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಿದರು ಆದರೆ ಜಪಾನಿನವರು ಅವರನ್ನೆಲ್ಲಾ ಸೋಲಿಸಿ, ತುಂಬಾ ನಷ್ಟಪಡಿಸಿ, ಹಿಂದಕ್ಕೆ ಓಡಿಸಿರುತ್ತಾರೆ

ಮಾರ್ಷಲ್ ಓಯಾಮಾ ಯವರು ರಷ್ಯಾ ಸೈನ್ಯದ ಮೇಲೆ ನುಗ್ಗಿ ಹೋಗುತ್ತಿದ್ದಾರೆ. ರಷ್ಯಾ ಸೈನ್ಯದ ಜನರಲ್ ಲಿನೆವಿಚ್ ಯವರು ಇಷ್ಟರಲ್ಲೇ ದೊಡ್ಡ ಯುದ್ಧ ಕೊಡುತ್ತಾರೆಂದು ಕಾಣುವುದು.

ರಷ್ಯಾದವರ ಇನ್ನೊಂದು ಸೋಲು

ಲಂಡನ್, ಮೇ ೨೧ —ತಾ ೧೯ರಲ್ಲಿ ಜಪಾನ್ ಮಾರ್ಷಲ್ ಓಯಾಮಾಯವರು ಫಾಕುಮೆನ್ ಮತ್ತು ವೀರ್‌ಜ್ಯಾನ್‌ಪೂಮೆನ್ ಎಂಬೀ ಕಡೆಗಳಲ್ಲಿ ರಷ್ಯಾದವರ ಕುದುರೆ ಸವಾರ್ ಸೈನ್ಯವನ್ನು [illegible] ಸಂಧಿಸಿ, ಯುದ್ಧಮಾಡಿ ಸೋಲಿಸಿರುತ್ತೇವೆ ಎಂಬ ತಂತೀವರ್ತಮಾನ ಕೊಟ್ಟಿದ್ದಾರೆ.

ಮಂಚೂರಿಯಾಕ್ಕೆ ಹೊಸ ಸೈನ್ಯ

ಲಂಡನ್, ಮೇ ೨೨ ರಷ್ಯಾದವರು ತಮ್ಮ ಸೈನ್ಯಗಳನ್ನು ಹೊಸ ಹೊಸದಾಗಿ ಯುದ್ಧಭೂಮಿಗೆ ಕಳುಹಿಸುತ್ತಿದ್ದಾರೆ ಯುದ್ಧಕಾರ್ಯದಲ್ಲಿ ಚತುರರಾಗಿಯೂ ಚಟುವಟಿಕೆಯುಳ್ಳವರಾಗಿಯೂ ಇರತಕ್ಕವರನ್ನೇ ಆರಾಯಿಸಿ ಕಳುಹಿಸುವರು.

ಬಾಲ್ಟಿಕ್ ಜಹಜುಗಳು.

ಅಡ್ಮಿರಲ್ ರಾಸ್‌ಡೆಸ್‌ವೆನ್ಸ್ಕಿ ಯವರು ಬಾಲ್ಟಿಕ್ ಜಹಜುಗಳ ಸಹಿತ ನೆಟ್ಟಗೆ ಉತ್ತರ ದಿಕ್ಕಿನಲ್ಲಿ [illegible] ವ್ಲಾಡಿವೊಸ್ಟಾಕನ್ನು ತಲುಪುವವರಾಗಿದ್ದಾರೆ. ಅವರು ಪೆಸ್ಕಾಡೋರೀಸ್ ಎಂಬ ರಾಜ್ಯವನ್ನು ಬಿಟ್ಟು, ಫಾರ್ಮೋಸಾ ದ್ವೀಪದ [illegible] ಭಾಗದಲ್ಲಿ ಹೋಗುತ್ತಿದ್ದಾರೆ.

ಅಡ್ಮಿರಲ್ ಬಿರಿಲೆಫ್ ಯವರು.

ರಷ್ಯಾ ನವೀನ ಸೈನ್ಯದ ಹೊಸ ಅಧಿಪತಿಯಾದ ಅಡ್ಮಿರಲ್ ಬಿರಿಲೆಫ್ ಯವರು ತಾ ೨೫ರಲ್ಲಿ ಸೇಂಟ್ ಪೀಟರ್ಸ್‌ಬರ್ಗಿನಿಂದ ಯುದ್ಧಭೂಮಿಗೆ ಪ್ರಯಾಣಮಾಡುವರು.

ವಿಶೇಷ ಸಮಾಚಾರಗಳು.

ಸೂರತ್ ಡಿಸ್ಟ್ರಿಕ್ಟಿನ ಕಲೆಕ್ಟರವರು ಪ್ರಕಟಿಸಿರುವ ಅಲ್ಲಿನ ಕಾಲ ಸ್ಥಿತಿಯ ರಿಪೋರ್ಟಿನಿಂದ ತಿಳಿದುಬರುವುದೇನೆಂದರೆ—೧೯೦೪—೦೫ನೆ ಸಾಲಿನಲ್ಲಿ ಓಲ್ಪಾಡ, ಚೋರಾಸಿ, ಪರಾಂಬ್ರಾ, ಈ ಮೂರು ತಾಲ್ಲೂಕುಗಳಲ್ಲೂ ಬೆಳೆಗಳ ಸುತ್ತುಮುತ್ತಲೂ ಮಳೆ [illegible] ಸರಿ ಪೈರು ಬಂದು ಕಾಳೂ ಆಗಲಿಲ್ಲ. ಯಾವ ಬೆಳೆ ಕಟ್ಟೆಯಲ್ಲೂ ಸರಿ ಇಲ್ಲ. ಓಲ್ಪಾಡ ತಾಲ್ಲೂಕಿನಲ್ಲಿ ಒಂದು ಬೆಳೆಯಾದರೂ ರೈತರ ಕೈಗೆ ಸಿಕ್ಕದೆಹೋಯಿತು. ಸೂರತ್ ಡಿಸ್ಟ್ರಿಕ್ಟಿನಲ್ಲೆಲ್ಲಾ ಭತ್ತದ ಬೆಳೆ ಆಗಲೇ ಇಲ್ಲ. ಆದಕಾರಣ ಆ ಪ್ರಾಂತ್ಯಗಳಲ್ಲಿ ಒಟ್ಟು ೨,೬೧,೪೧೫ ರೂಪಾಯಿನ ಕಂದಾಯ ಕಂತುಗಳನ್ನು ರೈತರಿಗೆ ರಿಮಿಷನ್ ಮಾಡಲಾಗಿದೆ ಇದಲ್ಲದೆ ೪,೦೦,೯೬೭ ರೂಪಾಯಿ ಕಂದಾಯಗಳನ್ನು ಈಗ ವಸೂಲು ಮಾಡದಂತೆ ತಡೆಮಾಡಿ, ಇನ್ನು ಮುಂದೆ ಸುಭಿಕ್ಷ ಕಾಲದಲ್ಲಿ ವಸೂಲ್ ಮಾಡಬೇಕೆಂದು ಹುಕುಂ ಕೊಡಲಾಗಿದೆ ಎಂಬುದೇ

****

ಇಂಡಿಯಾ ಗವರ್ನಮೆಂಟಿನವರು ಪ್ರಜೆಗಳ ಪ್ರಯೋಜನವನ್ನು ಚಿಂತಿಸಿ, ನಾಲ್ಕಾಣೆಗೆ ಒಂದು ತಂತೀ ವರ್ತಮಾನವನ್ನು ಊರಿಂದೂರಿಗೆ ಕಳುಹಿಸುವಂತೆ ಏರ್ಪಾಡು ಮಾಡಿದ್ದಾರೆ. ಆದರೆ ಈ ತಂತೀವರ್ತಮಾನದಲ್ಲಿ ವಿಳಾಸಗಳು ಆರು ಮಾತುಗಳನ್ನು [illegible] ಬಿಟ್ಟು, ವರ್ತಮಾನದಲ್ಲಿ ನಾಲ್ಕು ಮಾತುಗಳನ್ನು ಮಾತ್ರ ಬರೆಯತಕ್ಕದೆಂದೂ ಹೆಚ್ಚಾದರೆ ಪ್ರತಿ ಮಾತಿಗೂ ಒಂದೊಂದು ಆಣೆಯಂತೆ ಹೆಚ್ಚು ಹಣ ಕೊಡಬೇಕೆಂದೂ ವಿಧಿಸಿದ್ದಾರೆ ಇದರಲ್ಲಿ ಅನೇಕರಿಗೆ ತೊಂದರೆಯುಂಟಾಗುತ್ತದೆ ಎಂಬುವುದನ್ನು ತಿಳಿದು ಈಗ ಅವರು ಈ ಕ್ರಮವನ್ನು ಬದಲಾಯಿಸಿರುತ್ತಾರೆ. ಅದೇನೆಂದರೆ ವಿಳಾಸಗಳಲ್ಲೂ ಸಮಾಚಾರ ಬರೆಯುವ ಭಾಗದಲ್ಲೂ ಒಟ್ಟು ಹತ್ತು ಮಾತುಗಳನ್ನು ನಾಲ್ಕಾಣೆಗೆ ಬರೆದುಕೊಡಬಹುದು. ಇದರಿಂದ ವಿಳಾಸದಲ್ಲಿ ಮೂರು ನಾಲ್ಕು ಮಾತುಗಳನ್ನು ಮಾತ್ರ ಬರೆದು, ವರ್ತಮಾನದಲ್ಲಿ ಆರೇಳು ಮಾತುಗಳನ್ನು ಬರೆಯಲು ಅನುಕೂಲವಾಯಿತು. ಈ ಹೊಸ ಪದ್ಧತಿಯು ಈ ವರುಷ ಜುಲೈ ಪ್ರಾರಂಭದಿಂದ ಜಾರಿಗೆ ಬರುವುದು.

****

ಈಗ ಚಕ್ರವರ್ತಿ ಸಾರ್ವಭೌಮರಾಗಿರುವ ಏಳನೇ ಎಡ್ವರ್ಡ್ ಪ್ರಭುಗಳು ಪ್ರಿನ್ಸ್ ಆಫ್ ವೇಲ್ಸರಾಗಿ ಕಳೆದ ೧೮೭೫—೭೬ರಲ್ಲಿ ಹಿಂದೂಸ್ಥಾನದಲ್ಲಿ ಸಂಚಾರ ಮಾಡುತ್ತಿದ್ದಾಗ ಜಯಪುರ ಸಂಸ್ಥಾನಕ್ಕೆ ದಯಮಾಡಿದ್ದರು. ಆಗ್ಗೆ ಜಯಪುರದ ಮಹಾರಾಜರವರು ಮಾಸ್ಟರ್ ವೆರೆಷ್ಚಾಗಿನ್ ಎಂಬೊಬ್ಬ ಪ್ರಸಿದ್ಧ ರಷ್ಯಾ ಚಿತ್ರಗಾರನ ಕೈಯಿಂದ ಚಕ್ರವರ್ತಿಯವರ ಚಿತ್ರವನ್ನು ಅವರನ್ನು ಎದುರಿಗೆ ನಿಲ್ಲಿಸಿಕೊಂಡು, ಬಹು ಸುಂದರವಾಗಿಯೂ ಅವರ ರೂಪು ರೇಖೆಗಳಲ್ಲಿ ಸ್ವಲ್ಪವೂ ತಪ್ಪಿಲ್ಲದೆಯೂ ಬರೆಸಿದ್ದರು. ಈ ಚಿತ್ರವು ಕಾಲಾಂತರಗಳಿಂದ ಕೈಬಿಟ್ಟು, ಅಮೇರಿಕದಲ್ಲಿ ಒಬ್ಬ ದೊಡ್ಡಮನುಷ್ಯನ ಬಳಿಯಲ್ಲಿ ಸೇರಿಕೊಂಡಿತ್ತು ಜಯಪುರದ ಮಹಾರಾಜರವರು ವೈಸ್‌ರಾಯ್ ಲಾರ್ಡ್ ಕರ್ಜನ್ ಪ್ರಭುಗಳಿಗೆ ಬರೆದು, ಅವರಿಂದ ಅಮೇರಿಕಕ್ಕೆ ಬರೆಸಿ, ಆ ದೊಡ್ಡಮನುಷ್ಯನಿಗೆ ಹಣ ಕೊಟ್ಟು, ಅದನ್ನು ತರಿಸುವಂತೆ ಏರ್ಪಾಡು ಮಾಡಿದ್ದಾರೆ ಈ ಚಿತ್ರವು ಈಗ ಅಮೇರಿಕದಿಂದ ಹಿಂದೂಸ್ಥಾನಕ್ಕೆ ಬರುತ್ತಿರುವುದು. ಅದು ಬಂದ ಮೇಲೆ ಮಹಾರಾಜರವರು ಅದನ್ನು ಕಲ್ಕತ್ತೆಯಲ್ಲಿ ಲಾರ್ಡ್ ಕರ್ಜನ್ ಪ್ರಭುಗಳು ಕಟ್ಟಿಸುತ್ತಿರುವ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆಯಲ್ಲಿ ಇಟ್ಟುಕೊಳ್ಳಲು ಕಳುಹಿಸುವರು.

****

ಅಸ್ಸಾಂ ಪ್ರಾಂತ್ಯಕ್ಕೆ ಸೇರಿದ ಕಾಡುಗಾರ್ ಎಂಬಲ್ಲಿ ಒಂದು ಹಳೇ ಹೆಣ್ಣು ಹುಲಿ ಸೇರಿಕೊಂಡು, ಇದುವರೆಗೆ ಸುಮಾರು ಮುನ್ನೂರು ಜನರನ್ನು ಕೊಂದು ತಿಂದು, ಯಾರಿಗೂ ಸಿಕ್ಕದೆ ಅಲೆಯುತ್ತಾ ಇತ್ತು. ಇದನ್ನು ಕೊಂದವರಿಗೆ ೩೫೦ ರೂಪಾಯಿ ಇನಾಮು ಕೊಡುತ್ತೇವೆಂದು ಸಾರಿಸಿದ್ದರು. ಕಳೆದ ೬ನೇ ತಾರೀಖಿನ ದಿನ ಈ ಹುಲಿಯು [illegible] ಊರೊಳಕ್ಕೆ ನುಗ್ಗಿ ಒಬ್ಬ ಹೆಂಗಸನ್ನು ಹಿಡಿದು, ಎತ್ತಿಕೊಂಡು ಹೋಯಿತು ಅಲ್ಲಿದ್ದ ಮಿ॥ ಡಿಸ್ಟ್ರಿಕ್ಟ್ ಇಂಜಿನಿಯರವರು ಈ ಸುದ್ದಿಯನ್ನು ಕೇಳಿ, ಬಂದೂಕು ಸಹಿತ ಅದನ್ನು ಅಟ್ಟಿಕೊಂಡು ಹೋಗಿ, ಕಾಡಿನಲ್ಲಿ [illegible] ತನಕ ಒಂದು ಮರದ ಮೇಲೆ ಕುಳಿತುಕೊಂಡು, ಹುಲಿಯನ್ನೇ ಕಾದಿದ್ದರು. ಆಗ ಅದು ಪೊದೆಯಿಂದ ಹೊರಕ್ಕೆ ಬಂತು. ಕೂಡಲೇ ಅವರು ಗುರಿಯಿಟ್ಟು ಗುಂಡು ಹೊಡೆದರು. ಒಂದೇ ಏಟಿಗೆ ಹುಲಿಯು ಸತ್ತು ಬಿದ್ದಿತು. ಅಲ್ಲಿಂದ ಮಿ॥ ಡಿಸ್ಟ್ರಿಕ್ಟ್ ಇಂಜಿನಿಯರವರು ಅದನ್ನು ಹೊರಿಸಿ ತಂದು, ಊರಲ್ಲೆಲ್ಲಾ ಮೆರವಣಿಗೆ ಮಾಡಿಸಿದರು ಈ ಹುಲಿಯು ಸುಮಾರು ೮ ಅಡಿ [illegible] ದೊಡ್ಡದಾಗಿಯೂ ಇತ್ತು. ಇಂಥಾ ಭಯಂಕರವಾದ ಭಾರೀ ಮೃಗದ ಬಾಧೆಯನ್ನು ನಿವಾರಣೆಮಾಡಿದ್ದಕ್ಕಾಗಿ ಪ್ರಜೆಗಳೆಲ್ಲಾ ಮಿ॥ [illegible]

ಮನಸ್ಸಾಕ್ಷಿ

III—ಅದರ ಕೆಟ್ಟಲು

ನಮ್ಮಲ್ಲಿರುವ ಮನಸ್ಸಾಕ್ಷಿಯು ಮೂರು ನಾಲ್ಕು ವಿಷಯಗಳನ್ನು ಕುರಿತು ಸಾಕ್ಷಿ ನುಡಿಯುತ್ತದೆಂದು ಹಿಂದಣ ವಾರ ನೋಡಿದೆವಷ್ಟೆ. ದೇವರು ಇದ್ದಾನೆಂದೂ ಆತನು ನಮ್ಮ ಸಂಗಡ ಮಾತಾಡುತ್ತಾನೆಂದೂ ಅದು ನಮಗೆ ಕೇಳಿಸುತ್ತದೆಂದೂ ನಾವು ಜವಾಬ್ದಾರರಾಗಿರುವದರಿಂದ ನಮ್ಮ ಕೈಯಲ್ಲಿ ಒಪ್ಪಿಸಿಕೊಟ್ಟಿರುವ ಕರ್ತವ್ಯವೆಂಬ ದ್ರವ್ಯದ ವಿಷಯದಲ್ಲಿ ನಾವು ಲೆಕ್ಕವನ್ನು ಕೊಡಬೇಕಾಗಿದೆಯೆಂದೂ ಭಗವಂತನು ಬ್ರಹ್ಮತದಲ್ಲಿ ತನ್ನ ಕೃಪೆಯ ಮೂಲಕ ದಿನ ದಿನವೂ ನ್ಯಾಯತೀರ್ಪು ಮಾಡುತ್ತಾನೆಂದು ಕಡೆಯಲ್ಲಿ ನ್ಯಾಯಾಧೀಶನಾಗಿ ನಮ್ಮ ನಮ್ಮ ಗುಣಕ್ಕೆ ತಕ್ಕಹಾಗೆ ಪ್ರತ್ಯೇಕಿಸುವನೆಂದೂ ಮನಸ್ಸಾಕ್ಷಿಯ ದೆಸೆಯಿಂದ ತಿಳುಕೊಳ್ಳುತ್ತೇವೆ. ಈಗ ಇದರ ವಿಷಯ ಇನ್ನೊಂದು ಸಂಗತಿಯನ್ನು ನೋಡಬೇಕಾಗಿದೆ. ನಮ್ಮ ಅವಯವಗಳು ತಮ್ಮ ತಮ್ಮ ವ್ಯಾಪಾರಗಳನ್ನು ಯಾವಾಗಲೂ ಕ್ರಮವಾಗಿ ನಡಸುತ್ತವೆಯೋ ? ಇಲ್ಲ. ದೃಷ್ಟಾಂತವಾಗಿ—ಕೆಲವು ವೇಳೆ ನಮ್ಮ ಕಣ್ಣು ಬಣ್ಣಗಳನ್ನು ಭೇದಿಸಿ ತಿಳಿಯತಕ್ಕ ಶಕ್ತಿಯನ್ನು ಕಳೆದುಕೊಳ್ಳುವದರಿಂದ ಒಂದು ಬಣ್ಣಕ್ಕೂ ಬೇರೊಂದು ಬಣ್ಣಕ್ಕೂ ಇರುವ ವ್ಯತ್ಯಾಸವನ್ನು ಪರಿಷ್ಕಾರವಾಗಿ ತಿಳಿಯುವದು ಕಷ್ಟವಾಗಿಬಾತ್ತದೆ. ಕೆಲವರಿಗೆ ಕತ್ತಲಲ್ಲಿ ಪೂರ ಬೆಳೆದು ದೃಷ್ಟಿಯೇ ಮಂದವಾಗಿ ಹೋಗಿರುತ್ತದೆ. ಕೆಲವರಿಗೆ ಕಣ್ಣೇ ನಷ್ಟವಾಗಿ ಹೋಗಿರುವದುಂಟು. ಹೀಗೆ ದೃಷ್ಟಿಯಲ್ಲಿ ನಷ್ಟವನ್ನು ಹೊಂದಿರುವ ಮನುಷ್ಯನು—ನನಗೆ ಕಣ್ಣು ಕಾಣುತ್ತದೆಯೆಂದು ಹೇಳಿದರೂ ಪ್ರಯೋಜನವೇನು ? ಇದೇ ಪ್ರಕಾರವಾಗಿ ಕಿವಿ, ನಾಲಿಗೆ ಮೊದಲಾದ ಬೇರೆ ಇಂದ್ರಿಯಗಳ ವ್ಯಾಪಾರದ ವಿಷಯದಲ್ಲಿಯೂ ಹೇಳಬಹುದು. ಇದನ್ನು ನಮ್ಮ ಆತ್ಮಸಂಬಂಧವಾದ ಮನಸ್ಸಾಕ್ಷಿಯೆಂಬ ಇಂದ್ರಿಯದ ವಿಷಯದಲ್ಲಿಯೂ ಹೇಳಬಹುದೇ ? ಧಾರಾಳವಾಗಿ ಹೇಳಬಹುದು. ಒಬ್ಬರು ಯಾವದಾದರೊಂದು ಕೃತ್ಯವನ್ನು ಮಾಡಿ ಅವನ್ನು ಗರಿಯೊಂದು ಸ್ಥಿರಪಡಿಸುವದಕ್ಕಾಗಿ—ನನ್ನ ಮನಸ್ಸಾಕ್ಷಿಯು ಇದಕ್ಕೆ ಯಾವ ಆಕ್ಷೇಪಣೆಯನ್ನೂ ಮಾಡುವದಿಲ್ಲವೆಂದು ಹೇಳುವದುಂಟು. ಆದರೆ ಮನಸ್ಸಾಕ್ಷಿಯು ಒಪ್ಪುವದೆಲ್ಲಾ ಸರಿಯೆಂದು ತೀರ್ಮಾನಿಸುವದಕ್ಕಾಗುವದಿಲ್ಲ. ಯಾತಕ್ಕೆಂದರೆ ಕತ್ತಲಲ್ಲಿ ಪೂರ ಬೆಳೆದಿರುವದರಿಂದ ಕಣ್ಣು ಕಾಣುತ್ತದೆಯೆಂದು ಹೇಳುವದು ಹ್ಯಾಗೆ ಸಮ್ಮತವಾಗಲಾರದೋ ಹಾಗೆಯೇ ಮನಸ್ಸಾಕ್ಷಿಯಲ್ಲಿಯೂ ಕೊರತೆಯಿರುವದರಿಂದ ಮನಸ್ಸಾಕ್ಷಿಯು ಹೇಳುವದೆಲ್ಲಾ ಒಪ್ಪತಕ್ಕದೆಂದು ಒಪ್ಪುವದಕ್ಕೂ ಆಧಾರವಿಲ್ಲ. ಇದಕ್ಕೆ ಸರಿಯಾಗಿ ದಿವ್ಯ ಬೋಧಕನಾದ ಯೇಸುಸ್ವಾಮಿಯೂ ಸಹ—ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದಿರುವದೇನು ? ಎಂದು ಹೇಳಿರುವದು ಒಪ್ಪುತ್ತದೆ

ಸತ್ಯವೇದದ ಹೊಸ ಒಡಂಬಡಿಕೆಯಲ್ಲಿ ಕೊರತೆಯುಳ್ಳ ಮನಸ್ಸಾಕ್ಷಿಯನ್ನು ಸೂಚಿಸುವದಕ್ಕೆ ಮೂರು ಪದಗಳನ್ನು ಉಪಯೋಗಿಸಿರುತ್ತದೆ. ಅವು ಯಾವವೆಂದರೆ—೧. ಬಲಹೀನವಾದ ಮನಸ್ಸಾಕ್ಷಿ, ೨. ಅಶುದ್ಧವಾದ ಮನಸ್ಸಾಕ್ಷಿ, ೩. ಬರೆ ಹಾಕಿಸಿಕೊಂಡ ಮನಸ್ಸಾಕ್ಷಿ. ಈ ಪ್ರಕಾರ ಮನಸ್ಸಾಕ್ಷಿಗೆ ಮೂರು ಬಗೆಯ ವ್ಯಾಧಿಗಳುಂಟು. ದೇಹದ ಯಾವದಾದರೊಂದು ಅವಯವಕ್ಕೆ ರೋಗವು ಹಿಡಿಯಲಾಗಿ ಅದಕ್ಕೆ ನಾವೇ ಜವಾಬ್ದಾರರೆಂದು ಹೇಳಲಾಸ್ಪದವಿಲ್ಲದಿದ್ದರೂ ಆತ್ಮಸಂಬಂಧವಾದ ಅವಯವವು ರೋಗಗ್ರಸ್ತವಾದರೆ ಅದಕ್ಕೆ ಬಹುಶಃ ನಮ್ಮ ತಪ್ಪೇ ಕಾರಣವಾಗಿದೆಯೆಂದು ಹೇಳಬೇಕಾಗಿದೆ. ನಾವು ಮೇಲೆ ಹೇಳಿದ ಮನಸ್ಸಾಕ್ಷಿಯ ಮೂರು ಬಗೆಯ ವ್ಯಾಧಿಯನ್ನು ಮುಂದೆ ವಿವರಿಸುವೆವು

೧. ಬಲಹೀನವಾದ ಮನಸ್ಸಾಕ್ಷಿಯೆಂದರೆ—ದೇವರ ಶಬ್ದವಿಂಥಾದುದೆಂದು ಯಾವ ಮನಸ್ಸಾಕ್ಷಿಯು ಪರಿಷ್ಕಾರವಾಗಿ ಗ್ರಹಿಸಲಾರದೋ ಅಂಥ ಮನಸ್ಸಾಕ್ಷಿಯೇ ಬಲಹೀನವಾದುದು. ಹೀಗಿರುವದರಿಂದ ಯಾವದಾದರೊಂದು ಕಾರ್ಯದ ವಿಷಯದಲ್ಲಿ ಸರಿಯೋ ತಪ್ಪೋ ಎಂದು ಪ್ರಶ್ನಿಸಿದ ಬಳಿಕ ಅದಕ್ಕೆ ನಿಸ್ಸಂದೇಹವಾಗಿ ಉತ್ತರವನ್ನು ಕೊಡಲಾರದಾಗಿರುತ್ತದೆ. ಆದಕಾರಣ ಪಾಪಬಹುಳವಾದ ಕಾರ್ಯಗಳನ್ನು ಪುಣ್ಯಕೃತ್ಯಗಳೆಂದೂ ಪುಣ್ಯಕೃತ್ಯಗಳನ್ನು ಪಾಪಬಹುಳದ ಕಾರ್ಯಗಳೆಂದೂ ನಿರ್ಧರಿಸುತ್ತದೆ

೨. ಅಶುದ್ಧವಾದ ಮನಸ್ಸಾಕ್ಷಿಯೆಂದರೆ—ಸಾಧಾರಣವಾದ ಪಾಪಕೃತ್ಯಗಳನ್ನು ಮಾಡಿದರೆ ವಿಶೇಷ ದೋಷವಲ್ಲವೆಂದು ಪ್ರಾರಂಭದಲ್ಲಿ ಹೇಳುವಂಥ ಮನಸ್ಸಾಕ್ಷಿಯೇ ಇದು. ಇಮರ್ಲವಾದ ಪ್ರದೇಶದಲ್ಲಿ ಅಣು ಮಾತ್ರವಾದ ಧೂಳು ಕೂತಿದ್ದರೆ ಅವು ಕಾಣದೆ ಹೋದಾಗ್ಯೂ ಆ ನಿರ್ಮಲ ಪ್ರದೇಶವು ಹ್ಯಾಗೆ ಅಶುದ್ಧವಾಗುವದೋ ಹಾಗೆಯೇ ಈ ಅಶುದ್ಧವಾದ ಮನಸ್ಸಾಕ್ಷಿಯ ಸ್ಥಿತಿಯೂ ಉಂಟು. ಸಣ್ಣವುಗಳೆಂದೆನಿಸಿಕೊಳ್ಳುವ ಪಾಪಕೃತ್ಯಗಳಿಗೆ ಯಾರು ಅವಕಾಶವನ್ನು ಕೊಡುತ್ತಾರೋ ಅವರ ಮನಸ್ಸಾಕ್ಷಿಯು ಅಶುದ್ಧವಾಗಿ ದೊಡ್ಡ ದೊಡ್ಡ ಪಾಪಗಳನ್ನೂ ಧಾರಾಳವಾಗಿ ಮಾಡತಕ್ಕವರಾಗುತ್ತಾರೆ. ಮನೆಯನ್ನು ನಿತ್ಯವೂ ಗುಡಿಸದಿದ್ದರೆ ಧೂಳು ಸ್ವಲ್ಪ ಸ್ವಲ್ಪವಾಗಿ ತುಂಬುತ್ತಾ ಬಂದು ಕಡೆಗೆ ಮನೆಯೆಲ್ಲಾ ಅಶುದ್ಧವಾಗುವದು ಹ್ಯಾಗೋ ಹಾಗೆಯೇ ಅಶುದ್ಧವಾದ ಮನಸ್ಸಾಕ್ಷಿಯ ಸ್ಥಿತಿಯೂ ಇರುತ್ತದೆ

೩. ಬರೆ ಹಾಕಿಸಿಕೊಂಡ ಮನಸ್ಸಾಕ್ಷಿಯೆಂದರೆ—ಸುಡತಕ್ಕ ವಸ್ತುಗಳನ್ನು ಕೈಯಿಂದ ಹಿಡಿಯುತ್ತಲೇ ಇದ್ದರೆ ಕಾಲಕ್ರಮೇಣ ಕೈಯಿನ ಚರ್ಮವು ಒರಟಾಗಿ ಹೋಗಿಬಿಡುತ್ತದೆ. ಅದೇ ಪ್ರಕಾರವಾಗಿ ಮನಸ್ಸಾಕ್ಷಿಯು ಬೇಡ ಬೇಡ ಎಂಬದಾಗಿ ಎಚ್ಚರಿಸುತ್ತಿರುವಾಗ ಯಾವ ಮನುಷ್ಯನು ಅದರ ಮಾತಿಗೆ ಕಿವಿಗೊಡದೆ ಧಿಕ್ಕರಿಸುತ್ತಿರುವನೋ ಅವನ ಮನಸ್ಸಾಕ್ಷಿಯು ಬರೆ ಹಾಕಿಸಿಕೊಂಡದ್ದಾಗುತ್ತದೆ. ಅಂದರೆ ಅವನು ಮೊದಲು ಯಾವ ಕಾರ್ಯವನ್ನು ಮಾಡುವದಕ್ಕೆ ಬಹು ಭಯಪಡುತ್ತಿದ್ದನೋ ಅದನ್ನು ಈಗ ಧಾರಾಳವಾಗಿ ನಡಸುವವನಾಗಿದ್ದಾನೆ. ಬಾಹ್ಯಾಚಾರಗಳಲ್ಲಿ ಮಾತ್ರ ಕೇವಲ ನಿಷ್ಠರಾಗಿ ನೀತಿ ಸತ್ಯ ಶುಚಿತ್ವ ಮೊದಲಾದ ಅಂತರ್ಯ ಭಕ್ತಿಯಲ್ಲಿ ಯಾರು ಅಶ್ರದ್ಧರಾಗಿರುತ್ತಾರೋ ಅವರ ಮನಸ್ಸಾಕ್ಷಿಯ ಸ್ಥಿತಿಯು ಹೀಗಿರುತ್ತದೆ. ಅನ್ನಪಾನ, ಬಟ್ಟೆಬರೆ, ಸ್ನಾನಪಾನ ಮೊದಲಾದ ವಿಷಯಗಳಲ್ಲಿ ಬಹು ಶೀಲವಂತರಾಗಿದ್ದ ಮಾತ್ರಕ್ಕೆ ಮಹಾ ಪಾವನ ಪುರುಷರೆಂದು ಭಾವಿಸಿಕೊಳ್ಳುವವರ ಮನಸ್ಸಾಕ್ಷಿಯು ಬರೆ ಹಾಕಿಸಿಕೊಂಡದ್ದಾಗಿರುತ್ತದೆ.

ಕೆಲವರ ಮನಸ್ಸಾಕ್ಷಿಯು ಮೋಸಕ್ಕೊಳಗಾಗಿರುತ್ತದೆ. ಇದಕ್ಕೆ ದೃಷ್ಟಾಂತವಾಗಿ ೧ ಅರಸು. ೧೩ ೧೫—೧೮ ನ್ನು ಓದಿ ನೋಡಿರಿ. ಇನ್ನು ಕೆಲವರ ಮನಸ್ಸಾಕ್ಷಿಯು ತಕ್ಕಷ್ಟು ತಿಳುವಳಿಕೆಯಿಲ್ಲದ್ದಾಗಿರುತ್ತದೆ. ಸೌಲನೆಂಬ ರಾಜನು ಒಂದಾನೊಂದು ಕಾಲದಲ್ಲಿ ಅಕೃತ್ಯವನ್ನು ಮಾಡಿ—ನಾನು ತಿಳಿಯದೆ ಮಾಡಿದೆನು ಎಂದು ಹೇಳಿದನು. ಅವನ ಮನಸ್ಸಾಕ್ಷಿಯು ತಿಳುವಳಿಕೆಯಿಲ್ಲದ್ದಾಗಿತ್ತು. ಬೇರೆ ಕೆಲವರ ಮನಸ್ಸಾಕ್ಷಿಯು ಪೂರ್ವಭಾವಿಯಾಗಿಯೇ ವೈಷಮ್ಯದಿಂದ ತುಂಬಿರುತ್ತದೆ. ಅಂದರೆ—ನಜರೇತಿನಿಂದ ಒಳ್ಳೇದೇನಾದರೂ ಹುಟ್ಟೀತೇ ? ಎಂದು ಹೇಳಿದ ಆ ನತನಯೇಲನೆಂಬವನ ಮನಸ್ಸಾಕ್ಷಿಯು ಇಂಥಾದ್ದು. ಕೆಲವರ ಮನಸ್ಸಾಕ್ಷಿಯು ಸಂಪೂರ್ಣನಾಗಿ ಕೆಟ್ಟುಹೋಗಿರುತ್ತದೆ. ಇಂಥವರನ್ನು ಕುರಿತು ಯೆಶಾಯನೆಂಬ ಪ್ರವಾದಿಯು—ಕೆಟ್ಟದ್ದನ್ನು ಒಳ್ಳೇದೆಂದೂ ಒಳ್ಳೇದನ್ನು ಕೆಟ್ಟದ್ದೆಂದೂ, ಕತ್ತಲನ್ನು ಬೆಳಕೆಂದೂ ಬೆಳಕನ್ನು ಕತ್ತಲೆಂದೂ ಹೇಳುವವರಿಗೆ ಕಷ್ಟ ! ಎಂದು ಬಿನುಗುಟ್ಟುತ್ತಾನೆ. ಈ ಪರಿಯಾದ ಮನಸ್ಸಾಕ್ಷಿಗಳುಳ್ಳವರ ವಿಷಯದಲ್ಲಿ ಯೇಸುಸ್ವಾಮಿಯು—ನಿನ್ನಲ್ಲಿರುವ ಬೆಳಕು ಕತ್ತಲಾದರೆ ಆ ಕತ್ತಲು ಎಷ್ಟು ಅಪಾಯವಾಗಿರುವದು ! ಎಂದು ಹೇಳಿದನು

ಮೇಲೆ ಕಂಡ ದೃಷ್ಟಾಂತಗಳನ್ನು ನೋಡಲಾಗಿ—ಮನುಷ್ಯರು ತಾವು ಮಾಡುವಂಥಾದ್ದು ಬಹುಶಃ ತಮ್ಮ ಮನಸ್ಸಾಕ್ಷಿಗೆ ಒಪ್ಪುವಂಥಾದ್ದಾಗಿದ್ದರೂ ಪಾಪಕೃತ್ಯವೆಂದೇ ಹೇಳಬೇಕಾಗುತ್ತದೆ. ಯಾಕಂದರೆ ತಮ್ಮ ಮನಸ್ಸಾಕ್ಷಿಯು ಆ ಪ್ರಕಾರ ಕೆಟ್ಟುಹೋಗುವದಕ್ಕೆ ತಾವೇ ಕಾರಣರಾಗಿರುತ್ತಾರೆ ಎಂದು ತಿಳಿಯಬೇಕು. ತಮ್ಮ ಇಷ್ಟಕ್ಕೆ ಸರಿಯಾಗಿ ಮನಸ್ಸಾಕ್ಷಿಯನ್ನು ಬಗ್ಗಿಸಿಕೊಳ್ಳುವದೇ ಮನುಷ್ಯರಲ್ಲಿ ಬಹು ಸಾಧಾರಣವಾದ ಪದ್ಧತಿಯಾಗಿದೆ.

[ಸಶೇಷ]

ಅನ್ಯೋನ್ಯ ಸಹಕಾರಿ ವಿಶ್ವಾಸ ಸಂಘ ಬೇಕು.

ಇಂಡಿಯಾ ಸರ್ಕಾರದವರು ಹೋದ ವರ್ಷ ಕೋಆಪರೇಟಿವ್ ಕ್ರೆಡಿಟ್ ಸೋಸೈಟಿ (ಅನ್ಯೋನ್ಯ ಸಹಕಾರಿ ವಿಶ್ವಾಸ ಸಂಘ)ಗಳನ್ನು ಸ್ಥಾಪಿಸುವ ವಿಷಯದಲ್ಲಿ ಒಂದು ಕಾಯಿದೆಯನ್ನು ಮಾಡಿದರಷ್ಟೆ. ಬಡ ರೈತರಿಗೂ ಕೈಗಾರಿಕೆಯವರಿಗೂ ಬೇಕಾದಾಗ ಹಗುರವಾದ ಬಡ್ಡಿಯಿಂದ ಸಾಲ ದೊರಿಯಬೇಕಾಗಿ ಈ ಸಂಘಗಳ ಸ್ಥಾಪನೆಯಾದದ್ದು ವಾಚಕರಿಗೆ ಅರಿಕೆಯುಂಟು. ಆದರೆ ಪಟ್ಟಣಗಳಲ್ಲಿಯೂ ದೊಡ್ಡ ಗ್ರಾಮಗಳಲ್ಲಿಯೂ ಈ ಸಂಘಗಳಿಂದ ಅನ್ಯ ಜನರಿಗೂ ಪ್ರಯೋಜನಮಾಡಿಕೊಳ್ಳಲಿಕ್ಕೆ ಅನುಕೂಲವಿದೆ

ನಮ್ಮ ಇಲಾಖೆಯಲ್ಲಿ ಈ ಸಂಘಗಳನ್ನು ಸ್ಥಾಪಿಸುವ ವಿಷಯವಾಗಿ ಒಬ್ಬ ರೆಜಿಸ್ಟ್ರಾರನ್ನು ಸರಕಾರದವರು ನೇಮಿಸಿರುವರು. ಮೊ॥ ಗಿಬ್ಬ್ ಸಾಹೇಬರು ರಜಾ ಪಡೆದು, ಹೋದ ಬಳಿಕ ಅವರ ಕೆಲಸಕ್ಕೆ ನೇಮಿಸಲ್ಪಟ್ಟವರಾದ ಮಿ ಮ್ಯಾಕ್‌ನೀಲ್ ಸಾಹೇಬರೇ ಈ ರೆಜಿಸ್ಟ್ರಾರರಾಗಿರುವರು. ಇವರು ಕಲೆಕ್ಟರರಾಗಿ ಬಂದಾಗ್ಯೂ ರೆಜಿಸ್ಟ್ರಾರ ಅಧಿಕಾರವು ಇವರ ಕೈಯಲ್ಲಿ ಇರುತ್ತದೆ. ಈ ರೆಜಿಸ್ಟ್ರಾರರನ್ನು ನೇಮಿಸಿದ ಬಳಿಕ ನಮ್ಮ ಇಲಾಖೆಯ ಕೆಲಕೆಲವು ಭಾಗಗಳಲ್ಲಿ ಇಂಥಾ ಸಂಘಗಳ ಸ್ಥಾಪನೆಯಾದ ಸುದ್ದಿಯುಂಟು. ಆದರೆ ನಮ್ಮ ಕಡೆಗಳಲ್ಲಿ ಇವುಗಳ ಪ್ರಾದುರ್ಭಾವವು ಇನ್ನೂ ಆದಂತೆ ತೋರುವದಿಲ್ಲ. ತಡವಾದುದಕ್ಕೆ ಕಾರಣವೇನೋ ತಿಳಿಯದು. ಈ ಸಂಘವನ್ನು ಏರ್ಪಡು ಮಾಡಿಕೊಳ್ಳಲಿಕ್ಕೆ ಬಹಳ ಪ್ರಯಾಸವೇನೂ ಇಲ್ಲ. ಊರೊಳಗಿನ ಹತ್ತು ಜನ ಸಂಭಾವಿತರು ಕೂಡಿ, ನಾವು ಅನ್ಯೋನ್ಯ ಸಹಕಾರೀ ಸಂಘವನ್ನು ಸ್ಥಾಪಿಸುತ್ತೇವೆಂದು ಸರಕಾರಕ್ಕೆ ಅರ್ಜಿಯನ್ನು ಮಾಡಿದರೆ ತೀರಿತು. ಅವರು ಆ ಸಂಘವನ್ನು ತಮ್ಮ ರಜಿಸ್ಟರಿಗೆ ದಾಖಲ್ ಮಾಡಿಕೊಂಡು, ಅರ್ಜಿದಾರರಿಗೆ ಸಂಘದ ಕಾರ್ಯಕ್ರಮಗಳ ವಿಷಯದಲ್ಲಿ ಸರಕಾರದವರು ಮಾಡಿರುವ ನಿಯಮಗಳನ್ನು ಕಳುಹಿಸಿಕೊಡುವರು. ಆ ನಿಯಮಗಳಂತೆ ಸಾಲ ಕೊಡುವ ಮತ್ತು ತಕ್ಕೊಳ್ಳುವ ವ್ಯವಹಾರ ನಡಿಯಬೇಕಾಗಿರುತ್ತದೆ. ಸಂಘವನ್ನು ಮಾಡಿಕೊಳ್ಳಲಿಕ್ಕೆ ಇಷ್ಟು ಸುಲಭ ಮಾರ್ಗವಿದ್ದಾಗ್ಯೂ ನಮ್ಮ ಕಡೆಯ ನಿವಾಸಿಗಳು, ಪ್ರಾಮುಖ್ಯವಾಗಿ ಮೈಸೂರಿನ ನಾಗರಿಕರು, ಇನ್ನೂ ಈ ಉದ್ಯೋಗ ಮಾಡದೆ ಇರುವದು ಆಲಸ್ಯದ ಗುರುತಾಗಿ ತೋರುತ್ತದೆ.

ಈ ಸಂಸ್ಥಾನದಲ್ಲಿ ಅನ್ಯೋನ್ಯ ಸಹಕಾರೀ ಸಂಘದ ಅಂಗಡಿಯಾಗುವದು ಅತ್ಯವಶ್ಯವಿರುತ್ತದೆ. ಧನಸಂಚಯವುಳ್ಳಂಥಾ ಜನರಿಗೆ ತಮ್ಮ ತಣವನ್ನಿಡಲಿಕ್ಕೆ ಸರಕಾರೀ ಬ್ಯಾಂಕು ಹೊರ್ತು ಬೇರೆ ವಿಶ್ವಾಸದ ಸ್ಥಳವಿಲ್ಲ. ಬ್ಯಾಂಕಿನ ಕಟ್ಟಳೆಗಳು ಬಿಗಿಯಾಗಿರುವ ಕಾರಣ ಅಲ್ಪ ಸ್ವಲ್ಪ ಹಣವಿಡುವವರು ಬ್ಯಾಂಕಿಗೆ ಹೋಗಲಿಕ್ಕೆ ಅಪೇಕ್ಷಿಸುವದಿಲ್ಲ. ಪ್ರಾಮುಖ್ಯವಾಗಿ ಹಣವುಳ್ಳಂಥ ಹೆಂಗಸರಿಗೆ ಗತಿಯೇ ಇಲ್ಲದ ಹಾಗಾಗಿದೆ. ತಮ್ಮವರೆಂಬ ವಿಶ್ವಾಸವಿಂದ ಹೆಂಗಸರು ತಮ್ಮ ಬಂಧುಬಳಗದವರ ಬಳಿಯಲ್ಲಿ ಹಣವನ್ನಿಟ್ಟರೆ, ಇಟ್ಟುಕೊಂಡವರೇ ಅದನ್ನು ನುಂಗಿ, ಒಡೆಯಳ ಕೈಯಲ್ಲಿ ಕರಟ ಕೊಡುವರು. ಇಂಥಾ ದೃಷ್ಟಾಂತಗಳನ್ನು ಈ ಪ್ರಾಂತ್ಯದಲ್ಲಿ ಬೇಕಾದಷ್ಟು ತೋರಿಸಬಹುದು. ಸಾವಿರಗಟ್ಟಲೆಯಿಂದ ರೊಕ್ಕಗಳುಳ್ಳವನೊಬ್ಬ ದೊಡ್ಡ ಗೃಹಸ್ಥನು ಕೆಲ ದಿವಸಗಳ ಹಿಂದೆ ತೀರಿಹೋಗಲು ಅವನ ಹೆಂಡತಿಯು ಭಾವಮೈದುನ ಮುಂತಾದವರ ಮೇಲೆ ಅತಿಮಾತ್ರವೂ ವಿಶ್ವಾಸವಿಡದೆ, ಗಂಡನ ಸಂಚಯವೆಲ್ಲ ಕೌರುವನಿಗೆ ತೆಗೆದುಕೊಂಡು ಹೋಗಿ ಅಣ್ಣತಮ್ಮಂದಿರ ಕೈಯಲ್ಲಿ ಕೊಟ್ಟಳು. ಅವರು ಎರಡು ಮೂರು ವರ್ಷದೊಳಗೆ ಅದನ್ನೆಲ್ಲ ಹಾಳುಮಾಡಿ, ಆ ಬಡ ವಿಧವೆಯನ್ನು ಅನ್ನಕ್ಕಾಗಿ ಮನೆಮನೆ ತಿರುಗ ಹಚ್ಚಿದರು. ಇಂಥಾ ದೃಷ್ಟಾಂತಗಳೆಷ್ಟೋ ವಾಚಕರಿಗೂ ಗೊತ್ತಿರಬಹುದು. ಇತರ ಹೊರ್ತು ಸಂಭಾವಿತರಾಗಿ ಮನೆತನ ಮಾಡಿಕೊಂಡು ಸುಖದಿಂದ ಇರುವಂಥಾ ಸದ್ಗೃಹಸ್ಥರಿಗೆ ಸಮಯ ಬಂದಾಗ ಬೆಳ್ಳಿ ಬಂಗಾರಗಳ ಒಡವೆಗಳನ್ನು ಒತ್ತೇ ಇಟ್ಟ ಹೊರ್ತು ಐದು ರೂಪಾಯಿ ಸಹ ಮೈನಂಬಿಗೆಯ ಸಾಲ ದೊರೆಯುವದಿಲ್ಲ. ಪ್ರಜೆಗಳಲ್ಲಿ ಅವಿಶ್ವಾಸವು ಇಷ್ಟು ಬಲವಾಗಿ ಬೆಳೆದಿರುವದು. ಇಂಥಾ ಸ್ಥಿತಿಯಲ್ಲಿ ಅನ್ಯೋನ್ಯ ಸಹಕಾರಿ ವಿಶ್ವಾಸ ಸಂಘದ್ದೊಂದು ಅಂಗಡಿಯು ಅಲ್ಲಲ್ಲಿ ಸ್ಥಾಪಿತವಾದರೆ ಮೇಲೆ ಹೇಳಿದಂಥಾ ಧನಸಂಚಯವುಳ್ಳವರಿಗೂ ಸಾಲ ಹುಡುಕುವ ಸದ್ಗೃಹಸ್ಥರಿಗೂ ಬಹು ದೊಡ್ಡ ಅನುಕೂಲವಾಗುವದು. ಈ ಸಂಘದಲ್ಲಿ ಬೇಕಾದವರು ಹಣವನ್ನಿಡಬಹುದು, ಅಲ್ಪಸ್ವಲ್ಪ ಹಣವಿಟ್ಟು ಮೆಂಬರರಾದವರು ಬೇಕಾದಷ್ಟು ಸಾಲವನ್ನು ಸಂಘದಿಂದ ತೆಗೆದುಕೊಳ್ಳಬಹುದು. ಸರಕಾರೀ ಆಡಿಟ್ ದಾರರು ಸಂಘದ ಲೆಕ್ಕಪತ್ರಗಳನ್ನು ಆಗಾಗ್ಗೆ ಆಡಿಟ್ ಮಾಡುವದರಿಂದ ಸಂಘದ ಹಣ ಹಾಳಾಗುವ ಭಯವು ಎಷ್ಟುಮಾತ್ರವೂ ಇಲ್ಲ. ಸಂಘದ ಅಂಗಡಿಯು ಊರಲ್ಲೇ ಆಗುವದು. ಅದರ ಅಧ್ಯಕ್ಷ, ಸೆಕ್ರೆಟರಿ, ಈ ಮುಂತಾದ ಕಾರಭಾರಿಗಳನ್ನು ಸಂಘದ ಮೆಂಬರರೇ ಚುನಾಯಿಸಿ ನೇಮಿಸುವರು. ಅದರಿಂದ ಹಣವಿಡಲಿಕ್ಕೂ ತೆಗಿಯಲಿಕ್ಕೂ ಸಾಲ ತೆಗೆದುಕೊಳ್ಳಲಿಕ್ಕೂ ಎಷ್ಟುಮಾತ್ರವೂ ತೊಂದರೆಯಾಗುವ ಹಾಗಿಲ್ಲ. ಇದನ್ನೆಲ್ಲ ಚೆನ್ನಾಗಿ ಪರ್ಯಾಲೋಚಿಸಿ, ಆಯಾ ಕಡೆಗಳಲ್ಲಿ ಹತ್ತು ಜನ ಸಂಭಾವಿತರು ಮುಂದರಿದು ಸರ್ಕಾರಕ್ಕೆ ಅರ್ಜಿಯನ್ನು ಮಾಡಿಕೊಳ್ಳಬೇಕೆಂದು ನಮ್ಮ ಪ್ರಜೆಗಳಿಗೂ ಸೂಚಿಸುತ್ತೇವೆ.—ಕ ವ.

ಇಂಡಿಯಾ ದೇಶದ ವೃತ್ತಾಂತಗಳು

ಮದರಾಸ್ ಪಟ್ಟಣದಿಂದ ಹೊರಡುವ ರೈಲ್ ಗಾಡಿಗಳಲ್ಲಿ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಇಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಒಂದೆರಡು ತಿಂಗಳಲ್ಲೇ ಇದು ರೂಪಿಗೆ ಬಂದೀತೆಂದು ತೋರುವದು

* * * *

ಬಂಗಾಳಾ ಆಧಿಪತ್ಯದಲ್ಲಿ ಕಳೆದ ವರುಷ ೧೫,೦೮,೬೦೦ ಎಕರೆ ಜಮೀನಿನಲ್ಲಿ ರೈತರು ಗೋಧಿಯ ಬೆಳೆ ಮಾಡಿದ್ದರು. ಈ ಸಾಲಿನಲ್ಲಿ ೧೩,೫೫,೫೦೦ ಎಕರೆಯಷ್ಟು ಜಮೀನಿನಲ್ಲಿ ಗೋಧಿ ಫಸಲು ಮಾಡಿದಾರೆ

* * * *

ಬನಾರ್ ಆಧಿಪತ್ಯಕ್ಕೆ ಸೇರಿದ ದಂಗರ್ ನಗರದಲ್ಲಿ ಪ್ಲೇಗನ್ನು ನಿಲ್ಲಿಸುವದಕ್ಕೆ ಇಲಿ ಹೆಗ್ಗಣಗಳನ್ನು ಕೊಲ್ಲಿಸುತ್ತಿದಾರೆ. ಹೋದ ತಿಂಗಳು ಮೂರು ಬಸ್ತಿಗಳಲ್ಲಿ ೪೦,೦೦೦ ಇಲಿ ಹೆಗ್ಗಣಗಳನ್ನು ಕೊಂದರು. ಆ ಮೊಹಲೆಗಳಲ್ಲಿ ಪ್ಲೇಗಿನ ಹಾವಳಿ ಕಮ್ಮಿಯಾಗಿದೆ

* * * *

ಜೋಧಪುರ ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಸೈನ್ಯದ ಕುದುರೆಗಳಿಗೆ ಅಂಟುಜಾಡ್ಯ ಕಾಣಿಸಿಕೊಂಡು, ಸಾಯುತ್ತಾ ಬಂದವು. ಈ ಉಪದ್ರ ಇತರ ಕುದುರೆಗಳಿಗೂ ಹರಡಿಕೊಳ್ಳುತ್ತೆಂದು ಸರ್ಕಾರದವರು ೩೧ ಕುದುರೆಗಳನ್ನು ಗುಂಡು ಹೊಡೆದು ಕೊಂದು ಹಾಕಿದರು

* * * *

ಉತ್ತರ ದೇಶದಲ್ಲಿ ಗಣಿಗಳ ಉತ್ಪತ್ತಿಯನ್ನು ಸಾಗಿಸುವದಕ್ಕೆ ಈಸ್ಟ್ ಇಂಡಿಯಾ ರೈಲ್ವೆ ಕಂಪನಿಯವರು ಹೊಸದಾಗಿ ವಿಲಾಯತಿಯಿಂದ ೧,೦೦೦ ಗಾಡಿಗಳನ್ನು ತಯಾರ್ಮಾಡಿಸಿ ತರಿಸುವವರಾಗಿದಾರೆ. ಇದಕ್ಕೆ ಸರ್ಕಾರದವರು ಮೂರು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುವರು.

* * * *

ಬೊಂಬಾಯಿ ಆಧಿಪತ್ಯದ ಕೆಲವು ಭಾಗಗಳಲ್ಲಿ ಮಳೆ ಬೆಳೆ ಇಲ್ಲ. ಕ್ಷಾಮಪ್ರಾಪ್ತವಾಗಿರುತ್ತದೆ. ಇದುವರೆಗೆ ೩,೩೦೦ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿ ಬಿದ್ದು, ರಿಲೀಫ್ ಕಾಮಗಾರಿಗಳನ್ನು ಮಾಡಲಾರಂಭಿಸಿದಾರೆ. ಈ ಸಂಖ್ಯೆಯು ಹೆಚ್ಚುತ್ತಿದೆ ಎಂದು ತಿಳಿಯುವದು.

* * * *

ಮದರಾಸ್ ಗವರ್ನಮೆಂಟಿನವರು ಆ ಆಧಿಪತ್ಯದಲ್ಲಿ ಪ್ರಾಚೀನ ಕಾಲದ ಶಾಸನಗಳನ್ನು ಹುಡುಕಿ ಪರಿಶೋಧನೆ ಮಾಡುವದಕ್ಕಾಗಿ ೧,೧೨,೬೪೮ ರೂಪಾಯಿ ಸ್ಯಾಂಕ್ಷನ್ ಮಾಡಿ, ಈ ಪೈಕಿ ಕೆಲವು ಭಾಗವನ್ನು ಇಂಡಿಯಾ ಗವರ್ನಮೆಂಟಿನವರು ಸಹಾಯ ಮಾಡುವಂತೆ ಕೇಳಿಕೊಂಡಿದಾರೆ.

* * * *

ಹಿಂದುಸ್ಥಾನದಲ್ಲೆಲ್ಲಾ ಜಾಕೋಬಾಬಾದಿನ ಸೆಕೆಯಷ್ಟು ಇನ್ಯಾವ ಊರಿನಲ್ಲೂ ಇಲ್ಲ. ಬೇಸಿಗೆಯು ಅಲ್ಲಿ ಸಹಿಸಕೂಡದ್ದಾಗಿದೆ. ಕಳೆದ ಶನಿವಾರ ಬಿಸಲಿನ ತಾಪವು ನೆರಳಿನಲ್ಲಿ ೧೨೦ ಡಿಗ್ರಿಗಳ ತನಕ ಏರಿತ್ತು. ಈ ಸಂವತ್ಸರ ಇಷ್ಟು ತಾಪ ಕಂಡದ್ದು ಇನ್ನಾವ ಊರಿನಲ್ಲೂ ಇಲ್ಲ.

ಭೂಕಂಪದಿಂದ ಕಷ್ಟನಷ್ಟಗಳಿಗೆ ಗುರಿಯಾದ ಸೈನಿಕರ ಸಹಾಯಾರ್ಥವಾಗಿಯೇ ಹಿಂದುಸ್ಥಾನದ ಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರು ಪ್ರತ್ಯೇಕವಾಗಿ ಒಂದು ಫಂಡು ಮಾಡಿ, ಚಂದಾ ವಸೂಲ್ಮಾಡುತ್ತಿದ್ದಾರೆ. ಈ ಫಂಡಿಗೆ ಇದುವರೆಗೆ ೩೨,೦೦೦ ರೂಪಾಯಿ ಹಣ ವಸೂಲಾಗಿರುವುದು

****

ವೈಸ್‌ರಾಯಿ ಯವರ ಪತ್ನೀರಾದ ಲೇಡಿ ಕರ್ಜನರವರನ್ನು ಕಲ್ಕತ್ತೆಯ ಪ್ರಜೆಗಳು ಬಹು ಆದರಪೂರ್ವಕವಾಗಿ ಎದುರುಗೊಂಡು ಸುಖಾಗಮನವನ್ನು ಬಯಸಿದ್ದರಿಂದ ಆಕೆಯವರು ತಮ್ಮ ಹೆಸರಿನ ಮೇಲೆ ಕಲ್ಕತ್ತಾ ಪಟ್ಟಣದ ಮೈದಾನಿನಲ್ಲಿ ನೀರು ಹಾರುವ ನವೀನವಾದ ಒಂದು ಚಿಲುಮೆಯನ್ನು (ಫೌಂಟೆನ್) ಕಟ್ಟಿಸುವುದಾಗಿ ಮಾತುಕೊಟ್ಟಿದ್ದಾರೆ.

****

ಹೈದರಾಬಾದ್ ಸಂಸ್ಥಾನದ ಖಜಾನೆಯ ಮೊಬ್ತೇನಿದರಾದ ಮೊ॥ ಕ್ಯಾಸರ್ ವಾಕರ್ ಯವರು ಅಲ್ಲಿನ ರಾಜಧಾನಿಯಲ್ಲಿ ಮಹಮ್ಮದೀಯ ದೊಡ್ಡಮನುಷ್ಯರ ಜನಾನಾ ಸ್ತ್ರೀಯರಿಗೆ ವಿದ್ಯೆ ಕಲಿಸುವುದಕ್ಕಾಗಿ ಒಂದು ದೊಡ್ಡ ವಿದ್ಯಾಶಾಲೆಯನ್ನು ಇಡಿಸುವವರಾಗಿದ್ದಾರೆ. ಈ ತಿಂಗಳ ಅಂತ್ಯದೊಳಗಾಗಿ ಈ ಪಾಠಶಾಲೆಯು ಸ್ಥಾಪನೆಯಾಗುವುದೆಂದು ತಿಳಿದುಬಂದಿದೆ.

****

ಸಮಸ್ತ ರೋಗಗಳನ್ನೂ ಔಷಧವಿಲ್ಲದೆ ಗುಣಪಡಿಸುವ ಶಕ್ತಿಯುಳ್ಳವನೆಂದು ಹೆಸರುಪಡೆದಿರುವ ಮೊ॥ ಕ್ಯಾರಾಲ್ ಎಂಬಾತನು ಬೊಂಬಾಯಿನಿಂದ ಕಳೆದ ವಾರ ಹೈದರಾಬಾದಿಗೆ ಹೋಗಿ, ಒಂದು ಹೋಟೇಲಿನಲ್ಲಿ ಇಳುಕೊಂಡಿದ್ದಾನೆ. ಸಾವಿರಾರು ಜನರು ರೋಗಿಗಳನ್ನು ಆತನ ಬಳಿಗೆ ಕರೆದುಕೊಂಡು ಹೋಗುತ್ತಿರುವರು ಎಂದು ಒಬ್ಬ ಬಾತ್ಮಿದಾರನು ತಿಳಿಸುವನು

****

ಕೊಲ್ಲಾಪುರದ ಬಳಿ ಜಂಗಲಿನಲ್ಲಿ ಎರಡು ಮೂರು ಹುಲಿಗಳು ಸೇರಿಕೊಂಡು, ಪ್ರಜೆಗಳಿಗೂ ಗೋವುಗಳಿಗೂ ತುಂಬಾ ತೊಂದರೆಪಡಿಸುತ್ತಿವೆ. ಇವನ್ನು ಶಿಕಾರಿ ಮಾಡುವ ಉದ್ದೇಶ್ಯ ಬೊಂಬಾಯಿ ಗವರ್ನರಾದ ಲಾರ್ಡ್ ಲಾಮಿಂಗ್ಟನ್‌ರವರು ಕಳೆದ ವಾರ ಮಹಾಬಲೇಶ್ವರದಿಂದ ಅಲ್ಲಿಗೆ ಪ್ರಯಾಣ ಮಾಡಿದ್ದಾರೆ ನಾಲ್ಕಾರು ದಿನಗಳಲ್ಲೇ ವಾಪಸು ಬರುವರು.

****

ಬೊಂಬಾಯಿ ಪಟ್ಟಣದಲ್ಲಿ ಹೆಂಗಸರಿಗೆ ರೋಗಿಗಳ ಚಿಕಿತ್ಸೆ, ಶಸ್ತ್ರವೈದ್ಯ ಹೆರಿಗೆ, ಮಕ್ಕಳ ಚಿಕಿತ್ಸೆ ಮುಂತಾದವುಗಳನ್ನು ಅಲ್ಲಿನ 'ಗೋಕುಲದಾಸ್' ತೇಜಪಾಲರವರ ಆಸ್ಪತ್ರೆಯಲ್ಲಿ ಕಲಿಸಿಕೊಡುತ್ತಾರೆ. ಈ ಆಸ್ಪತ್ರೆಯ ಮೇಲೆ ಗವರ್ನರವರ ಪತ್ನೀರಾದ ಲೇಡಿ ಲಾಮಿಂಗ್ಟನ್‌ರವರಿಗೆ ತುಂಬಾ ಪ್ರೀತಿ ಆಕೆಯವರು ಆಗಾಗ್ಗೆ ಅಲ್ಲಿಗೆ ಹೋಗಿ ವಿಚಾರಣೆಮಾಡಿಕೊಂಡು ಬರುವರು.

****

ಬೊಂಬಾಯಿ ಪಟ್ಟಣದಲ್ಲಿ ೧೪, ೧೫, ೧೮, ೨೦ ವಯಸ್ಸಿನ ನಾಲ್ವರು ಹುಡುಗರು ಸೇರಿಕೊಂಡು, ಚಿಕ್ಕ ಮಕ್ಕಳನ್ನು ಎತ್ತಿಕೊಂಡು ಹೋಗಿ ಅವರ ಮೈ ಮೇಲಿರುವ ಒಡವೆ ಬಟ್ಟೆ ಬರೆಗಳನ್ನು ಕಸುಕೊಂಡು, ಬಿಟ್ಟುಬಿಡುತ್ತಿದ್ದರು. ಅವರು ಹೀಗೆ ಕಳವು ಮಾಡಿದ ಏಳು ಮೊಕದ್ದಮೆಗಳು ಕಳೆದ ವಾರ ದರ್ಯಾಪ್ತಿ ಆಗಿ, ಆ ನಾಲ್ವರಿಗೂ ಸಜಾ, ಛಡಿ ಮುಂತಾದ ಶಿಕ್ಷೆಗಳು ವಿಧಿಸಲ್ಪಟ್ಟವು

****

ಕುಲು ಕಣಿವೆಯಲ್ಲಿ ಭೂಕಂಪದಿಂದ ಮಂಡಿ ಸಂಸ್ಥಾನಕ್ಕೆ ಸೇರಿದ ಸಾಕುರ್‌ರೇತ್ ಎಂಬ ಗ್ರಾಮವು ನಾಶವಾಯಿತು. ಅಲ್ಲಿ ಒಂದೇ ಒಂದು ಭಾರೀ ಮನೆ ಚನ್ನಾಗಿ ಗಟ್ಟಿಯಾಗಿ ಉಳುಕೊಂಡಿತ್ತು. ಇದು ವಾಸಕ್ಕೆ ಅನುಕೂಲವಾಗಿದೆ ಎಂದು ಜನರು ತಿಳಿದಿದ್ದರು. ಈ ಭಾರೀ ಮನೆಯು ಕಳೆದ ವಾರ ಇದ್ದಕ್ಕಿದ್ದಹಾಗೇ ಅನಾಮತ್ತಾಗಿ ಕುಸಿದು ಬಿದ್ದು, ೮ ಜನರೂ ೨೫ ಗೋವುಗಳೂ ನಾಶವಾದವು.

****

ಕಾಶೀ ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಓಡುವಂಥಾ ಟ್ರಾಂಗಾಡಿಗಳನ್ನು ರೈಲ್ವೆ ಸ್ಟೇಷನಿಂದ ಮುಖ್ಯ ಮುಖ್ಯವಾದ ದೊಡ್ಡ ಬೀದಿಗಳಲ್ಲಿ ಓಡುವಂತೆ ಏರ್ಪಾಡು ಮಾಡಬೇಕೆಂದು ಚರ್ಚೆ ನಡೆಯುತ್ತಿದೆ. ಲಂಡನ್ ಪಟ್ಟಣದ ಕ್ರಾಂಪ್ಟನ್ ಎಂಬ ಕಂಪನಿಯವರು ಇಂಥಾ ಗಾಡಿಗಳನ್ನು ಇಡಿಸುತ್ತೇವೆಂತಲೂ ಅದಕ್ಕೆ ತಮಗೆ ಅವಕಾಶ ಕೊಡಬೇಕೆಂತಲೂ ಕಾಶೀ ಪಟ್ಟಣದ ಮ್ಯುನಿಸಿಪಾಲಿಟಿಯವರನ್ನು ಕೇಳಿದ್ದಾರೆ.

****

ಮದರಾಸ್ ಪಟ್ಟಣದಲ್ಲಿ ಗವರ್ನಮೆಂಟಿನವರು ಮೂಗು ಪ್ರಾಣಿಗಳ ವೈದ್ಯವನ್ನು ಕಲಿಸುವುದಕ್ಕೋಸ್ಕರ ಹೊಸದಾಗಿ ಒಂದು ವಿದ್ಯಾಶಾಲೆಯನ್ನು ಕಟ್ಟಿಸುತ್ತಿದ್ದದ್ದು ಈಗ ಪೂರೈಸಿರುತ್ತದೆ. ಇದಕ್ಕೆ ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಖರ್ಚಾಗಿರುತ್ತೆ. ಆ ಪಟ್ಟಣದಲ್ಲಿ ನೇತ್ರಾನಂದಕರವಾದ ಕಟ್ಟಡಗಳ ಪೈಕಿ ಇದೂ ಒಂದಾಯಿತು ಈ ಬೇಸಿಗೆ ರಜಾ ಪೂರೈಸಿದ ಮೇಲೆ ಈ ಶಾಲೆಯು ಪ್ರತಿಷ್ಟೆಯಾಗಿ ಪಾಠಪ್ರವಚನಗಳು ನಡೆಯಲಾರಂಭವಾಗುವುವೆಂದು ತಿಳಿದುಬಂದಿದೆ.

****

ಉತ್ತರದೇಶಕ್ಕೆ ಸೇರಿದ ನಾಭಾಪುರದ ರಾಜರು ತಮ್ಮ ಕುಮಾರನಿಗೆ ವಿವಾಹ ಮಾಡಬೇಕೆಂದು ಎಲ್ಲಾ ಸಿದ್ಧಪಡಿಸಿಕೊಂಡು ಬೀಗತನಿಗೆ ಹೊರಡುವ ವೇಳೆಗೆ ನಿಶ್ಚಯವಾಗಿದ್ದ ಕನ್ಯೆಯು ಕಾಲವಾಳೆಂಬ ವರ್ತಮಾನ ಬಂದುದರಿಂದ ಮದುವೆ ನಿಂತುಹೋಯಿತೆಂದು ಈ ಮೊದಲೇ ಪ್ರಕಟಿಸಿದ್ದೆವಷ್ಟೆ ಈಗ ಗಯಾ ಪಟ್ಟಣದಲ್ಲಿರುವ ಬಾಬೂ ಬ್ರಿಜಮೋಹನ ಲಾಲರವರ ನಾಲ್ಕನೆ ಕುಮಾರ್ತೆಯು ಆ ರಾಜರ ಕುಮಾರನಿಗೆ ನಿಶ್ಚಯವಾಗಿದೆ ಜೂನ್ ೩೦ ನೇ ತಾರೀಖಿನ ದಿನ ವಿವಾಹ ನಡೆಯುವುದು.

****

ಕಲ್ಕತ್ತಾ ಪಟ್ಟಣದಲ್ಲಿ ಹೋಮಿಯೋಪತಿ ಎಂಬ ವೈದ್ಯಕ್ರಮವನ್ನನುಸರಿಸಿ ರೋಗಿಗಳಿಗೆ ಚಿಕಿತ್ಸೆ ಮಾಡುವಂಥಾ ಒಂದು ಆಸ್ಪತ್ರೆ ಏರ್ಪಾಡು ಮಾಡಬೇಕೆಂದು ಅಲ್ಲಿನ ದೊಡ್ಡ ಮನುಷ್ಯರು ಅದಕ್ಕಾಗಿ ಒಂದೂವರೆ ಲಕ್ಷ ರೂಪಾಯಿ ಚಂದಾ ಕೂಡಿಸಲಾರಂಭಿಸಿರುವರು. ಅಲ್ಲಿನ ಮಹಾರಾಜಾ ಸರ್ ಜ್ಯೋತೀಂದ್ರ ಮೋಹನ ಟಾಗೂರ್ ಯವರೂ ರಾಜಾ ಪ್ಯಾರಿಮೋಹನ ಮುಖರ್ಜಿ ಯವರೂ ನ್ಯಾಯಾಧಿಪತಿಯಾದ ಮೊ॥ ಶಾರದಾ ಚರಣ ಮಿತ್ರರವರೂ ಈ ಏರ್ಪಾಡಿಗೆ ಮುಖ್ಯ ಪೋಷಕರಾಗಿದ್ದಾರೆ.

****

ಸಿಂಲಾ ಪಟ್ಟಣದಲ್ಲಿ ಸಾಹೆಬ್ ಜನರ ಗಂಡು ಹೆಣ್ಣುಮಕ್ಕಳೇ ನೂರಾರು ಮಂದಿ ಸೇರಿ ವಿದ್ಯಾಭ್ಯಾಸ ಮಾಡುವ ಬಿಷಪ್ ಕಾಟನ್ ಎಂಬ ಪಾಠಶಾಲೆಯು ಕಟ್ಟಡಕ್ಕೆ ಹಿಂದಿನವಾರ ಬೆಂಕಿಬಿದ್ದು, ಎಲ್ಲಾ ಹಾಳಾಯಿತು ಹುಡುಗರು ಮಕ್ಕಳನ್ನು ಜೀವಸಹಿತ ಉಳಿಸಿಕೊಳ್ಳುವುದೇ ಕಷ್ಟವಾಯಿತು. ಹುಡುಗರ ಬಟ್ಟೆಬರೆ ಪುಸ್ತಕಗಳೂ ಸ್ಕೂಲಿನ ಸಾಮಾನುಗಳೂ ನಾಶವಾದವು ಈಗ ಮತ್ತೆ ಆ ಸ್ಕೂಲನ್ನು ಕಟ್ಟಬೇಕೆಂದು ತೀರ್ಮಾನಿಸಿ, ಕಾಮಗಾರಿ ಪ್ರಾರಂಭಮಾಡಿದ್ದಾರೆ. ಇದಕ್ಕೆ ಎರಡು ಲಕ್ಷ ರೂಪಾಯಿಗಿಂತಲೂ ಹೆಚ್ಚು ಖರ್ಚಾಗುವುದು.

****

ಮದರಾಸ್ ಪಟ್ಟಣದ ಹೈಕೋರ್ಟ್ ಬಂಗಲೆಯ ಎದುರು ಪಾರ್ಶ್ವದಲ್ಲಿರುವ ರಾಜು ಕಂಪನಿ, ಶ್ರೀನಿವಾಸ ವರದಾಚಾರಿ ಕಂಪನಿ ಎಂಬ ಅಂಗಡಿ ಮಳಿಗೆಗಳಿಗೆ ಕಳೆದ ವಾರ ಬೆಂಕಿಬಿದ್ದು, ಮೂರು ಗಂಟೆಗಳ ಹೊತ್ತಿನಲ್ಲಿ ನೆಲಸಮವಾದವು. ರಾಜು ಕಂಪನಿಯವರು ಬೈಸಿಕಲ್ ಎಂಬ ಎರಡುಚಕ್ರಗಳ ಗಾಡಿ ಸಾಮಾನು ಇಟ್ಟಿದ್ದರು. ಅವರಿಗೆ ಸುಮಾರು ೨೦,೦೦೦ ರೂಪಾಯಿ ನಷ್ಟವಾಯಿತು ಶ್ರೀನಿವಾಸ ವರದಾಚಾರಿ ಕಂಪನಿಯವರು ಪುಸ್ತಕಗಳ ಅಂಗಡಿ ಇಟ್ಟಿದ್ದರು ಅವರ ಪುಸ್ತಕವೆಲ್ಲಾ ಬೂದಿಯಾಗಿ ಅವರಿಗೆ ಸುಮಾರು ೫೦,೦೦೦ ರೂಪಾಯಿ ನಷ್ಟವಾಗಿದೆ.

****

ಭೂಕಂಪದ ದೆಸೆಯಿಂದ ಹಾಳಾದ ಕಾಂಗ್ರ ಕಣಿವೆಯಲ್ಲಿ ಸಿಕ್ಕರ ಪ್ರಸಿದ್ಧ ದೇವಸ್ಥಾನವಿತ್ತು. ಇಲ್ಲಿಗೆ ಸಾವಿರಾರು ಪ್ರಜೆಗಳು ಯಾತ್ರಾರ್ಥಿಗಳಾಗಿ ಬಂದು ಹೋಗುತ್ತಿದ್ದರು. ಈ ದೇವಸ್ಥಾನವು ಸಂಪೂರ್ಣವಾಗಿ ನಾಶಹೊಂದಿದ್ದರಿಂದ ಆ ಪ್ರಾಂತ್ಯ ಜನಸಂದಣಿಯೇ ಕಡಿಮೆಯಾಗಿದೆ. ಆ ಪ್ರಾಂತ್ಯವನ್ನು ಮೊದಲಿನಂತೆ ಜನಸಾಂದ್ರತೆಯುಳ್ಳದ್ದನ್ನಾಗಿ ಮಾಡಬೇಕಾದಲ್ಲಿ ಈ ದೇವಸ್ಥಾನವನ್ನು ಯಥಾಪ್ರಕಾರ ಕಟ್ಟಿಸಿದಲ್ಲದೆ ಆಗಲಾರದೆಂದು ಹೇಳುವರು. ಅದರ ಕಾಮಗಾರಿಗೆ ಸರ್ಕಾರದವರೂ ಶಾಹುಕಾರರೂ ಪ್ರಜೆಗಳೂ ದ್ರವ್ಯಸಹಾಯ ಮಾಡಬೇಕೆಂದು ಸೂಚಿಸಲ್ಪಟ್ಟಿದೆ

****

ಕಳೆದ ವಾರ ಮದರಾಸ್ ಪಟ್ಟಣದ ಭಾರಿ ಭಾರೀ ಉದ್ಯೋಗದಾರರೂ ಸಾಹುಕಾರರೂ ಸಭೆ ಸೇರಿ, ವಿಲಾಯತಿ ರಾಜ್ಯದ ಯುವರಾಜರವರು ಮದರಾಸಿಗೆ ದಯಮಾಡುವಾಗ್ಗೆ ಅವರನ್ನು ಯಥಾಯೋಗ್ಯವಾಗಿ ಸತ್ಕರಿಸುವುದಕ್ಕೋಸ್ಕರ ಏರ್ಪಾಡುಗಳನ್ನು ಮಾಡುವುದಕ್ಕೂ ಪ್ರಜೆಗಳಿಂದ ಚಂದಾ ಹಣವನ್ನು ಕೂಡಿಸುವುದಕ್ಕೂ ಒಂದು ಕಮಿಟಿಯನ್ನು ಮಾಡಿದರು ಆ ದಿನ ದಿವಾನ್ ಬಹದೂರ್ ಸರ್ ಸುಬ್ರಹ್ಮಣ್ಯ ಐಯರವರು ಸಭಾನಾಯಕರಾಗಿದ್ದರು. ಯುವರಾಜರವರಿಗೆ ಅಡ್ರೆಸ್ ಓದಿ ಯೋಗ್ಯವಾದಂಥಾ ಒಂದು ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಬೇಕೆಂತಲೂ ತೀರ್ಮಾನಿಸಿದ್ದಾರೆ

****

ಈ ರಾಷ್ಟ್ರದಲ್ಲೆಲ್ಲಾ ಹಿಂದಿನವಾರ ೩೪,೬೦೭ ಜನರು ಪ್ಲೇಗಿನಲ್ಲಿ ಮೃತಪಟ್ಟರು. ಕಳೆದವಾರ ಈ ಉಪದ್ರದಲ್ಲಿ ಸತ್ತವರ ಸಂಖ್ಯೆಯು ೫೭,೭೫೩ ಕ್ಕೆ ಇಳಿಯಿತು. ಮುಖ್ಯ ಸಂಖ್ಯೆಗಳಷ್ಟೆಂದರೆ—ಪಂಜಾಬ್ ೩೦,೯೦೯, ಸಂಯುಕ್ತ ಆಧಿಪತ್ಯ ೧೭, ೯೦೯, ಬಂಗಾಳಾ ೧,೯೮೬, ರಾಜಪುಟಾಣ ೩,೩೫೮, ಬೊಂಬಾಯಿ ಡಿಸ್ಟ್ರಿಕ್ಟುಗಳು ೧೭,೭೦೫, ಬರ್ಮ ೯೯೦, ಕಾಶ್ಮೀರ ೩೮೭, ಬೊಂಬಾಯಿ ಪಟ್ಟಣ ೩೪೮, ಕಲ್ಕತ್ತಾ ೬೫೧, ಈ ಸಂಖ್ಯೆಗಳನ್ನು ನೋಡಿದಲ್ಲಿ ಪಂಜಾಬಿನಲ್ಲೂ ಸಂಯುಕ್ತ ಆಧಿಪತ್ಯದಲ್ಲೂ ಪ್ಲೇಗ್ ಉಪದ್ರವು ಇನ್ನೂ ತುಂಬಾ ಪ್ರಬಲವಾಗಿದೆ ಎಂದು ಗೊತ್ತಾಗುವುದು.

****

ಪೂನಾ ಪಟ್ಟಣದಲ್ಲಿ ಖೋಟಾ ನಾಣ್ಯಗಳ ಚಲಾವಣೆಯು ಈಚೆಗೆ ಹೆಚ್ಚಾಗುತ್ತಾ ಬಂತು. ಪೊಲೀಸಿನವರಾದರೋ ಹೋದ ತಿಂಗಳಲ್ಲಿ ಒಂದು ಗುಂಪನ್ನು ಪತ್ತೆಮಾಡಿ ಹಿಡಿದು, ದರ್ಯಾಪ್ತಿ ಮಾಡಿಸಿದ್ದರಲ್ಲಿ ಅವರೆಲ್ಲಾ ಅಂತರಂಗದಲ್ಲೇ ಖೋಟಾ ನಾಣ್ಯಗಳನ್ನು ಮಾಡತಕ್ಕವರೆಂಬುದು ರುಜುವಾತಾಯಿತು ಅವರಿಗೆ ಸಜಾ ಶಿಕ್ಷೆಯೂ ವಿಧಿಸಲ್ಪಟ್ಟಿತು. ಈ ತಿಂಗಳಲ್ಲಿಯೋ ಪೊಲೀಸಿನವರು ಇನ್ನು ನಾಲ್ಕು ಮಂದಿಯನ್ನು ಇನ್ನೊಂದು ಮನೆಯಲ್ಲಿ ಹಿಡಿದು, ಅವರು ಖೋಟಾ ನಾಣ್ಯಗಳ ತಯಾರಿಗಾಗಿ ಇಟ್ಟುಕೊಂಡಿದ್ದ ಸಾಮಾನುಗಳ ಸಹಿತ ದಸ್ತಗಿರಿ ಮಾಡಿದರು. ಸೆಷನ್ಸ್ ಜಡ್ಜರು ಈ ನಾಲ್ಕು ಮಂದಿಗೂ ತಲಾ ಐದೈದು ವರುಷಗಳಂತೆ ಕಠಿಣ ಸಜಾ ವಿಧಿಸಿದ್ದಾರೆ.

ತಾಲ್ಲೋಕು ವರ್ತಮಾನಗಳು.

ಸಕಲೇಶಪುರ.—ಒಂದು ವಾರದಿಂದಲು ಮಳೆ ಆಗುತ್ತಾ ಇರುವದರಿಂದ ರೈತರೆಲ್ಲಾ ಬಿತ್ತನೆ ಕೆಲಸದಲ್ಲಿ ಆಸಕ್ತರಾಗಿದ್ದಾರೆ. ಈ ವರುಷ ಮಳೆ ಸ್ವಲ್ಪ ಹಿಂದಾದ್ದರಿಂದ ಕಾಫಿ ಫಸಲಿಗೆ ಅನಾನುಕೂಲವಾಯಿತು.—ಹಾಸನದ ಡಿಪ್ಟಿ ಕಮಿಷನರ್ ಸಾಹೇಬರವರು ಜಮಾ ಮಾಡಿ, ಎಲ್ಲಾ ಇಲಾಖೆಯ ಲೆಕ್ಕ ಪತ್ರಗಳನ್ನೂ ಅಜಮಾಯಿಷಿ ಮಾಡಿ, ದಯಮಾಡಿದರು.—ವಾಲಂಟಿಯರಿಗೆ ಸೇರಿದ ಯೂರೋಪಿಯನ್ ಸರದಾರರೆಲ್ಲಾ ಬಂದು ರೈಫಲ್ ಅಭ್ಯಾಸದಲ್ಲಿ ಆಸಕ್ತರಾಗಿದ್ದಾರೆ.—ಈ ತಾಲ್ಲೂಕು ಹರಿಹಳ್ಳಿಯಲ್ಲಿ ಕೆಂಚಮ್ಮ ದೇವತೆಯ ಜಾತ್ರೆ ಬಹಳ ವಿಜೃಂಭಣೆಯಾಗಿ ನಡೆಯಿತು ಎರಡು ದಿವಸ ಹರಿಹಳ್ಳಿ ಶ್ಯಾನುಭೋಗ ವೆಂಕಟರಾಮಯ್ಯನವರೂ ಕಡೇ ದಿನ ಮಾಚೇಮರದ ವೆಂಕಟಸುಬ್ಬಯ್ಯನವರೂ ಸಂತರ್ಪಣೆ ಮಾಡಿ, ಪುಣ್ಯ ಸಂಪಾದನೆ ಮಾಡಿಕೊಂಡರು. ಈ ಜಾತ್ರೆಗೆ ೬—೫ ಸಾವಿರ ಪ್ರಜೆಗಳೂ ಕಲೆತು ಇದ್ದರು. ಶ್ಯಾನುಭೋಗರ ಧರ್ಮದಿಂದ ಯಾವ ಗಲಾಟೆಯೂ ಇಲ್ಲದೆ ನೆರವೇರಿತು. ಭಕ್ತಾದಿಗಳಿಂದ ೫೪ ರೂಪಾಯಿ ಕಾಣಿಕೆ ವಸೂಲು ಆಯಿತು. ದೇವಸ್ಥಾನದ ಜಾತ್ರೆ ಖರ್ಚಿಗಾಗಿ ಸರ್ಕಾರದಿಂದ ವರುಷಕ್ಕೆ ೯೦ ರೂಪಾಯಿ ಸಲ್ಲುತ್ತಿತ್ತು. ೫—೬ ವರುಷದಿಂದ ನಿಂತುಹೋಗಿದೆ. ದೇವಸ್ಥಾನದಲ್ಲಿ ಬಹಳ ಕತ್ತಲು ಇರುವದರಿಂದ ದೇವರ ದರ್ಶನ ಮಾಡುವದೂ ಬಹಳ ಪ್ರಯಾಸವಾಗಿ ಕಾಣುತ್ತೆ ಈ ದೇವತೆಯ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವಿರುತ್ತೆ ಇದರಿಂದ ಕಿಟಕಿ ಇಡಿಸಿ, ಸೋರತಕ್ಕ ಭಾಗ ಸರಿಪಡಿಸಿ, ಅನುಕೂಲ ಮಾಡಿಕೊಡಬಹುದಾಗಿದೆ.

ತಿಪಟೂರು.—ದೇವರ ದಯದಿಂದ ೩ ಹದ ಮಳೆಯಾಯಿತು. ರೈತರೆಲ್ಲರೂ ಭೂಮಿ ಸಾಗುವಳಿ ಮಾಡುವದಕ್ಕೆ ತೊಡಗಿದ್ದಾರೆ.—ಕೆರೆಗೆ ಬರತಕ್ಕ ನೀರನ್ನು ಕೆಲವರು ಮೇಲ್ಗಡೆ ತಮ್ಮ ತೋಟಗಳಿಗೆ ತಿರುಗಿಸಿಕೊಳ್ಳುವದರಿಂದ ಕೆರೆಯ ನೀರಿಗೆ ಅಡಚಣೆ ಎಂದು ಜನರು ಹೇಳುತ್ತಾರೆ —ಕೆರೆಯ ಅಂಗಳದಲ್ಲಿ ಗಾಡಿಕಾರ ಉದುಮಕೊಂಡ ಮಲ್ಲೇಶಪ್ಪನವರು ಒಂದು ಭಾವಿಯನ್ನು ತೆಗಿಸಿ, ಜನರು ಮತ್ತು ಜಾನುವಾರುಗಳಿಗೆ ನೀರಿನ ಉಪಯೋಗ ಮಾಡಿದರು. ಇನ್ನೂ ಕೆಲವು ಮಂದಿ ಮಹನೀಯರು ನೀರನ್ನು ಕೊಪ್ಪರಿಗೆಗಳಲ್ಲಿ ತುಂಬಿಸಿ, ದನಕರುಗಳಿಗೆ ಅನುಕೂಲ ಮಾಡಿದರು. ಧರ್ಮಿಷ್ಠರಾದ ವರ್ತಕರು ಅನೇಕ ಭಾವಿಗಳನ್ನಾದರೂ ತೆಗಿಸ್ಯಾರು. ಅವರೆ ಭೂಗರ್ಭದಲ್ಲಿಯೇ ಅನುಕೂಲವಾದ ಜಲ ಸಿಕ್ಕದಿದ್ದರೆ ಯಾರು ತಾನೇ ಏನುಮಾಡ್ಯಾರು?—ಕೋಣನ ಕಾವಲು ಜಮೇದಾರರು ಒಂದು ಕಿರುಬನನ್ನು ಕೊಂದು, ತಾಲ್ಲೂಕು ಕಚೇರಿಗೆ ಕಳುಹಿಸಿದ್ದರು. ಇದು ೬—೭ ರಾಸುಗಳನ್ನು ಸಂಹರಿಸಿತ್ತೆಂದು ವರ್ತಮಾನ ಕೇಳಿದೆವು —ಈ ಊರಲ್ಲಿ ಮ್ಯುನಿಸಿಪಲ್ ಕಂದಾಯ ವಸೂಲಿಗಾಗಿ ಒಂದು ಚಾವಡಿ ಇಲ್ಲದೆ, ಪಟೇಲ್ ಶಾನುಭೋಗರಿಗೆ ಬಹಳ ತೊಂದರೆ. ಊರು ಮುಂದಲ ಹಳೇ ದೇವಸ್ಥಾನದಲ್ಲಿ ಕಾಲಹರಿ ಗಂಟೆ ಬಾರಿಸುವ ಶಬ್ದವೂ ಕಂದಾಯ ಕೇಳುವ ಶಬ್ದವೂ ಕೂಕೊಳ್ಳುತ್ತವೆ ಅಲ್ಲಿಂದ ಊರೊಳಗೆ ಯಾವ ಮನೆಯ ಪಗರಿಯ ನೋಲಾದರೂ ಕೊಳ್ಳತರೆ ಆ ಮನೆಯ ಹೆಂಗಸರು ಪಸಿಕೆ ತೆಗೆದುಕೊಂಡು ಬರಲು, ಮತ್ತೊಂದು ಕಡೆಗೆ ಪ್ರಯಾಣ. ಇಂಥಾ ತೊಂದರೆಗಳಿಂದೆಂದು ಕಾಣುತ್ತೆ. ಮ್ಯುನಿಸಿಪಾಲಿಟಿಯವರು ಮನಸ್ಸು ಮಾಡಿದರೆ ಮನೆಯಾಗುತ್ತೆ. ಟವರ್ ರಸ್ತೆಗಳನ್ನು ಕ್ರಮದ ಪ್ರಕಾರ ಅಲ್ಲಲ್ಲಿ ದುರಸ್ತು ಮಾಡಿಸುತ್ತಿದಾರೆ.

ಸೀಯರ್.—ಇಲ್ಲಿ ಸುಮಾರು ೨ ಹದ ಮಳೆಯಾಯಿತು. ಆದರೂ ಸೆಕೆ ಜಾಸ್ತಿಯಾಗಿದೆ. ಕೆರೆ ಕಟ್ಟೆಗಳು ಒಣಗಿವೆ. ಇನ್ನೂ ನೀರು ಬಂದಿಲ್ಲ ಧಾರಣೆವಾಸಿ ಜಾಸ್ತಿಯಾಗಿದೆ.—ಇಲ್ಲಿ ವಾರಕ್ಕೊಂದಾವರ್ತಿ ಸಂತೆ ನೆರೆಯುತ್ತದೆ. ಈ ಸಂತೆ ನಡೆಯುವ ಸ್ಥಳದಲ್ಲಿ ನೆರಳಿಲ್ಲದೆ ಜನರು ಬಹಳ ಕಷ್ಟಪಡುತ್ತಾ, ಹೊತ್ತಾರೆ ೧೦ ಗಂಟೆಯಿಂದ ಸಾಯಂಕಾಲ ೫ ಗಂಟೆಯ ವರೆಗೂ ಬಿಸಲಲ್ಲಿ ಕಾಳ ತಿರಬೇಕು. ಸರ್ಕಾರಿ ಅಧಿಕಾರಿಗಳು ಇದನ್ನು ವಿಚಾರಿಸಿ, ಪ್ರಜೆಗಳಿಗೆ ನೆರಳಿಗಾಗಿ ಮರದ ರೆಂಬೆಗಳನ್ನು ಬೆಳಸಿದರೆ ಉಪಕಾರವಾದೀತು.—ಈ ಸಂತೆಯಲ್ಲಿ ವ್ಯಾಪಾರ ಮಾಡತಕ್ಕವರಿಗೆ ಪಸಿಕೆ ಎತ್ತುವ ಜನಗಳಿಂದ ತುಂಬಾ ತೊಂದರೆ. ಶಾನುಭೋಗರು, ಪಟೇಲರು, ತಳವಾರರು, ಬಾಬೆಸಾಬರು, ಈ ನಾಲ್ವರು ಮುಖ್ಯವಾದವರು. ಇವರುಗಳಲ್ಲಿ ಕೆಲವರು ಬಲವಂತವಾಗಿ ಅಕ್ಕಿ, ರಾಗಿ, ವೀಳ್ಯದೆಲೆ, ತರ್ಕಾರಿ, ಹಣ್ಣು, ಕಾಳು ವಗೈರೆ ವಸೂಲು ಮಾಡುತ್ತಾರೆ ಕೊಡುವದಿಲ್ಲವೆಂದು ಬಲವಂತಮಾಡಿದರೆ—" ನಮಗೆ ನೀವು ಕೊಡತಕ್ಕದ್ದು ನ್ಯಾಯ. ಸರ್ಕಾರಿ ರೂಲಿದೆ " ಎಂದು ಹೆದರಿಸಿ, ಕೆಲವು ಸಮಯದಲ್ಲಿ ಬೈದು, ವಸೂಲುಮಾಡುತ್ತಾರೆ. ಕಾಳು ೧ ಪಾವಿಗೆ ಕಮ್ಮಿ ಮುಟ್ಟುವದಿಲ್ಲ. ಒಬ್ಬ ಬಡಹೆಂಗಸು ೪ ಸೇರು ಕಾಳು (ಕಡ್ಲೆ) ಮಾರಾಟಕ್ಕೆ ತಂದು, ೪ ಜನಕ್ಕೆ ೧ ಸೇರು ಕೊಟ್ಟು, ೩ ಸೇರು ಮಾರಿದರೆ ಆಕೆಗೆ ಬಂದ ಲಾಭ ಎಷ್ಟು? ೩ ಸೇರಿಗೂ ೬ ಕಾಸು ಲಾಭವೂ, ೧ ಸೇರಿಗೆ ೬ ದುಡ್ಡು ನಷ್ಟವೂ ಆದರೆ ಅವಳು ಜೀವಿಸುವದು ಹ್ಯಾಗೆ? ಸರ್ಕಾರದವರು ತಕ್ಕ ಬಂದೋಬಸ್ತಿನಿಂದ ಸಂತೆ ನಡೆಯುವ ಕಾಲದಲ್ಲಿ ಬೇಡ್ರೆಸ್ಸಿನ ಮೇಲೆ ಹಿಡಿದು, ತಕ್ಕ ಶಿಕ್ಷೆ ಮಾಡಿಸಿದರೆ ಉಪಕಾರವಾದೀತು —ಇಲ್ಲಿಗೆ ಸುಮಾರು ೫ ಮೈಲಿ ದೂರದಲ್ಲಿರುವ ಚಿಕ್ಕನಾಯಕನ ಹಳ್ಳಿಯಲ್ಲಿ ಧರ್ಮಿಷ್ಠರಾದ ಉಗ್ರಗೌಡರಿದ್ದಾರೆ. ಇವರು ತಮ್ಮ ಅಣ್ಣಂದಿರಾದ ರಂಗೇಗೌಡರ ತೋಪಿನಲ್ಲಿ ಅರವಟ್ಟಿಗೆ ಇಟ್ಟು, ದಾರಿ ಪ್ರಯಾಣಸ್ಥರಿಗೆ ಪಾನಕ ಮಜ್ಜಿಗೆ ಕುಡಿಸುವದಲ್ಲದೆ, ಗೋಸಾಯಿಗಳಿಗೆ ಪ್ರತಿ ಒಬ್ಬರಿಗೂ ಅಕ್ಕಿ ಕೊಟ್ಟು, ಇವರಿಗೆ ನೀರಿಗಾಗಿ ಒಂದು ಕಲ್ಯಾಣಿಯನ್ನು ಕಟ್ಟಿಸುತ್ತಾರೆ ಇವರು ತುಂಬಾ ಆಸ್ತಿವಂತರು. ಮತ್ತು

ಪರೋಪಕಾರಿಗಳು. ಇವರು ತಮ್ಮ ಆಸ್ತಿಯನ್ನೆಲ್ಲಾ ಧರ್ಮಕಾರ್ಯಕ್ಕಾಗಿ ಇಟ್ಟು, ಅದರ ವೃದ್ಧಿಯಿಂದ ಧರ್ಮಕಾರ್ಯಗಳನ್ನು ಇನ್ನೂ ಅಧಿಕವಾಗಿ ನಡಿಸಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದಾರೆ. ಇವರು ಪ್ರತಿ ಶನಿವಾರವೂ ಈ ತೋಟದಲ್ಲಿ ಒಂದು ಸಂತೆ ಇಡಿಸಿ ಜನರಿಗೆ ಊಟ ವಗ್ಯೆರೆ ಮಾಡಿಸಿ, ಸಂತೋಷಪಡಿಸಬೇಕೆಂಬ ಆಸೆಯುಳ್ಳವರಾಗಿದ್ದಾರೆ. ಇವರ ಆಸೆಯನ್ನು ಸರ್ಕಾರದವರು ನೆರವೇರಿಸಲೆಂದು ಪ್ರಜೆಗಳೆಲ್ಲರೂ ಹಾರೈಸುತ್ತಿದ್ದಾರೆ. ಇವರ (ಉಗ್ರಗಾರರ) ಪ್ರೀತಿಯ ಸ್ವಭಾವವು ಇನ್ನೂ ಅಧಿಕವಾಗಲೆಂದು ಹಾರೈಸುತ್ತೇನೆ.

ತುಮಕೂರು.—ಈ ವಾರ ಒಳ್ಳೇ ಮಳೆಯಾದ್ದರಿಂದ ಧಗೆ ಕಡಿಮೆಯಾಗಿರುತ್ತದೆ. ಮುಂದೆಯೂ ಜಾಗ್ರತೆಯಾಗಿ ವಿಶೇಷ ಮಳೇ ಬರುವ ಸಂಭವವಿದೆ. ರೋಗಾದಿ ಉಪದ್ರಗಳ್ಯಾವೂ ಇಲ್ಲ. ಕಂದಾಯದ ಕಾಲ ತೀರಿದ್ದರಿಂದ ದಿನಸಿ ಗಾಡಿಗಳು ವಿಶೇಷವಾಗಿ ಬಾರದೆ, ದಿನ ದಿನಕ್ಕೆ ಧಾರಣೆಯು ಜಾಸ್ತಿಯಾಗುತ್ತಲಿದೆ.—ಈ ಟವನ್ನಿನ ಟೋಲ್ ಗೇಟಿನ ಕಂಟ್ರ್ಯಾಕ್ಟನ್ನು ಬೆಂಗಳೂರಿನ ಸಾಹುಕಾರರೊಬ್ಬರು ಐದು ಸಾವಿರ ಚಿಲ್ಲರೇ ರೂಪಾಯಿಗೆ ವಹಿಸಿಕೊಂಡು, ಈ ತಿಂಗಳು ಹತ್ತನೇ ತಾರೀಖಿನಿಂದ ಸುಂಕ ವಸೂಲ್ ಮಾಡುತ್ತಿದ್ದಾರೆ. ಹೀಗೆ ಅನೇಕ ಬಾಬುಗಳಿಂದ ನಮ್ಮ ಮ್ಯುನಿಸಿಪಾಲಿಟಿಗೆ ಆದಾಯ ಹೆಚ್ಚಾದಾಗ್ಯೂ ಪ್ರಜಾ ಸೌಕರ್ಯಕ್ಕೆ ಸಾಕಾದಷ್ಟು ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಇವುಗಳಲ್ಲಿ ಪ್ರಾಮುಖ್ಯವಾದದ್ದು ನೀರಿನ ಅಭಾವ. ಸಾಧಾರಣವಾಗಿ ಪರ್ವ ವರ್ಷವೂ ಕೆರೆಯು ತುಂಬುತ್ತಿದ್ದಾಗ ಊರಿನಲ್ಲಿರುವ ಭಾವಿಗಳೆಲ್ಲಾ ನೀರು ಇರುತ್ತೆ. ಸದ್ಯ ಕೆರೆಯಲ್ಲಿ ಸುತರಾಂ ನೀರಿಲ್ಲದಿರುವದರಿಂದ ಊರು ಭಾವಿಗಳೆಲ್ಲಾ ನಿರ್ಜಲವಾಗಿದೆ. ಈ ಬೇಸಿಗೇ ಕಾಲದಲ್ಲಿ ನೀರಿಗೋಸ್ಕರ ಜನರು ಪಡುವ ಶ್ರಮವು ಬರೆಯಲು ಅಸಾಧ್ಯ. ಈ ನೀರಿನ ಅಭಾವದ ವಿಷಯವಾಗಿ ಹಾಲೀ ದಿವಾನ್ ಪದವಿಯನ್ನಲಂಕರಿಸಿರುವ ಶ್ರೀಮಾನರು, ನಮ್ಮ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷನರಾಗಿದ್ದ ಕಾಲದಲ್ಲಿ, ಇಲ್ಲಿನ ತೊಂದರೆಯನ್ನು ಖುದ್ದಾಗಿ ಪರಾಂಬರಿಸಿ, ಜಲವಸತಿಗೆ ತಕ್ಕ ಏರ್ಪಾಡು ಮಾಡುವದಕ್ಕೆ ಉದ್ಯುಕ್ತರಾಗಿದ್ದು, ಈ ಮಧ್ಯೆ ನಮ್ಮ ದೌರ್ಭಾಗ್ಯದಿಂದ ಉಂಟಾದ ಅನಾನುಕೂಲದಿಂದ ಅಲ್ಲಿಗೇ ನಿಂತು ಹೋಯಿತು. ಈಚೆಗೆ ಬಂದ ಮಹನೀಯರಾದರೂ ಪ್ರಜೆಗಳನ್ನು ಈ ಸಂಕಟದಿಂದ ಪಾರುಮಾಡಿ, ಪುಣ್ಯ ಸಂಪಾದನೆ ಮಾಡಿಕೊಳ್ಳಲಿಲ್ಲ. ಈಗಲಾದರೂ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಪ್ರಜೆಗಳ ಅಹವಾಲನ್ನು ಚಿತ್ತದಲ್ಲಿ ತಂದು, ಈ ಊರಿನ ನೀರಿನ ಕ್ಷೋಭೆಯನ್ನು ಹೋಗಲಾಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಈ ವಿಷಯದಲ್ಲಿ ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳು ಅಧಿಕಾರಿಗಳ ಅನುಗ್ರಹಕ್ಕೆ ಪಾತ್ರರೇ ಹೊರತು ಪ್ರಜೆಗಳ ಅನಿವಾರ್ಯವನ್ನು ನಿವಾರಣೆ ಮಾಡಲು ಬದ್ಧಕಂಕಣರಾಗಿಲ್ಲ.—ನಮ್ಮ ತಾಲ್ಲೋಕಿನ ಅಮಲ್ದಾರರಾದ ಮೆ॥ ಹೆಚ್. ಸೀತಾರಾಮಯ್ಯನವರು ತಮ್ಮ ಕೆಲಸವನ್ನು ನಿಷ್ಪಕ್ಷಪಾತತೆಯಿಂದ ನೆರವೇರಿಸುತ್ತಾ, ದುಷ್ಕರ ಪ್ರಾಬಲ್ಯಕ್ಕೆ ಕಾಂಚಣವನ್ನುಂಟು ಮಾಡುತ್ತಿರುವದರಿಂದ ಪ್ರಜಾನುರಾಗಿಗಳಾಗಿರುತ್ತಾರೆ. ಈ ಮಹನೀಯರು ತಮ್ಮ ಕೈಕೆಳಗಿನ ನೌಕರರಿಂದ ಜನರಿಗೆ ಉಂಟಾಗುವ ತೊಂದರೆಗಳನ್ನು ಉಸ್ತುವಾರಿ ಇಟ್ಟು ನಿವಾರಣೆ ಮಾಡ್ಯಾರೆಂದು ಹಾರೈಸುತ್ತೇವೆ.

ಹಾಸನ.—ಈ ವಾರ ಈ ಪ್ರಾಂತ್ಯ ಬಹು ಒಳ್ಳೇ ಮಳೆಯಾಯಿತು. ರೈತರು ಮಹಾ ಸಂತೋಷದಿಂದ ವ್ಯವಸಾಯ ಕಾರ್ಯವನ್ನು ಮಾಡುತ್ತಲಿರುವರು. ಈ ಊರಿನಲ್ಲಿ ಪ್ರಬಲವಾದ ಗಾಳಿಯು ಬೀಸಿದ್ದರಿಂದ ಒಂದು ಮಹಡೀ ಮನೆಯು ಕುಸಿದು ಮಲಗಿಕೊಂಡಿತು. ಯಾರಿಗೂ ಯಾವ ಅಪಾಯವೂ ಆಗದೇ ಹೋದದ್ದು ಭಗವತ್ಕೃಪೆಯೇ ಸರಿ. ಗಾಳಿಯ ಹೊಡತವು ಬಹು ಬಲವಾಗಿ ದೆ ಈ ಊರಿನ ಉತ್ತರ ಭಾಗದಲ್ಲಿ ಕೆಲವು ಮರಗಳು ಕೂಡಕಲು ಬಿದ್ದಿವೆ.—ಹೊಸ ವೈಸ್ ಪ್ರೆಸಿಡೆಂಟರವರು ದೊಡ್ಡ ಸ್ಥಳದಿಂದ ಇಲ್ಲಿಗೆ ಬಂದವರಾಗಿರುವುದರಿಂದ ಸಾಧ್ಯವಾದ ಹಾಗೆಲ್ಲಾ ಮೈಸೂರು ಪಟ್ಟಣದ ಆಯುಕಟ್ಟನ್ನೇ ಇಲ್ಲಿಯೂ ಉಂಟುಮಾಡುತ್ತಾ ಏರಬಹುದೆಂಬ ನಿರೀಕ್ಷೆಯು ಇಲ್ಲಿನ ನಿವಾಸಿಗಳಲ್ಲಿ ಉಂಟಾಗಿದೆ.—ಕಳೆದ ವಾರದ ಪತ್ರಿಕೆಯಲ್ಲಿ ಕನ್ನೀಸ್ ಪೇಟೆಯ ಬಾತ್ಮೀದಾರರು ಹೇಳುವಂತೆ ಲಾಂಪ್ ಕಂಟ್ರ್ಯಾಕ್ಟರಿಗೆ ಹಣ ಕಡಿಮೆ ಮಾಡುವರೋ ಏನೋ ತಿಳಿಯದು. ಡೀಪಗಳ ಪರೀಕ್ಷೆಯನ್ನು ಮಾಡುವ ಅಧಿಕಾರಿಗಳು ಇದನ್ನು ಗಮನಿಸದಿರುವುದು ವಿಷಾದಕರವಾಗಿದೆ. ಈಗ ಸಂತೆಯು ನಡೆಯುತ್ತಿರುವ ಸ್ಥಳವು ಎಲ್ಲಾ ಭಾಗದ ನಿವಾಸಿಗಳಿಗೂ ಅನುಕೂಲವಾಗಿಯೂ, ಬಿಸಿಲು, ಗಾಳಿ, ಮಳೆಗಳ ಕಾಲದಲ್ಲಿ ಜನರ ಅವಲಂಬನಕ್ಕೆ ಒಳ್ಳೇ ಆಶ್ರಯಸ್ಥಾನವಾಗಿಯೂ ಇದೆ.—ಕಳೆದ ಏಪ್ರಲ್ ತಾ. ೨೯—೩೦ ರಲ್ಲಿ ಈ ಊರಿನಲ್ಲಿ ನಡೆದ ಉಭಯವೇದಾಂತ ಪ್ರವರ್ತನ ಸಭೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ೧೧ ಮಂದಿಗೂ ಮೇಲುಕೋಟೆಯಲ್ಲಿ ಇದೇ ಪರೀಕ್ಷೆಯಲ್ಲಿ ತೇರ್ಗಡೆಯಾದ ಸುಮಾರು ೨೯ ಮಂದಿಗೂ ಇದೇ ತಿಂಗಳು ೯ನೇ ತಾ. ಮಂಗಳವಾರದ (ಶ್ರೀ ರಾಮಾನುಜಾಚಾರ್ಯರ ತಿರುನಕ್ಷತ್ರ) ದಿನ ಮೇಲುಕೋಟೆಯ ದೇವಾಲಯದಲ್ಲಿ ನೆರೆದಿದ್ದ ಮಹಾ ಸಭೆಯ ಮುಂದೆ ಯಥೋಚಿತವಾದ ಬಹುಮಾನಗಳು ದ್ರವ್ಯ ವಸ್ತ್ರ ಪುಸ್ತಕರೂಪವಾಗಿ ವಿನಿಯೋಗವಾದವು. ಈ ಸಭೆಯೂ, ಈ ಸಭಾಮೂಲಕ ವೈದಿಕ ವಿದ್ಯಾಭಿವೃದ್ಧಿಯೂ ಆಸ್ತಿಕತೆಯೂ ವರ್ಷವರ್ಷ ಅಭಿವೃದ್ಧಿ ಹೊಂದುತ್ತಾ ಇರುವುದು ಸಂತೋಷಕರವಾಗಿದೆ. [ಉಳಿದ ವಿಷಯ ಪ್ರಕಟನೆಗೆ ಅರ್ಹವಾದದ್ದಲ್ಲ.—ಎಡಿ.]

ತೀರ್ಥಹಳ್ಳಿ.—ಈ ಟವರ್ ಪ್ರಾಂತ್ಯ ನಿನ್ನೆ ಮೊನ್ನೆ ಹದ ಮಳೆ ಆಗಿದೆ. ಇನ್ನು ಕೆಲವು ಪ್ರಾಂತ್ಯ ಮಳೆ ಹೆಚ್ಚಾಗಿದೆ. ನೋಡಿ ಮುಟ್ಟಿಕೊಂಡಿದೆ.—ಅಲ್ಲಲ್ಲಿ ಇಲಿಗಳು ಸಾಯುತ್ತಲೇ ಇವೆ. ಜನರು ಗುಡಿಸಲು ಕಟ್ಟಿಕೊಂಡಿದ್ದಾರೆಂದು ಮಾತನಾಡುತ್ತಾರೆ. ನಿಜ ಸಂಗತಿ ಮುಂದೆ ತಿಳಿಯಬೇಕು. ಕಳೆದ ಸಾಲಿನ ಭಯಕ್ಕೆ ಅನೇಕರು ಶೆಡ್ಡು ಕಟ್ಟಿಕೊಂಡೂ ಕಟ್ಟುತ್ತಲೂ ಇರುವರು. ಬಡಜನರಿಗೆ ಸರಕಾರದಿಂದ ಬೊಂಬು ವಗ್ಯೆರೆ ಮಾಫಿಯಾಗಿ ಕೊಡಿಸಿದರೆ ಉಪಕಾರವೂ ಪ್ರೋತ್ಸಾಹವೂ ಆಗುವದು.—ಮಳೆ ಕಾಲ ಸಮೀಪವಾದ್ದರಿಂದ ಬಿದರೂರಿನ ಅಡಿಕೆ ರವಾನೆ ಆಗುತ್ತಿದೆ. ಶೈಲ್ವೆ ಕಂಪನಿಯವರಿಗೆ ಶಿವಮೊಗ್ಗಾದಲ್ಲಿ ಅಡಿಕೆ ಮೂಟೆಗಳನ್ನು ಬಳ್ಳಾರಿಗೆ ರವಾನಿಸುವ ಖರ್ಚ ಕೊಟ್ಟರೆ ಮಣ ೧ಕ್ಕೆ ೦—೯—೩ ; ತೀರ್ಥಹಳ್ಳಿ ಅಪ್ಪುಟು ಏಜಂಸಿ ಕಂಪನಿ ಮೂಲಕ ಬಳ್ಳಾರಿಗೆ ರವಾನಿಸಿದರೆ ಮಣ ೧ಕ್ಕೆ ೩ ಆಣೆ ರೇಟು ಮಾಡಿದ್ದಾರೆ. ಇದು ಒಬ್ಬರೊಬ್ಬರಿಗೆ ಒಂದು ರೇಟು ಮಾಡಿದಂತಾಗುವದಿಲ್ಲವೇ ? ಕಂಪನಿಯವರು ಪುನರಾಲೋಚನೆ ಮಾಡಿಯಾರೆಂದು ನಂಬಿದ್ದೇನೆ. ಮುಂದಿನ ಸಾಲಿಗೆ ಅಡಿಕೆ ಮೂಟೆಗಳನ್ನು ಸೀದಾ ಗಾಡಿಗಳ ಮೇಲೆ ರವಾನಿಸಬೇಕೆಂದು ಕೆಲವು ಜನ ವರ್ತಕರು ಯೋಚಿಸುತ್ತಿರುವರು. ಯಾವ ಕಾರಣದಿಂದಲೋ ಸರಕು ತಮ್ಮ ವಶದಲ್ಲಿಂದು ಹೇಳುಗರು.—ಪೋಸ್ಟು ಇಲಾಖೆಯವರು ಲಕೋಟೆಗಳ ತೂಕವನ್ನು ಬಂಟಾಣೆಯಿಂದ ಹನ್ನೆರಡಾಣೆ ತೂಕಕ್ಕೆ ಹೆಚ್ಚಿಸಿ, ಸರ್ವರಿಗೂ ಸಂತೋಷಕಾರರಾದರು. ಬ್ರಾಂಚು ಪೋಸ್ಟು ಮಾಸ್ಟರುಗಳು ತಮ್ಮ ಕೆಲಸಕ್ಕೆ ತಕ್ಕ ಪ್ರತಿ ಫಲ [illegible] ಗಳುಗುಟ್ಟುತ್ತಿರುವರು. [illegible] ಆದರೂ ವಿಂಗಡಿಸಿ, ಹೆಚ್ಚು ಕೆಲಸ ನಡೆಯುವ ಆಫೀಸುಗಳಲ್ಲಿ ಅವರಿಗೆ ವೇತನ ಬಡ್ತಿ ಮಾಡಿದರೆ ನ್ಯಾಯೋಪಕಾರವಾದೀತು.—ಇಲ್ಲಿಯೂ ವೈದ್ಯರ ಸೀಮೆಯಂತೆ ಅಕ್ಕಿಯ ಸುಂಕವನ್ನು ವರ್ಜಿಸಿದ್ದಾರೆ. ತಂಬಾಕು, ತೆಂಗಿನ ಕಾಯಿಗೆ ಎರಡಾಣೆಯಿಂದ ನಾಲ್ಕಾಣೆ [illegible] ನಾಲ್ಕಾಣೆಯಿಂದ ಎಂಟಾಣೆಗೂ ಹೆಚ್ಚಿಸಿದರು. ಇದೂನೂ ಅಡಿಕೆ ಹಾಸಿದಂತೆ ರೈತರ ಮೇಲೆ ಬೀಳುವದು. ಹ್ಯಾಗೆಂದರೆ, ವೈದ್ಯರ ಸೀಮೆಯಲ್ಲಿ ತೆಂಗಿನ ಕಾಯಿ ಎಳ್ಳು, ಕುಂಬಳಕಾಯಿ, ಕಾಸಾಬೆ, ತಂಬಾಕು ಮುಂತಾದ ಹಾಸ್ಗಳ್ಳ ಮಾಲನ್ನು ರೈತರು ಬೆಳೆ ಮಾಡುತ್ತಾರೆ. ಈ ಮಲನಾಡಿನಲ್ಲಿ ಬೆಳೆ ಆಗುವದಿಲ್ಲ. ಇದೇ ಕಾರಣವಾಗಿದೆ.

ಫ್ರೆಂಚ್‌ರಾಕ್ಸ್.—ಈ ಪ್ರಾಂತ್ಯ ಒಳ್ಳೇ ಮಳೆಯಾಗಿ ಭೂಮಿ ತಂಪಾಗಿದೆ. ಆದರೂ [illegible] ಸಾಕಾಗದಾಗಿದೆ.—ಈ ಸ್ಥಳಕ್ಕೆ ಡಿಪ್ಟಿ ಅಮಲ್ದಾರ್ ರೆ. ನಾರಾಯಣಸ್ವಾಮಿ ಮೊದಲಿಯಾರರು ಬಂದು [illegible] ತಿಂಗಳಾಯಿತು. ಇವರು ಬಂದ ಮೇಲೆ ಅನೇಕ ಒಳ್ಳೇ ಕೆಲಸಗಳನ್ನು ಮಾಡಿಸಿದ್ದಾರೆ. ಬಹುಕಾಲದಿಂದಲೂ [illegible] ಕೆಲಸಗಳೆಲ್ಲಾ ಜಾರಿಗೆ ತಂದರು. [illegible] ನೀರಿಗೆ ತೊಂದರೆಯಾಗಿರುವ [illegible] ಬಾವಿಗಳನ್ನು ತೋಡಿಸಿ, [illegible] ದರಿಂದ ಜನರಿಗೆ ಬಹಳ ಸಂತೋಷ ಉಂಟು.—[illegible] ದಲ್ಲಿ ಬೆಳಕಿಲ್ಲದೆ ಇರುವದರಿಂದ ಕೆಲಸ ಮುಖ್ಯವಾದ [illegible] ತಿರುಗಾಡುವ ಜನರು ದಿಕ್ಕು ಕಾಣದೆ ಕೊಡಿಯುತ್ತಾರೆ. ಅದ್ದರಿಂದ ನಮ್ಮ ಅಮಲ್ದಾರರು ಈ ವಿಷಯಕ್ಕೆ ಹೆಚ್ಚು ನಿಗಾ ಕೊಟ್ಟು [illegible] ಗಳನ್ನು ಇಟ್ಟಿಸುವರೆಂದು ಹಾರೈಸುತ್ತೇನೆ.—[illegible] ರಾದ ಮೆ॥ ಶ್ರೀನಿವಾಸರಾಯರು ಈ ಸ್ಥಳಕ್ಕೆ ಬಂದು ಕೆಲವು ತಿಂಗಳಾಯಿತು. ಇವರು ಬಹಳ ಒಳ್ಳೆಯವರು, ನಿಧಾನಿಗಳು. ಕೆಲಸದಲ್ಲಿ ಬಹು ಚಟುವಟಿಕೆಯುಳ್ಳವರು. ಪ್ರಜೆಗಳಿಗೆ ಇವರ ವಿಷಯದಲ್ಲಿ ತುಂಬಾ ಸಂತೋಷ ಉಂಟು.—ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರಾದ ಮೆ॥ ಸಿ. ಡಿ. ರಾಮಸ್ವಾಮಿಯ್ಯನವರು ಈ ಸ್ಥಳಕ್ಕೆ ವರ್ಗವಾಗಿ ಬಂದು ಹೆಚ್ಚು ಕಡಿಮೆ ೧ ವರುಷವಾಯಿತು. ಈ ಮಹನೀಯರಿಂದ ಪೋಲೀಸ್ ಇಲಾಖೆಗೆ ತುಂಬಾ ಪ್ರೋತ್ಸಾಹ ಉಂಟಾಗಿದೆ. ಇವರು ತಮ್ಮ ಕೆಲಸ ಕಾರ್ಯದಲ್ಲಿ ಬಹಳ ಬುದ್ಧಿವಂತರು, ಯಥಾರ್ಥವಂತರು, ನಿಧಾನಿಗಳು. ಅನೇಕ ಜನರು ಸಂತೋಷಪಡುತ್ತಿದ್ದರು. ಈ ಮಧ್ಯೆ ಇವರಿಗೆ ಕೆಲಸ ತಪ್ಪಿ ಪೆನ್ಷನ್ ಆಗುತ್ತದೆಂದು ಸಮಾಚಾರ ಹುಟ್ಟಿರುವದರಿಂದ ಜನಗಳಿಗೆ ತುಂಬಾ ವಿಷಾದವಾಗಿದೆ.—ಈ ಊರಿನಲ್ಲಿ ಸರ್ಕಾರಿ ಸೂಲಗಿತ್ತಿ ಇಲ್ಲದೆ ಇರುವದರಿಂದ ಅನೇಕ ಬಡ ಜನರಿಗೆ ಹೆರಿಗೆಯ ಕಾಲಗಳಲ್ಲಿ ಬಹಳ ಕಷ್ಟ ಉಂಟು. ಈ ವಿಷಯವನ್ನು ಕುರಿತು ನಮ್ಮ ಅಮಲ್ದಾರರು ಮೇಲಕ್ಕೆ ಬರೆದು ಸ್ಯಾಂಕ್ಷನ್ ಮಾಡಿಸಿದಾಗ್ಯೂ ಮೇಲಿನವರು ಯಾವ ಕಾರಣದಿಂದಲೋ ಸೂಲಗಿತ್ತಿಯನ್ನು ಇನ್ನೂ ಕಳುಹಿಸದೆ ಇರುವದನ್ನು ನೋಡುವಾಗ ಈ ಸ್ಥಳದ ಬಡಮಾಯಿಗಳ ದುರಾದೃಷ್ಟವೆನ್ನುವದಕ್ಕೆ ಸಂಶಯವಿಲ್ಲ. ದಯಾಳುಗಳಾದ ಸರ್ಕಾರದವರು ಒಬ್ಬ ಒಳ್ಳೇ ನಂಬಿಗೆಯಾದ ಸೂಲಗಿತ್ತಿಯನ್ನು ಕಳುಹಿಸಿಕೊಟ್ಟರೆ ಬಡ ಜನರ ಕಷ್ಟವೆಲ್ಲಾ ಪರಿಹಾರವಾದೀತು. ಈ ಸ್ಥಳದಲ್ಲಿ ಒಬ್ಬ ಹಜಾಮರ ಜಾತಿ ಸೂಲಗಿತ್ತಿ ಇದ್ದಾಳೆ. ಈಕೆಯನ್ನು ಕಷ್ಟಕಾಲದಲ್ಲಿ ಕರೆಸಿದರೆ ಗಂಡು ಕೂಸಿಗೆ ೬ ರೂಪಾಯಿನ ಪ್ರಕಾರವೂ ಹೆಣ್ಣು ಕೂಸಿಗೆ ೩ ರೂಪಾಯಿನ ಪ್ರಕಾರವೂ ರುಸುಂ ಕೊಡಬೇಕೆಂದು ನಿರ್ಧಾರ ಮಾಡುವದಲ್ಲದೆ, ಆಕೆಯು ಅವರ ಮನೆಗೆ ಹೋಗುವಷ್ಟು ದಿವಸಗಳಲ್ಲಿಯೂ ಮೇಲಿನ ಖರ್ಚು ದಿನ ೧ಕ್ಕೆ ೪ ಆಣೆ ಪ್ರಕಾರವೂ ಕಡೇ ದಿನ ಒಂದು ಸೀರೆಯೂ ಕೊಡಬೇಕೆಂದು ಹೇಳುವದರಿಂದ ಜನರಿಗೆ ತುಂಬಾ ಕಷ್ಟ ಉಂಟೆಂದೂ ಇಲ್ಲಿನ ಅನೇಕ ಜನರು ಹೇಳಿಕೊಳ್ಳುತ್ತಾರೆ.

ಹೊಳೆನರಸೀಪುರ.—ಬಿಸಲಿನ ತಾಪವು ಕಡಿಮೆಯಾಗಿ ಗಾಳಿಯು ಹೆಚ್ಚಾಯಿತು. ಯಾವಾಗಲೂ ಮಳೆಯ ಮೋಡಗಳಿರುತ್ತವೆ. ನಿನ್ನೆ ಗುರುವಾರವೂ ಶುಕ್ರವಾರವೂ ಒಳ್ಳೇ ಎರಡು ಹದ ಮಳೆಗಳಿದ್ದರಿಂದ ಊರಿನ ಸುತ್ತಮುತ್ತಲಿನ ಕೆರೆಗಳಿಗೆಲ್ಲಾ ಆರು ತಿಂಗಳಿನ ನೀರು ಬಂತು. ರೈತರ ಸಂತೋಷವೆಷ್ಟೆಂದು ಹೇಳಲಿಕ್ಕಾಗದು. ಬೀಜ ಹಾಕಲಿಕ್ಕೆ ಹಸನು ಮಾಡಿದ ಹೊಲಗಳಿಗೆಲ್ಲಾ ಬೀಜ ಬಿತ್ತಿದರು. ಮಳೆಯು ಹೆಚ್ಚಿದ್ದರಿಂದ ಬೀದಿವೆಲ್ಲಾ ನೀರಿನ ಜೊತೆಯಲ್ಲಿ ಕೊಚ್ಚಿಹೋಯಿತು. ಮುಂದೆ ಕಾಲಕ್ಕೆ ಸರಿಯಾಗಿ ಮಳೆ ಬಂದರೆ ಬೆಳೆಯು ಬಹು ಚನ್ನಾಗಿ ಆಗುವದರಲ್ಲಿ ಸಂಶಯವಿಲ್ಲ. ಆದರೆ ಕಿಡಿಗಳ ಉಪದ್ರವು ಸ್ಲೇಗಿಗಿಂತ ಎಷ್ಟೋ ಅಧಿಕವಾಗಿದೆ. ಹೋದಸಾರಿ ಪ್ಲೇಗ್ ರೋಗವು ವ್ಯಾಪಿಸಿದ್ದಾಗ ಸುಮಾರು ೧೮—೨೦ ಮೇಣಸೆಬ್ಬಾದವು. ಆದರೆ ಈಗ ಕಿಡಿಗಳ ಉಪದ್ರದಿಂದ ಸುಮಾರು ೩೦ ಅಥವಾ ೪೦ ಮರಣಗಳಾಗಿವೆ. ಇದು ಒಳ್ಳೆ ವ್ಯಸನಕರವಾದ ಸಂಗತಿಯೇ ಸರಿ.—ಈ ಊರಿನ ಸುತ್ತಮುತ್ತಲಿನ ತಾಲ್ಲೋಕಿನಲ್ಲಿ ರಾಗಿಯ ಧಾರಣೆ ೪ ಆಣೆಗೆ ಐದಾರು ಸೇರು ಮಾರುತ್ತಿದ್ದರೂ ಈ ಊರಿನ ಸಂತೆಯಲ್ಲಿ ನಾಲ್ಕುವರೆ ನಾಲ್ಕು ಮುಕ್ಕಾಲು ಸೇರು ಮಾರುವದು ಈ ಊರಿನವರ ದುರಾದೃಷ್ಟವೇ ಸರಿ. ಅಕ್ಕಿಯು ರೂಪಾಯಿಗೆ ೧೦—೧೧ ಸೇರು ಮಾರುವದು.—ಈ ಊರು ಸಂತೆಯಲ್ಲಿ ದನಗಳನ್ನು ಮಾರುವ ಸಂತೆಯು ಬಹು ದೊಡ್ಡದು. ಹೊಲಗೇರಿಯವರೂ ಮಾದಿಗ್ಗೇರಿಯವರೂ ಬಹಳವಾಗಿ ದನಗಳನ್ನು ಕೊಂಡು ಕೊಂದು, ಒಂದು ವಾರಕ್ಕೆ ೪೦—೫೦ ದನಗಳನ್ನು ಸಂಹರಿಸುವರು. ನಮ್ಮ ತಾಲ್ಲೋಕಿನಲ್ಲಿ ಈ ಹಾವಳಿಯು ಬಹಳವಾಗಿ, ಮೂಗು ಪ್ರಾಣಿಗಳ ಸಂಖ್ಯೆಗೆ ಬಹಳ ಕುಂದು ಉಂಟಾಗಿರುವದು. ದಯಾಳುಗಳಾದ ನಮ್ಮ ಸರ್ಕಾರದವರು ಎಷ್ಟೋ ಪ್ರಜೋಪಕಾರದ ಕಾರ್ಯಗಳನ್ನು ಮಾಡುವರು. ಅವರು ಈ ಹಿಂಸೆಯನ್ನು ನಿಲ್ಲಿಸಿ, ಈ ಪ್ರಾಣಿ ವರ್ಗಕ್ಕೆ ಮೇಲನ್ನು ಮಾಡುವರೆಂದು ನಂಬಿದ್ದೇವೆ.—ಈ ಊರಿನಲ್ಲಿ ಸೇಂದಿ ಅಂಗಡಿಯು ಹುಲ್ಲಿನ ಗುಡಿಸಲಾಗಿದೆ. ಈ ಗುಡಿಸಲಿನ ಸುತ್ತು ಮುತ್ತಲೂ ಅನೇಕ ಮನೆಗಳು ಇವೆ. ಬೆಂಕಿ ಬಿದ್ದರೆ ಸುತ್ತು ಮುತ್ತಲಿನ ಮನೆಗಳೂ ನಾಶವಾಗುವವು. ಆದ್ದರಿಂದ ಸರ್ಕಾರದವರು ಈ ಅಂಗಡಿಗಾಗಿ ಒಂದು ಕಟ್ಟಡವನ್ನು ಕಟ್ಟಿಸಿಕೊಟ್ಟು, ಸೇಂದಿ ಕಂಟ್ರ್ಯಾಕ್ಟುದಾರರಲ್ಲಿ ತಿಂಗಳಿಗಿಷ್ಟು ಬಾಡಿಗೆಯಂತೆ ಗೊತ್ತು ಮಾಡಿ, ವಸೂಲ್ಮಾಡಲಿ. ಇಲ್ಲವೇ ಸೇಂದಿಯ ಕಟ್ಟಡವನ್ನು ಕಟ್ಟುವದಾಗಿ ಕಂಟ್ರ್ಯಾಕ್ಟುದಾರರಿಗೆ ಹುಕುಂ ಕೊಟ್ಟರೆ ಒಳ್ಳೇದು.—ಹೋದ ವಾರ ಚನ್ನರಾಯಪಟ್ಟಣ ತಾಲ್ಲೋಕು ಶ್ರವಣಬೆಳಗೊಳದ ಹೋಬಳಿ ಬಲ್ಲಪೇಟೆ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನ ಹೆಂಡತಿಯನ್ನು ಯಾರೋ ಗ್ಯೇಷಿಗಳು ಹೊಡೆದು, ಕರಿಗ [illegible] ಪಟ್ಟಣಕ್ಕೆ ಆಸ್ಪತ್ರೆ ಅಸಿಸ್ಟೆಂಟು ಇಲ್ಲದ್ದರಿಂದ ಈ ಊರು ಆಸ್ಪತ್ರೆಗೆ ಪೋಲೀಸಿನವರ ಮೂಲಕ ಹೆಣವನ್ನು ಚನ್ನರಾಯಪಟ್ಟಣದ ಅಮಲ್ದಾರರು ಕಳುಹಿಸಿಕೊಟ್ಟಿದ್ದರು. ನಮ್ಮ ಆಸ್ಪತ್ರೆ ಡಾಕ್ಟರೂ ಕಂಪೌಂಡರೂ ಬಹು ಮಾತ ವಹಿಸಿ, ಹೆಣವನ್ನು ಕೊಯ್ದು ಪರೀಕ್ಷಿಸಿದರು. ಆಗಲೆ ಹೆಣವು ೩—೪ ದಿನಗಳಾದ್ದರಿಂದ ವಿಷವೂ ಗೊತ್ತಾಗಲಿಲ್ಲ. ಇವರು ಪಟ್ಟ ಪ್ರಯಾಸವೆಲ್ಲಾ ನಿರರ್ಥಕವಾದದ್ದರಿಂದ ಹೆಣವನ್ನು ವಾರಸುದಾರರಿಗೆ ಕೊಟ್ಟು ದಹನ ಮಾಡಿಸಿದರು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳ ಕಡೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು. ಎಡಿ.

ಕರೆಸ್‌ಪಾಂಡೆನ್ಸ್.

ಹೊಳೆನರಸೀಪುರಕ್ಕೆ ಮಾಂಸದ ಮತ್ತು ಮೀನು ಮಾರುವ ಮಾರ್ಕೆಟ್ಟು ಬೇಕು

ಅಯ್ಯಾ,

ಈ ಊರಿನಲ್ಲಿ ಕಟುಕರ ಅಂಗಡಿಗಳು ಹೆಚ್ಚು. ಅಲ್ಲದೆ, ಅಂಗಡಿಗಳು ಬೀದಿ ಬೀದಿಗೆ ಒಂದೊಂದು ಉಂಟು. ಅಂದರೆ, ಮಾರ್ಗವಾದ ಸಣ್ಣ ಸಣ್ಣ ಗಲ್ಲಿಗಳಲ್ಲಿಗೆ ಸದರಿ ಅಂಗಡಿಯವರು ಮಾರ್ಗದಲ್ಲಿದ್ದೇವೆಂಬ ಭಯವಿಲ್ಲದೆ, ಮನಸ್ಸಿಗೆ ಬಂದ ಹಾಗೆ ಬಹು ಕನಿಷ್ಠ ಸ್ಥಿತಿಯಲ್ಲಿರುವ ರಾಸುಗಳನ್ನು ಕೊಯ್ದು ಮಾರುತ್ತಾರೆ. ಈ ಅಂಗಡಿಗಳ ಬಳಿ ದುರ್ವಾಸನೆಯು ಬಹಳವಾಗಿರುವದು. ಅಲ್ಲದೆ, ಮಾಂಸಹಾರಿಗಳಲ್ಲದ ಅನೇಕ ಜನಗಳು ಈ ಅಂಗಡಿಗಳ ಮಾರ್ಗವಾಗಿಯೇ ತಿರುಗಾಡುವರು ಮತ್ತು ಮೀನು ಮಾರುವ ಸ್ಥಳದಲ್ಲಿ ವಾಸನೆಯು ಹೇಳಲೇಕೂಡದಷ್ಟಿದೆ. ಆದ್ದರಿಂದ ನಮ್ಮ ಮ್ಯುನಿಸಿಪಾಲಿಟಿಯವರು ಊರಿಗೆ ಪ್ರತ್ಯೇಕವಾದ ಸ್ಥಳದಲ್ಲಿ ಒಂದು ಮಾರ್ಕೆಟ್ಟನ್ನು ಕಟ್ಟಿಸಿ, ತಲಾ ತಿಂಗಳೊಂದಕ್ಕೆ ಸ್ವಲ್ಪ ಸ್ವಲ್ಪ ಬಾಡಿಗೆ ವಸೂಲ್ಮಾಡಿದರೆ ಸುಮಾರು ಎರಡು ಮೂರು ವರುಷಗಳಲ್ಲಿ ಕಟ್ಟಿದ ಹಣವೆಲ್ಲಾ ವಸೂಲಾಗುವದಲ್ಲದೆ ಮುಂದಕ್ಕೆ ಇದರಿಂದ ಸರ್ಕಾರಕ್ಕೆ ಎಷ್ಟೋ ಫಾಯಿದೆ ಇರುವದು. ಊರಿನ ಆರೋಗ್ಯಕ್ಕೆ ಎಷ್ಟೋ ಒಳ್ಳೇದಾಗಿರುವದು. ಇದಕ್ಕೆ ಸರ್ಕಾರದವರು ನಿಗಾ ಕೊಟ್ಟಾರೆಂದು ನಂಬಿದ್ದೇನೆ.

ಪುರಾಭಿಮಾನಿ.

ಮದರಾಸಿನ ತುಳಸಿ ರಾಮದಾಸ್ ಕಂಪನಿಯ ಒಡವೆಗಳು.

ಅಯ್ಯಾ,

ತಮ್ಮ ಅಮೂಲ್ಯವಾದ ಸಂಚಿಕೆಯಾದ ಈ ವೃತ್ತಾಂತ ಪತ್ರಿಕೆಯಲ್ಲಿ ಕಳೆದ ಫೆಬ್ರುವರೀ ೯ನೇ ತಾ. ಗುರುವಾರ ಮದರಾಸಿನಲ್ಲಿ ಇರುವ ತುಲಸೀ ರಾಮದಾಸ್ ಕಂಪನಿಯಲ್ಲಿ ತಯಾರಾಗುವ ಕೆಲವು ಒಡವೆಗಳನ್ನು ಪ್ರಕಟಿಸಿದ್ದು ಸರಿಯಷ್ಟೆ. ಅದರಲ್ಲಿ

ಲೀಥನ್ನು ಜನರ ವಿವರಣೆಯ ಪ್ರಕಾರ ಒಂದು ಜೊತೆ ಬೆಂಡೋಲೆ ಕ್ರಯ ೬ ರೂಪಾಯಿ ಮತ್ತು ಒಂದು ಮೂಗು ಬೊಟ್ಟು ಕ್ರಯ ೩ ರೂಪಾಯಿ ಗೊತ್ತುಪಡಿಸಿದ್ದಾಯಿತು. ಇದು ನನ್ನ ಮನಸ್ಸಿಗೆ ಸರಿಯಾಗಿ ... ಮೂರನೆಯ ವಾರದ ೨೦ ನೇ ತಾರೀಖಿನಲ್ಲಿ ನಂಬರ್ ಮಾಡಿದ್ದಾಯಿತು. ಈ ತಹಶೀಲ್ದಾರರಿಗೂ ಹಣ ಏನಿಲ್ಲ. ಹಣ ಪಾವತಿಗೋಸ್ಕರವಾಗಿ ಒಂದು ರಿಜಿಸ್ಟರ್ ಕಾಗದವೂ ಮತ್ತು ೨ ಕಾರ್ಡುಗಳೂ ಬರೆದದ್ದಾಯಿತು. ಹಣವೂ ಬರಲಿಲ್ಲ. ಜವಾಬು ಸಹ ಬರಲಿಲ್ಲ. ಮತ್ತು ಇದೇ ಮಾಹೆ ೧೩ ತಾ. ಶನಿವಾರದ ದಿನ ಬೇರೆ ಅದೇ ಕ್ರಯ ಬಾಳತಕ್ಕ ಒಡವೆಯನ್ನಾದರೂ ಕಳುಹಿಸಿಕೊಡಬೇಕೆಂದು ಕಾರ್ಡು ಬರೆದಾಗ್ಯೂ ಇನ್ನೂ ಜವಾಬೂ ಇಲ್ಲ, ಒಡವೆಯೂ ಸಹ ಇಲ್ಲ. ಇದು ಮೋಸವಲ್ಲವೇ? ಹೀಗೆಯೇ ಎಷ್ಟು ಜನರು ಮೋಸಹೋಗುತ್ತಾರೋ ಎಂಬದಾಗಿ ತಿಳಿದು ಬರೆದಿದ್ದೇನೆ.

೨೨—೫—೦೪. ಜಿ ಸತ್ಯವೀರಯ್ಯ.

[ಈ ಕಂಪನಿಯವರ ಪ್ರಕಟನೆಯನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದರಿಂದ ಈ ಬಾತ್ಮೀದಾರರಿಗೆ ಇಂಥಾ ಮೋಸವಾಗುವದೆಂದು ನಾವು ಊಹಿಸಲಿಲ್ಲ. ಅವರಿಗೆ ಕಂಪನಿಯವರು ಸರಿಯಾದ ಸಮಾಧಾನ ಕೊಡುವ ತನಕ ನಾವು ಅವರ ಪ್ರಕಟನೆಯನ್ನು ಪ್ರಕಟಿಸಲಾರೆವಾಗಿ ನಿಶ್ಚಯಿಸುತ್ತೇವೆ.—ಎಡಿ.]

ತಿಪಟೂರು ವಿಚಾರ.

ಅಯ್ಯಾ,

ತಮ್ಮ ಕಳೆದ ತಾ. ೧೧ ನೆ ಪತ್ರಿಕೆಯಲ್ಲಿ ತಿಪ್ಟೂರು ಅಮಲ್ದಾರರು ಈ ತಾಲ್ಲೂಕಿಗೆ ದಯಮಾಡಿಸಿದಂದಿನಿಂದ ಅನೇಕ ಚರಸ್ಥಿರ ... ಕೆಲಸಗಳನ್ನು ಮಾಡಿಸಿದರೆಂದು ಪ್ರಕಟಗೊಳಿಸಿರುವದು ಸತ್ಯವಾಗಿದೆ. ಬಹು ದಿನಗಳಿಂದಲೂ ಆಗುತ್ತಿದ್ದ ಅನ್ಯಾಯವನ್ನು ... ಸದ್ಯಕ್ಕೆ ನಿವಾರಿಸಿರುವರು. ಈ ತಾಲ್ಲೂಕಿಗೆ ಸೇರಿದ ಸಾರ್ಥವಳ್ಳಿ ಎಂಬ ಗ್ರಾಮದಲ್ಲಿ ಒಂದು ಮುತ್ತಮ್ಮನೆಂಬ ದೇವತೆ ಇರುವದು. ಇದಕ್ಕೆ ಈಗ್ಗೆ ೩—೪ ವರುಷಗಳಿಂದಲೂ ಸಿವಿಲ್, ಕ್ರಿಮಿನಲ್ ವ್ಯಾಜ್ಯ ನಡೆದು, ಅನೇಕರು ಗ್ರಾಮಸ್ಥರಿಗೆ ಇತ್ಯರ್ಥವಾಯಿತು. ಪುನಃ ಈ ವಾದಿಗಳಾದವರಲ್ಲಿಯೇ ನಾನು ೧೮ ವರ್ಷದ ತಾನು ಯಜಮಾನನಾಗಬೇಕೆಂತ ಉತ್ಸವ ವಗೈರೆ ಭಂಗಪಡಿಸಿಕೊಂಡಿರುತ್ತಾರೆ. ಈ ದೇವತೆಯು ತೇರು ... ಬಂಧುತ್ವ ನಡಿಸಿಕೊಳ್ಳುತ್ತಾ ಇದೆ. ಈ ದೇವತೆಗೆ ಬಹು ಜನ ಭಕ್ತಾದಿಗಳಿರುವದರಿಂದ ವರ್ಷ ಒಂದಕ್ಕೆ ಸುಮಾರು ೩೦—೪೦ ರೂಪಾಯಿ ಕಾಣಿಕೆ ವಸೂಲಾಗುತ್ತೆ. ಇದು ಎಲ್ಲಿ ಖರ್ಚಾಗುವದೋ ದೇವರೊಬ್ಬನಿಗೇ ಗೊತ್ತು. ಇದಲ್ಲದೆ ಕೆಲವು ವನ ಬೆಸ್ತರು ಪೂಜಾರಿಗಳಾಗಿರುತ್ತಾರೆ. ಈ ಬೆಸ್ತರ ವಶದಲ್ಲಿ ಈ ದೇವತೆಯ ಬಾಬ್ತು ೩—೪ ಸಾವಿರ ರೂಪಾಯಿನ ಚಿನ್ನ ಬೆಳ್ಳಿ ಆಭರಣಗಳಿರುತ್ತವೆ. ಈ ವರೆಗೂ ಪಟ್ಟಿ ವಗೈರೆ ಇಲ್ಲದ್ದರಿಂದ ಇದರಲ್ಲಿ ಪೂಜಾರಿಯ ಪಾಲೆಷ್ಟೋ ದೇವರ ಪಾಲೆಷ್ಟೋ ತಿಳಿಯದು. ದಯಾಳುವಾದ ನಮ್ಮ ಅಮಲ್ದಾರರವರು ಪರಾಂಬರಿಸಿ, ಸರ್ಕಾರಿ ತರಫ್ ಏಜಂಟರಿಂದ ಮುಂದಣ ಸೇವೆಗಳು ನಡೆಯುವಂತೆ ಮಾಡಿದರೆ ಅವರ ಸತ್ಕೀರ್ತಿಯುಂಟಾಗುವದೆಂದು ಪ್ರಾರ್ಥಿಸುವ.

ಒಬ್ಬ ದೇವರ ಭಕ್ತ.

ಬೆಂಗಳೂರು ಬಸವನಪುರದ ಪೋಲೀಸ್ ವಿಷಯ

ಅಯ್ಯಾ,

ಬೆಂಗಳೂರು ಬಸವನಪುರದಲ್ಲಿರುವ ಪೋಲೀಸಿನವರು ರಾತ್ರಿ ಹೊತ್ತು ಬೀಟ್ ಮಾಡುವದು ಬಹಳ ವಿಚಿತ್ರವಾಗಿರುವದು. ಇಲ್ಲಿನ ನಿವಾಸಿಗಳು ಉಂಡು ಮಲಗಿ ನಿದ್ರೆಮಾಡುವ ಹೊತ್ತಿಗೆ ಸರಿಯಾಗಿ ಅಂದರೆ ಹತ್ತು ಅಥವಾ ಹನ್ನೊಂದು ಘಂಟೆಗೆ ಪ್ರಾರಂಭಿಸಿದ ಕೂಗುಗಳನ್ನು ಮತ್ತು ಸೀಟಿಗಳನ್ನು ೪—೫ ಘಂಟೆವರೆವಿಗೂ ನಿಲ್ಲಿಸುವದಿಲ್ಲ. ಈ ಬಸವನಪುರವು ಪೇಟೆಗೆ ದೂರ, ಕಾನ್ವೇರಿ ಸ್ಕೂಲ್‌ಗಳಿಗೆ ಬಹಳ ದೂರ. ಇಲ್ಲಿನ ನಿವಾಸಿಗಳೂ ಪೇಟೆ, ಕೋರ್ಟುಗಳಿಗೆ ಹೋಗಿ ಕೆಲಸ ತೀರಿಸಿಕೊಂಡು ಬಂದು, ಉಂಡು ವಿಶ್ರಾಂತಿಗೋಸ್ಕರ ಮನೆಯಲ್ಲಿ ರಾತ್ರಿ ಹೊತ್ತು ನಿದ್ರೆ ಮಾಡುತ್ತಿರುವ ಸಮಯದಲ್ಲಿ ಪೋಲೀಸಿನವರು ಭಂಗಪಡಿಸುವದು. ಈ ವೇಳೆ ಕೇಳಿದ ಕೂಗುಗಳಿಂದ ಭಂಗವಾಗದೆ ಇರುವವರನ್ನು ಕೂಡ ಪೋಲೀಸಿನವರು ಮನೇ ಬಾಗಿಲುಗಳಿಗೆ ಬಂದು, "ಸ್ವಾಮಿ, ಸ್ವಾಮಿ" ಎಂದು ಘಟ್ಟಿಯಾಗಿ ಕೂಗಿ ಮನೆಯವರು ಉತ್ತರ ಕೊಡುವ ವರಿಗೂ ನಿಲ್ಲಿಸುವದಿಲ್ಲ. ಹೀಗೆ ಎಚ್ಚತ್ತ ಮನೆಯವರು ಭಯದಿಂದ—ಏನಪ್ಪಾ ಎಂದರೆ, "ಹುಷಾರಾಗಿರೀ ಸ್ವಾಮಿ" ಎಂದು ಉತ್ತರವನ್ನು ಹೇಳಿ ಮುಂದಕ್ಕೆ ಸಾಗುವದು.

ಪೋಲೀಸಿನವರನ್ನು ಜನಗಳಿಗೆ ನಿದ್ರಾಭಂಗಮಾಡಿ ಅವರನ್ನು ಎಚ್ಚರಿಸುವ ಹಾಗೆ ಮಾಡುವದಕ್ಕಾಗಿಯೆ ಹೊರ್ತು ಪ್ರಜೆಗಳಿಗೆ ಹಿತವನ್ನುಂಟುಮಾಡಿ ದುಷ್ಟರಾದ ಕಳ್ಳರನ್ನು ಹಿಡಿಯುವದಕ್ಕೆ ನೇಮಿಸುವ ಹಾಗೆ ತೋರುವದಿಲ್ಲ. ಹೀಗೆ ಪ್ರಜೆಗಳೇ ಎಚ್ಚರವಾಗಿರುವದಾದರೆ ಪೋಲೀಸಿನವರು ಯಾತಕ್ಕೆ ಇರಬೇಕು? "ದೇವರು ವರಕೊಟ್ಟರೂ ಪೂಜಾರಿ ವರಕೊಡ" ಎಂಬ ನಾಣ್ಣುಡಿಗೆ ಸರಿಯಾಗಿ ನಗರೇಶನು ಈ ಸುಖವನ್ನು ಅನುಭವಿಸುವ ಹಾಗೆ ಮಾಡಿಸಿದ್ದರೂ ಪೋಲೀಸಿನವರು ಅನುಭವಿಸದ ಹಾಗೆ ಮಾಡುವರೇ! ನಮ್ಮ ದುರಾದೃಷ್ಟ, ಏನುಮಾಡತಕ್ಕದ್ದು? ಈ ಸಂಗತಿಯು ಅಧಿಕಾರಿಗಳ ತನಕ ಮುಟ್ಟಲಿಲ್ಲವೆಂತ ತೋರುತ್ತೆ. ಮುಟ್ಟಿದ್ದರೆ ದಾ... ದರ್ಶನಕ್ಕೆ ಬಂದ ಬ್ರಾಹ್ಮಣನಿಗೆ ಆದ ಫಲವು ಇವರಿಗೂ ದೊರಕುತ್ತಿತ್ತು. ಈಗಲಾದರೂ ಈ ತಮ್ಮ ಪತ್ರಿಕೆಯ ಮುಖದಿಂದ ಅಧಿಕಾರಿಗಳಿಗೆ ತಿಳಿಯಪಡಿಸುವದಕ್ಕೆ ಪ್ರಯತ್ನಪಟ್ಟಿರುವೆನು.

೧—೬—೦೪. ಪರಹಿತಕಾರಿ.

ಬೇಗೂರು ಸ್ಕೂಲ್ ವಿಚಾರ

ಅಯ್ಯಾ,

ಗುಂಡ್ಲುಪೇಟೆ ತಾಲ್ಲೂಕ್ ಬೇಗೂರಿನಲ್ಲಿ ಸನ್ ೧೯೦೫ನೇ ಇಸ್ವಿ ಮೇ ತಾರೀಖು ೧೯ ನೇ ಶುಕ್ರವಾರ ಪ್ರಾತಃಕಾಲ ಈ ಸ್ಕೂಲಿನಲ್ಲಿ ಪೋಲೀಸ್ ಸ್ಕ್ವೇರ್ ಚಾರ್ಜ್ ಅಧಿಕಾರಿಗಳು, ಯಳಂದೂರ್ ರೇಂಜ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರವರು, ಕಮಿಟಿ ಮೆಂಬರುಗಳು ಮತ್ತು ಗ್ರಾಮ ಮುಖಂಡರುಗಳು, ಇವರೇ ಮೊದಲಾದವರು ಸಭಾಸ್ಥಾನವನ್ನಲಂಕರಿಸಿ ಇರುವ ಕಾಲದಲ್ಲಿ ಅಗ್ರಾಸನವನ್ನು ಹೊಂದಿದ್ದ ಮ|| ರಾ|| ಬಿ ಎ. ತ್ರಿವಿಕ್ರಮರಾಯರು ಮಾಡಿದ ಉಪನ್ಯಾಸವೇನೆಂದರೆ—ಈ ಸ್ಕೂಲು ಕಳೆದ ೧೮೯೩ ನೇ ಇಸ್ವಿ ಜನವರಿ ೧೬ನೆ ತಾರೀಖಿನಲ್ಲಿ ಗೌವರ್ನಮೆಂಟಿನವರಿಂದ ಸ್ಥಾಪಿಸಲ್ಪಟ್ಟಿತು. ಆ ಲಾಗಾಯತು ಏಳು ವರ್ಷಗಳ ಕಾಲವೂ ೨—೩ ಜನ ಉಪಾಧ್ಯಾಯರುಗಳಿಂದ ಬೋಧಿಸಲ್ಪಟ್ಟರೂ ಕಳೆದ ೧೯೦೩ ನೇ ಇಸ್ವಿ ಪ್ರಾರಂಭದಲ್ಲಿ ಹಾಲಿ ಇರುವ ಮಾಸ್ಟರ್ ಮ|| ರಾ|| ಬಿ. ನಾಗೇಂದ್ರಯ್ಯನವರು ಈ ಸ್ಕೂಲು ಭಾರವನ್ನು ವಹಿಸಿದರು ಆ ಕಾಲದಲ್ಲಿ ೧೦—೧೫ ಜನ ವಿದ್ಯಾರ್ಥಿಗಳಿಂದ ಕೂಡಿದ್ದಾಗಿಯೂ ದಿಗರಸ್ಥಳಕ್ಕೆ ವರ್ಗವಾಗಲು ಅರ್ಹವಾದ ಸ್ಥಿತಿಯಲ್ಲೂ ಇತ್ತು. ಇವರು ಬಂದ ಮೇಲೆ ಕ್ಷೀಣಗತಿಯಲ್ಲಿದ್ದ ಈ ಸ್ಕೂಲು ೫೦ ಜನ ವಿದ್ಯಾರ್ಥಿಗಳಿಂದ ಕೂಡಿದು ಲೋವರ್ ಸೆಕೆಂಡರಿ ಪರೀಕ್ಷೆಯ ತರಗತಿಗೆ ಅರ್ಹವಾಗಿ ಆಯಿತು. ಇದಕ್ಕೆ ದೃಷ್ಟಾಂತವಾಗಿ ೧೯೦೪ ನೇ ಇಸ್ವಿಯಲ್ಲಿ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವದಲ್ಲದೆ, ಈ ವರುಷ ಏಳು ಜನ ಈ ಪರೀಕ್ಷೆಗೆ ತಯಾರಾಗುತ್ತಾ ಇದ್ದಾರೆ. ಮತ್ತು ಪ್ರಾಸಾದ ಇಬ್ಬರು ವಿದ್ಯಾರ್ಥಿಗಳೂ ವಿದ್ಯಾಭ್ಯಾಸದ ಇಲಾಖೆಯಲ್ಲಿ ಹಾಲಿ ಬದಲಿ ಕೆಲಸ ಮಾಡುತ್ತಾ ಇರುವರು ಈ ರೀತಿ ಅಭಿವೃದ್ಧಿಸ್ಥಿತಿಯಲ್ಲಿರುವ ಈ ಸ್ಕೂಲಿನ ವಿದ್ಯಾರ್ಥಿಗಳನ್ನು ನಮ್ಮ ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು ಸುಮಾರು ೨—೩ ತಿಂಗಳ ಕೆಳಗೆ ಈ ಮಾರ್ಗವಾಗಿ ಬಿಡೆಯಾಳದ ಕ್ಯಾಂಪಿಗೆ ಶಿಕಾರಿ ಉದ್ದೇಶ್ಯ ದಯಮಾಡಿಸಿದ್ದ ವೇಳೆಯಲ್ಲಿ ಪರಾಂಬರಿಸಿ ಸಂತೋಷಪಟ್ಟಿರುತ್ತಾರೆ. ಇದೂ ಅಲ್ಲದೆ, ಈ ಇಲಾಖೆಯ ಅಸಿಸ್ಟೆಂಟರೂ ಮತ್ತು ಡೆಪ್ಯುಟಿ ಇನ್ಸ್‌ಪೆಕ್ಟರೂ ಅನೇಕಸಾರಿ ವೇಳೆ ದಯಮಾಡಿಸಿ, ಈ ಸ್ಕೂಲಿನ ಸ್ಥಿತಿಯನ್ನು ಪರೀಕ್ಷಿಸಿ ತೃಪ್ತಿಗೊಂಡಿರುತ್ತಾರೆ. ಯೋಗ್ಯ ಕಟ್ಟಡವಿಲ್ಲದೆ ಇರುವ ಈ ಸ್ಕೂಲಿನ ವಿಷಯದಲ್ಲಿ ಹಾಲಿ ಇರುವ ಮಾಸ್ಟರು ಚಂದಾ ವಗೈರೆ ವಸೂಲು ಮಾಡಿ, ಗ್ರಾಮಸ್ಥರುಗಳಿಂದ ಕೆಲವು ಸಾಮಾನುಗಳನ್ನು ಸಂಗ್ರಹಿಸಿರುವದಲ್ಲದೆ, ಗವರ್ನಮೆಂಟಿನವರಿಂದಲೂ ದ್ರವ್ಯ ಸಹಾಯ ಆಗಬೇಕೆಂದು ನಿವೇದನ ಸಲ್ಲಿಸಿರುತ್ತಾರೆ. ಈ ರೀತಿಯಾಗಿ ಇಲ್ಲಿನ ಬಡ ಹುಡುಗರಿಗೆ ವಿದ್ಯಾವ್ಯಾಸಂಗವನ್ನು ನಡಿಸಿಕೊಂಡು ಬಂದಿರುವ ಹೆಡ್ಮಾಸ್ಟರ್ ಮ|| ನಾಗೇಂದ್ರಯ್ಯನವರಿಂದ ಪ್ರಾಸಾದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿರುತ್ತೆಂಬ ಮಾರಭಿಪ್ರಾಯವನ್ನು ಪ್ರಕಟಿಸುವುದು ಯೋಗ್ಯವಲ್ಲ. ಏನಂದರೆ ಈ ಮಾಸ್ತರು ಈ ಸ್ಕೂಲಿಗೆ ಬಂದ ಲಾಗಾಯತು ಕೇವಲ ಮುತುವರ್ಜಿ ವಹಿಸಿ, ಇಷ್ಟರಮಟ್ಟಿಗೆ ಅಭಿವೃದ್ಧಿಸ್ಥಿತಿಗೆ ತಂದಿರತಕ್ಕ ವಿಚಾರದಲ್ಲಿ ನಾನು ಬಹಳ ಸಂತೋಷಪಡುತ್ತೇನೆ. ಮತ್ತು ಇಲ್ಲಿನ ಮೆಂಬರುಗಳು ಸಹ ಸೇರಿ, ಇವರಿಗೆ ಪ್ರೋತ್ಸಾಹಪಡಿಸಿ, ಈ ಸ್ಕೂಲನ್ನು ದಿನೇ ದಿನೇ ಇನ್ನೂ ಹೆಚ್ಚಾದ ಅಭಿವೃದ್ಧಿಸ್ಥಿತಿಗೆ ತರುತ್ತಾರೆಂಬದಾಗಿ ನಂಬಿದ್ದೇನೆ.

ಸ್ಕೂಲ್ ಮೆಂಬರು.

ವಿದೇಶ ವರ್ತಮಾನಗಳು.

ಪರ್ಷಿಯಾ ರಾಜ್ಯದ ಪಾದುಶಹರು ಮುಂದಿನ ತಿಂಗಳಲ್ಲಿ ಫ್ರಾನ್ಸ್ ರಾಜ್ಯಕ್ಕೆ ಹೋಗಿ ಬರುವವರಾಗಿದಾರೆ.

****

ರಷ್ಯಾ ರಾಜ್ಯದವರು ಸ್ಟೇರ್ನ್ ಕ್ರೀರಪಟ್ಟಣದಲ್ಲಿ ಇಟ್ಟುಕೊಂಡಿದ್ದ ೪೫,೦೦೦ ಟನ್ನು ಕಲ್ಲಿದ್ದಲನ್ನು ಕಳೆದ ೨೩ ರಲ್ಲಿ ಐದು ಹಡಗುಗಳಿಗೆ ಭರ್ತಿಮಾಡಿ ಸಾಗಿಸಿಕೊಂಡುಹೋದರು.

****

ಗ್ಲಾಸ್ಗೋ ಪಟ್ಟಣದ ಸರ್ವ ವಿದ್ಯಾನಿಲಯಕ್ಕೆ ಕೋಟ್ಯಾಧೀಶ್ವರನಾದ ಮಿ|| ಆಂಡ್ರು ಕಾರ್ನೆಗಿಯು ೩೦,೦೦೦ ರೂಪಾಯಿಗೆ ಒಂದು ದೊಡ್ಡ ರಾಗಮಾಲನ್ನು ಕೊಂಡು ಕೊಟ್ಟಿರುತ್ತಾನೆ.

****

ಅಮೇರಿಕದ ವೆಲ್‌ನ್ಯಾರ್ ಸೀವರ್ ಮಾರ್ಗನ್ ಎಂಬ ಕಂಪನಿಯವರು ಜಪಾನ್ ರಾಜ್ಯಕ್ಕೆ ಸೇರಿದ ಕೂರಿ ಎಂಬ ಪಟ್ಟಣದಲ್ಲಿ ಯಂತ್ರಗಳ ಸಹಿತವಾಗಿ ಒಂದು ಉಕ್ಕಿನ ಕಾರ್ಖಾನೆಯನ್ನು ಕಟ್ಟಿಕೊಡುವುದಾಗಿ ೩೭,೫೦,೦೦೦ ರೂಪಾಯಿಗೆ ಕಂಟ್ರಾಕ್ಟು ವಹಿಸಿರುತ್ತಾರೆ

****

ಅಮೇರಿಕಕ್ಕೆ ಸೇರಿದ ಫೈಸಂಗುನಾ ಎಂಬ ಭಾರೀ ನಗರದಲ್ಲಿ ಬಹು ಭಯಂಕರವಾದ ಮತ್ತು ಬಹಳ ದುಃಖಕರವಾದ ಅಗ್ನಿನಷ್ಟ ಉಂಟಾಯಿತು. ನದೀ ತೀರದಲ್ಲಿದ್ದ ಟೌನ್ ಹಾಲ್ ಬಂಗಲೆ, ಹಲವು ವ್ಯಾಪಾರಗಳ ಕಟ್ಟಡಗಳು, ೧೫ ಬಸ್ತಿಗಳು, ಸುಟ್ಟು ನಾಶ ಹೋದುವು ಸುಮಾರು ಎರಡ ವರೆ ಕೋಟಿ ದ್ರವ್ಯದ ಆಸ್ತಿಪುಸ್ತಿಗಳು ಹಾಳಾಗಿವೆ

****

ವಿಲಾಯತಿ ರಾಜ್ಯದ ಮಹಾರಾಜಾ ಚಕ್ರವರ್ತಿಯವರು ಕಳೆದ ವಾರ ಫ್ರಾನ್ಸ್ ದೇಶದಲ್ಲಿ ಫ್ರೆಂಚರ ಸತ್ಕಾರವನ್ನು ಸ್ವೀಕರಿಸಿ ಸಂತೋಷಪಟ್ಟು, ವಾಪಸು ಬರಲು ಹತ್ತಿ ವಿಲಾಯತಿಗೆ ದಯಮಾಡಿದರು. ಲಂಡನ್ ಪಟ್ಟಣದ ವಿಕ್ಟೋರಿಯಾ ಸ್ಟೇಷನಿನಲ್ಲಿ ಲಾರ್ಡ್ ಲ್ಯಾನ್ಸ್‌ಡೌನ್, ಮಿ|| ಬಾಲ್ಫರ್, ಮಿ|| ಡಗ್ಲಸ್ ಎಂಬೀ ಮಂತ್ರಿಗಳು ಕಾದಿದ್ದು, ಚಕ್ರವರ್ತಿಯವರಿಗೆ ಸುಸ್ವಾಗತವನ್ನು ಬಯಸಿದರು. ಚಕ್ರವರ್ತಿಯವರು ಮಂತ್ರಿಗಳ ಸಂಗಡ ಕೆಲವು ನಿಮಿಷಗಳ ಕಾಲ ಸಂಭಾಷಣೆ ಮಾಡಿಕೊಂಡು, ಸಾರೋಟು ಹತ್ತಿ ರಾಜಭವನಕ್ಕೆ ತೆರಳಿದರು.

****

ರಷ್ಯಾ ಸೈನಿಕರು ಈಗ ಹಾರ್ಬಿನ್ ಪಟ್ಟಣವನ್ನು ಯುದ್ಧಭೂಮಿಯಲ್ಲಿ ತಮ್ಮ ಮುಖ್ಯ ಠಾಣ್ಯವಾಗಿ ಮಾಡಿಕೊಂಡಿದ್ದಾರೆ. ಇತರ ಕಡೆ ಯುದ್ಧಗಳಲ್ಲಿ ಗಾಯಗೊಂಡ ತಮ್ಮ ಸೈನಿಕರ ಹೆಣಗಳನ್ನು ರಷ್ಯನರು ಈ ಪಟ್ಟಣಕ್ಕೆ ಅವಸರವಾಗಿ ಸಾಗಿಸಿಕೊಂಡು ಬಂದು, ಅಲ್ಲಿ ಸಮಾಧಿಮಾಡಿದ್ದರಿಂದ ಈಗ ಆ ಪಟ್ಟಣದಲ್ಲಿರುವ ರಷ್ಯಾ ಸೈನಿಕರಿಗೆ ಒಂದು ತರಹಾ ಕೆಟ್ಟ ರೋಗ ಉಂಟಾಗಿ, ವಾರ ಒಂದಕ್ಕೆ ೫,೦೦೦ ಜನರಂತೆ ಸಾಯುತ್ತಿದ್ದಾರೆಂತಲೂ ಅಲ್ಲಿನ ಸ್ವದೇಶಿಗಳು ತಮಗೂ ಆ ಅಂಟು ರೋಗ ಬರುವುದೆಂದು ಹೆದರಿ, ರಷ್ಯದವರ ಹೆಣಗಳನ್ನು ಹೊರುವುದಿಲ್ಲವೆಂದು ಬಿಟ್ಟುಬಿಟ್ಟರೆಂತಲೂ ಆ ಪಟ್ಟಣದಿಂದ ಒಂದು ತಂತೀ ವರ್ತಮಾನ ಬಂದಿದೆ.

****

ಟಿಬೆಟ್ ರಾಜ್ಯದ ದಳಾಯಿಲಾಮನೆಂಬ ಮುಖ್ಯ ಗುರುವು ಇಂಡಿಯಾ ಗವರ್ನಮೆಂಟಿನವರ ಆಗಮನವನ್ನು ಕೇಳಿ, ತಲೆ ತಪ್ಪಿಸಿಕೊಂಡು ಹೋಗಿಬಿಟ್ಟನು. ಈಗ ಈತನು ಉರ್ಗಾನಗರ ವಾಸಿಯಾಗಿರುವನು. ಚೀನಾ ಅಧಿಕಾರಿಗಳು ಆತನನ್ನು ಪ್ರಾಣದಿಂದ ಮಾಡಿ, ಹಿಂದಕ್ಕೆ ಟಿಬೆಟ್ಟಿಗೆ ಕಳುಹಿಸಿಕೊಡಬೇಕೆಂದು ಪ್ರಯತ್ನಪಡುತ್ತಿದಾರೆ. ರಷ್ಯಾದವರಾದರೋ ಈ ದಳಾಯಿಲಾಮನೆಂಬ ಗುರುವನ್ನು ಉಪಾಯಾಂತರದಿಂದ ತಮ್ಮ ಆಶ್ರಯಕ್ಕೆ ಕರೆದುಕೊಂಡು, ಇದರಿಂದ ಆತನ ಮೂಲಕ ದೊಡ್ಡ ಕಾರಬಾರು ನಡಿಸಬೇಕೆಂದು ಒಳಸಂಚು ನಡಿಸುತ್ತಿರುವರು. ಆ ಮುಖ್ಯ ಗುರುವು ತನ್ನನ್ನು ಅಲ್ಲಿಂದ ಬಿಟ್ಟುಬಿಟ್ಟರೆ ಚೀನಾ ಮಾರ್ಗವಾಗಿ ಹಿಂತಿರುಗಿ ಟಿಬೆಟ್ಟಿಗೆ ಬಂದು ಸೇರಿಕೊಂಡೇನೆಂದು ಹೇಳುತ್ತಾನಂತೆ.

****

ಲಸ್ಸೆ ಎಂಬ ಹಡಗು ಜಪಾನಿಗೆ ಹೋಗಬೇಕಾಗಿತ್ತು. ರಂಗೂನ್ ಪಟ್ಟಣದಲ್ಲಿ ಆ ಹಡಗಿನ ನೌಕರರೂ ಅಧಿಕಾರಿಗಳೂ ತಾವು ಅಲ್ಲಿಂದ ಮುಂದಕ್ಕೆ ಬರುವುದಿಲ್ಲವೆಂತಲೂ, ಚೀನಾ ಸಮುದ್ರದಲ್ಲಿ ಸಂಚರಿಸುತ್ತಿರುವ ಬಾಲ್ಟಿಕ್ ಹಡಗುಗಳವರು ತಮ್ಮನ್ನು ಹಿಡಿದುಕೊಂಡಾರೆಂದು ಹೆದರುತ್ತೇವೆಂತಲೂ ಹೇಳಿ, ಹಡಗಿನ ಕ್ಯಾಪ್ಟನ್ ಎಂಬ ಮುಖ್ಯ ಉದ್ಯೋಗಸ್ಥನ ಮಾತನ್ನು ಕೇಳದೆ ಹೋದರು. ಆಗ ಕ್ಯಾಪ್ಟನ್ ಎಂಬ ಮುಖ್ಯ ಉದ್ಯೋಗಸ್ಥನು ಅವರ ಮೇಲೆಲ್ಲಾ ಫಿರ್ಯಾದು ಮಾಡಿದನು. ರಂಗೂನ್ ಪಟ್ಟಣದ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ವಿಚಾರಿಸಿದಾಗ ಕೆಲವು ಅಧಿಕಾರಿಗಳೂ ನೌಕರರೂ ಜಪಾನಿಗೆ ಹೋಗುವುದಕ್ಕೆ ಒಪ್ಪಿಕೊಂಡರು. ಆದರೆ ಹೋಗುವುದೇ ಇಲ್ಲವೆಂದು ಹಟಹಿಡಿದ ೩ ಮಂದಿಗೆ ತಲಾ ಎರಡೆರಡು ಮಾಸಗಳ ಸಾಧಾರಣ ಸಜಾ ವಿಧಿಸಲ್ಪಟ್ಟಿತು.

****

ರಷ್ಯಾ ಜಪಾನ್ ಯುದ್ಧದಲ್ಲಿ ಜಪಾನೀಸರ ಕಡೆ ಮಡಿದು ಹೋದ ಸೈನಿಕರ ಹೆಂಡರುಮಕ್ಕಳ ಜೀವನಕ್ಕೆ ಏರ್ಪಾಡಾಗಿರುವ ಫಂಡಿಗೆ ನೀವು ಸ್ವಲ್ಪ ದ್ರವ್ಯ ಸಹಾಯ ಮಾಡಬಾರದೇ ಎಂದು ಕೋಟ್ಯಾಧೀಶ್ವರನಾದ ಮಿ|| ಆಂಡ್ರು ಕಾರ್ನೆಗಿಯನ್ನು ಪ್ರಶ್ನೆ ಮಾಡಿದ್ದಕ್ಕೆ ಅವನು ಉತ್ತರ ಕೊಟ್ಟದ್ದೇನೆಂದರೆ—ದ್ರವ್ಯ ಸಹಾಯ ಮಾಡತಕ್ಕ ವಿಷಯದಲ್ಲಿ ನನ್ನ ಗಂಡ ಹೆಂಡರ ಅಭಿಪ್ರಾಯವೂ ಉದ್ದೇಶವೂ ಬೇರೆಯಾಗಿದೆ. ಯುದ್ಧ ವಿಚಾರದಲ್ಲಿ ನನಗೆ ಪ್ರೀತಿ ಇಲ್ಲ. ಪುಣ್ಯ ಕಾರ್ಯಕ್ಕಾಗಿ ಒಂದು ವೇಳೆ ಯುದ್ಧಮಾಡಿದರೂ ಮಾಡಬಹುದು. ರಾಜ್ಯ ರಾಜ್ಯಗಳವರು ಮುಂದಾಲೋಚನೆ ಇಲ್ಲದೆ, ಮತಿಹೀನರಾಗಿ ತಮ್ಮ ಸೈನಿಕರ ಜೀವನ ಹ್ಯಾಗೆಂದು ಯೋಚಿಸದೆ, ಯುದ್ಧಕ್ಕೆ ನುಗ್ಗಿ ಕೊಲ್ಲುವುದೂ ಕೊಲ್ಲಿಸಿಕೊಳ್ಳುವುದೂ ಬಹಳ ದುಃಖಕರವಾಗಿರುತ್ತೆ. ಇದೂ ಅಲ್ಲದೆ ಪ್ರಕೃತದಲ್ಲಿ ನಡೆಯುತ್ತಿರುವ ಯುದ್ಧದ ವಿಚಾರವಾಗಿ ನಾವು ಯಾರ ಕಡೆಗೂ ಪಕ್ಷಪಾತ ಮಾಡಲಾರೆವು ಎಂಬುದೇ.

****

ಅಫೀಮಿನ ವ್ಯಾಪಾರವನ್ನು ನಿಲ್ಲಿಸಿಬಿಡಬೇಕೆಂಬ ಸಂಕಲ್ಪ ಇಟ್ಟುಕೊಂಡಿರುವ ದೊಡ್ಡ ಮನುಷ್ಯರ ಸಂಘ ಒಂದು ವಿಲಾಯತಿಯಲ್ಲಿರುತ್ತದೆ. ಈ ಸಂಘದವರು ಕಳೆದವಾರ ಸಭೆ ಸೇರಿ ವಾರ್ಷಿಕ ರಿಪೋರ್ಟನ್ನು ಓದಿದರು. ಆಗ್ಗೆ ಷಾಂಘಾಯ್ ಪಟ್ಟಣದ ಡಾ|| ರಿಚರ್ಡ್‌ಯವರು—ಜಪಾನ್ ಗವರ್ನಮೆಂಟಿನವರು ಪಾಶ್ಚಾತ್ಯ ರಾಜ್ಯಗಳವರ ಸಲಹೆ ಪ್ರೇರಣೆಗಳೊಂದೂ ಇಲ್ಲದೆ, ತಮಗೆ ತಾವೇ ಈ ಅಫೀಮಿನ ವ್ಯಾಪಾರವನ್ನು ಆ ರಾಜ್ಯದಲ್ಲಿ ನಿಲ್ಲಿಸಿಬಿಟ್ಟರಾದರೆ ಎಂದು ತಿಳಿಸಿದರು. ಪಾರ್ಲಿಮೆಂಟ್ ಮೆಂಬರಾಗಿರುವ ಮಿ|| ಸಾಮ್ಯುಯಲ್ ಸ್ಮಿತ್ ಯವರು—ಹಿಂದುಸ್ಥಾನವು ಬಹಳ ದರಿದ್ರ ರಾಜ್ಯ. ಅಲ್ಲಿನ ರೈತರು ಅಫೀಮು ಬೆಳೆದು, ಚೀನಾ ರಾಜ್ಯಕ್ಕೆ ರಫ್ತು ಮಾಡಿ, ಜೀವನ ಮಾಡಬೇಕಾಗಿದೆ. ರೈತರು ಈ ಕಸಬನ್ನು (ಅಫೀಮು ಬೆಳೆ ಮಾಡುವುದನ್ನು) ಬಿಟ್ಟುಬಿಡಲಾರರು. ಹಿಂದುಸ್ಥಾನದಲ್ಲಿ ಗವರ್ನಮೆಂಟಿಗೆ ಅಫೀಮಿನ ಬಾಬಿನಲ್ಲಿ ಆಗುವ ಉತ್ಪತ್ತಿಯನ್ನೆಲ್ಲಾ ಬೇರಾವರೇ ಕೊಡತಕ್ಕವರಾಗಿದಾರೆ. ಈ ದುಷ್ಟ ವ್ಯಾಪಾರವನ್ನು ಇಂಡಿಯಾ ಗವರ್ನಮೆಂಟಿನವರು ಬಿಟ್ಟುಬಿಡಬೇಕಾದಲ್ಲಿ ವಿಲಾಯತಿ ರಾಜ್ಯವು ಇಪ್ಪತ್ತು ವರುಷಗಳ ತನಕ ಪ್ರತಿ ವರುಷವೂ ೩೫೦ ಲಕ್ಷ ರೂಪಾಯಿನಂತೆ ದ್ರವ್ಯ ಸಹಾಯ ಮಾಡುತ್ತಾ ಬರಬೇಕಾದದ್ದು ವಿಲಾಯತಿಯ ಕರ್ತವ್ಯವಾಗಿದೆ ಎಂದು ಹೇಳಿದರು.

ಪ್ರಪಂಚದಲ್ಲಿ ದೊಡ್ಡದು ಯಾವದು?

23

ಜ್ಞಾನವೋ ? ದ್ರವ್ಯವೋ ? ಸ್ನೇಹಿತರೋ ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ"

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ವಿಜಗುಣ ಯೋಗಿಗಳು ಬರೆದರು ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ಶ್ರೇಷ್ಠವಾದದ್ದಾಗಿವೆ ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ಯಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು ಕ್ರಯ ೨ ಆಣೆ.

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪ "ರೋಮನರ ಚರಿತ್ರೆ" ಕ್ರಯ ೦—೨—೦
೫. "ಗ್ರೀಕರ ಚರಿತ್ರೆ" ,, ೦—೨—೦
೬ "ಅನುಭವಾನಂದ" ,, ೦—೬—೦
೭ "ಗಣಿತ ಸಂಜೀವಿನಿ" ೧—೮—೦
೮ "ಗಣಿತ ಚಿಂತಾಮಣಿ" ೦—೧೦—೦
೯ "ಚಾಮರಾಜೇಂದ್ರ ವಿಲಾಸ" ೦—೧೨—೦
೧೦ "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧೨—೦
೧೧ "೧೯೦೫ನೇ ವರುಷದ ಡೈರಿಗಳು"
ಪ್ಲೈನ್, ಪೆನ್ಸಿಲ್ ಸಹಿತ ೦—೬—೦, ಸಾದಾ ೦—೪—೦.

ಮ್ಯಾನೇಜರ್,
ಸಿ ಎಲ್ ಎಸ್ ಬುಕ್ ಡಿಪ್ಪೋ,
ಮೈಸೂರು

ಜ್ವರಹರಿ

26

ಇದು ಸಾಧಾರಣ ಜ್ವರ, ಚಳಿಜ್ವರ, ವಿಷಮಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಇದ್ದು ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬಿಳುತ್ತಿರುವ ಕಾರಣದಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ— ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿತಲಾಗುವದು

****

ಬಿ ಮ ೦ ಕ ಪೂ ೯ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವೆ ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವೆ ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಅಯ್ಯರು—ಹೆನ್ರಿಯ ಬಿಮಂ ಕರ್ಪೂರವನ್ನು ನಾನೂ ನನ್ನ ಕಾಂಪೌಂಡರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪುರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಟ್ಟಣಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೆಕ್ಕಣ್ ಬೀದಿ ರೈನ್, ಮದರಾಸ್. ರೈನ್, ಮದರಾಸ್

WANTED WILD ANIMALS.

ಬೇಕಾಗಿದೆ ಬೇಕಾಗಿದೆ.

7

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಟ್ ಮಿ॥ ಹ್ಯೂಬಸ್ ಯವರು ಕೊಂಡುಕೊಳ್ಳುವರು.

Apply to—Mr Huchus Mysore Zoo

ಶ್ರೀ ತಾಂಬೂಲ.

25

ಇದನ್ನು ಓದಿ ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ವಾರ್ತೆಗಳನ್ನು ಪಾಡಿ ಮಾರುತ್ತಾರೆ ಇದರ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ವಾಕ್ಯ ಸೇವಿಸುತ್ತ ಬಂದರೆ ಮುಖದ ದುರ್ಗಂಧ ನಾಶವಾಗುತ್ತೆ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರಿಗೆ ವಿ. ಪಿ ಛಾರ್ಜು ೫ ಆಣೆ. ನಮ್ಮ ವಿಳಾಸ —

ದೇವನಹಳ್ಳಿ ಟವುನ್, ಬೆಂಗಳೂರು ಡಿಸ್ಟ್ರಿಕ್ಟ್
ಯಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್

ಹೊ ೕ ಮೊ ೕ ಸಿ ಯಾ

ಕಷ್ಟ ಪರಿಹಾರ.

ಜಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮಠ, ಟಾಣೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ಅಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಮಾರ್ಗವಾಯು, ಶೂಲವ್ಯಾಧಿ, ಉಳುಕು, ವಾಯುಗಳು, ನರ ಸೇದಲಾಗುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ಕಜ್ಜಿಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ಈ ರೂ ೨—೮ ಆ. ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಯೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಇದರ ಬಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಅವರ್ಗವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಗಳಲ್ಲಿ ಒಂದಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಪಟ್ಟಣಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ —ಹೋಮೋಸಿಯಾ ಕಂಪೆನಿ. ೨೫ ಸೆಕೆಂಡು ಬೀದಿ ರೈನ್, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೮—೪—1905 ರಿಂದ 5—5—1905 ರ ವರೆಗೆ

ಸ್ಥಳ.	ಪ್ಲೇಗ್ ಹಗಲು ಹಿಡಿದ್ದು	ಪ್ಲೇಗ್ ಸತ್ತದ್ದು	ಹೋದವಾರ	ಈ ವಾರದ ಸಂಖ್ಯೆ
ಬೆಂಗಳೂರು ಪಟ್ಟಣ	6	4	2	7
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	4	5	11	3
ಮೈಸೂರು ,,	0	0	[illegible]	10
ಕೋಲಾರ್ ,,	0	0	9	8
ಕೋಲಾರ್ ಚಿನ್ನದ ಗಣಿಗಳು	0	0	6	6
ತುಮಕೂರು ಡಿಸ್ಟ್ರಿಕ್ಟ್	1	1	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	8	4
ಕಡೂರ್ ,,	0	0	10	10
ಶಿವಮೊಗ್ಗ ,,	0	0	15	10
ಒಟ್ಟು	11	10	60	58

ಶಾಲಿವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ವೈಶಾಖ ಬಹುಳ ಸಪ್ತಮಿ ಗುರುವಾರದಿಂದ ವೈಶಾಖ ಬಹುಳ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಮೇ

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇದಿ ವೃಷಭ
25	ಗುರು	ಸಪ್ತಮಿ	30 16	ಧ	16 [illegible]	12
26	ಶುಕ್ರ	ಅಷ್ಟಮಿ	12 32	ಶ್ರ	50-30	13
27	ಶನಿವಾ	ನವಮಿ	16 10	ಪೂಭಾ	56 1	14
28	ಭಾನುವಾ	ದಶಮಿ	50 16	ಉಭಾ	60 0	15
29	ಸೋಮ	ಏಕಾದಶಿ	50 15	ಉಭಾ	— 15	16
30	ಕುಜ ↖	ದ್ವಾದಶಿ	60 0	ರೇ	[illegible]	17
31	ಬುಧ ‡	ದ್ವಾದಶಿ	0 51	ಅ	10 1	18

: ಸ್ಮಾರ್ತ ೧೧.
↖ ವೈಷ್ಣವ ೧೧, ಹರಿವಾಸರ, ಯುವರಾಜರ ವರ್ಧಂತಿ
‡ ಪ್ರದೋಷ

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಡ್ಲೇ ಅಕ್ಕಿ ಪಲ್ಲ ಒಕ್ಕೆ	ರೂ	೧೦ ೮—೦	೧೧—೦—೦
ಕೆಂಬೂತಿ ಅಕ್ಕಿ ಅವಲ್	..	೧೦—೪—೦	೧೧—೮—೦
,, ಮಧ್ಯಮ	..	೯—೧೨—೦	೧೦—೦—೦
ಜಾನ್ರಾಳ ಅಕ್ಕಿ	.	೯—೮—೦	೧೨—೦—೦
ಸಣ್ಣಕ್ಕಿ ಅವಲ್	..	೧೨—೦—೦	೧೨—೮—೦
,, ಮಧ್ಯಮ	..	೧೦ ೮ ೦	೧೨—೦—೦
ತೊಗರೀ ಬೇಳೆ ಪಲ್ಲ ಒಕ್ಕೆ	..	೧೦—೮ ೦	೧೨—೮—೦
,, ಮಧ್ಯಮ	..	೧೧—೦—೦	೧೦—೪—೦
ಜೈರ ರಾಗಿ ಪಲ್ಲ ಒಕ್ಕೆ	.	೪ ೧೨—೦	೫—೨—೦
ಕಾರಾಗಿ	.	೪—೧ ೦	೪—೧೧—೦
ಜೋಳ	..	೪—೧೨—೦	೭—೮—೦
ಹಲಸಂದೆ ಪಲ್ಲ ಒಕ್ಕೆ	.	೮—೧೨—೦	೭—೦—೦
ಬಿಳೀ ಅವರೆ	..	೬ ೧೨—೦	೭—೮—೦
ಹೆಸರು	..	೯ ೧೨—೦	೧೧—೮—೦
ಉದ್ದು	..	೮ ೧೪ ೦	೯—೮—೦
ಕಡಲೆ	..	೯ ೦—೦	೮—೪—೦
ಎಳ್ಳು	.	೧೬ ೦—೦	೧೪—೧೦ ೮
ಹುರುಳಿ	..	೮—೦ ೦	೮—೮—೦
ಅರಳು ೧೨೬ ಸೇರಿಗೆ	..	೯—೮—೦	೨—೧೩—೦
ತೆಂಗಿನಕಾಯಿ ಮಣ ಒಕ್ಕೆ	..	೨—೪—೦	೨—೧೨—೦
ಮೆಣಸಿನಕಾಯಿ		೪—೮—೦	೪—೦—೦
,, ಮಧ್ಯಮ	..	೩—೧೨—೦	೩ ೧೨—೦
ಬೆಲ್ಲ ದೊಡ್ಡ ಅಚ್ಚು	.	೭—೪—೦	೬ ೭ ೦—೦
ಒಳ್ಳೆಣ್ಣೆ ಮಣ ಒಕ್ಕೆ	.	೪—೦ ೦	೪—೮—೦
ಹರಳೆಣ್ಣೆ ,,	.	೪—೦—೦	೪—೦—೦
ಕೊತ್ತಂಬರಿ ಪಲ್ಲ ಒಕ್ಕೆ	.	೬ ೦—೦	೮—೧೨—೦
ಉಪ್ಪು ,,	.	೮—೦—೦	೭—೦—೦
ಹುಣಸೇ ಹಣ್ಣು	.	೧ ೪—೦	೦—೧೪—೦
,, ಚಿಳ್ಳೆಯ	.	೨—೧೪—೦	೦—೧೩—೦
ಹುಣ್ಸೆ		೧೨ ೦—೦	೧೧—೦—೦
ಸೀಮೆಯಿಂದ ಹತ್ತಿ ಒಕ್ಕೆ	.	೫ ೩—೦	೪—೬—೦
ತೆಂಗಿನಕಾಯಿ ೧೦೦ ಕ್ಕೆ	..	೫—೦—೦	೪—೨—೦
ಅಡಕೇಕಾಯಿ ಮಣ ಒಕ್ಕೆ	..	೧—೦—೦	೦—೧೦—೦
ಅಂಟುವಾಳಕಾಯಿ ಮಣ ಒಕ್ಕೆ	.	೦—೧೪—೦	೦—೪—೦
ತುಪ್ಪ (ಕಾಗ) ಕೆಂಪು	.	೧೫—೮—೦	೧೫—೪—೦
,, ,, ಹಸಿಮ		೧೫—೧೦—೦	೧೫—೮—೦
,, ,, ಗಟ್ಟಿ ತೊಲ ಒಕ್ಕೆ	..	೨೬—೦—೦	೨೪—೫—೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೬೨—೦—೦	೬೩—೦ ೦

Printed and Published by the Rev H Spencer B A, the Proprietor and Manager, Wesleyan Mission Press, Mysore 25/5/1905

[redacted]

[redacted]

[redacted]

FLASH NO 3

[redacted]

[redacted]

[redacted]

Vol. 5.

1st June 1905
to
31st May 1906

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ | ಮೈಸೂರು—ಸನ್ ೧೯೦೫ ನೇ ಇಸವಿ ಜೂನ್ ತಾರೀಖು ೧ ನೇ ಗುರುವಾರ | ಸಂಚಿಕೆ ೧

ಫಾರೆಸ್ಟು ಇಲಾಖೆ.

ಸೂಚನೆ—ಸನ್ ೧೯೦೫ ನೆ ಇಸವಿ ಮೆ ತಾ. ೧೮ ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟಿನ ಡಿಪೋ [2]ಗ್ಳ ಎದುರುಗಳ ಬಾಜೂವಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಚೌಬೀನೆ ಸಾಮಾನುಗಳನ್ನು ಹರಾಜು ಮಾಡಲ್ಪಡುತ್ತೆ

ಡಿಪೋ ಹೆಸರು	ಹರಾಜು ತಾರೀಖು.	ಹರಾಜು ಮಾಡುವ ಅಧೀಸರ ಹೆಸರು	ಚೌಬೀನಾ ಸುಮಾರು ಮೊತ್ತ — ಸಾಗವಾನಿ ನಾಟಾ ಮತ್ತು ಜಂತಿ.		ಮಿಶ್ರ ಜಾತಿ ನಾಟಾ ಮತ್ತು ಜಂತಿ		ಕಾಡು ನಾಟಾ ಮತ್ತು ಜಂತಿ		ಕಾಡು ಸರ.	
ಮೈಸೂರು ಉಡ್ಯಾಗರ್	10 6 1905	ಮೈಸೂರು ಡಿ. ಫಾ.	39	1018	143	8904	.	..		
ಕಂಜಾಳ ಕೂಡು ಡಿಪೋ	12 6 1905	ಅಧೀಸರು	710	4583	1270	9907	6	146	40	70

ಹರಾಜು ಶರತ್ತು—೧೮೯೫ ನೆ ಇಸವಿ ಏಪ್ರೆಲ್ ೧೫ ನೆ ತಾರೀಖು ೧೫ ನೆ ನಂಬರು ಗವರ್ನಮೆಂಟು ನೋಟಿಫಿಕೇಷನ್ ಆಗಿರುವ ೧೮೯೫ ನೆ ಇಸವಿ ಮಾರ್ಚಿ ೧೫ ನೆ ಮತ್ತು ೧೫೯೮—R. F. ೧೫೯—೯೦ ನೇ ನಂಬರು ಗವರನ್ಮೆಂಟು ನೋಟಿ ಫಿಕೇಷನ್ ನೋಡಿ.

ಬಿಡ್ಡಿಂಗು ಮಾಡತಕ್ಕವರು ಹರಾಜು ತಾರೀಖು ಆದಾಗ್ಯೂ ಮೂರು ದಿವಸದ ಒಳಗಾಗಿ ಕಾಲು ಹಿಸ್ಸೆ ಮೊಬಲಗು ಕಟ್ಟಬೇಕು. ಮುಕ್ಕಾಲು ಹಿಸ್ಸೆ ಮೊಬಲಗನ್ನು ೧೯೦೫ ನೆ ಜೂನ್ ಮಾಹೆ ಆಖೈರ್ ಒಳಗಾಗಿ ಪಾವತಿ ಮಾಡಬೇಕು.

By Order
H. P. GANGADHARAIYA,
District Forest Officer Mysore

ಪ್ರಶ್ನೋತ್ತರ ರತ್ನಬೋಧಿನಿ

ಎರಡನೆಯ ಭಾಗ ಕ್ರಯ ಒಂದು ರೂಪಾಯಿ ನಾಲ್ಕಾಣೆ [3]
ಗಮನಿಸಿರಿ ! ಬೇಗ ಬರೆಯಿರಿ !! ಬೇಗ ಬರೆಯಿರಿ !!!

ಬಿಂದುಮಾಧವ ಅಳತೆ

ಎಂಬೀ ಜಮೀನ್ ಮೋಜಣೀ ಕಲಿಸುವ ಪುಸ್ತಕದಿಂದ ಇತರರ ಸಹಾಯ ಸ್ವಲ್ಪವೂ ಇಲ್ಲದೆ ಸ್ವಲ್ಪಮಟ್ಟಿಗೆ ಓದುಬರಹ ಕಲಿತಿರುವ ದರೂ ಕೂಡ ಭೂಮಿಯನ್ನು ಅಳೆಯುವುದಕ್ಕೆ ಚೆನ್ನಾಗಿ ತಾವಾಗಿಯೇ ಕಲಿಯಬಹುದು ಒಂದು ಸಲ ತರಿಸಿ, ಓದಿನೋಡಿ ಕ್ರಯ ಹನ್ನೆರಡು ಆಣೆ ವಿಳಾಸ —
ಮಾರುತಿ ಸಂಪಂಗಿರಾಮ, ಹೊಸಕೋಟೆ, ಬೆಂಗಳೂರು.

ಶ್ರೀಚಾಮರಾಜೇಂದ್ರ ರಾಜ್ಯವಿಲಾಸ.

H THE LATE MAHARAJA S BIOGRAPHY.

[3] ಎಪ್ಪತ್ತೈದು ಪ್ರಕರಣಗಳುಳ್ಳ ಈ ಕನ್ನಡ ಪ್ರೋಸ್ ಪುಸ್ತಕದಲ್ಲಿ—ಶ್ರೀ ಚಾಮುಂಡೇಶ್ವರೀ ಅವತಾರ ಕಥೆಯೂ, ಯದುವಂಶಾವಳಿಯೂ, ಲೇಟ್ ಮಹಾರಾಜರವರ ಜೀವಕಾಲದ ಆದ್ಯಂತ ಚರಿತೆಯೂ, ಮಹಾರಾಣಿ ರೀಜೆಂಟರವರ ಚರಿತ್ರೆಯೂ, ಈಗಿನ ಶ್ರೀ ಶೃಂಗೇರಿ ಶ್ರೀ ಜಗದ್ಗುರು ಗುರುಗಳ ಚರಿತ್ರೆಯೂ, ಪೂರ್ವಕ ಮತ್ತು ಈಗಿನ ದಿವಾನ್ ರವರ ಚರಿತ್ರೆಯೂ, ರಾಜಧಾನಿಗೆ ಬಂದಿದ್ದ ವೈಸ್‌ರಾಯರ ಸ್ಪೀಚ್‌ಗಳೂ ರಾಜ್ಯಾಡಳಿತಗಳ ವಿಚಾರ ಮತ್ತು ಪ್ರಸಿದ್ಧರಾಗಿರುವ ವರಿಗಳ ಈ ದೇಶದ ಪ್ರತಿಯೊಂದು ಸಂಗತಿಗಳೂ, ಖರೀತ ಮುಂತಾದವೂ—ಚೆನ್ನಾಗಿ ವಿವರಿಸಿ ಪ್ರಭುಗಳ ಭಾವಚಿತ್ರವೂ ವ್ಯತ್ಯಾಸವಿಲ್ಲದೆ ಇದೆ ಇದರವರ ಪ್ರೋತ್ಸಾಹವನ್ನೂ ಹೊಂದಿದೆ ಸಕಲಜನೋಪ ಯೋಗವಾದುದು ಸ್ವಲ್ಪ ಪ್ರತಿಗಳೇ ಉಳಿದಿವೆ ನಮ್ಮ ರಾಜ್ಯದ ದೊಡ್ಡ ದೊರೆಗಳ ಚರಿತ್ರೆಯನ್ನು ಪೂರ್ತಿ ತಿಳಿಯಬೇಕೆಂದಿರುವವರಿಗೆ ಇದನ್ನು ಬಿಟ್ಟರೆ ಬೇರೆ ಪುಸ್ತಕ ದೊರೆಯಲಾರದು. ಕ್ರಯ, ೧೨ ಆಣೆ ಮಾತ್ರ ಬಾಗ್ಯತೆ ಈ ವಿಳಾಸಕ್ಕೆ ಬರೆಯಿರಿ ಪಿ. ಬಿ. ಜಗದಲ್ ವಿದ್ವಾನ್, ಲಕ್ಷ್ಮೀವಿಲಾಸ ರೋಡ್, ಮೈಸೂರು. ಪ್ರತಿ ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು. ಕಂಪೆನಿ, ಕೆ. ಹಣಮಂತ್ಯಯ ಅಂಡ್ ಕೋ., ಮೈಸೂರು.

೧೯೦೫ ಕಾಲದಲ್ಲಿ ಸ್ಥಿರಾಸ್ತಿ ಪರಿವರ್ತನ

[2] ಶ್ರೀರಂಗಪಟ್ಟಣದ ಅಂಚೇ ಬೀದಿಯಲ್ಲಿರುವ ಚನ್ನಪ್ಪನವರ ಮಗ ಪಾರ್ಥ ತಮ್ಮಯ್ಯನು ತಿಳಿಸುವದೇನಂದರೆ—ಗಂಜಾಂ ಊರಾದಲ್ಲಿರುವ ಚನ್ನಪ್ಪನವರ ಕಿರೀ ಮಗ ಚನ್ನಯ್ಯನು ಡಿಪೋ ಊರಾದಲ್ಲಿರುವ ಮಹಡಿ ಮನೆಯನ್ನು ಕ್ರಯ ಮಾಡುವದಾಗಿ ತಿಳಿಯಬಂದದ್ದರಿಂದ ಸನ್ ೧೯ ರಲ್ಲಿ ೧ ಹಿಸ್ಸೆ ಬರಬೇಕಾಗಿದೆ. ಕ್ರಯಕ್ಕೆ ತೆಗೆದುಕೊಳ್ಳುವವರು ನನ್ನ ಹಿಸ್ಸೆ ಬಿಟ್ಟು ತೆಗೆದುಕೊಳ್ಳತಕ್ಕದ್ದು

ಹೊಸ ನೋಟು

ಮೆಕ್ಮಿಲನ್‌ರವರ ೫, ೬ನೆಯ ಕನ್ನಡ ಪುಸ್ತಕಗಳಿಗೆ ೬ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ

[10] ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನಸಹಿತ ಈ ನೋಟ್ಸನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ. ೮ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (೬ನೆ ಭಾಷೆ)	೦—೧—೦
೬ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೧—೬
೧೯೦೫ನೆ ವರ್ಷದ ಲೋವರ್ ಸೆಕಂಡರಿ ನೋಟ್ಸು	೦—೭—೦

ವಿಳಾಸ—ಎಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು

"ವೃತ್ತಾಂತ ಪತ್ರಿಕೆ" ಚಂದಾದರ್ನಿಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪಡೆವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . .	ರೂ ೧—೦—೦
ಪತ್ರಿಕೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೨—೦
,, ,, ,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ದಿ ಯೆಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಉಪವೃತ್ತಿ ಕಲ್ಪನಾಸಂಘ, ಚನ್ನಪಟ್ಟಣ

[6] ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸುದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು ಸಾಮಾನ್ಯ ಉಪವೃತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯಕ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತ ೧೯೩ ನೇಮಕರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು. ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಮ್ಯಾನೇಜರಿಗೆ ಬರದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು ಇಂಥಾ ಏಜಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ

ವಿಳಾಸ:—ಆರ್. ಎಸ್ ಮಹಾಕಂ, ಮ್ಯಾನೇಜರ್

ಪಿ ಸುಬ್ಬರಾಯಯ್ಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

[6] ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ

'ರಕ್ತಾಮೃತಂ. —ಕಾಫಿ ಅಥವಾ ಟೀಗೆ ಪ್ರತಿನಿಧಿ.

"ರಕ್ತಾಮೃತಂ.'—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯೆಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ ಕಾಫಿ, ಟೀಯೆಲೆಗಳಲ್ಲಿರುವ ದುರ್ಗುಣ

ಗಳು ಇದಕ್ಕಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ ಜ್ವರ, ಸನ್ನಿ, ಬಸರು, ಜರಿ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ತಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು ಗುಲ್ಮ ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ. ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯೆಲೆಯನ್ನು ಬಿಟ್ಟು, ಈ ರಕ್ತಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು

ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ಆಣೆ ೬. ವಿ ಪಿ ಛಾರ್ಜ ಆಣೆ ೩. ಹೆಚ್ಚಾಗುವುದು ಮುಂಗಡ ೮ ಆಣೆ ಸ್ಟಾಂಪುಗಳು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ವಿಳಾಸ—ಪಿ ಸುಬ್ಬರಾಯರ್,
ಪೋರ್ಟನೋವೊ, ದಕ್ಷಿಣ ಆರ್ಕಾಟ್ ಜಿಲ್ಲಾ.

ನಮ್ಮ ಏಜಂಟರಿಗೆ ನೋಟೀಸ್.

"ವೃತ್ತಾಂತ ಪತ್ರಿಕೆ" ಯ ವರ್ಷವು ಕಳೆದ ವಾರಕ್ಕೆ ಮುಕ್ತಾಯವಾಗಿದೆ. ನಮ್ಮ ಪತ್ರಿಕಾ ಏಜಂಟರು ಹೊಸವರ್ಷದ ಚಂದಾ ವಸೂಲ್ಮಾಡಿಕೊಂಡಲ್ಲದೆ ಯಾರಿಗೂ ಈ ವಾರದಿಂದ ಪತ್ರಿಕೆಗಳನ್ನು ಕೊಡಲಾಗದು.

೧-೬-೦೫. ಮ್ಯಾನೇಜರ್.

ಸದರನ್ ಮರಾಠಾ ರೈಲ್ವೆ ಕಂಪನಿ, ಲಿಮಿಟೆಡ್,
ಡಿಸ್ಟ್ರಿಕ್ಟ್ ಟ್ರಾಫಿಕ್ ಸೂ|| ಆಫೀಸ್.

ನೋಟೀಸು.

ಇದರಿಂದ ತಿಳಿಯಪಡಿಸುವುದೇನೆಂದರೆ.—

ಸನ್ ೧೯೦೫ ನೆ ಇಸವಿ ಆಗಸ್ಟ್ ೨೮ ನೆ ತಾರೀಖಿನಲ್ಲಿ ಯಶ್ವಂತಪುರ ಸ್ಟೇಷನ್‌ನಿಂದ ಮೈಸೂರಿಗೆ ರವಾನಿಸಿದ ೨ (ಎರಡು) ವಾಗಿನ್ ಕಡಪೆಯ ಕಲ್ಲು ಚಪ್ಪಡಿಗಳು ಪಾವತಿ ಆಗದೆ ನಿಂತು ಇರುತ್ತೆ.

ಈ ಕಲ್ಲುಗಳನ್ನು ಇಂಡಿಯನ್ ರೈಲ್ವೇ ಆಕ್ಟ್ ೫೬ ನೆ ಸೆಕ್ಷನ್ ಪ್ರಕಾರ ೧೯೦೫ ನೆ ಇಸವಿ ಜೂನ್ ೨೫ ನೆ ತಾರೀಖು ಭಾನುವಾರ ೧೧ ಘಂಟೆಗೆ ಮೈಸೂರು ರೈಲ್ವೆ ಸ್ಟೇಷನ್‌ನಲ್ಲಿ ಪಬ್ಲಿಕ್ ಹರಾಜು ಮಾಡಲಾಗುವುದು.

ಬೆಂಗಳೂರು, } (Sd) S. J. Miller,
ತಾ|| ೨೫—೫—೦೫ } Dist Traffic Supdt.

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ಜೂನ್ ತಾ|| ೧ ನೇ ಗುರುವಾರ

ಕ್ರೈಸ್ತಮತಾವಲಂಬಿಗಳೂ ಪಕ್ಷಪಾತ ನ್ಯಾಯವೂ.

ಈ ವಿಷಯದಲ್ಲಿ ನಾವು ಮೊದಲೇ ನಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿರುತ್ತೇವೆಂಬುದು ವಾಚಕರ ನೆನಪಿನಲ್ಲಿದ್ದೀತು. ಆದರೆ ಕೆಲವು ವರ್ತಮಾನ ಪತ್ರಿಕಾ ಕರ್ತರು ಈ ವಿಷಯವಾಗಿ ಉದ್ಘೋಷಿಸುತ್ತಿರುವ ಕೆಲವು ಆಕ್ಷೇಪಣೆಗಳನ್ನು ಸಹ ವಾಚಕರ ಅವಗಾಹನೆಗೆ ತರುವುದು ನಮ್ಮ ಕರ್ತವ್ಯವಾಗಿದೆ.

೧೯೦೦ ನೇ ಇಸವಿಯಲ್ಲಿ ಮೇಲೆ ಕಂಡ ವಿಷಯವಾಗಿ ಸ್ಥಾಪಿಸಲ್ಪಟ್ಟ ನ್ಯಾಯಶಾಸನವನ್ನು ಬ್ರಿಟಿಷರಿಗೆ ಸೇರಿದ ಪ್ರಾಂತ್ಯಗಳಲ್ಲಿ ರದ್ದುಮಾಡಿದ್ದಾರೆಂದು ಕೆಲವರು ಹೇಳುತ್ತಿರುವರು. ಇದು ನಿಜವಲ್ಲ. ಈ ನ್ಯಾಯಶಾಸನವು ಇನ್ನೂ ಜಾರಿಯಲ್ಲಿರುವುದೊಂದೇ ಅಲ್ಲ, ಹಾಗಿರುವುದರಿಂದ ಹಿಂದೂ ಜನಗಳಿಗಾಗಲಿ ಹಿಂದೂ ಮತಕ್ಕಾಗಲಿ ಯಾವ ವಿಧವಾದ ನಷ್ಟವೂ ಸಂಭವಿಸಿಲ್ಲವೆಂಬುದು ಪ್ರತ್ಯಕ್ಷವಾಗಿದೆ. ಇದಕ್ಕೆ ದೃಷ್ಟಾಂತವಾಗಿ ಬೆಂಗಳೂರಿನ ದಂಡು ಬ್ರಿಟಿಷರ ಆಡಳಿತದಲ್ಲಿರುವುದಷ್ಟೆ. ಅಲ್ಲಿ ಈ ನಿಬಂಧನೆಯು ಜಾರಿಯಲ್ಲಿರುತ್ತದೆ. ಆದರೂ ಕೂಡ ಮೈಸೂರು ಸಂಸ್ಥಾನದ ಆಡಳಿತದಲ್ಲಿರುವ ಬೆಂಗಳೂರು ಪೇಟೆಯಲ್ಲಿ ಹಿಂದೂ ಮತವಿರುವ ಸ್ಥಿತಿಗೂ ದಂಡಿನಲ್ಲಿ ಆ ಮತವಿರುವ ಸ್ಥಿತಿಗೂ ವಿಶೇಷ ತಾರತಮ್ಯವಿರುವಂತೆ ಕಾಣುವುದಿಲ್ಲ.

ಇನ್ನೂ ಕೆಲವರು—೧೮೫೮ ರಲ್ಲಿ ಶ್ರೀಮನ್ಮಹಾರಾಣಿ ವಿಕ್ಟೋರಿಯಾ ಅಮ್ಮನವರು ಇಂಡಿಯಾ ರಾಜ್ಯಾಡಳಿತವನ್ನು ವಹಿಸಿಕೊಂಡಾಗ ಈ ದೇಶೀಯರಿಗೆ ಕೊಟ್ಟ ಭರವಸೆರೂಪವಾದ ಪ್ರಕಟನೆಗೆ ಮೇಲ್ಕಂಡ ನ್ಯಾಯಶಾಸನವು ವ್ಯತಿರಿಕ್ತವಾಗಿರುವುದರಿಂದ ಅದನ್ನು ಈ ಸಂಸ್ಥಾನದಲ್ಲಿ ಜಾರಿಗೆ ತರುವುದು ಅನುಚಿತವೆಂದು ಹೇಳುವರು. ಇದರ ವಿಷಯದಲ್ಲಿಯೂ ನಾವು ಮೇಲೆ ಕೊಟ್ಟಿರುವ ದೃಷ್ಟಾಂತವನ್ನೇ ಉದಾಹರಿಸಬೇಕಾಗಿದೆ. ಬ್ರಿಟಿಷ ಇಂಡ್ಯಾದಲ್ಲಿ ಇವೆರಡು ವಿಷಯಗಳೂ ಜಾರಿಯಲ್ಲಿದ್ದಾಗ್ಯೂ ಒಂದಕ್ಕೊಂದು ವಿರೋಧವಾಗಿಲ್ಲವೆಂದೂ ಅದೇ ಪ್ರಕಾರ ಮೈಸೂರು ದೇಶದಲ್ಲಿಯೂ ಇವೆರಡು ಕಟ್ಟಳೆಗಳೂ ಜಾರಿಯಲ್ಲಿ ಬರುವುದರಿಂದ ಪ್ರಜಾ ಸುಖಸಮಾಧಾನಗಳಿಗೆ ಭಂಗವುಂಟಾಗಲಾರದೆಂದೂ ನಾವು ಧಾರಾಳವಾಗಿ ಹೇಳಬಲ್ಲೆವು.

ಈ ಕಟ್ಟಳೆಯನ್ನು ಜಾರಿಗೆ ತರುವುದರಿಂದ ಕ್ರೈಸ್ತಮತಾವಲಂಬಿಗಳ ಸಂಖ್ಯೆಯನ್ನು ಹೆಚ್ಚಿಸುವುದೇ ಮುಖ್ಯೋದ್ದೇಶವೆಂದು ಮತ್ತೆ ಕೆಲವರು ಹೇಳುವರು. ಕ್ರೈಸ್ತರಿಗೆ ಇಹಲೋಕದ ಆಸ್ತಿಯ ಮೇಲೆ ಮನಸ್ಸಿರಬಾರದೆಂದು ಕ್ರೀಸ್ತಸ್ವಾಮಿಯೇ ಬೋಧಿಸಿರಲಾಗಿ, ಆತನ ಶಿಷ್ಯರು ಪರಲೋಕದ ಮೇಲೆ ಮನಸ್ಸಿಡಬೇಕೇ ಹೊರತು ಇಹಲೋಕದ ಆಸ್ತಿಯ ಸಲುವಾಗಿ ಹೀಗೆ ಆತುರಪಡುವುದು ಉಚಿತವಲ್ಲವೆಂದು [illegible]. ಆದರೆ ಆಸ್ತಿಯು ಇಲ್ಲಿ ಮೇಲಿನ ಆಶೆಯೆಂಬ ವಿಷಯವು ಮುಖ್ಯವಲ್ಲ. ಸಕಲ ಪ್ರಜೆಗಳಿಗೂ ನೀತಿಯು ಒಂದೇ ಸಮವಾಗಿರಬೇಕೆಂಬುದಲ್ಲವೇ ಮುಖ್ಯ ಕರ್ತವ್ಯ. ಇದು ಹಾಗಿರಲಿ. ನಮ್ಮನ್ನು ಆಕ್ಷೇಪಿಸುವವರಲ್ಲಿ ಅತಿ ಘನವಾದ [illegible] ಧರ್ಮಗ್ರಂಥದಲ್ಲಿ [illegible] ಪರಿಯಾಗಿ [illegible] ಸಲ್ಲತಕ್ಕ ಪಕ್ಷಪಾತಗಳ [illegible] ಕ್ರೈಸ್ತಮತಾವಲಂಬಿಗಳಿಗೂ ಸಲ್ಲತಕ್ಕ [illegible] ವರೂ ಇರುವುದನ್ನು ಬಿಟ್ಟು [illegible] ನಿಂತು ದೊಡ್ಡ ಪಟ್ಟಣಗಳಲ್ಲಿ [illegible] ಪ್ರತಿಭಟಿಸುತ್ತಲೂ ಕ್ರೈಸ್ತಮತಾವಲಂಬಿಗಳನ್ನು ತಮ್ಮ ಪತ್ರಿಕಾ ಮುಖೇನ [illegible] ತ್ತಲೂ ಇರುವುದನ್ನು ನೋಡಿದಲ್ಲಿ [illegible] ಹೇಳಬೇಕು."

ಮೈಸೂರು ಸಂಸ್ಥಾನವು [illegible] ದರಿಂದ ಹಿಂದೂ ಮತವು [illegible] ಳುವುದು ರಾಜಧರ್ಮವಾಗಿದೆಯೆಂದೂ ಹೇಳುವರು. ಇವರು ಮೈಸೂರು ಸಂಸ್ಥಾನವನ್ನು ಹಿಂದೂರಾಜರಿಗೆ ಕೊಟ್ಟವರಾರೆಂಬುದನ್ನು ಮರೆತುಹೋಗತಕ್ಕವರಾಗಿದ್ದಾರೆ. ಮೈಸೂರು ದೇಶೀಯರೇ ನಮ್ಮ ದೇಶವನ್ನು ಆಳುವುದೆಂದು ರಾಜ್ಯವನ್ನು ಒಪ್ಪಿಸಿಕೊಟ್ಟವರು ಕ್ರೈಸ್ತಸರಕಾರದವರಲ್ಲವೇ? ಇದನ್ನು ಈ ದೇಶೀಯರು ಮರೆಯಬಹುದೇ? ಯಾವುದು ನೀತಿಯೆಂಬ ವಿಷಯವನ್ನು ಗ್ರಹಿಸುವಷ್ಟು ಸಾಮರ್ಥ್ಯವು ಒಂದು ವೇಳೆ ಇಲ್ಲದಿದ್ದರೂ ಈ ದೇಶೀಯರಿಗೆ ಕೃತಜ್ಞತಾ ಭಾವವಾದರೂ ಇರಬೇಡವೇ?

ಈ ಸಂಸ್ಥಾನದಲ್ಲಿ ಈಗ ಜಾರಿಯಲ್ಲಿರುವ ಈ ವಿಷಯವು ಹಿಂದೂ ನ್ಯಾಯಶಾಸ್ತ್ರಕ್ಕನುಗುಣವಾಗಿದೆಯಾದ ಕಾರಣ ಇದನ್ನು ಸಲ್ಲಟವಮಾಡಕೂಡದೆಂದು ಕೆಲವರು ವಾದಿಸುವರು. ಇದಕ್ಕೆ ನಾವು ಹೇಳಬೇಕಾದುದೇನೆಂದರೆ—ಆ ಹಿಂದೂ ನ್ಯಾಯಶಾಸ್ತ್ರವು ನೀತಿಗೆ ಅನುಸಾರವಾಗಿಲ್ಲದಿದ್ದರೆ ಅದನ್ನು ಬದಲಾಯಿಸುವುದು ಉಚಿತವಾಗಿದೆ. ಸಹಗಮನವೆಂಬ ಕ್ರೂರಪದ್ಧತಿಯು ಹಿಂದೂ ನ್ಯಾಯಶಾಸ್ತ್ರಾನುಸಾರವಾಗಿದ್ದರೂ ಬ್ರಿಟಿಷ್ ಸರಕಾರದವರು ಅದಕ್ಕೆ ಅವಕಾಶವನ್ನು ಕೊಡದೆ ಆ ಪದ್ಧತಿಯನ್ನೇ ನಿಲ್ಲಿಸಿಬಿಟ್ಟು, ಮನುಷ್ಯರ ಪ್ರಾಣವನ್ನು ಕಾಪಾಡುವುದು ಹಿಂದೂ ನ್ಯಾಯಶಾಸನವನ್ನು ಪೂಜ್ಯವಾಗಿ ಕಾಣುವುದಕ್ಕಿಂತ ಉತ್ತಮವೆಂದು ಪ್ರತ್ಯಕ್ಷಪಡಿಸಿಲ್ಲವೇ? ಇದೇ ಪ್ರಕಾರ ಹಿಂದೂ ನ್ಯಾಯವು ಅನೀತಿಗೆ ಅವಕಾಶವನ್ನು ಕೊಡುವಂಥಾಗ್ಗಾಗಿದ್ದರೆ ಯಾವ ಭಾಗದಲ್ಲಿ ಹೀಗಾಗಿದೆಯೆಂದು ತಿಳಿದು ಅದನ್ನು ನಿಷೇಧಿಸುವುದು ನಮ್ಮ ಮೈಸೂರು ಸಂಸ್ಥಾನದ ಕರ್ತವ್ಯವಾಗಿದೆಯೆಂದು ನಾವು ಧಾರಾಳವಾಗಿ ಹೇಳಬಲ್ಲೆವು.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.



ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಕೂರಿಯಂಥ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋಗುತ್ತೆ. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೋ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ಒಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರಕಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು.—

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್

ಊರದೇಶದ ವೃತ್ತಾಂತಗಳು.

ಕಳೆದ ವಾರ ದಿವಾನರವರೂ ಕೌನ್ಸಿಲ್ ಮೆಂಬರುಗಳೂ ನೀಲಗಿರಿಯಿಂದ ಬೆಂಗಳೂರಿಗೆ ದಯಮಾಡಿದರು.

* * * *

ನೆನ್ನೆ ದಿನ ರಾಜಧಾನಿಯಲ್ಲಿ ಯುವರಾಜರವರ ವರ್ಷವರ್ಧಂತಿಯು ನಡೆಸಲಾಯಿತು. ಬೆಳಿಗ್ಗೆ ಗೌರವಾರ್ಹವಾದ ೨೧ ತೋಪ್ಗಳು ಹಾರಿಸಲ್ಪಟ್ಟವು. ಅರಮನೆಯಲ್ಲಿ ದರ್ಬಾರು ನಡೆಯಿತು. ದಾನಧರ್ಮಗಳೂ ಸಂತರ್ಪಣೆಯೂ ದೇವರುಗಳ ಉತ್ಸವಗಳೂ ಆದವು. ರಾತ್ರಿ ಪಟ್ಟಣದಲ್ಲಿ ದೀಪೋತ್ಸವ ನಡೆದರು.

* * * *

ಶ್ರೀಮನ್ ಮಹಾರಾಜರವರು, ಯುವರಾಜರವರು, ಮಹಾಮಾತೃಶ್ರೀಯವರು ಮೊದಲಾದವರೆಲ್ಲಾ ಪರಿವಾರ ಸಹಿತ ಕಳೆದ ಭಾನುವಾರವೂ ಸೋಮವಾರವೂ ರಾಜಧಾನಿಗೆ ದಯಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ದೊಡ್ಡ ಮನುಷ್ಯರು ಅರಮನೆಯ ಬಳಿಯಲ್ಲೂ ರೈಲ್ವೇ ಸ್ಟೇಷನಲ್ಲೂ ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿದರು.

* * * *

ಮ್ಯೆಸೂರ್ ಸ್ಟೇಟ್ ಹಜೂರ್ ಮುನ್ಷಿ ಸಿದ್ದೀಖಾ ಸಿರಾಜುಲ್ ಉಲ್ಮಾ ಯವರು ಕಳೆದ ಬುಧವಾರ ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿದು ಬಂದಿದೆ. ಇವರಿಗೆ ೭೨ ವರ್ಷವಾಗಿತ್ತು. ನಮ್ಮ ಮಹಾರಾಜರವರು ಇವರ ವಿದ್ಯಾ ಪ್ರಭಾವವನ್ನು ನೋಡಿ ಇವರಿಗೆ "ಸಿರಾಜುಲ್ ಉಲ್ಮಾ" ಎಂಬ ಬಿರುದನ್ನು ದಯಪಾಲಿಸಿದ್ದರು. ಈ ಮೌಲ್ವಿಯವರ ಮರಣವು ಇವರ ಕುಟುಂಬದವರಿಗೂ ಇವರ ಶಿಷ್ಯರಾದ ಸಿಪಾಯಿದಾರರಿಗೂ ತುಂಬಾ ವ್ಯಸನವನ್ನುಂಟುಮಾಡಿದೆ. ಶ್ರೀಮನ್ಮಹಾರಾಜರವರು ತಮ್ಮ ದುಃಖವನ್ನು ತಂತಿ ಮೂಲಕ ತಿಳಿಸಿದಾರೆ. ಇವರ ಜನರನ್ನು ಸಾಂತ್ವನಪಡಿಸುವುದಕ್ಕೆ ಬೆಂಗಳೂರಿನ ಮಹಮದೀಯರು ಒಂದು ಸಭೆಯನ್ನು ನಡಿಸಿದರು.

ಮೈಸೂರು ಗೆಜೆಟ್ ಸಂಗ್ರಹ.

ಪೊಲೀಸ್ ಅ|| ಸೂಪರಿಂಟೆಂಡೆಂಟ್ ಮ|| ನಾಡಿಗ ಸುಬ್ಬರಾಯರನ್ನು ಶಿವಮೊಗ್ಗೆಯಿಂದ ಚಿತ್ರದುರ್ಗಕ್ಕೂ ಪೊಲೀಸ್ ಸೂಪರಿಂಟೆಂಡೆಂಟ್ ಮ|| ಬಹರುದ್ದೀನ್ ಮೊಕ್ಕಯವರನ್ನು ಚಿತ್ರದುರ್ಗದಿಂದ ಶಿವಮೊಗ್ಗೆಗೂ ವರ್ಗಮಾಡಿದೆ. ಇಬ್ಬರೂ ಕೂಡ್ಲೆ ಹೊಸ ಸ್ಥಳಗಳಿಗೆ ಹೋಗಿ ಛಾರ್ಜು ವಹಿಸತಕ್ಕದ್ದು.

ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರೆರಿಯ ಕ್ಯೂರೆಟರ್ ಮ|| ಎ. ಮಹದೇವ ಶಾಸ್ತ್ರಿಗಳು ರಜದ ಮೇಲಿದ್ದಾಗ್ಗೆ ಲೈಬ್ರೇರಿಯನ್ ಮ|| ಆರ್. ಶಾಮಶಾಸ್ತ್ರಿಯವರು ಕ್ಯೂರೆಟರ್ ಆಫಿಸ್ ಛಾರ್ಜನ್ನು ವಹಿಸಿದರು.

ಎಕ್ಸೈಜ್ ಅ|| ಕಮೀಷನರ್ ಮ|| ಜಾರ್ಜ್ ಡನ್ನಿಂಗ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸೊರಬದ ತಾಲ್ಲೂಕು ಅಮಲ್ದಾರ್ ಮ|| ಎಸ್. ಕೃಷ್ಣಪ್ಪನವರಿಗೆ ಎರಡು ತಿಂಗಳು ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಸಿ. ನಾರಾಯಣರಾಯರು ಸೊರಬದ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡತಕ್ಕದ್ದು.

ಯಳಂದೂರು ಡಿಪ್ಟಿ ಅಮಲ್ದಾರ್ ಮ|| ಬಿ. ಜಗನ್ನಾಥರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಶ್ರೀನಿವಾಸ್ಯಯ್ಯಂಗಾರ್ರು ಯಳಂದೂರು ಡಿಪ್ಟಿ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮೀಷನರ್ ಮ|| ಡಿ. ದೇರಾಜೇ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಕಮೀಷನರ್ ಮ|| ಕೆ. ಆರ್. ಶ್ರೀನಿವಾಸ್ಯಯ್ಯಂಗಾರ್ ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಟಿ ಕಮೀಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಕೆಲಸನೋಡತಕ್ಕದ್ದು.

ಬೇಲೂರ್ ತಾಲ್ಲೂಕ್ ಅಮಲ್ದಾರ್ ಮೆ॥ ಎಸ್ ಕೃಷ್ಣಯ್ಯ ನವರಿಗೆ ಅವರು ಉದ್ಯೋಗಕ್ಕೆ ಹಿಂತಿರುಗಿ ಬಂದ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನದ ಡೆಪ್ಯುಟಿ ಕಮೀಷನರ ಆಫೀಸ್ ಹೆಡ್ ಕ್ಲಾರ್ಕ್ ಸಿ ಗೋಪಾಲಾಚಾರ್ಯರು ಬೇಲೂರು ತಾಲ್ಲೂಕಿನ ಅಮಲ್ದಾರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ಅ॥ ಕಮೀಷನರ್ ಮೆ॥ ಕೆ ಕೃಷ್ಣ ಯವರಿಗೆ ೧೫ ದಿನಗಳ ಪ್ರಿವಿಲೆಜ್ ರಜವನ್ನೂ ಒಂದು ವರುಷದ ಫರ್ಲೋ ರಜವನ್ನೂ ಕೊಟ್ಟಿದೆ.

ಮೆ॥ ಟಿ ರಾಮುಲು ಚೆಟ್ಟಿಯವರು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿ ಭಾರವನ್ನು ತಂಗಾಮಿಯಾಗಿ ವಹಿಸಿಕೊಳ್ಳತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ರೆವಿನ್ಯೂ ಪ್ರೊಬೇಷನರ್ ಮೆ॥ ಬಿ. ನಾರಾಯಣಸ್ವಾಮಿ ಐಯ್ಯಂಗಾರ್ಯರು ಚಿಕ್ಕಮಗಳೂರು ತಾಲ್ಲೂಕಿನ ಅಮಲ್ದಾರರಾಗಿ ನೇಮಿಸಲ್ಪಟ್ಟಿದ್ದಾರೆ

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ರಷ್ಯಾದವರ ಅಪಜಯ

ಲಂಡನ್, ಮೇ ೨೨—ತಾ. ೨೦ ರಲ್ಲಿ ರಷ್ಯಾ ಸೈನಿಕರು ಟಾಂಗ್‌ವೆಡ್ ಪಟ್ಟಣಕ್ಕೆ ಮುತ್ತಿಗೆ ಹಾಕಿದರು ಎರಡು ಗಂಟೆಗಳ ಹೊತ್ತು ಜಪಾನಿನವರು ಯುದ್ಧಮಾಡಿದರು ರಷ್ಯಾದವರ ಕಡೆ ೩೦೦ ಮಂದಿ ನಷ್ಟಹೊಂದಿ ಸೋತು ಹಿಮ್ಮೆಟ್ಟಿದರು ರಷ್ಯಾದವರು ಟಾಂಗ್ಸಾನ್ ಎಂಬ ರಾಜ್ಯವನ್ನು ಮುತ್ತಿಗೆ ಹಾಕಿದ್ದರಲ್ಲಿ ಸೋಲಾಗಿ ಹಿಮ್ಮೆಟ್ಟಿದರು

ಜಪಾನಿನವರ ಸೋಲು

ಲಂಡನ್, ಮೇ ೨೩—ರಷ್ಯಾದವರು ತಾ ರಲ್ಲಿ ವಾಫಂಗ್ಟು ಎಂಬ ರಾಜ್ಯವನ್ನು ಆಕ್ರಮಿಸಿಕೊಂಡಿದ್ದಲ್ಲದೆ, ತಾ. ೧೭ ರಲ್ಲಿ ಅವರ ಇನ್ನೊಂದು ಸೈನ್ಯವು ಜಪಾನಿನವರನ್ನು ಫಾಂಟುವ ಎಂಬ ರಾಜ್ಯದಿಂದ ಆಚೆಗೆ ಓಡಿಸಿದೆ ಎಂದು ಜನರಲ್ ಲಿನೆವಿಚ್ ಯವರು ತಿಳಿಸುತ್ತಾರೆ

ವ್ಲಾಡಿವೋಸ್ಟಾಕ್ ಕೋಟೆಯ ಮುತ್ತಿಗೆ

ಲಂಡನ್, ಮೇ ೨೪—ಜಪಾನಿನವರು ವ್ಲಾಡಿವೋಸ್ಟಾಕ್ ಕೋಟೆಗೆ ಹೋಗುವ ರೈಲ್‌ರಸ್ತೆಯನ್ನು ಕಿತ್ತುಹಾಕಿದರು. ಕೋಟೆಗೆ ಒಳಗಿನಿಂದ ಹೊರಕ್ಕಾಗಲಿ ಹೊರಗಿನಿಂದ ಒಳಕ್ಕಾಗಲಿ ಆಮದು ರಫ್ತುಗಳನ್ನೂ ಜನಸಂಚಾರವನ್ನೂ ತಡೆದಿರುತ್ತಾರೆ

ರಷ್ಯಾದವರ ಇನ್ನೊಂದು ಅಪಜಯ

ಲಂಡನ್, ಮೇ ೨೫—ಒಂದು ಕಡೆ ಜಪಾನ್ ಸೈನಿಕರು ಬಹು ಮಂದಿ ಎದುರು ರಾಜ್ಯಕ್ಕೆ ರಷ್ಯಾ ಜನರಲ್ ರೆನ್ನೆನ್‌ಕಾಂಫ್ ಯವರು ನುಗ್ಗಿಹೋಗಿ ಅವರ ಮೇಲೆ ಯುದ್ಧ ಮಾಡಿದರು. ರಷ್ಯಾದವರ ಕಡೆ ಅನೇಕ ಮಂದಿ ನಷ್ಟವಾದರು ಯಾವ ಸ್ಥಳದಲ್ಲಿ ಈ ಯುದ್ಧ ನಡೆಯಿತೋ ರಷ್ಯಾದವರ ಕಡೆ ಎಷ್ಟು ಮಂದಿ ನಷ್ಟಪಟ್ಟರೋ ಪ್ರಕಟವಾಗಿಲ್ಲ

ಕದನವು ನಡೆಯುವಂತೆ ಇಲ್ಲ

ಲಂಡನ್, ಮೇ ೨೬—ಜಪಾನ್ ಗವರ್ನಮೆಂಟಿನ ಪರರಾಜ್ಯಗಳ ಖಾತಾ ಮಂತ್ರಿಯವರಾದ ಬ್ಯಾರನ್ ಕೋಮುರ ಯವರು ಈ ಯುದ್ಧವು ಇನ್ನೂ ಬಹಳ ದೀರ್ಘಕಾಲ ನಡೆಯುತ್ತಲೇ ಇದ್ದೀತೆಂದು ತಿಳಿಸಿದಾರೆ

ಜಪಾನಿನವರ ದೊಡ್ಡ ಸೋಲು

ಲಂಡನ್, ಮೇ ೨೭—ರಷ್ಯಾ ಜನರಲ್ ಲಿನೆವಿಚ್ ಯವರು ತಿಳಿಸುವದೇನೆಂದರೆ—ನಮ್ಮ ಕಡೆ ಜನರಲ್ ಮಿಶ್ಚೆಂಕೊ ಯವರು ಕುದುರೆ ಸೈನ್ಯವನ್ನು ತೆಗೆದುಕೊಂಡು ಹೋಗಿ ಜಪಾನಿನವರನ್ನು ಸೋಲಿಸಿಬಂದರು ಜಪಾನಿನವರ ರಸ್ತೆಗಳನ್ನೂ ಟೆಲಿಗ್ರಾಫ್ ತಂತಿಗಳನ್ನೂ ಬಹಳ ದೂರದ ವರೆಗೆ ಕಿತ್ತು ಹಾಳುಮಾಡಿ, ಅವರ ಆಹಾರ ಪದಾರ್ಥಗಳನ್ನು ತರುತ್ತಿದ್ದ ಗಾಡಿ ಮೊದಲಾದುವನ್ನು ಚದರಿಸಿ ವಾಪಸು ಬಂದರು ಎಂಬುದೇ

ಸ್ಟ್ರೋಕುವಾನ್ ಬಳಿ ಜಪಾನಿನವರು ಬಲವಾದ ರಾಜ್ಯ ಹಾಕಿಕೊಂಡಿದ್ದರು. ರಷ್ಯಾದವರು ಅವರ ಮೇಲೆ ನುಗ್ಗಿ ಅವರ ಎರಡು ಕಂಪನಿಯಷ್ಟು ಸೈನ್ಯವನ್ನು ನಾಶಮಾಡಿ, ಇನ್ನೊಂದು ಕಂಪನಿಯನ್ನು ಸೆರೆ ಹಿಡಿದರು ಎಲ್ಲಾ ಒಟ್ಟು ೫೦೦ ಸೈನಿಕರೂ ಎರಡು ಫಿರಂಗಿಗಳೂ ರಷ್ಯಾದವರ ಸ್ವಾಧೀನವಾದವು.

ಭಯಂಕರವಾದ ಜಹಜುಗಳ ಯುದ್ಧ.

ಲಂಡನ್, ಮೇ ೨೭, ೨೮, ೨೯.—ಕಳೆದ ಶನಿವಾರದಿಂದ ಆ ರಷ್ಯಾ ಜಪಾನ್ ಜಹಜುಗಳು ಕೋರಿಯಾ ಜಲಸಂಧಿಯಲ್ಲಿ ಸೇರಿ ಯುದ್ಧ ಮಾಡುತ್ತಿವೆ ರಷ್ಯಾದವರ ಕಡೆ ಅಡ್ಮಿರಲ್ ರಾಸ್‌ಡೆಸ್ಟ್ವೆನ್ಸ್ಕಿ ಯವರೂ ಜಪಾನಿನವರ ಕಡೆ ಅಡ್ಮಿರಲ್ ಟೋಗೋ ಯವರೂ ಯುದ್ಧಮಾಡುವರು ಜಪಾನಿನವರು ಇಲ್ಲಿನ ವರೆಗೆ ಈ ಯುದ್ಧದಲ್ಲಿ ರಷ್ಯಾದವರ ಐದು ಯುದ್ಧದ ಭಾರೀ ಜಹಜುಗಳನ್ನು ಮುಳುಗಿಸಿದಾರೆ. ಯುದ್ಧವು ಇನ್ನೂ ಪೂರೈಸಿಲ್ಲ, ಒಬ್ಬರನ್ನೊಬ್ಬರು ಓಡಿಸಿಕೊಂಡೇ ಹೋಗುತ್ತಾ ಯುದ್ಧಮಾಡುವರು

ಇಂಡಿಯಾ ದೇಶದ ವೃತ್ತಾಂತಗಳು.

ನಭಾ ಸಂಸ್ಥಾನದ ರಾಜರವರು ತಮ್ಮ ಕುಮಾರಿಯನ್ನು ಧೋಲ್‌ಪುರ ಸಂಸ್ಥಾನದ ಮಹಾರಾಜ ರಾಣಾರವರಿಗೆ ಕೊಟ್ಟು ಈ ತಿಂಗಳು ೪ನೇ ತಾರೀಖಿನ ದಿನ ವಿವಾಹ ಬೆಳೆಸುವವರಾಗಿದಾರೆ.

◆◆◆◆

ಕಳೆದ ವಾರ ಅಹಮದಾಬಾದಿನಲ್ಲಿ ಎರಡು ಹತ್ತಿಯ ಕಾರ್ಖಾನೆಗಳಿಗೆ ಬೆಂಕಿ ಬಿದ್ದು, ಒಂದರಲ್ಲಿ ೧೪ ಸಾವಿರ ರೂಪಾಯಿನ ಹತ್ತಿಯೂ ಇನ್ನೊಂದರಲ್ಲಿ ೨೨ ಸಾವಿರ ರೂಪಾಯಿನ ಹತ್ತಿಯೂ ಸುಟ್ಟುಹೋಯಿತು.

ಲಕ್ನೋ ಪಟ್ಟಣದ ಇಂಗ್ಲಿಷ್ ಪಾಠಶಾಲೆಗಳ ಉಪಾಧ್ಯಾಯರು ರೆಲ್ಲಾ ಸೇರಿ, ಈ [illegible] ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟವರ ಮೇಲೆ ಆಕ್ಷೇಪಣೆಗಳನ್ನು ಬರೆದು, ಅಲಹಾಬಾದ್ ಯೂನಿವರ್ಸಿಟಿ ಅಧಿಕಾರಿಗಳಿಗೆ ಒಪ್ಪಿಸಿದಾರೆ

◆◆◆◆

ಮಾಳವ್ಯ ಪ್ರಾಂತ್ಯದಲ್ಲಿ ಸಂಚಾರ ಮಾಡುವ ಭಾರೀ ರೈಲ್ ಗಾಡಿಗಳಿಗೆ ಈಗ ಕಟ್ಟುವ ಎಂಜಿನ್ ಗಾಡಿಗಳು ದುರ್ಬಲವಾಗಿರುವುದರಿಂದ ವಿಲಾಯಿತಿಯಿಂದ ಬೇರೆ ೩೦ ಹೊಸ ಎಂಜಿನ್‌ಗಳನ್ನು ತರಿಸುವಂತೆ ಗವರ್ನಮೆಂಟಿನವರು ಆರು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

◆◆◆◆

ಕಳೆದ ೧೯ನೇ ತಾ ಗುರುವಾರ ಮಧ್ಯಾಹ್ನ ೧೨ ಗಂಟೆಯಲ್ಲಿ ಧರ್ಮಶಾಲೆಯಲ್ಲಿ ಮತ್ತೆ ಭೂಕಂಪ ಉಂಟಾಯಿತು ಏಪ್ರಿಲ್ ೪ ರಲ್ಲಿ ಆದ ಭೂಕಂಪದಲ್ಲಿ ಕಳೆದುಳಿದ ಮನೆಮಠಗಳೂ ಅಲ್ಲಿಂದ ಈಚೆಗೆ ಜನರು ಹಾಕಿಕೊಂಡಿದ್ದ ಗುಡಿಸಲು ಮುಂತಾದ ಕಟ್ಟಡಗಳೂ ಈಗ ಅಲ್ಲಾಡಿ ಮುದುರಿಕೊಂಡವು

◆◆◆◆

ಉತ್ತರ ದೇಶದ ಕಾಂಗ್ರಾ ಮತ್ತು ಕುಲು ಕಣಿವೆಗಳಲ್ಲಿ ಭೂಕಂಪದ ದೆಸೆಯಿಂದ ೧೯,೦೦೦ ಪ್ರಜೆಗಳು ಲಯವಾದರೆಂದು ಮೊದಲು ಅಂದಾಜು ಕಟ್ಟಿದ್ದರಷ್ಟೆ ಈಚೆಗೆ ಆ ಪ್ರಾಂತ್ಯದಲ್ಲೆಲ್ಲಾ ತನಿಖೆಮಾಡಿಸಿದ್ದರಲ್ಲಿ ಈ ಅನಾಹುತದ ದೆಸೆಯಿಂದ ಇಪ್ಪತ್ತು ಸಹಸ್ರ ಪ್ರಜೆಗಳು ತೀರಿಹೋದರೆಂದು ಗೊತ್ತಾಗಿದೆ

◆◆◆◆

ದಾಲ್ಬಂ ಸಂಸ್ಥಾನದ ಮಹಾರಾಜರು ತಮ್ಮ ಪ್ರಜಾ ಕ್ಷೇಮಾಭಿವೃದ್ಧಿಯಲ್ಲಿ ಗಮನವಿಲ್ಲದೆ ಸ್ವಾರ್ಥಪರರಾಗಿದ್ದಾರೆಂಬುದನ್ನು ತಿಳಿದು ಇಂಡಿಯಾ ಗವರ್ನಮೆಂಟಿನವರು ಅವರಿಗೆ—ನಿಮ್ಮ ಸಂಸ್ಥಾನವನ್ನು ಗವರ್ನಮೆಂಟಿಗೆ ಯಾಕೆ ಸೇರಿಸಿಕೊಳ್ಳಕೂಡದು ಎಂದು ಪ್ರಶ್ನೆಮಾಡಿ ಕಾಗದ ಬರೆದಿದಾರೆ.

◆◆◆◆

ರಂಗೂನ್ ಪಟ್ಟಣದಲ್ಲಿ ಮೆ॥ ಸ್ಟೀಲ್ ಎಂಬೊಬ್ಬ ಅಮೇರಿಕದವನನ್ನೂ ಸಿವಿಲ ಸರ್ಜನ್ ಡಾಕ್ಟರ್ ಮೆಕಾರ್ಥಿ ಎಂಬಾತನನ್ನೂ ಇವನ ಜವಾನನನ್ನೂ, ಒಂದು ಹುಚ್ಚುನಾಯಿ ಕಡಿದು ಗಾಯಮಾಡಿತು ಈಗ ಅವರು ಚಿಕಿತ್ಸೆ ಮಾಡಿಸಿಕೊಳ್ಳುವದಕ್ಕೆ ರಂಗೂನ್ ನಿಂದ ಕಸೌಲಿಗೆ ಪ್ರಯಾಣಮಾಡಿದರು.

◆◆◆◆

ಬರ್ಮಾ ಅಧಿಪತ್ಯದಲ್ಲಿ ಮಿಚಿಬೆರಿ ಪೋಲೀಸಿನವರು ನಾಲ್ಕು ಜನ ಬರ್ಮಾ ಬೈರಾಗಿಗಳನ್ನು ಮೇಗೋಬಿತ್ ನಿಂದ ಹಾಲ್ಗನಾಕ್ಕೆ ಕರೆದುಕೊಂಡು ಹೋಗುತ್ತಿರುವಲ್ಲಿ ಆ ನಾಲ್ವರೂ ತಪ್ಪಿಸಿಕೊಂಡು ಹೋದರು. ಅವರನ್ನು ಈಚೆಗೆ ಹಿಡಿದು ವಿಚಾರಣೆ ಮಾಡಿಸಿ, ತಲಾ ನಾಲ್ಕು ವರುಷದಂತೆ ಕಠಿಣ ಸಜಾ ವಿಧಿಸಿದಾರೆ

◆◆◆◆

ಮದರಾಸ್ ಅಧಿಪತ್ಯದಲ್ಲಿ ಕೆಲವು ಕಾಲಕ್ಕೆ ಮುಂಚೆ ಡಿಸ್ಟ್ರಿಕ್ಟ್ ಕಲೆಕ್ಟರಾಗಿದ್ದ ಕರಡಿಬಾವಿ ವೆಂಕಟರವ ಸ್ವಾಮಿ ಲಕ್ಷ್ಮೀರಾಯರೆಂಬುವರು ದುರ್ನಡತೆಯುಳ್ಳವರೆಂದು ತಿಳಿದುಬಂದ ಕಾರಣ ಅವರಿಗೆ ಹಿಂದೆ ಕೊಟ್ಟಿದ್ದ "ದಿವಾನ್ ಬಹದೂರ್" ಎಂಬ ಘನತರವಾದ ಅಂಕಿತವನ್ನು ಮದರಾಸ್ ಗವರ್ನರವರು ವಜಾ ಮಾಡಿರುತ್ತಾರೆ

◆◆◆◆

ಕಲ್ಕತ್ತಾ ಪಟ್ಟಣದಲ್ಲಿರುವ ಒಂದು ಭಾರೀ ನಾರಿನ ಕಾರ್ಖಾನೆಯಲ್ಲಿ ಮೆ॥ ನಹಾಲಿಯತ್ ಎಂಬಾತನು ಮ್ಯಾನೇಜರಾಗಿದ್ದನು ಕಂಪೆನಿಯವರು ಆತನನ್ನು ನಿಷ್ಕಾರಣವಾಗಿ ಕೆಲಸದಿಂದ ವಜಾಮಾಡಿದರೆಂತಲೂ ಇದರಿಂದ ಆತನಿಗೆ ಅಗೌರವವಾಯಿತೆಂತಲೂ ಆತನು ಕಂಪನಿಯವರ ಮೇಲೆ ನಾಶನಷ್ಟಕ್ಕೆ ಎರಡು ಲಕ್ಷ ರೂಪಾಯಿಗೆ ದಾವಾಮಾಡಿದಾನೆ

◆◆◆◆

ಹಿಂದುಸ್ಥಾನದಲ್ಲಿರುವ ಇಂಗ್ಲಿಷ್ ಸೈನ್ಯದ ಪೈಕಿ ಕೆಲವು ಭಾಗಗಳನ್ನು ದಕ್ಷಿಣ ಆಫ್ರಿಕಾ, ಚೀನಾ, ಸೋಮಾಲಿಲ್ಯಾಂಡ್ ಮುಂತಾದ ಕಡೆಗಳಿಗೆ ಕಳುಹಿಸಿದ್ದದರಿಂದ ಅವರ ಸಂಬಳವೂ ಬಟ್ಟೆಬರೆ ತಿಂಡಿ ಮುಂತಾದ ಖರ್ಚುಗಳೂ ವಿಲಾಯಿತಿಯ ಸರ್ಕಾರದವರೇ ವಹಿಸಿಕೊಂಡರು. ಇದರಿಂದ ಇಂಡಿಯಾ ಗವರ್ನಮೆಂಟಿಗೆ ೪ ಕೋಟಿಯ ೩೯ ಲಕ್ಷದ ೫೦ ಸಹಸ್ರ ರೂಪಾಯಿ ಉಳಿಕೆಯಾಗಿದೆ

◆◆◆◆

ಜಪಾನ್ ರಾಜ್ಯದಲ್ಲೆಲ್ಲಾ ಭೂಕಂಪದ ಪರಿಶೋಧನಾ ಕಾರ್ಯದಲ್ಲಿ ಪ್ರವೀಣರೆಂದು ಪ್ರಖ್ಯಾತಿ ಹೊಂದಿರುವ ಡಾಕ್ಟರ್ ಎಫ್ ಓಮೋರಿಯವರು ಕಳೆದ ವಾರ ಕಲ್ಕತ್ತೆಗೆ ಬಂದರು. ಕೆಲವು ದಿನಗಳಲ್ಲೇ ಇವರು ಭೂಕಂಪ ಪ್ರಾಪ್ತವಾದ ಧರ್ಮಶಾಲಾ, ಸಿಮ್ಲಾ, ಮಸೂರಿ ಮುಂತಾದ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿಕೊಂಡು, ಭೂಕಂಪಕ್ಕೆ ಕಾರಣ ಮುಂತಾದುವನ್ನು ಪರೀಕ್ಷೆಮಾಡುವವರಾಗಿದಾರೆ

◆◆◆◆

ಲಾಹೋರ್ ಪಟ್ಟಣದಲ್ಲಿ ಇಂಗ್ಲೆಂಡ್ ಬರ್ಟ್ ಟಾಫ್ ಎಂಬೊಬ್ಬ ಯೂರೋಪ್ಯನು ಕಳೆದ ಮಾರ್ಚಿ ತಿಂಗಳಲ್ಲಿ ಜಪಾನ್ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತೇನೆಂದು ಪ್ರಕಟಿಸಿ, ಟಿಕೆಟ್ ಹಾಕಿ ಜನರಿಂದ ದುಡ್ಡು ವಸೂಲ್ಮಾಡಿಕೊಂಡು, ಉಪನ್ಯಾಸ ಮಾಡದೆ, ಹಣ ತಿಂದುಬಿಟ್ಟು ಕರಾಚಿ ಪಟ್ಟಣಕ್ಕೆ ಓಡಿಹೋದನು. ಜನರು ಇವನನ್ನು ಹಿಡಿದು ತರಿಸಿ, ಸೆಷನ್ ಕೋರ್ಟಿನಲ್ಲಿ ಫಿರ್ಯಾದು ಮಾಡಿಸಿದರು ಆಗ ಅವನು ಜಡ್ಜಿಗೆ ತಿಳಿಸಿದ್ದೇನೆಂದರೆ—ಲೆಫ್ಟಿನೆಂಟ್ ಗವರ್ನರ್ ಸರ್ ಛಾರ್ಲ್ಸ್ ರಿವಾಜ್ ಯವರು ನನ್ನ ಉಪನ್ಯಾಸ ಸಭೆಗೆ ಅಧ್ಯಕ್ಷರಾಗುತ್ತೇವೆಂದು ಮಾತುಕೊಟ್ಟು, ಬಾರದೆ ನಿಂತುಬಿಟ್ಟರು. ಆಗ ಜನರು ತಮ್ಮ ಟಿಕೆಟ್ಟುಗಳನ್ನು ವಾಪಸು ಕೊಟ್ಟು, ತಮ್ಮ ಹಣ ವಾಪಸು ಪಡೆಯಬೇಕೆಂದು ಪ್ರಯತ್ನಪಟ್ಟರು ನಾನಾದರೋ ಆ ಹಣದಲ್ಲೆಲ್ಲಾ ಖರ್ಚುಮಾಡಿದ್ದರಿಂದ ವಾಪಸು ಕೊಡಲಾರದೆ ಹೋದೆನು ಉಪನ್ಯಾಸ ಮಂದಿರಕ್ಕೆ ಬಾಡಿಗೆ ಕೊಟ್ಟೆನು, ನೋಟೀಸುಗಳನ್ನು ಅಚ್ಚು ಹಾಕಿಸುವುದಕ್ಕೂ ಇತರ ಕೆಲಸಗಳಿಗೂ ಹಣ ಖರ್ಚಾಗಿ ಹೋಯಿತು. ಜನರ ಹಣ ಕೊಡಬೇಕಾದಾಗ ನಾನು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಯೋಚಿಸಿದ್ದೆನು. ನಾನು ಯಾರಿಗೂ ಮೋಸಮಾಡಬೇಕೆಂಬ ಅಭಿಪ್ರಾಯವುಳ್ಳವನಾಗಿರಲಿಲ್ಲ ಎಂಬುದೇ. ಈ ವಾಜ್ಮೂಲವನ್ನು ಕೇಳಿದ ಪಂಚಾಯತರೂ ಜಡ್ಜಿಯವರೂ ಆತನ ವಿಷಯದಲ್ಲಿ ಕನಿಕರಪಟ್ಟು, ಅವನಲ್ಲಿ ಅಪರಾಧವೇನೂ ಕಂಡುಬರುವುದಿಲ್ಲವೆಂದು ತೀರ್ಮಾನಿಸಿ, ಖೈದಿನಿಂದ ಬಿಟ್ಟುಬಿಡುವಂತೆ ಹುಕುಂ ಮಾಡಿದರು.

◆◆◆◆

ಬರ್ಮಾ ಅಧಿಪತ್ಯಕ್ಕೆ ಸೇರಿದ ಜೆರ್‌ಬಾಡಾ ಎಂಬ ಭಾಗದಲ್ಲಿ ಬರ್ಮಾ ಜನರು ಗುಂಪು ಕೂಡಿ, ದಳ್ಳಿಯನ್ನು ಮಾಡುತ್ತಿದ್ದರು ಈ ಗುಂಪಿಗೆ ಮೂರು ಸಲ ಸಿಡಿಲು ಬಡಿಯಿತು ೩೦ ಜನ ಬರ್ಮಾ ಜನರು ಮೂರ್ಛೆಹೊಂದಿ ಬಿದ್ದುಕೊಂಡರು ಈ ಸ್ಥಿತಿ ಬಂದ ಜನರಿಗೆ ಮೈಕೈಯೆಲ್ಲಾ ಸುಟ್ಟುಹೋಗಿದೆ. ಇಬ್ಬರು ತಕ್ಷಣ ಸತ್ತುಹೋದರು ಇನ್ನಿಬ್ಬರಿಗೆ ಪೂರಾ ಜಖಂ ಆಗಿದ್ದದರಿಂದ ಅವರು ಆಸ್ಪತ್ರೆಗೆ ಒಯ್ಯಲ್ಪಟ್ಟ ಮೇಲೆ ಸತ್ತುಹೋಗಿದಾರೆ

◆◆◆◆

ಭಾವನಗರದ ಮಹಾರಾಜರವರು ಕುಂಡ್ಲಾದಿಂದ ಪ್ರಯಾಣ ಮಾಡುತ್ತಿರುವಲ್ಲಿ ಬೋರಿಯಾ ಬೆಟ್ಟದ ಬಳಿ ಒಂದು ಚಿರತೆ ಇದೆ ಎಂಬುದನ್ನು ಕೇಳಿ, ಕೂಡಲೇ ಅಲ್ಲಿಗೆ ಹೋಗಿ ನೋಡುವಾಗ್ಗೆ ಅದು ಸಿಕ್ಕಿತು ಮಹಾರಾಜರು ಹೊಡೆದ ಗುಂಡಿನೇಟು ಅದಕ್ಕೆ ಬಲವಾಗಿ ಬಿದ್ದರೂ ಅದು ಮಹಾ ರೋಷದಿಂದ ಒಂದು ದೊಡ್ಡ ಕಲ್ಲನ್ನು ಬಾಯಿಯಲ್ಲಿ ಕಚ್ಚಿಕೊಂಡು, ಮಹಾರಾಜರವರ ಎದುರಿಗೆ ಸ್ವಲ್ಪ ದೂರ ಬಂದು, ಅಷ್ಟರಲ್ಲೇ ಬಿದ್ದು ಪ್ರಾಣಬಿಟ್ಟಿತು ಮಹಾರಾಜರು ಕಳೆದ ತಿಂಗಳಲ್ಲಿ ಇದೂ ಸೇರಿ ನಾಲ್ಕು ಚಿರತೆಗಳನ್ನು ಕೊಂದಂತಾಯಿತು.

◆◆◆◆

ಮಲಬಾರಿನಲ್ಲಿ ಪೂರಮ್ಮನ ದೇವಸ್ಥಾನದ ಬಳಿ ದೊಡ್ಡ ಉತ್ಸವವಾಯಿತು ಜನರು ಒಂದು ಕಡೆ ಸೇರಿ ಜೂಜಾಡುತ್ತಾರೆಂಬುದನ್ನು ತಿಳಿದು, ಅವರನ್ನು ದಸ್ತಗಿರಿ ಮಾಡಬೇಕೆಂದು ಟವರ್ ಪೋಲೀಸ್ ಇನ್ಸ್‌ಪೆಕ್ಟರು ಅಲ್ಲಿಗೆ ಕೆಲವು ಪೋಲೀಸಿನವರನ್ನು ಕಳುಹಿಸಿದರು ಹೀಗೆ ಹೋದವರಲ್ಲಿ ಇಬ್ಬರು ಹೆಡ್ ಕಾನ್‌ಸ್ಟೆಬಲ್‌ರೂ ನಾಲ್ವರು ಕಾನ್‌ಸ್ಟೆಬಲ್‌ರೂ ಜೂಜುಕೋರರನ್ನು ಹಿಡಿದು ತರುವದಕ್ಕೆ ಬದಲಾಗಿ ಅವರಿಂದ ಪ್ರತಿಫಲ ಹೊಂದಿ ಅವರಿಗೆಲ್ಲಾ ತಪ್ಪಿಸಿಕೊಂಡು ಹೋಗುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟರು ಇದಕ್ಕಾಗಿ ಆ ಪೋಲೀಸಿನವರನ್ನೆಲ್ಲಾ ಸರ್ಕಾರದವರು ತಕ್ಕ ಹಾಗೆ ಶಿಕ್ಷಿಸಿರುತ್ತಾರೆ

◆◆◆◆

ಬೇಸಿಗೆಯಲ್ಲಿ ಯೂರೋಪ್ಯನರೂ ಮಂತ್ರಿಜನಗಳೂ ಬೆಟ್ಟಗುಡ್ಡಗಳಿಗೆ ಹೋಗಿದ್ದು ಬೇಸಿಗೆ ಕಳೆದನಂತರ ಹಿಂದಿರುಗಿ ಬರುವುದು ವಾಡಿಕೆಯಾಗಿದೆಯಷ್ಟೆ. ಸಾಮಾನ್ಯವಾಗಿ ಮಧ್ಯತರದ ಹಿಂದುಗಳು ಬೇಸಿಗೆಯನ್ನು ಕಳೆಯುವದಕ್ಕೆ ಇದುವರೆಗೆ ಈ ರಾಷ್ಟ್ರದಲ್ಲಿ ವಸತಿಯಾದ ಸ್ಥಳವ್ಯವಸ್ಥೆಯೂ ಏರ್ಪಟ್ಟಿರಲಿಲ್ಲ ಬೊಂಬಾಯಿ ಪಟ್ಟಣದಲ್ಲಿರುವ ಭಾರೀ ಕಂಟ್ರಾಕ್ಟುದಾರನಾದ ಮೆ॥ ರಾವ್ ಬಹದೂರ್ ಬಾಳಾಜಿ ವಾಚಾರಿ ಎಂಬಾತನು ಬೊಂಬಾಯಿನ ಹತ್ತಿರ ಲೋನಾವಲಿ ಎಂಬ ಸ್ಥಳದಲ್ಲಿ ೩೧,೦೦೦ ರೂಪಾಯಿ ಖರ್ಚು ಮಾಡಿ, ಅಂಥಾ ಆನುಕೂಲ್ಯಕರವಾದ ಸ್ಥಳವಸತಿಯನ್ನು ಕಲ್ಪಿಸಿರುತ್ತಾನೆ ಇದನ್ನು ನೋಡಿ ಬೊಂಬಾಯಿನ ಸುತ್ತುಮುತ್ತಿನ ಹಿಂದುಗಳೆಲ್ಲಾ ಬಹಳ ಸಂತೋಷಪಡುವರು.

◆◆◆◆

ಸಿಂಧು ದೇಶಕ್ಕೆ ಸೇರಿದ ಷರಾಫಿ ಎಂಬ ಗ್ರಾಮದಲ್ಲಿ ಒಂದು ಭಯಂಕರವಾದ ಕಳುವು ನಡೆಯಿತು ಕಳೆದ ೨೩ ನೇ ತಾ॥ ರಾತ್ರಿ ೧೧ ಗಂಟೆಯಲ್ಲಿ ೧೨ ಮಂದಿ ಕಳ್ಳರು ಆ ಗ್ರಾಮಕ್ಕೆ ಹೋಗಿ, ರೋಖು ಎಂಬ ಮುಖಂಡನ ಮನೆ ಬಾಗಿಲನ್ನು ಮುರಿದು, ಆ ಮುಖಂಡನನ್ನು ಹಿಡಿದುತಂದು, ಕಿಂಗಟ್ಟುಮುರಿ ಕಟ್ಟಿ, ಒಂದು ಗಿಡಕ್ಕೆ ಕಟ್ಟಿಹಾಕಿ, ಅವನ ಹತ್ತಿರ ಇಬ್ಬರು ಪಹರೆ ಇದ್ದರು ಉಳಿದವರು ಮನೆಯೊಳಕ್ಕೆ ನುಗ್ಗಿ ೩,೦೦೦ ರೂಪಾಯಿನ ನಗನಾಣ್ಯಗಳನ್ನು ದೋಚಿಕೊಂಡು ಹೋದರು ಕಳ್ಳರ ಶಬ್ದವನ್ನು ಕೇಳಿ, ಮನೆಯ ಹೆಂಗಸರು ಹೆದರಿ ಮಂಚದಕೆಳಗೆ ಅಡಗಿಕೊಂಡಿದ್ದರು. ಕಳ್ಳರು ಅವರನ್ನು ಹೊರಕ್ಕೆ ಎಳೆದುಕೊಂಡು ಪ್ರಾಣ ತೆಗೆಯುವದಾಗಿ ಅವರನ್ನು ಹೆದರಿಸಿ, ಅವರ ಮೈಮೇಲಿದ್ದ ನಗಗಳನ್ನೆಲ್ಲಾ ಕಳಚಿಕೊಂಡರು. ಈಚೆಗೆ ಪೋಲೀಸಿನವರು ನಾಲ್ವರನ್ನು ಹಿಡಿದಿರುವರೆಂದು ಸಮಾಚಾರ ಬಂದಿದೆ

◆◆◆◆

ಹಿಂದುಸ್ಥಾನದಲ್ಲಿ ಆಫೀಸರುಗಳಿಗೆ ಬರೆಯತಕ್ಕ ಕಾಗದಗಳೂ ಕಳುಹಿಸುವ ಭಾಂಗಿಗಳೂ ಕೆಲವು ವೇಳೆ ತಲುಪುವುದಿಲ್ಲವೆಂತಲೂ ಅವುಗಳಲ್ಲಿರುವ ವಸ್ತುಗಳು ಗೈರ್ಹಾಜರಿ ಆಗುತ್ತವೆಂತಲೂ ಅನೇಕರು ಆಗಾಗ್ಗೆ ಆಕ್ಷೇಪಣೆ ಮಾಡುತ್ತಿದಾರೆ. ಇದನ್ನು ಕೇಳಿ ಇಂಡಿಯಾ ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿರುವುದೇನೆಂದರೆ—ಮೊದಲೇ ಸ್ಟಾಂಪು ಹಚ್ಚಿ ರಿಜಿಸ್ಟರ್ ಮಾಡಿ ಅಂಚೆಗೆ ಹಾಕತಕ್ಕ ಕವರುಗಳೇ ಭಾಂಗಿಯಾಗಲೀ ಗೈರ್ಹಾಜರಿ ಆಯಿತೆಂಬುದನ್ನು ತಪಾಸಣೆ ಮಾಡುವವರಾಗಲೀ ವಿಲಾಸದಾರರಾಗಲೀ ತೃಪ್ತಿಕರವಾಗಿ ಕಾರಣಗಳನ್ನು ಕೊಟ್ಟು ತಿಳಿಸಿದಲ್ಲಿ ಅಂಥಾ ಪ್ರತಿ ಸಂದರ್ಭದಲ್ಲೂ ಪೋಸ್ಟು ಆಫೀಸಿನವರು ಪಾರ್ಸೆಲಿಗೆ ೨೫ ರೂಪಾಯಿಗೆ ಮೀರದಂಥಾ ಪ್ರತಿಫಲವನ್ನು ಕೊಡುವರು. ಈ ಹೊಸ ಪ್ರಯುಕ್ತಿಯು ೧ ರಿಂದ ಜಾರಿಗೆ ಬರತಕ್ಕದ್ದು ಎಂಬುದೇ. ಇದರಿಂದ ಸರ್ಕಾರಿಗೂ ಇತರ ಪ್ರಜೆಗಳಿಗೂ ಬಹಳ ಸಂತೋಷವಾಗುವುದರಲ್ಲಿ ಸಂದೇಹವಿಲ್ಲ.

ಸಂಸ್ಕೃತ ಭಾಷೆಯ ಉಜ್ಜೀವನ.

ಸಂಸ್ಕೃತ ಭಾಷೆಯನ್ನು ಉಜ್ಜೀವಿಸಲಿಕ್ಕೆ ಅಲ್ಲಲ್ಲಿ ಮಾಡಿದ ಪ್ರಯತ್ನಗಳು ಉಪಯುಕ್ತವಾಗಿವೆಯೋ ಎಂಬುದನ್ನು ನಾವು ಸರಿಯಾಗಿ ನಿಶ್ಚಯಿಸಲಾರೆವು. ಮೃತಭಾಷೆಯನ್ನು ಪುನರ್ಜೀವಿತವನ್ನಾಗಿ ಮಾಡಲು ಆವಶ್ಯಕವಿರುವ ಅವಕಾಶಗಳೆಲ್ಲಾ ಈ ಕಾಲದಲ್ಲಿ ದೊರೆಯಲಾರವು. ನಮ್ಮ ಕಾಲದಲ್ಲಿ ಜೀವನೋಪಾಯವೇ ನಮ್ಮ ಪ್ರಥಮ ವಿಚಾರವಾಗಿರಲು, ಸಂಸ್ಕೃತ ತತ್ವಶಾಸ್ತ್ರಗಳ ನೆಲೆಯನ್ನು ತಿಳಿಯುವದಕ್ಕೂ ಸಂಸ್ಕೃತ ವಾಙ್ಮಯದ ಸೌಂದರ್ಯವನ್ನು ನಿರೀಕ್ಷಿಸುವದಕ್ಕೂ ಈ ಜೀವನೋಪಾಯದ ವಿಚಾರವೇ ವಿಸ್ತಾರವಾಗಿ ನಿಂತಿದೆ. ಸಂಸ್ಕೃತ ಭಾಷಾಜ್ಞಾನವೂ ಶಾಸ್ತ್ರವಿಚಾರವೂ ದೇಶೀಯರಿಗೆ ತುಂಬಾ ಉಪಕ್ತವಾಗಿದೆ ಎಂದು ಹೇಳುವದರಲ್ಲಿ ಸಂಶಯವಿಲ್ಲ. ಧನಾನುಕೂಲತೆಯೂ ಸಮಯಾನುಕೂಲತೆಯೂ ಇದ್ದವರು, ಮುಖ್ಯವಾಗಿ ಐಹಿಕ ವಿಷಯಗಳನ್ನು ಬಿಟ್ಟು ಪಾರಮಾರ್ಥಿಕ ವಿಚಾರಗಳನ್ನು ಕೈಕೊಳ್ಳುವವರು ಸಂಸ್ಕೃತ ಸಾಹಿತ್ಯವನ್ನು ಪಾಠಮಾಡಿ, ತತ್ವಶಾಸ್ತ್ರಗಳಲ್ಲಿ ಒಲಿಸಿ ಎಷ್ಟೋ ಆನಂದವನ್ನೂ ಲಾಭವನ್ನೂ ಪಡೆಯಬಹುದು. ಆದರೆ ಉದರಪೋಷಣೆಯೇ ಅತಿ ಕಷ್ಟಸಾಧ್ಯವಾದ ಈ ಕಾಲದಲ್ಲಿ ಸಂಸ್ಕೃತ ಭಾಷೆಯ ಪರಿಚಯವು, ಇತರ ಭಾಷೆಗಳ ಜ್ಞಾನವು ಕೊಡುವಷ್ಟು ದಿನಗೂಲಿಯನ್ನು ಕೊಡುವದಿಲ್ಲ. ಸಂಸ್ಕೃತ ಮುನಿಷಿಗಳ ಕಾಲವು ಆಗಿ ಹೋಯಿತು. ಧರ್ಮಶಾಸ್ತ್ರಿಗಳು ರಾಜಸ್ಥಾನಗಳಲ್ಲಿಯೂ ನ್ಯಾಯಸ್ಥಾನಗಳಲ್ಲಿಯೂ ವಿರಾಜಮಾನರಾಗಿದ್ದ ಕಾಲವೂ ಆಗಿಹೋಯಿತು. ಪ್ರಕೃತದಲ್ಲಿ ಸಂಸ್ಕೃತ ಕಾವ್ಯವನ್ನೋ ವ್ಯಾಕರಣವನ್ನೋ ೧೦-೧೨ ವರ್ಷಗಳ ವರೆಗೆ ಕಲಿತ ಬಿದ್ದಿವಂತರು ಕೂಡ ನಮ್ಮ ಓದು ಪಾಠಶಾಲೆಗಳಲ್ಲಿ ೧೫ ರೂಪಾಯಿ ಸಂಬಳಕ್ಕೆ ಉಪಾಧ್ಯಾಯರಾಗಿ ನಿಲ್ಲಬೇಕಲ್ಲದೆ ಬೇರೇನೂ ಉಪಾಯವಿಲ್ಲ. ನಾವಿದ ಮಂದಿಯಲ್ಲಿ ಒಬ್ಬ ಯುರೋಪಿಯನನು ಸಂಸ್ಕೃತ ಕಲಿಯುವದರಿಂದ ಒಬ್ಬಿಬ್ಬರು ವಿಂಡಸನಿಗೆ ಸಂಸ್ಕೃತ ಪಂಡಿತರಾಗಿ ಪಾಠ ಹೇಳಿಕೊಟ್ಟು ಹೊಟ್ಟೆ ಹೊರೆಯಬಲ್ಲರು. ಕೆಲವರು ಪುರೋಹಿತರ ವೃತ್ತಿಯನ್ನು ಹೊಂದಿ ಉದರಪೋಷಣೆಯನ್ನು ಮಾಡುತ್ತಿದ್ದಾರೆ.

ಸಂಸ್ಕೃತಾಧ್ಯಯನಕ್ಕೆ ಪೂರ್ವಕಾಲದಲ್ಲಿದ್ದ ಮಾನಮರ್ಯಾದೆಗಳು ಈಗ ತಪ್ಪಿ ಹೋಗಲು ಹಲವು ಕಾರಣಗಳಿವೆ. ಇಂಗ್ಲಿಷ್ ಭಾಷೆಯು ಹಿಂದುಸ್ಥಾನದಲ್ಲಿ ಪ್ರಚಲಿತವಾಗುತ್ತಾ ಬರುವಷ್ಟಕ್ಕೆ ಜೋಗರಿಗೆ ವೈದಿಕರ ಮೇಲಿದ್ದ ಅಭಿಮಾನವು ಕಡಿಮೆಯಾಗುತ್ತಾ ಬಂತು, ಇದರಿಂದ ವೈದಿಕರು ತಮ್ಮ ಗ್ರಂಥಗಳನ್ನು ಕಟ್ಟಿಟ್ಟು ಇತರ ವೃತ್ತಿಗಳನ್ನು ಅವಲಂಬಿಸ ತೊಡಗಿದ್ದಾರೆ. ಸಂಸ್ಕೃತ ವೈಯಾಕರಣಿಗಳೂ ತರ್ಕಶಾಸ್ತ್ರಿಗಳೂ ವಿಶೇಷವಾಗಿ ಗುರುಮಠಗಳಲ್ಲಿಯೇ ಅಲಂಕಾರಪ್ರಾಯರಾಗಿ ಇದ್ದದರಿಂದ ಮಠದ ವರ್ಷದ ಆದಾಯವು ಕಡಿಮೆಯಾಗುತ್ತ ಬಂದಷ್ಟಕ್ಕೆ ಈ ಮಹನೀಯರು ಸ್ವತಂತ್ರ ಜೀವನವನ್ನು ಕಲ್ಪಿಸುವದಕ್ಕೆ ಬೇರೆ ದಾರಿಗಳನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಸಂಸ್ಕೃತ ಜ್ಞಾನಕ್ಕೆ ದೀರ್ಘಕಾಲದ ಪರಿಶ್ರಮವು ಬೇಕಾಗುವದರಿಂದಲೂ, ಅಷ್ಟು ಕಷ್ಟಪಟ್ಟು ಆರ್ಜಿಸಿ, ಎದ್ಯೆಗೆ ಈ ಕಾಲದಲ್ಲಿ ಸಾಕಷ್ಟು ಬೆಲೆ ಬಾರದೆ ಇರುವದರಿಂದಲೂ ಈ ಮೃತ ಭಾಷೆಯನ್ನು ಬದುಕಿಸುವದಕ್ಕೆ ಯತ್ನಿಸುವವರು ಕೊಂಚ ಮಂದಿಯೇ ಇದ್ದಾರೆ. ಕೆಲವು ವರ್ಷಗಳ ಹಿಂದೆ ಮದ್ರಾಸ್ ಪಟ್ಟಣದಲ್ಲಿ ಸಂಸ್ಕೃತ ಭಾಷೆಯಲ್ಲಿ ಒಂದು ಸಮಾಚಾರ ಪತ್ರಿಕೆಯನ್ನು ಹೊರಡಿಸಿದ್ದರು. ಅದಕ್ಕೆ ಪೋಷಕರೂ ಚಂದಾದಾರರೂ ಇಲ್ಲದೆ ಅದು ಜೀವನ್ಮೃತವಾಗುವದಕ್ಕೆ ಕಾರಣವೇನು? ವಿದ್ಯಾ ಇಲಾಖೆಯು ನಿಬಂಧನೆಗಳನ್ನು ಶಾಲೆಗಳು ಅನುಸರಿಸಬೇಕೆಂಬುದರಿಂದಲೇ ಸಂಸ್ಕೃತ ಪಂಡಿತರನ್ನು ಪಾಠಶಾಲೆಗಳಲ್ಲಿ ಇಟ್ಟುಕೊಳ್ಳುವರಲ್ಲದೆ, ಅಂಥಾ ನಿಬಂಧನೆಗಳು ಇಲ್ಲದಿದ್ದರೆ, ಈ ವೃದ್ಧ ಪಂಡಿತರನ್ನು ಮನೆಗಳಿಗೆ ಕಳುಹಿಸಿಬಿಡಲು ಅಧಿಕಾರಿಗಳು ಹಿಂಜರಿಯುತ್ತಿದ್ದಿಲ್ಲ.

ದಿನಕ್ಕೆ ಎಂಟಾಣೆಯಾದರೂ ಪ್ರತಿಫಲ ಕೊಡದ ಇಂಥಾ ಕಷ್ಟಸಾಧ್ಯವಾದ ಸಂಸ್ಕೃತವನ್ನು ಕಲಿಯಲು ಯಾಕೆ ತಲೆ ಒಡೆದುಕೊಳ್ಳಬೇಕೆಂಬುದೇ ಈ ವಿಚಾರಿಸಬೇಕಾದ ಪ್ರಶ್ನೆಯಾಗಿದೆ. ವಿಲಾಯತಿಯಲ್ಲಿ ಪ್ರಚಲಿತವಾಗಿರುವ ಭಾಷೆಗಳಿಗೆ ಲಾಟೀನ್ ಗ್ರೀಕ್ ಭಾಷೆಗಳ ಸಹಾಯವು ಆವಶ್ಯವಾಗಿರುವಂತೆ ನಮ್ಮ ಹಿಂದು ದೇಶದಲ್ಲಿ ಮಾತಾಡುವ ಭಾಷೆಗಳನ್ನು ವ್ಯವಸಾಯ ಮಾಡುವದಕ್ಕೂ ಅವುಗಳ ಸಂಪೂರ್ಣ ಜ್ಞಾನವನ್ನು ಸಂಪಾದಿಸುವದಕ್ಕೂ ಸಂಸ್ಕೃತದ ಪರಿಚಯವು ಅಗತ್ಯವಾಗಿದೆ ಎಂದು ಹಲವು ಮಂದಿ ದೊಡ್ಡ ಮನುಷ್ಯರು ಅಭಿಪ್ರಾಯಪಡುತ್ತಾರೆ. ಪ್ರಾಚೀನ ಸುಧಾರಣೆ, ಹಿಂದುಶಾಸ್ತ್ರಗಳು, ಭಾರತ ಭೂಮಿಯ ಮಹತ್ವ, ಇವುಗಳನ್ನೆಲ್ಲಾ ಪಾಶ್ಚಾತ್ಯರು ನೋಡಿ ಬೆರಗಾಗಲು ಅವರು ಸಂಸ್ಕೃತ ಭಾಷಾ ಪ್ರಿಯರಾದ್ದರಿಂದಲೇ ಕಾರಣವಾಯಿತು. ವೇದಗಳೂ ಪುರಾಣಗಳೂ ಸ್ಮೃತಿಗಳೂ ಸಂಸ್ಕೃತದಲ್ಲಿ ಬರೆಯಲ್ಪಟ್ಟಿವೆ, ಇವುಗಳ ಪರಿಶೀಲನವನ್ನು ಮಾಡಲು ಸಂಸ್ಕೃತವಿಲ್ಲದೆ ಉಪಾಯವಿಲ್ಲವೆಂಬ ಮಾತು ಬಲವಾಗಿದೆ. ನಮ್ಮ ಪ್ರಾಚೀನ ಮತವನ್ನೂ ಮಹತ್ವವನ್ನೂ ಕುರಿತು ನಮಗೆ ಅಧಿಕವಾದ ಗೌರವವಿದ್ದರೂ, ನಮ್ಮ ಹಿಂದಿನ ಇಷ್ಟಪ್ರಾಪ್ತಿಗೂ ಅನಿಷ್ಟ ನಿವೃತ್ತಿಗೂ ಹಿಂದಿನ ಭಾಷೆಗಳೇ ಆಯುಧಗಳಾಗಿರುವದರಿಂದ, ಸಂಸ್ಕೃತ ಭಾಷಾಭಿಜ್ಞನು ಕೌರವ ಪಾಂಡವರ ಕಾಲದ ಕಾಲಾಳಿನಂತಿರುವನು, ಇಂದಿನ ಉದರ ನಿರ್ವಾಹಕ್ಕೆ ಬೇಕಾದ ಅಸ್ತ್ರಗಳನ್ನು ಪ್ರಯೋಗಿಸಲಾರನು, ಅಶನಾನ್ವೇಷಣದಲ್ಲಿ ಕಾಳಿದುವಾಗ ಸುತ್ತುಮುತ್ತಲು ಹಾರುವ ಗುಂಡುಗಳನ್ನು ತಪ್ಪಿಸಿಕೊಳ್ಳಲಾರನು. ಈ ವಿಚಾರವನ್ನು ಮಾಡಿ ವಿದ್ಯಾ ವಿಷಯಗಳನ್ನು ಆಲೋಚಿಸಲು ಎರಡು ವರ್ಷಗಳ ಹಿಂದೆ ಕೂಡಿದ್ದ ಯುನಿವರ್ಸಿಟಿ ಕಮಿಷನ್ ಎಂಬ ಸಭೆಯವರು ದೇಶಭಾಷೆಗಳನ್ನು ಕಲಿಸುವದಕ್ಕೆ ಬದಲಾಗಿ ಸಂಸ್ಕೃತ ಭಾಷೆಯನ್ನು ಹೈಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಹೇಳಿಕೊಡಬೇಕೆಂದು ಸೂಚಿಸಿದಾಗ, ಈ ವಿಷಯದಲ್ಲಿ ಮಹನೀಯರೆಲ್ಲರೂ ಎರಡು ಪಕ್ಷಗಳಾಗಿ ನಿಂತು ಬಿಟ್ಟು ವಿಪುಲವಾದ ವಿವಾದಗಳನ್ನು ಮಾಡಿ ಕೊನೆಗೆ ದೇಶಭಾಷೆಗಳನ್ನು ಪಾಠಶಾಲೆಗಳಿಂದ ತಪ್ಪಿಸುವದು ಲೇಸಲ್ಲವೆಂದು ನಿರ್ಣಯಮಾಡಿದರು.

ನಾವಾದರೋ ಗ್ರಂಥಸ್ಥವಾಗಿರುವ ಸಂಸ್ಕೃತ ಭಾಷೆಯನ್ನು ಭಕ್ತಿಪುರಸ್ಸರವಾಗಿ ಅಭಿಮಾನಿಸುತ್ತೇವೆ. ಸಂಸ್ಕೃತ ಭಾಷೆಯು ಹಿಂದುಸ್ಥಾನದಲ್ಲಿರುವ ಭಾಷೆಗಳಿಗೆ ಮಾತೃಪ್ರಾಯವಾಗಿದೆ ಎಂದು ನಮಗೆ ತಿಳಿದೇ ಇದೆ. ಶಬ್ದಶಾಸ್ತ್ರವನ್ನು ಕಲಿಯುವವನಿಗೂ ಹಿಂದಿಯದ ಮತಗಳನ್ನು ವಿಚಾರಿಸುವವನಿಗೂ ಪ್ರಾಚೀನ ಇತಿಹಾಸಗಳನ್ನು ಶೋಧಿಸುವವನಿಗೂ ಪುರಾತನ ಬಿರುದುಗಳನ್ನು ಕಂಡು ಹಿಡಿಯುವವನಿಗೂ ಸಂಸ್ಕೃತ ಭಾಷೆಯು ಅತ್ಯಂತ ಪ್ರಯೋಜನಕರವೂ ಆನಂದದಾಯಕವೂ ಆಗಿದೆ ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ ಸಂಸ್ಕೃತವನ್ನು ಉಜ್ಜೀವಿಸುವದು ಸಾಧ್ಯವಲ್ಲವೆಂಬುದೇ ನಮ್ಮ ಮತವಾಗಿದೆ. ಬೇಕಾದ ಅನುಕೂಲತೆಗಳಿದ್ದವರು ಅದನ್ನು ಪ್ರಾಮಾಣಿಕದಿಂದ ವ್ಯವಸಾಯ ಮಾಡಬಹುದಲ್ಲದೆ ಆ ಭಾಷೆಯನ್ನು ಜನಸಾಮಾನ್ಯರು ಬಳಸುವಂತೆ ಮಾಡುವದು ನಿರರ್ಥಕವಾಗಿದೆ. ನಿರಕ್ಷರಕುಕ್ಷಿಗಳಾದ ಜನಗಳ ಸ್ಥಿತಿಗತಿಯನ್ನು ಹೆಚ್ಚಿಸುವದಕ್ಕೂ ಸುಖಸಂತೋಷಗಳನ್ನು ವರ್ಧಿಸುವದಕ್ಕೂ ಸಚೇತನವಾದ ದೇಶಭಾಷೆಗಳೇ ಯೋಗ್ಯವಲ್ಲದೆ, ಮೃತಭಾಷೆಯಾದ ಸಂಸ್ಕೃತವಲ್ಲ. ಇನ್ನೂ ಅಂಗಡಿ ಬೀದಿಗಳನ್ನು ಒಳನುಗ್ಗಿ ಮನೆಮಾತುಗಳನ್ನು ಸೂರೆಗೊಳ್ಳುವದಕ್ಕೆ ಒತ್ತಿಯೆತ್ತಿ ಬರುತ್ತಿರುವ ಇಂಗ್ಲಿಷ್ ಭಾಷೆಯನ್ನಾದರೂ ಕಲಿತರೆ, ದಿನಚರ್ಯದ ವಹಿವಾಟದಲ್ಲಿ ಸಾಕಷ್ಟು ಲಾಭವುಂಟಾಗುವದು. ಒಂದು ಕಾಲದಲ್ಲಿ ಗೀರ್ವಾಣ ಭಾಷೆ ಎಂದು ಪ್ರಖ್ಯಾತವಾಗಿದ್ದ ಸಂಸ್ಕೃತದಲ್ಲಿ ದೊಡ್ಡದಾದ ಬಹು ಅಧ್ಯಯನದ ಸಂಸ್ಕೃತ ಭಾಷೆಯು ವ್ಯವಸಾಯದಿಂದ ಸಾಧಾರಣ ಮನುಷ್ಯನಿಗೆ ಪುರುಷಾರ್ಥವೇನೂ ನೆರವೇರಲಾರದು. — ಸ

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಇಲ್ಲಿನ ಟೌನ್ ಹಾಲ್ ನಲ್ಲಿ ಸಭೆ ಸೇರಿ, ತಿಂಗಳು ಕಳೆದುದಕ್ಕೆ ಚರ್ಚಿಸಿದರು. ಕಳೆದ ಏಪ್ರಿಲ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ ೧೩,೧೭೭—೩—೮ ಸ್ವಾಧೀನಕ್ಕೆ ಬಂದಿತು. ಖರ್ಚು ರೂ ೭,೩೭೯—೧೫—೧ ವ್ಯಯವಾಗಿದೆ. ಆ ತಿಂಗಳಲ್ಲಿ ಮೈಸೂರು ಪಟ್ಟಣದೊಳಗೆ ಜನನ ೮೧೫, ಬರಣ—ಪ್ಲೇಗ್ ೪, ಸಿಡುಬು ೧೪, ಜ್ವರ ೧೩, ಇತರ ಕಾರಣಗಳು ೧೨೪, ಒಟ್ಟು ೧೫೫ ಮರಣಗಳೂ ಆದವು.

ಗೊಪ್ಪಲಿನ ಏರಿಯ ಮೇಲೆ ಪೊಲೀಸ್ ಸ್ಟೇಷನ್ ಹಿಂಭಾಗದಲ್ಲಿ ರಸ್ತೆಯನ್ನು ಸರಿಯಾಗಿ ವಿಸ್ತರಿಸುವ ಕೆಲಸಕ್ಕೆ ೧೪೦೦ ರೂಪಾಯಿ ಖರ್ಚಾಗುವದೆಂದು ಪ್ರೆಸಿಡೆಂಟರು ತಿಳಿಸಿ ವಿವರಿಸಿದರು. ಅಷ್ಟು ಸುಲಭದಲ್ಲಿ ಈ ಕಾಮಗಾರಿ ಆಗುವುದಾದರೆ ಅದನ್ನು ಅಗತ್ಯ ಮಾಡಿಸಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ಸವರ್ ಬಾದ್ ವೊಹಲ್ಲೆಯಲ್ಲಿ ವಸೂಲಾಗದೆ ಬಾಕಿ ಇರುವ ರೂ. ೩೭೭—೮—೦ ಮ್ಯುನಿಸಿಪಲ್ ಕಂದಾಯಗಳನ್ನು ರಿಮಿಷನ್ ಮಾಡಬಹುದೆಂದು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿದ್ದಾರೆ. ಇದನ್ನು ಮೆಂಬರುಗಳು ಓದಿ, ರಿಕಾರ್ಡು ಮಾಡಿದರು.

ರಾಜಧಾನಿಗೆ ಕಾವೇರಿ ನೀರನ್ನು ಯಂತ್ರಗಳ ಮೂಲಕ ಎತ್ತಿ ಕಳುಹಿಸುವ ಬೆಳಗೊಳದ ಕಾರ್ಖಾನೆಯಲ್ಲಿ ದಾಷ್ವುಡ್, ಡಾರ್ಸಿನೋ ಎಂಬಿಬ್ಬರು ನೌಕರರಿಗೆ ಸಂಬಳ ಬತ್ತೆ ಮಂಜೂರುಮಾಡಬೇಕೆಂದು ಇಂಜಿನಿಯರವರು ಶಿಫಾರಸು ಮಾಡಿದ್ದರು. ಆ ನೌಕರರಿಗೆ ಬತ್ತೆ ಕೊಡುವುದು ಆವಶ್ಯವೆಂದೂ ಅವರು ಮಾಡುವ ಕೆಲಸವು ಕಷ್ಟತರವಾದದ್ದೆಂದೂ ಹೇಳಿದ್ದರಿಂದ ಮುಂದಿನ ಜುಲೈ ಗುರ್‍ರ್ ಲಾಗಾಯಿತು ಅವರಿಬ್ಬರಿಗೂ ವರುಷಕ್ಕೆ ೫ ರೂಪಾಯಿಯಂತೆ ಬತ್ತೆ ಕೊಡುವ ಕೆ ಬೋರ್ಡಿನಲ್ಲಿ ತೀರ್ಮಾನವಾಗಿದೆ.

ಸೌದೆ, ಭತ್ತ, ಬಿಲಮಾನು, ಮುಂತಾದವು ಸುತ್ತುಮುತ್ತಲ ಕಡೆಗಳಿಂದ ರಾಜಧಾನಿಗೆ ಬರುತ್ತವಷ್ಟೆ. ಇವುಗಳಿಗಲ್ಲಾ ದಲ್ಲಾಳಿಗಳು ಏರ್ಪಟ್ಟು ಇರುವುದೂ ಈ ದಲ್ಲಾಳಿಗಳಿಗೆ ಅವುಗಳ ಬಿಕರಿ ಮುಂತಾದ್ದರಿಂದಲೇ ಜೀವನವಾಗುವುದೂ ಎಲ್ಲರಿಗೂ ತಿಳಿದದೆ. ಅನೇಕರು ಈ ದಲ್ಲಾಳಿಯೇ ಒಂದು ಕಸಬಾಗಿ ಇಟ್ಟುಕೊಂಡಿದ್ದಾರೆ. ಅಂಗಡಿ ವಿಕಾಸ ಇಲ್ಲದೆ ಜವಳಿ ಚೀಲಾ ಬುಟ್ಟಿ ಮುಂತಾದ್ದನ್ನು ಹೊತ್ತು ತಿರಿಗಿ ಬಿಕರಿ ಮಾಡತಕ್ಕ ಸಣ್ಣ ವರ್ತಕರು ಮ್ಯುನಿಸಿಪಾಲಿಟಿಗೆ ತೆರಿಗೆ ಕೊಡಬೇಕಾಗಿದೆ. ಇವರು ಕೊಡುವ ತೆರಿಗೆಯ ದರದ ಪ್ರಕಾರವೇ ಈ ದಲ್ಲಾಳಿಗಳಿಂದಲೂ ತೆರಿಗೆ ವಸೂಲ್ಮಾಡಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ. ಮೈಸೂರು ಪಟ್ಟಣದಲ್ಲಿ ಈ ದಲ್ಲಾಳಿಗಳಿಂದ ವರುಷಕ್ಕೆ ೮೦೦ ರೂಪಾಯಿ ಹಣ ಮ್ಯುನಿಸಿಪಾಲಿಟಿಗೆ ಉತ್ಪತ್ತಿಯಾಗಬಹುದೆಂದು ವೈಸ್ ಪ್ರೆಸಿಡೆಂಟರು ತಿಳಿಸಿದರು. ಮೆಂಬರುಗಳು ಈ ತೆರಿಗೆಯನ್ನು ಹಾಕಬಹುದೆಂದು ಒಪ್ಪಿಕೊಂಡರು.

ಮೈಸೂರು ಪಟ್ಟಣದಲ್ಲಿ ಮೊದಲಿದ್ದ ಸಾಯರ್ ದರೋಗರಿಗೆ ೩೦ ರೂಪಾಯಿ ಸಂಬಳವಿತ್ತು. ಮೂರು ವರುಷಗಳಿಂದ ಹೊಸ ದರೋಗರು ನೇಮಕವಾಗಿದ್ದಾರೆ. ಇವರಿಗೆ ೪೦ ರೂಪಾಯಿ ಮಾತ್ರ ಮ್ಯುನಿಸಿಪಾಲಿಟಿಯಿಂದ ಪಾವತಿ ಆಗುತ್ತಿದೆ. ಇವರ ಕಾಲದಲ್ಲಿ ಸಾಯರ್ ಉತ್ಪತ್ತಿಯು ವರುಷೇವರುಷ ಹೆಚ್ಚುತ್ತಿದೆ. ಈ ಸಾಲಿನಲ್ಲಿ ೩೧,೦೦೦ ರೂಪಾಯಿಗೆ ಕಮ್ಮಿ ಇಲ್ಲದೆ ವಸೂಲಾಗುವುದು. ಗವರ್ನಮೆಂಟಿನವರು ದರೋಗರಿಗೆ ಸಂಬಳ ಬತ್ತೆ ಆಗುವಂತೆ ಬೋರ್ಡಿನಿಂದ ಶಿಫಾರಸು ಬರಬೇಕೆಂದು ಅಪೇಕ್ಷಿಸಿದರು. ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು, ಮೆಂಬರುಗಳು, ಎಲ್ಲರೂ ಇವರ ಬತ್ತೆ ಕೊಡುವದು ನ್ಯಾಯವಾಗಿದೆ ಎಂತಲೂ, ಮುಂದಿನ ಜುಲೈಯಿಂದ ಅವರ ಸಂಬಳವನ್ನು ೪೦ ರಿಂದ ೫೦ ಕ್ಕೆ ಏರಿಸಿ ಆಮೇಲೆ ಪ್ರತಿ ವರುಷವೂ ೫ ರೂಪಾಯಿಯಂತೆ ಇಜಾಫೆ ಮಾಡತಕ್ಕದ್ದೆಂತಲೂ ಏಕವಾಕ್ಯತೆಯಿಂದ ಒಪ್ಪಿ ತೀರ್ಮಾನಿಸಿದರು.

ಕೋಟೆ ಮೊಹಲ್ಲಾದಲ್ಲಿ ವಸೂಲಾಗದೆ ಉಳಿದಿರುವ ರೂ ೩೩೧—೬—೪ ಮ್ಯುನಿಸಿಪಲ್ ಕಂದಾಯಗಳನ್ನು ರಿಮಿಷನ್ ಮಾಡಬೇಕಾಗಿದೆ ಎಂದು ಕಮಿಷನರು ಶಿಫಾರಸು ಮಾಡಿದ್ದು ಮೆಂಬರುಗಳೆಲ್ಲಾ ಅದಕ್ಕೆ ಒಪ್ಪಿಕೊಂಡಿದ್ದಾರೆ.

ಮಂಡಿ ಮೊಹಲ್ಲಾದಲ್ಲಿರುವ ಹಿಂದುಸ್ಥಾನಿ ಗಂಡು ಹುಡುಗರ ಪಾಠಶಾಲೆಗೆ ಮ್ಯುನಿಸಿಪಾಲಿಟಿಯಿಂದ ತಿಂಗಳಿಗೆ ೧೦ ರೂಪಾಯಿಯಂತೆ ಗ್ರಾಂಟು ಕೊಡಬಹುದೆಂದು ಮ್ಯುನಿಸಿಪಲ್ ಸ್ಟ್ಯಾಂಡಿಂಗ್ ಕಮಿಟಿಯ ಪ್ರೆಸಿಡೆಂಟರು ಬೋರ್ಡಿಗೆ ಶಿಫಾರಸು ಬರೆದಿದ್ದರು. ಆ ಕಮಿಟಿಯ ಮೆಂಬರುಗಳು ತಮಗೆ ಈ ವಿಷಯ ತಿಳಿಸಲಿಲ್ಲವೆಂತಲೂ ಪ್ರೆಸಿಡೆಂಟರೇ ಸ್ವತಃ ಬರೆದಿದ್ದಾರೆಂತಲೂ ತಿಳಿಸಿದರು. ಕಡೆಗೆ ಈ ಸಂಗತಿಯನ್ನು ಪ್ರೆಸಿಡೆಂಟರು ಸ್ಟ್ಯಾಂಡಿಂಗ್ ಕಮಿಟಿ ಮೆಂಬರುಗಳಿಗೆ ತಿಳಿಸಿ, ಮೆಂಬರುಗಳ ಅಭಿಪ್ರಾಯದೊಡನೆ ಬೋರ್ಡಿಗೆ ರಿಪೋರ್ಟು ಕಳುಹಿಸಿದ ಮೇಲೆ ಬೋರ್ಡಿನವರು ಗ್ರಾಂಟು ಕೊಡುವ ವಿಚಾರ ಇತ್ಯರ್ಥವಾಗಬೇಕೆಂದು ತೀರ್ಮಾನವಾಯಿತು.

ಗುಲಾಂ ರಾಜಾ ಬೇಗ ಎಂಬಾತನು ಮ್ಯುನಿಸಿಪಾಲಿಟಿಯ ಕನ್ಸರ್ವೆನ್ಸಿ ಇನ್ಸ್ಪೆಕ್ಟರಾಗಿ ಕೆಲಸ ಮಾಡುತ್ತಾ ೨೮ ವರುಷ ಸರ್ವೀಸ್ ಮಾಡಿದ್ದಾನೆ... ಈ ನೌಕರನು ತನಗೆ ಸ್ಯಾನಿಟರಿ ಇನ್ಸ್ಪೆಕ್ಟರ ದರ್ಜೆಯನ್ನೂ ಸಂಬಳವನ್ನೂ ಕೊಡಬೇಕೆಂದು ಕೇಳಿದ್ದನು. ಗವರ್ನಮೆಂಟಿನವರು ಈ ಶಿಫಾರಸಿನಂತೆ ಏನೂ ಮಾಡಲಾಗುವುದಿಲ್ಲವೆಂತಲೂ ಸ್ಯಾನಿಟರಿ ವಿಭಾಗವನ್ನು ಹೊಸದಾಗಿ ಏರ್ಪಡಿಸಿದಾಗ ಆ ಕೆಲಸಕ್ಕೆ ನೇಮಕ ಮಾಡಿಕೊಳ್ಳಬೇಕೆಂತಲೂ ಹುಕುಂ ಕೊಟ್ಟಿದ್ದರು. ಆ ವಿಚಾರವನ್ನು ಮೆಂಬರುಗಳು ಚರ್ಚಿಸಿ, ಸ್ಯಾನಿಟರಿ ಇನ್ಸ್ಪೆಕ್ಟರ್ ಕೆಲಸಕ್ಕೆ ಅತನನ್ನು ನೇಮಿಸಿದರೆ ಸರಿಯಾಗಿದೆ ಎಂತಲೂ ಇದು ಸಾಧ್ಯವಿಲ್ಲವಾದರೆ ಆತನಿಗೆ ಮಾತ್ರ ೩೦ ರೂಪಾಯಿಯಂತೆ ಸಂಬಳ ಪಾವತಿ ಮಾಡಲು ಸ್ಯಾಂಕ್ಷನ್ ಮಾಡಬೇಕೆಂತಲೂ ಗವರ್ನಮೆಂಟಿಗೆ ಮತ್ತೆ ಬರೆಯಬೇಕೆಂತ ತೀರ್ಮಾನ ಮಾಡಿದರು.

ವೀರಣ್ಣನವರ ಛತ್ರ ಮನೆಗಳಿಗೂ ಹೊಸ ಬೋರ್ಡಿಂಗ್ ಹೌಸಿಗೂ ಇತರ ಜನಗಳಿಗೂ ಉಪಯೋಗವಾಗುವಂತೆ ಆ ಪ್ರದೇಶದ ಬಳಿ ಒಂದು ಪೊಲೀಸ್ ಸ್ಟೇಷನನ್ನು ಏರ್ಪಡಿಸಬೇಕೆಂದು ಆ ಬೀದಿಯವರು ಅರ್ಜಿ ಕೊಟ್ಟಿದ್ದನ್ನು ಮೆಂಬರುಗಳು ಒಪ್ಪಿ ಈ ವಿಷಯವನ್ನು ಗವರ್ನಮೆಂಟಿನವರಿಗೆ ಬರೆದು ಮಾಡಿಕೊಳ್ಳತಕ್ಕದ್ದೆಂದು ನಿರ್ಣಯಿಸಿದರು. ಆ ಪ್ರಾಂತ್ಯದಲ್ಲಿ ಒಂದು ಮಾರ್ಕೆಟ್ಟನ್ನು ಕಟ್ಟಿಸುವ ವಿಚಾರವನ್ನು ಸಿಟಿ ಇಂಪ್ರೂವ್ಮೆಂಟ್ ಟ್ರಸ್ಟ್ ಬೋರ್ಡಿಗೆ ತಿಳಿಸುವಂತೆ ಗೊತ್ತು ಮಾಡಿದರು. ಮತ್ತು ಸಯ್ಯಾಜಿ ರಾವ್ ರೋಡಿನ ಪೂರ್ವ ಭಾಗದಲ್ಲಿರುವ ಮ್ಯುನಿಸಿಪಲ್ ಆಫೀಸಿನ ಸುತ್ತಲೂ ಕಂಬಿಗಳನ್ನು ಹಾಕಿ, ಒಳಗೆ ಹೂವಿನ ತೋಟ ಮಾಡುವುದಕ್ಕೆ ಎಷ್ಟು ಹಣ ಬೇಕಾಗುವುದೋ ಅಂದಾಜು ಪಟ್ಟಿ ತಯಾರ್ ಮಾಡಿಸಬೇಕೆಂದು ತೀರ್ಮಾನವಾಗಿದೆ.

ಜೀವಣ್ಣರಾಯನ ಕಟ್ಟೆ ಬಳಿ ಇರುವ ಖಾಲಿ ಜಾಗದಲ್ಲಿ ದೇವಸ್ಥಾನವನ್ನೂ ಧರ್ಮಶಾಲೆಯನ್ನೂ ಕಟ್ಟಿಸುತ್ತೇನೆಂತಲೂ ಆ ಸ್ಥಳವನ್ನು ತನಗೆ ಉಚಿತವಾಗಿ ಕೊಡಿಸಬೇಕೆಂತಲೂ ಶ್ರೀ ರಾಮದಾಸ್ ಎಂಬಾತನು ಅರ್ಜಿ ಬರೆದುಕೊಂಡಿದ್ದನು. ಮೆಂಬರುಗಳು ಆತನಿಗೆ ಅಲ್ಲಿ ೪೦×೨೪ ಅಡಿಯಷ್ಟು ಸ್ಥಳವನ್ನು ಕೊಡಬಹುದೆಂತಲೂ ಅವರು ಕಟ್ಟುವಗಳೂ ಪ್ರಜಾ ಸಾಮಾನ್ಯಕ್ಕೆ ಅನುಕೂಲಿಸುವಂತೆ ಆತನಿಂದ ಮುಚ್ಚಳಿಕೆ ಬರೆಸಿಕೊಳ್ಳಬೇಕೆಂತಲೂ ತೀರ್ಮಾನ ಮಾಡಿದರು.

ಸಂತೆ ಪೇಟೆಯಲ್ಲಿ ಬೀಟ್ ಸವಾಯಿ ರಂಗಣ್ಣನವರ ಬಾಬತು ಮನೆಯನ್ನು ಪ್ಲೇಗ್ ರೂಲಿಸ ಪ್ರಕಾರ ಒಡೆದು ಹಾಕಿದರು. ಈಗ ಅವರ ಪತ್ನಿ ಕರಿಯಮ್ಮನು ಆ ಸ್ಥಳದಲ್ಲಿ ಮನೆ ಕಟ್ಟುವುದಕ್ಕೆ ಲೈಸನ್ಸು ಕೊಡಬೇಕೆಂತಲೂ ಸಾಗಿಲ್ಲದಿದ್ದರೆ ಅದಕ್ಕೆ ತಕ್ಕ ಪ್ರತಿ ಫಲವನ್ನು ಕೊಡಿಸಬೇಕೆಂತಲೂ ಬೋರ್ಡಿಗೆ ಬರೆದುಕೊಂಡಿದ್ದಳು. ಮೆಂಬರುಗಳು ಈ ವಿಷಯವನ್ನು ಆಲೋಚನೆ ಮಾಡಿ, ಆ ಕಡೆ ರಸ್ತೆ ೧೮ ಅಡಿಗೆ ಕಮ್ಮಿ ಆಗದಂತೆ ಜಾಗಾ ಬಿಟ್ಟು, ಉಳಿದ ಸ್ಥಳದಲ್ಲಿ ತಾರಸಿ ಮನೆ ಕಟ್ಟಿಕೊಳ್ಳಬೇಕೆಂಬ ಷರ್ತಿನ ಮೇಲೆ ಆಕೆಗೆ ಲೈಸನ್ಸು ಕೊಡಬಹುದೆಂದು ಅಭಿಪ್ರಾಯಪಟ್ಟರು.

ಶ್ರೀಮನ್ ಮಹಾರಾಜರವರ ಮತ್ತು ಯುವರಾಜರವರ ವರ್ಧಂತಿ ಉತ್ಸವಗಳಿಗೋಸ್ಕರ ಪಟ್ಟಣದಲ್ಲಿ ಚಪ್ಪರ, ಕಮಾನು, ತೋರಣಾದಿಗಳನ್ನು ಕಟ್ಟಿಸಿ, ದೀಪೋತ್ಸವವನ್ನು ಮಾಡುವುದಕ್ಕೆ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರು ತಯಾರ್ ಮಾಡಿಸಿದ್ದ ೩೨೫ ರೂಪಾಯಿ ಖರ್ಚಿನ ಅಂದಾಜು ಪಟ್ಟಿಯನ್ನು ಮೆಂಬರುಗಳು ಓದಿಸಿ ಒಪ್ಪಿಕೊಂಡರು.

ರಾಜಧಾನಿಯಲ್ಲಿರುವ ಶಿಫ್ರಿಡ ಮೂಗರ ಮತ್ತು ಕುರುಡರ ಪಾಠಶಾಲೆಯ ಖರ್ಚಿಗೆ ಮ್ಯುನಿಸಿಪಾಲಿಟಿಯವರು ತಿಂಗಳಿಗೆ ೩೦ ರೂಪಾಯಿಯಂತೆ ಗ್ರಾಂಟು ಕೊಡುತ್ತಿದ್ದಾರೆ. ಮ್ಯುನಿಸಿಪಲ್ ಪ್ರೆ

...ಟದವರು—ಈ ಪಾಠಶಾಲೆಯು ದಕ್ಷಿಣ ದೇಶದಲ್ಲೆಲ್ಲಾ ಅದ್ವಿತೀಯವಾದದ್ದು, ಹಟ್ಟುವಳಿಗಿಂತಲೂ ಅದರ ಖರ್ಚು ಹೆಚ್ಚಾಗಿದೆ. ಅದಕ್ಕೆ ದೊಡ್ಡ ವ್ಯಾಪನವಿರುವ ವಿಸ್ತಾರವಾದ ಕಟ್ಟಡವು ಬೇಕಾಗಿದೆ, ಅಲ್ಲಿರುವ ವಿದ್ಯಾರ್ಥಿಗಳೆಲ್ಲಾ ಸುತ್ತಮುತ್ತಲಿಂದ ಬಂದವರೇ ಹೊರ್ತು ರಾಜಧಾನಿಯವರಲ್ಲ ಇಂಥಾ ವಿದ್ಯಾಶಾಲೆಯ ಖರ್ಚಿಗೆ ಈ ಸಂಸ್ಥಾನದ ಎಲ್ಲಾ ಮ್ಯುನಿಸಿಪಾಲಿಟಿಯವರೂ ಅಲ್ಪ ಸ್ವಲ್ಪ ದ್ರವ್ಯ ಸಹಾಯ ಮಾಡಬೇಕು ಎಂದು ತಿಳಿಸಿದರು. ಮೆಂಬರುಗಳು ಈ ಅಭಿಪ್ರಾಯವನ್ನು ಒಪ್ಪಿ, ಆ ಸ್ಕೂಲ್ ಕಮಿಟಿಯವರು ಮ್ಯುನಿಸಿಪಲ್ ಬೋರ್ಡಿನಿಂದಲೂ ಕಾಗದ ಬರೆಸಿ, ಎಲ್ಲಾ ಬೋರ್ಡುಗಳಿಗೂ ಕಳುಹಿಸಬೇಕೆಂದು ಗೊತ್ತುಮಾಡಿದರು.

ಯೇಸುಕ್ರಿಸ್ತನ ಪುನರುತ್ಥಾನವು.

ಪುನರಾಕ್ಷೇಪಣೆಯೂ ಸಮಾಧಾನವೂ.

ಅಯ್ಯಾ,

ತಾವ ದಯವಿಟ್ಟು ಕೊಟ್ಟ ಉತ್ತರವು ನನಗೆ ಸಂಪೂರ್ಣವಾದ ಉತ್ತರವಲ್ಲವೆಂದು ವ್ಯಕ್ತವಾಗುತ್ತದೆ. ಕ್ರಿಸ್ತ ಮತಕ್ಕೆ ಕ್ರಿಸ್ತನ ಪುನರುತ್ಥಾನವೇ ಆಧಾರವೆಂಬುವ ಊಹೆಯು ಯಾವ ಕಾಲದಲ್ಲಿ ಜನಿಸಿತು? ಇದೊಂದರ ಚರಿತ್ರೆಯನ್ನು ಚನ್ನಾಗಿ ವಿಮರ್ಶಿಸಿ ನೋಡಿದರೆ ಕ್ರಿಸ್ತನು ಸತ್ತು ಸುಮಾರು ಮುನ್ನೂರು ವರ್ಷಗಳನಂತರ ಕ್ರಿಸ್ತನ ಶಿಷ್ಯವರ್ಗದಲ್ಲಿಯೇ ಅನೇಕ ವಾಗ್ವಾದಗಳು ಹುಟ್ಟಿ, ಕ್ರಿ. ಶ. ೩೨೫ನೇ ಇಸವಿಯಲ್ಲಿ ನಿಸೀಯಯೆಂಬ ಊರಿನಲ್ಲಿ ನಡೆದ ಸಭೆಯಲ್ಲಿ ಕ್ರಿಸ್ತನು ಭಗವಂತನೆಂದು ಸ್ಥಾಪಿಸಲ್ಪಟ್ಟಿತೆಂತ ಸ್ಪಷ್ಟವಾಗಿ ಕಂಡುಬರುವದು. ಮತ್ತು ಯಾವ ಯೇಹೂದ್ಯರ ಮತವು ಭಗವಂತನ ಅದ್ವಿತೀಯ ಸ್ವರೂಪವನ್ನು ಮರೆತು, ಕ್ರಿಸ್ತಶಕ ೩೮೩ ರಲ್ಲಿದ್ದ ರಾಜನು ಕ್ರಿಸ್ತನನ್ನು ದೇವರೆಂದು ನಂಬದೆ ಇರುವವರೆಲ್ಲರನ್ನೂ ಹತ್ಯಮಾಡುವೆನು ಎಂದು ಕಠಿಣವಾದ ಶಾಸನವನ್ನು ವಿಧಿಸಿದ ನಂತರವಲ್ಲವೇ ಕ್ರಿ. ಶ. ೪೪೧ ನೇ ಇಸವಿಯಲ್ಲಿ ಕ್ರಿಸ್ತನನ್ನು ದೇವರೆಂದು ನಂಬಲಿಕ್ಕೆ ಸ್ಥಿರವಾದ ಕಾರಣವಾಯಿತು; ಇದೇ ಆಧಾರದ ಮೇಲೆ ಒಂದು ಕಾಲದಲ್ಲಿ (ಕ್ರಿ. ಶ. ೫೫೯) ಯೂ, ಮತ್ತೊಂದು ಕಾಲದಲ್ಲಿ (ಕ್ರಿ. ಶ. ೬೭೯) ಯೂ, ಇನ್ನೊಂದು ಕಾಲದಲ್ಲಿ (ಕ್ರಿ. ಶ. ೮೬೯) ಯೂ ಬೀಸಿಲ್ ಎಂಬೊಬ್ಬ ಬಿಷಪ್ಪನು ಎಲ್ಲಾ ಗುಡಿಗಳಲ್ಲಿಯೂ ಮೇಲೆ ಹೇಳಿದ ಅಂಶವನ್ನೇ ಶಿರಸಾವಹಿಸಿ ನಡೆಯಬೇಕೆಂದು ಆಜ್ಞಾಪಿಸಿದನು ತದನಂತರವಲ್ಲವೇ ಕ್ರಿಸ್ತನ ರಾಜ್ಯದಲ್ಲಿ ಈ ಮತವು ತಲೆಯೆತ್ತಿಕೊಂಡು, 'ಅಧೋರ, ಅಧಾರ' ವೆಂದು ಕೇಳಿ, ಉಪದೇಶಿಸುವವನಿಗೆ ಪ್ರಯತ್ನಶೀಲರಾದ್ದರಿಂದ ಇದು ಏನೂ ಅತಿಶಯವಲ್ಲವೆ? ಇದನ್ನು ಒಪ್ಪಲಾರಿರಿ ಎಂಬುವದು ನಿಮ್ಮ ಮತದ ನ್ಯೂನತೆಯನ್ನು ಚೆನ್ನಾಗಿ ವ್ಯಕ್ತಗೊಳಿಸುವದು.

'ಕೆಲವು' ಜನರು ನಂಬಿರುವದರಿಂದ ಸತ್ಯದಮಾರ್ಗದಲ್ಲಿ ಕೆಂಚಿನ್ಮಾತ್ರವಾದರೂ ಅವರಿಗೆ ಚ್ಯುತಿಯುಂಟಾಯಿತೇ? ಇದು ನನಗೆ ಬಹಳ ಶೋಚನೀಯವಾಗಿದೆ. ನಮ್ಮ ಸದಸದ್ವಿವೇಕ ಮನಸ್ಸಾಕ್ಷಿಯಿಂದಲೂ ಬುದ್ಧಿಯಿಂದಲೂ ಹೃದಯದ ಅಂತರ್ಭಾಗದಿಂದಲೂ ಯಾವದು ಸತ್ಯವೆಂದು ನಂಬಿದೆವೋ, ಆ ಸತ್ಯವು ಒಬ್ಬನಿಂದಾಗಲೀ ಇಬ್ಬರಿಂದಲಾಗಲೀ ಬೋಧಿಸಲ್ಪಟ್ಟರೆ ಅದನ್ನು ನಾವು ಯಾವ ಕಾಲಕ್ಕೂ ಬಿಡದೆ ಅವಲಂಬಿಸಬೇಕು. ಹಾಗೆ ಮಾಡದೆ ಇರುವ ಪಕ್ಷದಲ್ಲಿ ಆ ಮಾನವನು ಹೇಡಿ ಎಂದು ಲೋವೆಲ್ ಎಂಬ ಒಬ್ಬ ಮಹಾ ಕವಿಯು ಹೇಳಿರುವದರಿಂದ ನಾವು ಸತ್ಯಧರ್ಮಗಳನ್ನು ತ್ಯಜಿಸದೆ, ಛಂದೋಬದ್ಧವಾಗಿಯುಕ್ತವಾದ 'ಜನಸಂಗಳೋ ಜಾತ್ರೆಯುಗಳೋ' ಎಂಬಂತೆ ಅನೇಕ ಜನರನ್ನು ಹಿಂಬಾಲಿಸದೆ, ಧೀರರಂತೆ ಒಬ್ಬಂಟಿಗನೇ ಆಗಲಿ ಭರ್ತೃಹರಿ ಹೇಳುವ ಹಾಗೆ.—

ಶ್ಲೋ॥ ನಿಂದಂತು ನೀತಿನಿಪುಣಾ ಯದಿವಾಸ್ತುವಂತು
ಲಕ್ಷ್ಮೀಸಮಾವಿಶತುಗಚ್ಛತುವಾ ಯಥೇಚ್ಛಂ
ಅದ್ಯೈವವಾ ಮರಣಮಸ್ತು ಯುಗಾಂತರೇವ
ನ್ಯಾಯಾತ್ಪಥಃ ಪ್ರವಿಚಲಂತಿ ಪದಂನಧೀರಾಃ ॥

ನಡೆದದ್ದೇ ಆದರೆ ಅದೇ ಅಲ್ಲವೇ ಸತ್ಯದ ಬಲವು? ಅದೇ ಅಲ್ಲವೇ ಧರ್ಮದ ಪ್ರಭಾವತೆಯು? ಅದೇ ಅಲ್ಲವೇ ಮಾನವ ಜನ್ಮಕ್ಕೆ ಜೋಡಾ ರತ್ನವು?

"ಜನರನ್ನು ಉದ್ಧಾರ ಮಾಡಲು ಅವತಾರಿಯಾದನು" ಎಂಬುವ ವಾಕ್ಯವು ಬಹು ಸರಳವಾದ ಮಾತು. ಭಗವಂತನಿಗೆ ಮನುಷ್ಯನ ಹಾಗೆ ಜರಾಮರಣಗಳೂ ಷಡ್ವಿಕಾರಗಳೂ ವಿಷಯಲಂಪಟಾದಿಗಳೂ ಇರುವ ಹಾಗೆ ಕಲ್ಪಿಸುವಿರಿ ಆಗಲಿ. ಅವತಾರವು ದೈವಿಕ ಗುಣಗಳೂ ಇವನಲ್ಲಿ ಏಕೀಭವಿಸಿದ್ದರೆ ನಿಸ್ಸಂದೇಹವಾಗಿ ಆತನ ಸರ್ವವ್ಯಾಪಕತ್ವಕ್ಕೂ ಸರ್ವಜ್ಞತ್ವಕ್ಕೂ ಭಂಗಬರುತ್ತದೆ. ಆತನು ಪಕ್ಷಪಾತದ ದೇವರಾಗುವನು. ಅಖಿಲಾಂಡಗಳಲ್ಲಿ ಕೇವಲ ಒಂದು ಸಣ್ಣ ಪ್ರದೇಶವಾದ ಪ್ಯಾಲಿಸ್ಟೈನ್ ದೇಶದ ನ್ಯಾಜರೆತ್ ಎಂಬ ಹಳ್ಳಿಯಲ್ಲಿ ಸರ್ವವ್ಯಾಪಿಯಾದ ಭಗವಂತನು ೩೩ ರೇ ವರ್ಷಗಳು ಬದುಕಿ ಸತ್ತು, ಹುಟ್ಟಿ, ಪರಲೋಕವನ್ನು ಏರಿದನೋ? ಇದನ್ನು ಬುದ್ಧಿಯುಳ್ಳ ವಾಚಕರೇ ಆಲೋಚಿಸಲಿ. ಮೂರು ದಿವಸಗಳು ಕ್ರಿಸ್ತನು ಗೋರಿಯಲ್ಲಿದ್ದಾಗ ಈ ಮಧ್ಯೆ ಎಲ್ಲಾ ಲೋಕಂಗಳೂ ಭಗವದ್ರಹಿತವಾಗಿದ್ದವೋ? ಅಥವಾ, ಬ್ರಹ್ಮಾಂಡವ್ಯಾಪಕತ್ವ ಕಾರ್ಯತ್ತರೆಯಂತ ಕವಿದಿತ್ತೋ? ಇದರಿಂದ ನಮಗೆ ತಿಳಿದುಬರುವದೇನೆಂದರೆ—ಕ್ರಿಸ್ತನು ಭಗವದವತಾರನಲ್ಲವು ಇದನ್ನು ಸ್ಥಾಪಿಸಲಿಕ್ಕೆ ಲೇಶಮಾತ್ರವಾದರೂ ಆಧಾರವಿಲ್ಲವು ಅದ್ದರಿಂದ ಆತನೂ ನಮ್ಮಂತೆ ಶುದ್ಧ ಬುದ್ಧಿವಂತನಾಗಿದ್ದನೇ ಹೊರತು ಅನ್ಯಥಾ ಇಲ್ಲವು. ಶಾಸ್ತ್ರದಿಂದ ಸ್ವಲ್ಪ ಆಲೋಚಿಸಿರಿ. ಪುಸ್ತಕಗಳ ಆಧಾರವು ಬಹು ಅನುಮಾನಕ್ಕೆ ಆಸ್ಪದವೆಂದು ಕಾರಣಾಂತರಗಳಿಂದ ಸೂಚಿಸಿ ಸ್ಥಾಪಿಸಿದ ಮೇಲೆ ಅಪೋಸ್ತಲರ ಬರವಣಿಗೆಯಲ್ಲಿ ನಂಬಿಕೆ ಇಡುವದು ಪ್ರಾಜ್ಞನಲ್ಲವು ಎಂಬುದು ಕೇವಲ ಆಭಾಸವಾಗಿದೆ

ಆತನ ಪುನರುತ್ಥಾನಕ್ಕೆ ನಿದರ್ಶನಗಳೇನು? ಬೀಜವೃಕ್ಷನ್ಯಾಯವು ನ್ಯಾಯವಲ್ಲವು ಇದು ಸ್ವಭಾವಜನ್ಯವಾದ ಪ್ರಕೃತಿಯ ಕಟ್ಟಳೆಯು. ಇದಕ್ಕೆ ನಿಷೇಧಗಳಿಲ್ಲವು, ಕ್ರಿಸ್ತನು ಎದ್ದು ಬಂದದ್ದು ಇದಕ್ಕೆ ಉದಾಹರಣವಲ್ಲವು, ಸ್ವಭಾವಕ್ಕೆ ವಿರುದ್ಧವ್ಯತಿರಿಕ್ತವು, ಪುನರುತ್ಥಾನವು ಅನನುಭವವು, ಜ್ಞಾನಕ್ಕೆ ತಿಮಿರವು, ಆತ್ಮಕ್ಕೆ ಕ್ಲೇಶವು, ಇದೊಂದನ್ನು ಬಿಟ್ಟದ್ದೇ ಆದರೆ ಕ್ರಿಸ್ತಮತವು ಶುಭ್ರವಾದೀತು.

ಬಾಹ್ಯಸ್ವರೂಪವಾದ ಭೂತ ಭೌತಿಕ ಪದಾರ್ಥಗಳಲ್ಲಿರುವ ನಿಯಮವನ್ನು ಕಂಡು, ಅದರಂತೆಯೇ ಆತ್ಮಸಂಬಂಧವಾದ ರಾಜ್ಯದಲ್ಲಿ ಆಗುವ ಸೂಕ್ಷ್ಮವಾದ ಸ್ಥಿತಿಗತಿಗಳನ್ನು ಹೋಲಿಸುವದರಿಂದ ಅದಿಗಳಾಂತರದಲ್ಲಿ ಎಷ್ಟು ಸಂಬಂಧ ಉಂಟೋ ನಿಮ್ಮ ಬೀಜ ವೃಕ್ಷನ್ಯಾಯದಲ್ಲಿ ಅಷ್ಟು ವ್ಯತ್ಯಾಸ ಉಂಟು. ನಾಸ್ತಿಕನಿಗೆ ಅತೀತನಾಗಿ ಅಪಾರ ಜ್ಞಾನಸ್ವರೂಪನಾದ ಪರಮೇಶ್ವರನಲ್ಲಿ ತುಚ್ಛಪ್ರಾಯವಾದ ಮನುಷ್ಯನಿಗಿರುವ ಭಾವಗಳನ್ನು ಕಲ್ಪಿಸುವಿರಿ. ಇದು ಯಾವ ನ್ಯಾಯವೋ ತಿಳಿಯದು.

ಅದಂತಿರಲಿ. "ನಾನು ಬರೆದ ವಾಕ್ಯಗಳಲ್ಲಿಯೇ ಸಿಕ್ಕಿಬಿದ್ದೆನು" ಎನ್ನುವಿರಿ. ಹೇಗೆ? "ಈ ನಾಗರೀಕತೆಯ ಕಾಲದಲ್ಲಿ ಕೃತ್ರಿಮವೇಷಧಾರಿಗಳಾದ ಎಷ್ಟು ಜನರನ್ನು ಅವತಾರಿಗಳೆಂದು ನೋಡಲಿಲ್ಲ" ಎಂದರೆ ನಾನೇ ಸಿಕ್ಕಿಬಿದ್ದೆನೋ? ಅಥವಾ, ತಾವೇ ರೂಢಿಯಲ್ಲಿರುವ ಕನ್ನಡ ಜ್ಞಾನವಿಲ್ಲದೆ ಅನರ್ಥವನ್ನು ಮಾಡಿಕೊಳ್ಳಿದಿರೋ? ನಿಮ್ಮ ಪತ್ರಿಕಾ ವಾಚಕರಿಗೇ ವೇದ್ಯವಾಗುತ್ತದೆ. ಹೆಚ್ಚು ಬರೆಯಲು ಅವಕಾಶವಿಲ್ಲವು. ಶುಕಿತರಾಗಬೇಡಿರಿ. ದಯಮಾಡಿ ನಿಮ್ಮ ನಿದರ್ಶನಗಳನ್ನು ವ್ಯಕ್ತಗೊಳಿಸಿರಿ. ನಿಮ್ಮ ಸತ್ಯವೇದವನ್ನು ಬಿಚ್ಚಿ ಚನ್ನಾಗಿ ಓದಿ ನೋಡಿರಿ. ಸತ್ಯವನ್ನು ಸತ್ಯವಾಗಿ ಸ್ಥಾಪಿಸಿರಿ ತತ್ವರಾಸ್ತ್ರಕ್ಕಿಂತಲೂ ಪ್ರಬಲವಾದ ಶಾಸ್ತ್ರವು ಮತ್ತಾವುದುಂಟು? ಇದನ್ನು ಒಪ್ಪಲಾರೆವು ಎನ್ನುವಿರೋ? ಅದು ಏಕೆ? ಕಾಲತಾರತಮ್ಯದಂತಿರುವ ಪ್ರಮಾಣಪುರಸ್ಸರವಾದ ನ್ಯಾಯವನ್ನು ಮಲಿನಾಶ್ರಿತವಿಲ್ಲದೆ ಅಂಗೀಕರಿಸಿರಿ ಅಂದಿಗಿಂತಲೂ ಈ ಕಾಲದಲ್ಲಿ ಎಷ್ಟು ನಾಸ್ತಿಕತ್ವವೂ ಅಧರ್ಮವೂ ಅನಾಚಾರವೂ ಪಾಪಿಷ್ಠತೆಯು ಹೆಚ್ಚಾಗಿ ವ್ಯಾಪಿಸುತ್ತದೆ ಇಂಥಾ ಕಾಲದಲ್ಲಿ ಏಕೆ ಕ್ರಿಸ್ತನು ಬರಕೂಡದು? ಕ್ರಿಸ್ತನ ವಾಕ್ಯವನ್ನು ನೀವು ಜರಿದು ನಿರಾಕರಿಸಿದರೆ ಆತನು ಹೇಳಿದ ವಾಕ್ಯಗಳನ್ನು ಚೆನ್ನಾಗಿ ಜ್ಞಾಪಿಸಿಕೊಳ್ಳಿ ಇದ್ದರೆ ನಿಮಗೆ ಶ್ರೇಯಸ್ಸಾಗುತ್ತಿತ್ತು. ಅದು ಏನೆಂದರೆ—"ನಾನು ನಿಮ್ಮ ಮತ್ತು ನನ್ನ ದೇವರ ಸಾನ್ನಿಧ್ಯವನ್ನೈದುವೆನು. ನಿಮ್ಮ ಮತ್ತು ನನ್ನ ತಂದೆಯ ಬಳಿ ಸೇರುವೆನು (ಯೋಹಾ. ೨೦: ೧೭).

ಬೆಂಗಳೂರು ಸಿಟಿ — ಎಂ. ನಾರಾಯಣಸಿಂಗ್.

ಉತ್ತರ.

ಕ್ರಿಸ್ತಸ್ವಾಮಿಯು ಪರಲೋಕಗತನಾಗಿ ೩೦೧-೪೦೦ ವರ್ಷಗಳಾದ ಮೇಲೆ ಹುಟ್ಟಿದ ವಿಕಲ್ಪಗಳ ವಿಷಯದಲ್ಲಿ ಚರ್ಚಿಸುವದು ಪ್ರಕೃತವಾಗಿ ತೋರುವದಿಲ್ಲ. ಅದಿರಲಿ ಕ್ರಿಸ್ತನ ದೈವತ್ವಕ್ಕೆ ಸಾಕ್ಷಿಯಾಗಿಯೂ ಕ್ರಿಸ್ತಮತಕ್ಕೆ ಆಧಾರವಾಗಿಯೂ ಇರುವ "ಕ್ರಿಸ್ತನಪುನರುತ್ಥಾನ" ವೆಂಬ ವಿಷಯವು ಬರೀ ಊಹೆಯಲ್ಲ. ಕ್ರಿಸ್ತಶಕ ೫೦—೬೦ ವರುಷಗಳೊಳಗಾಗಿ ಜೀವಿಸುತ್ತ ಕ್ರಿಸ್ತಮತ ಪ್ರಸಾರ ಕಾರ್ಯವನ್ನು ಬಹು ದೂರ ದೇಶಗಳಲ್ಲಿ ನಿರ್ವಹಿಸಿದ ಆ ಪ್ರೇಷಿತ ಶಿರೋಮಣಿಯಾದ ಪೌಲನೆಂಬವನು ಬರೆದ ಗ್ರಂಥದಿಂದಲೇ ಕ್ರಿಸ್ತನ ಮತಕ್ಕೆ ಆತನ ಪುನರುತ್ಥಾನವೇ ಆಧಾರವೆಂಬ ವಿಷಯವು ಸ್ಥಾಪಿತವಾಗುತ್ತದೆ ೧ ಕೊರಿಂಥ ೧೫. ೧೨—೧೯ ನ್ನು ಓದಿ ನೋಡಿ. ಇಷ್ಟೇಕೆ? ಕ್ರಿಸ್ತನು ಪುನರುತ್ಥಾನನಾದದ್ದು ನಿಸ್ಸಂದೇಹವಾಗಿ ಸ್ಥಾಪಿತವಾದ ನಿಜವಿಷಯವಾಗಿದೆ ಇದನ್ನು ನಿದರ್ಶನಪೂರ್ವಕವಾಗಿ ನಾವು ನಮ್ಮ ಈ ಪತ್ರಿಕಾ ಮುಖೇನ ಹಿಂದೆಯೇ (ಸಂಪುಟ ೧೫, ಸಂಚಿಕೆ ೩೦—೩೫, ೩೯ ಈ ಪತ್ರಿಕೆಗಳಲ್ಲಿ) ಸ್ಥಾಪಿಸಿದ್ದೇವೆ. ಅದೆಲ್ಲವನ್ನೂ ಇಲ್ಲಿ ಪುನಃ ಬರೆಯುವದು ಅಪ್ರಕೃತವಾಗಿದೆ. ಕ್ರಿಸ್ತ ಸ್ವಾಮಿಯು ಪುನರುತ್ಥಾನನಾದ ಕಾಲದಲ್ಲೇ ಆತನ ಮತವು ಹುಟ್ಟಿರಲಿಲ್ಲ. ಸ್ವಾಮಿಯು ಸತ್ತನಂತರ ಆತನ ಶಿಷ್ಯರು ಚದರಿಹೋದರು. ಅವರು ಆತನ ವಿಷಯದಲ್ಲಿ ತಮಗಿದ್ದ ನಂಬಿಕೆಯು ನಿರರ್ಥಕವಾಯಿತೆಂದು ತಿಳಿದಿದ್ದರು (ಲೂಕ ೨೪. ೨೦—೨೧) ಆದರೆ ಕ್ರಿಸ್ತನು ಪುನರುತ್ಥಾನನಾದನೆಂದು ಅವರಿಗೆ ನಿಸ್ಸಂದೇಹವಾಗಿ ತಿಳಿದ ಮೇಲ ಅವರು ಈ ವಿಷಯವನ್ನು ಸಕಲರಿಗೂ ತಿಳಿಯಪಡಿಸಲು ಉದ್ಯುಕ್ತರಾದರು. ಇದನ್ನು ನಂಬಿದವರೆಲ್ಲರೂ ಕ್ರಿಸ್ತನ ಶಿಷ್ಯವರ್ಗಕ್ಕೆ ಸೇರಿದವರಾದರು. ಇದೆಲ್ಲವನ್ನೂ ಸಾವಧಾನದಿಂದ ಆಲೋಚಿಸಲಾಗಿ ನಮಗೆ ತೋರುವದೇನೆಂದರೆ—ಕ್ರಿಸ್ತನು ಪುನರುತ್ಥಾನನಾದನೆಂಬುದು ಚರಿತ್ರಸಿದ್ಧವಾದ ವಿಷಯವೇ ಆಗಿದೆ. ಆ ವಿಷಯವು ಕ್ರಿಸ್ತಮತಕ್ಕೆ ಆಧಾರವೆಂಬುದು ಕೆಲವು ಶತಮಾನಗಳ ತರುವಾಯವೋ, ಕೆಲವು ವರ್ಷಗಳ ತರುವಾಯವೋ, ಜನರು ಕಲ್ಪಿಸಿದ ಊಹೆಯಲ್ಲ. ಅದು ಕ್ರಿಸ್ತನು ಪುನರುತ್ಥಾನನಾದ ದಿನದಲ್ಲೇ ಆತನನ್ನು ಕಣ್ಣಾರ ಕಂಡಂಥ, ಆತನ ಮಾತುಗಳನ್ನು ಕಿವಿಯಾರ ಕೇಳಿದಂಥ, ಆತನ ಜೊತೆಯಲ್ಲಿ ಕುಳಿತು ಊಟಮಾಡಿದಂಥ ಶಿಷ್ಯರ ಹೃದಯದಲ್ಲಿ ನಿಸ್ಸಂದೇಹವಾಗಿ ಹುಟ್ಟಿದ ನಂಬಿಕೆಯಾಗಿದೆ.

ಮೇಲೆ ಮುದ್ರಿಸಿರುವ ಆಕ್ಷೇಪಣೆಯನ್ನು ಆದ್ಯಂತವಾಗಿ ಓದಿದಲ್ಲಿ ದೇವರು ನರಾವತಾರಿಯಾಗಲಾರನೆಂದು ಆಕ್ಷೇಪಕರು ಮುನಃಪೂರ್ವಕವಾಗಿ ನಂಬಿರುವದರಿಂದಲೇ ಇಷ್ಟು ಆಕ್ಷೇಪಣೆಗೆ ಕಾರಣನಾಗಿದೆಯೆಂದು ನಾವು ತಿಳಿಯುತ್ತೇವೆ. ಇದರ ವಿಷಯದಲ್ಲಿ ನಾವು ದೀರ್ಘವಾಗಿ ಪ್ರಸ್ತಾಪಿಸಲವಕಾಶವಿಲ್ಲ. ಇಷ್ಟು ಮಾತ್ರ ನಾವು ಇಲ್ಲಿ ಹೇಳಬಲ್ಲೆವು. ಕ್ರಿಸ್ತನು ನರಾವತಾರಿಯಾದ ಭಗವಂತನೇ ಎಂಬುದು ಆತನ ಚರಿತ್ರೆಯಲ್ಲಿ ವ್ಯಕ್ತವಾಗುತ್ತದೆ. ಇದಕ್ಕೂ ಆತನ ಪುನರುತ್ಥಾನವೇ ನಿದರ್ಶನವಾಗಿದೆ. ಈ ಮಹಾ ನಿದರ್ಶನದ ಸಾಕ್ಷಿಯೊಂದು ಮಾತ್ರ ನಮಗೆ ಲಭಿಸದೆ ಹೋಗಿದ್ದರೆ ಆಕ್ಷೇಪಕರ ಲೇಖನದಲ್ಲಿ ತೋರುವ ಸಕಲ ಆಕ್ಷೇಪಣೆಗಳೂ ನಮ್ಮಲ್ಲಿಯೂ ಹುಟ್ಟುತ್ತಿದ್ದವು.

"ಈ ನಾಗರಿಕತೆಯ ..... ಎಷ್ಟು ಜನರನ್ನು ....." ಎಂದ ಸಂದರ್ಭದಲ್ಲಿ ನಿಜವಾಗಿ ದೇವಾಂಶ ಪುರುಷರೆಂದೆಣಿಸಿಕೊಳ್ಳುವ ಮಹಾ ಜನರ ವಿಷಯವಾಗಿ ಹೇಳಿದೆ ಎಂದು ನಾವು ಭಾವಿಸಿದೆವು. ಕೃತ್ರಿಮ ಜನಗಳನ್ನು ಕುರಿತು ಸೂಚಿಸಿದೆಯೆಂಬುವದು ನಮ್ಮ ತಿಳುವಳಿಕೆಗೆ ಬರಲಿಲ್ಲ. ನಾವು ಸರ್ವಜ್ಞರೆಂದು ಹೇಳಿಕೊಳ್ಳಲಿಲ್ಲವಷ್ಟೆ.

ಯೇಸು ಸ್ವಾಮಿಯು "ಅಂದಿಗಿಂತಲೂ ಈ ಕಾಲದಲ್ಲಿ ನಾಸ್ತಿಕ್ಯವೂ..... ಸಾವಿರ ಪಾಲು ಹೆಚ್ಚಾಗಿ ವ್ಯಾಪಿಸಿರುವ" ಇಂಥ ಕಾಲದಲ್ಲಿಯೇ ತನ್ನಾತ್ಮನ ಮುಖಾಂತರ ಪ್ರಸನ್ನನಾಗಿ ತನ್ನ ಭಕ್ತರನ್ನು ಸುಪ್ರೇರಣೆಯಿಂದ ತುಂಬಿಸಿ ಭೂಮಂಡಲದ ಸಮಸ್ತ ಭಾಗಗಳಿಗೂ ಕಳುಹಿಸಿ ಅಧರ್ಮವನ್ನು ನಾಶಪಡಿಸಿ ಸದ್ಧರ್ಮವನ್ನು ಸ್ಥಾಪಿಸುವ ಕಾರ್ಯದಲ್ಲಿ ಸದಾ ಉದ್ಯೋಗಿಯಾಗಿದ್ದಾನೆ ಇದು ಪ್ರತ್ಯಕ್ಷವೆನ್ನುವದಕ್ಕೆ ನಮ್ಮ ಈ ಪತ್ರಿಕೆಯೇ ಸಾಕ್ಷಿಯಾಗಿದೆ. "ನನ್ನ ಮತ್ತು ನಿಮ್ಮ ತಂದೆಯ ಬಳಿ ಸೇರುವೆನು" ಎಂದು ಹೇಳಿ ಸರ್ವಮಾನವರಿಗೆ ತಾನೊಬ್ಬ ಸಹೋದರನೆಂದು ಯಾವ ಮಾನವ ಕ್ರಿಸ್ತನು ಹೇಳಿದನೋ ಆತನೇ "ನಾನೂ ತಂದೆಯೂ ಒಂದೇ" ಎಂದು ಹೇಳಿದವನಲ್ಲದೆ ತನ್ನ ದೈವತ್ವವನ್ನು ಸಿದ್ಧಾಂತಪಡಿಸತಕ್ಕ ಅನೇಕ ಕಾರ್ಯಗಳನ್ನು ಮಾಡಿರುವುದರಿಂದ ಆತನ ಮಾತನ್ನು ನಾವು "ಚನ್ನಾಗಿ ಜ್ಞಾಪ್ತಿಯಲ್ಲಿ" ಟ್ಟಿರುವದರಿಂದಲೂ ನಮ್ಮ "ಸತ್ಯವೇದವನ್ನು ಬಿಚ್ಚಿ ಚನ್ನಾಗಿ ಓದಿನೋಡಿ" ರುವದರಿಂದಲೂ, "ಅಖಿಲಾಂಡಗಳಲ್ಲಿ ಕೇವಲ ಸಣ್ಣ ದೇಶದ ಒಂದು ಹಳ್ಳಿಯಲ್ಲಿ ಬೆಳೆದು, "೩೩ರೇ ವರ್ಷಗಳು ಬದುಕಿ," ಸತ್ತು, ಪುನರುತ್ಥಾನನಾಗಬೇಕೆಂದು ಸಂಕಲ್ಪಿಸಿದ ಭಗವಂತನ ಚಿತ್ತವನ್ನು ಭಂಗಿಸುವದಕ್ಕೆ ಧೈರ್ಯಗೊಳ್ಳದೆ, ಸಣ್ಣ ಹಳ್ಳಿಯಲ್ಲಿ ಹುಟ್ಟಿದರೂ ಈಗ ಜಗಜ್ಜ್ಯೋತಿಯಾಗಿ ಪ್ರಕಾಶಿಸುವ ಆ ಯೇಸುಸ್ವಾಮಿಯು ಪಾಪವೊಂದು ವಿನಾ ಉಳಿದ ವಿಷಯಗಳಲ್ಲಿ ನಿಜವಾಗಿ ಮನುಷ್ಯನಾಗಿದ್ದಾನೆಂತಲೂ ನಿಜವಾಗಿ ದೇವರಾಗಿದ್ದಾನೆಂತಲೂ ನಂಬಿ ಆ ವಿಷಯವನ್ನು ಸಕಲರಿಗೂ ತಿಳಿಯಪಡಿಸುತ್ತಿದ್ದೇವೆ ಕಿವಿಯುಳ್ಳವರು ಕೇಳಲಿ.

ಖಬರ್ದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬಂತಕ್ಕ ಖಬರ್ಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಖಬರ್ದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಖಬರನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಖಬರ್ಗಳನ್ನು ನಾವು ಖಬರ್ದಾರರಿಗೆ ವಾಪಸು ಕಳುಹಿಸಲಾರೆವು

ಖಬರ್ದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.— ಎಡಿ.

ಕರೆಸ್ಪಾಂಡೆನ್ಸ್.

ಚಾಮರಾಜನಗರದ ವಿಷಯಗಳು.

ಅಯ್ಯಾ,

ಈ ತಾಲ್ಲೂಕಿಗೆ ಸೇರಿದ ಉಮ್ಮತ್ತೂರು ಗ್ರಾಮದಲ್ಲಿ ಕಿರುಬವು ಊರೊಳಕ್ಕೆ ಬಂದು, ಗೋಕಾಯಿಗಳನ್ನು ಸಂಹರಿಸುತ್ತಿತ್ತು. ಹೀಗಿರಲು ಎಂದಿನಂತೆ ಕಿರುಬವು ಊರಿನ ಹತ್ತಿರ ಸುಮಾರು ಸಾಯಂಕಾಲ ೪ ಗಂಟೆ ಹೊತ್ತಿನಲ್ಲೇ ಬಂದಿರಲಾಗಿ ಊರಿನವರೆಲ್ಲ ಸೇರಿ ೧೯ನೇ ನಂಬರು ವೆಂಕಟ ಎಂಬ ಕಾನ್ಸ್ಟೆಬಲ್‌ಗೆ ತಿಳಿಸಲು ಆತನು ಹೆದರದೆ ಬಂದೂಕಿನಿಂದ ಆ ಕಿರುಬವನ್ನು ಸುಟ್ಟನು. ಸಂಕಟ ಆ ಕಿರುಬವು ನೋವನ್ನು ಸಹಿಸಲಾರದೆ ಕೆಳಕ್ಕೆ ಬಿದ್ದಿತು. ಆಗ ಅದು ಸತ್ತುಹೋಗಿದೆ ಎಂಬ ಭ್ರಾಂತಿಯಿಂದ ಹತ್ತಿರ ಹೋಗಿ ನೋಡಲು ಸದರಿ ವೆಂಕಟನ ತೋಳನ್ನು ಕಚ್ಚಿ ಪೂರಾ ಘಾಯಮಾಡಿ, ತಾನೂ ಸತ್ತುಹೋಯಿತು. ಈಗ ವೆಂಕಟನು ಚಿಕಿತ್ಸೆಯಲ್ಲಿರುತ್ತಾನೆ. ಇವನು ಪೋಲೀಸಿನವರಲ್ಲಿ ಧೈರ್ಯಸ್ಥನಾಗಿಯೂ ಧೃಢಕಾಯನಾಗಿಯೂ ಇರುತ್ತಾನಲ್ಲದೆ, ಸಾರ್ವಿಸು ಹೊಂದಿದವನಾಗಿರುತ್ತಾನೆ. ಈಗ ಅವರಿಗೆ ದೊರಕಬಹುದಾದ ಇನಾಮೂ ಅಲ್ಲದೆ, ಅವನು ಗುಣಹೊಂದುವವರಿಗೆ ಆಗತಕ್ಕ ಆರೋಗ್ಯವನ್ನು ಕೂಡ ಸರ್ಕಾರದವರು ಕೊಡುವುದರಿಂದ ಕೀರ್ತಿ ಹೊಂದ್ಯಾರೆಂದು ನಂಬಿರುತ್ತೇನೆ.

ಈ ತಾಲ್ಲೂಕಿಗೆ ಸೇರಿದ ಕಾತ್ಹಳ್ಳಿ ಗ್ರಾಮದಲ್ಲಿ ಇಬ್ಬರು ಹೊಲೆಯರು ರಾಗಿ ಕಳ್ಳತನ ಮಾಡುತ್ತಿದ್ದರೆಂತಲೂ ಮಾಲೀಕರು ಅವರನ್ನು ಹಿಡಿದು ಪೋಲೀಸಿಗೆ ಕೊಟ್ಟರೆಂತಲೂ ಈಗ ತನಿಖೆ ನಡೆಯುತ್ತಿರುವುದೆಂದಲೂ ತಿಳಿಯಬರುತ್ತೆ. ಹಾಳೆ ಬೆಳೆಗಳಿಲ್ಲದೆ ರೈತರು ಕಳುವುದಕ್ಕೆ ಮೊದಲು ಮಾಡುತ್ತಿರುವುದು ವಿಷಾದಕರವಾಗಿದೆ.

ಈ ಊರಿನಲ್ಲಿ ೫ ಜನ ಕಾನ್ಸ್ಟೆಬಲ್‌ಗಳು ಇದ್ದಾರೆ. ಟರ್ಮ್ ಬಹಳ ದೊಡ್ಡದಾದ್ದರಿಂದ ಈ ೫ ಜನರು ಬೀಟು ಮಾಡುವುದು ಬಹಳ ಅಸಮರ್ಪಕವಾಗಿದೆ. ಒಂದು ಕಡೆ ಬೀಟು ಮಾಡಿಕೊಂಡು

ಬಂದರೆ ಇನ್ನೊಂದು ಕಡೆ ನಡಿಯುವ ಅಮಲು ಗೊತ್ತಾಗುವದೇ ಇಲ್ಲ. ಆದ್ದರಿಂದ ಇನ್ನು ೭ ಜನರನ್ನು ಜಾಸ್ತಿಮಾಡಿದರೆ ಪ್ರಜಾನುಕೂಲವಾಗುವುದು.

೧೯—೫—೦೫. ಸಿ. ವಿ. ಆರ್.

ಗುಂಡ್ಲುಪೇಟೆ ತಾಲ್ಲೂಕ್ ಬೇಗೂರು ಸ್ಕೂಲ್ ವಿಚಾರ.

ಅಯ್ಯಾ,

ನಾನು ಬೇಗೂರು ಸ್ಕೂಲ್ ವಿಚಾರವಾಗಿ ಬರೆದಿದ್ದ ಬಾತ್ಮಿಯನ್ನು ಪ್ರಕಟಿಸಬಾರದೆಂದಲೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದ ಹುಡುಗರಿಗೆ ಸರ್ಟಿಫಿಕೇಟು ದೊರೆಯಲು ತೊಂದರೆಯಾಗಿರತಕ್ಕ ವಿಚಾರ ಇನ್ಸ್‌ಪೆಕ್ಟರಿಗೂ ಮೆ|| ಬಾಬಾ ಯವರಿಗೂ ಬರೆದುಕೊಂಡರೆ ಕಷ್ಟನಿವಾರಣೆಯಾಗುತ್ತೆಂದಲೂ ತಾವು ಪ್ರಕಟಿಸಿದ್ದುದ್ದು ಸರಿಯಷ್ಟೆ.

ಪುನಃ ಇದೇ ವಿಷಯವಾಗಿ ತಮ್ಮ ೨೫—೫—೦೫ನೇ ಮ ಕಾಂ ಪತ್ರಿಕೆಯಲ್ಲಿ ಮಾಸ್ಟರ್ ಸರ್ಟಿಫಿಕೇಟ್ ಕೊಡಲಿಲ್ಲವೆಂತ ದುರಭಿಪ್ರಾಯ ಪಡತಕ್ಕದ್ದು ಯೋಗ್ಯವಲ್ಲ; ಇವರು ಸ್ಕೂಲ್ ಅಭಿವೃದ್ಧಿಗೆ ತರುವುದರಲ್ಲಿ ತುಂಬಾ ಅಸಕ್ತರಾಗಿರುತ್ತಾರೆಂತ ತಾವು ಪ್ರಕಟಿಸಿರುತ್ತೀರಿ ಇವರು ಸ್ಕೂಲ್ ಅಭಿವೃದ್ಧಿಗೆ ತರುವುದರಲ್ಲಿ ಅಸಕ್ತರಲ್ಲವೆಂತ ನಾನು ಹೇಳುವುದಿಲ್ಲ. ಇವರಲ್ಲಿರತಕ್ಕ ದುರ್ಗುಣವನ್ನು ತಿದ್ದಿಕೊಂಡರೆ ವಿದ್ಯೋನ್ನತಿಕ್ಕೆ ಸಹಕಾರಿಯೆಂಬುವುದು ನನ್ನ ಮತವು.

ಈ ವಿಚಾರದಲ್ಲಿ ವಿಸಿಟಿಂಗ್ ಸೇರಿದ್ದ ಮಹನೀಯರು ಮುಖ್ಯಾಂಶವನ್ನೇ ಸಂಭಾಷಿಸದೆ ಇದ್ದದ್ದು ತುಂಬಾ ಶೋಚನೀಯವಾಗಿರುತ್ತೆ ಮುಖ್ಯ ಮಹೋದಯರೂ ಈ ವಿಷಯದಲ್ಲಿ ಪುನರಾಲೋಚಿಸಿ ತಮ್ಮ ಅವಗುಣವನ್ನು ಕ್ರಮಪಡಿಸಿಕೊಂಡು ಸತ್ಕೀರ್ತಿ ಹೊಂದುವರೆಂದು ಹಾರೈಸುತ್ತೇನೆ.

೨೭—೫—೦೫. ಹಿತಚಿಂತಕ.

ಹರಿಹರದ ಪೋಸ್ಟಿನ ಅಕ್ರಮ

ಅಯ್ಯಾ,

ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ತಮ್ಮ ವಾಗಸ್ಥ ತಮ್ಮ ಚಂದಾದಾರ ವಿಶ್ವಬ್ರಾಹ್ಮಣ ವೀರಾಚಾರಿಯು ಪೋಸ್ಟ್ ಆಫೀಸಿನವರಿಂದ ಉಂಟಾದ ತೊಂದರೆಯು ಏನೆಂದರೆ—ಈಗ ೨—೩ ವಾರದ ಪೇಪರ್ ಬಂದಿಲ್ಲ. ಒಳಗಡೆ ತಮ್ಮ ಪೇಪರಿಗೆ ತೊಂದರೆ ವಿಷಯ ಪೋಸ್ಟಿನವರಮೇಲೆ ಬಾತ್ಮಿ ಕೊಟ್ಟಿದ್ದನಷ್ಟೆ ತಾವು ತಮ್ಮ ಪತ್ರಿಕಾದಲ್ಲಿ ಪ್ರಕಟಿಸಿ, ಸರ್ವ ಈ ಮೈಸೂರ್ ದೇಶದ ಎಲ್ಲಗಳಲ್ಲಿ ಇರಲುಳ್ಳ ಪತ್ರಿಕಾ ಚಂದಾದಾರರಿಗೆ ಮತ್ತು ಅಕ್ರಮವಾಗಿ ನಡೆಯುವ ಪೋಸ್ಟಿನವರಿಗೂ ಸಹ ತಿಳಿಯುವ ಹಾಗೆ ಪ್ರಕಟಿಸಿದರಷ್ಟೆ ಆದಾಗ್ಯೂ ಪೋಸ್ಟ್ ಇಲಾಖಾದವರು ತಮ್ಮ ಪ್ರಕಟನ ಪತ್ರಿಕಾಕ್ಕೆ ಅಂಜದೆ, ತಮ್ಮ ಉದ್ಯೋಗ ಅಂದರೆ ಸಾಂಪ್ರದಾಯವೇರದೇನೇ ನಡಿಸುತ್ತಾರೆ. ಈ ಅಕ್ರಮಗಳನ್ನು ನಿಲ್ಲಿಸುವುದಕ್ಕೆ ತಮ್ಮ ಪತ್ರಿಕೆಯಿಂದ ಆಗದೆ ಹೋಗಿದೆ ಈ ವಿಷಯವನ್ನು ಕುರಿತು ಏನುಮಾಡಬೇಕು ದೇವರೇ ಎಂತ ಬೇಡಿಕೊಳ್ಳುತ್ತೇವೆ ನಮಗೆ ಪೇಪರುಗಳು ಒಡದು ಬಂದವುಗಳ ಪೈಕಿ ವಿರಹಸ್ಯ ಪತ್ರ ಪರಾ ತೆಗಿಸಿ ಪೋಸ್ಟಿನವರಿಂದ ಪಡೆದಿರುತ್ತೇನೆ ಈ ಬಗ್ಗೆ ತಾವು ಪ್ರಕಟನೆ ಮಾಡಿದ್ದರಿಂದ ಪೋಸ್ಟ್ ಇಲಾಖಾದಿಂದ ವಿಚಾರಣೆ ಜರುಗಲಿಲ್ಲ. ಪೇಪರುಗಳು ನಮಗೆ ಸರಿಯಾಗಿ ತಲುಪುವ ಹಾಗೆ ಮಾಡುವುದಲ್ಲದೆ ವಿಚಾರಣೆ ಸಹ ಮಾಡಿಸುವ ಹಾಗೆ ಮಾಡುತ್ತಾರೆಂತ ನಂಬಿರುತ್ತೇನೆ ತಮ್ಮ ಪೇಪರುಗಳನ್ನು ಫಲಾರ ಮಾಡಿದ್ದಾರೆ. ವಾರವಾರಕ್ಕೆ ಸರಿಯಾಗಿ ತಂದಾಕೊಡದೆ ತಾತ್ಸಾರಮಾಡಿ ಪೇಪರುಗಳನ್ನು ಗಲ್ಲಿಮಾಡಿ ಚಂದಾದಾರರುಗಳನ್ನು ಹೀಗೆ ಅನಾನುಕೂಲ ಪಡಿಸದಂತೆ ಕ್ರಮ ಪಡಿಸಬೇಕಾಗಿದೆ.

೨೩—೫—೦೫. ವಿಶ್ವಬ್ರಾಹ್ಮಣ ವೀರಾಚಾರಿ.

ಅರಸೀಕೆರೆಯ ಸಮಾಚಾರಗಳು.

ಅಯ್ಯಾ,

ಅರಸೀಕೆರೆ ತಾಲ್ಲೂಕಿನ ಸುತ್ತಮುತ್ತಲು ೩—೪ ಹದ ಒಳ್ಳೆ ಮಳೆ ಆಯಿತು. ರೈತರೆಲ್ಲ ಕೃಷಿವಾಣಿಜ್ಯಗಳಿಗೆ ಅನುಕೂಲವಾಗಿದೆ ಎಂದು ಸಂತೋಷವಾಗಿದ್ದಾರೆ.

ಈ ಊರಿನಲ್ಲಿ ಪ್ರತಿ ಶುಕ್ರವಾರವೂ ಸಂತೆ ಆಗುತ್ತೆ ಈ ಸಂತೆಗೆ ಬರತಕ್ಕ ಪದಾರ್ಥಗಳ ಪೈಕಿ ಜವಳಿ, ವಿಳ್ಳೇದೆಲೆ, ಅಡಿಕೆ, ಇವುಗಳಿಗೆ ಮಾತ್ರ ಸರ್ಕಾರದಿಂದ ಸುಂಕ ನೇಮಕವಾಗಿರುತ್ತೆ ಈ ಆಕ್ಟ್ರಾಯ ಮುಚ್ಚಲ್ಲಿ ಈ ಸುಂಕವನ್ನೆಲ್ಲಾ ಅತ ವಸೂಲ್ ಮಾಡುವಂತೆ ನೇಮಕವಾಗಿರುತ್ತೆ. ಇವರು ಪ್ರಥಮ ಬಂದಾಗ್ಯೆ ನಿಸ್ಪೃಹರಾಗಿ ವಸೂಲ್ ಮಾಡುತ್ತಿದ್ದರು. ಈಚೆಗೆ ಸ್ವಪ್ರಯೋಜನಾಪೇಕ್ಷೆಯುಳ್ಳವರಾಗಿರುವಂತೆ ತೋರುವದರಿಂದ ವ್ಯಾಪಾರಸ್ಥರಿಗೂ ತುಂಬಾ ಸಂಕಟವಾಗಿರುತ್ತೆ. ಮುನಿಸಿಪಲ್ ಮೆಂಬರುಗಳು ಆಗಾಗ್ಯೆ ತನಿಖೆಮಾಡುತ್ತಾ ಇದ್ದರು. ಈಚೆಗೆ ಇವರುಗಳ ನಿಗಾ ತಪ್ಪಿರುವ ಹಾಗೆ ಕಂಡು ಬರುತ್ತೆ. ಅಲ್ಲದೆ ಈ ಸಂತೆಯಲ್ಲಿ ಭಿಕ್ಷುಕರು ಮೊಂಡರು ಅಂಗಹೀನರು ಮುಂತಾದವರು ತಮ್ಮ ಜೀವನೋಪಾಯಕ್ಕಾಗಿ ಪಸಿಕೆ ಎತ್ತುವ ಪದ್ಧತಿಯುಂಟು. ಇವರೊಂದಿಗೆ ಸರ್ಕಾರಿ ಸಣ್ಣ ನೌಕರರು ಕೂಡ ಪಸಿಕೆ ಎತ್ತುತ್ತಾರೆ. ಕೊಡುವದಿಲ್ಲವೆಂದು ಹೇಳಿದರೆ ದುಬಾಂನಿಂದ ಕೆಳ್ಳೆ ಹೊಡೆಯುತ್ತಾರೆ ಇವುಗಳಿಗೆಲ್ಲಾ ನಮ್ಮ ಅಮಲ್ದಾರ್‍ರವರು ನಿಗಾ ಕೊಡುವದಾದರೆ ಇಂಥಾ ಅನರ್ಥಗಳು ಯಾವವೂ ಸಂಭವಿಸಲಾರವು.

ಇಲ್ಲಿಗೆ ಅನೇಕ ಸ್ಥಳಗಳಿಂದ ಪ್ರಯಾಣಿಕರು ಬಂದು ಇಳಿಯುವ ಪದ್ಧತಿ ಉಂಟು. ಇಲ್ಲಿನ ರೈಲ್ವೆ ಪೋಲೀಸಿನವರು ಈ ಪ್ರಯಾಣಿಕರಿಂದ ಅಂಡ ವಸೂಲ್ ಮಾಡುವದು, ಬೆದರಿಸುವದು ಮತ್ತು ಹೆಂಗಸರು ಬಂದರೆ ಬೆದರಿಸುವದು, ಇನೇ ಮೊದಲಾದ ಕೆಟ್ಟ ಕೃತ್ಯಗಳನ್ನು ನಡಿಸುತ್ತಾರಂತೆ ಅಲ್ಲದೆ ಈ ಟೌನ್ ನಿವಾಸಿಯಾದ ಒಬ್ಬ ಮೊಡ್ಲಿಯಾರ್‍ರನ್ನು ಯಾವದೋ ಒಂದು ನೆವದಿಂದ ರೈಲ್ವೆ ಪೋಲೀಸಿನವರು ಹೊಡೆದ ಪೆಟ್ಟಿಗೆ ತಲೆ ಒಡದು ಪೂರಾ ಗಾಯವಾಗಿ ಮೂರ್ಛಿತನಾದನು ಆತನಂತರ ವಾರಸ್ದಾರರು ಆಸ್ಪತ್ರೆಗೆ ತೆಗದುಕೊಂಡು ಹೋಗಿ ಡಾಕ್ಟರವರಲ್ಲಿ ತೋರಿಸುವಲ್ಲಿ ಸರಟಿಫಿಕೇಟ್ ಕೊಡುತ್ತೇನೆಂತ ಹೇಳಿ, ಗಾಯಪಟ್ಟವನನ್ನು ಉಪಚರಿಸಿದರು ಚಿಕಿತ್ಸೆ ಹೊಂದಿ ಚೇತರಿಸಿಕೊಂಡು ಟೌನ್ ಪೋಲೀಸಿಗೆ ಅರ್ಜಿ ಕೊಡಲು ರೈಲ್ವೆ ಪೋಲೀಸಿನವರು ಇಲ್ಲಿನವರು ಏಕವಾಗಿ ಅರ್ಜಿ ಎಲ್ಲಿ ಬಚ್ಚಿಟ್ಟರೋ ಗೊತ್ತೇ ಇಲ್ಲ. ಮತ್ತೊಬ್ಬ ಗರ್ಭಿಣಿಯಾದ ಹೆಂಗಸನ್ನು ಹೊಡೆದು ಬಡಿದು, ಪೂರಾ ಹಿಂಸೆಪಡಿಸಿದ್ದರಿಂದ ಅವಳು ಮಾರಣೆ ದಿವಸ ಪ್ರಸವಿಸಿ ಮೃತಪಟ್ಟು ಹೋದಳು.

ಈ ಟೌನಿನಲ್ಲಿ ರೀಡಿಂಗ್ ರೂಂ ಹೊಸದಾಗಿ ಕಟ್ಟುವ ಬಗ್ಯೆ ಮೆಂಬರುಗಳು ಏಕಪಟ್ಟು ಕಂಟ್ರಾಕ್ಟು ಕೊಟ್ಟು ಕೆಲಸಕ್ಕೆ ಪ್ರಾರಂಭವಾಗಿರುತ್ತೆ ಇದಕ್ಕೆಲ್ಲಾ ಮಾ|| ಸಬ್ ರಿಜಿಸ್ಟ್ರಾರ್ ಲಕ್ಷ್ಮೀಕಾಂತಯ್ಯಂಗಾರ್‍ರೂ, ಕಂಟ್ರಾಕ್ಟರ್ ಮೆ|| ಚೌಡಯ್ಯನವರೂ, ಮೆ|| ವೆಂಕಟಸುಬ್ಬಯ್ಯನವರೂ ಪ್ರಮುಖ್ಯಸ್ಥರಾಗಿ ನಿರ್ವಹಿಸಿರುತ್ತಾರೆ.

೨೦—೫—೦೫ ಪ್ರಜಾ ಹಿತಚಿಂತಕ

ವೈದ್ಯ ವಿದ್ಯಾ ಪ್ರೋತ್ಸಾಹ

ಅಯ್ಯಾ,

“ಪ್ರತ್ಯಕ್ಷಂ ಜ್ಯೋತಿಷಂ ವೈದ್ಯಂ” ಎಂದು ವೈದ್ಯ ವಿದ್ಯೆಯು ಪ್ರತ್ಯಕ್ಷ ವಿದ್ಯೆಯೆಂದು ಆರ್ಯರು ಅಭಿಪ್ರಾಯಪಡುತ್ತಾರೆ ಇಂಥ ವಿದ್ಯೆಗೆ ಧನ್ವಂತರಿಯೆಂಬ ಮಹಾ ಪುರುಷನೇ ಮೂಲಪುರುಷನೆಂದು ಒಪ್ಪಿಕೊಳ್ಳುತ್ತಾರೆ. ಈ ವಿದ್ಯೆಯು ನಮ್ಮ ಆರ್ಯಭೂಮಿಯಲ್ಲಿ ವಿಶೇಷವಾಗಿ ಮೂಲಿಕಾಪ್ರಯೋಗಪೂರ್ವಕವಾಗಿ ಇರುವುದಲ್ಲದೆ ಆಂಗ್ಲೇಯ ವೈದ್ಯ ವಿದ್ಯೆಯಂತೆ ಇತರ ವಸ್ತುವನ್ನು ವಿಶೇಷವಾಗಿ ಒಳಗೊಂಡಿಲ್ಲ. ಆದರೂ ನಮ್ಮ ದೇಶದಲ್ಲಿ ಈ ವಿದ್ಯೆಯೂ ಆರ್ಷೇಯವಾಗಿ ಪ್ರಚಾರವಾಗಿ ಹೋಗುತ್ತಾ ಬಂದು, ಈಗ ಆಂಗ್ಲೇಯ ವೈದ್ಯ ವಿದ್ಯಾಕ್ರಮವನು ಅನುಸರಿಸಿ ನಡೆಯುವ ವಿಷಯದಲ್ಲಿ ಇದರ ಪ್ರಚಾರವು ಪ್ರಜಾಹಿತ ಪದ್ಧತಿಯಲ್ಲಿ ಪ್ರವರ್ತಿಸಿ, ಮತ್ತೂ ವಿಶೇಷತೆಯನ್ನು ಹೊಂದಬಹುದು ತಾರತಮ್ಯಜ್ಞರಾದ ಪ್ರಜೆಗಳ ಮತ್ತು ಅರಸರ ಕಾರ್ಯವು ಇಂಥ ವಿದ್ಯಾಜ್ಞಾನಿಗಳಾದ ವೈದ್ಯರ ಸಂಪ್ರದಾಯವನ್ನು ನಿರಾತಂಕವಾಗಿ ಪೋಷಿಸುವದಕ್ಕೆ ಬೇಕಾಗಿರುವದು

ಇದರ ಕಡೆ [illegible] ವೇ|| ಜಯರಾವು ಪಂಡಿತರು ವೈದ್ಯ ವಿದ್ಯೆಯಲ್ಲಿ [illegible] ಲೇಟ್ ಕೃಷ್ಣರಾಜ ಒಡೆಯರವರು ತಮ್ಮ ಖಾಸಾ ವೈದ್ಯಮಂಡಲಿಯಲ್ಲಿ ಒಬ್ಬರನ್ನಾಗಿ ಪರಿಗಣಿಸಿ, ತದಾರಭ್ಯ ಸನ್ನಿಧಿಯಿಂದ ಇವರಿಗೆ ಪ್ರತಿ ಮಾಸಕ್ಕೂ ವೇತನವು ಸಲ್ಲುವಂತೆ ಅಪ್ಪಣೆಯನ್ನು ದಯಪಾಲಿಸಿದರು ಅದನ್ನು ಲೇಟ್ ಶ್ರೀ ಚಾಮರಾಜ ಒಡೆಯರವರೂ ನಡೆಸಿಕೊಂಡು ಬಂದರು. ಈಗ ನಮ್ಮನ್ನಾಳುವ ಶ್ರೀ ಕೃಷ್ಣರಾಜ ಒಡೆಯರವರೂ ಯಥಾಪ್ರಕಾರವಾಗಿ ಪೋಷಿಸುತ್ತಾ ಬರುತ್ತಾರೆ

ಇವರು ವೈದ್ಯಶಾಲೆಯನಿಟ್ಟು ಪ್ರಜಾರೋಗ್ಯಕಾರರಾಗಬೇಕೆಂದು ಗತಿಸಿದ ಮಹಾರಾಜರುಗಳಂತೆ ಈಗ ಆಳುತ್ತಿರುವ ನಮ್ಮ ಶ್ರೀಮನ್ಮಹಾರಾಜರವರೂ ಇವರಿಗೆ ಸೀತಾವಿಲಾಸ ಧರ್ಮಶಾಲೆಯಲ್ಲಿ ಒಂದು ಸ್ಥಳವನ್ನು ಉಚಿತವಾಗಿ ಬಿಡಿಸಿಕೊಟ್ಟು ವೈದ್ಯಶಾಲೆಯನ್ನು ಇಡುವುದಕ್ಕೆ ಸಹಾಯ ಮಾಡಿದಂತೆ ಈಗ ಆ ಸ್ಥಳದಲ್ಲಿ “ಆರೋಗ್ಯ ಭಾಗ್ಯ ವೈದ್ಯಶಾಲೆ” ಎಂಬ ನಾಮನಿರ್ದೇಶವಾಗಿ ಅದರಲ್ಲಿ ಮೇ|| ಜಯರಾವು ಪಂಡಿತರೇ ಇದ್ದುಕೊಂಡು, ತಮ್ಮ ವಿದ್ಯೆಯಿಂದ ಜನರಿಗೆ ಆರೋಗ್ಯಭಾಗ್ಯವನ್ನು ಕೊಡುತ್ತಾ ಇರುವರು.

ಇವರು ವೃದ್ಧರಾಗಿಯೂ ನಾಡಿ ಪರೀಕ್ಷೆಯಲ್ಲಿ ಹೆಚ್ಚು ಮಟ್ಟಿಗೆ ಅನುಭವಶಾಲಿಗಳಾಗಿಯೂ ಇರುವದಲ್ಲದೆ ಇವರಲ್ಲಿರುವ ಶಾಂತಗುಣವು ಸ್ತೋತ್ರಾರ್ಹವಾಗಿದೆ ಇದಕ್ಕೆ ಇವರಲ್ಲಿರುವ ಅದ್ವೈತ ವಿದ್ಯಾಪೇಕ್ಷೆಯೇ ಕಾರಣವೆಂದು ಇವರ ಸ್ನೇಹಿತರಿಂದ ತಿಳಿಯಬರುತ್ತದೆ ಇವರು ತಮ್ಮ ವೈದ್ಯಶಾಲೆಯಲ್ಲಿ ಇರುವ ಕಾಲದಲ್ಲಿ ಯಾವ ವಿಧವಾದ ಜನರು ಬಂದರೂ ಧಾತು ಪರೀಕ್ಷೆಯಿಂದಲೂ ಅವರ ಶರೀರಸ್ಥಿತಿಯನ್ನೆಲ್ಲಾ ಚೆನ್ನಾಗಿ ವಿಚಾರಿಸುವುದರಿಂದಲೂ ಸಂಪೂರ್ಣವಾಗಿ ತಿಳಿದು ಉಪಯುಕ್ತವಾದ ಔಷಧವನ್ನು ಉಪಯೋಗಿಸುವುದರಿಂದ ರೋಗಪರಿಹಾರವನ್ನು ಹೊಂದಿದ ಜನರ ಪ್ರೀತಿಗೆ ಇವರು ಪಾತ್ರರಾಗಿದ್ದಾರೆ.

ಇಂಥವರ ವೈದ್ಯಶಾಲೆಗೆ ದೂರಸ್ಥರಾಗಿರುವ ಬೀದಿಗಳಲ್ಲಿ ವಾಸಮಾಡಿಕೊಂಡಿರುವ ಹೆಂಗಸರು, ಮಕ್ಕಳು ಮೊದಲಾದವರು ದಿನದಿನವೂ ಆ ಸ್ಥಳಕ್ಕೆ ಹೋಗಿಬರುವುದು ಪ್ರಯಾಸವಲ್ಲದೆ ಇವರು ಕ್ಲುಪ್ತಕಾಲದಂತೆ ವೈದ್ಯಶಾಲೆಯನ್ನು ಬಿಟ್ಟು ಮನೆಗೆ ಬಂದಕಾಲದಲ್ಲಿ ಅಪೇಕ್ಷಿಸುವ ಜನರ ಮನೆಗಳಿಗೆಲ್ಲಾ ಹೋಗಿ ಬರುವುದಕ್ಕೆ ಆರಂಭಿಸಿದರೆ ಇವರು ವಯೋಗತರು ಮತ್ತು ಬಿಸಿಲು ಮಳೆಗಳ ತೊಂದರೆಯೊಂದು, ಇತ್ಯಾದಿ ಕಾರಣಗಳಿಂದ ರೋಗಿ ವೈದ್ಯ ಇವರೀರ್ವರ ಸಾನ್ನಿಧ್ಯಕ್ಕೆ ಅವಕಾಶ ಸಂದೇಹವಾಗಿರುವುದನ್ನು ತಿಳಿದು, ಈ ಕೊರತೆಯಾದ ಲೋಪವನ್ನು ತಪ್ಪಿಸಿ ಪ್ರಜಾ ಹಿತವನ್ನು ಬಯಸಿದಂಥ ಮೈಸೂರು ನಿವಾಸಿಗಳಾದ ಹೆಸರುಗಾಸ್ಥ ಸಾಹುಕಾರ್ ಮೆ|| ಚಂಡಪ್ಪನವರು ಒಂದು ಕುದುರೆಯನ್ನೂ ಪಲಾಟ್ ಕಂಟ್ರಾಕ್ಟರಾದ ಮೆ|| ಸಿದ್ದಪ್ಪನವರು ಒಂದು ಪೆಟ್ಟಿಗೆಗಾಡಿಯನ್ನೂ ಈ ಜಯರಾಯ ಪಂಡಿತರ ಉಪಯೋಗಾರ್ಥವಾಗಿ ಕೊಡುಮಾಡ ಕೊಟ್ಟಿರುತ್ತಾರೆ ಇವರ ಪರೋಪಕಾರ ಬುದ್ಧಿಯು ಶ್ಲಾಘ್ಯವಾಗಿದೆ. ಈ ಪಂಡಿತರೇನೋ ಪರೋಪಕಾರ ವಿದ್ಯೆಯಿಂದ ಅಲ್ಲ ಪರೋಪಕಾರ ಬುದ್ಧಿಯಿಂದಲೂ [illegible] ವರಾದರೂ ಅಪಾರವಯಸ್ಸು ಅವರ ವಿಶೇಷ [illegible] ತಡೆಯಾದುದು ಈ ಇಬ್ಬರು ಮಹನೀಯರೂ ತಮ್ಮ ಅಮೂಲ್ಯವಾದ ಯೋಗ್ಯತೆಯಿಂದ ಮಾಡಿದ ಸಹಾಯವು ಆ ತಡೆಯನ್ನು ತಪ್ಪಿಸಿ, ಜನಾನುಕೂಲವನ್ನುಂಟುಮಾಡಿತೆಂಬ ವಿಷಯದಲ್ಲಿ ಅನುಮಾನವಿಲ್ಲ. ಇವರಂತೆ ಸರ್ವರೂ ಸರ್ವವಿಧದಲ್ಲಿಯೂ ಕಾಲೋಚಿತವಾದ ಪರೋಪಕಾರದಲ್ಲಿ ಸಂಬಂಧಿಸಿದ ಸದ್ಯಶವನ್ನು ಸಂಪಾದಿಸುವರಾಗಲಿ

ಯಥಾರ್ಥವಾದಿ.

ಮಲೆನಾಡಿನ ದುಃಖದ ವಾರ್ತೆ.

ಅಯ್ಯಾ,

ಈಗ ಸುಮಾರು ಒಂದು ತಿಂಗಳಿಂದ ಪ್ರತಿ ಮನೆಯಲ್ಲಿಯೂ ನಾಲ್ಕೈದು ಜನರುಗಳಿಗೆ ಕಮ್ಮಿ ಇಲ್ಲದೆ ಪ್ರತಿ ದಿನಗಳ ಮೊಣಕಾಲು ಕೆಳಗೆ ಒಂದು ತರಹ ಅಂಟುಜಾಡ್ಯ ಪ್ರಾರಂಭವಾಗಿ ಎರಡು ಕಾಲುಗಳಲ್ಲೂ ಐದಾರು ಹುಣ್ಣುಗಳು ಎದ್ದು ಮಲಮೂತ್ರ ವಿಸರ್ಜನೆಗೆ ಕೂಡ ಹೊರಗೆ ಚಲಿಸುವದಕ್ಕೆ ಆಗದೆ ತಮ್ಮ ತಮ್ಮ ಗೃಹಗಳಲ್ಲಿಯೇ ನರಳುತ್ತಾ ಅದರ ದುರ್ವಾಸನೆ ಸಹಿಸಲಾರದೆ [illegible] ಮಾಡಿದ್ದನ್ನು ಕೂಡಾ ಪುನಃ ವಾಂತಿಮಾಡುತ್ತಾ ಬಲಹೀನರಾಗಿರುವದನ್ನು ನೋಡಿದರೆ ಯಾರಿಗೆತಾನೇ ವ್ಯಸನ ಪ್ರಾಪ್ತವಾಗಲ್ಲದು? ಈ ರೋಗವನ್ನು ನಾನು ನಿಜವಾಗಿ ನೋಡುವಾಗಲೇ ದಿನದಿನೇ ವೃದ್ಧಿ ಹೊಂದುತ್ತಾ ಪ್ಲೇಗ್ ರೋಗದೋಪಾದಿಯಲ್ಲಿ ಊರೆಲ್ಲಾ ವ್ಯಾಪಿಸುತ್ತಾ ಹಲವು ಜನಗಳಿಗೆ ಪ್ರಾಣ ಸಂಕಟವನ್ನುಂಟು ಮಾಡಿದೆ ಇಂಥಾಸ್ಥಳದಲ್ಲಿ ದಯಾಳು ಪ್ರಭುಗಳಾದ ನಮ್ಮ ಸರ್ಕಾರದವರು ಬಹು ಬೇಗನೆ ಬಂದು ಪಾಮರ ಮಕ್ಕಳುಗಳನ್ನು ತಕ್ಕ ಔಷಧೋಪಚಾರಗಳಿಂದ ಕಾಪಾಡಿ ಮೇಲ್ಕಂಡ ರೋಗವನ್ನು ಹೋಗಲಾಡಿಸಿ [illegible] ವಿಶೇಷವಾಗಿ ಸ್ಯಾನಿಟರಿ ಕಮಿಷನರ್ ಸಾಹೇಬರವರ ಜನಾಬಿಗೂ ಪೋಲೀಸ್ ಸ್ಟೇಷನ್‍ಗಳಿಗೆ ಸಹ ಅರ್ಜಿ ಬರೆಕೊಂಡರೂ ಈ ವರೆಗೂ ನಮ್ಮಗಳ ದುಃಖವನ್ನು ಹೋಗಲಾಡಿಸುವ ಪ್ರಯತ್ನ ಯಾರೂ ಕಂಡುಬಂದಿಲ್ಲ ಬಡ ರೈತರುಗಳು ಈ ಕಾಲದಲ್ಲಿ ತಮ್ಮ ಹೊಲ ಗದ್ದೆಗಳಿಗೆ ಗೊಬ್ಬರ ಬೀಜವನ್ನೇ ಹಾಕದೆ ಹೋದಲ್ಲಿ ಮುಂದಿನ ಗಂಜಿಗೆ ಅವಕಾಶವಿಲ್ಲವಾದಕಾರಣ ನಮ್ಮ ಕರುಣಾಳು ಸರ್ಕಾರದವರು ಇಂಥಾ ಕಷ್ಟಕಾಲದಲ್ಲಿ ನಮ್ಮಗಳ ಜೀವನವನ್ನು ಅತಿ ಜಾಗ್ರತೆಯಿಂದ ಕಾಪಾಡ ಬೇಕಾಗಿ ಬೇಡುತ್ತೇನೆ

೧೯—೫—೦೫ ಕೆ ಟಿ ಸಿದ್ದಪ್ಪಗೌಡ

ತೀರ್ಥಹಳ್ಳಿ ತಾಲ್ಲೂಕು ಮೋಗರವಳ್ಳಿ.

ಅಯ್ಯಾ,

ಈಗ ನಾಲ್ಕಾರು ದಿವಸದ ಬಾಗಾಯತು ಹಿಡಿದ ಜಡಿ ಮಳೆಯ ದೆಸೆಯಿಂದ ರೈತರು ಗದ್ದೆಗೆ ಬೀಜ ಹಾಕಲಿಕ್ಕೆ ಆಗದೆ [illegible] ಎಂದು ಕಂಗಾಲಾಗಿದ್ದರು ದೇವರ ದಯದಿಂದ ಈಗ ಒಂದೆರಡು ದಿವಸದ ಬಾಗಾಯತು ಸ್ವಲ್ಪ ನಿರಾಘಾತವಾಗಿದೆ ಮೋಗರವಳ್ಳಿ ಪ್ರಾಂತ್ಯದಲ್ಲೂ ಇದೇ ರೀತಿಯಾಗಿದೆ ಈ ಊರ ರೈತರೆಲ್ಲಾ ಅವಸರದಿಂದ ಗದ್ದೆಗಳಿಗೆ ಬೀಜ ಹಾಕುತ್ತಾ ಇದ್ದಾರೆ

ಈ ಕಾಲದಲ್ಲಿ ಇದೊಂದು ವೇಚಾಟವನ್ನು ಯಾರಿಗೆ ನೋಡು [illegible] ಒಂದು ಮನೆಯಲ್ಲಿ ಹತ್ತು ಜನರಿದ್ದರೆ ಎರಡು ಜನರು ಚೆನ್ನಾಗಿರುವದೇ ದುರ್ಲಭವಾಗಿದೆ ಉಳಿದ ಎಂಟು ಜನ ಮೊಣಕಾಲು ಕೆಳಗೆ ಎದ್ದಿರುವ ಕುಂಟನ ಹುಣ್ಣೆಂಬ ರೋಗದಿಂದ ನರಳುತ್ತಾ ಬಿದ್ದುಕೊಂಡಿದ್ದಾರೆ ಇದೇ ರೀತಿ ಪ್ರತಿಯೊಂದು ಮನೆಯವರಿಗೂ ಆಗಿರುತ್ತೆ ಇದನ್ನು ತೀರ್ಥಹಳ್ಳಿ ಆಸ್ಪತ್ರೆ ಡಾಕ್ಟರವರು ಚೆನ್ನಾಗಿ ಪರಾಂಬರಿಸಿ, ಔಷಧ ಕೊಟ್ಟರು ಇದರಿಂದ ಸ್ವಲ್ಪವಾದರೂ ಗುಣ ಕಾಣಲಿಲ್ಲ ಇಂಥಾ ವೇಸಾಯ ಕಾಲದಲ್ಲಿ ರೈತರ ದುಃಖವನ್ನು ಯಾರಿಗೆ ಮೊರೆಯಿಟ್ಟರೂ ಇದನ್ನು ಗುಣಪಡಿಸುವಂಥಾ ಒಬ್ಬನಾದರೂ ನಮಗೆ ದೊರೆಯುವದಿಲ್ಲವೆಂದು ಬೇಡುತ್ತಾರೆ.

ಈ ಊರಿಗೆ ಸ್ವಲ್ಪ ದೂರದಲ್ಲಿ ಇರುವ ತೀರ್ಥಹಳ್ಳಿ ಮುತ್ತೂರು ಎಂಬುವಲ್ಲಿ ಮೇ ತಾರೀಖು ೧೮ನೇ ಗುರುವಾರ ನಡೆದ ರಥೋತ್ಸವ ಕಾಲದಲ್ಲಿ ರಥವನ್ನು ಎಳೆಯುವಾಗ್ಯೆ ಮಳೆ ಜಾಸ್ತಿಯಾದ್ದರಿಂದ ಗದ್ದೆಯಲ್ಲಿ ಕೆಸರದ್ದು ರಥದ ಗಾಲಿಯು ಹೂತುಕೊಂಡಿತು. ರಥದ ಮೇಲಿದ್ದ ದೇವರಿಗೆ ಉತ್ಸವ ಚೆನ್ನಾಗಿ ನಡೆಯಲಿಲ್ಲವೆಂಬ ಸಿಟ್ಟಿನಿಂದ ಈ ರೀತಿ ಆಯಿತೋ ಅಥವಾ ಮೇಘರಾಜನ ಬಲವೋ ನಾನರಿಯೆ. ನಂತರ ಯಾವ ಪ್ರಯತ್ನಪಟ್ಟರೂ ಸಾಧ್ಯವಾಗದೆ ಅಲ್ಲೇ ದೇವರನ್ನು ಇಳಿಸಿ ರಥವನ್ನು ಬಿಟ್ಟು ಗಾಲಿಯನ್ನು ಹೊತ್ತುಕೊಂಡು ಬಂದರೆಂದು ಕೇಳುತ್ತೇನೆ.

೨೪—೫—೦೫, ದೇ ಕೋ

ನಾಲೂರು

[ಈ ಪ್ರಕಾರ ಪ್ರಜೆಗಳು ತಮಗೆ ಕಷ್ಟ ಪ್ರಾಪ್ತವಾಗಿದೆ ಎಂದು ಸರ್ಕಾರದವರಿಗೆ ಅರಿಕೆಮಾಡಿಕೊಂಡರೂ ರೋಗದ ಸ್ಥಿತಿಗತಿಯನ್ನು ನೋಡಿ ತಿಳಿಯುವುದಕ್ಕಾಗಲಿ ಅದನ್ನು ಪರಿಹರಿಸಿ ಪ್ರಜೆಗಳನ್ನು ಕಾಪಾಡುವುದಕ್ಕಾಗಲಿ ಆ ಪ್ರಾಂತ್ಯದ ಸರ್ಕಾರಿ ಅಧಿಕಾರಿಗಳು ಲಕ್ಷ್ಯ ಕೊಡಲಿಲ್ಲವೆಂದು ಈ ಬಾತ್ಮಿದಾರರು ಬರೆದಿರುವುದನ್ನು ಪ್ರಕಟಿಸಬೇಕಾಗಿ ಬಂದುದಕ್ಕಾಗಿ ವಿಷಾದಿಸುತ್ತೇವೆ. ತೀರ್ಥಹಳ್ಳಿ ತಾಲ್ಲೂಕಿನ ಅಮಲ್ದಾರರೂ ಆಸ್ಪತ್ರೆ ಅಸಿಸ್ಟೆಂಟರೂ ಆ ಪ್ರಾಂತ್ಯಕ್ಕೆ ಹೋಗಿ ಇದರ ನಿಜಾಂಶವನ್ನು ತಿಳಿಯುತ್ತಾರೆಂದೂ ಅವರ ಕಷ್ಟನಿವಾರಣೆ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ.—ಎಡಿ.]

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಇಲ್ಲಿ ಈ ತಿಂಗಳಲ್ಲಿ ೩—೪ ಹದ ಮಳೆ ಬಿದ್ದಿತು. ಕೆರೆ ಕಾಂಟೆಗಳಲ್ಲಿ ದನಕರುಗಳಿಗೆ ೧—೨ ತಿಂಗಳ ನೀರು ಬಂದಿದೆ —ಸರ್ಕಾರದವರು ಈ ಊರಿನಲ್ಲಿ ನೀರಿನ ನಲ್ಲಿಗಳನ್ನು ಇಡುವದಾದರೆ ಇಲ್ಲಿನವರು ಇವರ ಉಪಕಾರವನ್ನು ಮರೆಯಲಾರರು. ಬೇರೆ ಊರುಗಳ ಬಳಿಯಲ್ಲಿ ಹೊಳೆ ಹರಿಯುತ್ತಿದ್ದರೂ ನಲ್ಲಿ ಇಡಿಸಿದಾರೆ. ಆದರೆ ಇಲ್ಲಿ ನೀರಿಗೆ ಕಷ್ಟವಾಗಿದ್ದರೂ ಈಗಾ ಇಡದೆ ಇರುವದು ಇಲ್ಲಿನವರ ದುರಾದೃಷ್ಟವೋ ಎಂದು ಜನರು ಮರುಗುತ್ತಾರೆ —ಇಲ್ಲಿ ೪ ವರ್ಷಗಳಿಂದ ಸ್ಟೇಷನ್ ಮಾಸ್ಟರಾಗಿದ್ದ ಮೆ॥ ಆದಂ ಷರೀಫರು ಇಲ್ಲಿನ ಜನರ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಇಂಥವರನ್ನು ಬಿತ್ತಿಮೇಲೆ ಮದ್ದೂರಿಗೆ ವರ್ಗಮಾಡಿದರು. ಇಲ್ಲಿನ ದೊಡ್ಡ ಮನುಷ್ಯರು ಇವರಲ್ಲಿಟ್ಟಿದ್ದ ಪ್ರೀತಿಯನ್ನು ತೋರಿಸಿ, ಕಳುಹಿಸಿ ಕೊಡುವದಕ್ಕಾಗಿ ಹಳೇ ಛತ್ರದಲ್ಲಿ ಸಭೆ ಸೇರಿದ್ದರು ನಮ್ಮ ಅಮಲ್ದಾರರು ಅಗ್ರಾಸನವನ್ನು ವಹಿಸಿದ್ದರು ಡಾಕ್ಟರವರು ಸಬ್ ರಿಜಿಸ್ಟ್ರಾರು ಕೃಷ್ಣರಾಯರು ತೊಂಗಾಡಿಯಪ್ಪನವರು ಡೇವಿಡ್ ಅಯ್ಯನವರು ವಿಶ್ವನಾಥ ವೊಡ್ಡಿಯಾರು, ಸಾಹುಕಾರರಾದ ಸರಾಫ್ ಪುಟ್ಟಣ್ಣ ಶೆಟ್ಟರವರು ದಾನಪ್ಪನವರ ಪಾಪಣ್ಣನವರೇ ಮುಂತಾದವರು ಸಭೆಗೆ ಸೇರಿದ್ದರು ಸಂಗೀತ ವಾದ್ಯಗಳು ನಡದ ಮೇಲೆ ನಮ್ಮ ಅಮಲ್ದಾರರು ಸ್ಟೇಷನ್ ಮಾಸ್ಟರ ಗುಣವರ್ಣನೆಯನ್ನು ಮಾಡಿದರು. ಹೀಗೆ ಸ್ಟೇಷನ್ ಮಾಸ್ಟರುಗಳು ಜನರ ಹಿತಚಿಂತಕರಾಗಿದ್ದರೆ ಅವರಿಗೆ ಎಷ್ಟೋ ಪ್ರಯೋಜನವಾದೀತು ಒಳ್ಳೇ ಹೆಸರು ಒಳ್ಳೇ ತೈಲಕ್ಕಿಂತ ಒಳ್ಳೇದು. ಈ ಏರ್ಪಾಡನ್ನು ನಮ್ಮ ತೊಂಗಾಡಿಯಪ್ಪನವರೇ ವಹಿಸಿ ಮಾಡಿದರು —ಮೆ॥ ಭಾಭಾ ಸಾಹೇಬರು ಈ ಮಾರ್ಗವಾಗಿ ನಂದೀದುರ್ಗಕ್ಕೆ ಹೋಗಿದಾರೆ.

ಕೊಪ್ಪ —ಈಚೆಗೆ ಹದಿನೈದು ದಿವಸಗಳಿಂದ ಕೆಲವು ಹದ ಮಳೆ ಬಿದ್ದಿತು ಒಕ್ಕಲಿಗರೆಲ್ಲಾ ವ್ಯವಸಾಯಕ್ಕೆ ಉಪಕ್ರಮಿಸಿರುತ್ತಾರೆ. ರೋಗಾದ್ಯುಪದ್ರಗಳೇನೂ ಇಲ್ಲ —ಸಂತೆ ಧಾರಣೆಗಳು ಬಹಳ ಕಮ್ಮಿಯಾಗಿವೆ. ಸಂತೆಯಲ್ಲಿ ಕೆಲವು ಕಡೆ ಅಳತೆ ಸೇರು, ಬಟ್ಟುಗಳು ಕಮ್ಮಿಯಾಗಿರುವದು ಯಾವ ಆಫೀಸರ ನಿಗಾಕ್ಕೂ ಬಿದ್ದಂತೆ ಇಲ್ಲ. ಬಡವರಿಗೆ ಮಾತ್ರ ಇದರಿಂದ ತೊಂದರೆಯಾಗಿದೆ ಟೌನ್ ಪಂಚಾಯಿತಿ ವಿಚಾರದಲ್ಲಿ ನಮ್ಮ ವೈಸ್ ಪ್ರೆಸಿಡೆಂಟರವರು ಬಹಳ ನಿಗಾ ಇಡತಕ್ಕದ್ದಾಗಿದೆ.—ಕಳೆದ ಜನವರಿ ಲಾಗಾಯ್ತು ಬಾಳಗಡಿಯಲ್ಲಿಯೂ ಸ್ಕೂಲ್ ಪ್ರಾರಂಭವಾಗಿದೆ ಇದಕ್ಕಾಗಿ ಬೇರೆ ಹೊಸದಿ ನಜಾ ಏರ್ಪಾಡಾಗುತ್ತಾ ಇದೆ. ಈ ವಿಷಯದಲ್ಲಿ ಬಾಳಗಡಿ ನೌಕರರು ಬಹಳ ತುಂಬಾ ಪ್ರಯತ್ನಪಡುತ್ತಾರೆ. ಸ್ಕೂಲಿಗೆ ಮಾಸ್ತರು ಕೊಪ್ಪದಿಂದಲೇ ನೇಮಿಸಲ್ಪಟ್ಟ ಪ್ರಯುಕ್ತ ಕೊಪ್ಪದಲ್ಲಿ ಒಬ್ಬರೇ ಕೆಲಸಮಾಡುತ್ತಾ ಇದ್ದರು ಈಚೆಗೆ ಕೊಪ್ಪ ಸ್ಕೂಲಿಗೆ ಜನವರಿಯಿಂದಲೂ ತಪಸೀಲುಪಡೆ ಆಫೀಸರುಗಳ ನಿಗಾ ಇಲ್ಲುತ್ತಾ ಇದ್ದು, ಕಳೆದ ಏಪ್ರಿಲ್ ತಿಂಗಳಲ್ಲಿ ಎಲ್ಲಿಗೆ ಬಂದುವಾಗಿದ್ದ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಮೆ॥ ಆಭಾ ಸಾಹೇಬರವರು ಪರಾಂಬರಿಕೆಯಿಂದ ವಿದ್ಯಾಭ್ಯಾಸಕ್ಕೆ ತೊಂದರೆಪಡುತ್ತಿದ್ದ ಒಬ್ಬ ಬಡವಿದ್ಯಾರ್ಥಿಯು ಅರ್ಜಿಯಿಂದ ಆವನಿಗೆ ಫ್ರೀ ಮಾಡಿಸಿ, ೫ ನೇ ತರಗತಿ ಏರ್ಪಡಿಸಿಕೊಂಡು ಪಾಠಮಾಡಬೇಕಾಗಿ ಮಾಸ್ಟರಿಗೆ ಹುಕುಂ ಕೊಟ್ಟಿರುತ್ತಾರೆ. ಸ್ಕೂಲಿನ ಕೊಪ್ಪದಲ್ಲಿರತಕ್ಕ ಒಬ್ಬ ಮಾಸ್ಟರಿಂದ ಹಾಲಿ ಇರತಕ್ಕ ೫ ತರಗತಿಗಳ ಪಾಠನಡೆಯುವದು ಅಸಾಧ್ಯವೆಂಬ ಸಂಗತಿ ತಿಳಿದ್ದೆ ಬಂದು, ಹೊಸದಾಗಿ ಇಸಂ ಕೊಡತಕ್ಕ ಬಗ್ಗೆ ಅಪ್ಪಣೆಯಾದ ಮೇರೆ ನಮ್ಮ ಡೆಪ್ಯುಟಿ ಇನ್ಸ್ಪೆಕ್ಟರ್ ಮೆ॥ ತಿಮ್ಮಲಾಚಾರ್ಯರು ಶೃಂಗೇರಿ ಸ್ಕೂಲಿನಿಂದ ಇಲ್ಲಿಗೆ ಒಬ್ಬರನ್ನು ಚುನಾಯಿಸಿರುವರು. ಇದೇ ರೀತಿ ಇಲಾಖಾ ಅಧಿಕಾರಿಗಳ ನಿಗಾವಣೆಯೂ ಆಗಾಗ್ಗೆ ತಾಲ್ಲೂಕು ಮತ್ತು ರೆವಿನ್ಯೂ ಆಫೀಸರುಗಳ ನಿಗಾವಣೆಯೂ ಬೀಳುತ್ತಿರುವದು ತುಂಬಾ ಅನುಕೂಲವಾಗಿದೆ.

ತಿಪ್ಟೂರು —ತುಮಕೂರು ಜನರಲ್ ಅ ಕಮಿಷನರು, ಕ್ಸ್ಯಸ್ ಅ ಕಮಿಷನರು, ಪೋಲೀಸ್ ಸೂಪರಿಂಟೆಂಡೆಂಟರು, ಇಂಜನೀರ್ ಹಂಜಪ್ಪನವರೇ ಮುಂತಾದ ಅಧಿಕಾರಿಗಳು ಕಳೆದ ವಾರ ಇಲ್ಲಿಗೆ ದಯಮಾಡಿಸಿ, ಆಯಾ ಇಲಾಖೆಗಳ ಕಾರುಬಾರುಗಳನ್ನು ಪರಾಂಬರಿಸಿದರು. ಮತ್ತು ಕೇಂದಿ ಹರಾಜು ಕಳೆದ ವರುಷಕ್ಕಿಂತ ಈ ವರುಷ ಜಾಸ್ತಿಯಾದಂತೆ ಕಂಡುಬರುತ್ತೆ. ಈ ವಿಷಯವಾಗಿ ಮೇಲಕ್ಕೆ ತಂತಿ ಕೊಟ್ಟಿರುವಂತೆಯೂ ಅದರ ಫಲಿತಾಂಶವನ್ನು ಎದುರು ನೋಡುತ್ತಿರುವಂತೆಯೂ ತಿಳಿದು ಬರುತ್ತೆ —ಈ ಊರು ಮ್ಯುನಿಸಿಪಲ್ ಚಾವಡಿಯನ್ನು ತಾಲ್ಲೂಕ್ ಕಚೇರಿ ಮುಂದೆ ಕಟ್ಟುವ ಬದಲು ಊರಿನ ಪೂರ್ವಭಾಗದಲ್ಲಿ, ಇಲ್ಲವೇ ತಕ್ಕ ಗದಿದ್ದಲ್ಲಿ ಕಟ್ಟಿದರೆ ಗ್ರಾಮಕ್ಕೆ ಮತ್ತಷ್ಟು ಬಗೆಯಿಲ್ಲವೇ ಎಂದು ಅವರು ಅಭಿಪ್ರಾಯ ಪಡುತ್ತಾರೆ. ನಮ್ಮ ಅಮಲ್ದಾರರು ಈ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಿಸ್ಯಾರೆಂದು ಕೋರುತ್ತೇವೆ —ಕಳೆದ ೨೩ ನೇ ತಾ॥ ರಾತ್ರಿ ವಿಪರೀತವಾದ ಗಾಳಿ, ಮಳೆ ಬಿದ್ದಿತು. ಸಿಕ್ಕಿದ ನೀರನ್ನೆಲ್ಲಾ ಕುಡಿದದ್ದರಿಂದ ಜನರು ಕೆಮ್ಮು, ನೆಗಡಿ, ತಲೆನೋವುಗಳಿಂದ ಬಾಧೆಪಡುತ್ತಾರೆ. ಈಗ ಕೆರೆಗೆ ಸ್ವಲ್ಪ ನೀರು ಬಂದಿರುತ್ತೆ.—ನೀರುಳ್ಳ ಬಜಾರಿನಲ್ಲಿರುವ ಮ್ಯುನಿಸಿಪಲ್ ಭಾವಿ, ಗಾರೆಕಲ್ಲುಗಳಿಂದ ಅಲಂಕಾರವಾಗಿ ಕಾಣುತ್ತೆ. ನೀರಿಗೆಂದು ಬಂದ ಜನರು ಬೊಗ್ಗಿನೋಡಿದರೆ ನಿರಾಶರಾಗಿ ಹೋಗಬೇಕಾಗುತ್ತೆ. ನಮ್ಮ ಅಮಲ್ದಾರರು ದಯವಿಟ್ಟು ಇದರಲ್ಲಿ ನೀರು ಬರುವ ಮಾರ್ಗವನ್ನು ಕಲ್ಪಿಸಿ ಕೊಟ್ಟರೆ ಮತ್ತಷ್ಟು ಕೀರ್ತಿವಂತರಾದಾರಲ್ಲಾ ಎಂದು ಜನರು ಹಂಬಲಿಸುತ್ತಾರೆ.—ನೋಡು ಬಂದು ವರ್ಷದಿಂದಲೂ ಇಲ್ಲಿರುವ ಕಾಟೆಗಳ ನೇಟಿವ್ ವೈದ್ಯರು ಮೆ॥ ಯಿಂಬಾರ್ಜಿಯರ್ ಎಂಬ ಪಂಡಿತರು ಈ ಪ್ರಾಂತ್ಯ ಅನೇಕ ರೋಗಿಗಳನ್ನು ಗುಣಮಾಡಿದರೆಂಬ ವರ್ತಮಾನ.—ಇಲ್ಲಿಂದ ಹುಳಿಯಾರಿಗೆ ಹಾಕಿರುವ ರಸ್ತೆಯು ಆಗಾಗ್ಗೆ ಹಳೇಬಟ್ಟೆಗೆ ಹೊಸಬಟ್ಟೆ ತ್ಯಾಪೆ ಹಾಕಿದಂತಾಗಿ ಪ್ರಯಾಣಿಕರ ಗಾಡಿಗಳ ಕ, ರಸ್ತೆಕ್ಕೆ, ಬಂಡಿಯುವ ಸತ್ವ, ತಗಡ್ಡುತ್ತ ಎಂಬಂತಾಗುತ್ತಲ್ಲಾ ಎಂದು ಜನರು ಹೇಳಿಕೊಳ್ಳುತ್ತಾರೆ.—ಚಿಕ್ಕನಾಯಕನಹಳ್ಳಿಯಲ್ಲಿ ಪ್ಲೇಗಿರುವದರಿಂದ ಅಲ್ಲಿರುವವರನೇಕರು ಇಲ್ಲಿಗೆ ಬಂದು ಕಾಲಕ್ಷೇಪ ಮಾಡುತ್ತಿರುತ್ತಾರೆ. ಹ್ಯಾಗಾದರೂ ಇರಲಿ ಅಂತೂ ಈ ಊರು ರೈಲ್ವೆ ಸ್ಟೇಷನ್ ಸಮೀಪವಾದ್ದರಿಂದಲೋ ಮತ್ಯಾವ ಕಾರಣದಿಂದಲೋ ಹೀರಾ ಹಜಾರ್ ಬಾರಾ ಹಜಾರ್ ಎಂಬಂತಾಯಿತಲ್ಲಾ ಎಂದು ಜನರು ಮಾತಾಡಿಕೊಳ್ಳುತ್ತಾರೆ.

ಚಿಕ್ಕಮಗಳೂರು.—ಕಳೆದ ಎರಡು ವಾರಗಳಿಂದಲೂ ಈ ಪ್ರಾಂತ್ಯ ಒಳ್ಳೇ ಮಳೆಯಾಗಿದೆ. ಆದರೆ ಕೆರೆ ಕಟ್ಟೆಗಳ್ಯಾವೂ ತುಂಬಿಲ್ಲ. ರೈತರೆಲ್ಲಾ ಮುಂಗಾರು ಬೀಜವನ್ನು ಪೇರಾವು ಮಾಡಿದಾರೆ. ಬಾಗಿಹೋಗಿದ್ದ ಭೂಮಿ ತಂಪಾಗಿಯೂ ಕೀದುಹೋಗಿದ್ದ ಹುಲ್ಲು ಹಸುರಾಗಿಯೂ ಕಾಣುತ್ತಲಿದೆ. ಹವ ಮಳೆಯಾದಿನಿಂದೀಚೆಗೆ ಹಿತವಾಗಿದೆ. ಆದರೆ ಊರಿನಲ್ಲಿ ಸಿಡುಬು ರೋಗವು ಮಕ್ಕಳನ್ನು ಬಿಟ್ಟುಹೋಗಲಿಲ್ಲ.—ಶ್ರೀ ಶಿವಗಂಗಾ ಸ್ವಾಮಿಗಳು ೨೦ ನೆ ತಾರೀಖಿಗೆ ಈ ಊರಿಗೆ ದಯಮಾಡಿಸಿ, ಐದು ದಿನಗಳಿದ್ದು ಮೊದಲನೇ ದಿನ ಕರ್ಮ ಮಾರ್ಗದ ವಿಷಯವಾಗಿಯೂ ೨ ನೇ ದಿನ ಭಕ್ತಿಯ ವಿಷಯವಾಗಿಯೂ ೩ ನೇ ದಿನ ಮತ ಸಂಬಂಧವಾದ ಬೇರೆ ಬೇರೆ ವಿಷಯಗಳನ್ನು ಕುರಿತೂ ೪ ನೇ ದಿನ ಯೋಗವೆಂಬದರ ವಿಷಯವಾಗಿಯೂ ಉಪನ್ಯಾಸ ಮಾಡಿದರೆಂದೂ ಇಲ್ಲಿನ ಲಾಯರುಗಳೂ ಸರಕಾರದ ಉದ್ಯೋಗದಲ್ಲಿರುವವರೂ ವರ್ತಕರೂ ಅಂತು ಆ ಮತಕ್ಕೆ ಸೇರಿದ ಶಿಷ್ಯವರ್ಗದವರಲ್ಲನೇಕರು ಶ್ರೀ ಸ್ವಾಮಿಗಳವರನ್ನು ತಮ್ಮ ತಮ್ಮ ಮನೆಗಳಿಗೆ ಕರೆಸಿಕೊಂಡು, ಪಾದಪೂಜೆ ಮಾಡಿದರೆಂದೂ ಇದರಿಂದ ಶ್ರೀ ಸ್ವಾಮಿಗಳವರಿಗೆ ಒಂದು ಸಾವಿರ ರೂಪಾಯಿನ ವರಿಗೂ ಉತ್ಪತ್ತಿಯಾಯಿತೆಂದೂ ಹೇಳುತ್ತಾರೆ ಸ್ವಾಮಿಗಳು ೨೫ ನೇ ತಾರೀಖಿನಲ್ಲಿ ಇಲ್ಲಿಂದ ಶೃಂಗೇರಿ ಕಡೆ ಪ್ರಯಾಣಮಾಡಿದರು.—ಇಲ್ಲಿನ ಹೈ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಸುಬ್ರಹ್ಮಣ್ಯ ಅಯ್ಯರವರಿಗೆ ಚಿಕ್ಕಬಳ್ಳಾಪುರಕ್ಕೆ ವರ್ಗವಾಯಿತೆಂದೂ ಅವರು ಈಗಾಗಲೇ ಇಲ್ಲಿಂದ ಹೊರಟುಹೋದರೆಂದೂ ಕಾಣುತ್ತಲಿದೆ. ಇವರು ಬಹಳ ಒಳ್ಳೇಯವರು, ನಿಧಾನಿಗಳು, ಬುದ್ಧಿವಂತರು, ದಯಾಳುಗಳು, ಸ್ನೇಹಪರರು, ಉಪಕಾರಿಗಳೂ ಆಗಿದ್ದರು. ಅವರನ್ನು ಈ ಊರಿನಲ್ಲಿರುವ ಯೂರೋಪ್ಯರು ಹಿಂದೂ ಜನರು ಮಹಮದೀಯರು ಆದಿಯಾಗಿ ಎಲ್ಲರೂ ಬಹಳವಾಗಿ ಸ್ನೇಹಿಸುತ್ತಿದ್ದರು. ಇಂಥವರು ಈ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ವರ್ಗಾಯಿಸಲ್ಪಟ್ಟದ್ದು ಇಲ್ಲಿನ ನಿವಾಸಿಗಳಿಗೆಲ್ಲಾ ವ್ಯಸನವನ್ನುಂಟುಮಾಡಿದಾಗ್ಯೂ ಅವರು ಈ ಮಲ್ನಾಡು ಪ್ರದೇಶದಿಂದ ಆರೋಗ್ಯಕರವಾದ ಬೈಲ್ ಸೀಮೆಯ ಕಡೆ ಹೋದದ್ದು ಅವರ ಶರೀರಾರೋಗ್ಯಕ್ಕೆ ಒಳ್ಳೇದೆಂದು ತಿಳಿದು ಸಂತೋಷಿಸುವವರಾಗಿದಾರೆ ಇಲ್ಲಿನ ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮೆ॥ ವೇದಾಂತ ದೇಶಿಗಂ ಅಯ್ಯಂಗಾರ್ರಿಗೆ ಇಲ್ಲಿಂದ ನಂಜನಗೂಡಿಗೆ ವರ್ಗವಾಯಿತೆಂದು ವರ್ತಮಾನವಿದೆ ಇವರು ಸಹ ಒಳ್ಳೆಯವರೂ ನಿಸ್ಪೃಹಿಗಳೂ ಸಂತೋಷಕರೂ ಆಗಿದಾರೆ ಇಂಥಾ ದೊಡ್ಡ ಮನುಷ್ಯರಿಬ್ಬರೂ ಏಕ ಕಾಲದಲ್ಲಿ ಬೇರೆ ಕಡೆಗೆ ವರ್ಗವಾದದ್ದು ಇಲ್ಲಿನವರಿಗೆ ವಿಷಾದವಲ್ಲವೇ ? ನಮ್ಮ ಡೆಪ್ಯುಟಿ ಕಮಿಷನರು ಆ ಮೂರು ಪ್ರಾಂತ್ಯ ಸರ್ಕೀಟು ಹೋಗಿದಾರೆ.

ತೀರ್ಥಹಳ್ಳಿ.—ಈಗ ಕೆಲವು ದಿನಗಳಿಂದ ಮಳೆ ಬರುತ್ತಾ ಇರುವದರಿಂದ ಬಿಸಲಿನ ತಾಪ ಹೋಗಿ ತಂಗಾಳಿ ಬೀಸಲು ಶುರುವಾಗಿದೆ ಕೆಲವು ಭಾವಿಗಳಲ್ಲಿ ಇನ್ನೂ ತಕ್ಕಷ್ಟು ನೀರು ಇಲ್ಲದೆ ಜನರು ಬಹು ಕಷ್ಟಪಡುತ್ತಾರೆ. ನಾಲೂರೆಂಬ ಗ್ರಾಮದಲ್ಲಿ ಜನರು ನೀರಿಗೆ ಪಡುವ ಕಷ್ಟವನ್ನು ಎಷ್ಟು ಹೇಳಿದರೂ ತೀರದು. ಅಲ್ಲಿ ಒಂದು ಭಾವಿ ತೋಡಿಸಿಕೊಡಬೇಕೆಂದು ಅನೇಕ ಸಾರಿ ಅರ್ಜಿ ಬರೆದುಕೊಂಡರೂ ಇನ್ನೂ ಪ್ರಜೆಗಳ ಆಶೆ ನೆರವೇರಲಿಲ್ಲ ಬೇಗನೆ ಭಾವಿಯಾದರೆ ಉತ್ತಮ ಸ್ವಾನಿಟೇರಿ ಅಸಿಸ್ಟೆಂಟ್ ಕಮಿಷನರು ಮೆ॥ ಪಲ್ಪು ಸಾಹೇಬರು ನಾಲೂರಿನ ನಿವಾಸಿಗಳಿಗೆ ಇರುವ ನೀರಿನ ಅನನುಕೂಲಗಳನ್ನು ಖುದ್ದು ಪರಾಂಬರಿಸಿಕೊಂಡು ಹೋದರು. ಇವರಾದರೂ ತಕ್ಕ ಏರ್ಪಾಡು ಮಾಡಿಸ್ಯಾರೆಂದು ಗ್ರಾಮಸ್ಥರು ಕಾದಿದಾರೆ —ಮಲ್ನಾಡಿನ ನಿವಾಸಿಗಳಿಗೆ ಇರುವ ಅನೇಕ ಬಾಧೆಗಳಲ್ಲಿ ಗಾಟುಕುಣ್ಣು ಎಂಬ ಬಾಧೆ ಒಂದು ಜೋರಾಗಿದೆ ಅಲ್ಲಲ್ಲಿ ಬಿಸಲಿನ ಧಗೆಯಿಂದ ಜನರು ಸಿಡುಬು ಎದ್ದು ಚೇತರಿಸಿಕೊಳ್ಳುವಷ್ಟರಲ್ಲೇ ನರಗಳ ಮೇಲೆ ಈ ಹುಣ್ಣುಗಳೆದ್ದು ಜನರನ್ನು ಬಾಧಿಸುತ್ತದೆ. ತಕ್ಕ ಚಿಕಿತ್ಸೆ ಏನೂ ತಿಳಿಯದೆ ಜನರು ಬಹು ಸಂಕಟಪಡುತ್ತಿದಾರೆ. ಇಂಥಾ ಕೆಲವು ರೋಗಿಗಳಿಗೆ ತೀರ್ಥಹಳ್ಳಿ ಆಸ್ಪತ್ರೆ ಅಸಿಸ್ಟೆಂಟರು ಔಷಧಿ ಹಾಕುತ್ತಿದಾರೆ. ಕೆಲವರಿಗೆ ವಾಸಿಯಾಗುತ್ತಲೂ ಇದೆ.—ತೀರ್ಥಹಳ್ಳಿಯ ನಿವಾಸಿಗಳಲ್ಲಿ ಅನೇಕರು ಈ ಸಾರಿ ಬಡತನಕ್ಕೂ ಕಷ್ಟಕ್ಕೂ ಗುರಿಯಾಗಿದಾರೆ. ಕೆಲವರಿಗೆ ತಿನ್ನುವದಕ್ಕೆ ಮಾರ್ಗವಿಲ್ಲದೆ ಅಲೆಯುತ್ತಿದಾರೆ. ಎರಡು ಮೂರು ಜನ ಹೆಂಗಸರು ದಿಕ್ಕಿಲ್ಲದೆ ಕಾಯಿಲೆಯಿಂದ ನರಳುತ್ತಾ ಇದಾರೆ ಇಂಥಾ ಪರದೇಶಿಗಳಿಗೆ ಇಲ್ಲಿನ ರಾಮೇಶ್ವರ ದೇವಸ್ಥಾನದಿಂದಲಾದರೂ ಅನ್ನ ಹಾಕಿಸಬಾರದೇ ಎಂದು ಜನರು ಹೇಳಿಕೊಳ್ಳುತ್ತಾರೆ —ತೀರ್ಥಹಳ್ಳಿ ಟವನಿನಲ್ಲಿ ಅನೇಕರು ಮನೆಗಂದಾಯ ಮುಂತಾದ್ದು ಬಾಕಿ ಇಟ್ಟುಕೊಂಡಿದಾರೆಂತಲೂ ಅವರಲ್ಲಿ ಕೆಲವರು ಬ್ರಾಹ್ಮಣರು, ಇತರರು ದೊಡ್ಡ ಮನುಷ್ಯರೆಂತಲೂ ಕಂಡು ಬಂದಿದೆ. ಅಂಥವರಿಗೆಲ್ಲಾ ನೋಟೀಸ್ ಕೊಟ್ಟು ಜಪ್ತಿ ವಸೂಲ್ ಮಾಡದೆ, ಕೂಲಿ ಮಾಡುವ ಜನಗಳಿಗೆ ಇದಿನೈದು ದಿನ ಮುಸ್ತಾಯಿಷರ ನೋಟೀಸ್ ಕೊಟ್ಟು ಜಪ್ತಿ ವಸೂಲ್ ಮಾಡುತ್ತಾರಂತೆ. ಇಂಥಾ ಬಡವರ ಬಾಕಿಯನ್ನು ತಾಳಿಕೊಂಡು ದೊಡ್ಡ ಮನುಷ್ಯರನ್ನು ಮೊದಲು ವಸೂಲ್ ಮಾಡಬಾರದೇ ? ಇಲ್ಲಿನ ಹೊಲಿಗೆ ಕೆಲಸದವರಿಗೆ ೨ ರೂಪಾಯಿ ಕಂದಾಯ ಇದ್ದದ್ದು ಏಕಾಏಕಿ ನಾಲ್ಕು ರೂಪಾಯಿಗೆ ಹೆಚ್ಚಿಸಿದಾರೆ. ಈ ರೀತಿ ಕಾರುಬಾರು ಮಾಡುವದಕ್ಕೆ ಪಂಚಾಯತಿದಾರರಿಗೆ ಯಾರು ಅಧಿಕಾರ ಕೊಟ್ಟರೋ ತಿಳಿಯದು. ಒಂದು ವೇಳೆ ಅರ್ಧ ರೂಪಾಯಿ ಹೆಚ್ಚಿಸಬಹುದಾಗಿತ್ತು. ಎಷ್ಟು ದೊಡ್ಡ ಪಟ್ಟಣದಲ್ಲಿಯೂ ಇಂಥಾ ದಾಟಾರಿ ಕೆಲಸ ನಡೆಯುವದಿಲ್ಲ.—ಅಸಿಸ್ಟೆಂಟ್ ಕಮಿಷನರ್ ಮೆ॥ ಚಾಂಡಿ ಸಾಹೇಬರು ಇಲ್ಲಿಗೆ ದಯಮಾಡಿಸಿ, ಆಗುಂಬೆ ಟೋಲ್ ಗೇಟ್ ಹರಾಜು ಮುಂತಾದ್ದು ತೀರಿಸಿಕೊಂಡು, ಮುಂದಕ್ಕೆ ಪ್ರಯಾಣ ಬೆಳಸಿದರು. ಇವರ ಬರೋಣವು ಜನಗಳಿಗೆ ಬಹು ಹರ್ಷವಾಗಿತ್ತು.

ವಿದೇಶ ವರ್ತಮಾನಗಳು.

ಅಮೇರಿಕಕ್ಕೆ ಸೇರಿದ ಟಾಟೋಯ ಎಂಬ ಪಟ್ಟಣದಲ್ಲಿ ಕಲ್ಲಿದ್ದಲ ಗಣಿಯು ಮಹಾ ಶಬ್ದದೊಡನೆ ಅಕಸ್ಮಾತ್ತಾಗಿ ಹಾರಿ ಅವಾಂತರವಾದುದರಲ್ಲಿ ಹದಿನಾರು ಮಂದಿ ಕೂಲಿ ಆಳುಗಳು ಪ್ರಾಣಕಳೆದುಕೊಂಡರು.

❖❖❖❖

ಲ್ಲಾಯಡ್ ಎಂಬ ವರ್ತಕರ ಕಂಪೆನಿಗೆ ಸೇರಿದ ಯೋಯರ್ ಪ್ರೋ ಎಂಬ ಹಡಗು ಕಿಂಗ್‍ಟಾ ಎಂಬಲ್ಲಿ ಬೆಂಕಿಯ ಬೇಗೆಯಿಂದ ಸುಟ್ಟು ಹೋಯಿತು ಅದರೊಳಗಿದ್ದ ೧೫೦ ಜನ ಚೀನಾದವರು ಸಮುದ್ರದ ಪಾಲಾದರೆಂದು ತಿಳಿದುಬಂದಿದೆ.

❖❖❖❖

ಜರ್ಮನಿ ರಾಜ್ಯದ ಕೆಲವು ಭಾಗಗಳಲ್ಲಿ ಜನರಿಗೆ ಇದ್ದಕ್ಕಿದ್ದ ಹಾಗೇ ಬುದ್ಧಿಭ್ರಮಣೆಯುಂಟಾಗಿ ಪ್ರಾಣಹೋಗುತ್ತಿದೆ. ಕಟ್ಟೋವಿಟ್ಸ್ ಎಂಬೊಂದು ಸಣ್ಣ ಡಿಸ್ಟ್ರಿಕ್ಟಿನಲ್ಲೇ ೩೫೪ ಜನರಿಗೆ ಈ ರೋಗ ತಗಲಿದ್ದರಲ್ಲಿ ೨೦೩ ಜನರು ಸತ್ತುಹೋಗಿದಾರೆ.

❖❖❖❖

ರಷ್ಯಾ ಬಾಲ್ಟಿಕ್ ಜಹಜುಗಳ ಅಧಿಪತಿಯಾದ ಅಡ್ಮಿರಲ್ ರಾಸ್‍ದೆಸ್ಟ್‍ವೆನ್ಸ್ಕಿ ಯವರು ಕಾಲವಾದರೆಂದು ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ವರ್ತಮಾನವಿರುವುದೆಂದು ಲಂಡನ್ ಪಟ್ಟಣದಿಂದ ಕಲ್ಕತ್ತಾ ಪಟ್ಟಣಕ್ಕೆ ತಂತೀ ವರ್ತಮಾನ ಬಂದಿದೆ.

❖❖❖❖

ಬಾಲವೇಯೋ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಸ್ಥಳದೇಶಗಳ್ಯಾರಾದರೂ ಆಯುಧಗಳ ಹಿಡಿದುಕೊಂಡು ಬೀದಿಗಳಲ್ಲಿ ಸಂಚರಿಸಕೂಡದೆಂತಲೂ ಮುಖ್ಯ ಮುಖ್ಯ ಸ್ಥಳಗಳಿಗೆ ಅವರು ಹೋಗಲೇಕೂಡದೆಂತಲೂ ಈ ವಿಷಯದಲ್ಲಿ ತಪ್ಪಿದವರು ೫೦ ರೂಪಾಯಿ ಜುಲ್ಮಾನೆ ಕೊಡಬೇಕೆಂತಲೂ ವಿಧಿಸಿದಾರೆ.

❖❖❖❖

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ೧೬,೦೦೦ ಕೂಲಿ ಆಳುಗಳು ಏಕಕಾಲದಲ್ಲಿ ಒಗ್ಗಟ್ಟಾಗಿ ವ್ಯವಸಾಯ ಕೆಲಸಕ್ಕಾಗಲಿ ಕೈಗಾರಿಕೆ ಕಾರ್ಖಾನೆಗಳಿಗಾಗಲಿ ಬರುವುದಿಲ್ಲವೆಂದು ನಿಂತುಬಿಟ್ಟದ್ದರಿಂದ ಅನೇಕ ಕಾರ್ಖಾನೆಗಳಲ್ಲೂ ಜಮೀನುಗಳಲ್ಲೂ ಕೆಲಸಗಳು ನಿಂತು ತುಂಬಾ ತೊಂದರೆಯಾಗಿದೆ.

❖❖❖❖

ಅಮೇರಿಕಕ್ಕೆ ಸೇರಿದ ಮಿಲ್ವಾಕಿ ನಗರದ ಭಾರೀ ಬ್ಯಾಂಕಿನ ಪ್ರೆಸಿಡೆಂಟರಾದ ಮೆ॥ ಬೈಜೆಲೋ ಎಂಬಾತನು ಬ್ಯಾಂಕಿನ ಹಣವನ್ನು ಸ್ವಂತವಾಗಿ ಗೋಧಿಯ ವ್ಯಾಪಾರಕ್ಕೆ ಉಪಯೋಗಿಸುತ್ತಾ ಬಂದನು. ಇದರಲ್ಲಿ ಅವನಿಗೆ ೪೫ ಲಕ್ಷ ರೂಪಾಯಿ ಮುಳುಗಿ ಹೋಯಿತು. ಈಗ ಬ್ಯಾಂಕಿನವರು ಆ ಅಧಿಕಾರಿಯನ್ನು ಹಿಡಿದು ತನಿಖೆ ಮಾಡುತ್ತಿದ್ದಾರೆ.

❖❖❖❖

ರಷ್ಯಾ ಜಪಾನ್ ರಾಜ್ಯಗಳ ಹಡಗುಗಳು ಸಮುದ್ರ ಯುದ್ಧ ಮಾಡುವುದರಲ್ಲಿ ಸಮುದ್ರದೊಳಗೆ ಮದ್ದನ್ನು ನಾನಾ ರೂಪದಲ್ಲಿಟ್ಟು ಘಾಂಘಳೆ ನಡೆಸುತ್ತಿರುವುದನ್ನು ನೋಡಿ, ಆ ಪ್ರಾಂತ್ಯ ಸಮುದ್ರ ಪಾಲಕರಗಳೂ ತಿಮಿತಿಮಿಂಗಿಲಗಳೇ ಮೊದಲಾದ ಮೀನುಗಳೂ ಅಲ್ಲಿಂದ ಯೂರೋಪಿನ ಬಳಿಯ ಸಮುದ್ರದೊಳಕ್ಕೆ ಹೊರಟು ಬಂದಿರುತ್ತವೆಂದು ಪ್ರಕಟನಾಗಿದೆ.

❖❖❖❖

ಸೂರ್ಯಗ್ರಹದ ಸುತ್ತಲೂ ಸಂಚರಿಸುವ ಗ್ರಹಗಳಲ್ಲಿ ಶನಿಗ್ರಹವೆಂಬುದನ್ನು ಪರೀಕ್ಷೆ ಮಾಡುವುದರಲ್ಲೇ ಉದ್ಯುಕ್ತನಾಗಿದ್ದು, ಇದುವರೆಗೆ ೫೦೦ ಹೊಸ ನಕ್ಷತ್ರಗಳನ್ನು ಕಂಡುಹಿಡಿದಿರುವ ಡಾಕ್ಟರ್ ಆಟೊ ವಿಲ್‍ಹೆಲಂ ವಾನ್‍ಸ್ಟ್ರುವೆ ಎಂಬ ಪ್ರಖ್ಯಾತನಾದ ಜ್ಯೋತಿಶ್ಶಾಸ್ತ್ರ ಪರಿಶೋಧಕನು ಕಳೆದವಾರ ಜರ್ಮನ್ ರಾಜ್ಯದ ರಾಜಧಾನಿಯಾದ ಕಾರಲ್ಸ್ ನಗರದಲ್ಲಿ ಕಾಲವಾದನು.

❖❖❖❖

ಸಯಾಂ ರಾಜ್ಯದ ದೊರೆಯವರು ತಮ್ಮ ರಾಜ್ಯದಲ್ಲೆಲ್ಲಾ ಯಾರೂ ಗುಲಾಮರನ್ನು ಕೊಂಡಿಟ್ಟುಕೊಳ್ಳಕೂಡದೆಂದು ಹುಕುಂ ಕೊಟ್ಟು ಸಾರಿಸಿರುತ್ತಾರೆ ಆ ರಾಜ್ಯದಲ್ಲಿ ಸಾಲ ತೀರಿಸುವುದಕ್ಕೆ ಕೈಲಾಗದವರು ಗುಲಾಮರಾಗಿ ಸೇರಿಕೊಂಡು ಚಾಕರಿ ಮಾಡುತ್ತಿದ್ದರು. ಈಗ ಇಂಥಾ ಸಾಲವು ಕ್ರಮ ಕ್ರಮವಾಗಿ ಅವರ ಚಾಕರಿಯಿಂದ ವಜಾ ಮಾಡಿ, ಕೆಲವು ಕಾಲದಲ್ಲೇ ತೀರಿಹೋಗುವಂತೆ ಏರ್ಪಾಡು ಮಾಡಿದಾರೆ. ಇನ್ನು ಮುಂದೆ ಯಾರೂ ಯಾರನ್ನೂ ಗುಲಾಮರಾಗಿ ಇಟ್ಟುಕೊಳ್ಳದಂತೆ ಬಂದೋಬಸ್ತಾಗಿದೆ. ಇದರಿಂದ ಆ ರಾಜ್ಯವು ದಿನೇ ದಿನೇ ನವನಾಗರಿಕ ಸ್ಥಿತಿಯನ್ನು ಹೊಂದುತ್ತಿದೆ ಎಂದು ಹೇಳಬಹುದಾಗಿದೆ.

ಪ್ರಪಂಚದಲ್ಲಿ ದೊಡ್ಡವನು ಯಾವನು?

24

ಜ್ಞಾನವೋ? ಧನ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ:—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮಾ|| ರಾ|| ಚರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ.

೩. "ಸ್ವಪ್ನಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪ "ರೋಮನರ ಚರಿತ್ರೆ." ಕ್ರಯ ೦—೨—೦
೫. "ಗ್ರೀಕರ ಚರಿತ್ರೆ." ,, ೦—೨—೦
೬. "ಅನುಭವಾನಂದ.",, ೦—೬—೦
೭. "ಗಣಿತ ಸಂಜೀವಿನಿ" ೧—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ." ೦—೧೨—೦
೧೧. "೧೯೦೫ನೇ ವರುಷದ ಡೈರಿಗಳು."
ಪೋಷ್ಟ್, ಪೆನ್ಸಿಲ್ ಸಹಿತ ೧—೬—೦; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಜ್ವರಹರಿ.

29

ಇದು ಸಾಧಾರಣ ಜ್ವರ, ಚಳೀಜ್ವರ, ಮೈರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್ಸಿಯರ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬಳುತ್ತಿರುವ ಕಾರಣದಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುತ್ತಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ತಾ ೨ ೧೦ ಅ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಅಮೃತ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆ ಚುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕಾಲರೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಮುದಲಿ—ಅಮೃತ ಕರ್ಪೂರವನ್ನು ನಾನೂ ನನ್ನ ಕಾರ್ಯದಾರನೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ

ಈ ಎಲ್ಲಾ ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ:—

ಕಂಪೆನಿಯ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೋಂಟ್ ಟೀಚ್ ಕ್ಲಾಕ್, ಮದರಾಸ್.

WANTED WILD ANIMALS.

ಬೇಕಾಗಿದೆ. 8 ಬೇಕಾಗಿದೆ.

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ|| ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo.

ಶ್ರೀ ತಾಂಬೂಲ.

20

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಟವರ್, ಬೆಂಗಳೂರು ಡಿಸ್ಟ್ರಿಕ್ಟ್.
ಯಂ, ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್.

ಹೋಮೋಸಿಯಾ.

ರಕ್ತಕ್ಷಣ ಪರಿಹಾರ.

ಹಗಲಾತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಎಡತೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ರಾಣಾ, [illegible] ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ [illegible] ಪ್ರಯೋಜನವಾದ ಔಷಧವು ಬ್ಯಾರದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತಕ್ಕಾಲದಲ್ಲಿ ಜೀವರಾಶಿಗಳಿಗೆ ಮುಖ್ಯವಾಗಿ ಪ್ರಶಸ್ತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಮಾರುಗಾಲಿಯು, ಮೂಲವ್ಯಾಧಿ, ಉಬ್ಬಸ, ನಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಅ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨—೮ ಆಣೆ ಬಾಯಿ ಡಬ್ಬಿದಲ್ಲಿ ೧ ರೂ ಡಬ್ಬಿವಲ್ಲಿರುವದಕ್ಕಿಂತ ೪ ಪಟ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಅ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಭಾಗಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ. ೨೬ ಸೆಕೆಂಡ್ ಲೇನ್ ಬೀಚ್, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

12—5—1905 ರಿಂದ 18—5—1905 ರ ವರೆಗೆ.

ಸ್ಥಳ.	ಪ್ಲೇಗ್ ಹಗಲಿ ವ್ಯ.	ಪ್ಲೇಗ್ ಸತ್ತ ವ್ಯ.	ಹೋದವಾರದ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	3	2	2	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	4	2	14	12
ಮೈಸೂರು ,,	3	5	23	10
ಕೋಲಾರ್ ,,	1	0	0	0
ಕೋಲಾರ್ ಚಿನ್ನದ ಗಣಿಗಳು	1	1	0	0
ತುಮಕೂರು ಡಿಸ್ಟ್ರಿಕ್ಟ್	0	0	0	1
ಹಾಸನ ,,	0	0	5	3
ಚಿತ್ರದುರ್ಗ ,,	0	0	16	18
ಕಡೂರ್ ,,	0	0	2	8
ಶಿವಮೊಗ್ಗ ,,	0	0	2	3
ಜುಮ್ಲಾ.	12	10	64	53

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ವೈಶಾಖ ಬಹುಳ ತ್ರಯೋದಶಿ ಗುರುವಾರದಿಂದ ಜೇಷ್ಠ ಶುದ್ಧ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಜೂನ್

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶೇ ಪ್ರವಾ
1	ಗುರು ‡	ತ್ರಯೋ	5 30	ಭ	21 0	19
2	ಶುಕ್ರ ನ	ಚತುರ್ದಶಿ	9-15	ಕೃ	26-10	20
3	ಶನಿವಾ .	ಅಮಾ	11-56	ರೋ	30-12	21
4	ರವಿವಾ ⁎	ಪಾಡ್ಯ	13 21	ಮೃ	33-12	22
5	ಚಂದ್ರ	ಬಿದಿಗೆ	13-15	ಆ	34-16	23
6	ಕುಜ	ತದಿಗೆ	12-50	ಪು	35 5	24
7	ಬುಧ	ಚೌತಿ	10-35	ಪು	31 22	25

‡ ಮಾಸಶಿವರಾತ್ರಿ.
ನ ಸರ್ವತ್ರ ಅಮಾವಾಸ್ಯೆ
. ಅಮೃತಸಿದ್ಧಿಯೋಗ.
⁎ ಬೌದ್ಧಕಲ್ಕಿಜಯಂತಿ, ಚಂದ್ರೋದಯ.

ಪೇಟೆ ಧಾರಣೆ.

ಬಿಕರಿ.	ಮೈಸೂರು	ಬೆಂಗಳೂರ
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ ೧೦ ೮—೦	೧೧—೦—
ಕೆಂಪುಕೆ ಅಕ್ಕಿ ಅವಲ್ ..	೧೦—೪—೬	೧೦—೮—
,, ಮಾಯಂ	೯—೧೨—೦	೧೧—೦—
ಸಾಬಾಳಿ ಅಕ್ಕಿ .	೯—೮—೦	೧೨—೭—
ಸಣ್ಣಕ್ಕಿ ಅವಲ್ ..	೧೨—೦—೬	೧೨—೮—
,, ದಾಯಂ ..	೧೦—೮—೬	೧೨—೦—
ತೊಗರೀ ಬೇಳೆ ಪಲ್ಲಾ ೧ಕ್ಕೆ ..	೧೦—೮—೦	೭—೬—೮—
,, ದಾಯಂ ..	೧೧—೦—೦	೧೦—೪—
ಕ್ಯಾಬಗಿ ಪಲ್ಲಾ ೧ಕ್ಕೆ ..	೪ ೧೨—೦	೫—೨—
ಕಾರಾಗಿ ..	೪—೧—೦	೪—೧೦—
ಜೋಳ ..	೪—೧೨—೦	೪—೮—
ಹುಲಸಂದೆ ಪಲ್ಲಾ ೧ಕ್ಕೆ ..	೮—೧೨—೦	೭—೦—
ಬಿಳೀ ಅವರೆ	೬—೧೨—೦	೭—೮—
ಹೆಸರು ..	೯ ೧೨—೦	೧೦—೮—
ಉದ್ದು ..	೮ ೧೪ ೦	೯—೮—
ಕಡಲೆ ..	೯ ೦—೦	೮—೪—
ಎಳ್ಳು ..	೧೭ ೦—೦	೧೪—೧೦—
ಹುರುಳಿ ..	೮—೦ ೦	೮—೮—
ಹರಳು ೧೨ ಸೇರಿಗೆ ..	೯—೮—೦	೭—೧೪—
ಸೀಗೇಕಾಯಿ ಮಣ ೧ಕ್ಕೆ ..	೨—೪—೦	೨—೧೨—
ಮೆಣಸಿನಕಾಯಿ ..	೪—೮—೦	೪—೦—
,, ದಾಯಂ ..	೩—೧೨—೦	೩—೧೨—
ಬೆಲ್ಲ ದೊಡ್ಡ ಅಚ್ಚು ..	೭—೪—೦	೭ ೨—೦—
ಒಳ್ಳೆಣ್ಣೆ ಮಣ ೧ಕ್ಕೆ ..	೪—೦ ೦	೪—೮—
ಹರಳೆಣ್ಣೆ ,, ..	೪—೦—೦	೪—೦—
ಕೊತ್ತುಂಬರಿ ಪಲ್ಲ ೧ಕ್ಕೆ ..	೬—೦—೦	೮—೧೨—
ಉಪ್ಪು ,, ..	೮—೦—೦	೭—೦—
ಹುಣಸೇ ಹಣ್ಣು ..	೧ ೪—೦	೦—೧೪—
,, ಹಳೇದು ..	೦—೧೪—೦	೦—೧೩—
ಹುಚ್ಚೆಳ್ಳು ..	೧೨—೦—೦	೧೦—೦—
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	೫—೩—೦	೪—೬—
ತೆಂಗಿನಕಾಯಿ ೧೦೦ ಕ್ಕೆ ..	೫—೦—೦	೪—೦—
ಅಳಲೇಕಾಯಿ ಮಣ ೧ಕ್ಕೆ ..	೧—೦—೦	೦—೧೧—
ಅಂಟುವಾಳದಕಾಯಿ ಮಣ ೧ಕ್ಕೆ ..	೦—೧೪—೦	೧—೪—
ತುಪ್ಪ (ಹಸು) ಕಂಡು ..	೧೫—೮—೦	೧೫—೪—
,, ,, ಎಮ್ಮೆ ..	೧೫—೧೦—೦	೧೫—೮—
,, ,, ಗಟ್ಟಿ ತೊಲ ೧ಕ್ಕೆ ..	೨೬—೦—೦	೨೪—೫—
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ ..	೬೨—೦—೦	೬೩—೦—

Printed and Published by the Rev. H. Spencer, B.A the Proprietor and Manager, Wesleyan Mission Press Mysore. 1/6/1905.

ವೃತ್ತಾಂತ ಪತ್ರಿಕೆ.

REGISTERED M. 20

ಯ ೧ ಮು ಷ್ಟು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ ಮೈಸೂರು—ಸನ್ ೧೯೦೫ ನೇ ಇಸವಿ ಜೂನ್ ತಾರೀಖು ೮ ನೇ ಗುರುವಾರ. ಸಂಚಿಕೆ ೨

ಫಾರೆಸ್ಟು ಇಲಾಖೆ.

ನೋಟೀಸು ೧೯೦೫ ನೆ ಇಸವಿ ಮೆ ತಾ. ೧೫ ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟಿನ ಡಿಪೋ ಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಚೌಬೀನೆ ಸಾಮಾನುಗಳನ್ನು ಹರಾಜು ಮಾಡಲ್ಪಡುತ್ತೆ.

ಡಿಪೋ ಹೆಸರು.	ಹರಾಜು ತಾರೀಖು.	ಹರಾಜು ಮಾಡಿಸುವ ಆಫೀಸರ ಹೆಸರು.	ಚೌಬೀನಾ ಸುಮಾರು ಮೊತ್ತ.							
			ಸಾಗವಾನಿ ನಾಟಾ ಮತ್ತು ಜಂತಿ.		ಮುಮ್ಮಾ ಜಾತಿ ನಾಟಾ ಮತ್ತು ಜಂತಿ.		ಕಾಡು ನಾಟಾ ಮತ್ತು ಜಂತಿ		ಕಾಡು ಸರ.	
ಮೈಸೂರು ಉದ್ಯಾನವನ.	10 6 1905	ಮೈಸೂರು ಡಿ. ಫಾ.	39	1018	413	8901	...	...	...	..
ನಂಜನಗೂಡು ಡಿಪೋ.	12 6 1905	ಆಫೀಸರು.	710	15?6	1370	9997	6	146	40	70

ಹರಾಜು ಷರತ್ತು.—೧೮೯೫ ನೆ ಇಸವಿ ೨೫ ನೇ ಯೇಪ್ರಿಲ್ ೧೫ ನ ನಂಬರು ಗೆಜೆಟ್ಟಿನ್ನು ಫಾರಂಪ್ ಆಗಿರುವ ೧೮೯೫ ನೆ ಇಸವಿ ಮಾರ್ಚಿ ೨೫ ನೆ ಮತ್ತು ೨ ೧೯೧೯—R. F. ೧೯೦೯—೫೨ ನೇ ನಂಬರು ಗವರನ್‌ಮೆಂಟು ನೋಟಿಫೀಕೇಷನ್ ನೋಡಿ.

ಚೌಬೀನೆ ಸಡವವರು ಹರಾಜು ತಾರೀಖು ಆಗಾಯ್ತು ಮೂರು ದಿವಸದ ಒಳಗಾಗಿ ಕಾಲು ಹಿಸ್ಸೆ ಮೊಬಲಗು ಜಮಾ ಮಾಡಬೇಕು. ಮುಕ್ಕಾಲು ಹಿಸ್ಸೆ ಮೊಬಲಗನ್ನು ೧೯೦೫ ನ ಜೂನ್ ಮಾಹೆ ಆಖೈರ್ ಒಳಗಾಗಿ ಜಮಾ ಮಾಡಬೇಕು.

By Order,
H. P. GANGADHARAPPA,
District Forest Office, Mysore.

ಪ್ರಶ್ನೋತ್ತರ ಲೇಖಬೋಧಿನಿ

1

ಎರಡನೆಯ ಛಾಪೆ. ಕ್ರಯ ಒಂದು ರೂಪಾಯಿ ನಾಲ್ಕಾಣೆ.

ಬೇಗ ಬರೆಯಿರಿ ! ಬೇಗ ಬರೆಯಿರಿ !! ಬೇಗ ಬರೆಯಿರಿ !!!

ಬಿಡಿಮಿಯ ಅಲ್ಲ.

ಎಂಬೀ ಜವಿರ್ಗಾ ನೋಜಣೀ ಕಲಿಸುವ ಪುಸ್ತಕದಿಂದ ಇತರರ ಸಹಾಯ ಸ್ವಲ್ಪವೂ ಇಲ್ಲದೆ ಸ್ವಲ್ಪಸಮಯಕ್ಕೆ ಓದುಬರಹ ಕಲಿತಿರುವ ರೂ ಕೂಡ ಭೂಮಿಯನ್ನು ಅಳೆಯುವುದಕ್ಕೆ ಚೆನ್ನಾಗಿ ತಾವಾ ಯೇ ಕಲಿಯಬಹುದು. ಒಂದು ಸಲ ತರಿಸಿ, ಓದಿನೋಡಿ. ಕ್ರಯ . ಅಂಚೆ ಖರ್ಚು ಆಣೆ ವಿಳಾಸ .— ಭಾರತಿ ಸಂಪಂಗಿರಾಮು, ಹೊಸಕೋಟೆ, ಬೆಂಗಳೂರು.

ಶ್ರೀಚಾಮರಾಜೇಂದ್ರ ರಾಜ್ಯವಿಲಾಸ

H. H. THE LATE MAHARAJA'S BIOGRAPHY.

ಎಪ್ಪತ್ತೈದು ಪ್ರಕರಣಗಳುಳ್ಳ ಈ ಕನ್ನಡ ಪ್ರೋಸ್ ಪುಸ್ತಕ ದಲ್ಲಿ ಶ್ರೀ ಚಾಮುಂಡೇಶ್ವರೀ ಅವತಾರ ಕಥೆಯೂ ಯದುವಂ ಶಾವಳಿಯೂ, ಲೇಟ್ ಮಹಾರಾಜರವರ ಜೀವಕಾಲದ ಆದ್ಯಂತ ಚರಿತ್ರೆಯೂ, ಮಹಾರಾಣಿ ರೀಜಂಟರವರ ಚರಿತ್ರೆಯೂ, ಈಗಿನ ಶ್ರೀ ಶೃಂಗೇರಿ ಶ್ರೀ ಸದ್ಗುರುಗಳ ಚರಿತ್ರೆಯೂ, ಪೂರ್ಣಯ್ಯ ಮತ್ತು ಈಗಿನ ದಿವಾನ್ ರವರ ಚರಿತ್ರೆಯೂ, ರಾಜಧಾನಿಗೆ ಬಂದು ಹೋದಿದ್ದ ವೈಸ್‌ರಾಯರ ಸ್ಪೀಚ್‌ಗಳೂ ರಾಜ್ಯಾಡಳಿತಗಳ ವಿಚಾರ ವೂ, ರೀಜನ್ಸಿ ಏರ್ಪಾಡಾಗುವ ವರಿಗಿನ ಈ ದೇಶದ ಪ್ರತಿಯೊಂದು ಸಂಗತಿಗಳೂ, ಖರೀತ ಮಾಂತಪವೂ—ಚೆನ್ನಾಗಿ ವಿವ ರಿಸಲ್ಪಟ್ಟಿವೆ. ಪ್ರತಿಭಾಗಗಳ ಭಾವಚಿತ್ರವೂ ವ್ಯತ್ಯಾಸವಿಲ್ಲದೆ ಇವೆ. ಕಾಗದವೂ ಪ್ರೋಸ್ಸೂ ಜೋಡಿಸಿದೆ. ಸಕಲಜನೋಪ ಯೋಗವಾದುದು ಸ್ವಲ್ಪ ಪ್ರತಿಗಳೇ ಉಳಿದಿವೆ. ನಮ್ಮ ರಾಷ್ಟ್ರದ ನಮ್ಮ ದೊರೆಗಳ ಚರಿತ್ರೆಯನ್ನು ಪೂರ್ತಿ ತಿಳಿಯಬೇಕೆಂದಾಶಿಸು ವವರಿಗೆ ಇದನ್ನು ಬಿಟ್ಟರೆ ಬೇರೆ ಪುಸ್ತಕ ದೊರೆಯಲಾರದು. ಕ್ರಯ, ೧೨ ಆಣೆ ಮಾತ್ರ ಜಾಗ್ರತೆ ಈ ವಿಳಾಸಕ್ಕೆ ಬರೆಯಿರಿ.

೧. ದಿ ಜನರಲ್ ಏಜನ್ಸಿ, ಲಕ್ಷ್ಮೀವಿಲಾಸ ರೋಡ್, ಮೈಸೂರು.

೨. ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

೩. ಮೆಸರ್ಸ್. ಕೆ. ನರಸಿಂಹ್ಯಯ ಅಂಡ್ ಕೋ., ಮೈಸೂರು.

WANTED WILD ANIMALS.

ಬೇಕಾಗಿವೆ. ಬೇಕಾಗಿವೆ.

9

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—MR. HUGHES, MYSORE ZOO.

ಹೊಸ ನೋಟು.

ಮೆಟ್ರಿಕ್ಯುಲೇಷನ್ ಪರಿ ೧೯, ಒನೆಯ ಕನ್ನಡ ಪುಸ್ತಕಗಳಿಗೆ ಎಲ್ಲಾ ಸಮಸ್ತ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

11

ಬೇಕಾದಷ್ಟು ವಿಷಯ ಳೊಡನೆ, ಪ್ರಶ್ನೆಸಹಿತ ಈ ನೋಟ್ಸ ನ್ನು ಬರೆದು ಅನೇಕ ದಿನವಾದಾಗ್ಯೂ ಇತರ ನೋಟ್ಸುಗಳ ಗಲಾ ಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೨೧ ರೊಳಗೆ ಸಿದ್ಧವಾಗುತ್ತೆ. ಕ್ರಯ. ೮ ಆಣೆ.

ಮೈಸೂರು ಸಂಕ್ಷ್ಯಾಪ ಭೂವಿವರಣೆ (೨ನೆ ಛಾಪೆ)	೦—೧—೨
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೧—೬
೧೯೦೪ನೆ ವರ್ಷದ ಲೋವರ್ ಸೆಕೆಂಡರಿ ನೋಟ್ಸು	೦—೩—೦

ವಿಳಾಸ—ಮ್ಸ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾಸಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ .

(ಅಡ್ವಾನ್ಸು)	ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ. ೧—೦೪—೦
,, ,, ೬ ,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟ ವಾಗಿ ಬರೆಯಬೇಕು.

ಸರ್ವ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸಾಗುವಾನಿ ಹರಾಜು ನೋಟಿಸ್.

ಮೈಸೂರು ದೊಡ್ಡ ಪೇಟೆ ಹಳೆ ತಾಲ್ಲೂಕ್ ಕಛೇರಿ ಪಕ್ಕದ ಹಳೇ ಸಾಮುರ್ ಲಾಕಪ್ ಆಗಿದ್ದ ಕಟ್ಟಡದ ನಾನಾ ತರದ ಸಾಗುವಾನಿ ಸಾಮಾನುಗಳನ್ನು ಇದೇ ಜೂನ್ ತಾ. ೧೧ನೇ ಭಾನುವಾರದಿಂದ ತಾ. ೧೩ನೆ ಮಂಗಳವಾರದ ವರೆಗೆ ಮೂರು ದಿವಸವೂ ಬೆಳಗಿನ ಹೊತ್ತು ಮ್ಯಾನೆಜರ್ ಬುದ್ಧು ಸೇಟರೂ ಏಜಂಟ್ ಲಿಂಗಣ್ಣನವರೂ ಹರಾಜು ಹಾಕುವರು. ಬೇಕಾದವರು ಅಲ್ಲಿಗೆ ಬಂದು ಅದ ರಖಾಸ್ತಿನಿಂದ ಸಾಮಾನುಗಳನ್ನು ಪಡೆಯಬಹುದು.

ಶ್ರೀ ತಾಂಬೂಲ.

30

ಇದನ್ನು ಓದಿ ! ಬಿಡಬೇಡಿ !! ಗುಣ ನೋಡಿ !!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲ

ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯೂಪಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧-೨ ಮಾತ್ರೆಗಳಂತೆ ಕೊಟ್ಟರೆ ಒಡನೆ ಗುಣಕಾಣುತ್ತೆ. ಈ ವರೆಗೆ ಸಾವಿರಾರು ಜನರು ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರೆಗೆ ವಿ. ಪಿ. ಛಾರ್ಜು ೩ ಆಣೆ ನಮ್ಮ ವಿಳಾಸ:—

ಬೇಲನಹಳ್ಳಿ ಟವರ್, ಯಂ. ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟೀಷನರ್.

ಇದು ಕಳೆದ ಜನವರಿ ತಿಂಗಳ ಪ್ರೆಸೆಂಟೇಷನ್ ವಾಚು.

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರೈಲ್ವೆ ಗಾರ್ಡ್ ವಾಚು ಓಪನ್ ಫೇಸ್ ಕೀಲೆಸ್ ಪೇಟೆಂಟ್ ಲಿವರ್ ವಾಚು ಕಂಪೆನಿ ಸೇರ್ಪ ಬ್ಯಾಲನ್ಸ್ ಬಹು ಖಚಿ



ತವಾದ ಗಡಿಯಾರ ೩ ವರುಷ ಗ್ಯಾರಂಟೀ ಕ್ರಯ ರೂ.೪—೮—೦ ಈ ವಾಚನ್ನು ಕಳೆದ ಜನವರಿ ಮ ಹೋತ್ಸವಕ್ಕಾಗಿ ಡಿಸೆಂಬರ್ ೧ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವವರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರವು ಜಾಗ್ರತೆ ದರಖಾಸ್ತು ಕಳುಹಿ. ಪ್ರಜೆಂಟೇಷನ್ ಸಾಮಾನುಗಳು.

ಕ್ರಯವುಳ್ಳದ್ದು.

ಮೇಲಾದ ಜರ್ಮನ್ ಸಿಲ್ವರ್ ಕಲಾಯಿಗುಂಡಿ ೧ ಸೆಟ್ಟು	೦—೧೦—೦
ಚಿಕ್ಕ ಹಣದಪೆಟ್ಟಿಗೆ ಇಂಗ್ಲಿಷ್ ಮೇಡ್ (Cash Box)	೨—೦—೦
ಸುಗಂಧ ಸನ್ಸ್ವಾಪ್ ತುಂಬಿದ ಡಬ್ಬಿ ೧	೦—೮—೦
ಮುಖನೋಡುವ ದೀಪ ಬಹಳ ಸುಂದರವಾದದ್ದು	೦—೬—೦
ಬಹಳ ಸೊಗಸಾದ ಗಡಿಯಾರದ ಸರಪಣಿ	೦—೮—೦

೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರೆಗೆ ಬರುವ ಜುಲೈ ಆಖೈರ್ ವರಿಗೆ ಬಹುಮಾನ ಸಹಿತ ಗಡಿಯಾರವನ್ನು ಕೊಡಲ್ಪಡುತ್ತೆ. ಜಾಗ್ರತೆ !! ಜಾಗ್ರತೆ !!

ಇತರರು ನಮ್ಮ ಕಂಪನಿಯ ನೋಟೀಸುಗಳಂತೆ ಮಾದರಿಯಲ್ಲಿ ಪ್ರಿಂಟುಮಾಡಿ ಉಪಯೋಗವಿಲ್ಲದ ಸಾಮಾನುಗಳನ್ನೂ ಗಡಿಯಾರವನ್ನೂ ಕಳುಹಿಸುತ್ತಿರುವದರಿಂದ ಮೇಲ್ಕಂಡ ಕಂಪನಿಯ ಹೆಸರನ್ನು ಈ ಪಕ್ಷದಲ್ಲಿ ಇಟ್ಟುಕೊಳ್ಳಬೇಕೆಂದು ಕೋರುತ್ತೇವೆ.

ವಿಳಾಸ:—ಮ್ಯಾನೇಜರ್, ಫ್ಲಾರಿನ್ ವಾಚ್ ಕಂಪೆನಿ,
ಪಾರ್ಕ್ ಟವನ್, ಮದರಾಸ್.

ಶೃಂಗೇರಿ ನೋಟೀಸು.

ಶೃಂಗೇರಿಯಲ್ಲಿರುವ ಕನಿಕಿನಿ ಎವಾಸಿ ಬೋವೀಕಮ್ಮನು ತಿಳಿಸುವುದು—ನಾನು ಸ್ವಂತವಾಗಿ ಮೂಲಗೇಣೀನೂ ತೋಟವನ್ನೂ ಮುನ್ಸಿಪಲ್ ನಂ. ೮೦, ೮೩ ಎಂದು ಮನೆಗಳನ್ನೂ ಸಂಪಾದಿಸಿರುತ್ತೇನೆ. ನನ್ನ ಮೂರು ಮಂದಿ ಗಂಡುಮಕ್ಕಳೂ ಪೋಲಿ ತಿರುಗುವುದು ದುಷ್ಕಾರ್ಯಗಳಲ್ಲಿ ಬಿದ್ದು ಸಾಲಮಾಡಿದಲ್ಲಿ ನನ್ನ ಸ್ವಂತ ಸಂಪಾದನೆ ಮೇಲ್ಕಂಡ ಸೊತ್ತುಗಳ್ಯಾವದೂ ಜವಾಬ್ದಾರಿಯಾಗಲಾರದು. ಈ ಆಸ್ತಿ ಆಧಾರದ ಮೇಲೆ ಯಾರೊಬ್ಬರೂ ನನ್ನ ಮಕ್ಕಳಾದ ಸುಬ್ಬ, ತಿಮ್ಮ, ಅಣ್ಣಯ್ಯ ಇವರಿಗೆ ಸಾಲ ಕೊಡಕೂಡದಾಗಿ ಈ ಮೂಲಕ ಎಚ್ಚರಿಸಿದೇನೆ.

೨೬—೫—೧೯೦೫. ಕನಿಕಿನಿ ಬೋಯಿತಮ್ಮನ ರುಜು.

ಸದರನ್ ಮರಾಠಾ ರೈಲ್ವೆ ಕಂಪನಿ, ಲಿಮಿಟೆಡ್.
ಡಿಸ್ಟ್ರಿಕ್ಟ್ ಟ್ರಾಫಿಕ್ ಸೂ॥ ಆಫಿಸ್.

2

ನೋಟೀಸು.

ಇದರಿಂದ ತಿಳಿಯಪಡಿಸುವುದೇನೆಂದರೆ:—

ಸನ್ ೧೯೦೪ ನೆ ಇಸವಿ ಆಗಸ್ಟ್ ೨೪ ನೆ ತಾರೀಖಿನಲ್ಲಿ ಯರ್ರಗುಂಟ್ಲಾ ಸ್ಟೇಷನ್‌ನಿಂದ ಮೈಸೂರಿಗೆ ರವಾನಿಸಿದ ೨ (ಎರಡು) ವಾಗಿನ್ ಕಡಪೆಯ ಕಲ್ಲು ಚಪ್ಪಡಿಗಳು ಪಾವತಿ ಆಗದೆ ನಿಂತು ಇರುತ್ತೆ.

ಈ ಕಲ್ಲುಗಳನ್ನು ಇಂಡಿಯನ್ ರೈಲ್ವೇ ಆಕ್ಟು ೫೬ ನೆ ಸೆಕ್ಷನ್ ಪ್ರಕಾರ ೧೯೦೫ ನೆ ಇಸವಿ ಜೂನ್ ೨೫ ನೆ ತಾರೀಖು ಭಾನುವಾರ ೧೧ ಘಂಟೆಗೆ ಮೈಸೂರು ರೈಲ್ವೆ ಸ್ಟೇಷನ್‌ನಲ್ಲಿ ಪಬ್ಲಿಕ್ ಹರಾಜು ಮಾಡಲ್ಪಡುತ್ತೆ.

ಬೆಂಗಳೂರು, ತಾ॥ ೨೫—೫—೦೫ (Sd.) S J. MERCER, *Dist. Traffic Supdt.*

ಸುಲಭಕ್ರಯ: ಸುಗಂಧದ್ರವ್ಯಗಳು.

24

ಅಂಬರ್ ಕಡ್ಡಿ ಸೇರು ೧ಕ್ಕೆ	.. ..	೫—೦—೦
ವಸಂತಸುಕುಮಾರವರ್ತಿ	..	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ	..	೨—೮—೦
ಪುನುಗು ಕಡ್ಡಿ ,, ೧ಕ್ಕೆ	.. ..	೧—೮—೦
ಮುಸಾಲಾ ಕಡ್ಡಿ ,, ೧ಕ್ಕೆ	..	೦—೧೦—೦
ಕಸ್ತೂರಿ ಬಿಲ್ಲೆ ತೊಲ ೧ಕ್ಕೆ	.. ..	೧—೦—೦
ಕೇಸರಿ ಬಿಲ್ಲೆ ೧ಕ್ಕೆ	..	೦—೧—೬
ಪಚ್ಚೆ ಗಂಧ ತೊಲ ೧ಕ್ಕೆ	.. ..	೨—೦—೦
ಡಿಟೋ	..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	.. ..	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ, ವರ್ಕಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ	..	೦—೪—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ	.. ..	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ	..	೦—೨—೦
ಪನ್ನೀರು ಶೀಸೆ ೧ಕ್ಕೆ	.. ..	೦—೯—೦
ತಂಬಾಕ್ ಪೋಕ್ ಡಬ್ಬಿ ೧ಕ್ಕೆ	..	೦—೩—೦
ಶೈವವೈಷ್ಣವ ಕಾರ್ತೀಕ ದಶಾಂಗ ಸೇರು ೧ಕ್ಕೆ		೦—೧೨—೦
ಫಿರ್ನಾ ತೊಲ ೧ಕ್ಕೆ	.. ..	೨—೦—೦
ಡಿಟೋ	..	೧—೦—೦
ಅಭ್ಯಂಗಚೂರ್ಣ ಡಬ್ಬಿ ೧ಕ್ಕೆ	.. ..	೦—೦—೬
ವಸಂತ ೧೦೦ಕ್ಕೆ ..		೨—೦—೦ ಪಾನೀಪುಯಾಟ ಕ

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಜಾಸ್ತಿಯಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ.—ಟಿ. ಎಲ್. ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ವೃತ್ತಾಂತ ಪತ್ರಿಕೆ.

:o:

ಸನ್ ೧೯೦೫ ನೇ ಇಸವಿ ಜೂನ್ ತಾ॥ ೮ ನೇ ಗುರುವಾರ.

ಸಮುದ್ರ ಯುದ್ಧವೂ ಜಪಾನ್‌ನವರ ಜಯಪ್ರದವೂ.

ಕಳೆದ ವಾರ ಯುದ್ಧಭೂಮಿಯಿಂದ ಬಂದಿರುವ ವರ್ತಮಾನಗಳು ಬಹು ಭಯಂಕರವಾಗಿರುವವು. ತ್ಸುಷೀಮಾ ಎಂಬ ಪಟ್ಟಣದಬಳಿ ರಷ್ಯಾ ಜಪಾನ್ ಹಡಗುಗಳು ಸಂಧಿಸಿ ಯುದ್ಧವಾಯಿತು. ಪ್ರಪಂಚದ ಆದಿಯಿಂದಲೂ ಇದುವರೆಗೆ ಇಂಥಾ ಭಯಂಕರವಾದ ಯುದ್ಧಗಳು ಹದಿನೈದು ಮಾತ್ರ ನಡೆದಿದ್ದವು. ಈ ಯುದ್ಧವು ಹದಿನಾರನೆಯದೆಂದು ಚರಿತ್ರಕಾರರು ಇದಕ್ಕೆ ಮಹಾ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಈ ಯುದ್ಧದಲ್ಲಿ ಜಪಾನ್‌ನವರು ತಮ್ಮ ಪರಾಕ್ರಮ ಸಾಹಸ ಚಮತ್ಕಾರಗಳನ್ನೆಲ್ಲಾ ತೋರಿಸಿ ಶತ್ರುಗಳು ತಂದಿದ್ದ ಜಹಜುಗಳಲ್ಲಿ ಹದಿನೈದನ್ನು ಮುಳುಗಿಸಿದ್ದಲ್ಲದೆ ಎಂಟು ಜಹಜುಗಳನ್ನು ಕಿತ್ತುಕೊಂಡು ಜಯಭೇರಿಯನ್ನು ಹೊಡೆದು ಸಕಲರಾಜ್ಯಗಳವರಿಂದಲೂ ಹೊಗಳಿಸಿಕೊಳ್ಳುತ್ತಿದ್ದಾರೆ ಸುಮಾರು ಮೂರು ಸಹಸ್ರ ರಷ್ಯಾ ಸೈನಿಕರೂ ಮುದ್ದೇದಾರರೂ ಖೈದಿಗಳಾದರು ಮಹಾ ಪ್ರತಾಪಶಾಲಿಯಾದ ರಷ್ಯಾ ಅಡ್ಮಿರಲ್ ರಾಸ್‌ಡೆಸ್ಟ್‌ವೆನ್‌ಸ್ಕಿಯವರು ಗಾಯಪಟ್ಟು ಕೈಸೆರೆ ಸಿಕ್ಕಿ ಜಪಾನ್‌ನವರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ಈತನ ಕೈಕೆಳಗಿದ್ದ ಮೂವರು ಅಡ್ಮಿರಲ್‌ಗಳು ಕೈಸೆರೆಯಾದರು. ಜಪಾನ್‌ನವರ ಕಡೆ ಮೂರು ದೊಡ್ಡ ದೋಣಿಗಳೂ ಸುಮಾರು ೮೦೦ ಸೈನ್ಯವೂ ನಷ್ಟಹೊಂದಿದವು.

ಇನ್ನು ರಷ್ಯಾದವರು ಈ ಯುದ್ಧದಲ್ಲಿ ಜಯಶೀಲರಾಗುತ್ತಾರೆಂಬ ಭರವಸೆ ತಪ್ಪಿಹೋಯಿತು. ವೃಥಾ ಪ್ರಾಣ ನಷ್ಟವಾಗುವುದು ಬಹಳಾ ದುಃಖಕರವೆಂದು ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ತಿಳಿದು ರಷ್ಯಾ ಜಪಾನ್‌ನವರಿಗೆ ಕರಾರು ಮಾಡಿಸಬೇಕೆಂದು ಪ್ರಯತ್ನಪಡಲಾರಂಭಿಸಿದ್ದಾರೆ. ಇವರ ಮಧ್ಯಸ್ಥಿಕೆಯು ಸಾರ್ಥಕಹೊಂದಿ ಈ ಮಹಾ ದುಃಖಕರವಾದ ಯುದ್ಧವು ಬೇಗನೆ ಕೊನೆಗಾಣಲೆಂದು ಪ್ರಾರ್ಥಿಸುತ್ತೇವೆ.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

22



ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲರಾ, ಉಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ—"ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಮಾರು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಳಗಿನ ವಿಳಾಸದಾರರಲ್ಲಿ ಸಿಕ್ಕುವದು ಬಂದಿಕ.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಒಳದೇಶದ ವೃತ್ತಾಂತಗಳು.

ಮ॥ ಬಿ. ವೆಂಕಟಾಚಾರ್ಯರು "ಗೀತೋಕ್ತ ಕರ್ಮ" ವೆಂಬ ಸಣ್ಣ ಪುಸ್ತಕವನ್ನು ರಚಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿದಾರೆ.

****

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಕಾಂಪೌಂಡಿನಲ್ಲೇ ಸರ್ಕಾರಿ ಕಣ್ಣಾಸ್ಪತ್ರೆಯನ್ನೂ ಕಟ್ಟಿಸಬೇಕೆಂದು, ಅದಕ್ಕೆ ಸಧ್ಯ ೭೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

****

ಮಾಗಡಿ ಸ್ಕೂಲ್ ಮಾಸ್ಟರ್ ಮ॥ ವಿಶ್ವೇಶ್ವರ ಶಾಸ್ತ್ರಿಗಳು "ವ್ಯಾಕ್ಯುಲರ್ ಕನ್ನಡದ ಐದನೇ ರೀಡರಿನ ನೋಟ್ಸ್" ರಚಿಸಿ, ಒಂದು ಪ್ರತಿಯನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ

****

ನಮ್ಮ ಹೊಸ ರೆಸಿಡೆಂಟರಾದ ಮ॥ ಎ. ವಿಲ್ಲಿಯಂಸ್ ಯವರು ಕಳೆದ ಶನಿವಾರ ರಾಜಧಾನಿಗೆ ಬಂದು ಶ್ರೀಮನ್ ಮಹಾರಾಜರವರ ಭೇಟಿಮಾಡಿಕೊಂಡು ಆ ದಿನ ರಾತ್ರಿಯೇ ಬೆಂಗಳೂರಿಗೆ ಪ್ರಯಾಣ ಮಾಡಿದರು.

****

ಬೆಂಗಳೂರು ಸಿಟಿ ಹೊಸ ತರಗುಪೇಟೆಯ ವರ್ತಕ ಮಹಾಜನರು ಕಳೆದ ಎಂಪೈರ್ ಡೇ ಎಂಬ ಉತ್ಸವದ ದಿನ ಚಂದಾ ಕೂಡಿಸಿ ೪,೦೦೦ ಬಡಬಗ್ಗರಿಗೆ ಅನ್ನದಾನಮಾಡಿದರೆಂದು ಒಬ್ಬ ಬಾತ್ಮಿದಾರರು ತಿಳಿಸಿದಾರೆ.

****

ಉತ್ತರ ದೇಶದಲ್ಲಿ ಭೂಕಂಪಕ್ಕೆ ಸಿಕ್ಕಿದ ಪ್ರಜೆಗಳ ಕಷ್ಟನಿವಾರಣೆಗಾಗಿ ಬೆಂಗಳೂರಿನಲ್ಲಿ ರತ್ನಾವಳಿ ನಾಟಕದ ಕಂಪನಿಯವರು ಒಂದು ನಾಟಕವನ್ನು ಆಡಿ ಉತ್ಪತ್ತಿಯಾಗುವ ಹಣವನ್ನು ಧರ್ಮ ಕೊಡುವರೆಂದು ಕೇಳಿ ಸಂತೋಷಪಡುತ್ತೇವೆ.

****

ಬೆಂಗಳೂರು ಚೀಫ್ ಕೋರ್ಟ್ ಜಡ್ಜರಾದ ಮ॥ ಎ. ರಂಗಸ್ವಾಮ್ಯಯಂಗಾರ್ರಿಗೆ ಒಂದು ತಿಂಗಳ ರಜಾ ಸ್ಯಾಂಕ್ಷನ್ ಆಗಿದೆ ಎಂತಲೂ ಮೈಸೂರು ಡಿಸ್ಟ್ರಿಕ್ಟ್ ಜಡ್ಜರಾದ ಮ॥ ಎಂ. ರಾಮಸ್ವಾಮ್ಯಯ್ಯರವರು ಅವರ ಕೆಲಸವನ್ನು ಬದಲೀ ನೋಡುತ್ತಾರೆಂತಲೂ ಪ್ರಕಟವಾಗಿದೆ.

****

ಬೆಂಗಳೂರಿನಿಂದ ೨೨ ಮೈಲಿ ದೂರದಲ್ಲಿರುವ ಯಲಹಂಕದಲ್ಲಿ ಬಹು ವಿಸ್ತಾರವಾದ ಮತ್ತು ಶ್ರೇಷ್ಠವಾದ ಚಿನ್ನದ ಗಣಿ ದೊರಕಿದೆ ಅದು ೧೦ ಮೈಲಿ ಚೌಕವೆಂತಲೂ ಇದನ್ನು ಮ॥ ಫ್ರೆಡ್ ದೆವೇರೊ ಮ॥ ಡಿ. ಜಿ. ಶ್ಲೇ ಎಂಬ ಇಬ್ಬರು ಪಡಿಸಿಕೊಂಡಿದಾರೆಂತಲೂ ತಿಳಿಯುವುದು.

ಮಂಡ್ಯದ ತಾಲ್ಲೂಕು ಕೆರಗೋಡಿಗೆ ಸೇರಿದ ಕಲ್ಲಹಳ್ಳಿಯಲ್ಲಿ ಸುಮಾರು ೩೦ ವರ್ಷದ ಲಿಂಗೈಯನೆಂಬುವನು ಕುರಿ ಕಾಯುತ್ತಿರುವಾಗ್ಗೆ ಮಳೆ ಗುಡುಗು ಮಿಂಚು ಬಂದೂ ಇಲ್ಲದೆ ಆಕಸ್ಮಾತ್ತಾಗಿ ಬಿದ್ದು ಮೃತಪಟ್ಟನೆಂತಲೂ ಇವನ ತಲೆಯಲೂ ನಡುವಿನ ಬಟ್ಟೆಯೂ ಸುಟ್ಟಿದ್ದವೆಂತಲೂ ತಿಳಿಯುವುದು

****

ಮೊನ್ನೆ ಭಾನುವಾರ ಸಾಯಂಕಾಲ ರಾಜಧಾನಿಯ ಮುಂದೆ ಸರ್ಕಸ್ ಡೇರಾದಲ್ಲಿ ಬೆಂಕಿಯು, ಸಾಬ್‌ಜಾನ್ ಬ್ಬರಿಗೂ ದೊಡ್ಡ ಕುಸ್ತಿ ಆಯಿತು. ಸಾವಿರಾರು ಜನರು ನೋಡಿದರು. ೧,೫೦೦ ರೂಪಾಯಿಗಿಂತಲೂ ಹೆಚ್ಚಾಗಿ ಆಗಿದೆ, ಕುಸ್ತಿಯ ಫಲಿತಾಂಶವು ಇನ್ನೂ ಇತ್ಯರ್ಥವಾಗಲಿಲ್ಲ

****

ಕೊಳ್ಳೇಗಾಲದಲ್ಲಿ ಮಳೆ ಇಲ್ಲದೆ ಬಹಳ ಜನರು ಕಷ್ಟ ತ್ತಿದಾರೆ. ಗದ್ದೆಗಳು ಸಹ ಬತ್ತಿ ಪೈರುಗಳೆಲ್ಲಾ ಬಾಡಿ ಹೋತ್ತಿವೆ. ಜನಗಳ ಕಷ್ಟ ಇಷ್ಟೇ ಸರಿ ಎಂದು ಹೇಳಲು ಅಸಾ ಮರಹಳ್ಳಿ ಸಂತೆಗೂ ಯಳಂದೂರಿನಿಂದ ಮಾಂಬಳ್ಳಿ ತನಕ ಬಹಳ ಬಿಕ್ಕಟ್ಟಾಗಿತ್ತು. ಈಗ ರಿಪೇರಿ ಆಗುತ್ತಾ ಇದೆ. ಜನ ಈಗ ಈ ರಸ್ತೆಯನ್ನು ನೋಡಿ ಬಹಳ ಸಂತೋಷಪಡುವರು ಎಂದಾಗಿ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

****

ಬೆಂಗಳೂರು ಪಟ್ಟಣದಲ್ಲಿರುವ ಧರ್ಮಾಂಬುಧಿ ಕೆರೆಯ ಮುಚ್ಚಿಬಿಟ್ಟು, ಆಟಕೂಟಕ್ಕೆ ಅನುಕೂಲಿಸುವಂತೆ ಮೈದಾನ ಪಡಬಾರದೇ ಎಂದು ಗವರ್ನಮೆಂಟಿನವರು ಸಿಟಿ ಮ್ಯುನಿಸಿಪಾಲಿಟಿಯವರನ್ನು ಪ್ರಶ್ನೆ ಮಾಡಿದ್ದರು. ಮ್ಯುನಿಸಿಪಾಲಿಟಿಯವರು ವಿಷಯದಲ್ಲಿ ಚರ್ಚೆಮಾಡಿ, ಈ ಕೆರೆಯನ್ನು ಈಗಿರುವಂತೆ ಇಟ್ಟಿರಬೇಕೆಂತಲೂ ದ್ರವ್ಯಾನುಕೂಲವಾಗುವ ಪಕ್ಷಕ್ಕೆ ಸಾ ಕೆರೆಯಿಂದ ನೀರನ್ನು ತಂದುಬಿಟ್ಟು ಆಟಾಡು ಮಾಡಬೇಕೆಂ ತೀರ್ಮಾನ ಮಾಡಿದಾರೆ.

****

ಬರುವ ಮಂಗಳವಾರ ಶ್ರೀಮನ್ ಮಹಾರಾಜರವರ ೨೨ನೆ ವರ್ಷ ವರ್ಧಂತಿಯು ರಾಜಧಾನಿಯಲ್ಲಿ ನೆರವೇರುವುದು. ಆ ಪೇ ಸುಮಾರು ೧೦೦ ಮಂದಿ ಸರ್ದಾರರೂ ದೊರೆಸಾನಿಗಳೂ ಡು ಸ್ಪೆಷಲ್ ರೈಲಿನಲ್ಲಿ ಬಂದು, ಗವರ್ನಮೆಂಟ್ ಹೌಸ್ ಬಂಯಲ್ಲಿ ಶ್ರೀಮನ್ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವ ತಾ. ೧೬ ರಿಂದ ತಾ. ೨೧ರ ವರೆಗೆ ಪ್ರತಿದಿನವೂ ಕುದುರೆ ಜೂ ಪೊಲೋ ಪಂದ್ಯವು ನಡೆಯುವವು. ಸರ್ದಾರರೆಲ್ಲಾ ಮರು ವಾಪಸು ಪ್ರಯಾಣಮಾಡುತ್ತಾರೆ.

****

ಒಬ್ಬಾನೊಬ್ಬ ಬಾತ್ಮಿದಾರರು ಬರೆಯುವುದು—ಅರಕಲಗೂ ತಾಲ್ಲೂಕು ಕೊಣನೂರು ಹೋಬಳಿಗೆ ಸೇರಿದ ಚಿಮ್ಮತ್ತಿ ಹನಡು ಹಳ್ಳಿಗೂ ಮಳೆ ಇಲ್ಲದೆ ದನವಿಗೂ ಮನುಷ್ಯನಿಗೂ ಕುಡಿವದಕ್ಕೆ ನೀರಿಲ್ಲ. ಜನರೆಲ್ಲಾ ಯೋಚನೆಮಾಡುತ್ತಾ ಇರು ಕೆಲವರು ನಿಲುಕಾಂಬಹ ಗ್ರಾಮದಲ್ಲಿ ಇಲ್ಲಿಗೆ ೯ ತಿಂಗಳಲ್ಲಿ ಶ್ರವ ಕಿತ್ತು ನೋಡಬೇಕೆಂದು ಕಿತ್ತು ನೋಡುವಷ್ಟು ಈಗ ಶ್ರವದಂತೆ ಇತ್ತು. ಕಿತ್ತದ್ದು ಮೇ ತಾ. ೩ರಲ್ಲಿ. ಬಹಳ ಜ ನೋಡಿ ಆಶ್ಚರ್ಯಪಟ್ಟರು. ತಕ್ಷಣವೇ ವಿಪರೀತವಾದ ಮ ಬಂತು. ಕುಡಿಯಲಿಕ್ಕೆ ನೀರು ಸಾಕು, ರಾಗಿ ಬಿತ್ತದ ಹೊ ಚನ್ನಾಗಿ ಬಂದಿರುತ್ತೆ ಎಲ್ಲಾ ಜನರೂ ಸಂತೋಷವಾಗಿರುತ್ತಾ

****

ರಾಜಧಾನಿಯಲ್ಲಿ ಸಬ್‌ಟ್ರಾರ್ಡ್ ಮೊಹಲ್ಲಾ ಗುಲಾಂದಸ್ತಗಿ ಎಂಬ ವರ್ತಕರು ಒಂದು ಪತ್ರವನ್ನು ಇಲ್ಲಿನ ರಿಜಿಸ್ಟ್ರಾರ್ ಆನಲ್ಲಿ ಕೊಟ್ಟು ರಿಜಿಸ್ಟರ್ ಮಾಡಿಸಿ ಅದನ್ನು ವಾಪಸು ಕೇಳು ಹೆಡ್ ಗುಮಾಸ್ತೆ ಸುಬ್ಬರಾಯನು ನಾಲ್ಕಾಣೆ ರುಷುವತ್ತು ಕೊಕೆಂದು ಕೇಳಿದನು. ವರ್ತಕನು ಲಂಚ ಕೊಡುವುದಕ್ಕೆ ಒದೆಪ್ಯುಟಿ ಕಮಿಷನರಿಗೆ ಅರ್ಜಿ ಕೊಟ್ಟನು. ಸುಬ್ಬರಾಯನ ಸಸ್ಪೆಂಡ್ ಮಾಡಿ ಅವನ ಮೇಲೆ ಮೊಕದ್ದಮೆ ನಡೆಸುವಂತೆ ಹು ಆಯಿತು. ಟೌನ್ ಮ್ಯಾಜಿಸ್ಟ್ರೇಟರು ಸುಮಾರು ಎರಡು ಳಿಂದ ವಿಚಾರಣೆ ಮಾಡಿ, ಅಪರಾಧಿಗೆ ಮೊನ್ನೆ ಸೋಮವಾರ ರೂಪಾಯಿ ಜುಲ್ಮಾನೆ ಹಾಕಿರುತ್ತಾರೆ. ಈಗ ಅಪರಾಧಿಯು ಅಪೀಲು ಮಾಡುವನೆಂದು ಕೇಳುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಮಿ॥ ಟಿ. ಎಸ್. ಸಿದ್ದಪ್ಪನವರನ್ನು ಸಬ್ ಅಸಿಸ್ಟೆಂಟ್ ಸರ್ಜನ್‌ಗಳ ವರ್ಗದಲ್ಲಿ ಕಳೆದ ಮಾರ್ಚಿ ೨೧ ರಿಂದ ೧ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೈಸೂರು ತಾಲ್ಲೂಕು ಅಮಲ್ದಾರ್ ಮಿ॥ ಟಿ. ವೆಂಕಟರಾಮಯ್ಯನವರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ರಾವ್ ಬಹದೂರ್ ಮಿ॥ ಸಿ. ಮಾಧವರಾಯರವರು ತಮ್ಮ ಇತರ ಕೆಲಸಗಳೊಂದಿಗೆ ಮೇ ೧೭ ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸ್ ಛಾರ್ಜನ್ನು ವಹಿಸಿಕೊಂಡರು.

ಸಬ್ ಅ॥ ಸರ್ಜನ್ ಮಿ॥ ಎಂ. ಜಗನ್ನಾಥಂ ಪಿಳ್ಳೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನದ ಸಬ್ ಜಡ್ಜ್ ಮಿ॥ ಸಿ. ಬಿ. ಶೇಷಗಿರಿ ರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ॥ ಕಮಿಷನರ್ ಮಿ॥ ಸಿ. ಶ್ರೀಕಂಠೇಶ್ವರ ಐಯರಿಗೆ ಕೊಟ್ಟಿದ್ದ ಒಂದು ತಿಂಗಳು ಏಳು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂಭತ್ತು ದಿನಗಳು ಜಾಸ್ತಿ ಮಾಡಿದೆ.

ಅರಸೀಕೆರೆ ತಾಲ್ಲೂಕು ಅಮಲ್ದಾರ್ ಮಿ॥ ಬಿ. ಕೆ. ಲಕ್ಷ್ಮಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೆದಾರ್ ಎಚ್. ಶ್ರೀನಿವಾಸರಾಯರು ತಾಲ್ಲೂಕಿನ ಟಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ಮಿ॥ ಎ. ಕೃಷ್ಣ ಅರಸನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೆದಾರ್ ಲಕ್ಷ್ಮೀನರಸಿಂಹಯ್ಯಂಗಾರರು ಗುಂಡ್ಲುಪೇಟೆ ತಾಲ್ಲೂಕ್ ಅಮಲ್ದಾರರಾಗಿಯೂ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಕೆಲಸ ನೋಡತಕ್ಕದ್ದು.

ಡೆಪ್ಯುಟಿ ಕಮಿಷನರ್ ಮಿ॥ ಎಂ. ನಾರಾಯಣ ರಾಯರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತಷ್ಟೆ. ಅದರ ಜೊತೆಗೆ ಈಗ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಸಬ್ ಪ್ರೊಬೆಷನ್ ಅಮಲ್ದಾರ್ ಮಿ॥ ಪಿ. ಭೀಮಸೇನರಾಯರಿಗೆ ಮಾರ್ಚಿ ೨೯ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರಜಾ ಪೂರೈಸಿದ ಮೇಲೆ ಅವರು ವರ್ಷ ಪಡೆದು ಕೆಲಸ ಬಿಡತಕ್ಕದ್ದು.

ಕಡೂರು ಡಿಸ್ಟ್ರಿಕ್ಟ್ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಸಿ. ಶ್ರೀನಿವಾಸರಾಯರು ೧೯೦೪ ನೇ ಮಾರ್ಚ ೧೧ ರಿಂದ ಮಾರ್ಚಿ ೨೦ ರ ವರೆಗೆ ಮುತ್ತಿಗೆರೆ ತಾಲ್ಲೂಕ್ ಅಮಲ್ದಾರರಾಗಿಯೂ ೧೯೦೪ನೇ ಅಕ್ಟೋಬರ್ ೨೯ ರಿಂದ ನೊವೆಂಬರ್ ೨೦ ರ ವರೆಗೆ ಯಡೆಯೂರು ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರರಾಗಿಯೂ ಕೆಲಸ ನೋಡಿರುತ್ತಾರೆ.

ಮಾರೀಕಣಿವೆ ಡಿವಿಷನ್ ಅ॥ ಇಂಜನಿಯರ್ ಮಿ॥ ಕೆ. ಅನಂತಾಚಾರ್ಯರಿಗೆ ಕೊಟ್ಟಿದ್ದ ೧೯ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ೨೯ ದಿನಗಳು ಜಾಸ್ತಿ ಮಾಡಿದೆ.

ಸಿ. ವಿ. ಎಸ್. ಸಾಂಬಶಿವ ಐಯರಿಗೆ ಮೇ ೧೯ ರಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಭಾರೀ ಕನ್ನ ಕಳುವು.

ತೀರ್ಥಹಳ್ಳಿ ತಾಲ್ಲೋಕು ೧ಗಂಟೆ ನಾಗರಹ ಚಿಕ್ಕಳೂರ ಗ್ರಾಮದ ಅರಮನೆ ತೋಟದ ಅನಂತಯ್ಯನ ಮನೆಗೆ ಕಳೆದ ತಾ. ೨೭ ರಲ್ಲಿ ರಾತ್ರಿ ಕಳ್ಳರು ಹೊರಗಿನಿಂದ ಒಳಕ್ಕೆ ಕನ್ನ ಹಾಕಿ ಗೋಡೆಯಲ್ಲಿ ರಂಧ್ರ ಮಾಡಿ ಒಳಗೆ ಪ್ರವೇಶ ಮಾಡಿ ಸದರಿ ಅನಂತಯ್ಯನ ಆಫೀಸು ಕೋಣೆಗೆ ದಾಟಿಕೊಂಡು ಅಲ್ಲಿ ಪೆಟ್ಟಿಯಲ್ಲಿ ಇದ್ದ ಸುಮಾರು ಎರಡು ಸಾವಿರ ರೂಪಾಯಿನ ಮಾಲುಗಳು ಕದ್ದುಕೊಂಡು ಬಂದದಾರಿಯಲ್ಲಿ ಹೊರಟುಹೋಗಿದ್ದಾಗಿದೆ. ಮಾಲುಗಳ ತಪಸೀಲು ೯೦೦ ರೂಪಾಯಿ ನೋಟುಗಳು, ನಗದು ೩೦೦ ರೂಪಾಯಿಗಳು, ೧,೦೦೦ ಅಥವಾ ೧,೨೦೦ ರೂಪಾಯಿನ ಕ್ರಯ ಬಾಳುವಷ್ಟು ಚಿಂಗ-ದದ ನಗಗಳು, ಈ ರೀತಿ ಮಾಲುಗಳು ಚೋರಿ ಆದಾಗ್ಯೂ ಈ ಅನಂತಯ್ಯನ ಸ್ವಂತ ಮಾಲುಗಳು ಕೂಡ ಅಲ್ಲ. ನಗಗಳು ಆತನ ಕೂತನ ಮಗಳ ಸಂಬಂಧದಲ್ಲಿ ಯಾರವು ತಂದದ್ದಾಗಿದೆ. ಈ ರೂಪಾಯಿಗಳು ಆತನಿಗೆ ಸಾಲ ಕೊಟ್ಟಿರುವಂಥವನು ಸಾಲ ತೀರಿಸಲಿಕ್ಕಾಗಿ ಕಡಿಮೆ ಬಡ್ಡಿಯಲ್ಲಿ ಬೇರೊಬ್ಬರು ಸಾವಕಾರರಲ್ಲಿ ಸಾಲ ತಂದು ಇಟ್ಟಂಥಾದ್ದಾಗಿತ್ತು. ಆದರೆ ಜಾಗ್ರತೆಯಿಂದ ಈ ಮೊದಲೆ ಕಾಲಗಾರರಿಗೆ ಕೊಡುತ್ತ ಇದ್ದರು. ಆದರ ಲಗ್ನದ ಗಲಾಟೆಯಿಂದ ನಾಮತ್ತು ಇಟ್ಟುಕೊಂಡಿದ್ದರು. ಈ ಮಲಕೀಮೆ ಪ್ರಾಂತ್ಯ ಮಳೆಗಾಲ ಪ್ರಾರಂಭವಾಗುತ್ತಾ ಬಂದಾಗ್ಯೂ ಕಳುವು ದಿಕಾಯಿತಿ ಇನ್ನು ನಿಂತಿಲ್ಲ. ಆದರೆ ಸರ್ಕಾರದವರು ಇಂಥಾ ಕೇಸುಗಳನ್ನು ರ್ ತರಪುರದಿನಿಂದ ಪತ್ತೆ ಮಾಡಿದಾಗ್ಯೂ ಈ ಕೇಸು ಜಾಸ್ತಿಯಾಗುತ್ತಾ ಬರುವದು. ಪೊಲೀಸಿನವರು ಕೇಸು ಪತ್ತೆಗಾಗಿ ಬಂದರೆ ಕೋರ್ಟಿನ ಜೋಬು ಬಾಧಿ ಆಗಲು ಅಪೇಕ್ಷೆ ಮಾಡುವದರಿಂದಲೆ ಕೇಸು ಜಾಸ್ತಿ ಆಗಿ ಬಡವರ ಮುಂಡೆ ಹೊಡಿಯಲಿಕ್ಕೆ ಅಸ್ಪದನಾಗುತ್ತೆ. ಈಗು ಪೊಲೀಸಿನವರು ನಿದಾಶಿಯಿಂದ ಕೇಸು ಪತ್ತೆಮಾಡಿ ಚಾರ್ಜಿಷೀಟು ಡಿಸ್ಟ್ರಿಕ್ಟ್ ಆಫೀಸರಲ್ಲಿಗೆ ತೆಗೆದುಕೊಂಡು ಹೋದಾಗ್ಯೂ ಲಾಯರುಗಳು ಖುಲಾಸ ಮಾಡಿಸದೆ ಬಿಡುವದೇ ಕಡಿಮೆ. ಈ ವಿಚಾರದಿಂದ ಕೋರ್ಟಿನ ಜೋಬನ್ನು ಯಾಕೆ ಗಟ್ಟಿಮಾಡಬಾರದು ? ಆದರೆ ಈ ಅರಮನೆ ತೋಟದ ಕೇಸು ಪತ್ತೆಗೆ ಖುದ್ದ ಹೇಳ ತಾಲ್ಲೋಕ್ ಅಮಲ್ದಾರರವರು ಪೊಲೀಸು ಇನ್ಸ್‌ಪೆಕ್ಟರವರು ಜಮಾದಾರರು ಮುಂತಾದವರೆಲ್ಲಾ ಸ್ಥಳಕ್ಕೆ ಬಂದಿದಾರೆ. ಈವಾಗ ಮೂರು ನಾಲ್ಕು ದಿವಸಗಳನ್ನು ಗುಮಾನಿಯಾಗಿ ಹಿಡಿದಿದಾರೆ. ಮಾಲುಗಳು ಯಾವದೂ ಸಿಕ್ಕಿಲ್ಲ. ಇಂಥಾ ಕೇಸುಗಳು ಪತ್ತೆ ಆಗದೆ ಹೋದರೆ ಇನ್ನು ಮುಂದೆ ಈ ಮಲಕೀಮೆಯಲ್ಲಿ ಜನರು ವಾಸಮಾಡಿಕೊಂಡು ಇರುವದು ಬಹಳ ಕಷ್ಟವಾಗಿದೆ. ಅದು ಹ್ಯಾಗೆಂದರೆ ಅರ್ಧ ಮೈಲು ಮುಕ್ಕಾಲು ಮೈಲಿಗೆ ಒಂದೊಂದು ಮನೆಗಳು ಇರುತ್ತವೆ. ಹೀಗಿರುವಲ್ಲಿ ಇಂಥಾ ಕಳ್ಳರಿಗೆ ಹಿಡಿದು ಶಿಕ್ಷಿಸದೆ ಇದ್ದರೆ ಇವರಿಗೆ ಇದೇ ವೃತ್ತಿಯಂತಾ ತಿಳಿದು ಇದಕ್ಕೆ ಭದ್ರಪಡಿಸದೆ ಬಿಟ್ಟಾರೆ. ಆದರೆ ಈ ಕೇಸಿಗೆ ಸೇರಿದವರು ಸದರಿ ಅನಂತಯ್ಯನ ಮನೆ ಒಳಗಿನ ಅಂದಾಜು ತಿಳಿದವರಲ್ಲದಿದ್ದರೆ ಅವರು ಕೋಣೆ ದಾಟಿಕೊಳ್ಳುವಲ್ಲಿಯೋ ಕನ್ನ ಹಾಕುತ್ತಾ ಇದ್ದರೇ. ಹೊರಗಡೆಗೆ ರಂಧ್ರಮಾಡಿದ್ದು ಕೀರಾ ಕೋಣೆಗೆ ಮಾತ್ರವಲ್ಲದೆ ಇನ್ನು ಯಾವ ಒಳಕ್ಕಾದರು ಹಾಗಿಲ್ಲಾ. ಈ ಪ್ರಾಂತ್ಯ ಬೈಲು ಸೀಮೆ ಜನಗಳು ಇನ್ನೂ ಇದಾರೆ. ಮಳೆಗಾಲ ಪ್ರಾರಂಭವಾದಾಗ್ಯೂ ಇವರುಗಳು ಇನ್ನು ಊರು ಸೇರಿಲ್ಲ.

ಚಾಕ್ಕಿದಾರ್.

ಮಿ॥ ಯೂಜೆನ್ ಸಾಂಡೋ ಎಂಬ ಜಟ್ಟಿಯು. ಮದರಾಸಿಗೆ ಬಂದಿರುತ್ತಾನೆ.

ಮಿ॥ ಯೂಜೆನ್ ಸಾಂಡೋ ಎಂಬ ಜಟ್ಟಿಯು ಹಿಂದಿನ ಗುರುವಾರ ಮದರಾಸ್ ಪಟ್ಟಣಕ್ಕೆ ಬಂದಿರುತ್ತಾನೆ. ಈತನು ಪ್ರಪಂಚದಲ್ಲೆಲ್ಲಾ ಮಹಾ ಕಾಯಪುಷ್ಟನಾದ ಪುರುಷನೆಂದೂ ಶರೀರವನ್ನು ಬೆಳೆಸಿ ಗಟ್ಟಿ ಮಾಡಿಕೊಳ್ಳುವುದಕ್ಕೆ ನವೀನವಾದ ಸಾಧನಾಭ್ಯಾಸಗಳನ್ನೂ ಉಪಕರಣಗಳನ್ನೂ ಕಂಡು ಹಿಡಿದವನೆಂದೂ ಸಮಸ್ತ ದೇಶಗಳಲ್ಲೂ ಇರುವ ಎಲ್ಲಾ ವಯಸ್ಸಿನವರಿಗೂ ಕಾಯಪುಷ್ಟಿಯನ್ನೂ ಶರೀರ ಸೌಖ್ಯವನ್ನೂ ಕಾಪಾಡಿಕೊಳ್ಳುವುದಕ್ಕೂ ಅಭಿವೃದ್ಧಿ ಪಡಿಸಿಕೊಳ್ಳುವುದಕ್ಕೂ ಉಪದೇಶ ಮಾಡತಕ್ಕವನೆಂದೂ ಪ್ರಸಿದ್ಧಿ ಹೊಂದಿರುತ್ತಾನೆ. ಇವನ ದೇಹದ ಖಂಡಗಳ ಬೆಳವಳಿಗೆಯೂ ಅಪೂರ್ವವಾದದ್ದಾಗಿದೆ. ಈತನ ಶರೀರದ ಅಂಗಾಂಗಗಳ ಪ್ರಮಾಣಗಳು ಎಷ್ಟೆಂದರೆ—ಎತ್ತರ ೫ ಅಡಿ ೯ ಅಂಗುಲ, ಕತ್ತು ೧೮ ಅಂಗುಲ, ಎದೆ ೪೮ ಅಂಗುಲ, ಎದೆ ವಿಸ್ತರಿಸಿದರೆ ೬೨ ಅಂಗುಲ, ನಡು ೩೦ ಅಂಗುಲ, ಕಟಿಪ್ರದೇಶ ೪೨ ಅಂಗುಲ, ತೊಡೆ ೨೭ ಅಂಗುಲ, ಮಣಿ ೧೪ ಅಂಗುಲ, ಕಾಲುಕಂಠ ೧೮ ಅಂಗುಲ, ಗೆಣ್ಣು ೮॥ ಅಂಗುಲ, ಮೇಲಿನ ತೋಳು ೧೯॥ ಅಂಗುಲ, ಮುಂದಿನ ತೋಳು ೧೬॥ ಅಂಗುಲ, ಕೈಗೂಣಿಕಟ್ಟು ೭॥ ಅಂಗುಲ, ವಯಸ್ಸು ೩೬ ವರ್ಷ, ತೂಕ ೨೦೨ ಪೌಂಡು.

ಶಿಷ್ಯರೂ ಕಂಪನಿಯೂ

ಈತನ ಸಂಗಡ ೨೪ ಮಂದಿ ಶಿಷ್ಯರು ಬಂದಿದಾರೆ. ಇವರಲ್ಲಿ ಪ್ರತಿಯೊಬ್ಬನೂ ಒಂದೊಂದು ಜನಾಂಗಕ್ಕೆ ಸೇರಿದವನು. ಇವರು ಆತನ ಅಂಗಸಾಧನೆಯ ಕ್ರಮಗಳನ್ನು ಕಲಿತು ಅಭ್ಯಾಸ ಮಾಡಿ, ತಮ್ಮ ಶರೀರಗಳನ್ನು ಬಹಳ ಪ್ರೇಕ್ಷಣೀಯವಾಗಿ ಬೆಳೆಸಿಕೊಂಡಿದಾರೆ. ಇವರಲ್ಲಿ ಕೆಲವರು ಪಾಶ್ಚಾತ್ಯರಾಗಿದಾರೆ; ಎಲ್ಲರೂ ಪ್ರಖ್ಯಾತರೂ ದೊಡ್ಡಸ್ತಿಕೆಯುಳ್ಳವರೂ ಆಗಿದಾರೆ. ಈ ಕಂಪನಿಯವರು ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬಂದರು. ಅಂದಿನಿಂದ ಕಲ್ಕತ್ತಾ, ಕಾನ್‌ಪುರ, ಲಕ್ನೋ ಮೊದಲಾದ ಪಟ್ಟಣಗಳಿಗೂ ಕಡೆಗೆ ಬೊಂಬಾಯಿಗೂ ಹೋಗಿ ಆಯಾ ಸ್ಥಳಗಳಲ್ಲಿ ಶರೀರ ಸಾಧಕದಿಂದ ಆಗಬಹುದಾದ ಕಾಯಪುಷ್ಟಿಯನ್ನು ಪ್ರಜೆಗಳಿಗೆಲ್ಲಾ ಸಾಕ್ಷಾತ್ತಾಗಿ ಪ್ರದರ್ಶನ ಮಾಡಿರುತ್ತಾರೆ. ಮಿ॥ ಸಾಂಡೋ ಎಂಬ ಮಹಾಬಲದ ಶಕ್ತಿಯನ್ನು ಎಲ್ಲೆಲ್ಲೂ ಜನರು ನೋಡಿ ಬೆರಗಾದಾರು.

ಮೊದಲನೆ ದಿವಸ ಪ್ರದರ್ಶನ

ಮೊದಲನೆ ದಿನ ಪ್ರದರ್ಶಿಸಿದಲ್ಲಿ ಮಿ॥ ಸಾಂಡೋ ಜಟ್ಟಿಯು ತನ್ನ ಸ್ವಂತ ದೇಹವನ್ನು ತೋರಿ, ಅದರಲ್ಲಿ ಆತನೂ ಮತ್ತು ಆತನ ಶಿಷ್ಯರು ಬಹು ಕಸರತ್ತುಗಳನ್ನು ಮಾಡಿ ತೋರಿಸಿದರು. ಈ ಥೇರೆಯನ್ನು ಇದುವರೆಗೆ ಯಾರೂ ನೋಡಿದ್ದಿಲ್ಲ. ಅದರಲ್ಲಿ ೪,೦೦೦ ಜನರು ಕೂತುಕೊಳ್ಳಬಹುದಾದಷ್ಟು ದೊಡ್ಡದಾಗಿಯೂ ನಾಟಕ ಮಂದಿರಗಳಲ್ಲಿರುವಂತೆಯೇ ಪ್ಲಾಟ್ ಫಾರಂ, ಸ್ಟೇಜು ಮುಂತಾದವುಗಳನ್ನುಳ್ಳದ್ದಾಗಿಯೂ ಇರುತ್ತದೆ. ಮೊದಲನೇ ದಿನವೂ ತರುವಾಯ ಆಟ ನಡೆದ ಪ್ರತಿದಿನವೂ ಥೇರೆಯು ತುಂಬಾ ಜನರು ಕಿಕ್ಕಿರಿಯುವಂತೆ ಸೇರುತ್ತಿದ್ದರು. ಒಳಗೆ ಸ್ಥಳವಿಲ್ಲದೆ ಸಾವಿರಾರು ಜನರು ಹೊರಗಡೆಯಲ್ಲಿ ನಿಲ್ಲುವಂತಾಯಿತು. ಅನೇಕರು ಟಿಕೇಟು ಕೊಂಡುಕೊಂಡು ಒಳಕ್ಕೆ ಹೋಗಲು ಅವಕಾಶವಿಲ್ಲದೆ ವಾಪಸು ಹೋದರು. ಸಾಂಡೋವಿನ ಶಿಷ್ಯರು ಮೊದಲು ತಮ್ಮ ಕಸರತ್ತುಗಳನ್ನೆಲ್ಲಾ ಮಾಡಿ ತೋರಿಸಿದರು. ನೋಡಿದ ಜನರು ಸಂತೋಷಪಟ್ಟು ಆಗಾಗ್ಗೆ ಜಯಧ್ವನಿ ಮಾಡುತ್ತಿದ್ದರು. ಕಡೆಗೆ ಸಾಂಡೋ ಜಟ್ಟಿಯೇ ಬಂದು ತನ್ನ ಅದ್ಭುತ ಸಾಮರ್ಥ್ಯಗಳನ್ನು ತೋರಿಸಿದನು. ಅವನು ತನ್ನ ದೇಹದ ಖಂಡಗಳನ್ನು ಒಂದು ಸೇಳೆ ಸೆಳೆದುಕೊಂಡಾಗ ಅವ ಉಕ್ಕಿನಂತೆ ಗಟ್ಟಿಯಾಗುವವು. ತನ್ನ ಅಂಗಗಳನ್ನು ಎತ್ತಿ ಸುತ್ತಿಸಿ ಮಾಂಸಖಂಡಗಳ ಬೆಳವಳಿಗೆಯನ್ನೂ ಕಾಠಿಣ್ಯವನ್ನೂ ಪ್ರಕಾಶಪಡಿಸಿದನು. ಅವನು ತನ್ನ ಎದೆಯನ್ನು ವಿಸ್ತರಿಸಿದನು. ಸಾಧಾರಣವಾಗಿ ಅವನ ಎದೆ ೪೭ ಅಂಗುಲವಿದೆ. ಇದನ್ನು ಅಗಲಮಾಡಿದಾಗ ೬೧ ಅಂಗುಲದ ವರೆಗೆ ಉಬ್ಬಿಕೊಂಡಿತು. ತರುವಾಯ ಅನೇಕ ತರಹ ಸಾಧನೆಗಳನ್ನೂ ಕಾಮರೆಗಳ ಮೇಲೆ ನಿಂತು ಕುಸ್ತಿ ಆಡುವುದನ್ನೂ ತೋರಿಸಿದರು. ಮಿ॥ ಸಾಂಡೋ ಜಟ್ಟಿಯು ಸಂಗೀತದ ಲಯಕ್ಕೆ ಸರಿಯಾಗಿ ತನ್ನ ದೇಹದ ಮಾಂಸಖಂಡಗಳನ್ನು ಕುಣಿಯುವಂತೆ ಮಾಡಿ ತೋರಿಸಿದನು. ತನ್ನ ಶಿಷ್ಯರನ್ನು ಕಬ್ಬಿಣದ ಗುಂಡುಗಳ ಮೇಲೆ ಕೂರಿಸಿ ಅನಾಯಾಸವಾಗಿ ಎತ್ತಿದನು. ಒಂದು, ಎರಡು ಮೂರು ಪ್ಯಾಕ್ ಇಸ್ಪೀಟುಗಳನ್ನು ಕ್ರಮವಾಗಿ ಜೋಡಿಸಿಕೊಂಡು ಬೆರಳುಗಳಿಂದ ಹರಿದು ಎರಡುಚೂರು ಮಾಡಿದನು. ೧೫೬ ಇಸ್ಪೀಟುಗಳನ್ನು ಒಂದೇ ಸಲ ಎರಡು ಪಾಲಾಗಿ ಹರಿಯಬೇಕಾದರೆ ಆತನ ಸಾಮರ್ಥ್ಯವೆಷ್ಟಿರಬೇಕೋ ಊಹಿಸಬಹುದಾಗಿದೆ. ಅತನು ಅಂಗಾತನಾಗಿ ಮಲಗಿ ತನ್ನ ಪಾದಗಳ ಮೇಲೆ ೧೫೬ ಪೌಂಡು ತೂಕ ಕಾಲ್ ಕಬ್ಬಿಣ ಸಲಾಕಿಯನ್ನು ಇಟ್ಟುಕೊಂಡು ಕರೆಯ ಕಡೆಯಿಂದ ೨೦೨ ಪೌಂಡು ಭಾರದ ಇನ್ನೊಂದು ಕಬ್ಬಿಣದ ಗಟ್ಟಿಯನ್ನು ಎತ್ತಿದನು. ತಾನು ಕುದುರೆಯ ಮೇಲೆ ಕೂತುಕೊಂಡು ನೆಲದ ಮೇಲೆ ಮಲಗಿದ್ದವನನ್ನು ತನ್ನ ಒಂದೇ ಕೈಯಿಂದ ಎತ್ತಿ ಕುದುರೆಯ ಮೇಲೆ ಕೂರಿಸಿಕೊಂಡನು. ಕುದುರೆಯ ಮೇಲಿದ್ದ ಹಾಗೆಯೇ ಇನ್ನೂ ಅನೇಕ ವಿಧದಲ್ಲಿ ತನ್ನ ಕಾಯಶಕ್ತಿಯನ್ನು ತೋರಿಸಿದನು. ಕಡೆಯಲ್ಲಿ ಆತನು ಪ್ರಕಾಶಪಡಿಸಿದ ಸಾಮರ್ಥ್ಯವು ಅಪೂರ್ವವಾದದ್ದಾಗಿಯೂ ಪರಮಾಶ್ಚರ್ಯಕರವಾದದ್ದಾಗಿಯೂ ಅದ್ಭುತವಾದದ್ದಾಗಿಯೂ ಇದೆ. ಒಂದು ಉದ್ದವಾದ ಕೋಲಿನ ಮೇಲೆ ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕೂರಿಸಿದ್ದಲ್ಲದೆ ೬೦೦ ಪೌಂಡು ಭಾರವುಳ್ಳ ಕಬ್ಬಿಣದ ಗಟ್ಟಿಗಳನ್ನೂ ಇಟ್ಟು ಎಲ್ಲವನ್ನೂ ಅನಾಯಾಸವಾಗಿ ಸಾಂಡೋ ಜಟ್ಟಿಯು ಎತ್ತಿ ಕೊಡೆಯ ಹಿಡಿವಾಗಿ ಹೊತ್ತುಕೊಂಡನು. ಇಂಥಾ ಅವನ ಶಕ್ತಿಯನ್ನು ನೋಡಿ ಎಲ್ಲರೂ ಪರಮಾಶ್ಚರ್ಯಪಟ್ಟದ್ದು ಸಹಜ ?

ಬೆಂಗಳೂರಿಂದ ಹೋದ ಪೈಲ್ವಾನನ ಕುಸ್ತಿ.

ಮಿ॥ ಸಾಂಡೋ ಜಟ್ಟಿಯು ಮೇಲೆ ಹಿಂದುಸ್ಥಾನದಲ್ಲಿ ಅನೇಕರು ಕುಸ್ತಿ ಮಾಡುವುದಾಗಿಯೂ ಆತನು ಇದಕ್ಕೆ ಅವಕಾಶ ಕೊಡಬೇಕೆಂತಲೂ ಆತನಿಗೆ ಬರೆದಿದ್ದರು. ಮಿ॥ ಸಾಂಡೋ ಜಟ್ಟಿಯು ಅವರಿಗೆಲ್ಲಾ ಮೊದಲು ತನ್ನ ಶಿಷ್ಯರ ಮೇಲೆ ಕುಸ್ತಿ ಮಾಡಬಹುದೆಂತಲೂ ಹಾಗೆ ತನ್ನ ಕಡೆಯವರನ್ನು ಕುಸ್ತಿಯಲ್ಲಿ ಸೋಲಿಸಿದರೆ ಪ್ರತಿ ಒಂದು ಸೋಲಿಗೂ ತಾನೇ ಗೆದ್ದವನಿಗೆ ೧೦೦ ರೂಪಾಯಿ ಸಂತೆ ಬಹುಮಾನ ಕೊಡುತ್ತೇನೆಂತಲೂ ತಿಳಿಸಿದನು. ಈ ಕರಾರಿನಂತೆ ಅನೇಕ ಹಿಂದು ಪೈಲ್ವಾನರು ಕುಸ್ತಿ ಮಾಡುವುದಕ್ಕೆ ಒಪ್ಪಿಕೊಂಡಿದಾರೆ. ಬೆಂಗಳೂರಿನಿಂದ ಇಬ್ಬರು ಮೂವರು ಪೈಲ್ವಾನರು ಕಳೆದ ವಾರ ಕುಸ್ತಿ ಮಾಡುವುದಕ್ಕಾಗಿ ಮದರಾಸಿಗೆ ಹೋದರು. ಕಳೆದ ಶುಕ್ರವಾರ ರಾತ್ರಿ ಮಿ॥ ಸಾಂಡೋವಿನ ಥೇರೆಯಲ್ಲಿ ಜನರು ಭರ್ತಿಯಾಗಿ ಈ ಕುಸ್ತಿಯನ್ನು ನೋಡಬೇಕೆಂದು ಕಾದಿದ್ದರು. ಬೆಂಗಳೂರಿಂದ ಹೋಗಿದ್ದ ಮಹಬೂಬ್ ಖಾನ್ ಎಂಬೊಬ್ಬ ಪೈಲ್ವಾನನಿಗೂ ಮಿ॥ ಸಾಂಡೋ ಜಟ್ಟಿಯ ಶಿಷ್ಯರಲ್ಲಿ ಒಬ್ಬನಾದ ನ್ಯೂಜಿಲಾಂಡ್ ಸೀಮೆಯ ಜಟ್ಟಿಗೂ ಕಾಳಗವಾಯಿತು. ಸೋಲು ಗೆಲುವನ್ನು ಗೊತ್ತುಮಾಡುವುದಕ್ಕೆ ಮದರಾಸಿನ ಒಬ್ಬ ಜಟ್ಟಿಯನ್ನು ನೇಮಿಸಿ, ಕುಸ್ತಿಗೆ ೨೦ ನಿಮಿಷ ಮಾತ್ರ ಗೊತ್ತುಮಾಡಿದರು. ಕುಸ್ತಿ ಪ್ರಾರಂಭವಾಯಿತು. ನೋಟಕರೆಲ್ಲಾ ಉತ್ಸಾಹದೊಡನೆ ಕಣ್ಣು ಬಿಟ್ಟುಕೊಂಡು ನೋಡುತ್ತಿದ್ದರು. ಇಬ್ಬರೂ ಸ್ವಲ್ಪ ಹೊತ್ತು ಹೆಣಗಾಡಿದರು. ಕಡೆಗೆ ಬೆಂಗಳೂರಿನ ಪೈಲ್ವಾನನು ನ್ಯೂಜಿಲಾಂಡಿನ ಜಟ್ಟಿಯ ಮೇಲೆ ನುಗ್ಗಿ ಏಕಾಏಕಿ ಕೆಳಕ್ಕೆ ಕೆಡವಿಕೊಂಡನು. ಆದರೆ ನ್ಯೂಜಿಲಾಂಡಿನವನು ಬೋರಲಾಗಿ ಬಿದ್ದು ಹಾಗೇ ಮಲಗಿದನು. ಇವನ ಬೆನ್ನಿಗೆ ಬಂದ ಪೈಲ್ವಾನನು ಅವನನ್ನು ಬೆನ್ನು ಮಾಡಬೇಕೆಂದು ತನ್ನ ಕೈಲಾದಷ್ಟೂ ಸಾಹಸ ಮಾಡಿದನು. ಅವನು ಬೇರೆ ಬೆನ್ನಾಗಲಿಲ್ಲ. ಅಷ್ಟರೊಳಗೆ ೨೦ ನಿಮಿಷ ಮುಗಿಯಿತು. ಜಟ್ಟಿಯು ಸೀಟಿ ಹಾಕಿದನು. ಇಬ್ಬರೂ ಎದ್ದುಬಿಟ್ಟರು. ಕಾಳಗವು ಸಮಾಪ್ತವಾಯಿತು.

ಐದಾರು ನಿಮಿಷಗಳ ಮೇಲೆ ಸಾಂಡೋ ಜಟ್ಟಿಯು ತನ್ನ ಇನ್ನೊಬ್ಬ ಶಿಷ್ಯನನ್ನು ಕರೆದು ತಂದು ಮಹಬೂಬ್ ಖಾನನ ಮೇಲೆ ಕುಸ್ತಿಗೆ ಬಿಟ್ಟನು. ಈ ಶಿಷ್ಯನು ಸ್ವಿಟ್ಜರ್ಲೆಂಡ್ ದೇಶದವನು. ಇವರಿಬ್ಬರೂ ಕುಸ್ತಿಯನ್ನು ಪ್ರಾರಂಭ ಮಾಡಿದರು. ಸ್ವಲ್ಪ ಹೊತ್ತು ಒಬ್ಬನಿಗೂ ಪಟ್ಟುಗಳ ಅವಕಾಶವಾಗಲಿ ? ಕೈದೆ ಇಬ್ಬರೂ ದೂರ ದೂರದಲ್ಲೇ ಹೋರಾಡುತ್ತಿದ್ದರು. ಎಲ್ಲರೂ ವಿಸ್ಮಯ ಹೊಂದಿ ಕಾಳಗವನ್ನು ನೋಡುತ್ತಿರುವಾಗ್ಗೆ ಪೈಲ್ವಾನನು ಸ್ವಿಟ್ಜರ್ಲೆಂಡಿನವನ ಮೇಲೆ ನುಗ್ಗಿ ಅವನ ನಡುವನ್ನು ಹಿಡಿದು ಕೆಳಕ್ಕೆ ಕೆಡವಿಕೊಂಡು ಮೇಲೆ ಬಂದನು. ಸ್ವಿಟ್ಜರ್ಲೆಂಡಿನವನೂ ಹೊಸ ತನ್ನ ಸ್ನೇಹಿತನಂತೆಯೇ ಬೋರಲಾಗಿ ಬಿದ್ದುಕೊಂಡು. ಖಾನನು ಏನೇನು ಮಾಡಿದರೂ ಅವನಿಗೆ ಬೆನ್ನು ಕೊಡದೆ ತುಂಬಾ ಸಾಮರ್ಥ್ಯವನ್ನು ತೋರಿಸಿದನು. ಆದರೆ ಕಡೆಯಲ್ಲಿ ಮಹಬೂಬ್ ಖಾನನು ಸಾಹಸ ಮಾಡಿ ತನ್ನ ಎದುರು ಕಕ್ಷಿಯನ್ನು ಎತ್ತಿ ಬೆನ್ನು ಮಾಡಿದನು. ಕೂಡಲೇ ಜಟ್ಟಿಯು ಸೀಟಿ ಹಾಕಿದನು. ಬೆಂಗಳೂರಿನವನು ಗೆದ್ದನೆಂದು ಥೇರೆಯಲ್ಲಿದ್ದ ನೋಟಕರೆಲ್ಲಾ ಜಯಘೋಷಮಾಡಿ ಚಪ್ಪಾಳೆ ತಟ್ಟಿದರು. ಆಗ ಮಿ॥ ಸಾಂಡೋ ಜಟ್ಟಿಯು ರಂಗಸ್ಥಳಕ್ಕೆ ಬಂದು, ೧೦೦ ರೂಪಾಯಿನ ಚೀಲವನ್ನು ಎತ್ತಿ ಸಭಿಕರ ಎದುರಿಗೆ ಬೆಂಗಳೂರು ಪೈಲ್ವಾನನಿಗೆ ಒಪ್ಪಿಸಿದನು.

ಶನಿವಾರ ರಾತ್ರಿ ಮಿ॥ ಸಾಂಡೋ ಜಟ್ಟಿಯ ಶಿಷ್ಯರಲ್ಲಿ ಇಬ್ಬರ ಮೇಲೆ ಬೆಂಗಳೂರು ಮಹಬೂಬ್ ಖಾನನು ಕುಸ್ತಿ ಮಾಡಿದನು. ಮಹಬೂಬ್ ಖಾನನು ೨೯೪ ಪೌಂಡು ಭಾರವಾಗಿದಾನೆ. ಇವನ ಮೇಲೆ ಕುಸ್ತಿ ಮಾಡಿದವರಲ್ಲಿ ಒಬ್ಬನು ೧೯೯ ಪೌಂಡು ಭಾರವಾಗಿಯೂ ಇನ್ನೊಬ್ಬನು ೧೬೮ ಪೌಂಡು ಭಾರವಾಗಿಯೂ ಇರುವುದರಿಂದ ಬೆಂಗಳೂರು ಪೈಲ್ವಾನನು ಅವರಿಗಿಂತ ಎಷ್ಟು ಬಲಿಷ್ಠನೆಂಬುದು ಗೊತ್ತಾಗುತ್ತದೆ. ಈ ಪೈಲ್ವಾನನು ಮಿ॥ ಸಾಂಡೋ ಜಟ್ಟಿಗಿಂತಲೂ ತೂಕದಲ್ಲಿ ೯೨ ಪೌಂಡು ಜಾಸ್ತಿಯಾಗಿದಾನೆ. ಪೈಲ್ವಾನನು ಆಫ್ರಿಕದ ಜಟ್ಟಿಯನ್ನೂ ನಂತರ ರಷ್ಯಾ ಜಟ್ಟಿಯನ್ನೂ ಎದುರಾಯಿಸಿ ಕುಸ್ತಿಮಾಡಿ ತುಂಬಾ ಸಾಹಸಪಟ್ಟು ಇಬ್ಬರನ್ನೂ ಬೆನ್ನುಮಾಡಿದನು. ಸಭಿಕರೆಲ್ಲಾ ನೋಡಿ ಸಂತೋಷಪಟ್ಟರು. ಮಿ॥ ಸಾಂಡೋ ಜಟ್ಟಿಯು ಪೈಲ್ವಾನನಿಗೆ ೧೦೦ ರೂಪಾಯಿನ ಬಹುಮಾನವನ್ನು ಕೊಟ್ಟನು. ಮೊನ್ನೆ ಸೋಮವಾರ ಅವನ ಇನ್ನಿಬ್ಬರು ಶಿಷ್ಯರು ಈ ಪೈಲ್ವಾನನ ಮೇಲೆ ಕುಸ್ತಿ ಮಾಡುವವರಾಗಿದ್ದರು. ತರುವಾಯ ಇನ್ನೊಬ್ಬ ಪೈಲ್ವಾನನಿಗೂ ಮಿ॥ ಸಾಂಡೋವಿನ ಒಬ್ಬ ಶಿಷ್ಯನಿಗೂ ಕುಸ್ತಿಯಾಗುತ್ತದೆ.

ಮನಸ್ಸಾಕ್ಷಿ

IV. ಅದಕ್ಕೆ ಬೆಳಕು ಬರುವದು ಹೇಗೆ?

ವಸ್ತು ವಿಷಯಗಳನ್ನು ಗ್ರಹಿಸುವದಕ್ಕೂ ಒಳ್ಳೇದನ್ನೂ ಕೆಟ್ಟದ್ದನ್ನೂ ವಿಭೇದಿಸಿ ತಿಳಿಯುವದಕ್ಕೂ ನಮ್ಮಲ್ಲಿ ಅವಯವಗಳಿರುವ ಪ್ರಕಾರವೇ ಇದು ಸರಿ, ಇದು ತಪ್ಪು ಎಂದು ತೀರ್ಪು ಮಾಡತಕ್ಕ ಒಂದು ಅವಯವವು ನಮ್ಮಲ್ಲುಂಟು. ಇದಕ್ಕೆ ಮನಸ್ಸಾಕ್ಷಿಯೆಂದು ಹೆಸರು. ಕಣ್ಣೆಂಬ ಅವಯವವಿರುವದರಿಂದ ಬೆಳಕೆಂಬ ವಸ್ತು ಉಂಟೆಂಬುದಕ್ಕೆ ಹ್ಯಾಗೆ ನಿದರ್ಶನವಾಗಿದೆಯೋ ಹಾಗೆಯೇ ಮನಸ್ಸಾಕ್ಷಿಯಿರುವದರಿಂದ ಮಾನ ವಿಷಯದಲ್ಲಿ ಕೆಲವು ಸಂಗತಿಗಳನ್ನು ಗ್ರಹಿಸುವದಕ್ಕೆ ನಿದರ್ಶನವುಂಟಾಗಿದೆ. ಆದರೆ ಕಣ್ಣಾಗಲಿ ಕಿವಿಯಾಗಲಿ ಮತ್ತೆ ಯಾವ ಅವಯವವಾಗಲಿ ತನ್ನ ವ್ಯಾಪಾರವನ್ನು ತೃಪ್ತಿಕರವಾಗಿ ಮಾಡದೆ ಕೆಟ್ಟು ಹೋಗುವದು ಹ್ಯಾಗೆ ಸ್ವಭಾವವಾಗಿದೆಯೋ ಹಾಗೆಯೇ ನಮ್ಮ ಮನಸ್ಸಾಕ್ಷಿಯಲ್ಲೂ ಕೊರತೆಗಳಿರಬಹುದು. ಅಂಥ ಕೊರತೆಗಳಿಗೆ ನಾವೇ ಕಾರಣರಾಗಿರುತ್ತೇವೆ. ಆದಕಾರಣ ನಮ್ಮ ಮನಸ್ಸಾಕ್ಷಿಯು ಸಂಪೂರ್ಣ ಬೆಳಕುಳ್ಳದ್ದಾಗಿರುವಂತೆ ನಾವು ನೋಡಿಕೊಳ್ಳತಕ್ಕದ್ದು.

ಸಂಪೂರ್ಣ ಬೆಳಕನ್ನು ಹೊಂದಿರುವ ಮನಸ್ಸಾಕ್ಷಿಯೆಂದರೆ ಭಗವಂತನು ಯಾವ ಪ್ರಕಾರ ಸರಿಯನ್ನೂ ತಪ್ಪನ್ನೂ, ಒಳ್ಳೆಯದನ್ನೂ ಕೆಟ್ಟದ್ದನ್ನೂ ಯಥಾಸ್ಥಿತಿಯಾಗಿ ತಿಳಿದು ತೀರ್ಪು ಮಾಡಬಲ್ಲವನಾಗಿದ್ದಾನೋ ಹಾಗೆಯೇ ನಾವೂ ತಿಳಿಯಬಲ್ಲ ಮನಸ್ಸಾಕ್ಷಿಯನ್ನು ಹೊಂದಿದವರಾಗಿರಬೇಕು. ಇಂಥ ಪುರುಷನು ಮಾನವರಲ್ಲಿ ಒಬ್ಬನು ಮಾತ್ರವಿದ್ದನು. ಆತನು ಯಾರಂದರೆ, ಮನುಷ್ಯನಾದ ಕ್ರೀಸ್ತ ಯೇಸುವೇ. ಇದರ ತಾತ್ಪರ್ಯವೇನಂದರೆ—ಯೇಸು ಕ್ರೀಸ್ತನು ಮನುಷ್ಯನಾಗಿ ಸಕಲ ಸಮಯಗಳಲ್ಲಿ ತಂದೆಯಾದ ದೇವರ ಚಿತ್ತವೇನೆಂಬುದನ್ನು ಗ್ರಹಿಸಿಕೊಂಡು ಆ ತಂದೆಯಾದ ದೇವರು ಯಾವದರ ವಿಷಯವಾಗಿ ಹ್ಯಾಗೆ ತೀರ್ಪು ಮಾಡುವನೋ ಅದೇ ಪ್ರಕಾರವಾಗಿ ತಾನೂ ತೀರ್ಪು ಕೊಡುತ್ತಿದ್ದನು. ಇದಕಾರಣ ಮನುಷ್ಯ ಕುಮಾರನಾದ ಕ್ರೀಸ್ತನು ಮನುಷ್ಯರಿಗೆ ನ್ಯಾಯಾಧಿಪತಿಯಾಗಿರತಕ್ಕವನೆಂಬುದು ವ್ಯಕ್ತವಾಯಿತು. "ತಾನು ಮುನ್ನೇಮಿಸಿದ ಆ ಮನುಷ್ಯನ ಮೂಲಕ ಲೋಕಕ್ಕೆ ನೀತಿಯಾಗಿ ನ್ಯಾಯತೀರ್ಪು ಕೊಡುವನು" ಎಂದು ಹೇಳುವ ವೇದವಾಕ್ಯವು ಇದರಲ್ಲಿ ಚನ್ನಾಗಿ ಒಪ್ಪುತ್ತದೆ.

ಈ ವಾಕ್ಯದ ಅಭಿಪ್ರಾಯದ ಎರಡು ಕೆನಾಗಿರುವದು—೧. ತಂದೆಯಾದ ದೇವರು ಕೊಡುವ ತೀರ್ಪು ಮನುಷ್ಯನಾದ ಕ್ರೀಸ್ತೇಸುವೆಂಬ ಮಧ್ಯವರ್ತಿಯ ಮುಖಾಂತರವೇ ಬರುವದು, ೨ ಮನುಷ್ಯ ಕುಮಾರನಾದ ಯೇಸು ಕ್ರೀಸ್ತನ ಗುಣಲಕ್ಷಣಗಳನ್ನೇ ನಾವು ಪ್ರಮಾಣವಾಗಿಟ್ಟುಕೊಂಡು ನಮ್ಮ ಗುಣಲಕ್ಷಣಗಳನ್ನು ಅದಕ್ಕೆ ಹೋಲಿಸಿಕೊಳ್ಳಬೇಕು.

ಕ್ರೀಸ್ತನನ್ನು ಯಾವನು ತನ್ನಲ್ಲಿ ವಾಸಿಸುವ ರೀತಿಯಾಗಿ ಆತನಿಗೆ ತನ್ನನ್ನು ಐಕ್ಯಮಾಡಿಕೊಂಡಿರುವನೋ ಅವನೇ ಕ್ರೀಸ್ತಭಕ್ತನು. ಕಡೆಗಾಲದಲ್ಲಿ ಆಗುವ ನ್ಯಾಯತೀರ್ವಿಕೆಗೂ ದೇವರ ಶ್ರೀಸನ್ನಿಧ್ಯದಲ್ಲಿ ಪ್ರತ್ಯಕ್ಷವಾಗಿ ನಿಲ್ಲುವದಕ್ಕೂ ಯಾವನು ತನ್ನನ್ನು ಸಿದ್ಧಪಡಿಸಿಕೊಳ್ಳಬೇಕೆಂದಿರುವನೋ ಅವನು ಕ್ರೀಸ್ತನ ಮನಸ್ಸಾಕ್ಷಿಯನ್ನು ತನ್ನಲ್ಲಿ ಹೊಂದಿದವನಾಗಿರತಕ್ಕದ್ದು. ಯಾವನು ಕ್ರೀಸ್ತನ ಜೀವವನ್ನು ಎಷ್ಟರ ಮಟ್ಟಿಗೆ ತನ್ನಲ್ಲಿ ಉಂಟಾದವನಾಗಿರುತ್ತಾನೋ ಅಷ್ಟರ ಮಟ್ಟಿಗೆ ಆ ಕ್ರೀಸ್ತನ ಮನಸ್ಸಾಕ್ಷಿಯು ಅವನಲ್ಲಿ ಸಂಪೂರ್ಣ ಸ್ಥಿತಿಯನ್ನು ಹೊಂದುವದರಲ್ಲಿ ಬೆಳೆಯುತ್ತಾ ಹೋಗುವದು.

ಹಳೆಯ ಒಡಂಬಡಿಕೆಯಲ್ಲಿ ಪ್ರವಾದಿಯಾದ ಯೆಶಾಯನೆಂಬವನು ಕ್ರೀಸ್ತನ ನಾಮಾವಳಿಯನ್ನು ಹೇಳುವಲ್ಲಿ ಆತನಿಗೆ "ಆಲೋಚನಾ ಕರ್ತನು" ಎಂಬ ಹೆಸರನ್ನು ಕೊಟ್ಟಿರುತ್ತಾನೆ. ಹಾಗಂದರೆ ಮನುಷ್ಯರೊಳಗಿರುವ ಮನಸ್ಸಾಕ್ಷಿಗಳನ್ನು ಆತನು ಬೆಳಕಿನಿಂದ ತುಂಬಿಸುವನೆಂಬುವದೇ. ಇದೀಗ ಮನುಷ್ಯರ ಬಲಹೀನವಾದಂಥ ಅಶುದ್ಧವಾದಂಥ ಬರೆಹಾಕಿಸಿಕೊಂಡಂತೆ ಕೆಟ್ಟುಹೋಗಿರುವ ಮನಸ್ಸಾಕ್ಷಿಗಳನ್ನು ತಿದ್ದುವಂಥ ಮಹಾ ಯತ್ನವಾಗಿದೆ ಯೆಂದು ತಿಳಿಯಬೇಕು. ಈ ಯತ್ನವನ್ನು ನಾವು ಉಪಯೋಗಿಸಿಕೊಳ್ಳುವದು ಹೇಗೆ? ಹ್ಯಾಗಂದರೆ—

೧ ಕ್ರೀಸ್ತ ಭಕ್ತರಿಗೆ ನಡತೆಯ ಪರಿಮಾಣವಾದ ಕ್ರೀಸ್ತನ ಜೀವಮಾನವನ್ನೂ ಆತನ ಗುಣಲಕ್ಷಣಗಳನ್ನೂ ಎಡೆಬಿಡದೆ ಪರಿಸುತ್ತಿರಬೇಕು.

೨. ಕ್ರೀಸ್ತನ ಗುಣಲಕ್ಷಣಗಳನ್ನು ಪರಿಸುತ್ತಿದ್ದರೆ ಇಂಥಿಂಥ ಸಂದರ್ಭಗಳಲ್ಲಿ ಕ್ರೀಸ್ತನು ಹ್ಯಾಗೆ ನಡಕೊಳ್ಳುತ್ತಿದ್ದನು? ಎಂಬುವದನ್ನು ಗ್ರಹಿಸುವದಕ್ಕೆ ನಮ್ಮ ಬುದ್ಧಿಯೂ ಶಕ್ತಿಯೂ ಹೆಚ್ಚುತ್ತ ಬರುವದು. ಮತ್ತು ಆತನೇನು ಮಾಡುತ್ತಿದ್ದನೋ ಅದನ್ನೇ ನಾನೂ ಈ ಸಂದರ್ಭದಲ್ಲಿ ಮಾಡಬೇಕು ಎಂದೂ ಹಾಗೆ ಮಾಡುವದರಲ್ಲಿ ಎಳ್ಳಷ್ಟಾದರೂ ತಪ್ಪಿದ ಮಾತ್ರದಲ್ಲಿ ನಾನು ಶಿಕ್ಷೆಗೀಡಾದವನೆಂದೂ ಗೊತ್ತಾಗುವದು.

೩. ದಿನದಿನವೂ ನನ್ನ ಜೀವನನ್ನು ಈ ಪ್ರಮಾಣಕ್ಕೆ ಹೋಲಿಸಿ ನೋಡಿಕೊಳ್ಳುತ್ತಾ ಹೋಗತಕ್ಕದ್ದು. ಗೋಡೆಯನ್ನು ಕಟ್ಟುವವನು ಪದೇ ಪದೇ ಸೀಸದ ಗುಂಡನ್ನು ಬಿಟ್ಟು ಗೋಡೆಯು ನೆಟ್ಟಗಿದೆಯೋ ಇಲ್ಲವೋ ಎಂದು ನೋಡಿಕೊಳ್ಳುತ್ತಿರುವಂತೆಯೇ ನಾವೂ ನಮ್ಮ ಮನಸ್ಸಾಕ್ಷಿಯನ್ನು ಕ್ರೀಸ್ತನ ಜೀವಿತಕ್ಕೆ ಹೋಲಿಸಿಕೊಳ್ಳುತ್ತ ಹೋಗಬೇಕು. ಹೀಗೆ ಮಾಡುವದು ಅತ್ಯವಶ್ಯಕವಾಗಿದೆ. ಯಾಕಂದರೆ ನಮ್ಮ ನೆರೆಹೊರೆಯವರು ಬೇರೆ ಬೇರೆ ಮಾದರಿಗಳನ್ನಿಟ್ಟುಕೊಂಡು ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳಲೆತ್ನಿಸುತ್ತಿರುವರು. ನಾವು ಅವರನ್ನು ನೋಡಿ ನಮ್ಮ ಮಾದರಿಯನ್ನು ಅವರ ಮಾದರಿಯಂತೆ ಮಾಡಿಕೊಳ್ಳುವದುಂಟು. ಪ್ರತಿಯೊಬ್ಬ ಮನುಷ್ಯನೂ ತನತನಗೆ ತೋರಿದ ಮಾದರಿಯನ್ನು ಮುಖ್ಯವೆಂದೆಣಿಸಿಕೊಂಡು ನಡೆಯುತ್ತಿರುತ್ತಾನೆ. ಸರ್ವಸಾಧಾರಣವಾಗಿ ಮನುಷ್ಯರು ಇಟ್ಟುಕೊಳ್ಳುವ ಪ್ರಮಾಣವು ಕನಿಷ್ಟವಾಗಿಯೇ ಇರುವುದು ಸ್ವಭಾವ. ಆದಕಾರಣ ಅದನ್ನು ನೋಡಿ ನಮ್ಮ ನಡತೆಯನ್ನು ಕ್ರಮಪಡಿಸಿಕೊಳ್ಳಲುದ್ಯುಕ್ತರಾದರೆ ನಮ್ಮಲ್ಲಿ ಉಂಟಾಗುವ ತೃಪ್ತಿಯು ಯಥಾರ್ಥವಾಗಿರಲಾರದು. ಹೀಗಿರುವದರಿಂದ ಮನುಷ್ಯರಿಗೆಲ್ಲಾ ವಿಹಿತ ಮಹೋನ್ನತವಾದ ಜೀವಿತವನ್ನು ಪರಿಮಾಣವಾಗಿಟ್ಟುಕೊಂಡು ಅದಕ್ಕೆ ನಮ್ಮ ನಡತೆಯನ್ನು ಹೋಲಿಸಿ ತಿದ್ದಿಕೊಳ್ಳುವದು ಸರ್ವೋತ್ತಮವಾಗಿದೆ.

೪ ಮಹೋನ್ನತವಾದ ನಡತೆಯನ್ನು ಎಡೆಬಿಡದೆ ಧ್ಯಾನಿಸುತ್ತಿದ್ದ ಮಾತ್ರದಲ್ಲಿ ಫಲವಿಲ್ಲ. ಅರೋಗ ದೃಢಕಾಯನಾದ ಒಬ್ಬ ಮನುಷ್ಯನನ್ನು ರೋಗಿಯ ಬಳಿಯಲ್ಲಿ ನಿಲ್ಲಿಸಿ ಆ ರೋಗಿಗೆ—ನೀನು ಈ ಬಲಿಷ್ಟನ ದೇಹಪ್ರಕೃತಿಗೆ ನಿನ್ನ ದೇಹಪ್ರಕೃತಿಯನ್ನು ಯಾವಾಗಲೂ ಹೋಲಿಸಿಕೊಳ್ಳುತಲಿರಬೇಕಪ್ಪ ಎಂದು ಹೇಳಿದರೆ ಪ್ರಯೋಜನವೇನು? ಆ ಬಲಿಷ್ಠನ ಬಲವು ರೋಗಿಯ ದೇಹದಲ್ಲಿ ಬರುವಂತೆ ಮಾಡಿದರಷ್ಟೆ ಪ್ರಯೋಜನವಿದ್ದೀತು! ಹಾಗೆಯೇ ಪಾಪರಹಿತನಾದ ಯೇಸು ಕ್ರೀಸ್ತನ ಪವಿತ್ರ ಜೀವಿತಕ್ಕೆ ನಮ್ಮ ಜೀವಿತವನ್ನು ಹೋಲಿಸಿಕೊಂಡ ಮಾತ್ರದಲ್ಲಿ ಪ್ರಯೋಜನವಿಲ್ಲ. ಆ ಪರಿಮಾಣಕ್ಕೆ ನಾವು ಸಮನಾಗಿ ಬರಬೇಕಾದರೆ ಕ್ರೀಸ್ತನೇ ನಮ್ಮಲ್ಲಿಗೆ ಬಂದು ತನ್ನ ಜೀವವನ್ನು ನಮ್ಮಲ್ಲಿ ಅನುಗ್ರಹಿಸಬೇಕು. ಯಾರು ಕ್ರೀಸ್ತನ ಶರೀರವಾದ ಆತನ ಪರಿಶುದ್ಧ ಭಕ್ತಮಂಡಲಿಯನ್ನು ಸೇರುತ್ತಾರೋ ಅವರು ಆ ಶರೀರದ ಅವಯವಗಳಾಗಿ ಆತನ ಜೀವಿತವನ್ನು ಹೊಂದಿ ಪವಿತ್ರರಾಗಿ ಜೀವಿಸಬಲ್ಲವರಾಗುತ್ತಾರೆ. ಈ ಪ್ರಕಾರ ಕ್ರಮಕ್ರಮವಾಗಿ ಮನುಷ್ಯರು ಕ್ರೀಸ್ತನ ಮನಸ್ಸಾಕ್ಷಿಯನ್ನು ಹೊಂದುವವರಾಗುತ್ತಾರೆ.

ಬಲಹೀನವಾದ ಮನಸ್ಸಾಕ್ಷಿಗೆ ದೃಢತ್ವವು ಬೇಕಾಗಿದೆ. ದೇವರ ಚಿತ್ತಾನುಸಾರವಾದದ್ದೇನೆಂಬ ವಿಷಯದಲ್ಲಿ ನಿಸ್ಸಂದೇಹವಾದ ತಿಳುವಳಿಕೆಯು ಅದಕ್ಕೆ ಬೇಕಾಗಿರುತ್ತದೆ. ಇದು ಲಭಿಸಬೇಕಾದರೆ ಕ್ರೀಸ್ತನು ಯಾವದನ್ನು ಮೆಚ್ಚುವನೆಂಬ ವಿಷಯವನ್ನೂ ಆತನು ಬೋಧಿಸಿರುವದರಲ್ಲಿಯೂ ನಡೆದು ತೋರಿಸಿರುವದರಲ್ಲಿಯೂ ವ್ಯಕ್ತವಾಗುವ ನಡತೆಯ ಸೂತ್ರಗಳನ್ನೂ ಪರಿಷ್ಕಾರವಾಗಿ ತಿಳಿಯುವದರಿಂದ ಉಪಾಯವಾಗಿದೆ.

ಅಶುದ್ಧವಾದ ಮನಸ್ಸಾಕ್ಷಿಗೆ ಉತ್ಕೃಷ್ಟವಾದ ಒಂದು ನಡತೆಯ ಪ್ರಮಾಣವೂ ಘನವಾದ ಒಂದು ಉದ್ದೇಶವೂ ಬೇಕಾಗಿದೆ. ಇದಕ್ಕೆ ಪಾಪವು ಎಷ್ಟು ಹೇಯವಾದದ್ದೆಂಬ ಅರಿವು ಹೆಚ್ಚಾಗಿ ಬರಬೇಕಾಗಿದೆ. ಇದು ಕ್ರೀಸ್ತನು ಕೊಟ್ಟಿರುವ ಉನ್ನತವಾದ ಮಾದರಿಯನ್ನು ಧ್ಯಾನಿಸುವದರಿಂದಲೂ ಆ ಪೂರ್ಣಪ್ರಮಾಣವನ್ನು ಹೊಂದುವದು ನಮಗೂ ಸಾಧ್ಯವೆಂದು ನಂಬುವದರಿಂದಲೂ ನಮಗೆ ಲಭಿಸುತ್ತದೆ.

ಬರೆಹಾಕಿಸಿಕೊಂಡಂತೆ ಕೆಟ್ಟುಹೋಗಿರುವ ಮನಸ್ಸಾಕ್ಷಿಗೆ ಗುಣಾಂತರವೆಂಬ ಮಹಾಶ್ಚರ್ಯ ರೂಪವಾದ ಪರಿಹಾರವೇ ಅತ್ಯವಶ್ಯಕವಾಗಿದೆ. ಯಾರು ತನ್ನಲ್ಲಿ ಇಂಥ ಕೊರತೆ ಇದೆಯೆಂದು ಬಗೆಗೊಂಡವರಾಗಿದ್ದಾರೋ ಅವರೊಳಗೆ ಮಾತ್ರವೇ ಈ ಮಹತ್ಕಾರ್ಯವುಂಟಾಗುವದು. "ನನ್ನಿಂದ ಕಲಿತುಕೊಳ್ಳಿರಿ, ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿದ್ದೇನೆ" ಹೀಗೆ ಮಾಡಿದರೆ ಮಾತ್ರ "ನಿಮ್ಮ ಪ್ರಾಣಗಳಿಗೆ ವಿಶ್ರಾಂತಿಯಾಗುವದು" ಎಂದು ಹೇಳಿದ ಆ ಸ್ವಾಮಿಯ ಶಿಷ್ಯರಾಗಬೇಕೆಂದಿರುವವರಲ್ಲಿ ಅಹಂಕಾರವೂ ಆತ್ಮತೃಪ್ತಿಯೂ ಎಂದಿಗೂ ತಲೆಹಾಕಬಾರದು. ಇಂಥ ಪ್ರಬಲವಾದ ಆಟಂಕಗಳಿಗೆ ಅವಕಾಶವನ್ನು ಕೊಟ್ಟರೆ ಅವರೊಳಗೆ ಕಾಲೋಚಿತ ಪರಿಜ್ಞಾನ ಸ್ವರೂಪವಾದ ಬೆಳಕನ್ನೂ ಭಗವಂತನೊಡನೆ ಸಮಾಧಾನ ಸ್ಥಿತಿಯಲ್ಲಿ ಇರಗೊಡಿಸತಕ್ಕ ಆ ಸರ್ವೋತ್ಕೃಷ್ಟವಾದ ಮನಸ್ಸಾಕ್ಷಿಯು ದೊರಕಲಾರದು.

[ಸಶೇಷ.]

ಸಾಲಂಕೃತ ಕನ್ಯಾದಾನ.

[ಬರೆದುಬಂದದ್ದು]

ಕಳೆದ ತಿಂಗಳು ೨೪ ನೇ ಬುಧವಾರ ಮಧ್ಯಾಹ್ನದಲ್ಲಿ ಒಬ್ಬ ಮಹನೀಯನು ತುಂಕೂರು ಡಿಸ್ಟ್ರಿಕ್ಟಿಗೆ ಸೇರಿದ ಕುಣಿಗಲಿನ ರಿಟೈರ್ಡ್ ಗುಮಾಸ್ತೆ ಭೀಮಣ್ಣನವರ ಮನೆಯಲ್ಲಿ ಇಳಿದನು. ನೀವು ಯಾರು? ಏನು ಎಂದು ಕೇಳಲಾಗಿ—ಸ್ವಾಮಿ, ನಾನು ಉಲುಚುಕಮ್ಮೆಯ ಬ್ರಾಹ್ಮಣನು. ನಮ್ಮ ಸ್ಥಳ ಶ್ರೀರಂಗಪಟ್ಟದ ತಾಲ್ಲೂಕು ಪಾಲಹಳ್ಳಿ. ನನ್ನ ಹೆಸರು ವೀಸೋಸುಬ್ಬಣ್ಣ. ಪೂರ್ವದಲ್ಲಿ ಫಾರೆಸ್ಟ್ ಕೆಲಸವಿತ್ತು. ಈಗ ಅರಮನೆಯಲ್ಲಿ ಪಾಂಡಿತ್ಯದ ಸಂಬಳ ದೊರೆಯುತ್ತಿದೆ. ಬೆಂಗಳೂರಿನ ಬಳಿಯಲ್ಲಿರುವ ವೆಂಕಟಾಪುರವೆಂಬ ಗ್ರಾಮದಲ್ಲಿಯೂ ನಾಗಮಂಗಲ ಅಮೃತೂರುಗಳಲ್ಲಿಯೂ ಜಮೀನುಗಳೂ ಲೇವಾದೇವಿಯೂ ಇರುವುದಲ್ಲದೆ ೮—೧೦ ಸಾವಿರ ರೂಪಾಯಿಗಳ ಆಸ್ತಿಯೂ ಇದೆ. ಆದರೆ ನನ್ನ ವ್ಯಸನ ಹೇಳಲಸಾಧ್ಯ. ಯಾಕಂದರೆ ಬಿ ಎಲ್ ಪ್ಯಾಸುಮಾಡಿ, ಅಸಿಸ್ಟೆಂಟ್ ಕೆಲಸದಲ್ಲಿದ್ದ ಒಬ್ಬ ಮಗನು ಸತ್ತುಹೋದದ್ದಲ್ಲದೆ, ನನ್ನ ಇಬ್ಬರು ಹೆಂಡತಿಯರೂ ಕಾಲವಾದರು. ೧೧ ವರುಷಗಳು ತುಂಬಿರುವ ಒಬ್ಬ ಹೆಣ್ಣುಮಗಳು ಮಾತ್ರ ಇರುತ್ತಾಳೆ. ಇವಳನ್ನು ನಾಗಮಂಗಲದ ನಿವಾಸಿಗಳಾದ ಜೋಟಿ ರಾಯರ ಮಗ ಗುಂಡಪ್ಪನವರಿಗೆ ಕೊಡುವಂತೆ ನಿಶ್ಚಯಿಸಿ, ಬಂದಿದ್ದ ಬೀಗರಿಗೆ ಲಾಡು ಚಿರೋಟಿ ಫೇಣಿ ಮೊದಲಾದ ಭಕ್ಷ್ಯಭೋಜ್ಯಗಳಿಂದ ತೃಪ್ತಿಗೊಳಿಸಿ, ಈ ತಿಂಗಳು ೨೮ ನೇ ತಾರೀಖು ಭಾನುವಾರ ವಿವಾಹ ನಡೆಯುವದಕ್ಕೆ ಗೊತ್ತುಮಾಡಿದ್ದೆನು. ಅವರು ದುರಾಶೆಯುಳ್ಳವರಾಗಿ, ನನ್ನ ಆಸ್ತಿಯನ್ನು ಅಳಿಯನಿಗೆ ದಾನಪತ್ರ ಬರೆದು ರಿಜಿಸ್ಟರ್ ಮಾಡಿಕೊಡುವದಾದರೆ ತಾವು ನನ್ನ ಕನ್ಯಾಪರಿಗ್ರಹಿಸುತ್ತೇವೆ ಇಲ್ಲದಿದ್ದರೆ ಆವಶ್ಯಕವಿಲ್ಲವೆಂದು ಹೇಳಿ, ಮೋಸಮಾಡಿದ ಕಾರಣ ಅತಿಶಯವಾಗಿ ಮಾಡಿರುವ ೩೦೦—೪೦೦ ರೂಪಾಯಿ ಸಾಮಾನುಗಳು ನಷ್ಟವಾಗುವುದು. ನೀವು ಸದ್ವಂಶೀಕರಾಗಿಯೂ ಪೂರ್ವಬಾಂಧವ್ಯವುಳ್ಳವರಾಗಿಯೂ ಇರುವುದರಿಂದ ಗುಬ್ಬಿಯಲ್ಲಿರುವ ನಿಮ್ಮ ಮಕ್ಕಳಲ್ಲಿ ಮ॥ ರಾ॥ ಸಂಜೀವಯ್ಯನವರಿಗೆ ಕೊಟ್ಟು, ಇದೇ ಲಗ್ನದ ಮುಹೂರ್ತ ನೆರವೇರಿಸಿ, ಕೃತಾರ್ಥನಾಗಿ ಸಂತೋಷಹೊಂದಬೇಕೆಂಬ ಹಟದಿಂದ ಬಂದಿರುವೆನು ಎಂದು ನಾನಾ ವಿಧವಾದ ಜಂಭಗಳನ್ನು ಹೇಳಿದನು. ಭೀಮಣ್ಣನವರು ಬಹಳ ಸಾತ್ವಿಕರಾದುದರಿಂದಲೂ ಸೊಸೆಯು ಕಾಲವಾದ ದುಃಖದಲ್ಲಿದ್ದುದರಿಂದಲೂ ಹಿತೈಷಿಗಳಾದ ನೆರೆಹೊರೆಯವರ ಪ್ರೋತ್ಸಾಹದಿಂದಲೂ ಸಮ್ಮತರಾಗಿ—ಅಯ್ಯಾ ಕನ್ಯಾದಾನ ಕರ್ತರಿರಾ, ಇಷ್ಟು ತ್ವರೆಯಾಗಿ ಲಗ್ನವಾಗುವುದು ಹ್ಯಾಗೆ? ಬೇರೇ ಲಗ್ನವಿಟ್ಟರೆ ಬೇಕಾದದ್ದು ಅನುಕೂಲಪಡಿಸಿಕೊಳ್ಳುತ್ತೇವೆ ಎನಲು—ಓಹೋ! ಇದೇನು ಭಾವನವರೇ? ಹೀಗೆ ಯೋಚಿಸುವಿರಿ? ದೇವರು ನನಗೆ ತಕ್ಕಮಟ್ಟಿಗೆ ಐಶ್ವರ್ಯ ಕೊಟ್ಟಿರುವುದರಿಂದಲೂ ಒಬ್ಬಳೇ ಮಗಳಿರುವುದರಿಂದಲೂ ಸಾಲಂಕೃತ ಕನ್ಯಾದಾನ ಮಾಡಿಕೊಡುವೆನಲ್ಲದೆ, ನಿಮ್ಮ ವಿಶಿಷ್ಟ ಖರ್ಚುಗಳಿಗೆ ಗುಬ್ಬಿಯಲ್ಲೇ ನಮ್ಮ ಸ್ಥಳದಿಂದ ತಂತೀ ಮನಿಯಾರ್ಡರು ಮೂಲಕ ಬೇಕಾದಷ್ಟು ಹಣವನ್ನು ತರಿಸಿಕೊಡುವೆನು. ತಕ್ಷಣವೇ ಪ್ರಯಾಣವನ್ನು ಬೆಳೆಸಿರಿ ಎಂದು ಹೇಳಿದನು. ಭೀಮಣ್ಣನವರು ಇವನ ಮಾತಿಗೆ ಮರುಳಾಗಿ, ಅವನಿಗೆ ಷೋಡಶೋಪಚಾರಗಳನ್ನು ಮಾಡಿ ಬಂಧುಮಿತ್ರರೊಡನೆ ಸಂಭ್ರಮದಿಂದ ಪ್ರಯಾಣಸ್ಥರಾದರು. ಬೀಗನು ಮನೆಯವರಿಗಿಂತಲೂ ಹೆಚ್ಚಾಗಿ ಗಂಟು ಮೂಟೆಗಳನ್ನು ಕಟ್ಟುತ್ತಾ, ಒಳ್ಳೇ ರೇಷ್ಮೆಯ ವಸ್ತ್ರವನ್ನೂ ಮುಕಟನನ್ನೂ ಮೇಲುಕೋಟೆಯ ಪಂಚೆಯನ್ನೂ ಗೋಚರವಿಲ್ಲದೆ ಸಂಗ್ರಹ ಮಾಡಿಕೊಂಡನು. ಎಲ್ಲರೂ ಗಾಡಿಯಲ್ಲಿ ಕುಳಿತು ಪ್ರಯಾಣವಾಗಿ ಸ್ವಲ್ಪದೂರ ಹೋಗುತ್ತಲೇ—ಭಾವನವರೇ, ತಣ್ಣಗೆ ಗಾಳಿ ಬೀಸುತ್ತದೆ ಚನ್ನಾಗಿ ಹೊದ್ದುಕೊಳ್ಳಿರಿ. ನಾನು ನಿಮ್ಮ ಈ ಬನೀನನ್ನು ಹೊದ್ದುಕೊಂಡು, ನಿಮಗೆ ಮರೆಯಾಗಿ ಕೂತುಕೊಳ್ಳುತ್ತೇನೆ. ಇಗೋ, ನನ್ನ ಹಿತವಾಕ್ಯಗಳನ್ನು ಲಾಲಿಸಿರಿ. ಕೃಷ್ಣನು ಏನೋ ನಿಮಗೂ ನಮಗೂ ಸಂಘಟನೆ ಮಾಡಿದನು. ನಾನು ಏಕಾಂಗಿ. ವಿವಾಹ ಮಾಡಿಕೊಡುತ್ತಲೇ ನನ್ನ ಸಕಲ ಜಮೀನುಗಳನ್ನೂ ಲೇವಾದೇವಿಯನ್ನೂ ನಿಮ್ಮ ಸ್ವಾಧೀನಕ್ಕೆ ಕೊಟ್ಟುಬಿಡುತ್ತೇನೆ. ನಿಮ್ಮ ಗೃಹಕೃತ್ಯಗಳೇನಿದ್ದರೂ ನಾನು ನೋಡಿಕೊಳ್ಳುತ್ತೇನೆ. ನನಗೆ ಅನೇಕ ಅಧಿಕಾರಿಗಳು ಮಿತ್ರರಾಗಿರುವುದರಿಂದ ನಿಮ್ಮ ಮೂರುಮಂದಿ ಮಕ್ಕಳಿಗೂ ಶಿಫಾರಸು ಮಾಡಿ, ದೊಡ್ಡ ಕೆಲಸಗಳನ್ನು ಮಾಡಿಸಿಬಿಡುತ್ತೇನೆ. ಈಗಿರುವ ಅವರ ಕೆಲಸಗಳಿಗೆ ರಾಜೀನಾಮೆ ಕೊಡಿಸಿಬಿಡಿರಿ ಎಂದು ಹೇಳುತ್ತಾ ೯ ಮೈಲಿಯಲ್ಲಿರುವ ಹೆಬ್ಬೂರಿನ ಬಳಿಯಲ್ಲಿ ಅದೇ ರಾತ್ರಿ ಸುಮಾರು ೧ ಘಂಟೆ ಸಮಯದಲ್ಲಿ ಗಾಡಿಯಿಂದಿಳಿದು—ಭಾವನವರೇ, ನನಗೆ ಕಾಲುಗಳೆಲ್ಲಾ ಗಂಟು ಕಟ್ಟಿಕೊಂಡಿತು. ಮತ್ತು ರಾತ್ರಿ ಭೋಜನಮಾಡಿದ್ದು ಅರಗಲಿಲ್ಲ ಎಂದು ನೆಪವನ್ನು ಹೇಳಿ, ೧—೨ ಫರ್ಲಾಂಗಿನವರಿಗೆ ಮಾತನಾಡುತ್ತಾ ನಡೆಯುತ್ತಿದ್ದವನು ಕಣ್ಣಿಗೆ ಕಾಣಿಸಲಿಲ್ಲ. ಗಾಡಿಯಲ್ಲಿದ್ದವರೆಲ್ಲರೂ ಒಂದು ವೇಳೆ ಮುಂದೆ ಮುಂದೆ ಗುಬ್ಬಿಯನ್ನು ಜಾರಿತು ಹೋಗುತ್ತಿರಬಹುದೆಂದು ಊಹಿಸಿ, ಆಗಾಗ್ಗೆ ಕೂಗುತ್ತಲೇ ಇದ್ದರು. ಆ ಮಹನೀಯನ ನೆಲೆಯೇ ಕಾಣದೆ, ಗಾಬರಿಯಾಗಿ ಗುಬ್ಬಿಯನ್ನು ಸೇರಿ, ಎಲ್ಲಿ ಹುಡುಕಿದಾಗ್ಯೂ ಆತ ಗೋಚರವೇ ಆಗಲಿಲ್ಲ. ಭೀಮಣ್ಣನವರು ಮಹದ್ವ್ಯಸನಾಕ್ರಾಂತರಾಗಿ ವಿಸ್ಮಯವನ್ನು ಹೊಂದಿ, ತಮ್ಮ ಗಂಟು ಮೂಟೆಗಳನ್ನು ಮೊದಲು ನೋಡಿಕೊಳ್ಳಲು, ಬನೀನು ಸಮೇತವಾಗಿ ಬೀಗನಿಗೆ ಉಡುಗೆರೆಯಾಗಿದ್ದದ್ದು ಗೊತ್ತಾಯಿತು. ಈ ಸಾಲಂಕೃತ ಕನ್ಯಾದಾನಿಯು ಯಾವ ದೇಶದವನೋ, ಇವನ ಕುಲಗೋತ್ರಗಳೇನೋ, ಈ ಪರಿಯ ಯಾವ ಯಾವ ದೇಶದಲ್ಲಿ ಯಾವ ಯಾವ ರೀತಿ ವೇಷಧಾರಿಯಾಗಿದ್ದನೋ ಮುಂದೆ ಹ್ಯಾಗೆ ಪರಿಣಮಿಸುವನೋ ಇಲ್ಲಿ ಯಾರಿಗೂ ಗೊತ್ತಾಗಲಿಲ್ಲ. ಸಕಲ ಜನರೂ ಇಂಥವರ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕು. ಈತನು ಸ್ವಲ್ಪ ಕಪ್ಪಾಗಿಯೂ ಮುಖವು ಸಿಡುಬಿನ ಕಲೆಗಳಾಗಿಯೂ ಮೂಗಿನ ತುದಿ ಸ್ವಲ್ಪ ಅಣಗಿದ ಹಾಗೂ ಹುಳುಕಾಗಿಯೂ ಇರುವುದು. ಜಾಣರಾದ ಪೋಲೀಸಿನವರಿಗೆ ಎಂದಿದ್ದರೂ ಸಿಕ್ಕುವನು.

ಸ. ಸ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು. -ಎಡಿ.

ಯಥಾರ್ಥವಾದಿ ಮತ್ತು ಹಿತಚಿಂತಕ, ಅರಸಿಕೆರೆ; ಬೆಂಗಳೂರು ಲಕ್ಷ್ಮಯ್ಯ, ಚಿತ್ರದುರ್ಗ.—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು.

ಎಂ. ನಾರಾಯಣ ಸಿಂಗ್, ಬೆಂಗಳೂರು —ಇವರು "ಕ್ರಿಸ್ತ ಪುನರುತ್ಥಾನ" ವೆಂಬೀ ವಿಷಯದಲ್ಲಿ ಬರೆದ ಎರಡು ಲೇಖನಗ

ನ್ನು ಪ್ರಕಟಿಸಿದೆನಷ್ಟೆ. ಈಗ ಮೂರನೇ ಸಲ ಬರೆದಿರುವ ದೀರ್ಘವಾದ ಪತ್ರವನ್ನು ಮುದ್ರಿಸುವದಕ್ಕಾದರೂ, ಅದರಲ್ಲಿ ಅವರು ಸ್ಥಾಪಿಸಲೆತ್ನಿಸಿರುವ "ಜಾನ್ ಯೆಂಬವನು ನಾಲ್ಕನೇ ಸುವಾರ್ತೆಯನ್ನು ಬರೆಯಲಿಲ್ಲ" ವೆಂಬಿವೇ ಮೊದಲಾದ ಕೇವಲ ತಾರ್ಕಿಕ ವಿಷಯಗಳನ್ನು ಚರ್ಚಿಸುವದಕ್ಕಾದರೂ ಇಲ್ಲಿ ಅವಕಾಶ ದೊರಕಲಾರದು. ಮೇಲ್ಕಂಡ "ಪುನರುತ್ಥಾನ" ವೆಂಬ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳನ್ನೆಲ್ಲಾ ನಾವು ಹಿಂದೆಯೇ ನಿರ್ದೇಶಿಸಿರುವ ಪ್ರತಿಗಳನ್ನು ನೋಡಿ ತಿಳಿಯಬಹುದಾಗಿದೆ. ಕೇವಲ ವಾಗ್ವಾದದಿಂದ ಯಾವ ಫಲವೂ ಕಾಣಬರುವದಿಲ್ಲ. —ಎಡಿ.]

ಕರೆಸ್ಪಾಂಡೆನ್ಸ್.

ರಬ್ಬರು ಸೀಲುಗಳ ವಿಚಾರ—ಪ್ರಶ್ನೆ.

ಅಯ್ಯಾ

ಅನೇಕರು ಈಗ ರಬ್ಬರು ಸೀಲುಗಳನ್ನು ಮಾಡಿ ಮಾರುತ್ತಾರಷ್ಟೆ. ಕೆಲವರು ಅವನ್ನು ಮಾಡಬೇಕಾದರೆ ಗವರ್ನಮೆಂಟಿನವರ ಅಪ್ಪಣೆಪಡೆಯಬೇಕೆಂತಲೂ ಕೆಲವರು ಅದಕ್ಕೆಲ್ಲಾ ಯಾವದಕ್ಕೂ ಬೇಕಿಲ್ಲ ಎಂತಲೂ ಹೇಳುತ್ತಾರೆ. ಅದಕ್ಕೆ ಪಡೆಯಬೇಕೋ ಬೇಡವೋ ಎಂಬ ಸಂಗತಿಯನ್ನು ಸರಿಯಾಗಿ ಯಾರೊಬ್ಬರೂ ತಿಳಿಸುವದಿಲ್ಲ. ಇದನ್ನು ಯಾರಾದರೂ ತಿಳಿದವರು ತಮ್ಮ ಪತ್ರಿಕೆ ಮೂಲಕ ತಿಳಿಸುತ್ತಾರೆಂದು ನಂಬಿರುತ್ತೇನೆ.

ಯು ಎಂ ಆಚಾರಿ

ಕಂಟ್ರಾಕ್ಟಿನ ದರಗಳು.

ಅಯ್ಯಾ,

ಕೋಲಾರ್ ಡಿಸ್ಟ್ರಿಕ್ಟ್ ಪ್ಯೂಕಿ ಇಂಜನಿಯರ್ ಇಲಾಖೆಯು ಮಾರಿಫತ್ತು ಕಾಂಗಾರಿ ಮಾಡಿಸುವ ಕೆರೆ ಕಟ್ಟೆಗಳಿಗೆ ಸ್ಟೋನ್ ಪಿಚ್ಚಿಂಗ್ ಎಂಬ ಕಟ್ಟಡಕ್ಕೆ ಇದುವರೆವಿಗೆ ಚದರ ಗಜದ ಮೇರಿಗೆ ರೇಟುಗಳು ಕೊಡಲ್ಪಡುತ್ತಿತ್ತು. ಈಚೆಗೆ ಇದು ತಪ್ಪಿಸಿ, ಕಾಲುಗದ ಅಗಲಕ್ಕೆ ಸಲೆಗಳ ಲೆಕ್ಕಮಾಡಿ, ಹಳೇ ಇಲ್ಲಿನ ಕಟ್ಟಡಕ್ಕೆ ಸಲೆಗದ ೧ಕ್ಕೆ ೬ ಆಣೆಯಂತೆಯೂ ಹೊಸಕಲ್ಲು ಕಟ್ಟಡಕ್ಕೆ ೧ ರೂಪಾಯಿನಂತೆಯೂ ರೇಟು ಕೊಟ್ಟಿರುತ್ತಾರಂತೆ. ಇದರ ಪ್ರಕಾರ ಗುಡಿಬಂಡೆ ತಾಲ್ಲೂಕು ತಿರುಮಣೀ ಗ್ರಾಮದ ಕೆರೆಗೆ ಸ್ಯಾಂಕ್ಷನ್ ಮಾಡಿರುತ್ತಾರೆ ಈ ವಿಷಯದಲ್ಲಿ ಕಂಟ್ರಾಕ್ಟುದಾರರಿಗೆ ತುಂಬಾ ಲುಕ್ಸಾನು ಆಗಿ ಕಟ್ಟಡವು ತುಂಬಾ ದುರ್ಬಲವಾಗುವವೆಂಬುವುದರಲ್ಲಿ ಸಂಶಯವೇ ಇಲ್ಲ. ಈ ರೇಟಿಗೆ ಯಾವ ಕಂಟ್ರಾಕ್ಟರು ಒಪ್ಪುತ್ತಾರೆಯೋ ಪರಮಾಶ್ಚರ್ಯವಾಗಿರುತ್ತೆ.

ಕಂಟ್ರಾಕ್ಟರ ಅಭಿಮಾನಿ.

ತಿಪ್ಪೂರು ಧರ್ಮಛತ್ರವು.

ಅಯ್ಯಾ,

ಹೋದ ತಿಂಗಳು ೨೮ನೇ ತಾ. ರಾತ್ರಿ ತಿಪ್ಪೂರು ಧರ್ಮಛತ್ರದಲ್ಲಿ ಮಲಗಿಕೊಳ್ಳಬೇಕೆಂದು ಹೋದೆನು. ಮಲಗುವಾಗ್ಗೆ ಜೀವಸ್ಥವನಂತೆ ಇದ್ದ ದೀಪವು ೯ ಗಂಟೆಗೆ ಆರಿಸಲ್ಪಟ್ಟು ದಿಡ್ಡೀ ಬಾಗಲು ಹಾಕಲ್ಪಟ್ಟಿತು. ನಾನು ಅರ್ಧರಾತ್ರಿಯಲ್ಲಿ ಹೊರಕ್ಕೆ ಹೋಗಬೇಕಾಯಿತು. ಕಾಣದ ಸ್ಥಳದಲ್ಲಿ ದಿಕ್ಕು ತೋರುವುದು ಹ್ಯಾಗೆ? ಆ ಧರ್ಮ ಛತ್ರವು ಅಧರ್ಮ ಪ್ರವರ್ತಕರ ಹಸ್ತಂಗತದಿಂದ ತಿಮಿರವೇ ಆವರಿಸಿ ನನ್ನ ಪಾಲಿಗೆ ಶೂಲಸ್ತಂಭದಂತಿದ್ದ ಕಂಭಗಳು ಬಡಿದು ಬಡಿದು ಖತಿದು ಛತ್ರ ನಿರ್ಮಾಣಕರ್ತರ ಧರ್ಮದ ಫಲವೋ ಎನ್ನುವ ಹಾಗೆ ರಕ್ತ ಇಳಿಯಿತು. ಬೆಳಗಾಗುವವರಿಗೂ ತಡಕಾಡಿ ನಂತರ ಆಸ್ಪತ್ರೆಯಲ್ಲಿ ಪಳಸ್ತ್ರ ಹಚ್ಚಿಕೊಂಡು ಊರಿನ ದಾರಿ ಹಿಡಿದೆನು. ಎಲೈ ವಾಚಕರೇ, ಧರ್ಮವನ್ನು ಅಧರ್ಮಕ್ಕೆ ತಿರುಗಿಸಿ ಆ ಧರ್ಮ ಕರ್ತನ ಹೆಸರನ್ನು ಈ ವಿಧವಾಗಿ ಹೆಸರುಗೊಳಿಸುವ ಪುಣ್ಯಾತ್ಮರಿಗೆ ಸ್ವಾಮಿ ಎಂಥಾ ಸ್ವರ್ಗವನ್ನು ಬೇರೇ ನಿರ್ಮಾಣ ಮಾಡಬೇಕೋ ನೀವೇ ಯೋಚನೆಮಾಡಿರಿ. ಬಹಳ ದಿವಸ ಸರ್ವಿಸ್ ಮಾಡಿ ಪೆನ್ಷನ್ ಪಡೆದು ವಿಶ್ರಾಂತರಾದ ನರಸಿಂಹಯ್ಯಂಗಾರ್ರು ಈ ವಿಷಯವಾಗಿ ಸರಿಯಾದ ಏರ್ಪಾಡು ಮಾಡಿ ಸ್ವಗೃಹವೆಂಬ ಮಾತನ್ನು ತಪ್ಪಿಸಿ ಪ್ರಯಾಣಿಕರ ಗೃಹವೆಂಬುವೇ ನಿಜವಾಗಿ ಮಾಡಬೇಕು. ಇದೇ ನನ್ನ ಮುಖ್ಯ ಪ್ರಾರ್ಥನೆ.

ಚಿಕ್ಕನಾಯಕನ ಹಳ್ಳಿ ತಾಲ್ಲೂಕು ವೀರಸಂಗಪ್ಪ,
ಪಟೇಲ್, ಮೇಲ್ನಹಳ್ಳಿ.

ವೀರನಗೆರೆ ಪ್ಲೇಗ್ ಕ್ಯಾಂಪಿನ ಆಸ್ಪತ್ರೆ ಅಸಿಸ್ಟೆಂಟರು.

ಅಯ್ಯಾ,

ಒಂದೆರಡು ತಿಂಗಳ ಹಿಂದೆ ಮೈಸೂರು ವೀರನಗೆರೆ ಪ್ಲೇಗ್ ಕ್ಯಾಂಪ್ ಆಸ್ಪತ್ರೆ ಅಸಿಸ್ಟೆಂಟ್ ಮೆ॥ ಹುಸೇನ್ ಅಲ್ಲಿ ಖಾನ್ ರವರ ಮೇಲೆ ಒಂದು ವಿಪರೀತವಾದ ಫಿರ್ಯಾದು ಬಂದಿದೆಯೆಂದೂ ಅದನ್ನು ಅಲ್ಲಿದ್ದ ಕೆಲಸವನ್ನು ಕಳಕೊಂಡ ಒಬ್ಬ ಹೆಂಗಸು ತಂದಿದ್ದಾಳೆಂದೂ ಅದು ಕೋರ್ಟಿನಲ್ಲಿ ದರ್ಯಾಫ್ತಿ ಆಗಲಿಕ್ಕಿದೆಯೆಂದೂ ಬೆಂಗಳೂರಿನ ಒಂದು ಕನ್ನಡ ಪತ್ರಿಕೆಯಲ್ಲಿ ನೋಡಿ ಬಹಳ ವಿಷಾದಪಟ್ಟೆವು. ಸದರಿ ಮೊಕದ್ದಮೆ ಮೊದಲು ಪೊಲೀಸ್ ಕೋರ್ಟಿನಲ್ಲಿಯೂ ತರುವಾಯ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿಯೂ ಬಹು ಖಂಡಿತವಾದ ವಿಚಾರಣೆ ಆಯಿತು. ಈ ಮೊಕದ್ದಮೆಯಲ್ಲಿ ಫಿರ್ಯಾದು ನಿಜವಾದ್ದಲ್ಲವೆಂದೂ ಸದರಿ ದೊಡ್ಡ ಮನುಷ್ಯರ ಹೆಸರನ್ನು ಬದನಾಂ ಮಾಡುವದಕ್ಕಾಗಿ ತಂದಂಥಾ ಫಿರ್ಯಾದೆಂದೂ ತೀರ್ಮಾನವಾಗಿ ಎರಡು ಕೋರ್ಟುಗಳಲ್ಲಿಯೂ ವಜಾ ಮಾಡಿಬಿಟ್ಟರು. ಸದರಿ ಆಸ್ಪತ್ರೆ ಅಸಿಸ್ಟೆಂಟರು ತಮ್ಮ ಹೆಸರನ್ನು ಬದನಾಂ ಮಾಡಿದ್ದಕ್ಕಾಗಿ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟಕ್ಕಾಗಿ ಫಿರ್ಯಾದು ಮಾಡಿರುವಂತೆ ಕೇಳುತ್ತೇವೆ. ಚಿಕಾವಣೆಸುವವರ ಪ್ರೇರಣೆ ಪ್ರಕಾರ ಅನ್ಯಾಯವಾದ ಬಾದುರ್ಕಂದು ದೊಡ್ಡ ಮನುಷ್ಯರ ಮಾನವನ್ನು ಭಂಗಪಡಿಸಲು ಪ್ರಯತ್ನಪಟ್ಟ ಆ ಹೆಂಗಸಿಗೂ ಇವಳ ಚಿತಾವಣೆಗಾರರಿಗೂ ನ್ಯಾಯವಾಗಿ ಸ್ವಲ್ಪ ಶಿಕ್ಷೆ ಮಾಡಿದರೆ ಮುಂದೆ ಹೀಗೆ ಬದನಾಂ ಮಾಡುವವರಿಗೆ ಎಚ್ಚರಿಕೆ ಕೊಟ್ಟಂತಾಗುತ್ತದೆ.

ಈ ಆಸ್ಪತ್ರೆ ಅಸಿಸ್ಟೆಂಟರು ಈ ಪ್ಲೇಗ್ ಕ್ಯಾಂಪಿಗೆ ಬಂದಲಾಗಾಯಿತು ಪ್ಲೇಗಿನ ಕಷ್ಟಕಾಲಗಳಲ್ಲಿ ಇವರ ಆರೈಯಕ್ಕೆ ಬಂದಂಥಾ ಸಮಸ್ಥರನ್ನೂ ಒಂದೇ ಸಮನಾಗಿ ನೋಡುತ್ತಾ ಕಾಯಿಲೆಯವರ ಕಷ್ಟ ನಿವಾರಣೆಗಾಗಿ ಬಹಳ ಮೊಹನತ್ತನ್ನು ತೆಗೆದುಕೊಳ್ಳುತ್ತಾ, ಉಪಚರಿಸುತ್ತಾ ಬಂದಿರುವರು. ಇವರ ಸೌಜನ್ಯಗುಣವನ್ನು ಕುರಿತು ಈ ಪಟ್ಟಣದಲ್ಲಿರುವ ಅನೇಕರು ಸಾಕ್ಷಿಕೊಡಬಹುದೆಂಬುವದಕ್ಕೆ ಏನೇನೂ ಸಂಶಯವಿಲ್ಲ. ಈ ಪಾಪನೀಯರ ಮೇಲೆ ಆ ದುಷ್ಟರು ತಂದಿದ್ದ ಅಬದ್ಧಗಳಿಂದ ಅವರ ಯಶಸ್ಸಿಗೆ ಎಳ್ಳಷ್ಟಾದರೂ ಚ್ಯುತಿಯಾಗದೆ ಬಹಳ ಮಾನಿಷ್ಟರೆಂದು ಸಾಕ್ಷಿಕೊಂಡು ಕೋರ್ಟಿನಿಂದ ಹೊರಗೆ ಬಂದದ್ದಕ್ಕಾಗಿ ನಾವೆಲ್ಲರೂ ಬಹಳ ಸಂತೋಷ ಪಡುತ್ತೇವೆ. ಈ ಆಸ್ಪತ್ರೆ ಅಸಿಸ್ಟೆಂಟರು ಈ ಕ್ಯಾಂಪಿನಲ್ಲಿರುವಷ್ಟು ಕಾಲ ಇಲ್ಲಿಗೆ ಬರತಕ್ಕ ಕಾಯಿಲೆಯವರಿಗೆ ಬಹು ಪ್ರಯೋಜನವಾಗುವದರಲ್ಲಿ ಏನೂ ಸಂಶಯವಿಲ್ಲ.

ಸತ್ಯವಾದಿ

ಆಗುಂಬೆ ಪೋಸ್ಟು ವಿಚಾರ ನಿಜವಾದದ್ದು.

ಅಯ್ಯಾ,

ತಮ್ಮ ಕಳೆದ ನೇ ತಾ. ೧೮ನೇ ಗುರುವಾರದ ವೃತ್ತಾಂತ ಪತ್ರಿಕೆಯ ೬ನೇ ಪುಟದಲ್ಲಿ ಕೊನೇ ಭಾಗದಲ್ಲಿ ಆಗುಂಬೆ ಪೋಸ್ಟು ವಿಚಾರ ನಿಜವಲ್ಲವೆಂದು ಕೆ. ಟಿ. ಸಿದ್ಧಪ್ಪಗೌಡರು ಕೊಟ್ಟ ಚಾಕೀಯನ್ನು ವಾಚಕರು ಓದಿರಬಹುದು. ಎನ್. ಎಸ್. ತಮ್ಮಣ್ಣ ಹೆಗ್ಗಡೆ ಎಂಬ ವಿಳಾಸದಾರನಾದ ನನ್ನನ್ನು ಆಗುಂಬೆ ಪೋಸ್ಟ್ ಮಾಸ್ಟರು ವಿಚಾರಿಸಿದಲ್ಲಿ ಚೋಪ್ಪು ಕಾಲ್ದೋಳು ಶೃಂಗೇರಿಯಲ್ಲಿ ಇದ್ದೇನೆಂದು ಮೇಲ್ಕಂಡ ಸಿದ್ಧಪ್ಪಗೌಡರ ಚಾಕೀಯಿಂದ ತಿಳಿಯಬಂತಷ್ಟೆ. ತಾಮಣ್ಣನವರ ಹುಚ್ಚು ನನ್ನ ಕಡೆಯಿಂದ ಕೆ. ಟಿ. ಸಿದ್ಧಪ್ಪ ಗೌಡರಿಗೆ ತಿರಿಗಿತೆಂದು ಸರ್ವರಿಗೂ ಮೇಲ್ಕಂಡ ಸುಳ್ಳು ಮಾತಿನಿಂದ ತಿಳಿಯಲು ಅಡ್ಡಿ ಇಲ್ಲ. ನಾನು ಈಗ ೨ ತಿಂಗಳ ಲಾಗಾಯ್ತು ಶೃಂಗೇರಿಯಲ್ಲಿ ಇದ್ದದ್ದನ್ನು ಈ ಚಾಕೀ ಕೊಟ್ಟ ಕೆ. ಟಿ. ಸಿದ್ಧಪ್ಪ ಗೌಡರು ರುಜುವಾತು ಮಾಡಿಕೊಡಬಲ್ಲರೋ? ಕೆ. ಟಿ ಸಿದ್ಧಪ್ಪ ಗೌಡರೇ ೨೬ ಚದರ ಮೈಲಿ ವಿಸ್ತೀರ್ಣವುಳ್ಳ ಸ್ಥಳಗಳನ್ನು ಒಬ್ಬನೇ ಪೀವನು ಸುತ್ತಿ ಕಾಗದ ಬಟವಾಡೆ ಮಾಡುವದು ಕಷ್ಟವೆಂದು ತಿಳಿಸಿದಾರಷ್ಟೆ. ಹಾಗಾದ ಪಕ್ಷದಲ್ಲಿ ಈ ಪೀವನು ಪೋಸ್ಟು ಇಲಾಖೆಗೆ ಬರೆದುಕೊಂಡು ಇನ್ನೊಬ್ಬನನ್ನು ಏತಕ್ಕೆ ಕರೆಸಿಕೊಳ್ಳಬಾರದು? ಮೊದಲಿದ್ದ ರಾಮನು ಎಷ್ಟು ಮರ್ಯಾದೆಯಿಂದ ಕೆಲಸ ನೋಡುತ್ತಿದ್ದ. ಈಗಿನ ಪೀವನು ಎಷ್ಟು ಅಜಾಗ್ರತೆಯಿಂದ ಕೆಲಸ ನೋಡುತ್ತಾರೆ. ಇದನ್ನು ಆಗುಂಬೆ ಪೋಸ್ಟ್ ಮಾಸ್ಟರ ಚಿತ್ತರ ತಿಳಿದರೆ ಗೊತ್ತಾಗುತ್ತದೆ. ಮತ್ತು ಕಾಗದಗಳನ್ನು ಕೊಟ್ಟು ರುಜು ಹಾಕಿಸಿಕೊಳ್ಳುವ ಪೋಸ್ಟ್ ಬುಕ್ಕನ್ನು ನೋಡಿದರೆ ಗೊತ್ತಾಗುವುದಿಲ್ಲವೋ? ಮತ್ತು ನಾಬಳದ ಶೇಷಣ್ಣ ಹೆಗ್ಗಡೇರು ನಂಟೂರಲ್ಲಿ ಇರುವರೆಂದು ಮೇಲ್ಕಂಡ ಚಾಕೀಯಲ್ಲಿ ತಿಳಿದಿದೆ. ನಾಬಳವು ನಂಟೂರು ಗ್ರಾಮಕ್ಕೆ ಸೇರಿದ್ದಾಗಿದೆ ನಂಟೂರಿಂದ ನಾಬಳಕ್ಕೆ ೩ ಫರ್ಲಾಂಗು ಆಗುತ್ತೆ. ಎನ್. ಎಸ್. ತಮ್ಮಣ್ಣ ಹೆಗ್ಗಡೆ ಎಂಬ ನಾನು ನಂಟೂರಲ್ಲಿ ವಾಸಮಾಡುತ್ತೇನೆ. ನನಗೆ ಕಾಗದ ತಲಪಿಸುವಾಗ ಅವರಿಗೆ ಸಹ ತಲಪಿಸಬಾರದೋ? ನಾವುಗಳು ಯಾವಾಗಲೂ ನಂಟೂರಲ್ಲೇ ವಾಸಮಾಡತಕ್ಕಂಥಾವರಾಗಿದ್ದೇವೆ ನಾವು ಇಬ್ಬರಲ್ಲಿ ಒಬ್ಬರು ಮನೆಯಲ್ಲಿ ತಪ್ಪಿದ ದಿವಸವಿಲ್ಲವು. ಈ ಪ್ಯಾಮಣ್ಣನವರು ಕೆಲಸ ನೋಡ್ತಾ ೨೦ ವರ್ಷವಾಯ್ತೇ? ೨ ವರ್ಷ ಪೂರ್ತಿಯಾಗಲಿಲ್ಲ. ಇವರಿಗೆ ಹುಚ್ಚುಹಿಡಿದಾಗ ೮—೯ ತಿಂಗಳು ಮುಟ್ಟಿಗೆ ರಾಮನು ಕೆಲಸ ನೋಡಲಿಲ್ಲವೋ? ೨ ವರ್ಷವೇ ಅವರಿಗೆ ೨೦ ವರ್ಷವಾಯ್ತೇ? ಆತ್ಮದೋಷಕ್ಕೆ ಅನ್ಯರೇ ಕನ್ನಡಿ! ನಮ್ಮಿಬ್ಬರ ದೋಷಕ್ಕೆ ವಾಚಕರೇ ಕನ್ನಡಿ

ಆಗುಂಬೆ ನಂಟೂರು. ಎನ್. ಎಸ್. ತಮ್ಮಣ್ಣ ಹೆಗ್ಗಡೆ.

[ಈ ವಿಷಯವಾದ ಚಾಕೀಗಳನ್ನು ಇನ್ನು ಪ್ರಕಟಿಸಲಾರೆವು.—ಎಡಿ]

ದೇಶೀಯ ಕ್ರೈಸ್ತರೂ ದೇಶಾಭಿಮಾನವೂ.

ಅಯ್ಯಾ,

ದೇಶೀಯ ಕ್ರೈಸ್ತರಾದ ಹಿಂದೂ ಜನರು ತಮ್ಮ ಹಿಂದೂ ಮತಗಳನ್ನು ಬಿಟ್ಟು ಬಿಟ್ಟು ಕ್ರೈಸ್ತ ಮತವನ್ನು ಅವಲಂಬಿಸುತ್ತಿರುವದು ಈಗ ಆಚರಣೆಯಲ್ಲಿದೆಯಷ್ಟೆ ಇಂಥಾ ದೇಶೀಯ ಕ್ರೈಸ್ತರ ವಿಷಯವಾಗಿ ಕೆಲವರು ಬಹು ಶೋಚನೀಯವಾದ ತಾತ್ಪರ್ಯ ಪಡುವದು ತಿಳುವಳಿಕೆಯುಳ್ಳ ಬುದ್ಧಿವಂತರಿಗೆ ಬಹು ಆಶ್ಚರ್ಯವನ್ನು ಉಂಟುಮಾಡದಿರಲಾರದು. ಹಿಂದೂ ಕ್ರೈಸ್ತರು ತಮ್ಮ ಹಳೇ ಮತವನ್ನು ಬಿಟ್ಟ ಕೂಡ್ಲೆ ಅವರಲ್ಲಿರುವ ದೇಶಾಭಿಮಾನವು ಶೂನ್ಯವಾಗುತ್ತದೆಂದೂ ದೇಶಕ್ಕೆ ಒದಗುವ ಆಪತ್ತು ವಿಪತ್ತು ಎಂಬೀ ಸಮಯ ಸಮಯಗಳಲ್ಲಿ ಈ ದೇಶೀಯ ಕ್ರೈಸ್ತರಿಂದ ಯಾವ ಪ್ರಯೋಜನವೂ ಬರಲಾರದೆಂದೂ ತಾತ್ಪರ್ಯಪಡುತ್ತಾರೆ. ಇವರ ಆಧಾರವಿಲ್ಲದ ಸಂಶಯಗಳೂ ತಾತ್ಪರ್ಯಗಳೂ ಎಷ್ಟರ ಮಟ್ಟಿಗೆ ನಿಜವಾಗಬಹುದೆಂದು ಮುಂದೆ ಉದಹರಿಸುವ ವರ ಹೊಸವಾದ ಸಂಗತಿಗಳಿಂದ ಸುಲಭವಾಗಿ ತಿಳುಕೊಳ್ಳಬಹುದು.

ಈಗ ರಷ್ಯಾ ರಾಜ್ಯಕ್ಕೂ ಜಪಾನ್ ಸೀಮೆಗೂ ಭಯಂಕರವಾದ ಯುದ್ಧಗಳು ನಡೆಯುತ್ತಾ ಇವೆಯಷ್ಟೆ. ಈ ಎರಡು ರಾಜ್ಯಗಳಲ್ಲಿ ರಷ್ಯಾ ರಾಜ್ಯವು ಕ್ರೈಸ್ತರ ದೇಶವಾಗಿಯೂ ಜಪಾನ್ ರಾಜ್ಯವು ಕ್ರೈಸ್ತರಲ್ಲದ ಬೌದ್ಧರ ದೇಶವೆಂದೂ ಎಲ್ಲರೂ ತಿಳಿದೇ ಇದ್ದಾರೆ. ಈ ಎರಡು ರಾಜ್ಯಗಳು ಒಂದಕ್ಕೊಂದು ಅಜಗಜಾಂತ್ರ ಹೆಚ್ಚು ಕಡಿಮೆಯಾದವುಗಳೆಂದೂ ಸಣ್ಣ ದ್ವೀಪವಾದ ಜಪಾನ್ ದೇಶವು ಲೋಕವೆಂದು ಕರೆಯಲ್ಪಡುವ ರಷ್ಯಾ ರಾಜ್ಯದ ಎದುರಿನಲ್ಲಿ ತೃಣಕ್ಕೆ ಸಮಾನವಾದದ್ದಾಗಿ ಇದ್ದಾಗ್ಯೂ ಈ ಘೋರವಾದ ಯುದ್ಧಾರಂಭದಿಂದ ಈಚಲ್ ವರಿಗೂ ನಡೆದ ಯುದ್ಧಗಳಲ್ಲಿ ಜಪಾನರೇ ಜಯಶೀಲರಾಗಿ ಇದ್ದಾರೆಂದೂ ನೋಡುತ್ತೇವೆ ರಷ್ಯಾ ಕ್ರೈಸ್ತ ಜನಾಂಗವು ಜಪಾನ್ ಬೌದ್ಧ ಜನಾಂಗಕ್ಕೆ ವಿರೋಧವಾಗಿ ಯುದ್ಧ ಮಾಡುತ್ತಿರುವಾಗ ಜಪಾನ್ ದೇಶೀಯ ಕ್ರೈಸ್ತರು ಏನುಮಾಡುತ್ತಾ ಇದ್ದಾರೆಂದೂ ಯಾರ ಪಕ್ಷವನ್ನು ವಹಿಸಿದಾರೆಂದೂ ಅವರನ್ನು ಕುರಿತು ವಿಚಾರಿಸುವದು ಅನ್ಯಾಯವಾಗಿರದು ಅಂಥಾ ವಿಚಾರಣೆಯಲ್ಲಿ ಕ್ರೈಸ್ತರು ಕ್ರೈಸ್ತರೊಂದಿಗೆ ಕೂಡಿಕೊಂಡು ಕ್ರೈಸ್ತರಲ್ಲದ ಜನಾಂಗದವರಿಗೆ ವಿರೋಧವಾಗಿ ಯುದ್ಧ ಮಾಡಬಹುದು ಎಂದು ಸಂಶಯಗೊಳ್ಳುವದು ಅಸಾಧಾರಣವಾದ ಕಾರ್ಯವಲ್ಲ. ಆದರೂ ಅದರ ಸತ್ಯವನ್ನು ವಿಚಾರಿಸುವಾಗ ದೇಶೀಯ ಕ್ರೈಸ್ತರ ದೇಶಾಭಿಮಾನವನ್ನು ಕುರಿತು ಸಂಶಯ ಪಡುವದು ಬಹು ಅನ್ಯಾಯವಾಗಿದೆಯೆಂದು ಮುಂದೆ ಬರುವ ದೃಷ್ಟಾಂತಗಳಿಂದ ತಿಳುಕೊಳ್ಳಬಹುದು.

ಈಗ ಮಹಾ ಜಯಶೀಲರೆಂದು ಕೀರ್ತಿಯನ್ನು ಪಡಕೊಂಡಿರುವ ಜನರಲ್ ಟೋಗೊ, ಕುರೋಕಿ, ಮಾರ್ಷಲ್ ಓಯಾಮಾ ಮೊದಲಾದ ನೂರಾರು ಮಂದಿ ಯುದ್ಧವೀರರು ದೇಶೀಯ ಕ್ರೈಸ್ತರಲ್ಲವೋ? ಮಹಾ ಪರಾಕ್ರಮಶಾಲಿಯೂ ಕ್ರೈಸ್ತ ಭಕ್ತನೂ ಆಗಿರುವ ಟೋಗೋವಿನ ವಿಷಯ ಹೋದ ವಾರ ಬಂದ ಪತ್ರಿಕೆಗಳಲ್ಲಿ ಅವರ ದೇಶಾಭಿಮಾನಾಸಕ್ತಿಯನ್ನು ಕುರಿತು ಹೀಗೆ ಹೇಳಿದೆ—ಏನೆಂದರೆ, ಟೋಗೋ ಯವರ ಹಿರೀ ಮಗನು ಯುದ್ಧದಲ್ಲಿ ಮಡಿದು ಹೋದಾಗ ಟೋಗೋ ಯವರ ಪತ್ನಿಯವರು ಮಗನ ಸಮಾಧಿಕ್ರಿಯೆಯನ್ನು ಮಾಡುವದಕ್ಕೆ ಉಪಕ್ರಮಿಸಲು ಟೋಗೋ ಯವರು ಅದನ್ನು ತಡೆದು ತಮ್ಮ ಪತ್ನಿಯವರಿಗೆ—ನಾನೂ ನನ್ನ ಹಿರೀ ಮಗನೂ ನಮ್ಮ ಚಕ್ರವರ್ತಿಗಾಗಿಯೂ ಪ್ರಿಯ ದೇಶಕ್ಕಾಗಿಯೂ ಯುದ್ಧ ಮಾಡಿ ಪ್ರಾಣಕೊಡುವದಕ್ಕಾಗಿ ಮುಂದಕ್ಕೆ ಹೋಗುತ್ತೇವೆ. ನಾವಿಬ್ಬರೂ ಸತ್ತನಂತರ ನೀನು ಮೂವರಿಗೂ ಒಂದೇ ಸರ್ತಿ ಸಮಾಧಿ ಕ್ರಿಯೆ ಮಾಡಿಸಬಹುದೆಂದು ಹೇಳಿದರಂತೆ. ಇವರಂಥಾ ದೇಶಾಭಿಮಾನಿಗಳಾದ ಕ್ರೈಸ್ತರು ಆ ಯುದ್ಧಭಟರಲ್ಲಿ ಇನ್ನೂ ಅನೇಕರು ಇದ್ದಾರೆಂಬುವದಕ್ಕೆ ಏನೇನೂ ಸಂಶಯವಿಲ್ಲ.

ಜಪಾನ್ ದೇಶೀಯ ಕ್ರೈಸ್ತರಲ್ಲಿರುವ ದೇಶಾಭಿಮಾನವೇ ಹಿಂದೂ ಕ್ರೈಸ್ತರಲ್ಲಿಯೂ ಸಹ ಕೊಂಚಮಟ್ಟಿಗಾದರೂ ಇಲ್ಲದಿರಬಹುದೇ? ಮತಕ್ಕೂ ದೇಶಾಭಿಮಾನಕ್ಕೂ ಸ್ವಲ್ಪ ಹೆಚ್ಚುಕಡಮೆ ಉಂಟಷ್ಟೆ. ಹಳೇಮತ ಬಿಟ್ಟಮಾತ್ರಕ್ಕೇ ಸ್ವಭಾವದನಿತವಾದ ದೇಶಾಭಿಮಾನವು ಬಿಟ್ಟೀತೇ? ಸಮಯಾಸಮಯಗಳಲ್ಲಿ ನಮ್ಮ ದೇಶಬಾಂಧವರು ನಮ್ಮ ದೇಶವನ್ನು ಕಾಪಾಡಿಕೊಳ್ಳುವಲ್ಲಿ ದೇಶೀಯ ಕ್ರೈಸ್ತರು ಅವರಿಗೆ ಬಲಭುಜವಾಗಿ ನಿಂತುಕೊಳ್ಳುವದನ್ನು ನೋಡುವಾಗ್ಗೆ ಸದರಿ ಕ್ರೈಸ್ತರ ಹಕ್ಕು ಬಾಧ್ಯತೆಗಳಿಗೆ ವಿರೋಧವಾಗಿ ನಿಂತುಕೊಂಡದ್ದಕ್ಕೆ ಲಜ್ಜೆಪಡದೆ ಇರಲಾರರೆಂದು ನಂಬುತ್ತೇನೆ.

ಒಬ್ಬ ಹಿಂದೂ ಕ್ರೈಸ್ತನು.

ದಾವಣಗೆರೆಯಲ್ಲಿ ಕೂಡ್ಲಿ ಸ್ವಾಮಿಗಳ ಮೆರವಣಿಗೆ.

ಅಯ್ಯಾ,

ಕಳೆದ ತಿಂಗಳಿನ ಮಧ್ಯದಲ್ಲಿ ಕೂಡ್ಲಿ ಸ್ವಾಮಿಗಳು ಚಿತ್ರದುರ್ಗದಿಂದ ದಾವಣಗೆರೆಗೆ ದಯಮಾಡಿಸಿದರು. ಅವರು ಬಂದು ರೈಲ್ವೆ ಸ್ಟೇಷನ್ ಸಮೀಪದಲ್ಲಿರುವ ಛತ್ರದಲ್ಲಿ ಇಳುಕೊಂಡರು. ೨—೩ ದಿನಗಳ ತರುವಾಯ ತಾವು ತಮ್ಮ ಶಿಷ್ಯವರ್ಗದವರಾದ ಬ್ರಾಹ್ಮಣರನ್ನೂ ವೈಶ್ಯಮಂಡಲಿಯನ್ನೂ ದರ್ಶಿಸುವದಕ್ಕೆ ಪೇಟೆಯಲ್ಲಿ ಮೆರವಣಿಗೆ ಹೋಗಬೇಕೆಂದು ಪ್ರಯತ್ನ ಮಾಡಿ, ಡೆಪ್ಯುಟಿ ಕಮಿಷನರ್ ಸಾಹೇಬರಿಗೆ ಇದನ್ನು ತಂತಿಯ ಮುಖಾಂತರ ತಿಳಿಸಿ, ಅವರನ್ನು ಕರೆಸಿಕೊಂಡರು. ಡೆಪ್ಯುಟಿ ಕಮಿಷನರ್ ರವರು ಇಲ್ಲಿಗೆ ಬಂದು ಅನೇಕ ತಾಲ್ಲೂಕುಗಳ ಪೊಲೀಸ್ ಸಿಬ್ಬಂದಿಯನ್ನು ಕರಿಸಿಕೊಂಡು ಮೆರವಣಿಗೆಯನ್ನು ಪ್ರಾರಂಭ ಮಾಡುವದಕ್ಕೆ ಸಿದ್ಧಪಡಿಸುತ್ತಿರುವಾಗ್ಗೆ ಆ ಊರಿನ ಲಿಂಗಾಯತ ಮಂಡಲಿಯವರು ಆ ಸಮಾಚಾರವನ್ನು ಕೇಳಿ ಮೆರವಣಿಗೆಯನ್ನು ಮಾಡಕೂಡದೆಂದೂ ಹಾಗೆ ಮಾಡುವದಾದರೆ ತಮಗೆ ತುಂಬಾ ಅವಮಾನವೆಂದೂ ತಿಳಿದು, ಅವರಲ್ಲಿ ಕೆಲವರು ಸೇರಿಕೊಂಡು ಡೆಪ್ಯುಟಿ ಕಮಿಷನರ್ ಸಾಹೇಬರಿಗೆ ಅರ್ಜಿಗಳನ್ನು ಕೊಟ್ಟರು. ಅದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರು ನಿಮ್ಮ ಇರಾದೆಯ ಪ್ರಕಾರ ನಾವು ನಡಿಯುವದಕ್ಕೆ ಆಗುವದಿಲ್ಲ. ಆದರೆ ನೀವು ಮೇಲ್ಪಟ್ಟವರಿಗೆ ತಿಳಿಸಿ, ಅಲ್ಲಿಂದ ಹುಕುಮನ್ನು ತಂದರೆ ನಿಲ್ಲಿಸುತ್ತೇವೆ. ಅದಕ್ಕೋಸ್ಕರ ೧೦ ದಿನಗಳು ನಿಮಗೆ ವಾಯಿದೆ ಕೊಡುತ್ತೇವೆ. ಹಾಗೆ ನೀವು ಮಾಡದೆ ಹೋದರೆ ಕ್ರಮ ಪ್ರಕಾರ ನಾವು ಮೆರವಣಿಗೆಯನ್ನು ಮಾಡಿಸುತ್ತೇವೆಂದು ಅವರಿಗೆ ಅಪ್ಪಣೆಯನ್ನು ಕೊಟ್ಟರು ಅದೇ ಪ್ರಕಾರ ಲಿಂಗಾಯತ ಮಂಡಲಿಯವರು ಚೀಫ್ ಕೋರ್ಟಿನಲ್ಲಿ ದಾವಾ ದಾಖಲ್ ಮಾಡಿದರು. ಈ ದಾವೆಯನ್ನು ಹಾಕುವ ಉದ್ದೇಶ್ಯ ೬ತರ ಕಾಲವನ್ನು ಖರ್ಚು ಮಾಡಿದರು. ಹೀಗೆ ಲಿಂಗಾಯತ ಮಂಡಲಿಯವರು ಮಾಡಿದಾಗ್ಯೂ ಯಾವ ಉತ್ತರ ಬಾರದ ಕಾರಣ ಅವರ ವಾಯಿದೆ ಪೂರೈಸಿತು. ಜೂನ್ ೨ನೇ ತಾರೀಖಿನ ಬೆಳಿಗ್ಗೆ ೮ ಗಂಟೆಗೆ ಡೆಪ್ಯುಟಿ ಕಮಿಷನರ್ ಸಾಹೇಬರು, ಸಬ್ ಡಿವಿಜನ್ ಸಾಹೇಬರು, ಪೊಲೀಸ್ ಸೂಪರಿಂಟೆಂಡೆಂಟರು, ದಾವಣಗೆರೆಯ ಅಮಲ್ದಾರರು ಮತ್ತು ಬೇರೆ ಕೆಲವು ತಾಲ್ಲೂಕುಗಳ ಅಮಲ್ದಾರರುಗಳು, ಕೆಲವು ತಾಲ್ಲೂಕುಗಳ ಪೊಲೀಸ್ ಸಿಬ್ಬಂದಿಯು, ಕೆಲವು ಕುದುರೆ ಸವಾರರುಗಳು ಮತ್ತು ಬೆಂಗ

ಕೂರಿಂದ ರಿಜರ್ವ್ ಪೋಲೀಸ್ ಸಿಬ್ಬಂದಿಯೊಂದಿಗೆ ಗುರುಗಳ ಮೆರವಣಿಗೆಯನ್ನು ಹೊರಡುವಂತೆ ಏರ್ಪಾಡು ಮಾಡಿದರು. ಆಗ ಸ್ವಾಮಿಗಳು ತಮ್ಮಗಳ ಬಿರುದುಗಳೊಂದಿಗೆ ಛತ್ರವನ್ನು ಬಿಟ್ಟು ಪಾಲಿಕೆ ಯಲ್ಲಿ ಕುಳಿತಿದ್ದರು. ಹಿಂಭಾಗದಲ್ಲಿ ಪೋಲೀಸ್ ಸಿಬ್ಬಂದಿಯೂ ಕುದುರೆ ಸಿಪಾಯಿಗಳೂ ಮುಂಭಾಗದಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರೂ ಇನ್ನು ಕೆಲವು ದೊಡ್ಡ ಅಧಿಕಾರಿಗಳೂ ಹೊರಟರು. ವಿಪರೀತ ಜನಗಳು ಸೇರಿದರು. ಜನಗಳ ಗಲಾಟೆಯನ್ನು ನಿಲ್ಲಿಸುವ ಉದ್ದೇಶ್ಯ ಕುದುರೆ ಸವಾರರು ಜನಗಳ ಮೇಲೆ ಕುದುರೆಗಳನ್ನು ನುಗ್ಗಿಸಿದರು. ಆ ಜನರ ಮಧ್ಯದಲ್ಲಿ ಕೆಲವು ಲಿಂಗಾಯತ ಮಂಡಲಿಯ ಮುಖ್ಯಸ್ಥರು ಸ್ವಲ್ಪ ಗಲಾಟೆಯನ್ನು ಮಾಡಿದರು. ಅಂಥವರನ್ನು ಹಿಡಿದೂ ಮತ್ತು ಅವರನ್ನು ಹೊಡೆದೂ ಲಾಕಪ್ಪಿನಲ್ಲಿ ಹಾಕಿಸಿದರು. ಇನ್ನು ಕೆಲವರು ಅರ್ಜಿಗಳನ್ನು ಬರೆದು ಡೆಪ್ಯುಟಿ ಕಮಿಷನರ್ ಸಾಹೇಬರಿಗೆ ಕೊಡುವದಕ್ಕೆ ಹೋದರು. ಅವರು ಅವುಗಳನ್ನು ಸ್ವೀಕರಿಸದೆ ಹೋದರು ಅದ್ದರಿಂದ ಅವರು ಸಹ ಸ್ವಲ್ಪ ಜಾಸ್ತಿ ಮಾತಾಡಿದ್ದರಿಂದ ಅವರನ್ನು ಕೂಡ ಲಾಕಪ್ಪಿನಲ್ಲಿ ಇಡಿಸಿದರು. ಅಲ್ಲಿಂದ ಗುರುಗಳು ಮುಂಚೆಯೇ ಏರ್ಪಡಿಸಿದ್ದ ಪ್ರಕಾರ ಕಂಬಾಳು ಪೇಟೆಯಿಂದ ಹೊರಟು ದೊಡ್ಡ ಪೇಟೆಗೆ ತಿರುಗಿಕೊಂಡು, ಅಲ್ಲಿಂದ ಮಾರ್ಗವ್ಮಧ ಗುಡಿಯ ವರಿಗೂ ಸವಾರಿಯನ್ನು ಬೆಳಸಿ, ಪುನಃ ವಾಪಸ್ ಬರುವಾಗ್ಗೆ ತಮ್ಮ ಶಿಷ್ಯರುಗಳನ್ನು ದರ್ಶಿಸಿ ಅವರಿಂದ ಪಾದ ಪೂಜೆಯನ್ನು ಮಾಡಿಸಿಕೊಂಡು, ಹೋದ ಮಾರ್ಗದಲ್ಲಿಯೇ ವಾಪಸು ಬಂದು ತಮ್ಮ ಸ್ಥಳವನ್ನು ಸೇರಿದರು. ಈ ಮಧ್ಯೆ ಯಾವ ಗಲಾಟೆಯೂ ನಡೆಯಲಿಲ್ಲ. ಲಿಂಗಾಯತ ಮಂಡಲಿಯವರು ತಮ್ಮ ಮನೆಗಳ ಬಾಗಲನ್ನು ಮುಚ್ಚಿಕೊಂಡರು. ನನಗೆ ತಿಳಿದಿರುವವರೆಗೆ ಈ ವಿರೋಧಕ್ಕೆ ಕಾರಣವೇನಂದರೆ—೪ ತಿಂಗಳಿಗೆ ಮುಂಚೆ ಲಿಂಗಾಯತರ ಗುರುಗಳಾದ ಮುರಿಗೆ ಸ್ವಾಮಿಗಳು ದಾವಣಗೆರೆಗೆ ದಯಮಾಡಿಸಿದ್ದರು. ಆ ಕಾಲದಲ್ಲಿ ಇಲ್ಲಿ ಕೆಲವು ಬ್ರಾಹ್ಮಣರು ಅರ್ಜಿಗಳನ್ನು ಸರ್ಕಾರಕ್ಕೆ ಕೊಟ್ಟು, ಸರ್ಕಾರದಿಂದ ಸ್ವಾಮಿಗಳು ಬಿರುದುಗಳೊಂದಿಗೆ ಬರಕೂಡದೆಂದು ಅಡ್ಡಿ ಮಾಡಿಸಿದರಂತೆ. ಅದರ ಮೇಲೆ ಮುರಿಗೆ ಸ್ವಾಮಿಗಳು ಮಹಾರಾಜರವರಿಗೂ ಛೀಫ್ ಕೋರ್ಟಿಗೂ ತಂತಿಯ ಮುಖಾಂತರ ವರ್ತಮಾನ ಕೊಟ್ಟು, ದಾವಾ ದಾಖಲು ಮಾಡಿದರೆಂದು ವರ್ತಮಾನ ಕೇಳುತ್ತೇನೆ. ಈ ಜಿದ್ದಿನಿಂದಲೇ ಲಿಂಗಾಯತ ಮಂಡಲಿಯವರಿಗೂ ಬ್ರಾಹ್ಮಣರಿಗೂ ವಿರೋಧ ಹುಟ್ಟಿರುವಂತೆ ಕಾಣುತ್ತದೆ. ಇದಕ್ಕೆ ತಕ್ಕವರ್ ಯಾರು ಬಂದಾಗ್ಯೂ ಯಾವ ಗಲಾಟೆಯೂ ನಡೆಯುತ್ತಿರಲಿಲ್ಲವೆಂದು ಜನರು ಮಾತನಾಡಿಕೊಳ್ಳುತ್ತಾರೆ. ಈ ಇಬ್ಬರು ಸ್ವಾಮಿಗಳವರ ದೆಸೆಯಿಂದ ದಾವಣಗೆರೆಯಲ್ಲಿ ಬೆಂಕಿ ಬಿದ್ದು ಹತ್ತಿಕೊಂಡು ಉರಿಯುತ್ತದೆ. ಈ ಬೆಂಕಿಯು ಯಾವ ಕಾಲಕ್ಕೆ ಯಾವ ಮಹರಾಯರಿಂದ ಶಮನವಾಗುತ್ತದೋ ಸ್ವಾಮಿಯೇ ಬಲ್ಲನು. ಲಾಕಪ್ಪಿನಲ್ಲಿ ಇರುವ ಜನರ ವಿಷಯದಲ್ಲಿ ಏನಾಗುವದೋ ಮುಂದೆ ತಿಳಿಯಬೇಕು.

ತಾಲ್ಲೂಕು ವರ್ತಮಾನಗಳು.

ದಾವಣಗೆರೆ.—ದಾವಣಗೆರೆಯಲ್ಲಿ ಬಾಸವಾರ ಸಂತೆಯು ನಡೆಯುತ್ತದೆ. ಈ ಸಂತೆಯಲ್ಲಿ ಒಬ್ಬ ಮನುಷ್ಯನು ಬಹಿರಂಗವಾಗಿ ಜೂಜಾಡುತ್ತಾನೆ ಪೋಲೀಸಿನವರು ಅದರ ತಮಾಷೆ ನೋಡಿಕೊಂಡಿರುತ್ತಾರೆಯೇ ಹೊರತು ಅವರನ್ನು ಹಿಡಿಯುವದಿಲ್ಲ. ಇದಕ್ಕೆ ಏನು ಕಾರಣವೋ ತಿಳಿಯದು. ಇದರ ವಿಷಯದಲ್ಲಿ ಮೇಲಿನ ಅಧಿಕಾರಿಗಳು ವಿಚಾರಣೆ ಮಾಡುತ್ತಾರೋ ಇಲ್ಲವೋ ತಿಳಿಯದು. ತಾಲ್ಲೂಕು ಅಮಲ್ದಾರರು ತಕ್ಷ ಬಂದೋಬಸ್ತು ಮಾಡುವರೆಂದು ನಂಬುತ್ತೇನೆ. ಇದು ಮಾತ್ರವಲ್ಲ ಈ ಸಂತೆಯಲ್ಲಿ ಗೂಡಿನ ಕಲ್ಲುಗಳು ಸೇರುಗಳು ಪ್ಯಾಗೆಯೋ ದೇವರೇ ಬಲ್ಲ ಕೆಲವರು ಕಾಡು ಕಲ್ಲುಗಳಿಂದಲೇ ತೂಕ ಮಾಡುತ್ತಾರೆ ಇದನ್ನು ನಾನು ನೋಡಿದ್ದೇನೆ, ಅನುಭವಿಸಿಯೂ ಇದ್ದೇನೆ ಈ ಕೊರತೆಯನ್ನು ಅಮಲ್ದಾರ್ ಸಾಹೇಬರು ಸರಿಮಾಡುವರೆಂದು ನಂಬುತ್ತೇನೆ. ದೊಡ್ಡ ಅಂಗಡಿಗಳಲ್ಲಿಯೂ ೨೩ ರೂಪಾಯಿ ತೂಕ ಕೊಡುತ್ತಾರೆ ಇಂಥಾದ್ದನ್ನು ಸರ್ಕಾರದವರು ನೇಮಿಸಿದಾರೋ ಇಲ್ಲವೇ ಇಲ್ಲಿನ ವರ್ತಕರೇ ಮಾಡಿಕೊಂಡಿದಾರೋ ತಿಳಿಯದು. ಮೈಸೂರಿಗೆ ಸೇರಿದ ಎಲ್ಲಾ ತಾಲ್ಲೂಕುಗಳಲ್ಲಿಯೂ ೨೪ ರೂಪಾಯಿ ತೂಕ ಉಂಟು. ಇಲ್ಲಿ ಮಾತ್ರ ಹೀಗಿರುವದಕ್ಕೆ ಕಾರಣವೇನೋ

ತರೀಕೆರೆ.—ಈವಗೆ ಇಲ್ಲಿ ಮಳೆ ಬಂದಾಗ್ಯೂ ಬಿಸಲಿನ ತಾಪವು ಇನ್ನೂ ಕಮ್ಮಿಯಾಗಲಿಲ್ಲ. ಧಾನ್ಯವಸ್ತುಗಳು ದಿನದಿನಕ್ಕೆ ಇಳಿತರವಾಗುತ್ತಾ ಇದೆ—ಕಳೆದ ಏಪ್ರಿಲ್ ತಿಂಗಳಲ್ಲಿ ಇಲ್ಲಿಗೆ ಹೊಸದಾಗಿ ಬಂದಿರುವ ಅಬ್ಕಾರಿ ಎಕ್ಸೈಸ್ ಇನ್ಸ್‌ಪೆಕ್ಟರು, ಸಬ್ ಇನ್‌ಸ್ಪೆಕ್ಟರು, ಪೋಲೀಸ್ ಜಮೇದಾರು ಕಾನಸ್ಟೇಬಲ್ ಇವರುಗಳೊಂದಿಗೆ ಮೇ ತಿಂಗಳು ೨೮ ರಲ್ಲಿ ಮೂರು ಮೈಲಿ ದೂರದಲ್ಲಿರುವ ಶಿವಪುರ ಎಂಬ ಚಿಕ್ಕ ಗ್ರಾಮಕ್ಕೆ ಹೋಗಿ ಲಂಬಾಣಿಗರ ತಾಂಡದ ೫ ಮನೆಯವರು ಕಳ್ಳತನದಿಂದ ಸರಾಯಿ ಬಟ್ಟಿ ಇಳಿಸತಕ್ಕವರನ್ನು ಸಾಮಾನುಗಳೊಂದಿಗೆ ಹಿಡಿದು ಇಲ್ಲಿಗೆ ತಂದಿರುತ್ತಾರೆ ಈ ಐದು ಜನರಲ್ಲಿಯೂ ಸಾರಾಯಿ ಮಡಕೆಗಳು ಮಾತ್ರ ಬಿಳಿ ಬ್ಯಾಲದ ಚಕ್ಕೆ ಬೆಲ್ಲ ಮುಂತಾದವು ಇದ್ದವು. ಇವರನ್ನು ಈಗ ಲಾಕಪ್ಪಿನಲ್ಲಿಟ್ಟಿರುತ್ತಾರೆ. ಈ ತಿಂಗಳು ೫ ರಲ್ಲಿ ಇಲ್ಲಿನ ಮೇಜಿಸ್ಟ್ರೇಟರು ವಿಚಾರಣೆ ಮಾಡುತ್ತಾರೆ—ಇಲ್ಲಿನ ಇಂಗ್ಲಿಷ್ ಆಸ್ಪತ್ರೆಯಲ್ಲಿ ಕಳೆದ ೯ ವರುಷಗಳಿಂದಲೂ ಕೆಲಸ ನೋಡುತ್ತಿದ್ದ ಆಸ್ಪತ್ರೆ ಅಸಿಸ್ಟೆಂಟರನ್ನು ಈ ತಿಂಗಳಿಂದ ಬೇರೂರಿಗೆ ವರ್ಗ ಮಾಡಿದಾತ್ತಾರೆ. ಇವರು ಇಷ್ಟು ದೀರ್ಘಕಾಲ ನಮ್ಮಗಳ ಮಧ್ಯದಲ್ಲಿ ಇದ್ದು ಅನೇಕರನ್ನು ಒಳ್ಳೇ ಔಷಧಗಳಿಂದ ಸ್ವಸ್ಥಪಡಿಸಿ ಜನರ ಪ್ರೀತಿಗೆ ಪಾತ್ರರಾಗಿಯೂ ಗೌರವಕ್ಕೆ ಪಾತ್ರರಾಗಿಯೂ ಇದ್ದರು. ಇವರಲ್ಲಿ ಸಹನ, ಪ್ರೀತಿ, ವಾತ್ಸಲ್ಯ ಇತ್ಯಾದಿ ಸದ್ಗುಣಗಳು ವಿಶೇಷವಾಗಿತ್ತು. ಪ್ಲೇಗ್ ಕಾಲದಲ್ಲಿ ಇಲ್ಲಿನ ಕ್ರೈಸ್ತ ಕುಟುಂಬದವರನ್ನು ಪ್ರಬಲವಾಗಿ ಆದರಿಸಿ ಒಳ್ಳೇ ಔಷಧ ಕೊಟ್ಟು ಸ್ವಸ್ಥಪಡಿಸಿದರು. ಇಂಥವರು ಈ ಸ್ಥಳವನ್ನು ಬಿಟ್ಟು ಹೋಗುತ್ತಾರಲ್ಲ ಎಂದು ವ್ಯಸನಪಟ್ಟಾಗ್ಯೂ ಇವರಿಗೆ ಬದಲಾಗಿ ಬಂದಿರುವ ಮೆ॥ ಗುರುರಾಯರು ಸಹಾ ಹಿಂದಿನವರ ಪದ್ಧತಿಯನ್ನು ಅನುಸರಿಸಿ ಜನರ ಪ್ರೀತಿಗೆ ಪಾತ್ರರಾಗುತ್ತಾರೆಂದು ನಂಬುತ್ತೇವೆ—ಇಲ್ಲಿನ ಜೇಟನ್ ಆಸ್ಪತ್ರೆಯು ದಿನದಿನಕ್ಕೆ ಬಹಳ ಅಭಿವೃದ್ಧಿಸ್ಥಿತಿಗೆ ಬರುತ್ತಿದೆ. ಆದರೆ ಈ ಆಸ್ಪತ್ರೆಯು ತಿಂಗಳಿನ ಔಷಧ ಖರ್ಚು ಕಮ್ಮಿಯಾಗಿದೆ. ಈ ವಿಷಯದಲ್ಲಿ ಮುನಿಸಿಪಲ್ ಕಮಿಟಿಯವರು ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇವೆ ಈ ಆಸ್ಪತ್ರೆಗೆ ಕುರ್ಚಿ, ಮೇಜು ಮುಂತಾದವುಗಳನ್ನು ಒದಗಿಸಿ ಕೊಡುವ ಹಾಗೆ ಅಪ್ಪಣೆ ಕೊಟ್ಟಿರುತ್ತಾರೆ.

ಚಾಮರಾಜನಗರ.—ಈ ಕಡೆ ಮಳೆ ಆಗಿ ಕೆರೆ ಕುಂಟೆಗಳೆಲ್ಲಾ ತುಂಬಿಹೋಗಿದೆ. ಈ ಊರಿಗೆಲ್ಲಾ ನೀರನ್ನು ಒದಗಿಸಿ ಕೊಡುವ ದೊಡ್ಡ ಅರಸಿನ ಕೊಳದಲ್ಲಿ ತಾ. ೩೦ ನೇ ಭಾನುವಾರ ಒಬ್ಬ ಬ್ರಾಹ್ಮಣ ಹೆಂಗಸು ಆಕಸ್ಮಾತ್ತು ಬಿದ್ದು ಸತ್ತುಹೋದಳು ಆಕೆ ಬಿದ್ದದ್ದು ಯಾರಿಗೂ ತಿಳಿಯದು. ಮಾರನೆ ಬೆಳಗ್ಗೆ ಹೆಣವು ಮೇಲೆ ತೇಲುತ್ತಿತ್ತು. ಈ ವರ್ತಮಾನವು ಪೋಲೀಸಿಗೆ ತಿಳಿಯಲು ಇನ್ಸ್‌ಪೆಕ್ಟರೂ ಜಮಾದಾರರೂ ಹೋಗಿ ಹೆಣವನ್ನು ಮೇಲಕ್ಕೆತ್ತಿಸಿ ಯಾವ ವಿಧವಾದ ಪಾಯದ ಚಿಹ್ನೆಗಳೂ ಕಾಣಬರಲಿಲ್ಲವಾದ್ದರಿಂದ ದಹನಮಾಡಲು ಬಿಟ್ಟರು. ಕೊಳವಾದರೋ ತುಂಬಿ ತುಳುಕಾಡುತ್ತಿದೆ. ಕೆಲವು ಹೆಂಗಸರು ಎರಡೆರಡು ಕೊಡಗಳನ್ನು ತರುತ್ತಾರೆ. ಇದರಿಂದ ತುಂಬಾ ಅಪಾಯವಾಗಿದೆ. ಹಿಂದೆ ಇದೇ ರೀತಿ ಒಬ್ಬ ಹೆಂಗಸು ಎರಡು ಕೊಡಗಳನ್ನು ತುಂಬಿ ಎತ್ತಿಕೊಳ್ಳುವ ಸಮಯದಲ್ಲಿ ತೂರಾಟದಿಂದ ನೀರೊಳಕ್ಕೆ ಬಿದ್ದು ಸತ್ತುಹೋದಳು ಆದ್ದರಿಂದ ಈ ನಷ್ಟತೆಯನ್ನು ತಪ್ಪಿಸಿದರೆ ತುಂಬಾ ಅನುಕೂಲ—ಈ ಊರಿಗೆ ಡಾಕ್ಟರಾಗಿ ಬಂದಿರುವ ಮೆ॥ ಶ್ರೀಕಂಠಯ್ಯ ಎಂಬುವರು ಬಹು ಗುಣಶಾಲಿಗಳಾಗಿಯೂ ರೋಗಿಗಳಿಗೆ ತುಂಬಾ ಮುತುವರ್ಜಿಯಿಂದ ಚಿಕಿತ್ಸೆ ಮಾಡುವವರಾಗಿಯೂ ಇರುತ್ತಾರೆ. ಇಂಥ ಡಾಕ್ಟರು ಇದುವರಿಗೂ ಬಂದಿಲ್ಲ. ಈಗೀಗ ಬಹು ಜನರು ಆಸ್ಪತ್ರೆಗೆ ಹೋಗಿ ಔಷಧ ಸೇವನೆ ಮಾಡುತ್ತಿದ್ದಾರೆ. ಲಕ್ಷ್ಮಮ್ಮಳ್ ಎಂಬ ಸೂಲಗಿತ್ತಿಯು ಕಳೆದ ೩ ವರುಷಗಳಿಂದ ತುಂಬಾ ಹೆಸರುವಾಸಿ ಪಡೆದಿರುತ್ತಾಳೆ. ಇಂಥಾ ಸುಗುಣಶಾಲಿಗಳು ಬಿರಕಾಲ ನಮ್ಮ ಊರಿನಲ್ಲೇ ಇರಬೇಕೆಂದು ಕೋರುತ್ತೇನೆ.—ಈ ತಾಲ್ಲೂಕಿಗೆ ಸೇರಿದ ಅಲೂರು ಗ್ರಾಮದಲ್ಲಿ ಪ್ಲೇಗ್ ಕಳ್ಳತನವೋ ಜೂಜು ನಡೆಯುತ್ತಿತ್ತು. ಇಬ್ಬರು ಜಮಾದಾರ್ ವೆಂಕಟಸ್ವಾಮಿಯವರು ಆ ಸ್ಥಳಕ್ಕೆ ಹೋಗಿ ಆಡುತ್ತಿದ್ದವರಲ್ಲಿ ಕೆಲವನ್ನು ಹಿಡಿದು ತನಿಖೆಮಾಡಿ ಬಿಟ್ಟುಬಿಟ್ಟರಂತೆ ಈಗ ಅದೇ ಗುಂಪಿನವರು ಬಾಚೂ ಗ್ರಾಮವಾದ ಹೊಮ್ಮದಲ್ಲಿ ಆಡುತ್ತಿದ್ದಾರೆಂದು ವರ್ತಮಾನ ಬಂದಿದೆ. ಇದು ಶೀಘ್ರದಲ್ಲಿಯೇ ಪೋಲೀಸಿನವರ ಗಮನಕ್ಕೆ ಬರುತ್ತೆಂದು ನಿರೀಕ್ಷಿಸುತ್ತೇನೆ—ಕಳೆದ ೧೯ ನೇ ತಾರೀಖಿನ ಬಾತ್ಮಿಯಂತೆ ರಾಗಿಯನ್ನು ಕಳುತ್ತಿದ್ದ ಉತ್ತಹಳ್ಳಿ ಹೊಲೆಯರಿಗೆ ಮ್ಯಾಜಿಸ್ಟ್ರೇಟರು ಫಲಾ ಆರು ತಿಂಗಳು ಸಜಾ ವಿಧಿಸಿದರು.

ಕುಣಿಗಲು.—ಇಲ್ಲಿ ಬಹಳ ಮಳೆ ಬನ್ನಾಗಿದೆ. ಕೆಲವು ದಿವಸಗಳ ಕೆಳಗೆ ೨—೩ ಹದ ಮಳೆಯಾಗಿ ನಿರ್ಜಲವಾಗಿದ್ದ ಕೆರೆಗೆ ಸ್ವಲ್ಪಮಟ್ಟಿಗೆ ನೀರುಬಂದಿದೆ ರೈತರು ತಮ್ಮ ತಮ್ಮ ಭೂಮಿಗಳನ್ನು ಉತ್ತುಸಿದ್ಧರಾಗಿರುವರು. ಪುನಃ ಮಳೆಯ ನಿರೀಕ್ಷಣೆಯಲ್ಲಿದ್ದಾರೆ. ಷೆಡ್ಡುಗಳಲ್ಲಿದ್ದವರು ಮಾತ್ರ ಊರನ್ನು ಸೇರಿದರು ಪರಸ್ಥಳಗಳಿಗೆ ಹೋದವರು ಇನ್ನು ಕೆಲವರು ಅಲ್ಲೇ ಇರುತ್ತಾರೆ ಸ್ಕೂಲುಗಳೆಲ್ಲಾ ತೆರೆಯಲ್ಪಟ್ಟು ಅರ್ಧಮಟ್ಟಿಗೆ ವಿದ್ಯಾರ್ಥಿಗಳು ಸೇರಿ ಓದುತ್ತಿರುವರು. ಇವರೆಲ್ಲರೂ ೩—೪ ತಿಂಗಳುಗಳ ವರೆವಿಗೂ ವಿದ್ಯಾಭ್ಯಾಸವಿಲ್ಲದೆ ಆಯಾ ತರಗತಿಗಳಿಗೆ ಹೀನಸ್ಥಿತಿಯಾಗಿದ್ದಾರೆ. ಸ್ಕೂಲು ಮಾಸ್ಟರುಗಳ ಪ್ರಯತ್ನ ಅಪಾರವಾಗಿದೆ—ನಮ್ಮ ಅಮಲ್ದಾರರಾದ ಮೆ॥ ಆರ್ ರಾಘವೇಂದ್ರರಾಯರು ಇಲ್ಲಿಗೆ ದಯಮಾಡಿ ಕೆಲವು ತಿಂಗಳುಗಳಾದವು. ಇವರು ಸರ್ಕಾರದ ಕೆಲಸಗಳಲ್ಲಿ ಬಹು ಸಮರ್ಥರೂ, ಬಹುಶ್ರುತರೂ, ನೀತಿಬೋಧಕರೂ, ಸಕಲ ಪ್ರಜಾ ಕ್ಷೇಮಚಿಂತಕರೂ ಆಗಿರುವರು. ಇವರು ದಯಮಾಡಿದಾರಭ್ಯ ಮ್ಯುನಿಸಿಪಾಲಿಟಿಯ ನೋಡಲಾದ ವಿಷಯಗಳಲ್ಲಿ ವಿಶೇಷ ಗಮನಕೊಟ್ಟು ಆರೋಗ್ಯಭಾಗ್ಯವನ್ನೂ ಸುಖಸ್ಥಿತಿಗಳನ್ನೂ ಕಲ್ಪಿಸುತ್ತಾ ಬರುತ್ತಾರೆ.—ಇಲ್ಲಿಗೆ ಸಮೀಪದಲ್ಲಿರುವ ಕೆಬ್ಬಗೆರೆ ಗ್ರಾಮದ ನಂಜಯ್ಯನೆಂಬುವನು ಯಾವ ಕಾರಣದಿಂದಲೋ ೯ ವರುಷಗಳ ಒಬ್ಬ ಹುಡುಗನಿಗೆ ಪಾಷಾಣವನ್ನು ತಿನ್ನಿಸಿ ಕೊಂದನೆಂಬುದಾಗಿ ಇಲ್ಲಿನ ಲಾಕಪ್ಪಿನಲ್ಲಿರುತ್ತಾನೆ ಪೋಲೀಸ್ ಸೂಪರಿಂಟೆಂಡೆಂಟರು ವಿಚಾರಣೆ ಮಾಡುತ್ತಿರುವರು ಫಲಿತಾರ್ಥವು ನಿರೀಕ್ಷಣೀಯವಾಗಿದೆ.—ಇಬ್ಬರು ಹುಡುಗರು ಹುತ್ತರಿ ದುರ್ಗದ ಬಳಿಯಲ್ಲಿ ಬರುತ್ತಿರಲು, ಸಿಡಿಲುಬಡಿದು ಸತ್ತುಹೋದರು. ಇವರ ತಾಯಿ ತಂದೆಗಳ ದುಃಖವು ಹೇಳಲಸಾಧ್ಯವಾಗಿದೆ.—ಈ ಊರಿಗೆ ಲಿಂಗಾಯತ ಯೋಗಿಗಳೆಂಬುವರು ಬಂದು ಊರುಮುಂದಿನ ಹೂವರ್ಜಿಯ ಮರದ ಕೆಳಗೆ ಬೆಂಕಿಯನ್ನು ಹಾಕಿಕೊಂಡು ಗುಡಿಗುಡಿ ಸೇದುತ್ತಾ ರಾತ್ರಿ ಹಗಲು ಕೆಲವು ದಿನಗಳು ಕುಳಿತಿರುತ್ತಾರೆ ಕೆಲವು ದಿನ ಶ್ರೀಮಂತರ ಮನೆಗಳಲ್ಲಿರುತ್ತಾರೆ. ಮರದ ಕೆಳಗೆ ಕುಳಿತಿದ್ದಾಗ ಕೇಳಿದರೆ ಸಾವಿರ ಜನರಿಗೆ ಭೋಜನವನ್ನು ಮಾಡಿಸಿದ ಹೊರ್ತು ನಾನು ಉಪವಾಸವಾಗಿ ಹೀಗೆಯೇ ಕುಳಿತಿರುವೆನು ಎಂದು ಹೇಳುವರು ಕೆಲವರು ನಿಮ್ಮ ಇಷ್ಟದಂತೆ ನಡಿಸುತ್ತೇವೆಂದು ಮನೆಗೆ ಕರೆದುಕೊಂಡು ಹೋಗಿ ಊಟಕ್ಕಿಡುವರು. ಸಹಸ್ರಜನ ಸಂತರ್ಪಣೆ ಮಾತ್ರ ಕಾಣಲಿಲ್ಲ. ಈ ಯೋಗಿಗಳ ಸಂಕಲ್ಪವು ಆಶ್ಚರ್ಯಭರಿತವಾಗಿದೆ ಮುಂದೆ ನೋಡಬೇಕು.

ಇಂಡಿಯಾ ದೇಶದ ವೃತ್ತಾಂತಗಳು.

ಪಂಜಾಬಿನಲ್ಲಿ ಗವರ್ನಮೆಂಟಿನವರು ಹೊಸದಾಗಿ ನಾಲೆಗಳ ಕಾಮಗಾರಿ ಪ್ರಾರಂಭ ಮಾಡುವವರಾಗಿದ್ದಾರೆ. ಅಲ್ಲಿಗೆ ಕಡೇ ಪಕ್ಷ ಒಂದು ಲಕ್ಷ ಕೂಲಿ ಜನರು ಬೇಕಾಗುವದು.

✦✦✦✦

ಕಾಂಗ್ರಾ ಕೊಲೂ ಕಣಿವೆಗಳಲ್ಲಿ ಭೂಕಂಪದ ಅನಾಹುತಕ್ಕೆ ಸಿಕ್ಕಿದ ಪ್ರಜೆಗಳ ಸಹಾಯಾರ್ಥವಾಗಿ ಕಪೂರ್ಥಲದ ಮಹಾರಾಜರವರು ೧೫,೦೦೦ ರೂಪಾಯಿ ಚಂದಾ ಕೊಟ್ಟಿದ್ದಾರೆ.

✦✦✦✦

ಬಿಹಾರ್ ಅಧಿಪತ್ಯದಲ್ಲಿ ಮರಗಳೂ ಬೊಂಬುಗಳೂ ವಿರಳವಾಗಿರುವುದನ್ನು ನೋಡಿ, ಅವುಗಳಿಂದ ಕಾಗದವನ್ನು ತಯಾರು ಮಾಡಬೇಕೆಂದು ಗವರ್ನರವರು ಯೋಚಿಸಿ, ಈ ವಿದ್ಯೆಯನ್ನು ಕಲಿತಿರುವಂಥಾ ಒಬ್ಬ ಬುದ್ಧಿವಂತನನ್ನು ವಿಲಾಯತಿಯಿಂದ ಕರೆಸುತ್ತಾರೆ.

✦✦✦✦

ಕಳೆದ ಶನಿವಾರ ರಾತ್ರಿ ಬೊಂಬಾಯಿ ಪಟ್ಟಣದಲ್ಲಿ ನಾಜುನಸಿ ಎಂಬೊಬ್ಬ ಹಿಂದೂ ವರ್ತಕನು ಇಟ್ಟಿದ್ದ ಮದ್ಯಪಾನ ಪದಾರ್ಥಗಳ ಭಾರೀ ಅಂಗಡಿಗೆ ಬೆಂಕಿ ಬಿದ್ದು ಸುಟ್ಟುಹೋಯಿತು ಆ ವರ್ತಕನಿಗೆ ೩,೧೨,೦೦೦ ರೂಪಾಯಿ ನಷ್ಟವಾಗಿದೆ ಎಂದು ತಿಳಿದು ಬರುವುದು.

✦✦✦✦

ಗತಿಸಿದ ಖಾನ್ ಬಹದೂರ್ ಬಿಸ್ತೂಕಜಿ ಸೊರಾಬ್ಜಿ ಛೋಟ್ವಾಲಾ ಎಂಬೊಬ್ಬ ಪಾರ್ಸಿ ಸಾಹುಕಾರರಿಂದ ಭೋಜ್ ನಗರದಲ್ಲಿ ಕಟ್ಟಿಸಲ್ಪಟ್ಟ ಅಗ್ನಿ ದೇವಸ್ಥಾನವನ್ನು ಕಳೆದ ವಾರ ಮಹಾರಾವ್ ಶ್ರೀಖೇಂಗಾರ್ಜಿ ಸವಾಯಿ ಬಹದೂರ್ ಅವರು ಪ್ರತಿಷ್ಠೆ ಮಾಡಿದರು. ಪಾರ್ಸಿ ಜನರ ದೇವಸ್ಥಾನಕ್ಕೆ ಹಿಂದುಗಳು ಪ್ರವೇಶ ಮಾಡಿದ್ದು ಇದೇ ಮೊದಲಾಗಿದೆ

✦✦✦✦

ಚಿತ್ತಗೊಂಡದಲ್ಲಿ ಕಳೆದ ಸೆಪ್ಟಂಬರ್ ತಿಂಗಳಿಂದಲೂ ಒಂದು ಹುಲಿ ಸೇರಿಕೊಂಡು ನೂರಾರು ದನಗಳನ್ನೂ ಹತ್ತಾರು ಪ್ರಜೆಗಳನ್ನೂ ಹಿಡಿದು ತಿಂದುಹಾಕಿ, ಆ ಪ್ರಾಂತ್ಯದಲ್ಲೆಲ್ಲಾ ತುಂಬಾ ಭೀತಿಯನ್ನುಂಟುಮಾಡಿತ್ತು. ಅದನ್ನು ಕೊಲಗಲಪುರದ ಜಮೀನ್ದಾರರು ಕೊಲ್ಲಬೇಕೆಂದು ಎರಡಾವರ್ತಿ ಪ್ರಯತ್ನಪಟ್ಟು ಸಾರ್ಥಕವಾಗದೆ ಕಳೆದ ವಾರ ಮೂರನೇ ಸಲ ಪ್ರಯತ್ನಮಾಡಿ ಕೊಂದು ಹಾಕಿದರು. ಈ ಭಾರೀ ಹುಲಿಯನ್ನು ಜನರೆಲ್ಲಾ ನೋಡಿ ಆಶ್ಚರ್ಯಪಟ್ಟರು.

✦✦✦✦

ಹಿಂದುಸ್ಥಾನದಲ್ಲಿ ಹೋದ ವಾರ ಪ್ಲೇಗ್ ಉಪದ್ರವದಲ್ಲಿ ೪೧,೨೦೩ ಮಂದಿ ಮೃತಪಟ್ಟರು. ಈ ವಾರ ೩೫,೪೯೨ ಮಂದಿ ಕಾಲವಾಗಿದಾರೆ ಬೇರೆ ಬೇರೆ ಕಡೆಯ ಸಂಖ್ಯೆ ಏನೆಂದರೆ—ಪಂಜಾಬ್ ೨೬,೩೪೦, ಸಂಯುಕ್ತ ಅಧಿಪತ್ಯ ೫,೨೩೦ ಬಂಗಾಳಾ ೧,೮೭೯, ರಾಜಪುಟಾನ ೨,೧೪೨, ಬೊಂಬಾಯಿ ಡಿಸ್ಟ್ರಿಕ್ಟುಗಳು ೫೮೯, ಬಿಹಾರ್ ೫೮, ಕಾಶ್ಮೀರ ೨೦೦, ಬೊಂಬಾಯಿ ಪಟ್ಟಣ ೧೯೪, ಕಲ್ಕತ್ತೆ ೧೩೨ ಇದನ್ನು ನೋಡಲಾಗಿ ಪ್ಲೇಗ್ ಉಪದ್ರವು ಈಗೀಗ ಕಡಿಮೆಯಾಗುತ್ತಿರುವಂತೆ ಕಾಣುತ್ತಿದೆ

✦✦✦✦

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಕೈರಾಪುರದ ಡಿಸ್ಟ್ರಿಕ್ಟಿನಲ್ಲಿ ಷಹಜಾನ್‌ಪುರವೆಂಬ ಗ್ರಾಮದೊಳಗಿದ್ದ ಒಬ್ಬ ಹಿಂದೂ ಭದ್ರಿನಾಥಕ್ಕೆ ಯಾತ್ರೆ ಹೋಗಿ ಬಂದು ಕಾಯಿಲೆಯಾಗಿದ್ದು ಕಳೆದ ವಾರ ಮೃತಪಟ್ಟನು ಅವನ ಮನೆಯವರು ಶವವನ್ನು ರುದ್ರಭೂಮಿಗೆ ಸಾಗಿಸಿ ಚಿತೆಯಮೇಲಿಟ್ಟು ಬೆಂಕಿ ಹಾಕಿ ಬಂದುಬಿಟ್ಟರು. ಇವರೆಲ್ಲಾ ಸಮೀಪದಲ್ಲಿರುವ ಒಂದು ಕೊಳದಲ್ಲಿ ಸ್ನಾನಮಾಡುತ್ತಿದ್ದಾಗ ಸತ್ತವನ ಹೆಂಡತಿಯು ನೆಟ್ಟಗೆ ಸ್ಮಶಾನಕ್ಕೆ ಹೋಗಿ ಚಿತೆಯನ್ನು ಬಿಚ್ಚಿ ಉರಿಯುತ್ತಿದ್ದ ತನ್ನ ಗಂಡನ ಹೆಣದ ಮೇಲೆ ಹಾಕಿ, ತಾನೂ ಬಿದ್ದು ಸಹಗಮನ ಮಾಡಿದಳು ಮನೆಯವರು ಅವಳನ್ನು ನೋಡುವಾಗ್ಗೆ ಅವಳ ಮರಣವು ಗೊತ್ತಾಯಿತು.

✦✦✦✦

ಸಿಲೋನ್ (ಲಂಕಾ) ದ್ವೀಪದ ಗವರ್ನರವರು ಕಳೆದ ತಿಂಗಳ ೨೩ನೆ ತಾರೀಖಿನಲ್ಲಿ ತಮ್ಮ ರಾಜಧಾನಿಯಿಂದ ಪರಿವಾರ ಸಹಿತ ಸಕೀಟು ಹೋಗಿ ಬಂದರು. ವಾಪಸು ಬರುವಾಗ್ಗೆ ಅವರ ಮುಖ್ಯವಾದ ಕೈಪೆಟ್ಟಿಗೆಯೇ ಕಾಣಲಿಲ್ಲದಾಗಿತ್ತು. ಅವರ ಹತ್ತಿರವಿದ್ದವರೆಲ್ಲಾ ಹೊಸಲೇ ಗಾಬರಿ ಬಿದ್ದು ಎಲ್ಲಾ ಕಡೆಗಳಲ್ಲೂ ಹುಡುಕಿದರು. ಪೋಲೀಸಿಗೂ ರೈಲಿನವರಿಗೂ ರಿಪೋರ್ಟು ಮಾಡಿದರು. ಆದಾಗ್ಯೂ ಇದುವರೆಗೆ ಆ ಪೆಟ್ಟಿಗೆ ಸಿಕ್ಕಿ ಇಲ್ಲ. ಅದರಲ್ಲಿ ಸರ್ಕಾರಕ್ಕೆ ಸಂಬಂಧಪಟ್ಟ ಮುಖ್ಯ ಮುಖ್ಯ ಕಾಗದಗಳೇ ತುಂಬಿದ್ದವೆಂದು ತಿಳಿದುಬರುತ್ತದೆ. ಗವರ್ನರವರ ಕೈಪೆಟ್ಟಿಗೆಯನ್ನು ಕದ್ದು ಇನ್ನೂ ಪತ್ತೆ ಆಗದೆ ಇರುವ ಕಳ್ಳರ ಧೈರ್ಯವೇ ಧೈರ್ಯ!

✦✦✦✦

ಸಿಲೋನ್ (ಲಂಕಾ) ದ್ವೀಪದ ಗುತ್ತಲೂ ಸಮುದ್ರದಲ್ಲಿ ಮುತ್ತುಗಳು ಸಿಕ್ಕುವುದೂ ಇದರಿಂದ ಸರ್ಕಾರಕ್ಕೆ ತುಂಬಾ ಹಣ ಉತ್ಪತ್ತಿಯಾಗುವುದೂ ತಿಳಿದಿದೆಯಷ್ಟೆ. ಇದನ್ನು ತೆಗೆಯುವುದಕ್ಕೆ ಇಲ್ಲಿನ ವರ್ತಕರೇ ಕಂಟ್ರಾಕ್ಟು ತೆಗೆದುಕೊಳ್ಳುತ್ತಿದ್ದರು ಈಗ ಈ ಕಂಟ್ರಾಕ್ಟನ್ನು ಲಂಡನ್ ಪಟ್ಟಣದ ವರ್ತಕರು ತೆಗೆದುಕೊಳ್ಳಬೇಕೆಂದು ಒಂದು ಕಂಪನಿ ಗೂಡಿ ಷೇರು ಮೂಲಕ ೩೦ ಲಕ್ಷ ರೂಪಾಯಿಗಿಂತಲೂ ಹೆಚ್ಚು ಹಣ ಕೂಡಿಸಿ, ಇಪ್ಪತ್ತು ಸಂವತ್ಸರಗಳ ತನಕ ನಮಗೆ ಕಂಟ್ರಾಕ್ಟು ಕೊಡಬೇಕೆಂದು ಸಿಲೋನ್ ಗವರ್ನಮೆಂಟಿಗೆ ಅರ್ಜಿ ಬರೆದಿರುತ್ತಾರೆ ಸಿಲೋನ್ ಗವರ್ನರವರು ಈ ವಿಷಯವನ್ನು ತಮ್ಮ ಮಂತ್ರಾಲೋಚನಾ ಸಭೆಯಲ್ಲಿ ತಿಳಿಸಿ, ಮೆಂಬರುಗಳ ಅಭಿಪ್ರಾಯವನ್ನು ತಿಳಿಯುವವರಾಗಿದಾರೆ.

ಮದರಾಸ್ ಪಟ್ಟಣದಲ್ಲಿ ಕೆಲವು ಮಂದಿ ಹಿಂದೂಗಳು ಒಂದು ಸಂಘವನ್ನು ಮಾಡಿಕೊಂಡು, ಶೇರು ಮೂಲಕ ಹಣ ಕೂಡಿಸಿ, ಅಗಸರ ಕಂಪನಿಯನ್ನು ಏರ್ಪಾಡು ಮಾಡಿದ್ದಾರೆ. ಈ ಕಂಪನಿಯವರು ಅಗಸರನ್ನು ಸಂಬಳಕ್ಕೆ ನೇಮಿಸಿಕೊಂಡು, ಅವರಿಂದ ಹಿಂದೂಗಳ ಮತ್ತು ಸಾಹೇಬ್ ಜನಗಳ ಮನೆಗಳಲ್ಲಿ ಬೀಳುವ ಬಟ್ಟೆಗಳನ್ನು ತರಿಸಿ ಒಗಿಸುವರು. ಸಾಹೇಬ್ ಜನರ ಮನೆಗಳಿಗೆ ೧೦೦ ರ ವರೆಗೆ ತಿಂಗಳಿಗೆ ೫ ರೂಪಾಯಿನಂತೆಯೂ ಹಿಂದೂಗಳ ಮನೆಗಳಿಗೆ ೩೦ ರ ವರೆಗೆ ತಿಂಗಳಿಗೆ ೧—೨ ರೂಪಾಯಿನಂತೆಯೂ ಮನೆಯವರಿಂದ ಕೂಲಿ ವಸೂಲ್ಮಾಡುವರು. ಸಾಹೇಬ್ ಜನರಿಗೆ ವಾರಕ್ಕೊಂದು ಸಲವೂ ಹಿಂದೂಗಳಿಗೆ ೧೦ ದಿನಗಳಿಗೊಂದು ಸಲವೂ ಮಡಿ ಕೊಡುವಂತೆ ಏರ್ಪಾಡು ಮಾಡಿದಾರೆ

❖❖❖❖

ಹಿಂದೂಸ್ಥಾನದ ವಾಯುವ್ಯ ಸರಹದ್ದಿನಲ್ಲಿ ದೀರ್ ಎಂಬ ಸ್ವತಂತ್ರ ಸಂಸ್ಥಾನದಲ್ಲಿ ದೊರೆಯಾಗಿರುವ ಬಾದ್‌ಷಾ ಖಾನನಿಗೂ ಆತನ ತಮ್ಮನಾದ ಮಿಯಾರ್ ಗುಲ್ ಜಾರ್ ಎಂಬಾತನಿಗೂ ವೈಮನಸ್ಯಗಳು ಹೆಚ್ಚಿವೆ. ತಮ್ಮನು ಅಣ್ಣನನ್ನು ಓಡಿಸಿ ದೊರೆತನವನ್ನು ತಾನು ಮಾಡಿಕೊಳ್ಳಬೇಕೆಂದು ಸೈನ್ಯವನ್ನು ಕಟ್ಟಿ ಅಣ್ಣನ ಮೇಲೆ ಯುದ್ಧಕ್ಕೆ ಹೊರಟಿದಾನೆ. ಆಗಲೇ ಕೆಲವು ಭಯಂಕರವಾದ ಕದನಗಳೂ ಆದವು. ಆ ಪ್ರಾಂತ್ಯದಲ್ಲಿ ಇಂಗ್ಲೀಷರು ಚಕ್ದಾರಾದಿಂದ ಚಿತ್ರಾಲಿಗೆ ಹೋಗಿರುವ ರಸ್ತೆ ಇರುವುದರಿಂದ ಪ್ರಯಾಣಸ್ಥರಿಗೆ ಯಾವ ಅಪಾಯವೂ ಉಂಟಾಗದಂತೆ ಕಾಪಾಡುವ ಉದ್ದೇಶ್ಯ ಇಂಡಿಯಾ ಗವರ್ನ್‌ಮೆಂಟಿನವರು ಅಲ್ಲಿಗೆ ಕೆಲವು ಸೈನ್ಯಗಳನ್ನು ಕಳುಹಿಸಿರುತ್ತಾರೆ.

❖❖❖❖

ಕಲ್ಕತ್ತಾ ಪಟ್ಟಣದ ಪೋಲೀಸಿನವರು ಮೂರು ಮಂದಿ ಬಂಗಾಳಿಗಳನ್ನು ದಸ್ತಗಿರಿ ಮಾಡಿದಾರೆ. ಇವರಲ್ಲಿ ಮುಖಂಡನಾದವನು ತಿಳಿಸಿದ್ದೇನೆಂದರೆ—ನಾವು ಕರೆನ್ಸಿ ನೋಟುಗಳನ್ನು ಕದ್ದು ತರುವವರಿಂದ ಅಲ್ಪಕ್ರಯಕ್ಕೆ ಅವನ್ನು ಕೊಂಡು ಕೊಂಡು, ಯೂರೋಪಿಯನ್ ಜನರು ಇರುವ ಮನೆಗಳಿಗೂ ಹೋಟೇಲುಗಳಿಗೂ ಹೋಗಿ ಆ ನೋಟುಗಳನ್ನು ಕೊಟ್ಟು ಹಣ ತೆಗೆದುಕೊಳ್ಳುತ್ತೇವೆ. ಎಂಟು ವರುಷಗಳಿಂದಲೂ ಇದೇ ನಮ್ಮ ಕಸಬಾಗಿದೆ. ಇದುವರೆಗೆ ನಾವು ಒಂದು ಸಾವಿರ ರೂಪಾಯಿನ ೩೨ ನೋಟುಗಳನ್ನೂ ಐವತ್ತು ರೂಪಾಯಿನ ೧೩ ನೋಟುಗಳನ್ನೂ ನೂರು ರೂಪಾಯಿನ ಅನೇಕ ನೋಟುಗಳನ್ನೂ ಈ ರೀತಿ ಬಿಕರಿ ಮಾಡಿರುವೆವು ಎಂಬುದೇ. ಈ ಮುಖಂಡನಿಗೆ ಮಿಡ್ನಪುರದಲ್ಲಿ ಈ ಮೊದಲೇ ಮೂರು ವರುಷ ಕಠಿಣಸಜಾ ಆಗಿತ್ತು.

❖❖❖❖

ಕಳೆದ ೨೧ನೆಯ ತಾರೀಖಿನ ದಿನ ಬಳ್ಳಾರಿಯ ಟೌನ್ ಹಾಲ್ ಬಂಗಲೆಯಲ್ಲಿ ಸ್ತ್ರೀಯರ ಸಮಾಜವೊಂದು ನಡೆಯಿತು. ಸುಮಾರು ೨೦೦ ಮಂದಿ ಸ್ತ್ರೀಯರು ಸಭಾಸದರಾಗಿ ಹೋಗಿದ್ದರು. ಜಾನಕಮ್ಮನೆಂಬೊಬ್ಬ ಬ್ರಾಹ್ಮಣ ಸ್ತ್ರೀಯು ಸಭಾನಾಯಕಿಯಾಗಿದ್ದುಕೊಂಡು, ಸ್ತ್ರೀವಿದ್ಯಾಭಿವೃದ್ಧಿ, ಬಾಲ್ಯವಿವಾಹ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರು. ಇನ್ನು ಕೆಲವು ಸ್ತ್ರೀಯರು ತೆಲುಗಿನಲ್ಲಿ ಉಪನ್ಯಾಸಗಳನ್ನು ಬರೆದು ತಂದು ಓದಿದರು. ತರುವಾಯ ಸ್ತ್ರೀವಿದ್ಯಾಭ್ಯಾಸ, ಹುಡುಗಿಯರಿಗೆ ವಯಸ್ಸಾದ ಮೇಲೆ ವಿವಾಹಮಾಡುವುದು ಎಂಬೀ ವಿಷಯಗಳನ್ನು ಕುರಿತು ಚರ್ಚೆ ಮಾಡಿದರು. ಕಡೆಗೆ ಹೆಣ್ಣುಮಕ್ಕಳಿಗೆ ಇಂಗ್ಲಿಷ್ ವಿದ್ಯೆಯನ್ನು ಕಲಿಸಬೇಕೆಂತಲೂ ವಯಸ್ಸಾದ ಮೇಲೆ ವಿವಾಹ ಮಾಡಬೇಕೆಂತಲೂ ತೀರ್ಮಾನ ಮಾಡಿರುತ್ತಾರೆ

❖❖❖❖

ಬ್ರಹ್ಮ ಸಮಾಜವೆಂಬ ಮತದ ಮುಖಂಡರಾಗಿದ್ದ ಪ್ರತಾಪಚಂದ್ರ ಮೊಜುಂದಾರ್ ಎಂಬ ಪ್ರಸಿದ್ಧ ಪುರುಷರು ಕಳೆದ ಶನಿವಾರ ೬೫ ನೆ ವಯಸ್ಸಿನಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಕಾಲವಾದರು. ಇವರು ಚಿಕ್ಕಂದಿನಿಂದಲೂ ಭಕ್ತಿ ಮಾರ್ಗವನ್ನೇ ಹಿಡಿದು, ಬ್ರಹ್ಮ ಸಮಾಜದ ಮುಖಂಡರಾಗಿದ್ದ ಕೇಶವ ಚಂದ್ರಸೇನರವರ ಶಿಷ್ಯರಾಗಿ ಅವರ ಕಾಲಾನಂತರ ಬ್ರಹ್ಮ ಸಮಾಜದ ಮುಖಂಡರಾದರು. ಇವರು ತಮ್ಮ ಜೀವಕಾಲವನ್ನೆಲ್ಲಾ ಮತ ಪ್ರಸಾರಕ ಕಾರ್ಯದಲ್ಲೇ ಕಳೆದರು. ವಿಲಾಯಿತಿ, ಯೂರೋಪ್, ಅಮೇರಿಕಗಳಿಗೆ ಹೋಗಿ ಅಲ್ಲೆಲ್ಲಾ ಉಪನ್ಯಾಸಗಳನ್ನು ಮಾಡಿ, ತುಂಬಾ ಕೀರ್ತಿಯನ್ನು ಪಡೆದಿದ್ದರು. ಕಳೆದ ೧೮೯೩ ರಲ್ಲಿ ಚಿಕಾಗೋ ನಗರದಲ್ಲಿ ನಡೆದ ಮತಗಳ ಸಮಾಜಕ್ಕೂ ಹೋಗಿ ನಿಂತು ಬ್ರಹ್ಮ ಸಮಾಜವೆಂಬ ಮತವಿಚಾರವನ್ನು ಕುರಿತು ಉಪನ್ಯಾಸ ಮಾಡಿದರು. ಇಂಥಾ ಯಶೋವಂತರು ಕಾಲವಾದುದಕ್ಕಾಗಿ ಅನೇಕಾನೇಕರು ವ್ಯಸನಪಡುತ್ತಿದಾರೆ.

❖❖❖❖

ಕಾಶ್ಮೀರ ಸಂಸ್ಥಾನದಿಂದ ಕಳೆದ ವಾರ ಬಂದಿರುವ ವಿಶೇಷ ತಂತೀ ವರ್ತಮಾನಗಳೇನೆಂದರೆ—(೧) ಮೂರು ದಿನಗಳಿಂದ ಕಾಶ್ಮೀರದಲ್ಲಿ ಸಾರೋದ್ಧಾರವಾಗಿ ಮಳೆ ಸುರಿಯುತ್ತಿದೆ. ಪ್ರವಾಹಗಳು ಅಪಾರವಾಗಿ ಬರಬಹುದೆಂದು ಪ್ರಜೆಗಳು ಗಾಬರಿಪಡುತ್ತಿದಾರೆ. ವರ್ತಕರೇ ಮುಂತಾದವರು ತಮ್ಮ ಸರಕುಗಳನ್ನು ದೋಣಿಗಳಿಗೆ ಸಾಗಿಸಿ ಭರ್ತಿಮಾಡುತ್ತಿರುವರು. ಬಾರಾಮುಲಾ ಎಂಬ ಊರು ಕೆಲವು ಭಾಗದಲ್ಲಿ ನೀರು ನಿಂತಿದೆ. ಎರಡು ಭಾರೀ ಸೇತುವೆಗಳು ಮುರಿದುಹೋದವು. ಇದರಿಂದ ಅಂಚೆ ರಸ್ತೆ ನಿಂತುಹೋಯಿತು. (೨) ತುಂಬಾ ಮಳೆ ಸುರಿದದ್ದರಿಂದ ಕೋಹಾಲಾ, ಬಾರಾಮುಲಾ ಎಂಬ ಕಡೆಗಳಲ್ಲಿ ಐದು ಸೇತುವೆಗಳು ಮುರಿದುಹೋದವು. ಕಾಶ್ಮೀರಕ್ಕೆ ಹೋಗುವ ರಸ್ತೆ ಕೆಟ್ಟುಹೋಗಿದೆ. ಅಂಚೆ ವಸ್ತುಗಳನ್ನು ಬಹಳ ಕಷ್ಟಪಟ್ಟು ಸಾಗಿಸುತ್ತಿದಾರೆ. ಇನ್ನೂ ೧೦—೧೨ ದಿನಗಳ ತನಕ ಕಾಶ್ಮೀರಕ್ಕೆ ಹೋಗಿ ಬರುವುದು ಅಸಾಧ್ಯ. (೩) ತಾ. ೧೩ ರಿಂದ ಮಳೆಯೂ ಮಂಜು ಗಡ್ಡೆಗಳೂ ಅಪಾರವಾಗಿ ತಾ. ೧೭ ರ ವರೆಗೆ ಸುರಿದವು. ಟೆಲಿಗ್ರಾಫ್ ತಂತಿಗಳು ಕಿತ್ತುಹೋಗಿವೆ. ರಾಜಧಾನಿಯಾದ ಈ ಪಟ್ಟಣಕ್ಕೆ ಹೋಗುವ ರಸ್ತೆ ತುಂಬಾ ಕೆಟ್ಟಿದೆ. ಯೂರೋಪಿನ ವರ್ತಕರು ಸಾಮಾನನ್ನು ಜೋಜಿಲ್ಲಾ ಕಣಿವೆಯಲ್ಲಿ ಸಾಗಿಸುವುದು ತುಂಬಾ ಪ್ರಯಾಸವಾಗಿರುವುದು. ಅವರ ಅನೇಕ ಪ್ರಾಣಿಗಳು ಲಯವಾದವು (೪) ಮುಖ್ಯ ರಾಜಧಾನಿಯಾದ ಶ್ರೀನಗರವು ನೀರಿನಲ್ಲಿ ಮುಳುಗಿಹೋಯಿತು. ಇದಲ್ಲದೆ ಇಪ್ಪತ್ತೆರಡು ಗ್ರಾಮಗಳು ಸಂಪೂರ್ಣವಾಗಿ ನಾಶಹೊಂದಿದವೆಂದು ವರ್ತಮಾನವಿದೆ. ತಗ್ಗಿನಲ್ಲಿರುವ ಪ್ರದೇಶಗಳಲ್ಲಿ ಭತ್ತದ ಬೆಳೆಯೂ ಇತರ ಪೈರುಗಳೂ ಎಲ್ಲಾ ಕೊಚ್ಚಿಹೋಗಿವೆ. ಗೋಕಾಯಿಗಳೆಷ್ಟು ನಷ್ಟವಾದವೋ ಇನ್ನೂ ತಿಳಿಯಲಿಲ್ಲ.

ವಿದೇಶ ವರ್ತಮಾನಗಳು.

ನಾರ್ವೆ ರಾಜ್ಯದಲ್ಲಿ ಗವರ್ನ್‌ಮೆಂಟಿನವರು ಪ್ರಜೋಪಕಾರ ಕಾರ್ಯಗಳನ್ನು ಮಾಡಿಸುವುದಕ್ಕೋಸ್ಕರ ಕಳೆದ ವಾರ ಪ್ಯಾರಿಸ್ ಪಟ್ಟಣದಲ್ಲಿ ನಾಲ್ಕು ಕೋಟಿ ದ್ರವ್ಯವನ್ನು ಸಾಲಮಾಡಿದಾರೆ.

❖❖❖❖

ಕೇಪ್ ಕಾಲೋನಿಗೆ ಸೇರಿದ ಗಾರ್ಡೋನಿಯಾ ಡಿಸ್ಟ್ರಿಕ್ಟಿನಲ್ಲಿ ಜನರು ಸಂಚಾರ ಮಾಡುವುದು ತುಂಬಾ ಕಷ್ಟವಾದ್ದರಿಂದ ಸರ್ಕಾರದವರು ಆ ಪ್ರಾಂತ್ಯದಲ್ಲಿ ಒಂಟೆಗಳ ಮೇಲೆ ಟಪ್ಪಾಲ್ ವಸ್ತುಗಳನ್ನು ಸಾಗಿಸುತ್ತಾ ಬಂದಿದಾರೆ

❖❖❖❖

ವಾರ್ಸಾ ಪಟ್ಟಣದ ಪಾಠಶಾಲೆಗಳಲ್ಲಿ ಓದುವ ಹುಡುಗರಾಗಲಿ ಹುಡುಗಿಯರಾಗಲಿ ಮ್ಯಾಕ್ಸಿಂ ಗೋರ್ಕಿ ಎಂಬ ಕವಿಯಿಂದ ಬರೆಯಲ್ಪಟ್ಟಿರುವ ಪುಸ್ತಕಗಳನ್ನು ಓದಿದರೆ ಅಂಥಾವರನ್ನು ಪಾಠಶಾಲೆಗಳಿಂದ ವಜಾ ಮಾಡಬೇಕೆಂದು ರಷ್ಯಾ ಸರ್ಕಾರದವರು ಹುಕುಂ ಕೊಟ್ಟಿದಾರೆ.

❖❖❖❖

ದಕ್ಷಿಣ ಆಫ್ರಿಕಕ್ಕೆ ಸೇರಿದ ಕೇಪ್ ಕಾಲೊನಿಯಲ್ಲಿ ಈಚೆಗೆ ಇಂಗ್ಲಿಷ್ ಸರ್ಕಾರದವರು ಪ್ರಜೆಗಳ ಗಣತಿಯನ್ನು ಮಾಡಿಸಿದರು. ಇದರಿಂದ ಅಲ್ಲಿ ೩೦೦ ಜನರು ನೂರು ವರ್ಷಕ್ಕಿಂತಲೂ ಹೆಚ್ಚು ವಯಸ್ಸಾದವರು ಇರುತ್ತಾರೆಂದು ತಿಳಿಯುವುದು.

❖❖❖❖

ರಷ್ಯಾ ಸೈನ್ಯದಲ್ಲಿ ಉದ್ಯೋಗದಾರನಾಗಿರುವ ಕ್ಯಾಪ್ಟನ್ ಕಾಸ್ಲೊ ಎಂಬಾತನು ಟಿಬೆಟ್ಟಿನ ದಳಾಯಿಲಾಮನೆಂಬ ಮುಖ್ಯ ಗುರುವನ್ನು ಕಂಡು ಆತನಿಗೆ ಒಪ್ಪಿಸುವುದಕ್ಕೋಸ್ಕರ ಚಕ್ರವರ್ತಿಯವರ ಬಳಿಯಿಂದ ಅನೇಕ ಅಮೂಲ್ಯ ವಸ್ತ್ರಾಭರಣಾದಿಗಳನ್ನು ತೆಗೆದುಕೊಂಡು ಪ್ರಯಾಣಮಾಡಿರುತ್ತಾರೆ

❖❖❖❖

ದಕ್ಷಿಣ ಆಫ್ರಿಕದ ಯುದ್ಧ ಕಾಲದಲ್ಲಿ ಇಂಗ್ಲಿಷರು ತಮ್ಮ ಸೈನಿಕರಿಗೋಸ್ಕರ ಅಲ್ಲಿಗೆ ಕಳುಹಿಸಿದ ಆಹಾರ ಮುಂತಾದ ಪದಾರ್ಥಗಳು ಉಳಿದುಹೋದವು. ಇದನ್ನೆಲ್ಲಾ ಸರ್ಕಾರದವರು ಕೂಡಿಸಿ ಸುಟ್ಟುಹಾಕಿರುತ್ತಾರೆ. ಈ ಪದಾರ್ಥಗಳ ಬೆಲೆ ೪೨,೬೩,೭೦೦ ರೂಪಾಯಿ.

❖❖❖❖

ವಿಲಾಯಿತಿ ರಾಜ್ಯಕ್ಕೆ ಸೇರಿದ ನಾರ್ಥಾಂಪ್ಟನ್ ಡಿಸ್ಟ್ರಿಕ್ಟಿನಲ್ಲಿ ಸೈನ್ಯಕ್ಕೆ ಜೋಡು ಮೋಜಾಗಳನ್ನು ಮಾಡಿಕೊಡತಕ್ಕ ಕಾರ್ಖಾನೆಯ ಕೂಲಿಯಾಳುಗಳು ಒಂದು ಅರ್ಜಿಯನ್ನು ಬರೆದು, ಪಾರ್ಲಿಮೆಂಟಿಗೆ ಒಪ್ಪಿಸಬೇಕೆಂದು ಗೊತ್ತುಮಾಡಿ, ತಮ್ಮಲ್ಲಿ ೨೦೦ ಮಂದಿಯನ್ನು ಆರಿಸಿ ಲಂಡನ್ ಪಟ್ಟಣಕ್ಕೆ ಕಳುಹಿಸಿದಾರೆ.

❖❖❖❖

ಪರ್ಷಿಯಾ ರಾಜ್ಯದ ಸುಲ್ತಾನರು ಪರಿವಾರ ಸಹಿತ ಯೂರೋಪ್ ಖಂಡದ ರಾಜ್ಯಗಳಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದಾರೆ. ರಷ್ಯಾ ಚಕ್ರಾಧಿಪತ್ಯದ ಸಾರ್ವಭೌಮರಾದ ಜಾರ್ ಯವರು ತಮ್ಮ ಸ್ವಂತಕ್ಕೆ ಮಾಡಿಸಿಕೊಂಡಿರುವ ರೈಲ್ ಗಾಡಿಗಳನ್ನು ಸುಲ್ತಾನರವರ ಸಂಚಾರಕ್ಕೆ ಉಪಯೋಗಿಸುವಂತೆ ಕೊಡುವರು.

❖❖❖❖

ಅಮೇರಿಕದಲ್ಲಿರುವ ಪ್ರಸಿದ್ಧ ಜಲಪಾತವಾದ ನೈಯಾಗರಾದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ, ೨೫,೦೦೦ ಕುದುರೆಗಳ ಬಲದಷ್ಟು ಶಕ್ತಿಯನ್ನು ತಂತಿಗಳ ಮೇಲೆ ಅಲ್ಲಿಂದ ೧೦೦ ಮೈಲಿಗಳ ದೂರಕ್ಕೆ ಸಾಗಿಸುವ ಕಾಮಗಾರಿ ನಡೆಯುತ್ತಿದೆ. ಇದನ್ನು ಕೆನಡಾ ರಾಜ್ಯದ ಗವರ್ನರ್ ಜನರಲ್ ಅರಲ್ ಗ್ರೇ ಯವರು ಕಳೆದ ವಾರ ಹೋಗಿ ನೋಡಿ ಬಂದರು.

❖❖❖❖

ರಷ್ಯಾ ರಾಜ್ಯದಲ್ಲಿ ಬಾಲ್ಟಿಕ್ ಕಡಲುಕಾಲುವೆಯಿಂದ ಕಪ್ಪು ಸಮುದ್ರಕ್ಕೆ ಹಡಗುಗಳ ಸಂಚಾರಕ್ಕೆ ಅನುಕೂಲಿಸುವಂಥಾ ದೊಡ್ಡ ಕಾಲುವೆಯನ್ನು ತೆಗೆಯಬೇಕೆಂದು ಬಹು ಕಾಲದಿಂದ ಚರ್ಚೆ ನಡೆಯುತ್ತಿತ್ತು. ಈಗ ಇದನ್ನು ನಿಷ್ಕರ್ಷೆ ಮಾಡಿ ಈ ಕೆಲಸದ ಕಂಟ್ರಾಕ್ಟನ್ನು ರೇಗಾ ಬರ್ಗ ಎಂಬ ಕಂಪನಿಯ ವರ್ತಕರಿಗೆ ವಹಿಸಿರುತ್ತಾರೆ. ಇದಕ್ಕೆ ೬೦ ಕೋಟಿ ದ್ರವ್ಯ ಖರ್ಚಾಗುವುದು.

❖❖❖❖

ಚೀನಾ ರಾಜ್ಯದ ಕೊಚ್ಯಾಂಗ್ ಆಧಿಪತ್ಯದಲ್ಲಿ ಕೆಲವು ವಾರಗಳಿಂದಲೂ ಮತ್ತೆ ಬಾಕ್ಸರುಗಳ ಗಲಭೆ ತುಂಬಾ ಪ್ರಬಲವಾಗಿದೆ ಎಂದು ತಿಳಿದು ಬಂದಿದೆ. ಚೀನಾ ಸೈನಿಕರು ಕ್ವಾಟಾಂಗಿನಲ್ಲಿ ಗುಂಪು ಕೂಡಿದ್ದ ಬಾಕ್ಸರುಗಳನ್ನು ನಿರ್ಬಂಧ ಪಡಿಸಿದ್ದರಿಂದ ಬಾಕ್ಸರುಗಳೆಲ್ಲಾ ಅಲ್ಲಿಂದ ಓಡಿ ಹೋಗಿ "ಕಬ್ಬಿಣದ ಬೆಟ್ಟ" ಎಂಬ ಬಲವಾದ ಕೋಟೆಯೊಳಗೆ ಸೇರಿಕೊಂಡರು. ಸೈನಿಕರಾದರೋ ಅವರನ್ನು ಹಿಂದಟ್ಟಿಕೊಂಡು ಹೋಗಿ ಈಗ ಆ ಕೋಟೆಗೆ ಮುತ್ತಿಗೆ ಹಾಕಿರುತ್ತಾರೆ

❖❖❖❖

ರಷ್ಯಾ ಜಪಾನ್ ಯುದ್ಧ ರಂಗಗಳಲ್ಲೊಂದಾದ ಹಾರ್ಬಿನ್ ಪಟ್ಟಣದಲ್ಲಿ ಬಹು ಭಯಂಕರವಾದ ಪ್ಲೇಗ್ ಉಪದ್ರವು ಪ್ರಾರಂಭವಾಗಿರುವಂತೆಯೂ ಪ್ರತಿ ದಿನವೂ ಮುನ್ನೂರು ಜನರ ವರೆಗೂ ಸಾಯುತ್ತಿರುವಂತೆಯೂ ಆಸ್ಪತ್ರೆಗಳು ರೋಗಿಗಳಿಂದ ತುಂಬಿ ಚಿಕಿತ್ಸೆ ಮಾಡತಕ್ಕ ವೈದ್ಯರು ಸಾಲದೆ ತುಂಬಾ ತೊಂದರೆಪಡುತ್ತಿರುವಂತೆಯೂ ಜಪಾನ್ ರಾಜಧಾನಿಯಾದ ಟೋಕಿಯೋ ನಗರದಿಂದ ತಂತೀ ವರ್ತಮಾನ ಬಂದಿದೆ.

❖❖❖❖

ಅರಬ್ಬಿ ದಂಗೇ ಕೋರರ ಹಾವಳಿಯನ್ನು ಅಡಗಿಸುವುದಕ್ಕಾಗಿ ಜನರಲ್ ರೈಜ್ ಪಾಷಾ ರವರು ತುರ್ಕಿ ಸೈನ್ಯವನ್ನು ತೆಗೆದುಕೊಂಡು ಹೋಗಿ ಅವರ ಮೇಲೆ ಯುದ್ಧ ಮಾಡಿದರು. ದಂಗೇ ಕೋರರು ಅವರನ್ನು ಸೋಲಿಸಿ, ಸಾನಾದಿಂದ ೩೦ ಮೈಲಿ ದೂರದಲ್ಲಿರುವ ಮೆನಾಖಾ ಎಂಬ ಪಟ್ಟಣಕ್ಕೆ ಹೋಗಿ ಮುತ್ತಿಗೆ ಹಾಕಿರುತ್ತಾರೆ ಆ ಪಟ್ಟಣದಲ್ಲಿರುವ ೫,೦೦೦ ತುರ್ಕಿ ಸೈನಿಕರೂ ದಂಗೇ ಕೋರರ ಪಕ್ಷವನ್ನೇ ವಹಿಸಿದರೆಂದು ತಿಳಿಯುವುದು.

❖❖❖❖

ಪ್ರಸಿದ್ಧ ಕವಿಯಾಗಿದ್ದ ಶಾಲಮಾಜ ಷಿಲ್ಲರ್ ಎಂಬಾತನ ಹೆಸರಿನಲ್ಲಿ ಜರ್ಮನಿ, ಸ್ವಿಟ್ಜರ್ಲ್ಯಾಂಡ್, ಆಸ್ಟ್ರಿಯಾ ರಾಜ್ಯಗಳ ಪ್ರಜೆಗಳು ಶತಮಾನದ ಮಹೋತ್ಸವವನ್ನು ಬಹು ಅಟ್ಟಹಾಸದಿಂದ ನೆರವೇರಿಸಿದರು. ಅದಕ್ಕಾಗಿ ೨೫ ಲಕ್ಷ ದ್ರವ್ಯ ಚಂದಾ ಕೂಡಿಸಿದ್ದರು. ಕೌಂಟ್ ವಾನ್ ಬೂಲೋ ಎಂಬ ಮಂತ್ರಿಯವರು ಆ ಕವಿಯಿಂದ ರಚಿಸಲ್ಪಟ್ಟಿರುವ ಒಂದು ಕವಿತೆಯನ್ನು ಹತ್ತು ಸಹಸ್ರ ಪ್ರತಿ ಅಚ್ಚು ಹಾಕಿಸಿ, ಪ್ರಜೆಗಳಿಗೆಲ್ಲಾ ಆ ದಿನ ಹಂಚಿಸಿದರು.

❖❖❖❖

ಮಹಮದಿಯರ ಯಾತ್ರಾಸ್ಥಳಕ್ಕೆ ರೈಲ್ ರಸ್ತೆಯನ್ನು ಹಾಕಿಸುವುದಕ್ಕೆ ಹಿಂದೂಸ್ಥಾನದಲ್ಲಿ ಚಂದಾ ಕೂಡಿಸಿ ಕಳುಹಿಸುತ್ತಿರುವ ರಷ್ಟೆ. ಈ ಫಂಡಿಗೆ ಇದುವರೆಗೆ ಒಂದು ಕೋಟಿಯೂ ಮೂವತ್ತೈದು ಲಕ್ಷ ರೂಪಾಯಿ ವಸೂಲಾಗಿ ತುರ್ಕಿ ರಾಜಧಾನಿಯಾದ ಕಾನ್ಸ್ಟಾಂಟಿನೋಪಲ್ಲಿಗೆ ರವಾನೆಯಾಯಿತು. ರೈಲ್ ರಸ್ತೆಯ ಕಾಮಗಾರಿಯಾದರೋ ತುಂಬಾ ಜಾಗ್ರತೆಯಾಗಿಯೇ ನಡೆಯುತ್ತಿದೆ. ಇನ್ನೊಂದು ವರ್ಷದೊಳಗಾಗಿ ರೈಲ್ ಗಾಡಿಗಳ ಸಂಚಾರ ಪ್ರಾರಂಭವಾಗಬಹುದೆಂದು ಕಾಣುವುದು.

❖❖❖❖

ಅಮೇರಿಕದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲಿ ಮೂರು ನಾಟಕ ಶಾಲೆಗಳವರು ಮಿಸ್ ವೆಸ್ಟಾ ಟಿಲ್ಲೆ ಎಂಬೊಬ್ಬ ಸಂಗೀತಗಾರಳನ್ನು ತಮ್ಮ ನಾಟಕ ಮಂದಿರಗಳಲ್ಲಿ ಆರು ವಾರಗಳ ಪ್ರಕಾರ ಹಾಡುವುದಕ್ಕೆ ಆಕೆಯಿಂದ ಕರಾರು ಬರೆಸಿಕೊಂಡಿದಾರೆ, ಇದಕ್ಕೆ ಕಂಪೆನಿಯವರು ಆಕೆ ಹಾಡುವ ಪ್ರತಿ ಒಂದು ನಿಮಿಷಕ್ಕೂ ೩೦ ರೂಪಾಯಿನಂತೆ ಭಾಡಿಗೆ ಕೊಡುವಂತೆ ಕರಾರು ನಡೆದಿದೆ ಈ ಪ್ರಕಾರ ಲೆಕ್ಕ ಹಾಕಿದರೆ ಆಕೆಗೆ ವಾರಕ್ಕೆ ೭,೯೨೦ ರೂಪಾಯಿ ಭಾಡಿಗೆ ಸಿಕ್ಕುವುದು.

❖❖❖❖

ನಾಯಿ ಕಡಿ ಮುಂತಾದ ಪ್ರಾಣಿಗಳಿಂದ ಕಚ್ಚಿಸಿಕೊಳ್ಳುವವರಿಗೆ ಚಿಕಿತ್ಸೆ ಮಾಡುವುದಕ್ಕಾಗಿ ಪ್ರಾಣಿಗಳನ್ನು ಹಿಂಸಿಸಿ ಅವುಗಳ ಮೈಯ ರಕ್ತದಿಂದ ಔಷಧವನ್ನು ಮಾಡುತ್ತಾರೆ. ಇದು ಮಹಾ ಕ್ರೂರತರವಾದ ಪಾಪ ಕೃತ್ಯವೆಂತಲೂ ಈ ವಿಧವಾದ ಚಿಕಿತ್ಸೆಯನ್ನು ನಿಲ್ಲಿಸಬೇಕೆಂತಲೂ ಒಂದು ಅರ್ಜಿ ಬರೆದು ವಿಲಾಯಿತಿ ಗವರ್ನ್‌ಮೆಂಟಿಗೆ ಒಪ್ಪಿಸುವುದಕ್ಕೆ ಸಿದ್ಧಮಾಡಿಕೊಂಡಿರುವರು. ಈ ಅರ್ಜಿಯೂ ಅದರಲ್ಲಿ ಪ್ರಜೆಗಳು ಹಾಕಿರುವ ರುಜುಗಳೂ ಆರು ಮೈಲಿ ಉದ್ದವಾಗುವುದೆಂದು ತಿಳಿದುಬಂದಿದೆ.

❖❖❖❖

ರಾಜ್ಯರಾಜ್ಯಗಳಿಗೆ ಹುಟ್ಟುವ ವ್ಯಾಜ್ಯಗಳನ್ನು ಹಿತದಿ ದರ್ಯಾಫ್ತು ಮಾಡುವುದಕ್ಕೋಸ್ಕರ ಹೇಗ್ ನಗರದಲ್ಲಿ ಪಂಚಾಯತರು ಸೇರುವುದಕ್ಕೆ ಒಂದು ಭಾರೀ ಮಂದಿರವನ್ನು ಕಟ್ಟುತ್ತಿದಾರೆ. ಇದಕ್ಕೆ ಕೋಟ್ಯಾಧೀಶ್ವರರಾದ ಮಿ॥ ಅಂಡ್ರೂ ಕಾರ್ನೆಗಿ ಯವರು ಕೆಲವು ಲಕ್ಷ ರೂಪಾಯಿಗಳನ್ನೇ ಕೊಟ್ಟಿದಾರೆ. ಈಗ ಅದನ್ನು ನಡೆಸುವುದಕ್ಕೂ ಸಿಬ್ಬಂದಿ ಮುಂತಾದ ಖರ್ಚುಗಳೂ ಹಾಲೆಂಡ್ ಸರ್ಕಾರದವರು ಪ್ರತಿ ವರುಷವೂ ೮,೨೦,೦೦೦ ರೂಪಾಯಿನಂತೆ ಕೊಡುವುದಾಗಿ ವಾಗ್ದಾನ ಮಾಡಿದಾರೆ

❖❖❖❖

ಜರ್ಮನ್ ರಾಜ್ಯದ ಪ್ರಿನ್ಸ್ ಅಸಿಸುಗವ ಎಂಬ ರಾಜಕುಮಾರನು ಪರಿವಾರ ಸಹಿತ ವಿಲಾಯಿತಿ, ಫ್ರಾನ್ಸ್ ಮುಂತಾದ ರಾಜ್ಯಗಳಲ್ಲಿ ಸಂಚಾರ ಮಾಡಿಕೊಂಡು, ಕಳೆದ ವಾರ ಜರ್ಮನಿ ರಾಜ್ಯಕ್ಕೆ ಬಂದನು. ರಾಜಧಾನಿಯಾದ ಬರ್ಲಿನ್ ನಗರದ ರೈಲ್ವೆ ಸ್ಟೇಷನ್ನಲ್ಲಿ ಜರ್ಮನಿ ಚಕ್ರವರ್ತಿಯವರು ತಮ್ಮ ಆಸ್ಥಾನ ಮಂತ್ರಿ ಸಾಮಾಜಿಕರುಗಳೊಡನೆ ಕಾದಿದ್ದು ಈ ರಾಜಕುಮಾರನನ್ನು ಗೌರವದಿಂದ ಎದುರುಗೊಂಡರು. ಪ್ರಜೆಗಳೆಲ್ಲಾ ಅವರನ್ನು ನೋಡಿ ಹರ್ಷಧ್ವನಿಗಳನ್ನು ಮಾಡಿ ಸುಖಾಗಮನವನ್ನು ಬಯಸಿದರು. ರಾಜಕುಮಾರನು ಒಂದು ಹೋಟೇಲಿನಲ್ಲಿ ಬಿಡಾರ ಮಾಡಿಕೊಂಡಿರುವನು. ಚಕ್ರವರ್ತಿಯವರು ರಾಜಕುಮಾರನನ್ನು ರಾಜಭವನಕ್ಕೆ ಕರೆಸಿಕೊಂಡು, ತಮ್ಮ ಪಕ್ಕದಲ್ಲೇ ಕೂರಿಸಿಕೊಂಡು, ಬಹು ಸಂಭ್ರಮಯುಕ್ತವಾಗಿ ಔತಣ ಮಾಡಿ, ತುಂಬಾ ಶ್ಲಾಘ್ಯವಾದ ಎರಡು ಬಹುಮಾನಗಳನ್ನು ದಯಪಾಲಿಸಿರುತ್ತಾರೆ.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ.

"ರಕ್ತಾಮೃತಂ."—ಕಾಫಿ ಅಥವಾ ಟೀಗೆ ಪ್ರತಿರೂಪು.



"ರಕ್ತಾಮೃತಂ."—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯೆಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರು ಮಾಡಲ್ಪಟ್ಟಿರುತ್ತದೆ. ಕಾಫಿ, ಟೀಯೆಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ, ಬಸರು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ತಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗೂರ್ಲು ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ. ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು.

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಶಮನಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯೆಲೆಯನ್ನು ಬಿಟ್ಟು ಈ ರಕ್ತಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು.

ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ಆಣೆ ೬. ವಿ. ಪಿ. ಛಾರ್ಜು ಆಣೆ ೩ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪಿಟ್ಟು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ವಿಳಾಸ.—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ

ಗಂಜಾಂ ಕುರಾದಲ್ಲಿ ಸ್ಥಿರಾಸ್ತಿ ಪರಿವರ್ತನೆ.

3

ಶ್ರೀರಂಗಪಟ್ಟಣದ ಅಂಚೇ ಬೀದಿಯಲ್ಲಿರುವ ಚನ್ನಪ್ಪನವರ ಮಗ ಮುಳಗೆ ಚನ್ನಯ್ಯನು ತಿಳಿಸುವದೇನಂದರೆ—ಗಂಜಾಂ ಕುರಾದಲ್ಲಿರುವ ಚನ್ನಪ್ಪನವರ ಹಿರೀ ಮಗ ಚನ್ನಯ್ಯನು ದಿಟೋ ಕುರಾದಲ್ಲಿರುವ ಮಾಳಿಗೆ ಮನೆಯನ್ನು ಕ್ರಯ ಮಾಡುವದಾಗಿ ತಿಳಿಯಬಂದಿದ್ದರಿಂದ ನನಗೆ ೫ ರಲ್ಲಿ ೧ ಹಿಸ್ಸೆ ಬರಬೇಕಾಗಿದೆ. ಕ್ರಯಕ್ಕೆ ತೆಗೆದುಕೊಳ್ಳುವವರು ನನ್ನ ಹಿಸ್ಸೆ ಬಿಟ್ಟು ತೆಗೆದುಕೊಳ್ಳತಕ್ಕದ್ದು.

ದಿ ಯೆಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಉಪಪತ್ತಿ ಕಲ್ಪನಾಸಂಘ, ಚನ್ನಪಟ್ಟಣ.

7

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸ್‌ದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು. ಸಾಮಾನ್ಯ ಉತ್ಪತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ. ಆ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತ ಯಾ ನೇಮಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು. ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಮ್ಯಾನೇಜರಿಗೆ ಬರೆದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು. ಅಂಥಾ ಏಜಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ.

ವಿಳಾಸ:—ಆರ್. ಎಸ್. ಸ್ವಾಮಿ, ಮ್ಯಾನೇಜರ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೧೯—೫—೧೯೦೫ ರಿಂದ ೨೬—೫—೧೯೦೫ ರ ವರೆಗೆ.

ಸ್ಥಳ.	ಪ್ಲೇಗ್: ಹಗಲಿ ಬಿದ್ದ.	ಪ್ಲೇಗ್: ಸತ್ತ ಬಿದ್ದ.	ಹೋದವಾರ ಸಂಖ್ಯೆ
ಬೆಂಗಳೂರು ಪಟ್ಟಣ	1	0	0
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟ್	4	3	27
ಮೈಸೂರು ,,	0	1	60
ಕೋಲಾರ್ ,,	೧	0	6
ಕೋಲಾರ್ ಚಿನ್ನದ ಗಣಿಗಳು	0	0	2
ತುಮಕೂರು ಡಿಸ್ಟ್ರಿಕ್ಟ್	2	2	4
ಹಾಸನ ,,	0	0	18
ಚಿತ್ರದುರ್ಗ ,,	0	0	4
ಕಡೂರ್ ,,	0	0	5
ಶಿವಮೊಗ್ಗ ,,	13	6	34
ಒಟ್ಟು.	20	12	160

ಶಾಲಿವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ಜ್ಯೇಷ್ಠ ಶುದ್ಧ ಪಂಚಮಿ ಗುರುವಾರದಿಂದ ಜ್ಯೇಷ್ಠ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಜೂನ್

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ.	[illegible]
8	ಗುರು ‡	ಪಂಚಮಿ	7-32	ಪ್ಲೇ	32 25	2[illegible]
9	ಶುಕ್ರ	ಷಷ್ಠಿ	3 12	ಉತ್ತರ	35-1	2[illegible]
10	ಶನಿವಾ	ಅಷ್ಟಮಿ	52-34	ಹಸ್ತ	26 50	2[illegible]
11	ರವಿವಾ	ನವಮಿ	16 26	ಚಿತ್ತ	22 55	2[illegible]
12	ಚಂದ್ರ	ದಶಮಿ	10-32	ಸ್ವಾ	15 51	3[illegible]
13	ಕುಜ §	ಏಕಾದಶಿ	31-12	ವಿಶಾ	11-13	31
14	ಬುಧ	ದ್ವಾದಶಿ	28 25	ಸ್ವಾ	10 16	1

‡ ಅರಣ್ಯಗೌರೀ ವ್ರತ, ಸ್ಕಂದಪಂಚಮಿ. ಪರವಿಧ ಮಾತೃದಶಮಿ, ನರಹರಿ ಜಯಂತಿ. § ಸರ್ವತ್ರ ಏಕಾದಶಿ, ಶ್ರೀಮದ್ ಹಾರಾಜರವರ ವರ್ಧಂತಿ ‖ ರಾಮಲಕ್ಷ್ಮಣದ್ವಾದಶಿ, ಕೂರ್ಮ ಜಯಂತಿ, ಷಡಶೀತಿಪುಣ್ಯಕಾಲ.

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು
ಕಾವೇರಿ ಹತ್ತಿ ಪಲ್ಲಾ ೧ಕ್ಕೆ	ರೂ. ೧೦-೮-೬	೧೧-೦
ಕೆಂಬೂತಿ ಅಕ್ಕಿ ಅವಲ್ ..	೧೦-೪-೦	೧೦-೮
,, ಮಧ್ಯಮ	.. ೯-೧೩-೦	೧೦-೦
ಜಾವಾಳಿ ಅಕ್ಕಿ ..	.. ೯-೮-೦	೯-೩-೬
ಸಣ್ಣಕ್ಕಿ ಅವಲ ..	.. [illegible]	[illegible]
,, ಮಧ್ಯಮ ..	.. ೧೦ ೮-೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ ..	.. ೧೧-೮-೦	[illegible]
,, ಮಧ್ಯಮ ..	.. ೧೧-೦-೦	[illegible]
ಮೈಸೂರು ರಾಗಿ ಪಲ್ಲಾ ೧ಕ್ಕೆ ..	.. ೪ ೧೨-೦	೫-೩
[illegible]	.. ೪-೧-೦	೪-೧೧
ಜೋಳ	. ೪-೧೩-೬	[illegible]
ಹಲಸಂದೆ ಪಲ್ಲಾ ೧ಕ್ಕೆ ..	. ೮-೧೦-೦	೭-೦
ಬಿಳೇ ಅವರೆ ..	೬ ೧೩-೦	೭-೮
ಹೆಸರು	. ೯-೧೩-೦	೧೧-೮
ಉದ್ದು	.. ೮ ೧೪ ೦	೯-೮
ಕಡಲೆ ..	. ೯ ೦-೦	೮-೪
ಎಳ್ಳು .. .	೧೬ ೦ ೦	೧೪-೧೦
ಹುರುಳಿ	೮-೦ ೦	೮-೮
[illegible] .	೯-೮-೦	[illegible]
ಸೀಗೇಕಾಯಿ ಮಣ ೧ಕ್ಕೆ	೩-೪-೦	[illegible]
ಸೊಣಸಿನಕಾಯಿ .. .	೪-೮-೦	೪-೦
,, ದಾಯಂ .. .	[illegible]	[illegible]
ಬೆಲ್ಲ ಮೊದ್ಲು ಅಚ್ಚು .. .	[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ .. .	೪-೦ ೦	೪-೮
ಹರಳೆಣ್ಣೆ ,, ...	೪-೦-೦	೪-೦
ಕೊತ್ತುಂಬರಿ ಪಲ್ಲ ೧ಕ್ಕೆ	೬-೧-೦	[illegible]
ಉಪ್ಪು	೮-೦-೦	[illegible]
ಹುಣಸೇ ಹಣ್ಣು	೧ ೪-೦	[illegible]
,, ಹಳೇದು . ..	[illegible]	[illegible]
[illegible]	[illegible]	೧೧-೯
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ .	೫-೩-೦	೪-೬
ತೆಂಗಿನಕಾಯಿ ೧೦೦ ಕ್ಕೆ ..	೫-೦-೦	೪-೭
ಅಳಲೇಕಾಯಿ ಮಣ ೧ಕ್ಕೆ ..	೧-೦-೦	[illegible]
ಅಂಟುವಾಳದಕಾಯಿ ಮಣ ೧ಕ್ಕೆ .	[illegible]	[illegible]
ಚಿನ್ನ ([illegible]) ತೊಲ ..	೧೫-೮-೦	[illegible]
,, ,, [illegible] ..	[illegible]	೧೫-೮
,, ,, ಗಟ್ಟಿ ತೊಲ ೧ಕ್ಕೆ ..	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ ..	[illegible]	[illegible]

ಜ್ವರಹರಿ. 30



ಇದು ಸಾಧಾರಣ ಜ್ವರ, ಹಳೇಜ್ವರ, ಮೈರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಪಿ. ವೆಂಕಟಪತಿ ಅಯ್ಯಂಗಾರರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಟಲೇ ಬಿಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೫೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುವರು.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ ೨—೫೦ ಡೋ, ೧೧ ರೂ.; ಹನ್ನೆರಡು ಸೀಸೆ ಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಬಿ ಸುಂ ಕ ಪ್ರೋ ೯ ರ.



ಈ ಔಷಧವು ಅಜೀರ್ಣ, ಶೀತಭೇದಿ, ಆಹಾರದ ಹೊಟ್ಟೆಶೂಲೆ ಯುಳ್ಳವರು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಪ್ರತ್ಯಕ್ಷವಾಗಿ ಪರಿಣಮಿಸಿ ಕೂಡಲೇ ಗುಣ ಕೊಡುವದು. ಇದು ಸಂಗಸರು ತಿಂಗಳ್‌ ಒಂದಾವರ್ತಿ ಕೊಡಗೆ ಆಗುವಾ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪಾಲರಾಯರು—ನಿಮ್ಮ ಬಿಂದು ಕರ್ಪೂರವನ್ನು ನಾನೂ ನನ್ನ ಶಾಪ್‌ದಾರರೂ ಮ್ಯಾನೇಜರ್ ಆಸ್ಪತ್ರೆಯಲ್ಲಿ ಅನೇಕ ರೋಗಿಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿರುವರು

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಶಿಕ್ಷಣಯುತ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೆಳಂಡ್ ಬೀಚ್ ರೈನ್, ಮದ್ರಾಸ್.

[illegible]

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತಮ್ಮ ಲಪಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕೂಡಲೇ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ನಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಗುಣಪಡಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಛಾರ್ಜು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ಪಟ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ರ. ಡಬ್ಬಿನನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಛಾರ್ಜು ಮಾಫಿ ಬಿಡುತ್ತೆ.

****

ಕೋಹಿನೂರ್ ಯುಜೆನಿಕ್ ಕೇಸನ್.

ಈ ತೈಲವು ಕಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಅನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಬಿಂದಿಗೆಯಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಛಾರ್ಜು ಮಾಫಿ. ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪುಸ್ತಕಗಳನ್ನು ಅಪೇಕ್ಷಿಸಿದರೆ ಕಳುಹಿ ಕೊಡುವೆವು.

ವಿಳಾಸ.—ಕೋಹಿನೂರ್ ಫಾರ್ಮ ಕಂಪನಿ. ೨೩ ಸೇಲಂ ಸ್ಟ್ರೀಟ್ ರೈನ್, ಮದರಾಸ್

Printed and Published by the Rev. H. Spencer, B.A. the Proprietor and Manager, Wesleyan Mission Press Mysore. 8/6/1905

ವೃತ್ತಾಂತ ಪತ್ರಿಕೆ.

REGISTERED M. 20.

ಕ್ರಯ ೧ ರು ೮ ಆ — ಕ್ರಯ ೧ ರು ೮ ಆ

ಪ್ರತಿ ಗುರುವಾರ [illegible] ಪ್ರಕಟಿಸಲ್ಪಡುವದು.

ಸಂಪುಟ ೧೯ | ಮೈಸೂರು—ಸನ್ ೧೮೯೫ ನೇ ಇಸವಿ ಜೂನ್ ತಾರೀಖು ೧೫ ನೇ ಗುರುವಾರ. | ಸಂಚಿಕೆ ೩

ಪ್ರಶ್ನೋತ್ತರ ಲೋಕಬೋಧಿನಿ

5

ಎರಡನೆಯ ಛಾಪೆ. ಕ್ರಯ : ಒಂದು ರೂಪಾಯಿ ನಾಲ್ಕಾಣೆ.
ಬೇಗ ಬರೆಯಿರಿ ! ಬೇಗ ಬರೆಯಿರಿ !! ಬೇಗ ಬರೆಯಿರಿ !!!

ಮರೆಯಬೇಡಿ.

ಎಂಟ್ರೆನ್ಸ್ ಪರೀಕ್ಷೆ ಮೊದಲಾದ ಕ್ಲಾಸಿನ ಪುಸ್ತಕದಿಂದ ಇತರದ ಶಿಕ್ಷಣದ ಸ್ವಲ್ಪವಾದರೂ ಇಲ್ಲದೆ ಸ್ವಲ್ಪವಯಸ್ಸಿಗೆ ಓದುಬರಹ ಕಲಿತಿರುವ ಜನರು [illegible] ಭೂಮಿಯನ್ನು ಅಳೆದು ಬರೆಯುವ ಚೆನ್ನಾಗಿ ತಾವೇ ತಿಳಿಯಬಹುದು. ಒಂದು ಸಲ ತರಿಸಿ, ಓದಿನೋಡಿ. ಕ್ರಯ ಹನ್ನೆರಡು ಆಣೆ. ವಿಳಾಸ —
ಭಾರತಿ ಸಂಘಗಿರಾಯ, ದೊಡ್ಡಪೇಟೆ, ಬೆಂಗಳೂರು.

ಶೃಂಗೇರಿ ನೋಟೀಸು.

ಶೃಂಗೇರಿಯಲ್ಲಿರುವ ಶನಿಕಿನ ನಿವಾಸಿ ಬೋಮೀಶನ್ನನು ತಿಳಿಸುವದು—ನಾನು ಸ್ವಂತವಾಗಿ ಮಲಗೇಟನ ತೋಟವನ್ನೂ ಮುನಿಸಿಪಲ್ ನಂ ೪೦, ೪೩ ಎರಡು ಮನೆಗಳನ್ನೂ ಸಾಧಿಸಿಸುತ್ತೇನೆ. ನನ್ನ ಮೂರು ಮಂದಿ ಗಂಡುಮಕ್ಕಳೂ ಪೋಲಿ ತಿರುಗುವದು ದುಷ್ಕಾರ್ಯಗಳಲ್ಲಿ ಬಿದ್ದು ಸಾಲಮಾಡಿದಲ್ಲಿ ನನ್ನ ಸ್ವಂತ ಸಂಪಾದನೆ ಮೇಲ್ಕಂಡ ಸೊತ್ತುಗಳ್ಯಾವದೂ ಜವಾಬ್ದಾರಿಯಾಗಲಾರದು ಈ ಆಸ್ತಿ ಆಧಾರದ ಮೇಲೆ ಯಾರೊಬ್ಬರೂ ನನ್ನ ಮಕ್ಕಳಾದ ಸುಬ್ಬ, ತಿಮ್ಮ, ಲಕ್ಷ್ಮಯ್ಯ ಇವರಿಗೆ ಸಾಲ ಕೊಡಕೂಡದಾಗಿ ಈ ಮೂಲಕ ಎಚ್ಚರಿಸಿದೇನೆ

೨೬—೫—೧೮೯೫. ಶನಿಕಿನ ಬೊಯಿತಮ್ಮನ ರುಜು.

ಹೊಸ ನೋಟ್ಸು.

ಮೆಕ್ಲಿಲನ್ ರವರ ೫, ೬ನೆಯ ಕನ್ನಡ ಪುಸ್ತಕಗಳಿಗೆ
೬ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

12

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನೆಸಹಿತ ಈ ನೋಟ್ಸನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ. ೪ ಆಣೆ.

ಮೈಸೂರು ಸಂಸ್ಥಾನದ ಭೂವಿವರಣೆ (೩ನೆ ಛಾಪೆ)	೦—೧—೦
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೨—೧—೬
೧೮೯೫ನೆ ವರ್ಷದ ಲೋವರ್ ಸೆಕಂಡರಿ ನೋಟ್ಸು	೦—೩—೦

ವಿಳಾಸ—ಯಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು

"ವೃತ್ತಾಂತ ಪತ್ರಿಕೆ" ಚಂದಾನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) . . . . . . ರೂ. ೧—೦—೦
ಸರಕಾರದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ . . . . . . ರೂ. ೧—೧೨—೦
,, ,, ೬ ,, ,, ೦—೧೫—೦
ಚಂದಾದಾರರಾಗಬೇಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.
ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕಥಾಸಂಗ್ರಹ—ಮೊದಲನೆ ಭಾಗ.

11

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ನುಡಿಯ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ ಈಗಿನ ಕಾಲಕ್ಕೆ ತಕ್ಕಂತೆ ಪದಗಳನ್ನೂ ವಾಕ್ಯರಚನೆಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಅಚ್ಚಾಗಿದೆ; ಅಂದವಾದ ಮತ್ತು ಗಟ್ಟಿಯಾದ ರೈಂಡು ಕಟ್ಟಿದೆ. ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಿಂತೆ ಡಿಸ್ಕೌಂಟು ಸಿಕ್ಕುವದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣುಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ.—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಶ್ರೀಚಾಮರಾಜೇಂದ್ರ ರಾಜ್ಯವಿಲಾಸ.

H. H. THE LATE MAHARAJA'S BIOGRAPHY.

5

ಎಪ್ಪತ್ತೈದು ಪ್ರಕರಣಗಳುಳ್ಳ ಈ ಕನ್ನಡ ಫೂಲ್ಸ್ ಪುಸ್ತಕದಲ್ಲಿ—ಶ್ರೀ ಚಾಮುಂಡೇಶ್ವರೀ ಅವತಾರ ಕಥೆಯೂ, ಯದುವಂಶಾವಳಿಯೂ, ಲೇಟ್ ಮಹಾರಾಜರವರ ಜೀವಕಾಲದ ಆದ್ಯಂತ ಚರಿತೆಯೂ, ಮಹಾರಾಣಿ ರೀಜೆಂಟರವರ ಚರಿತ್ರೆಯೂ, ಈಗಿನ ಶ್ರೀ ಶೃಂಗೇರಿ ಶ್ರೀ ಪರಕಾಲ ಗುರುಗಳ ಚರಿತ್ರೆಯೂ, ಪೂರ್ವದ ಮತ್ತು ಈಗಿನ ದಿವಾನ್ ರವರ ಚರಿತ್ರೆಯೂ, ರಾಜಧಾನಿಗೆ ದಯಮಾಡಿದ್ದ ವೈಸ್‌ರಾಯರ ಸ್ಪೀಚ್‌ಗಳೂ ರಾಜ್ಯಾಡಳಿತಗಳ ವಿಚಾರವೂ, ರೀಜನ್ಸಿ ಏರ್ಪಾಡಾಗುವ ವರೆಗಿನ ಈ ದೇಶದ ಪ್ರತಿಯೊಂದು ಇಲಾಖೆಯ ಸಂಗತಿಗಳೂ, ಖರೀತ ಮುಂತಾದವೂ—ಚೆನ್ನಾಗಿ ವಿವರಿಸಲ್ಪಟ್ಟಿವೆ ಪ್ರಭುಗಳ ಭಾವಚಿತ್ರವೂ ವ್ಯತ್ಯಾಸವಿಲ್ಲದೆ ಇದೆ. ಸರ್ಕಾರದವರ ಪ್ರೋತ್ಸಾಹವನ್ನೂ ಹೊಂದಿದೆ. ಸಕಲಜನೋಪಯೋಗವಾದುದು. ಸ್ವಲ್ಪ ಪ್ರತಿಗಳೇ ಉಳಿದಿವೆ ನಮ್ಮ ರಾಷ್ಟ್ರದ ನಮ್ಮ ಧೊರೆಗಳ ಚರಿತ್ರೆಯನ್ನು ಪೂರ್ತಿ ತಿಳಿಯಬೇಕೆಂಬಾತನು ಪವರಿಗೆ ಇದನ್ನು ಬಿಟ್ಟರೆ ಬೇರೆ ಪುಸ್ತಕ ದೊರೆಯಲಾರದು. ಕ್ರಯ, ೧೨ ಆಣೆ ಮಾತ್ರ. ಜಾಗ್ರತೆ ಈ ವಿಳಾಸಕ್ಕೆ ಬರೆಯಿರಿ.
೧. ಬಿ ಬಸಪ್ಪಲ್ ಏಜನ್ಸಿ, ಲಕ್ಷ್ಮೀವಿಲಾಸ ರೋಡ್, ಮೈಸೂರು.
೨. ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೊ, ಮೈಸೂರು.
೩. ಮೆಸರ್ಸ್. ಜೆ. ನರಸಿಂಹಯ್ಯ ಅಂಡ್ ಕೋ., ಮೈಸೂರು.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ
ಆಯುರ್ವೇದ ಔಷಧಗಳು.

7

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ.

'ರಕ್ಷಾಮೃತಂ. —ಕಾಫಿ ಅಥವಾ ಟೀಗೆ ಪ್ರತಿರೂಪ.

"ರಕ್ಷಾಮೃತಂ." —ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ತೇಯಿಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರ್ಮಾಡಲ್ಪಟ್ಟಿರುತ್ತದೆ. ಕಾಫಿ, ತೇಯಿಲೆಗಳಲ್ಲಿರುವ ದುರ್ಗುಣ



ಗಳು ಇದಕ್ಕಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ, ಬಸರು, ಹರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಬಂಧಕವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವೂ, ಗೂರ್ಲು ಉಬ್ಬಸವೂ, ಕ್ಷಯವೂ, ಅಜೀರ್ಣವೂ, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ. ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು.

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು ; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ತೇಯಿಲೆಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು.

ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ಆಣೆ ೬. ವಿ. ಪಿ. ಛಾರ್ಜು ಆಣೆ ೩ ಹೆಚ್ಚಾಗುವುದು. ಮುಂಗಡ ೪ ಆಣೆ ಸ್ಟಾಂಪಿಟ್ಟು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

10

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr. Hughs, Mysore Zoo.

ಶ್ರೀ ತಾಂಬೂಲ.

31

ಇದನ್ನು ಓದಿ ! ಬಿಡಬೇಡಿ !! ಗುಣ ನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ರವಾನೆ ಮಾಡುತ್ತಿದ್ದಾರೆ. ಅವರ ಸ್ವಲ್ಪ ಪರೀಕ್ಷಿಸಿ ನೋಡಿ. ತಾಂಬೂಲ

ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಬಾಯಿಯ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ, ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಥಳ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೩ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾರಿಯಾವುದು. ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೩ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ.—
ದೇವನಹಳ್ಳಿ ಟವನ್, ಯಂ. ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟಿಷನರ್.

೨೫ ಕಾಲದ ಒನೆವರಿ ತಿಂಗಳ ಪ್ರೆಜೆಂಟೇಷನ್ ವಾಚು.

2

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರೈಲ್ವೆ ಗಾರ್ಡು ವಾಚು ಓಪನ್ ಕೇಸ್ ಕೀಲೆಸ್ ಪೇಟೆಂಟ್ ಲಿವರ್ ವಾಚು ಕಾಂಪೆನ್‌ಸೇಷನ್ ಬ್ಯಾಲನ್ಸ್ ಬಹು ಬಲಿಷ್ಟವಾದ ಗಡಿಯಾರ ೫ ವರುಷ

ಗ್ಯಾರಂಟೀ ಕ್ರಯ ರೂ.೫—೪—೦ ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವದರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರವು. ಜಾಗ್ರತೆ ದರಖಾಸ್ತು ಕಳುಹಿ. ಪ್ರಜೆಂಟೇಷನ್ ಸಾಮಾನುಗಳು.
ಕ್ರಯವುಳ್ಳದ್ದು.

ಮೇಲಾದ ಜರ್ಮನ್ ಸಿಲ್ವರ್ ಕರಟುಗಳಿಂತಿ ೧ ಸೆಟ್ಟು	೦—೧೦—೦
ಚಿಕ್ಕ ಹಣದಪೆಟ್ಟಿಗೆ ಇಂಗ್ಲಿಷ್ ಮೇಡ್ (Cash Box)	೧—೦—೦
ಸುಗಂಧ ಸಸ್ಯಪುಷ್ಪ ತುಂಬಿದ ಡಬ್ಬಿ ೧	೦—೪—೦
ಮಲಗುವಮನೆ ದೀಪ ಬಹಳ ಸುಂದರವಾದದ್ದು	೦—೬—೦
ಬಹಳ ಸೊಗಸಾದ ಗಡಿಯಾರದ ಸರಪಣಿ	೨—೪—೦

೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರೆಗೆ ಬರುವ ಬುಲ್ಕ್ ಆರ್ಡರ್ ವರಿಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡಲ್ಪಡುತ್ತೆ. ಜಾಗ್ರತೆ !! ಜಾಗ್ರತೆ !!

ಇತರರು ನಮ್ಮ ಕಂಪನಿಯ ನೋಟೀಸುಗಳಂತೆ ಮದರಾಸಿನಲ್ಲಿ ಪ್ರಿಂಟುಮಾಡಿ ಉಪಯೋಗವಿಲ್ಲದ ಸಾಮಾನುಗಳನ್ನೂ ಗಡಿಯಾರವನ್ನೂ ಕಳುಹಿಸುತ್ತಿರುವದರಿಂದ ಮೇಲ್ಕಂಡ ಕಂಪನಿಯ ಹೆಸರನ್ನು ಈ ಪಕ್ಕದಲ್ಲಿ ಇಟ್ಟುಕೊಳ್ಳಬೇಕೆಂದು ಕೋರುತ್ತೇವೆ.

ವಿಳಾಸ:—ಮ್ಯಾನೇಜರ್, ಫ್ಲಾರಿನ್ ವಾಚ್ ಕಂಪೆನಿ,
ಪಾರ್ಕ್ ಟವನ್, ಮದರಾಸ್.

WANTED.

A trained Lower Secondary teacher, language, Kanarese and English, salary according to qualifications.

Apply with testimonials to Captain Spence, American Advent Mission, 7, Tannery Road, Cleveland Town, Bangalore.

ವೃತ್ತಾಂತ ಪತ್ರಿಕೆ.

ಸನ್ ೧೯೦೪ ನೇ ಇಸವಿ ಜೂನ್ ತಾ॥ ೧೫ ನೇ ಗುರುವಾರ.

ರಷ್ಯಾ ಜಪಾನ್ ಯುದ್ಧವು.

ತ್ಸುಷಿಮಾ ಎಂಬ ಸ್ಥಳದಲ್ಲಿ ರಷ್ಯಾ ಜಪಾನ್ ರಾಜ್ಯಗಳ ಜಹಜುಗಳ ಯುದ್ಧವು ನಡೆದದ್ದರಲ್ಲಿ ರಷ್ಯಾದವರಿಗೆ ಅಪಜಯವಾದಾಗ್ಯೂ ಅವರು ಈ ಯುದ್ಧವನ್ನು ಇನ್ನೆಷ್ಟು ಸಾಹಸಪಟ್ಟರೂ ಗೆಲ್ಲಲಾರರೆಂಬುದು ಪ್ರಕಾಶಕ್ಕೆ ಬಂದಿದೆ. ಅಮೇರಿಕ ಸಂಸ್ಥಾನಗಳನ್ನಾಳುವ ಪ್ರೆಸಿಡೆಂಟ್ ರೂಸವೆಲ್ಟ್ ಯವರು ಮಧ್ಯಸ್ಥಿಕೆ ಮಾಡಿ ಈ ಕಾಳಗವನ್ನು ನಿಲ್ಲಿಸಿ ರಷ್ಯಾ ಜಪಾನ್ ರಾಜ್ಯಗಳಿಗೆ ಕರಾರು ನಡೆಯುವಂತೆ ಮಾಡಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಕಳೆದ ವಾರ ಬಂದಿರುವ ತಂತೀ ವರ್ತಮಾನಗಳು ಈ ಕರಾರಿನ ವಿಷಯವಾದವುಗಳಾಗಿರುತ್ತವೆ. ಈ ಬಾಗದಲ್ಲಿ ಅಮೇರಿಕದ ಪ್ರೆಸಿಡೆಂಟರು ತಿಳಿಸಿದ ಸಲಹೆಯನ್ನು ರಷ್ಯಾದವರೂ ಜಪಾನ್‌ನವರೂ ಒಪ್ಪಿಕೊಂಡು, ಅವರು ಮಧ್ಯಸ್ಥಿಕೆ ಮಾಡುವುದಾಗಿ ಒಪ್ಪಿಕೊಂಡಿರುವುದಕ್ಕೆ ಅವರನ್ನು ವಂದಿಸಿರುತ್ತಾರೆ. ಫ್ರಾನ್ಸ್ ಸಂಸ್ಥಾನದವರು ತಮ್ಮ ಸ್ನೇಹಿತರಾದ ರಷ್ಯಾದವರನ್ನು ಬಲವಂತಮಾಡಿ ಕರಾರು ಮಾಡಿಕೊಳ್ಳುವುದಕ್ಕೆ ಒಪ್ಪಿಸಿದರು. ಕರಾರು ಆಗುವ ವಿಷಯದಲ್ಲಿ ಮೊದಲು ಜಪಾನ್‌ನವರ ಅಭಿಮತವನ್ನು ತಿಳಿಯಬೇಕೆಂತಲೂ ಅನಂತರ ತಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆಂತಲೂ ರಷ್ಯಾದವರು ಹೇಳಿರುತ್ತಾರೆ.

ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರು.

ಕಳೆದ ೧೩ ನೇ ಮಂಗಳವಾರ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರ ೨೧ ನೇ ವರುಷ ವರ್ಧಂತಿ ಉತ್ಸವವು ರಾಜಧಾನಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಆ ದಿನ ಬೆಳಗ್ಗೆ ಶ್ರೀಮನ್ ಮಹಾರಾಜರವರು ಮಂಗಳಸ್ನಾನ ಆಹ್ನಿಕಗಳನ್ನು ತೀರಿಸಿಕೊಂಡು, ಆಯುಷ್ಯ ಹೋಮಾದಿ ಕಾರ್ಯಗಳನ್ನು ನಡಿಸಿ, ದರ್ಬಾರ್ ಮಂಟಪಕ್ಕೆ ದಯಮಾಡಿ, ಸಿಂಹಾಸನದಲ್ಲಿ ಕುಳಿತುಕೊಂಡರು. ಅವರ ಪಕ್ಕದಲ್ಲೇ ಯುವರಾಜರು, ರಾಜಪಿಂಡೆಯವರು, ದಿವಾನ್‌ರು, ಕೌನ್ಸಿಲ್ ಮೆಂಬರುಗಳು, ಮೆ॥ ಎ. ರಾಮಚಂದ್ರೈಯವರು, ಮೆ॥ ತಂಬೂಚೆಟ್ಟಿಯವರು, ಮೆ॥ ವಿ. ಎನ್. ನರಸಿಂಹೈಯಂಗಾರ್ರು, ಮೆ॥ ಅಂಬಿಲ್ ನರಸಿಂಹೈಯ್ಯಂಗಾರ್ರು, ಸೆಕ್ರೆಟರಿಗಳು, ಮೆ॥ ರಂಗಸ್ವಾಮ್ಯೈಯ್ಯಂಗಾರ್ರು, ಡಿಸ್ಟ್ರಿಕ್ಟ್‌ಗಳ ಡೆಪ್ಯುಟಿ ಕಮಿಷನರುಗಳು, ಮ್ಯುನಿಸಿಪಲ್ ಕಮಿಷನರುಗಳು, ವರ್ತಕರು ಮೊದಲಾದವರೆಲ್ಲಾ ಶ್ರೀಮನ್ ಮಹಾರಾಜರವರಿಗೆ ಮುಜರೆ ಮಾಡಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ತರುವಾಯ ಮಹಾರಾಜರವರು ಫಲಪೂಜೆ ಮಾಡಿ, ವೈದಿಕ ಮಂಡಳಿಯವರು ತಂದೊಪ್ಪಿಸಿದ ಫಲ ಮಂತ್ರಾಕ್ಷತೆಗಳನ್ನು ಸ್ವೀಕರಿಸಿದರು. ಕೊಯಮತ್ತೂರಿನಿಂದ ಕರಸಲ್ಪಟ್ಟಿದ್ದ ವಾದ್ಯಗಾರರು ತಮ್ಮ ವಾದ್ಯಗಳಿಂದ ದರ್ಬಾರೀಗಳಿಗೆ ಕರ್ಣಾನಂದವನ್ನುಂಟುಮಾಡಿದರು. ಸಾಯಂಕಾಲ ಸುಮಾರು ೫ ಗಂಟೆಗೆ ಶ್ರೀಮನ್ ಮಹಾರಾಜರವರು ಅಶ್ವಾರೂಢರಾಗಿ ಸಕಲ ಮರ್ಯಾದೆಗಳೊಡನೆ ಮೆರವಣಿಗೆ ಹೊರಟು ರೆಸಿಡೆನ್ಸಿಗೆ ದಯಮಾಡಿ, ಅಲ್ಲಿ ಸೇರಿದ್ದ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರುಗಳ ವಂದನೆಯನ್ನು ಸ್ವೀಕರಿಸಿ, ಮೈದಾನಿಗೆ ಹೋಗಿ ಕುದುರೆ ಸವಾರರೂ ಶಿಪಾಯಿಗಳೂ ಮಾಡಿ ತೋರಿಸಿದ ಚಮತ್ಕಾರವಾದ ಮತ್ತು ಸಾಹಸಯುಕ್ತವಾದ ಕಾರ್ಯಗಳನ್ನು ಪರಾಂಬರಿಸಿದರು. ತರುವಾಯ ಚಿತ್ರವಿಚಿತ್ರವಾದ ಬಾಣಬಿರುಸುಗಳು ಹತ್ತಿಸಲ್ಪಟ್ಟವು. ಮಹಾರಾಜರವರು ರೆಸಿಡೆನ್ಸಿ ಬಂಗಲೆಯಿಂದ ರಾತ್ರಿ ಸುಮಾರು ೮॥ ಗಂಟೆಗೆ ಅಶ್ವಾರೂಢರಾಗಿ ಹಿಂತಿರಿಗಿ ಮೆರವಣಿಗೆ ಮಾಡಿಕೊಂಡು ಸುಮಾರು ೯ ಗಂಟೆಗೆ ಅರಮನೆಯನ್ನು ಸೇರಿದರು. ಅಲ್ಲಿ ಪದ್ಧತಿಯ ಪ್ರಕಾರ ಆರತಿ ಅಕ್ಷತೆ ಮುಜರೆ ಮುಂತಾದವು ನಡೆದವು. ಅದೇ ದಿನ ರಾತ್ರಿ ಬಹುಮಂದಿ ಯೂರೋಪಿಯನ್ ಸರ್ದಾರರುಗಳಿಗೆಲ್ಲಾ ರೆಸಿಡೆನ್ಸಿ ಬಂಗಲೆಯಲ್ಲಿ ಔತಣ ನಡೆಯಿತು. ದೇವಸ್ಥಾನಗಳಲ್ಲಿ ಮಹಾರಾಜರವರ ಶ್ರೇಯಃ ಪ್ರಾರ್ಥನಾರೂಪವಾದ ಅಭಿಷೇಕಗಳೂ ಅರ್ಚನೆಗಳೂ ನಡೆದವು. ಈ ಉತ್ಸವಕ್ಕಾಗಿ ದಯಮಾಡಿದ್ದ ಸರ್ಕಾರಿ ಮುದ್ದೇದಾರರುಗಳೆಲ್ಲಾ ನಾಳೆ ವಸಿವಾರ ಭಾನುವಾರಗಳಲ್ಲಿ ಪ್ರಯಾಣ ಮಾಡುವರು. ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರು ಚಿರಾಯುಗಳಾಗಿ ಇಂಥಾ ಉತ್ಸವಗಳನ್ನು ಅನೇಕವಾಗಿ ಅನುಭೋಗಿಸುತ್ತಾ ಬರಬೇಕೆಂದು ಪ್ರಾರ್ಥಿಸುತ್ತೇವೆ.

ಚೇಂಬರ್ಲೇನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.



ಶೀತ, ಕೆಮ್ಮು, ಗಂಟಲು ಗಾರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಜಾಡ್ಯಗಳಿಗೆ ಈ ಔಷಧವು ಬಹು ಪ್ರಖ್ಯಾತಿಯುಳ್ಳದ್ದಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವನ್ನು ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಬಿಗಿದುಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತದೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧವು ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಕಳೆದ ಮಂಗಳವಾರ ರಾತ್ರಿ ಶ್ರೀಮನ್ ಮಹಾರಾಜರವರು ರಾಜಧಾನಿಯ ಗವರ್ನಮೆಂಟ್ ಹೌಸ್ ಬಂಗಲೆಯಲ್ಲಿ ಸುಮಾರು ೧೦೦ ಮಂದಿ ಯೂರೋಪಿಯನ್ ಸರ್ದಾರರಿಗೂ ಹೆಂಗಸರಿಗೂ ಔತಣವನ್ನು ಮಾಡಿಸಿದರು. ಅವರಿಗೆ ಭೋಜನವಾದನಂತರ ಮಹಾರಾಜರವರು ಯುವರಾಜರು ದಿವಾನರು ಕೌನ್ಸಿಲ್ ಮೆಂಬರುಗಳ ಸಮೇತ ಬಂಗಲೆಗೆ ದಯಮಾಡಿಸಿದರು. ಬ್ರಿಟಿಷ್ ರೆಸಿಡೆಂಟರು ಶ್ರೀಮನ್ ಮಹಾರಾಜರವರ ಔದಾರ್ಯಾದಿ ಸದ್ಗುಣಗಳನ್ನು ಕುರಿತು ಉಪನ್ಯಾಸ ಮಾಡಿದರು. ಶ್ರೀಮನ್ ಮಹಾರಾಜರವರು ಅದಕ್ಕೆ ಪ್ರತ್ಯುತ್ತರವಾಗಿ ಕೆಲವು ಮಾತುಗಳನ್ನು ಅಪ್ಪಣೆಕೊಡಿಸಿ ಸರ್ದಾರರುಗಳನ್ನೆಲ್ಲಾ ವಂದಿಸಿದರು.

ಬಳದೇಶದ ವೃತ್ತಾಂತಗಳು.

ಈ ತಿಂಗಳ ಕಡೆಯಲ್ಲಿ ಶ್ರೀಮನ್ ಮಹಾರಾಜರವರು ವೈಸ್‌ರಾಯಿಯವರ ಭೇಟಿಗಾಗಿ ಸಿಂಲಾ ಪಟ್ಟಣಕ್ಕೆ ದಯಮಾಡುವರೆಂದು ಪ್ರಕಟವಾಗಿದೆ.

*****

ಕಳೆದ ವಾರ ಅರಮನೆಯ ಗಜಶಾಲೆಗೆ ಸೇರಿದ ಎರಡು ಆನೆಗಳು ಶಾಕ್ಕರಹಳ್ಳಿ ಕೆರೆಯ ಬಳಿ ತೋಟಕ್ಕೂ ಪೋಲೀಸ್ ಲೈನ್ ಮನೆಗಳಿಗೂ ಕೊಪ್ಪಲಿಗೂ ನುಗ್ಗಿ ತುಂಬಾ ಗಲಭೆಮಾಡಿ ನಷ್ಟಪಡಿಸಿದವೆಂತು ಕೇಳುತ್ತೇವೆ.

*****

ಮೆ॥ ದಳವಾಯಿ ದೇವರಾಜೇ ಅರಸಿನವರ ಕುಮಾರನಿಗೆ ಲೇಟ್ ಸರ್ವಾಧಿಕಾರದ ಎಂ. ನಂಜರಾಜೇ ಅರಸಿನವರ ಕುಮಾರಿಯನ್ನು ಕೊಟ್ಟು ಒಂದು ವಿವಾಹವೂ ಅದೇ ನಂಜರಾಜೇ ಅರಸಿನವರ ಕುಮಾರನಿಗೆ ಬಾಡಿಗಾರ್ಡ್ ಕಮ್ಯಾಂಡೆಂಟ್ ಮೆ॥ ಲಿಂಗರಾಜೇ ಅರಸಿನವರ ಕುಮಾರ್ತೆಯನ್ನು ಕೊಟ್ಟು ಒಂದು ವಿವಾಹವೂ ಅರಮನೆಯಲ್ಲಿ ಈ ದಿನ ನಡೆಯುವವು.

*****

ಶ್ರೀಮನ್ ಮಹಾರಾಜರವರು ೩೦,೦೦೦ ರೂಪಾಯಿಗೆ ಪ್ರಸಿದ್ಧವಾದ ಮಂಡೇರಾ ಎಂಬ ಕುದುರೆಯನ್ನು ಆಸ್ಟ್ರೇಲಿಯಾ ದ್ವೀಪದಲ್ಲಿ ಕೊಂಡುಕೊಂಡರು. ಇದು ಮುಂದಿನ ತಿಂಗಳಲ್ಲಿ ಬೆಂಗಳೂರಿಗೆ ಬರುವುದು. ಕಲ್ಕತ್ತಾ ಪಟ್ಟಣದಲ್ಲಿ ಮುಂದಿನ ಡಿಸೆಂಬರ್ ತಿಂಗಳಲ್ಲಿ ನಡೆಯುವ ಎರಡು ಭಾರೀ ಕುದುರೆ ಜೂಜಿನಲ್ಲಿ ಈ ಕುದುರೆಯನ್ನು ಜೂಜುಬಿಡುವರೆಂದು ತಿಳಿದುಬಂದಿದೆ.

*****

ಬೆಂಗಳೂರು ಕಬ್ಬನ್ ಪಾರ್ಕ್ ಉದ್ಯಾನವನದಲ್ಲಿ ಲೇಟ್ ಚಕ್ರವರ್ತಿನಿಯವರ ಶಿಲಾಪ್ರತಿಮೆಯನ್ನು ಇಡಿಸುವಂತೆ ಗೊತ್ತಾಗಿದೆಯಷ್ಟೆ. ಈ ಪ್ರತಿಮೆಯು ಮುಂದಿನ ವಾರ ಬೆಂಗಳೂರಿಗೆ ಬರುವದು. ಇದಕ್ಕೆ ೨೫,೦೦೦ ರೂಪಾಯಿ ಖರ್ಚಾಗಿದೆ. ಈ ಪೈಕಿ ಮೈಸೂರು ಸರ್ಕಾರದವರು ೧೫,೦೦೦ ರೂಪಾಯಿ ಕೊಟ್ಟಿದ್ದಾರೆ. ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಬೆಂಗಳೂರಿಗೆ ದಯಮಾಡಿದಾಗ ಅವರೇ ಈ ಪ್ರತಿಮೆಯನ್ನು ಪ್ರತಿಷ್ಠೆ ಮಾಡುವವರಾಗಿದ್ದಾರೆ.

*****

ಒಬ್ಬ ಬಾತ್ಮೀದಾರರು ಬರೆಯುವುದು—ಶಿವಮೊಗ್ಗಾ ಡಿಸ್ಟ್ರಿಕ್ಟ್ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರು ಗ್ರಾಮದ ಬಳಿ ಒಂದು ಧ್ವಜಸ್ತಂಭವು ಸುಮಾರು ೫೨೫ ವರ್ಷದಿಂದ ಇತ್ತು. ಅದು ಈಗ ಮೇ ತಾ ೨೭ನೇ ಶುಕ್ರವಾರ ದಿವಸ ಗಾಳಿಯಿಂದಲೂ ಶಿಥಿಲದಿಂದಲೂ ಬಿತ್ತು. ಇಂಥ ಗಾಳಿ ಬಂದಿರಲಿಲ್ಲ. ಅದು ಸುಮಾರು ೫೦ ಅಡಿ ಎತ್ತರವುಳ್ಳದ್ದಾಗಿರುತ್ತೆ. ಇಂಥ ಧ್ವಜಸ್ತಂಭವು ಎಡಬಲ ಪ್ರಾಂತ್ಯದಲ್ಲಿ ಇದ್ದಹಾಗೆ ಕಾಣುವದಿಲ್ಲ. ಸಂತೆಬೆನ್ನೂರು ಮತ್ತು ಎಡಬಲದವರು ಸಹಾ ಆಶ್ಚರ್ಯಪಟ್ಟರು.

ಮೆ॥ ಯೂಜೀನ್ ಸಾಂಡೋ ಎಂಬ ಜಟ್ಟಿಯು.

ಜಟ್ಟಿ ಕಾಳಗ ಮುಂತಾದ್ದು

ಹಿಂದಿನ ಸೋಮವಾರ ರಾತ್ರಿ ಮೆ॥ ಸಾಂಡೋ ಜಟ್ಟಿಯು ಮದರಾಸ್ ಪಟ್ಟಣದ ಜನರಿಗೆ ತನ್ನ ಶಕ್ತಿ ಪರಾಕ್ರಮಗಳನ್ನು ತನ್ನ ಶಿಷ್ಯರ ಕಾಯಪುಷ್ಟಿ ಸಾಮರ್ಥ್ಯಗಳನ್ನೂ ತೋರಿಸಿದನು. ತರುವಾಯ ಅವನ ಶಿಷ್ಯರ ಮೇಲೆ ಆ ದಿನ ಕುಸ್ತಿ ಮಾಡುತ್ತೇನೆಂದು ವಾಗ್ದಾನಮಾಡಿದ್ದ ಬೆಂಗಳೂರು ಪೈಲ್ವಾನ್ ಮಹಬೂಬ್‌ಖಾನನು ಕಾಣದೆ ಹೋದದ್ದನ್ನು ನೋಡಿ, ಜನರೆಲ್ಲಾ ಆಶ್ಚರ್ಯಪಡುತ್ತಿದ್ದರು. ಆಗ ಮೆ॥ ಸಾಂಡೋ ಜಟ್ಟಿಯು ಕಡೆಯುವರೆಟ್ಟನು ಬಂದು—ಶನಿವಾರ ಸಾಂಡೋ ಜಟ್ಟಿಯು ಮಹಬೂಬ್‌ಖಾನನನ್ನು ಕರೆದು ಸೋಮವಾರ ತನ್ನ ಶಿಷ್ಯರಲ್ಲಿ ಬಲಿಷ್ಠನಾಗಿರುವವರನ್ನು ಗೆದ್ದರೆ ಆತನಿಗೆ ೨,೦೦೦ ರೂಪಾಯಿ ಬಹುಮಾನಕೊಡುವುದಾಗಿ ತಿಳಿಸಿದನು. ಪೈಲ್ವಾನನು ಬರುವುದಾಗಿ ಒಪ್ಪಿಕೊಂಡರೂ ಬಾರದೆ ಹೋದನು ಎಂದು ನೋಟಕರಿಗೆಲ್ಲಾ ತಿಳಿಸಿದನು.

ಹೊಸ ಕುಸ್ತಿಗಳು

ಕರೀಂಭಕ್ಷ್ ಎಂಬೊಬ್ಬ ಪೈಲ್ವಾನನು ತನ್ನ ಇಬ್ಬರು ಶಿಷ್ಯರನ್ನು ಕುಸ್ತಿಗೆ ಕರೆದುತಂದಿದ್ದನು. ಈ ಪೈಕಿ ಒಬ್ಬ ಪೈಲ್ವಾನನಿಗೂ ಸಾಂಡೋ ಜಟ್ಟಿಯ ಶಿಷ್ಯರಲ್ಲಿ ಫ್ರಾನ್ಸ್ ದೇಶದವನಿಗೂ ಕಾಳಗವಾಯಿತು. ಇವರಿಬ್ಬರೂ ಬಹಳ ಹೊತ್ತು ಹೋರಾಡಿ ತಮ್ಮ ಶಕ್ತಿಸಾಹಸ ಚಮತ್ಕಾರಗಳನ್ನು ತೋರಿಸಿದರು. ಇಬ್ಬರೂ ಸೋಲೂ ಇಲ್ಲ. ಗೆಲ್ಲಲೂ ಇಲ್ಲ. ಈ ಕುಸ್ತಿಯನ್ನು ನಿಲ್ಲಿಸಿದ ತರುವಾಯ ಕರೀಂಭಕ್ಷನೂ ಅವನ ಇನ್ನೊಬ್ಬ ಶಿಷ್ಯನೂ ಸಾಂಡೋವಿನ ಹಿಂದುಸ್ಥಾನದ ಶಿಷ್ಯನ ಮೇಲೆ ಒಬ್ಬರಾದಮೇಲೊಬ್ಬರಂತೆ ಕುಸ್ತಿಮಾಡಿದರು. ಆ ಹಿಂದುಸ್ಥಾನದ ಶಿಷ್ಯನು ಈ ದೇಶದ ಕುಸ್ತಿ ಉಪಾಯಗಳನ್ನೂ ಸಾಂಡೋ ಜಟ್ಟಿಯಿಂದ ಕಲಿತ ವಿದ್ಯೆಯನ್ನೂ ಅವರಿಬ್ಬರ ಮೇಲೂ ಪ್ರಯೋಗಿಸಿ, ಬಹಳ ಬೇಗ ಅವರಿಬ್ಬರನ್ನೂ ಬೆನ್ನುಮಾಡಿ ಸೋಲಿಸಿಬಿಟ್ಟನು. ಜನರೆಲ್ಲಾ ಈ ವಿನೋದವಾದ ನೋಟವನ್ನು ನೋಡಿ ಸಂತೋಷಪಟ್ಟರು. ಕಡೆಯಲ್ಲಿ ಸಾಂಡೋವಿನ ಕಡೆಯವರು ಬಂದು—ನಾಳೆ ಈ ದೇಶದ ನಾಲ್ವರು ನಮ್ಮ ಶಿಷ್ಯರ ಮೇಲೆ ಕುಸ್ತಿ ಮಾಡುವುದಾಗಿ ಒಪ್ಪಿಕೊಂಡಿದ್ದಾರೆಂತಲೂ, ಮಹಬೂಬ್‌ಖಾನನೇ ಬಂದು ನಮ್ಮ ಶಿಷ್ಯರನ್ನು ಸೋಲಿಸುವುದಾದರೆ ಆತನಿಗೆ ಒಂದು ಗೆಲುವಿಗೆ ಒಂದು ಸಾವಿರ ರೂಪಾಯಿಯಂತೆ ಇನಾಮು ಕೊಡುತ್ತೇವೆಂತಲೂ ತಿಳಿಸಿದರು.

ಮಹಬೂಬ್‌ಖಾನನ ಕಾಗದವು.

ಮಂಗಳವಾರ ರಾತ್ರಿ ಕ್ರಮಪ್ರಕಾರ ನಾಟಕಶಾಲೆಯು ನೋಟಕರಿಂದ ಕಿಕ್ಕಿರಿಯುತ್ತಿತ್ತು. ಸಾಂಡೋ ಜಟ್ಟಿಯು ಹೊಸ ಹೊಸ ಸಾಧನೆಗಳನ್ನು ಮಾಡಿ ತೋರಿಸಿದನು. ಕಡೆಗೆ ಆತನ ಶಿಷ್ಯರು ಮೂವರು ಪೈಲ್ವಾನರುಗಳ ಮೇಲೆ ಕುಸ್ತಿ ಮಾಡಿ ಬಹು ಬೇಗ ಸೋಲಿಸಿ ಬಿಟ್ಟರು. ಈ ಕುಸ್ತಿಗಳು ಬೇಗ ಮುಗಿದುಹೋದಾಗ್ಯೂ ತುಂಬಾ ಸ್ವಾರಸ್ಯವಾಗಿದ್ದವು. ಮಹಬೂಬ್‌ಖಾನನು ಬರಲೇ ಇಲ್ಲ.

ಮಹಬೂಬ್‌ಖಾನನು ತಿಳಿಸಿದ್ದೇನೆಂದರೆ—ಮೆ॥ ಸಾಂಡೋ ಜಟ್ಟಿಯು ಕಳೆದ ಗುರುವಾರ ಭಾಷೆ ಕೊಟ್ಟ ಪ್ರಕಾರ ನಡೆದುಕೊಳ್ಳಲಿಲ್ಲ. ನಾನು ಎಷ್ಟು ಮಂದಿ ಶಿಷ್ಯರನ್ನು ಸೋಲಿಸುವೆನೋ ಅಷ್ಟು ನೂರು ರೂಪಾಯಿಗಳನ್ನು ಬಹುಮಾನ ಕೊಡುತ್ತೇನೆಂದು ಹೇಳಿದನಷ್ಟೆ. ಅದೇ ಪ್ರಕಾರ ಶನಿವಾರ ರಾತ್ರಿ ನಾನು ಆತನ ಇಬ್ಬರು ಶಿಷ್ಯರನ್ನು ಸೋಲಿಸಿದೆನು. ಆದರೂ ನನಗೆ ೧೦೦ ರೂಪಾಯಿ

ಮಾತ್ರ ಕೊಟ್ಟಿರುತ್ತಾನೆ. ನನಗೆ ಇನ್ನೂ ೧೦೦ ರೂಪಾಯಿ ಬರಬೇಕೆಂದು ಆತನನ್ನು ಆ ದಿನವೇ ಕೇಳಿದ್ದಕ್ಕೆ ಕೊಡತಕ್ಕದ್ದಿಲ್ಲವೆಂದು ಹೇಳಿಬಿಟ್ಟನು.

ಮಿ॥ ಸಾಂಡೋ ಪಟ್ಟಿಯು ಬುಧವಾರ ರಾತ್ರಿ ಯಥಾಪ್ರಕಾರ ತನ್ನ ದೇಹಶಕ್ತಿಯನ್ನು ಪ್ರಕಾಶಪಡಿಸಿದನು ಆತನ ಅದ್ಭುತವೂ ವಿಚಿತ್ರವೂ ಆದ ದೇರು ತುಂಬಾ ನೋಟಕರು ಸೇರಿದ್ದರು. ಮತ್ತು ಕಡೇ ದಿನವೆಂಬುದನ್ನು ಕೇಳಿ ಜನರು ಬಹು ವಿಶೇಷವಾಗಿ ನುಗ್ಗಿಬಿಟ್ಟದ್ದರಿಂದ ಒಳಗೆ ನಿಲ್ಲುವುದಕ್ಕೂ ಸ್ಥಳವಿಲ್ಲದಂತಾಗಿತ್ತು. ಒಬ್ಬರಮೇಲೊಬ್ಬರು ಬಿದ್ದು ಒದ್ದಾಡುತ್ತಿದ್ದರು. ಆದಾಗ್ಯೂ ತೆರೆ ಎತ್ತಿ ಸಾಂಡೋ ಪಟ್ಟಿಯೂ ಆತನ ಶಿಷ್ಯರೂ ಸಾಹಸಕಾರ್ಯಗಳನ್ನು ಮಾಡಲಾರಂಭಿಸಿದ ಕೂಡಲೇ ನಿಶ್ಶಬ್ದವು ನೆಲೆಗೊಂಡಿತು. ಎಲ್ಲರೂ ಆಶ್ಚರ್ಯಯುಕ್ತರಾಗಿ ನೋಡುತ್ತಾ ಬಂದರು.

ತರುವಾಯ ಕುಸ್ತಿಗಳಾದವು. ಮೂವರು ಪೈಲ್ವಾನರು ಸಾಂಡೋವಿನ ಶಿಷ್ಯರ ಮೇಲೆ ಕುಸ್ತಿಮಾಡಿದರು. ಫ್ರಾನ್ಸಿನ ಮತ್ತು ಅಮೇರಿಕದ ಇಬ್ಬರು ಶಿಷ್ಯರು ಇಬ್ಬರು ಪೈಲ್ವಾನರ ಮೇಲೆ ಕುಸ್ತಿಮಾಡಿ, ಇಬ್ಬರನ್ನೂ ಬೆನ್ನುಮಾಡಿ ಸೋಲಿಸಿಬಿಟ್ಟರು ಸಾಂಡೋವಿನ ಪಂಜಾಬೀ ಶಿಷ್ಯನು ಬೆಂಗಳೂರಿನ ಇನ್ನೊಬ್ಬ ಪೈಲ್ವಾನನ ಮೇಲೆ ಕುಸ್ತಿ ಮಾಡಿ ತನ್ನ ಸಾಹಸಚಮತ್ಕಾರಗಳನ್ನು ತೋರಿಸಿದನು. ಬಹಳ ಹೊತ್ತು ಹೆಣಗಾಡಿ ಕಡೆಗೆ ಪಂಜಾಬಿಯು ಬೆಂಗಳೂರಿನವನನ್ನು ಸೋಲಿಸಿ, ನೋಟಕರ ಶಾಬಾಸ್‌ಗಿರಿಯನ್ನು ಸಂಪಾದಿಸಿಕೊಂಡನು

ಮರುದಿನ ಮಿ॥ ಸಾಂಡೋ ಪಟ್ಟಿಯು ತನ್ನ ಶಿಷ್ಯರ ಸಮೇತ ಮದರಾಸಿನಲ್ಲಿ ಹಡಗು ಹತ್ತಿ ಪೀನಾಂಗಿಗೆ ತೆರಳಿದನು.

ಕರ್ನಾಟಕ ಭಾಷಾಭಿವೃದ್ಧಿ ಸಂಘವು.

ಧಾರವಾಡದ ಸಭೆಯೂ ಮೈಸೂರು ಪ್ರತಿನಿಧಿಗಳೂ

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಧಾರವಾಡದಲ್ಲಿ ಕೆಲವು ಮಹಾ ಜನಗಳು ಕರ್ನಾಟಕ ಭಾಷಾಭಿವೃದ್ಧಿ ಮಾಡುವುದಕ್ಕಾಗಿ ಒಂದು ಸಂಘವನ್ನು ಏರ್ಪಡಿಸಿಕೊಂಡು, ಪ್ರತಿ ವರ್ಷವೂ ಗೊತ್ತುಮಾಡಿದ ಕೆಲವು ಕನ್ನಡದ ಗ್ರಂಥಗಳನ್ನು ಓದಿ ಪರೀಕ್ಷೆ ಕೊಟ್ಟವರಿಗೂ, ಸಭೆಯಲ್ಲಿ ಉತ್ತಮವಾಗಿ ಉಪನ್ಯಾಸ ಮಾಡಿದವರಿಗೂ ಕನ್ನಡದಲ್ಲಿ ಹೊಸದಾಗಿ ಗ್ರಂಥಗಳನ್ನು ರಚಿಸಿದವರಿಗೂ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಪಡಿಸುತ್ತಿರುವುದು ವಾಚಕರಿಗೆಲ್ಲ ತಿಳಿದಿರಬಹುದು. ಮೈಸೂರು ಸರ್ಕಾರದವರು ಆ ಸಭೆಯಲ್ಲಿ ಪರೀಕ್ಷಾ ಕಾರ್ಯಗಳನ್ನು ನೆರವೇರಿಸಲು ಲೌಕಿಕ ವೈದಿಕ ವಿದ್ವಾಂಸರಿಬ್ಬರನ್ನು ಪ್ರತಿ ವರ್ಷವೂ ಕಳುಹಿಸುತ್ತಿರುವರು ಅದರಂತೆ ಈ ವರ್ಷದಲ್ಲಿ ಮೈಸೂರು ಗವರ್ನಮೆಂಟ್ ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರು ಮಿ॥ ಕೆ. ನಾರಣಯ್ಯಂಗಾರ್, ಬಿ ಎ. ಯವರೂ, ಅದೇ ನಾರ್ಮಲ್ ಸ್ಕೂಲ್ ಪಂಡಿತರು ವೇ॥ ಶ್ರೀನಿವಾಸರಾಘವಾಚಾರ್ಯರೂ ಈ ತಿಂಗಳು ತಾ. ೨ಕ್ಕೆ ಅಲ್ಲಿಗೆ ದಯಮಾಡಿಸಿದ್ದರು. ೩ನೇ ತಾರೀಖಿನಲ್ಲಿ ಪರೀಕ್ಷೆಗಳೂ, ೪ನೇ ತಾರೀಖಿನಲ್ಲಿ ಬಹುಮಾನ ಸಭೆಯೂ ನಡೆದವು. ಅಲ್ಲಿನ ಮಿಶನ್‌ಸಮಾಜದ ಕಟ್ಟಡದಲ್ಲಿ ಸಭೆಯು ನೆರೆದಿತ್ತು. ಸುಮಾರು ೨೦೦ ಮಂದಿ ಸಭಿಕರು ಸೇರಿದ್ದರು. ಡೆಪ್ಯುಟಿ ಕಲೆಕ್ಟರವರೂ, ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರವರೂ, ವಕೀಲರುಗಳೂ, ವರ್ತಕರೂ, ಟ್ರೈನಿಂಗ್ ಕಾಲೇಜ್ ಮತ್ತು ಇತರ ಸ್ಕೂಲುಗಳ ವಿದ್ಯಾರ್ಥಿಗಳೂ, ಸ್ಥಳದ ಇನ್ನೂ ಕೆಲವು ಮಹನೀಯರೂ ಸಭೆಯನ್ನು ಅಲಂಕರಿಸಿದ್ದರು. ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಲ್‌ರಾದ ಮಿ॥ ರೊದ್ದ ಶ್ರೀನಿವಾಸರಾಯರು ಸಭಾಧ್ಯಕ್ಷರಾಗಿದ್ದರು. ಮೊದಲು ಮಿ॥ ಕೆ. ನಾರಣಯ್ಯಂಗಾರರೂ, ವೇ॥ ಪಂಡಿತ ಶ್ರೀನಿವಾಸರಾಘವಾಚಾರ್ಯರೂ "ಕರ್ನಾಟಕ ಭಾಷೆಯ ಅಭಿವೃದ್ಧಿಯನ್ನು ಹೇಗೆ ಮಾಡಬೇಕು" ಎಂಬ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು ಅವುಗಳ ಸಾರಾಂಶವೇನೆಂದರೆ—

ಲೋಕದಲ್ಲಿ ಜನಗಳ ಪರಸ್ಪರ ವ್ಯವಹಾರಕ್ಕೆ ಭಾಷೆಯು ಅತಿ ಮುಖ್ಯಸಾಧನವು ಜನಸಮುದಾಯ ಭೇದದಿಂದ ಭಾಷಾ ಭೇದಗಳು ಸಹಜವಾಗಿ ಉಂಟಾದವು. ನಮ್ಮ ಭರತಖಂಡದಲ್ಲಿ ಗೌಡ, ದ್ರಾವಿಡ ಮುಂತಾದ ಭಾಷಾ ಸಮುದಾಯಗಳಲ್ಲಿ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಕನ್ನಡ ಭಾಷೆಯು ಸುಮಾರು ಎರಡು ಸಾವಿರ ವರ್ಷಗಳಿಂದಲೂ ಪ್ರಚಾರದಲ್ಲಿರುವಂತೆ ತೋರುತ್ತೆ. ಕ್ರಿ. ಶ. ೩ನೆಯ ಶತಮಾನದಲ್ಲಿ ಬರೆದ ಗ್ರಂಥಗಳು ಈಗ ಸಿಕ್ಕಿರುವುದರಿಂದ ಈ ಭಾಷೆಯು ಅದಕ್ಕೆ ಮುಂಚೆಯೂ ಒಳ್ಳೇ ಸ್ಥಿತಿಯಲ್ಲಿ ಬಳಕೆಯಾಗಿತ್ತೆನ್ನುವುದಕ್ಕೆ ಅಡ್ಡಿಯಿಲ್ಲ. ೯ನೇ ಶತಮಾನದಲ್ಲಿ ಪಂಪನೇ ಮೊದಲಾದ ಮಹಾ ಕವಿಗಳಿಂದ ಅತ್ಯುನ್ನತ ದಶೆಯಲ್ಲಿತ್ತು. ಆಗ ಕನ್ನಡವು ಬೆಲಗಾಂ, ಧಾರವಾಡದಿಂದ ವಿಜಯನಗರದ ವರೆಗಿನ ರಾಜ್ಯದಲ್ಲಿ ನೆಲಸಿತ್ತು. ಅಲ್ಲಿಯೇ ಪಂಪಭಾರತ ಮುಂತಾದ ಮಹಾ ಕಾವ್ಯಗಳು ಹುಟ್ಟಿದವು. ಈಚೆಗೆ ಕಾಲವಶದಿಂದ ಕನ್ನಡವು ಅಲ್ಲಿ ಖಿಲವಾಗಿ ಕ್ರಮವಾಗಿ ದಕ್ಷಿಣಕ್ಕೆ ಹಬ್ಬಿ ೧೭ನೆಯ ಶತಮಾನದಲ್ಲಿ ಮೈಸೂರು ಚಿಕ್ಕದೇವರಾಜ ಒಡೆಯರವರ ಆಶ್ರಯದಿಂದಲೂ ಪ್ರಕಾಶಹೊಂದಿ ಈಗ ಈ ಕಡೆಯೂ ಮಲಿನವಾಗುತ್ತ ಬರುತ್ತಿದೆ. ಹೀಗೆ ಪೂರ್ವದಲ್ಲಿ ಅನೇಕ ಮಹಾ ಕವಿಗಳು ಕಾವ್ಯನಾಟಕ ಅಲಂಕಾರ ಮುಂತಾದ ಅನೇಕ ಗ್ರಂಥಗಳನ್ನು ರಚಿಸಿ, ಲೋಕೋಪಕಾರ ಮಾಡಿ ಕೀರ್ತಿಗೊಂಡರು. ಈಗ ಕನ್ನಡವನ್ನು ನಿಜವಾಗಿ ಅಭಿವೃದ್ಧಿಪಡಿಸಬೇಕಾದರೆ ಶ್ರೇಷ್ಠವಾದ ಭಾಷಾ ಗ್ರಂಥಗಳನ್ನು ಸುಲಕ್ಷಣವಾಗಿ ಪ್ರಚಾರಪಡಿಸುವುದು ಮೊದಲನೆಯ ಕೆಲಸ. ಮತ್ತು ಕನ್ನಡದಲ್ಲಿ ಕಾವ್ಯಗಳೇನೋ ಹೇರಳವಾಗಿರುವುವಲ್ಲದೆ ಶಾಸ್ತ್ರ ಗ್ರಂಥಗಳು ಮಾತ್ರ ಕಡಮೆ. ತರ್ಕ, ಶಿಲ್ಪ, ವೈದ್ಯ ಮೊದಲಾದ ಶಾಸ್ತ್ರಗಳನ್ನು ಪ್ರಾಚೀನಾರ್ಯರಿಂದಲೂ, ಪಾಶ್ಚಾತ್ಯರಿಂದಲೂ ಕನ್ನಡಕ್ಕೆ ತರುವುದಲ್ಲದೆ ಆರ್ಯರ ಸನಾತನ ಧರ್ಮವನ್ನು ಪ್ರಚಾರಪಡಿಸುವುದು ಈಗಿನ ಕಾಲಕ್ಕೆ ಅತ್ಯವಶ್ಯಕವು. ಯಾವ ದೇಶದಲ್ಲಿ ವಿದ್ಯೆಯೂ ನಾಗರಿಕತೆಯೂ ಹೆಚ್ಚಿರುವುವೋ ಅಲ್ಲಿ ಶ್ರೇಷ್ಠವಾದ ಭಾಷಾ ಗ್ರಂಥಗಳೂ ವಿಶೇಷವಾಗಿರುವುವು. ಇದಕ್ಕಾಗಿ ಮೈಸೂರು ಸರ್ಕಾರದವರೂ ಬಹಳವಾಗಿ ಖರ್ಚುಮಾಡುತ್ತಿರುವರು. ಮೈಸೂರು ದೇಶವು ಕನ್ನಡ ಭಾಷೆಗೆ ಗೃಹವು. ಧಾರವಾಡ, ಬಿಜಾಪುರ ಪ್ರಾಂತ್ಯಗಳೇ ಕನ್ನಡಕ್ಕೆ ಜನ್ಮ ಭೂಮಿ. ಆದುದರಿಂದ ಆ ಪ್ರಾಂತದವರೂ ದೇಶಭಾಷಾಭಿವೃದ್ಧಿ ಮಾಡಬೇಕೆಂಬುದನ್ನು ವಿಶೇಷವಾಗಿ ಮನಸ್ಸಿಗೆ ತಂದುಕೊಂಡು, ಅದರಂತೆ ಆಚರಿಸಿ, ಕನ್ನಡಿಗರನ್ನು ಅಭಿವೃದ್ಧಿಗೊಳಿಸಿ, ಎಲ್ಲರೂ ಐಕಮತ್ಯದಿಂದಿದ್ದು, ಶ್ರೇಯಃಫಲರಾಗಬೇಕೆಂಬುದೇ ಮುಖ್ಯ ಪ್ರಾರ್ಥನೆ

ಕ॥ ಕನ್ನಡಿಗರ ಸಂಘವಿದು ಮ ।
ಹೋನ್ನತಿವೆತ್ತಿರ್ಕೆ ಸಕಲ ಸಾಧನದಿಂದಂ ॥
ಸನ್ನುತ ಕೃಷ್ಣಮಹೇಶಂ ।
ಕನ್ನಡಕೊಳ್ಸಿತ್ತು ನಲಿಗೆ ಸೊಗದಿಂದೆಂದುಂ ॥

ಎಂದು ಉಪನ್ಯಾಸಗಳು ಮುಗಿಸಲ್ಪಟ್ಟವು

ತರುವಾಯ ಸಂಘದ ಕಾರ್ಯದರ್ಶಿ ಮಿ॥ ನಾರಾಯಣರಾವ್ ಕರಿಗುದರಿ, ಬಿ ಎ, ಎಲ್. ಎಲ್. ಬಿ ಯವರು ಹದಿನಾಲ್ಕನೆಯ ವರ್ಷದ ಬಹುಮಾನ ಸಭೆಯ ವಿಷಯವನ್ನು ತಿಳಿಸಿ, ತಮಗೆ ಕರ್ನಾಟಕವಿದ್ಯಾವರ್ಧಕಸಂಘದ ಕಟ್ಟಡಕ್ಕಾಗಿ ಮೂರು ಸಾವಿರ ರೂಪಾಯಿಗಳನ್ನು ಕೊಡುವಂತೆ ವಾಗ್ದಾನ ಮಾಡಿ, ಸಹಾಯ ಮಾಡುತ್ತಿರುವ ಮೈಸೂರು ಶ್ರೀಮನ್ಮಹಾರಾಜರವರ ಮಹೋಪಕಾರವನ್ನು ಕೊಂಡಾಡಿದರು. ಆ ಮೇಲೆ ಪರೀಕ್ಷೆ ಕೊಟ್ಟ ವಿದ್ಯಾರ್ಥಿಗಳು ೬..೭ ಮಂದಿಗೆ ೫ ರಿಂದ ೧೫ ರೂ, ಉಪನ್ಯಾಸ ಮಾಡಿದ ಇಬ್ಬರಿಗೆ ೧೫—೧೦ ರೂ., ಗ್ರಂಥವನ್ನು ರಚಿಸಿದ್ದಕ್ಕಾಗಿ ಅಲ್ಲಿನ ಗರ್ಲ್ಸ್ ಸ್ಕೂಲು ಉಪಾಧ್ಯಾಯಿನಿಯೊಬ್ಬಳಿಗೆ ೨೦ ರೂ., ಪಂಡಿತ ಕುಂದಲಿಗಿಯಾಚಾರ್ಯರಿಗೆ ೨೫೦ ರೂ, ಈ ರೀತಿ ಬಹುಮಾನಗಳು ಕೊಡಲ್ಪಟ್ಟವು ಅನಂತರ ಸಭಾಧ್ಯಕ್ಷರು ಸಭಿಕರಾದ ದೇಶೀಯ ಮಹಾಜನಗಳಿಗೆ ಪ್ರಕೃತೋಪದೇಶವನ್ನು ಮಾಡಿದ್ದಲ್ಲದೆ, ಮೈಸೂರು ಸರ್ಕಾರದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಅಧಿಪತಿಗಳಾಗಿಯೂ ವಿದ್ಯಾಭಿವೃದ್ಧಿ ಮಾಡುವುದರಲ್ಲಿ ಬದ್ಧಕಂಕಣರಾಗಿಯೂ ಇರುವ ಮಿ॥ ಭಾಭಾ ಸಾಹೇಬರನ್ನು ಶ್ಲಾಘಿಸಿ ಸಭೆಯನ್ನು ಮುಗಿಸಿದರು

ರಾಜಧಾನಿಯಲ್ಲಿ ಹೊಸ ಸಂಘದ ಸ್ಥಾಪನೆ.

ಸಂಘಪರಿಷ್ಕರಣ ಕಾರ್ಯವು.

ಮದರಾಸ್ ಪಟ್ಟಣದಲ್ಲಿ ಹಿಂದುಗಳು ತಮ್ಮ ಆಚಾರವ್ಯವಹಾರಗಳನ್ನು ಈಗಿನ ಕಾಲಕ್ಕೆ ತಕ್ಕ ಹಾಗೆ ಬದಲಾವಣೆ ಮಾಡಿಕೊಳ್ಳುವುದಕ್ಕಾಗಿ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಈ ಸಂಘದ ಶಾಖೆಗಳು ಆ ಆಧಿಪತ್ಯದ ಅನೇಕ ಪಟ್ಟಣಗಳಲ್ಲಿರುತ್ತವೆ. ಉತ್ತರ ದೇಶದಲ್ಲೂ ಇಂಥಾ ಸಂಘಗಳಿರುವುವು ನೂರಾರು ಜಾತಿಗಳೂ ಸಾವಿರಾರು ಒಳಪಂಗಡಗಳೂ ಏರ್ಪಟ್ಟು ಹಿಂದುಸ್ಥಾನವನ್ನು ಕ್ಷೀಣಗತಿಗೆ ತಂದುಬಿಟ್ಟವೆಂತಲೂ ಮದುವೆ ಮುಂತಾದ ಶುಭಕಾರ್ಯಗಳನ್ನೂ ತಿಥಿ ಮುಂತಾದ ಅಶುಭಕ್ರಿಯೆಗಳನ್ನೂ ಮಾಡುವುದರಲ್ಲಿ ಪ್ರಜೆಗಳು ತಮ್ಮ ಸ್ಥಿತಿಗತಿಗಳನ್ನು ಲಕ್ಷ್ಯವಿಡದೆ ವಿಧಿನಿಷೇಧಗಳ ತಾರತಮ್ಯಜ್ಞಾನ ಶೂನ್ಯತೆಯಿಂದ ಮಿಂದು ಖರ್ಚುಮಾಡಿ ಸಾಲಗಾರರಾಗಿ ಕೆಟ್ಟುಹೋಗುತ್ತಿರುವರೆಂತಲೂ ಸ್ತ್ರೀಯರಿಗೆ ವಿದ್ಯೆ ಕಲಿಸದೆ ಅವರನ್ನು ಮೌಢ್ಯದಲ್ಲಿಟ್ಟುಕೊಂಡು ಅವರ ಅಲ್ಪಸಂತೋಷಕ್ಕೆ ಸಹಕಾರಿಗಳಾದ ಕಾರ್ಯಗಳನ್ನು ನೆರವೇರಿಸಿಕೊಡುತ್ತಾ ಅವರನ್ನು ಕೆಡಿಸಿ ತಾವೂ ಕೆಟ್ಟು ತಮ್ಮ ಮಕ್ಕಳ ಪುರೋಭಿವೃದ್ಧಿಗೆ ಹಾನಿತಂದುಕೊಳ್ಳುತ್ತಿದ್ದಾರೆಂತಲೂ ಬಹುಮಂದಿ ಮಹನೀಯರಾದ ಹಿಂದುಗಳು ಈಗೀಗ ತಿಳಿದುಕೊಂಡು ಸಂಘಗಳನ್ನು ಮಾಡಿಕೊಂಡು ಅಲ್ಲಲ್ಲಿ ಉಪನ್ಯಾಸಮಾಡುತ್ತಾ ಹಾನಿಕರವಾದ ಕಾರ್ಯಗಳನ್ನು ಜನಗಳಿಗೆ ತಿಳಿಯಪಡಿಸುತ್ತಾ, ಪ್ರಜೆಗಳ ಕರ್ತವ್ಯಾಕರ್ತವ್ಯಗಳು ಇಂಥಿಂಥವುಗಳೆಂದು ದೃಷ್ಟಾಂತಪಡಿಸುತ್ತಾ ಬಂದಿದ್ದಾರೆ.

ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯಲ್ಲಿ ಇಂಥಾ ಸಂಘಪರಿಷ್ಕರಣ ಸಭೆಯೊಂದನ್ನು ಸ್ಥಾಪಿಸುವುದಕ್ಕಾಗಿ ಬಹು ಜನ ದೊಡ್ಡ ಮನುಷ್ಯರೂ ವಿದ್ಯಾವಂತರೂ ಸೇರಿದ್ದರು. ಅರಮನೆ ಕಂಟ್ರೋಲರಾಗಿದ್ದ ಮಿ॥ ವಿ. ಪಿ. ಸುಬ್ರಹ್ಮಣ್ಯಂಗಾರ್ಯರು ಸಭಾನಾಯಕರಾಗಿದ್ದರು ಅವರು ತಿಳಿಸಿದ್ದೇನೆಂದರೆ—ಜನಗಳಲ್ಲಿ ಅನೇಕ ಒಳ ಜಾತಿಗಳೂ ಪಂಗಡಗಳೂ ಏರ್ಪಟ್ಟಿವೆ ಸಣ್ಣ ವಯಸ್ಸಿನಲ್ಲಿ ಮಕ್ಕಳಿಗೆ ಮದುವೆ ಮಾಡುವರು. ಹೆಂಗಸರನ್ನು ಮೌಢ್ಯದಲ್ಲಿ ಇಟ್ಟುಕೊಂಡಿದ್ದಾರೆ. ಉತ್ತಮ ಜಾತಿಯವರೆಂತಲೂ ಕೀಳು ಜಾತಿಯವರೆಂತಲೂ ದುರಭಿಪ್ರಾಯದಿಂದ ತಾರತಮ್ಯವನ್ನು ಇಟ್ಟುಕೊಂಡಿದ್ದಾರೆ ಅನೇಕ ನಿಷ್ಪ್ರಯೋಜನವಾದ ಆಚಾರವ್ಯವಹಾರಗಳೂ ಪ್ರಾಚೀನಕಾಲಕ್ಕೆ ಯೋಗ್ಯವಾಗಿದ್ದ ಕಾರ್ಯಗಳೂ ಅನೇಕ ಹೊಸ ಪದ್ಧತಿಗಳೂ ಅಭ್ಯಾಸಗಳೂ ಕಾಣಿಸಿಕೊಂಡು ನಾನಾ ಗುಂಪುಗಳಾಗಿ ಸುಹೃದಯವಿಲ್ಲದೆ ದೇಶವು ಕ್ಷೀಣಗತಿಗೆ ಬರುತ್ತಿದೆ. ಮತವಿಚಾರವಾಗಿ ನಾನು ಏನೂ ಹೇಳುವುದಿಲ್ಲ. ಅನೇಕ ಕಾರ್ಯಗಳನ್ನು ಮತಕ್ಕೆ ಸಂಬಂಧಪಟ್ಟವುಗಳೆಂದು ವಿಧಿಸಿ, ಆಚಾರವೆಂತಲೂ ಪದ್ಧತಿಯೆಂತಲೂ ಮಾಡಿಕೊಂಡಿರುವರು. ಇದರಿಂದ ಹೆಣ್ಣು ಕೊಟ್ಟು ತರುವುದಕ್ಕೆ ಜನರಿಗೆ ತುಂಬಾ ಕಷ್ಟವಾಗಿದೆ. ಭೋಜನ ಪ್ರತಿಭೋಜನಕ್ಕೆ ಬಹಳ ಆತಂಕವಾಗಿದೆ. ಪರಸ್ಪರಾನುರಾಗವೂ ಐಕಮತ್ಯವೂ ಸದ್ವ್ಯವಹಾರಗಳೂ ಅದೃಶ್ಯವಾಗುತ್ತಿವೆ. ವೇದಶಾಸ್ತ್ರ ಪುರಾಣ ಇತಿಹಾಸ ಧರ್ಮಶಾಸ್ತ್ರ ಮೊದಲಾದವುಗಳನ್ನು ಚನ್ನಾಗಿ ಓದಿಕೊಂಡು ಗುರುಹಿರಿಯರನ್ನಿಸಿಕೊಂಡಿರತಕ್ಕ ಆಚಾರ್ಯ ಪುರುಷರನ್ನು ಕೇಳಿದರೆ—ಈಗ ನಮ್ಮಲ್ಲಿರುವ ಆಚಾರವ್ಯವಹಾರಗಳೆಲ್ಲಾ ಸರ್ವಶ್ರೇಷ್ಠಗಳಾಗಿವೆ ಎಂತಲೂ ಯಾವುದನ್ನೂ ಬದಲಾಯಿಸಕೂಡದೆಂತಲೂ ಹೇಳುತ್ತಾ ಪ್ರತಿ ಒಂದು ಮಾತಿಗೂ ಶಾಸ್ತ್ರವಚನಗಳನ್ನು ತೋರಿಸುತ್ತಾ ಬಂದಿದ್ದಾರೆ. ಮತವಿಚಾರದಲ್ಲಿ ಪ್ರತಿ ಒಬ್ಬನೂ ತನಗೆ ಸರ್ವೋತ್ತಮವೆಂದು ತೋರುವಂಥಾ ಮಾರ್ಗದಲ್ಲಿ ನಡೆಯಲಿ. ಆದರೆ ಪ್ರತಿ ಒಂದು ಆಚರಣೆಗೂ ಮತವನ್ನು ತಂದು ಗಂಟುಹಾಕಿರುವುದು ಜನಗಳ ಶ್ರೇಯಸ್ಸಿಗೂ ಅಭಿವೃದ್ಧಿಗೂ ಕಂಟಕವಾಗಿದೆ. ಹೀಗೆ ಮತಕ್ಕೆ ಅಂಟಿಕೊಂಡಿರುವ ಆಚಾರವ್ಯವಹಾರಗಳನ್ನು ಪ್ರತ್ಯೇಕ ಮಾಡಿ, ಇವುಗಳಲ್ಲಿ ಅವಶ್ಯವಾದವುಗಳನ್ನು ಊರ್ಜಿತಪಡಿಸುವುದಕ್ಕೂ ಉಳಿದವುಗಳನ್ನು ಈಗಿನ ಕಾಲ ದೇಶ ವರ್ತಮಾನಗಳಿಗೂ ಪ್ರಜೆಗಳ ಶ್ರೇಯೋಭಿವೃದ್ಧಿಗೂ ಅನುಕೂಲವಾಗುವ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದಕ್ಕೂ ಒಂದು ಸಂಘವು ಏರ್ಪಡಬೇಕಾದದ್ದು ತುಂಬಾ ಅವಶ್ಯವಾಗಿದೆ. ಆದಕಾರಣ ಈ ದಿನ ಮೈಸೂರಿನಲ್ಲಿ ಇಂಥಾ ಸಂಘವು ಸ್ಥಾಪನೆ ಆಗುವ ಕಾಲ ಒದಗಿದ್ದಕ್ಕಾಗಿ ಎಲ್ಲರೂ ಸಂತೋಷಪಡತಕ್ಕದ್ದಾಗಿರುವುದು. ಈ ಸಂಘದ ಮೆಂಬರುಗಳು ಸ್ವಾರ್ಥವನ್ನು ಬಿಟ್ಟು ಪರೋಪಕಾರಕ್ಕಾಗಿಯೂ ನೈಜವಾದ ಸ್ವದೇಶ ವಾತ್ಸಲ್ಯಪೂರಿತರಾಗಿಯೂ ಏಕೀಭವಿಸಿ, ಈ ಸಂಘದ ಶ್ರೇಷ್ಠವಾದ ಉದ್ದೇಶಗಳನ್ನು ಜಿತಮನಸ್ಸಿನಿಂದಲೂ ತಾಳ್ಮೆಯಿಂದಲೂ ವಿವೇಕಪೂರ್ವಕವಾಗಿಯೂ ನೆರವೇರಿಸುವವರಾಗಲೆಂದು ಹಾರೈಸುತ್ತೇನೆ ಎಂಬುದೇ.

ಅನಂತರ ಮಿ॥ ಎಂ. ವೆಂಕಟಕೃಷ್ಣಯ್ಯನವರು, ಡಾಕ್ಟರ್ ಪಿ ಎಸ್. ಅಚ್ಯುತರಾಯರು, ಮಿ॥ ಎಸ್. ನಂಜುಂಡರಾಜೇ ಅರಸಿನವರು, ಮಿ॥ ವೆಂಕೋಬರಾಯರು, ಪರ್ಷ ಪ್ರೊಫೆಸರ್ ಮಿ॥ ಬಿ. ವೆಂಕಟಾಚಾರ್ಯ, ಅಡ್ವೊಕೇಟ್ ಮಿ॥ ವಿ. ರಾಘವಾಚಾರ್ಯ, ಈ ಮೊದಲಾದ ದೊಡ್ಡ ಮನುಷ್ಯರು ಉಪನ್ಯಾಸಮಾಡಿದರು.

ಮಿ॥ ವರದಾಚಾರ್ಯರೆಂಬೊಬ್ಬ ವೈದಿಕ ಪಂಡಿತರು ಮುಂದೆ ಬಂದು—ಈ ಸಂಘವನ್ನು ಸ್ಥಾಪಿಸಬೇಕೆಂದಾಗಲಿ ಕೂಡದೆಂದಾಗಲಿ ನಾನು ಹೇಳುವುದಿಲ್ಲ. ಆದರೆ ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳುತ್ತೀರಷ್ಟೆ. ಅವರು ವಿದ್ಯೆ ಕಲಿಯುವುದು ಸಾಧ್ಯವೇ? ಒಂದು ವೇಳೆ ಕಲಿತರೂ ಬಿ. ಎ., ಎಂ. ಎ ಪರೀಕ್ಷೆ ಕೊಟ್ಟರೂ ಅವರು ಯಾವ ಕೆಲಸ ಮಾಡಬೇಕಾಗಿದೆ? ಅವರಿಗೆ ಮನೆ ಕೆಲಸಗಳನ್ನು ತಪ್ಪಿಸುವುದಕ್ಕಾಗಿದೆಯೇ? ಇವರು ವಿದ್ಯೆ ಕಲಿಯುವುದರಲ್ಲಿ ಬಿಟ್ಟರೆ ಗೃಹಕೃತ್ಯ ಕಾರ್ಯಗಳ ಮಕ್ಕಳ ಪೋಷಣೆಯೂ ಎಂದಿಗೆ ನೆಟ್ಟಗಾದಾವು? ಗೃಹಗಳಲ್ಲಿ ಅನೇಕ ವಿಘ್ನಗಳು ಹುಟ್ಟಿ ಸಂಸಾರ ಸುಖವೇ ಕೆಟ್ಟುಹೋಗುವುದು. ಇದಲ್ಲದೆ ಈಗ ಇಂಗ್ಲಿಷ್ ವಿದ್ಯೆಯನ್ನು ಕಲಿತ ಮಹನೀಯರು ಪೂರ್ವಾಚಾರ ಪದ್ಧತಿಗಳನ್ನು ಬದಲಾಯಿಸಬೇಕೆಂದು ಹೇಳುವರು ಹೀಗೆ ಬದಲಾಯಿಸುವುದರಿಂದ ನಮ್ಮ ಜಾತಿಗಳೆಲ್ಲಾ ಕೆಟ್ಟುಹೋಗುವವು. ವೇದ ಶಾಸ್ತ್ರ ಧರ್ಮಸೂತ್ರಗಳಿಗೆ ಈ ಬದಲಾವಣೆಯು ವಿರೋಧವಾಗಿರುತ್ತದೆ. ಈ ಸಂಘದಲ್ಲಿ ಪೂರ್ವಿಕರಾಗಿಯೂ ಶಾಸ್ತ್ರರೀತ್ಯಾ ಆಚಾರವ್ಯವಹಾರಗಳನ್ನು ತಿಳಿದವರಾಗಿಯೂ ಇರತಕ್ಕ ಆಚಾರ್ಯ ಪುರುಷರನ್ನು ಮೆಂಬರಾಗಿ ಸೇರಿಸಿಕೊಳ್ಳಬೇಕು ಎಂಬುದಾಗಿ ಹೇಳಿದರು.

ಕಡೆಯಲ್ಲಿ ಮದರಾಸ್ ಪಟ್ಟಣದಲ್ಲಿರುವ ಇಂಥಾ ಸಂಘದ ಕಾರ್ಯದರ್ಶಿಗಳಾದ ಡಾಕ್ಟರ್ ಸಿ ಬಿ. ರಾಮರಾಯರು ಉಪನ್ಯಾಸ ಮಾಡಿ ಇಂಥಾ ಸಂಘದ ಉದ್ದೇಶವನ್ನೂ ಕಾರ್ಯಗಳನ್ನೂ ಸವಿಸ್ತಾರವಾಗಿ ಸಭಿಕರಿಗೆ ವಿವರಿಸಿ ತಿಳಿಸಿದರು. ಈಗಿರುವ ಜಾತಿಗಳಿಂದಲೂ ಜಾತಿಯ ಒಳಪಂಗಡಗಳಿಂದಲೂ ಸ್ತ್ರೀಯರ ಮೌಢ್ಯಸ್ಥಿತಿಯಿಂದಲೂ ಆಚಾರವ್ಯವಹಾರಗಳಲ್ಲಿರುವ ಅನೇಕ ಕೆಟ್ಟ ಪದ್ಧತಿಗಳಿಂದಲೂ ಈ ರಾಷ್ಟ್ರವು ದಿನೇ ದಿನೇ ಹೀನಸ್ಥಿತಿಗೆ ಬರುತ್ತಿದೆ. ಜಾತಿಯನ್ನು ನಿರ್ಮೂಲಮಾಡಿ ಹೆಂಗಸರಿಗೆ ವಿದ್ಯೆ ಕಲಿಸದ ಹೊರತು ನಮ್ಮ ದೇಶವು ಶ್ರೇಯೋಭಿವೃದ್ಧಿಯನ್ನು ಹೊಂದಲಾರದು. ಇಂಥಾ ಸಂಘಪರಿಷ್ಕರಣ ಸಭೆಗಳು ಅಲ್ಲಲ್ಲಿ ಸ್ಥಾಪನೆಯಾಗಿರುವುದರಿಂದ ಸಹುಮಸ್ಸಿಗೆ ಈ ಕಷ್ಟಗಳೂ ಆತಂಕಗಳೂ ಕಡಿಮೆಯಾಗುತ್ತವೆ ಇನ್ನು ಕೆಲವು ಪ್ರದೇಶಗಳಲ್ಲಿ ಇಂಥಾ ಸಂಘಗಳು ಸ್ಥಾಪನೆಯಾಗಬೇಕು. ದೇಶಾಟನೆಗೂ ಐಕಮತ್ಯಕ್ಕೂ ಸದ್ವ್ಯವಹಾರಕ್ಕೂ ಪರಸ್ಪರಾನುರಾಗಕ್ಕೂ ಜಾತಿ ಕಟ್ಟಳೆಯು ತುಂಬಾ ಕಂಟಕವಾಗಿರುತ್ತದೆ. ಸ್ತ್ರೀಯರು ಪ್ರಪಂಚ ಜ್ಞಾನವಿಲ್ಲದೆ ವಿದ್ಯಾಹೀನರಾಗಿಯೂ ಅಲ್ಪ ಸಂತೋಷಗಳಲ್ಲಿ ಆಸಕ್ತರಾಗಿಯೂ ಇರೋಣದರಿಂದ ವಿದ್ಯಾವಂತರಾದ ತಮ್ಮ ಗಂಡಂದಿರ ಮತ್ತು ಸಹೋದರರ ಉತ್ಸಾಹವನ್ನು ಭಂಗಮಾಡುವರು; ಅವರ ಅಭಿವೃದ್ಧಿಗೆ ಆತಂಕಪಡಿಸುವರು; ಅವರ ಸಂಗಡ ಬೆರೆಯುವುದಕ್ಕೆ ಯೋಗ್ಯತಾಸಿದ್ಧಿಯನ್ನು ಪಡೆದವರಾಗಿಲ್ಲ, ಅವರನ್ನು ಒಡವೆ ಸೀರೆ ಮುಂತಾದವುಗಳನ್ನು ತಂದುಕೊಡಬೇಕೆಂದು ಹಿಂಸೆಮಾಡುವುದೊಂದು ಮಾತ್ರ ಚನ್ನಾಗಿ ಬಲ್ಲರು. ಹೆಂಗಸರೂ ಗಂಡಸರಂತೆಯೇ ಸಕಲ ಭಾಗಗಳಲ್ಲೂ ಅಭಿಪ್ರಾಯಪಡುವವರಾಗುವ ತನಕ ನಮ್ಮ ದೇಶವು ಶ್ರೇಯಸ್ಸನ್ನು ಹೊಂದಲಾರದು. ಮೈಸೂರು ಸಂಸ್ಥಾನವನ್ನಾಳುವ ಶ್ರೀಮನ್ಮಹಾರಾಜರವರು ಬಹು ಉತ್ಸಾಹಶೀಲರಾಗಿಯೂ ಪ್ರಜಾವಾತ್ಸಲ್ಯಪೂರಿತರಾಗಿಯೂ ಇರುವುದರಿಂದ ಈ ಸಂಸ್ಥಾನದಲ್ಲಿ ಪ್ರಜೆಗಳು ಆಚಾರವ್ಯವಹಾರಗಳನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಅವರಿಗೆ ಪ್ರೋತ್ಸಾಹ ಕೊಡತಕ್ಕವರಾಗಿದ್ದಾರೆ ಇಂಥಾ ಸಂಘವು ಈ ಸಂಸ್ಥಾನದಲ್ಲಿ ತುಂಬಾ ಅಭಿವೃದ್ಧಿಗೆ ಬಂದೀತೆಂಬುವುದರಲ್ಲಿ ಸಂಶಯವಿಲ್ಲ. ಪ್ರಜೆಗಳ ಮುಖಂಡರು ಈ ದಿನ ಸ್ಥಾಪಿಸಿರುವ ಈ ಸಂಘವನ್ನು ಚಿರಕಾಲ ನಡೆಯುವಂತೆ ಮಾಡಿಕೊಂಡಾರೆಂತಲೂ ಇದರಿಂದ ಮಹೋಪಕಾರಗಳು ಲಭ್ಯವಾಗುವವೆಂತಲೂ ಹಾರೈಸುತ್ತೇನೆ ಎಂಬುದಾಗಿ ಮಿ॥ ಸಿ. ಬಿ. ರಾಮರಾಯರು ಉಪನ್ಯಾಸ ಮಾಡಿದರು.

ತರುವಾಯ ಈ ಸಂಘವು ಮೈಸೂರಿನಲ್ಲಿ ಸ್ಥಾಪಿಸಲ್ಪಟ್ಟಿತು. ಇದಕ್ಕೆ ಮಿ॥ ವಿ. ಪಿ. ಸುಬ್ರಹ್ಮಣ್ಯಂಗಾರ್ಯರು ಪ್ರೆಸಿಡೆಂಟರಾಗಿಯೂ ಮಿ॥ ವೆಂಕಟಕೃಷ್ಣಯ್ಯನವರೂ ಡಾಕ್ಟರ್ ಪಿ. ಎಸ್. ಅಚ್ಯುತರಾಯರೂ ಸೆಕ್ರೆಟರಿಗಳಾಗಿಯೂ ಇರಬೇಕೆಂತಲೂ ಸಭಿಕರು ಗೊತ್ತು ಮಾಡಿದರು. ಎಲ್ಲಾ ಪಂಗಡಗಳಲ್ಲೂ ಮುಖಂಡರಾಗಿರತಕ್ಕವರನ್ನು ಆರಿಸಿ ಈ ಸಂಘಕ್ಕೆ ಮೆಂಬರುಗಳನ್ನಾಗಿ ನೇಮಿಸಿರುತ್ತಾರೆ.

ಕಡೆಯಲ್ಲಿ ಮಿ॥ ವಿ. ಪಿ. ಸುಬ್ರಹ್ಮಣ್ಯಂಗಾರ್ಯರು ಸಂಘಪರಿಷ್ಕರಣ ಕಾರ್ಯವು ಅತ್ಯಾವಶ್ಯಕವಾದುದೆಂಬ ಅರ್ಥಕ್ಕೆ ಬಹು ಸ್ವಾರಸ್ಯವಾಗಿಯೂ ದೀರ್ಘವಾಗಿಯೂ ಉಪನ್ಯಾಸ ಮಾಡಿ ಸಭೆಯನ್ನು ಮುಕ್ತಾಯಕ್ಕೆ ತಂದರು.

ಅರಮನೆ ಇಲಾಖೆಯು.

ಅಧಿಕಾರಿಗಳೂ ಅವರ ಸಂಬಳಗಳೂ.

ಅರಮನೆ ಇಲಾಖೆಯ ನೌಕರಿಮಾನೇದಾರುಗಳ ಮುಖ್ಯ ಹುದ್ದೇದಾರರ ಸಂಬಳ ಮುಂತಾದ್ದನ್ನೂ ರಜಾ ರಸ್ತುಗಳನ್ನೂ ಕ್ರಮಪಡಿಸಿ ಶ್ರೀಮನ್ ಮಹಾರಾಜರವರು ಈಗತಾನೇ ಒಂದು ಹೊಸ ಹುಕುಮನ್ನು ದಯಪಾಲಿಸಿರುತ್ತಾರೆ. ಈ ಹುಕುಮಿನಲ್ಲಿ ಕಂಡ ಕೆಲವು ಮುಖ್ಯ ವಿಚಾರಗಳನ್ನು ಮಾತ್ರ ಪ್ರಕಟಿಸುವೆವು

ಇದುವರೆಗೆ ಅರಮನೆ ವಿಚಾರಗಳನ್ನೆಲ್ಲಾ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಭಾರೀ ಸಂಬಳದ ಒಬ್ಬ ಅಧಿಕಾರಿಯನ್ನು ನೇಮಿಸಿ ಈ ಅಧಿಕಾರಿಗೆ ಕಂಟ್ರೋಲರ್ ಎಂಬ ಹೆಸರು ಕೊಟ್ಟಿದ್ದರು ಈಗ ಮಿ॥ ವಿ ಎನ್. ನರಸಿಂಹ್ಮಯ್ಯಂಗಾರರು ಪೆನ್ಶನ್ ಪಡೆದ ಬಾಗಾಯಿತು ಕಂಟ್ರೋಲರ್ ಎಂಬ ಹೆಸರನ್ನೂ ಆ ಭಾರೀ ಸಂಬಳವನ್ನೂ ತೆಗೆದುಬಿಟ್ಟು, ಆ ಕೆಲಸಕ್ಕೆ ಒಬ್ಬ ಅಸಿಸ್ಟೆಂಟ್ ಕಮಿಷನರರನ್ನ ಕಡಿಮೆ ಸಂಬಳದ ಮೇಲೆ ನೇಮಕ ಮಾಡಿ ಅವರಿಗೆ ಅರಮನೆ ಇಲಾಖೆಯ ಇನ್ ಛಾರ್ಜಿ ಆಫೀಸರ ಎಂಬ ಹೆಸರನ್ನು ಕೊಟ್ಟಿರುತ್ತಾರೆ. ಇವರ ಕೈಕೆಳಗೆ ಅರಮನೆಯ ಸಮಸ್ತ ಇಲಾಖೆಗಳೂ ನೌಕರಮಾನೇದಾರುಗಳೂ ಕೆಲಸ ಮಾಡುವರು ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳಿಗೆ ಮೊಖ್ತೇಸರರೆಂಬ ಹೆಸರನ್ನೂ ಮೊಖ್ತೇಸರರ ಕೈಕೆಳಗೆ ಮುಖ್ಯಸ್ಥರಾಗಿರುವವರಿಗೆ ಗುಮಾಸ್ತರೆಂಬ ಹೆಸರನ್ನೂ ಇಲಾಖೆಗಳಲ್ಲಿ ಕೆಲಸ ಮಾಡುವ ಗುಮಾಸ್ತೆದಾರುಗಳ ಮತ್ತು ಸೇವಕಾಳುಗಳ ಮೇಲ್ಪಟ್ಟ ದೊಡ್ಡ ನೌಕರರಿಗೆ ಶಿರಸ್ತೇದಾರರೆಂಬ ಹೆಸರನ್ನ ಕೊಟ್ಟಿದಾರೆ ಆಫೀಸುಗಳಲ್ಲಿ ಬರವಣಿಗೆ ಲೆಕ್ಕಾಚಾರ ಮುಂತಾದ ಕೆಲಸ ಮಾಡತಕ್ಕವರಿಗೆ ಅಕೌಂಟೆಂಟ್, ಇಂಗ್ಲೀಷ್ ಕ್ಲಾರ್ಕ್, ಕನ್ನಡ ಗುಮಾಸ್ತೆ, ಮುಖ್ತಸದ್ದಿ ಈ ರೀತಿಯಾಗಿ ಸಂದರ್ಭಾನುಸಾರ ಹೆಸರು ಕೊಟ್ಟಿದಾರೆ.

ನೌಕರಿ ಸಂಬಳ ಮುಂತಾದ್ದು.

ಇಲಾಖೆಗಳ ಅಧಿಕಾರವನ್ನು ವಹಿಸಿರುವ ಮೊಖ್ತೇಸರರಿಗೆ ತಿಂಗಳಿಗೆ ೭೫ ರೂ ನಿಂದ ೧೫೦ ರೂ ವರೆಗೂ, ಗುಮಾಸ್ತರಿಗೆ ೩೦ ರೂ. ನಿಂದ ೭೫ ರೂ ವರೆಗೂ ಶಿರಸ್ತೇದಾರರಿಗೆ ೨೫ ರೂ ನಿಂದ ೫೦ ರೂ ವರೆಗೂ ಇತರರಿಗೆ ೧೦ ರೂ ನಿಂದ ೨೫ ರೂ. ವರೆಗೂ ಕ್ರಮವಾಗಿ ಬಡ್ತಿ ಆಗುವಂತೆ ಏರ್ಪಾಡುಮಾಡಿರುತ್ತಾರೆ ಅರಮನೆ ನೌಕರಿಗಳೆಲ್ಲಾ ಹಕ್ಕುದಾರಿಯಾಗಿರುವ ಕಾರಣ ಪೆನ್ಶನ್ ಮೇಲಾಗಲಿ ಇತರ ಕಾರಣಗಳಿಗಾಗಲಿ ಒಬ್ಬ ನೌಕರನು ಕೆಲಸ ಬಿಟ್ಟಲ್ಲಿ ಆತನ ಹಿರೀ ಮಗನೇ ಮುಂತಾದವರಿಗೆ ಕೆಲಸಕ್ಕೆ ಲಾಯಖಾಗಿದ್ದಲ್ಲಿ ಕೆಲಸ ಕೊಡಲಾಗುತ್ತದೆ. ೧೮ ವಯಸ್ಸಿನ ಮೇಲೆ ೭೫ ವರುಷ ವಯಸ್ಸಿನ ತನಕ ಅರಮನೇಯಲ್ಲಿ ನೌಕರಿ ಮಾಡಿದ್ದನ್ನು ಮಾತ್ರ ಸರ್ವಿಸಿಗೆ ಸೇರಿಸಿಕೊಳ್ಳುತ್ತಾರೆ. ಅನಂತರವೂ ಕಾಯಪುಷ್ಟಿ ಚನ್ನಾಗಿದ್ದಲ್ಲಿ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಟ್ಟರೆ ನೌಕರಿಯಲ್ಲಿರಬಹುದು. ಅರಮನೆಯ ನೌಕರರನ್ನೆಲ್ಲಾ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗಮಾಡಬಹುದು ಸಂಬಳ ಬಡ್ತಿ ಆಗುವ ವಿಚಾರದಲ್ಲಿ ನೌಕರರು ಯೋಗ್ಯರಾಗಿಯೂ ಹೆಚ್ಚು ಸರ್ವಿಸ್ಸುಳ್ಳವರಾಗಿಯೂ ಇರಬೇಕು ಯೋಗ್ಯರಾದವರನ್ನು ಮೇಲಣ ದರ್ಜೆಗೆ ಚುನಾಯಿಸಿ ಬಡ್ತಿ ಮಾಡಲಾದೀತು

ರಜಾ ರಸ್ತು ಮುಂತಾದ್ದು

ಅರಮನೆಯ ಸಮಸ್ತ ಇಲಾಖೆಗಳ ನೌಕರಮಾನೇದಾರಿಗೂ ೧೨ ತಿಂಗಳ ಸರ್ವಿಸ್ ಮಾಡಿದರೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಡಲಾಗುತ್ತೆ. ಒಂದೇ ಸಲ ಮೂರು ತಿಂಗಳಿಗಿಂತ ಹೆಚ್ಚು ಪ್ರಿವಿಲೆಜ್ ರಜಾ ದೊರಕಲಾರದು. ಕಾಯಿಲೆಗಾಗಲಿ ಸ್ವಂತ ಕೆಲಸಕ್ಕಾಗಲಿ ಮೊದಲನೆ ವರ್ಷ ಅರ್ಧ ತಲಬಿನ ಮೇಲೂ ಎರಡನೆ ವರ್ಷ ಕಾಲು ತಲಬಿನ ಮೇಲೂ ರಜಾ ಸಿಕ್ಕುವುದು ಇಂಥಾ ರಜ ಒಂದೇ ಸಲ ೨೪ ತಿಂಗಳಿಗಿಂತ ಹೆಚ್ಚು ಕೊಡಲಾಗುವುದಿಲ್ಲ. ಇದಲ್ಲದೆ ಪರೂರಿಯಾತ್ ಕೆಲಸಕ್ಕೆ ೫ ದಿನಗಳಿಗೆ ವಿರಾಮ ಅಥವಾ ವರ್ಷದಲ್ಲಿ ೧೫ ದಿನಗಳ ರಜಾ ಕೊಡಲ್ಪಡುತ್ತದೆ ಇಲಾಖೆಗಳ ಮುಖ್ಯಸ್ಥರೇ ಅಂದರೆ ಮೊಖ್ತೇಸರರೇ ಅರಮನೆ ಇನ್‌ಛಾರ್ಜ್ ಆಫೀಸರ ಸಮ್ಮತಿಯನ್ನು ಪಡೆದು ತಮ್ಮ ಕಾಬೇದಾರರಿಗೆ ರಜಾ ಕೊಡಬಹುದು ಇಲಾಖಾ ಮೊಖ್ತೇಸರರಿಗೆ ರಜಾ ಬೇಕಾದ ಸಂದರ್ಭದಲ್ಲಿ ಶ್ರೀಮನ್ ಮಹಾರಾಜರವರೇ ಸ್ಯಾಂಕ್ಷನ್ ಮಾಡಬೇಕು.

ಸ್ವಾಧೀನ ಮುಂತಾದ್ದು.

ಅರಮನೆ ಇಲಾಖೆಯಲ್ಲಿ ೧೦ ರೂ. ತಲಬಿಗೆ ಮೇಲ್ಪಟ್ಟ ಹೊಸ ನೌಕರರನ್ನು ನೇಮಿಸುವುದು, ಸಂಬಳ ಬಡ್ತಿ ಆಗುವುದು, ಕೆಲಸದಿಂದ ತೆಗೆಯುವುದು, ಒಂದು ಇಲಾಖೆಯಿಂದ ಮತ್ತೊಂದು ಇಲಾಗೆ ವರ್ಗಮಾಡುವುದು, ಈ ಬಾಬುಗಳನ್ನೆಲ್ಲಾ ಅರಮನೆ ಇನ್‌ಛಾರ್ಜ್ ಆಫೀಸರವರ ಶಿಫಾರಸನ್ನು ಪಡೆದುಕೊಂಡು ಶ್ರೀಮನ್ ಮಹಾರಾಜರವರೇ ಖುದ್ದು ಪರಾಂಬರಿಸಿ ಸ್ಯಾಂಕ್ಷನ್ ಮಾಡಬೇಕಾಗಿದೆ ೧೦ ರೂಪಾಯಿ ತಲಬಿನೊಳಗಿರುವ ಬದಲಿ ನೌಕರಿಗಳಿಗೆ ಇಲಾಖೆಗಳ ಮೊಖ್ತೇಸರರೇ ಜನರನ್ನು ನೇಮಿಸಿಕೊಳ್ಳಬಹುದಾಗಿದೆ.

ಪೆನ್ಶನ್ ಹಕ್ಕುದಾರಿ ಮುಂತಾದ್ದು.

ಐದು ವರ್ಷಕ್ಕಿಂತ ಕಡಿಮೆ ಸರ್ವಿಸ್ ಮಾಡಿದವರಿಗೆ ಪೆನ್ಶನ್ನಾಗಲಿ ಹಕ್ಕಾಗಲಿ ಇರುವುದಿಲ್ಲ. ೫ ರಿಂದ ೨೫ ವರ್ಷದ ಒಳಗೆ ಸರ್ವಿಸ್ ಮಾಡಿದವರಿಗೆ ವರ್ಷಕ್ಕೆ ಒಂದು ತಿಂಗಳ ಸಂಬಳದ ಪ್ರಕಾರ ಲೆಕ್ಕ ಮಾಡಿ ಒಂದು ವರ್ಷದ ಸಂಬಳಕ್ಕಿಂತ ಹೆಚ್ಚಾಗದಷ್ಟು ಹಣವನ್ನು ಗ್ರ್ಯಾಂಟು (ಇನಾಮು) ಕೊಡಲ್ಪಡುವುದು ವಿಶೇಷ ಸಂದರ್ಭಗಳಲ್ಲಿ ದುಷ್ಪ್ರವರ್ತನೆಗಳಲ್ಲದೆ ಅನ್ಯಾಯ ಕಾರಣಕ್ಕಾದರೂ ಕೆಲಸದಿಂದ ತೆಗೆಯಲ್ಪಟ್ಟರೆ ೧೫ ವರ್ಷ ಸರ್ವಿಸ ಮಾಡಿದವರಿಗೆ ಸರ್ಕಾರ ರೂಲಿನ ಪ್ರಕಾರ ಪೆನ್ಶನ್ ಕೊಡಲಾಗುತ್ತೆ. ಆದರೆ ಪೂರ್ಣವಾಗಿ ೩೦ ವರ್ಷಕ್ಕೆ ಕಡಿಮೆ ಸರ್ವಿಸ್ ಮಾಡಿದವರಿಗೆ ಪೆನ್ಶನ್ ದೊರೆಯುವುದಿಲ್ಲ ಇದಲ್ಲದೆ ಹಕ್ಕುದಾರರಿಗೆ ನೌಕರಿ ಮಾಡಿಕೊಟ್ಟಲ್ಲಿ ಹಿಂದಿನವರಿಗೆ ಪೆನ್ಶನ್ ಸಿಕ್ಕಲಾರದು ಆದರೆ ಕೆಲವು ಸಂದರ್ಭಗಳಲ್ಲಿ ಅಂಥಾವರಿಗೂ ಸ್ವಲ್ಪ ಪೆನ್ಶನ್ ಕೊಡಲ್ಪಡಬಹುದು ಹಕ್ಕುದಾರರೇ ಇಲ್ಲದಿದ್ದರೆ ಮೃತಪಟ್ಟವನ ಹೆಂಡತಿಗೋ ತಾಯಿಗೋ ಆತನ ಸಂಬಳದ ನಾಲ್ಕನೇ ಒಂದು ಹಿಸ್ಸೆ ಆಷ್ಟು ಪೆನ್ಶನ್ ದೊರೆಯುತ್ತದೆ ಆದರೆ ಇಂಥಾ ಪೆನ್ಶನ್ ೨೫ ರೂ ಗಿಂತ ಜಾಸ್ತಿಯಾಗಕೂಡದು

ಇತರ ವಿಚಾರಗಳು

ಅರಮನೆಯಲ್ಲಿ ಖಜಾನೆಯನ್ನೂ ಮೋದಿಖಾನೆಯನ್ನೂ ಬೇರೆ ಬೇರೆ ಇಲಾಖೆಗಳಾಗಿ ಮಾಡಿ ರತ್ನಾದಿ ಪ್ರತ್ಯೇಕವಾಗಿದ್ದ ದಫ್ತರ್ ಕಚೇರಿಯನ್ನು ಅರಮನೆ ಆಫೀಸರವರ ಕಚೇರಿಗೆ ಸೇರಿಸಿದರು ಈ ಆಫೀಸರವರ ಕಚೇರಿಯ ಕೆಲಸಗಳನ್ನು ತಪ್ಪಿತರವಾಗಿಯೂ ಜಾಗ್ರತೆಯಿಂದಲೂ ಮಾಡಿಸುವುದಕ್ಕೆ ಒಬ್ಬ ಮ್ಯಾನೇಜರು ಇರತಕ್ಕದ್ದು ಈ ಮ್ಯಾನೇಜರ ಸಂಬಳಕ್ಕೆ ೭೫ ರೂ. ನಿಂದ ೧೫೦ ರೂ ವರೆಗೆ ಬಡ್ತಿ ಆಗುವಂತೆ ಹುಕುಂ ಮಾಡಲ್ಪಟ್ಟಿದೆ ಸಮಸ್ತ ಇಲಾಖೆಗಳನ್ನೂ ಅರಮನೆ ಆಫೀಸರವರ ಮೇಲ್ವಿಚಾರಣೆಗೆ ಒಪ್ಪಿಸಿರುತ್ತಾರೆ. ಆ ಪೈಕಿ ಟಪ್ಪಾಲು, ದೊ ಇಂಗ್ಲಿಷ್ ಬ್ಯಾಂಡ, ಈ ಮೂರು ಇಲಾಖೆಗಳನ್ನು ಶ್ರೀಮನ್ ಮಹಾರಾಜರವರೇ ಖುದ್ದಾಗಿ ಪರಾಂಬರಿಸುವರು, ದರ್ಬಾರ್ ಬಕ್ಷೀಯವರು ದಿವಾನ ದಫ್ತರ ಖಾನೆ, ಕಟ್ಟೋರಕಟ್ಟ, ಗಜಶಾಲೆ, ಈ ಮೂರು ಇಲಾಖೆಗಳನ್ನು ಶ್ರೀಮನ್ ಮಹಾರಾಜರವರ ಅನುಜ್ಞೆಯ ಪ್ರಕಾರ ಮೇಲ್ವಿಚಾರಣೆ ನೋಡಿಕೊಳ್ಳುವಂತೆ ಏರ್ಪಾಟಾಗಿದೆ.

ಮನುಷ್ಯನ ಪಾಪಸ್ಥಿತಿ.

"ನಮಗೆ ಪಾಪವಿಲ್ಲವೆಂದು ಹೇಳಿಕೊಂಡರೆ, ನಮ್ಮನ್ನು ನಾವೇ ವಂಚಿಸಿಕೊಳ್ಳುತ್ತೇವೆ"

ಇದು ಕ್ರಿಸ್ತ ಸಭೆಯವರು ಬರೆದಿರುವ ವಾಕ್ಯವಾಗಿದ್ದರೂ, ಈ ಭೂಲೋಕದ ಸಮಸ್ತ ಜನಾಂಗಗಳಿಗೂ ದೇವರು ಪ್ರಕಟಪಡಿಸಿದ ಸತ್ಯವಾಗಿದೆ ಎಂದು ತಿಳಿಯತಕ್ಕದ್ದು. ಮನುಷ್ಯನು ಸ್ವಾಭಾವಿಕವಾಗಿ ಪಾಪಿಷ್ಠನು. ಇದರಲ್ಲಿ ಸಂಶಯವಿಲ್ಲ. ಆದರೂ ಹಿಂದು ಜನಗಳು ಸಾಧಾರಣವಾಗಿ ಈ ಸತ್ಯವನ್ನು ಒಪ್ಪುವದಿಲ್ಲ. ನಾವು ಹಿಂದೆ ಪ್ರಕಟಿಸಿದ ಮಾಯಾವಾದವೆಂಬ ಬೋಧನೆಯೇ ಇದಕ್ಕೆ ಸಾಕ್ಷಿಯಾಗಿದೆ. ಹಿಂದು ಜನಗಳು ಬಾಯಿಯಿಂದ ಹೀಗೆ ಹೇಳಿದಾಗ್ಯೂ ಅವರ ಮತಸಿದ್ಧಾಂತಗಳನ್ನು ಪರೀಕ್ಷಿಸಿದರೆ, ಮನುಷ್ಯನು ಪಾಪಿಷ್ಠನೆಂದು ಅವು ಒಪ್ಪಿಕೊಳ್ಳುತ್ತವೆಂಬುವದು ಗೋಚರವಾಗುವದು ಕ್ರಿಸ್ತ ವೇದದಲ್ಲಂತೂ ಈ ಬೋಧನೆಯು ಬಹು ಮುಖ್ಯವಾದದ್ದಾಗಿದೆ ಅಂದರೆ ಮನುಷ್ಯನು ಮೋಕ್ಷವನ್ನು ಪಡೆಯಬೇಕಾದರೆ ಮೊದಲು ಅವನು ತಾನು ಪಾಪಿಯಾಗಿದ್ದೇನೆಂದು ಒಪ್ಪಿಕೊಂಡು, ದೇವರಿಂದ ಪಾಪವಿಮೋಚನೆಯನ್ನು ಪಡೆಯುವದು ಅತ್ಯವಶ್ಯಕವಾಗಿದೆಯೆಂದು ಅದು ಬೋಧಿಸುತ್ತದೆ ಹಿಂದು ಮತದಲ್ಲಿ ಜ್ಞಾನ ಮಾರ್ಗಕ್ಕೂ ಕರ್ಮ ಮಾರ್ಗಕ್ಕೂ ಈ ಬೋಧನೆಯು ಅಸ್ತಿವಾರ ರೂಪವಾಗಿ ಹೇಳಲ್ಪಟ್ಟಿದೆ ಹ್ಯಾಗಂದರೆ —

ಬ್ರಾಹ್ಮಣರು ಪ್ರತಿ ದಿನದಲ್ಲಿಯೂ ಮಾಡುವ ಪೂಜಾಂತ್ಯದಲ್ಲಿ—ಪಾಪೋಽಹಂ ಪಾಪಕರ್ಮಾಽಹಂ ಪಾಪಾತ್ಮಾ ಪಾಪಸಂಭವಃ ಅಂದರೆ—ನಾನು ಪಾಪವುಳ್ಳವನು, ನಾನು ಪಾಪವನ್ನು ಮಾಡುವವನು, ನಾನು ಪಾಪವುಳ್ಳ ಆತ್ಮವನ್ನು ಹೊಂದಿದ್ದೇನೆ, ನಾನು ಪಾಪದಲ್ಲಿ ಹುಟ್ಟಿದವನು ಎಂದು ಕೇವಲ ವಿನಯದಿಂದ ದೇವರ ಮುಂದೆ ಒಪ್ಪಿಕೊಳ್ಳುವವರಾಗಿದ್ದಾರಲ್ಲವೇ ! ಈ ಘನಗಂಭೀರಾಭಿಪ್ರಾಯವುಳ್ಳ ಶ್ಲೋಕಕ್ಕನುಗುಣವಾದ ಅನೇಕ ವಾಕ್ಯಗಳು ಸತ್ಯವೇದದಲ್ಲಿ ತುಂಬಿವೆ. ಅಂತೂ ಪಾಪಾತ್ಮಾ ಪಾಪಸಂಭವಃ ಎಂಬೀ ಶಬ್ದಗಳು ಮನುಷ್ಯನು ಸ್ವಾಭಾವಿಕವಾಗಿ ಪಾಪಿಷ್ಠನು ಎಂದು ಪರಿಷ್ಕಾರವಾಗಿ ಬೋಧಿಸುತ್ತವೆ.

ಈ ಅಭಿಪ್ರಾಯವನ್ನು ಬೋಧಿಸುವ ಒಂದೆರಡು ವಾಕ್ಯಗಳನ್ನು ಉದಾಹರಿಸದೆ ಬಿಟ್ಟಾಗ್ಯೂ, ಹಿಂದು ಜನರ ತತ್ವಶಾಸ್ತ್ರಗಳ ಅಭಿಪ್ರಾಯವೂ ಹೀಗೇ ಉಂಟೆಂದು ತಿಳಿಯುತ್ತೇವೆ ಆತ್ಮನೆಂಬುವದನ್ನು ಕುರಿತು ತತ್ವಶಾಸ್ತ್ರಗಳು ನೂರಾರು ಗ್ರಂಥಗಳನ್ನು ಬರೆದಿರುವರು. ಆತ್ಮ ಅಥವಾ ಅಹಂಭಾವವೇ ಕರ್ಮಕ್ಕೆ ಮೂಲವೆಂತಲೂ, ಅದರಿಂದ ಕಡೆಗೆ ಮಹಾ ಪಾಪ ದೋಷಗಳು ಉಂಟಾಗುತ್ತವೆಂತಲೂ ಅವರೆಲ್ಲರೂ ಒಪ್ಪಿಕೊಳ್ಳುತ್ತಾರೆ ಮತ್ತು ಈ ಅಹಂಭಾವದಿಂದ ಬಿಡುಗಡೆಯನ್ನು ಹೊಂದಬೇಕಾದರೆ ನಿರ್ವಾಣವನ್ನು ಹೊಂದುವದಾಗಲಿ, ಪರಮಾತ್ಮನಲ್ಲಿ ಐಕ್ಯವಾಗುವದಾಗಲಿ ಇವೆರಡೇ ಮಾರ್ಗಗಳೆಂದು ಬೋಧಿಸುತ್ತಾರೆ. ಈ ಅಭಿಪ್ರಾಯವು ಸರಿಯೋ ತಪ್ಪೋ ಎಂಬುವದನ್ನು ಈಗ ಚರ್ಚಿಸದೆ ಮನುಷ್ಯನು ಪಾಪಸ್ಥಿತಿಯಲ್ಲಿದ್ದಾನೆಂಬ ವಿಷಯದಲ್ಲಿ ಇದರಿಂದ ಯಾವ ಸಹಾಯವಾಗುತ್ತದೆಯೆಂದು ನೋಡೋಣ ಮನುಷ್ಯನು ಪಾಪಿಷ್ಠನೆಂಬುವದನ್ನು ಕುರಿತು ಹಿಂದೂ ತತ್ವಶಾಸ್ತ್ರಗಳು ಬೋಧಿಸುವದು ಏನೆಂದರೆ.—ಮನುಷ್ಯನಲ್ಲಿರುವ ಆತ್ಮನೂ ಪರಮಾತ್ಮನೂ ಬೇರೆ ಬೇರೆಯಾಗಿರದೆ ಒಂದೇಯಾಗಿದ್ದಾರೆ ಪ್ರತಿಯೊಬ್ಬ ಮನುಷ್ಯನು ಹುಟ್ಟಿದ ಕೂಡಲೇ ತಾನು ಬೇರೆ ಪರಮಾತ್ಮನು ಬೇರೆಯೆಂಬ ಅಹಂಭಾವಕ್ಕೆ ಮಾಯೆಯು ಅವನನ್ನು ಒಳಪಡಿಸುತ್ತದೆ. ಈ ಮಾಯೆಯ ಪ್ರೇರಣೆಯೇ ಸಕಲ ವಿಧ ಕರ್ಮಗಳಿಗೆ ಅಂದರೆ ಕೃತ್ಯಕ್ಕೆ ಕಾರಣವಾಗುತ್ತವೆ. ಇಂಥ ಮಾಯೆಯ ಪ್ರೇರಣೆಯಿಂದ ಜಹಂಭಾವವು ಮಾಡುವದೆಲ್ಲವೂ ಪಾಪವಾಗಿದೆ ಎಂಬುವದೇ. ಹಾಗಂದರೆ ಈ ಕರ್ಮದ ಒಕ್ಕ ಮೊದಲಿನಿಂದು ಆರಂಭವಾಗುತ್ತದೆಯಾದ ಕಾರಣ, ಈ ಮಾಯಾಕೃತ್ಯದ ದೆಸೆಯಿಂದ ಮನುಷ್ಯನು ಆ ಜನ್ಮ ಪಾಪಿಯಾಗಿ ಅಥವಾ ಸ್ವಾಭಾವಿಕ ಪಾಪಿಯಾಗಿ ಇದ್ದಾನೆಂದು ಒಪ್ಪಿಕೊಳ್ಳಬೇಕಷ್ಟೆ.

ಇದಲ್ಲದೆ ಮನುಷ್ಯನು ಹೊಂದುವ ಕೋಟ್ಯಂತರ ಜನ್ಮಗಳಲ್ಲಿ ಪ್ರತಿಯೊಂದು ಜನ್ಮಸ್ಥಿತಿಗೆ ಅದರ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕರ್ಮಗಳೇ ಕಾರಣವಾಗಿವೆಯೆಂದು ಹೇಳುತ್ತಾರೆ. ಒಂದು ವೇಳೆ ಒಬ್ಬನು ಒಳ್ಳೇ ಸ್ಥಿತಿಯಲ್ಲಿ ಹುಟ್ಟಿದಾಗ್ಯೂ, ಮನುಷ್ಯನನ್ನು ನಿತ್ಯದುಃಖಕ್ಕೆ ಹಿಂದಣ ಜನ್ಮಗಳಲ್ಲಿ ಮಾಡಿದ ಪಾಪಗಳು ಕಾರಣಗಳು, ಎಂದು ಹೇಳುವರು

ಕರ್ಮ ಕ್ಷೇತ್ರೇ ಮಾತ್ಯಲೋಕೇ — ಇತ್ಯಂತ ಅಂದರೆ ಮನುಷ್ಯರು ತಮ್ಮ ಕೃತ್ಯಗಳ ಫಲವು ತೀರಿ ಹೋಗುವದರಿಂದ ಮರ್ತ್ಯಲೋಕದಲ್ಲಿ ಹುಟ್ಟುತ್ತಾರೆ ಸಂದರ್ಭ ಹೀಗೆ ನೋಡಿದ ಕಾರ್ಯಗಳನ್ನು ವಿಮರ್ಶಿಸುವದರಿಂದ ಮನುಷ್ಯನು ಸ್ವಭಾವಿಕವಾಗಿ ಪಾಪಸ್ಥಿತಿಯಲ್ಲಿದ್ದಾನೆಂದು ಹಿಂದು ಮತವು ಬೋಧಿಸುತ್ತದೆಯೆಂಬುವದು ಚೆನ್ನಾಗಿ ತಿಳಿಯುತ್ತದಷ್ಟೆ

ಮತ್ತು ಮನುಷ್ಯನು ಪಾಪಿಯಾಗಿದ್ದಾನೆಂಬುದಕ್ಕೆ ಹಿಂದೂ ಮತದಲ್ಲಿ ನೇಮಿಸಿರುವ ನಾನಾವಿಧ ಕರ್ಮಾನುಷ್ಠಾನಗಳೂ ಸಾಕ್ಷಿಗಳಾಗಿವೆ ಇಷ್ಟವರೂ ಮನುಷ್ಯರು ಜನ್ಮಪಾಪಿಗಳೆಂಬುದನ್ನು ಹಿಂದು ಜನಗಳು ಇಲ್ಲವೆಂದು ಬೋಧಿಸುವದು ಪರಮಾಶ್ಚರ್ಯಕರವಾಗಿರುತ್ತದೆ ಇದಕ್ಕೆ ಮುಖ್ಯಕಾರಣವೇನಂದರೆ—ತಾವು ಎಂದರಲ್ಲಾಗಬೇಕೆಂದು ತಿಳಿದಿದ್ದಾರೋ ಅಂದವರಾಗಿಲ್ಲವೆಂದೂ ತಾವು ಏನುಮಾಡತಕ್ಕದ್ದೆಂದು ತಿಳಿದಿದ್ದಾರೋ ಆ ಕಾರ್ಯಗಳನ್ನು ಅವರು ಮಾಡಲಿಲ್ಲವೆಂದೂ ಅವರ ಮನಸ್ಸಾಕ್ಷಿಗಳು ಸಂಪೂರ್ಣವಾಗಿ ಪ್ರೇರಿಸುವವುಗಳಾಗಿದ್ದಾಗ್ಯೂ ಅವರ ತತ್ವಶಾಸ್ತ್ರವೂ, ಅವರ ಮತಕರ್ತವ್ಯಗಳೂ ಅವರಲ್ಲಿ ಹುಟ್ಟುವ ಸದ್ಜ್ಞಾನವನ್ನೆಲ್ಲಾ ನಾಶನಮಾಡಿ, ಅವರು ಯಾವ ಕಾರ್ಯ ಮಾಡಿದರೂ ಅದಕ್ಕೆ ಅವರು ಉತ್ತರವಾದಿಗಳಲ್ಲವೆಂದೂ ಬೋಧಿಸುತ್ತವೆ ಅಕಟಾ! ಪರಿಪಾಲಿಸುವವನೂ ಕರ್ತನೂ, ಮಾನವರ ತಂದೆಯೂ ಆಗಿರುವ ದೇವರು ತನ್ನ ಮಕ್ಕಳಲ್ಲಿ ಪ್ರತಿಯೊಬ್ಬರ ಹೃದಯದಲ್ಲಿ—ಇಂಥಿಂಥ ಕಾರ್ಯವನ್ನ ಮಾಡಬಾರದು ಇಂಥಾದ್ದನ್ನು ಮಾಡತಕ್ಕದ್ದು ಎಂದು ಹುಟ್ಟಿಸುವ ಮನಸ್ಸಾಕ್ಷಿಯನ್ನು ಹಿಂದುಮತ ತತ್ವಶಾಸ್ತ್ರಗಳು ಚಿವುಟಿಹಾಕುವದು ಎಂಥಾ ಶೋಚನೀಯವಾದ ಸಂಗತಿಯಾಗಿದೆ. ಕಾರ್ಯವು ಹೀಗಿರುವಾದರೂ ಹಿಂದು ಜನಗಳಿಗೆ ಪಾಪದ ಭೀಕರತ್ವವು ಸ್ವಲ್ಪವೂ ತಿಳಿಯುವದಿಲ್ಲ

ಆದಾಗ್ಯೂ ದೇವರು ಈ ವಿಷಯದಲ್ಲಿ ಪ್ರತಿಯೊಬ್ಬರನ್ನು ಎಚ್ಚರಿಸದೆ ಬಿಡುವದಿಲ್ಲ ನಾವು ಇತರರ ನಡತೆಯನ್ನು ನೋಡಿ, ಅವರ ಮೇಲೆ ತಪ್ಪು ಹೊರಿಸುವಾಗಲೂ, ನಮ್ಮ ನಮ್ಮ ಸ್ಥಿತಿಗತಿಯನ್ನು ಕುರಿತು ನಮ್ಮಲ್ಲಿ ನಾವೇ ಅತೃಪ್ತಿಯನ್ನು ಹೊಂದುವಾಗಲೂ ನಮ್ಮ ತಂದೆಯಾದ ದೇವರು ನಮ್ಮನ್ನು ಎಚ್ಚರಿಸುತ್ತಾನೆಂದು ನಾವು ತಿಳಿಯತಕ್ಕದ್ದು ಕೆಟ್ಟುಹೋಗಿರುವ ಎಲ್ಲಾದ ನಾವು ನಮ್ಮ ಆತ್ಮರೋಗವನ್ನ ಹೋಗಲಾಡಿಸಿಕೊಳ್ಳುವದಕ್ಕೆ ಭವರೋಗ ವೈದ್ಯನಾದ ನಮ್ಮ ತಂದೆಯ ಬಳಿಗೆ ಓಡಿಹೋಗುವದು ಅಗತ್ಯವಾಗಿದೆ ಈ ಭಾಗದಲ್ಲಿ ನಮ್ಮ ದೇಶೀಯರಿಗೆ ಕ್ರಿಸ್ತ ಸ್ವಾಮಿಯ ಸಹಾಯವು ಅಗತ್ಯವಾದದ್ದೆಂದು ಹೇಳುವದಕ್ಕೆ ಮುಖ್ಯ ಕಾರಣಗಳಲ್ಲೊಂದು ಯಾವದಂದರೆ—ಪ್ರತಿಯೊಬ್ಬನು ತನ್ನ ತನ್ನ ಪಾಪಗಳನ್ನು ಜ್ಞಾಪಿಸಿಕೊಂಡು, ದೇವರ ಸನ್ನಿಧಿಯಲ್ಲಿ ಅವುಗಳ ಅಪರಾಧವನ್ನು ಒಪ್ಪಿಕೊಂಡು, ಮನ್ನಣೆಯನ್ನು ಬೇಡಿಕೊಳ್ಳಬೇಕೆಂಬ ಮಾನಸಾಂತರವೆಂಬ ಬೋಧನೆಯನ್ನೇ ಆತನು ಪ್ರಧಾನವಾಗಿ ಹೇಳುತ್ತಾನೆ ಮತ್ತು ಆತನು ೧೯೦೦ ವರ್ಷಗಳಿಗೆ ಮುಂಚೆ ಇರುವಾಗ ಆತನ ಬಳಿಗೆ ಬಂದವರಲ್ಲಿ ಸಿಬ್ಬಮಾನಸಾಂತರವನ್ನ ಹುಟ್ಟಿಸಿದಂತೆಯೇ ಈಗಲೂ ಆತನ ವಾಕ್ಯಗಳನ್ನು ಕಿವಿಗೊಟ್ಟು ಕೇಳುವವರಲ್ಲಿಯೂ ಹುಟ್ಟಿಸುವದಲ್ಲದೆ ತನ್ನನ್ನು ಯಾರ್ಯಾರು ಮರೆಹೊಗುತ್ತಾರೋ ಅವರಿಗೆಲ್ಲಾ ಪಾಪಕ್ಷಮೆಯನ್ನು ಕೊಟ್ಟು ಸಂರಕ್ಷಿಸುವನೆಂಬ ನಿಶ್ಚಯಾರ್ಥವನ್ನೂ ದಯಪಾಲಿಸುತ್ತಾನೆ ಈತನಲ್ಲಿ ಸಿಕ್ಕುವ ಈ ಪರಮ ವರವನ್ನು ನಮ್ಮ ದೇಶೀಯರೆಲ್ಲರೂ ಅಂಗೀಕರಿಸಲೆಂಬುವದೇ ನಮ್ಮ ಪ್ರಾರ್ಥನೆಯಾಗಿದೆ. ಮತ್ತು ಆತನ ವಿಷಯದಲ್ಲಿ ಸಕಲ ಸತ್ಯವನ್ನು ತಿಳಿದಿದ್ದರೂ ಇನ್ನೂ ಹಿಂದೆಗೆಯುತ್ತಿರುವವರೂ, ಆತನ ನಿಜರೂಪ ಲಾವಣ್ಯಗಳ್ಯಾವವೆಂದು ಸಾವಧಾನವಾಗಿ ವಿಮರ್ಶಿಸಿ, ತಿಳಿಯದೆ ಸ್ವೇಚ್ಛೆಯಿಂದಲೂ ಅಹಂಭಾವದಿಂದಲೂ ತುಂಬಿದವರಾಗಿ ನಾನಾ ವಿಧದಲ್ಲಿ ಆತನನ್ನು ನಿಂದಿಸಿ ಹೀಯಾಳಿಸುತ್ತಿರುವವರೂ ಆತನ ವರಪ್ರಸಾದಕ್ಕೆ ಭಾಗಿಗಳಾಗಲಿ! ಶಿಲುಬೆಯ ಮೇಲೆ ತೂಗ್ಯಾಡುತ್ತಿರುವಾಗಲೂ ತನ್ನನ್ನು ನಿಂದಿಸಿ ಹಿಂಸಿಸುತ್ತಿದ್ದವರಿಗಾಗಿ ಅಸಾಧಾರಣವಾದ ಮನ್ನಣೆಯನ್ನು ಪ್ರಕಟ ಮಾಡಿ, ಸ್ವರ್ಗ ಪದವಿಯನ್ನು ಅನುಗ್ರಹಿಸಿದ ಆ ಮಹಾನುಭಾವನ ಪುಣ್ಯಚರಿತ್ರೆಯ ಬೆಲೆಯನ್ನು ಗ್ರಹಿಸದೆ ಅಜ್ಞಾನಾಂಧರಾಗಿರುವವರಿಗೂ ಆತನು ಈಗಲೂ ದಯಪಾಲಿಸುವದಕ್ಕೆ ಸಿದ್ಧವಾಗಿರುವ ನಿಷ್ಪಕ್ಷಪಾತವಾದ ಬುದ್ಧಿಯನ್ನು ಎಲ್ಲರ ತಂದೆಯಾದ ದೇವರು ಅನುಗ್ರಹಿಸಲಿ!

ಇಂಡಿಯಾ ದೇಶದ ವೃತ್ತಾಂತಗಳು.

ಅಲಹಾಬಾದ್ (ಪ್ರಯಾಗ) ದಿಂದ ಕಾಶೀ ಪಟ್ಟಣಕ್ಕೆ ಇನ್ನೊಂದು ರೈಲ್ ರಸ್ತೆ ಕಾಮಗಾರಿ ಆಗುತ್ತಿದೆ ಇದು ೭೫ ಮೈಲಿ ಫಾಸಲೆಯಾಗುವುದು.

* * * *

ಕಳೆದ ೧೯೦೪ ನೆ ಇಸವಿಯ ೧೨ ತಿಂಗಳಲ್ಲಿ ಹಿಂದುಸ್ಥಾನದ ರೈಲ್ವೆ ಇಲಾಖೆಯಲ್ಲಿ ಎಲ್ಲಾ ಖರ್ಚು ಕಳೆದು ಗವರ್ನಮೆಂಟಿಗೆ ೨೩೭ ಲಕ್ಷ ರೂಪಾಯಿ ಆದಾಯ ಕಂಡುಬಂದಿದೆ.

ಅಲಹಾಬಾದಿನಲ್ಲಿ ಗಂಗಾ ನದಿಗೆ ಒಂದು ಭಾರೀ ರೈಲ್ ಸೇತುವೆ ಕಟ್ಟಿ ಸಿದ್ಧವಾಗಿದೆ. ಈ ದಿನ ಅದನ್ನು ಪ್ರತಿಷ್ಠೆ ಮಾಡಿ, ಇದರ ಮೇಲೆ ರೈಲು ಬಿಡುತ್ತಾರೆಂದು ತಿಳಿಯಬರುವುದು.

❖❖❖❖

ಕಲ್ಕತ್ತಾ ಪಟ್ಟಣದ ಸಮುದ್ರ ತೀರದಲ್ಲಿ ಕೆಲವು ಸರ್ಕಾರಿ ಕಟ್ಟಡಗಳನ್ನು ಬೇಗನೆ ಕಟ್ಟಿ ಮುಗಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಆ ಕಾಮಗಾರಿಗೆ ೨೬,೩೬,೮೦೦ ರೂಪಾಯಿ ಗ್ರ್ಯಾಂಟ್ ಮಾಡಿದಾರೆ.

❖❖❖❖

ಕಳೆದ ಏಪ್ರಿಲ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ೨೮ ಲಕ್ಷ ರೂಪಾಯಿನ ಚಿನ್ನವೂ ೪೩ ಲಕ್ಷ ರೂಪಾಯಿನ ಬೆಳ್ಳಿಯೂ ಬಂದವು. ಹಿಂದುಸ್ಥಾನದ ಟಂಕಸಾಲೆಯ ಅಧಿಕಾರಿಗಳು ೯೦ ಲಕ್ಷ ರೂಪಾಯಿನ ಬೆಳ್ಳಿಯನ್ನು ಕೊಂಡು, ೫೮ ಲಕ್ಷ ರೂಪಾಯಿಗಳನ್ನು ಮಾಡಿ ಹಾಕಿರುತ್ತಾರೆ

❖❖❖❖

ಪ್ರಪಂಚವನ್ನು ಪರಿಶೋಧನೆ ಮಾಡುವುದರಲ್ಲಿ ನಿರತನಾಗಿರುವ ಪರ್ವತ ದೊಡ್ಡ ಮನುಷ್ಯನು (ಡಾಕ್ಟರ್ ಬಮ್ರಿ) ಲಂಡನ್ ಪಟ್ಟಣದಿಂದ ಕಾಂಗ್ರಾ ಕಣಿವೆಗೆ ಹೋಗಿರುವನು ಮೂರು ವಾರಗಳ ತನಕ ಆತನು ಅಲ್ಲೆಲ್ಲಾ ಸಂಚಾರ ಮಾಡುವವನಾಗಿದಾನೆ.

❖❖❖❖

ಸಿಲೋನ್ (ಲಂಕಾ) ದ್ವೀಪದಿಂದ ಕಳೆದ ೩೦ ವರುಷಗಳಲ್ಲಿ ೯,೦೮,೧೦೭ ರೂಪಾಯಿನ ಬೆಲೆ ಬಾಳುವ ೨,೨೫೫ ಆನೆಗಳನ್ನು ಹಿಡಿದು ಪರದೇಶಗಳಿಗೆ ರಫ್ತು ಮಾಡಿದಾರೆ. ಕಳೆದ ೧೯೦೪ನೆ ಇಸವಿಯಲ್ಲಿ ೨೯೩ ಆನೆಗಳನ್ನು ರಫ್ತು ಮಾಡಿದರು. ಕಳೆದ ವರುಷ ೬೦ ಆನೆಗಳು ರಫ್ತಾದವು.

❖❖❖❖

ರಾಣಿಗಂಜಿಗೂ ಬರ್ಧವಾನಿಗೂ ನಡುವೆ ಇರುವ ದಾಮೋದರ ತೀರದಲ್ಲಿ ಕಲ್ಲಿದ್ದಲು ಗಣಿ ಉಂಟೇ ಇಲ್ಲವೇ ಎಂಬುದನ್ನು ಗೊತ್ತು ಮಾಡುವುದಕ್ಕೋಸ್ಕರ ಗಣಿ ಕಂಪನಿಯವರು ೨,೧೪೯ ಅಡಿ ಆಳವಾದ ಭಾವಿಯನ್ನು ತೋಡಿದಾರೆ. ಇದರಷ್ಟು ಆಳವಾದ ಭಾವಿ ಹಿಂದುಸ್ಥಾನದಲ್ಲೆಲ್ಲೂ ಇಲ್ಲವೆಂದು ತಿಳಿಯುವುದು.

❖❖❖❖

ರಂಗೂನ್ ಪಟ್ಟಣದಲ್ಲಿ ಪ್ಲೇಗನ್ನು ಅಡಗಿಸುವುದಕ್ಕೆ ಸರ್ಕಾರದವರು ಹೆಗ್ಗಣ ಇಲಿಗಳನ್ನು ವಿಶೇಷವಾಗಿ ಹಿಡಿಸಿ ಕೊಲ್ಲಿಸುತ್ತಿದಾರೆ. ಕಳೆದ ನಾಲ್ಕು ತಿಂಗಳಲ್ಲಿ ೧,೦೩,೯೯೨ ಇಲಿ ಹೆಗ್ಗಣಗಳು ನಾಶ ಹೊಂದಿದವು. ಇದರಿಂದ ಅನೇಕ ಭಾಗಗಳಲ್ಲಿ ಹೆಗ್ಗಣಗಳ ಹೆಸರೇ ನಿರ್ನಾಮವಾಯಿತು. ಪ್ಲೇಗ್ ಉಪದ್ರವೂ ಬಹಳ ಕಡಿಮೆಯಾಗಿದೆ.

❖❖❖❖

ಅಲಹಾಬಾದಿನಲ್ಲಿ ಸೆಷನ್ಸ್ ಜಡ್ಜರು ಖೋಟಾ ನಾಣ್ಯಗಳ ವಿಷಯವಾದ ಎರಡು ಮೊಕದ್ದಮೆಗಳನ್ನು ಧರ್ಯಾಪ್ತಿ ಮಾಡಿ, ಮೊದಲನೆ ಮೊಕದ್ದಮೆಯಲ್ಲಿ ಅಪರಾಧಿಗೆ ಒಂಭತ್ತು ವರ್ಷಗಳ ಕಠಿನ ಸಜವನ್ನೂ ಎರಡನೆ ಮೊಕದ್ದಮೆಯಲ್ಲಿ ಮೂವರು ಅಪರಾಧಿಗಳಿಗೆ ತಲಾ ಏಳೇಳು ವರ್ಷಗಳಂತೆ ಕಠಿಣ ಸಜವನ್ನೂ ವಿಧಿಸಿರುತ್ತಾರೆ

❖❖❖❖

ಕೊಚ್ಚಿ ಸಂಸ್ಥಾನದಲ್ಲಿ ಅಲೆನ್'ಗೌಡರೆಂಬ ರಾಜರು ಅಕ್ರಮವಾಗಿ ರೈಲ್ ಕಂಬಿಗಳನ್ನು ದಾಟಿಕೊಂಡು ಹೋದರೆಂದು ಅಸಿಸ್ಟೆಂಟ್ ಇಂಜನಿಯರವರು ಅವರ ಮೇಲೆ ಫಿರ್ಯಾದು ಮಾಡಿದರು. ಧರ್ಯಾಪ್ತಿಯಲ್ಲಿ ಅಪರಾಧ ಮಾಡಿದ್ದು ರುಜುವಾತಾದ್ದರಿಂದ ಮ್ಯಾಜಿಸ್ಟ್ರೇಟರು ಆ ರಾಜರಿಗೆ ೭ ರೂಪಾಯಿ ಜುಲ್ಮಾನೆ ವಿಧಿಸಿದರು.

❖❖❖❖

ಮೊಂಘೀರ್ ಮತ್ತು ಗಯಾ ಡಿಸ್ಟ್ರಿಕ್ಟುಗಳಿಗೆ ಸೇರಿ ನರಗಾ ಕೊಸ್ತಾ ಎಂಬೀ ಎರಡು ಗ್ರಾಮಗಳ ಪ್ರಜೆಗಳು ತುಂಟರಾಗಿ ಪ್ರಜಾನೆಮ್ಮದಿಗೆ ಭಂಗವನ್ನುಂಟುಮಾಡುತ್ತಿದ್ದ ಕಾರಣ ಸರ್ಕಾರದವರು ಆ ಗ್ರಾಮಗಳಿಗೆ ಪೋಲೀಸಿನವರನ್ನು ನೇಮಿಸಿ, ಅವರ ಸಂಬಳವನ್ನು ಗ್ರಾಮಸ್ಥರಿಂದಲೇ ವಸೂಲ್ಮಾಡುವಂತೆ ಹುಕುಂ ಕೊಟ್ಟಿದಾರೆ.

❖❖❖❖

ಅಫಘಾನಿಸ್ಥಾನದ ಅಮೀರರು ತಮ್ಮ ರಾಜ್ಯಕ್ಕೂ ರಷ್ಯಾದವರ ಎಲ್ಲೆಗೂ ನಡುವೆ ಅಪಾರವಾದ ಸೈನ್ಯವನ್ನು ಇಟ್ಟು ಇರುತ್ತಾರೆ. ಇವರಿಗೆಲ್ಲಾ ಈಗಿನ ಕಾಲದ ಯುದ್ಧಸಾಮಗ್ರಿಗಳನ್ನು ಒದಗಿಸಿ ಕೊಟ್ಟಿದಾರೆ. ಈ ಸೈನ್ಯದ ಬೆಂಬಲಕ್ಕೆ ಇನ್ನೂ ೨೦,೦೦೦ ಸೈನ್ಯವನ್ನು ಹೊಸದಾಗಿ ನೇಮಿಸಿ ತರಪೇತು ಮಾಡಿ ಇಟ್ಟುಕೊಳ್ಳುವಂತೆ ಹುಕುಂ ಮಾಡಿರುವರು

❖❖❖❖

ಕಾಬೂಲ್ ಪಟ್ಟಣಕ್ಕೆ ಹೋಗಿ ಇಂಡಿಯಾ ಗವರ್ನಮೆಂಟಿನ ಪರ ವರವಾಗಿ ನಿಂತು ಅಮೀರರ ಕೈಲಿ ಕರಾರಿಗೆ ರುಜು ಹಾಕಿಸಿಕೊಂಡು ಬಂದಿರುವ ಮಿ॥ ಡೇನ್ ಯವರಿಗೂ ಅವರ ಸಂಗಡ ಹೋಗಿದ್ದ ಅಧಿಕಾರಿಗಳಿಗೂ ಇಂಗ್ಲಿಷ್ ಸರ್ಕಾರದವರು ಬಿರುದುಗಳನ್ನು ಕೊಟ್ಟಿದಾರೆ. ಮಿ॥ ಡೇನ್ ಯವರಿಗೆ ಕೆ. ಸಿ. ಐ. ಇ. ಎಂಬ ಬಿರುದು ದೊರೆಯಿತು.

❖❖❖❖

ಪಾಟಿಯಾಲಾ ಸಂಸ್ಥಾನದಲ್ಲಿ ಒಳ್ಳೇ ಕಟ್ಟಡದ ಕಲ್ಲುಗಳು ಅಪಾರವಾಗಿ ಸಿಕ್ಕುತ್ತವೆ. ಕಲ್ಕತ್ತೆಯಲ್ಲಿ ಕಟ್ಟುವ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಅಪೂರ್ವವಾದ ಬಂಗಲೆಗೆ ಈ ಕಲ್ಲುಗಳನ್ನು ಎಷ್ಟು ಬೇಕಾಗಿದ್ದರೂ ಒಂದು ಕಾಸಾದರೂ ತೆಗೆದುಕೊಳ್ಳದೆ ಕೊಡುತ್ತೇವೆಂದು ಪಾಟಿಯಾಲಾ ಸಂಸ್ಥಾನದ ರೀಜೆನ್ಸಿ ಕೌನ್ಸಿಲ್'ನವರು ತಿಳಿಸಿದಾರೆ.

❖❖❖❖

ಮದರಾಸ್ ಪಟ್ಟಣದಲ್ಲಿ ಸೂರ್ಯಾಸ್ತಮಯವಾಗಿದ ಅರ್ಧ ಗಂಟೆಯಾದ ಮೇಲೆ ಉದಯಕ್ಕೆ ಮುಂಚೆ ಒಂದು ಗಂಟೆ ತನಕ ದೀಪವಿಲ್ಲದೆ ಗಾಡಿಯನ್ನು ನಡಿಸಿದರೆ ಅಂಥಾ ಅಪರಾಧಿಗೆ ೫೦ ರೂಪಾಯಿಗೆ ಮೀರದ ಜುಲ್ಮಾನೆಯನ್ನೋ ಅಥವಾ ಒಂದು ತಿಂಗಳ ತನಕ ಸಜವನ್ನೋ ವಿಧಿಸಬೇಕೆಂದು ಗವರ್ನಮೆಂಟಿನವರು ಕಾನೂನು ಬದಲಾವಣೆ ಮಾಡಿದಾರೆ

❖❖❖❖

ಹಿಂದಿನ ವಾರ ತಂಜಾವೂರಿನಲ್ಲಿ ಮಹಾ ಅಪೂರ್ವವಾದ ಗರುಡೋತ್ಸವವಾಯಿತು. ೧೬ ದೇವರುಗಳನ್ನು ಏಕಕಾಲದಲ್ಲಿ ಮೆರವಣಿಗೆ ಮಾಡಿದರು. ಈ ಉತ್ಸವವನ್ನು ನೋಡುವುದಕ್ಕೆ ಸೇರಿದ್ದ ಪ್ರಜೆಗಳು ಕಡೇ ಪಕ್ಷ ೫೦,೦೦೦ ಆಗಬಹುದೆಂದು ಹೇಳುತ್ತಾರೆ ಅಲ್ಲಿಗೆ ೨೨ ಸ್ಪೆಷಲ್ ರೈಲನ್ನು ಬಿಟ್ಟಿದ್ದಾಗ್ಯೂ ರೈಲಿನ ಮೇಲೆ ಹೋದವರೇ ೩೫,೦೦೦ ಜನಕ್ಕೆ ಕಡಿಮೆ ಇಲ್ಲವೆಂತಲೂ ತಿಳಿಯುವುದು.

❖❖❖❖

ಉತ್ತರ ದೇಶದಲ್ಲಿ ಅಯೋಧ್ಯೆಯಿಂದ ರೋಹಿಲ್'ಖಂಡಕ್ಕೆ ಹೋಗಿಬರುತ್ತಿದ್ದ ರೈಲ್'ಗಾಡಿಗಳಿಗೆ ಕಳೆದ ೨ ನೆ ಮತ್ತು ೩ ನೆ ತಾರೀಖುಗಳಲ್ಲಿ ಅಪಾಯ ಸಂಭವಿಸಿತು ಮೊದಲನೇ ದಿನದ ಅಪಾಯದಲ್ಲಿ ರೈಲಿನ ನೌಕರನೊಬ್ಬನಿಗೂ ೧೭ ಮಂದಿ ಪ್ರಯಾಣಿಕರಿಗೂ ಗಾಯಗಳಾದವು. ಎರಡನೇ ದಿನ ನಡೆದ ಅಪಾಯದಲ್ಲಿ ನಾಲ್ಕು ಜನ ರೈಲ್ವೆ ನೌಕರರಿಗೂ ೨೦ ಜನ ಪ್ರಯಾಣಿಕರಿಗೂ ಗಾಯಗಳಾಗಿವೆ.

❖❖❖❖

ಕೊಚ್ಚಿ ಸಂಸ್ಥಾನದಲ್ಲಿ ಇಂಗ್ಲಿಷರಿಗೆ ಸೇರಿದ ಭಾಗಕ್ಕೆ ಡಿಪ್ಟಿ ಕಲೆಕ್ಟರಾಗಿದ್ದು ಕೆಲಸ ಬಿಟ್ಟಿರುವ ಮಿ॥ ಲಕ್ಷ್ಮಣರಾಯರಿಗೆ ಇಂಡಿಯಾ ಗವರ್ನಮೆಂಟಿನವರು ಪೆನ್'ಷನ್ ಕೊಡದೆ, ಅವರಿಗೆ ಬಂದಿದ್ದ ದಿವಾನ್ ಬಹದೂರ್ ಎಂಬ ಬಿರುದನ್ನು ಕಿತ್ತುಕೊಂಡರು. ಇವರು ಕೆಲಸದಲ್ಲಿದ್ದಾಗ ಮಾಡಿದ ಯಾವದೋ ಒಂದು ಕಾರ್ಯವು ಅನ್ಯಾಯವಾದದ್ದೆಂದು ಈಚೆಗೆ ರುಜುವಾತಾದದ್ದೇ ಇದಕ್ಕೆ ಕಾರಣವಾಗಿದೆ.

❖❖❖❖

ತುರ್ಕಿ ಸುಲ್ತಾನರಿಂದ ಹಿಂದುಸ್ಥಾನದ ಪಾರ್ಸಿಗಳಲ್ಲಿ ಇದುವರೆಗೆ ಯಾರಿಗೂ ಬಿರುದು ಬಂದದ್ದು ಇಲ್ಲ. ಈಗ ಬೊಂಬಾಯಿನ ಪ್ರಸಿದ್ಧ ನಾಟಕದ ಕಂಪನಿಯ ಮಿ॥ ಕಾವಸ್'ಜಿ ಪಾಲಿವಾಲಾ ಎಂಬ ಪಾರ್ಸಿಯವನಿಗೆ ತುರ್ಕಿ ಸುಲ್ತಾನರು ಒಂದು ಮೆಡಲನ್ನು ಕಳುಹಿಸಿರುತ್ತಾರೆ ಈ ಪಾರ್ಸಿಯವನು ಹೆಜ್ಜಾಸ್ ರೈಲ್ ರಸ್ತೆಯ ಮೂಲಧನಕ್ಕೆ ತುಂಬಾ ಸಹಾಯಮಾಡಿದ್ದೇ ಈ ಬಿರುದಿಗೆ ಕಾರಣವಾಗಿದೆ.

❖❖❖❖

ಕಳೆದ ೧೯೦೪ನೆ ವರ್ಷದಲ್ಲಿ ಹಿಂದುಸ್ಥಾನದೊಳಗೆ ೨೨ ಕೋಟಿಯೂ ೭೦ ಲಕ್ಷ ಜನರು ರೈಲ್'ಗಾಡಿಗಳಲ್ಲಿ ಸಂಚಾರಮಾಡಿದರು: ಎಂದರೆ ೧೯೦೩ನೆ ವರ್ಷಕ್ಕಿಂತ ೧ ಕೋಟಿಯೂ ೭೦ ಲಕ್ಷ ಜನರು ಹೆಚ್ಚು. ಸರಾಸರಿ ಲೆಕ್ಕಾಚಾರ ಮಾಡುವಲ್ಲಿ ಪ್ರತಿ ಒಬ್ಬನೂ ೩೦ ಮೈಲಿ ದೂರ ಪ್ರಯಾಣಮಾಡಿದಂತೆಯೂ ೩ನೇ ತರಗತಿಯಲ್ಲಿ ಪ್ರತಿ ಒಬ್ಬನೂ ಮೈಲಿಗೆ ೨೭ ಕಾಸಿನಂತೆ ಛಾರ್ಜು ಕೊಟ್ಟಹಾಗೂ ತಿಳಿಯುವುದು.

❖❖❖❖

ದಕ್ಷಿಣ ದೇಶದಿಂದ ಕಳೆದ ಏಪ್ರಿಲ್ ತಿಂಗಳಲ್ಲಿ ೨೨,೦೦೦ ಜನರು ತಮ್ಮ ಊರು ಮನೆ ಮಠಗಳನ್ನು ತ್ಯಜಿಸಿ ಸಿಲೋನ್ (ಲಂಕಾ) ದ್ವೀಪಕ್ಕೆ ಹೋಗಿರುತ್ತಾರೆ. ಅಲ್ಲಿ ಕಾಫಿ, ಟೀ, ಸಿಂಕೋನ, ಮೊದಲಾದ ತೋಟಗಳಲ್ಲಿ ಕೂಲಿ ಮಾಡಿ ಹೊಟ್ಟೆ ಹೊರೆಕೊಳ್ಳುವರು ಮೇ ತಿಂಗಳಲ್ಲಿ ಇನ್ನೂ ಹೆಚ್ಚು ಜನರು ಅಲ್ಲಿಗೆ ಹೋದರೆಂದು ತಿಳಿದು ಬಂದಿದೆ ಇದನ್ನು ನೋಡುವಲ್ಲಿ ದಕ್ಷಿಣ ದೇಶದಲ್ಲಿ ಜನರಿಗೆ ಜೀವನಕ್ಕೆ ತುಂಬಾ ಕಷ್ಟಪ್ರಾಪ್ತವಾಗಿರುವಂತೆ ಕಾಣುವುದು

❖❖❖❖

ಬರ್ಮಾ ಆಧಿಪತ್ಯದ ರೈಲ್ವೆ ಡಿಸ್ಟ್ರಿಕ್ಟ್ ಸೂಪರಿನ್'ಟೆಂಡೆಂಟರಾದ ಮೇಜರ್ ಸವೆಲ್ ಯವರು ಪೆಗ್ಗೂ ಪಟ್ಟಣದ ರೈಲ್ ಸ್ಟೇಷನ್'ನಲ್ಲಿ ಒಬ್ಬ ಹಾಲುಮಾರುವವನನ್ನು ಹಿಡಿದುಕೊಂಡು ಅವನು ಟಿಕೆಟ್ ಇಲ್ಲದೆ ಪ್ರಯಾಣ ಮಾಡಿದನೆಂದು ಹೇಳಿ ಹೊಡೆದು ಹಿಂಸೆಪಡಿಸಿದರು. ಅವನು ಅವರ ಮೇಲೆ ಫಿರ್ಯಾದು ತಂದನು. ಮ್ಯಾಜಿಸ್ಟ್ರೇಟರು ಮೇಜರ್ ಸವೆಲ್ ಯವರಿಗೆ ೨೦ ರೂಪಾಯಿ ಜುಲ್ಮಾನೆ ಹಾಕಿ, ಅರ್ಧ ಹಣವನ್ನು ಹಾಲು ಮಾರುವವನಿಗೆ ಪ್ರತಿಫಲ ಕೊಡಿಸಿರುತ್ತಾರೆ.

❖❖❖❖

ಬರುವ ತಿಂಗಳ ಅಂದರೆ ಜುಲೈ ೧ನೇ ತಾರೀಖಿನಿಂದ ಹಿಂದುಸ್ಥಾನದಲ್ಲೆಲ್ಲಾ ಒಂದೇ ತರಹಾ ಗಂಟೆ ಇರುವಂತೆ ಬದಲಾವಣೆಯಾಗುವುದು. ಮದರಾಸ್ ಟೈಂ ತೋರಿಸುವ ಗಂಟೆಯು ಇನ್ನೂ ೯ ನಿಮಿಷ ಮುಂದಕ್ಕೆ ಹೋಗುವುದು. ಅಂದರೆ ಈಗ ನಾವು ಮಧ್ಯಾಹ್ನ ೧೨ ಗಂಟೆ ಎನ್ನುವುದು ಜುಲೈ ೧ರಿಂದ ಬದಲಾವಣೆ ಹೊಂದಿ, ೧೨ ಗಂಟೆ ೯ ನಿಮಿಷಕ್ಕೆ ನಡು ಮಧ್ಯಾಹ್ನವೆಂದು ನಿಷ್ಕರ್ಷೆಯಾಗಿ ರೈಲ್ವೆ ಮತ್ತು ಟೆಲಿಗ್ರಾಫ್ ಗಂಟೆಗಳನ್ನು ೯ ನಿಮಿಷ ಮುಂದಕ್ಕಿಡುತ್ತಾರೆ.

ಹಿಂದುಸ್ಥಾನದ ವಾಯವ್ಯ ಸರಹದ್ದಿನಲ್ಲಿ ಡೀರ್ ಎಂಬ ಸಂಸ್ಥಾನದ ನವಾಬನಿಗೂ ಆತನ ಸಹೋದರನಿಗೂ ವೈಮನಸ್ಯಗಳು ಹುಟ್ಟಿ, ತಮ್ಮನು ಸೈನ್ಯಸಹಿತ ಹೊರಟು ಅಣ್ಣನ ಮೇಲೆ ಯುದ್ಧ ಮಾಡುವವನಾಗಿದಾನೆಂದು ಕಳೆದ ವಾರ ತಿಳಿಸಿದೆವಷ್ಟೆ. ಈಚೆಗೆ ಈ ಅಣ್ಣತಮ್ಮಂದಿರಿಬ್ಬರೂ ಒಂದು ಕಡೆ ಸಂಧಿಸಿ, ತಮ್ಮ ತಮ್ಮ ಮನಸ್ತಾಪಗಳನ್ನು ಕುರಿತು ಚರ್ಚೆ ಮಾಡಿ ಇತ್ಯರ್ಥಪಡಿಸಿಕೊಂಡಿದಾರೆಂದೂ ಆಭ್ಯಂತರ ಯುದ್ಧ ಸಂಭವವೇನೂ ಕಾಣುವುದಿಲ್ಲವೆಂದೂ ತಂತೀ ವರ್ತಮಾನ ಬಂದಿದೆ.

❖❖❖❖

ಸಾತಾರೆಯಲ್ಲಿ ಗಿರಿಜಾ ಕೋಮ ಪೀಲೂ ಎಂಬೊಬ್ಬ ಸ್ತ್ರೀಯು ಖೋಟಾ ನಾಣ್ಯಗಳನ್ನು ತಯಾರುಮಾಡಿದ ಅಪರಾಧಕ್ಕೆ ಸಿಕ್ಕಿಬಿದ್ದು, ಕಳೆದ ಏಪ್ರಿಲ್ ತಿಂಗಳಲ್ಲಿ ೬ ವರುಷಗಳ ಕಠಿಣ ಸಜಾ ಅನುಭವಿಸುವಂತೆ ಶಿಕ್ಷೆ ವಿಧಿಸಲ್ಪಟ್ಟಳು. ಅವಳು ಬೊಂಬಾಯಿ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದಳು. ಕಳೆದ ವಾರ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ಧರ್ಯಾಪ್ತಿ ಮಾಡಿ, ಕೆಳಕೋರ್ಟಿನ ತೀರ್ಮಾನವನ್ನು ಖಾಯಂ ಮಾಡಿರುತ್ತಾರೆ. ಹೆಂಗಸು ಇಂಥಾ ಅಪರಾಧ ಮಾಡಿದ್ದು ಹಿಂದುಸ್ಥಾನದಲ್ಲಿ ಇದೇ ಮೊದಲಾಗಿದೆ.

❖❖❖❖

ರಂಗೂನ್ ಪಟ್ಟಣದಿಂದ ೯ ಮೈಲಿ ದೂರದಲ್ಲಿರುವ ಇನ್'ಸೀನ್ ಎಂಬ ಊರಿನಲ್ಲಿ ಕಳೆದ ಸೋಮವಾರ ಪ್ರಾತಃಕಾಲ ೬ ಗಂಟೆಯಿಂದ ೮ ಗಂಟೆ ತನಕ ಬಹು ಭಯಂಕರವಾದ ಸುಂಟರಗಾಳಿ ಪ್ರಾಪ್ತವಾಯಿತು. ಅನೇಕ ಮನೆಗಳ ಮೇಲ್ಛಾವಣಿಗಳು ಕಿತ್ತು ಹಾರಿಹೋದವು. ಬಹು ಭಾರೀ ಮರಗಳು ಬುಡ ಸಹಿತ ಕಿತ್ತು ಉರುಳಿಕೊಂಡವು. ಸೌತೇಕಾಯಿ, ಅಡಕೆ, ದ್ರಾಕ್ಷಿಮುಂತಾದ ದೊಡ್ಡ ತೋಟಗಳೂ ಒಂದು ಭಾರೀ ಇಟ್ಟಿಗೆ ಕಾರ್ಖಾನೆಯೂ ನಾಶಹೊಂದಿದವು ಜಮೀನ್ದಾರರಿಗೂ ಸಾಹುಕಾರರಿಗೂ ತುಂಬಾ ನಷ್ಟ ಪ್ರಾಪ್ತವಾಗಿದೆ

❖❖❖❖

ಜಪಾನ್ ಜನರಲ್ ಒಕೂ ಯವರು ಯುದ್ಧಭೂಮಿಯಲ್ಲಿದ್ದಾರೆ ಇವರು ಜಪಾನ್ ರಾಜ್ಯದ ಪ್ರತಿನಿಧಿಯಾಗಿ ಹಿಂದುಸ್ಥಾನಕ್ಕೆ ಬಂದು, ಡಿಲ್ಲಿ ದರ್ಬಾರಿನಲ್ಲಿ ಹಾಜರಾಗಿದ್ದರು. ಅಂದಿನಿಂದ ಹಿಂದುಸ್ಥಾನದ ವಿಷಯಗಳನ್ನು ಕೇಳಿ ತಿಳಿಕೊಳ್ಳುವುದರಲ್ಲಿ ಅವರಿಗೆ ತುಂಬಾ ಕುತೂಹಲ ಉಂಟಾಗಿದೆ ಎರಡು ತಿಂಗಳ ಹಿಂದೆ ಉತ್ತರ ದೇಶದಲ್ಲಿ ಆದ ಭೂಕಂಪದ ಅನಾಹುತವು ಇದುವರೆಗೆ ಅವರಿಗೆ ತಿಳಿದಿರಲಿಲ್ಲ. ಕಳೆದ ವಾರ ಈ ಸುದ್ದಿಯನ್ನು ಯುದ್ಧಭೂಮಿಯಲ್ಲಿ ಕೇಳಿ ಜನರಲ್ ಒಕೂ ಯವರು ತುಂಬಾ ವ್ಯಸನಪಟ್ಟು, ನಮ್ಮ ವೈಸ್'ರಾಯಿಯವರಿಗೆ ತಮ್ಮ ದುಃಖವನ್ನು ತಂತೀ ವರ್ತಮಾನ ಕೊಟ್ಟು ತಿಳಿಸಿದಾರೆ.

❖❖❖❖

ಕಳೆದ ೨ನೆ ತಾರೀಖಿನ ದಿನ ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿನಿಂದ ಗವರ್ನರವರು ನಮ್ಮ ವೈಸ್'ರಾಯಿ ಲಾರ್ಡ್ ಕರ್ಜನ್ ಪ್ರಭುಗಳಿಗೆ ತಂತೀ ವರ್ತಮಾನ ಕೊಟ್ಟು ತಿಳಿಸಿದ್ದೇನೆಂದರೆ— ಕಳೆದ ಬುಧವಾರ ರಾತ್ರಿ ಆ ಪ್ರಾಂತ್ಯ ಬಹು ಭಯಂಕರವಾದ ಸುಂಟರಗಾಳಿಯೂ ಮಳೆಯೂ ಪ್ರಾಪ್ತವಾದವು. ಡರ್ಬನ್ ನಗರದ ಹತ್ತಿರ ಪೈನ್'ಟೌನ್ ಎಂಬ ಪಟ್ಟಣದಲ್ಲಿ ಭಾರೀ ಕೆರೆಯು ಒಡೆದು ಹೋಯಿತು. ನೀರು ಬಹು ರಭಸವಾಗಿ ಉಂಬಿಲೋ ಎಂಬ ಕಣಿವೆಯೊಳಕ್ಕೆ ನುಗ್ಗಿ ತುಂಬಾ ನಷ್ಟಪಡಿಸಿದೆ ಈ ಕಣಿವೆಯಲ್ಲಿ ವಿಶೇಷವಾಗಿ ಹಿಂದುಸ್ಥಾನದ ಪ್ರಜೆಗಳೇ ವ್ಯವಸಾಯಮಾಡುತ್ತಾ ಜೀವಿಸಿಕೊಂಡಿದ್ದರು. ರೈಲ್'ರಸ್ತೆಗಳೂ, ಟೆಲಿಗ್ರಾಫ್ ತಂತಿಗಳೂ ಕಿತ್ತುಹೋಗಿರುವುದರಿಂದ ಆ ಪ್ರಾಂತ್ಯದಿಂದ ಸರಿಯಾದ ವರ್ತಮಾನ ತಿಳಿಯಬರಲಿಲ್ಲ. ಇಲ್ಲಿನ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನೋಡಿದರೆ ೩೦೦ರಿಂದ ೫೦೦ ಪ್ರಜೆಗಳ ತನಕ ಈ ಅನಾಹುತಕ್ಕೆ ಸಿಕ್ಕಿ ಪ್ರಾಣ ಕಳೆದುಕೊಂಡರೆಂದು ಕಾಣುವುದು ಎಂಬುದೇ. ಇದಕ್ಕೆ ನಮ್ಮ ವೈಸ್'ರಾಯಿಯವರು ತಾ. ೭ರಲ್ಲಿ ನಟಾಲ್ ಗವರ್ನರಿಗೆ ಜವಾಬು ಕೊಟ್ಟಿರುವುದೇನೆಂದರೆ—ನಟಾಲಿನಲ್ಲಿ ಕೆರೆ ಕಿತ್ತುಹೋಗಿ ಹಿಂದುಸ್ಥಾನದ ರೈತಪ್ರಜೆಗಳಲ್ಲಿ ಅನೇಕ ಮಂದಿ ತೀರಿಹೋದರೆಂಬ ಭಯಂಕರವಾದ ಸುದ್ದಿಯು ನನಗೆ ಮಹಾ ವ್ಯಸನವನ್ನುಂಟುಮಾಡಿದೆ. ಆದರೆ ನಟಾಲ್ ಗವರ್ನಮೆಂಟಿನವರು ಸತ್ತು ಕೆಟ್ಟುಹೋದವರ ಸಂಸಾರದವರಿಗೂ ಕಷ್ಟಕ್ಕೆ ಗುರಿಯಾದವರಿಗೂ ತಕ್ಕ ಸಹಾಯ ಸಂಪತ್ತುಗಳನ್ನು ಒದಗಿಸಿ ಕೊಟ್ಟು ಕಾಪಾಡುತ್ತಾರೆಂದು ನಾನು ನಂಬಿರುತ್ತೇನೆ ಎಂಬುದೇ.

ವಿದೇಶ ವರ್ತಮಾನಗಳು.

ಜರ್ಮನಿ ಮಂತ್ರಿಯಾದ ಕೌಂಟ್ ವಾನ್ ಬ್ಯುಲೋ ಯವರಿಗೆ ಚಕ್ರವರ್ತಿಯವರು ರಾಜಕುಮಾರ ಎಂಬ ಬಿರುದನ್ನು ದಯಪಾಲಿಸಿದರು.

❖❖❖❖

ಹಾಲೆಂಡಿಗೆ ಸೇರಿದ ಫ್ರಾನೆಕರ್ ಎಂಬ ಪಟ್ಟಣದಲ್ಲಿ ಬೆಂಕಿ ಬಿದ್ದು ಎರಡು ದೇವಸ್ಥಾನಗಳು ಉರಿದುಹೋದವು. ಇಪ್ಪತ್ತು ಕುದುರೆಗಳು ಉರಿಯಲ್ಲಿ ಸಿಕ್ಕಿ ಮೃತಪಟ್ಟುವು.

❖❖❖❖

ವಿಲಾಯತಿ ರಾಜ್ಯದ ನಾರ್ಫೋಕ್ ಡಿಸ್ಟ್ರಿಕ್ಟಿಗೆ ಸೇರಿದ ಕ್ರಾಲ್ಹಾಂ ಪಟ್ಟಣದಲ್ಲಿ ಒಂದು ಅಪೂರ್ವವಾದ ವಿವಾಹ ನಡೆಯಿತು. ಮದುವೆ ಗಂಡಿಗೆ ೭೫ ವರ್ಷ ವಯಸ್ಸಾಗಿದೆ. ಈ ವರನು ೭೮ ವಯಸ್ಸಿನ ಕನ್ನಿಕೆಯನ್ನು ವರಿಸಿ, ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಮದುವೆಮಾಡಿಕೊಂಡಿರುತ್ತಾನೆ.

ಸಯಾಂ ಗವರ್ನಮೆಂಟಿನವರು ತಮ್ಮ ರಾಜಧಾನಿಯಲ್ಲಿ ಕುಷ್ಠರೋಗ ಪರಿಹಾರಕ್ಕೆ ಒಂದು ತರಹಾ ಹಾಲನ್ನು ತಯಾರುಮಾಡುವಂಥಾ ಕಾರ್ಖಾನೆಯನ್ನು ಕಟ್ಟಿಸುವವರಾಗಿದಾರೆ.

❖❖❖❖

ಜರ್ಮನಿ ರಾಜ್ಯದ ಯುವರಾಜರಿಗೆ ಗ್ರಾಂಡ್ ಡಚಸ್ ಸೆಸಿಲಿಯಾ ಎಂಬ ರಾಜಕುಮಾರಿಯನ್ನು ಕೊಟ್ಟು ಕಳೆದ ೬ನೇ ತಾರೀಖಿನ ದಿನ ರಾಜಧಾನಿಯಾದ ಬರ್ಲಿನ್ ನಗರದಲ್ಲಿ ವಿಶೇಷ ಆಸ್ಪದಾಪಯುಕ್ತವಾಗಿ ವಿವಾಹ ಮಾಡಿದರು.

❖❖❖❖

ಮಸ್ಕತ್ ಪ್ರಾಂತ್ಯದ ವಿಚಾರದಲ್ಲಿ ಇಂಗ್ಲೀಷರಿಗೂ ಫ್ರೆಂಚರಿಗೂ ಮನಸ್ತಾಪಗಳುಂಟಾದವೆ. ಈ ವಿಚಾರವನ್ನು ಹೇಗ್ ಪಟ್ಟಣದ ಪಂಚಾಯತಿ ಕೋರ್ಟಿನವರು ಹಿಡಿದು ಇತ್ಯರ್ಥ ಮಾಡಬೇಕೆಂದು ಉಭಯ ರಾಜ್ಯಗಳವರೂ ಒಪ್ಪಿ ತಿಳಿಸಿದಾರೆ

❖❖❖❖

ಆಲ್ಜೀರಿಯಾ ಡಿಸ್ಟ್ರಿಕ್ಟಿನಲ್ಲಿ ಕಳೆದ ವಾರ ಬಹು ಭಯಂಕರವಾದ ಭೂಕಂಪ ಪ್ರಾಪ್ತವಾಯಿತು. ಸ್ಕಟಾರಿ ಎಂಬ ಪಟ್ಟಣವು ಪಾಳುಬಿದ್ದುಹೋಗಿದೆ. ಸುಮಾರು ೧೦೦ ಜನರು ಪ್ರಾಣ ಕಳೆದುಕೊಂಡರು. ೨೫೦ ಜನರಿಗಿಂತಲೂ ಹೆಚ್ಚಾಗಿಯೇ ಗಾಯಪಟ್ಟರು.

❖❖❖❖

ಮುಸಲ್ಮಾನ ಜನರ ಪ್ರವಾದಿಯಾದ ಮಹಮದ್ ಎಂಬ ಗುರು ವಿನ ಹುಟ್ಟಿದ ಹಬ್ಬವನ್ನು ಲಂಡನ್ ಪಟ್ಟಣದಲ್ಲಿ ಸುಮಾರು ೧೫೦ ಮಂದಿ ಸೇರಿ ನೆರವೇರಿಸಿದರು. ಇವರೆಲ್ಲಾ ಮಹಮದಿಯರೇ. ಕೆಲವರು ತುರ್ಕಿಯವರು, ಕೆಲವರು ಈಜಿಪ್ಟ್, ಮಕ್ಕಾ, ಅರಬ್ಬಿ, ಮೂರ್, ಈ ಪ್ರಾಂತ್ಯಗಳವರು. ಇವರೆಲ್ಲಾ ಆ ದಿನ ತಮ್ಮ ಮಹಾಪುರುಷನ ಜನ್ಮಚರಿತ್ರೆಯನ್ನು ಉಪನ್ಯಾಸ ಮಾಡಿ, ಸಂತೋಷದಿಂದ ಒಂದು ಕಡೆ ಕುಳಿತು ಭೋಜನ ಮಾಡಿದರು.

❖❖❖❖

ಅಮೇರಿಕಕ್ಕೆ ಸೇರಿದ ಟೆಕ್ಸಾಸ್ ಜಿಲ್ಲೆಯಲ್ಲಿ ಕ್ಷಯರೋಗಿಗಳಿಗೆ ಚಿಕಿತ್ಸೆಮಾಡುವಂಥಾ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟುವರು ೪,೦೦೦ ಎಕರೆ ವಿಸ್ತಾರವಾದ ಜಮೀನು ದೊರೆತಿದೆ. ಇದುವರೆಗೆ ೩ ಕೋಟಿ ರೂಪಾಯಿ ಚಂದಾ ಕೂಡಿರುವುದು. ಆಸ್ಪತ್ರೆ ಕಟ್ಟತಕ್ಕ ಪ್ರದೇಶವು ಸಮುದ್ರಮಟ್ಟಕ್ಕಿಂತ ೩,೦೦೦ದಿಂದ ೬,೫೦೦ ಅಡಿಯ ವರೆಗೆ ಎತ್ತರವಾಗಿದೆ. ಶ್ವಾಸಕೋಶದ ರೋಗಿಗಳಿಗೆ ಈ ಸ್ಥಳವು ಬಹಳ ಕ್ಷೇಮಕರವೆಂದು ಗೊತ್ತುಮಾಡಲ್ಪಟ್ಟಿದೆ.

❖❖❖❖

ಸ್ಪೇನ್ ರಾಜ್ಯದ ದೊರೆಯಾದ ಆಲ್ಫಾನ್ಸೋ ಯವರು ಪರಿವಾರ ಸಹಿತ ಕಳೆದ ವಾರ ಲಂಡನ್ ಪಟ್ಟಣಕ್ಕೆ ಹೋಗಿ ಇಳಿದರು. ಇವರನ್ನು ಪ್ರಿನ್ಸ್ ಆಫ್ ವೇಲ್ಸ್‌ರವರು ಪೋರ್ಟ್ಸ್‌ಮತ್ ಪಟ್ಟಣದಲ್ಲಿ ಕಾದಿದ್ದು ಎದುರ್ಗೊಂಡರು. ಸಾವಿರಾರು ಪ್ರಜೆಗಳು ಜಯಘೋಷಗಳನ್ನು ಮಾಡಿ ಅವರಿಗೆ ಸುಸ್ವಾಗತವನ್ನು ಬಯಸಿದರು. ದೊರೆಯವರಿಗೆ ಯಾವ ವಿಧವಾದ ಆತಿಬಾಧೆಗಳೂ ಉಂಟಾಗದಂತೆ ಸರ್ಕಾರದವರು ಬಹು ವಿಶೇಷವಾದ ಪೋಲೀಸ್ ಬಂದೋಬಸ್ತು ಮಾಡಿಸಿದ್ದರು.

❖❖❖❖

ಚೀನಾ ರಾಜ್ಯದಲ್ಲಿ ಬಹುಕಾಲದಿಂದಲೂ ರೂಢಿಯಲ್ಲಿರುವ ಮುಂದೆ ಹೇಳುವಂಥಾ ಶಿಕ್ಷೆಗಳನ್ನು ವಜಾ ಮಾಡಬೇಕೆಂದು ಮಂತ್ರಿಗಳು ಚಕ್ರವರ್ತಿಯವರಿಗೆ ಅರಿಕೆಮಾಡಿರುತ್ತಾರೆ. ಅವು ಯಾವವೆಂದರೆ—(೧) ಶವಗಳನ್ನು ಕತ್ತರಿಸುವುದು, (೨) ಗಲ್ಲಿಗೆ ಹಾಕಿದವನ ತಲೆ ಬುರುಡೆಯನ್ನು ಮೆರವಣಿಗೆ ಮಾಡುವುದು; (೩) ಅಪರಾಧ ಮಾಡಿದವರ ಹಣೆಯ ಮೇಲೆ ಬರೆ ಹಾಕುವುದು, ಇವೇ. ಬೈದಿಗಳನ್ನು ಚಿತ್ರ ಹಿಂಸೆಗೆ ಗುರಿಪಡಿಸುವ ಶಿಕ್ಷೆಯು ಈ ಮೊದಲೇ ವಜಾ ಆಗಿದೆ.

❖❖❖❖

ಅಮೇರಿಕ ರಾಜ್ಯದಲ್ಲಿ ಉತ್ತರ ಕೆರೋಲಿನಾ ಡಿಸ್ಟ್ರಿಕ್ಟಿಗೆ ಸೇರಿದ ಡರ್ಹಾಂ ನಗರದಲ್ಲಿ ಮಿ॥ ವಾಷಿಂಗ್ಟನ್ ಡ್ಯೂಕ್ ಎಂಬೊಬ್ಬ ಕೋಟ್ಯಾಧೀಶ್ವರನು ಕಾಲವಾದನೆಂದು ತಂತೀ ವರ್ತಮಾನ ಬಂದಿದೆ. ಈತನು ಚಿಕ್ಕಂದಿನಲ್ಲಿ ನಾಲ್ಕಾರು ಚುಟ್ಟಾಗಳನ್ನು ಇಟ್ಟು ಬಿಕರಿ ಮಾಡಿ, ಅಲ್ಲಿಂದ ಕ್ರಮಕ್ರಮವಾಗಿ ದೊಡ್ಡ ವ್ಯಾಪಾರಿಯಾದನು. ತಂಬಾಕು ವ್ಯಾಪಾರದಲ್ಲಿ ಈತನಿಗೆ ಅಮೇರಿಕದಲ್ಲೇ ಇವನನ್ನು ಮೀರಿಸಿದವರು ಯಾರೂ ಇಲ್ಲದೆಹೋದರು. ಈತನು ಈಗ ೬೦ ಕೋಟಿ ದ್ರವ್ಯವನ್ನು ಬಿಟ್ಟಿರುತ್ತಾನೆ.

❖❖❖❖

ಸ್ಪೇನ್ ರಾಜ್ಯದ ದೊರೆಯವರು ಹಿಂದಿನ ವಾರ ಫ್ರಾನ್ಸ್ ರಾಜ್ಯದ ಮುಖ್ಯಪಟ್ಟಣವಾದ ಪ್ಯಾರಿಸ್ ನಗರಕ್ಕೆ ದಯಮಾಡಿದ್ದರು. ಫ್ರೆಂಚರ ಪ್ರೆಸಿಡೆಂಟರಾದ ಲೋಬೇ ಯವರು ದೊರೆಯವರನ್ನು ನಾಟಕ ಮಂದಿರಕ್ಕೆ ಕರೆದುಕೊಂಡು ಹೋಗಿ ನಾಟಕ ತೀರಿದ ಮೇಲೆ ಇಬ್ಬರೂ ಒಂದೇ ಗಾಡಿಯಲ್ಲಿ ಕುಳಿತು ಅರಮನೆಗೆ ಬರುತ್ತಿದ್ದರು. ದಾರಿಯಲ್ಲಿ ಕೂಲಿಯವನಂತೆ ದಿರಸು ಹಾಕಿಕೊಂಡಿದ್ದ ಒಬ್ಬ ದುಷ್ಟ ಮನುಷ್ಯನು ಮದ್ದಿನ ಗುಂಡನ್ನು ದೊರೆಯವರಿದ್ದ ಗಾಡಿಗೆ ಎಸೆದನು. ಅದು ಒಡೆದು ಬಹಳ ಅನಾಹುತವಾಯಿತು. ಸುಮಾರು ೨೦ ಜನರಿಗೆ ಗಾಯಗಳಾಗಿವೆ. ಎರಡು ಕುದುರೆಗಳು ಸತ್ತುಹೋದವು. ಆದರೆ ದೇವರ ಕೃಪೆಯಿಂದ ದೊರೆಯವರಿಗಾಗಲಿ ಪ್ರೆಸಿಡೆಂಟರಿಗಾಗಲಿ ಸ್ವಲ್ಪವೂ ಅಪಾಯ ಸಂಭವಿಸಲಿಲ್ಲ.

❖❖❖❖

ಸಿಂಗಪುರ, ಪೀನಾಂಗ್ ಮೊದಲಾದ ಪ್ರಾಂತ್ಯಗಳಲ್ಲಿ ಪ್ರಜೆಗಳೆಲ್ಲಾ ಕೆಲವು ಕಾಲದಿಂದ ನಾನ್ ರೊಟ್ಟಿ ತಿನ್ನುವುದನ್ನೇ ವರ್ಜಮಾಡಿದಾರೆ. ಯಾಕೆಂದರೆ ದುಷ್ಟರ್‍ಯಾರೋ ಹಡಗುಗಳಲ್ಲಿ ವಿಷಬೆರಸಿದ ಗೋಧಿ ಹಿಟ್ಟನ್ನು ಜರ್ಮನವರಿಗೆ ಕಳುಹಿಸುತ್ತಿದ್ದಹಾಗೂ ಅದನ್ನೆಲ್ಲಾ ಚೀಣೆಯವರು ಕೊಡದುಬಿಟ್ಟಿದ್ದರಿಂದ ಚೀಣೆಯವರೇ ಆ ಹಿಟ್ಟನ್ನು ಕೊಂಡು ರೊಟ್ಟಿ ಮಾಡಿ ಬಿಕರಿ ಮಾಡಿದ ಹಾಗೂ ಈ ರೊಟ್ಟಿಗಳನ್ನು ತಿಂದವರಲ್ಲಿ ಹಲವರು ಮೃತಪಟ್ಟ ಹಾಗೂ ಒಂದು ಸುದ್ದಿಯುಂಟಾಗಿ ಆ ಪ್ರಾಂತ್ಯದಲ್ಲೆಲ್ಲಾ ಹರಡಿಕೊಂಡಿದೆ. ಈ ಹಿಟ್ಟನ್ನು ಉಪಯೋಗಿಸದೆ ಬೇರೇ ಹಿಟ್ಟಿನಲ್ಲಿ ರೊಟ್ಟಿಗಳನ್ನು ಮಾಡಿ ಬಿಕರಿ ಮಾಡಿದರೂ ಸಂಶಯದಿಂದ ಯಾರೂ ಕೊಂಡುಕೊಳ್ಳದೆ ಇದಾರೆ ಇದರಿಂದ ರೊಟ್ಟಿ ಗಡಂಗುಗಳ ಸಾಹುಕಾರರಿಗೂ ಅಂಗಡಿಯವರಿಗೂ ತುಂಬಾ ನಷ್ಟಕಷ್ಟಗಳು ಪ್ರಾಪ್ತವಾಗಿರುವವು.

❖❖❖❖

'ಅರಬ್ಬಿ ದೇಶದಲ್ಲಿ ತುರ್ಕಿ ಸುಲ್ತಾನರ ಆಳ್ವಿಕೆಗೆ ಸೇರಿದ ಯೇಮೆನ್ ಎಂಬ ಪ್ರಾಂತ್ಯದಲ್ಲಿ ಪ್ರಜೆಗಳು ಸರ್ಕಾರದವರ ಮೇಲೆ ದಂಗೆ ಎದ್ದಿದಾರೆಂತಲೂ ಅಲ್ಲಿರುವ ಸರ್ಕಾರಿ ಸೈನ್ಯದ ಪೈಕಿ ಈ ದಂಗೆಯನ್ನು ಅಣಗಿಸುವುದಕ್ಕಾಗದೇ ಇವರಲ್ಲೇ ಕೆಲವರು ದಂಗೆಕೋರರ ಕಡೆಗೆ ಹೋಗಿ ಸೇರಿಕೊಂಡದ್ದರಿಂದಲೂ ತುರ್ಕಿಯಿಂದಲೇ ಸುಲ್ತಾನರು ಹೊಸ ಸೈನ್ಯ ಕಳುಹಿಸಬೇಕಾಯಿತೆಂತಲೂ ತಿಳಿಸಿದೇನೆ. ಇದಲ್ಲದೆ ಈ ದಂಗೆಕೋರರಿಗೆ ಸಮಾಧಾನ ಹೇಳಿ, ಅವರ ಅಭಿಪ್ರಾಯವನ್ನು ತಿಳಿದುಕೊಂಡು ಬರಬೇಕೆಂದು ಸುಲ್ತಾನರವರು ಕೆಲವು ಜನ ದೊಡ್ಡ ಮನುಷ್ಯರನ್ನು ಅಲ್ಲಿಗೆ ಕಳುಹಿಸಿದಾರೆ. ಈ ದೊಡ್ಡ ಮನುಷ್ಯರು ಹೊಡೀಡಾ ಎಂಬ ತೀರ ಪಟ್ಟಣಕ್ಕೆ ಬಂದಿಳಿದರು. ಅತ್ತಲಾಗಿ ದಂಗೆಕೋರರು ಕಟಾಬಾ ಮತ್ತು ಐಬಾ ಎಂಬೀ ಎರಡು ಪಟ್ಟಣಗಳನ್ನೂ ಸ್ವಾಧೀನ ಮಾಡಿಕೊಂಡದ್ದಲ್ಲದೆ ಈಗ ಟೆಯಿಜ್ ಎಂಬ ಪಟ್ಟಣಕ್ಕೆ ಮುತ್ತಿಗೆಹಾಕಿಕೊಂಡಿದಾರೆ.

❖❖❖❖

ರಷ್ಯಾ ರಾಜ್ಯದಲ್ಲಿ ಹಳೇ ಭಕ್ತರು ಎಂಬ ಒಂದು ಗುಂಪಿನ ಜನರು ಇರುತ್ತಾರೆ. ಇವರೆಲ್ಲಾ ತುಂಬಾ ಐಶ್ವರ್ಯವಂತರು. ಚಕ್ರವರ್ತಿಯವರು ಕಳೆದ ಏಪ್ರಿಲ್ ೩೦ ರಲ್ಲಿ ಒಂದು ಇಸ್ತಿಹಾರನ್ನು ಪ್ರಕಟಿಸಿ, ಯಾರುಬೇಕಾದರೂ ಯಾವ ಮತವನ್ನಾದರೂ ಅವಲಂಬಿಸಿ ತನಗೆ ತೋರಿದಂತೆ ಮತಕೃತ್ಯಗಳನ್ನು ಆಚರಣೆ ಮಾಡಬಹುದು ಎಂದು ಅಪ್ಪಣೆಕೊಡಿಸಿದ್ದಲ್ಲದೆ ಸುಮಾರು ಐವತ್ತು ವರುಷಗಳ ಕೆಳಗೆ ಮುಚ್ಚಿಸಿದ ಬೇರೆ ಬೇರೆ ಮತಸ್ಥರ ದೇವಸ್ಥಾನಗಳನ್ನು ತೆರೆಯಬಹುದೆಂದೂ ಹುಕುಂ ಮಾಡಿದರು. ಈ ಇಸ್ತಿಹಾರು ಹಳೇ ಭಕ್ತರೆಂಬ ಗುಂಪಿನವರಿಗೆ ತುಂಬಾ ಸಂತೋಷವನ್ನುಂಟುಮಾಡಿತು. ಅವರ ಮುಖಂಡರೆಲ್ಲಾ ಸೇರಿ ಜಾರ್ ಚಕ್ರವರ್ತಿಯವರ ಉದಾರವಾದ ಮನಸ್ಸನ್ನು ಹೊಗಳಿ, ತಮ್ಮ ತಮ್ಮಲ್ಲೇ ಚಂದಾ ಎತ್ತಿ ೧೫೦ ಕೋಟಿ ದ್ರವ್ಯವನ್ನು ಕೂಡಿಸಿ, ಚಕ್ರವರ್ತಿಯವರಿಗೆ ಒಪ್ಪಿಸಿದರು. ರಷ್ಯಾ ಗವರ್ನಮೆಂಟಿನವರು ಈ ದ್ರವ್ಯದಿಂದ ಸೈಬೀರಿಯಾ ದೇಶದ ಉದ್ದಕ್ಕೂ ಇನ್ನೊಂದು ರೈಲ್ ರಸ್ತೆಯನ್ನು ಹಾಕಿಸುವವರಾಗಿದಾರೆ.

❖❖❖❖

ಇಂಗ್ಲಾಂಡಿಗೆ ಸೇರಿದ ಕೇಂಬ್ರಿಡ್ಜ್ ನಗರದಲ್ಲಿ ಮಿ॥ ಇ. ಜೆ. ಜೆಫ್‌ರ್ಸನ್ ಎಂಬೊಬ್ಬ ಕಾರೇಗಾರನು ಹೆಣಗಳನ್ನಿಡುವ ಒಂದು ಹೊಸ ತರಹಾ ಪೆಟ್ಟಿಗೆಯನ್ನು ಮಾಡಿರುತ್ತಾನೆ. ಪ್ರಾಣ ಹೋಗದೆ ಮೂರ್ಛೆಯಲ್ಲಿರುವವರನ್ನು ಅನೇಕ ಸಂದರ್ಭಗಳಲ್ಲಿ ಜನರು ಸತ್ತುಹೋದಂತೆ ತಿಳಿದು ಪೆಟ್ಟಿಗೆಯಲ್ಲಿಟ್ಟು ಸಮಾಧಿ ಮಾಡುವುದನ್ನು ಕೇಳಿದೇವೆ. ಹೀಗೆ ಇಟ್ಟರೂ ಒಂದು ವೇಳೆ ಪೆಟ್ಟಿಗೆಯೊಳಗೇ ಪ್ರಜ್ಞೆ ಬಂದರೆ ಅವನು ಆಚೆಗೆ ಎದ್ದು ಬರುವುದಕ್ಕೆ ಸಹಾಯವಾಗಬೇಕೆಂದು ಮೇಲ್ಕಂಡ ಕಾರೇಗಾರನು ನವೀನವಾದ ಪೆಟ್ಟಿಗೆಯನ್ನು ಮಾಡಿರುತ್ತಾನೆ. ಈ ಪೆಟ್ಟಿಗೆಯೊಳಗೆ ಒಂದು ಗುಂಡಿ ಇರುವುದು. ಒಳಗಿದ್ದವನು ಈ ಗುಂಡಿಯನ್ನು ಒತ್ತಿದರೆ ಹೊರಗಿಟ್ಟಿರುವ ದೊಡ್ಡ ಗಂಟೆಯು ತುಂಬಾ ಶಬ್ದಮಾಡುವುದು. ಮತ್ತು ಶ್ವಾಸವಾಡುವುದಕ್ಕೆ ಸಹಾಯವಾಗುವಂತೆ ಒಳಕ್ಕೂ ಹೊರಕ್ಕೂ ಗಾಳಿ ಆಡುವ ಉಪಾಯವನ್ನೂ ಮಾಡಿರುತ್ತಾನೆ. ಪೆಟ್ಟಿಗೆಯೊಳಗೆ ಒಂದು ಖಾನೆಯೂ ಈ ಖಾನೆಯಲ್ಲಿ ಒಂದು ಸುತ್ತಿಗೆ, ದೀಪದಕಡ್ಡಿ ಪೆಟ್ಟಿಗೆ, ಒಂದು ಮೋಂಬತ್ತಿ ಮೊದಲಾದ ಸಾಮಾನುಗಳೂ ಇಟ್ಟಿರುವವು.

ಮೈಸೂರು ಗೆಜೆಟ್ ಸಂಗ್ರಹ.

ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಹಾಸನ, ಬೇಲೂರು, ಆಲೂರು, ಈ ಮೂರು ಸ್ಥಳಗಳಲ್ಲಿ ಪ್ಲೇಗ್ ಉಪದ್ರವನ್ನು ನಿಲ್ಲಿಸುವುದಕ್ಕೆ ಮನೆಯಿಂದ ಮನೆಗೆ ಹೋಗಿ ಆಡನಾಯಿಸಿ ಮಾಡುವ ಅಧಿಕಾರವನ್ನು ಡೆಪ್ಟಿ ಕಮಿಷನರಿಗೆ ವಹಿಸಿದೆ. ಈ ಭಾಗದಲ್ಲಿ ಸೂಕ್ತ ತೋರಿದ ಏರ್ಪಾಡುಗಳನ್ನು ಜಾರೀಲಿ ತರಲು ಅವರು ಅಧಿಕಾರ ಉಳ್ಳವರಾಗಿದಾರೆ.

ಮಿ॥ ಗಳಾದ ರಂಗನಾಥ ಮೊದಲಿಯಾರ್‌ರನ್ನೂ ಕರಿಗಿರಿ ನರಸಿಂಹೈಯನವರನ್ನೂ ಮಳವಳ್ಳಿ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಸ್ಕೂಲುಗಳ ಮೇಲ್ವಿಚಾರಣಾ ಕಮಿಟಿಗೆ ಮಿ॥ ಎಚ್. ವಿ. ನಂಜುಂಡಯ್ಯನವರನ್ನು ಪ್ರೆಸಿಡೆಂಟಾಗಿ ನೇಮಕ ಮಾಡಿದೆ.

ಸಬ್ ಅ॥ ಸರ್ಜನ್ ಮಿ॥ ಎಸ್. ಕೆ. ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಬ್ ಅ॥ ಸರ್ಜನ್ ಮಿ॥ ಟಿ. ಎಸ್. ಸಿದ್ಧಪ್ಪನವರನ್ನು ಮುಂಡಗೆರೆಯಿಂದ ಶಿವಮೊಗ್ಗಾ ಸಿವಿಲ್ ಆಸ್ಪತ್ರೆಗೆ ವರ್ಗಮಾಡಿದೆ.

ತುಂಕೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮಿ॥ ಕೆ. ಎಸ್. ಬೊರೆಸ್ವಾಮಿ ಐಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ॥ ಚಂಗಯ್ಯಚೆಟ್ಟಿಯವರು ಕಡೂರು ಡಿಸ್ಟ್ರಿಕ್ಟಿನ ಡೆ॥ ಕಮಿಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಕೆಲಸನೋಡತಕ್ಕದ್ದು.

ಕಡೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರಾದ ಮಿ॥ ಎಸ್. ವೆಂಕಟರಾಯರನ್ನು ತುಮಕೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ

ಮಿ॥ ಬಿ. ಚನ್ನಿಗಲ್ಲನವರು ಬೆಂಗಳೂರು ತಾಲ್ಲೂಕಿನ ಭಾರವನ್ನು ವಹಿಸಿದಾರಭ್ಯ ಅಂದರೆ ಕಳೆದ ಏಪ್ರಿಲ್ ೭ ರಿಂದ ಸಬ್ ಡಿವಿಜನ್ ಅಮಲ್ದಾರರಾಗಿ ನೇಮಿಸಲ್ಪಟ್ಟಿದಾರೆ

ಮೈಸೂರು ಇಂಪೀರಿಯಲ್ ಸರ್ವಿಸ್ ರಜಿಮೆಂಟಿನಲ್ಲಿ ಮಾರ್ಚಿ ೧೩ ಲಾಗಾಯಿತು ಮುಂದೆ ಹೇಳುವ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ.—ಟ್ರೂಪ್ ಕಮ್ಯಾಂಡರ್ ರಿಸಲ್ದಾರಿಯಲ್ಲಿ ಟಿ. ಸಂಜೀವಜೀ ಅರಸಿನವರನ್ನು ೧ನೇ ಗ್ರೇಡಿಗೂ, ಖಂಡೇರಾವ್ ಘಾಟ್ಕೆಯವರನ್ನೂ ಶ್ರೀನಿವಾಸರಾವ್ ಸಾಲಿಕೆಯವರನ್ನೂ ೨ನೇ ಗ್ರೇಡಿಗೂ ಲಕ್ಷ್ಮಣರಾವ್ ಮೋರೆಯವರನ್ನೂ ಹಯಾತ್ ಉಲ್ಲಾಖಾನಿಯವರನ್ನೂ ೩ನೇ ಗ್ರೇಡಿಗೂ ಸುಬ್ಬರಾಜೇ ಅರಸಿನವರನ್ನು ೪ನೇ ಗ್ರೇಡಿಗೂ ಬಡ್ತಿಮಾಡಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ಆಯಾ ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ವಿಚಿತ್ರವಾದ ಕಳ್ಳನು

ಅಯ್ಯಾ,

ಮೇಗರವಳ್ಳಿ ಮತ್ತು ನಾಲೂರು ಈ ಪ್ರಾಂತ್ಯದ ಹಳ್ಳಿಗಳಲ್ಲಿ ಒಬ್ಬ ಹಗಲುಕಳ್ಳನಿರುತ್ತಾನೆ. ಈತನು ಅಲ್ಲಲ್ಲಿ ಹಳ್ಳಿಯಲ್ಲಿ ಇರುವವರ ಮನೆಗಳಿಗೆ ಹೋಗಿ ಆ ಮನೆಯವರಿಗೆ ತಾನು ಸೆಟ್ಟಿ ಎಂತಲೂ ಅಥವ ವಿದ್ಯಾಕಲಿಸುವ ಜಂಗಳೆಂತಲೂ ಹೇಳುತ್ತಾನೆ. ನಂತರ ಕ್ಷೇಮಸಮಾಚಾರವನ್ನು ಮಾತಾಡಿ ನಾನು ಒಬ್ಬಳು ಬಡ ಹೆಂಗಸಿನ ಮನೆಯಲ್ಲಿ ಒಂದು ಗಬ್ಬದಕತ್ತೆಯನ್ನು ಗೊತ್ತುಮಾಡಿದ್ದೇನೆಂತಲೂ ಅದಕ್ಕೆ ನಾಲ್ವತ್ತು ರೂಪಾಯಿ ಬೇಕೆಂತಲೂ ಈಗ ಅದನ್ನು ಇಪ್ಪತ್ತುನಾಲ್ಕು ರೂಪಾಯಿಗೆ ಕೊಡುತ್ತಾಳೆ ನಾನು ಕೊಡಿಸುತ್ತೇನೆ. ನನಗೆ ಎರಡು ರೂಪಾಯಿ ಕೊಡಿ ಎಂತಲೂ ಹೇಳಿ ನೀವೇ ರೂಪಾಯಿ ಹಿಡಿದುಕೊಳ್ಳಿ ಎಂದು ಮೋಸಗೊಳಿಸಿ ಕೆಲವು ದೂರ ಕರೆದುಕೊಂಡು ಹೋಗಿ—ನೀವು ಈ ಗಿಡದ ಮರೆಯಲ್ಲಿ ಇಲ್ಲೇ ಕೂತುಕೊಳ್ಳಿ. ನಿಮ್ಮನ್ನು ಕಂಡರೆ ಆವಳು ಕೊಡೋದಿಲ್ಲವೆಂದು ನಂಬಿಸಿ ರೂಪಾಯಿ ತೆಗೆದುಕೊಂಡು ತನ್ನದೊಂದು ಪಂಚೆಯನ್ನು ಅಲ್ಲೇ ಇಟ್ಟು ನಂತರ ಪರಾರಿಯಾಗುತ್ತಾನೆ. ಇದೇ ರೀತಿ ಜಮಗಲ್ಲಿನಲ್ಲಿ ಒಬ್ಬ ಗೌಡರಿಗೆ ಹದಿನೈದು ರೂಪಾಯಿಗೂ ಮುಂಡುವಳ್ಳಿಯಲ್ಲಿ ಒಬ್ಬ ಅಕ್ಕಸಾಲೆಗೆ ಇಪ್ಪತ್ತು ರೂಪಾಯಿಗೂ ಗುಬ್ಬಿಗದಲ್ಲಿ ಒಬ್ಬ ಗೌಡರಿಗೆ ಇಪ್ಪತ್ತುನಾಲ್ಕು ರೂಪಾಯಿಗೂ ಇನ್ನು ಕೆಲವರಿಗೆ ಇದೇ ರೀತಿ ಸುಲಿಗೆ ಮಾಡಿಕೊಂಡು ಪರಾರಿಯಾಗಿರುತ್ತಾನೆ. ಈತನು ಒಂದು ಕಡೆ ಅಲ್ಲ, ತೀರ್ಥಹಳ್ಳಿ, ಚನ್ನಗಿರಿ ರಾಮಣ್ಣನ ಮನೆ ಹೊಕ್ಕ ಕಳ್ಳರು ಎಷ್ಟೆಷ್ಟು ದೂರದಲ್ಲಿ ದರೋಡೆ ಮಾಡಿದರೋ ಅದೇ ರೀತಿ ಈತನು ೪—೫ ಮೈಲು ಫಾಸಲೆಯಲ್ಲಿ ಈ ರೀತಿ ಮಾಡುತ್ತಾನೆ. ಯಾರನ್ನು ಕೇಳಿದರೂ ಒಂದೇ ತರನಾದ ವರ್ಣವನ್ನು ಹೇಳುತ್ತಾರೆ ಈತನನ್ನು ಈ ಸುಲಿಗೆಗೆ ಮೊದಲು ನಾನು ನೋಡಿದ್ದೆ. ಎರಡು ದಫ ನಮ್ಮ ಅಂಗಡಿಯಲ್ಲಿ ಸ್ವಲ್ಪ ಬಳ್ಳಿರೆ ವ್ಯಾಪಾರ ಮಾಡಿದ್ದ. ಈತನ ನಮೂನೆ ತಲೆ ಕೂದಲು ಜಾಸ್ತಿಯಾಗಿ ಇದೆ. ಬಿಳುಪು ಮಿಶ್ರವಾದ ಕೆಂಪಿನಲ್ಲಿದ್ದಾನೆ ಸುಮಾರು ೨೫ ವರುಷ ಪ್ರಾಯವಾಗಬಹುದು. ಈತನನ್ನು ಯಾರಾದರೂ ಕಂಡರೆ ವಿಚಾರಣೆ ಇಲ್ಲದೇನೇ ಸ್ಟೇಷನ್ನಿಗೆ ದಾಖಲ್ ಮಾಡಿದರೆ ಆ ಕಾಲದಲ್ಲಿ ಹಣ ಕಳಕೊಂಡವರು ಒಟ್ಟೊಬ್ಬರಾಗಿ ಬರುವರು.

೬—೬—೦೪,
ನಾಲೂರು.

ಕೆ. ಟಿ. ದೇವಪ್ಪ.

ಅವ್ಯವಸ್ಥೆಯು ವ್ಯವಸ್ಥೆಯಾಗಲಿಲ್ಲವಲ್ಲ.

ಅಯ್ಯಾ,

ಮಳವಳ್ಳಿ ತಾಲ್ಲೂಕು ಕ್ಯಾತನಹಳ್ಳಿ ಮತ್ತು ಕದಬಹಳ್ಳಿ ಗ್ರಾಮಗಳ ಎಲ್ಲೆ ಸರಹದ್ದಿನಲ್ಲಿ ಸರ್ವೆ ನಕಾಶೆಯಲ್ಲಿ ತೆಗದಿರುವ ಸರ್ಕಾರಿ ಖರಾಬು ಹಳ್ಳಕ್ಕೆ ಖೂಹಳ್ಳ ಬಸಕಟ್ಟೆ ಎಂಬುವನು ಸರ್ಕಾರದ ಅಪ್ಪಣೆಯನ್ನು ಪಡೆಯದೆ ಕಲ್ಲಿನಿಂದ ಅಣೆಕಟ್ಟು ಕಟ್ಟಿ ಲ್ಯಾಂಡು ರೆವೆನ್ಯೂ ಕೋಡು ೩೩, ೪೯, ೧೩೩ನೇ ಸೆಕ್ಷನ್ನಿಗೆ ವಿರೋಧವಾಗಿ ಕೃತ್ಯ ನಡಿಸಿದ ವಿಷಯದಲ್ಲಿ ವಿವಾಹ ನಡೆದು ರೆವೆನ್ಯೂ ಕಮಿಷನರ್ ಸಾಹೇಬರವರು ತಾ. ೩೦—೧೧—೦೩ನೇ ನಂಬರು ೨೩೨೭ನೇ ನಂಬರು ಆರ್ಡರು ಮೂಲಕ ವ್ಯವಸ್ಥೆಯನ್ನು ಮಾಡಿದರು. ಈ ಆರ್ಡರು ಜಾರೀಲಿ ಬಾರದಿರಲು, ಮ

ಟ್ಟ ಸ್ಥಳಗಳಿಗೆಲ್ಲಾ ಅನೇಕ ಅರ್ಜಿಗಳನ್ನೂ ಈ ಪತ್ರಿಕಾ ಮು ಖೇನವೆ ಸಹ ಅರಿಕೆಮಾಡಿಕೊಂಡ ಮೇಲೆ ತಾಲ್ಲೂಕು ಅಧಿಕಾರಿಗ ಳಿಗೆ ದಯಹುಟ್ಟಿ, ಗವರ್ನಮೆಂಟು ಆರ್ಡರು ಜಾರೀ ಮಾಡಿರುತ್ತೇ ವು ಕೆಲವು ಮಾತ್ರ ಮುಕ್ಕಾಲು ಅಥವ ಒಂದು ಗಜ ಪ್ರಮಾಣ ಎಷ್ಟು ತೇ ವು, ಮೇಲಕ್ಕೆ ರಿಪೋರ್ಟು ಮಾಡಿ ನನಗೂ ತಾ ೧೮—೩—೦೫ ರ ಮಾರ್ಚಿ ೬೯ನೇ ನಂಬರು ೫ ಕಂ ಕೊಟ್ಟಿರುತ್ತಾರೆ. ಇದಕ್ಕೆ ಗವರ್ನಮೆಂಟು ಆರ್ಡರು ಸಂಪೂರ್ಣವಾಗಿ ಜಾರೀ ಆಗ ಲ್ಲವೆಂದು ಅನೇಕ ಅರ್ಜಿಗಳನ್ನು ತಾಲ್ಲೂಕಿಗೂ ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿಗೂ ಬರೆದುಕೊಂಡೆನು ಒಂದಕ್ಕೂ ಜವಾಬೇ ಇಲ್ಲವು ಆರ್ಡರು ಸಂಪೂರ್ಣವಾಗಿ ಜಾರಿಯೂ ಮಾಡಿ ಲ್ಲವು ಈಗ ಮಳೆ ಹುಯಿದು ಸದರಿ ಹಳ್ಳದಲ್ಲಿ ನೀರು ಬರು ತ್ತೇ ಸದರಿ ಬಸವಪ್ಪಯ್ಯನು ಸವಮಾತ್ರ ಕಿತ್ತುಹಾಕಿರುತ್ತಾನೆಂದು ಹೇಳಿದ್ದ ಪ್ರದೇಶಕ್ಕೆ ಸುಮಾರು ಮುಕ್ಕಾಲು ಗಜ ಎತ್ತರ ಕಲ್ಲು ಕಟ್ಟಿ, ಬಳಿತಾಳೆ ಮುಳ್ಳು ನೆಟ್ಟು, ನೀರು ಹೋಗಲು ತಡೆಮಾಡಿಬಿ ಟ್ಟಿರುತ್ತಾನೆ. ಈ ಸಂಗತಿಯನ್ನು ಸನ್ಮಾನ ಶೇಕದಾರರಿಗೆ ರೂ ಬರೂ ತೋರಿಸಲು ಅವರು ನೋಡಿ—ನಾನೇ ಕೀಳಿಸಿದ್ದೆ ನು; ಈಗ ಪುನಃ ಕಟ್ಟಿರುತ್ತಾನೆಂದು ಹೇಳಿ ಹೊರಟುಹೋದರು. ಈ ವಿಚಾರವನ್ನೇ ಕುರಿತು ಡೆಪ್ಯುಟಿ ಕಮಿಷನರ್ ಸಾಹೇಬರವರಿ ಗೂ ತಾಲ್ಲೂಕಿಗೂ ಅರ್ಜಿ ಕೊಟ್ಟಿರುತ್ತೇನೆ. ಇನ್ನು ಜವಾಬು ಬಂದಿಲ್ಲವು ಮುಖ್ಯವಾಗಿ ರೆವಿನ್ಯೂ ಕಮಿಷನರವರ ಆರ್ಡರು ಹುಟ್ಟಿ ಒಂಭತ್ತು ವರುಷವಾದಾಗ್ಯೂ ತಾಲ್ಲೂಕಿನವರು ಸಂಪೂ ರ್ಣವಾಗಿ ಜಾರೀ ಮಾಡಿಸದೆ ಹೋದಮೇಲೆ ಬಡ ರೈತರು ಮಾಡು ವದೇನು? ಗವರ್ನಮೆಂಟ ಆರ್ಡರೇ ಈ ರೀತಿ ಆದಮೇಲೆ “ಸರಿ ಯ ಕಾಣು ಗಿರಿಯ ಮುಟ್ಟಿತೇ” ಎಂಬಂತೆ ನನ್ನ ಅಹವಾಲ್ ಕೇಳುವವರು ಯಾರು? ಸರ್ಕಾರದವರು ದುಷ್ಟನಿಗ್ರಹವನ್ನು ಮಾ ಡದೆ ಇದ್ದರೆ ಬಲಿಷ್ಟರು ಬಲಹೀನರ ಸರ್ವಸ್ವವನ್ನು ಅಪಹರಿಸುವ ರು. ಆ ಹಾ ಅಪಹರಣಕ್ಕೆ ಅವಕಾಶವಿಲ್ಲದಂತೆ ಸರ್ಕಾರದವರು ಮಾಡುವದು ಬೇಕಾದ ಪಳಿಗೆ ಮುಖ್ಯವಾದುದು ಇಂಥಾದ್ದರಲ್ಲಿ ನಮ್ಮ ತಾಲ್ಲೂಕಿನವರು ಈ ವಿಷಯದಲ್ಲಿ ಗಮನ ಕೊಡದೆ ಇರು ವದು ಯಾವ ನ್ಯಾಯವು? ಅಂತೂ ಇಂತೂ ಈ ವರುಷವೂ ನನ್ನ ತೋಟದ ಪಸಲು ಆಗುವುದಕ್ಕೆ ಅವಕಾಶವಿಲ್ಲದಂತಾಗಿದೆ. ಈ ತಾಲ್ಲೂಕಿನಲ್ಲಿ ಮೇಲಿನ ಆರ್ಡರೇ ಈ ರೀತಿಯಾಗಿ ಪರಿಣಮಿಸಿದ ಮೇಲೆ ಬಡವರ ಗತಿ ಏನಾಗಬೇಕು? ವಾಚಕರೇ, ನೀವುನೂ ಡೋಣ?

೮—೩—೦೫. ಚನ್ನಪ್ಪಯ್ಯ.

ವಿದ್ಯಾಭ್ಯಾಸದ ಪರಿಣಾಮ

ಅಯ್ಯಾ,

ನಮ್ಮ ಮೈಸೂರು ಗವರ್ನಮೆಂಟಿನವರು ಪ್ರಜೆಗಳ ಮೌಢ್ಯವನ್ನು ಹೋಗಲಾಡಿಸುವದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ವಿದ್ಯಾಭ್ಯಾಸದ ಇಲಾಖೆಯನ್ನು ಏರ್ಪಡಿಸಿದಾರೆ. ಸ್ಕೂಲುಗಳಲ್ಲಿ ವಿದ್ಯಾಭ್ಯಾಸಕ್ಕೆ ಬೇಕಾಗುವ ಸಮಸ್ತ ಸಲಕರಣೆಗಳೊಡನೆ ಉಪಾಧ್ಯಾಯರು ನೂತನ ರೀತಿಯಾಗಿ ವಿದ್ಯೆಹೇಳುತ್ತಾರೆ ಆದರೇನು! “೮ ದಿವಸಕ್ಕೆ ೫ ಕಲಿಯುತ್ತಾನೆ, ೫ ದಿನಕ್ಕೆ ೩ ಮರೆಯುತ್ತಾನೆ. ೧೦೮ ಶ್ಲೋಕಗಳನ್ನು ಎಷ್ಟು ದಿವಸಕ್ಕೆ ಕಲಿ ಯುತ್ತಾನೆ?” ಎಂಬುವ ಲೆಕ್ಕಾಚಾರದ ಪ್ರಕಾರ ಉಪಾಧ್ಯಾಯರು ಕಷ್ಟಪಟ್ಟು ಕಲಿಸಿದ್ದು ರಜಾ ಕಾಲಗಳಲ್ಲಿ ವ್ಯರ್ಥವಾಗಿ ಹೋಗುತ್ತದೆ. ಒಂದು ದಿನದಲ್ಲಿ ಪ್ರಾತಃಕಾಲ ಎಳುಗಂಟೆ ಆಗಾಯಿತು ೯ ಗಂಟೆ ವರಿಗೂ ಮಧ್ಯಾಹ್ನ ೨॥ ಗಂಟೆ ಆಗಾಯಿತು ೫ ಗಂಟೆ ವರಿಗೂ (ದಿನ ೧ ಕ್ಕೆ ೬½—೫ ಗಂಟೆ ಮಾತ್ರ) ಪಾಠ ಹೇಳಿ ಕೊಡುತ್ತಾರೆ. ವಾರದಲ್ಲಿ ಶನಿವಾರ ಸಂತೆ ರಜ, ಸಂತೆಯಲ್ಲಿ ಹುಡುಗರು ತಿರಿಗಿ ತಿರಿಗಿ ಅನಾರೋಗ್ಯವನ್ನು ಹೊಂದುವದಕ್ಕೂ ಉಪಾಧ್ಯಾಯರು ತಕರಾರಿ ವಗೈರೆ ಕೊಂಡುಕೊಳ್ಳುವದಕ್ಕೂ ಅನುಕೂಲ ಆದಿತ್ಯವಾರ ವಿಶ್ರಾಂತಿ ರಜ. ಒಂದು ಪಕ್ಷದಲ್ಲಿ ದ್ವಾದಶಿ ಹತ್ತುಗಂಟೆ ರಜ. ಉಪಾಧ್ಯಾಯರು ಏಕಾದಶಿ ಹಗಲು ಉಪವಾಸದಿಂದ ಬಳಲುತ್ತಲೂ ರಾತ್ರಿ ಜಾಗರಣೆ ಮಾಡಿ ದ್ವಾದಶಿ ಹತ್ತುಗಂಟೆ ಊಟದಿಂದ ಮಂದಾಗ್ನಿಯಾಗಿ ತೂಕಡಿಸುತ್ತಲೂ ವಿದ್ಯಾ ಹೇಳತಕ್ಕದ್ದು ಸಾಧಾರಣವಾಗಿಯೇ ಇರುತ್ತದೆ. ತಿಂಗಳಲ್ಲಿ ಹಬ್ಬಗಳು ತಿಥಿಗಳು ವಗೈರೇ ರಜಾಗಳು ಇದ್ದೇ ಇರುತ್ತವೆ. ವರ್ಷದಲ್ಲಿ ಬೇಸಿಗೆ ರಜಾ ಒಂದು ತಿಂಗಳು. ಇದರಲ್ಲಿ ಉಪಾಧ್ಯಾಯರು ಬಿಸಲಿನ ತಾಪವನ್ನು ಹೋಗಲಾಡಿಸಿಕೊಳ್ಳುವದಕ್ಕೆ ಹವಾ ಚನ್ನಾಗಿರತಕ್ಕ ತಂಪಾದ ಸ್ಥಳಗಳಲ್ಲಿ ವಾಸಮಾಡ ಬರಲು ಅನುಕೂಲ. ವಿದ್ಯಾರ್ಥಿಗಳಾದರೋ ಬಿಸಲಿನಲ್ಲಿ ತಮ್ಮ ತಮ್ಮ ಹೊಲತೋಟಗಳಲ್ಲಿ ಸ್ವೇಚ್ಛೆಯಾಗಿ ತಿರಿಗಿ ಅನಾರೋಗ್ಯವನ್ನು ಹೊಂದುವದಕ್ಕೆ ಅನುಕೂಲ. ಈ ರಜಾಗಳಲ್ಲದೆ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಕಾಯಿಲೆ ಕಸಾಲೆ, ತಮ್ಮ ಸ್ವಂತ ಕೆಲಸಗಳೇ ಮುಂತಾದವುಗಳ ದೆಸೆಯಿಂದ ಕೆಲವು ದಿವಸಗಳು ಕಳೆಯುತ್ತವೆ. ಇದಲ್ಲದೆ ಪ್ಲೇಗಿನ ಹಾವಳಿ ವಿದ್ಯಾಭ್ಯಾಸಕ್ಕೆ ಶತ್ರುವಾಗಿರುತ್ತದೆ. ಹುಡುಗರಾದರೋ ಯಾವಾಗಲೂ ಆಟಗಳಲ್ಲಿ ಮಗ್ನರಾಗಿ ವಿದ್ಯಾಭ್ಯಾಸವು ನೆಪ ಮಾತ್ರವುಳ್ಳವರಾಗಿರುತ್ತಾರೆ ಈ ನೂತನ ರೀತಿಯ ವಿದ್ಯಾಭ್ಯಾಸವನ್ನು ನೋಡಲಾಗಿ ಸರ್ಕಾರದವರ ಪ್ರಯತ್ನವು ಸಫಲವಾಗಲಾರದೆಂದು ಊಹಿಸಬೇಕಾಗುತ್ತದೆ. ವಿದ್ಯಾರ್ಥಿಗಳ ತಂದೆ ತಾಯಿಗಳ ಪರಿತಾಪವನ್ನು ಎಷ್ಟು ಹೇಳಿದರೂ ತೀರದು. ಮಕ್ಕಳು ವಿದ್ಯಾ ಕಲಿಯಲಿ ಎಂದು ಕೊಸವಿಧಿ ಸ್ಕೂಲ್ ಫೀಯನ್ನು ಕೊಟ್ಟು ಪುಸ್ತಕಗಳನ್ನು ಕೊಡಿಸಿ ಸ್ಕೂಲಿಗೆ ಕಳುಹಿಸುವದಲ್ಲದೆ ಅನ್ನ ಬಟ್ಟೆ ಯನ್ನು ಕೊಟ್ಟು ಪೋಷಿಸುತ್ತಾ ಎಷ್ಟು ದಿವಸಕ್ಕೆ ಬುದ್ಧಿವಂತರಾಗುತ್ತಾರೆಯೋ ಎಂದು ನಿರೀಕ್ಷಿಸುತ್ತಾರೆ. ಇದೇ ತಂದೆತಾಯಿಗಳ ಕರ್ತವ್ಯ. ಇದುವಿನಹ ತಮ್ಮ ಜೀವನೋಪಾಯದ ಕೆಲಸಕಾರ್ಯಗಳನ್ನು ತೊರೆದು ಹುಡುಗರು ಆಟವಾಡತಕ್ಕದ್ದನ್ನೂ ಜಗಳವಾಡತಕ್ಕದ್ದನ್ನೂ ದೊಂಬಿಮಾಡತಕ್ಕದ್ದನ್ನೂ ಬಿಡಿಸಿ ಸನ್ಮಾರ್ಗಕ್ಕೆ ತರತಕ್ಕದ್ದು ತಂದೆತಾಯಿಗಳಿಗೆ ಸಾಧ್ಯವೇ? ಈ ಸಂಕಟವನ್ನು ಸಹಿಸಲಾರದೆ ಸ್ವಾಮಿ ಮೇಷ್ಟ್ರೇ, ನನ್ನ ಮಗ ಕೆಟ್ಟುಹೋದನು ಎಂದು ದೂರು ಹೇಳಿಕೊಂಡರೆ—ಏನಯ್ಯಾ, ಕ್ರಿಸ್ತಪ್ರಕಾರ ಕಾನೂ ಹೇಳಿಕೊಡುತ್ತೇನೆ. ನಿಮ್ಮ ಹುಡುಗರು ಆಟವಾಡಿದರೆ ನಾವೇನುಮಾಡೋಣ! ನಿಮಗೆ ಅವಶ್ಯ ಇದ್ದರೆ ಟೀಚರನ್ನು ಇಟ್ಟುಗೊಂಡು ನಿಮ್ಮ ಮನೆಯಲ್ಲಿ ವಿದ್ಯಾಬುದ್ಧಿ ಕಲಿಸಿಕೊಳ್ಳಿರಿ ಎಂದು ಗದರಿಸಿಕೊಳ್ಳುತ್ತಾರೆ “ಇದೆಲ್ಲಾ ಯೋಕಪ್ಪ ನಿಷ್ಟೂರ. ನಮ್ಮ ಅದೃಷ್ಟದಲ್ಲೇ ವಿದ್ಯ ಇಲ್ಲ. ಮಕ್ಕಳಿಗೆ ಇನ್ನೆಲ್ಲಿಂದಾ ಬಂದೀತು” ಎಂದು ತಂದೆತಾಯಿಗಳು ತಮ್ಮ ಜೊತೆಯಲ್ಲಿ ಸೇಗಿಲು ಹೊಡೆಯುವದಕ್ಕಾಗಲಿ ದನ ಕಾಯುವದಕ್ಕಾಗಲಿ ಕರೆದುಕೊಂಡು ಹೋಗಬೇಕಾಗುತ್ತದೆ ಪಡರೈತನವರ ಗೋಳು ಯಾರಿಗೆತಾನೇ ಕೃತ? ನಮ್ಮ ದುರದೃಷ್ಟದ ಫಲ! ಇದನ್ನೆಲ್ಲಾ ಯೋಚಿಸಿದರೆ ಬಡರೈತರ ಮುದ್ದು ಪ್ರಾಯವಾದರೂ ಆಗಲಿ, ಅವರ ಮಕ್ಕಳು ಹ್ಯಾಗಿದ್ದರೂ ಇರಲಿ ಎಷ್ಟು ದಿವಸಕ್ಕಾದರೂ ವಿದ್ಯೆಕಲಿಯಲಿ ಮಾಸ್ಟರುಗಳುಮಾತ್ರ ತೊಂದರೆ ಪಡಬಾರದು, ದೇಹಾಯಾಸವನ್ನು ಹೊಂದಬಾರದು. ಸೌಖ್ಯಕ್ಕೆ ಕೊರತೆ ಇರಬಾರದು ಎಂಬುವ ಉದ್ದೇಶವೇನಾದರೂ ವಿದ್ಯಾ ಇಲಾಖೆಯವರ ಗ್ರಹಿಕೆಯಲ್ಲಿ ಇದೆಯೋ ಹ್ಯಾಗೋ ತಿಳಿಯದು

ನಮ್ಮ ಬಗಲೂರು ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ನಾರಾಯಣರಾಯರು ಮೃದುಸ್ವಭಾವಿಗಳು, ಬಹಳ ಮುತುವರ್ಜಿವಹಿಸಿ ಹುಡುಗರಿಗೆ ಮನಸ್ಸಿಗೆ ಹಿಡಿಯುವ ಹಾಗೆ ವಿದ್ಯವನ್ನು ಹೇಳಿಕೊಡುತ್ತಾರೆ. ಇವರು ಬೇಜಾರಾಗದೆ ವಿದ್ಯೆಹೇಳತಕ್ಕದ್ದನ್ನು ನೋಡಿದರೆ ಅತ್ಯಂತ ಸಂತೋಷವಾಗುತ್ತದೆ. ಸ್ಕೂಲಿನ ಸ್ಥಿತಿ ನೋಡಿ ಬಹಳ ವ್ಯಸನಪಡುತ್ತಾರೆ ಉಳಿದ ಮಾಸ್ಟರುಗಳಿಗೆ ಪಸು ಬಾಧಕ? ಐಶ್ವರ್ಯವಂತರಮಕ್ಕಳು. ಸ್ಕೂಲ್ ಕೆಲಸದಲ್ಲಿ ಅಲಕ್ಷ್ಯ ಅಸ್ಥಿರತೆ ಇರೋಣದರಿಂದ ಕೆಲವು ಹುಡುಗರು ಸ್ಕೂಲ್ ಸಮೀಪದಲ್ಲಿ ಇದ್ದಾಗ್ಯೂ ಪು। ತಿಪ್ಪಯ್ಯನವರ ಪಾಠಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ಅಲ್ಲಿ ೩೦—೩೫ ಬಾಲಕರು ಬರಮಾಡಿಸಿದಾರೆ. ಇದಲ್ಲದೆ ಇಷ್ಟು ವರ್ಷಗಳಾದರೂ ಇಲ್ಲಿನ ರೈತರಲ್ಲಿ ಒಬ್ಬನಾದರೂ ಲೋವರ್ ಸೆಕಂಡರೀ ಪರೀಕ್ಷೆಯನ್ನು ಕೊಡಲಿಲ್ಲ. ಸ್ಕೂಲಿನ ಫಲಿತಾಂಶವು ಮೊದಲೇ ಗೊತ್ತಾಗಲಿಲ್ಲ. ಆದ್ದರಿಂದ ಸುಶಿಕ್ಷಿತ ವಿದ್ಯಾಸವು ಕ್ರಮೇಣ ರೈತರಲ್ಲಿ ಕಡಮೆಯಾಗುವದರಲ್ಲಿ ಸಂದೇಹವಿಲ್ಲ

ಬಗಲೂರು. ಬಡೇಸಾಬಿ

ತಾಲ್ಲೋಕು ವರ್ತಮಾನಗಳು.

ಮುಳಬಾಗಿಲು.—ಈ ಮಾಹೆ ತಾ. ೧ ರಲ್ಲಿ ನಮ್ಮ ಅಮಲ್ದಾರರಿಗೆ ಪುತ್ರರತ್ನ ಜನನವಾಯಿತು. ಈ ಶುಭವರ್ತಮಾನವು ಸಕ್ಕರೆ ಬೀರಿದ್ದು ಮೂಲಕ ತಾಲ್ಲೂಕಿನವರಿಗೆ ತಿಳಿದು, ಸರ್ವರು ಸಂತೋಷಪಟ್ಟರು.—ಇಲ್ಲಿ ಮಳೆ ಆಗಾಗ್ಯೆ ನಡೆಯೋಣದರಿಂದ ಜೋಳ ಮತ್ತು ಎಳ್ಳಿನ ಫಸಲು ಚನ್ನಾಗಿ ಜನಗಳಿಗೆಲ್ಲಾ ಸಂತೋಷವನ್ನುಂಟು ಮಾಡಿದೆ ಹವಾ ಆರೋಗ್ಯಕರವಾಗಿದೆ.—ಈ ತಾಲ್ಲೂಕಿಗೆ ಪೊಲೀಸು ಇನ್‌ಸ್ಪೆಕ್ಟರು (ಸುಬ್ರಾಯರು), ಜಮೇದಾರ್ (ನಾಗಪ್ಪನವರು) ಇಬ್ಬರು ಬರುತ್ತಲೇ ಕಳ್ಳತನ ಜೂಜು ಮೊದಲಾದ ದುರ್ನಡತೆಗಳು ಅಡಗಿಹೋದವು ಎಲ್ಲಿಯಾದರೂ ಅಕಸ್ಮಾತ್ ದುಷ್ಟ ನಡತೆಗಳು ನಡೆದಾಗ್ಯೂ ಅಪರಾಧಿಗಳಿಗೆ ತಮ್ಮ ನಡತೆಯಲ್ಲಿ (ಪೋಲೀಸು) ಅಧಿಕಾರಿಗಳ ಕಿವಿಗೆ ಬಿದ್ದೀತೋ ಎಂಬ ಭೀತಿ ಇರುತ್ತೆ.—ರೆವಿನ್ಯೂ ಕಮಿಷನರ್ ಸಾಹೇಬರವರ ಸವಾರಿಯು ಈ ತಾಲ್ಲೂಕಿಗೆ ದಯಮಾಡುತ್ತದೆ ಎಂಬ ಪ್ರವಾದ ಹುಟ್ಟಿದೆ

ದೊಡ್ಡಬಳ್ಳಾಪುರ.—ಇಲ್ಲಿ ೬ನೇ ತಾ ನಲ್ಲಿ ಒಂದು ಹದ ಮಳೆ ಸುರಿಯಿತು. ಇಲ್ಲಿಗೆ ಸುಮಾರು ನಾಲ್ಕು ಮೈಲಿ ದೂರವಿರುವ ಒಬದೇನಹಳ್ಳಿ ಲಕ್ಷ್ಮಪ್ಪನ ಮನೆಯಲ್ಲಿ ಎತ್ತುಗಳು ಕಟ್ಟಿದ್ದ ಮನೆಗೆ ಸಿಡಿಲು ಬಿದ್ದು, ಗೋಡೆಯನ್ನು ಕೆಡವಿ ಒಳಕ್ಕೆ ನುಗ್ಗಿ ಒಳಗಿನ ಗೋಡೆಗೂ ತಗಲಿ, ಒಳಗೆ ಕಟ್ಟಿದ್ದ ೧೦೦ ರೂಪಾಯಿನ ಒಂದು ಜೋಡಿ ಎತ್ತುಗಳನ್ನು ಸಾಯಮಾಡಿ, ಪುನಹ ಸಿಡಿಲು ಮೇಲ್ಗಡೆ ತೂತುಮಾಡಿಕೊಂಡು ಹೋಗಿರುವುದಾಗಿ ಇಲ್ಲಿನ ಪೊಲೀಸ್ ಸ್ಟೇಷನಿಗೆ ರಿಪೋರ್ಟು ಬಂದಿದೆ.—ಮೈಲ್ ಬಸವಣ್ಣನ ಗುಡಿ ಹತ್ತರ ದೋಸೆ ಕಟ್ಟಿಕೊಂಡಿದ್ದವರ ಪೈಕಿ ಎರಡು ಗುಡಿಸಲುಗಳು ಸುಟ್ಟುಹೋದವು ಬಹಳ ಸಾಮಾನುಗಳು ನಷ್ಟವಾದವು. ಈ ಬಡವರಿಗೆ ಸರ್ಕಾರದವರು ಯಾವ ರೀತಿಯಿಂದಲಾದರು ಸ್ವಲ್ಪ ಸಹಾಯ ಮಾಡುವರೆ ಬಡವರು ಬದಕುತ್ತಾರೆ.—ಇಲ್ಲಿನ ಕೈಗಾರಿಕೆ ಸ್ಕೂಲಿಗೆ ನಮ್ಮ ಮೆ॥ ಬಾಬೂ ಸಾಹೇಬರ ಕುಮಾರರು ದಯಮಾಡಿಸಿ ನೋಡಿ ತೃಪ್ತಿಪಟ್ಟು ಒಳ್ಳೇ ರಿಪೋರ್ಟು ಬರೆದಿದಾರೆ. ಮತ್ತು ಬೊಂಬಾಯಿನ ಸಾಹುಕಾರರ ಕಂಪನಿಯವರೊಬ್ಬರು ದಯಮಾಡಿಸಿ ಒಳ್ಳೇ ರಿಪೋರ್ಟು ಬರೆದಿದಾರೆ ಮೇ ತಿಂಗಳಿನ ಕಡೆಯಲ್ಲಿ ಆರ್ಕಿಯಾಲಾಜಿಕಲ್ ಡೈರೆಕ್ಟರಾದ, ಮೆ॥ ರೈಸ್ ದೊರೆಯವರು ಕುಟುಂಬ ಸಮೇತರಾಗಿ ಬಂದು ನೋಡಿ, ಈ ಸ್ಕೂಲು ಬಹು ಉತ್ತಮವಾದ ಸ್ಥಿತಿಯಲ್ಲಿದೆ ಎಂತಲೂ, ಇಲ್ಲಿ ತಯಾರಾಗುವ ಸಾಮಾನು ನಮ್ಮ ಈ ದೇಶದ ಜನರಿಗೆ ಅನುಕೂಲವಾದವುಗಳಾಗಿವೆ ಎಂತಲೂ ಒಳ್ಳೇ ರಿಪೋರ್ಟು ಬರೆದು ಇರುವರು.

ಚಿಕ್ಕಮಗಳೂರು.—ಎರಡು ವಾರದಿಂದಲೂ ಹವಳ ಬಿಸಿಲೂ ಸೆಕೆಯೂ ಇದ್ದು ನೆನ್ನೆ ರಾತ್ರಿ ಸೋನೆ ಮಳೆಯು ಶುರುವಾಗಿದೆ. ಇನ್ನು ಮೇಲೆ ಮಲನಾಡಿನ ಜಡಿ ಮಳೆಯು ಸುರಿಯುವಹಾಗಿ ಕಾಣುತ್ತದೆ.—ಇಲ್ಲಿ ಆಕ್ಟಿಂಗ್ ಡೆಪ್ಯುಟಿ ಕಮಿಷನರಾಗಿದ್ದ ಮೆ॥ ಎ೯ ವೆಂಕಟರಾಯರಿಗೆ ತುಮಕೂರಿಗೆ ವರ್ಗವಾದಾಕಿಂತಲೂ ಇವರ ಬದಲಿಗೆ ಮೆ॥ ಜಂಗಯ್ಯ ಚೆಟ್ಟಿಯವರು ಬಂದು ಈ ದಿನ ೧೦ ನೆ ತಾರೀಖಿನ ಬೆಳಗ್ಯೆ ಡಿಸ್ಟ್ರಿಕ್ಟು ಟ್ರೆಜರಿ ಛಾರ್ಜು ವಹಿಸಿಕೊಂಡು, ಮೆ॥ ವೆಂಕಟರಾಯರೂ ಮೆ॥ ಜಂಗಯ್ಯಚೆಟ್ಟಿರೂ ಜೊತೆಯಲ್ಲಿಯೇ ಮಹಾರಾಜರವರ ವರ್ಧಂತಿ ಉತ್ಸವಕ್ಕಾಗಿ ಇದೇ ದಿನ ಬೆಳಗ್ಯೆ ಮೈಸೂರಿಗೆ ಪ್ರಯಾಣ ಮಾಡಿದರೆಂದೂ ಹೇಳುತ್ತಾರೆ.—ಮೆ॥ ನಾರಾಯಣಸ್ವಾಮಿ ಅಯ್ಯಂಗಾರ್ಯರು ಈ ವಾರದಲ್ಲಿ ಇಲ್ಲಿನ ತಾಲ್ಲೋಕು ಛಾರ್ಜನ್ನು ಮೆ॥ ನರಸಿಂಹಯ್ಯಂಗಾರ್ಯರಿಂದ ವಹಿಸಿಕೊಂಡರು. ಮೆ॥ ನರಸಿಂಹಯ್ಯಂಗಾರ್ಯರು ತಮ್ಮ ಹಿಂದಿನ ಹೆಡ್ ಅಕೌಂಟೆಂಟ್ ಕೆಲಸಕ್ಕೆ ವಾಪಸು ಮಾಡಲ್ಪಟ್ಟಿದಾರೆ.—ಇದೇ ತಿಂಗಳು ೯ ನೆ ತಾರೀಖಿಗೆ ಇಲ್ಲಿನ ಡಿಸ್ಟ್ರಿಕ್ಟಿನ ಶಿರಸ್ತೆದಾರರು ಮೆ॥ ಚಲುವಯ್ಯಂಗಾರ್ಯರಿಂದ ಇದೇ ಆಫೀಸಿನ ಇಂಗ್ಲೀಷ್ ಡಿಪಾರ್ಟ್‌ಮೆಂಟ್ ಹೆಡ್ ಕ್ಲರ್ಕ್ ಮೆ॥ ಸ್ವಾಗ್ ಯವರಿಗೆ ಶಿರಸ್ತೆ ಛಾರ್ಜನ್ನು ಕೊಡಿಸಿ ಮೆ॥ ಅಯ್ಯಂಗಾರ್ಯರನ್ನು ರಿಟೈರ್ ಮಾಡಿಸಿದಾರೆ.—ಇಲ್ಲಿನ ಸಂದಲ್‌ಕೋಠಿ ಛಾರ್ಜಿನಲ್ಲಿದ್ದ ಫಾರೆಸ್ಟರ್ ಆನಂದರಾಯರನ್ನು ಇದೇ ತಾಲ್ಲೋಕಿನ ರೇಂಜ್ ಆಫೀಸರ್ ಮೆ॥ ಈಗಲ್ಸ್ ಯವರು ಇದೇ ತಿಂಗಳು ೭ ನೆ ತಾರೀಖಿನಲ್ಲಿ ಯಾವದೋ ಒಂದು ನಡತೆನ ಸಂದರ್ಭದಲ್ಲಿ ಫಾರೆಸ್ಟರ್ ಆನಂದರಾಯರಿಂದ ಕೋಠಿಯ ಛಾರ್ಜ್ ವಹಿಸಿಕೊಳ್ಳದೆಯೂ ಮೇಲ್ಪಟ್ಟ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ ಅಪ್ಪಣೆ ಇಲ್ಲದೆಯೂ ನಿಷ್ಕಾರಣವಾಗಿ ಕೋಠಿಯ ಕೆಲಸದಿಂದ ವಜಾ ಮಾಡಿರುವದಾಗಿ ಅಪ್ಪಣೆ ಕೊಡಿಸಿ ಕಳುಹಿಸಿಬಿಟ್ಟರೆಂದೂ ವರ್ತಮಾನವಿದೆ.—ಪೋಸ್ಟ್ ಆಫೀಸುಗಳ ಸೂಪರೇಂಟಡಾದ ಮೆ॥ ಹಾಮಿಲ್ಟನ್ ಸ್ಮಿತ್ ಸಾಹೇಬರು ಇಲ್ಲಿಗೆ ಬಂದು ನೆನ್ನೆ ೯ ನೆ ತಾರೀಖಿನಿಂದ ಪೋಸ್ಟ್ ಆಫೀಸನ್ನು ಆಡಿಟ್ ಮಾಡುತ್ತಿದಾರೆ.—ಇಲ್ಲಿನ ಕರ್ನಾಟಕ ವೈದ್ಯಶಾಲೆಗೆ ಬೇಕಾದ ಸಾಮಾನಿಗಾಗಿ ಮುನ್ಸಿಪಾಲಿಟಿಯಿಂದ ಇನ್ನೂರು ರೂಪಾಯಿ ಸ್ಯಾಂಕ್ಷನ್ ಮಾಡಿರುವದೂ ಪ್ರತಿ ತಿಂಗಳಲ್ಲಿ ಹದಿನೈದು ರೂಪಾಯಿನಂತೆ ಸಾದಿಲವಾರು ಖರ್ಚಿಗಾಗಿ ಕೊಡಲು ಮುಂದೂರಾಗಿರುವದೂ ತುಂಬಾ ಅನುಕೂಲವೇ ಸರಿ.—ಇಲ್ಲಿನ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ಮಲ್ಲಯ್ಯ ಸಾಹೇಬರು ತಮ್ಮ ಸರ್ಕೀಟು ತೀರಿಸಿಕೊಂಡು ೯ ನೆ ತಾರೀಖಿಗೆ ಹೆಡ್‌ಕ್ವಾರ್ಟರನ್ನು ಸೇರಿದರು.

ತಿಪಟೂರು.—ಈಗ ಆಗಾಗ್ಗೆ ಮಳೆ ಬರುತ್ತಲೇ ಇದೆ. ಮತ್ತು ಕಳೆದ ಶನಿವಾರ ಸೋನೆ ಹಿಡಿದದ್ದರಿಂದ ಸಂತೆ ಚನ್ನಾಗಿ ನಡೆಯಲಿಲ್ಲ. ಪದಾರ್ಥಗಳ ಧಾರಣೆ ಜಡವಾಗಿರುತ್ತದೆ. ಒಂದು ಸೇರು ಹಾಲಿಗೆ ನಾಲ್ಕಾಣೆ. ಇತರ ಕಡೆಗಳಲ್ಲಿ ಸಿಕ್ಕುವ ಒಂದಾಣೆ ಹುಲ್ಲಿಗೆ ಇಲ್ಲಿ ನಾಲ್ಕಾಣೆ. ಬಡವರ ಜೀವ ಧಡಾರನ್ನುತ್ತೆ. ಇತರ ಕಡೆಗಳಲ್ಲಿ ತಿಗಳರಿರುವದರಿಂದ ಕಾಯಿಪಲ್ಯಗಳಿಗೆ ಅನುಕೂಲ; ಇಲ್ಲಿ ಅವರ ಹೆಸರೇ ಇಲ್ಲ. ಜನರಂತೂ ತರ್ಕಾರಿಯೋ ಕರಿಕರಿಯೋ ಮಾಡಿಕೊಳ್ಳುತ್ತಾರೆ ಕಣ್ಣು ಬಾಧೆಯಿಂದ ಅನೇಕ ಮಕ್ಕಳು ಕಾಯಿಲೆ, ಮತ್ತು ಚಿಕ್ಕವರು ದೊಡ್ಡವರನೇಕರಿಗೆ ಗಡ್ಡೆ ಊದಿಕೊಳ್ಳುವದು ಪ್ರಾರಂಭವಾಗಿದೆ.—ಹೆಗ್ಗಡಿಗಂ ಮದುವೆಯ ದಿಬ್ಬಣ ಸಂದರ್ಭದಲ್ಲಿ ಯಜ್ಞೇಶ್ವರನು ಚಪ್ಪರದೊಳಗೆ ಹೊಕ್ಕೊಳ್ಳಲು ಬಹಳ ಜನರು ಸುತ್ತಿಕೊಂಡು ನೀರು ಕುಡಿಸಿದರು. ಇಂಥಾ ಸಂದರ್ಭಗಳಲ್ಲಿ ಎಚ್ಚರಿಕೆಯಿಂದಿರುವದು ಒಳ್ಳೇದು.—ಕೆಲವು ತೆಂಗಿನ ಕಾಯಿಗಳನ್ನು ಚೋರಿ ಮಾಡಿದ ಒಬ್ಬನಿಗೆ ಹತ್ತು ದಿನಗಳ ಸಜಾ ನೇಮಕವಾಯಿತೆಂದು ತಿಳಿಯಿತು.—ಮಾಂಸದ ಮಾರ್ಕೆಟ್ಟು ರೈಲ್ ರಸ್ತೆಗೂ ಜನರು ವಾಯುಪಾನ ಮಾಡುವ ಸ್ಥಳಕ್ಕೂ ಮಧ್ಯೆ ಇರುವ ಹಾಳು ಮೈದಾನ. ಮುನಿಸಿಪಲ್‌ನವರು ಈ ಜಾಗವನ್ನು ನೋಡಬಾರದೋ ಏನೋ! ಅಂತೂ ಒಂದು ಕಟ್ಟಡವು ಬೇಕೆಂದು ದಯವಿಟ್ಟು ಯೋಚಿಸ್ಯರೆಂದು ನಿರೀಕ್ಷಿಸಲ್ಪಟ್ಟಿದೆ. ಮತ್ತು ಕಟುಗರು ಮಾರುವ ಪದಾರ್ಥವೆಂಥಾದ್ದೆಂದು ಸ್ವಲ್ಪ ಶನಿಖಿ ತೆಗೆದುಕೊಂಡರೆ ಒಳ್ಳೇದು ಇಲ್ಲದಿದ್ದರೆ ಅನೇಕರು ಕಾಯಿಲೆಯಾಗುತ್ತಾರೆಂಬುದರಲ್ಲಿ ಸಂಶಯವಿಲ್ಲ. ಜವಳಿ ಅಂಗಡಿ ಮೆ॥ ಮಸ್ತಾನ್‌ಸಾಬರು ಕಳೆದ ಬೇಸಿಗೆಯಲ್ಲಿ ತಮ್ಮ ಜನರು ನೀರಿಗೆ ತೊಂದರೆ ಪಡುತ್ತಿದ್ದದ್ದನ್ನು ನೋಡಿ ಆ ಬೀದಿಯ ಜನರಿಗಾಗಿ ತೋಡಿಸಿದ್ದ ಭಾವಿಯ ಕಲ್ಲುಕಟ್ಟಡವು ಈಗ ಪೂರೈಸಿತೆಂದು ತಿಳಿಯಿತು. ಮಹಮೆಜಿಕೆಯಿಂದ ತೆಗಸಿದವರ ಭಾವಿಗಳಲ್ಲಿ ನೀರು ಈಗ ಇದ್ದೇ ಇರುತ್ತೆ. ಜನಮೆಚ್ಚಿದವರ ಭಾವಿಗಳು ಕೆಟ್ಟಕೆದಂತಾಗಿವೆ. ಹೊಸದಾಗಿ ತೆಗೆಯುತ್ತಿರುವ ರೈಲ್ವೆ ಭಾವಿಯ ನೀರನ್ನು ಸೇದುತ್ತಿದ್ದ ಪಂಪು (ಯಂತ್ರವು) ಮಳೆಯ ದೆಸೆಯಿಂದ ಭಾವಿಯ ಆಳವನ್ನು ನೋಡುತ್ತಿತ್ತು. ರೈಲ್ವೆ ಇಂಜನಿಯರ್ ಸಾಹೇಬರೂ ಲೈನ್ ಇನ್‌ಸ್ಪೆಕ್ಟರ್ ಮೆ॥ ಅಂತೋಣಿಮುತ್ತೂ ಬಹು ಸಾಹಸದಿಂದ ಹೊರಗೆ ತೆಗೆದರು.—ವ್ಯಾಕ್ಸಿನೇಟರ್ ಮೆ॥ ಗುಬ್ಬಿ ತೋಟ್ಟದಾರಾಧ್ಯರು ಬಹು ಮುತುವರ್ಜಿಯಿಂದ ಈ ಪ್ರಾಂತ್ಯ ಕೆಲಸ ಮಾಡುತ್ತಿರುತ್ತಾರೆ ಒಂದೆರಡು ಹಳ್ಳಿಯವರು ಇನ್ನೂ ಬೆದರುತ್ತಿರುತ್ತಿದಾರೆಂದು ಕೇಳಿ ಅವರ ಮೌಢ್ಯಕ್ಕೆ ಆಶ್ಚರ್ಯಪಡಬೇಕಾಗಿದೆ.—ರೆಜಿಸ್ಟ್ರೇಷನ್ ಗುಮಾಸ್ತೆಯೊಬ್ಬರು ಕಠಿಣ ಕಾಯಿಲೆಯಾಗಿ ಬಿಕ್ಕಳಿಕೆಯುಂಟಾಗಲು ನಿರೀಕ್ಷೆ ತಪ್ಪಿತಂತೆ. ಮೆ॥ ಎಂಬಾರ್ಜಿಯರೆಂಬ ಕರ್ನಾಟಕ ವೈದ್ಯರು ಚಿಕಿತ್ಸೆ ಮಾಡಲು ಗುಣವಾಯಿತು. ಇತರ ಸ್ಥಳಗಳಲ್ಲಿರುವಂತೆ ಇಲ್ಲಿಯೂ ಒಂದು ಕರ್ನಾಟಕ ವೈದ್ಯಶಾಲೆಯನ್ನು ಇಡಿಸಿಕೊಟ್ಟರೆ ಪ್ರಜೆಗಳಿಗೆ ಮಹದುಪಕಾರವೂ ಮುನಸಿಪಾಲಿಟಿಯವರಿಗೆ ಕೀರ್ತಿಯೂ ಮೆ॥ ಪಂಡಿತರಿಗೆ ಪ್ರೋತ್ಸಾಹವೂ ಉಂಟಾಗುವದೆಂದು ಹಾರೈಸುತ್ತಾರೆ ಮೆ॥ ಪಂಡಿತರ ಪೂರ್ವಿಕರೆಲ್ಲರೂ ಕುಣಿಗಲಲ್ಲಿ ಪ್ರಸಿದ್ಧರಾಗಿದ್ದರೆಂತಲೂ ಇವರು ವಿಗವಿಗಳೂ ಅನುಭವಸ್ಥರೂ ಸಂಸ್ಕೃತಾಭ್ಯಾಸಿಗಳೂ ಆಗಿದ್ದಾರೆಂತಲೂ ತಿಳಿಯಬರುತ್ತೆ.

ಪ್ರಸಂಗದಲ್ಲಿ ದೊಡ್ಡದು ಯಾವದು?

25

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ಓದಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅಧ್ಯಾತ್ಮ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾವಣನುಪಾಧ್ಯಾಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ.

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪	"ರೋಮನರ ಚರಿತ್ರೆ"	ಕ್ರಯ ೦—೨—೦
೫	"ಗ್ರೀಕರ ಚರಿತ್ರೆ"	,, ೦—೨—೦
೬.	"ಅನುಭವಾನಂದ.",,	೦—೬—೦
೭	"ಗಣಿತ ಸಂಜೀವಿನಿ"	೧—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯	"ಚಾಮರಾಜೇಂದ್ರ ವಿಲಾಸ."	೦—೧—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ"	೦—೧—೦
೧೧	"೧೯೦೫ನೇ ಇಸವಿಯ ಡೈರಿಗಳು"	

ಕ್ಲಾತ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦.

ಮ್ಯಾನೇಜರ್,

ಸಿ. ಎನ್. ಎಸ್ ಬುಕ್ ಡಿಪೋ,

ಮೈಸೂರು.

ಜ್ವರಹರಿ. 31

ಇದು ಸಾಧಾರಣ ಜ್ವರ, ಚಳೀಜ್ವರ, ನೆಗಡೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರವಾದ ಜ್ವರದಿಂದ ಚನ್ನಾಗಿ ಗುಣಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬಿದ್ದಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಮನೋಹರ ಪೂರ್ಣ [illegible]

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾವಿಧ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಜಾಗ್ರತೆಯಾಗಿ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ, ಸೀಸೆಗಳಲ್ಲಿ ದೊರಕುವದು.

ಕಡೂರಿನ ಅಸಿಸ್ಟೆಂಟ್ ಸರ್ಜನ್ ಗಣಪತಿರಾಯರು—ತಮ್ಮಿಂದ ಬಂದ ಔಷಧಗಳನ್ನು ನಾನೂ ನನ್ನ ಕಾಂಪೌಂಡರರೂ ಮೈಸೂರು ಆಸ್ಪತ್ರೆಯಲ್ಲಿ ಅನೇಕ ಜನಗಳಿಗೆ ಉಪಯೋಗಿಸಿದ್ದೇವೆ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ಸಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಛಾವುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಹನ್ನಿಯಾಸಿಕ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಲೇಕ್ ಲೈನ್, ಮದರಾಸ್.

WESLEYAN MISSION PRESS MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

17

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಾಗಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂಲ್ಕಿನ್ ಮಿಸಿಯನ್, ಬ್ರೆವಿಯರ್, ಲಾಂಗ್ ಪ್ರೈಮರ್ ಮೊದಲಾದವುಗಳೂ, ಲೆಡ್ಡು ಕ್ವಾಡು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುವವು. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ವಿವರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,

ಮಿಷನ್ ಪ್ರೆಸ್, ಮೈಸೂರು.

ದಿ ಯೂನೈಟೆಡ್ ಇಂಡಿಯಾ ಎಸ್ಟೇಟ್ಸ್ ಪ್ರೊಟೆಕ್ಷನ್ ಎಂಬ ಉಪಕಾರಿ ನಿಧಿ ಸಂಘ, ಮೈಸೂರು [illegible]

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸುದಾರರು ಬಹಳ ದ್ರವ್ಯ ಪ್ರಯೋಜನವೊಂದಬಹುದು. ಸಾಮಾನ್ಯ ಉಪಕಾರಿ ನಿಧಿಯವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ. ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ಒಕ್ಕೆ ೧ ರೂಪಾಯಿ ಡಿಪಾಸಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತ ಯಾ ನೇಮಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ಪಸೂಲಾದ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಸಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು. ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜೆಂಟರುಗಳು ಸಂಘದ ಮ್ಯಾನೇಜರಿಗೆ ಬರೆದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು. ಇಂಥಾ ಏಜೆಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ.

ವಿಳಾಸ: [illegible], ಮ್ಯಾನೇಜರ್.

ಹೋಮೋಸಿಯಾ

ತಕ್ಷಣ ಪರಿಹಾರ. ಅಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಕ್ವಾಪಿಯೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಅತ್ಯಲ್ಪದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕುತ್ತ ಔಷಧ. ಇದನ್ನು ಉಪಯೋಗಿಸಿದ ಬ್ರಿಟಿಷ್ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ನಾಯುಗಳು, ನರ ಹಿಡಿಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಉಪಾಗಳು, ಗಡ್ಡೆಗಳು, ಪಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಬಿದ್ದಿರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಚಾಬ್ತು ಡಬ್ಬಿಗೆ ೧ ರೂ. ಡಬ್ಬಿಗಳಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

ಹೋಮೋಸಿಯಾ ಎಂಬ್ರೋಕೇಷನ್.

ಈ ತೈಲವು ಪಶ್ವೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳಲ್ಲಿ ಹೊಸ ಛಾಯೆಯಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಡಿಂಬಿ ೮ ಆಣೆಗೂ ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವವು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಛಾವುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೩೩ ಸೆಕೆಂಡ್ ಬೀಚ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್ ಸ್ಥಿತಿ

೧೦-೬-೧೯೦೫ ರಿಂದ ೧೬-೬-೧೯೦೫ ರವರೆಗೆ

ಸ್ಥಳ	ಪ್ಲೇಗ್ ಆಗಲಿ ಹುಟ್ಟಿ.	ಸತ್ತು ಹೋದ	ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	1	0	0	
ಮೈಸೂರು ,,	0	0	2	
ಬೆಂಗಳೂರು ಡಿಸ್ಟ್ರಿಕ್ಟ್	4	4	16	೭
ಮೈಸೂರು ,,	[illegible]	0	4	೭
ಕೋಲಾರ್ ,,	0	0		
ಕೋಲಾರ್ ಚಿನ್ನದ ಗಣಿಗಳು	0	0	[illegible]	
ತುಮಕೂರು ಡಿಸ್ಟ್ರಿಕ್ಟ್	2	0	0	
ಹಾಸನ ,,	0	0	[illegible]6	1
ಚಿತ್ರದುರ್ಗ ,,	0	0	4	
ಕಡೂರ್ ,,	0	0	[illegible]	1
ಶಿವಮೊಗ್ಗ ,,	2	2	10	
ಜುಮ್ಲಾ	9	5	1[illegible]	[illegible]

ಶಾಲಿವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಜೇಷ್ಠ ಶುದ್ಧ ತ್ರಯೋದಶಿ ಗುರುವಾರದಿಂದ ಜೇಷ್ಠ ಬಹುಳ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಜೂನ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ಬೇಸ್ತ ವಾರ
15	ಗುರು	ತ್ರಯೋ	22 [illegible]	ವಿ	[illegible]	2
16	ಶುಕ್ರ ‡	ಚತುರ್ದಶಿ	17 [illegible]	ಜ್ಯೇ	3 00	3
17	ಶನಿವಾ	ಪೌರ್ಣಮಿ	[illegible]	ಮೂ	1 [illegible]	4
18	ರವಿವಾ	ಪಾಡ್ಯ	10 10	ಪೂಷಾ	0 [illegible]	5
19	ಚಂದ್ರ	ಬಿದಿಗೆ	[illegible]	ಉತ್ತರಾ	60 [illegible]	6
20	ಕುಜ *	ತದಿಗೆ	[illegible]	ಉತ್ತರಾ	[illegible]	7
21	ಬುಧ	ಚೌತಿ	7 1[illegible]	ಧ	1 [illegible]	8

ತಿಥಿದ್ವಯಂ ‡ ಪೂರ್ಣಿಮಾ ತಿಥಿ.

* ಭೂಮಿ ಪೂರ್ಣಿಮಾ

ವ್ಯತ್ಯಯೋಗ

ಸಂಕಷ್ಟ ಚತುರ್ಥಿ

ಪೇಟೆ ಧಾರಣೆ.

ಪಿಸಲಿ.		ಮೈಸೂರು.	ಬೆಂಗಳೂರು
ಸಾಧಾರಣ ಅಕ್ಕಿ ಪಲ್ಲ ೧ಕ್ಕೆ	ರೂ.	೧೦-೮-೦	೧೦-೦-೦
ಕೆಂಬತಿ ಅಕ್ಕಿ ಅವಲ್		೧೦-೪-೦	೧೧-೮-೦
,, ಮಧ್ಯಮ		೯-೧-೦	೧೦-೦-೦
ಜೋಳಾಣ ಅಕ್ಕಿ		೯-೮-೦	೧೨-೦-೦
ಸಣ್ಣಕ್ಕಿ ಅವಲ್		೧೦-೨-೦	೧೨-೮-೦
,, ಮಧ್ಯಮ		೧೦-೮-೦	೧೨-೦-೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೦-೦-೦	೧೦-೪-೦
,, ಮಧ್ಯಮ		೧೦-೦-೦	೧೦-೪-೦
ಪೈರ್ ರಾಗಿ ಪಲ್ಲ ೧ಕ್ಕೆ		೪-೦-೦	೫-೨-೦
ಕಾರ್ಗಿ		೪-೭-೦	೪-೧೧-೦
ಜೋಳ		೪-೧-೦	೫-೮-೦
ಹುರುಳಿ		೮-೧೦-೦	೨-೮-೦
ಕಡಲೆ ಪಲ್ಲ ೧ಕ್ಕೆ		೬-೦-೦	೭-೮-೦
ಅವರೆ		೯-೦-೦	೧೦-೮-೦
ಉದ್ದು		೮-೦೪-೦	೯-೮-೦
ಹೆಸರು		೯-೦-೦	೮-೪-೦
ಎಳ್ಳು		೧೬-೦-೦	೧೭-೧೦-೦
ಹುರುಳಿ		೮-೦-೦	೮-೮-೦
ಹರಳು ೧೨ ಸೇರಿಗೆ		೯-೮-೦	೨-೧೦-೦
ಸೀಗೇಕಾಯಿ ಮಣ ೧ಕ್ಕೆ		೧-೪-೦	೨-೦-೦
ಸೋಪಿನಕಾಯಿ		೪-೮-೦	೪-೦-೦
,, ಮಧ್ಯಮ		೩-೦-೦	೩-೦-೦
ಬೆಲ್ಲ ದೊಡ್ಡ ಅಚ್ಚು		೨-೪-೦	೩-೦-೦
ಬೆಳ್ಳುಳ್ಳಿ ಮಣ ೧ಕ್ಕೆ		೪-೦-೦	೪-೮-೦
ಈರುಳ್ಳಿ ,,		೪-೦-೦	೪-೦-೦
ಕೊತ್ತುಂಬರಿ ಪಲ್ಲ ೧ಕ್ಕೆ		೬-೦-೦	೮-೦-೦
ಸಾಸ್ವೆ ,,		೮-೦-೦	೬-೦-೦
ಮೆಣಸಿನ ಕಾಯಿ		೧ ೪-೦	೦-೧೪-೦
,, ಜೀರಿಗೆ		೦-೧೪-೦	೦-೧೩-೦
ಉಪ್ಪು		೦-೧೦-೦	೧೦೧-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ		೫-೩-೦	೪-೬-೦
ತೆಂಗಿನಕಾಯಿ ೧೦೦ಕ್ಕೆ		೫-೦-೦	೪-೦-೦
ಅಡಿಕೇಕಾಯಿ ಮಣ ೧ಕ್ಕೆ		೦-೦-೦	೦-೦-೦
ಬಂಗಾಳದಕಾಯಿ ಮಣ ೧ಕ್ಕೆ		೦-೧೦-೦	೦-೧೨-೦
ಚಿನ್ನ (ಪೌಂ) ತೊಲ		೧೫-೮-೦	೧೫-೯-೦
,, ,, ಪವನ		೧೫-೧೦-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ		೦-೦-೦	೦-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೬೩-೦-೦	೬೩-೦-೦

Printed and Published by the Rev. H. Spencer, B.A., the Proprietor and Manager, Wesleyan Mission Press, Mysore. 15/6/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಜೂನ್ ತಾರೀಖು ೨೨ ನೇ ಗುರುವಾರ. — ಸಂಚಿಕೆ ೪

ತತ್ವದರ್ಪಣ

HINDU CATECHISM

ಹಿಂದೂ ಮತಾಭಿಮಾನಿಗಳಾದ ಆಬಾಲವೃದ್ಧರಿಗೂ ಅತ್ಯಂತ ತೋಷದಾಯಕವಾದ ಈ ಹೊಸ ಕನ್ನಡ ಪುಸ್ತಕದಲ್ಲಿ—೧ ಭಗವ ತ್ಸ್ವರೂಪ ನಿರೂಪಣ, ೨ ವೇದಗಳ ವ್ಯಾಖ್ಯಾನ ಪ್ರತಿಪತ್ತಿ, ೩ ವೇದಾ ರ್ಥಪ್ರಕಾಶಕರಾದ ಮಹಾತ್ಮರಲ್ಲಿ ಶ್ರೀಮಚ್ಛಂಕರಾಚಾರ್ಯಾದಿ ಮತ ಧ್ಯಾಚಾರ್ಯರುಗಳ ಚರಿತ್ರೆ, ೪ ಮತತ್ರಯಾದಿ ಆರ್ಯಸಿದ್ಧಾಂತವಿಚಾರ, ೫ ಭಗವತ್ಸ್ವರೂಪಾರೋಪಣ ನಿರೂಪಣ, ೬ ಸ್ವಾನುಭವಪ್ರ ಕರಣ ೭ ಇಷ್ಟದೇವತಾಸ್ತುತಿ —ಇವುಗಳೆಲ್ಲವೂ ಅನೇಕ ಪ್ರ ಕರಣಗಳು ಪ್ರಶ್ನೋತ್ತರ ರೀತಿ ಪ್ರಾಚೀನ ಗ್ರಂಥಗಳನ್ನನುಸರಿ ಸಿ ವಿವರಿಸಲ್ಪಟ್ಟಿದೆ. ಮತತ್ರಯ ಗುರುಗಳ ಚರಿತ್ರ ಸಮ್ಮತಗಳನ್ನೂ ತಿಳಿಯಬೇಕೆಂದಾಸೆಯುಳ್ಳವರಿಗೆ ಮುಖ್ಯವಾದು ದು. ಪಂಡಿತರಿಗಳಿಂದಲೂ ಅನೇಕ ವಿದ್ವಾಂಸರಿಂದಲೂ ಪ್ರಶಂಸಿ ಸಲ್ಪಟ್ಟಿದೆ ಸ್ವಲ್ಪ ಪ್ರತಿಗಳೇ ಉಳಿದಿವೆ ಜಾಗ್ರತೆ ಪಡೆಯಿರಿ. ಕ್ರಯ ನಾಲ್ಕೇ ಆಣೆ ವಿಳಾಸ —ವಿ ವೆಂಕಟಪ್ಪ ವಿಲಾಸ ರೋಡ್, ಮೈಸೂರು ಅಥವಾ,

ನೌಕರ್ ಕೆ. ನರಸಿಂಹಯ್ಯ ಆರ್ ಕೋ ಮೈಸೂರು

ಪಿ ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ

"ರಕ್ಷಾಮೃತಂ ಕಾಸಿ ಪದಾ ಶೀಘ್ರ ಪ್ರಕಿರ್ತನ"

"ರಕ್ಷಾಮೃತ" —ಆಯುರ್ವೇದಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಿಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾ ರಾಗಲ್ಪಟ್ಟಿರುತ್ತದೆ ಕಾಫಿ, ಟೀಯಿಗಳಲ್ಲಿರುವ ದುರ್ಗುಣ

ಗಳು ಇದಕ್ಕಿಲ್ಲ. ಕಾಫಿ ಟೀಯಿದನ್ನು ಯಾವ ಕ್ರಮದ ಲ್ಲಿ ಉಪಯೋಗಿಸುತ್ತೀವೆಯೋ ಆ ಕ್ರಮದಲ್ಲಿಯೇ ಇದನ್ನು ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವದು. ಶಿಶುಗಳು ಮೊದಲುಗೊಂಡು ವೃದ್ಧಾ ಪ್ಯದಲ್ಲಿರುವವರವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷ ರೂ ಉಪಯೋಗಿಸಬಹುದಾಗಿದೆ ಜ್ವರ, ಸನ್ನಿ, ಕೆಮ್ಮು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳ ಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲು ಸೇರಿ ಸಿಯಾಗಲಿ ಸೇರಿಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳ ದಂತೆ ಕಾಪಾಡುತ್ತದೆ. ಪಿತ್ತಪಾಂಡುವು, ಗುಲ್ಮ ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದ ಲಾದ ರೋಗಗಳು ನಿವಾರಣೆ ಹೊಂದುತ್ತವೆ. ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು.

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿ ಸುತ್ತಾ ಬಂದರೆ ಮಧುಮೂತ್ರ ರೋಗಗಳ ಶರೀರದಿಂದ ಹೊರಡುವ ಬೆವರಿನಲ್ಲಿ ಸಹ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿ ಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಿಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುವಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು.

ಇಪ್ಪತ್ತು ದಿವಸಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ಒಕ್ಕೆ ಕ್ರಯ ಆಣೆ ೬. ವಿ ಪಿ ಛಾರ್ಜು ಆಣೆ ೩ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪುಟ್ಟು ಬರೆದಲ್ಲಿ ಒಂದು ಡಬ್ಬಿ ಕಳುಹಿಸ ಲ್ಪಡುತ್ತೆ.

ವಿಳಾಸ —ಪಿ. ಸುಬ್ಬರಾಯರ್,

ಪೋರ್ಟೊನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

11

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಗಾರ್ಡನ್ ದೇಟ್ ನೆ ಹ್ಯೂಜಸ್ ರವರು ಕೊಂಡುಕೊಳ್ಳುವರು.

Apply to Mr Hughes, Mysore Zoo

ಶ್ರೀ ತಾಂಬೂಲ.

ಇದನ್ನು ಓದಿ ! ಓದಬೇಡ !! ಗುಣ ನೋಡಿ !!!

ಲೋಕದಲ್ಲಿ ಅನೇಕದ ಇಂಥಾ ತಾಂಬೂಲದ ಮಾತ್ರೆಗಳನ್ನು ೧೦ ಪಾರುತ್ತಿಂದರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲ

ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದ ರೆ ಬಾಯಿ ಬೆವರಿನ ದುರ್ಗಂಧ ನಾಶವಾಗು ತ್ತೆ. ರಕ್ತ ಶುದ್ಧಿ, ಜೀರ್ಣಶಕ್ತಿ, ಮೇಧಾಶ ಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ ವಿದ್ಯಾ ರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಧಳ, ಜ್ವರ, ಶೀತ, ಕೆಮ್ಮು ಮತ್ತು ಆಯಾಸ ವಾದಿ ನೀವು ಕೇಳಿರುವ ಗುಣಕಾ ರಿಯಾದುದು ಈವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಪಾಳ್ಯಗಳ ಮನೆ ಗಳಲ್ಲಿ ಅವಶ್ಯ ಇದನ್ನು ಇಡಬೇಕು ೨೦೦

ಮಾತ್ರೆ ಉಳ್ಳ ಡಬ್ಬಿಗೆ ೩ ಆಣೆ ಅದು ಸೀಸೆಗೆ ಒಂದು ಜಾಸ್ತಿ ಸೀಸೆ ವರೆಗೆ ವಿ ಪಿ. ಛಾರ್ಜು ೧ ಆಣೆ ನಮ್ಮ ವಿಳಾಸ —

ಬೇವನಹಳ್ಳಿ ಬಜಾರ್, ಬೆಂಗಳೂರು ಡಿಸ್ಟ್ರಿಕ್ಟ — ಎಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್

ಇದು ಕನಸು ಇನಾಮು ತಿಂಗಳು ಪ್ರೆಸೆಂಟೇಷನ್ ವಾಚು.

ಈ ಚಿತ್ರದಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರೈಲ್ವೆ ಗಾರ್ಡ್ ವಾಚು ಓಪನ್ ಕೇಸ್ ಕೀಲೆಸ ಪೇಟೆಂಟ್ ಲಿವರ್ ವಾಚು ಕಂಪೆ



ನಿ ಸೇಫ್ಟಿ ಬ್ಯಾಲೆನ್ಸ್ ಬಹು ಬಲಿಷ್ಟವಾದ ಗಡಿಯಾರ ೫ ವರುಷ ಗ್ಯಾರಂಟೀ ಕ್ರಯ ರೂ ೫—೮—೦ ಈ ವಾಚನ್ನು ಕಳೆದ ಜನವರಿ ಮ ಹೋತ್ಸವಕ್ಕಾಗಿ ಡಿಸೆಂಬರ್ ೧ನೇ ತಾರೀಖು ಮೊದಲು ೧,೦೦೦ ವಾ ಚುಗಳು ಮುಗಿಯುವದರೊಳಗಾ ಗಿ ದರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ

ಕ್ರಯವಿಲ್ಲದೆ ಪ್ರೆಜೆಂಟಾಗಿ ನಮ್ಮ ಕಂಪನಿಯಿಂದ ಕಳುಹಿಸುತ್ತೇವೆ ಇದು ಮುಗಿದನಂತರ ಪ್ರೆಜೆಂಟೇಷನ್ ದೊರೆಯಲಾರವು. ಜಾಗ್ರತೆ ದರಖಾಸ್ತು ಕಳುಹಿ. ಪ್ರೆಜಂಟೇಷನ್ ಸಾಮಾನುಗಳು, ಕ್ರಯವುಳ್ಳದ್ದು.

ಮೇಲಾದ ಜರ್ಮನ್ ಸಿಲ್ವರ್ ಕಡಗುಗಳು ೧ ಸೆಟ್ಟು	೦—೧೦—೦
ಚಿಕ್ಕ ಹಣದಪೆಟ್ಟಿಗೆ ಇಂಗ್ಲಿಷ್ ಮೇಡ್ (Cash Box)	೧—೦—೦
ಸುಗಂಧ ಸಲ್ಯೂಟ್ ತುಂಬಿದ ದಬ್ಬಿ ೧	೦—೮—೦
ಮಲಗುವಮನೆ ಬೀಸ ಬಹಳ ಸುಂದರವಾದದ್ದು	೦—೬—೦
ಬಹಳ ಸೊಗಸಾದ ಗಡಿಯಾರದ ಸರಪಣಿ	೦—೮—೦

೧,೦೦೦ ವಾಚುಗಳು ಮುಗಿದು ಹೋದ ಮೇಲೆ ಅನೇಕರ ಕೋರಿಕೆಯ ಮೇರೆಗೆ ಬರುವ ಡಬ್ಲ್ಯು ಆರ್ಡರ್ ವರೆಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡಲ್ಪಡುತ್ತೆ ಜಾಗ್ರತೆ !! ಜಾಗ್ರತೆ !!

ಇತರರು ನಮ್ಮ ಕಂಪನಿಯ ನೋಟೀಸುಗಳಂತೆ ಮದರಾಸಿನಲ್ಲಿ ಪ್ರಿಂಟುಮಾಡಿ ಉಪಯೋಗವಿಲ್ಲದ ಸಾಮಾನುಗಳನ್ನೂ ಗಡಿಯಾರವನ್ನೂ ಕಳುಹಿಸುತ್ತಿರುವದರಿಂದ ಮೇಲ್ಕಂಡ ಕಂಪನಿಯ ಹೆಸರನ್ನು ಈ ಪಕ್ಷದಲ್ಲಿ ಇಟ್ಟುಕೊಳ್ಳಬೇಕೆಂದು ಕೋರುತ್ತೇವೆ

ವಿಳಾಸ:—ಮ್ಯಾನೇಜರ್, ಫ್ಲಾರಿನ್ ವಾಚ್ ಕಂಪೆನಿ,

ಪಾರ್ಕ್ ಟವನ್, ಮದರಾಸ್.

WANTED.

2

A trained Lower Secondary teacher, languages Kanarese and English, salary according to qualifications

Apply with testimonials to Captain Spence, American Advent Mission, 7 Tannery Road, Cleveland Town, Bangalore

ಬಹಳ ಸುಲಭ ! ಒಳ್ಳೇ ಸಮಯ !

ಒಳ್ಳೇ ತರದ ಟ್ವಿಲ್, ಷರ್ಟಿಂಗ್, ಫ್ಲಾನಲ್ ವಗೈರೆ ಪಟ್ಟೆಗಳು ನಮ್ಮಲ್ಲಿ ದೊರೆಯುತ್ತವೆ. ವಿ ಪಿ ಪಿ ಮೂಲಕ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ಸಹ ಸುಲಭ.

ಸಂಪಿಗೆ ರಾಮರಾವ್, ಮರ್ಚೆಂಟ —ಟೈಲರ್,

೫೦೯—೩, ಚಿಕ್ಕಪೇಟೆ, ಬೆಂಗಳೂರು ಸಿಟಿ

'ವೃತ್ತಾಂತ ಪತ್ರಿಕೆ' ಚಂದಾಸಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸ)	ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಒಂಚೆಯ ಮೇಲೆ ತರಿಸಿ ಕೊಂಡಲ್ಲಿ ಪ್ರತಿ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ	ರೂ. ೧—೧೪—೦
" " ೬ " "	೧—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಹೊಸ ನೋಟ್ಸು.

ಮಿಸ್ಟರ್ ಬ್ಲಿಸ್ ರವರ ೫, ೬ನೆಯ ಕನ್ನಡ ಪುಸ್ತಕಗಳಿಗೆ ೬ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನೆಸಹಿತ ಈ ನೋಟ್ಸನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ ೮ ಆಣೆ.

ಮೈಸೂರು ಸಂಸ್ಥಾನದ ಭೂವಿವರಣೆ (೬ನೆ ಭಾಗ)	೦—೧—೦
೬ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೧—೬
೧೯೦೫ನೆ ವರ್ಷದ ಲೋವರ್ ಸೆಕಂಡರಿ ನೋಟ್ಸು	೦—೬—೦

ವಿಳಾಸ—ಯಂ. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು

ಬೇಲೂರಿನಲ್ಲಿ ಮನೆ ಪರಿವರ್ತನೆ ನೋಟೀಸ್.

ಬೇಲೂರು ಪೇಟೆ ವಾಸಸ್ಥರಾದ ಮೈಸೂರು ಲಕ್ಷ್ಮಣ ಶೆಟ್ಟರ ಮಗ ರಂಗಶೆಟ್ಟಿ ಉರುಫ್ ರಾಮಶೆಟ್ಟಿಯು ತಿಳಿಯಪಡಿಸುವದೇನೆಂದರೆ —ನನ್ನ ತಾಯಿ ಪೆದ್ದ ಲಕ್ಷಮ್ಮನು ಗತಿಸಿದ ನಂತರ ನಮ್ಮ ಅಜ್ಜಿ ಅಕ್ಕಣ್ಣಮ್ಮನು ನನ್ನ ಪೋಷಣೆಯಲ್ಲಿದ್ದುಕೊಂಡು ಈಗ ಕೆಲವು ದುಷ್ಟರ ಪ್ರೇರೇಪಣೆಯಿಂದಲೂ ತನ್ನ ೮೦ ವರುಷದ ಅರುಳು ಮರುಳಿನಿಂದಲೂ, ನನ್ನನ್ನು ತಿರಸ್ಕರಿಸಿ ಬೇರೆ ಇದ್ದುಕೊಂಡು ನನ್ನ ತಾಯಿ ಹೆಸರಿಗೆ ಖಾತೆ ಇದ್ದ ನಂತರ ನನ್ನ ಹೆಸರಿಗಾಗಿ ನನ್ನ ಅನುಭವದಲ್ಲಿರುವ ಹಂಚಿನ ಮನೆ ಮತ್ತು ಹಿತ್ತಲನ್ನು ಪರಭಾರೆ ಅಡವು, ಭೋಗ್ಯ, ಮುಂತಾದ್ದನ್ನು ಮಾಡಿ ಸಾಲಸೋಲ ತೆಗೆದುಕೊಳ್ಳುವದಾಗಿ ಪರೋಕ್ಷದಲ್ಲಿ ತಿಳಿದುಬಂದುದರಿಂದ, ಆಕೆಗೆ ಯಾರಾಗಲಿ ಸಾಲ ಕೊಟ್ಟು ಸದರಿ ಮನೆಯನ್ನು ಆಧಾರಮುಂತಾದ್ದಾಗಿ ದನ್ನು ಮಾಡಿಸಿಕೊಂಡರೂ ಆಕೆಯ ಸಾಲಕ್ಕೂ ಆ ಮನೆಗೂ ಸಂಬಂಧವಿರುವದಿಲ್ಲವೆಂಬುದನ್ನೂ ಈ ಕಾರಣದಿಂದ ಆಕೆಗೆ ಸಾಲ ಕೊಡಕೂಡದೆಂಬುದನ್ನೂ ತಿಳಿದುಕೊಂಡಿರತಕ್ಕದ್ದು.

೧೬—೬—೦೫, ರಂಗಶೆಟ್ಟಿ ಉರುಫ್ ರಾಮಶೆಟ್ಟಿ, ಬೇಲೂರು.

ಸುಲಭಕ್ರಯ; ಸುಗಂಧದ್ರವ್ಯಗಳು.

24

ಅಂಬರ್ ಕಡ್ಡಿ ಕೇರು ೧ಕ್ಕೆ	೫—೦—೦
ವಸಂತಕುಸುಮಾಕರವರ್ತಿ .	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೮—೦
ಘಸುಗು ಕಡ್ಡಿ ,, ೧ಕ್ಕೆ	೧—೮—೦
ಮುಸಾಲಾ ಕಡ್ಡಿ ,, ೧ಕ್ಕೆ ..	೦—೧೦—೦
ಕಸ್ತೂರಿ ಬಿಲ್ಲೆ ಕೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಜಕೀ ಗಂಧ ಕೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ ವರಕಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ ..	೦—೪—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ತಂಬಾಕ್ ಸ್ನೋಕ್ ಡಬ್ಬಿ ೧ಕ್ಕೆ ..	೦—೨—೦
ಶೈವವೈಷ್ಣವ ಶುಕ್ಲೇಯ ದಶಾಂಗ ಕೇರು ೧ಕ್ಕೆ	೦—೧೨—೦
ಘುತ್ತಾ ತೋಲ ೧ಕ್ಕೆ	೨—೦—೦
ಡಿಟೊ ..	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ಪಸಂದ ೧೦೦ಕ್ಕೆ ..	೨—೦—೦

ಮಾನೀಘಾಂಯುಟ ಕ ಇನ್ನು ಅನೇಕ ತರಹ ಸುಗಂಧ ದ್ರವ್ಯಗಳು ಎಲ್ಲಾ ತರಹ ಅತ್ತರುಗಳು ದೊರೆಯುತ್ತವೆ. ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ ವಿಳಾಸ —ಬಿ ಎಲ್. ಉಪಾಧ್ಯಾಯ ಅಂಡ್ ಕೋ,

ಸುಗಂಧಕಾರಿ, ಮೈಸೂರು.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

21



ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಶಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಸುಟ್ಟರೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ. ; ೨ ರೂ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು —

ಡಬ್ಲ್ಯು ಇ. ಸ್ಮಿತ್ ಅಂಡ್ ಕಂಪೆನಿ,

ಮವುಂಟ್ ರೋಡ್,

ಮದರಾಸ್.

ವೃತ್ತಾಂತ ಪತ್ರಿಕೆ.

೦

ಸರ್ ೧೯೦೫ ನೇ ಇಸವಿ ಜೂನ್ ತಾ॥ ೨೨ ನೇ ಗುರುವಾರ.

ರಷ್ಯಾ ಜಪಾನ್ ಯುದ್ಧವು

ಕಳೆದವಾರ ತಿಳಿಸಿದಂತೆ ಅಮೇರಿಕ ಸಂಸ್ಥಾನದವನ್ನಾಳುವ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರ ಮಧ್ಯಸ್ಥಿಕೆ ಮೂಡಿ, ಈ ಘೋರವಾದ ಯುದ್ಧವನ್ನು ನಿಲ್ಲಿಸಬೇಕೆಂದು ಪ್ರಯತ್ನಪಡುತ್ತಿದ್ದಾರೆ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅಮೇರಿಕದ ರಾಜಧಾನಿಯಾದ ವಾಷಿಂಗ್‌ಟನ್ ನಗರವನ್ನು ಗೊತ್ತು ಮಾಡಿದ್ದಾರೆ ರಷ್ಯಾದವರಿಗೂ ಜಪಾನ್‌ನವರಿಗೂ ಈ ನಗರದ ಮುಖಾಂತ್ರ ಕಾಗದ ಪತ್ರಗಳು ನಡೆಯುತ್ತಿವೆ. ಕರಾರು ಮಾಡಿಕೊಳ್ಳುವುದಕ್ಕೆ ರಷ್ಯಾದವರು ಕೌಂಟ್ ನೆಲಿಡಾಫ್ ಯವರನ್ನೂ ಜಪಾನ್‌ನವರು ಮಾರ್ಕ್ವಿಸ್ ಇಟೋ ಯವರನ್ನೂ ಪ್ರತಿನಿಧಿಗಳನ್ನಾಗಿ ನೇಮಿಸಿದ್ದಾರೆ. ಕರಾರು ನಡೆಯುವ ಪರೀಕ್ಷೆಯಿಂದ ಯುದ್ಧಭೂಮಿಯಲ್ಲಿ ರಷ್ಯಾ ಜಪಾನ್ ದಳಪತಿಗಳಾದ ಜನರಲ್ ಲಿನೆವಿಚ್ ಯವರೂ ಮಾರ್ಷಲ್ ಓಯಮಾ ಯವರೂ ಇಷ್ಟರಲ್ಲೇ ಕೂಡಿ, ಯುದ್ಧಕಾರ್ಯಗಳನ್ನು ಕೆಲವುಕಾಲ ನಿಲ್ಲಿಸಿರುವಂತೆ ಒಪ್ಪಂದ ಮಾಡಿಕೊಳ್ಳುವವರಾಗಿದ್ದಾರೆಂದು ತಿಳಿಯುವುದು

ನಾರ್ವೆ ಸ್ವೀಡನ್ ರಾಜ್ಯಗಳು

ಈ ವಾರದ ತಂತೀ ವರ್ತಮಾನಗಳನ್ನು ನೋಡಲಾಗಿ ಯೂರೋಪ್ ಖಂಡದ ಉತ್ತರ ಭಾಗದಲ್ಲಿರುವ ನಾರ್ವೆ ಸ್ವೀಡನ್ ಎಂಬೀ ಎರಡು ದೇಶಗಳೂ ಪ್ರತ್ಯೇಕ ಪ್ರತ್ಯೇಕವಾಗುವವೋ ಎಂದು ಕಾಣುತ್ತದೆ. ಕಳೆದ ನಾನೂರು ವರ್ಷಗಳಿಂದಲೂ ೧೮೧೪ ನೆ ಇಸ್ವಿಯ ವರೆಗೆ ನಾರ್ವೆ ಮತ್ತು ಡೆನ್‌ಮಾರ್ಕ್ ಎಂಬೆರಡು ರಾಜ್ಯಗಳೂ ಒಂದೇ ಆಗಿದ್ದವು. ಆ ವರ್ಷ ಡೆನ್‌ಮಾರ್ಕ್ ರಾಜ್ಯದ ದೊರೆಗೂ ಸ್ವೀಡನ್ ರಾಜ್ಯದ ದೊರೆಗೂ ಒಂದು ಕರಾರು ನಡೆದು, ನಾರ್ವೆ ರಾಜ್ಯವು ಸ್ವೀಡನ್ನಿಗೆ ಸೇರಿ ಹೋಯಿತು. ಹೀಗೆ ಸೇರಿಸಲ್ಪಟ್ಟಾಗ ನಾರ್ವೆ ದೇಶದ ಜನರ ಅಭಿಪ್ರಾಯಗಳನ್ನು ಅವರು ಕೇಳಲಿಲ್ಲ ಆದಕಾರಣ ಆ ದೇಶದವರು ತಮ್ಮನ್ನು ಕೇಳದ ತಮ್ಮ ದೇಶವನ್ನು ಸ್ವೀಡನ್ನಿಗೆ ಸೇರಿಸಿಬಿಟ್ಟರೆಂದು ಬೇಸರ ಈ ನಿರ್ಧಾರವನ್ನು ಒಪ್ಪಿಕೊಳ್ಳದ ಹೋದರು ಆಗ ಸ್ವೀಡನ್ನಿನವರು ಸೈನ್ಯವನ್ನು ಕಳುಹಿಸಿ, ನಾರ್ವೆಯವರನ್ನು ಈ ಕರಾರಿಗೆ ಸಮ್ಮತಿ ಪಡುವಂತೆ ಮಾಡಿದರು ಆಗ ನಡೆದ ಒಪ್ಪಂದದ ಪ್ರಕಾರ ನಾರ್ವೆ ಸ್ವೀಡನ್ ಎಂಬೆರಡು ದೇಶಗಳೂ ಒಬ್ಬ ರಾಜನಿಂದಲೇ ಆಳಲ್ಪಡಬೇಕೆಂತಲೂ ಆದರೆ ಆಯಾ ದೇಶಗಳಲ್ಲಿನ ರಾಜ್ಯಭಾರದ ಕ್ರಮಗಳು ಮಾತ್ರ ಆಗಿದ್ದಂತೆ ಬೇರೆ ಬೇರೆಯಾಗಿಯೇ ಇರಬೇಕೆಂತಲೂ ಗೊತ್ತು ಮಾಡಿಕೊಂಡರು ಇವರಿಂದ ಅವೆರಡು ರಾಜ್ಯಗಳನ್ನೂ ಒಬ್ಬ ದೊರೆಯೇ ಆಳುತ್ತಿದ್ದರೂ ರಾಜ್ಯಗಳೇನೋ ಬೇರೆ ಬೇರೆಯಾಗಿಯೇ ಇದ್ದವೆನ್ನುವದು ಸ್ಪಷ್ಟವಾಗಿದೆ ನಾರ್ವೆ ದೇಶದವರಿಗೆ ಸ್ವೀಡನ್ ರಾಜ್ಯದ ಭಾಗದಲ್ಲಿ ಸ್ವೀಡನ್ ದೇಶದವರಿಗೆ ನಾರ್ವೆ ಸರ್ಕಾರದಲ್ಲಿ ಉದ್ಯೋಗಗಳನ್ನು ಕೊಡುತ್ತಿರಲಿಲ್ಲ ಒಬ್ಬರನ್ನೊಬ್ಬರು ಪರದೇಶದವರೆಂದು ಭಾವಿಸುತ್ತಿದ್ದರು ಇದಲ್ಲದೆ ಇದುವರೆಗೆ ಪರರಾಜ್ಯಗಳಿಗೆ ಸ್ವೀಡನ್ನಿನ ರಾಯಭಾರಿಗಳು ಮಾತ್ರ ಸಾಮಾನ್ಯವಾಗಿ ಹೋಗುತ್ತಿದ್ದರು. ನಾರ್ವೆಯವರು ತಮ್ಮ ರಾಯಭಾರಿಗಳನ್ನು ಕಳುಹಿಸುತ್ತಿರಲಿಲ್ಲ ಈ ಭಾಗದಲ್ಲಿ ನಾರ್ವೆಯವರಿಗೆ ಸ್ವೀಡನ್ನಿನವರಲ್ಲಿ ಅಸಮಾಧಾನ ಉಂಟಾಗಿತ್ತು ಅವರು ತಮ್ಮ ಸ್ಟಾರ್‌ತಿಂಗ್ ಎಂಬ ಸಾರ್ವಜನಿಕಸಭಾಕೂಟದಲ್ಲಿ ಈ ವಿಷಯವನ್ನು ಚರ್ಚಿಸಿ, ತಾವೂ ತಮ್ಮ ರಾಯಭಾರಿಗಳನ್ನು ಪರರಾಜ್ಯಗಳಿಗೆ ಕಳುಹಿಸುವಂತಾಗಬೇಕೆಂದು ೧೮೯೧ ನೆ ಇಸವಿಯಿಂದಲೂ ಹೊಡೆದಾಡುತ್ತಾ ಬಂದು, ಇದೇ ಅರ್ಥಕ್ಕೆ ಒಂದು ಕಾಗದ ಬರೆದು ಉಭಯರಾಜ್ಯಗಳ ದೊರೆಯ ಮುಂದಿಟ್ಟರು ದೊರೆಯು ನಾರ್ವೆಗೂ ಸ್ವೀಡನ್ನಿಗೂ ಬೇರೆಬೇರೆ ರಾಯಭಾರಿಗಳನ್ನು ನೇಮಿಸಿ ಪರರಾಜ್ಯಗಳಿಗೆ ಕಳುಹಿಸುವ ಈ ಏರ್ಪಾಟಿಗೆ ಸಮ್ಮತಿಪಡಲಿಲ್ಲ ಇದನ್ನು ನೋಡಿ ನಾರ್ವೆಯ ಮಂತ್ರಿಗಳು ಅಸಮಾಧಾನಪಟ್ಟು, ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟರು. ದೊರೆಯು ಅವರ ರಾಜೀನಾಮೆಯನ್ನು ಅಂಗೀಕರಿಸದೆ ವಾಪಸು ಕಳುಹಿಸಿದನು ಮಂತ್ರಿಗಳಾದರೋ ತಾವು ಕೊಟ್ಟ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳುವದಿಲ್ಲವೆಂತಲೂ ಮೊದಲಿನಂತೆ ತಮ್ಮ ಇಷ್ಟಪ್ರಕಾರ ದೊರೆಯು ಸಮ್ಮತಿ ಪಡುವುದಾದರೆ ತಾವು ಕೆಲಸಮಾಡುತ್ತೇವೆಂತಲೂ ಇಲ್ಲವಾದರೆ ತಮಗೆ ಕೆಲಸವೇ ಬೇಡವೆಂತಲೂ ತಿಳಿಸಿರುವರು. ಸದ್ಯ ಈ ವಿಚಾರವಾಗಿಯೇ ದೊರೆಗೂ ನಾರ್ವೆ ಮಂತ್ರಿಗಳಿಗೂ ವಾಗ್ವಾದಗಳು ನಡೆಯುತ್ತಿರುವವು ಇದು ಹ್ಯಾಗೆ ತೀರ್ಮಾನವಾಗುವುದೋ ನೋಡಬೇಕು ಬಹುಶಃ ಈ ಎರಡು ರಾಜ್ಯಗಳೂ ಒಬ್ಬ ದೊರೆಯ ಆಳ್ವಿಕೆಯಿಂದ ತಪ್ಪಿ ಬೇರೆಬೇರೆಯಾಗುವುವೆಂದು ಕಾಣುತ್ತಿದೆ.

ಒಳದೇಶದ ವೃತ್ತಾಂತಗಳು.

ಚಾಮರಾಜನಗರದ ತಾಲ್ಲೂಕು ಸಂತೇಮರಹಳ್ಳಿಯಲ್ಲಿ ಒಂದು ಮುಸಾಫರ್‌ಖಾನೆ ಕಟ್ಟುವಂತೆ ಸರ್ಕಾರದಿಂದ ಅಪ್ಪಣೆಯಾಗಿದೆ

❖❖❖❖❖

ಕಾಂಗ್ರೆಸ್ ಕಚೇರಿಯ ನಿರ್ಮಾಣದ ಫಂಡಿಗೆ ನಮ್ಮ ಶ್ರೀಮನ್ ಮಹಾರಾಜರವರು ೧೦,೦೦೦ ರೂಪಾಯಿ ಚಂದಾ ಹಣವನ್ನು ದಯಪಾಲಿಸಿದರೆಂದು ತಿಳಿದುಬಂದಿದೆ

❖❖❖❖❖

ದೊಡ್ಡ ಬಳ್ಳಾಪುರದ ಸಬ್ ಡಿವಿಜನ್ ಭಾರವನ್ನು ವಹಿಸಿರುವ ಅ॥ ಕಮಿಷನರ್ ಮ॥ ಅಹಮದ್ ಅಲ್ಲಿ ಯವರನ್ನು ಸರ್ಕಾರದವರು ತೆರವು ಕೊಟ್ಟು ಕೆಲಸ ಬಿಡಿಸುತ್ತಾರೆಂದು ಪ್ರಕಟವಾಗಿದೆ.

ಕಾಲೀಸ್‌ಪೇಟೆಯ ಆಸ್ಪತ್ರೆ ಅಸಿಸ್ಟೆಂಟರು ವಾರಕ್ಕೊಂದು ಸಲ ಬಿಸದಿಗೆ ಹೋಗಿ ಬಂದರೆ ಸಾಕೆಂತಲೂ ಕಾಲತ್ರಾಗಾಲದಲ್ಲಿ ಒಂದು ವೈದ್ಯಶಾಲೆಯನ್ನು ಇಡಬೇಕೆಂತಲೂ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನಿಸಿರುತ್ತಾರೆ

❖❖❖❖

ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟರಾದ ಮ॥ ಎಚ್. ನಂಜುಂಡರಾಜೇ ಅರಸಿನವರು ತಮ್ಮ ಕುಮಾರ್ತೆಯನ್ನು ಲೇಟ್ ಭಕ್ಷಿ ವೀರಪ್ಪಾಜಿ ಅರಸಿನವರ ಕುಮಾರನಿಗೆ ಕೊಟ್ಟು ರಾಜಧಾನಿಯಲ್ಲಿ ಈ ದಿನ ವಿವಾಹ ಬೆಳಸುವವರಾಗಿದ್ದಾರೆ

❖❖❖❖

ರಾಜಧಾನಿಯಲ್ಲಿ ಹವಾ ಬದಲಾವಣೆಯಾಗಿರುತ್ತದೆ ಸೂರ್ಯರಶ್ಮಿಯನ್ನು ಕಾಣುವುದು ಅಪರೂಪ ಸರ್ವದಾ ಮೋಡ ಹಾಕಿಕೊಂಡು ಆಗಾಗ್ಗೆ ತುಂತುರು ಹನಿ ಬೀಳುವುದು. ಶೀತಗಾಳಿಯು ಜೋರಾಗಿ ಬೀಸುತ್ತಿದೆ. ಪ್ರಜಾ ಕ್ಷೇಮವು ಚನ್ನಾಗಿದೆ

❖❖❖❖

ದಳವಾಯಿ ಮ ಬಿ ದೇವರಾಜೇ ಅರಸಿನವರು ತಮ್ಮ ಕುಮಾರನಿಗೆ ವಿವಾಹ ಬೆಳೆದ ನಿಮಿತ್ತ ಶ್ರೀಮನ್ಮಹಾರಾಜರವರನ್ನು ತಮ್ಮ ಮನೆಗೆ ಬಿಜಯಮಾಡಿಸಿಕೊಂಡು ಸತ್ಕರಿಸಬೇಕೆಂದು ಯೋಚಿಸಿರುವಂತೆಯೂ ಈ ಕಾರ್ಯವು ಈ ವಾರ ನೆರವೇರಬಹುದೆಂತಲೂ ಕೇಳುತ್ತೇವೆ

❖❖❖❖

ಉತ್ತರ ದೇಶದ ಡೇರಾಡೂನ್ ಕಾಲೇಜಿಗೆ ಹೋಗಿ ಫಾರೆಸ್ಟ್ ವಿಚಾರಗಳನ್ನು ಕಲಿತು ಬರುವಂಥಾ ನಾಲ್ವರಿಗೆ ತಲಾ ತಿಂಗಳಿಗೆ ೪೦ ರೂಪಾಯಿ ವೇತನ ಕೊಡುತ್ತೇವೆಂತಲೂ ಅಪೇಕ್ಷೆಯುಳ್ಳವರು ಫಾರೆಸ್ಟ್ ಕನ್ಸರ್ವೇಟರವರಿಗೆ ಅರ್ಜಿ ಬರೆದುಕೊಳ್ಳಬಹುದೆಂತಲೂ ಪ್ರಕಟಿಸಿದ್ದಾರೆ.

❖❖❖❖

ಬೆಂಗಳೂರಿನಲ್ಲಿ ಒಳ್ಳೇ ವಕೀಲರೆಂದೂ ಗುಣಾಢ್ಯರೆಂದೂ ಬಹು ಕಾಲದಿಂದ ಹೆಸರುಗೊಂಡಿದ್ದ ಮ॥ ಬಿ ಎ ನಂಜುಂಡಪ್ಪನವರು ಕಳೆದ ವಾರ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೫೪ ವರ್ಷ ವಯಸ್ಸಾಗಿತ್ತು

❖❖❖❖

ಮೈಸೂರು ಡೆಪ್ಯುಟಿ ಕಮಿಷನರಾಗಿದ್ದು ರಜ ಪಡೆದುಕೊಂಡಿದ್ದ ಮ॥ ಎಂ ಕಾಂತರಾಜೇ ಅರಸಿನವರು ಸರ್ಕಾರಿ ನೌಕರಿಯೇ ತಮಗೆ ಬೇಡವೆಂದು ಗವರ್ನಮೆಂಟಿಗೆ ರಾಜೀನಾಮೆ ಕೊಟ್ಟಿದ್ದಾರೆಂತಲೂ ಗವರ್ನಮೆಂಟಿನವರು ಅದನ್ನು ಇನ್ನೂ ಅಂಗೀಕರಿಸಿಲ್ಲವೆಂತಲೂ ಕೇಳುತ್ತೇವೆ.

❖❖❖❖

ಕಳೆದ ಜನವರಿ ಅಂತ್ಯ ಭಾಗದಲ್ಲಿ ಚಿತ್ರದುರ್ಗದ ತಾಲ್ಲೂಕು ಹಿರೇಕಂದವಾಡಿ ಗ್ರಾಮದಲ್ಲಿ ಗೊಲ್ಲರ ಈರನೆಂಬುವನು ತನ್ನ ಮನೆಯ ಬಳಿಗ ಗೋಡೆ ಹಾಕುವುದಕ್ಕೆ ಪಾಯ ತೆಗೆಯುವಾಗ ಒಂದು ಸಣ್ಣ ಕುಡಿಕೆಯಲ್ಲಿ ಇಕ್ಕೇರಿ ವರಹ ಮೊದಲಾದ ಕೆಲವು ನಗನಾಣ್ಯಗಳು ಸಿಕ್ಕಿದವು ಅದನ್ನು ಸರ್ಕಾರದವರು ತರಿಸಿಟ್ಟುಕೊಂಡಿದ್ದಾರೆ.

❖❖❖❖

ಕರ್ನಲ್ ಆರ್. ಜೆ ಜೋನ್ಸ್ ಯವರನ್ನು ಮೈಸೂರು ಗವರ್ನಮೆಂಟಿನವರು ಇನ್ನೂ ಐದು ವರುಷಗಳ ತನಕ ಮಿಲಿಟರಿ ಸೆಕ್ರೆಟರಿಯಾಗಿ ನೇಮಿಸಿಕೊಂಡಿರಬಹುದೆಂದು ಇಂಡಿಯಾ ಗವರ್ನಮೆಂಟಿನವರು ಸ್ವೀಕರಿಸಿ ಮಾಡಿದ್ದಾರೆ. ಮ॥ ಜೋನ್ಸ್ ಯವರಿಗೆ ಹಿಂದುಸ್ಥಾನದ ಸೈನ್ಯದಲ್ಲಿ ಲೆಫ್ಟಿನೆಂಟ್ ಕರ್ನಲ್ ಎಂಬ ಹುದ್ದೆಯು ಖಾಯಂ ಆಗಿದೆ.

ಶ್ರೀಮನ್ಮಹಾರಾಜರವರ ವರ್ಧಂತಿ ಕಟ್ಟಳೆಯ ಔತಣವು ಕಳೆದ ವಾರ ದೊಡ್ಡ ಮನುಷ್ಯರಿಗೆಲ್ಲಾ ಅರಮನೆಯಲ್ಲಿ ನಡೆಯಿತು. ಡಿಸ್ಟ್ರಿಕ್ಟುಗಳಿಂದ ಅಧಿಕಾರಿಗಳೂ ಚೀಫ್ ಕೋರ್ಟ್ ಜಡ್ಜಿಗಳೂ ಕಳೆದ ಶನಿವಾರವೇ ತಮ್ಮ ತಮ್ಮ ಸ್ಥಳಗಳನ್ನು ಕುರಿತು ತೆರಳಿದರು. ದಿವಾನರೂ ಕೌನ್ಸಿಲ್ ಮೆಂಬರುಗಳೂ ಈ ವಾರವೆಲ್ಲಾ ಇಲ್ಲೇ ಇರುವರೆಂದು ಕೇಳುತ್ತೇವೆ.

◆◆◆◆

ಕಳೆದ ವರುಷ ಶ್ರೀಮನ್ಮಹಾರಾಜರವರು ಮೆ॥ ಎ. ರಾಮಚಂದ್ರ ಐಯರವರಿಗೆ "ರಾಜಧರ್ಮ ಪ್ರವೀಣ" ಎಂಬ ಬಿರುದನ್ನು ದರ್ಬಾರಿನಲ್ಲಿ ದಯಪಾಲಿಸಿದ್ದರು. ಈ ಬಿರುದಿಗೆ ತಕ್ಕ ಖಿಲ್ಲತ್ತುಗಳನ್ನು ಆಗ ಕೊಟ್ಟಿರಲಿಲ್ಲ. ಇವರನ್ನು ಈ ಸಲ ವರ್ಧಂತಿ ಉತ್ಸವಕ್ಕೆ ಕರೆಸಿಕೊಂಡು, ಎರಡನೇ ದಿನದ ದರ್ಬಾರಿನಲ್ಲಿ ಅವರಿಗೆ ಸುಮಾರು ೫,೦೦೦ ರೂಪಾಯಿನ ಖಿಲ್ಲತ್ತುಗಳನ್ನು ಕೊಡಿಸಿದರು.

◆◆◆◆

ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವದ ನಿಮಿತ್ತ ರಾಜಧಾನಿಗೆ ದಯಮಾಡಿದ್ದ ಸರ್ದಾರರುಗಳೆಲ್ಲಾ ಈ ದಿನ ಪ್ರಯಾಣ ಮಾಡುವರು. ಮೈಸೂರಿಗೆ ಬಂದಿರುವ ಸರ್ಕಸ್ ಕಂಪನಿಯವರನ್ನು ಜಗನ್ಮೋಹನ ಬಂಗಲೆಗೆ ಕರೆಸಿಕೊಂಡು, ಎರಡು ದಿನ ರಾತ್ರಿ ಅವರ ಸಾಹಸ ಚಮತ್ಕಾರ ವಿದ್ಯೆಗಳನ್ನು ಶ್ರೀಮನ್ಮಹಾರಾಜರವರು ಪರಾಂಬರಿಸಿದ್ದಲ್ಲದೆ, ಸರ್ದಾರರುಗಳಿಗೂ ತೋರಿಸಿದರು.

◆◆◆◆

ಬರುವ ತಿಂಗಳ ೧೩ನೇ ತಾರೀಖಿನ ದಿನ ಬೆಂಗಳೂರಿನಲ್ಲಿ ಲಿಂಗಾಯತ ಮಹಾ ಸಭೆಯು ಪ್ರಾರಂಭವಾಗಿ ಮೂರು ದಿನ ನಡೆಯುವುದು. ಇದಕ್ಕಾಗಿ ಮೆ॥ ಕೋಟೆಪಪ್ಪನವರ ಧರ್ಮಶಾಲೆ ಮೈದಾನಿನಲ್ಲಿ ಭಾರೀ ಚಪ್ಪರವನ್ನು ಹಾಕುವವರಾಗಿದ್ದಾರೆ. ಶ್ರೀಮನ್ಮಹಾರಾಜರವರು ಈ ಸಲ ಈ ಸಭೆಯನ್ನು ಪ್ರಾರಂಭಿಸುವರೆಂಬ ವರ್ತಮಾನವಿತ್ತು. ಅವರಿಗೆ ಅವಕಾಶವಾಗುವುದಿಲ್ಲವೆಂದು ಕೇಳುತ್ತೇವೆ.

◆◆◆◆

ಸ॰ ೧೮೭೯ನೆ ಇಸ್ವಿಯಲ್ಲಿ ಉತ್ತರ ಕನ್ನಡಾ ಜಿಲ್ಲಾ ಬೆಳಗಿಯೊಳಗೆ ಪ್ರಸಿದ್ಧ ರಾಜವೈದ್ಯರು ಹಿಂದುಸ್ಥಾನ (ಭರತಖಂಡ), ಬ್ರಹ್ಮದೇಶ, ಮಸ್ಕತ, ಪರ್ಷ, ಪೋರ್ಟಬ್ಲೇಯರ್ ಇತ್ಯಾದಿ ಪ್ರದೇಶದ ವ್ಯಾಧಿಗ್ರಸ್ತರ ಉಪಯೋಗಾರ್ಥವಾಗಿ ಸ್ಥಾಪಿಸಿದ "ಕರ್ನಾಟಕ ಔಷಧಾಲಯದ" ಔಷಧಗಳ ಸಪ್ಲಿಮೆಂಟನ್ನು ಈ ವಾರದ ಪತ್ರಿಕೆಯ ಮೂಲಕ ನಮ್ಮ ಚಂದಾದಾರರಿಗೆಲ್ಲಾ ಕಳುಹಿಸಿ ಕೊಟ್ಟಿದೇವೆ.

◆◆◆◆

ರಾಜಧಾನಿಯಲ್ಲಿ ಹೊಸ ಅರಮನೆ ಕಟ್ಟಡವನ್ನು ಮಾಡಿಸುತ್ತಿರುವ ಎಕ್ಸಿಕ್ಯೂಟಿವ್ ಇಂಜನಿಯರ್ ಮೆ॥ ಬಿ. ಪಿ ರಾಘವಲುನಾಯ್ಡು ಯವರು ಇಲ್ಲಿನ ಚಾಮರಾಜಪೇಟೆಯಲ್ಲಿ ಬಹು ಸುಂದರವಾದ ಬಂಗಲೆಯನ್ನು ಕಟ್ಟಿ ಪೂರೈಸಿ, ಮೊನ್ನೆ ಮಂಗಳವಾರ ದೊಡ್ಡ ಸಂತರ್ಪಣೆ ಮಾಡಿ, ಗೃಹಪ್ರವೇಶ ಮಾಡಿದರು. ಈ ಕಟ್ಟಡಕ್ಕೆ ಸುಮಾರು ೫೦—೬೦ ಸಹಸ್ರ ರೂಪಾಯಿ ತನಕ ಖರ್ಚಾಗಿರುವುದೆಂದು ಹೇಳುತ್ತಾರೆ.

◆◆◆◆

ರಾಜಧಾನಿಯ ಲಷ್ಕರ್ ಮೊಹಲ್ಲಾ ಪ್ರಜೆಗಳಿಂದ ಮ್ಯುನಿಸಿಪಲ್ ಕಮಿಷನರಾಗಿ ಚುನಾಯಿಸಲ್ಪಟ್ಟ ಮೆ॥ ಅಬೂಬಕರ್ ಸೇಟರವರು ಸುಮಾರು ಒಂದು ತಿಂಗಳಿಂದಲೂ ಕಾಯಿಲೆಯಾಗಿದ್ದು ಕಳೆದ ಗುರುವಾರ ಬೆಳಿಗ್ಗೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಇನ್ನೂ ೪೨ ವರ್ಷವಾಗಿತ್ತು. ಮ್ಯುನಿಸಿಪಾಲಿಟಿಯ ಕಾರ್ಯಗಳನ್ನು ಕ್ರಮಕ್ಕೆ ತರಬೇಕೆಂಬ ಉದ್ದೇಶ ಉತ್ಸಾಹಗಳನ್ನು ಪಡೆದು ಇದ್ದ ಮೆ॥ ಸೇಟರವರು ಇಷ್ಟು ಚಿಕ್ಕ ವಯಸ್ಸಿನಲ್ಲೇ ತೀರಿಹೋದದ್ದು ವ್ಯಸನಕರವಾಗಿದೆ.

◆◆◆◆

ರಾಜಧಾನಿಯ ಕುಕ್ಕರಹಳ್ಳಿ ಕೆರೆಯ ಬಳಿ ಕಟ್ಟುತ್ತಿದ್ದ ಮೊದಲನೇ ಮಹಾರಾಜ ಕುಮಾರಿಯವರ ದೊಡ್ಡ ಬಂಗಲೆಗೆ ಮೊನ್ನೆ ಭಾನುವಾರ ಪ್ರವೇಶ ಹೋಮಾದಿಗಳನ್ನು ಮಾಡಿದರು. ಸುಮಾರು ೧,೦೦೦ ಜನ ಸಂತರ್ಪಣೆ ನಡೆಯಿತು. ಮಾರನೇ ದಿನ ಮೆ॥ ಕಾಂತರಾಜೇ ಅರಸಿನವರೂ ಮೊದಲನೆಯ ಮಹಾರಾಜ ಕುಮಾರಿಯವರೂ ಮುಹೂರ್ತದೊಡನೆ ಗೃಹಪ್ರವೇಶ ಮಾಡಿದರು. ಈ ಬಂಗಲೆಗೆ ಐದು ಲಕ್ಷ ರೂಪಾಯಿ ತನಕ ಖರ್ಚಾಗಿದೆ ಎಂದು ಕೇಳುತ್ತೇವೆ. ಮರುದಿನ ಮೆ॥ ಕಾಂತರಾಜೇ ಅರಸಿನವರು ಶ್ರೀಮನ್ಮಹಾರಾಜರವರನ್ನು ಬಂಗಲೆಗೆ ಬಿಜಮಾಡಿಸಿಕೊಂಡು ಸತ್ಕಾರ ಮಾಡಿದರು.

◆◆◆◆

ಈ ಸಂಸ್ಥಾನದಲ್ಲಿರುವ ಸಣ್ಣ ಸಣ್ಣ ಕೆರೆಗಳ ಏರಿಗಳನ್ನು ಕೀಳುವುದು, ಕಟ್ಟುವುದು, ತೂಬುಗಳನ್ನು ಕಟ್ಟುವುದು ಮತ್ತು ರಿಪೇರಿ ಮಾಡುವುದು, ಈ ಕಾಮಗಾರಿಗಳನ್ನೆಲ್ಲಾ ಇದುವರೆಗೆ ಆಯಾ ಗ್ರಾಮಗಳ ರೈತ ಪ್ರಜೆಗಳೇ ಮಾಡಬೇಕಾಗಿತ್ತು. ಇದರಿಂದ ಅವರು ತಮಗೆ ಬಹಳ ಕಷ್ಟವೆಂದೂ ಈ ಜವಾಬ್ದಾರಿಯನ್ನು ತಪ್ಪಿಸಬೇಕೆಂದೂ ಗವರ್ನಮೆಂಟಿನವರನ್ನು ಕೇಳಿಕೊಳ್ಳುತ್ತಲೇ ಇದ್ದರು. ಈಗ ಗವರ್ನಮೆಂಟಿನವರು ಅವರ ಪ್ರಾರ್ಥನೆಯನ್ನು ನೆರವೇರಿಸಿಕೊಟ್ಟು, ಇನ್ನು ಮುಂದೆ ಇಂಥಾ ಕಾಮಗಾರಿಯನ್ನೆಲ್ಲಾ ಸರ್ಕಾರದವರೇ ಮಾಡುವುದಾಗಿ ಒಪ್ಪಿಕೊಂಡಿದಾರೆ. ಇದರಿಂದ ರೈತ ಪ್ರಜೆಗಳೆಲ್ಲಾ ಗವರ್ನಮೆಂಟಿನವರಿಗೆ ಬಹಳ ಕೃತಜ್ಞರಾಗಿರುವರು.

ಪೋಸ್ಟ್ ಆಫೀಸಿನ ಮೂಲಕ ಪದಾರ್ಥಗಳನ್ನು ಭಾಂಗಿ ಮಾಡತಕ್ಕವರಿಗೆ ಇನ್ಷೂರೆನ್ಸ್ ಛಾರ್ಜಿನ ದರವನ್ನು ಸರ್ಕಾರದವರು ನಾಳೆ ಜುಲೈ ೧ ರಿಂದ ಕಡಿಮೆಮಾಡಿರುತ್ತಾರೆ. ಭಾಂಗಿ ಒಳಗಿರತಕ್ಕ ಮಾಲುಗಳು ೫೦ ರೂಪಾಯಿನೊಳಗೆ ಕ್ರಯ ಬಾಳುವುದಾದರೆ ಅದಕ್ಕೆ ಒಂದಾಣೆ ಮಾತ್ರ ಇನ್ಷೂರೆನ್ಸು ಛಾರ್ಜು ಕೊಡಬೇಕೆಂತಲೂ ೫೦ ರೂಪಾಯಿಗಿಂತಲೂ ಹೆಚ್ಚು ಬೆಲೆ ಬಾಳುವ ಭಾಂಗಿಗೆ ಪ್ರತಿ ೫೦ ರೂಪಾಯಿಗೂ ಒಂದೊಂದು ಆಣೆಯ ಪ್ರಕಾರವೇ ಕೊಡಬೇಕೆಂತಲೂ ಗೊತ್ತುಮಾಡಿದಾರೆ. ಇನ್ಷೂರು ಮಾಡಿದ್ದ ಭಾಂಗಿಗಳು ಕಳೆದುಹೋದ ಪಕ್ಷದಲ್ಲಿ ಅವುಗಳ ಬೆಲೆಯನ್ನು ಪೋಸ್ಟ್ ಇಲಾಖೆಯವರು ಮಾಲೀಕರಿಗೆ ಕೊಡುವರು. ಈ ದರವನ್ನು ಈ ರೀತಿ ಕಡಿಮೆಮಾಡಿದ್ದರಿಂದ ಭಾಂಗಿಗಳನ್ನು ಕಳುಹಿಸುವ ಪ್ರಜೆಗಳಿಗೆ ಬಹಳ ಅನುಕೂಲವಾಯಿತು.

◆◆◆◆

ಕೆಲವು ಕಾಲಾಂತರದಿಂದೀಚೆಗೆ ಶ್ರೀ ಶೃಂಗೇರಿ ಪೀಠಾಧಿಪತ್ಯಕ್ಕೆ ಉತ್ತರಾಧಿಕಾರಿಗಳನ್ನು ಒಂದೇ ಶಾಖೆಯ ಬ್ರಾಹ್ಮಣರಲ್ಲಿ ಚುನಾಯಿಸುತ್ತಲಿದ್ದ ಪದ್ಧತಿಯು ಉಪಯೋಗಕಾರಿಯಾದ್ದಲ್ಲವೆಂಬ ಅಂಶವನ್ನು ಶ್ರೀ ಶೃಂಗೇರಿ ಶಿವಾಭಿನವ ಸಚ್ಚಿದಾನಂದ ನೃಸಿಂಹ ಭಾರತಿ ಸ್ವಾಮಿಗಳವರು ಅರಿತು ಮುಂದೆ ಪೀಠಾಧಿಪತ್ಯಕ್ಕೆ ಬೇಕಾಗುವ ಉತ್ತರಾಧಿಕಾರಿಗಳನ್ನು ಬ್ರಾಹ್ಮಣ ಮಂಡಲಿಯಲ್ಲಿಯೇ ೮—೧೨ ವರುಷ ವಯಸ್ಸುಳ್ಳ ಇಪ್ಪತ್ತು ಜನ ಬ್ರಹ್ಮಚಾರಿಗಳನ್ನು ಈ ಆರ್ಯಾವರ್ತದ ಎಲ್ಲಾ ಭಾಗಗಳಿಂದಲೂ ಕರೆಸಿ ಅವರಿಗೆ ವೇದಾಧ್ಯಯನವೇ ಮೊದಲಾದ ವಿದ್ಯಾಭ್ಯಾಸಂಗವನ್ನು ಮಾಡಿಸಿ ಸ್ವಲ್ಪ ಕಾಲಾನಂತರ ಇವರಲ್ಲಿ ಯಾರು ಉತ್ತಮರಾಗಿ ಕಾಣುವರೋ ಅವರನ್ನು ಪೀಠಾಧಿಪತ್ಯಕ್ಕೆ ನಿಯಮಿಸುವುದಾಗಿ ತೀರ್ಮಾನಿಸಿರುವರೆಂದು ವರ್ತಮಾನವಿದೆ —ವಿ.

◆◆◆◆

ಬೆಂಗಳೂರು ದೇವಾಂಗದ ಮುದ್ದಪ್ಪನ ಪ್ಯಾಟಿ ಯಜಮಾನ ಲಿಂಗಣ್ಣಶೆಟ್ಟರು ತಿಳಿಸುವುದೇನೆಂದರೆ ಸನ್ ೧೯೦೫ನೇ ಇಸವಿ ಮಾರ್ಚಿ ತಾ. ೬ ರಲ್ಲು ಬೆಂಗಳೂರು ದೇವಾಂಗದ ಮುದ್ದಪ್ಪನ ಪೇಟೆಯಲ್ಲಿರುವ ಶಿವಾಚಾರದ ಚೆಂದಗುಣಿ ಸಂಜೀವಪ್ಪನ ಮಗ ಗಿರೀಮಲ್ಲಪ್ಪನು ತನ್ನ ಬಾಬತು ೪ನೇ ನಂಬರು ಉಳ್ಳ ಒಂದು ಪಟಾರವನ್ನು ಸದರಿ ಪ್ಯಾಟಿ ಶ್ರೀ ರಾಮೇಶ್ವರ ದೇವಸ್ಥಾನಕ್ಕೆ ಕೊಟ್ಟು, ಅದರಲ್ಲಿ ಬರತಕ್ಕ ಬಾಡಿಗೆಯನ್ನು ದೇವಸ್ಥಾನಕ್ಕೆ ದೀಪಾರಾಧನೆ ವಗೈರೆ ಕೆಲಸಕ್ಕೆ ಉಪಯೋಗಿಸಬೇಕೆಂದು ಉಯಿಲು ಬರೆದುಕೊಟ್ಟು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಸಹ ಮೇಲ್ಕಂಡ ದೇವಸ್ಥಾನದ ಮೇನೇಜುಮೆಂಟು ಯಜಮಾನ ಲಿಂಗಣ್ಣಶೆಟ್ಟಿಯವರ ಸ್ವಾಧೀನಕ್ಕೆ ಕೊಟ್ಟು ಇರುತ್ತಾನೆ. ಈ ಉಯಿಲು ಬರೆದುಕೊಟ್ಟ ಒಂದು ತಿಂಗಳಿಗೆ ಮೃತಪಟ್ಟು ಇರುತ್ತಾನೆ.

◆◆◆◆

ಕಳೆದ ಬುಧವಾರ ಮಧ್ಯಾಹ್ನ ರಾಜಧಾನಿಯ ಕಾರಂಜಿ ಕೆರೆಯ ಎದುರ್ಬಾರ್ದನ ಮೈದಾನಿನಲ್ಲಿ ಕಟ್ಟುತ್ತಿದ್ದ ಎರಡನೇ ಮಹಾರಾಜಕುಮಾರಿಯವರ ದೊಡ್ಡ ಬಂಗಲೆಯಲ್ಲಿ ಮಧ್ಯದ ದೊಡ್ಡ ತೊಟ್ಟಿ ಮೇಲಣ ಎರಡು ಅಂತಸ್ತುಗಳು ಅಕಸ್ಮಾತ್ತಾಗಿ ಕುಸಿದು ಬಿದ್ದುಕೊಂಡವು. ಇದರ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಆರು ಮಂದಿಗೆ ಪೂರಾ ಗಾಯಗಳಾದವು. ಇವರಲ್ಲಿ ಮೂವರು ಗಂಡಸರು, ಮೂವರು ಹೆಂಗಸರು. ಕೂಡಲೇ ಇವರನ್ನು ಗಾಡಿಗಳಲ್ಲಿ ಹಾಕಿ ಜನರಲ್ ಆಸ್ಪತ್ರೆಗೆ ಸಾಗಿಸಿದರು. ಬಿದ್ದುಹೋದ ಬಂಗಲೆಯನ್ನು ಮಹಾಮಾತೃಶ್ರೀಯವರೂ ದಿವಾನರವರೂ ದಯಮಾಡಿ ಪರಾಂಬರಿಸಿದರು. ಗುರುವಾರದಿಂದ ಭಾನುವಾರ ಸಾಯಂಕಾಲದ ತನಕ ಆ ತೊಟ್ಟಿಯ ತುಂಬಾ ಬಿದ್ದಿದ್ದ ಇಟ್ಟಿಗೆ ಗಾರೆ ಕಬ್ಬಿಣ ಮುಂತಾದ ಸಾಮಾನುಗಳನ್ನು ಹೊರಕ್ಕೆ ಸಾಗಿಸಿ, ಸ್ಥಳವನ್ನು ಚೊಕ್ಕಟ ಮಾಡಿದರು. ಬಿದ್ದ ಕಟ್ಟಡದ ಕೆಳಗೆ ಕೂಲಿ ಆಳುಗಳ್ಯಾರೂ ಸತ್ತು ಇರಲಿಲ್ಲ. ಇಂಥ ಭಾರೀ ಕಟ್ಟಡವು ಕೆಡಿಕೊಂಡದ್ದರಿಂದ ಒಂದು ಲಕ್ಷ ರೂಪಾಯಿನ ತನಕ ನಷ್ಟವಾಯಿತು.

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಮಗಳೂರು ಮ್ಯುನಿಸಿಪಲ್ ಬೋರ್ಡಿಗೆ ಮೆ॥ ಟಿ. ಚೆನ್ನಬಸಪ್ಪಶೆಟ್ರನ್ನೂ ಮೆ॥ ಬಿ. ಜನಾರ್ದನೈಯನವರನ್ನೂ ಮೆಂಬರಾಗಿ ನೇಮಿಸಿದೆ.

ಅ॥ ಕಮಿಷನರ್ ಮತ್ತು ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ. ಕೆ. ಮತ್ತಾರರವರಿಗೆ ಸಾಕ್ಷಿಗಳ ಹೇಳಿಕೆಯನ್ನು ಇಂಗ್ಲಿಷಿನಲ್ಲೇ ಸ್ವಹಸ್ತ ಬರೆದುಕೊಳ್ಳ ತಕ್ಕ ಅಧಿಕಾರಕೊಡಲ್ಪಟ್ಟಿದೆ.

ಕೋಲಾರ್ ಚಿನ್ನದ ಗಣಿಗಳ ಅ॥ ಕಮಿಷನರ್ ಮತ್ತು ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಸರಹದ್ದಿನಲ್ಲಿ ಹುಟ್ಟುವ ಮೊಕದ್ದಮೆಗಳನ್ನು ಸಮ್ಮರಿಯಾಗಿ ದರ್ಯಾಪ್ತುಮಾಡುವಂತೆ ಆ ಮ್ಯಾಜಿಸ್ಟ್ರೇಟರಿಗೆ ಅಧಿಕಾರಕೊಟ್ಟಿದೆ.

ತುಂಕೂರು ಮುನ್ಸಿಫ್ ಮೆ॥ ಟಿ. ಇ. ದಯರಾಮ ಐಯರವರಿಗೆ ಜುಲೈ ೫ ರಿಂದ ೧೨ ನೆ ತಾರೀಖು ವರೆಗೆ ಉಭಯ ದಿನಗಳೂ ಸೇರಿ ಪ್ರಿವಿಲೆಜ್ ರಜಾ ಕೊಟ್ಟಿದೆ.

ರೆವಿನ್ಯೂ ಪ್ರೊಬೇಷನರ್ ಮೆ॥ ಎನ್. ರಾಮರಾಯರನ್ನೂ ಮೆ॥ ಬಿ ನಾರಾಯಣಸ್ವಾಮೈಯಂಗಾರ್ರನ್ನೂ ೪ ನೆ ಕ್ಲಾಸ್ ಅಮಲ್ದಾರರನ್ನಾಗಿ ಖಾಯಂಮಾಡಿದೆ.

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಕೆ. ಮುತ್ತಯ್ಯನವರಿಗೆ ಆರು ತಿಂಗಳ ತನಕ ಕಾಡುಗಳಲ್ಲಿ ಬೇಟೆಯಾಡುವ ಮೃಗಾದಿಗಳನ್ನು ಕಾಪಾಡುವ ಅಧಿಕಾರ ವಹಿಸಲ್ಪಟ್ಟಿದೆ.

ಮೈಸೂರು ಅರಮನೆ ಡಿವಿಜನ್ ಅ॥ ಇಂಜನಿಯರ್ ಮೆ॥ ಟಿ. ಎಸ್. ಶೇಷೈಯಂಗಾರ್ರಿಗೆ ಏಪ್ರಿಲ್ ತಾ ೨೯ ರಿಂದ ಒಂದು ತಿಂಗಳು ಹದಿಮೂರು ದಿನಗಳ ಪ್ರಿವಿಲೆಜ್ ರಜವನ್ನೂ ತರುವಾಯ ಒಂದು ವರುಷ ಹತ್ತು ತಿಂಗಳು ಹದಿನೇಳು ದಿನಗಳ ಫರ್ಲೋ ರಜವನ್ನೂ ಕೊಟ್ಟಿದೆ.

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು

ರಷ್ಯಾದವರ ಸೋಲು

ಲಂಡನ್, ಜೂನ್ ೧೭ —ಜಪಾನಿನವರು ತಾ ೯ ರಲ್ಲಿ ಭಾಂಗ್ ಟಾಪು ಎಂಬ ಸ್ಥಳದ ಬಳಿ ರಷ್ಯ ಸೈನ್ಯಗಳನ್ನು ಸಂಧಿಸಿ ಯುದ್ಧ ಮಾಡಿ ಸೋಲಿಸಿ ಹಿಂದಕ್ಕೆ ಓಡಿಸಿಕೊಂಡು ಹೋದರು.

ಇನ್ನೊಂದು ಸೋಲು.

ರಷ್ಯಾದವರು ಜಪಾನಿನವರ ಸ್ವಾಧೀನದಲ್ಲಿರುವ ಮೂರು ಠಾಣ್ಯಗಳ ಮೇಲೆ ನುಗ್ಗಿ ಮುತ್ತಿಗೆ ಹಾಕಿದರು. ಆದರೆ ಜಪಾನಿನವರು ಪ್ರತಿ ಒಂದು ಕಡೆಯಲ್ಲೂ ಶತ್ರುಗಳನ್ನು ಸೋಲಿಸಿ ಹಿಮ್ಮೆಟ್ಟಿಸಿರುತ್ತಾರೆ.

ಸೈಬೀರಿಯಾ ರೈಲ್ವೆ ಉದ್ದಕ್ಕೂ ಇರುವ ಪ್ರಾಂತ್ಯಗಳಲ್ಲಿ ರಷ್ಯಾ ಸೈನಿಕರು ವಾಂತಿಭೇದಿ ಉಪದ್ರ ತಗಲಿ ಮೃತಪಡುತ್ತಿದ್ದಾರೆ.

ಜಪಾನಿನಲ್ಲಿ ದೊಡ್ಡ ಸಭೆ.

ಲಂಡನ್, ಜೂನ್ ೧೬.—ಜಪಾನ್ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ಚಕ್ರವರ್ತಿಯವರು ತಮ್ಮ ರಾಜವರ್ಗಕ್ಕೆ ಸೇರಿದ ದೊಡ್ಡ ಮನುಷ್ಯರನ್ನೂ ಸೈನ್ಯಾಧಿಪತಿಗಳನ್ನೂ ಅಡ್ಮಿರಲ್ ಎಂಬ ನಾವೆಗಳ ಅಧಿಪತಿಗಳನ್ನೂ ಮಂತ್ರಿಗಳನ್ನೂ ಅರಮನೆಗೆ ಕರೆಸಿಕೊಂಡು ಬಹಳ ಹೊತ್ತು ರಾಜಕೀಯ ವಿಷಯಗಳನ್ನು ಕುರಿತು ಚರ್ಚೆಮಾಡಿದರು.

ಈ ವಾರವೆಲ್ಲಾ ರಷ್ಯಾ ಜಪಾನಿನವರಿಗೆ ಕರಾರು ನಡೆಯುವ ವಿಚಾರಗಳೇ ವಿಶೇಷವಾಗಿ ಪ್ರಕಟವಾಗಿವೆ. ಯುದ್ಧಭೂಮಿಯಲ್ಲಿ ನಡೆಯುತ್ತಿರುವ ಕಾರ್ಯಗಳೇನೆಂಬುದು ತಿಳಿದುಬರಲಿಲ್ಲ.

ಸತ್ತವರಿಗೆ ಉತ್ತರ ಕ್ರಿಯೆ.

ಲಂಡನ್, ಜೂನ್ ೧೮ —ಕ್ಯುಷಿಮಾ ಎಂಬ ಕಡೆಯಲ್ಲಿ ನಡೆದ ಸಮುದ್ರ ಯುದ್ಧದಲ್ಲಿ ರಷ್ಯಾದವರ ಕಡೆ ಮಡಿದುಹೋದವರಿಗೆಲ್ಲಾ ಉತ್ತರ ಕ್ರಿಯೆಗಳನ್ನು ಮಾಡುವುದಕ್ಕೆ ರಷ್ಯಾ ರಾಜಧಾನಿಯ ದೇವಾಲಯದಲ್ಲಿ ದೊಡ್ಡ ಸಭೆ ನಡಸಿದರು. ಚಕ್ರವರ್ತಿಯವರ ಮಾತೃಶ್ರೀಯವರೂ ಬಹು ಮಂದಿ ಆಸ್ಥಾನದ ದೊಡ್ಡ ಮನುಷ್ಯರೂ ರಾಜವರ್ಗಕ್ಕೆ ಸೇರಿದವರೂ ಈ ಕೂಟದಲ್ಲಿ ಹಾಜರಾಗಿದ್ದರು.

ಇನ್ನೊಂದು ಸೋಲು.

ಲಿಯೊಯಾಂಗ್ ಪ್ರೋಪಿಂಗ್ ಎಂಬ ರಾಜ್ಯದಿಂದ ರಷ್ಯಾದವರನ್ನು ಜಪಾನಿನವರು ಓಡಿಸಿ ಸ್ವಾಧೀನಪಡಿಸಿಕೊಂಡರು. ರಷ್ಯಾದವರ ಕಡೆ ಬಹು ಮಂದಿ ಹತರಾದರು. ಜಪಾನಿನವರಲ್ಲಿ ೧೬೪ ಮಂದಿ ನಷ್ಟವಾದರು.

ಹಾಸ್ಯಲಹರಿ

ರಾಮು—ಗೋವಿಂದ! ಕಳೆದ ಶನಿವಾರ ನಿಮ್ಮ ಉಪಾಧ್ಯಾಯರು ನಿನ್ನನ್ನು ಹೊಡೆದದ್ದು ಈ ದಿವಸ ನಮಗೆಲ್ಲಾ ತಿಳಿಯಿತು!

ಗೋವಿಂದ—ಅದು ಆ ದಿವಸವೇ ನನಗೆ ತಿಳಿಯಿತು.

ಪತಿ—ಪ್ರಿಯೆ, ನಿದ್ರೆ ಬರುತ್ತೆ, ತಲೆದಿಂಬನ್ನು ಕೊಡು.

ಪತ್ನಿ—ಮನೆಯಲ್ಲಿ ತಲೆದಿಂಬೇ ಇಲ್ಲ. ಅಳೆಯುವ ಸೇರನ್ನಾದರೂ ಕೊಡಲೇ?

ಪತಿ—ಅದು ಬೇಡ; ತಲೆ ಒತ್ತುತ್ತದೆ.

ಪತ್ನಿ—ಹಾಗಾದರೆ ಅದಕ್ಕೆ ಅರಳೆಯನ್ನು ತುಂಬಿಕೊಡಲೇ.

ಮಾರ್ಗಸ್ಥ—(ಪಾದಚಾರಿಯಾಗಿ ಹೋಗುತ್ತಿದ್ದ ರಾಜನನ್ನು ಕಂಡು) ಮಹಾ ಪ್ರಭುವೇ ವಂದಿಸುವೆನು.

ರಾಜ—ನೀನು ಯಾರು? ನಿನ್ನ ಯೋಗಕ್ಷೇಮವೇನು?

ಮಾರ್ಗಸ್ಥ—(ರಾಜನಿಗೆ ಒಂದೇ ಗಜ ದೂರದಲ್ಲಿ ಸಂಗಡ ಸಂಚರಿಸುತ್ತಾ) ನಾನು ತಮ್ಮ ರೈತನು, ದಾರಿಯಲ್ಲಿ ಕಂಡದ್ದರಿಂದ ನನ್ನ ಭಕ್ತಿಯನ್ನು ತೋರಿಸಲು ಅಡ್ಡಬಿದ್ದೆನು.

ರಾಜ—(ತನಗೆ ಅಷ್ಟು ಸಮೀಪದಲ್ಲಿ ಸಂಚರಿಸುತ್ತಾ ಮಾತನಾಡಿದುದಕ್ಕೆ ಕೋಪಗೊಂಡು) ಏನೋ, ನಿನಗೂ ಕತ್ತೆಗೂ ವ್ಯತ್ಯಾಸವೇನು ಇಲ್ಲವೇ?

ಮಾರ್ಗಸ್ಥ—ಮಹಾ ಸ್ವಾಮಿ, ಇಲ್ಲವು; ಒಂದೇ ಗಜವು.

ಅರಸನು—ಜೋಯಿಸರೆ! ಕಳೆದ ರಾತ್ರಿ ನನ್ನ ಬಾಯಿಯಲ್ಲಿರುವ ಹಲ್ಲುಗಳೆಲ್ಲಾ ಬಿದ್ದುಹೋದಂತೆ ಸ್ವಪ್ನವಾಯಿತು; ಅದರ ಫಲವೇನು?

ಜೋಯಿಸ—ಮಹಾಸ್ವಾಮಿ! ತಮ್ಮ ಕಣ್ಣೆದುರಿಗೆ ತಮ್ಮ ಪುತ್ರ ಮಿತ್ರ ಕಳತ್ರ ಬಂಧುಗಳೆಲ್ಲರೂ ಸಾಯುವರು.

ಅರಸನು—(ಕೋಪಗೊಂಡು, ಆ ಜೋಯಿಸನನ್ನು ಅರಮನೆಯಿಂದ ಹೊರಕ್ಕೆ ತಳ್ಳುವಂತೆ ಆಜ್ಞಾಪಿಸಿ, ಮತ್ತೊಬ್ಬ ಜೋಯಿಸನನ್ನು ಕರೆಸಿಕೊಂಡು ಅದೇ ಪ್ರಶ್ನೆಯನ್ನು ಮಾಡಿದನು.)

೨ ನೇ ಜೋಯಿಸ—ಸ್ವಾಮಿ! ತಮ್ಮ ಸ್ವಪ್ನವು ಸರ್ವೋತ್ತಮವಾದುದು; ಮಹಾ ಸ್ವಾಮಿಯವರಿಗೆ ಸಮಸ್ತ ಬಂಧುಬಳಗಗಳಿಗಿಂತಲೂ ದೀರ್ಘಾಯುಸ್ಸುಂಟಾಗುವುದು.

ಅರಸನು—(ಇದನ್ನು ಕೇಳಿ ೨ ನೇ ಜೋಯಿಸರಿಗೆ ಬಹುಮಾನವನ್ನು ಕೊಡಿಸಿದನು.)

☞ ತಾವು ಲಕ್ಷ್ಯಕೊಟ್ಟು ಓದಿ ಆದ ಮೇಲೆ ದಯಮಾಡಿ ಇದನ್ನು ತಮ್ಮ ಮಿತ್ರರಿಗೂ ತೋರಿಸಬೇಕು.

ಮೈಸೂರು ವೃತ್ತಾಂತಪತ್ರಿಕೆಯ ಸಪ್ಲಮೆಂಟು, ಗುರುವಾರ ತಾ ೨೨ನೇ ಜೂನ್ ೧೯೦೫ನೇ ಇಸವಿ.

ಸನ್ ೧೮೭೭ನೇ ಇಸ್ವಿಯಲ್ಲಿ ಉತ್ತರ ಕಾನಡಾ ಜಿಲ್ಲಾ, ಬಿಳಗಿಯೊಳಗೆ ಪ್ರಸಿದ್ಧ ರಾಜವೈದ್ಯರು ಹಿಂದುಸ್ಥಾನ (ಭರತಖಂಡ), ಬ್ರಹ್ಮದೇಶ, ಮಸ್ಕತ, ಏಡನ್, ಪೋರ್ಟ್ ಬ್ಲೇಯರ್ ಇತ್ಯಾದಿ ಪ್ರದೇಶದ ವ್ಯಾಧಿಗ್ರಸ್ತರ ಉಪಯೋಗಾರ್ಥವಾಗಿ ಸ್ಥಾಪಿಸಿದ

ಕರ್ನಾಟಕ ಔಷಧಾಲಯವು.

೧. ಇದರ ಕೆಳಗ ನಮೂದಿಸಿದ ಔಷಧಗಳು ವರ್ಷದ ಎಲ್ಲ ಋತುವಿನಲ್ಲಿಯೂ ಉಪಯೋಗಿಸಬಹುದು.

೨. ನಮ್ಮ ಔಷಧದಲ್ಲಿ ಹೆಚ್ಚಾಗಿ ವನಸ್ಪತಿಯನ್ನೇ ಉಪಯೋಗಿಸುತ್ತೇವೆ. ಹಾಗೂ ನಿರ್ದೋಷವಾದ ಜಿನಸುಗಳನ್ನು ಮಾತ್ರ ಔಷಧದಲ್ಲಿ ಸೇರಿಸುವದರಿಂದ ಪ್ರತಿ ಒಬ್ಬರು ಈ ಔಷಧಗಳನ್ನು ಆಕ್ಷೇಪವಿಲ್ಲದೆ ಸೇವಿಸಬಹುದು.

೩. ಪೊರ ಊರಿನವರಿಗೆ ಈ ಕೆಳಗೆ ನಮೂದಿಸಿದ ಎಲ್ಲ ಔಷಧಗಳನ್ನು ಯಾವಾಗಲೂ ದೊರಿಯುವ ಹಾಗೆ ತಯಾರಿಯಲ್ಲಿಟ್ಟಿರುತ್ತೇವೆ, ಮತ್ತು ಈ ಕಂಪನಿಯವರು ಹೊರ ಊರಿಗ ಕಳುಹಿಸುವ ಪ್ರತಿ ಒಂದು ಔಷಧದ ಮೇಲೆ ಮುಖ್ಯ ರಾಜವೈದ್ಯರು ಯಾವಾಗಲೂ ಪೂರ್ಣ ಪಟ್ಟಬೇಟು ಇದುತ್ತಿರುತ್ತಾರೆ.

೪. ಪೊರ ಊರಿನ ಅನೇಕ ಸಾವಿರ ಜನರು ನಮ್ಮ ಈ ಔಷಧದಿಂದ ಗುಣ ಹೊಂದಿದ ಲೇಖಿ ದಾಖಲೆಗಳು ನಮ್ಮ ಸ್ಥಳದಲ್ಲಿರುತ್ತವೆ. ಅಂಥಾ ದಾಖಲೆಗಳಲ್ಲಿ ಅನೇಕ ದೊಡ್ಡ ಮನುಷ್ಯರು ಗುಣ ಹೊಂದಿದ ಎಷ್ಟೋ ದಾಖಲೆಗಳನ್ನು ಈ ಕೆಳಗ ಛಾಪಿಸಿರುತ್ತೇವೆ. ಅಂಥವುಗಳನ್ನು ನಮ್ಮ ವಾಚಕರು ದಯಮಾಡಿ ಓದಿನೋಡಬೇಕೆಂದು ಇಚ್ಛಿಸುತ್ತೇವೆ.

೫. ನಮ್ಮ ಔಷಧದೊಳಗೆ ವಿಶೇಷ ರೂಢಿಯಲ್ಲಿ ಎಲ್ಲವರಿಂದಲೂ ಉಪಯೋಗಿಸಲ್ಪಡುವ ಮದನಸಂಜೀವನೀ ಗುಳಿಗೆ ಮತ್ತು ಮದನ ಸಂಜೀವನೀ ತೈಲ ಈ ಎರಡು ಔಷಧಗಳನ್ನು ಇಂಗ್ಲಿಷ ವೈದ್ಯವಿದ್ಯೆಯಲ್ಲಿ ಅತ್ಯಂತ ಪದವಿಯನ್ನು ಹೊಂದಿದ ಸನ್ಮಾನನೀಯ ಡಾಗ್ತಾರ ಜನರು ಪರೀಕ್ಷಿಸಿ, ಆ ಬಗ್ಗೆ ಅವರು ಕೊಟ್ಟ ಇಂಗ್ಲಿಷ ದಾಖಲೆಗಳನ್ನೂ ಅವುಗಳ ಸಂಕ್ಷೇಪವಾದ ಕನ್ನಡ ಭಾಷಾಂತರವನ್ನೂ ಇದರ ಕೆಳಗ ಛಾಪಿಸಿದ್ದೇವೆ. ಅವನ್ನು ನಮ್ಮ ಪ್ರಿಯ ವಾಚಕರು ಒಮ್ಮೆ ಓದಿನೋಡಬೇಕೆಂತ ಅಪೇಕ್ಷಿಸುತ್ತೇವೆ.

೬. ನಮ್ಮ ಈ ಕಂಪನಿಯ ಮುಖ್ಯ ರಾಜವೈದ್ಯರಿಂಗ ಸ್ವದೇಶಪ್ರೇಮ ... ತೈಲವು ... ಯಾವದೇ ಅನ್ಯರಾದ ಪ್ರಕಾರದ ಔಷಧದೊಳಗೆ ಅನುಭವದಿಂದ ಸಂಪೂರ್ಣ ಗುಣಕಾರಿಯಾಗಿ ಕಂಡು ಬಂದ ಔಷಧಗಳನ್ನು ಮಾತ್ರ ನಾವು ಉಪಯೋಗಿಸುತ್ತೇವೆ.

೭. ನಮ್ಮ ಔಷಧಗಳನ್ನು ಕನ್ನಡ, ಮರಾಠಿ, ಗುಜರಾತಿ, ಹಿಂದುಸ್ಥಾನಿ ಈ ನಾಲ್ಕು ಭಾಷೆಯೊಳಗೆ ಪ್ರಕಟಿಸುವದರಿಂದ ಈ ವರೆಗೆ ಹೊರ ಊರಿನ ೧೦,೦೦೦ ಜನರಿಂದ ನಮ್ಮ ಔಷಧಗಳು ಉಪಯೋಗಿಸಲ್ಪಟ್ಟವೆ.

೮. ಔಷಧ ಅಪೇಕ್ಷಿಸುವಾಗ ಗ್ರಾಹಕರು ತಮ್ಮ ಸಂಪೂರ್ಣ ವಿಳಾಸ ಬಾಲಬೋಧ ಅಕ್ಷರದಿಂದ ಬರೆದು ನಮ್ಮ ಈ ಕೆಳಗಿನ ವಿಳಾಸಕ್ಕೆ ಪತ್ರ ಕಳುಹಿಸಬಹುದು.

ನಮ್ಮ ವಿಳಾಸ—'ರಾಜವೈದ್ಯ ಮತ್ತು ಕಂಪನಿ, ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ, ಮುಂಬೈ ಇಲಾಖೆ.' Our Address:—Rajavaidya & Co., Post Bilgi, North Kanara District, Bombay Presidency. Our Telegraphic Address: 'Rajavaidya,' 'Post Bilgi,' Telegraph Office, Kumta.'

ಅತ್ಯಂತ ವಿದ್ವಾನ ಡಾಗ್ತಾರರ ಪರೀಕ್ಷೆಯಿಂದಲೂ ಅನುಭವದಿಂದಲೂ ಖಾತ್ರಿಯಾದ ಔಷಧಗಳು.

(1)

ಭಾರೀ ಸೋಜಿಗ ವಸ್ತು!!!

ಮದನ ಸಂಜೀವನೀ ಗುಳಿಗೆ.

ಸುವರ್ಣಭಸ್ಮದ (ಚಿನ್ನದ) ಮಿಶ್ರಣದಿಂದ ತಯಾರಿಸಿದ್ದು.

(2)

ಅದ್ಭುತ ಚಮತ್ಕಾರ!!!

ಮದನಸಂಜೀವನೀ ತೈಲವು.

ಶಿಫಾರಸಪತ್ರಗಳು (ಸರ್ಟಿಫಿಕೇಟುಗಳು).

(ಡಾಗ್ತಾರ್) ಜೆ. ಜೆ. ಪ್ರಿಬಲ್,

(ಡಾಗ್ತಾರ್) ಕೆ. ಬಿ. ಬುಲೆಲ್, ಎಮ್. ಡಿ.,

(ಡಾಗ್ತಾರ್) ಕೆ. ಆರ್. ವಿಕಾಜೀ, ಎಮ್. ಡಿ., ಮುಂಬೈ

ಸೋಲಿನ ದಾಖಲೆಗಳ ಮೂಲ ಇಂಗ್ಲಿಷ ಪ್ರತಿ ಈ ಕೆಳಗೆ ಕೊಟ್ಟಿರುತ್ತೇವೆ.—

REPORT ON MADANASANJIVANI PILLS AND OIL

(1) I have made a careful examination of some pills and an oil or liniment prepared by Mr. Ramkrishna Pandurang, and sold by them as an aphrodisiac or sexual excitant and for the cure of venereal diseases. I find the drugs of which they are composed to be among the most valuable of those which find a place in the British and other European Pharmacopœias and which are constantly employed by the leading physicians. I am of opinion that these medicines, when properly exhibited, would not be injurious, but would be very efficacious in the relief and cure of those symptoms for which they are specially recommended by the Vendors.

J. J. PREBBLE,
Analytical and Consulting Chemist, Prize Medallist, for Kemp & Co., Ltd., Bombay.

(2) Mr. Ramkrishna Pandurang of Bilgi explained to me the process and the ingredients that are used in the preparations of his *Madanasanjivani Pills* and *Oil*. The medicines he uses in their preparations are out of the many that are used by learned Doctors for diseases for which he has advertised them to be effective. They are excellent and would do no harm.

K. B. BULLEL, M. D.,
Eye and Ear Surgeon, Bombay.

(3) In all cases * * * these preparations will, I believe, be found a handy and convenient form for use.

K. R. VICCAJEE, M. D.,
Fellow of the University of Bombay, late Assist. Chemical Analyser to the Government of Bombay.

(6)

ಹವಿಸ್ಯ ವಿಜಯಕ್ಕೆ ಸುಂದರ ವರ್ಣಸನ್ನು ...

ಜಂಬೀರ ತೈಲವು.

(7)

ಶೀತಜ್ವರರಿಪು ಗುಳಿಗೆ.

(ನಂಬರ ೧)

(8)

ಶೀತಜ್ವರರಿಪು ಗುಳಿಗೆ.

(ನಂಬರ ೨)

(9)

ಚಿಕ್ಕ ಹುಡುಗರ

ಕೂರ್ಮವ್ಯಾಧಿಗೆ.

ನವೌಷಧಿ ಗುಳಿಗೆ (ನಂಬರ ೪)

(10)

ಅತಿಶೀಘ್ರ ಗುಣದ

ಲೋಹಭಸ್ಮವು.

(11)

ವ್ಯಾಯಮಬದ್ಧರ ಉರಿಮೂತ್ರಕ್ಕೆ

ಅಮೃತಾದಿ ಚೂರ್ಣ.

(17)

ಅಮೃತರಸ (ನಂಬರ ೧)

(18)

ಅಮೃತರಸ (ನಂಬರ ೨)

(19)

ಅಮೃತರಸ (ನಂಬರ ೪)

(20)

ಜ್ವರಗಡ್ಡೆಗೆ ಸುಧಾಬಿಂದು.

(21)

ವಂಶವೃದ್ಧಿಗೆ

ಸುವಾಸಿಕ ಮಂಜನವು.

(22)

ಸುಧಾಚೂರ್ಣ.

ಮೂಗಿನ ಸೀನಸಿ ಅದನಾ ಪಿನಿಸಿರೋಗಕ್ಕೆ.

(23)

ನಯನರೋಗಕ್ಕೆ ಸುಖಾಂಜನವು.

(24)

ಸುದರ್ಶನ ತೈಲ (ನಂಬರ ೧).

(25)

ಸುದರ್ಶನ ತೈಲ (ನಂಬರ ೨).

(29)

ಮಂಗಲಕಾರಕ ಲೇಪನವು.

(ನಂಬರ ಒಂದನೆಯದು ಇದು ಸುವಾಸಿಕವಾಗಿದೆ).

(30)

ಮೂಲವ್ಯಾಧಿಗೆ

ವನಮೂಲಿಕಾ ಚೂರ್ಣ.

(31)

ಮೂಲವ್ಯಾಧಿಗೆ ಮಲಮು.

(32)

ಭರ್ತೃ ಸ್ತ್ರೀಯವರ ಸುಲಭಪ್ರಸೂತಿಗೆ

ಪಿಯೂಷ ಗುಟಿಕಾ.

(33)

ಸ್ವಪ್ನದಲ್ಲಿ ಆಗುವ ಧಾತುಸ್ರಾವ ನಿಲ್ಲಲಿಕ್ಕೆ

ಮೂಲಿಕಾಬಿಂದು.

(34)

ಅಗ್ನಿಶಾಂತೀ ಗುಳಿಗೆ.

(35)

ಮಧುಮೇಹಕ್ಕೆ ವನೌಷಧಿ.

ಸುವರ್ಣಭಸ್ಮದ (ಚಿನ್ನದ) ಮಿಶ್ರಣದಿಂದ ತಯಾರಿಸಿದ್ದು

(2)

ಆಮೃತ ಚಮತ್ಕಾರ!!!

ಮದನಸಂಜೀವನೀ ತೈಲವು.

ಸಂಪೂರ್ಣ ಖಾತ್ರಿಯುಳ್ಳದ್ದು (೫೦೦೦ಕ್ಕಿಂತಲೂ ಹೆಚ್ಚು ಖರ್ಚು ಮಾರಿದವು)

ಶಿಫಾರಸಪತ್ರಗಳು (ಸರ್ಟಿಫಿಕೇಟುಗಳು)

(ಡಾಕ್ಟರ್) ಜೆ. ಜೆ. ಪ್ರಿಬಲ್,

(ಡಾಕ್ಟರ್) ಕೆ. ಬಿ. ಬುಲೆಲ್, ಎಮ್. ಡಿ.,

(ಡಾಕ್ಟರ್) ಕೆ. ಆರ್. ವ್ಹಿಕಾಜಿ, ಎಮ್. ಡಿ., ಮುಂಬೈ.

ಮೇಲಿನ ದಾಖಲೆಗಳ ಮೂಲ ಇಂಗ್ಲಿಷ ಪ್ರತಿ ಈ ಕೆಳಗೆ ಕೊಟ್ಟಿರುತ್ತೇನೆ:—

REPORT ON MADANASANJIVANI PILLS AND OIL.

(1) I have made a careful examination of the pills and an oil or liniment prepared by Mr. Ramkrishna Pandurang and sold by them as an aphrodisiac or sexual excitant and for the cure of venereal diseases. I find the drugs of which they are composed to be among the most valuable of those which find a place in the British and other European Pharmacopœias and which are constantly employed by the leading physicians. I am of opinion that these medicines, when properly exhibited, would not be injurious, but would be very efficacious in the relief and cure of those symptoms for which they are specially recommended by the Vendors.

J. J. PREBBLE,

Analytical and Consulting Chemist, Prize Medalist, for Kemp & Co. Ltd. Bombay.

(2) Mr. Ramkrishna Pandurang of Bilgi explained to me the process and the ingredients that are used in the preparations of his *Madanasanjivani Pills* and *Oil*. The medicines he uses in their preparations are out of the many that are used by learned Doctors for diseases for which he has advertised them to be effective. They are excellent and would do no harm.

K. B. BULLEL, M. D.

Lic. and Lic. Surgeon, Bombay.

(3) In all cases * * * these preparations will, I believe, be found a handy and convenient form for use.

K. R. VICCAJEE, M. D.

Fellow of the University of Bombay, Late Chemical Analyser to the Government of Bombay.

ಇವಲ್ಲದೆ ಈ ಔಷಧಗಳನ್ನು ಉಪಯೋಗಿಸಿ ಗುಣ ಹೊಂದಿದ ಅನೇಕಾನೇಕ ಜನರ ಸ್ವ ದಾಖಲೆಗಳನ್ನು ಈ ಪತ್ರಿಕೆಯ ಹಿಂಭಾಗದಲ್ಲಿ ವಿವರಿಸಿದ್ದೇನೆ. ಅವನ್ನು ಓದಿ ನೋಡಬೇಕು.

(3)

ಪ್ರಮೇಹರಿಪು ಬಿಂದು.

(4)

ಅಮೃತಸಂಜೀವನೀ ಗುಳಿಗೆ.

(ಅನೇಕ ಜನರು ಇದರಿಂದ ಗುಣ ಹೊಂದಿದ್ದಾರೆ.)

(5)

ಉಗ್ಗು ಮಾತಿನ ಮೇಲೆ

ವಾಕ್‌ಸಂಜೀವನೀ ಗುಳಿಗೆ.

(ಅನೇಕ ಜನರು ಇದರಿಂದ ಗುಣ ಹೊಂದಿದ್ದಾರೆ.)

(6)

ಹದಿನೈದು ಮಿನಿಟಗಳಲ್ಲಿ ಸುಖದ ವಶೀಕರಣವು.

ಶುದ್ಧ ವನಸ್ಪತಿಗಳಿಂದ ತಯಾರಿಸಿದ ಪೂರ್ಣ ಸುಖದಾಯಕವಾದ

ಜಂಬೀರ ತೈಲವು.

(7)

ಶೀತಜ್ವರರಿಪು ಗುಳಿಗೆ.

(ನಂಬರ ೧)

(8)

ಶೀತಜ್ವರರಿಪು ಗುಳಿಗೆ.

(ನಂಬರ ೨)

(9)

ಚಿಕ್ಕ ಹುಡುಗರ

ಕೂರ್ಮವ್ಯಾಧಿಗೆ.

ವನೌಷಧಿ ಗುಳಿಗೆ (ನಂಬರ ೪)

(10)

ಅಪಿಮ್ಮಿಶ್ರಿತ ಗುಣದ

ಲೋಹಭಸ್ಮವು.

(11)

ಪ್ರಾಯಶ್ಚಿತ್ತವುಳ್ಳವರ ಬಿರಿಮೂತ್ರಕ್ಕೆ

ಅಮೃತಾದಿ ಚೂರ್ಣ.

(12)

ಸುಖದಾಯಿನೀ ಗುಳಿಗೆ.

(13)

ಚಿಕ್ಕ ಹುಡುಗರ

ಬಾಲಗ್ರಹದ ಉಪಹತಿಗೆ.

ಔಷಧ.

(14)

ಗಜಕರ್ಣದ ಮಲಾಮು.

(15)

ಮಲಮುಗಳು.

(16)

ವಾಯುಹಾರಕ ತೈಲವು.

(19)

ಅಮೃತರಸ (ನಂಬರ ೪).

(20)

ಜ್ವರಗಡ್ಡೆಗೆ ಸುಧಾಬಿಂದು.

(21)

ದಂತಶುದ್ಧಿಗೆ

ಸುವಾಸಿಕ ಮಂಜನವು.

(22)

ಸುಧಾಚೂರ್ಣ.

ಮೂಗಿನ ಪೀನಸಿ ಅಥವಾ ಸಿನಾಸಿರೋಗಕ್ಕೆ

(23)

ನಯನರೋಗಕ್ಕೆ ಸುಖಾಂಜನವು.

(24)

ಸುದರ್ಶನ ತೈಲ (ನಂಬರ ೧)

(25)

ಸುದರ್ಶನ ತೈಲ (ನಂಬರ ೨).

(26)

ವನೌಷಧಿ ತೈಲ (ಕರ್ಣಸ್ರಾವಕ್ಕೆ).

(27)

ಅಜಮೋದಾಮೃತವು.

(28)

ಮಂಗಲಕಾರಕ ಲೇಪನವು.

(ನಂಬರ ೧ ಅಥವಾ ನಂಬರ ೨).

ವನಮೂಲಿಕಾ ಚೂರ್ಣ.

(31)

ಮೂಲವ್ಯಾಧಿಗೆ ಮಲಮು.

(32)

ಗರ್ಭಿಣಿ ಸ್ತ್ರೀಯರಿಗೆ ಮಲಬದ್ಧತೆಗೆ

ಪಿಯೂಷ ಗುಟಿಕಾ.

(33)

ಸ್ವಪ್ನದಲ್ಲಿ ಆಗುವ ಧಾತುಸ್ರಾವ ನಿಲ್ಲಲಿಕ್ಕೆ

ಮೂಲಿಕಾಬಿಂದು.

(34)

ಅಗ್ನಿಶಾಂತೀ ಗುಳಿಗೆ.

(35)

ಮಧುಮೇಹಕ್ಕೆ ವನೌಷಧಿ.

(36)

ರಕ್ತಾತಿಸಾರ ಮತ್ತು ಆಮಾತಿಸಾರಕ್ಕೆ.

ವನೌಷಧಿ ಗುಳಿಗೆ (ನಂಬರ ೨).

(37)

ಅಮೃತರಸ (ನಂಬರ ೩) ಕರ್ಣಸ್ರಾವಕ್ಕೆ.

(38)

ಅಮೃತರಸ (ನಂಬರ ೫).

ಚಿಕ್ಕ ಕೂಸುಗಳ ಆಳೋಣವು ನಿಲ್ಲಲಿಕ್ಕೆ.

ಇದರ ಹಿಂಭಾಗ ಓದಿನೋಡಿ.

(39)

ಸ್ತ್ರೀಯರ ಆರ್ತವಶೂಲಗೆ ಜಲಬಿಂದು.

(40)

ಸಾರಕ ಮಧುರ ಚೂರ್ಣವು.

ಸೌಮ್ಯತರದ ಜುಲಾಬು ಆಗುವದಕ್ಕೆ

(41)

ವಿಲಾಸ ಸಂಜೀವನಿಯ ಬೇರು.

(ಈ ಬೇರು ಅತಿ ದಾತುಪುಷ್ಟಿಯ ಗುಣವುಳ್ಳದ್ದು)

(42)

ನೂಗದಬೇರಿನ ಸತ್ವದ ಗುಳಿಗೆಗಳು.

(ರಕ್ತ ಶುದ್ಧಿಗೆ)

(43)

ಉಬ್ಬಸ ಅಂದರೆ ದಮ್ಮಿಗೆ

ಸುಖಸಂಜೀವನೀ ಗುಳಿಗೆ.

(44)

ಪಾಂತಿಭೇದಿಗೆ ಕ್ಲೋರೋಡಾಯಿನ್.

(45)

ಸೂತಿಕಸನ್ನಿಗೆ ವನೌಷಧಿ ಮಾತ್ರೆಗಳು.

(46)

ಪ್ಲೇಗ ಪ್ರತಿಬಂಧಕ ಬಿಂದು.

(ಪ್ಲೇಗದ ಪಿಡುಗು ಹುಟ್ಟಿದ ಇದ್ದ ಹಾಗ ಉಳಿಯಲಿಕ್ಕೆ)

(51)

ಬಾಲ ಸುಧಾರಸ.

(52)

ಸಂಗ್ರಹಣಿಗೆ

(ಕುಟಜ ಸತ್ವದ ಗುಳಿಗೆಗಳು)

(53)

ಬಾಷ್ಪಸ್ನಾನವು.

ನಮ್ಮ ವಿಳಾಸ — ರಾಮಕೃಷ್ಣ ಪಾಂಡುರಂಗ, ರಾಜವೈದ್ಯ ಮತ್ತು ಕಂಪನಿ,

Our Address —Rajavaidya & Co.,

Post Bilgi, North Kanara District.

Our Telegraphic Address —"Rajavaidya,"

Post Bilgi, Telegraph Office Kumta.

ನಮ್ಮ ಔಷಧಗಳನ್ನು ಸೇವಿಸಿ ಗುಣ ಹೊಂದಿದ ಅನೇಕ ದೊಡ್ಡ ಮನುಷ್ಯರ ದಾಖಲೆಗಳನ್ನು ಈ ಕೆಳಗೆ ಓದಿರಿ

ನಮ್ಮ ವಿಳಾಸ ರಾಮಕೃಷ್ಣ ಪಾಂಡುರಂಗ ರಾಜವೈದ್ಯ ಮತ್ತು ಕಂಪನಿ,

Our Address Rajavaidya & Co,

Post Bilgi, North Kanara District

Our Telegraphic Address —"Rajavaidya,"

Post Bilgi, Telegraph Office Kumta

ಶರೀರಸುಖಕ್ಕ ಒಂದು ಸುಲಭ ಉಪಾಯವು.

ಅಂದರೆ

ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮಿಂಚಿನ ಪದಕವೂ ಮಿಂಚಿನ ಉಂಗುರವೂ.

(39)

ಸ್ತ್ರೀಯರ ಆರ್ತವಶೂಲೆಗೆ ಜಲಬಿಂದು.

ಅನೇಕ ಸ್ತ್ರೀಯರಿಗೆ ಪ್ರತಿ ತಿಂಗಳಲ್ಲಿ ಮುಟ್ಟಾಗುವ ಕಾಲಕ್ಕೆ ಕೆಳಹೊಟ್ಟೆಯ ಲ್ಲಿಯೂ, ಗರ್ಭಸ್ಥಾನದಲ್ಲಿಯೂ, ತಲೆಯಲ್ಲಿಯೂ, ... ಅತಿಶಯ ಶೂಲೆಯೂ ವೇದನೆಯೂ ಪ್ರಾರಂಭವಾಗಿ ... ಬಹು ಕಷ್ಟ ಪಡಬೇಕಾಗುತ್ತದೆ. ಈ ಪ್ರಕಾರದ ... ಈ ಔಷಧದ ಉಪಯೋಗದಿಂದ ... ಕ್ರಯ ... ರೂಪಾಯಿ. ಪೋಸ್ಟ ಖರ್ಚು ... ಆಣೆ.

(40)

ಸಾರಕ ಮಧುರ ಚೂರ್ಣವು.

ಸೌಮ್ಯತರದ ಜುಲಾಬು ಆಗುವದಕ್ಕೆ

ಆಹಾರದ ದೋಷದಿಂದ ಹೊಟ್ಟೆ ... [illegible] ... ಕ್ರಯ ... ಪೋಸ್ಟ ಖರ್ಚು ... ಆಣೆ.

(41)

ವಿಲಾಸ ಸಂಜೀವನಿಯ ಬೇರು.

(ಈ ಬೇರು ಅತಿ ಧಾತುಪುಷ್ಟಿಯ ಗುಣವುಳ್ಳದ್ದು)

ಇದರ ಉಪಯೋಗದಿಂದ ... [illegible] ... ಪೋಸ್ಟ ಖರ್ಚು ... ಆಣೆ.

ಸೂಚನೆ — ... ಈ ಬೇರು ಸಿಕ್ಕಲಾರದು.

(42)

ಸೊಗದಬೇರಿನ ಸತ್ವದ ಗುಳಿಗೆಗಳು.

(ರಕ್ತ ಶುದ್ಧಿಗೆ)

[illegible] ... ಪೋಸ್ಟ ಖರ್ಚು ... ಆಣೆ.

(43)

ಉಬ್ಬಸ ಆದರ ದಮ್ಮಿಗೆ

ಸುಖಸಂಜೀವನೀ ಗುಳಿಗೆ.

[illegible] ... ಪೋಸ್ಟ ಖರ್ಚು ... ಆಣೆ.

(44)

ಶಾಂತಿಭೇದಿಗೆ ಕ್ಲೋರೋಡಾಯಿನ್.

[illegible] ... ಪೋಸ್ಟ ಖರ್ಚು ... ಆಣೆ.

ಸೂಚನೆ — ... [illegible]

(45)

ಸೂತಿಕಸನ್ನಿಗೆ ವನೌಷಧಿ ಮಾತ್ರೆಗಳು.

ಸೂತಿಕಸನ್ನಿ (Hysteria) ... [illegible] ... ಪೋಸ್ಟ ಖರ್ಚು ... ಆಣೆ.

(46)

[illegible]ಗ ಪ್ರತಿಬಂಧಕ ಬಿಂದು.

(... ಇದ್ದ ಹಾಗೆ ಉಳಿಯಲಿಕ್ಕೆ)

[illegible]

(51)

ಬಾಲ ಸುಧಾರಸ.

ಚಿಕ್ಕ ಮಕ್ಕಳು ... [illegible] ... ಕ್ರಯ ... ರೂಪಾಯಿ. ಪೋಸ್ಟ ಖರ್ಚು ... ಆಣೆ.

(52)

ಸಂಗ್ರಹಣಿಗೆ

(ಕುಟಜ ಸತ್ವದ ಗುಳಿಗೆಗಳು)

ಮಲದಲ್ಲಿ ರಕ್ತ ... [illegible] ... ಪೋಸ್ಟ ಖರ್ಚು ... ಆಣೆ.

(53)

ಬಾಷ್ಪಸ್ನಾನವು.

[illegible] ... ಪೋಸ್ಟ ಖರ್ಚು ... ಆಣೆ ...

ನಮ್ಮ ವಿಳಾಸ — **ರಾಮಕೃಷ್ಣ ಪಾಂಡುರಂಗ, ರಾಜವೈದ್ಯ ಮತ್ತು ಕಂಪನಿ,**
ಪೋಸ್ಟ ಬಿಳಗಿ, ಉತ್ತರ ಕನ್ನಡಾ ಜಿಲ್ಹಾ, ಮುಂಬೈ ಇಲಾಖೆ

Our Address — ***Rajavaidya & Co.,***
Post Bilgi, North Kanara District

Our Telegraphic Address — ***"Rajavaidya,"***
Post Bilgi, Telegraph Office Kumta

ನಮ್ಮ ಔಷಧಗಳನ್ನು ಸೇವಿಸಿ ಗುಣ ಹೊಂದಿದ ಅನೇಕ ದೊಡ್ಡ ಮನುಷ್ಯರ ದಾಖಲೆಗಳನ್ನು ಈ ಕೆಳಗೆ ಓದಿರಿ

(೧) [illegible] **ಅಣ್ಣಾರಾವು ಗೋವಿಂದ**
ಸಂಪೋರಿ ... ಜಿಲ್ಲಾ ...

(೨) [illegible] **ಶಿವರಾಮ ಪಾಂಡುರಂಗ ...,**
... ಬಡೋದಾ ಸ್ಟೇಟ

(೩) [illegible] **ಸುಬ್ರಾವ ಲಿಂಗೋ, ಸ್ಕೂಲ್ ಮಾಸ್ತರ, ...**

(೪) [illegible] **ದಾಕ್ತಾರ ... ರಾಜೋಬಾ,**
... ಬಡೋದಾ ಸ್ಟೇಟ

(೫) [illegible]

(೬) [illegible]

(೭) [illegible] **ದತ್ತಾತ್ರಯ ...**

(೮) [illegible]

(೯) [illegible] **ಶಂಕರ ...**

(೧೦)–(೪೩) [illegible]

(೪೪) [illegible] **ಗಣೇಶ ಭಟ್ಟ, ...**

(೪೫)–(೪೯) [illegible]

... **ಗೋವಿಂದ ...**

... **ಆರ್. ಕೃಷ್ಣಪ್ಪ, ...**

(೫೦) [illegible] **ಬಳವಂತ ...**

(೫೧) [illegible] **(ದಾಕ್ತಾರ) ...**

(೫೨)–(೫೪) [illegible] **ಕೃಷ್ಣಾಜಿ ...**

... **ವಿಷ್ಣು ... ಗಾಡಗೀಳ, ...**

... **ತಿರುಮಲ ...**

... **ಗಿರಮಾಜಿ ...**

... **ಶಂಕರರಾವ ...**

... **ಚಿತ್ರಗಾರ ಲಕ್ಷ್ಮಯ್ಯ, ...**

... **ಕೋಟಿ ವೆಂಕಟರಾವ ...**

... ***H. Govinda Rao,*** ...

... **ಶ್ರೀ ಅನಂತ ಜೋಯಿಸ, ...**

... ***Hormusji Nusarvanji Kotwal,*** ...

... **ಕವಿ ಪುಟ್ಟ ...**

... **ರಾಮಚಂದ್ರ ಕೃಷ್ಣ ...**

... **ಆರಿಕ್ಕಿ ಬಸಪ್ಪಯ್ಯ, ...**

... ***T. Minnas,*** ...

... ***S. Mangle,*** ...

... ***R. Narayana Rau,*** *Bank Agent* ...

... ***Damian D'Souza,*** ...

... **ದತ್ತಾತ್ರಯ ...**

... ***B. Thimma Gowda,*** ...

... **ಶಿವಪ್ಪ ...**

... **ಅರಸ ವೆಂಕಟ ...**

(೬೭) [illegible]

ಈ ಪ್ರಕಾರ ಬೇರೆ ಬೇರೆ ಗೃಹಸ್ಥರು ಎಷ್ಟೋ ಜನರಿಗೆ ... ಬಂದಿರುತ್ತವೆ.

ಮೇಲೆ ಕಾಣಿಸಿದ ಪ್ರತಿ ಒಂದು ಔಷಧದೊಂದಿಗೆ ಛಾಪಿಸಿದ ಅನುಪಾನಪತ್ರ ಕಳುಹಿಸುತ್ತಿರುತ್ತೇವೆ.

ವಿ ಪಿ ಪಿ ಇಂದಲೂ ಔಷಧ ರವಾನಿಸುತ್ತೇವೆ. ಉತ್ತರ ಬೇಡುವಾಗ ಅದಕ್ಕಾಗಿ ಪೋಸ್ಟೇಜ ಸ್ಟಾಂಪು ಕಳಹಬೇಕು. ಮೇಲೆ ಕಾಣಿಸಿದ ಹೊರ್ತು ಬೇರೆ ಅನೇಕ ಔಷಧಗಳು ನಮ್ಮ ಕಡಿಗೆ ದೊರೆಯುತ್ತವೆ. ಅದರ ಅಂಥಾ ಸಂಗತಿಗಾಗಿ ಪ್ರಕೃತಿಯ ಸಂಪೂರ್ಣ ಮಜಕೂರು ತಿಳಿಸಬೇಕು. (ಪರರ ಗುಪ್ತ ಮಜಕೂರು ನಾವು ಪ್ರಕಟಿಸುವದಿಲ್ಲಾ)

ನಮ್ಮ ವಿಳಾಸ — **ರಾಮಕೃಷ್ಣ ಪಾಂಡುರಂಗ, ರಾಜವೈದ್ಯ ಮತ್ತು ಕಂಪನಿ,**
ಪೋಸ್ಟ ಬಿಳಗಿ, ಉತ್ತರ ಕನ್ನಡಾ ಜಿಲ್ಹಾ, ಮುಂಬೈ ಇಲಾಖೆ

Our Address — ***Rajavaidya & Co,***
Post Bilgi, North Kanara District

Our Telegraphic Address — ***"Rajavaidya,"***
Post Bilgi, Telegraph Office Kumta

ಶರೀರಸುಖಕ್ಕೆ ಒಂದು ಸುಲಭ ಉಪಾಯವು.

ಅಂದರೆ

ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ... [illegible] ...

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.

 

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು — ಅಶಕ್ತಿ, ಅಜೀರ್ಣ, ... ಆಲಸ್ಯ, ... ಉಬ್ಬಸ, ... [illegible] ... ಆಗುವ ಧಾತುಸ್ರಾವವು, ಸ್ಮರಣಶಕ್ತಿಯು ಊನತೆ ಇತ್ಯಾದಿ ಅನೇಕ ಉಪಶಮನಗಳು ... ಈ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ — ಪದಕವು ಎದೆಯ ಮೇಲೆ ತೊಲಬೇಕು ... [illegible]

[illegible]

ಸೂಚನೆ —[illegible]

(42)

ಸೂಗದಬೇರಿನ ಸತ್ವದ ಗುಳಿಗೆಗಳು.

(ರಕ್ತ ಶುದ್ಧಿಗೆ)

[illegible]

(43)

ಉಬ್ಬಸ ಅಂದರ ದಮ್ಮಿಗೆ

ಸುಖಸಂಜೀವನೀ ಗುಳಿಗೆ.

[illegible]

(44)

ವಾಂತಿಭೇದಿಗೆ ಕ್ಲೋರೊಡಾಯಿನ್.

[illegible]

(45)

ನೂತಿಕನನ್ನಿಗ ವನೌಷಧಿ ಮಾತ್ರಗಳು.

ಸೂತಿಕನನ್ನಿಗ (Hysteria) [illegible]

(46)

ಪ್ಲೇಗ ಪ್ರತಿಬಂಧಕ ಬಿಂದು.

(ಪ್ಲೇಗದ ಪಿಡುಗು ಹುಟ್ಟಿದ ಇದ್ದ ಹಾಗ ಉಪಯಕ್ಕೆ)

[illegible]

(47)

ಸಕ್ಕರಯಲ್ಲಿ ತಯಾರಿಸಿದ ಔಷಧಿಪಾಕವು.

SYRUP OF HYPOPHOSPHATE OF LIME

[illegible]

(48)

ಜ್ವರಗಡ್ಡೆಗೆ ಮಲಾಮು.

[illegible]

(49)

ರಕ್ತಪಿನಾಸಿಗೆ ತೈಲವು.

[illegible]

(50)

ಫೊಸ್ಪರಸದೊಡನೆ

[illegible]

ನಮ್ಮ ವಿಳಾಸ — ರಾಮಕೃಷ್ಣ ಪಾಂಡುರಂಗ, ರಾಜವೈದ್ಯ ಮತ್ತು ಕಂಪನಿ,
ಪೋಸ್ಟ್ ಬಿಳಗಿ, ಉತ್ತರ ಕನ್ನಡಾ ಜಿಲ್ಹಾ, ಮುಂಬೈ ಇಲಾಖೆ

Our Address —Rajavaidya & Co.,
Post Bilgi North Kanara District

Our Telegraphic Address —"Rajavaidya,"
Post Bilgi, Telegraph Office Kumta

ನಮ್ಮ ಔಷಧಗಳನ್ನು ಸೇವಿಸಿ ಗುಣ ಹೊಂದಿದ ಅನೇಕ ದೊಡ್ಡ ಮನುಷ್ಯರ ದಾಖಲೆಗಳನ್ನು ಈ ಕೆಳಗೆ ಓದಿರಿ

(೧) [illegible] ಆತ್ಮಾರಾಮ ಗೋಪಿನಾಥ, [illegible]

(೨) [illegible] ಶಿವರಾಮ ಪಾಂಡುರಂಗ ಅಪಸಕರ, [illegible] ಬಡೋದಾ ಸ್ಟೇಟ

(೩) [illegible] ಸುಬ್ರಾವ ಲಿಂಗೋ, ಸ್ಕೂಲ್ ಮಾಸ್ತರ, [illegible]

(೪) [illegible] ಡಾಕ್ಟರ್ ದಾಮಾಜಿ ರಾಜೋಬಾ, [illegible] ಬಡೋದಾ ಸ್ಟೇಟ್

(೮) [illegible] ಗೋವಿಂದ ದಿನಕರ ಜೋಶಿ, [illegible]

[illegible]

Bastian D'Souza, [illegible]

[illegible]

Narraniah [illegible]

[illegible]

H. Govinda Rao, [illegible]

Hormusjee Nasarwanji Kotwal, [illegible]

I. Mines, [illegible]

S. Mangle, [illegible]

R. Narayana Rao, [illegible]

B. Thomma Gowda [illegible]

R. Venkatachala Iyengar [illegible]

K. Srinivasa Murti, [illegible]

P. Pandurang Nayak, [illegible]

Martin, [illegible]

ಈ ಪ್ರಕಾರ ಸಾವಿರಾರು ಜನರು ನಮ್ಮ ಔಷಧಗಳಿಂದ ಗುಣಹೊಂದಿದ ದಾಖಲೆಗಳು [illegible]

ಸಾಕಾಸಂಜೀವನೀ ಗುಳಿಗೆಯ ಮಹತ್ವವು!!!

[illegible]

[illegible]

ಈ ಪ್ರಕಾರ ಬೇರೆ ಬೇರೆ ಪ್ರಕೃತಿಯು ಎಷ್ಟೋ ಜನರಿಗೆ ಈ ಗುಳಿಗೆಯಿಂದ ಗುಣ ಬಂದಿರುತ್ತದೆ

ಮೇಲೆ ಕಾಣಿಸಿದ ಪ್ರತಿ ಒಂದು ಔಷಧದೊಂದಿಗೆ ಭಾಷೆಯ ಅನುಪಾನಪತ್ರ ಕಳುಹಿಸುತ್ತಿರುತ್ತೇವೆ

ವಿ ಪಿ ಪಿ ಇಂದಲೇ ಔಷಧ ರವಾನಿಸುತ್ತೇವೆ ಉತ್ತರ ಬೇಡುವಾಗ ಅದಕ್ಕಾಗಿ ಪೋಸ್ಟೇಜ ಸ್ಟಾಂಪು ಕಳುಹಿಸಬೇಕು ಮೇಲೆ ಕಾಣಿಸಿದ ಹೊರ್ತು ಬೇರೆ ಅನೇಕ ಔಷಧಗಳು ನಮ್ಮ ಕಡೆಗೆ ದೊರೆಯುತ್ತವೆ ಆದರೆ ಅಂಥಾ ಸಂಗತಿಗಾಗಿ ಪ್ರಕೃತಿಯ ಸಂಪೂರ್ಣ ಮಜಕೂರು ತಿಳಿಸಬೇಕು (ಪರರ ಗುಪ್ತ ಮಜಕೂರು ನಾವು ಪ್ರಕಟಿಸುವದಿಲ್ಲಾ)

ನಮ್ಮ ವಿಳಾಸ — ರಾಮಕೃಷ್ಣ ಪಾಂಡುರಂಗ, ರಾಜವೈದ್ಯ ಮತ್ತು ಕಂಪನಿ,
ಪೋಸ್ಟ್ ಬಿಳಗಿ ಉತ್ತರ ಕನ್ನಡಾ ಜಿಲ್ಹಾ, ಮುಂಬೈ ಇಲಾಖೆ

Our Address Rajavaidya & Co.,
Post Bilgi North Kanara District

Our Telegraphic Address —"Rajavaidya."
Post Bilgi Telegraph Office Kumta

ಶರೀರಸುಖಕ್ಕೆ ಒಂದು ಸುಲಭ ಉಪಾಯವು.

ಅಂದರೆ

ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

[illegible]

ಮಿಂಚಿನ ಪದಕವೂ ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು —[illegible]

ಉಪಯೋಗ [illegible]

ವಿಠಲದಾಸ ಶೆಣೈ, [illegible]

ಹೊರ ಊರಿಂದ ಬಂದ ಗುಣದ ದಾಖಲೆಗಳು

[illegible]

(ಇದಲ್ಲದೆ ಇನ್ನು ಅನೇಕ ದಾಖಲೆ ಬಂದಿವೆ)

ವರ್ತಮಾನಸಾರವು.

[illegible]

ಜಪಾನಾಭಿನಂದನ.

ಉ॥ ಕ್ಷೋಣಿಯ ಭೂಪರಲ್ಲಿ ನಿಜಜಾಪರ ನಿಮ್ಮಯ ಶೌರ್ಯ
ಪೆರ್ಚಿತು ।
ಪ್ರಾಣದಭೂಪನಾಥ ವರರೂಪದಪೂರ್ತನು ಸಾರುಗಾಣಮು॥
ಪತ್ರಾಣಭೀತಿಯಾಂತೊರೆದು ಕಾದುವನಿಮ್ಮಯ ಕೋರ
ಭೋಗವು ।
ದ್ರೋಣಕೌರ್ಯದಂತೆ ನಿಪಕೌರ್ಯವ ಪರ್ಣಿಸಲಾಗ
ದೇಂದಿಗಂ ॥

ಸ್ರ॥ ಜಯವಿರಲಿ ಜಯಶೀಲಗುವೇ ಜಯ ।
ಜಯದಸಾಜವೆ ಜಯವು ನಿಮ್ಮಯ ।
ಭಯವಿರಲಿ ಸಕಲರಾಷ್ಟ್ರಪರಾಜಪ್ರಭುರಿಂಗೆ ॥
ಜಯವಿರಲಿ ಪವಕೂರಸೇನೆಗೆ ।
ಜಯವಿರಲಿ ಅರಿಗಳಲಿ ನಿಮ್ಮಯ ।
ಜಯಪವಾರ್ತೆಯಕೇಳ್ವ ಆರ್ಯರಿಗೆಲ್ಲ ಮುದವಿರಲಿ ॥

ಕಂ॥ ಜಾಪದರಾಜನೆ ನಿಮ್ಮಯ ।
ಕೋಪಕೆ ಗುರಿಯಾಗಿ ರೂಸರಾಜರು ನಿಜದಿಂ ॥
ತಾಪಂಬಡುತಿಹ ಕ್ವರಯಿಂ ।
ಕೋಪವಸಂತೈಸಿ ಸಂಧಿಗೈಯುವದಿನ್ನುಂ ॥

ಶಾ. ಜ. ಗೋಖಲೆ

ದೇವರೂ ಮನುಷ್ಯನೂ.

ಪರಿಶುದ್ಧನಾದ ದೇವರು ಪಾಪಾತ್ಮರಾದ ಮನುಷ್ಯರನ್ನು ನೀತಿವಂತರೆಂದು ತೀರ್ಮಾನಿಸುವ ವಿಧಾನ ಹೇಗೆ ?

ಮನುಷ್ಯರು ಅಜ್ಞಾನ ಪ್ರೇರಣೆಯಿಂದ ನಾನಾ ದುರ್ಮಾರ್ಗಗಳಲ್ಲಿ ನಡೆದು ನೀತಿಭ್ರಷ್ಟರಾಗಿ ಇದ್ದಾರೆಂದೂ ಅದರಿಂದ ಅವರು ಇಹಲೋಕದಲ್ಲಿಯೂ ಮುಂದೆ ಬರುವ ನರಕಾಜ್ಞೆಗಳಿಗೂ ಹೇತುವಾಗಿದ್ದಾರೆಂದೂ ಸಿದ್ಧಾಂತಪಡಿಸುವದಕ್ಕೆ ಅವರವರ ಅಂತರಾತ್ಮವೆಂಬ ಮನಸ್ಸಾಕ್ಷಿಗಿಂತ ಇತರ ದೊಡ್ಡ ಸಾಕ್ಷಿಗಳನ್ನು ಉದಾಹರಿಸ ಬೇಕಾಗಿಲ್ಲ. ಇಂಥಾ ದುರವಸ್ಥೆಯಲ್ಲಿರುವವರು ತಮ್ಮ ಪಾಪಗಳಿಂದ ವಿಮುಕ್ತರಾಗಿ, ದೇವರಿಂದ ನೀತಿಯನ್ನು ಸಂಪಾದಿಸಿಕೊಂಡು, ಸನ್ಮಾರ್ಗಪ್ರವರ್ತನೆಗಳಲ್ಲಿ ದೇವಾಶೀರ್ವಾದಗಳಿಗೆ ಯೋಗ್ಯರಾಗುವದು ಅವರ ಅತ್ಯಂತ ಅವಶ್ಯಕವಾದ ಕರ್ತವ್ಯವಾಗಿದೆ ಎಂಬುವದನ್ನು ನಾವು ಮರೆಯಲೇ ಬಾರದು. ಇಂಥಾ ಪ್ರಾಮುಖ್ಯವಾದ ವಿಚಾರವನ್ನು ಉಲ್ಲಂಘನೆ ಮಾಡಿಬಿಟ್ಟು, ಹಾಳೆಗುದ್ದಿ ಮೈನೋಯಿಸಿಕೊಂಡ ಮನುಷ್ಯನಂತೆಯೂ, ಸ್ವಪ್ನದಲ್ಲಿ ದ್ರವ್ಯವನ್ನು ಹಿಡಿದುಕೊಂಡವನ ಹಾಗೂ, ತಮ್ಮ ಯಥಾರ್ಥವಾದ ಸ್ವಭಾವಸ್ಥಿತಿಗಳನ್ನು ತೋರಿಸಿದಂಥ, ತಮ್ಮ ಆತ್ಮಗಳನ್ನು ಪಾಪಬಂಧನದಿಂದ ವಿಮೋಚನೆ ಮಾಡಿದಂಥ, ದೇವರು ಉಚಿತಾರ್ಥವಾಗಿ ಕೊಡಲಿಕ್ಕಿರುವ ಕೃಪಾವರಗಳಿಗೆ ತಮ್ಮ ಕೈಯನ್ನು ಚಾಚದಂತೆ, ಮಹಾ ಅಹಂಭಾವವನ್ನು ಹುಟ್ಟಿಸತಕ್ಕ ಮಾನುಷ ಕಲ್ಪಿತವಾದ ತತ್ವಶೋಧನೆಗಳಲ್ಲಿಯೂ, ಅಜ್ಞಾನಪ್ರೇರಣೆಯಿಂದ ನಿರ್ಮಿತವಾದ ಕರ್ಮಸಾಧನೆಗಳಿಗೂ, ದೊರೆಯಲಾರದಂಥ ಪುಣ್ಯವನ್ನು ಸಂಪಾದಿಸಿಕೊಂಡವರ ಹಾಗೆ ಊಹಿಸಿ, ಪರಿಶುದ್ಧನಾದ ದೇವರ ಮುಂದೆ ನೀತಿವಂತರೆಂದೆನ್ನಿಸಿಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ.

ಮನುಷ್ಯರ ಈ ದುಃಸ್ಥಿತಿಯನ್ನು ನ್ಯಾಯಸ್ಥಾನದಲ್ಲಿ ವಿಚಾರಣೆಗಾಗಿ ನಿಲ್ಲಿಸಲ್ಪಡುವ ಅಪರಾಧಿಗೆ ಚನ್ನಾಗಿ ಹೋಲಿಸಬಹುದು. ಕೋರ್ಟಿನಲ್ಲಿ ಜಡ್ಜಿಯು ತನ್ನ ಎದುರಿನಲ್ಲಿರುವ ಅಪರಾಧಿಯು ಅಪರಾಧಗಳೇನೆಂದು ವಿಚಾರಣೆಯಿಂದ ಅಪರಾಧವು ಸ್ಥಾಪಿತವಾಗುತ್ತದೆಂದು ತಿಳುಕೊಂಡ ಮೇಲೆ ಕಟಕಟೆಯಲ್ಲಿರುವ ಆ ಬಡ ಮನುಷ್ಯನನ್ನು ನೋಡಿ,—ಎಲಾ ನಿನ್ನ ಮೇಲೆ ಅಪರಾಧ ಸಾಬೀತಾಗಿದೆ. ನಿನ್ನ ಅಪರಾಧಕ್ಕಾಗಿ ಇಷ್ಟು ಶಿಕ್ಷೆಯನ್ನು ವಿಧಿಸಿದ್ದೇನೆ ಎಂದು ಫೈಸಲ್ ಹೇಳಿದ ಮೇಲೆ ಆ ಬಡಪಾಯಿ ಕೈಗಳನ್ನು ಜೋಡಿಸಿಕೊಂಡು—ಬುದ್ಧೀ, ನೀವು ನನ್ನ ಮೇಲೆ ಹೊರಿಸಿರುವ ಅಪರಾಧಗಳಿಗೆ ನಾನು ಜವಾಬ್ದಾರನಲ್ಲ. ನಾನೇನು ಒಂದು ಸೂತ್ರದ ಗೊಂಬೆಯಂತೆ ನನ್ನೊಳಗಿರುವ ಆ ಕಪಟ ನಾಟಕ ಸೂತ್ರಧಾರಿಯ ಕೈಯಿಂದ ಆಡಿಸಲ್ಪಡುತ್ತೇನೆ. ಅದು ನನ್ನ ತಪ್ಪಲ್ಲ ಆತನ ತಪ್ಪು ಆತನಿಗೆ ಶಿಕ್ಷೆ ವಿಧಿಸಿರೆಂದು ಹೇಳಬಹುದೇ? ಅಥವ ಈ ಅಪರಾಧವನ್ನು ನನ್ನ ಸ್ವಂತ ಬುದ್ಧಿಪೂರ್ವಕವಾಗಿ ಮಾಡದೆ ಜನ್ಮಾಂತರ ವಾಸನೆಯಿಂದ ಉಂಟಾದದ್ದೆಂದೂ, ಇಲ್ಲವೇ ಇದನ್ನು ನನ್ನ ಹಲದಿಂದಲ್ಲ, ನನ್ನ ಹಣೆಯಲ್ಲಿ ಬರೆಯಲ್ಪಟ್ಟಿರುವ ಬ್ರಹ್ಮಲಿಪಿ ಇದನ್ನು ಮಾಡಿಸಿದೆ ಎಂಬೀ ನೆವಗಳನ್ನೂ ಕಾರಣಗಳನ್ನೂ ಎಷ್ಟು ತೋರಿಸಿದರೂ ತನ್ನ ಮೇಲೆ ಸ್ಥಾಪಿತವಾಗಿರುವ ಅಪರಾಧವನ್ನು ಪರಿಹರಿಸಿಕೊಂಡು ಆ ಶಿಕ್ಷೆಯಿಂದ ಬಿಡುಗಡೆಯಾದಾನೇ? ಇಲ್ಲವೇ ಆ ಅಪರಾಧಿ ತನ್ನ ಅಪರಾಧಗಳನ್ನು ಒಪ್ಪಿಕೊಂಡು ನ್ಯಾಯಾಧಿಪತಿಗೆ—ಬುದ್ಧೀ, ನಾನು ಈ ಅಪರಾಧವನ್ನು ಮಾಡಬಾರದಾಗಿತ್ತು. ಅದರೆ ಮಾಡಿದ್ದು ನಿಜ. ಇದನ್ನು ಕ್ಷಮಿಸಿದರೆ ಇನ್ನು ಮುಂದೆ ಯೋಗ್ಯನಾಗಿ ನಡೆದುಕೊಳ್ಳುತ್ತೇನೆ ಎಂದು ಬೇಡಿಕೊಂಡರೆ ಇವನ ಮುಂದಿನ ಯೋಗ್ಯತೆ ಇವನ ಹಿಂದಿನ ಅಪರಾಧಕ್ಕೆ ಈಡಾಗಬಹುದೇ ? ಒಂದು ವೇಳೆ ಅಪರಾಧಿಯು ತನ್ನನ್ನು ಜೈಲಿಗೆ ಕಳುಹಿಸದೆ ಬಿಟ್ಟರೆ ನನ್ನ ಮನೆಯಲ್ಲೇ ಜೈಲಿನಲ್ಲಿರುವ ಶಿಕ್ಷೆಗಿಂತ ಎರಡರಷ್ಟನ್ನು ಮಾಡಿಕೊಳ್ಳುತ್ತೇನೆಂತಲೂ ನನ್ನ ಅಪರಾಧದಿಂದ ಉಂಟಾದ ನಷ್ಟಕ್ಕೆ ನನ್ನ ಸರ್ವಸ್ವವನ್ನೂ ಮಾರಿಬಿಟ್ಟು ನಾಲ್ಕರಷ್ಟು ಕೊಡುತ್ತೇನೆ ಎಂದು ಎಷ್ಟು ಅಂಗಲಾಚಿ ಬೇಡಿಕೊಂಡಾಗ್ಯೂ ಅವನ ಅಪರಾಧಕ್ಕೆ ಪರಿಹಾರವಾಗಿ ಆ ಶಿಕ್ಷೆಯಿಂದ ಅವನು ಬಿಡುಗಡೆಯಾಗುವದು ಅಸಾಧ್ಯವಾದ ಕಾರ್ಯವೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ.

ಮನುಷ್ಯರೆಲ್ಲರೂ ಆ ಅಪರಾಧಿಯಂತೆ ದೇವರ ನ್ಯಾಯಸ್ಥಾನದಲ್ಲಿ ನಿಂತುಕೊಂಡಿದ್ದೇವೆ. ನಮ್ಮ ಪಾಪಗಳಿಗಾಗಿ ಎಷ್ಟು ಶಿಕ್ಷೆಯನ್ನು ಅನುಭವಿಸಬೇಕೋ ಭಗವಂತನು ಅದನ್ನು ತೀರ್ಮಾನಿಸಿದ್ದಾನೆ. ಈ ಅಪರಾಧದಿಂದಲೂ ಶಿಕ್ಷೆಯಿಂದಲೂ ತಪ್ಪಿಸಿಕೊಳ್ಳುವದು ಮಾನುಷ ಬುದ್ಧಿ, ಶಕ್ತಿ, ಚಮತ್ಕಾರಗಳಿಗೆ ಮೀರಿದ್ದಾಗಿಯೂ, ಹಿಂದೂ ದೇಶಸ್ಥರು ಏರ್ಪಡಿಸಿಕೊಂಡಿರುವ ಉಪಾಯಗಳಿಂದ ಆಗದ್ದಾಗಿಯೂ ಇದೆಯೆಂದು ನಾವು ಖಂಡಿತವಾಗಿ ತಿಳದುಕೊಳ್ಳಬೇಕು. ಆದರೂ ಕರುಣಾಸಮುದ್ರನಾದ ದೇವರು ಇಂಥಾ ಪಾಪಾತ್ಮರನ್ನು ಬಿಡುಗಡೆ ಮಾಡುವದಕ್ಕೆ ತಾನೇ ಒಂದು ಉಪಾಯವನ್ನು ಕಲ್ಪಿಸಿದ್ದಾನೆ. ಆ ಉಪಾಯವು ಪಾಪಿಷ್ಟರ ಅಂಗೀಕಾರಕ್ಕೆ ಯೋಗ್ಯವಾದದ್ದಾಗಿಯೂ, ಪರಿಶುದ್ಧನಾದ ದೇವರ ಸ್ವಭಾವ ಗುಣಲಕ್ಷಣಗಳಿಗೆ ಅನುಗುಣವಾದದ್ದಾಗಿಯೂ ಇದೆ. ಅಂದರೆ, ದೇವರೇ ಶಿಕ್ಷೆ ರಕ್ಷಣೆಗಳಿಗೆ ಕಾರಣಕರ್ತನಾಗಿದ್ದಾನೆಂಬ ವೇದೋಕ್ತದ ಪ್ರಕಾರ ತಾನೇ ನರರ ಉದ್ಧಾರಕ್ಕಾಗಿ ನರಾವತಾರವನ್ನು ತಾಳಿ ಮನುಷ್ಯರು ಮೀರಿದ್ದ ದೇವರ ನೀತಿಯನ್ನೆಲ್ಲಾ ಸಂಪೂರ್ಣವಾಗಿ ಕೈಕೊಂಡು, ಅವರ ವಿಮೋಚನೆಗಾಗಿ ತನ್ನ ಅಮೂಲ್ಯವಾದ ರಕ್ತವನ್ನು ಚೆಲ್ಲಿ ಪಾಪಾತ್ಮರ ಜೀವವನ್ನು ಉಳಿಸುವದಕ್ಕಾಗಿ ತನ್ನ ಪ್ರಾಣವನ್ನು ಕೊಟ್ಟು ದೇವರ ನೀತಿಯನ್ನು ತೃಪ್ತಿಪಡಿಸಿ ಹೀಗೆ ಪಾಪಾತ್ಮರ ಸ್ಥಾನದಲ್ಲಿ ಅವರಿಗೆ ಬದಲಾಗಿ ತಾನು ನಿಂತುಕೊಂಡು, ಪಾಪಾತ್ಮರ ರಕ್ಷಣೆಯನ್ನು ಸಂಪೂರ್ಣ ಮಾಡಿರುವದರಿಂದ ಆತನಲ್ಲಿ ವಿಶ್ವಾಸವಿಟ್ಟು ತಮ್ಮ ರಕ್ಷಕನನ್ನಾಗಿ ಅಂಗೀಕಾರ ಮಾಡಿಕೊಳ್ಳುವವರೆಲ್ಲರನ್ನೂ ನೀತಿವಂತರನ್ನಾಗಿ ತೀರ್ಮಾನಿಸುವದಲ್ಲದೆ ಪಾಪದ ಭಾವವನ್ನು ಬದಲಾಯಿಸಿಬಿಟ್ಟು ಪರಿಶುದ್ಧರನ್ನಾಗಿ ಮಾಡಿ ದೇವರು ಮೆಚ್ಚುವಂಥಾ ಕೆಲಸಗಳನ್ನು ಮಾಡುವದಕ್ಕೆ ತನ್ನ ಪವಿತ್ರಾತ್ಮನ ಶಕ್ತಿಕೊಟ್ಟು ಮೋಕ್ಷಪದವಿಗೆ ಅವರನ್ನು ಸಿದ್ಧಪಡಿಸುತ್ತಾನೆ.

ಇಂಡಿಯಾ ದೇಶದ ವೃತ್ತಾಂತಗಳು.

ಮೇಲಣ ಬರ್ಮಾದಲ್ಲಿ ಮೂ ಎಂಬ ನದಿಯಿಂದ ಜಮೀನು ಸಾಗುವಳಿ ದೊಡ್ಡ ನಾಲೆಯನ್ನು ತೆಗೆಯಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ನಾಲ್ವತ್ತು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

❖❖❖❖

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಯಾವ ಊರುಗಳಲ್ಲಿ ಪ್ಲೇಗ್ ಉಪದ್ರವಿರುವದೋ ಅಲ್ಲೆಲ್ಲಾ ಹೆಗ್ಗಣ ಇಲಿಗಳನ್ನು ಸಂಪೂರ್ಣವಾಗಿ ನಾಶಮಾಡುವಂತೆ ಆಯಾ ಮ್ಯುನಿಸಿಪಾಲಿಟಿಗಳಿಗೆ ಸರ್ಕಾರದವರು ಅಪ್ಪಣೆ ಕೊಟ್ಟಿದಾರೆ

❖❖❖❖

ಬ್ರಹ್ಮಸಮಾಜದ ಅಧ್ಯಕ್ಷರಾಗಿದ್ದು ಈ ತಿಂಗಳ ಪ್ರಾರಂಭದಲ್ಲಿ ಕಾಲವಾದ ಪ್ರತಾಪ ಚಂದ್ರಮೊಜುಂದಾರರ ಹಂದತಿ ಮಕ್ಕಳಿಗೆ ವೈಸರಾಯಿಯವರೂ ಬಂಗಾಳಾ ಲೆಫ್ಟಿನೆಂಟ್ ಗವರ್ನರವರೂ ತಮ್ಮ ವ್ಯಸನವನ್ನು ತಿಳಿಸಿದಾರೆ.

❖❖❖❖

ಬರುವ ಡಿಸೆಂಬರ್ ಕಡೇ ವಾರದಲ್ಲಿ ಕಾಶೀ ಪಟ್ಟಣದಲ್ಲಿ ಹಿಂದುಸ್ಥಾನದ ಸಾರ್ವಜನಿಕ ಸಮಾಜವು ನಡೆಯುವುದು. ಅಗ್ಗ ಆ ಸಂಘದವರು ಹಿಂದುಸ್ಥಾನದ ವ್ಯವಸಾಯದ ಮತ್ತು ವ್ಯಾಪಾರಿಕೆಗಳ ವಸ್ತು ಪ್ರದರ್ಶನ ಶಾಲೆಯನ್ನು ಸಹ ಇಡಿಸುವವರಾಗಿದಾರೆ.

❖❖❖❖

ಆಫ್ಘಾನಿಸ್ಥಾನದ ಅಮೀರ್ ಹಬಿಬುಲ್ಲಾಖಾನರವರು ಕೋಹಿಸ್ಥಾನ್ ಎಂಬ ಪ್ರಾಂತ್ಯದಲ್ಲಿ ಈಗ ಸಂಚಾರ ಹೊರಟಿದಾರೆ. ಇವರ ಸಂಗಡ ಅವರ ಅಣ್ಣತಮ್ಮಂದಿರೆಲ್ಲಾ ಹೊರಟಿರುವರು. ಇವರೆಲ್ಲಾ ಸುಹೃದಯರಾಗಿರುವುದನ್ನು ನೋಡಿ ಜನರು ತುಂಬಾ ಸಂತೋಷಪಡುತ್ತಾರೆ.

❖❖❖❖

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಷೋಲಾಪುರ ಡಿಸ್ಟ್ರಿಕ್ಟಿನಲ್ಲಿ ಮಿಡ್ಚೆಗಳ ಕಾಟವು ಮತ್ತೆ ರೈತರಿಗೆ ತುಂಬಾ ಕಳವಳವನ್ನುಂಟುಮಾಡಿದೆ. ಮಿಡ್ಚೆಗಳ ಗುಂಪು ಪೈರುಗಳನ್ನೆಲ್ಲಾ ಧ್ವಂಸಮಾಡಲಾರಂಭಿಸಿರುವುದು. ಅದನ್ನು ಅಡಗಿಸುವುದಕ್ಕೆ ಸರ್ಕಾರದವರು ಪ್ರಯತ್ನಪಟ್ಟಿರುವರು.

❖❖❖❖

ರಂಗೂನ್ ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಯಿ ಮಾಡುವ ಕಾಮಗಾರಿಗೆ ಆ ಮ್ಯುನಿಸಿಪಾಲಿಟಿಯವರು ೪೬ ಲಕ್ಷದ ೩೩ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದ್ದರು. ಈ ಹಣ ಸಾಲದೆ ಬಂದದ್ದರಿಂದ ಈಗ ಮತ್ತೆ ೪೯ ಸಾವಿರ ರೂಪಾಯಿಯನ್ನು ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಮುಂದೆ ನವಂಬರ್ ತಿಂಗಳಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ಹಿಂದುಸ್ಥಾನಕ್ಕೆ ದಯಮಾಡುವಾಗ್ಗ ಹಿಂದುಸ್ಥಾನದ ಸೈನ್ಯದ ಪೈಕಿ ಸುಮಾರು ೬೦,೦೦೦ ಸೈನ್ಯವನ್ನು ಡೆಹಲಿ ಪಟ್ಟಣದಲ್ಲಿ ಜಮಾಯಿಸಿ ಇವರ ಸಾಹಸ ಚಮತ್ಕಾರಗಳನ್ನು ಯುವರಾಜರಿಗೆ ತೋರಿಸಬೇಕೆಂದ ಏರ್ಪಾಡು ನಡೆಯುತ್ತಿದೆ.

❖❖❖❖

ಪಂಜಾಬ್ ಆಧಿಪತ್ಯದಲ್ಲಿ ಬಾಲಕಾಂತಗಳನ್ನು ಕಲಿಸುವ ೯೦೦ ಪ್ರೈಮರಿ ಪಾಠಶಾಲೆಗಳು ಇಷ್ಟರಲ್ಲೇ ಸ್ಥಾಪನೆಯಾಗಬೇಕೆಂದು ಲೆಫ್ಟಿನೆಂಟ್ ಗವರ್ನರವರು ಅಪ್ಪಣೆ ಕೊಡಿಸಿದಾರೆ. ಬಾಲಕಾರಗಳನ್ನು ಕಲಿಸುವುದಕ್ಕೆ ಉಪಾಧ್ಯಾಯರನ್ನು ಅನೇಕವಾಗಿ ತಯಾರು ಮಾಡಬೇಕೆಂದೂ ಹುಕುಂ ಕೊಟ್ಟಿದಾರೆ.

❖❖❖❖

ಹಿಂದುಸ್ಥಾನದ ಸರ್ವಸೇನಾಪತಿಯಾದ ಲಾರ್ಡ್ ಕಿಚ್ನರ್‌ರವರು ಈ ರಾಷ್ಟ್ರದ ವಾಯವ್ಯ ಸರಹದ್ದಿನಲ್ಲಿ ಉದ್ದಕ್ಕೂ ಸೈನ್ಯವನ್ನಿಟ್ಟು ಕಾಪಾಡುವದಕ್ಕೆ ಒಂದು ಹೊಸ ಏರ್ಪಾಡು ಮಾಡಿದಾರೆ. ಈ ಏರ್ಪಾಡನ್ನು ಜಾರಿಯಲ್ಲಿ ತರುವದಕ್ಕೆ ಇಂಡಿಯಾ ಗವರ್ನಮೆಂಟಿನವರು ೧೫ ಕೋಟಿ ರೂಪಾಯಿಯನ್ನು ಖರ್ಚುಮಾಡಬೇಕಾಗಿದೆ

❖❖❖❖

ಬೊಂಬಾಯಿ ಹೈಕೋರ್ಟ್ ಜಡ್ಜಿಯವರಾದ ಮಿ॥ ಬದ್ರುದ್ದೀನ್ ತಾಯಬ್ಜಿ ಯವರ ಪತ್ನೀಯವರು ಕಳೆದ ವಾರ ಕಾಲವಾದರು. ಇವರು ಅಲ್ಲಿನ ಸ್ತ್ರೀಯರ ಸಂಘವನ್ನು ಸ್ಥಾಪಿಸಿ ಅನೇಕ ವೇಳೆ ಹಿಂದುಸ್ಥಾನದ ಸ್ತ್ರೀಯರ ಕೊರತೆಗಳನ್ನು ಕುರಿತು ಸ್ತ್ರೀಸಮಾಜಗಳಲ್ಲಿ ಉಪನ್ಯಾಸ ಮಾಡಿ ತುಂಬಾ ಹೆಸರುವಾಸಿಯನ್ನು ಸಂಪಾದಿಸಿಕೊಂಡಿದ್ದರು.

❖❖❖❖

ನೀಲಗಿರಿ ಡಿಸ್ಟ್ರಿಕ್ಟಿಗೆ ಸೇರಿದ ಕೂನೂರಿನಲ್ಲಿ ಮದರಾಸ್ ಸರ್ಕಾರದವರು ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಸಿಕೊಂಡ ರೋಗಿಗಳಿಗೆ ಚಿಕಿತ್ಸೆ ಮಾಡಿಸುವದಕ್ಕೆ ಒಂದು ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಗೊತ್ತುಮಾಡಿದಾರೆ. ಇದಕ್ಕೆ ಅಲ್ಲಿ ಐದು ಎಕರೆಯಷ್ಟು ಜಮೀನನ್ನು ಕೊಂಡುಕೊಳ್ಳುವಂತೆ ಅಲ್ಲಿನ ಕಲೆಕ್ಟರಿಗೆ ಅಪ್ಪಣೆ ಕೊಟ್ಟಿದಾರೆ

❖❖❖❖

ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದ ಸೈನ್ಯದಲ್ಲಿ ಹದ್ದೇದಾರರಾಗಿರುವವರ ಪೈಕಿ ಪ್ರತಿವರ್ಷವೂ ಮೂರು ಮಂದಿಯನ್ನು ಪರ್ಷಿಯಾ ರಾಜ್ಯಕ್ಕೆ ಕಳುಹಿಸಿ, ಅವರು ಅಲ್ಲಿನ ದೇಶಭಾಷೆಯನ್ನು ಕಲಿತುಕೊಂಡು ಬರುವಂತೆಯೂ ಆ ಭಾಷೆಯಲ್ಲಿ ತೇರ್ಗಡೆ ಹೊಂದುವವರಿಗೆ ೩,೦೦೦ ರೂಪಾಯಿ ಬಹುಮಾನ ಕೊಡುವಂತೆಯೂ ಹುಕುಂ ಮಾಡಿದಾರೆ.

❖❖❖❖

ರಂಗೂನ್ ಪಟ್ಟಣದ ಹತ್ತಿರ ಪಲೋಪಟನ್ ಎಂಬೊಬ್ಬ ಶಿಕಾರಿಗಾರನು ಒಂದು ಲಾಂದ್ರವನ್ನು ತನ್ನ ಎದೆಗೆ ತಗಲಿಹಾಕಿಕೊಂಡು ಬಂದೂಕು ಸಹಿತ ಕಾಡಿಗೆ ಹೋಗಿ ಒಂದು ಏಕ ರಾತ್ರಿಹೊತ್ತಿನಲ್ಲಿ ಮೂರು ಹುಲಿಗಳನ್ನು ಕೊಂದುಹಾಕಿದನು. ಹುಲಿಗಳು ಇವನ ಎದೆಯಲ್ಲಿದ್ದ ದೀಪದ ಬೆಳಕನ್ನು ನೋಡಿ ದಿಗ್ಭ್ರಮೆಗೊಂಡು ಚಲಿಸದೆ ನಿಂತ ಕಡೆಯಲ್ಲಿಯೇ ನಿಂತಿದ್ದವು. ಶಿಕಾರಿಯು ಅವುಗಳ ಸಮೀಪದ ವರೆಗೂ ಹೋಗಿ ಗುರಿಕಟ್ಟಿ ಗುಂಡ ಹೊಡೆದು ಕೊಂದುಬಿಟ್ಟನು.

❖❖❖❖

ಆಗ್ರಾ ಪಟ್ಟಣದ ಪೊಲೀಸಿನವರು ಕಳ್ಳರ ಮೂರು ಗುಂಪುಗಳನ್ನು ಬಹಳ ಸಾಹಸಪಟ್ಟು ಹಿಡಿದರು. ಮೊದಲನೆ ಗುಂಪಿನವರ ಪೈಕಿ ಇಬ್ಬರು ಕಳ್ಳರೂ ಒಬ್ಬ ಪೊಲೀಸಿನವನೂ ಒಂದು ಹುಡುಗನೂ ಮೃತಪಟ್ಟರು. ನಾಲ್ವರನ್ನು ದಸ್ತಗಿರಿ ಮಾಡಿದರು. ಕಳ್ಳರು ಮದ್ದು ಗುಂಡನ್ನು ಉಪಯೋಗಿಸಿದರು. ಎರಡನೆಯ ಗುಂಪಿನಲ್ಲಿ ೧೩ ಜನರನ್ನು ಅವರ ಬಳಿ ಇದ್ದ ಮದ್ದು ಗುಂಡು ಸಹಿತವಾಗಿ ಹಿಡಿದರು. ಮೂರನೇ ಗುಂಪಿನಲ್ಲಿ ಒಂಬತ್ತು ಜನ ಕಳ್ಳರನ್ನು ಹಿಡಿದರು. ಇವರ ಹತ್ತಿರಲೂ ಮದ್ದು ಗುಂಡು ತುಂಬಾ ಸಿಕ್ಕಿತು.

❖❖❖❖

ಕಾಂಗ್ರಾ ಕಣಿವೆಯ ಪ್ರಜೆಗಳ ರಿಲೀಫ್ ಫಂಡಿಗೆ ಈ ತಿಂಗಳ ೪ನೇ ತಾ. ವರೆಗೆ ೬ ಲಕ್ಷವೂ ೧೦ ಸಾವಿರ ರೂಪಾಯಿ ವಸೂಲಾಗಿಯೂ ಈಚಿಗೆ ದಿನ ೧ಕ್ಕೆ ೧೬,೩೦೦ ರೂಪಾಯಿಯನಂತೆ ವಸೂಲಾಗುತ್ತಲೂ ಇದೆ. ಈ ಫಂಡಿಗೆ ೧೫ ಲಕ್ಷ ರೂಪಾಯಿ ಕೂಡಿದ ಹೊರತು ಇದರ ಉದ್ದೇಶವು ಸಂಪೂರ್ಣವಾಗಿ ನೆರವೇರಲಾರದೆಂದೂ ಇದಕ್ಕೋಸ್ಕರ ಹಿಂದುಸ್ಥಾನದ ಪ್ರಜೆಗಳು ತಮ್ಮ ಕೈಲಾದಷ್ಟು ದ್ರವ್ಯವನ್ನು ಕೊಡಬೇಕೆಂತಲೂ ಪ್ರಕಟಿಸಿದಾರೆ. ವಿಲಾಯಿತಿಯಿಂದ ಇನ್ನೂ ಹೆಚ್ಚಾಗಿ ಹಣ ಕೂಡಿಸಿ ಕಳುಹಿಸುವಂತೆ ತಿಳಿಸಿದಾರೆ.

❖❖❖❖

ಲೇಟ್ ಟೀಪೂ ಸುಲ್ತಾನರವರ ವಂಶಸ್ಥನಾದ ಕಲ್ಕತ್ತೆಯಲ್ಲಿರುವ ಬಖ್ತಿಯಾರ್‌ಷಾ ಎಂಬ ರಾಜಕುಮಾರನಿಗೆ ಇಂಡಿಯಾ ಗವರ್ನಮೆಂಟಿನವರು ಒಂದು ಬಂಗಲೆಯನ್ನು ಕೊಟ್ಟು ತಿಂಗಳಿಗೆ ೫೦೦ ರೂಪಾಯಿ ಪೆನ್ಷನ್ ಕೊಡುತ್ತಿದಾರೆ. ಈ ರಾಜಕುಮಾರನು ಈಚಿಗೆ ೬,೧೨,೬೩೦ ರೂಪಾಯಿ ವರೆಗೆ ಸಾಲಸೋಲ ಮಾಡಿಕೊಂಡು ತನ್ನ ಎರಡು ಮೂರು ಭಾರೀ ಜವಾಹುಗಳನ್ನೂ ಮನೆಗಳನ್ನೂ ಕಳೆದುಕೊಂಡನು. ಈಗ ಸರ್ಕಾರದವರು ಆ ಸಾಲಗಾರರ ತಗಾದೆಯನ್ನು ಕಡಿಮೆಮಾಡಬೇಕೆಂದು ಅಧಿಕಾರಿಗಳನ್ನು ನೇಮಕಮಾಡಿದಾರೆ.

❖❖❖❖

ಈ ತಿಂಗಳ ೧೦ ನೆಯ ತಾರೀಖಿಗೆ ಹೈದರಾಬಾದ್ ಸಂಸ್ಥಾನದ ನೈಜಾಮರವರಿಗೆ ನಾಲ್ವತ್ತು ವರ್ಷ ತುಂಬಿತು. ಪ್ರಜೆಗಳು ವರ್ಧಂತಿ ಉತ್ಸವವನ್ನು ವಿಶೇಷ ಉತ್ಸಾಹದಿಂದ ಮಾಡಬೇಕೆಂದು ಏರ್ಪಾಡು ಮಾಡುವದಕ್ಕಾರಂಭಿಸಿದರು. ನೈಜಾಮರವರು ಶಿಕಾರಿ ಕ್ಯಾಂಪಿನಲ್ಲಿದ್ದು ಈ ವರ್ತಮಾನವನ್ನು ಕೇಳಿ, ವಿಲಾಯಿತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಹೈದರಾಬಾದಿಗೆ ಬರುವವರಾಗಿದಾರೆಂತಲೂ ಅಲ್ಲಿವರೆಗೆ ಈ ಉತ್ಸವವನ್ನು ನಿಲ್ಲಿಸಬೇಕೆಂತಲೂ ಅಪ್ಪಣೆ ಕೊಡಿಸಿರುತ್ತಾರೆ. ಆಗ್ಗ ಈ ಉತ್ಸವವು ಬಹು ವಿಶೇಷತೆಯಿಂದ ನೆರವೇರುವುದು.

ಸೂರತ್ ನಗರದಲ್ಲಿ ದೊಡ್ಡ ವರ್ತಕನಾದ ಸೇಠ್ ನಾಗಿನ್ ಚಂದ್ ಜವೇರ್ ಚಂದ್ ಜಾವೇರಿ ಎಂಬೊಬ್ಬ ಭಾರೀ ಸಾಹುಕಾರನು ತನ್ನ ಮಗನ ಮದುವೆಯನ್ನು ಬಹು ಆಟ್ಟಹಾಸದಿಂದ ಮಾಡಿ ಲಕ್ಷಾಂತರ ರೂಪಾಯಿ ಖರ್ಚುಮಾಡಿದನು. ಆ ಸಂತೋಷ ಕಾಲದಲ್ಲಿ ೨೫,೦೦೦ ರೂಪಾಯಿ ಧರ್ಮ ಖರ್ಚಿಗೆ ಕೊಟ್ಟಿರುತ್ತಾನೆ ಈ ಪೈಕಿ ೧೨,೦೦೦ ರೂಪಾಯಿ ಮುಟ್ಟಿಸಿ ಒಂದು ದೊಡ್ಡ ಪುಸ್ತಕ ಭಂಡಾರವನ್ನು ಕಟ್ಟಿಸಬೇಕೆಂತಲೂ ೫,೦೦೦ ರೂಪಾಯಿ ಖರ್ಚು ಮಾಡಿ ತನ್ನ ಜಾತಿಯ ಜನರ ಉಪಯೋಗಾರ್ಥವಾಗಿ ಒಂದು ಧರ್ಮಶಾಲೆಯನ್ನು ಕಟ್ಟಿಸಬೇಕೆಂತಲೂ ತಿಳಿಸಿರುವನು.

❖❖❖❖

ಬರ್ಮಾ ದೇಶದಲ್ಲಿ ಗಂಡಹೆಂಡರಿಬ್ಬರಿಗೂ ಒಟ್ಟಾಗಿ ಜೀವನ ಮಾಡುವುದು ಕಷ್ಟವಾದರೆ ಒಂದು ಉಪಾಯ ಮಾಡುವರು. ಅಂಗಡಿಗೆ ಹೋಗಿ ಇದಕ್ಕಾಗಿಯೇ ಮಾಡಿರುವ ಒಂದು ಜೊತೆ ಮೇಣದ ಬತ್ತಿಯನ್ನು ತಂದು, ಇಬ್ಬರೂ ಅವುಗಳನ್ನು ಏಕಕಾಲದಲ್ಲಿ ತಮ್ಮ ಹೆಸರನ್ನಿಟ್ಟು ಹತ್ತಿಸುತ್ತಾರೆ. ಇಬ್ಬರೂ ಅದು ಉರಿಯುವುದನ್ನೇ ಕಾದುಕೊಂಡಿರುವರು. ಯಾರ ಹೆಸರಿನ ಮೇಣದ ಬತ್ತಿಯು ಮುಂಚೆ ಉರಿದು ಆರಿಹೋಗುತ್ತದೆಯೋ ಅವರು ತಮ್ಮ ಮೈಮೇಲಿರುವ ಬಟ್ಟೆ ವಿನಹ ಇನ್ನೇನೂ ತೆಗೆದುಕೊಳ್ಳದೆ ಆ ಮನೆಯನ್ನು ಬಿಟ್ಟು ಬೇಗ ಹೋಗತಕ್ಕದ್ದು. ಉಳಿದವರು ಮನೆಯಲ್ಲೇ ಇರುವುದು.

❖❖❖❖

ಬೊಂಬಾಯಿ ಬರೋಡಾ ಮಧ್ಯ ಇಂಡಿಯಾ ಎಂಬ ರೈಲ್ವೆಯನ್ನು ಒಂದು ಕಂಪನಿಯು ಇಲ್ಲಿಯವರೆಗೆ ಕಳೆದ ೧೮೫೯ನೇ ಇಸವಿಯಿಂದ ಲೀಸಿಗೆ ನಡಸುತ್ತಾ ಬಂದಿದಾರೆ. ಈ ಕಂಪನಿಯವರು ಮೊದಲು ಷೇರು ಹಾಕಿ ೧೧,೩೭,೫೩,೯೦೦ ರೂಪಾಯಿ ಕೂಡಿಸಿ ಈ ಮೂಲಧನದಿಂದ ರೈಲು ಹಾಕಿದರು. ಮೊದಲು ಈ ಕಂಪನಿಯ ಷೇರು ಒಂದಕ್ಕೆ ೧೫೦ ರೂಪಾಯಿ ಆಗಿತ್ತು. ಈಗ ಈ ಷೇರಿನ ಕ್ರಯ ೩೩೨ ರೂಪಾಯಿ ಆಗಿದೆ ಈ ದರದ ಪ್ರಕಾರ ಇಂಡಿಯಾ ಗವರ್ನ್‌ಮೆಂಟಿನವರು ಈ ರೈಲ್ ಕಂಪನಿಗೆ ಈ ವರ್ಷದ ಡಿಸೆಂಬರಿನಲ್ಲಿ ೧೯,೫೭,೮೫,೧೭೭ ರೂಪಾಯಿ ಕೊಟ್ಟು ಈ ರೈಲನ್ನು ತಮ್ಮ ಸ್ವಾಧೀನಕ್ಕೆ ತಗೆದುಕೊಳ್ಳುವವರಾಗಿದಾರೆ.

❖❖❖❖

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಕೆಲವು ಕಡೆಗಳಲ್ಲಿ ಕಾಲ ಸ್ಥಿತಿಯು ಚೆನ್ನಾಗಿಲ್ಲ. ಸರ್ಕಾರಿ ರಿಪೋರ್ಟಿನಿಂದ ತಿಳಿದುಬರುವುದೇನೆಂದರೆ—ಬಿಜಾಪುರ ಡಿಸ್ಟ್ರಿಕ್ಟಿನಲ್ಲಿರುವ ೧,೧೩೩ ಗ್ರಾಮಗಳ ಪೈಕಿ ೬೭೦ ಗ್ರಾಮಗಳಲ್ಲಿ ಪೈರುಗಳು ಕೆಟ್ಟು ಹೋಗಿವೆ; ೭೯ ಗ್ರಾಮಗಳಲ್ಲಿ ಪೈರೆಲ್ಲಾ ಹಾಳಾಗಿದೆ ಆದಕಾರಣ ೪೩,೦೭೦ ರೂ. ಕಂದಾಯವನ್ನು ಬಿಡಿಮರ್ಜಿ ಮಾಡಿ, ೩,೬೫,೦೦೦ ರೂ. ಕಂದಾಯವನ್ನು ಮುಂದಕ್ಕೆ ಸಲ್ಲತಕ್ಕದ್ದು ಎಂದು ಬಿಟ್ಟಿದಾರೆ. ಇತ್ತ ಧಾರವಾಡ ಡಿಸ್ಟ್ರಿಕ್ಟಿಗೆ ಸೇರಿದ ನವಲಗುಂದ, ರೋಣ, ಗದಗ್, ಈ ಮೂರು ತಾಲ್ಲೂಕುಗಳಲ್ಲೂ ೪,೨೭೯ ರೂಪಾಯಿ ಕಂದಾಯ ಬಿಡಿಮರ್ಜಿ ಮಾಡಿದರು, ೧,೮೮,೪೧೭ ರೂಪಾಯಿ ಕಂದಾಯ ಕೊಳೆಗಳನ್ನು ಇನ್ನು ಮುಂದೆ ಸುಭಿಕ್ಷದಲ್ಲಿ ವಸೂಲ್ಮಾಡುವಂತೆ ಹುಕುಂ ಕೊಡಲಾಗಿದೆ.

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ಹಿಂದಿನ ವಾರ ಸಹಿಸಲಸಾಧ್ಯವಾದ ಶೆಖೆಯು ಪ್ರಾಪ್ತವಾಗಿ ಪ್ರಜೆಗಳನ್ನು ಕಷ್ಟಪಡಿಸಿತು. ನೆರಳಿನಲ್ಲಿ ಕಾವು ೧೦೯—೧೧೦ ಡಿಗ್ರಿಗಳ ವರೆಗೆ ಏರಿತ್ತು. ಅನೇಕ ಕುದುರೆಗಳೂ ಮೂಗುಪ್ರಾಣಿಗಳೂ ಶೆಖೆಯ ತಾಪವನ್ನು ಸಹಿಸಲಾರದೆ ಬಿದ್ದು ಸತ್ತು ಹೋದವು. ಕೆಲವು ಜನರೂ ಸೊಕ್ಕಿ ಮೃತಪಟ್ಟರು. ಪಾಠಶಾಲೆಗಳಿಗೆ ಒಂದು ವಾರ ರಜಾ ಕೊಟ್ಟು ಮುಚ್ಚಿಬಿಟ್ಟರು. ವಾದಿಗಳು ಹೈಕೋರ್ಟಿನಲ್ಲಿ ಕೋರ್ಟುಗಳಿಗೆ ಒಂದು ವಾರವಾದರೂ ರಜಾ ಕೊಡಬೇಕೆಂದು ಚೀಫ್ ಜಸ್ಟಿಸರವರನ್ನು ಕೇಳಿಕೊಂಡರು ಅನೇಕ ಪ್ರಜೆಗಳು ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಮನೆಗಳಲ್ಲೇ ಇದ್ದುಬಿಟ್ಟರು ಅಂಗಡಿ ಮುಂಗಟ್ಟುಗಳೂ ಬ್ಯಾಂಕುಗಳೂ ೪—೭ ದಿನ ಮುಚ್ಚಲ್ಪಟ್ಟಿದ್ದವು. ೧೮೯೭ ನೆ ಇಸವಿಯಲ್ಲಿ ಆದಂತೆ ಭೂಕಂಪವೇನಾದರೂ ಆದೀತೋ ಎಂದು ಜನರೆಲ್ಲಾ ಗಾಬರಿ ಪಡುತ್ತಿದಾರೆ. ಇಂಥಾ ಶೆಖೆಯು ಕಳೆದ ೧೮೮೮ನೆ ಇಸವಿಯಿಂದೀಚೆಗೆ ಅಲ್ಲಿ ಪ್ರಾಪ್ತವಾಗಿರಲಿಲ್ಲ.

❖❖❖❖

ಕಳೆದ ೧೯೦೪ನೆ ವರ್ಷದ ಹಿಂದುಸ್ಥಾನದ ರೈಲ್ವೆ ಇಲಾಖೆಯ ರಿಪೋರ್ಟು ಪ್ರಕಟವಾಗಿದೆ. ಅದರಿಂದ ತಿಳಿದುಬರುವ ಮುಖ್ಯ ವಿಷಯಗಳೇನೆಂದರೆ—ಆ ವರ್ಷ ೭೩೧ ಮೈಲಿ ರೈಲ್‌ರಸ್ತೆಯನ್ನು ನಿರ್ಮಾಣ ಮಾಡಿದರು ಒಟ್ಟು ೨೭,೫೬೫ ಮೈಲಿ ರೈಲ್‌ರಸ್ತೆ ಸಿದ್ಧವಾಯಿತು. ಇದಲ್ಲದೆ ೮೫೦ ಮೈಲಿ ರೈಲ್‌ರಸ್ತೆ ಹೊಸದಾಗಿ ತಯಾರಾಗುವಂತೆ ಸ್ಯಾಂಕ್ಷನ್ ಮಾಡಿದರು ೧೯೦೫ನೆ ಏಪ್ರೈಲ್ ಆಖೈರಿನಲ್ಲಿ ಹಿಂದುಸ್ಥಾನದ ರೈಲ್‌ರಸ್ತೆಯು ೨೭,೯೦೪ ಮೈಲಿ ದೂರವಾಯಿತು. ಇನ್ನೂ ೩,೦೫೫ ಮೈಲಿ ರಸ್ತೆಯು ಕಾಮಗಾರಿ ಆಗುತ್ತಿತ್ತು. ಆ ವರ್ಷ ರೈಲ್ ಇಲಾಖೆಗೆ ೧೩೦ ಎಂಜಿನ್‌ಗಳು ೩೩೩ ಪ್ರಯಾಣಿಕರ ಗಾಡಿಗಳು, ೬,೮೦೮ ವಾಗನ್‌ಭಂಡಿಗಳು ಇವನ್ನು ಹೊಸದಾಗಿ ತರಿಸಿದರು ಹಿಂದಿನ ವರ್ಷಕ್ಕಿಂತಲೂ ೩೭೪ ಲಕ್ಷ ರೂಪಾಯಿ ಹೆಚ್ಚು ಉತ್ಪತ್ತಿ ಆಯಿತು. ಅಂದರೆ ಖರ್ಚು ಜಾತಾ ಈ ಬಾಬಿನಲ್ಲಿ ಗವರ್ನಮೆಂಟಿಗೆ ಆ ವರ್ಷದಲ್ಲಿ ೨,೦೮೭ ಲಕ್ಷ ರೂಪಾಯಿ ಆದಾಯವಾಗಿದೆ ರೈಲ್ವೆ ಅಪಾಯಗಳಿಂದ ೧೯೦೪ನೆ ವರ್ಷದಲ್ಲಿ ೪೦ ಜನರು ಸತ್ತರು; ೨೦೧ ಜನರಿಗೆ ಗಾಯವಾಗಿದೆ.

❖❖❖❖

ಬೆಂಗಳೂರು ಸೆಂಟ್ ಜೋಸಫ್ ಕಾಲೇಜ್ ಎಂಬ ವಿದ್ಯಾಶಾಲೆಯ ಪ್ರಿನ್ಸಿಪಲ್‌ರಾದ ಫ್ರಾಜರ್ ಎಂಬುವರು ವೆಲ್ಲಿಂಗ್ಟನಿಂದ ನೀಲಗಿರಿಗೆ ಕೊತ್ತಗಿರಿಯ ಮಾರ್ಗವಾಗಿ ಬೈಸಿಕಲ್‌ಗಾಡಿಯ ಮೇಲೆ ಹೋಗುತ್ತಿದ್ದಾಗ ದೂರದಲ್ಲಿ ಒಂದು ಬಂಡೆಯಮೇಲೆ ಒಂದು ಹುಲಿ ಕೂತಿದ್ದುದನ್ನು ಕಂಡರು. ಅದು ಇವರನ್ನು ನೋಡಿದಕೂಡಲೇ ಅವರಿಂದ ತನಗೇನೋ ಅಪಾಯಸಂಭವಿಸುವುದೆಂದು ಯೋಚಿಸಿ ಬಂಡೆಯಿಂದಿಳಿದು ಅವರನ್ನು ಅಟ್ಟಿಸಿಕೊಂಡು ಬಂತು. ಅವರು ತುಂಬಾ ಗಾಬರಿಬಿದ್ದು ಬೈಸಿಕಲ್ ಗಾಡಿಯ ಮೇಲೆ ತಮ್ಮ ಶಕ್ತಿಯು ದಷ್ಟೂ ವೇಗವಾಗಿ ಮುಂದಕ್ಕೆ ಓಡಿದರು ಹುಲಿಯೂ ಎರಡು ಮೈಲಿದೂರದ ತನಕ ಅವರನ್ನು ಹಿಡಿಯಬೇಕೆಂದು ಬೆನ್ನುಹತ್ತಿ ಬಹು ರಭಸದಿಂದ ನುಗ್ಗಿತು. ಕಡೆಗೆ ಅದಕ್ಕೆ ಸಾಕಾಗಿ ಅಲ್ಲಿಯೇ ನಿಂತುಕೊಂಡದ್ದರಿಂದ ಅವರು ತಮ್ಮ ಪ್ರಾಣ ಇಂದಿಗೆ ಉಳಿಯಿತೆಂದು ಧೈರ್ಯಗೊಂಡರು. ಹುಲಿಯು ಅವರನ್ನು ಹಿಂದೆ ಅಟ್ಟಿಸಿಕೊಂಡು ಬರುವಾಗ್ಗೆ ಅವರ ಭೀತಿಯು ಎಷ್ಟಾಗಿತ್ತೋ ವಿವರಿಸಲಶಕ್ಯವಾಗಿದೆ.

ವಿದೇಶ ವರ್ತಮಾನಗಳು.

ಲಂಡನ್ ಪಟ್ಟಣದಲ್ಲಿರುವ ಪ್ರತಿ ಸಾವಿರ ಜನರಲ್ಲೂ ಇಪ್ಪತ್ತೆಂಟು ಮಂದಿ ಬಡವರುಗಳು

❖❖❖❖

ವಿಲಾಯತಿಗೆ ಸೇರಿದ ಪ್ಲಿಮತ್ ಎಂಬ ತೀರಪಟ್ಟಣದ ಹತ್ತಿರ ಒಂದು ಭಾರೀ ದೋಣಿಯು ಆಕಸ್ಮಾತ್ತಾಗಿ ಮುಳುಗಿ ಹದಿನೈದು ಜನರು ಸಮುದ್ರದ ಪಾಲಾದರು.

❖❖❖❖

ದಕ್ಷಿಣ ಆಫ್ರಿಕದ ಯುದ್ಧದ ಖರ್ಚಿಗಾಗಿ ಆ ರಾಜ್ಯದ ಉತ್ಪತ್ತಿಯಿಂದ ವಿಲಾಯತಿ ಸರ್ಕಾರದವರು ಕಳೆದ ವರುಷ ೪೯ ಕೋಟಿ ರೂಪಾಯನ್ನು ತೆಗೆದುಕೊಂಡಿದಾರೆ.

❖❖❖❖

ವಿಲಾಯತಿಗೆ ಸೇರಿದ ಗ್ಲಾಸ್ಗೋ ಪಟ್ಟಣದಲ್ಲಿ ಮಿ॥ ಗ್ಲೆನ್ ವಿವಿಯನ್ ಎಂಬೊಬ್ಬ ಧಣ್ಯಾತ್ಮನು ೧೦,೩೯,೦೦೦ ರೂಪಾಯಿಗಳನ್ನು ಧರ್ಮ ಕಾರ್ಯಗಳಿಗೆ ಕೊಟ್ಟಿರುತ್ತಾನೆ.

❖❖❖❖

ಕಳೆದ ವರ್ಷ ಲಂಡನ್ ನಗರದ ಒಳಗೂ ಸುತ್ತುಮುತ್ತಲೂ ಇರುವ ೭೦೪ ಧರ್ಮಛತ್ರಗಳಿಗೆ ಸುಮಾರು ಹತ್ತೂವರೆ ಕೋಟಿ ದ್ರವ್ಯವು ಜನಗಳಿಂದ ಧರ್ಮಾರ್ಥವಾಗಿ ಕೊಡಲ್ಪಟ್ಟಿದೆ.

❖❖❖❖

ಆಫ್ರಿಕಾ ಖಂಡದ ಅಬಿಸೀನಿಯಾ ರಾಜ್ಯದಲ್ಲಿ ಕೊಲೆ ಮಾಡಿದವನನ್ನು ಹಿಡಿದು ಸತ್ತವನ ಬಂಧುಗಳಿಗೆ ಒಪ್ಪಿಸಿಬಿಡುತ್ತಾರೆ. ಅವರ ಮನಸ್ಸುಬಂದರೆ ಇವನನ್ನು ತಮಗೆ ತೋರಿದ ರೀತಿಯಲ್ಲಿ ಕೊಲ್ಲಬಹುದು

❖❖❖❖

ಇಂಗ್ಲೆಂಡಿನಲ್ಲಿ ಒಂದು ಕಾಟೇಜಿನ ಗ್ಲಾಸ್ಟರ್ ಎಂಬಲ್ಲಿ ಒಬ್ಬ ಡಾಕ್ಟರು ಬರೀ ಕಾಲಿನಲ್ಲಿ ನಡೆಯುವುದು ತುಂಬಾ ಆರೋಗ್ಯಕರವಾದ್ದೆಂದು ತಿಳಿದು ತನ್ನ ಮಕ್ಕಳನ್ನು ಹಾಗೆಯೇ ಸ್ಕೂಲಿಗೆ ಕಳುಹಿಸುತ್ತಿದಾನೆ.

❖❖❖❖

ಮಡಗಾಸ್ಕರ್ ದ್ವೀಪದಲ್ಲಿ ಎರಡು ಸಲ ಸುಂಟರಗಾಳಿ ಪ್ರಾಪ್ತವಾಗಿ ಸುಮಾರು ೨೦೦ ಜನ ಮೃತಪಟ್ಟರೆಂತಲೂ ಆಸ್ತಿಪಾಸ್ತಿಗಳೂ ಬೆಳೆಗಳೂ ತುಂಬಾ ನಷ್ಟವಾದವೆಂತಲೂ ಅಲ್ಲಿಂದ ಬಂದಿರುವ ಕಾಗದಗಳು ಹೇಳುವವು.

❖❖❖❖

ಷಾಂಘಾಯಿ ಪಟ್ಟಣದಲ್ಲಿರುವ ಹತ್ತಿಬಟ್ಟೆಗಳ ಕಾರ್ಖಾನೆಯೇ ಚೀನಾ ರಾಜ್ಯದಲ್ಲೆಲ್ಲಾ ಅತ್ಯಂತ ದೊಡ್ಡದು. ಈ ಕಾರ್ಖಾನೆಯನ್ನು ಜಪಾನ್ ವರ್ತಕ ಸಂಘದವರು ಒಂದು ಕೋಟಿ ರೂಪಾಯಿಗೆ ಕೊಂಡುಕೊಂಡಿದಾರೆ.

❖❖❖❖

ರಷ್ಯಾ ಗವರ್ನ್‌ಮೆಂಟಿನವರು ತಮ್ಮ ಸ್ವಾಧೀನಾನುಭವದಲ್ಲಿರುವ ಮೂರು ರೈಲ್ ರಸ್ತೆಗಳನ್ನು ಫ್ರೆಂಚರ ಮತ್ತು ಜರ್ಮನಿಯವರ ಒಂದು ಕಂಪನಿಗೆ ೧೨೦ ಕೋಟಿ ರೂಪಾಯಿಗೆ ಮಾರಿಬಿಡಬೇಕೆಂದು ಯೋಚಿಸಿರುತ್ತಾರೆ.

❖❖❖❖

ರಯೊ.ಜನೆರೋ ರಾಜ್ಯದಲ್ಲಿರುವ ರಷ್ಯಾ ರಾಯಭಾರಿಯೂ ಅವನ ಸಂಸಾರದವರೂ ಎಲ್ಲಾ ಬೌದ್ಧಮತಸ್ಥರಾಗಿಯೂ, ಜರ್ಮನವರ ಮಂತ್ರಿಯವರೂ ಅವರ ಸೆಕ್ರೆಟರಿಯವರೂ ಕ್ರೈಸ್ತಮತಸ್ಥರಾಗಿಯೂ ಇರುವುದೂ ಆಶ್ಚರ್ಯಕರವಾಗಿದೆ.

❖❖❖❖

ಸಯಾಂ ರಾಜ್ಯದಲ್ಲಿರುವ ದೊಡ್ಡ ಮನುಷ್ಯರ ಮನೆ ಹೆಂಗಸರೆಲ್ಲಾ ತಲೆಯ ಕೂದಲನ್ನು ಒಂದೂವರೆ ಅಂಗುಲದಷ್ಟು ಮಾತ್ರ ಬಿಟ್ಟು ಉಳಿದದ್ದನ್ನು ಕತ್ತರಿಸಿಕೊಳ್ಳುತ್ತಾರೆ. ಇದರಿಂದ ಅವರ ತಲೆಯ ಮೇಲೆ ಕೂದಲು ನೆಟ್ಟಗೆ ನಿಂತುಕೊಳ್ಳುತ್ತದೆ.

❖❖❖❖

ನೀರನ್ನು ಹೆಚ್ಚಾಗಿ ಕುಡಿಯುವದರಿಂದ ದೇಹದ ಊಕವೂ ಶಕ್ತಿಯೂ ಹೆಚ್ಚುತ್ತದ ಎಂದು ಅನೇಕರು ತಿಳಿದಿರಬಹುದು. ಅದರಿಂದ ದೇಹವು ತೂಕದಲ್ಲಿ ಕಮ್ಮಿಯಾಗಿಯೂ ಗಾತ್ರದಲ್ಲಿ ಸಣ್ಣದಾಗಿಯೂ ಆಗುತ್ತದೆಂದು ಕೆಲವರು ಕಂಡುಹಿಡಿದಿರುತ್ತಾರೆ.

❖❖❖❖

ಫ್ರಾನ್ಸ್ ದೇಶದ ಒಬ್ಬನೊಬ್ಬ ಚಿತ್ರಗಾರನು ಎಂಟು ವರ್ಷಗಳಿಂದ ಶ್ರಮಪಟ್ಟು ಒಂದು ದೊಡ್ಡ ಪಸ್ವೀರನ್ನು ಬರೆದಿಟ್ಟಿದಾನೆ ಅದು ಪೂರ್ಣವತ್ತು ಅಡಿ ಉದ್ದ ಅಗಲದಷ್ಟು ಬಟ್ಟೆಯನ್ನೊಳಗೊಂಡಿದೆ. ಪ್ರಪಂಚದಲ್ಲಿರುವ ಪಸ್ವೀರುಗಳಲ್ಲೆಲ್ಲಾ ಇದೇ ದೊಡ್ಡದು.

❖❖❖❖

ಹಾವುಗಳು ಯಾವಾಗಲೂ ರೆಪ್ಪೆ ಮುಚ್ಚದೆ ಇರುವುದರಿಂದಲೇ ಅವು ತಮ್ಮನ್ನು ಹಿಂಸಿಸುವುದಕ್ಕೆ ಬರುವ ಇತರ ಪ್ರಾಣಿಗಳಿಂದ ತಪ್ಪಿಸಿಕೊಳ್ಳುತ್ತವೆ. ರಾತ್ರಿಯೂ, ನಿದ್ದೆ ಹೋಗುತ್ತಿರುವಾಗಲೂ, ಸತ್ತಿರುವಾಗಲೂ ಅವು ತಮ್ಮ ಕಣ್ಣನ್ನು ಮುಚ್ಚುವುದೇ ಇಲ್ಲ.

❖❖❖❖

ಇಟಲೀ ದೇಶದ ಸೇನಾರ್ ಗ್ಯಾರೊಫಾಲೊ ಎಂಬ ಕ್ರಿಮಿನಲ್ ಶಾಸ್ತ್ರಜ್ಞರು ತಿಳಿಸಿರುವುದೇನೆಂದರೆ—ಯೂರೋಪ್‌ಖಂಡದಲ್ಲಿ ವರ್ಷ ಒಂದಕ್ಕೆ ಹತ್ತು ಸಾವಿರ ಜನರು ಕೊಲೆಯನ್ನು ಮಾಡುತ್ತಾರೆ ಅವರಲ್ಲಿ ಮೂರಕ್ಕೆ ಒಬ್ಬನು ಮಾತ್ರವೇ ವಿಚಾರಣೆಗೆ ಒಳಪಡುತ್ತಾನೆ.

❖❖❖❖

ಅಮೇರಿಕದವರು ತಮ್ಮ ದೇಶಕ್ಕೆ ಬರುವ ವಿಷಮೂಲಿಕೆಗಳಿಗಾಗಿ ಖರ್ಚಾಗುವ ಮೂರು ಕೋಟಿ ರೂಪಾಯಿಗಳನ್ನು ಉಳಿಸಿಕೊಳ್ಳಬೇಕೆಂದು ವಾಷಿಂಗ್ಟನ್ ಪಟ್ಟಣದ ಹತ್ತಿರ ಕೆಲವು ಭಾರಿ ಮೈದಾನಗಳನ್ನು ವಿಷಮೂಲಿಕೆಗಳನ್ನು ಹಾಕಿ ಬೆಳೆಯುವುದಕ್ಕಾಗಿ ಬಿಟ್ಟಿದಾರೆ.

❖❖❖❖

ಅಮೇರಿಕಕ್ಕೆ ಸೇರಿದ ಪೋರ್ಟ್‌ಲೆಂಡ್ ಡಿಸ್ಟ್ರಿಕ್ಟಿನಲ್ಲಿ ಪ್ರಜೆಗಳ ಪೈಕಿ ಯಾರೇ ಆಗಲಿ ತಮ್ಮ ಹೆಂಡಿರುಗಳನ್ನು ಹೊಡೆದು ಬಡಿದು ಹಿಂಸೆಮಾಡಿದ್ದೇ ಉಂಟಾದರೆ ಅಂಥಾ ಕ್ರೂರಿಗಳಾದ ಗಂಡಂದಿರಿಗೆ ತಲಾ ಇಪ್ಪತ್ತು ಛಡಿ ಏಟು ಹೊಡೆಯತಕ್ಕದ್ದೆಂಬುದಾಗಿ ಒಂದು ಕಾನೂನ್ ಮಾಡಿ ಜಾರಿಗೆ ತಂದಿದಾರೆ

❖❖❖❖

ಸ್ಪೇಯಿನ್ ರಾಜ್ಯದಲ್ಲಿ ಒಂದು ಪದ್ಧತಿಯು ರೂಢಿಯಲ್ಲಿದೆ ಅದೇನೆಂದರೆ, ಮಂಗಳವಾರದ ದಿನ ಮದುವೆಯನ್ನಾಗಲಿ ಪ್ರಯಾಣವನ್ನಾಗಲಿ ಮಾಡಕೂಡದು. ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ಮಂಗಳವಾರ ಮದುವೆಗಳೂ ನಡೆಯುವುದಿಲ್ಲ. ಪ್ರಯಾಣಿಕರೊಬ್ಬರೂ ಇಲ್ಲದೆ ರೈಲ್ ಗಾಡಿಗಳು ಬರಿದಾಗಿ ತಿರುಗುತ್ತವೆ.

❖❖❖❖

ಕಳೆದ ೧೯೦೨ನೆ ಇಸವಿಯಲ್ಲಿ ಜರ್ಮನಿ ರಾಜ್ಯದಲ್ಲೆಲ್ಲಾ ಒಟ್ಟು ೧೨,೩೩೬ ಜನರು ಆತ್ಮಹತ್ಯ ಮಾಡಿಕೊಂಡರು. ಮುಖ್ಯವಾದ ಕಾರಣಗಳ್ಯಾವವೆಂದರೆ—ಹೊಟ್ಟೆಗಿಲ್ಲದ್ದು ಒಂದು, ಸೈನ್ಯದ ಉದ್ಯೋಗಸ್ಥರ ಹಿಂಸೆ ಎರಡನೆಯದು ಇದರಿಂದ ಜರ್ಮನಿಯ ಕಾಟವೂ ಸೈನ್ಯದ ಇಲಾಖೆಯ ಕಾನೂನುಗಳ ಬಿಗಿಯೂ ಎಷ್ಟರ ಮಟ್ಟಿನವೋ ಊಹಿಸಬಹುದಾಗಿದೆ.

❖❖❖❖

ಪರ್ಷಿಯಾ ರಾಜ್ಯದ ಷಾ ಸುಲ್ತಾನರವರು ಯೂರೋಪಿನ ರಾಜ್ಯಗಳನ್ನು ಸುತ್ತಿಕೊಂಡುಬರುವುದಕ್ಕಾಗಿ ಪ್ರಯಾಣ ಮಾಡಿದರು. ಇವರ ಸಂಗಡ ಹೊರಟಿರುವವರ್ಯಾರೆಂದರೆ—ಅವರ ಕೊನೆಯ ಮಗ, ಮೊಮ್ಮಗ, ಮುಖ್ಯ ವಜೀರ, ಮೂವರು ರಾಜಕುಮಾರರು, ಹತ್ತು ಮಂದಿ ಮಂತ್ರಿಗಳು, ಮೂರು ಮಂದಿ ಚೀಫ್ ಸೆಕ್ರೆಟರಿಗಳು, ನಾಲ್ಕು ಜನ ಡಾಕ್ಟರುಗಳು, ಆಸ್ಥಾನಕ್ಕೆ ಸೇರಿದ ೧೨ ಮಂದಿ ದೊಡ್ಡ ಮನುಷ್ಯರು, ಒಂಬತ್ತು ಜನ ಸೇವಕರು.

❖❖❖❖

ದಕ್ಷಿಣ ಆಫ್ರಿಕದ ಪ್ರಿಮಿಯರ್ ಡಯಮಂಡ್ ವರ್ಕ್ಸ್ ಎಂಬ ವಜ್ರಗಳ ಕಂಪನಿಗೋಸ್ಕರ ಈಗ ಒಂದು ಕಬ್ಬಿಣದ ಪೆಟ್ಟಿಗೆಯು ತಯಾರಾಗಿದೆ ಅದರಲ್ಲಿ ಮೂರು ಕೋಟಿ ರೂಪಾಯಿನಷ್ಟು ವಜ್ರಗಳನ್ನು ಇಡಬಹುದು. ಇದುವರೆಗೆ ಪ್ರಪಂಚದಲ್ಲಿ ತಯಾರಾಗಿರುವ ಪೆಟ್ಟಿಗೆಗಳಲ್ಲಿ ಇದೇ ಬಹಳ ಬಲವಾದದ್ದು. ಅದು ಏಳು ಅಡಿ ಎತ್ತರವೂ, ಆರು ಅಡಿ ಅಗಲವೂ ಇದೆ. ಅದರ ತೂಕ ೩೦ ಟನ್‌ಗಳು. ಈ ಪೆಟ್ಟಿಗೆಯು ನಾಲ್ಕುವರೆ ಲಕ್ಷ ರೂಪಾಯಿ ಬಾಳಬಹುದೆಂದು ತೋರುತ್ತೆ.

❖❖❖❖

ಜರ್ಮನಿ ರಾಜ್ಯಕ್ಕೆ ಸೇರಿದ ಬ್ರೆಸ್ಲಾ ಪಟ್ಟಣದ ಬಳಿ ಭೂಮಿಯನ್ನು ಅಗತೆ ಮಾಡಿದ್ದರಲ್ಲಿ ಪ್ರಾಚೀನ ಕಾಲದ ಒಂದು ಗ್ರಾಮಕ್ಕೆ ಗ್ರಾಮವೇ ಸಿಕ್ಕಿರುತ್ತದೆ. ಈ ಗ್ರಾಮದಲ್ಲಿ ನೂರ ಐವತ್ತು ವಾಸದ ಮನೆಗಳಿರುವವು. ಅದರ ಸಮೀಪದಲ್ಲೇ ನಾಲ್ಕು ನೂರು ಸಮಾಧಿಗಳು ಸಿಕ್ಕಿದವು. ಅಲ್ಲಿಂದ ಅರ್ಧ ಮೈಲಿ ದೂರದಲ್ಲಿ ದೇವಾಂಗದವರು ಬಟ್ಟೆ ನೇಯುವ ಅನೇಕ ಮಗ್ಗಗಳು ದೊರಕಿರುತ್ತವೆ ಇವು ಸುಮಾರು ನಾಲ್ಕುಸಾವಿರ ವರ್ಷದ ಹಿಂದೆ ಇದ್ದ ಗ್ರಾಮವೆಂದು ಹೇಳುತ್ತಾರೆ.

❖❖❖❖

ಜೋಹೋರ್ ರಾಜ್ಯದ ಚಿಕ್ಕ ಸುಲ್ತಾನನ ಹತ್ತಿರ ಒಂದು ವಿಶೇಷ ಆಶ್ಚರ್ಯಕರವಾದ ಕುದುರೆ ಇದೆ. ಅನೇಕ ವರ್ಷಗಳ ಹಿಂದೆ ಕಾರಣಾಂತರದಿಂದ ಅದರ ಕುದುರೆಯ ಹಲ್ಲೆಲ್ಲಾ ಉದುರಿ ಹೋದವು ಅದಕ್ಕೆ ಬದಲಾಗಿ ಗಟ್ಟಿ ಚಿನ್ನದಲ್ಲಿ ಹಲ್ಲುಗಳನ್ನು ಮಾಡಿಸಿ, ಅದರ ಮಧ್ಯೆ ಒಂದೊಂದು ವಜ್ರವನ್ನು ನೆಡಿಸಿರುತ್ತಾನೆ. ಕುದುರೆಯು ಬಾಯಿಬಿಡುವಾಗ ನೋಟಕಾರಿಗೆ ಒಳ್ಳೇ ನೋಟವು ಲಭಿಸುವುದು. ಸೂರ್ಯರಶ್ಮಿಯೇನಾದರೂ ಅವುಗಳ ಮೇಲೆ ಬಿದ್ದರೆ ಅವು ದೀಪದಂತೆ ಪ್ರಕಾಶಿಸುವವು.

❖❖❖❖

ಅಸ್ಟ್ರಿಯಾ ರಾಜ್ಯದ ಮುಖ್ಯನಗರವಾದ ವಿಯನ್ನಾಪಟ್ಟಣದಲ್ಲಿ ಸುಮಾರು ಎರಡು ಕೋಟಿಯೂ ಸಲವತ್ತು ಲಕ್ಷ ರೂಪಾಯಿ ಮುಟ್ಟಿಸಿ ಪ್ರಪಂಚದಲ್ಲೆಲ್ಲಾ ದೊಡ್ಡದಾದ ಆಸ್ಪತ್ರೆಯನ್ನು ಕಟ್ಟು

ತ್ತಾರೆ. ಅದು ೩೪ ಲಕ್ಷ ಜನಗಳು ಸ್ಥಳವನ್ನೊಳಗೊಳ್ಳುವುದಲ್ಲದೆ ಅದೇ ಒಂದು ಸಣ್ಣ ಪಟ್ಟಣವೆನಿಸಿಕೊಳ್ಳುವುದು. ಅದರಲ್ಲಿ ೩೦ ಬಂಗಲೆಗಳನ್ನು ಕಟ್ಟುವರು. ಅವುಗಳಲ್ಲಿ ರೋಗಿಗಳಿಗೆ ೨,೩೦೦ ಹಾಸಿಗೆಗಳನ್ನು ಸಿದ್ಧಪಡಿಸುತ್ತಾರೆ. ಕ್ಷಯರೋಗಿಗಳ ಉಪಯೋಗಕ್ಕಾಗಿ ಅಲ್ಲಲ್ಲಿ ತೋಟಗಳನ್ನೂ ಮಾಡುವರು

****

ಕಳೆದ ೧೮೬೬ನೆ ಇಸವಿಯಲ್ಲಿ ಜರ್ಮನಿಯವರು ಡೆನ್ಮಾರ್ಕಿಗೆ ಸೇರಿದ್ದ ಷ್ಲೆಸ್‌ವಿಗ್ ಎಂಬ ಪ್ರಾಂತ್ಯವನ್ನು ಸ್ವಾಧೀನಪಡಿಸಿಕೊಂಡರು. ಈ ಪ್ರಾಂತ್ಯದಲ್ಲಿರುವ ಸ್ವದೇಶಿಗಳು ಕೆಲವು ದಿನಗಳ ಕೆಳಗೆ ಒಂದು ಸಂಘವನ್ನು ಮಾಡಿಕೊಂಡು, ತಮ್ಮ ಪೂರ್ವಿಕರ ಸಾಹಸಪರಾಕ್ರಮಗಳನ್ನು ಕುರಿತು ಸಂಗೀತರೂಪವಾಗಿ ಹಾಡಲಾರಂಭಿಸಿದರು ಜರ್ಮನಿಯ ಸರ್ಕಾರಿ ಅಧಿಕಾರಿಗಳು ಇವರಿಂದ ರಾಜ್ಯದ ನೆಮ್ಮದಿಗೆ ಭಂಗ ಉಂಟಾದೀತೆಂದು ಹೆದರಿ ಆ ಸಂಘಕ್ಕೆ ಸೇರಿದ್ದ ನೂರಾರು ಮಂದಿಯನ್ನು ದಸ್ತಗಿರಿ ಮಾಡಿ ಲಾಕಪ್ಪಿನಲ್ಲಿ ಹಾಕಿದಾರೆ

****

ಹಿಂದುಸ್ಥಾನದಿಂದಲೂ ಸಿಲೋನ್ (ಲಂಕಾ) ದ್ವೀಪದಿಂದಲೂ ವ್ಲಾಡಿವೊಸ್ಟಾಕ್ ಎಂಬ ರಷ್ಯಾದವರ ಕೋಟೆಗೆ ಟೀ ಸೊಪ್ಪನ್ನು ಕಳ್ಳತನದಿಂದ ಸಾಗಿಸಿಕೊಂಡು ಹೋಗುತ್ತಿದ್ದ ವರ್ತಕರ ಹಡಗುಗಳನ್ನು ಜಪಾನಿನವರು ಸಮುದ್ರ ಮಧ್ಯದಲ್ಲಿ ಹಿಡಿದು ಸ್ವಾಧೀನಪಡಿಸಿಕೊಂಡು, ಆ ಟೀ ಸೊಪ್ಪನ್ನೆಲ್ಲಾ ಸಸಿಬೊ ನಗರದಲ್ಲಿ ಬೆಟ್ಟಗಳೋಪಾದಿಯಲ್ಲಿ ರಾಸಿ ಹಾಕಿ, ಧಾರಣೆ ಬಂದ ಹಾಗೆಲ್ಲಾ ಜಪಾನ್ ವರ್ತಕರಿಗೆ ವಿಕರಿಮಾಡುತ್ತಿದಾರೆ. ಆರು ಲಕ್ಷ ರೂಪಾಯಿ ಕ್ರಯದ ಟೀ ಸೊಪ್ಪಿನ ಒಂದು ರಾಸಿಯನ್ನು ಕಳೆದವಾರ ತೊಂಬತ್ತು ಸಾವಿರ ರೂಪಾಯಿಗೆ ಕೊಂಡುಕೊಂಡರು

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ತಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಎಸ್. ಪರಸುಂಗ್ಯಯ—ಆ ಕಂಪನಿಗೇ ಬರೆದುಕೊಳ್ಳಿ

ಸಾಹುಕಾರ್ ಕಾಡಪ್ಪನವರು, "ಏಹು ಭ್ರಾಂತರ್ಪರಿಗ್ರಹದ ಫಲ", "ಇದಕ್ಕಿಂತ ಮೂಢರುಂಟೆ"—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು.

ಕರೆಸ್‌ಪಾಂಡೆನ್ಸ್

ರೈತನನ್ನು ಕಷ್ಟಪಡಿಸುವುದು

ಅಯ್ಯಾ,

ಕೋಲಾರಗೆರೆ ಸಬ್ ತಾಲ್ಲೂಕು ಸಾಗ್ಗೆರೆ ಬಳಿ ಮದ್ದವೆಂಬ ಗ್ರಾಮದ ಬಳಿ ಒಬ್ಬ ಬಡ ರೈತನು ಮಾವತ್ತೂರು ಕೆರೆ ಹಲಾವು ನೀರು ಇಟ್ಟು ಸರ್ಕಾರಕ್ಕೆ ತೆರತಕ್ಕ ಕಂದಾಯವನ್ನು ಕಂದಾಯವೆಂಬ ಎರಡು ಕೆರೆಗೆ ತೆತ್ತು ಗದ್ದೆ ಸಾಗುವಳಿ ಮಾಡಿ ಈಗ ಸುಮಾರು ೧೫—೨೦ ದಿನದ ಕೆಳಗೆ ಕಟಾವ್ ಮಾಡಿಸಿ ಕಣದಲ್ಲಿ ರಾಸಿ ಮಾಡಿ ಮನೆಗೆ ಹೋಗಿರಲು ಆ ಗ್ರಾಮದ ಶಾನ ಭೋಗ ಸಂಗಪ್ಪ, ಮಲ್ಲಪ್ಪ, ಮುದ್ದೇಗವುಡ, ಬಸಪ್ಪದೇವರು ಈ ವೆಂಕಟಲಾಡವರೆಲ್ಲಾ ಸೇರಿ ಅವನು ಹಾಜರಿಲ್ಲದ ವೇಳೆ ಭತ್ತದ ರಾಸಿಯನ್ನು ಗಾಡಿಗಳ ಮೇಲೆ ತಮ್ಮ ತಮ್ಮ ಮನೆಗಳಿಗೆ ಸಾಗಿಸಿಕೊಂಡಿದಾರೆ ಇದಕ್ಕಾಗಿ ಆ ರೈತರು ಫಿರ್ಯಾದು ಮಾಡಿದಾರೆ ಫಿರ್ಯಾದಿಸಂತೆ ತಾಲ್ಲೂಕು ಅಮಲ್ದಾರ್ರವರು ಸುಮಾರು ೫೦—೫೫ ದಿನದ ವರಿವಿಗೂ ಹಿಡಿದು ಲಾಕಪ್ಪ ಮಾಡಿ ಪುನಹ ಬಿಟ್ಟಿದಾರೆ ಮತ್ತು ತಾಲ್ಲೂಕು ಅಮಲ್ದಾರ್ರು, ಪೋಲೀಸು ಸೂಪ್ರಂಟರು ಸಾಗ್ಗೆರೆಗೆ ಈ ಮಾಹೆ ೧೨ನೇ ತಾರೀಖಿನ ಒಳ ದಯಮಾಡಿಸಿದಾರೆ ವಿಚಾರಣೆ ಏನಾಗಿರುವದೋ ಗೊತ್ತಿಲ್ಲ

ಪ್ರತ್ಯಕ್ಷದರ್ಶಿ

ಭಾರೀ ಕಳ್ಳತನವು.

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಚಿಕ್ಕಳೂರು ಗ್ರಾಮದ ಅರಮನೆ ತೋಟದ ಅನಂತಯ್ಯನವರ ಮನೆಯಲ್ಲಿ ಕಳೆದ ಮೇ ತಿಂಗಳು ತಾರೀಖು ೨೮ ನೆ ರಾತ್ರಿ ಸುಮಾರು ೧೨ ಗಂಟೆ ಸಮಯದಲ್ಲಿ ವಧುವರರು ನಿದ್ರೆ ಮಾಡುತ್ತಿರುವ ಕಾಲದಲ್ಲಿ ಖಜಾನೆ ಇರುವ ಕೋಣೆಯಲ್ಲಿ ಹೊರಗಿನಿಂದ ಗೋಡೆಯನ್ನು ಒಬ್ಬ ಮನುಷ್ಯ ಮಾತ್ರ ಒಳಗೆ ಪ್ರವೇಶ ಮಾಡುವಷ್ಟು ಸಣ್ಣ ರಂಧ್ರ ಕೊರೆದು, ಕಾಂಬ್ರದ ಸಂದೂಕವನ್ನು ಒಡೆದು ಸುಮಾರು ೫೦೦ ರೂಪಾಯಿನ ನೋಟುಗಳು, ೧,೨೫೦ ರೂಪಾಯಿ ನಗದು, ೧,೨೬೦ ರೂಪಾಯಿನ ನಗಗಳು ಹಾಗೆ ೩,೦೨೦ ರೂಪಾಯಿ ಕಳುವಾಯಿತು ಈ ಗ್ರಾಮದ ಪಟೇಲ್ ಹೊಮ್ಮೆ ಗೌಡರು ರಿಪೋರ್ಟು ಮಾಡಿದ್ದರ ಮೇಲೆ ಪೋಲೀಸ್ ಇನ್ಸ್‌ಪೆಕ್ಟರೇ ಮುಂತಾದ ಅಧೀಕರು ವಿಚಾರಣೆ ಮಾಡಿಸಿದ್ದರಲ್ಲಿ ಪತ್ತೇ ಆಗಲಿಲ್ಲ. ನೋಣಬೂರು ಸ್ಟೇಷನ್ ಹಫೇದಾರರು ಹಾಗಿ ಅದೇ ಸ್ಥಳದಲ್ಲಿ ಪತ್ತೆ ಹರಹೂರು ಮೇಲೆ ೭—೮ ದಿವಸದಿಂದ ಗುಮಾನಿ ಜನಗಳು ಸಿಕ್ಕುತ್ತಾರೆಯೋ ಎಂದು ಕಾಯುತ್ತಿರುವರು. ಈ ಪೈಕಿ ಪೊಲೀಸಿನವರು ಹೆಂಗಸರನ್ನು ನಾನಾ ರೀತಿಯಲ್ಲಿ ಹಿಂಸೆ ಮಾಡುವಂತೆ ಕೇಳುತ್ತೇನೆ ಇಂಥಾ ಅತ್ಯಕ್ಕೆ ಈ ಮಹಾ ಪುಣ್ಯಾತ್ಮರು ಮಾಡುವ ಚಟುವಟಿಕೆಯು ಕಳ್ಳರನ್ನು ಹಿಡಿಯಲು ಪ್ರಯತ್ನ ಮಾಡಿದ್ದಾದರೆ ದರೋಡೆಕೋರರು ಸಿಕ್ಕಬಹುದಿತ್ತು. ಮೇಲೆ ಕಂಡ ಪಟೇಲ್ ಹೊಮ್ಮೆ ಪೊಲೀಸ್ ದಫೇದಾರರು ಪತ್ತೆ ಹರಹೂದಿನಿಂದ ತುಂಬಾ ಕೀರ್ತಿ ಸಂಪಾದಿಸ್ಯಾರು ಎಂದು ಹಾರೈಸುತ್ತೇನೆ

ಎಂ ಎಚ್. ತಿಮ್ಮಪ್ಪನಾಯ್ಕ

ಸ್ಕೂಲ್ ಮಾಸ್ಟರ ಸಂಬಳ ಬಟವಾಡೆ

ಅಯ್ಯಾ,

ನನಗೆ . . . ತಾಲ್ಲೂಕು . . . ಯಲ್ಲಿ ಮಾಸೆಯಾನಾ ೭ ರೂಪಾಯಿ ಕಲಬುಳ್ಳ ಸ್ಕೂಲ್ ಮಾಸ್ಟರ ಕೆಲಸವಿದೆ ನನಗೆ ಏಪ್ರಿಲ್ ಮಾಹೆ ಬಾಗಾಯಿತು ಜುಬನ್ನೇ ಕೊಡದೆ ಬಂದುವಾದಿದ್ದಾರೆ ತಾಲ್ಲೋಕಿಗೆ ಈ ವರೆಗೆ ೩ ರಿಪೋರ್ಟು ಕೊಟ್ಟೆ ಅವರು ಗಮನಕ್ಕೆ ತರಲಿಲ್ಲ. ನನಗೆ ಜೀವನಕ್ಕಿಲ್ಲದೆ ಶ್ರಮಪಡಿಸುವ ಸಂಗತಿ ವಿವರಿಸುವದು ಅಸಾಧ್ಯ ಇಂಥಾ ಬಡ ನೌಕರನಿಗೆ ಹೀಗೆ ನಡೆಯಲು ಕಾರಣವೇನೋ ತಿಳಿಯದು ನಮ್ಮ ಇನ್ಸ್‌ಪೆಕ್ಟರವರ ಆಫೀಸಿಗೆ ೨ ರಿಪೋರ್ಟು ಕೊಟ್ಟೆ ಅವರ ಬಳಿ ಖಜಾನೆಯಿಲ್ಲ ತಾಲ್ಲೋಕಿಗೆ ಯಾಪಾಸ್ತು ಕೊಟ್ಟರಬಹುದು ತಾಲ್ಲೋಕಿನವರು ಬಡ ನೌಕರನ ಅಹವಾಲ್ ಚಿತ್ತಕ್ಕೆ ತರುವುದಿಲ್ಲ ಆನೆಯೂ ಮತ್ತು ಸಣ್ಣ ಇರುವೆಯೂ ಒಂದೇಬಗೆ ಪರಮಾತ್ಮನಲ್ಲವೇ? ಆನೆಗೆ ಹಾಪತ್ರಯ ಹೆಚ್ಚಾದ್ದೇನು? ಇರುವೆಗೆ ಕಷ್ಟವಿಲ್ಲದ್ದೇನು? ಖಂಡಿತವಾಗಿ ಬಡಬರೆ ತನ್ನ ಚಾಕರಿಗೆ ಮಣ್ಣು ಹಾಕಿಸುತ್ತೇವೆಂತಾ ದುರ್ಯೋಚನೆ ಮಾಡುತ್ತಾರೆ ಹೀಗೆಲ್ಲಾ ಅನಿವಾರ್ಯ ಬಂದಿದೆ ಹ್ಯಾಗೆ ಮಾಡಬೇಕು? ಪ್ರತ್ಯುತ್ತರ ಕೊಡಿ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಗೆ ಈ ವಿಷಯ ಬರೆದುಕೊಳ್ಳಲು ನನಗೆ ಅಧಿಕಾರ ಇಲ್ಲ ೧೮೯೦ನೇ ಇಸ್ವಿ ನಂ ೫ ರಲ್ಲಿ ಮಾಸ್ತರ್ಯಾರೂ ನೇರವಾಗಿ ತನಗೆ ಬರೆಕೊಳ್ಳಕೂಡದೆಂದು ಸರ್ಕುಲರ್ ಕೊಟ್ಟಿರುತ್ತಾರೆ ಉಭಯ ತಾಪ ಸಂಕಟ ಬಂದಿದೆ

೧೮—೬—೦೫ ಸ್ಕೂಲ್ ಮಾಸ್ಟರು

[ಈ ಬಾತ್ಮಿದಾರರು ತಮ್ಮ ಹೆಸರನ್ನೂ ಹೋಬಳಿ ಮತ್ತು ತಾಲ್ಲೂಕುಗಳ ಹೆಸರನ್ನೂ ತಿಳಿಸಿದಾರೆ ಅವುಗಳನ್ನು ಸಹ ಪ್ರಕಟಿಸಬೇಕೆಂಬುದು ಅವರ ಇಷ್ಟವಾದರೂ ಅವರ ಕ್ಷೇಮದೃಷ್ಟಿ ಯಿಂದ ನಾವು ಪ್ರಕಟಿಸಲಿಲ್ಲ ತಾಲ್ಲೂಕುಗಳ ನೌಕರರು ಎಷ್ಟು ಚನ್ನಾಗಿ ಕೆಲಸ ಮಾಡುತ್ತಾರೆಂಬುದು ಇದರಿಂದ ಸ್ಪಷ್ಟವಾಗುವುದು ಈ ಬಡಮಾಸ್ತರ ಕಷ್ಟ ಹ್ಯಾಗೆ ನಿವಾರಣೆಯಾಗುವದೋ ತಿಳಿಯದು ಎಡಿ]

ಮಾಂಸಾಹಾರ

ಅಯ್ಯಾ,

ಹಿಂದು ಶಾಸ್ತ್ರದಲ್ಲಿ ಮಾಂಸಾಹಾರವು ಸಲ್ಲದೆಂದು ಹೇಳಿದಿಯಷ್ಟೆ ಹೀಗಿದ್ದಾಗ್ಯೂ ಆಚಾರಸಂಪನ್ನರಾದ ತುಳಸೀ ಮಾಲೆಯನ್ನು ಕೊರಳಲ್ಲಿ ಧರಿಸಿರುವವರು ಸಹ ಚಿಪ್ಪಿನ ಸುಣ್ಣವನ್ನು ಧಾರಾಳವಾಗಿ ಉಪಯೋಗಿಸುತ್ತಾರಲ್ಲಾ, ಇದು ಮಾಂಸ ತಿಂದ ಹಾಗಲ್ಲವೇ? ಚಿಪ್ಪು (ಶುಕ್ತಿ) ಜಲಜಂತುವಿನ ಶರೀರ ಭಾಗವಲ್ಲವೇ ಎಂದು ಕಲ್ಕತ್ತೆಯಲ್ಲಿ ಪ್ರಚಾರವಾಗುವ ಏಷಿಯಾ ಪತ್ರದ ವಾಚಕರೊಬ್ಬರು ಸೂಚಿಸಿರುವರು ಮಾಂಸಾಹಾರವು ಸಲ್ಲದೆಂದು ಹಿಂದೂ ಶಾಸ್ತ್ರದಲ್ಲಿ ಎಲ್ಲಿಯೂ ಹೇಳಿಯಿಲ್ಲ ಮತ್ತು ಮಾಂಸವನ್ನು ಆಹಾರಕ್ಕೆ ಉಪಯೋಗಿಸುತ್ತಿದ್ದರೆಂಬುದಕ್ಕೆ ಭಾರತ ರಾಮಾಯಣಾದಿ ಮಹಾ ಗ್ರಂಥಗಳಲ್ಲಿ ನೂರಾರು ಪಂಕ್ತಿಗಳು ಸಿಕ್ಕುತ್ತವೆ ಯಾವ ಸೂತ್ರಗ್ರಂಥದಲ್ಲೂ ದೇಶ ಕಾಲಾನುಗುಣವಾಗಿರಬೇಕು ಹಲಿಗಲ್ಲಾ ಒಂದೇ ಪ್ರಮಾಣವೆಂದು ತಲೆಗೆ ಆಭರಣವನ್ನು ಧರಿಸುವದಕ್ಕೂ ಕ್ಷೌರಮಾಡಿಸಿಕೊಳ್ಳುವದಕ್ಕೂ ಒಂದೇ ಮುಹೂರ್ತವು ಸರಿಯಾದೀತೆ? ಅದರಂತೆ ಕಲಿಯುಗದ ಬ್ರಾಹ್ಮಣರ ಶರೀರ ದಾರ್ಢ್ಯವನ್ನು ರಾಗ ದ್ವೇಷಗಳನ್ನೂ ಆಲೋಚಿಸಿ ವೇದಾಧಾರದಿಂದ ಧರ್ಮಶಾಸ್ತ್ರವನ್ನು ಬರೆದವರು ಮಾಂಸಸೇವನೆಯೂ ಮಧ್ಯಪಾನವೂ ಕೂಡದೆಂದು ಕಟ್ಟುಹಾಕಿದರು ಪೂರ್ವದಲ್ಲಿ ಮಾಂಸ ಭಕ್ಷಣವು ಸರ್ವರಲ್ಲಿಯೂ ರೂಢಿಯಾಗಿದ್ದದರಿಂದಲೇ ಚರ್ಮವೂ ಕಸ್ತೂರಿಯೂ ವರಾಹ ಕೋವಲುಗಳೂ ರೇಷ್ಮೆ ಹುಳಗಳ ದಾರವೂ ಪವಿತ್ರವಸ್ತುಗಳೆಂದು ಪರಿಣಮಿಸಿರುವವು ಇದರಂತೆಯೇ ಚಿಪ್ಪಿನ ಸುಣ್ಣವೂ ಸಹ ಪರಿಗ್ರಾಹ್ಯವಾಯಿತು. ಮತ್ಸ್ಯ ಮಾಂಸಕ್ಕೆ ಪ್ರತಿನಿಧಿಯಾಗಿ ಶ್ರಾದ್ಧಾದಿ ಹವ್ಯಕವ್ಯಗಳಲ್ಲಿ ಜೇನು ತುಪ್ಪವನ್ನೂ ಉದ್ದನ್ನೂ (ಸಂಸ್ಕೃತ ಮಾಷಾ, "ಮಾಂಸ" ದ ಪರ್ಯಾಯ) ಉಪಯೋಗಿಸುವರು. ಮಾಂಸ ಸೇವನೆಯು ಶಾಸ್ತ್ರಸಮ್ಮತವಾದುದರಿಂದ ಭೇದವಿಲ್ಲದೆ ಗೋಮಾಂಸವನ್ನೂ ಭಕ್ಷಿಸಿಬಿಟ್ಟಾರೆಂದು ಗೋಮಾಂಸವು ಪರಮ ನಿಂದ್ಯವೆಂದು ಪುನಃ ಪುನಃ ಹೇಳಿರುತ್ತಾರೆ ಈ ಕಾರಣಗಳಿಂದ ಶುಕ್ತಿಚೂರ್ಣವು ಉಪಯೋಗಿಸುವದು ಮಾಂಸ ಭಕ್ಷಣವೆಂದು ಪರಿಣಮಿಸುವದಿಲ್ಲವೆಂದು ತಮ್ಮ ವಾಚಕ ಮಹಾಶಯರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

ಎಂ ಆರ್. ಎ.

ಹೋಬಳಿ ಸ್ಕೂಲ್ ಮಾಸ್ಟರುಗಳ ದುಃಸ್ಥಿತಿ.

ಅಯ್ಯಾ,

ಹೋಬಳೀ ಸ್ಕೂಲ್‌ಗಳಲ್ಲಿಯೂ ತಾಲ್ಲೂಕು ಸ್ಕೂಲ್‌ಗಳಲ್ಲಿಯೂ ಅನೇಕ ಜನ ಪಠಸ್ಥರ ಬಡಮಾಸ್ಟರುಗಳು ಅತ್ಯಲ್ಪವಾದ ಸಂಬಳಗಳನ್ನು ತೆಗೆದುಕೊಂಡು ಕಷ್ಟಪಟ್ಟು ಸರ್ಕಾರದ ಕೆಲಸವನ್ನು ತೃಪ್ತಿಕರವಾಗಿ ಮಾಡುತ್ತಿದ್ದಾಗ್ಯೂ ಜೀವನಕ್ಕೆ ಸಾಲದೆ ತುಂಬಾ ಕಷ್ಟಪಡುತ್ತಿದ್ದಾರೆ ಇವರಿಗೆ ಸಂಬಳಗಳನ್ನು ಏರ್ಪಾಡು ಮಾಡಿ ಈಗ್ಯೆ ಸುಮಾರು ೩೦ ವರುಷಗಳಾಗಿರಬಹುದು ಆಗ ಈಗ್ಯೂ ಪದಾರ್ಥಗಳ ಧಾರಣೆಗಳಲ್ಲಿ ಅದಗದ ನ್ಯಾಯವಾಗಿ ಇಂಥಾ ದುರ್ಭಿಕ್ಷ ಕಾಲದಲ್ಲಿಯೂ ಇವರಿಗೆ ಸಂಬಳಗಳನ್ನು ಜಾಸ್ತಿ ಮಾಡದೆ ಇದ್ದರೆ ಇವರ ಪರಿಣಾಮ ಹ್ಯಾಗೆ? ಇವರಿಗೆ ಬರತಕ್ಕ ಅಲ್ಪ ಸಂಬಳಗಳು ಇವರ ಸಂಸಾರವನ್ನು ಒಂದು ತಿಂಗಳಲ್ಲಿ ೧೫ ದಿನಗಳಾದರೂ ಸರಿಯಾಗಿ ಪೋಷಿಸುವುದಕ್ಕೆ ಸಾಲದಲ್ಲಾ! ಔದಾರ್ಯಹೃದಯರಾದ ಶ್ರೀಮನ್ ಮಹಾರಾಜರವರಿಗೂ ಅವರ ಸರ್ಕಾರಕ್ಕೂ ಎಲ್ಲಾ ಇಲಾಖೆಗಳ ಮೇಲೆ ಇರುವ ದಯೆಯು ಇವರ ಮೇಲೆ ಏತಕ್ಕೆ ಬಂಲಿಲ್ಲ! ಇದು ಇವರ ಪೂರ್ವಾರ್ಜಿತ ಕರ್ಮ ಫಲವೋ, ಅಥವಾ ಈ ಸೀಮೆಯಲ್ಲಿ ವಿದ್ಯಾಭ್ಯಾಸದ ಇಲಾಖೆಯು ಸರಿಯಾದ ಸ್ಥಿತಿಯಲ್ಲಿ ಇಲ್ಲವೋ, ಅಥವಾ ಈ ಬಡಮಾಸ್ಟರುಗಳು ಶ್ರೀಮನ್ ಮಹಾರಾಜರವರ ಪ್ರಜೆಗಳಲ್ಲವೋ ದಿವಾನ್ ಸಾಹೇಬರವರು ಕಳೆದ ೩ ವರುಷಗಳ ಸಮಯಾತ್ರಿ ಕಾಲದ ರಿಪೋರ್ಟುಗಳಲ್ಲಿಯೂ ಬಡಮಾಸ್ಟರುಗಳಿಗೆ ಪ್ರಮೋಷನ್ ಕೊಡಬೇಕೆಂತಲೂ ಅದಕ್ಕಾಗಿಯೇ ವಿದ್ಯಾರ್ಥಿಗಳಿಗೆ ಸ್ಕೂಲ್ ಫೀಯನ್ನು ಹೆಚ್ಚಿಸಿರುವದಾಗಿಯೂ ಉಪನ್ಯಾಸ ಮಾಡಿದರು.

ಬಡ ಮಾಸ್ಟರುಗಳ ದುರಾದೃಷ್ಟವು ಈ ರೀತಿಯಿಂದಾದರೂ ದೂರವಾಗಲೆಂದು ಈ ಸೀಮೆಯ ಪ್ರಜೆಗಳೆಲ್ಲರೂ ಏಕಕಂಠ್ಯರಾಗಿ ಜಾಸ್ತಿ ಸ್ಕೂಲ್ ಫೀಗಳನ್ನು ಕೊಡುವುದಕ್ಕೆ ಸಂತೋಷದಿಂದ ಅಂಗೀಕರಿಸಿದರು ಈ ರೀತಿ ಸ್ಕೂಲ್ ಫೀ ದರ ಜಾಸ್ತಿಯಾಗಿ ೨ ವರುಷಕ್ಕೆ ಬಂದಾಗ್ಯೂ ಈ ಬಡ ಮಾಸ್ಟರುಗಳ ದುರದೃಷ್ಟವು ದೂರವಾಗದೆ ಹೋಯಿತು ಇವರಿಗೆ ಸಹಾಯ ಮಾಡಲು ಅಂಗೀಕರಿಸಿದ ನಮ್ಮಗಳ ಕೈಯಿಂದ ಮಾತ್ರ ೧ ಕ್ಕೆ ೨ ರಷ್ಟು ಮೊಬಲಗು ಜಾಸ್ತಿಯಾಗಿ ಬಡ ಮಾಸ್ಟರುಗಳ ದುರದೃಷ್ಟದ ಭಾಗವನ್ನು ಎಷ್ಟೆಂದು ಹೇಳಿದರೂ ಸ್ವಲ್ಪವೇ ಇದೆ

ಈಗ್ಯೆ ಕೆಲವು ತಿಂಗಳುಗಳ ಕೆಳಗೆ ಸೀಮೆಯಲ್ಲಿ 'ವಿದ್ಯಾಭ್ಯಾಸದ ಕಾನ್ಫರೆನ್ಸ್' ಎಂಬ ಸಭೆ ಸೇರಿ ಸದರಿ ಸಭೆಯವರು ಈ ಸೀಮೆಯಲ್ಲಿರಬೇಕಾದ ಬಡ ಮಾಸ್ಟರುಗಳ ಸಂಬಳವನ್ನು ವಿಸ್ತರಿಸಿ ಮಾಡಿ ಗವರ್ನಮೆಂಟಿನವರಿಗೆ ಬರೆದಿರುವಂತೆ ೧೯೦೫ನೇ ಮಾರ್ಚಿ ೨೨ನೇ ತಾರೀಖಿನ ಮದರಾಸ್ ಮೆಯಿಲ ನಲ್ಲಿ ಪ್ರಕಟವಾಗಿತ್ತು ಅದೇನಾಯಿತೋ ಗೊತ್ತೇ ಇಲ್ಲ ದಯಾಳುಗಳಾದ ಸರ್ಕಾರದವರೇ ಆಹಸ್ಯಹನಿ ಕಾಲಕ್ಷೇಪಕ್ಕೂ ಮಾರ್ಗವಿಲ್ಲದೆ ತುಂಬಾ ಕಷ್ಟಪಟ್ಟು ಕೆಲಸ ಮಾಡುತ್ತಿರುವ ಈ ಬಡ ಮಾಸ್ಟರುಗಳಲ್ಲಿ ದಯೆಯಿಟ್ಟು ಇವರಿಗೆ ಸಂಭಾರ ಪ್ರೋತ್ಸಾಹವನ್ನಾದರೂ ಕೊಟ್ಟು ಇವರನ್ನು ಕಾಪಾಡಬೇಕೆಂದು ಅತ್ಯಂತ ವಿನಯದಿಂದ ಬೇಡುವ

ಬಡ ಮಾಸ್ಟರುಗಳ ಅಭಿಮಾನಿ

ತಾಲ್ಲೋಕು ವರ್ತಮಾನಗಳು.

ಶ್ರಿಂಗೇರಿ.—ಈಗ್ಯೆ ಎರಡು ವಾರಗಳ ಹಿಂದೆ ಶ್ರಿಂಗೇರಿಗೆ ಶ್ರೀ ಶಿವಗಂಗೆ ಮಠದ ಸ್ವಾಮಿಗಳವರ ಸಮಾರಿಯು ದಯಮಾಡಿಸಿತು. ಅವರನ್ನು ಇಲ್ಲಿಯ ಪಂಡಿತರು ಅಮಲ್ದಾರ್ರವರೇ ಮುಂತಾದವರು ಬಹಳ ಮರ್ಯಾದೆಯಿಂದ ಎದುರುಗೊಂಡು ಕರೆದುಕೊಂಡು ಬಂದರು ಶ್ರೀ ಸ್ವಾಮಿಗಳವರು ನಾಲ್ಕಾರು ದಿವಸಗಳು ಇಲ್ಲಿಯೇ ಇದ್ದು ಇಲ್ಲಿಯ ಎಲ್ಲಾ ಉದ್ಯೋಗಸ್ಥರು ಮತ್ತು ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳು ಮುಂತಾದವರಿಗೆ ಉಚಿತವಾದ ಉಡುಗೆರೆ ಮುಂತಾದ್ದನ್ನು ಕೊಟ್ಟು ವಾಪಸು ದಯಮಾಡಿಸಿದರು —ಈ ಮಠದ ಒಂದು ಗಂಡಾನೆಗೆ ಹನ್ನೆರಡು ದಿನಗಳ ಮುಂಚೆ ಹುಚ್ಚುಹಿಡಿದು, ಈ ಆನೆಯು ಮಾವುತನ ತಂದೆಯನ್ನು ಕೊಂದುಹಾಕಿ ಬಹಳ ಗಲಾಟೆಮಾಡಿತು ಇದನ್ನು ಬಹಳ ಕಷ್ಟದಿಂದ ಹಿಡಿದಿರುತ್ತಾರೆ ಇದಕ್ಕೆ ಇನ್ನೂ ಹುಚ್ಚುಬಿಟ್ಟಿಲ್ಲ —ಇಲ್ಲಿಯ ಆಕಸ್ಮಿಕವಾದ ಪ್ಲೇಗಿನಿಂದ ಊರು ಬಿಟ್ಟುಹೋದವರಲ್ಲಿ ಕೆಲವರು ಊರಿಗೆ ಬಂದಿರುತ್ತಾರೆ ಗಾಳಿ ಜಾಸ್ತಿಯಾಗಿ ಮಳೆ ಬರುವುದು ಪ್ರಾರಂಭವಾಗಿರುತ್ತದೆ ಇಲ್ಲಿಯ ಪೋಸ್ಟಾಫೀಸ್ ಪ್ಲೇಗ್ ಕಾರಣದಿಂದ ಸಿಡಿ ಟೈಲ್ ಗುಡ್ಡದಲ್ಲಿದ್ದದ್ದು ಪುನಃ ಟೌನಿಗೆ ಬರುವುದೆಂದು ಕೇಳಿ ಎಲ್ಲರೂ ಸಂತೋಷವಾಗಿರುತ್ತಾರೆ

ತರೀಕೆರೆ.—ಕಳೆದವಾರ ಇಲ್ಲಿ ಮಳೆ ಚನ್ನಾಗಿ ಬಂದದ್ದರಿಂದ ಬಿಸಿಲಿನ ತಾಪವು ಕಮ್ಮಿಯಾಗುತ್ತಾ ಬರುತ್ತಲಿದೆ ಆದರೆ ಧಾನ್ಯವಾಸಿಗಳು ಇನ್ನೂ ಇಳಿತರವಾಗಲಿಲ್ಲ —ಈಗ್ಯೆ ಎರಡುವಾರಗಳ ಕೆಳಗೆ ೧೦ ವರುಷದ ಒಬ್ಬ ಮುಸಲ್ಮಾನರ ಹುಡುಗನು ಇಲ್ಲಿಗೆ ೧ ಫರ್ಲಾಂಗ್ ದೂರದಲ್ಲಿರುವ ಒಂದು ಭಾವಿಗೆ ನೀರು ಸೇದುವದಕ್ಕೆ ಹೋದನು. ಹುಡುಗನು ನೀರು ಸೇದುತ್ತಿರುವಾಗ ಹಗ್ಗ ಕಾಲಿಗೆ ಸುತ್ತಿಕೊಂಡದ್ದರಿಂದ ನೀರಿನೊಳಗೆ ಬಿದ್ದನು ಅಷ್ಟರಲ್ಲಿಯೇ ಅಲ್ಲಿರುವ ಒಬ್ಬ ಸವಾರರು ಅದನ್ನು ತಿಳಿದು ಆ ಹುಡುಗನನ್ನು ಮೇಲಕ್ಕೆ ಎತ್ತಿ ಹಾಕುವ ಹಾಗೆ ಮತ್ತೊಬ್ಬನನ್ನು ನೀರಿನಲ್ಲಿ ಇಳಿಸಿದರು ಹುಡುಗನು ಮೇಲಕ್ಕೆ ಬಂದ ಮೇಲೆ ಇವನು ಬಾಯಿಬಿಟ್ಟುಕೊಂಡದ್ದರಿಂದ ಪ್ರಾಣವಿದೆ ಎಂದು ತಿಳಿದು, ಡಾಕ್ಟರವರನ್ನು ಕರೆದುಕೊಂಡು ಬಂದರು ಡಾಕ್ಟರು ಹುಡುಗನಿಗಾಗಿ ಬಹಳ ಪ್ರಯಾಸಪಟ್ಟಾಗ್ಯೂ ಬದುಕದೆ ಸತ್ತುಹೋದನು. ಇಲ್ಲಿಗೆ ಹೊಸದಾಗಿ ಬಂದಿರುವ ಆಸ್ಪತ್ರೆ ಅಸಿಸ್ಟೆಂಟ್ ಮೇ ಗುರುರಾಯರು ತಾವು ಬಂದಾರಭ್ಯದಿಂದ ರೋಗಿಗಳನ್ನು ತಾವೇ ಸ್ವತಃ ನೋಡುತ್ತಾ ಜನರಿಗೆ ಒಳ್ಳೇ ಔಷಧಿಗಳನ್ನು ಕೊಟ್ಟು ಚಿಕಿತ್ಸೆಯನ್ನು ಮಾಡುತ್ತಾ ಬಂದಿದಾರೆ.

ನೆಲಮಂಗಲ.—ನೆಲಮಂಗಲಕ್ಕೆ ಈಗ ಹೊಸದಾಗಿ ಬಂದಿರುವ ತಾಲ್ಲೂಕು ಅಮಲ್ದಾರ್ ಸುಬ್ರಾಯಲು ನಾಯ್ಡು ಯವರು ಸರ್ಕಾರದ ಕೆಲಸಗಳಲ್ಲಿ ತುಂಬಾ ಶಕ್ತಿವಂತರಾಗಿಯೂ ಸರ್ಕಾರ

...ಕಾರರಿಗೆ ತೊಂದರೆ ಇಲ್ಲದಂತೆಯೂ ಪ್ರಜೆಗಳ ಅಹವಾಲುಗಳನ್ನು ಶ್ರೀಮಚ್ಚಿತ್ತನೆಯನ್ನು ಚನ್ನಾಗಿ ವಿಚಾರಿಸುವವರಾಗಿಯೂ ಇರುವದರಿಂದ ಪ್ರಜೆಗಳೆಲ್ಲರೂ ಸಂತೋಷಪಡುತ್ತಾರೆ. ಅಲ್ಲದೆ ಈಗ ಈ ಊರಿಗೆ ಬಂದಿರುವ ಹರಿಕಥೆ ದಾಸರಲ್ಲಿ ಶ್ರೀನಿವಾಸ ಕಲ್ಯಾಣವೆಂಬ ಸತ್ಕಥೆಯನ್ನು ಪ್ರಜೆಗಳ ಅನುಮತಿಯಂತೆ ಪ್ರಾರಂಭಿಸಿ ಅದಕ್ಕೆ ಆಗಬೇಕಾದ ಸಲಕರಣೆಯನ್ನೆಲ್ಲಾ ಮಾಡುತ್ತಿದ್ದಾರೆ ಈ ಅಮಲ್ದಾರರು ದೇವಸ್ಥಾನ ಛತ್ರ ಮಠ ಇವುಗಳನ್ನು ವೃದ್ಧಿಗೆ ತರಬೇಕೆಂಬ ಅಭಿಲಾಷೆಯುಳ್ಳವರಾಗಿರುವದರಿಂದ ಇನ್ನು ಕೆಲವು ವರುಷಗಳಲ್ಲೇ ಸರ್ಕಾರದವರು ಇಟ್ಟಲ್ಲಿ ಈ ಊರು ಉತ್ತಮ ಸ್ಥಿತಿಗೆ ಬರುವದರಲ್ಲಿ ಸಂಶಯವಿಲ್ಲ —ನೆಲಮಂಗಲದಲ್ಲಿರುವ ಟಾಪು ಇನ್ಸ್‌ಪೆಕ್ಟರ್ ಕೃಷ್ಣರಾಯರು ಕಳೆದ ವಾರ ಕಂಟೋನ್ಮೆಂಟ್ ಷಾಪಿನಲ್ಲಿ ...ಡಾಪ್ ಕಳವು ಮಾಡಿದ್ದರಿಂದ ಅಲ್ಲಿನ ಮ್ಯಾಜಿಸ್ಟ್ರೇಟರು ಇವನಿಗೆ ಮೂರು ತಿಂಗಳ ಸಜಾ ವಿಧಿಸಿದರು ೨೫ ರೂಪಾಯಿ ನೌಕರಿಯುಳ್ಳ ಈ ಮನುಷ್ಯನಿಗೆ ಇಂಥಾ ಬುದ್ಧಿ ಹುಟ್ಟಿದ್ದಕ್ಕಾಗಿ ತುಂಬಾ ವ್ಯಸನಪಡಬೇಕಾಗಿದೆ ಈ ಕೃಷ್ಣರಾಯನು ತನ್ನ ಕೈಕೆಳಗಿನ ಜವಾನರು ರಜಾ ತೆಕ್ಕೊಂಡಾಗ ಬದ್ಲಿ ಬಂದ ಜವಾನರಿಗೆ ಸರಿಯಾಗಿ ಸಂಬಳ ಕೊಡದೆ ತಾನೇ ಅಪಹರಿಸುವದಕ್ಕೆ ಪ್ರಯತ್ನಪಡುತ್ತಿದ್ದನಾಗೂ ಆದಾಗ್ಯೂ ಸೂಪರ್‌ವೈಜರು ಬುದ್ಧಾಗಿ ಹಲವು ಕೊಡುತ್ತಿದ್ದರಿಂದ ಇವರಿಗೆ ಯತ್ನ ವಿಶ್ರಾಂತಿ ಇರಲಿಲ್ಲವೆಂತಲೂ ಕೇಳುತ್ತೇನೆ

ಹಾಸನ —ಮಳೆಯು ಸುತರಾಂ ಇಲ್ಲವಾಯಿತು ವಾಯು ...ಮ ವ್ಯತ್ಯಾಸದಿಂದ ಅಲ್ಲಲ್ಲಿ ಕೆಮ್ಮಲು ಮೊದಲಾದ ಶೀತವ್ಯಾಧಿಗಳು ತಲೆದೋರಿರುತ್ತವೆ ಕಳೆದ ೧೩ ನೇ ತಾರೀಖು ಮಂಗಳವಾರ ಇಲ್ಲಿನ ಸನ್ಮಾರ್ಗಪ್ರವರ್ತಕ ಸಭೆಯವರು ಶ್ರೀಕೇಶವದೇವರ ದೇವಸ್ಥಾನದಲ್ಲಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಾಗಿ ಸಭೆ ಸೇರಿದ್ದರು ಅನೇಕ ಸರ್ಕಾರೀ ಉದ್ಯೋಗಸ್ಥರೂ, ಪ್ಲೀಡರುಗಳೂ, ವಿದ್ವಾಂಸರೂ, ಇತರ ವೈದಿಕ ಲೌಕಿಕ ಮಹನೀಯರೂ ಸಹ ಸಭೆಯನ್ನು ಅಲಂಕರಿಸಿದ್ದರು ಪಂಡಿತ ರಘುನಾಥಾಚಾರ್ಯರವರು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾರೂಪವಾಗಿ ಕೆಲವು ಪದ್ಯಗಳನ್ನು ಮಾಡಿದ್ದರು ದೇವರಿಗೆ ಮಂಗಳಾರತಿ ಮುಂತಾದವು ಆದ ಮೇಲೆ ವೈದಿಕರು ವೇದಸೂಕ್ತಗಳಿಂದಲೂ, ಲೌಕಿಕರು ಉಪನ್ಯಾಸಪೂರ್ವಕವಾಗಿಯೂ ಶ್ರೀಮನ್ಮಹಾರಾಜರವರಿಗೆ ಶ್ರೇಯಃಪ್ರಾರ್ಥನೆಯನ್ನು ಬಯಸಿದರು. ಕಡೆಗೆ ಇಲ್ಲಿ ನಡೆದ ಅಂಶವನ್ನೆಲ್ಲಾ ನಮೂದಿಸಿ ಸನ್ಮಾರ್ಗಪ್ರವರ್ತಕಸಂಘದ ಪಂಡಿತನಿಂದ ಶ್ರೀಮನ್ಮಹಾರಾಜರವರಿಗೆ ಟೆಲಿಗ್ರಾಫ್ ಕೊಟ್ಟರು —ಮುನಿಸಿಪಾಲಿಟಿಯ ಅಧಿಕಾರವು ಅಸಿಸ್ಟೆಂಟ್ ಮಿ॥ ನಾರಸಿಂಗಾಚಾರ್ಯರಿಗೆ ಬಂದ ಮೇಲೆ ರಾತ್ರಿಯ ಕಾಲದೊಳಗೆ ಅಲ್ಲಲ್ಲಿ ಲಾಂದ್ರಗಳು ಕಿಲಿಕಿಲಿಗುಟ್ಟುತ್ತಿವೆ ಗ್ರಾಮಸ್ಥರ ಮುಂತಾದ ...ಗಳು ಅಲ್ಲಲ್ಲಿ ಸಲೀಸಾಗಿ ಸಾಗಲು ಪ್ರಾರಂಭವಾಗಿದೆ ...ದರೂ ಸಂದುಗೊಂದುಗಳಿಗೆ ಅಂತಹ ಸಂತೋಷಸ್ಥಿತಿಯು ಬಂದಿಲ್ಲ ಮುನಿಸಿಪಾಲಿಟಿಯ ವಿಷಯದಲ್ಲಿ ಮೇಲ್ಪಟ್ಟ ಅಧಿಕಾರಿಗಳ ದೃಷ್ಟಿಯು ಕ್ರಮೇಣ ಬೀಳುತ್ತಾ ಬಂದರೆ ಈ ಹಾಸನದ ಭಾಗ್ಯಕ್ಕೆ ಎಣೆಯೇ ಇರುವದಿಲ್ಲ —ಅಮೇರಿಕದ ಕಿಂಗ್ ಡ್ರಾಮಾಟಿಕ್ ಕಂಪನಿಯವರು ಇಲ್ಲಿನ ಹೈಸ್ಕೂಲ್ ಕಟ್ಟಡದಲ್ಲಿ ತಮ್ಮ ವಿದ್ಯಾ ಕೌಶಲ್ಯವನ್ನು ಬಹಳ ಚನ್ನಾಗಿ ಪ್ರಕಟಪಡಿಸಿದರು ಇದಕ್ಕೆ ಮೊದಲೇ ಅರಸೀಕೆರೆ ನಾಟಕದ ಕಂಪನಿಯವರು ಈ ಊರೊಳಗೆ ಬೀಡು ಹಾಕಿಕೊಂಡು ನಾಟಕಗಳನ್ನು ಆಡಿದರು ಅನೇಕರು ಇಲ್ಲಿಗೆ ದುಡ್ಡುಕೊಟ್ಟು ಅನಾರೋಗ್ಯವನ್ನು ಕೊಂಡುಕೊಂಡರು —ತಾ॥ ೧ ನೇ ಭಾನುವಾರ ವಿದ್ಯಾಭ್ಯಾಸದ ಇಲಾಖಾ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಮಿ। ವೆಂಕಟರಾಮಿನಾಯುಡುರವರು ಇಲ್ಲಿಗೆ ಬಂದು ಬೇಲೂರಿಗೆ ದಯಮಾಡಿಸಿದರು ಪುನಃ ಈ ಊರು ಸ್ಕೂಲ್‌ಗಳ ಇನ್ಸ್‌ಪೆಕ್ಷನ್‌ಗಾಗಿ ಈ ತಿಂಗಳು ೨೦ ಕ್ಕೆ ದಯಮಾಡಿಸುತ್ತಾರೆ.

ಬೇಲೂರು —ಇಲ್ಲಿ ಇದುವರೆಗಿದ್ದ ಹಳೇ ದೊಡ್ಡಿಗೆ ಮೇಲ್ಛಾವಣಿಯೇ ಇಲ್ಲದ್ದನ್ನು ನೋಡಿ ನಮ್ಮ ಅಮಲ್ದಾರರು ಹೊಸ ದೊಡ್ಡಿಯನ್ನು ಕಟ್ಟಿಸಿರುವರು ಅದಕ್ಕೆ ಕೊಂಚ ಭಾಗಕ್ಕೆ ಮಾತ್ರ ಛಾವಣಿಯನ್ನು ಇಡಿಸಿರುವರು ಆ ಕೆಲಸವು ಇನ್ನೂ ಪೂರ್ತಿಯಾಗಿಲ್ಲ ಈಗ ಮಳೆಕಾಲವಾದುದರಿಂದಲೂ ಇದು ಮಲೆನಾಡು ...ದರಿಂದಲೂ ಮೂಗು ಪ್ರಾಣಿಗಳ ಮೇಲೆ ಪೂರ್ಣ ವಿಶ್ವಾಸದಿಂದ ಹೊಸ ದೊಡ್ಡಿಯ ಕೆಲಸವನ್ನು ಬೇಗ ಪೂರ್ತಿಮಾಡಿಸಿ ಇದಕ್ಕಾಗಿ ಮೇಲೆ ಒಬ್ಬ ಪೌಂಡು ಕೀಪರನ್ನು ನಿಯಮಿಸಿದಲ್ಲಿ ದನಗಳು ...ಮನೆಯಲ್ಲಿದ್ದುದಕ್ಕಿಂತಲೂ ಸುಖವಾಗಿರುವವು ಈ ವಿಚಾರದಲ್ಲಿ ...ತ್ರ ವೈಸ್ ಪ್ರೆಸಿಡೆಂಟರು ಅಗತ್ಯವಾಗಿ ಗಮನಿಸ್ಯಾರೆಂದು ಹಾರೈಸುವೆನು.—ನಮ್ಮ ಆಸ್ಪತ್ರೆಯ ಡಾಕ್ಟರು ಮಿ॥ ನಾರಾಯಣರಾಯರು ಪ್ರತಿಯೊಬ್ಬ ಕಾಯಿಲೆಯವರ ಮನೆಗೂ ಹೋಗಿ ಅವರ್ಯಾದರ ...ಕಾಯಿಲೆಯವನ್ನು ನೋಡಿ ಕೊಂಚವೂ ಬಗುಪ್ಸೆ ಇಲ್ಲದೆ ಉಪಚರಿಸಿ ಒಳ್ಳೇ ಔಷಧಿಗಳನ್ನು ಕೊಡುತ್ತಿರುವರು ಇದು ಮಲೆನಾಡಾದುದರಿಂದ ಪ್ರತಿಯೊಂದು ತಾಲ್ಲೂಕು ಆಸ್ಪತ್ರೆಗೆ ಬರುವ ಕಾಯಿಲೆಯವರ ಸಂಖ್ಯೆಗಿಂತ ಇದರಲ್ಲಿ ಬಹಳ ಹೆಚ್ಚಾದುದರಿಂದ ಗೌರ್ನಮೆಂಟಿನವರು ಒಂದು ವರುಷಕ್ಕೆ ಒದಗಿಸುವ ಔಷಧಿಯು ಈ ತಾಲ್ಲೂಕಿನ ಪ್ರಜೆಗಳಿಗೆ ೮ ತಿಂಗಳಿಗಾಗಿ ಮಿಕ್ಕ ನಾಲ್ಕು ತಿಂಗಳು ಔಷಧವಿಲ್ಲದೇ ನರಳಬೇಕಾಗಿರುವದು. ಆದ್ದರಿಂದ ಗವರ್ನಮೆಂಟಿನವರು ಈ ಊರು ಬಡ ಪ್ರಜೆಗಳ ವಿಷಯವನ್ನು ತಮ್ಮ ...ರ್ಣ ಗಮನಕ್ಕೆ ತಂದುಕೊಂಡು ಈ ತಾಲ್ಲೂಕಿನ ವಿಷಯದಲ್ಲಿ ಕೊಂಚ ಹೆಚ್ಚು ಸಪ್ಲೈ ಮಾಡಬೇಕೆಂದು ಪ್ರಜೆಗಳೆಲ್ಲರೂ ಬೇಡಿಕೊಳ್ಳುವರು —ನಮ್ಮ ಖಾಯಂ ಅಮಲ್ದಾರರು ಎರಡು ತಿಂಗಳು ರಜಾದ ಮೇಲೆ ದಯಮಾಡಿರುವದರಿಂದ ಹುಣಸೂರ್ ಡಿಸ್ಟ್ರಿಕ್ಟ್ ಬೋರ್ಡ್ ಮುನ್ಷಿ ಮಿ॥ ಗೋಪಾಲಯ್ಯಂಗಾರ್ಯರು ಪ್ರತಿಯಾಗಿ ಬಂದು ...ಂಡಾಯುದ ಬಾಕಿ ವಿಷಯದಲ್ಲಿ ಬಹಳ ನೂತನ ವಜೆ ವಹಿಸಿ ಇದುವರೆಗೆ ಬಹಳ ಬಾಕಿ ವಸೂಲ್ ಮಾಡಿದ್ದಾಗಿ ತಿಳಿಯಬರುವದು.

ಅಲ್ಲದೆ ಊರಿನ ಪ್ರತಿಯೊಂದು ಭಾಗವನ್ನೂ ದೊಡ್ಡಿಯನ್ನೂ ನೋಡಿ, ಮುನಿಸಿಪಾಲಿಟಿಯನ್ನು ಅದರಲ್ಲಿ ಕೊರತೆಗಳನ್ನು ನಿವಾರಿಸಲು ಪ್ರಯತ್ನಿಸಿರುವರು ಮುನ್ಸಿಪ್ ಸೇರುತ್ತಿದ್ದ ತಾಲ್ಲೂಕು ಪದ್ಧತಿಯನ್ನು ತಪ್ಪಿಸಿ ಎಲ್ಲರೂ ೧೧ ಗಂಟೆಗೆ ಕ್ರಮವಾಗಿ ಕಛೇರಿಗೆ ಬಂದು ೬ ಗಂಟೆ ಒಳಗೆ ಕೆಲಸ ಪೂರೈಸಬೇಕೆಂದು ವಿಧಾಯಕ ಮಾಡಿರುವರು —ಈ ಊರು ಕೋಟೆಯವರಿಗೆ ಸ್ನಾನಕ್ಕೆ ವಿದ್ಯಾಸಮುದ್ರವೆಂಬ ಕೆರೆಯ ವಿನಹಾ ಬೇರೆ ಅನುಕೂಲವಿಲ್ಲ ಬಹು ಮಂದಿ ನೀರನ್ನು ಗಲೀಜು ಮಾಡುತ್ತಿರುವರು — ಈಗ ಸದರಿ ಕೆರೆ ಬೀದಿಯಲ್ಲಿಯೇ ಅಕ್ಕಿ ಸಾಹುಕಾರ್ ಕರಣ್ಣ ಶೆಟ್ಟಿಯ ಮನೆಯಲ್ಲಿ ಏಕಕಾಲದಲ್ಲಿ ೪—೫ ಇಲಿಗಳು ಬಿದ್ದು ಸತ್ತದ್ದಾಗಿ ತಿಳಿಯಬಂತು ಗವರ್ನಮೆಂಟಿನವರು ಸದರಿಯವರ ಮನೆಯನ್ನು ಚನ್ನಾಗಿ ಡೆಸಿಕೇಷನ್ ಮಾಡಿಸಿ, ಪೂರ್ವದಲ್ಲಿದ್ದಂತೆ ಸದರಿ ಕೆರೆಯ ಕಾವಲಿಗೆ ಒಬ್ಬ ಪೋಲೀಸಿನವನನ್ನು ನಿಯಮಿಸಿ ಮುನಿಸಿಪಾಲಿಟಿಯಲ್ಲಿರುವ ಕೆಲವು ದೋಷಗಳನ್ನು ನಿವಾರಣೆ ಮಾಡಬೇಕಾಗಿದೆ ಎಂದು ಕೋರುತ್ತೇನೆ

ತುಮಕೂರು —ಪ್ರತಿದಿನವೂ ವಿಪರೀತವಾಗಿ ಗಾಳಿ ಬೀಸುವದರಿಂದ ಮಳೆ ಅಭಾವವಾಗಿದೆ ರೈತರಾದರೋ ಹೊಲವನ್ನು ಹಸನು ಮಾಡುವದಕ್ಕೆ ಸಾಕಾದಷ್ಟು ಮಳೆಯಿಲ್ಲದಿರುವದರಿಂದ ಕಳವಳಪಡುತ್ತಿದ್ದಾರೆ ಧಾರಣೆವಾಸಿಗಳು ಉಗ್ರಕಾಲವಾದ್ದರಿಂದ ಎಲ್ಲಾ ಜಿನಸಿಗಳೂ ಪ್ರಿಯವಾಗಿವೆ ಸ್ವಾಮಿಯ ದಯದಿಂದ ರೋಗಾದ್ಯುಪದ್ರವಗಳ್ಯಾವವೂ ಇಲ್ಲ ಜನರು ವಿವಾಹಾದಿ ಶುಭಕಾರ್ಯಗಳಲ್ಲಿ ಸಂತೋಷವಾಗಿರುತ್ತಾರೆ —ಈ ತಿಂಗಳಲ್ಲಿ ಇಲ್ಲಿನ ಮ್ಯುನಿಸಿಪಲ್ ಲ್ಯಾಂಟರ್ನ್ ಕಂಟ್ರಾಕ್ಟು ಹರಾಜಾಗಿ ಮಾಮೂಲು ಕಂಟ್ರಾಕ್ಟುದಾರರಿಗೆ ಬೀಟು ನಿಂತಿತು ಗತಸಾಲಿಗೂ ಈಗ್ಯೂ ಸಾಧಾರಣವಾಗಿ ಲಾಂದ್ರ ಒಂದಕ್ಕೆ ನಾಲ್ಕು ಮತ್ತು ಕಮ್ಮಿಯೂ ಆಯಿತು ಇದರಿಂದ ಇಲ್ಲಿರುವ ೫೦ ಲಾಂದ್ರಗಳಿಗೂ ಹೆಚ್ಚು ಕಡಿಮೆ ವರ್ಷ ಒಂದಕ್ಕೆ ೧೫೦ ರೂಪಾಯಿ ಉಳಿತಾಯ ಆಯಿತು ಈ ದೊಡ್ಡ ಪಟ್ಟಣಕ್ಕೆ ಇಟ್ಟಿರತಕ್ಕ ೧೫೦ ಲಾಂದ್ರಗಳಲ್ಲಿ ಹೆಚ್ಚು ಭಾಗವು ಅಧಿಕಾರಿಗಳಿರುವ ಪ್ರದೇಶಗಳಲ್ಲಿ ಮಾಸಿಸುತ್ತವೆ ಇದು ಹ್ಯಾಗಾದರೂ ಇರಲಿ ಇನ್ನೂ ಇಲ್ಲಿನ ಅನೇಕ ಗಲ್ಲಿಗಳಿಗೆ ಲಾಂದ್ರಗಳ ಅವಶ್ಯಕತೆಯುಂಟು ಅಧಿಕಾರಿಗಳು ಈ ವಿಷಯದಲ್ಲಿ ನಿಗಾ ಕೊಡುವಂತೆ ಕೋರುತ್ತೇವೆ.—ನಮ್ಮ ಖಾಯಂ ಡಿ॥ ಕ॥ ಸಾಹೇಬರವರು ಖಾಯಿಲೆ ಸಬಬು ರಜಾ ತೆಗೆದುಕೊಂಡಿರುವದರಿಂದ ಕಡೂರು ಡಿಸ್ಟ್ರಿಕ್ಟ್ ಡಿ॥ ಕ॥ ಮಿ॥ ಎಂ ವೆಂಕಟರಾಯರು ದಯಮಾಡಿಸಿ ಛಾರ್ಜ ವಹಿಸಿಕೊಂಡಿರುತ್ತಾರೆ. ಈ ಮಹನೀಯರಾದರೂ ತಾವು ಇಲ್ಲಿರುವಷ್ಟು ಕಾಲದಲ್ಲಿ ಮುಳ್ಳಿಯುರುವ ಬಾಬುಗಳನ ವ್ಯವಸ್ಥೆ ಮಾಡಿಯಾರೆಂದು ನಿರೀಕ್ಷಿಸುತ್ತೇವೆ —ಈಗ್ಯೆ ಮೂರು ತಿಂಗಳಿಗೆ ಮುಂಚೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದ ತುಳಸಿರಾಮದಾಸ್ ಕಂಪನಿಯವರ ಒಡವೆಗಳು ನಂಬಿಕೆಗೆ ಅರ್ಹವಾದವುಗಳೆಂದು ತಿಳಿದು ಇಲ್ಲಿನ ಮಿಷನ್ ಸ್ಕೂಲ್ ಮಾಸ್ಟರೊಬ್ಬರು ಒಂದು ಜೊತೆ ಬೆಂಡೋಲೆಗೆ ಆರ್ಡರು ಕೊಟ್ಟರು. ಆರ್ಡರು ಕೊಟ್ಟ ಎರಡು ತಿಂಗಳ ಮೇಲೆ ಆರು ಕಾಲು ರೂಪಾಯಿಗೆ ಛಾಂಗಿ ಬರಲು ಒಡೆದು ನೋಡುವಾಗ ತಮ್ಮ ದೇಶದ ಸ್ತ್ರೀಯರ ಕಿವಿಗೆ ಸರಿಹೊಂದುವ ಮಾಟವಾಗಿರಲಿಲ್ಲವಾದ್ದರಿಂದಲೂ ಅಷ್ಟು ಶ್ರಾವ್ಯ ...ವಿಲ್ಲದಿರುವದರಿಂದಲೂ ಅವರ ನಿಬಂಧನೆಯಂತೆ ಹಿಂದಕ್ಕೆ ವಾಪಸು ಮಾಡಿದರು ಇವರು ಕಂಪನಿಯವರು ಅದನ್ನು ತೆಗೆದುಕೊಳ್ಳಲಿಲ್ಲ ಇದರಿಂದ ಆ ಮಾಸ್ಟರಿಗೆ ತುಂಬಾ ಲುಕ್ಸಾನಾಯಿತೆಂಬುವದಕ್ಕೆ ಸಂಶಯವಿಲ್ಲ ಮುಂದೆ ತಮ್ಮ ಅನೋಘವಾದ ಪತ್ರಿಕೆಯಲ್ಲಿ ಇಂಥಾ ಮೋಸಗಾರರ ಪ್ರಕಟನೆಗೆ ಅವಕಾಶ ಕೊಡದಂತೆ ಪ್ರಾರ್ಥಿಸುತ್ತೇನೆ [ಅದೇ ಪ್ರಕಟನೆಯನ್ನು ನಮ್ಮ ಪತ್ರಿಕೆಯಲ್ಲಿ ಮಾತ್ರ ಪ್ರಕಟಿಸಬೇಕೆಂದು ಆ ಕಂಪನಿಯವರು ನಮಗೆ ಬರೆದಿದ್ದರು. ನಮ್ಮ ಉದಾರತಾರಿಗೆ ಉಂಟಾಗಿರುವ ನಷ್ಟವನ್ನು ನಾನಾ ಕಡೆಗಳಿಂದ ಕೇಳಿ, ಅವರಿಗೆ ತಿಳಿಸಿದ್ದಲ್ಲದೆ ಅವರ ಪ್ರಕಟನೆಯನ್ನು ತಿರಸ್ಕರಿಸುತ್ತೇವೆ —ಎಡಿ.— ಕಳೆದ ವಾರ ಮಿ॥ ಕೆ ಕೃಷ್ಣಸ್ವಾಮಿಯಂಗಾರ್ಯರು ಇಲ್ಲಿಗೆ ಬಂದು ಇಲ್ಲಿನ ಮಿಷನ್ ಬಾಲಿಕಾ ಪಾಠಶಾಲೆಯಲ್ಲಿ ಬಾಲಕ ಬಾಲಿಕೆಯರಿಗೆ ವಸ್ತುಪಾಠಕ್ಕೆ ಅನುಕೂಲವಾದ ವಿಷಯಗಳನ್ನು ಮ್ಯಾಜಿಕ್ ಲ್ಯಾಂಟರ್ನ್ ಮೂಲಕ ಪ್ರದರ್ಶನ ಮಾಡಿ ವಿದ್ಯಾರ್ಥಿಗಳನ್ನು ತುಂಬಾ ಸಂತೋಷಗೊಳಿಸಿದರು

ಮೈಸೂರು —ಸುಮಾರು ೮ ವರುಷಗಳಿಂದಲೂ ಇಲ್ಲಿನ ವಸ್ತ್ರ...ರ್ ಕಂಪನಿಯಲ್ಲಿ ಮ್ಯಾನೇಜರಾಗಿದ್ದು ಕಾರ್ಖಾನೆಯನ್ನು ಬಹು ಮಟ್ಟಿಗೆ ಅಭಿವೃದ್ಧಿಗೆ ತಂದ ಮಿ॥ ವಿಲ್ಕಿನ್ಸನ್ ಸಾಹೇಬರು ತಮ್ಮ ಕೆಲಸವನ್ನು ತಮ್ಮ ಅಸಿಸ್ಟೆಂಟರಾಗಿ ಮಿ॥ ಟ್ವೀಟ್ಸ್ ಸಾಹೇಬರಿಗೆ ವಹಿಸಿ, ಇದೇ ತಿಂಗಳು ೧ ನೇ ತಾ ಈ ಊರನ್ನು ಬಿಟ್ಟು ತಮ್ಮ ಸೀಮೆಗೆ ಪ್ರಯಾಣ ಬೆಳಸಿದರು ಇವರು ಹೊರಡುವದಕ್ಕೆ ಮುಂಚೆ, ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮೇಸ್ತ್ರಿಗಳೂ ಫಿಟ್ಟರುಗಳೂ ಮೊದಲಾದವರೆಲ್ಲಾ ಕೇರಿವರಿಗೆ ಒಂದು ಅಡ್ರೆಸ್ಸನ್ನು ಓದಿ ಸುಮಾರು ೬೦ ರೂ ಬೆಲೆಯುಳ್ಳ ಒಂದು ವಿಚಿತ್ರವಾದ ಮಿನಾಯಿ ಕೆಲಸದ ಪಾತ್ರೆಯನ್ನು ಮದರಾಸಿನಿಂದ ತರಿಸಿ, ಬಹುಮಾನ ಮಾಡಿದರು ಮಿ॥ ವಿಲ್ಕಿನ್ಸನ್‌ರವರು ಇಲ್ಲಿರುವ ವಾಲಂಟಿಯರುಗಳನ್ನೆಲ್ಲಾ ಸೇರಿಸಿ, ಕಳೆದ ತಿಂಗಳು ೮ ನೇ ತಾ. ವಾಲಂಟಿಯರ್ ಕಡೇ ಷೂಟಿಂಗ್ ಮಾಡಿಸಿ ಮೊದಲನೆಯವರಿಗೆ ೧೦ ರೂ ಎರಡನೆಯವರಿಗೆ ೮ ರೂ, ಮೂರನೆಯವಗೆ ೬ ರೂ ಈ ಪ್ರಕಾರ ಇನಾಮುಗಳನ್ನು ಕೊಟ್ಟು, ಆ ದಿ ಅವರನ್ನೆಲ್ಲಾ ಬಹು ಸಂತೋಷಪಡಿಸಿದರು ಅವರನ್ನು ಕಳಕೊಂಡದ್ದಕ್ಕಾಗಿ ಕಂಪನಿಯಲ್ಲಿರುವ ಅನೇಕರಿಗೆ ತುಂಬಾ ವ್ಯಸನವಿದೆ —ನಮ್ಮ ತಾಲ್ಲೂಕು ಕಛೇರಿಯಲ್ಲಿ ಮಾರ್ಚ ೧ ನೇ ತಾ ಸ್ಟ್ಯಾಂಪ್ ಕಳುವಾದದ್ದಕ್ಕಾಗಿ ಕಛೇರಿ ನೌಕರರಿಗೆ ಮುಂಚೆ ತಿಳಿಯಲು ನಿರ್ಲಕ್ಷ್ಯ... ಮೇಲ್ಪಟ್ಟ ಅಧಿಕಾರಿಗಳು ಬಹು ನೌಕರರ ಗೈರ್ಹಾಜರಿಯನ್ನು ಪರಿಹರಿಸಿ, ಕಛೇರಿಯಲ್ಲಿ ಇಬ್ಬರನ್ನು ಕೆಲಸದಿಂದ ವಜಾ ಮಾಡಿದರು ಇನ್ನು ಮೇಲಾದರೂ ಯಾವ ಕುಚೂಕಿಲ್ಲದೆ, ಸರ್ಕಾರಿ ಕೆಲಸಗಳನ್ನು ನೆಮ್ಮದಿಯಾಗಿ ಮಾಡುತ್ತಾ, ಹೋದರೆ ಕಛೇರಿಯಲ್ಲಿರುವವರಿಗೆ ಮಾನವೂ ಮೇಲ್ಪಟ್ಟವರಿಗೆ ಸಂತೋಷವೂ ಉಂಟಾಗುವದು ಬರುವದರಲ್ಲಿ ಯಾವ ಸಂದೇಹವೂ ಇರಲಾರದು —ರಾತ್ರಿ ಕಾಲಗಳಲ್ಲಿ ಮ್ಯುನಿಸಿಪಲ್ ದೀಪಗಳ ಚಿಮ್ನಿಗಳನ್ನು ಯಾರೋ ಕದ್ದುಕೊಂಡು ಹೋಗುತ್ತಾರೆಂದು ವರ್ತಮಾನವಿದೆ. ಇಂಥಾ ಕೆಲಸ ಮಾಡುವ ಆಸಾಮಿಗಳನ್ನು ಹ್ಯಾಗಾದರೂ ಪತ್ತೆಮಾಡಿ, ಬಂದೋಬಸ್ತು ಮಾಡಿದರೆ ಒಳ್ಳೇದು. ರಾತ್ರಿ ಕಾಲಗಳಲ್ಲಿ ಪೋಲೀಸಿನವರು ಬೀದಿಗಳಲ್ಲಿ ಸೀಟಿ ಹಾಕಿಕೊಂಡು ಕೂಗಾಡಿಕೊಂಡು, ಬೀಟ್ ಕೊಡುವದಾದರೆ ಕಳ್ಳರು ಹ್ಯಾಗೆ ಪತ್ತೆಯಾದಾರು ?—ಅಪರಾಧಿಗಳು ಲಾಕಪ್ಪಿನಲ್ಲಿರುವಾಗ್ಯೆ ಪೋಲೀಸಿನವರು ಅವರಿಗೆ ಬಹು ಕ್ರೂರವಾದ ಹಿಂಸೆಗಳನ್ನು ಕೊಡುತ್ತಾರೆಂದು ವರ್ತಮಾನ ಇಂಥಾ ಹಿಂಸೆಗಳನ್ನು ಕೊಡುವದರಿಂದಲೋ ಏನೋ ಅಪರಾಧಿಗಳು ಪೋಲೀಸಿನಲ್ಲಿ ಒಂದು ವಿಧವಾದ ಕನ್ಫೆಷನ್ನು, ಅದಾಲತಿನಲ್ಲಿ ಒಂದು ವಿಧವಾದ ಕನ್ಫೆಷನ್ನು ಕೊಡುವದು ಬಹು ರೂಢಿಯಾಗಿರುವದು ಅನೇಕ ಸಾರಿ ಪೋಲೀಸಿನವರ ಹಿಂಸೆಯಿಂದ ಅಪರಾಧಿಗಳ ಬಾಯಿಯಲ್ಲಿ ಸುಳ್ಳೇ ಜವಾಬು ನಿಜ ಹೊರಡುವದು ಬಹು ಅಪರೂಪ ಹೀಗಿರುವಲ್ಲಿ ಪೋಲೀಸಿನವರು ತಮ್ಮ ಬುದ್ಧಿ ಚಮತ್ಕಾರಗಳನ್ನು ಹೆಚ್ಚಾಗಿ ಉಪಯೋಗಿಸಿ ನಿಜವಾದದ್ದನ್ನು ಕಂಡು ಹಿಡಿದರೆ ಉತ್ತಮ —ಮಳೆಯಿಲ್ಲದೆ ರಾಗಿಪೈರೆಲ್ಲಾ ಹೋಯಿತೆಂದು ರೈತರು ತುಂಬಾ ಚಿಂತೆಯಲ್ಲಿದ್ದರು ಆದರೆ ದೇವರ ಕೃಪೆಯಿಂದ ಈಗ ಮೂರುನಾಲ್ಕು ದಿನಗಳಿಂದಲೂ ಮಳೆ ಬಿಡದೆ ಸುರಿಯುತ್ತಾ ಇದೆ ಕಳೆದ ವಾರ ಅಸಿಸ್ಟೆಂಟ್ ಕಮಿಷನರಾದ ಮಿ॥ ದೇವರಾಜೇ ಅರಸಿನವರೂ ಎಕ್ಸೈಜ್ ಕಮಿಷನರಾದ ಮಿ॥ ಪೂರ್ಣಯ್ಯನವರೂ ಈ ತಾಲ್ಲೂಕಿಗೆ ಬಂದು, ಇನ್ಸ್‌ಪೆಕ್ಷನ್ ಮಾಡಿಕೊಂಡು ಹೋದರು.

ಕೊಪ್ಪ.—ಇಲ್ಲಿನ ಪೋಸ್ಟ್‌ಮಾಸ್ಟರ್ ಕೃಷ್ಣರಾಯರು ಟ್ರಾನ್ಸಿಟ್ ಕಂಪನಿ ಏಜಂಟ್ ನರಸಿಂಹಯ್ಯನವರ ಸಂಗಡ ಜಗಳ ಮಾಡಲು ನರಸಿಂಹಯ್ಯನವರು ಇಲ್ಲಿನ ಮೋಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿದ್ದರು ಇದನ್ನು ತಿಳಿದು ಕೃಷ್ಣರಾಯರು ಇಲ್ಲಿನ ದೊಡ್ಡ ಮನುಷ್ಯರ ಮಧ್ಯಸ್ಥಿಕೆಯಿಂದ ಖರ್ಚನ್ನು ಕೊಟ್ಟು ನರಸಿಂಹಯ್ಯನವರ ಸಂಗಡ ರಾಜಿಮಾಡಿಕೊಂಡರು —ಎರಡು ಮೂರು ತಿಂಗಳಿಂದಲೂ ಇಲ್ಲಿನ ಆಸ್ಪತ್ರೆಗೆ ಕಾಯಿಲೆ ಜನರು ಬಹಳ ಹೆಚ್ಚಾಗಿ ಬರುತ್ತಾರೆ ಇವರಲ್ಲಿ ಮುಕ್ಕಾಲು ಮೂರು ವೀಸಪಾಲು ಜನರು ಮಂಡಿಯ ಕೆಳಗೆ ಒಂದೇ ಜಾತಿಯ ಹುಣ್ಣುಳ್ಳವರಾಗಿರುತ್ತಾರೆ. ಈ ತರದ ಹುಣ್ಣನ್ನು ನಾನು ಎಲ್ಲಿಯೂ ನೋಡಲಿಲ್ಲ. ಇದು ನೋಟಕ್ಕೆ ಭಯಂಕರವಾಗಿಯೂ ಜಾಗ್ರತೆ ವಾಸಿಯಾಗದೆ ಇರುವಂಥಾದ್ದಾಗಿಯೂ ಇರುತ್ತದೆ ಇಂಥಾ ಜನರನ್ನು ಇಲ್ಲಿನ ಆಸ್ಪತ್ರೆ ಅ॥ ಮಿ॥ ವಿ ಸಿದ್ದಣ್ಣನವರು ಬಹು ಆದರಪೂರ್ವಕವಾಗಿ ಉತ್ತಮವಾದ ಔಷಧೋಪಚಾರಗಳಿಂದ ಗುಣಮಾಡುತ್ತಾ ಬರುವದು ಸ್ತೋತ್ರಾರ್ಹವಾಗಿರುತ್ತದೆ ಇದರಿಂದ ಅವರು ಇಲ್ಲಿನ ಬಹು ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದಾರೆ - ತೀರ್ಥಹಳ್ಳಿಯ ಕಡೆಯಿಂದ ಪರೀಕ್ಷೆ ಬಗ್ಗೆ ಒಂದು ಹೆಣವನ್ನು ಇಲ್ಲಿಗೆ ತಂದಿದ್ದರು ಮೃತನು ಒಬ್ಬಿಬ್ಬರ ಜೊತೆಯಲ್ಲಿ ಹಾರುವ ಬೆಕ್ಕಿನ ಬೇಟೆಗೆ ಹೋಗಿ ಮರದ ಪೊಟರೆಯಲ್ಲಿದ್ದ ಆ ಬೆಕ್ಕನ್ನು ಹೊಡೆಯಲು ಮರದ ಮೇಲೆ ಹತ್ತಿ ಬಾರ್ ಮಾಡಿದ್ದ ಬಂದೂಕನ್ನು ಕೆಳಗೆ ಹಿಡಿದಿದ್ದವನಿಂದ ತೆಗೆದುಕೊಳ್ಳುವಾಗ್ಯೆ ಅದರ ತೆರೆದಿದ್ದ ಕುದುರೆಯು ಒಂದು ರೆಂಬೆಗೆ ತಗಲಿ ಕೇಪು ಹಾಕಿದ್ದ ನೆಪ್ಪಲಿಗೆ ಬಡಿದ ಕೂಡ್ಲೆ ಬಂದೂಕು ಹಾರಿ ಚರೆಯು ಅವನ ಕುತ್ತಿಗೆಯಲ್ಲಿ ಪ್ರವೇಶಿಸಲು ತಕ್ಷಣ ಕೆಳಗೆ ಬಿದ್ದು ಪ್ರಾಣ ಬಿಟ್ಟನೆಂದು ಹೆಣದ ಜೊತೆಯಲ್ಲಿ ಬಂದಿದ್ದ ಅವನ ಕಡೆಯ ಜನರಿಂದ ತಿಳಿಯ ಬಂತು ಹೆಣವನ್ನು ಮಿ॥ ಸಿದ್ದಣ್ಣನವರು ಪರೀಕ್ಷೆಮಾಡಿದರು ನಾಲ್ಕೈದು ದಿನಗಳ ಹಿಂದೆಯೇ ಸತ್ತದ್ದಾದ್ದರಿಂದ ಬಹಳವಾಗಿ ಉಬ್ಬಿಕೊಂಡು ಲೆಕ್ಕವಿಲ್ಲದ ಹುಳುಗಳಿಂದ ತುಂಬಿ ಸಹಿಸಕೂಡದಷ್ಟು ದುರ್ವಾಸನೆಯಿಂದ ಭರಿತವಾಗಿತ್ತು — ಕೆಲವು ದಿನಗಳ ಹಿಂದೆ ಶೃಂಗೇರಿ ಮಠದಲ್ಲಿ ಕಟ್ಟಿದ್ದ ಆನೆಯನ್ನು ಅದರ ಮಾವುತನು ಬಿಚ್ಚಿ ಸೊಪ್ಪನ್ನು ತರುವದಕ್ಕೆ ಹೋಗುತ್ತಾ ತನ್ನ ಮನೆಯ ಮುಂದೆ ಆನೆಯಿಂದ ಇಳಿದು ಬಾಗಲಲ್ಲಿ ಕೂತಿದ್ದ ತನ್ನ ತಂದೆಗೆ —ಊಟ ಮಾಡಿ ಬರುವ ತನಕ ಇದನ್ನು ನೋಡಿಕೋ ಎಂದು ಹೇಳಿ ಒಳಗೆ ಹೋಗಲು ಆನೆಯು ಆ ಮುದುಕನನ್ನು ತನ್ನ ಸೊಂಡಲಿನಿಂದ ಎತ್ತಿ ಕೆಳಕ್ಕೆ ಹಾಕಿ ಕಾಲಿನಿಂದ ಉಜ್ಜಿ ಕೊಂದದ್ದಲ್ಲದೆ ಮಾವುತನ ಮನೆಯ ಹಾರನ್ನೂ ಇನ್ನೂ ಕೆಲವರ ಮನೆಯ ಸೂರುಗಳನ್ನೂ ಕಿತ್ತು ದಾರಿಯಲ್ಲಿ ಕಂಡವರನ್ನು ಅಟ್ಟಿಕೊಂಡು ಹೋಗುತ್ತಾ ಕಡೆಯಲ್ಲಿ ತನ್ನನ್ನು ಕಟ್ಟುತ್ತಿದ್ದ ಸ್ಥಳವನ್ನು ಸ್ಮರಿಸಿ ನಡೆಯುತ್ತಿರಲು ಮಠದ ಬಾಗಲಿನ ಹೊಸ್ತಿಲಿನ ಮೇಲೆ ಇದಕ್ಕೆ ತಿಳಿಯದ ಹಾಗೆ ಕೂತಿದ್ದ ಮಾವುತನು ಒಳಹೊಕ್ಕ ಆನೆಯ ಕುತ್ತಿಗೆಯ ಮೇಲೆ ಕೂತುಕೊಂಡು ತನ್ನ ಕೈಯಲ್ಲಿದ್ದ ಅಂಕುಶದಿಂದ ಚನ್ನಾಗಿ ಪ್ರಹರಿಸುತ್ತಾ ಅದರ ಸ್ಥಳದಲ್ಲಿ ಕಟ್ಟಿಹಾಕಿದ್ದಾಗಿ ಕೇಳುತ್ತೇನೆ ಆ ಆನೆಗೆ ಮದವೇರಿದ್ದರಿಂದ ಇಷ್ಟು ಅನಾಹುತಕ್ಕೆ ಕಾರಣವಾಯಿತೆಂದು ಅದನ್ನು ಮಾವುತನು ತಿಳಿದುಕೊಳ್ಳದೆ ಹೋದನು —ಎಗಳಿಲ್ಲ [?] ಆಸ್ಪತ್ರೆ ಅ॥ ಮಿ॥ ಜಿ ಚಿನ್ನಯ್ಯನವರು ಮೇ ತಿಂಗಳಿನ ಸಂಬಳವನ್ನು ತರುವದಕ್ಕೆ ತಮ್ಮ ಕಂಪೌಂಡರ್ ರಾಮಪ್ಪನನ್ನು ಕೊಪ್ಪದ ತಾಲ್ಲೂಕ್ ಕಛೇರಿಗೆ ಕಳುಹಿಸಿದ್ದರು ಅವನು ಕಛೇರಿಯಲ್ಲಿ ಅರವತ್ತು ಚಿಲ್ಲರೆ ರೂಪಾಯಿಗಳನ್ನು ತೆಗೆದುಕೊಂಡು ಇಲ್ಲಿನ ಕೆಳಗಿನ ಪೇಟೆಯ ಸಮೀಪದಲ್ಲಿರುವ ಪರಬಾನೆಯಲ್ಲಿ ಇಸ್ಪೀಟು ಆಡಿ ಕೆಲವು ಹಣವನ್ನು ಸೋತು ತಾನು ಪರಬಾನೆಯಲ್ಲಿ ರಾತ್ರಿ ಮಲಗಿರುವಾಗ್ಯೆ ತನ್ನ ಜೊತೆಯಲ್ಲಿ ಮಲಗಿದ್ದ ಇಬ್ಬರು ಮೂವರು ತನ್ನಲ್ಲಿದ್ದ ಹಣವನ್ನು ಅಪಹರಿಸಿದಾರೆಂದು ಇಲ್ಲಿನ ಪೋಲೀಸ್ ಸ್ಟೇಷನ್ನಲ್ಲಿ ರಿಪೋರ್ಟು ಮಾಡಿದನು ಇನ್ಸ್‌ಪೆಕ್ಟರು ಅವನು ಸೂಚಿಸಿದ ಆಸಾಮಿಗಳನ್ನು ಹಿಡಿದು ತರಿಸಿ ವಿಚಾರಿಸಲು—ಇವನೇ ತಮ್ಮನ್ನು ಆಡುವದಕ್ಕೆ ಪ್ರೇರಿಸಿದನು, ತಾವು ಇವನಲ್ಲಿ ಗೆದ್ದಿದ್ದ ಎಂಟು ಹತ್ತು ರೂಪಾಯಿಗಳನ್ನು ಕೊಡುತ್ತೇವೆಂದು ತಂದು ಒಪ್ಪಿಸಿರುವದಾಗಿ ಕೇಳುತ್ತೇನೆ ಕಂಪೌಂಡರನ್ನು ಲಾಕಪ್ಪಿನಲ್ಲಿಟ್ಟಿರುತ್ತಾರೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

26

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ.—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ವಿದಗಾಣ ಯೋಗಿಗಳು ಬರೆದರು. ಅಧ್ಯಾತ್ಮ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರ ವಾಗಿವೆ. ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ನಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪	"ರೋಮನರ ಚರಿತ್ರೆ"	ಕ್ರಯ ೦—೨—೦
೫.	"ಗ್ರೀಕರ ಚರಿತ್ರೆ"	,, ೦—೨—೦
೬.	"ಅನುಭವಾನಂದ" ,,	೦—೬—೦
೭	"ಗಣಿತ ಸಂಜೀವಿನಿ"	೧—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯	"ಚಾಮರಾಜೇಂದ್ರ ವಿಲಾಸ."	೦—೧೨—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೬—೦
೧೧	"೧೯೦೫ನೇ ವರುಷದ ಡೈರಿಗಳು"	

ಫ್ಲಾಪ್, ಪೆನ್ಸಿಲ್ ಸಹಿತ ೦—೩—೦; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪೋ,
ಮೈಸೂರು.

ಜ್ವರಹರಿ.

32



ಇದು ಸಾಧಾರಣ ಜ್ವರ, ಹಳೇಜ್ವರ, ಮೈರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರು ತ್ತಾರಾದ ಪ್ರಯುಕ್ತ ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ ೨—೧೨ ಆ., ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಜಠರಾಮೃತ ಪ್ರತಿಕಾರ.

Amrit Cursor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ ಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪನ್ನಿರಡು ಬುಡ್ಡಿ ಕರ್ಪೂರದವನ್ನು ನಾನೂ ನನ್ನ ಕಾಜೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ. — ಚಿನ್ನಯಾಚಾರ್ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಕೆಂಪೆ ಹೋಟೆಲ್ ಸ್ಟ್ರೀಟ್, ಮದರಾಸ್.

WESLEYAN MISSION PRESS, MYSORE
ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

18

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟ್ರೊಲ್ಲೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು

ದಿ ಯೆಂಡೋಮೆಂಟ್ ಇನ್ಸ್ಟಿಟ್ಯೂಷನ್ ಎಂಬ ಉಪವೃತ್ತಿ ಕಲ್ಪನಾಸಂಘ, ಚನ್ನಪಟ್ಟಣ.

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸ್ದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು. ಸಾಮಾನ್ಯ ಉಪವೃತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ. ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಶಾಶ್ವತವಾದ ಸಂಘವನ್ನು ಪ್ರಾರಂಭಿಸಿದೆ. ಈ ಸಂಘದಲ್ಲಿ ತಿಂಗಳು ಒಂದಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತ ರಾದ ನೇಮಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನ್ಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು. ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಮ್ಯಾನೇಜರಿಗೆ ಬರೆದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು ಇಂಥಾ ಏಜಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ.

ವಿಳಾಸ:—ಆರ್. ಎಸ್ ರಾಮಕಂ, ಮ್ಯಾನೇಜರ್.

ಕೇಸರಿಯಾ

ಈ ಔಷಧಿಯು ಮನೆ, ಛತ್ರಂ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಜೋಟಿರ್, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಡಾಕ್ಟರು ಜೇನರಾಶಿಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರ್ ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವ ಅರೆ ತಲೆನೋವು, ಸೊಂಟನೋವು. ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಹುಣ್ಣುಗಳು, ಕಜ್ಜಿಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿಪತ್ತು, ಚಪ್ಪರಿಸುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಟ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಟ್ಲು ಡಬ್ಬಿದಲ್ಲಿ ೧ ರೂ. ಡಬ್ಬಿಗಳಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ವಿದುತ್ತೆ.

****

ಹೋಮಿಯೋಪತೀ ಯಂಬ್ರೋಕೇಷನ್

ಈ ತೈಲವು ಹಳೆ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಪಿಯದ ಗುಣಗಳ ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಎನ್ನೆಯ ಗುಣಗಳುಳ್ಳ ಹೊಸ ಭಾಗವಿರುತ್ತೆ, ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಒಂದು ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ಏಜಂಟರೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮಿಯೋಸಿಯಾ ಕಂಪೆನಿ, ೨೩ ಸೆಕಂಡು ಬೀಚ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨—೬—1905 ರಿಂದ ೮—೬—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಹೋದವಾರ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	0	0	0	
ಮೈಸೂರು ,,	0	0	0	
ಬೆಂಗಳೂರು ಡಿಸ್ಟ್ರಿಕ್ಟ್	3	2	59	2
ಮೈಸೂರು ,,	7	4	61	[illegible]
ಕೋಲಾರ್ ,,	0	0	14	1
ಕೋಲಾರ್ ಚಿನ್ನದ ಗಣಿಗಳು	0	0	5	
ತುಮಕೂರು ಡಿಸ್ಟ್ರಿಕ್ಟ್	10	6	0	
ಹಾಸನ ,,	0	0	37	1
ಚಿತ್ರದುರ್ಗ ,,	0	0	5	
ಕಡೂರ್ ,,	0	0	18	1
ಶಿವಮೊಗ್ಗ ,,	1	1	35	
ಮೊತ್ತ.	21	13	229	

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರದ ಜ್ಯೇಷ್ಠ ಬಹುಳ ಪಂಚಮಿ ಗುರುವಾರದಿಂದ ಜ್ಯೇಷ್ಠ ಬಹುಳ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಜೂನ್

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ	ತೆ ...
22	ಗುರು	ಪಂಚಮಿ	8-40	ಧ	1 16	
23	ಶುಕ್ರ ‡	ಷಷ್ಟಿ	11-21	ಶ	9-9	[illegible]
24	ಶನಿವಾ	ಸಪ್ತಮಿ	15 5	ಪೂಭಾ	11-30	1
25	ರವಿವಾ *	ಅಷ್ಟಮಿ	19-30	ಉಭಾ	20-32	1
26	ಚಂದ್ರ	ನವಮಿ	21 25	ರೇ	27-28	1
27	ಕುಜ	ದಶಮಿ	25-35	ಶ್ವಿ	33 16	1
28	ಬುಧ	ಏಕಾದಶಿ	31 2	ಭ	39 28	1

‡ ಕರ್ಕಾಟಕಾಯನಗತೋರವಿ * ನವಮಿನಾತಿಥಿ, ತ್ರಿಲೋಗ ಗೌರೀ ವ್ರತ ... ರಾನ್ಯತಿಥಿ, ಲಿಂಗಾಂಬುಧೀಶ್ವರ ರಥ ... ಯೋಗ ... ಸರ್ವತ್ರಸಾಮ್ಯ ಏಕಾದಶಿ

ಪೇಟೆ ಧಾರಣೆ.

ವಿವರ.	ಮೈಸೂರು.	ಬೆಂಗಳೂರು
ಕಾಫೀ ಉತ್ತಮ ಪಲ್ಲ ೧ಕ್ಕೆ	೨೫ ೧೨—೮	೧೧—
ಬೆಣ್ಣೆ ... ಅವಲ್	೧೦—೪—೦	೧೧—
,, ಮಧ್ಯಮ	೯—೧೨—೦	೧೧—
ಜಾವಾರಿ ಅಕ್ಕಿ	೯—೮—೦	೧೧—
ಸಣ್ಣಕ್ಕಿ ಅವಲ್	೧೨—೦—೦	೧೨—
,, ದಾಯಂ	೧೧—೮—೦	೧೧—
ಹೊಗೆಸೊಪ್ಪು ಪಲ್ಲ ೧ಕ್ಕೆ	೧೦—೮—೦	೧೦
,, ಮಧ್ಯಮ	೧೧—೦—೦	೧೧—
ಹೈನ ರಾಗಿ ಪಲ್ಲ ೧ಕ್ಕೆ	೪ ೧೨—೦	೫—
ಕಾರ್ರಾಗಿ	೪—/—೦	೪—೧
ಜೋಳ	೪—೧೨—೦	೬—
ಹುರುಳಿ ಪಲ್ಲ ೧ಕ್ಕೆ	೮—೧೨—೦	೯—
ಬಿಳೀ ಅವರೆ	೬—೧೨—೦	೮—
ಹೆಸರು	೯ ೧೨—೦	೯—
ಉದ್ದು	೮ ೧೪ ೦	೯—
ಕಡಲೆ	೯ ೦—೦	೮—
ಎಳ್ಳು	೧೬ ೦—೦	೧೬
ಹುರುಳಿ	೮—೦ ೦	೮—
ಹರಳು ೧೨೭ ಸೇರಿಗೆ	೯—೮—೦	೯
ಸೀಗೇಕಾಯಿ ಮಣ ೧ಕ್ಕೆ	೨—೪—೦	೨—
ಮೆಣಸಿನಕಾಯಿ	೪—೮—೦	೬—
,, ಮಧ್ಯಮ	೬—೧೨—೦	೬—
ಬೆಲ್ಲ ದೊಡ್ಡ ಅಚ್ಚು	೭—೪—೦	೫—
ಒಳ್ಳೆಣ್ಣೆ ಮಣ ೧ಕ್ಕೆ	೪—೦ ೦	೪
ಹರಳೆಣ್ಣೆ ,,	೪—೦—೦	೪
ಕೊಬ್ಬರಿ ಹಲ್ಲ ೧ಕ್ಕೆ	೬—೦—೦	೯
ಉಪ್ಪು ,,	೮—೦—೦	೬—
ಹುಣಸೇ ಹಣ್ಣು	೧ ೪—೦	೬—
,, ಹಳೇದು	೦—೧೪—೦	೦—
ಹುಣ್ಣು	೧೨—೦—೦	೦೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫—೬—೦	೪
ತೆಂಗಿನಕಾಯಿ ೧೦೦ ಕ್ಕೆ	೫—೦—೦	೬—
ಅಡಕೇಕಾಯಿ ಮಣ ೧ಕ್ಕೆ	೧—೦—೦	೦—
ಅಂಬ್ಯಾಳಕಾಯಿ ಮಣ ೧ಕ್ಕೆ	೦—೧೪—೦	೦—
ಹತ್ತಿ (ಬೀಜ) ಕೆಂಪು	೧೫—೮—೦	೧೫
,, ,, ಬಿಳುಪು	೧೫—೧೦—೦	೧೫
,, ,, ಗಟ್ಟಿ ಹೊರೆ ೧ಕ್ಕೆ	೨೬—೦—೦	೨೬—
ಬೆಲ್ಲ ಗಟ್ಟಿ ಹೊರೆ ೧೦೦ ಕ್ಕೆ	೬೨—೦—೬	೬೬

Printed and Published by the Rev. H. SPENCER the Proprietor and Manager, Wesleyan Mission Mysore. 22/6/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ಪುಟ್ಟು — ಕ್ರಯ ೧ ಪುಟ್ಟು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೮೯೫ ನೇ ಇಸವಿ ಜೂನ್ ತಾರೀಖು ೨೭ ನೇ ಗುರುವಾರ. — ಸಂಚಿಕೆ ೫೯

ತತ್ವದರ್ಪಣ.

HINDU CATECHISM

7

ಹಿಂದೂ ಮತಾಭಿಮಾನಿಗಳಾದ ಆಬಾಲವೃದ್ಧರಿಗೂ ಅತ್ಯಂತ ಶ್ರೇಯಸ್ಕರವಾದ ಈ ಹೊಸ ಕನ್ನಡ ಪುಸ್ತಕದಲ್ಲಿ—೧ ಭಗವದ್ವಿಷಯನಿರೂಪಣ, ೨ ವೇದಗಳ ಪ್ರಾಮಾಣ್ಯಾತಿಶಯ, ೩ ವೇದಾರ್ಥಪ್ರಕಾಶಕರಾದ ಮಹಾತ್ಮರಲ್ಲಿ ಶ್ರೀಮಚ್ಛಂಕರರಾಮಾನುಜಮಧ್ವಾಚಾರ್ಯರುಗಳ ಚರಿತ್ರೆ, ೪ ಮತತ್ರಯದ ಪ್ರತ್ಯೇಕಸಿದ್ಧಾಂತವಿಚಾರ, ೫ ಭಗವತ್ಸಾಕ್ಷಾತ್ಕಾರೋಪಾಯನಿರೂಪಣ, ೬ ಸ್ವಾನುಭವಪ್ರಕರಣ, ೭ ಇಷ್ಟದೇವತಾಸ್ತುತಿ,—ಏಳು ಪ್ರಕರಣಗಳೊಡನೆ ಇಷ್ಟು ಪ್ರಕರಣಗಳು ಪ್ರಶ್ನೋತ್ತರರೀತಿ ಪ್ರಾಚೀನ ಗ್ರಂಥಗಳನ್ನನುಸರಿಸಿ ಚೆನ್ನಾಗಿ ವಿವರಿಸಲ್ಪಟ್ಟಿದೆ ಮತತ್ರಯ ಗುರುಗಳ ಚರಿತ್ರೆಯನ್ನೂ ಮತವಿಚಾರವನ್ನೂ ತಿಳಿಯಬೇಕೆಂದಾಶಿಸುವರಿಗೆ ಮುಖ್ಯವಾದುದು. ಮಠಪತಿಗಳಿಂದಲೂ ಅನೇಕ ವಿದ್ವಾಂಸರಿಂದಲೂ ಪ್ರೋತ್ಸಾಹಿಸಲ್ಪಟ್ಟಿದೆ ಸ್ವಲ್ಪ ಪ್ರತಿಗಳೇ ಉಳಿದಿವೆ. ಜಾಗ್ರತೆ ಬರೆಯಿರಿ. ಕ್ರಯ ನಾಲ್ಕೇ ಆಣೆ. ವಿಳಾಸ —ದಿ ಜನರಲ್ ಏಜನ್ಸಿ, ಲಕ್ಷ್ಮೀವಿಲಾಸ ರೋಡ್, ಮೈಸೂರು ಅಥವಾ,

ಮೆಸರ್ಸ್ ಕೆ. ನರಸಿಂಹಯ್ಯ ಅಂಡ್ ಕೋ. ಮೈಸೂರು.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

9

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು. ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ, ಬರಾಸ ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇಮಕ್ಕಳಿಂದ ಮುದುಕರವರೆಗೆ ಎಲ್ಲರೂ ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೨ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು. ಕ್ರಯ— ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾರ್ಜಿ ಚಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ —ದಿ ಮಹಮದ್ ಸಮಾದಾನಿ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ; ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು.—ಪುತ್ತೂರು ಪೋಲೀಸ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.— ಸಿ. ಕೃಷ್ಣಯ್ಯಂಗಾರ್, ಟೆಲಿಗ್ರಾಫ್ ಡಿಪಾರ್ಟ್‌ಮೆಂಟ್, ಕ್ವೈಲಾನ್.

Apply to:—P. SUBBAROY,

Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್,

ಪೋರ್ಟೊನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

WANTED WILD ANIMALS.

ಬೇಕಾಗಿದೆ. — ಬೇಕಾಗಿದೆ.

12

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ರವರು ಕೊಂಡುಕೊಳ್ಳುವರು.

Apply to—Mr Hughes, Mysore Zoo.

ಶ್ರೀ ತಾಂಬೂಲ.

30

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ. ತಾಂಬೂಲ

ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬಾಯಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ರೋಗಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರಿಗೆ ವಿ. ಪಿ. ಛಾರ್ಜಿ ೫ ಆಣೆ ನಮ್ಮ ವಿಳಾಸ.—

ದೇವನಹಳ್ಳಿ ಟವರ್, — ಎಂ. ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್. — ಮೆಡಿಕಲ್ ಪ್ರಾಕ್ಟಿಷನರ್.

ಎಲ್ಲರೂ ಮಾತೃಭಾಷಾಭಿಮಾನವಿಡಿರಿ.

"ವಿನೋದಿನಿ." ಎಂಬ ಸಚಿತ್ರ ಮಾಸಪತ್ರಿಕೆಯು.

'ಕ್ರಾವ್ನ್' ಸೈಜಿನಲ್ಲಿ ಹದಿನಾರು ಪುಟಗಳು ಬರುವ ಜುಲಾಯಿ ೧೮೯೫ ನೇ ಯಿಂದ ಹೊರಡುವದು. ವಿದ್ಯಾವರ್ಧನ, ಕಾವ್ಯಶಾಸ್ತ್ರ, ಕಲಾಕೌಶಲ ಮೊದಲಾದ ಅನೇಕ ಉಪಯುಕ್ತ ವಿಷಯಗಳು ಮನೋರಂಜಕವಾಗಿ ಬರೆಯಲ್ಪಡುವವು. ವಾರ್ಷಿಕ ಚಂದಾ ಅಂಚೆ ಹಾಸಲು ಸೇರಿ ಒಂದೂವರೆ ರೂಪಾಯಿ. ಈ ಪತ್ರಿಕೆಗೆ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಲೇಖಕರಿರುವರು. ಚಂದಾದಾರರಾಗಬಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು. ವಿಳಾಸ.—ಮ್ಯಾನೇಜರ್, ವಿನೋದಿನಿ ಆಫೀಸ್, ಕಾರವಾರ.

'ಭೂಗೋಳ' ಸಂಗ್ರಹ—ಐದನೇ ಮುದ್ರಣ.

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮಿ॥ ಟಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಜಾಸ್ತಿಯಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨½ ಯಂತೆ ಡಿಸ್ಕೌಂಟು ಕೊಡಲಾಗುವುದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿಪ್ರತಿಗಳನ್ನು ತರಿಸಬಯಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ:—೧ ಪ್ರತಿಗೆ ೬ ಆಣೆ, ಪೋಸ್ಟೇಜು ೧ ಆಣೆ.

ಕಥಾಸಂಗ್ರಹ—ಮೊದಲನೆ ಭಾಗ.

13

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ನುಡಿಯ ಕಥಾಸಂಗ್ರಹದಲ್ಲಿ ೧, ೨, ೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ವಾಕ್ಯಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವುದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ.—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ನೇರೆಯಾಗಿ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ. ೧—೧೪—೦
" " ೬ " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಹೊಸ ನೋಟ್ಸು.

ಮೆಕ್ಮಿಲನ್‌ರವರ ೫, ೬ನೆಯ ಕನ್ನಡ ಪುಸ್ತಕಗಳಿಗೆ ೬ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

11

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನಸಹಿತ ಈ ನೋಟ್ಸನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ. ೮ ಆಣೆ.

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೬
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೧—೬
೧೮೯೫ನೆ ವರ್ಷದ ಲೋವರ್ ಸೆಕೆಂಡರಿ ನೋಟ್ಸು	೦—೭—೦

ವಿಳಾಸ—ಎಂ. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

ಬೇಲೂರಿನಲ್ಲಿ ಮನೆ ಪರಿವರ್ತನೆ ನೋಟೀಸ್.

3

ಬೇಲೂರು ಪೇಟೆ ವಾಸಸ್ಥನಾದ ಮೈಸೂರು ಲಕ್ಷ್ಮಣ ಶೆಟ್ಟಿಯ ಮಗ ರಂಗಶೆಟ್ಟಿ ಉರುಫ್ ರಾಮಶೆಟ್ಟಿಯು ತಿಳಿಯಪಡಿಸುವುದೇನೆಂದರೆ —ನನ್ನ ತಾಯಿ ಪೆದ್ದ ಲಕ್ಷಮ್ಮನು ಗತಿಸಿದ ನಂತರ ನಮ್ಮ ಅಜ್ಜಿ ಅಕ್ಕಣ್ಣಮ್ಮನು ನನ್ನ ಪೋಷಣೆಯಲ್ಲಿದ್ದುಕೊಂಡು ಈಗ ಕೆಲವು ದುಷ್ಟರ ಪ್ರೇರೇಪಣೆಯಿಂದಲೂ ತನ್ನ ೮೦ ವರುಷದ ಅರುಳು ಮರುಳುನಿಂದಲೂ, ನನ್ನನ್ನು ತಿರಸ್ಕರಿಸಿ ಬೇರೆ ಇದ್ದುಕೊಂಡು ನನ್ನ ತಾಯಿ ಹೆಸರಿಗೆ ಖಾತೆ ಇದ್ದು ನಂತರ ನನ್ನ ಹೆಸರಿಗಾಗಿ ನನ್ನ ಅನುಭವದಲ್ಲಿರುವ ಹಂಚಿನ ಮನೆ ಮತ್ತು ಹಿತ್ತಲನ್ನು ಪರಭಾರೆ ಅಡವು, ಭೋಗ್ಯ, ಮುಂತಾದ್ದನ್ನು ಮಾಡಿ ಸಾಲಸೋಲ ತೆಗೆದುಕೊಳ್ಳುವದಾಗಿ ಪರೋಕ್ಷದಲ್ಲಿ ತಿಳಿಯಬಂದುದರಿಂದ, ಆಕೆಗೆ ಯಾರಾಗಲಿ ಸಾಲ ಕೊಟ್ಟು ಸದರಿ ಮನೆಯನ್ನು ಆಧಾರಮುಂತಾದ್ದಾಗಿ ದನ್ನು ಮಾಡಿಸಿಕೊಂಡರೂ ಆಕೆಯ ಸಾಲಕ್ಕೂ ಆ ಮನೆಗೂ ಸಂಬಂಧವಿರುವದಿಲ್ಲವೆಂಬಂಶವನ್ನೂ ಈ ಕಾರಣದಿಂದ ಆಕೆಗೆ ಸಾಲ ಕೊಡಕೂಡದೆಂಬಂಶವನ್ನೂ ತಿಳಿದುಕೊಂಡಿರತಕ್ಕದ್ದು.

೧೬—೬—೯೫, — ರಂಗಶೆಟ್ಟಿ ಉರುಫ್ ರಾಮಶೆಟ್ಟಿ,

ಬೇಲೂರು.

ಬಹಳ ಸುಲಭ! ಒಳ್ಳೇ ಸಮಯ!

೨

ಒಳ್ಳೇ ತರಹ ಟ್ವೀಲ್, ಪ್ಲ್ಯಾಟಿಂಗ್, ಫ್ಲ್ಯಾನಲ್ ವಗೈರೆ ಪಟ್ಟೆ ಗಳು ಸಸ್ತಾಗಿ ದೊರೆಯುತ್ತವೆ. ವಿ ಪಿ ಪಿ ಮೂಲಕ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ಸಹ ಸುಲಭ.

ಸಂಬಿಗೆ ಶಾಮರಾವ್, ಮರ್ಚೆಂಟ್—ಟೈಲರ್,

೫೦೩—೩ ಚಿಕ್ಕಪೇಟೆ, ಬೆಂಗಳೂರು ಸಿಟಿ

ಇದು ಕಳೆದ ಜನವರಿ ತಿಂಗಳ ಪ್ರೆಜೆಂಟೇಷನ್ ವಾಚು.

ಈ ಪತ್ರಿಕೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ಗೈಲ್ಸ್ ಗಾರ್ಡ ವಾಚು ಓಪನ್ ಫೇಸ್ ಕೀಲೆಸ್ ಪೇಟೆಂಟ್ ಲಿವರ್ ವಾಚು ಕಂಪೆನ್‌ಸೇಷನ್ ಬ್ಯಾಲನ್ಸ್ ಬಹು ಬಲಿಷ್ಟವಾದ ಗಡಿಯಾರ ೫ ವರುಷ



ಗ್ಯಾರಂಟೀ ಕ್ರಯ ರೂ. ೫-೪-೦ ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವವರೊಳಗಾಗಿ ಹಣವನ್ನು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರೆಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರೆಜೆಂಟೇಷನ್ ದೊರೆಯಲಾರದು. ಜಾಗ್ರತೆ ಹಣವನ್ನು ಕಳುಹಿಸಿ ಪ್ರೆಜೆಂಟೇಷನ್ ಸಾಮಾನುಗಳು, ಕ್ರಯವುಳ್ಳದ್ದು.

ಮೇಲಾದ ಜರ್ಮನ್ ಸಿಲ್ವರ್ ಚರಟುಗುಂಡಿ ೧ ಸೆಟ್ಟು	೦—೧೦—೦
ಚಿಕ್ಕ ಹಣದಪೆಟ್ಟಿಗೆ ಇಂಗ್ಲಿಷ್ ಮೇಡ್ (Cash Box)	೧—೦—೦
ಸುಗಂಧ ಪರಿಮಳ ತುಂಬಿದ ಡಬ್ಬಿ ೧	೦—೪—೦
ನಾಲಗುವರ್ಷ ದೀನ ಬಹಳ ಸುಂದರವಾದದ್ದು	೦—೬—೦
ಬಹಳ ಸೊಗಸಾದ ಗಡಿಯಾರದ ಸರಪಣಿ	೦—೪—೦

೧ ೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರಿಗೆ ೭ ರವ ಜುಲೈ ಆಖೈರ್ ವರಿಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡಲ್ಪಡುತ್ತೆ. ಜಾಗ್ರತೆ!! ಜಾಗ್ರತೆ!!

ಇತರರು ನಮ್ಮ ಕಂಪೆನಿಯ ನೋಟೀಸುಗಳಂತೆ ಮದರಾಸಿನಲ್ಲಿ ಟ್ರಿಂಟುಮಾಡಿ ಉಪಯೋಗವಿಲ್ಲದ ಸಾಮಾನುಗಳನ್ನೂ ಗಡಿಯಾರವನ್ನೂ ಕಳುಹಿಸುತ್ತಿರುವದರಿಂದ ಮೇಲ್ಕಂಡ ಕಂಪೆನಿಯ ಹೆಸರನ್ನು ಈ ಪಕ್ಕದಲ್ಲಿ ಇಟ್ಟುಕೊಳ್ಳಬೇಕೆಂದು ಕೋರುತ್ತೇವೆ.

ವಿಳಾಸ:—ಮ್ಯಾನೇಜರ್, ಫ್ಲಾರಿನ್ ವಾಚ್ ಕಂಪೆನಿ, ಪಾರ್ಕ್ ಟವನ್, ಮದರಾಸ್.

ಚೇಂಬರ್ಲೇನ್ ಯವರು ಹೊಟ್ಟೆನೋವೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧ.

೨೫



ಕೆಳಹೊಟ್ಟೆಯ ನೋವು ವಾಂತಿಭೇದಿ ಉಬ್ಬರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ—"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರಲ್ಲಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಮಾರುವ ಅಂಗಡಿಗಳಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವ್ವುಂಟ್ ರೋಡ್,
ಮದರಾಸ್.

ವೃತ್ತಾಂತ ಪತ್ರಿಕೆ.

:೦:

ಸಂ ೧೯೦೫ ನೇ ಇಸವಿ ಜೂನ್ ತಾ|| ೨೯ ನೇ ಗುರುವಾರ.

ಹಿಂದುಸ್ತಾನದ ಬಜೆಟ್ಟು.

ವಿಲಾಯತಿ ರಾಜ್ಯದ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಮನೆಯಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮೆ|| ಸಂಟ್ ಜಾನ್ ಬ್ರಾಡ್ರಿಕ್ ಯವರು ಹಿಂದುಸ್ತಾನದ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ಮೆಂಬರುಗಳಿಗೆ ಒಪ್ಪಿಸಿದರು. ಆಗ್ಗೆ ಅವರು ತಿಳಿಸಿದ ಮುಖ್ಯ ವಿಷಯಗಳ್ಯಾವವೆಂದರೆ—

ಹಿಂದುಸ್ತಾನದಲ್ಲಿ ಪ್ಲೇಗ್ ಉಪದ್ರವ ದೆಸೆಯಿಂದ ಅನೇಕವಾಗಿ ಪ್ರಾಣನಷ್ಟವಾಗುತ್ತಿರುವುದನ್ನೂ ಅದನ್ನು ತಡೆಯುವುದಕ್ಕೆ ಸರ್ಕಾರದವರು ಮಾಡುವ ಏರ್ಪಾಡುಗಳ ವಿಷಯದಲ್ಲಿ ಪ್ರಜೆಗಳು ಅಲಕ್ಷ್ಯದಿಂದ ಇರುವುದನ್ನೂ ನೋಡಿ ವಿಷಾದಪಡಬೇಕಾಗಿದೆ. ಹಿಮಾಚಲದ ತಪ್ಪಲಲ್ಲಿ ಭೂಕಂಪಕ್ಕೆ ಸಿಕ್ಕಿದ ಪ್ರಜೆಗಳ ಕಷ್ಟನಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಇಂಡಿಯಾ ಗವರ್ನಮೆಂಟಿನವರು ತುಂಬಾ ಸಾಹಸಪಡುತ್ತಿದ್ದಾರೆ. ಅದಕ್ಕಾಗಿ ಆಗಲೇ ತಕ್ಕಷ್ಟು ದ್ರವ್ಯ ಕೂಡಿಸಲಾಗಿದೆ; ಈ ದ್ರವ್ಯದಲ್ಲಿ ಅವರಿಗೆ ನಾನಾ ಬಗೆಯ ಸಹಾಯಗಳನ್ನು ಮಾಡುತ್ತಿದ್ದಾರೆ.

ಹಿಂದುಸ್ತಾನವು ಅಭಿವೃದ್ಧಿಹೊಂದುವುದಕ್ಕೆ ತಕ್ಕ ಸಹಾಯ ಸಂಪತ್ತುಗಳನ್ನು ಈಗ ಬಹು ಸಮರ್ಪಕವಾಗಿ ಮಾಡಿಸುತ್ತಾರೆ. ಇದರಿಂದ ಆ ರಾಷ್ಟ್ರವು ಇನ್ನು ಮುಂದೆ ತಡೆಯಿಲ್ಲದೆ ವೃದ್ಧಿಹೊಂದೀತೆನ್ನುವುದಕ್ಕೆ ಸಂಶಯವಿಲ್ಲ. ವಿಲಾಯತಿಯಿಂದ ಹಿಂದುಸ್ತಾನಕ್ಕೆ ರಫ್ತಾಗತಕ್ಕ ಸರಕುಗಳು ದಿನಕ್ರಮೇಣ ಹೆಚ್ಚುತ್ತಲೇ ಬಂದಿರುವವು. ಕಳೆದ ೧೯೦೪ ನೇ ಇಸವಿಯಲ್ಲಿ ಆಸ್ಟ್ರೇಲಿಯಾ, ಕಾನಡಾ, ದಕ್ಷಿಣ ಆಫ್ರಿಕಾ, ಈ ಮೂರು ಸ್ವಾಸ್ಥ್ಯಗಳೂ ವಿಲಾಯತಿಯಿಂದ ತರಿಸಿಕೊಂಡಷ್ಟು ಸರಕುಗಳನ್ನು ಹಿಂದುಸ್ತಾನ ಒಂದೇ ತರಿಸಿಕೊಂಡಿರುವುದು. ಹಿಂದುಸ್ತಾನದ ವ್ಯಾಪಾರ ವಿಚಾರವು ವಿಲಾಯತಿಯ ವ್ಯಾಪಾರ ವಿಚಾರದಲ್ಲಿ ಎರಡನೆಯ ಸ್ಥಾನವನ್ನು ಪಡೆದಿರುತ್ತದೆ. ರೈಲ್ ರಸ್ತೆಗಳಾದರೋ ದಿನೇ ದಿನೇ ಹೆಚ್ಚುತ್ತಾ ಬಂದಿರುವುದರಿಂದ ಪ್ರಜೆಗಳ ಐಶ್ವರ್ಯ ಸುಖ ಸಂತೋಷಗಳನ್ನು ವೃದ್ಧಿಪಡಿಸುತ್ತಲೂ ಗವರ್ನಮೆಂಟಿಗೆ ತುಂಬಾ ಆದಾಯವನ್ನು ತರುತ್ತಲೂ ಇರುವವು. ಆದಕಾರಣ ಹಿಂದುಸ್ತಾನದಲ್ಲಿ ಇನ್ನೂ ತುಂಬಾ ಹಣ ಖರ್ಚುಮಾಡಿ ರೈಲ್ ರಸ್ತೆಗಳನ್ನು ಬಹಳವಾಗಿ ಹೆಚ್ಚಿಸಬೇಕೆಂಬ ಕುತೂಹಲ ಉಂಟಾಗಿರುವುದು.

ಹಿಂದುಸ್ತಾನವನ್ನು ಪರರಾಜರು ಬಂದು ನುಗ್ಗದಂತೆ ಸಂರಕ್ಷಣೆ ಮಾಡುವುದಕ್ಕೆ ಗವರ್ನಮೆಂಟಿನವರು ಸೈನ್ಯದ ಏರ್ಪಾಡಿನಲ್ಲಿ ತುಂಬಾ ಬದಲಾವಣೆಗಳನ್ನು ಮಾಡಿ ಈ ಬದಲಾವಣೆಗಳನ್ನು ರೂಢಿಸುವುದಕ್ಕೆ ನಗದು ಪದಿನೈದು ಕೋಟಿ ರೂಪಾಯಿ ತೆಗೆದಿಟ್ಟಿದ್ದಾರೆ. ಈ ಬಾಬಿಗೆ ಇನ್ನು ಹಣ ಖರ್ಚಾಗುವುದು ಬಹಳ ನಿಶ್ಚಯವು ಕಂಡುಬಂದಾಗ್ಯೂ ಅದರ ಅವಶ್ಯಕತೆಯು ವಿಶೇಷವಾಗಿರುತ್ತದೆ.

ಮೆ|| ಬ್ರಾಡ್ರಿಕ್ ಯವರು ಈ ರೀತಿಯಾಗಿ ತಿಳಿಸಿದ ತರುವಾಯ ಪಾರ್ಲಿಮೆಂಟ್ ಮೆಂಬರುಗಳಲ್ಲಿ ಮುಖ್ಯ ಮುಖ್ಯರಾದವರು ಸಂತೋಷಪಟ್ಟು ಒಪ್ಪಿಕೊಂಡರು. ಅವರಲ್ಲಿ ಮೆ|| ಜೆ. ಸಿ ವಾಸನ್ ಎಂಬುವರು ಎದ್ದು—ಈ ಪಾರ್ಲಿಮೆಂಟಿನವರು ಹಿಂದುಸ್ತಾನದ ಆಳ್ವಿಕೆಯ ವಿಷಯಗಳನ್ನು ಆಗಾಗ್ಗೆ ಚರ್ಚೆಮಾಡುವಂತೆ ಆದರೆ ಇನ್ನೂ ಒಳ್ಳೆಯದೆಂದು ಸೂಚಿಸಿದರು. ಈ ಅಭಿಪ್ರಾಯವನ್ನು ಮೆಂಬರುಗಳಲ್ಲಿ ೬೫ ಮಂದಿ ಮಾತ್ರ ಒಪ್ಪಿ, ೧೧೭ ಮಂದಿ ಒಪ್ಪದೆಹೋದುದರಿಂದ ಅವರು ಸೂಚಿಸಿದ ಬದಲಾವಣೆಯು ಸಾಧ್ಯವಲ್ಲವೆಂದು ತೀರ್ಮಾನವಾಯಿತು

ಒಳದೇಶದ ವೃತ್ತಾಂತಗಳು.

ಕಳೆದ ಶನಿವಾರ ರಾತ್ರಿ ದಿವಾನರು ತಮ್ಮ ಸೆಕ್ರೆಟರಿಗಳೊಡನೆ ಬೆಂಗಳೂರಿಗೆ ಪ್ರಯಾಣ ಮಾಡಿದರು.

✦✦✦✦

ರಜಾ ಪಡೆದು ಶೀಮೆಗೆ ಹೋಗಿದ್ದ ಛೀಫ್ ಜಡ್ಜರಾದ ಮೆ|| ಸ್ಟೇಲಿಯವರು ಕಳೆದ ವಾರ ಬೆಂಗಳೂರಿಗೆ ಬಂದು ಛೀಫ್ ಕೋರ್ಟಿನ ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

✦✦✦✦

ಈ ಸಲ ನವರಾತ್ರಿಯಲ್ಲಿ ನಡೆಯುವ ಪ್ರಜಾಪ್ರತಿನಿಧಿಗಳ ಸಭೆಯು ಆಕ್ಟೋಬರು ೧೧ನೇ ತಾರೀಖು ಬುಧವಾರ ಪ್ರಾರಂಭವಾಗುವುದೆಂದು ಗೊತ್ತುಮಾಡಿದ್ದಾರೆ.

✦✦✦✦

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಡಾ|| ನಿಬ್ಲಾಕ್ ಎಂಬ ವೈದ್ಯರನ್ನು ಮೈಸೂರು ಸರ್ಕಾರದವರು ಕರೆಸಿ ನೇಮಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದಾರೆಂದು ಕೇಳುತ್ತೇವೆ.

✦✦✦✦

ಕಳೆದ ವಾರ ದಿವಾನ ಸರ್ ಕೃಷ್ಣಮೂರ್ತಿಯವರು ರಾಜಧಾನಿಯಲ್ಲಿರುವ ನಾರ್ಮಲ್ ಸ್ಕೂಲನ್ನೂ ಕಿವುಡ ಮೂಕರ ಮತ್ತು ಕುರುಡರ ಪಾಠಶಾಲೆಯನ್ನೂ ಹೊಸ ಅರಮನೆಯ ಕಟ್ಟಡವನ್ನೂ ಪುರಾಭಿವೃದ್ಧಿಯ ಕಾರ್ಯಗಳನ್ನೂ ಪರಾಂಬರಿಸಿದರು.

✦✦✦✦

ನೊರಬಹಳ್ಳಿರುವ ಆಸ್ಪತ್ರೆ ಕಟ್ಟಡವು ಹೊಸ ನಮೂನೆಯದಾಗಿಯೇ ಇರುವುದರಿಂದ ಅದನ್ನು ಕಿತ್ತು ಕಟ್ಟಬೇಕಾದ ಅಗತ್ಯವಿಲ್ಲವೆಂತಲೂ ನ್ಯಾಮತಿಯಲ್ಲಿರುವ ಆಸ್ಪತ್ರೆಯನ್ನು ಖಾಯಂ ಮಾಡಬೇಕೆಂತಲೂ ಶಿವಮೊಗ್ಗದ ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನಿಸಿದ್ದಾರೆ.

✦✦✦✦

ರಾಜಧಾನಿಯಲ್ಲಿ ಈ ವಾರವೆಲ್ಲಾ ಮೋಡಹಾಕಿಕೊಂಡೇ ಇತ್ತು. ಸೂರ್ಯರಶ್ಮಿಯೇ ಕಾಣಲಿಲ್ಲ. ಸೋನೆಮಳೆ ಸುರಿಯುತ್ತಿದೆ. ಪ್ರಜಾ ಆರೋಗ್ಯವು ಚನ್ನಾಗಿದೆ. ಕೋಟೆಯಲ್ಲಿ ಒಬ್ಬ ಶಿವಾಚಾರದ ಹೆಂಗಸು ಗ್ರಾಮದಿಂದ ಬಂದು ಪ್ಲೇಗ್ ಜಾಡ್ಯದಿಂದ ಸಾಗಿಸಿದ ಒಡನೆಯೇ ಕಾಲವಾದಳು.

ಅಮೃತಮಹಲ್ ಸೂಪರಿಂಟೆಂಡೆಂಟರಾದ ಮೆ|| ಎಚ್. ಸಂ ದಾಂಡಿರಾಜೇ ಅರಸಿನವರು ತಮ್ಮ ಕುಮಾರ್ತೆಗೆ ವಿವಾಹವಾದ ನಿಮಿತ್ತ ಚಾಮರಾಜಪೇಟೆಯಲ್ಲಿರುವ ತಮ್ಮ ಮನೆಗೆ ನಾಳೆ ದಿನ ಶ್ರೀಮನ್ಮಹಾರಾಜರವರನ್ನೂ ರಾಜವರ್ಗದವರನ್ನೂ ಬಿಜಮಾಡಿಸಿಕೊಂಡು ಸತ್ಕರಿಸುವವರಾಗಿದ್ದಾರೆಂದು ಕೇಳುತ್ತೇವೆ

✦✦✦✦

ಮೈಸೂರು ಸರ್ಕಾರದವರು ರಾಜಧಾನಿಯಲ್ಲಿ ಇಟ್ಟು ನಡಸುತ್ತಿರುವ ಇಂಜನಿಯರ್ ಸ್ಕೂಲಿನಲ್ಲಿ ಈ ಸಲ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಆಗಲೇ ಅಲ್ಲಲ್ಲಿ ಕೆಲಸಗಳು ದೊರಕಿದವು ಈ ಪಾಠಶಾಲೆಯ ಕೆಲಸಗಳು ಬಹು ತೃಪ್ತಿಕರವಾಗಿ ನಡೆಯುತ್ತಿರುವುದನ್ನು ನೋಡಿ ಸಂತೋಷಪಡುತ್ತೇವೆ ಸ್ಕೂಲ್ ಹೆಡ್ ಮಾಸ್ಟರು ವಿದ್ಯಾರ್ಥಿಗಳಿಗೆ ವಿಷಯಗಳನ್ನು ವ್ಯಾಖ್ಯಾನಪೂರ್ವಕವಾಗಿ ಹೇಳಿಕೊಡುವುದಕ್ಕೋಸ್ಕರ ಅವರನ್ನು ಮಾರೀಕಣಿವೆ, ಬೋರನಕಣಿವೆ, ಹೆಸರಘಟ್ಟ, ಈ ಮುಂತಾದ ಕಡೆಗಳಿಗೆ ಕರೆದುಕೊಂಡು ಹೋಗಿರುತ್ತಾರೆ ಇದಕ್ಕಾಗಿ ಸರ್ಕಾರದವರು ೫೦೦ ರೂಪಾಯಿ ಹಣ ಸ್ಯಾಂಕ್ಷನ್ ಮಾಡಿದರೆಂದು ತಿಳಿಯುವದು

✦✦✦✦

ಬೆಂಗಳೂರು ಚಾಮರಾಜಪೇಟೆಯಲ್ಲಿ ಪ್ರಜೆಗಳೂ ಅಧಿಕಾರಿಗಳೂ ಚಂದಾ ಹಾಕಿ ಒಂದು ದೇವಸ್ಥಾನವನ್ನು ಕಟ್ಟಿ ಪೂರೈಸಿದರು. ಈ ದೇವಸ್ಥಾನದಲ್ಲಿ ರಾಮೇಶ್ವರ ದೇವರನ್ನು ಮೊನ್ನೆ ಭಾನುವಾರ ಪ್ರತಿಷ್ಠೆ ಮಾಡಿದರು. ದಿವಾನರು, ಕೌನ್ಸಿಲ್ ಮೆಂಬರುಗಳು, ಛೀಫ್ ಕೋರ್ಟ್ ಜಡ್ಜಿಗಳು, ಸರ್ಕಾರಿ ನೌಕರರು, ದೊಡ್ಡ ಮನುಷ್ಯರು, ಸಾಹುಕಾರರು ಮುಂತಾದವರೆಲ್ಲಾ ಈ ಕಾರ್ಯದಲ್ಲಿ ಉದ್ಯುಕ್ತರಾಗಿದ್ದರು. ಈ ದೇವಸ್ಥಾನಕ್ಕೆ ಮೈಸೂರು ಸರ್ಕಾರದವರು ೧ ೩೦೦ ರೂಪಾಯನ್ನು ಸ್ಯಾಂಕ್ಷನ್ ಮಾಡಿದ್ದಲ್ಲದೆ ತಿಂಗಳು ಕಟ್ಟಳೆಯ ಪಡಿತರ ದೀಪಾರಾಧನೆಗೆ ೧೭ ರೂಪಾಯನ್ನೂ ಕೆಲವು ಜಮೀನುಗಳನ್ನೂ ಕೊಡುವಂತೆ ಹುಕುಂ ಮಾಡಿದ್ದಾರೆ.

✦✦✦✦

ಬೆಂಗಳೂರು ಮಲ್ಲೇಶ್ವರದ ಅಚ ಮೆ|| ತಾತಾಯವರ ರೇಷ್ಮೆ ಕಾರ್ಖಾನೆಗೆ ನಮ್ಮ ಸರ್ಕಾರದವರು ಕೆಲವು ಸ್ಕೂಲ್ ಮಾಸ್ಟರುಗಳನ್ನು ಕಳುಹಿಸಿ, ರೇಷ್ಮೆ ಹುಳಗಳ ಕ್ಷೇಮಾಭಿವೃದ್ಧಿಯನ್ನೂ ಹಿಪ್ಪನೇರಲೆ ಗಿಡವನ್ನು ಬೆಳೆಯುವ ವಿಧಾನವನ್ನೂ ಕಲಿಸಿಕೊಟ್ಟು ಈಗ ಅವರನ್ನು ರೇಷ್ಮೆ ವ್ಯವಸಾಯದ ಇನ್ಸ್ಪೆಕ್ಟರಾಗಿ ನೇಮಿಸಿರುತ್ತಾರೆ. ಇವರು ತಿಂಗಳಲ್ಲಿ ೨೦ ದಿವಸಗಳು ಗ್ರಾಮಗಳ ಮೇಲೆ ಸುತ್ತಿ ರೇಷ್ಮೆ ತಯಾರಾಗುವ ಸ್ಥಳಗಳಲ್ಲಿ ಜನರಿಗೆ ಆ ವಿಧಾನವನ್ನು ಉಪನ್ಯಾಸ ಮೂಲಕವಾಗಿ ದೃಷ್ಟಾಂತಗಳೊಡನೆ ಕಲಿಸುತ್ತಾ ಬರಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ. ಈ ಇನ್ಸ್ಪೆಕ್ಟರುಗಳು ವಾರವಾರಕ್ಕೂ ತಾವು ಮಾಡಿದ ಕೆಲಸಗಳೇನೆಂಬುದನ್ನು ಕುರಿತು ಅಸಿಸ್ಟೆಂಟ್ ಕಮಿಷನರುಗಳಿಗೆ ರಿಪೋರ್ಟು ಮಾಡಬೇಕಾಗಿದೆ ಇವರುಗಳ ಮೂಲಕ ಈ ಸಂಸ್ಥಾನದ ರೇಷ್ಮೆ ಬೆಳೆಯೂ ಅದರ ವ್ಯಾಪಾರವೂ ವೃದ್ಧಿಹೊಂದಿ ಪ್ರಜೆಗಳಿಗೆ ಸಹಾಯವಾದೀತಾಗಿ ನಿರೀಕ್ಷಿಸಲ್ಪಟ್ಟಿದೆ.

✦✦✦✦

ಬೆಂಗಳೂರು ಸಿಟಿ ಪೂರ್ಣಯ್ಯನವರ ಛತ್ರದಲ್ಲಿ ಕಳೆದ ವಾರ ಸ್ಮಾರ್ತ ಬ್ರಾಹ್ಮಣರ ಸಭೆಯೊಂದು ನಡೆಯಿತು. ಶ್ರೀ ಶೃಂಗೇರಿ ಜಗದ್ಗುರುಗಳು—ಇನ್ನು ಮುಂದೆ ಸ್ಮಾರ್ತರಲ್ಲಿ ಶೃಂಗೇರಿ ಮಠಕ್ಕೂ ಶಿವಗಂಗಾ ಮಠಕ್ಕೂ ತಾರತಮ್ಯವನ್ನಿಡಕೂಡದೆಂತಲೂ ಎರಡೂ ಒಂದೇ ಎಂದು ಭಾವಿಸಬೇಕೆಂತಲೂ ಅಪ್ಪಣೆ ಕೊಡಿಸಿದ ಶ್ರೀ ಮುಖವು ಆ ಸಭೆಯಲ್ಲಿ ಓದಲಾಯಿತು. ಅಜರೆ ಶ್ರೀ ಶಿವಗಂಗಾ ಸ್ವಾಮಿಗಳು ರಾಜಧಾನಿಯಿಂದ ದಯಮಾಡುವಾಗ್ಗೆ ಸಂಘಸಂಸ್ಕರಣದ ವಿಚಾರದಲ್ಲಿ ಕೆಲವು ಬದಲಾವಣೆಗಳನ್ನು ಕುರಿತು ಶ್ರೀ ಶೃಂಗೇರಿ ಜಗದ್ಗುರುಗಳನ್ನು ಕಂಡು ಅವರ ಅನುಜ್ಞೆಯನ್ನು ಪಡೆದು ತಿಳಿಸುವುದಾಗಿ ಅಪ್ಪಣೆ ಕೊಡಿಸಿದ್ದರು ಮುಖ್ಯವಾಗಿ ಸಮಪ್ರಯಾಣ ಸ್ನಾನ ಬರತಕ್ಕವರ ವಿಚಾರದಲ್ಲೂ ಜಾತಿಯ ಒಳಪಂಗಡಗಳೆಲ್ಲಾ ಒಂದಾಗಿ ಪರಸ್ಪರ ಕೊಟ್ಟು ತರುವ ವಿಷಯದಲ್ಲೂ ಮಠಾಧಿಪತಿಗಳು ಈಗಿನ ಕಾಲಕ್ಕೆ ತಕ್ಕ ರೀತಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ ಶಿಷ್ಯ ಮಂಡಲಿಗಳಿಗೆ ಅನುಜ್ಞೆಯಿತ್ತರೆ ದೇಶೋನ್ನತಿಗೆ ತುಂಬಾ ಸಹಾಯವಾಗುವುದು.

✦✦✦✦

ಮೆ|| ಕಳವಾಯಿ ದೇವರಾಜೇ ಅರಸಿನವರು ತಮ್ಮ ಕುಮಾರನಿಗೆ ವಿವಾಹವಾದ ನಿಮಿತ್ತ ಮೊನ್ನೆ ಮಂಗಳವಾರ ರಾಜಧಾನಿಯಲ್ಲಿ

ಶ್ರೀಮನ್ ಮಹಾರಾಜರವರನ್ನೂ ಮಹಾಮಾತೃಶ್ರೀ ಯವರನ್ನೂ ಮಹಾರಾಣಿಯವರನ್ನೂ ರಾಜಕುಮಾರಿಯರನ್ನೂ ಮೆ॥ ಕಾಂತರಾಜೇ ಅರಸ್ ನವರನ್ನೂ ಮೆ॥ ಲಕ್ಷ್ಮೀಕಾಂತರಾಜೇ ಅರಸಿನವರನ್ನೂ ತಮ್ಮ ಮನೆಗೆ ಕರೆದುಕೊಂಡು ಬಂದು ಬಹು ಉತ್ಸಾಹಪೂರ್ವಕವಾಗಿ ಸತ್ಕರಿಸಿದರು. ಶ್ರೀಮನ್ ಮಹಾರಾಜರವರು ಪರಿವಾರ ಸಹಿತ ಸಮಸ್ತ ಬಿರುದುಗಳೊಡನೆ ಅವರ ಮನೆಗೆ ಬೆಳಗ್ಗೆಯೇ ದಯಮಾಡಿ ಮೆ॥ ದೇವರಾಜೇ ಅರಸಿನವರು ಮಾಡಿದ ಪಾದಪೂಜೆಯನ್ನು ಸ್ವೀಕರಿಸಿದರು. ಭೋಜನಾನಂತರ ಕೆಲವು ಸಂತೋಷೋತ್ಸವಗಳನ್ನು ನೋಡಿಕೊಂಡು ಮಹಾರಾಜರವರು ಗಾಳಿಸವಾರಿ ದಯಮಾಡಿ, ಪುನಃ ಸಾಯಂಕಾಲವೂ ಅವರ ಮನೆಗೆ ಬಿಜಯಂಗೈದರು. ಮೆ॥ ದೇವರಾಜೇ ಅರಸಿನವರು ತಮ್ಮ ಮನೆಯನ್ನು ರಾಜಭವನದೋಪಾದಿಯಲ್ಲಿ ಶೃಂಗಾರ ಮಾಡಿಸಿದ್ದರು. ಗ್ಯಾಸ್ ಮತ್ತು ವಿದ್ಯುಚ್ಛಕ್ತಿಯ ದೀಪಗಳು ಮನೆಯೆಲ್ಲಾ ಪ್ರಕಾಶಮಾನ ಮಾಡಿದ್ದುವು. ರಾತ್ರಿ ಭೋಜನಾನಂತರ ನೂತನದಂಪತಿಗಳಿಗೆ ಅಕ್ಷತೆಗಳು ನಡೆದುವು. ಎಲ್ಲಾ ಅರಸುಗಳೂ ದಯಮಾಡಿದ್ದರು. ಮಹಾರಾಜರವರೂ ಯುವರಾಜರವರೂ ಶ್ರೇಷ್ಠವಾದ ಆಸನಗಳನ್ನಲಂಕರಿಸಿದ್ದರು. ರಾಮಕೃಷ್ಣ ಭಾಗವತರ ಮತ್ತು ಕೆಂಪೇಗೌಡರ ಹಾಡುಗಾರಿಕೆಯಾಯಿತು. ವಧುವರರಿಗೆ ಹಾರ ತುರಾಯಿಗಳೂ ಒಪ್ಪಿಸಲ್ಪಟ್ಟ ನಂತರ ಶ್ರೀಮನ್ಮಹಾರಾಜರವರು ಒಳಕ್ಕೆ ಬಿಜಮಾಡಿದರು. ಅನಂತರ ರಾತ್ರಿ ಸುಮಾರು ೧೧ ಗಂಟೆಯ ಮೇಲೆ ರಾಜವರ್ಗದವರೆಲ್ಲಾ ಅರಮನೆಗೆ ದಯಮಾಡಿದರು.

ಮೈಸೂರು ಸರ್ಕಾರದ ಹುಕುಮುಗಳು

ರಾಜಧಾನಿಯಲ್ಲಿರುವ ಭಕ್ಷಿ ನರಸಪ್ಪನವರ ದೇವಸ್ಥಾನವೂ ಅನ್ನಸತ್ರವೂ.

ಮೈಸೂರು ಪಟ್ಟಣದಲ್ಲಿ ಲೇಟ್ ಭಕ್ಷಿ ನರಸಪ್ಪನವರು ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನವನ್ನೂ ಅದಕ್ಕೆ ಸೇರಿದಂತೆ ಒಂದು ಅನ್ನಸತ್ರವನ್ನೂ ಸ್ಥಾಪಿಸಿದರು. ಇದನ್ನು ಸರ್ಕಾರದವರು ಮುಜರಾಯಿ ಇಲಾಖೆಗೆ ಸೇರಿಸಿಕೊಂಡು ೧೮೬೪ನೇ ಇಸ್ವಿಯಿಂದ ಲಾಗಾಯಿತು ನಡಿಸುತ್ತಾ ಬಂದಿದ್ದಾರೆ. ಈ ಸತ್ರ ದೇವಸ್ಥಾನಗಳಿಗೆ ಬಿಟ್ಟಿರುವ ಮನೆ ನಿವೇಶನಗಳೂ ಅಂಗಡಿ ಬಾಡಿಗೆಗಳಿಂದಲೂ ವರ್ಷಕ್ಕೆ ೧,೩೮೭ ರೂಪಾಯಿ ಹುಟ್ಟುವಳಿ ಆಗುತ್ತೆ. ಇದರ ಪ್ರಕಾರ ರೂ ೧,೩೪೨—೧೩—೦ ಖರ್ಚಾಗುತ್ತದೆ. ಈ ಅಂದಾಜು ಪಟ್ಟಿಯಂತೆ ಎರಡು ವರ್ಷ ಆದಮಾಯಿಷಿ ತರೀಖು ನಡೆಯುತ್ತಾ ಬದ್ದ ಬಹು ಬಾಬುಗಳನ್ನು ಇನ್ನೂ ಕಡಿತಾ ಮಾಡಬೇಕಾಗಿದೆ. ಈಗಿನಂತೆ ವರ್ಷಕ್ಕೆ ಖರ್ಚಾದಾಗ ಉಳಿಯುವ ರೂ ೪೩—೩—೦ ಯು ರಿಪೇರಿ ಮುಂತಾದ ಕೆಲಸಗಳಿಗೆ ಸಾಕಾಗಲಾರದು. ಡೆಪ್ಟಿ ಕಮಿಷನರು ಸಿಫಾರಸು ಮಾಡಿರುವಂತೆ ಪಾರುಪತ್ತೇಗಾರ್ ರಾಮಣ್ಣನವರಿಗೆ ತಿಂಗಳಿಗೆ ೬ ರೂಪಾಯಿ ಸಂಬಳವಲ್ಲದೆ ೩ ಸೇರು ಅಕ್ಕಿಯನ್ನೂ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ. ಹುಟ್ಟುವಳಿ ಬಾಬಿನಲ್ಲಿ ಛತ್ರದ ಕ್ರಯವನ್ನು ಬಂದ ೧೯ಕ್ಕೆ ೪॥ ರೂಪಾಯಿನಂತೆ ಲೆಕ್ಕ ಹಾಕಿದಾರೆ. ಇದಕ್ಕಿಂತಲೂ ಇನ್ನೂ ಲಾಭಕರವಾದ ಬೆಲೆಗೆ ಛತ್ರವನ್ನು ಬಿಕರಿಮಾಡಬೇಕಾಗಿದೆ. ಅಂಗಡಿಗಳು ೧೯ ಇದ್ದಾಗ್ಯೂ ೧೩ಕ್ಕೆ ಮಾತ್ರ ಬಾಡಿಗೆ ಬರುತ್ತೆಂದೂ ಅಂಗಡಿಗಳು ಖಾಲಿ ಇವೆ ಎಂದೂ ತಿಳಿಯುತ್ತದೆ. ಕೂಡಲೇ ಈ ಅಂಗಡಿಗಳಿಗೂ ಬಾಡಿಗೆದಾರರನ್ನು ಗೊತ್ತುಮಾಡಬೇಕಾಗಿದೆ. ಆಗನಿಕ, ಸ್ಥಾನಿಕ ಮತ್ತು ಪುರೋಹಿತ, ಅರ್ಚಕ, ಮಣಿಯಂ ಮತ್ತು ವೇದಪಾರಾಯಣ, ಕಾವಲುಗಾರ, ಈ ನೌಕರಿಗಳನ್ನು ವಜಾಮಾಡುತ್ತಾರೆ.

ಅನ್ನಸತ್ರಕ್ಕೆ ಸಿಬ್ಬಂದಿ ಖರ್ಚು ತಿಂಗಳಿಗೆ ರೂ ೧೬, ಸಂತರ್ಪಣೆಗೆ ರೂ ೩೫, ಹೆಚ್ಚುಕಟ್ಲೆಗೆ ರೂ. ೮—೮—೦, ಅಂತು ವರ್ಷಕ್ಕೆ ರೂ. ೬೨೦—೮—೦ ಇಟ್ಟಿದಾರೆ. ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ ಸಿಬ್ಬಂದಿ ಖರ್ಚು ತಿಂಗಳಿಗೆ ರೂ ೨೦, ಪಾತರ ದೀಪಾರಾಧನೆಗೆ ರೂ ೨೨—೮—೦, ಹೆಚ್ಚುಕಟ್ಲೆಗೆ ವರ್ಷಕ್ಕೆ ರೂ ೩೯—೮—೦, ಆಂಜನೇಯ ಸ್ವಾಮಿ ದೀಪಾರಾಧನೆ ಮುಂತಾದ್ದಕ್ಕೆ ರೂ ೩, ಈ ಪ್ರಕಾರ ಖರ್ಚುಗತಕ್ಕದ್ದು.

ನಾಗಮಂಗಲದ ಹೊಸ ಮಸೀತಿಯ ವಿಚಾರ.

ಕಳೆದ ೧೮೯೧ನೆ ಇಸವಿಯ ಡಿಸೆಂಬರಿನಲ್ಲಿ ನಾಗಮಂಗಲದ ಮುಸಲ್ಮಾನ್ ಪ್ರಜೆಗಳು ಅಲ್ಲಿನ ಕೋಟೆಯೊಳಗೆ ಒಂದು ಮಸೀತಿಯನ್ನು ಕಟ್ಟಬೇಕೆಂದು ಕೇಳಿಕೊಂಡರು. ಅಲ್ಲಿಗೆ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರಾಗಿದ್ದ ಮೆ॥ ಕೆ ಮಹಮದಲ್ಲಿಯವರು ಹೋಗಿ ಮಸೀತಿ ಕಟ್ಟತಕ್ಕ ಪ್ರದೇಶವನ್ನು ನೋಡಿ, ಮಹಮದಿಯರ ಮುಖಂಡರುಗಳಿಂದ ಮಸೀತಿಯ ಮುಂದೆ ಹಿಂದೂ ಮೆರವಣಿಗೆಗಳು ಹೋಗುವ ವಿಷಯದಲ್ಲಿ ಎಂದೆಂದಿಗೂ ಅಡ್ಡಿ ಮಾಡುವುದಿಲ್ಲವೆಂದು ಮುಚ್ಚಳಿಕೆ ಬರೆಸಿಕೊಂಡು, ಮಸೀತಿ ಕಟ್ಟಿಕೊಳ್ಳುವುದಕ್ಕೆ ಅವಕಾಶಕೊಡುವಂತೆ ಅಮಲ್ದಾರರಿಗೆ ಹುಕುಂ ಕೊಟ್ಟರು. ಅಮಲ್ದಾರರು ೧೮೯೨ ಜೂನ್ ೩ರಲ್ಲಿ ಅವರಿಂದ ಮುಚ್ಚಳಿಕೆಯನ್ನು ಬರೆಸಿಕೊಂಡಿದಾರೆ. ತರುವಾಯ ಮಸೀತಿ ಕಟ್ಟುತ್ತಿರುವಲ್ಲಿ ನಾಗಮಂಗಲದ ಹಿಂದು ಪ್ರಜೆಗಳು ಅದನ್ನು ಕಟ್ಟುವುದಕ್ಕೆ ಅಪ್ಪಣೆ ಕೊಡಕೂಡದೆಂದು ಡೆಪ್ಟಿ ಕಮಿಷನರಿಗೆ ಮಹಜರ್ ಮಾಡಿದ ಅರ್ಜಿಯನ್ನು ಕೊಟ್ಟರು. ಆಗ ಡೆಪ್ಟಿ ಕಮಿಷನರಾಗಿದ್ದ ಮೆ॥ ಎ. ರಂಗಸ್ವಾಮಯ್ಯಂಗಾರ್ಯರು ಸಬ್ ಡಿವಿಜನ್ ಆಫೀಸರಿಗೆ ಆ ಸ್ಥಳದಲ್ಲಿ ಮಸೀತಿ ಕಟ್ಟುವುದಕ್ಕೆ ಅವಕಾಶಕೊಡುವುದರಿಂದ ಹಿಂದುಗಳಿಗೂ ಮುಸಲ್ಮಾನರಿಗೂ ಅನಾವಶ್ಯವಾಗಿ ಅಸಮಾಧಾನವನ್ನು ಹುಟ್ಟಿಸುತ್ತದೆಂತಲೂ ಮುಸಲ್ಮಾನರಿಗೆ ಅನುಕೂಲವಾದ ಮತ್ತು ಯಾರ ಆಕ್ಷೇಪಣೆಯೂ ಇಲ್ಲದ ಬೇರೆ ಸ್ಥಳವನ್ನು ಕೊಡುವುದು ಒಳ್ಳೇದೆಂತಲೂ ೧೮೯೩—೮—೨ರಲ್ಲಿ ಸಬ್ ಡಿವಿಜನ್ ಆಫೀಸರವರು ತಿಳಿಸಿದರು. ಆದರೆ ಈ ಹುಕುಮನ್ನು ಜಾರಿಗೆ ತರಲೇ ಇಲ್ಲ. ಮುಸಲ್ಮಾನ್ ಜನರು ಮಸೀತಿಯನ್ನು ಕಟ್ಟುತ್ತಾ ಬಂದರು. ಈಚೆಗೆ ೧೮೯೫ನೆ ಇಸವಿಯಲ್ಲಿ ಮುಜರಾಯಿ ಸೂಪರಿಂಟೆಂಡೆಂಟ್ ಮೆ॥ ರಾಯಬಹದೂರ್ ಎ. ಶ್ರೀನಿವಾಸಾಚಾರ್ಯರು ನಾಗಮಂಗಲಕ್ಕೆ ಹೋಗಿದ್ದಾಗ ಮಸೀತಿಯನ್ನು ನೋಡಿ, ಕಟ್ಟಡವೆಲ್ಲಾ ಪೂರೈಸಿದ ತರುವಾಯ ಸರ್ಕಾರದಿಂದ ಆ ಮಸೀತಿಗೆ ೧೦೦ ರೂಪಾಯಿ ಸಹಾಯ ಕೊಡುವಂತೆ ಪ್ರಾರ್ಥನ ಮಾಡಿದರು. ಅನಂತರ ೧೮೯೯ರಲ್ಲಿ ಡೆಪ್ಟಿ ಕಮಿಷನರ್ ಮೆ॥ ರಾವ್ ಬಹದೂರ್ ಸಿ. ಮಾಧವಯ್ಯನವರು ಮಸೀತಿಯನ್ನು ಹೋಗಿ ನೋಡಿ, ಹಿಂದಿನ ಸಬ್ ಡಿವಿಜನ್ ಆಫೀಸರ್ ಮೆ॥ ಮಹಮದಲ್ಲಿಯವರು ಮೇಲ್ಕಂಡ ಮಸೀತಿಯನ್ನು ಕಟ್ಟದಂತೆ ಮೆ॥ ರಂಗಸ್ವಾಮಯ್ಯಂಗಾರ್ಯರು ಕೊಟ್ಟಿದ್ದ ಹುಕುಮನ್ನು ಜಾರಿಗೆ ತರಲಿಲ್ಲವೆಂದು ತಿಳಿದು, ಇನ್ನು ಮುಂದಾದರೂ ಹಿಂದು ಮಹಮದೀಯರಿಗೆ ಯಾವ ವಿಧವಾದ ಕಲಹಗಳೂ ಅಸಮಾಧಾನವೂ ಉಂಟಾಗದಂತೆ ಮಸೀತಿಯ ಪೂರ್ವ ದಿಕ್ಕಿನ ಒಂದೇ ಒಂದು ಬಾಗಿಲನ್ನು ಬಿಟ್ಟು ಉಳಿದ ಬಾಗಿಲುಗಳನ್ನೆಲ್ಲಾ ಎಂದೆಂದಿಗೂ ತೆರೆಯದಂತೆ ಮುಚ್ಚಿಸಿರುತ್ತಾರೆ. ಈಗ ಮುಸಲ್ಮಾನ್ ಪ್ರಜೆಗಳು ಸರ್ಕಾರದಿಂದ ೧೦೦ ರೂಪಾಯನ್ನು ಮೇಲ್ಕಂಡ ಭಾಷೆಯ ಪ್ರಕಾರ ಕೊಡಬೇಕೆಂದೂ ಮಸೀತಿಯ ತಿಂಗಳುಕಟ್ಲೆಯ ಖರ್ಚಿಗೆ ಏನಾದರೂ ಮಾಸಾಶನವನ್ನು ಕೊಡಿಸಬೇಕೆಂದು ಕೇಳಿದರು. ಡೆಪ್ಟಿ ಕಮಿಷನರು ಮೇಲ್ಕಂಡ ೧೦೦ ರೂಪಾಯಿಗಳನ್ನು ಕೊಡಬಹುದೆಂದು ಸಹಾಯವಾಗಿ ಬರೆದರು.

ಹಿಂದೆ ೧೮೯೩ನೆ ಇಸವಿಯಲ್ಲಿ ಡೆಪ್ಟಿ ಕಮಿಷನರು ಕೊಟ್ಟ ಹುಕುಮನ್ನು ಜಾರಿಗೆ ಬರದೆ, ಸರ್ಕಾರದವರ ಹುಕುಮಿಗೆ ವಿರೋಧವಾಗಿ ಮಸೀತಿ ಕಟ್ಟಿರೋಣದರಿಂದ ಅದಕ್ಕೆ ಗವರ್ನ್‌ಮೆಂಟಿನವರು ಯಾವ ವಿಧವಾದ ಸಹಾಯವನ್ನೂ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಪೂರ್ವದ ಮುಜರಾಯಿ ಸೂಪರಿಂಟೆಂಡೆಂಟರು ಕೊಟ್ಟಿರುವ ಭಾಷೆಯ ಪ್ರಕಾರ ಆ ೧೦೦ ರೂಪಾಯಿಗಳನ್ನು ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ. ಈ ಮಸೀತಿಗೆ ಇರತಕ್ಕ ಪೂರ್ವದಿಕ್ಕಿನ ಬಾಗಿಲು ಒಂದು ವಿನಹಾ ಇನ್ಯಾವ ಬಾಗಲನ್ನೂ ಯಾವ ಸಮಯದಲ್ಲೂ ತೆರೆಯದಂತೆ ಡೆಪ್ಟಿ ಕಮಿಷನರು ತಕ್ಕ ಏರ್ಪಾಡು ಮಾಡಬೇಕೆಂದು ಹುಕುಂ ಕೊಟ್ಟಿದಾರೆ. ನಾಗಮಂಗಲದಲ್ಲಿರುವ ಇತರ ಕೋಮುಗಳ ಪ್ರಜೆಗಳ ಮೆರವಣಿಗೆಗಳನ್ನಾಗಲಿ ಅವರ ವಾದ್ಯಗಳನ್ನಾಗಲಿ ಈ ಮಸೀತಿಯವರು ಎಂದೆಂದಿಗೂ ತಡೆಯಲೇ ಕೂಡದೆಂದು ಹುಕುಂ ಆಗಿದೆ. ಮೇಲ್ಕಂಡ ೧೦೦ ರೂಪಾಯಿ ಮಾವಸ ಆಗುವುದಕ್ಕೆ ಮೊದಲು ಮುಸಲ್ಮಾನ್ ಜನರು ಈ ಮಸೀತಿ ಕಟ್ಟಿದ ಇಸವಿಯನ್ನು ಕಲ್ಲಿನ ಮೇಲೆ ಕೆತ್ತಿಸಿ ಎಲ್ಲರಿಗೂ ಬೇಗನೆ ಕಾಣುವಂತೆ ಇಟ್ಟಬೇಕು. ಈ ಮಸೀತಿಗೆ ಗವರ್ನ್‌ಮೆಂಟಿನವರು ಮಾಸಾಶನವನ್ನು ಕೊಡಲು ಅವಕಾಶವಿಲ್ಲ.

ರಾಜಧಾನಿಯ ಮ್ಯುನಿಸಿಪಲ್ ವಿಚಾರಗಳು

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಸಿದರು. ಕಳೆದ ಮೇ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ ೧೨,೯೮೦—೯—೬ ಪೈ ಜಮಾ ಆಯಿತು, ರೂ ೮,೩೩೩—೭—೫ ಪೈ ಖರ್ಚಾಯಿತು. ಆ ತಿಂಗಳಲ್ಲಿ ರಾಜಧಾನಿಯೊಳಗೆ ೧೧೯ ಜನನವೂ ೧೨೯ ಮರಣವೂ ಆದವು. ಪ್ಲೇಗಿನಲ್ಲಿ ಮರಣಗಳೇನೂ ಆಗಲಿಲ್ಲ. ಶೀತಬಿಸಿನಲ್ಲಿ ೫, ಜ್ವರದಿಂದ ೬, ಇತರ ಕಾರಣಗಳಿಂದ ೧೧೯ ಮರಣಗಳಾಗಿವೆ.

ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆ ಮಾಡಿದ ಆಡಿಟರುಗಳು ರಿಪೋರ್ಟಿನಲ್ಲಿ ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ—ಆಕ್ಟ್ರಾಯ್ ಬಾಬಿನಲ್ಲಿ ಹೋದ ವರ್ಷ ಈ ತಿಂಗಳ ಹುಟ್ಟುವಳಿಗಿಂತಲೂ ಈ ಸಲ ಅದೇ ತಿಂಗಳ ಹುಟ್ಟುವಳಿಯು ೧೬೦ ರೂಪಾಯಿ ಕಡಿಮೆಯಾಗಿದೆ. ಹೀಗೆ ಕಡಿಮೆಯಾಗಲು ಕಾರಣವೇನೋ ತಿಳಿಸಿಲ್ಲ. ಮೈಸೂರು ಪಟ್ಟಣದಲ್ಲಿ ಅನೇಕ ಭಾರೀ ಕಟ್ಟಡಗಳು ಕಟ್ಟುತ್ತಿದ್ದಾಗ್ಯೂ ದಿನಕ್ಕೆ ಸರಾಸರಿ ೧೬ ಗಾಡಿಯಷ್ಟು ಮಾತ್ರ ಸುಣ್ಣ ಬರುತ್ತೆಂದು ಕಂಡುಬಂದಿದೆ. ಈ ಸಂಗತಿಯನ್ನು ತನಿಖೆ ಮಾಡಬೇಕಾಗಿದೆ. ಇದಲ್ಲದೆ ಹೊಗೇಸೊಪ್ಪು, ತುಪ್ಪ, ಎಣ್ಣೆ ಮುಂತಾದ ಸರಕುಗಳ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಏನು ಮಾಡಬೇಕೆಂಬುವುದನ್ನು ಬೋರ್ಡಿನವರು ಯೋಚಿಸಬೇಕಾಗಿದೆ.

ರಾಜಧಾನಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರದವರು ಒಂದು ಟ್ರಸ್ಟ್ ಬೋರ್ಡನ್ನು ಏರ್ಪಡಿಸಿರುತ್ತಾರೆ. ಈ ಬೋರ್ಡಿನವರು ಕೆಲಸ ನಡಿಸುತ್ತಿರುವ ಮೂರು ಮೊಹಲ್ಲೆಗಳಲ್ಲೂ ಮನೆಗಳನ್ನು ಒಡೆಸುವುದು, ರಸ್ತೆ ಹಾಕಿಸುವುದು, ಹೊಸ ಮನೆ ಕಟ್ಟುವುದಕ್ಕೆ ಲೈಸೆನ್ಸು ಕೊಡುವುದು, ಹೊಸದಾಗಿ ಚಚ್ಚಲುಗಳನ್ನು ಕಟ್ಟುವುದು, ಕಚರಾ ಮುಂತಾದ್ದು ಸಾಗಿಸಿ ಸ್ಯಾನಿಟೇಷನ್ ವಿಚಾರವನ್ನು ಕ್ರಮಪಡಿಸುವುದು, ಮುಂತಾದ ಕಾರ್ಯಗಳನ್ನು ನಡಸುವರು. ಇದಕ್ಕಾಗಿ ಆ ಮೊಹಲೆಗಳ ಮೇಲೆ ಸ್ವತಂತ್ರಾಧಿಕಾರವನ್ನು ಮ್ಯುನಿಸಿಪಾಲಿಟಿಯವರಿಂದ ವಹಿಸಿಕೊಳ್ಳಬೇಕೆಂದು ಬರೆದಿದ್ದರು. ಈ ಭಾಗಗಳನ್ನು ಮ್ಯುನಿಸಿಪಲ್ ಬೋರ್ಡಿನವರು ಟ್ರಸ್ಟ್ ಬೋರ್ಡಿಗೆ ವಹಿಸಿಕೊಡಬೇಕೆಂತಲೂ, ಅಲ್ಲಿನ ರಸ್ತೆಗಳನ್ನು ಟ್ರಸ್ಟ್ ಬೋರ್ಡಿನವರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ಅವರಿಗೆ ತಿಳಿಸಬೇಕೆಂಬುದಾಗಿಯೂ ಕಮಿಷನರುಗಳು ಗೊತ್ತುಮಾಡಿದರು.

ನಜರ್‌ಬಾದ್ ಮೊಹಲ್ಲೆಯಲ್ಲಿ ಕೆಲವು ಮನೆಗಳವರು ಸತ್ತುಹೋಗಿರೋಣದರಿಂದ ಅಂಥಾ ಮನೆಗಳ ಮ್ಯುನಿಸಿಪಲ್ ತೆರಿಗೆಯನ್ನು ವಸೂಲ್ಮಾಡುವುದಕ್ಕಾಗುವುದಿಲ್ಲವೆಂತಲೂ ಅದನ್ನು ರಿಮಿಷನ್ ಮಾಡಬೇಕಾಗಿದೆ ಎಂತಲೂ ಮೊಹಲಾ ಕಮಿಷನರು ತನಿಖೆಯಿಂದ ಶಿಫಾರಸು ಮಾಡಿದರು. ಈ ವಿಷಯವನ್ನು ಮೆಂಬರುಗಳು ಚರ್ಚೆಮಾಡಿ, ಬಾಕಿ ಇರುವ ಕಂದಾಯ ರೂ ೪೨—೮—೦ ಮಾತ್ರವೇ ಆಗಿರೋಣದರಿಂದ ಅದನ್ನು ರಿಮಿಷನ್ ಮಾಡಬಹುದೆಂದು ತೀರ್ಮಾನ ಮಾಡಿದರು.

ಈಚೆಗೆ ಮ್ಯುನಿಸಿಪಲ್ ತೆರಿಗೆ ದರಗಳನ್ನು ಕಮ್ಮಿ ಜಾಸ್ತಿ ಮಾಡಿಸಿದರು. ಅವರ ತಕರಾರುಗಳನ್ನು ಹಿಡಿದು ತನಿಖೆಯಿಂದ ಇತ್ಯರ್ಥ ಮಾಡಿದ ಕೆಲವು ಮ್ಯುನಿಸಿಪಲ್ ಕಮಿಷನರಿಗೆ ದಿನಕ್ಕೆ ೧೦ ರೂಪಾಯಿನ ದರದಂತೆ ರುಸುಂ ಕೊಡಬೇಕೆಂದು ಹಿಂದೆ ಮೀಟಿಂಗಿನಲ್ಲಿ ತೀರ್ಮಾನವಾಗಿ ಅವರಿಗೆ ೪೮೦ ರೂಪಾಯಿ ರುಸುಂ ಕೊಡಬಹುದೆಂದು ಗವರ್ನ್‌ಮೆಂಟಿಗೆ ಅರಿಕೆಮಾಡಿದ್ದರು. ಗವರ್ನ್‌ಮೆಂಟಿನವರು ಬೋರ್ಡಿನವರ ಈ ತೀರ್ಮಾನವನ್ನು ನೋಡಿ—ಬೆಂಗಳೂರಿನಲ್ಲಿ ಇಂಥಾ ಕೆಲಸ ಮಾಡಿದ ಕಮಿಷನರುಗಳಿಗೆ ದಿನಕ್ಕೆ ೫ ರೂಪಾಯಿಗಿಂತ ಜಾಸ್ತಿಯಾಗಿ ಕೊಡಲಿಲ್ಲ. ಮೈಸೂರು ಮ್ಯುನಿಸಿಪಾಲಿಟಿಯಲ್ಲಿ ಹಣ ಉಳಿತಾಯದೆ ಇದ್ದರೂ ೧೦ ರೂಪಾಯಿನಂತೆ ಕಮಿಷನರಿಗೆ ರುಸುಂ ಕೊಡಬೇಕೆಂದು ತೀರ್ಮಾನ ಮಾಡಿರುವುದು ಸಮಂಜಸವಾಗಿ ಕಾಣುವುದಿಲ್ಲ. ಒಬ್ಬ ಮೆಂಬರು ಅಭಿಪ್ರಾಯಪಟ್ಟಿರುವಂತೆ ಕಮಿಷನರುಗಳು ಈ ಕಾರ್ಯಗಳನ್ನು ಪ್ರಜೋಪಕಾರಕ್ಕಾಗಿ ಮಾಡತಕ್ಕದ್ದಾಗಿರೋಣದರಿಂದ ರುಸುಮನ್ನೇ ತೆಗೆದುಕೊಳ್ಳದೆ ಇದ್ದರೆ ಇನ್ನೂ ಸಂತೋಷವೇ ಸರಿ. ಆದರೂ ಸದ್ಯದಲ್ಲಿ ೪೮೦ ರೂಪಾಯನ್ನು ಅವರಿಗೆ ಕೊಡುವಂತೆ ಸ್ಯಾಂಕ್ಷನ್ ಮಾಡಿದೆ. ಇನ್ನು ಮುಂದೆ ೫ ರೂಪಾಯಿನಂತೆ ಈ ವಿಷಯಕ್ಕೆ ರುಸುಂ ಕೊಡಬಹುದು ಎಂಬೀ ರೀತಿಯಾಗಿ ಅಪ್ಪಣೆ ಕೊಡಿಸಿದರು. ಬೋರ್ಡಿನವರು ಈ ಹುಕುಮನ್ನು ಒಪ್ಪಿ ರಿಕಾರ್ಡುಮಾಡಿಕೊಂಡರು.

ರಾಜಧಾನಿಯಲ್ಲಿ ನಿತ್ಯಕಟ್ಟೆ ಬೀಳುವ ಕಚರಾವನ್ನೂ ಗೊಬ್ಬರ ಮುಂತಾದ್ದನ್ನೂ ಸಾಗಿಸಿ, ಪಟ್ಟಣದ ಹೊರಪ್ರದೇಶದಲ್ಲಿ ಶೇಖರ ಮಾಡಿ, ಅನುಕೂಲ ಬಿದ್ದ ಹಾಗೆ ಬಿಕರಿಮಾಡುವುದೇ ಮುಂತಾದ ಕಾರ್ಯಗಳನ್ನು ಚೆನ್ನಾಗಿ ನಡಸುವುದಕ್ಕೆ ಟ್ರಸ್ಟ್ ಬೋರ್ಡಿನವರು ಕೆಲವು ಕಾನೂನುಗಳನ್ನು ಮಾಡಿ, ಈ ಕಾನೂನು ಜಾರಿಯಲ್ಲಿ ತರಬಹುದೇ ಎಂದು ಮ್ಯುನಿಸಿಪಲ್ ಬೋರ್ಡಿನವರನ್ನು ಕೇಳಿದರು. ಮೆಂಬರುಗಳು ಈ ವಿಷಯವನ್ನು ಚರ್ಚೆಮಾಡಿದಾಗ್ಗೆ ಟ್ರಸ್ಟ್ ಬೋರ್ಡಿನವರು ಈ ಕಾನೂನಿನ ಪ್ರಕಾರ ರಾಜಧಾನಿಯಲ್ಲಿ ಪ್ರಜೆಗಳಿಗೆ ಹೊಸ ತೆರಿಗೆ ಹಾಕಿ ವಸೂಲ್ಮಾಡುವಂತೆ ಕಾಣುತ್ತೆಂದು ತೋರಿಬಂದದ್ದರಿಂದ ಈ ಭಾಗವನ್ನು ಈಗಲೇ ತೀರ್ಮಾನಿಸಕೂಡದೆಂತಲೂ, ಒಂದು ಸಬ್ ಕಮಿಟಿಯಲ್ಲಿ ಈ ವಿಷಯವನ್ನು ಆಲೋಚನೆ ಮಾಡಿಸಿ ರಿಪೋರ್ಟು ತರಿಸಬೇಕೆಂತಲೂ ತೀರ್ಮಾನ ಮಾಡಿ, ಅದಕ್ಕಾಗಿ ಒಂದು ಕಮಿಟಿ ಗೊತ್ತುಮಾಡಿದಾರೆ.

ದೊಡ್ಡಕೆರೆ ಏರಿಯ ಮೇಲಕ್ಕೆ ನೂರಡಿ ರಸ್ತೆಯು ಪೊಲೀಸ್ ಸ್ಟೇಷನ್ ಹಿಂಭಾಗದಲ್ಲಿ ಬಂದು ಸೇರುವ ಕಡೆ ಸೇತುವೆಯನ್ನೂ ರಸ್ತೆಯನ್ನೂ ಸುಮಾರು ಎಪ್ಪತ್ತು ಅಡಿಯಷ್ಟು ಅಗಲವಾಗಿ ಮಾಡುವುದಕ್ಕೆ ೧,೪೦೦ ರೂಪಾಯಿ ಅಂದಾಜಾ ಉಳ್ಳ ಕಾಮಗಾರಿ ಪಟ್ಟಿಯನ್ನು ಮೆಂಬರುಗಳು ನೋಡಿ, ಇದು ತುಂಬಾ ಅವಶ್ಯವಾದ ಕೆಲಸವೆಂದು ಒಪ್ಪಿ ಹಣ ಖರ್ಚುಮಾಡಬಹುದೆಂದು ತೀರ್ಮಾನ ಮಾಡಿದರು.

ಮ್ಯುನಿಸಿಪಲ್ ಮೊಹತರ್ಫಾ ಕಂದಾಯಗಳು ಕಳೆದ ಏಳುವರ್ಷಗಳಿಂದ ಸರಿಯಾಗಿ ವಸೂಲಾಗದೆ ಸುಮಾರು ೮೦,೦೦೦ ರೂಪಾಯಿ ಪ್ರಜೆಗಳ ಮೇಲೆ ಬಾಕಿ ಉಳಿಯಿತು. ಇದನ್ನು ವಸೂಲ್ಮಾಡುವುದಕ್ಕೆ ಮ್ಯುನಿಸಿಪಲ್ ಆಫೀಸ್ ಮ್ಯಾನೇಜರನ್ನು ಕಳೆದ ವರ್ಷ ಆಗೋಸ್ಟ್ ಆಖೈರು ವರೆಗೆ ಒಂಬತ್ತು ತಿಂಗಳ ತನಕ ನೇಮಿಸಿದರು. ಇವರು ತುಂಬಾ ಸಾಹಸಮಾಡಿ ೩೦,೦೦೦ ರೂಪಾಯಿವರೆಗೆ ವಸೂಲ್ಮಾಡಿದರು. ಅವರಿಗೆ ಈ ಕೆಲಸಮಾಡಿದ್ದಕ್ಕೆ ಸ್ವಲ್ಪ ಬಹುಮಾನ ಕೊಡಬೇಕೆಂದು ಗವರ್ನ್‌ಮೆಂಟಿಗೆ ಬೋರ್ಡಿನಿಂದ ಶಿಫಾರಸು ಹೋಯಿತು. ಗವರ್ನ್‌ಮೆಂಟಿನವರು—ಮ್ಯುನಿಸಿಪಾಲಿಟಿಯವರ ಅಜಾಗ್ರತೆಯಿಂದಲೂ ಮೇಲ್ವಿಚಾರಣೆ ಸರಿಯಾಗಿಲ್ಲದ್ದರಿಂದಲೂ ಇಷ್ಟು ಬಾಕಿ ನಿಲ್ಲುವಂತಾಯಿತೆಂತಲೂ ಇದನ್ನು ವಸೂಲ್ಮಾಡುವುದಕ್ಕೆ ಬಹುಮಾನ ಕೊಡಲಾಗುವುದಿಲ್ಲವೆಂತಲೂ ಹೇಳಿ ಮ್ಯುನಿಸಿಪಾಲಿಟಿಯವರ ಶಿಫಾರಸನ್ನು ಸ್ಯಾಂಕ್ಷನ್ ಮಾಡದೆಹೋದರು. ಈಚೆಗೆ ಹೊಸ ವೈಸ್ ಪ್ರೆಸಿಡೆಂಟರು ನೇಮಕವಾಗಿ ಬಂದ ಮೇಲೆ ಇವರು ತೆರಿಗೆ ಮುತ್ಸದ್ದೀರನ್ನೂ ಆಫೀಸಿನ ಬೇರೆ ಕೆಲವು ನೌಕರರನ್ನೂ ತೆರಿಗೆ ಬಾಕಿ ವಸೂಲಿಗೆ ಬಿಟ್ಟು ಇರುತ್ತಾರೆ. ಈ ನೌಕರರು ಕಳೆದ ಡಿಸೆಂಬರ್ ಲಾಗಾಯತು ಇದೇ ಜೂನ್ ತಿಂಗಳ ತನಕ ಸಾಹಸಪಟ್ಟು ೨೬,೯೦೦ ಚಿಲ್ಲರೆ ರೂಪಾಯಿ ವಸೂಲ್ಮಾಡಿದಾರೆ. ಇನ್ನೂ ೩೦,೦೦೦ ರೂಪಾಯಿ ವಸೂಲಾಗದೆ ಬಾಕಿ ಉಳಿದಿರುತ್ತೆ. ವೈಸ್ ಪ್ರೆಸಿಡೆಂಟರು ಈ ನೌಕರರೆಲ್ಲಾ ತುಂಬಾ ಕಷ್ಟಪಟ್ಟು ಹಣ ವಸೂಲ್ಮಾಡಿದ್ದಾರಾದಕಾರಣ ಇವರಿಗೆ ಏನಾದರೂ ಅಲ್ಪ ಸ್ವಲ್ಪ ಇನಾಂ ಕೊಟ್ಟು ಪ್ರೋತ್ಸಾಹಪಡಿಸಬೇಕೆಂದೂ ಬೆಂಗಳೂರಿನಲ್ಲಿ ಇದೇ ರೀತಿ ಬಹುಮಾನ ಕೊಟ್ಟಿದೆ ಎಂದೂ ಸೂಚಿಸಿದರು. ಡಾ॥ ಅಚ್ಯುತರಾಯರೂ, ಮೆ॥ ರಂಗಯ್ಯಂಗಾರರೂ, ಮೆ॥ ವೀರ್ ಯವರೂ—ಹೀಗೆ ಬಹುಮಾನ ಕೊಡುವುದು ಯೋಗ್ಯವಾದ ಪದ್ಧತಿಯಲ್ಲ, ಮುಂದಕ್ಕೂ ಹೀಗೆಯೇ ಬಾಕಿ ಉಳಿಯುವುದಕ್ಕೆ ಕಾರಣವಾದೀತು. ಇದು ಕೆಟ್ಟ ಮೇಲ್ಪಂಕ್ತಿ. ಇನಾಂ ಕೊಡುವುದನ್ನು ನಾವು ಒಪ್ಪಲಾರೆವು ಎಂತಲೂ, ಮೆ॥ ಅಂಬಳೇ [illegible]ರೂ ಮೆ॥ ನರಸಿಂಹಸ್ವಾಮಿಗಳೂ, ಮೆ॥ ರಾಘವಾಚಾರ್ಯರೇ ಮುಂತಾದವರು—ಈಗಿರುವ ತೆರಿಗೆ ಬಾಕಿಯನ್ನೆಲ್ಲಾ ಪೂರ್ತಾ ವಸೂಲ್ಮಾಡಿದರೆ ಆ ಮೇಲೆ ಬಹುಮಾನ ಕೊಡುವ ವಿಷಯ ಯೋಚಿಸುವುದು ಯುಕ್ತವಾಗಿ ಕಾಣುತ್ತೆಂತಲೂ ಹೇಳಿದರು. ಕಡೆಯಲ್ಲಿ ಈ ಬಹುಮಾನ ಕೊಡತಕ್ಕ ವಿಚಾರವನ್ನು ಇನ್ನು ಮುಂದೆ ಚರ್ಚಿಸೋಣವೆಂದು ಬಹು ಮಂದಿ ಅಭಿಪ್ರಾಯಪಟ್ಟದ್ದರಿಂದ ಆ ರೀತಿ ತೀರ್ಮಾನವಾಯಿತು.

ಲಷ್ಕರ್ ಮೊಹಲ್ಲಾ ಮ್ಯುನಿಸಿಪಲ್ ಕಮಿಷನರಾಗಿದ್ದ ಮೆ॥ ಅಬೂಬಕರ್ ಸೇಟರವರು ಕಾಲವಾದ್ದರಿಂದ ಅವರ ಸ್ಥಾನಕ್ಕೆ ಬೇರೊಬ್ಬರನ್ನು ನೇಮಿಸಬೇಕಾಗಿದೆ ಎಂದು ವೈಸ್ ಪ್ರೆಸಿಡೆಂಟರು ಸೂಚಿಸಿದರು. ಸಕ್ಕರೆ ಕಾರ್ಖಾನೆಯ ಮೆ॥ ರಹಿಮ್ ಉಲ್ಲಾ ಅಹಮದ್ ಸೇಟರನ್ನು ಮುಂದೆ ಹೊಸ ಚುನಾವಣೆ ಆಗುವ ತನಕ ಆ ಮೊಹಲಾದ ಮ್ಯುನಿಸಿಪಲ್ ಕಮಿಷನರಾಗಿ ನೇಮಿಸಬಹುದೆಂದು ಮೆಂಬರುಗಳೆಲ್ಲಾ ಅಭಿಪ್ರಾಯಪಟ್ಟರು.

ಮತಾಂತರವನ್ನು ಅವಲಂಬಿಸುವ ಮಗನ ಹಕ್ಕು ಬಾಧ್ಯತೆಯ ವಿಚಾರ —I.

[ಒಬ್ಬಾನೊಬ್ಬ ಹಿಂದುವು ಬರೆಯುವುದು.]

[ಹಿಂದೂ ಧರ್ಮಶಾಸ್ತ್ರದಲ್ಲಿ ಒಬ್ಬನು ತನ್ನ ತಂದೆಯ ಮತವನ್ನು ಬಿಟ್ಟು ಅನ್ಯಮತವನ್ನು ಅವಲಂಬಿಸಿದರೆ ತನ್ನ ತಂದೆಯ ಆಸ್ತಿವಿಚಾರವಾದ ಹಕ್ಕು ಬಾಧ್ಯತೆಯನ್ನೆಲ್ಲಾ ಕಳಕೊಳ್ಳುತ್ತಾನೆಂದು ಈಗ ಕೆಲವರು ಚರ್ಚಿಸುತ್ತಾ ಇರುತ್ತಾರಷ್ಟೆ. ಇವರು ಈ ಚರ್ಚೆಯನ್ನು ಎರಡು ಕಡೆಗಳಲ್ಲಿಯೂ ವಿಚಾರಪೂರ್ವಕವಾಗಿ ಸಾಧಿಸುತ್ತಾ ಬರುತ್ತಾರೆಂಬುವದನ್ನು ನಂಬುವದಕ್ಕೆ ಆಸ್ಪದವಿಲ್ಲವೆಂದು ನಾವು ಗೊತ್ತುಮಾಡುವದಕ್ಕೆ ಅನೇಕ ಕಾರಣಗಳುಂಟು.

[ಈ ನಮ್ಮ ದೇಶದಲ್ಲಿ ವೈಷ್ಣವ ಮತ, ಶೈವಮತ, ಬೌದ್ಧ ಮತ, ನಾಸ್ತಿಕಮತ, ಮಹಮ್ಮದೀಯ ಮತ, ಇತ್ಯಾದಿ ಅನೇಕ ಮತಗಳು ಉಂಟಷ್ಟೆ. ಈ ಮತಗಳು ಪರಸ್ಪರ ಸಂಬಂಧವಿಲ್ಲದೆ ಒಂದಕ್ಕೊಂದು ವಿರೋಧವಾಗಿ ಇರುವದನ್ನು ನಾವು ಸಿದ್ಧಾಂತಮಾಡಲವಶ್ಯವಿಲ್ಲ. ವಿಷ್ಣುಮತಸ್ಥರಲ್ಲಿ ಕೆಲವರು ಶೈವ ಮತವನ್ನು ವಿಶೇಷಿಸಿ ಶೈವಮತಸ್ಥರಾದದ್ದುಂಟು. ಹಾಗೆಯೇ ಶೈವ ಮತಸ್ಥರಲ್ಲಿ ಕೆಲವರು ವಿಷ್ಣುಮತವೇ ಸತ್ಯವಾದದ್ದೆಂದು ನಂಬಿ ಶೈವಮತವನ್ನು ಬಿಟ್ಟು ವೈಷ್ಣವ ಮತವನ್ನು ಅವಲಂಬಿಸಿದ್ದಾರೆ. ಇನ್ನು ಕೆಲವರು ಮೇಲ್ಕಂಡ ಎರಡು ಮತಗಳನ್ನೂ ಬಿಟ್ಟು ನಾಸ್ತಿಕ ಮತಕ್ಕೆ ಸೇರಿ ನಾಸ್ತಿಕರಾಗಿದ್ದಾರೆ. ಕೆಲವರು ಮಹಮ್ಮದ್ ಮತವನ್ನು ಪ್ರೀತಿಸಿ ತುರುಕರಾಗಿದ್ದಾರೆ. ಇಂಥಾ ಆಚರಣೆಯನ್ನು ಈಗಿನ ಕಾಲದವರು ಮಾತ್ರ ಕೈಕೊಳ್ಳುತ್ತಾ ಬರುತ್ತಾರೆಂದು ಊಹಿಸಬಾರದು. ಹಿಂದೂ ಇತಿಹಾಸಗಳನ್ನು ಪಕ್ಷಪಾತವಿಲ್ಲದೆ ವಿಚಾರಿಸುವವರು ಮತಾಂತರವನ್ನು ಅವಲಂಬಿಸುವದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ ಎಂದು ಕಂಡುಕೊಳ್ಳುತ್ತಾರೆಂಬುವದಕ್ಕೆ ಏನೇನೂ ಸಂಶಯವಿರುವದಿಲ್ಲ. ಹೀಗಿದ್ದರೆ ಮತಾಂತರವನ್ನು ಅವಲಂಬಿಸಿರುವ ಅವರುಗಳೆಲ್ಲಾ ತಮ್ಮ ಪೂರ್ವ ಮತವನ್ನು ಬಿಟ್ಟದ್ದಕ್ಕಾಗಿ ತಮ್ಮ ರಕ್ತಸಂಬಂಧವನ್ನೂ ತಮ್ಮ ತಂದೆಗಳ ಆಸ್ತಿ ವಿಚಾರವಾದ ಹಕ್ಕು ಬಾಧ್ಯತೆಗಳನ್ನೂ ಹೋಗಲಾಡಿಸಿಕೊಂಡಿದ್ದಾರೋ? ಇಂಥಾ ನಿರ್ಬಂಧ ಅವರಿಗೆ ಉಂಟಾಗಿತ್ತೋ? ಎಷ್ಟುಮಾತ್ರಕ್ಕೂ ಇಲ್ಲವೇ ಇಲ್ಲ. ಹೀಗಿದ್ದರೆ ಕ್ರೈಸ್ತ ಮತವನ್ನು ಅವಲಂಬಿಸಿದವರಿಗೆ ಯಾತಕ್ಕೆ ಈ ನಿರ್ಬಂಧವಿರಬೇಕು ?

[ಇವುಗಳಲ್ಲದೆ ತಂದೆ ಮಕ್ಕಳ ರಕ್ತ ಸಂಬಂಧವೂ ಈ ಸಂಬಂಧಕ್ಕೆ ಒಳಪಟ್ಟಿರುವ ಹಕ್ಕು ಬಾಧ್ಯತೆಗಳೂ ಭಗವತ್ಸಂಕಲ್ಪವಾದದ್ದೇ ಹೊರ್ತು ಮನುಷ್ಯರ ನೇಮಕವಲ್ಲವಾದಕಾರಣ ಸ್ವಭಾವಸಿದ್ಧವಾದದ್ದೇ ಸರಿ. ಈ ಹಕ್ಕುಬಾಧ್ಯತೆಗಳನ್ನು ಮಾನುಷಕಲ್ಪವಾದ ಮತಾಚಾರಗಳಿಂದ ರದ್ದುಪಡಿಸುವದಕ್ಕೆ ಪ್ರಯತ್ನಿಸುವದು ಬಹು ಅನ್ಯಾಯವಾದದ್ದೆಂದು ಎರಡು ಪಕ್ಷಗಳನ್ನೂ ನೀತಿಯಿಂದ ತೂಗಿ ನೋಡುವಂಥಾ ಮತ್ತು ಪಕ್ಷಪಾತವಿಲ್ಲದೆ ವಿಚಾರಿಸಿ ಗೊತ್ತುಮಾಡುವಂಥಾ ನ್ಯಾಯವಾದಿಗಳು ನಮ್ಮ ಹಿಂದೂ ಜನರಲ್ಲಿಯೇ ಇದ್ದಾರೆ. ಅಂಥವರಲ್ಲಿ ಕೆಲವರು ಮೇಲ್ಕಂಡ ಮತಾಂತರವನ್ನು ಅವಲಂಬಿಸಿರುವವರ ಹಕ್ಕು ಬಾಧ್ಯತೆಯನ್ನು ಚೆನ್ನಾಗಿ ಪರಿಶೀಲನೆ ಮಾಡಿ, ಇದರ ವಿಷಯವಾದ ವಿಚಾರಣೆಯನ್ನೂ ಅದರ ತೀರ್ಮಾನವನ್ನೂ ಬರೆದು, ಆ ಲೇಖನವನ್ನು ನಮ್ಮ ಬಳಿಗೆ ಕಳುಹಿಸಿದ್ದಾರೆ. ನಾವು ಆ ಲೇಖನವನ್ನು ಅವರು ಕಳುಹಿಸಿದಂತೆಯೇ ಇದರಲ್ಲಿ ಪ್ರಕಟಿಸುತ್ತೇವೆ. ಇನ್ನು ಮುಂದೆಯೂ ನಮ್ಮ ವಾಚಕರ ತಿಳುವಳಿಕೆಗಾಗಿ ಇಂಥಾ ಲೇಖನಗಳನ್ನು ಛಾಪಿಸಬೇಕೆಂದಿರುತ್ತೇವೆ. ಮಾನ್ಯರಾದ ವಾಚಕರೆಲ್ಲರೂ ಪಕ್ಷಪಾತವನ್ನು ತೊರೆದುಬಿಟ್ಟು, ನ್ಯಾಯವಾಗಿ ವಿಚಾರಣೆ ಮಾಡಬೇಕೆಂಬುವದೇ ನಮ್ಮ ಅಪೇಕ್ಷೆಯಾಗಿದೆ.—ಎಡಿ.]

ಈಗಿನ ಜನರೊಳಗೆ ಕೆಲವರು ಮತಭ್ರಷ್ಟರಿಗೆ ಪಿತ್ರಾರ್ಜಿತ ಸ್ವತ್ತಿನ ಹಕ್ಕು ಬಾಧ್ಯತೆಯೇ ಇಲ್ಲವೆಂತಲೂ ಕೆಲವರು ಉಂಟೆಂತಲೂ ವಾದಿಸುತ್ತಿರುವರಷ್ಟೆ. ಇದರ ವಿಷಯದಲ್ಲಿ ಧರ್ಮ ವಿಚಾರವು ಅವಶ್ಯವೆಂಬು ಆ ಉಭಯ ಪಕ್ಷದವರೂ ಲಕ್ಷ್ಯವಿಡಬೇಕಾದ ಕೆಲವು ಕಾರಣಗಳು ಇದರಲ್ಲಿ ತೋರ್ಪಡಿಸೋಣಾಗಿರುತ್ತವೆ. ಆ ಕಾರಣಗಳು ತಿಳಿದ ಬಳಿಕ ಸಾಧಾರಣ ಜನರುಗಳೂ ಇದು ಹೀಗೆಯೇ ಸರಿಯೆಂದು ನಿರ್ಣಯಿಸಬಹುದಾಗಿದೆ.

ಮತದ ಮುಖ್ಯಸ್ಥರು ತಮ್ಮ ಮತಾಚಾರಗಳನ್ನು ತ್ಯಜಿಸಿ ಇತರ ಮತಾವಲಂಬನವನ್ನು ಮಾಡಿದವರನ್ನು ಮತದಿಂದ ಹೊರಗು ಮಾಡಿಬಿಡುವದು ಪೂರ್ವದಿಂದಲೂ ನಡೆದುಬಂದಿರುವ ಸಂಪ್ರದಾಯವಾಗಿದೆ. ಆದರೆ ಸ್ವತ್ತು ಮತಕ್ಕೆ ಸಂಬಂಧಪಟ್ಟದ್ದಲ್ಲವಾದಕಾರಣ ಮತದ ಮುಖ್ಯಸ್ಥರು ಮತಾಚಾರಗಳ ಹಕ್ಕನ್ನು ಮಾತ್ರ ಮತಭ್ರಷ್ಟನಿಗೆ ಇಲ್ಲದಂತೆ ಮಾಡಬೇಕಾಗುತ್ತದೆಯೇ ಹೊರ್ತು ಸ್ವತ್ತಿನ ಹಕ್ಕು ಬಾಧ್ಯತೆಯನ್ನು ತಪ್ಪಿಸುವ ಅಧಿಕಾರವುಳ್ಳವರಾಗಲಾರರು. ಮತ್ತು ಪಿತ್ರಾರ್ಜಿತ ಸ್ವತ್ತಿನ ಹಕ್ಕುಬಾಧ್ಯತೆಯ ವ್ಯವಸ್ಥೆಯು ಸರ್ಕಾರದ ನ್ಯಾಯನಿಬಂಧನೆಯಿಂದ ಸ್ಥಿರಪಡಬೇಕಲ್ಲದೆ ಮತಸ್ಥರಿಗೆ ಸಂಬಂಧಪಟ್ಟದ್ದಲ್ಲವು.

ಹಿಂದುಗಳಿಗೆ ಪಿತ್ರಾರ್ಜಿತದ ಹಕ್ಕು ಬಾಧ್ಯತೆ ಅವರವರ ಜನ್ಮದಿಂದಲೇ ಸ್ವತಸ್ಸಿದ್ಧವಾದದ್ದು. ಮತವಾದರೋ ಜ್ಞಾನೋದಯದಿಂದ ಉಂಟಾಗತಕ್ಕದ್ದಾಗಿರುತ್ತದೆ. ಪ್ರತಿ ಮನುಷ್ಯನೂ ಪುತ್ರಸಂತತಿಯನ್ನು ಪಡೆದೇ ಪಿತೃಗಳ ಋಣದಿಂದ ವಿಮುಕ್ತನಾಗಬೇಕೆಂತಲೂ ಪುತ್ರಸಂತಾನವಿಲ್ಲದವನು ಪಿತೃಗಳ ಋಣವುಳ್ಳವನಾಗಿರುವನೆಂತಲೂ ಧರ್ಮಶಾಸ್ತ್ರದಲ್ಲಿ ಹೇಳಿರುತ್ತದೆ. ಆದ್ದರಿಂದ ಹುಟ್ಟಿದವರೆಲ್ಲಾ ತಂತಮ್ಮ ಜನ್ಮದಿಂದಲೇ ತಂದೆಗಳನ್ನು ಪಿತೃಗಳ ಸಾಲದಿಂದ ಬಿಡಿಸಿ ಅವರ ಸ್ವತ್ತಿಗೆ ಬಾಧ್ಯರಾಗುವರು. ಆದರಿಂದ ಜನ್ಮಪ್ರಾಪ್ತವಾದ ಹಕ್ಕು ಬಾಧ್ಯತೆ ಸ್ವತಸ್ಸಿದ್ಧವಾದದ್ದಾದಕಾರಣ ಅದನ್ನು ರದ್ದುಮಾಡುವುದು ಅನ್ಯಾಯವು.

ಒಬ್ಬನು ಮತಭ್ರಷ್ಟನಾದರೆ ಅವನ ಹೆಂಡತಿ ಮಾಂಗಲ್ಯವನ್ನು ಕಿತ್ತು ಬಿಸಾಟು ಶಿರೋಮುಂಡನಾದಿ ವೈಧವ್ಯಚಿಹ್ನೆಗಳನ್ನು ಹೊಂದುವಳೋ? ಅವನು ಸತ್ತರೆ ಅವನ ಜ್ಞಾತಿ ಬಾಂಧವರಿಗೆ ವ್ಯಾಶೌಚಗಳು ಅವರ ಕ್ರಿಯೆ ಮೊದಲಾದವುಗಳು ಸಹ ಇಲ್ಲವೆಂದು ಹೇಳಲಿಕ್ಕೆ ವೃದ್ಧಾಚರಣೆಯೂ ಶಾಸ್ತ್ರಪ್ರಮಾಣವೂ ಉಂಟೋ? ಮತಭ್ರಷ್ಟನ ರಕ್ತಸಂಬಂಧವನ್ನು ಇಲ್ಲದಂತೆ ಮಾಡಲಿಕ್ಕೆ ಯಾವನಿಂದಲಾದರೂ ಸಾಧ್ಯವೋ! ತಂದೆ ತಾಯಿಗಳು, ಸಹೋದರರು, ಪತ್ನೀಪುತ್ರರು ಮೊದಲಾದ ಬಂಧುತ್ವದ ಹೆಸರುಗಳು ರಕ್ತಸಂಬಂಧದಿಂದಲೇ ಸ್ವತಸ್ಸಿದ್ಧವಾಗಿರುತ್ತಾ, ಸ್ವತ್ತಿನ ಹಕ್ಕು ಬಾಧ್ಯತೆಯನ್ನು ಹಾರಿಸುವುದಕ್ಕೆ ಮಾತ್ರ ರಕ್ತರಿಂದಲೂ ಬಂಧುತ್ವದ ಹೆಸರುಗಳನ್ನು ತಪ್ಪಿಸಲಸಾಧ್ಯವೆಂದೂ ವಾದಿಸುವುದು ನ್ಯಾಯವಾಗಿದ್ದೀತೇ?

ಲೋಕದಲ್ಲಿ ಅಸತ್ಯ, ವ್ಯಭಿಚಾರ, ಕಳವು, ಕೊಲೆ ಮೊದಲಾದ ಅಕೃತ್ಯಗಳನ್ನು ಮಾಡಿದವರಿಗೆ ಸರ್ಕಾರದವರು ಅಪರಾಧಾನುಸಾರವಾದ ಶಿಕ್ಷೆಯನ್ನು ವಿಧಿಸಿ, ಕಾರಾಗೃಹಕ್ಕೆ ಸೇರಿಸುವರಷ್ಟೆ. ಇಂಥವರಿಗೆಲ್ಲಾ ಪಿತ್ರಾರ್ಜಿತ ಸ್ವತ್ತಿನ ಹಕ್ಕು ಬಾಧ್ಯತೆ ಇಲ್ಲವೆಂದೂ ಸಾಧಿಸುವುದು ಮೂರ್ಖಲಾಪವಲ್ಲವೇ? ಆದಿಯಿಂದ ಇಂದಿನವರೆಗೂ ಯಾವ ಮತಭ್ರಷ್ಟನಾದರೂ ತನ್ನ ಹಕ್ಕನ್ನು ಕಳೆದುಕೊಂಡಿಲ್ಲ. ಯಾವ ಸರ್ಕಾರದವರೂ ಅದನ್ನು ರದ್ದುಮಾಡಿದ್ದಿಲ್ಲ.

ಪಿತ್ರಾರ್ಜಿತದ ಹಕ್ಕುಬಾಧ್ಯತೆಯು ಮತಾಚಾರ ಸಂಬಂಧವಾದದ್ದೋ ಅಥವಾ ಅದು ಪಿತೃಗಳ ರಕ್ತಸಂಬಂಧಬಂದಾದದ್ದೋ ಎಂಬ ಪ್ರಶ್ನೆಯೇ ಬೇಕಿಲ್ಲ. ಯಾವನಾದರೂ ಅನ್ಯಮತಾಚಾರವುಳ್ಳವನಾದರೆ ಆ ಅನ್ಯನು ತಂದೆಯಾದಾನೇ? ಅಥವಾ ಇತರ ಬಂಧುವಾದಗೂ ಅದನ್ನೇ ಹಕ್ಕು ಬಾಧ್ಯತೆಯನ್ನು ಆಚಾರದಿಂದ ಕಳೆಯಕೂಡದು; ಆದರೆ ಮತವನ್ನು ಆಚಾರದಿಂದ ಬಿಡಬಹುದು; ಇಲ್ಲವೇ, ಪಡೆಯಬಹುದು.

ಹಿರಣ್ಯಕಶಿಪು ಶೈವಮತದವನು; ಅವನ ಮಗನಾದ ಪ್ರಹ್ಲಾದನು ವೈಷ್ಣವ ಮತದವನು. ಇವನಿಗೆ ತಂದೆಯ ಸ್ವತ್ತಿನ ಹಕ್ಕು ಬಾಧ್ಯತೆ ಉಂಟಾಗಲಿಲ್ಲವೇ? ಯುಗಾಂತರದ ಕಥೆಗಳಲ್ಲಿ ಇಂಥಾ ದೃಷ್ಟಾಂತಗಳು ಎಷ್ಟೆಷ್ಟೋ ಇವೆ ಮತ್ತು ಈ ಯುಗದಲ್ಲೂ ಹಿಂದಕ್ಕೆ ಅನೇಕ ಹಿಂದುಗಳು ತುರುಕರ ಮತಕ್ಕೆ ಸೇರಿ ಮತಭ್ರಷ್ಟರಾಗಿಯೂ ತಮ್ಮ ತಮ್ಮ ಪಿತ್ರಾರ್ಜಿತ ಸ್ವತ್ತುಗಳಿಗೆ ಬಾಧ್ಯರಾಗಿದ್ದ ಸಂಗತಿಗಳು ಈಗಿನ ಚರಿತ್ರೆಗಳಲ್ಲಿ ಬೇಕಾದಷ್ಟು ತೋರಬರುವವು. ಮತಭ್ರಷ್ಟರಿಗೆ ಪಿತ್ರಾರ್ಜಿತ ಸ್ವತ್ತುಗಳ ಹಕ್ಕು ಬಾಧ್ಯತೆ ಇಲ್ಲವೆಂಬು ವಾದಿಸುವ ಶಾಸ್ತ್ರ ಪ್ರಮಾಣಗಳು ಹಿಂದಣವುಗಳೋ ಈಗಿನವುಗಳೋ? ಯಾವುದನ್ನು ಸಾಧಿಸಿದರೂ ಮತಭ್ರಷ್ಟನ ಹಕ್ಕು ಬಾಧ್ಯತೆಗೆ ಎಂದಿಗೂ ಕುಂದಿಲ್ಲ.

ಸರ್ಕಾರದವರು ಅಪರಾಧಾನುಗುಣವಾಗಿ ದಂಡನೆಗಳನ್ನು ವಿಧಿಸುವ ರೀತಿಯಲ್ಲಿ ಮತದವರು ಸಹ ಅನಾಚಾರಗಳಿಗೆ ತಕ್ಕ ಪ್ರಾಯಶ್ಚಿತ್ತಗಳನ್ನು ವಿಧಿಸಲಿಕ್ಕೆ ಶಾಸ್ತ್ರಪ್ರಮಾಣಗಳುಂಟು. ಆದರೆ ಜನ್ಮಪ್ರಾಪ್ತವಾದ ಹಕ್ಕನ್ನು ರದ್ದುಮಾಡಬೇಕಾದರೆ ಮೊದಲು ಜನ್ಮವನ್ನೇ ರದ್ದುಮಾಡಬೇಕಷ್ಟೆ! ಶಾರೀರಕ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಪ್ರತಿ ನರಗಳೊಳಗೂ ಸಂಬಂಧಿಸಿರುವ ಪಿತೃರಕ್ತವನ್ನು ಬೇರ್ಪಡಿಸಬಲ್ಲಾತನೇ ಮಗನಿಗಿರುವ ತಂದೆಯ ಸ್ವತ್ತಿನ ಹಕ್ಕು ಬಾಧ್ಯತೆಯನ್ನು ರದ್ದುಮಾಡಲಿಕ್ಕೆ ಶಕ್ತನಾಗಿರತಕ್ಕದ್ದು.

ಒಂದು ವೇಳೆ ತಂದೆ ಜೀವವಂತನಾಗಿದ್ದರೆ ಅವನು ಸ್ವಾರ್ಜಿತ ಸ್ವತ್ತಿಗೆ ಮಾತ್ರವೇ ಬಾಧ್ಯನಲ್ಲದೆ, ಅವನ ಪಿತ್ರಾರ್ಜಿತಕ್ಕೆ ಮೊಮ್ಮಗನೇ ಹಕ್ಕುದಾರನಾಗಿರುವುದರಿಂದ ಅದರ ಮೇಲೆ ಅಧಿಕಾರವಿಲ್ಲದವನಾಗುತ್ತಾನೆ. ಮತಭ್ರಷ್ಟನು ತಂದೆಯಿರುವಾಗ್ಗೆ ಆತಂದಿರ ಸ್ವತ್ತಿಗೂ ತಂದೆಯ ಕಾಲಾನಂತರ ತಂದೆಯ ಸ್ವತ್ತಿಗೂ ಬಾಧ್ಯನೆಂಬುವುದಕ್ಕೆ ಯಾರ ಅಡ್ಡಿಯೂ ಇಲ್ಲ.

ಮತಭ್ರಷ್ಟರಾದ ಅನೇಕರು ತಮ್ಮೊಂದಿಗೆ ಸೇರದಿದ್ದ ಹೆಂಡತಿಯರಿಗೆ ಜೀವನಾಂಶಗಳನ್ನು ಕೊಡುತ್ತಾ ಬರುವುದು ಈಗಿನ ಆಚರಣೆಯಲ್ಲಿದೆ. ಇದರಿಂದಲೂ ಮತಭ್ರಷ್ಟನು ಪಿತ್ರಾರ್ಜಿತಕ್ಕೆ ಹಕ್ಕುದಾರನೆಂದು ಸಿದ್ಧಾಂತಪಡಿಸಬಹುದು.

ಮೇಲಿನ ಕಾರಣಗಳನ್ನು ಪರ್ಯಾಲೋಚಿಸುವಲ್ಲಿ ಮತಭ್ರಷ್ಟನಿಗೆ ಪಿತ್ರಾರ್ಜಿತ ಸ್ವತ್ತಿನ ಹಕ್ಕು ಬಾಧ್ಯತೆ ಸ್ವತಸ್ಸಿದ್ಧವಾದದ್ದೆಂತಲೂ ಜನನ ಮಾತ್ರದಿಂದಲೇ ಪಿತೃಗಳ ಋಣವನ್ನು ಪರಿಹರಿಸಿದ್ದರಿಂದ ಉಂಟಾದ ಬಾಧ್ಯತೆಯೆಂತಲೂ ನಿರ್ಣಯವಾಗುತ್ತಿದೆ.

ಧರ್ಮವಿಚಾರಿ.

ಮನಸ್ಸಾಕ್ಷಿ.

V.—ಅಪರ ಸಮಾಧಾನಸ್ಥಿತಿ.

ಯಾವನಾದರೊಬ್ಬ ಮನುಷ್ಯನು ಯಾವದೋ ಒಂದು ಮಹಾಪಾತಕ್ಕೃತ್ಯವನ್ನು ಮಾಡಿದನೆಂದು ಊಹಿಸೋಣ. ಅವನಿಗೆ ಭಗವಂತನು ಮನಸ್ಸಾಕ್ಷಿಯ ಮುಖಾಂತರ—ಎಲಾ, ಇಂಥಿಂಥ ಪಾಪಕೃತ್ಯವನ್ನು ಮಾಡಿದ ಅಪರಾಧವು ನಿನ್ನದೇ! ಎಂದು ಅಲಗು ನೆಟ್ಟಂತೆ ತಿಳಿಸಲಾಗಿ ಅವನು ಹೃದಯದಲ್ಲಿ ಇರಿಯಲ್ಪಟ್ಟು—ಹೌದು, ಆ ಪಾಪವನ್ನು ಮಾಡಿ ಭಗವಂತನ ಸಮುಖದಲ್ಲಿ ಪಾಪಿಯಾಗಿರುತ್ತೇನೆ ಎಂದು ಒಪ್ಪಿಕೊಳ್ಳುತ್ತಾನೆಂತಲೂ ತಿಳಿಯೋಣ. ಇದ್ದಾದ ಮೇಲೆ ಆ ಮನುಷ್ಯನ ಮನಸ್ಸಿನಲ್ಲಿ ನಡೆಯುವ ಸ್ಥಿತ್ಯಂತರವೇನು? ಏನೆಂದು ಕೇಳಿದರೆ ಮೊದಲು ಸಮಾಧಾನಸ್ಥಿತಿಯಲ್ಲಿದ್ದ ಮನಸ್ಸಾಕ್ಷಿಯು ಈಗ ತಳಮಳಗೊಂಡು ಅಸಮಾಧಾನ ಸ್ಥಿತಿಯನ್ನು ಹೊಂದಿದ್ದಾಗುವದಲ್ಲವೇ? ಗೊತ್ತಾದ ಅಪರಾಧವನ್ನು ತಿಳಿದು ಇಂಥ ಅಸಮಾಧಾನಸ್ಥಿತಿಯನ್ನು ತರುವದಲ್ಲವೇ? ಹಾಗಾದರೆ ಅಪರಾಧವೆಂದರೇನು? ನಮ್ಮ ಕರ್ತವ್ಯವಾವುದೋ ಅದಕ್ಕೆ ವ್ಯತಿರಿಕ್ತವಾಗಿ ನಡೆದಿದ್ದೇವೆಂದು ತಿಳಿಯೋಣದರ ದೆಸೆಯಿಂದ ಮನಸ್ಸಿನಲ್ಲುಂಟಾಗತಕ್ಕ ವ್ಯಥೆಯೋ! ಅಲ್ಲ. ಅನೇಕರಿಗೆ ಅಕೃತ್ಯವನ್ನು ಮಾಡಿದ್ದೇವೆಂಬ ತಿಳುವಳಿಕೆಯು ಮನಸ್ಸಿಗೆ ಚನ್ನಾಗಿ ತಟ್ಟಿದ್ದಾಗ್ಯೂ ಅವರಲ್ಲಿ ಮನೋವ್ಯಥೆಯೆಂಬುದೇ ಇರುವದಿಲ್ಲ. ಭಗವಂತನ ಕಟ್ಟಳೆಯನ್ನು ಉಲ್ಲಂಘಿಸಿದ್ದರಿಂದ ಯಾವ ಪಾಪಕೃತ್ಯವುಂಟಾಯಿತೋ ಆ ಪಾಪಕೃತ್ಯದ ಫಲವೇ ಅಪರಾಧವಾಗಿದೆ. ಪಾಪದ ಫಲವು ಹಲವು ಬಗೆಯಾಗಿರುವದು. ಪಾಪದ ದೆಸೆಯಿಂದ ಪರಿಹರಿಸಲಾರದ ಕೇಡು ನಮಗೆ ಸಂಭವಿಸಬಹುದು. ಅಥವಾ ಆ ಪಾಪದಿಂದ ಅಂಥ ಕೇಡು ಇತರರಿಗೂ ಸಂಭವಿಸಬಹುದು. ಇದಂತಿರಲಿ, ಪಾಪದಿಂದ ಯಾರಿಗೆ ಯಾವ ಕೇಡು ಸಂಭವಿಸಿದರೂ ದೊಡ್ಡ ವಿಷಯವಲ್ಲ. ಮುಖ್ಯವಾಗಿ ತಿಳಿಯತಕ್ಕದ್ದೇನಂದರೆ—ಸಕಲ ಪಾಪವೂ ಭಗವಂತನಿಗೆ ವಿರೋಧವಾದ ಕೃತ್ಯವಾದುದರಿಂದಲೇ ಅದು ಹೇಯವಾದುದೆಂದು ತಿಳಿಯತಕ್ಕದ್ದು. ಯಾವನು ಪಾಪವನ್ನು ಮಾಡುತ್ತಾನೋ ಅವನು ದೇವರಿಗೆ ವಿರೋಧಿಯಾಗುತ್ತಾನೆ. ಪಾಪದ ಅಪರಾಧವುಳ್ಳವನಾಗಿರುವದೆಂದರೆ ದೇವರಲ್ಲಿ ವಿರೋಧವನ್ನು ಕಟ್ಟಿಕೊಳ್ಳುವದೇ ಆಗಿದೆ.

ಜನರು ಸಾಧಾರಣವಾಗಿ ಘೋರವಾದ ಪಾಪವೆಂದು ಹೇಳುವರಲ್ಲವೇ? ಘೋರವಾದ ಪಾಪವೊಂದರಲ್ಲಿ ಮೂರು ಮುಖ್ಯವಾದ ಅಂಶಗಳನ್ನು ಗ್ರಹಿಸಬೇಕಾಗಿದೆ. ಅವು ಯಾವವೆಂದರೆ—೧. ಆ ಕೃತ್ಯದಲ್ಲಿ ದೇವರ ಚಿತ್ತ ಎಂಥಾದ್ದಾಗಿತ್ತೆಂದು ಪ್ರಕಟವಾಗಬೇಕು. ೨. ಆ ಕೃತ್ಯವನ್ನು ಮಾಡುವವನಿಗೆ ದೇವರ ಚಿತ್ತ ಎಂಥಾದ್ದೆಂದು ಗೊತ್ತಾಗಬೇಕು. ೩. ಅವನು ಆ ಕೃತ್ಯವನ್ನು ತಿಳಿದೂ ತಿಳಿದು ಮಾಡಬೇಕು. ಇಂಥ ಘೋರ ಪಾಪವನ್ನು ಮಾಡಿದವನಲ್ಲಿ ಮನಸ್ಸಾಕ್ಷಿಯು ತಕ್ಕಷ್ಟು ಬೆಳಕನ್ನು ಹೊಂದಿ ಆ ಪಾಪಸ್ಥಿತಿಯನ್ನು ತಿಳುವಳಿಕೆಗೆ ತರುವದಾದರೆ ಆ ಪಾಪಿಷ್ಠನಲ್ಲಿ ಸಮಾಧಾನಸ್ಥಿತಿಯಿರಲಾರದು. ಇಂಥ ಅಸಮಾಧಾನಸ್ಥಿತಿಯುಳ್ಳವನಿಗೆ ಬೇಕಾದದ್ದೇನು? ಅವನಿಗೆ ಸಮಾಧಾನಸ್ಥಿತಿಯೇ ಬೇಕಾಗಿರುತ್ತದೆ. ಇದು ಲಭಿಸುವದು ಹ್ಯಾಗೆ? ಎರಡು ವಿಧವಾಗಿ ಲಭಿಸಬಹುದು ತನ್ನ ಅಸಮಾಧಾನಸ್ಥಿತಿಯನ್ನು ಮರೆತುಹೋಗುವದರಿಂದಾಗಲಿ, ಕ್ಷಮಾಪಣೆಯನ್ನು ಹೊಂದುವದರಿಂದಾಗಲಿ ಸಮಾಧಾನಸ್ಥಿತಿಯನ್ನು ಲಭ್ಯಮಾಡಿಕೊಳ್ಳಬಹುದು. ಆದರೆ ಇವೆರಡು ವಿಧಗಳಲ್ಲಿ ತನ್ನ ಸ್ಥಿತಿಯನ್ನು ಮರೆತುಹೋಗುವದರಿಂದ ಲಾಭಮಾಡಿಕೊಳ್ಳಲೆತ್ನಿಸತಕ್ಕ ಮಾರ್ಗವು ನಿಷ್ಪ್ರಯೋಜನವಾದದ್ದೆಂದು ಸ್ಥಾಪಿಸಲವಶ್ಯಕವಿಲ್ಲ. ಶರೀರದಲ್ಲುಂಟಾದ ನೋವನ್ನು ಮರೆತುಹೋಗುವಂತೆ ಮಾದಕ ಪದಾರ್ಥಗಳನ್ನು ಸೇವಿಸುವದರಿಂದ ಎಷ್ಟು ಫಲವೋ ಅಷ್ಟೇ ಫಲವು ತನ್ನ ಸ್ಥಿತಿಯನ್ನು ಮರೆತುಹೋಗಲೆತ್ನಿಸುವದರಲ್ಲಿ ಉಂಟು. ನೋವನ್ನುಂಟು ಮಾಡುವ ಮೂಲವನ್ನು ನಾಶಪಡಿಸದೆ ನೋವನ್ನು ಮರೆಯಿಸುವಂಥ ಪದಾರ್ಥಗಳನ್ನು ಸೇವಿಸುತ್ತಲೆ ಇದ್ದರೆ ಅದರಿಂದ ಕಡೆಗೆ ಮರಣವೇ ನಿಶ್ಚಯವಾಗಿರುವದು. ಅಥವಾ ಶೀತದೇಶಗಳಲ್ಲಿ ಹಿಮ ಮಯವಾದ ಗಾಳಿಗೆ ಸಿಕ್ಕಿದ ಒಬ್ಬ ಮನುಷ್ಯನು ತನಗೆ ಆ ಕಾಲದಲ್ಲಿ ಬರುವ ಅತಿಹಿತವಾಗಿ ತೋರುವ ತೂಕಡಿಕೆಗೆ ಅವಕಾಶವನ್ನು ಕೊಟ್ಟು ಹಾಗೇ ಹಿಮದಲ್ಲಿ ಬಿದ್ದುಕೊಂಡರೆ ಅವನಿಗೆ ದೀರ್ಘ ನಿದ್ರೆಯು ಬಂದು ಚಳಿಯೇ ಕಾಣದೆಹೋಗುವದು ಹೇಗೆಯೋ ಮನುಷ್ಯನು ತನ್ನಲ್ಲಿ ಪಾಪದ ಅರಿವುಂಟಾಗುವದರ ದೆಸೆಯಿಂದ ಮನಸ್ಸಾಕ್ಷಿಯು ತಳಮಳಗೊಳ್ಳಲು ಅದನ್ನು ಸಮಾಧಾನಪಡಿಸುವದಕ್ಕಾಗಿ ಮರೆಯುವಿಕೆಯೆಂಬ ಮಾದಕ ಪದಾರ್ಥವನ್ನು ಸೇವಿಸುವೆನೆಂದು ಆಲೋಚಿಸಿದರೆ ಅವನ ಮನಸ್ಸಾಕ್ಷಿಯು ಸಮಾಧಾನವನ್ನು ಹೊಂದುವದೆಂಬುದೇನೋ ನಿಶ್ಚಯವೇ. ಅದರೆ ಆ ಸಮಾಧಾನಸ್ಥಿತಿಯು ಹಿಮದಲ್ಲಿ ಬಿದ್ದು ದೀರ್ಘ ನಿದ್ರಾವಶನಾಗುವ ನಿರ್ಭಾಗ್ಯಶಾಲಿಯು ಮರಣಾವಸ್ಥೆಯೇ ಆಗಿ ಪರಿಣಮಿಸುವದಲ್ಲವೇ? ದೇವರಿಂದ ತನ್ನನ್ನು ದೂರ ಮಾಡಿಕೊಳ್ಳುವ ಮರಣಾವಸ್ಥೆಗೆ ಸಮಾನವಾದ ವಿಸ್ಮೃತಿಯಿಂದ ಲಭ್ಯವಾಗತಕ್ಕ ಸಮಾಧಾನಸ್ಥಿತಿಯು ಯಾವ ಪ್ರಯೋಜನಕ್ಕೂ ಬಂದದ್ದಲ್ಲ. ಕೇವಲ ದೇವಸ್ವರೂಪವಾದಂಥ ಭಗವಂತನೊಂದಿಗೆ ಐಕ್ಯವನ್ನು ಕಲ್ಪಿಸಿಕೊಡತಕ್ಕಂಥ ಬೇರೊಂದು ಸಮಾಧಾನಸ್ಥಿತಿಯುಂಟು. ಅದು ದೇವರ ಬಳಿಯಿಂದ ದೊರಕುವಂಥ ಕ್ಷಮಾಪಣೆಯೇ.

ಈ ಕ್ಷಮಾಪಣೆಯನ್ನು ಮನುಷ್ಯನು ಪಡೆಯುವದು ಹ್ಯಾಗೆ? ಭಗವಂತನು ಮನುಷ್ಯನಿಗೆ ಕ್ಷಮೆಯನ್ನು ಕೊಡುವದಕ್ಕೆ ಯಾವಾಗಲೂ ಸಿದ್ಧನಾಗಿದ್ದಾನೆಂಬುದನ್ನು ನಾವು ಮೊದಲೇ ತಿಳಿದಿರಬೇಕು. ದೇವರು ಮನುಷ್ಯನ ಬಳಿಯಿಂದ ತನ್ನನ್ನು ದೂರ ಮಾಡಿಕೊಂಡಿಲ್ಲ; ಆದರೆ ಮನುಷ್ಯನೇ ಹಾಗೆ ಮಾಡಿಕೊಂಡಿದ್ದಾನೆ. ಮನುಷ್ಯನು ಮಾಡಿರುವ ಪಾಪವು ಅವನ ಸುತ್ತಲೂ ಒಂದು ಗೋಡೆಯನ್ನು ಕಟ್ಟಿದ ಹಾಗಿದೆ. ಭಗವಂತನ ಕ್ಷಮೆಯಾದರೋ ಮಿತಿಮೀರಿಯಿಲ್ಲದಷ್ಟಾಗಿದೆ. ಹೀಗಿದ್ದರೆ ಮನುಷ್ಯನು ಆ ಕ್ಷಮೆಯನ್ನು ಹೊಂದುವದಕ್ಕೆ ಅಡ್ಡಿಯೇನು? ಅಡ್ಡಿಯೇನಂದರೆ—ಅವನು ಆ ಪಾಪಕೃತ್ಯದ ವಿಷಯದಲ್ಲಿ ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಬೇಕಾಗಿರುವದೊಂದೇ ಅಡ್ಡಿ. ಇದಕ್ಕೆ ಮಾನಸಾಂತರವೆಂದು ಹೆಸರು. ಈ ಪ್ರಕಾರ ಕೇವಲ ಮಾನಸಾಂತರವನ್ನು ಹೊಂದಿರುವ ಮನುಷ್ಯನು ಭಗವಂತನಿಂದ ಕ್ಷಮಾಪಣೆಯನ್ನು ಹೊಂದುವದರಲ್ಲಿ ನೀತಿಭಂಗವೇನೂ ಇರುವದಿಲ್ಲ. ಕ್ಷಮಾಪಣೆಯ ಹೊಂದಿಕೆಯಲ್ಲಿ ಮನಸ್ಸಾಕ್ಷಿಯು ಸಮಾಧಾನಸ್ಥಿತಿಯೂ ಬರುತ್ತದೆ

ಇದರಲ್ಲಿ ಮಾತ್ರೊಂದು ವಿಶೇಷವುಂಟು. ಮೇಲೆ ಸೂಚಿಸಿರುವ ಮಾನಸಾಂತರಸ್ಥಿತಿಯು ಮನುಷ್ಯನಿಗೆ ತನ್ನಿಂದ ತಾನೇ ಬರುವದೋ? ಬರಲಾರದು. ಇದಕ್ಕೆ ಪ್ರಬಲವಾದ ಒಂದು ಕಾರಣವಿರುವದು. ಅದೇನಂದರೆ—ಪಾಪವನ್ನು ಮಾಡಿ ಮಾಡಿ ಮನಸ್ಸು ಮು

ಶವಾಗಿ ಹೋಗಿರುವದರಿಂದ ಅದರ ಘೋರವಾದ ಸ್ಥಿತಿಯಿಂದಾದ್ದೆಂಬ ಅರಿವು ಒಳಗೊಳ್ಳುವದಕ್ಕೆ ಮಾರ್ಗವೇ ಇಲ್ಲದೆಹೋಗಿರುತ್ತದೆ. ಹಾಗಾದರೆ ಪಾಪಿಷ್ಟನು ಮನಸ್ಸಾಂತರಪಡುವದಕ್ಕೇ ಮಾರ್ಗವಿಲ್ಲವೋ? ಅವನು ಭಗವಂತನೊಂದಿಗೆ ಪುನಃ ಐಕ್ಯವಾಗುವದಕ್ಕೆ ಅವಕಾಶವಿಲ್ಲವೋ? ಉಂಟು, ಉಂಟು. ಭಗವಂತನು ತನ್ನನ್ನು ಮನುಷ್ಯನೊಂದಿಗೆ ಸಂಪೂರ್ಣ ಸಮಾಧಾನಸ್ಥಿತಿಯಲ್ಲಿ ತಂದುಕೊಳ್ಳುವದಕ್ಕಾಗಿ ಉಪಕಾರಿಯಾಗಿರುವದರಿಂದಲೇ ಮನುಷ್ಯನಿಗೆ ನಿರೀಕ್ಷೆಯು ತಪ್ಪಿಹೋಗದೆ ಉಳಿಯಿತು. ಆ ದೇವಕುಮಾರನು ಶಿಲುಬೆಯ ಮೇಲೆ ತನ್ನನ್ನು ಅರ್ಪಿಸಿದ್ದರ ಮೂಲಕ ಪಾಪದ ಘೋರವಾದ ಸ್ಥಿತಿಯನ್ನು ಮನುಷ್ಯರಿಗೆ ಚಿತ್ರಿಸಿದಂತಾಯಿತು ಆ ದಿಸೆಯಿಂದ ಮನುಷ್ಯರು ಮನಸ್ಸಾಂತರ ಪಡುವದಕ್ಕೆ ಹೇತುವುಂಟಾಯಿತು. ಈ ಪ್ರಕಾರ ಯೇಸುಸ್ವಾಮಿಯು ನಮ್ಮನ್ನು ದೇವರ ಕ್ಷಮಾಪಣೆಗೆ ಪಾತ್ರರನ್ನಾಗಿ ಮಾಡುತ್ತಾನೆ. ಆ ಕ್ಷಮಾಪಣೆಯಲ್ಲಿಯೇ ಮನಶ್ಶಾಂತಿಯು ಸಮಾಧಾನಸ್ಥಿತಿಯು ಲಭ್ಯವಾಗುತ್ತದೆ.

ಸಾಲಂಕೃತ ಕನ್ಯಾದಾನ.

ತಾವು ೪—೬—೦೫ನೇ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿದ ಸಾಲಂಕೃತದ ಕನ್ಯಾದಾನದ ಮಹಾನುಭಾವರು ಬೇಲೂರು ಲೇಟ್ ಅಮಲ್ದಾರ್ ನರಸಣ್ಣನವರ ಛತ್ರದಲ್ಲಿ ಈ ಮಾಹೆ ೨೩—೬—೦೫ ಬಂದಿದ್ದ ವಿಚಾರವನ್ನು ತಿಳಿಸಲು ಬಹಳ ಸಂತೋಷಪಡುತ್ತೇನೆ. ಪರಸ್ಥಳದ ಬ್ರಾಹ್ಮಣರಿಗೆ ಭೋಜನಕ್ಕೆ ಅನುಕೂಲಪಡಿಸಿರುವ ವಿಚಾರವನ್ನು ತಿಳಿದು, ಛತ್ರದ ಪಾರುಪತ್ಯಗಾರರನ್ನು ವಿಚಾರಿಸಿಕೊಂಡು, ತಾನು ನಂಜನಗೂಡಿನಿಂದ ಬಂದಿರುವದಾಗಿಯೂ ಈ ಸ್ಥಳದಲ್ಲಿ ಛತ್ರ ಕಟ್ಟಿಸಿ, ಬಂದ ಬ್ರಾಹ್ಮಣರಿಗೆ ಮೃಷ್ಟಾನ್ನ ಭೋಜನಕ್ಕೆ ಏರ್ಪಾಟು ಮಾಡಿರುವ ಲೇಟ್ ಅಮಲ್ದಾರ್ ನರಸಣ್ಣನವರ ಮಕ್ಕಳು ಮ॥ ರಾಮರಾಯರು ತಮ್ಮ ಕಾರ್ಯಕ್ಕೋಸ್ಕರ ಈ ದಿನ ರಾತ್ರಿಯೇ ಇಲ್ಲಿಗೆ ಬರುವದಾಗಿಯೂ ತಮ್ಮ ಮಗಳನ್ನೇ ಇವರ ಕುಮಾರನಿಗೆ ಕೊಡುವದಾಗಿಯೂ ತನ್ನ ಹೆಸರು ಸುಬ್ಬಣ್ಣನೆಂತಲೂ ತನ್ನ ಒಬ್ಬ ಮಗ ಬಿ. ಎ., ಬಿ. ಯಲ್. ಪ್ಯಾಸ್ ಮಾಡಿದವನು ಮೃತನಾಗಿದ್ದಾಗಿಯೂ ಪಾಲಹಳ್ಳಿ, ಚನ್ನಗಿರಿ ಕಡೆಗಳಲ್ಲಿ ತನಗೆ ಬೇಕಾದಷ್ಟು ಭೂಸ್ಥಿತಿಗಳಿರುವದಾಗಿಯೂ ಹೇಳಿದನು. ಇವನ ಮಾತಿನಿಂದ ಪಾರುಪತ್ಯಗಾರರಿಗೆ ಸಂಶಯಬಂದು—ಸ್ವಾಮಿ, ತಮ್ಮ ಕುಟುಂಬವೆಲ್ಲಿರುತ್ತದೆ? ತಮಗೆ ಎಷ್ಟು ಜನ ಮಕ್ಕಳು? ತಮ್ಮ ಹೆಣ್ಣುಮಗುವಿಗೆ ಎಷ್ಟು ವಯಸ್ಸು? ಮೇಲ್ಕಂಡ ರಾಮರಾಯರಿಗೆ ಚಿಕ್ಕಮಗಳೂರಿನಲ್ಲಿ ಯಾರಾದರೂ ಸಂಬಂಧಿಗಳಿರುವರೇ? ಎಂಬದಾಗಿ ಪ್ರಶ್ನೆಮಾಡಿದರು ಅದಕ್ಕೆ ಆ ಮಹಾನುಭಾವನು—ನನ್ನ ಸಂಸಾರ ತೀರಿಹೋಗಿ ಆರು ತಿಂಗಳಾಯಿತು. ನನ್ನ ಹೆಣ್ಣುಮಗುವಿಗೆ ಏಳು ವಯಸ್ಸು. ಈ ಛತ್ರದಲ್ಲಿ ಪೂರ್ವದಲ್ಲಿ ಪಾರುಪತ್ಯಗಾರನಾಗಿದ್ದ ಶಾಮಣ್ಣನೂ ನಾನೂ ಏಕ ಸಹೋದರರು. ನಮ್ಮ ತಾಯಿಯ ಹೆಸರು ಲಕ್ಷ್ಮಮ್ಮ ಶಾಮಣ್ಣನ ತಮ್ಮ ಚಿಕ್ಕಮಗಳೂರಲ್ಲಿರುತ್ತಾನೆ. ಆಕಾರದಲ್ಲಿ ಕೆಂಪು ಮತ್ತು ಗಿಡ್ಡ ಹೆಸರು ಜ್ಞಾಪಕವಿಲ್ಲ ಎಂದು ಹೇಳಿದ್ದಕ್ಕೆ, ಪಾರುಪತ್ಯಗಾರರು ಆತನನ್ನು ಕುರಿತು—ಇದೇನು ಸ್ವಾಮಿ, ಅವರಿಗೆ ೫ ವರ್ಷದ ಮಗನಿರುತ್ತಾನೆ ತಮ್ಮ ಮಗಳಿಗೆ ೭ ವಯಸ್ಸು ಎಂದು ಹೇಳುತ್ತೀರಿ? ಹೇಗೆ ಲಗ್ನ ಸಂಘಟನೆಯಾಗುತ್ತದೆ ಎಂದು ಕೇಳಿದ್ದಕ್ಕೆ ಆತನು—ನನಗೆ ಇನ್ನೂ ಒಬ್ಬ ಮಗಳಿರುತ್ತಾಳೆ; ಅವಳಿಗೆ ನಾಲ್ಕು ಸಂವತ್ಸರಗಳೆಂದು ಹೇಳಿದನು.

ಇವರು ವೈಷ್ಣವರ ಆಕಾರದಲ್ಲಿ ನಾಮಧಾರಿಗಳಾಗಿದ್ದದರಿಂದಲೂ ಶ್ಯಾಮಣ್ಣನ ತಾಯಿಯ ಹೆಸರು ಲಕ್ಷ್ಮಮ್ಮನೆಂದು ಸುಳ್ಳು ಹೇಳಿದ್ದರಿಂದಲೂ ಇವನ ನಡೆನುಡಿಗಳಿಂದ ಅಂಥಾ ದೊಡ್ಡ ಮನುಷ್ಯರ ಬಂಧುತ್ವಕ್ಕೆ ಅರ್ಹನಲ್ಲವೆಂದು ಸಂಶಯ ತೋರುಬಂದು, ಛತ್ರದ ಪಾರುಪತ್ಯಗಾರರು ಛತ್ರದ ನೌಕರರಿಗೆಲ್ಲಾ ತಮಗೆ ಸಂಶಯ ತೋರುಬಂದದ್ದರಿಂದ ಎಚ್ಚರದಿಂದಿರುವಂತೆ ಗೊತ್ತುಮಾಡಿ, ತಮ್ಮ ಕೆಲಸಕ್ಕೆ ಹೊರಟುಹೋದರು. ನಂತರ ಈ ವೇಷಧಾರಿಯು ತಾನೇ ಈ ಛತ್ರದ ಪಾರುಪತ್ಯದ ಕೆಲಸಕ್ಕೆ ಬಂದಿರುವಂತೆಯೂ ನೌಕರರೆಲ್ಲರೂ ತನ್ನ ಅಪ್ಪಣೆಯಂತಿರಬೇಕೆಂತಲೂ ಹೇಳಿ, ಒಬ್ಬಿಬ್ಬರಿಗೆ ಇನಾಮನ್ನೂ ಕೊಟ್ಟು, ಛತ್ರದ ಆವಾಸದಿಂದ ಛತ್ರದ ಹಿಂಭಾಗದಲ್ಲಿ ಹಿಂದೂಸ್ಥಾನಿ ಭಾಷೆಯನ್ನು ಸ್ಪಷ್ಟವಾಗಿ ಆಡುತ್ತಾ, ಕಾಮಗಾರಿ ವಗೈರೆ ಕೆಲಸ ಮಾಡಿಸುತ್ತಲೂ ಛತ್ರದ ಅಂಗಡಿ ಮಳಿಗೆದಾರರ ಬಳಿಗೆ ಹೋಗಿ ಈ ಛತ್ರಕ್ಕೆ ತಾನು ಪಾರುಪತ್ಯಗಾರನೆಂತಲೂ ಇನ್ನು ಮುಂದೆ ತನಗೇ ಮಳಿಗೆಗಳ ಬಾಡಿಗೆಗಳನ್ನು ಕೊಡಬೇಕೆಂತಲೂ ಎಲ್ಲರಿಗೂ ತಿಳಿಸಿದನು. ನಿಮ್ಮ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟಿರುವ ಗುರುತುಗಳೆಲ್ಲವೂ ಆತನಲ್ಲಿ ನೆಲಗೊಂಡಿವೆ. ಕೊನೆಗೆ ತಾನು ಮೇಲೆ ಹೇಳಿದ್ದೆಲ್ಲಾ ಸುಳ್ಳೆಂತಲೂ ಕುಣಿಗಲ್ಲಿ ಭೀಮಣ್ಣನವರಿಗೆ ಲಗ್ನವಿಚಾರದಲ್ಲಿ ಮಾಡಿದ ಮೋಸವೂ ದಿಟವೆಂತಲೂ ಅವರಲ್ಲಿ ಯಾವದೊಂದು ಪದಾರ್ಥವನ್ನೂ ಅಪಹರಿಸಲಿಲ್ಲವೆಂತಲೂ ತಾನು ಚಿಕ್ಕಮಗಳೂರಿನಲ್ಲಿ ಹೋಟಲನ್ನಿಟ್ಟಿರುವದಾಗಿಯೂ ತಾನು ಭಂಗಿ ಸೇದುವದರಿಂದ ಬುದ್ಧಿ ಸ್ಥಿಮಿತವಿಲ್ಲವೆಂತಲೂ ದ್ರಾವಿಡ ಬ್ರಾಹ್ಮಣನೆಂತಲೂ ತನಗೆ ಕನ್ನಡ, ಹಿಂದೂಸ್ಥಾನಿ, ತಮಿಳು, ತೆಲುಗು, ಈ ಭಾಷೆಗಳು ಆಡುವದಕ್ಕೆ ಚೆನ್ನಾಗಿ ತಿಳಿಯುವದೆಂತಲೂ ಹೇಳಿ, ಅದೇ ರೀತಿ ನಾಳಿನ ದಿವಸ ಚಿಕ್ಕಮಗಳೂರಿಗೆ ಹೋಗುತ್ತೇನೆಂದು ಹೇಳಿ ಹೊರಟುಹೋದನು.

ಬೇಲೂರು.   ವೆ. ಶಾ.

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಕಳೆದ ಫೆಬ್ರುವರಿ ಆಗಾಯಿತು ಪ್ಲೇಗನ್ನು ಅಡಗಿಸುವ ಏರ್ಪಾಡುಗಳಿಗೋಸ್ಕರ ೧,೯೨,೨೪೫ ರೂಪಾಯಿ ಖರ್ಚುಮಾಡಿದಾರೆ.

◆◆◆◆

ಕಾರ್ವೇಟಿ ನಗರದ ಜಮೀನ್ದಾರರಾದ ರಾಜಾ ಬೊಮ್ಮರಾಜ ಬಹದೂರ್ ಯವರು ಹಿಂದಿನ ವಾರ ಅಕಸ್ಮಾತ್ತಾಗಿ ಕಾಯಿಲೆಬಿದ್ದು ವೈದ್ಯರು ಬರುವಷ್ಟರೊಳಗೆ ಕಾಲವಾದರೆಂದು ತಿಳಿದುಬಂದಿದೆ

◆◆◆◆

ಪಂಜಾಬ್ ಅಧಿಪತ್ಯದಲ್ಲಿ ಚಾಲ್ತಿ ಸಾಲಿನ ಆಖೈರಿನೊಳಗಾಗಿ ಹೊಸದಾಗಿ ಪ್ರೈಮರಿ ವಿದ್ಯಾಶಾಲೆಗಳನ್ನು ಸ್ಥಾಪಿಸುವದಕ್ಕೆ ಸರ್ಕಾರದವರು ೪,೨೪,೬೬೬ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

◆◆◆◆

ಉತ್ತರ ಮಲಬಾರಿನಲ್ಲೂ ವಾಲುವನಾಡು ಡಿವಿಜನಲ್ಲೂ ರೈತ ಪ್ರಜೆಗಳು ಸೇರಿ ವ್ಯವಸಾಯಾಭಿವೃದ್ಧಿಗೋಸ್ಕರ ಎರಡು ಸಂಘಗಳನ್ನು ಏರ್ಪಡಿಸಿಕೊಂಡಿದಾರೆ ಇವುಗಳಿಗೆ ಭಾರೀ ಜಮೀನ್ದಾರರೂ ಸೇರಿಕೊಂಡು ಪ್ರೋತ್ಸಾಹಪಡಿಸುತ್ತಿದಾರೆ.

◆◆◆◆

ಬರ್ಮಾ ಅಧಿಪತ್ಯಕ್ಕೆ ಸೇರಿದ ನಾಲ್ಕು ಮ್ಯುನಿಸಿಪಾಲಿಟಿಗಳಲ್ಲಿ ನೌಕರರು ದುಷ್ಕಾರ್ಯ ಪ್ರವರ್ತನೆಗೆ ಬಿದ್ದು, ಸರ್ಕಾರಿ ಹಣದಲ್ಲಿ ೬,೫೦೦ ರೂಪಾಯಿ ತನಕ ತಿಂದುಬಿಟ್ಟಿದಾರೆ. ಅವರ ಮೇಲ್ವಿಚಾರಣೆಯು ತೃಪ್ತಿಕರವಾಗಿರಲಿಲ್ಲವೆಂದು ಪ್ರಕಟವಾಗಿದೆ.

◆◆◆◆

ಮಾಲದ್ವೀಪ್ ದ್ವೀಪಗಳ ಸುಲ್ತಾನರಾದ ಮಹಮದ್ ಸಂಸುದ್ದೀನ್ ಇಸ್ಕಂದರ್ ಯವರಿಗೆ ಮುಂದಿನ ತಿಂಗಳ ಕಡೇ ವಾರದಲ್ಲಿ ಪಟ್ಟಾಭಿಷೇಕವಾಗುವದು ಇದಕ್ಕಾಗಿ ಮಾಲೆ ಎಂಬ ರಾಜಧಾನಿಯಲ್ಲಿ ಈಗಿನಿಂದಲೂ ಉತ್ಸವದ ಏರ್ಪಾಡು ನಡೆಯುತ್ತಿದೆ.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಒಂದು ಭಾರೀ ನೂಲಿನ ಕಂಪಾನಿಯ ಮೇಲ್ಭಾಗದಲ್ಲಿ ಕೂಲಿ ಆಳುಗಳು ಹಳೆ ಕಟ್ಟಡವನ್ನು ಕೆಡವುತ್ತಿದ್ದರು. ಆಕಸ್ಮಾತ್ತಾಗಿ ಆ ಛಾವಣಿಯೇ ಕಳಚಿ ಬಿದ್ದುಕೊಂಡಿತು. ಐದು ಜನ ಕೂಲಿಯವರು ಅದರ ಕೆಳಗೆ ಸಿಕ್ಕಿ ಮೃತಪಟ್ಟರು.

◆◆◆◆

ಧರ್ಮಶಾಲೆಯ ದಂಡಿನಲ್ಲಿದ್ದ ಸೈನಿಕರಿಗೆ ಭೂಕಂಪದಿಂದುಂಟಾದ ಕಷ್ಟನಷ್ಟಗಳು ಅಪಾರವಾದ್ದರಿಂದ ಸೇನಾಪತಿ ಲಾರ್ಡ್ ಕಿಚ್ನರ್ ಯವರು ಅವರ ಸಹಾಯಾರ್ಥವಾಗಿ ಒಂದು ಧರ್ಮದ ಫಂಡನ್ನು ಮಾಡಿ ಚಂದಾ ಕೂಡಿಸಿದರು. ಈ ಫಂಡಿಗೆ ೧,೩೨,೦೦೦ ರೂಪಾಯಿ ವಸೂಲಾಗಿದೆ

◆◆◆◆

ಪ್ರಿನ್ಸ್ ಆಫ್ ವೇಲ್ಸ್ ರವರು ದೆಹಲಿ ಪಟ್ಟಣಕ್ಕೆ ದಯಮಾಡುವಾಗ್ಗೆ ಗೌರವಯುಕ್ತನಾಗಿ ಅವರನ್ನು ಎದುರುಗೊಂಡು ಸತ್ಕರಿಸಿ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸುವದಕ್ಕೂ ಪುರಶೃಂಗಾರಾದಿಗಳಿಗೂ ಮುನಿಸಿಪಾಲಿಟಿಯವರು ೨೦,೦೦೦ ರೂಪಾಯಿ ಖರ್ಚು ಮಾಡಬೇಕೆಂದು ಗೊತ್ತುಮಾಡಿದಾರೆ.

◆◆◆◆

ಬರ್ಮಾ ಅಧಿಪತ್ಯದ ಮರಹಮ್ಮತ್ ಇಲಾಖೆಯ ನೌಕರನಾಗಿದ್ದ ಫೇಲ್ಪ್ಸ್ ಎಂಬಾತನು ತನ್ನನ್ನು ನಿಷ್ಕಾರಣವಾಗಿ ಸರ್ಕಾರದವರು ಕೆಲಸದಿಂದ ತೆಗೆದುಹಾಕಿದರೆಂತಲೂ ಇದಕ್ಕಾಗಿ ೧೫,೦೦೦ ರೂಪಾಯಿ ಡಾಮೇಜು ಕೊಡಿಸಬೇಕೆಂತಲೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮೇಲೆ ಲಂಡನಿನಲ್ಲಿ ದಾವಾ ತಂದಿದಾನೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ವಾರ ಅಪರಿಮಿತವಾದ ಮಳೆಯೂ ಸುಂಟರಗಾಳಿಯೂ ಪ್ರಾಪ್ತವಾದವು ಒಂದೇ ಚೌಕದಲ್ಲಿ ಅದರ ರಭಸವು ಹೆಚ್ಚಾಗಿದ್ದರಿಂದ ಅನೇಕ ಭಾರೀ ಮರಗಳೂ ಸಣ್ಣಸಣ್ಣ ಮನೆಗಳೂ ನೆಲಸಮನಾದವು. ಟೆಲಿಗ್ರಾಫ್ ತಂತಿಗಳು ಕಿತ್ತುಹೋದವು ದೇವರದಯದಿಂದ ಪ್ರಾಣನಷ್ಟವೇನೂ ಆಗಲಿಲ್ಲ.

◆◆◆◆

ಈ ವರ್ಷಾಂತ್ಯದಲ್ಲಿ ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಪರಿವಾರ ಸಹಿತ ಹಿಂದೂಸ್ಥಾನಕ್ಕೆ ದಯಮಾಡಿ, ರಾಜಪುಟಾನಾ ಸಂಸ್ಥಾನಗಳ ಮೇಲೆ ಸಂಚಾರ ಮಾಡುವಾಗ್ಗೆ ಅವರ ಪ್ರಯಾಣಕ್ಕೆ ಅನುಕೂಲವಾಗುವಂತೆ ಬಹು ಶ್ರೇಷ್ಠವಾದ ರೈಲ್ ಗಾಡಿಗಳನ್ನು ಅಜ್ಮೀರ್ ನಗರದ ಕಾರ್ಖಾನೆಯಲ್ಲಿ ತಯಾರುಮಾಡಿಸುತ್ತಿದಾರೆ.

◆◆◆◆

ಅಫ್ಘಾನಿಸ್ಥಾನದ ಅಮೀರ್ ಹಬೀಬುಲ್ಲಾ ಖಾನ್ ರವರು ತಮ್ಮ ಸೈನ್ಯವನ್ನು ಇನ್ನೂ ವೃದ್ಧಿ ಮಾಡುವದಕ್ಕೆ ಹೊಸ ಜನರನ್ನು ಸೇರಿಸಿಕೊಳ್ಳುವಂತೆ ಹುಕುಂ ಮಾಡಿದರು. ಇವರಿಗೆಲ್ಲಾ ಸಂಬಳ ಮುಂತಾದ್ದು ಕೊಡುವದಕ್ಕೋಸ್ಕರ ತಮ್ಮ ರಾಜ್ಯದಲ್ಲೆಲ್ಲಾ ರೈತರಿಂದಲೂ ಪ್ರಜೆಗಳಿಂದಲೂ ಮೂರು ತಿಂಗಳ ಕಂದಾಯ ಕೌಳಿಗೆಗಳನ್ನು ಅಡ್ವಾನ್ಸಾಗಿ ವಸೂಲ್ಮಾಡಿಸಿರುತ್ತಾರೆ.

◆◆◆◆

ಅಂಬಾಲಾ ಪಟ್ಟಣದಲ್ಲಿ ಬಂದೀವಾನರಿಗೆ ಕೊಡುವ ಆಹಾರ ವಸ್ತುಗಳನ್ನು ಜೈಲಿನೊಳಗೆ ಹಗೇವು (ಗುಣಿ) ಗಳನ್ನು ತೆಗೆದು ಭರ್ತಿಮಾಡಿಡುವುದು ಪದ್ಧತಿಯಾಗಿದೆ ಕಳೆದ ವಾರ ಈ ಕಣಜದಿಂದ ಧಾನ್ಯವನ್ನು ತೆಗೆಯುವದಕ್ಕೆ ನಾಲ್ಕು ಮಂದಿ ಬಂದೀವಾನರನ್ನು ಇಳಿಸಿದರು. ಅವರೆಲ್ಲಾ ಅದರೊಳಗಿದ್ದ ವಿಷಗಾಳಿಯನ್ನು ಸೇವನೆ ಮಾಡಿದ್ದರಿಂದ ಕಾಲುಗಂಟೆ ಹೊತ್ತಿನೊಳಗಾಗಿ ಪ್ರಾಣಬಿಟ್ಟರು.

◆◆◆◆

ದಕ್ಷಿಣ ದೇಶದಿಂದ ಸಿಲೋನ್ (ಲಂಕಾ) ದ್ವೀಪಕ್ಕೆ ಅಲ್ಲಿನ ತೋಟ ಮುಂತಾದ ಎಸ್ಟೇಟುಗಳಲ್ಲಿ ಕೂಲಿ ಮಾಡುವದಕ್ಕೆ ಬಹು ಜನರು ಹೋಗಲಾರಂಭಿಸಿದಾರೆ. ದಿನಕ್ಕೆ ೪೦೦ ಮಂದಿಯಂತೆ ಹೋಗುವರೆಂದೂ ಕಳೆದ ಏಪ್ರಿಲ್ ತಿಂಗಳಲ್ಲಿ ೨೨,೦೦೦ ಜನರು ಹೋಗಿದಾರೆಂದೂ ತಿಳಿದುಬಂದಿದೆ. ಹೋದ ವರ್ಷ ಅದೇ ತಿಂಗಳಲ್ಲಿ ೫,೧೯೦ ಜನರು ಮಾತ್ರ ಹೋಗಿದ್ದರು. ಈ ವರ್ಷ ಇಷ್ಟು ಹೆಚ್ಚಾಗಲು ದಕ್ಷಿಣ ದೇಶದಲ್ಲಿ ಕಾಲಸ್ಥಿತಿ ಚೆನ್ನಾಗಿಲ್ಲವೆಂಬುವದೇ ಮುಖ್ಯ ಕಾರಣವೆಂದು ಕಾಣುತ್ತೆ.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಪಾರ್ಸಿ ಜನರಿಗಾಗಿಯೇ ಪ್ರತ್ಯೇಕವಾದ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಮಿ॥ ಜಹಂಗೀರ್ ಬೋಮನ್ಜಿ ಪಟೇಲ್ ಎಂಬ ಪಾರ್ಸಿ ದೊಡ್ಡ ಮನುಷ್ಯನು ಪ್ರಯತ್ನಪಟ್ಟಿದಾನೆ ಇದಕ್ಕೆ ೭ ಲಕ್ಷ ರೂಪಾಯಿ ಬೇಕಾಗುವದು. ಆತನು ತನ್ನ ಜನರಿಂದ ಚಂದಾ ಕೂಡಿಸುತ್ತಾ ಬಂದಿರುತ್ತಾನೆ. ಇದುವರೆಗೆ ೪೨,೦೦೦ ರೂಪಾಯಿ ಮಾತ್ರ ಈ ಫಂಡಿಗೆ ವಸೂಲಾಗಿದೆಯಾದರೂ ಈ ವರ್ಷದ ಕಡೆಯೊಳಗಾಗಿ ಎಲ್ಲಾ ಹಣವೂ ದೊರಕುವದೆಂದು ಹೇಳುತ್ತಾನೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಯಂತ್ರಗಳ ಮೂಲಕ ಶವಗಳನ್ನು ದಹನಮಾಡುವದಕ್ಕೆ ಮ್ಯುನಿಸಿಪಾಲಿಟಿಯವರು ಕಾಮಗಾರಿ ಮಾಡಿಸುತ್ತಿದಾರೆ. ೬೦,೭೬೦ ರೂಪಾಯಿ ಖರ್ಚಾಗುವದು. ದಹನ ಮಾಡಬೇಕೆಂದು ಅಪೇಕ್ಷೆ ಪಡುವವರು ಶವವನ್ನು ಈ ಯಂತ್ರದ ಕಟ್ಟಡದೊಳಕ್ಕೆ ಸಾಗಿಸಿಕೊಂಡು ಹೋಗಿ ಒಂದು ಹಲಿಗೆಯ ಮೇಲೆ ಇಟ್ಟು ಹೊರಕ್ಕೆ ಬರುವಷ್ಟರಲ್ಲೇ ಶವವು ಸುಟ್ಟು ಬೂದಿ ಇನ್ನೊಂದು ಕಡೆಯಲ್ಲಿ ಬಂದು ಬೀಳುವದು. ಪ್ರತಿ ಒಂದು ಶವವನ್ನು ಸುಡುವದಕ್ಕೂ ಇಷ್ಟೆಂದು ಮ್ಯುನಿಸಿಪಾಲಿಟಿಗೆ ರುಸುಂ ಕೊಡಬೇಕಾದೀತೆಂದು ಕಾಣುತ್ತದೆ.

◆◆◆◆

ಅಸಾಂ ಎಂಬ ಪ್ರಾಂತ್ಯವನ್ನು ಬಂಗಾಳಾ ಅಧಿಪತ್ಯದಿಂದ ಪ್ರತ್ಯೇಕ ಮಾಡಬೇಕೆಂದು ಇಂಡಿಯಾ ಗವರ್ನಮೆಂಟಿನವರು ಏರ್ಪಾಡು ಮಾಡುತ್ತಿರುವದೂ ಆಸಾಮಿನ ಪ್ರಜೆಗಳು ಕೂಡದೆಂದು ಸಭೆಗಳನ್ನು ಮಾಡಿ ತಮ್ಮ ತೀರ್ಮಾನಗಳನ್ನು ಗವರ್ನಮೆಂಟಿಗೆ ಅರಿಕೆಮಾಡುತ್ತಿರುವದೂ ನಮ್ಮ ವಾಚಕರಿಗೆ ತಿಳಿಸಿದೇವಷ್ಟೆ. ಕಳೆದ ವಾರವೂ ಈ ವಿಷಯವಾಗಿಯೇ ಪೂರ್ವ ಬಂಗಾಳಾದಲ್ಲಿ ಒಂದು ದೊಡ್ಡ ಸಭೆ ನಡೆದು, ಗವರ್ನಮೆಂಟಿನವರು ಬಂಗಾಳಾ ಅಧಿಪತ್ಯವನ್ನು ಒಡೆದು ಬೇರೆ ಬೇರೆ ಮಾಡಕೂಡದೆಂದು ತೀರ್ಮಾನಮಾಡಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದಾರೆ

◆◆◆◆

ಬೊಂಬಾಯಿ ಸೈನ್ಯದ ಇಂಜನಿಯರ್ ಇಲಾಖೆಯಲ್ಲಿ ಮುಖ್ಯ ಗುಮಾಸ್ತೆಯಾಗಿರುವ ಪಂಡಿತ ರಾಮಶಾಸ್ತ್ರಿ ಪಠಕ್ ಯವರಿಗೆ ಕಳೆದ ವಾರ ಕೈಸರ್ ಹಿಂದ್ ಎಂಬ ಬೆಳ್ಳಿ ಮೆಡಲನ್ನು ಕಮಿಷನರವರು ಒಪ್ಪಿಸಿದರು. ಆ ಶಾಸ್ತ್ರಿಗಳು ಬರೀ ಗುಮಾಸ್ತೆಯಾಗಿದ್ದರೂ ಸ್ವಂತ ಸಮಯದಲ್ಲಿ ಪೂನಾ, ಅಲ್ಲಹಾಬಾದ್, ಲಾಹೋರ್, ಲಕ್ನೋ, ಈ ಪಟ್ಟಣಗಳಲ್ಲಿ ಧರ್ಮದ ಆಸ್ಪತ್ರೆಗಳನ್ನು ಇಡಿಸಿ ನಡಸುತ್ತಾ ಬಂದು ಪ್ರಜೆಗಳಿಗೆ ತುಂಬಾ ಉಪಕಾರ ಮಾಡುತ್ತಿದಾರೆ. ಇದರಿಂದ ಇವರ ಸಾಹಸವನ್ನೂ ಪ್ರಜಾವಾತ್ಸಲ್ಯವನ್ನೂ ಗವರ್ನಮೆಂಟಿನವರು ನೋಡಿ ಅವರಿಗೆ ಈ ಬಿರುದನ್ನು ದಯಪಾಲಿಸಿದರು.

◆◆◆◆

ದೆಹಲಿ ಪಟ್ಟಣದ ಕಮರುದ್ದೀನ್ ಎಂಬೊಬ್ಬ ವರ್ತಕನು ಒಂದು ಪೆಟ್ಟಿಗೆಯಲ್ಲಿ ಬಾಣಬಿರುಸುಗಳನ್ನು ಹಾಕಿ ರೈಲಿನ ಮೇಲೆ ಕಳುಹಿಸಿದನು ಅದರಲ್ಲಿ ಕಬ್ಬಿಣದ ಬೀಗಗಳಿವೆ ಎಂದು ರೈಲಿನವರಿಗೆ ಸುಳ್ಳುಹೇಳಿದನು. ಸ್ಟೇಷನಿನಲ್ಲಿ ಆ ಪೆಟ್ಟಿಗೆಯನ್ನು ಜವಾನರು ಉರುಳಿಸಿದಾಗ ಅದು ಒಡೆದು ಹಾರಿ ಒಬ್ಬ ಜವಾನನನ್ನು ಕೊಂದುಬಿಟ್ಟಿತು. ಇನ್ನೊಬ್ಬನಿಗೆ ಪೂರಾ ಜಖಂ ಆಯಿತು. ಸೆಷನ್ಸ್ ಜಡ್ಜರು ಆ ಕಮರುದ್ದೀನನನ್ನು ದರ್ಯಾಪ್ತಿಮಾಡಿ, ಅವನಿಗೆ ೨ ವರ್ಷ ಕಠಿಣಸಜೆಯನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ಸುಳ್ಳುಹೇಳಿ ಮೋಸಮಾಡಿದ್ದಕ್ಕೆ ಅವನಿಗೆ ತಕ್ಕಶಿಕ್ಷೆಯಾಗಿದೆ.

◆◆◆◆

ಬಂಗಾಳಾ ಅಧಿಪತ್ಯಕ್ಕೆ ಸೇರಿದ ನದ್ದಿಯಾ (ನವದ್ವೀಪ) ದಲ್ಲಿ ಬಹುಜನ ಹಿಂದೂ ಪಂಡಿತರು ಕಳೆದ ವಾರ ಸೇರಿ ದೊಡ್ಡ ಸಭೆಯನ್ನು ನಡಸಿದರು ಮಹಾಮಹೋಪಾಧ್ಯಾಯ ರಾಜಕೃಷ್ಣ ತರ್ಕಪಂಚಾನನ್ ಜಾದುನಾಥ ಸಾರ್ವಭೌಮ, ಹರಿಶ್ಚಂದ್ರ ತರ್ಕರತ್ನ, ಅಜಿತನಾಥನ್ಯಾಯರತ್ನ, ಶಿತಿಕಂಠ ವಾಚಸ್ಪತಿ, ಪ್ಯಾರಿಲಾಲ್ ವಾಗ್ಭಟರತ್ನ ಎಂಬೀ ಮುಖಂಡರು ಹಾಜರಾಗಿದ್ದರು. ಆ ದಿನ ಸಭಿಕರು ಕಾಯಸ್ಥರ್ಯಾರೆಂಬುವದನ್ನು ಕುರಿತು ಚರ್ಚೆಮಾಡಿ, ಕಾಯಸ್ಥಜನರೆಲ್ಲಾ ಶೂದ್ರರೇ ಹೊರತು ಕ್ಷತ್ರಿಯರಲ್ಲವಾದ್ದರಿಂದ ಅವರಿಗೆ ಯಜ್ಞೋಪವೀತಹಾಕಿಕೊಳ್ಳುವ ಅಧಿಕಾರವಿಲ್ಲವೆಂಬುದಾಗಿ ತೀರ್ಮಾನ ಮಾಡಿದರು.

◆◆◆◆

ಕಳೆದ ವಾರ ಹಿಂದೂಸ್ಥಾನದಲ್ಲಿ ಪ್ಲೇಗ್ ಜಾಡ್ಯವು ಕುಂದು ಕಡಿಮೆಯಾಯಿತು. ಈ ಉಪದ್ರವದಿಂದ ಆ ವಾರದಲ್ಲಿ ೩,೪೪೩

ಜನರು ಮಾತ್ರವೇ ಮೃತಪಟ್ಟರು. ಈ ಪ್ರಕಾರ ಪಂಜಾಬ್ ೩,೩೮೯, ಸಂಯುಕ್ತ ಅಧಿಪತ್ಯಗಳು ೩,೯೬, ರಾಜಪುಟಾನಾ ೨೮೫, ಬಂಗಾಳಾ ೨೮೯, ಬೊಂಬಾಯಿ ಅಧಿಪತ್ಯ ೩೯೦, ಮದರಾಸ್ ಅಧಿಪತ್ಯ ೬, ಬರ್ಮಾ ೮೨, ಮೈಸೂರು ಸಂಸ್ಥಾನ ೨೩, ಈ ಪ್ರಕಾರ ಮರಣಗಳಾಗಿವೆ. ಮಧ್ಯ ಇಂಡಿಯಾ, ಮಧ್ಯ ಪ್ರಾಂತ್ಯಗಳು, ಬೀರಾರ್, ಈ ಪ್ರಾಂತ್ಯಗಳಲ್ಲಿ ಉಪದ್ರವು ನಿರ್ನಾಮವಾಗಿದೆ.

*****

ಬೊಂಬಾಯಿ ಪಟ್ಟಣದಲ್ಲಿ ಪ್ಲೇಗ್ ಉಪದ್ರವನ್ನು ನಿಲ್ಲಿಸುವ ಏರ್ಪಾಡಿಗೆ ಗವರ್ನಮೆಂಟಿನವರು ಮ್ಯುನಿಸಿಪಾಲಿಟಿಯವರಿಗೆ ಸ್ವಲ್ಪ ದ್ರವ್ಯ ಸಹಾಯಮಾಡುವರು. ಈ ಹಣ ಸಾಲದೆಂತಲೂ ಇನ್ನೂ ಸ್ವಲ್ಪ ಹೆಚ್ಚಾಗಿ ಹಣ ಕೊಡಬೇಕೆಂತಲೂ ಮ್ಯುನಿಸಿಪಾಲಿಟಿಯವರು ಮೊದಲು ಬೊಂಬಾಯಿ ಗವರ್ನಮೆಂಟಿನವರನ್ನೂ ಅನಂತರ ಇಂಡಿಯಾ ಗವರ್ನಮೆಂಟಿನವರನ್ನೂ ಕೇಳಿಕೊಂಡರು. ಅವರು ಈಗ ಕೊಡ:ವುದಕ್ಕಿಂತಲೂ ಹೆಚ್ಚು ಹಣ ಕೊಡಲಾಗುವುದಿಲ್ಲವೆಂದು ಜವಾಬು ಕೊಟ್ಟ ಕಾರಣ ಮ್ಯುನಿಸಿಪಾಲಿಟಿಯವರು ಈಗ ಇಂಡಿಯಾ ಸ್ಟೇಟ್ ಸೆಕ್ರಿಟರಿಯವರಿಗೆ ಬರೆದುಕೊಳ್ಳಬೇಕೆಂದು ತೀರ್ಮಾನಿಸಿರುತ್ತಾರೆ. ಇವರ ಪ್ರಾರ್ಥನೆಯು ಎಷ್ಟುಮಟ್ಟಿಗೆ ಸಾರ್ಥಕವಾಗುವುದೋ ಮುಂದೆ ತಿಳಿಯತಕ್ಕದ್ದಾಗಿದೆ.

*****

ಬರ್ಮಾ ದೇಶದ ರಾಜಧಾನಿಯಾದ ಮಾಂಡಲೇ ಪಟ್ಟಣದಲ್ಲಿ ಪೂರ್ವದ ಅರಸರು ವಾಸಮಾಡುತ್ತಿದ್ದ ಅರಮನೆಯೊಳಗೆ ಅನೇಕ ಸರ್ಕಾರಿ ಕೋರ್ಟು ಕಛೇರಿಗಳನ್ನು ಮಾಡಿಕೊಂಡಿದ್ದರು. ಕೆಲವರು ಅದರಲ್ಲೇ ವಾಸಮಾಡುತ್ತಲೂ ಇದ್ದರು. ವೈಸ್‌ರಾಯಿಯವರು ಅಲ್ಲಿಗೆ ದಯಮಾಡಿದ್ದಾಗ್ಗೆ ಅದನ್ನು ನೋಡಿ ತುಂಬಾ ವ್ಯಸನಪಟ್ಟು, ಅರಮನೆಯಲ್ಲಿ ಯಾರೂ ಇರಕೂಡದೆಂತಲೂ ಕೋರ್ಟು ಕಛೇರಿಗಳನ್ನು ಮಾಡಕೂಡದೆಂತಲೂ ಚನ್ನಾಗಿ ರಿಪೇರಿಮಾಡಿ ಒಳ್ಳೇಸ್ಥಿತಿಯಲ್ಲಿಟ್ಟುಕೊಂಡಿರಬೇಕೆಂತಲೂ ಲೆಫ್ಟಿನೆಂಟ್ ಗವರ್ನರವರಿಗೆ ತಿಳಿಸಿದರು. ಅದೇ ಪ್ರಕಾರ ಸರ್ಕಾರದವರು ಸುಮಾರು ಒಂದೂವರೆಲಕ್ಷ ರೂಪಾಯಿ ಖರ್ಚುಮಾಡಿ ಅರಮನೆಯನ್ನು ದುರಸ್ತು ಮಾಡಿಸಿದ್ದಾರೆ. ಕೋರ್ಟು ಕಛೇರಿಗಳನ್ನು ಇತರ ಕಡೆಗಳಿಗೆ ವರ್ಗ ಮಾಡಿದರು.

*****

ಕೊಯಮುತ್ತೂರು ಜಿಲ್ಲೆಗೆ ಸೇರಿದ ಕೆಂಪನಾಯಕನ ಪಾಳ್ಯದಲ್ಲಿ ಸರ್ಕಾರದವರು ಯೂನಿಯನ್ ಪಂಚಾಯಿತಿಯನ್ನಿಟ್ಟು, ಮ್ಯುನಿಸಿಪಲ್ ಏರ್ಪಾಡು ಮಾಡಿದರು. ಈ ಪಂಚಾಯಿತಿಗೆ ೭೯೪ ಮನೆಗಳು ಸೇರಿವೆ. ವರ್ಷಕ್ಕೆ ೪೦೬ ರೂಪಾಯಿ ಮ್ಯುನಿಸಿಪಲ್ ತೆರಿಗೆ ವಸೂಲಾಗುತ್ತೆ. ಈ ಹಣದಲ್ಲಿ ಕಚರಾ ಗುಡಿಸುವವರನ್ನು ಮೂವರು ಮಂದಿಗಿಂತ ಹೆಚ್ಚಾಗಿ ನೇಮಿಸುವುದು ಸಾಧ್ಯವಲ್ಲ. ಯಾಕೆಂದರೆ ಆರೋಗ್ಯ ವಿಚಾರಕನ್ನ ಅಫೀಸ್ ಸಿಬ್ಬಂದಿಗೂ ೨೬೦ ರೂಪಾಯಿ ಖರ್ಚಾಗಿ ೧೪೦ ರೂಪಾಯಿ ಮಾತ್ರ ಉಳಿಯುವುದು. ಇದರಿಂದ ಪ್ರಜೆಗಳಿಗೆ ಅನುಕೂಲವಾಗುವಂತೆ ಎಷ್ಟು ಮಟ್ಟಿಗೆ ತಾನೇ ಏರ್ಪಾಡು ಮಾಡಲು ಸಾಧ್ಯವಾದೀತು ! ಇದನ್ನು ನೋಡಿ ಸರ್ಕಾರದವರು ಅಲ್ಲಿನ ಮ್ಯುನಿಸಿಪಲ್ ಏರ್ಪಾಡನ್ನೇ ವಜಾಮಾಡಿಬಿಟ್ಟರು. ಹೀಗೆ ವಜಾಮಾಡದೆ ಹೋಗಿದ್ದರೆ ಪ್ರಜೆಗಳಿಗೆ ಮ್ಯುನಿಸಿಪಲ್ ತೆರಿಗೆ ತೆರುವ ಕಷ್ಟವೊಂದೇ ವಿಶೇಷವಾಗುತ್ತಿತ್ತು.

*****

ಸಂಯುಕ್ತ ಅಧಿಪತ್ಯಕ್ಕೆ ಸೇರಿದ ತಾಂಕೋಲಿಯೇ ಸಂಸ್ಥಾನದ ರಾಜರು ಇನ್ನೂ ಚಿಕ್ಕ ವಯಸ್ಸಿನವರು. ಇವರು ಶಿವಹರ್ ಸಂಸ್ಥಾನದ ರಾಜರ ಮಗಳನ್ನು ಮದುವೆಮಾಡಿಕೊಳ್ಳಬೇಕೆಂದು ಗೊತ್ತುಮಾಡಿದರು. ತಾಂಕೋಲಿಯೇ ರಾಜರ ಮಾತೃಶ್ರೀ ಯವರು ತಮ್ಮ ಕುಮಾರ ಗೊತ್ತುಮಾಡಿಕೊಂಡಿರುವ ಹೆಣ್ಣನ್ನು ತಂದುಕೊಳ್ಳುವುದಕ್ಕೆ ಇಷ್ಟಪಡದೆ ಮದುವೆಯನ್ನು ನಿಲ್ಲಿಸಬೇಕೆಂದು ಪ್ರಯತ್ನಪಟ್ಟರು. ಇದು ಸಾಧ್ಯವಾಗಲಿಲ್ಲವಾದ್ದರಿಂದ ಆಕೆಯವರು ರಾಯರನ್ನು ಇಟ್ಟು ಈ ಮದುವೆಯನ್ನು ನಿಲ್ಲಿಸಬೇಕೆಂದು ಅಲಹಾಬಾದ್ ಹೈಕೋರ್ಟಿನಲ್ಲಿ ಅರ್ಜಿ ಕೊಟ್ಟರು. ಅಷ್ಟರಲ್ಲೇ ಡಿಸ್ಟ್ರಿಕ್ಟ್ ಜಡ್ಜಿಯವರು ಈ ಮೊಕದ್ದಮೆಯ ಕಟ್ಟನ್ನು ತಮ್ಮ ಕೋರ್ಟಿಗೆ ತರಿಸಿಕೊಂಡು ವಾದಿಗಳ ಕೈಫಿಯತ್ತನ್ನು ಕೇಳಿ, ಅವರ ಇಷ್ಟಪ್ರಕಾರ ಮದುವೆಯನ್ನು ತಡೆಮಾಡುವುದಕ್ಕಾಗುವುದಿಲ್ಲವೆಂದು ತೀರ್ಮಾನ ಮಾಡಿದರು. ಈ ರಾಜರ ವಿವಾಹವು ಕೋರ್ಟಿಗೆ ಬರುವಂತಾದದ್ದಕ್ಕೆ ಕಾರಣವೇನೋ ತಿಳಿಯಲಿಲ್ಲ.

ವಿದೇಶ ವರ್ತಮಾನಗಳು.

ಪೂರ್ವ ಆಫ್ರಿಕದಲ್ಲಿ ಜರ್ಮನಿಯವರ ಸ್ವಾಸ್ಥ್ಯಕ್ಕೆ ಗವರ್ನರಾಗಿದ್ದು ಕೆಲಸಬಿಟ್ಟುಬಂದ ಎಪ್ಪತ್ತು ವರ್ಷ ವಯಸ್ಸಿನ ಮೇಜರ್ ವಿಸ್ಮನ್ ಎಂಬಾತನು ಕಾರಣಾಂತರದಿಂದ ಆತ್ಮಹತ್ಯ ಮಾಡಿಕೊಂಡನು.

*****

ಜಪಾನಿನವರ ಕಡೆ ಪೋರ್ಟ್ ಆರ್ಥರ್ ಕೋಟೆಯ ಯುದ್ಧದ ಅಂತ್ಯದವರೆಗೆ ೩೦,೪೪೬ ಜನ ಸೈನಿಕರು ಮಡಿದುಹೋದರು. ಈಚೆಗೆ ಟೈಕೋವಾಯಿ, ಮುಕ್ಡೆನ್, ತ್ಸುಷಿಮಾ ಎಂಬೀ ಯುದ್ಧಗಳಲ್ಲಿ ಮಡಿದವರ ಸಂಖ್ಯೆಗಳು ಇನ್ನು ಮುಂದೆ ಪ್ರಕಟವಾಗುವವು

*****

ಸಾಖಾಲಿನ್, ವ್ಲಾಡಿವೋಸ್ಟಕ್ ಎಂಬೀ ಪಟ್ಟಣಗಳಿಂದ ರಷ್ಯ ಪ್ರಜೆಗಳು ಷಾಮಬೀರಿಡಗಾಗಿ ವ್ಲಾಡಿವೋಸ್ಟಕಿಗೆ ಹೋಗಿ ಸೇರುತ್ತಿದ್ದಾರೆ. ಈ ವ್ಲಾಡಿವೋಸ್ಟಕಿನಲ್ಲಾದರೋ ರಷ್ಯದವರು ಜಪಾನಿನವರ ಮುತ್ತಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸನ್ನಾಹಮಾಡುತ್ತಿರುವರು.

*****

ಈ ವರ್ಷದ ಪ್ರಾರಂಭದಿಂದ ರಷ್ಯ ಗವರ್ನಮೆಂಟಿಗೆ ಯುದ್ಧದ ಖರ್ಚಿಗಾಗಿ ೪೪ ಕೋಟಿ ದ್ರವ್ಯ ಕೈಬಿಟ್ಟುಹೋಯಿತು. ಇದಲ್ಲದೆ ೩೪ ಕೋಟಿ ದ್ರವ್ಯದ ಕರೆನ್ಸಿ ನೋಟುಗಳನ್ನು ಹೊಸದಾಗಿ ಚಲಾವಣೆಗೆ ತರಬೇಕಾಯಿತು. ಅಂತು ಆದರಿಗೆ ಕಳೆದ ಆರು ತಿಂಗಳಲ್ಲಿ ೭೮ ಕೋಟಿ ದ್ರವ್ಯ ಕೈಬಿಟ್ಟಿತು

*****

ಪಶ್ಚಿಮ ಸಮುದ್ರದಲ್ಲಿ ಕಾರೊಲೈನ್ ಎಂಬ ದ್ವೀಪಸಮುದಾಯಗಳಿಗೆ ಕಳೆದ ತಿಂಗಳ ಎರಡನೇ ವಾರದಲ್ಲಿ ಭಯಂಕರವಾದ ಸುಂಟರಗಾಳಿ ಪ್ರಾಪ್ತವಾಗಿ ಪೋನಪೆ, ಕೂಸೀ ಎಂಬ ಎರಡು ದ್ವೀಪಗಳನ್ನು ನಾಶಮಾಡಿತು. ಅನೇಕ ಮನೆಮಠಗಳು ನೆಲಸಮನಾದವು. ನೂರಾರು ಜನರು ಪ್ರಾಣ ಕಳೆದುಕೊಂಡರೆಂದು ತಿಳಿದು ಬಂದಿದೆ.

*****

ಜರ್ಮನ ರಾಜ್ಯಕ್ಕೆ ಸೇರಿದ ಮೋಜೆ, ಹಿರೋಷೀಮಾ, ಯಜೇನಾ ಎಂಬ ಪಟ್ಟಣಗಳಲ್ಲಿ ಈ ತಿಂಗಳ ೩ನೆ ತಾರೀಖಿನ ದಿನ ಭೂಕಂಪವಾಯಿತು ಸುಮಾರು ೩೦ ಜನರು ಪ್ರಾಣ ಕಳೆದುಕೊಂಡರೆಂತಲೂ ನೂರಾರು ಮಂದಿಗೆ ಗಾಯಗಳಾದವೆಂತಲೂ ಆಸ್ತಿಪಾಸ್ತಿ ಮನೆ ಮಠಗಳು ಅನೇಕವಾಗಿ ಹಾಳಾದವೆಂತಲೂ ವರ್ತಮಾನ ಬಂದಿದೆ.

*****

ಕೊಲಾಂಗೋ ರಾಜ್ಯಕ್ಕೆ ಸೇರಿದ ಕಾಮಾಜಿಬೋ ಎಂಬ ಪಟ್ಟಣದಲ್ಲಿ ಭೂಕಂಪ ಪ್ರಾಪ್ತವಾಗಿ ಪಟ್ಟಣಕ್ಕೆ ಪಟ್ಟಣವೇ ನಾಶವಾಯಿತು. ನೂರಾರು ಮಂದಿ ಪ್ರಜೆಗಳೂ ಹೆಂಗಸರು ಮಕ್ಕಳೂ ಪ್ರಾಣಬಿಟ್ಟರು. ಭೂಮಿಯಲ್ಲಿ ದೊಡ್ಡ ಮತ್ತು ಅಗಲವಾದ ಬಿರುಕುಗಳು ಬಿಟ್ಟಿವೆ; ಈ ಬಿರುಕುಗಳಿಂದ ಬಿಸಿಯಾದ ಗಾಳಿಯೂ ಸುಡುವ ಹಬೆಯೂ ಮೇಲಕ್ಕೆ ನುಗ್ಗಿಬರುತ್ತಿವೆ

*****

ಆಫ್ರಿಕದ ಉತ್ತರ ಭಾಗದಲ್ಲಿರುವ ಆಲ್ಜೀರಿಯಾ ದೇಶದಲ್ಲಿ ಕಳೆದ ವಾರ ಆರು ಮೈಲಿ ಅಗಲವೂ ೧೨೦ ಮೈಲಿ ಉದ್ದವೂ ಉಳ್ಳ ಭೂಭಾಗದ ಮೇಲೆ ಆಪ್.........ಳೆಯೂ ಅನೆಕಲ್ಲುಗಳೂ ಸುರಿದದ್ದರಿಂದ ಸಮಸ್ತ ಬೆಳೆಗಳೂ ನಾಶವಾದವು. ರೈತಪ್ರಜೆಗಳು ತುಂಬಾ ನಷ್ಟಪಟ್ಟು ಗೋಳಾಡುತ್ತಿದ್ದಾರೆ. ಸುಮಾರು ೬೦ ಲಕ್ಷ ದ್ರವ್ಯದಷ್ಟು ಬೆಳೆ ನಾಶವಾದವೆಂದು ಸತ್ಯವಾಗಿರುತ್ತದೆ.

*****

ಜಪಾನ ಹಡಗುಗಳು .... ಪೋರ್ಟ್ ಆರ್ಥರ್ ಕೋಟೆಯಲ್ಲಿದ್ದ ರಷ್ಯದವರ ಹಡಗುಗಳ ಮೇಲೆ .... ಮಾಡಿ, ಕೆಲವನ್ನು ಸಮುದ್ರದೊಳಕ್ಕೆ ಮುಳುಗಿಸಿದ್ದರಷ್ಟೆ ಈಗ ಜಪಾನ ಸರ್ಕಾರದವರು ಮುಳುಗಿಹೋಗಿರುವ ೨೨ ಹಡಗುಗಳನ್ನು ಬೇಕಾದವರು ಕೊಂಡುಕೊಂಡು ತೆಗೆದುಕೊಳ್ಳಬಹುದೆಂದು ಪ್ರಕಟಿಸಿರುತ್ತಾರೆ. ಹಡಗುಗಳ ವರ್ತಕರಿಗೆ ಇದು ಒಳ್ಳೇ ಸಮಯ.

*****

ಜೋಹಾನ್ ಹಾಕ್ ಎಂಬೊಬ್ಬ ಅಮೇರಿಕದವನು ಇದುವರೆಗೆ ೨೦–೩೦ ಜನ ಸ್ತ್ರೀಯರನ್ನು ಒಬ್ಬರಾದ ಮೇಲೆ ಒಬ್ಬರಂತೆ ಮದುವೆ ಮಾಡಿಕೊಂಡನು. ಇವನ ಹೆಂಡತಿಯರೆಲ್ಲಾ ಕೆಲವು ದಿನಗಳೊಳಗಾಗಿ ಮೃತಪಡುತ್ತಿದ್ದರು. ಕೆಲವು ದಿನಗಳ ಕೆಳಗೆ ಅವನ ಕಡೆಯ ಹೆಂಡತಿಯು ಸತ್ತಳು. ಇವಳಿಗೆ ಅವನು ವಿಷ ಹಾಕಿ ಕೊಂದನೆಂಬುದು ರುಜುವಾತಾಯಿತು. ಇದರಿಂದ ಅವನಿಗೆ ಮರಣದಂಡನೆಯನ್ನು ವಿಧಿಸಿದಾರೆ.

*****

ಸ್ಯಾಂಡ್ವಿಚ್ ದ್ವೀಪಸಮುದಾಯಕ್ಕೆ ಸೇರಿದ ಮಾಯಿ ಎಂಬಲ್ಲಿ ರಷ್ಯದವರು ಕೊರಿಯಾ ಪ್ರಜೆಗಳಿಂದ ಕೂಲಿ ಕೆಲಸಗಳನ್ನು ಮಾಡಿಸುತ್ತಿದಾರೆ. ಜಪಾನ ಕೂಲಿಕಾರರು ಕೊರಿಯಾ ಕೂಲಿಯವರಿಗೆ ಚಿತಾವಣೆ ಕೊಟ್ಟು ರಷ್ಯದವರ ಮೇಲೆ ತಿರುಗಿಬೀಳುವಂತೆ ಮಾಡಿದರು. ಈ ಕಲಹದಲ್ಲಿ ಅನೇಕರು ಮಡಿದುಹೋದರು. ಹೊನಲೂಲೂವಿನಿಂದ ರಷ್ಯ ಸೈನಿಕರು ಹೋಗಿ ತಮ್ಮ ಜನರನ್ನು ಕೋಟೆಯೊಳಗಿಂದ ಬಿಡಿಸಿಕೊಂಡರು.

*****

ಸ್ವೀಡನ್ ನಾರ್ವೆ ರಾಜ್ಯದ ದೊರೆಮಗನಾದ ಗಸ್ಟಾವಸ್ ಎಂಬ ರಾಜಕುಮಾರನಿಗೆ ವಿಲಾಯಿತಿ ರಾಜ್ಯದ ಎಡ್ವರ್ಡ್ ಚಕ್ರವರ್ತಿಯವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟರವರು ತಮ್ಮ ಕುಮಾರ್ತೆಯಾದ ಮಾರ್ಗರೆಟ್ ವಿಕ್ಟೋರಿಯಾರವರನ್ನು ಕೊಟ್ಟು, ಹಿಂದಿನವಾರ ಲಂಡನ್‌ನಗರದ ವಿಂಡ್‌ಸರ್ ದೊಡ್ಡ ದೇವಸ್ಥಾನದಲ್ಲಿ ವಿವಾಹಮಾಡಿದರು. ವಿಲಾಯಿತಿಯ ದೊರೆಯವರು ರಾಣಿಯವರು, ಈಜಿಪ್ಟಿನ ಖೆಡೈವ್ ರಾಜರು, ಸ್ವೀಡನ್ ಯುವರಾಜರು, ಈ ಮೊದಲಾದ ಅನೇಕ ರಾಜವರ್ಗದವರು ಹಾಜರಾಗಿದ್ದು ವಿವಾಹವನ್ನು ಅಗಮಾಡಿಸಿದರು.

*****

ಚೀನಾ ರಾಜ್ಯದಲ್ಲಿ ಸ್ವಾಂಗಾಂಗ್ ಎಂಬ ಪಟ್ಟಣದ ಬಳಿ ಯುಲ್ಲೋ ಎಂಬ ನದಿಗೆ ಕಟ್ಟಿರುವ ಸೇತುವೆಯು ಪ್ರಪಂಚದಲ್ಲೆಲ್ಲಾ ಅತ್ಯಂತ ಉದ್ದವಾದದ್ದು. ಇದಕ್ಕೆ ಸಿಂಹ ಸೇತುವೆ ಎಂಬ ಹೆಸರಿಟ್ಟಿದಾರೆ ಇದು ೫॥ ಮೈಲಿ ಉದ್ದವಾಗಿರುವುದು. ಅದಕ್ಕೆ ಕಲ್ಲುಗಳಿಂದಲೇ ಕಟ್ಟಲ್ಪಟ್ಟ ೩೦೦ ಭಾರೀ ಕಮಾನುಗಳಿರುತ್ತವೆ. ಪದಿಯ ಮೇಲೆ ೭೦ ಅಡಿ ಎತ್ತರದಲ್ಲಿ ಸೇತುವೆಯನ್ನು ಕಟ್ಟಿ ರಸ್ತೆ ಹಾಕಿರುವರು. ಆಚೆ ಈಚೆ ಪಕ್ಕಗಳಲ್ಲಿ ಕಬ್ಬಿಣದಿಂದ ಪಲೆಯ ಮಾದಿಯಲ್ಲಿ ಅಡ್ಡಕಟ್ಟೆಗಳನ್ನು ಹಾಕಿದಾರೆ. ಪ್ರಪಂಚದ ಇನ್ಯಾವ ಕಡೆಯಲ್ಲೂ ಯಾವ ನದಿಗೂ ಇಷ್ಟು ಉದ್ದವಾದ ಸೇತುವೆಯನ್ನು ಕಟ್ಟಿಲ್ಲ.

*****

ಜಪಾನ ರಾಜ್ಯದ ರಾಜಕುಮಾರರಾದ ಅರಿಸುಗಾವಾರವರು ಈಗ ಪತ್ನೀ ಪರಿವಾರ ಸಹಿತ ಯೂರೋಪಿನ ರಾಜ್ಯಗಳಲ್ಲಿ ಸಂಚಾರ ಮಾಡುತ್ತಿದಾರಷ್ಟೆ. ಇವರು ಈ ತಿಂಗಳ ೩೦ಕ್ಕೆ ವಿಲಾಯಿತಿಗೆ ಹೋಗಿ ಲಂಡನ್ ಪಟ್ಟಣದಲ್ಲಿ ಇಳಿಯುವರು. ಇವರನ್ನು ಸಕಲ ಮರ್ಯಾದೆಗಳೊಡನೆ ಎದುರುಗೊಳ್ಳಬೇಕೆಂದು ವಿಲಾಯಿತಿ ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿದಾರೆ ಸರ್ಕಾರದವರೂ ಪ್ರಜೆಗಳೂ ಅವರನ್ನು ತುಂಬಾ ಉತ್ಸಾಹದಿಂದ ಸತ್ಕರಿಸಬೇಕೆಂದು ಏರ್ಪಾಡು ಮಾಡುತ್ತಿದಾರೆ. ರಾಜಕುಮಾರರು ಜುಲೈ ೧೦ನೆ ತಾರೀಖುವರೆಗೆ ಆ ಪಟ್ಟಣದಲ್ಲಿದ್ದು ಮುಂದಕ್ಕೆ ಪ್ರಯಾಣಮಾಡುವರೆಂದು ತಿಳಿದುಬಂದಿದೆ.

*****

ಪೋರ್ಟ್ ಆರ್ಥರ್ ಕೋಟೆಯನ್ನು ಜನರಲ್ ಸ್ಟೋಯೆಸೆಲ್ ಯವರು ಕಾಪಾಡಿಕೊಂಡಿದ್ದದ್ದೂ ಜಪಾನವರು ಅದನ್ನು ಸ್ವಾಧೀನಪಡಿಸಿಕೊಂಡದ್ದೂ ವಾಚಕರಿಗೆ ತಿಳಿದಿದೆಯಷ್ಟೆ. ಜನರಲ್ ಸ್ಟೋಯೆಸೆಲ್ ಯವರು ಕೋಟೆಯನ್ನು ಯಾಕೆ ಶತ್ರುಗಳಿಗೆ ಒಪ್ಪಿಸಿದರೆಂಬ ವಿಚಾರವನ್ನು ಈಗ ರಷ್ಯ ಗವರ್ನಮೆಂಟಿನವರು ದರ್ಯಾಫ್ತು ಮಾಡುತ್ತಿದಾರೆ. ಈ ತನಿಖೆಯಲ್ಲಿ ಈಗ ತಿಳಿದುಬರುವುದೇನೆಂದರೆ—ಪೋರ್ಟ್ ಆರ್ಥರ್ ಕೋಟೆಯೊಳಗೆ ಜನರಲ್ ಸ್ಟೋಯೆಸೆಲ್ ಯವರ ಪತ್ನಿಯು ೪೦ ಹಸುಗಳನ್ನು ಸಾಕುತ್ತಿದ್ದಳು. ರಷ್ಯ ಸೈನಿಕರಿಗೆ ಅರೆಹೊಟ್ಟೆಯಾಗಿದ್ದರೂ ಆಕೆ ತನ್ನ ಹಸುಗಳಿಗೆ ಮಾತ್ರ ನಾರ್ರೊಟ್ಟಿಗಳನ್ನೇ ಇಟ್ಟು ತಿನ್ನಿಸುತ್ತಿದ್ದಳು ಹಸುಗಳ ಹಾಲನ್ನು ಬಹಳ ಹೆಚ್ಚು ಕ್ರಯಕ್ಕೆ ಬಿಕರಿ ಮಾಡುತ್ತಾ, ಒಂದು ಪಾವು ಹಾಲನ್ನು ೪ ಆಣೆಗೆ ಮಾರುತ್ತಿದ್ದಳು ಒಂದು ಕೋಳಿಗೆ ೩೦ ರೂಪಾಯಿ ಕ್ರಯ ಕೊಟ್ಟು ಜನರಲ್ ಸ್ಟೋಯೆಸೆಲ್‌ರವರಿಂದ ಕೊಂಡುಕೊಂಡಿರುತ್ತೇನೆಂದು ಒಬ್ಬ ದಳಪತಿಯು ಹೇಳಿದಾನೆ.

*****

ಗ್ಲಾಸ್ಗೋ ಪಟ್ಟಣದಿಂದ ೧೬॥ ಟನ್ ಭಾರದಷ್ಟು ಡೈನಮೈಟನ್ನು ಈಜಿಪ್ಟಿಗೆ ಒಂದು ಕಂಪನಿಯವರು ರವಾನೆ ಮಾಡಿದರು. ಈ ಮದ್ದು ಅಬೂಕಿರ್ ಪಟ್ಟಣದ ಕೋಟೆಯೊಳಗೆ ಭರ್ತಿಯಾಗಿತ್ತು. ಅದರ ವಿಚಾರವಾಗಿ ವ್ಯಾಜ್ಯಬಂದದ್ದರಿಂದ ಆ ಮದ್ದನ್ನೆಲ್ಲಾ ಸುಟ್ಟುಬಿಡಬೇಕೆಂದು ಗೊತ್ತಾಯಿತು. ಅದನ್ನೆಲ್ಲಾ ಸಮುದ್ರತೀರದಿಂದ ೫೦೦ ಗಜ ದೂರಕ್ಕೆ ಸಾಗಿಸಿ ೧೫೯ ಅಡಿ ನೀರುಳ್ಳ ಆಳವಾದ ನೀರಿನಲ್ಲಿ ಮುಳುಗಿಸಿ, ಸಮುದ್ರತೀರದಿಂದ ವಿದ್ಯುಚ್ಛಕ್ತಿಯ ತಂತಿಗಳನ್ನು ಇಟ್ಟು, ತೀರದಲ್ಲಿ ಒಂದು ಗುಂಡಿಯನ್ನು ಒತ್ತಿ, ಆ ಮದ್ದನ್ನೆಲ್ಲಾ ಒಂದೇ ಸಲಕ್ಕೆ ಸುಟ್ಟುಬಿಟ್ಟರು ಅದು ಹಾರಿದ ರಭಸಕ್ಕೆ ಅಬೂಕಿರ್ ಪಟ್ಟಣದ ಮನೆಗಳೆಲ್ಲಾ ಭೂಕಂಪವಾದಾಗ ಹ್ಯಾಗೋ ಹಾಗೆ ಅಲ್ಲಾಡಿದವು. ಮದ್ದು ಹಾರಿದ ಸ್ಥಳದಲ್ಲಿ ನೀರು ಕುದಿದು ಸುಮಾರು ೨,೦೦೦ ಅಡಿ ಮೇಲಕ್ಕೆ ಕಂಭದೋಪಾದಿಯಲ್ಲಿ ನಿಂತುಕೊಂಡಿತು. ವಿನಾ ಮುಂತಾದ ಲಕ್ಷಾಂತರ ಜಲಚರಗಳು ಸತ್ತು ತೀರಕ್ಕೆ ಬಂದು ಬಿದ್ದವು ಬೆಸ್ತರಿಗೆ ತುಂಬಾ ಲಾಭವಾಯಿತು. ಈ ಮದ್ದು ೧೫೫,೦೦೦ ರೂಪಾಯಿ ಕ್ರಯ ಬಾಳುವುದು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಖಿಮ್ದಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ರಾ. ಹೆ, ಮೇಗರವಳ್ಳಿ, ನಿಷ್ಪಕ್ಷಪಾತಿ, ಚನ್ನಪಟ್ಟಣ ಟವನ್; ಎಂ. ಎಂ. ಬಿ., ಪಬ್ಲಿ.—ಈ ಬಾತ್ಮಿಗಳಲ್ಲಿ ಪ್ರಕಟನೆಗೆ ಅರ್ಹವಾದ ಸಮಾಚಾರಗಳೇನೂ ಕಂಡುಬರುವುದಿಲ್ಲ —ಎಡಿ.]

ಸತ್ಯವಾದಿ, ತಿಪ್ಟೂರು—ನಿಮ್ಮ ಬಾತ್ಮಿ ಬಹು ದೀರ್ಘವಾಗಿದೆ.

ಸಿ. ಎನ್. ಡಿ., ಬೆಂಗಳೂರು—ನಿಮ್ಮ ಬಾತ್ಮಿಯನ್ನು ಪತ್ರಿಕೆಯಲ್ಲಿ ಪ್ರಕಟಿಸೋಣದರಿಂದ ನಿಮ್ಮ ಮನೋಭೀತಿಯು ಹೋಗಲಾರದು. ನಿಮಗೆ ಬರೆದಿರತಕ್ಕದ್ದನ್ನೆಲ್ಲಾ ನಿಮ್ಮ ಊರಿನ ಪೋಲೀಸ್ ಇನ್ಸ್‌ಪೆಕ್ಟರಿಗೆ ಕಾರಣಸಹಿತವಾಗಿ ವಿವರಿಸಿ ತಿಳಿಸಿದರೆ ಅವರು ನಿಮಗೆ ತಕ್ಕ ಪರಿಹಾರವನ್ನು ತೋರಿಸ್ಯಾರು —ಎಡಿ.

ಕರೆಸ್‌ಪಾಂಡೆನ್ಸ್.

ಉಚಿತವಾದ ಔಷಧ.

ಅಯ್ಯಾ,

ತಲೆಯಲ್ಲಿ ಹುಣ್ಣು ಎದ್ದು ಕೀವು ತುಂಬಿ ಮಹಾ ಯಾತನೆ ಆಗಿದ್ದರೂ ಕೂಡ ೩ ದಿವಸದಲ್ಲೇ ವಾಸಿಯಾಗುವಂಥಾ ಗಿಡಮೂಲಿಕೆ ಮುಲಾಮು ಧರ್ಮಾರ್ಥವಾಗಿ ಕೊಡಲ್ಪಡುತ್ತೆ. ಇಷ್ಟವುಳ್ಳವರು ಭಾಂಗಿಟಪಾಲ್ ಕೊಟ್ಟು ತರಿಸಿಕೊಳ್ಳಬಹುದು.

ವಿಳಾಸ—ನೆಲಮಂಗಲದ ವೆಸ್ಲಿಯನ್ ಮಿಷನ್ ಗರ್ಲ್ ಸ್ಕೂಲ್

ಅ. ಮಾಸ್ಟರ್ ಎನ್. ಪಟಹಳ್ಳಯ್ಯ

ವಿದ್ಯೆ ಕಲಿಯುವುದಕ್ಕೆ ವಯಸ್ಸು ಕಾರಣವಲ್ಲ, ಮನಸ್ಸೇ ಕಾರಣ.

ಅಯ್ಯಾ,

ಈ ಊರಿನಲ್ಲಿ ಬಡಗಿ ಕೆಲಸ ಮಾಡುವ ಮು ಕೈಯಪ್ಪ ಉಪ್ಪಾರ್ ಎಂಬವರು ೪೦ ವರ್ಷ ಪ್ರಾಯದವರು ಇವರಿಗೆ ಓದು ಬರಹವೇ ಬರುತ್ತಿರಲಿಲ್ಲ. ಇವರಿಗೆ ೧೦ ಜನ ಮಕ್ಕಳು ಇದ್ದವರು ಈಗ ಕೆಲವು ವರ್ಷಗಳಲ್ಲಿ ಅಕಾಲ ಮರಣದಿಂದ ಸ್ವರ್ಗಸ್ಥರಾದರು. ಇವರು ಕಳೆದ ೧೯೦೪ ನೆ ಜನವರಿಯಿಂದ ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದದ್ದನ್ನೇ ಕೆಲವು ನಿಮಿಷಗಳು ಅನುಕೂಲವಿದ್ದಾಗ ಮನಸ್ಸುಕೊಡುತ್ತಾ ಇದ್ದು ಈಗ್ಯೆ ಚನ್ನಾಗಿ ಓದುವದಕ್ಕೂ ಬರೆಯುವದಕ್ಕೂ ಕಲಿತಿರುವರು.

ಅಮ್ಮತ್ತಿ, ೨೪—೬—೦೫. ಹಿಂದುಸ್ತಾನಿ ಸ್ಕೂಲು

ಮಾಂಸಾಹಾರ ಮಾಡಬಹುದೇ ?

ಅಯ್ಯಾ,

ಕಳೆದ ವಾರದ ಪತ್ರಿಕೆಯಲ್ಲಿ ಎ ಆರ್. ಎ. ಎಂಬುವವರು ಮಾಂಸಾಹಾರ ಮಾಡಬಹುದೆಂದು ಅದಕ್ಕನುಸಾರವಾಗಿ ಚಿಪ್ಪಿನ ಸುಣ್ಣವನ್ನು ಉಪಯೋಗಿಸುತ್ತಾರೆಂತಲೂ ಉಪಯೋಗಿಸಿದ ಮಾತ್ರಕ್ಕೆ ಮಾಂಸ ತಿಂದ ಹಾಗಾಯಿತೆಂತಲೂ ತಿಳಿಸುತ್ತಾರೆ. ಅಲ್ಲದೆ ಚರ್ಮವು ವರಾಹ ಕೂದಲು, ಕಸ್ತೂರಿ, ರೇಷ್ಮೆ ಮುಳಿದ ಧಾರಗಳು ಪವಿತ್ರ ವಸ್ತುಗಳೆಂದು ಬರೆದಿದ್ದಾರೆ ಆದಾಗ್ಯೂ ಸಾಧಾರಣವಾಗಿ ಅನೇಕರು ಹಸುವಿನ ಹಾಲನ್ನು ಉಪಯೋಗಿಸುತ್ತಾರಲ್ಲವೇ ? ಇದನ್ನು ಉಪಯೋಗಿಸಿದ ಮಾತ್ರಕ್ಕೆ ಗೋಮಾಂಸ ತಿಂದ ಹಾಗಾಯಿತೇ ? ಮತ್ತು ಶಿಲುವು ಸ್ತನ್ಯಪಾನ ಮಾಡಿದ ಮಾತ್ರಕ್ಕೇ ನರಮಾಂಸ ತಿಂದ ಹಾಗಾಯಿತೇ ? ವಾಚಕ ಮಹಾಶಯರೇ, ಮಾಂಸಾಹಾರವು ದೇಹೋಪಚಾರಕ್ಕಾಗಿ ಉಪಯೋಗಿಸಿ ಅನೇಕ ಪ್ರಾಣಿಗಳನ್ನು ಕೊಂದು ಮಹಾ ಪಾಪಕ್ಕೊಳಗಾಗುವರು (?) ಈ ವಿಷಯವಾಗಿ ಯೋಚಿಸಿ ನೋಡಲಾಗಿ "ಅಹಿಂಸಾ ಪರಮೋಧರ್ಮಃ" ಎಂಬ ಧರ್ಮಶಾಸ್ತ್ರವನ್ನು ಅನುಸರಿಸದೆ ಪ್ರಾಣತ್ಯಾಗವನ್ನು (?) ಮಾಡುವಂಥಾದ್ದು ಸರ್ವಥಾ ತಪ್ಪು ಯಾಕೆಂದರೆ ಅವುಗಳಿಗೂ ಹಸಿವು ತೃಷೆಗಳುಂಟು, ನಮಗೂ ಹಸಿವು ತೃಷೆಗಳುಂಟಷ್ಟೆ ಆದ್ದರಿಂದ ನಮ್ಮ ಶರೀರದ ಪೋಷಣೆಗಾಗಿ ಅವುಗಳನ್ನು ಕೊಲ್ಲಬಾರದೆಂಬದಾಗಿ ವಾಚಕಮಹಾಶಯರಲ್ಲಿ ವಿಜ್ಞಾಪಿಸಿಕೊಳ್ಳುವೆನು

ಬೆಂಗಳೂರು ಸಿಟಿ. ಸುಜನಮಿತ್ರ.

ತಾಲ್ಲೋಕು ವರ್ತಮಾನಗಳು.

ತಿಪ್ಟೂರು.—ಸಾಹುಕಾರ್ ಮೆ॥ ಶಿಂಗ್ರಿ ನಂಜಪ್ಪನವರು ತಮ್ಮ ಮಂಗಳವಾದ ಕಲ್ಯಾಣದ ಬಳಿ, ಸಕಲ ಕೋಮಿನವರಿಗೂ ಪ್ರತ್ಯೇಕ ಪ್ರತ್ಯೇಕ ಭೋಜನಗಳನ್ನು ಮಾಡಿಸಿದರು. ಸುತ್ತಲಿನ ಅನೇಕ ಗ್ರಾಮಗಳಿಂದಲೂ ಜನರು ಬಂದಿದ್ದರು. ಸುಮಾರು ಎರಡು ಸಾವಿರ ಜನರು ಊಟಮಾಡಿ ತೃಪ್ತರಾದರೆಂತಲೂ ಪ್ರತಿ ಒಬ್ಬರಿಗೂ ದಕ್ಷಿಣೆಯೂ ಕೊಡಲ್ಪಟ್ಟು ಮೆ॥ ಸಾಹುಕಾರರಿಗೆ ಸುಮಾರು ೧,೨೦೦ ರೂಪಾಯಿ ಖರ್ಚಾಯಿತೆಂತಲೂ ಹೇಳುತ್ತಾರೆ. ಸಾಹುಕಾರರ ಔದಾರ್ಯ ಭಾವವನ್ನು ಕೊಂಡಾಡುತ್ತಾ ದೇವರು ಇವರಿಗೆ ಇನ್ನೂ ಸುಖವನ್ನನುಗ್ರಹಿಸಲಿ ಎಂದು ಹರಸುತ್ತಾ ಜನರು ತಮ್ಮ ಸ್ಥಳಗಳಿಗೆ ಹೋದರು ಈ ಊರು ಹುಟ್ಟಿದ ಲಾಗಾಯಿತು ಇಂಥಾ ಅಪೂರ್ವ ಕಾರ್ಯವನ್ನು ಯಾರೂ ಮಾಡಲಿಲ್ಲವೆಂದು ಹೇಳುತ್ತಾರೆ. ಸಾಹುಕಾರರು ಬಡವರಾಧಾರಿಗಳೆಂದು ಹೇಳುತ್ತಾರೆ.—ಚಿಕ್ಕ ಹುಡುಗಿಯೊಬ್ಬಳು ಭಾವಿಯಲ್ಲಿ ನೀರು ಸೇದಿ ಕೊಡವನ್ನು ತೆಗೆದುಕೊಳ್ಳುವ ಸಮಯಕ್ಕೆ ಎರಡು ಕಾಲುಗಳೂ ಜೋರ್ ಕೊಡದು ಬಿಂದಿಗೆಯನ್ನು ಅಪ್ಪಿಕೊಂಡು ನೀರೊಳಗೆ ಹೋಗಿ ಮೇಲಕ್ಕೆ ಎರಡನೇ ಸಾರಿ ಬರುವಾಗ್ಯೆ ಪುಣ್ಯಾತ್ಮನೊಬ್ಬನು ಸಾಹಸದಿಂದ ಮೇಲಕ್ಕೆ ತೆಗೆದನೆಂದು ತಿಳಿಯಿತು. ಹುಡುಗಿ ಕ್ಷೇಮವಾಗಿರುತ್ತಾಳೆ. ಅವಿವೇಕಿಗಳಾದ ತಾಯಿಗಳು ತಮ್ಮ ಚಿಕ್ಕ ಮಕ್ಕಳ ವಿಷಯ ವಿವೇಕ ತಂದುಕೊಂಡರೆ ಒಳ್ಳೇದು.—ಕೊಂಡ್ಲಿ ಗಟ್ಟದಲ್ಲಿ ಪಟೇಲ್ ಶಾನುಭೋಗರು ಕಂದಾಯ ವಸೂಲುಮಾಡುತ್ತಿರುವಾಗ ಕೆಲವರು ಖಂಟರು ಹಣವನ್ನು ಸೂರೆಮಾಡಿದರೆಂದು ಹಿಂದೇ ವರ್ತಮಾನ ಬಂದದ್ದರಿಂದ ನಮ್ಮ ಅಮಲ್ದಾರರೂ ಪೋಲೀಸ್ ಇನ್ಸ್‌ಪೆಕ್ಟರವರೂ ಸದರಿ ಗ್ರಾಮಕ್ಕೆ ದಯಮಾಡಿಸಿದ್ದಾರೆಂದು ತಿಳಿಯಿತು.—ಕೆಲವು ದಿನಗಳಿಂದಲೂ ಮಳೆ ನಿಂತಿರುತ್ತೆ. ಊರಲ್ಲಿ ಸಣ್ಣಸಣ್ಣ ಕಾಯಿಲೆಗಳು ಇದ್ದೇ ಇರುತ್ತವೆ. ಮಕ್ಕಳ ಚೇಷ್ಟೆ (ಬಾಲಗ್ರಹ) ಎಂಬ ರೋಗದಿಂದ ಕೆಲವು ಮಕ್ಕಳು ಸಾಯುತ್ತವೆ.

ಮಂಡ್ಯ.—ಈ ತಿಂಗಳು ೨೦ ನೇ ತಾರೀಖು ಇಲ್ಲಿ ಮೆ॥ ಭಾಭಾ ಸಾಹೇಬರು ಬಂದು ಸಾತ್ನೂರಲ್ಲಿ ನಡೆಯುವ ಜವಳಿ ಕೆಲಸವನ್ನು ನೋಡಿಕೊಂಡು ಹೋದರು. ಅದೇ ದಿನ ರೆವಿನ್ಯೂ ಕಮಿಷನರ್ ಸಾಹೇಬರು ಬಂದು ಮಂಡ್ಯದ ಕೆರೆಯ ಕೆಳಗೆ ೧೪—೧೫ ವರ್ಷಗಳಿಂದ ಹೊಲೇರ ಬೊಮ್ಮನ ಗದ್ದೆಗೆ ನೀರು ಬಾರದಂತೆ ಕಾಲುವೆಯನ್ನು ಮುಚ್ಚಿಕೊಂಡಿರುವ ಚಿಕ್ಕಬೋರನ ಗದ್ದೆಯನ್ನು ತನಿಖೆ ಮಾಡಿಸಿದರು. ಕೆಲವು ತಿಂಗಳ ಹಿಂದೆ ಡೆಪ್ಟಿ ಕಮಿಷನರ್ ಮೆ॥ ಸ್ಪಾರ್ಕ್ಸ್ ಸಾಹೇಬರು ಆ ಗದ್ದೆಯನ್ನು ನೋಡಿ ಚಿಕ್ಕಬೋರನು ಕಾಲುವೆ ಮುಚ್ಚಿ ಆ ಬಡವನಿಗೆ ಅನೇಕ ದಿನಗಳಿಂದ ಕಷ್ಟಕ್ಕೆ ಗುರಿಮಾಡಿದ ವಿಷಯ ಶ್ರುತಪಡಿಸಬೇಕೆಂದು ರೆವಿನ್ಯೂ ಕಮಿಷನರನ್ನು ಕೇಳಿಕೊಂಡಿದ್ದರು. ಆದರೆ ಚಿಕ್ಕಬೋರನು ಮಾತ್ರ ಇಲ್ಲಿಂದ ನೀರು ಹೋಗುವ ಪೋರ್ನಾಳ್ ಇರಲಿಲ್ಲವೆಂದು ಹೇಳಿಕೊಂಡನು. ಆ ದಿನ ಈ ಊರಿನ ಎಲ್ಲಾ ಜನರು ಆ ವಿಚಾರ ನೋಡಬೇಕೆಂದು ಗದ್ದೆಗೆ ಹೋಗಿದ್ದರು. ಹೊಲೆಯರು ಇನ್ನು ನಾವು ಬದುಕಿಕೊಂಡೆವೆಂದು ಆನಂದಾಬ್ಧಿಯಲ್ಲಿ ಮುಳುಗಿದ್ದರು. ಇತರ ಜನರೆಲ್ಲರೂ ಸಂತೋಷಪಟ್ಟರು. ರೆವಿನ್ಯೂ ಕಮಿಷನರೂ ಡಿವಿಜನ್ ಆಫೀಸರೂ ಆ ಜಮೀನನ್ನು ನೋಡಿದ ಮೇಲೆ ಚಿಕ್ಕಬೋರನನ್ನು ನೋಡಿ—ಯಾಕೆ ನೀರು ಕೊಡಬಾರದೆಂದು ಕೇಳಿದರು. ಅವನು—ನಾನು ಕೆಟ್ಟುಹೋಗುತ್ತೇನೆ ಸ್ವಾಮಿ ತಮ್ಮ ಅಪ್ಪಣೆ ಆದರೆ ಕೊಡುತ್ತೇನೆಂದು ಹೇಳಿದನು. ಆ ಸುತ್ತುಗದ್ದೆ ಮಾಡುವವರು, ನೀರುಗಂಟಿ, ಪಟೇಲ ಶ್ಯಾನುಭೋಗರು ಚಿಕ್ಕಬೋರನ ಗದ್ದೆಯಿಂದಲೇ ಹೊಲೇರ ಗದ್ದೆಗೆ ನೀರು ಹೋಗುತ್ತೆಂದು ಹೇಳುತ್ತಾರೆ. ಇವರನ್ನು ಕೇಳಲೇ ಇಲ್ಲ. ನೀರು ಬರುವ ಜಾಗದಲ್ಲಿದ್ದ ಮಣ್ಣನ್ನು ಬೋರನು ತೆಗೆದು ಗದ್ದೆ ದಿಣ್ಣೆಮಾಡಿ ನೀರು ಹತ್ತುವದಿಲ್ಲವೆಂದು ಹೇಳಿಕೊಂಡನು. ಆದರೆ ಹೊಲೇರಿಗೆ ಗದ್ದೆಕೊಟ್ಟ ಹೆಂಗಸು—ಇಲ್ಲಿ ಲಾಗಾಯಿತಿನಿಂದ ನೀರು ಹೋಗುತ್ತ ಇತ್ತೆಂದು ಸಾಕ್ಷಿ ಹೇಳಿದಳು. ಆದರೆ ಸಾಹೇಬರು ಚಿಕ್ಕಬೋರನ ಗದ್ದೆಯಿಂದ ಕೊಡತಕ್ಕದ್ದಿಲ್ಲವೆಂದು ಹೇಳಿಬಿಟ್ಟರು. ಅವನ ಗದ್ದೆಯನ್ನು ಅಳತೆ ಮಾಡಿಸಬೇಕೆಂದು ಕೇಳಿಕೊಂಡನು. ಮಾಡುವದಿಲ್ಲ ಅಂದರು. ಇವರು ೧೫ ವರ್ಷದಿಂದ ಕಂದಾಯ ಕೊಟ್ಟು ಬಡವರಾಗಿದ್ದಾರೆ ದೇವರೇ ಇವರಿಗೆ ಸಹಾಯ ತೋರಿಸಿ ಕಾಪಾಡಬೇಕು.

ಚಿಕ್ಕಮಗಳೂರು—ಸೋನೆ ಮಳೆಯು ಸುಮಾರಾಗಿ ಇರುತ್ತಲಿದ್ದರೂ ಪೈರುಗಳಿಗೆ ಹದವಾಗಲಿಲ್ಲ. ಕೆರೆ ಕಟ್ಟೆಗಳಿಗೆ ನೀರು ಬರಲಿಲ್ಲ. ಊರಿನಲ್ಲಿ ಕಣ್ಣು ನೋವಿನ ಬಾಧೆ ತಪ್ಪಲಿಲ್ಲ. ಹೊಸ ಡೆಪ್ಯುಟಿ ಕಮಿಷನರ್ ಮೆ॥ ಚಂಗಯ್ಯಶೆಟ್ಟರವರು ೨೧ನೇ ತಾರೀಖಿಗೆ ಬಂದು ತಮ್ಮ ಕೋರ್ಟಿಗೆ ಬಂದಿದ್ದ ಅಪೀಲ್ ಕೇಸುಗಳನ್ನೆಲ್ಲಾ ಫೈಸಲ್ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಡಾ॥ ಸಿ. ಎ. ನಂಜಪ್ಪನವರು ೨೧ನೆ ತಾ. ಬಂದು ಇಲ್ಲಿನ ಸಿವಿಲ್ ಆಸ್ಪತ್ರೆಯ ಚಾರ್ಜನ್ನು ಡಾ॥ ಉಸ್ಮಾನರಿಂದ ವಹಿಸಿಕೊಂಡರು ಡಾ॥ ಉಸ್ಮಾನರವರು ಅದೇ ದಿನ ಬೆಂಗಳೂರಿಗೆ ಪ್ರಯಾಣಮಾಡಿದರು.—ಸ್ಕೂಲುಗಳ ಸರ್ಕಲ್ ಇನ್ಸ್‌ಪೆಕ್ಟರ್ ಮೆ॥ ವೆಂಕಟಸ್ವಾಮಿ ನಾಯುಡುರವರು ಕಳೆದ ವಾರ ಇಲ್ಲಿಗೆ ಬಂದು ಇಲ್ಲಿನ ಸ್ಕೂಲುಗಳನ್ನೆಲ್ಲಾ ನೋಡಿಕೊಂಡು ಶಿವಮೊಗ್ಗೆಯ ಕಡೆ ಪ್ರಯಾಣಮಾಡಿದರು.—ಮೈಸೂರು ಕ್ರೈಸ್ತ ವೆಸ್ಲಿಯನ್ ಮಿಷನ್ ಸಂಘದ ಅಧ್ಯಕ್ಷರಾದ ಮಿಸ ಡಿ. ಎ. ರೀಸ್ ದೊರೆಯವರು ಧೊರೆಸಾನಿಯವರ ಸಂಗಡ ಇದೇ ೨೨ನೆ ತಾರೀಖಿನಲ್ಲಿ ಹಾಸನದ ಕಡೆಯಿಂದ ಬೇಲೂರು ಮಾರ್ಗವಾಗಿ ಇಲ್ಲಿಗೆ ಬಂದರು. ಆಗ ಇಲ್ಲಿನ ವೆಸ್ಲಿಯನ್ ಕ್ರೈಸ್ತರೆಲ್ಲರೂ ಫಲಪುಷ್ಪಗಳೊಡನೆ ಅವರ ದರ್ಶನವನ್ನು ತೆಗೆದುಕೊಂಡರು. ಅವರು ಸಭೆಯ ಕ್ಷೇಮಸಮಾಚಾರವನ್ನು ವಿಚಾರಿಸಿದರು. ಅನಂತರ ಸಾಯಂಕಾಲ ೬॥ ಘಂಟೆಗೆ ಇಲ್ಲಿನ ಮಿಷನ್ ದೇವಾಲಯದಲ್ಲಿ ಉಪನ್ಯಾಸಮಾಡಿದರು. ೨೪ನೆ ತಾರೀಖಿನ ದಿನ ಬೆಳಿಗ್ಗೆ ಸ್ಕೂಲುಗಳನ್ನು ನೋಡಿಕೊಂಡು ಬಂದನಂತರ ಸಾಯಂಕಾಲ ೬॥ ಘಂಟೆಗೆ ತಿರಿಗಿ ದೇವಾಲಯದಲ್ಲಿ ಸೇರಿದ್ದವರಿಗೆಲ್ಲಾ ಉಪನ್ಯಾಸ ಮಾಡಿದರು ಈ ಎರಡು ಉಪನ್ಯಾಸಗಳಿಂದ ಸಭೆಯವರಿಗೆ ಬಹಳ ಪ್ರಯೋಜನವಾಯಿತೆಂಬುವದರಲ್ಲಿ ಸಂಶಯವಿಲ್ಲ. ಧೊರೆಸಾನಿಯವರು ಸಭೆಯವರ ಮನೆಗಳಿಗೆಲ್ಲಾ ಹೋಗಿ ಹೆಂಗಸರು ಮಕ್ಕಳ ಕ್ಷೇಮವನ್ನು ವಿಚಾರಿಸಿ, ಕೆಲವರ ಸಂಗಡ ದೇವರ ವಿಷಯ ಮಾತನಾಡಿ ಕೆಲವರ ಸಂಗಡ ದೇವರ ಪ್ರಾರ್ಥನೆ ಮಾಡಿದರು. ೨೪ನೆ ತಾ. ಬೆಳಿಗ್ಗೆ ಇಲ್ಲಿಂದ ಬೇಲೂರು ಮಾರ್ಗವಾಗಿ ಹಾಸನದ ಕಡೆ ಪ್ರಯಾಣಮಾಡಿದರು.—ಮುನಿಸಿಪಾಲಿಟಿಯವರು ಊರಿನಲ್ಲಿರುವ ಕೆಲವು ಭಾಗದ ರಸ್ತೆ ಚರಂಡಿಗಳ ಜಾಕೀಜಾ ವಿಷಯ ನಿಗಾ ಕೊಡುವದು ಪ್ರಯೋಜನವಾಗಿರುವದು

ತಿಪಟೂರು ತಾ॥ ನೊಣವಿನ ಕೆರೆ—ಮಳೆ ಇಲ್ಲ. ಧಾರಣೆವಾಸಿಗಳು ದಿನೆ ದಿನೇ ತಗ್ಗುತ್ತಲಿವೆ. ಈ ಊರಿನಲ್ಲಿ ಯೂನಿಯನ್ ಪಂಚಾಯತ್ದದ್ದರಿಂದ ಸುಂಕ ಕಂದಾಯ ಇನ್ನೂ ಜಾಸ್ತಿಯಾಗಿ ತಪ್ಪಿಹೋಗಿದ್ದ ಪೋಲೀಸು ಕಾವಲ್ ಪದ್ಧತಿಯು ಪುನಃ ಜಾರಿಗೆ ಬಂತು. ಇದು ನಾವು ಕೊಡುವ ಜಾಸ್ತಿ ಕಂದಾಯದ ಬದ್ಧೆಯೋ ಏನೋ ಎಂದು ಅನೇಕರು ಗೊಣಗುಟ್ಟುತ್ತಿರುವರು. ವರ್ತಕರುಗಳ ಮೇಲೆ ಉಂಟಾಗಿರುವ ತೊಂದರೆಯನ್ನು ಹೇಳತೀರದು. ಸಾಲದ್ದಕ್ಕೆ ಕಟುಕರ ಆವಾಂತರ. ಈ ಮೂಗುಪ್ರಾಣಿಗಳು ಜೀವಸಹಿತ ಕಟುಕರಿಂದ ಸಂಹರಿಸಲ್ಪಡತಕ್ಕ ಕೆಟ್ಟ ಪದ್ಧತಿಯನ್ನು ದಯಾಳುಗಳಾದ ನಮ್ಮ ಸರ್ಕಾರದವರು ಇನ್ನುಮೇಲಾದರೂ ತಪ್ಪಿಸ್ಯಾರೆಂದು ನಂಬಿರುವೆನು !—ಇದೇ ತಿಂಗಳು ೨೧ನೆ ತಾ. ಬುಧವಾರ ತುಂಕೂರು ಡಿ॥ ಸ್ಕೂಲುಗಳ ಅ॥ ಡೆಪ್ಟಿ ಇನ್ಸ್‌ಪೆಕ್ಟರ್ ಬಿ ತಿರುಮಲಾಚಾರ್ಯರು ೬॥ ಘಂಟೆಗೆ ಮ್ಯಾಜಿಕ್ ಲಾಂಟರ್ನ ಮೆ॥ ಡಿ. ಕೃಷ್ಣಸ್ವಾಮ್ಯೆಂಗಾರ್ಯರವರೊಡನೆ ಈ ಗ್ರಾಮಕ್ಕೆ ದಯಮಾಡಿಸಿದರು. ಈ ರಾತ್ರಿ ಇಲ್ಲಿನ ೧. ಸ್ಕೂಲ ಕಟ್ಟಡದಲ್ಲಿ ಮೆ॥ ಡಿ ಕೃಷ್ಣಸ್ವಾಮ್ಯಯ್ಯಂಗಾರ್ಯರು ಮ್ಯಾಜಿಕ್ ಲಾಂಟರ್ನ ಮೂಲಕ ಪ್ರದರ್ಶನಕ್ಕೆ ಪ್ರಾರಂಭಿಸಿದರು ಆಗ್ಯೆ ಅಲ್ಲಿ ಈ ಗ್ರಾಮದ ಸ್ಕೂಲ್‌ಗಳ ಬಾಲಕಬಾಲಕಿಯರೂ ಮಾಸ್ಟರುಗಳೂ ಸ್ಕೂಲ್ ಮೆಂಬರುಗಳೂ ಇನ್ನೂ ಅನೇಕ ದೊಡ್ಡಮನುಷ್ಯರೂ ಬಿದರೆ, ಹೊನ್ನೆ, ಕಣಕೂರು, ಈ ಗ್ರಾಮಗಳ ಸ್ಕೂಲ್‌ಗಳ ಬಾಲಕರೂ ಮಾಸ್ತರುಗಳೂ ಸಹಾ ಸೇರಿದ್ದರು. ಇವರುಗಳಿಗೆಲ್ಲಾ ಬಹಳ ಚನ್ನಾಗಿ ತಿಳಿಯುವಂತೆ ಅ॥ ಡೆಪ್ಟಿ ಇನ್ಸ್‌ಪೆಕ್ಟರವರು ಮ್ಯಾಜಿಕ್‌ಲಾಂಟರ್ನ ಪ್ರದರ್ಶನದ ವಿಷಯಗಳನ್ನು ವಿವರಿಸಿ ಹೇಳಿ ಬಹಳ ಸಂತೋಷವನ್ನುಂಟುಮಾಡಿದರು. ತದನಂತರ ಇಲ್ಲಿನ ಸ್ಕೂಲ್ ಆ ಮಾಸ್ಟರ್ ಸಿ ಸುಬ್ರಹ್ಮಣ್ಯಶಾಸ್ತ್ರಿಗಳು ಮ್ಯಾಜಿಕ್‌ಲಾಂಟರ್ನ ಪ್ರದರ್ಶನದ ಮುಖ್ಯ ಉದ್ದೇಶವನ್ನು ಸಭಿಕರಿಗೆಲ್ಲಾ ಪರಿಷ್ಕಾರವಾಗಿ ತಿಳಿಯಪಡಿಸಿದರು. ಮತ್ತು ಕಸ್ತೂರಿರಂಗ್ಯೆಂಗಾರ್ಯರು ಅಲ್ಲಿ ಸೇರಿದ್ದ ಸಭಿಕರ ಪರವಾಗಿ ಈ ದಿನ ಅ॥ ಡೆಪ್ಟಿ ಇನ್ಸ್‌ಪೆಕ್ಟರವರೂ ಮೆ॥ ಡಿ ಕೃಷ್ಣಸ್ವಾಮ್ಯೆಂಗಾರ್ಯರವರೂ ನಮ್ಮ ಗ್ರಾಮಕ್ಕೆ ದಯಮಾಡಿಸಿ ನಮ್ಮಗಳಿಗೆಲ್ಲಾ ಬಹಳ ಸಂತೋಷ ಉಂಟಾಗುವ ಹಾಗೆ ಅನೇಕ ಹೊಸ ವಿಷಯಗಳನ್ನು ತೋರ್ಪಡಿಸಿದುದಕ್ಕಾಗಿ ನಾವು ಬಹಳ ಕೃತಜ್ಞರಾಗಿರುತ್ತೇವೆ. ಮತ್ತು ಆಗಾಗ್ಯೆ ನಮಗೆ ಇಂಥಾ ಪ್ರದರ್ಶನಗಳು ದೊರಕುವಂತೆ ತಕ್ಕ ಸಹಾಯಗಳನ್ನು ಕಲ್ಪಿಸಿಕೊಟ್ಟಿರುವ ನಮ್ಮ ಶ್ರೀಮನ್ ಮಹಾರಾಜರವರ ಸರ್ಕಾರಕ್ಕೆ ಅನೇಕ ವಂದನೆಗಳನ್ನು ಅರ್ಪಿಸಿರುವೆವು ಎಂದು ಹೇಳಿದ ಕೂಡಲೆ ಕರತಾಡನಗಳು ಮಾಡಲ್ಪಟ್ಟು ೯॥ ಘಂಟೆಗೆ ಸಭೆಯು ಮುಕ್ತಾಯಮಾಡಲ್ಪಟ್ಟಿತು. ಮಾರನೇ ದಿನ ಪ್ರಾತಃಕಾಲ ೪ ಘಂಟೆಗೆ ಅವರುಗಳು ತಿಪಟೂರು ಮಾರ್ಗವಾಗಿ ಹೊನ್ನವಳ್ಳಿಗೆ ದಯಮಾಡಿದರು.

ತೀರ್ಥಹಳ್ಳಿ.—ತೀರ್ಥಹಳ್ಳಿಯಲ್ಲಿ ಮಳೆಗಾಲವಾಗಿದ್ದರೂ ಆನಂದಪುರದ ರಸ್ತೆಯಲ್ಲಿರುವ ಕೆಲವು ಭಾವಿಗಳಲ್ಲಿ ನೀರಿಲ್ಲದೆ ಬಹಳ ಕಷ್ಟವಾಗಿದೆ ದೊಡ್ಡಮನೆ ತೋಟದ ಹತ್ತಿರುವ ಮ್ಯುನಿಸಿಪಾಲಿಟಿ ಭಾವಿಯಲ್ಲಿ ನೀರು ಬತ್ತಿಹೋಗಿ ಮೂರು ತಿಂಗಳಾಯಿತು. ಆ ಭಾವಿಯು ನಿಷ್ಪ್ರಯೋಜನವಾಗಿ ಬಿದ್ದಿದೆ ಜನರು ನೀರಿಗೆ ಅಲೆದಾಡುತ್ತಿದ್ದಾರೆ ಮ್ಯುನಿಸಿಪಾಲಿಟಿಯವರು ಗಮನಕೊಟ್ಟು ಆ ಭಾವಿಯನ್ನು ಇನ್ನೂ ಸ್ವಲ್ಪ ಆಳವಾಗಿ ತೋಡಿಸಿದರೆ ಬಹು ಉತ್ತಮ. ಈ ಸಾರಿ ಮಳೆಯು ತಕ್ಕಷ್ಟು ಇಲ್ಲದ್ದರಿಂದ ಹೊಳೆಯು ಬೇಸಿಗೆ ಕಾಲದ ರೀತಿ ಹರಿಯುತ್ತಿದೆ.—ಈ ಪ್ರಾಂತ್ಯದಲ್ಲಿ ಜನಗಳು ಕಾಂಟು ಹುಣ್ಣುಗಳಿಂದ ಬಾಧೆಪಡುತ್ತಿರುವದು ಸರ್ಕಾರದವರಲ್ಲಿ ಯಾರ ಗಮನಕ್ಕೂ ಬಂದಂತೆ ತೋರುವದಿಲ್ಲ. ಈಗ ಒಳ್ಳೇ ಬೇಸಾಯದ ಕಾಲ. ಗದ್ದೆ ಹೂಡದಿದ್ದರೆ ಗೇಡ ಜನಗಳಿಗೆ ಮುಂದೆ ಆಹಾರಕ್ಕೆ ಮಾರ್ಗವಿಲ್ಲ? ಇಂಥಾದ್ದರಲ್ಲಿ ಅನೇಕರು ನರಳುತ್ತಾ ಬಿದ್ದಿದ್ದಾರೆ. ಈ ಹುಣ್ಣುಗಳ ಪರಿಹಾರವು ಯಾರಿಂದ ಆಗುವದೋ ಎಂದು ಜನಗಳು ಹಂಬಲಿಸುತ್ತಿದ್ದಾರೆ. ಇಲ್ಲಿನ ಅಮಲ್ದಾರರು ತಾಲ್ಲೋಕಿನಲ್ಲಿರುವ ಜನಗಳ ಕಷ್ಟವನ್ನು ಸರ್ಕಾರಕ್ಕೆ ಇಲ್ಲವೆ ಸಿವಿಲ್ ಸರ್ಜನರಿಗೆ ಶ್ರುತಪಡಿಸುವದು ಬಹು ಉತ್ತಮವೂ ಅವಶ್ಯವೂ ಆದದ್ದು. ಹೀಗೆ ಬರೆದು ಸಹಾಯ ಮಾಡಿಸಿದರೆ ಅಮಲ್ದಾರರನ್ನು ತಾಲ್ಲೋಕಿನ ರೈತಾಪಿ ಜನಗಳೆಲ್ಲರೂ ಕೊಂಡಾಡುವರು.—ಮ್ಯುನಿಸಿಪಾಲಿಟಿಯ ಕೆಲಸಗಳನ್ನು ೭—೪ ಜನ ಹೊರೆಯರು ಮಾಡುತ್ತಿದ್ದಾರೆ ಇವರಿಗೆ ಊರಿನ ಶುದ್ಧಿ ವಿಷಯ ಏನುಗೊತ್ತು ? ಆಳುಗಳಿಂದ ಸ್ವಲ್ಪ ಗುಡಿಸುವದು ಮಾತ್ರ ತಿಳಿಯಬಹುದು. ಮೇಲಿನವರು ಬಿದ್ದ ಪತ್ರ ಇದ್ದ ಊರಿನಲ್ಲಿ ಸ್ವಲ್ಪವೂ ಕಸವಿಲ್ಲದ ರೀತಿ ದೂರ ಎತ್ತಿಹಾಕಿಸುವದು ಅವಶ್ಯವಾಗಿದೆ. ಆದರೆ ಪೇಟೆಯ ದೊಡ್ಡ ರಸ್ತೆಯ ಉಭಯ ಪಾರ್ಶ್ವಗಳಲ್ಲಿಯೂ ಎರಡು ಗಜ ಕೆತ್ತನೆದರಂತೆ ಅನೇಕ ಪಿಟ್ಟುಗಳನ್ನು ಮ್ಯುನಿಸಿಪಾಲಿಟಿಯವರೇ ಮಾಡಿಸಿದ್ದಾರೆಂದು ಹೇಳಬೇಕಾಗಿದೆ. ಇವುಗಳು ಕೊಳೆತು ನಾರುತ್ತಿವೆ ರಸ್ತೆಯಲ್ಲಿ ತಿರುಗುವದಕ್ಕೆ ಹೇಸಿಕೆಯಾಗುತ್ತದೆ. ವೈಸ್ ಪ್ರೆಸಿಡೆಂಟರ ದೃಷ್ಟಿಯು ಯಾಕೆ ಆ ಕೊಳಕ ಗೊಬ್ಬರದ ಮೇಲೆ ಬೀಳುವದಿಲ್ಲವೋ ಆಶ್ಚರ್ಯವಾಗಿದೆ ಆ ಗೊಬ್ಬರ ಕೊಳೆತ ಪದಾರ್ಥಗಳಲ್ಲಿ ಸೇರಿ ದುರ್ವಾಸನೆಯು ಮನೆಗಳಿಗೆ ನುಗ್ಗಿ ಇಲ್ಲದ ಕಷ್ಟಗಳುಂಟಾಗುತ್ತವೆ. ಮ್ಯುನಿಸಿಪಾಲಿಟಿಗೆ ಕಚರಾ ಸಾಗಿಸುವದಕ್ಕೆ ಒಂದು ಗಾಡಿ ಇಲ್ಲದೆ ಇದೆಯಂತೆ ಆ ಝಾಡಮಾಲಿಗಳು ಅಂಗಲಾಚಿಕೊಂಡು, ಕಸವನ್ನು ದೂರ ಸಾಗಿಸಲಾರದೆ ಹತ್ರದಲ್ಲಿಯೇ ಹಾಕುತ್ತಾ ಅರ್ಧ ಸಾಗಿಸುತ್ತಾ ಅರ್ಧ ಗುಡ್ಡೆ ಮಾಡಿದ ಸ್ಥಳಗಳಲ್ಲಿ ಬಿಟ್ಟು ಕೊಳೆಸುತ್ತಾ ಬರುತ್ತಿದ್ದಾರೆ. ಊರ ಕಚ್ಚರಾ ಹೊರಸಾಗಿ ಹೋಗದೆ ಇದ್ದರೆ ಅದಕ್ಕಿಂತಲೂ ಊರಿಗೆ ಅಶುದ್ಧವು ಬೇರೆ ಯಾವದಿದೆ ? ಆದ್ದರಿಂದ ವೈಸ್ ಪ್ರೆಸಿಡೆಂಟರು ಗಮನಕೊಟ್ಟು ಈ ಕಾಲದಲ್ಲಿ ಎಲ್ಲಾ ರಸ್ತೆಗಳನ್ನೂ ಸಂಚರಿಸಿ ಕಚರಾ ಗುಡ್ಡೆಗಳನ್ನೂ ಚರಂಡಿಗಳಲ್ಲಿ ನಾರುತ್ತಿರುವ ಕೊಳಕುಗಳನ್ನೂ ತೆಗೆಸಿ, ಸಾಧ್ಯವಾದರೆ ಊರಿಗಾಚೆ ಅರ್ಧ ಮೈಲಿ ಫಾಸಲೆಯಲ್ಲಾದರೂ ಹಾಕಿಸುವಂತೆ ಹುಕುಂ ಮಾಡುವದು ಉತ್ತಮವಾಗಿದೆ. ಜನರ ಮೇಲಿಗಾಗಿ ವೈಸ್ ಪ್ರೆಸಿಡೆಂಟರು ಎಷ್ಟು ಕೆಲಸ ಮಾಡಿಸಿದರೂ ಅಷ್ಟು ಕೀರ್ತಿ ತಮಗೆ ಬರುವದು.—ಈ ಪ್ರಾಂತ್ಯಗಳಲ್ಲಿ ದನಗಳು, ಕುರಿಗಳು, ಜಾತಿ ಭೇದದ ಮತ್ಸರದಿಂದ ಇನ್ನೂ ಅನೇಕರು ವ್ಯಾಜ್ಯಗಳನ್ನು ತರುತ್ತಿದ್ದಾರೆ. ಇವರಲ್ಲಿ ಕೆಲವು ದುರಾಶೆಯುಳ್ಳ ಲಾಯರಿಗಳು ಸೇರಿ ಹೆಂಗಸರನ್ನು ಕೋರ್ಟಿಗೆ ಎಳೆಯಲು ಪ್ರಾರಂಭಿಸಿದ್ದಾರೆ. ಮತ್ತು ಅನೇಕ ಸಿವಿಲ್ ಕೇಸುಗಳನ್ನು ಕ್ರಿಮಿನಲ್ ಕೇಸುಗಳಾಗಿ ಮಾಜಿಸ್ಟ್ರೇಟರು ವಿಚಾರಿಸಲು ಅವಕಾಶ ಮಾಡಿಕೊಡುತ್ತಾರೆ. ಇದು ಈ ಲಾಯರುಗಳು ಮಾಡುವ ಪಿತೂರಿ ಎಂದೂ ಕೋರ್ಟಿಗೆ ಹೋಗದ ದೊಡ್ಡ ಮನುಷ್ಯರು ಇಂಥಾ ಮೋಸಗಾರರಿಂದ ಮಾನಕಳೆದುಕೊಳ್ಳಬೇಕಾಗಿದೆ ಎಂದೂ ತಾಲ್ಲೂಕ್ ಮ್ಯಾಜಿಸ್ಟ್ರೇಟರು ಸ್ಥಳದ ಮಾಹಿತಿನ್ನು ಚನ್ನಾಗಿ ಮಾಡಿಕೊಂಡು ಮೊಕದ್ದಮೆಗಳನ್ನು ವಿಚಾರಿಸುವಲ್ಲಿ ನಿಜ ಸಂಗತಿಗಳು ಗೊತ್ತಾಗುವವು ಎಂದೂ ಜನರು ಹೇಳಲಾರಂಭಿಸಿದ್ದಾರೆ —ಈ ತಿಂಗಳಲ್ಲಿ ಪದ್ಧತಿಯಂತೆ ಎಲ್ಲಾ ಪಟೇಲರೂ ಛೋಟಕೆಯಲ್ಲಿ ೧—೭—೬ರೂ. ವರಿಗೂ ಕಳೆದುಕೊಂಡರಂತೆ. ಈ ಪುಸ್ತ ಬಲವಂತದ ಎಂದಿಗೆ ನಿಲ್ಲುವದೋ ಎಂದು ಕೋರಬೇಕಾಗಿದೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

27

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ.—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ರಯಾಣ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪. "ರೋಮನರ ಚರಿತ್ರೆ" ಕ್ರಯ ೦—೨—೦
೫. "ಗ್ರೀಕರ ಚರಿತ್ರೆ." ,, ೦—೨—೦
೬. "ಅನುಭವಾನಂದ." ,, ೦—೬—೦
೭. "ಗಣಿತ ಸಂಜೀವಿನಿ" ೧—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ." ೦—೧೨—೦
೧೧. "೧೯೦೫ನೇ ವರುಷದ ಡೈರಿಗಳು"

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಜ್ವರಹರಿ.

33

ಇದು ಸಾಧಾರಣ ಜ್ವರ, ಹಳೇಜ್ವರ, ನೆರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಪಿ. ವೆಂಕಟಪತಿ ಅಯ್ಯರವರು— ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಇದು ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೀ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ ಮುರಿತ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮುಂ ಕರ್ಪೂರವನ್ನು ನಾನೂ ನನ್ನ ಕಾಂಪೋಂಡರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೊಂಡಿ ಚೆಟ್ಟಿ ಸ್ಟ್ರೀಟ್, ಮದರಾಸ್.

WESLEYAN MISSION PRESS, MYSORE.
ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

19

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇವಲ್ಲದೆ ಕನ್ನಡ ಅಕ್ಷರಗಳು—ಬೂರ್ಜೈಸ್ ಮಿನಿಯನ್, ಪೈಕ, ಲಾಂಗ್ ಪ್ರೈಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು.

ವಿಳಾಸ—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು.

ದಿ ಯೆಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಉಪಪತ್ತಿ ಕಲ್ಪನಾಸಂಘ, ಚನ್ನಪಟ್ಟಣ

10

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು ಸಾಮಾನ್ಯ ಉಪಪತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ. ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತ ಯಾ ನೇಮಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಮ್ಯಾನೇಜರಿಗೆ ಬಂದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು ಇಂಥಾ ಏಜಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ.

ವಿಳಾಸ—ಆರ್. ಎನ್. ವೆಂಕಟರಾಂ ಮ್ಯಾನೇಜರ್.

ಹೋಮೋಸಿಯಾ

ತಕ್ಷಣ ಪರಿಹಾರ. ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು. ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ತುರಿಕಜ್ಜಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿಲುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮೋಸಿಯಾ ಯುಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಕುಂಟಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ ೨೬ ಸೆಕಂಡು ಬೀಚ್ ಲೈನ್, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

9—6—1905 ರಿಂದ 16—6—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ಈ ವಾರ ಸಂಖ್ಯೆ.	
ಬೆಂಗಳೂರು ಪಟ್ಟಣ	0	0	5	2
ಮೈಸೂರು ,,	0	0	4	3
ಬೆಂಗಳೂರು ಡಿಸ್ಟ್ರಿಕ್ಟ್	[illegible]	7	66	49
ಮೈಸೂರು ,,	0	0	78	50
ಕೋಲಾರ್ ,,	0	0	23	11
ಕೋಲಾರ್ ಚಿನ್ನದ ಗಣಿಗಳು	0	0	7	4
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	0	0	34	10
ಚಿತ್ರದುರ್ಗ ,,	0	0	3	2
ಕಡೂರ್ ,,	0	0	55	34
ಶಿವಮೊಗ್ಗ ,,	1	1	26	19
ಜುಮ್ಲಾ.	8	8	305	18

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರದ ಜ್ಯೇಷ್ಠ ಬಹುಳ ದ್ವಾದಶಿ ಗುರುವಾರದಿಂದ ಆಷಾಢ ಶುದ್ಧ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಜೂನ್ ಮತ್ತು ಜುಲೈ

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ	ತೇದಿ ಸೌ. ಮಾಸ
29	ಗುರು	ದ್ವಾದಶಿ	37 50	ಕೃ	41 56	16
30	ಶುಕ್ರ ‡	ತ್ರಯೋ	10 25	ರೋ	19-8	17
1	ಶನಿವಾ ;;	ಚತುರ್ದಶಿ	[illegible] 12	ಮೃ	52-11	18
2	ರವಿವಾ *	ಅಮಾ	12-32	ಆ	51 [illegible]	19
3	ಚಂದ್ರ	ಪಾಡ್ಯ	11-30	ಪು	[illegible] 11	20
4	ಕುಜ †	ಬಿದಿಗೆ	6-29	ಪುಷ್ಯ	51 [illegible]	21
5	ಬುಧ |	ತದಿಗೆ	36 12	ಶ್ಲೇ	[illegible]2 18	22

‡ ಕೂರ್ಮಜಯಂತಿ ‡ ಪ್ರದೋಷ. ;; ಮಾಸಶಿವರಾತ್ರಿ.
* ಸರ್ವತ್ರಅಮಾವಾಸ್ಯೆ † ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವ | ದಗ್ಧಯೋಗ, ಮಿಥುನದಲ್ಲಿ ಚಂದ್ರ ೧

ಪೇಟೆ ಧಾರಣೆ.

ಬಾಬು.	ಮೈಸೂರು.	ಬೆಂಗಳೂರು
ಕಿತ್ತೇ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೦-೮-೦	೧೧-೨-೦
ಕೆಂಬೂತಿ ಅಕ್ಕಿ ಅವಲ್ ..	೧೦-೪-೦	೧೦-೪-೦
,, ಮಾಯಂ	೯-೧೨-೦	೧೧-೧-೦
ಜಾಬಾಣಿ ಅಕ್ಕಿ	೯-೮-೦	೧೦-೮-೦
ಸಣ್ಣಕ್ಕಿ ಅವಲ್	೧೨-೦-೦	೧೭-೪-೦
,, ಮಾಯಂ	೧೦-೮-೦	೧೦-೬-೦
ಹೊಗರೀ ಬೇಳೆ ಪಲ್ಲಾ ೧ಕ್ಕೆ	೧೦-೮-೦	೧೦-೨-೦
,, ಮಾಯಂ	೧೧-೦-೦	೧೧-೦-೦
ಪೈರ್ ರಾಗಿ ಪಲ್ಲಾ ೧ಕ್ಕೆ	೪-೧೨-೦	೫-೦-೦
ಕಾರ್ರಾಗಿ	೪-೧-೦	೪-೧೨-೦
ಜೋಳ	೪-೧೨-೦	೬-೬-೦
ಹಲಸಂದೆ ಪಲ್ಲಾ ೧ಕ್ಕೆ	೮-೧೨-೦	೯-೦-೦
ಬಿಳೀ ಅವರೆ	೬-೧೨-೦	೮-೨-೦
ಹೆಸರು	೯-೧೦-೦	೯-೬-೦
ಉದ್ದು	೮-೧೪-೦	೯-೨-೦
ಕಡಲೆ	೯-೦-೦	೮-೮-೦
ಎಳ್ಳು	೧೬-೦-೦	೧೭-೮-೦
ಹುರುಳಿ	೮-೦-೦	೮-೮-೦
ಹರಳು ೧೨೭ ಸೇರಿಗೆ	೯-೮-೦	೯-೧೨-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೨-೧೫-೦
ಮೆಣಸಿನಕಾಯಿ	೪-೮-೦	೩-೧೨-೦
,, ಮಾಯಂ	೩-೧೨-೦	೩-೬-೦
ಬೆಲ್ಲ ದೊಡ್ಡ ಅಚ್ಚು	೭-೪-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೪-೦-೦	೪-೪-೦
ಹರಳೆಣ್ಣೆ ,,	೪-೦-೦	೪-೦-೦
ಕೊಬ್ಬರಿ ಪಲ್ಲ ೧ಕ್ಕೆ	೬-೦-೦	೯-೨-೦
ಉಪ್ಪು ,,	೮-೦-೦	೬-೧೨-೦
ಹುಣಸೇ ಹಣ್ಣು	೧-೪-೦	೦-೧೫-೦
,, ಹಳೇದು	೦-೧೪-೦	೦-೧೩-೦
ತುಪ್ಪ	೧೨-೦-೦	೧೦-೧೨-೦
ಸೀಮೆಯೆಣ್ಣೆ ಪಟ್ಟ ೧ಕ್ಕೆ	೫-೩-೦	೪-೭-೦
ತೆಂಗಿನಕಾಯಿ ೧೦೦ಕ್ಕೆ	೫-೦-೦	೩-೧೪-೦
ಅಳಲೇಕಾಯಿ ಮಣ ೧ಕ್ಕೆ	೧-೦-೦	೦-೧೧-೦
ಅಂಟುವಾಳದಕಾಯಿ ಮಣ ೧ಕ್ಕೆ	೦-೧೪-೦	೦-೧೩-೦
ಚಿನ್ನ (ಪವನ್) ಕೆಂಪು	೧೫-೮-೦	೧೫-೫-೦
,, ,, ಪಸಿಮೆ	೧೫-೧೦-೦	೧೫-೯-೦
,, ,, ಗಟ್ಟಿ ತೊಲ ೧ಕ್ಕೆ	೨೬-೦-೦	೨೩-೧೨-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೨-೦-೦	೭೩-೦-೦

Printed and Published by the Rev. H. Spencer, B.A., the Proprietor and Manager, Wesleyan Mission Press, Mysore 29/6/1905.

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ ಮೈಸೂರು—ಸನ್ ೧೯೦೫ ನೇ ಇಸವಿ ಜುಲೈ ತಾರೀಖು ೬ ನೇ ಗುರುವಾರ. ಸಂಚಿಕೆ ೬

ಬಹಳ ಸುಲಭ! ಒಳ್ಳೇ ಸಮಯ!

3

ಒಳ್ಳೇ ತರಹ ಟ್ವಿಲ್ ಸ್ಯಾಟಿಂಗ್, ಫ್ಲಾನಲ್ ವಗೈರೆ ಸಟಾರ್ಗಳು ನನ್ನಲ್ಲಿ ದೊರೆಯುತ್ತವೆ ವಿ ಪಿ ಪಿ ಮೂಲಕ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಸಹ ಸುಲಭ

ಸಂಪಿಗೆ ಶಾಮರಾವ್ ಮರ್ಚೆಂಟ್—ಟೈಲರ್,

೫೦೩—೩ ಚಿಕ್ಕಪೇಟೆ ಬೆಂಗಳೂರುಸಿಟಿ

ಕಥಾಸಂಗ್ರಹ—ಮೊದಲನ ಭಾಗ.

14

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಸುಮುಖ ಕಥಾಸಂಗ್ರಹದಲ್ಲಿ ೧—೩ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚು ಹಾಕಿದೆ ಈಗಿನ ಕಾಲಕ್ಕೆ ತಕ್ಕಂತೆ ಪಾಠಗಳನ್ನೂ ಮಾತಿನ ಸರಣಿಯನ್ನೂ ಬದಲಾವಣೆ ಮಾಡಿದೆ ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿಗೆ ೧ ಪ್ರತಿಗೆ ಕ್ರಯ ೧ ರೂಪಾಯಿ ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಕಮಿಷನ್ ಉಂಟು ತಮ್ಮ ವಿಳಾಸವನ್ನು ಬೇಗ ಬರೆದು ತರಿಸಿಕೊಳ್ಳಿ ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ ವಿ ಪಿ ಯಾಗಿ ತರಿಸಬಹುದು

ವಿಳಾಸ —ಮ್ಯಾನೇಜರ್,

ಸಿ ಎಲ್ ಎಸ್ ಡಿಪೋ ಮೈಸೂರು

ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

10

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ

“ರಕ್ಷಾಮೃತಂ”—ಕಾಫಿ ಅಥವಾ ಟೀಗೆ ಪ್ರತಿರೂಪು

“ರಕ್ಷಾಮೃತಂ”—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರು ಮಾಡಲ್ಪಟ್ಟಿರುತ್ತದೆ ಕಾಫಿ, ಟೀಯಲೆಗಳಲ್ಲಿರುವ ದುರ್ಗುಣ

ಗಳು ಇದಕ್ಕಿಲ್ಲ ಕಾಫಿ ಮುಂತಾದ್ದನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀರೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ ಜ್ವರ, ಸನ್ನಿ, ಬಸರು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗೂರ್ಲು ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು.

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು ವಿದ್ಯಾರ್ಥಿಗಳು, ವಕೀಲರು ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಲೆಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವನ್ನಾಗಿ ಪರಿಣಮಿಸುವದು

ಇಪ್ಪತ್ತು ದಿವಸಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ಆಣೆ ೬. ವಿ ಪಿ ಛಾರ್ಜು ಆಣೆ ೩. ಹೆಚ್ಚಾಗುವುದು ಮುಂಗಡ ೮ ಆಣೆ ಸ್ಟಾಂಪುಗಳು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

ವಿಳಾಸ—ಪಿ. ಸುಬ್ಬರಾಯರ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ

WANTED WILD ANIMALS.

ಬೇಕಾಗಿದೆ ಬೇಕಾಗಿದೆ.

13

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ದೊರೆತನದ ರೆಸಿಡೆಂಟ್ ಜೂ ಸಲ್ಲಿಸಬೇಕಾದವರು ಕೊಂಡುಕೊಳ್ಳುವರು

Apply to—Mr Hughes, Mysore Zoo

ಶ್ರೀ ತಾಂಬೂಲ.

4

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಕಂಡು ನೂರುತಿ ರಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಡನೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಪಿತ್ತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯಗಳನ್ನು ಕೊಡುತ್ತೆ ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣವಾಗುವುದು ಈ ವರೆಗೆ ಸಾವಿರಾರು ಜನರ ಅನುಭವಸಿದ್ಧವಾಗಿದೆ ಪ್ರತಿಯೊಬ್ಬರ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು ೧೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರೆಗೆ ವಿ ಪಿ ಛಾರ್ಜು ೫ ಆಣೆ ನಮ್ಮ ವಿಳಾಸ—

ದೇವನಹಳ್ಳಿ ಟವುನ್, ಜಿ. ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟಿಷನರ್.

ಎಲ್ಲರೂ ಸಹೃದಯಾವಲಂಬಿಸತಕ್ಕ

ವಿನೋದಿನಿ ಎಂಬ ಸಚಿತ್ರ ಮಾಸಪತ್ರಿಕೆಯು

2

‘ಕ್ಯಾಪಿಟಲ್’ ಸೈಜಿನಲ್ಲಿ ಹದಿನಾರು ಪುಟಗಳುಳ್ಳ ಬಗೆಯ ೬ ಲಾಯಿ ೧೯೦೫ ನೇ ಯಿಂದ ಹೊರಡುವದು ವಿದ್ಯಾವರ್ಧನ, ತತ್ವಶಾಸ್ತ್ರ ಕಲಾಕೌಶಲ ಮೊದಲಾದ ಅನೇಕ ಉಪಯುಕ್ತ ವಿಷಯಗಳು ಮನೋರಂಜಕವಾಗಿ ಬರೆಯಲ್ಪಡುವವು ವಾರ್ಷಿಕ ಚಂದಾ ಅಂಚೆ ಹಾಸಲು ಸೇರಿ ಒಂದೂವರೆ ರೂಪಾಯಿ ಈ ಪತ್ರಿಕೆಗೆ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಲೇಖಕರಿರುವರು. ಚಂದಾದಾರರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು ವಿಳಾಸ—ಮ್ಯಾನೇಜರ್, ವಿನೋದಿನಿ ಆಫೀಸ್, ಕಾರವಾರ

ಭೂಗೋಳ ಸಂಗ್ರಹ—ಐದನೇ ಮುದ್ರಣ

2

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಿಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮ। ಟಿ. ಎಂ ರಾಮುಶಾಸ್ತ್ರಿಯವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಜಾಸ್ತಿಯಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೦ ರಂತೆ ಡಿಸ್ಕೌಂಟು ಕೊಡಲಾಗುವುದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮೊದಲಾದವರು—ದಿ ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು

ಕ್ರಯ:—೧ ಪ್ರತಿಗೆ ೩ ಆಣೆ, ಪೋಸ್ಟೇಜು ೧ ಆಣೆ.

“ವೃತ್ತಾಂತ ಪತ್ರಿಕೆ” ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ಸು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
,, ,, ೬ ,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಹೊಸ ನೋಟ್ಸು.

ಮೆಕ್ಮಿಲನ್‌ರವರ ೫, ೬ನೆಯ ಕನ್ನಡ ಪುಸ್ತಕಗಳಿಗೆ

೪ನೆಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

1

ಬೇಕಾದಷ್ಟು ವಿವರಣೆಗಳೊಡನೆ, ಪ್ರಶ್ನೆಸಹಿತ ಈ ನೋಟನ್ನು ಬರೆದು ಅನೇಕ ದಿವಸವಾದಾಗ್ಯೂ ಇತರ ನೋಟ್ಸುಗಳ ಗಲಬೆಯಿಂದ ಬೇಗ ಮುದ್ರಿಸಲಾಗಲಿಲ್ಲ ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ ಕ್ರಯ ೮ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಷೆ)	೪—೦—
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೧—
೧೯೦೫ನೆ ವರ್ಷದ ಲೋವರ್ ಸೆಕೆಂಡರಿ ನೋಟ್ಸು	೦—೬—

ವಿಳಾಸ—ಯಮ್. ಆರ್ ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು

ಇದು ಕಳೆದ ಜನವರಿ ತಿಂಗಳ ಪ್ರೆಜೆಂಟೇಷನ್ ವಾಚು

5

ಈ ಪಟ್ಟಿಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರೈಲ್ವೆ ಗಾರ್ಡು ವಾಚು ಓಪನ್ ಕೇಸ್ ಕೀಲೆಸ್ ಪೇಟೆಂಟ್ ಲಿವರ್ ವಾಚು ಕಾಂ



ಪೆನ್‌ಸೇಷನ್ ಬ್ಯಾಲೆನ್ಸ್ ಬಹು ಬಲವಾದ ಗಡಿಯಾರ ೫ ವರುಷ ಗ್ಯಾರಂಟೀ ಕ್ರಯ ರೂ ೫ ೮ ಈ ವಾಚನ್ನು ಕಳೆದ ಜನವರಿ ಪ್ರೋತ್ಸಾಹಕ್ಕಾಗಿ ಡಿಸೆಂಬರ್ ೧ ನೆ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವವರೊಳಗಾಗಿ ವರಮಾನ್ಯ ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳು ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರವು ಜಾಗ್ರತೆ ವರಮಾನ್ಯ ಕಳುಹಿಸಿ ಪ್ರಜೆಂಟೇಷನ್ ಸಾಮಾನುಗಳು.

ಕ್ರಯವುಳ್ಳವು

ಮೇಲಾದ ಜರ್ಮನ್ ಸಿಲ್ವರ್ ಶರಟುಗುಂಡಿ ೧ ಸೆಟ್ಟು	೦—೧೦—
ಚಿಕ್ಕ ಹಣದ ಪೆಟ್ಟಿಗೆ ಇಂಗ್ಲಿಷ್ ಮೇಡ್ (Cash Box)	೧—೦—
ಸುಗಂಧ ಸಕ್ಕರೆಯಿಂದ ತುಂಬಿದ ಡಬ್ಬಿ ೧	೦—೮—
ಮಲಗುವ ಮನೆ ದೀಪ ಬಹಳ ಸುಂದರವಾದದ್ದು	೦—೬—
ಬಹಳ ಸೊಗಸಾದ ಗಡಿಯಾರದ ಸರಪಣಿ	೦—೮—

೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕ ಕೋರಿಕೆಯ ಮೇರೆಗೆ ಒಂದು ಜ ಲೈ ಆಖೈರ್ ವರೆಗೆ ಬಹುಮಾನ ಸಹಿತ ಗಡಿಯಾರವನ್ನು ಕೊಡಲ್ಪಡುತ್ತೆ. ಜಾಗ್ರತೆ!! ಜಾಗ್ರತೆ!

ಇತರರು ನಮ್ಮ ಕಂಪನಿಯ ನೋಟೀಸುಗಳಂತೆ ಮದರಾಸಿನಲ್ಲಿ ಪ್ರಿಂಟುಮಾಡಿ ಉಪಯೋಗವಿಲ್ಲದ ಸಾಮಾನುಗಳನ್ನೂ ಗಡಿಯಾರವನ್ನೂ ಕಳುಹಿಸುತ್ತಿರುವದರಿಂದ ಮೇಲ್ಕಂಡ ಕಂಪನಿಯ ಹೆಸರನ್ನು ಈ ಪಕ್ಷದಲ್ಲಿ ಇಟ್ಟುಕೊಳ್ಳಬೇಕೆಂದು ಕೋರುತ್ತೇವೆ

ವಿಳಾಸ—ಮ್ಯಾನೇಜರ್, ಫ್ರಾಂಕ್ಲಿನ್ ವಾಚ್ ಕಂಪೆನಿ,

ಪಾರ್ಕ್ ಟವುನ್, ಮದರಾಸ್.

ಜರೂರ್ ಆಗಿ ಬೇಕಾಗಿದೆ.

೧೦೦ ಜನ ಏಜಂಟರು ನಮ್ಮ ಕಂಪನಿಯ ಪದಾರ್ಥಗಳನ್ನು ಮಾರಲಿಕ್ಕೆ. ಸಂಬಳ ತಿಂಗಳಿಗೆ ರೂ ೨೫, ಅಥವಾ ರೂ ೧೫, ಅಥವಾ ರೂ ೧೦ ಕೊಡಲ್ಪಡುತ್ತೆ. ಪ್ರತಿ ಏಜಂಟರು ರೂ. ೧೦೦, ಅಥವಾ ರೂ ೫೦, ಅಥವಾ ರೂ. ೨೫ ಠೇವಣಿ ಪ್ರಕಾರ ಈ ಕಂಪನಿಯಲ್ಲಿ ಠೇವಣಾತಿ ಇಡಬೇಕು ಅಪೇಕ್ಷೆಯುಳ್ಳವರು ೨ ಅಣೆ ಸ್ಟಾಂಪ್ ಹಚ್ಚಿ ಅರ್ಜಿ ಬರೆದುಕೊಳ್ಳತಕ್ಕದ್ದು. ವಿಳಾಸ — The Manager, The Rational Therapeutical Corporation, Basavanpur, Bangalore City.

ಸುಲಭಕ್ರಯ : ಸುಗಂಧದ್ರವ್ಯಗಳು.

25

ಅಂಬರ್ ಕಡ್ಡಿ ಸೇರು ೧ಕ್ಕೆ	೫—೦—೦
ವಸಂತಕುಸುಮಾಕರವರ್ತಿ .	೮—೦—೦
ಕಸ್ತೂರಿ ಕಡ್ಡಿ ,, ೧ಕ್ಕೆ ..	೨—೮—೦
ಗುಸುಗು ಕಡ್ಡಿ ,, ೧ಕ್ಕೆ	೧—೮—೦
ಮಸಾಲಾ ಕಡ್ಡಿ ,, ೧ಕ್ಕೆ ..	೦—೧೦—೦
ಕಸ್ತೂರಿ ಬಿಲ್ಲೆ ತೋಲ ೧ಕ್ಕೆ	೧—೦—೦
ಕೇಸರಿ ಬಿಲ್ಲೆ ೧ಕ್ಕೆ ..	೦—೧—೬
ಜಟೀ ಗಂಧ ತೋಲ ೧ಕ್ಕೆ	೨—೦—೦
ಡಿಟೋ ..	೦—೧೨—೦
ಹಾಲುಮಡ್ಡಿ ಗಟ್ಟಿ ೧ಕ್ಕೆ	೦—೨—೦
ತಾಂಬೂಲ ವಿಹಾರಿಣಿ (ಭಂಗಾರ, ಬೆಳ್ಳಿ ಪತ್ರಿನಿಂದ ತಯಾರಾಗಿದೆ) ಡಬ್ಬಿ ೧ಕ್ಕೆ ..	೦—೪—೦
ಕೇಶೋಲ್ಲಾಸಿನಿ ಶೀಶೆ ೧ಕ್ಕೆ	೦—೬—೦
ಟೂತ್ ಪೌಡರ್ ಡಬ್ಬಿ ೧ಕ್ಕೆ ..	೦—೨—೦
ಪನ್ನೀರು ಶೀಸೆ ೧ಕ್ಕೆ	೦—೯—೦
ತಂಬಾಕ್ ಪೋಕ್ ಡಬ್ಬಿ ೧ಕ್ಕೆ ..	೦—೨—೦
ಕೈವಲ್ಯಸ್ನಾನ ಶಾಕ್ತೀಯ ದಟಾಂಗ ಸೇರು ೧ಕ್ಕೆ	೦—೧೨—೦
ಫತ್ತಾ ತೋಲ ೧ಕ್ಕೆ	೨—೦—೦
ಡಿಟೊ . ..	೧—೦—೦
ಅಭ್ಯಂಗಚೂರ್ಣ ಪಟ್ಟ ೧ಕ್ಕೆ	೦—೦—೬
ವಸಂತ ಪಾನೀಯಘುಟಿಕಾ ೧೦೦ಕ್ಕೆ ..	೨—೦—೦

ಇನ್ನು ಅನೇಕ ತರಹಾ ಸುಗಂಧ ದ್ರವ್ಯಗಳು ಎಲ್ಲಾ ತರಹಾ ಅತ್ತರುಗಳು ದೊರೆಯುತ್ತವೆ. ಹೆಚ್ಚಾಗಿ ತರಿಸುವವರಿಗೆ ಕಮಿಷನ್ ದೊರೆಯುತ್ತದೆ. ವಿಳಾಸ.—ಟ ಎಲ್. ಉಪಾಧ್ಯಾಯ ಅಂಡ್ ಕೋ, ಸುಗಂಧಕಾರಿ, ಮೈಸೂರು.

ವೃತ್ತಾಂತ ಪತ್ರಿಕೆ.

ಸ೯ ೧೯೦೫ ನೇ ಇಸವಿ ಜುಲೈ ತಾ॥ ೬ ನೇ ಗುರುವಾರ.

ರಷ್ಯಾ ಜಪಾನ್ ಯುದ್ಧವು.

ರಷ್ಯಾ ಗವರ್ನಮೆಂಟಿನವರೂ ಜಪಾನ್ ರಾಜ್ಯದವರೂ ಕರಾರು ಮಾಡಿಕೊಳ್ಳುವುದಕ್ಕೆ ಸಮ್ಮತಿಪಟ್ಟು, ತಮ್ಮ ತಮ್ಮ ಪಕ್ಷದಲ್ಲಿ ಕರಾರಿನ ಕಲಮುಗಳನ್ನು ಚರ್ಚೆ ಮಾಡಿ ಗೊತ್ತುಮಾಡುವುದಕ್ಕಾಗಿ ರಾಯಭಾರಿಗಳನ್ನು ಚುನಾಯಿಸಿ ಇವರಿಗೆ ಅಧಿಕಾರ ವಹಿಸಿರುತ್ತಾರೆ. ಈ ರಾಯಭಾರಿಗಳು ಅಮೇರಿಕ ಸಂಸ್ಥಾನದ ರಾಜಧಾನಿಯಾದ ವಾಷಿಂಗ್‌ಟನ್ ನಗರದಲ್ಲಿ ಮುಂದಿನ ಆಗೀಷ್ಟು ಗುರ್ರ್ತಾರೀಖಿನಿಂದಾಚೆಗೆ ಸಭೆಸೇರಿ ಚರ್ಚೆ ಮಾಡುವರು. ಅಮೇರಿಕದ ಪ್ರೆಸಿಡೆಂಟರವರೇ ಮಧ್ಯಸ್ಥ ಮಾಡುತ್ತಾರೆ ಈ ರಾಯಭಾರಿಗಳು ಒಪ್ಪಿ ಬರೆಯುವ ಕರಾರಿನ ನಕಲನ್ನು ಉಭಯ ರಾಜ್ಯಗಳವರೂ ನೋಡಿ ರುಜು ಹಾಕುತ್ತೇವೆಂದು ತಿಳಿಸಿದಾರೆ.

ಹಿಂದುಸ್ಥಾನದಲ್ಲಿ ಸೈನ್ಯದ ಹೊಸ ಶಿಸ್ತು.

ಹಿಂದುಸ್ಥಾನದ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಸೈನ್ಯದ ವಿಚಾರವನ್ನು ತಿಳಿಸುವುದಕ್ಕೆ ಒಬ್ಬ ಮಿಲ್ಟೇರಿ ಮೆಂಬರು ಇರುತ್ತಾರೆ. ಹಿಂದುಸ್ಥಾನದ ಸೈನ್ಯವನ್ನೆಲ್ಲಾ ಆಳತಕ್ಕ ಸೇನಾಪತಿಯು ವೈಸ್‌ರಾಯಿಯವರಿಗೆ ಸೈನ್ಯದ ವಿಚಾರವಾಗಿ ಯಾವ ಅಭಿಪ್ರಾಯವನ್ನಾದರೂ ತಿಳಿಸಬೇಕಾದಲ್ಲಿ ಅವರು ಆ ಮಿಲ್ಟೇರಿ ಮೆಂಬರಿಗೆ ತಿಳಿಸಿ ಅವರ ಮೂಲಕ ಸಭೆಯಲ್ಲಿ ಚರ್ಚೆಗೆ ತರಬೇಕಾಗಿದೆ. ಈ ಮಿಲ್ಟೇರಿ ಮೆಂಬರ ದರ್ಜೆಯು ಸೇನಾಪತಿಯ ದರ್ಜೆಗಿಂತ ಕಡಿಮೆಯಾದದ್ದು. ಇದನ್ನು ನೋಡಿ ಈಗಿನ ಸೈನ್ಯಾಧಿಪತಿಯಾದ ಲಾರ್ಡ್ ಕಿತ್ತನರ್ ಯವರು—ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಮಿಲ್ಟೇರಿ ಮೆಂಬರು ಇರೋಣವರಿಂದ ಅನೇಕ ತೊಂದರೆಗಳಗೂ ಕೆಲಸಗಳು ಸರಾಗವಾಗಿ ನಡೆಯದೆ ಇರುವುದಕ್ಕೂ ಕಾರಣವಾಗಿದೆ ಎಂತಲೂ ಆದುದರಿಂದ ಮಿಲ್ಟೇರಿ ಮೆಂಬರನ್ನೇ ವಜಾ ಮಾಡಬೇಕೆಂತಲೂ ಸೈನ್ಯಾಧಿಪತಿಯನ್ನೇ ಹಿಂದುಸ್ಥಾನದ ಸೈನ್ಯಗಳ ಏರ್ಪಾಡುಗಳ ವಿಷಯದಲ್ಲಿ ವೈಸ್‌ರಾಯಿಯವರಿಗೆ ಜವಾಬ್ದಾರನಾಗಿರುವಂತೆ ಮಾಡಬೇಕೆಂತಲೂ ವಿಲಾಯತಿ ಗವರ್ನಮೆಂಟಿಗೆ ಬರೆದುಕೊಂಡರು. ಲಾರ್ಡ್ ಕಿತ್ತನರವರು ಸೂಚಿಸಿದ ಹೊಸ ಬದಲಾವಣೆಯನ್ನು ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಯಾರೂ ಒಪ್ಪದೆ ಹೋದರು ಆದರೂ ವಿಲಾಯತಿ ಗವರ್ನಮೆಂಟಿನವರು ಲಾರ್ಡ್ ಕಿತ್ತನರ್ ಯವರ ಅಭಿಪ್ರಾಯವನ್ನೇ ಒಪ್ಪಿಕೊಂಡು, ನಮ್ಮ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿರುವ ಮಿಲ್ಟೇರಿ ಮೆಂಬರನ್ನು ವಜಾ ಮಾಡುವುದಾಗಿಯೂ ಸರ್ವಸೇನಾಪತಿಯೇ ಸೈನ್ಯದ ಕಾರುಕರ್ದಿಗಳನ್ನು ತಡೆಯಿಲ್ಲದೆ ನಡೆಸತಕ್ಕದೆಂತಲೂ ಈ ಹೊಸ ಕ್ರಮವು ನಾಳೆ ಅಕ್ಟೋಬರ್ ಗುರ್ರ್ತಾರೀಖಿನಿಂದ ಚಲಾವಣೆಗೆ ಬರಬೇಕೆಂದುದಾಗಿಯೂ ಹುಕುಂ ಕಳುಹಿಸಿದಾರೆ. ವೈಸ್‌ರಾಯಿಯವರಾದರೋ ಸೇನಾಪತಿಗೆ ಸೈನ್ಯದ ಏರ್ಪಾಡುಗಳಲ್ಲಿ ಇಂಥಾ ಸರ್ವಸ್ವಾತಂತ್ರ್ಯವನ್ನು ವಹಿಸಿದರೆ ಹಿಂದುಸ್ಥಾನದ ಸೈನ್ಯದ ಇಲಾಖೆಯ ಖರ್ಚು ಬಹಳವಾಗಿ ಹೆಚ್ಚುಗುವುದೆಂತಲೂ ಇದರಿಂದ ಇಲ್ಲಿನ ಪ್ರಜೆಗಳ ಹೊರೆಯೂ ಜಾಸ್ತಿಯಾಗುವುದೆಂತಲೂ ಶಂಕೆಪಡುವರು ಈ ವಿಷಯವಾಗಿ ಲಾರ್ಡ್ ಕಿತ್ತನರ್ ಯವರೂ ಲಾರ್ಡ್ ಕರ್ಸನ್‌ರವರೂ ಸೇರಿ ಆಲೋಚನೆ ಮಾಡಿ, ಈಗ ಹುಕುಂ ಆಗಿ ಬಂದಿರುವ ಹೊಸ ಕ್ರಮದಲ್ಲಿ ಇಬ್ಬರೂ ಒಪ್ಪಿ ಕೆಲವು ಹೊಸ ಬದಲಾವಣೆಗಳನ್ನು ಮಾಡಿ, ಇದರಂತೆ ಸ್ಯಾಂಕ್‌ಷನ್ ಆಗಬೇಕೆಂದು ವಿಲಾಯತಿ ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡಿದಾರೆ. ಲಾರ್ಡ್ ಕರ್ಸನ್‌ರವರಾದರೋ ತಾವು ಸೂಚಿಸಿರುವ ಬದಲಾವಣೆಯನ್ನು ವಿಲಾಯತಿ ಗವರ್ನಮೆಂಟಿನವರು ಒಪ್ಪಿ ಅದರಂತೆ ಹುಕುಂ ಕಳುಹಿಸದೆ ಹೋದರೆ ತಾವು ವೈಸ್‌ರಾಯಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸೀಮೆಗೆ ಪ್ರಯಾಣ ಮಾಡುವುದಾಗಿಯೂ ತಿಳಿಸಿರುತ್ತಾರೆ. ವಿಲಾಯತಿ ಗವರ್ನಮೆಂಟಿನವರು ಈ ಬದಲಾವಣೆಯನ್ನು ಒಪ್ಪಿ ಅದರಂತೆ ಹುಕುಂ ದಯಪಾಲಿಸ್ವಾರೆಂದು ನಿರೀಕ್ಷಿಸುತ್ತೇವೆ. ಸೇನಾಪತಿಯು ಹ್ಯಾಗೂ ವೈಸ್‌ರಾಯಿಯವರ ಅಧಿಕಾರಕ್ಕೊಳಪಟ್ಟು ಕಾರ್ಯ ನಡಸುವಂತಾದರೆ ಸರ್ವಸಮ್ಮತವಾಗಿರುವುದು. ಹಿಂದುಸ್ಥಾನದ ಸೈನ್ಯಗಳೂ ಆ ಇಲಾಖೆಯ ಏರ್ಪಾಡುಗಳೂ ಈಗಿನ ಕಾಲಕ್ಕೆ ತಕ್ಕವುಗಳಾಗಿರಬೇಕಾದುದೇನೋ ತುಂಬಾ ಅವಶ್ಯವೇ ಸರಿ ಆದರೆ ಹಿಂದುಸ್ಥಾನದ ಸೈನ್ಯವನ್ನು ಬಲಪಡಿಸಬೇಕೆಂದು ಹೇಳಿ ಅದನ್ನು ಅನಾವಶ್ಯವಾಗಿ ಹೆಚ್ಚಿಸಿ ಪ್ರಜೆಗಳ ಹೊರೆಯನ್ನು ಇನ್ನೂ ಜಾಸ್ತಿ ಮಾಡುವುದೂ ಈ ಇಲಾಖೆಯ ಕಾರುಬಾರುಗಳನ್ನೆಲ್ಲಾ ಒಬ್ಬ ಅಧಿಕಾರಿಯ ಸ್ವಾತಂತ್ರ್ಯಕ್ಕೇನೇ ಸಂಪೂರ್ಣವಾಗಿ ವಹಿಸುವುದೂ ಈ ರಾಷ್ಟ್ರದ ಪುರೋವೃದ್ಧಿಗೆ ಸಹಕಾರಿಗಳಾಗಲಾರವು. ಇದನ್ನೆಲ್ಲಾ ಪರ್ಯಾಲೋಚನೆ ಮಾಡಿಯೇ ವೈಸ್‌ರಾಯಿ ಲಾರ್ಡ್ ಕರ್ಸನ್ ಪ್ರಭುಗಳು ಹಿಂದುಸ್ಥಾನದ ಪ್ರಜೆಗಳ ಪರವಾಗಿ ಮೇಲ್ಕಂಡ ಬದಲಾವಣೆಗಳನ್ನು ಸೂಚಿಸಿರುತ್ತಾರೆ. ಇದಕ್ಕಾಗಿ ಈ ರಾಷ್ಟ್ರದವರೆಲ್ಲಾ ಅವರನ್ನು ಕೃತಜ್ಞತಾಪೂರ್ವಕವಾಗಿ ವಂದಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಆದಕಾರಣ ಇಂಥಾ ಪ್ರಜಾವಾತ್ಸಲ್ಯಪರಿಪೂರಿತರಾದ ಪ್ರಭುಗಳು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡದಹಾಗಾಗಲೆಂದು ಸರ್ವರೂ ಹಾರೈಸುತ್ತಾರೆ.

ಚೇಂಬರ್ಲೇನ್ ಯವರು ಕಂಗುಹಿಡಿದ ಕೆಮ್ಮು ಔಷಧವು.

·26

ಶೀತ, ಕೆಮ್ಮು, ಗಂಟಲು ಗೂರಿಕೆಮ್ಮುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಾಣಪ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೇ ಉಪೇಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು ; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವ್ರುಂಟ್ ರೋಡ್,
ಮದರಾಸ್.

ಬಳದೇಶದ ವೃತ್ತಾಂತಗಳು.

ಯುವರಾಜರವರು ಕಳೆದ ಶುಕ್ರವಾರ ಬೆಳಗ್ಗೆ ತಮ್ಮ ವಿದ್ಯಾಗುರುಗಳೊಡನೆ ಮೋಟರ್‌ಕಾರ್ ಎಂಬ ಸ್ವತಂತ್ರವಾಗಿ ಓಡುವ ಗಾಡಿಯಲ್ಲಿ ಬೆಂಗಳೂರಿಗೆ ದಯಮಾಡಿದರು ಗೌರವಾರ್ಥವಾಗಿ ೨೧ ತೋಪುಗಳು ಹಾರಿಸಲ್ಪಟ್ಟವು

*****

ಪಬಲ್ ಸರ್ಕಸ್ ಕಂಪನಿಯವರನ್ನು ಶ್ರೀಮನ್ಮಹಾರಾಜರವರು ರಾಜಧಾನಿಯ ಜಗನ್ಮೋಹನ ಬಂಗಲೆಗೆ ಕರೆಸಿಕೊಂಡು ಅವರಿಂದ ಎರಡು ರಾತ್ರಿ ಆಟವಾಡಿಸಿ ಪರಾಂಬರಿಸಿ, ಅವರಿಗೆ ೨,೦೦೦ ರೂಪಾಯಿ ಬಹುಮಾನ ಕೊಡಿಸಿರುತ್ತಾರೆ

*****

ಆರಣೆಯ ಪಟಗೇದಾರರು ಅವರ ಯೂರೋಪ್ಯಿಯನ್ ಉಪಾಧ್ಯಾಯರೊಡನೆ ಕಳೆದ ವಾರ ರಾಜಧಾನಿಗೆ ಬಂದು, ನಮ್ಮ ಮಹಾರಾಜರವರ ಅತಿಥಿಗಳಾಗಿದ್ದು, ಇಲ್ಲಿನ ಅರಮನೆ ಜಗನ್ಮೋಹನ ಬಂಗಲೆ ಮೊದಲಾದ ಕಟ್ಟಡಗಳನ್ನೆಲ್ಲಾ ನೋಡಿಕೊಂಡು, ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿಯೂ ಎಲ್ಲವನ್ನೂ ನೋಡಿ, ಬೆಂಗಳೂರಿಗೆ ಪ್ರಯಾಣಮಾಡಿದರು

*****

ಕಳೆದ ವಾರ ಶ್ರೀಮನ್ಮಹಾರಾಜರವರೂ ಮಹಾ ಮಾತೃಶ್ರೀಯವರೂ ರಾಜಕುಮಾರ್ತೆಯರೂ ಮ॥ ನಂಜುಂಡರಾಜೇ ಅರಸಿನವರ ಮನೆಗೂ, ಮ॥ ಕಾಂತರಾಜೇ ಅರಸಿನವರ ಮನೆಗೂ, ಮ॥ ಭಕ್ತಿ ನೀಲಪ್ಪಾಜಿ ಅರಸಿನವರ ಮನೆಗೂ ಒಂದೊಂದು ದಿನ ಚಿತ್ತೈಸಿ, ಆಯಾ ಮನೆಯಲ್ಲಿ ನಡೆದ ಪಾದಪೂಜೆ ಆತಿಥ್ಯಗಳನ್ನು ಸ್ವೀಕರಿಸಿ, ನೂತನ ದಂಪತಿಗಳ ಅಕ್ಷತೆ ಮುಂತಾದ ಉತ್ಸವಗಳನ್ನು ಪರಾಂಬರಿಸಿದರು.

*****

ಕಳೆದ ಶನಿವಾರ ಸಾಯಂಕಾಲ ಬೆಂಗಳೂರು ರೈಲ್ವೆ ಸ್ಟೇಷನ್ನಲ್ಲಿ ಮ॥ ಜೆ ಡಬ್ಲಿಯು ಕ್ಲಾರಿಡ್ಜ್ ಎಂಬಾತನು ರೈಲ್ ಕಂಬಿಗಳ ಮೇಲೆ ತನ್ನ ಕತ್ತನ್ನಿಟ್ಟು ಮಲಗಿ ಆತ್ಮಹತ್ಯ ಮಾಡಿಕೊಂಡನು ಈತನಿಗೆ ೫೦ ವಯಸ್ಸಾಗಿತ್ತು ತಿರುವಾಂಕೂರಿನಲ್ಲಿ ಪ್ಲಾಂಟರಾಗಿದ್ದನು. ಆ ದಿನ ಸಾಯಂಕಾಲ ಅವನು ತನ್ನ ಹೆಂಡತಿ ಇಬ್ಬರು ಮಕ್ಕಳ ಸಂಗಡ ಗಾಡಿಯಲ್ಲಿ ರೈಲ್ ಸ್ಟೇಷನ್ಗೆ ಬಂದು ಕೆಲವು ಸಾಮಾನನ್ನು ತೆಗೆದುಕೊಳ್ಳುವಂತೆ ತನ್ನ ಹೆಂಡತಿಗೆ ಹೇಳಿ ಆಕೆಯನ್ನೂ ಮಕ್ಕಳನ್ನೂ ಸಾಮಾನ್ ಕೊಠಡಿಯ ಬಳಿ ಬಿಟ್ಟು ತಾನು ಹೋಗಿ ಆತ್ಮಹತ್ಯ ಮಾಡಿಕೊಂಡನು ಮನೋವ್ಯಥೆಯಿಂದ ಆತನು ಈ ಅಂತ್ಯವನ್ನು ತಂದುಕೊಂಡನೆಂದು ಪ್ರಸಿದ್ಧವಾಗಿದೆ

*****

ಕಳೆದ ಸೋಮವಾರ ಮಧ್ಯಾಹ್ನ ೧ ಗಂಟೆ ಸಮಯದಲ್ಲಿ ರಾಜಧಾನಿಯ ಜೈಲ್‌ಖಾನೆಯಲ್ಲಿದ್ದ ದೇವಣ್ಣ ಉರುಫ್ ದೊಡ್ಡಕ್ಕಿ ಕಾರಣ್ಣ ಉರುಫ್ ಪುಟ್ಟಸ್ವಾಮಿ ಎಂಬೀ ಇಬ್ಬರು ಖೈದಿಗಳು ಅವರ ಮೇಲೆ ಕಾವಲಿದ್ದ ಅಟ್ಟಾಸ್‌ಸಾಬಿ ಎಂಬ ಸರ್ಕಾರಿ ಜವಾನನನ್ನು ಕೊಂದುಹಾಕಿ, ತಮಗೆ ಸರ್ಕಾರದವರು ಕೊಟ್ಟಿದ್ದ ಕಂಬಳಿಗಳನ್ನು ಹರಿದು ಉದ್ದಕ್ಕೆ ಹಗ್ಗದಂತೆ ಮಾಡಿ, ಜೈಲ್ ಗೋಡೆಯನ್ನು ಹಾರಿ ಪರಾರಿಯಾದರು. ಇವರು ಯಡತೊರೆ ತಾಲ್ಲೂಕಿಗೆ ಸೇರಿದ ಅಬ್ಬಗೂರೆಂಬ ಗ್ರಾಮದಲ್ಲಿ ಕೆಲವು ದಿನಗಳ ಕೆಳಗೆ ಕೊಲೆಮಾಡಿದ ಆಪಾದಿತರು ಇವರಿಗೆ ಮರಣದಂಡನೆ ವಿಧಿಸಲ್ಪಟ್ಟಿತ್ತು. ಇಂಥ ಘಾತಕರು ಜೈಲ್ ಬಂಧನದಿಂದ ತಪ್ಪಿಸಿಕೊಂಡು ಹೋಗಿರುವುದು ಪರಮಾಶ್ಚರ್ಯವಾಗಿದೆ. ಇವರನ್ನು ಹುಡುಕಿ ಹಿಡಿಯುವುದಕ್ಕೆ ಸರ್ಕಾರದವರು ಸನ್ನಾಹ ಮಾಡಿರುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರ್ ಛೀಫ್ ಕೋರ್ಟ್ ಅಡ್ವಕೇಟ್ ಮ॥ ಎ ರಂಗಸ್ವಾಮಿಯಂಗಾರ್ರಿಗೆ ಜುಲೈ ೧೯ರ ವರಗಾಯಿತು ಒಂದು ತಿಂಗಳು ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಗವರ್ನಮೆಂಟಿನ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾದ ಕರ್ನಲ್ ಜೆ. ಸ್ಮಿತ್‌ಯವರಿಗೆ ೩ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಸಿವಿಲ್ ಸರ್ಜನ್ ಮ॥ ಡಿ. ಎಸ್. ಅಯ್ಯಂಗಾರ್ಯರು ಮತ್ತಿಂದು ಹುಕುಂ ಕೊಡಲ್ಪಡುವ ವರೆಗೆ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾಗಿ ಕೆಲಸ ನೋಡತಕ್ಕದ್ದು.

ಫಾರೆಸ್ಟ್ ಅ॥ ಕನ್ಸರ್ವೇಟರ್ ಮಿ॥ ಎಚ್. ಶ್ರೀನಿವಾಸರಾಯರು ರಜದಿಂದ ವಾಪಸು ಬಂದು ಮೇ ೨೭ ನೇ ತಾರೀಖಿನಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆಹೋದ ರಜವನ್ನು ರದ್ದುಮಾಡಿದೆ.

ಅಮಲ್ದಾರ್ ಮಿ॥ ಸಿ ಕೃಷ್ಣರಾಯರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ಫರ್ಲೋ ರಜಾದಂತೆ ಬದಲಾವಣೆ ಮಾಡಿದೆ

ಎಕ್ಸ್ಟ್ರಾ ಅ॥ ಕಮಿಷನರ್ ಮಿ॥ ಎ. ಆನಂದರಾಯರನ್ನು ಫೆಬ್ರವರಿ ೨೨ ರಿಂದ ೩ನೇ ತರಗತಿಯಿಂದ ೨ನೇ ತರಗತಿಗೆ ಬಡ್ತಿ ಮಾಡಿದೆ

ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಿನ ಮತ್ತು ಟ್ರಜರಿಯ ಛಾರ್ಜನ್ನು ಮಿ॥ ಡಿ. ದೇವರಾಜೇ ಅರಸಿನವರಿಂದ ಜೂನ್ ೧ ರಲ್ಲಿ ಮಿ॥ ಕೆ ಆರ್ ಶ್ರೀನಿವಾಸೈಯಂಗಾರ್ಯ ವಹಿಸಿಕೊಂಡಿರುತ್ತಾರೆ.

ತುಂಕೂರು ಡಿಸ್ಟ್ರಿಕ್ಟ್ ಆಫೀಸಿನ ಮತ್ತು ಟ್ರಜರಿಯ ಛಾರ್ಜನ್ನು ಮಿ॥ ಕೆ ಎಸ್. ದೊರಸಾಮಿ ಐಯರವರಿಂದ ಅ॥ ಕಮಿಷನರ್ ಮಿ॥ ಸಿ ಶೇಷಾದ್ರಿ ಐಯಂಗಾರ್ಯರು ಮೇ ೨೭ ರಲ್ಲಿ ವಹಿಸಿಕೊಂಡಿರುತ್ತಾರೆ.

ಕಡೂರು ಡಿಸ್ಟ್ರಿಕ್ಟ್ ಆಫೀಸ್ ಮತ್ತು ಟ್ರಜರಿಯ ಛಾರ್ಜನ್ನು ಮಿ॥ ಚಂಗೈಯ ಚೆಟ್ಟಿಯವರು ಮಿ॥ ಎನ್. ವೆಂಕಟರಾಯರವರಿಂದ ಜೂನ್ ೧೦ ರಲ್ಲಿ ಪಡೆದುಕೊಂಡಿರುತ್ತಾರೆ

ಮೈಸೂರು ಇಂಜನಿಯರ್ ಇಲಾಖೆಯಲ್ಲಿ ಕೆಳಗೆ ನಮೂದಾಗುವ ಹುದ್ದೆದಾರರಿಗೆಲ್ಲಾ ಮಾರ್ಚಿ ೧ ರಿಂದ ಬಡ್ತಿ ಕೊಡಲಾಗಿದೆ —ಮಿ॥ ಗಳಾದ ಡಿ. ಸೀತಾರಾಮರಾಯರು, ಸಿ. ಎ. ಮಹದೇವಶಾಸ್ತ್ರಿಗಳು, ಪಿ. ಅರುಣಾಚಲ ಮೊದಲಿಯಾರ್ಯ, ಎಚ್ ಜಿ ಮಲ್ಲಯ್ಯನವರು, ವಿ ಐಯಾಸಾಮಿ ಐಯರವರು, ಫ್ರೆಡರಿಕ್ ಭೂಯು ಫ್ರಾಂಗರ್ಗನುವರು, ಬಿ ಗರುಡಾಚಾರ್ಯ, ಬಿ ನಂಜುಂಡಾರಾಧ್ಯರು, ಟಿ. ಕೆ ಅರುಣಾಚಲಂ ನಾಯಿರವರು, ಬಿ. ಎಸ್. ವೆಂಕಟಾಚಾರ್ಯ, ವಿ. ಟಿ. ರಾಘವಲುನಾಯುಡುವರು, ಬಿ. ಸುಬ್ಬರಾಯರು, ಕೆ. ಕೃಷ್ಣೈಯಂಗಾರ್ಯ, ಆರ್. ವಿ. ಸುಂದರಂ ಐಯರವರು, ಎಚ್ ಡಿ ಗ್ಯಾಸ್‌ಯವರು, ಎ ಕುಟ್ಟಿಸಾಮ್ಮಯನವರು, ಕೆ. ಆರ್ ಶೇಷಾಚಾರ್ಯ

ಕೋಲಾರ್ ಡಿವಿಜನ್ ಅ॥ ಕಮಿಷನರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ॥ ವಿ ಆರ್. ತ್ಯಾಗರಾಜ ಐಯರವರಿಗೆ ಮೊಕದ್ದಮೆಗಳನ್ನು ತನ್ನ ಅಧಿಕಾರಕ್ಕೊಳಪಟ್ಟ ೨ನೇ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟುಗಳ ಕೋರ್ಟುಗಳಿಗೆ ವರ್ಗಮಾಡುವ ಸ್ವಾತಂತ್ರ್ಯವನ್ನು ಕೊಡಲಾಗಿದೆ

ಗೊಲ್ಲರಹಳ್ಳಿಯ ಮಿ॥ ಪಟೇಲ್ ಬಸಪ್ಪನವರನ್ನು ಹೊಸ್ಕೋಟೆ ತಾಲ್ಲೂಕ್ ಬೋರ್ಡಿನ ಮೆಂಬರಾಗಿಯೂ ಮಿ॥ ಜಂಪಣ್ಣನಾಯಕರನ್ನು ಚಳ್ಳಕೆರೆ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿಯೂ ನೇಮಿಸಿದೆ.

ವೈದ್ಯ ಇಲಾಖೆಯಲ್ಲಿ ಮುಂದೆ ಹೇಳುವವರನ್ನು ವರ್ಗಮಾಡಲಾಗಿದೆ —ಸಬ್ ಅ॥ ಸರ್ಜನ್ ಮಿ॥ ವಿ. ಮುತ್ತುಸಾಮಿದಾಸ್‌ಯವರನ್ನು ಬೀರೂರಿನಿಂದ ತುಂಕೂರಿಗೆ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ, ಅ॥ ಸರ್ಜನ್ ಮಿ॥ ಸಿ. ರಾಜಾರಾಮರಾಯರನ್ನು ತುಂಕೂರಿನಿಂದ ಶಿವಮೊಗ್ಗೆಗೆ; ಅ॥ ಸರ್ಜನ್ ಮಿ॥ ಡಬ್ಲಿಯು. ಶ್ರೀನಿವಾಸೈಯಂಗಾರ್ಯರನ್ನು ಶಿವಮೊಗ್ಗೆಯಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ

ಡೆಪ್ಯುಟಿ ಕಮಿಷನರ್ ಮಿ॥ ದೊರಸಾಮಿ ಐಯರವರಿಗೆ ಕೊಟ್ಟಿದ್ದ ಮೂರು ವಾರಗಳ ಪ್ರಿವಿಲೆಜ್ ರಜವನ್ನು ಇನ್ನೂ ಮೂರು ವಾರಗಳಿಗೆ ಜಾಸ್ತಿ ಮಾಡಿದೆ.

ಚಿತ್ರದುರ್ಗದ ಡೆಪ್ಯುಟಿ ಕಮಿಷನರ್ ಮಿ॥ ಎಚ್ ರಾಮಾನುಜೈಯಂಗಾರ್ಯರು ರಜದಿಂದ ಬಂದು ಕಳೆದ ಜೂನ್ ೫ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಚಿತ್ರದುರ್ಗದ ತಾಲ್ಲೂಕ್ ಅಮಲ್ದಾರ್ ಮಿ॥ ವಿ. ಪಾರ್ಥಸಾರಥೈಯಂಗಾರ್ಯರಿಗೆ ೨೯ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ತಾಲ್ಲೂಕ್ ಶಿರಸ್ತೆದಾರ್ ಎಂ. ವೆಂಕಟರಾಯರು ಅಮಲ್ದಾರ್ ಮತ್ತು ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ಮಿ॥ ಎಚ್. ರಾಮಾನುಜೈಯಂಗಾರ್ಯ ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಆಫೀಸಿನ ಮತ್ತು ಖಜಾನೆಯ ಛಾರ್ಜನ್ನು ಮಿ॥ ಎಂ. ಚಂಗೈಯಚೆಟ್ಟಿಯವರಿಂದ ಜೂನ್ ತಾ. ೫ ರಲ್ಲಿ ವಹಿಸಿಕೊಂಡಿದ್ದಾರೆ.

ಮಿ॥ ಎನ್ ವೆಂಕಟರಾಯರು ತುಂಕೂರು ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಮಿ॥ ಸಿ. ಶೇಷಾದ್ರ್ಯಯ್ಯಂಗಾರ್ಯರಿಂದ ಜೂನ್ ತಾ. ೧೧ ರಲ್ಲಿ ವಹಿಸಿಕೊಂಡಿದ್ದಾರೆ

ಮೈಸೂರು ಸರ್ಕಾರಿ ಹುಕುಮುಗಳು.

ಶ್ರೀರಂಗಪಟ್ಟಣದ ಸರ್ಕಾರಿ ಛತ್ರವು.

ಶ್ರೀರಂಗಪಟ್ಟಣದಲ್ಲಿ ಸಂದಲ್‌ಕೋಠಿಯ ಬಳಿ ಲೇಟ್ ಮಹಾರಾಜಾ ಚಾಮರಾಜೇಂದ್ರ ಒಡೆಯರವರ ಹೆಸರಿನ ಮೇಲೆ ಒಂದು ಛತ್ರವನ್ನು ಸರ್ಕಾರದವರು ಕಟ್ಟಿಸುತ್ತಿದ್ದರು. ಈ ಕಟ್ಟಡವು ಪೂರೈಸಿದೆ ಎಂತಲೂ ಇದನ್ನು ಡಿಸ್ಟ್ರಿಕ್ಟ್ ಬೋರ್ಡಿನವರ ವಿಚಾರಣೆಯಲ್ಲಿ ಇಟ್ಟುಕೊಳ್ಳತಕ್ಕದ್ದೇ ಅಥವಾ ಶ್ರೀರಂಗಪಟ್ಟಣದ ಮ್ಯುನಿಸಿಪಾಲಿಟಿಗೆ ವಹಿಸೋಣವೇ ಎಂತಲೂ ಡೆಪ್ಯುಟಿ ಕಮಿಷನರವರು ಗವರ್ನಮೆಂಟಿನವರನ್ನು ಕಳೆದ ಜನವರಿ ತಿಂಗಳ ೧೭ ನೆ ತಾರೀಖಿನಲ್ಲಿ ಕೇಳಿದರು. ಇದರ ಮೇಲೆ ಸರ್ಕಾರದವರು ಏಪ್ರಿಲ್ ೨೭ ರಲ್ಲಿ ಹುಕುಂ ಕೊಟ್ಟಿರುವುದೇನಂದರೆ—

ಈ ಛತ್ರದ ಮೇಲ್ವಿಚಾರಣೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರಾಗಲಿ ಮ್ಯುನಿಸಿಪಾಲಿಟಿಯವರಾಗಲಿ ನೋಡಿಕೊಳ್ಳಬೇಕೆಂಬುದು ಗವರ್ನಮೆಂಟಿನವರ ಅಭಿಪ್ರಾಯವಲ್ಲ. ಅದನ್ನು ಗವರ್ನಮೆಂಟಿನವರೇ ವಹಿಸಿಕೊಂಡು ಮುಜರಾಯಿ ಇಲಾಖೆಯ ಮೂಲಕ ವಿಚಾರಣೆ ತೆಗೆದುಕೊಳ್ಳುವರು. ಹಿಂದುಗಳಲ್ಲಿ ಮೇಲ್ತರಗತಿಗೆ ಸೇರಿದಂಥಾ ಪ್ರಯಾಣಸ್ಥರ ಉಪಯೋಗಾರ್ಥವಾಗಿ ಈ ಛತ್ರವನ್ನು ಮಾಡಿರುತ್ತಯಾದಕಾರಣ ಮುಜರಾಯಿ ಸೆಕ್ರೆಟರಿಯವರು ಅದನ್ನು ಯಾವಾಗಲೂ ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡಿರುವಂತೆ ಸರಿಯಾದ ಏರ್ಪಾಡು ಮಾಡಬೇಕಾಗಿದೆ. ಅಲ್ಲಿಗೆ ಒಬ್ಬ ಬ್ರಾಹ್ಮಣ ನೌಕರನನ್ನು ನೇಮಿಸಿ ಪಾತ್ರೆಪದಾರ್ಥಗಳನ್ನು ಕೊಂಡುಕೊಡತಕ್ಕದ್ದು. ಛತ್ರವನ್ನೂ ಅಜೂಬಾಜೂ ಪ್ರದೇಶವನ್ನೂ ಚೊಕ್ಕಟವಾಗಿಡುವುದಕ್ಕೂ ಹೂವಿನ ತೋಟ ಮುಂತಾದ್ದನ್ನು ಮಾಡುವುದಕ್ಕೂ ಇಬ್ಬರು ಜವಾನರನ್ನು ನೇಮಿಸಬೇಕಾಗಿದೆ. ಇದಕ್ಕೆಲ್ಲಾ ಎಷ್ಟು ಖರ್ಚಾಗುವುದೆಂದು ಒಂದು ಅಂದಾಜು ಪಟ್ಟಿ ಮಾಡಿ ಗವರ್ನಮೆಂಟಿನವರ ಸ್ಯಾಂಕ್ಷನ್ ಬಗ್ಗೆ ಕಳುಹಿಸಬೇಕಾಗಿದೆ.

ಚಿನ್ನದ ಗಣಿಗಳ ವಾರ್ಷಿಕ ರಿಪೋರ್ಟು.

ಕಳೆದ ೧೯೦೩ನೇ ಇಸವಿಯ ಗಣಿಗಳ ರಿಪೋರ್ಟಿನ ಮೇಲೆ ಗವರ್ನಮೆಂಟಿನವರು ಕಳೆದ ಏಪ್ರಿಲ್ ೨೫ ರಲ್ಲಿ ಹುಕುಂ ಮಾಡಿರುವುದೇನೆಂದರೆ—

೧೯೦೩ನೇ ಇಸವಿಯಲ್ಲಿ ಹದಿನಾಲ್ಕು ಕಂಪನಿಗಳು ಚಿನ್ನ ತೆಗೆಯುವ ಕೆಲಸದಲ್ಲಿದ್ದುವು, ಅಂದರೆ ಹಿಂದಿನ ವರ್ಷಕ್ಕಿಂತ ಒಂದು ಕಡಿಮೆ. ಮೈಸೂರ್ ನಗರ್ ಎಂಬ ಹೆಸರಿನ ಕಂಪನಿಯವರು ಕೆಲಸವನ್ನು ನಿಲ್ಲಿಸಿದರು. ಛಾಂಪಿಯನ್ ರೀಫ್ ಕಂಪನಿಯವರು ಹೊಸದಾಗಿ ೧೨೫ ಎಕರೆ ಜಮೀನನ್ನು ಕೊಂಡುಕೊಂಡು ಚಿನ್ನ ತೆಗೆಯುತ್ತಿದ್ದಾರೆ ೧೯೦೩ನೇ ಇಸವಿಯಲ್ಲಿ ೨೨,೮೮,೭೨೦ ಪೌಂಡಿನ (ಪೌಂಡು ೧ಕ್ಕೆ ೧೫ ರೂ.) ಚಿನ್ನವು ಉತ್ಪತ್ತಿ ಆಯಿತು; ಅಂದರೆ ಹಿಂದಿನ ವರುಷಕ್ಕಿಂತ ೩,೧೯,೫೩೩ ಪೌಂಡು ಜಾಸ್ತಿ ಮೈಸೂರು ಗವರ್ನಮೆಂಟಿಗೆ ೧೯೦೨ ರಲ್ಲಿ ಉತ್ಪತ್ತಿಯಾದ ಚಿನ್ನದಿಂದ ೯೩,೩೬೫ ಪೌಂಡುಗಳೂ ೧೯೦೩ ರಲ್ಲಿ ೧,೧೩,೧೩೮ ಪೌಂಡುಗಳೂ ರಾಜಾದಾಯ ಬಂದಿದೆ ಶಿವಸಮುದ್ರದಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಕಂಪನಿಗಳಿಗೆ ಬಿಕರಿ ಮಾಡಿದ್ದರಲ್ಲಿ ಆ ವರ್ಷದೊಳಗೆ ೮೧,೩೩೭ ಪೌಂಡು ಆದಾಯವಾಯಿತು ಆದರೆ ಈ ಪೈಕಿ ಈ ಕಾರ್ಖಾನೆಯನ್ನು ನಡಿಸುವುದಕ್ಕೆ ೧೩,೨೩೧ ಪೌಂಡುಗಳು ಖರ್ಚಾದವು ಗಣಿಗಳಲ್ಲಿ ಅನಾಹುತಗಳು ೧೯೦೨ರಲ್ಲಿ ೨೩೨, ೧೯೦೩ ರಲ್ಲಿ ೨೫೮ ಆದವು ಈ ಸಾವಿನಲ್ಲಿ ಅನಾಹುತಗಳ ದೆಸೆಯಿಂದ ೬೯ ಜನರು ಪ್ರಾಣ ಕಳೆದುಕೊಂಡರು. ಗಣಿಗಳಲ್ಲಿ ಕಳವು ಮುಂತಾದ ಕೃತ್ಯಗಳನ್ನು ನಡಿಸಿದರೆಂದು ೭೦೩ ಮಂದಿಯನ್ನು ಹಿಡಿದರು. ಈ ಪೈಕಿ ೨೮೮ ಜನರಿಗೆ ಶಿಕ್ಷೆಯಾಗಿದೆ. ಚಿನ್ನದ ಗಣಿ ಪ್ರಾಂತ್ಯದಲ್ಲಿ ಪ್ರಜಾ ಆರೋಗ್ಯವು ಅನುಕೂಲವಾಗಿತ್ತು. ಎಲ್ಲಾ ಕಾರಣಗಳಿಂದಲೂ ೧೯೦೩ ರಲ್ಲಿ ೬೧೦ ಜನ ಮೃತಪಟ್ಟರು. ೧೯೦೨ ರಲ್ಲಿ ೬೫೭ ಜನರೂ ೧೯೦೩ ರಲ್ಲಿ ೧೮೩ ಜನರೂ ಪ್ಲೇಗಿನಿಂದ ಕಾಲವಾದರು

ಕಾಫಿ ಕಳುವಿನ ಕಾನೂನು

ಕಾಫಿ ಕಳುವನ್ನು ನಿಲ್ಲಿಸುವುದಕ್ಕೆ ಏರ್ಪಾಡಾಗಿರುವ ಹೊಸ ಕಾನೂನಿನ ಪ್ರಕಾರ ಕಳೆದ ಮಾರ್ಚಿ ೩೧ ಕ್ಕೆ ಮುಗಿದ ವರ್ಷದಲ್ಲಿ ೧೩ ಮೊಕದ್ದಮೆಗಳು ತರಲ್ಪಟ್ಟು ೮ ಮೊಕದ್ದಮೆಗಳಲ್ಲಿ ೮ ಜನರಿಗೆ ಶಿಕ್ಷೆಯಾಯಿತು. ರೂ. ೬೧—೮—೦ ಜುಲ್ಮಾನೆ ವಸೂಲಾಗಿದೆ ಮ್ಯಾಜಿಸ್ಟ್ರೇಟರು ಇಬ್ಬರು ಪಕ್ಷೇದಾರರಿಗೂ ಒಬ್ಬ ಕಾನ್ಸ್ಟೇಬಲ್ಲಿಗೂ ೧೩ ರೂಪಾಯಿ ಬಹುಮಾನ ಕೊಡಿಸಿದಾರೆ. ಇದಲ್ಲದೆ ಕಾಫಿ ಕಳುವಿನ ಮೊಕದ್ದಮೆಗಳೇ ಈ ವರ್ಷ ೨೮ ಬಂದವು. ಇದರ ಪೈಕಿ ೮ ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಜುಲ್ಮಾನೆ ಆಗಿದೆ ರೂ ೧೦೦ ಜುಲ್ಮಾನೆ ವಸೂಲಾಗಿರುವುದು. ಖುದುವಾತಿಗೆ ಬಾರದೆ ಹೋದ ಮೊಕದ್ದಮೆಗಳು ಈ ವರ್ಷ ಹೆಚ್ಚಿದವು. ಆದದರಿಂದ ಫಲಿತಾಂಶವು ತೃಪ್ತಿಕರವಾಗಿಲ್ಲ.

ಪರಮಾನಂದ ಶಿಷ್ಯರು.

ದಕ್ಷಿಣ ಮಳೆಯಾಳದಲ್ಲಿ ಒಬ್ಬ ಗುರುಗಳಿದ್ದರು. ಅವರಿಗೆ ಹತ್ತು ಜನ ಶಿಷ್ಯರು. ಇವರಿಗೆ ಅಕ್ಷರಜ್ಞಾನ ಶುದ್ಧಾಂಗವಾಗಿರಲಿಲ್ಲ. ಸುಖದುಃಖಗಳ ಲೇಶವಿಲ್ಲದೆ ಯಾವಾಗಲೂ ಹಸನ್ಮುಖರಾಗಿ ಕಾಲಕ್ಷೇಪಣ ಮಾಡುತ್ತಿದ್ದುದರಿಂದಲೂ ಅವರ ಅವಿವೇಕದ ಕೆಲಸಗಳಿಗೂ ಜನರು ಪರಮಾನಂದ ಶಿಷ್ಯರೆಂದು ಕರೆಯುತ್ತಿದ್ದರು. ಗುರುಗಳು ಒಂದು ಗ್ರಾಮದಲ್ಲಿ ಇಳಿದುಕೊಂಡಿರುವಾಗ ಒಬ್ಬ ಶಿಷ್ಯನಿಗೆ ಒಂದು ದುಡ್ಡಿನ ತುಪ್ಪ ಒಂದು ದುಡ್ಡಿನ ಎಣ್ಣೆ ತರುವಂತೆ ಹೇಳಿದರು. ಆ ಶಿಷ್ಯನು ಒಂದೇ ಪಾತ್ರೆ ತೆಗೆದುಕೊಂಡು ಅಂಗಡಿಗೆ ಹೋಗಿ ಮೊದಲು ಒಂದು ದುಡ್ಡಿಗೆ ಎಣ್ಣೆಯನ್ನು ಹಾಕಿಸಿಕೊಂಡು ಕೂಡಲೇ ಒಂದು ದುಡ್ಡಿಗೆ ತುಪ್ಪ ಕೊಡು ಎಂದನು. ಪಾತ್ರೆ ಎಲ್ಲಿ ? ಎಂದು ಅಂಗಡಿಯವನು ಕೇಳಲು ತಟ್ಟನೆ ಎಣ್ಣೆಹಾಕಿದ ಪಾತ್ರೆಯನ್ನು ಬೋರಲು ಹಾಕಿ ಮೇಲ್ಗಡೆ ತುಪ್ಪ ಹಾಕು ಎಂದನು. ವರ್ತಕನು ನಗುತ್ತ ತುಪ್ಪದ ಮುದ್ದೆಯನ್ನು ಅದರ ಮೇಲಿಟ್ಟನು. ಒಳಗಿನ ಎಣ್ಣೆ ಏನಾಯಿತೋ ಎಂದು ಪಾತ್ರೆ ಹಿಂತಿರುಗಿಸಲು, ತುಪ್ಪವು ಜಾರಿ ಕಾಲುವೆಯಲ್ಲಿ ಬಿದ್ದುಹೋಯಿತು ಎಣ್ಣೆ ತುಪ್ಪ ತಂದದ್ದಾಯಿತು ಎಂದು ಪಾತ್ರೆಯನ್ನು ಗುರುಗಳ ಮುಂದೆ ಮಲಗಿಸಿಟ್ಟು ಒಳಗೆ ಎಣ್ಣೆ ಹೊರಗೆ ತುಪ್ಪ ಹಾಕಿಸಿದೇನೆ. ಹೋದದ್ದು ಹೋಗುತ್ತಾ ಉಳಿದದ್ದು ತರುವಾಗ ಕೈ ಜಿಡ್ಡಾಗದಂತೆ ಪ್ರಯಾಸಪಟ್ಟೆನು ಎಂದನು.

೨. ಮತ್ತೊಂದಾವರ್ತಿ ಗುರುಗಳು ತಮ್ಮ ಥೈಲವಾಸವನ್ನು ಹೊಲಿಯುವ ಸೂಜಿಯನ್ನೂ ದಾರದ ಉಂಡೆಯನ್ನೂ ರಾತ್ರಿ ತಂಗಿದ್ದ ಊರಿನಲ್ಲಿ ಮರೆತು ಬಂದರು. ಅವನ್ನು ಹೋಗಿ ತರುವುದಕ್ಕೆ ಅಜ್ಞಾತನಾದವನು ನಾನೊಬ್ಬನೇ ಹೊರಹೋಗಬೇಕು. ಎಲ್ಲರೂ ಬರಲಿ ಎಂದು ಗುರುಗಳನ್ನು ನಿಂತಲ್ಲಿಯೇ ಬಿಟ್ಟು ಹತ್ತು ಮಂದಿಯೂ ಆ ಹಳ್ಳಿಗೆ ಬಂದು ದಾರದ ಉಂಡೆಯನ್ನೂ ಸೂಜಿಯನ್ನೂ ತೆಗೆದುಕೊಂಡರು ಒಬ್ಬನೇ ಅವೆರಡನ್ನೂ ಹೊತ್ತುಕೊಂಡರೆ ನಿಂತವರು ಸುಮ್ಮನೆ ಕೈಯಾಡಿಸಿಕೊಂಡು ಬರುವರು ಎಂದು ಯೋಚಿಸಿ ಉದ್ದವಾದ ಕೋಲಿಗೆ ಮಧ್ಯದಲ್ಲಿ ಸೂಜಿಯನ್ನು ತಗಲಿಸಿ ಸುತ್ತಲೂ ದಾರವನ್ನು ಸುತ್ತಿ ಹೊತ್ತುಕೊಂಡರು. ಹಿಂಭಾಗವಾಯಿತೆಂದು ಒಂದು ಸಲ ಮುಂಭಾಗವಾಯಿತೆಂದು ಮತ್ತೊಂದು ಸಲ ಹೀಗೆ ಹೆಜ್ಜೆ ಹೆಜ್ಜೆಗೂ ಇಳಿಸಿ ಸರಿಪಡಿಸಿಕೊಳ್ಳುತ್ತಾ ಹಾಗೂ ಹೀಗೂ ಗುರುಗಳನ್ನು ಬಂದು ಸೇರಿದರು. ಗುರುಗಳು ಶಿಷ್ಯರ ಅವಿವೇಕವನ್ನು ನೋಡಿ ವ್ಯಸನಪಟ್ಟು ದೂಲದ ಮೇಲೆ ಸೂಜಿಯುಗೋಸ್ಕರ ಕೈ ಸವರಿದರು ಹಿಂಭಾಗ ಮುಂಭಾಗ ಸರಿಮಾಡುವುದರಲ್ಲಿ ಸೂಜಿ ಎಲ್ಲಿಯೋ ಬಿದ್ದುಹೋಗಿತ್ತು! ದಾರವು ಒರಟಾದೂಲಕ್ಕೆ ಬಲವಾಗಿ ಸುತ್ತಿದ್ದಕಾರಣ ಕಡಕಲಾಗಿ ಪುಡಿಪುಡಿಯಾಯಿತು. ಆಗ ಗುರುಗಳ ಸೂಜೀದಾರ ಹೋದರೂ ಹೋಗಲಿ ನಮಗೆ ಈ ಕೋಲಿ ಹೊರುವ ತಂಟೆ ತಪ್ಪಿತು ಎಂದುಕೊಂಡು ಶಿಷ್ಯರು ಸಂತೋಷಪಟ್ಟರು.

೩. ಗ್ರಾಮೈಕರಾತ್ರಿವಾಸಕರಾದ ಆ ಗುರುಶಿಷ್ಯರು ಒಂದು ಸಲ ಪರಿಪೂರ್ಣವಾದ ನದಿಯೊಂದನ್ನು ದಾಟಬೇಕಾಯಿತು. ಬಾಲ್ಯದಾರಭ್ಯ ನದಿಗಳು ವಿಶೇಷವಾಗಿರುವ ಪ್ರದೇಶವಾಸಿಗಳಾದ ಅವರಿಗೆ ಈಜುವುದು ಮಾತೃಭಾಷೆಯಾಗಿತ್ತು. ಎಲ್ಲರೂ ಲೀಲಾಮಾತ್ರವಾಗಿ ದಾಟಿ ಆಚೆಯ ದಡವನ್ನು ಸೇರಿದರು. ಬಹು ರಭಸವಾಗಿ ಹರಿದು ಹೋಗುತ್ತಿದ್ದ ನದಿಯೊಳಗೆ ತಮ್ಮವರಲ್ಲಿ ಯಾರಾದರೂ ಕೊಚ್ಚಿಕೊಂಡು ಹೋದರೋ ಏನೋ ಎಂದು ಅನುಮಾನಪಟ್ಟು ಒಬ್ಬೊಬ್ಬನೂ ಲೆಕ್ಕಮಾಡಿದನು. ಎಣಿಸಿದವನು ತನ್ನನ್ನು ಲೆಕ್ಕಮಾಡಿಕೊಳ್ಳುತ್ತಿರಲಿಲ್ಲವಾಗಿ ಯಾರು ಎಣಿಸಿದಾಗ್ಯೂ ಒಂದು ಜನ ಕಡಮೆಯಾಗುತ್ತಿತ್ತು. ಆಗ ಒಬ್ಬನು ನದಿಯುದ್ಯಾಲಾದನೆಂದು ಹೋದವನಿಗೋಸ್ಕರ ಎಲ್ಲರೂ ಗೋಳಿಡುತ್ತಾ ಕುಳಿತರು. ಹಂಬಲಿಸಿ ಅಳುವ ಈ ಪರಮಾನಂದ ಶಿಷ್ಯರನ್ನು ದಾರಿಗನಾದೊಬ್ಬ ಕೋಮಟಿಯು ನೋಡಿ ವಾಜ್ಯೋಲವನ್ನು ಕೇಳಿ ತಿಳಿದುಕೊಂಡು ಕಂಕುಳಲ್ಲಿದ್ದ ಛತ್ರಿಯ ದಗ್ಗವನ್ನು ತೆಗೆದು ತಿವಿದೊರೆದು ಹೊಳೆಯಲ್ಲಿ ಕಾವಲಿಕ್ಕೆ ಇಳಿದವನು ಯಾರ್‍ಯಾರು ಎಂದು ಕೂಗುವೆನು. ಇಳಿದವರೆಲ್ಲರೂ ಮುಂದಕ್ಕೆ ಬರಲಿ ಅವರಿಗೆ ಅದರ ಜ್ಞಾಪಕಾರ್ಥವಾಗಿ ಈ ದಗ್ಗದಿಂದ ಒಂದೇಟು ಮುಟ್ಟಿಸುವೆನು ಆ ಮೇಲೆ ಯಾರು ಕಡಮೆಯಾಗಿದಾರೆಯೊ ತಿಳಿಯುವುದು ಎಂದನು. ಹತ್ತು ಮಂದಿಯಲ್ಲಿ ಪ್ರತಿಯೊಬ್ಬನು ಏಟು ತಿಂದರು ಸರಿ, ಈಗ ಎಷ್ಟು ಜನಕ್ಕೆ ಏಟು ಬಿದ್ದಿದೆಯೊ ಅಷ್ಟು ಜನ ಈಜಿದವರು. ಹೊರಗೆ ಬಂದವರು ಅಷ್ಟೇ ಜನ ಎಂದು ತತ್ವೋಪದೇಶ ಮಾಡಿದನು. ಒಬ್ಬನು ಒಬ್ಬನನ್ನು ಎಣಿಸುವುದಕ್ಕಾರಂಭಿಸಿ ತನಗೂ ಏಟುಬಿದ್ದುದ್ದರಿಂದ ತಾನೂ ಈಜಿದವನೇ ಹತ್ತು ಜನ ಸರಿಹೋಯಿತೆಂದ ಹತ್ತನೆಯವನನ್ನು ಬದುಕಿಸಿ ಕೊಟ್ಟ ಶೆಟ್ಟಿಗೆ ಶುಭವಾಗಲಿ ಎಂದು ಹರಸಿ ಗುರುಗಳನ್ನು ಸೇರಿ ಈ ದಿನ ತಮ್ಮ ತಪಃ ಪ್ರಭಾವದಿಂದ ನಮ್ಮಲ್ಲಿ ಒಬ್ಬನಿಗೆ ಪುನರ್ಜನ್ಮವಾಯಿತೆಂದು ಸಂಗತಿಯನ್ನು ವಿವರಿಸಿದರು.

೪. ಮತ್ತೊಂದು ಸಲ ಗುರುಗಳು ಶಿಷ್ಯನೊಬ್ಬನನ್ನು ಕರೆದು ಮೂರು ಕಾಸಿನ ಬಿಲ್ಲೆಯನ್ನು ಕೈಯಲ್ಲಿಟ್ಟು ಒಂದೊಂದು ಕಾಸಿಗೆ ಮೇಣು ಜೀರಿಗೆ ತರುವಂತೆ ಹೇಳಿದರು. ಈ ಕ್ಷಣದಲ್ಲಿ ಕೇಳಿದ ಮಾತನ್ನು ಉತ್ತರ ಕ್ಷಣದಲ್ಲಿ ಮರೆಯುವ ಮಹಿಮೆಯುಳ್ಳ ಆ ಶಿಷ್ಯನು ಮೇಣು ಜೇರಿಗೆ ಎಂದು ಪಾಠ ಮಾಡಿಕೊಳ್ಳುತ್ತ ನೋಕಟು ಅಂಗಡಿಯನ್ನು ತಲುಪುವುದರೊಳಗೆ ದಾರಿಯಲ್ಲಿ ಹಾವಾಡಿಗನು ಆಡಿಸುತ್ತಿದ್ದ ಸರ್ಪಗಳನ್ನು ನೋಡಿ ಪುಂಗಿಯ ಸ್ವರವನ್ನು ಕೇಳುತ್ತ ನಿಂತನು ಗುರುಗಳು ಹೇಳಿದ ಪದಾರ್ಥಗಳ ಹೆಸರುಗಳು ನಾಲಿಗೆಗೆ ಬಾರದೆ ಹೋದುವು. ಹೇಗೋ ಮೂರು ಕಾಸುಗಳಿದ್ದುದರಿಂದ ಮೂರು ಪದಾರ್ಥ ಇರಬಹುದೆಂದು ಮೇಣ, ಸೂಜಿ, ರಿಗೆ ಆಗಿರಬಹುದು. "ಸೂಜಿ" ಹೋಗದಂತೆ ಭದ್ರಪಡಿಸಲಿಕ್ಕೆ ಉಭಯ ಪಾರ್ಶ್ವದಲ್ಲಿ ಹೇಳಿದ ಎರಡು ಪದಾರ್ಥಗಳಿರಬಹುದೆಂದು ನಿಶ್ಚಯಿಸಿ ವರ್ತಕನಿಗೆ ಆ ಪದಾರ್ಥಗಳ ಹೆಸರು ಹೇಳಿದನು. ಮೇಣವೂ ಸೂಜಿಯೂ ಸಿಕ್ಕಿತು. "ರಿಗೆ" ಯಾವ ಅಂಗಡಿಯಲ್ಲಿಯೂ ದೊರೆಯಲಿಲ್ಲ. ಅಯ್ಯೋ ! ಗುರುಗಳಿಗೆ ಏನು ಹೇಳಲಿ ಎಂದು ವ್ಯಸನಪಡುತ್ತ ಅವರ ಪೀಠದ ಬಳಿಗೆ ಬಂದು ಮೇಣ, ಸೂಜಿ ಮತ್ತು ಒಂದು ದುಡ್ಡಿಯನ್ನು ಮುಂದಿಟ್ಟು 'ರಿಗೆ' ಎಲ್ಲೆಲ್ಲಿಯೂ ಹುಡುಕಿದೆ, ಸಿಕ್ಕಲಿಲ್ಲ ಸಾವಕಾಶವಾದದ್ದಕ್ಕೆ ಕ್ಷಮಿಸಬೇಕೆಂದನು.

೫. ಇವರ ಅವಿವೇಕ ಇನ್ನೆಷ್ಟೆಂದು ಹೇಳೋಣ ! ಗುರುಗಳು ಒಂದು ರೂಪಾಯಿನ ಉದ್ದ ತರುವಂತೆ ಒಬ್ಬ ಶಿಷ್ಯನಿಗೆ ನೇಮಿಸಿದರು. ಅವನು ಗೋಣೀಚೀಲವನ್ನು ತೆಗೆದುಕೊಂಡು ಪೇಟೆಗೆ ಹೋದನು. ಶೆಟ್ಟಿಯು ೪೮ ಸೇರು ಹಾಕಿ ಮೂಟೆಯನ್ನು ಇಬ್ಬರು ಎತ್ತಿ ತಲೆಯ ಮೇಲಿಟ್ಟರು. ಶಿಷ್ಯನು ಭಾರವನ್ನು ಹೊತ್ತು ಆಯಾಸಪಡುತ್ತಾ ಬರುತ್ತಿದ್ದನು. ಚೀಲದ ತಳದಲ್ಲಿ ಬೆರಳು ತೂರುವಷ್ಟು ರಂಧ್ರವಿದ್ದು ಉದ್ದು ಸೋರುತ್ತಬಂತು. ಸೋರಿದ ಹಾಗೆಲ್ಲಾ ಮೂಟೆಯು ಕರಗಿ ಹಗುರವಾಯಿತು. ಭಾರ ಹೊತ್ತು ತರುವ ನನ್ನ ಕಷ್ಟವನ್ನು ಗುರುಗಳು ಜ್ಞಾನದೃಷ್ಟಿಯಿಂದ ತಿಳಿದು ಮೂಟೆಯು ಹಗುರಾಗಿರುವಂತೆ ಅನುಗ್ರಹಿಸಿದರೆಂದು ಶಿಷ್ಯನು ಸಂತೋಷಪಟ್ಟುಕೊಂಡು ಬರುವಲ್ಲಿ ಚೀಲದ ತೂತಿನವರಿಗೂ ಸೋರಿ ಅದು ಸೇರಿನಷ್ಟು ಉಳಿಯಿತು. ಗುರುಗಳ ಮುಂದೆ ಚೀಲವನ್ನು ಇಳಿಸಿ—ಸ್ವಾಮಿ, ಇಬ್ಬರು ಹೊರಿಸಿದ ಚೀಲವನ್ನು ತರುತ್ತಿರುವಾಗ ತಮ್ಮ ಅನುಗ್ರಹ ವಿಶೇಷದಿಂದ ಹಗುರಾಗುತ್ತ ಬಂತು. ಈಗ ಒಬ್ಬನೇ ಇಳಿಸಿದೆನು ಎಂದನು. ೧ ರೂಪಾಯಿಗೆ ಇಷ್ಟೇ ಕಾಳು ಬಂತೇ ಎಂದು ಗುರುಗಳು ಪೇಚಾಡಿದರು.

ಮೂರು ಮಂದಿ ಪರೋಪಕಾರಿಗಳು.

ವಿಲ್ಲಿಯಮ್ ವಿಲ್ಬರ್‌ಫೋರ್ಸ್ ಎಂಬಾತನು ಇಂಗ್ಲಂಡಿನಲ್ಲಿ ಒಂದು ನೂರು ವರ್ಷಗಳ ಕೆಳಗೆ ಜೀವಿಸುತ್ತಿದ್ದನು. ಈತನು ಆ ದೇಶದ ಪಾರ್ಲಿಮೆಂಟ್ ಸಭೆಯವರಲ್ಲೊಬ್ಬನಾಗಿ ಖ್ಯಾತಿಯನ್ನು ಪಡೆದಿದ್ದನು. ಆ ಕಾಲದಲ್ಲಿ ಇಂಗ್ಲಿಷ್ ಜನರ ಅನ್ಯ ದೇಶೀಯ ಸ್ವಾಸ್ಥ್ಯಗಳಲ್ಲಿ ಗುಲಾಮರ ಮುಖಾಂತರ ಕಬ್ಬಿನ ಬೆಳೆಯನ್ನು ಮಾಡಿಸುವ ವಾಡಿಕೆಯು ಪ್ರಬಲವಾಗಿದ್ದಿತು. ಆದಕಾರಣ ಐವಿಸಾಸುದಾರರಾದ ಇಂಗ್ಲಿಷ್ ಧನವಂತರು ತಮ್ಮ ಐವಿಸಾಸುಗಳಲ್ಲಿ ಕೂಲಿಯಾಳುಗಳು ಬೇಕಾದಾಗ ಆಫ್ರಿಕ ಖಂಡದಿಂದ ಕಪ್ಪು ಜನರನ್ನು ಹಿಡಿದು ತಂದು ಬಹಳ ಹಿಂಸೆಪಡಿಸುತ್ತಿದ್ದರು. ಗುಲಾಮರನ್ನು ಪಶುಗಳಂತೆ ಕೊಳ್ಳುವ ಮಾರುವ ವ್ಯಾಪಾರವು ಅತ್ಯಂತ ಹೇಯವಾಗಿ ನಡೆಯುತಿತ್ತು. ಇದು ಮನುಷ್ಯ ಕುಲಕ್ಕೆ ಮಹಾ ಅನರ್ಥಕರವಾದಂಥ ಮತ್ತು ಅವಮಾನಕರವಾದಂಥ ನಡತೆಯಾದುದರಿಂದ ಇಂಥ ವ್ಯಾಪಾರವನ್ನು ಇಂಗ್ಲಿಷ್ ವ್ಯಾಪಾರಸ್ಥರು ಮಾಡಲೇಬಾರದೆಂದು ಒಂದು ರಾಜ್ಯ ಶಾಸನವನ್ನು ಸ್ಥಾಪಿಸಬೇಕೆಂದು ಈ ವಿಲ್ಬರ್‌ಫೋರ್ಸನು ಪ್ರಯತ್ನಿಸಿ ಸುಮಾರು ೧೭ ವರ್ಷಗಳು ಹೋರಾಡಿ ದಯಪಾಲಿಯಾದನು. ಬಳಿಕ ಬಡವರಾದ ಆ ಕಪ್ಪು ಜನಗಳ ಪರಿತಾಪಕರವಾದ ಸ್ಥಿತಿಯನ್ನು ಲಕ್ಷ್ಯಕ್ಕೆ ತಂದು ಆ ನೀಗ್ರೊ ಗುಲಾಮರನ್ನು ದಾಸ್ಯದಿಂದ ಬಿಡುಗಡೆ ಮಾಡಬೇಕೆಂದು ಪ್ರತಿಜ್ಞೆ ಮಾಡಿಕೊಂಡು ಪಾರ್ಲಿಮೆಂಟಿನಲ್ಲಿ ತನ್ನ ಜೀವಾಂತ್ಯದ ಪರ್ಯಂತರವೂ ಕಾರ್ಯಸಾಧನಾಸಕ್ತನಾಗಿದ್ದನು. ಹೀಗೆ ಸುಮಾರು ೨೧ ವರ್ಷಗಳು ಪ್ರಯತ್ನಶಾಲಿಯಾಗಿದ್ದು ಸಾಯುವುದಕ್ಕೆ ಮೂರು ದಿನಗಳಿರುವಾಗ ಕಾರ್ಯಸಿದ್ಧಿಯನ್ನು ಹೊಂದಿದನು.

ಜಾನ್ ಹವರ್ಡ್ ಎಂಬಾತನು ಒಬ್ಬ ಮಹಾ ಧನಿಕನು. ಈತನು ನೂರು ವರ್ಷಗಳ ಹಿಂದೆ ಜೀವಿಸಿದ್ದವನು. ಈತನು ಬದುಕಿದ್ದ ಕಾಲದಲ್ಲಿ ಇಂಗ್ಲಂಡ್ ದೇಶದ ಸೆರೆಮನೆಗಳು ಮಹಾ ಹಿಂಸಕರವಾದ ಸ್ಥಳಗಳಾಗಿದ್ದವು. ಅವುಗಳಲ್ಲಿ ಬಿದ್ದಿದ್ದ ಜನರ ಸ್ಥಿತಿಗಳನ್ನು ವಿವರಿಸಲಶಕ್ಯವಾಗಿರುವದು. ಅವರು ಮನುಷ್ಯರೆಂಬ ಹೆಸರನ್ನು ಹೊಂದಿದ್ದಾಗ್ಯೂ ಅವರಿಗೂ ಮೃಗಗಳಿಗೂ ವ್ಯತ್ಯಾಸವು ಸ್ವಲ್ಪವೇ ಎಂದು ಹೇಳಬೇಕು. ಅವರು ಮನುಷ್ಯ ಸಂಪರ್ಕಕ್ಕೆ ಹೊರಗಾದವರೆಂದೇ ಹೇಳತಕ್ಕವರಾಗಿದ್ದರು. ಅವರು ಘೋರ ಪಾತಕರ್ಮಿಗಳೆಂದು ಹೇಳುವುದೇನೋ ಸಹಜವೇ, ಆದರೂ ಅವರು ನಮ್ಮಂತೆ ಮನುಷ್ಯರೇ ಎಂದು ಈ ಹವರ್ಡನು ಹೇಳಿ ಅವರು ಶ್ರಮಪಡುತಿದ್ದ ವಿಧಗಳನ್ನೆಲ್ಲಾ ಇಂಗ್ಲಿಷ ದೇಶೀಯರಿಗೆಲ್ಲಾ ತಿಳಿಯಪಡಿಸಿದನು. ಸೆರೆಮನೆಗಳ ಮೇಲ್ವಿಚಾರಣೆಯನ್ನು ಸರಿಮಾಡುವುದಕ್ಕಾಗಿ ಬಹಳ ಪ್ರಯಾಸಪಟ್ಟನು. ತನ್ನ ಹಣವನ್ನು ಈ ಪರೋಪಕಾರದಲ್ಲಿ ಧಾರಾಳವಾಗಿ ವೆಚ್ಚಮಾಡಿದನು. ತಾನೇ ಸೆರೆಮನೆಗಳೊಳಗೆ ಹೋಗಿ ಅಲ್ಲಿ ಕಷ್ಟಕೆಲ್ಕಾಳಗಾಗಿದ್ದವರನ್ನು ಬಹಳವಾಗಿ ಆದರಿಸಿದನು. ರೋಗಿಗಳಾಗಿದ್ದವರಿಗೆ ತಾನೇ ಔಷಧಗಳನ್ನು ಕೊಟ್ಟು ಉಪಚರಿಸಿದನು. ಇದೇ ಸೇವೆಯಲ್ಲಿ ತನ್ನ ಪ್ರಾಣವನ್ನು ಒಪ್ಪಿಸಿದನು.

ಕೆಲವು ವರ್ಷಗಳ ಕೆಳಗೆ ರೋಮನ್ ಕಥೋಲಿಕ ಮತಸ್ಥರಲ್ಲಿ ಡೇಮಿಯನ್ನೆಂಬೊಬ್ಬ ಪಾದ್ರಿಯು ಇದ್ದನು. ಈತನು ಪೆಸಿಫಿಕ್ ಸಾಗರ ಮಧ್ಯದಲ್ಲಿ ಮೊಲೊಕೈ ಎಂಬ ದ್ವೀಪವು ಅಪರ ಪಂಟಾ ಕುಷ್ಠರೋಗಿಗಳೂ ಇರುವುದನ್ನು ಕೇಳಿ ಆ ರೋಗಪೀಡಿತರಾದವರನ್ನು ಆದರಿಸುವುದಕ್ಕೆ ತಾನೇ ಹೋಗಿ ಅವರ ನಡುವೆ ವಾಸಿಸ ತೊಡಗಿ ಅನೇಕ ವರ್ಷಗಳು ಅವರನ್ನು ನಾನಾ ವಿಧಗಳಲ್ಲಿ ಪೋಷಿಸುತಲಿದ್ದು ಕಡೆಗೆ ಆ ರೋಗಕ್ಕೆ ತಾನೇ ಬಲಿಯಾಗಿ ಸತ್ತನು.

ಈ ಮೂರು ಮಂದಿಯ ಸಂಕ್ಷೇಪ ಚರಿತ್ರೆಯನ್ನು ಪರ್ಯಾಲೋಚಿಸುವಲ್ಲಿ ಇವರು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಜನಾಂಗಕ್ಕೆ ಸೇರಿದವರಾಗಿದ್ದರೂ ಮೂವರಲ್ಲಿಯೂ ಒಂದೇ ಒಂದು ಪ್ರಾಮುಖ್ಯವಾದ ಲಕ್ಷಣವು ಪ್ರಕಟವಾಗುತ್ತದೆಂದು ಗೊತ್ತಾಗುತ್ತದೆ. ಇವರಲ್ಲಿ ಪ್ರತಿಯೊಬ್ಬರೂ ಸೋದರಭಾವವನ್ನು ಅತ್ಯತಿಶಯವಾಗಿ ಪ್ರಕಟಿಸುವವರಾಗಿದ್ದರು. ಆ ವಿಲ್ಬರ್‌ಫೋರ್ಸನು ಯಾರು? ಆಫ್ರಿಕದ ಆ ಕಪ್ಪು ಜನಗಳು ಯಾರು? ಆದರೂ ಆತನು ಅವರನ್ನು ತನ್ನ ಒಡಹುಟ್ಟುಗಳೆಂದೇ ಭಾವಿಸಿದನು. ಅವರ ಕಷ್ಟವು ಹಿಂಸೆಯೂ ತನ್ನದೆಂದು ತಿಳಿದನು. ಆತನು ಪಾರ್ಲಿಮೆಂಟಿನಲ್ಲಿ ಖ್ಯಾತಿವಂತನಾಗಿದ್ದನು. ಇನ್ನೂ ಅತ್ಯುತ್ತಮವಾದ ಪದವಿಯನ್ನೂ ಹೇರಳವಾದ ದ್ರವ್ಯವನ್ನೂ ಪಡೆಯಬಲ್ಲವನಾಗಿದ್ದನು. ಆದರೂ ಅವುಗಳನ್ನೆಲ್ಲಾ ತಿರಸ್ಕರಿಸಿ ತನಗೆ ದೇಶದ ಶ್ರೀಮಂತರಲ್ಲಿ ಹೇಕರು ವೈರಿಗಳಾದರೂ ಸಹ್ಯಮಾಡದೆ ಕಷ್ಟಪಡುವವರಾದ ಆ ವಿದೇಶೀಯರಾದ ಕಪ್ಪು ಜನಗಳನ್ನು ಸಲಹುವುದೇ ತನ್ನ ಕರ್ತವ್ಯವೆಂದು ಗ್ರಹಿಸಿದನು. ಹಾಗೇ ಉಳಿದವರಿಬ್ಬರೂ ಸ್ವದೇಶೀಯರಾಗಲಿ ಪರದೇಶೀಯರಾಗಲಿ ಸೆರೆಮನೆಯಲ್ಲಿಯೂ ಅನ್ಯದ್ವೀಪದಲ್ಲಿಯೂ ಮನುಷ್ಯ ಸಂಪರ್ಕಕ್ಕೆ ದೂರಗತರಾದಂಥ ಜನಗಳನ್ನು ಆದರಿಸುವದೂ ಉಪಚರಿಸುವದೂ ತಮ್ಮ ಕರ್ತವ್ಯವೆಂದೂ ಅವರು ಸಹ ಇತರರಂತೆ ಮನುಷ್ಯರೆಂದೂ ಗ್ರಹಿಸಿದರು. ಅವರಿಗೆ ಸ್ವಜಾತ್ಯಭಿಮಾನವಾಗಲಿ ಶ್ರೇಷ್ಠ ಜಾತಿಯೆಂಬ ಅಹಂಕಾರವಾಗಲಿ ಪರಮತ ದ್ವೇಷವಾಗಲಿ ನಾಗರಿಕರಾಗಿದ್ದೇವೆಂಬ ಗರ್ವವಾಗಲಿ ಇರಲಿಲ್ಲ. ಕಷ್ಟಪಡುವವರು ಯಾವ ದೇಶೀಯರೇ ಆಗಲಿ ಎಷ್ಟೇ ಹೀನ ಸ್ಥಿತಿಯವರಾಗಲಿ ಅವರನ್ನು ಕಾಪಾಡುವದು ಯೋಗ್ಯವೆಂದು ತಿಳಿದರು.

ಈ ಸೋದರಭಾವವು ಎಷ್ಟು ಶ್ರೇಷ್ಠವಾದುದು! ಎಷ್ಟು ಫಲಪ್ರದವಾದುದು! ಎಷ್ಟು ಅತಿಶಯವಾದ ಭೂಷಣಪ್ರಾಯವಾದುದು! ಎಲೈ ಆರ್ಯರೇ, ನಮ್ಮ ಈ ದೇಶದಲ್ಲಿ ಈ ಭಾವವು ಯೋಗ್ಯವಾದುದೆಂದು ಒಪ್ಪುವವರು ಎಷ್ಟು ಮಂದಿ? ಆ ಭಾವವನ್ನು ವ್ಯವಹಾರದಲ್ಲಿ ತರುವುದಕ್ಕೆ ಸಿದ್ಧರಾಗಿರುವವರು ಎಷ್ಟು ಮಂದಿಯಿದ್ದಾರೆ? ನೀವೇ ಈ ಪ್ರಶ್ನೆಯನ್ನು ನಿಮ್ಮ ಮನಸ್ಸಿನಲ್ಲಿ ಕೇಳಿಕೊಳ್ಳಿರಿ. ಮೇಲ್ಪಟ್ಟ ಜಾತಿಯಲ್ಲಿರುವವರು ತಿರಸ್ಕರಿಸಿ ಹೊರಗೆ ಹಾಕಿರುವ ಕೀಳುಜಾತಿಯವರೆಂಬುವವರು ನಿಮ್ಮ ಒಡಹುಟ್ಟಿದವರಲ್ಲವೇ? ಅವರನ್ನು ನೀವು ಎಷ್ಟು ಹಿಂಸೆಗೂ ತಿರಸ್ಕಾರಕ್ಕೂ ಗುರಿಮಾಡಿದ್ದೀರಿ? ನಿಮ್ಮ ಮತವೇ ಅವರನ್ನು ಇಷ್ಟು ಅಲಕ್ಷ್ಯಕ್ಕೆ ಪಾತ್ರರನ್ನಾಗಿ ಕಾಣಬೇಕೆಂದು ವಿಧಿಸುತ್ತದೆಯಲ್ಲವೇ? ಇವರನ್ನು ಸಮಾಜಕ್ಕೆ ಯೋಗ್ಯರನ್ನಾಗಿ ಮಾಡುವುದಕ್ಕೆ ಯಾರು ಯಾವ ಪ್ರಯತ್ನವನ್ನು ಮಾಡಿದ್ದಾರೆ? ಅವರ ಪಕ್ಷವಾಗಿ ನಿಂತು ಹೋರಾಡುವ ಮಹನೀಯರು ಎಲ್ಲಿದ್ದಾರೆ? ಸಾಮಾಜಿಕ ವಿಷಯವಾದ ಈ ಕೊರತೆಯನ್ನು ಪರಿಹರಿಸುವುದಕ್ಕೆ ಒಬ್ಬರಾದರೂ ಪ್ರಯತ್ನಿಸುತ್ತಲಿದ್ದಾರೆಯೇ? ಇಲ್ಲವಲ್ಲ! ಹೀಗಿರಲಾಗಿ ದೇಶವು ಉನ್ನತಾವಸ್ಥೆಯನ್ನು ಪಡೆಯುವದೆಂದಿಗೆ? ಸೋದರಭಾವವನ್ನು ಬಾಯಿಂದ ಹೊಗಳಿ ಅದನ್ನು ಕಾರ್ಯದಲ್ಲಿ ಸಿದ್ಧಿಸುವಂತೆ ಮಾಡದೆ ಇದ್ದರೆ ಪ್ರಯೋಜನವೇನು? ಒಂದು ವೇಳೆ ಇಂಥ ಉಪಕಾರವನ್ನು ಮಾಡಬೇಕೆಂದು ಮನಸ್ಸಿದ್ದರೂ ಆ ಮನಸ್ಸಿನಲ್ಲಿ ಹುಟ್ಟಿದ ಆಲೋಚನೆಯನ್ನು ಮನಸ್ಸಿನಲ್ಲೇ ಕತ್ತುಹಿಸುಕಿ ಕೊಲ್ಲುವ ಗುಣವು ಇಂದೂ ಸಮಾಪಸ್ಥಿತಿಯಲ್ಲಿದೆ. ಇಂಥ ಘೋರ ರಾಕ್ಷಸನ ಸಂಕೋಲೆಗೆ ಸಿಕ್ಕಿರುವ ನಮ್ಮ ಸಹೋದರರಾದ ಈ ದೇಶೀಯರು ಬೇಗನೆ ಬಿಡುಗಡೆಯನ್ನು ಹೊಂದಲೆಂದೂ ಈ ದೇಶದವರು ಮಿಕ್ಕ ದೇಶೀಯರನ್ನೆಲ್ಲಾ ಸಹೋದರರೆಂದು ಭಾವಿಸಿ ಅವರ ಕಷ್ಟಸುಖಗಳಲ್ಲಿ ಭಾಗಿಗಳಾಗತಕ್ಕ ಶ್ರೇಷ್ಠವಾದ ಗುಣದಿಂದಲಂಕೃತರಾಗುವ ಕಾಲವು ಬೇಗ ಬರಲೆಂದೂ ಹಾರೈಸುವೆವು.

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದ ಕೋಟೆಯೊಳಗಿರುವ ದೊಡ್ಡ ಬಂಗಲೆಗಳಿಗೂ ಬೀದಿಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನಿಡುವುದಕ್ಕೆ ಕಾಮಗಾರಿ ನಡೆಯುತ್ತಿದೆ. ಮುಂದಿನ ತಿಂಗಳಲ್ಲಿ ಇದು ಸಿದ್ಧವಾಗುವುದೆಂದು ಹೇಳುತ್ತಾರೆ.

****

ರಷ್ಯಾ ಜಪಾನ್ ಯುದ್ಧದಲ್ಲಿ ಮಡಿದುಹೋದ ಜಪಾನ್ ಸೈನಿಕರ ಹೆಂಡರು ಮಕ್ಕಳ ಪೋಷಣೆಗಾಗಿ ಹಿಂದುಸ್ಥಾನದಲ್ಲೂ ಒಂದು ಫಂಡು ಏರ್ಪಡಾಗಿರುವುದೂ ಇದಕ್ಕೆ ಇಲ್ಲಿನ ಪ್ರಜೆಗಳೂ ಚಂದಾ ಕೊಡುತ್ತಿರುವುದೂ ತಿಳಿಸಿರುತ್ತೇವಷ್ಟೆ. ಈ ಫಂಡಿಗೆ ಇದುವರೆಗೆ ೯೪,೯೬೯ ರೂಪಾಯಿ ಕೂಡಿರುವುದು.

****

ಕಾಂಗ್ರಾ ಕಣಿವೆಯಲ್ಲಿ ಇಂಗ್ಲಿಷ್ ಸೈನಿಕರಿಗೆ ಭೂಕಂಪದ ದೆಸೆಯಿಂದ ಉಂಟಾದ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಸೈನ್ಯಾಧಿಪತಿ ಲಾರ್ಡ್ ಕಿಚ್ನರ್‌ಯವರು ಏರ್ಪಡಿಸಿದ ಫಂಡಿಗೆ ೨,೪೦,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ವಸೂಲಾಯಿತು. ಈ ಪೈಕಿ ೮೨,೨೫೮ ರೂಪಾಯಿ ವಿಲಾಯಿತಿಯಲ್ಲಿ ಕೂಡಿಸಿ ಕಳುಹಿಸಿದಾರೆ.

****

ಆಗ್ರಾಪಟ್ಟಣದ ಪೊಲೀಸಿನವರು ಬಲವಂತಸಿಂಗ್ ಠಾಕೂರ್ ಎಂಬ ಪ್ರಸಿದ್ಧನಾದ ಕಳ್ಳನನ್ನು ಹಿಡಿಯುವುದಕ್ಕೆ ಪಂಟಾ ಪ್ರಯಾಸಪಟ್ಟರೂ ಅವನು ಸಿಕ್ಕದೆಹೋದುದರಿಂದ ಅವನನ್ನು ಗುಂಡು ಹೊಡೆದು ಕೊಂದುಹಾಕಿದರು. ಇವನನ್ನು ಹಿಡಿದು ಕೊಡುವವರಿಗೆ ೫೦೦ ರೂಪಾಯಿ ಬಹುಮಾನ ಸಿಕ್ಕುವುದೆಂದು ಸರ್ಕಾರದವರು ಪ್ರಕಟಿಸಿದ್ದರು.

****

ಹಿಂದುಸ್ಥಾನದ ವೈಸ್‌ರಾಯ ಕೆಲಸವನ್ನು ಲಾರ್ಡ್ ಕರ್ಜನ್ ಪ್ರಭುಗಳು ಬಿಟ್ಟುಹೋಗುವುದಾದರೆ ಅವರ ಕೆಲಸಕ್ಕೆ ಲಾರ್ಡ್ ರೋಸ್‌ಬರಿ ಯವರ ಅಳಿಯಂದಿರಾದ ಅರಲ್ ಆಫ್ ಕ್ರೂ ಯವರು ನೇಮಕವಾಗಿ ಬರುತ್ತಾರೆಂದು ವರ್ತಮಾನವಿದೆ. ಈ ಅರಲ್ ಆಫ್ ಕ್ರೂ ಯವರು ತಮ್ಮ ಬಳಿಯಲ್ಲಿದ್ದ ಜೂಜಿನ ಕುದುರೆಗಳನ್ನೆಲ್ಲಾ ಮಾರಿಬಿಟ್ಟರು.

****

ಕಲ್ಕತ್ತಾ ಪಟ್ಟಣದಲ್ಲಿ ವಿಸ್ತಾರಿಣಿ ದಾಸಿ ಎಂಬ ವಿಧವೆಯು ತನ್ನ ಗಂಡನ ಆಸ್ತಿಯನ್ನೆಲ್ಲಾ ತಂದೆಗೆ ಕೊಟ್ಟು, ಅವನಿಂದಲೇ ರಕ್ಷಿಸುತ್ತಿದ್ದಳು. ಅವಳ ಮಗನ ಮದುವೆ ಮಾಡಿದಾಗ ಆ ತಂದೆಯು ಪಂಟಾ ಹಣವನ್ನು ತಿಂದುಹಾಕಿದನು. ಈಗ ಆ ವಿಧವೆಯಾದ ಮಗಳು ತನ್ನ ತಂದೆಯ ಮೇಲೆ ಅವನು ಮೋಸಮಾಡಿದನೆಂಬದಾಗಿ ದಾವಾ ತಂದಿದಾಳೆ.

****

ವಿಲಾಯತಿಯ ಯುವರಾಜರವರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಹಿಂದುಸ್ಥಾನಕ್ಕೆ ಈ ವರ್ಷದ ಅಂತ್ಯಭಾಗದಲ್ಲಿ ದಯಮಾಡಿದಾಗ ಲಾಹೋರ್, ಜಮ್ಮೂ, ಡೇಹಲಿ, ಕಲ್ಕತ್ತಾ ಈ ಮೊದಲಾದ ಮುಖ್ಯ ನಗರಗಳಲ್ಲಿ ದೊಡ್ಡ ದೊಡ್ಡ ದರ್ಬಾರ್ ಮಾಡುವರು. ಈ ದರ್ಬಾರುಗಳಿಗೆ ಸುತ್ತುಮುತ್ತಿನ ಮಹನೀಯರನ್ನೂ ರಾಜರುಗಳನ್ನೂ ಮುಖ್ಯ ಮುಖ್ಯ ಉದ್ಯೋಗಸ್ಥರನ್ನೂ ಕರೆಸಿಕೊಳ್ಳುವರು.

****

ಗಿಲ್ಗಿಟ್ ಏಜನ್ಸಿಗೆ ಸೇರಿದ ಊರುಗಳಲ್ಲಿ ನದಿಯ ಪ್ರವಾಹವು ಬಹು ಅಪಾರವಾಗಿ ಬಂದ ಕಾರಣ ಇಸ್ಕಮನ್ ಎಂಬ ಸ್ಥಳದಲ್ಲಿ ಹಾಕಿದ್ದ ಅರ್ಧಕಟ್ಟೆಯು ಕಿತ್ತುಹೋಯಿತು. ಗಿಲ್ಗಿಟ್ಟಿನ ಅಂತರ್ಗತದ ಸೇತುವೆಯು ಕೊಚ್ಚಿಹೋಗಿದೆ. ಪ್ರಾನಿಯಾಳದಲ್ಲಿ ಒಂದು ಕೋಟೆಗೆ ಕೋಟೆಯೇ ನೀರಿನಲ್ಲಿ ಮುಳುಗಿ ತೇಲುತ್ತಿರುವುದು. ಇದರಿಂದುಂಟಾದ ಕಷ್ಟನಷ್ಟಗಳು ಇನ್ನೂ ವಿವರವಾಗಿ ತಿಳಿದು ಬರಲಿಲ್ಲ.

****

ಆಫ್ಘಾನಿಸ್ಥಾನದ ಅಮೀರರಿಗೆ ಅವರ ಸೈನ್ಯದ ಖರ್ಚಿಗಾಗಿ ಇಂಡಿಯಾ ಗವರ್ನಮೆಂಟಿನವರು ಪ್ರತಿ ವರುಷವೂ ೧೮ ಲಕ್ಷ ರೂಪಾಯಿ ಕೊಡುತ್ತಾ ಬಂದಿದಾರೆ. ಇದನ್ನು ಅವರು ಕೆಲವು ವರುಷಗಳಿಂದ ತರಿಸಿಕೊಳ್ಳಲಿಲ್ಲವಾದ್ದರಿಂದ ಆ ಹಣವು ಸುಮಾರು ೬೫ ಲಕ್ಷ ರೂಪಾಯಿ ತನಕ ಇಂಡಿಯಾ ಗವರ್ನಮೆಂಟಿನವರ ವಶದಲ್ಲಿ ಉಳಿದಿರುವುದು. ಇದನ್ನು ಅವರು ಇಷ್ಟರಲ್ಲೇ ತರಿಸಿಕೊಳ್ಳುವವರಾಗಿದಾರೆ.

****

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ವಾರ ಬಿಸಲಿನ ತಾಪ ಸಹಿಸಲಶಕ್ಯವಾಗಿತ್ತು. ಕೆಲವು ಜನ ಯೂರೋಪ್ಯರು ಧಗೆಯನ್ನು ಸಹಿಸಲಾರದೆ ಸತ್ತುಹೋದರು. ಟ್ರಾಮ್ ಗಾಡಿಗಳಿಗೆ ಕಟ್ಟುವ ಕುದುರೆಗಳ ಪೈಕಿ ನೂರಾರು ಪ್ರಾಣಿಗಳು ಮೃತಪಟ್ಟವು. ಅಮೃತಸಾರ, ಅಲ್ಲಹಾಬಾದ, ಲಾಹೋರ್ ಮುಂತಾದ ನಗರಗಳಲ್ಲೂ ಹೀಗೆಯೇ ಬಿಸಲಿನ ತಾಪ ಹೆಚ್ಚಿ ಕೆಲವು ಜನರೂ ಅನೇಕ ದನಗಳು ಪ್ರಾಣಿಗಳೂ ಸತ್ತುಹೋದಂತೆ ತಿಳಿಯುವುದು.

****

ಕೈರಾ ಡಿಸ್ಟ್ರಿಕ್ಟಿಗೆ ಸೇರಿದ ಮಾತಾರ್ ತಾಲ್ಲೂಕಿನಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಹೆಚ್ಚುತ್ತಿದೆ. ಸದ್ಯ ಅಲ್ಲಿ ೩೦೦ ಪ್ರಜೆಗಳು ರಿಲೀಫ್ ಕಾಮಗಾರಿ ಮಾಡುತ್ತಿರುವರು. ಷೋಲಾಪುರ ಡಿಸ್ಟ್ರಿಕ್ಟಿನಲ್ಲಿ ದುಷ್ಕಾಲದ ಪ್ರಯುಕ್ತ ಸರ್ಕಾರದವರು ೧,೬೨,೨೫೦ ರೂಪಾಯಿ ಕಂದಾಯಗಳನ್ನು ರಿಮಿಷನ್ ಮಾಡಿದ್ದಲ್ಲದೆ ೧,೩೩,೦೬೦ ರೂಪಾಯಿ ಕಂದಾಯ ಬಾಕಿಗಳನ್ನು ಇನ್ನು ಮುಂದೆ ಸುಭಿಕ್ಷಕಾಲದಲ್ಲಿ ವಸೂಲ್ಮಾಡುವಂತೆ ಹುಕುಂ ಕೊಟ್ಟಿದಾರೆ.

****

ಕಲ್ಕತ್ತಾ ಪಟ್ಟಣದ ಪೊಲೀಸ್ ಕೋರ್ಟಿನಲ್ಲಿ ಅವತಾರಚಂದ ಲಾಹಾವರ್ ಎಂಬ ದೊಡ್ಡಮನುಷ್ಯನು ದೊಡ್ಡ ಸಭೆಯನ್ನು ಸೇರಿಸಿ, ಜಪಾನ್ ನಾವೆಯ ಅಧಿಪತಿಯಾದ ಅಡ್ಮಿರಲ್ ಟೋಗೋ ಯವರು ರಷ್ಯಾ ಹಡಗುಗಳನ್ನು ಯುದ್ಧದಲ್ಲಿ ಸೋಲಿಸಿ, ಜಯವನ್ನು ಹೊಂದಿದ ವಿಷಯವಾಗಿ ಉಪನ್ಯಾಸಗಳನ್ನು ಮಾಡಿ, ಆ ಅಧಿಪತಿಯ ಪರಾಕ್ರಮವನ್ನು ಹೊಗಳಿದನು. ಇನ್ನೂ ಕೆಲವು ದೊಡ್ಡ ಮನುಷ್ಯರು ಅದೇ ಅರ್ಥಕ್ಕೆ ಉಪನ್ಯಾಸಮಾಡಿದರು.

****

ಅಲ್ಲಹಾಬಾದಿನಲ್ಲಿ ಪ್ರಸಿದ್ಧ ವಕೀಲನಾಗಿರುವ ಬಾಬು ಗಣೇಶಚಂದ್ರ ಎಂಬಾತನ ಕುಮಾರನಾದ ಮಿ॥ ಎಂ. ಎನ್. ಬೋಸು ಎಂಬಾತನು ಕಲ್ಕತ್ತೆಯಲ್ಲಿ ಬಿ. ಎ. ಪರೀಕ್ಷೆಯನ್ನು ಕೊಟ್ಟು, ವಿಲಾಯತಿಗೆ ಹೋಗಿ ವ್ಯಾಸಂಗ ಮಾಡುತ್ತಿದ್ದನು. ಈತನು ಚರಿತ್ರೆ ಎಂಬ ಭಾಗದಲ್ಲಿ ಬಹಳ ಮೇಲ್ದರವಾಗಿ ತೇರ್ಗಡೆ ಹೊಂದಿರುತ್ತಾನೆಂದು ತಂತೀ ವರ್ತಮಾನ ಬಂದಿದೆ. ಹಿಂದುಸ್ಥಾನದ ಹುಡುಗರ‍್ಯಾರೂ ಇದುವರೆಗೆ ವಿಲಾಯತಿಯಲ್ಲಿ ಈ ರೀತಿ ಹೆಸರು ಪಡೆದಿಲ್ಲ.

****

ಭರತಖಂಡದ ಚಕ್ರವರ್ತಿ ೭ನೇ ಎಡ್ವರ್ಡ್ ಸಾರ್ವಭೌಮರವರ ವರ್ಷ ವರ್ಧಂತಿಯ ಪ್ರಯುಕ್ತ ಕಳೆದ ೨೬ನೇ ತಾರೀಖಿನ ದಿನ ಹಿಂದುಸ್ಥಾನದಲ್ಲೆಲ್ಲಾ ಸರ್ಕಾರದವರೂ ಸೈನಿಕರೂ ಪ್ರಜೆಗಳೂ ನಾನಾಪ್ರಕಾರವಾದ ಸಂತೋಷೋತ್ಸವಗಳನ್ನು ಮಾಡಿದರು. ರಾಜಗೃಹ ಸಂಸ್ಥಾನದ ಮಹಾರಾಜರವರು ಆ ದಿನ ಬಡಬಗ್ಗರಿಗೆ ಅನ್ನದಾನ ಮಾಡಿ, ೮ ಮಂದಿ ಖೈದಿಗಳಿಗೆ ಅವರ ಅಪರಾಧವನ್ನು ಕ್ಷಮಿಸಿ ಬಂದೀಖಾನೆಯಿಂದ ಬಿಡುಗಡೆ ಮಾಡಿದರು. ಇನ್ನೂ ಅನೇಕವಾಗಿ ದಾನಧರ್ಮಗಳು ಆ ಸಂಸ್ಥಾನದಲ್ಲಿ ನಡೆದಿರುತ್ತವೆ.

****

ಮಸೂರಿ ಪಟ್ಟಣದಲ್ಲಿ ಯಾರ್ಕ್ ಹೌಸ್ ಎಂಬ ಬಂಗಲೆಯೊಳಗೆ ಯೂರೋಪಿಯನ್ ಸಂಸಾರಸ್ಥರು ಕಳೆದ ಭಾನುವಾರ ರಾತ್ರಿ ಕೂತುಕೊಂಡು ಭೋಜನಮಾಡುತ್ತಿರುವಾಗ ಆ ಬಂಗಲೆಗೆ ಕಿಚ್ಚು ಬಿದ್ದಿತು. ಇಬ್ಬರು ಹೆಣ್ಣು ಮಕ್ಕಳೂ ತಾಯಿಯೂ ಈಕೆಯ ಸಹೋದರಿಯೂ ಕಾಚಗಳಿಂದ ಕೆಳಕ್ಕೆ ಪ್ರಜ್ಞೆತಪ್ಪಿ ಬಿದ್ದುಕೊಂಡರು. ಸ್ವಲ್ಪ ಹೆಚ್ಚು ಕಡಿಮೆ ಆ ಮನೆಯಲ್ಲಿದ್ದ ಜನರಿಗೆಲ್ಲಾ ಪ್ರಜ್ಞೆ ತಪ್ಪಿತು. ಬಂಗಲೆಯು ಕೆಲವು ಕಡೆ ಜಖಂ ಆಯಿತು. ಆ ಪೈಕಿ ೨—೩ ಮಂದಿಗೆ ದೇಹದ ಉದ್ದಕ್ಕೂ ಕೆಂಪು ಗುರುತು ಆಗಿರುವುದು.

****

ಹಿಂದಿನ ಶನಿವಾರ ರಾತ್ರಿ ಕಾಲಿಂಪಾಂಗ್ ಪಟ್ಟಣದಲ್ಲಿ ಒಂದು ಮನೆಯ ಅಂಗಳದೊಳಗೆ ನಾಲ್ಕು ಮಂದಿ ಹೆಂಗಸುಗಳು ಮಲಗಿ ನಿದ್ರೆ ಮಾಡುತ್ತಿರುವಾಗ ಒಂದು ಚಿರತೆಯು ಅಂಗಳಕ್ಕೆ ಬಂದು ಅವರನ್ನು ದಾಟಿಕೊಂಡು ನಡುವೆ ಮಲಗಿದ್ದ ಒಬ್ಬ ಹುಡುಗನನ್ನು ಪರಚಿಕೊಂಡುಹಾಕಿ ಎತ್ತಿಕೊಂಡು ಹೋಯಿತು. ಅವನ ಕೂಗನ್ನು ಕೇಳಿ ತಾಯಿ ಒಳಗಿನಿಂದ ಎದ್ದು ಬಂದು, ಮಗಹೋದನೆಂದು ಅರಚಿಕೊಂಡಳು. ಜನರೆಲ್ಲಾ ಕೂಡಲೇ ಗುಂಪುಸೇರಿ ಕೋಲುಗಳನ್ನು ಹಿಡಿದು, ಚಿರತೆಯನ್ನು ಅಟ್ಟಿಸಿಕೊಂಡು ಹೋಗಿ ಹುಡುಗನನ್ನು ಕೊಂಡುಹಾಕಿದರು.

ಹೈದರಾಬಾದ್ ಸಂಸ್ಥಾನದಲ್ಲಿ ಮೊದಲನೆ ದೊಡ್ಡ ಮನುಷ್ಯನಾದ ನವಾಬ್ ಜಪರ್ ಜಂಗ್ ಬಹದೂರ್ ಯವರು ನಾರಾಯಣನೆಂಬುವವನನ್ನು ತಮ್ಮ ಪ್ರೈವೆಟ್ ಸೆಕ್ರೆಟರಿಯಾಗಿ ನೇಮಿಸಿಕೊಂಡಿದ್ದರು ಇವನು ಹೈದರಾಬಾದಿನಲ್ಲೆಲ್ಲಾ ತುಂಬಾ ಗೌರವವನ್ನು ಸಂಪಾದಿಸಿಕೊಂಡಿದ್ದನು ಇಂಥಾ ಮನುಷ್ಯನನ್ನು ಕಳೆದ ವಾರ ದಸ್ತಗಿರಿ ಮಾಡಿ ಲಾಕಪ್ಪಿನಲ್ಲಿ ಹಾಕಿರುತ್ತಾರೆ ಇದಕ್ಕೆ ಅವನು ಬೆಂಗಾಳಾ ಬ್ಯಾಂಕಿಗೆ ಮೋಸಮಾಡಿ ತುಂಬಾ ಹಣ ತಿಂದುಹಾಕಿದನೆಂಬುದೂ ಇನ್ನೂ ಕೆಲವು ಅಕೃತ್ಯಗಳನ್ನು ಮಾಡಿದ್ದಾನೆಂಬುದೂ ಕಾರಣಗಳಾಗಿ ಪ್ರಕಟಿಸಲ್ಪಟ್ಟಿವೆ

*****

ಬರ್ಮಾ ದೇಶದ ಜನರು ಮೋಂಬತ್ತಿ (ಮೇಣದಬತ್ತಿ) ಗಳನ್ನು ಉಪಯೋಗಿಸುವಷ್ಟು ಪ್ರಪಂಚದ ಇನ್ಯಾವ ಭಾಗದ ಜನರೂ ಉಪಯೋಗಿಸುತ್ತಾ ಇಲ್ಲ ಅವರು ದೇವಸ್ಥಾನಗಳಿಗೆ ಹೋಗುವಾಗಲೆಲ್ಲಾ ಮೋಂಬತ್ತಿಗಳನ್ನು ಹಚ್ಚಿಟ್ಟುಬರುವರು ಮನೆಗಳಲ್ಲೂ ಅವುಗಳನ್ನೇ ವಿಶೇಷವಾಗಿ ಉಪಯೋಗಿಸುವರು. ಮತ್ತು ಪ್ರಯಾಣ ಹೊರಟರೆ ಪ್ರತಿ ಒಬ್ಬನೂ ಮೇಣದ ಬತ್ತಿಗಳನ್ನು ತೆಗೆದುಕೊಳ್ಳದೆ ಹೋಗುವುದಿಲ್ಲ ಆದಕಾರಣ ಮೇಣದ ಬತ್ತಿಗಳು ಸಣ್ಣಸಣ್ಣ ಹಳ್ಳಿಗಳಲ್ಲೂ ತುಂಬಾ ಬಿಕರಿ ಆಗುವವು. ಜನರು ಅಲ್ಲೇ ಈ ಮೋಂಬತ್ತಿಗಳನ್ನು ಜೇನುಮೇಣದಿಂದ ಅಪಾರವಾಗಿ ತಯಾರುಮಾಡುವರು

*****

ಅಲಿಘಡದಲ್ಲಿರುವ ಮಹಮದೀಯ ಕಾಲೆಜ್ಜೆಂಬ ವಿದ್ಯಾಶಾಲೆಯಲ್ಲಿ ಕಳೆದ ವರುಷ ೧,೨೪,೦೪೩ ರೂಪಾಯಿ ಉತ್ಪತ್ತಿ ಆಯಿತು. ಇದಲ್ಲದೆ ಹೊಸ ಕಟ್ಟಡ ಮುಂತಾದ ಕೆಲಸಗಳಿಗೆ ೧,೨೩,೪೯೯ ರೂಪಾಯಿ ಚಂದಾ ವಸೂಲಾಗಿದೆ ಅಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸುವುದಕ್ಕೆ ನವಾಬ್ ಫಸಾಸ್ ಅಲ್ಲಿ ಖಾನರವರು ೨೮,೦೦೦ ರೂಪಾಯಿ ಕೊಟ್ಟಿದ್ದಾರೆ ಲೆಫ್ಟಿನೆಂಟ್ ಗವರ್ನರವರು ಮುಂದಿನ ತಿಂಗಳಲ್ಲಿ ಅಲ್ಲಿಗೆ ಹೋಗಿ ಆ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕುವರು ಅಂತೂ ಈ ಮಹಮದೀಯ ವಿದ್ಯಾಶಾಲೆಯು ತುಂಬಾ ಉಚ್ಛ್ರಾಯ ಸ್ಥಿತಿಯಲ್ಲಿರುವುದೆಂದು ತಿಳಿಸಲು ಸಂತೋಷವಾಗುವುದು

*****

ಅಮೃತಸರದ ಪಟ್ಟಣದಲ್ಲಿ ಚಿನ್ನದ ದೇವಸ್ಥಾನದೊಳಗಿದ್ದ ...ಸ್ಕರ ವಿಗ್ರಹಗಳನ್ನು ದೇವಸ್ಥಾನದ ಮ್ಯಾನೆಜರು ತೆಗೆಸಿಹಾಕಿದರು ಇದನ್ನು ನೋಡಿ ಸಿಕ್ ಜನರಲ್ಲಿ ಎರಡು ಗುಂಪುಗಳಾಗಿವೆ. ಒಂದು ಗುಂಪಿನವರು ವಿಗ್ರಹಗಳನ್ನು ತೆಗೆದುಹಾಕಿದ್ದು ಒಳ್ಳೆಯದಾಯಿತೆಂತಲೂ ಇನ್ನೊಂದು ಗುಂಪಿನವರು ವಿಗ್ರಹಗಳಿದ್ದೇ ಇರಬೇಕೆಂತಲೂ ವಾಗ್ವಾದ ಮಾಡುತ್ತಿದ್ದಾರೆ ಹಿಂದುಗಳ ಸಂಪರ್ಕದಲ್ಲಿರುವ ಸಿಕ್ಕರೆಲ್ಲಾ ವಿಗ್ರಹಗಳಿರಬೇಕೆಂದು ವ್ಯಾಖ್ಯಮಾಡುತ್ತಾರೆ ...ದರು ಕಕ್ಷಿಯವರು ಈಗಿನಕಾಲದ ನವನಾಗರಿಕವನ್ನು ಪಡೆದವರು. ಈ ವಾಗ್ವಾದವು ಯಾವರೀತಿ ಪರ್ಯವಸಾನವಾಗುವುದೋ ನೋಡಬೇಕಾಗಿದೆ.

*****

ಹಿಂದುಸ್ಥಾನದ ಯುರೋಪ್ಪಿಯನ್ ಸರ್ದಾರರ ಮನೆಗಳಲ್ಲಿ ಮತ್ತು ಕೆಲಸಮಾಡುವುದಕ್ಕೆ ದೇಶೀಯ ಹೆಂಗಸರು ಸಂಬಳ ಕೊಟ್ಟರೂ ಸಿಕ್ಕುವುದು ಕಷ್ಟವೆಂದು ಕೆಲವರು ಯೋಚಿಸಿ ಕಲ್ಕತ್ತೆಯಲ್ಲಿ ಒಂದು ಸಂಘವನ್ನು ಮಾಡಿರುತ್ತಾರೆ ಈ ಸಂಗದವರು ಜಪಾನ್ ಸ್ತ್ರೀಯರನ್ನು ಅಲ್ಲಿಂದ ಕರೆಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿರುವರು, ಈಚೆಗೆ ಜಪಾನ್ ಸೈನಿಕರಲ್ಲಿ ಬಹುಮಂದಿ ಯುದ್ಧಮಾಡಿ ಸತ್ತುಹೋಗಿರುವಕಾರಣ ಅವರುಗಳ ಹೆಂಡಿರೂ ಮಕ್ಕಳೂ ನಿರ್ಗತಿಕರಾಗಿ ಜೀವನಕ್ಕೆ ಕಷ್ಟಪಡುತ್ತಿದ್ದಾರೆ. ಇಂಥವರು ಕಷ್ಟಪಟ್ಟು ದುಡಿಯುವವರೆಯಿಂದಲೂ ನಂಬಿಕೆಯುಳ್ಳವರಾಗಿಯೂ ಪ್ರೀತಿಪೂರ್ವಕವಾಗಿಯೂ ಚಾಕರಿ ಮಾಡುವರೆಂದೂ ಅವರನ್ನು ಕರೆಸಿಕೊಳ್ಳಬೇಕೆಂದೂ ಮೇಲ್ಕಂಡ ಸಂಘದವರು ತಿಳಿದಿರುತ್ತಾರೆ.

*****

ಮದರಾಸ್ ಪಟ್ಟಣದಲ್ಲಿರುವ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆಯನ್ನು ಕಟ್ಟುವಾಗ್ಗೆ ಹಣಸಾಲದ್ದರಿಂದ ವಿಜಯನಗರ ಸಂಸ್ಥಾನದ ಲೇಟ್ ಮಹಾರಾಜರವರು ಅದೇ ಬಂಗಲೆಯ ಆಧಾರದ ಮೇಲೆ ಕೆಲವು ಹಣವನ್ನು ಸಾಲ ಕೊಟ್ಟಿದ್ದರು. ಆ ಸಾಲವು ಬಡ್ಡಿ ಬೆಳೆದು ಸುಮಾರು ಎರಡು ಲಕ್ಷ ರೂಪಾಯಿ ಆಗಿದ್ದಿತು. ಈಗಿನ ಮಹಾರಾಜರವರು ಪ್ರಾಪ್ತವಯಸ್ಕರಾದದರಿಂದ ತಮ್ಮ ಉದಾರ ಮನಸ್ಸನ್ನು ಪ್ರಕಾಶಪಡಿಸಿ, ಈ ಸಾಲವನ್ನು ಮಾಫಿಯಾಗಿ ಬಿಟ್ಟುಬಿಟ್ಟರು. ಅವರ ಈ ಧರ್ಮಕಾರ್ಯವನ್ನು ಶಾಶ್ವತಪಡಿಸುವುದಕ್ಕೋಸ್ಕರ ಆ ಬಂಗಲೆಯ ಕಮಿಟಿಯವರು ಲೇಟ್ ಮಹಾರಾಜರವರ ಭಾವಚಿತ್ರವುಳ್ಳ ಒಂದು ದೊಡ್ಡ ತಸ್ವೀರನ್ನು ಆ ಬಂಗಲೆಯಲ್ಲಿ ಕಟ್ಟಬೇಕೆಂದು ಗೊತ್ತುಮಾಡಿದಾರೆ.

*****

ಕಳೆದ ಭಾನುವಾರ ರಾತ್ರಿ ಕಲ್ಕತ್ತಾ ಪಟ್ಟಣದಲ್ಲಿ ಒಂದು ಭಯಂಕರವಾದ ಕೊಲೆ ನಡೆಯಿತು. ಸುಂದರವಾದ ಒಬ್ಬ ಹಿಂದೂ ವಿಧವೆಯು ಒಬ್ಬಳೇ ಒಂದು ಮನೆಯಲ್ಲಿ ವಾಸಮಾಡಿಕೊಂಡಿದ್ದಳು. ಆಕೆಯ ಹತ್ತಿರ ಲಕ್ಷಾಂತ್ರ ರೂಪಾಯಿನ ನಗನಾಣ್ಯಗಳಿದ್ದುವು. ಕೆಲವು ಅಣ್ಣಾವಟಿಗಾರರು ಅವಳನ್ನು ವಶಪಡಿಸಿಕೊಳ್ಳಬೇಕೆಂದು ನಾನಾ ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲ. ಕಡೆಗೆ ಆ ದಿನ ಅವಳು ಮಲಗಿದ್ದಾಗ ಮುಗ್ಗಿ ಬಾಯಿಗೆ ಬಟ್ಟೆ ತುರುಕಿ ಅನಾಮತ್ತಾಗಿ ಅವಳನ್ನು ಮನೆಯಿಂದ ಎರಡು ಮೈಲಿ ದೂರ ಹೊತ್ತುಕೊಂಡು ಹೋಗಿ ಚನ್ನಾಗಿ ಹೊಡೆದು ಗಿಡದ ಕೆಳಗೆ ಹಾಕಿಬಂದು ಅವಳ ನಗನಾಣ್ಯಗಳನ್ನೆಲ್ಲಾ ಅಪಹರಿಸಿದರು. ಈಚೆಗೆ ಈ ದುಷ್ಟರನ್ನು ಪೋಲೀಸಿನವರು ಪತ್ತೆ ಮಾಡಿ ಹಿಡಿದಿರುವುದಾಗಿ ತಿಳಿದುಬಂದಿದೆ.

*****

ಪೂನಾ ಪಟ್ಟಣದ ಮ್ಯುನಿಸಿಪಲ ಕಮಿಷನರುಗಳಿಗೂ ಅಲ್ಲಿನ ಆರೋಗ್ಯ ವಿಚಾರವನ್ನು ನೋಡಿಕೊಳ್ಳುವ ಸ್ಯಾನಿಟರಿ ಕಮಿಟಿಯ ಪ್ರೆಸಿಡೆಂಟರಾದ ಡಾಕ್ಟರ್ ಹೆಂಡ್ರರ್ಸರವರಿಗೂ ಮನಸ್ತಾಪ ಉಂಟಾಗಿರುವಂತೆ ಕಾಣುತ್ತದೆ ಮಿ॥ ಹೆಂಡ್ರರ್ಸನವರು ಕಮಿಟಿಯ ಮೀಟಿಂಗಿಗೆ ಹೋದರೆ ಮೆಂಬರುಗಳೇ ಹಾಜರಾಗಿರುವುದಿಲ್ಲವೆಂತಲೂ ತಾವು ಮಾತ್ರ ಮೂರು ಮೈಲಿ ದೂರ ಅಲೆಕೊಂಡು ಬರುವುದು ವ್ಯರ್ಥವೆಂತಲೂ ಹೇಳಿ ಪ್ರೆಸಿಡೆಂಟ್ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಮ್ಯುನಿಸಿಪಲ್ ಮೀಟಿಂಗಿನಲ್ಲಿ ಈ ವಿಷಯವನ್ನು ಮೆಂಬರುಗಳು ಚರ್ಚಿಸಿದಾಗ ಪ್ರೆಸಿಡೆಂಟ್ ಮಿ॥ ಗೋಖಲೆ ಯವರು ಆ ಸಾಹೇಬರ ಮಾತು ನಿಜವಲ್ಲವೆಂದು ಹೇಳಿದರು. ಇವರಿವರ ಜಿಜ್ಞಾಸವಲ್ಲಿ ಪೂನಾ ಪಟ್ಟಣದ ಪ್ರಜೆಗಳ ಆರೋಗ್ಯವು ಕೆಡದಿದ್ದರೆ ಒಳ್ಳೇದು

*****

ಕಾಂಗ್ರಾ ಕಣಿವೆಯ ರಿಲೀಫ್ ಫಂಡಿಗೆ ಈ ವಾರ ಭಾರೀ ಮೊಬಲಗನ್ನು ಚಂದಾ ಕಳುಹಿಸಿರುವವರ್ಯಾರೆಂದರೆ—ಪಾಟಿಯಾಲಾ ಸಂಸ್ಥಾನದ ಮಹಾರಾಜರವರು (೨ನೆ ಸಲ) ೧೫,೦೦೦ ರೂ ಕೋಟಾ ಸಂಸ್ಥಾನದ ಮಹಾರಾಜರವರು ೨,೦೦೦ ರೂ., ಕಿಂಗ್ ಕಂಪನಿಯ ಮೂಲಕ (೫ನೆ ಸಲ) ೨೬,೦೦೦ ರೂ, ಬೆಂಗಾಳಾ ಬ್ಯಾಂಕಿನ ಮೂಲಕ ೯,೦೦೦ ರೂ, ಅಮೃತಸಾರದ ಡೆಪ್ಟಿ ಕಮಿಷನರ ಮೂಲಕ (೪ನೆ ಸಲ) ೩,೪೦೦ ರೂ, ರೋಟಾಕಿನ ಡೆಪ್ಟಿ ಕಮಿಷನರ ಹಸ್ತ ೪,೭೦೦ ರೂ, ಪೆಷಾವರಿನ ಡೆಪ್ಟಿಕಮಿಷನರ ಹಸ್ತ ೪,೯೦೦ ಲಂಡನ್ ಪಟ್ಟಣದ ಗ್ರಿಂಡ್ಲೆ ಕಂಪನಿಯವರ ಮೂಲಕ ೧೮,೬೦೦ ರೂ, ಬರ್ಮಾದಿಂದ ೬,೦೦೦ ರೂ, ಲಯಲ್‌ಪುರದಿಂದ ೫,೮೦೦ ರೂ, ಸಿಂಧುದೇಶದಿಂದ ೭,೦೦೦ ರೂ, ಬೆಂಗಾಳ ವ್ಯಾಪಾರ ಸಂಘದಿಂದ (೪ನೆಸಲ) ೩,೦೦೦ ರೂ, ಮಾರ್ವಾರ್ ಸಂಸ್ಥಾನದಿಂದ ೪,೦೦೦ ರೂ, ಇದಕ್ಕೆ ಹಿಂದೆ ಈ ಫಂಡಿನಲ್ಲಿ ಕೂಡಿದ್ದುದು ೬,೩೭,೬೦೦ ರೂ, ಎಲ್ಲಾ ಮೊಬಲಗು ೮,೬೮,೪೫೬ ರೂಪಾಯಿಗಳಾಗಿವೆ

ವಿಶೇಷ ವರ್ತಮಾನಗಳು.

ಅಲ್ಬೇನಿಯಾಕ್ಕೆ ಸೇರಿದ ಸ್ಕುಟಾರಿಯಲ್ಲಿ ಭೂಕಂಪ ಉಂಟಾಗಿ ಸುಮಾರು ೭೦೦ ಮನೆಗಳು ನೆಲಸಮವಾದವು. ೨೦೦ ಜನರು ಮೃತಪಟ್ಟರು.

*****

ರಷ್ಯಾ ಚಕ್ರವರ್ತಿಯವರ ಕಡೆಯಿಂದ ಪೊಕೆಂಟಲಾಫ್ ಎಂಬೊಬ್ಬ ಮಂತ್ರಿಯು ಬಹುಮಾನಗಳನ್ನು ತೆಗೆದುಕೊಂಡು ಬಂದು ಟಿಬೆಟ್ ರಾಜ್ಯದ ಮಾಜಿ ಗುರುವಾದ ದಳಾಯಿ ಲಾಮನಿಗೆ ಕಳೆದ ವಾರ ಒಪ್ಪಿಸಿರುತ್ತಾನೆಂದು ತಂತೀ ವರ್ತಮಾನ ಬಂದಿದೆ.

*****

ಒಬ್ಬಾನೊಬ್ಬ ಹಿಂದು ಸ್ತ್ರೀಯು ವಿಷ್ಣು ಭಕ್ತಳೆಂದು ಹೇಳಿಕೊಳ್ಳುತ್ತಾ ಯೂರೋಪ್ ಖಂಡದಲ್ಲಿ ಸಂಚಾರ ಮಾಡುತ್ತಿದ್ದಾಳೆ ಈಕೆಯ ಬಳಿ ಚಿನ್ನದ ಕೊಂಬುಗಳುಳ್ಳ ಒಂದು ಹಸುವು ಇರುವುದು ಇದನ್ನು ಜೊತೆಯಲ್ಲಿ ಕರೆದುಕೊಂಡು ವಿಲಾಯಿತಿಗೆ ಹೋಗಿ ಎಲ್ಲರಿಗೂ ತೋರಿಸುವವಳಾಗಿದ್ದಾಳೆ.

*****

ಬೊಂಬಾಯಿನಿಂದ ಬರೋಡೆಗೆ ಹಾಕಿರುವ ರೈಲ್ ರಸ್ತೆಯನ್ನು ಇಂಡಿಯಾ ಗವರ್ನಮೆಂಟಿನವರು ಕಂಪನಿಯವರಿಂದ ಕೊಂಡುಕೊಳ್ಳುವುದಕ್ಕೆ ವಿಲಾಯಿತಿಯಲ್ಲಿ ೩೦ ಕೋಟಿ ರೂಪಾಯಿ ಸಾಲ ಮಾಡುವರು. ಈ ರೀತಿ ಸಾಲ ಮಾಡಬಹುದೆಂದು ವಿಲಾಯಿತಿ ಪಾರ್ಲಿಮೆಂಟಿನವರು ಅವರಿಗೆ ಅಪ್ಪಣೆಕೊಟ್ಟರು

*****

ಹಾಲೆಂಡ್ ರಾಜ್ಯದ ರಾಜಧಾನಿಯಾದ ಕೋಪನ್ ಹೇಗನ್ ಪಟ್ಟಣದ ಬಳಿ ಸಮುದ್ರದಲ್ಲಿ ಇಂಗ್ಲಿಷರ ಹಡಗು ಹೋಗುತ್ತಿರುವಾಗ ಅದು ನರ್ವರ ಒಂದು ಹಡಗಿಗೆ ಬಡಿದು ಆ ಹಡಗನ್ನು ಕಳೆದವಾರ ಮುಳುಗಿಸಿತು ಅದರಲ್ಲಿದ್ದವರ ಪೈಕಿ ೨೨ ಮಂದಿ ಸಮುದ್ರದ ಪಾಲಾದರು ; ೨೬ ಮಂದಿ ಬದುಕಿದರು.

*****

ರಷ್ಯಾ ಜಪಾನವರಿಗೆ ಆದ ಕಡೇ ನಾವೆಯ ಯುದ್ಧದಲ್ಲಿ ಜಪಾನವರು ರಷ್ಯಾದವರ ಹಡಗುಗಳಲ್ಲಿ ಕೆಲವನ್ನು ಸಮುದ್ರದೊಳಕ್ಕೆ ಮುಳುಗಿಸಿ ಇನ್ನು ಕೆಲವನ್ನು ಅವರಿಂದ ಕಿತ್ತುಕೊಂಡಿರುತ್ತಾರಷ್ಟೆ. ಈ ಹಡಗುಗಳ ಕ್ರಯವು ಸುಮಾರು ೨೩ ಕೋಟಿಯೂ ೬೫ ಲಕ್ಷ ರೂಪಾಯಿಗಳೆಂದು ಅಂದಾಜು ಕಟ್ಟುತ್ತಾರೆ.

*****

ದಕ್ಷಿಣ ಆಫ್ರಿಕಾಕ್ಕೆ ಸೇರಿದ ಮಾರೆಂಗೋ ಎಂಬ ದೇಶೀಯ ದೊರೆಯು ಜರ್ಮನಿಯವರ ಮೇಲೆ ಕತ್ತಿಕಟ್ಟಿ ಅವರ ಸೈನಿಕರನ್ನು ಒಂದು ಯುದ್ಧದಲ್ಲಿ ಸೋಲಿಸಿ ಅವರ ಬಳಿ ಇದ್ದ ಮದ್ದುಗುಂಡನ್ನೂ ಆಹಾರ ಮುಂತಾದ ಪದಾರ್ಥಗಳನ್ನೂ ಕಿತ್ತುಕೊಂಡನು. ಜರ್ಮನಿಯವರ ಕಡೆ ಬಹಳ ನಷ್ಟವಾಯಿತೆಂದು ತಿಳಿಯುತ್ತದೆ.

ಅಮೇರಿಕ ಸಂಸ್ಥಾನದ ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರು ತಮ್ಮ ಸಂಸ್ಥಾನಕ್ಕೆ ವ್ಯಾಪಾರಾರ್ಥವಾಗಾಗಲಿ ದೇಶಾಟನೆಗಾಗಲಿ ಬರತಕ್ಕ ಚೀಣಾಯವರನ್ನು ಪ್ರಜೆಗಳೆಲ್ಲಾ ವಿಶೇಷ ಮರ್ಯಾದೆಯೊಡನೆ ಕಾಣಬೇಕೆಂತಲೂ ಅವರಿಗೆ ಯಾವ ತರವಾದ ಕಷ್ಟನಷ್ಟಗಳಾದರೂ ಸಂಭವಿಸಿದಲ್ಲಿ ಆ ಪ್ರಾಂತ್ಯದ ಅಧಿಕಾರಿಗಳನ್ನು ತಕ್ಷಣವೇ ಕೆಲಸದಿಂದ ವಜಾ ಮಾಡುತ್ತೇವೆಂತಲೂ ಇಸ್ತಿಹಾರು ಕೊಟ್ಟಿದ್ದಾರೆ

*****

ಜರ್ಮನಿ ಚಕ್ರವರ್ತಿಯವರು ಬ್ರಾಂಡರ್ಬರ್ಗಿನ ಒಬ್ಬ ಸ್ತ್ರೀಗೆ ಒಂದು ಮೆಡಲ್ ಎಂಬ ಚಿನ್ನದ ಬಿಲ್ಲೆಯನ್ನು ಕಳುಹಿಸಿರುತ್ತಾರೆ. ಆಕೆಗೆ ಇದುವರೆಗೆ ಮೂರಾವರ್ತಿ ಹೆರಿಗೆಯಾಯಿತು. ಮೂರು ಸಲವೂ ಆಕೆ ಎರಡೆರಡು ಮಕ್ಕಳನ್ನು ಹೆತ್ತಿದ್ದಾಳೆ. ಈಕೆಯ ತಾಯಿಯಾದರೋ ನಾಲ್ಕಾವರ್ತಿ ಬಸುರಾಗಿ ನಾಲ್ಕಾವರ್ತಿಯೂ ಅವಳಿ ಮಕ್ಕಳನ್ನೇ ಹಡೆದಳು. ಇಂಥಾ ಸ್ತ್ರೀಯರು ರಾಜ್ಯದಲ್ಲಿದ್ದರೆ ಪ್ರಜಾ ಸಂಖ್ಯೆಯು ಬೇಗ ಹೆಚ್ಚೀತು

*****

ತುರ್ಕಿ ಸುಲ್ತಾನರವರು ನಾಯಿಗಳನ್ನು ಸಾಕಿ ಅವುಗಳನ್ನೇ ತಮ್ಮ ಅಂಗರಕ್ಷಕರಾಗಿ (ಬಾಡಿಗಾರ್ಡ್) ಮಾಡಿಕೊಳ್ಳಬೇಕೆಂದಿರುತ್ತಾರೆ ಪ್ರಪಂಚದ ಸ್ತ್ರೀ ಪುರುಷರಲ್ಲಿ ಸುಲ್ತಾನರಿಗೆ ನಂಬಿಕೆ ತಪ್ಪಿಹೋಯಿತು ಇವರು ಮಸಲತ್ತು ಫಿತೂರಿಗಳನ್ನು ಮಾಡಿ ತಮ್ಮನ್ನು ಕೊಲ್ಲುತ್ತಾರೆಂದು ಅವರು ತಿಳಿದುಕೊಂಡಿದ್ದಾರೆ ಆದ್ದರಿಂದ ಐರ್ಲಾಂಡಿನಲ್ಲಿ ನಾಯಿಗಳನ್ನು ಸಾಕಿ ಬೆಳೆಸುವ ಒಬ್ಬ ಪ್ರಸಿದ್ಧ ವರ್ತಕನಿಂದ ಜನರನ್ನು ಗುರ್ತು ಹಿಡಿದು ಎಳೆದಾಡುವಂಥಾ ನಾಯಿಗಳನ್ನು ಕೊಂಡು ತರಿಸಬೇಕೆಂದು ಹುಕುಂ ಕೊಟ್ಟಿರುವರು ಇವುಗಳನ್ನು ತಮ್ಮ ಅರಮನೆಯಲ್ಲೆಲ್ಲಾ ಉಸ್ತುವಾರಿ ಮಾಡುವುದಕ್ಕೆ ಇರಿಸಿಕೊಳ್ಳುವರು.

*****

ಯೂರೋಪ್ ಖಂಡದ ಕೆಲವು ರಾಜ್ಯಗಳಲ್ಲಿ ಬಹು ಜನರು ಸೇರಿ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಈ ಸಂಘದ ಮೆಂಬರುಗಳೆಲ್ಲಾ ತುಂಬಾ ಬಡತನದಲ್ಲೇ ಜೀವನ ನಡಿಸಿಕೊಂಡುಹೋಗುವರು ಇವರು ಮನೆಗಳನ್ನು ಕಟ್ಟಿಕೊಂಡು ವಾಸಮಾಡುವುದಿಲ್ಲ ಅನೇಕ ಉಡಿಗೆಗಳನ್ನು ತೊಡುವುದಿಲ್ಲ. ಕಂಬಳಿ ಬಟ್ಟೆಯ ಒಂದೇ ಒಂದು ನಿಲುವಂಗಿಯನ್ನು ಹಾಕಿಕೊಳ್ಳುವರು ಕೂದಲನ್ನು ಕತ್ತರಿಸದೆ ಹಾಗೇ ಬಿಟ್ಟು ಬೆಳೆಸುತ್ತಾರೆ ಕೂದಲು ಗಡ್ಡ ವಿನಾ ಈ ಮೊದಲಾದವೇ ತಮ್ಮ ದೇಹದ ಕಾಪನ್ನು ಕಾಪಾಡಬಲ್ಲವೆಂದು ತಿಳಿದಿರುವರು. ಜೋಡು ಹಾಕಿಕೊಳ್ಳದೆ ಬರಿ ಕಾಲಿನಲ್ಲೇ ನಡೆದು ಸದಾ ಪಾದಗಳೆಲ್ಲಾ ಕರ್ರಗಿರುತ್ತವೆ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಈ ಸಂಘದವರು ಯಾವ ಪ್ರಾಣಿಯನ್ನೂ ಕೊಲ್ಲುವುದಿಲ್ಲ ಬರೀ ಕಾಯಿಪಲ್ಯ ಹಣ್ಣುಹಂಪಲು ಗೆಡ್ಡೆಗೆಣಸುಗಳನ್ನೇ ತಿಂದು ಜೀವಿಸುವರು. ಬಿಸಿ ನೀರು ಅವರಿಗೆ ಕಂಡರಾಗದು. ನದಿಗಳಲ್ಲಿ ಹರಿಯುವ ನೀರಿನಲ್ಲೇ ಅವರು ಸ್ನಾನ ಮಾಡುವರು

*****

ಜಪಾನ್ ರಾಜಕುಮಾರರಾದ ಅರಿಸಗಾವಾಸ್ ಯವರು ಪತ್ನಿ ಪರಿವಾರ ಸಹಿತ ಕಳೆದ ೨೪ನೆ ತಾರೀಖಿನ ದಿನ ಲಂಡನ್‌ಪಟ್ಟಣವನ್ನು ತಲುಪಿದರು. ಲಂಡನ್‌ಪಟ್ಟಣದಲ್ಲಿರುವ ಜಪಾನ್ ರಾಯಭಾರಿ ಬ್ಯಾರನ್ ಹಯಾಷಿ ಯವರೂ ಇತರ ಅಧಿಕಾರಿಗಳೂ ಇಂಗ್ಲಿಷ್ ಗವರ್ನಮೆಂಟಿನ ಸೈನ್ಯಾಧಿಪತಿಗಳಾದ ಸರ್ ನೆವಿಲ್ಲ ಲಿಟ್ಲ್‌ಟನ್ರವರು, ಸರ್ ವಿಲ್ಯಂ ನಿಕಾಲ್ಸನರವರು, ಮೊದಲಾದವರೆಲ್ಲಾ ವಿಕ್ಟೋರಿಯಾ ಸ್ಟೇಷನಿನಲ್ಲಿ ಕಾದಿದ್ದರು. ಸಮಸ್ತ ಮರ್ಯಾದೆಗಳೂ ಸ್ಟೇಷನಿಗೆ ಬಂದಿದ್ದವು ಪ್ರಿನ್ಸ್ ಆಫ್ ವೇಲ್ಸರವರು ಪತ್ನಿ ಸಹಿತ ರಾಜಕುಮಾರರನ್ನು ಎದುರುಗೊಂಡರು ರಾಜಕುಮಾರರು ಸ್ಟೇಷನಿನಿಂದ ಸಾರೋಟಿನಲ್ಲಿ ಬಕಿಂಗ್ಹಾಂ ಅರಮನೆಗೆ ದಯಮಾಡಿ, ಎಡ್ವರ್ಡ್ ಸಾರ್ವಭೌಮರವರ ಮತ್ತು ಚಕ್ರವರ್ತಿನಿಯವರ ಪಕ್ಕದಲ್ಲಿ ಕುಳಿತು ಫಲಾಹಾರಾದಿಗಳನ್ನು ತೀರಿಸಿಕೊಂಡು, ಯಾರ್ಕ್ ಹೌಸ್ ಎಂಬ ರಾಜಭವನಕ್ಕೆ ಹೋಗಿ ಇಳುಕೊಂಡರು. ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಆ ರಾಜಭವನಕ್ಕೆ ದಯಮಾಡಿ, ಜಪಾನ್ ರಾಜಕುಮಾರರಿಗೆ ಮರು ಭೇಟಿಯನ್ನು ಕೊಟ್ಟು, ವಾಪಸ್ಸು ಬಂದರು. ಮರು ದಿನ ರಾಜಕುಮಾರರು ಲಂಡನ್‌ಪಟ್ಟಣದ ದೊಡ್ಡ ಮನುಷ್ಯರ ಮನೆಗಳಿಗೆ ದಯಮಾಡಿದ್ದರು. ಅನಂತರ ಅವರು ಸಾರ್ವಭೌಮರವರ ಪಙ್ಕ್ತಿಯಲ್ಲಿ ಕುಳಿತು ಭೋಜನವನ್ನು ಮಾಡಿದರು ಮಾರನೇ ದಿನ ವಿಲಾಯಿತಿಯ ದೊರೆಯು ಅತಿಥಿರಾಜರಿಗೆ ದೊಡ್ಡ ಔತಣ ಮಾಡಿದರು. ವಿಲಾಯಿತಿ ರಾಜ್ಯದ ಪ್ರಧಾನ ಮಂತ್ರಿಗಳೆಲ್ಲಾ ಸೇರಿ ಭೋಜನಮಾಡಿದರು. ಉಪನ್ಯಾಸಗಳೇನೂ ನಡೆಯಲಿಲ್ಲ. ರಾಜಕುಮಾರರು ಈ ಸತ್ಕಾರವನ್ನು ನೋಡಿ ತುಂಬಾ ಸಂತೋಷಪಟ್ಟು ದೊರೆಯವರನ್ನೂ ಪ್ರಜೆಗಳನ್ನೂ ಬಹಳವಾಗಿ ಕೊಂಡಾಡಿದಾರ ಇದರಿಂದ ವಿಲಾಯಿತಿ ರಾಜ್ಯಕ್ಕೂ ಜಪಾನ್ ರಾಜ್ಯಕ್ಕೂ ಸ್ನೇಹವು ವಿಶೇಷವಾಗಿ ಹೆಚ್ಚುತಿನ್ನುವುದಕ್ಕೆ ಸಂಶಯವಿಲ್ಲ.

ನಮ್ಮ ಪುಸ್ತಕಭಂಡಾರವು.

“ಮಿಸ್ಸೆಸ್ ಅನ್ನಿ ಬೆಸೆಂಟ್.”

ಸ್ವಮತವಾದ ಕ್ರೈಸ್ತ ಮತವನ್ನು ತ್ಯಜಿಸಿ ಕಾಲಾನುಗುಣ್ಯವಾಗಿ ಅನೇಕ ಮತಗಳನ್ನವಲಂಬಿಸಿ ಕೊನೆಗೆ ಹಿಂದು ಎಂಬ ವೇಷದಿಂದ ಬೌದ್ಧಮತ ಸಾರವಾದ ನಾಸ್ತಿಕಾಭಿಪ್ರಾಯವನ್ನು ತನ್ನ ವಾಗ್ಝರಿಯಿಂದ ಹರಡುವ, ಸಮಸ್ತ ಭರತಖಂಡದಲ್ಲಿಯೂ ಪ್ರಸಿದ್ಧಳಾದ ಮಿಸ್ಸೆಸ್ ಅನ್ನಿ ಬೆಸೆಂಟ್ ಎಂಬಾಕೆಯ ಚರಿತ್ರೆಯನ್ನು

ಕೇಳಿ ಆಕೆಯು ವಾಗ್ಝರಿಗೆ ಮರುಳಾಗಿ ಕೆಟ್ಟುಹೋಗುವವರ ಪರ ಹಿತಕ್ಕೋಸ್ಕರ ಮಂಗಳೂರು ಬಾಸೆಲ್ ಮಿಶನ್ ಮುದ್ರಾಲಯದವರು ಈ ಸಣ್ಣ ಪುಸ್ತಕ ಬರೆದು ಅದೇ ಹೆಸರುಳ್ಳ ಡಿಪೋವಿನಲ್ಲಿ ೬ ಪೈ ಬೆಲೆಗೆ ಮಾರುವರು. ಇದರಲ್ಲಿ ಈಕೆಯ ಗುರುವಾದ ಮದಾಮ್ ಬ್ಲವಟ್ಸ್ಕಿಯೂ ಸಹಾಯಕರಾದ ಕರ್ನಲ್ ಒಲ್ಕಟ್ ಇವರೇ ಮೊದಲಾದವರ ಮೋಸಕೃತ್ಯಗಳೂ ಚೆನ್ನಾಗಿ ವಿವರಿಸಿರುವುದೂ ಅಲ್ಲದೆ ಈಕೆಯು ಬೋಧಿಸತಕ್ಕ ಬೋಧನೆಯ ವಿಷಯವಾಗಿ ವ್ಯಾಖ್ಯಾನವು ಬರೆಯಲ್ಪಟ್ಟಿರುವುದು. ಸ್ವಮತವನ್ನು ಪ್ರತಿಪಾದಿಸುವ ಶಾಸ್ತ್ರಗಳ ಗಂಧ ಲೇಶವೂ ಕೂಡ ಅರಿಯದ ಆಂಗ್ಲೇಯ ವಿದ್ಯಾಪರಿಚಯವುಳ್ಳ ಹಿಂದುಗಳಿಗೆ ಬಹಳ ಎಚ್ಚರಿಕೆಯನ್ನು ಕೊಡತಕ್ಕ ಪುಸ್ತಕವು ಇದಾಗಿದೆ

"ಸ್ವಯಂ ಶಿಕ್ಷಕ ಸಂಸ್ಕೃತ ಭಾಷಾ ಪ್ರಥಮ ಪುಸ್ತಕಂ"

ಇದು ಸಾಮವೇದ ಭಾಷ್ಯಕಾರರಾದ ಮ॥ ತುಲಸಿರಾಮಸ್ವಾಮಿಯವರಿಂದ ರಚಿಸಲ್ಪಟ್ಟದ್ದಾಗಿ ಹೈ ಕೋರ್ಟು ವಕೀಲ್ ಮ॥ ಸುಬ್ರಾಮ್ಯಶೇಷಗಿರಿ ಹಾಳಕಾರ, ಬಿ. ಎ., ಎಲ್ ಎಲ್ ಬಿ. ಯವರಿಂದ ಕನ್ನಡಕ್ಕೆ ಭಾಷಾಂತರಿಸಲ್ಪಟ್ಟಿರುವದು. ಪುಸ್ತಕವು ಹದಿನಾಲ್ಕು ಪಾಠಗಳನ್ನೊಳಗೊಂಡಿದೆ. ಪ್ರತಿ ಪಾಠದಲ್ಲಿಯೂ ಸಂಸ್ಕೃತ ಶಬ್ದಗಳಿಗೆ ಕನ್ನಡ ಅರ್ಥಗಳೂ ಹಿಂದಿನ ಪಾಠಗಳ ಸಂಸ್ಕೃತ ಶಬ್ದಗಳ ಸಹಾಯದಿಂದ ಸಂಸ್ಕೃತಕ್ಕೆ ಪರಿವರ್ತನೆ ಮಾಡಬಹುದಾದ ಸಣ್ಣ ಸಣ್ಣ ಕನ್ನಡ ವಾಕ್ಯಗಳೂ ಇವೆ. ಈ ಪಾಠಗಳನ್ನು ಕಲಿಯುವದರಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರ ಸಹಾಯವು ಅಷ್ಟು ಅಗತ್ಯವಾದದ್ದೆಂದು ತೋರುವದಿಲ್ಲ ಇದರ ಕ್ರಯ ಒಂದು ಆಣೆ. ಪುಸ್ತಕವು ಗ್ರಂಥಕರ್ತರಲ್ಲಿಯೂ ಕಾರ್ವಾರ್ ಜಿಲ್ಲೆಗೆ ಸೇರಿದ ಕುಂಪ್ಟದಲ್ಲಿರುವ ದಿ ಸ್ಟಾರ್ ಆಫ್ ಕೆನರ ಪ್ರೆಸ್ಸಿನಲ್ಲಿಯೂ ದೊರೆಯುವದು

"ಸಂಯುಕ್ತ ಸಂಸ್ಥಾನದ ಮೊದಲನೇ ಅಧ್ಯಕ್ಷ
ಜಾರ್ಜ ವಾಷಿಂಗ್ಟನ್ನಿನ ಜೀವಚರಿತ್ರೆಯು."

ಪ್ರಪಂಚದ ಎಲ್ಲಾ ಭಾಗಗಳಲ್ಲಿ ಲೋಕೋನ್ನತಿಯನ್ನಪೇಕ್ಷಿಸುವವರು ಪ್ರಾಚೀನ ಮತ್ತು ಆಧುನಿಕ ಪ್ರಸಿದ್ಧ ಪುರುಷರುಗಳ ಗುಣಾವಗುಣಗಳನ್ನು ಕೊಂಡಾಡುವ ಜೀವಚರಿತ್ರೆಗಳನ್ನು ಬರೆದಿರುವರು ತಮ್ಮ ಗುಣಾವಗುಣಗಳನ್ನು ತೋರ್ಪಡಿಸುವುದಕ್ಕಾಗಿಯೇ ಈ ಜೀವಮಾನ ಚರಿತ್ರೆಗಳಲ್ಲಿ ಕೆಲವು ಆ ಮಹನೀಯರಿಂದಲೇ ರಚಿಸಲ್ಪಟ್ಟವಾಗಿರುವವು ಅವರ ವಿಷಯವಾಗಿ ಕಂಡು ಕೇಳಿದ ಅಂಶಗಳನ್ನು ತಿಳಿಸತಕ್ಕ ಮತ್ತೆ ಕೆಲವು ಆಯಾ ಪ್ರಸಿದ್ಧ ಪುರುಷರುಗಳ ಕಾಲಗಳಲ್ಲಿ ಜೀವಂತರಾಗಿದ್ದ ಇತರರಿಂದಾಗಲಿ, ಅನಂತರ ಬಂದವರಿಂದಾಗಲಿ ಬರೆಯಲ್ಪಟ್ಟಿರುವವು ಈ ಪುರುಷರ ಗುಣಾವಗುಣಗಳಿಂದ ಲಭ್ಯವಾದ ಕೀರ್ತಿಯನ್ನೂ ಅಪಜಯವನ್ನೂ ತೋರ್ಪಡಿಸಿ ಅವಗುಣಗಳನ್ನು ತ್ಯಜಿಸಿ ಸುಗುಣಾವಲಂಬಿಗಳಾಗಿ ಅವರಂತೆಯೇ ಇತರರೂ ಕೂಡ ಆಚಂದ್ರಾರ್ಕವಾದ ಯಶಸ್ಸನ್ನೂ ಸುಖವನ್ನೂ ಪಡೆಯಲೆಂಬುವದೇ ಈ ಚರಿತ್ರೆಗಳ ಮುಖ್ಯೋದ್ದೇಶವು. ಸುಗುಣಚರಿತರು ಎಷ್ಟು ದುರವಸ್ಥೆಗೆ ಬಂದರೂ ತಮ್ಮ ಒಳ್ಳೇ ನಡತೆಯನ್ನು ಬಿಡರು. ಕಷ್ಟಸುಖಗಳೆಷ್ಟು ಬಂದರೂ ಆ ಗುಣಗಳು ಅದಲುಬದಲಾಗದೆ ಶಾಶ್ವತವಾಗಿ ನೆಲೆಗೊಂಡಿರುವವು. ಇಂಥಾ ಮಹನೀಯರ ಜೀವಚರಿತ್ರೆಗಳಲ್ಲೊಂದಾದ ಅಮೇರಿಕದ ಸಂಯುಕ್ತ ಸಂಸ್ಥಾನ ಮೊದಲನೇ ಪ್ರೆಸಿಡೆಂಟ್ ಆಗಿದ್ದ ಜಾರ್ಜ ವಾಷಿಂಗ್ಟನ್ನಿನ ಚರಿತ್ರೆಯನ್ನು ಮ॥ ರಾ॥ ಎಂ. ಆರ್. ಅಣ್ಣಾಜಿರಾವ್ ಎಂಬುವರು ಒಂದು ಸಣ್ಣ ಪುಸ್ತಕ ರೂಪವಾಗಿ ಕನ್ನಡಿಗರ ಉಪಯೋಗಕ್ಕಾಗಿ ಬರೆದಿರುವರು ಪುಸ್ತಕವು ಮಂಗಳೂರು ಬಾಸೆಲ್ ಮಿಶನ್ ಮುದ್ರಾಲಯದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟು ಅದೇ ಹೆಸರಿನ ಡಿಪೋವಿನಲ್ಲಿ ಆರು ಪೈ ಬೆಲೆಗೆ ದೊರೆಯುವದು. ಈ ಪುಸ್ತಕವು ೫ ಅಧ್ಯಾಯಗಳನ್ನೊಳಗೊಂಡಿದೆ ಮೊದಲನೇ ಅಧ್ಯಾಯದಲ್ಲಿ ಜಾರ್ಜ ವಾಷಿಂಗ್ಟನನು ಅಧ್ಯಕ್ಷನಾಗಿದ್ದ ಪ್ರದೇಶವಾದ ಅಮೇರಿಕ ಖಂಡವು ಯಾವದು ? ಅದರ ವಿಸ್ತೀರ್ಣವೇನು ? ಜನಾಂಗದ ಪೂರ್ವ ಚರಿತ್ರೆ ಎಂಥಾದ್ದು ? ಅವರ ರಾಜ್ಯಾಡಳಿತಕ್ರಮವು ಹೇಗೆಂಬುದೂ, ಎರಡನೇದರಲ್ಲಿ ವಾಷಿಂಗ್ಟನ್ನಿನ ಬಾಲ್ಯವೂ ಆತನ ವಿದ್ಯಾಭ್ಯಾಸವೂ, ಮೂರನೇದರಲ್ಲಿ ಆತನ ಸೇನಾಧಿಪತ್ಯ, ಇವನಿಗೂ ಫ್ರೆಂಚರಿಗೂ ನಡೆದ ಯುದ್ಧವಿಚಾರ, ಆತನ ವಿವಾಹಗಳೂ, ನಾಲ್ಕನೇದರಲ್ಲಿ ಮಾತೃ ದೇಶವಾದ ಇಂಗ್ಲಾಂಡಿಗೂ ಸಂಯುಕ್ತ ಸಂಸ್ಥಾನಕ್ಕೂ ಸಂಭವಿಸಿದ ವಿರೋಧ, ಅದರಿಂದುಂಟಾದ ವಾಷಿಂಗ್ಟನ್ನಿನ ಕಲಹ, ಇವನ ಪುತ್ರಶೋಕ, ವಾಷಿಂಗ್ಟನನು ಅಧ್ಯಕ್ಷ ಪದವಿಯನ್ನು ಸ್ವೀಕರಿಸುವಂತೆ ಜನಗಳ ಪ್ರಾರ್ಥನೆ, ಕೊನೆಯದರಲ್ಲಿ ಆತನ ಅಧ್ಯಕ್ಷತೆ, ರಾಜ್ಯದ ತಿದ್ದುಪಾಟು, ಸಭಿಕರ ಮತ್ತು ವಾಷಿಂಗ್ಟನ್ನಿನ ಭಿನ್ನಾಭಿಪ್ರಾಯಗಳು, ಈತನು ಏಕಾಂತನಾದದ್ದು, ಆತನ ಮರಣ, ಇವೇ ಮೊದಲಾದವೂ ಕೇವಲ ಬಾಲರಿಗೂ ಬೋಧೆಯಾಗುವಂತೆ ಸುಲಭ ಶೈಲಿಯಲ್ಲಿ ವಿವರಿಸಲ್ಪಟ್ಟಿವೆ

ಪ್ರಾಂತಿಕ ವರ್ತಮಾನಗಳು.

ಬೇಲೂರು.—ಶಿವಮೊಗ್ಗೆಯಿಂದ ದೇವರ ದರುಶನಕ್ಕಾಗಿ ಬಂದಿದ್ದ ಯಾತ್ರಾರ್ಥಿಗಳ ಪೈಕಿ ಕೆಲವರು ಈ ಊರು ಕೆರೆಗೆ ಸ್ನಾನಕ್ಕೆ ಹೋಗಿ ಕೆರೆಯಲ್ಲಿ ಸ್ನಾನ ಮಾಡುತ್ತಿರುವಾಗ್ಯೆ ಸದರಿ ಯಜಮಾನನು ಕಾಲುಜಾರಿ ಕೆರೆಯಲ್ಲಿ ಮುಳುಮುಳುಗಿ ಏಳುತ್ತಾ ಅಲ್ಲಿದ್ದ ಎಲ್ಲರಿಗೂ ಕೈಮುಗಿದು ಬೇಡಿಕೊಂಡರೂ ಯಾರೂ ಸಹಾಯ ಮಾಡದ್ದನ್ನು ಕೇಳಿ ಗಂಗೇಗೌಡಿ ಕೇಗವನಾಯ್ಕನೆಂಬುವನು ಓಡಿ ಹೋಗಿ ಧುಮುಕಿ ಸದರಿ ಮುಳುಗಿದ್ದ ಮನುಷ್ಯನನ್ನು ಅಮಾನತ್ತು ಎತ್ತಿಕೊಂಡು ಬಂದು ಅವನು ಕುಡಿದಿದ್ದ ನೀರನ್ನೆಲ್ಲಾ ಹೊರಡಿಸಿ ಹುಷಾರು ಮಾಡಿದನು. ಕೆರೆಯಲ್ಲಿ ಸ್ನಾನ ಮಾಡುವ ಬ್ರಾಹ್ಮಣ ಹೆಂಗಸರ ಮಧ್ಯೆ ಕೆಲವು ದುಷ್ಟರು ಇಳಿದುಕೊಂಡು ವಿಷು ಹಿಡಿಯುತ್ತಲೂ ಹೆಂಗಸರೇನಾದರೂ ನೀರು ಹಾರುವದೆಂದು ಹೇಳಿದರೆ ಅವರನ್ನು ಮನಸ್ವೀ ಬೈಯುತ್ತಲೂ, ಬೈಲಾಗಳ ಪ್ಲೆಲ್‌ಗಳ ಮೈತೊಳೆಯಲು ಲಕ್ಷ್ಯವಿಲ್ಲದೆ ಹೆಂಗಸರ ಮೇಲೆ ನುಗ್ಗಿಸುತ್ತಲೂ ಇರುವದು ದುಃಖಕರವಾಗಿದೆ ನಮ್ಮ ವೈಸ್ ಪ್ರೆಸಿಡೆಂಟರು ಈ ಕೆರೆಯ ಬಳಿ ದಕ್ಷನಾದ ಒಬ್ಬ ಪೊಲೀಸಿನವನನ್ನು ಏರ್ಪಡಿಸುವದರ ಮೂಲಕ ಈ ಹೆಂಗಸರ ಕಷ್ಟವನ್ನು ನಿವಾರಿಸ್ಯಾರೆಂದು ನಂಬಿರುವೆನು —ನಾವೆಗಳೆಲ್ಲರೂ ಪಟ್ಣದಲ್ಲಿರುವಾಗ್ಯೆ ಮನೆಗಳ ಬೀಗಗಳನ್ನು ಕಳ್ಳರು ಒಡೆದು ಸಿಕ್ಕಿದ್ದನ್ನು ದೋಚಿಕೊಂಡು ಹೋಗಿದ್ದರು ಇದು ಊರರ ಕೆಲಸವಲ್ಲವೆಂದು ಯೋಚಿಸಿ, ಕಳೆದ ೨೯ ನೆ ತಾ ರಾತ್ರಿ ನಮ್ಮ ಕೋಟೆಯಲ್ಲಿ ಜನಭರಿತವಾದ ಅಂಗಡೀ ಬೀದಿಯಲ್ಲಿ ಒಂದೇ ಸಾಲಿನಲ್ಲಿ ಜನಗಳು ಮನೆಯಲ್ಲಿ ಮಲಗಿರುವಾಗ್ಯೆ ಪಕ್ಕದ ಮಳಿಗೆಗಳ ಬೀಗವನ್ನು ಒಡೆದು ಹೀಗೆ ಐದು ಮಳಿಗೆಗಳ ಬೀಗ ಮುರಿದು ಬೆಲೆಬಾಳತಕ್ಕ ಐವಳಿ ಮುಂತಾದ ಸಾಮಾನುಗಳನ್ನು ದೋಚಿಕೊಂಡು ಹೋಗುವದರ ಮೂಲಕ ತಮ್ಮ ಪೌರುಷಪ್ರದರ್ಶನ ಮಾಡಿರುವರು ಇದರಲ್ಲಿ ಕಳೆದ ವರುಷವೂ ಬೇಮಾಜಯೆಂಬುವ ಮಾರ್ವಾಡಿಯವನಿಗೆ ಚೆನ್ನಾಗಿ ಉಣಿಸಿಯನವಾಯಿತು ಇದಲ್ಲದೆ ಪೇಟೆಯಲ್ಲಿಯೂ ನಿನ್ನೇ ರಾತ್ರಿ ಒಂದೇ ಸಾಲಿನಲ್ಲಿ ೪ ಮನೆಗಳ ಬೀಗ ಮುರಿದು ಸಿಕ್ಕಿದ್ದನ್ನು ದೋಚಿಕೊಂಡು ಹೋಗಿರುವರು ಈ ಊರಿನಲ್ಲಿ ಪರೇಲವೆಂಬ ಮೂರೆಲೆಯ ಆಟವು ಬಹು ಜೋರಾಗಿರುವದು ಇದಕ್ಕೆಲ್ಲಾ ಪೊಲೀಸಿನವರ ಅಲಕ್ಷ್ಯವೂ ಈ ತಾಲ್ಲೂಕಿನ ಅಧೀಸರುಗಳೆಲ್ಲಾ ಊರಿಗೆ ದೂರವಾಗಿ ಪಟ್ಣದಲ್ಲಿ ವಾಸಿಸುತ್ತಿರುವದೂ ಕಾರಣವೆಂದು ಪ್ರಜೆಗಳು ಗೊಣಗುಟ್ಟುತ್ತಿರುವದನ್ನು ನಮ್ಮ ಅಮಲ್ದಾರರು ನಿವಾರಿಸ್ಯಾರೆಂದು ನಂಬಿರುವೆನು

ಚನ್ನಪಟ್ಣ —ಸದ್ಯಕ್ಕೆ ಇಲ್ಲಿ ಮಳೆ ಇಲ್ಲ ರೈತಾಪಿ ಜನಗಳು ಭೂಮಿಯನ್ನು ಹಸನು ಮಾಡಿಕೊಂಡು ಮುಗಿಲನೇ ನೋಡುತ್ತಿದ್ದಾರೆ. ದಿನವೆಲ್ಲಾ ಮೋಡಗಳು ಮತ್ತು ನೆಲಮುತ್ತಿ ನಾಲ್ಕಾರು ಹನಿ ಉದುರಿ ಮಳೆ ಮಾಡುವಂತೆ ಪವನಗಳ ಧಾಟಿ ದಿನೇ ದಿನೇ ಜಡವಾಗುತ್ತಲೇ ಇದೆ ಗಾಳಿಯಿಂದ ಬೀಜಿಯು ಹೊಳೆಲ್ಲಾ ಅಂತರ್ಧಾನವಾಗಿ ಎಲ್ಲಿ ನೋಡಿದರೂ ಮಕ್ಕಳು ನೊಸವರು ಸಹಾ ಕಣ್ಣೀರಿನಿಂದ [illegible] ರುತ್ತಿರುವರು —ಕೆಲವು ದಿನಗಳ ಕೆಳಗೆ ಈ ಟವನಿಗೆ ಸೇರಿದ ಮಂಗಳವಾರಪೇಟೆಯ ಒಬ್ಬ ರೈತನ ತೋಟಕ್ಕೆ ದುಷ್ಟರು ಯಾರೋ ಕೈಹಾಕಿ ನೂರಾರು ಬಾಳೆ ಕಂದುಗಳನ್ನು ಕಡಿದುಬಿಟ್ಟರು ಅದಲ್ಲದೆ ತೆಂಗಿನ ಮರಗಳಲ್ಲಿನ ಕಾಯಿ ಹೀಚು ಹೊಂಬಾಳೆಗಳನ್ನು ಸಹಾ ತಕ್ಕರಿಸಿಹಾಕಿ ನೂರಾರು ರೂಪಾಯಿ ನಷ್ಟಪಡಿಸಿದ್ದಾರೆಂದು ವರ್ತಮಾನವಿದೆ.—ಇಲ್ಲಿ ರೈಲ್ವೆ ಸ್ಟೇಷನ್ನಿನಲ್ಲಿ ಪೋರ್ಟರು ಕೆಲಸದ ಟಿಬ್ಬ ಎಂಬಾತನು ಸ್ಟೇಷನ್ ಮಾಸ್ಟರ ಮೇಲೆ ಕೈಮಾಡಿ ವಿಚಾರಣೆಯಲ್ಲಿ ೧೦ ರೂಪಾಯಿ ಜುಲ್ಮಾನೆ ತಿಂಗಳ ಸಜಾಕ್ಕೂ ಗುರಿಯಾಗಿದ್ದಾನೆಂಬುದಾಗಿ ತಿಳಿದುಬರುತ್ತೆ.—ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವಕ್ಕಾಗಿ ಹೊರಟಿದ್ದ ರಾಜ ರಿಜಿಮೆಂಟಿನವರು ವಾಪಸ್ ಬಂದು ಕಳೆದ ವಾರ ಇಲ್ಲಿ ಮೊಕ್ಕಾಂ ಮಾಡಿದ್ದರು ಆ ದಿನ ಸಾಯಂಕಾಲ ನಮ್ಮ ಅಮಲ್ದಾರರೆ ಮೊದಲಾದ ಉದ್ಯೋಗಸ್ಥರೆಲ್ಲಾ ಇಲ್ಲಿನ ಮುನಿಸಿಪಲ್ ಪಾರ್ಕಿನ ಮೈದಾನದಲ್ಲಿ ನೆರೆದು ರಿಜಿಮೆಂಟಿನವರ ಬ್ಯಾಂಡುಮೂಲಕ ಮಹಾರಾಜರವರ ಜನ್ಮೋತ್ಸವದ ಆನಂದವನ್ನು ಅನುಭವಿಸಿ ಮಹಾರಾಜರವರ ಆಯುರಾರೋಗ್ಯ ಬಯಸಿದವರಾದರು —ಕಳೆದ ೩೦ ನೇ ತಾ ಬೆಳಿಗ್ಯೆ ನಮ್ಮ ಶ್ರೀಮನ್ಮಹಾರಾಜರವರು ೧೦ ಗಳೂರಿಗೆ ದಯಮಾಡುತ್ತಾರೆಂಬುದಾಗಿ ತಿಳಿದು ಬಹುಜನ ಪ್ರಜೆಗಳು ಬಂದಿದ್ದರು ಅಮಲ್ದಾರರೂ ಇತರ ಉದ್ಯೋಗಸ್ಥರೂ ಮಹಾರಾಜರಿಗಾಗಿ ಫಲಪುಷ್ಪ ತಾಂಬೂಲಾದಿಗಳನ್ನು ಸಿದ್ಧಪಡಿಸಿಕೊಂಡಿದ್ದರು. ೯॥ ಗಂಟೆಗೆ ಯುವರಾಜರು ಮೂರ್ತಗೊಂಡಿದ್ದ ಸುಂದರವಾದ ಮೋಟಾರ್ ಕಾರ್ ಗಾಡಿಯು ಬಂತು. ಆದರೆ ರಾಜರವರೂ ಕ್ಷಣಮಾತ್ರವಾದರೂ ನಿಲ್ಲದೆ ಗಾಡಿಯನ್ನು ಮುಂದರಿಸಿಕೊಂಡು ಹೋಗೇಬಿಟ್ಟರು —ಜನರಿಗಾದರೋ ಯುವರಾಜರು ಯಾರೆಂಬ ಗುರುತು ಯಾರಿಗೆ ತಿಳಿಯಿತೋ ಯಾರಿಗೆ ತಿಳಿಯಲಿಲ್ಲವೋ ಎಂಬ ಹಾಗಾಯ್ತು ಸಿದ್ಧಪಡಿಸಿದ್ದ ಫಲಪುಷ್ಪಗಳು ಹಾಗೆಯೇ ಉಳಿದವು —ಮಾರಣೆ ದಿನ ಬೆಂಗಳೂರಿಂದ ಮಹಾರಾಜರು ಹೋದ ಮೋಟಾರ್ ಕಾರ್ ಗಾಡಿ ವಾಪಸ್ ಬಂದಂತೆ ಅದರಲ್ಲಿ ಒಬ್ಬರು ಮಾತ್ರ ಕೂತು ಗಾಡಿ ನಡಿಸಿಕೊಂಡು ಬಂದರು. ಅವರು ಅದನ್ನು ರಸ್ತೆಯಲ್ಲಿ ಓರೆಯಾಗಿ ತಿರುಗಿಸುವಾಗ ಏನು ವ್ಯತ್ಯಾಸವಾಯಿತೋ ಆ ಗಾಡಿಯು ಒಂದು ಅಂಗಡಿಗೆ ನುಗ್ಗಿ ತಿಕ್ಕಿಕೊಟ್ಟಹಾಗೂ ಅದರಿಂದ ಸ್ವಲ್ಪ ಸಾಮಾನು ಚೆಲ್ಲಿಹೋಗಿ ಕೂತಿದ್ದ ಮುದುಕಿಯ ತೊಡೆಗೆ ಸ್ವಲ್ಪ ಪೆಟ್ಟು ತಾಗಿರುವ ಹಾಗೂ ಇದನ್ನೆಲ್ಲಾ ಗಮನಿಸದೆ ಅವರು ಗಾಡಿಯನ್ನು ಸರಿಯಾಗಿ ತಿರುಗಿಸಿಕೊಂಡು ಹೊರಟು ಹೋದರೆಂತಲೂ ತಿಳಿದುಬರುತ್ತೆ.

ದಾವಣಗೆರೆ.—ಈ ತಿಂಗಳು ಮೊದಲನೇ ತಾರೀಖು ರಾತ್ರಿ ದಾವಣಗೆರೆ ತಾಲ್ಲೂಕಿನ ಟವನ್ನಿನಲ್ಲಿ ಲಿಂಗಾಯತರ ಮೊಕದ್ದಮೆಯನ್ನು ನಡಿಸುವದಕ್ಕೋಸ್ಕರ ಶಿವಮೊಗ್ಗೆಯಿಂದ ಬಂದಿದ್ದ ಮ॥ ಗರುಡಾಚಾರ್ ಪ್ಲೀಡರವರು ಇಲ್ಲಿನ ಸರ್ಕಾರದ ಕೆಲವು ದೊಡ್ಡ ಮನುಷ್ಯರನ್ನೂ ಕೆಲವು ದೊಡ್ಡ ವರ್ತಕರನ್ನೂ ಸಭೆ ಸೇರಿಸಿ ಕ್ರೈಸ್ತಮತಕ್ಕೆ ಸೇರತಕ್ಕ ಹಿಂದುಗಳಿಗೆ ಜಾತಿಯ ಹಕ್ಕು ಬಾಧ್ಯತೆಯನ್ನು ಕೊಡಕೂಡದೆಂದು ಹೇಳಿ ಉಪನ್ಯಾಸಮಾಡಿ ಇದರ ವಿಷಯದಲ್ಲಿ ಶ್ರೀಮನ್ಮಹಾರಾಜರವರಿಗೂ ಬ್ರಿಟಿಷ್ ರೆಸಿಡೆಂಟರಿಗೂ ಅವರ ವಿಷಯವಾದ ಆಕ್ಟನ್ನು ಬದಲಾಯಿಸಕೂಡದೆಂದು ಅರ್ಜಿ ಮೂಲಕ ವಿಜ್ಞಾಪಿಸಿಕೊಳ್ಳುವಂತೆ ಸಭಿಕರನ್ನು ಪ್ರೇರೇಪಿಸಿದ್ದು ಮಾತ್ರವಲ್ಲದೆ, ಹಾಗೇನಾದರೂ ಸರ್ಕಾರದವರು ಅದನ್ನು ಬದಲಾಯಿಸಿದ ಪಕ್ಷಕ್ಕೆ ಪ್ರಜೆಗಳು ದಂಗೆ ಏಳುವದಕ್ಕೆ ಅವಕಾಶವಾಗುವದೆಂದು ಹೇಳಿದರಂತೆ ಈ ಮಹಾರಾಯರು ತಮ್ಮ ಉಪನ್ಯಾಸದಲ್ಲಿ ಹೇಳಿದ ಮುಖ್ಯಾಂಶವೇನೆಂದರೆ—"ಈಗಲೇ ಅಂದರೆ ಈ ಬಾಧ್ಯತೆಯ ಆಕ್ಟು ಇಲ್ಲದಿರುವಾಗಲೇ ಕ್ರೈಸ್ತಮತವು ಬೆಳೆಯುತ್ತಾ ಬರುತ್ತದೆ ಈ ಆಕ್ಟನ್ನು ಬದಲಾಯಿಸಿದ ಪಕ್ಷದಲ್ಲಿ ಆ ಮತವು ಎಷ್ಟಧಿಕವಾಗಿ ವೃದ್ಧಿಗೊಂಡುವದು ? ಆದವರಿಂದ ಹಿಂದುಗಳಾದ ನಾವು ಇದಕ್ಕೆ ಅವಕಾಶಕೊಡಕೂಡದು" ಎಂಬುದೇ ಈ ದೊಡ್ಡ ಮಹನೀಯರು ಈ ಮತದ ವೃದ್ಧಿಯ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರುವದು ಸಂತೋಷಕರವಾದರೂ ಅದನ್ನು ಅಡಗಿಸುವದಕ್ಕೆ ಪ್ರಯತ್ನಿಸಿ ಉಪನ್ಯಾಸೋಪಾಯದಿಂದ ಜನರನ್ನು ಪ್ರೇರೇಪಿಸಿದ್ದು ತುಂಬಾ ಆಶ್ಚರ್ಯವಾಗಿದೆ —ಈ ಊರಿನ ಲಿಂಗಾಯತ ಮಂಡಲಿಯವರಿಗೂ ಬ್ರಾಹ್ಮಣರಿಗೂ ಅನ್ಯೋನ್ಯವಿಲ್ಲದೆ ಮತಸಂಬಂಧವಾಗಿ ಜಗಳ ನಡೆಯುತ್ತಿರುವದೂ ಅದಕ್ಕಾಗಿ ಕಳ ಹಣ ಖರ್ಚಾಗಿಯೂ ಇನ್ನೂ ಇತ್ಯರ್ಥವಾಗದಿರುವದೂ ವಾಚಕರಿಗೆಲ್ಲಾ ವೇದ್ಯವಾಗಿರಬಹುದು ಈ ಮಧ್ಯೆ ಬ್ರಾಹ್ಮಣರ ಮತಗಳನ್ನು ಬೇರೆಯವರು ಕೇಳುವದರಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗುವದೋ ವಾಚಕರೇ ಊಹಿಸಿಕೊಳ್ಳಬಹುದು ದಾವಣಗೆರೆ ಲಿಂಗಾಯತ ಮಂಡಲಿಯ ಗುಂಪಿನವರಲ್ಲಿ ಕೆಲವರ ಮೇಲೆ ಸರ್ಕಾರದವರು ಬೊಂಬ ಕೇಸ್ ಮಾಡಿದ್ದಾರೆ ಈಗ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ನಡೆಯುತ್ತಿದೆ ಎಂದು ಹೇಳುವರು ಅದವು ಈ ಬೊಂಬ ಕೇಸು ಯಾವ ಕಾಲದಲ್ಲಿ ಮುಗಿಯುವದೋ ದೇವರೇ ಬಲ್ಲನು ಮತ್ತು ಇಲ್ಲಿನ ಲಿಂಗಾಯತ ಮಂಡಲಿಯವರಿಗೆ ತಕ್ಕ ಸನ್ಮಾನಗಳನ್ನು ಮಾಡ [illegible] ವರ್ತಮಾನ ಕೇಳುವೆನು ಮುಂದೆ ಇದರ ಫಲಿತಾಂಶ ಏನಾಗುವದೋ ನೋಡಬೇಕು ಈ ಊರಿನಲ್ಲಿ ಈಗ ಒಂದು ವಾರದಿಂದಲೂ ಮೋಡಗಳು ಮು[illegible]ಕೊಂಡ ಬಿಸಿಲಿನ ತಾಪ [illegible] ಮಾತ್ರವೇ ಭೂದೇವತೆಯನ್ನು ಸ್ವಲ್ಪ ಶಾಂತಿ ಪಡಿಸಿದೆ ಜನ ತಮ್ಮ ಆರದ ಕೆಲಸವನ್ನು ಪ್ರಾರಂಭಿಸಿದ್ದಾರೆ [illegible] ಪ್ರಾಣಿಗಳ ಜೀವ ಉಳಿಸಿದೆ —ದೇವರ ಕೃಪೆಯಿಂದ ಈ ವರ್ಷ ಸ್ಥಳದಲ್ಲಿ ಯಾವ ಗಲಾಟೆಯೂ ಇಲ್ಲ ಆದರೆ ಹರಿಹರದಲ್ಲಿ ಮಾತ್ರ ಈಗ ೧೫ ದಿನಗಳಿಂದಲೂ ಕಾಲರಾ ಉಪದ್ರವ ಪ್ರಾರಂಭವಾಗಿ ಈಗ್ಯೆ ಸುಮಾರು ೧೫ ಕೇಸುಗಳು ಆದವೆಂದು [illegible] ದನು ಅದಕ್ಕಾಗಿ ಇಲ್ಲಿನ ಅಮಲ್ದಾರರು ಸಾಧ್ಯವಾದ ಮಟ್ಟಿಗೆ ದಾವಣಗೆರೆಯು ಒಳ್ಳೇ ಆರೋಗ್ಯಸ್ಥಿತಿಯಲ್ಲಿ ಇರುವಂತೆ ಸೂಚಿಸಲಾಗಿದೆ ಯಾಕೆಂದರೆ ಹರಿಹರವೂ ದಾವಣಗೆರೆಯೂ [illegible] ತಂಗಿಯರು. ಈ ಟವನ್ನಿನ ದೀಪಗಳ ಗೋಳನ್ನು ನಾನು ಹೇಳೆನು. ಅವುಗಳು ಈಗಲೋ ಇನ್ನೊಂದು ಘಂಟೆಗೋ ಸಾಯ ಸ್ಥಿತಿಯಲ್ಲಿ ಉರಿಯುತ್ತವೆ ಇದಕ್ಕೆ ಕಾರಣವೇನೋ ತಿಳಿಯದು ಎಣ್ಣೆಯ ಕಾರಣವೋ ಇಲ್ಲವೇ ಹಚ್ಚುವವರ ತಪ್ಪೋ ಗೊತ್ತಾಗುವದಿಲ್ಲ ಇದರ ವಿಷಯ ನಮ್ಮ ಮುನಿಸಿಪಲ್ ಪ್ರೆಸಿಡೆಂಟರು ಗಮನ ಕೊಡುವರೆಂದು ನಂಬುತ್ತೇನೆ

ಬಾತ್ಮಿದಾರರಿಗೆ ಸೂಚನೆ.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳನ್ನು ನಾವು ಪ್ರಕಟಿಸಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು ; ಇಂಥವುಗಳಿಗೆ ನಾವು ಬೆಲೆ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎ[illegible]

ಕರೆಸ್ಪಾಂಡೆನ್ಸ್.

ಕಬ್ಬಿಣದ ಅಲೆಯಂತ್ರ.

ಅಯ್ಯಾ,

ಇಲ್ಲಿ ಮಳೆ ಇಲ್ಲದೆ ಜನಗಳ ಕಷ್ಟವು ಬಹಳವಾಗಿದೆ ನಿನ್ನೆ ಮೊನ್ನೆ ರಾಗಿ ದೊರೆಯಲಿಲ್ಲ. ದೊರೆತಾಗ್ಯಾದರು ರೂಪಾಯಿದಕ್ಕೆ ೧೦ ಸೇರು.

ಕೊಯಮುತ್ತೂರು ಜಿಲ್ಲಾ ಕೊಳ್ಳೆಗಾಲ ತಾಲ್ಲೂಕು ವ[illegible] ಗುಂಡದ ಗ್ರಾಮದಲ್ಲಿ ಚನ್ನರಾಯಪಟ್ಟಣದ ಆಂ. ಕಂ. ಸು[illegible]ಯ ಶೆಟ್ಟರ ಹೊಸ ಬಾರಿ ಏರ್ಪಾಡು ಮಾಡಿರುವ ಕಂಪನಿಯ ಸರ್ವ ಜನಗಳ ಉಪಯೋಗಾರ್ಥವಾಗಿ ಕಬ್ಬಿಣದ ಅಲೆಯ ಎಂಬುವ ಗಾಣವನ್ನು ಹೊಸದಾಗಿ ಇಲ್ಲಿ ತಯಾರ್ಮಾಡಿಸಿ ಬಳ[illegible] ಸಿದ್ಧವಾಗಿರುತ್ತೆ ಇದು ಮರದ ಅಲೆಗಾಣಕ್ಕಿಂತಲೂ ಬಹಳ [illegible]ಷ್ಟವಾಗಿರುವ ಪ್ರಯುಕ್ತ ಸಕಲ ಜನಗಳು ಕಬ್ಬಿಣದ ಗಾಣವ[illegible] ಉಪಯೋಗಿಸುತ್ತಾರೆಂದು ಭಾವಿಸಿ ಹೊಸದಾಗಿ ಈ ಊರಿ[illegible] ಸ್ಥಾಪಿಸಲ್ಪಟ್ಟಿದೆ. ಮತ್ತು ಹಳೆ ಗಾಣಗಳ ರಿಪೇರಿಯು ಸಹ ಮಾಡಲ್ಪಡುತ್ತೆ. ಇದರ ವಿಷಯ ತಿಳಿಯಲು ಅಪೇಕ್ಷೆಯುಳ್ಳವರು ಕೆಳ ವಿಳಾಸಕ್ಕೆ ಬರೆದುಕೊಳ್ಳಬಹುದು.

ಆರ್. ರಾಮಪ್ಪ.

ಉಪನ್ಯಾಸಗಳು

ಅಯ್ಯಾ,

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಚಾಮರಾಜನಗರದಲ್ಲಿರುವ ರಾಮಕೃಷ್ಣಭಟ್ಟರು ಎಂಬುವರು ಕಾರ್ಯಾರ್ಥವಾಗಿ ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಮುದನಹಳ್ಳಿಗೆ ಬಂದು ನೆನ್ನೆ ತಾ ೨೫ರಲ್ಲಿ ಇಲ್ಲಿನ ನಾಟಕಶಾಲೆಯಲ್ಲಿ ಮತವಿಚಾರವಾಗಿ ಬಹು ದೀರ್ಘವಾದ ಉಪನ್ಯಾಸವನ್ನು ಕನ್ನಡದಲ್ಲಿ ಮಾಡಿ, ತೆಲುಗಿನಲ್ಲಿ ಭಾಷಾಂತರ ಮಾಡಿಸಿದರು. ಅವರು ಇಲ್ಲಿ ಇರುವ ಪರ್ಯಂತರವೂ ಅಲ್ಲಲ್ಲಿ ನ್ಯಾಗಿ ಅನೇಕ ವಿಷಯಗಳಲ್ಲಿ ಉಪನ್ಯಾಸಮಾಡುವವರಾಗಿದ್ದಾರೆ. ಎಲ್ಲರೂ ಬಹು ಮರ್ಯಾದೆ ಮಾಡುತ್ತಿರುತ್ತಾರೆ. ದೀರ್ಘ ಉಪನ್ಯಾಸದ ದಿವಸ ಅನೇಕ ದೊಡ್ಡಮನುಷ್ಯರು ಬಂದು ಕೇಳಿ ಜಯಘೋಷಮಾಡುತ್ತಾ ಹೋದರು. ನಾಳೆ ವಾಪಿಸ್ಸು ಹೊರಡುವವರಾಗುತ್ತಾರೆ.

೨೩-೬-೦೫, ರಾಮರಾವ್

ಮುದನಹಳ್ಳಿ.

ಸಣ್ಣ ಕೆರೆಗಳ ಕಾಮಗಾರಿ

ಅಯ್ಯಾ,

ತಮ್ಮ ಮಾಹೆ ಗುದಸ್ತು ೨೨ನೇ ತಾರೀಖಿನ ಪತ್ರಿಕೆ ೩ನೇ ಪೇಜಿನಲ್ಲಿ ಈ ಸಂಸ್ಥಾನದಲ್ಲಿ ಇರುವ ಸಣ್ಣ ಸಣ್ಣ ಕೆರೆಗಳ ರಿಪೇರಿಯುಂಟಾದ್ದು ಇದುವರೆಗೆ ರೈತರುಗಳನ್ನು ಮಾಡಬೇಕೆಂದು ಮಾಡುತ್ತಿದ್ದ ತೊಂದರೆಯನ್ನು ತಪ್ಪಿಸಿ ಸರ್ಕಾರದವರೇ ವಹಿಸುವ ಹಾಗೆ ಅಪ್ಪಣೆ ಆಗಿರುತ್ತೆಂಬ ಸಂಗತಿ ಓದಿಕೊಂಡು ಬಹಳ ಸಂತೋಷವಾಯಿತು. ಇದು ಗವರ್ನಮೆಂಟಿನಲ್ಲಿ ಆರ್ಡರಾಗಿ ಅದರ ದಾಖಲೆ ತಮಗೆ ಸರಿಯಾಗಿ ದೊರಕಿರುವುದರಿಂದಲೇ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವದಾಗಿ ಖಂಡಿತವಾಗಿ ನಂಬಿರುತ್ತೇನೆ. ಆದಾಗ್ಯೂ ಗವರ್ನಮೆಂಟಿನವರು ಆರ್ಡರ್ ಮಾಡಿದ್ದು ಯಾವಾಗ? ಅದರ ಸ್ವಲ್ಪಾಕೆ ತಾರೀಖು ಮತ್ತು ನಂಬರು ತಮ್ಮಲ್ಲಿ ದಾಖಲೆ ತರಿಸಿ ಆ ದಾಖಲೆ ನಮೂದಿನಿಂದ ಪ್ರಕಟಿಸಿದರೆ ತಮ್ಮ ಈ ಮಹದುಪಕಾರಕ್ಕೆ ನಾನು ತುಂಬಾ ಕೃತಜ್ಞನಾಗಿರುತ್ತೇನೆ. ಮತ್ತು ಈ ಪ್ರಾಂತ್ಯ ಇಲಾಕ ಬಡ ರೈತರುಗಳಿಗೆ ಈ ಮೂಲಕ ಆಗುವ ಸಹಾಯವು ತಮ್ಮನ್ನೇ ಹೊಂದಿದ್ದಾಗಿರುತ್ತೆ.

೨೩-೬-೦೫ ಕೆ. ರಾ. ರಾ.

[ಆರ್. ೫೨೫೭—೬೧—ಆಗ್ರಿ. ೩೨೬—೦೪—೬ ತಾ. ೧೯ನೇ ಡಿಸೆಂಬರ್ ೧೯೦೪—ಇದೇ ಆರ್ಡರು ಎಂದು ನಾವು ಊಹಿಸುತ್ತೇನೆ —ಎಡಿ.]

ಮದುವೆ ಖರ್ಚು.

ಅಯ್ಯಾ,

ಬೆಂಗಳೂರು ಸಿಟಿ ಕುಂಚಿಗರ ಪೇಟೆಯಲ್ಲಿ ಇರುವ ನಿವಾಸಿಗಳಾದ ಕುಂಚಿಗರ ಜಾತಿಯಲ್ಲಿ ಲಗ್ನವಾದರೆ ಹೆಣ್ಣು ಕೊಡುವವರು ಗಂಡಿನವರಿಂದ ಒಡವೆಗಾಗಿ ೪೦೦ ರೂಪಾಯಿ, ಅನ್ನ ಖರ್ಚಿಗಾಗಿ ೩೦೦ ರೂಪಾಯಿ, ಒಟ್ಟು ೭೦೦ ರೂಪಾಯಿಗಳು ಖರ್ಚು ತೆಗೆದುಕೊಳ್ಳುತ್ತಾರೆ. ಇದರಲ್ಲಿ ಸಾಹುಕಾರರು ೭೦೦ ರೂಪಾಯಿಗಳನ್ನು ಕೊಡುವದಕ್ಕೆ ಅವರಿಗೆ ಲಕ್ಷ್ಯವಿರುವದಿಲ್ಲ. ಅವರಲ್ಲಿ ಬಡವರಿಗೆ ೭೦೦ ರೂಪಾಯಿಗಳನ್ನು ಕೊಡುವದಕ್ಕೆ ಸಾಧ್ಯವಾಗಿ ಇರುವದಿಲ್ಲ. ಬಡವನಾದವನು ಒಂದು ಮದುವೆಯಾಗಬೇಕಾದರೆ ಆತನು ಯಾವ ಕಾಲಕ್ಕೆ ೭೦೦ ರೂಪಾಯಿಗಳನ್ನು ಸಂಪಾದಿಸಿ ಮದುವೆಯಾಗುತ್ತಾನೋ ನೀವು ಯೋಚಿಸಬೇಕು. ಮತ್ತು ಸಾಲಮಾಡಿ ಮದುವೆಯಾದರೆ ಆತನು ಒಬ್ಬೊಂಟಿಗನಾಗಿ ಇದ್ದಲ್ಲಿ ಗೃಹಕೃತ್ಯಗಳನ್ನು ನೋಡಿಕೊಂಡು ಯಾವ ರೀತಿ ೭೦೦ ರೂಪಾಯಿಗಳನ್ನು ತೀರಿಸುತ್ತಾನೆ? ಈ ರೀತಿಯಾಗಿ ಮದುವೆ ಮಾಡುವದು ಬಹಳ ಅನ್ಯಾಯವಾಗಿ ಇರುತ್ತೆ. ಆದ್ದರಿಂದ ಈ ಸಂಗತಿಗಳನ್ನು ತಾವು ದಯವಿಟ್ಟು ಪ್ರಕಟಿಸುವದು. ೭೦೦ ರೂಪಾಯಿ ಬಡವರ ಮದುವೆಗೆ. ಇದೇ ಕಡೇ ರೇಟಾಗಿ ಇರುತ್ತೆ. ಹಣ ಇರುವವರು ಇದರ ಮೇಲ್ಪಟ್ಟು ಮಾಡಿಕೊಳ್ಳಬಹುದು. ಈ ರೇಟನ್ನು ನೀವು ಕಡಮೆ ಮಾಡಿದರೆ ನಿಮಗೆ ಬಹಳ ಪುಣ್ಯಬರುತ್ತೆ.

೨—೭—೦೫,

ಬೆಂಗಳೂರು ಸಿಟಿ. ಕುಂಚಿಗ.

[ಇದು ಸಂಘವಿಚಾರವಾದ್ದರಿಂದ ಕುಂಚಿಗರ ಮುಖಂಡರು ಸಭೆ ಸೇರಿ ಈ ಸಂಗತಿಯನ್ನು ಚರ್ಚೆ ಮಾಡಿ ಅನುಕೂಲವಾಗಿರತಕ್ಕ ಏರ್ಪಾಡನ್ನು ಮಾಡಿಕೊಳ್ಳಬೇಕಾಗಿದೆ.—ಎಡಿ.]

ನಂಬಿಗೆ ಚಮತ್ಕಾರ.

ಅಯ್ಯಾ,

ಮೇಗರವಳ್ಳಿ, ನಾಲೂರು, ಆಗುಂಬೆ, ಈ ಪ್ರಾಂತ್ಯದಲ್ಲಿ ಚನ್ನಗಿರಿ ತಾಲ್ಲೂಕು ಕಾಕನೂರಿಂದ ವಸೂಲಿ ಕೆಲಸಕ್ಕೋಸ್ಕರ ಬಂದಿರುವ ಬುಡ್ಡಸಾಬು ಮತ್ತು ಇವನ ಕಡೆ ಆರು ಜನರು ಮೂರು ವರುಷದ ಲಾಗಾಯ್ತು ವಸೂಲಿ ಮಾಡುತ್ತೇವೆಂದು ಹೊಟ್ಟೇ ಜೀವನ ಮಾಡಿಕೊಂಡು ಹೋಗುತ್ತಿದ್ದರು. ಈ ವರುಷವಾದರು ಊರಿಗೆಲ್ಲಾ ಹೆಚ್ಚಾಗಿ ನಂಬಿಗೆಯನ್ನು ಬೆಳಸಿ ಈ ಊರ ಜನರಿಗಿಂತ ಹೆಚ್ಚಾದ ಸ್ನೇಹ ಮಾಡಿಕೊಂಡಿದ್ದರು. ನಂತರ ಈ ಮೇಗರವಳ್ಳಿಯಲ್ಲಿ ನಂಬಿಗೆಯಿಂದ ಇಟ್ಟಿರು ಅಂಗಡಿಯವರಲ್ಲಿ ವ್ಯಾಪಾರ ಮಾಡುತ್ತಾ ಒಬ್ಬರಲ್ಲಿ ೧೦ ರೂಪಾಯಿಗೂ ಇನ್ನೊಬ್ಬರಲ್ಲಿ ೫ ರೂಪಾಯಿಗೂ ಲೆಕ್ಕಾಚಾರ ಮಾಡಿಕೊಂಡದ್ದಲ್ಲದೆ ಆಗುಂಬೆ ಸನಿಹ ಒಬ್ಬರು ಗಾಡಿಕಾರರಿಗೆ ೨೦ ರೂಪಾಯಿಗೂ ಇನ್ನೂ ಕೆಲವು ಹಳ್ಳಿಗಳಲ್ಲಿ ಕೆಲವರಿಗೆ ಇದೇ ರೀತಿ ಹಲವು ನಾಲ್ಕು ರೂಪಾಯಿಯಂತೆ ಎತ್ತಿಕೊಂಡು ಒಬ್ಬರಿಗೂ ಹೇಳದೆ ರಾತ್ರಿ ಕಾಲದಲ್ಲೇ ಪ್ರಯಾಣ ಬೆಳಸಿರುತ್ತಾರೆ. ಇವರು ಯಾವ ಕಡೇ ಹೋದರೂ ಇದೇ ರೀತಿ ಮಾಡ್ಯಾರೆನ್ನುವದಕ್ಕೆ ಸಂಶಯವಿಲ್ಲ.

ಈ ಮೇಗರವಳ್ಳಿಯಲ್ಲಿ ಜೂನ್ ತಾರೀಖು ೪ನೆ ಭಾನುವಾರ ರಾತ್ರಿ ಸುಮಾರು ೧೨ ಗಂಟೆ ಸಮಯ ಪೋಲಿಸ ಮನೆ ತಮ್ಮಯ್ಯನೆಂಬುವವನ ಮನೆಗೆ ಆಕಸ್ಮಾತ್ತಾಗಿ ಬೆಂಕಿ ಬಿದ್ದ ಕಾಲದಲ್ಲಿ ಇಲ್ಲಿಯ ಬ್ರಾಹ್ಮಣರಲ್ಲಿ ಅನೇಕರು ಹೋಗಿ ಸಹಾಯ ಮಾಡಿದರು. ಈ ಊರ ಪಟೇಲ್ ನಮ್ಮಯ್ಯ ಹೆಗ್ಗಡೇರೆಂಬುವರು ಸಹ ಸುಮಾರು ಹತ್ತು ಜನದವರಿಗೆ ಜೊತೆಯಲ್ಲಿ ಕರೆದುಕೊಂಡು ಬಂದು ನೀರನ್ನು ಹಾಗಿಸಿ ಬಹಳ ಸಹಾಯ ಮಾಡಿದರು. ಆದರೇನು ಮಾಡುವದು! ಆ ಮನೆಯ ಸುತ್ತಮುತ್ತಾ ಇದ್ದ ಮೂರು ಬಾವಿಗಳಲ್ಲಿ ಸ್ವಲ್ಪ ಸ್ವಲ್ಪ ನೀರಿತ್ತಾದ್ದರಿಂದ ಜಾಗ್ರತೆ ಬತ್ತಿಹೋಯಿತು. ಅಂತು ಪ್ರಯಾಸದಿಂದ ಕೆಲವು ಸಾಮಾನುಗಳನ್ನು ಉಳುಹಿಸಿದರು. ಈ ಕಾಲದಲ್ಲಿ ಈತನಿಗೆ ಇದೊಂದು ದುಃಖವಿತ್ತು. ತನ್ನ ಮಗನಿಗೆ ಲಗ್ನ ಮಾಡಿಸಿ ಮೂರು ದಿವಸವಾಗಿತ್ತಾದ್ದರಿಂದ ಬಹಳ ಸಾಮಾನುಗಳು ನಷ್ಟವಾದವು. ನಂತರ ಊರ ಜನರೆಲ್ಲರು ಸೇರಿ ನಾಲ್ಕು ದಿವಸದಲ್ಲಿಯೇ ಪ್ರಯಾಸದಿಂದ ಮನೆಯನ್ನು ಕಟ್ಟಿ ಸರಿಪಡಿಸಿಕೊಟ್ಟರು. ಇವರನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಇದೆ.

ನಾಲೂರು. ಕೆ. ಟಿ. ದೇವಪ್ಪ.

ಪ್ರತ್ಯಕ್ಷವಾಗಿ ನೋಡಿದ್ದು ಪತ್ತೇ ಆಗಲಿಲ್ಲ.

ಅಯ್ಯಾ,

ದೊಡ್ಡಬಳ್ಳಾಪುರದ ಕಸಬಾ ಟರ್ಮ ಮಾರ್ಕೆಟ್ಟಿನ ಬಳಿ ಮೇಲುಗಡೆ ಇರುವ ದೇವಾಂಗದ ಮಲ್ಲಪ್ಪನೆಂಬುವನ ಮನೆ ಕೋಣೆಯಲ್ಲಿ ತಾ ೨೪ನೇ ಶನಿವಾರ ರಾತ್ರಿ ೧—೨ ಘಂಟೆಗಳ ಸಮಯಕ್ಕೆ ಸರಿಯಾಗಿ ಗಿಟೊ ಕೋಣೆ ಕಿಟಕಿಗೆ ಅಡ್ಡವಾಗಿ ಹಾಕಿದ್ದ ಕಟ್ಟಿಗೆಯನ್ನು ಕಿಟಕಿ ಸಂದಿನಿಂದ ತೆಗೆದುಹಾಕಿ ಒಳಕ್ಕೆ ನುಗ್ಗಿ ಬೀಗ ಹಾಕದೆ ಇಟ್ಟಿದ್ದ ಪೆಟ್ಟಿಗೆಯಲ್ಲಿ ಇದ್ದ ನಗನಾಣ್ಯಗಳು ಸುಮಾರು ನಾನೂರು ರೂಪಾಯಿಗಳು ಬಾಳುವಷ್ಟು ಹೋದ ಮೇಲೆ ಮನೆಯಲ್ಲಿ ಮಲಗಿದ್ದ ಹೆಂಗಸು ಮಕ್ಕಳು ಹುಶಾರಾಗಿ ಎದ್ದು ದೀವಿಗೆ ಹಚ್ಚಿಸಿ ನಡುಮನೆ ಬಾಗಲು ತೆಗೆದು ಹಟ್ಟಿಯಲ್ಲಿ ಇದ್ದ ಮನುಷ್ಯನನ್ನು ನೋಡಿ ಏನಯ್ಯ ನೆರೆಹೊರೆಯವನಾಗಿ ಇಂಥಾ ಕೆಲಸ ಮಾಡುವದು ಎಲ್ಲಾದರು ಉಂಟೇ? ಎಂದು ಕೇಳಿದಾಗ ಅವನು ಗದ್ದರಿಸಿ ಮುಖದ ಮೇಲೆ ಪೆಟ್ಟು ಹೊಡೆದು, ಜಾಗ್ರತೆ ಓಡಿಹೋಗಿ ಮನೆ ಬಾಗಲು ಹಾಕಿಕೊಂಡನಂತೆ. ಆಕೆಯು ಸುಧಾರಿಸಿಕೊಂಡು ಆತನ ಹಿಂದೆ ಹೋಗಿ ಮನೆ ಬಾಗಲು ಹಾಕಿಕೊಂಡದ್ದನ್ನು ನೋಡಿ, ಅಯ್ಯೋ ಅಪ್ಪೊ ಎಂದು ಕೂಗ್ಯಾಡಿ ಗಲಾಟೆಮಾಡುವಷ್ಟರಲ್ಲಿ ನೆರೆಮನೆಯ ಶೆಟ್ಟಿ ಸುಬ್ಬಣ್ಣನೆಂಬುವನು ಮತ್ತು ಮಲ್ಲಪ್ಪನೆಂಬುವನು ಬಂದು ಇಷ್ಟು ಸಮಾಚಾರಗಳನ್ನು ಕೇಳಿ ಇರಲಿ ಬೆಳಿಗ್ಗೆ ವಿಚಾರಿಸಿ ನಿನ್ನ ಒಡವೆ ಏನಿದ್ದಾಗ್ಯೂ ಕೊಡಿಸಿಕೊಡುತ್ತೇವೆಂದು ಆಗ್ಯೆ ಆಕೆಯ ಮನಸ್ಸು ಸಮಾಧಾನಪಡಿಸಿ ಆಕೆಯನ್ನು ಮನೆಗೆ ಕಳುಹಿಸಿದರಂತೆ. ಆಕೆಯು ಮನೆಗೆ ಹೋಗಿ ಬೆಳಗ್ಯೆ ಸುಬ್ಬಣ್ಣ ಮಲ್ಲಪ್ಪ ವಗೈರೆಯವರನ್ನು ವಿಚಾರಿಸಿದ್ದಕ್ಕೆ ತಾವು ಬರುವದಿಲ್ಲವೆಂದು ಹೇಳಿದರಂತೆ. ಆಕೆಯು ಪೋಲೀಸ್ ಸ್ಟೇಷನ್ನಲ್ಲಿ ಹೇಳಿಕೊಳ್ಳುವಾಗ್ಯೆ ಪರಸ್ಥಳಕ್ಕೆ ಹೋಗಿದ್ದ ಆಕೆಯ ಗಂಡನು ಬಂದು ಕೈಫಿಯತ್ತು ಕೊಟ್ಟನು. ಸರ್ಕಾರದವರು ಬಂದು ಚಿಕ್ಕಣ್ಣನ ಮನೆಯನ್ನು ಜಪ್ತಿಮಾಡಿಸಿದ್ದರ ಮೇಲೆ ಮಾಲುಗಳು ಪತ್ತೆ ಆಗದೆ ರಾತ್ರಿ ಆಕೆಗೆ ಸಮಾಧಾನ ಹೇಳಿ ಕಳುಹಿಸಿದ ಸಾಕ್ಷಿಗಳನ್ನು ಅಂದರೆ ಮೇಲ್ಕಂಡ ಸುಬ್ಬಣ್ಣ ಮಲ್ಲಪ್ಪ ಇವರುಗಳನ್ನು ಕೇಳಿದ್ದಕ್ಕೆ ಅವರು ತಮಗೆ ಈ ಸಂಗತಿಯೇ ಗೊತ್ತಿಲ್ಲವೆಂದು ಹೇಳಿಬಿಟ್ಟರು. ಅದರ ಮೇಲೆ ಸರ್ಕಾರದವರು ಮಾಲುಗಳು ಸಿಕ್ಕದೆ ಇದ್ದದ್ದರಿಂದ ಸುಮ್ಮನಾದರು. ಮತ್ತು ಪಿರ್ಯಾದಿಗಳ ಕೈಲಿ ಮಾಲುಗಳು ಪತ್ತೆ ಆಗದೆ ಇದ್ದದ್ದಕ್ಕೆ ರುಜುಮಾಡಿಸಿಕೊಂಡು ಹೋಗಿದಾರೆ. ಇದುವರೆಗೂ ವಿಚಾರಿಸಲೇ ಇಲ್ಲ. ಕಂಡು ಕಂಡು ಕಳೆದುಕೊಂಡವರ ಸಂಕಟ ಎಷ್ಟಿರಬಹುದೋ. ಮೇಲ್ಪಟ್ಟ ಅಧಿಕಾರಿಗಳು ಈ ಸಂಗತಿಗಳನ್ನು ಮನಸ್ಸಿಗೆ ತಂದು ಪುನರ್ವಿಚಾರಣೆಯಿಂದ ಫಿರ್ಯಾದಿಗಳ ಮನಸ್ಸಿಗೆ ಸಂತೋಷವನ್ನುಂಟುಮಾಡಿಸುವರೆಂದು ಬರೆದಿದ್ದೇನೆ.

೨೭—೬—೦೫, ಜಿ. ಕೋಟಿ ಹನುಮಂತರಾವ್.

ದೊಡ್ಡಬಳ್ಳಾಪುರ.

ಶಿವಗಂಗೆ ಸ್ವಾಮಿಗಳು.

ಅಯ್ಯಾ,

ಈ ಯತೀಶ್ವರರ ಸವಾರಿಯು ತರೀಕೆರೆಯಿಂದ ಈ ಬೀರೂರಿಗೆ ಈ ಮಾಸ ೨೮ರ ಏಕಾದಶಿ ಮಧ್ಯಾಹ್ನ ೧ ಘಂಟೆಗೆ ಚಿತ್ತೈಸಿತು. ಈ ಮಹನೀಯರನ್ನು ಪುರದ ವಿಪ್ರಶ್ರೇಷ್ಠರು, ಕಡೂರು ಅಮಲ್ದಾರರು, ಪೋಲೀಸ್ ಇನ್ಸ್ಪೆಕ್ಟರು, ಪ್ರಮುಖ ವರ್ತಕ ಮಂಡಲಿಯವರು ಮುಂತಾದ ಅನೇಕ ಮಹಾ ಜನಗಳು ಎದುರ್ಗೊಂಡು ಮರ್ಯಾದಾಪುರಸ್ಸರವಾಗಿ ಊರ ಸುತ್ತಲು ವಿಜೃಂಭಣೆಯಿಂದ ಮೆರವಣಿಗೆ ಮಾಡಿಸಿಕೊಂಡು, ಮಧ್ಯಾಹ್ನ ಸುಮಾರು ೩॥ ಘಂಟೆಯ ಹೊತ್ತಿಗೆ ನರಸಣ್ಣನವರ ಛತ್ರದಲ್ಲಿಳಿಸಿದರು.

ಈ ಛತ್ರವು ಸದಾ ಪರಸ್ಥಳೀಕರಿಂದ ಕೂಡಿರುವುದಾಗಿಯೂ ಇಂಥ ಮಹನೀಯರುಗಳಿಗೆ ಇಳಿದುಕೊಳ್ಳಲು ಸರ್ವೋತ್ಕೃಷ್ಟವಾಗಿಯೂ ಇರುತ್ತೆ. ಇದರಿಂದ ಅಮಲ್ದಾರ್ ನರಸಣ್ಣನವರ ಧರ್ಮ ಕಾರ್ಯಗಳನ್ನು ಎಷ್ಟು ಶ್ಲಾಘಿಸಿದರೂ ಸ್ವಲ್ಪವಾಗಿಯೇ ಇದೆ. ಸ್ವಲ್ಪ ಕಾಲದ ಹಿಂದೆ ಶ್ರೀ ಶೃಂಗೇರಿ ಸ್ವಾಮಿಗಳವರ ಸವಾರಿಯು ಚಿತ್ತೈಸಿದ್ದಾಗ ಈ ಛತ್ರದಲ್ಲಿಯೇ ಇಳಿದಿತ್ತು. ಆಗ ಈ ಛತ್ರಕ್ಕೆ ಸಂಬಂಧಪಟ್ಟ ಈಶ್ವರ ದೇವಾಲಯವನ್ನೂ ಮತ್ತು ಈಶ್ವರ ವಿಗ್ರಹವನ್ನೂ ನೋಡಿ ಪರಮಾನಂದ ಭರಿತರಾದರು. ಅದರಂತೆಯೇ ಈ ಮಹನೀಯರು ಆಚರಿಸಿದರು. ದ್ವಾದಶಿಯ ದಿವಸ ಸ್ಥಳದ ವಿಪ್ರಶ್ರೇಷ್ಠರ ಭಿಕ್ಷೆಯು ಮತ್ತು ಮರ್ಯಾದೆಗಳು ತ್ರಯೋದಶಿಯ ದಿವಸ ಊರಿನ ವೈಶ್ಯಮಂಡಲಿಯವರ ಮರ್ಯಾದೆಗಳೂ ನಡೆದುವು. ಚತುರ್ದಶಿ ದಿವಸ ಮಿಕ್ಕ ಕೆಲವು ವೈಶ್ಯ ಮಂಡಲಿಯವರಿಂದ ಸ್ವಾಮಿಗಳಿಗೆ ಪಾದಪೂಜೆಯೂ ಭಿಕ್ಷೆ ಮುಂತಾದ ಮರ್ಯಾದೆಗಳೂ ನಡೆದುವು. ಅಮಾವಾಸ್ಯೆಯ ದಿವಸ ಪ್ರಾತಃಕಾಲ ೮ ಘಂಟೆಗೆ ಈ ಸ್ವಾಮಿಗಳವರ ಸವಾರಿಯು ಕಡೂರಿಗೆ ಹೊರಡುವ ಉದ್ದೇಶ್ಯವಾಗಿ ಇಲ್ಲಿಂದ ಹೊರಟು ಮ॥ ಕಣ್ಣಶೆಟ್ಟೀ ರಾಮಣ್ಣನವರಿಂದ ಕಟ್ಟಿಸಲ್ಪಟ್ಟಿರುವ ರಾಮದೇವರ ದೇವಸ್ಥಾನಕ್ಕೂ ಈಶ್ವರ ದೇವರ ದೇವಸ್ಥಾನಕ್ಕೂ ವಿಜಯಮಾಡಿಸಿ, ಅಲ್ಲಿನ ಮೂರ್ತಿಗಳನ್ನು ನೋಡಿ, ಪರಮಾನಂದಭರಿತರಾಗಿ ಈ ರಾಮಣ್ಣನವರು ಮಾಡಿರುವ ಸಾಹಸ ಕಾರ್ಯಗಳಿಗೆ ಅವರನ್ನು ಶ್ಲಾಘಿಸಿದರು. ಈ ಈಶ್ವರ ದೇವಸ್ಥಾನದ ಕಟ್ಟಡ ಪೂರೈಸುವುದಕ್ಕೆ ತಕ್ಕ ಸಹಾಯ ಮಾಡುವದಾಗಿ ವಾಗ್ದಾನ ಮಾಡಿರುತ್ತಾರಂತೆ. ಮಾರ್ಗಶಿರ ಮಾಸದಲ್ಲಿ ಶಿವಗಂಗೆಯಲ್ಲಿ ನಡೆಯುವ ಶ್ರೀ ಶಾರದಾಂಬಾ ಪ್ರತಿಷ್ಠೆಯ ಕಾಲದಲ್ಲಿ ತಕ್ಕ ಸಹಾಯ ಮಾಡುವುದಾಗಿ ಇಲ್ಲಿನ ವೈಶ್ಯಮಂಡಲಿಯವರೆಲ್ಲಾ ಒಪ್ಪಿಕೊಂಡಿರುತ್ತಾರೆ. ಈ ಊರಲ್ಲಿ ಶ್ರೀ ಸ್ವಾಮಿಗಳವರಿಗೆ ಸುಮಾರು ಆರುನೂರು ರೂಪಾಯಿಗಳ ವರೆಗೂ ಪಾದಕಾಣಿಕೆಯನ್ನೊಪ್ಪಿಸಿದರು. ಇವರು ತಮ್ಮ ಧರ್ಮ ಗುಣಗಳನ್ನು ಈ ರೀತಿಯಾಗಿಯೇ ಪ್ರಕಾಶಪಡಿಸುತ್ತಾ ಇರುವುದು ಶ್ಲಾಘನೀಯವಾಗಿದೆ. ಬಳಿಕ ಸರ್ವರಿಗೂ ಫಲ ಮಂತ್ರಾಕ್ಷತೆಗಳನ್ನು ಕೊಟ್ಟು ೧೦ ಘಂಟೆಗೆ ಇಲ್ಲಿಂದ ಮುಂದಕ್ಕೆ ಕಡೂರಿಗೆ ಪ್ರಯಾಣ ಬೆಳೆಸಿದರು.

೩—೭—೦೫. ಬಿ. ವಿ. ಲ.

ಬೀರೂರು.

ಮಾಂಸಾಹಾರ.

ಅಯ್ಯಾ,

ಸುಜನಮಿತ್ರರು ಮೇಲಿನ ವಿಷಯವಾಗಿ ಕಳೆದ ವಾರ ಈ ಪತ್ರಿಕೆಯಲ್ಲಿ ಬರೆದ ಪತ್ರವನ್ನು ಓದಿದೆನು. ಅವರು "ಅಹಿಂಸಾ ಪರಮೋ ಧರ್ಮಃ" ಎಂಬುದರ ಅರ್ಥ ಚೆನ್ನಾಗಿ ತಿಳಿದುಕೊಂಡಂತೆ ತೋರುವದಿಲ್ಲ. ಪ್ರಾಣಿಮಾತ್ರಕ್ಕೆ ಹಿಂಸೆಪಡಿಸದಿರುವದು ಪರಮಧರ್ಮವೆಂದು ಇಷ್ಟೇ ಅರ್ಥವಾದರೆ ಕರುವು ಕುಡಿಯುತ್ತಿರುವದನ್ನು ತಪ್ಪಿಸಿ ಹಾಲನ್ನು ಕರೆದು ಕುಡಿಯುವದು ಪ್ರಾಣಿಹಿಂಸೆಯಲ್ಲವೇ? ಕುದುರೆಗಳನ್ನೂ ಎತ್ತುಗಳನ್ನೂ ಬಂಡಿಗೆ ಕಟ್ಟಿ ಸವಾರಿ ಹೋಗುವದೂ ನೇಗಲುಗಳಿಗೆ ಕಟ್ಟಿ ಉಳುವದೂ ಜೀವಹಿಂಸೆಯಲ್ಲವೇ? ಸ್ಥಾವರ ಜಂಗಮ ಭೇದಯುಕ್ತವಾದ ಜೀವರಾಶಿಯಲ್ಲಿ ಸೇರಿದ ತರಕಾರಿಯ ಗಿಡಗಳಲ್ಲಿ ಎಳೆಯ ಕಾಯಿಪಲ್ಯಗಳನ್ನು ಕಿತ್ತು ವ್ಯಂಜನಗಳು ಮಾಡಿ ತಿನ್ನಬಹುದೇ? ಇವೆಲ್ಲಾ ಪ್ರಾಣಿಹಿಂಸೆಯೆಂದು ಯಾರೂ ಹೇಳಲಾರರು. ಎತ್ತು, ಕುದುರೆ, ಕತ್ತೆ, ಇವು ಬಲಹೀನವಾಗಿದ್ದಾಗ ಹೊರಲಾರದಷ್ಟು ಭಾರವನ್ನು ಹಾಕಿ ಎಳಸುವದೂ ಸುಜನರನ್ನು ಪೀಡಿಸಿ ಪರರಿಗೆ ಅಪಕಾರಮಾಡಿ ವ್ಯಸನಪಡಿಸುವದೂ ಇವೇ ಜೀವಹಿಂಸೆ ಎಂದರಿಯಬೇಕು. ದೇವರ ಸೃಷ್ಟಿಯಲ್ಲಿ ಮನುಷ್ಯನೇ ಉತ್ತಮ ಜೀವಿಯು. ಮಿಗಿಲಾದವುಗಳೆಲ್ಲಾ ಮನುಷ್ಯನಿಗಾಗಿಯೇ ಸೃಷ್ಟಿಯಾಗಿವೆ. ಮನುಷ್ಯನಲ್ಲಿ ಯಾವಯಾವ ಕೆಲಸಕ್ಕೆ ಯಾವಯಾವ ಇಂದ್ರಿಯಗಳು ಬೇಕೋ ಅವೆಲ್ಲಾ ಬೇರೆ ಬೇರೆಯಾಗಿದ್ದು ಇವುಗಳನ್ನೆಲ್ಲಾ ಆಯಾಯ ಕಾರ್ಯಗಳಲ್ಲಿ ಪ್ರವರ್ತಿಸುವಂತೆ ಮಾಡುವ ಮೆದುಳು ಸಹ ಇರುತ್ತದೆ. ಮನುಷ್ಯೇತರ ಜೀವಿಗೆ ಮೆದುಳು ಕಡಮೆ, ನಮ್ಮಗಳ ಹಾಗೆ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳು ಹೆತ್ತವರು ಸಮೀಪ ಬಂಧುಗಳು ಇಷ್ಟರು ಎಂಬ ಮಮಕಾರ ಪಶುಗಳಿಗೆ ಇರುವದಿಲ್ಲ. ಅಥವ ಇದ್ದರೂ ದೀರ್ಘಕಾಲ ಇರದು. ಒಂದು ಕರುವು ಹಾಲು ಕುಡಿಯುವದು ಬಿಟ್ಟಬಳಿಕ ತಾಯಿಯು ಮತ್ತೊಂದು ಕರುವು ಹಾಕಿದಮೇಲೆ ಅದಕ್ಕೆ ಪೂರ್ವದ ಮರಿಯು ತನ್ನದೆಂಬ ಜ್ಞಾನವಿರುವದಿಲ್ಲ. ಆ ಪ್ರಾಣಿಗಳಿಗೂ ನಮ್ಮಂತೆಯೇ ಭಾವನಾದಿಗಳು ದೇವರು ಕೊಟ್ಟಿದ್ದ ಪಕ್ಷದಲ್ಲಿ ಅವುಗಳಿಂದ ನಾವು ಸಹಾಯ ಪಡೆಯುವದು ಕಷ್ಟವಾಗುತ್ತಿತ್ತು. ಇದನ್ನಾಲೋಚಿಸಿಯೇ ದೇವರು ಹಾಗೆ ಮಾಡಲಿಲ್ಲ. ಗಂಡು ಮರಿಯೇ ದೊಡ್ಡದಾಗಿ ತಾಯಿಗೆ ಗರ್ಭನಿಲ್ಲಿಸುವದುಂಟು. ಆಯಾಸವಿಲ್ಲದೆ ಜೀವದೇಹಗಳಿಗೆ ವಿಯೋಗ ಹುಟ್ಟಿಸುವದು ಪಾಪಕೆಲಸವಲ್ಲ. ಹಾಲುಕುಡಿಯುವ ಮರಿಯನ್ನಾಗಲಿ ಮರಿಗಳಿಗೆ ಹಾಲು ಕೊಡುತ್ತಿರುವ ತಾಯಿಯನ್ನಾಗಲಿ ವಧಿಸುವದು ತಪ್ಪು. ಮಾಂಸತಿನ್ನಬಹುದೆಂದು ಹೇಳಿದ ಶಾಸ್ತ್ರದಿಂದ ಪಶುಗಳಿಗೆ ಅವು ತೋಪರೆಯಲ್ಲಿ ಸಿಕ್ಕಿ ನರಳುವಾಗ ಲಕ್ಷಿಸದಿರುವದೂ ಬಾಯಾರಿ ಬಳಲಿದಾಗ ಹುಲ್ಲು ನೀರು ಹಾಕದಿರುವದೂ ತಪ್ಪೆಂದು ಎಲ್ಲರೂ ಒಪ್ಪುವರು. ಅದು ಅಪಕಾರವೇ ಸರಿ.

ಶ್ರೀರಾಮ ದುಷ್ಯಂತ ಮೊದಲಾದ ಪೂರ್ವದ ರಾಜರುಗಳು ಬೇಟೆಗೆ ಹೋಗುತ್ತಿದ್ದು ಮೃಗವನ್ನು ಹೊಡೆದು ತಂದು ಮಾಂಸವನ್ನು ತಿನ್ನುತ್ತಿದ್ದರೆಂದು ರಾಮಾಯಣಾದಿ ಗ್ರಂಥಗಳಲ್ಲಿ ಹೇಳಿ ಇದೆ. ಮೃಗಯಾ ವಿನೋದದಲ್ಲಿ ಅನಾಯಾಸದಿಂದಲೇ ಮೃತಿಯು ಮೃಗಗಳಿಗೆ ಉಂಟಾಗುತ್ತಿತ್ತೆಂದು ಹೇಗೆ ಹೇಳಬಹುದು? ಹೀಗಿದ್ದರೂ "ಅಹಿಂಸಾ ಪರಮೋ ಧರ್ಮಃ" ಎಂದೂ ಒಂದೇ ಬಾಯಿಯಲ್ಲಿ ಎರಡು ಮಾತನ್ನು ಹೇಳುವದರಿಂದ ಇದಕ್ಕೆ ಮೇಲ್ಕೆಹೇಳಿದಂತೆ ಅರ್ಥತಿಳಿದುಕೊಳ್ಳಬೇಕೆಂದು ತೋರುವದು.

ಎಂ. ಆರ್. ಎ.

ಪ್ರಪಂಚದಲ್ಲಿ ದೊಡ್ಡದು ಯಾವದು?

28

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧ "ಅನುಭವಸಾರ"

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಶ್ಲಾಘ್ಯವಾದ ಅಭಿಪ್ರಾಯವನ್ನು ಕೊಟ್ಟಿರುವರು ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪ "ರೋಮನರ ಚರಿತ್ರೆ" ಕ್ರಯ ೦—೬—೦
೫. "ಗ್ರೀಕರ ಚರಿತ್ರೆ" ,, ೦—೨—೦
೬ "ಅನುಭವಾನಂದ" ,, ೦—೬—೦
೭ "ಗಣಿತ ಸಂಜೀವಿನಿ" ೦—೮—೦
೮ "ಗಣಿತ ಚಿಂತಾಮಣಿ" ೦—೧೦—೦
೯ "ಚಾಮರಾಜೇಂದ್ರ ವಿಲಾಸ" ೦—೧೬—೦
೧೦ "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧೨—೦
೧೧ ೧೯೦೫ನೇ ವರುಷದ ಡೈರಿಗಳು "
ಕ್ಲಾತ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦

ಮ್ಯಾನೇಜರ್,
ಸಿ ಎಲ್ ಎಸ್ ಬುಕ್ ಡಿಪ್ಪೋ,
ಮೈಸೂರು

ಜ್ವರಹರ 31

ಇದು ಸಾಧಾರಣ ಜ್ವರ, ಹಳೇಜ್ವರ, ಮೈರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೬—೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಬಿಮುಂಕಪೂರ ರ.

Cream Carpool

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಪಿಮುಂಕಪೂರವನ್ನು ನಾನೂ ನನ್ನ ಕಾಂಪೌಂಡರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಸಂದರ್ಭಗಳಲ್ಲಿಯೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ಬೇಗನೆ ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಮೊದ್ದಿ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ — ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕಂಡ್ ಬೀಚ್ ಲೈನ್, ಮದರಾಸ್.

WESLEYAN MISSION PRESS, MYSORE

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್

20

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಚಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು

ಇದಲ್ಲದೆ ಕನ್ನಡ ಅಕ್ಷರಗಳು—ಟೂಲೈನ್ ಮಿನಿಯನ್, ಪೈಕ, ಲಾಂಗ್ ಪ್ರೈಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳ ಬಹುದು.

ವಿಳಾಸ — ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು

ದಿ ಯೆಂಡೋವ್ಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಉಪಪತ್ತಿ ಕಲ್ಪನಾಸಂಘ, ಚನ್ನಪಟ್ಟಣ

11

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸ್ದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು ಸಾಮಾನ್ಯ ಉಪಗತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂತಾನನಿಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವೆ ನಮ್ಮ ಮೈಸೂರು ಸೀಮೆಯಲ್ಲಿ ಇಲ್ಲಿಲ್ಲ ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಿಮ್ಮ ನೇಮಿತದಾರ ನೇಮಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜಂಟರುಗಳು ಸಂಘದ ಸ್ಯಾನೇಜರಿಗೆ ಬರೆದಲ್ಲಿ ಇತರ ವಿವರಗಳನ್ನು ತಿಳಿದುಕೊಳ್ಳಬಹುದು. ಇಂಥಾ ಏಜಂಟರುಗಳಿಗೆ ದಾರಾಳವಾದ ಬಹುಮಾನ ಕೊಡುತ್ತೆ.

ವಿಳಾ — ಆರ್. ಎಸ್ ಮಹಾಕಂ, ಮಾನೇಜರ್.

ಹೋಮೋಸಿಯಾ

ಕಷ್ಟ ಪರಿಹಾರ — ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಆಠಪಾಕ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಪೇನರಾಕಿಲ್ಲರ ಮಾದರಿಯಾಗಿ ಸಿಕ್ಕುತ್ತ ಈ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ವಾತರ್ಗವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊಡಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ. ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಜಾಸ್ತಿ ಔಷಧವಿರುತ್ತೆ ಈ ರೂ ೨—೮ ಆ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಕುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪುಸ್ತಕಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ —ಹೋಮೋಸಿಯಾ ಕಂಪೆನಿ. ೩೩ ಸೆಕಂಡು ಬೀಚ್ ಲೈನ್ ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

16—6—1905 ರಿಂದ 23—6—1905 ರ ವರೆಗೆ.

ಸ್ಥಳ	ಪ್ಲೇಗ್ ಹಗಲಿದ್ದು	ಸತ್ತದ್ದು	ಹೋದವಾರ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	0	0	5	[illegible]
ಮೈಸೂರು ,,	0	0	2	[illegible]
ಬೆಂಗಳೂರು ಡಿಸ್ಟ್ರಿಕ್ಟು	9	9	75	51
ಮೈಸೂರು ,,	7	3	88	7
ಕೋಲಾರ್ ,,	0	0	44	3
ಕೋಲಾರ್ ಚಿನ್ನದ ಗಣಿಗಳು	0	0	4	
ತುಂಕೂರು ಡಿಸ್ಟ್ರಿಕ್ಟು	1	1	8	
ಹಾಸನ ,,	0	0	15	1
ಚಿತ್ರದುರ್ಗ ,,	0	0	13	
ಕಡೂರ್ ,,	0	0	32	2
ಶಿವಮೊಗ್ಗ ,,	9	5	26	8
ಜುಮ್ಲಾ	19	11	308	2

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ಆಷಾಢ ಶುದ್ಧ ಚೌತಿ ಗುರುವಾರದಿಂದ ಆಷಾಢ ಶುದ್ಧ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಜುಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
6	ಗುರು	ಚೌತಿ	3-30	ಮ	50 16	23
7	ಶುಕ್ರ ‡	ಪಂಚಮಿ	7-40	ಪುಬ್ಬ	16-39	24
8	ಶನಿ ,,	ಷಷ್ಠಿ	[illegible]	ಉತ್ತ	13-2	25
9	ರವಿ *	ಸಪ್ತಮಿ	15-30	ಹಸ್ತ	11-8	26
10	ಚಂದ್ರ	ಅಷ್ಟಮಿ	[illegible]	ಚಿತ್ತ	[illegible] 11	27
11	ಭೌಮ	ನವಮಿ	3-25	ಸ್ವಾತಿ	51 12	28
12	ಬುಧ †	ಏಕಾದಶಿ	[illegible]	ವಿ	7-30	29

‡ ಅಮೃತಯೋಗ
,, ತೀಂದ್ರಿಯಾ ಕೂಮರ್ಪಾಪ ಉತ್ಪಾತಯೋಗ
* ಅಷ್ಟ ವಿಪಾತಿ
† ಶಯನೈಕಾದಶಿ, ಸ್ಮಾರ್ತದ್ವಾದಶಿ

ಪೇಟೆ ಧಾರಣೆ.

ಸಿನಸು.	ಮೈಸೂರು	ಬೆಂಗಳೂರು
ಅಕ್ಕಿ ಒಳ್ಳೆ ಬಲ್ಲಾ ೧ಕ್ಕೆ ರೂ	೧೧—೮—೦	೧೧—೬
ಸಾಧಾರಣ ಅಕ್ಕಿ ಅವಲ್	೧೨—೪—೦	೧೧—೮
,, ಹಾಯಿ	೯—೧೨—೦	೧೧—೪
ಸಾದ್ರಾಸ್ ಅಕ್ಕಿ	೯—೮—೦	೧೧—೮
ಸಣ್ಣಕ್ಕಿ ಅವಲ	೧೨—೦—೦	೧೬—೧೨
,, ಹಾಯಿ	೧೧ ೮ ೦	೦—೪
ಕೊಗರಿ ಬೇಳೆ ಬಲ್ಲಾ ೧ಕ್ಕೆ	೧೧—೮ ೦	[illegible]
,, ಹಾಯಿ	೧೧—೦—೦	೧೧—೪
ಹುಳ್ಳ ರಾಗಿ ಪಲ್ಲಾ ೧ಕ್ಕೆ	೪ ೧೨—೦	೫—೮
ರಾಗಿ	೪—೭—೦	೫—೦
ಜೋಳ	೪—೧೨—೦	೬—೬
ಹಲಸಂದೆ ಪಲ್ಲಾ ೧ಕ್ಕೆ	೮—೧೨—೦	೯—೪
ಬಿಳೀ ಅವರೆ	೬ ೧೨—೦	೮—೮
ಹೆಸರು	೯ ೧೨—೦	೯—೬
ಉದ್ದು	೮ ೧೪ ೦	೯—೪
ಕಡಲೆ	೯ ೦—೦	೮—೪
ಎಳ್ಳು	೧೬ ೦ ೦	೧೭—೧೬
ಹುರುಳಿ	೮—೦—೦	೮—೮
ಹರಳು ೧—೬ ಸೇರಿಗೆ	೯—೮—೦	೧೧—೪
ತೆಂಗೇಕಾಯಿ ಮಣ ೧ಕ್ಕೆ	೨—೪—೦	೨—೧೫
ಮೆಣಸಿನಕಾಯಿ	೪—೮—೦	೪—೪
,, ಹಾಯಿ	೩—೧೨—೦	೩—[illegible]
ಬೆಲ್ಲ ದೊಡ್ಡ ಅಚ್ಚು	೩—೪—೦	[illegible]
ಒಳ್ಳೆ ಮಣ ೧ಕ್ಕೆ	೪—೦ ೦	೪—೧
ತರಳೆ ,,	೪—೦—೦	೪—೪
ಕೊಬ್ಬರಿ ಬಲ್ಲ ೧ಕ್ಕೆ	೬—೦—೦	೯—೪
ಉಪ್ಪು ,,	೮—೦—೦	೬—೦೬
ಹುಣಸೇ ಹಣ್ಣು	೧ ೪—೦	೧—೪
,, ಹಳೇದು	೦—೧೪—೦	೦—೧೫
ಹುಪ್ಪ	೧೨—೦—೦	೧೦—೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫—೩—೦	೪—೪
ತೆಂಗಿನಕಾಯಿ ೧೦೦ ಕ್ಕೆ	೫—೦—೧	೩—೦೫
ಅಳಲೇಕಾಯಿ ಮಣ ೧ಕ್ಕೆ	೧—೦—೦	೦—೧೨
ಅಂಟುವಾಳದಕಾಯಿ ಮಣ ೧ಕ್ಕೆ	೦—೧೪—೦	೦—೧೩
ಚಿನ್ನ (ಪೌನ್) ಒಂದು	೧೫—೮—೦	೧೫—೫
,, ಪವನು	೧೫ ೧೧—೦	೧೫—೯
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೩—೧
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೨—೦—೦	೭೩—[illegible]

Printed and Published by the Rev H Spencer, … the Proprietor and Manager, Wesleyan Mission Pr…
Mysore 6/7/1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಜುಲೈ ತಾರೀಖು ೧೩ ನೇ ಗುರುವಾರ. — ಸಂಚಿಕೆ ೭

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. .. ರೂ ೧—೦—೦

ಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್

ಸೇರಿ .. .. ರೂ ೧—೧೪—೦

,, ,, ,, ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಹೊಸ ನೋಟ್ಸು

ಮುದ್ರಿತ ವಾಗಿರುವ ಎಲ್ಲಾ ಕನ್ನಡ ಪುಸ್ತಕಗಳಿಗೆ ೪ನೇಯ ತರಗತಿಯ ವಿದ್ಯಾರ್ಥಿಗಳಿಗೋಸ್ಕರ.

ಬೇಕಾದನ್ನು ವಿಷಯವಿಳಿದನೆ, ಪ್ರಶ್ನೋತ್ತರ ಈ ನೋಟ್ಸು ಬರೆದು ಅನೇಕ ಪಾಸಾದಾಗ್ಯೂ ಇತರ ನೋಟ್ಸುಗಳ ಗಲಾಟೆಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ ೮ ಆಣೆ

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ) ೦—೦—೬

೪ನೆ ತರಗತಿಯ ಪದ್ಯಸಂಗ್ರಹದ ನೋಟ್ಸು ೦—೧—೬

೧೯೦೫ನೆ ವರ್ಷದ ಲೋವರ್ ಸೆಕಂಡರಿ ನೋಟ್ಸು ೦—೩—೦

ವಿಳಾಸ—ಯಂ. ಎಂ. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು

ಇದು ಕಳೆದ ಜನವರಿ ತಿಂಗಳ ಪ್ರೆಜೆಂಟೇಷನ್ ವಾಚು.

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ಬೈಲ್ಸ್ ಗಾರ್ಡು ಜು ಓಪನ್ ಕೇಸ್ ಕೀಲೆಸ್ ಪೇಟೆಂಟ್ ಲಿವರ್ ವಾಚು ಕಾಂಪೆನ್ಸೇಷನ್ ಬ್ಯಾಲನ್ಸ್ ಬಹು ಬಲಿಷ್ಟವಾದ



ಗಡಿಯಾರ ೫ ವರುಷ ಗ್ಯಾರಂಟೀ ಕ್ರಯ ರೂ ೫-೮-೦ ಈ ವಾಚನ್ನು ಕಳೆದ ಜನರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವವರೊಳಗಾಗಿ ಧರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರದು. ಜಾಗ್ರತೆ ಧರಖಾಸ್ತು ಕಳುಹಿಸಿ ಪ್ರಜೆಂಟೇಷನ್ ಸಾಮಾನುಗಳು.

ಕ್ರಯವುಳ್ಳದ್ದು.

ಚಿನ್ನದ ಗಿರವರ್ ಸಿಲ್ವರ್ ಕಟಾಗುಂಡಿ ೧ ಸೆಟ್ಟು ೦—೧೦—೦

ಹಣ ಹಾಕುವ ಪೆಟ್ಟಿಗೆ ಇಂಗ್ಲಿಷ್ ಮೇದ್ (Cash Box) ೧—೦—೦

ಸುಗಂಧ ಸುವ್ಯತ್ತು ತುಂಬಿದ ಡಬ್ಬಿ ೧ ೦—೮—೦

ಬೆಳಗುವಮನೆ ದೀಪ ಬಹಳ ಸುಂದರವಾದದ್ದು ೦—೩—೦

ಹಳ ಸೊಗಸಾದ ಗಡಿಯಾರದ ಸರಪಣಿ ೦—೮—೦

೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರಿಗೆ ಬರುವ ಜುಲೈ ಅಕ್ಟೋಬರ್ ವರಿಗೆ ಬಹುಮತಿಕ ಗಡಿಯಾರವನ್ನು ಕೊಡುತ್ತಿತ್ತೆ ಜಾಗ್ರತೆ!! ಜಾಗ್ರತೆ!!

ಇತರರು ನಮ್ಮ ಕಂಪನಿಯ ನೋಟೀಸುಗಳಂತೆ ಮುದ್ರಿಸಿ ಪ್ರಿಂಟುಮಾಡಿ ಉಪಯೋಗವಿಲ್ಲದ ಸಾಮಾನುಗಳನ್ನೂ ಗಡಿಯಾರವನ್ನೂ ಕಳುಹಿಸುತ್ತಿರುವದರಿಂದ ಮೇಲ್ಕಂಡ ಕಂಪನಿಯ ಸರನ್ನು ಈ ಪಕ್ಕದಲ್ಲಿ ಇಟ್ಟುಕೊಳ್ಳಬೇಕೆಂದು ಕೋರುತ್ತೇವೆ.

ವಿಳಾಸ:—ಮ್ಯಾನೇಜರ್, ಫ್ರಾಂಕ್ಲಿನ್ ವಾಚ್ ಕಂಪೆನಿ,

ಪಾರ್ಕ್ ಟವನ್, ಮದರಾಸ್.

ಬಹಳ ಸುಲಭ! ಬಹಳ ಸಮಯ!

4

ಒಳ್ಳೇ ತರಹ ಟ್ವಿಲ್, ಪ್ಯಾಟಂಗ್, ಫ್ಲಾನಲ್ ವಗೈರೆ ಷರ್ಟುಗಳು ನಮ್ಮಲ್ಲಿ ದೊರೆಯುತ್ತವೆ ವಿ. ಪಿ ಪಿ ಮೂಲಕ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ಸಹ ಸುಲಭ.

ಸಂಪಿಗೆ ಶಾಮರಾವ್, ಮರ್ಚಂಟ್—ಟೈಲರ್,

೪೦೩—೩ ಚಿಕ್ಕಪೇಟೆ, ಬೆಂಗಳೂರು ಸಿಟಿ

ಕಥಾಸಂಗ್ರಹ—ಮೊದಲನೆ ಭಾಗ.

15

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ನ ತಿಯ ಕಥಾಸಂಗ್ರಹದಲ್ಲಿ ೧ ೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ದಾತಿನ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಸೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವದು ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣುಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ ವಿ ಪಿ ಮೂಲಕವೂ ಕಳುಹಿಸುತ್ತೆ ವಿಳಾಸ —ಮ್ಯಾನೇಜರ್,

ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು

P. SUBBAROY'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11

ಲಕ್ಷ್ಮೀಕರ ಕಸ್ತೂರಿಮಾತ್ರೆ

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು ಬೆಳಿಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ, ಬರಳು ವ ೦೦ ಕಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇಮಕ್ಕಳಿಂದ ಮುದುಕರವರೆಗೆ ಎಲ್ಲರೂ ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು. ಕ್ರಯ.—ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೬ ಸೀಸೆಗೆ ವಿ. ಪಿ. ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕಾರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ —ರಿ ಮಹಮದ್ ಸಮಾದಾನಿ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಕ್ಕಿಬೇಳೆ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ —ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಆದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು —ಪುತ್ತೂರು ಪೋಲೀಸ್ ಇನ್ಸ್‌ಪೆಕ್ಟರ್

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕಾನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡುತ್ತವೆ.—ಜೆ. ಕೃಷ್ಣಯ್ಯಂಗಾರ್, ಟೆಲಿಗ್ರಾಫ್ ಸಿಗ್ನಲರ್ ಪೆನ್ಷನರ್, ಕ್ವೆಲಾರ್.

Apply to —P. SUBBAROY,

Porto Novo, South Arcot.

ವಿಳಾಸ.—ಪಿ. ಸುಬ್ಬರಾಯರ್,

ಪೋರ್ಟೊನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ

WANTED WILD ANIMALS.

ಬೇಕಾಗಿದೆ. — ಬೇಕಾಗಿದೆ.

14

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—MR HUGHES, MYSORE ZOO.

ಶ್ರೀ ತಾಂಬೂಲ.

31

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲ

ದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಕಫ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ ನಮ್ಮ ವಿಳಾಸ —

ದೇವನಹಳ್ಳಿ ಟವನ್, — ಯಂ. ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್. — ಮೆಡಿಕಲ್ ಪ್ರಾಕ್ಟಿಷನರ್.

ಜರೂರ್ ಆಗಿ ಬೇಕಾಗಿದೆ.

2

೧೦೦ ಜನ ಏಜೆಂಟರು ನಮ್ಮ ಕಂಪನಿಯ ಪದಾರ್ಥಗಳನ್ನು ಮಾರಲಿಕ್ಕೆ. ಮಾಹೇಯಾನ ತಲಬು ರೂ. ೨೫, ಅಥವಾ ರೂ ೧೫, ಅಥವಾ ರೂ ೧೦ ಕೊಡಲ್ಪಡುತ್ತೆ ಪ್ರತಿ ಏಜೆಂಟರು ರೂ. ೧೦೦, ಅಥವಾ ರೂ. ೫೦, ಅಥವಾ ರೂ. ೨೫ ಡಿಪಾಜಿಟು ಪ್ರಕಾರ ಈ ಕಂಪನಿಯಲ್ಲಿ ಟೇವಣಿ ಇಡಬೇಕು ಅಪೇಕ್ಷೆಯುಳ್ಳವರು ೨ ಆಣೆ ಸ್ಟಾಂಪಿಟ್ಟು ಅರ್ಜಿ ಬರೆದುಕೊಳ್ಳತಕ್ಕದ್ದು. ವಿಳಾಸ —

The Manager, The Rational Therapeutical Corporation, Basavapur, Bangalore City.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

3

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮ॥ ಟಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಸೇಕಡಾ ೧೨½ ಯಂತೆ ಡಿಸ್ಕೌಂಟು ಕೊಡಲಾಗುವದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು.

ಕ್ರಯ:—೧ ಪ್ರತಿಗೆ ೩ ಆಣೆ, ಪೋಸ್ಟೇಜು ೧ ಆಣೆ.

ಸಚೇತಾ ವೀರಶೈವಾಂತ್ಯೇಷ್ಟಿವಿಧಿಯು.

ಬಿಕರಿಗೆ ಸಿದ್ಧವಾಗಿದೆ. ವಿ. ಪಿ. ಸೇರಿ ೧ ಪ್ರತಿಗೆ ೮ ಆಣೆ. ಒಟ್ಟಾಗಿ ೧೦ ಪ್ರತಿ ತರಿಸಿಕೊಂಡರೆ ೧ ಪ್ರತಿ ಕೆಟ್ಟಾಗಿ ಸಿಕ್ಕುತ್ತೆ. ಬೇಗ ಬರೆದು ತರಿಸಿಕೊಳ್ಳಿ. ವಿಳಾಸ—ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಚಿಕ್ಕನಹಳ್ಳಿ ಮಠದ ಸಿದ್ಧಲಿಂಗದೇವರು.

ವೇದಾಂತ ಪಂಡಿತರಿಗೆ ಅಗತ್ಯ ಬೇಕಾದದ್ದು.

ದೇವಾಗಮಾರ್ಥ ಪ್ರಕಾಶಿಕೆ | ದೇವಾಗಮಾರ್ಥ ಪ್ರಕಾಶಿಕೆ

ಸ್ವಲ್ಪ ಪ್ರತಿಗಳಿವೆ ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸಮ್ಮಾವ ತಾರಕ್ಕೂ ಸುಂದರವಾದ ೧೪ ತಸ್ವೀರಿದೆ. ಕ್ರಯ ಸುಲಭವಾಗಿದೆ. ೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೨—೮. ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೧—೮ ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮. ತಕ್ಷಣ ಮಣಿಆರ್ಡರಿಗೂ ವಿ ಪಿ ಲ್ಲೂ ಕಳುಹಿಸುತ್ತೆ ವಿಳಾಸ—ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ.

ಶ್ರೀಮುಖದ ಬಂದಿನ.

ಶ್ರೀ ಜಗದ್ಗುರು ಶ್ರೀ ಶೃಂಗೇರೀ ಶಿವಗಂಗಾ ಶ್ರೀ ಸುಬ್ರಹ್ಮಣ್ಯಾಭಿನವ ಸಚ್ಚಿದಾನಂದ ಭಾರತಿ ಸ್ವಾಮಿಗಳವರು ಅಪ್ಪಣೆಕೊಡಿಸುವದೇನೆಂದರೆ —"ಚಿಕಿತ್ಸಕ ವಿ. ಡಿ. ಪಂಡಿತರವರಿಂದ ತಯಾರಾದ ಕೇಸರಾರ್ಕಮಧುವು ಎಲ್ಲಾ ವಿಧವಾದ ಜ್ವರಗಳಿಗೂ ಅತ್ಯಂತ ಗುಣವನ್ನು ವ್ಯಾಧಿಕೋಟಿಗಳಿಗೆ ಕೊಡುವದರಲ್ಲಿ ಯಾವ ಸಂದೇಹವೂ ಇಲ್ಲವೆಂದು ನಾವು ಎಂತಿತವಾಗಿ ಆಶೀರ್ವದಿಸಿರುತ್ತೇವೆ ಮತ್ತು ಕೇಸರಾರ್ಕಮಧುವನ್ನು ನಾವು ಸಂಚಾರದಲ್ಲಿ ಉಪಯೋಗಿಸಲು ನಮ್ಮ ಸಂಸ್ಥಾನದ ಶಿಷ್ಯಮಂಡಲಿಯವರಿಗೆ ಇದನ್ನೇ ಉಪಯೋಗಿಸುತ್ತಾ ಬರುತ್ತೇವೆ" ರಕ್ತ ಶೋಧಕ, ರೋಗನಾಶಕ, ಸ್ತ್ರೀಜೀವನಾಮೃತ, ಕೇಸರಾರ್ಕಮಧು, ಇವೇ ಮೊದಲಾದ ನಮ್ಮ ಔಷಧಗಳು ಮೈಸೂರು "ಚಿಂತಾಮಣಿ" ಆಫೀಸ್ ಮ|| ರಾಮನಾಥಯ್ಯನವರಲ್ಲಿ ದೊರೆಯುತ್ತವೆ ನಮ್ಮ ಔಷಧಗಳ ಕ್ಯಾಟಲಾಗು ಅಪೇಕ್ಷಿಸುವವರು ಅರ್ಧಾಣೆ ಲೇಬಲ್ ಕಳುಹಿಸಿ ತರಿಸಿಕೊಳ್ಳಬಹುದು.

ವಿಳಾಸ—ಚಿಕಿತ್ಸಕ, ವಿ ಡಿ. ಪಂಡಿತರು, ಬೆಂಗಳೂರು ಸಿಟಿ.

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು.



ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚೆನ್ನಾಗಿ ಬಿಟ್ಟುಹೋದೀತು ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೆನ್ ನೋವುಹರಪೇಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ. ; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು'—

ಡಬ್ಲ್ಯೂ. ಇ. ಸ್ಮಿತ್ ಅಂಡ್‌ಕಂಪೆನಿ,
ಮೌಂಟ್ ರೋಡ್,
ಮದರಾಸ್.

ವೃತ್ತಾಂತ ಪತ್ರಿಕೆ.

:o:

ಸರ್ ೧೯೦೫ ನೇ ಇಸವಿ ಜುಲೈ ತಾ|| ೧೩ ನೇ ಗುರುವಾರ.

ಮೈಸೂರು ಪ್ರಜಾಪ್ರತಿನಿಧಿ ಸಮಾಜವು.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ವಿಷಯವಾಗಿಯೂ ಅವರ ವಿಜ್ಞಾಪನೆಗಳ ವಿಷಯವಾಗಿಯೂ ಸರ್ಕಾರದವರು ಕೆಲವು ಹೊಸ ಬದಲಾವಣೆಗಳನ್ನು ಮಾಡಿ ಪ್ರಕಟಿಸಿರುತ್ತಾರೆ. ಈ ಬದಲಾವಣೆಗಳು ಸರ್ಕಾರದವರಿಗೂ ಪ್ರತಿನಿಧಿಗಳಿಗೂ ತುಂಬಾ ಅನುಕೂಲವಾಗಿರುವವು. ಮೆಂಬರುಗಳು ಸಭೆಯಲ್ಲಿ ಚರ್ಚೆಗೆ ತರಬೇಕೆಂದು ಸೂಚಿಸತಕ್ಕ ವಿಷಯಗಳಿಗೆ ಕಾಲ ನಿಯಾಮಕವಿರಲಿಲ್ಲವು. ಸರ್ಕಾರದವರು ಅಂಥಾ ವಿಷಯಗಳನ್ನೆಲ್ಲಾ ಕ್ರೋಢೀಕರಿಸುವುದಕ್ಕಾಗಲಿ ಅವುಗಳ ವಿಚಾರವಾಗಿ ಹಿಂದಿನ ದಾಖಲೆ ಮುಂತಾದ್ದನ್ನು ತೆಗೆದು ಸಿದ್ಧಪಡಿಸಿಕೊಳ್ಳುವುದಕ್ಕಾಗಲಿ ಅವಕಾಶವಾಗುತ್ತಿರಲಿಲ್ಲವು. ಈ ಸಭೆ ಕೂಡುವುದಕ್ಕೆ ಮುಂಚೆ ಸೆಕ್ರೆಟೇರಿಯೆಟ್ಟಿನ ನೌಕರರಿಗೆ ಸಭೆಯ ಕಾರ್ಯಗಳ ವಿಷಯದಲ್ಲಿ ತುಂಬಾ ಗಲಭೆಯುಂಟಾಗಿ ಆತುರಪಟ್ಟು ಕೆಲಸಗಳನ್ನು ಪೂರೈಸುವುದೇ ಕಷ್ಟವಾಗುವುದು. ಇದಲ್ಲದೆ ಮೆಂಬರುಗಳು ಒಟ್ಟಾಗಿ ಸೇರಿ ಮೊದಲೇ ವಿಷಯಗಳನ್ನು ಚನ್ನಾಗಿ ಚರ್ಚೆಮಾಡಿಕೊಳ್ಳುವುದಿಲ್ಲ. ಒಬ್ಬೊಬ್ಬರು ಒಂದೊಂದು ವಿಧವಾಗಿ ವಿಷಯಗಳನ್ನು ಸೂಚಿಸುವರು. ಮತ್ತು ಅವರು ಸೂಚಿಸುವ ವಿಷಯಗಳನ್ನು ಸಂಕ್ಷೇಪವಾಗಿಯೂ ಸ್ಪಷ್ಟವಾಗಿಯೂ ವಿವರಿಸುವುದಿಲ್ಲ. ಇದರಿಂದ ಸರ್ಕಾರಿ ನೌಕರರ ಕಷ್ಟವು ಮತ್ತಷ್ಟು ಹೆಚ್ಚುತ್ತದೆ. ಈ ವಿಧವಾದ ಅನಾನುಕೂಲಗಳನ್ನು ಸಾಧ್ಯವಾಗುವಷ್ಟುಮಟ್ಟಿಗೂ ನಿವಾರಣೆ ಮಾಡಬೇಕೆಂದು ಸರ್ಕಾರದವರು ಮಾಡಿರುವ ಬದಲಾವಣೆಗಳ್ಯಾವವೆಂದರೆ—

ಈ ವರ್ಷದ ಪ್ರತಿನಿಧಿ ಸಭೆಯು ಬರುವ ಅಕ್ಟೋಬರ್ ತಿಂಗಳ ೧೧ ನೇ ತಾರೀಖು ಬುಧವಾರ ಪ್ರಾರಂಭವಾಗುವುದು. ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ ಚುನಾಯಿಸಲ್ಪಟ್ಟ ಮೆಂಬರುಗಳ ಪಟ್ಟಿಯನ್ನೂ ಆ ಪೈಕಿ ಎಷ್ಟು ಮಂದಿ ಈ ಸಲ ಸಭೆಗೆ ಬರಹುದೆಂಬುವುದನ್ನೂ ಸೆಪ್ಟೆಂಬರ್ ೧ನೇ ತಾರೀಖಿಗೆ ಮುಂಚೆ ಸೆಕ್ರೆಟೇರಿಯಟ್ಟಿಗೆ ತಿಳಿಸಬೇಕು. ಮತ್ತು ಮೆಂಬರುಗಳು ತಿಳಿಸುವ ವಿಷಯಗಳನ್ನು ಅವರು ಹೇಳುವ ಪ್ರಕಾರವೇ ಡೆಪ್ಯುಟಿ ಕಮಿಷನರುಗಳು ಸ್ಪಷ್ಟವಾಗಿಯೂ ಸಂಕ್ಷೇಪವಾಗಿಯೂ ಬರೆದುಕೊಂಡು, ಅಂಥಾ ಪ್ರತಿ ವಿಷಯಕ್ಕೂ ಡೆಪ್ಯುಟಿ ಕಮಿಷನರ ಅಭಿಪ್ರಾಯವನ್ನು ಕಾಣಿಸಿ ಸೆಪ್ಟೆಂಬರ್ ೧ ರೊಳಗಾಗಿ ತಲುಪುವಂತೆ ಸೆಕ್ರೆಟೇರಿಯಟ್ಟಿಗೆ ಕಳುಹಿಸತಕ್ಕದ್ದು. ಅಕ್ಟೋಬರ್ ೮ ರೊಳಗೆ ಮೈಸೂರಿನಲ್ಲಿ ಆಯಾ ಡಿಸ್ಟ್ರಿಕ್ಟಿನ ಮೆಂಬರುಗಳು ಪ್ರತ್ಯೇಕ ಪ್ರತ್ಯೇಕವಾಗಿ ಸಭೆಸೇರಿ, ಇತರ ಮುಖ್ಯ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಬೇಕು ಈ ಬದಲಾವಣೆಯ ಪ್ರಯೋಜನಗಳನ್ನು ಮೆಂಬರುಗಳು ತಿಳಿದುಕೊಂಡು, ಆಯಾ ಡಿಸ್ಟ್ರಿಕ್ಟಿನವರು ಪಕ್ಷಭೇದವಿಲ್ಲದೆ ವಿಷಯಗಳನ್ನು ಮೊದಲೇ ಚನ್ನಾಗಿ ಚರ್ಚೆಮಾಡಿಕೊಳ್ಳಬೇಕಾಗಿದೆ ಅನೇಕ ಅಲ್ಪ ವಿಷಯಗಳನ್ನು ಸಭೆಯಲ್ಲಿ ಚರ್ಚೆಗೆ ತರುವುದಕ್ಕಿಂತಲೂ ಮುಖ್ಯ ಮುಖ್ಯವಾದ ಕೆಲವನ್ನು ಮಾತ್ರ ಸೂಚಿಸುವುದರಲ್ಲಿ ತುಂಬಾ ಪ್ರಯೋಜನವಾದೀತೆಂದು ಅಭಿಪ್ರಾಯಪಡುವೆವು. ಇದುವರೆಗೆ ಪ್ರತಿನಿಧಿ ಸಭೆಯಲ್ಲಿ ನಡೆಯುತ್ತಾ ಬಂದಿರುವ ಕಾರ್ಯವನ್ನು ನೋಡಲಾಗಿ ಮೆಂಬರುಗಳು ಅನೇಕ ಅಲ್ಪ ಸಂಗತಿಗಳನ್ನೂ ಅಸಾಧ್ಯ ವಿಷಯಗಳನ್ನೂ ಅನಾವಶ್ಯವಾದ ವಿಚಾರಗಳನ್ನೂ ಕುರಿತು ಚರ್ಚೆಮಾಡುತ್ತಾ ಸಭೆಯ ಸಮಯವನ್ನು ವ್ಯರ್ಥಮಾಡುವರು. ಈ ವರ್ಷದ ಸಭೆಯು ಹೀಗೆ ಆಗಲಾರದೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಸರ್ ಲೂಯಿ ಡೇನ್ ಎಂಬ ಸರ್ದಾರರು ನಮ್ಮ ಸಂಸ್ಥಾನಕ್ಕೆ ಬ್ರಿಟಿಷ್ ರೆಸಿಡೆಂಟರಾಗಿ ದಯಮಾಡುವರೆಂದು ಉತ್ತರ ದೇಶದ ಪತ್ರಿಕೆಗಳು ತಿಳಿಸುವವು.

*****

ಮುಂದಿನ ವಾರ ಶ್ರೀಮನ್ ಮಹಾರಾಜರವರು ಬೆಂಗಳೂರಿನಿಂದ ನೀಲಗಿರಿಗೆ ದಯಮಾಡಿ, ಮದರಾಸ್ ಗವರ್ನರವರನ್ನು ಕಂಡು ಬರುವವರಾಗಿದ್ದಾರೆ.

*****

ಬೆಂಗಳೂರು ತಾಲ್ಲೂಕಿನಲ್ಲಿ ಇಬ್ಬರು ಒಂದು ಮಗುವನ್ನು ಮಾರಮ್ಮನಿಗೆ ಬಲಿಕೊಟ್ಟರೆಂದು ಮೊಕದ್ದಮೆ ಆಗಿ ಕಳೆದ ವಾರ ಅವರಿಬ್ಬರಿಗೂ ಸೆಷನ್ಸ್ ಜಡ್ಜರು ಫಾಸಿ ಶಿಕ್ಷೆಯನ್ನು ವಿಧಿಸಿದಾರೆ.

*****

ಬೆಂಗಳೂರು ಚಾಮರಾಜಪೇಟೆಯಲ್ಲಿದ್ದ ವೆರ್ನ್ಯಾಕ್ಯುಲರ್ ಅಮಲ್ದಾರ್ ಮ|| ಎನ್. ಶಾಮಣ್ಣನವರು ಹಿಂದಿನ ಮಂಗಳವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೬೦ ವಯಸ್ಸಾಗಿತ್ತು.

*****

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವನ್ನು ತಲೆದೋರದಂತೆ ಮಾಡಬೇಕೆಂದು ಪ್ಲೇಗ್ ಇಲಾಖೆಯವರು ಒಂದು ತರಹ ವಿಷವನ್ನು ಮನೆಗಳಿಗೆ ಹಂಚಿಕೊಟ್ಟು, ಅದರ ಮೂಲಕ ಇಲಿ ಹೆಗ್ಗಣಗಳನ್ನು ನಿರ್ಮೂಲಮಾಡಲಾರಂಭಿಸಿದಾರೆ.

*****

ವ್ಯವಸಾಯ, ವ್ಯಾಪಾರ, ಕೈಗಾರಿಕೆ ಮೊದಲಾದವುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಪ್ರಜೆಗಳು ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸಿಕೊಳ್ಳುವಂತೆ ಸರ್ಕಾರದವರು ಈಗಲೇ ಒಂದು ಕಾನೂನನ್ನು ಜಾರಿಗೆ ತಂದಿರುತ್ತಾರೆ.

*****

ಮ|| ಸ್ಪಾರ್ಕ್ಸ್ ರವರಿಗೆ ಸ್ಪೆಷಲ್ ಡ್ಯೂಟಿಯ ಮೇಲೆ ವರ್ಗವಾಯಿತೆಂತಲೂ ಮ|| ಕಾಂತರಾಜೇ ಅರಸಿನವರಿಗೆ ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಕೆಲಸ ನೇಮಕವಾಯಿತೆಂತಲೂ ಜನರು ಆಡಿಕೊಳ್ಳುವ ಮಾತು ನಿಜವಲ್ಲವೆಂದು ತಿಳಿದುಬಂದಿದೆ.

*****

ಶ್ರೀಮನ್ಮಹಾರಾಜರವರು ಈಗಿರುವ ಎಕ್ಸಿಕ್ಯೂಟಿವ್ ಕೌನ್ಸಿಲ್ ಎಂಬ ಸಭೆಯನ್ನು ರಜಾ ಮಾಡಿ, ಅದಕ್ಕೆ ಬದಲಾಗಿ ರೆವಿನ್ಯೂ ಬೋರ್ಡನ್ನು ಏರ್ಪಡಿಸುತ್ತಾರೆಂತಲೂ ಈ ಬೋರ್ಡಿಗೆ ಮ|| ನರಲ್ ಗ್ರಾಂಟ್‌ಯವರನ್ನು ಅಧ್ಯಕ್ಷರನ್ನಾಗಿ ಮಾಡುವರೆಂತಲೂ ವರ್ತಮಾನವಿದೆ.

*****

ಶ್ರೀಮನ್ಮಹಾರಾಜರವರು, ಮ|| ಮೆಕಾನಕಿಯವರು, ಮ|| ರಾಘವೇಂದ್ರರಾಯರು, ಮ|| ಗೋಪಾಲರಾಜೇ ಅರಸಿನವರು ಕಳೆದ ಭಾನುವಾರ ಬೆಳಿಗ್ಗೆ ೧೧ ಗಂಟೆಗೆ ರಾಜಧಾನಿಯಿಂದ ಮೋಟಾರ್ ಗಾಡಿಗಳಲ್ಲಿ ಬೆಂಗಳೂರಿಗೆ ದಯಮಾಡಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು.

*****

ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಗೆ ದಯಮಾಡಿದಾಗ್ಗೆ ಅವರಿಗೆ ದಿಢನವಾಗುವ ದಿನ ಹತ್ತಿಸುವ ವಿಚಿತ್ರ ತರಗಳಾದ ಆನೇಕ ಬಾಣಬಿರುಸುಗಳನ್ನು ಲಂಡನ್ ಪಟ್ಟಣದಿಂದ ತರಿಸಬೇಕೆಂದು ಶ್ರೀಮನ್ ಮಹಾರಾಜರವರು ಅವುಗಳಿಗಾಗಿಯೇ ೨೦,೦೦೦ ರೂಪಾಯಿ ಖರ್ಚುಮಾಡುವವರಾಗಿದಾರೆಂದು ಕೇಳುತ್ತೇವೆ.

*****

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಮಸೀದಿಯ ಬಳಿ ಇರುವ ಪೋಲೀಸ್ ಕಾನ್ಸ್ಟೆಬಲ್ ಅಬ್ದುಲ್ ಮಜೀದ್ ಸಾಬ್ ಎಂಬಾತನು ಹಾವುಕಚ್ಚಿದವರಿಗೆ ಔಷಧ ಹಾಕಿ ವಾಸಿಮಾಡುತ್ತಾನೆಂತಲೂ ಕಳೆದ ವಾರ ಹಾವುಕಚ್ಚಿದ ಸಿದ್ದೇಗೌಡನೆಂಬುವವನನ್ನು ಔಷಧ ಕೊಟ್ಟು ಗುಣಮಾಡಿದನೆಂತಲೂ ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

*****

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಕುದುರೆ ಜೂಜಿನಲ್ಲಿ ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜೇ ಅರಸಿನವರ ಎರಡು ಕುದುರೆಗಳು ಮೊದಲನೆಯದಾಗಿ ಓಡಿದ್ದರಿಂದ ಸುಮಾರು ಐದು ಸಾವಿರ ರೂಪಾಯಿ ಬಹುಮಾನ ಸಿಕ್ಕಿತವು. ಶ್ರೀಮನ್ ಮಹಾರಾಜರವರು ಇಟ್ಟಿದ್ದ ಭಾರೀ ಇನಾಮನ್ನೂ ಮ|| ಅರಸಿನವರ ಕುದುರೆಗಳು ಸಂಪಾದಿಸಿದವು.

*****

ದಾವಣಗೆರೆಯಲ್ಲಿ ಶ್ರೀ ಕೊಟ್ಟೂರು ಸ್ವಾಮಿಗಳ ಮೆರವಣಿಗೆ ವಿಚಾರದಲ್ಲಿ ಸರ್ಕಾರದವರು ೧೮ ಜನರನ್ನು ದೊಂಬಿಮಾಡಿದರೆಂದು ಹಿಡಿದು ದರ್ಯಾಫ್ತು ಮಾಡುತ್ತಿದಾರೆ. ಶಿವಮೊಗ್ಗೆಯ ಅಡ್ವೊಕೇಟ್ ಮ|| ಗರುಡಾಚಾರ್ಯರು ಅಪರಾಧಿಗಳ ಕಡೆ ವಕೀಲರಾಗಿರುವರು. ಫಿರ್ಯಾದಿ ತರಫು ಮೊಕದ್ದಮೆ ಪೂರೈಸಿದ ಮೊಕದ್ದಮೆಯನ್ನು ಮುಂದಿನ ತಿಂಗಳ ೨೯ಕ್ಕೆ ಹೀರಿಂಗು ಇಟ್ಟಿದಾರೆ.

*****

ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಗೆ ದಯಮಾಡಿದ ಕಾಲದಲ್ಲಿ ಇಲ್ಲಿನ ಟೌನ್ ಹಾಲ್ ಬಂಗಲೆಯ ಎದುರಿಗೆ ಲೇಟ್ ಮಹಾರಾಜರವರ ಹೊಸ ಲೋಹ ಪ್ರತಿಮೆಯನ್ನು ಪ್ರತಿಷ್ಠೆ ಮಾಡುವರು. ಆಸ್ಪತ್ರೆ ಎದುರಿನ ಮೈದಾನದಲ್ಲಿ ಕಟ್ಟಲ್ಪಡುವ ಸರ್ಕಾರಿ ಹೆಂಗಸರ ವಿದ್ಯಾಶಾಲೆಗೆ ಅಸ್ತಿಭಾರವನ್ನು ಹಾಕುತ್ತಾರೆ; ಬೆಂಗಳೂರಿಗೂ ದಂಡಿಗೂ ನಡುವೆ ಕಬ್ಬನ್ ಪಾರ್ಕ್ ಎಂಬ ಉದ್ಯಾನವನದಲ್ಲಿ ಲೇಟ್ ಚಕ್ರವರ್ತಿನಿಯವರ ಲೋಹಪ್ರತಿಮೆಯನ್ನು ಪ್ರತಿಷ್ಠೆ ಮಾಡುವರು.

*****

ಮೈಸೂರು ರತ್ನಾವಳಿ ನಾಟಕದ ಕಂಪನಿಯವರು ಕೋಲಾರದಲ್ಲಿ ಎರಡು ನಾಟಕಗಳನ್ನು ಆಡಿದ್ದರಲ್ಲಿ ಅಲ್ಲಿನ ಪ್ರಜೆಗಳು ತುಂಬಾ ಸಂತೋಷಪಟ್ಟು, ಕಂಪನಿಯ ಇಬ್ಬರು ಮೆಂಬರುಗಳಿಗೆ ಮೆಡಲ್ ಎಂಬ ಬಿರುದುಗಳನ್ನು ಕೊಟ್ಟದಾರೆ. ವರದಾಚಾರ್ಯರಿಗೆ ಚಿನ್ನದ ಮೆಡಲ್, ಚಿನ್ನದ ಗಡಿಯಾರ ಸರಪಣಿಗಳನ್ನೂ ಕಮೂರ್ತಿಯವರಿಗೆ ಚಿನ್ನದ ಮೆಡಲನ್ನೂ ಕೊಟ್ಟರು. ಈಗ ಕಂಪನಿಯವರು ರಾಜಧಾನಿಯ ಟೌನ್ ಹಾಲಿನಲ್ಲಿ ನಾಟಕವಾರಂಭಿಸಿದಾರೆ.

*****

ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ಕಾಕನಕೋಟೆ ಕಾಡಿನಲ್ಲಿ ಆನೆಗಳನ್ನು ಹಿಡಿಯುವ ವಿಧಾನವನ್ನು ತೋರಿಸುವುದಕ್ಕೋಸ್ಕರ

ಮೈಸೂರು ಸರ್ಕಾರದವರು ಏರ್ಪಾಡು ಮಾಡಲಾರಂಭಿಸಿದಾರೆ. ಈ ಕೆಡ್ಡಾ ಏರ್ಪಾಡಿಗೆ ಗವರ್ನಮೆಂಟಿನವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುವರು. ಈ ಪೈಕಿ ೨೫,೦೦೦ ರೂಪಾಯಿ ಖರ್ಚುಮಾಡಿ ಎರಡು ಸಾವಿರ ಆನೆಗಳನ್ನು ಹೊಂದಿಸಿಕೊಳ್ಳುತ್ತಾರೆ. ಮೆ॥ ಮುತ್ತಣ್ಣನವರೂ ಮೆ॥ ಶ್ರೀನಿವಾಸರಾಯರೂ ಈ ಕೆಡ್ಡಾ ಏರ್ಪಾಡಿಗೆ ನೇಮಕವಾಗಿದಾರೆ.

*****

ರಾಜಧಾನಿಯ ಹೆಡ್ ಪೋಸ್ಟ್ ಮಾಸ್ಟರ್ ಮೆ॥ ಏಮಸ್‌ಯವರು ಕಲ್ಲಿಕೋಟೆ ಪೋಸ್ಟ್ ಮಾಸ್ಟರಾಗಿ ವರ್ಗಮಾಡಲ್ಪಟ್ಟು ಪ ರ್ವವಾಯಿತು ಮೆ॥ ರಿಕೆಟ್ಸ್ ಯವರನ್ನು ಇಲ್ಲಿಗೆ ಕಳುಹಿಸಿದ್ದರು. ಅಂಚೆ ಇಲಾಖೆಯವರು ಇವರನ್ನು ಬೆಂಗಳೂರಿಗೆ ಡಿಪ್ಟಿ ಪೋಸ್ಟ್ ಮಾಸ್ಟರಾಗಿ ವರ್ಗಮಾಡಿದಾರೆ. ಕಲ್ಲಿಕೋಟೆಯಿಂದ ಮೆ॥ ಏಮಸ್‌ಯವರು ಮುಂದಿನ ವಾರ ಬಂದು ಕೆಲಸದ ಭಾರವನ್ನು ವಹಿಸುವರು

*****

ನಂಜನಗೂಡು ತಾಲ್ಲೂಕು ಸಿಂಧುವಳ್ಳಿಯಲ್ಲಿರುವ ಜಂಗಮ ಮಠವು ತುಂಬಾ ಶಿಥಿಲವಾಗಿದೆ ಎಂತಲೂ ಅದರಲ್ಲಿ ಪ್ರಯಾಣಸ್ಥರಿಗೆ ಯಾವ ಸೌಕರ್ಯವೂ ದೊರಕುವದಿಲ್ಲವೆಂತಲೂ, ಆ ಮಠಕ್ಕೆ ಬಿಟ್ಟಿರುವ ಇನಾಂ ಜಮೀನುಗಳನ್ನು ಸಿದ್ದಲಿಂಗಪ್ಪನೇ ಮೊದಲಾದ ಮೂರು ಮಂದಿ ಅನುಭೋಗಿಸುತ್ತಿದಾರೆಂತಲೂ ಈ ಕಾರಣದಿಂದ ಆ ಜಮೀನುಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂತಲೂ ಅಮಲ್ದಾರರವರು ರಿಪೋರ್ಟು ಮಾಡಿದರು. ಗವರ್ನಮೆಂಟಿನವರು ಆ ಮಠದ ವಿಚಾರವನ್ನೆಲ್ಲಾ ಗನಿಬ ಮಾಡಿಸಿ, ಆ ಜಮೀನುಗಳನ್ನು ಮುಜರಾಯಿ ಇಲಾಖೆಗೆ ಸೇರಿಸಿಕೊಳ್ಳಬೇಕೆಂದು ಹುಕುಂ ಕೊಟ್ಟಿದಾರೆ

ಮೈಸೂರು ಗವರ್ಟ್ ಸಂಗ್ರಹ.

ನೆ ಜೇವನಹಳ್ಳಿ ಶಿವಲಿಂಗಪ್ಪನವರನ್ನು ಸೊನ್ನಳ್ಳಿ ತಾಲ್ಲೂಕ್ ಬೋರ್ಡಿಗೂ ಮೆ॥ ಎ. ವೆಂಕಟಾಚಲೈಯನವರನ್ನು ಹಿರಿಯೂರು ಮ್ಯುನಿಸಿಪಲ್ ಬೋರ್ಡಿಗೂ ಮೆಂಬರಾಗಿ ನೇಮಿಸಿದೆ.

ಮೆ॥ ಸೈಯದುದ್ದೀನ್ ಹುಸ್ಸೇನ್ ಯವರು ಕೆಲಸದಿಂದ ನಿವೃತ್ತರಾದ ಸಬಬು ಆಕ್ಟಿಂಗ್ ಎಕ್ಸ್ಟ್ರಾ ಅ ಸಿಸ್ಟೆಂಟ್ ಕಮಿಷನರ್ ಮೆ॥ ವಿ. ವೇದಾಂತ ದೇಶಿಕ ಐಯ್ಯಂಗಾರ್ಯರನ್ನು ಹಂಗಾಮಿಯಾಗಿ ಕೋಲಾರದ ಡಿಸ್ಟ್ರಿಕ್ಟ್ ಪೊಲೀಸ್ ಭಾರವನ್ನು ವಹಿಸುವಂತೆ ನೇಮಿಸಿದೆ.

ಮೆ॥ ಮಹಮುದ್ ರಜಾ ಯವರು ಕೆಲಸದಿಂದ ನಿವೃತ್ತರಾದ ಸಬಬು ಆಕ್ಟಿಂಗ್ ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಬಿ ಜೆ. ರಾಮಸ್ವಾಮೈಯ್ಯನವರನ್ನು ಹಂಗಾಮಿಯಾಗಿ ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಭಾರವನ್ನು ವಹಿಸಿರುವಂತೆ ನೇಮಿಸಿದೆ.

ಮೆ॥ ಪಿ ಡಿ ರಾಮಸ್ವಾಮೈಯ್ಯನವರು ಕೆಲಸದಿಂದ ನಿವೃತ್ತರಾದ ಸಬಬು ಪೊಲೀಸ್ ಇನ್ಸ್‌ಪೆಕ್ಟರ್ ಮೆ॥ ಎಫ್ ವಿಕ್ಟರ್‌ಸನ್ ಯವರನ್ನು ಫ್ರೆಂಚ್‌ರಾಕ್ ಪೊಲೀಸ್ ಅ॥ ಸೂಪರಿಂಟೆಂಡೆಂಟರಾಗಿ ಕೆಲಸ ನೋಡುವಂತೆ ನೇಮಿಸಿದೆ

ಯಡೆಹಳ್ಳಿ ಮುನ್ಸಿಫ್ ಮೆ॥ ಎನ್. ನರಸಿಂಹೈಯಂಗಾರ್ಯರಿಗೆ ಮೆ॥ ೨೯ ರಿಂದ ಎರಡು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಅಡ್ವೋಕೇಟ್ ಮೆ॥ ಪಿ ಮಹದೇವಯ್ಯನವರನ್ನು ಯಡೆಹಳ್ಳಿ ಮುನ್ಸಿಫರಾಗಿ ಕೆಲಸ ನೋಡುವಂತೆ ನೇಮಿಸಿದೆ

ಮೈಸೂರು ಚೀಫ್ ಕೋರ್ಟ್ ಡಿಪ್ಟಿ ರಿಜಿಸ್ಟ್ರಾರ್ ಮೆ॥ ಜೆ. ಕ್ಲಾರ್ಕ್‌ಯವರಿಗೆ ಜೂನ್ ೧೨ರಿಂದ ಒಂದು ತಿಂಗಳು ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರಜಾ ಪೂರೈಸಿದ ತರುವಾಯ ಅವರು ಕೆಲಸದಿಂದ ನಿವೃತ್ತರಾಗಿ ಪೆನ್ಷನ್ ಪಡೆಯತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮೆ॥ ಸಿ ಸೈಯದುದ್ದೀನ್ ಹುಸ್ಸೇನ್‌ಯವರಿಗೆ ಜುಲೈ ೧ರಿಂದ ಎರಡು ತಿಂಗಳೂ ಒಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ರಜಾ ಪೂರೈಸಿದನಂತರ ಅವರು ಕೆಲಸದಿಂದ ನಿವೃತ್ತರಾಗಿ ಪೆನ್ಷನ್ ಪಡೆಯತಕ್ಕದ್ದು.

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮೆ॥ ಎಂ. ಎಸ್. ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ರಜದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸೀನಿಯರ್ ಅ॥ ಕಮಿಷನರವರು ಡೆಪ್ಟಿ ಕಮಿಷನರಾಗಿ ಕೆಲಸ ನೋಡತಕ್ಕದ್ದು

ನಾಗಮಂಗಲ ತಾಲ್ಲೂಕ್ ಅಮಲ್ದಾರ್ ಮೆ॥ ಎನ್. ಗೋಪಾಲಕೃಷ್ಣೈಯಂಗಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿರಸ್ತೇದಾರ್ ಶ್ರೀಕಂಠೈಯನವರು ನಾಗಮಂಗಲದ ಅಮಲ್ದಾರ್ ಮತ್ತು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡತಕ್ಕದ್ದು

ಫಾರೆಸ್ಟ್ ಅ॥ ಕನ್ಸರ್ವೆಟರ್ ಮೆ॥ ವೈ ಸೀತಾರಾಮೈಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪಾವಗಡದ ತಾಲ್ಲೂಕ್ ಅಮಲ್ದಾರ್ ಮೆ॥ ಹೆಚ್. ಎಸ್. ವೆಂಕಟಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ರಜದಮೇಲಿರುವಾಗ್ಯೆ ಕೊರಟಗೆರೆ ಡಿಪ್ಟಿ ಅಮಲ್ದಾರ್ ಮೆ॥ ಬಸವರಾಜೇ ಅರಸಿನವರು ಪಾವಗಡದ ಅಮಲ್ದಾರ್ ಮತ್ತು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಹೆಡ್ ಅಕೌಂಟೆಂಟ್ ಜಿ ನರಸಿಂಹಾಚಾರ್ಯರು ಕೊರಟಗೆರೆಯ ಡಿಪ್ಟಿ ಅಮಲ್ದಾರ್ ಮತ್ತು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಕೆಲಸ ನೋಡತಕ್ಕದ್ದು.

ಹೊಳೆನರಸೀಪುರದ ತಾಲ್ಲೂಕು ಸಬ್ ಪ್ರೊಬೇಷನ್ ಅಮಲ್ದಾರ್ ಮೆ॥ ಬಿ ಟಿ ಸೀತಾರಾಮೈಯನವರಿಗೆ ಜೂನ್ ೧೫ರಿಂದ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಆ ಕಾಲದಲ್ಲಿ ಶಿರಸ್ತೇದಾರ್ಯರು ತಾಲ್ಲೂಕಿನ ಚಾರ್ಜಿ ಕೆಲಸಗಳ ಭಾರವನ್ನು ವಹಿಸತಕ್ಕದ್ದು.

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ.—ಮೆ॥ ವಿ. ಪಾರ್ಥಸಾರಥಿ ಐಯ್ಯಂಗಾರ್ಯ ಚಿತ್ರದುರ್ಗದಿಂದ ಸಾಗರಕ್ಕೆ, ಮೆ॥ ಜಿ. ಹನುಮಂತರಾಯರು ಸಾಗರದಿಂದ ಮೂಡಿಗೆರೆಗೆ (ಮೆ॥ ಕೇಶವಾಚಾರ್ಯ ಕೆಲಸದಿಂದ ನಿವೃತ್ತರಾದ ಸಬಬು); ಮೆ॥ ಟಿ. ರಾಮಚಂದ್ರರಾಯರು ಆನೆಕಲ್ಲಿನಿಂದ ಚಿತ್ರದುರ್ಗಕ್ಕೆ; ಅಮಲ್ದಾರ್ ಮೆ॥ ಮಹಮುದ್ ರಜಾ ಯವರು ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಭಾರವನ್ನು ಮೆ॥ ಬಿ. ರಾಮಸ್ವಾಮೈಯನವರಿಗೆ ವಹಿಸಿದ ನಂತರ ಆನೆಕಲ್ ತಾಲ್ಲೂಕಿನ ಭಾರವನ್ನು ವಹಿಸತಕ್ಕದ್ದು.

ಚಿತ್ರದುರ್ಗ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಬಿ ಸುಬ್ಬಣ್ಣಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಪ್ರಿನ್ಸ್ ಆಫ್ ವೇಲ್ಸ್ ರವರ ದೇಶಸಂಚಾರವು.

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಹಿತರಾಗಿ ಭರತಖಂಡಕ್ಕೆ ಬರತಕ್ಕ ಮತ್ತು ಇತರ ಸ್ಥಳಗಳಲ್ಲಿ ಸಂಚರಿಸತಕ್ಕ ಕಾಲನಿರ್ಣಯವನ್ನು ಈಗತಾನೆ ಸರ್ಕಾರದವರು ಪ್ರಕಟಿಸಿರುತ್ತಾರೆ ಆದರೆ ಇದರೊಳಗೆ ಕಾಲಾನುಗುಣ್ಯವಾಗಿ ವ್ಯತ್ಯಸ್ತವಾಗತಕ್ಕ ಸಂಭವವಿರುತ್ತದೆ. ಅವರು ೧೯೦೫ನೇ ನವಂಬರ್ ತಾ॥ ೯ನೇ ಮಧ್ಯಾಹ್ನ ಬೊಂಬಾಯಿ ಪಟ್ಟಣವನ್ನು ತಲಪಿ, ತಾ ೧೫ರ ವರೆಗೆ ಅಲ್ಲೇ ನಿಲ್ಲುವರು ನವಂಬರ್ ತಾ ನವಂಬರ್ ತಾ. ೧೬ ರಲ್ಲಿ ಬೊಂಬಾಯಿಯನ್ನು ಬಿಟ್ಟು ತಾ ೧೭ ರಲ್ಲಿ ಅಜಮೀರನ್ನು ತಲಪಿ ತಾ ೧೭ ರವರೆಗೆ ಅಲ್ಲೇ ನಿಲ್ಲುವರು. ತಾ. ೧೮ ರಲ್ಲಿ ಉದಯಪುರಕ್ಕೆ ಪ್ರಯಾಣ ಮಾಡಿ ತಾ. ೨೦ ರವರೆಗೆ ಅಲ್ಲಿರುವರು ತಾ ೨೦ ರಿಂದ ೨೪ ರವರೆಗೆ ಜಯಪುರದಲ್ಲಿದ್ದು ೨೫ ರಲ್ಲಿ ಬಿಕಾನೀರ್ ಸಂಸ್ಥಾನವನ್ನು ಸೇರುವರು. ತಾ ೨೭ ರಲ್ಲಿ ಬಿಕಾನೀರನ್ನು ಬಿಟ್ಟು ೨೮ ರಲ್ಲಿ ಲಾಹೋರನ್ನು ಸೇರಿ ಡಿಸೆಂಬರ್ ೧ ರವರೆಗೆ ಅಲ್ಲಿ ನಿಲ್ಲುವರು. ಅನಂತರ ಅಲ್ಲಿಂದ ಹೊರಟು, ಡಿಸೆಂಬರ್ ೨ ರಲ್ಲಿ ಪೇಷಾವರನ್ನು ತಲಪಿ ತಾ ೬ರ ವರೆಗೆ ಅಲ್ಲಿದ್ದು ತಾ ೭ ರಲ್ಲಿ ಜಮ್ಮುಗೆ ಹೋಗಿ ಒಂದು ದಿವಸ ನಿಲ್ಲುವರು. ಡಿಸೆಂಬರ್ ೩ ರಲ್ಲಿ ಡೆಹಲಿಯನ್ನು ತಲಪಿ ೧೦ರ ವರೆಗೆ ಅಲ್ಲಿದ್ದು ತಾ. ೧೧ ರಲ್ಲಿ ಕ ವನ್ಮೆಂಟರ್ ಇನ್ ಚೀಫರ ಕ್ಯಾಂಪಿಗೆ ಹೊರಟು ೧೫ರ ವರೆಗೆ ಅಲ್ಲಿ ನಿಲ್ಲುವರು ತಾ ೧೬ ರಲ್ಲಿ ಆಗ್ರಾಪಟ್ಟಣವನ್ನು ಸೇರಿ ೧೯ರ ವರೆಗೆ ಅಲ್ಲಿ ನಿಲ್ಲುವರು ಆಗ್ರಾ ಬಿಟ್ಟು ಹೊರಟು ತಾ. ೨೦ ರಲ್ಲಿ ಗ್ವಾಲಿಯರ್ ಸಂಸ್ಥಾನಕ್ಕೆ ತೆರಳುವರು ಅಲ್ಲಿ ತಾ. ೨೫ರ ವರೆಗೆ ನಿಂತು ೨೬ ರಲ್ಲಿ ಲಕ್ನೋ ಪಟ್ಟಣವನ್ನು ಸೇರುವರು. ಲಕ್ನೋದಲ್ಲಿ ೨ ದಿನಗಳಿದ್ದು ತಾ. ೨೮ ರಲ್ಲಿ ಕಲ್ಕತ್ತಾಕ್ಕೆ ಪ್ರಯಾಣಮಾಡಿ ತಾ ೨೯ ರಲ್ಲಿ ತಲಪುವರು ಕಲ್ಕತ್ತಾದಲ್ಲಿ ೧೯೦೬ನೇ ಜನವರಿ ೬ರ ವರೆಗೆ ಇದ್ದು, ಮಾರನೆ ದಿನ ಹೊರಟು ಡಾರ್ಜೆಲಿಂಗನ್ನು ಸೇರುವರ. ಅಲ್ಲಿ ತಾ. ೮ನೇ ಜನವರಿ ವರೆಗಿದ್ದು ೯ ರಲ್ಲಿ ಕಲ್ಕತ್ತಾಕ್ಕೆ ಹಿಂತಿರುಗಿ ಬರುವರು ತಾ ೧೦ ರಲ್ಲಿ ರಿನೌನ್ ಎಂಬ ಜಹಜನ್ನು ಹತ್ತಿ ರಂಗೂನನ್ನು ತಾ ೧೩ನೇ ಜನವರಿಯಲ್ಲಿ ಸೇರುವರು. ತಾ. ೧೬ರ ವರೆಗೆ ರಂಗೂನಿನಲ್ಲಿದ್ದು ಮಾಂಡಲೆಗೆ ಪ್ರಯಾಣ ಮಾಡಿ, ೧೭ ರಲ್ಲಿ ಸೇರುವರು ಅಲ್ಲಿ ೨ ದಿನಗಳಿದ್ದು ತಾ ೧೯ ಮತ್ತು ೨೦ ರಲ್ಲಿ ರಂಗೂನಿಗೆ ಹಿಂತಿರುಗಿ ಬರುತ್ತ ದಾರಿ ಜೆಸಲ್ಲೇ ಇರುವರು. ತಾ. ೨೧ ರಲ್ಲಿ ರಂಗೂನನ್ನು ಸೇರುವರು ರಿನೌನ್ ಎಂಬ ಜಹಜನ್ನು ಹತ್ತಿ ಜನವರಿ ತಾ ೨೪ನೇ ಬುಧವಾರ ಮದರಾಸನ್ನು ತಲಪುವರು. ಮದರಾಸಿನಲ್ಲಿ ೪ ದಿನಗಳಿದ್ದು ತಾ ೨೮ ರಲ್ಲಿ ಬೆಂಗಳೂರು ಮತ್ತು ಮೈಸೂರಿಗೆ ಪ್ರಯಾಣ ಮಾಡಿ ಫೆಬ್ರವರಿ ತಾ. ೩ರ ವರೆಗೆ ಈ ಸಂಸ್ಥಾನದಲ್ಲೇ ನಿಲ್ಲುವರು ಅನಂತರ ಹೈದರಾಬಾದಿಗೆ ಹೊರಟು ತಾ ೮ ರಿಂದ ೧೫ರ ವರೆಗೆ ಅಲ್ಲಿ ನಿಲ್ಲುವರು. ಫೆಬ್ರವರಿ ೧೬ ರಲ್ಲಿ ಎಲ್ಲೋರಾಕ್ಕೆ ಹೋಗಿ ಅಲ್ಲಿಂದ ಕಾಶೀಗೆ ಪ್ರಯಾಣ ಮಾಡಿ ತಾ ೧೮ ಮತ್ತು ೧೯ರ ವರೆಗೆ ಅಲ್ಲಿರುವರು. ಅಲ್ಲಿಂದ ನೇಪಾಳಕ್ಕೆ ಹೊರಟು ಫೆಬ್ರವರಿ ೨೮ ರಿಂದ ಮಾರ್ಚಿ ೨೦ ವರೆಗೆ ಇರುವರು. ಅಲ್ಲಿಂದ ಹೊರಟು ಪ್ರಾಯಶಃ ಸಿಮ್ಲಾ ಮತ್ತು ಇತರ ಸ್ಥಳಗಳಿಗೆ ಹೋಗುವರು. ಅನಂತರ ಕ್ವೇಟಾಕ್ಕೆ ಹೋಗಿ ಮಾರ್ಚಿ ೧೨ ರಿಂದ ೧೬ರ ವರೆಗೆ ನಿಲ್ಲುವರು ಅಲ್ಲಿಂದ ಕರಾಚಿಗೆ ಪ್ರಯಾಣ ಮಾಡಿ ೧೭ ರಲ್ಲಿ ಅದನ್ನು ತಲಪುವರು. ಕರಾಚಿಯಲ್ಲಿ ಜಹಜು ಹತ್ತಿ ತಾ. ೧೯ ರಲ್ಲಿ ಸೀಮೆಗೆ ತೆರಳುವರು.

ಅನಂತಶಯನದಲ್ಲಿ ಮುರು ಜಪವು.

ತಿರುವಾಂಕೂರಿನ ಪ್ರಸಿದ್ಧಿಹೊಂದಿದ ಅನೇಕ ದೇವಾರಾಧನೆಗಳಲ್ಲಿ ಮುರಜಪವೆಂಬುವುದೇ ದೊಡ್ಡದು. ಈ ಉತ್ಸವವು ಆರು ವರ್ಷಕ್ಕೊಮ್ಮೆ ನಡೆಯುತ್ತದೆ ತಿರುವಾಂಕೂರಿನ ಅಕ್ಕಪಕ್ಕದ ದೇಶೀಯ ಸಂಸ್ಥಾನಗಳಿಂದಲೂ ಬ್ರಿಟಿಷ್ ಇಂಡಿಯಾದಿಂದಲೂ ಅನೇಕರು ಈ ಉತ್ಸವಕ್ಕೆ ಬಂದು ಗುಂಪು ಕೂಡುವರು ಈ ಉತ್ಸವವನ್ನು ನಡೆಸುವ ಅಲ್ಲಿನ ರಾಜರು ಹೆಚ್ಚಾದ ಧನವನ್ನು ವೆಚ್ಚ ಮಾಡುವರು ಮುರಜಪವೆಂದರೆ ಗೊತ್ತುಮಾಡಲ್ಪಟ್ಟ ಕೆಲವು ದಿನಗಳ ವರೆಗೂ ವೇದ ಪಾರಾಯಣವನ್ನು ಮಾಡತಕ್ಕದ್ದು. ಈ ಉತ್ಸವಕ್ಕೆ ಕಾರಣವೇನೆಂದರೆ—೧೭೨೯ ರಿಂದ ೧೭೫೮ ರ ವರೆಗೂ ಆಳಿದ ಮಾರ್ತಾಂಡವರ್ಮರು ರಾಜ್ಯವನ್ನು ವಿಸ್ತರಿಸುವುದಕ್ಕೋಸ್ಕರ ಚಿಕ್ಕಚಿಕ್ಕ ರಾಜ್ಯಗಳಮೇಲೆ ದಂಡೆತ್ತಬೇಕಾಯಿತು ಈ ದಂಡಯಾತ್ರೆಯಿಂದ ಅನೇಕ ನರಹತ್ಯೆಗಳುಂಟಾದವು. ರಾಜ್ಯವು ಸಮಾಧಾನಸ್ಥಿತಿಗೆ ಬಂದನಂತರ ಈ ಲೋಕದಲ್ಲಿ ಮಾಡಿದ ನರಹತ್ಯಾದಿ ಪಾಪಗಳ ನಿವಾರಣೆಗೋಸ್ಕರ ದಕ್ಷಿಣದೇಶಗಳಲ್ಲಿದ್ದ ಎಲ್ಲಾ ವಿದ್ವಾಂಸರುಗಳನ್ನೂ ಸಭೆಗೂಡಿಸಿ, ತಕ್ಕ ಪ್ರಾಯಶ್ಚಿತ್ತವಾವುದೆಂದು ರಾಜನು ಪ್ರಶ್ನೆ ಮಾಡಲು, ಅವರು ಇಂಥಾ ಪಾಪವಿಮೋಚನೆಗೋಸ್ಕರ ಪೂರ್ವದಲ್ಲಿ ಕಾರ್ತವೀರ್ಯಾರ್ಜುನನು ಆಚರಿಸಿದ ಭದ್ರದೀಪ, ಮುರಜಪವೆಂಬ ಎರಡು ಪರ್ಯಾಯಗಳನ್ನು ವಿಧಿಸಿದರು. ಮಕರಮಾಸದ ಮೊದಲನೇ ತೇದಿ ಅಂದರೆ ಜನವರಿ ಮಧ್ಯತಿಂಗಳಲ್ಲಿಯೂ, ಕರ್ಕಾಟಕಮಾಸ ಮೊದಲನೇ ತೇದಿ ಅಂದರೆ ಜುಲೈ ತಿಂಗಳ ಮಧ್ಯದಲ್ಲಿಯೂ ರಾಜರ ಖಾಸಾ ದೇವಸ್ಥಾನದಲ್ಲಿ ನಂದಾದೀಪವನ್ನಿಟ್ಟು ಏಳು ದಿನಗಳ ವರೆಗೂ ವೇದ ಪಾರಾಯಣಾದಿಗಳಿಂದ ದೇವರನ್ನು ಆರಾಧಿಸತಕ್ಕದ್ದು ಹೀಗೆ ವರ್ಷಕ್ಕೆ ಎರಡು ಸಲ ನಡಿಯುವ ಭದ್ರದೀಪವೆಂಬ ಹೆಸರುಳ್ಳ ಈ ಉತ್ಸವವು ಹನ್ನೆರಡಾವೃತ್ತಿ ಆದನಂತರ ಅಂದರೆ ಆರು ವರ್ಷಗಳ ಮೇಲೆ ಮುರಜಪವೆಂಬುವುದು ೫೬ ದಿನಗಳ ವರೆಗೂ ನಡೆಯುವುದು. ತರುವಾಯ ಅದು ಎಂದಿಗೆ ಲಕ್ಷದೀಪಗಳಿಂದ ಮುಕ್ತಾಯವಾಗುವುದೋ ಆ ದಿನ ರಾತ್ರಿ ದೇವಸ್ಥಾನದ ಒಳಪ್ರಾಕಾರದಲ್ಲಿ ರಾಜರ ಮತ್ತು ರಾಜವರ್ಗದವರ ಸಂಗಡ ದೇವರ ಮೆರವಣಿಗೆಯು ಅತ್ಯಂತ ವೈಭವದಿಂದ ನಡೆಯುವುದು.

ಈ ವರ್ಷ ಉತ್ಸವವು ಮುಂದೆ ಬರುವ ನವಂಬರ್ ತಿಂಗಳಲ್ಲಿ ಪ್ರಾರಂಭವಾಗಿ ಮುಂದಿನ ಜನವರಿ ತಿಂಗಳಲ್ಲಿ ಮುಕ್ತಾಯವಾಗುವುದು ಡಿವಿಜನ್ ಅಸಿಸ್ಟೆಂಟ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೆಲಸವನ್ನು ಬದಲಿ ನೋಡುವ ಮೆ॥ ರಾಘವಾಚಾರ್, ಬಿ ಎ. ಯವರು ಇದಕ್ಕಾಗಿಯೇ ನೇಮಿಸಲ್ಪಟ್ಟು, ಆಗಲೇ ಕೆಲಸವನ್ನು ಪ್ರಾರಂಭಿಸಿರುವರು. ಈ ಉತ್ಸವದಲ್ಲಿ ವೇದಪಾರಾಯಣವನ್ನು ಮಾಡತಕ್ಕವರು ನಂಬೂರಿ ಬ್ರಾಹ್ಮಣರೇ ಆಗಿರುವರು ಇವರಲ್ಲಿ ಕೆಲವರು ಮಹಾರಾಜರ ಆಹ್ವಾನ ಪತ್ರಿಕೆಯನ್ನು ಪಡೆದವರೂ ಮಿಕ್ಕ ಕೆಲವರು ತಾವೆ ಬರುವವರೂ ಆಗಿದಾರೆ. ಉತ್ಸವವು ನಡೆಯುವುದಕ್ಕೆ ಸ್ವಲ್ಪ ದಿನ ಮುಂಚೆಯೇ ಇದಕ್ಕಾಗಿ ನೇಮಿಸಿರುವ ರಾಜಭಟರು ತಿರುವಾಂಕೂರು ಕೊಚ್ಚಿನ್ ಮೊದಲಾದ ಪ್ರದೇಶಗಳಲ್ಲಿರತಕ್ಕ ಮುಖಂಡರಾದ ನಂಬೂರಿ ಬ್ರಾಹ್ಮಣರುಗಳನ್ನು ಕರೆತರಲು ಹೋಗುತ್ತಾರೆ. ಹೀಗೆ ಕರೆಸಿಕೊಳ್ಳತಕ್ಕ ಬಡ ಬ್ರಾಹ್ಮಣನೂ ಕೂಡ ರಾಜಭಟರೊಂದಿಗೆ ರಾಜರ ಅತಿಥಿಯಾಗಿ ಪ್ರಯಾಣ ಮಾಡುವನು ಮಾರ್ಗದಲ್ಲಿ ಅವನಿಗೂ ತನ್ನ ಸೇವಕರಿಗೂ ಬೇಕಾದದ್ದನ್ನು ವೇಳೆ ಸಮಯವನ್ನು ನಿರೀಕ್ಷಿಸದೆ ಒದಗಿಸಿ ಕೊಡುವುದು ಉದ್ಯೋಗಸ್ಥರ ಕರ್ತವ್ಯವಾಗಿರುವದು ಸ್ನಾನ, ಅಭ್ಯಂಜನ, ಮಲಗುವಿಕೆ, ಇವೇ ಮೊದಲಾದ ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಅವರ ಭಾರವಾಗಿರುತ್ತದೆ ಅಲ್ಪ ನೌಕರರೇನಾದರೂ ಇದರ ವಿಷಯದಲ್ಲಿ ಅಗೌರವವಾಗಿ ನಡೆದದ್ದು ದೊಡ್ಡ ಅಧಿಕಾರಿಗಳ ಕಿವಿಗೆ ಬಿದ್ದಲ್ಲಿ ಅವರು ಕ್ರೂರದಂಡನೆಗೆ ಗುರಿಮಾಡಲ್ಪಡುವರು. ಮೂರು ಸಾವಿರಕ್ಕಿಂತಲೂ ಅಧಿಕವಾಗುವ ಇಂಥಾ ಅತಿಥಿಗಳಿಗೆ ರಾಜಧಾನಿಯಲ್ಲಿ ಇಳಿದುಕೊಳ್ಳಲು ವಿಶಾಲವಾದ ಬಿಡಾರಗಳು ಕಲ್ಪಿಸಿರುವವು. ಇವರ ಆರೋಗ್ಯಾಭಿವೃದ್ಧಿಗಳನ್ನು ನೋಡಿಕೊಳ್ಳಲು ಬೇರೆ ಸ್ಯಾನಿಟರಿ, ಮೆಡಿಕಲ್ ಆಫೀಸರುಗಳನ್ನು ಗೊತ್ತು ಮಾಡುವರು. ಈ ಉತ್ಸವದಲ್ಲಿ ಪ್ರತಿ ದಿನವೂ ಬೆಳಗ್ಗೆ ೬ ಗಂಟೆಯಿಂದ ೮ ಗಂಟೆವರೆಗೂ ದೇವಸ್ಥಾನದ ಒಳಗೆ ನಂಬೂರಿಗಳು ವೇದಪಾರಾಯಣವನ್ನು ಮಾಡುವರು. ಆ ಕಾಲದಲ್ಲಿ ಕ್ರಮಪ್ರಕಾರ ಮಹಾರಾಜರವರೇ ಸ್ವತಃ ಪದ್ಮನಾಭಸ್ವಾಮಿಯನ್ನು ಆರಾಧಿಸುವರು. ಇದಾದನಂತರ ದೊಡ್ಡ ಸಮಾರಾಧನೆಯು ನಡೆಯುವದು. ಪ್ರತಿಯೊಬ್ಬನು ತನಗೆ ಇಷ್ಟವಾದ ಆಹಾರವನ್ನು ಪೇಕ್ಷಿಸಬಹುದು. ಇವರಲ್ಲಿ ರೋಗಾರ್ತರಿಗೂ ಕೂಡ ಪಥ್ಯಾಹಾರಗಳನ್ನು ಏರ್ಪಡಿಸುವರು. ಈ ಸಮಾರಾಧನೆಗಳು ದೇವಸ್ಥಾನದ ದೊಡ್ಡ ಪಡಸಾಲೆಗಳಲ್ಲಿಯೂ, ಇದಕ್ಕಾಗಿ ಏರ್ಪಡಿಸಿರುವ ಚಪ್ಪರಗಳಲ್ಲಿಯೂ ನಡೆಯುವವು. ಇದರಲ್ಲಿ ದಿವಾನರೇ ಮೊದಲುಗೊಂಡು ಎಲ್ಲಾ ನೌಕರರು ಮೇಲುಸ್ತುವಾರಿಯಲ್ಲಿರುವರು ಕೆಲವು ಬ್ರಾಹ್ಮಣರು ಹಿಂದೆ ನಡೆದ ಉತ್ಸವಗಳ ಸಮಾರಾಧನೆಗಳಿಗೂ ಈಗ ನಡೆಯುವದಕ್ಕೂ ಇರುವ ತಾರತಮ್ಯವನ್ನು ವಿವರಿಸುವಷ್ಟು ದಕ್ಷರಾಗಿರುವರು. ಭೋಜನಾನಂತರ ಮಧ್ಯಾಹ್ನ ೨ ಗಂಟೆಯಿಂದ ೩ ಗಂಟೆವರೆಗೂ ಸಹಸ್ರನಾಮ ಜಪವಾಗುವದು. ಆ ಕಾಲದಲ್ಲಿ ಮಹಾರಾಜರು ಅವರ ಸುತ್ತಲೂ ಬಂದು ಆಶೀರ್ವಾದವನ್ನು ಕೈಗೊಳ್ಳುವರು. ಇದಾದ ಮೇಲೆ ಪುನಃ ಮತ್ತೊಂದು ಊಟವು ಸಿದ್ಧವಾಗುವದು. ಗೋಪುರದ ಎದುರು ಪಾರ್ಶ್ವದಲ್ಲಿರುವ ಪದ್ಮತೀರ್ಥ ಸರೋವರದಲ್ಲಿ ಸಾಯಂಕಾಲ ೬ ಗಂಟೆಗೆ ಮಂತ್ರಜಪಕ್ಕೆ ಪ್ರಾರಂಭವಾಗುವದು. ಅಲ್ಲಿನ ಸ್ನಾನಘಟ್ಟಗಳು ಚಪ್ಪರಗಳಿಂದಲೂ ಪರದೆಗಳಿಂದಲೂ ಮರೆಮಾಡಲ್ಪಟ್ಟಿರುವವು. ಮೊಣಕಾಲುದ್ದ ನೀರಿನಲ್ಲಿ ನಿಂತು ಬ್ರಾಹ್ಮಣರು ಒಂದು ಗಂಟೆಯ ತನಕ ಮಂತ್ರಜಪವನ್ನು ಮಾಡಿ ಮುಗಿಸಿದ ಮೇಲೆ ಸುಮಾರು ೩ ಗಂಟೆಯಲ್ಲಿ ಮಹಾರಾಜರು ತಮ್ಮ ವರ್ಗದವರೊಡನೆ ದಿವಾನರೇ ಮೊದಲಾದ ಇತರ ಬ್ರಾಹ್ಮಣ ಉದ್ಯೋಗಸ್ಥರಿಂದ ಕೂಡ ಕೊಳದ ಸುತ್ತಲೂ ಪ್ರದಕ್ಷಿಣೆ ಮಾಡುವರು. ರಾತ್ರಿ ಭೋಜನಾನಂತರ ಬ್ರಾಹ್ಮಣರು ದೇವಸ್ಥಾನವನ್ನು ಬಿಟ್ಟು ತಮ್ಮ ತಮ್ಮ ಬಿಡಾರಕ್ಕೆ ಹೋಗುವಾಗ ಅವರಿಗೆ ಪುರಿಯುಂಡೆಗಳು ವಿನಿಯೋಗ ಮಾಡಲ್ಪಡುವವು. ಪ್ರತಿ ದಿನವೂ ಪ್ರತಿಯೊಬ್ಬನಿಗೂ ಇತರ ಪದಾರ್ಥಗಳೊಡನೆ ಎಂಟು ಆಣೆ ದಕ್ಷಿಣೆಗಿಂತಲೂ ಕಮ್ಮಿ ದೊರೆಯುವದಿಲ್ಲ.

ಮುಂದೆ ನಡೆಯುವ ಉತ್ಸವದಲ್ಲಿ ೩॥ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ಗೊತ್ತುಮಾಡಿರುತ್ತಾರೆ. ಈಗ ೪೨ ವರ್ಷಗಳಿಂದಲೂ ಈ ಉತ್ಸವದ ಖರ್ಚು ಹೆಚ್ಚುತ್ತಲೇ ಬಂದಿರುವದು. ಆಗಿನ ರಾಜನ ಅಭಿಲಾಷೆಯಂತೆ ಈ ಉತ್ಸವವು ೧೫೦ ವರ್ಷಗಳು ಅಂದರೆ ಇಪ್ಪತ್ತೈದು ಮುರಜಪಗಳು ನಡೆದು, ಕಳೆದುಹೋದ ಹಿಂದಿನ ಉತ್ಸವವೇ ಕೊನೆಯದಾಗಬೇಕಾಗಿತ್ತು. ಆದರೆ ಈಗಿನ ಮಹಾರಾಜರು ಹಿಂದಿನ ಉತ್ಸವಗಳಂತೆಯೇ ಈಗಲೂ ನಡೆಸಬೇಕೆಂದು ಉದ್ದೇಶಿಸಿರುವದರಿಂದ ಪ್ರಯುಕ್ತ ಮುಂದೆ ಆಗುವ ಉತ್ಸವವು ಇವರ ಕಾಲದಲ್ಲಿ ನಡೆದುದರಲ್ಲಿ ವಾಲ್ಕನೆಯದಾಗುವುದು.

ನೀನೂ ಬಾಧ್ಯಸ್ಥನೋ?

ಲಾಲಸಿಂಗನು ಒಂದಾನೊಂದು ಮಳಿಗೆಯ ಮುಂದೆ ಕುಳಿತಿದ್ದನು. ಮುಖವನ್ನು ಎರಡು ಕೈಯಿಂದಲೂ ಮುಚ್ಚಿಕೊಂಡು ಮೊಣಕಾಲಿನ ಮೇಲೆ ಇಟ್ಟುಕೊಂಡು ಬಹಳವಾಗಿ ಶೋಕಿಸುತ್ತಾ ಇದ್ದನು. ಅವನ ಮೈಮೇಲಿರುವ ಬಟ್ಟೆಗಳೆಲ್ಲವೂ ಚಿಂದಿ ಚಿಂದಿಯಾಗಿ ಹರಿದು ಹೋಗಿದ್ದುವು. ಕ್ಷಾಮಕಾಲದಲ್ಲಿ ತನ್ನ ತಾಯಿಯು ಸತ್ತುಹೋಗಿದ್ದಳು. ಉಳಿದಿದ್ದ ಒಂದು ಹೊಲವು ತಂದೆಯೂ ತಮ್ಮನೂ ಇವರಿಬ್ಬರ ಜೀವನಕ್ಕೆ ಸಾಲದೆ ಹೋಗುವದೆಂದು ತಿಳಿದು ಹಿರಿಯವನಾದ ತಾನು ಬೇರೆ ಕಡೆಯಲ್ಲಿ ಸಂಪಾದಿಸಿ ಜೀವನ ನಡಸಿಕೊಳ್ಳಬೇಕೆಂದು ಹೇಳಿಕೊಂಡು ಮನೆಯನ್ನು ಬಿಟ್ಟು ಬಹು ದೂರವಾದ ದೇಶಗಳಿಗೆಲ್ಲಾ ಹೋಗಿ ಸಂಚರಿಸುತ್ತಾ ಈಗ ಮಹಾ ದುರವಸ್ಥೆಗೆ ಸಿಕ್ಕಿದವನಾಗಿ ಬೊಂಬಾಯಿ ನಗರಕ್ಕೆ ಹೋಗಿ ಅಲ್ಲಿ ಈ ಪ್ರಕಾರ ಕುಳಿತಿದ್ದಾನೆ. ನನ್ನ ಕೈಯಲ್ಲಿ ಕಾಸಿಲ್ಲ, ಒಂದು ತುತ್ತು ಅನ್ನವನ್ನು ಕೊಡುವವರೂ ಯಾರೂ ಇಲ್ಲ. ಮುಂದೇನು ಗತಿಯೆಂದು ಅವನು ಮಹಾ ವ್ಯಸನಾಕ್ರಾಂತನಾಗಿ ಕುಳಿತಿರುವಲ್ಲಿ ಅಕಸ್ಮಾತ್ತಾಗಿ ಯಾರೋ ಅವನ ಹತ್ತಿರಕ್ಕೆ ಬಂದುನಿಂತು—ಏನಪ್ಪಾ, ಲಾಲಸಿಂಗನಲ್ಲವೇ ನೀನು? ಭಾರಿ ಜಮೀನಿಗೆ ಒಡೆಯನಾದ ನೀನು ಈ ಪ್ರಕಾರ ದುಃಖಿತನಾಗಿ ಕುಳಿತಿರುವದು ತರವಲ್ಲ! ಎಂದು ಕರೆದು ಹೇಳಲು, ಲಾಲಸಿಂಗನು ಕನಸು ಕಂಡವನಂತೆ ಥಿಗ್ಗನೆ ತಲೆಯನ್ನು ಮೇಲಕ್ಕೆತ್ತಿ ನೋಡಿ—ಅಯ್ಯಾ, ನನ್ನನ್ನು ಅಪಹಾಸ್ಯಮಾಡಬೇಡಯ್ಯ, ನನ್ನಂಥ ಪಾಪಿಯು ಭಾರಿ ಜಮೀನಿಗೆ ಒಡೆಯನೆಂದರೆ ಯಾರು ನಂಬುವರು! ಎಂದು ಬಿಸುಸುಯ್ದನು. ಆಗ ಆ ಸ್ನೇಹಿತನು ತನ್ನ ಊರು ಕೇರಿ ಮುಂತಾದ ಗುರುತುಗಳನ್ನೆಲ್ಲಾ ತಿಳಿಸಲಾಗಿ ಲಾಲಸಿಂಗನು ಅವನನ್ನು ದಿಟ್ಟಿಸಿನೋಡಿ ಅವನ ಗುರುತನ್ನು ತಿಳಿದು ಅವನಿಂದ ವಿವರವನ್ನೆಲ್ಲಾ ಆಮೂಲಾಗ್ರನಾಗಿ ವಿಚಾರಿಸಿದನು. ಆಗ ಅವನಿಗೆ ಸ್ನೇಹಿತನ ಮಾತೆಲ್ಲವೂ ನಿಶ್ಚಯವೆಂದು ಗೊತ್ತಾಯಿತು. ತನ್ನ ತಂದೆಯೂ ಚಿಕ್ಕಪ್ಪನೂ ತೀರಿಹೋಗಿ ಬಿಟ್ಟು ತನಗೆ ಬಹಳ ಹಣವನ್ನೂ ಆಸ್ತಿಯನ್ನೂ ಬಿಟ್ಟುಹೋಗಿದ್ದಾರೆಂದು ತಿಳಿದುಬಂತು. ಆ ಲಾಲಸಿಂಗನ ದುಃಖವೂ ಚಿಂತೆಯೂ ಪ್ರಲಾಪವೂ ಇನ್ನೆಲ್ಲವೂ ಎಲ್ಲಿ ಓಡಿಹೋದವೋ! ಅವನ ಸಂತೋಷವನ್ನು ವಿವರಿಸುವದಕ್ಕೆ ಯಾರಿಗೆ ಶಕ್ಯವು! ಆ ಸ್ನೇಹಿತನು ಕೊಟ್ಟ ಹಣದ ಸಹಾಯದಿಂದ ಮಾರಣೆಯ ದಿನದಲ್ಲಿ ಅವನು ತಮ್ಮೂರಿಗೆ ಹೋಗುವ ರೈಲು ಹತ್ತಿ ಪ್ರಯಾಣಮಾಡುವಾಗ ಆ ಲಾಲಸಿಂಗನು ಇವನೇ ಎಂದು ಯಾರೂ ಗುರುತು ಹಿಡಿಯಲಾರದವನಾಗಿದ್ದನು

ಕೆಲವು ದಿನಗಳು ಕಳೆದವು. ಲಾಲಸಿಂಗನು ಕುಳಿತಿದ್ದ ಸ್ಥಳದಲ್ಲಿ ಇನ್ನೊಬ್ಬ ಯೌವನಸ್ಥನು ಕುಳಿತಿದ್ದಾನೆ. ಲಾಲಸಿಂಗನಂತೆಯೇ ಇವನೂ ಮಹಾ ದುಃಖಾಕ್ರಾಂತನಾಗಿದ್ದಾನೆ. ಇವನಿಗೂ ಹಣವಿಲ್ಲ. ಅನ್ನವಿಲ್ಲ. ಪೋಷಕರು ಇವನನ್ನು ಕಾಪಾಡುವದಿಲ್ಲವೆಂದು ಹೇಳಿಬಿಟ್ಟರು. ತಂದೆ ತಾಯಿಗಳಾಗಲಿ ಬೇರೆ ನೆಂಟರಿಷ್ಟರಾಗಲಿ ಇವನಿಗಿಲ್ಲ. ಆದಕಾರಣ ವಾಮನ ನಾರಾಯಣನೆಂಬವನು ಇಂಗ್ಲಿಷಿನಲ್ಲಿ ಒಂದೆರಡು ಪಾಸುಗಳನ್ನು ಪಡೆದ ವಿದ್ಯಾವಂತನಾಗಿದ್ದರೂ ಒಂದು ತುತ್ತು ಅನ್ನಕ್ಕೂ ಮಾರ್ಗ ಕಾಣದೆ ಸಾವಾದರೂ ಬಂದು ಕೊಂದುಹೋಗದಲ್ಲ ಎಂದು ಚಿಂತಿಸುತ್ತಿದ್ದನು

ಲಾಲಸಿಂಗನಿಗೂ ಅವನ ಸ್ನೇಹಿತನಿಗೂ ನಡೆದ ಸಂಭಾಷಣೆಯನ್ನು ಕೇಳಿದ್ದ ಕನಿಕರವುಳ್ಳ ಒಬ್ಬ ಪುರುಷನು ಈ ವಾಮನ ನಾರಾಯಣನ ದುರವಸ್ಥೆಯನ್ನು ಚೆನ್ನಾಗಿ ನೋಡಿ ತಿಳಿದು—ಇವನೂ ದೊಡ್ಡ ಆಸ್ತಿಗೆ ಬಾಧ್ಯಸ್ಥನಾಗಿದ್ದಾನೆ. ಅದನ್ನು ಕುರಿತು ಇವನಿಗೆ ತಿಳಿಸಬೇಕೆಂದು ಹೇಳಿಕೊಂಡು ಆ ಯೌವನಸ್ಥನ ಹತ್ತಿರಕ್ಕೆ ಹೋಗಿ ಅವನ ಬೆನ್ನು ತಟ್ಟಿ—ಅಪ್ಪಾ ಸ್ನೇಹಿತನೇ, ದುಃಖವನ್ನು ಬಿಡು. ನೀನೂ ಆಸ್ತಿಗೆ ಬಾಧ್ಯಸ್ಥನೆಂಬುದನ್ನು ಅರಿಯೆಯಾ? ಎಂದು ಕೇಳಿದನು.

ವಾಮನನು ಚಕಿತನಾದಾಗ್ಯೂ ಇದು ಒಬ್ಬ ಪರಿಹಾಸಕನ ಮಾತೆಂದು ಆಲೋಚಿಸಿ, ತಲೆಯನ್ನೂ ಮೇಲಕ್ಕೆತ್ತದೆ—ಅಯ್ಯಾ? ನಿನ್ನ ದಾರಿ ಹಿಡಿದು ಹೋಗಪ್ಪ! ಎಂದು ಗದರಿಸಿ ಮಾತಾಡಿದನು. ಆ ಮನುಷ್ಯನು ಕೋಪಮಾಡದೆ ಅವನನ್ನು ಮತ್ತೂ ಕನಿಕರಿಸಿ—ಅಧೈರ್ಯಪಡಬೇಡಯ್ಯಾ, ಅಪನಂಬಿಕೆ ಬೇಡಯ್ಯಾ, ಆಸ್ತಿಗೆ ಬಾಧ್ಯಸ್ಥನಾದ ನೀನು ಚಿಂತೆಗೆ ಅವಕಾಶ ಕೊಡುವದು ತಕ್ಕದ್ದಲ್ಲವೆಂದು ಹೇಳಲು, ವಾಮನನಾರಾಯಣನು—ನನ್ನನ್ನು ಹಾಸ್ಯಮಾಡಬೇಡ. ನಾನು ಚಿಂದಿ ಬಟ್ಟೆಗೂ ನಿರಾಶೆಗೂ ಬಾಧ್ಯಸ್ಥನು. ಆಸ್ತಿಗೆ ಬಾಧ್ಯಸ್ಥನಲ್ಲ ಎಂದು ದುಃಖಿಸಿದನು. ಅದಕ್ಕಾ ಮನುಷ್ಯನು—ಅಪ್ಪಾ, ನಾನು ಹಾಸ್ಯಮಾಡುವವನಲ್ಲ. ಎಲ್ಲಿ ನಿನ್ನ ಮುಖವನ್ನು ತೋರಿಸು ಎಂದು ಹೇಳುತ್ತ ಅವನ ಮುಖವನ್ನು ನೋಡಿ—ಹೌದು, ಹೌದು, ನಾನು ಯೋಚಿಸಿದಂತೆಯೇ ಇದೆ ಎಂದು ಹೇಳಲು ವಾಮನನು ಆ ಮನುಷ್ಯನನ್ನು ನೋಡಿ ಆತನು ಹೇಳುತ್ತಿರುವದು ಅಪಹಾಸ್ಯಕರವಲ್ಲವೆಂದು ತಿಳಿದು—ನೀವು ಹೇಳುವದೇನೋ ನನಗೆ ತಿಳಿಯದು ಎಂದು ಹೇಳುತ್ತ ಬೇರೊಂದು ಕಡೆಗೆ ಮುಖವನ್ನು ತಿರುಗಿಸಿಕೊಂಡನು. ಆ ಮನುಷ್ಯನು ಪುನಃ ವಾಮನನನ್ನು ಕುರಿತು—ಅಯ್ಯಾ ಯೌವನಸ್ಥನೇ, ನಿನ್ನನ್ನು ನೋಡಿದರೆ ತುಂಬಾ ಕೊರತೆಯುಳ್ಳವ ಕಂಗೆಟ್ಟಿದ್ದೀಯೆಂದು ಪರಿಷ್ಕಾರವಾಗಿ ತೋರುತ್ತದೆ. ನೀನು ಆಸ್ತಿಗೆ ಬಾಧ್ಯಸ್ಥನಾಗಬೇಕೆಂದು ಅಪೇಕ್ಷಿಸುವದಿಲ್ಲವೋ? ನೀನು ರಾಜ್ಯವನ್ನೇ ಬಾಧ್ಯವಾಗಿ ಹೊಂದಬೇಕೆಂಬುದು ನಿನ್ನ ತಂದೆಯ ಅಪೇಕ್ಷೆಯಾಗಿದೆ. ಆದಕಾರಣ ಅಂಥ ಬಾಧ್ಯಸ್ಥನಾಗಬೇಕೆಂದು ನೀನೂ ಅಪೇಕ್ಷಿಸಬೇಕು ಎಂದು ಹೇಳಲು ವಾಮನನು—ನನ್ನ ತಂದೆಯೂ ಸತ್ತುಹೋದನು. ಆತನು ರಾಜನಾಗಿತ್ತೆ ಇಲ್ಲ ಎನ್ನುತ್ತ ಕೆಟ್ಟನು.

ಆ ಸ್ನೇಹಿತನು ಅದಕ್ಕೆ—ಹಾಗೆ ಹೇಳಬೇಡಪ್ಪಾ, ನೀನು ಅರಸನ ಮಗನಾಗಿರುವದೇ ನಿಜ. ಆತನು ಸತ್ತಿಲ್ಲ, ಬದುಕಿದ್ದಾನೆ ಎನ್ನಲು; ವಾಮನನು—ಅಯ್ಯಾ, ನಿನಗೇನಾದರೂ ಹುಚ್ಚು ಹಿಡಿದಿದೆಯೋ? ನನಗೆ ಈಗ ಇರುವ ದುಃಖವು ಸಾಲದೆಂದು ವಿನೋದವನ್ನು ನೀಗೆ ಮಾಡುವದಕ್ಕೆ ಬಂದೆಯೋ? ಹೋಗು ಹೋಗಪ್ಪಾ ಎಂದು ಬೇಡಿಕೊಂಡನು. ಆ ಮನುಷ್ಯನು ವಾಮನನ ಬೆನ್ನನ್ನು ತಟ್ಟುತ್ತಾ ಪ್ರೀತಿವಾಕ್ಯಗಳಿಂದ ಆದರಿಸಿ ಅವನನ್ನು ಬೇರೊಂದು ಕಡೆಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿಕೊಂಡು ಅವನಿಗೆ ತನ್ನ ಅಭಿಪ್ರಾಯವನ್ನು ವಿವರಿಸಿದನು. ಆಗ ವಾಮನನಿಗೆ ಈ ಮನುಷ್ಯನು ಕ್ರೀಸ್ತಭಕ್ತನೆಂದು ಗೊತ್ತಾಗಿ—ಅಯ್ಯಾ, ನೀವು ಕ್ರೀಸ್ತನ ಭಕ್ತರೆಂದು ತಿಳಿಯಿತು. ನೀವು ಹೇಳುವ ಮಾತು ನನ್ನ ಮನಸ್ಸಿಗೆ ಒಪ್ಪಲಾರದು.

ಕ್ರಿ. ಭ.—ನೀನು ಬ್ರಾಹ್ಮಣನು. ಆದರೂ ದೇವರ ಮಗನು. ದೇವರೇ ನಿನ್ನನ್ನು ಉಂಟುಮಾಡಿದನು. ಆತನು ನಿನ್ನನ್ನು ಪ್ರೀತಿಸುತ್ತಾನೆ. ತನ್ನ ಕುಮಾರನಾದ ಯೇಸುಕ್ರೀಸ್ತನ ಮುಖಾಂತರ ನಿನ್ನನ್ನು ಪಾಪದಿಂದ ಬಿಡುಗಡೆ ಮಾಡುವನು. ಇದೇ ನಿನ್ನ ಆಸ್ತಿ. ಈ ಆಸ್ತಿಯು ನಿನಗಾಗಿ ಕಾದಿದೆ.

ವಾಮನ—ಬ್ರಾಹ್ಮಣ್ಯವನ್ನು ಕಳೆದುಕೊಳ್ಳಲೇ?

ಕ್ರೀ. ಭ.—ಜನ್ಮದಿಂದ ಬಂದ ಬ್ರಾಹ್ಮಣ್ಯವನ್ನು ಬಿಡಲಾಗುವದು ಯಾರಿಂದಾದೀತು? ಆದರೆ ನಿನ್ನ ಪ್ರೀತಿಪಾತ್ರವಾದ ವಸ್ತುವನ್ನು ಬೇರೆ ಮಾಡಿಕೊಳ್ಳಬಹುದು. ದೇವರನ್ನು ಮಾತ್ರ ನಿನ್ನ ಅರಸನೆಂದೂ ತಂದೆಯೆಂದೂ ಭಾವಿಸಿ ಇಂದು ಆತನನ್ನು ಪ್ರೀತಿಪೂರ್ವಕವಾಗಿ ಸತ್ಯದಿಂದ ಸೇವಿಸಿ ಆ ಯೇಸುಕ್ರೀಸ್ತನನ್ನು ನಿನ್ನ ರಕ್ಷಕನೆಂದು ಅಂಗೀಕರಿಸಿ ಆತನಿಗೆ ವಿಧೇಯನಾಗಿ ನಡೆದರಾಯಿತು. ಅಂಥ ವಿಧೇಯತ್ವದಿಂದ ನಿನ್ನಲ್ಲಿ ತಿಳುವಳಿಕೆಯೂ ನಿರೀಕ್ಷಣೆಯೂ ಹುಟ್ಟುವವು ನಿರೀಕ್ಷಣೆಯು ಸಂತೋಷವಾಗಿ ಮುಗಿಯುವದು.

ವಾಮನ—ನಾನು ವಿಗ್ರಹಾರಾಧನೆಯಲ್ಲಿ ನಂಬಿಕೆಯನ್ನು ಬಿಟ್ಟು ಅನೇಕ ವರ್ಷಗಳಾದವು. ಕ್ರೀಸ್ತಮತವನ್ನು ಅವಲಂಬಿಸಬೇಕಾದರೆ ಬಹಳ ನಷ್ಟವನ್ನು ಹೊಂದಬೇಕಾಗುತ್ತದೆ. ನಿಮ್ಮ ಬೈಬಲ್ ಗ್ರಂಥವನ್ನು ನಾನು ಓದುತ್ತೇನೆ. ಅದರಲ್ಲಿ ಹೇಳುವದನ್ನೆಲ್ಲಾ ನಂಬಿ ಕ್ರೀಸ್ತನ ಹಿಂಬಾಲಕನಾಗಿರುವದಕ್ಕೆ ಇಷ್ಟವುಂಟು. ಆದರೆ ಜಾತಿಯನ್ನೂ ಮತ ಪದ್ಧತಿಗಳನ್ನೂ ಬಿಡುವದು ಸುಲಭವಲ್ಲ.

ಕ್ರೀ. ಭ.—ಸುಲಭವಲ್ಲ ನಿಜವೇ. ನಾನೂ ನಿನ್ನಂತೆಯೇ ಬ್ರಾಹ್ಮಣನಾಗಿದ್ದೆನು. ನನಗೂ ನೆಂಟರಿಷ್ಟರು ಊರು ತುಂಬಾ ಇದ್ದರು. ಆದರೂ ಕ್ರೀಸ್ತನ ದಾಸನಾಗುವದರಲ್ಲಿರುವ ಸಂತೋಷವೂ ಸಂತೃಪ್ತಿಯೂ ಮತ್ತೆಲ್ಲಿಯೂ ಇಲ್ಲವೆಂಬುದು ಅನುಭವಕ್ಕೆ ಬಂತು.

ವಾಮನ—ಹಾಗೋ? ನೀವು ಹೇಳುವದೆಲ್ಲಾ ಅನುಭವದ ಮಾತೋ? ಇನ್ನೂ ಹೇಳಿರಿ. ಕೇಳುತ್ತೇನೆ.

ತರುವಾಯ ಆ ಕ್ರೀಸ್ತಭಕ್ತನು ತಾನು ಕೆಲವು ದಿನಗಳ ಹಿಂದೆ ಕಿವಿಯಾರ ಕೇಳಿದ್ದ ಲಾಲಸಿಂಗನ ವೃತ್ತಾಂತವನ್ನು ವಾಮನನಿಗೆ ಪ್ರಸ್ತಾಪಿಸಿ— ಲಾಲಸಿಂಗನು ತನ್ನ ಆಸ್ತಿಯ ವಿಷಯವನ್ನು ಕೇಳಿದ ಕೂಡಲೆ ಏನು ಮಾಡಿದನು? ಎಂದು ಪ್ರಶ್ನಿಸಿದನು.

ವಾಮನ—ಅವನು ಆ ಸ್ನೇಹಿತನ ಮಾತನ್ನು ನಂಬಿ ಕೂಡಲೆ ಎದ್ದು ಹೊರಟನು

ಕ್ರೀ. ಭ.—ನಾನೇ ನಿನ್ನ ಸ್ನೇಹಿತನಾಗಿದ್ದೇನೆ. ನಿನಗೆ ಈ ಸುವರ್ತಮಾನವನ್ನು ತಂದಿದ್ದೇನೆ. ದೇವರ ಮಗನಾಗಿರುವ ನೀನು ನಿನ್ನ ಆಸ್ತಿಯನ್ನು ಪಡೆಯುವ ಹಾಗೆ ಹೊರಡಲಾರೆಯಾ?

ವಾಮನ—ನಾನು ದೇವರ ಮಗನಾಗಿರುವದಕ್ಕೆ ಯೋಗ್ಯನಲ್ಲ. ಆ ಹಕ್ಕನ್ನು ಆತನಲ್ಲಿ ಕೇಳಿಕೊಳ್ಳುವದು ಹ್ಯಾಗೆ?

ಕ್ರೀ. ಭ.—ಯೇಸುಸ್ವಾಮಿಯು ನಿನ್ನ ಸ್ನೇಹಿತನೆಂದೂ ನಿನ್ನನ್ನು ಪಾಪ ಕಲ್ಮಷದಿಂದ ತೊಳೆದು ಬಿಡುಗಡೆ ಮಾಡತಕ್ಕವನೆಂದೂ ನೀನು ನಿಸ್ಸಂದೇಹವಾಗಿ ನಂಬಿದ್ದರೆ ನಿನಗೇ ವಿಶೇಷವಾದ ವರವನ್ನು ಕೊಡಬೇಕೆಂದು ಕೇಳಿಕೊಳ್ಳದೆ ಸುಮ್ಮನಿರುವೆಯಾ?

ವಾಮನ—ಇಲ್ಲ, ಸುಮ್ಮನಿರಲಾರೆನು.

ಕ್ರೀ. ಭ.—ನಿನಗಾಗಿ ದೂರದೇಶದಲ್ಲಿ ಒಂದು ಆಸ್ತಿಯು ಕಾದಿದೆಯೆಂದು ತಿಳಿದು ಅಲ್ಲಿಗೆ ಹೋಗಬೇಕೆಂಬ ಮನಸ್ಸುಂಟಾದರೆ ಏನು ಮಾಡುವೆ?

ವಾಮನ—ಎಷ್ಟು ಪ್ರಯಾಸಪಡಬೇಕಾದರೂ ಲಕ್ಷ್ಯಮಾಡದೆ ಅಲ್ಲಿಗೆ ಸೇರುವದರಲ್ಲಿ ತುಂಬಾ ಶ್ರಮಪಡುವೆನು. ನಾನೇನು ಮಾಡಬೇಕೋ ಹೇಳಿರಿ. ನನ್ನ ಪರಮ ಪಿತನಾದ ದೇವರನ್ನು ಕಾಣಬೇಕೆಂಬ ಆಶೆಯು ನನ್ನನ್ನು ಪೀಡಿಸಲಾರಂಭಿಸಿದೆ.

ಕ್ರೀ. ಭ.—ನನ್ನ ಮನೆಗೆ ಬಾ ಹುಡುಕಿದವರಿಗೆ ಸಿಕ್ಕುವದು ಎಂದು ಭಗವಂತನು ಹೇಳಿದ ಮಾತನ್ನು ನಿದರ್ಶನಪಡಿಸುವೆನು

ಈ ಪ್ರಕಾರವಾಗಿ ವಾಮನ ನಾರಾಯಣನು ಕ್ರೀಸ್ತನ ವಿಷಯ ಮತ್ತೂ ಹೆಚ್ಚಾಗಿ ತಿಳಿದುಕೊಳ್ಳುವದಕ್ಕೋಸ್ಕರ ಆ ಕ್ರೀಸ್ತಶಿಷ್ಯನನ್ನು ಹಿಂಬಾಲಿಸಿಹೋದನು. ಅವನು ಕಾಲಕ್ರಮೇಣ ನಾಶವಾಗದಂಥ ಆ ಪವಿತ್ರವಾದ ಪರಲೋಕವಾಸದಲ್ಲಿ ದೊರಕುವಂಥ ಆಸ್ತಿಯನ್ನು ಸ್ವತಂತ್ರಿಸಿಕೊಳ್ಳುವವನಾದನು.

ಇಂಡಿಯಾ ದೇಶದ ವೃತ್ತಾಂತಗಳು.

ಬಂಗಾಳಾ ಅಧಿಪತ್ಯದಲ್ಲಿ ಜನರು ವಿಶೇಷವಾಗಿ ಗಾಂಜಾ ಸೇದುವದರಿಂದ ಬಹುಜನರಿಗೆ ಬುದ್ಧಿಭ್ರಮಣೆ ಉಂಟಾಗಲು ಕಾರಣವಾಗಿದೆ ಎಂದು ತಿಳಿದುಬರುತ್ತದೆ.

ಇಂಡಿಯಾ ಗವರ್ನಮೆಂಟಿನವರು ಸರ್ಕಾರಿ ಟಂಕಸಾಲೆಗಳಲ್ಲಿ ರೂಪಾಯಿಗಳನ್ನು ಛಾಪಿಸುವದಕ್ಕೆ ಕಳೆದವಾರ ಹತ್ತು ಲಕ್ಷ ರೂಪಾಯಿನ ಬೆಳ್ಳಿಯನ್ನು ಕೊಂಡು ತರಿಸಿದಾರೆ.

* * * *

ಬೊಂಬಾಯಿ ಅಧಿಪತ್ಯದ ಗವರ್ನರಾದ ಲಾರ್ಡ್ ಲಾಮಿಂಗ್ಟನರವರಿಗೆ ಕಳೆದವಾರ ಜ್ವರ ಮುಂತಾದ್ದು ಪ್ರಾಪ್ತವಾಗಿತ್ತು, ಈಚೆಗೆ ಸ್ವಲ್ಪ ಗುಣವಾಗಿದೆ ಎಂದು ತಿಳಿಯುವದು.

* * * * *

ಪೆಶಾವರ ಪ್ರಾಂತ್ಯದಲ್ಲಿ ಪ್ಲೇಗ ಉಪದ್ರವು ತುಂಬಾ ಜೋರಾಗಿರುವದರಿಂದ ಅಲ್ಲಿನ ಸಾವಿರಾರು ಪ್ರಜೆಗಳು ಗಾಬರಿಬಿದ್ದು ಸಂಸಾರ ಸಹಿತ ಅಫ್ಘಾನಿಸ್ಥಾನಕ್ಕೆ ಬಂದು ಸೇರುತ್ತಿದಾರೆಂದು ತಂತೀವರ್ತಮಾನ ಬಂದಿದೆ

* * * * *

ಬೊಂಬಾಯಿ ಪಟ್ಟಣದಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಷೇರುಗಳ ಮೂಲಕ ಕೂಡಿಸಿ, ಬಹು ಅಲಂಕಾರವಾದ ಒಂದು ನಾಟಕಶಾಲೆಯನ್ನು ಕಟ್ಟಿಸುತ್ತಾರೆ. ಇದರಿಂದ ಷೇರುದಾರರಿಗೆ ತುಂಬಾ ಆದಾಯವಾದೀತೆಂದು ನಿರೀಕ್ಷಿಸಲ್ಪಟ್ಟದೆ.

* * * * *

ಮಣಿಪುರ ಸಂಸ್ಥಾನದಲ್ಲಿ ರೇಷ್ಮೆ ಕಾರ್ಖಾನೆಯೊಂದನ್ನು ಸ್ಥಾಪಿಸುವದಕ್ಕೆ ಕಲ್ಕತ್ತೆಯ ಒಂದು ಕಂಪನಿಯವರು ಅಪ್ಪಣೆ ತೆಗೆದುಕೊಂಡು ಬಂದಿದಾರೆ. ಆ ಸಂಸ್ಥಾನದಲ್ಲಿ ರೇಷ್ಮೆ ತಯಾರಿಗೆ ತುಂಬಾ ಅನುಕೂಲಗಳುಂಟೆಂದು ತಿಳಿಯುವದು

* * * * *

ಬೊಂಬಾಯಿ ಪಟ್ಟಣದಲ್ಲಿ ೧೫ ಲಕ್ಷ ರೂಪಾಯಿ ಖರ್ಚುಮಾಡಿ ಒಂದು ಅಜಾಯಿಬ ಬಂಗಲೆಯನ್ನು ಕಟ್ಟಿಸಿ, ಅದರಲ್ಲಿ ವಿಚಿತ್ರವಾದ ಸಮಸ್ತ ಪದಾರ್ಥಗಳನ್ನೂ ಇಡಿಸುವರು. ಈ ಪ್ರತಿ ಕೆಲವು ಹಣವನ್ನು ಬೊಂಬಾಯಿ ಗವರ್ನಮೆಂಟಿನವರು ಕೊಡುತ್ತಾರೆ.

* * * * *

ಬಂಗಾಳಾ ಪ್ರಾಂತ ಸೇನನೀಗೋಸ್ಕರ ಗುಮಾಸ್ತೆಯು ಕಲ್ಕತ್ತಾ ಪಟ್ಟಣದ ಬೆಂಗಾಳಾ ಬ್ಯಾಂಕಿನಲ್ಲಿ [illegible] ೩೦,೦೦೦ ರೂಪಾಯಿ ತೆಗೆದುಕೊಂಡು ಹದ್ದು ಸಿಕ್ಕಿ ಆಗ ಆ ಮೋಸಗಾರನಿಗೆ ಕಳೆದ ವಾರ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು ೬ ವರುಷ ಕಠಿಣಶಿಕ್ಷೆ ವಿಧಿಸಿದಾರೆ

* * * * *

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸರವರು ಮುಂದಿನ ಜನವರಿಯಲ್ಲಿ ಕಲ್ಕತ್ತೆಗೆ ದಯಮಾಡುವಾಗ ಕಲ್ಕತ್ತೆಯಲ್ಲಿ ಲಾರ್ಡ್ ಕರ್ಜನ ಪ್ರಭುಗಳು ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಬಂಗಲೆಗೆ ಅವರಿಂದ ಅಸ್ತಿಭಾರವನ್ನು ಹಾಕಿಸಿ ಕಟ್ಟಿಸುವವರಾಗಿದಾರೆ

* * * * *

ಮೈಮನಸಿಂಗ್ ಡಿಸ್ಟ್ರಿಕ್ಟಿಗೆ ಸೇರಿದ ಸಂತೋಷವೆಂಬ ಗ್ರಾಮದಲ್ಲಿ ಬಾಬೂ ವೈಕುಂಠನಾಥ ಚೌಧ್ರಿ ಎಂಬಾತನ ಪತ್ನಿಯಾದ ಶ್ರೀಮತಿ ದೀನಮಣಿ ಎಂಬಾಕೆಯು ಡಾರ್ಜಿಲಿಂಗ್ ಪಟ್ಟಣದಲ್ಲಿರುವ ಆಸ್ಪತ್ರೆಯನ್ನು ಜಡಾವಣೆಮಾಡಿ ಕಟ್ಟುವದಕ್ಕೆ ೧೫,೦೦೦ ರೂಪಾಯಿ ಧರ್ಮಮಾಡಿದಾಳೆ.

* * * * *

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ರತ್ನಗಿರಿ ಡಿಸ್ಟ್ರಿಕ್ಟಿನಲ್ಲಿ ಈ ಸಲ ಬೆಟ್ಟಗಳ ಅವಾಂತ್ರ ಜಾಸ್ತಿ, ರೈತರ ಬೆಳೆಗಳು ಅನೇಕ ಕಡೆ ನಾಶವಾದವು. ಇದಕ್ಕಾಗಿ ಸರ್ಕಾರದವರು ೧೧,೦೪೩ ರೂಪಾಯಿನ ಕಂದಾಯ ಕೌಳಿಗೆಗಳನ್ನು ಸುಭಿಕ್ಷದಲ್ಲಿ ಇನ್ನು ಮುಂದೆ ವಸೂಲ್ಮಾಡಬೇಕೆಂದು ಹುಕುಂ ಕೊಟ್ಟಿದಾರೆ

* * * * *

ಉತ್ತರ ದೇಶದಲ್ಲಿ ಸಂಚಾರ ಮಾಡುವ ಗ್ರೇಟ್ ಇಂಡಿಯನ್ ಪೆನಿನ್ಸುಲರ್ ರೈಲ್ ಗಾಡಿಗಳ ಮಾಲೀಕರು ಆ ರೈಲ್ ಗಾಡಿಗಳ ೩ನೆ ತರಗತಿಯ ಪ್ರಯಾಣಿಕರ ಸೌಕರ್ಯವನ್ನು ಕುರಿತು ಚರ್ಚೆಮಾಡಿ ಟಿಕೇಟುಗಳನ್ನು ಅನೇಕ ಕಡೆ ಪೋಸ್ಟ ಆಫೀಸುಗಳಲ್ಲೂ ಬಿಕರಿ ಆಗುವಂತೆ ಏರ್ಪಾಡು ಮಾಡಬೇಕೆಂದು ಯೋಚಿಸಿರುತ್ತಾರೆ.

* * * * *

ಅಫ್ಘಾನಿಸ್ಥಾನದ ಉತ್ತರದಿಕ್ಕಿನ ಎಲ್ಲೆಕಟ್ಟಿನ ಬಳಿ ಅಮೀರರ ಕಡೆಯವರು ವೇಷಧಾರಿಯಾದ ಒಬ್ಬ ರಷ್ಯಾದವನನ್ನು ಹಿಡಿದು, ದರ್ಯಾಫ್ತಿಯ ಬಗ್ಗಾಗಿ ಅವನನ್ನು ಕಾಬೂಲ್ ಪಟ್ಟಣಕ್ಕೆ ಕಳುಹಿಸಿದಾರೆಂತಲೂ ಆ ರಷ್ಯಾದವನ ಬಳಿ ರಾಜಕೀಯ ವಿಷಯದ ಕೆಲವು ಕಾಗದ ಪತ್ರಗಳು ಸಿಕ್ಕಿರುವದಾಗಿಯೂ ತಿಳಿದು ಬಂದಿದೆ.

* * * * *

ಮದರಾಸ್ ಪಟ್ಟಣದಲ್ಲಿರುವ ಲಾರೆನ್ಸ್ ಅಸೈಲಂ ಪ್ರೆಸ್ ಎಂಬ ಭಾರೀ ಅಚ್ಚಿನ ಕಾರ್ಖಾನೆಯ ಮ್ಯಾನೆಜರು ಕೂಲಿ ಜನರಿಂದ ಹಬ್ಬಗಳಿಗೂ ಕೂಡ ರಜಾ ಕೊಡದೆ ಕೆಲಸ ಮಾಡಿಸುತ್ತಿದ್ದದರಿಂದ ಸುಮಾರು ೫೦೦ ಮಂದಿ ಕೆಲಸಕ್ಕೆ ಬಾರದೆ ನಿಂತುಬಿಟ್ಟರು. ಸುಮಾರು ಎರಡು ತಿಂಗಳಿಂದಲೂ ಅವರೆಲ್ಲಾ ಕೆಲಸಕ್ಕೆ ಹೋಗಲಿಲ್ಲ

* * * *

ಕರಾಚಿ ಪಟ್ಟಣದ ಸಮುದ್ರ ತೀರದಲ್ಲಿ ಈ ತಿಂಗಳು ಅಧಿಕವಾದ ಗಲಾಟೆ ಇರುವದು. ಉತ್ತರ ದೇಶದಲ್ಲಿ ಬೆಳೆಯುವ ಗೋಧಿ ಮೊದಲಾದ ಧಾನ್ಯಗಳು ರಾಶಿಯಾಗಿ ರೈಲ್ ಮೇಲೆ ಬಂದು ಕರಾಚಿಯಲ್ಲಿ ಹಡಗುಗಳಿಗೆ ಭರ್ತಿಯಾಗಿ ವಿಲಾಯತಿಗೆ ಸಾಗಿಹೋಗುವವು. ಈ ಧಾನ್ಯಗಳ ಪೈಕಿ ಗೋಧಿಯೊಂದೇ ೭೫ ಲಕ್ಷ ಖಂಡಿಗಳು ರಫ್ತಾಗುತ್ತವೆ.

ಕೊಚ್ಚಿ ಸಂಸ್ಥಾನದ ಮಹಮದೀಯ ಪ್ರಜೆಗಳಲ್ಲಿ ಮುಖಂಡರೆಲ್ಲಾ ಸಭೆಸೇರಿ ತಮ್ಮ ಜನಗಳಲ್ಲಿ ಬಡಬಗ್ಗರ ಮಕ್ಕಳಿಗೆ ಅನ್ನವಿಟ್ಟು ಹಾಕಿ ವಿದ್ಯೆ ಕಲಿಸಬೇಕೆಂತಲೂ ಇದಕ್ಕಾಗಿ ಒಂದು ಧರ್ಮಪಾಠಶಾಲೆಯನ್ನು ಕಟ್ಟಿಸಬೇಕೆಂತಲೂ ಗೊತ್ತುಮಾಡಿ, ಚಂದಾ ಎತ್ತುತ್ತಿದ್ದಾರೆ ಇದುವರೆಗೆ ಈ ಫಂಡಿಗೆ ೨೦,೦೦೦ ರೂಪಾಯಿ ರಗೆ ವಸೂಲಾಗಿದೆ

*****

ಮೋಲಾರ ಬಜಾರದಲ್ಲಿ ಮೂಲಕಣಿವೆಯಲ್ಲಿ ನದಿಯ ಪ್ರವಾಹಕ್ಕೆ ಸುಮಾರು ಆರು ಮೈಲಿ ಭೂಸಲಿ ಜಮೀನೆಲ್ಲಾ ನೀರಿನಲ್ಲಿ ಮುಳುಗಿಕೊಂಡಿರು ಒಂದು ಕಡೆ ದೂಸ್ಮಯೇರಿಯ ಕಿತ್ತುಹೋಗಿದೆ ವೈಲ್ ಪ್ರಯಾಣಿಕರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ದೋಣಿಗಳಲ್ಲಿ ಸಾಗಿಸುತ್ತಲೂ ಕಿತ್ತುಹೋಗಿರುವ ರೈಲನ್ನು ಹೊಸದಾಗಿ ಕಟ್ಟಿಸುತ್ತಲೂ ಇದ್ದಾರೆ

*****

ರಂಗೂನ್ ಪಟ್ಟಣದಲ್ಲಿ ಸರ್ಕಾರಿ ಅಧಿಕಾರಿಯಾಗಿದ್ದ ಮಿ॥ ಬರಕ್ ಎಂಬಾತನು ಆಕಸ್ಮಾತ್ತಾಗಿ ಮೃತಪಟ್ಟನು ಅವನಿಗೆ ಯಾರೋ ವಿಷ ಹಾಕಿದರೆಂದು ತಿಳಿದು ಬಂದದ್ದರಿಂದ ಅವನ ಇಬ್ಬರು ಸೇವಕರನ್ನು ಹಿಡಿದು ತನಿಖೆಮಾಡಿ ಉಸ್ತುವಾರಿ ಮೇಲೆ ಬಿಟ್ಟು, ಕೊಲೆಗಾರನನ್ನು ಪತ್ತೆ ಮಾಡಿಕೊಡುವವರಿಗೆ ೧,೦೦೦ ರೂಪಾಯಿ ಬಹುಮಾನ ಸಿಕ್ಕುವುದೆಂದು ಪ್ರಕಟಪಡಿಸಿರುತ್ತಾರೆ

*****

ವಾಯುವ್ಯ ಪ್ರಾಂತ್ಯದಲ್ಲಿ ಸಂಚರಿಸುವ ರೈಲ ಗಾಡಿಗಳು ಬಹಳ ಹಳದಾಗಿರುವುದರಿಂದ ಸರ್ಕಾರದವರು ೬೦ ಹೊಸ ಗಾಡಿಗಳನ್ನು ವಿಲಾಯತಿಯಿಂದ ತರಿಸುತ್ತಾರೆ ಇದಕ್ಕೋಸ್ಕರ ೧೯೦,೦೦೦ ರೂಪಾಯಿ ಕಳುಹಿಸಿದ್ದಾರೆ ಇದಲ್ಲದೆ ಎಂಜಿನ್‌ಗಳಿಗೆ ನೀರು ಸಂಗ್ರಹ ಮಾಡುವುದಕ್ಕೆ ೪,೬೫,೦೬೦ ರೂಪಾಯಿ ಮುಟ್ಟಿಸಿ ೨೫ ಬ-ರೀ ಡಬ್ಬಿಗಳನ್ನು ತರಿಸುವರು

*****

ಪಾರ್ಸಿ ಜನರು ಬೊಂಬಾಯಿ ಪಟ್ಟಣದಲ್ಲಿ ತಮ್ಮ ಜಾತಿಯವರು ಸತ್ತರೆ ಶವವನ್ನು ತೆಗೆದುಕೊಂಡುಹೋಗಿ ಒಂದು ಕಟ್ಟಡದೊಳಗೆ ಇಟ್ಟು ಬರುವರು ಈ ಶವಗಳನ್ನು ರಣಹದ್ದುಗಳೇ ಮುಂತಾದವು ತಿಂದುಬಿಡುವವು ಈ ಪದ್ಧತಿಯು ತುಂಬಾ ಅಸಹ್ಯವಾದದ್ದೆಂತಲೂ ಇನ್ನು ಮೇಲೆ ಶವಗಳನ್ನು ಬೆಂಕಿಯಲ್ಲಿ ಸುಟ್ಟುಬಿಡುವ ಪದ್ಧತಿ ಸರ್ವಸಮ್ಮತವಾಗಿರುವುದೆಂತಲೂ ಬಹು ಮಂದಿ ಪಾರ್ಸಿಗಳು ಅಭಿಪ್ರಾಯಪಡುವರು

*****

ಮದರಾಸ್ ಅಧಿಪತ್ಯದ ಗವರ್ನರಾದ ಲಾರ್ಡ್ ಆಂಪ್ಟಿಲ್‌ರವರು ಪತ್ನೀಪರಿವಾರ ಸಹಿತ ಮುಂದಿನ ತಿಂಗಳು ೧೭ಕ್ಕೆ ನೀಲಗಿರಿಯಿಂದ ಹೊರಟು, ೧೪ಕ್ಕೆ ಹೈದರಾಬಾದಿಗೆ ದಯಮಾಡಿ ಒಂದು ವಾರ ನೈಜಾಮರವರ ಆತಿಥ್ಯವನ್ನು ಸ್ವೀಕರಿಸುವವರಾಗಿದ್ದಾರೆ ಆಗ್ಗೆ ತುಂಗಭದ್ರಾ ಮೊದಲಾದ ಕೆಲವು ನೀರಾವರಿ ಕಾಮಗಾರಿಗಳ ವಿಷಯವನ್ನು ಕುರಿತು ಗವರ್ನರವರು ನೈಜಾಮರವರ ಸಂಗಡ ಮಾತನಾಡುವರೆಂದು ತಿಳಿದುಬಂದಿದೆ

*****

ಕಲ್ಕತ್ತಾ ಪಟ್ಟಣದ ಅಪ್ಪರ್ ಸರ್ಕುಲರ್ ರೋಡ್ ಎಂಬ ರಸ್ತೆಯಲ್ಲಿ ಕಳೆದ ವಾರ ಒಂದು ಮನೆಯಲ್ಲಿದ್ದ ಇಬ್ಬರೇ ಇಬ್ಬರು ಮುದುಕಿಯರನ್ನು ಯಾರೋ ಕೊಂದುಹಾಕಿ, ಆ ಮನೆಯೊಳಗಣ ಸುಮಾರು ೨೦,೦೦೦ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿದರು ಪೋಲೀಸಿನವರು ಪತ್ತೆ ತರಹದೂ ನಡಸುತ್ತಿದ್ದಾರೆ ಕಳ್ಳರನ್ನು ಹಿಡಿದು ಕೊಡುವವರಿಗೆ ೯೦೦ ರೂಪಾಯಿ ಬಹುಮಾನ ದೊರಕುವುದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ

*****

ಅಫಘಾನಿಸ್ಥಾನದ ಅಮೀರ್ ಹಬಿಬುಲ್ಲಾಖಾನರವರು ಕೊಚ್ಚಿ ಸಂಸ್ಥಾನದಲ್ಲಿ ಸಂಚಾರ ಮಾಡುವಾಗ್ಗೆ ದುಷ್ಕರೆಂದು ಹೆಸರುಗೊಂಡಿದ್ದ ೬೬೯ ಜನರನ್ನು ಹಿಡಿಸಿ, ಅವರನ್ನೆಲ್ಲಾ ತಮ್ಮ ಸೈನ್ಯಕ್ಕೆ ಸೇರಿಸಿಕೊಳ್ಳುವುದಾಗಿ ನಂಬಿಸಿ, ರಾಜಧಾನಿಯಾದ ಕಾಬೂಲ್ ನಗರಕ್ಕೆ ಪಹರೆ ಇಟ್ಟು ಕಳುಹಿಸಿದರು. ಅಲ್ಲಿ ಕೊತ್ವಾಲರಾದ ಸರ್ದಾರ್ ಫತ್ತೆ ಮಹಮದ್ ಖಾನರವರು ಅವರನ್ನೆಲ್ಲಾ ಸೆರೆಮನೆಯಲ್ಲಿ ಹಾಕಿರುತ್ತಾರೆ. ದುಷ್ಟನಿಗ್ರಹವು ಎಷ್ಟು ಸುಲಭವಾಗಿ ನೆರವೇರಿತು!

*****

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೭,೪೬೩ ಜನರು ಪ್ಲೇಗ್ ಉಪದ್ರವದಿಂದ ಕಾಲವಾದರು ಈ ಪೈಕಿ ಪಂಜಾಬಿನಲ್ಲಿ ೩,೬೬೩ ಜನರೂ, ಸಂಯುಕ್ತ ಆಧಿಪತ್ಯಗಳಲ್ಲಿ ೧೪೯೧, ಬೊಂಬಾಯಿ ಪಟ್ಟಣದಲ್ಲಿ ೧೧೭, ಬೊಂಬಾಯಿ ಡಿಸ್ಟ್ರಿಕ್ಟುಗಳು ೨೪೩, ಕಲ್ಕತ್ತೆ ೨೪, ಬಂಗಾಳ ಡಿಸ್ಟ್ರಿಕ್ಟುಗಳು ೧೩೭, ಬರ್ಮಾ ೯೩ ಈ ಪ್ರಕಾರ ಮರಣಸಂಖ್ಯೆ ಕಡಿಮೆಯಾಗಿರುವುದು. ಪ್ರತಿ ವರುಷವೂ ಈ ದಿನಗಳಲ್ಲಿ ಈ ಉಪದ್ರವ ಜೋರು ಸ್ವಲ್ಪ ಶಾಂತವಾಗಿರುತ್ತದೆ

*****

ತಿರುವಾಂಕೂರು (ಆನಂತಶಯನ) ಸಂಸ್ಥಾನದಲ್ಲಿ ಏಕಾಕಿ ಎಂಬ ಗ್ರಾಮದೊಳಗೆ ಸರ್ಕಾರದವರು ಎಕರೆ ೧ಕ್ಕೆ ೨೧ ರೂಪಾಯಿನಂತೆ ಕಂದಾಯ ಹಾಕಿ ವಸೂಲ್ಮಾಡುತ್ತಿದ್ದಾರೆ ದಿವಾನ್ ಮಿ॥ ಮಾಧವರಾಯರು ಕಳೆದ ವಾರ ಆ ಪ್ರಾಂತ್ಯ ಹೋಗಿದ್ದಾಗ ಅಲ್ಲಿನ ರೈತರು ತಮ್ಮ ಕಷ್ಟನಷ್ಟಗಳನ್ನು ಅರಿಕೆ ಮಾಡಿಕೊಂಡರು ಹೊಸದಾಗಿ ಸೆಟ್ಲ್‌ಮೆಂಟು ಮಾಡುತ್ತಿದೇವೆಂತಲೂ ಆ ವಿಷಯವನ್ನು ಆಗ್ಗೆ ಲಕ್ಷ್ಯ ಹಾಕಿಕೊಳ್ಳುತ್ತೇವೆಂತಲೂ ದಿವಾನರವರು ಅಪ್ಪಣೆ ಕೊಡಿಸಿರುತ್ತಾರೆ.

ಕಳೆದ ೧೮೮೯ ನೆ ಇಸವಿಯಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ಪುದುಚೇರಿಯ ವಿಷಯವಾಗಿ ಒಂದು ಕರಾರು ನಡೆದಿದೆ ಈ ಕರಾರಿನ ಪ್ರಕಾರ ಇಂಡಿಯಾ ಗವರ್ನಮೆಂಟಿನವರು ಪುದುಚೇರಿಯ ಪ್ರಜೆಗಳಿಗೆ ಅವರ ಉಪ್ಪಿನ ದೋಣಿಗಳ ಕಸಬು ತಪ್ಪಿಹೋದ ಪ್ರತಿಫಲಕ್ಕೋಸ್ಕರ ಪ್ರತಿ ವರುಷವೂ ಆರು ಲಕ್ಷ ರೂಪಾಯಿಗಳನ್ನು ಕೊಡುತ್ತಾ ಬಂದಿದ್ದಾರೆ ಆದರೆ ಫ್ರೆಂಚ್ ಸರ್ಕಾರದವರು ಈ ಹಣವನ್ನು ಪುದುಚೇರಿಗಾಗಿ ವಿನಿಯೋಗಿಸದೆ ಪ್ಯಾರಿಸ್‌ಗೇನೇ ತರಿಸಿಕೊಳ್ಳುವರು

*****

ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಕಮಿಷನರಾದ ಮಿ॥ ಇಬ್ರಾಹಿಂ ರಹಿಮತ್ ಉಲ್ಲಾರವರು ಆ ಪಟ್ಟಣದೊಳಗಿರುವ ಸಮಸ್ತ ಹುಡುಗರಿಗೂ ಬಲಾತ್ಕಾರ ಪೂರ್ವಕ ವಿದ್ಯೆ ಕಲಿಸುವಂಥಾ ಕಾನೂನು ಮಾಡಿ ಜಾರಿಗೆ ತರಬೇಕೆಂತಲೂ ಈ ವಿಷಯದಲ್ಲಿ ಬೋರ್ಡಿನವರು (ಗವರ್ನಮೆಂಟಿಗೆ ಶಿಫಾರಸು) ಮಾಡಬೇಕೆಂತಲೂ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಕಳೆದವಾರ ಸೂಚಿಸಿದರು ಇನ್ನೂ ಕೆಲವು ಮಂದಿ ಆದು ಕೂಡದೆಂದು ಉಪನ್ಯಾಸ ಮಾಡಿದರು ಅಂತು ಈ ವಿಷಯವು ಚರ್ಚೆಯಾಗುತ್ತಿದೆ

*****

ಕಲ್ಕತ್ತಾ ಪಟ್ಟಣದ ಪೋಲೀಸ್ ಇಲಾಖೆಯ ರಿಪೋರ್ಟು ಪ್ರಕಟವಾಗಿದೆ ಅದರಿಂದ ತಿಳಿದುಬರುವುದೇನೆಂದರೆ—ಕಳೆದ ವರುಷ ಪೋಲೀಸ್ ನೌಕರರಲ್ಲಿಯೇ ನಾನಾ ಅಪರಾಧಗಳು ನಡೆದುದರಿಂದ ಸುಮಾರು ೪೦೦ ಮಂದಿ ಪೋಲೀಸಿನವರನ್ನು ಕೆಲಸದಿಂದ ವಜಾಮಾಡಿದರು ಜಟ್ಕಾ ಗಾಡಿ ಹೊಡೆಯುವವರ ಪೈಕಿ ೨೩೪ ಮಂದಿ ಕೋಚ್‌ಮನರನ್ನು ಅಲಕ್ಷ್ಯದಿಂದ ಗಾಡಿ ಹೊಡೆದದ್ದಕ್ಕೆ ಹಿಡಿದು, ಅವರಿಗೆಲ್ಲಾ ಜುಲ್ಮಾನೆ ಹಾಕಿಸಿದರು ಈ ಪೈಕಿ ಏಳು ಜನರಿಗೆ ಕಾರಾಗೃಹಶಿಕ್ಷೆಯು ವಿಧಿಸಲಾಯಿತು

*****

ರಂಗೂನ್ ಪಟ್ಟಣದಲ್ಲಿ ಸ್ಕೂಲ ವಿದ್ಯಾರ್ಥಿಯೊಬ್ಬನು ಮಾವಿನ ಹಣ್ಣು ತಿಂದು ಅದರ ಸಿಪ್ಪೆಯನ್ನು ಬೀದಿಯಲ್ಲಿ ಹಾಕಿದನು ಮ್ಯುನಿಸಿಪಾಲಿಟಿಯ ಅಧಿಕಾರಿಗಳು ಅವನನ್ನು ಹಿಡಿದು, ಅವನು ಪ್ರಜಾ ಆರೋಗ್ಯಕ್ಕೆ ಕುಂದಕವನ್ನುಂಟುಮಾಡಿದನೆಂದು ಹೇಳಿ, ಅವನ ಮೇಲೆ ಫಿರ್ಯಾದು ತಂದರು ಮ್ಯಾಜಿಸ್ಟ್ರೇಟರು—ಇದು ತುಂಬಾ ಅಲ್ಪ ವಿಷಯವೆಂದು ಹೇಳಿದರೂ ಅಪರಾಧಿಗೆ ಶಿಕ್ಷೆಮಾಡಬೇಕೆಂದು ಮ್ಯುನಿಸಿಪಾಲಿಟಿಯವರು ಹಟ ಹಿಡಿದದ್ದರಿಂದ ಅವರು ಕಡೆಗೆ ಆ ಹುಡುಗನಿಗೆ ಒಂದಾಣೆ ಜುಲ್ಮಾನೆ ಹಾಕಿದರು

*****

ಪ್ರಿನ್ಸ ಆಫ್ ವೇಲ್ಸ್‌ರವರು ಡಿಸೆಂಬರ್ ೬ಕ್ಕೆ ಕಾಶ್ಮೀರ ಸಂಸ್ಥಾನವನ್ನು ತಲುಪುವರು ಅವರನ್ನು ಒಂದು ವಾರದ ವರೆಗೆ ಅಲ್ಲಿನವರು ಬಹು ಉತ್ಸಾಹದಿಂದ ಸತ್ಕಾರ ಮಾಡುವುದಕ್ಕೆ ಸನ್ನಾಹ ಮಾಡಲಾರಂಭಿಸಿದ್ದಾರೆ ಸುಮಾರು ೩೦ ಸಂವತ್ಸರಗಳ ಹಿಂದೆ, ಈಗಿನ ಚಕ್ರವರ್ತಿಯವರು ಪ್ರಿನ್ಸ್ ಆಫ್ ವೇಲ್ಸರಾಗಿದ್ದು ಹಿಂದುಸ್ಥಾನಕ್ಕೆ ದಯಮಾಡಿದ್ದವೇಳೆ ಕಾಶ್ಮೀರ ಸಂಸ್ಥಾನದ ಮಹಾರಾಜರವರು ಅವರ ಬಿಡಾರಕ್ಕೋಸ್ಕರ ಲಕ್ಷಾಂತರ ರೂಪಾಯಿ ಮುಟ್ಟಿಸಿ ಒಂದು ರಾಜಭವನವನ್ನು ಕಟ್ಟಿಸಿದರು. ಈ ರಾಜಭವನದಲ್ಲೇ ಈಗಲೂ ಯುವರಾಜರು ಇಳುಕೊಳ್ಳುವವರಾಗಿದ್ದಾರೆ.

*****

ಬಂಗಾಳ ಆಧಿಪತ್ಯಕ್ಕೆ ಸೇರಿದ ಹುಗ್ಲಿ ಡಿಸ್ಟ್ರಿಕ್ಟಿನ ಕಲೆಕ್ಟರಾದ ಮಿ॥ ಹಟ್ ಡಿ ಜೆರೀಯವರು ಏನೇನೋ ಅಕೃತ್ಯಗಳನ್ನು ಮಾಡಿದರೆಂದು ಬಂಗಾಳ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಯಿತು ಗವರ್ನಮೆಂಟಿನವರು ಈ ಆಕ್ಷೇಪಣೆಗಳನ್ನು ಅಂತರಂಗದಲ್ಲೇ ತನಿಖೆಮಾಡಿ, ಆ ಅಧಿಕಾರಿಯ ಸಂಬಳವನ್ನು ೧,೪೦೦ ರೂಪಾಯಿನಿಂದ ೯೦೦ ರೂಪಾಯಿಗೆ ಇಳಿಸಿ ಮಾಡಿದ್ದಲ್ಲದೆ ಡಿಸ್ಟ್ರಿಕ್ಟಿನ ಛಾರ್ಜು ತಪ್ಪಿಸಿ, ಜಾಯಿಂಟ್ ಮ್ಯಾಜಿಸ್ಟ್ರೇಟ್ ಎಂಬ ನೌಕರಿಗೆ ಕಳಿಸಿದ್ದಾರೆ ಈಗ ಅತನು ತನ್ನ ಕಷ್ಟನಷ್ಟಗಳನ್ನು ಕುರಿತು ವೈಸ್‌ರಾಯರವರಿಗೆ ಅರ್ಜಿ ಬರೆದುಕೊಂಡಿದ್ದಾನೆ

*****

ಕೊಲೊಕಣಿವೆಯಲ್ಲಿ ಭೂಕಂಪವಾದುದನ್ನು ಪರಿಶೋಧನೆ ಮಾಡುವುದಕ್ಕೆ ಜರ್ಮನ್ ಶಾಸ್ತ್ರಜ್ಞನಾದ ಓಮೋರಿ ಎಂಬ ಪಂಡಿತನು ಆ ಪ್ರಾಂತ್ಯ ಹೋಗಿ ಎಲ್ಲಾ ನೋಡಿಕೊಂಡು ಬಂದನು ಈತನು ತಿಳಿಸುವುದೇನೆಂದರೆ—ಉತ್ತರ ಹಿಂದುಸ್ಥಾನವು ಇನ್ನು ೨೧೦ ವರ್ಷಗಳ ವರೆಗೆ ಸುರಕ್ಷಿತವಾಗಿರುವುದು ಇಂಥಾ ಭಯಂಕರವಾದ ಭೂಕಂಪಗಳು ಅದುವರೆಗೆ ಪ್ರಾಪ್ತವಾಗಲಾರವು. ಆದರೆ ಅಲ್ಲಲ್ಲಿ ಆಗಿಂದಾಗ್ಗೆ ಸಣ್ಣ ಸಣ್ಣ ಭೂಕಂಪಗಳಾದರೂ ಆಗಬಹುದು ಈ ಸಣ್ಣ ಭೂಕಂಪಗಳಲ್ಲಿ ಯಾವದಾದರೂ ಒಂದು ಸ್ವಲ್ಪ ಕಠಿಣವಾಗಿ ಪರಿಣಮಿಸಿದರೂ ಈಗಿನಷ್ಟು ಕಷ್ಟನಷ್ಟಗಳು ಪ್ರಾಪ್ತವಾಗುವುದಿಲ್ಲ ಇನ್ನು ಮುಂದೆ ಮಹಾ ಭಯಂಕರವಾದ ಭೂಕಂಪ ಪ್ರಾಪ್ತವಾಗುವದಾದರೆ ಪಂಜಾಬ್ ಪ್ರಾಂತ್ಯದಲ್ಲಿ ಆದೀತು. ಅದರಿಂದೀಚಿಗೆ ಸಂಭವಿಸಲಾರದೆಂದು ಕಾಣುವವು ಎಂಬುದೇ.

*****

ಮದರಾಸ್ ಪಟ್ಟಣದ ಬಳಿ ಸೇಂಟ್ ತಾಮಸ್ ಮೌಂಟ್ ಎಂಬ ಊರಿನಲ್ಲಿ ಮಿ॥ ಮುತ್ತುಸಾಮಿ ಪಿಳ್ಳೆ ಎಂಬ ದೇಶೀಯ ಕ್ರೈಸ್ತನು ಕಳ್ಳರು ಗುರುತಿಸುವವರಿಗೂ (ಕೊರವರಿಗೂ) ಅವರ ಮಕ್ಕಳಿಗೂ ವಿದ್ಯೆ ಕಲಿಸಬೇಕೆಂದೂ ಅವರನ್ನು ಒಳ್ಳೇ ಸ್ಥಿತಿಗೆ ತರಬೇಕೆಂದೂ ತುಂಬಾ ಸಾಹಸಪಡುತ್ತಿದ್ದಾನೆ ಅವರಿಗಾಗಿ ಅತನು ಒಂದು ಪಾಠಶಾಲೆಯನ್ನು ಇಡಿಸಿರುವನು. ಸರ್ಕಾರದವರು ಇಂಥಾ ಪುಣ್ಯಕಾರ್ಯಕ್ಕೆ ಕಳ್ಳಪುಟ್ಟಿಗೆ ದ್ರವ್ಯಸಹಾಯಕೊಡುತ್ತಾ ಇಲ್ಲವೆಂತಲೂ ಇದರಿಂದ ವಿದ್ಯೆ ಕಲಿಸುವುದು ತುಂಬಾ ಕಷ್ಟವಾಗಿದೆ ಎಂತಲೂ ಆತನು ಮದರಾಸ್ ಗವರ್ನರವರಿಗೆ ಅರಿಕೆ ಮಾಡಿಕೊಂಡಿದ್ದಾನೆ. ಇಂಥಾ ಕೀಳುಜಾತಿಯವರ ಪಾಠಶಾಲೆಗೆ ಯೋಗ್ಯತಾಸಿದ್ಧಿಯನ್ನು ಪಡೆದಿರುವ ಉಪಾಧ್ಯಾಯನು ಸಿಕ್ಕುವುದು ತುಂಬಾ ಕಷ್ಟ ಪ್ಯಾಸ್ ಮಾಡಿದ ಉಪಾಧ್ಯನಿಲ್ಲವೆಂಬ ಅಲ್ಪಕಾರಣದಿಂದ ಈ ಪಾಠಶಾಲೆಗೆ ಪ್ರತ್ಯಕಹಾಯ ಕೊಡದೆ ಇರುವುದು ಸಹಜವೆಂದು ಯಾರುತಾನೇ ಊಹಿಸುವುದಕ್ಕಾದೀತು.

*****

ಕಲ್ಕತ್ತಾ ಪಟ್ಟಣದಲ್ಲಿ ತಾರಕನಾಥ ದತ್ತನೆಂಬವನು ಹಾರಿಸನ್ ರಸ್ತೆಯ ಒಂದು ಹಳೇ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು, ಆ ಊರಿನಲ್ಲಿ ಕೆಲಸವಿಲ್ಲದವರು ತನಗೆ ಅರ್ಜಿ ಬರೆದುಕೊಂಡಲ್ಲಿ ತಾನು ಅವರಿಗೆಲ್ಲಾ ಕೆಲಸ ಗೊತ್ತು ಮಾಡಿಕೊಡುತ್ತೇನೆಂತಲೂ ಅರ್ಜಿಯ ಸಂಗಡ ತನಗೆ ಒಂದು ರೂಪಾಯಿ ಕಳುಹಿಸಬೇಕೆಂತಲೂ ಕೆಲಸವಾದ ಮೇಲೆ ಒಂದು ತಿಂಗಳ ಸಂಬಳವನ್ನು ಕೊಡಬೇಕೆಂತಲೂ ನೋಟೀಸುಗಳನ್ನು ಅಚ್ಚುಹಾಕಿಸಿ ಪ್ರಕಟಿಸಿದ್ದಲ್ಲದೆ ಅಲ್ಲಿನ ವರ್ತಮಾನ ಪತ್ರಿಕೆಗಳಲ್ಲೂ ಪ್ರಕಟಿಸಿದನು ನೂರಾರು ಜನರು ಈ ನೋಟೀಸುಗಳನ್ನು ನೋಡಿ ಬಂದು ಅವನಿಗೆ ತಲಾ ಒಂದು ರೂಪಾಯಿಯಂತೆ ಕೊಟ್ಟರು ಪ್ರತಿ ಒಬ್ಬನಿಗೂ ಈ ದತ್ತನು ಒಂದೊಂದು ಕಾಗದ ಕೊಟ್ಟು, ತಲಾ ೩೬ ರೂಪಾಯಿನಿಂದ ೭೫ ರೂಪಾಯಿವರೆಗೆ ಸಂಬಳ ಗೊತ್ತು ಮಾಡಿ, ಅಲ್ಲಿನ ಒಂದಾನೊಂದು ಸುಪ್ರಸಿದ್ಧರ್ತ್ಯಗಳ ಆಫೀಸಿನಲ್ಲಿ ಕೆಲಸ ಮಾಡುವಂತೆ ಕಳುಹಿಸಿದನು ಒಂದು ತಿಂಗಳು ಕಳೆಯಿತು ಅವರಿಗೆಲ್ಲಾ ಸಂಬಳ ಬಟವಾಡೆಯ ಕಾಲ ಪ್ರಾಪ್ತವಾಯಿತು ಆ ಸಮಯದಲ್ಲಿ ತಾರಕನಾಥನು ಮೋಸಗಾರನೆಂಬುದು ಗೊತ್ತಾಯಿತು ಆಗ ಕೆಲವರು ಹೋಗಿ, ಅವನ ಮೇಲೆ ಪೋಲೀಸಿಗೆ ರಿಪೋರ್ಟು ಮಾಡಿದರು ಅವನನ್ನು ಹಿಡಿಯಬೇಕೆಂದು ವಾರಂಟು ಹುಟ್ಟಿ ಇದೆ ವಿಚಾರಣೆಯಲ್ಲಿ ಇವನು ಏನು ಹೇಳುವನೋ ನೋಡಬೇಕು

ವಿದೇಶ ವರ್ತಮಾನಗಳು.

ಇಟಲಿ ರಾಜ್ಯದ ದೊರೆಯವರ ಮಹಾಶ್ರೀಯವರು ಜರ್ಮನ್ ರಾಜ್ಯಕ್ಕೆ ಹೋಗಿ ಬರಬೇಕೆಂದು ಸನ್ನಾಹ ಮಾಡುತ್ತಿರುವಂತೆ ತಂತೀ ವರ್ತಮಾನ ಬಂದಿದೆ.

*****

ಸುಮಾರು ೧,೦೦೦ ಜರ್ಮನ್ ಸಂಸಾರದವರು ಅಮೇರಿಕಕ್ಕೆ ಹೋಗಿ ಟೆಕ್ಸಾಸ್ ಎಂಬ ಡಿಸ್ಟ್ರಿಕ್ಟಿನಲ್ಲಿ ೯,೦೦೦ ಎಕರೆ ಜಮೀನನ್ನು ಸಾಗುವಳಿಮಾಡಿ ಜೀವನ ಮಾಡಬೇಕೆಂದು ಗೊತ್ತು ಮಾಡಿಕೊಂಡಿದ್ದಾರೆ

*****

ಸ್ವಿಟ್ಜರ್ಲಾಂಡಿನಲ್ಲಿರುವ ಜೂರಿಚ್ ಪಟ್ಟಣದಲ್ಲಿ ಈ ತಿಂಗಳ ೧೪ ರಿಂದ ೧೯ ನೆ ತಾರೀಖಿನವರೆಗೆ ಒಂದು ದೊಡ್ಡ ಉತ್ಸವವಾಗುವುದು ಸಂಗೀತಗಾರರೇ ಸುಮಾರು ೧೮,೦೦೦ ಮಂದಿ ಸೇರಿ ದೇವರ ಕೀರ್ತನೆಗಳನ್ನು ಹಾಡುತ್ತಾರೆ ಈ ಉತ್ಸವವೂ ಕೀರ್ತನೆಗಳೂ ಒಂದು ದೊಡ್ಡ ಕೆರೆಯ ಮೇಲೆ ನಡೆಯುವುದು

*****

ಸಿಂಗಪುರದಲ್ಲಿರುವ ಚೀನಾ ಪ್ರಜೆಗಳು ತಮ್ಮ ಚಕ್ರವರ್ತಿನಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು, ಅದರಲ್ಲಿ ಈಗ ಚೀನಾರಾಜ್ಯದ ಕಾರುಬಾರಿಗಳು ತುಂಬಾ ಕಷ್ಟವಾಗಿರುವುದರಿಂದ ಚಕ್ರವರ್ತಿನಿಯವರು ರಾಜ್ಯಭಾರವಿಚಾರಗಳನ್ನು ಸಂಪೂರ್ಣವಾಗಿ ಚಕ್ರವರ್ತಿಯವರಿಗೆ ವಹಿಸಿಬಿಡುವುದು ತುಂಬಾ ಅವಶ್ಯವಾಗಿದೆ ಎಂದು ಬರೆದು ತಿಳಿಸಿದ್ದಾರೆ.

*****

ಜರ್ಮನ್ ರಾಜ್ಯದ ರಾಜಕುಮಾರರಾದ ಪ್ರಿನ್ಸ್ ಅರ್ಡಲ್ಬರ್ಟರವರು ಪತ್ನೀಪರಿವಾರ ಸಹಿತ ವಿಲಾಯತಿ ರಾಜ್ಯದಲ್ಲಿ ಅತಿಥಿಗಳಾಗಿದ್ದು, ಚಕ್ರವರ್ತಿಯವರಿಂದಲೂ ಪ್ರಧಾನ ಮಂತ್ರಿಗಳಿಂದಲೂ ಪ್ರಜೆಗಳಿಂದಲೂ ಸನ್ಮಾನ ಹೊಂದಿ, ಅಲ್ಲಿನ ಮುಖ್ಯ ಮುಖ್ಯ ಸ್ಥಳಗಳನ್ನೆಲ್ಲಾ ನೋಡಿ ಬಂದರು. ಇವರು ಮೊನ್ನೆ ೧೧ನೇ ತಾರೀಖಿನ ದಿನ ವಿಲಾಯತಿಯನ್ನು ಬಿಟ್ಟು, ಜರ್ಮನ್ ರಾಜ್ಯವನ್ನು ಕುರಿತು ಪ್ರಯಾಣ ಮಾಡಿದ್ದಾರೆ

*****

ಚೀನಾ ಜನರನ್ನೂ ವರ್ತಕರನ್ನೂ ಅಮೇರಿಕದವರು ತುಂಬಾ ಸಂಶಯದಿಂದ ಕಾಣುವರು ಅವರು ಅಮೇರಿಕಕ್ಕೆ ಹೋದರೆ ಅಮೇರಿಕದವರು ಅವರನ್ನು ನಾನಾ ಕಷ್ಟನಷ್ಟಗಳಿಗೆ ಗುರಿಮಾಡುತ್ತಾರೆ ಇದನ್ನು ನೋಡಿ ಸಿಂಗಪುರ ಮೊದಲಾದ ಕಡೆಗಳಲ್ಲಿರುವ ಚೀನಿಯವರು ಸಭೆ ಸೇರಿ ಅಮೇರಿಕದ ವ್ಯಾಪಾರ ಸರಕುಗಳನ್ನು ಚೀನಾ ಜನರು ಕೊಂಡುಕೊಳ್ಳಕೂಡದೆಂತಲೂ ಅಮೇರಿಕದ ವರ್ತಕರಿಗೆ ನಾನಾ ಅನಾನುಕೂಲಗಳನ್ನು ಕಲ್ಪಿಸಬೇಕೆಂತಲೂ ಗೊತ್ತುಮಾಡಿಕೊಂಡಿದ್ದಾರೆ

*****

ಹಂಗೇರಿ ರಾಜ್ಯದ ಮುಖ್ಯ ಪಟ್ಟಣವಾದ ಬೂಡಾ ಪೆಸ್ತ್ ನಗರದ ಬಳಿ ಒಂದು ವಿಚಿತ್ರವಾದ ಮದುವೆ ಜಗಳವಾಯಿತು. ಕಾರಣಾಂತರದಿಂದ ಬೀಗ ಬೀಗರಿಗೆ ಜಗಳ ಹುಟ್ಟಿತು ನೂರಾರು ಜನರು ಮದುವೆ ಮನೆಯಲ್ಲಿ ಎರಡು ಗುಂಪಾಗಿ ಒಬ್ಬರಮೇಲೊಬ್ಬರು ಬಿದ್ದು ಕಾದಾಡಿದರು. ಕತ್ತಿ ಚೂರಿ ಚಾಕು ಪಿಸ್ತೂಲುಗಳನ್ನು ಪ್ರಯೋಗಿಸಿ ಜಗಳವಾಡಿದರು. ಈ ಜಗಳವನ್ನು ಸರ್ಕಾರದ ಸೈನಿಕರು ಬಂದು ನಿಲ್ಲಿಸಬೇಕಾಯಿತು ಆದರೂ ಮದುವೆ ಮನೆಯಲ್ಲಿ ಇಬ್ಬರು ಸತ್ತುಬಿದ್ದರು; ಆರು ಮಂದಿಗೆ ಘೋರ ಗಾಯಗಳಾದವು ಸರ್ಕಾರದವರು ೪೦ ಜನರನ್ನು ದಸ್ತಗಿರಿಮಾಡಿದ್ದಾರೆ

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮಿ॥ ಬ್ರಾಡ್ರಿಕ್ ಯವರು ಕಳೆದ ವಾರ ವಿಲಾಯಿತಿಯ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದೇನೆಂದರೆ—ಬಂಗಾಳಾ ಅಧಿಪತ್ಯವನ್ನು ಎರಡು ಭಾಗ ಮಾಡುವ ವಿಚಾರದಲ್ಲಿ ಇಂಡಿಯಾ ಗವರ್ನಮೆಂಟಿನವರ ಶಿಫಾರಸ್ಸನ್ನು ಒಪ್ಪಿರುತ್ತೇವೆ ಎಂಬುವದೇ. ಬಂಗಾಳಾ ಅಧಿಪತ್ಯವು ದೊಡ್ಡದಾಗಿರುವದರಿಂದ ಇಂಡಿಯಾ ಗವರ್ನಮೆಂಟಿನವರು ಅದನ್ನು ಭಾಗಮಾಡಿ, ಆಸ್ಸಾಂ ಪ್ರಾಂತ್ಯವನ್ನು ಬೇರೆ ಮಾಡಬೇಕೆಂದು ತಿಳಿಸಿದ್ದರು. ಅಲ್ಲಿನ ಪ್ರಜೆಗಳಾದರೋ ಹಾಗೆ ಭಾಗಮಾಡಕೂಡದೆಂದು ಹೇಳುತ್ತಲೇ ಬಂದಿದ್ದಾರೆ. ಇವರ ಹೇಳಿಕೆಯೆಲ್ಲಾ ನಿಷ್ಪ್ರಯೋಜನವಾಯಿತು.

*****

ಅಮೇರಿಕ ಸಂಸ್ಥಾನವನ್ನು ಆಳುವ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ವರ್ಜೆನಿಯಾ ಡಿಸ್ಟ್ರಿಕ್ಟಿನಲ್ಲಿ ೧೫ ಎಕರೆ ಜಮೀನನ್ನು ಕೊಂಡುಕೊಂಡು ಅದರಲ್ಲಿ ಒಂದು ಸಣ್ಣ ಮನೆಯನ್ನು ಕಟ್ಟಿಕೊಂಡಿದ್ದಾರೆ. ಗಂಡಹೆಂಡರು ತಮ್ಮ ಮಕ್ಕಳನ್ನು ಅಲ್ಲಿಗೆ ಕರೆದುಕೊಂಡುಹೋಗಿ ಕೆಲವು ದಿನ ಅಲ್ಲಿ ಇದ್ದುಕೊಂಡು ಬರುತ್ತಾರೆ. ಅಗ್ಗ ಮನೆಯಲ್ಲಿ ಸೇವಾ ವೃತ್ತಿಗೆ ಒಬ್ಬ ಆಳನ್ನಾಗಲಿ ದಾದಿಯನ್ನಾಗಲಿ ನೇಮಿಸಿಕೊಳ್ಳುವುದಿಲ್ಲ. ಪ್ರೆಸಿಡೆಂಟರ ಪತ್ನೀಯವರೇ ಸ್ವತಃ ಅಡಿಗೆ ಮುಂತಾದ್ದನ್ನು ಮಾಡಿ ಮನೆಯ ಕೆಲಸಗಳನ್ನೆಲ್ಲಾ ನೋಡಿಕೊಳ್ಳುವರು. ಪ್ರೆಸಿಡೆಂಟರಾದರೋ ತಮ್ಮ ಮಕ್ಕಳನ್ನು ಹೊಲ ತೋಟಗಳಿಗೆ ಕರೆದುಕೊಂಡುಹೋಗಿ ಅವರಿಗೆಲ್ಲಾ ವ್ಯವಸಾಯ ಮುಂತಾದ ಕೆಲಸಗಳನ್ನು ಕಲಿಸಿ ಅವರಿಂದ ಮಾಡಿಸುತ್ತಾರೆ. ಇದರಿಂದ ಅಮೇರಿಕ ಸಂಸ್ಥಾನದ ಪ್ರಜೆಗಳಿಗೆಲ್ಲಾ ಒಳ್ಳೇ ಮೇಲ್ಪಂಕ್ತಿ ಆಗಿದೆ. ವ್ಯವಸಾಯವು ಎಷ್ಟು ಉತ್ಕೃಷ್ಟವಾದ ಉದ್ಯೋಗವೋ ಹೇಳಿ ತೀರದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಶ್ರೀನಿವಾಸ ನಾರಾಯಣರಾವ್, ಬಿಜೂರು ಬ್ಯಂದೂರು.—ಆ ಕಂಪನಿಗೆ ಬರೆದುಕೊಳ್ಳಿ.

ಜೇಸುದಾಸ್, ಬೆಂಗಳೂರು. ನಿಮ್ಮ ಅಪೇಕ್ಷೆಯನ್ನು ನಾವು ನೆರವೇರಿಸಲಾರೆವು.

ಹುಣ್ಣುಗಳ ಔಷಧ, ನೆಲಮಂಗಲ.—ಈ ವಿಷಯವನ್ನು ಹಿಂದೆಯೇ ಪ್ರಕಟಿಸಿದೇವೆ.

ಎಚ್. ಟಿ. ರಾಮಕೃಷ್ಣಯ್ಯ, ಕ್ಯಾಂಪ್ ಬಾವಳಿ.—ಆ ವಿಚಾರವನ್ನು ಕುರಿತು ನಿಮ್ಮ ಸರ್ಕಲ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರಿಗೆ ಬರೆದುಕೊಳ್ಳಿ.

ಸೋಮೇಗೌಡ, ಸಕಲೇಶಪುರ; ನಟೇಶ ಮೊದಲಿಯಾರ್, ಬೆಂಗಳೂರು; ತೊ ರಾಮಣ್ಣ, ದೊಡ್ಡಬಳ್ಳಾಪುರ; ಎಸ್. ಶಿವರಾಮಯ್ಯ, ಕಾಲಿಯೂರುಮಾರ್ಗ:—ಇವರುಗಳು ಬರೆದಿರುವ ಬಾತ್ಮಿಗಳನ್ನು ಪ್ರಕಟಿಸಲಾರೆವು —ಎಡಿಟರ್.]

ಕರೆಸ್‌ಪಾಂಡೆನ್ಸ್.

ವಿಶೇಷ ಪ್ರಶ್ನೆ.

ಅಯ್ಯಾ,

ಮದುವೆ ಹಬ್ಬ ವಗೈರೆ ಕಾರ್ಯಗಳಲ್ಲಿ ಬಾಳೆ ಮರ ಮತ್ತು ಮಾವಿನ ಎಲೆಗಳನ್ನು ಮಾತ್ರ ತೋರಣ ಕಟ್ಟುತ್ತಾರೆ ಯಾಕೆ? ಇತರ ಮರಗಳು ಮತ್ತು ಎಲೆಗಳು ಆಗಬಾರದೇ?

ಅಮ್ಮತ್ತಿ. ಅ. ರ. ಮ.

[ಆಗಮಶಾಸ್ತ್ರದ ಅಭಿಪ್ರಾಯವೂ ಜನರ ವಾಡಿಕೆಯೂ ಇವುಗಳ ಉಪಯೋಗಕ್ಕೆ ಕಾರಣವೆಂದು ನಮಗೆ ತೋರುತ್ತಿದೆ.—ಎಡಿ.]

ವಿಶೇಷ ಪದ್ಧತಿ.

ಅಯ್ಯಾ,

ಮಡಿಕೇರಿ ರೊಕ್ಕ ಮಹಮದ್ ಖಾನ್ ಎಂಬ ಭಾರೀ ಸಾಹುಕಾರನ ಮಗನಿಗೆ ಬಿಳಿಗುಂದ ಗ್ರಾಮದ ಒಬ್ಬರು ಜಹಗೀರ್‌ದಾರರ ಮಗಳನ್ನು ಕೊಡುವ ವಿವಾಹವು ಭಾರೀ ಸಂಭ್ರಮದಿಂದ ನಡೆಯಿತು. ಮುಸಲ್ಮಾನರ ಮದುವೆಗಳಲ್ಲಿ ಕಲ್ಲುಸಕ್ಕರೆ ಉತ್ತುತ್ತೆ ಕಾಯಿಗಳನ್ನು ಮೇಲಕ್ಕೆ ಹಾರಿಸುವ ಪದ್ಧತಿ ಉಂಟಂತೆ. ಅದರ ಬದಲು ಈ ಮದುವೆಯಲ್ಲಿ ಆಲೂಗೆಡ್ಡೆ ಬಾಳೆಕಾಯಿ ವಗೈರೆಗಳಲ್ಲಿ ಹೆಣ್ಣು ಮತ್ತು ಗಂಡಿನ ಕಡೆಯವರು ವಿನೋದವಾಗಿ ಹೊಡೆದಾಡಿದರಂತೆ.

ಅಮ್ಮತ್ತಿ. ಅ. ರ. ಮ.

ಮಲೆನಾಡಿನ ಅವ್ಯವಸ್ಥೆಯು.

ಅಯ್ಯಾ,

ಈ ಮಲೆನಾಡು ಪ್ರಾಂತ್ಯ ಈ ಮುಂಗಾರು ಮುಣ್ಣೆಂಬ ಕೆಟ್ಟ ಜ್ವರವು ಅನೇಕರಿಗೆ ವ್ಯಾಪಿಸಿ, ಬಹಳ ದಿವಸದ ವರೆಗೆ ವಾಸಿಯಾಗದೆ ಬಹಳ ತೊಂದರೆಯನ್ನು ಪಡಿಸುವದಲ್ಲದೆ ಗರೀಬರಾಗಿ ಒಬ್ಬಂಟಿಗರಾಗಿ ಇರುವವರಿಗೆ ಇದು ಅದರ ಇದ್ದದ್ದಕ್ಕೂ ಕೂಡಾ ಅವರ ಅಸ್ವಸ್ಥತೆಗೇನೇ ಕಲ್ಲು ಹಾಕುತ್ತಾ ಇರುವದು. ಇವರ ಬೊಬ್ಬಾಟವು ತಮ್ಮ ದಿವ್ಯ ಚಿತ್ತಕ್ಕೆ ತಿಳಿದಿರಬಹುದು. ಈ ಅವ್ಯವಸ್ಥೆಯನ್ನು ಸಹಿಸಲಾರದೆ ಇದಕ್ಕೋಸುಗವಾಗಿ ಅನೇಕ ಕಡೆಗಳಿಂದಲೂ ಆಸ್ಪತ್ರೆಗಳಲ್ಲಿಯೂ ಔಷಧಿಗಳು ಮೊಲಾಮುಗಳು ಸಹಾ ತರಿಸಿ ನೋಡಿದ್ದಾಯಿತು. ಏನು ಮಾಡಿದರೂ ವ್ಯಾಧಿಯನ್ನು ಹೊಂದುವನೇ ಹೊರ್ತು ಪರಿಹರವಾಗುವ ರೀತಿ ಕಾಣಲಿಲ್ಲ. ನಂತರ ದೈವಾನುಗ್ರಹದಿಂದ ಒಂದು ಮೂಲಿಕೆ ದೊರತು ಇದನ್ನು ಮಾಡಿದ್ದರಿಂದ ಅನೇಕ ಜನಗಳಿಗೆ ೩ ಅಥವಾ ೪ ದಿವಸಗಳಲ್ಲಿಯೇ ಸಂಪೂರ್ಣ ಗುಣವಾಯಿತು. ಇದು ಚನ್ನಾಗಿ ಅನುಭವಕ್ಕೆ ಬಂದದ್ದಾದ್ದರಿಂದ ಇದನ್ನು ತಮ್ಮ ಪತ್ರಿಕೆಯಲ್ಲಿ ಪ್ರಚಾರಪಡಿಸ್ಯಾರೆಂದು ನಂಬಿ ಹಾರೈಸುತ್ತೇನೆ. ಇದು ಪರೋಪಕಾರವಾದ ಕೆಲಸ. ಈ ಮೂಲಿಕೆಗೆ ಹೀಲಗದ ಮರ, ಬುಗುರಿ ಮರ ಎಂದು ಎರಡು ಹೆಸರು ಇರುತ್ತೆ. ಚನ್ನಾಗಿ ಬಲಿತ ಮರದ ಚಕ್ಕೆಯನ್ನು ತಂದು ನಿಂಬೇಹುಳಿಯಲ್ಲಿ ತೇದು ಲೇಪಮಾಡಿ ಘಾಯ ತೊಳೆದು ದಿವಸಕ್ಕೆ ೨ ಅಥವಾ ೩ ಸರ್ತಿ ಚನ್ನಾಗಿ ಹಚ್ಚಬೇಕು. ಹುಣ್ಣು ವಾಸಿಯಾಗುವದು.

ಜೋಳ್ದಾಳು. ಪರೋಪಕಾರಿ,

ಮಾಂಸಾಹಾರವು.

ಅಯ್ಯಾ,

ಎಂ. ಆರ್. ಎ. ಎಂಬುವವರು ಕಳೆದ ವಾರ ಬರೆದ ಉತ್ತರವನ್ನು ಓದಿದೆನು. ಆದಾಗ್ಯೂ ಅವರು ನಾವು ಪ್ರಕಟಿಸಿದ್ದ ವಿಷಯಕ್ಕೆ ಉತ್ತರವು ಬರಿಯಲಿಲ್ಲ. ಅವು ಯಾವವೆಂದರೆ, ಹಸು ವಿನ ಹಾಲನ್ನೂ ತಾಯಿಯ ಹಾಲನ್ನೂ ಕುಡಿದ ಮಾತ್ರಕ್ಕೆ ಮಾಂಸ ತಿಂದಹಾಗಾಯಿತೇ ಎಂದು ಬರೆದಿದ್ದೆವು. ಅದಕ್ಕೆ ಉತ್ತರ ಬರಿಯಲಿಲ್ಲ. ಆದಾಗ್ಯೂ ಚಿಂತೆಯಿಲ್ಲ "ಅಹಿಂಸಾ ಪರಮೋ ಧರ್ಮಃ" ಎಂಬುವದರ ಅರ್ಥವು ಸಾಧಾರಣವಾಗಿ ಪಶುಪಕ್ಷಿಗಳು ಮಾಡುವ ಕೆಲಸವೇ ಹಿಂಸೆ ಎಂದು ತಿಳಿಯಕೂಡದು. ಈ ವಾಕ್ಯಾರ್ಥವೇನೆಂದರೆ, ಜೀವ ಹಿಂಸೆ ಮಾಡದಿರುವುದೇ ಪರಮ ಧರ್ಮವೆಂದು ತಿಳಿಯಬೇಕು. ಅಲ್ಲದೆ ದೇವರ ಸೃಷ್ಟಿಯಲ್ಲಿ ಮನುಷ್ಯನೇ ಉತ್ತಮ ಜೀವಿಯು. ಮಿಗಿಲಾದವುಗಳೆಲ್ಲಾ ಮನುಷ್ಯನಿಗಾಗಿಯೇ ಸೃಷ್ಟಿಯಾಗಿವೆ ಎಂಬುವದು ಸಹಜವಾಗಿದೆ. ಆದಾಗ್ಯೂ ಸರ್ವಸಮಸ್ತವಾದ ವಸ್ತುಗಳನ್ನೂ ವಿಪರೀತಿಯಾಗಿ ಅನುಭವಿಸುವುದಕ್ಕಾದೀತೇ? ಯಾಕೆಂದರೆ ವಿಷ, ಗಂಧಕ, ಪಾಷಾಣಾದಿ ಗ್ರಂಥಿಕ ದ್ರವ್ಯಗಳನ್ನು ಸಮಗ್ರವಾಗಿ ಉಪಯೋಗಿಸುವ್ವದಕ್ಕಾದೀತೇ? ಆಗಲಾರದು. ಮನುಷ್ಯನೇ ಉತ್ತಮಜೀವಿಯಾಗಿರುವುದರಿಂದಲೂ ಪಶು ಮುಂತಾದ ಪ್ರಾಣಿಗಳಿಗೆ ಸರಿಯಾದ ತಿಳುವಳಿಕೆ ಇಲ್ಲದ್ದರಿಂದಲೂ ಅವುಗಳ ತಾರತಮ್ಯವನ್ನರಿತು ಪೋಷಿಸುವುದೇ ಧರ್ಮವಾಗಿದೆ. ಹೀಗಿದ್ದಾಗ್ಯೂ ಅಂಥಾ ಮೂಕ ಜೀವ ದೇಹಗಳಿಗೆ ವಿಯೋಗ ಹುಟ್ಟಿಸುವುದು ಪಾಪ ಕೆಲಸವಲ್ಲವೆಂದು ಅಭಿಪ್ರಾಯಪಡುತ್ತಾರೆ. ಆದಾಗ್ಯೂ ಅದು ಮಾನುಷ ಕಾರ್ಯವಲ್ಲ. ದೇಹ ಜೀವಗಳಿಗೆ ಯಾರು ಬಂಧವನ್ನುಂಟುಮಾಡಿದ್ದಾರೋ ಅವರೇ ವಿಯೋಗಮಾಡತಕ್ಕದ್ದಲ್ಲದೆ ಮನುಷ್ಯನು ಮಾಡುವಂಥಾದ್ದು ಅನುಚಿತವಾದ ಪಾಪವಾಗಿದೆ. ಇದು ವಿಷಯಾಸಕ್ತರಾದ ಮನುಷ್ಯರಿಗೆ ಧರ್ಮವಾಗಿ ಕಂಡಾಗ್ಯೂ ಅಂತ್ಯದಲ್ಲಿ ಅದು ಅಧರ್ಮವಾಗಿಯೇ ಪರಿಣಮಿಸುವದು ಸಿದ್ಧಾಂತವಾಗಿದೆ. ಸೃಷ್ಟಿಕರ್ತನಾದ ಭಗವಂತನು ಮಾನುಷ ಶರೀರ ಪೋಷಣೆಗಾಗಿ ಅನೇಕ ಧಾನ್ಯಗಳನ್ನೂ ಸಸವರ್ಗಗಳನ್ನೂ ಫಲಗಳನ್ನೂ ಸೃಷ್ಟಿಸಿದ್ದಾನಲ್ಲವೇ? ಹೀಗಿರಲಾಗಿ ತುಚ್ಛ ಪ್ರಾಣಿಗಳನ್ನು ಕೊಲ್ಲಬಹುದೇ? ಮಾಂಸಾಹಾರವು ಆದಿಯಿಂದಲೂ ಬಂದಿಲ್ಲವೆಂಬುವುದೇ ನನ್ನ ಸಿದ್ಧಾಂತವಾಗಿದೆ.

ರಾಮಾಯಣಾದಿ ಪುಸ್ತಕಗಳಲ್ಲಿ ಶ್ರೀ ರಾಮರು ಬೇಟೆಯನ್ನಾಡಿ ಮೃಗಗಳನ್ನು ಕೊಂದು ತಂದು ತಿನ್ನುತ್ತಿದ್ದರೆಂದು ಬರೆದಿದ್ದಾರೆ. ಆದರೆ ರಾಮಾಯಣವನ್ನು ಬರೆದ ವಾಲ್ಮೀಕಿಯು ತನ್ನ ಪೂರ್ವಪದ್ಧತಿಗನುಸಾರವಾಗಿ ಬರೆದನಲ್ಲದೆ ರಾಮರ ಸ್ವಧರ್ಮವನ್ನು ಬರೆಯಲಿಲ್ಲ. ಶ್ರೀ ರಾಮರು ಬೇಟೆಯನ್ನಾಡಿ ಮೃಗಗಳನ್ನು ಕೊಂದು ತಿಂದು ಜೀವಿಸಬೇಕಾಗಿತ್ತೇ?

ಬೆಂಗಳೂರು ಸಿಟಿ. ಸುಜನಮಿತ್ರ.

ಕೊಪ್ಪದ ವಿಚಾರಗಳು.

ಅಯ್ಯಾ,

ಕಡೂರು ಡಿಸ್ಟ್ರಿಕ್ಟ್ ಕೊಪ್ಪದಲ್ಲಿ ಎಂಟು ಹತ್ತು ದಿನಗಳಿಂದ ಬಿಟ್ಟ ಮಳೆ ಪುನಹಾ ಪ್ರಾರಂಭವಾಗಿದೆ. ಕಸಬಾದಲ್ಲಿ ಪ್ರತಿ ಮನೆಯಲ್ಲಿಯೂ ೨—೩ ಈ ರೀತಿ ಜನಗಳು ಛಳಿಜ್ವರದಿಂದ ನವೆಯುತ್ತಾ ಇದ್ದಾರೆ. ಇಲ್ಲಿಗೆ ವರ್ಗಪಟ್ಟು ಬಂದಿರುವ ಡಾಕ್ಟರ್ ಮೆ॥ ವಿ. ಸಿದ್ದಪ್ಪನವರು ಪ್ರತಿ ಮನೆಗೂ ಹೋಗಿ ಬುದ್ಧಿ ಕಾಪಿಲೆ ವಿದ್ಯಮಾನಗಳನ್ನು ತಿಳಿದು ಕೊಡುತ್ತಿರುವ ಔಷಧವು ಸರ್ವಜನ ಸ್ತೋತ್ರಾರ್ಹವಾಗಿದೆ. ಇವರ ಶಾಶ್ವತವಾದ ನಿಲ್ಲುವಿಕೆಯನ್ನೇ ಗ್ರಾಮಸ್ಥರುಗಳೆಲ್ಲರೂ ಬಯಸುತ್ತಿದ್ದಾರೆ.

ಇದೇ ತಾಲ್ಲೂಕ್ ಮೋಜಿನೀದಾರ್ ಅನಂತವೆಂಕಟೇಶರವರು ಸರ್ಕಾರಿ ಕೆಲಸಕ್ಕಾಗಿ ತಿಗ್ಗ ಪ್ರಾಂತ್ಯ ಹೋದವರು ಕೆಲವು ಬಿಗಿನೇ ಕೋಲನ್ನು ಕೈಯಕ್ಕೆ ತೆಗೆದುಕೊಂಡು ಮಜೂರಿಗೆ ಒಂದು ಆಳನ್ನು ಗೊತ್ತುಮಾಡಿ ಕೊಪ್ಪದ ಬೇಳಿಹಳ್ಳ ಶ್ಯಾನುಭೋಗ ನಂಜುಂಡಪ್ಪನವರ ಮನೆಗೆ ಕೊಡುವಂತೆ ಕಾಗದ ಸಮೇತ ಆಳನ್ನು ಕಳುಹಿಸಿ ಕೊಡಲು ಆ ಕೂಲಿಯು ಕೊಪ್ಪಕ್ಕೆ ಬಂದು ಟವರ್ ಶ್ಯಾನುಭೋಗರನ್ನು ವಿಚಾರಿಸುತ್ತಾ ಬರುತ್ತಿರಲಾಗಿ ಆಗ ಪೊಲೀಸ್ ಸ್ಟೇಷನ್ ಬಳಿ ಹಾಜರಿದ್ದ ಜಮಾನಿ ನ್ಕರಿಣ್ಯರೋ ಆ ಕೋಲುಗಳನ್ನು ನೋಡಿ ಆ ಆಳನ್ನು ಕರದು ಉಪಾಯವಾಗಿ— ಅಯ್ಯಾ, ಈ ಕೋಲುಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೀಯೋ ಎಂದು ಕೇಳಲು, ಅವನು ಪೊಲೀಸಿನವರನ್ನು ಕಂಡ ಭಯದಿಂದ ನಡುಗುತ್ತಾ—ಸ್ವಾಮಿ, ಇಲ್ಲಿ ಬೇಲಿಹಳ್ಳಿ ಶ್ಯಾನುಭೋಗ ನಂಜುಂಡಪ್ಪನವರ ಮನೆ ಯಾವದು? ಅಲ್ಲಿಗೆ ತಲಪಿಸುವ ಮೋಜಿನೀದಾರ್ರವರು ಕೊಟ್ಟಿರುತ್ತಾರೆ ಎಂಬದಾಗಿ ಅವರು ಬರೆದು ಕೊಟ್ಟ ಕಾಗದಾ ತೋರಿಸಲು ಸದ್ರಿ ಪೊಲೀಸಿನವರು ಆ ಕಾಗದ ತೆಗೆದುಕೊಂಡು—ಅಯ್ಯಾ, ಎಷ್ಟು ಹೊತ್ತಿನಿಂದ ಶ್ಯಾನುಭೋಗರ ಮನೆ ಹುಡುಕಿದೆಯೋ? ನಿನಗೆ ಗೊತ್ತಿಲ್ಲದೆ ವ್ಯರ್ಥವಾಗಿ ಕ[illegible] ಪಟ್ಟೆ. ಆದರೂ ಚಿಂತೆಯಿಲ್ಲ. ಇಗೋ ನೋಡು, ಇಲ್ಲಿ ಕೂತಿ[illegible] ವರೇ ನಿಮ್ಮ ಕಾಗದದ ಶ್ಯಾನುಭೋಗರು ಎಂಬದಾಗಿ ಯಾರೋ[illegible] ಸನ್ನೋ ತೋರಿಸಿ ಕೋಲುಗಳನ್ನು ತೆಗೆದುಕೊಂಡು ಆತನು ಇ[illegible] ಬನ್ನು ಅಪೇಕ್ಷಿಸಲು ಬೇರೊಂದು ತುಂಡು ಕಾಗದದ ಮೇಲೆ ವ[illegible] ಸ್ವಿ ಬರದು ಈ ರಶೀದಿಯನ್ನು ಸವರಿಯವರಿಗೆ ಕೊಡು ಎಂಬದಾ[illegible] ಹೇಳಿಕೊಡಲು ಆತನು ಈ ಪೊಲೀಸಿನವರ ಮಧ್ಯದಿಂದ ಇ[illegible] ಮಾತ್ರ ಬಿಡುಗಡೆಯಾದ್ದು ತನ್ನ ಪುಣ್ಯೋದಯವೆಂದು ಎಣಿಸಿ[illegible] ಗದದೊಂದಿಗೆ ಈಚೆಗೆ ಬಂದು ಮೋಜಿನೀದಾರ್ರಲ್ಲಿಗೆ ಹೋಗಿ ಕಾ[illegible] ದ ದೊಡನೆ ನಡೆದ ಸಂಗತಿಯನ್ನು ಹೇಳಲು ಅವರು ಈ ಸಂಗ[illegible] ಕೇಳಿ ತುಂಬಾ ವ್ಯಸನಾಕ್ರಾಂತರಾಗಿರುತ್ತಾರೆ.

ಕಸಬಾ ಸ್ಕೂಲ್ ಕಟ್ಟಡದ ರಿಪೇರಿ ಬಗ್ಗೆ ಹಂಚುಗಳು ಬ[illegible] ವೆ. ಸ್ಕೂಲ್ ಕಟ್ಟಡವೇನೋ ಪಾಲೀಮಾಡಿಸಿ ತಾಲ್ಲೂಕ್ ಅಮಲ್ದಾರ್ರವರು ಹಂಗಾಮಿಯಾಗಿ ಕೊಟ್ಟ ಮುಸಾಫರಿ ಛತ್ರದಲ್ಲಿ ಸ್ಕೂ[illegible] ನಡೆಯುತ್ತಾ ಇದೆ. ಇದು ತೀರಾ ತೊಂದರೆಯಾಗಿರತಕ್ಕ ಸಂಗ[illegible] ನಮ್ಮ ಮ॥ ಇನ್‌ಸ್ಪೆಕ್ಟರ ಚಿತ್ತಕ್ಕೆ ಬಂದು ಜಾಗ್ರತೆ ಅನು[illegible] ಕೂಲಿಸಿ ಕೊಟ್ಟಾರಾಗಿ ನಂಬಿದೇವೆ. ಇದೇ ಸ್ಕೂಲಿಗೆ ಹಂಗಾ[illegible] ಹರೀಬಾಂಬಿರ ವ ಸ್ಕೂಲ್ ಮಾಸ್ಟರು ಈ ಜುಲೈಗೆ ಪನ್ನಿ ಮು[illegible] ದು ವಾಪಸ್ ಹೋಗತಕ್ಕ ಸಂಗತಿ ಕೇಳುತ್ತೇವೆ. ಮುಂದೆ ಪುನ[illegible] ಅಭಿವೃದ್ಧಿಗೆ ಬಂದ ತೊಂದರೆಯಾಗುವ ಸಂಗತಿ ಬುದ್ಧಿ [illegible] ಕ್ಕೆ ಬಂದ ನಮ್ಮ ವಿದ್ಯಾಭ್ಯಾಸದ ಇಲಾಖಾ ಡೈ॥ ಜನರಲ್‌ರವ[illegible] ಎಂದಿಗೂ ಹಾಗಾಗ ಇದಕ್ಕೆ ಕೊಡದಿರಲಾರರಾಗಿ ನಂಬಿದೇವೆ.

೪—೭—೦೫. ಬಿ ಎನ್.

ಗ್ರಾಮಸ್ಥರ ಪ್ರಾರ್ಥನೆಗಳು.

ಅಯ್ಯಾ,

ದಾವಣಗೆರೆ ತಾಲ್ಲೂಕಿನ ಸೇರಿದ ತೋಳಹುಣಸೆ ಗ್ರಾಮಸ್ಥರಾದ ನಾವುಗಳು ಕೆಳಗೆ ಬರೆಯುವ ಸಂಗತಿಯನ್ನು ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸುವಂತೆ ಬೇಡುತ್ತೇವೆ.

ಈ ತೋಳಹುಣಸೆ ಗ್ರಾಮದ ಸುತ್ತಲೂ ಅನೇಕ ಜಮೀನುಗಳು ಇರುತ್ತವೆ. ಈ ಜಮೀನುಗಳಲ್ಲಿ ವಿಶೇಷವಾದ ಮಳೆ ಬಂದಾಗ್ಯೂ ಫಸಲಾಗುವದು ದುರ್ಲಭವಾಗಿದೆ. ಇಂಥಾದ್ದರಲ್ಲಿ [illegible] ಎರಡು ಮೂರು ವರ್ಷದಿಂದಲೂ ವಿಶೇಷ ಮಳೆ ಇಲ್ಲದೆ ಇರುವದರಿಂದ ಒಳ್ಳೇ ಭೂಮಿಗಳೇ ತಮ್ಮ ಯಜಮಾನರಿಗೆ ಫಸಲ[illegible] ಕೊಡದೆ ಗೋಳಾಡಿಸುತ್ತವೆ. ಮಿಕ್ಕಾದ ಅಧಮ ಜಮೀನುಗಳು ಪಾಡೇನಾಗಿರಬಹುದೋ ಅವುಗಳು ಎಷ್ಟರ ಮಟ್ಟಿಗೆ ರೈತ[illegible] ಪ್ರಯೋಜನ ಕೊಡಬಹುದೋ ನಾವು ಹೇಳಲಾರೆವು. ಇಂಥ ಜಮೀನುಗಳನ್ನು ಕಟ್ಟಿಕೊಂಡು ಗೋಳಾಡುವ ನಾವುಗಳು ಈ ಮೂರು ವರ್ಷದಿಂದಲೂ ಕಂದಾಯಕ್ಕೆ ಬೇಕಾದ ಹಣ ಕಾಣದೆ ದಾವಣಗೆರೆಯಲ್ಲಿ ಇರತಕ್ಕ ವರ್ತಕರಲ್ಲಿ ಮನೆಗಳನ್ನು ಮತ್ತು ನಮ್ಮ [illegible] ಕರುಗಳನ್ನು ಮರದ ಸಾಮಾನ್ ನೊದಲಾದವುಗಳನ್ನು ಅಡವಿಟ್ಟು ಹಣ ತೆಗೆದುಕೊಂಡು ಬಂದು ಕಂದಾಯವನ್ನು ಕಟ್ಟಿದೆವು. ಮಧ್ಯೆ ಕಳೆದ ವರ್ಷದಲ್ಲಿ ಸರ್ವೇ ಡಿಪಾರ್ಟ್‌ಮೆಂಟಿನವರು [illegible] ಭಾಗಕ್ಕೆ ದಯಮಾಡಿಸಿ, ಯಾವದನ್ನೂ ವಿಚಾರಣೆ ಮಾಡದೆ ಇ[illegible] ಹೆಚ್ಚು ಕಂದಾಯವನ್ನು ಹಾಕಿದ್ದಾರೆ. ಈ ಸಂಗತಿಯನ್ನು ಕೇ[illegible] ದಾವಣಗೆರೆಯ ವರ್ತಕರು ತಿಳಿದು ಕೂಡಲೇ ರಾಜೀನಾಮೆಯ[illegible] ಒಪ್ಪಿಸಿದರು. ಇನ್ನು ಕೆಲವರು ರಾಜೀನಾಮೆಯನ್ನು ಕೊಡು[illegible]ಕ್ಕೆ ಹೋಗುವಾಗ್ಯೆ ವಾಯಿದೆ ಮುಗಿಯಿತು; ಈ ವರ್ಷದಲ್ಲಿ [illegible] ಲಾರದು ಎಂದು ಶಾನಭೋಗರು ಹೇಳಿ ಕಂದಾಯವನ್ನು ವಸೂಲು ಮಾಡಿದರು. ಮತ್ತು ನಾವು ಡೆಪ್ಯುಟಿ ಕಮಿಷನರ್ ಸಾಹೇಬರಿಗೆ ಅರ್ಜಿಗಳನ್ನು ಬರೆದುಕೊಂಡೆವು. ಅವರು ಸಹ ಅದೇ ಪ್ರಕಾರ ಬಾಯಿಮಾತಿನಿಂದಲೇ ಹೇಳಿದರು. ಪುನಹ ನಮಗೆ ಇಂದಾಸ್ ಮೂಲಕ ಅಪ್ಪಣೆ ಕೊಡಬೇಕೆಂದು ಕೇಳಿದ್ದಕ್ಕೆ ನಾವು ಚಿತ್ರದುರ್ಗಕ್ಕೆ ಹೋಗಿ ದಯಪಾಲಿಸುತ್ತೇವೆಂದು ಅಪ್ಪಣೆ ಕೊಟ್ಟರು. ಇದುವರಿಗೂ ನೋಡಿದಾಗ್ಯೂ ಬರಲೇ ಇಲ್ಲ. ಈ ವರ್ಷವೇನೋ ಕಂದಾಯ ಕೊಟ್ಟೆವು. ಬರುವ ವರ್ಷದಲ್ಲಿ ಕೆಲವು ರಾಜೀನಾಮೆ ಕೊಡುವದಕ್ಕೆ ಸಿದ್ಧವಾಗಿದೆ. ಯಾವ ತಿಂಗಳಲ್ಲಿ ಕೊಡಬೇಕೆಂ[illegible] ಎಂಬುವದನ್ನು ತಿಳುಕೊಳ್ಳುವಂತೆ ಆ ಮಹಾ ಸ್ವಾಮಿಯವರ ಡೆಪ್ಯುಟಿ ಕಮಿಷನರ್ ಸಾಹೇಬರ ಇಂದಾರಸನ್ನೇ ಎದುರು ನೋಡುತ್ತಿದ್ದೇವೆ. ಯಾವಾಗ ಬರುವದೋ ದೇವರೇ ಬಲ್ಲನು! ಇದರ ಸುತ್ತ[illegible] ರತಕ್ಕ ಗ್ರಾಮಗಳು ಅಂದರೆ ರಂಗಾಪಳ್ಳಿಯು ಸಹ ಇದೇ ರೀತಿಯಲ್ಲಿದೆ. ಆದ್ದರಿಂದ ಡೆಪ್ಯುಟಿ ಕಮಿಷನರ್ ಸಾಹೇಬರು ಇದನ್ನು ಬಂದು ಖುದ್ದಾಗಿ ನೋಡಿ ನಮ್ಮ ಕಷ್ಟವನ್ನು ಪರಿಹರ ಮಾಡುವದು ಮಾತ್ರವಲ್ಲದೆ ಇದನ್ನು ಮೇಲಕ್ಕೆ ಬರೆದು ಬಡ ರೈತರಾದ ನಮ್ಮ ಕ[illegible]ವನ್ನು ಪರಿಹರಿಸುವ ಉದ್ದೇಶ್ಯ ವ್ಯಾಗಾದರೂ ಸ್ವಲ್ಪ ಕಂದಾಯವನ್ನು ಕಮ್ಮಿಮಾಡಿ ಕೊಡುವರೆಂದು ನಿರೀಕ್ಷಿಸುತ್ತೇವೆ. ಹಾಗೆ ಗವರ್ನಮೆಂಟಿನವರು ಮಾಡದೆಹೋದರೆ ನಾವು ಆ ಗ್ರಾಮವನ್ನು ಬಿಟ್ಟು ದೇಶಾಂತರ ಹೊರಡಬೇಕಾಗಿದೆ. ದಯಾಳುಗಳಾದ ಮೈಸೂರು ಸರ್ಕಾರದವರು ನಮ್ಮ ಕಷ್ಟವನ್ನು ಹ್ಯಾಗಾದರೂ ಪರಿಹಾರ ಮಾಡುವರೆಂದು ಕಾದುಕೊಂಡಿದ್ದೇವೆ.

ಈ ಗ್ರಾಮದ ಪಟೇಲನು ಈ ಊರಿನ ರೈತಾಪಿ ಜನಗಳ[illegible] ಪ್ರೀತಿಯಿಂದ ಕಾಪಾಡುವದು ಮಾತ್ರವಲ್ಲದೆ ಕಷ್ಟದಲ್ಲಿಯೂ ಕೈ[illegible]

ಸ್ಟ್ಯಾಂಡರ್ಡ್

ಲೈಫ್ ಎಸ್ಯೂರೆನ್ಸ್ ಕಂಪೆನಿ.

1825 ನೆ ಇಸವಿಯಲ್ಲಿ ಸ್ಥಾಪನೆಯಾದದ್ದು.

ಹೆಡ್ ಆಫೀಸು:—ಎಡಿನ್‌ಬರೋ.

ಬ್ರಾಂಚ್ ಆಫೀಸು:—ಹಾರನ್‌ಬ್ಯೆ ರೋಡು, ಬೊಂಬಾಯಿ.

[illegible]

[illegible]

ಸ್ಟ್ಯಾಂಡರ್ಡ್ ಲೈಫ್ ಎಸ್ಯೂರೆನ್ಸ್ ಕಂಪನಿ

1846 ನೇ ಇಸವಿಯಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು.

ಲೋಕದಲ್ಲಿ ಇರತಕ್ಕ ಸಕಲರೂ ತಮ್ಮನ್ನು ಆಶ್ರಯಿಸಿಕೊಂಡು ಇರು ಹೆಂಡರು ಮಕ್ಕಳಿಗೆ ತಮ್ಮ ಪಶ್ಚಾತ್ ಜೀವನೋಪಾಯವು ನಡೆಯುವ ಮಾರ್ಗ ಮಾಡತಕ್ಕದ್ದು ಅವರ ಕರ್ತವ್ಯವಾಗಿ ಇದೆ ಎನ್ನುವದು ಎಲ್ಲರಿ ತಿಳಿದ ಸಂಗತಿಯೇ ಆಗಿ ಇದೆ. ಆದರೆ ಈ ಅಭಿಲಾಷೆಯು ನೆರವೇ ಅನೇಕ ಮಾರ್ಗಗಳು ಇರುವದಾಗಿಯೂ ತಾವು ಬಹುಕಾಲ ಜೀವಂತರಾ ಬಹುದಾದ್ದರಿಂದ ಇವಕ್ಕಾಗಿ ತತ್ಕಾಲದಲ್ಲಿ ಯೋಚಿಸಬೇಕಾದ ಅವಶ್ಯ ವೆಂತಲೂ ಯೋಚಿಸಿ, ಈ ಮುಖ್ಯವಾದ ಕೆಲಸಕ್ಕೆ ಪ್ರಯತ್ನ ಕೂಡಾ ಬಿಟ್ಟುಬಿಡುತ್ತಾರೆ. ಇದು ತಪ್ಪು. "ಜಾತಸ್ಯ ಮರಣಂ ಧ್ರುವಂ" ಎಂಬ ಸ್ವಭಾವಸಿದ್ಧವಾಗಿಯೇ ಇದೆ. ಆದರೆ ಇದು ಯಾವಾಗ ಸಂಭವಿಸುತ್ತದೆ ವದು ಮಾತ್ರ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಬಡವರೂ ಬಲ್ಲಿದ ಕೂಡಾ ಅವರವರ ಯೋಗ್ಯತೆಗೆ ತಕ್ಕಂತೆ ತಮ್ಮನ್ನು ಹೊಂದಿದ ಹೆಂ ಮಕ್ಕಳ ಜೀವನ ನಡೆಯಲು ತಕ್ಕ ಆಸ್ತಿಯನ್ನು ಮಾಡಿಡಬಹುದಾದ ಸುಲಭೋಪಾಯವನ್ನು ಈ ಕೆಳಗೆ ಸೂಚಿಸಿ ಇರುತ್ತದೆ.

ಆರೋಗ್ಯಸ್ಥಿತಿಯಲ್ಲಿರುವ ಒಬ್ಬ ಮನುಷ್ಯನು ಸಂಪಾದಿಸಲು ಶಕ್ತನಾ ಇದ್ದಾಗ ವರುಷಂಪ್ರತಿ ಗೊತ್ತಾದ ದರದಂತೆ ಸ್ವಲ್ಪ ಮುಂಗಡ (Premium ಕೊಡುತ್ತಾ ಬಂದು, ತಾನು ಸಂಪಾದಿಸಲು ಅಶಕ್ತನಾದಾಗ, ತಾನಾಗಲೀ ಅವ ಮುಂಚಿತವಾಗಿ ಮರಣ ಸಂಭವಿಸಿದರೆ ತನ್ನನ್ನು ಆಶ್ರಯಿಸಿಕೊಂಡಿರತಕ್ಕ ಡರು ಮಕ್ಕಳಿಗಾಗಲಿ ಜೀವಿಸುವದಕ್ಕೆ ಅನುಕೂಲಿಸುವಂತೆ ಹಣವನ್ನು ತಕ್ಕ ಮಾರ್ಗಕ್ಕೆ ಲೈಫ್ ಎಸ್ಯೂರೆನ್ಸ್ (Life Assurance) ಎಂತಲೂ, ವಿಮೆ ಎಂತಲೂ, ಭೀಮಾ ಎಂತಲೂ ಹೆಸರು.

ಗಣಿತಶಾಸ್ತ್ರಜ್ಞರು ಅನುಭವಸಿದ್ಧವಾದ ದಾಖಲೆಗಳ ಮೇಲೆ ಮುಂಗಡ ದರಗಳನ್ನು ಗೊತ್ತುಮಾಡಿ ಕೊಡುವವರ ಆಧಾರದ ಮೇಲೆ ಲೈಫ್ ಎಸ್ಯೂರೆನ್ಸ್ ಕಂಪೆನಿಗಳು ಏರ್ಪಟ್ಟು, ಕೆಲಸಗಳು ನಡಿಸಲ್ಪಡುತ್ತಾ ಇರುತ್ತವೆ.

ಈ ರೀತಿ ಕೆಲಸ ನಡೆಸತಕ್ಕ ಕಂಪೆನಿಗಳಲ್ಲಿ ಸ್ಟ್ಯಾಂಡರ್ಡ್ ಲೈಫ್ ಎಸ್ಯೂರೆನ್ಸ್ ಕಂಪೆನಿಯು ಮುಖ್ಯವಾದದ್ದು. ಯಾಕಂದರೆ ಈ ಕಂಪೆನಿಯು ಬಹು ದಿನಗಳಿಂದ ನಡದುಬಂದು ಇರುವ ಕಾರಣ ಅನುಭವದ ಮೇಲೆ ಕಂಪೆನಿಗೆ ಸೇರತಕ್ಕವರಿಗೆ ಅನುಕೂಲಿಸುವಂತೆ ತಕ್ಕ ಬದಲಾವಣೆಗಳನ್ನು ಆಗಾಗ್ಯೆ ಮಾಡುತ್ತಾ ಇರುತ್ತಾರೆ. ಈ ರೀತಿ ಸೌಲಭ್ಯತೆಗಳು ಜನಗಳಿಗೆ ಇರುವದರಿಂದ ವರ್ಷೇ ವರ್ಷೇ ಜನಗಳು ಹೆಚ್ಚಾಗಿ ಸೇರುತ್ತಾ, ಕಂಪೆನಿಯು ವೃದ್ಧಿ ಹೊಂದುತ್ತಲೇ ಬರುತ್ತಾ ಇರುತ್ತೆನ್ನುವದು ಈ ಕೆಳಗಣ ತಖ್ತೆಯಿಂದ ಗೊತ್ತಾಗುತ್ತದೆ.

ವರುಷಗಳು.	ಜಾರಿ ಆದ ವಿಮೆ ದಸ್ತೈವಜು ಸಂಖ್ಯೆ.	ವಿಮೆ ಮೊಬಲಗು
1880—1885	11,925	ರೂ. 10,07,13,990
1885—1890	13,481	10,39,33,425
1890—1895	19,035	13,43,50,040
1895—1900	24,401	15,16,35,270

ಹಾಲಿ ಈ ಕಂಪೆನಿಯ ಸಾಲಿಯಾನಾ ಹುಟ್ಟುವಳಿಯು 2,08,00,000 ರೂಪಾಯಿಗಳಿಗಿಂತಲೂ ಹೆಚ್ಚಾಗಿರುತ್ತೆ. ಮತ್ತು ಕಂಪೆನಿಯ ಬಂಡವಾಳವು 8,52,00,000 ರೂಪಾಯಿಗಳಿಗಿಂತ ಜಾಸ್ತಿಯಾಗಿ ಇರುತ್ತೆ. ಇದುವರಿಗೆ ಕಂಪೆನಿಯವರು ವಿಮೆದಾರರಿಗೂ ಅವರ ವಾರಸುದಾರರಿಗೂ 34,16,00,000 ರೂಪಾಯಿಗಳಿಗಿಂತ ಹೆಚ್ಚು ಮೊಬಲಗನ್ನು ಪಾವತಿಮಾಡಿ ಇರುತ್ತಾರೆ.

ಸಾಧಾರಣವಾಗಿ ಮಾಡತಕ್ಕ 3 ರೀತಿಯಂತೆ ವಿಮೆ ಮಾಡಿ, 2,000 ರೂಪಾಯಿಗಳನ್ನು ಪಡೆಯತಕ್ಕ ಬಗ್ಗೆ ತಿಂಗಳಿಗೆ ಒಂದಾವರ್ತಿ ಕೊಡಬೇಕಾದ ಮುಂಗಡಗಳ* ವಿವರಣೆ:—(ಮುಂದಿನ ಪುಟವನ್ನು ನೋಡಿರಿ.)

[*ಈ ದರಗಳು ಒಳ್ಳೇ ಆರೋಗ್ಯಸ್ಥಿತಿಯಲ್ಲಿರತಕ್ಕ ವಿಮೆ ಪಡೆಯುವವರಿಗೆ ಮಾತ್ರ ಲಗಾವಾಗತಕ್ಕದ್ದು.]

ಮುಂಗಡಗಳನ್ನು ವರುಷಕ್ಕೊಂದಾವರ್ತಿ, ಆರು ತಿಂಗಳಿಗೆ ಒಂದಾವರ್ತಿ ಅಥವಾ ಮೂರು ತಿಂಗಳಿಗೆ ಒಂದಾವರ್ತಿ ಕೊಡಬಹುದು

ಪಾಲಿ ನಡಿಯುತ್ತಿರುವ ವಯಸ್ಸು.	1	2	3
	ವಿಮೆ ಮೊಬಲಗು— ವಿಮೆದಾರನ ಮರಣಾನಂತರ ವಾರಸದಾರರಿಗೆ ಪಾವತಿ ಆಗತಕ್ಕದ್ದು.		ವಿಮೆದಾರನಿಗೆ 55 ವ[illegible] ವಾದ ಕೂಡಲೆ [illegible] ಗಾಗಲೀ, ಅಷ್ಟರಲ್ಲಿ [illegible] ತನಾದರೆ ವಾರಸದಾ[illegible] ಆಗಲೀ ವಿಮೆ ಮೊ[illegible] [illegible] ಪಾವತಿ ಆಗತಕ್ಕ[illegible]
	ಮುಂಗಡಗಳು— ವಿಮೆದಾರನು ಜೀವಮಾನ ಪರ್ಯಂತ ಕೊಡತಕ್ಕದ್ದು.	ಮುಂಗಡಗಳು— 20 ವರ್ಷಗಳು ಮಾತ್ರ) ಕೊಟ್ಟ ನಂತರ ನಿಲ್ಲಿಸಿಬಿಡತಕ್ಕದ್ದು.	
20	4—0—8	6—0—0	4—15—4
25	4—8—0	6—6—0	5—11—4
30	5—2—0	6—15—4	6—14—8
35	5—12—0	7—8—0	8—12—8
40	6—9—4	8—4—0	11—14—0
45	7—10—0	9—2—8	18—0—0

ಮೇಲೆ 2,000 ರೂಪಾಯಿಗಳನ್ನು ಪಡೆಯತಕ್ಕ ಬಗ್ಗೆ ದರಗಳನ್ನು [illegible] ಅದ್ದಾಗ್ಯೂ, ಇದಕ್ಕಿಂತ ಹೆಚ್ಚು ಅಥವಾ ಕಮ್ಮಿ ಮೊಬಲಗಿಗೇ ಆಗಲೀ, ಮೇ[illegible] ಹೇಳ ಇರುವ ವಯಸ್ಸಲ್ಲದ ಇತರ ವಯಸ್ಸಿನವರಿಗೇ ಆಗಲೀ ಮುಂಗಡ [illegible] ತಕ್ಕ ದರಗಳೇನೆಂಬದಕ್ಕೆ ಈ ಕೆಳಗಿನ ವಿಳಾಸದಾರರಿಗೆ ಬರೆದು ತಿಳಿದುಕೊ[illegible] ಬಹುದು.

1 ನೇ ರೀತಿಯಂತೆ ಇನ್ಸ್ಯೂರೆನ್ಸ್ ಯಾನೆ ವಿಮೆ ಮಾಡುವದರಿಂದ [illegible] ಮೊಬಲಗನ್ನು ಮುಂಗಡವಾಗಿ ಕೊಡುತ್ತಾ ಬಂದು, ಯಾವಾಗ ಮ[illegible] ಸಂಭವಿಸಿದಾಗ್ಯೂ ತನ್ನ ವಾರಸದಾರರಿಗೆ ಹೆಚ್ಚಾದ ಆಸ್ತಿಯು ಸಿಕ್ಕುವ[illegible] ಏರ್ಪಾಡು ಮಾಡಬಹುದು.

2 ನೇ ರೀತಿಯಂತೆ ಮಾಡುವವರಿಂದ ಸಂಪಾದನೆಯು ಯಾವಾಗ[illegible] ಒಂದೇ ರೀತಿ ಇರಲಾರದೆನ್ನತಕ್ಕಂಥಾವರು ಸಂಪಾದನೆ ಹೆಚ್ಚು ಇರಬಹುದಾ[illegible] ಕಾಲದಲ್ಲಿ ಮುಂಗಡಗಳನ್ನು ಕೊಟ್ಟು, ನಂತರ ಈ ತೊಂದರೆಯನ್ನು ತಪ್ಪಿಸಿ[illegible] ಳ್ಳಬಹುದು. ಒಂದುವೇಳೆ ಮುಂಗಡ ಕೊಡುವ ಕ್ಲುಪ್ತವಾದ ಕಾಲಗಳ[illegible] ಗಾಗಿ ವಿಮೆ ಮಾಡಿದವನು ಮೃತನಾದರೆ ವಾರಸದಾರರಿಗೆ ವಿಮೆಯ [illegible] ಮೊಬಲಗು ದೊರೆಯುವದು.

3 ನೇ ರೀತಿಯಂತೆ ವಿಮೆ ಮಾಡತಕ್ಕವರು ಮೇಲೆ ಹೇಳಿದ 2 ರೀತಿಗಳ[illegible] ಗಿಂತಲೂ ಜಾಸ್ತಿ ಮುಂಗಡ ಕೊಡಬೇಕಾದಾಗ್ಯೂ ತುಂಬಾ ಪ್ರಯೋಜನಕರ[illegible] ವಾದದ್ದು. ಯಾಕೆಂದರೆ ವಿಮೆದಾರನು ಬದುಕಿ ಇದ್ದಲ್ಲಿ ಸಂಪಾದನೆಯು ಕಮ್ಮಿ[illegible] ಯಾದ ಕಾಲಕ್ಕೆ ಈ ಹಣವು ಉಪಯೋಗಕ್ಕೆ ಬರುತ್ತದೆ. ಒಂದು ವೇಳೆ ಆಕ[illegible] ಸ್ಮಾತ್ ಮರಣ ಸಂಭವಿಸಿದರೆ ಕೂಡಲೆ ವಿಮೆ ಮೊಬಲಗು ವಾರಸದಾರರಿಗೆ [illegible] ಪಾವತಿ ಆಗುತ್ತದೆ.

ಮೇಲೆ ಹೇಳಿದ 3 ರೀತಿಗಳಲ್ಲದೆ ಇನ್ನೊಂದು ಹೊಸ ವಿಧವಾದ ವಿಮೆ [illegible] ಅಥವಾ ಇನ್ಸ್ಯೂರ್ ಮಾಡತಕ್ಕದ್ದನ್ನು ಈ ಕಂಪೆನಿಯವರು ಹೊಸದಾಗಿ ಏರ್ಪ[illegible] [illegible]ಸಿ ಇರುತ್ತಾರೆ. ಇದಕ್ಕೆ "ಡಬಲ್ ಎಂಡೌಮೆಂಟ್ ಸಿಸ್ಟಂ" ಎಂದು ಹೆಸರು.

ಈ ಹೊಸ ರೀತಿಯಂತೆ ವಿಮೆ ಮಾಡಲಪೇಕ್ಷೆಯುಳ್ಳವರು ಈ ಕೆಳಗೆ [illegible] ಕಂಡಂತೆ ಮುಂಗಡಗಳನ್ನು ಕೊಡುತ್ತಾ ಬಂದು, ಗೊತ್ತಾದ ವರುಷಗಳ ಒಳ[illegible] [illegible]ಗಾಗಿ ಮೃತಪಟ್ಟರೆ ವಿಮೆದಾರರ ವಾರಸದಾರರಿಗೆ 1,000 ರೂಪಾಯಿಗಳನ್ನು [illegible] ಪಾವತಿ ಮಾಡುತ್ತಾರೆ. ವಿಮೆದಾರರೇ ಗೊತ್ತಾದ ವರುಷಗಳು ಕಳೆಯುವ[illegible] [illegible]ವರೆಗೆ ಜೀವಂತರಾಗಿದ್ದರೆ 2,000 ರೂಪಾಯಿಗಳನ್ನು ಕಂಪೆನಿಯವರು ಕೊಡು[illegible] ತ್ತಾರೆ.

[illegible]ಲಿ ನಡೆಯುತ್ತಿರುವ ವಯಸ್ಸು.	ವರುಷಂಪ್ರತಿ ಕೊಡತಕ್ಕ ಮುಂಗಡ ದರ.	ವಿಮೆ ಮೊಬಲಗು ಪೂರಾ ಪಾವತಿ ಆಗಲು ನಿಬಂಧನೆಯಾದ ವರುಷಗಳು.
[illegible]0 ರ ಲಾಗಾಯತು 50 ವರುಷ.	111—6—8	15
[illegible]0 ,, 45 ,,	78—13—4	20
[illegible]0 ,, 40 ,,	59—10—8	25

ಈ ಮುಂಗಡಗಳನ್ನು ಆರು ತಿಂಗಳಿಗೊಂದಾವರ್ತಿ ಅಥವಾ ಮೂರು [illegible] ತಿಂಗಳಿಗೊಂದಾವರ್ತಿ ಕೂಡಾ ಕೊಡಬಹುದು.

ಈ ಮೇಲೆ ಕಂಡ ಸಂಗತಿಗಳಲ್ಲದೆ ಇನ್ನೂ ಏನಾದರೂ ತಪಶೀಲು ತಿಳ[illegible] [illegible]ದುಬೇಕಾಗಿದ್ದಲ್ಲಿ ಇದರ ಕೊನೆಯಲ್ಲಿ ಇರುವ ಫಾರಂ ಭರ್ತಿಮಾಡಿ ಕಳುಹಿ[illegible] [illegible]ಕೊಟ್ಟು ತಿಳುಕೊಳ್ಳಬಹುದು.

ಸ್ಟ್ಯಾಂಡರ್ಡ್ ಲೈಫ್ ಎಸ್ಯೂರೆನ್ಸ್ ಕಂಪೆನಿಯಲ್ಲಿ ವಿಮೆ ಮಾಡುವವರಿಂದ ಉಂಟಾಗತಕ್ಕ ಮುಖ್ಯ ಪ್ರಯೋಜನಗಳು.

(1) ಮುಂಗಡ ದರಗಳು ಅನುಭವಸಿದ್ಧತೆಯಂತೆ ಗೊತ್ತುಮಾಡಿರುವ ಕಾರ[illegible] ಈ ಕಂಪೆನಿಯ ದರವು ಬಹಳ ಕಮ್ಮಿ ಆಗಿ ಇರುತ್ತದೆ.

ಪಾಲಿ ನಡಿಯುತ್ತಿರುವ ವಯಸ್ಸು.	1	2	3
	ವಿಮೆ ಮೊಬಲಗು— ವಿಮೆದಾರನ ಮರಣಾನಂತರ ವಾರಸದಾರರಿಗೆ ಪಾವತಿ ಆಗತಕ್ಕದ್ದು.		ವಿಮೆದಾರನಿಗೆ ... ವಾದ ಕೂಡ್ಲೆ ... ಗಾಗಲೀ, ಅಷ್ಟ... ತನಾದರೆ ವಾರಸ... ಆಗಲೀ ವಿಮೆ ... ಗು ಪಾವತಿ ಆಗ...
	ಮುಂಗಡಗಳು—ವಿಮೇದಾರನು ಜೀವನಪೂರ್ಣ ವಧಿ ಕೊಡತಕ್ಕದ್ದು.	ಮುಂಗಡಗಳು— 20 ವರ್ಷಗಳು ಮಾತ್ರ ಕೊಟ್ಟು ನಂತರ ನಿಲ್ಲಿಸಿಬಿಡತಕ್ಕದ್ದು.	
20	4—0—8	6—0—0	4—15—4
25	4—8—0	6—6—0	5—11—4
30	5—2—0	6—15—4	6—14—8
35	5—12—0	7—8—0	8—12—8
40	6—9—4	8—4—0	11—14—0
45	7—10—0	9—2—8	18—0—0

ಮೇಲೆ 2,000 ರೂಪಾಯಿಗಳನ್ನು ಪಡೆಯತಕ್ಕ ಬಗ್ಗೆ ದರಗಳನ್ನು ... ಇದ್ದಾಗ್ಯೂ, ಇದಕ್ಕಿಂತ ಹೆಚ್ಚು ಅಥವಾ ಕಮ್ಮಿ ಮೊಬಲಗಿಗೇ ಆಗಲೀ, ಮೇ... ಹೇಳಿ ಇರುವ ವಯಸ್ಸಲ್ಲದ ಇತರ ವಯಸ್ಸಿನವರಿಗೇ ಆಗಲೀ ಮುಂಗಡ ಕೊ... ತಕ್ಕ ದರಗಳೇನೆಂಬದಕ್ಕೆ ಈ ಕೆಳಗಿನ ವಿಳಾಸದಾರರಿಗೆ ಬರೆದು ತಿಳದು... ಬಹುದು.

1 ನೇ ರೀತಿಯಂತೆ ಇನ್ಸ್ಯೂರೆನ್ಸ್ ಯಾನೆ ವಿಮೆ ಮಾಡುವದರಿಂದ ... ಮೊಬಲಗನ್ನು ಮುಂಗಡವಾಗಿ ಕೊಡುತ್ತಾ ಬಂದು, ಯಾವಾಗ ಮ... ಸಂಭವಿಸಿದಾಗ್ಯೂ ತನ್ನ ವಾರಸದಾರರಿಗೆ ಹೆಚ್ಚಾದ ಆಸ್ತಿಯು ಸಿಕ್ಕು... ಏರ್ಪಾಡು ಮಾಡಬಹುದು.

2 ನೇ ರೀತಿಯಂತೆ ಮಾಡುವದರಿಂದ ಸಂಪಾದನೆಯು ಯಾವಾ... ಒಂದೇ ರೀತಿ ಇರಲಾರದೆನ್ನತಕ್ಕಂಥಾವರು ಸಂಪಾದನೆ ಹೆಚ್ಚು ಇರಬಹು... ಕಾಲದಲ್ಲಿ ಮುಂಗಡಗಳನ್ನು ಕೊಟ್ಟು, ನಂತರ ಈ ತೊಂದರೆಯನ್ನು ತಪ್ಪಿಸಿ... ಳ್ಳಬಹುದು. ಒಂದುವೇಳೆ ಮುಂಗಡ ಕೊಡುವ ಕ್ಲುಪ್ತವಾದ ಕಾಲಗಳ... ಗಾಗಿ ವಿಮೆ ಮಾಡಿದವನು ಮೃತನಾದರೆ ವಾರಸದಾರರಿಗೆ ವಿಮೆಯ ಪೂ... ಮೊಬಲಗು ದೊರೆಯುವದು.

3 ನೇ ರೀತಿಯಂತೆ ವಿಮೆ ಮಾಡತಕ್ಕವರು ಮೇಲೆ ಹೇಳಿದ 2 ರೀತಿಗಳ... ಂತಲೂ ಜಾಸ್ತಿ ಮುಂಗಡ ಕೊಡಬೇಕಾದಾಗ್ಯೂ ತುಂಬಾ ಪ್ರಯೋಜನಕರ... ವದದ್ದು. ಯಾಕಂದರೆ ವಿಮೆದಾರನು ಬದುಕಿ ಇದ್ದಲ್ಲಿ ಸಂಪಾದನೆಯು ಕಮ್ಮಿ... ...ದ ಕಾಲಕ್ಕೆ ಈ ಹಣವು ಉಪಯೋಗಕ್ಕೆ ಬರುತ್ತದೆ. ಒಂದು ವೇಳೆ ಅಕ... ...ತ್ ಮರಣ ಸಂಭವಿಸಿದರೆ ಕೂಡ್ಲೆ ವಿಮೆ ಮೊಬಲಗು ವಾರಸದಾರರಿಗೆ ...ವತಿ ಆಗುತ್ತದೆ.

ಮೇಲೆ ಹೇಳಿದ 3 ರೀತಿಗಳಲ್ಲದೆ ಇನ್ನೊಂದು ಹೊಸ ವಿಧವಾದ ವಿಮೆ ...ಥವಾ ಇನ್ಸ್ಯೂರ್ ಮಾಡತಕ್ಕದ್ದನ್ನು ಈ ಕಂಪೆನಿಯವರು ಹೊಸದಾಗಿ ಏರ್ಪ... ...ಸಿ ಇರುತ್ತಾರೆ. ಇದಕ್ಕೆ "ಡಬಲ್ ಎಂಡೌಮೆಂಟ್ ಸಿಸ್ಟಂ" ಎಂದು ಹೆಸರು.

ಈ ಹೊಸ ರೀತಿಯಂತೆ ವಿಮೆ ಮಾಡಲಪೇಕ್ಷೆಯುಳ್ಳವರು ಈ ಕೆಳಗೆ ...ಂತೆ ಮುಂಗಡಗಳನ್ನು ಕೊಡುತ್ತಾ ಬಂದು, ಗೊತ್ತಾದ ವರುಷಗಳ ಒಳ... ...ಗಿ ಮೃತಪಟ್ಟರೆ ವಿಮೆದಾರರ ವಾರಸದಾರರಿಗೆ 1,000 ರೂಪಾಯಿಗಳನ್ನು ...ವತಿ ಮಾಡುತ್ತಾರೆ. ವಿಮೆದಾರರೇ ಗೊತ್ತಾದ ವರುಷಗಳು ಕಳೆಯುವ ...ಕ ಜೀವಂತರಾಗಿದ್ದರೆ 2,000 ರೂಪಾಯಿಗಳನ್ನು ಕಂಪೆನಿಯವರು ಕೊಡು... ...ರೆ.

...ಲಿ ನಡೆಯುತ್ತಿರುವ ವಯಸ್ಸು.	ವರುಷಂಪ್ರತಿ ಕೊಡತಕ್ಕ ಮುಂಗಡ ದರ.	ವಿಮೆ ಮೊಬಲಗು ಪೂರಾ ಪಾವತಿ ಆಗಲು ನಿಬಂಧನೆಯಾದ ವರುಷಗಳು.
...ರಲಾಗಾಯಿತು 50 ವರುಷ.	111—6—8	15
" 45 "	78—13—4	20
" 40 "	59—10—8	25

ಈ ಮುಂಗಡಗಳನ್ನು ಆರು ತಿಂಗಳಿಗೊಂದಾವರ್ತಿ ಅಥವಾ ಮೂರು ...ಂಗಳಿಗೊಂದಾವರ್ತಿ ಕೂಡಾ ಕೊಡಬಹುದು.

ಈ ಮೇಲೆ ಕಂಡ ಸಂಗತಿಗಳಲ್ಲದೆ ಇನ್ನೂ ಏನಾದರೂ ತಪಶೀಲು ತಿಳಿ... ...ಬೇಕಾಗಿದ್ದಲ್ಲಿ ಇದರ ಕೊನೆಯಲ್ಲಿ ಇರುವ ಫಾರಂ ಭರ್ತಿಮಾಡಿ ಕಳುಹಿ... ...ಕೊಟ್ಟು ತಿಳುಕೊಳ್ಳಬಹುದು.

ಸ್ಟ್ಯಾಂಡರ್ಡ್ ಲೈಫ್ ಎಸ್ಯೂರೆನ್ಸ್ ಕಂಪೆನಿ ಯಲ್ಲಿ ವಿಮೆ ಮಾಡುವದರಿಂದ ಉಂಟಾಗತಕ್ಕ ಮುಖ್ಯ ಪ್ರಯೋಜನಗಳು.

(1) ಮುಂಗಡ ದರಗಳು ಅನುಭವಸಿದ್ಧತೆಯಂತೆ ಗೊತ್ತುಮಾಡಿರುವ ಕಾರ... ಈ ಕಂಪೆನಿಯ ದರವು ಬಹಳ ಕಮ್ಮಿ ಆಗಿ ಇರುತ್ತದೆ.

ಹಣವನ್ನು ಕಂಪನಿಯವರು ಸಾಲವಾಗಿ ಕೊಡುತ್ತಾರೆ. ಈ ಸಾಲದ ಬಳಗೆ ಶೇಕಡಾ ಸಾಲಿಯಾನಾ 6—0—0 ರೂಪಾಯಿಸಂತೆ ಮಾತ್ರ ಬಡ್ಡಿ ಬೇಕು. ಈ ರೀತಿ ಸಾಲ ಕೊಡುವದರಿಂದ ಒಂದು ವೇಳೆ ಮುಂಗಡ ಕೊಡು ಅನಾನುಕೂಲವಾಗುವ ಪಕ್ಷಕ್ಕೆ ಅದನ್ನು ಕೊಟ್ಟು ವಿಮೆ ಪತ್ರವು ರದ್ದಾ ಜಾರೀಲಿ ಇಡತಕ್ಕ ಬಗ್ಗೆ ಮತ್ತು ಇನ್ಯಾವದಾದರೂ ಜರೂರಿಯಾತ್ ರದ ಖರ್ಚಿಗೆ ಉಪಯೋಗಿಸುತ್ತದೆ.

(5) ವಿಮೆ ಮೊಬಲಗನ್ನು ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಕೊಡಲು ಕಂಪ ಯವರು ಸಿದ್ಧರಾಗಿ ಇರುತ್ತಾರೆ. ಮತ್ತು ವಿಮೆದಾರರ ವಾರಸುದಾರರಿಗೆ ಬಲಗು ಪಡೆಯತಕ್ಕ ಬಗ್ಗೆ ಅನಾವಶ್ಯಕವಾದ ನಿರ್ಬಂಧಗಳ್ಯಾವದನ್ನೂ ಯವರು ಪರ್ಮಾಡಿಸಿ ಇರುವದಿಲ್ಲ.

(6) ವಿಮೆ ಪತ್ರಗಳು ಬೊಂಬಾಯಿ ಆಫೀಸಿನಿಂದಲೇ ಕೊಡಲ್ಪಡುವದರಿಂದ ಮೊಬಲಗು ವಾರಸ್ದಾರರಿಗೆ ಪಾವತಿ ಮಾಡುವ ಮುಂತಾದ ಕೆಲಸಗಳು ಆಫೀಸಿನಲ್ಲೇ ನಡಿಸಲ್ಪಡುತ್ತವೆ.

ಲೋಕಲ್ ಏಜಂಟರು, ಶಿವಮೊಗ್ಗ.

ಯಂ. ಸೂರ್ಯನಾರಾಯಣಯ್ಯ, ಕಮಿಷನ್ ಮತ್ತು ಜನರಲ್ ಏಜನ್ಸಿ.

ಶಿವಮೊಗ್ಗದಲ್ಲಿರುವ ಸ್ಟ್ಯಾಂಡರ್ಡ್ ಲೈಫ್ ಎಸ್ಸೂರೆನ್ಸ್ ಕಂಪನಿ ಲೋಕಲ್ ಏಜಂಟರವರಿಗೆ.

ಯ್ಯ,

ನನ್ನ ವಯಸ್ಸು ಮತ್ತು ವಿಮೆ ಮಾಡತಕ್ಕ ರೀತಿಯ ತಪಶೀಲನ್ನು ಈ ಗೆ ನಮೂದಿಸಿ ಇರುತ್ತೇನೆ. ಇದಕ್ಕೆ ನಾನು ಕೊಡಬೇಕಾದ ಮುಂಗಡ ವೇನೆಂಬದನ್ನು ದಯವಿಟ್ಟು ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ.

ರುಜು.

ಹೆಸರು..

ವಯಸ್ಸು..

ವಿಮೆ ಮಾಡತಕ್ಕ ರೀತಿ 1 2 3 ....

ವಿಳಾಸ..

(2) ವಿಮೆ ಮಾಡತಕ್ಕವರ ದೇಹಾರೋಗ್ಯದ ಪರೀಕ್ಷೆಗೆ ಕೊಡತಕ್ಕ ಡಾಕ್ಟರ ರುಸುಂ ಕಂಪೆನಿಯವರೇ ಕೊಡುವದಲ್ಲದೆ ವಿಮೆ ದಸ್ತೈವಜಿನ ಸ್ಟಾಂಪ್ ಖರ್ಚು ಕೂಡಾ ಕಂಪೆನಿಯವರೇ ವಹಿಸುತ್ತಾರೆ.

(3) ಮುಂಗಡಗಳನ್ನು ವರುಷಕ್ಕೊಂದಾವರ್ತಿ, ಆರು ತಿಂಗಳಿಗೊಂದಾವರ್ತಿ ಮತ್ತು ಮೂರು ತಿಂಗಳಿಗೆ ಒಂದಾವರ್ತಿ ಕೊಡತಕ್ಕವರಿಗೆ ವಾಯಿದೆ ತಾರೀಖಿ ನಿಂದ 30 ದಿನಗಳೊಳಗಾಗಿ ಕೊಡಲು ರಿಯಾಯತಿ ತೋರಿಸುತ್ತಾರೆ. ತಿಂಗಳಿಗೆ ಒಂದಾವರ್ತಿ ಮುಂಗಡ ಕೊಡತಕ್ಕವರಿಗೆ 10 ದಿನಗಳ ರಿಯಾಯತಿ ತೋರಿಸುತ್ತಾರೆ. ಈ ಪ್ರಕಾರ ರಿಯಾಯತಿ ದಿನಗಳೊಳಗಾಗಿ ವಿಮೆ ಮುಂಗಡಗಳ ಪಾವತಿ ಆಗದೇ ಹೋಗುವ ಪಕ್ಷಕ್ಕೆ ವಿಮೆ ದಸ್ತೈವಜು ರದ್ದಾದಂತೆ ಭಾವಿಸಲ್ಪಡುತ್ತ.

(4) ಆದರೆ ಒಂದು ವಿಮೆ ಪತ್ರವು 5 ವರುಷಗಳು ಜಾರಿಯಲ್ಲಿದ್ದನಂತರ ವಿಮೆದಾರರ ಅನಾನುಕೂಲತೆಯ ದೆಸೆಯಿಂದ ಮುಂಗಡ ಕೊಡದೇ ವಿಮೆ ಪತ್ರವು ರದ್ದಾದ ಪಕ್ಷದಲ್ಲಿ ವಾಯಿದೆ ತಾರೀಖು ಲಾಗಾಯಿತು 13 ತಿಂಗಳುಗಳೊಳಗಾಗಿ ದೇಹಾರೋಗ್ಯದ ಪರೀಕ್ಷೆ ಇಲ್ಲದೆ ಪುನಃ ಜಾರಿಗೆ ತರಲ್ಪಡಬಹುದು. ಈ ರೀತಿ ರದ್ದಾದ ಪತ್ರವು ಜಾರಿಗೆ ತರಬೇಕಾದರೆ ಬಾಕಿಯಲ್ಲಿರತಕ್ಕ ಮುಂಗಡದ ಹಣವಿಗೆ ಶೇಕಡಾ ತಿಂಗಳು 1 ಕ್ಕೆ 0–8-0 ಯಂತೆ ಬಡ್ಡಿ ಸೇರಿಸಿ ಕೊಡತಕ್ಕದ್ದು. ಒಂದು ವೇಳೆ ರದ್ದಾದ ವಿಮೆ ಪತ್ರವು ಜಾರಿಗೆ ಬರುವದರೊಳಗಾಗಿ ವಿಮೆದಾರನು ಮೃತನಾಗುವ ಪಕ್ಷಕ್ಕೆ ಬಾಕೀ ಇರತಕ್ಕ ಮುಂಗಡ ಮತ್ತು ಬಡ್ಡಿ ವಜಾಮಾಡಿ ವಿಮೆ ದಸ್ತೈವಜಿನ ಮೊಬಲಗು ಕೊಡಲ್ಪಡುವದು. ಈ ಹದಿಮೂರು ತಿಂಗಳುಗಳೊ ಳಗೆ ವಿಮೆ ಪತ್ರವು ಪುನಃ ಜಾರಿಗೆ ತರಲ್ಪಡದೇ ಹೋಗುವ ಪಕ್ಷಕ್ಕೆ ಕಂಪೆನಿಯವರ ಜವಾಬ್ದಾರಿಯು ತಪ್ಪಿದಂತೆ ತಿಳಿಯತಕ್ಕದ್ದು.

(6) ಐದು ವರುಷಗಳಿಗಿಂತ ಕಮ್ಮಿ ಕಾಲ ಜಾರಿಯಲ್ಲಿರತಕ್ಕ ವಿಮೆ ಪತ್ರಗಳ ಮುಂಗಡ ಪಾವತಿ ಆಗದೆ ರದ್ದಾದ ಪಕ್ಷದಲ್ಲಿ ವಿಮೆದಾರರೇ ತಮ್ಮ ಸ್ವಂತ ಖರ್ಚಿ ನಿಂದ ಡಾಕ್ಟರವರ ಪರೀಕ್ಷೆ ಮಾಡಿಸಿಕೊಂಡು, ಸರ್ಟಿಫಿಕೇಟಿನ ಸಮೇತ ಮುಂಗಡ ಹಣವನ್ನು ಸೇಕಡಾ ವರ್ಷಯಾನಾ 0–8–0 ಯಂತೆ ಬಡ್ಡಿಯನ್ನು ಸೇರಿಸಿಕೊ ಟ್ಟಲ್ಲಿ ಕಂಪೆನಿಯವರು ಡಾಕ್ಟರವರ ಸರ್ಟಿಫಿಕೇಟು ಸಮರ್ಪಕವಾಗಿದ್ದರೆ ರದ್ದಾದ ವಿಮೆ ಪತ್ರವನ್ನು ಪುನಃ ಜಾರಿ ಮಾಡುತ್ತಾರೆ.

(4) ಒಂದು ವಿಮೆ ಪತ್ರವು ಮೂರು ವರುಷಗಳು ಜಾರಿಯಲ್ಲಿದ್ದನಂತರ ವಿಮೆದಾರರು ಅಪೇಕ್ಷಿಸಿದರೆ ಮುಂಗಡಗಳು ಕೊಟ್ಟದ್ದರ ಮೇಲೆ ಲೆಕ್ಕ ಹಾಕಿ

ಹಣವನ್ನು ಕಂಪೆನಿಯವರು ಸಾಲವಾಗಿ ಕೊಡುತ್ತಾರೆ. ಈ ಸಾಲದ ಮೊಬಲಗಿಗೆ ಶೇಕಡಾ ಸಾಲಿಯಾನಾ 6–0–0 ರೂಪಾಯಿನಂತೆ ಮಾತ್ರ ಬಡ್ಡಿ ಕೊಡಬೇಕು. ಈ ರೀತಿ ಸಾಲ ಕೊಡುವದರಿಂದ ಒಂದು ವೇಳೆ ಮುಂಗಡ ಕೊಡು ವದಕ್ಕೆ ಅನಾನುಕೂಲವಾಗುವ ಪಕ್ಷಕ್ಕೆ ಅದನ್ನು ಕೊಟ್ಟು ವಿಮೆ ಪತ್ರವು ರದ್ದಾ ಗದಂತೆ ಜಾರೀಲಿ ಇಡತಕ್ಕ ಬಗ್ಗೆ ಮತ್ತು ಇನ್ಯಾವದಾದರೂ ಜರೂರಿಯಾತ್ ಸಂದರ್ಭದ ಖರ್ಚಿಗೆ ಉಪಯೋಗಿಸುತ್ತದೆ.

(5) ವಿಮೆ ಮೊಬಲಗನ್ನು ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಕೊಡಲು ಕಂಪೆನಿಯವರು ಸಿದ್ಧರಾಗಿ ಇರುತ್ತಾರೆ. ಮತ್ತು ವಿಮೆದಾರರ ವಾರಸುದಾರರಿಗೆ ಮೊಬಲಗು ಹಡೆಯತಕ್ಕ ಬಗ್ಗೆ ಅನಾವಶ್ಯಕವಾದ ನಿರ್ಬಂಧಗಳ್ಯಾವದನ್ನೂ ಕಂಪೆನಿಯವರು ಏರ್ಪಡಿಸಿ ಇರುವದಿಲ್ಲ.

(6) ವಿಮೆ ಪತ್ರಗಳು ಬೊಂಬಾಯಿ ಆಫೀಸಿನಿಂದಲೇ ಕೊಡಲ್ಪಡುವದರಿಂದ ವಿಮೆ ಮೊಬಲಗು ವಾರಸುದಾರರಿಗೆ ಪಾವತಿ ಮಾಡುವ ಮುಂತಾದ ಕೆಲಸಗಳು ಆ ಆಫೀಸಿನಲ್ಲೇ ನಡಿಸಲ್ಪಡುತ್ತವೆ.

ಲೋಕಲ್ ಏಜಂಟರು, ಶಿವಮೊಗ್ಗಾ.

ಡಿಯಂ. ಸೂರ್ಯನಾರಾಯಣಪ್ಪ,
ಕಮಿಷನ್ ಮತ್ತು ಜನರಲ್ ಏಜನ್ಸಿ.

ಶಿವಮೊಗ್ಗಾದಲ್ಲಿರುವ ಸ್ಟ್ಯಾಂಡರ್ಡ್ ಲೈಫ್
ಎಸ್ಯೂರೆನ್ಸ್ ಕಂಪೆನಿ ಲೋಕಲ್ ಏಜಂಟರವರಿಗೆ.

ಮ್ಯಾ,

ನನ್ನ ವಯಸ್ಸು ಮತ್ತು ವಿಮೆ ಮಾಡತಕ್ಕ ರೀತಿಯ ತಪಸೀಲನ್ನು ಈ ಕೆಳಗೆ ಸಮೂದಿಸಿ ಇರುತ್ತೇನೆ. ಇದಕ್ಕೆ ನಾನು ಕೊಡಬೇಕಾದ ಮುಂಗಡ ವಗೈರೆ ಸಂಬಂಧವನ್ನು ವಿವರಿಸಿ ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ.

ರುಜು.

ಹೆಸರು...

ವಯಸ್ಸು...

ವಿಮೆ ಮಾಡತಕ್ಕ ರೀತಿ 1 2 3 ....

ವಿಳಾಸ...

...ರು ಕಾಲದಲ್ಲಿಯೂ ಜನತನ್ನು ತನ್ನ ಸ್ವಂತ ಮಕ್ಕಳೆಂದು ಭಾವಿಸುತ್ತಾನೆ. ಆದರೆ ಈ ಮಧ್ಯೆ ಈತನನ್ನು ತೆಗೆದು ...ರಯವರನ್ನು ಇಡಬೇಕೆಂದು ಮೇಲಿನ ಅಧಿಕಾರಿಗಳು ಯೋಚಿಸುತ್ತಿದ್ದಾರಂತೆ. ಯಾಕೆಂದರೆ ಈತನಿಗೆ ವಿದ್ಯೆ ಬರುವದಿಲ್ಲವೆಂದು ವಿದ್ಯೆ ಬರತಕ್ಕವರೇ ಬೇಕೆಂದೂ ಕೇಳಿದರೆಂದು ವರ್ತಮಾನ ...ಲದವು ಮೈಸೂರು ದೇಶದಲ್ಲಿ ಇಂಥಾವರು ಸಿಕ್ಕುವದೇ ಅಪೂರ್ವ. ಇಂಥಾ ಪುಣ್ಯಾತ್ಮರೇ ಸ್ಥಿರವಾಗಲೆಂದು ಪ್ರಜೆಗಳಾದ ನಾವು ...ಳಿಕೊಳ್ಳುತ್ತೇವೆ.

ರುಜುಗಳು —ಕಾರುವಳ್ಳಿ ನಂಜಪ್ಪ, ಸಿದ್ಧಲಿಂಗಪ್ಪ ಕಲ್ಲಪ್ಪ, ...ನಹಳ್ಳಿ ಬಸಪ್ಪ, ಬಡಗಿ ಲಿಂಗಪ್ಪ, ಪಟ್ಟಣದ ವೀರಭದ್ರಪ್ಪ, ...ಗಳ ಬಸಪ್ಪ, ಮುರಿಗಪ್ಪ, ಕಲ್ಲೇಶಪ್ಪ, ನಾಗಪ್ಪ, ಕಮ್ಮಾರ ...ಪ್ಪ, ಗೌಡರ ಕಲಪ್ಪ, ಗೌಡರ ವೀರಭದ್ರಪ್ಪ, ಧರ್ಮಪ್ಪನವರು, ...ದಲಾದವರು ರುಜು ಮಾಡುವ ಉದ್ದೇಶ್ಯ ಗೆರೆಹಾಕಿದ್ದಾರೆ.

[ಈ ರೈತರುಗಳೆಲ್ಲಾ ಈ ಅಭಿಪ್ರಾಯಗಳನ್ನು ಕಾಣಿಸಿ ರವಿನ್ಯೂ ಕಮಿಷನರವರಿಗೆ ಅರ್ಜಿ ಬರೆದುಕೊಂಡಲ್ಲಿ ಅವರು ನಿಜಾಂಶವನ್ನು ಗೊತ್ತುಮಾಡಿ ಕಷ್ಟನಿವಾರಣೆ ಮಾಡಿಯಾರೆನ್ನುವದಕ್ಕೆ ಸಂಶಯವಿಲ್ಲ —ಎಡಿ]

ಪ್ಲೇಗ್ ಮಹೋಪಶಾಂತಿ

ವೃ॥ ಇಳೆಯೊಳ್ಳಂ ಪ್ರಳಯಾಂಬರಲ್ ಬಹುಜನಂ ಸಾವೆಯ್ದೆ
ದುರ್ಭಯದಿಂ ಕಾಳದಿಂ ದೇಶಿಗರಾಗಿ ನಾಡನುಳಿದೆತ್ತಂ ಪೋಗೆ
ದುಷ್ಕೃತ್ಯಗಳಿಂ ಬಳಲಲ್ ಧಾತ್ರಿಗೆ ಕಂಪಿಸಲ್ ಭರತಖಂಡಂ ವ್ಯಸ್ತ
ಮಂಗಳೊಳ್ ಬಲವತ್ಸ್ಪೇಗದಿಂದು ಮಲ್ಗಿಸಿದುದೀ ಪ್ಲೇಗ್ ಮಾ
ರೀಕಷ್ಟವಂ ॥೧॥

ವೃ॥ ತೊಳಗಂ ಕಾಂತೆಯನೋಪ ನೋಪೆತೊಳಗಳ್ ಬರ್ತಾರ
ಸಂತಂಗೆಕಾಂ ತೊರೆದಂ ಪುತ್ರರ ನಾತನಂತೆ ಜರೆದಂ ಪುತ್ರಾ ಮಾ
ತ್ಯಾಕಿಮಂ । ತೊರೆದಳ್ಮಾತಸುಪುತ್ರಿಯಂ ತೊರೆದಳಂತೇ ಲೋಕ
ಮಂನಾಡೆಸ ತ್ತಪದಿಂ ಕೆಳ್ತಲೆಯಾ । ತಗ್ಗಲಮನಂತೇತಂತೆನಲ ಬ
ರ್ಪವೋ ॥೨॥

ವೃ॥ ಪೋದುದು ಮೆಟ್ಟಿದತ್ತ ಮೃಗಖಂಗಾದು ಕೊಂದುದು
ಧಾತೇಗಿತ ಸ್ವರದೆ ಕಡಂಗಿಸುತ್ತಿತುಳಿದತ್ತು ಕರುತ್ತು ಕಾನುಂಗಿ
ದುರ್ನಾಶ ದೀರ್ಘರದಾಗಿಮಾಡಿದತ್ತು ನೆಗೆದತ್ತು ವಿಜೃಂಭಿಸಿ ಭೂ
ಪಾಲರಂ ತರಹರಿಸುತ್ತೆ ನೂಂಕಿತವೆ ಕೇಂಕಿತು ಭೂಮಿಯೊ
ಳಿದದ ತಂ ॥೩॥

ವೃ॥ ಪಿರಿದೊಂದುಲ್ಲಣದಿಂದಿದೇನುರಿದುತಾಂ ಮಾಳ್ಕೆತ್ತೊ
ಸತ್ತುಗೋ ಕರನಿಬಭೂಮಿಬರಂ ಕವರ್ದು ಪರಿದಾಡಿರ್ದಾಯ
ತೋಳಿನಿ ॥ ಸ್ವರಪೇಗಳ್ಮಲಗಿತ್ತೊ ಸೀಂದುದೊ ಮನುಷ್ಯವ್ರಾತ
ಖಾಗ್ನಿಯಂ ಭವದಿಂದೆಂದನೆ ನಾಶವಾಯ್ತು ಧರೆಯುಲ್ಲೇ
ಪರಿಶೋಧಿದ್ರದಂ ॥೪॥

ವೃ॥ ದರೆಯಂ ಕೃಷ್ಣನರೇಶವರ್ಯನದಿಂ ಪಾಳಕ್ಕೆ ನಿಸ್ಪರ್ಶ
೦ । ಶಿರಯೊಳ್ ಸಸ್ಯಕಾಲಂಪ್ರವರ್ಧಿಸುಗೆ ನೀಹಂಬೊಂದಿವಿದ್ಯ
ಸ್ತಪ ॥ ಮೆರೆಗೆಂದುಂ ನೆರೆಪೊರ್ದದೀರ್ಘ ನಿಸಪಂ ಪ್ಲೇಗ್ ಮಾರಿ
ಕಾಪಮ್ಯ । ಸಿರಿಯುಂ ಭಾರತಭೂಮಿಗಕ್ಕೆ ವಿಜಯಂ ಭದ್ರಂ
ಶುಭಂ ಮಂಗಳಂ ॥೫॥

ಎಚ್ ವೆಂಕಟರಾಯ

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ — ಈ ತಾಲ್ಲೂಕಿನಲ್ಲಿ ಕೆಲವು ಕಡೆ ಹೊಗಳನ್ನು ಬಿತ್ತಿದ್ದಾರೆ. ಆದರೆ ಸರಿಯಾದ ಮಳೆ ಇಲ್ಲದೆ, ಬಿತ್ತಿದರು ಆಕಾಶವನ್ನು ನೋಡುತ್ತಾ ಇದ್ದಾರೆ. ಮಳೆ ಬರುವ ಹಾಗೆ ತೋರುತ್ತೆ. ಮಳೆ ಇಲ್ಲ. ಈ ತಾಲ್ಲೂಕಿನಲಿ ಮಳೆ ಬಂದರೆ ...ಗಿ ಬೆಳೆ ಉಂಟು. ಇನ್ನು ಯಾವ ಆಧಾರವೂ ಜನರಿಗೆ ಇಲ್ಲದ್ದರಿಂದ ಜನರು ಭಯಪಡುತ್ತಾರೆ. ಧಾರಣೆಗಳು ಹೆಚ್ಚಾಗಿವೆ. ...ರ ತಿಂಗಳ ಕಡೆಯಲ್ಲಿ ಸ್ಕೂಲ್ ಡೆಪುಟಿ ಇನ್ಸ್‌ಪೆಕ್ಟರ್ ಮೆ॥ ...ರಭದ್ರಪ್ಪನವರು ಇಲ್ಲಿಗೆ ದಯಮಾಡಿ, ಸ್ಕೂಲ್‌ಗಳನ್ನು ಚನ್ನಾಗಿ ಪರೀಕ್ಷೆ ಮಾಡಿದರು ಮತ್ತು ಕ್ಯಾರಿಕೆ ಸ್ಕೂಲನ್ನು ಸಹ ...ಡಿದರು. ಈ ಸ್ಕೂಲುಗಳನ್ನು ನೋಡಿ ಬಹಳ ಸಂತೋಷಪಟ್ಟರು. ಕೆಲವು ಬಡ ಸ್ಕೂಲ್ ಮಾಸ್ಟರುಗಳ ಸಂಬಳದ ವಿಷಯ ...ರ್ಕಾರದವರು ಗಮನಕ್ಕೆ ತಂದುಕೊಂಡರೆ ಒಳ್ಳೇದು. ಇವರ ...ಲ್ಪ ಸಂಬಳದಿಂದ ಈ ಕಾಲದಲ್ಲಿ ಜೀವಿಸುವದು ಕಷ್ಟ.

ತಿಪ್ಟೂರು —ಕೊಂಡ್ಲಿಗಟ್ಟದಲ್ಲಿ ಕಂದಾಯ ವಸೂಲಿ ಕೆಲಸವು ...ರೆಯಾಯಿತೆಂದು ಹಿಂದೆ ಹೇಳಿತ್ತಷ್ಟೆ. ಸದರಿ ಶಾನುಭೋಗರಿಗೂ ...ತರಿಗೂ ಮನಸ್ತಾಪಗಳಾದ್ದರಿಂದ ರೈತರಿಗೆ ಕೇಡುಂಟಾಗಲೆಂದು ಶಾನುಭೋಗರು ಮಾಡಿದ ಪಿತ್ತಲಾಟದ ತಂತೀ ವರ್ತಮಾನವೆಂದು ...ಳುವರು. ಆದರೇನು, ಆ ತಂತಿಯು ಶಾನುಭೋಗರ ಕತ್ತನ್ನು ...ತ್ತಿಕೊಳ್ಳದೆ ಬಿಟ್ಟೀತೆ ಎಂದು ಜನರು ಮಾತಾಡಿಕೊಳ್ಳುತ್ತಾರೆ. ...ಣದ ಪಟ್ಟಾದಾರಿಯು ಗ್ರಾಮದ ಪಟೇಲರನ್ನೇ ಹೊಂದಿದ್ದರೆ ...ತ್ತಮವೆಂದು ತೋರುತ್ತೆ —ನಮ್ಮ ಅಮಲ್ದಾರರು ತಾಲ್ಲೂಕ್ ಕಚೇರಿ ಕಾಂಪೌಂಡನ್ನು ಶುಚಿಮಾಡಿಸಿ, ಕೆಲವು ತೆಂಗಿನ ಸಸಿ...ನ್ನು ಹಾಕಿಸಿದ್ದಾರೆ. ಒಳ್ಳೇ ಗಾಳಿಯನ್ನುಂಟುಮಾಡುವ ಕೆಲವು ...ತ್ತಮವಾದ ಗಿಡಗಳನ್ನು ಸಹಾ ಹಾಕಿಸಿದರೆ ತಿರುಗಾಡಿ ಬರತ...ವರೆಲ್ಲರೂ ಇವರ ಹೆಸರನ್ನು ಸ್ಮರಿಸದೆ ಇರಲಾರರು —ಕೆರೆಗೆ ...ಂಚವಾಗಿ ಬಂದಿರುವ ನೀರು ಸಹಾ ಜನಗೊಬ್ಬರದಿಂದ ಕೆಟ್ಟು ...ಹೋಗುತ್ತದೆ. ಪ್ರತ್ಯೇಕ ಕಕ್ಕಸ್ ಮನೆಗಳನ್ನು ಕಟ್ಟಿಸಿದರೆ ...ರಿಗೂ ಉತ್ತಮವೆಂದು ತೋರುವದು. ಆದರೆ ಈ ವಿಷಯದ ...ಯು ಮ್ಯುನಿಸಿಪಲ್ ಮೆಂಬರುಗಳಿಗೆ ಅರಿವಿಲ್ಲವೇನೋ !

ಕೆಲವು ದಿನಗಳ ತನಕ ಮಳೆ ನಿಂತಿತ್ತು. ಭಗವತ್ಕೃಪೆಯಿಂದ ಈಗ ಶುರುವಾಗುತ್ತದೆ —ಗ್ರಂಧಿಗೆ ಮೆ॥ ಬಿರಾಮ್ ಸಾಹೇಬರು ತಮ್ಮ ಜ್ಯೇಷ್ಠಪುತ್ರಿಯನ್ನು ಗರೀಬನಾಥ ಪಿಥವೆಯ ಮಗ ಸೌಮ್ಯಗುಣಸ್ಥನಿಗೆ ಕೊಟ್ಟು ಲಗ್ನ (ನಿಕಾಕಾಗಿ) ಬೆಳಸಿದರು. ವಿವಾಹ ಮಂಟಪದಲ್ಲಿ ಆಫೀಸರುಗಳೂ ಸಕಲ ಕೋರ್ಟಿನ ದೊಡ್ಡ ಮನುಷ್ಯರೂ ಸಭಾ ಸೇರಿರಲು ಬಾರಿ ಬಾರಿಗೂ ಪನ್ನೀರು ಚಳಾವಣೆಯು ಸಕಲರಿಗೂ ಪುಷ್ಪ ಗಂಧ ತಾಂಬೂಲಾದಿಗಳು ಹಂಚಲ್ಪಟ್ಟಿತು. ಚತುರ್ವರ್ಣ ಉತ್ಪತ್ತಿ, ಕಲ್ಲುಸಕ್ಕರೆ, ಪೆಪ್ಪರ್‌ಮೆಂಟ್ ವಿಲಾಯಿಸಿದ ಮಳೆ ಗರೆಯಿತು. ಇವರ ಮತಸ್ಥರನೇಕರಿಗೆ ಪುಷ್ಟಿಕರವಾದ ಭೋಜನಗಳು ನಡೆದವು. ಯೋಗ್ಯತಾನುಸಾರ ಅನೇಕರಿಗೆ ದಕ್ಷಿಣೆಯೂ ಕೊಡಲಾಯಿತು. ಈ ರೀತಿ ಮುಸಲ್ಮಾನರೂ ಹಿಂದುಗಳೂ ಏಕರಾಗಿರುವದು ದೇಶಕ್ಕೆ ಕೀರ್ತಿಯಾಗಿದೆ. ಮೆ॥ ಸಾಹೇಬರ ಸುಗುಣವನ್ನು ಹೊಗಳುತ್ತಾ ಜನರು ತಮ್ಮ ಮನೆಗಳಿಗೆ ಹೋದರು. ಸುಮಾರು ೧ ಸಾವಿರ ರೂಪಾಯಿ ಮಟ್ಟಿಗೆ ಈ ಲಗ್ನ ಕಾರ್ಯವು ಸಾಗಿರಬಹುದೆಂದು ಹೇಳುತ್ತಾರೆ —ಈ ಗನೇ ಭಾನುವಾರ ಶಿವಗಂಗೆ ಮಠಾಧಿಪರ ಸವಾರಿಯು ಚತ್ರಿಪಿ ಶಿಷ್ಯಮಂಡಲಿಯೊಂದಿಗೆ ಊರಲ್ಲಿ ಮೆರವಣಿಗೆ ಬೆಳಸಿ, ತಮ್ಮ ಬಿಡಾರವನ್ನು ಸೇರಿದರೆಂದು ತಿಳಿಯಿತು —ಈಗ ದಿನಕ್ಕೆ ನಾಲ್ಕು ಸಾರಿ ರೈಲ್ ಗಾಡಿಗಳು ಓಡ್ಯಾಡುವದರಿಂದ ಪ್ರಯಾಣಿಕರಿಗೆ ಬಹಳ ಸಹಾಯವಾಗಿದೆ.

ಚಿಕ್ಕಮಗಳೂರು.—ಈ ಪ್ರಾಂತ್ಯ ಮಳೆಯು ಇನ್ನೂ ಬಂದಿಲ್ಲ. ಹೊಲ ಗದ್ದೆಗಳ ಪೈರು ಮಳೆ ಇಲ್ಲದೆ ಬಾಡುತ್ತಲಿವೆ. ಮೋಡವಾಡುವದೂ ಗಾಳಿ ಬೀಸುವದೂ ತಪ್ಪಲಿಲ್ಲ. ಪಶ್ಚಿಮ ಗಾಳಿಯು ಹೆಚ್ಚಾಗಿ ಬೀಸುತ್ತಲಿರುವದರಿಂದ ಮಳೆ ಬರುವದೆಂಬ ನಿರೀಕ್ಷಣೆ ಇದೆ. ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ಕಡೂರು, ತರೀಕೆರೆ ಪ್ರಾಂತ್ಯ ಸರ್ಕೀಟು ಹೊರಟಿದ್ದಾರೆ.—ಶಿವಮೊಗ್ಗ ಸರ್ಜನ್ ಜಪ್ಪರವರು ೯ ನೆ ತಾರೀಖಿಗೆ ಇಲ್ಲಿಗೆ ಬರುತ್ತಾರೆಂದು ವರ್ತಮಾನವಿದೆ —ಬಾಳೇಹೊನ್ನೂರು ಸಂಸ್ಥಾನದ ವೀರಶೈವ ಮಠಸ್ಥರ ಗುರುಗಳಾದ ಶ್ರೀ ಪಂಚಾಕ್ಷರಿ ರಾಜ ದೇಶಿಕೇಂದ್ರ ಸ್ವಾಮಿಗಳವರ ಸವಾರಿಯು ಕಳೆದ ತಿಂಗಳ ೩೦ ನೆ ತಾರೀಖಿಗೆ ಇಲ್ಲಿಗೆ ಬಂದಿತು. ಇಲ್ಲಿನ ಗೌಡರು ವರ್ತಕರೇ ಮೊದಲಾದ ಆ ಮಠದ ಶಿಷ್ಯವರ್ಗದವರನೇಕರು ಅವರನ್ನು ಎದುರ್ಗೊಂಡು ಪೇಟೆ ಬೀದಿಯಲ್ಲಿನ ಮಾರ್ಗವಾಗಿ ಬಹು ವಿಜೃಂಭಣೆಯಿಂದ ಕರೆದುಕೊಂಡು ಬಂದು ಕೋಟೆಯಲ್ಲಿನ ವೀರತ್ತೇಗೌಡನ ಮನೆಯಲ್ಲಿ ಇಳಿಸಿದ್ದಾರೆ. ಕೆಲವರು ಶ್ರೀ ಸ್ವಾಮಿಗಳವರನ್ನು ತಮ್ಮ ಮನೆಗೆ ಕರೆಸಿಕೊಂಡು ಪಾದಪೂಜೆ ಮಾಡಿದರು. ಇದ ವರೆಗೆ ಶ್ರೀ ಸ್ವಾಮಿಗಳವರಿಗೆ ಒಂದು ಸಾವಿರ ರೂಪಾಯಿನ ತನಕ ಕಾಣಿಕೆ ವಸೂಲಾಗಿದೆಯಾಗಿಯೂ ಇನ್ನೂ ವಸೂಲು ಆಗುತ್ತಲಿರುವದಾಗಿಯೂ ವರ್ತಮಾನವಿದೆ —ಇದುವರೆಗೂ ಇಲ್ಲಿನ ಮುನಿಸಿಪಾಲಿಟಿಯವರು ಸಂತೇ ಪಿಸ ಸಂತೆ ನಡೆಯುವ ಮಾರ್ಕೆಟ್ಟಿಗೆ ಜಿನಸಿ ಮೊದಲಾದ ಸಾಮಾನುಗಳನ್ನು ಮಾರಲಿಕ್ಕೆ ಹೋಗುವವರಿಂದ ಸುಂಕವನ್ನು ತಾವೇ ವಸೂಲು ಮಾಡುತ್ತಿದ್ದರು. ಈಗ ಅದನ್ನು ಜೂನ್ ತಾರೀಖು ೩೦ ರಲ್ಲಿ ಹರಾಜು ಮಾಡಿದ್ದರಿಂದ ಬಸವನಹಳ್ಳಿಯಲ್ಲಿರುವ ಬಾಣಾರು ಹನುಮಂತನಾಯ್ಕರು ವರುಷಕ್ಕೆ ೧,೭೫೦ ರೂಪಾಯಿಗೆ ತಮ್ಮ ಬೀಟಿಗೆ ನಿಲ್ಲಿಸಿಕೊಂಡು, ಸುಂಕವನ್ನು ತಾನೇ ವಸೂಲಿ ಮಾಡುತ್ತಿದ್ದಾರೆ —ಇಲ್ಲಿನ ಸ್ಲಾಟರ್ ಹೌಸಿನ ಕಂಟ್ರಾಕ್ಟು ವರುಷಕ್ಕೆ ೭೫೦ ರೂಪಾಯಿಗೆ ಆದಂತೆಯೂ ಮಾರ್ಕೆಟ ಹುಲ್ಲು ೩೦ ರೂಪಾಯಿಗೆ ಆದಂತೆಯೂ ವರ್ತಮಾನವಿದೆ —ಈಗ ಮೆ॥ ಮೈಲಾರಿರಾಯರವರು ವೈಸ್ ಪ್ರೆಸಿಡೆಂಟರಾಗಿದ್ದಾರೆ. ಇವರು ಬಂದ ಮೇಲೆ ಮುನಿಸಿಪಾಲಿಟಿಯ ವಿಚಾರವು ಚನ್ನಾಗಿದೆಯೆಂದೂ ಹಿಂದೆ ಆನಂದರಾಯರ ಕಾಲದಲ್ಲಿದ್ದಂತೆ ಚನ್ನಾಗಿ ನಡೆಯುವದೆಂದೂ ಹೇಳುತ್ತಾರೆ —ಇಲ್ಲಿನ ಹೈಸ್ಕೂಲಿಗೆ ಮೆ॥ ಎಂ ಬಿ ಶ್ರೀನಿವಾಸಯ್ಯಂಗಾರ್ಯ ಚಿಕ್ಕಬಳ್ಳಾಪುರದಿಂದ ಬಂದು ಸ್ಕೂಲಿನ ಛಾರ್ಜನ್ನು ವಹಿಸಿಕೊಂಡರು.

ತುಮಕೂರು —ಹವಾ ತಂಪಾಗಿದೆ. ಹೋದವಾರದಲ್ಲಿ ಆದ ಮಳೆ ವಿನಹಾ ಈಚೆಗೆ ಸುತರಾಂ ಇಲ್ಲದಿರುವದರಿಂದ ಬೀಜ ಹೇರಾವು ಮಾಡಲು ಬಹಳ ಅನಾನುಕೂಲವಾಗಿರುತ್ತೆ. ದಿನಸಿ ಗಾಡಿಗಳು ಈ ವಾರದ ಮೊದಲಿನಿಂದ ಸಾಧಾರಣವಾಗಿ ದಿನ ೧ಕ್ಕೆ ೩೦೦—೪೦೦ರವರೆಗೂ ಬರುತ್ತಲಿವೆ. ಮಳೆ ಬಾರದಿರುವದರಿಂದಲೂ ಪರಸ್ಥಳದ ಗಿರಾಕಿ ವಿಶೇಷವಾಗಿರುವದರಿಂದಲೂ ಧಾರಣೆ ರಾಗಿ ಭತ್ತ ಖಂಡಗ ೧ಕ್ಕೆ ೧೭—೧೮ರವರೆಗೂ ಆಗಿದೆ. ಇನ್ನೂ ಜಾಸ್ತಿಯಾಗುವ ಸಂಭವವೂ ಇರುವದು. ಈ ಸಂದರ್ಭದಲ್ಲಿ ಬಡವರ ಸ್ಥಿತಿ ಮುಂದೆ ಯಾವ ರೀತಿಯಲ್ಲಿ ಪರಿಣಮಿಸುವದೋ ತಿಳಿಯಲು ಅಸಾಧ್ಯವಾಗಿದೆ —ಇಲ್ಲಿನ ಮಂಡೀಪೇಟೆಗೂ ರೈಲ್ವೆ ಸ್ಟೇಷನಿಗೂ ಸುಮಾರಾಗಿ ಮುಕ್ಕಾಲು ಮೈಲಿ ಫಾಸಲೆ ಇದ್ದೆ. ಹೀಗಿದ್ದರೂ ಮಧ್ಯೆ ಎತ್ತರವಾದ ದಿಣ್ಣೆ ಇರುವದರಿಂದ ಭಂಡಿ ಎತ್ತುಗಳಿಗೆ ನಾಲ್ಕು ಮೈಲಿ ಪ್ರಯಾಣಮಾಡಿದಷ್ಟು ಶ್ರಮವಾಗುತ್ತೆ. ಇಂಥಾದ್ದರಲ್ಲಿ ದಿನಸಿ ಮೂಟೆಗಳನ್ನು ಹೊಡೆಯುತಕ್ಕ ಪುಣ್ಯಾತ್ಮರು ದಫಾ ೧ಕ್ಕೆ ಹನ್ನೊಂದು ಮೂಟೆಗಿಂತ ಜಾಸ್ತಿ ಹಾಕಕೂಡದೆಂಬ ಸರ್ಕಾರೀ ನಿಬಂಧನೆಗೆ ಒಳಪಟ್ಟಿದ್ದಾಗ್ಯೂ ಹೆಚ್ಚು ಸಂಪಾದನೆಗೆ ಆಸೆಬಿದ್ದು ಮಧ್ಯೆ ಗದರಿಸುವ ಪೋಲೀಸ್‌ನವರಿಗೆ ದಕ್ಷಿಣೆಗಳಿಂದ ಸಾಧುಮಾಡಿಕೊಂಡು ಗಾಡಿ ೧ಕ್ಕೆ ೨೦ ಮೂಟೆಗಳವರೆಗೂ ಹಾಕಿ ದಿನ ೧ಕ್ಕೆ ೨೦—೩೦ ದಫೆ ಹೊಡೆಯುತ್ತಾರೆ. ಆದರೆ ಆ ಬಡ ಮೂಗುಪ್ರಾಣಿಗಳು ಅಷ್ಟು ಭಾರವನ್ನು ಆ ಕಠಿಣ ದಿಣ್ಣೆಯಲ್ಲಿ ಎಳೆಯುವಾಗ ಪಡುವ ಶ್ರಮವು ಎಂಥಾ ಕಠಿಣ ಹೃದಯನಿಗಾದರೂ ಕಣ್ಣೀರು ಬರುವದರಲ್ಲಿ ಸಂಶಯವಿಲ್ಲ. ಈ ಅಪಾರವಾದ ಕಷ್ಟವನ್ನು ಭಗವಂತನು ತಪ್ಪಿಸುವವನಾಗಲಿ. ಜೀವಹಿಂಸೆ ನಿಷೇಧ ಸಂಘದವರು ಇದಕ್ಕೆ ಗಮನಕೊಡಬಾರದೇ? ಇಲ್ಲಿನ ಮಂಡಿ ಪೇಟೆಯ ಹಿಂಭಾಗದಲ್ಲಿ ಎರಡು ಬಾಳಸಿಪಟ್ಟಿ ೧೦೦ ಅಡಿ ಬಾವಿಯಿಂದ ಸ್ಥಳದ ಮತ್ತು ಪರಸ್ಥಳದವರಿಗೆ ಉಂಟಾಗುತ್ತಿರುವ ಪ್ರಯೋಜನವು ಬಹಳವಾಗಿರುತ್ತೆ. ಇಂಥಾದ್ದರಲ್ಲಿ ಇದಕ್ಕೆ ಸುತ್ತಲೂ ಇರುವ ಏರಿ ಮತ್ತು ನೀರಿನಲ್ಲಿರುವ ಉಸುಬು ಕ್ರಮವಾದ ಸ್ಥಿತಿಯಲ್ಲಿಲ್ಲವಾದ್ದರಿಂದ ಹೋದ ವಾರ ಒಬ್ಬ ಮಹನಾದೀಯ ಪ್ರಾಯಸ್ಥರು ಸ್ನಾನಮಾಡುವುದಕ್ಕೆಂದು ನೀರನೊಳಕ್ಕಿಳಿದವನು ಮೇಲಕ್ಕೆ ಬರಲೇ ಇಲ್ಲ. ಅನಂತರ ಜನರು ಹುಡುಕಿದಾಗ ಸತ್ತುತೇಲಿದನು. ಸರ್ವಜನೋಪಕಾರವಾದ ಈ ಕಟ್ಟೆಯನ್ನು ಕ್ರಮವಾದ ರೀತಿಯಲ್ಲಿ ಇಟ್ಟಿಲ್ಲದಿರುವದು ನಮ್ಮಗಳ ದೌರ್ಭಾಗ್ಯವೆಂದೇ ಹೇಳಬಹುದು. ನಮ್ಮ ವೈಸ್ ಪ್ರೆಸಿಡೆಂಟರು ಈ ವಿಷಯದಲ್ಲಿ ನಿಗಾ ತೆಗೆದುಕೊಂಡು ಏರಿಯನ್ನು ಕ್ರಮಪಡಿಸುತ್ತಲೂ ಕಂಬಿಗಳನ್ನು ಹಾಕಿಸಿ ನೀರು ಗಲೀಜಾಗದಂತೆ ಮಾಡಿ ತಮ್ಮ ಹೆಸರನ್ನು ಶಾಶ್ವತಪಡಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ —ಈ ವರುಷ ಲಾಂದ್ರದ ಕಂಟ್ರಾಕ್ಟುದಾರರಿಗೆ ದರ ಜಾಸ್ತಿಯಾದ್ದರಿಂದ ಸಾಯಂಕಾಲ ೭—೮ ಗಂಟೆಗೆ ಅನೇಕ ಲಾಂದ್ರಗಳು ಅರ್ಧಗ್ರಹಣ ಪೂರ್ಣಗ್ರಹಣಗಳಿಗೆ ಗುರಿಯಾಗಿರುವಂತೆ ತೋರುತ್ತೆ. ಈ ರೀತಿಯಾಗದಂತೆ ತಕ್ಕ ಉಸ್ತುವಾರಿಯಿಂದ ಕ್ರಮಪಡಿಸ್ಯಾರೆಂದು ನಂಬಿರುತ್ತೇನೆ —ಇಲ್ಲಿಗೆ ವರ್ಗವಾಗಿ ಬಂದಿರುವ ಡಾಕ್ಟರು ಮೆ॥ ವಿ ಮುತ್ತುಸ್ವಾಮಿದಾಸ್ ಯವರು ಈಗಾಗಲೇ ಪ್ರಜೆಗಳ ಕಷ್ಟ ಸುಖಗಳಿಗೆ ಬಾಧ್ಯರಾಗಿ ಪ್ರತಿ ರೋಗಿಯನ್ನು ಬಹಳ ಆದರಣೆಯಿಂದ ಮುದ್ದಾಗಿ ಪರಾಂಬರಿಸಿ ತಕ್ಕ ಚಿಕಿತ್ಸೆ ಮಾಡುತ್ತಿರುವದರಿಂದ ಪ್ರತಿ ದಿನವೂ ತಂಡ ತಂಡವಾಗಿ ಖಾಯಿಲೆಯವರು ಬಂದು ಗುಣಹೊಂದುತ್ತಲಿದ್ದಾರೆ —ಈ ತಿಂಗಳಲ್ಲಿ ಸೌದೆ ಕಂಟ್ರಾಕ್ಟು ತೀರಿತಾದ್ದರಿಂದ ಚಿಲ್ಲರೆಯಾಗಿ ಸೌದೆ ಮಾರಲು ಸರ್ಕಾರದವರು ತಕ್ಕ ಏರ್ಪಾಡು ಮಾಡಿಲ್ಲ. ಬಿತ್ತನೆ ಕಾಲವಾದ್ದರಿಂದ ಸೌದೆ ಗಾಡಿಗಳು ಬರುವದಿಲ್ಲ. ಪ್ರಜೆಗಳಿಗೆ ಉಂಟಾಗಿರುವ ಸೌದೆ ತೊಂದರೆಯನ್ನು ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ಜಾಗ್ರತೆ ನಿವಾರಣೆ ಮಾಡ್ಯಾರೆಂದು ಕೋರುತ್ತೇವೆ.

ತೀರ್ಥಹಳ್ಳಿ —ವಿಶೇಷವಾದ ಮಳೆಯು ಕಳೆದ ವಾರದಿಂದ ಪ್ರಾರಂಭವಾಯಿತು. ರಾತ್ರೀ ಹಗಲು ವಿರಾಮವಿಲ್ಲದ ಸುರಿಯುತ್ತದೆ. ಆಗುಂಬೆಯಲ್ಲಂತೂ ಪುರಸತ್ತೇ ಇಲ್ಲದಂತೆ ಮಳೆಯು ಸುರಿಯುವದು —ಆಗುಂಬೆ ಹತ್ತಿರ ಅಂಚಲಿಸಿನಲ್ಲಿ ಒಂದು ಮನೆಗೆ ಬೆಂಕಿ ಬಿದ್ದು ಎಲ್ಲಾ ಸುಟ್ಟುಹೋಯಿತು. ಸಾಮಾನುಗಳನ್ನು ಬಹು ಕಷ್ಟದಿಂದ ಹೊರಕ್ಕೆ ಸಾಗಿಸಿದರು. ಕಡೆಗೆ ಒಬ್ಬ ಹೆಂಗಸು ಸಾಮಾನುಗಳನ್ನೆಲ್ಲಾ ತರಲು ಒಳಕ್ಕೆ ಹೋದಳು. ಆಗ ಒಂದು ಮಗುವು ಆಕೆಯ ಹಿಂದೆಯೇ ಒಳಕ್ಕೆ ಹೋದದ್ದನ್ನು ನೋಡಲಿಲ್ಲ. ಹೆಂಗಸು ಬಹು ಪ್ರಯಾಸದಿಂದ ಹೊರಕ್ಕೆ ಬಂದಳು. ಆದರೆ ಮಗುವು ಬರಲಾರದೆ ಒಳಗೆ ಸಿಕ್ಕಿ ಸುಟ್ಟು ಬೂದಿಯಾಯಿತು. ಮಗುವು ಕೂಡುವಾಗ ಬಹಳವಾಗಿ ಕಿರಚಿಕೊಂಡಾಗ್ಯೂ ಒಳಕ್ಕೆ ನುಗ್ಗಲು ಯಾರಿಗೂ ಸಾಧ್ಯವಿಲ್ಲದೆ ಹೋಯಿತು —ಮುಳುವಾಡಿ ಗ್ರಾಮದ ವಾಸಿಗಳಲ್ಲಿ ಒಬ್ಬ ಗೌಡರು ನೇಗಲನ್ನು ಹೊತ್ತುಕೊಂಡು ಸಂಕದ ಮೇಲೆ ದಾಟುತ್ತಿರುವಾಗ ಆಯತಪ್ಪಿ ತಕ್ಷಣವೇ ಅಲ್ಲಿ ಹರಿಯುತ್ತಿರುವ ಸಣ್ಣ ಹೊಳೆಯಲ್ಲಿ ಬಿದ್ದುಹೋದರು. ಹತ್ತಿರದಲ್ಲಿ ಯಾರೂ ಇರಲಿಲ್ಲ. ಮೇಲೆ ಬರುವದಕ್ಕೆ ಬಹು ಪ್ರಯತ್ನಪಟ್ಟಾಗ್ಯೂ ಸಾಧ್ಯವಿಲ್ಲದೆಹೋಯಿತೆಂದು ತೋರುತ್ತದೆ. ಮಾರಣೆ ದಿನ ಹೆಣವನ್ನು ಹುಡುಕಿ ದಹನಕ್ರಿಯೆ ಮಾಡಿದರು. ಅವರ ಕುಟುಂಬ ಮತ್ತು ಮಗಳು ಬಹಳ ದುಃಖದಲ್ಲಿದ್ದಾರೆ —ಫಾರೆಸ್ಟ್ ಇಲಾಖೆ ಬಾಬು ನೌಕರರುಗಳಿಗೆ ಫಾರೆಸ್ಟರುಗಳು ಕಾಲಕ್ಕೆ ಸರಿಯಾಗಿ ಸಂಬಳ ಕೊಡದೆ ಬಹಳವಾಗಿ ಸತಾಯಿಸುತ್ತಾರೆಂದು ಸದರಿ ಇಲಾಖೆಯ ಜವಾನರು ಗೋಳಾಡುತ್ತಾರೆ. ಇದಕ್ಕೆ ಮೇಲ್ಪಟ್ಟವರು ನಿಗಾಕೊಟ್ಟು ಸರಿಪಡಿಸುವದು ಉತ್ತಮ —ಈ ಊರಿನಲ್ಲಿರುವ ಸೂಲಗಿತ್ತಿಯು ಹೆರಿಗೆಯಾಗುವಂಥಾವರ ಮನೆಗಳಿಗೆ ಸಕಾಲಕ್ಕೆ ಹೋಗುವದಿಲ್ಲವೆಂದು ತೋರುತ್ತದೆ. ಕಳೆದ ವಾರ ಒಬ್ಬರು ಮನೆಗೆ ಹೋಗಿ ಎರಡು ಸಾರಿ ಸೂಲಗಿತ್ತಿಯನ್ನು ಕರೆದಾಗ್ಯೂ ಆಕೆಯ ತಮ್ಮನು ಮನೆಯಲ್ಲಿ ಇಲ್ಲ ಯಾರಲ್ಲಿಯೋ ಹೆರಿಗೆ ಪ್ರಸ್ತಕ್ಕೆ ಹೋಗಿದ್ದಾರೆಂದು ಹೇಳಿದ್ದಾಯಿತು. ಕಡೆಗೆ ವಿಚಾರಿಸುವಾಗ್ಗ ಬಾಯಿಲೆ ಇದ್ದ ಹಾಗೂ ಬರಲಾರದ ಉದ್ದೇಶ್ಯ ಹಾಗೆ ಹೇಳಿಸಿದ ಹಾಗೂ ತಿಳಿಯಬಂದಿದೆ. ಇದಲ್ಲದೆ ಆಗುಂಬೆಯಿಂದ ಒಬ್ಬರು ಅವಸರವಾಗಿ ಬಂದು, ಒಬ್ಬರಿಗೆ ಜನನವಾಗದೆ ಶಿಶುವಿನ ಕೈ ಹೊರಗೆ ಬಂದಿದೆ, ಬಹಳ ಕಷ್ಟ, ಬರಬೇಕೆಂದು ಗಾಡಿ ತಂದು ನಿಲ್ಲಿಸಿ ಕರೆದಾಗ್ಯೂ ಆಕೆ ಖಾಯಿಲೆ ಹೊರಗೆ ಹೊರಡಲು ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಬೇರೆಯವರನ್ನು ರುಸುಂ ಕೊಟ್ಟು ಕರಕೊಂಡು ಹೋದರು. ಹಾಗೆ ಖಾಯಿಲೆ ಇರುವದು ನಿಜವಾದರೆ ಯಾಕೆ ರಜ ಪಡೆಯಬಾರದು? ಇಲ್ಲವಾದರೆ ಕರೆದ ಕೂಡಲೆ ಕೆಲಸಕ್ಕೆ ಹೋಗುವದು ಕ್ರಮ —ಟವುನಿನಲ್ಲಿ ಮುನಿಸಿಪಲ್ ಲಾಂದ್ರಗಳನ್ನು ಕಾಣುವದು ಅಪರೂಪವಾಗಿದೆ. ಕಂಬಗಳು ಮಾತ್ರ ಉಂಟು. ರಾತ್ರಿಯಲ್ಲಿ ಹಚ್ಚುವದಿಲ್ಲ. ಮಳೆಗಾಲವೆಂದು ಹೀಗೆ ಮಾಡುತ್ತಾರೋ ? ಮತ್ತು ಪೂರ್ಣಯ್ಯನವರ ಛತ್ರದಲ್ಲಿ ಪ್ರಯಾಣಿಕರ ವಾಸಕ್ಕೆ ಬಹು ಇಕ್ಕಟ್ಟಾಗಿದೆ. ಇಂಥಾ ಸ್ಥಳದಲ್ಲಿ ಯಾದರೂ ಲಾಂದ್ರ ಇಲ್ಲದೆಹೋದರೆ ಹ್ಯಾಗೆ ಪೂರೈಸುವದೋ ಗೊತ್ತಿಲ್ಲ —ಶಿವಮೊಗ್ಗ ಡೆಪ್ಯುಟಿ ಕಮಿಷನರ ಕೋರ್ಟಿಗೆ ಹೋದ ನ್ಯಾಯ್ದ ಮುಂತಾದ ಅನೇಕ ಕೆಲಸಗಳು ಬೇಗನೆ ಫೈಸಲಾಗುವದಿಲ್ಲವೆಂದು ಜನರು ಅಂಗಲಾಚಿ ಬರುತ್ತಾರೆ. ಆದರು ಅಸೌಖ್ಯದಿಂದ ದೀರ್ಘ ಮಾಡುತ್ತಿರಬಹುದು. ಈಗ ಅಸಿಸ್ಟೆಂಟ್ ಕಮಿಷನರೇ ಛಾರ್ಜು ವಹಿಸಿದ್ದಾರೆಂದು ತಿಳಿದಿರುವದರಿಂದ ಬೇಗನೆ ಉತ್ತರ ದೊರಕಿ ಜನಗಳಿಗೆ ನೆಮ್ಮದಿಯಾದೀತು.—ಇಲ್ಲಿನ ಅಮಲ್ದಾರರ ಮನೆಯಲ್ಲಿ ಇಲಿಗಳು ಬಿದ್ದು ಅವರು ಮನೆ ಬಿಟ್ಟು ತೀರ್ಥಹಳ್ಳಿ ಮಠದಲ್ಲಿ ವಾಸಿಸುತ್ತಿದ್ದಾರೆ. ಅವರ ಮನೆಯು ಬಂಟಸಾಗಿತ್ತು. ಅಲ್ಲಿ ಇಲಿಗಳು ಬೀಳುವದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮೆ॥ ಬ್ರಾಡ್ರಿಕ್ ಯವರು ಕಳೆದ ವಾರ ವಿಲಾಯಿತಿಯ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದೇನೆಂದರೆ—ಬಂಗಾಳಾ ಆಧಿಪತ್ಯವನ್ನು ಎರಡು ಭಾಗ ಮಾಡುವ ವಿಚಾರದಲ್ಲಿ ಇಂಡಿಯಾ ಗವರ್ನಮೆಂಟಿನವರ ಶಿಫಾರಸ್ಸನ್ನು ಒಪ್ಪಿರುತ್ತೇವೆ ಎಂಬುವದೇ. ಬಂಗಾಳಾ ಆಧಿಪತ್ಯವು ದೊಡ್ಡದಾಗಿರುವುದರಿಂದ ಇಂಡಿಯಾ ಗವರ್ನಮೆಂಟಿನವರು ಅದನ್ನು ಭಾಗಮಾಡಿ, ಆಸ್ಸಾಂ ಪ್ರಾಂತ್ಯವನ್ನು ಬೇರೆ ಮಾಡಬೇಕೆಂದು ತಿಳಿಸಿದ್ದರು. ಅಲ್ಲಿನ ಪ್ರಜೆಗಳಾದರೋ ಹಾಗೆ ಭಾಗಮಾಡಕೂಡದೆಂದು ಹೇಳುತ್ತಲೇ ಬಂದಿದ್ದಾರೆ. ಇವರ ಕೇಳಿಕೆಯೆಲ್ಲಾ ನಿಷ್ಪ್ರಯೋಜನವಾಯಿತು.

*****

ಅಮೇರಿಕ ಸಂಸ್ಥಾನವನ್ನು ಆಳುವ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ವರ್ಜಿನಿಯಾ ಡಿಸ್ಟ್ರಿಕ್ಟಿನಲ್ಲಿ ೧೫ ಎಕರೆ ಜಮೀನನ್ನು ಕೊಂಡುಕೊಂಡು ಅದರಲ್ಲಿ ಒಂದು ಸಣ್ಣ ಮನೆಯನ್ನು ಕಟ್ಟಿಕೊಂಡಿದ್ದಾರೆ. ಗಂಡಹೆಂಡರು ತಮ್ಮ ಮಕ್ಕಳನ್ನು ಅಲ್ಲಿಗೆ ಕರೆದುಕೊಂಡುಹೋಗಿ ಕೆಲವು ದಿನ ಅಲ್ಲಿ ಇದ್ದುಕೊಂಡು ಬರುತ್ತಾರೆ. ಆಗ್ಗೆ ಮನೆಯಲ್ಲಿ ಸೇವಾ ವೃತ್ತಿಗೆ ಒಬ್ಬ ಆಳನ್ನಾಗಲಿ ದಾದಿಯನ್ನಾಗಲಿ ನೇಮಿಸಿಕೊಳ್ಳುವುದಿಲ್ಲ. ಪ್ರೆಸಿಡೆಂಟರ ಪತ್ನೀಯವರೇ ಸ್ವತಃ ಅಡಿಗೆ ಮುಂತಾದ್ದನ್ನು ಮಾಡಿ ಮನೆಯ ಕೆಲಸಗಳನ್ನೆಲ್ಲಾ ನೋಡಿಕೊಳ್ಳುವರು. ಪ್ರೆಸಿಡೆಂಟರಾದರೋ ತಮ್ಮ ಮಕ್ಕಳನ್ನು ಹೊಲ ತೋಟಗಳಿಗೆ ಕರೆದುಕೊಂಡುಹೋಗಿ ಅವರಿಗೆಲ್ಲಾ ವ್ಯವಸಾಯ ಮುಂತಾದ ಕೆಲಸಗಳನ್ನು ಕಲಿಸಿ ಅವರಿಂದ ಮಾಡಿಸುತ್ತಾರೆ. ಇದರಿಂದ ಅಮೇರಿಕ ಸಂಸ್ಥಾನದ ಪ್ರಜೆಗಳಿಗೆಲ್ಲಾ ಒಳ್ಳೇ ಮೇಲ್ಪಂಕ್ತಿ ಆಗಿದೆ. ವ್ಯವಸಾಯವು ಎಷ್ಟು ಉತ್ಕೃಷ್ಟವಾದ ಉದ್ಯೋಗವೋ ಹೇಳ ಲೀರದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಅದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಶ್ರೀನಿವಾಸ ನಾರಾಯಣರಾವ್, ಚಿಕ್ಕಬಳ್ಳಾಪುರ.—ಆ ಕಂಪನಿಗೆ ಬರೆದುಕೊಳ್ಳಿ.

ಜೇಸುದಾಸ್, ಬೆಂಗಳೂರು ನಿಮ್ಮ ಅಪೇಕ್ಷೆಯನ್ನು ನಾವು ನೆರವೇರಿಸಲಾರೆವು

ಹುಣ್ಣುಗಳ ಔಷಧ, ನೆಲಮಂಗಲ.—ಈ ವಿಷಯವನ್ನು ಹಿಂದೆಯೇ ಪ್ರಕಟಿಸಿದೇವೆ

ಎಚ್. ಟಿ. ರಾಮಕೃಷ್ಣಯ್ಯ, ಕ್ಯಾಂಪ್ ಬಾವಳಿ.—ಆ ವಿಚಾರವನ್ನು ಕುರಿತು ನಿಮ್ಮ ಸರ್ಕಲ್ ಸ್ಕೂಲುಗಳ ಡೆಪ್ಟಿ ಇನ್ಸ್‌ಪೆಕ್ಟರಿಗೆ ಬರೆದುಕೊಳ್ಳಿ.

ಸೋಮೇಗೌಡ, ಸಕಲೇಶಪುರ; ನಟೇಶ ಮೊದಲಿಯಾರ್, ಬೆಂಗಳೂರು, ತಿ. ರಾಮಣ್ಣ, ದೊಡ್ಡಬಳ್ಳಾಪುರ, ಎಸ್. ಶಿವರಾಮಯ್ಯ, ಹುಲಿಯೂರುದುರ್ಗ —ಇವರುಗಳು ಬರೆದಿರುವ ಬಾತ್ಮಿಗಳನ್ನು ಪ್ರಕಟಿಸಲಾರೆವು —ಎಡಿಟರ್.]

ಕರೆಸ್‌ಪಾಂಡೆನ್ಸ್.

ವಿಶೇಷ ಪ್ರಶ್ನೆ.

ಅಯ್ಯಾ,

ಮದುವೆ ಹಬ್ಬ ವಗೈರೆ ಕಾರ್ಯಗಳಲ್ಲಿ ಬಾಳೆ ಮರ ಮತ್ತು ಮಾವಿನ ಎಲೆಗಳನ್ನು ಮಾತ್ರ ತೋರಣ ಕಟ್ಟುತ್ತಾರೆ ಯಾಕೆ? ಇತರ ಮರಗಳು ಮತ್ತು ಎಲೆಗಳು ಆಗಬಾರದೇ?

ಅಮೃತ್ತೂರ್ ಅ. ರ. ಮ.

[ಆಗಮಕಾರರ ಅಭಿಪ್ರಾಯವೂ ಜನರ ವಾಡಿಕೆಯೂ ಇವುಗಳ ಉಪಯೋಗಕ್ಕೆ ಕಾರಣವೆಂದು ನಮಗೆ ತೋರುತ್ತಿದೆ.—ಎಡಿ]

ವಿಶೇಷ ಪದ್ಧತಿ.

ಅಯ್ಯಾ,

ಮಡಿಕೇರಿ ರೊಟ್ಟಿ ಮುಹಮ್ಮದ್ ಖಾನ್ ಎಂಬ ಭಾರೀ ಸಾಹುಕಾರರ ಮಗನಿಗೆ ಬಳುಗುಂದ ಗ್ರಾಮದ ಬಸ್ಸೆಲು ಜಹಗೀರ್‌ದಾರರ ಮಗಳನ್ನು ಕೊಡುವ ವಿವಾಹವು ಭಾರೀ ಸಂಭ್ರಮದಿಂದ ನಡೆಯಿತು. ಮುಸಲ್ಮಾನರ ಮದುವೆಗಳಲ್ಲಿ ಕಲ್ಲುಸಕ್ಕರೆ ಉತ್ತುತ್ತೆ ಕಾಯಿಗಳನ್ನು ಮೇಲಕ್ಕೆ ಹಾರಿಸುವ ಪದ್ಧತಿ ಉಂಟಂತೆ. ಅದಲ್ಲದೆ ಈ ಮದುವೆಯಲ್ಲಿ ಅಲೂಗೆಡ್ಡೆ ಬಾಳೆಕಾಯಿ ವಗೈರೆಗಳಲ್ಲಿ ಹೆಣ್ಣು ಮತ್ತು ಗಂಡಿನ ಕಡೆಯವರು ವಿನೋದವಾಗಿ ಹೊಡೆದಾಡಿದರಂತೆ.

ಅಮೃತ್ತೂರ್. ಅ. ರ. ಮ.

ಪುಟನಾಡಿನ ಅವ್ಯವಸ್ಥೆಯು.

ಅಯ್ಯಾ,

ಈ ಮಲೆನಾಡು ಪ್ರಾಂತ್ಯ ಈ ಮುಂಗಾರು ಹುಚ್ಚೆಂಬ ಕೆಟ್ಟ ಪ್ರಾಣವು ಅನೇಕರಿಗೆ ವ್ಯಾಪಿಸಿ, ಬಹಳ ದಿವಸದ ವರೆಗೆ ವಾಸಿಯಾಗ ... ತಂದರೆಯನು. ಪಡಿಸುವಲ್ಲದೆ ಗರೀಬರಾಗಿ ಒಬ್ಬಂ

ಟಗರಾಗಿ ಇರುವವರಿಗೆ ಇದು ಅನ್ನಸ್ಥಿತಿಗೇನೇ ಕಲ್ಲುಹಾಕುತ್ತವು ತಮ್ಮ ದಿವ್ಯ ಚಿತ್ತಕ್ಕೆ ತಿಳಿದಿರೇ ಸಹಿಸಲಾರದೆ ಇದಕ್ಕೋಸುಗವ ತ್ರಗಳಲ್ಲಿಯೂ ಔಷಧಿಗಳು ಮದ್ದಾಯಿತು. ಏನು ಮಾಡಿದರೂ ರ್ದು ಪರಿಹರವಾಗುವ ರೀತಿ ಕಾಣಿಂದ ಒಂದು ಮೂಲಿಕೆ ದೊರೆ ಈ ಜನಗಳಿಗೆ ೩ ಅಥವಾ ೪ ದಿನ ವಾಯಿತು ಇದು ಚನ್ನಾಗಿ ಆ ನ್ನು ತಮ್ಮ ಪತ್ರಿಕೆಯಲ್ಲಿ ಪ್ರಚಸುತ್ತೇನೆ ಇದು ಪರೋಪಕಾರ ಹೀಲಗದ ಮರ, ಬುಗರಿ ಮರ ಚನ್ನಾಗಿ ಬಲಿತ ಮರದ ತೊಗಟೇ ಡು ಲೇಪಮಾಡಿ ಘಾಯ ತೊಳೆದು ಚನ್ನಾಗಿ ಹಚ್ಚಬೇಕು

ಜೋಳ್ದಾಳು

ಮಾಂಸ

ಅಯ್ಯಾ,

ಎಂ ಆರ್. ಎ ಎಂಬುವವನು ಒದಿದೆನು. ಆದಾಗ್ಯೂ ಕ್ಕೆ ಉತ್ತರವು ಬರಿಯಲಿಲ್ಲ. ಒನೂ ತಾಯಿಯ ಹಾಲನ್ನು ಗಾಯಕೇ ಎಂದು ಬರೆದಿದ್ದೆವು. ಆದಾಗ್ಯೂ ಚಿಂತೆಯಿಲ್ಲ "ಅಹಿಂಸೆ ಎಂಬುವದರ ಅರ್ಥವು ಸಾಧಾರಣವಾಗಿ ಸರ್ವ ಹಿಂಸೆ ಎಂಬು ತಿಳಿಯಬೇಕು ಜೀವ ಹಿಂಸೆ ಮಾಡದಿರುವ ಯಬೇಕು ಅಲ್ಲದೆ ದೇವರ ಸೃಷ್ಟಿಯು ನಿಮಗಾಗಿದವುಗಳೇ ಯಾಗಿವೆ ಎಂಬುವದು ಸಹಜವು. ದ ವಸ್ತುಗಳನ್ನು ಪಕರಿತಿಯಾ ಯಾಕೆಂದರೆ ರಸ, ಗಂಧಳ, ಪಾಸಮುಚಿತವಾಗಿ ಉಪಯೋಗಿ ಮನುಷ್ಯನೇ ಉ॥ ಮ.ಜೀವಿಯು ಕಾದ ಪಾರ್ಥಗಳಿಗೆ ಸರಿಯಾದ ತಿಗಳ ಕಾಂತನ್ಯವನ್ನರಿತು ವೃ ದ್ದಾಗ್ಯೂ ಆಗಾಗಿಲ್ಲದೆ ಜೀವಿಗಳಿಗೆ ವಿಯೋಗ ಹುಟ್ಟಿಸುವುದು ಪಾಪ ಕೆಲಸವಲ್ಲವೇ ... ಅಭಿಪ್ರಾಯ ಪಡುತ್ತಾರೆ ಆದಾಗ್ಯೂ ಅದು ಮಾನುಷ ಕಾರ್ಯವಲ್ಲ ದೇಹ ಜೀವಗಳಿಗೆ ಯಾರು ಬಂಧವನ್ನುಂಟುಮಾಡಿದ್ದಾರೋ ಅವರೇ ವಿಯೋಗಮಾಡತಕ್ಕದ್ದಲ್ಲದೆ ಮನುಷ್ಯನು ಮಾಡುವಂಥಾದ್ದು ಅನುಚಿತವಾದ ಪಾಪವಾಗಿದೆ. ಇದು ವಿಷಯಾಸಕ್ತರಾದ ಮನುಷ್ಯರಿಗೆ ಧರ್ಮವಾಗಿ ಕಂಡಾಗ್ಯೂ ಅಂತ್ಯದಲ್ಲಿ ಅದು ಅಧರ್ಮವಾಗಿಯೇ ಪರಿಣಮಿಸುವದು ಸಿದ್ಧಾಂತವಾಗಿದೆ. ಸೃಷ್ಟಿಕರ್ತನಾದ ಭಗವಂತನು ಮಾನುಷ ಶರೀರ ಪೋಷಣೆಗಾಗಿ ಅನೇಕ ಧಾನ್ಯಗಳನ್ನೂ ರಸವರ್ಗಗಳನ್ನೂ ಫಲಗಳನ್ನೂ ಸೃಷ್ಟಿಸಿದ್ದಾನಲ್ಲವೇ? ಹೀಗಿರಲಾಗಿ ತುಚ್ಛ ಪ್ರಾಣಿಗಳನ್ನು ಕೊಲ್ಲಬಹುದೇ? ಮಾಂಸಾಹಾರವು ಆದಿಯಿಂದಲೂ ಬಂದಿಲ್ಲವೆಂಬುವುದೇ ನನ್ನ ಸಿದ್ಧಾಂತವಾಗಿದೆ.

ರಾಮಾಯಣಾದಿ ಪುಸ್ತಕಗಳಲ್ಲಿ ಶ್ರೀ ರಾಮರು ಬೇಟೆಯನ್ನಾಡಿ ಮೃಗಗಳನ್ನು ಕೊಂದು ತಂದು ತಿನ್ನುತ್ತಿದ್ದರೆಂದು ಬರೆದಿದ್ದಾರೆ ಆದರೆ ರಾಮಾಯಣವನ್ನು ಬರೆದ ವಾಲ್ಮೀಕಿಯು ತನ್ನ ಪೂರ್ವಪದ್ಧತಿಗನುಸಾರವಾಗಿ ಬರೆದನಲ್ಲದೆ ರಾಮರ ಸ್ವಧರ್ಮವನ್ನು ಬರೆಯಲಿಲ್ಲ. ಶ್ರೀ ರಾಮರು ಬೇಟೆಯನ್ನಾಡಿ ಮೃಗಗಳನ್ನು ಕೊಂದು ತಿಂದು ಜೀವಿಸಬೇಕಾಗಿತ್ತೇ?

ಬೆಂಗಳೂರು ಸಿಟಿ ಸುಜನಮಿತ್ರ.

ಕೊಪ್ಪದ ವಿಚಾರಗಳು.

ಅಯ್ಯಾ,

ಕಡೂರು ಡಿಸ್ಟ್ರಿಕ್ಟ್ ಕೊಪ್ಪದಲ್ಲಿ ಎಂಟು ಹತ್ತು ದಿನಗಳಿಂದ ಬಿಟ್ಟ ಮಳೆ ಪುನಹಾ ಪ್ರಾರಂಭವಾಗಿದೆ. ಕಸಬಾದಲ್ಲಿ ಪ್ರತಿ ಮನೆಯಲ್ಲಿಯೂ ೨—೩ ಈ ರೀತಿ ಜನಗಳು ಛಳಿಜ್ವರದಿಂದ ನರಳುತ್ತಿದ್ದಾರೆ ಇಲ್ಲಿಗೆ ವರ್ಗವಾಗಿ ಬಂದಿರುವ ಡಾಕ್ಟರ್ ಮೆ॥ ವಿ. ಸಿದ್ದಪ್ಪನವರು ಪ್ರತಿ ಮನೆಗೂ ಹೋಗಿ ಖುದ್ದು ಕಾಲೆ ವಿದ್ಯಮಾನಗಳನ್ನು ತಿಳಿದು ಕೊಡುತ್ತಿರುವ ಔಷಧವು ಸರ್ವಜನ ಸ್ತೋತ್ರಾರ್ಹವಾಗಿದೆ. ಇವರ ಶಾಶ್ವತವಾದ ನಿಲ್ಲುವಿಕೆಯನ್ನೇ ಗ್ರಾಮಸ್ಥರುಗಳೆಲ್ಲರೂ ಬಯಸುತ್ತಿದ್ದಾರೆ.

ಇದೇ ತಾಲ್ಲೂಕ್ ಮೋಜಿನೀದಾರ್ ಅನಂತವೆಂಕಟೇಶರವರು ಸರ್ಕಾರಿ ಕೆಲಸಕ್ಕಾಗಿ ಶಿಗ್ಗ ಪ್ರಾಂತ್ಯ ಹೋದವರು ಕೆಲವು ಬಗಿನೇ ಕೋಲನ್ನು ಕ್ರಯಕ್ಕೆ ತೆಗೆದುಕೊಂಡು ಮಜೂರಿಗೆ ಒಂದು ಆಳನ್ನು ಗೊತ್ತುಮಾಡಿ ಕೊಪ್ಪದ ಬೇಳೂಹಳ್ಳಿ ಶ್ಯಾನುಭೋಗ ನಂಜುಂಡಪ್ಪನವರ ಮನೆಗೆ ಕೊಡುವಂತೆ ಕಾಗದ ಸಮೇತ ಆಳನ್ನು ಕಳುಹಿಸಿ ಕೊಡಲು ಆ ಕೂಲಿಯು ಕೊಪ್ಪಕ್ಕೆ ಬಂದು ಬರ್ಕ ಶ್ಯಾನುಭೋಗರನ್ನು ವಿಚಾರಿಸುತ್ತಾ ಬರುತ್ತಿರಲಾಗಿ ಆಗ ಪೋಲೀಸ್ ಸ್ಟೇಷನ್ ಬಳಿ ಹಾಜರಿದ್ದ ಜವಾನಿ ನ್ ಕರದ್ಯಾರೋ ಆ ಕೋಲುಗಳನ್ನು ನೋಡಿ ಆ ಆಳನ್ನು ಕರೆದು ಉಪಾಯವಾಗಿ—ಅಯ್ಯಾ, ಈ ಕೋಲುಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗು

... ರಿಂದ ಒಳ್ಳೇ ಭೂಮಿಗಳೇ ತಪ, ಜುಜಮಾನರಿಗೆ ಫಸಲು ... ಕೊಡದೆ ಗೋ ... ವೆ ಮಿಕ್ಕಾದ ಆಧಮ ಜಮೀನು ... ಮಾಡೇನಾಗಿರಬಹುದೋ ಅವುಗಳು ಎಷ್ಟರ ಮಟ್ಟಿಗೆ ರೈತ ... ಪ್ರಯೋಜನ ಕೊಡಬಹುದೋ ನಾವು ಹೇಳಲಾರೆವು. ... ದಿಮಾನುಗಳನ್ನು ಕಟ್ಟಿಕೊಂಡು ಕೊಳ್ಳುವುದು ನಾವುಗಳು ... ಮೂರು ವರ್ಷದಿಂದಲೂ ಕಂದಾಯಕ್ಕೆ ಟಕರಾರ್ ಕಾದೆ ... ಗರ್ನಲ್ಲಿ ಇರತಕ್ಕ ವರ್ತನದಲ್ಲಿ ಮನೆಗಳನ್ನು ಮತ್ತು ನಮ್ಮ ಕರುಗಳನ್ನು ಮರದ ಸಾಮಾನ್ ಮೊದಲಾದವುಗಳನ್ನು ಜಪ್ತಿ ... ಜಪ್ತಿ ತೆಗೆದುಕೊಂಡು ಬಂದು ಕಂದಾಯವನು ಕಟ್ಟಿದೆವು. ಮಧ್ಯೆ ಕಳೆದ ವರ್ಷದಲ್ಲಿ ಸರ್ವೆ ಡಿಪಾರ್ಟ್‌ಮೆಂಟಿನವರು ... ಭಾಗಕ್ಕೆ ದಯಮಾಡಿಸಿ, ಯಾವದನ್ನೂ ವಿಚಾರಣೆ ಮಾಡದೆ ... ಹೆಚ್ಚು ಕಂದಾಯವನ್ನು ಹಾಕಿದ್ದಾರೆ. ಈ ಸಂಗತಿಯನ್ನು ... ದಾವಣಗೆರೆಯ ವರ್ತಕರು ತಿಳಿದು ಕೂಡಲೇ ರಾಜೀನಾಮೆಯನ್ನು ಒಪ್ಪಿಸಿದರು. ಇನ್ನು ಕೆಲವರು ರಾಜೀನಾಮೆಯನ್ನು ಕೊಡ... ಕ್ಕೆ ಹೋಗುವಾಗ್ಯೆ ವಾಯಿದೆ ಮುಗಿಯಿತು; ಈ ವರ್ಷದಲ್ಲಿ ... ಲಾಗದು ಎಂದು ಶಾನಭೋಗರು ಹೇಳಿ ಕಂದಾಯವನ್ನು ... ಲು ಮಾಡಿದರು. ಮತ್ತು ನಾವು ಡೆಪ್ಟಿ ಕಮೀಷನರ್ ಸಾಹೇಬರಿಗೆ ಅರ್ಜಿಗಳನ್ನು ಬರೆದುಕೊಂಡೆವು. ಅವರು ಸಹ ಅದೇ ಶ್ರೀ ... ಬಾಯಿಮಾತಿನಿಂದಲೇ ಹೇಳಿದರು. ಪ್ರಸಕ್ತ ನಮಗೆ ಇಂದು ... ಮೂಲಕ ಅಪ್ಪಣೆ ಕೊಡಬೇಕೆಂದು ಕೇಳಿದ್ದಕ್ಕೆ ನಾವು ... ರ್ಗಕ್ಕೆ ಹೋಗಿ ದಯಪಾಲಿಸುತ್ತೇವೆಂದು ಅಪ್ಪಣೆ ಕೊಟ್ಟು ಇದುವರಿಗೂ ನೋಡಿದಾಗ್ಯೂ ಬರಲೇ ಇಲ್ಲ. ಈ ವರ್ಷವೇ ಕಂದಾಯ ಕೊಟ್ಟೆವು ಬರುವ ವರ್ಷದಲ್ಲಿ ಕೆಲವು ರಾಜೀನಾಮೆ ಕೊಡುವದಕ್ಕೆ ಸಿದ್ಧವಾಗಿದೆ. ಯಾವ ತಿಂಗಳಲ್ಲಿ ಕೊಡಬೇಕು ಎಂಬುವದನ್ನು ತಿಳುಕೊಳ್ಳುವಂತೆ ಆ ಮಹಾ ಸ್ವಾಮಿಯವರು ಡೆಪ್ಟಿ ಕಮೀಷನರ್ ಸಾಹೇಬರ ಇಂತಾರಸ್ಸೇ ಎದುರು ನೋಡುತ್ತೇನೆ ಯಾವಾಗ ಬರ ಮಾಡೋ ದೇವರೇ ಬಲ್ಲನು! ಇವರ ಸಹ ... ರತಕ್ಕ ಗ್ರಾಮಗಳು ಅಂದರೆ ರಂಗಾನಹಳ್ಳಿಯು ಸಹ ಇದೇ ರೀತಿ ... ಲ್ಲಿದೆ. ಆದ್ದರಿಂದ ಡೆಪ್ಟಿ ಕಮೀಷನರ್ ಸಾಹೇಬರು ಇದನ್ನು ಖುದ್ದಾಗಿ ನೋಡಿ ನಮ್ಮ ಕಷ್ಟವನ್ನು ಪರಿಹರ ಮಾಡುವದು ... ತ್ರವಲ್ಲದೆ ಇದನ್ನು ಮೇಲಕ್ಕೆ ಬಂದು ಬಡ ರೈತರಾದ ನಮ್ಮ ... ವನ್ನು ಪರಿಹರಿಸುವ ಉದ್ದೇಶ್ಯ ಹ್ಯಾಗಾದರೂ ಸ್ವಲ್ಪ ಕಂದಾಯ ... ನ್ನು ಕಮ್ಮಿಮಾಡಿ ಕೊಡುವರೆಂದು ನಿರೀಕ್ಷಿಸುತ್ತೇವೆ ಹಾಗೆ ... ರ್ನಮೆಂಟಿನವರು ಮಾಡದೆಹೋದರೆ ನಾವು ಆ ಗ್ರಾಮವನ್ನು ಬಿಟ್ಟು ದೇಶಾಂತರ ಹೊರಡಬೇಕಾಗಿದೆ. ದಯಾಳುಗಳಾದ ... ಸೂರು ಸರ್ಕಾರದವರು ನಮ್ಮ ಕಷ್ಟವನ್ನು ಹ್ಯಾಗಾದರೂ ... ಹಾರ ಮಾಡುವರೆಂದು ಕಾದುಕೊಂಡಿದ್ದೇವೆ

ಈ ಗ್ರಾಮದ ಪಟೇಲನು ಈ ಊರಿನ ಗ್ರಹಾಚಿ ಜನಗಳನ್ನು ಪ್ರೀತಿಯಿಂದ ಕಾಪಾಡುವದು ಮಾತ್ರವಲ್ಲದೆ ಕಷ್ಟದಲ್ಲಿಯೂ ...

ರು ಕಾಲದಲ್ಲಿ ಈ ಜನರನ್ನು ತನ್ನ ಸ್ವಂತ ಮಕ್ಕಳೆಂದು ಪ್ರತಿಪಾಲಿಸುತ್ತಾನೆ ಆದರೆ ಈ ಮಧ್ಯೆ ಈತನನ್ನು ತೆಗೆದು ಹಾಕುವವರನ್ನು ಇದಲ್ಲದೆ ಮೇಲಿನ ಅಧಿಕಾರಿಗಳು ಯೋಚನೆ ಮಾಡಿದ್ದಾರಂತೆ. ಯಾಕೆಂದರೆ ಈತನಿಗೆ ವಿದ್ಯೆ ಬರುವದಿಲ್ಲವೆಂದು. ವಿದ್ಯೆ ಬ ತಕ್ಕವರೇ ಬೇಕೆಂದೂ ಹೇಳಿದರೆಂದು ವರ್ತಮಾನ ಬಂದವು. ಮೈಸೂರು ಸೀಮೆಯಲ್ಲಿ ಇಂಥಾವರು ಸಿಕ್ಕುವದೇ ಅಪೂರ್ವ. ಇಂಥಾ ಪುಣ್ಯಾತ್ಮರೇ ಸ್ಥಿರವಾಗಲೆಂದು ಪ್ರಜೆಗಳ ಪರ ನಾವು ಕೇಳಿಕೊಳ್ಳುತ್ತೇವೆ

ರುಜುವು:—ಶಾನುಭೋಗ ನಂದಪ್ಪ, ಸಿದ್ಧಲಿಂಗಪ್ಪ, ಕಲ್ಲಪ್ಪ, ಗೌಡರ ಬಸಪ್ಪ, ಬುಡಗಿ ಲಿಂಗಪ್ಪ, ಬಸವ್ಯಗಳ ವೀರಭದ್ರಪ್ಪ, ಗಳ ಬಸಪ್ಪ, ಮುದಿಗಪ್ಪ, ಕಲ್ಲೇಶಪ್ಪ, ನಾಗಪ್ಪ, ಕಮ...ಪ್ಪ, ಗೌಡರ ಕಲಪ್ಪ, ಗೌಡರ ವೀರಭದ್ರಪ್ಪ, ಧರ್ಮಪ್ಪ ನವರು, ಮೊದಲಾದವರು ರುಜು ಮಾಡುವ ಉದ್ದೇಶ್ಯ ಗೆರಹಾಕಿದ್ದಾರೆ.

(ಈ ರೈತರುಗಳೆಲ್ಲಾ ಈ ಅಭಿಪ್ರಾಯಗಳನ್ನು ಕಾಣಿಸಿ ಡೆಪ್ಯುಟಿ ಕಮಿಷನರವರಿಗೆ ಅರ್ಜಿ ಬರೆದುಕೊಂಡಲ್ಲಿ ಅವರು ನಿಜಾಂಶವನ್ನು ಗೊತ್ತುಮಾಡಿ ಕಷ್ಟನಿವಾರಣೆ ಮಾಡಿಯಾರೆನ್ನುವುದಕ್ಕೆ ಸಂಶಯವಿಲ್ಲ.—ಎಡಿ.)

ಪ್ಲೇಗ್ ಮಹಾಕೋಪಶಾಂತಿ.

ವೃ॥ ಇಳೆಯೆಲ್ಲಂ ಪ್ರಳಯಂಬರಲ್ ಬಹುಜನಂ ಸಾವೆಯ್ದೆ
ದುರ್ಭಯಾ ಕಾಳದಿಂ ದೇಶಿಗರಾಗಿ ನಾವನುಳಿದೆತ್ತಂ ಪೋಗೆ
ಭೃತ್ಯಕ್ಕಳಂ ಬಳಲಲ್ ಪ್ಲಾತಿಗೆ ಕಂಪಿಸಲ್ ಭಗತುಂತಂ ವ್ಯಪ್ತ
...ನೀಳಲ್ ಜಲವಿಲ್ಲಗಡೆಂದು ಮಲ್ಲಿಸಿದಿ ಪ್ಲೇಗ್‌ಮಾ
ರ್ಮರ್ದನಂ ೧॥

ವೃ॥ ತೊರೆದಂ ಕಾಂತೆಯನೋಸು ನೋಪಿತೊರೆದಳ್ ಭರ್ತಾರ
...ತಂಗಳಂ ತೊರೆ ಪಂಥ್ರುಕ್ಕಳ ನಾಂತಸಂತೊರೆದನಾ ಪುತ್ರಾ ಮ
...ತ್ರಿಯಂ ತೊರೆದಳಸ್ವಕಸುಪುತ್ರಿಯಂ ತೊರೆದಳಂತೀ ಲೋಕ
ನಾಡೆಸ ತ ರಪಿಂ ಕಿಳ್ಳ ಲಿಯಾಗ ಅಗ್ಗಲಮುಸಂಕಿತುಂತೆನಲ
...ವೋ ೨॥

ವೃ॥ ಪಡಿದುದು ಪಟ್ಟಣತ ಮಿನಗುಂದಿದು ಕೊಂಡುದು
ದುತೇಗಿತ ಬ್ಬರದೆ ಸಡಂಗಿಸಾತ್ತ ಡುಳಿದತ್ತು ಕರಾತ್ತು ಕಾಸುಂಗಿ
ದುರ್ಗಮ ವಿರಹಗಿವಮಾಡಿದತ್ತು ನೆಗೆದತ್ತು ವಿದ್ಯುಂಫಿಸಿಭೂ
ಪಾಲರಂ ತರದಬಿತ್ತೆ ನೋಂಕಿದವೆ ಕೇಂಕಿಸು ಭೂಮಿಯೊ
ಳಿದವ್ ೩॥

ವೃ॥ ಸಿರಿಡೊಂದುಳ್ಳಿಣಿದೇದಿಪೇನುಟಿದುದಾಂ ಮಳೆ ಕ್ತೊ
ಸತ್ತುಗೇ ಕರವಿಮಾಭೂಮಿದರಂ ಕವರ್ದು ...ದಾರ್ದು
ತೋಕನಿ ...ಗಳ್ಕಲಗಿತ್ತೊ ಸಿಂದುಗೊ ಮನುಷ್ಯ ಪ್ರಾತ
...ಭರದಿಂದೆಂದನೆ ನಾಶಮಾಯ್ತು ಧರೆಯುಳ್ಳೀ
ಕೊರಕೆ...ದ್ರರ್ ೪॥

ವೃ॥ ದಯೆಯಂ ಕೃಷ್ಣನರೇಶವರ್ಯನದಿಂ ಪಾಳ್ದೆಕದ್ಯರ್ಕ
ಂ ಕಿರಿಯೊಳ್ ಸಸ್ಯಕುಲಂ ಬ್ರವರ್ಧಿಸುಗೆ ಸೇರಂಪೊಂದಿಪಿಷ್ಟ
...ನರ ವೆರಗೆಂದುಂ ನೆರೆ ಪೊರ್ದದಿರ್ದ ನಿಜದಿಂ ಪ್ಲೇಗ್‌ಮಾರಿ
ಕಾವಮ್ಯೆ ಸಿರಿಯಂ ಭಾರತಭೂಮಿಗಕ್ಕೆ ವಿಜಯಂ ಭದ್ರಂ
ಶುಭಮಂಗಳಂ ೫॥

ಎಚ್. ವೆಂಕಟರಾಯ.

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಈ ತಾಲ್ಲೋಕಿನಲ್ಲಿ ಕೆಲವು ಕಡೆ ಹೊಲಗಳನ್ನು ಬಿತ್ತಿದ್ದಾರೆ ಆದರೆ ಸರಿಯಾದ ಮಳೆ ಇಲ್ಲದೆ, ಬಿತ್ತಿದರು ಆಕಾಶವನ್ನು ನೋಡುತ್ತಾ ಇದ್ದಾರೆ. ಮಳೆ ಬರುವ ಹಾಗೆ ಮೋಡಮಾಡುತ್ತೆ. ಮಳೆ ಇಲ್ಲ ಈ ತಾಲ್ಲೋಕಿನಲ್ಲಿ ಮಳೆ ಬಂದರೆ ರಾಗಿ ಬೆಳೆ ಉಂಟು ಇನ್ನು ಯಾವ ಆಧಾರವೂ ಜನರಿಗೆ ಕಡಮೆ. ಆದ್ದರಿಂದ ಜನರು ಭಯಪಡುತ್ತಾರೆ. ಧಾರಣೆಗಳು ಹೆಚ್ಚಾಗಿವೆ ೯ನೇ ತಿಂಗಳ ಕಡೆಯಲ್ಲಿ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ವೀರಭದ್ರಪ್ಪನವರು ಇಲ್ಲಿಗೆ ದಯಮಾಡಿ, ಸ್ಕೂಲ್‌ಗಳನ್ನು ಚನ್ನಾಗಿ ಪರೀಕ್ಷೆ ಮಾಡಿದರು ಮತ್ತು ಕೈಗಾರಿಕೆ ಸ್ಕೂಲನ್ನು ಸಹ ನೋಡಿದರು. ಈ ಸ್ಕೂಲುಗಳನ್ನು ನೋಡಿ ಬಹಳ ಸಂತೋಷಪಟ್ಟರು. ಕೆಲವು ಬಡ ಸ್ಕೂಲ್ ಮಾಸ್ಟರುಗಳ ಸಂಬಳದ ವಿಷಯ್ಯ ಸರ್ಕಾರದವರು ಗಮನಕ್ಕೆ ತಂದುಕೊಂಡರೆ ಒಳ್ಳೇದು. ಇವರ ಅಲ್ಪ ಸಂಬಳದಿಂದ ಈ ಕಾಲದಲ್ಲಿ ಜೀವಿಸುವದು ಕಷ್ಟ.

ತಿಪ್ಟೂರು.—ಕೊಂಡ್ಲಿಗಟ್ಟದಲ್ಲಿ ಕಂದಾಯ ವಸೂಲಿ ಹಣವು ಕಳವಾಯಿತೆಂದು ಹಿಂದೆ ಹೇಳಿತ್ತಷ್ಟೆ. ಸದರಿ ಶಾನುಭೋಗರಿಗೂ ಪಟೇಲರಿಗೂ ಮನಸ್ತಾಪಗಳಾದ್ದರಿಂದ ರೈತರಿಗೆ ಕೇಡುಂಟಾಗಲೆಂದು ಶಾನುಭೋಗರು ಮಾಡಿದ ಪಿತ್ತಲಾಟದ ತಂತೀ ವರ್ತಮಾನವೆಂದು ಹೇಳುವರು ಆದರೇನು, ಆ ತಂತಿಯು ಶಾನುಭೋಗರ ಕತ್ತನ್ನು ಸುತ್ತಿಕೊಳ್ಳದೆ ಬಿಟ್ಟೀತೆ ಎಂದು ಜನರು ಮಾತಾಡಿಕೊಳ್ಳುತ್ತಾರೆ ಇದು ಪಟ್ಟದ್ದರಿಯು ಗ್ರಾಮದ ಪಟೇಲರನ್ನೇ ಹೋದಿದ್ದರೆ ಉತ್ತಮವೆಂದು ತೋರುತ್ತೆ.—ನಮ್ಮ ಅಮಲ್ದಾರರು ತಾಲ್ಲೋಕ್ ಛೇರಿ ಕಾಂಪೌಂಡನ್ನು ಬಚಮಾಡಿಸಿ, ಕೆಲವು ತೆಂಗಿನ ಸಸಿಗಳನ್ನು ಹಾಕಿಸಿದ್ದಾರೆ. ಒಳ್ಳೇ ಗಾಳಿಯನ್ನುಂಟುಮಾಡುವ ಕೆಲವು ಉತ್ತಮವಾದ ಗಿಡಗಳನ್ನು ಸಹಾ ಹಾಕಿಸಿದರೆ ತರುವಾಯ ಬರತಕ್ಕವರೆಲ್ಲರೂ ಇವರ ಹೆಸರನ್ನು ಸ್ಮರಿಸದೆ ಇರಲಾರರು.—ಕೆರೆಗೆ ಕೊಂಚವಾಗಿ ಬಂದಿರುವ ನೀರು ಸಹಾ ಜನಗೊಜ್ಜರಿಂದ ಕೆಟ್ಟುಹೋಗುತ್ತದೆ. ಪ್ರತ್ಯೇಕ ಕಕ್ಕಸ್ ಮನೆಗಳನ್ನು ಕಟ್ಟಿಸಿದರೆ ಎಲ್ಲರಿಗೂ ಉತ್ತಮವೆಂದು ತೋರುವದು. ಆದರೆ ಈ ವಿಷಯದ ಕಡೆಯು ಮ್ಯುನಿಸಿಪಲ್ ಮೆಂಬರುಗಳಿಗೆ ಅವಶ್ಯವಿಲ್ಲವೇನೋ!

ಕೆಲವು ದಿನಗಳ ತನಕ ಮಳೆ ನಿಂತಿತು. ಭಗವತ್ಕೃಪೆಯಿಂದ ಈಗ ಮರುವಾಗುತ್ತದೆ—ಗ್ರಂಡಿಗೆ ಮ॥ ಬಿರಾಮ್ ಸಾಹೇಬರು ತಮ್ಮ ಜ್ಯೇಷ್ಠಪುತ್ರಿಯನ್ನು ಗರೀಬನಾದ ವಿಧವೆಯ ಮಗ ಸೌಮ್ಯ ಗುಣಿಷ್ಠನಿಗೆ ಕೊಟ್ಟು ಲಗ್ನ (ನಿಕಾಹಾಗಿ) ಬೆಳಸಿದರು. ವಿವಾಹ ಮಂಟಪದಲ್ಲಿ ಆಫೀಸರುಗಳೂ ಸಕಲ ಕೋರ್ಟಿನ ದೊಡ್ಡ ಮನುಷ್ಯರೂ ಸಭಾ ಸೇರಿರಲು ಬಾರಿ ಬಾರಿಗೂ ಪನ್ನೀರು ಚಳಾವಾಯಿತು ಸಕಲರಿಗೂ ಪುಷ್ಪ ಗಂಧ ತಾಂಬೂಲಾದಿಗಳು ಹಂಚೋಣಾಯಿತು. ತತ್ಪೂರ್ವ ಉತ್ತುತ್ತಿ, ಕಲ್ಲುಸಕ್ಕರೆ, ಪೆಪ್ಪರ್‌ಮೆಂಟ್ ವಿಲಾಯಿಸಿದ ಮಳೆ ಗರೆಯಿತು ಇವರ ಮತಸ್ಥನೇಕರಿಗೆ ಪುಷ್ಟಿಕರವಾದ ಭೋಜನಗಳು ನಡೆದವು. ಯೋಗ್ಯತಾನುಸಾರ ಅನೇಕರಿಗೆ ದಕ್ಷಿಣೆಯೂ ಕೊಡಲಾಯಿತು. ಈ ರೀತಿ ಮುಸಲ್ಮಾನರೂ ಹಿಂದುಗಳೂ ಏಕರಾಗಿರುವದು ದೇಶಕ್ಕೆ ಕೀರ್ತಿಯಾಗಿದೆ ಮ॥ ಸಾಹೇಬರ ಸುಗುಣವನ್ನು ಹೊಗಳುತ್ತಾ ಜನರು ತಮ್ಮ ಮನೆಗಳಿಗೆ ಹೋದರು. ಸುಮಾರು ೧ ಸಾವಿರ ರೂಪಾಯಿ ಮಟ್ಟಿಗೆ ಈ ಲಗ್ನ ಕಾರ್ಯವು ಸಾಗಿರಬಹುದೆಂದು ಹೇಳುತ್ತಾರೆ.—ತಾ. ೯ನೇ ಭಾನುವಾರ ಶಿವಗಂಗೆ ಮಠಾಧಿಪರ ಸವಾರಿಯು ಚಿತ್ಯೈಸಿ ಶಿಷ್ಯಮಂಡಲಿಯೊಂದಿಗೆ ಊರಲ್ಲಿ ಮೆರವಣಿಗೆ ಬೆಳಸಿ, ತಮ್ಮ ಬಿಡಾರವನ್ನು ಸೇರಿದರೆಂದು ತಿಳಿಯಿತು.—ಈ ದಿನಕ್ಕೆ ನಾಲ್ಕು ಸಾರಿ ರೈಲ್ ಗಾಡಿಗಳು ಓಡ್ಯಾಡುವದರಿಂದ ಪ್ರಯಾಣಿಕರಿಗೆ ಬಹಳ ಸಹಾಯವಾಗಿದೆ.

ಚಿಕ್ಕಮಗಳೂರು.—ಈ ಪ್ರಾಂತ್ಯ ಮಳೆಯು ಇನ್ನೂ ಬಂದಿಲ್ಲ. ಹೊಲ ಗದ್ದೆಗಳ ಪೈರು ಮಳೆ ಇಲ್ಲದೆ ಬಾಡುತ್ತಲಿವೆ ಮೋಡವಾಡುವದೂ ಗಾಳಿ ಬೀಸುವದೂ ತಪ್ಪಿಲ್ಲ ಪಶ್ಚಿಮ ಗಾಳಿಯು ಸಟ್ಟಾಗಿ ಬೀಸುತ್ತಲಿರುವದರಿಂದ ಮಳೆ ಬರುವದೆಂಬ ನಿರೀಕ್ಷಣೆ ಇದೆ ನಮ್ಮ ಡೆಪ್ಟಿ ಕಮಿಷನರ್ ಸಾಹೇಬರವರು ಕಡೂರು, ತರೀಕೆರೆ ಪ್ರಾಂತ್ಯ ಸರ್ಕೀಟು ಹೊರಟಿದ್ದಾರೆ.—ಶಿವಮೊಗ್ಗ ಸೆಷನ್ಸ್ ಜಡ್ಜರವರು ೯ನೆ ತಾರೀಖಿಗೆ ಇಲ್ಲಿಗೆ ಬರುತ್ತಾರೆಂದು ವರ್ತಮಾನವಿದೆ.—ಬಾಳೇಹೊನ್ನೂರು ಸಂಸ್ಥಾನದ ವೀರಶೈವ ಮತಗುರುಗಳಾದ ಶ್ರೀ ಪಂಚಾಕ್ಷರಿ ರಾಜದೇಶಿಕೇಂದ್ರ ಸ್ವಾಮಿಗಳವರ ಸವಾರಿಯು ಕಳೆದ ತಿಂಗಳ ೩೦ನೆ ತಾರೀಖಿಗೆ ಇಲ್ಲಿಗೆ ಬಂದಿತು ಇಲ್ಲಿನ ಗೌಡರು ವರ್ತಕರೇ ಮೊದಲಾದ ಆ ಮತದ ಶಿಷ್ಯವರ್ಗದವರನೇಕರು ಅವರನ್ನು ಎದುರ್ಗೊಂಡು ಪೇಟೇ ಬೀದಿಯಲ್ಲಿನ ಮಾರ್ಗವಾಗಿ ಬಹು ವಿಜೃಂಭಣೆಯಿಂದ ಕರೆದುಕೊಂಡು ಬಂದು ಕೋಟೆಯಲ್ಲಿನ ವೀರಶೆಟ್ಟಿಗೌಡರ ಮನೆಯಲ್ಲಿ ಇಳಿಸಿದ್ದಾರೆ ಕೆಲವರು ಶ್ರೀ ಸ್ವಾಮಿಗಳವರನ್ನು ತಮ್ಮ ಮನೆಗೆ ಕರೆಸಿಕೊಂಡು ಪಾದಪೂಜೆ ಮಾಡಿದರು. ಇದ ಒಳಗೆ ಶ್ರೀ ಸ್ವಾಮಿಗಳವರಿಗೆ ಒಂದು ಸಾವಿರ ರೂಪಾಯಿನ ತನಕ ಕಾಣಿಕೆ ವಸೂಲಾಗಿದೆಯಾಗಿಯೂ ಇನ್ನೂ ವಸೂಲು ಆಗುತ್ತಲಿರುವದಾಗಿಯೂ ವರ್ತಮಾನವಿದೆ.—ಇದುವರೆಗೂ ಇಲ್ಲಿನ ಮ್ಯುನಿಸಿಪಾಲಿಟಿಯವರು ಸಂತೇ ದಿನ ಸಂತೆ ನಡೆಯುವ ಮಾರ್ಕೆಟ್ಟಿಗೆ ಜಿನಸು ಮೊದಲಾದ ಸಾಮಾನುಗಳನ್ನು ಮಾರಲಿಕ್ಕೆ ಹೋಗುವವರಿಂದ ಸುಂಕವನ್ನು ತಾವೇ ವಸೂಲು ಮಾಡುತ್ತಿದ್ದರು. ಈಗ ಅದನ್ನು ಜೂನ್ ತಾರೀಖು ೩೦ ರಲ್ಲಿ ಹರಾಜು ಮಾಡಿದ್ದರಿಂದ ಬಸವನಹಳ್ಳಿಯಲ್ಲಿರುವ ಬಾಬಾರು ಜನುಮಂತನಾಯ್ಕರು ವರುಷಕ್ಕೆ ೧,೨೫೦ ರೂಪಾಯಿಗೆ ತಮ್ಮ ಬೀಟಿಗೆ ನಿಲ್ಲಿಸಿಕೊಂಡು, ಸುಂಕವನ್ನು ತಾವೇ ವಸೂಲಿ ಮಾಡುತ್ತಿದ್ದಾರೆ—ಇಲ್ಲಿನ ಸ್ಲಾಟರ್ ಹೌಸಿನ ಕಂಟ್ರಾಕ್ಟು ವರುಷಕ್ಕೆ ೨೫೦ ರೂಪಾಯಿಗೆ ಆದಂತೆಯೂ ಮಾರ್ಕೆಟ್ ಸುಲ್ಕು ೩೦ ರೂಪಾಯಿಗೆ ಆದಂತೆಯೂ ವರ್ತಮಾನವಿದೆ—ಈಗ ಮ॥ ವ್ಯಾಸರಾಯರವರು ವೈಸ್ ಪ್ರೆಸಿಡೆಂಟರಾಗಿದ್ದಾರೆ. ಇವರು ಬಂದ ಮೇಲೆ ಮ್ಯುನಿಸಿಪಾಲಿಟಿಯ ವಿಚಾರವು ಚನ್ನಾಗಿದೆಯೆಂದೂ ಹಿಂದೆ ಮ॥ ಅನಂತರಾಯರ ಕಾಲದಲ್ಲಿದ್ದಂತೆ ಚನ್ನಾಗಿ ನಡೆಯುವದೆಂದೂ ಹೇಳುತ್ತಾರೆ—ಇಲ್ಲಿನ ಹೈಸ್ಕೂಲಿಗೆ ಮ॥ ಎಂ. ಬಿ ಶ್ರೀನಿವಾಸಯ್ಯಂಗಾರ್ಯ ಚಿಕ್ಕಬಳ್ಳಾಪುರದಿಂದ ಬಂದು ಸ್ಕೂಲಿನ ಭಾರವನ್ನು ವಹಿಸಿಕೊಂಡರು.

ತುಂಕೂರು.—ಹವಾ ತಂಪಾಗಿದೆ ಹೋದವಾರದಲ್ಲಿ ಆದ ಮಳೆ ವಿನಹಾ ಈಚೆಗೆ ಸುತರಾಂ ಇಲ್ಲದಿರುವದರಿಂದ ಬೀಜ ಪೇರಾವು ಮಾಡಲು ತುಂಬಾ ಅನಾನುಕೂಲವಾಗಿರುತ್ತೆ. ದಿನಸು ಗಾಡಿಗಳು ಈ ವಾರದ ಮೊದಲಿನಿಂದ ಸಾಧಾರಣವಾಗಿ ದಿನ ೧ಕ್ಕೆ ೩೦೦—೪೦೦ರವರೆಗೂ ಬರುತ್ತಲಿವೆ ಮಳೆ ಬಾರದಿರುವದರಿಂದಲೂ ಪರಸ್ಥಳದ ಗಿರಾಕಿ ವಿಶೇಷವಾಗಿರುವದರಿಂದಲೂ ಧಾರಣೆ ರಾಗಿ ಪತ್ತು ಖಂಡುಗ ೧ಕ್ಕೆ ೧೭—೧೮ರವರೆಗೂ ಆಗಿದೆ ಇನ್ನೂ ಜಾಸ್ತಿಯಾಗುವ ಸಂಭವವೂ ಇರುವದು. ಈ ಸಂದರ್ಭದಲ್ಲಿ ಬಡವರ ಸ್ಥಿತಿ ಮುಂದೆ ಯಾವ ರೀತಿಯಲ್ಲಿ ಪರಿಣಮಿಸುವದೋ ತಿಳಿಯಲು ಅಸಾಧ್ಯವಾಗಿದೆ—ಇಲ್ಲಿನ ಮಂಡಿಪೇಟೆಗೂ ರೈಲ್ವೆ ಸ್ಟೇಷನಿಗೂ ಸುಮಾರಾಗಿ ಮುಕ್ಕಾಲು ಮೈಲಿ ಫಾಸಲೆ ಇದೆ. ಹೀಗಿದ್ದರೂ ಮಧ್ಯೆ ಎತ್ತರವಾದ ದಿಣ್ಣೆ ಇರುವದರಿಂದ ಭಂಡಿ ಎತ್ತುಗಳಿಗೆ ನಾಲ್ಕು ಮೈಲಿ ಪ್ರಯಾಣಮಾಡಿದಷ್ಟು ಶ್ರಮವಾಗುತ್ತೆ. ಇಂಥಾದ್ದರಲ್ಲಿ ದಿನಸಿ ಮೂಟೆಗಳನ್ನು ಹೊಡಿಯತಕ್ಕ ಪುಣ್ಯಾತ್ಮರು ದಫಾ ೧ಕ್ಕೆ ಹನ್ನೊಂದು ಮೂಟೆಗಿಂತ ಜಾಸ್ತಿ ಹಾಕಕೂಡದೆಂಬ ಸರ್ಕಾರೀ ನಿಬಂಧನೆಗೆ ಒಳಪಟ್ಟದ್ದಾಗ್ಯೂ ಹೆಚ್ಚು ಸಂಪಾದನೆಗೆ ಆಸೆಬಿದ್ದು ಮಧ್ಯೆ ಗದರಿಸುವ ಪೋಲೀಸಿನವರಿಗೆ ದಕ್ಷಿಣೆಗಳಿಂದ ಸಾಧುಮಾಡಿಕೊಂಡು ಗಾಡಿ ೧ಕ್ಕೆ ೨೦ ಮೂಟೆಗಳವರೆಗೂ ಹಾಕಿ ದಿನ ೧ಕ್ಕೆ ೨೦—೩೦ ದಫೆ ಹೊಡೆಯುತ್ತಾರೆ. ಆದರೆ ಆ ಬಡ ಮೂಗುಪ್ರಾಣಿಗಳು ಅಷ್ಟು ಭಾರವನ್ನು ಆ ಕಠಿಣ ದಿಣ್ಣೆಯಲ್ಲಿ ಎಳೆಯುವಾಗ ಪಡುವ ಶ್ರಮವು ಎಂಥಾ ಕಠಿಣ ಹೃದಯನಿಗಾದರೂ ಕಣ್ಣೀರು ಬರುವದರಲ್ಲಿ ಸಂಶಯವಿಲ್ಲ. ಈ ಅಪಾರವಾದ ಕಷ್ಟವನ್ನು ಬಗೆ ಜಂತುಗಳು ತಪ್ಪಿಸುವದಾಗಲಿ. ಜೀವಹಿಂಸಾನಿಷೇಧಸಂಘದವರು ಇದಕ್ಕೆ ಗಮನಕೊಡಬಾರದೇ? ಇಲ್ಲಿನ ಮಂಡಿ ಪೇಟೆಯ ಹಿಂಭಾಗದಲ್ಲಿರುವ ಗುಳಿನಕಟ್ಟೆ ಎಂಬ ಜಲಪಕ್ತಿಯಿಂದ ಸ್ಥಳದ ಮತ್ತು ಪರಸ್ಥಳದವರಿಗೆ ಉಂಟಾಗುತ್ತಿರುವ ಪ್ರಯೋಜನವು ಬಹಳವಾಗಿರುತ್ತೆ. ಇಂಥಾದ್ದರಲ್ಲಿ ಇದಕ್ಕೆ ಸುತ್ತಲೂ ಇರುವ ಏರಿ ಮತ್ತು ನೀರಿನಲ್ಲಿರುವ ಊಸುಬು ಕ್ರಮವಾದ ಸ್ಥಿತಿಯಲ್ಲಿಲ್ಲವಾದ್ದರಿಂದ ಹೋದ ವಾರ ಒಬ್ಬ ಮಹಮದೀಯ ಪ್ರಾಯಸ್ಥನು ಸ್ನಾನಮಾಡುವುದಕ್ಕೆಂದು ನೀರನ್ನೊಳಕ್ಕಿಳಿದವನು ಮೇಲಕ್ಕೆ ಬರಲೇ ಇಲ್ಲ ಅನಂತರ ಜನರು ಹುಡುಕಿದಾಗ ಸತ್ತು ತೇಲಿದನು ಸರ್ವಜನೋಪಕಾರವಾದ ಈ ಕಟ್ಟೆಯನ್ನು ಕ್ರಮವಾದ ರೀತಿಯಲ್ಲಿ ಇಟ್ಟಿಲ್ಲದಿರುವರು ನಮ್ಮಗಳ ದೌರ್ಭಾಗ್ಯವೆಂದೇ ಹೇಳಬಹುದು ನಮ್ಮ ವೈಸ್ ಪ್ರೆಸಿಡೆಂಟರು ಈ ವಿಷಯದಲ್ಲಿ ನಿಗಾ ತೆಗೆದುಕೊಂಡು ಏರಿಯನ್ನು ಕ್ರಮಪಡಿಸುತ್ತಲೂ ಕಂಬಿಗಳನ್ನು ಹಾಕಿಸಿ ನೀರು ಗಲೀಜಾಗದಂತೆ ಮಾಡಿ ತಮ್ಮ ಹೆಸರನ್ನು ಶಾಶ್ವತಪಡಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ—ಈ ವರುಷ ಲಾಂದ್ರದ ಕಂಟ್ರಾಕ್ಟುದಾರರಿಗೆ ದರ ಜಾಸ್ತಿಯಾದ್ದರಿಂದ ಸಾಯಂಕಾಲ ೭—೮ ಗಂಟೆಗೆ ಅನೇಕ ಲಾಂದ್ರಗಳು ಅರ್ಧಗ್ರಹಣ ಪೂರ್ಣಗ್ರಹಣಗಳಿಗೆ ಗುರಿಯಾಗಿರುವಂತೆ ತೋರುತ್ತೆ ಈ ರೀತಿಯಾಗದಂತೆ ತಕ್ಕ ಉಸ್ತುವಾರಿಯಿಂದ ಕ್ರಮಪಡಿಸ್ಯಾರೆಂದು ನಂಬಿರುತ್ತೇನೆ—ಇಲ್ಲಿಗೆ ವರ್ಗವಾಗಿ ಬಂದಿರುವ ಡಾಕ್ಟರು ಮ॥ ವಿ ಮುತ್ತುಸ್ವಾಮಿದಾಸ್ ಯವರು ಈಗಾಗಲೇ ಪ್ರಜೆಗಳ ಕಷ್ಟ ಸುಖಗಳಿಗೆ ಬಾಧ್ಯರಾಗಿ ಪ್ರತಿ ರೋಗಿಯನ್ನು ತುಂಬಾ ಆದರಣೆಯಿಂದ ಖುದ್ದಾಗಿ ಪರಾಂಬರಿಸಿ ತಕ್ಕ ಚಿಕಿತ್ಸೆ ಮಾಡುತ್ತಿರುವದರಿಂದ ಪ್ರತಿ ದಿನವೂ ತಂಡ ತಂಡವಾಗಿ ಖಾಯಿಲೆಯವರು ಬಂದು ಗುಣಹೊಂದುತ್ತಲಿದ್ದಾರೆ—ಈ ತಿಂಗಳಲ್ಲಿ ಸೌದೆ ಕಂಟ್ರಾಕ್ಟು ತೀರಿತಾದ್ದರಿಂದ ಚಿಲ್ಲರೆಯಾಗಿ ಸೌದೆ ದೊರೆಯಲು ಸರ್ಕಾರದವರು ತಕ್ಕ ಏರ್ಪಾಡು ಮಾಡಿಲ್ಲ. ಬಿತ್ತನೆ ಕಾಲವಾದ್ದರಿಂದ ಸೌದೆ ಗಾಡಿಗಳು ಬರುವದಿಲ್ಲ. ಪ್ರಜೆಗಳಿಗೆ ಉಂಟಾಗಿರುವ ಸೌದೆ ತೊಂದರೆಯನ್ನು ನಮ್ಮ ಡೆಪ್ಟಿ ಕಮಿಷನರ್ ಸಾಹೇಬರವರು ಜಾಗ್ರತೆ ನಿವಾರಣೆ ಮಾಡ್ಯಾರೆಂದು ಕೋರುತ್ತೇವೆ.

ತೀರ್ಥಹಳ್ಳಿ.—ವಿಶೇಷವಾದ ಮಳೆಯು ಕಳೆದ ವಾರದಿಂದ ಪ್ರಾರಂಭವಾಯಿತು ರಾತ್ರೀ ಹಗಲು ವಿರಾಮವಿಲ್ಲದ ಸುರಿಯುತ್ತದೆ ಆಗುಂಬೆಯಲ್ಲಂತೂ ಪುನರುಕ್ತೇ ಇಲ್ಲದಂತೆ ಮಳೆಯು ಸುರಿಯುವದು.—ಆಗುಂಬೆ ಹತ್ತಿರ ಅಂದಲಿಸಿನಲ್ಲಿ ಒಂದು ಮನೆಗೆ ಬೆಂಕಿ ಬಿದ್ದು ಎಲ್ಲಾ ಸುಟ್ಟುಹೋಯಿತು. ಸಾಮಾನುಗಳನ್ನು ಬಹು ಕಷ್ಟದಿಂದ ಹೊರಕ್ಕೆ ಸಾಗಿಸಿದರು. ಕಡೆಗೆ ಒಬ್ಬ ಹೆಂಗಸು ಸಾಮಾನುಗಳನ್ನೆಲ್ಲಾ ತರಲು ಒಳಕ್ಕೆ ಹೋದಳು ಆಗ ಒಂದು ಮಗುವು ಆಕೆಯ ಹಿಂದೆಯೇ ಒಳಕ್ಕೆ ಹೋದದ್ದನ್ನು ನೋಡಲಿಲ್ಲ. ಹೆಂಗಸು ಬಹು ಪ್ರಯಾಸದಿಂದ ಹೊರಕ್ಕೆ ಬಂದಳು ಆದರೆ ಮಗುವು ಬರಲಾರದೆ ಒಳಗೆ ಸಿಕ್ಕಿ ಸುಟ್ಟು ಬೂದಿಯಾಯಿತು. ಮಗುವು ಸುಡುವಾಗ ಬಹಳವಾಗಿ ಕಿರಚಿಕೊಂಡಾಗ್ಯೂ ಒಳಕ್ಕೆ ನುಗ್ಗಲು ಯಾರಿಗೂ ಸಾಧ್ಯವಿಲ್ಲದೆ ಹೋಯಿತು.—ಮುಳುವಾಡಿ ಗ್ರಾಮದ ವಾಸಿಗಳಲ್ಲಿ ಒಬ್ಬ ಗೌಡನು ನೇಗಲನ್ನು ಹೊತ್ತುಕೊಂಡು ಸಂಖದ ಮೇಲೆ ದಾಟುತ್ತಿರುವಾಗ ಆಯತಪ್ಪಿ ತಕ್ಷಣವೇ ಜಲ್ಲಿ ಹರಿಯುತ್ತಿರುವ ಕಲ್ಲು ಹೊಳೆಯಲ್ಲಿ ಬಿದ್ದುಹೋದರು. ಹತ್ತಿರದಲ್ಲಿ ಯಾರೂ ಇರಲಿಲ್ಲ. ಮೇಲೆ ಬರುವದಕ್ಕೆ ಬಹು ಪ್ರಯತ್ನಪಟ್ಟಾಗ್ಯೂ ಸಾಧ್ಯವಿಲ್ಲದೆಹೋಯಿತೆಂದು ತೋರುತ್ತದೆ. ಮಾರನೇ ದಿನ ಹೆಣವನ್ನು ಹುಡುಕಿ ದಹನಕ್ರಿಯೆ ಮಾಡಿದರು. ಅವರ ಕುಟುಂಬ ಮತ್ತು ಮಗಳು ತುಂಬಾ ದುಃಖದಲ್ಲಿದ್ದಾರೆ—ಫಾರೆಸ್ಟ್ ಇಲಾಖೆಯ ಕೂಡುಬು ನೌಕರರುಗಳಿಗೆ ಫಾರೆಸ್ಟರುಗಳು ಕಾಲಕ್ಕೆ ಸರಿಯಾಗಿ ಸಂಬಳ ಕೊಡದೆ ಬಹಳವಾಗಿ ಸತಾಯಿಸುತ್ತಾರೆಂದು ಸದರಿ ಇಲಾಖೆಯ ಜವಾನರು ಗೋಳಾಡುತ್ತಾರೆ. ಇದಕ್ಕೆ ಮೇಲ್ಪಟ್ಟವರು ನಿಗಾಕೊಟ್ಟು ಸರಿಪಡಿಸುವದು ಉತ್ತಮ.—ಈ ಊರಿನಲ್ಲಿರುವ ಸೂಲಗಿತ್ತಿಯು ಹೆರಿಗೆಯಾಗುವಂಥಾವರ ಮನೆಗಳಿಗೆ ಸಕಾಲಕ್ಕೆ ಹೋಗುವದಿಲ್ಲವೆಂದು ತೋರುತ್ತದೆ. ಕಳೆದ ವಾರ ಒಬ್ಬರು ಮನೆಗೆ ಹೋಗಿ ಎರಡು ಸಾರಿ ಸೂಲಗಿತ್ತಿಯನ್ನು ಕರೆದಾಗ್ಯೂ ಆಕೆಯು ತನ್ನ ಮನೆಯಲ್ಲಿ ಇಲ್ಲ ಯಾರಲ್ಲಿಯೋ ಹೆರಿಗೆ ಪ್ರಸ್ತಕ್ಕೆ ಹೋಗಿದ್ದಾರೆಂದು ಹೇಳಿದ್ದಾಯಿತು. ಕಡೆಗೆ ವಿಚಾರಿಸುವಾಗ್ಗ ಖಾಯಿಲೆ ಇದ್ದ ಹಾಗೂ ಬರಲಾರದ ಉದ್ದೇಶ್ಯ ಹಾಗೆ ಹೇಳಿಸಿದ ಹಾಗೂ ತಿಳಿಯಬಂದಿದೆ ಇದಲ್ಲದೆ ಆಗುಂಬೆಯಿಂದ ಒಬ್ಬರು ಅವಸರವಾಗಿ ಬಂದು, ಒಬ್ಬರಿಗೆ ಪ್ರಸವವಾಗದೆ ಶಿಶುವಿನ ಕೈ ಹೊರಗೆ ಬಂದಿದೆ, ಬಹಳ ಕಷ್ಟ, ಬರಬೇಕೆಂದು ಗಾಡಿ ತಂದು ನಿಲ್ಲಿಸಿ ಕರೆದಾಗ್ಯೂ ಆಕೆ ಖಾಯಿಲೆ ಹೊರಗೆ ಹೊರಡಲು ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಬೇರೆಯವರನ್ನು ರುಸುಂ ಕೊಟ್ಟು ಕರಕೊಂಡು ಹೋದರು ಹಾಗೆ ಖಾಯಿಲೆ ಇರುವದು ನಿಜವಾದರೆ ಯಾಕೆ ರಜ ಪಡಕೊಳ್ಳಬಾರದು? ಇಲ್ಲವಾದರೆ ಕರೆದ ಕೂಡ್ಲೆ ಕೆಲಸಕ್ಕೆ ಹೋಗುವದು ಉತ್ತಮ.—ಟವರ್ನಲ್ಲಿ ಮ್ಯುನಿಸಿಪಲ್ ಲಾಂದ್ರಗಳನ್ನು ಕಾಣುವದು ಅಪರೂಪವಾಗಿದೆ ಕಂಬಗಳು ಮಾತ್ರ ಉಂಟು ರಾತ್ರಿಯಲ್ಲಿ ಹಚ್ಚುವದಿಲ್ಲ ಮಳೆಗಾಲವೆಂದು ಹೀಗೆ ಮಾಡುತ್ತಾರೋ? ಮತ್ತು ಪೂರ್ಣಯ್ಯನವರ ಛತ್ರದಲ್ಲಿ ಪ್ರಯಾಣಿಕರ ವಾಸಕ್ಕೆ ಬಹು ಇಕ್ಕಟ್ಟಾಗಿದೆ. ಇಂಥಾ ಸ್ಥಳದಲ್ಲಿಯಾದರೂ ಲಾಂದ್ರ ಇಲ್ಲದಿದ್ದರೆ ಜನಗ ಹ್ಯಾಗೆ ವ್ಯಾಪ್ತಿಸುವದೋ ಗೊತ್ತಿಲ್ಲ.—ಶಿವಮೊಗ್ಗ ಡೆಪ್ಟಿ ಕಮಿಷನರ ಕೋರ್ಟಿಗೆ ಹೋದ ವ್ಯಾಜ್ಯ ಮುಂತಾದ ಅನೇಕ ಕಲಹಗಳು ಬೇಗನೆ ಫೈಸಲಾಗುವದಿಲ್ಲವೆಂದು ಜನರು ಅಂಗಲಾಚಿಪಡುತ್ತಾರೆ ಅವರು ಆಲಸ್ಯದಿಂದ ದೀರ್ಘ ಮಾಡುತ್ತಿರಬಹುದು. ಈಗ ಅಸಿಸ್ಟೆಂಟ್ ಕಮಿಷನರೇ ಛಾರ್ಜ ವಹಿಸಿದ್ದಾರೆಂದು ತಿಳಿದಿರುವದರಿಂದ ಬೇಗನೆ ಉತ್ತರ ದೊರಕಿ ಜನಗಳಿಗೆ ನೆಮ್ಮದಿಯಾದೀತು.—ಇಲ್ಲಿನ ಅಮಲ್ದಾರ್ರು ಮನೆಯಲ್ಲಿ ಇಲಿಗಳು ಬಿದ್ದು ಅವರು ಮನೆ ಬಿಟ್ಟು ತೀರ್ಥಕ್ಕ ಮಠದಲ್ಲಿ ವಾಸಿಸುತ್ತಿದ್ದಾರೆ. ಅವರ ಮನೆಯು ಬಂಟಸಾಗಿತ್ತು. ಅಲ್ಲಿ ಇಲಿಗಳು ಬೀಳುವದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ.

ಪ್ರಪಂಚದಲ್ಲಿ ದೊಡ್ಡದು ಯಾವದು?

29

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ। ರಾ। ಕರಿಬಸವಶಾಸ್ತ್ರಿಗಳು ಬರೆದಿದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧-೩ ಆಣೆ; ವಿ ಪಿ. ಮೂಲಕ ೧೪ ಆಣೆ

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ.

೩ "ಸ್ವಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೪ ಆಣೆ.

೪ "ರೋಮನರ ಚರಿತ್ರೆ" ಕ್ರಯ ೦—೬—೦
೫ "ಗ್ರೀಕರ ಚರಿತ್ರೆ" ,, ೦—೨—೦
೬ "ಅನುಭವಾನಂದ",, ೦—೬—೦
೭ "ಗಣಿತ ಸಂಜೀವಿನಿ" ೧—೮—೦
೮ "ಗಣಿತ ಚಿಂತಾಮಣಿ" ೦—೧೦—೦
೯ ಚಾಮರಾಜೇಂದ್ರ ವಿಲಾಸ" ೦—೧೨—೦
೧೦ "ಹಿಂದೂ ಧರ್ಮ ಶಾಸ್ತ್ರ (ಲಾ) ಸಂಗ್ರಹ" ೦—೧೨—೦
೧೧ "೧೯೦೫ನೇ ವರುಷದ ಡೈರಿಗಳು"

ಪ್ಲಾಪ್, ಪೆನ್ಸಿಲ್ ಸಹಿತ ೦—೬—೦, ಸಾದಾ ೦—೪—೦

ಮನೇಜರ್,
ಸಿ ಎಲ್. ಎಸ್ ಬುಕ್ ಡಿಪ್ರೋ,
ಮೈಸೂರು.

ಜ್ವರಹರಿ. 3

ಇದು ಸಾಧಾರಣ ಜ್ವರ, ಹಳೇಜ್ವರ, ಮೈರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜರಾಯಿ ಇಲಾಖಾ ಸಬ್ ಓವರ್ಸಿಯರ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ಎಂಟು ಸೀಸೆಯು ತೀರಿಹೋಯಿತು ಇನ್ನು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಲೇ ಇರುತ್ತಾರೆ ಆದದರಿಂದ ದಯವಿಟ್ಟು ಇನ್ನೊಂದು ಎಂಟು ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ, ೨—೦ ರೂ. ಅ., ೧ ರೂ, ಪನ್ನೆರಡು ಸೀಸೆ ತರಿಸಿಕೊಂಡರೆ ಗೋಸ್ತೀಯ ಮಾಡಿ ಬಿಡಲಾಗುವದು

****

ಓಮ್ನಿಯಂ ಕರ್ಪೂರ.

Omnium Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಮೊದಲು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡುವದು ಇದು ಬೆಂಗಳೂರು ತಿಂಗಳುಗಳ ಒಂದಾವರ್ತಿ ಮೊದಗೆ ಆಗುವಾಗ ಕೊಟ್ಟರೆ ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡೂರು ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯವರ ಅ... ಭಾ...ವನ್ನು ನಾನು ನನ್ನ ಆಸ್ಪತ್ರೆಯಲ್ಲಿ ಪ್ರಯೋಗಿಸಿದ್ದು ಅನೇಕ ಜನರಿಗೆ ಅಜೀರ್ಣ ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ಪುಸ್ತಕ ಶಾಪುಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಶಾಲೆ,
ಕೆಲಂಡ್ ಬೀಚ್ ಲೈನ್, ಮದರಾಸ್.

WESLEYAN MISSION PRESS MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

21

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಚಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇದಲ್ಲದೆ ಕನ್ನಡ ಅಕ್ಷರಗಳು—ಟೂಪ್ರೈಸ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಲೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿಯೂ ಬಹಳ ಕಾಲ ಬಾಳಿಕೆ ಬರುವವುಗಳಾಗಿಯೂ ಇರುತ್ತವೆ. ಕೆಳಗಿನ ವಿಳಾಸದಾರರಿಗೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು

ವಿಳಾಸ—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು

ದಿ ಯೆಂಡೋಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಉಪವೃತ್ತಿ ಕಲ್ಪನಾಸಂಘ ಚನ್ನಪಟ್ಟಣ

12

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸ್‌ದಾರರು ಬಹಳ ದ್ರವ್ಯ ಪ್ರಯೋಜನ ಹೊಂದಬಹುದು ಸಾಮಾನ್ಯ ಉಪವೃತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ಪ್ರಮಾಸದಾಯಕ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣದರಿಂದ ಮರಣಾನಂತರ ನಮ್ಮ ನೇಮಿತದಾರ ನೇಮಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜೆಂಟರುಗಳು ಸಂಘದ ಮ್ಯಾನೇಜರಿಗೆ ಬರದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು ಅಂಥಾ ಏಜೆಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ

[illegible], ಮ್ಯಾನೇಜರ್.

ರ ... ...

Homocea

ಕಣ್ಣ ... ಕಡಿತ ... ... ಹಗಲು ರಾತ್ರೀ ನೋವು ವಾಸಿ ... ಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೇನರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡಕಡೆ ಇದನ್ನು ಹಚ್ಚಿದರೆ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಮಾರ್ಗವಾಯು ಮೂಲವ್ಯಾಧಿ, ಉಬ್ಬಸ ವಾಯುಗಳು, ನರ ಹೋಕ್ಕುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮುತ್ತು ಚೇಳು ಕಡಿದದ್ದು, ಬಿಸಿಲಲ್ಲಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ಸೇರುವದಿಲ್ಲ

ಕ್ರಯ—ಸಣ್ಣ ಡಬ್ಬಿ ೧ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಅ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೇವೆ. ರೂ ೨—೮ ಅಣೆ ಬೆಲೆಯ ಡಬ್ಬಿಗಳಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ಈ ರೂ ೨—೮ ಅ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮಿಯೋಸಿಯಾ ಯಂಬ್ರೋಕೇಷನ್

ಈ ತೈಲವು ಚಳಿ ನೋವುಗಳಿಗೆ ಉಪಯೋಗಿಸತಕ್ಕದ್ದು ಜನರು ಒಡೆದ ಕಡೆ ಇದನ್ನು ಹಚ್ಚಿಕೊಂಡು ಇದರಲ್ಲಿ ವೇದನೆಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕೆ ಹೊಂದಿಕೆ ಇದರಲ್ಲಿ ಇನ್ನೊಂದು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಒಮ್ಮೆಗೆ ಬಹು ಬೇಗನೆ ಸೇರಿಕೊಳ್ಳುವುದಿಲ್ಲ ಡಬ್ಬಿಗಳಲ್ಲಿ ಹಿಂಬಿ ಚಿಕ್ಕದಾಗೂ ೧ ರೂ ಗೂ ಒಂದರಂತೆ ಸೀಸೆ ಮಾರುತ್ತೇವೆ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಔಷಧಿಗಳನ್ನು ಕೂಡ ದೊರೆಯುವದು

ಈ ಔಷಧಗಳು ವಿದೇಶಗಳಲ್ಲೂ, ಆಸ್ಪತ್ರೆಗಳಲ್ಲೂ ಒಳ್ಳೆ ಹೆಸರುಗಳನ್ನು ಪಡೆದಿರುವುದರಿಂದ ಕಳುಹಿಸುತ್ತೇವೆ.

ವಿಳಾಸ—ಹೋಮೋಸಿಯಾ ಕಂಪನಿ. ... ಸ್ಟೋರ್ಸ್ ... ಲೈನ್ ... ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

23—6—1905 ರಿಂದ 30—6—1905 ರ ವರೆಗೆ.

ಸ್ಥಳ		ಪ್ಲೇಗ್ ತಗಲಿದ್ದು	ಸತ್ತದ್ದು	ಕೋಲಿಮರ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ		0	0	1	1
ಮೈಸೂರು	,,	2	2	0	0
ಬೆಂಗಳೂರು ಡಿಸ್ಟ್ರಿಕ್ಟ್		13	9	89	8[illegible]
ಮೈಸೂರು	,,	4	5	112	10[illegible]
ಕೋಲಾರ್	,,	0	0	63	4[illegible]
ಕೋಲಾರ್ ಚಿನ್ನದ ಗಣಿಗಳು		0	0	9	[illegible]
ತುಮಕೂರು ಡಿಸ್ಟ್ರಿಕ್ಟ್		3	3	7	[illegible]
ಹಾಸನ	,,	0	0	11	[illegible]
ಚಿತ್ರದುರ್ಗ	,,	0	0	42	2[illegible]
ಕಡೂರ್	,,	0	0	13	[illegible]
ಶಿವಮೊಗ್ಗ	,,	5	4	45	2[illegible]
	ಜುಮ್ಲಾ	25	22	122	3[illegible]

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಆಷಾಢ ಶು ... ದ್ವಾದಶಿ ಗುರುವಾರದಿಂದ ಆಷಾಢ ಬಹುಳ ... ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಜುಲೈ

ತಾ.	ವಾರ.	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ತ್ಯಾಜ್ಯ
13	ಗುರು	ದ್ವಾದಶಿ	[illegible]	[illegible]	10	30
14	ಶುಕ್ರ ‡	ತ್ರಯೋ	[illegible]	[illegible]	[illegible]	31
15	ಶನಿ	... ತ್ರಿ	[illegible]	ಮೂ	[illegible]	32
16	ರವಿ	... ವರ್	[illegible]	ಪೂ	[illegible]	1
17	ಸೋಮ *	ಪ್ರಾಡ್ಯ	[illegible]	ಉ	[illegible]	2
[illegible]	ಮಂಗ	ಬಿದಿಗೆ	[illegible]	ಶ್ರ		3
[illegible]	ಬುಧ	ತದಿಗೆ	[illegible]	ಧ	[illegible]	1

... ದಿಬಪ್ರಾರಂಭ ವೈಷ್ಣವಯೇಕಾದ. ಹರಿವಾಸರ
‡ ಪ್ರದೋಷ , ದಕ್ಷಿಣಾಯನ ಪುಣ್ಯಕಾಲ
* ವ್ಯಾಸಪೂರ್ಣಿಮಾ, ಚಾತುರ್ಮಾಸ್ಯ ಪ್ರಾರಂಭ
~ ಮೃತ್ಯುಯೋಗ ದಗ್ಧಯೋಗ

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಸ್ತೂರೀ ಅಕ್ಕಿ ಪಲ್ಲ ೧ಕ್ಕೆ	ರೂ	೧೦—೮—೦	೧೧—೮
ಕೆಂಪುಸಾಂಬ ಅಕ್ಕಿ ಅವಲ್		೧೦—೪—೦	೧೦—೧೨
,, ಮಧ್ಯಮ		೯—೧೨—೦	೧೧—೭
ಜಾವಾರ್ಡ್ ಅಕ್ಕಿ		೯—೮—೦	೧೦—೮
ಸಣ್ಣಕ್ಕಿ ಅವಲ		೧೨—೦—೦	೧೩—೦
,, ಮಧ್ಯಮ		೧೧ ೮—೦	೧೨—೮
ತೊಗರಿ ಬೇಳೆ ಪಲ್ಲ ೧ಕ್ಕೆ		೧೪ ೮ ೦	೧೨ ೦
,, ಮಧ್ಯಮ		೧೧—೦—೦	೧೧—೦
ಹೈಗ ರಾಗಿ ಪಲ್ಲ ೧ಕ್ಕೆ		೪ ೦—೦	೫—೧೦
ಕಾರಾಗಿ		೪—೧—೦	೫—
ಜೋಳ		೪—೧೨—೦	೫—೦
ಹುಲಸಂದೆ ಪಲ್ಲ ೧ಕ್ಕೆ		೮—೧೨—೦	೯—೦
ಬಿಳೇ ಅವರೆ		೬ ೧೨—೦	೮—೮
ಹೆಸರು		೯ ೧೨—೦	೧೦—
ಉದ್ದು		೮ ೧೪ ೦	೯—೨
ಕಡಲೆ		೯ ೦—೦	೮—೧೨
ಎಳ್ಳು		೧೬ ೦ ೦	೧೪—೦
ಹುರುಳಿ		೮—೦ ೦	೮—೮
ಹರಳು ೧೨೩ ಸೇರಿಗೆ		೯—೮—೦	೧೦—೦
ಸೀಗೇಕಾಯಿ ಮಣ ೧ಕ್ಕೆ		೨—೪—೦	೨—೦
ಮೆಣಸಿನಕಾಯಿ		೪—೮—೦	೪—
,, ಮಧ್ಯಮ		೩—೧೨—೦	೩—೮
ಬೆಲ್ಲ ಮೊದ್ದ ಅಚ್ಚು		೩—೪—೦	೩—೨
ಒಳ್ಳೆ ಬೆಲ್ಲ ಮಣ ೧ಕ್ಕೆ		೩—೬—೦	೩—
ಹರಳೆಣ್ಣೆ		೪—೦—೦	೪—
ಕೊಬ್ಬರಿ ಪಲ್ಲ ೧ಕ್ಕೆ		೬—೦—೦	೮—೦
ಉಪ್ಪು ,,		೫—೦—೦	೬—೦
ಬೆಣ್ಣೆ ಜಪ್ಪು		೦ ೪—೦	೦—
,, ಶಳೇಮ		೦—೫ ೦—೦	೦—೦
ಶಾಖ		೦—೨ ೦—೦	೦—೦
ಸೀಮೆಯೆಣ್ಣೆ ಪಟ್ಟಿ ೧ಕ್ಕೆ		೫—೩—೦	೩—
ಹಂಗಿನಕಾಯಿ ೧೦೦ಕ್ಕೆ		೫—೦—೦	೩—
ಅಡಕೇಕಾಯಿ ಮಣ ೧ಕ್ಕೆ		೨—೦—೦	೦—೦
ಬಾಳೆಕಾಯಿ ರುಪಾಯಿ		೨೫—೦—೦	೨—೦
ಟೀ (ಪೌ) ಹೆಂಟೆ		೧೯—೮—೦	೨—
,, ಮಧ್ಯಮ		೧೬—೮—೦	೧—೦
,, ,, ಗಸ್ಟ್ಟ ಕೋಲ ೧ಕ್ಕೆ		೬—೦—೦	೨೨
ಕಲ್ಲು ಗಟ್ಟಿ ಕಡಲ ೧೦೦		೬—೦—೦	೩೩—

Printed and Published by the Rev H. Sexton the Proprietor and Manager, Wesleyan Mission P[ress] Mysore 13/7 1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು

ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯   ಮೈಸೂರು—ಸನ್ ೧೯೦೫ ನೇ ಇಸವಿ ಜುಲೈ ತಾರೀಖು ೨೦ ನೇ ಗುರುವಾರ.   ಸಂಚಿಕೆ ೮

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . . . . ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ . . . . . . ರೂ ೧—೧೪—೦

" " ೦ ೧೫ ೦

ಪಾಠಕರಾಗತಕ್ಕವರು ತಮ್ಮ [illegible] ವಿಳಾಸಗಳನ್ನು ಸ್ಪಷ್ಟವಾಗಿ ಬರೆಯ ಬೇಕು.

ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಹೊಸ ನೋಟ್ಸು

ಮೈಸೂರು [illegible] ಪರೀಕ್ಷೆಗೆ ಓದುವ [illegible] ವಿದ್ಯಾರ್ಥಿಗಳಿಗೋಸ್ಕರ

17

ಬೇಕಾದಷ್ಟು ವಿಷಯಗಳೊಡನೆ, ಪ್ರಶ್ನಸಹಿತ ಈ ನೋಟ್ಸು [illegible] ವಿವರವಾದಾಗ್ಯೂ ಇತರ ನೋಟ್ಸುಗಳ ಗಲಾ [illegible] ಯಿಂದ ಬೇಗ ಮುದ್ರಿಸಲಾಗಲಿಲ್ಲ. ಏಪ್ರಿಲ್ ತಾ. ೧೧ ರೊಳಗೆ ಸಿದ್ಧವಾಗುತ್ತೆ. ಕ್ರಯ. ೮ ಅಣೆ

ಮೈಸೂರ ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೦—೮
೨ನೆ ತರಗತಿಯ ಪದ್ಯಸಂಗ್ರಹದ ನೋಟ್ಸು	೦—೦—೩
೧೯೦೪ನೆ ವರುಷದ ಲೋವರ್ ಸೆಕಂಡರಿ ನೋಟ್ಸು	೦—೩—೦

ವಿಳಾಸ—ಎಂ. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

ಇದು ಕರ್ನೆ [illegible] ತಿಂಗಳ ಪ್ರೆಜೆಂಟೇಷನ್ ವಾಚು.

ಈ ಪತ್ರಿಕೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರೈಲ್ವೆ ಗಾರ್ಡ್ ವಾಚು ಓಪನ್ ಕೇಸ್ ಕೀಲೆಸ್ ಪೇಟಂಟ್ ಲಿವರ್ ವಾಚು ಕಂಪೆನಿ ಸ್ಪೆಷಲ್ ಬ್ಯಾಲನ್ಸ್ ಬಹು ಬಲಿಷ್ಟವಾದ ಗಡಿಯಾರ ೫ ವರುಷ ಗ್ಯಾರಂಟೀ ಕ್ರಯ ರೂ ೫-೮ ೦



ಈ ವಾಚನ್ನು ಕಳೆದ ಜನರಿ ೧ ರಿಂದ ಉತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವದರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರದು. ಜಾಗ್ರತೆ ದರಖಾಸ್ತು ಕಳುಹಿಸಿ. ಪ್ರಜೆಂಟೇಷನ್ ಸಾಮಾನುಗಳು

ಕ್ರಯವೆಷ್ಟು.

ಮೇಲಾದ ಜರ್ಮನ್ ಸಿಲ್ವರ್ ಕಟುಗಾಂಡಿ ೧ ಸೆಟ್ಟು	೦—೧೨—೦
ಟಕ್ಕ ಹೊಳಪುಪೆಟ್ಟಿಗೆ ಇಂಗ್ಲಿಷ್ ಮೋಪ್ (ʼ [illegible])	೧—೦—೦
ಸುಗಂಧ ಪುಷ್ಪವುಳ್ಳ ಕಸೂರಿದ ಡಬ್ಬಿ ೧	೦—೮—೦
ಮಲಗುವವರು ಪಿಲ್ಲೊ ಕಳ ಸುಂದರವಾದದ್ದು	೦—೩—೦
ಬಹಳ ಸೊಗಸಾದ ಗಡಿಯಾರದ ಸರಪಳಿ	೦—೮—೦

೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆ ಮೇರೆಗೆ [illegible] ಜುಲೈ ಅಕ್ಟೋಬರ್ ವರಿಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡಲ್ಪಡುತ್ತೆ. ಜಾಗ್ರತೆ!! ಜಾಗ್ರತೆ!!

ಇತರರು ನಮ್ಮ ಕಂಪನಿಯ ನೋಟೀಸುಗಳಂತೆ ಮದರಾಸಿನಲ್ಲಿ ಪ್ರಿಂಟ ಮಾಡಿ ಉಪಯೋಗವಿಲ್ಲದ ಸಾಮಾನುಗಳನ್ನೂ ಗಡಿಯಾರವನ್ನೂ ಕಳುಹಿಸುತ್ತಿರುವದರಿಂದ ಮೇಲ್ಕಂಡ ಕಂಪನಿಯ ಹೆಸರನ್ನು ಈ ಪತ್ರದಲ್ಲಿ ಇಟ್ಟುಕೊಳ್ಳಬೇಕೆಂದು ಕೋರುತ್ತೇವೆ.

ವಿಳಾಸ:—ಮ್ಯಾನೇಜರ್, ಫ್ಲಾರಿಸ್ ವಾಚ್ ಕಂಪೆನಿ,

ಪಾರ್ಕ್ ಟವನ್, ಮದರಾಸ್.

ಬಹಳ ಸುಲಭ!   ಒಳ್ಳೇ ಸಮಯ!

5

ಒಳ್ಳೇ ತರಹ ಟೈಲ್, ಪ್ಯಾಟಿಂಗ್, ಫ್ಲಾನಲ್ ವಗೈರೆ ಸಟ್ಟುಗಳು ನನ್ನಲ್ಲಿ ದೊರೆಯುತ್ತವೆ. ವಿ. ಪಿ. ಪಿ. ಮೂಲಕ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ಬಹು ಸುಲಭ.

ಕಂಪನಿ ರಾಮರಾವ್, ಮಾರ್ಚೆಂಟು—ಟೈಲರ್,

೧೧೩–೩ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕಥಾಸಂಗ್ರಹ—ಮೊದಲನೆ ಭಾಗ.

11

ವಿಶೇಷ ವ್ಯಾಖ್ಯಾನಗಳುಳ್ಳ ಕನ್ನಡ ನುಡಿಯ ಕಥಾಸಂಗ್ರಹದಲ್ಲಿ ೧—೨ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ [illegible] ಶಾಕಿದೆ. ಈಗಿನ [illegible] ತಕ್ಕಂತೆ ಪಾಠಗಳನ್ನೂ ಮಾಡಿ ನ [illegible] ವಿಶದವಾಗಿ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ [illegible] ಮ್ಯಾನೇಜರ್ [illegible] ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣುಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕ ಕಳುಹಿಸುತ್ತೆ.   ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

12

ದಯಮಾಡಿ ಇದನ್ನು ಪರೀಕ್ಷಿಸಿ ನೋಡಿರಿ

[illegible] ತಂ —[illegible] ಟೀಗೆ ಪ್ರತಿರೂಪ.

"[illegible]ತಂ."—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಿಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರು ಮಾಡಲ್ಪಟ್ಟಿರುತ್ತದೆ. ಕಾಫಿ, ಟೀಯಿಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರು ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ, ಬೇಸರು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ [illegible] ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ನಿಯಮಾನುಸಾರವಾಗಿ ಸೇವಿಸಿದರೆ ಜನರಿಗೆ ಸಮಸ್ತ ವ್ಯಾಧಿಗಳಿಂದಲೂ ಬಿಡುಗಡೆಯಾಗಿ ಜಯಪ್ರದವಾಗುವುದು. [illegible] ಮಾಡುವದಲ್ಲದೆ, ಯಾವದೊಂದು ರೋಗವೂ ಕಾಲಿಡದಂತೆ ಕಾಪಾಡುವುದು. ಪಿತ್ತವಾಯುವು, ಗೂರ್ಲು ಉಬ್ಬಸ, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ. ಸಾಧಾರಣವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತೆ. ಅಗ್ನಿಮಾಂದ್ಯವುಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು.

ಈ ಚೂರ್ಣವನ್ನು ಕ್ರಮಾನುಸಾರವಾಗಿ ಇಷ್ಟದ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಮೂತ್ರದಲ್ಲಿರತಕ್ಕ ಸಕ್ಕರೆಯ ಅಂಶವನ್ನೂ ವಿಶೇಷವಾದ [illegible] ಕಡಿಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುತ್ತದೆ. ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧವಿಲ್ಲದ ಗುಣವುಳ್ಳ ಕಾಫಿ, ಟೀಯಿಗಳನ್ನು ಬಿಟ್ಟು, ಈ [illegible] ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಾಗಿ ಪರಿಣಮಿಸುವದು.

ಇದ್ದರೂ ಏನು ಫಲ [illegible] ಡಬ್ಬಿಯ ಕ್ರಯ ಆಣೆ ೬. ವಿ. ಪಿ. ಛಾರ್ಜು ಆಣೆ ೩. ಸೆಟ್ಟಿಗಳಾದರೂ ಸ್ಟಾಂಗಡ ೮ ಆಣೆ ಸ್ಟಾಂಪು ಇಟ್ಟು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

ವಿಳಾಸ—ಪಿ. ಸುಬ್ಬರಾಯ್,

ಪ್ರೋಪ್ರೈಟರ್ [illegible] ಲಕ್ಷ್ಮೀ ಬಿಲ್ಡಿಂಗ್ಸ್

WANTED WILD ANIMALS.

ಬೇಕಾಗಿವೆ.   ಬೇಕಾಗಿವೆ.

15

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಎಂಬವರು ಕೊಂಡುಕೊಳ್ಳುವರು.

Apply to—Mr. Hughes Mysore Zoo.

ಶ್ರೀ ತಾಂಬೂಲ.

ಇದನ್ನು ಓದಿ!   ನಿಜಬೇಡ!!   ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾರಿ ಮೋಸಮಾಡುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಬಾಯಿಯ ಹಿನ್ನಿರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶ್ಲೇಷ್ಮ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಕಳ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೨ ಮಾತ್ರೆಗಳಂತೆ ಕೊಟ್ಟರೆ ಒಳ್ಳೆ ಗುಣಕಾರಿಯಾದದ್ದು. ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಸಭ್ಯರುಳ್ಳ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರಿಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ—

ದೇವನಹಳ್ಳಿ ಟವನ್,   ಎಂ. ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್.   ಮೆಡಿಕಲ್ ಪ್ರಾಕ್ಟೀಷನರ್.

ಏಜಂಟರು ಬೇಕಾಗಿದೆ

3

೨೦ ಜನ ಏಜಂಟರು ನಮ್ಮ ಕಂಪನಿಯ ಪದಾರ್ಥಗಳನ್ನು ಮಾರಲಿಕ್ಕೆ. ಮಾಸೋತ್ತರ ಸಂಬಳ ರೂ ೨೫, ಅಥವಾ ರೂ ೧೫, ಅಥವಾ ರೂ. ೧೦ ಕೊಡಲ್ಪಡುತ್ತೆ. ಪ್ರತಿ ಏಜಂಟರು ರೂ ೧೦೦, ಅಥವಾ ರೂ ೫೦, ಅಥವಾ ರೂ. ೨೫ ದಾಮಾಷಾ ಪ್ರಕಾರ ಈ ಕಂಪನಿಯಲ್ಲಿ ಠೇವಣಿ ಇಡಬೇಕು. ಅಪೇಕ್ಷೆಯುಳ್ಳವರು ೨ ಆಣೆ ಸ್ಟಾಂಪಿಟ್ಟು ಅರ್ಜಿ ಬರೆದುಕೊಳ್ಳತಕ್ಕದ್ದು. ವಿಳಾಸ—

The Manager, The Rational Therapeutical Corporation [illegible], Bangalore City.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

1

ಮೈಸೂರು ನಿವಾಸಿ [illegible] ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ತರಾದ ಮ. ಬಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಲೋವರ್ ಸೆಕೆಂಡರಿ ಪರೀಕ್ಷೆಗೆ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ತೆಗೆದುಕೊಳ್ಳುವವರಿಗೆ ಶೇಕಡಾ ೧೨ ಮುಂತೆ ಕಮೀಷನ್ ಕೊಡಲಾಗುವದು. ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಬೇಕೆನ್ನುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು.

ಕ್ರಯ:—೧ ಪ್ರತಿಗೆ ೬ ಆಣೆ, ಪೋಸ್ಟೇಜು ೧ ಆಣೆ.

"ಬಕ್ಕಲತನವೂ ಬಕ್ಕಲಿಗನೂ"—ಪಕ್ಷಕ್ಕೊಂದು

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು ಇದರ ವಾರ್ಷಿಕ ವರ್ಗ ಕೆ ಪೋಸ್ಟೇಜು ಸಹಿತ ರೂ ೧-೮-೦ ರೈತರೇ, ಬೇಗ ತರಿಸಿ
ವಿಳಾಸ —ದಿ ಮ್ಯಾನೇಜರ್, ೧೯೯, ಸಿವಿಲ್ ಲೈನ್ಸ್, ಪ್ರಾಗ

ಸಬೇಶಾ ವೀರಶೈವಾಂತ್ಯೇಷ್ಟಿವಿಧಿಯು

೨

ಬಿಕರಿಗೆ ಸಿದ್ಧವಾಗಿದೆ ವಿ ಪಿ ಸೇರಿ ೧ ಪ್ರತಿಗೆ ೮ ಆಣೆ ಒಟ್ಟಾಗಿ ೧೦ ಪ್ರತಿ ತರಿಸಿಕೊಂಡರೆ ೧ ಪ್ರತಿ ಹೆಚ್ಚಾಗಿ ಸಿಕ್ಕುತ್ತೆ ಬೇಗ ಬರೆದು ತರಿಸಿಕೊಳ್ಳಿ ವಿಳಾಸ—ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಚಿಕ್ಕಸಹಳ್ಳಿ ಮಠದ ಸಿದ್ಧಲಿಂಗದೇವರು

ದೇವಾಂಗ ಪಂಚಸ್ಥರಿಗೆ ಅಗತ್ಯ ಬೇಕಾದದ್ದು

ದೇವಾಂಗಮಠ ದೀಪಸ್ತಂಭ | ದೇವಾಂಗಮಠ ಪ್ರಕಾಶಿಕೆ

೨

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಭ್ಯಾವಕಾಶಕ್ಕೂ ಸುಂದರವಾದ ೧೪ ಚಿತ್ರಪಟಗಳಿವೆ ಕ್ರಯ ಸುಲಭಮಾಡಿದೆ ೧೪ ಚಿತ್ರಪಟಗಳಿರುವ ಪ್ರತಿ ೧ಕ್ಕೆ ೨ ಪಿ ಖರ್ಚು ಸೇರಿ ರೂ ೨—೮. ಚಿತ್ರಪಟವಿಲ್ಲದ ಇದೇ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೧—೮ ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮ ತಕ್ಷಣ ಮಣಿಆರ್ಡರಿಗೂ ವಿ ಪಿ ಲೂ ಕಳುಹಿಸುತ್ತೆ ವಿಳಾಸ—ಮೈಸೂರು ದವಳ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

ಶ್ರೀಮುಖದ ಒಂದಂಶ

ಶ್ರೀ ಜಗದ್ಗುರು ಶ್ರೀ ಶೃಂಗೇರೀ ಶಿವಗಂಗಾ ಶ್ರೀ ಸುಬ್ರಹ್ಮಣ್ಯಾಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ಅಪ್ಪಣೆ ಕೊಡಿಸುವ ದೇನೆಂದರೆ —' ಚಿಕಿತ್ಸಕ ವಿ ಡಿ ಪಂಡಿತರಿಂದ ತಯಾರಾದ ಕೇಸರಿ ಕಲ್ಪಮಧುವು ಎಲ್ಲಾ ವಿಧವಾದ ಜ್ವರಗಳಿಗೂ ಅತ್ಯಂತ ಗುಣವನ್ನು ಪ್ರಾಣಿಕೋಟಿಗಳಿಗೆ ಕೊಡುವದರಲ್ಲಿ ಯಾವ ಸಂದೇಹವೂ ಇಲ್ಲವೆಂದು ನಾವು ಖಂಡಿತವಾಗಿ ಆಶೀರ್ವದಿಸಿರುತ್ತೇವೆ ಕೇಸರಿಕಲ್ಪ ಮಧುವನ್ನು ನಾವು ಸಂಚಾರದಲ್ಲಿ ಯಾವಾಗಲೂ ನಮ್ಮ ಸಂಸ್ಥಾನದ ಶಿಷ್ಯಮಂಡಲಿಯವರಿಗೆ ಇದನ್ನೇ ಉಪಯೋಗಿಸುತ್ತಾ ಇರುತ್ತೇವೆ " ರಕ್ತ ಶೋಧಕ, ರೋಗನಾಶಕ, ಸ್ತ್ರೀ ಜೀವನಾಮೃತ, ಕೇಸರಿಕಲ್ಪಮಧು, ಇವೇ ಮೊದಲಾದ ನಮ್ಮ ಔಷಧಗಳು ಮೈಸೂರು "ಚಿಂತಾಮಣಿ" ಆಫೀಸ್ ನ ರಾಮನಾಥಯ್ಯನವರಲ್ಲಿ ದೊರೆಯುತ್ತವೆ ನಮ್ಮ ಔಷಧಗಳ ಕ್ಯಾಟಲಾಗು ಅಪೇಕ್ಷಿಸುವವರು ಅರ್ಧ ಆಣೆ ಲೇಬಿಲ್ ಕಳುಹಿಸಿ ತರಿಸಿಕೊಳ್ಳಬಹುದು
ವಿಳಾಸ—ಚಿಕಿತ್ಸಕ, ವಿ ಡಿ ಪಂಡಿತರು, ಬೆಂಗಳೂರು ಸಿಟಿ

ಆಂಗ್ಲೇಯ ಚರಿತ್ರಸಂಗ್ರಹ
History of England in Kanarese

ಇಂಗ್ಲೆಂಡ್ ರಾಜ್ಯವು ಆರೋಗ್ಯ ಸಂಪದಗಳುಳ್ಳದಾದ ರೀತಿಯನ್ನೂ, ಅಲ್ಲಿ ಜನಾಭಿವೃದ್ಧಿಯಾದ ಬಗೆಯನ್ನೂ, ಇಂಗ್ಲಿಷರು ತಂತಮ್ಮ ಪ್ರಭುತ್ವದಲ್ಲಿ ನಡೆಸಿದ ಕಾರುಬಾರುಗಳನ್ನೂ, ಅವರು ಸರ್ವಾಧಿಕಾರಿಗಳಾಗಿ ಸಾರ್ವಭೌಮ ಪದವಿಗೆ ಬರಲು ಮಾಡಿದ ಕಾರ್ಯಸಾಧನೆ ಮುಂತಾದ್ದೆಲ್ಲವನ್ನೂ, ಪಾರ್ಲಿಮೆಂಟಿನ ವಿಚಾರವನ್ನೂ, ರಾಜನೀತಿಯನ್ನೂ, ತಿಳಿಯಬಯಸುವ ಕನ್ನಡ ಸ್ಕೂಲ್ ಟೀಚರುಗಳಿಗೂ, ೪ ಮತ್ತು ೫ನೆಯ ಫಾರಂ ಹೈಸ್ಕೂಲ್ ವಿದ್ಯಾರ್ಥಿಗಳಿಗೂ, ಪ್ರಜಾಪ್ರತಿನಿಧಿಗಳಿಗೂ ವರ್ತಕರಿಗೂ, ಅತ್ಯಂತೋಪಯುಕ್ತವಾದ ಮೇಲೆ ಹೇಳಿದ ಪುಸ್ತಕವು ಅತಿ ಸುಲಭಕ್ರಯಕ್ಕೆ ಸಿದ್ಧವಾಗಿದೆ ಸರ್ಕಾರದವರು ಈ ವಿಲಾಯತಿ ಚರಿತ್ರೆಯನ್ನು ಕೊಂಡುಕೊಂಡು, ದೇಶೀಯೋಪಾಧ್ಯಾಯ ಪರೀಕ್ಷೆಗೆ ಗೊತ್ತುಮಾಡಿ ಪ್ರೋತ್ಸಾಹಿಸಿದಾರೆ ಮುಖ್ಯವಾಗಿ ಬಾಲಕರಾದ ಇಂಗ್ಲಿಷರ ಚರಿತ್ರೆಯನ್ನು ಆದ್ಯಂತವಾಗಿ ಕನ್ನಡದಲ್ಲಿ ಓದಬೇಕೆಂದಿರುವವರಿಗೆ ಇದನ್ನು ಬಿಟ್ಟರೆ ಬೇರೆ ಪುಸ್ತಕ ಸಿಕ್ಕಲಾರದು ಸ್ವಲ್ಪಪ್ರತಿಗಳೇ ಉಳಿದಿವೆ ಜಾಗ್ರತೆ ಬರೆಯಿರಿ ಕ್ರಯ ೧ ಪ್ರತಿಗೆ ೪ ಆಣೆ ಚಾಮರಾಜೇಂದ್ರ ರಾಜ್ಯವಿಲಾಸ ೧೦ ಆಣೆ ತತ್ವದರ್ಪಣ ೪ ಆಣೆ
ವಿಳಾಸ —ದಿ ಜನರಲ್ ಏಜನ್ಸಿ, ಮೈಸೂರು ಅಥವಾ, ದಿ ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರು ಅಥವಾ ಮೆಸರ್ಸ್ ಕೆ ನರಸಿಂಹಯ್ಯ ಎಂಡ್ ಕೊ, ಮೈಸೂರು

ವೃತ್ತಾಂತ ಪತ್ರಿಕೆ.

ಸನ್ ೧೯೦೪ನೇ ಇಸವಿ ಜುಲೈ ತಾ|| ೧೪ನೇ ಗುರುವಾರ

ಕರಾರಿನ ವಿಚಾರವು

ರಷ್ಯಾ ಜಪಾನ್ ರಾಜ್ಯಗಳಿಗೆ ಕರಾರು ಮಾಡಿಸಿ ಅವರ ವೈಷಮ್ಯಗಳನ್ನೂ ರಕ್ತ ಚೆಲ್ಲುವಿಕೆಯನ್ನೂ ನಿಲ್ಲಿಸಬೇಕೆಂದು ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ಪ್ರಯತ್ನಪಟ್ಟು ಮಧ್ಯಸ್ಥಿಕೆ ಮಾಡುತ್ತಿರುವುದನ್ನೂ, ಯುದ್ಧ ಮಾಡಿ ಏನೇನು ನಾನಾವಿಧ ಕಷ್ಟನಷ್ಟಗಳನ್ನು ಅನುಭವಿಸಿ, ಕರಾರು [illegible] ವೆಂದು ರಷ್ಯನವರು ಒಪ್ಪಿರುವುದನ್ನೂ ಜಪಾನಿನವರು ಕೂಡ ಇದೇ ರೀತಿ ಕಷ್ಟನಷ್ಟಗಳು ಪ್ರಾಪ್ತವಾದಾಗ್ಯೂ ಸ್ವಲ್ಪವೂ ಧೈರ್ಯಗೆಡದೆ ಮಹಾ ಪರಾಕ್ರಮದಿಂದ ಪ್ರತಿಭಟಿಸಿ ರಷ್ಯನವರನ್ನು ಸೋಲಿಸಿ [illegible] ರಾಜ್ಯ ಪಡೆದಿರುವ [illegible] ಮಾಡಿಸ ಪ್ರಕಾರ [illegible] ಕರಾರು ಸಂಪೂರ್ಣವಾದ [illegible] ಯುದ್ಧವನ್ನು ನಿಲ್ಲಿಸುವ [illegible] ಮಾಡಿಕೊಳ್ಳುವುದಾಗಿ [illegible] ಕೇಳಿದ [illegible] ವನ್ನು [illegible] ಪತ್ರಿಕೆಗಳಲ್ಲಿ ಇಲ್ಲ ಇಂಗ್ಲೆಂಡ್ ಯೂರೋಪಿನ [illegible] ಇಟಲಿ, ಫ್ರಾನ್ಸ್, ಜರ್ಮನಿ ಮುಂತಾದ ಪ್ರಮುಖ ರಾಜ್ಯಗಳವರು ರಷ್ಯಾದವರ ಪಕ್ಷವನ್ನೇ ಜಪಾನಿನವರ ಪಕ್ಷವನ್ನೇ ವಹಿಸಿದವರಾಗಿರುತ್ತಾರೆಂಬುದು ಜನಜನಿತವಾಗಿದೆ. ಇವರು ಈ ಯುದ್ಧವನ್ನು ನಿಲ್ಲಿಸಬೇಕೆಂದೂ ಕರಾರು ಮಾಡಿಸಬೇಕೆಂದೂ ಎಷ್ಟು ಕುತೂಹಲ [illegible] ಇವರ ಮಧ್ಯಸ್ಥಿಕೆಯು ಸಫಲವಾಗಿ ಪರಿಣಮಿಸಿದಲ್ಲಿ ಆದರೂ ಇವರು ಅಂತರಂಗದಲ್ಲಿ ಕಾರ್ಯಭಾಗ ನಡೆಸುತ್ತಾ ಕರಾರಾಗುವುದಕ್ಕೆ ಬೇಕಾದ ಸಹಾಯ ಕೊಡುತ್ತಾ ಬಂದಿದಾರೆನ್ನುವುದಕ್ಕೆ ಸಂದೇಹವಿಲ್ಲ

ಕರಾರಿನ ಕಲಮುಗಳ ವಿಷಯದಲ್ಲಿ ಜಪಾನ್‌ನವರು ತಮ್ಮ ಮೊದಲಿನ ಅಭಿಪ್ರಾಯಗಳನ್ನು ಬದಲಾಯಿಸಿ [illegible] ಬಿಟ್ಟುಕೊಡುವುದಕ್ಕೆ ಒಪ್ಪದಕ್ಕಿರಾಗಿಲ್ಲವೆಂಬುದು ಸ್ವತಸ್ಸಿದ್ಧವಾಗಿದೆ ಅವರು [illegible] ಕಾರಣ ನ್ಯಾಯವಾಗಿ ಅವರಿಗೇ ವಿಶೇಷವಾದ ಪ್ರಯೋಜನವಾಗಬೇಕು ಈ ಆದರ್ಶವು ಉಚಿತವಾದುದೆಂದು ರಷ್ಯಾದವರಿಗೆ ತಿಳಿಯದೆಹೋದಲ್ಲಿ ಈಗ ಪ್ರಯತ್ನಪಟ್ಟಿರುವ ಕರಾರಿನ ಸಂಧಾನಗಳು ಕೆಟ್ಟುಹೋಗುವುದು ಖಂಡಿತ. ಈವರೆಗೆ ಪ್ರಕಟವಾಗಿರುವ ಪ್ರಕಾರ ಜಪಾನ್‌ನವರು ಅಪೇಕ್ಷಿಸುವುದೇನೆಂದರೆ—ರಷ್ಯಾದವರು ಜಪಾನ್‌ನವರಿಗೆ ಅವರ ಯುದ್ಧದ ನಷ್ಟಪರಿಹಾರಕ್ಕಾಗಿ ೩೦೦ ಕೋಟಿ ರೂಪಾಯನ್ನು ಕೊಡಬೇಕು ಮ್ಯಾಂಚೂರಿಯಾ ಸೀಮೆಯನ್ನು ರಷ್ಯಾದವರು ವಾಪಸು ಚೀನಾ ಯವರಿಗೆ ಕೊಟ್ಟುಬಿಡಬೇಕು, ಇದನ್ನು ಜಪಾನ್‌ನವರು ಕಾಪಾಡಿಕೊಂಡು ಬರುವರು ಜಪಾನ್‌ನವರು ಕೊರಿಯಾ ರಾಜ್ಯವನ್ನು ತಮ್ಮ ಸೈನ್ಯವನ್ನಿಟ್ಟು ಆಕ್ರಮಿಸಿಕೊಳ್ಳುವಂತೆ ಅವಕಾಶವಾಗಬೇಕು ರಷ್ಯಾದವರು ತಮ್ಮ ಪೋರ್ಟ್ ಆರ್ಥರ್, ಸೆಖಾಲಿಯನ್, ಮ್ಯಾಂಚೂರಿಯಾ ರೈಲ್ವೆ, ಈ ಮೂರನ್ನೂ ಜಪಾನ್‌ನವರಿಗೆ ಕೊಟ್ಟುಬಿಡಬೇಕು ಈ ರೈಲ್ವೆಗಾಗಿ ಮೊದಲಿಂತ ದ್ರವ್ಯದಲ್ಲಿ ಕೆಲವು ಭಾಗವನ್ನು ಜಪಾನ್‌ನವರು ಮತ್ತಾರ ಕೊಡುವುದಕ್ಕೆ ಸಿದ್ಧರಾಗಿದಾರೆ ಇದಲ್ಲದೆ ಪೂರ್ವದಿಗ್ಸಮುದ್ರದಲ್ಲಿ ರಷ್ಯಾದವರ ಜಹಜುಗಳ ಸಂಖ್ಯೆಯು ಬಹಳ ಮಿತಿಗೆ ಕಡಿಮೆಯಾಗಿರಬೇಕು ಸಮುದ್ರದೊಳಗೆ ಮುಳುಗಿಸಲ್ಪಟ್ಟಿರುವ ರಷ್ಯಾ ಜಹಜುಗಳನ್ನೆಲ್ಲಾ ಅವರು ಜಪಾನ್‌ನವರಿಗೇ ಬಿಡತಕ್ಕದ್ದು ಮತ್ತು ರಷ್ಯಾದವರು ಯುದ್ಧದ [illegible] ಎಷ್ಟು ದ್ರವ್ಯವನ್ನೆಲ್ಲಾ ಸಂಪೂರ್ಣವಾಗಿ [illegible] ಗಾಗಿ [illegible] ಪೋರ್ಟ್ ಆರ್ಥರ್ [illegible] ತೀರದ [illegible] ಜಪಾನಿನವರ [illegible] ಬಿಟ್ಟುಕೊಡಬೇಕು ಈ ರೀತಿ ಕರಾರು ಆಗಬೇಕೆಂದು ಜಪಾನ್‌ನವರು ಅಪೇಕ್ಷಿಸುವಂತೆ ಪ್ರಕಟವಾಗಿದೆ [illegible] ರಷ್ಯಾದವರ ಅಭಿಪ್ರಾಯವೇನೆಂದು ನೋಡಿದರೆ ಅವರ ರಾಜಧಾನಿಯಲ್ಲಿ ಪ್ರಕಟವಾಗುವ [illegible] ಪತ್ರಿಕೆಗಳ [illegible] ಅಭಿಪ್ರಾಯಗಳು ತಿಳಿಸುತ್ತವೆ [illegible] ಪೋರ್ಟ್ ಆರ್ಥರ್ [illegible] ತೀರದ [illegible] ಕೊಡಬೇಕೆಂದು [illegible] ಜಪಾನ್‌ನವರಿಗೆ ಬಿಟ್ಟುಕೊಡಬೇಕೆಂಬುವುದನ್ನು ಪೂರ್ವದಿಗ್ಸಮುದ್ರದಲ್ಲಿ ರಷ್ಯಾ ಜಹಜುಗಳನ್ನು ಇಡಬೇಕೆಂಬುವುದನ್ನೂ ಎಷ್ಟು ಮಾತ್ರಕ್ಕೂ ಒಪ್ಪಿಕೊಳ್ಳುವುದಿಲ್ಲ ಮ್ಯಾಂಚೂರಿಯಾ, ಪೋರ್ಟ್ ಆರ್ಥರ್ ಸೆಖಾಲಿಯನ್, ಈ ವಿಷಯಗಳನ್ನು ಕುರಿತು ಜಪಾನ್ ರೀತಿ ಕರಾರು ಬರೆದರೂ ಸಮ್ಮತಿಯುಂಟು ಈ ಅಭಿಪ್ರಾಯವನ್ನು ರಷ್ಯಾ ರಾಜರ ಒಬ್ಬ ಮಂತ್ರಿಯು [illegible] ಒಬ್ಬ ವಾರ್ತಾದಾರರಿಗೆ ತಿಳಿಸಿರುವಂತೆ ಪ್ರಕಟವಾಗಿದೆ

ಕಳೆದ ವಾರ ರಷ್ಯಾದವರು ಯುದ್ಧದ ಕಾರ್ಯಗಳನ್ನು ನಿಲ್ಲಿಸಬೇಕೆಂದು ಜಪಾನ್‌ನವರಿಗೆ ಬರೆದಿದ್ದರು ಕರಾರಿನ ಕಲಮುಗಳ ಪ್ರತಿ ಮುಖ್ಯ ಮುಖ್ಯವಾದ ಭಾಗಗಳನ್ನೆಲ್ಲಾ ಉಭಯಪಕ್ಷದವರೂ ಒಪ್ಪಿಕೊಂಡ ಹೊರತು ಯುದ್ಧಕಾರ್ಯವನ್ನು ನಿಲ್ಲಿಸಲಾಗುವುದಿಲ್ಲವೆಂದು ಜಪಾನಿನವರು ತಿಳಿಸಿರುವ ಜವಾಬು ನ್ಯಾಯವಾಗಿದೆ

ಒಳದೇಶದ ವೃತ್ತಾಂತಗಳು

ಅರಮನೆ ತಬೇಲೆಯ ಅಧ್ಯಕ್ಷ್ಯರಾದ ಮಿ|| ರಾಯಲ್ ಯವರಿಗೆ ಮುಂದಿನ ಸೋಮವಾರ ಬೆಂಗಳೂರಿನಲ್ಲಿ ವಿವಾಹವಾಗುವದೆಂದು ಕೇಳುತ್ತೇವೆ

* * * *

ರಾಜಧಾನಿಯಲ್ಲಿ ಬಿಸಲು ಕಾಣುವುದು ಕಷ್ಟವಾಗಿದೆ ಬಲವಾದ ಶೀತಗಾಳಿ ಬೀಸುತ್ತಿರುವುದು ಆದರೆ ಪ್ಲೇಗ್ ಮೊದಲಾದ ಯಾವ ಕಾಯಿಲೆಯ ಬಾಧೆಯೂ ಇಲ್ಲದೆ ಸುರಕ್ಷಿತವಾಗಿದೆ

* * * *

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ಮೈಸೂರು ಸಂಸ್ಥಾನಕ್ಕೆ ದಯಮಾಡುವಾಗ್ಗೆ ಅವರನ್ನು ಸತ್ಕರಿಸುವ ನಾನಾ ಬಗೆಯ ಏರ್ಪಾಡುಗಳಿಗೆ ಮೈಸೂರು ಸರ್ಕಾರದವರು ೨ ಲಕ್ಷ ರೂಪಾಯಿ ತನಕ ಖರ್ಚುಮಾಡುವವರಾಗಿದಾರೆಂದು ಕೇಳುತ್ತೇವೆ

* * * *

ಕಳೆದವಾರ ಶ್ರೀಮನ್ಮಹಾರಾಜರವರು ಬೆಂಗಳೂರಿಂದ ಕೋಟಾರಲಂ ಪಟ್ಟಣಕ್ಕೆ ಬಿಜಯಮಾಡಿದ್ದರು ಈ ದಿನ ಅವರು ಪರಿವಾರಸಹಿತ ಊಟಿಗರಿಗೆ ಚಿತ್ತೈಸುವರೆಂತಲೂ, ಬರುವ ಭಾನುವಾರ ನೀಲಗಿರಿಗೆ ದಯಮಾಡಿ ಸುಮಾರು ಎರಡು ವಾರಗಳ ತನಕ ಅಲ್ಲಿರುವರೆಂತಲೂ ತಿಳಿದುಬಂದಿದೆ.

* * * *

ಬೆಂಗಳೂರು ಇಂಪೀರಿಯಲ್ ರಿಜಿಮೆಂಟು ಅಡ್ಜುಟೆಂಟರಾಗಿ ಮಿ|| ಕನ್ನಿಂಘಂಯವರು ಕಳೆದ ವಾರ ತಮ್ಮ ೪೨ನೇ ವಯಸ್ಸಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ತಮ್ಮ ನೌಕರಿಯಲ್ಲಿ ಬಹಳ ಒಳ್ಳೆಯವರೆಂಬ ಹೆಸರು ಪಡೆದಿದ್ದರು ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

28



ಕೆಳಹೊಟ್ಟೆಯ ನೋವು ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಸೆಳೆಯುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ —"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ, ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ " ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು ಹೊಟ್ಟೆ ತೊಳಸುವಿಕೆ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು ಈಹೊತ್ತೇ ಕೊಂಡು ತರಿಸಿ, ಪ್ರಾಣವನ್ನು ಬದುಕಿಸಿಕೊಳ್ಳಬಹುದು ಕ್ರಯ ೧ ಬಾಟ್ಲಿಗೆ ೧ ರೂ , ೨ ರೂ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಜೆಬ್ಲ್ಯೂ ಇ ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್

ಬೆಂಗಳೂರಿನಲ್ಲಿ ತಾಲ್ಲೂಕ್ ವರ್ಕಿಂಗ್ ಇನ್ಸ್ಪೆಕ್ಟರ್ ಲಕ್ಷ್ಮಣಯ್ಯನವರು ಕಳೆದ ಶನಿವಾರ ಕುದುರೆಯ ಮೇಲೆ ಹೋಗುತ್ತಿದ್ದಾಗ ಕುದುರೆ ಚರಂಡಿಗೆ ಬಿದ್ದು ಅವರನ್ನು ಕೆಡವಿತೆಂತಲೂ, ನರಸೋಜಿರಾವ್, ಲಿಂಗಯ್ಯ ಎಂಬುವರು ಅವರನ್ನು ಜಟಕಾ ಗಾಡಿಯಲ್ಲಿ ಕೂರಿಸಿ ಮನೆಗೆ ಕಳುಹಿಸಿದರೆಂತಲೂ ಒಬ್ಬ ಬಾತ್ಮೀದಾರರು ತಿಳಿಸಿದಾರೆ.

* * * * *

ಕೊಳ್ಳೇಗಾಲದ ಒಬ್ಬ ಬಾತ್ಮೀದಾರರು ಬರೆಯುವುದು — ಕೊಳ್ಳೇಗಾಲದ ಐದು ಲಾಂದ್ರಕಂಬದ ರೋಡಿನಲ್ಲಿ ಕಳೆದ ಗುರುವಾರ ಸಾಯಂಕಾಲ ದೊಡ್ಡಪುರದ ಚನ್ನಪ್ಪನವರ ಮಗ ಬಸಪ್ಪನೆಂಬುವನು ತನ್ನ ಅಣ್ಣನಾದ ಮಾದಪ್ಪನನ್ನು ಕತ್ತಿಯಿಂದ ಹೊಟ್ಟೆಯನ್ನು ಚುಚ್ಚಿ ಓಡಿಹೋದನು. ಮಾದಪ್ಪನನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡಿದರೂ ಅವನು ಬದುಕದೆ ಶನಿವಾರ ಸತ್ತುಹೋದನು. ಪೋಲೀಸಿನವರು ಬಸಪ್ಪನನ್ನು ಹಿಡಿದುತಂದು ಜೈಲಿನಲ್ಲಿ ಇಟ್ಟಿದಾರೆ ಎಂಬುದೇ

* * * * *

ಬೆಂಗಳೂರು ಪಟ್ಟಣದಲ್ಲಿ ಮುಂದಿನ ವಾರದಿಂದ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವಿಕೆ ಪ್ರಾರಂಭವಾಗುವುದೆಂತಲೂ ಮೊದಲನೆಯ ದಿನ ಶ್ರೀಮನ್ ಮಹಾರಾಜರವರು ಆ ಕಾರ್ಖಾನೆಯನ್ನು ಪ್ರತಿಷ್ಠೆ ಮಾಡುವರೆಂತಲೂ ಕೇಳುತ್ತೇವೆ. ಅಲ್ಲಿ ಬಿನ್ನಿ ಕಂಪನಿಯು ಬಟ್ಟೆ ನೇಯುವ ಕಾರ್ಖಾನೆಯವರು ವಿದ್ಯುಚ್ಛಕ್ತಿಯ ಸಹಾಯದಿಂದ ಯಂತ್ರಗಳನ್ನು ನಡೆಸಲಾರಂಭಿಸಿದಾರೆ. ಬೆಂಗಳೂರಿನಲ್ಲಿ ಹಾಕಿರುವ ಈ ತಂತಿಗಳನ್ನು ಪ್ರಜೆಗಳ್ಯಾರೂ ಮುಟ್ಟಬಾರದೆಂತಲೂ ಹಾಗೆ ಮುಟ್ಟಿದಲ್ಲಿ ತಕ್ಷಣವೇ ಮೃತಪಡುವರೆಂತಲೂ ಸರ್ಕಾರದವರು ಪ್ರಕಟಿಸಿರುತ್ತಾರೆ.

* * * * *

ರಾಜಧಾನಿಯ ಜಗನ್ಮೋಹನ ಬಂಗಲೆಯ ಬಳಿ ನಂ' ಕೃಷ್ಣಪ್ಪಾಜಿ ಅರಸಿನವರ ಲಾಯದಲ್ಲಿ ವಾಸವಾಗಿದ್ದ ಇಬ್ಬರು ಕುಮಾರದವರು ಲೆಫ್ಟಿನೆಂಟ್ ಕರ್ನಲ್ ದೇಸರಾಜೇ ಅರಸಿನವರ ಬಳಿ ಚಾಕರಿ ಮಾಡುತಿದ್ದಾಗ ಅವರ ಬಾಬತು ಬಟ್ಟೆಬರೆಗಳನ್ನೂ ನಗಗಳನ್ನೂ ಕಳವುಮಾಡಿ ತಂದು ಮನೆಯಲ್ಲಿಟ್ಟುಕೊಂಡಿದ್ದರು. ಇದನ್ನೆಲ್ಲಾ ಕಳೆದ ವಾರ ಪೋಲೀಸಿನವರು ಪತ್ತೆಮಾಡಿ ತೆಗೆದುಕೊಂಡು ಹೋದರು. ಬೆಂಗಳೂರಿನಲ್ಲಿ ತನಿಖೆ ನಡೆಯುತ್ತಿದೆ. ಅವರು ಕಳವು ಮಾಡಿದ್ದ ನಗನಾಣ್ಯಗಳೆಲ್ಲಾ ಸುಮಾರು ೬೦,೦೦೦ ರೂಪಾಯಿಗಿಂತಲೂ ಹೆಚ್ಚಿನವೆಂದು ತಿಳಿದುಬಂದಿದೆ. ಸುಬ್ಬ, ಕೆಂಚ, ಮಾದ ಎಂಬೀ ಜನಗಳನ್ನು ಲಾಕಪ್ಪಿನಲ್ಲಿಟ್ಟುಕೊಂಡಿದಾರೆ. ಇನ್ನು ಕೆಲವರು ಇದಕ್ಕೆ ಸೇರಿರುವ ಹಾಗೂ ಅವರನ್ನು ತಲಾಷು ಮಾಡುತ್ತಿರುವ ಹಾಗೂ ಕೇಳುತ್ತೇವೆ

ವೀರಶೈವ ಮಹಾ ಸಭೆಯು.

ಕಳೆದ ಗುರುವಾರ ಬೆಂಗಳೂರು ಪಟ್ಟಣದ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಛತ್ರದ ಬೈಲಿನಲ್ಲಿ ೨ನೆಯ ವೀರಶೈವ [illegible] ಮೈಸೂರು ಸಂಸ್ಥಾನದಲ್ಲೂ ಧಾರವಾಡ, ಬೆಳಗಾವಿ, ಪೂನಾ, ಸಾಂಗ್ಲಿ, ಬಳ್ಳಾರಿ ಮೊದಲಾದ ಕಡೆಗಳಲ್ಲೂ ಇರುವ ವೀರಶೈವಮತಸ್ಥರು ಈ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಿದ್ದರು. ಸುಮಾರು ೬೦೦ ಜನ ಪ್ರತಿನಿಧಿಗಳೂ ೩,೦೦೦—೪೦೦೦ ಜನ ಪ್ರೇಕ್ಷಕರೂ ಸಭೆಯಲ್ಲಿ ಹಾಜರಾಗಿದ್ದರು. ಸಭಾ ಮಂದಿರವನ್ನು ನಾನಾ ಪ್ರಕಾರವಾಗಿ ಅಲಂಕರಿಸಿದ್ದರು. ಮೈಸೂರು ಸಂಸ್ಥಾನದ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು, ಲೆಫ್ಟಿನೆಂಟ್ ಕರ್ನಲ್ ಜೆ. ದೇಸರಾಜೇ ಅರಸಿನವರು, ಛೀಫ್ ಕೋರ್ಟ್ ಜಡ್ಜಿಗಳಾದ ಮ॥ ಎ ರಂಗಸ್ವಾಮಿಯಯ್ಯಂಗಾರ್ರು, ಮ॥ ಎಚ್. ವಿ. ನಂಜುಂಡಯ್ಯನವರು, ಪರ್ಸನಲ್ ಅಸಿಸ್ಟೆಂಟರಾದ ಮ॥ ಸುಬ್ರಾಯ ಐಯರವರು, ಗವರ್ನಮೆಂಟು ಸೆಕ್ರೆಟರಿ ಮ॥ ಎಂ. ಕಾಂತರಾಯರು, ಸ್ಕೂಲ್‌ಗಳ ಡೆಪ್ಯುಟಿ ಇನ್ಸ್ಪೆಕ್ಟರ್ ವಿ. ವೆಂಕಟರತ್ನಯ್ಯಂಗಾರ್ರು, ಇಂಜನಿಯರ್ ಮ॥ ಶ್ರೀನಿವಾಸರಾಯರು, ಅ॥ ಕಮೀಷನರ್ ಮ॥ ಎ. ಆನಂದರಾಯರು, ಈ ಮೊದಲಾದ ಬಹು ಮಂದಿ ಉದ್ಯೋಗಸ್ಥರು ಸಭೆಯನ್ನಲಂಕರಿಸಿದ್ದರು. ಸಭಾಧ್ಯಕ್ಷರಾದ ಸರ್ ಸಿರಸಂಗೀಕರ ದೇಸಾಯಿಯವರು ಸಾರೋಟಿನಲ್ಲಿ ದಯಮಾಡಿದಾಗ ಮ॥ ಕೆ. ಪಿ. ಪುಟ್ಟಣ್ಣಶೆಟ್ಟಿಯವರು ಹೋಗಿ ಅವರನ್ನು ಎದುರುಗೊಂಡು ಮಂಟಪದೊಳಕ್ಕೆ ಕರೆತಂದರು.

ತರುವಾಯ ಸಭಾಕಾರ್ಯಾರಂಭವಾಗುವುದಕ್ಕೆ ಮೊದಲು ಕೆಲವು ವೈದಿಕರು ಸಭೆಯ ಶ್ರೇಯಃ ಪ್ರಾರ್ಥನಾ ಶ್ಲೋಕಗಳನ್ನು ರಚಿಸಿ ಹೇಳಿದರು. ಆಗ ಮ॥ ಕೆ. ಪಿ. ಪುಟ್ಟಣ್ಣಶೆಟ್ಟಿಯವರು ಈ ಸಭೆಗೆ ಬರುವುದಕ್ಕೆ ಅವಕಾಶವಾಗದ ಬಹು ಮಂದಿ ಮೆಂಬರುಗಳೂ ದೊಡ್ಡ ಮನುಷ್ಯರೂ ಉದ್ಯೋಗಸ್ಥರೂ ಬರೆದು ಕಳುಹಿಸಿದ್ದ ಕಾಗದಗಳನ್ನೂ ಮಠಗಳಿಂದ ಬಂದಿದ್ದ ಶ್ರೀ ಮುಖಗಳನ್ನೂ ಸಭಿಕರಿಗೆ ಓದಿ ಹೇಳಿದ ಮೇಲೆ ಸಭಾಪತಿಯನ್ನೂ ಮೆಂಬರುಗಳನ್ನೂ ವಂದಿಸಿ ಅವರಿಗೆಲ್ಲಾ ಸುಸ್ವಾಗತವನ್ನು ಬಯಸಿ ಉಪನ್ಯಾಸ ಮಾಡಿದರು. ಅವರು ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ—ಇಂಥಾ ಸಂಘವನ್ನು ವೀರಶೈವ ಮತಸ್ಥರು ಮಾಡಿಕೊಂಡು ತಮ್ಮ ಜನಗಳ ವಿದ್ಯಾಬುದ್ಧಿ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತಾ ತಮ್ಮನ್ನೂ ತಮ್ಮ ಮೂಲಕ ತಮ್ಮ ದೇಶವನ್ನೂ ಉಚ್ಛಸ್ಥಿತಿಗೆ ತರಲು ಸಾಹಸಪಡಬೇಕಾಗಿದೆ. ಇದಕ್ಕಾಗಿ ಮಹನೀಯರೆಲ್ಲಾ ಸೇರಿ ಚಂದಾ ಹಾಕಿ ಅದರ ಮೂಲಕ ವೀರಶೈವ ಮತಸ್ಥರ ಮಕ್ಕಳನ್ನು ಅಭಿವೃದ್ಧಿಗೆ ತರಬೇಕು ಎಂಬುದೇ.

ಅನಂತರ ಸಭಿಕರ ಅಪೇಕ್ಷೆಯ ಪ್ರಕಾರ ಸರ್ ದೇಸಾಯಿಯವರು ಸಭೆಯ ಅಗ್ರಾಸನವನ್ನು ವಹಿಸಿ, ಈ ಮಹಾ ಸಭೆಯ ಉದ್ದೇಶ, ಗ್ರಂಥಪ್ರಚಾರ ಮತ್ತು ಪತ್ರಿಕಾ ಪ್ರಯೋಜನ, ಪರೀಕ್ಷೆಗಳು, ವಿದ್ಯಾಭ್ಯಾಸ, ವಿದ್ಯಾರ್ಥಿನಿಲಯ, ಸಂಸ್ಕೃತ ಪಾಠಶಾಲೆಗಳು, ಈ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿ ಸಭಿಕರ ಮನಸ್ಸನ್ನು ಸಂತೋಷಪಡಿಸಿದರು.

ಎರಡನೆಯ ದಿನದ ಸಭೆ.

ಮೊದಲನೆಯ ದಿನ ಸೇರಿದ್ದ ಮೆಂಬರುಗಳಿಗಿಂತಲೂ ಎರಡನೆಯ ದಿನ ಸೇರಿದ್ದವರ ಸಂಖ್ಯೆ ಹೆಚ್ಚಾಗಿತ್ತು. ಎರಡನೆಯ ದಿನ ವೀರಶೈವ ವಿದ್ಯಾಭಿವೃದ್ಧಿಗಾಗಿ ಒಂದು ಫಂಡಿನ ಅವಶ್ಯಕತೆಯನ್ನು ಕುರಿತು ಮೆಂಬರುಗಳು ಉಪನ್ಯಾಸ ಮಾಡಿ ಚಂದಾ ಪಟ್ಟಿ ಹಾಕಿದರು. ಈ ಪಟ್ಟಿಗೆ ಮ॥ ಕೆ. ಪಿ. ಪುಟ್ಟಣ್ಣಶೆಟ್ಟಿಯವರು ೫,೦೦೦ ರೂಪಾಯಿಗಳನ್ನು ಕೊಡುವುದಾಗಿ ರುಜು ಹಾಕಿದಾರೆ. ಇನ್ನೂ ಅನೇಕರು ಚಂದಾ ಹಾಕಿದರು. ಬೆಂಗಳೂರಿನ ಭಾರಿ ಭಾರೀ ವರ್ತಕರು ೧,೦೦೦—೧,೫೦೦ ಈ ಪ್ರಕಾರ ಚಂದಾ ಕೊಡುವುದಾಗಿ ವಾಗ್ದಾನ ಮಾಡಿದಾರೆ. ಮ॥ ಅತ್ತಿಬೆಲೆ ಶಿವಬಸಪ್ಪನವರು ೧೦,೦೦೦ ರೂಪಾಯಿ ಹಾಕಿದಾರೆ. ಅಂತು ಈ ವಿದ್ಯಾಪ್ರೋತ್ಸಾಹಕ್ಕೆ ಸಭಿಕರೆಲ್ಲ ಸುಮಾರು ಐವತ್ತು ಸಹಸ್ರ ರೂಪಾಯಿ ವರೆಗೆ ಚಂದಾ ಕೊಡುವಂತೆ ಮಾತುಕೊಟ್ಟಿದಾರೆ.

ಈ ಸಭೆಯನ್ನು ಸಾಂಗವಾಗಿ ನೆರವೇರಿಸಿದ್ದಕ್ಕಾಗಿ ಸಭಿಕರೆಲ್ಲಾ ಸರ್ ದೇಸಾಯಿಯವರನ್ನೂ, ಮ॥ ಕೆ. ಪಿ. ಪುಟ್ಟಣ್ಣಶೆಟ್ಟಿಯವರನ್ನೂ, ಮ॥ ಟಿ ಎಸ್' ಸಾಂಬಪ್ಪನವರನ್ನೂ ವಂದಿಸಿದರು. ಈ ಸಭಿಕರು ತಮ್ಮ ಸಂಘದವರ ಏಳಿಗೆಗಾಗಿ ಮಾಡುತ್ತಿರುವ ಕಾರ್ಯಗಳೆಲ್ಲಾ ಸಾರ್ಥಕವಾಗಲೆಂದು ಹಾರೈಸುತ್ತೇವೆ. ಈ ಪ್ರಕಾರ ಲಿಂಗಾಯತ ಪ್ರಜೆಗಳು ಏಕೀಭವಿಸಿ ಶ್ರಮಪಟ್ಟು ತಮ್ಮ ಜನಗಳ ಪುರೋಭಿವೃದ್ಧಿಗೆ ಬೇಕಾಗುವ ಸಹಾಯ ಸಂಪತ್ತುಗಳನ್ನು ಒದಗಿಸಿಕೊಳ್ಳುವುದಕ್ಕೆ ಕಾರ್ಯಾರಂಭ ಮಾಡಿರುವುದು ಸಂತೋಷಕರವಾಗಿದೆ. ವಿದ್ಯಾದಾನವು ಶ್ರೇಷ್ಠ ದಾನಗಳಲ್ಲಿ ಒಂದೊಂದು ವಿದ್ಯೆಯಿಂದಲೇ ಸಕಲ ಸಂಪತ್ತುಗಳೂ ಲಭ್ಯವಾಗುವವೆಂದೂ ನಾವು ಹೇಳಬೇಕಾಗಿಲ್ಲ

ರಷ್ಯ ಜಪಾನ್ ಯುದ್ಧವು.

ಕರಾರಿನ ಸಂಧಾನಗಳು.

ಅಮೇರಿಕ ಸಂಸ್ಥಾನದ ಮುಖ್ಯಪಟ್ಟಣವಾದ ವಾಷಿಂಗ್ಟನ್ ನಗರದಲ್ಲಿ ರಷ್ಯ ಜಪಾನ್ ರಾಜ್ಯಗಳ ಪ್ರತಿನಿಧಿಗಳು ಮುಂದಿನ ಆಗಸ್ಟು ತಿಂಗಳು ಸೇರಿ ಕರಾರಿನ ವಿಷಯಗಳನ್ನು ಚರ್ಚಿಸಿ ಗೊತ್ತುಮಾಡುವವರಾಗಿದಾರೆ. ಇದಕ್ಕೆ ರಷ್ಯದವರ ಕಡೆ ಕೌಂಟ್ ಮುರಾವಿಫ್‌ಯವರೂ ಬ್ಯಾರನ್ ರೋಜನ್‌ಯವರೂ ರಾಯಭಾರಿಗಳಾಗಿ ಹೋಗಬೇಕೆಂದು ರಷ್ಯ ರಾಜ್ಯದವರೂ ಜಪಾನಿನವರ ಕಡೆ ಬ್ಯಾರನ್ ಕೊಮುರಾಯವರೂ ಎಂ. ತಾಕಹೀರಾಯವರೂ ರಾಯಭಾರಿಗಳಾಗಿ ಹೋಗತಕ್ಕದ್ದೆಂದು ಜಪಾನ್ ಸರ್ಕಾರದವರೂ ನೇಮಕಮಾಡಿದ್ದಾಯಿತು. ರಷ್ಯ ಚಕ್ರವರ್ತಿಯವರು, ಮತ್ತೆ ಎಂದೆಂದಿಗೂ ಯುದ್ಧಕ್ಕೆ ಕಾರಣವಾಗದಂತೆ ಶಾಶ್ವತವಾಗಿ ನಡೆಯುವಂಥಾ ಕರಾರು ಆಗಬೇಕೆಂದೂ ಈ ವಿಷಯವಾಗಿ ತಕ್ಕ ಕಲಮುಗಳನ್ನು ಕರಾರಿನೊಳಗೆ ಸೇರಿಸಬೇಕೆಂದೂ ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟ್‌ಯವರಿಗೆ ತಿಳಿಸಿದಾರೆ. ಅತ್ತಲಾಗಿ ಯುದ್ಧ ಭೂಮಿಯಲ್ಲಿ ಯುದ್ಧಕಾರ್ಯಗಳನ್ನು ಕೆಲವು ಕಾಲದಮಟ್ಟಿಗೆ ನಿಲ್ಲಿಸುವಂತೆ ರಷ್ಯದವರು ಸೂಚಿಸಿ ಜಪಾನಿನವರಿಗೆ ಅಮೇರಿಕದ ಪ್ರೆಸಿಡೆಂಟರ ಮುಖಾಂತರ ತಿಳಿಸಿರುತ್ತಾರೆ.

ಜಪಾನ್ ಚಕ್ರವರ್ತಿಯವರು ತಮ್ಮ ಕಡೆಯ ರಾಯಭಾರಿಗಳನ್ನು ರಾಜಧಾನಿಗೆ ಕರೆಸಿಕೊಂಡು ಅವರಿಗೆ ಔತಣ ಮಾಡಿ ಅವರನ್ನು ಕುರಿತು—ರಷ್ಯದವರು ಈಗ ಕರಾರು ಮಾಡಿಕೊಳ್ಳಬೇಕೆಂಬ ಹಾಗೆ ಆತುರವನ್ನೂ ನಮ್ರಭಾವವನ್ನೂ ತೋರಿಸುತ್ತಿದಾರೆ. ಆ ಪರಂತೆಯೇ ಅವರು ಕಡೇ ತನಕ ಇದ್ದು ಕರಾರು ನಡೆಯುವುದಾದರೆ ಯುದ್ಧ ಕಾರ್ಯಗಳನ್ನು ನಿಲ್ಲಿಸಬಹುದಾಗಿದೆ. ಹೀಗಾಗಬೇಕೆಂಬುವುದೇ ನಮ್ಮ ಅಭಿಮತವೂ ಆಗಿರುವುದು. ಆದಕಾರಣ ಎಂದೆಂದಿಗೂ ಮನಸ್ತಾಪಗಳು ಹುಟ್ಟದಂತೆ ಶಾಶ್ವತವಾದ ಕರಾರನ್ನು ಮಾಡಿಕೊಂಡು ಬರುವವರಾಗಿ ಎಂದು ಅಪ್ಪಣೆಕೊಟ್ಟು ಕಳುಹಿಸಿದರು.

ಚೀನಾಯವರು ಕಲೆ ಹಾಕುವರು.

ಚೀನಾ ರಾಜ್ಯದವರು ಈ ಕರಾರು ನಡೆಯುವಾಗ್ಗೆ ತಮ್ಮ ಕಡೆಯ ರಾಯಭಾರಿಗಳೂ ಹಾಜರಾಗಿರಬೇಕೆಂದು ಅಮೇರಿಕದ ಪ್ರೆಸಿಡೆಂಟರಿಗೆ ತಿಳಿಸಿದರು. ಪ್ರೆಸಿಡೆಂಟರು ಚೀನಾಯವರ ಅಭಿಪ್ರಾಯವನ್ನು ರಷ್ಯದವರಿಗೂ ಜಪಾನಿನವರಿಗೂ ಹೇಳಿದರು. ಇವರು ಯಾವ ಜವಾಬು ಕೊಟ್ಟರೋ ಇನ್ನೂ ಪ್ರಕಟವಾಗಲಿಲ್ಲ. ಆದರೆ ಇದನ್ನು ರಷ್ಯದವರು ಒಪ್ಪಿಕೊಂಡರೆಂತಲೂ ಜಪಾನಿನವರು ಒಪ್ಪಿಕೊಳ್ಳುವುದಿಲ್ಲವೆಂತಲೂ ಕಾಣುತ್ತಿದೆ

ಕರಾರಾಗುವ ಸ್ಥಳ

ಅಮೇರಿಕಕ್ಕೆ ಸೇರಿದ ನ್ಯೂ ಹ್ಯಾಂಪ್‌ಶೈರ್ ಡಿಸ್ಟ್ರಿಕ್ಟಿನಲ್ಲಿರುವ ಪೋರ್ಟ್ಸ್‌ಮತ್ ಎಂಬ ಪಟ್ಟಣದೊಳಗೆ ರಾಯಭಾರಿಗಳೆಲ್ಲಾ ಸೇರಿ ಕರಾರಿನ ಕಲಮುಗಳನ್ನು ಚರ್ಚೆಮಾಡಿ ತಹನಾಮೆಯನ್ನು ಬರೆಯುವಂತೆ ಸ್ಥಳವನ್ನು ಗೊತ್ತುಮಾಡಿದಾರೆ. ಈ ಸ್ಥಳದ ಹವಾ ತಂಪಾಗಿಯೂ ಸುಖಕರವಾಗಿಯೂ ಇದೆ. ರಾಯಭಾರಿಗಳು ಮೊದಲು ನ್ಯೂಯಾರ್ಕ್ (ಅಮೇರಿಕದ ಮುಖ್ಯ ಪಟ್ಟಣ) ನಗರದಲ್ಲಿ ಕೂಡಿ, ಅಲ್ಲಿಂದ ಎರಡು ಹಡಗುಗಳಲ್ಲಿ ಹೊರಟು ಪ್ರೆಸಿಡೆಂಟ್ ರೂಸ್‌ವೆಲ್ಟ್ (ಮಧ್ಯಸ್ಥಗಾರರು) ಯವರನ್ನು ಎದುರುಗೊಂಡು, ತರುವಾಯ ಪೋರ್ಟ್ಸ್‌ಮತ್ತಿಗೆ ಹೋಗಿ ಸೇರುವರು.

ಚೀನಾದವರ ಉದ್ದೇಶ.

ರಷ್ಯ ಜಪಾನ್ ರಾಯಭಾರಿಗಳು ಚೀನಾ ರಾಜ್ಯದ ವಿಚಾರದಲ್ಲಿ ಚೀನಾ ರಾಯಭಾರಿಯನ್ನಿಟ್ಟುಕೊಳ್ಳದೆ ತಹನಾಮೆಗಳನ್ನು ಬರೆದುಕೊಳ್ಳುವ ಪಕ್ಷದಲ್ಲಿ ಚೀನಾ ರಾಜ್ಯದವರು ಆ ಕಲಮುಗಳನ್ನು ಒಪ್ಪಿಕೊಳ್ಳುವುದಿಲ್ಲವೆಂದು ಚೀನಾದವರು ಎಲ್ಲಾ ರಾಜ್ಯಾಧಿಪತಿಗಳಿಗೂ ತಿಳಿಸಿದ್ದಾರೆ. ಇದನ್ನು ನೋಡಿ ಜಪಾನಿನವರು ಈ ಇಸ್ತಿಹಾರ್ನಾಮೆಯು ತಮ್ಮ ಉದ್ದೇಶ ಕಾರ್ಯಗಳಿಗೆ ಸಂಬಂಧಪಡುವುದಿಲ್ಲವೆಂದು ಜವಾಬು ಕೊಟ್ಟಿದಾರೆ

ರಷ್ಯ ರಾಯಭಾರಿಯ ಬದಲಾವಣೆ.

ಕೌಂಟ್ ಮುರಾವಿಫ್‌ಯವರು ತಮ್ಮ ಶರೀರಸ್ಥಿತಿ ಚೆನ್ನಾಗಿಲ್ಲವೆಂದು ಹೇಳಿ ರಾಯಭಾರಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ರಷ್ಯ ಚಕ್ರವರ್ತಿಯವರು ಆ ರಾಯಭಾರಿಯ ಸ್ಥಾನಕ್ಕೆ ಎಂ. ಡಿವಿಟ್ಟ ಎಂಬ ಅಧಿಕಾರಿಯನ್ನು ನೇಮಕಮಾಡಿದರು

ಯುದ್ಧ ಕಾರ್ಯ ನಿಲ್ಲಿಸಲಾಗದು.

ಜಪಾನ್ ರಾಜ್ಯದವರು ರಷ್ಯದವರು ಬರೆದಿದ್ದ ಕಾಗದಕ್ಕೆ ಪ್ರತಿಯಾಗಿ ಅವರಿಗೆ—ಕರಾರಿನ ಮುಖ್ಯ ವಿಷಯಗಳನ್ನು ಉಭಯ ಪಕ್ಷದವರೂ ಒಪ್ಪಿಕೊಳ್ಳುವ ತನಕ ಯುದ್ಧಕಾರ್ಯಗಳನ್ನು ನಿಲ್ಲಿಸುವುದಕ್ಕಾಗಲಾರದು ಎಂಬುದಾಗಿ ಜವಾಬು ಕೊಟ್ಟಿದಾರೆ

ವಿದೇಶ ವರ್ತಮಾನಗಳು.

ಕಾಶ್ಮೀರ ಸಂಸ್ಥಾನದ ಲೇ ಡಿಸ್ಟ್ರಿಕ್ಟಿನಲ್ಲಿ ಗೋಕಾಯಗಳಿಗೆ ಕಾಲುಬಾಯಿ ಜ್ವರವು ಹುಟ್ಟಿ ೫,೦೦೦ ಮೂಗುಪ್ರಾಣಿಗಳು ಸತ್ತುಹೋದವೆಂದು ತಂತೀ ವರ್ತಮಾನ ಬಂದಿದೆ

* * * * *

ಕಾಶ್ಮೀರ ಸಂಸ್ಥಾನದ ಮಹಾರಾಜರವರ ಏಕ ಪುತ್ರನು ಕಳೆದ ಶುಕ್ರವಾರ ಶ್ರೀನಗರದಲ್ಲಿ ಕಾಲವಾದನೆಂದು ತಿಳಿಸಲು ವಿಷಾದಿಸುತ್ತೇವೆ. ಈ ಕುಮಾರನು ಯುವರಾಜನಾಗಿ ಸಂಸ್ಥಾನದ ಸಿಂಹಾಸನಕ್ಕೆ ಹಕ್ಕುದಾರನಾಗಿದ್ದನು.

* * * * *

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಕಳೆದವಾರ ಪುತ್ರೋತ್ಸವವಾಯಿತು. ತಾಯಿಯೂ ಬಾಣಂತಿಯೂ ಆರೋಗ್ಯವಾಗಿದಾರೆಂದು ತಂತೀ ವರ್ತಮಾನ ಬಂದಿದೆ. ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಐದು ಮಂದಿ ಪುತ್ರರೂ ಒಬ್ಬ ಪುತ್ರಿಯೂ ಇರುತ್ತಾರೆ. ಕಳೆದ ೧೮೯೪ ನೆ ಜೂನ್ ೨೩ ರಲ್ಲಿ ಜ್ಯೇಷ್ಠ ಪುತ್ರರಾದ ಎಡ್ವರ್ಡ್ ರಾಜಕುಮಾರರೂ, ೧೮೯೭ ರಲ್ಲಿ ಜ್ಯೇಷ್ಠ ಪುತ್ರಿಯಾದ ವಿಕ್ಟೋರಿಯಾ ರಾಜಕುಮಾರಿಯೂ ಜನಿಸಿರುತ್ತಾರೆ. ರಾಜದಂಪತಿಗಳಿಗೂ ಅವರ ಪುತ್ರಿ ಪುತ್ರರುಗಳಿಗೂ ಸುಖಸಂತೋಷಗಳುಂಟಾಗಲೆಂದು ಹಾರೈಸುತ್ತೇವೆ

* * * * *

ಜೂನಾರಿನಲ್ಲಿರುವ ಮಾರ್ಲಿಹಾಮಿಲ್ಟನ್ ಕಂಪೆನಿಯವರು ಕಾಗೆ ಬಂಗಾರವನ್ನು ಗರ್ಭದಲ್ಲಿಟ್ಟು ಚಪ್ಪಡಿಗಳನ್ನೂ ಇಟ್ಟಿಗೆಗಳನ್ನೂ ತಯಾರುಮಾಡುತ್ತಿದಾರೆ. ಈ ಇಟ್ಟಿಗೆಗಳನ್ನು ಉಪಯೋಗಿಸಿ ಗೋಡೆ ಹಾಕಿ ಮನೆಕಟ್ಟಿದರೆ ಅಂಥಾ ಮನೆಯೊಳಗೆ ಉರಿಬೇಸಿಗೆಯಲ್ಲೂ ತುಂಬಾ ತಂಪಾಗಿರುತ್ತದೆ. ಸೆಕೆಯು ಮನೆಯೊಳಗಿರುವವರಿಗೆ ಸ್ವಲ್ಪವೂ ತಟ್ಟುವದಿಲ್ಲ. ಗೋಡೆಯನ್ನು ಹೊರಗಡೆ ಒಂದು ವರಿಸೆಯಷ್ಟು ಮಾತ್ರ ೪ ಇಟ್ಟಿಗೆಯಿಂದ ಕಟ್ಟಿದರೆ ಸಾಕಾಗುವುದೆಂದು ಹೇಳುತ್ತಾರೆ. ಸಮುದ್ರ ತೀರಗಳಲ್ಲಿರುವ ಪಟ್ಟಣಗಳಲ್ಲಿ ಸೆಕೆಯು ತುಂಬಾ ಹೆಚ್ಚಾಗಿರುತ್ತಾದ್ದರಿಂದ ಮನೆಗಳನ್ನು ಈ ಇಟ್ಟಿಗೆಯಿಂದ ಕಟ್ಟುವದು ತುಂಬಾ ಕ್ಷೇಮಕರವಾಗಿದೆ.

* * * * *

ಮ್ಯೆಮೆನ್‌ಸಿಂಗ್ ಪಟ್ಟಣದ ಜೈಲ್‌ಖಾನೆಯಲ್ಲಿ ಸಜಾ ಶಿಕ್ಷೆಯನ್ನು ಅನುಭವಿಸುತ್ತಿದ್ದ ರಾಮಕುಮಾರ ಗೋಷನೆಂಬುವನನ್ನು ಶಿಕ್ಷೆಯ ಅವಧಿ ಪೂರೈಸಿದರೂ ಅಧಿಕಾರಿಗಳು ಯಾವಕಾರಣದಿಂದಲೋ ಬಿಡುಗಡೆ ಮಾಡದೆ ಹೋದರು. ಅವನು ಇನ್ನು ಕೆಲವು ದಿನ ಬಂದೀವಾಸನಾಗಿರಬೇಕಾಗಿ ಬಂತು. ತರುವಾಯ ಅವನನ್ನು ಜೈಲಿನಿಂದ ಬಿಟ್ಟುಬಿಟ್ಟರು. ಆಗ ಅವನು ತನ್ನನ್ನು ಅಕ್ರಮವಾಗಿ ಜೈಲಿನಲ್ಲಿ ಹೆಚ್ಚುಕಾಲ ಇಟ್ಟಿದ್ದರೆಂದೂ ಇದಕ್ಕೆ ತನಗೆ ನಷ್ಟದ್ರವ್ಯ ಕೊಡಿಸಬೇಕೆಂದೂ ಇಂಡಿಯಾ ಗವರ್ನಮೆಂಟಿನವರ ಮೇಲೆ ದಾವಾ ತಂದನು. ಗವರ್ನಮೆಂಟಿನವರು ರಾಮಕುಮಾರನಿಗೆ ೫೦ ರೂಪಾಯಿ ಪ್ರತಿಫಲಕೊಟ್ಟು ಸಮಾಧಾನ ಪಡಿಸಿದರು. ಅವನು ದಾವೆಯನ್ನು ವಾಪಸು ತೆಗೆದುಕೊಂಡನು.

* * * * *

ಪೋರ್ಟ್ ಆರ್ಥರ್ ಕೋಟೆಯನ್ನು ಜಪಾನಿನವರಿಗೆ ಒಪ್ಪಿಸಿಕೊಟ್ಟ ಜನರಲ್ ಸ್ಟೋಯೆಸೆಲ್‌ಯವರನ್ನು ಕಳೆದವಾರ ರಷ್ಯ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್ ಪಟ್ಟಣದಲ್ಲಿ ಸರ್ಕಾರದವರು ದಸ್ತಗಿರಿ ಮಾಡಿ ಬಂದೀಖಾನೆಯಲ್ಲಿಟ್ಟಿದಾರೆಂದು ತಂತೀ ವರ್ತಮಾನ ಬಂದಿದೆ. ಇದಕ್ಕೆ ಕಾರಣವೇನೋ ಇನ್ನೂ ಪ್ರಕಟವಾಗಲಿಲ್ಲ. ಆದರೂ ಜನರಲ್ ಸ್ಟೋಯೆಸೆಲ್‌ಯವರು ಪೋರ್ಟ್ ಆರ್ಥರ್ ಕೋಟೆಯಲ್ಲಿ ಅವರ ಕೈಕೆಳಗಿದ್ದ ಸೈನಿಕರ ಪೈಕಿ ಯಾರೂ ಪ್ರೀತಿಸುತ್ತಿರಲಿಲ್ಲವೆಂತಲೂ ಅವರು ತಮ್ಮ ಪತ್ನಿಯ ಮುಖಾಂತರ ಸೈನಿಕರಿಗೆ ಆಹಾರ ಪದಾರ್ಥಗಳನ್ನು ತುಂಬಾ ಹೆಚ್ಚಾಗಿ ಮಾರಿಸುತ್ತಿದ್ದರೆಂತಲೂ ಕೋಟೆಯನ್ನು ಜಪಾನಿನವರಿಗೆ ಒಪ್ಪಿಸುವುದಕ್ಕಿಂತ ಮೊದಲು ಅವರು ಸಾಮಾನು ಮುಂತಾದ್ದನ್ನು ೧೦೦ ಪೆಟ್ಟಿಗೆಗಳ ತುಂಬಾ ತುಂಬಿ ರವಾನಿಸಿಕೊಂಡು ಬಂದರೆಂತಲೂ ಶತ್ರುಗಳ ಫಿರಂಗಿಗಳು ಕೋಟೆಯೊಳಕ್ಕೆ ಬೀಳುತ್ತಿರುವಾಗ ಅವರು ಒಂದು ಸಲವಾದರೂ ತಮ್ಮ ಬಂಗಲೆಯನ್ನು ಬಿಟ್ಟು ಹೊರಕ್ಕೆ ಬರಲಿಲ್ಲವೆಂತಲೂ ಜನಜನಿತವಾಗಿ ತಿಳಿದಿರುತ್ತದೆ. ಈ ಉದ್ದೇಶಗಳನ್ನು ಇಷ್ಟರಲ್ಲೇ ಸರ್ಕಾರದವರು ವಿಚಾರಣೆ ಮಾಡುತ್ತಾರಾದಕಾರಣ ಅವರ ಮೇಲೆ ಬಂದಿರುವ ಅಪರಾಧವು ಹೊರಪಡುವುದೆಂದು ನಿರೀಕ್ಷಿಸಬಹುದಾಗಿದೆ.

ದ್ರಾಕ್ಷೆಯ ಬಳ್ಳಿಯೂ ಕೊಂಬೆಗಳೂ.

ನಾನೇ ನಿಜವಾದ ದ್ರಾಕ್ಷೇ ಬಳ್ಳಿ, ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದೆ ಇರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ. ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲ ಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಆಗಲೆ ಶುದ್ಧರಾದಿರಿ. ನೀವು ನನ್ನಲ್ಲಿ ನೆಲೆಗೊಂಡಿರಿ, ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ತನ್ನಿಂದ ತಾನೇ ಹ್ಯಾಗೆ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲ ಕೊಡಲಾರಿರಿ. ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು, ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲ ಕೊಡುವನು. ಯಾಕಂದರೆ ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ. ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿ ಹೋಗುವನು, ಅಂಥಾದ್ದನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅದು ಸುಟ್ಟುಹೋಗುತ್ತದೆ. ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ಆಗುವದು. ನೀವು ಬಹಳ ಫಲ ಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು, ಆಗ ನನ್ನ ಶಿಷ್ಯರಾಗುವಿರಿ. ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನು ನಿಮ್ಮನ್ನು ಪ್ರೀತಿಸಿದೆನು. ನನ್ನ ಪ್ರೀತಿಯಲ್ಲಿ ನೆಲೆಗೊಂಡಿರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ. ನನ್ನ ಆನಂದ ನಿಮ್ಮಲ್ಲಿರಬೇಕೆಂತಲೂ ನಿಮ್ಮ ಆನಂದವು ಸಂಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುವದೇ ನಾನು ಕೊಡುವ ಆಜ್ಞೆಯಾಗಿದೆ.

ಕ್ರೀಸ್ತಸ್ವಾಮಿಯು ಶಿಲುಬೆಯ ಮೇಲೆ ಮರಣವನ್ನು ಹೊಂದುವದಕ್ಕೆ ಹಿಂದಿನ ರಾತ್ರಿಯಲ್ಲಿ ತನ್ನ ಶಿಷ್ಯರೊಡನೆ ಸಂಭಾಷಣೆ ಮಾಡಿದನು. ಅದರಲ್ಲಿ ಮೇಲ್ಕಂಡ ಸಂಗತಿಯು ಒಂದು ಭಾಗವಾಗಿದೆ. ಸ್ವಾಮಿಯೂ ಶಿಷ್ಯರೂ ಯೆರೂಸಲೇಮಿನಲ್ಲಿ ರಾತ್ರಿಯೂಟವನ್ನು ಮುಗಿಸಿಕೊಂಡು ಗೆತ್ಸೇಮನೆ ತೋಟದಲ್ಲಿ ಪ್ರಾರ್ಥನೆ ಮಾಡುವದಕ್ಕೆ ಹೋಗುತ್ತಿರುವಾಗಲೋ ಅಥವಾ ಊಟದ ಮನೆಯಲ್ಲಿ ಕುಳಿತಿರುವಾಗ ಶಿಷ್ಯರೊಳಗೊಬ್ಬನಾದ ಯೂದನು ಯೇಸುಸ್ವಾಮಿಯಿದ್ದ ಸ್ಥಳವನ್ನು ಯಾಜಕರಿಗೆ ತೋರಿಸಿಕೊಡುವದಕ್ಕೆ ಹೊರಟುಹೋಗಿರುವಾಗಲೋ ಸ್ವಾಮಿಯು ಯೋಹಾನ ೧೪, ೧೫, ೧೬ ಅಧ್ಯಾಯಗಳಲ್ಲಿರುವ ವಿಷಯಗಳನ್ನು ತನ್ನ ಶಿಷ್ಯರಿಗೆ ಬೋಧಿಸಿದನು. ತಾನು ಅವರನ್ನು ಬೇಗನೆ ಬಿಟ್ಟು ಹೋಗುವದಕ್ಕಿದ್ದರೂ ತನ್ನಿಂದ ಅವರನ್ನು ಯಾವದೂ ಅಗಲಿಸಕೂಡದಂತೆ ತನ್ನನ್ನೂ ಅವರನ್ನೂ ಬಂಧಿಸತಕ್ಕ ಒಂದು ರೀತಿ ಉಂಟೆಂತಲೂ ಅದನ್ನು ಅವರಿಗೆ ತಾನು ತಿಳಿಸುತ್ತೇನೆಂತಲೂ ಸ್ವಾಮಿಯು ಈ ಸಾಮ್ಯದಲ್ಲಿ ತಿಳಿಸುತ್ತಾನೆ. ಯೆಹೂದ್ಯರಿಗೆ ದ್ರಾಕ್ಷೆಯ ಬಳ್ಳಿಯೆಂಬ ಹೆಸರು ಪದೇ ಪದೇ ಸಲ್ಲುತ್ತಿತ್ತು. ದೇವರು ತನ್ನ ದ್ರಾಕ್ಷೆಯ ಬಳ್ಳಿಯನ್ನು ಐಗುಪ್ತದಿಂದ ತಂದು ಪಾಲೆಸ್ತೀನ ದೇಶದಲ್ಲಿ ನೆಟ್ಟನೂ ಅದು ಕಹಿಯಾದ ಕಾಯಿಗಳನ್ನು ಬಿಟ್ಟಿತೆಂಬದೂ, ಅದು ಜನಗಳೆಲ್ಲಾ ತುಳಿದು ಹಾಳುಮಾಡುವ ಹಾಗಾಯಿತೆಂಬದೂ ಕೀರ್ತನೆಗಳ ಪುಸ್ತಕದಲ್ಲಿಯೂ ಪ್ರವಾದನಾಗ್ರಂಥಗಳಲ್ಲಿಯೂ ಹೇಳಿದೆ (ಕೀರ್ತ ೮೦ ೮ ೧೬, ಯೆಶಾ ೫ ೧—೭). ಇದರ ತಾತ್ಪರ್ಯವೇನಂದರೆ—ಯೆಹೂದ್ಯರೇ ಈ ದ್ರಾಕ್ಷೇ ಬಳ್ಳಿ, ಅವರು ಒಳ್ಳೇ ಫಲವನ್ನು ಕೊಡದೆ, ನಿಷ್ಫಲವುಳ್ಳವರಾಗಿ ತಮ್ಮ ಶ್ರೇಷ್ಠತ್ವವನ್ನು ಕಳಕೊಂಡು, ತ್ಯಜಿಸಲ್ಪಟ್ಟರೆಂಬುವದೇ.

ಯೇಸುಸ್ವಾಮಿಯು ತಾನೇ ನಿಜವಾದ ದ್ರಾಕ್ಷೆಯ ಬಳ್ಳಿಯೆಂದು ಹೇಳಿಕೊಳ್ಳುತ್ತಾನೆ. ದೇವರ ಜನಗಳು ಯೆಹೂದ್ಯರೇ ಅಲ್ಲ, ಬೇರೆ ಯಾವದಾದರೊಂದು ಜನಾಂಗವೇ ಅಲ್ಲ, ಯಾರ್‍ಯಾರು ಆ ಬಳ್ಳಿಯಲ್ಲಿ ಕೊಂಬೆಗಳಾಗಿ ಸೇರಿಕೊಂಡಿದ್ದಾರೋ ಅವರೆಲ್ಲರೂ ದೇವರ ಜನರಾಗಿದ್ದಾರೆಂದು ಸ್ವಾಮಿಯು ಬೋಧಿಸುತ್ತಾನೆ. ಈ ಸಾಮ್ಯದಿಂದ ನಾವು ತಿಳಿಯುವದೇನಂದರೆ—

೧ ಯೇಸುವಿನ ಶಿಷ್ಯರು ಆತನಲ್ಲಿ ಬಹು ಅನ್ಯೋನ್ಯಸಂಬಂಧವುಳ್ಳವರಾಗಿದ್ದಾರೆ.

"ನೀವು ಕೊಂಬೆಗಳು" ಎಂದು ಸ್ವಾಮಿಯು ಹೇಳುತ್ತಾನಷ್ಟೆ. ಅವರು ಆ ಕೊಂಬೆಗಳಾದದ್ದು ಹ್ಯಾಗೆ? ೧—ಅವರು ಆತನಲ್ಲಿ ನಂಬಿಕೆಯಿಟ್ಟರು, ತನ್ನನ್ನು ಹಿಂಬಾಲಿಸಿರೆಂದು ತಾನವರನ್ನು ಕರೆದಾಗ ಅವರು ವಿಧೇಯರಾದರು. ಇದಕ್ಕೆ ಅವರು ಆತನ ಮಾತಿನಲ್ಲಿ ನಂಬಿಕೆಯಿಟ್ಟದ್ದೇ ಕಾರಣ. ಆತನು ಅವರಿಗೆ ಬೋಧಿಸುತ್ತಾ ಬೋಧಿಸುತ್ತಾ ಅವರ ನಂಬಿಕೆಯು ಹೆಚ್ಚುತ್ತಲೂ ಸ್ಥಿರವಾಗುತ್ತಲೂ ಇತ್ತು. ೨—ಅವರು ಆತನನ್ನು ಪ್ರೀತಿಸುವದಕ್ಕೆ ಕಲಿತರು. ನಿಜವಾದ ಶಿಷ್ಯತನಕ್ಕೆ ಇವೆರಡು ನಿಬಂಧನೆಗಳಿವೆ. ನಾವು ಯೇಸುವನ್ನು ನಂಬಿ ಪ್ರೀತಿಸಿದರೆ ನಾವು ಆತನ ಶಿಷ್ಯರಾಗುವೆವು. ಬಳ್ಳಿಯಲ್ಲಿ ಒಂದು ಭಾಗವಾಗಿರುವದರಿಂದಲೆ ಕೊಂಬೆಗಳು ಜೀವಿಸುತ್ತವೆ. ಅದರಂತೆಯೇ ನಾವು ಯೇಸುವಿನಲ್ಲಿ ಸೇರಿಕೊಳ್ಳುವದರಿಂದ ಮಾತ್ರವೇ ಜೀವಿಸುವೆವು.

೨ ಯೇಸುವಿನ ಶಿಷ್ಯರು ಫಲ ಫಲಿಸಲುಳ್ಳವರಾಗಿದ್ದಾರೆ.

ಫಲಫಲಿಸುವದೆಂದರೆ—ತಾವು ಸುಗುಣವನ್ನು ಹೊಂದುವದಲ್ಲದೆ ಇತರರೂ ಸುಗುಣಿಗಳಾಗುವಂತೆ ಸಹಾಯ ಮಾಡುವದೆಂದು ಅರ್ಥ. ಇವೆರಡು ವಿಧಗಳಿಂದಲೂ ನಾವು ದೇವರಿಗೆ ಮಹಿಮೆಯನ್ನು ತರುವವರಾಗಬೇಕೆಂದು ಸ್ವಾಮಿಯು ಅಪೇಕ್ಷಿಸುತ್ತಾನೆ. ನಮ್ಮನ್ನು ಫಲಬಿಡುವಂಥವರನ್ನಾಗಿ ಮಾಡಬೇಕೆಂದು ದೇವರು ತನ್ನಿಂದಾದದ್ದನ್ನೆಲ್ಲಾ ಮಾಡುತ್ತಾನೆಂಬ ೨ನೇ ವಚನದಲ್ಲಿ ಹೇಳಿದೆ. ಯಾವನು ಒಳ್ಳೇಫಲ ಬಿಡುವದಿಲ್ಲವೋ ಅವನು ಯೇಸುವಿನ ಶಿಷ್ಯನಾಗಿರುವದಿಲ್ಲ. ಯೂದನು ಅಂಥವನು. ಯಾವ ಶಿಷ್ಯನು ಫಲ ಬಿಡುತ್ತಾನೋ ಅವನು ಮತ್ತೂ ಹೆಚ್ಚಾಗಿ ಫಲಬಿಡುವಂತೆ ದೇವರು ಸಕಲ ಸಾಧನಗಳನ್ನು ಉಪಯೋಗಿಸುತ್ತಾನೆ. ಕೊಂಬೆಯನ್ನು ಕೆಡಿಸತಕ್ಕದ್ದನ್ನೆಲ್ಲಾ ಕತ್ತರಿಸಿಹಾಕಿ ಶುದ್ಧಮಾಡುತ್ತಾನೆ. ಇದರಿಂದ ಕೊಂಬೆಯಲ್ಲಿ ಫಲವು ಹೆಚ್ಚಾಗಿ ಬಿಡುವದಕ್ಕೆ ಅವಕಾಶವು ಆಗುತ್ತದೆ.

೩ ನಾವು ಯೇಸುವಿನಲ್ಲಿ ಸಂಬಂಧವನ್ನು ಸ್ಥಾಪಿಸಿಕೊಳ್ಳುವದರಿಂದ ಮಾತ್ರವೇ ಆತನಲ್ಲಿ ನಮ್ಮ ಶಿಷ್ಯತನವು ಸ್ಥಿರವಾಗುವದು. ಬಳ್ಳಿಯಿಂದ ಕತ್ತರಿಸಲ್ಪಟ್ಟ ಕೊಂಬೆಯು ಒಣಗಿಹೋಗುತ್ತದೆ, ಅದರಲ್ಲಿ ಫಲ ಬಿಡುವದಿಲ್ಲ. ಅದರಂತೆಯೇ ನಮಗೆ ಕ್ರಿಸ್ತನಲ್ಲಿರುವ ನಂಬಿಕೆಯೂ ಪ್ರೀತಿಯೂ ಕ್ಷಯಿಸಿಹೋಗುವಂತೆ ಮಾಡಿಕೊಂಡರೆ ನಾವು ಒಣಗಿ ಹೋಗುತ್ತೇವೆ, ನಮ್ಮ ಜೀವವು ನಿಷ್ಫಲವಾಗಿ ಹೋಗುತ್ತದೆ. ನಂಬಿಕೆ ಪ್ರೀತಿ ಇವೆರಡರ ಮೂಲಕವಾಗಿ ನಾವು ಆತನಲ್ಲಿ ಸೇರಿಕೊಂಡಿದ್ದರೆ ನಾವು ಎಲ್ಲವನ್ನು ಮಾಡಬಲ್ಲವರಾಗುತ್ತೇವೆ. ನಾವು ಆತನಲ್ಲಿಯೂ ಆತನ ವಾಕ್ಯಗಳು ನಮ್ಮಲ್ಲಿಯೂ ನೆಲೆಯಾಗಿದ್ದು ನಾವು ಏನು ಬೇಡಿಕೊಂಡರೂ ಅದನ್ನು ಹೊಂದುವೆವು ಎಂದು ಯೇಸುಸ್ವಾಮಿಯು ಹೇಳುತ್ತಾನೆ. ಇದು ಹ್ಯಾಗಂದರೆ—ಆತನಲ್ಲಿ ನೆಲೆಯಾಗಿರುವಂಥವರು ದೇವರಿಗೆ ಮೆಚ್ಚಿಕೆಯಾದ ಕಾರ್ಯಗಳನ್ನೇ ಬೇಡಿಕೊಳ್ಳುವರು. ಆದದರಿಂದ ಕ್ರಿಸ್ತನ ನಿಜವಾದ ಶಿಷ್ಯರು ಮಾಡಿಕೊಂಡ ಬೇಡಿಕೆಯನ್ನು ದೇವರು ನಡೆಸಿಕೊಡುವನೆಂದು ತಿಳಿಯತಕ್ಕದ್ದು.

೪ ಯೇಸುವಿನಲ್ಲಿರುವ ನಮ್ಮ ಅನ್ಯೋನ್ಯ ಸಂಬಂಧವನ್ನು ನಾವು ಕಾಪಾಡಿಕೊಳ್ಳುವದು ಹ್ಯಾಗೆ? ೧೦ನೇ ವಚನವನ್ನು ನೋಡಿ. ನಾವು ಆತನ ಆಜ್ಞೆಗಳನ್ನು ಕೈಕೊಂಡರೆ ಆತನ ಪ್ರೀತಿಯಲ್ಲಿ ನೆಲೆಗೊಳ್ಳುವೆವು. ಇದು ಬಹು ಸಂಪೂರ್ಣವಾದ ಸಂತೋಷಕ್ಕೆ ಕಾರಣವು (೧೧ ವ), ಅದು ಮಾತ್ರವಲ್ಲ. ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುವದು ಕ್ರಿಸ್ತನ ಆಜ್ಞೆ [illegible]. ಹೀಗಿರುವದರಿಂದ ನಾವು ತಿಳಿಯತಕ್ಕ ಮುಖ್ಯ ವಿಷಯವು ಏನಂದರೆ—

ನಾನು ನಿಮ್ಮನ್ನು ಪ್ರೀತಿಸಿದ್ದೇನೆ. ನೀವು ನನ್ನ ಪ್ರೀತಿಯಲ್ಲಿ ನೆಲೆಗೊಳ್ಳಿರಿ. ನೀವು ನನ್ನ ಆಜ್ಞೆಗಳನ್ನು ಕೈಕೊಂಡರೆ ನನ್ನ ಪ್ರೀತಿಯಲ್ಲಿ ನಿಜವಾಗಿ ನೆಲೆಗೊಳ್ಳುವಿರಿ.

ಮತಾಂತರವನ್ನು ಅವಲಂಬಿಸುವ ಮಗನ ಹಕ್ಕು ಬಾಧ್ಯತೆಯ ವಿಚಾರ—II

"ಧರ್ಮವಿಚಾರ" ಎಂಬ ಒಬ್ಬ ಹಿಂದೂವು ಬರೆಯುವದು:

ಮತವಿಷಯದಲ್ಲಿ ಐಹಿಕಸ್ವತ್ಯಕ್ಕಾಗಿ ಸಂಕೇತ ಮಾಡಿಕೊಂಡಿರುವ ಆಚಾರಗಳೂ ನಡವಳಿಕೆಗಳೂ ಮತಧರ್ಮಗಳಾಗಿರುವದರಿಂದ ಈ ಸಂಕೇತವನ್ನು ಮೀರಿದವನು ಮತಭ್ರಷ್ಟನೆಂತಲೂ ಇಂಥವನಿಗೆ ಮತಧರ್ಮ ಹಕ್ಕು ಇರಕೂಡದೆಂತಲೂ ಪಿತ್ರಾರ್ಜಿತ ಸ್ವತ್ತಿನ ಹಕ್ಕುಬಾಧ್ಯತೆ ಮತಭ್ರಷ್ಟನಿಗೆ ತಪ್ಪಲಾಗದೆಂತಲೂ ಕೆಲವು ಕಾರಣಗಳನ್ನು ಕಳೆದ ಜೂನ ೨೯ನೆ ತಾರೀಖಿನ "ವೃತ್ತಾಂತಪತ್ರಿಕೆ" ಯಲ್ಲಿ ಉದಾಹರಿಸಿ ತೋರ್ಪಡಿಸಿರುವೆನಷ್ಟೆ. ನಿರ್ಮತ್ಸರಬುದ್ಧರಾಗಿರುವ ನ್ಯಾಯಪಕ್ಷಿಕರು ಅನುಬಂಧಕ ಪ್ರತಿಬಂಧಕಗಳ ಬಲಾಬಲಗಳನ್ನು ಮತಭ್ರಷ್ಟನಿಗಿರುವ ಹಕ್ಕುಬಾಧ್ಯತಾ ವಿಷಯದಲ್ಲಿಯೂ ವಿಮರ್ಶೆಮಾಡಿ ನಿರ್ಣಯಿಸಿಯಾರೆಂದು ನಂಬುತ್ತೇನೆ.

ಶರೀರವು ಮತಧರ್ಮಗಳಿಗೆ ಸಂಬಂಧಪಟ್ಟದ್ದೆಂದಿಗೂ ಆಗಲಾರದು. ರಕ್ತಸಂಬಂಧವು ಯಾವ ಯಾವ ಶರೀರದ ಧಾತುಗಳೊಳಗೆ ಸೇರಿರುತ್ತದೋ ಅಂಥಾ ದೇಹಗಳೆಂದೆಂದಕ್ಕೂ ಆ ಸಂಬಂಧವುಳ್ಳವುಗಳಾಗಿರುತ್ತವೆ. ಇದರಿಂದಲೇ ಮನುಷ್ಯನು ಮತಧರ್ಮಗಳಿಂದ ಮಾತ್ರವೇ ಬಹಿಷ್ಕೃತನಾಗಬಹುದಲ್ಲದೆ, ಶಾರೀರಕ ಧರ್ಮದಿಂದ ಭ್ರಷ್ಟನಾಗಕೂಡದು. ಮತ್ತು ಶರೀರಸಂಬಂಧದಿಂದ ಸ್ವತಸ್ಸಿದ್ಧವಾಗಿರುವ ಬಂಧುತನವು ಹ್ಯಾಗೆ ಅಪರಿಹಾರ್ಯವಾದದ್ದೋ ಹಾಗೆಯೇ ಮತಭ್ರಷ್ಟನಿಗೆ ಪಿತ್ರಾರ್ಜಿತ ಸ್ವತ್ತಿನ ಮೇಲಣ ಹಕ್ಕು ಬಾಧ್ಯತೆಯು ಸ್ವತಸ್ಸಿದ್ಧವಾದದ್ದಾಗಿ ಅಪರಿಹಾರ್ಯವಾಗಿರುತ್ತದೆಂಬುವದನ್ನು ಧರ್ಮವಿಚಾರಿಗಳು ಸಿದ್ಧಾಂತಪಡಿಸದಿರಲಾರರು.

ನೋಡಲು ನ್ಯಾಯಗಳು ಶಾಸ್ತ್ರೀಯಗಳೇ ಅಲ್ಲದೆ ಯುಕ್ತಿಪ್ರಿಯಗಳಲ್ಲವು. ಮತ್ತು ಲೋಕದಲ್ಲಿ ಶಾಸ್ತ್ರಕರ್ತೃಗಳೊಳಗೆ ಒಳಗೆ ಬಾರದಿರುವ ಅಂಶಗಳು ಎಷ್ಟೋ ಉಂಟು, ಆಚರಣೆಯಲ್ಲಿರುವಂಥಾ ಅನೇಕ ವಿಷಯಗಳಿಗೆ ಶಾಸ್ತ್ರಪ್ರಮಾಣಗಳೇ ಇರುವದಿಲ್ಲ. ಪ್ರಕೃತದಲ್ಲಿ ಶಾಸ್ತ್ರಪ್ರಮಾಣಗಳಿಗಿಂತಲೂ ವ್ಯಾವಹಾರಿಕ ಧರ್ಮಗಳೇ ಪ್ರಾಮುಖ್ಯವಾಗಿರುವದರಿಂದ ಶಿಷ್ಟಪರಿಗ್ರಾಹ್ಯವಾಗಿರತಕ್ಕದ್ದೆಂದು ತಿಳಿದ ಧರ್ಮವಿಚಾರಿಗಳೂ ಮತಭ್ರಷ್ಟನಿಗಿರುವ ಹಕ್ಕುಬಾಧ್ಯತೆಯ ವಿಷಯದಲ್ಲಿ ನೆರೆಹೊರೆ ದೇಶಗಳಲ್ಲಿನ ನಡವಳಿಕೆಗಳಿಗನುಗುಣವಾಗಿ ಸ್ವದೇಶದ ಧರ್ಮಾಧಿಕಾರಿಗಳೂ ತೀರ್ಪುಗಳನ್ನು ಮಾಡುವದರಲ್ಲಿ ಯಾವ ಪ್ರತಿಬಂಧಕವೂ ತೋರಬರುವದಿಲ್ಲ. ಇದರ ಸಿದ್ಧಾಂತದ ಬಗ್ಗೆ "ಸ್ಮೃತಿಚಂದ್ರಿಕಾ," "ಶಾಂಡಿಲ್ಯ," "ಮಾಧವೀಯ," "ನಿರ್ಣಯಸಂಗ್ರಹ," ಈ ಮೊದಲಾದ ಶಾಸ್ತ್ರಗ್ರಂಥಗಳೊಳಗೆ ದಾಯಭಾಗದ ವಿಷಯದಲ್ಲಿ ಹೇಳಿರುವವುಗಳೊಳಗೆ ಪ್ರಬಲಪ್ರಮಾಣಗಳಾವುವು? ದುರ್ಬಲಪ್ರಮಾಣಗಳಾವುವು? ಈಗಿನ ಮತ್ತು ಪೂರ್ವದ ಲೋಕವ್ಯವಹಾರಗಳು ಎಂಥವು? ಇವನ್ನೆಲ್ಲಾ ನಿಷ್ಪಕ್ಷಪಾತದಿಂದ ಪರಿಶೋಧಿಸಿ ತೀರ್ಪುಮಾಡುವ ಧರ್ಮವಿಚಾರಿಗಳಿಗೆ ಕೃತಜ್ಞತೆಯಿಂದ ವಂದಿಸಿ ಕೃತಾರ್ಥನಾಗುವೆನೆಂದು ನಿರೀಕ್ಷಿಸಿ, ಈ ವಿಷಯವಾದ ಪತ್ರಿಕಾ ವ್ಯವಹಾರವನ್ನು ತತ್ಕಾಲಕ್ಕೆ ನಿಲ್ಲಿಸಿರುವೆನು.

(ಇನ್ನೊಬ್ಬ ಬಾತ್ಮೀದಾರರು ಬರೆಯುವದು)

ಮತಾಂತರವನ್ನು ಅಂಗೀಕರಿಸಿದವನಿಗೆ ತಾಯಿತಂದೆಗಳ ದೇಹಸಂಬಂಧವೂ ಆಸ್ತಿಬಾಧ್ಯತೆಯೂ ಉಂಟೋ ಇಲ್ಲವೋ ಎಂಬ ವಿಚಾರದಲ್ಲಿ ಶಾಸ್ತ್ರಕಾರರುಗಳು ಏನು ಹೇಳುತ್ತವೆ ಎಂಬ ವಿಷಯವಾಗಿ ವಿಮರ್ಶೆ ಮಾಡುವೆನು.

೧. ದೇಹಸಂಬಂಧ —'ಅಂಗಾದಂಗಾತ್ಸಂಭವಸಿ,' 'ಆತ್ಮಾವೈ ಪುತ್ರನಾಮಾಸಿ,' 'ಯಾಪ್ಯಮಾತ್ರಾ ಇಹಾಭವತ್,' 'ಷಾಟ್ಕೌಶಿಕಂ ಶರೀರಂ ತ್ರೀಣಿಮಾತೃತಃ ತ್ರೀಣಿಪಿತೃತಃ,' 'ಅಸ್ಥಿಸ್ನಾಯುಮಜ್ಜಾ ಪಿತೃತಃ ತ್ವಙ್ಮಾಂಸರುಧಿರಾಣಿಮಾತೃತಃ,' ಇತ್ಯಾದಿ ವಚನಗಳಿಂದ ಮಗನು ತಂದೆ ತಾಯಿಗಳ ರಕ್ತಮಾಂಸಾದಿ ಶರೀರಾವಯವ ಸಂಬಂಧದಿಂದ ಒಂದು ಪಿಂಡವಾಗಿ ತಂದೆಯ ರೂಪವನ್ನು ಹೊಂದಿ ಹುಟ್ಟುತ್ತಾನೆಂತಲೂ ಈ ಶರೀರಗಳ ಸಂಬಂಧವು ತನ್ನ ಮರಣಾಂತವೂ ತಪ್ಪುವದಿಲ್ಲವೆಂತಲೂ ಪುತ್ರನು ಹುಟ್ಟಿದ ಮಾತ್ರಕ್ಕೆ ತಂದೆಯು ಸಲ್ಲಿಸಬೇಕಾದ ಸಮಸ್ತ ಋಣ ಭಾಗಕ್ಕೂ ಪಿತ್ರಾರ್ಜಿತವಾದ ಆಸ್ತಿಗೂ ತಾನೇ ಬಾಧ್ಯನಾಗುತ್ತಾನೆಂತಲೂ ತಿಳಿಯಬರುತ್ತದೆ.

೨ [illegible] (೧) ಮತತೇವದ [illegible] ದೇವರು ಸರ್ವ ಜನರಿಗೂ ತನ್ನ ಸಂಕೇತವನ್ನು ವೇದವಾಕ್ಯ [illegible] ರುತ್ತಾನೆ. ಈ ವೇದವಾಕ್ಯಗಳಿಗೆ ಮತಸ್ಥರು ತಮ್ಮ ಬುದ್ಧಿಗೆ ತೋರಿದಂತೆ ಬೇರೆ ಬೇರೆ ಅರ್ಥಗಳನ್ನು ಕಲ್ಪಿಸಿ, ಅವುಗಳನ್ನು ಜನರಿಗೆ ಬೋಧಿಸಿ, ಅವರು ತಮ್ಮ ಮಾರ್ಗಗಳಿಗೆ ಬರುವಂತೆ ಮಾಡಿದರು. ಈ ಕಾರಣದಿಂದ ಬೌದ್ಧ, ಜೈನ, ಶೈವ, ವೈಷ್ಣವ ಮುಂತಾದ ಮತಗಳು ಹುಟ್ಟಿದವು. [illegible] ನಾಲ್ಕು [illegible] ಇವುಗಳಲ್ಲಿ [illegible] ಸನ್ಯಾಸಿ [illegible] ನಾಲ್ಕು ಆಶ್ರಮಗಳುಂಟು. ಇವುಗಳಲ್ಲಿ ನಾಲ್ಕನೇ ಆಶ್ರಮವೇ ಸನ್ಯಾಸವಾದದ್ದೆಂತಲೂ ಮೋಕ್ಷಪ್ರದವೆಂತಲೂ ತಿಳಿದು, ಒಬ್ಬನು ಹಿಂದಿನ ಆಶ್ರಮ ಧರ್ಮಗಳನ್ನೆಲ್ಲಾ ಬಿಟ್ಟು ಶಿಖಾಯಜ್ಞೋಪವೀತಗಳನ್ನು ತ್ಯಜಿಸಿ ಪುತ್ರಕಳತ್ರಾದಿ ಬಂಧುತ್ವವನ್ನು ಬಿಟ್ಟಾಗ್ಯೂ, ಸನ್ಯಾಸಿಯಾಗುತ್ತಾನೆ. ಈ ರೀತಿ ತಂದೆಯು ವ್ಯತ್ಯಂತರಗಳಿಂದ ಮಗನ ಸಂಬಂಧವನ್ನು ಬಿಟ್ಟರೂ ಮಗನಿಗೆ ಆತನ ಆಸ್ತಿಯ ಬಾಧ್ಯತೆಯು ತಪ್ಪುವದಿಲ್ಲ.

(೨) ಶೈವ, ವೈಷ್ಣವ, ಗಾಣಾಪತ್ಯ ಮೊದಲಾದ ಮತಭೇದಗಳಲ್ಲಿ ಶೈವನು ವೈಷ್ಣವ ಮತವನ್ನೂ, ವೈಷ್ಣವನು ಶೈವಮತವನ್ನೂ ಹೀಗೆ ಒಂದು ಮತದವನು ಮತ್ತೊಂದು ಮತವನ್ನು ಅಂಗೀಕರಿಸಿದಾಗ್ಯೂ ತಂದೆಯ ದೇಹಸಂಬಂಧವೂ ಆಸ್ತಿಯ ಬಾಧ್ಯತೆಯೂ ಮಗನಿಗೆ ತಪ್ಪುವದಿಲ್ಲ.

(೩) ಸಮಸ್ತ ಮತಗಳಲ್ಲಿಯೂ ಕರ್ಮ, ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ನಾಲ್ಕು ವೃತ್ತಿಗಳುಂಟು. ಈ ವೃತ್ತಿಗಳಲ್ಲಿ

'ನಚ ತಿ ,ದಂ ನಕುಲಂ ನಲಿಂಗಂ ನಗುಣಕ್ರಿಯಾಃ ॥
ನದೇಶಕಾಲ ನಾವಸ್ಥಾ ಯೋಗೋಹ್ಯಯ ಮಪೇಕ್ಷತೇ ॥"

ಎಂಬಂತೆ ಜ್ಞಾನಯೋಗದಲ್ಲಿದ್ದವನಿಗೆ ಜಾತಿಭೇದ, ಕುಲ, ಮತ ಸಂಬಂಧವಾದ ಚಿಹ್ನೆಗಳು ದೇಶ, ಕಾಲ, ಅವಸ್ಥೆ ಮುಂತಾಗವುಗಳ ಅಭಿಮಾನವು ಅವಶ್ಯವಿರುವದಿಲ್ಲವೆಂದು ಸ್ಪಷ್ಟವಾಗುತ್ತದೆ. ಆದದರಿಂದ "ಸಾರಭೂತಮುಪಾಸೀತ" ಎಂಬಂತೆ ಒಬ್ಬನು ಮತಾಂತರಗಳ ಸಾರಾಂಶಗಳನ್ನು ಚೆನ್ನಾಗಿ ತಿಳಿದುಕೊಂಡು, ಅವುಗಳಲ್ಲಿ ಸಾರತಮವಾದದ್ದನ್ನು ಪರಿಗ್ರಹಿಸಿ, ತನ್ನ ಪೂರ್ವಮತ ಪದ್ಧತಿಗಳನ್ನು ತ್ಯಜಿಸಿದರೆ ಅವನಿಗೆ ಮತಾಂತರವನ್ನು ಅವಲಂಬಿಸಿದ ದೋಷವು ಹ್ಯಾಗೆ ತಾನೇ ಬಂದೀತು? ಬರುವದಿಲ್ಲ. ಈ ಮತಾಂತರ ಪ್ರವೇಶದಿಂದ ಕರ್ಮ ಜ್ಞಾನ ಭಕ್ತಿ ವೈರಾಗ್ಯಗಳು ಬದಲಾಯಿಸಲ್ಪಡುತ್ತವೆಯೇ ಹೊರತು ಶರೀರವು ಬದಲಾಯಿಸಲ್ಪಡುವದಿಲ್ಲ. ಯಾವಾಗ ಶರೀರ ಬದಲಾಯಿಸಲ್ಪಡಲಿಲ್ಲವೋ ಮಗನಿಗೆ ತಂದೆಯ ಸಾಪಿಂಡ್ಯವು ತಪ್ಪುವದಿಲ್ಲ. ಯಾವಾಗ ತಂದೆಯ ಸಾಪಿಂಡ್ಯವು ತಪ್ಪಲಿಲ್ಲವೋ ಆತನ ಆಸ್ತಿಯ ಬಾಧ್ಯತೆಯೂ ತಪ್ಪುವದೇ ಇಲ್ಲ. ಇದೇ ಸರಿಯಾಗುತ್ತದೆ.

(೪) ಲೋಕದಲ್ಲಿ ಒಬ್ಬನು ಕಳ್ಳತನ, ವ್ಯಭಿಚಾರ, ಮೋಸ ಮುಂತಾದ ದುಷ್ಕೃತ್ಯಗಳನ್ನು ಮಾಡಿ, ಶಿಕ್ಷೆಗೆ ಗುರಿಯಾಗಿ ಬಂದೀಖಾನೆಯಲ್ಲಿ ಹಾಕಲ್ಪಟ್ಟು ಅನೇಕ ಸಂವತ್ಸರಗಳು ಮತಧರ್ಮಗಳನ್ನು ಸ್ವಲ್ಪವೂ ಆಚರಿಸದೇ ಇರುವನು. ಅಂಥಾ ಮನುಷ್ಯನು ಸೆರೆಯಿಂದ ಬಿಡಲ್ಪಟ್ಟು ಬಂದರೆ ಆತನು ಸಕಲ ವಿಷಯದಲ್ಲಿಯೂ ಹತನಾಗಿದ್ದಾಗ್ಯೂ ತಂದೆಯ ಆಸ್ತಿಗೆ ಬಾಧ್ಯನಾಗುತ್ತಾನೆ. ಹೀಗೆ ದುಷ್ಕೃತ್ಯಗಳನ್ನು ಮಾಡಿ, ಮತಧರ್ಮಗಳನ್ನು ಸಂಪೂರ್ಣವಾಗಿ ಬಿಟ್ಟಿರುವವನಿಗೂ ಪಿತ್ರಾರ್ಜಿತ ಸ್ವತ್ತಿನ ಬಾಧ್ಯತೆಯುಂಟಾಗುವದಲ್ಲದೆ ಅತಿಶಯವಾದ ಜ್ಞಾನವನ್ನು ಹೊಂದಿ ಒಂದು ಮತವನ್ನು ಬಿಟ್ಟು ಉತ್ತಮ ತರವಾದ ಮತ್ತೊಂದು ಮತವನ್ನು ಅವಲಂಬಿಸಿದವನಿಗೆ ತಂದೆಯ ಆಸ್ತಿಯ ಬಾಧ್ಯತೆ ಇಲ್ಲವೆಂದು ಹೇಳುವದು ಯಾವ ನ್ಯಾಯವೆಂದು ತೋರುವದಿಲ್ಲ. ಅದಲ್ಲದೆ, ಸರ್ವಸಮ್ಮತವಲ್ಲ.

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಸತ್ಕರಿಸುವುದಕ್ಕೆ ೧೫,೦೦೦ ರೂಪಾಯಿ ಕೊಟ್ಟು ಪ್ರಜೆಗಳಿಂದಲೂ ಹಣವನ್ನು ಕೂಡಿಸುತ್ತಿದ್ದಾರೆ.

◆◆◆◆

ವಾನಿಯಂಬಾಡಿಯಲ್ಲಿ ಪುಣ್ಯವಂತನೆಂದು ಹೆಸರು ಪಡೆದ ಬದ್ರುದ್ದೀನ್ ಸಾಹೇಬ್ ಎಂಬ ಚರ್ಮದ ವ್ಯಾಪಾರಿಯು ೨೦,೦೦೦ ರೂಪಾಯಿ ವೆಚ್ಚಿಸಿ ಅಲ್ಲಿ ಒಂದು ಮಸೀತಿಯನ್ನು ಕಟ್ಟಿಸುತ್ತಿದ್ದಾನೆ.

◆◆◆◆

ಮದರಾಸ್ ಅಧಿಪತ್ಯದ ವಿದ್ಯಾಭ್ಯಾಸದ ಇಲಾಖೆಯವರು ಬಹುಕಾಲದಿಂದ ನಡೆಯುತ್ತಾ ಬಂದಿರುವ ಪ್ರೈಮರಿ ಪರೀಕ್ಷೆಯನ್ನೂ ಲೋವರ್ ಸೆಕಂಡರಿ ಪರೀಕ್ಷೆಯನ್ನೂ ಮದರಾಸ್ ಗವರ್ನಮೆಂಟಿನವರು ಇದೇ ಜುಲೈ ೧ರಿಂದ ಲಾಗಾಯಿತು ವಜಾಮಾಡಿದ್ದಾರೆ.

◆◆◆◆

ಉತ್ತರ ದೇಶದಲ್ಲಿ ಬೆಳೆದ ಗೋಧಿಯು ಕಳೆದ ಜೂನ್ ತಿಂಗಳಲ್ಲಿ ೧,೯೫,೦೦೦ ಟನ್ ತೂಕದಷ್ಟು ಕರಾಚಿ ಪಟ್ಟಣಕ್ಕೆ ರೈಲಿನಲ್ಲಿ ಬಂದು, ವಿಲಾಯಿತಿಗೆ ರಫ್ತಾಯಿತು. ಈ ಜುಲೈ ತಿಂಗಳಲ್ಲಿ ಇನ್ನೂ ೨,೧೦,೦೦೦ ಟನ್‌ಗಳು ಸಾಗಿಸಲ್ಪಡುವುವೆಂದು ಹೇಳುತ್ತಾರೆ.

◆◆◆◆

ಕಳೆದ ವಾರ ಹಿಂದೂಸ್ಥಾನದಲ್ಲಿ ಒಟ್ಟು ೨,೨೬೧ ಪ್ರಜೆಗಳು ಪ್ಲೇಗ್ ರೋಗದಿಂದ ಮೃತಪಟ್ಟರು. ಈಗೀಗ ಉಪದ್ರವು ಕಡಿಮೆಯಾಗುತ್ತಿದೆ. ಈ ಸಂಖ್ಯೆ ಪಂಜಾಬ್ ಅಧಿಪತ್ಯದಲ್ಲಿ ೧,೨೮೩, ಬೊಂಬಾಯಿ ಅಧಿಪತ್ಯದಲ್ಲಿ ೪೯೯, ಸಂಯುಕ್ತ ಅಧಿಪತ್ಯದಲ್ಲಿ ೭೩೨, ಬರ್ಮಾದಲ್ಲಿ ೧೬೨ ಈ ಪ್ರಕಾರವಾಗಿ ಭಾಗವಾಗಿವೆ.

◆◆◆◆

ಹೈದರಾಬಾದಿನಲ್ಲಿರುವ ನವಾಬ್ ಮುಸ್ತಾಪ್ ಜಾಫ್ ಜಂಗ್ ರವರ ಮನೆಗೆ ಕಳೆದ ವಾರ ಕಳ್ಳರು ಬಿದ್ದು, ಬೇಗಂ ರವರ ಜವಾಹಿರಿ ಪೆಟ್ಟಿಗೆಯನ್ನು ಅಪಹರಿಸಿದರು. ಸುಮಾರು ಮೂರು ಲಕ್ಷ ರೂಪಾಯಿನ ಒಡವೆಗಳು ಕಳುವಾಗಿವೆ ಎಂದೂ ಪೋಲೀಸಿನವರು ಪತ್ತೆ ತನಿಖೆ ನಡಸುತ್ತಿದ್ದಾರೆಂದೂ ತಿಳಿದು ಬಂದಿದೆ.

◆◆◆◆

ದೆಹಲಿ ಪಟ್ಟಣದ ಪೋಸ್ಟ್ (ಅಂಚೆ) ಆಫೀಸಿನಲ್ಲಿ ಕಳೆದ ದಿವಸ ೮೦,೦೦೦ ರೂಪಾಯಿನ ಬ್ಯಾಂಕಿ ನೋಟ್ಟು ಕಾಗದ ರಿಜಿಸ್ಟರ್ ಕವರ್ ಒಂದನ್ನು ಕಳುವು ಮಾಡಿದರು. ನೌಕರಿಗಳಿಗೆ ಅಲ್ಪ ಸಂಬಳಗಳನ್ನು ಕೊಡುವುದರಿಂದ ಇಂಥಾ ದುಷ್ಕರ್ಮಗಳು ಸಂಭವಿಸುವವೆಂದು ಅಲ್ಲಿನ ಪತ್ರಿಕೆಯು ಹೇಳುವುದು.

◆◆◆◆

ಸಿಂಲಾ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಇದುವರೆಗೆ ಪ್ರಜೆಗಳ ಮನೆಗಳಲ್ಲಿ ಕೆಲಸ ಮಾಡುವ ನೌಕರರ ಮೇಲೆ ತಲೆತೆರಿಗೆಯನ್ನು ವಿಧಿಸಿ ವಸೂಲುಮಾಡುತ್ತಿದ್ದರು. ಈ ಕಂದಾಯವು ವರ್ಷಕ್ಕೆ ೬,೦೦೦ ರೂಪಾಯಿ ವಸೂಲಾಗುತ್ತಿತ್ತು. ಈ ವರ್ಷದಿಂದ ಈ ತೆರಿಗೆಯನ್ನು ವಜಾಮಾಡಿ ನೀರಿನ ತೆರಿಗೆಯನ್ನು ಎರಡರಷ್ಟು ಹೆಚ್ಚಿಸುತ್ತಾರೆ.

◆◆◆◆

ಬಂಗಾಳ ಅಧಿಪತ್ಯಕ್ಕೆ ಸೇರಿದ ದಾಲ್ತನ್ ಸಂಸ್ಥಾನದ ರಾಜರು ತುಂಬಾ ಸಾಲಸೋಲಗಳನ್ನು ಮಾಡಿ ತಮ್ಮ ಜಹಗೀರಿಗಳನ್ನೆಲ್ಲಾ ಸಾಲಗಾರರ ಪಾಲು ಮಾಡುವ ಸಂದರ್ಭ ಬಂದಿರುವುದನ್ನು ನೋಡಿ ಇಂಡಿಯಾ ಗವರ್ನಮೆಂಟಿನವರು ಸಾಲ ತೀರಿಸುವುದಕ್ಕೂ ಅವರ ಜಹಗೀರಿಗಳನ್ನು ಬಲಲ್ ಆಗದಂತೆ ಕಾಪಾಡುವುದಕ್ಕೂ ಏರ್ಪಾಡು ಮಾಡುತ್ತಿದ್ದಾರೆ.

◆◆◆◆

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸೂರತ್ ಡಿಸ್ಟ್ರಿಕ್ಟಿನಲ್ಲಿ ಮಳೆ ಬೆಳೆ ಆಗದೆ ರೈತರಿಗೆ ತುಂಬಾ ಕಷ್ಟಪ್ರಾಪ್ತವಾಗಿದೆ. ಸರ್ಕಾರದವರು ಇದಕ್ಕಾಗಿ ೨,೧೬,೫೦೦ ರೂಪಾಯಿ ಕಂದಾಯಗಳನ್ನು ರೆಮಿಷನ್ ಮಾಡಿದ್ದಲ್ಲದೆ ೮,೫೦,೦೦೦ ರೂಪಾಯಿ ಕಂದಾಯಗಳನ್ನು ಇನ್ನು ಮುಂದೆ ಸುಭಿಕ್ಷದಲ್ಲಿ ವಸೂಲುಮಾಡಿಕೊಳ್ಳಬೇಕೆಂದು ಹುಕುಂ ದಯಪಾಲಿಸಿದ್ದಾರೆ.

◆◆◆◆

ಬರ್ಮಾ ಅಧಿಪತ್ಯಕ್ಕೆ ಸೇರಿದ ಮೌಲ್ಮೀನ್ ಪಟ್ಟಣದಲ್ಲಿ ಕಳೆದ ವಾರ ಎರಡು ಬಾರೀ ಹೊಸ ಕಟ್ಟಡಗಳು ಆಕಸ್ಮಿಕವಾಗಿ ಕುಸಿದು ಬಿದ್ದುಹೋದವು. ೧೧ ಜನ ಇಟ್ಟಿಗೆ ಸುಡುವವರು, ಇಬ್ಬರು ಕೂಲಿ ಹೆಂಗಸರು, ಮೂವರು ವರ್ತಕರು, ೪ ಮಂದಿ ಮಕ್ಕಳು ಅವುಗಳ ಕೆಳಗೆ ಸಿಕ್ಕಿ ನಾಶಹೊಂದಿದರು. ಆ ಮಕ್ಕಳೂ ಒಬ್ಬ ವರ್ತಕನೂ ವಿನಹಾ ಉಳಿದವರೆಲ್ಲಾ ಸತ್ತುಹೋದರು.

◆◆◆◆

ಹಿಂದೂಸ್ಥಾನದ ಸೈನ್ಯಕ್ಕೆ ಮಹಮ್ಮದೀಯರು, ಹಿಂದೂಗಳು, ಸಿಕ್ಕರು, ಈ ಜನರೆಲ್ಲಾ ಸೇರಿಕೊಂಡಿರುವರಷ್ಟೆ. ಇವರಿಗೆ ಭಕ್ತಿ ವಿಶ್ವಾಸವನ್ನು ಆಗಾಗ್ಗೆ ಬೋಧಿಸುವುದಕ್ಕೆ [illegible] ಗವರ್ನಮೆಂಟಿನವರು ಪ್ರತಿ ಒಂದು ಸೈನ್ಯದಲ್ಲೂ ಒಬ್ಬೊಬ್ಬ ಮೌಲ್ವಿಯನ್ನೂ ಒಂದು ಪಂಡಿತನನ್ನೂ ಸಿಕ್ಕರ ಗ್ರಂಥಿ ಎಂಬ ಗುರುವನ್ನೂ ಸಂಬಳ ಕೊಟ್ಟು ನೇಮಿಸಬೇಕೆಂದು ಹುಕುಂ ಕೊಟ್ಟಿದ್ದಾರೆ.

◆◆◆◆

ಬಂಗಾಳ ಅಧಿಪತ್ಯದ ಸೆನಸ್ (ಖಾನೇಸುಮಾರಿ) ಗಣತಿ ಲೆಕ್ಕದಿಂದ ಆ ಪ್ರಾಂತ್ಯದಲ್ಲಿ ಮದುವೆಯಾಗಿರುವ ಹೆಣ್ಣು ಕೂಸುಗಳ ಸಂಖ್ಯೆ ೪,೦೦೦ ಕ್ಕಿಂತ ಹೆಚ್ಚೆಂದೂ, ಈ ಪೈಕಿ ೨೦೦ ಮಂದಿ ಹೆಣ್ಣುಮಕ್ಕಳು ವಿಧವೆಯರಾಗಿರುವರೆಂದೂ ಇವರಲ್ಲಿ ಒಂದು ಮಗುವಿಗಾದರೂ ೧೨ ತಿಂಗಳು ತುಂಬಿಲ್ಲವೆಂದೂ ಉಳಿದವರೆಲ್ಲಾ ವಿಧವೆಯರೇ ಆದರೂ ಅವರಿಗೆ ೫ ವರ್ಷದ ಒಳಗೆ ವಯಸ್ಸಾಗಿದೆ ಎಂದೂ ತಿಳಿಯಬರುತ್ತದೆ.

◆◆◆◆

ಬರ್ಮಾ ಅಧಿಪತ್ಯದಲ್ಲಿ ಗೋಕಾಯಿಗಳು ರೈಲ್ ಗಾಡಿಗೆ ಸಿಕ್ಕಿ ಮೃತಪಡುವುದು ಹೆಚ್ಚಾಗುತ್ತಾ ಬಂದಿದೆ. ಇದನ್ನು ನಿಲ್ಲಿಸಬೇಕೆಂದು ಸರ್ಕಾರದವರು ರೈಲ ಕಂಪನಿಯವರನ್ನು ಎಚ್ಚರಿಸಿದ್ದಾರೆ. ಪ್ರಜೆಗಳು ತಮ್ಮ ಗೋಕಾಯಿಗಳನ್ನು ಸರಿಯಾಗಿ ಸಂರಕ್ಷಣೆ ಮಾಡುವುದಿಲ್ಲವೆಂದೂ ಈ ವಿಷಯದಲ್ಲಿ ಸರ್ಕಾರದವರು ಪೋಲೀಸಿನವರ ಮೂಲಕ ಪ್ರಜೆಗಳಿಗೆ ತಿಳಿಯಪಡಿಸಬೇಕೆಂದೂ ರೈಲ್ ಕಂಪನಿಯವರು ಅರಿಕೆಮಾಡಿಕೊಂಡಿದ್ದಾರೆ.

◆◆◆◆

ರಜಪುತಾನಕ್ಕೆ ಸೇರಿದ ಧೇಬಾರ್ ಎಂಬ ಸಂಸ್ಥಾನದಲ್ಲಿ ಒಂದು ದೊಡ್ಡ ಕೆರೆ ಇರುತ್ತದೆ. ಪ್ರಪಂಚದಲ್ಲಿ ಮನುಷ್ಯರಿಂದ ಕಟ್ಟಲ್ಪಟ್ಟಿರುವ ಕೆರೆಗಳಲ್ಲೆಲ್ಲಾ ಈ ಕೆರೆಯೇ ಅತ್ಯಂತ ವಿಸ್ತಾರವಾದುದೆಂದು ಹೇಳುತ್ತಾರೆ. ಈ ಕೆರೆಯಲ್ಲಿ ಸರ್ವದಾ ೨೦ ಚದರ ಮೈಲಿ ವಿಸ್ತಾರವುಳ್ಳ ಪಾತ್ರದಲ್ಲಿ ನೀರು ಇದ್ದೇ ಇರುತ್ತದೆ. ಈ ನೀರನ್ನು ನಾಲೆಗಳ ಮೂಲಕ ಜಮೀನುಗಳಿಗೆ ಹಾಯಿಸಿ ತರಿಬಾಗಾಯಿತು ಫಸಲುಗಳನ್ನು ಮಾಡುತ್ತಾರೆ.

◆◆◆◆

ರಂಗೂನ್ ಪಟ್ಟಣದ ಛಾರ್ಟರ್ಡ್ ಬ್ಯಾಂಕಿನ ಒಬ್ಬ ಗುಮಾಸ್ತೆಯು ಡಾರ್ಫರ್ಡ್ ಕಂಪನಿಯವರ ಮ್ಯಾನೇಜರ ರುಜುವಿನಂತೆ ಎತ್ತಿಗೆ ರುಜು ಹಾಕಿ ಬ್ಯಾಂಕಿಗೆ ಕೊಟ್ಟು, ೩೦,೦೦೦ ರೂಪಾಯಿಗಳನ್ನು ತೆಗೆದುಕೊಂಡನು. ಅವನ ಮನೆಯನ್ನು ಶೋಧನೆ ಮಾಡಿದಾಗ ಒಂದು ಒತ್ತುವ (ನಕ್ಸ) ಕಾಗದ ಸಿಕ್ಕಿತು. ಇದರಲ್ಲಿ ಆ ರುಜುವನ್ನು ಒತ್ತಿದ ಗುರುತು ಚೆನ್ನಾಗಿ ಕಾಣಬರುತ್ತದೆ. ಅದರ ಮೇಲೆ ಆ ಗುಮಾಸ್ತೆಯನ್ನು ಹಿಡಿದು ದರ್ಯಾಪ್ತಿ ಮಾಡುತ್ತಿದ್ದಾರೆ.

◆◆◆◆

ದೆಹಲಿ ಪಟ್ಟಣದ ಅರಮನೆಯಲ್ಲಿರುವ ಮೊಗಲಾಯಿ ಚಕ್ರವರ್ತಿಗಳ ಪುರಾತನ ಕಾಲದ ಸಿಂಹಾಸನವನ್ನೂ ಅರಮನೆಯನ್ನೂ ದುರಸ್ತುಮಾಡಿಸಿ, ನೋಡುವಂತೆ ಹೊಸದಾಗಿ ಮಾಡಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ. ಇಟಲಿ ದೇಶದಲ್ಲಿ ಇಂಗ್ಲಿಷ್ ರಾಯಭಾರಿಗಳಾಗಿರುವ ಸರ್ ಎಡ್ವರ್ಡ್ ಎಗರ್ಟನ್ ರವರು ಚತುರರಾದ ಕಾರೀಗಾರರನ್ನು ಹುಡುಕಿಸುತ್ತಿದ್ದಾರೆ. ಈ ಕಾರೀಗಾರರು ಸಿಕ್ಕಿದಕೂಡಲೇ ಅವರನ್ನು ಹಿಂದೂಸ್ಥಾನಕ್ಕೆ ಕಳುಹಿಸಿಕೊಡುವರು.

◆◆◆◆

ಆಫ್ಘಾನಿಸ್ಥಾನದ ರಾಜಧಾನಿಯಾದ ಕಾಬೂಲ ಪಟ್ಟಣದಲ್ಲಿ ವರ್ತಕರು ಅಳತೆ ತೂಕಗಳನ್ನು ತಮಗೆ ತೋರಿದ ರೀತಿಯಲ್ಲಿಟ್ಟುಕೊಂಡು ಪ್ರಜೆಗಳಿಗೆ ಮೋಸಪಡಿಸುತ್ತಿದ್ದರು. ರಾಜಕುಮಾರರಾದ ಇನಾಯತ್ ಉಲ್ಲಾಖಾನರವರು ಈ ವರ್ತಕರ ಮೋಸವನ್ನು ತನಿಖೆಮಾಡಿ, ಅಳತೆ ತೂಕಗಳನ್ನು ಎಲ್ಲಾ ವರ್ತಕರೂ ಒಂದೇ ರೀತಿ ಇಡಬೇಕೆಂದು ವಿಧಿಸಿ, ಆ ವಿಧಿಯಂತೆ ನಡೆಯದೆ ಹೋಗುವ ವರ್ತಕರನ್ನು ಸರ್ಕಾರದವರು ಗಲ್ಲಿಗೆ ಹಾಕುವರು ಎಂಬುದಾಗಿ ಇಸ್ತಿಹಾರು ಕೊಟ್ಟಿದ್ದಾರೆ.

◆◆◆◆

ಅಫ್ಘಾನಿಸ್ಥಾನದ ಅಮೀರ್ ಹಬೀಬುಲ್ಲಾಖಾನರವರು ಪೇಷಾವರಿನಲ್ಲಿರುವ ತಮ್ಮ ಕಡೆಯ ಪ್ರಜೆಗಳೂ ವರ್ತಕರೂ ಆದ ಜನರಿಗೆ ವ್ಯಾಪಾರದಲ್ಲಿ ಪ್ರೋತ್ಸಾಹ ಕೊಡಬೇಕೆಂದು ಮೂರು ಲಕ್ಷ ರೂಪಾಯಿ ಸಾಲಕೊಟ್ಟು ಕಳುಹಿಸಿದ್ದಾರೆ. ವರ್ತಕರು ಈ ಹಣದಲ್ಲಿ ತಮ್ಮ ಯೋಗ್ಯತೆ ಚೈತನ್ಯಗಳಿದ್ದಷ್ಟು ಸಾಲಪಡೆದು ವ್ಯಾಪಾರಮಾಡುತ್ತಾ ನಿಧಾನವಾಗಿ ಸಾಲ ತೀರಿಸುವರು. ಅಮೀರರು ಈ ವಿಷಯದಲ್ಲಿ ತಮ್ಮ ವರ್ತಕರಿಗೆ ಪ್ರೋತ್ಸಾಹ ಕೊಟ್ಟಿದ್ದನ್ನು ನೋಡಿ ಎಲ್ಲರೂ ಆಶ್ಚರ್ಯಪಡುತ್ತಿದ್ದಾರೆ.

◆◆◆◆

ಮುಂದೆ ಹೇಳುವ ಪರಮಾಶ್ಚರ್ಯವಾದ ಸಮಾಚಾರವು ಬಳ್ಳಾರಿಯಿಂದ ಬಂದಿರುವುದು.—"ಹಿಮಾಚಲ ಪರ್ವತದಿಂದ ಪೀತಸ್ವಾಮಿ ಎಂಬೊಬ್ಬ ಮನುಷ್ಯನು ಇಲ್ಲಿಗೆ ಬಂದಿರುವನು. ಹುಡುಗರು ಅವನನ್ನು ಕಲ್ಲುಗಳಿಂದ ಹೊಡೆಯುತ್ತಾರೆ. ಆ ಕಲ್ಲುಗಳು ಅವನ ಶರೀರಕ್ಕೆ ತಗಲಿ, ಬೀಳುವಾಗ ಬೆಳ್ಳಿಯ ಮತ್ತು ತಾಂಬ್ರದ ನಾಣ್ಯಗಳಾಗಿ ಬೀಳುವವು. ಆ ಸ್ವಾಮಿಯು ಎಲೆಗಳನ್ನು ಕೈಯಲ್ಲಿ ಹಿಡಿದು ಎರಚಿದರೆ ಅವೆಲ್ಲಾ ಪರಿಮಳವನ್ನು ಕಾಣುವ ಪುಷ್ಪಗಳಾಗಿ ಬೀಳುವವು" ಎಂಬುದೇ.

◆◆◆◆

ಕಲ್ಕತ್ತಾ ಪಟ್ಟಣದ ರೈಲ್ವೇ ಸ್ಟೇಷನ್ನಿನಲ್ಲಿ ಟಿಕೆಟ್ಟುಗಳನ್ನು ವಿಕ್ರಯಮಾಡುತ್ತಿದ್ದ ದೇವೇಂದ್ರನಾಥ ಮುಖರ್ಜಿ, ಯೋಗೇಶ್ವರ ಆಟ್ಯ ಎಂಬೀ ನೌಕರರು ಅನು ಮೈಲಿ ದೂರದಲ್ಲಿರುವ ರೈಲ್ ಸ್ಟೇಷನ್ನಿಗೆ ಹೋಗತಕ್ಕ ಟಿಕೇಟುಗಳನ್ನು ತೆಗೆದು ೨೦ ಮೈಲಿ ದೂರದ ರೈಲ್ ಸ್ಟೇಷನ್ನಿಗೆ ಅನುಕೂಲವಾಗುವಂತೆ ತಿದ್ದಿಕೊಟ್ಟು, ರೈಲ್ ಕಂಪನಿಯವರಿಗೆ ಮೋಸಮಾಡುತ್ತಿದ್ದರು. ಇದರಿಂದ ಅವರಿಗೆ ಸಾವಿರಾರು ರೂಪಾಯಿ ಲಾಭ ಸಿಕ್ಕುತ್ತಿತ್ತು. ಈ ಸಂಗತಿಯು ಹ್ಯಾಗೋ ಗೊತ್ತಾಗಿ ಅವರಿಬ್ಬರನ್ನೂ ಹಿಡಿದು ಈಗ ಸೆಷನ್ ಕೋರ್ಟಿನಲ್ಲಿ ದರ್ಯಾಪ್ತಿ ಮಾಡುತ್ತಿದ್ದಾರೆ.

ಅಫ್ಘಾನಿಸ್ಥಾನದ ಅಮೀರರವರು ತಮ್ಮ ಸಂಸ್ಥಾನದ ಪ್ರಜೆಗಳಲ್ಲೆಲ್ಲಾ ತುಂಬಾ ಶಕ್ತರಾಗಿಯೂ ಯೋಗ್ಯರಾಗಿಯೂ ಪ್ರಪಂಚಜ್ಞಾನವನ್ನು ತಿಳಿದವರಾಗಿಯೂ ಇರುವ ದೊಡ್ಡ ಮನುಷ್ಯರ ಪಟ್ಟಿ ಮಾಡಿಸಿ ತರಿಸಿಕೊಂಡು, ಆ ಪೈಕಿ ೨೪ ಮಂದಿಯನ್ನು ಚುನಾಯಿಸಿಕೊಂಡು, ಇವರನ್ನೆಲ್ಲಾ ವಿಲಾಯಿತಿ, ಫ್ರಾನ್ಸ್, ಟರ್ಕಿ, ಪರ್ಷಿಯಾ, ರಷ್ಯಾ, ಈ ಮೊದಲಾದ ಅನೇಕ ರಾಜ್ಯಗಳಿಗೆ ಹೋಗಿ ಆಯಾ ಕಡೆಗಳ ವಿದ್ಯಾಮಾರ್ಗಗಳನ್ನು ತಿಳಿದುಬರುವಂತೆ ಅಪ್ಪಣೆ ಕೊಟ್ಟು ಕಳುಹಿಸುವವರಾಗಿದ್ದಾರೆ. ಇದರಿಂದ ಅಮೀರರು ತಮ್ಮ ರಾಜ್ಯವನ್ನು ಈಗಿನ ಕಾಲಕ್ಕೆ ತಕ್ಕಂತೆ ಅಭಿವೃದ್ಧಿಗೆ ತಂದುಕೊಳ್ಳುವುದರಲ್ಲಿ ಕುತೂಹಲಪಡುತ್ತಿದ್ದಾರೆಂದು ಕಂಡುಬರುವುದು.

◆◆◆◆

ಬರುವ ಡಿಸೆಂಬರ್ ತಿಂಗಳ ಅಂತ್ಯಭಾಗದಲ್ಲಿ ಕಾಶೀ ಪಟ್ಟಣದಲ್ಲಿ ಹಿಂದೂಸ್ಥಾನದ ಸಾರ್ವಜನಿಕ ಸಮಾಜವು (ನ್ಯಾಷನಲ್ ಕಾಂಗ್ರೆಸ್) ಕೂಡುವುದು. ಇದಕ್ಕೆ ಸಂಬಂಧಪಟ್ಟಹಾಗೆ ಈ ಸಲ ಹಿಂದೂಸ್ಥಾನದ ಕೈಗಾರಿಕೆಗಳ ಪ್ರದರ್ಶನವನ್ನು ಬೊಂಬಾಯಿ ಮದರಾಸುಗಳಲ್ಲಿ ನಡೆದಂತೆ ನಡಸಬೇಕೆಂದು ಏರ್ಪಾಡುಮಾಡಿದ್ದಾರೆ. ಕಾಶೀಪಟ್ಟಣದಲ್ಲಿ ನಡೆಯುವ ಪ್ರದರ್ಶನಕ್ಕೆ ವಿಶೇಷವಾಗಿ ಈ ಸಲ ವ್ಯವಸಾಯ ಸಾಧಕಗಳನ್ನೂ ಅವುಗಳ ಪ್ರಯೋಗಗಳನ್ನೂ ತಂದಿಟ್ಟು ತೋರಿಸುವುದಾಗಿ ತಿಳಿಸಿರುತ್ತಾರೆ. ಈ ಭಾಗವು ಹಿಂದೂಸ್ಥಾನದ ರೈತಪ್ರಜೆಗಳಿಗೆ ಮುಖ್ಯವಾಗಿರುವಕಾರಣ ಅವರು ಇದನ್ನು ಹೋಗಿ ನೋಡಿಬಂದು ಅದರಿಂದ ಪ್ರಯೋಜನವನ್ನು ಹೊಂದುವುದರ ಮೂಲಕ ದೇಶವನ್ನು ಅಭಿವೃದ್ಧಿಗೆ ತರಬೇಕಾಗಿದೆ.

◆◆◆◆

ಗೋದಾವರಿ ಜಿಲ್ಲೆಯಲ್ಲಿ ಒಂದು ವಿಷಯವು ತುಂಬಾ ಗಲಿಬಿಲಿಯನ್ನುಂಟುಮಾಡಿದೆ. ಹೆಂಗಸರು ತೊಟ್ಟುಕೊಳ್ಳುವ ಗಾಜಿನ ಕೈಬಳೆಗಳನ್ನು ಬೊಂಬಾಯಿಯಲ್ಲಿ ಹೊ. ಹೊ. ನಮೂನೆಯಾಗಿ ತಯಾರುಮಾಡುವರು. ಈ ಬಳೆಗಳಿಗೆ ಸರ್ಪಗಳಂತೆ ಸಣ್ಣ ಸಣ್ಣ ಗಾಜಿನ ಚೂರುಗಳನ್ನು ಹಚ್ಚಿ ತಯಾರಾದ ಬಳೆಗಳನ್ನು ಕಳುಹಿಸುತ್ತಾರೆ. ಇಂಥಾ ಬಳೆಗಳಲ್ಲಿ ಪ್ಲೇಗಿನ ಕ್ರಿಮಿಗಳು ಸೇರಿಕೊಂಡಿರುತ್ತವೆಂದೂ ಈ ಬಳೆಗಳನ್ನು ತೊಟ್ಟುಕೊಂಡ ಮೂವರು ಹೆಂಗಸರು ಒಂದು ಊರಿನಲ್ಲಿ ಪ್ಲೇಗ ರೋಗದಿಂದ ಸತ್ತರೆಂದೂ ವರ್ತಮಾನ ಹುಟ್ಟಿದೆ. ಈ ಹುಳುಗಳು ಕಣ್ಣಿಗೆ ಕಾಣುವಷ್ಟು ಗಾತ್ರವಾಗಿವೆಯಂತೆ. ಗೋದಾವರಿ ಜಿಲ್ಲೆಯಲ್ಲಿ ಈ ವಿಷಯವು ತುಂಬಾ ಗಾಬರಿಯನ್ನುಂಟುಮಾಡಿದೆ. ಆ ಪ್ರಾಂತ್ಯದಲ್ಲಿ ಹೆಂಗಸರ್ಯಾರೂ ಬೊಂಬಾಯಿನ ಬಳೆಗಳನ್ನು ತೊಟ್ಟುಕೊಳ್ಳುವುದಕ್ಕೆ ಒಪ್ಪುವುದಿಲ್ಲ.

◆◆◆◆

ಅಸ್ಸಾಂ ಪ್ರಾಂತ್ಯದಲ್ಲಿರುವ ನಂಗಳದಾಯಿ ಎಂಬ ಊರಿನಲ್ಲಿ ಮನುಷ್ಯರನ್ನು ಹಿಡಿದು ತಿನ್ನುವ ಹುಲಿಯೊಂದು ಸೇರಿಕೊಂಡು, ಪ್ರಜೆಗಳಿಗೆ ತುಂಬಾ ಕಳವಳವನ್ನುಂಟುಮಾಡಿದೆ. ಈ ಹುಲಿಯು ಇದುವರೆಗೆ ೨೦—೩೦ ಜನರನ್ನು ಹಿಡಿದು ಕೊಂದು ತಿಂದು ಹಾಕಿರುವುದು. ಇದನ್ನು ಹಿಡಿಯಬೇಕೆಂದು ಇಲ್ಲವೇ ಕೊಂದುಹಾಕಬೇಕೆಂದು ಅನೇಕರು ಪ್ರಯತ್ನಮಾಡುತ್ತಿದ್ದರು. ಇದುವರೆಗೆ ಅದು ಸಿಕ್ಕಿ ಇಲ್ಲ. ಸರ್ಕಾರದವರು ಅದನ್ನು ಕೊಂದವರಿಗೆ ೫೦ ರೂಪಾಯಿ ಬಹುಮಾನ ಕೊಡುವುದಾಗಿ ಪ್ರಕಟಿಸಿಯೂ ಇದ್ದಾರೆ. ಈ ಹುಲಿಯು ಮರಗಳನ್ನು ಹತ್ತಿ ಕೂತಿದ್ದು ಮನುಷ್ಯರು ಒಬ್ಬಂಟಿಗರಾಗಿ ಬರುತ್ತಿರುವುದನ್ನೇ ಹೊಂಚುಹಾಕಿಕೊಂಡಿದ್ದು ಮೇಲೆ ಬಿದ್ದು ತಿಂದುಹಾಕುತ್ತದೆ. ಹುಲಿಗಳು ಮರವನ್ನು ಹತ್ತುವುದು ಅಪೂರ್ವವಾದರೂ ಈ ಹುಲಿಯು ಮರದ ಮೇಲಿದ್ದುದನ್ನು ಅನೇಕರು ನೋಡಿರುತ್ತಾರೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಹೈಕೋರ್ಟ್ ಜಡ್ಜಿಗಳು, ಲೆಫ್ಟಿನೆಂಟ್ ಗವರ್ನರವರು, ಜಮೀನ್ದಾರುಗಳು, ಭಾರಿ ಭಾರಿ ಉದ್ಯೋಗಸ್ಥರು, ದೊಡ್ಡ ಸಾಹುಕಾರರು, ಪ್ರಜೆಗಳ ಮುಖಂಡರು, ಇವರೆಲ್ಲಾ ಕಳೆದ ವಾರ ಸಭೆ ಸೇರಿ ಒಂದು ದೊಡ್ಡ ಮೀಟಿಂಗ್ ನಡಸಿದರು. ಲೆಫ್ಟಿನೆಂಟ್ ಗವರ್ನರವರೇ ಪ್ರೆಸಿಡೆಂಟರಾಗಿದ್ದರು. ಚೀಫ್ ಜಡ್ಜರೂ ದರ್ಭಾಂಗದ ಮಹಾರಾಜರವರೂ ಮುಂತಾದವರೆಲ್ಲಾ ಪ್ರಿನ್ಸ್ ಆಫ್ ವೇಲ್ಸ್ ರವರನ್ನು ವಿಶೇಷ ಉತ್ಸವದೊಡನೆ ಪಟ್ಟಣದೊಳಕ್ಕೆ ಬರಮಾಡಿಕೊಂಡು ಸತ್ಕರಿಸಬೇಕೆಂಬ ಅರ್ಥವುಳ್ಳ ಉಪನ್ಯಾಸಮಾಡಿದರು. ಹಿಂದೂಸ್ಥಾನಕ್ಕೆ ಕಲ್ಕತ್ತೆಯು ಪ್ರಧಾನ ನಗರವಾಗಿರುವುದರಿಂದ ಅಲ್ಲಿ ಅವರಿಗೆ ನಡೆಯುವ ಸತ್ಕಾರವು ಅದ್ವಿತೀಯವಾದುದಾಗಿರಬೇಕೆಂದು ಚೀಫ್ ಜಡ್ಜರು ತಿಳಿಸಿದರು. ಕಡೆಗೆ ಈ ಉತ್ಸವಕ್ಕಾಗಿ ಪ್ರಜೆಗಳಿಂದ ಚಂದಾ ಎತ್ತಬೇಕೆಂದು ತೀರ್ಮಾನವಾಯಿತು. ಈ ಫಂಡಿಗೆ ಆಗಲೇ ೮೮,೦೦೦ ರೂಪಾಯಿ ನಗದು ವಸೂಲಾಗಿದೆ.

◆◆◆◆

ಅಸ್ಸಾಂ ಬಂಗಾಳ ರೈಲ್ವೆ ಕಂಪನಿಯವರು ಆವಾಮಾ ಎಂಬ ಊರಿನಲ್ಲಿ ತಮ್ಮ ರೈಲ್ ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಜನರು ಮನೆಗಳನ್ನು ಕಟ್ಟಿಕೊಳ್ಳಕೂಡದೆಂದು ಪ್ರಕಟಿಸಿದರು. ಸ್ಟೇಬಲ್‌ಚನ್ ಎಂಬೊಬ್ಬ ಇಂಜನಿಯರು ಆ ಊರಿಗೆ ಹೋಗಿ ಆಜಮಾಯಿಷಿ ಮಾಡಿದಾಗ ಇಬ್ಬರು ಚಮ್ಮಾರರು ತಮ್ಮ ಗುಡಿಸಲುಗಳನ್ನು ರೈಲ್ ರಸ್ತೆಯ ಬಾಜೂದಲ್ಲಿ ಕಟ್ಟಿಕೊಂಡಿದ್ದರು. ಆಗ ಅಧಿಕಾರಿಯು ಅವರನ್ನು ಕರೆದು ಆ ಗುಡಿಸಲುಗಳನ್ನು ಕಿತ್ತುಹಾಕುವಂತೆ ಹುಕುಂ ಮಾಡಿದನು. ಅವರು ಕಿತ್ತುಹಾಕಲಿಲ್ಲ. ಕೂಡಲೇ ಆ ಇಂಜನಿಯರು ಬೆಂಕಿಹಾಕಿ ಜೋಪಡಿಗಳನ್ನು ಸುಡಿಸಿಬಿಟ್ಟನು. ಚಮ್ಮಾರರು ಆ ಇಂಜನಿಯರ ಮೇಲೆ ಫಿರ್ಯಾದು ತಂದರು. ಕಲ್ಕತ್ತಾ ಪಟ್ಟಣದ ಸೆಷನ್ಸ್ ಕೋರ್ಟಿನಲ್ಲಿ ಈ ಮೊಕದ್ದಮೆ

ಪರ್ಯಾಯವಾಗಿ ಆಗಿ ಕಳೆದ ವಾರ ಆ ಇಂಜನಿಯರಿಗೆ ೧೦೦ ರೂಪಾಯಿ ಜುಲ್ಮಾನೆ ಆಯಿತು. ಆ ಪೈಕಿ ೨೦ ರೂಪಾಯನ್ನು ಮನೆ ಕಳ ಕೊಂಡ ಆ ಚಮ್ಮಾರರಿಗೆ ಕೊಡಿಸಿದರು

*****

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಮಹಾರರೆಂಬ ಕೀಳು ಜಾತಿಯ ಪ್ರಜೆಗಳು ಗವರ್ನರವರಿಗೆ ಅರ್ಜಿ ಬರೆದುಕೊಂಡು, ತಮ್ಮ ಜನರನ್ನು ಪೊಲೀಸಿನಲ್ಲೂ ಸೈನ್ಯದಲ್ಲೂ ನೌಕರಿಗಳನ್ನು ಕೊಟ್ಟು ನೇಮಿಸಿಕೊಳ್ಳಬೇಕೆಂದು ಬೇಡಿಕೊಂಡಿದ್ದರು ಬೊಂಬಾಯಿ ಗವರ್ನಮೆಂಟಿನವರು ಅವರಿಗೆ ಸರಿಯಾದ ಉತ್ತರವನ್ನು ದಯಪಾಲಿಸಲಿಲ್ಲ. ಈಗ ಈ ಮಹಾರರು ಮೈಸೂರಾಯಿ ಪ್ರಭುಗಳಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದಾರೆ. ಬರೋಡ ರಾಜ್ಯದಲ್ಲೂ ತಮ್ಮಂಥಾ ಜನರಿದಾರೆಂತಲೂ ಈಚಿಗೆ ಬರೋಡ ಚಕ್ರವರ್ತಿಯವರು ಕರುಣವಿಟ್ಟು ತಮ್ಮ ಜನರನ್ನು ಸರ್ಕಾರಿ ನೌಕರಿಗಳಿಗೆ ಸೇರಿಸಿಕೊಳ್ಳುತ್ತಿದಾರೆಂತಲೂ ಹಿಂದುಸ್ಥಾನದಲ್ಲೂ ಬಿದೊಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರೂ ಮೆ॥ ಗೋಖಲೆಯವರೂ ಕೇಶವಚಂದ್ರ ಸೇನರವರೂ ಮಹಾರರನ್ನು ಉತ್ತಮ ಸ್ಥಿತಿಗೆ ತರುವ ವಿಷಯದಲ್ಲಿ ತುಂಬಾ ಸಾಹಸಪಡುತ್ತಿದಾರೆಂತಲೂ ಆದಕಾರಣ ಇಂಡಿಯಾ ಗವರ್ನಮೆಂಟಿನವರು ತಮ್ಮ ಈ ಪ್ರಜೆಗಳನ್ನು ನೌಕರಿ ಕೊಟ್ಟು ಉದ್ಧಾರ ಮಾಡಬೇಕೆಂತಲೂ ಬರೆದುಕೊಂಡಿದಾರೆ.

*****

ದಕ್ಷಿಣ ಆಫ್ರಿಕಾ ಯುದ್ಧದಲ್ಲಿ ಇಂಗ್ಲಿಷರು ಬೋಅರರಿಂದ ಕಿತ್ತುಕೊಂಡ ಅವರ ಕೆಲವು ಫಿರಂಗಿಗಳನ್ನು ತಮ್ಮ ಸ್ವಾಸ್ಥ್ಯಗಳಿಗೆಲ್ಲಾ ಒಂದೊಂದರಂತೆ ಕಳುಹಿಸಿದರು ಲಂಡನ್ ಪಟ್ಟಣಕ್ಕೆ ಕಳುಹಿಸಿದ ಫಿರಂಗಿಯನ್ನು ಅಲ್ಲಿನ ಮ್ಯುನಿಸಿಪಾಲಿಟಿಯವರು ತೆಗೆದುಕೊಳ್ಳದೆ—ಅದನ್ನು ಇಡುವುದರಲ್ಲಿ ಬೋಅರರಿಗೆ ತುಂಬಾ ಅಪಮಾನ ಸವಿಸಿದಂತಾಗುವುದು ಎಂದು ಗವರ್ನಮೆಂಟಿಗೆ ತಿಳಿಸಿದರು ಕಲ್ಕತ್ತಾ ಪಟ್ಟಣಕ್ಕೂ ಗವರ್ನಮೆಂಟಿನವರು ಅಂಥಾ ಒಂದು ಫಿರಂಗಿಯನ್ನು ಕಳುಹಿಸಿಕೊಟ್ಟರು ಕಳೆದ ವಾರ ಕಲ್ಕತ್ತೆಯ ಮ್ಯುನಿಸಿಪಲ್ ಕಮಿಷನರುಗಳು ಈ ಫಿರಂಗಿಯನ್ನು ಬೋಅರ್ ಯುದ್ಧದ ಜ್ಞಾಪಕಾರ್ಥವಾಗಿ ತೆಗೆದು ಇಟ್ಟು ಪ್ರದರ್ಶನ ಮಾಡತಕ್ಕ ವಿಚಾರವನ್ನು ಕುರಿತು ಚರ್ಚೆ ಮಾಡಿದರು. ಕೆಲವು ಮ್ಯುನಿಸಿಪಲ್ ಕಮಿಷನರು ಲಂಡನ್‌ಪಟ್ಟಣದವರಂತೆಯೇ ಅಭಿಪ್ರಾಯಪಟ್ಟು, ಗವರ್ನಮೆಂಟಿನವರು ಕಳುಹಿಸಿರುವ ಫಿರಂಗಿಯನ್ನು ಅಂಗೀಕರಿಸಬಾರದೆಂದು ಹೇಳಿದರು. ಆದರೂ ಬಹು ಮಂದಿ ಆಗಬಹುದೆಂದು ಸಮ್ಮತಿಸಿದ್ದರಿಂದ ಕಡೆಗೆ ಆ ಫಿರಂಗಿಯನ್ನು ತೆಗೆದುಕೊಂಡು ಒಳ್ಳೇ ಸ್ಥಾನದಲ್ಲಿ ಇಡಬೇಕೆಂದು ತೀರ್ಮಾನ ಮಾಡಿದಾರೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

ಕೆ. ರಾಮಣ್ಣ, ದೊಡ್ಡಬಳ್ಳಾಪುರ —ಆ ಬಾತ್ಮಿಯನ್ನು ಕಳುಹಿಸಲಾರೆವು

ಸಿ ಟಿ ಎಂ, ಚಿಕ್ಕನಾಯಕನಹಳ್ಳಿ —ನೀವು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆದಿದ್ದೀರಿ. ಮತ್ತು ಆ ಬರವಣಿಗೆಯನ್ನು ಓದುವುದು ಕಷ್ಟ.

ಚಂದಾದಾರ, ನಂಜನಗೂಡು —ನಿಮ್ಮ ಬಾತ್ಮಿಯಲ್ಲಿ ಪ್ರಕಟನೆಗೆ ಅರ್ಹವಾದ ವಿಶೇಷ ವರ್ತಮಾನವೇನೂ ಕಂಡುಬರುವುದಿಲ್ಲ.

ಕರೆಸ್‌ಪಾಂಡೆನ್ಸ್.

ಶ್ರೀರಂಗಪಟ್ಟಣದ ಧರ್ಮಛತ್ರ

ಅಯ್ಯಾ,

ಕಳೆದ ವಾರ ರಂಗನಾಥ ಸ್ವಾಮಿಯವರ ದರ್ಶನಾರ್ಥವಾಗಿ ಶ್ರೀರಂಗಪಟ್ಟಣಕ್ಕೆ ಹೋದ ನಾನು ಮಧ್ಯಾಹ್ನ ಅನಾನುಕೂಲತೆಯಿಂದ ಮಹಾರಾಜರವರ ಧರ್ಮಛತ್ರಕ್ಕೆ ಇಳಿದು ಬಾಯಾರಿಕೆಗೆ ಕೇಳಿ ಸಿಕ್ಕದೆ ಬಹಳ ಪ್ರಯಾಸವಾದ್ದಲ್ಲದೆ ಹ್ಯಾಗೂ ಮಧ್ಯಾಹ್ನ ಊಟಕ್ಕೆ ನಿಂತೆನು. ಊಟವಾದರೋ ತಿಂದ ಒಡನೆ ಇಲ್ಲದ ಹೊಸ ರೋಗನೇ ಹತ್ತುವಷ್ಟು ಪೋಷಾಧಿಯಲ್ಲಿ ಇತ್ತು. ಆ ದಿನ ಮಾತ್ರವೇ ಹಾಗೋ ಗೊತ್ತಿಲ್ಲ. ಮಹಾರಾಜರವರು ಈ ಛತ್ರವನ್ನು ಪ್ರಜಾರೋಗ್ಯಕ್ಕೂ ಜನ ರಕ್ಷಣೆಗೂ ಆಗಿ ಇಟ್ಟಿದ್ದಾಗಿರಬಹುದು. ಆದರೆ ಈ ಪ್ರಕಾರವೇ ಇನ್ನು ನಡೆಯುವನಾದರೆ ಅಲ್ಲಿ ಬರತಕ್ಕ ಪ್ರಯಾಣಿಕರಿಗೆ ಪ್ರಯೋಜನವಿಲ್ಲ. ಬೇರೆ ಯಾರಿಗಾದರು ಮಹಾಶಯರೇ ಗ್ರಹಿಸಿಕೊಳ್ಳಲಿ ಈ ಸಂಗತಿಗಳಲ್ಲಾ ಮಹಾರಾಜರವರ ಚಿತ್ತಕ್ಕೆ ಈ ವರೆಗೆ ತಿಳಿದುಬಂದಿರಲಿಲ್ಲ ಇನ್ನಾದರೂ ದಯಾಳುಗಳಾದ ಮಹಾರಾಜರವರು ತಕ್ಕ ವಿಲೇವಾರಿಗಳನ್ನು ಮಾಡಿಯಾರಾಗಿ ನಂಬಿರುವ

ಕಂಟನ್‌ಮೆಂಟ್, ಚಂದಾದಾರರಲ್ಲೊಬ್ಬನು.
೧೧—೭—೦೫

ಮಲ್ನಾಡು ಜನರ ದುಃಖನಿವಾರಣೆ

ಅಯ್ಯಾ,

ಜೂನ್ ತಾರೀಖು ೧ ರಲ್ಲಿ ನಮೂದು ಆಗುವ ಪ್ರಕಾರ ಈ ತಾಲ್ಲೂಕು ಕೆಲವು ಗ್ರಾಮಗಳಲ್ಲಿ ದನಗಳಿಗೆ ಕಾಲುಮೇಲೆ ಹುಣ್ಣಾಗಿ ಪಡೆದುಕೊಳ್ಳುವದು ನಿಜ ಈ ಹುಣ್ಣಿಗೆ ಕಟ್ಟೆ ಹುಣ್ಣು, ನಾರೋ ಹುಣ್ಣು, ಹಂದಿಹುಣ್ಣು, ಎಂಬ ೩ ವಿಧವಾದ ಹೆಸರು ಇದೆ. ಇದಕ್ಕೆ ಸರಿಯಾದ ಔಷಧಿ ಮಾಡದೆ ಇದ್ದರೆ ಪರಿಣಾಮವಾಗುವದು ಕಷ್ಟ. ಇದಕ್ಕಾಗಿಯೇ ಒಂದು ವಿಧವಾದ ಮುಲಾಮನ್ನು ಬಿ. ಅಂಚೇ ರಾಮಪ್ಪನವರು ತಯಾರು ಮಾಡಿದ್ದಾರೆ ಇದು ನನ್ನ ಅನುಭವಕ್ಕೆ ಬಂದಿದೆ ಇದರ ಗುಣವು ಇದರ ಶಕ್ತಿಯು ಎಷ್ಟು ಹೇಳಿದಾಗ್ಯೂ ತೀರದು. ನಾನು ಮೇಲೆ ಕಾಣುವ ಕಾಹಿಲೆಯಿಂದಲೇ ಒದ್ದಾಡುತ್ತಾ ಅನೇಕ ಔಷಧಿ ಮಾಡಿದಾಗ್ಯೂ ಗುಣ ಬಾರದೆ ಈ ಮುಲಾಮನ್ನು ೮ ದಿವಸ ಹಚ್ಚಿದ್ದರಲ್ಲಿಯೇ ಚೆನ್ನಾಗಿ ಗುಣಬಂದಿತಾಗಿ ಇದರಲ್ಲಿ ನನಗೆ ತುಂಬಾ ನಂಬಿಕೆ ಉಂಟಾಗಿದೆ. ಇಂಥಾ ಗುಣಕಾರಿಯಾದ ಔಷಧಿಯನ್ನು ಸದರಿಯವರು ಧರ್ಮವಾಗಿ ಕೊಡುತ್ತಾರೆ ರೋಗಪೀಡಿತರಾದ ಜನರು ಈ ಔಷಧಿ ಅನುಪಾನಗಳಿಂದ ಆರೋಗ್ಯವನ್ನು ಹೊಂದುವಲ್ಲಿ ಮಲ್ನಾಡು ಜನರ ದುಃಖನಿವಾರಣೆ ಆಗುವದೆಂದು ಹೇಳುತ್ತೇನೆ ಇವರು ಇರುವ ಸ್ಥಳ ಮುಂತಾದ್ದು ನನ್ನ ಮೂಲಕ ತಿಳಿದುಕೊಳ್ಳಬಹುದು

ತೀರ್ಥಹಳ್ಳಿ. ಮಣೆಗಾರ್ ಆ ಶೇಷಪ್ಪ

ಚಿಕ್ಕಬಾಣಾವರದ ವಿಷಯ

ಅಯ್ಯಾ,

ಈ ಊರಲ್ಲಿ ತಕ್ಕಮಟ್ಟಿಗೆ ಮಳೆ ಬಿದ್ದು ರೈತರು ಬಿತ್ತನೆ ಕೆಲಸದಲ್ಲಿ ನಿರತರಾಗಿದ್ದಾರೆ ಆದರೂ ಇನ್ನು ಮಳೆ ಸಾಲದು ಈಗ ೧೫ ದಿನಗಳ ಕೆಳಗೆ ಈ ಊರಲ್ಲಿ ಪ್ರತಿ ವರ್ಷವೂ ನಡೆಯುವ ಮಾರಮ್ಮನ ರಥೋತ್ಸವ ಬಹಳ ವಿಜೃಂಭಣೆಯಿಂದ ನೆರವೇರಿತು. ರಥೋತ್ಸವದ ಕಡೇ ದಿನ ದೇವರುಗಳ ಉತ್ಸವಗಳು ಬಾಣಾ ಬಿರುಸುಗಳೊಡನೆ ನೋಟಕರಿಗೆ ನೇತ್ರಾನಂದವನ್ನುಂಟುಮಾಡಿದವು. ಈ ಊರಿನ ಸ್ಕೂಲ್ ಇಬ್ಬರು ಮಾಸ್ಟರುಗಳ ಬಲ್ಲವರಾಗಿಯೂ ಒಳ್ಳೇ ಸ್ಥಿತಿಗೆ ಬರತಕ್ಕದ್ದಾಗಿಯೂ ಇದೆ ಆದರೆ ಸ್ಕೂಲಿಗೆ ಸರಿಯಾದ ಕಟ್ಟಡವಿಲ್ಲ ದೇವಸ್ಥಾನದಲ್ಲಿ ಸ್ಕೂಲ್ ನಡೆಸುತ್ತಾರೆ. ಈಗೀಗ ಹೊಸ ಕಟ್ಟಡಕ್ಕೆ ಪ್ರಯತ್ನವಾಗುತ್ತಿ ಇದೆ ಈಗ ೧೦—೧೨ ದಿನಗಳ ಮುಂಚೆ ಬೆಂಗಳೂರ ತಾಲ್ಲೂಕು ದೇವೀ ಪಂಡಿತರು ಮೆ॥ ಬಿ ಆರ್ ಗೆ ವಿಂಧ್ಯಾಚಾರ್ಯರು ಬಂದು ಈ ಗಾಮದಲ್ಲಿಯೂ ಆಸ ಪಾಸು ಗ್ರಾಮಗಳಲ್ಲಿಯೂ ಮಕ್ಕಳಿಗೆ ವ್ಯಾಕ್ಸಿನೇಷನ್ ಮಾಡಿದರು ಇವರು ಈ ಊರಿನಲ್ಲಿ ವ್ಯಾಕ್ಸಿನೇಷನ್ ಮಾಡುವಾಗ್ಯೂ ಪಬ್ಲಿಕ್ ಉಪಯೋಗಕರವಾದ ಕೆಲವು ಸ್ಥಳಗಳಲ್ಲಿ ರೈತರಿಗೂ ಇತರ ಪ್ರಜೆಗಳಿಗೂ ಸಿಡುಬು ರೋಗದ ವಿಷಯ, ಟೀಕಾ ಹಾಕಿಸುವದರಿಂದ ಏನು ಪ್ರಯೋಜನ ಎಂಬೀ ವಿಷಯಗಳಲ್ಲಿ ಉಪನ್ಯಾಸ ಮಾಡಿರುತ್ತಾರೆ ದೊಡ್ಡಬಳ್ಳಾಪುರದ ಸಮೀಪದಲ್ಲಿ ಚಿನ್ನದ ಗಣಿ ಸಿಕ್ಕಿರುವದರಿಂದ ಈ ಪ್ರಾಂತ್ಯ ಭೂಗರ್ಭ ಇಲಾಖೆಯವರು ಶೋಧನೆ ಮಾಡುತ್ತಿದ್ದಾರೆ ನೆಲಮಂಗಲ ತಾಲ್ಲೂಕಿಗೆ ಸೇರಿದ್ದ ಹೆಸರುಗಟ್ಟದ ಹೋಬಳಿಯನ್ನು ಬೆಂಗಳೂರು ತಾಲ್ಲೂಕಿಗೆ ಸೇರಿಸುತ್ತಾರೆಂದು ವದಂತಿ ಇದೆ

ಪ್ರತ್ಯಕ್ಷದರ್ಶಿ

ತೀರ್ಥಹಳ್ಳಿ ತಾಲ್ಲೂಕು ಆರಗದ ಸಮಾಚಾರ.

ಅಯ್ಯಾ,

ಈ ಆರಗವು ಅಗ್ರಹಾರವೆಂತಲೂ ಪೇಟೆಯೆಂತಲೂ ಎರಡು ಭಾಗವಾಗಿದೆ ಪೇಟೆಯಲ್ಲಿ ವರ್ತಕರು ಜಿನಿವಾರರು ವಾಸವಾಗಿದಾರೆ ಇಲ್ಲಿ ತಾಲ್ಲೂಕು ಗೌರ್ನಮೆಂಟ್ ಬ್ರಾಂಚ್ ಕನ್ನಡ ಸ್ಕೂಲ್ ಇದೆ ಹೆಡ್ ಮಾಸ್ಟರು ಬಹಳ ಶ್ರದ್ಧೆಯಿಂದಲೂ ಮುತುವರ್ಜಿಯಿಂದಲೂ ಕೆಲಸ ಮಾಡುವರು ಸದಾಶಿವಪುರ ಅಗ್ರಹಾರವು ಬಹು ಪುರಾತನವಾದದ್ದು. ಈ ಅಗ್ರಹಾರದಲ್ಲಿ ಬ್ರಾಹ್ಮಣರ ಮನೆಗಳು ಅನೇಕ ಇವೆ ಇದರಲ್ಲಿ ಸಾಹುಕಾರರಾಗಿರತಕ್ಕವರು ೧—೨ ಜನಗಳು ಇದ್ದಾರೆ. ಈ ಅಗ್ರಹಾರ ಎರಡು ಶ್ರೇಣಿಗಳಾಗಿದೆ ಸರಕಾರ ರಸ್ತೆಗಳು ಇಲ್ಲ. ಬಾಕಿಗೆ ರಸ್ತೆಗಳು ಬಹಳ ಗಲೀಜು ಆಗಿ ಇವೆ. ಈ ಊರು ಬ್ರಾಹ್ಮಣರು ತಮ್ಮ ತಮ್ಮ ಮನೆಯ ದನಕರುಗಳನ್ನು ನಿಗಾನೋಡದೆ ಇರುವದರಿಂದ ರಾತ್ರಿ ಕಾಲದಲ್ಲಿ ದನಗಳು ರಸ್ತೆಯಲ್ಲಿಯೇ ಮಲಗಿ ಸಗಣಿ ಗಂಜಲಗಳು ಬಿದ್ದು ರಸ್ತೆ ಬಹಳ ಅನಾರೋಗ್ಯಕ್ಕೆ ಕಾರಣವಾಗಿ ಪ್ಲೇಗ್ ಉಪದ್ರ ತಲೆದೋರುವದೋ ಎನ್ನುವ ಹಾಗೆ ಇದೆ ಈ ಊರಲ್ಲಿ ಸರಕಾರಿ ನೊಡ್ಡಿಗಳು ಇಲ್ಲ. ಸರಕಾರದವರು ಈ ಅಗ್ರಹಾರಕ್ಕೆ ಸ್ಯಾನಿಟರಿ ರೂಲ್ಸನ್ನು ಜಾರಿಗೆ ತಂದು ಜನಗಳ ಆರೋಗ್ಯಭಾಗ್ಯವನ್ನು ಕಾಪಾಡ್ಯಾರೆಂದು ಯೋಚಿಸುತ್ತೇನೆ ಈ ಅಗ್ರಹಾರದಲ್ಲಿ ಸರಕಾರಿ ಬ್ರಾಂಚ್ ಕನ್ನಡ ಸ್ಕೂಲ್ ಇದೆ ಇಲ್ಲಿಗೆ ೫ ಜನ ಮಾಸ್ಟರುಗಳು ಇದಾರೆ. ಹೆಡ್ ಮಾಸ್ಟರ ತಲಬು ೨೦ ರೂಪಾಯಿಗೆ ಬಡ್ತಿ ಆದಂತೆ ಕೇಳಿ ಸಂತೋಷವಾಯ್ತು ಇಲ್ಲಿ ಒಂದು ಪೋಸ್ಟ್ ಆಫೀಸು ಸಹಾ ಇದೆ ಕಾಗದ ಬಟವಾಡೆಗೆ ಬಹಳ ಅನಾನುಕೂಲವಿದೆ ಎಂತ ಪೋಸ್ಟ್ ಮಾಸ್ಟರು ಹೇಳುತ್ತಾರೆ ಸರಕಾರದವರು ... ಪೋಸ್ಟ್ ಪ್ಯಾದೆ ಮನನ್ನು ಇಡಿಸ್ಯಾರೆಂದು ಹಾರೈಸುತ್ತೇವೆ.

ಬಾತ್ಮಿದಾರ್.

ಮೈಸೂರು ಗೆಜೆಟ್ ಸಂಗ್ರಹ.

ಬೌರಿಂಗ್ ಪೇಟೆ ತಾಲ್ಲೂಕಿಗೆ ಸೇರಿದ ಬೂದಿಕೋಟೆಯನ್ನೂ ಬೇತಮಂಗಲವನ್ನೂ ಗ್ರಾಮ ಸಂಘ (ವಿಲ್ಲೇಜ್ ಯೂನಿಯನ್)ಗಳಾಗಿ ಏರ್ಪಾಡು ಮಾಡಿದಾರೆ.

ಸಿವಿಲ್ ಸರ್ಜನ್ ಮೆ॥ ಟಿ ಎಸ್. ನಂಜಪ್ಪನವರಿಗೆ ಕಳೆದ ಮಾರ್ಚಿ ೩ ರಲ್ಲಿ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಮೂರು ತಿಂಗಳಿಗೆ ಜಾಸ್ತಿಮಾಡಿದೆ

ಮೈಸೂರು ಅಡಿಷನಲ್ ಮುನ್ಸಿಫ್ ಮೆ॥ ಪಿ ಎ ಶಿವಪ್ರಸಂ ಪಿಳ್ಳೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಕಾಯಿಲೆ ರಜಾ ಕೊಟ್ಟಿದೆ

ಅಡ್ವೊಕೇಟ್ ಮೆ॥ ಎಸ್. ವೆಂಕಟಕೃಷ್ಣಯ್ಯನವರು ಮೈಸೂರು ಅಡಿಷನಲ್ ಮುನ್ಸಿಫರಾಗಿ ನೇಮಿಸಲ್ಪಟ್ಟಿದಾರೆ

ದಾವಣಗೆರೆ ತಾಲ್ಲೂಕು ಸಬ್‌ಪ್ರೊಟೆಂ ಅಮಲ್ದಾರ್ ಮೆ॥ ಎಚ್ ಕೇಶವಾಚಾರ್ರಿಗೆ ಎರಡು ತಿಂಗಳು ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು.

ತಿಪ್ಟೂರು ತಾಲ್ಲೂಕು ಅಮಲ್ದಾರ್ ಮೆ॥ ಸಿ. ವಿ ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತುಮಕೂರು ಡಿಸ್ಟ್ರಿಕ್ಟ್ ಆಫೀಸ್ ಹೆಡ್ ಕ್ಲಾರ್ಕ್ ಸಿ. ಗೋಪಾಲಾಚಾರ್ರು ತಿಪ್ಟೂರು ತಾಲ್ಲೂಕಿನ ಅಮಲ್ದಾರ್ ಮತ್ತು ೩ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದಾರೆ

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮೀಷನರ್ ಮೆ॥ ಡಿ ರಾಜೇ ಅರಸಿನವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ಅನ್ನು ಇನ್ನೂ ಹದಿನೈದು ದಿನಗಳಿಗೆ ಜಾಸ್ತಿಮಾಡಿದೆ

ಡೆಪ್ಟಿ ಕಮೀಷನರ್ ಮೆ॥ ಕೆ ಎಸ್ ದೊರೆಸಾಮಿ ಐಯರಿಗೆ ಕೊಟ್ಟಿದ್ದ ೨ ವಾರಗಳ ಪ್ರಿವಿಲೆಜ್ ರಜವನ್ನು ಇನ್ನು ಹದಿನೈದು ದಿನಗಳಿಗೆ ಜಾಸ್ತಿಮಾಡಿದೆ.

ಎಕ್ಸ್‌ಟ್ರಾ ಅ॥ ಕಮೀಷನರ್ ಮೆ॥ ಬಿ. ದಾಸಿ ಕೃಷ್ಣರಾಯರನ್ನು ಕಳೆದ ಫೆಬ್ರವರಿ ೨೨ರ ಲಾಗಾಯಿತು ೩ನೇ ತರಗತಿಯಿಂದ ೩ನೇ ತರಗತಿಗೆ ಬಡ್ತಿ ಮಾಡಿದೆ

ರೆವಿನ್ಯೂ ಪ್ರೊಬೇಷನರ್ ಮತ್ತು ಸಬ್ ಪ್ರೊಟೆಂ ಅಮಲ್ದಾರ್ ಮೆ॥ ಸಿ ರಂಗನಾಥರಾವ್ ಸಾಹೇಬ್‌ಯವರನ್ನು ಕಳೆದ ಜೂನ್‌ನಿಂದ ೩ನೇ ಕ್ಲಾಸ್ ಅಮಲ್ದಾರರಾಗಿ ಖಾಯಂಮಾಡಿದೆ

ಪ್ರೊ ಎಕ್‌ಸ್ಟ್ರಾ ಅ॥ ಕಮೀಷನರ್ ಮೆ॥ ಟಿ ತಂಬೂಚಟ್ಟಿಯವರನ್ನು ಬೆಂಗಳೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಖಜಾನೆ ಛಾರ್ಜ್ ವಹಿಸುವದಕ್ಕಾಗಿ ವರ್ಗಮಾಡಿದೆ ಕೂಡಲೇ ಕೆಲಸದ ಮೇಲೆ ಹಾಜರಾಗತಕ್ಕದ್ದು

ಮೆ॥ ರಾ. ಮಲ್ಲಚಟ್ಟಿಯವರನ್ನು ಕೋಲಾರ್ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜ್ ವಹಿಸುವದಕ್ಕೆ ವರ್ಗಮಾಡಿದೆ

ಎಕ್‌ಸ್ಟ್ರಾ ಅ॥ ಕಮೀಷನರ್ ಮೆ॥ ಟಿ. ಸುಂದರರಾಜ ಐಯಂಗಾರ್ರನ್ನು ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಖಜಾನೆ ಛಾರ್ಜ್ ವಹಿಸುವುದಕ್ಕೋಸ್ಕರ ವರ್ಗಮಾಡಿದೆ

ಕೋಲಾರ್ ಡಿವಿಜನ್ ಸಬ್ ಆ ಇಂಜನಿಯರ್ ಮೆ॥ ರಾಮರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಇನ್‌ಫೆಂಟ್ರಿ ೩ನೇ ಬೆಟಾಲಿಯನ್ ಕಮಿಷನ್‌ಯಲ್ಲಿ ಗುಲಾಂ ಅಹಮದ್‌ಯವರನ್ನು ೧ನೇ ಗ್ರೇಡ್ ಜಮಾಯಿಂದ ೨ನೇ ಗ್ರೇಡ್ ಸುಬೇದಾರಿಗೆ ಕಳೆದ ಜೂನ್ ೧ನೇ ತಾರೀಖಿನಿಂದ ಬಡ್ತಿ ಮಾಡಿದೆ

ಉಪ್ಪೋಂಬಲು ಮಠದ ಅಪೀಲು.

ಮದರಾಸ್ ಹೈ ಕೋರ್ಟಿನ ತೀರ್ಮಾನ.

ಮದರಾಸ್ ಹೈ ಕೋರ್ಟ್ ಜಡ್ಜಿಗಳಾದ ಮೆ॥ ಡೇವಿಸ್‌ವರೂ ಮೆ॥ ಬೆನ್ಸನ್‌ರವರೂ ಈ ಮಠದ ಅಪೀಲ್ ಮೊಕದ್ದಮೆಯಲ್ಲಿ ಕಳೆದ ೧೨ನೆ ತಾರೀಖಿನ ದಿನ ತೀರ್ಮಾನ ಹೇಳಿದರು ಜಡ್ಜಮೆಂಟಿನ ಸಾರಾಂಶವೇನೆಂದರೆ—

ಕಳೆದ ಜನವರಿ ೨೭ನೆ ತಾರೀಖಿನಲ್ಲಿ ಹೈ ಕೋರ್ಟ್ ಕೊಟ್ಟೋಣಾದ ಹುಕುಂ ಪ್ರಕಾರ ಈ ಮಠದ ಶಿಷ್ಯರುಗಳ ೮,೦೦೦ ಜನರು ಅರ್ಜಿಗಳನ್ನು ಬರೆದು ರುಜು ಹಾಕಿ ಹಾಜರುಮಾಡಿದರು ಈ ಅರ್ಜಿಗಳನ್ನು ತನಿಖೆ ಮಾಡಿ ನೋಡುವಲ್ಲಿ ಮಠದ ಜೀಯರ್ ಅಥವಾ ಮಠಾಧಿಪತ್ಯಕ್ಕೆ ಏಳು ಮಂದಿಯರುಗಳನ್ನು ಕಾಣಿಸಿದಾತ್ತಾರೆ ಈ ಏಳು ಮಂದಿಗಳ ಹೆಸರು ಅವರವರನ್ನು ಮಠಾಧಿಪತ್ಯಕ್ಕೆ ನೇಮಿಸಬೇಕೆಂದು ಶಿಷ್ಯರು ಕೊಟ್ಟಿರುವ ಸಮ್ಮತಿ ರುಜುಗಳ ಸಂಖ್ಯೆಗಳೂ ಏನೆಂದರೆ—(೧) ಚಕ್ರವರ್ತಿ ವೆಂಕಟಾಚಾರ್ಯರು—ಇವರಿಗೆ ೪,೮೩೯ ಜನರು ಸಮ್ಮತಿ ಹಾಕಿದಾರೆ (೨) ಶ್ರೀ ಲಕ್ಷ್ಮೀನರಸಿಂಹ ರಾಮಾನುಜ ಸ್ವಾಮಿಗಳು—ಇವರಿಗೆ ಆ ಪಟ್ಟವಾಗಬೇಕೆಂದು ೧,೪೦೩ ಮಂದಿ ಶಿಷ್ಯರು ಒಪ್ಪಿದಾರೆ (೩) ಯಜ್ಞದೀಕ್ಷಿತರು—ಇವರಿಗೆ ೭೩೦ ಜನ ಶಿಷ್ಯರೂ, (೪) ಸ್ವರ್ಣಂ ಕೃಷ್ಣಮಾಚಾರ್ರು—ಇವರಿಗೆ ೫೬೯ ಶಿಷ್ಯರೂ, (೫) ಕೆ ಎ. ಶ್ರೀನಿವಾಸಾಚಾರ್ಯರು—ಇವರಿಗೆ ... ಜನ ಶಿಷ್ಯರೂ, (೬) ಟಿ ಶ್ರೀನಿವಾಸರಾಘವಾಚಾರ್ಯರು—ಇವರಿಗೆ ೬೩ ಜನ ಶಿಷ್ಯರೂ, (೭) ಶೇಷಾದ್ರಿಚಾರ್ಯರು—ಇವರಿಗೆ ೫ ಜನ ಶಿಷ್ಯರೂ ಸಮ್ಮತಿಗಳನ್ನು ಹಾಕಿದಾರೆ. ಈ ಸಮ್ಮತಿ ರುಜುಗಳನ್ನು ಮದರಾಸ್ ಅಧಿಪತ್ಯದ ಪ್ರತಿ ಒಂದು ಭಾಗದಲ್ಲಿರುವರೂ, ತಿರುವಾಂಕೂರು (ಅನಂತಶಯನ), ಮೈಸೂರು, ಹೈದರಾಬಾದು, ಕಾಶೀ—ಈ ಪ್ರಾಂತ್ಯಗಳಲ್ಲಿರತಕ್ಕ ಶಿಷ್ಯಮಂಡಲಿಯವರೂ ಹಾಕಿರುವರು ಇದರಿಂದ ಈ ಮಠಕ್ಕೆ ಸೇರಿದ ಶಿಷ್ಯಮಂಡಲಿಯವರೆಲ್ಲಾ ಈ ವಿಷಯದಲ್ಲಿ ತಮ್ಮ ಅಭಿಮತವನ್ನು ತಿಳಿಸಿದ್ದಾರೆಂದು ಗೊತ್ತಾಗುವುದು. ಶಿಷ್ಯಮಂಡಲಿಯವರು ಮೇ

...ದನ ರಾಮಾನುಜಾಚಾರ್ಯರುಗಳ ಯೋಗ್ಯತಾಯೋಗ್ಯತೆಗಳನ್ನು ಬಹ ಚನ್ನಾಗಿ ವಿವರಿಸುತ್ತಾರೆ ಇದೆಲ್ಲಾ ಒಟ್ಟು ೧,೭೦೦ ಫುಲ್ ಸ್ಕೇಪ್ ಕಾಗದಗಳಲ್ಲಿ ಅಚ್ಚಾಗಿರುವದು ಉಭಯ ಪಕ್ಷದ ವಕೀಲರೂ ಈ ಪ್ರಿಂಟಾಗಿರುವ ಕಾಗದಗಳಲ್ಲಿನ ಮುಖ್ಯಾಂಶಗಳನ್ನು ...ಗಳಿಗೆ ವಿವರಿಸಿ ತಿಳಿಸಿರುತ್ತಾರೆ. ಇದರಿಂದ ಸುಮಾರು ಮು ...ಲುಪಾಲು ಶಿಷ್ಯರೆಲ್ಲಾ ಚಕ್ರವರ್ತಿ ವೆಂಕಟಾಚಾರ್ಯರಿಗೇ ...ಯರ ಸ್ಥಾನ ದೊರಕಬೇಕೆಂದು ಸಮ್ಮತಿಹಾಕಿರುವದು ಗೊತ್ತಾಗುತ್ತದೆ. ಎರಡನೇ ರಾಮಾನುಜ ಸ್ವಾಮಿಗಳು ಪಡೆದಿರುವ ಸಮ್ಮತಿಗಿಂತಲೂ ಇವರಿಗೆ ನಾಲ್ಕುಪಾಲು ಹೆಚ್ಚಾಗಿ ಸಮ್ಮತಿ ದೊರೆತಿರುವು ಇದಲ್ಲದೆ ಬಹುಜನ ದೊಡ್ಡಮನುಷ್ಯರೇ ಅವರಿಗೆ ಪಟ್ಟ ...ಗಬೇಕೆಂದು ಸಮ್ಮತಿ ಹಾಕಿದಾರೆ. ದಿವಾನ್‌ಗಳು, ಮ್ಯಾಜಿಸ್ಟ್ರೇಟರು, ಇತರ ಸರಕಾರಿ ನೌಕರರು, ೪೦ ಮಂದಿ ಹೈಕೋರ್ಟ ವಕೀಲರು, ಮಿರಾಸಿಗಳು, ಭಾರಿ ಭಾರೀ ಜಮೀನುದಾರರು, ಮಠಾಧಿಪತಿಗಳು, ಇನ್ನೂ ಅನೇಕರು ವೆಂಕಟಾಚಾರ್ಯರಿಗೆ ಸಮ್ಮತಿ ಹಾಕಿರೋದರಿಂದ ಅವರು ಆ ಸ್ಥಾನಕ್ಕೆ ಯೋಗ್ಯತಾ ...ವನ್ನು ಪಡೆದಿದಾರೆನ್ನುವುದಕ್ಕೆ ಸಂಶಯವಿಲ್ಲ ಇದಲ್ಲದೆ ...ವರ ಹಿರಿಯರೂ ಜೀಯರುಗಳಾಗಿದ್ದರು. ಇವರಿಗೆ ೫೦ ವರ್ಷ ...ಯುಸ್ಸಾಗಿ ವಿದ್ಯಾವಿಷಯಾಮುಖ್ಯಗಳನ್ನು ಸಂಪೂರ್ಣವಾಗಿ ಪಡೆದಿ...ರೆ ಆದರೆ ಇವರ ವಿಷಯದಲ್ಲಿ ಒಂದು ಅಪವಾದವಿದೆ. ಇವರು ...ಮಾರು ಹತ್ತು ವರ್ಷಗಳ ಹಿಂದೆ ಸಬ್ ಜಡ್ಜಿಯವರ ಕೋರ್ಟಿನಲ್ಲಿ ನಡೆದ ಒಂದು ಸಿವಿಲ್ ಮೊಕದ್ದಮೆಯಲ್ಲಿ ಒಂದು ಸುಳ್ಳು ...ಳಿದರೆಂದು ತಿಳಿಯುವುದು ಆದರೆ ಅದರ ನಿಜಸ್ಥಿತಿಯು ಅದಾಲತಿನಲ್ಲಿ ವಿಚಾರಣೆಯಾಗಲಿಲ್ಲ. ಆದದರಿಂದ ಇವರು ಈ ಶ್ರೇಷ್ಠ ಸ್ಥಾನಕ್ಕೆ ಅರ್ಹರಲ್ಲವೆನ್ನುವುದಕ್ಕೆ ಯಾವ ಕಾರಣವೂ ಕಂಡುಬರುತ್ತಿಲ್ಲ. ಆದಕಾರಣ ಜಡ್ಜಿಗಳು ಏಕವಾಕ್ಯತೆಯಿಂದ ಅವರ ...ಮಠದ ಜೀಯರನ್ನಾಗಿ ನೇಮಕಮಾಡಿದಾರೆ. ಅವರು ಒಂದು ...ಂಗಳೊಳಗಾಗಿ ಮಠದ ಕ್ರಮಗಳಿಗನುಸಾರವಾಗಿ ಸನ್ಯಾಸವನ್ನು ಸ್ವೀಕರಿಸತಕ್ಕದ್ದು ಇದಲ್ಲದೆ ಮಠದ ಕಾರುಬಾರುಗಳನ್ನು ಸ ...ರ್ಕಾರಿ ತರಫ ನೋಡಿಕೊಳ್ಳುತ್ತಿರುವ ಅಧಿಕಾರಿಯು (ರಿಸೀವರು) ವೆಂಕಟಾಚಾರ್ಯರಿಗೆ ಸನ್ಯಾಸಾಶ್ರಮ ಸ್ವೀಕಾರಕ್ಕೆ ಬೇಕಾದ ...ಹಾಯ ಸಂಪತ್ತುಗಳನ್ನೆಲ್ಲಾ ಒದಗಿಸಿಕೊಡಬೇಕಾಗಿದೆ ಮತ್ತು ...ಮೊಕದ್ದಮೆಯ ಖರ್ಚುಗಳನ್ನೆಲ್ಲಾ ಮಠದ ಫಂಡಿನಿಂದಲೇ ...ಡತಕ್ಕದ್ದು

ವಿದೇಶ ವರ್ತಮಾನಗಳು

ಫ್ರಾನ್ಸ್ ರಾಜ್ಯದಲ್ಲಿ ಪ್ರಜೆಗಳು ೪ ಲಕ್ಷ ನಾಯಿಗಳನ್ನು ...ಕುತ್ತಾರೆಂತಲೂ ಇವುಗಳ ಮೇಲೆ ಸರ್ಕಾರದವರು ವಿಧಿಸಿರುವ ...ರಿಗೆ ಬಾಬಿನಿಂದ ವರ್ಷಕ್ಕೆ ೬೦ ಲಕ್ಷ ರೂಪಾಯಿಗೆ ಕಮ್ಮಿ ಇಲ್ಲ ಉತ್ಪತ್ತಿ ಆಗುತ್ತಿದೆ ಎಂತಲೂ ಪ್ರಕಟವಾಗಿದೆ.

*****

ಅಮೇರಿಕ ಸಂಸ್ಥಾನದ ಮಿಲ್ವಾಕಿ ನಗರದಲ್ಲಿ ಒಂದು ದೊಡ್ಡ ಬ್ಯಾಂಕಿನ ಮ್ಯಾನೇಜರಾಗಿದ್ದ ಬಿಗಲೋ ಎಂಬಾತನು ಆ ಬ್ಯಾಂಕಿನ ...ಣವಲ್ಲಿ ೪೫ ಲಕ್ಷ ರೂಪಾಯಿಗಳನ್ನು ತಿಂದುಹಾಕಿದನು ಇವ ...ಗೆ ಹತ್ತು ವರುಷ ಕಠಿಣ ಸಜಾ ಆಯಿತೆಂದ ತಿಳಿದುಬಂದಿದೆ

*****

ಲಂಡನ್ ಪಟ್ಟಣದಲ್ಲಿ ಕೆಲವು ದಿನಗಳ ಕೆಳಗೆ ಕಾಲವಾದ ಡ್ಯೂಕ್ ಆಫ್ ವೆಸ್ಟ್‌ಮಿನಿಸ್ಟರ್ ಎಂಬಾತನ ... ರೂಪಾಯಿಗಳನ್ನೂ, ...ಬರ್ಟ ಆರ್ಮಿಂಗ್‌ಟನ್ ಎಂಬಾತನು ತನ್ನ ೧೪೫ ಲ ರೂಪಾಯಿ ...ಆಸ್ತಿಯಲ್ಲಿ ಕಾಲುಪಾಲನ್ನೂ ಧರ್ಮ ಕೆಲಸಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿದಾರೆ.

*****

ವಿಲಾಯಿತಿಯಲ್ಲಿರುವ ಬ್ಯಾಂಕ್ ಆಫ್ ಇಂಗ್ಲೆಂಡ್ ಎಂಬ ...ಹುಕಾರಿ ಲೇವಾದೇವಿ ಕಂಪನಿಯಲ್ಲಿ ೧,೦೦೦ ಜನ ನೌಕರರಿದ್ದಾರೆ. ಇವರ ಸಿಬ್ಬಂದಿ ಖರ್ಚು ವರ್ಷಕ್ಕೆ ೩೭ ಲಕ್ಷ ರೂಪಾಯಿ ಆಗುತ್ತದೆ ಇದಲ್ಲದೆ ಈ ಬ್ಯಾಂಕಿನವರು ತಮ್ಮ ಹಳೇ ನೌಕರರಿಗೆ ವರ್ಷಕ್ಕೆ ೫। ಲಕ್ಷ ರೂಪಾಯಿ ಪೇನ್ಷನ್ ಕೊಡುತ್ತಿದಾರೆ

*****

ರಷ್ಯಾ ರಾಜ್ಯದಲ್ಲಿ ದೊಡ್ಡ ಸಂತೆ ನಡೆಯುವ ಮಾಸ್ಕೋ ಪಟ್ಟಣದಲ್ಲಿ ಪ್ರತಿ ವರುಷವೂ ಒಂದು ಸಾವಿರ ಮದುವೆಗಳಾಗುವವು ...ತ್ತುಮುತ್ತಿನಿಂದ ಗಂಗಸರೂ ಹೆಂಗಸರೂ ಆ ಸಂತೆಗೆ ಬಂದು ...ತಮಗೆ ಬೇಕಾದ ಗಂಡು ಹೆಣ್ಣುಗಳನ್ನು ಆರಿಸಿ ಗೊತ್ತುಮಾಡಿಕೊಳ್ಳುವರು. ಆದಕ್ಕೆ ಮದುವೆಯ ಸಂತೆ ಎಂದು ಹೆಸರಿಟ್ಟಿದ್ದಾರೆ.

*****

ಸ್ಯಾಕ್ಸನಿ ರಾಜ್ಯದಲ್ಲಿ ದೊಡ್ಡ ಶಹರಾದ ಲೀಪ್ಸಿಗ್ ಪಟ್ಟಣದಲ್ಲಿ ಒಂದು ಭಾರೀ ರೈಲ್ ಸ್ಟೇಷನ್ ಕಟ್ಟುತ್ತಿದಾರೆ. ಇದರಷ್ಟು ದೊಡ್ಡ ಸ್ಟೇಷನು ಪ್ರಪಂಚದ ಇನ್ನಾವ ಪಟ್ಟಣದಲ್ಲೂ ಇರುವುದಿಲ್ಲ. ಈ ಕಟ್ಟಡಕ್ಕೆ ಒಟ್ಟು ೯ ಕೋಟಿ ರೂಪಾಯಿ ಖರ್ಚಾಗುವುದು ಕಾಮಗಾರಿಯು ಪೂರೈಸುವುದಕ್ಕೆ ಹತ್ತು ಸಂವತ್ಸರಗಳು ಹಿಡಿಯುವವೆಂದು ತಿಳಿದುಬಂದಿದೆ

*****

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ವಿಲ್ಲಿಯಂಸ್ ಎಂಬ ಪಟ್ಟಣದಲ್ಲಿ ಗ್ರೂಬರ್ ಎಂಬೊಬ್ಬ ಶಿಕಾರಿಗಾರನು ತನ್ನ ಸ್ನೇಹಿತರಿಗೆ ಔತಣಮಾಡಿದನು ಅವನು ಹಾವುಗಳನ್ನಲ್ಲದೆ, ಇನ್ನಾವ ಜೀವಿಗಳನ್ನೂ ಕೊಲ್ಲುವುದಿಲ್ಲ. ಇದುವರಿಗೆ ೪,೦೦೦ ಹಾವುಗಳನ್ನು ಕೊಂದಿರುತ್ತಾನೆ. ಆ ಹಾವುಗಳ ಚರ್ಮದಿಂದ ತಯಾರಾದ ಅಂಗಿಯನ್ನೇ ಆ ಔತಣದ ದಿನ ಅವನು ತೊಟ್ಟುಕೊಂಡಿದ್ದನು.

ಫ್ರಾನ್ಸಿನ ಮುಖ್ಯ ಪಟ್ಟಣವಾದ ಪ್ಯಾರಿಸ್‌ನಗರದಲ್ಲಿ ಕೆಲವು ದಿನಗಳ ಹಿಂದೆ ಕುಂಟರನ್ನು ನಿಲ್ಲಿಸಿ ಪಂದ್ಯಕಟ್ಟಿ ಓಡಿಸಿದರು. ಸುಮಾರು ೧೯ ಮಂದಿ ಮರದ ಕಾಲುಗಳನ್ನುಳ್ಳ ಕುಂಟರು ಈ ಪಂದ್ಯಕ್ಕೆ ಸೇರಿ ಜೂಜುಕಟ್ಟಿ ಓಡಿದರು. ಮೂರು ಮೈಲಿಯ ಓಟದಲ್ಲಿ ಮೊದಲು ಓಡಿದವನಿಗೆ ತುಂಬಾ ಬಹುಮಾನ ಕೊಟ್ಟರು. ಸಾವಿರಾರು ಪ್ರಜೆಗಳು ಈ ವಿನೋದವನ್ನು ನೋಡಿ ಸಂತೋಷಪಟ್ಟರು.

*****

ಯೂರೋಪ್ ಖಂಡದಲ್ಲಿ ಮಹಾ ಐಶ್ವರ್ಯವಂತರೆಂದು ಪ್ರಖ್ಯಾತಿ ಪಡೆದಿದ್ದ ಗತಿಸಿದ ಬ್ಯಾರನ್ ನಥ್ಯಾನಿಯಲ್ ರಾತ್ಸ್‌ಚೈಲ್ಡ ಯವರು ವಿಯನ್ನಾ ಪಟ್ಟಣದಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಬೇಕೆಂತಲೂ ಅದರಲ್ಲಿ ನರಗಳ ಉಪದ್ರವನ್ನನುಭವಿಸುವ ರೋಗಿಗಳಿಗೆ ಚಿಕಿತ್ಸೆಮಾಡಬೇಕೆಂತಲೂ ಈ ಪುಣ್ಯಕಾರ್ಯಕ್ಕೆ ತನ್ನ ಆಸ್ತಿಯಲ್ಲಿ ೧೩೦ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂತಲೂ ಮರಣಶಾಸನವನ್ನು ಬರೆದಿದಾರೆ.

*****

ಆಸ್ಟ್ರಿಯಾ ಸೈಲೆಷಿಯಾಕ್ಕೆ ಸೇರಿದ ಟ್ರೋಪೋ ಎಂಬ ಪಟ್ಟಣದಲ್ಲಿ ಹರ್ ಪಾಲ್ ಟೂರಾ ಎಂಬೊಬ್ಬ ಕಾರೇಗಾರನು ಕಾಲವಾದನು. ಇವನು ಸಾಯುವ ಕಡೆಗಾಲದಲ್ಲಿ ಫೋನೋಗ್ರಾಫ್ ಎಂಬ ಯಂತ್ರವನ್ನು ತರಿಸಿ, ತನ್ನ ಮರಣ ಸೂಚಕವಾದ ಕೀರ್ತನೆಯನ್ನು ಹೇಳಿ ಆ ಯಂತ್ರಕ್ಕೆ ಬರಸಿದನು ಸತ್ತ ಮೇಲೆ ತನ್ನ ಶವವನ್ನು ರುದ್ರಭೂಮಿಗೆ ಸಾಗಿಸುವಾಗ್ಗೆ ತನ್ನ ಸಮೀಪ ಬಂಧುಗಳು ಆ ಫೋನೋಗ್ರಾಫನ್ನು ಒಡದು, ಆ ಕೀರ್ತನೆಯನ್ನೇ ಹಾಡಬೇಕೆಂದು ತಿಳಿಸಿ ಕಟ್ಟುಮಾಡಿದನು.

*****

ಪೋರ್ಚುಗಲ್ ರಾಜ್ಯಕ್ಕೆ ಸೇರಿದ ಪಡ್ರೆಲ್ಲಾ ನಗರದಲ್ಲಿ ಆಂತೋನಿಯೋ ಸೂಯೆಸ್ ಎಂಬೊಬ್ಬ ಮನುಷ್ಯನಿರುತ್ತಾನೆ. ಈತನಿಗೆ ಮೂರು ತಿಂಗಳಿಂದ ನಿದ್ರೆಯೇ ಇಲ್ಲ. ಅನೇಕ ಡಾಕ್ಟರುಗಳು ಆತನ ದೇಹಸ್ಥಿತಿಯನ್ನು ಪರೀಕ್ಷಿಸಿ, ನಿದ್ರೆ ಬರುವಂತೆ ನಾನಾ ತರದ ಔಷಧಗಳನ್ನು ಕೊಟ್ಟದಾರೆ. ಆದರೂ ಆತನಿಗೆ ಕೆಲವು ನಿಮಿಷಗಳಾದರೂ ನಿದ್ರೆಹತ್ತಲಿಲ್ಲ. ಅವನು ಹಗಲಿನಲ್ಲಿ ಹೇಸರಕತ್ತೆಗಳನ್ನು ಹೊಡೆದು ಮೇಯಿಸುತ್ತಲೂ ರಾತ್ರಿ ಹೊತ್ತು ಪಹರೆ ಕೊಡುವ ಕೆಲಸ ಮಾಡುತ್ತಲೂ ಇದ್ದಾನೆ.

*****

ರಷ್ಯಾವಿಗೆ ಸೇರಿದ ತುರ್ಕಿಸ್ಥಾನದಲ್ಲಿ ವರ್ತಕರಿಗೆ ತುಂಬಾ ಹಿಂಸೆಯುಂಟಾಗಿರುವಂತೆ ತಿಳಿದುಬಂದಿದೆ. ರಷ್ಯಾ ಅಧಿಕಾರಿಗಳು ಜಪಾನ್ ಯುದ್ಧದ ಖರ್ಚಿಗಾಗಿ ವರ್ತಕರನ್ನು ಬಹಳವಾಗಿ ಕಷ್ಟನಷ್ಟಗಳಿಗೆ ಗುರಿಮಾಡಿದರು. ಇದನ್ನು ಸಹಿಸಲಾಗದೆ ಸಾಹುಕಾರರು ಗುಂಪು ಗುಂಪಾಗಿ ಸಂಸಾರ ಸಹಿತ ತುರ್ಕಿಸ್ಥಾನವನ್ನೇ ಬಿಟ್ಟು ಅಫಘಾನಿಸ್ಥಾನಕ್ಕೆ ಬಂದು ನಿಲ್ಲುತ್ತಿದಾರೆ ಅಫಘಾನಿಸ್ಥಾನದ ಅಮೀರರು ಅವರಿಗೆ ಯಾವ ವಿಧವಾದ ತೊಂದರೆಗಳೂ ಉಂಟಾಗದಂತೆ ನೋಡಿಕೊಳ್ಳುವರು ಆ ವರ್ತಕರಲ್ಲಿ ಕೆಲವರು ಹಿಂದೂಸ್ಥಾನಕ್ಕೂ ಬರಬೇಕೆಂದು ಗೊತ್ತುಮಾಡಿದಾರೆ

*****

ಅಲೆಕ್ಸಾಂಡ್ರಿಯಾ, ಮಾರ್ಸೇಲ್ಸ್, ಟ್ರಿಯಸ್ಟ, ಈ ಮಹಾ ಪಟ್ಟಣಗಳಲ್ಲಿರುವ ಕೆಲವು ದೊಡ್ಡ ವರ್ತಕರು ಸೇರಿ ಅಲೆಕ್ಸಾಂಡ್ರಿಯಾ ನಗರದಲ್ಲಿ ಒಂದು ಭಾರೀ ಕಾರ್ಖಾನೆಯನ್ನು ಸ್ಥಾಪಿಸಿ, ಯಂತ್ರ ಮೊದಲಾದವುಗಳನ್ನು ಅನೇಕವಾಗಿ ತಂದಿಟ್ಟು, ಭತ್ತವನ್ನು ಕುಟ್ಟಿ ಅಕ್ಕಿ ಮಾಡಿಸುತ್ತಿದಾರೆ ಪ್ರತಿ ದಿನವೂ ೧೧೨೦ ಪಲ್ಲಾದಂತೆ ಅಕ್ಕಿ ತಯಾರಾಗುವುದು. ಈಜಿಪ್ಟ ರಾಜ್ಯದ ನೈಲ್ ನದೀ ಪ್ರಾಂತ್ಯದಲ್ಲಿ ಬೆಳೆಯುವ ಅಪಾರವಾದ ಭತ್ತವನ್ನು ಈ ಕಾರ್ಖಾನೆಗೆ ತರಿಸುವರು ಇನ್ನು ಮುಂದೆ ಹಿಂದೂಸ್ಥಾನದಿಂದಲೂ ಬರ್ಮಾದಿಂದಲೂ ಭತ್ತವನ್ನು ಈ ಕಾರ್ಖಾನೆಗೆ ಕಳುಹಿಸುತ್ತಾರೆಂದು ವರ್ತಮಾನವಿದೆ.

*****

ಲಂಡನ್ ಪಟ್ಟಣದಲ್ಲಿ ಬಡ ರೋಗಿಗಳಿಗೆ ಚಿಕಿತ್ಸೆ ಮಾಡುವುದಕ್ಕೆ ೨೭೦ ಆಸ್ಪತ್ರೆಗಳೂ ಆಲಯಗಳೂ ಇರುವವು ಕಳೆದ ವರುಷ ಈ ಆಸ್ಪತ್ರೆಗಳಲ್ಲಿ ೧೫ ಲಕ್ಷ ರೂಪಾಯಿ ಖರ್ಚಾಗಿರುವುದು. ೧೦,೦೦೦ ರೋಗಿಗಳು ಸರ್ವದಾ ಆಸ್ಪತ್ರೆಗಳಲ್ಲಿದ್ದುಕೊಂಡು ಚಿಕಿತ್ಸೆ ಹೊಂದುತ್ತಿದಾರೆ. ಇಂಥಾ ಪುಣ್ಯ ಕೆಲಸಕ್ಕೆ ಐಶ್ವರ್ಯವಂತರು ಇನ್ನೂ ಹೆಚ್ಚಾಗಿ ದ್ರವ್ಯ ಸಹಾಯ ಮಾಡಬೇಕೆಂದು ಲಂಡನ್ ಮೇಯರ್ ಎಂಬ ಪುರಾಧ್ಯಕ್ಷರು ಪ್ರಸಿದ್ಧಪಡಿಸಿದಾರೆ. ಮೆ॥ ಜಾರ್ಜ ಹರ್ರಿಂಗ್ ಎಂಬೊಬ್ಬ ಪಮಿರ್ಯವನು ಅದನ್ನು ಕೇಳಿ, ಈ ಆಸ್ಪತ್ರೆಗಳ ಮೂಲ ಧನಕ್ಕೆ ೧೫ ಲಕ್ಷ ರೂಪಾಯಿ ಕೊಡುತ್ತೇನೆಂದು ಹೇಳಿಕಳುಹಿಸಿರುವನು

*****

ಲಂಡನ್ ಪಟ್ಟಣದ ಒಂದಾನೊಂದು ಜೋಪಡಿಗೆ ಅಮೇರಿಕದ ಒಬ್ಬ ಮನುಷ್ಯನು ಬಂದಿರುತ್ತಾನೆ. ಇವನಿಗೆ ಎಂಥಾ ಕಠಿಣ ತರವಾದ ವಿಷವನ್ನು ಎಷ್ಟು ಕೊಟ್ಟರೂ ಏನೂ ಆಗುವುದಿಲ್ಲವಂತೆ. ಲಂಡನ್ ಪಟ್ಟಣದ ಕೆಲವು ಡಾಕ್ಟರುಗಳು ಒಂದು ಸಮಾಜ ಮಾಡಿಕೊಂಡು, ಈ ಮನುಷ್ಯನನ್ನು ಕರಸಿಕೊಂಡು ೨೦ ಜನರನ್ನು ಏಕ ಕಾಲದಲ್ಲಿ ಕೊಲ್ಲುವಷ್ಟು ವಿಷಗಳನ್ನು ಒಂದು ಬಟ್ಟಲಲ್ಲಿ ಸುರಿದು, ಅವನಿಗೆ ಕುಡಿಸಿದರು. ಅವನು ಅಷ್ಟನ್ನೂ ಒಂದು ತೊಟ್ಟೂ ಬಿಡದೆ ಕುಡಿದು ತೇಗಿಬಿಟ್ಟನು. ಅದರಿಂದ ಅವನಿಗೆ ಯಾವ ಬಾಧಕವೂ ಉಂಟಾಗಲಿಲ್ಲ. ಇವನ ಶರೀರ ಸ್ವಭಾವವು ಅಪೂರ್ವವಾದುದೆಂದು ಡಾಕ್ಟರುಗಳೇ ಆಶ್ಚರ್ಯಪಡುತ್ತಿದಾರೆ.

ವಿಲಾಯತಿ ರಾಜ್ಯಕ್ಕೆ ಸೇರಿದ ಎಡಿಂಬರೋ ಪಟ್ಟಣದಲ್ಲಿ ಕುರುಡರ ವಿದ್ಯಾಭ್ಯಾಸವನ್ನು ಕುರಿತು ಚರ್ಚಿಸುವುದಕ್ಕೆ ಕೆಲವು ದಿನಗಳ ಕೆಳಗೆ ಒಂದು ದೊಡ್ಡ ಸಭೆ ನಡೆಯಿತು. ಈ ಸಮಾಜಕ್ಕೆ ವಿಲಾಯತಿ, ಐರ್ಲ್ಯಾಂಡ್, ಇಂಗ್ಲಿಷರ ಸ್ವಾಸ್ಥ್ಯಗಳು, ಸಂಯುಕ್ತ ಸಂಸ್ಥಾನಗಳು, ಫ್ರಾನ್ಸ್, ಜರ್ಮನಿ, ಪೋರ್ಚುಗಲ್, ಸ್ವೀಡನ್, ಈ ಮೊದಲಾದ ಕಡೆಗಳಿಂದ ೩೦೦ ಮಂದಿ ದೊಡ್ಡ ಮನುಷ್ಯರು ಪ್ರತಿನಿಧಿಗಳಾಗಿ ಬಂದಿದ್ದರು ಇವರು ಕುರುಡರಿಗೆ ವಿದ್ಯಾಭ್ಯಾಸಮಾಡಿಸುವ ವಿಷಯವನ್ನೂ ವಿದ್ಯಾವಂತರಾದ ಕುರುಡರನ್ನು ಉಪಾಧ್ಯಾಯರನ್ನಾಗಿ ನೇಮಿಸುವ ವಿಚಾರವನ್ನೂ ಕುರಿತು ಬಹಳ ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಚರ್ಚೆಮಾಡಿದರು.

*****

ಕೆನಡಾ ರಾಜ್ಯದಲ್ಲಿ (ಇದು ವಿಲಾಯತಿಯ ರಾಜ್ಯಾಂಗವಾಗಿರುವುದು.) ಬಹು ಜನ ಐಶ್ವರ್ಯವಂತರು ಸೇರಿ ನಾನಾ ಕಸಬುಗಳನ್ನು ನಡಿಸಬೇಕೆಂಬ ಉದ್ದೇಶದಿಂದ ಒಂದು ದೊಡ್ಡ ಸಂಘವನ್ನು ಮಾಡಿಕೊಂಡಿದಾರೆ. ಈ ಸಂಘದಲ್ಲಿ ಮುಖಂಡರಾಗಿಯೂ ವಿದ್ಯಾವಂತರಾಗಿಯೂ ಇರುವ ೭೪೦ ಮಂದಿ ಮೆಂಬರುಗಳು ವಿಲಾಯತಿಗೆ ಬಂದು, ಅಲ್ಲಿನ ಸಮಸ್ತ ವಿಧವಾದ ಕೈಗಾರಿಕೆಗಳನ್ನೂ ನೋಡಿ, ಯಾವ ಯಾವ ಕಸಬನ್ನು ಯಾವ ಯಾವ ರೀತಿಯಲ್ಲಿ ನಡಸುತ್ತಾರೆಂಬುವುದನ್ನು ಕಲಿತುಕೊಂಡು ಹೋಗುವವರಾಗಿದಾರೆ. ಇದರಿಂದ ವಿಲಾಯತಿಗೂ ಕೆನಡಾವಿಗೂ ಆಮದು ರಫ್ತಾಗುವ ವ್ಯಾಪಾರ ಸರಕುಗಳು ತುಂಬಾ ಹೆಚ್ಚುವವೆಂದು ತಿಳಿಯುವುದು.

*****

ಆಸ್ಟ್ರೇಲಿಯಾ ದ್ವೀಪದ ಪ್ರಜಾ ಸಂಖ್ಯೆಯು ೪೦ ಲಕ್ಷ ಅವರಲ್ಲಿ ೬೭೬ ಮಂದಿ ಪಾರ್ಲಿಮೆಂಟ್ ಮೆಂಬರುಗಳು. ಇವರಿಗೆ ವರ್ಷಕ್ಕೆ ೩೭ ಲಕ್ಷ ರೂಪಾಯಿ ತಲಬು ಪಾವತಿ ಆಗುವುದು ಆ ದ್ವೀಪವನ್ನು ಆರುನಾಲ್ಕು ಗವರ್ನಮೆಂಟುಗಳಾಗಿ ವಿಂಗಡಿಸಿ, ಎರಡು ಪಾರ್ಲಿಮೆಂಟು ಸಭೆಮನೆಗಳನ್ನಿಟ್ಟುಕೊಂಡಿದಾರೆ. ಗವರ್ನರುಗಳಿಗೆ ೯ ಲಕ್ಷ ರೂಪಾಯಿಯೂ, ಏಜಂಟ್ ಜನರಲ್‌ಗಳಿಗೆ ೪ ಲಕ್ಷ ರೂಪಾಯಿಯೂ, ಪಾರ್ಲಿಮೆಂಟುಗಳಲ್ಲಿ ನಡಿಯುವ ಸಂಗತಿಗಳನ್ನು ಅಚ್ಚು ಹಾಕಿಸಿ ಪ್ರಕಟಿಸುವುದಕ್ಕೆ ೭೪ ಲಕ್ಷ ರೂಪಾಯಿಯೂ ಖರ್ಚಾಗುವುದು ಅಷ್ಟು ಸಣ್ಣ ದ್ವೀಪವನ್ನು ಆಳುವುದಕ್ಕೆ ಈ ಪ್ರಕಾರ ಅಲ್ಲಿನ ಸರ್ಕಾರದವರು ಸಿಬ್ಬಂದಿ ಖರ್ಚು ಇಟ್ಟಿರುತ್ತಾರೆ

*****

ರಷ್ಯಾ ಆಧಿಪತ್ಯಕ್ಕೆ ಸೇರಿದ ವಾರ್ಸಾ ಪಟ್ಟಣದಲ್ಲಿ ಜನರಲ್ ಮಾಕ್ಸಿಮೊವಿಚ್ ಎಂಬಾತನು ಗವರ್ನರ್ ಜನರಲ್ ಆಗಿರುತ್ತಾನೆ. ಈತನು ಹೊರಕ್ಕೆ ಹೊರಟರೆ ಅವನ ಸುತ್ತುಮುತ್ತಲೂ ಅಂಗರಕ್ಷಣೆಗಾಗಿ ಕುದುರೆ ಸವಾರರೂ ಬೈಸಿಕಲ್ ಮೇಲೆ ಪೋಲೀಸ್ ಅಧಿಕಾರಿಗಳೂ ಯಾವಾಗಲೂ ಇದ್ದೇ ಇರುವರು. ಇಂಥಾ ಅಧಿಕಾರಿಗೆ ಒಬ್ಬ ದುಷ್ಟನು ಒಂದು ಕಾಗದ ಬರೆದು—ನಿನ್ನನ್ನು ಬೀದಿಗಳಲ್ಲಿ ಕೊಲ್ಲಬೇಕೆಂದು ಯಾರೂ ಪ್ರಯತ್ನ ಮಾಡುವುದಿಲ್ಲ ನೀನು ಅಂಗರಕ್ಷಕರನ್ನು ಇಟ್ಟುಕೊಂಡು ಸಂಚಾರ ಹೊರಡಬೇಕಾದ ಅಗತ್ಯವಿಲ್ಲ ಧೈರ್ಯವಾಗಿ ಸಂಚಾರಮಾಡು ಚಾಕರರು ನಿನ್ನನ್ನು ನಿನ್ನ ಹಾಸಿಗೆಯ ಮೇಲೆಯೇ ಕೊಂದುಹಾಕುತ್ತಾರೆ. ಇದನ್ನು ಚನ್ನಾಗಿ ತಿಳಿದಿರು ಎಂಬುದಾಗಿ ತಿಳಿಸಿದಾನೆ ಪೋಲಾಂಡಿನಲ್ಲಿ ಅಧಿಕಾರ ಚಲಾಯಿಸುವ ಬಹು ಮಂದಿ ರಷ್ಯಾ ಉದ್ಯೋಗಸ್ಥರಿಗೆ ಈ ವಿಧವಾದ ನೋಟೀಸುಗಳು ಹಂಚಲ್ಪಟ್ಟವೆ. ಇದರಿಂದ ಈ ಅಧಿಕಾರಿಗಳು ಎಷ್ಟು ಕ್ರೂರವಾಗಿ ಪ್ರಜೆಗಳನ್ನು ಆಳುವರೋ ಊಹಿಸಿಕೊಳ್ಳಬಹುದಾಗಿದೆ

*****

ರಷ್ಯಾ ರಾಜ್ಯದವರು ಜಪಾನಿನವರ ಸಂಗಡ ಕರಾರು ಮಾಡಿಕೊಳ್ಳುವುದಕ್ಕೆ ಸಲಹೆ ಬಿಟ್ಟಿದಾರೆಂಬುವುದನ್ನು ಯುದ್ಧ ಭೂಮಿಯಲ್ಲಿರುವ ರಷ್ಯಾ ಸೈನ್ಯಾಧಿಪತಿಯಾದ ಜನರಲ್ ಲಿನೆವಿಚ್ ಯವನು ಕೇಳಿ, ತನ್ನ ಕೈಕೆಳಗಿರುವ ದಳಪತಿಗಳನ್ನೆಲ್ಲಾ ಕರಸಿ ಒಂದು ಸಭೆಮಾಡಿ, ಅವರಿಗೆ ಈ ಸಂಗತಿಯನ್ನು ತಿಳಿಸಿ, ಅವರ ಅಭಿಪ್ರಾಯಗಳನ್ನೆಲ್ಲಾ ಕ್ರೋಢೀಕರಿಸಿ, ಚಕ್ರವರ್ತಿಯವರಿಗೆ ತಂತೀ ವರ್ತಮಾನಕೊಟ್ಟು ತಿಳಿಸಿರುವುದೇನೆಂದರೆ—ಯುದ್ಧ ಭೂಮಿಯಲ್ಲಿರುವ ನಿಮ್ಮ ಸೈನ್ಯಗಳ ದಳಪತಿಗಳೆಲ್ಲಾ ಕರಾರಿನ ಸಂಧಾನವನ್ನು ಕುರಿತು ಚರ್ಚೆಮಾಡಿದರು ಯುದ್ಧವನ್ನು ನಿಲ್ಲಿಸುವುದಾಗಲಿ ಕರಾರು ಮಾಡಿಕೊಳ್ಳುವುದಾಗಲಿ ಯಾರಿಗೂ ಸಮ್ಮತವಾಗಿಲ್ಲ. ಜಪಾನಿನವರು ಮುಕ್ಡೆನ್ ಎಂಬ ಭೂಯುದ್ಧದಲ್ಲೂ ತ್ಸುಷಿಮಾ ಎಂಬ ಸಮುದ್ರ ಯುದ್ಧದಲ್ಲೂ ಈಗತಾನೇ ಜಯಪ್ರದ ಹೊಂದಿದುತ್ತಾರಾದರೂ ರಷ್ಯಾ ಸೈನ್ಯಗಳು ಕರಾರು ಮಾಡಿಕೊಳ್ಳುವಷ್ಟು ಹೀನಸ್ಥಿತಿಗೆ ಬಂದಿಲ್ಲ. ಜಪಾನಿನವರು ಅನೇಕ ಅಸಾಧ್ಯ ವಿಷಯಗಳನ್ನು ಕೇಳುವರು. ಇದು ನಮ್ಮ ಚಕ್ರಾಧಿಪತ್ಯದ ಘನತೆಗೆ ತುಂಬಾ ಕುಂದಕವಾಗುವುದು. ನಮಗೆ ಇನ್ನುಮುಂದೆ ಜಯಪ್ರದಗಳೇ ಆಗುವೆನ್ನುವುದಕ್ಕೆ ಸಂಶಯವಿಲ್ಲ. ಆದಕಾರಣ ಕರಾರು ಮಾಡಿಕೊಳ್ಳುವುದು ನಿಮ್ಮ ದಳಪತಿಗಳ್ಯಾರಿಗೂ ಸಮ್ಮತವಾಗಿಲ್ಲ. ಈಗ ನಮ್ಮ ಸೈನ್ಯಗಳೂ ನಮ್ಮ ರಾಣ್ಯಗಳೂ ಬಹಳ ಬಲವಾಗಿರುತ್ತವೆ. ಮಳೆಗಾಲ ತೀರಿದ ಕೂಡಲೇ ನಮ್ಮ ಸೈನ್ಯವನ್ನು ಜಪಾನಿನವರ ಮೇಲೆ ನುಗ್ಗಿಸಿಕೊಂಡು ಹೋಗಿ ಯುದ್ಧ ಮಾಡಿ ಗೆಲ್ಲುತ್ತಾ ಬಂದೇವು. ಆದುದರಿಂದ ಚಕ್ರವರ್ತಿಯವರು ಕರಾರು ಮಾಡಿಕೊಳ್ಳುವುದಕ್ಕೆ ಎಷ್ಟು ಮಾತ್ರಕ್ಕೂ ಒಪ್ಪಕೂಡದು ಹಾಗೆ ಕರಾರು ಮಾಡಿಕೊಂಡಲ್ಲಿ ರಷ್ಯಾ ರಾಜ್ಯದ ಯಶಸ್ಸಿಗೆ ಅಪಕೀರ್ತಿಯುಂಟಾಗುವುದು ಎಂಬುದೇ. ಈ ವಿಜ್ಞಾಪನೆಗೆ ಯುದ್ಧ ಭೂಮಿಯಲ್ಲಿರುವ ರಷ್ಯಾ ದಳಪತಿಗಳೆಲ್ಲಾ ರುಜುಮಾಡಿ ಕಳುಹಿಸಿದಾರೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

30

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ:—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮಾ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ಧಾರವಾಡ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ನಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೪ ಆಣೆ

೪ "ರೋಮನರ ಚರಿತ್ರೆ" ಕ್ರಯ ೦—೨—೦
೫. "ಗ್ರೀಕರ ಚರಿತ್ರೆ" ,, ೦—೨—೦
೬. "ಅನುಭವಾನಂದ." ,, ೦—೩—೦
೭ "ಗಣಿತ ಸಂಜೀವಿನಿ." ೧—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯ "ಚಾಮರಾಜೇಂದ್ರ ವಿಲಾಸ." ೧—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧೨—೦
೧೧ "೧೯೦೫ನೇ ವರುಷದ ಡೈರಿಗಳು" ಕ್ಲಾತ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦

ಮ್ಯಾನೇಜರ್,
ಸಿ. ಎಚ್. ಎಸ್ ಬುಕ್ ಡಿಪೋ,
ಮೈಸೂರು.

ಜ್ವರಹರಿ. 36



ಇದು ಸಾಧಾರಣ ಜ್ವರ ಚಳೀಜ್ವರ, ಮಲೇರಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖೆ ಸಬ್ ಡಿವಿಜನ್ ಆಫೀಸರ್ ಎಸ್. ಪಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೇ ಬರುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ ೬—೧೨ ಆ., ೧೧ ರೂ., ಡಜನ್ ಸೀಸೆ ತರಿಸಿಕೊಂಡರೆ ಡಾಕ್ ಕೂಲಿ ಬಿಡಲಾಗುವದು

ಅಮೃತಾಂಜನ ಪ್ರಕಾರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ್ಳುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು ಮುಂತಾದವುಗಳನ್ನೆಲ್ಲಾ ಶೀಘ್ರವಾಗಿ ಪರಿಹರಿಸಿ, ಕೂಡಲೇ ಗುಣಕೊಡುವದು ಇದು ಕೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡೂರಿನ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮಿಂದ ಬಂದ ಕಳುಹಿಸಿದವನ್ನು ನಾನೂ ನನ್ನ ಸ್ನೇಹಿತರೂ ಮ್ಯಾನೇಜರ ಆಸ್ಪತ್ರೆಯಲ್ಲಿ ಅನೇಕ ವಿಧಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಇವೇ ರೋಗಿಷ್ಠರಿಗೆ ಕೊಡುತ್ತೇನೆ. ಹೊಟ್ಟೆ ಕಾಹಿಲೆ ಜನರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ— ಕತ್ರಿಯಾಪಕ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

[illegible]

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನೂ ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು

ಇವಲ್ಲದೆ ಕನ್ನಡ ಅಕ್ಷರಗಳು—ಟೂಪೈನ್ ಮಿನಿಯನ್, ಪೈಕ, ಲಾಂಗ್ ಪ್ರಿಮರ್ ಮೊದಲಾದವುಗಳೂ, ಬೆಡ್ಡು ಕ್ವಾಡ್ಸು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುತ್ತವೆ. ಅಕ್ಷರಗಳು ಬಹು ಸುಂದರವಾಗಿವೆ. ಬಹಳ ಬಾಳಿಕೆ ಬರುತ್ತವೆ. ಪ್ರೆಸ್ ಇಟ್ಟಿರುವವರು ಮಾತ್ರ ಕೆಳಗಿನ ವಿಳಾಸಕ್ಕೆ ಬರೆದು ಕ್ರಯದ ದರಗಳನ್ನೂ ಅಕ್ಷರಗಳ ನಮೂನೆಯನ್ನೂ ತರಿಸಿಕೊಳ್ಳಬಹುದು

ವಿಳಾಸ:—ಮ್ಯಾನೇಜರ್,
ಮಿಷನ್ ಪ್ರೆಸ್, ಮೈಸೂರು

ದಿ ಯೆಂಡೋವ್ಮೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಉಪವೃತ್ತಿ ಕಲ್ಪನಾಸಂಘ, ಬೆಂಗಳೂರು ಪಟ್ಟಣ

ಸುಲಭಸಾಧ್ಯವಾದ ಈ ಸಂಘದಿಂದ ಮರಣಾನಂತರ ವಾರಸುದಾರರು ಬಹಳ ದ್ರವ್ಯ ಪ್ರಯೋಜನಹೊಂದಬಹುದು ಸಾಮಾನ್ಯ ಉಪವೃತ್ತಿ ಉಳ್ಳವರಿಗೂ ಬಡವರಿಗೂ ಅವರವರ ಸಂಪಾದನೆಗೆ ಅನುಗುಣವಾಗಿಯೂ ಸ್ಥಿರವಾಗಿಯೂ ಇರತಕ್ಕ ದ್ರವ್ಯಸಹಾಯದ ಸಂಘವು ನಮ್ಮ ಮೈಸೂರು ಸೀಮೆಯಲ್ಲಿ ಇರಲಿಲ್ಲ. ಈ ಕೊರತೆಯನ್ನು ತಪ್ಪಿಸುವದಕ್ಕಾಗಿ ಈ ಮೇಲ್ಕಂಡ ಸಂಘವನ್ನು ಪ್ರಾರಂಭಿಸಿರುತ್ತೆ. ಈ ಸಂಘದಲ್ಲಿ ತಿಂಗಳು ೧ಕ್ಕೆ ೧ ರೂಪಾಯಿ ಡಿಪಾಜಿಟ್ಟು ಇಡೋಣವರಿಂದ ಮರಣಾನಂತರ ನಿಮ್ಮ ನೇಮಿತ ಯಾ ನೇಮಿತರಿಗೆ ಮೊತ್ತವಾಗಿ ಹಣ ದೊರೆಯುತ್ತೆ. ಈ ಸಂಘಕ್ಕೆ ವಸೂಲಾದ ಚಂದಾ ಹಣವನ್ನು ಮೈಸೂರು ಗವರ್ನಮೆಂಟು ಸೇವಿಂಗ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡೋಣದರಿಂದ ಸಂಪೂರ್ಣವಾದ ಭದ್ರತೆ ಉಂಟು ಈ ಸಂಘಕ್ಕೆ ಮೆಂಬರುಗಳನ್ನು ಸೇರಿಸತಕ್ಕ ಏಜೆಂಟರುಗಳು ಸಂಘದ ಮ್ಯಾನೇಜರಿಗೆ ಬರೆದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು ಅಂಥಾ ಏಜೆಂಟರುಗಳಿಗೆ ಧಾರಾಳವಾದ ಬಹುಮಾನ ಸಿಕ್ಕುತ್ತೆ.

ವಿಳಾಸ:—ಆರ್. ಎಸ್. ನಾರಾಯಣ, ಮ್ಯಾನೇಜರ್.

ಹೋಮೇಸಿಯಾ



ಕಣ್ಣಿನ ಪರಿಹಾರ. ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ದೇವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಮುಖರ್ವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ಗಾಯಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಚುಚ್ಚಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೬ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಡಬ್ಬಿ ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ಪಟ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುವೆ

ಹೋಮೋಸಿಯಾ ಎಂಬ್ರೊಕೇಷನ್

ಈ ತೈಲವು ಕಾಲ್ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ಶೀಘ್ರವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೂ ಬಹು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ವಿಕ್ರಯ ಮಾಡುವರು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ:—ಹೋಮೋಸಿಯಾ ಕಂಪನಿ. [illegible]

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

30—6—1905 ರಿಂದ 7—7—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಕಳೆದವಾರದ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	0	0	0	[illegible]
ಮೈಸೂರು ,,	1	1	2	[illegible]
ಬೆಂಗಳೂರು ಡಿಸ್ಟ್ರಿಕ್ಟ್	7	2	120	83
ಮೈಸೂರು ,,	0	0	125	[illegible]
ಕೋಲಾರ್ ,,	0	0	45	3[illegible]
ಕೋಲಾರ್ ಚಿನ್ನದ ಗಣಿಗಳು	0	0	13	1[illegible]
ತುಂಕೂರು ಡಿಸ್ಟ್ರಿಕ್ಟ್	2	2	[illegible]	[illegible]
ಹಾಸನ ,,	0	0	7	[illegible]
ಚಿತ್ರದುರ್ಗ ,,	0	0	19	1[illegible]
ಕಡೂರ್ ,,	0	0	14	1[illegible]
ಶಿವಮೊಗ್ಗ ,,	20	18	40	3[illegible]
ಜುಮ್ಲಾ	39	21	399	[illegible]

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರದ ಆಷಾಢ ಬಹುಳ ಚೌತಿ ಗುರುವಾರದಿಂದ ಆಷಾಢ ಬಹುಳ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಜುಲೈ

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಆಂ
20	ಗುರು	ಚೌತಿ	[illegible]	[illegible]	[illegible]	5
1	ಶುಕ್ರ ‡	ಪಂಚಮಿ	[illegible]	ಪೂಭಾ	[illegible]	6
[illegible]	ಶನಿವಾ ,,	ಷಷ್ಠಿ	17 [illegible]	ಉಭಾ	[illegible]	7
[illegible]	ರವಿವಾ	ಸಪ್ತಮಿ	[illegible]	ರೇ	[illegible]	8
[illegible]	ಚಂದ್ರ	ಅಷ್ಟಮಿ	[illegible]	[illegible]	[illegible]	9
[illegible]	ಕುಜ	[illegible]	[illegible]	[illegible]	[illegible]	10
[illegible]	ಬುಧ	ನವಮಿ	[illegible]	[illegible]	[illegible]	11

‡ ಮೇಲುಕೋಟೆಯಲ್ಲಿ [illegible] ಕೃಷ್ಣರಾಜಮುಡಿ ಉತ್ಸವ [illegible] ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ [illegible] ಅಮೃತಯೋಗ.

ಪೇಟೆ ಧಾರಣೆ.

ಜಿನಸಿ.	ಮೈಸೂರು	ಬೆಂಗಳೂರು
ಕಾಲ್ದೀ ಅಕ್ಕಿ ಪಲ್ಲ ೧ಕ್ಕೆ	ರೂ. ೧೦—೮—	೧೧—೧೨
ಕೆಂಬೂತಿ ಅಕ್ಕಿ ಅವಲ್ ..	.. ೧೦ ೪—೦	೧೦—೮
,, ದುಯ್ಯಂ	.. ೯—೧೨—೧	೧೦—೪
ಜಾವಾರ್ತಿ ಅಕ್ಕಿ ..	.. ೯—೮—೦	೧೦—೮
ಸಣ್ಣಕ್ಕಿ ಅವಲ್ ..	.. ೧೨—೦—೦	೧೩—೦
,, ದುಯ್ಯಂ ..	.. ೧೧ ೮ ೦	೧೨—೮
ಹೊಗರೀ ಬೇಳೆ ಪಲ್ಲ ೧ಕ್ಕೆ	.. ೧೦—೮ ೦	೧೨—೦
,, ದುಯ್ಯಂ ..	.. ೧೧—೦—೦	೧೧—೦
ಬೈಗ ರಾಗಿ ಪಲ್ಲ ೧ಕ್ಕೆ ..	.. ೪ ೧೨—೬	೫—೮
ಹಾರಾಗಿ	.. ೪—[illegible]—೦	೫—೦
ಜೋಳ	.. ೪—೧೨—೦	೬—೦
ಹಲಸಂದೆ ಪಲ್ಲ ೧ಕ್ಕೆ ..	.. ೮—೧೨—೦	೯—೦
ಅವರೇ ಅವರೆ ..	.. ೬ ೧೧—೦	೮—೧೨
ಹೆಸರು	.. ೯ ೧೨—೬	೧೦—೦
ಉದ್ದು ..	.. ೮ ೧೪ ೦	೯—೪
ಕಡಲೆ ..	.. ೯ ೦—೦	೮—೧೨
ಎಳ್ಳು	.. ೧೬ ೦ ೦	೧೪—೪
ಹುರುಳಿ ..	.. ೮—೦ ೦	೯—೦
ಹರಳು ೧೨ ಸೇರಿಗೆ ..	.. ೯—೮—೦	೧೦—೮
ಸೀಗೇಕಾಯಿ ಮಣ ೧ಕ್ಕೆ	೨—೪—೦	೩—[illegible]
ಮೆಣಸಿನಕಾಯಿ ..	. ೪—೮—೦	೪—[illegible]
,, ದುಯ್ಯಂ ..	.. ೩—೧೨—೦	೩—೧[illegible]
ಬೆಲ್ಲ ದೊಡ್ಡ ಅಚ್ಚು ..	.. ೬—೪—೦	೭—೨[illegible]
ಒಳ್ಳೆಣ್ಣೆ ಮಣ ೧ಕ್ಕೆ ..	.. ೪—೦ ೬	೪—[illegible]
ಹರಳೆಣ್ಣೆ ,, ..	.. ೪—೦—೦	೪—[illegible]
ಕೊತ್ತಂಬರಿ ಪಲ್ಲ ೧ಕ್ಕೆ ..	. ೬ ೦—೦	೮—೧
ಜೀರಿಗೆ ,, .	.. ೮—೦—೧	೬—೧[illegible]
ತುಪ್ಪ ದುಯ್ಯಂ ..	೧ ೪—೦	೧—[illegible]
,, ಕಳಲೆ ..	.. ೧—೧೪—೬	೦—೧[illegible]
ಹುಣಸೆ	.. ೧೨ ೦—೦	೧೦—[illegible]
ಸೀಮೆಯಂಚು ಹಿಟ್ಟು ೧ಕ್ಕೆ ..	.. ೫—೩—೦	೪—೦
ತೆಂಗಿನಕಾಯಿ ೧೦೦ಕ್ಕೆ ..	.. ೫—೦—೦	೩—[illegible]
ಅಡಿಕೆ ಕಾಯಿ ಮಣ ೧ಕ್ಕೆ ..	.. ೧—೧—೦	೦—೧
ಜಾಪತ್ರೆಕಾಯಿ ಮಣ ೧ಕ್ಕೆ	. ೦—೦೪—೦	೨—೦
ಚಕ್ಕೆ (ಹೊ) ತೊಪ್ಪ	. ೧೫—೮—೦	೧೭—[illegible]
,, ಸಪ್ಪೆ	೨೫—೧೦—೦	೧೭—[illegible]
,, ಗಬ್ಬು ತೊಟ್ಟು ೧ಕ್ಕೆ	. [illegible]	೨೪ ೬
ಸಿಪ್ಪೆ ಗಟ್ಟಿ ಹತ್ತಿ ೧೦ ಕ್ಕೆ	.. ೩—೦—೦—೦	೩೩—

Printed and Published by the Rev. H. Spencer, the Proprietor and Manager, Wesleyan Mission Press, Mysore 20/7/1905.

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ | ಮೈಸೂರು—ಸನ್ ೧೯೦೫ ನೇ ಇಸವಿ ಜುಲೈ ತಾರೀಖು ೨೭ ನೇ ಗುರುವಾರ. | ಸಂಚಿಕೆ ೯

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ದೂಸೂಪರಿಂಟೆಂಡೆಂಟ್ ಮಿ॥ ಹ್ಯೂಸ್ ರವರು ಕೊಂಡುಕೊಳ್ಳುವರು

Apply to Mr. Hugh, Mysore Zoo

ಜರೂರಾಗಿ ಬೇಕಾಗಿದೆ

೧೦೦ ಜನ ಏಜಂಟರು ನಮ್ಮ ಕಂಪನಿಯ ಪದಾರ್ಥಗಳನ್ನು ಮಾರಲಿಕ್ಕೆ, ಮಾಹೇಯಾನ ತಲಾ ರೂ ೨೫, ಅಥವಾ ರೂ ೧೫, ಅಥವಾ ರೂ. ೧೦ ಕೊಡಲ್ಪಡುತ್ತೆ. ಪ್ರತಿ ಏಜಂಟರು ರೂ ೧೦೦, ಅಥವಾ ರೂ ೫೦, ಅಥವಾ ರೂ ೨೫ ದಾವತ್ತು ಪ್ರಕಾರ ಈ ಕಂಪನಿಯಲ್ಲಿ ಜಾಮೀನಾಗಿ ಇಡಬೇಕು ಅಪೇಕ್ಷೆಯುಳ್ಳವರು ೨ ಆಣೆ ಸ್ಟಾಂಪು ಇಟ್ಟು ಅರ್ಜಿ ಬರೆದುಕೊಳ್ಳತಕ್ಕದ್ದು. ವಿಳಾಸ —

The Manager, The National Incorporated Corporation, Basavangudi, Bangalore City.

ಈ ಕೆಳಗಿನ ಪುಸ್ತಕಗಳು ಕೆಲವೇ ಉಳಿದಿವೆ. ಬೇಗನೆ ತರಿಸಿಕೊಳ್ಳಿ. ಅನಂತರ ಸುಲಭವಾಗಿ ಈ ಕಾಪಿಗಳು ಸಿಕ್ಕಲಾರವು ಇವು ಒಳ್ಳೇ ಸಮಯವು.

ಕನ್ನಡ ಹಿಂದೂಲಾ.—ಇದು ಎಲ್ಲಾ ಕೈಕೋರ್ಟುಗಳ ತೀರ್ಮಾನಗಳೊಡನೆ ಸೇರಿ, ಸಮಸ್ತ ವಿಷಯಗಳನ್ನೂ ಕನ್ನಡದಲ್ಲಿ ತಿಳಿಸುವುದು ಸರಕಾರಿ ವ್ಯವಹಾರಗಳುಳ್ಳ ಎಲ್ಲಾ ಜನರಿಗೂ ಅತ್ಯವಶ್ಯಕವಾಗಿದೆ ಇದರ ಬೆಲೆ ರೂ ೨—೮—೦

ಕನ್ನಡ ಸುಮನೋಗ್ರಂಥ—ಇದರಲ್ಲಿ ಲೋಕಜ್ಞಾನಕ್ಕೆ ಬೇಕಾಗಿರುವ ಸಮಸ್ತ ಶಾಸ್ತ್ರತತ್ವವಿಷಯಗಳೂ ಸುಲಭವಾದ ವಚನದಲ್ಲಿ ನಿರೂಪಿಸಲ್ಪಟ್ಟಿದೆ ಎಲ್ಲರಲ್ಲಿಯೂ ಇರಬೇಕಾಗಿರುವ ಅತ್ಯಾವಶ್ಯಕ ಪುಸ್ತಕವು ಬೆಲೆ ರೂ. ೧.

ಕನ್ನಡ ಕೇಸರೀ ವಿಲಾಸವು—ಇದು ಅತ್ಯದ್ಭುತ ಚಮತ್ಕಾರವಾದ ನಾವಲ್ ಎಂಬ ನಾಟಕ ವಿನೋದ ಕಥೆ ಬಹಳ ಸುಲಭವಾದ ಶೈಲಿಯಿಂದ ಬರೆಯಲ್ಪಟ್ಟಿದೆ ಬೆಲೆ ಆಣೆ ೦—೮—೦

ಪಿ. ಆರ್. ವೆಂಕಟಾಚಾರಿ ಅಂಡ್ ಕಂಪೆನಿ,

ತಿರುವಲ್ಲಿಕ್ಕೇಣಿ, ಮದರಾಸ

"ಭೂಗೋಳ ಸಂಗ್ರಹ—ಐದನೇ ಮುದ್ರಣ.

ಮೈಸೂರು ವಿಜಯಾಂಬೀಕ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ತರಾದ ಮ. ಟಿ. ಸಿ. ರಾಮಸ್ವಾಮಿಯ್ಯಂಗಾರವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಲೋಯರ್ ಪರೀಕ್ಷೆಗಳಿಗೂ ಎಲ್ಲಾ ಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨ ಪರ್ಸೆಂಟ್ ಡಿಸ್ಕೌಂಟ್ ಕೊಡಲಾಗುವುದು. ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ, ಮೈಸೂರು—ಈ ವಿಳಾಸಕ್ಕೆ ಬಿಡಿ ಪ್ರತಿಗಳನ್ನು ತರಿಸಬೇಕೆನ್ನುವ ವಿದ್ಯಾರ್ಥಿಗಳೇ ಮುಂತಾದವರು ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಸನಾತನ ವೀರಶೈವಾಂತ್ಯೇಷ್ಟಿವಿಧಿಯು.

ಬಿಕರಿಗೆ ಸಿದ್ಧವಾಗಿದೆ ವಿ ಪಿ ಸೇರಿ ೧ ಪ್ರತಿಗೆ ೮ ಆಣೆ ಒಟ್ಟಾಗಿ ೧೨ ಪ್ರತಿ ತರಿಸಿಕೊಂಡರೆ ೧ ಪ್ರತಿ ಹೆಚ್ಚಾಗಿ ಸಿಕ್ಕುತ್ತೆ. ಬೇಗ ಬರೆದು ತರಿಸಿಕೊಳ್ಳಿ. ವಿಳಾಸ—ಬೆಂಗಳೂರು ತಾಲ್ಲೂಕು ಜಂಗಮರ ಕೋಟೆ ಚಿಕ್ಕನಹಳ್ಳಿ ಮಠದ ಸಿದ್ಧಲಿಂಗದೇವರು

ಕಥಾಸಂಗ್ರಹ—ಮೊದಲನ ಭಾಗ.

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ನುಡಿಯ ಕಥಾಸಂಗ್ರಹದಲ್ಲಿ ೧ ೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ ಈಗಿನ ಕಾಲಕ್ಕೆ ತಕ್ಕಂತೆ ಪಾಠಗಳನ್ನೂ ಮಾತಿನ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ ೧ ಪ್ರತಿಗೆ ಕ್ರಯ ೧ ರೂಪಾಯಿ ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವದು ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣುಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ ವಿ ಪಿ ಮೂಲಕವೂ ಕಳುಹಿಸುತ್ತೇವೆ ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಪಿ ಸುಬ್ಬರಾಯರವರ

P. SUBBAROY'S

World Renowned and most Efficacious Ayurvedic Medicines.

ಪಿ ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಚಿತ್ತ್ರಕರ ಕಸ್ತೂರಿಮಾತ್ರೆ



ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು. ಇದರಲ್ಲಿ ಆಕ್ಷೇಪಣೆಯಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ, ಬರಳು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇಮಕ್ಕಳಿಂದ ಮುದುಕರವರೆಗೆ ಎಲ್ಲರೂ ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು. ಕ್ರಯ—ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೬ ಸೀಸೆಗೆ ವಿ ಪಿ ಛಾರ್ಜ್ ಬಾರ್ಮ ೫ ಆಣೆ

ಯೋಗ್ಯತಾ ಪತ್ರಗಳು

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ —ದಿ ಮುಶಮುಟ್ ಸಮಾಧಾನಿ

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ ಬೇರೆ ಔಷಧ ಅವಶ್ಯವಿಲ್ಲ —ದೇಶೋಪಕಾರಿ

ನಿಮ್ಮ ಈ ಮಾತ್ರೆಗಳು ಉಪ್ಪೇಕ್ಷತ್ಮಷ್ಟವಾಗಿರುತವೆ, ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು —ಪುತ್ತೂರು ಪೋಲೀಸ್ ಇನ್ಸ್ಪೆಕ್ಟರ್

ನೀವು ನನಗೆ ಕೆಲಗಳಲಿಗೆ ಕಳುಹಿಸಿದ ಮಾತ್ರೆಗಳು ಅನೇಕರಿಗೆ ಕೊಡಲಾಗಿ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡುತ್ತವೆ — ಜಿ. ಕೃಷ್ಣಯ್ಯಂಗಾರ, ಶೀರಾಪ್ ದಿವಾನ್ ಪೇಷ್ಕಾರ್, ಕ್ವಿಲಾನ್.

Apply to—P. SUBBAROY,

Porto Novo, South Arcot.

ವಿಳಾಸ—ಪಿ. ಸುಬ್ಬರಾಯ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

'ಬಕ್ಕಲತನಸ್ತೂ ಬಕ್ಕರಿಗನೂ. —ವಕ್ಷ್ಯಕೊಳ್ಳಿಂದು.

ಇದು ವೇದಾಂತಿಗಳಿಗತ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪ್ರತಿ ವಾರಕ್ಕೊಂದು ಸಲ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗಣಿ ಪೋಸ್ಟೇಜು ಸಹಿತ ರೂ ೧—೮—೦ ನೈತರೇ, ಬೇಗ ತರಿಸಿ ವಿಳಾಸ —ದಿ ಮ್ಯಾನೇಜರ್, ೧೯, ಸಿವಿಲ್ ಲೈನ್ಸ್, ಪ್ರಾನ

ಮೆ॥ ಆರ್. ವೆಂಕಟಸುಬ್ಬರಾಯ್,

ಸುಬೋಧ ಗ್ರಂಥಾಲಯ, ಮೈಸೂರು.

ಮೆಟ್ರಿಕ್ಯುಲೇಷನ್ ಕನ್ನಡದ ೩ನೆ ಪುಸ್ತಕದ ನೋಟ್ಸು	೦—೪—೦
ಡಿಟೋ ,, ,, ೬ ನೆ ಪುಸ್ತಕದ ನೋಟ್ಸು	೦—೪—೦
ಡಿಟೋ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಛಾಪೆ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಶ್ರೀಮುಖ ಬಂಟಿ.

ಶ್ರೀ ಜಗದ್ಗುರು ಶ್ರೀ ಶೃಂಗೇರೀ ಶಿವಗಂಗಾ ಶ್ರೀ ಸುಬ್ರಹ್ಮಣ್ಯ ಚಿದಾನಂದ ಭಾರತಿ ಸ್ವಾಮಿಗಳವರು ಅಪ್ಪಣೆಕೊಡಿಸುವದೇನೆಂದರೆ —"ಚಿಕಿತ್ಸಕ ವಿ ಡಿ ಪಂಡಿತರಿಂದ ತಯಾರಾದ ಕೇಸರಾಕರ್ಷಮಧು ವಿ ಎಲ್ಲಾ ವಿಧವಾದ ಜ್ವರಗಳಿಗೂ ಅತ್ಯಂತ ಗುಣವನ್ನು ಪ್ರತ್ಯೇಕೋಟಿಗಳಿಗೆ ಕೊಡುವದರಲ್ಲಿ ಯಾವ ಸಂದೇಹವೂ ಇಲ್ಲವೆಂದು ನಾವು ಖಂಡಿತವಾಗಿ ಆಶೀರ್ವದಿಸುತ್ತೇವೆ ಕೇಸರಾಕರ್ಷಮಧುವನ್ನು ನಾವು ಸಕ್ಕರೆಟಿನಲ್ಲಿ ಯಾವಾಗಲೂ ನಮ್ಮ ಸಂಸ್ಥಾನದ ಶಿಷ್ಯಮಂಡಲಿಯವರಿಗೆ ಇದನ್ನೇ ಉಪಯೋಗಿಸುತ್ತಾ ಇದ್ದೇವೆ" ರಕ್ತ ಶೋಧಕ, ರೋಮನಾಶಕ, ಸ್ತ್ರೀಸಂಜೀವನಾಮೃತ, ಕೇಸರಾಕರ್ಷಮಧು ಇವೇ ಮೊದಲಾದ ನಮ್ಮ ಔಷಧಗಳು ಮೈಸೂರು "ಟಿ ಪಾವ ೫" ಆಫೀಸ್ ಮಿ॥ ರಾಮನಾಥಯ್ಯನವರಲ್ಲಿ ದೊರೆಯುತ್ತವೆ ನಮ್ಮ ಔಷಧಗಳ ಕ್ಯಾಟಲಾಗು ಅಪೇಕ್ಷಿಸುವವರು ಅರ್ಧಾಣೆ ಲೇಬಲ್ ಕಳುಹಿಸಿ ತರಿಸಿಕೊಳ್ಳಬಹುದು

ವಿಳಾಸ—ಚಿಕಿತ್ಸಕ ವಿ ಡಿ. ಪಂಡಿತರು, ಬೆಂಗಳೂರು ಸಿಟಿ.

ಇದು ಕೇವಲ ಇನಾಮು ತಿಂಗಳ ಪ್ರೆಜಂಟೇಷನ್ ಮಾತ್ರ.

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರೈಲ್ವೆ ಗಾರ್ಡ್ ವಾಚು ಓಪನ ಫೇಸ್ ಕೀಲೆಸ್ ಪೇಟೆಂಟ್ ಲಿವರ್ ವಾಚು ಕಂಪೆನ್ಸೇಷನ್ ಬ್ಯಾಲನ್ಸ್ ಬಹು ಖಚಿತವಾದ ಗತಿಯಾದ ೫ ವರುಷ ಗ್ಯಾರಂಟೀ ಕ್ರಯ ರೂ ೫-೮ ೦



ಈ ವಾಚನ್ನು ಕಳೆದ ದಸರಾ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವಪರಿಯಂತರ ದರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರದು ಜಾಗ್ರತೆ ದರಖಾಸ್ತು ಕಳುಹಿಸಿ ಪ್ರಜೆಂಟೇಷನ್ ಸಾಮಾನುಗಳು

ಕ್ರಯವುಳ್ಳದ್ದು.

ಮೇಲಾದ ಜರ್ಮನ್ ಸಿಲ್ವರ್ ಶರಟುಗುಂಡಿ ೧ ಸೆಟ್ಟು	೦—೧೧—೦
ಚಿಕ್ಕ ಹಣದಪೆಟ್ಟಿಗೆ ಇಂಗ್ಲಿಷ್ ಮೇಡ್ (Cash Box)	೧—೦—೦
ಸುಗಂಧ ಸಸ್ಯಪುಡಿ ತುಂಬಿನ ಪೆಟ್ಟಿ ೧	೦—೮—೦
ಮೇಲಗುವಮನೆ ದೀಪ ಬಹಳ ಸುಂದರವಾದದ್ದು	೦—೬—೦
ಬಹಳ ಸೊಗಸಾದ ಗಡಿಯಾರದ ಸರಪಣಿ	೦—೮—೦

೧,೦೦೦ ವಾಚುಗಳು ಮುಗಿದು. ಸೋದಾಗ್ಯೂ ಅನೇಕರ ಕೋರಿಕೆಯ ಮೇರೆಗೆ ದರುವ ದುಷ್ಟೆ ಆಫರ್ ವರಿಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡಲ್ಪಡುತ್ತೆ. ಜಾಗ್ರತೆ! ! ಜಾಗ್ರತೆ! !

ಇತರರು ನಮ್ಮ ಕಂಪನಿಯ ನೋಟೀಸುಗಳಂತೆ ಪೇಪರಿನಲ್ಲಿ ಪ್ರಿಂಟುಮಾಡಿ ಉಪಯೋಗವಿಲ್ಲದ ಸಾಮಾನುಗಳನ್ನೂ ಗಡಿಯಾರವನ್ನೂ ಕಳುಹಿಸುತ್ತಿರುವದರಿಂದ ಮೋಸಹೋಗದಂತೆ ಕಂಪೆನಿಯ ಹೆಸರನ್ನು ಈ ಪತ್ರದಲ್ಲಿ ಇಟ್ಟುಕೊಳ್ಳಬೇಕೆಂದು ಕೋರುತ್ತೇವೆ

ವಿ. ಎಸ್. ಮ್ಯಾನೇಜರ್, ಫ್ರಾಂಕ್ಲಿನ್ ವಾಚ್ ಕಂಪೆನಿ.

ಪಾರ್ಕ್ ಟವನ್, ಮದರಾಸ್.

ಕ್ರೈಸ್ತಮತವೆಂದರೇನು?

ಕ್ರೈಸ್ತಮತದಲ್ಲಿ ಈ ಜಗತ್ಸೃಷ್ಟಿಸ್ಥಿತಿಲಯಗಳ ವಿಷಯವಾದ ತತ್ವವಿಚಾರವು ಇಲ್ಲದೆ ಇಲ್ಲ. ಅಥವಾ ಭೂಲೋಕದ ಮನುಷ್ಯರ ನಡತೆಯ ವಿಷಯದಲ್ಲಿ ಹೇಳಿರುವ ಧರ್ಮವಿಚಾರವು ಇಲ್ಲದೆ ಇಲ್ಲ. ಮನುಷ್ಯರು ಅತಿ ಶ್ರೇಷ್ಠವೆಂದು ತಿಳಿದಿರುವ ತತ್ವವಿಚಾರಕ್ಕಿಂತಲೂ ಧರ್ಮವಿಚಾರಕ್ಕಿಂತಲೂ ಅತಿಶಯವಾದ ಬೇರೊಂದು ವಿಚಾರವು ಕ್ರೈಸ್ತನ ಮತದಲ್ಲಿ ನಮಗೆ ಗೋಚರವಾಗಿದೆ. ಅವನ್ನಿಲ್ಲಿ ವಿವರಿಸುವೆವು. ಕ್ರೈಸ್ತಮತದಲ್ಲಿ ಬೋಧಿಸಿರುವ ಧರ್ಮವಿಚಾರವು ಬಹುಶಃ ಇತರ ಮತಗಳಲ್ಲಿಯೂ ದೊರಕುತ್ತದೆ. ಆದರೆ ಇತರ ಮತಗಳಲ್ಲಿ ಎಂದಿಗೂ ಸಿಕ್ಕಲಾರದ ವಿಶೇಷವಾದ ಸಂಗತಿಯೊಂದು ಕ್ರೈಸ್ತಮತದಲ್ಲಿ ದೊರಕುತ್ತದೆ.

ಸುಳ್ಳು ಹೇಳಬಾರದು, ವಂಚಿಸಬಾರದು, ಕಳ್ಳತನಮಾಡಬಾರದು, ವ್ಯಭಿಚಾರಮಾಡಬಾರದು, ಪರರಸೊತ್ತಿಗೆ ಆಶೆಮಾಡಬಾರದು ಎಂಬೀ ಮೊದಲಾದ ಸತ್ಯಬೋಧನೆಗಳನ್ನು ಕ್ರೈಸ್ತಮತವೊಂದೇ ಬೋಧಿಸುತ್ತದೆಂದು ಸಾಧಿಸುವದು ಬುದ್ಧಿಗೆ ಒಪ್ಪಲಾರದು. ಇಂಥ ವಿಷಯಗಳನ್ನು ಬೋಧಿಸುವ ಒಂದು ಸಾಮಾನ್ಯವಾದ ಮತವೇ ಮನುಷ್ಯರೆಲ್ಲರಿಗೆ ಅವಶ್ಯವೆಂದು ಯಾರೂ ಹೇಳುವದಿಲ್ಲ. ಮನುಷ್ಯರಿಗೆ ಅವಶ್ಯವಾದದ್ದು ಏನಂದರೆ—ಇಂಥ ಬೋಧನೆಗಳಿಗನುಸಾರವಾಗಿ ನಡೆಯುವದಕ್ಕೆ ಸಾಮರ್ಥ್ಯವನ್ನು ಕೊಡತಕ್ಕ ಮತವೇ ಅವಶ್ಯವಾದದ್ದು. ನಮ್ಮ ದೇಶೀಯರನ್ನಾಗಲಿ ಅನ್ಯದೇಶೀಯರನ್ನಾಗಲಿ ಯಾರನ್ನು ನೋಡಿದರೂ "ಹೇಳೋದು ಒಂದು, ಮಾಡೋದು ಒಂದು" ಎಂಬ ಮಾತು ಸ್ಮರಣೆಗೆ ಬರುತ್ತದೆಯಷ್ಟೆ. ತಮ್ಮ ಮನದ ಇಟ್ಟುಕೊಂಡಿರುವ ಶ್ರೇಷ್ಠವಾದ ನಡತೆಯ ಪ್ರಮಾಣಕ್ಕೆ ಸರಿಯಾಗಿ ನಡೆಯಲಾರದೆ, ಕೇವಲ ನಿಕೃಷ್ಟವಾದ ಭಾವಗಳಿಗೆ ತಕ್ಕಂತೆ ನಡೆಯುವದೇ ಸಾಕೆಂದು ಯೋಚಿಸುತ್ತಿರುವ ಜನರಿಂದ ಭೂಲೋಕದ ಸರ್ವಭಾಗಗಳೂ ತುಂಬಿವೆಯಲ್ಲವೇ? ಭೂಲೋಕದ ಈ ಸ್ಥಿತಿಯನ್ನು ನೋಡುವಾಗ ಜನರಲ್ಲಿ ಪ್ರೀತಿಯೇ ಇಲ್ಲದಂತೆ ತೋರುತ್ತದೆ. ಸಮಾಜದ ನಿಜಸ್ಥಿತಿಯನ್ನು ಪರೀಕ್ಷಿಸಿದರೆ ಬಹು ಹೇಯವಾದ ದುಷ್ಟದುರ್ಗತಿಗಳಿಗೆ ಸಮಾಜವು ಅವಕಾಶವನ್ನು ಕೊಟ್ಟು ಈ ದುಷ್ಕೃತ್ಯಗಳಿಗೆ ಮಾತೃಭೂಮಿಯಾದ ಈ ಸಮಾಜದಿಂದ ಈ ದುರ್ಗುಣಗಳನ್ನು ತೆಗೆದುಹಾಕುವದು ಹೇಗೆ ಎಂದು ತಲ್ಲಣಿಸುವಂತೆಯಾಗಿದೆ. ಇಂಥ ಸಂದರ್ಭದಲ್ಲಿಯೇ ಕ್ರೈಸ್ತಮತದ ವಿಶೇಷತೆಯು ಗೋಚರವಾಗುತ್ತದೆ. ಮನುಷ್ಯರು ಯಾವ ಸರ್ವಶ್ರೇಷ್ಠವಾದ ಪ್ರಮಾಣಾನುಸಾರವಾಗಿ ನಡೆಯಲಾರದೆ ಪ್ರಾಣವಾಗಲಿ ಆಶೆಯಾಗಲಿ ಇಲ್ಲದಂಥ ಶವಗಳಂತೆ ಕಾಲಕ್ಷೇಪವನ್ನು ಮಾಡುತ್ತಿದ್ದಾರೋ ಆ ಪ್ರಮಾಣಗಳನ್ನು ಯಥೋಚಿತವಾಗಿ ಅನುಸರಿಸುವಂತೆ ಕ್ರೈಸ್ತಮತವು ಸಹಾಯವನ್ನು ಕೊಡುತ್ತದೆ. ಕ್ರೈಸ್ತಮತದಿಂದ ರಕ್ಷಣೆಯುಂಟಾಗುತ್ತದೆಯೆಂದು ನಾವು ಪದೇ ಪದೇ ಹೇಳುತ್ತಿರುವದರ ಅಭಿಪ್ರಾಯವಿದೇ. ಕ್ರೈಸ್ತನ ಮತದಿಂದ ಮನುಷ್ಯರಿಗೆ ರಕ್ಷಣೆಯುಂಟು. ಅಂದರೆ ಅವರನ್ನು ಪೀಡಿಸುತ್ತಿರುವ ನೀಚವಾದ ಉದ್ದೇಶಗಳಿಂದಲೂ ಅಭಿಪ್ರಾಯಗಳಿಂದಲೂ ಅವರನ್ನು ಬಿಡುಗಡೆ ಮಾಡುತ್ತದೆ. ಅವರನ್ನು ಕೆಳಕ್ಕೆ ಕೆಡವಿ ತುಳಿಯುತ್ತಿರುವ ಪಾಪದ ಅಧಿಕಾರದಿಂದ ಬಿಡಿಸಿ ಅವರನ್ನು ಉನ್ನತವಾದಂಥ ಮತ್ತು ಅವರಿಗೆ ಉಚಿತವಾದಂಥ ಪದವಿಗೆ ಸೇರಿಸುತ್ತದೆ. ದೇವರು ಅವರನ್ನು ಯಾವ ಉದ್ದೇಶದಿಂದ ಭೂಲೋಕದಲ್ಲಿರಿಸಿದ್ದಾನೋ ಆ ಉದ್ದೇಶವು ಅವರಲ್ಲಿ ಸಾರ್ಥಕವಾಗುವಂತೆ ಮಾಡುತ್ತದೆ. ಅವರನ್ನು ಬಂಧಿಸಿರುವ ಹಲವು ಬಗೆಯಾದ ವ್ಯಾಧಿಬಾಧೆಗಳಿಗೂ ದುಷ್ಪ್ರವೃತ್ತಿಗಳಿಗೂ ದೂರಮಾಡಿ ಅವರಿಗೆ ಎಲ್ಲಾ ವಿಷಯದಲ್ಲಿಯೂ ಸ್ವಾತಂತ್ರ್ಯವನ್ನು ಕೊಡುತ್ತದೆ. ಯಾವ ಸ್ತ್ರೀಪುರುಷರು ಪಾಪವೆಂಬ ಕಲ್ಮಷದಿಂದ ಅಸಹ್ಯರಾಗಿದ್ದಾರೋ ಅವರನ್ನು ಶುಚಿಮಾಡಿ ಅವರ ಗುಣವನ್ನು ನಿರ್ಮಲವಾಗಿ ಮಾಡುತ್ತದೆ. ಪಾಪವೆಂಬ ಹೊರೆಯನ್ನು ಹೊತ್ತು ಬಹು ಸಂಕಟದಿಂದ ತಪಿಸುವವರಿಗೆ ಆ ಹೊರೆಯನ್ನು ಇಳಿಸಿ ಕ್ಷಮೆಯನ್ನೂ ಸಮಾಧಾನವನ್ನೂ ವಿಶ್ರಾಂತಿಯನ್ನೂ ಕೊಡುತ್ತದೆ.

ಇಷ್ಟು ಸೌಖ್ಯಗಳನ್ನು ಕಲ್ಪಿಸಿಕೊಡುವಂಥದ್ದು ಕ್ರೈಸ್ತಮತವೆನ್ನುವಲ್ಲಿ ಆ ಮತದ ಯಾವ ತತ್ವದಿಂದ ಬರತಕ್ಕದ್ದೆಂದು ಪ್ರಶ್ನಿಸಬಹುದಷ್ಟೆ. ಆ ತತ್ವವು ಮತದ ಬೋಧನೆಗಳಲ್ಲಿಲ್ಲ. ಬೋಧನೆಯು ಶಬ್ದಸ್ವರೂಪವಷ್ಟೆ. ಅದು ತಾನೇ ನಿರ್ಜೀವ ವಸ್ತುವಾಗಿರಲಾಗಿ ಇತರರನ್ನು ಜೀವಿತರನ್ನಾಗಿಮಾಡುವದು ಹ್ಯಾಗೆ? ಯಾವ ಬೋಧನೆ ಎಷ್ಟು ಉತ್ಕೃಷ್ಟವಾಗಿದ್ದರೂ ಅದು ಮನುಷ್ಯರ ಆತ್ಮಗಳನ್ನು ಸೆರೆಹಿಡಿದಿರುವ ದುರಾತ್ಮಗಳಿಗೆ ಸಮಾನವಾದ ದುರ್ಗುಣಗಳನ್ನು ಓಡಿಸಿ ಆ ಮನುಷ್ಯರಲ್ಲಿ ನೀತಿಯನ್ನೂ ಪವಿತ್ರತೆಯನ್ನೂ ಸ್ಥಾಪಿಸುವಂಥ ಜೀವವನ್ನು ಹೊಂದಿದೆಯೋ? ಎಷ್ಟುಮಾತ್ರವೂ ಇಲ್ಲ. ಅಂಥ ಜೀವವನ್ನು ಹುಟ್ಟಿಸತಕ್ಕ ಶಕ್ತಿಯು ಒಬ್ಬ ಪುರುಷನಿಂದಲೇ ಬರಬೇಕಷ್ಟೆ. ಆದಕಾರಣ ಜೀವಿತ ಮಾಡುವಂಥ ಶಕ್ತಿಯು ಕ್ರೈಸ್ತಮತದಲ್ಲಿರುವದು ನಿಜವಾದರೆ ಆ ಶಕ್ತಿಯು ಯಾವನೋ ಒಬ್ಬ ಪುರುಷನಿಂದಲೇ ಬರತಕ್ಕದ್ದೆಂದು ನಾವು ನಿಶ್ಚಯಿಸಬೇಕಾಗಿದೆ. ಆ ಪುರುಷನು ಯಾರೆಂದರೆ—ಯೇಸುಸ್ವಾಮಿಯೇ. ಕ್ರೈಸ್ತಮತದ ತತ್ವಸ್ವರೂಪನು ಕ್ರೈಸ್ತನೇ. ಆತನು ರಕ್ಷಣೆಯ ವಿಷಯವಾಗಿ ಬೋಧಿಸುವ ಸದ್ಗುರುವು ಅಲ್ಲದೆ ತಾನೇ ರಕ್ಷಕನಾಗಿಯೂ ಇದ್ದಾನೆ. ಆತನು ನಿಜವಾದ ಜೀವಿತದ ಮಾರ್ಗವನ್ನು ಬೋಧಿಸುವದಕ್ಕೆ ಬಂದ ಶ್ರೇಷ್ಠನಾದ ಮಾರ್ಗದರ್ಶಿಯಾಗಿರುವದಲ್ಲದೆ ಆ ಮಾರ್ಗದಲ್ಲಿ ನಡೆಯಬೇಕೆಂದವರಿಗೆ ಸಹಾಯವನ್ನು ಕೊಟ್ಟು ನಡಿಸುವವನಾಗಿಯೂ ಇದ್ದಾನೆ. ಮನುಷ್ಯರಿಗೆ ಸರ್ವಶ್ರೇಷ್ಠವಾದ ನಡತೆಯು ಇಂಥಾದ್ದೆಂದು ತಿಳಿಯಪಡಿಸಿದ್ದೂ ಅಲ್ಲದೆ ತಾನೇ ನಡೆದು ತೋರಿಸಿದನು. ತಾನು ಭೂಲೋಕದಲ್ಲಿ ಜೀವಿಸಿದ ಕಾಲದಲ್ಲಿ ಜೀವಿಸುತ್ತಲೂ ತನ್ನ ಜೊತೆಯಲ್ಲಿ ಸಂಚರಿಸುತ್ತಲೂ ಇದ್ದ ಶಿಷ್ಯಜನಕ್ಕೆ ಮಾತ್ರವಲ್ಲದೆ ಇತರರಿಗೂ ಆ ಶಕ್ತಿಯನ್ನು ಕೊಟ್ಟನು. ಆತನು ಊರೂರು ಸಂಚರಿಸುತ್ತಿರುವಾಗ ತನ್ನ ಬಳಿಗೆ ಬಂದ ರೋಗಿಷ್ಟರನ್ನು ಕೈಯಿಂದ ಮುಟ್ಟಿದ ಕೂಡಲೆ ಅವರ ರೋಗವೆಲ್ಲ ಬಿಡಹೋಯಿತು. ಕುಂಟರಿಗೆ ಕಾಲು ಬಂತು. ಕುರುಡರಿಗೆ ಕಣ್ಣು ಬಂತು. ಹಾಗೆಯೇ ಪಾಪದಿಂದ ತುಂಬಿದವರು ಆತನ ಬಳಿಗೆ ಬರಲು ಆತನ ಸನ್ನಿಧಾನದ ಶಕ್ತಿಯು ಅವರನ್ನು ವಶಪಡಿಸಿಕೊಳ್ಳಲು ಆ ಬಡ ಜನಗಳು ಏನೋ ಒಂದು ವಿಧವಾದ ಹೊಸ ಜೀವವನ್ನು ಹೊಂದಿದಂಥವರಾದರು. ಅವರು ತಮ್ಮ ಹೇಯ ಸ್ವಭಾವವನ್ನು ಗ್ರಹಿಸಿ ಅತ್ಯಂತ ದೀನಮನಸ್ಸುಳ್ಳವರಾದರೂ ಪಾಪವನ್ನು ಜಯಿಸಬಹುದೆಂಬ ಅಪೂರ್ವವಾದ ಬಲವನ್ನೂ ಉತ್ಸಾಹವನ್ನೂ ಧರಿಸಿದವರಾದರು.

ಈ ಅಪೂರ್ವವಾದ ಶಕ್ತಿಯು ಕ್ರೈಸ್ತಸ್ವಾಮಿಯ ಕಾಲದಲ್ಲಿ ಜೀವಿಸಿದ ಶಿಷ್ಯರೊಳಗೂ ಇತರರೊಳಗೂ ಹುಟ್ಟಿತೆಂದು ಮೇಲೆ ಹೇಳಿದೆವಷ್ಟೆ. ಆ ಶಿಷ್ಯರು ಸ್ವದೇಶವನ್ನು ಬಿಟ್ಟು ಅನ್ಯದೇಶಗಳಲ್ಲಿ ಸಂಚರಿಸುತ್ತ ತಾವು ಸ್ವಾಮಿಯಿಂದ ಗ್ರಹಿಸಿದ ರಕ್ಷಣಾಶಕ್ತಿಯ ವಿಷಯವಾದ ಸುವಾರ್ತೆಯನ್ನು ಪ್ರಸಿದ್ಧಪಡಿಸುತ್ತಿರಲು ಅವರ ಮಾತನ್ನು ಕೇಳಿ ನಂಬಿದವರೊಳಗೂ ಈ ಅಪೂರ್ವಶಕ್ತಿಯು ಬಂದಿತೆಂಬುದು ಅನುಭವಸಿದ್ಧವಾಗಿದೆ. ಕ್ರೈಸ್ತಮತವನ್ನು ಪ್ರಚಾರಪಡಿಸುವದರಲ್ಲಿ ಮಹಾ ಪ್ರಯಾಸಿಯಾಗಿದ್ದ ಪೌಲನೆಂಬ ದೇವಭಕ್ತನು ಕ್ರೈಸ್ತಸ್ವಾಮಿಯನ್ನು ಕಣ್ಣಿನಿಂದ ನೋಡಿದ್ದನೋ ನೋಡಿರಲಿಲ್ಲವೋ ಎಂಬ ವಿಷಯವು ಹಾಗಿರಲಿ. ಆತನು ಅನುಭವಪೂರ್ವಕವಾಗಿ ಹೇಳಿರುವ ಮಾತು ಪ್ರಕೃತೋದ್ದೇಶಕ್ಕೆ ಅತ್ಯನುಕೂಲವಾಗಿದೆ. "ಬದುಕುವವನು ನಾನಲ್ಲ, ನನ್ನಲ್ಲಿ ಕ್ರೈಸ್ತನೇ ಬದುಕುತ್ತಾನೆ" ಎಂದು ಆತನು ಹೇಳಿರುವದನ್ನು ನಾವು ಆಲೋಚಿಸಿದರೆ ಆತನಲ್ಲಿ ಸ್ವಾಮಿಯು ಎಂಥ ಶಕ್ತಿಯುಳ್ಳವನಾಗಿ ವರ್ತಿಸಿದನೆಂದು ನಾವು ಆಶ್ಚರ್ಯಪಡಬೇಕಾಗುತ್ತೇವೆ. ಆ ಪೌಲನ ಅನುಭವವೇ ಲಕ್ಷೋಪಲಕ್ಷ ಮಂದಿಯ ಅನುಭವವಾಗಿದೆಯೆಂದು ನಾವು ಧಾರಾಳವಾಗಿ ಸಾಧಿಸಬಲ್ಲೆವು. ಕ್ರೈಸ್ತನು ಯಾರೊಳಗೆ ವಾಸಿಸುತ್ತಾನೋ ಅವರಲ್ಲಿ ಉತ್ತಮೋತ್ತಮವಾದ ಆಶೆಗಳೊಳಗೆ ಮನಸ್ಸು ಓಡುತ್ತಿರುತ್ತದೆ. ಅವರಲ್ಲಿರುವ ನೀಚವಾದ ದುಷ್ಟ ಆಶೆಗಳಿಗೆಲ್ಲಾ ಸಾವು ಬರುತ್ತದೆ. ಅತ್ಯಂತ ನಾಗರೀಕರಾಗಿಯೂ ಬುದ್ಧಿವಂತರಾಗಿಯೂ ಇರುವಂಥ ಜನರನ್ನು [illegible] ಕೇವಲ ಹೀನಜಾತಿಯವರನ್ನು [illegible] ಯೇಸುಸ್ವಾಮಿಯು ಈ ಅಪೂರ್ವಶಕ್ತಿಯು [illegible] ಒಂದೇ ಅಭಿಪ್ರಾಯವುಳ್ಳವರಾಗಿರುವ [illegible] ಬರುವದು.

ಆದಕಾರಣ ಕ್ರೈಸ್ತನ ವಿಷಯವಾಗಿ ಜನರಿಗೆ ಯಾವ ಸಂಶಯವು ಹುಟ್ಟಿದರೂ ಎಷ್ಟು ಚರ್ಚೆ ನಡೆದರೂ ಆತನು ಮನುಷ್ಯರಿಗೆ ಸರ್ವಭಾಗದಲ್ಲೂ ರಕ್ಷಣೆಯನ್ನು ಕೊಟ್ಟು ಉದ್ಧಾರಮಾಡತಕ್ಕವನೆಂಬ ವಿಷಯದಲ್ಲಿ ಯಾವ ಸಂಶಯವೂ ಇಲ್ಲವೆಂದು ಗ್ರಹಿಸಿ ವಿವೇಕಿಗಳಾದವರು ಆತನ ಮೈತ್ರಿಯನ್ನೂ ಸಹವಾಸವನ್ನೂ ಪಡೆದು ಆತನ ದಿವ್ಯಶಕ್ತಿಯಿಂದ ಪ್ರೇರಿತರಾಗಿ ತಮ್ಮಲ್ಲಿಯೂ ಇತರರಲ್ಲಿಯೂ ನೆಲೆಗೊಂಡಿರುವಂಥ ಸಕಲ ದುರ್ಗುಣಗಳನ್ನೂ ಹೋಗಲಾಡಿಸಿ, ಸಕಲ ಸದ್ಗುಣಭರಿತರಾಗಿ ತಮ್ಮ ಸಮಾಜಕ್ಕೂ ದೇಶಕ್ಕೂ ಭೂಷಣಪ್ರಾಯರಾಗುವದು ಕರ್ತವ್ಯವಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಬರ್ಮಾ ಅಧಿಪತ್ಯದ ಕಾಮೋಕಾ ಸೀಟ್ ಎಂಬ ಪಟ್ಟಣದ ಸಮುದ್ರತೀರದಲ್ಲಿ ಒಂದು ಸಾಹುಕಾರೀ ಹಡಗು ಒಡೆದುಹೋಗಿ ಕಳೆದ ವಾರ ಇಬ್ಬರು ಮೃತಪಟ್ಟರು. ಇನ್ನು ಮೂರು ಮಂದಿಗೆ ತುಂಬಾ ಗಾಯವಾಗಿದೆ, ಇವರು ಬದುಕುವ ಸಂಭವವಿಲ್ಲ.

* * * * *

ಮೇಜರ್ ಜಾಲಿ ದಿ ಲೋಟಿನಿಯರ್ ಎಂಬ ಇಂಜನಿಯರವರು ಕಾಶ್ಮೀರ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವದಕ್ಕೆ ಅಂದಾಜಿನ ಪಟ್ಟಿಯನ್ನು ಬರೆದು ಒಪ್ಪಿಸಿದರು. ಸಂಸ್ಥಾನದವರು ಅದರಂತೆ ಒಬ್ಬ ಹಣ ಸ್ಯಾಂಕ್ಷನ್ ಮಾಡುವವರಾಗಿದ್ದಾರೆ.

* * * * *

ಮದರಾಸ್ ಗವರ್ನಮೆಂಟಿನವರು ರವಿನ್ಯೂ ಕಂದಾಯಗಳನ್ನೂ ರೈತರು ಮಣಿಆರ್ಡರ್ ಮೂಲಕ ಕಳುಹಿಸುವದಕ್ಕೆ ಸಹಾಯವಾಗುವಂತೆ ಕೆಲವು ರೂಲುಗಳನ್ನು ಮಾಡುತ್ತಿದ್ದಾರೆ. ತಾಲೂಕ್ ಆಫೀಸುಗಳಿಗೆ ಈಗ ಕಂದಾಯ ಪಾವತಿಮಾಡುತ್ತಿರುವ ಜಮೀನ್ದಾರರಿಗೆ ಈ ರೂಲುಗಳು ಅನ್ವಯಿಸುವದಿಲ್ಲ.

* * * * *

ರಂಗೂನ ಮ್ಯುನಿಸಿಪಾಲಿಟಿಯವರು ಆ ಪಟ್ಟಣದ ಬಚ್ಚಲ ನೀರು ಸರಿಯಾಗಿ ಸಾಗಿಹೋಗುವ ಕಾಮಗಾರಿಗೂ ಪ್ರಜೆಗಳಿಗೆ ಕುಡಿಯುವ ನೀರನ್ನು ತಂದೊದಗಿಸುವ ಕಾಮಗಾರಿಗೂ ೬೦ ಲಕ್ಷ ರೂಪಾಯಿ ಸಾಲ ಮಾಡುವವರಾಗಿದ್ದಾರೆ. ಈ ಸಾಲಕ್ಕೆ ೪೦ ವರುಷಗಳ ವಾಯಿದೆ; ಬಡ್ಡಿ ಶೇಕಡ ವರುಷಕ್ಕೆ ೪ ರೂಪಾಯಿ.

* * * * *

ಕಲ್ಕತ್ತಾ ಪಟ್ಟಣದ ಮ್ಯಾಜಿಸ್ಟ್ರೇಟರು ಕಳೆದ ವಾರ ಒಬ್ಬ ಅಪರಾಧಿಯನ್ನು ದರ್ಯಾಫ್ತು ಮಾಡಿ, ಮರುದಿನ ಶಿಕ್ಷೆ ವಿಧಿಸುತ್ತೇನೆಂದು ತಿಳಿಸಿದರು. ಕೂಡಲೇ ಅಪರಾಧಿಯು ಮ್ಯಾಜಿಸ್ಟ್ರೇಟರನ್ನು ಕುರಿತು—ಸ್ವಾಮಿ, ಈಗಲೇ ಶಿಕ್ಷೆ ಹೇಳಿಬಿಟ್ಟರೆ ಜೈಲಿಗೆ ಹೋದೇನು. ಆ ಕಲ್ಮಷವಾದ ಪೋಲೀಸ್ ಲಾಕಪ್ಪಿನಲ್ಲಿರಲಾರೆ ಎಂದು ಬೇಡಿಕೊಂಡನು. ಆದರೂ ಅಪರಾಧಿಯು ಇಷ್ಟಪ್ರಕಾರ ಶಿಕ್ಷೆಯನ್ನು ಹೇಳಬೇಕಾದ ಅಗತ್ಯ ಕಂಡುಬರುವದಿಲ್ಲವೆಂದು ಹುಕುಂ ಆಯಿತು.

ಹೈದರಾಬಾದ್ ಸಂಸ್ಥಾನದ ನೈಜಾಮರವರ ಫಿರಂಗಿ ಸೈನ್ಯದಲ್ಲಿ ಜಮೇದಾರನಾಗಿದ್ದ ಮಲ್ಲಿಗರ ಸಾಹೇಬನು ಕಳೆದವಾರ ತನ್ನ ಸೇವಕರನ್ನೆಲ್ಲಾ ಕೆಲಸಗಳ ಮೇಲೆ ಕಳುಹಿಸಿಬಿಟ್ಟು ತನ್ನ ಕೋಣೆಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯಮಾಡಿಕೊಂಡನು. ಇವನ ಹೆಂಡತಿ ಸತ್ತುಹೋಗಿದ್ದಳು. ಇವನಿಗೆ ಆರು ಮಂದಿ ಚಿಕ್ಕ ಮಕ್ಕಳಿದ್ದಾರೆ.

* * * * *

ಬೊಂಬಾಯಿ ಪಟ್ಟಣದಲ್ಲಿ ಕಟ್ಟುವ ಮ್ಯೂಜಿಯಂ ಎಂಬ ವಸ್ತುಸಂಗ್ರಹ ಬಂಗಲೆಯ ಫಂಡಿಗೆ ಅಲ್ಲಿನ ಬೋಹ್ರಾ ಮಹಮ್ಮದಿಯ [illegible] ಕರೀಮಭಾಯಿ ಇಬ್ರಾಹಿಂ ಎಂಬ ಪ್ರಖ್ಯಾತನು ಮೂರು ಲಕ್ಷ ರೂಪಾಯಿ ಕೊಡುತ್ತೇನೆಂದು ವಾಗ್ದಾನ ಮಾಡಿದ್ದಾನೆ. ಬೊಂಬಾಯಿ ಗವರ್ನಮೆಂಟಿನವರು ೨,೫೦,೦೦೦ ರೂಪಾಯಿ ಕೊಡುವರು.

* * * * *

ಲಂಕಾ (ಸಿಲೋನ್) ದ್ವೀಪದಲ್ಲಿ ಅಗಸರು ಬಟ್ಟೆಗಳನ್ನು ಕದಿಯುವದು ಹೆಚ್ಚಾಗಿರುವಂತೆ ಕಾಣುತ್ತದೆ. ಈಚೆಗೆ ಅಲ್ಲಿನ ಸೆಷನ್ಸ್ ಜಡ್ಜರು ಒಬ್ಬ ದೊರೆಗೆ ಒಂದು ಅಂಗಿ ಕಳುಹಿದ್ದಕ್ಕೆ [illegible] ತಿಂಗಳ ಕಠಿಣ ಸಜೆಯನ್ನೂ ಇನ್ನೊಬ್ಬ ಅಗಸನಿಗೆ ಒಂದು ವರುಷ ಕಠಿಣ ಸಜೆಯನ್ನೂ ವಿಧಿಸಿದರು. ಇನ್ನೆರಡು ಮೊಕದ್ದಮೆಗಳು ದರ್ಯಾಫ್ತಿಯಾಗುತ್ತಿವೆ.

* * * * *

ಕಲ್ಕತ್ತಾ ಪಟ್ಟಣದ ನಾಮೆಯ ಇಲಾಖೆಯಲ್ಲಿ ಒಬ್ಬ ಗುಮಾಸ್ತೆಯೂ ಇನ್ನಿಬ್ಬರೂ ಸೇರಿ ೨೦,೦೦೦ ರೂಪಾಯಿಗಳನ್ನು ಕಂಟ್ರ್ಯಾಕ್ಟದಾರನಿಗೆ ಪಾವತಿ ಆದಂತೆ ಲೆಕ್ಕ ಬರೆದು ತಿಂದುಹಾಕಿದರು. ಸೆಷನ್ಸ್ ಜಡ್ಜರು ಈ ಅಪರಾಧಿಯಾದ ಗುಮಾಸ್ತೆಗೆ ೧೮ ತಿಂಗಳ ಕಠಿಣ ಸಜೆಯನ್ನೂ ೨ನೇ ಅಪರಾಧಿಗಳಿಗೆ ಮೂರು ಮೂರು ತಿಂಗಳ ಕಠಿಣ ಸಜೆಯನ್ನೂ ವಿಧಿಸಿದರು.

* * * * *

ಕಳೆದ ವಾರ ರಂಗೂನ ಪಟ್ಟಣದಲ್ಲಿ ಒಬ್ಬ ದೊಡ್ಡ ಮನುಷ್ಯನ ೧೯ ವರುಷದ ಮಗಳು ತನ್ನ ಉದ್ಯಾನವನದಿಂದ ಹೊರಕ್ಕೆ ಬಂದಾಗ ಮೂವರು ಬರ್ಮೀಯರು ಅವಳನ್ನು ಎತ್ತಿ [illegible] ಎಲ್ಲಿಗೋ ಹೋಗಿಬಿಟ್ಟರು. ಈ ಹುಡುಗಿಯ ತಂದೆ ಮೌಂಗ್ [illegible] ಎಂಬ ದೊಡ್ಡ [illegible] ಈಗ ವಿಚಾರಣೆಯಲ್ಲಿದ್ದಾನೆ.

* * * * *

ಹಿಂದುಸ್ಥಾನದಲ್ಲಿ ರೈಲ್ವೆ ದರ್ಜೆಗಳನ್ನು ಬದಲಿಸುವ ವಿಷಯದಲ್ಲಿ ಹಿಂದುಸ್ಥಾನ ಗವರ್ನಮೆಂಟಿನವರು ಒಂದು ಕಾನೂನು ಮಾಡಿ ಪಾರ್ಲಿಮೆಂಟ್ ಸಭೆಯಲ್ಲಿ ಓದಿದರು. ಹೌಸ್ ಆಫ್ ಕಾಮನ್ಸ್ ಎಂಬ ಸಭೆಯಲ್ಲಿ ಅದನ್ನು ಮೊದಲನೇ ಸಲ ಓದಿ ಪಾಸ್ ಮಾಡಿದರು. ಇದರಂತೆ ಗವರ್ನಮೆಂಟಿನವರು ೩೦ ಕೋಟಿ ದ್ರವ್ಯವನ್ನು ಸಾಹುಕಾರರಿಂದ ಸಾಲಮಾಡುತ್ತಾರೆ.

* * * * *

ಲಂಕಾ ದ್ವೀಪಕ್ಕೆ ಸೇರಿದ ಮಂದನವೆಂಬ ಪಟ್ಟಣದಲ್ಲಿ ಒಂದು ಭಾರೀ ಬೌದ್ಧ ದೇವಸ್ಥಾನಕ್ಕೆ ಚಿನ್ನದ ತಗಡು ಹೊದಿಸಿದ ಗೋಪುರವನ್ನು ಇಟ್ಟು ಪ್ರತಿಷ್ಠೆ ಮಾಡಿದರು. ಸುಮಾರು ೫೦,೦೦೦ ಜನರು ಆ ದಿನ ಅಲ್ಲಿ ಸೇರಿದ್ದರು. ಮೊ॥ ಧರ್ಮಪಾಲರವರೂ ದೇವಸ್ಥಾನದ ಅರ್ಚಕರೂ ಗೋಪುರ ಪ್ರತಿಷ್ಠೆ ಆದ ತರುವಾಯ ಬಹು ಸ್ವಾರಸ್ಯವಾದ ಉಪನ್ಯಾಸಗಳನ್ನು ಮಾಡಿ, ಅವರನ್ನೆಲ್ಲಾ ಸಂತೋಷಪಡಿಸಿದರು.

* * * * *

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯ ಮೊಕದ್ದಮೆಗಳನ್ನು ನಡಿಸುವದಕ್ಕೆ ೧,೨೫೦ ರೂಪಾಯಿ ತಲಬಿನ ಒಬ್ಬ ನೌಕರನನ್ನು ನೇಮಿಸಿಕೊಳ್ಳಬಹುದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದರು. ಈ ಕೆಲಸಕ್ಕೆ ೧೭ ಮಂದಿ ಲಾಯರುಗಳು ಅರ್ಜಿ ಕೊಟ್ಟಿದ್ದರು. ಕಮೀಷನರುಗಳು ಈ ಅರ್ಜಿಗಳನ್ನು [illegible] ಬಾಬು ಮತಿಲಾಲ ಸೇನ ಎಂಬ ವಕೀಲನನ್ನು ಆ ಕೆಲಸಕ್ಕೆ ನೇಮಿಸಿಕೊಂಡಿರುತ್ತಾರೆ.

* * * * *

ಅನಂತಶಯನ ಸಂಸ್ಥಾನದ ರಾಜಧಾನಿಯಲ್ಲಿ ಶ್ರೀ ಕೃಷ್ಣದೇವರಿಗಾಗಿ ಕಟ್ಟಿಸಿರುವ ಅನಾದಿ ದೇವಸ್ಥಾನದ ಗರ್ಭಗುಡಿಯೊಳಗೆ ಕಳೆದ ಬುಧವಾರ ಪೂಜಾರಿಯನ್ನು ಕತ್ತರಿಸಿಹಾಕಿದ್ದಾರೆ. ಈ ಪೂಜಾರಿಗೂ ಕೊಂದ ಹಂತಕರಿಗೂ ಬಹಳ ವೈಷಮ್ಯ ಇದ್ದ ಹಾಗೂ ಒಂದು ಮೊಕದ್ದಮೆಯಲ್ಲಿ ಅವರವರ ದ್ವೇಷವು ಹೆಚ್ಚಿದ ಹಾಗೂ ಅದರ ಫಲವೇ ಈ ಕೊಲೆಯೆಂತಲೂ ಪ್ರಕಟವಾಗಿದೆ. ಗುಮಾನಿ ಜನರನ್ನೆಲ್ಲ ಸರ್ಕಾರದವರು ಹಿಡಿದು ತನಿಖೆಮಾಡುತ್ತಿದ್ದಾರೆ.

* * * * *

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವು ಕ್ಷೀಣಗತಿಯನ್ನು ಹೊಂದಿದಂತೆ ಕಾಣುತ್ತದೆ. ಹಿಂದಿನವಾರ ೧,೫೬೭ ಮಂದಿಮಾತ್ರ ಆ ಉಪದ್ರವದಲ್ಲಿ ಕಾಲವಾದರು. ಈ ಪೈಕಿ ಪಾಟಿಯಾಲಾ ಸಂಸ್ಥಾನದಲ್ಲಿ ೭೭೬ ಮರಣಗಳೂ, ಪಂಜಾಬ್ ೧೮೦, ಬರ್ಮಾ ೧೬೦, ಮೈಸೂರು ೫೪೪, ಹೈದರಾಬಾದ್ ೨೯, ಸಂಯುಕ್ತ ಅಧಿಪತ್ಯ ಬಂಗಾಳದಲ್ಲಿ ೨೪, ಮದರಾಸ್ ಅಧಿಪತ್ಯದಲ್ಲಿ ೧೬, ಬೊಂಬಾಯಿ ಅಧಿಪತ್ಯದಲ್ಲಿ ೭೨೩ ಮರಣಗಳೂ ಆಗಿರುತ್ತವೆ.

* * * * *

ವೈಸ್‌ರಾಯ ಲಾರ್ಡ ಕರ್ಜನರವರು ಮುಂದಿನ ತಿಂಗಳು ರಾಜಕುಮಾರರುಗಳ ವಿದ್ಯಾಶಾಲೆಗಳನ್ನು ನೋಡಿಕೊಂಡು ಬರುವರು. ತರುವಾಯ ಡೆಹಲಿ, ಆಗ್ರಾ ಪಟ್ಟಣಗಳಲ್ಲಿ ಪ್ರಿನ್ಸ್ ಆಫ್ ವೇಲ್ಸರವರ ಆತಿಥ್ಯಕ್ಕೆ ಮಾಡತಕ್ಕ ಏರ್ಪಾಡುಗಳನ್ನೆಲ್ಲಾ ಪರಿ

ಪುಷ್ಟಿ ಮಾಡುವರು. ಅನಂತರ ಅವರು ಪತ್ನಿಸಹಿತರಾಗಿ ಬೊಂಬಾಯಿಗೆ ಬಂದು ಯುವರಾಜರನ್ನು ಎದುರುಗೊಂಡು ಉತ್ತರದೇಶಕ್ಕೆ ಕರದುಕೊಂಡು ಹೋಗುವರೆಂದು ತಿಳಿದುಬಂದಿದೆ.

*****

ದಕ್ಷಿಣದೇಶದಿಂದ ಸಿಲೋನ್ ದ್ವೀಪದ ತೋಟಗಳಲ್ಲಿ ಕೂಲಿ ಮಾಡುವುದಕ್ಕೆಂದು ಹೋಗುತ್ತಿರುವವರ ಸಂಖ್ಯೆಯು ತುಂಬಾ ಹೆಚ್ಚಾಗಿದೆ. ಈ ಜುಲೈ ತಿಂಗಳ ಮೊದಲನೇ ವಾರದಲ್ಲಿ ೨,೦೩೫ ಜನರೂ ಎರಡನೇ ವಾರದಲ್ಲಿ ೫,೦೭೩ ಜನರೂ ಅಂತೂ ಈ ತಿಂಗಳ ೧೦ ರಿಂದ ೧೭ನೇ ತಾರೀಖಿನ ವರೆಗೆ ೧೧,೬೨೫ ಜನರು ಅಲ್ಲಿಗೆ ಹಿಂದುಸ್ಥಾನದಿಂದ ಹೋಗಿರುವಂತೆ ತಿಳಿದು ಬರುವುದು. ಹಿಂದಿನ ವರುಷಗಳಲ್ಲಿ ಇಷ್ಟೊಂದು ಜನರು ಹೋಗಿದ್ದಿಲ್ಲ.

*****

ಬೊಂಬಾಯಿ ಪಟ್ಟಣದಲ್ಲಿರುವ ಘನವನ್ನೈದಿದ ಅಗಾಖಾನರವರು ಕಲ್ಕತ್ತಾ ಪಟ್ಟಣದಲ್ಲಿ ಕಟ್ಟಲ್ಪಡುವ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆಯಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರ ಮತ್ತು ಅವರ ಪತ್ನಿಯರವರ ಲೋಹಪ್ರತಿಮೆಗಳನ್ನು ನಿಲ್ಲಿಸಬೇಕೆಂದು ಗೊತ್ತುಮಾಡಿ, ಅವುಗಳನ್ನು ತಯಾರುಮಾಡಿಸಿ ಕಳುಹಿಸುವಂತೆ ವಿಲಾಯತಿಯ ಒಬ್ಬ ಕಾರೀಗಾರನಿಗೆ ಬರೆದು ಗೊತ್ತುಮಾಡಿದಾರೆ. ಈ ಪ್ರತಿಮೆಗಳು ಪ್ರಿನ್ಸ್ ಆಫ್ ವೇಲ್ಸ್‌ರವರು ಈ ರಾಷ್ಟ್ರಕ್ಕೆ ದಯಮಾಡಿದ ವಿಚಾರವನ್ನು ಶಾಶ್ವತಪಡಿಸುವವು

*****

ಬರೋಡ ರಾಜಕುಮಾರರಾದ ಅರಸುಗಾಮಾರವರು ಪತ್ನಿ ಸಹಿತ ಸ್ವರಾಜ್ಯವನ್ನು ಕುರಿತು ಪ್ರಯಾಣ ಮಾಡುತ್ತಿರುವಷ್ಟು. ಇವರು ಮುಂದಿನ ತಿಂಗಳ ೩ನೇ ತಾರೀಖಿನ ದಿನ ಸಿಲೋನ್ ದ್ವೀಪದ ಕೊಲಂಬೋ ನಗರಕ್ಕೆ ಬಂದಿಳಿಯುತ್ತಾರೆಂತಲೂ ಅವರನ್ನು ಗೌರವ ಪೂರ್ವಕವಾಗಿ ಸ್ವೀಕರಿಸಬೇಕೆಂತಲೂ ಲಂಕಾ ದ್ವೀಪದ ಗವರ್ನರರಿಗೆ ಸೀಮೆಯಿಂದ ತಂತೀ ವರ್ತಮಾನ ಬಂದಿದೆ. ರಾಜರವರು ಗವರ್ನರರವರ ಅತಿಥಿಗಳಾಗಿ ಬಂದು ಒಂದೆರಡು ದಿನಗಳಲ್ಲಿ ಆ ದ್ವೀಪದ ಮುಖ್ಯ ಸ್ಥಳಗಳನ್ನು ನೋಡುವವರಾಗಿದಾರೆ. ಗವರ್ನರವರು ಅವರಿಗೆ ಭಾರೀ ಔತನ ಮಾಡುವವರು

*****

ಅಸ್ಸಾಂ ಮುಖ್ಯಪಟ್ಟಣವಾದ ಸಿಲ್‌ಹಟ್ ನಗರದಲ್ಲಿ ಮುಸಲ್ಮಾನ ಪ್ರಜೆಗಳು ತಮ್ಮ ರಕ್ತಸಂಬಂಧಿಗಳ ಹೆಣಗಳನ್ನು ತಮ್ಮ ಮನೆಯ ಆವರಣದಲ್ಲೇ ಹೂಳುತ್ತಿದ್ದರು. ಇದು ಬಹು ಕೆಟ್ಟ ಪದ್ಧತಿಯಾದ್ದರಿಂದ ಮ್ಯುನಿಸಿಪಾಲಿಟಿಯವರು ಅದನ್ನು ತಪ್ಪಿಸುವುದಕ್ಕೆ ಶಕ್ತಿಸಾಲದವರಾಗಿದ್ದರು. ಕೆಲವು ದಿನಗಳ ಕೆಳಗೆ ಕಮೀಶನರವರು ಊರಿಗೆ ಹೋಗಿ ಮುಸಲ್ಮಾನ ಜನರಲ್ಲಿ ಚಂದಾ ಎತ್ತಿಸಿ ಸಮಾಧಿಗಾಗಿಯೇ ಊರಹೊರಗೆ ಒಂದು ಸ್ಥಳವನ್ನು ಖರೀದು ಮಾಡಿದರು. ಮುಸಲ್ಮಾನರು ಅವರ ಮಾತಿನಂತೆ ಹೆಣಗಳನ್ನು ಆ ಸಮಾಧಿಯಲ್ಲಿ ಹೂಳಿಸುವುದಕ್ಕೆ ಒಪ್ಪಿಕೊಂಡರು.

*****

ಇಂಡಿಯಾ ಗವರ್ನಮೆಂಟಿನವರು ನಿಕ್ಕಲ್ ಎಂಬ ಲೋಹದ ಒಂದಾಣೆಯ ನಾಣ್ಯಗಳನ್ನೂ, ಕಂಚಿನಲ್ಲಿ ಅರ್ಧಾಣೆ, ಕಾಲಾಣೆ, ಬಿಡಿಕಾಸು ಎಂಬೀ ನಾಣ್ಯಗಳನ್ನೂ ತಮ್ಮ ಟಂಕಸಾಲೆಗಳಲ್ಲಿ ಛಾಪು ಹಾಕಿಸಿ, ಜಾರಿಗೆ ತರುವುದಕ್ಕೆ ಒಂದು ಕಾನೂನು ಮಾಡಿದಾರೆ. ಈ ಕಾನೂನಿನ ಮಸೂದೆಯು ಕಳೆದ ವಾರ ವೈಸ್‌ರಾಯಿಯವರ ಮಂತ್ರಾಲೋಚನಾ ಸಭಿಕರಿಂದ ಚರ್ಚಿಸಲಾಯಿತು. ಇವೆರಡು ತರದ ನಾಣ್ಯಗಳೂ ಸರಿಯಾಗಿ ಚಲಾವಣೆಗೆ ಬಂದ ಮೇಲೆ ನಿಕ್ಕಲ್ ಎಂಬ ಲೋಹದಲ್ಲೇ ಎರಡಾಣೆಯ ಮತ್ತು ಅರ್ಧಾಣೆಯ ನಾಣ್ಯಗಳನ್ನೂ ಛಾಪು ಹಾಕಬೇಕೆಂದಿರುವುದಾಗಿ ಗವರ್ನಮೆಂಟಿನವರು ತಿಳಿಸಿದಾರೆ.

*****

ವಿಲಾಯತಿಯ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಪರಿವಾರದೊಡನೆ ಅಕ್ಟೋಬರ್ ೧೯ ಕ್ಕೆ ಲಂಡನ್ ಪಟ್ಟಣದಿಂದ ಪ್ರಯಾಣಮಾಡಿ, ತಾ ೨೦ ಕ್ಕೆ ಜಿನೋವಾ ಪಟ್ಟಣಕ್ಕೆ ಬಂದು, ಅಲ್ಲಿ ರಿನೌನ್ ಎಂಬ ಹಡಗನ್ನು ಹತ್ತಿ ಸಮುದ್ರಯಾನಮಾಡಿಕೊಂಡು, ನೊವೆಂಬರ್ ೯ನೆ ತಾರೀಖಿನ ದಿನ ಬೊಂಬಾಯಿಪಟ್ಟಣದಲ್ಲಿ ಬಂದು ಹಡಗಿನಿಂದ ಇಳಿಯುವರು. ಆ ಶುಭ ದಿನ ವಿಲಾಯತಿ ರಾಜ್ಯದ ದೊರೆಯವರಾದ ಏಳನೇ ಎಡ್ವರ್ಡ್ ಪ್ರಭುಗಳ ಜನ್ಮದಿನವಾಗಿರುವುದು ಮತ್ತು ಅವರು ಪ್ರಿನ್ಸ್ ಆಫ್ ವೇಲ್ಸ್‌ರವರಾಗಿದ್ದಾಗ ೧೮೭೫ ರಲ್ಲಿ ಹಿಂದುಸ್ಥಾನಕ್ಕೆ ದಯಮಾಡಿದ್ದಾಗ ನೊವೆಂಬರ್ ೯ ರಲ್ಲೇ ಬಂದು ಹಡಗು ಇಳಿದಿದ್ದರು.

*****

ಡೆಹಲಿ ಪಟ್ಟಣದ ಬಳಿ ಪಲ್ಲಭಘಡವೆಂಬ ಒಂದು ಸಣ್ಣ ಊರು ಇದೆ. ಈ ಊರಿನಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ಬರುವ ಡಿಸೆಂಬರಿಗೆ ಹೋಗಿ ೬೦—೭೦ ಸಹಸ್ರ ಸೈನಿಕರು ಸೇರಿ ಮಾಡುವ ಸಾಹಸದ ಕಾರ್ಯಗಳನ್ನು ಪರಾಂಬರಿಸುವವರಾಗಿದಾರೆ. ಈ ಊರು ಬಹು ಪುರಾತನವಾದದ್ದು, ಪೂರ್ವದಲ್ಲಿ ಜಾತ್ ಎಂಬ ವಂಶದ ರಾಜರು ಅಲ್ಲಿ ಆಳುತ್ತಿದ್ದರು. ಈ ವಂಶದ ಕಡೇ ರಾಜನಾದ ರಾಜಾ ನಾಹರಸಿಂಹನು ದೊಡ್ಡ ದಂಗೆಯಲ್ಲಿ ಇಂಗ್ಲೀಷರ ಮೇಲೆ ಕೈ ಎತ್ತಿದ್ದರಿಂದ ಇಂಗ್ಲೀಷರು ಅವನನ್ನು ಹಿಡಿದು, ರಾಜದ್ರೋಹಿ ಎಂದು ತೀರ್ಮಾನಿಸಿ, ಅವನನ್ನು ಗಲ್ಲಿಗೆ ಹಾಕಿಬಿಟ್ಟರು. ಅಂದಿನಿಂದ ಈ ಊರು ಡೆಹಲಿಗೆ ಸೇರಿಹೋಗಿರುತ್ತದೆ

*****

ಲಾಹೋರ್ ಪಟ್ಟಣದಲ್ಲಿ ಪ್ರಜೆಗಳಿಗೆ ಹಾಲು ಮಾರತಕ್ಕವರು ಹಾಲಿಗೆ ನೀರು ಬೆರಸಿ ಹಾಳುಮಾಡುತ್ತಾರೆಂಬುದನ್ನು ಮ್ಯುನಿಸಿಪಾಲಿಟಿಯವರು ತಿಳಿದು ಅದನ್ನು ತಪ್ಪಿಸಿ, ನಿರ್ಮಲವಾದ ಒಳ್ಳೇ ಹಾಲು ಪ್ರಜೆಗಳಿಗೆ ಸಿಕ್ಕುವಂತೆ ಒಂದು ಕಾನೂನು ಮಾಡಿದಾರೆ. ಹಾಲು ಮಾರತಕ್ಕ ಜನರು ತಮ್ಮ ಗೋಶಾಲೆಗಳನ್ನು ನಿರ್ಮಲವಾದ ಕೊಟ್ಟಿಗೆಗಳಲ್ಲಿ ಕಟ್ಟಿ ಚನ್ನಾಗಿ ಸಾಕುತ್ತಿರಬೇಕು. ಮ್ಯುನಿಸಿಪಲ್ ಅಧಿಕಾರಿಗಳು ಅದನ್ನು ಹೋಗಿ ನೋಡಿ ಎಲ್ಲಾ ತೃಪ್ತಿಕರವಾಗಿ ಕಂಡುಬಂದರೆ ಅಂಥವರಿಗೆ ಹಾಲು ಮಾರುವುದಕ್ಕೆ ಲೈಸೆನ್ಸು ಕೊಡುವರು. ಇಂಥಾ ಲೈಸೆನ್ಸು ಪಡೆದವರು ವಿನಹಾ ಉಳಿದವರ್‍ಯಾರೂ ಹಾಲು ಮಾರಕೂಡದು. ಹಾಗೇನಾದರೂ ಮಾರಿದಲ್ಲಿ ಅವರಿಗೆ ಶಿಕ್ಷೆ ವಿಧಿಸುವರು.

*****

ಡಾಕ್ಟರ್ ಸಂತಿಲಾಂಡ್ಸ್ ಎಂಬಾತನು ಮಧ್ಯಪ್ರಾಂತ್ಯಗಳಲ್ಲಿದ್ದಾಗ ದೇಶೀಯ ಜನರ ಹೆಂಗಸರಲ್ಲಿ ತನ್ನ ದುರಿಚ್ಛೆಯನ್ನು ಪ್ರಕಾಶಪಡಿಸಿದನೆಂಬ ವರ್ತಮಾನ ಹುಟ್ಟಿ ಆತನು ವಿಲಾಯತಿಗೆ ಹೋಗಿದ್ದಾಗ ಪ್ರಚಾರವಾಯಿತು. ಸರ್ಕಾರದವರು ವಾರಂಟು ಕಳುಹಿಸಿ ಅವನನ್ನು ವಿಲಾಯತಿಯಿಂದ ಕರೆಸಿದರು. ಭಂಡಾರಾ ಪಟ್ಟಣದ ಮ್ಯಾಜಿಸ್ಟ್ರೇಟರು ಅವನ ಮೇಲೆ ಬಂದ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಅವನಿಗೆ ೫ ವರುಷಗಳ ಕಠಿಣಸಜೆಯನ್ನು ವಿಧಿಸಿದರು. ಅವನು ನಾಗಪುರದ ಜುಡಿಷಲ ಕಮೀಷನರ ಕೋರ್ಟಿನಲ್ಲಿ ಅಪೀಲು ಮಾಡಿದನು. ಕಮೀಷನರು ಕಳೆದವಾರ ತನಿಖೆಮಾಡಿ ಅವನ ಶಿಕ್ಷೆಯನ್ನು ೫ ರಿಂದ ೨ ವರುಷಕ್ಕೆ ಕಡಿಮೆ ಮಾಡಿ, ೫೦೦ ರೂಪಾಯಿ ಜುಲ್ಮಾನೆ ಹಾಕಿದರು.

*****

ಭಯಂಕರವಾದ ಭೂಕಂಪವು ಪ್ರಾರಂಭವಾದುದರಿಂದ ಹಿಮಾಚಲ ತಪ್ಪಲಲ್ಲಿರುವ ಕುಲುಕಣಿವೆಯಲ್ಲಿ ಅನೇಕಾನೇಕ ಕಲ್ಲುಬಂಡೆಗಳೂ ಗುಡ್ಡಗಳೂ ಅಲ್ಲಾಡಿ ಸಡಿಲವಾಗಿದ್ದವು. ಈಗ ಆ ಪ್ರಾಂತ್ಯದಲ್ಲಿ ಸಾರೋದ್ಧಾರವಾದ ಮಳೆ ಪ್ರಾರಂಭವಾಗಿರುವುದರಿಂದ ಸಡಿಲವಾಗಿರುವ ಭಾಗಗಳು ಕ್ರಮಕ್ರಮವಾಗಿ ಕುಸಿದು ಉರುಳಿಕೊಳ್ಳುತ್ತಿವೆ. ಕಳೆದ ವಾರ ಆ ಕಣಿವೆಯಲ್ಲಿ ಬಾರಾಯಿಗ್ರಾಮದ ಏಳು ಮನೆಗಳು ಕುಸಿದು ನಾಶಹೊಂದಿದವು. ಈ ಏಳು ಮನೆಗಳೂ ಅವುಗಳಲ್ಲಿದ್ದ ಜನ ಜಾನುವಾರು ಸಾಮಾನು ಮುಂತಾದವುಗಳೆಲ್ಲಾ ಸೇರಿ ಹೊಳೆಗೆ ಕೊಚ್ಚಿಕೊಂಡು ಹೋಗಿರುತ್ತವೆ. ಇಂಥಾ ಅನಾಹುತಗಳು ಇನ್ನೂ ಕೆಲವು ಸಂಭವಿಸಬಹುದೆಂದು ಊಹಿಸುತ್ತಾರೆ. ಆಗಾಗ್ಗೆ ಆ ಪ್ರಾಂತ ಸಣ್ಣಸಣ್ಣ ಭೂಕಂಪಗಳೂ ಆಗುವವು

*****

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ತ್ರಿಪ್ಪೂಣಿತ್ತುರ ಪಟ್ಟಣದಲ್ಲಿ ಶಾಸ್ತ್ರೋಕ್ತವಾದ ನಂಬೂದ್ರಿ ಪಂಡಿತರ ಒಂದು ಸಮಾಜ ನಡೆಯಿತು. ಈ ಸಮಾಜಕ್ಕೆ ಕೊಚ್ಚಿ ರಾಜರೇ ಹಾಜರಾಗಿ ಅಧ್ಯಕ್ಷತೆಯನ್ನು ವಹಿಸಿದ್ದರು. ಒಬ್ಬ ನಂಬೂದ್ರಿ ಸ್ತ್ರೀಯು ಅಲ್ಲಿನ ಸುಮಾರು ೬೦ ಮಂದಿ ದೊಡ್ಡ ಮನುಷ್ಯರು ಜಾತಿ ಕಟ್ಟಿಗೆ ವಿರೋಧವಾಗಿ ದುಷ್ಕಾರ್ಯಗಳನ್ನು ನಡೆಸಿರುತ್ತಾರೆಂದು ಆ ಸಮಾಜದಲ್ಲಿ ದೂರು ಹೇಳಿದರು. ಪಂಡಿತರೂ ರಾಜರೂ ಸೇರಿ ಆ ಜನರನ್ನೆಲ್ಲಾ ಕರೆಸಿಕೊಂಡು ತನಿಖೆಮಾಡಿ, ಅವರನ್ನು ಜಾತಿಯಿಂದ ಹೊರಗೆ ಹಾಕುವಂತೆ ಅಪ್ಪಣೆಕೊಟ್ಟರು. ಅವರಲ್ಲಿ ಕೆಲವರು ಆ ಸಂಸ್ಥಾನದಲ್ಲಿ ಭಾರೀ ಭಾರಿ ಉದ್ಯೋಗಸ್ಥರಾಗಿದಾರೆ. ಇದಲ್ಲದೆ ರಾಜರು ಆ ಹೆಂಗಸಿಗೂ ಬಹಿಷ್ಕಾರ ಹಾಕಿದರು. ಆದರೆ ಅವಳು ಏಕಾಂಗಿಯಾಗಿ ಇರುವುದಕ್ಕೆ ಒಪ್ಪಿದಪಕ್ಷದಲ್ಲಿ ಅಲ್ಲಿನ ದೇವಸ್ಥಾನದ ಫಂಡಿನಿಂದ ಅವಳಿಗೆ ಜೀವನ ನಡಸುತ್ತೇವೆಂದು ತಿಳಿಸಿದಾರೆ. ಸಂಸ್ಥಾನದ ಆಚಾರವಿಚಾರಗಳಲ್ಲಿ ರಾಜರೂ ಪಂಡಿತರೂ ಇಷ್ಟು ಶ್ರದ್ಧೆಯನ್ನು ತೋರಿಸಿ ದುಷ್ಪ್ರವರ್ತಕರನ್ನು ಈ ರೀತಿ ಶಿಕ್ಷಿಸಿದ್ದು ಆ ಪ್ರಾಂತ್ಯದಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ

*****

ಕಳೆದ ವಾರ ಕಾಶ್ಮೀರ ಸಂಸ್ಥಾನದಲ್ಲಿ ತುಂಬಾ ಪ್ರಾಣನಷ್ಟವಾಯಿತು. ಅನೇಕಜನ ಪಂಡಿತರು (ಶಾಸ್ತ್ರಿಗಳು) 'ತುಲಾಮುಲಾ' ಎಂಬ ಸ್ಥಳದಲ್ಲಿ ಪ್ರತಿವರ್ಷವೂ ನಡೆಯುವ ದೊಡ್ಡ ಉತ್ಸವಕ್ಕೆ ಹೋಗಿಬರುವ ಪದ್ಧತಿಯು ಪ್ರಕಾರ ಕಳೆದ ವಾರವೂ ಹೋಗಿ ಉತ್ಸವ ಮುಂತಾದ್ದನ್ನು ತೀರಿಸಿಕೊಂಡು, ದೊಡ್ಡ ದೋಣಿಯಲ್ಲಿ ವಾಪಸು ಅಂಚಾರ್ ಲೇಕ್ ಎಂಬ ದೊಡ್ಡ ಕೆರೆಯನ್ನು ದಾಟಿ ಬರುತ್ತಿದ್ದರು. ಸುಮಾರು ೩೦—೪೦ ಜನ ಪಂಡಿತರು ಆ ದೋಣಿಯಲ್ಲಿದ್ದರು. ದೋಣಿಯು ಮಧ್ಯ ಕೆರೆಗೆ ಬರುವಾಗ್ಗೆ ಸರಿಯಾಗಿ ಭಯಂಕರವಾದ ಸುಂಟರಗಾಳಿ ಎದ್ದು ಅಪಾರವಾದ ನೀರು ದೋಣಿಗೆ ನುಗ್ಗಿ ಮುಳುಗಿಕೊಂಡಿತು. ಐದಾರುಮಂದಿಯು ವಿನಹಾ ಉಳಿದವರೆಲ್ಲಾ ನೀರಿನಪಾಲಾದರು. ಈ ಉಳಿದವರು ದೋಣಿ ನಡೆಸುತ್ತಿದ್ದ ಅಂಬಿಗರೇ. ತಕ್ಷಣವೇ ಜನರನ್ನು ಬಿಟ್ಟು ಶೋಧನೆಮಾಡಿಸಿದ್ದರಲ್ಲಿ ಅರೆವಾಸಿ ಹೆಣಗಳು ಸಿಕ್ಕಿದವು. ಉಳಿದ ಹೆಣಗಳನ್ನು ಹುಡುಕುತ್ತಿದಾರೆ. ಈ ಪಂಡಿತರಲ್ಲಿ ಯಾರಿಗೂ ಈಜು ಬರುತ್ತಿದ್ದಿಲ್ಲವೆಂಬುದಾಗಿ ತಿಳಿದುಬಂದಿದೆ. ಈ ಪ್ರಕಾರ ಅಲ್ಲಿನ ವಿದ್ಯಾವಂತರು ಏಕಕಾಲದಲ್ಲಿ ಮೃತರಾದದ್ದು ತುಂಬಾ ಪರಿತಾಪವನ್ನುಂಟುಮಾಡಿರುವುದು

*****

ಕೊಯಮುತ್ತೂರು ಸೆಷನ್ ಕೋರ್ಟಿನಲ್ಲಿ ಒಂದು ಘೋರವಾದ ಕೊಲೆಯ ಮೊಕದ್ದಮೆ ದರ್ಯಾಫ್ತಿಗೆ ಬಂದಿದೆ. ಒಬ್ಬನು ಎರಡನೆ ಹೆಂಡತಿಯನ್ನು ಮದುವೆಮಾಡಿಕೊಂಡನು. ಅವನಿಗೆ ಮೊದಲನೆ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದ ೯—೭ ವರ್ಷದ ಇಬ್ಬರು ಹೆಣ್ಣು ಮಕ್ಕಳೂ ೫ ವರ್ಷದ ಒಂದು ಗಂಡು ಮಗುವೂ ಇದ್ದರು. ಆ ಎರಡನೆ ಹೆಂಡತಿಯು ತನ್ನ ಗಂಡನನ್ನು ಅವನ ತಂಗಿಯ ಗ್ರಾಮಕ್ಕೆ ಹೋಗಿಬರುವಂತೆ ಹೇಳಿ ಕಳುಹಿಸಿಬಿಟ್ಟು, ಅವನು ಇಲ್ಲದಾಗ ಮೇಲ್ಕಂಡ ಮೂರು ಮಕ್ಕಳನ್ನೂ ರಾತ್ರಿ ಹೊತ್ತಿನಲ್ಲಿ ತೋಟಕ್ಕೆ ಕರೆದುಕೊಂಡು ಹೋಗಿ, ಹೆಣ್ಣುಮಕ್ಕಳಿಬ್ಬರನ್ನೂ ಒಂದು ಭಾವಿಗೂ ಗಂಡು ಮಗುವನ್ನು ಇನ್ನೊಂದು ಭಾವಿಗೂ ತಳ್ಳಿ ಕೊಂದುಹಾಕಿ, ನೆಟ್ಟಗೆ ಹಿಂತಿರಿಗಿ ತನ್ನ ಮನೆಗೆ ಬಾರದೆ ತೌರುಮನೆಗೆ ಹೋಗಿ ಸೇರಿಕೊಂಡಳು. ಮರುದಿನ ಬೆಳಿಗ್ಗೆ ತಂದೆಯಾದವನು ಗ್ರಾಮದಿಂದ ವಾಪಸು ಬಂದು. ತನ್ನ ಹೆಂಡತಿ ಮನೆಯಲ್ಲಿಲ್ಲದ್ದನ್ನೂ ತನ್ನ ಮಕ್ಕಳು ಸತ್ತುಹೋದದ್ದನ್ನೂ ಕೇಳಿ, ಅವಳ ತೌರು ಮನೆಗೆ ಹೋಗಿ ಅವಳನ್ನು ಕರೆದುಕೊಂಡು ಬಂದನು. ಅವಳು ಮಣೇಗಾರರ ಮುಂದೆ ಬರೆಸಿದ ಕೈಫಿಯತ್ತಿನಲ್ಲಿ ತಾನೇ ಆ ಎರಡು ಹೆಣ್ಣು ಮಕ್ಕಳನ್ನೂ ಬಾವಿಗೆ ತಳ್ಳಿ ಕೊಂದುಹಾಕಿದ್ದೆನೆಂತಲೂ ಆ ಗಂಡುಮಗು ಮಾತ್ರ [illegible] ತಾನೇ ಭಾವಿಗೆ ಬಿದ್ದುಬಿಟ್ಟನೆಂತಲೂ ಬರೆಸಿದಾಳೆ. ಅಲ್ಲಿಂದ ಮ್ಯಾಜಿಸ್ಟ್ರೇಟರ ಮುಂದೆ ಕೊಟ್ಟ ಕೈಫಿಯತ್ತಿನಲ್ಲೂ ಇದೇ ರೀತಿ ಬರೆಸಿರುವಳು. ಸೆಷನ್ಸ್ ಜಡ್ಜರ ದರ್ಯಾಫ್ತಿಯಲ್ಲಿ ಏನಾಗುವದೋ ಮುಂದೆ ತಿಳಿಯಬೇಕು.

*****

ಬಂಗಾಳಾ ಅಧಿಪತ್ಯದಲ್ಲಿ ಕಳೆದ ವಾರ ಒಂದು ವಿಚಿತ್ರವಾದ ಕಳವು ನಡೆದಿದೆ. ಅವಿನಾಶಮುಖರ್ಜಿ ಎಂಬುವನನ್ನು ೧೯೦೪ನೇ ಇಸವಿಯಲ್ಲಿ ಜೈಲ್‌ಖಾನೆಯಿಂದ ಬಿಟ್ಟರು. ಅವನನ್ನು ಪೊಲೀಸಿನವರು ಆಗಿನಿಂದಲೂ ಹುಡುಕುತ್ತಲೇ ಇದಾರೆ. ಇವನು ಸೀಲ್ದಾ ಪಟ್ಟಣದಲ್ಲಿರುವ ಮೃಣಾಳಿನಿದೇವಿ ಎಂಬ ಪುಣ್ಯವತಿಯ ಮನೆಗೆ ಹೋಗಿ ಅಕೆಯನ್ನು ಕಂಡು—ನಿಮ್ಮ ತಾಯಿಗೆ ಅವಸಾನಕಾಲ ಪ್ರಾಪ್ತವಾಗಿರುವುದು. ಅವಳು ನಿಮ್ಮನ್ನು ನೋಡಬೇಕೆಂದು ಇಚ್ಛೆಪಟ್ಟು ನಿಮ್ಮನ್ನು ಕರೆದು ತರುವಂತೆ ನನ್ನನ್ನು ಈ ಕಾಗದ ಕೊಟ್ಟು ಕಳುಹಿಸಿದಾಳೆ. ಕೂಡಲೇ ಹೊರಡು ಎಂದು ಹೇಳಿ, ಒಂದು ಸುಳ್ಳಾದ ಕಾಗದವನ್ನು ಅವಳಿಗೆ ಕೊಟ್ಟನು. ಅದೆಲ್ಲಾ ನಿಜವೆಂದು ಆ ಹೆಣ್ಣು ಹೆಂಗಸು ನಂಬಿ, ತಾನೇ ತನ್ನ ಮನೆಗೆ ಯಜಮಾನಳಾಗಿದ್ದಕಾರಣ ತನ್ನ ಬಾಬತು ನಗನಾಣ್ಯಗಳನ್ನೆಲ್ಲಾ ಮನೆಯಲ್ಲಿಟ್ಟು ಹೋಗುವುದಕ್ಕೆ ಹೆದರಿ ಒಂದು ಚೀಲದಲ್ಲಿ ಕಟ್ಟಿ, ಅವನ ಸಂಗಡ ರೈಲಿಗೆ ಹೊರಟಳು. ಇವಳ ಒಬ್ಬ ಸೇವಕಳೂ ಜೊತೆಯಲ್ಲಿ ಹೋದಳು. ದೇವಿಯು ಅವನಲ್ಲಿ ಭರವಸವಿಟ್ಟು ತನ್ನ ಹಣದ ಚೀಲವನ್ನು ಅವನ ವಶಕ್ಕೆ ಕೊಟ್ಟಳು. ಕಳೆದ ಮೇ ತಿಂಗಳ ೨೫ ರಲ್ಲಿ ಈ ಮೂರು ಮಂದಿಯೂ ರೈಲ್ ಗಾಡಿಯನ್ನು ದರ್ಶನವೆಂಬ ಸ್ಟೇಷನ್ನಲ್ಲಿ ಹತ್ತುವಾಗ್ಗೆ ಹೆಂಗಸರಿಬ್ಬರೂ ಹೆಂಗಸರ ಗಾಡಿಯೊಳಗೆ ಕುತುಕೊಂಡರು. ಗಂಗಾಧರನೆಂದು ಹೆಸರಿಟ್ಟುಕೊಂಡಿದ್ದ ಆ ಮೋಸಗಾರನು ಗಂಡಸರ ಗಾಡಿಯೊಳಗೆ ಕುಳಿತುಕೊಳ್ಳುವುದಕ್ಕೆ ಹೋದನು. ಗಾಡಿ ಹೊರಟು ಮುಂದಿನ ಸ್ಟೇಷನಿಗೆ ತಲಪಿತು. ಮದನಪುರವೆಂಬ ಸ್ಟೇಷನ್ನಲ್ಲಿ ಆಕೆ ಆ ಮೋಸಗಾರನನ್ನು ನೋಡುವಾಗ್ಗೆ ಅವನು ಸಿಕ್ಕಲಿಲ್ಲ. ಅವನು ಸುಮಾರು ೨೦೦ ರೂಪಾಯಿಗಿಂತ ಹೆಚ್ಚಾಗಿದ್ದ ಗಂಟಿನ ಸಹಿತ ಎಲ್ಲಿಯೋ ಹೋಗಿಬಿಟ್ಟನು. ಅಂದಿನಿಂದ ಪೊಲೀಸಿನವರು ಹುಡುಕುತ್ತಿದ್ದಾಗ್ಯೂ ಅವನು ಇದುವರೆಗೂ ಸಿಕ್ಕಿ ಇಲ್ಲ

ವಿದೇಶ ವರ್ತಮಾನಗಳು.

ವೇಲ್ಸ್ ನಲ್ಲೂ ವೆಸ್ಟ್ ಫೇಲಿಯಾದಲ್ಲೂ ಎರಡು ಕಲ್ಲಿದ್ದಲ ಗಣಿಗಳಲ್ಲಿ ಅನಾಹುತ ಸಂಭವಿಸಿ ಒಂದು ಗಣಿಯಲ್ಲಿ ೧೨೬ ಜನ ಕೂಲಿಯವರೂ ಎರಡನೆ ಗಣಿಯಲ್ಲಿ ೩೯ ಜನ ಕೂಲಿಯವರೂ ಸತ್ತರೆಂದು ತಿಳಿದುಬಂದಿದೆ

*****

ಲಂಡನ್ ಪಟ್ಟಣದಲ್ಲಿ ಚಕ್ರವರ್ತಿಯವರ ಹೆಸರಿನ ಮೇಲೆ ಕಟ್ಟಿಸಿರುವ ಆಸ್ಪತ್ರೆ ಫಂಡಿಗೆ ಮಿಸ್ ಎಂ. ಹಾಕ್ಸರ್ ಎಂಬಾಕೆಯು ೩ ಲಕ್ಷ ರೂಪಾಯನ್ನೂ ಸರ್ ಚಾರ್ಲ್ಸ್ ಟೆನ್ನೆಂಟ್ ಎಂಬಾತನು ೧॥ ಲಕ್ಷ ರೂಪಾಯನ್ನೂ ತಮ್ಮ ಆಸ್ತಿಯಿಂದ ಕೊಟ್ಟಿದಾರೆ.

*****

ರಷ್ಯಾ ರಾಜ್ಯದ ನೈಋತ್ಯ ಭಾಗದಲ್ಲಿ ಮಾಕಿಜೋವ್ಕಾ ಎಂಬ ಕಲ್ಲಿದ್ದಲ ಗಣಿಯಲ್ಲಿ ಹಿಂದಿನ ವಾರ ಅಕಸ್ಮಾತ್ತಾಗಿ ಬೆಂಕಿ ಹುಟ್ಟಿ ಗಣಿಗೆ ಗಣಿಯೇ ದೊಡ್ಡ ಶಬ್ದದೊಡನೆ ಹಾರಿತು. ಈ ಅನಾಹುತದಿಂದ ನಾನೂರ ಅರವತ್ತು ಕೂಲೀ ಜನರು ಏಕಕಾಲದಲ್ಲಿ ಹತರಾದರು.

*****

ಅಮೇರಿಕ ಸಂಸ್ಥಾನಗಳಲ್ಲಿರುವ ಮೆ॥ ಜೆ ಡಿ. ರಾಕ್‌ಫೆಲರ್ ಎಂಬ ಕೋಟ್ಯಾಧೀಶ್ವರನು ಪ್ರೌಢವಿದ್ಯಾಭಿವೃದ್ಧಿಗೋಸ್ಕರ ಗವರ್ನಮೆಂಟಿನವರ ವಶಕ್ಕೆ ನಾಲ್ಕು ಕೋಟಿ ರೂಪಾಯಿಗಳನ್ನೂ, ಯೇಲ್ ಎಂಬ ವಿದ್ಯಾನಿಲಯದ ಮೂಲಧನಕ್ಕೆ ೩೦ ಲಕ್ಷ ರೂಪಾಯಿಗಳನ್ನೂ ದಾನಮಾಡಿರುತ್ತಾನೆ.

*****

ವಿಲಾಯತಿ ರಾಜ್ಯದ ಯುವರಾಜರವರು ಹಿಂದೂಸ್ಥಾನದಲ್ಲೆಲ್ಲಾ ಸಂಚಾರ ಮಾಡುವಷ್ಟರೊಳಗಾಗಿ ರಷ್ಯಾ ಜಪಾನ ರಾಜ್ಯಗಳಿಗೆ ಕದನವು ನಡೆದು ಯುದ್ಧ ನಿಲ್ಲುತ್ತಿದ್ದಾದರೆ ಅವರು ಹಿಂದೂಸ್ಥಾನದಿಂದ ಮಲಯಾ ದ್ವೀಪಗಳಿಗೂ ಆ ತರುವಾಯ ಜಪಾನ ರಾಜ್ಯಕ್ಕೂ ದಯಮಾಡಬಹುದೆಂದು ವರ್ತಮಾನ ಹುಟ್ಟಿದೆ.

*****

ವಿಲಾಯತಿಗೆ ಸೇರಿದ ಡೋವರ್ ಪಟ್ಟಣದಲ್ಲಿ ಕೆಲವು ದಿನಗಳ ಕೆಳಗೆ ಕಾಲವಾದ ಮಿಸ್ ಸಿ. ಪೆಟ್ಟರ್ ಎಂಬಾಕೆಯು ತನ್ನ ಆಸ್ತಿಯಲ್ಲಿ ೩೦ ಸಾವಿರ ರೂಪಾಯನ್ನೂ ಮಿಸ್ ಎಂ. ಇ. ಬೋಲಾನ್ಸ್ ಎಂಬಾಕೆಯು ೯೦ ಸಾವಿರ ರೂಪಾಯನ್ನೂ ಮೆ॥ ವಿಂಡ್ಹಾಂ ಕುಕ್ ಎಂಬಾತನು ೬। ಲಕ್ಷ ರೂಪಾಯನ್ನೂ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿಟ್ಟಿದಾರೆ.

*****

ಜರ್ಮನಿ ರಾಜ್ಯದಲ್ಲಿ ಕೌಂಟ್ ಜೆಪ್ಲಿನ್ ಎಂಬ ದೊಡ್ಡ ಮನುಷ್ಯನು ೭ ಲಕ್ಷ ರೂಪಾಯಿ ಖರ್ಚುಮಾಡಿ ಅಂತರಿಕ್ಷದಲ್ಲಿ ಸಂಚರಿಸುವಂಥಾ ಒಂದು ಆಕಾಶಬುಟ್ಟಿಯನ್ನು ತಯಾರುಮಾಡಿಸಿ

ದಾನೆ. ಇದರಲ್ಲಿ ಮೂರು ಮಂದಿ ಕುಳಿತುಕೊಂಡು ಕಾರ್ಸ್ಟರ್ಸ್ ಎಂಬ ಭಾರೀ ಕೆರೆಯನ್ನು ದಾಟಿಬಂದರು. ಇದನ್ನು ನೋಡುವುದಕ್ಕೆ ಜರ್ಮನಿ ಚಕ್ರವರ್ತಿಯವರೂ ಅವರ ಆಸ್ಥಾನದ ಮಂತ್ರಿ ಸಾಮಂತರೂ ಹೋಗಿದ್ದರು.

*****

ನಮ್ಮ ದೇಶದ ಮ್ಯುನಿಸಿಪಾಲಿಟಿಗಳು ಈ ವಿಷಯಕ್ಕೆ ಗಮನ ಕೊಟ್ಟು ಪ್ರಜೆಗಳನ್ನು ಯಥಾರ್ಥವಾಗಿ ಪಾಲಿಸಬಾರದೇ?— ವಿಲಾಯತಿಗೆ ಸೇರಿದ ಲೀಡ್ಸ್ ನಗರದ ಮ್ಯುನಿಸಿಪಾಲಿಟಿಯವರು ಪ್ರಜೆಗಳಿಗೆ ಆರೋಗ್ಯಕರವಾದ ಒಳ್ಳೇ ಹಾಲು ಸಿಕ್ಕುವುದಕ್ಕೆ ತೃಪ್ತಿಕರವಾದ ಏರ್ಪಾಡು ಮಾಡಿದಾರೆ. ಒಂದು ದೊಡ್ಡ ಜಮೀನು ಕೊಂಡುಕೊಂಡು, ಅದರಲ್ಲಿ ಆರೋಗ್ಯಸೂತ್ರಗಳಿಗನುಸಾರವಾಗಿ ಗೋಶಾಲೆಗಳನ್ನಿಟ್ಟು ಸಾಕಿ, ಹಾಲನ್ನು ಪ್ರಜೆಗಳಿಗೆ ಬಿಕರಿಮಾಡುವರು. ಈ ಗೋಶಾಲೆಗಳ ಶರೀರ ಸ್ಥಿತಿಯನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಪಶುವೈದ್ಯನನ್ನು ಸಂಬಳ ಕೊಟ್ಟು ನೇಮಿಸಿದಾರೆ. ಇಂಥಾ ಪ್ರಜೋಪಕಾರಕ ಕಾರ್ಯಗಳು ಈ ರಾಷ್ಟ್ರದಲ್ಲಿ ಎಂದಿಗೆ ಆಗುವವೋ!

*****

ಅಮೇರಿಕದ ಸ್ತ್ರೀಯರು ವಿದ್ಯಾಸಂಪೂರ್ತಿ ಹೊಂದುವುದಕ್ಕೋಸ್ಕರ ವಿಲಾಯತಿಗೆ ಬಂದು ಅಲ್ಲಿನ ವಿದ್ಯಾಶಾಲೆಗಳಲ್ಲಿ ಒಂದು ವರ್ಷ ಕಾಲ ವ್ಯಾಸಂಗ ಮಾಡಿ ಹೋಗುವುದು ಈಚೆಗೆ ಪ್ರಬಲವಾಗುತ್ತಿದೆ. ಇಂಥಾ ಸ್ತ್ರೀಯರಿಗೆ ವೇತನ ಕೊಡುವಂತೆ ಏರ್ಪಾಡು ಮಾಡಬೇಕೆಂದು ಲಂಡನ್ ಪಟ್ಟಣದಲ್ಲಿರುವ ಅಮೇರಿಕ ಸ್ತ್ರೀ ಸಂಘದವರು ಗೊತ್ತುಮಾಡಿದರು. ಅಮೇರಿಕದಲ್ಲಿರುವ ೪೭ ಸಂಸ್ಥಾನಗಳಿಂದಲೂ ಪ್ರತಿ ವರ್ಷವೂ ಇಬ್ಬಿಬ್ಬರು ಸ್ತ್ರೀಯರು ವಿಲಾಯತಿಗೆ ಬಂದು ವ್ಯಾಸಂಗ ಮಾಡಬೇಕೆಂತಲೂ, ಇವರಿಗೆ ವರ್ಷಕ ಕೊಡುವುದಕ್ಕೆ ಒಂದು ಫಂಡು ಏರ್ಪಡಬೇಕೆಂತಲೂ, ಈ ಫಂಡಿಗೆ ಅಮೇರಿಕದ ಸ್ತ್ರೀ ಸಮಾಜದವರು ದ್ರವ್ಯ ಸಹಾಯ ಮಾಡಬೇಕೆಂತಲೂ ತಿಳಿಸಿದಾರೆ.

*****

ವಸ್ತ್ರಗಳನ್ನು ಕತ್ತರಿಸುವುದಕ್ಕೂ ಅವುಗಳಿಗೆ ಪಟ್ಟೆ ಹಾಕುವುದಕ್ಕೂ ಯೂರೋಪ ಖಂಡಕ್ಕೆ ಸೇರಿದ ಹಾಲೆಂಡ್ ರಾಜ್ಯದಲ್ಲಿ ಒಂದು ತರಹ ಧೃತಿಯನ್ನು ಉಪಯೋಗಿಸುತ್ತಾರೆ. ಈ ಧೃತಿಯನ್ನು ಉಪಯೋಗಿಸಿ ಕೆಲಸ ಮಾಡುವವರಿಗೆ ಅದರಿಂದ ಶರೀರ ಧರ್ಮವು ಕೆಟ್ಟು ರೋಗಾದಿಗಳು ಸಂಭವಿಸುತ್ತವೆ. ಆದಕಾರಣ ಆ ಧೃತಿಯನ್ನು ಉಪಯೋಗಿಸುವುದಕ್ಕೆ ಬದಲಾಗಿ ಇನ್ನಾವುದನ್ನಾದರೂ ಯಾವ ರೀತಿಯಲ್ಲಾದರೂ ಉಪಯೋಗಿಸುವ ಕ್ರಮವನ್ನು ಚೆನ್ನಾಗಿ ವಿವರಿಸಿ ಇಂಗ್ಲಿಷಿನಲ್ಲಿ ಬರೆದು ಕಳುಹಿಸಿದರೆ ಅಂಥವರಿಗೆ ೭,೧೦೦ ರೂಪಾಯಿ ಇನಾಮು ಕೊಡುತ್ತೇವೆಂದೂ, ಬರೆಯುವ ಸಂಗತಿಯು ಮುಂದಿನ ಜನವರಿ ೧ನೆ ತಾರೀಖಿನೊಳಗಾಗಿ ಹಾಲೆಂಡ್ ರಾಜ್ಯದಲ್ಲಿರುವ ಡೆಲ್ಫ್ಟ್ ನಗರದ ಪಾಲಿಟೆಕ್ನಿಕ್ ಸ್ಕೂಲಿನ ಅಧ್ಯಕ್ಷರಾದ ಡಾಕ್ಟರ್ ಎಲ್. ಆರೋನ್ಸ್ಟೀನ್ ಎಂಬ ಪಂಡಿತರಿಗೆ ತಲಪುವಂತೆ ಕಳುಹಿಸಬೇಕೆಂತಲೂ ಪ್ರಕಟಮಾಡಿದಾರೆ. ಬುದ್ಧಿವಂತರು ಬಹುಮಾನ ಪಡೆಯುವುದಕ್ಕೆ ಇದು ಒಳ್ಳೇ ಸಮಯ.

*****

ಪಶಾನಿಕ ಬ್ರ ಸಮುದ್ರದೊಳಗೆ ಕಳೆದ ನೊವೆಂಬರ್ ತಿಂಗಳಲ್ಲಿ ಅಲ್ಲಕಲ್ಲೋಲವಾಗಿ, ಒಂದು ದ್ವೀಪವು ಹೊಸದಾಗಿ ಸಮುದ್ರದ ಮಧ್ಯೆ ಉತ್ಪನ್ನವಾಯಿತೆಂತಲೂ, ಅದಕ್ಕೆ ಜಪಾನಿನವರು ಸುಷೀಮಾ ಎಂಬ ಹೆಸರಿಟ್ಟು ಅಲ್ಲಿ ತಮ್ಮ ರಾಜನ ಬಾವುಟವನ್ನು ಕಟ್ಟಿಬಂದರೆಂತಲೂ ತಿಳಿಸಿದ್ದೆವಷ್ಟೆ. ಆಗ್ಗೆ ಈ ದ್ವೀಪದ ಸುತ್ತಳತೆಯು ೨ ೧ ಮೈಲಿಯಾಗಿತ್ತು. ಅದು ಸಮುದ್ರ ಸುಟ್ಟಕ್ಕಿಂತ ೪೮೦ ಅಡಿ ಎತ್ತರವಾಗಿತ್ತು. ಈಚೆಗೆ ಆ ದ್ವೀಪವನ್ನು ನೋಡಿಕೊಂಡು ಬಂದ ಒಬ್ಬ ಜಪಾನ್ ಅಧಿಕಾರಿಯು, ಅದು ದಿನಕ್ರಮೇಣ ಸಮುದ್ರದೊಳಕ್ಕೆ ಮುಳುಗುತ್ತಿದೆ ಎಂತಲೂ ಈಗ ಸಮುದ್ರಕ್ಕೂ ಭೂಮಿಗೂ ೧೦ ಅಡಿ ಮಾತ್ರ ಬಿಟ್ಟಿದೆ ಎಂತಲೂ ಸುಮಾರು ಮುಕ್ಕಾಲು ಮೈಲಿಗಿಂತಲೂ ಹೆಚ್ಚಾಗಿ ಸಮುದ್ರದೊಳಕ್ಕೆ ಮುಳುಗಿ ಹೋಗಿದೆ ಎಂತಲೂ ಸರ್ಕಾರಕ್ಕೆ ರಿಪೋರ್ಟು ಮಾಡಿದಾನೆ. ಈ ದ್ವೀಪವು ಇನ್ನು ಕೆಲವು ವಾರಗಳೊಳಗಾಗಿ ಸಮುದ್ರದೊಳಗೆ ಮುಳುಗಿಕೊಳ್ಳುವುದೆಂದು ಹೇಳುತ್ತಾರೆ.

*****

ಡಾಕ್ಟರ್ ಬರ್ನಾರ್ಡೋ ಎಂಬ ಪುಣ್ಯಾತ್ಮನು ಲಂಡನ್ ಪಟ್ಟಣದಲ್ಲಿ ಬಡಬಗ್ಗರ ಮಕ್ಕಳನ್ನೂ ದಿಕ್ಕಿಲ್ಲದ ಮಕ್ಕಳನ್ನೂ ಇಟ್ಟು ಸಾಕಿ ಸಂರಕ್ಷಣೆ ಮಾಡಿ ವಿದ್ಯಾಬುದ್ಧಿಗಳನ್ನೂ ಬೇರೆ ಬೇರೆ ಜೀವನೋಪಾಯಗಳನ್ನೂ ಕಲಿಸಿ ಉದ್ಧಾರಮಾಡುತ್ತಿದ್ದಾನೆ. ಈ ದೊಡ್ಡ ಮನುಷ್ಯನು ಕಳೆದ ನಾಲ್ವತ್ತು ಸಂವತ್ಸರಗಳಲ್ಲಿ ೧೯,೮೦೦ ಬಾಲಕ ಬಾಲಕಿಯರನ್ನು ಸಂರಕ್ಷಣೆ ಮಾಡಿ ಬೇರೆ ಬೇರೆ ದೇಶಗಳಿಗೆ ಕಳುಹಿಸಿ ಅವರವರೇ ಜೀವನವನ್ನು ಕಲ್ಪಿಸಿಕೊಳ್ಳುವಂತೆ ಮಾಡಿರುವನು. ಈಗಲೂ ಲಂಡನ್ ಪಟ್ಟಣದಲ್ಲಿ ಆತನ ಅನಾಥಾಲಯಗಳಲ್ಲಿ ೮,೪೦೦ ಮಂದಿ ಮಕ್ಕಳು ಪೋಷಣೆ ಹೊಂದುತ್ತಿದಾರೆ. ಇಂಥಾ ಪುಣ್ಯಕಾರ್ಯಕ್ಕೆ ಪ್ರಪಂಚದಲ್ಲಿರುವ ಎಲ್ಲಾ ಭಾಗಗಳಿಂದಲೂ ಐಶ್ವರ್ಯವಂತರು ದ್ರವ್ಯ ಸಹಾಯಮಾಡುತ್ತಾ ಬಂದಿದಾರೆ. ಈ ಅನಾಥಾಲಯಗಳಲ್ಲಿ ಆದ ಯಾವ ಹುಡುಗರ ಮೈಕೆ ನೂರಕ್ಕೆ ಒಬ್ಬರು ಕೂಡಾ ನಿಷ್ಪ್ರಯೋಜಕರೆನ್ನಿಸಿಕೊಳ್ಳುವುದಿಲ್ಲ. ಡಾಕ್ಟರ್ ಬರ್ನಾರ್ಡೋ ಎಂಬೀ ಧರ್ಮಿಷ್ಠನಿಗೆ ೬೦ ವರುಷ ತುಂಬುವುದು. ಆತ ಏರ್ಪಡಿಸಿರುವ ಈ ಅನಾಥಾಲಯಗಳ ಫಂಡಿಗೆ ಇನ್ನು ೧೮ ಲಕ್ಷ ರೂಪಾಯಿ ಚಂದಾ ಮೂಲಕ ಕೊಡಿಸಬೇಕೆಂದು ಕಳೆದ ವಾರ ಏರ್ಪಾಟಿಯಲ್ಲಿ ದೊಡ್ಡ ಮನುಷ್ಯರು ಸಭೆಸೇರಿ ತೀರ್ಮಾನ ಮಾಡಿಕೊಂಡಿದಾರೆ.

ಮತಾಂತರವನ್ನು ಅವಲಂಬಿಸುವ ಮಗನ ಹಕ್ಕು ಬಾಧ್ಯತೆಯ ವಿಚಾರ.

“ಧರ್ಮವಿಚಾರಿ” ಗೆ ಜವಾಬು —೧

ಮತಭ್ರಷ್ಟನಿಗೆ ಪಿತ್ರಾರ್ಜಿತ ಸ್ವತ್ತಿನಲ್ಲಿ ಹಕ್ಕಿಲ್ಲನೆಂದು ಹಿಂದುಗಳು ವಾದಿಸುವದಿಲ್ಲ. ಜಾತಿಭ್ರಷ್ಟನಿಗೆ ಹಕ್ಕಿಲ್ಲವೆಂದು ವಾದಿಸುತ್ತಾರೆ. ಶ್ರುತಿ ಸ್ಮೃತಿಗಳಲ್ಲಿ ಹೇಳಿರುವ ಸಮಯಾಚಾರ ಮತ್ತು ಕರ್ಮ ಬದ್ಧನಿಗೆ ಜಾತಿಯೆಂಬುದೇ ಹೊರ್ತು ಮತಾಚಾರ ಪ್ರವರ್ತಕರಿಗೆ ಜಾತಿಯೆಂಬುದಿಲ್ಲ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಜಾತಿಭ್ರಷ್ಟರಾದರೂ, ಹೊಲೆಯ ಮಾದಿಗ ಮುಂತಾದ ಕೀಳು ಜಾತಿಯವರು ಜಾತಿಭ್ರಷ್ಟರಾದರೂ ಮತ್ತು ಮತಾಂತರದವರಾದ ಮಹಮ್ಮದ್, ಬೌದ್ಧ ಮುಂತಾದ ಮತಸ್ಥರು ಬಂದರೂ ಕ್ರೈಸ್ತರು ತಮ್ಮ ಮತಕ್ಕೆ ಸೇರಿಸಿಕೊಂಡೆವೆಂದು ಹೇಳಿಕೊಂಡು, ಅವರಲ್ಲಿ ಉಪ್ಪುಉಪಚಾರ ಊಟ ಹೆಣ್ಣು ಕೊಟ್ಟು ತರುವದೂ ಮಾಡುತ್ತಾರೆ. ಜಾತಿ ಉಳ್ಳಂಥ ಸಾಧುಗಳು ಆ ರೀತಿ ಮಾಡುವದಿಲ್ಲ. ಶೈವಮತದವರೂ ವಿಷ್ಣು ಮತದವರು ಸಹಾ ಮತಾಂತರವನ್ನು ಅವಲಂಬಿಸಿದರೇ ಹೊರ್ತು ಕ್ರೀಸ್ತ ಮತಕ್ಕೆ ಸೇರಿದವರ ಹಾಗೆ ಜಾತಿ ಕೆಟ್ಟಿಲ್ಲ. ಮಹಮ್ಮದೀಯ, ಬೌದ್ಧ ಮುಂತಾದ ಮತಕ್ಕೆ ಸೇರಿ ಜಾತಿ ಕೆಟ್ಟವರಿಗೆ ಪಿತ್ರಾರ್ಜಿತ ಸ್ವತ್ತಿನಲ್ಲಿ ನ್ಯಾಯವಾಗಿ ಎಂದಿಗೂ ಹಿಂದೆ ಭಾಗ ಸಂದಿಲ್ಲ. ಹಿಂದೂ ಜಾತಿಯ ಆಚಾರ ಪದ್ಧತಿಯಲ್ಲಿದ್ದು ಕ್ರೈಸ್ತ ಅಥವಾ ಮಹಮ್ಮದೀಯ ಮುಂತಾದ ಮತಾವಲಂಬಿಯಾದರೆ ಅವನಿಗೆ ಪಿತ್ರಾರ್ಜಿತ ಸ್ವತ್ತಿಲ್ಲವೆಂದು ಹೇಳಿದರೆ ಆಗ ಒಪ್ಪಬಹುದಾದ್ದು ಹಿಂದುವು ಬರೆಯುವದೆಂದು ಕ್ರೈಸ್ತರು ಬರೆದುಕೊಂಡಿರುವ ೧೯೦೫ನೇ ಇಸವಿ ಜೂನ್ ೨೯ನೇ ತಾರೀಖಿನ “ವೃತ್ತಾಂತ ಪತ್ರಿಕೆ” ಯ ೪ನೇ ಪೇಜಿನ ೧—೨ನೇ ಕಾಲಂಗಳು ಸರಿಹೋಗುತ್ತಯೇ ಹೊರ್ತು ಜಾತಿಭ್ರಷ್ಟನಿಗೆ ಪಿತ್ರಾರ್ಜಿತ ಸ್ವತ್ತಿನಲ್ಲಿ ಹಕ್ಕಿಲ್ಲವೆಂದು ಹೇಳುವ ಈಗಿನ ಕಾಲಕ್ಕೆ ಸರಿಹೋಗುವದಿಲ್ಲ. ಜನ್ಮದಿಂದಲೇ ಪಿತ್ರಾರ್ಜಿತಕ್ಕೆ ಹಕ್ಕುಂಟೆಂದು ಹೇಳುವದು ಸರಿಯಾದದ್ದಲ್ಲ. ಮಸಲಾ ಒಬ್ಬ ಬ್ರಾಹ್ಮಣನು ೪ ವರ್ಣ ಯಾ ಜಾತಿಗಳ ಹೆಣ್ಣುಗಳನ್ನು ಮದುವೆಯಾಗುತ್ತಾನೆ. ಎಲ್ಲರಲ್ಲೂ ಮಕ್ಕಳಾದರೆ ತಾಯಿಗಳ ಹೆಚ್ಚು ಕಡಮೆ ಜಾತಿಸಂಬಂಧದಿಂದ ೩ ಜಾತಿಯವರು ಹೆಚ್ಚು ಕಡಮೆ ಭಾಗವನ್ನು ಹೊಂದುತ್ತಾರೆ. ೪ನೇ ಜಾತಿಯವಳ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಭಾಗವೇ ಇಲ್ಲ. ಅವನು ಮಿಕ್ಕಾದವರ ಸೇವೆ ಮಾಡಿಕೊಂಡು ಜೀವಿಸಬೇಕು. ಹೀಗಿರುವಲ್ಲಿ ಜಾತಿಭ್ರಷ್ಟನಿಗೆ ಜನ್ಮದಿಂದಲೇ ಹಕ್ಕುಂಟೆಂದು ಹೇಳುವ ಕ್ರೈಸ್ತರ ಮಾತು ಮರುಳು ಮಾತಲ್ಲವೇ.

ತಾ ೩—೭ ೦೫ ಕೃಷ್ಣಪ್ಪ

“ಧರ್ಮವಿಚಾರಿ” ಗೆ ಜವಾಬು — ೨.

ಕಳೆದ ಜೂನ್ ೨೯ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ ಮತಾಂತರವನ್ನವಲಂಬಿಸುವ ಮಗನ “ಹಕ್ಕು ಬಾಧ್ಯತೆ ವಿಚಾರದಲ್ಲಿ” ಧರ್ಮವಿಚಾರಿ ಎಂಬ ಹಿಂದುವು—“ಇದರ ವಿಷಯದಲ್ಲಿ ಧರ್ಮವಿಚಾರವು ಅವಶ್ಯವೆಂದು ಆ ಉಭಯ ಪಕ್ಷದವರೂ ಲಕ್ಷ್ಯವಿಡಬೇಕಾದ ಕೆಲವು ಕಾರಣಗಳು ಇದರಲ್ಲಿ ತೋರಬರಬೊಣಾಗಿರುತ್ತವೆ” ಎಂದು ಬರೆಯುವರು. ಈ ನಮ್ಮ ಭರತಖಂಡದಲ್ಲಿ ಹಿಂದು, ಮಹಮ್ಮದ, ಕ್ರೈಸ್ತ ಮೊದಲಾದ ಅನೇಕ ಮತಗಳೂ ಆಯಾಯ ಮತಾಚಾರಗಳಿಗನುಸಾರವಾಗಿ ಪಿತ್ರಾರ್ಜಿತ ಹಕ್ಕು ಬಾಧ್ಯತೆಯನ್ನು ಪ್ರತಿಪಾದಿಸುವ ನ್ಯಾಯ (ಲಾ) ಶಾಸ್ತ್ರಗಳೂ ಇರುತ್ತವೆ. ಇವೆಲ್ಲವೂ ಆಯಾ ಮತದ ವೃದ್ಧಾಚಾರಕ್ಕನುಸಾರವಾಗಿ ಏರ್ಪಡಿಸಲ್ಪಟ್ಟಿರುವವು. ಒಂದು ಮತದ ನ್ಯಾಯಶಾಸ್ತ್ರವು ಇನ್ನೊಂದು ಮತದವರಿಗೆ ಅನ್ವಯಿಸುವದಿಲ್ಲವೆನ್ನುವುದೂ ಹಾಗೆಯೇ ಮತಾಂತರವನ್ನವಲಂಬಿಸಿದವನಿಗೆ ತನ್ನ ಪೂರ್ವ ಮತದ ವಿಷಯವಾಗಿ ಎಲ್ಲಾ ಹಕ್ಕು ತಪ್ಪಿಹೋಗಿರುವದೆಂದೂ ಅವರಿಗೆ ಯಾಕೆ ತೋರಲಿಲ್ಲವೋ? ಹಾಗಿಲ್ಲದಿದ್ದರೆ ಆಯಾ ಮತಕ್ಕೋಸ್ಕರವೇ ಬೇರೆ ಬೇರೆ ನ್ಯಾಯಶಾಸ್ತ್ರಗಳ್ಯಾತಕ್ಕಿರಬೇಕು?

ಧರ್ಮವಿಚಾರಿಯು—“ಆದರೆ ಸ್ವತ್ತು ಮತಕ್ಕೆ ಸಂಬಂಧಪಟ್ಟದ್ದಲ್ಲ” ಎಂದು ಮುಂದಾಗಿ ಹೇಳುವರು. ಮೇಲೆ ಹೇಳಿದ ಕಾರಣಗಳಿಂದ ಆಯಾ ಮತದವನ ಸ್ವತ್ತೂ ಕೂಡ ಅವನ ಮತಕ್ಕೆ ಸಂಬಂಧಪಟ್ಟದ್ದಾಗಿರುವದು. ಸರ್ಕಾರದ ನ್ಯಾಯನಿಬಂಧನೆಯು ಕೂಡ ಮತವನ್ನೇ ಅನುಸರಿಸಿರುತ್ತದೆ.

“ಹಿಂದುಗಳಿಗೆ ಪಿತ್ರಾರ್ಜಿತದ ಹಕ್ಕು ಬಾಧ್ಯತೆ ಅವರವರ ಜನ್ಮದಿಂದಲೇ ಸ್ವತಸ್ಸಿದ್ಧವಾದದ್ದು. ಮತವಾದರೋ ಜ್ಞಾನೋದಯದಿಂದುಂಟಾಗತಕ್ಕದ್ದು” ಎಂದು ಹೇಳುತ್ತಾರೆ. ತಂದೆ ತಾತಂದಿರ ಮತಕ್ಕೆ ಬಾಹಿರನಾದಂಥವನು ಅವರ ಕಷ್ಟಾರ್ಜಿತದಲ್ಲಿ ತನ್ನ ಜನ್ಮದಿಂದಲೇ ಸ್ವತಸ್ಸಿದ್ಧವಾದ ಹಕ್ಕನ್ನು ಪಡೆದಿರುವನಲ್ಲವೇ! ಮತಭ್ರಷ್ಟನಾದ ಮಾತ್ರದಲ್ಲಿ ಹೆಂಡರಿಗೆ ವೈಧವ್ಯ ಪ್ರಾಪ್ತಿಯಾಯಿತೆಂದು ಇವರು ಊಹಿಸಿರುವರೇನೋ? ಹಾಗಾದರೆ ಸದವೆಗೂ ವಿಧವೆಗೂ ವ್ಯತ್ಯಾಸವೇನಾಯಿತು? ಮತಾಂತರವನ್ನು ಹೊಂದಿದವನಿಗೂ ಅವನ ಪೂರ್ವ ನೆಂಟರುಗಳಿಗೂ ಬಾಂಧವ್ಯವೇನೂ ಉಂಟಾಗುವುದಿಲ್ಲ. ಆದಿಯಿಂದ ಇಂದಿನ ವರೆವಿಗೂ, ಮತಭ್ರಷ್ಟನಾದವನು ತನ್ನ ಪಿತ್ರಾರ್ಜಿತದ ಹಕ್ಕನ್ನು ನಿಂತಿತವಾಗಿ ಕಳೆದುಕೊಂಡಿರುವನು. ಅವರವರ ಮತಕ್ಕನುಸಾರವಾಗಿ ನ್ಯಾಯತೀರ್ಪುಗಳ್ಳ ಪ್ರತಿ ಸರ್ಕಾರವೂ ಈ ಹಕ್ಕನ್ನು ರದ್ದುಮಾಡಿರುವದು.

“ಹಿರಣ್ಯ ಕಶಿಪು ಶೈವನು ಅವನ ಮಗ ಪ್ರಹ್ಲಾದನು ವೈಷ್ಣವನು ಇವನಿಗೆ ತಂದೆಯ ಸ್ವತ್ತಿನ ಹಕ್ಕು ಬಾಧ್ಯತೆಯುಂಟಾಗಲಿಲ್ಲವೇ?” ಎಂದು ಕೇಳುತ್ತಾರೆ. ಷಣ್ಮತಗಳನ್ನೊಳಗೊಂಡಿರುವ ಈ ಹಿಂದೂ ಜಾತಿಯಲ್ಲಿ ಪ್ರಹ್ಲಾದನು ವೈಷ್ಣವನಾದರೂ ಹಿಂದುವೇ ಆಗಿದ್ದನೆಂದು ತಿಳಿಯಲಿಲ್ಲವೋ? “ಪ್ರತಿ ನರಗಳಲ್ಲಿಯೂ ಸಂಚರಿಸುವ ಪಿತೃರಕ್ತವನ್ನು ಬೇರ್ಪಡಿಸಬಲ್ಲಾತನೇ ಮಗನಿಗಿರುವ ತಂದೆಯ ಸ್ವತ್ತಿನ ಹಕ್ಕು ಬಾಧ್ಯತೆಯನ್ನು ರದ್ದುಮಾಡಲಿಕ್ಕೆ ಶಕ್ತನು” ಎಂದು ಹೇಳುವರು. ಯಾವಾಗ ಮತಾಂತರವನ್ನು ಹೊಂದಿ ಪೂರ್ವ ಮತವಿರೋಧವಾದ ಅನ್ನಪಾನಗಳನ್ನು ತೆಗೆದುಕೊಂಡನೋ ಆಗಲೇ ಪ್ರತಿ ನರಗಳಲ್ಲೂ ಪ್ರವಹಿಸುವ ಪಿತೃರಕ್ತಕ್ಕೆ ಭಂಗಕ ಬರಲಿಲ್ಲವೇ? ಕ್ಷತ್ರಿಯರಲ್ಲಿ ಜ್ಯೇಷ್ಠಪುತ್ರನೇ ರಾಜ್ಯಕ್ಕೆ ಹಕ್ಕುದಾರನಾಗಿರುವನು, ಕನಿಷ್ಠಾದಿಪುತ್ರರಿಗಿಲ್ಲ. ಹಾಗಾದರೆ ಆ ಕನಿಷ್ಠಾದಿಪುತ್ರರೂ ತಂದೆಯ ರಕ್ತಸಂಬಂಧವಿಲ್ಲದವರೆಂದು ಹೇಳಬಹುದೋ? ಜ್ಯೇಷ್ಠಪುತ್ರನಂತೆ ಕನಿಷ್ಠರಿಗೂ ಪಿತೃರಕ್ತ ಸಂಬಂಧವಿರುವದರಿಂದ ಒಬ್ಬೊಬ್ಬನಿಗೆ ಒಂದೊಂದು ವರ್ಷ ರಾಜ್ಯಾಧಿಕಾರವು ಏಕೆ ಆಗಬಾರದು? ಅದರಂತೆಯೇ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆ ಪಾಲು ಏತಕ್ಕೆ ಸಿಕ್ಕಬಾರದು? ಮತ್ತು ಮತದಲ್ಲಿರುವ ಗಂಡು ಹೆಣ್ಣು ಮಕ್ಕಳಿಗೇನೇ ಪಿತ್ರಾರ್ಜಿತದಲ್ಲಿ ಸಮಾನವಾದ ಹಕ್ಕು ಇಲ್ಲದೇ ಇರಲು ಮತಭ್ರಷ್ಟನಿಗೆಲ್ಲಿಯದು? ತಂದೆ ತಾಯಿ ಸಹೋದರರನ್ನು ಬಿಟ್ಟು ತನ್ನನ್ನೇ ನಂಬಿಕೊಂಡಿರುವ ಅಕಳಂಕವಾದ ಹೆಂಡತಿಗೆ ಪಿತ್ರಾರ್ಜಿತವಾದ ಹಕ್ಕು ಲೇಶವೂ ಇಲ್ಲದೆ ಇದ್ದು ಮತಾಂತರವನ್ನವಲಂಬಿಸಿದ ಗಂಡನು ತಾನೆ ಏತಕ್ಕೋಸ್ಕರ ಜೀವನಾಂಶವನ್ನು ಕೊಡತಕ್ಕದ್ದು? ಇದು ಅವಳ ಪಾಡು ಅವಳಿಗೆ, ನನ್ನ ಪಾಡು ನನಗೆ ಎಂಬುವವನ ಮಾತಾಯಿತು.

ಜುಲೈ ೨೦ ನೆ ತಾ. ಪತ್ರಿಕೆಯಲ್ಲಿ “ಮತವೆಂದರೆ ಏಕಮತ್ಯವಾಗಿ ಸಂಕೇತ ಮಾಡಿಕೊಂಡಿರುವ ಆಚಾರ ನಡವಳಿಕೆಗಳು. ಇದನ್ನು ತಪ್ಪಿದವನು ಮತಭ್ರಷ್ಟನು” ಎಂಬುದಾಗಿ ಹೇಳಿರುವರು. ಆಯಾ ಮತದವನ ಸ್ವತ್ತೂ ಕೂಡ ಅವನವನ ಮತಕ್ಕೆ ಸಂಬಂಧಪಟ್ಟದ್ದೆಂದು ಮೇಲೆ ತೋರಿಸಿರುವೆನಷ್ಟೆ. ಇದರಂತೆಯೇ ಸಂಕೇತ ಮಾಡಿಕೊಂಡ ಆಚಾರ ನಡವಳಿಕೆಗಳನ್ನು ಬಿಟ್ಟವನಿಗೆ ಅವರ ಸ್ವತ್ತಿನ ಸಂಬಂಧ ತಾನೇ ಹೇಗುಂಟಾದೀತು? “ಶರೀರವು ಮತಧರ್ಮಗಳಿಗೆ ಸಂಬಂಧಪಟ್ಟದ್ದೆಂದಿಗೂ ಆಗಲಾರದು” ಎಂದು ನಿರ್ಣಯಿಸುವದು ಏಕಮತ್ಯ ಸಂಕೇತವಾದ ಆಚಾರ ನಡವಳಿಕೆಗೋಸ್ಕರ ಶರೀರವನ್ನು ಕೂಡ ತದನುಸಾರವಾಗಿ ಬದ್ಧ ಮಾಡಲ್ಪಡಬೇಕಾಗಿರುವದರಿಂದ ದೇಹಸಂಬಂಧವೂ ಕೂಡ ಮತ ವಿಷಯದಲ್ಲೇ ಮಿಳಿತವಾಗಿರುವದು. ಇದರಿಂದಲೇ ಯಾವನು ಯಾವಾಗ ಮತದಿಂದ ಬಹಿಷ್ಕೃತನಾದನೋ ಆಗಲೇ ದೇಹಸಂಬಂಧದಿಂದಲೂ ಬಹಿಷ್ಕೃತನಾಗುವನು. (ಪರಮೋಕ್ಷ ಕುಲಾಲಂಬೀಯತ್ರವಿಪ್ರಾಮ್ಯತಿಕುಲಂ) ಅಂದರೆ ಏಕಮತ್ಯ ಸಂಕೇತವಾದ ಆಚಾರ ನಡವಳಿಕೆಗಳಿಂದ ತನ್ನ ಕುಲಕ್ಕೆ ದಿಗಂತ ವಿಶ್ರಾಮವಾದ ಕೀರ್ತಿಯನ್ನು ತರುವವನೇ ದೇಹಸಂಬಂಧ ಉಳ್ಳವನು. (ಪಿತ್ರೋರ್ನೈರ್ವಚಂ ಶ್ರುಣೋತಿ ದಿವಸತ್ಯಾಗವ್ರತಾಲಯಂ ಯಾಸ್ತ್ರೀಭಿರ್ಯಾ ಪತೀಬ್ರಿಧ್ವನಿಮುಹುಃ ಕಿತೂಹಲಿಂವಿನ್ನ ತಾಬಂಧುನಾಮಾಪದೇಶವಾಚವತಿ ಕೋಧ್ಯೈಕತಾನಾಂವಚಃ ಸಾಧೂನ್ನಿಂದತಿ ಧಾರ್ಮಸಂಚಮಸುಮಿತ್ರಂಕಾಪುತ್ರೋಜಸಃ) ಈ ಪ್ರಕಾರ ಪಿತೃಕುಲವನ್ನು ಬಿಟ್ಟು ಮತಾಂತರವನ್ನು ಹೊಂದಿದ ಇಂಥಾ ಪುತ್ರನು ದೇಹಸಂಬಂಧವುಳ್ಳವನೇ?

ಮತಾಂತರವನ್ನವಲಂಬಿಸಿದ ಮಾತ್ರಕ್ಕೆ ಜ್ಞಾನೋದಯವಾಗಲಾರದು. ಈ ಪ್ರಪಂಚದಲ್ಲಿ ಅನೇಕ ಮತಗಳುಂಟು. ಇದರಲ್ಲಿ ನಾಸ್ತಿಕರಾಗುವವರು ಬಹು ಸ್ವಲ್ಪ. ಪ್ರತಿಯೊಬ್ಬನು ತನ್ನ ಮತಾನುಸಾರವಾಗಿ ಜಗತ್ಕರ್ತನೊಬ್ಬನಿದ್ದಾನೆಂದು ತನ್ನ ಭಕ್ತ್ಯನುಸಾರವಾಗಿ ನಂಬಿಕೊಂಡಿರುವನು. ಮನುಷ್ಯನು ತನ್ನ ಸಚ್ಚರಿತ್ರಗಳಿಂದ ಅಹಿಂಸಾಪರನಾಗಿದ್ದುಕೊಂಡು ಸತ್ಯ ಶಾಂತಿ ಶಮದಮಾದಿಗಳಿಂದ ಕೂಡಿ, ಯಾವ ಮತದಲ್ಲಿದ್ದರೂ ಜ್ಞಾನೋದಯವನ್ನು ಪಡೆಯುವನು. ಈ ಅಭಿಪ್ರಾಯವು ಹಿಂದೂ ಮತದಲ್ಲಿರುವದರಿಂದಲೇ ಇದು ಇತರ ಮತಕ್ಕೆ ಕೈನೀಡುವದಿಲ್ಲ.

ಧರ್ಮಪ್ರವರ್ತಕ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಸತ್ಯವಾದಿ—ಕಾರೂರು, ಎಂ. ಎಲ್. ಎಸ್.—ಸಕಲೇಶಪುರ; ಸಿ ಎಂ ಸಿ—ಹಾವೇರಿ, ಸುಜನಮಿತ್ರ—ಕೋಲಾರ; ಬಹಗೀದಾರ್—ಸರ್ಜಾಪುರ; ಸಾಧು ಮಹಿಮೆ—ಬೆಂಗಳೂರು ಈ ಬಾತ್ಮಿಗಳನ್ನು ಪ್ರಕಟಿಸಲಾರೆವು —ಎಡಿ.]

ಕರೆಸ್‍ಪಾಂಡೆನ್ಸ್.

ಹೊಳೆನರಸೀಪುರದ ಚಲವಾದಿಗಳ ಸಮೂಹವು.

ಅಯ್ಯಾ,

ಹೊಳೆನರಸೀಪುರವೆಂಬ ೫ ತಾಲ್ಲೂಕಿಗೆ ಮಾತ್ರ ನಾಲ್ಕು ಮಂದಿ ಚಲವಾದಿಗಳು ಹಕ್ಕುದಾರರೆಂದು ಹೇಳಿಕೊಳ್ಳುತ್ತಾರೆ. ಈಚೆಗೆ ಮೂರು ಮಂದಿ ಹಾಜರಿ ಚಲವಾದಿಗಳಾಗಿದ್ದಾರೆ. ಒಬ್ಬ ತಂದೆ ಹತ್ತು ಮಂದಿ ಮಕ್ಕಳು ಇದ್ದರೆ ಅವರೆಲ್ಲರೂ ಚಲವಾದಿಗಳಾ

ಬಡ ವ್ಯಾಪಾರಗಾರರ ಗತಿ ಏನಾಗುವದು ? ಅಲ್ಲದೆ ಈ ತಾಲ್ಲೂಕಿನ ನೂರು ಮಂದಿ ಪಟವಾರಿಗಳಾದರೆ ಡಿಸ್ಟ್ರಿಕ್ಟಿಗೆ ಎಷ್ಟು ಮಂದಿ ಆಗಬೇಕು ? ಆದ್ದರಿಂದ ನಮ್ಮ ಅಮಲ್ದಾರರು ಈ ವಿಷಯವನ್ನು ಆಲೋಚಿಸಿ, ಇವರಲ್ಲಿ ಹಳ್ಳಿದಾರನಾದ ಒಬ್ಬನನ್ನೇ ನೇಮಿಸಿ ಪ್ರಜೆಗಳಿಗೆ ಕ್ಷೇಮವನ್ನುಂಟು ಮಾಡಿ ಯಶಸ್ಸು ಪಡೆದಾರೆಂದು ನಿರೀಕ್ಷಿಸುತ್ತೇನೆ

ಪ್ರಜಾಭಿಮಾನಿ

ಹೊಳೆನರಸೀಪುರದ ಅಗಸರ ಕಟ್ಟು

ಅಯ್ಯಾ,

ಹೊಳೆನರಸೀಪುರದ ಅಗಸರು ಒಂದು ಕಟ್ಟು ಮಾಡಿಕೊಂಡಿದಾರೆ ಈ ಕಟ್ಟಿನ ದೆಸೆಯಿಂದ ಜನಗಳಿಗೆ ಅನೇಕ ಬಗೆಯಾಗಿ ತೊಂದರೆಗಳುಂಟಾಗುವವು ಹ್ಯಾಗೆಂದರೆ, ಒಬ್ಬ ಅಗಸನು ಒಬ್ಬರ ಮನೆಯ ಬಟ್ಟೆಗಳನ್ನು ಒಗೆಯುವದಕ್ಕೆ ಕೂಲಿ ಗೊತ್ತು ಮಾಡಿಕೊಂಡು, ಬಟ್ಟೆಗಳನು ತೆಗೆದುಕೊಂಡುಹೋಗಿ ಒಗೆದು ತಂದುಕೊಟ್ಟು, ಎರಡನೇ ಸಾರಿ ಬಂದಾಗ ಅವರಿಗೆ—ನೀವು ಕೊಡುವ ಕೂಲಿ ಸಾಲದು , ಇನ್ನೂ ಹೆಚ್ಚು ಕೊಡಬೇಕು. ಇಲ್ಲವಾದರೆ ನಿಮ್ಮ ಬಟ್ಟೆಗಳನ್ನು ನಾನು ಒಗೆಯುವದಿಲ್ಲವೆಂದು ಹೇಳಿ, ಅವರು ಕೂಲಿ ಹೆಚ್ಚಾಗಿ ಕೊಡದೆಹೋದರೆ ಅವರ ಬಟ್ಟೆಗಳನ್ನೇ ಒಗೆಯದೆ ಬಿಟ್ಟುಬಿಡುವನು ಅವರು ಮತ್ತೊಬ್ಬ ಅಗಸನನ್ನು ಗೊತ್ತುಮಾಡಿಕೊಳ್ಳುವದಕ್ಕೆ ಪ್ರಯತ್ನಮಾಡಿದರೆ ಯಾರೂ ಬಂದು ಒಗೆಯುವದಿಲ್ಲ ಬಡ ನೌಕರರು ಅಷ್ಟು ದುಡ್ಡು ಹ್ಯಾಗೆ ಕೊಟ್ಟಾರು ? ಇಲ್ಲವೇ, ಅವರೇ ತಮ್ಮ ಬಟ್ಟೆಗಳನ್ನು ಒಗೆಯುವದಕ್ಕೆ ಪ್ರಯತ್ನಪಟ್ಟರೆ ಅವರ ಕೆಲಸದ ಪಾಡು ಏನಾಗುವದು ? ಆದ್ದರಿಂದ ನಮ್ಮ ಅಮಲ್ದಾರ್ ಸಾಹೇಬರು ಈ ವಿಷಯವನ್ನು ಕ್ರಮಪಡಿಸಿ, ಕೀರ್ತಿಪಡೆದಾರೆಂದು ನಂಬಿದ್ದೇನೆ

ಪ್ರಜಾಕ್ಷೇಮಕರ.

ಮಾಂಸಾಹಾರ

ಅಯ್ಯಾ,

ಪ್ರಪಂಚದಲ್ಲಿನ ಪದಾರ್ಥಗಳು ಮೂರು ತೆರನಾಗಿವೆ. ಶರೀರಕ, ವನೌಷಧೀಯ, ಲೋಹಮಯ. ಆಕಳ ಹಾಲು, ಆಡಿನ ಮೊಲೆಹಾಲು, ಇವು ಶಾರೀರಕ ಪ್ರಾಂತವು ಈ ಗುಂಪಿಗೆ ಸೇರಿದ್ದು. ಆದ್ದರಿಂದ ಹಸು, ಎಮ್ಮೆ, ಮೇಕೆ, ಕುರಿ, ಇವುಗಳ ಹಾಲು ಮೊಸರು ಅಥವಾ ತುಪ್ಪ ಸೇವಿಸುವುದು ಮಾಂಸದ ರೂಪಾಂತರವೆಂಬುದೇ ತಿಳಿಯಬೇಕು ದೇವರು ಎಲ್ಲವನ್ನು ಮನುಷ್ಯನಿಗಾಗಿಯೇ ಸೃಜಿಸಿರುತ್ತಾನೆ ಎಂದು ನಾನು ಹೇಳುವುದಕ್ಕೆ ಎಲ್ಲಾ ಪದಾರ್ಥಗಳನ್ನೂ ಸಮರಸವಾಗಿ ಉಪಯೋಗಿಸಲಿಕ್ಕಾಗದೇಕೆ ಎಂದು ಸುಜನಮಿತ್ರರು ಆಕ್ಷೇಪಿಸಿರುವರು. ದೇವರು ನಮಗಾಗಿ ಪದಾರ್ಥಗಳನ್ನು ಸೃಷ್ಟಿಸಿರುವುದೇ ನಿಜ. ಆದರೆ ಅವುಗಳನ್ನು ಯಥಾನ್ಯಾಯವಾಗಿ ಉಪಯೋಗಿಸುವ ಬುದ್ಧಿಯನ್ನು ನಮಗೆ ಕೊಟ್ಟಿರುವನು. ಅತ್ಯಂತ ಹಿತಕಾರಿಯಾದ ವಸ್ತುವೂ ಸ್ವಲ್ಪ ಹೆಚ್ಚಾದರೆ ವಿಷವಾಗಿ ಪರಿಣಮಿಸುವದು. ಸರ್ವತ್ರ ಅತಿಶಯವನ್ನು ವರ್ಜಿಸಬೇಕು. ವಿಷವನ್ನು ಕೂಡ ಮಿತವಾಗಿ ಸೇವಿಸಿದರೆ ಹಿತಕಾರಿಯಾಗುವದು. ಪಥ್ಯವನ್ನು ಔಷಧವನ್ನು ತೆಗೆದುಕೊಳ್ಳಬಹುದೇ ? ಜೀವಹಿಂಸೆ ಮಾಡಿ ಜೀವಿಸಬಾರದೆಂದು ಸುಜನಮಿತ್ರರು ಅಭಿಪ್ರಾಯಪಡುವರು ಜೀವರಾಶಿಗಳಲ್ಲಿ ಸ್ಥಾವರ ಜಂಗಮ ಎಂದು ಎರಡು ಭೇದಗಳು ಸ್ಥಾವರ ದೇಹಗಳಿಗೂ ಜಂಗಮ ದೇಹಗಳಿಗೆ ಹ್ಯಾಗೋ ಹಾಗೆ ಸುಖದುಃಖಗಳುಂಟು. ಅಂದರೆ ನಾವು ಕಾಯಿಗಳನ್ನಾಗಲೀ ಹೂವುಗಳನ್ನಾಗಲಿ ಕೀಳುವಾಗಲೂ ಕುರಿ ಕೋಳಿಗಳ ಕತ್ತನ್ನು ಕೊಯ್ಯುವಾಗ ಆಗುವಷ್ಟು ವೇದನೆಯಾಗುತ್ತದೆ ಈಗಾದ ಮೇಲೆ ಜೀವಹಿಂಸೆ ಮಾಡದಿದ್ದರೆ ನಮಗೆ ಆಹಾರವೇ ಇಲ್ಲ. ಆದ್ದರಿಂದ ನಾವು ಸಸ್ಯಾದಿಗಳನ್ನು ಆಕ್ಷೇಪದಿಂದ ಸಲಹಿ ಪಕ್ವವಾದಾಗ ಫಲವನ್ನು ತೆಗೆದು ತಿನ್ನುವಂತೆ ಜೀವರಾಶಿಗಳನ್ನೂ ಸಲಹಿ ಅವುಗಳಿಂದ ಯಾವ ಯಾವ ಪ್ರಯೋಜನವನ್ನು ಹೊಂದಬೇಕೋ ಆಯಾ ಪ್ರಯೋಜನವನ್ನು ಹೊಂದಬೇಕು. ಆದಕಾರಣ ಮಾಂಸಾಹಾರವು ಜೀವಹಿಂಸೆಯಲ್ಲವೆಂದು ತೋರುತ್ತದೆ ಶ್ರೀರಾಮನು ಬೇಟೆಯಾಡಿ ಜೀವಿಸುತ್ತಿರಲಿಲ್ಲವೇ ಎಂದು ಪ್ರಶ್ನೆ ಮಾಡಿರುವರು. ಆತನಿಗೆ ಯಾರೊಂದು ಜೀವ ನೋಯಿಸಿಯಿಲ್ಲದೆ ಹಾಗೆ ಮಾಡಿದನೆಂದು ತಿಳಿಯಬಾರದು ಅರಣ್ಯದಲ್ಲಿ ವಾಸಮಾಡಿಕೊಂಡಿದ್ದ ಋಷಿಗಳ ಆಶ್ರಮಗಳಿಗೆ ದುಷ್ಟಮೃಗಗಳು ತೊಂದರೆ ಕೊಡದ ಹಾಗೆ ರಾಜರುಗಳು ಬೇಟೆಯಾಡಿ ಅವುಗಳನ್ನು ಕೊಲ್ಲುತ್ತಿದ್ದರು. ದುಷ್ಟಮೃಗಗಳ ವೃದ್ಧಿಗೆ ಕಾರಣವಾದ ಅಲ್ಪಜೀವಿಗಳನ್ನು ಹಿಡಿದು ತಿನ್ನುತ್ತಿದ್ದರು. ಇದರಿಂದ ಬೇಟೆಯಾಟವೂ ಮಾಂಸಭಕ್ಷಣವೂ ಪೂರ್ವಯುಗಗಳಲ್ಲಿ ಧಾರಾಳವಾಗಿತ್ತೆಂದು ಖಂಡಿತವಾಗಿ ಹೇಳಬಹುದು. ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸುವ.

ಎಂ. ಆರ್. ಎ.

ತಾಲ್ಲೋಕು ವರ್ತಮಾನಗಳು.

ಚಾಮರಾಜನಗರ.—ಇಲ್ಲಿನ ಮ್ಯುನಿಸಿಪಾಲಿಟಿಯವರು ಈಗ ಪ್ರಜೋಪಕಾರವಾದ ಕಾರ್ಯಗಳನ್ನು ಮಾಡಲು ಯತ್ನಿಸಿರುತ್ತಾರೆ. ಊರಲ್ಲಿರುವ ಪಾಳು ನೆಲಭಾವಿಗಳನ್ನು ದುರಸ್ತು ಮಾಡಿಸಿ ರಾಟೆ ಹಾಕಿಸಿರುತ್ತಾರೆ. ಅವಶ್ಯವಿದ್ದ ಕಡೆ ಲಾಂದ್ರ ಕಂಭಗಳನ್ನು ಇಡಿಸಿರುತ್ತಾರೆ.—ಈಚೆಗೆ ನಂಜನಗೂಡಿಗೂ ಚಾಮರಾಜನಗರಕ್ಕೂ ಮಧ್ಯೆ ಇರುವ ರಸ್ತೆಯಲ್ಲಿ ರಾತ್ರಿಕಾಲದ ಪ್ರಯಾಣಿಕರ ಸಹಾಯಾರ್ಥವಾಗಿ ತಾಲ್ಲೂಕು ಪೋಲೀಸಿನವರನ್ನೂ ರಿಜರ್ವ್ ಪೋಲೀಸಿನವರನ್ನೂ ಸರ್ಕಾರದವರು ನೇಮಿಸಿರುತ್ತಾರೆ. ಇವರಿಂದ ಪ್ರಯಾಣಿಕರಿಗೆ ತೊಂದರೆಯಾಗಿರುತ್ತೆಂದು ಕೇಳುತ್ತೇನೆ. ಪೋಲೀಸಿನವರು ಹೆಂಗಸರು ಮಕ್ಕಳೆಂದು ನೋಡದೆ ಗಾಡಿಗಳಲ್ಲಿ ಮಲಗಿಕೊಳ್ಳುತ್ತಾರೆ. ಗಾಡಿಯವರು ತಂಟೆಮಾಡಿದರೆ ಇಲ್ಲದ ನೆವಗಳನ್ನು ಹುಟ್ಟಿಸಿ ಗಾಡಿಯನ್ನು ನಿಲ್ಲಿಸಿ ಪ್ರಯಾಣಿಕರಿಗೆ ತುಂಬಾ ತೊಂದರೆ ಮಾಡುತ್ತಾರೆ. ಇದಕ್ಕೆ ಅಧಿಕಾರಿಗಳು ಗಮನಕೊಡಬೇಕಾಗಿದೆ.

ಕೊಪ್ಪ.—ಇಲ್ಲಿ ೮-೧೦ ದಿನಗಳಿಂದ ವಿಪರೀತ ಮಳೆಯಾಗಿ ತರೀದಮಿಾನಿನ ಬೇಸಾಯಕ್ಕೆ ರೈತರಿಗೆ ತುಂಬ ಸಂತೋಷವನ್ನುಂಟು ಮಾಡಿರುತ್ತೆ. ಬಾಗಾಯ್ತು ಜಮಿಾನುಗಳಿಗೆ ಈ ಮಳೆಯು ಉದ್ದಿಕ್ಕೆ ಕೊಳೆಯೆಂಬ ರೋಗವು ಪದ್ಧತಿ ಪ್ರಕಾರ ಎಲ್ಲಿ ಬರುತ್ತೊ ಎಂಬ ಯೋಚನೆಯು ಈ ಪ್ರಾಂತ್ಯದ ಜನಗಳಿಗೆ ಬಹಳ ಕಳವಳವನ್ನುಂಟುಮಾಡಿದೆ ಮಳೆ ಕೆಲವು ದಿವಸ ಬಿಟ್ಟರೆ ಬಾಗಾಯ್ತು ಜಮಿಾನು ಫಸಲು ಉಳಿಯಬಹುದು. ಈಚೆಗೆ ಇಲ್ಲಿ ರೋಗಾದ್ಯುಪದ್ರವೇನೂ ಇಲ್ಲ. ಈ ಟರ್ಮ ಪಾಠಶಾಲೆ ವಿಷಯದಲ್ಲಿ ನಮ್ಮ ವೈಸ್ ಪ್ರೆಸಿಡೆಂಟರವರು ಸಿಗಾ ಕೊಡತಕ್ಕದ್ದಾಗಿರುತ್ತೆ —ಇಲ್ಲಿ ಕನ್ನಡಾ ಸ್ಕೂಲ್ ಕಟ್ಟಡವು ಇನ್ನೂ ರಿಪೇರಿಯಾಗಲಿಲ್ಲ. ಇಂಥಾ ಮಳೆಯಲ್ಲಿ ಕೂಡಾ ಪಾಲಿ ಸ್ಕೂಲಿಗೆ ೪೦—೫೦ ಬಾಲಕರ ಮೇರಿಗೆ ಬರುತ್ತಾರೆ ಇಷ್ಟು ಬಾಲಕರನ್ನು ಮುಸಾಫರ್‌ಖಾನೆಯಲ್ಲಿ ಎರಡು ಚಿಕ್ಕ ರೂಮುಗಳಲ್ಲಿ ಜಮಾಯಿಸಿಕೊಂಡು ಪಾಠಮಾಡುತ್ತಾ ಇದ್ದಾರೆ. ಹೀಗೆ ಮಾಡುವದು ತೀರಾ ಅನಾರೋಗ್ಯವನ್ನುಂಟುಮಾಡತಕ್ಕದ್ದಾಗಿದೆ.

ಚೆನ್ನಪಟ್ಟಣ.—ಮೈಸೂರು ಮಹಾರಾಜರ ಸವಾರಿಯು ಇದೇ ತಿಂಗಳು ೯ನೇ ತಾರೀಖು ಭಾನುವಾರ ಸಾಯಂಕಾಲ ೪ ಗಂಟೆಗೆ ಮೋಟಾರ್‌ಕಾರ್ ಗಾಡಿಯ ಮೇಲೆ ಬರೋಣವಾಯಿತು ಅಮಲ್‌ದಾರರು, ಪೋಲೀಸ್ ಇನ್ಸ್‌ಪೆಕ್ಟರು, ಮ್ಯುನಿಸಿಪಲ್ ಮೆಂಬರುಗಳು, ಇತರ ದೊಡ್ಡಮನುಷ್ಯರು, ವರ್ತಕರು, ಬಹು ಮಂದಿ ಫಲಪುಷ್ಪಗಳನ್ನು ಸಿದ್ಧಪಡಿಸಿಕೊಂಡು ಟ್ರಾವೆಲರ್ಸ್ ಬಂಗಲೆ ಬಳಿ ಕಾದಿದ್ದರು ಊರನ್ನು ಮಕರತೋರಣಗಳಿಂದ ಬಹು ಅಂದವಾಗಿ ಅಲಂಕರಿಸಿದ್ದರು ಮೆ॥ ಸಾಹುಕಾರ್ ಬದ್ದಿವಾರಂ ಚಿಕ್ಕಕೃಷ್ಣಶೆಟ್ಟರು, ಮೆ॥ ಮಾಕಂ ರಾಮಸಂಜೀವಶೆಟ್ಟರು, ಮೆ॥ ಬವಲಿ ಅಂಗಡಿ ರಾಮಕೃಷ್ಣಯ್ಯನವರ ಮಕ್ಕಳು ಮೆ॥ ಮರಿಕೆಂಚಪ್ಪನವರು, ಇತರರು ತಮ್ಮ ಅಂಗಡಿ ಮನೆಗಳ ಮುಂದೆ ಬಹು ನೇತ್ರಾನಂದಕರವಾಗಿ ಚಪ್ಪರಗಳನ್ನು ಹಾಕಿಸಿ ಮಹಾರಾಜರನ್ನು ವಂದಿಸಿದರು —ಇಲ್ಲಿ ೨—೩ ಹದ ಮಳೆ ಆಯಿತು ರೈತರು ಬೀಜವನ್ನು ಬಿತ್ತಲು ಅನುಕೂಲವಾಗಿದೆ —ಈ ಊರಿನಲ್ಲಿ ಜನಾನಾ ಮಿಷಿನಗಳು ಘೋಷ ಹೆಂಗಸರು ಮಕ್ಕಳಿಗಾಗಿ ಆಸ್ಪತ್ರೆಯನ್ನು ಕಟ್ಟಲು ಉಪಕ್ರಮಿಸಿದಾರೆ.—ಕಳೆದ ಏಕಾದಶಿ ಹಬ್ಬದ ದಿವಸ ಮೆ॥ ಗಂಪಿಗೆ ಅಂಗಡಿ ಪಟ್ಟಪ್ಪನವರು ಮುಂತಾದ ಮೆ॥ ರಂಗಪ್ಪನವರು ಇತರರು ಸೇರಿ ಬೆಂಗಳೂರಿನಿಂದ ಶಿವಪ್ಪಶಾಸ್ತ್ರಿಗಳನ್ನು ಕರಿಸಿಕೊಂಡು ಧರ್ಮಪಾಲಚರಿತ್ರೆ ಎಂಬ ನಾಟಕವನ್ನು ಆಡಿಸಿ ಬಹು ಜನರನ್ನು ಸಂತೋಷಪಡಿಸಿದರು —ಇಲ್ಲಿ ತಂತಿ ಹಾಕುವ ಮರಿಯಾಚಾರರಿಗೆ ಮದ್ರಾಸಿನಲ್ಲಿ ಕಳೆದ ವರುಷ ನಡೆದ ಸಕಲವಸ್ತು ಪ್ರದರ್ಶನದಲ್ಲಿ ಇವರ ಬುದ್ಧಿಕೌಲತೆಯನ್ನು ನೋಡಿ ಮೆಡಲ್ ಸರ್ಟಿಫಿಕೇಟ್ ಕಳುಹಿಸಿದಾರೆ

ಚಿಕ್ಕಮಗಳೂರು —ಈ ಊರಿನಲ್ಲಿ ಮಳೆಯು ವಿಶೇಷವಾಗಿಲ್ಲ. ಸಾಧಾರಣವಾಗಿ ಸೋನೆ ಮಳೆಯು ಬಂದರೂ ಪೈರುಗಳಿಗೆ ಹದವಾಗುವಂತಿಲ್ಲ. ಕೆರೆಗಳಿಗೆ ನೀರು ಮೊದಲೇ ಇಲ್ಲ. ಕಾಫಿ ತೋಟಗಳ ಪ್ರಾಂತ್ಯದಲ್ಲಿಯೂ ಮಳೆ ವಿಶೇಷವಾಗಿಲ್ಲವೆಂದು ಹೇಳುತ್ತಾರೆ. ಆದರೆ ಕಳೆದ ವಾರ ಕಡೂರಿನಿಂದ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣ ಮಾಡುವಾಗ ದಾರಿಯಲ್ಲಿ ಉದ್ದಕ್ಕೂ ಕಂಡ ನೀರನ್ನು ನೋಡಿದ್ದರಿಂದ ಈ ಪ್ರಾಂತ್ಯ ಮಳೆಯಾಗಿದೆ ಎಂದು ತೋರುತ್ತದೆ. ಕೆಲವು ಕಡೆ ರಾಗಿಯನ್ನು ಬಿತ್ತಿದಾರೆ ಕೆಲವು ಕಡೆ ಬಿತ್ತುತ್ತಿದಾರೆಂದು ಕಾಣುತ್ತಲಿದೆ.—ಚಿಕ್ಕಮಗಳೂರು ತಾಲ್ಲೂಕು ಕಡೂರು, ಮೂಡುಗೆರೆ, ಆಲ್ದೂರು ರಸ್ತೆಗಳಲ್ಲಿನ ಸಾಲು ಮರಗಳ ಕೊಂಬೆಗಳು ರಸ್ತೆಯ ಮೇಲೆ ಹಬ್ಬಿ, ದಾರಿಯಲ್ಲಿ ತಿರುಗುವ ಬಂಡಿಗಳ ಕಮಾನುಗಳನ್ನು ಮುರಿಯುವವುಗಳಾಗಿಯೂ ಡಾಕ್ಕಾರ್ಟಿನಲ್ಲಿ ಹೋಗುವವರ ಮುಖಕ್ಕೆ ತಗಲುವವುಗಳಾಗಿಯೂ ಇರುವದರಿಂದ, ರೆವಿನ್ಯೂ ಇಲಾಖೆಯ ಅಧಿಕಾರಿಗಳು ರಸ್ತೆಗೆ ಬಂದಿರುವ ಕೊಂಬೆಗಳನ್ನು ಎಷ್ಟು ಅಡಿಯ ಕೆಳಗೆ ಕತ್ತರಿಸಬೇಕೆಂದು ವಿಧಾಯಕವಿದೆಯೋ ಅಷ್ಟು ಅಡಿಗಳ ಕೆಳಗಿರುವ ರೆಂಬೆಗಳನ್ನು ಕತ್ತರಿಸಿ ಪ್ರಯಾಣಿಕರ ತೊಂದರೆಯನ್ನು ತಪ್ಪಿಸುವದು ಒಳ್ಳೇದೆಂದು ಕಾಣುತ್ತದೆ —ಇದೇ ತಿಂಗಳು ೧೩ನೇ ತಾರೀಖಿನಲ್ಲಿ ಚಿಕ್ಕಮಗಳೂರಿಗೆ ಒಂದು ಮೈಲಿಯಲ್ಲಿರುವ ಚಿಕ್ಕ ಕುರುಬರಹಳ್ಳಿಯಲ್ಲಿ ೪ ವರ್ಷದ ಒಂದು ಹೆಣ್ಣು ಮಗುವೂ ೨ ವರ್ಷದ ಒಂದು ಗಂಡು ಮಗುವೂ ಒಂದರ ಹಿಂದೆ ಒಂದು ಭಾವಿಯಲ್ಲಿ ಬಿದ್ದು ಸತ್ತವೆಂದು ಹೇಳುತ್ತಾರೆ.—ಇದೇ ತಿಂಗಳು ೨೦ನೇ ತಾರೀಖಿನಿಂದ ೨೫ರ ವರಿಗೂ ಬೆಂಗಳೂರಿನಲ್ಲಿ ನಡೆಯುವ ಉಪದೇಶಿಗಳ ಕೂಟಕ್ಕೆ ಇಲ್ಲಿಂದ ಇಬ್ಬರು ಉಪದೇಶಿಗಳೂ ಘನ ರೆವ್ ಮೆಡ್ ಸಾಹೇಬರೂ ಬೆಂಗಳೂರಿಗೆ ಹೋಗಿದಾರೆ

ಚಿತ್ರದುರ್ಗ —ಈಗ ೨—೩ ವಾರಗಳಿಂದಲೂ ಮಳೆಯಿಲ್ಲ. ತಂಗಾಳಿಯಿಂದ ಕೂಡಿದ ಮೋಡಗಳು ಸಂಚಾರಮಾಡುತ್ತಾ ಇರುತ್ತವೆ ರೈತರಿಗೆ ಬಹಳ ತೊಂದರೆಯಾಗಿದೆ. ಪ್ರತಿ ವರ್ಷವೂ ಈ ದಿವಸಗಳಲ್ಲಿ ಧಾನ್ಯಾದಿಗಳೆಲ್ಲ ಅಗ್ಗವಾಗಿರುತ್ತಿದ್ದವು. ಈ ವರ್ಷ ಬಹಳ ಧಾರಣೆಯಾಗಿದೆ. ಬಡವರಿಗೆ ಬಹಳ ಕಷ್ಟ —ಡಿಸ್ಟ್ರಿಕ್ಟ್ ಜಡ್ಜ್ ಆಗಿದ್ದ ವೆಂಕಟೇಶ ಅಯ್ಯಂಗಾರ್ಯರವರ ಕಾಲದಲ್ಲಿ ಕೆಲವು ಬಡವರು ವಾಸಮಾಡುವ ಸಣ್ಣ ಬೀದಿಗಳಲ್ಲಿ ಚಪ್ಪಡಿಗಳನ್ನು ಇರಿಸಿಕೊಟ್ಟು ಬಹಳ ಉಪಕಾರ ಮಾಡಿದರು. ಇನ್ನು ಕೆಲವು ಕಡೆಗಳಲ್ಲಿ ಏರ್ಪಡಿಸಿದ್ದಂತೆ ಗುಂಡಿಯನ್ನು ಕೂಡ ತೆಗೆದಿದ್ದದ್ದು ಈಚೆಗೆ ನಿಂತು ಹೋಗಿದ್ದನ್ನು ಕೇಳಿ ವ್ಯಸನಪಡಬೇಕಾಗಿದೆ. ೪—೫ ಮನೆಗಳೂ ಳಗೆ ಚಪ್ಪಡಿಗಳನ್ನು ಇಟ್ಟುಕೊಟ್ಟಿದಾರೆ. ಅದರಂತೆ ಅನೇಕರು ಇರಿಸಿಕೊಳ್ಳಲು ಅಪೇಕ್ಷಿಸುತ್ತಿರುವರು. ಅದನ್ನು ಆಕ್ಷೇಪಣೆಗೆ ಬಿಡದೆ ಯಾವದಾದರೂ ಒಂದು ಕ್ರಮವನ್ನು ಏರ್ಪಡಿಸಿ, ಎಲ್ಲರಿಗೂ ತಿಳಿಯಪಡಿಸುವರೆಂದು ನಂಬಿದೇವೆ.—ಮುನಿಸಿಪಾಲಿಟಿ ಕಾರ್ಯಗಳೆಲ್ಲ ಕ್ರಮವಾಗಿವೆ. ಗುಡಿಸುವವರು ಕಸವನ್ನು ಗುಡಿಸುತ್ತಾರೆಯೇ ಹೊರತು ಅಲ್ಲಲ್ಲಿ ಬಿದ್ದಿರುವ ಮಲದ ಮೇಲೆ ಮಣ್ಣು ಮುಚ್ಚಿ ಹೋಗುವರು. ಇದನ್ನು ಬಳಿಯುವದೇ ಇಲ್ಲ. ಇದಕ್ಕಾಗಿ ಜನಗಳನ್ನು ಇಟ್ಟರೆ ಬಹಳ ಒಳ್ಳೇದು.—ಪುರಾಣ ಹೇಳತಕ್ಕ ಮೆ॥ ಭುಜಂಗಾಚಾರ್ಯರು ಇಲ್ಲಿಗೆ ಬಂದು ೨ ತಿಂಗಳಾದವು ೫—೬ ವಾರಗಳಿಂದ ಆಗಾಗೆದ್ವೈತ, ಅದ್ವೈತಗಳ ವಿಚಾರವಾಗಿ ಉಪನ್ಯಾಸ ಮಾಡಿದರು. ಬಾಲ ಸರಸ್ವತಿ ಎಂಬ ಒಂದು ಸಭೆಯನ್ನು ಏರ್ಪಡಿಸಿದಾರೆ. ಮೊನ್ನೆ ಭಾನುವಾರ ಬೇರೆ ಒಬ್ಬ ಪಂಡಿತರು ಅದೇ ವಿಚಾರವನ್ನು ಕುರಿತು ಒಂದು ಉಪನ್ಯಾಸ ಕೊಟ್ಟರು. ಚನ್ನಾಗಿತ್ತು.—ದಾವಣಗೆರೆಯಲ್ಲಿ ನಡೆದ ದೊಂಬಿ ಮೊಕದ್ದಮೆಯು ಈ ಡಿಸ್ಟ್ರಿಕ್ಟಿನಲ್ಲಿ ವಿಚಾರಣೆ ಇಲ್ಲದೆ ಇನ್ನೊಂದು ಹುಕುಂ ಕೊಡುವವರಿವಿಗೂ ನಿಲ್ಲಿಸಬೇಕೆಂತ ಹೇಳಿಕೊಳ್ಳುತ್ತಾರೆ.

ತೀರ್ಥಹಳ್ಳಿ.—ಹವ ತಕ್ಕಷ್ಟು ಅನುಕೂಲವಾಗಿದೆ. ಜ್ವರ ಮುಂತಾದವುಗಳು ಏನೂ ಇಲ್ಲ. ಮಳೆಯು ಕಳೆದವಾರ ಸ್ವಲ್ಪ ಜಾಸ್ತಿಬೀತು ಈಗಲಾದರೂ ತಕ್ಕ ಹದವಿಲ್ಲವೆಂದು ರೈತಾಬಿ ಜನಗಳು ಅಂಗಲಾಚುತ್ತಿದಾರೆ. ಹೋದವರ್ಷ ಈ ಕಾಲದಲ್ಲಿ ವಿಪರೀತ ಮಳೆಯಾಗಿತ್ತು. ಈ ವರ್ಷ ಅದರಲ್ಲಿ ಕಾಲುಭಾಗ ಮಳೆಯೂ ಬಂದಿಲ್ಲ. ಮುಂದೆ ಏನಾಗುವುದೋ ಗೊತ್ತಿಲ್ಲ —ದೇವಂಗಿ ಸಾಹುಕಾರರ ಮೇಲೆ ಬಂದಿದ್ದ ಮೊಕದ್ದಮೆ ವಜಾ ಆಯಿತು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಂಥಾ ದೊಡ್ಡಮನುಷ್ಯರೂ ಗುಣಾಢ್ಯರೂ ಪರೋಪಕಾರಿಗಳೂ ಮತ್ಯಾರಿಲ್ಲವೆಂದು ಹೇಳಬೇಕಾಗಿದೆ.—ಈ ಸಾರಿ ಇಲ್ಲಿ ಆದ ಮದುವೆಗಳಲ್ಲಿ ಮದಾರ್ ಸಾಬರು ತಮ್ಮ ಅಣ್ಣನ ಮಗಳನ್ನು ಸುಂಡಗಪ್ಪೆ ನೇಕ್ದಾರರ ಕುಮಾರನಿಗೆ ಕೊಟ್ಟು ವಿವಾಹಮಾಡಿಸಿದ್ದು ಬಹು ಅಂದವಾಗಿತ್ತು. ಸುಮಾರು ಸಾವಿರ ರೂಪಾಯಿ ತನಕ ಖರ್ಚುಮಾಡಿ ಊರಿನ ಮುಸಲ್ಮಾನರಿಗೆ ಎಂಟು ದಿನಗಳ ತನಕ ಭೋಜನಮಾಡಿಸಿದರು. ಗಂಡಿಗೆ ಬಹು ಸೊಗಸಾಗಿ ಅಲಂಕಾರಮಾಡಿಸಿ, ಊರಿನ ಎಲ್ಲಾ ದೊಡ್ಡಮನುಷ್ಯರಿಗೆ ವೀಳೆಯ ಗಂಧ ಪುಷ್ಪ ತಾಂಬೂಲ ಮುಂತಾದವುಗಳನ್ನು ಹಂಚಿದರು. ನೋಲ್ಬರದ ವಾದ್ಯಗಳು ಕರ್ಣಾನಂದಕರವಾಗಿತ್ತು ಕಣ್ಣುಮುಚ್ಚನ್ನು ನುಡಿಸುತ್ತಿದ್ದರು.—ಅನಂತಪುರದ ರೋಡಿನಲ್ಲಿ ಕಂಪನಿ ಮನೆಗೆ ಹೋಗುವ ಸ್ಥಳದಲ್ಲಿ ಒಬ್ಬ ಮುದುಕಿಯ ಕಾಲನ್ನು ಒಬ್ಬ ಹೆಂಗಸು ಕಡಿದುಬಿಟ್ಟು ಕಡೆಗೆ ಗಂಡ ಹೆಂಡರು ಸೇರಿ ಅವಳನ್ನು ಸುಮ್ಮನಿರುವಂತೆ ಮಾಡಿದಾರೆಂದು ತಿಳಿದುಬಂದಿದೆ.—ಶಿವಮೊಗ್ಗೆಯಿಂದ ತೀರ್ಥಹಳ್ಳಿಗೆ ಪ್ರತಿದಿನವೂ ಹೋಗಿಬರುವ ಪ್ರಯಾಣಿಕರಿಗೋಸ್ಕರ ಒಂದು ಜಟ್ಕಾಗಾಡಿಯನ್ನು ಮಂಡಗದ್ದೆಯ ಸಾಬರು ಇಟ್ಟಿದಾರೆ. ಇದು ಜನೋಪಕಾರವಾಗಿದೆ ಆದರೆ ಇನ್ನೂ ಸಲೀಸಾಗಿ ಓಡುವ ಕುದುರೆಗಳನ್ನು ಕಳಗಿಸಿ ಇಟ್ಟರೆ ಅನೇಕರಿಗೆ ತುಂಬಾ ಪ್ರಯೋಜನವಾಗುವುದು.—ಮಳೆಗಾಲದಲ್ಲಿ ಇಲ್ಲಿನ ರಸ್ತೆಗಳು ತುಂಬಾ ಕೀಳುಸ್ಥಿತಿಯಲ್ಲಿರುತ್ತವೆ. ಬೇಸಿಗೆಯಲ್ಲಿ ಇನ್ನೂ ಕೇಡಾಗಿರುತ್ತವೆ. ಈಚೆಗೆ ರಿಪೇರಿಯಲ್ಲಿ ಕಂದಕ ಮಾಡುವದರಿಂದ ಹೀಗಾಗುವದೆಂದು ಹೇಳುತ್ತಾರೆ.

ಹೊಳೆನರಸೀಪುರ.—ಈಗ ಒಂದು ವಾರದಿಂದಲೂ ಮಳೆಯು ಅವಕಾಶವಿಲ್ಲದೆ ಪ್ರತಿ ನಿತ್ಯವೂ ಬೀಳುತ್ತಲೇ ಇದೆ ಹೊಲದ ಪೈರುಗಳೆಲ್ಲಾ ಕೋಮಲವಾಗಿ ತೆನೆಗಳಿಂದಲೂ ಮೊಗ್ಗು ತೆನೆಗಳಿಂದಲೂ ಸಣ್ಣ ಪೈರುಗಳಿಂದಲೂ ಕೂಡಿ ನೋಡುವ ಜನಗಳ ಕಣ್ಣುಗಳಿಗೆ ಸಂತೋಷದ ಬಾಷ್ಪಗಳನ್ನು ಸುರಿಸುವಂತಿವೆ. ಇನ್ನು ಮುಂದೆಯೂ ಸಕಾಲಕ್ಕೆ ಮಳೆ ಸುರಿಸಿದರೆ ರೈತರು ಒಳ್ಳೇ ಬೆಳೆಗಳನು ಪಡೆಯುವರೆನ್ನುವುದರಲ್ಲಿ ಏನೂ ಸಂಶಯವಿಲ್ಲ. ಮತ್ತು ಗದ್ದೆಗಳಿಗೆ ಪೈರು ನೆಟ್ಟು ಹಸನು ಮಾಡುವದರಿಂದಲೂ ಈ ಕಾಲದಲ್ಲಿ ಮಳೆಯು ಸರಿಯಾಗಿ ಬೀಳುವುದರಿಂದಲೂ ಈ ಸಾರಿ ಒಳ್ಳೇ ಬೆಳೆಯಾಗಬಹುದೆಂದು ಕಾಣುತ್ತೆ.—ಆದರೆ ಇಷ್ಟು ಮಳೆಬೆಳೆಯಿಂದ ಸಮೃದ್ಧಿಯಾಗಿ ನಡೆಸಿದರೂ ಧಾರಣೆಮಾತ್ರ ಮಳೆಬಾರದ ಸ್ಥಳಗಳಿಗಿಂತ ತಗ್ಗಿರುತ್ತದೆ ಕಾರಣ ಈ ವಿಷಯವು ತುಂಬ ವ್ಯಸನಕರವಾಗಿರುವದು. ಇದೆಲ್ಲಾ ದುರಾಶೆಯುಳ್ಳ ದಳ್ಳಾಳಿಗಳಿಂದಲೇ ಆಗುವದು. ಒಬ್ಬನು ಮತ್ತೊಬ್ಬನ ಮೇಲೆ ಪೋಟಾಪೋಟಿಯಿಂದ ಧಾರಣೆ ಹೆಚ್ಚುಮಾಡುವನು. ಇದರಿಂದ ರಾಗಿ ಗಾಡಿಯವರಿಗೆ ಫಾಯಿದೆಯೂ ಕೊಂಡುಕೊಳ್ಳುವ ಬಡ ಜನಗಳಿಗೆ ಕಷ್ಟವೂ ಆಗುವದೇ ಹೊರತು ಸದರೀ ದಳ್ಳಾಳಿಗಳಿಗೇನೂ ಸಿಕ್ಕುವದಾಗಿಲ್ಲ. ಈ ರಾಟೆಯನ್ನು ತಿಳಿದ ಗಾಡಿಯವರು ನ್ಯಾಯವಾದ ತಮ್ಮ ಸಂಖ್ಯೆಯನ್ನು ಹೆಚ್ಚು ಮಾಡಿಕೊಂಡು ಬರುವರು. ಈ ಸಂತೆಗೆ ಬರುವಷ್ಟು ರಾಗಿ ಗಾಡಿಗಳು ಈ ಡಿಸ್ಟ್ರಿಕ್ಟಿನ ಯಾವ ತಾಲೂಕಿಗೂ ಬರುವದಿಲ್ಲ. ಅಲ್ಲದೆ ಯಡತೊರೆ ಮೊದಲಾದ ತಾಲ್ಲೂಕುಗಳಿಂದ ಬರುವ ರಾಗಿ ಗಾಡಿಗಳನ್ನು ಒಟ್ಟಾಗಿ ಖರೀದಿ ಮಾಡಿಕೊಂಡು ಊರಿಂದೂರಿಗೆ ಸಾಗಿಸಿಕೊಂಡು ಹೋಗುವ ವರ್ತಕರ ಹಾವಳಿಯನ್ನು ಯಾರು ನಿಲ್ಲಿಸ್ಯಾರೋ ತಿಳಿಯದು. ಹಿಂದಿನ ಅಮಲ್ದಾರರ ಕಾಲದಲ್ಲಿ ಈ ವರ್ತಕರಿಗೆ ಥಲಿ ಒಂದಕ್ಕೆ ೫ ರೂಪಾಯಿ ದಂಡ ಮಾತ್ರ ಕೊಟ್ಟು ಮಿಕ್ಕದ್ದನ್ನೆಲ್ಲಾ ಚಿಲ್ಲರೆಯಾಗಿ ಗಾಡಿಯವರೇ ಮಾರಿಸುತ್ತಿದ್ದರು. ಹಾಗೆಯೇ ನಮ್ಮ ಅಮಲ್ದಾರರು ಸಂತೆ ದಿನ ತಮ್ಮ ಸವಾರಿಯನ್ನು ಬೆಳೆಸುವರಾದರೆ ವರ್ತಕರ ದಳ್ಳಾಳಿಯು ತಪ್ಪಿ ಅದರಿಂದ ಪ್ರಜೆಗಳಿಗೆ ಹೆಚ್ಚು ಪ್ರಯೋಜನವಾಗಿ ಎಲ್ಲಾ ಅವರ ಹೆಸರನ್ನು ಕೊಂಡಾಡುವರನ್ನುವದರಲ್ಲಿ ಏನೂ ಅನುಮಾನವಿಲ್ಲ ಈ ವಿಷಯವನ್ನು ನಮ್ಮ ಅಮಲ್ದಾರ್ ಸಾಹೇಬರು ಚಿತ್ತೈಸಿ ತಂಪು ಪ್ರಜಾ ಕ್ಷೇಮಕ್ಕೆ ಶ್ರಮಪಡುವರೆಂದು ಪ್ರಾರ್ಥಿಸುತ್ತೇನೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

31

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧ "ಅನುಭವಸಾರ"

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ.

೨ "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ.

೩. "ಸ್ವಪ್ನಪ್ರಯಾಸ ಫಲದೀಪಿಕೆ"

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪ "ರೋಮನರ ಚರಿತ್ರೆ" ಕ್ರಯ ೧—೨—೦
೫ "ಗ್ರೀಕರ ಚರಿತ್ರೆ" ,, ೦—೨—೦
೬ "ಅನುಭವಾನಂದ" ,, ೦—೬—೦
೭ "ಗಣಿತ ಸಂಜೀವಿನಿ" ೧—೮—೦
೮ "ಗಣಿತ ಚಿಂತಾಮಣಿ" ೦—೧೦—೦
೯ "ಚಾಮರಾಜೇಂದ್ರ ವಿಲಾಸ" ೧—೧೨—೦
೧೦ "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧೨—೦
೧೧ "೧೯೦೫ನೇ ವರುಷದ ಡೈರಿಗಳು"

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦, ಸಾದಾ ೦—೪—೦

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು

ಜ್ವರಹರಿ

37

ಇದು ಸಾಧಾರಣ ಜ್ವರ, ಹಳೇಜ್ವರ, ಮಲೇರಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಅ, ೧೧ ರೂ, ಡಜನ್ನರದು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಚಿಮಂಕಪೂರ್ಣ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ಮಾಂಸಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದಳವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಶಾಸನದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹನ್ನಿಯ ಒಂದು ಕಳುಹಿದವನ್ನು ನಾನೂ ನನ್ನ ಕಾರ್ಯನಿರತರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವಿರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕ್ಷಣದಲ್ಲಿ ಅವರ ರೋಗಗಳು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ದೊರೆಯುತ್ತವೆ. ಕೆಳಗಿನ ವಿಳಾಸದಲ್ಲಿ ವಿಶೇಷ —

ಹನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಕೆನಿಂಗ್ ಹೀಟ್ ರೋಡ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. ರೂ ೧—೨—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ .. .. ರೂ ೧—೧೪—೦
,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಶ್ರೀತಾಂಬೂಲ.

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಪಡಾ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುತ್ತೆ. ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮುಕ್ಯರಾದ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರಿಗೆ ವಿ. ಪಿ. ಛಾರ್ಜಿ ೫ ಆಣೆ. ನಮ್ಮ ವಿಳಾಸ —

ದೇವನಹಳ್ಳಿ ಟವರ್, ಬೆಂಗಳೂರು ಡಿಸ್ಟ್ರಿಕ್ಟ್ — ಡಿಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್.

ಹೋಮೋಸಿಯಾ

ಕಷ್ಟ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ಕಜ್ಜಿಗಳು, ಹುಳುಕಡ್ಡಿ, ಸೊಳ್ಳೆ ಗುತ್ತು, ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದ್ದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಅ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಅ ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯುಂಬ್ರೊಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅವಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಾಗಳಲ್ಲಿ ಡುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಕೊಡತಕ್ಕದ್ದಿಲ್ಲ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಕರಪತ್ರಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮೋಸಿಯಾ ಕಂಪೆನಿ, ೨೬ ನೆಂಬರು ಬೀಚ್ ರೋಡ್, ಮದರಾಸ್.

ಮೈಸೂರು ಶೀಮೆಯಲ್ಲಿ ಪ್ಲೇಗಿನ ಸ್ಥಿತಿ

೭—೭—1905 ರಿಂದ 14—೭—1905 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದವಾರದ ಈ ವಾರದ ಸಂಖ್ಯೆ
ಬೆಂಗಳೂರು ಪಟ್ಟಣ	0	0	0
ಮೈಸೂರು ,,	0	0	7
ಬೆಂಗಳೂರು ಡಿಸ್ಟ್ರಿಕ್ಟ್	8	9	121
ಮೈಸೂರು ,,	4	3	11[illegible]
ಕೋಲಾರ್ ,,	0	0	44
ಕೋಲಾರ್ ಚಿನ್ನದ ಗಣಿಗಳು	0	0	[illegible]5
ತುಮಕೂರು ಡಿಸ್ಟ್ರಿಕ್ಟ್	3	9	15
ಹಾಸನ ,,	0	0	50
ಚಿತ್ರದುರ್ಗ ,,	0	0	32
ಕಡೂರ್ ,,	0	0	78
ಶಿವಮೊಗ್ಗ ,,	28	25	95
ಒಟ್ಟು	4[illegible]	[illegible]0	55[illegible]

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಆಷಾಢ ಬಹುಳ ದಶಮಿ ಗುರುವಾರದಿಂದ ಶ್ರಾವಣ ಶುದ್ಧ ಪಾಡ್ಯ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಜುಲೈ ಮತ್ತು ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
27	ಗುರು	ದಶಮಿ	6 30	ಕೃ	3 12
28	ಶುಕ್ರ ‡	ಏಕಾದಶಿ	[illegible] 12	ರೋ	[illegible] 0
[illegible]	ಶನಿವಾ ,	ದ್ವಾದಶಿ	10 0	ಮೃ	10 6
30	ರವಿವಾ *	ತ್ರಯೋ	1 [illegible]	ಆ	3 [illegible]
31	ಚಂದ್ರ	ಚತುರ್ದ	10 3[illegible]	ಪು	13 [illegible]
1	ಕುಜ ↖	ಅಮಾ	[illegible] 3[illegible]	ಪ್ಯ	11 3
2	ಬುಧ ⊤	ಪಾಡ್ಯ	[illegible]	ಶ್ಲೇ	12 [illegible]

‡ ಸರ್ವತ್ರ ಏಕಾದಶೀ ,, ಶನಿಪ್ರದೋಷ
* ಮಾಸಶಿವರಾತ್ರಿ ಸರ್ವ ದರ್ಶ ಅಮಾವಾಸ್ಯೆ ಬೀಮೇಶ್ವರ
↖ ಪದ್ಮಕಯೋಗ
, ಚಂದ್ರೋದಯ

ಪೇಟೆ ಧಾರಣೆ

ದಿನಸು.	ಮೈಸೂರು	ಬೆಂಗಳೂರು
ಕಾಜ್ಜೀ ಅಕ್ಕಿ ಪಲ್ಲ ೧ಕ್ಕೆ	೧೦—೮—	೧೧—೧—
ಕೆಂಬೂತಿ ಅಕ್ಕಿ ಅವಲ್	೧೦—೪—೦	೧೦—೮
,, ಮಧ್ಯಮ	೯—೧—೨—೦	೧೦—
ಜಾದಾಳಿ ಅಕ್ಕಿ	೯—೮—೦	೧೧—೧
ಸಣ್ಣಕ್ಕಿ ಅವಲ	೧೨—೦—೦	೧೪—
,, ಮಧ್ಯಮ	೧೦—೮—೦	೧೨—೮
ತೊಗರಿ ಬೇಳೆ ಪಲ್ಲ ೧ಕ್ಕೆ	೧೦—೮—೦	೧೧—೮
,, ಮಧ್ಯಮ	೧೧—೦—೦	೧೧—
ಸ್ಟೈನ್ ರಾಗಿ ಪಲ್ಲ ೧ಕ್ಕೆ	೪—೧—೨—೦	೫—
ಕಾರ್‍ರಾಗಿ	೪—೧—೦	೫—
ಜೋಳ	೪—೧೨—೦	೬—೧—
ಹಲಸಂದೆ ಪಲ್ಲ ೧ಕ್ಕೆ	೮—೧೨—೦	೯—
ಬಿಳೀ ಅವರೆ	೬—೧೨—೦	೯—
ಹೆಸರು	೯—೧೨—೦	೧೦—
ಉದ್ದು	೮—೧೪—೦	೯—
ಕಡಲೆ	೯—೦—೦	೮—೮
ಎಳ್ಳು	೧೬—೦—೦	೧೪—೮
ಹುರುಳಿ	೮—೦—೦	೯—
ಹಳ್ಳು ೧೨೮ ಸೇರಿಗೆ	೯—೮—೦	೧೨—
ಸೀಗೇಕಾಯಿ ಮಣ ೧ಕ್ಕೆ	೨—೪—೦	೩—
ಮೆಣಸಿನಕಾಯಿ	೪—೮—೦	೪—
,, ಮಧ್ಯಮ	೩—೧೨—೦	೩—೧—
ಬೆಲ್ಲ ಗೊಡ್ಡು ಅಚ್ಚು	೩—೪—೦	೩—೨
ಒಳ್ಳೆಣ್ಣೆ ಮಣ ೧ಕ್ಕೆ	೪—೦—೦	೪—
ಹರಳೆಣ್ಣೆ ,,	೪—೦—೦	೩—
ಕೊಬ್ಬರಿ ಬಟ್ಟಿ ಪಲ್ಲ ೧ಕ್ಕೆ	೬—೦—೦	೮—೦
ಉಪ್ಪು ,,	೮—೦—೦	೬—೧—
ಹುಣಿಸೇ ಹಣ್ಣು	೧—೪—೦	೧—
,, ಹಳೇದು	೦—೧೪—೦	೦—೧
ಹುಚ್ಚೆಳ್ಳು	೧೨—೧—೦	೧೦—
ಸೀಮೆಯೆಂಣೆ ಪೆಟ್ಟಿ ೧ಕ್ಕೆ	೫—೩—೦	೩—೦
ತೆಂಗಿನಕಾಯಿ ೧೦೦ಕ್ಕೆ	೫—೦—೦	೪—
ಅಳಲೇಕಾಯಿ ಮಣ ೧ಕ್ಕೆ	೧—೦—೦	೦—೧
ಅಂಟ್ವಾಳದಕಾಯಿ ಮಣ ೧ಕ್ಕೆ	೦—೧೪—೦	೧—೦
ಚಿನ್ನ (ಪೌನ್) ಒಂದು	೧೫—೮—೦	೧೫—
,, ,, ವರಹ	೧೧ ೧೧—೦	೧೫—೦
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೨೪ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೩೨—೦—೦	೩೩

Printed and Published by the Rev. H. Spencer, the Proprietor and Manager, Wesleyan Mission Press, Mysore. 27/7/1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಆಗಸ್ಟ್ ತಾರೀಖು ೩ ನೇ ಗುರುವಾರ. — ಸಂಚಿಕೆ ೩೦

ಜೀರಿಗೇ ರಸಾಯನ.

1

ಇದನ್ನು ಸೇವಿಸೇ ಪಡಿದಿ ಪಿತ್ತವನ್ನು ಕಳೆದುಕೊಳ್ಳಿ. ಡಬ್ಬಿ ಒಂದಕ್ಕೆ ೬ ಆಣೆ. ಕಸ್ತೂರಿ ಮಾತ್ರೆ ಸೀಸೆಗೆ ೪ ಆಣೆ. ತಾಂಬೂಲ ಚೂರ್ಣ ೧ ಪಟ್ಟಿಗೆ ೨ ಆಣೆ. ಜವ್ವಾಜಿಗಂಧ ೧ ತೊಲೆಗೆ ೧ ರೂ. ಲೆಮನೇಡ್ ಮಾತ್ರೆ ೧ ಡಜ್ಜಿಗೆ ೨ ಆಣೆ. ಖಾತರಿಯಾದ ಹಲ್ಲು ಪುಡಿ ಡಬ್ಬಿಗೆ ೩ ಆಣೆ. ದೇಹಶಾಂತಿ ಚೂರ್ಣ ಡಬ್ಬಿಗೆ ೩ ಆಣೆ. ಭೃಂಗಾಮಲಕ ತೈಲ ೧ ಸೀಸೆಗೆ ೧೨ ಆಣೆ. ಪ್ರಮೇಹಾಂಜನ ಸೀಸೆ ೧ಕ್ಕೆ ೮ ಆಣೆ.

ವಿಳಾಸ—ಸಿ. ಪಿ. ಓಂಪ್ ಕಾಲೋ, ಬೆಂಗಳೂರು ಸಿಟಿ.

ಸಂಗೀತ ಮಹಾಸಭೆ.

ಚಾಮರಾಜನಗರ ತಾಲ್ಲೂಕು ರಾಮಸಮುದ್ರದ ಮ॥ ಸಂಗೀತ ವಿದ್ವಾನ್ ಮ॥ ಸುಬ್ರಹ್ಮಣ್ಯಯ್ಯನವರು ಈ ತಿಂಗಳು ೧೯ನೇ ತಾರೀಖಿನಲ್ಲಿ ಬೆಂಗಳೂರಿನಲ್ಲಿ ನಡೆದ ವೀರಶೈವ ಮಹಾಸಭೆಯಲ್ಲಿ ವೀಣಾ ಗಾನ ನಡೆಯಿತು. ಆಗ್ಗೆ ಮಹಾ ಶ್ರೇಷ್ಠ ವಿದ್ವಾಂಸರು, ದೊಡ್ಡ ಗೌರ್ನಮೆಂಟ್ ಅಧಿಕಾರಿಗಳು, ಶ್ರೀಮಂತರು, ಅಂತು ೩—೪ ಸಾವಿರ ಜನ ಈ ಸಭೆಯಲ್ಲಿ ಕಲೆತಿದ್ದರು. ಆಗ್ಗೆ ಮ॥ ಮಹದೇವಪ್ಪನವರ ಸಂಗೀತದ ಗಂಧರ್ವಲೋಕವೆನಿಸುವಲ್ಲಿ ಆ ಸಭಾ ಸಮಿತಿಯಲ್ಲಿ ನಡೆಯಿತು. ಆಗ್ಗೆ ಮಹಾ ಜನರುಗಳು ಇವರ ಗಾನ ವೈಖರಿ ... ಕೇಳಿ ಬಹಳ ಆನಂದವನ್ನು ಹೊಂದಿ ಇವರಿಗೆ ಮಹಾ ಸಭೆಯ ಬಂಗಾರದ ಮೆಡಲ್ ... ಕೊಟ್ಟರು ... ಊರು ದೊಡ್ಡಪೇಟೆ ... ಸಾವ್ ಕಾರ್.

ದೇವಾಂಗ ಸಂಸಾರಿಗೆ ಜಗತ್ ಬೇಕಾದದ್ದು

ದೇವಾಂಗಮಿತ್ರ ಪ್ರಕಾಶಿಕೆ.

ಸ್ವಲ್ಪ ಪ್ರತಿಗಳಿವೆ ಜಾಗ್ರತೆಯಾಗಿ ಸಿಕ್ಕುತ್ತೆ. ನಂತರ ಸಿಕ್ಕುವದಿಲ್ಲ. ಸ್ವಕುಲಗುರುಗಳು ವ॥ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸಹ್ಯಾವರ ... ದಿಂದ ೧೨ ಡಿಸ್ಕೌಂಟ್ ಕ್ರಯ ಕಡಿಮೆ ಮಾಡಿದೆ. ಮುದ್ರೆ ಹೊಡೆದಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮. ಮುದ್ರೆ ಇಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೧—೮. ... ಅರ್ಥಸಹಿತ ಮಂಗಳಸ್ತಂಭ ೧ಕ್ಕೆ ರೂ. ೦—೮. ... ಮಣಿಆರ್ಡರಿಗೂ ವಿ. ಪಿ. ಲೂ ಕಳುಹಿಸುತ್ತೆ. ವಿಳಾಸ—ಮೈಸೂರು ದವಳ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

6

ಮೈಸೂರು ಸಿವಿಲ್‌ಸರ್ವೀಸ್ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯ ಹೆಡ್ ಮಾಸ್ಟರಾದ ಮ॥ ಪಿ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಲೋಯರ್ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨ ರಂತೆ ಡಿಸ್ಕೌಂಟ್ ಕೊಡಲಾಗುವುದು. ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮೊದಲಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು.

ಕ್ರಯ:—೧ ಪ್ರತಿಗೆ ೬ ಆಣೆ, ಪೋಸ್ಟೇಜು ೧ ಆಣೆ.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ

17

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to Mr Hughes, Mysore Zoo.

ಕಥಾಸಂಗ್ರಹ—ಮೊದಲನೆ ಭಾಗ.

14

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ನಾಡಿನ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಪ್ರಾಂತಿನ ಸರಣಿಯನ್ನೂ ಬದಲಾಯಿಸಿ ... ಮಾಡಿದೆ. ಒಳ್ಳೆ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ರೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವುದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

1

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ

'ರಕ್ಷಾಮೃತಂ'—ಕಾಫಿ ಅಥವಾ ಟೀಗೆ ಪ್ರತಿಯಾದದ್ದು

"ರಕ್ಷಾಮೃತ,"—ಆಯುರ್ವೇದಗಳಲ್ಲಿ ಹೇಳಿರುವ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಲೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರು ಮಾಡಲ್ಪಟ್ಟಿರುತ್ತದೆ. ಕಾಫಿ, ಟೀಯಲೆಗಳಲ್ಲಿರುವ ದೋಷಗಳು ಇದರಲ್ಲಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀರೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ, ಪಿತ್ತ, ಕೆಮ್ಮು, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಸೇರಿಸಿಯಾಗಲಿ ಸೇರಿಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಬಿಡಿಸುವಂತೆ ಮಾಡುವದಲ್ಲದೆ, ಯಾವದೊಂದು ರೋಗವೂ ಬಾರದಂತೆ ಕಾಪಾಡುವುದು. ಪಿತ್ತಪಾಂಡು, ಗುಲ್ಮ, ಉಬ್ಬಸ, ಕ್ಷಯ, ಅಜೀರ್ಣ, ಮಲಬದ್ಧತೆ, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ. ಜೀವಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನುಂಟುಮಾಡುತ್ತದೆ. ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು.

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿ ರಕ್ತ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಲೆಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು.

ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ಆಣೆ ೬. ವಿ. ಪಿ. ಖರ್ಚು ಆಣೆ ೩ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪಿಟ್ಟು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

ವಿಳಾಸ—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

"ಒಕ್ಕಲತನವೂ ಒಕ್ಕಲಿಗನೂ.—ಪಕ್ಷ ಕ್ಕೊಂದು.

3

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗ ಪೋಸ್ಟೇಜು ಸಹಿತ ರೂ. ೧—೮—೦. ದೈತರೇ, ಬೇಗ ತರಿಸಿ. ವಿಳಾಸ—ದಿ ಮ್ಯಾನೇಜರ್, ೧೯೯, ಸಿವಿಲ್ ಲೈನ್ಸ್ ಪೂನ.

ಯಂ. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು

2

ಮೆಟ್ರಿಕ್ಯುಲೇಷನ್ ಕನ್ನಡದ ೨ನೆ ಪುಸ್ತಕದ ನೋಟ್ಸು	೧—೪—೦
ಡಿಟೋ ,, ,, ೬ ನೆ ಪುಸ್ತಕದ ನೋಟ್ಸು	೦—೪—೦
ಡಿಟೋ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೬ನೆ ಭಾಗ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಶ್ರೀಮುಖ ಪಂಡಿತ.

1

ಶ್ರೀ ಜಗದ್ಗುರು ಶ್ರೀ ಶೃಂಗೇರೀ ಶಿವಗಂಗಾ ಶ್ರೀ ಸುಬ್ರಹ್ಮಣ್ಯಾಖ್ಯ ಪೀಠದ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ಅಪ್ಪಣೆಕೊಡಿಸುವದೇನೆಂದರೆ —"ಚಿಕಿತ್ಸಕ ವಿ. ಪಿ. ಪಂಡಿತರಿಂದ ತಯಾರಾದ ಕೇಸರಾಕಲ್ಪವು ಎಲ್ಲಾ ವಿಧವಾದ ಜ್ವರಗಳಿಗೂ ಅತ್ಯಂತ ಗುಣವನ್ನು ಪ್ರಜೆಕೋಟಿಗಳಿಗೆ ಕೊಡುವದರಲ್ಲಿ ಯಾವ ಸಂದೇಹವೂ ಇಲ್ಲವೆಂದು ನಾವು ಖಂಡಿತವಾಗಿ ಆಶೀರ್ವದಿಸಿರುತ್ತೇವೆ. ಕೇಸರಾಕಲ್ಪವನ್ನು ನಾವು ಸರ್ಟಿಫಿಕೆಟ್ಟಿನಲ್ಲಿ ಯಾವಾಗಲೂ ನಮ್ಮ ಸಂಸ್ಥಾನದ ಶಿಷ್ಯಮಂಡಲಿಯವರಿಗೆ ಇದನ್ನೇ ಉಪಯೋಗಿಸುತ್ತಾ ಇರುತ್ತೇನೆ" ರಕ್ತ ಶೋಧಕ, ರೋಗನಾಶಕ, ಸ್ತ್ರೀಜೀವನಾಮೃತ, ಕೇಸರಾಕಲ್ಪವು ಇವೇ ಮೊದಲಾದ ನಮ್ಮ ಔಷಧಗಳು ಮೈಸೂರು "ಚಿಂತಾಮಣಿ" ಆಫೀಸ್ ಮ॥ ರಾಮನಾಥೈಯನವರಲ್ಲಿ ದೊರೆಯುತ್ತವೆ. ನಮ್ಮ ಔಷಧಗಳ ಕ್ಯಾಟಲಾಗು ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪ್ ಕಳುಹಿಸಿ ತರಿಸಿಕೊಳ್ಳಬಹುದು.

ವಿಳಾಸ—ಚಿಕಿತ್ಸಕ ವಿ. ಪಿ. ಪಂಡಿತರು, ಬೆಂಗಳೂರು ಸಿಟಿ.

ಪ್ರಿಯ ನೋಡಿ ಮನಸ್ಸರೆ!

ಈ ನಮ್ಮ ಗುಲಾಬಿ ಮೊಗ್ಗನ್ನು ಪರೀಕ್ಷಿಸಿರುವಿರಾ?

"ಗುಲಾಬಿ ಮೊಗ್ಗಿನ ಉಂಗುರ"

2

ಈ ಉಂಗುರದ ಮಧ್ಯೆ ಗುಲಾಬಿ ಮೊಗ್ಗಿನಂತೆ ಇದ್ದು ನೋಡುವವರಿಗೆ ನಿಜವಾದ ವಜ್ರದಂತೆ ಥಳಥಳಿಸುವ ... ಗಳು ಸುತ್ತಲೂ ಕೂರಿಸಲ್ಪಟ್ಟಿವೆ. ಯಾ ... ರಿಗೂ ಕಂಡುಹಿಡಿಯಲಾರದಂಥ ಬಂಗಾರದಿಂದ ಇಂಗ್ಲಿಷ್ ಕಂಪೆನಿಯವರು ತಯಾರಿಸಲ್ಪಟ್ಟಿರುತ್ತಾರೆ. ಸಹಜವಾದ ಬಂಗಾರದಂತೆ ಇದರ ಬಣ್ಣವೂ ಕಾಂತಿಯೂ ಇರುವುದಲ್ಲದೆ ಎಷ್ಟು ದಿನಗಳಾಗಲೀ ಎಷ್ಟುಬಿಸಿಲಿಗೂ ಕೆಡುವುದಿಲ್ಲವೆಂದು ನಾವು ಭರವಸದಿಂದ ಹೇಳುತ್ತೇವೆ. ಒಂದು ವೇಳೆ ಕೊಳೆಯು ಕೂತು ಇದರ ಬಣ್ಣವೇನಾದರೂ ಮಂಕಾದರೆ ಸ್ವಲ್ಪ ಸೀಮೆಸುಣ್ಣದ ಪುಡಿಯನ್ನು ಹಾಕಿ ಒಂದು ಸಣ್ಣ ಬಟ್ಟೆಯಿಂದ ಉಜ್ಜಿದರೆ ಎಂದಿನಂತೆ ಹೊಳೆಯುವುದು. ಈ ಉಂಗುರವು ನೋಡುವವರಿಗೆ ರೂ. ೨,೦೦೦ ಬೆಲೆ ಬಾಳತಕ್ಕದರಂತೆ ಕಾಣಿಸಿಕೊಳ್ಳುತ್ತದೆ.

ಇದರ ನಗದು ಬೆಲೆ ೨ ರೂ. ಮಾತ್ರ

ಬಹುಮಾನ! ಬಹುಮಾನ!! ಬಹುಮಾನ!!!

೧೨ ಉಂಗುರಗಳನ್ನು ಒಟ್ಟಾಗಿ ತರಿಸಿಕೊಳ್ಳತಕ್ಕವರಿಗೆ ನಿಕ್ಕಲ್ ಬೆಳ್ಳಿಯ ಸರಪಣಿ ಸಮೇತವಾದ ಒಂದು ವಾಚು, ೬ ನ್ನು ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ಟೈಂಪೀಸು, ೩ ನ್ನು ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ೧ ಸೆಟ್ ಗುಂಡಿಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಇಷ್ಟಪಟ್ಟವರಿಗೆ ಒಂದು ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುವುದು. ಈ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿರಿ.

ವಿಳಾಸ—ಗುರುಬಸವ ಅಂಡ್ ಕೊ., ಸಾವಕಾರಪೇಟೆ, ಮದರಾಸ್.

ಯೋಗ್ಯತಾಪತ್ರ. ಕೋಲಾರ ಸಿಟಿಯಿಂದ ರಾಮಪ್ಪ ಗುರಪ್ಪ, ಹೋಳಲೂರು, ಮೊಡುವ ಬರೆಯುತ್ತಾರೆ. ತಾವು ಕಳುಹಿಸಿದ ಗುಲಾಬಿ ಮೊಗ್ಗಿನ ಉಂಗುರವನ್ನೇ ಇಲ್ಲಿ ಸರಾಫರಿಂದ ಬೆಲೆ ಕಟ್ಟಲಸಾಧ್ಯವಾಗಿದೆ. ನೋಡಲಿಕ್ಕೆ ತಾವು ಬರೆದಂತೆ ೨,೦೦೦ ರೂ. ಗಿಂತಲು ಹೆಚ್ಚು ಬಾಳುತ್ತೆದು. ಇನ್ನೊಂದು ೧೨ ಉಂಗುರವನ್ನು (ಪ್ರೆಜೆಂಟ್ ವಾಚನ್ನು ಸಹ) ನನ್ನ ಹೆಸರಿಗೆ ವಿ. ಪಿ. ಮಾಡಬೇಕು. ವಿಶ್ವಾಸವುಳ್ಳ, ಸಂ॥ ಜ್ಯೇಷ್ಠ ಶುದ್ಧ ೯.

ತ್ಯಾಗದ ಮರದ ಸಾಮಾನು ಪಸನಾದದ್ದು.

ಮೈಸೂರು ಸರ್ಕಾರದ ಶಾಕನ್‌ಕೋಟೆ ಜಂಗಲಿನ ಬಹಳ ಶ್ರೇಷ್ಠವಾದ ೧೦೦ರಿಂದ ೩೦ ಅಡಿ ಸುತ್ತಳತೆಯುಳ್ಳ ಮರಗಳಿಂದ ಕೊಯಿದಿರುವ ತ್ಯಾಗದ ತೊಲೆಗಳು, ಹಲಿಗೆಗಳು, ಹೊಟ್ಟೆಮರಗಳು, ಆರೇಕಾಲು ವಗೈರೆ ವಿಧ ವಿಧವಾದ ಅಳತೆಗಳ ಸಾಮಾನುಗಳು ಮೈಸೂರಿನಲ್ಲೂ ಮತ್ತು ಬೆಂಗಳೂರು ಕೋಟೆಯಲ್ಲಿರುವ ಗಂಧದ ಕೋಠಿಯಲ್ಲೂ ಸಹ ಕ್ರಯಕ್ಕೆ ದೊರೆಯುತ್ತವೆ ಎಲ್ಲಾ ಸಂಗತಿಗಳೂ ಈ ವಿಳಾಸದಾರರಿಂದ ತಿಳಿದುಕೊಳ್ಳಬಹುದು —

ಮ ನಾಗಪ್ಪ, ಕಂಟ್ರ್ಯಾಕ್ಟರ್, ಬಳ್ಳಾಪುರಪೇಟೆ, ಬೆಂಗಳೂರು ಸಿಟಿ

ಈ ಕೆಳಗಣ ಪುಸ್ತಕಗಳು ಕೊಂಚವಾಗಿವೆ ಜೇಗನೆ ತರಿಸಿಕೊಳ್ಳಿ ಅಮೇಲೆ ಸುಲಭವಾಗಿ ಈ ಕಡಿಮೆ ಬೆಲೆಗೆ ಸಿಕ್ಕಲಾರವು ಇದು ಒಳ್ಳೇ ಸಮಯವು.

ಕನ್ನಡ ಹಿಂದೂಲಾ —ಇದು ಎಲ್ಲಾ ಹೈಕೋರ್ಟುಗಳ ಸಾರಾಂಶಗಳೊಡನೆ ಸೇರಿ, ಸಮಸ್ತ ವಿಷಯಗಳನ್ನೂ ಕನ್ನಡಿಯಂತೆ ತಿಳಿಸುವುದು ಸರಕಾರಿ ವ್ಯವಹಾರಗಳುಳ್ಳ ಎಲ್ಲಾ ಜನರಿಗೂ ಅತ್ಯಾವಶ್ಯಕವಾಗಿದೆ ಇದರ ಬೆಲೆ ರೂ ೩—೮—೦

ಕನ್ನಡ ಧರ್ಮಶಾಸ್ತ್ರವು —ಇದರಲ್ಲಿ ಲೋಕಜ್ಞಾನಕ್ಕೆ ಬೇಕಾಗಿರುವ ಸಮಸ್ತ ಶಾಸ್ತ್ರತತ್ತ್ವ ವಿಷಯಗಳೂ ಸುಲಭವಾದ ವಚನದಲ್ಲಿ ನಿರೂಪಿಸಲ್ಪಟ್ಟಿದೆ ಎಲ್ಲರಲ್ಲಿಯೂ ಇರಬೇಕಾಗಿರುವ ಅತ್ಯಾವಶ್ಯಕ ಪುಸ್ತಕವು ಬೆಲೆ ರೂ ೧

ಕನ್ನಡ ಕೇಸರೀ ವಿಲಾಸವು —ಇದು ಅತ್ಯದ್ಭುತ ಚಮತ್ಕಾರವಾದ ನಾವಲ್ ಎಂಬ ನಾಟಕ ವಿನೋದ ಕಥೆ ಬಹಳ ಸುಲಭವಚನ ಶೈಲಿಯಿಂದ ಬರೆಯಲ್ಪಟ್ಟಿದೆ ಬೆಲೆ ಆಣೆ ೦—೮—೦

ವಿಳಾಸ —ರತ್ನಾಕರ್ ಅಂಡ್ ಕಂಪೆನಿ,

ತಿರುವಲ್ಲಿಕ್ಕೇಣಿ, ಮದರಾಸ್

ಚಾಮರಾಜನಗರ ಮದರಾಸು ನಶ್ಯವು

ವರ್ತಕರಿಗೆ ಸುಲಭಕ್ರಯ



ಮದರಾಸು ನಶ್ಯಪುಡಿ ಡಬ್ಬಿ ೧ಕ್ಕೆ ೬ ಆಣೆ ಭಾಂಗಿ ಖರ್ಚು ೩ ಆಣೆ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ ೧ ಡಬ್ಬಿಗೆ ಜಾಸ್ತಿಯಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಪುಡಿಗೆ ತಕ್ಕಹಾಗೆ ಸರಿಯಾದ ಡಬ್ಬಿಯಲ್ಲಿ ಹಾಕಿ ಭಾಂಗಿ ಖರ್ಚು ಸುಲಭ ಬೀಳುವ ಹಾಗೆ ಕಳುಹಿಸುತ್ತೇವೆ ೧ ರೂಪಾಯಿಗೆ ಕಮ್ಮಿಯಿಲ್ಲದೆ ದರಖಾಸ್ತು ಕಳುಹಿಸತಕ್ಕ ವರ್ತಕರು ಮೊದಲಿಂದ ವರಿಗೆ ರೂಪಾಯಿಗೆ ೦—೧—೦ ಕಮಿಷನ್ ಕೊಡುತ್ತೇವೆ ನಮ್ಮ ವೈದ್ಯಶಾಲೆಯಲ್ಲಿ ತಯಾರಿಸುವ ಪುಡಿಯು ಇತರ ವರ್ತಕರಲ್ಲಿ ತಯಾರಿಸತಕ್ಕ ಪುಡಿಯಂತಾದ್ದಲ್ಲ. ಮೇಲಾದ ಒಡಿಯರನಾ ದೇಶದ ಹೊಗೆಸೊಪ್ಪಿನಿಂದ ಕಾರವುಳ್ಳದ್ದಾಗಿ ತಯಾರಿಸಲ್ಪಟ್ಟಿರುತ್ತೆ. ಎಷ್ಟು ದಿವಸಗಳವರೆಯಂತ್ರ ಇಟ್ಟಾಗ್ಯೂ ಸ್ವಾಟು ಹೋಗದಹಾಗೆ ಪುಡಿಯನ್ನು ಮಾಡುವದರಲ್ಲಿ ಅಧಿಕ ಪರಿಶ್ರಮವುಳ್ಳವರುಗಳಿಂದ ತಯಾರಿಸಲ್ಪಟ್ಟಿರುತ್ತೆ ಇದನ್ನು ೧ ಸಾರಿ ಹಾಕಿಕೊಂಡರೆ ಸಾಕು ಅನೇಕ ದೊಡ್ಡಮನುಷ್ಯರು ಪ್ರತಿನಿತ್ಯವೂ ಇದನ್ನೇ ಉಪಯೋಗಿಸುತ್ತಾರೆ

ಪರಿಮಳನಶ್ಯಪುಡಿ

ಪರಿಮಳನಶ್ಯಪುಡಿ ಡಬ್ಬಿ ೧ಕ್ಕೆ ೯ ಆಣೆ ಭಾಂಗಿ ಖರ್ಚು ೩ ಆಣೆ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆ ಉಳ್ಳದ್ದಾಗಿ ತಯಾರು ಮಾಡಲ್ಪಟ್ಟಿದೆ ಇದರ ಸುವಾಸನೆ ಬಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪ ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ ತಲೆನೋವು, ಪೀನಸ, ಜಲದೋಷ ಶಿರೋವ್ಯಾಧಿ ಮೊದಲಾದವುಗಳನ್ನು ತಪ್ಪದೆ ಪರಿಹರಿಸುತ್ತೆ

ಮಾದ್ರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ

ವಿಳಾಸ— ಮ್ಯಾನೇಜರ್, ಧರ್ಮವೈದ್ಯಶಾಲಾ,

೬೯ ಚೈನಾಬಜಾರು ರೋಡ್, ಸಾಹುಕಾರ್ ಪೇಟೆ, ಮದರಾಸ್

ವೃತ್ತಾಂತ ಪತ್ರಿಕೆ.

ಸರ್ ೧೯೦೬ ನೇ ಇಸವಿ ಆಗಸ್ಟ್ ತಾ॥ ೨ ನೇ ಗುರುವಾರ

ಪ್ಲೇಗ್ ಉಪದ್ರವೂ ಗವರ್ನಮೆಂಟ್ ರಿಪೋರ್ಟೂ.

ಮೈಸೂರು ಗವರ್ನಮೆಂಟಿನವರು ಕಳೆದ ೧೯೦೪—೦೫ ನೇ ಸಾಲಿನ ಪ್ಲೇಗ್ ಇಲಾಖೆಯ ಕಾರ್ಯಗಳನ್ನು ಪುನರ್ವಿಮರ್ಶೆ ಮಾಡಿ, ಅದರ ಮೇಲೆ ತಮ್ಮ ಮುಕುಮನ್ನು ಬರೆದು ಈಗತಾನೇ ಪ್ರಕಟಿಸಿದ್ದಾರೆ ೧೯೦೫ ನೇ ಜೂನ್ ೩೦ ಕ್ಕೆ ಆ ವರ್ಷವು ಪೂರೈಸಿತು ಸೀನಿಯರ್ ಸರ್ಜನ್ ರವರು ವರ್ಷದ ಕಾರ್ಯಗಳನ್ನೆಲ್ಲಾ ಬರೆದು, ೧೯೦೬ನೇ ಜನವರಿ ೧೧ರಲ್ಲಿ ಗವರ್ನಮೆಂಟಿಗೆ ಕಳುಹಿಸಿಕೊಟ್ಟರು ತರುವಾಯ ಇದೇ ವಿಚಾರವಾಗಿ ಸೀನಿಯರ್ ಸರ್ಜನ್ ರವರಿಗೂ ಗವರ್ನಮೆಂಟಿಗೂ ಫೆಬ್ರವರಿ ೧೬ರ ತನಕ ಕಾಗದ ಪತ್ರಗಳು ನಡೆಯುತ್ತಿದ್ದವು ಅದಾಗ್ಯೂ ಮೇ ೧೬ರ ವರೆಗೆ ಗವರ್ನಮೆಂಟಿನವರು ಈ ರಿಪೋರ್ಟಿನ ಮೇಲೆ ತಮ್ಮ ಅಭಿಪ್ರಾಯವನ್ನು ಬರೆಯಲಿಲ್ಲ ಅಂತು ವರ್ಷವೆಲ್ಲಾ ಕಳೆದುಹೋಗಿ ಹಳೆದಾಗಿರುವ ರಿಪೋರ್ಟು ಈಗ ಪ್ರಕಟವಾಗಿರುವುದು ಇದರಿಂದ ಈ ರಿಪೋರ್ಟಿನಲ್ಲಿರುವ ಸ್ವಾರಸ್ಯವು ಬಹುಮಟ್ಟಿಗೆ ಕಡಿಮೆಯಾದೀತೆಂತಲೂ ಇನ್ನು ಮುಂದಾದರೂ ಇಷ್ಟು ಸಾವಕಾಶವಾಗುವುದಕ್ಕೆ ಅವಕಾಶ ಕೊಡದೆ ಶೀಘ್ರವಾಗಿ ಪ್ರಕಟವಾಗಬೇಕೆಂತಲೂ ನಾವು ಹೇಳಬೇಕಾದುದಿಲ್ಲ ಶ್ರೀಮನ್ ಮಹಾರಾಜಾ ಸರಕಾರದವರು ಈ ಭಯಂಕರವಾದ ಉಪದ್ರವನ್ನು ನಿರ್ಮೂಲ ಮಾಡುವುದರಲ್ಲಿ ಬದ್ಧಕಂಕಣರಾಗಿರುತ್ತಾರೆಂದು ಅವಕಾಶ ದೊರೆತಾಗಲೆಲ್ಲಾ ಸಾರುತ್ತಿದ್ದರೂ ಬಹಳವಾಗಿ ಸಂತೋಷಪಡುತ್ತೇವೆ ಆದರೆ ವಾರ್ಷಿಕ ರಿಪೋರ್ಟುಗಳನ್ನು ಬೇಗಬೇಗನೆ ಪ್ರಕಟಮಾಡುತ್ತಾ ಬರುವುದರಲ್ಲಿ ಅವರ ಕಾರ್ಯಗಳಿಗೇ ತುಂಬಾ ಸಹಾಯವಾದೀತೆನ್ನುವುದಕ್ಕೆ ಸಂದೇಹವಿಲ್ಲ

ಕಳೆದ ೧೯೦೫ನೇ ಜೂನ್ ೩೦ಕ್ಕೆ ಮುಕ್ತಾಯವಾದ ಒಂದು ವರ್ಷದಲ್ಲಿ ಮೈಸೂರು ಸಂಸ್ಥಾನದಲ್ಲಿ ೩,೯೯೧ ಜನರಿಗೆ ಪ್ಲೇಗ್ ತಗಲಿತು ಅದರ ಹಿಂದಿನ ವರ್ಷದಲ್ಲಿ ೨೬,೯೮೮ ಜನರಿಗೆ ಪ್ಲೇಗ್ ತಗಲಿತ್ತು ೧೯೦೪ನೇ ಸಾಲಿನಲ್ಲಿ ೩,೫೩೩ ಜನರೂ, ೧೯೦೩ ರಲ್ಲಿ ೧೯,೯೦೦ ಜನರೂ ಪ್ಲೇಗಿನಲ್ಲಿ ಮೃತಪಟ್ಟರು ಈ ರೀತಿ ಪ್ಲೇಗ್ ತಗಲಿದವರ ಸಂಖ್ಯೆಯೂ ಅವರಲ್ಲಿ ಮೃತಪಟ್ಟವರ ಸಂಖ್ಯೆಯೂ ಕಡಿಮೆಯಾಗಿರುವುದು ಸಂತೋಷಪ್ರದವೇ ಸರಿ ಆದರೂ ಉಪದ್ರ ತಗಲಿದವರ ಪೈಕಿ ಇನ್ನೂ ಹೆಚ್ಚು ಸಂಖ್ಯೆಯ ಜನರನ್ನು ಬದುಕಿಸುವ ಮಾರ್ಗವನ್ನು ಕಂಡುಹಿಡಿಯುವುದು ಅಪೇಕ್ಷಣೀಯವಾಗಿದೆ ಯಾಕೆಂದರೆ ಈ ವರ್ಷ ಉಪದ್ರ ತಗಲಿದವರಲ್ಲಿ ೧೦೦ಕ್ಕೆ ೨೫ ಮಂದಿಯಷ್ಟು ಮಾತ್ರ ಬದುಕಿದರು ಅದರ ಹಿಂದಿನ ವರ್ಷಕ್ಕಿಂತಲೂ ತುಂಬಾ ಕಡಿಮೆಯಾಯಿತು ಅಂದರೆ ಆ ಹಿಂದಿನ ವರ್ಷದಲ್ಲಿ ಇನ್ನೂ ಹೆಚ್ಚು ಸಂಖ್ಯೆಯಷ್ಟು ಬದುಕಿಕೊಂಡರು.

ಈ ರಿಪೋರ್ಟಿನಲ್ಲಿ ಬಹು ವಿಶೇಷವಾದ ಸಂಗತಿ ಯೇನೆಂದರೆ, ಪ್ಲೇಗ್ ತಗಲಿತೆಂದ ಕೂಡಲೇ ಕಾಯಿಲೆಯವರನ್ನು ಮನೆಗಳಲ್ಲಿಟ್ಟುಕೊಳ್ಳುವುದಕ್ಕಿಂತಲೂ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗುವುದೇ ಉತ್ತಮವೆಂತಲೂ ಅಲ್ಲಿ ರೋಗಿಗಳು ಬದುಕುವ ಸಂಭವ ಹೆಚ್ಚೆಂತಲೂ ಪ್ರಜೆಗಳಲ್ಲಿ ಒಳ್ಳೇ ಭರವಸ ಉಂಟಾಗಿರುತ್ತದೆ ಬೆಂಗಳೂರಿನಲ್ಲಿ ಪ್ಲೇಗ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಹೊಂದಿದ ರೋಗಿಗಳಲ್ಲಿ ೧೦೦ಕ್ಕೆ ೪೦ ರಂತೆಯೂ ಮೈಸೂರಿನಲ್ಲಿ ಆಸ್ಪತ್ರೆ ಚಿಕಿತ್ಸೆಯಿಂದ ೧೦೦ಕ್ಕೆ ೩೩ ರಂತೆಯೂ ಬದುಕಿಕೊಂಡಿದಾರೆಂದು ತಿಳಿದು ಬರುತ್ತದೆ. ಇದರಿಂದ ಪ್ರಜೆಗಳು ರೋಗಿಗಳನ್ನು ಆಸ್ಪತ್ರೆಗಳಿಗೆ ಕಳುಹಿಸುವುದು ತಮಗೇ ಒಳ್ಳೆಯದೆಂತಲೂ, ಈ ರೀತಿ ಗವರ್ನಮೆಂಟಿನವರಿಗೆ ಸಹಾಯ ಮಾಡಿ ಉಪದ್ರವನ್ನು ನೀಗಿಸುವುದಕ್ಕೆ ಪ್ರಯತ್ನಪಡುವುದು ತಮ್ಮ ಕರ್ತವ್ಯವೆಂತಲೂ ಬೇಗ ಬೇಗನೆ ತಿಳಿದುಕೊಂಡಾರೆಂದು ಹಾರೈಸುತ್ತೇವೆ ಜನರು ಈ ಭಾಗದಲ್ಲಿ ತಮ್ಮ ನೆರೆಹೊರೆಯವರಿಗೂ ಸ್ನೇಹಿತರಿಗೂ ಪ್ರೋತ್ಸಾಹ ಪಡಿಸತಕ್ಕದ್ದಾಗಿದೆ

ಆ ವರ್ಷದಲ್ಲಿ ಪ್ಲೇಗ್ ಚುಚ್ಚುಮದ್ದನ್ನು ಹಾಕಿಕೊಂಡವರ ಸಂಖ್ಯೆಯು ಬಹಳ ಕೊಂಚವೆಂದು ವಿಷಾದಿಸಬೇಕಾಗಿದೆ ಮೈಸೂರಿನಲ್ಲಿ ೩೬೮ ಜನರು ಬೆಂಗಳೂರಿನಲ್ಲಿ ೧೬೬ ಜನರೂ ಮಾತ್ರ ಚುಚ್ಚುಮದ್ದು ಹಾಕಿಸಿಕೊಂಡರು ಸಂಸ್ಥಾನದ ಇತರ ಕಡೆಗಳಲ್ಲಿ ಒಬ್ಬರಾದರೂ ಹಾಕಿಸಿಕೊಳ್ಳಲಿಲ್ಲ ಈ ಸಂಗತಿಯನ್ನು ಕುರಿತು ಬರೆಯುವ ಸೀನಿಯರ್ ಸರ್ಜನ್ ರವರು — ಇತರ ಜನರಿಗಿಂತಲೂ ಚುಚ್ಚುಮದ್ದು ಹಾಕಿಸಿಕೊಂಡವರಲ್ಲಿ ರೋಗಿಗಳು ಬದುಕಿರುವರೆಂತಲೂ ಆ ಜನರೇ ವಿವೇಕವುಳ್ಳವರು ಚುಚ್ಚುಮದ್ದನ್ನು ಹಾಕಿಸಿಕೊಂಡು ಅದರ ಪ್ರಯೋಜನವನ್ನು ಪಡೆದರೆಂತಲೂ ಹೇಳಿರುವರು ಈ ಜಾತಿಯಲ್ಲಿರುವ ಸಣ್ಣ ಜನರ ವಿವೇಕವನ್ನೂ ಈ ಸಂಸ್ಥಾನದ ಇತರ ಪ್ರಜೆಗಳೂ ಗ್ರಹಿಸಿ ಅನುಸರಿಸುವರೆಂದು ನಿರೀಕ್ಷಿಸುತ್ತೇವೆ

ಸಾಧಾರಣವಾಗಿ ಪಟ್ಟಣವಾಸಿಗಳಲ್ಲೂ ವಿಶೇಷವಾಗಿ ಗ್ರಾಮಸ್ಥರಲ್ಲೂ ಅನಿಷ್ಟವಾದ ಒಂದು ದುರಭಿಪ್ರಾಯವಿದೆ ಪ್ರಜೆಗಳು — ಅಯ್ಯೋ ನಮಗೆ ಇದು ದೈವದತ್ತವಾದದ್ದು ಎಂದು ಹೇಳುವವರಾಗಿದಾರೆ ಇದು ಉಪದ್ರವನ್ನು ನೀಗಿಸಬೇಕೆಂಬ ಸರಕಾರದವರ ಸದುದ್ದೇಶವನ್ನೂ ಅವರ ನಾನಾ ಪ್ರಯತ್ನಗಳನ್ನೂ ಭಂಗಪಡಿಸುವುದು ಸ್ವಲ್ಪವೂ ಸಾಹಸ ಕುತೂಹಲಗಳನ್ನು ಪ್ರಕಾಶಪಡಿಸದೆ "ದೈವದ ಮೇಲೆ ಅಧಿಕವಾಗಿ ನಂಬಿರುವ ಇಂಥಾ ಪ್ರಜೆಗಳಿಗಾಗಿ ನಾವೇನೂ ಮಾಡಬಲ್ಲೆವು" ಎಂಬುದಾಗಿ ಅಧಿಕಾರಿಗಳು ಹೇಳಿದಾರೆ ತನ್ನ ಪ್ರಾಣವನ್ನಾಗಲಿ ತನ್ನ ಸಹೋದರನ ಜೀವನವನ್ನಾಗಲಿ ಬದುಕಿಸಿಕೊಳ್ಳಬೇಕೆಂದು ಪ್ರಯತ್ನಪಡುವುದು ದೇವರ ನಿಯಮಕ್ಕೆ ವಿರೋಧವಾದದ್ದೆಂದು ಯಾರೂ ಊಹಿಸಲಾರರು ಹಾಗೆ ಪ್ರಯತ್ನಮಾಡದವರು ತಪ್ಪಿತಸ್ಥರಾಗಿರುವುದೇ ಆತನ ಚಿತ್ತವೃತ್ತಿಗೆ ವಿರೋಧವಾದದ್ದು ಇದನ್ನು ಪ್ರಜೆಗಳೆಲ್ಲಾ ಉಚಿತವಾಗಿ ತಿಳಿದಿರಬೇಕು

ಪ್ರಜೆಗಳು ತಮ್ಮ ತಮ್ಮ ಮನೆಗಳಲ್ಲಿರುವ ಹೆಗ್ಗಣಗಳನ್ನು ನಿರ್ಮೂಲಮಾಡಬೇಕೆಂಬುದರ ಆವಶ್ಯಕತೆಯನ್ನು ಕುರಿತು ಗವರ್ನಮೆಂಟಿನವರು ಕುತೂಹಲವುಳ್ಳವರಾಗಿ ಕಂಡುಬರುವುದಿಲ್ಲ ಈ ಸಂಗತಿಯನ್ನು ತಿಳಿದು ಪ್ರಜೆಗಳನ್ನು ಎಚ್ಚರಿಸುವುದು ಅಗತ್ಯವೆಂದು ಕಾಣುತ್ತದೆ ಅಲ್ಲದೆ ಉಪದ್ರವ ಪ್ರಾರಂಭವಾದ ಕೂಡಲೆ ಮನೆಗಳನ್ನು ಕೆಲಕಾಲ ಬಿಟ್ಟುಬಿಡುವುದೇ ಉತ್ತಮ ಈ ಉಪದ್ರವದ ಭಯವನ್ನು ತಪ್ಪಿಸಿ ಪ್ರಜೆಗಳನ್ನು ಕಾಪಾಡಬೇಕೆಂದು ಗವರ್ನಮೆಂಟಿನವರು ತಮ್ಮ ಕೈಲಾದಮಟ್ಟಿಗೂ ಶ್ರಮಪಡುತ್ತಿದ್ದಾರೆ ಆದಕಾರಣ ಅವರ ಬುದ್ಧಿವಾದವನ್ನೂ ಅವರ ಉದ್ದೇಶವನ್ನೂ ತಿಳಿದು ಆ ಪ್ರಕಾರ ನಡೆದುಕೊಳ್ಳುವುದರ ಮೂಲಕ ಈ ಉಪದ್ರವನ್ನು ನೀಗಿಸುವುದು ಪ್ರಜೆಗಳ ಕರ್ತವ್ಯವಾಗಿರುತ್ತದೆ

ಒಳದೇಶದ ವೃತ್ತಾಂತಗಳು

ಕಳೆದ ವಾರ ಉರಿಗದ ಚಿನ್ನದ ಗಣಿಯಲ್ಲಿ ಸಣ್ಣ ಬನಾವಾಗಿ ಇದ್ದರು ಕೂಲಿಯವರು ಪ್ರಾಣಕಳೆದುಕೊಂಡರು

*****

ಕಳೆದ ವಾರ ಮೆ॥ ಪಿಟ್ರ್ಹೇ ಎಂಬ ಸಾಹೇಬರು ಮೈಸೂರಿಂದ ಅಷ್ಟ್ರಮ ತೀರ್ಥ ನದಿಗೆ ಹೋಗಿ ಒಂದು ಭಾರೀ ಮೊಸಳೆಯನ್ನು ಗುಂಡಿನಿಂದ ಹೊಡೆದು ಕೊಂದು ತಂದಿದಾರೆ ಅದು ೧೫ ಅಂಗುಲ ಪ್ರಮಾಣವುಳ್ಳದ್ದಾಗಿದೆ ಅದರ ಹೊಟ್ಟೆಯ

ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧ

30



ಈ ಔಷಧವು ಪ್ರತಿ ಮನೆಯವರಿಗೂ ಅಗಾಗ್ಯೆ ಬೇಕಾಗುತ್ತಲೇ ಇರುವದು ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು ಶರೀರಕ್ಕೆ ನೂರು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಸುಟ್ಟರೂ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು ಮತ್ತು ತಲೆನೋವು, ಹಲ್ಲುನೋವು ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೀನ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ ಇದನ್ನು ಯಾರೂ ಮರೆಯಬಾರದು ಕ್ರಯ ಬಾಟ್ಲಿ ೧ಕ್ಕೆ ೧ ರೂ , ೨ ರೂ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮವುಂಟ್ ರೋಡ್

ಮದರಾಸ್

ತೆರೆ ನೋಡುವಲ್ಲಿ ಒಬ್ಬ ಹೆಂಗಸಿನ ತಲೆಯು ಅಕಸ್ಮಾತ್ತಾಗಿ ಸಿಕ್ಕಿತು. ಆ ಹೆಂಗಸು ಯಾರೆಂದೇ ತಿಳಿದುಬಂದಿಲ್ಲ.

****

ಶ್ರೀಮನ್ಮಹಾರಾಜರವರು ಈಗ ನೀಲಗಿರಿ ಬೆಟ್ಟದಲ್ಲೇ ಇರುತ್ತಾರೆ. ಅವರು ಅಲ್ಲಿಗೆ ವಿಹಾರಾರ್ಥವಾಗಿ ದಯಮಾಡಿದ್ದಾರೆಂದು ಪ್ರಕಟವಾಗಿದೆ. ಇಂಡಿಯಾ ಗವರ್ನಮೆಂಟಿನ ಫಾರಿನ್ ಸೆಕ್ರೆಟರಿಯಾದ ಮಿ॥ ಎಸ್. ಎಂ. ಫ್ರೇಸರ್ ಯವರು ಕಳೆದವಾರ ಅಲ್ಲಿಗೆ ಬಂದಿದ್ದರೆಂದು ವರ್ತಮಾನವಿರುವುದು.

****

ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯಕ್ಕೆ ಆಗಬೇಕಾದ ಏರ್ಪಾಡುಗಳನ್ನು ಸೂಚಿಸುವುದಕ್ಕೋಸ್ಕರ ಬ್ರಿಗೇಡಿಯರ್ ಜನರಲ್ ಸ್ಟುವರ್ಟ್ ಬೀಟ್ಸನ್‌ರವರು ನೆನ್ನೆ ಬೆಳಿಗ್ಗೆ ರಾಜಧಾನಿಗೆ ಬಂದರು. ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮಿ॥ ಮೊಕಾಸಕಿಯವರೂ ಸಂಸ್ಥಾನದ ಮಿಲಿಟರಿ ಸೆಕ್ರೆಟರಿ ಕರ್ನಲ್ ಜೋನ್ಸ್ ಯವರೂ ಅವರನ್ನು ಕರೆದುಕೊಂಡು ಬಂದಿದ್ದಾರೆ.

****

ಶ್ರೀರಂಗಪಟ್ಟಣದ ಪ್ಲೀಡರ್ ಮಿ॥ ಸುಬ್ಬರಾಯರ ಎರಡನೆ ಮಗನು ಚಿಕ್ಕ ವಯಸ್ಸಿನಲ್ಲೇ ಬಹು ಗಣ್ಯವಾಗಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಒಂದೇ ಸಲ ಮೂರು ಬಿರುದುಗಳನ್ನು ಸಂಪಾದಿಸಿಕೊಂಡರು. ಈತನ ವಿದ್ಯಾದಿ ಸಾಮರ್ಥ್ಯಗಳನ್ನು ಗವರ್ನಮೆಂಟಿನವರು ನೋಡಿ ತುಂಬಾ ಸಂತೋಷಪಟ್ಟು, ವಿದ್ಯಾಸಂಪೂರ್ಣತೆಯನ್ನು ಪಡೆದುಬರುವಂತೆ ಆತನನ್ನು ವೇತನ ಕೊಟ್ಟು ವಿಲಾಯತಿಗೆ ಕಳುಹಿಸುವವರಾಗಿದ್ದಾರೆಂದು ಕೇಳುತ್ತೇವೆ. ಆತನು ಗವರ್ನಮೆಂಟಿನವರ ಸಹಾಯವನ್ನೂ ಉದ್ದೇಶವನ್ನೂ ಸಾರ್ಥಕಪಡಿಸುವನೆನ್ನುವುದಕ್ಕೆ ಸಂಶಯವಿಲ್ಲ.

ನವ ಗ್ರಂಥ ಭಂಡಾರವು

“ವಿನೋದಿನಿ” —ಮಾಸಪತ್ರಿಕೆ

ಈ ಸಚಿತ್ರ ಮಾಸಪತ್ರಿಕೆಯು ಬಾಲಕರಾದ ಕನ್ನಡಿಗರಿಗೆ ವಿದ್ಯಾಭಿವೃದ್ಧಿಯನ್ನೂ ಕಲಾಕೌಶಲ್ಯವನ್ನೂ ತತ್ವಶಾಸ್ತ್ರಜ್ಞಾನವನ್ನೂ ಉಂಟುಮಾಡಲು ಪ್ರಚುರಮಾಡಲ್ಪಟ್ಟದ್ದಾಗಿರುವುದು. ಮೊದಲನೇ ಸಂಚಿಕೆಯು ಜುಲೈ ತಿಂಗಳಿನಿಂದ ಪ್ರಾರಂಭವಾಗಿದೆ. ಪ್ರಥಮ ಸಂಚಿಕೆಯ ಮುಖಪತ್ರದಲ್ಲಿ ಯಶೋದೆ ಕೃಷ್ಣನು ತನ್ನ ಬಾಯಲ್ಲಿ ವಿಶ್ವರೂಪ ದರ್ಶನವನ್ನು ಮಾಡಿಸಿದ ಚಿತ್ರವಿರುವುದು. ಇದರಲ್ಲಿರುವ ವಿಷಯಗಳು ಈ ಮಾಸಪತ್ರಿಕೆಯ ಹೆಸರಿಗೆ ಅನ್ವರ್ಥಗಳಾಗಿವೆ. ಇದರ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಒಂದೂವರೆ ರೂಪಾಯಿ. “ವಿನೋದಿನಿ” ಆಫೀಸ್, ಕಾರವಾರ, ಉತ್ತರ ಕನ್ನಡ, ಈ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.

“ಒಕ್ಕಲತನವೂ ಒಕ್ಕಲಿಗನೂ” —ಪಕ್ಷಕ್ಕೊಂದು

ಯಾವ ಜನಾಂಗದವರು ಕೃಷಿ, ವಾಣಿಜ್ಯ, ಕುಶಲವಿದ್ಯೆ, ಇವುಗಳಲ್ಲಿ ಅತ್ಯಂತ ಚತುರರಾಗಿರುವರೋ ಅವರು ಇತರ ಜನಾಂಗದವರಿಗಿಂತಲೂ ಬುದ್ಧಿ ಚಾತುರ್ಯವುಳ್ಳವರೆಂದೂ ಅವರಿಂದಲೇ ಇತರ ಕಾರ್ಯಗಳಿಗಿಂತಲೂ ಸಮಾಧಾನ, ಐಶ್ವರ್ಯ, ಸಮೃದ್ಧಿಯಿಂದ ಕೂಡಿದ್ದಾಗಿರುವವೆಂದೂ ಎಣಿಸಲ್ಪಟ್ಟಿರುವುದು. ಅಮೇರಿಕ, ಇಂಗ್ಲಾಂಡ್, ಜರ್ಮನ್ ದೇಶಗಳು ಕುಶಲವಿದ್ಯೆಯೊಂದರಲ್ಲೇ ಅತ್ಯಂತ ಜಾಣ್ಮೆಯುಳ್ಳವುಗಳಾಗಿರುವುದರಿಂದಲೇ ರಾಜ್ಯಗಳಲ್ಲಿ ಕಿರೀಟಪ್ರಾಯಗಳಾಗಿರುವವು. ನಮ್ಮ ಈ ಹಿಂದೂಸ್ಥಾನದಲ್ಲಾದರೋ ಇವುಗಳ ಸಂಬಂಧವಾಗಿ ಎಷ್ಟೋ ಉಪಯುಕ್ತ ಮಾಹಿತಿಯನ್ನು ಸರ್ಕಾರದವರು ಆಗಾಗ್ಯ ಪ್ರಚುರಪಡಿಸುತ್ತಿರುವರಾದಾಗ್ಯೂ ರೈತರು ಬಡವರಾಗಿಯೂ ಅವಿದ್ಯಾವಂತರಾಗಿಯೂ ಇರುವುದರಿಂದಲೇ ದೇಶದ ಐಶ್ವರ್ಯಾಭಿವೃದ್ಧಿಗೆ ಕೊರತೆಯು ಯಾವಾಗಲೂ ಇದ್ದೇ ಇರುತ್ತದೆ. ಮೇಲೆ ಹೇಳಿದ ದೇಶಗಳಲ್ಲೂ ಇತರ ಕಡೆಗಳಲ್ಲೂ ಇವು ಮೂರನ್ನೂ ಒಟ್ಟಿಗೆ ಅಭಿವೃದ್ಧಿಗೆ ತರಲು ಸ್ವಾಭಾವಿಕವಾಗಿ ಕುಂದಕವನ್ನುಂಟುಮಾಡುವ ಅನೇಕ ಕಾರಣಗಳು ಇರುವವು. ಆದರೆ ನಮ್ಮ ಹಿಂದೂಸ್ಥಾನದಲ್ಲಿ ಮಾತ್ರ ಹಾಗಿಲ್ಲ. ಈ ದೇಶದಲ್ಲಿ ಕೃಷಿ, ವ್ಯಾಪಾರ, ಕುಶಲವಿದ್ಯೆ, ಇವುಗಳೆಲ್ಲ ತೀರ ಒಕ್ಕಲತನವನ್ನೇ ಅವಲಂಬಿಸಿರುತ್ತವೆ. ನಮ್ಮ ಜನರು ೧೦೦ ರಲ್ಲಿ ೮೦ ಜನರು ವ್ಯವಸಾಯದಿಂದಲೇ ಜೀವನ ಮಾಡತಕ್ಕವರಾಗಿರುವರು. ನಮ್ಮ ದೇಶದ ೮ ದೇಶಭಾಷೆಗಳಲ್ಲಿ ಹಲವು ವರ್ತಮಾನ ಪತ್ರಿಕೆಗಳು ಪ್ರಚುರವಾಗುತ್ತಿದ್ದಾಗ್ಯೂ ಈ ಬೇಸಾಯಗಾರರ ಕೊರತೆಗಳನ್ನು ತೋರ್ಪಡಿಸಿ, ಅವರನ್ನು ತಿದ್ದಿಕೊಡುವ ಪತ್ರಿಕೆಗಳು ಕಡಿಮೆಯೇ. ಆದರೆ ಈಗಲೀಗ “ಒಕ್ಕಲತನವೂ ಒಕ್ಕಲಿಗನೂ” ಎಂಬೀ ಹೆಸರುಳ್ಳ, ಪಕ್ಷಕ್ಕೊಂದು ಸಲ ಹೊರಡುವ ಪತ್ರಿಕೆಯನ್ನು ಮಿ॥ ಗಣೇಶ ಬಲ್ವಂತ ಸಹಸ್ರಬುದ್ಧೆ ಎಂಬುವರು ಕನ್ನಡ ಬೇಸಾಯಗಾರರ ಉಪಯೋಗಾರ್ಥವಾಗಿ ಪ್ರಕಟಿಸಲಾರಂಭಿಸಿದ್ದಾರೆ. ಈ ಪತ್ರಿಕೆಯಲ್ಲಿ ಒಕ್ಕಲತನಕ್ಕೆ ಮುಖ್ಯಾಧಾರಗಳಾದಂಥಾ ಪಶುಗಳು, ಗೊಬ್ಬರ, ವ್ಯವಸಾಯಕ್ಕೆ ಉಪಯುಕ್ತವಾದ ಆಯುಧಗಳು, ಸಾಗುವಳಿ ಮಾಡತಕ್ಕ ರೀತಿ, ಬೆಳೆಗಳಿಗೆ ಬರತಕ್ಕ ರೋಗಗಳು, ಮಳೆ ಬೆಳೆಯ ಮಾಹಿತಿ, ಪೇಟೆ ಧಾರಣೆ, ಸರಕಾರಿ ಕಾನೂನುಗಳ ಮಾಹಿತಿ, ವ್ಯವಸಾಯ ಸಂಬಂಧವಾರ್ತೆಗಳು, ಒಕ್ಕಲತನವನ್ನು ಚರ್ಚೆ ಮಾಡುವ ಪತ್ರವ್ಯವಹಾರ, ಒಕ್ಕಲತನಕ್ಕೆ ಸಂಬಂಧಪಡುವ ಪ್ರಕಟಣೆಗಳು, ಇವೇ ಮೊದಲಾದ ವಿಷಯಗಳು ಗರ್ಭಿತವಾಗಿರುವವು. ಈ ರಾಷ್ಟ್ರದಲ್ಲಿ ವ್ಯವಸಾಯವೇ ಐಶ್ವರ್ಯಕ್ಕೆ ತವರುಮನೆಯಾಗಿರುವುದರಿಂದ ಪ್ರತಿಯೊಬ್ಬ ರೈತನೂ ಇಂಥಾ ಪತ್ರಿಕೆಯನ್ನೋದಿ ತನ್ನ ನ್ಯೂನಾತಿರೇಕಗಳನ್ನು ತಿದ್ದಿಕೊಂಡು, ತಾವು ಅಭಿವೃದ್ಧಿಗೆ ಬರುವುದಲ್ಲದೆ ಪತ್ರಿಕೆಯೂ ಚಿರಕಾಲ ಬಾಳುವಂತೆ ಉತ್ತೇಜನವನ್ನು ಕೊಟ್ಟು ಕಾಪಾಡುವರೆಂದು ಹಾರೈಸುವೆವು. ಇದರ ವಾರ್ಷಿಕ ಚಂದಾ ಒಂದು ರೂಪಾಯಿ ಎಂಟು ಆಣೆ. ೬ ತಿಂಗಳಿಗೆ ಒಂದು ರೂಪಾಯಿ. ದಿ ಮ್ಯಾನೇಜರ್, “ಒಕ್ಕಲತನವೂ ಒಕ್ಕಲಿಗನೂ,” ೧೯೯ ಬಂಗಲೆ, ಸ್ಟೇಷನದ ಹತ್ತರ, ಸಿವಿಲ್ ಲೈನ್ಸ್, ಪೂನಾ—ಈ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.

ರಷ್ಯ ಜಪಾನ್ ಯುದ್ಧವು.

ಲಂಡನ್, ಜುಲೈ ೨೬ —ಜಪಾನರು ಅಲೆಕ್ಸಾಂಡ್ರೋವಸ್ಕ್ ಎಂಬ ಪಟ್ಟಣವನ್ನು ಸ್ವಲ್ಪವೂ ನಷ್ಟವಿಲ್ಲದೆ ರಷ್ಯದವರಿಂದ ಕಿತ್ತು ಸ್ವಾಧೀನಪಡಿಸಿಕೊಂಡರು.

ಅಲೆಕ್ಸಾಂಡ್ರೋವಸ್ಕ್ ನಗರಕ್ಕೆ ಒಂದು ಬೆಟಾಲಿಯನ್ (ಪಟಾಲಂ) ಹೊಸ ರಷ್ಯ ಸೈನ್ಯ ಬಂದಿತ್ತು. ಇದಲ್ಲದೆ ಆ ಪಟ್ಟಣದಲ್ಲಿ ನೂರಾರು ಮಂದಿ ವಾಲಂಟಿಯರ್ ಸೈನಿಕರು ೪ ಫಿರಂಗಿಗಳನ್ನಿಟ್ಟುಕೊಂಡಿದ್ದರು. ಜಪಾನವರು ಆ ಪಟ್ಟಣದ ಸಮೀಪಕ್ಕೆ ಹೋಗಿ ದಾಳಿಯ ಹಾಕಿಕೊಂಡು, ತಾ. ೨೪ ರಲ್ಲಿ ಮುತ್ತಿಗೆಯನ್ನಾರಂಭಿಸಿದರು. ೨೦೦ ಮಂದಿ ರಷ್ಯದವರು ಕೈಸೆರೆ ಸಿಕ್ಕಿದ್ದಾರೆ. ಪೂರ್ವದಿಕ್ಕಿನಲ್ಲಿ ಮಾತ್ರ ರಷ್ಯದವರು ಕಠಿಣವಾಗಿ ಯುದ್ಧ ಮಾಡಿದರು. ಜಪಾನರು ಅವರ ಮೇಲೆ ಮತ್ತೆ ನುಗ್ಗಿ ಹೋಗಿ, ತಾ. ೨೫ ರಲ್ಲಿ ಪಟ್ಟಣವನ್ನು ತೆಗೆದುಕೊಂಡರು.

ಜಪಾನರು ಅನೇಕ ಸಾವಿರದಷ್ಟು ಸೈನ್ಯವನ್ನು ತೆಗೆದುಕೊಂಡು ಹೋಗಿ, ವ್ಲಾಡಿವೋಸ್ಟಾಕಿಗೆ ದಕ್ಷಿಣದಲ್ಲಿರುವ ಕೂವೆರ್ ಎಂಬ ರೇವಿಗೆ ಮುತ್ತಿಗೆ ಹಾಕಿಕೊಂಡಿದ್ದಾರೆ.

ಜಪಾನರು ೨೪ನೆ ತಾ. ನಲ್ಲಿ ಕ್ಯಾಸ್ಟ್ರೀಸ್ ಎಂಬ ಕೊಲ್ಲಿಯಿಂದ ಒಂದು ಬೆಟಾಲಿಯನ್ ಸೈನ್ಯವನ್ನು ತಂದು ಇಳಿಸಿರುತ್ತಾರೆಂದು ರಷ್ಯ ಜನರಲ್ ಲಿನೆವಿಚ್‌ಯವರು ಹೇಳುತ್ತಾರೆ.

ಲಂಡನ್, ಜುಲೈ ೨೮ —ಜಪಾನರು ಅಲೆಕ್ಸಾಂಡ್ರೋವಸ್ಕ್ ಪಟ್ಟಣದ ಒಂದು ಭಾಗದಲ್ಲಿರುವ ರಷ್ಯ ಸೈನ್ಯಕ್ಕೆ ಮುತ್ತಿಗೆ ಹಾಕಿಕೊಂಡಿದ್ದಾರೆ. ಅವರು ಇನ್ನೇನು ಜಪಾನರ ಸ್ವಾಧೀನವಾಗುವುದರಲ್ಲಿದ್ದಾರೆ. ಆದರಿಂದ ಜಪಾನರು ಸೆಘೇಲಿಯನ್ ಎಂಬ ದ್ವೀಪಕ್ಕೆಲ್ಲಾ ಸರ್ವಸ್ವತಂತ್ರರಾಗುವರು. ಈ ಸುದ್ದಿಯನ್ನು ಕೇಳಿ ಟೋಕಿಯೋ ನಗರದಲ್ಲಿ ಜಪಾನರು ವಿಶೇಷವಾದ ವಿಜಯೋತ್ಸವಗಳನ್ನು ಮಾಡುತ್ತಿದ್ದಾರೆ.

ಜಪಾನ್ ಹಡಗಿನ ಸೈನ್ಯವು ಅಲೆಕ್ಸಾಂಡ್ರೋವಸ್ಕ್ ಪಟ್ಟಣದ ಬಳಿ ರಷ್ಯದವರ ಹಡಗುಗಳಿಗೂ ಪಟ್ಟಣಕ್ಕೂ ಫಿರಂಗಿಗಳನ್ನು ಹೊಡೆದದ್ದರಿಂದ ರಷ್ಯದವರ ಫಿರಂಗಿಗಳ ಶಬ್ದವು ನಿಂತುಹೋಯಿತು. ಅವರ ಒಂದು ಮದ್ದಿನಮನೆ ಹತ್ತಿ ಮಹಾ ಶಬ್ದದೊಡನೆ ಹಾರಿತು. ಇದರಿಂದ ಪಟ್ಟಣವೇ ಹತ್ತಿಕೊಂಡು ಉರಿಯುತ್ತಿದೆ ಎಂಬುದಾಗಿ ಜಪಾನ್ ಅಡ್ಮಿರಲ್ ಕಟೋಕಾಯವರು ತಿಳಿಸುತ್ತಾರೆ.

ಜಪಾನ್ ಗವರ್ನಮೆಂಟಿನವರು ತಿಳಿಸುವುದೇನೆಂದರೆ—ಸೆಘೇಲಿಯನ್ ದ್ವೀಪದಲ್ಲಿರುವ ನಮ್ಮ ಸೈನಿಕರು ಈ ಪ್ರಕಾರ ಬರೆಯುತ್ತಾರೆ—ನಮ್ಮ ಒಂದು ಸೈನ್ಯವು ಮೊದಲು ಆಲ್ಕೋವಾದಲ್ಲಿ ರಷ್ಯ ಸೈನ್ಯವನ್ನು ಸಂಧಿಸಿತು. ಯುದ್ಧ ನಡೆಯುತ್ತಿದ್ದಲ್ಲಿ ರಷ್ಯ ಸೈನಿಕರೆಲ್ಲಾ ನೋಡು ದಿಕ್ಕುಪಾಲಾಗಿ ಚದರಿಹೋದರು. ಅತ್ತಲಾಗಿ ರಷ್ಯದವರು ಅಲೆಕ್ಸಾಂಡ್ರೋವಸ್ಕ್ ಪಟ್ಟಣದ ಸಮುದ್ರ ತೀರದಲ್ಲಿರುವ ತಮ್ಮ ಕಟ್ಟಡಗಳನ್ನು ಸುಟ್ಟುಬಿಡುವುದರಲ್ಲಿದ್ದುದನ್ನು ತಿಳಿದು ಅಲ್ಲಿಗೆ ಒಂದು ಸೈನ್ಯವನ್ನು ಕಳುಹಿಸಿದೆವು. ಈ ಸೈನ್ಯವು ಆ ಕಟ್ಟಡಗಳನ್ನೆಲ್ಲಾ ಗೆದ್ದು ಸ್ವಾಧೀನಪಡಿಸಿಕೊಂಡಿತು. ಸುಡುವುದಕ್ಕೆ ಶತ್ರುಗಳಿಗೆ ಅವಕಾಶ ದೊರೆಯಲಿಲ್ಲ. ರಷ್ಯದವರು ಚದರಿಹೋದರು. ನಮ್ಮ ಸೈನಿಕರು ಶತ್ರುಗಳನ್ನು ಓಡಿಸಿಕೊಂಡು ಹೋಗಿ ಮಾಗೇಟ ಎಂಬ ಠಾಣ್ಯವನ್ನು ಕಿತ್ತುಕೊಂಡರು. ಅನಂತರ ನಾವು ಅಲೆಕ್ಸಾಂಡ್ರೋವಸ್ಕ್ ನಗರವನ್ನೆಲ್ಲಾ ಗೆದ್ದುಕೊಂಡೆವು. ಮತ್ತೆ ತಾ. ೨೫ನೇ ಪ್ರಾತಃಕಾಲ ನಾವು ಮುತ್ತಿಗೆಯನ್ನು ಪ್ರಾರಂಭಿಸಿ, ನೋವೋಮಿಕೇಲಾವಸ್ಕ್ ನಗರವನ್ನು ಸ್ವಾಧೀನಪಡಿಸಿಕೊಂಡೆವು. ನಮಗೆ ೨೦೦ ರಷ್ಯ ಸೈನಿಕರು ಕೈಸೆರೆ ಸಿಕ್ಕಿದ್ದಾರೆ. ತರುವಾಯ ಆ ದ್ವೀಪದ ಮುಖ್ಯ ಮುಖ್ಯ ಠಾಣ್ಯಗಳಿಗೆಲ್ಲಾ ನಮ್ಮ ಸೈನ್ಯವನ್ನು ಕಳುಹಿಸಿ ಬಲಪಡಿಸಿಕೊಂಡೆವು. ಶತ್ರುಗಳು ನ್ಯೂಮಿನಾ ಠಾಣ್ಯವನು ಸುಟ್ಟುಹಾಕಿದ್ದಲ್ಲದೆ ಆಲ್ಕೋವಾ ಮತ್ತು ಅಲೆಕ್ಸಾಂಡ್ರೋವಸ್ಕ್ ಎಂಬ ಠಾಣ್ಯಗಳಿಗೆ ಬೆಂಕಿ ಇಟ್ಟು ಹೋದರು. ಆದರೆ ಇವೆರಡನ್ನೂ ಉಳಿಸಿಕೊಂಡೆವು. ಈಗ ಅಲೆಕ್ಸಾಂಡ್ರೋವಸ್ಕಿನ ಗವರ್ನರರ ಬಂಗಲೆಯ ಮೇಲೆ ಜಪಾನ್ ಬಾವುಟ ನಿಲ್ಲಿಸಲ್ಪಟ್ಟಿದೆ. ನಮ್ಮ ಹಡಗುಗಳಿಗಾಗಲಿ, ಹಡಗಿನ ಸೈನ್ಯಕ್ಕಾಗಲಿ ಅಪಾಯವೇನೂ ಸಂಭವಿಸಲಿಲ್ಲ ಎಂಬುದೇ.

ಲಂಡನ್, ಜುಲೈ ೨೯ —ಜಪಾನರು ವ್ಲಾಡಿವೋಸ್ಟಾಕ್ ಪಟ್ಟಣಕ್ಕೆ ಸಮುದ್ರದ ಕಡೆಯಿಂದ ಬಲವಾಗಿ ಮುತ್ತಿಗೆ ಹಾಕಿಕೊಂಡು, ಫಿರಂಗಿಗಳನ್ನು ಎತ್ತಿಕಟ್ಟಿ, ಪಟ್ಟಣದೊಳಕ್ಕೆ ಹೊಡೆಯುತ್ತಿದ್ದಾರೆ.

ಲಂಡನ್, ಜುಲೈ ೩೦ —ಸೆಘೇಲಿಯನ್ ದ್ವೀಪದಲ್ಲಿ ಜಪಾನರು ನಿಧಾನವಾಗಿ ರಷ್ಯದವರನ್ನು ನೂಕಿ ಹಿಮ್ಮೆಟ್ಟಿಸುತ್ತಾ ಇದ್ದಾರೆ. ರೈಕಾಫ್ ಪಟ್ಟಣದ ಬೀದಿ ಬೀದಿಗಳಲ್ಲೂ ರಷ್ಯದವರು ನಿಂತು ಯುದ್ಧ ಕೊಟ್ಟು ಕಡೆಗೆ ಸೋತುಹೋದರು. ಆ ಪಟ್ಟಣವು ಜಪಾನರ ಸ್ವಾಧೀನವಾಯಿತು. ಅಲ್ಲಿಂದ ದಕ್ಷಿಣ ಭಾಗದಲ್ಲಿ ೪೦೦ ಮಂದಿ ರಷ್ಯದವರು ಜಪಾನರ ಮೇಲೆ ನುಗ್ಗಿ ಯುದ್ಧ ಕೊಟ್ಟರು. ಜಪಾನರು ಆ ಪೈಕಿ ೨೦೦ ಮಂದಿಯನ್ನು ಕೊಂದು, ೫೦೦ ಮಂದಿಯನ್ನು ಕೈಸೆರೆ ಹಿಡಿದುಕೊಂಡಿದ್ದಾರೆ.

ಕರಾರಿನ ಏರ್ಪಾಡುಗಳು.

ಲಂಡನ್, ಜುಲೈ ೨೭ —ಜಪಾನ್ ರಾಯಭಾರಿಯಾದ ಬ್ಯಾರನ್ ಕೊಮುರಾ ಯವರು ಅಮೇರಿಕದ ರಾಜಧಾನಿಯಾದ ನ್ಯೂಯಾರ್ಕನ್ನು ತಲುಪಿದರು. ಅಲ್ಲಿರುವ ಜಪಾನ್ ಪ್ರಜೆಗಳು ವಿಶೇಷ ವಾದ್ಯಾದಿ ಉತ್ಸವಪೂರ್ವಕವಾಗಿ ಅವರನ್ನು ಎದುರುಗೊಂಡು ಅವರಿಗೆ ಸುಸ್ವಾಗತವನ್ನು ಬಯಸಿದರು.

ಲಂಡನ್, ಜುಲೈ ೨೬ —ನ್ಯೂಯಾರ್ಕ್ ನಗರದಲ್ಲಿ ಒಬ್ಬ ಬಾತ್ಮೀದಾರನು ನೆನ್ನೆ ಬ್ಯಾರನ್ ಕೊಮುರಾ ಯವರನ್ನು ಕಂಡು ಕರಾರಿನ ವಿಷಯವಾಗಿ ಅವರನ್ನು ಪ್ರಶ್ನೆ ಮಾಡುವಾಗ್ಗೆ ಅವರ ಕಡೆ ಎಂ. ಸಾಟೋ ಯವರು ಪ್ರತ್ಯುತ್ತರ ಕೊಟ್ಟದ್ದೇನೆಂದರೆ—ಕರಾರು ನಡೆಯುವುದು ಖಂಡಿತವೆಂದು ನಾನು ನಂಬಿಕೊಂಡಿದ್ದೇನೆ. ಜಪಾನರು ಸಹಜವಾಗಿರತಕ್ಕ ಕಲಮುಗಳನ್ನೇ ಅಪೇಕ್ಷಿಸುತ್ತಾರೆ. ಅಸಾಧ್ಯವಾದ ಮತ್ತು ವಿಶೇಷ ವಿಷಯಗಳನ್ನು ಕೇಳುವುದಿಲ್ಲ. ಈ ಯುದ್ಧಕ್ಕಾದರೋ ಜಪಾನರಿಗೆ ದಿನ ಒಂದಕ್ಕೆ ೩೦ ಲಕ್ಷ ದ್ರವ್ಯದಂತೆ ಖರ್ಚಾಗುತ್ತಿದೆ. ಆದಕಾರಣ ಅವರು ನಷ್ಟ ದ್ರವ್ಯವನ್ನು ರಷ್ಯದವರಿಂದ ವಸೂಲ್ಮಾಡಬೇಕೆಂದು ಅಭಿಪ್ರಾಯಪಡುವರು. ಯುದ್ಧ ಕಾರ್ಯಗಳನ್ನು ಹಂಗಾಮಿಯಾಗಿ ನಿಲ್ಲಿಸುವುದೇ ಬಹುಶಃ ಕರಾರಿನ ಮೊದಲನೇ ಕಾರ್ಯವಾಗಿದ್ದೀತು ಎಂಬುದೇ.

ರಷ್ಯ ರಾಜ್ಯದ ಪರವಾಗಿ ಕರಾರು ಮಾಡಿಕೊಡುವುದಕ್ಕೆ ಚಕ್ರವರ್ತಿ ಜಾರ್ ಯವರಿಂದ ನೇಮಕವಾಗಿರುವ ಎಂ. ಡಿವಿಟ್ಟಿ ಎಂಬ ರಾಯಭಾರಿಯು ನ್ಯೂಯಾರ್ಕ್ ನಗರವನ್ನು ಕುರಿತು ಪ್ರಯಾಣಮಾಡಿದರು.

ಬ್ಯಾರನ್ ಕೊಮುರಾ ಮತ್ತು ಪ್ರೆಸಿಡೆಂಟ್ ರೂಸ್‌ವೆಲ್ಟ್

ಜಪಾನ್ ರಾಯಭಾರಿ ಬ್ಯಾರನ್ ಕೊಮುರಾ ಯವರು ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರನ್ನು ಕಂಡು ಮಾತನಾಡಿಕೊಂಡು ಬಂದ ಮೇಲೆ ಮಿ॥ ತಕಹಿರಾ ಯವರು (ಜಪಾನ್ ರಾಯಭಾರಿ) ಕರಾರಿನ ಸಭೆಯ ವಿಷಯವಾಗಿ ಪ್ರೆಸಿಡೆಂಟರನ್ನು ಕಂಡು ಮಾತನಾಡಿದರು. ಪ್ರೆಸಿಡೆಂಟರು ಶುಕ್ರವಾರ ಬ್ಯಾರನ್ ಕೊಮುರಾ ಯವರನ್ನು ಸಾಮಾನ್ಯವಾಗಿ ಕಂಡು ಅವರ ಸಂಗಡ ಸಂಭಾಷಿಸುವರು.

ಲಂಡನ್, ಜುಲೈ ೨೭ —ನ್ಯೂಯಾರ್ಕ್ ನಗರದಲ್ಲಿ ಒಬ್ಬ ಬಾತ್ಮೀದಾರರ ಸಂಗಡ ರಷ್ಯ ರಾಯಭಾರಿ ಎಂ. ಡಿವಿಟ್ಟಿ ಯವರು ಹೇಳಿದ್ದೇನೆಂದರೆ—ರಷ್ಯದವರು ಪೂರ್ವದಿಗ್ದೇಶದಲ್ಲಿ ವೈಸ್‌ರಾಯಿ ಎಂಬ ಅಧಿಕಾರಿಯನ್ನು ನೇಮಕಮಾಡಿದ್ದೇ ಈ ಯುದ್ಧಕ್ಕೆ ಮುಖ್ಯಕಾರಣಗಳಲ್ಲೊಂದಾಯಿತು. ಈ ಅಧಿಕಾರದ ಏರ್ಪಾಡಿನಿಂದ ಚೀನಾ, ಜಪಾನ್, ವಿಲಾಯತಿ, ಅಮೇರಿಕ—ಈ ರಾಜ್ಯಗಳಿಗೆ ಕೋಪೋದ್ರೇಕವಾಯಿತು. ಈ ಏರ್ಪಾಡಿಗೆ ರಷ್ಯದವರು ಪೂರ್ವ ಸಮುದ್ರದಲ್ಲಿ ಯಾವ ಯಥಾರ್ಥ ಅಭಿಪ್ರಾಯವನ್ನೂ ಸಂಪಾದಿಸಿಕೊಂಡಿರಲಿಲ್ಲ ಎಂಬುದೇ.

ಲಂಡನ್, ಜುಲೈ ೨೮ —ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ಆಯಿಸ್ಟರ್ ಕೊಲ್ಲಿಯಲ್ಲಿ ಬ್ಯಾರನ್ ಕೊಮುರಾ, ಎಂ. ತಕಹಿರಾ ಎಂಬಿವರನ್ನು ಕರೆಸಿಕೊಂಡು, ಅವರನ್ನು ತಮ್ಮ ಪಜ್ಜೆಯಲ್ಲಿ ಕೂರಿಸಿಕೊಂಡು ಭೋಜನಮಾಡಿದರು. ಈ ಭೋಜನವಾದನಂತರ ಅವರವರು ಯಾವ ವಿಶೇಷ ವಿಷಯವನ್ನೂ ಕುರಿತು ಸಂಭಾಷಣೆ ಮಾಡಲಿಲ್ಲ. ಈಗ ಸದ್ಯಕ್ಕೆ ಯುದ್ಧಕಾರ್ಯಗಳನ್ನು ನಿಲ್ಲಿಸಬೇಕೆಂದು ಅಪೇಕ್ಷಿಸಲಿಲ್ಲ.

ಕರಾರು ನಡೆಯುವುದರ ವಿಚಾರವನ್ನು ಚರ್ಚಿಸುವುದಕ್ಕಾಗಿ ಬಂದಿರುವ ಎಲ್ಲಾ ರಾಯಭಾರಿಗಳೂ ಆಗೋಸ್ಟು ೫ನೆ ತಾ. ಬೆಳಿಗ್ಗೆ ನ್ಯೂಯಾರ್ಕ್ ನಗರದಿಂದ ಹಡಗು ಹತ್ತಿ ಆಯಿಸ್ಟರ್ ಕೊಲ್ಲಿಗೆ ಪ್ರಯಾಣ ಮಾಡುತ್ತಾರೆಂಬುದು ಖಂಡಿತವಾಗಿದೆ. ಅವರೆಲ್ಲಾ ಆ ದಿನ ಅಲ್ಲಿ ಪ್ರೆಸಿಡೆಂಟ್ ರೂಸ್‌ವೆಲ್ಟ್‌ಯವರ ಜೊತೆಯಲ್ಲಿ ಕುಳಿತು ಭೋಜನ ಮಾಡಿಕೊಂಡು, ಆ ದಿನ ಮಧ್ಯಾಹ್ನದ ಮೇಲೆ ಅಲ್ಲಿಂದ ಹಡಗು ಹತ್ತಿ, ಪ್ರಯಾಣಮಾಡಿಕೊಂಡು ತಾ. ೭ಕ್ಕೆ ಪೋರ್ಟ್ಸ್‌ಮತ್ ಪಟ್ಟಣವನ್ನು ಹೋಗಿ ಸೇರುತ್ತಾರೆ.

ಜಪಾನರು ಅಪೇಕ್ಷಿಸುವ ಕರಾರಿನ ಕೆಲವು ಕಲಮುಗಳು ಅಮೇರಿಕ ಸಂಸ್ಥಾನದ ವಾಷಿಂಗ್‌ಟನ್ ನಗರದಲ್ಲಿ ಪ್ರಕಟವಾಗಿವೆ. ಈ ಕಲಮುಗಳು ನಿಜವಾದುವೆಂದೂ ಹೇಳುತ್ತಾರೆ. ರಷ್ಯದವರು ಜಪಾನರಿಗೆ ೩೦೦ ಕೋಟಿ ರೂಪಾಯನ್ನು ಅವರ ಯುದ್ಧದ ಖರ್ಚಿಗೆ ಪರಿಹಾರ ರೂಪವಾಗಿ ಕೊಡಬೇಕು. ಪೂರ್ವ ಸಮುದ್ರದಲ್ಲಿರುವ ತಮ್ಮ ವ್ಲಾಡಿವೋಸ್ಟಾಕ್ ಎಂಬ ತೀರಪಟ್ಟಣವನ್ನು ರಷ್ಯದವರು ತಮ್ಮ ಸ್ವಂತಕ್ಕೇನೇ ಇಟ್ಟುಕೊಳ್ಳ ಕೂಡದು. ಪರರಾಜ್ಯಗಳವರೆಲ್ಲಾ ಅಲ್ಲಿ ಹೋಗಿ ಇರುವಂತೆ ಆಗಬೇಕು. ರಷ್ಯದವರು ಇದನ್ನು ಒಪ್ಪಿಕೊಳ್ಳುವುದಾದರೆ ಜಪಾನರು ಈಗ ಅವರಿಂದ ಗೆದ್ದು ಸ್ವಾಧೀನಪಡಿಸಿಕೊಂಡಿರುವ ಪೋರ್ಟ್ ಆರ್ಥರ್ ಎಂಬ ತೀರಪಟ್ಟಣವನ್ನು ಕಾವಲುಗಾರಿ ಮಾಡಿ ಕೋಟೆಕೊತ್ತಲಗಳಿಂದ ಭದ್ರಪಡಿಸಿಕೊಳ್ಳುವುದಿಲ್ಲ.

ಲಂಡನ್, ಜುಲೈ ೨೯.—ನ್ಯೂಯಾರ್ಕ್ ನಗರದಲ್ಲಿ ಜಪಾನ್ ರಾಯಭಾರಿ ಎಂ. ಕೇಟೋ ಯವರು ಒಬ್ಬ ಬಾತ್ಮೀದಾರನಿಗೆ—ಈ ಕರಾರಿನ ಸಭೆಗೆ ನೇಮಕವಾಗಿ ಬಂದಿರುವ ರಾಯಭಾರಿಗಳ ಅಧಿಕಾರ ಪತ್ರಗಳನ್ನು ಚೆನ್ನಾಗಿ ನೋಡಿ ಆದ ತರುವಾಯ ಯುದ್ಧಭೂಮಿಯಲ್ಲಿ ಕಾದಾಡುವುದನ್ನು ಕೆಲವು ಕಾಲದವರೆಗೆ ನಿಲ್ಲಿಸುವುದಕ್ಕೆ ಜಪಾನರು ಸಮ್ಮತಿಪಡುವವರಾಗಿದ್ದಾರೆ ಎಂದು ತಿಳಿಸಿದರು.

ರಷ್ಯ ಚಕ್ರವರ್ತಿಯವರೂ ಕರಾರೂ.

ಲಂಡನ್, ಜುಲೈ ೩೦ —ರಷ್ಯ ಚಕ್ರವರ್ತಿ ಜಾರ್‌ಯವರಿಗೆ—ಲಜ್ಜಾಸ್ಪದವಾದ ಕರಾರನ್ನು ಮಾಡಿಕೊಳ್ಳಬೇಡಿ ಎಂದು ಹೇಳಿ, ಒಪ್ಪಿಸಲ್ಪಟ್ಟ ವಿಜ್ಞಾಪನಾ ಪತ್ರಿಕೆಯನ್ನು ಅವರು ಅಂಗೀಕರಿಸಿ, ಅದಕ್ಕೆ ಪ್ರತಿಯಾಗಿ—“ನಾನು ಎಂದಿಗೂ ಅವಮಾನಕರವಾದ ಅಥವಾ ಅಯೋಗ್ಯಕರವಾದ ಕರಾರನ್ನು ಮಾಡಿಕೊಳ್ಳುವುದಿಲ್ಲ. ಈ ಭಾಗದಲ್ಲಿ ರಷ್ಯ ಪ್ರಜೆಗಳು ನನ್ನಲ್ಲಿ ಭರವಸವನ್ನಿಟ್ಟಿರಬಹುದು” ಎಂಬುದಾಗಿ ಅಪ್ಪಣೆಕೊಡಿಸಿದಾರೆ.

ಉಪದೇಶಿಗಳ ಸಂಘವು.

ಮೈಸೂರು ದೇಶದ ನಾನಾ ಕಡೆಗಳಿಂದ ಬಂದ ನಮ್ಮ ವೆಸ್ಲಿಯನ್ ಮಿಷನ್ ಉಪದೇಶಿಗಳ ಉಪಯೋಗಾರ್ಥವಾಗಿ ಜುಲೈ ೨೦ರಿಂದ ೨೫ರ ವರೆಗೂ ಬೆಂಗಳೂರು "ಹಡ್ಸನ್ ಮೆಮೋರಿಯಲ್" ದೇವಾಲಯದಲ್ಲಿ ಒಂದು ಭಕ್ತ್ಯಭಿವೃದ್ಧಿಯ ಸಂಘವು ನಡೆಯಿತು. ಈ ಘನವಾದ ಸಂಘದಲ್ಲಿ ನಡೆದ ಕೂಟಗಳೆಲ್ಲವೂ ತುಂಬಾ ವಿಶೇಷವಾದವುಗಳೂ ಪವಿತ್ರಾತ್ಮ ಪ್ರೇರಿತವಾದವುಗಳೂ ಆಗಿದ್ದವೆಂಬುವದರಲ್ಲಿ ಸ್ವಲ್ಪವಾದರೂ ಸಂಶಯವಿಲ್ಲ. ಪ್ರತಿ ನಿತ್ಯವೂ ಪ್ರಾತಃಕಾಲದಲ್ಲಿ ಘನ ಸಾಡೆ ಬೋಧಕರು ನಡಿಸಿದ ಕೂಟಗಳೆಲ್ಲವೂ ಪವಿತ್ರಾತ್ಮ ಪ್ರೇರಿತವಾದವುಗಳಾಗಿದ್ದವು. ಪವಿತ್ರಾತ್ಮನ ಜ್ಞಾನವೆಂಬುವ ಆತ್ಮೀಯ ಆಹಾರವನ್ನು ಕೊಟ್ಟು ಬಲಪಡಿಸಿ ಆಯಾ ದಿನದಲ್ಲಿ ನಡೆದ ಪಾರಮಾರ್ಥಿಕ ತತ್ವ ಬೋಧನೆಗಳನ್ನು ಜೀರ್ಣಿಸಲು ತುಂಬಾ ಸಹಕಾರಿಗಳಾಗಿದ್ದವು. ಘನ ಎಡ್ವರ್ಡ್ಸ್ ಬೋಧಕರು ತುಂಬಾ ಆಸಕ್ತಿಯಿಂದಲೂ ಬಲವಾದ ಪ್ರೇರಣೆಯಿಂದಲೂ ಮಾಡಿದ ಇಬ್ರಿಯರ ಪತ್ರಿಕೆಯ ವ್ಯಾಖ್ಯಾನೋಪನ್ಯಾಸಗಳು ನಮ್ಮ ಸಹೋದರರಿಗೆ ಹೇರಳವಾದ ಆತ್ಮೀಯ ಲಾಭವನ್ನುಂಟುಮಾಡಿರುವದು ಮಾತ್ರವಲ್ಲದೆ ದೇವರ ಸತ್ಯ ಕೃತಿಯಲ್ಲಿ ಅಡಗಿರುವ ನೂತನವಾದ ಅಭಿಪ್ರಾಯಗಳನ್ನು ಪ್ರಕಾಶಗೊಳಿಸಿ ಅದರ ಸೌಂದರ್ಯಾತಿಶಯಗಳಿಂದ ಪ್ರತಿಯೊಬ್ಬರ ಕಣ್ಣುಗಳನ್ನು ಸೆರೆಗೊಳಿಸುವಂತೆ ಮಾಡಿದವು. ಕ್ರೈಸ್ತ ಜೀವನಶಕ್ತಿಯೆಂಬುವ ಗೃಹಕ್ಕೆ ಪಾವಟಿಗೆಗಳೋಪಾದಿಯಲ್ಲಿರುವ ಮಾನಸಾಂತರ, ನೀತಿನಿರ್ಣಯ, ಪವಿತ್ರಾತ್ಮನ ಸಾಕ್ಷಿ, ಶುದ್ಧೀಕರಣವೆಂಬೀ ನಾಲ್ಕು ಪ್ರಾಮುಖ್ಯವಾದ ಬೋಧನೆಗಳ ವಿಷಯದಲ್ಲಿ ನಡೆದ ಉಪನ್ಯಾಸಗಳಿಂದಲೂ ಸಂಭಾಷಣೆಯಿಂದಲೂ ನಮ್ಮ ಸಹೋದರರೆಲ್ಲರಿಗೆ ಭಕ್ತ್ಯಭಿವೃದ್ಧಿಯನ್ನು ಹೊಂದಲು ತುಂಬಾ ಅವಕಾಶ ದೊರೆಯಿತು. ಸಾಯಂಕಾಲಗಳಲ್ಲಿ ನಡಿಸಲ್ಪಟ್ಟ ಭಕ್ತಿ ಪ್ರೋತ್ಸಾಹಣೆಯ ಕೂಟಗಳು ನಿಜವಾಗಿಯೂ ಭಕ್ತಿವೃದ್ಧಿ ಹೊಂದುವಿಕೆಗೆ ತಕ್ಕ ಆಹಾರವನ್ನು ಒದಗಿಸಿಕೊಟ್ಟವು. ವಿಶ್ವಾಸ, ಪ್ರಾರ್ಥನೆ ಎಂಬುವ ಪಕ್ವಾನ್ನವನ್ನು ಸರ್ವರೂ ಭುಂಜಿಸಿ ತೃಪ್ತಿಹೊಂದಿ ಆನಂದಭರಿತರಾದರು.

ನಮ್ಮ ಮೈಸೂರು ದೇಶದ ಸಭಾಧ್ಯಕ್ಷರಾಗಿರುವ ಘನ ರೀಸ್ ಬೋಧಕರು ೨೩ನೇ ಭಾನುವಾರದಲ್ಲಿ ನಡೆಸಿದ ದಿವ್ಯವಾದ ಪ್ರಸಂಗದ ಮೂಲಕವಾಗಿ ಪವಿತ್ರಾತ್ಮನು ಪ್ರತಿಯೊಬ್ಬರ ಹೃದಯವನ್ನು ಮುಟ್ಟಿ ಅವರವರ ನ್ಯೂನತೆಗಳನ್ನು ಪ್ರಕಾಶಪಡಿಸಿ ತನಗೂ ತಮ್ಮ ಯಜಮಾನನಾದ ಯೇಸುಸ್ವಾಮಿಗೂ ಇರುವ ಸಂಬಂಧವನ್ನು ವ್ಯಕ್ತಪಡಿಸಿ ಆತನ ನಿಜವಾದ ಭೃತ್ಯರಾಗಿರುವಂತೆ ಮಾಡಿತೆಂಬುವದರಲ್ಲಿ ಎಳ್ಳಷ್ಟಾದರೂ ಅನುಮಾನ ಉಂಟೇ? ಶಿವಾಯ, ಅವರು ಈ ಸಂಘದ ಕಡೇ ದಿನದಲ್ಲಿ ನಡಿಸಿದ ಪ್ರತಿಷ್ಠೆಯ ಕೂಟದಿಂದ ಪರಿಶುದ್ಧಾತ್ಮನ ಪ್ರೇರಣೆಯೂ ಬಲವೂ ಪ್ರತಿಯೊಬ್ಬ ಸಹೋದರನಿಗೂ ಉಂಟಾಗಿ ಅವರವರು ತಂತಮ್ಮ ಸ್ಥಳಗಳಲ್ಲಿ ನಡಿಸುವ ದೇವರ ಸೇವೆಯು ಫಲದಾಯಕವಾಗುವಂತೆ ಸಾಧ್ಯರಲ್ಲಿ ಪ್ರಭುವಿನ ನಾಮಕ್ಕೆ ಅತ್ಯಧಿಕ ಘನ ಮಹಿಮೆಯುಂಟಾಗುವದರಲ್ಲಿ ಸಂದೇಹವಿಲ್ಲ.

ಈ ಕೂಟಗಳ ಫಲಿತಾಂಶವನ್ನು ತಿಳಿಯಲು ಬಯಸಿ ಪ್ರತಿ ಉಪದೇಶಿಗಳು ಇನ್ನು ಮುಂದೆ ಸತ್ಯವೀರರಾಗಿ ತಮ್ಮನ್ನು ಆವರಿಸಿಕೊಳ್ಳುವವರಿಗೆ ಕ್ರೀಸ್ತನ ಬೆಳಕನ್ನು ಪ್ರಕಟಪಡಿಸಿ ಈ ಬೆಳಕಿನಲ್ಲಿ ಸೈತಾನಾಸುರನನ್ನು ಜಯಿಸಿ ಕ್ರಿಸ್ತನ ರಾಜ್ಯವನ್ನು ಪ್ರಬಲಿಸಿ ಅನೇಕ ಆತ್ಮಗಳನ್ನು ಮೃತ್ಯುಂಜಯನಾದ ಯೇಸು ಮಹೇಶನಿಗೆ ಕಾಣಿಕೆಗಳಾಗಿ ತರುವರೆಂದು ಹಾರೈಸುತ್ತೇವೆ.

ಲೋಕೈಕವೀರನು ಇಂಥಾ ಕೂಟಗಳನ್ನು ನಮ್ಮ ಮಧ್ಯದಲ್ಲಿ ನಡಿಸಿದ್ದಕ್ಕಾಗಿ ನಮ್ಮ ಸಹೋದರರೆಲ್ಲರು ಆತನ ನಾಮಕ್ಕೆ ಕೃತಜ್ಞತಾಸ್ತುತಿಯನ್ನು ಸಲ್ಲಿಸುವದು ಮಾತ್ರವಲ್ಲದೆ ಆತನು ತನ್ನ ಸೇವಕರನ್ನು ತನ್ನ ದಿವ್ಯ ಸೇವೆಯಲ್ಲಿ ಉಪಯೋಗಿಸಬೇಕೆಂದೂ ಪ್ರಾರ್ಥಿಸುತ್ತೇವೆ.

ಕಡೆಯದಾಗಿ ನಮ್ಮ ಸಭಾಧ್ಯಕ್ಷರಾದ ಘನ ರೀಸ್ ಬೋಧಕರಿಗೆ ನಮ್ಮ ವಿನಯವಂದನೆಗಳನ್ನು ಹೇಳಲು ಮರೆಯಲಾರೆವು.

ಸಿ. ಹೊ.

ಯೇಸು ಕ್ರೀಸ್ತನು ಯಾರು?

ಕಳೆದ ಸಂಚಿಕೆಯಲ್ಲಿ "ಕ್ರೀಸ್ತಮತವಂದರೇನು" ಎಂದು ಪ್ರಸ್ತಾಪಿಸಿ, ಕ್ರೀಸ್ತಮತದ ತತ್ವವು ಆತನ ಬೋಧನೆಯಲ್ಲವೆಂತಲೂ ಕ್ರೀಸ್ತನಲ್ಲಿ ಯಾರ್ಯಾರು ನಂಬುತ್ತಾರೋ ಅವರೆಲ್ಲರೂ ಸದಾಚಾರಶೀಲರಾಗಿ ನಡೆಯುವಂತೆ ಆತನು ಅನುಗ್ರಹಿಸುವ ಶಕ್ತಿಯೇ ಆ ತತ್ವವೆಂತಲೂ ತಿಳಿಸಿದೆವಷ್ಟೆ. ಈ ಸಂಚಿಕೆಯಲ್ಲಿ ನಾವು ವಿಚಾರಿಸತಕ್ಕ ಪ್ರಾಮುಖ್ಯವಾದ ಸಂಗತಿಯೇನೆಂದರೆ—ಭೂಮಂಡಲದಲ್ಲಿರುವ ಸ್ತ್ರೀಪುರುಷರೆಲ್ಲರ ಅವಗುಣವನ್ನು ಸದ್ಗುಣವನ್ನಾಗಿ ಮಾರ್ಪಡಿಸುವನಲ್ಲದೆ ಜಾತಿ, ಕಾಲ, ಜನಾಂಗ, ನಾಗರಿಕತೆ, ಬುದ್ಧಿ, ಮುಂತಾದ ಯಾವ ಭೇದವಿಲ್ಲದೆ ಎಂಥ ಮನುಷ್ಯರನ್ನಾದರೂ ಮಾರ್ಪಡಿಸತಕ್ಕ ಆಶ್ಚರ್ಯಕರವಾದ ಶಕ್ತಿಯನ್ನುಳ್ಳವನಾದ ಈ ಯೇಸುಕ್ರೀಸ್ತನು ಯಾರು ಎಂದು ವಿಚಾರಿಸೋಣ.

ನಜರೇತೆಂಬ ಆ ಸಣ್ಣ ಊರಿನಲ್ಲಿ ಜೀವಿಸುತಲಿದ್ದ ಆ ಯೇಸುಸ್ವಾಮಿಯ ಜೀವಿತ ಚರಿತ್ರೆಯನ್ನು ಓದಿನೋಡಿದರೆ ಆ ಕಾಲದಲ್ಲಿದ್ದ ಜನಗಳು ಆತನನ್ನು ಕೇವಲ ಸಾಧಾರಣವಾದ ಮನುಷ್ಯನೆಂದು ಭಾವಿಸಿದ್ದರೆಂಬುದಾಗಿ ಗೊತ್ತಾಗುತ್ತದೆ. ಯಾರ ಪ್ರಾಬಲ್ಯವಾಗಲಿ ಸಾಧಾರಣವಾಗಿ ಅವರವರ ಜೀವಕಾಲದಲ್ಲೋ ಅಥವ ಅವರ ಮರಣಾನಂತರ ಕೆಲವು ವರ್ಷಗಳವರೆಗೋ ಮಾತ್ರವೇ ಇರುವುದು ಭೂಲೋಕದಲ್ಲಿ ರೂಢಿಯಾಗಿದೆ. ಇದು ಕೆಲವು ಜನಗಳ ವಿಷಯದಲ್ಲಿ ಮಾತ್ರ ಒಪ್ಪದಿದ್ದರೂ ಕೆಲರ ಜೀವಿತಸ್ಥಿತಿಯನ್ನು ನೋಡಿದರೆ ಅವರ ನೆನಪೇ ಮರೆಯಾಗುವುದಾಗಿರುತ್ತದೆ. ಈ ವಾಡಿಕೆಯನ್ನು ಯೇಸುಕ್ರೀಸ್ತನ ವಿಷಯದಲ್ಲಿ ಹೇಳುವದಕ್ಕಾಗುವದಿಲ್ಲ. ಕಾಲವು ಗತಿಸಿ ಹೋಗುತ್ತ ಹೋಗುತ್ತ ಆತನ ಪ್ರಾಬಲ್ಯವು ಹೆಚ್ಚುತ್ತಿದೆಯೆಂದು ತಿಳಿಯತಕ್ಕದ್ದು. ಆತನ ವಿಷಯವಾಗಿ ಮನುಷ್ಯರಾದವರಿಗೆ ತಿಳಿಯಬೇಕಾದ ಸಂಗತಿಗಳು ವರುಷೇ ವರುಷವೂ ಹೆಚ್ಚುತ್ತಲೇ ಇವೆ. ಮತ್ತು ಆತನ ಶಿಷ್ಯರ ಸಂಖ್ಯೆಯು ವರ್ಷಂಪ್ರತಿಯೂ ಹೆಚ್ಚುತ್ತಲಿದೆ. ಕಳೆದ ವರ್ಷದಲ್ಲಿ ದಕ್ಷಿಣ ಹಿಂದುಸ್ಥಾನದೊಂದರಲ್ಲೇ ಎಂಟು ಸಾವಿರ ಮಂದಿಗಿಂತ ಹೆಚ್ಚಾಗಿಯೇ ಆತನ ಮತವನ್ನು ಸೇರಿದರು. ಕ್ರೀಸ್ತನ ಜೀವಿತಕಾಲದಲ್ಲಿ ಹೀಗಿರಲಿಲ್ಲ. ಆತನು ಪಾಲಸ್ತೀನ್ ದೇಶಕ್ಕೆ ಸೇರಿದ ಒಂದು ಸಾಧಾರಣವಾದ ಗ್ರಾಮವಾಸನಾಗಿದ್ದನು. ಈ ಪಾಲಸ್ತೀನ್ ದೇಶವಾದರೂ ಅಷ್ಟು ದೊಡ್ಡದಲ್ಲ. ಅದು ರೋಮನ್ ಚಕ್ರಾಧಿಪತ್ಯದಲ್ಲಿ ಒಂದು ಮೂಲೆಯಲ್ಲಿ ಸೇರಿದ್ದ ಚಿಕ್ಕ ದೇಶ. ಆತನು ಬೆಳೆದ ಮನೆಯೋ ಬಡಗಿಯ ಮನೆ. ತಾನೂ ಅದೇ ಕಸಬನ್ನು ಮಾಡತಕ್ಕವನಾಗಿದ್ದನು. ಹೀಗೆ ಆತನು ಯಾರ ಗೋಚರಕ್ಕೂ ಬಾರದೆ ಮೂವತ್ತು ವರ್ಷಗಳು ಕಳೆದ ಮೇಲೆ ಮನೆಯನ್ನು ಬಿಟ್ಟು ಸತ್ಯಬೋಧನೆಯನ್ನು ಮಾಡುತ್ತಾ ಊರು ಗ್ರಾಮಾಂತರಗಳನ್ನು ಸುತ್ತುತ್ತಾ ಆ ದೇಶದಲ್ಲೆಲ್ಲಾ ಸಂಚರಿಸಿದನು. ಆ ದೇಶದ ಧರ್ಮಾಧಿಕಾರಿಗಳಾದರೋ ಆತನ ಬೋಧನೆಯನ್ನು ಒಪ್ಪಲಿಲ್ಲ. ಜನದಲ್ಲಿ ರಾಜಕೀಯ ಪಕ್ಷದವರಾದರೋ ಆತನಿಗೆ ವಿರೋಧಿಗಳಾಗಿದ್ದರು. ಆದರೆ ಸಾಧಾರಣ ಜನಗಳು ಮುಖ್ಯವಾಗಿ ಹಳ್ಳಿಯವರು ಆತನನ್ನು ಮೆಚ್ಚಿ ಬಹುಮಂದಿಯಾಗಿ ಶಿಷ್ಯರಾದರು. ಇವರಲ್ಲಿ ಬಡವರೂ ಅವಿದ್ಯಾವಂತರೂ ಆದ ಹನ್ನೆರಡು ಮಂದಿಯನ್ನು ಆತನು ತನ್ನ ಮುಖ್ಯ ಶಿಷ್ಯರನ್ನಾಗಿ ಮಾಡಿಕೊಂಡನು. ಇವರಲ್ಲಿ ಒಬ್ಬನ ಹೊರತು ಮಿಕ್ಕಾದವರೆಲ್ಲರೂ ಆ ದೇಶದ ಉತ್ತರ ಭಾಗವಾದ ಗಲಿಲಾಯವೆಂಬ ಪ್ರಾಂತ್ಯದಿಂದ ಬಂದವರು. ದೇಶದ ರಾಜಕೀಯ ಪಕ್ಷಕ್ಕೆ ಪ್ರಧಾನ ಸ್ಥಾನವಾದ ಯೂದಾಯವೆಂಬ ಭಾಗದಿಂದ ಬಂದು ಶಿಷ್ಯನಾದ ಆ ಒಬ್ಬ ಮನುಷ್ಯನಾದರೋ ಕಡೆಗಾಲದಲ್ಲಿ ತನ್ನ ಸ್ವಾಮಿಗೆ ದ್ರೋಹವನ್ನು ಮಾಡಿ ಆತನನ್ನು ಶತ್ರುಗಳ ಕೈಯಲ್ಲಿ ಒಪ್ಪಿಸಿಕೊಟ್ಟನು. ಕ್ರೀಸ್ತನು ಈ ಪ್ರಕಾರವಾಗಿ ಸುಮಾರು ಮೂರುವರುಷಗಳು ಬೋಧಕೋದ್ಯೋಗವನ್ನು ನಡೆಸಿದ ಬಳಿಕ ಶತ್ರುಗಳ ಹಗೆತನವು ಹೆಚ್ಚಾದುದರಿಂದ ಅವರು ಆತನ ಮೇಲೆ ರಾಜಕೀಯ ಪಾಪ ತಪ್ಪುಗಾರನೆಂದು ದೋಷವನ್ನು ಆರೋಪಿಸಿ ಆತನನ್ನು ಕೊಂದುಹಾಕಿದರು.

ಯೇಸುಕ್ರೀಸ್ತನ ಜೀವಿತ ವೃತ್ತಾಂತವನ್ನು ಇನ್ನು ಸ್ವಲ್ಪ ವಿವರವಾಗಿ ವಿಚಾರಿಸಿ ನೋಡಿದರೆ ಆತನಲ್ಲಿ ಸಾಧಾರಣವಾದ ಮನುಷ್ಯಸ್ವಭಾವವೂ ಗುಣವೂ ಇದ್ದಿತೆಂಬುದಕ್ಕೆ ಅನೇಕ ಚಿಹ್ನೆಗಳು ತೋರಿಬಂದಾವು. ವಿಷ್ಣುವಿನ ಅವತಾರವಾದ ಕೃಷ್ಣನು ಹುಟ್ಟಿದಕೂಡಲೆ ತನ್ನ ತಂದೆತಾಯಿಗಳೊಡನೆ ಮಾತಾಡಿದನೆಂದು ಹಿಂದೂ ಮತಸ್ಥರು ಹೇಳುವರಷ್ಟೆ. ಇಂಥ ಅದ್ಭುತಕಾರ್ಯವನ್ನು ಕ್ರೀಸ್ತನು ಕೂಸಾಗಿರುವಾಗ ಮಾಡಿದನೆಂದು ನಾವು ಕೇಳುವುದಿಲ್ಲ. ಆತನು ಶೈಶವದಲ್ಲಿ ಇತರ ಕೂಸುಗಳಂತೆಯೇ ಇದ್ದನು. ಆತನು ಬುದ್ಧಿಯಲ್ಲಿ ಸರ್ವಸಂಪೂರ್ಣವಾದ ಶಿಶುವಾಗಿ ಹುಟ್ಟಲಿಲ್ಲ. ಆತನು ಪ್ರಾಯದಲ್ಲಿಯೂ ದೇಹದಾರ್ಢ್ಯದಲ್ಲಿಯೂ ಹೆಚ್ಚಿದ ಹಾಗೆಲ್ಲಾ ಬುದ್ಧಿಯಲ್ಲಿಯೂ ಮನುಷ್ಯರಿಗೆ ಸಾಮಾನ್ಯವಾದ ಇತರ ವಿಷಯಗಳಲ್ಲಿಯೂ ಅಭಿವೃದ್ಧಿಯಾದನು. ಆತನು ಪೂರ್ಣವಾಗಿ ಬೆಳೆದು ಗಂಡಸಾದ ಮೇಲೆಯೂ ತನಗೆ ಕೆಲವು ಸಂಗತಿಗಳು ತಿಳಿದೇ ಇಲ್ಲವೆಂದು ತಾನೇ ಹೇಳಿದನು. ಆತನಿಗೆ ಹಸಿವೂ ದಾಹವೂ ತಪ್ಪಲಿಲ್ಲ. ತನ್ನ ಕೊರತೆಗಳನ್ನು ಪರಿಹರಿಸಿಕೊಳ್ಳುವ ವಿಷಯಗಳಲ್ಲಿ ಇತರ ಮನುಷ್ಯರಿಗೆ ಯಾವ ಯತ್ನಗಳು ಸಾಮಾನ್ಯವಾಗಿವೆಯೋ ಅವುಗಳನ್ನು ವಿನಾಯಿಸಿ ಬೇರೆ ಯಾವ ಯತ್ನಗಳನ್ನೂ ಉಪಯೋಗಿಸಿಕೊಳ್ಳುವದಕ್ಕೆ ಆತನಿಗೆ ಸಾಮರ್ಥ್ಯವು ಇದ್ದರೂ ಇಷ್ಟಪಡಲಿಲ್ಲವೋ ಅಥವ ಅಂಥ ಸಾಮರ್ಥ್ಯವೇ ಇರಲಿಲ್ಲವೋ ತಿಳಿಯದು. ಆತನು ಬಡವನಾಗಿದ್ದನೆಂಬ ವಿಷಯದಲ್ಲಂತೂ ಯಾವ ಸಂಶಯವೂ ಇರಲಿಲ್ಲ. ಆತನು ನಜರೇತಿನಲ್ಲಿದ್ದ ಮನೆಯನ್ನು ಬಿಟ್ಟಮೇಲೆ ಯಾವ ಸ್ಥಾನದಲ್ಲಿಯೂ ನೆಲೆಯಾಗಿ ನಿಲ್ಲದೆ ಯಾರಲ್ಲಿ ತನಗೆ ಸ್ನೇಹಿತರು ದೊರಕಿದರೋ ಆಯಾ ಸ್ಥಳಗಳಲ್ಲಿ ಅತಿಥಿಯಾಗಿದ್ದುಕೊಂಡು ಕಾಲಹರಣವನ್ನು ಮಾಡಿದನು.

ಆತನನ್ನು ಆಕ್ಷೇಪಿಸುತ್ತಿದ್ದವರು ಅನೇಕ ಸಂದರ್ಭಗಳಲ್ಲಿ ತಾನು ಸಾಧಾರಣವಾದ ಮನುಷ್ಯನಿಗಿಂತ ಹೆಚ್ಚೆಂದು ತೋರಿಸುವ ಚಿಹ್ನೆ ಸೂಚಕ ಕಾರ್ಯವನ್ನು ಮಾಡಿ ತೋರಿಸಬೇಕೆಂಬದಾಗಿ ಕೇಳಿದರು. ಆದರೆ ಆತನು ಒಂದುಸಾರಿಯಾದರೂ ಅವರ ಮಾತಿನಂತೆ ನಡೆಯದೆ ಒಲ್ಲೆನೆಂದು ಹೇಳಿದನು. ಆತನಿಗೆ ಮಹತ್ಕಾರ್ಯಗಳನ್ನು ಮಾಡುವ ಸಾಮರ್ಥ್ಯವು ಇಲ್ಲವಾದದರಿಂದಲೇ ಹೀಗೆ ಒಲ್ಲೆನೆನ್ನುತ್ತಾನೆಂಬದಾಗಿ ಆ ವಿರೋಧಿಗಳು ಹೇಳಿದರೆಂಬುದರಲ್ಲಿ ಸಂಶಯವಿಲ್ಲ. ಏನಂದರೆ ಆತನೂ ಮನುಷ್ಯ ಮಾತ್ರನೇ ಎಂದು ಅವರು ನಂಬಿದ್ದರೆಂಬುದು ಪರಿಷ್ಕಾರವಾಗಿದೆ. ಆತನ ವಿಷಯದಲ್ಲಿ ಬರೆಯಲ್ಪಟ್ಟಿರುವ ಚರಿತ್ರ ವೃತ್ತಾಂತಗಳನ್ನು ನೋಡಿದರೂ ಆತನ ಸ್ವಭಾವ ತತ್ವದ ವಿಷಯದಲ್ಲಿ ಆತನು ಮನುಷ್ಯಮಾತ್ರನಲ್ಲವೆಂದು ಸೂಚಿತವಾದರೂ ಆತನು ಮನುಷ್ಯನಾಗಿದ್ದನೆಂಬ ಈ ಮಾತು ಸಹ ನಿಜವೆಂದು ಗೊತ್ತಾಗುತ್ತದೆ. ಹ್ಯಾಗಂದರೆ—ಮನುಷ್ಯರನ್ನು ಪಾಪದಲ್ಲಿ ಬೀಳಿಸತಕ್ಕಂಥ ದುಷ್ಪ್ರೇರಣೆಗಳು ಆತನಿಗೂ ಬಂತೆಂತಲೂ ಆತನೂ ಇತರ ಮನುಷ್ಯರಂತೆ ಸಹಾಯವನ್ನಪೇಕ್ಷಿಸಿ ದೇವರನ್ನು ಬೇಡಿಕೊಂಡನೆಂತಲೂ ಆ ಚರಿತ್ರ ಪುಸ್ತಕಗಳಲ್ಲಿ ನಿಸ್ಸಂದೇಹವಾಗಿ ಹೇಳಿದೆ. ಇಷ್ಟೇ ಅಲ್ಲ. ಆತನು ಮನುಷ್ಯರೂಪದಲ್ಲಿ ತೋರುತ್ತಿದ್ದ ದೇವರಾಗಿದ್ದನೆಂತಲೇ ಅಲ್ಲ, ಆತನು ಸ್ವಭಾವತಃ ಮನುಷ್ಯನೇ ಆಗಿದ್ದನು. ಆತನು ದೇವಾವತಾರಿಯಾಗಿದ್ದದ್ದು ಒಂದೇ ಅಲ್ಲ, ನಾವು ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ತನ್ನಲ್ಲಿ ನಂಬಿಕೆಯಿಡುವಂಥ ಜನಗಳಿಗೆ ಶಕ್ತಿಯನ್ನು ಕೊಡುವ ಘನವೂ ಬಲವೊಂದು ವಿಷಯದಲ್ಲಿ ವಿನಾಯಿಸಿ ಮಿಕ್ಕ ಎಲ್ಲಾ ವಿಷಯಗಳಲ್ಲಿ ಆತನು ಇತರ ಮನುಷ್ಯರಂತೆ ಕೇವಲ ಬಲಹೀನನಾಗಿಯೂ ಇದ್ದನೆಂದು ಆತನ ಚರಿತ್ರೆಗಳಿಂದ ತಿಳಿದುಬರುತ್ತದೆ. ಆತನು ಮನುಷ್ಯನು ನಿಜ, ಆದರೆ ಆತನು ಸರ್ವ ಸಂಪೂರ್ಣನಾದ ಮನುಷ್ಯನಾಗಿದ್ದನು. ಮನುಷ್ಯತ್ವದಲ್ಲಿ ಆತನಿಗಿದ್ದ ಅನುಭವವು ಸಂಪೂರ್ಣವಾಗಿದ್ದಿತು. ದೇವರ ಚಿತ್ತದ ವಿಷಯದಲ್ಲಿ ಮನುಷ್ಯರಿಗೆ ಪರಮಕರ್ತವ್ಯವಾಗಿರತಕ್ಕ ವಿಧೇಯತ್ವವೂ ಆತನಲ್ಲಿ ಸಂಪೂರ್ಣವಾಗಿದ್ದಿತು. ಇಷ್ಟೇ ಅಲ್ಲ, ಆತನ ಸ್ವಭಾವದಲ್ಲಿ ಬೇರೆ ತತ್ವಗಳು ಕೂಡಿದ್ದುವೆಂಬುದಕ್ಕೆ ಬಹು ಬಲವಾದ ಆಧಾರಗಳು ಆತನ ಜೀವಿತಚರಿತ್ರೆಯಲ್ಲಿ ಸಿಕ್ಕುತ್ತವೆ. ಅವುಗಳನ್ನು ಕುರಿತು ಮುಂದಣವಾರ ಆಲೋಚಿಸೋಣ. ಯೇಸುಸ್ವಾಮಿಯು ಯಾರೆಂಬ ಈ ಪ್ರಶ್ನೆಗೆ ಆತನು ಸಂಪೂರ್ಣನಾದ ಮನುಷ್ಯನೆಂಬುದೇ ಮೊದಲು ಕೊಡತಕ್ಕ ಉತ್ತರವಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಆಫ್ಘಾನಿಸ್ಥಾನದ ಅಮೀರರವರು ತಮ್ಮ ಸೈನ್ಯಕ್ಕೆ ಜೀನ ಮೋಜಾ, ಬಿರಸು ಮುಂತಾದವುಗಳನ್ನು ಕೊಂಡುತರಬೇಕೆಂದು ನಿಪುಣರನ್ನು ಹಿಂದುಸ್ಥಾನಕ್ಕೆ ಕಳುಹಿಸಿರುತ್ತಾರೆ.

❖❖❖❖❖

ವೈಸ್‌ರಾಯಿ ಲಾರ್ಡ್ ಕರ್ಜನ್‌ರವರಿಗೆ ಕಳೆದವಾರ ಆಮಶಂಕೆ ಉಪದ್ರ ಕಾಣಿಸಿಕೊಂಡು, ಸುಮಾರು ೮—೧೦ ದಿನ ಬಂಗಲೆಬಿಟ್ಟು ಬರುತಿರಲಿಲ್ಲ. ಈಗೀಗ ಅವರು ಆರೋಗ್ಯಹೊಂದುತ್ತಿದ್ದಾರೆಂದು ಪ್ರಕಟವಾಗಿದೆ.

❖❖❖❖❖

ಕಲ್ಕತ್ತಾ ಪಟ್ಟಣದ ವಾಟ್‌ಗಂಜ್ ಎಂಬ ಸೇತುವೆಯ ಮೇಲೆ ಹೋಗುತಿದ್ದ ಒಬ್ಬ ಸ್ತ್ರೀಯನ್ನು ಒಬ್ಬ ಮಹಮ್ಮದೀಯ ಹುಡುಗನು ಅಗೌರವವಾಗಿ ಮಾತನಾಡಿಸಿದ್ದಕ್ಕೋಸ್ಕರ ಅವನಿಗೆ ಕೋರ್ಟಿನಲ್ಲಿ ೨೦ ರೂಪಾಯಿ ಜುಲ್ಮಾನೆ ಆಯಿತು.

❖❖❖❖❖

ಮದರಾಸ್ ಆಧಿಪತ್ಯದ ಕಂದಾಯದ ವಸೂಲಿಯು ಇದುವರೆಗೆ ೧೨ ಲಕ್ಷ ರೂಪಾಯಿ ಕಡಿಮೆ ಆಗಿದೆ. ಜಮೀನ್ ಕಂದಾಯದ ಬಾಬಿನಲ್ಲೇ ೯ ಲಕ್ಷ ಕಡಿಮೆ. ಕೆಲವು ಕಡೆಗಳಲ್ಲಿ ಸುಮಾರಾಗಿ ಕ್ಷಾಮಪ್ರಾಪ್ತವಾಗಿರುವದೇ ಕಾರಣವೆಂದು ತಿಳಿಯಬರುವುದು.

❖❖❖❖❖

ಭೂಕಂಪದ ದೆಸೆಯಿಂದ ಕೊಲೂ ಕಾಂಗ್ರಾ ಕಣಿವೆಗಳಲ್ಲಿ ಕಷ್ಟನಷ್ಟಗಳಿಗೆ ಗುರಿಯಾದ ಪ್ರಜೆಗಳಿಗೋಸ್ಕರ ಲೆಫ್ಟಿನೆಂಟ್ ಗವರ್ನರವರು ಒಂದು ರಿಲೀಫ್ ಫಂಡನ್ನು ಸ್ಥಾಪಿಸಿರುತ್ತಾರಷ್ಟೆ. ಈ ಫಂಡಿಗೆ ಕಳೆದ ೨೫ನೆ ತಾ॥ ವರೆಗೆ ೧೧ ಲಕ್ಷ ರೂಪಾಯಿ ಚಂದಾ ವಸೂಲಾಗಿರುವುದು.

❖❖❖❖❖

ಬೊಂಬಾಯಿ ಪಟ್ಟಣದ ಬಾಂದೋರಾದಲ್ಲಿದ್ದ ಪ್ರಖ್ಯಾತ ಧನಭಾಯಿಜಿ ಎಂಬಾಕೆಯು ತೀರಿಹೋದದರಿಂದ ಆಕೆಯ ಉತ್ತರಕ್ರಿಯಾದಿಗಳನ್ನು ಮಾಡುವಾಗ್ಗೆ ಆಕೆಯ ಹೆಸರಿನಲ್ಲಿ ೧೯,೦೦೦ ರೂಪಾಯಿಗಳನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಬಂಧುಗಳು ತೆಗೆದಿಟ್ಟರು.

❖❖❖❖❖

ಮಾಲ್ಡೀವ್ ದ್ವೀಪಗಳ ಸುಲ್ತಾನರಿಗೆ ಮೊನ್ನೆ ೨೩ನೆ ತಾ॥ ನಲ್ಲಿ ಪಟ್ಟಾಭಿಷೇಕವಾಯಿತು. ಈ ಉತ್ಸವದಲ್ಲಿ ಹಾಜರಾಗಿದ್ದ ಸುಲ್ತಾನರಿಗೆ ರಾಜದಂಡವನ್ನು ಒಪ್ಪಿಸಿಕೊಡುವುದಕ್ಕೆ ಸಿಲೋನ್ ದ್ವೀಪದ ಗವರ್ನರವರ ಪ್ರೈವೆಟ್ ಸೆಕ್ರೆಟರಿ ಸರ್ ಜಾನ್ ಕೀರ್ಯವರು ಅಲ್ಲಿಗೆ ಹೋಗಿದ್ದು ಮೊನ್ನೆ ಶನಿವಾರ ವಾಪಸು ಬಂದರು.

❖❖❖❖❖

ರಂಗೂನ್ ಪಟ್ಟಣದಲ್ಲಿ ದೊಡ್ಡ ಮನುಷ್ಯನಾದ ಮಾಂಗ್ ಓಹ ಗ್ಯೀ ಎಂಬಾತನು ಶೀಮೆಗೆ ಹೋಗಿದ್ದಾನೆಂತಲೂ, ಆತನ ಮಗನನ್ನು ದುಷ್ಟರ್ಯಾರೋ ಅಪಹರಿಸಿಕೊಂಡು ಹೋದರೆಂತಲೂ ತಿಳಿದೆವಷ್ಟೆ. ಅವನು ಇನ್ನೂ ಪತ್ತೇ ಆಗಲಿಲ್ಲ. ಆ ಹುಡುಗನನು ಕೊಂದುಬಿಟ್ಟಿರಬಹುದೆಂದು ಈಗ ವರ್ತಮಾನ ಹುಟ್ಟಿದೆ.

❖❖❖❖❖

ಇಂಡಿಯಾ ಗವರ್ನಮೆಂಟಿನವರು ನಾಲ್ಕುಕೋಟಿ ರೂಪಾಯಿ ಸಾಲಬೇಕೆಂತಲೂ ಅದಕ್ಕೆ ಶೇಕಡಾ ವರುಷಕ್ಕೆ ೩॥ ಯಂತೆ ಬಡ್ಡಿ ಕೊಡುವುದಾಗಿಯೂ ಪ್ರಕಟಿಸಿದ್ದಾರೆ. ನೆನ್ನೆ ಈ ಹಣವನ್ನು ದರಖಾಸ್ತುಗಳ ಮೂಲಕ ಕಲ್ಕತ್ತಾ, ಮದರಾಸ್, ಬೊಂಬಾಯಿ, ಅಲಹಾಬಾದ್, ಲಾಹೋರ್ ಪಟ್ಟಣಗಳಲ್ಲಿ ಕೊಡಿಸುವವರಾಗಿದ್ದರು.

❖❖❖❖❖

ಬೊಂಬಾಯಿ ಪಟ್ಟಣದಲ್ಲಿ ಮೋಟಾರ್ ಕಾರ್ ಎಂಬ ಗಾಡಿಯನ್ನು ಅತಿವೇಗವಾಗಿ ಓಡಿಸಿಕೊಂಡು ಹೋಗುವವರಿಗೆ ಸರ್ಕಾರದವರು ಶಿಕ್ಷೆ ಮಾಡಬೇಕೆಂದು ವಿಧಿಸಿದಾರೆ. ಕಳೆದವಾರ ಮೆ॥ ಗುರವರೂ ಮೆ॥ ಎಲ್ಸ್ನರವರೂ ಮ್ಯಾಜಿಸ್ಟ್ರೇಟ್ ಕೋರ್ಟಿನ ದರ್ಯಾಪ್ತಿ ಮಾಡಲ್ಪಟ್ಟು ೨೦, ೧೫ ರೂಪಾಯಿ ಜುಲ್ಮಾನೆ ತೆತ್ತು ಬಂದರು.

ಕಲ್ಕತ್ತಾ ಪಟ್ಟಣದ ಚಿತ್ಪೂರ್ ಎಂಬ ಮೊಹಲೆಯಲ್ಲಿ ಅಮರ ... ಎಂಬ ಬೀದಿಯಲ್ಲಿರುವ ಇಬ್ಬರು ಸಾಹುಕಾರರ ಮನೆಗೆ ... ಳೆದವಾರ ಕಳ್ಳರು ಬಿದ್ದು, ಸುಮಾರು ೧೯,೦೦೦ ರೂಪಾ ... ನಗನಾಣ್ಯಗಳನ್ನು ಕದ್ದುಬಿಟ್ಟರು. ಆ ಕಳ್ಳರ ಪತ್ತೆ ... ಆಗಲಿಲ್ಲ. ಪೊಲೀಸಿನವರು ಪತ್ತೆಮಾಡುವುದಕ್ಕೆ ಬಹಳ ... ಪಡುತ್ತಿದ್ದಾರೆ.

* * * *

ದೇಹಲಿ ಪಟ್ಟಣದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರ ಮುಂದೆ ... ಹಿಂದೂಸ್ಥಾನದ ಸೈನ್ಯದಲ್ಲಿ ...೦-೬೦ ಸಾವಿರ ಮಂದಿಯನ್ನು ... ಪ್ರದರ್ಶನಮಾಡುವುದಕ್ಕೆ ಈಗಿನಿಂದ ಅಲ್ಲಿ ದೊಡ್ಡ ಏರ್ಪಾಡು ನಡೆಯುತ್ತಿದೆ. ಸುಮಾರು ೭,೦೦೦ ಕೂಲಿಯವರು ದಿನವೂ ಕಾಮಗಾರಿ ... ನಡೆಸುತ್ತಿದ್ದಾರೆ. ಕೆರೆಗಳ, ಕೊಳಗಳು, ಉದ್ಯಾನವನಗಳು, ಬಂಗಲೆಗಳೇ ಮುಂತಾದವುಗಳನ್ನು ಕಟ್ಟುತ್ತಿರುವರು.

* * * *

ಮೈಸೂರ ಸಂಸ್ಥಾನದ ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ತಮ್ಮ ಸಂಸ್ಥಾನದಲ್ಲಿ ಸತ್ಕರಿಸುವುದಕ್ಕೆ ೩ ಲಕ್ಷ ರೂಪಾಯಿ ಖರ್ಚು ಮಾಡುತ್ತಾರೆಂದು ಮೊದಲು ಪ್ರಕಟವಾಗಿತ್ತು. ... ಇದು ನಿಜವಲ್ಲವೆಂತಲೂ ಮಹಾರಾಜರು ಆ ಉತ್ಸವಕ್ಕೆ ...೦ ಸಾವಿರ ರೂಪಾಯಿ ಮಾತ್ರ ಮಂಜೂರಿ ಮಾಡಿದ್ದಾರೆಂತಲೂ ಈಚೆಗೆ ... ಆದರೆ ಈಗಲಾದರೋ ಯುವರಾಜರವರು ಆ ಸಂಸ್ಥಾನಕ್ಕೆ ... ಹೋಗುವುದಕ್ಕೆ ಸಮಯವಾಗುವುದಿಲ್ಲವೆಂದು ಗವರ್ನಮೆಂಟಿನ ... ಮೂಲಕ ತಿಳಿಸಿದ್ದಾರೆ.

* * * *

ಪಂಜಾಬ್ ಅಧಿಸತ್ಯದಲ್ಲಿ ನಾನಾ ಕೈಗಾರಿಕೆಗಳ ಕಾರ್ಖಾನೆಗಳು ಒಟ್ಟು ...೦ ಕ್ಕೀಗಲೂ ಹೆಚ್ಚಾಗಿರುತ್ತವೆ. ಈ ಕಾರ್ಖಾನೆಯ ವ್ಯಾನೇಜರುಗಳು ಸೇರಿ ಒಂದು ಸಭೆ ಮಾಡಿಕೊಂಡು, ಒಂದು ಕಾರ್ಖಾನೆಯ ... ಕೆಲಸದವರು ಇನ್ನೊಂದು ಕಾರ್ಖಾನೆಗೆ ಕೆಲಸಕ್ಕೆ ಹೋದರೆ ಅಂತವರನ್ನು ಸೇರಿಸಿಕೊಳ್ಳಕೂಡದೆಂತಲೂ, ಸರ್ಟಿಫಿಕೇಟ್ ಇದ್ದ ಕೆಲಸಗಾರರನ್ನು ಮಾತ್ರ ಸೇರಿಸಿಕೊಳ್ಳಬೇಕೆಂತಲೂ ಒಪ್ಪಂದಮಾಡಿಕೊಂಡಿದ್ದಾರೆ. ಈ ಸಂಘಕ್ಕೆ ೫೦೦ ಕಾರ್ಖಾನೆಗಳ ಮಾಲಿಕರು ಸೇರಿಕೊಂಡಿರುವರು.

* * * *

ಹಿಂದೂಸ್ಥಾನದಲ್ಲಿ ಪ್ಲೇಗ್ ಉಪದ್ರವ ಹೆಚ್ಚು. ಈ ವರುಷ ... ಮಾಹೆ ... ವಷ್ಟು ಹಿಂದೆ ಯಾವ ವರುಷದಲ್ಲೂ ಇಲ್ಲ. ಈ ... ಪ್ರಾಂತ್ಯಗಳಲ್ಲಿ ಹೀಗಿನ ನಾಲ್ಕು ...೯ ಮರಣಗಳು ವಹಿಸ್ತು ಆದ ... ಈ ಪೈಕಿ ಬೊಂಬಾಯಿ ಅಧಿಪತ್ಯ ... ಬಂಗಾಳ ೧೯೬, ಮದರಾಸ್ ಅಧಿಪತ್ಯ ೧೫೫, ಬಂಗಾಳ ೬೪, ಸಂಯುಕ್ತ ಅಧಿಪ ... ಗಳು ೬, ಪಂಜಾಬ್ ೪೯, ಮೈಸೂರು ಸಂಸ್ಥಾನ ೪೯, ರಾಜಪುತಾನಾ ೧೬—ಈ ಪ್ರಕಾರ ಪ್ಲೇಗ್ ಮರಣಗಳಾಗಿವೆ. ಹೀಗೆಯೇ ... ಉಪದ್ರವವು ನಿರ್ನಾಮವಾಗಲೆಂದು ಸಕಲರೂ ಹಾರೈಸುವರು.

* * * *

ಉತ್ತರ ದೇಶದಲ್ಲಿ ಬುಟ್ಲಾ ನಗರದ ಮಾರ್ಗದ ಚಂದ್ ...೦ ... ವರ್ಷದವನು ಒಂದು ಪೆಟ್ಟಿಗೆಯಲ್ಲಿ ಸುಮಾರು ೧೯,೦೦೦ ರೂಪಾಯಿ ಬೆಲೆ ... ನಗಗಳನ್ನೂ ಕೆಲವು ನಾಣ್ಯಗಳನ್ನೂ ... ಪಟ್ಟಣಕ್ಕೆ ರೈಲಿನಲ್ಲಿ ಪಾರ್ಸೆಲ್ ಮಾಡಿ ಕಳುಹಿಸಿದನು. ಈ ಪಾರ್ಸೆಲನ್ನು ರಿಜಿಸ್ಟರಾಗಲಿ ಇನ್ಶೂರಾಗಲಿ ಮಾಡಿರಲಿಲ್ಲ. ಕಲ್ಕತ್ತೆಯಲ್ಲಿ ... ನಾರಾಯಣ ಮಿತ್ರ ಎಂಬುವನು ಸ್ಟೇಷನ್ನಿಗೆ ಹೋಗಿ ಪಾರ್ಸೆಲು ತನಗೇ ಬಂದುದೆಂದು ಹೇಳಿ, ತೆಗೆದುಕೊಂಡು ಹೋದನು. ಈಚೆಗೆ ಇವನು ಮೋಸಗಾರನೆಂದೂ ಇವನ ಜೊತೆ ... ಇನ್ನೂ ಅನೇಕರಿದ್ದಾರೆಂದೂ ಗೊತ್ತಾಯಿತು.

* * * *

ಲಾಹೋರ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಅಲ್ಲಿನ ಹಾಲು ಮಾರತಕ್ಕವರೆಲ್ಲಾ ಲೈಸೆನ್ಸ್ ಪಡೆಯಬೇಕೆಂತಲೂ, ಲೈಸೆನ್ಸು ಇಲ್ಲದೆ ಯಾರಾದರೂ ಹಾಲುಮಾರಿದರೆ ಶಿಕ್ಷೆ ವಿಧಿಸುತ್ತೇವೆಂತಲೂ ... ಮಾಡುವವರು ... ದಾರೆಂದು ತಿಳಿಸಿದೆವಷ್ಟೆ. ಇದನ್ನು ಕೇಳಿ ... ಪ್ರಜೆಗಳು ಬಹಳ ಅಸಮಾಧಾನಪಟ್ಟು, ಒಂದು ದೊಡ್ಡ ಸಭೆ ಮಾಡಿ, ಈ ಲೈಸೆನ್ಸಿನಿಂದ ಹಾಲಿನ ಬೆಲೆ ಬಹಳ ತಗ್ಗಾಗಿ ಪ್ರಜೆಗಳಿಗೆ ಕಷ್ಟವಾಗುವುದೆಂದು ಸರ್ಕಾರಕ್ಕೆ ಅರಿಕೆ ಮಾಡಿಕೊಂಡಿದ್ದಾರೆ. ಈ ಸಭೆ ಕೂಡುವುದಕ್ಕೆ ಯಾವ ಕಟ್ಟಡವೂ ಸಾಲದೆ ಹೋದ್ದರಿಂದ ಪ್ರಜೆಗಳೆಲ್ಲಾ ಮೈದಾನದಲ್ಲೇ ಸೇರಿದ್ದರೆಂದು ತಿಳಿದು ಬಂದಿದೆ.

* * * *

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸಕ್ಕರೆ ಡಿಸ್ಟ್ರಿಕ್ಟಿನಲ್ಲಿ ದೊಡ್ಡ ನೀರಾವರಿ ಕಾಮಗಾರಿ ನಡೆಯುವುದು. ಮೂ ಎಂಬ ನದಿಯಿಂದ ೩೯ ಮೈಲಿ ಉದ್ದ ದೊಡ್ಡ ನಾಲೆಯನ್ನೂ ೬೪ ಮೈಲಿ ... ಕಿರು ನಾಲೆಗಳನ್ನೂ ತೆಗೆಯುವರು. ಈ ನಾಲೆಗಳ ಕೆಳಗೆ ...೫,೦೦೦ ಎಕರೆ ಜಮೀನು ತರೀ ಫಸಲಿಗೆ ಬರುತ್ತೆಂದೂ ಈ ... ಕಾಮಗಾರಿಗೆ ಹಾಕುವ ಹಣಕ್ಕೆ ಬಡ್ಡಿಯು ೫ ರೂಪಾಯಿ ... ಉತ್ಪತ್ತಿಯಾಗುವುದೆಂದೂ ಅಂದಾಜು ಹಾಕಿದ್ದಾರೆ. ... ಸ್ಟೇಟ್ ಸೆಕ್ರೆಟರಿಯವರು ಈ ನಾಲಾ ಕಾಮಗಾರಿಯನ್ನು ಮಂಜೂರು ಮಾಡಿ, ಈ ಕಾಮಗಾರಿಗೆ ೩೫,೬೧,೦೦೦ ರೂಪಾಯಿ ಖರ್ಚು ಮಾಡುವಂತೆ ಹುಕುಂ ಕೊಟ್ಟಿದ್ದಾರೆ.

* * * *

ಕಾಬೂಲ್ ಪಟ್ಟಣದಲ್ಲಿ ಅಮೀರರವರು ಪ್ರಜೆಗಳ ಮಾನ ಧನ ಪ್ರಾಣಗಳನ್ನು ಉಸ್ತುವಾರಿ ಮಾಡುವುದಕ್ಕೆ ೬,೭೦೦ ಮಂದಿ ಪೊಲೀಸಿನವರನ್ನು ನೇಮಕಮಾಡಿದ್ದಾರೆ. ಇವರ ಮೇಲೆ ಇಬ್ಬರು ಅಧಿಕಾರಿಗಳೂ ಇವರಿಬ್ಬರ ಮೇಲೂ ಒಬ್ಬ ಕೊತ್ವಾಲನೂ ಇರು ... ಆ ಇಬ್ಬರು ಅಧಿಕಾರಿಗಳಲ್ಲಿಯೂ ಕಾರಣಾಂತರದಿಂದ ಮನಸ್ತಾಪ ಹುಟ್ಟಿ ಕತ್ತಿಹಿಡಿದು ಒಬ್ಬರ ಮೇಲೊಬ್ಬರು ನುಗ್ಗಿ ಕಾದಾಡಲಾರಂಭಿಸಿದರು. ಕೊತ್ವಾಲನು ಒಬ್ಬನನ್ನು ಹಿಡಿದು ಅಮೀರರ ಮುಂದೆ ನಿಲ್ಲಿಸಿದಾಗ ಅಮೀರರು ಅವನಿಗೆ ಮರಣದಂಡನೆಯನ್ನೇ ವಿಧಿಸಿದರು. ಸಿಪಾಯಿಗಳು ಸ್ವಲ್ಪವೂ ಹಿಂದುಮುಂದು ನೋಡದೆ ಆ ಕ್ಷಣ ಅವನನ್ನು ಗುಂಡುಹೊಡೆದು ಕೊಂದುಬಿಟ್ಟರು.

* * * *

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಲ್ ಕಮೀಷನರುಗಳ ಪೈಕಿ ಒಬ್ಬರು ರಸ್ತೆಗಳ ಉಭಯಪಾರ್ಶ್ವಗಳಲ್ಲೂ ಹಾಕಿರುವ ಗಿಡಗಳಿಂದ ಪ್ರಜೆಗಳಿಗೆ ಬಹಳ ಕೆಡಕಾಗುವುದೆಂತಲೂ, ಈ ಗಿಡಗಳು ವಿಷಜನಕವಾದ ವಾಯುವನ್ನು ಉಗಿಯುತ್ತವೆಂತಲೂ ತಿಳಿಸಿದ್ದಾರೆ. ಇದು ವಿಚಿತ್ರವಾದ ಅಭಿಪ್ರಾಯವಾಗಿದೆ. ಈಗಿನ ನವನಾಗರೀಕರೆಲ್ಲಾ ಗಿಡಗಳ ಹೆಚ್ಚಾಗಿದ್ದಷ್ಟೂ ಪ್ರಾಣಿಗಳ ಆರೋಗ್ಯ ಹೆಚ್ಚುವುದೆಂದೂ ಪ್ರಾಣಿಗಳಿಂದ ಉಗಿಯಲ್ಪಡುವ ವಿಷವಾಯುವನ್ನೆಲ್ಲಾ ಗಿಡಗಳು ಹೀರಿಕೊಂಡು, ಅದಕ್ಕೆ ಪ್ರತಿಯಾಗಿ ಪ್ರಾಣಿಗಳ ಪ್ರಾಣಧಾರಣೆಗೆ ಆವಶ್ಯವಾದ ಪ್ರಾಣವಾಯುವನ್ನು ಉಗಿಯುತ್ತವೆಂದೂ ಸಿದ್ಧಾಂತ ಪಡಿಸಿರುತ್ತಾರೆ. ಈ ಸಿದ್ಧಾಂತಕ್ಕೂ ಮೇಲ್ಕಂಡ ಮೆಂಬರ ಅಭಿಪ್ರಾಯಕ್ಕೂ ರಾತ್ರಿ ಹಗಲಾಗುವುದು. ಈ ಮೆಂಬರು ಹಾಗೆ ಯಾಕೆ ಹೇಳಿದರೋ ತಿಳಿಯಬೇಕಾಗಿದೆ.

* * * *

ಬ್ಯಾರೀಲಿ ಪಟ್ಟಣದ ದಂಡಿನಲ್ಲಿ ಪ್ಲೇಗ ಉಪದ್ರವನ್ನು ಅಣಗಿಸುವುದಕ್ಕೆ ಸರ್ಕಾರದವರು ಹೊಸ ಏರ್ಪಾಡು ಮಾಡಿದರು. ಅಲ್ಲಿ ಕಟ್ಟಿಗೆ ಸೌದೆಗಳು ಅಪಾರವಾಗಿ ಸಿಕ್ಕುವುದು. ೧ ರೂಪಾಯಿಗೆ ೧೦—೧೨ ಗಾಡಿ ತುಂಬುವಷ್ಟು ಸಿಕ್ಕುತ್ತದೆ. ಇದನ್ನು ತಂದು ಪ್ಲೇಗ್ ಆದ ಮನೆಗಳಲ್ಲಿ ಹರಡಿ, ಬೆಂಕಿಹಾಕಿ ಉರಿಸಿದರು. ಉರಿಯು ಮೇಲ್ಛಾವಣಿಗೆ ಹತ್ತಲಿಲ್ಲ. ನೆಲದ ಮೇಲೆಯೇ ಸ್ವಲ್ಪಹೊತ್ತು ಉರಿದು ಆರಿಹೋಯಿತು. ಇದರ ಕಾವು ಭೂಮಿಯೊಳಕ್ಕೆ ೧—೨ ಅಡಿ ತನಕ ಪ್ರವೇಶವಾಗಿ, ಸಮಸ್ತವಿಧವಾದ ಕ್ರಿಮಿಗಳನ್ನೂ ನಾಶಮಾಡಿಬಿಟ್ಟಿತು. ಈ ಪ್ರಕಾರ ಡಿಸಿನ್‌ಫೆಕ್ಟ್ ಮಾಡಿದ ಮನೆಗಳಲ್ಲಿ ಪುನಃ ಪ್ಲೇಗ್ ಉಪದ್ರ ಪ್ರಾಪ್ತವಾಗಲಿಲ್ಲ. ಬಡಬಗ್ಗರು ಸಹ ಈ ಹೊಸ ರೀತಿಯ ಚಿಕಿತ್ಸೆಯನ್ನು ನಡಸುತ್ತಿದ್ದಾರೆ ಎಂಬುದಾಗಿ ಅಲ್ಲಿನ ಅಧಿಕಾರಿಗಳು ಪ್ರಕಟಿಸಿದ್ದಾರೆ.

* * * *

ಗುಜರಾತ್, ಸೂರತ್, ಅಹಮದಾಬಾದ್, ಪೂನಾ, ಈ ಮುಂತಾದ ಕಡೆಗಳಲ್ಲಿ ಕಳೆದ ವಾರ ಎರಡು ದಿನ ಪೂರಾ ಮಳೆ ಸುರಿಯಿತು. ಒಂದೊಂದು ... ೨೯ ೨೮ ೩೯ ೫೬ ... ಈ ಪ್ರಕಾರ ಅಂಗುಲಗಳ ಪ್ರಮಾಣದಷ್ಟು ಮಳೆ ಸುರಿದು, ನಾನಾ ಕಷ್ಟನಷ್ಟಗಳು ಪ್ರಾಪ್ತವಾಗಿರುವುವು. ರಸ್ತೆಗಳೆಲ್ಲಾ ಹೊಳೆಗಳಾದವು. ಮನೆಗಳು ಜಲಮಯವಾದವು. ವರ್ತಕರ ಧಾನ್ಯ ರಾಶಿಗಳು ಕೊಚ್ಚಿಹೋದವು. ಸುಮಾರು ಒಂದೆರಡು ಕೋಟಿ ರೂಪಾಯಿನ ದವಸ ಹಾಳಾಯಿತೆಂದು ತಿಳಿದುಬಂದಿದೆ. ಇಂಥಾ ಅಪಾರವಾದ ಮಳೆ ಹಿಂದೆ ಆ ಕಡೆಗಳಲ್ಲಿ ಆಗಿದ್ದಿಲ್ಲವೆಂದು ಹೇಳುತ್ತಾರೆ. ಈ ವಾರ ಕಲ್ಕತ್ತೆಯಲ್ಲೂ ಹಿರಿದು ಮಳೆ ಬಿಟ್ಟಿಲ್ಲ. ಅನೇಕ ಬಡಬಗ್ಗರ ಮನೆಗಳು ಕೊಚ್ಚಿಹೋದವು. ಯಾವ ತರಹ ಗಾಡಿಗಳ ಸಂಚಾರಕ್ಕೂ ಮಾರ್ಗವಿಲ್ಲದಂತಾಗಿ ರೈಲ್ ಗಾಡಿಗಳ ಸಂಚಾರಕ್ಕೂ ಅಡ್ಡಿಯಾಗಿದೆ.

* * * *

ಲಂಕಾ ದ್ವೀಪಕ್ಕೆ ಸೇರಿದ ಅನೂರಾಧಪುರದಲ್ಲಿ ಬೌದ್ಧರ ಪರಿಶುದ್ಧವೃಕ್ಷ ಒಂದಿರುವುದು. ಈ ವೃಕ್ಷವು ಬಹು ಪುರಾತನಕಾಲದ್ದು. ಪೂರ್ವದಲ್ಲಿ ಮಗಧರಾಜ್ಯದ ದೊರೆಯಾಗಿದ್ದ ಧರ್ಮಶೋಕನ ಪುತ್ರಿಯಾದ ಸಂಗಮಿತ್ರಾ ಎಂಬಾಕೆಯು ಒಂದು ರೆಂಬೆಯನ್ನು ತೆಗೆದುಕೊಂಡು ಹೋಗಿ ಅನೂರಾಧಪುರದಲ್ಲಿ ನಟ್ಟುಹಾಕಿದಳೆಂಬ ಪ್ರವಾದವಿದೆ. ಈ ಗಿಡವು ಈಗ ಬಹಳವಾಗಿ ಬೆಳೆದು, ಮುಪ್ಪಿನಸ್ಥಿತಿಯಲ್ಲಿರುವುದರಿಂದ ಇಂಥಾ ವೃಕ್ಷವು ನಿರ್ನಾಮವಾದೀತೆಂದು ಲಂಕಾ ದ್ವೀಪದ ಬೌದ್ಧರಿಗೆ ಶಂಕೆಯುಂಟಾಗಿದೆ. ಆದಕಾರಣ ಈ ವೃಕ್ಷದ ರೆಂಬೆಯನ್ನು ಇನ್ನೊಂದುಕಡೆ ನಟ್ಟುಹಾಕಬೇಕೆಂದೂ, ಅದಕ್ಕೆ ತಕ್ಕಸಮಯ ಒದಗಿರುವುದೆಂದೂ ಗೊತ್ತುಮಾಡಿದ್ದಾರೆ. ಈ ವಾರ ಅಲ್ಲಿಗೆ ಜರ್ಮನ್ ರಾಜ್ಯದ ಯುವರಾಜರವರು ಪತ್ನಿ ಸಹಿತ ದಯಮಾಡುವರಷ್ಟೆ. ಅವರ ಪತ್ನಿಯವರ ಹಸ್ತದಿಂದ ಹೊಸದಾಗಿ ಒಂದು ವೃಕ್ಷವನ್ನು ನಟ್ಟುಹಾಕಿಸುವುದಕ್ಕೆ ಬೌದ್ಧ ಮಹಾಜನರೆಲ್ಲಾ ಗೊತ್ತುಮಾಡಿಕೊಂಡಿದ್ದಾರೆ.

* * * *

ಹೈದರಾಬಾದಿನಲ್ಲಿ ಸಾರೂ ಖಾನ್ ಎಂಬೊಬ್ಬ ಪಠಾಣನು ತನ್ನ ಭಾವನನ್ನು ಕಡಿದುಹಾಕಿದನು. ಅಲ್ಲಿ ದೊಡ್ಡಮನುಷ್ಯನಾದ ನವಾಬ್ ದವಲತ್ ಜಂಗ್ ಎಂಬಾತನಿಗೆ ಈ ಕೊಲೆಗಾರನು ಹತ್ತಿರಸಂಬಂಧಿಯಾಗಿದ್ದನು. ಇವನು ಮಾಡಿದ ಅಪರಾಧಕ್ಕೆ ಇವನನ್ನು ಬಹಿರಂಗವಾಗಿ ಶಿರಚ್ಛೇದನ ಮಾಡಬೇಕೆಂಬುದಾಗಿ ಶಿಕ್ಷೆಯನ್ನು ನ್ಯಾಯಾಧಿಪತಿಗಳು ರವರೇ ವಿಧಿಸಿದರು. ಕಳೆದ ವಾರ ಇವನನ್ನು ಪೊಲೀಸ್ ಪಹರೆ ಇಟ್ಟು, ಬೇಗಂ ಬಜಾರಿನ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ ಕರೆದುಕೊಂಡುಹೋದರು. ಒಂದು ಚೌಕದಲ್ಲಿ ಗಲ್ಲಿಗೆ ಹಾಕುವವನು ತನ್ನ ಇಬ್ಬರು ಸೇವಕರೊಡನೆ ನಿಂತಿದ್ದನು. ಈ ಅಪರಾಧಿಯನ್ನು ಬಹಿರಂಗವಾಗಿ ನಿಲ್ಲಿಸಿ, ಸಾವಿರಾರು ಪ್ರಜೆಗಳು ನೋಡುತ್ತಿರುವಲ್ಲಿ ಕಟುಕನು ಕತ್ತಿಯೆತ್ತಿ ಒಂದೇ ಏಟಿಗೆ ಅವನ ಕತ್ತನ್ನು ಕತ್ತರಿಸಿ ಎರಡು ತುಂಡುಮಾಡಿದನು. ತರುವಾಯ ಹೆಣವನ್ನು ದಫನಮಾಡುವುದಕ್ಕೆ ಕೊಟ್ಟರು. ಈ ಮೊಬದ್ದಮೆಯ ವಿಚಾರವಾಗಿ ಹೈದರಾಬಾದಿನ ಪ್ರಜೆಗಳು ಕಳವಳಪಡುತ್ತಿದ್ದರು.

* * * *

ಮದರಾಸ್ ಪಟ್ಟಣದಲ್ಲಿ ಪ್ರಜಾ ಮರಣ ಸಂಖ್ಯೆಯು ಸ್ವಲ್ಪವಾಗಿ ಹೆಚ್ಚುತ್ತಿರುವುದನ್ನು ನೋಡಿ, ಇದಕ್ಕೆ ಕಾರಣಗಳೇನೆಂಬುದನ್ನೂ ಪ್ಲೇಗ್ ಉಪದ್ರವೇನಾದರೂ ತಿಳಿಯದಂತೆ ಕಾಲು ಹಾಕಿಕೊಂಡಿದೆಯೋ ಎಂಬುದನ್ನೂ ಅದರ ನಿವಾರಣೆಗೆ ಜಾಗ್ರತೆಯ ಪ್ರತಿಕ್ರಿಯೆಗಳನ್ನು ಮಾಡಬೇಕೆಂಬುದನ್ನೂ ಕೂಡಲೇ ತಿಳಿಸಬೇಕೆಂಬುದಾಗಿ ಮದರಾಸ್ ಗವರ್ನಮೆಂಟಿನವರು ಅಲ್ಲಿನ ಪುರಾಧ್ಯಕ್ಷರನ್ನೂ ಹೆಲ್ತ್ ಆಫೀಸರನ್ನೂ ಕೇಳಿದ್ದಾರೆ. ಇತ್ತಲಾಗಿ ಕಳೆದ ಒಂದೆರಡು ವಾರಗಳಿಂದ ಮದರಾಸ್ ಸುತ್ತುಮುತ್ತಿನ ಪ್ರಜೆಗಳು ಹೊಟ್ಟೆಗಿಲ್ಲದೆ ಮದರಾಸಿಗೆ ಬಂದು ಬೀದಿ ಬೀದಿ ಅಲೆಯಲಾರಂಭಿಸಿದ್ದಾರೆ. ಸರ್ಕಾರದವರು ಅಂಥಾ ಜನರನ್ನೆಲ್ಲಾ ಪೊಲೀಸಿನವರಿಂದ ಹಿಡಿದು ತರಿಸಿ ಅಲ್ಲಿದ ಮಹೇಗಾರ್ ಚೌಲ್ಟ್ರಿ ಎಂಬ ಸತ್ರದಲ್ಲಿ ಅನ್ನ ಹಾಕಲಾರಂಭಿಸಿದ್ದಾರೆ. ಈ ಬಡವರುಗಳಲ್ಲಿ ಹೆಂಗಸರು ಮಕ್ಕಳ ಸಂಖ್ಯೆಯೇ ಸಾವಿರಗಟ್ಟಲೆಯಾಗಿರುವುದು. ಅವರ ಶರೀರ ಸ್ಥಿತಿಯಾದರೋ ಬಹಳ ಪರಿತಾಪಕರವಾಗಿರುತ್ತದೆ. ಅನೇಕರಿಗೆ ಮೂಳೆ ಚಕ್ಕಳ ಮಾತ್ರ ಅಂಟಿಕೊಂಡಿವೆ. ಇವರಲ್ಲಿ ವಾಂತಿಭೇದಿ ಉಪದ್ರ ಹುಟ್ಟಿ ಸುಮಾರು ೫೦—೬೦ ಜನ ಸತ್ತುಹೋದರು. ಸರ್ಕಾರದವರು ಇಂಥಾ ರೋಗಿಗಳನ್ನೆಲ್ಲಾ ಊರ ಹೊರಗೆ ಇಟ್ಟು, ಕೆಲವು ಕಾಲದ ತನಕ ಅನ್ನಹಾಕಿ ಪೋಷಿಸಬೇಕೆಂದು ಹುಕುಂ ಕೊಟ್ಟು, ಹಣವನ್ನು ಮಂಜೂರು ಮಾಡಿದ್ದಾರೆ.

* * * *

ಮಂಗಳಪಟ್ಟಣದ ಬಳಿ ಸುಮಾರು ಮೂರು ವರ್ಷಗಳ ಕೆಳಗೆ ಅಪಾರವಾಗಿ ಮಳೆ ಸುರಿದದ್ದರಿಂದ ಮದರಾಸ್ ರೈಲ್ ಗಾಡಿಯು ಸೇತುವೆ ಮುರಿದು ನದಿಯೊಳಕ್ಕೆ ಮಗುಚಿಕೊಂಡು ಅನೇಕ ಪ್ರಾಣನಷ್ಟವಾಯಿತು. ಮದರಾಸಿನಲ್ಲಿ ಜವಾಹಿರಿ ವ್ಯಾಪಾರಗಾರನಾದ ಕಾಳಿದಾಸ್ ಎಂಬಾತನು ಈ ಅನಾಹುತದಲ್ಲಿ ಪ್ರಾಣಕಳೆದುಕೊಂಡನು. ಇವನ ಮಗನು ಮದರಾಸ್ ರೈಲ್ವೆ ಕಂಪನಿಯವರ ಮೇಲೆ ೩ ಲಕ್ಷ ರೂಪಾಯಿ ನಾಮಿಜಿಗೆ ದಾವಾ ಮಾಡಿದ್ದನು. ಹೈಕೋರ್ಟ್ ಪಶ್ಚಿಮಯವರಾದ ಮಿ ಮೂರ್ ಯವರು ಈ ಮೊಕದ್ದಮೆಯನ್ನು ತನಿಖೆ ಮಾಡಿ, ಕಂಪನಿಯವರು ವಾದಿಗೆ ೩೩,೦೦೦ ಚಿಲ್ಲರೆ ರೂಪಾಯಿ ನಾಮಿಜು ಕೊಡುವಂತೆ ತೀರ್ಮಾನಮಾಡಿದರು. ಇದರ ಮೇಲೆ ಈ ತೀರ್ಮಾನ ನ್ಯಾಯವಾದದ್ದಲ್ಲವೆಂದು ರೈಲ್ವೆ ಕಂಪನಿಯವರು ಹೈಕೋರ್ಟಿನಲ್ಲಿ ಅಪೀಲ್ ಮಾಡಿದರು. ಹೈಕೋರ್ಟ್ ಜಡ್ಜಿಗಳಾದ ಮಿ। ಡೇವಿಸ್ ಯವರೂ ಮಿ॥ ಬೆನ್ಸನ್‌ರವರೂ ಈ ಮೊಕದ್ದಮೆಯನ್ನು ತನಿಖೆಮಾಡಿ, ಅಪೀಲನ್ನು ವಜಾಮಾಡಿದ್ದಾರೆ. ಇದರಿಂದ ರೈಲ್ವೆ ಕಂಪನಿಯವರು ಗತಿಸಿದ ಕಾಳಿದಾಸನ ಮಗನಿಗೆ ೩೩,೦೦೦ ಚಿಲ್ಲರೆ ರೂಪಾಯಿ ನಾಮಿಜು ಕೊಟ್ಟೇ ತೀರಬೇಕಾಯಿತು. ರೈಲ್ವೆ ನೌಕರರು ಆ ರಾತ್ರಿ ತಮ್ಮ ಕೆಲಸವನ್ನು ಸರಿಯಾಗಿ ಮಾಡಿದ್ದಪಕ್ಷಕ್ಕೆ ಈ ಅನಾಹುತ ಸಂಭವಿಸುತ್ತಿರಲಿಲ್ಲವೆಂದು ಜಡ್ಜಿಗಳು ಖಂಡಿತವಾಗಿ ಬರೆದಿದ್ದಾರೆ.

* * * *

ಕಲ್ಕತ್ತಾ ಪಟ್ಟಣವನ್ನು ಎಲ್ಲಾ ವಿಷಯಗಳಲ್ಲೂ ಅಭಿವೃದ್ಧಿಗೆ ತರಬೇಕೆಂದು ಗವರ್ನಮೆಂಟಿನವರು ತೀರ್ಮಾನಮಾಡಿಕೊಂಡಿದ್ದಾರೆ. ಇದಕ್ಕೋಸ್ಕರ ಏಳು ಮಂದಿ ದೊಡ್ಡ ಮನುಷ್ಯರನ್ನು ನೇಮಿಸಿ ಒಂದು ಟ್ರಸ್ಟ್ ಬೋರ್ಡ್ ಎಂಬ ಸಂಘವನ್ನು ಮಾಡುವರು. ಈ ಬೋರ್ಡಿನವರು ಪಟ್ಟಣದಲ್ಲೆಲ್ಲಾ ದೊಡ್ಡ ದೊಡ್ಡ ರಸ್ತೆಗಳನ್ನು ಹಾಕಬೇಕು, ಅಲ್ಲಲ್ಲಿ ವಿಸ್ತಾರವಾದ ಮತ್ತು ನಿರ್ಮಲವಾದ ಮೈದಾನುಗಳಿರಬೇಕು, ಪಟ್ಟಣವನ್ನು ಇನ್ನು ಮುಂದೆ ದೊಡ್ಡದು ಮಾಡುವುದಕ್ಕೆ ಅನುಕೂಲಿಸುವಂತೆ ಹೊಸ ಸ್ಥಳಗಳನ್ನು ಕೊಂಡುಕೊಳ್ಳಬೇಕು. ಇಷ್ಟು ಕೆಲಸವು ಪೂರೈಸುವುದಕ್ಕೆ ಕಡೇ ಪಕ್ಷ ಇಪ್ಪತ್ತು ವರುಷಗಳು ಹಿಡಿಯುವುವು. ಇದಕ್ಕೆಲ್ಲಾ ಒಟ್ಟು ...೬೦ ಲಕ್ಷ ರೂಪಾಯಿ ವೆಚ್ಚವಾಗುತ್ತದೆ. ಈ ಪೈಕಿ ಹೊಸ ರಸ್ತೆಗಳನ್ನು ಹಾಕುವುದಕ್ಕೆ ೫೦೦ ಲಕ್ಷ ರೂಪಾಯಿಯನ್ನು ಮೈದಾನುಗಳಿಗೆ ೧೭೬ ಲಕ್ಷ ರೂಪಾಯಿಯನ್ನೂ, ಹೊಸ ಪಟ್ಟಣ ಪುರಾಭಿವೃದ್ಧಿಗಾಗಿ ಕೊಂಡುಕೊಳ್ಳುವುದಕ್ಕೆ ೧೦೦ ಲಕ್ಷ ರೂಪಾಯಿಯನ್ನೂ, ಈ ಹೊಸ ಸ್ಥಳವನ್ನು ಆಬಾದು ಮಾಡುವುದಕ್ಕೆ ೫೦ ಲಕ್ಷ ರೂಪಾಯಿಯನ್ನೂ ಖರ್ಚುಮಾಡುತ್ತಾರೆ. ಈ ಮಹಾ ಕಾರ್ಯಕ್ಕೆ ಗವರ್ನಮೆಂಟಿನವರು ೫೦ ಲಕ್ಷ ರೂಪಾಯಿ ಗ್ರಾಂಟು ಕೊಡುವರು. ಅಂಗಡಿಮಳಿಗೆ ಮುಂತಾದವುಗಳನ್ನು ಬಾಡಿಗೆ ...ದರಿಂದ ೩೩೬ ಲಕ್ಷ ರೂಪಾಯಿ ಹುಟ್ಟುವಳಿ ಆಗುವುದು. ಮ್ಯುನಿಸಿಪಾಲಿಟಿಯವರು [illegible] ಲಕ್ಷ ರೂಪಾಯಿಯನ್ನು ಸಾಹುಕಾರರಿಂದ ಸಾಲಮಾಡಬೇಕು. ಇದಲ್ಲದೆ ಮ್ಯುನಿಸಿಪಾಲಿಟಿಯವರು ಪ್ರಜೆಗಳ ಮೇಲೆ ಮೂರು ಹೊಸ ತೆರಿಗೆಗಳನ್ನು ಹಾಕಿ ಹಣ ಕೂಡಿಸುತ್ತಾರೆ.

* * * *

ಹಿಂದೂಸ್ಥಾನದ ಸಾಂಡೋ ಪಟ್ಟಿಯೊಬ್ಬನು ಈಗ ಕೆಲವು ದಿನಗಳಿಂದ ಮದರಾಸ್ ಪಟ್ಟಣದಲ್ಲಿ ಬಂದು ತನ್ನ ಅದ್ಭುತ ಶಕ್ತಿಯನ್ನು ಪ್ರಕಾಶಪಡಿಸುತ್ತಿದ್ದಾನೆ. ಈತನ ಹೆಸರು ರಾಮಮೂರ್ತಿ. ಇವನು ಹಿಂದುವು, ಇವನ ಬಳಿಯಲ್ಲೂ ಕೆಲವು ಶಿಷ್ಯರಿದ್ದಾರೆ. ಇವನು ಸ್ಯಾಂಡೋವಿನಷ್ಟು ಪರಿಪೂರ್ಣ ಕಾಯಪುಷ್ಟಿ ಪಡೆದವನಲ್ಲವಾದರೂ ಮಹಾ ಶಕ್ತನೆನ್ನುವುದಕ್ಕೆ ಸಂಶಯವಿಲ್ಲ. ಮದರಾಸ್ ಪಟ್ಟಣದಲ್ಲಿ ಪೀಪಲ್ಸ್ ಪಾರ್ಕ್ ಎಂಬ ಉದ್ಯಾನವನದೊಳಗೆ ಈತನು ನಾಟಕಶಾಲೆಯನ್ನು ಹಾಕಿ, ತನ್ನ ಮತ್ತು ತನ್ನ ಶಿಷ್ಯರ ಶಕ್ತಿಸಾಮರ್ಥ್ಯಗಳನ್ನು ಪ್ರಕಾಶಪಡಿಸುತ್ತಿದ್ದಾನೆ. ಸಾವಿರಾರು ಪ್ರಜೆಗಳೂ ದೊಡ್ಡ ಮನುಷ್ಯರೂ ಹೋಗಿ ನೋಡಿ ನೇತ್ರಾನಂದ ಹೊಂದುತ್ತಿದ್ದಾರೆ. ಅತ ಮಾಡುವ ಕಾರ್ಯ ವಿಶೇಷವೇನೆಂದರೆ—ಅವನು ಅಂಗತಂಗನಾಗಿ ಮಲಗಿಕೊಳ್ಳುವನು. ಇವನ ಎದೆಯ ಮೇಲೆ ಬಹು ಭಾರವುಳ್ಳ ಬೆಣಚುಕಲ್ಲಿನ ಚಪ್ಪಡಿಯನ್ನು ಹೊರಿಸುವರು. ಮತ್ತು ಈತನ ಶಿಷ್ಯರು ದೊಡ್ಡ ಚಮ್ಮಟಿಗೆಗಳನ್ನು ಎತ್ತಿ ಆ ಚಪ್ಪಡಿಯ ಮೇಲೆ ಎಷ್ಟು ಜೋರಾಗಿ ಹೊಡೆದರೂ ಅವನು ಆ ಚಪ್ಪಡಿಯ ಭಾರವನ್ನೂ ಅದರ ಮೇಲೆ ಬೀಳುವ ಬಹು ಕಠಿಣವಾದ ಚಮ್ಮಟಿಗೆಗಳ ಏಟನ್ನೂ ಸ್ವಲ್ಪವೂ ಲಕ್ಷ್ಯ ಮಾಡದೆ ಸಹಿಸಿಕೊಳ್ಳುತ್ತಾನೆ. ಇದಲ್ಲದೆ

ಅವನು ಅಂಗತಂಗನಾಗಿ ಮಲಗಿರುವಾಗ್ಗೆ ತುಂಬಾ ಹೊರೆಯನ್ನು ಹಾಕಿರುವಂಥಾ ಗಾಡಿಯನ್ನು ಅವನ ಎದೆಯ ಮೇಲೆ ಬಹು ವೇಗವಾಗಿ ಓಡಿಸುವರು. ಚಕ್ರಗಳ ಓಡಾಟದ ಶಬ್ದವು ಗಡಗಡಾ ಎಂದು ಬಹು ಸ್ಪಷ್ಟವಾಗಿ ಕೇಳಬರುತ್ತಿದ್ದರೂ ರಾಮಮೂರ್ತಿಯು ಬಹು ಉತ್ಸಾಹದಿಂದ ಅದನ್ನು ಸಹಿಸಿಕೊಳ್ಳುತ್ತಾನೆ. ಇವನ ಶಿಷ್ಯರು ಕೂಡ ಅವರವರ ಯೋಗ್ಯತೆಗೆ ತಕ್ಕಂಥಾ ಸಾಮರ್ಥ್ಯ ಕೆಲಸಗಳನ್ನು ಮಾಡುವರು. ಇವರಲ್ಲಿ ಎಂಟು ವರುಷದ ಒಬ್ಬ ಹುಡುಗನು ಅಂತರಾಳದ ಸಲಾಕೆಯ ಮೇಲೆ ಮಾಡತಕ್ಕ ಚಮತ್ಕಾರಯುಕ್ತವಾದ ಕಾರ್ಯಗಳು ಪರಮಾಶ್ಚರ್ಯವನ್ನುಂಟುಮಾಡುವವು. ಇತ್ತಲಾಗಿ ಕೆಲವು ದಿವಸಗಳ ಕೆಳಗೆ ಮದರಾಸಿನಲ್ಲಿ ಬಂದು ಅಪ್ರತಿಮ ಸಾಮರ್ಥ್ಯವನ್ನು ತೋರಿಸಿದ ಪ್ರಸಿದ್ಧ ಸಾಂಡೋ ಪಟ್ಟಿಯ ವಿಷಯವನ್ನೂ ಅವನ ಶಿಷ್ಯರ ಮೇಲೆ ಬೆಂಗಳೂರಿನ ಮಹಬೂಬ್ ಖಾನ್ ಎಂಬ ಪೈಲ್ವಾನನು ಮಾಡಿದ ಕುಸ್ತಿಗಳನ್ನೂ ನಮ್ಮ ವಾಚಕರು ಮರೆತಿರಲಾರರಷ್ಟೆ. ಈ ಮಹಬೂಬ್ ಖಾನನು ಮೇಲ್ಕಂಡ ರಾಮಮೂರ್ತಿಯ ಮೇಲೆ ಕುಸ್ತಿ ಮಾಡುವುದಾಗಿಯೂ ಅವನು ಅದಕ್ಕೆ ಸಮ್ಮತಿಸಬೇಕೆಂತಲೂ ಬರೆದನು. ರಾಮಮೂರ್ತಿಯು ಅದಕ್ಕೆ— ಪೈಲ್ವಾನನು ತನ್ನ ಶಿಷ್ಯರ ಮೇಲೆ ಮೊದಲು ಕುಸ್ತಿ ಮಾಡಿ ಗೆದ್ದರೆ ಅದಕ್ಕೆ ಅವನಿಗೆ ಬಹುಮಾನ ಕೊಡುವುದಾಗಿ ತಿಳಿಸಿದನು. ಮಹಬೂಬ್ ಖಾನನು ಇದಕ್ಕೆ ಒಪ್ಪಿಕೊಂಡನು. ಮದರಾಸ್ ಪಟ್ಟಣದಲ್ಲಿ ಹಿಂದಿನ ಮಂಗಳವಾರ ರಾತ್ರಿ ರಾಮಮೂರ್ತಿಯ ಶಿಷ್ಯನಿಗೂ ಪೈಲ್ವಾನನಿಗೂ ಕಾಳಗವಾಯಿತು. ಆ ಶಿಷ್ಯನು ಪೈಲ್ವಾನನಲ್ಲಿ ಅರವಾಸಿಗಿಂತಲೂ ಕಡಿಮೆಯಾದವನಾಗಿದ್ದನು. ಪೈಲ್ವಾನನು ಅವನನ್ನು ಸ್ವಲ್ಪ ಹೊತ್ತು ಹೀನಗಾಡಿಸಿ ಸುಲಭವಾಗಿ ಬೆನ್ನುಮಾಡಿ ಸೋಲಿಸಿದನು. ಆಗ ರಾಮಮೂರ್ತಿಯ ಶಿಷ್ಯರ ಪೈಕಿ ಇಬ್ಬರು ಪಂಜಾಬಿ ಪಟ್ಟಿಗಳು ಮುಂದೆ ಬಂದು ಮಹಬೂಬ್ ಖಾನನ ಮೇಲೆ ಕುಸ್ತಿ ಮಾಡುವುದಾಗಿ ತಿಳಿಸಿದರು. ಪೈಲ್ವಾನನು ಅದಕ್ಕೆ ಒಪ್ಪಿಕೊಂಡನು. ಈ ಕುಸ್ತಿಗಳು ಮೊನ್ನೆ ಶುಕ್ರವಾರ ನಡೆದವು

ಮೈಸೂರು ಗೆಜೆಟ್ ಸಂಗ್ರಹ.

ಸಬ್ ಅ॥ ಸರ್ಜನ್ ಮೆ॥ ಎ ಕೋದಂಡಪಾಣಿ ಮೊದಲಿಯಾರ್ರಿಗೆ ಹಿಂದೆ ಕೊಟ್ಟಿರುವ ಒಂದು ವರುಷದ ಸಂಬಳವಿಲ್ಲದ ರಜವನ್ನು ಇನ್ನೂ ನಾಲ್ಕು ತಿಂಗಳು ಜಾಸ್ತಿ ಮಾಡಿದೆ

ಶಿವಮೊಗ್ಗ ಡಿಸ್ಟ್ರಿಕ್ಟ್ ಅ॥ ಸರ್ಜನ್ ಮತ್ತು ಮೆಡಿಕಲ್ ಸ್ಯಾನಿಟರಿ ಆಫಿಸರಾದ ಮೆ॥ ಸಿ. ರಾಜಾರಾಮರಾಯರಿಗೆ ಜುಲೈ ೭ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಆ ತರುವಾಯ ಮೂರು ತಿಂಗಳ ಖಾಯಿಲೆ ರಜವನ್ನೂ ಕೊಡಲಾಗಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ॥ ಸರ್ಜನ್ ಮೆ॥ ಮಹಮ್ಮದ್ ಉಸ್ಮಾನಯವರು ಶಿವಮೊಗ್ಗ ಡಿಸ್ಟ್ರಿಕ್ಟಿನ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರಾಗಿ ಕೆಲಸನೋಡತಕ್ಕದ್ದು.

ಅಮಲ್ದಾರ್ ಮೆ॥ ಮಹಮದ್ ರಜಾಯವರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ಅವರ ಇಷ್ಟಪ್ರಕಾರ ರದ್ದು ಮಾಡಿದೆ.

ಛೀಫ್ ಕೋರ್ಟ್ ಜಡ್ಜ್ ಮೆ॥ ಎ ರಂಗಸ್ವಾಮಯ್ಯಂಗಾರ್ರವರು ರಜದಿಂದ ವಾಪಸು ಬಂದು ಜುಲೈ ೧೭ ರಲ್ಲಿ ಕೆಲಸದ ಛಾರ್ಜ ವಹಿಸಿದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಅ॥ ಕಮಿಷನರ್ ಮೆ॥ ಜಿ ಅರವಾಮುದು ಐಯಂಗಾರ್ರಿಗೆ ಜುಲೈ ೮ ರಿಂದ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ಮೆ॥ ಎ ಕೃಷ್ಣೈ ಅರಸಿನವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಒಂದು ವಾರ ಜಾಸ್ತಿ ಮಾಡಿದೆ.

ಮಾಗಡಿ ತಾಲ್ಲೂಕು ಅಮಲ್ದಾರ್ ಮೆ॥ ಬಿ ಸಿ ಕೃಷ್ಣಶಾಸ್ತ್ರಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಇವರ ಗೈರುಹಾಜರಿಯಲ್ಲಿ ತಾಲ್ಲೂಕ್ ಶಿರಸ್ತೇದಾರರು ಅಮಲ್ದಾರಿಯ ಚಾಲ್ತಿ ಕೆಲಸಗಳನ್ನು ಚಲಾಯಿಸತಕ್ಕದ್ದು

ಎಕ್ಸ್‌ಟ್ರಾ ಅ॥ ಕಮಿಷನರ್ ಮೆ॥ ಅಹಮದ್ ಆಲಿಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರಜಾ ಪೂರೈಸಿದ ತರುವಾಯ ಅವರು ಕೆಲಸದಿಂದ ನಿವೃತ್ತರಾಗಿ ಪೆನ್ಷನ್ ಪಡೆಯತಕ್ಕದ್ದು.

ಮೆ॥ ಎಸ್. ವೆಂಕಟರಾಯರು ತುಮಕೂರು ಡಿಸ್ಟ್ರಿಕ್ಟಿನ ಛಾರ್ಜನ್ನು ಮೆ॥ ಕೆ ಎಸ್. ದೊರೆಸ್ವಾಮಿ ಐಯರವರಿಗೆ ವಹಿಸಿದ ಮೇಲೆ ಮೈಸೂರು ಪಟ್ಟಣದ ಸಿಟಿ ಮ್ಯಾಜಿಸ್ಟ್ರೇಟರಾಗಿ ವಾಪಸು ಹೋಗತಕ್ಕದ್ದು.

ಅ॥ ಕಮಿಷನರ್ ಮೆ॥ ಪಿ ಶ್ರೀನಿವಾಸರಾಯರು ಮೆ॥ ಎಸ್ ವೆಂಕಟರಾಯರಿಗೆ ಛಾರ್ಜ ವಹಿಸಿದ ಮೇಲೆ ತುಮಕೂರು ಡಿಸ್ಟ್ರಿಕ್ಟಿಗೆ ಹಿಂತಿರುಗಿ ಹೋಗತಕ್ಕದ್ದು.

ಅ॥ ಕಮಿಷನರ್ ಮೆ॥ ಸಿ ಶೇಷಾದ್ರ್ಯಯಂಗಾರ್ರು ಮೆ॥ ಶ್ರೀನಿವಾಸರಾಯರಿಗೆ ಛಾರ್ಜ ವಹಿಸಿದ ನಂತರ ಕೋಲಾರಕ್ಕೆ ಹೋಗಿ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು.

ಮೆ॥ ಕೆ. ಮೈಲಾರಿರಾಯರನ್ನೂ ಮೆ॥ ಆನಂದರಾವ್ ಎಸ್ ಸಿಸ್ಟೆಯವರನ್ನೂ ರೆವಿನ್ಯೂ ಇಲಾಖೆಗೆ ವರ್ಗ ಮಾಡಿರುವುದರಿಂದ ಮೆ॥ ಎಂ ಎಲ್. ಶ್ರೀಕಂಠೇಶಗೌಡರನ್ನ, ಮೆ॥ ಕೆ ಲಕ್ಷ್ಮೀನಾರಾಯಣಯ್ಯನವರನ್ನೂ ಮೆ॥ ಟಿ. ಕೃಷ್ಣಯ್ಯಂಗಾರ್ರನ್ನೂ ಮುನ್ಸಿಫರ ತರಗತಿಯಲ್ಲಿ ೩ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಮುಂದೆ ಹೇಳುವ ಆಸ್ಪತ್ರೆ ಅಸಿಸ್ಟೆಂಟರನ್ನು ಜೂನ್ ೨೫ ರಿಂ ಒಂದನೆ ಕ್ಲಾಸಿಗೆ ಬಡ್ತಿ ಮಾಡಿದೆ.—ಮಿಸ್ ಎಸ್. ಎ. ಪಾಲ್‌ಯವರು, ಟಿ ಎಸ್. ರಾಮಸ್ವಾಮಿ ಐಯಂಗಾರ್ರು, ಎಂ ವಿ ನರಸಿಂಹಾಚಾರ್ರು, ಎಚ್ ಕೃಷ್ಣಭಟ್ಟರು, ಎಂ. ನಂಜುಂಡಯ್ಯನವರು

ಆಸ್ಪತ್ರೆ ಅಸಿಸ್ಟೆಂಟ್ ಎಂ. ಜಿ. ರತ್ನಸ್ವಾಮಿ ಪಿಳ್ಳೆಯವರನ್ನು ಏಪ್ರೆಲ್ ೨೫ ರಿಂದ ೨ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೆ॥ ಗುಲಾಂ ಸಾಬರನ್ನು ಹೊಸಕೋಟೆ ತಾಲ್ಲೂಕು ಬೋರ್ಡಿಗೂ, ಮುನಿಯೂರು ಪಟೇಲ್ ಮೆ॥ ಬಸಲಿಂಗಯ್ಯನವರನ್ನು ತೀರ್ಥಹಳ್ಳಿ ತಾಲ್ಲೂಕು ಬೋರ್ಡಿಗೂ ಮೆಂಬರಾಗಿ ನೇಮಿಸಿದೆ.

ಬೆಂಗಳೂರು ಡಿವಿಜನ್ ಅ॥ ಇಂಜನಿಯರ್ ಮೆ॥ ಎಫ್. ಎ. ಸ್ಮಿತ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಪವರ್ ಮತ್ತು ಲೈಟಿಂಗ್ ಸ್ಕೀಮಿನ ಡಿವಿಜನ್ ಸೂಪರಿಂಟೆಂಡೆಂಟ್ ಮೆ॥ ಬಿ ದ್ವಾರಕನಾಥ್ ಯವರಿಗೆ ತಾ ೪ರಿಂದ ಹತ್ತು ದಿನಗಳ ಖಾಯಿಲೆ ರಜಾ ಕೊಟ್ಟಿದೆ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರರು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭಸೇರಿ ತಿಂಗಳುಕಟ್ಟಳೆಯ ಮ್ಯುನಿಸಿಪಲ್ ಬೋರ್ಡ್ ಮೀಟಿಂಗನ್ನು ನಡಿಸಿದರು. ಮೊದಲು ಜೂನ್ ತಿಂಗಳ ಮ್ಯುನಿಸಿಪಲ್ ಜಮಾ ಖರ್ಚು ಮುಂತಾದ ಲೆಕ್ಕಗಳನ್ನು ಓದಿ ಪಾಸ್ ಮಾಡಿದರು. ಆ ತಿಂಗಳಲ್ಲಿ ರೂ ೧೭,೪೩೫ ೧ ೦ ಜಮಾ ಆಗಿದೆ, ಮತ್ತು ರೂ ೧೧,೫೩೦ ೪ ೭ ಪೈ ಖರ್ಚಾಗಿದೆ. ಜೂನ್ ತಿಂಗಳಲ್ಲಿ ಜನನ ೧೧೬, ಮರಣ— ಪ್ಲೇಗ್ ೨, ಸಿಡುಬು ೧, ಜ್ವರ ೯, ಇತರ ಕಾರಣಗಳು ೧೪೪, ಅಂತು ೧೫೬ ಮರಣಗಳಾದವು.

ಮುಂದೆ ಆಗುವ ಪ್ರಜಾ ಪ್ರತಿನಿಧಿ ಸಭೆಗೆ ಮ್ಯುನಿಸಿಪಲ್ ಕಮಿಷನರರ ಪೈಕಿ ನಾಲ್ಕು ಮಂದಿಯನ್ನು ಚುನಾಯಿಸಿ ಕಳುಹಿಸಬೇಕೆಂದು ಡೆಪ್ಯುಟಿ ಕಮಿಷನರರು ಬರೆದಿದ್ದರು. ಆದರಂತೆ ಕಮಿಷನರುಗಳು ಸೇರಿ ತಮ್ಮ ತಮ್ಮಲ್ಲೇ ಸಮ್ಮತಿಗಳನ್ನು ಹಾಕಿ ಚುನಾಯಿಸಿದ್ದರಲ್ಲಿ ಮೆ॥ ಗಳಾದ ಎಂ ವೆಂಕಟಕೃಷ್ಣಯ್ಯನವರು, ಎಂ ಅನಂತರಾಜೈಯನವರು, ಎಂ ಸಿ ರಂಗೈಯಂಗಾರ್ರು, ಮಾದಪ್ಪನವರು, ಈ ನಾಲ್ಕು ಜನ ಕಮಿಷನರುಗಳು ಪ್ರತಿನಿಧಿಗಳಾಗಿ ಹೋಗತಕ್ಕದ್ದೆಂದು ಗೊತ್ತಾಯಿತು

ರಾಜಧಾನಿಯ ರೈಲ್ವೆ ಸ್ಟೇಷನ್ ಕಾಂಪೌಂಡಿನಲ್ಲಿ ರಾತ್ರಿ ಹೊತ್ತು ಬೆಳಕು ಸರಿಯಾಗಿಲ್ಲದಿರುವುದರಿಂದ ಅಲ್ಲಿ ಒಂದು ಮಾಷಿಂಗ್ಟನ್ ಲಾಂದ್ರ ಇಡುವಂತೆ ಪ್ರೆಸಿಡೆಂಟರವರು ರೈಲ್ವೆ ಕಂಪನಿಯವರಿಗೆ ಬರೆದಿದ್ದರು. ಕಂಪನಿಯವರು ಅದಕ್ಕೆ ಅಂಥಾ ದೀಪವನ್ನು ಇಡಬೇಕಾದ ಆವಶ್ಯಕತೆ ಕಂಡುಬರುವುದಿಲ್ಲವೆಂದು ಜವಾಬು ಕೊಟ್ಟಿದಾರೆ.

ಬೆಳಗೊಳದಲ್ಲಿ ನೀರನ್ನು ಎತ್ತುವ ಹಳೇ ಯಂತ್ರಗಳನ್ನು ದುರಸ್ತು ಮಾಡಿಸಿ ಬಿಕರಿಮಾಡಬಹುದೆಂತಲೂ ದುರಸ್ತು ಮಾಡಿಸುವುದಕ್ಕೆ ೫೦೦ ರೂಪಾಯಿ ಕೊಡಬೇಕೆಂತಲೂ ವಾಟರ್ ಸಪ್ಲೈ ಡಿವಿಜನ್ ಇಂಜನಿಯರವರು ಕೇಳಿದ್ದರು. ಈ ವಿಷಯವನ್ನು ಮೆಂಬರುಗಳು ಚರ್ಚೆಮಾಡಿ, ಈಗ ೫೦೦ ರೂಪಾಯಿ ಖರ್ಚಿಟ್ಟು ರಿಪೇರಿ ಮಾಡಿದರೆ ಆ ಯಂತ್ರಗಳಿಗೆ ಎಷ್ಟು ಕ್ರಯ ಬರಬಹುದೋ ಅಂದಾಜು ತಿಳಿಸಬೇಕೆಂದು ಇಂಜನಿಯರನ್ನು ಕೇಳುವಂತೆ ತೀರ್ಮಾನ ಮಾಡಿದರು

ರಾಜಧಾನಿಯಲ್ಲಿ ಮ್ಯುನಿಸಿಪಾಲಿಟಿಯಿಂದಲೇ ಎಲ್ಲಾ ಮನೆಗಳ ಪಾಯಿಖಾನೆಯನ್ನೂ ಪ್ರತಿ ನಿತ್ಯವೂ ಗುಡಿಸುವುದಕ್ಕೆ ಏರ್ಪಾಡು ಮಾಡಿ, ಇದಕ್ಕೆ ಬೆಂಗಳೂರಿನಲ್ಲಿ ಹಾಕಿರುವಂತೆ ಇಲ್ಲಿಯೂ ಪ್ರಜೆಗಳಿಂದ ತೆರಿಗೆ ಹಾಕಿ ವಸೂಲ್ಮಾಡಬೇಕೆಂಬುದಾಗಿ ವಿಧಿಸಿದಾರೆ. ಆದರೆ ಈಗ ಟ್ರಸ್ಟ್ ಬೋರ್ಡಿನವರು ಯಾವ ಯಾವ ಮೊಹಲೆಗಳನ್ನು ವಿಸ್ತರಿಸಿ ಕ್ರಮಪಡಿಸಿರುತ್ತಾರೋ ಅಂಥಾ ಭಾಗಗಳಲ್ಲಿ ಮೊದಲು ಈ ಕಾನೂನನ್ನು ಜಾರಿಗೆ ತರಬೇಕೆಂತಲೂ ಕ್ರಮೇಣ ಈ ತೆರಿಗೆಯನ್ನು ಎಲ್ಲಾ ಮೊಹಲೆಗಳಿಗೂ ಹಾಕಬೇಕೆಂತಲೂ ಬೋರ್ಡಿನಲ್ಲಿ ತೀರ್ಮಾನವಾಗಿದೆ

ಮ್ಯುನಿಸಿಪಲ್ ಸ್ಕೂಲುಗಳ ಕಮಿಟಿಯವರು ಕೆಲವು ಪಳ್ಳಿಮಠಗಳಿಗೆ ಮ್ಯುನಿಸಿಪಾಲಿಟಿಯಿಂದ ಗ್ರಾಂಟು ಕೊಡಬೇಕೆಂದು ಶಿಫಾರಸು ಮಾಡಿದ್ದರು. ಈ ಪ್ರಕಾರ ತಿಂಗಳಿಗೆ ೩೫ ರೂಪಾಯಿ ಗ್ರಾಂಟು ಕೊಡಬಹುದೆಂದು ಮೆಂಬರುಗಳು ಒಪ್ಪಿರುತ್ತಾರೆ.

ಶಿವದೇವಮ್ಮನವರು ಲಷ್ಕರ್ ಮೊಹಲ್ಲಾದಲ್ಲಿರುವ ತಮ್ಮ ಬಾಬತು ಬಂಗಲೆಯನ್ನೂ ಅದಕ್ಕೆ ಸೇರಿದ ಜಾಯವನ್ನೂ ದೇವಸ್ಥಾನವಾಗಿಯೂ ಪ್ರಯಾಣಿಕರ ಆಶ್ರಯಸ್ಥಾನವಾಗಿಯೂ ಬಿಟ್ಟುಕೊಟ್ಟಿರುವುದರಿಂದ ಈ ಕಟ್ಟಡಗಳಿಗೆ ಮ್ಯುನಿಸಿಪಲ್ ತೆರಿಗೆಯನ್ನು ಮಾಫ್ ಮಾಡಬೇಕೆಂಬುದಾಗಿ ಅರ್ಜಿ ಬರೆದುಕೊಂಡಿದ್ದರು. ವೈಸ್ ಪ್ರೆಸಿಡೆಂಟರು ಈ ಅರ್ಜಿಯನ್ನು ತನಿಖೆ ಬಗ್ಗೆ ಮೆ॥ ಮಾದಪ್ಪನವರಿಗೆ ಕಳುಹಿಸಿಕೊಟ್ಟರು. ಇವರು ಆ ಕಟ್ಟಡಗಳನ್ನೂ ಅಲ್ಲಿ ನಡೆಯುವ ಕಾರ್ಯಗಳನ್ನೂ ನೋಡಿ, ಅದು ಪಬ್ಲಿಕ್ಕಿಗೆ ಬಿಟ್ಟುಕೊಟ್ಟಿರುವ ಕಟ್ಟಡವೇ ಸರಿ ಎಂತಲೂ ಕಂದಾಯ ಮಾಫಿ ಬಿಡಬಹುದೆಂತಲೂ ಶಿಫಾರಸು ಮಾಡಿದರು. ಮೆಂಬರುಗಳು ಈ ಸಂಗತಿಯನ್ನು ಚರ್ಚಿಸಿ—ಆ ಕಟ್ಟಡವು ಎಲ್ಲಿನ ವರೆಗೆ ಪಬ್ಲಿಕ್ ಉಪಯೋಗದಲ್ಲಿರುವುದೋ ಅಲ್ಲಿನ ತನಕ ಮ್ಯುನಿಸಿಪಲ್ ಕಂದಾಯವನ್ನು ಮಾಫಿ ಬಿಡತಕ್ಕದ್ದೆಂದು ತೀರ್ಮಾನ ಮಾಡಿದಾರೆ.

ಚಾಮರಾಜ ಮೊಹಲ್ಲೆಯಲ್ಲಿ ವೀರಣ್ಣನವರ ಲೈನ್ ಮನೆಗಳ ಪ್ರಜೆಗಳಿಗೂ ಆ ಸುತ್ತುಮುತ್ತಿನ ನಿವಾಸಿಗಳಿಗೂ ಮಾರ್ಕೆಟ್ಟು ಇಲ್ಲದಿರೋಣದರಿಂದ ಈ ಕಷ್ಟವನ್ನು ಪರಿಹರಿಸುವುದು ಆವಶ್ಯವೆಂದು ತಿಳಿದು ಮ್ಯುನಿಸಿಪಾಲಿಟಿಯಿಂದ ೧,೫೦೦ ರೂಪಾಯಿ ಮುಟ್ಟಿಸಿ ಆ ಬಳಿ ಒಂದು ಮಾರ್ಕೆಟ್ಟನ್ನು ಕಟ್ಟಿಸಿಕೊಡುವಂತೆ ಹಣ ಸ್ಪ ಷ್ಟ ಮಾಡಿದಾರೆ.

ದೇವರಾಜ ಮೊಹಲ್ಲಾದಲ್ಲಿ ಬಹು ಕಾಲದಿಂದಲೂ ಎಳೆ ಮ[ಕ್ಕ]ಳಿಗೆ ಚಿಕಿತ್ಸೆ ಮಾಡುತ್ತಾ ತುಂಬಾ ಉಪಕಾರ ಮಾಡುತ್ತಿರುವ ಶೇಖ್ ಮಹಮದ್ ಖಾದರವರಿಗೆ ಮ್ಯುನಿಸಿಪಾಲಿಟಿಯಿಂದ ಸ್ವ[ಲ್ಪ] ದ್ರವ್ಯ ಸಹಾಯ ಮಾಡಬೇಕೆಂದು ಮೆ॥ ಅನಂತರಾಜೈಯನವ[ರು] ಮುಂತಾದ ಕೆಲವು ಮ್ಯುನಿಸಿಪಲ್ ಕಮಿಷನರುಗಳು ಸೂಚಿಸಿದ್ದನ್ನು ಇತರ ಮೆಂಬರುಗಳೂ ಒಪ್ಪಿ, ಆ ಹಕೀಮರಿಗೆ ತಿಂಗಳಿಗೆ ರೂಪಾಯಿ ಗ್ರಾಂಟು ಕೊಡಬಹುದೆಂದು ತೀರ್ಮಾನ ಮಾಡಿದಾ[ರೆ].

ರೈಲ್ವೆ ಸ್ಟೇಷನಿನಿಂದ ಪಕ್ಕದುಕ್ಕೆ ಒಂಟಿಕೊಪ್ಪಲಿನ ಕನಕಗಿ[ರಿ] ರಸ್ತೆಯನ್ನು ಕ್ರಮವಾಗಿ ಜಲ್ಲಿ ಹಾಕಿ ತಯಾರುಮಾಡುವುದ[ಕ್ಕೆ] ೮೭೦ ರೂಪಾಯಿ, ಸುಬ್ರಾಯನಕೆರೆ ಪೂರ್ವಭಾಗದ ಮೈದಾ[ನವ]ನ್ನು ಕಟ್ಟಿಣದ ಸಲಾಕೆ ಹಾಕಿ ಅಬಾದು ಮಾಡುವುದಕ್ಕೆ ೪೯೪ [ರೂ]ಪಾಯಿ, ಸುಬ್ರಾಯನ ಕೆರೆಯನ್ನು ಚೊಕ್ಕಟ ಮಾಡಿ, ಒಳನಲ್ಲಿಗಳನ್ನಿಟ್ಟು, ನಿರ್ಮಲವಾದ ನೀರು ತಂದುಬಿಟ್ಟು ಜನರ ಸ್ನಾನಾದಿಗಳಿಗೆ ಉಪಯೋಗವಾಗುವಂತೆ ಮಾಡುವುದಕ್ಕೆ ೧,೦೪ ರೂಪಾಯಿ—ಈ ರೀತಿ ಖರ್ಚು ಮಾಡಬಹುದೆಂದು ಮೆಂಬರುಗ[ಳು] ಸಮ್ಮತಿಪಟ್ಟಿದಾರೆ

ಮ್ಯುನಿಸಿಪಲ್ ತೆರಿಗೆಗಳನ್ನು ತುಂಬಾ ಮುತುವರ್ಜಿಯಿಂದ ವಸೂಲ್ಮಾಡುತ್ತಿರುವ ನೌಕರರಿಗೆ ಅವರ ಕಷ್ಟಕ್ಕೆ ತಕ್ಕಂತೆ ಅ ಸ್ವಲ್ಪ ಪ್ರತಿಫಲ ಕೊಟ್ಟು ಪ್ರೋತ್ಸಾಹಪಡಿಸುವುದು ಒಳ್ಳೆಯದೆಂ ಮೆ॥ ಶೇಕ್ ಇಬ್ರಾಹಿಂ ಸಾಹೇಬರೂ ಮೆ॥ ತಿರುವೆಂಗಡ ಮೊ ಲಿಯಾರ್ರೂ ಸೂಚಿಸಿದರು. ಮೆಂಬರುಗಳು ಈ ವಿಷಯವನ್ನು ಚರ್ಚೆ ಮಾಡಿ, ಹೀಗೆ ಪ್ರೋತ್ಸಾಹಪಡಿಸುವುದು ಸರಿಯಲ್ಲವೆಂತಲೂ ಮ್ಯು ನಿಸಿಪಲ್ ತೆರಿಗೆ ಬಾಕಿಯಿಲ್ಲದೆ ಸಂಪೂರ್ಣ ವಸೂಲಾದ ನಂ ಈ ವಿಷಯವನ್ನು ಸೂಚಿಸಿದರೆ ಕಷ್ಟಪಟ್ಟವಂಥಾ ನೌಕರರ ಸಂಬಳ ಬಡ್ತಿಮಾಡಬಹುದೆಂತಲೂ ತಿಳಿಸಿದರು

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮೀಗಳನ್ನು ನಾ ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮೀದಾರರು ಕೊಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಸಣ್ಣ ತಮ್ಮಯ್ಯ—ಅರಕಲಗೂಡು ತಾ , ಅಷ್ಟಯ್ಯ— ವ್ಯಬಳ್ಳಾಪುರ , ಆಚಾರ್ಯ ಕಳ್ಳಿಗು—ಕೊಪ್ಪ ತಾ ; ತೀರ್ಥ ಬಾತ್ಮೀದಾರ , ಪುತ್ತೂರು ಬಾತ್ಮೀ —ಇವುಗಳನ್ನು ಪ್ರಕಟಿಸಲಾರೆವು. —ಎಡಿ

ಕರೆಸ್‌ಪಾಂಡನ್ಸ್.

ಚಾಮರಾಜನಗರದ ಪೋಲೀಸ್ ವಿಚಾರವು

ಅಯ್ಯಾ,

ಈ ಊರು ದೊಡ್ಡದಾದರೂ ಟೌನಲ್ಲಿ ೫ ಜನ ಕಾನ್‌ಸ್ಟೇಬಲ್‌ಗಳಿರುವುದು ಶೋಚನೀಯವಾಗಿದೆ ಅಲ್ಲದೆ ಈ ಅಲ್ಪ ಜನರಿಗೆ ತೊಂದರೆಯಾಗುವುದಲ್ಲದೆ ಕೆಲಸ ಸರಿಯಾಗಿ ನಡೆಯುವುದು ಕ ವಾಗುತ್ತೆ. ಈ ಊರಿಗೆ ಇನ್ನೂ ಕೆಲವು ಜನರನ್ನು ನೇಮಿಸುವುದು ಉತ್ತಮವಾಗಿರುತ್ತೆ. ತಲೆ ತಗಲುವುದಕ್ಕಿಂತ ಮುಂಚೆ ನೇಮಿಸಿದರೆ ಫಲವುಂಟು

ಬಾತ್ಮೀದಾರ.

ಬಾತ್ಮೀದಾರರ ಮೇಲೆ ಆಕ್ಷೇಪಣೆ.

ಅಯ್ಯಾ,

ಪ್ರಪಂಚದಲ್ಲಿ ಸಮಸ್ತ ವರ್ತಮಾನ ಪತ್ರಿಕೆಗಳಿಗೂ ಬಾತ್ಮೀದಾರರುಂಟಷ್ಟೆ. ಇಂಥಾ ಬಾತ್ಮೀದಾರರು ತಮ್ಮ ಸ್ಥಳದಲ್ಲಿ ನಡೆಯತಕ್ಕ ವಿಶೇಷ ವರ್ತಮಾನಗಳನ್ನೂ, ದುರ್ನಡತೆಗಳನ್ನೂ, ಪ ಹಾರ ಮೊದಲಾದ ವಿಷಯಗಳನ್ನೂ ಕುರಿತು ಬಾತ್ಮೀ ಬರೆಯುವರು "ಕಂಡದ್ದು ಕಂಡ ಹಾಗೆ ಹೇಳಿದರೆ ಕೆಂಡದಂಥ ಕೋಪ" ಎಂಬ ಗಾದೆಗೆ ಸರಿಯಾಗಿ ಕೆಲವರು ಆಕ್ಷೇಪಣೆ ಮಾಡಬಹುದು ಆಕ್ಷೇಪಣೆಗಳಿಂದ ಕೆಲವರು ಹೆಸರಿ ಹೋಗಳಿಗೆ ಸುಳ್ಳು ಮುಂತಾದ್ದನ್ನು ಬರೆಯುವುದರಿಂದ ಯಾವ ಪ್ರಯೋಜನವೂ ಇಲ್ಲ. ಆ ಇದರಿಂದ ವೈಮನಸ್ಯ ಬೆಳೆಸಲೂ ಕೂಡದು ಯಾವಾಗಲೂ ಬಾ ದಾರರು ಪ್ರಯೋಜನಕಾರವಾದ ಕಾರ್ಯಗಳನ್ನು ಹುಡುಕಿ ಸಮಾ ಮಾಡಿ ತಮ್ಮಮೂಲಕ ಕೀರ್ತಿ ಪಡೆಯುತ್ತಾರೆಂತ ನಂಬುತ್ತೇನೆ.

ಪೈಶುನ್.

ಮಾಂಸಾಹಾರವು

ಅಯ್ಯಾ,

ಎಂ. ಆರ್. ಎ. ಎಂಬುವವರು ಕಳೆದ ವಾರ ಪ್ರಕಟ ಪತ್ರವನ್ನು ಓದಿದೆನು. ದೇವರು ನಮಗಾಗಿ ಅನೇಕ ಪದಾ ಗಳನ್ನು ಸೃಷ್ಟಿಸಿರುವನು. ಆದರೆ ಅವುಗಳನ್ನು ಯಥಾ ನ್ಯಾಯವಾಗಿ ಉಪಯೋಗಿಸುವ ಬುದ್ಧಿಯನ್ನು ಕೊಟ್ಟಿರುವನು ಎಂ

...ಬಲ್ಲಿರುವದು ಸರಿಯಾದದ್ದೆ. ಆದರೆ ಅವುಗಳನ್ನು ಶೈಲಿಯ ದಯೋಗಿ ...ವದರಲ್ಲಿ ದಾಕ್ಷಿಣ್ಯವು ತಪ್ಪಿದೆ. ಜೀವರಾಶಿಗಳಲ್ಲಿ ಸ್ಥಾವರ ...ಗವು ಎಂದು ಎರಡು ಭೇದಗಳುಂಟೆಂದು ಬರೆದಿರುತ್ತಾರೆ. ...ದು ಅವರಿಗೆ ಚನ್ನಾಗಿ ತಿಳಿಯಬರುವಂತೆ ತೋರುವದಿಲ್ಲ. ಸ್ಥಾವ ...ಅಂದರೆ ಚಲಿಸದೇ ಇರುವ ಪದಾರ್ಥಗಳು, ಜಂಗಮ ಅಂದರೆ ...ರುವ ಪದಾರ್ಥಗಳು. ಜಂಗಮ ಪದಾರ್ಥಗಳು ಸಂತಾನ ಕೊಡು...ವ ಜಂಗಮ ಪದಾರ್ಥ ಳಿಗೆ ಸುಖ ದುಃಖ, ಹಸಿವು ತೃಷೆ, ...ಹಾರ, ಭಯ ಸಂಗ—ಈ ಮುಂತಾದವುಗಳು ಇರುವ ಹಾಗೆ ...ವರ ಪದಾರ್ಥಗಳು ಇರುವುದಿಲ್ಲ. ಆದ್ದರಿಂದ ಜಂಗಮ ಪದಾ...ವು ಸ್ಥಾವರ ಪದಾರ್ಥಗಳಿಗೆ ಸಮವಾಗಲಾರದು. ಇದನ್ನು ...ಯದ ಜೀವಿಗಳಲ್ಲಿ ಸ್ಥಾವರ ಜಂಗಮ ಎರಡು ಪದಾರ್ಥಗಳುಂ...ದು ಬರೆದಿರುತ್ತಾರೆ. ಜಂಗಮ ಪದಾರ್ಥಗಳಾದ ಸಮಸ್ತ ಜೀವ...ಗಳಲ್ಲಿ ಮನುಷ್ಯನೇ ಜ್ಞಾನವುಳ್ಳ ಶ್ರೇಷ್ಠನೆಂದು ಹೇಳುವಲ್ಲಿ ...ಥಾ ಜ್ಞಾನವಿಲ್ಲದ ಮೃಗ ಪಕ್ಷಿಗಳನ್ನು ಹೊಡೆದು ತಿನ್ನುವುದು ...ಮನುಷ್ಯನ ಜ್ಞಾನಕ್ಕೆ ಯೋಗ್ಯವಾದ ಕೃತ್ಯವೇ? ರಾಮರು ಮೊ...ದ ರಾಜರುಗಳು ಋಷಿಗಳ ಆಶ್ರಮಗಳಿಗೆ ತೊಂದರೆ ಕೊಡುವ ...ಗೆ ಬೇಟೆಯಾಡಿ ಮೃಗಗಳನ್ನು ಕೊಲ್ಲುತ್ತಿದ್ದರೆಂದು ಬರೆದಿ...ದೆ. ಮೃಗಗಳ ಬಾಧೆಗೆ ಅಂಜಿದರೆ ಋಷಿಗಳ ತಪಸ್ಸು ಏನಾಗಿರ...ಬಹುದು! ಅಂಥಾ ತಪಸ್ವಿಗಳ ಹತ್ತಿರ ದುಷ್ಟ ಮೃಗದ ಕ್ರೂರತ್ವವೆ...ಲ್ಲಿ(ದೆ)? ಹಾಗೆ ಕ್ರೂರತ್ವವಿದ್ದು ಬಾಧಿಸಿದ್ದೇ ಸಹಜವಾದರೆ ...ವ ಋಷಿಗಳು ಮೃಗದ ಬಾಯಿಗೆ ಆಹಾರವಾದರು. ಒಂದು ...ಳ ಕೆಲವು ದಿವಸಗಳಿಂದ ಮಾಂಸಾಹಾರವು ಅಭ್ಯಾಸವಾಗಿರುವದ...ಕ ಈಗ ನಾನು ಹೇಳುವ ಅಭಿಪ್ರಾಯವು ಅವರಿಗೆ ವಿರೋಧ...ವಾಗಿರಬಹುದು. ಆದ್ದರಿಂದ ಅವರು ಈ ವರ್ತನೆಯನ್ನು ಇಷ್ಟಿಗೆ ...ಸುವಾ ಎಂದು ಬರೆದಿರುವದು ನನಗೆ ಬಹಳ ಸಂತೋಷವಾ...ಗಿದೆ.

ಬೆಂಗಳೂರು ಸಿಟಿ ಸುಜನಮಿತ್ರ

ವರ್ತಕರ ಮೋಸಗಾರಿಕೆ

...ಮ್ಯ,

ಕೆಲವರು ?? ದ ವ್ಯಾಪಾರಿಗಳೆಂದು ಡಂಭಾಚಾರದಿಂದ ನಟಿ...ಬಂದವಾಳವಿಲ್ಲದೇನೇ ಅನೇಕ ದೂರ ದೇಶಗಳಿಂದ ಸರಕುಗ...ನ್ನು ತರಿಸಿಕೊಂಡು, ಧಗಶಾ ಬಂದ ಕೂಡ್ಲೆ ಆದಾಯವಾಗಲಿ ಅ...ವಾ ನಷ್ಟವಾಗಲಿ ಒಪ್ಪಿ ಮಾಡಿ ಸ್ವಲ್ಪ ಹಣ ಕಟ್ಟಿ ಮೊದಲು ...ಬಹುದು ಹೋಗಿ ಚಾಲ್ತಿಗೆ ತಂದುಕೊಂಡು ಬಂದು, ಮಾನ... ...ಮಾಡುತ್ತಾರೆ. ಕೊನೆಗೆ ಇಂಥವರ ವ್ಯಾಪಾರ ಫಲವು ಗೊ...ತ್ತಾಗುವುದು ಇವರು ದಿವಾಳಿಗಳಾಗಿ ದೇಶದಾರರಿಗೆ ಅರ್ಧ, ಕಾ...ಲು ಕೊಡುತ್ತಾರೆ... ಪಾಲಿನಂತೆ ಕೃಸಲ್ಮಾಡಿಕೊಂಡವರ ಸಂಕಟವು ಹೇಳಲಸಾಧ್ಯ...ವಾಗಿದೆ. ಸ್ವಲ್ಪ ಲಾಭಕ್ಕೋಸ್ಕರ ನಂಬಿಕೆಯೆಂದು ತಿಳಿದು ಸಿಕ್ಕಿ...ಕೊಂಡು ನಂತರ ಇವರ ಮೋಸಗಳನ್ನು ಕಂಡು ವ್ಯಸನಪಡುತ್ತಾರೆ. ...ನ್ನು ಕೆಲವರು ಇವರಂತೆ ನಟಿಸುತ್ತಿದ್ದಾರೆ. ಮುಂದೆ ಆದರೂ ...ಈ ದೇಶದ ವರ್ತಕರು ಸರಿಯಾದ ನಂಬಿಕೆಯೆಂದು ತಿಳಿದ ವರ್ತ...ಕರಲ್ಲಿ ಲೇವಾದೇವಿ ಮಾಡಿಕೊಂಡು ಡಂಭಾಚಾರಿಗಳ ಮೋಸಗ...ಳಾದ ವರ್ತಕರನ್ನು ದೂರಮಾಡಿದಲ್ಲಿ ತಮ್ಮ ಹಣಕ್ಕೆ ನಂಬಿ...ಕೆಯಾಗಿರುವದಲ್ಲದೆ ಪಟ್ಟಣಕ್ಕೂ ಕೆಟ್ಟ ಹೆಸರು ಬಾರದೆ ಕ್ಷೇಮವಾ...ಗಿರುವದರಲ್ಲಿ ಸಂದೇಹವಿಲ್ಲ.

...ಯು, ಕೆಲವು ಪ್ರಾಂತೀ ಜನಗಳು ದೊಡ್ಡ ಮನುಷ್ಯರ ಆರ್ಡ...ರು ಹಾಕಿ ಪದಾರ್ಥಗಳು ವಿ. ಪಿ. ಕಳುಹಿಸುವಂತೆ ಕಂಪನಿಗಳಿಗೆ ...ಬರೆಯುತ್ತಾರೆ. ಅವರು ಪ್ಯಾಕ್ ಮಾಡಿ ವಿ. ಪಿ. ಬಂದಾಗ ...ರ್ಡರುದಾರರು ತಾವು ಬರೆಯಲಿಲ್ಲವೆಂದು ವಾಪಸು ಮಾಡುತ್ತಾರೆ. ...ಇದರಿಂದ ಕಂಪನಿಗಳಿಗೆ ನಷ್ಟವಾಗುತ್ತೆ. ಇಂಥಾ ನೀಚರನ್ನು ಹಿಡಿದು ...ಶಿಕ್ಷಿಸಿದಲ್ಲಿ ತುಂಬಾ ಕ್ಷೇಮವಾದೀತು.

ನಿಷ್ಪಕ್ಷಪಾತಿ

ವಿದ್ಯಾಭಿವೃದ್ಧಿ ಮುಂತಾದ್ದಕ್ಕೆ ಪ್ರೋತ್ಸಾಹಬೇಕು.

...ಮ್ಯ,

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಶಿವಗಂಗಾ ಮಹಾ ಕ್ಷೇತ್ರದ ...ಯ್ಯಾ ಹಸ್ತಿಗೆ ಸೇರಿದ ಹತ್ತಿಗನೂರೆಂಬ ಗ್ರಾಮದಲ್ಲಿ ಒಂ...ದು ಶಿವಾಲಯವೂ, ಒಂದು ಮಠವೂ, ಆ ಮಠಕ್ಕೆ ಪಟ್ಟ ಚರಂತ...ರುಗಳನ್ನು ದೀಕ್ಷಾಬದ್ಧರ ಮಾಡಿ ಇಡುವುದೂ, ಒಂದು ದಾಸೋಹ ...ಶಾಲೆಯೂ, ಸಂಸ್ಕೃತ ಗ್ರಂಥಗಳನ್ನು ಕಲಿಸುವ ಪಾಠಶಾಲೆಯೂ, ...ಪಾಠಶಾಲೆಯ ವಿದ್ಯಾರ್ಥಿಗಳಿಗೆ ಆಹಾರಾದ್ಯುಪಚಾರ ನಡೆಯು...ವಂತೆಯೂ ಏರ್ಪಡಿಸಬೇಕೆಂದು ಯೋಚಿಸಿ ಪ್ರಾರಂಭ ಮಾಡೋ...ಣವು. ಈ ಕಾರ್ಯಕ್ಕೆ ಆ ಗ್ರಾಮದ ಪಟೇಲ್ ಹೆಂದಲೆಗೌಡ...ರು, ಶಾನುಭೋಗ ವೆಂಕಟಸುಬ್ಬಯ್ಯನವರು, ಪಣಪದಲಿ ಪುಟ್ಟವೀರ...ಪ್ಪನವರು, ಬೈರೆಗೌಡರು, ಚಿಕ್ಕಣ್ಣಗೌಡರು, ಗೆದ್ದಲಹಳ್ಳಿ ಪುಟ್ಟಬ...ಸವಾರಾಧ್ಯರು, ಸೋಲಕುಂಟೆ ಸುಬ್ಬಣ್ಣನವರು, ಅಗ್ರಹಾರದ ಪಟೇ...ಲ್ ಭೈರೆಗೌಡರು, ಕಾಗರಗಟ್ಟದ ಪಟೇಲ್ ರಾಮೇಗೌಡರು, ಪಟ...ಪಲಿ ದಾಸಗೌಡರ ರಂಗೇಗೌಡರು, ಮೊಳಕತ್ತಿಗನೂರು ಪಟೇಲ್ ...ಮುಂಡೆಗೌಡರು, ಮುಗುಳಹಳ್ಳಿ ಪಟೇಲ್ ಮುನಿಯಗೌಡರು, ...ಹಳ್ಳಿ ಪಟೇಲ್ ಹಿರಿಯಣ್ಣಗೌಡರು, ಈ ದೊಡ್ಡ ಮನುಷ್ಯ...ರು ೫೦೦ ರೂಪಾಯಿ ವರಿಗೆ ಸಹಾಯ ಮಾಡಿದರು. ಇದಲ್ಲದೆ ಬೆಂ...ಗಳೂರು ಮತ್ತು ದಂಡಿನಲ್ಲಿರುವ ಕೆಲವು ಧರ್ಮಾತ್ಮರು ೩೦೦ ರೂ...ಪಾಯಿ ವರಿವಿಗೆ ಸಹಾಯ ಮಾಡಿದರು. ಸರಕಾರದಿಂದ ಅಮಲ್ದಾ...ರ್ ಮಿ॥ ಪುಟ್ಟಣ್ಣನವರು ಈ ಕಟ್ಟಡಗಳಿಗೆ ಸ್ಥಳವನ್ನು ದಯಪಾಲಿ...ಸುತ್ತಾರೆ. ಕೆಲವು ಸಾಮಾನ ಕ್ರಯಕ್ಕೆ ತೆಗೆದು ಇರುತ್ತೆ. ಕಟ್ಟ...ಡ ಕೆಲಸವು ಕೊಂಚವಾಗಿ ನಡೆದಿರುತ್ತೆ. ಧರ್ಮಾತ್ಮರಾದ ಧನ...ವಂತರು ದ್ರವ್ಯ ಸಹಾಯವಂ ಮಾಡಿ ಈ ಕಾರ್ಯವನ್ನು ಸಾರ್ಥಕ ಪಡಿಸಿ ಮುಗಿಸಿಕೊಡಬೇಕೆಂದು ವಿಜ್ಞಾಪಿಸುತ್ತೇನೆ.

ಬೆಂಗಳೂರು ಡಿಸ್ಟ್ರಿಕ್ಟ ನೆಲಮಂಗಲದ ತಾಲ್ಲೂಕು ಕೆರೆಹತ್ತಿಗನೂರಿನಲ್ಲಿರುವ ದೊಡ್ಡ ಸಂಜಾರಾಧ್ಯರ ಮಗ ಪುಟ್ಟ ಸಂಜಾರಾಧ್ಯನ ವಿಜ್ಞಾಪನೆ.

ತಾಲ್ಲೋಕು ವರ್ತಮಾನ.

ತುಂಕೂರು.—ಶೀತವಾದ ಗಾಳಿ ಬಿರುಸಾಗಿ ಬೀಸುತ್ತಿರುವದರಿಂದ ಮಳೆ ಅಭಾವವಾಗಿದೆ. ಬೀಜ ಪೇರುವು ಮಾಡುವ ಕಾಲವು ತೀರುತ್ತಾ ಬಂತಾದರೂ ನಮ್ಮ ಪ್ರಾಂತ್ಯ ಅನೇಕ ಜಮೀನುಗಳು ಮಳೆ ಇಲ್ಲದಿರುವದರಿಂದ ಉಳುವದಕ್ಕವಕಾಶವಿಲ್ಲದಿವೆ. ಇನ್ನೂ ಬೀಜ ಪೇರಾವು ಎಷ್ಟೋ ರಕ್ಕವುಗಳಿಗೆ ಸಾಕಾದಷ್ಟು ಮಳೆ ಇಲ್ಲದಿರುವದರಿಂದ ಪೈರು ಹುಟ್ಟಿ ಒಣಗಿಹೋಗುತ್ತಲಿವೆ. ಈ ನಮ್ಮ ಬೈಲ್ ಪ್ರದೇಶದಲ್ಲಿ ಆರಂಭಕ್ಕೆ ಮಳೆಯೇ ಆಧಾರವಾಗಿರುವಲ್ಲಿ ಈ ರೀತಿಯಾದ ಅನಾವೃಷ್ಟಿಯಿಂದ ಜನರಿಗೆ ಉಂಟಾಗಿರುವ ಭಯವು ಅಪಾರವಾಗಿದೆ. ಈ ಸುಧ್ಯೆ ಜನರ ಸ್ಥಿತಿಯು ಹೀಗಿದ್ದರೂ ಜಾನುವಾರುಗಳಿಗೆ ಗತ ಸಾಲಿನಲ್ಲಿ ಬೆಳೆ ಸಂಪೂರ್ಣವಾಗದೆ ಹುಲ್ಲು ಕೊಂಚವಾದ್ದರಿಂದಲೂ ಪ್ರಕೃತದಲ್ಲಿ ಮಳೆ ಬೀಳದಿರುವದರಿಂದಲೂ ಮೇವಿಲ್ಲದೆ ತುಂಬಾ ಕೃಶಾಂಗಗಳಾಗಿ ಅಲೆಯುತ್ತಿವೆ. ಈ ಮೂಗು ಪ್ರಾಣಿಗಳ ಕಷ್ಟವಾದರೂ ಪಾರಾದರೆ ಸಾಕು. ಇದರಲ್ಲೂ ಧಾರಣೆಗಳು ದಿನದಿನಕ್ಕೆ ಜಾಸ್ತಿಯಾಗುತ್ತಲಿರುವದರಿಂದ ಬಡ ಜನರು ಪಡುವ ತೊಂದರೆ ಹ್ಯಾಗಿರಬೇಕೋ ಲೇಖನದಿಂದ ಗೋಚರಿಸಲಾರದು.—ಕಳೆದ ವಾರ ಇಲ್ಲಿನ ಟ್ರಜರಿ ಅಸಿಸ್ಟೆಂಟರಾಗಿದ್ದ ಮಿ॥ ಭೀಮರಾಯರು ಚಿತ್ರದುರ್ಗಕ್ಕೆ ವರ್ಗವಾಗಿ ಹೋದರು. ಅವರ ಸ್ಥಾನಕ್ಕೆ ಮಿ॥ ರಾಯಲು ಚೆಟ್ಟಿಯವರು ದಯಮಾಡಿಸಿರುತ್ತಾರೆ. ಮಿ॥ ಭೀಮರಾಯರು ನಮ್ಮ ಟವರ್ ವೈಸ್ ಪ್ರೆಸಿಡೆಂಟರಾದಾಗಲಿಂದ ಈ ವರಿಗೂ ತಮ್ಮ ಹೆಸರನ್ನು ಸಾರ್ಥಕಪಡಿಸುವಂಥ ಸ್ವಾನಿಟರಿ ಕೆಲಸಗಳಿಗೆ ಗಮನಿಸದೆ ಹೊರಟುಹೋದದ್ದು ನಮ್ಮಗಳ ದೌರ್ಭಾಗ್ಯವೆಂದೇ ಹೇಳಬೇಕಾಗಿದೆ. ಈಗ ಬಂದಿರತಕ್ಕ ಮಹನೀಯರಾದರೂ ಪ್ರಜಾನುಕೂಲಕ್ಕೆ ಆವಶ್ಯಕಗಳಾದ ಆರೋಗ್ಯ ವಿಚಾರಗಳನ್ನು ಗಮನಿಸಿ, ತಕ್ಕ ಅನುಕೂಲಪಡಿಸಿ ಪ್ರಜಾನುರಾಗಿಗಳಾಗಲೆಂದು ಹಾರೈಸುತ್ತೇವೆ.—ಇಲ್ಲಿನ ಮಹಮ್ಮದೀಯರ ಯುವಕನೊಬ್ಬನನ್ನು ಮರಕ್ಕೆ ಕಟ್ಟಿ ಬಲವಾಗಿ ಹೊಡೆದುಬಿಟ್ಟಿದ್ದರು. ಈ ವಿಷಯ ಸರ್ಕಾರಕ್ಕೆ ವಿಧಿತವಾಗಿ ಹೊಡೆದವರ ಮೇಲೆ ಚಾರ್ಜಾಗಿ ಅಪರಾಧಿಗಳಿಗೆ ಒಂದೊಂದು ತಿಂಗಳ ಸಜಾ ಶಿಕ್ಷೆ ವಿಧಿಸಲ್ಪಟ್ಟಿತು.—ಕಳೆದ ಗುರುವಾರ ಇಲ್ಲಿನ ಸಂತೆಗೆ ಪರಸ್ಥಳದಿಂದ ಬಂದಿದ್ದ ಅಕ್ಕಸಾಲಿಗನೊಬ್ಬನು ತನ್ನ ಊರಿನಿಂದ ತೆಗೆದುಕೊಂಡು ಬಂದಿದ್ದ ನಗಗಳ ಚೀಲವನ್ನು ಗಲಾಟೆಯಲ್ಲಿ ಯಾರೋ ಕದ್ದುಬಿಟ್ಟರೆಂದು ವರ್ತಮಾನ ಕೇಳುತ್ತೇನೆ. ಅಲ್ಲದೆ ಮುಂತಿವೇಟಿಗ ದಿವಸ ತಂದಿದ್ದವನೊಬ್ಬನು ಊರಿಗೆ ಹೋಗುವಾಗ್ಯೆ ದಿನಸಿ ಮಾರಿ ಬಂದ ಹಣವನ್ನು ಇಲ್ಲಿ ಯಾರೋ ಹೊಂಚುಹಾಕಿದ್ದು ಅಪಹರಿಸಿದರೆಂದು ತಿಳಿಯಲಾಯಿತು. ಸಾಮಾನ್ಯವಾಗಿ ಇಂಥಾ ವಿಷಯಗಳು ಇಲ್ಲಿ ಅನೇಕವಾಗಿ ನಡೆಯುತ್ತಲಿವೆ. ಆದರೂ ಇವುಗಳನ್ನೆಲ್ಲಾ ಬಂದೋಬಸ್ತು ಮಾಡಲು ತಕ್ಕಷ್ಟು ಪೊಲೀಸ್ ಸಿಬ್ಬಂದಿ ಕಡಮೆಯಾಗಿರುವದೇ ಕಾರಣವಾಗಿದೆ. ನಮ್ಮ ಅಧಿಕಾರಿಗಳು ಇದನ್ನು ಕ್ರಮಪಡಿಸಿ ಪ್ರಜಾನುಕೂಲ ಮಾಡಿಸಿಕೊಟ್ಟಾರೆಂದು ಹಾರೈಸುತ್ತೇವೆ.

ವಿದೇಶ ವರ್ತಮಾನಗಳು.

ಜರ್ಮನ ರಾಜ್ಯದವರು ಕಳೆದ ೧೯೦೪ನೆ ಮೇ ತಿಂಗಳಿಂದೀಚೆಗೆ ಲಂಡನ್ ಪಟ್ಟಣದ ಸಾಹುಕಾರಿ ಬ್ಯಾಂಕುಗಳಲ್ಲಿ ನಾಲ್ಕಾವರ್ತಿ ಸಾಲಮಾಡಿದ್ದಾರೆ. ಈ ಸಾಲವೆಲ್ಲಾ ಒಟ್ಟು ೧೦೩ ಕೋಟಿ ರೂಪಾಯಿಗಳೆಂದು ತಿಳಿಯುವುದು.

*****

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟಿನಲ್ಲಿ ಸ್ಯಾಂಡಿಯಾಗೋ ಎಂಬ ಪಟ್ಟಣದ ಸಮುದ್ರತೀರದಲ್ಲಿ ಒಂದು ಹಡಗು ಅಕಸ್ಮಾತ್ತಾಗಿ ಒಡೆದು ಅನಾಹುತವಾಯಿತು. ಹಡಗಿನಲ್ಲಿದ್ದವರು ಆಕಾಶಕ್ಕೆ ಎಸೆಯಲ್ಪಟ್ಟರು. ೧೭ ಜನ ಹತರಾದರು. ೩೦ ಜನಗಳಿಗೆ ಗಾಯಗಳಾಗಿವೆ.

*****

ಅಮೇರಿಕಾ ರಾಜ್ಯದ ಜಾರ್ಜ ಗಿಲ್ಮೋರ್ ಎಂಬಾತನು ತನ್ನ ಆಸ್ತಿಯಲ್ಲಿ ೧ ಲಕ್ಷ ರೂಪಾಯನ್ನು ವಿಲಾಯತಿಯಲ್ಲಿ ಸರ್ ಜಾರ್ಜ ವಿಲ್ಲಿಯಮ್ಸ್ ಎಂಬಾತನು ತನ್ನ ಆಸ್ತಿಯಲ್ಲಿ ೭ ಲಕ್ಷ ರೂಪಾಯನ್ನೂ ಪ್ಲಾರೆನ್ಸ್ ಡಾವಿಸ್ ಎಂಬಾಕೆಯು ತನ್ನ ಪತಿಯ ಆಸ್ತಿಯಲ್ಲಿ ೮ ಲಕ್ಷ ರೂಪಾಯನ್ನೂ ನಾನಾ ಧರ್ಮ ಫಂಡುಗಳಿಗೆ ಕೊಡುವಂತೆ ಮರಣಶಾಸನವನ್ನು ಬರೆದಿರುತ್ತಾರೆ.

*****

ರಷ್ಯಾ ಹಡಗು ಒರೆಲ್ ಎಂಬ ಹೆಸರುಳ್ಳದ್ದು ಜರ್ಮನ ಹಡಗುಗಳ ಮೇಲೆ ಯುದ್ಧಮಾಡುತ್ತಿರುವಾಗ್ಗೆ ಜರ್ಮನವರು ಅದನ್ನು ಅನಾಮತ್ತಾಗಿ ಮುಳುಗಿಸಿದರಷ್ಟೆ. ಅದರಲ್ಲಿದ್ದ ೮೦೦ ಮಂದಿಯ ಪೈಕಿ ಒಬ್ಬನೇ ಒಬ್ಬ ಬದುಕಿದನೆಂದೂ ಹಡಗು ಮುಳುಗುವುದಕ್ಕೆ ಮುಂಚೆ ಅದರಲ್ಲಿದ್ದ ೧೯ ಲಕ್ಷ ದ್ರವ್ಯವನ್ನು ಅಧಿಕಾರಿಗಳು ಎತ್ತಿ ಸಮುದ್ರಕ್ಕೆ ಚಲ್ಲಿಬಿಟ್ಟರೆಂದೂ ಪ್ರಕಟವಾಗಿದೆ.

*****

ಫ್ರಾನ್ಸಿಗೆ ಸೇರಿದ ಬಾಟನಾಲಿಸ್ ಎಂಬ ರೈಲ್ವೆ ಸ್ಟೇಷನಿನಲ್ಲಿ ಒಂದು ಸರ್ಕಸ್ ಕಂಪನಿಯ ಐದು ಆನೆಗಳು ಸರಪಣಿಗಳನ್ನು ಕಿತ್ತುಕೊಂಡು, ಆ ಸ್ಟೇಷನ್ನೆಲ್ಲಾ ಹಾಳುಮಾಡಿ, ಹಣ್ಣು ಹಂಪಲುಗಳ ಅಂಗಡಿಗಳನ್ನು ಲೂಟಿಮಾಡಿಬಿಟ್ಟವು. ವರ್ತಕರಿಗೂ ಪ್ರಯಾಣಿಕರಿಗೂ ತುಂಬಾ ಕಷ್ಟವಾಯಿತು. ಕಡೆಗೆ ಆ ಕಂಪನಿಯ ಮಾಹುತರು ಬಂದು ಆ ಆನೆಗಳನ್ನು ಹಿಡಿದು ಕಟ್ಟಿಹಾಕಿದರು.

*****

ಚೀಣಾ ರಾಜ್ಯದಲ್ಲಿ ದೊಡ್ಡ ಮನುಷ್ಯರು ತಮ್ಮ ಸ್ತ್ರೀಯರು ವಿದ್ಯಾವಂತರಾದ ಹೊರತು ರಾಜ್ಯವು ಅಭಿವೃದ್ಧಿಗೆ ಬರಲಾರದೆಂದು ಈಗೀಗ ಪರಿಷ್ಕಾರವಾಗಿ ತಿಳಿದುಕೊಳ್ಳುತ್ತಿದ್ದಾರೆ. ಅವರು ತಮ್ಮ ಹೆಣ್ಣು ಮಕ್ಕಳನ್ನು ಜಪಾನಿಗೆ ಕಳುಹಿಸಲಾರಂಭಿಸಿರುವರು. ಇದುವರೆಗೆ ಸುಮಾರು ೧೫೦ ಮಂದಿ ಸ್ತ್ರೀಯರು ಜಪಾನ ವಿದ್ಯಾಶಾಲೆಗಳಿಗೆ ಹೋಗಿ ಸೇರಿ, ವ್ಯಾಸಂಗಮಾಡುತ್ತಿರುವಂತೆ ಪ್ರಕಟವಾಗಿದೆ.

*****

ಸರ್ ಕವಾಸ್‌ಜಿಯವರು ಪತ್ನಿಸಹಿತ ಈಗ ಲಂಡನ್ ಪಟ್ಟಣದಲ್ಲಿರುತ್ತಾರೆ. ಇವರು ಬೊಂಬಾಯಿನಲ್ಲಿ ದೊಡ್ಡ ಸಾಹುಕಾರರು. ಲಂಡನ್ ಪಟ್ಟಣದ ಸೆಸಿಲ್ ಹೋಟೇಲಿನೊಳಗೆ ಈ ಸಾಹುಕಾರರು ಕಳೆದ ವಾರ ಹಿಂದೂಸ್ಥಾನದಿಂದ ಅಲ್ಲಿಗೆ ಹೋಗಿರತಕ್ಕವರನ್ನು ಕರೆಸಿಕೊಂಡು ದೊಡ್ಡ ಔತಣ ಮಾಡಿದರು. ಅಗ್ಗೆ ಬರೋಡಾ ಸಂಸ್ಥಾನದ ಮಹಾರಾಜರವರೂ ಮಹಾರಾಣಿಯವರೂ ಹೋಗಿದ್ದರು.

*****

ಡಾಕ್ಟರ್ ಟಾನರ್ ಎಂಬಾತನು ೨೦ ವರುಷಗಳ ಕೆಳಗೆ ವಿಲಾಯತಿಯಲ್ಲಿ ೪೦ ದಿನಗಳ ತನಕ ಉಪವಾಸ ಮಾಡಿ, ತನ್ನ ಅದ್ಭುತ ಶಕ್ತಿಯನ್ನು ತೋರಿಸಿದನು. ಈಗ ಈತನು ಅಮೇರಿಕಕ್ಕೆ ಸೇರಿದ ಇಂಡಿಯಾನಾ ಡಿಸ್ಟ್ರಿಕ್ಟಿಗೆ ಹೋಗಿರುತ್ತಾನೆ. ಇವನನ್ನು ಅಟ್ಟಿಕಾ ಎಂಬ ಪಟ್ಟಣದಲ್ಲಿ ೮ ಅಡಿ ಆಳವಾದ ತೊಟ್ಟಿಯನ್ನು ಭೂಮಿಯಲ್ಲಿ ತೋಡಿ ಒಳಗಿಟ್ಟು ಮೇಲೆ ಮಣ್ಣು ತುಂಬುವರು. ೩೦ ದಿನಗಳ ಮೇಲೆ ತೆಗೆದರೆ ಅವನು ಜೀವಸಹಿತನಾಗಿ ಗುಣಿಯಿಂದ ಎದ್ದು ಬರುವೆನೆಂದು ಭರವಸೆ ಕೊಟ್ಟಿದ್ದಾನೆ. ಆತನಿಗೆ ಈಗ ೭೫ ವರುಷ ವಯಸ್ಸಾಗಿರುವುದು.

*****

ರಷ್ಯಾ ಚಕ್ರವರ್ತಿ ಜಾರ್‌ಯವರು ಕಳೆದವಾರ ತಮ್ಮ ಸಹೋದರರಾದ ಗ್ರಾಂಡ ಡ್ಯೂಕ್ ಮಿಕೇಲ್‌ಯವರನ್ನೂ ತಮ್ಮ ಆಸ್ಥಾನದ ಒಬ್ಬ ಮಂತ್ರಿಯನ್ನೂ ಮಾತ್ರ ಕರೆದುಕೊಂಡು, ಪೀಟರ್ ಹಾಫ್ ಎಂಬ ರಾಜಭವನದಿಂದ ಹೊರಟು, ಜರ್ಮನಿ ಚಕ್ರವರ್ತಿಯವರನ್ನು ಕಂಡು, ಇಬ್ಬರೂ ಒಂದು ಹಡಗಿನಲ್ಲಿ ಸೇರಿ ರಾಜಕೀಯ ವಿಷಯಗಳನ್ನು ಕುರಿತು ಮಾತನಾಡಿ, ಮರುದಿನ ಹಿಂತಿರುಗಿ ತಮ್ಮ ಅರಮನೆಗೆ ದಯಮಾಡಿದರು. ಈ ರೀತಿ ಈ ಚಕ್ರವರ್ತಿಗಳೀರ್ವರೂ ಸೇರಿ ಮಾತನಾಡಿದ್ದನ್ನು ನೋಡಿ, ಜರ್ಮನಿ, ಫ್ರಾನ್ಸ್, ರಷ್ಯಾ, ಈ ಮೂರು ರಾಜ್ಯಗಳವರೂ ಒಂದಾಗಿ ಕರಾರು ಮಾಡಿಕೊಳ್ಳುವವರಾಗಿದ್ದಾರೆಂದು ಅಲ್ಲಿನ ಪತ್ರಿಕೆಗಳು ಊಹಿಸಿರುತ್ತವೆ.

*****

ಪೋರ್ಟ್ ಆರ್ಥರ್ ಕೋಟೆಯನ್ನು ಕಾಪಾಡಿಕೊಳ್ಳುವುದಕ್ಕಾಗದೆ ಅದನ್ನು ಜಪಾನವರಿಗೆ ಒಪ್ಪಿಸಿ ಹಿಂತಿರುಗಿ ರಷ್ಯಾಕ್ಕೆ ಹೊರಟುಹೋದ ರಷ್ಯಾ ಜನರಲ್ ಸ್ಟೋಯೆಸೆಲ್‌ಯವರನ್ನು ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಸರ್ಕಾರದವರು ಅಕಸ್ಮಾತ್ತಾಗಿ ಹಿಡಿದು ಲಾಕಪ್ಪಿಗೆ ಹಾಕಿದರೆಂದು ತಿಳಿಸಿದೇವಷ್ಟೆ. ಈ ವಿಷಯದಲ್ಲಿ ರಷ್ಯಾದಿಂದ ಚೀಣಕ್ಕೆ ಕಳೆದವಾರ ಬಂದ ವರ್ತಮಾನವು ಬಹು ಭಯಂಕರವಾದದ್ದಾಗಿದೆ. ಜನರಲ್ ಸ್ಟೋಯೆಸಲ್‌ಯವರು ಪೋರ್ಟ್ ಆರ್ಥರ್ ಕೋಟೆಯನ್ನು ಜಪಾನವರಿಗೆ ಒಪ್ಪಿಸಿ ಅವರಿಂದ ಸುಮಾರು ಒಂದು ಕೋಟಿ ದ್ರವ್ಯವನ್ನು ಗುಟ್ಟಾಗಿ ಪಡೆದುಕೊಂಡರೆಂತಲೂ, ಈ ಸಂಗತಿಯು ಈಚೆಗೆ ರಷ್ಯಾ ಚಕ್ರವರ್ತಿಯವರಿಗೆ ತಿಳಿದುಬಂದುದರಿಂದ ಅವರು ತಕ್ಷಣ ಆ ಹುದ್ದೆದಾರರನ್ನು ಹಿಡಿದುತರಿಸಿ, ಪರ್ಯಾಪ್ತಿ ಮಾಡಿಸಿ ಗುಂಡುಹೊಡೆದು ಕೊಲ್ಲಿಸಿದರೆಂತಲೂ ವರ್ತಮಾನ ಬಂದಿರುವುದು.

*****

ಟರ್ಕಿ ಸುಲ್ತಾನರವರು ಕಳೆದ ಶುಕ್ರವಾರ ಪದ್ಧತಿಯ ಪ್ರಕಾರ ದೇವರ ಪ್ರಾರ್ಥನೆಗೋಸ್ಕರ ಅರಮನೆಯಿಂದ ಹೊರಟು, ಸುಮಾರು ೧—೩ ಫರ್ಲಾಂಗ್ ದೂರದಲ್ಲಿರುವ ಮಸೀತಿಗೆ ಹೋಗಿ ಬಂದರು. ಅವರು ಪ್ರಾರ್ಥನೆಯನ್ನು ತೀರಿಸಿಕೊಂಡು, ಹಿಂತಿರುಗುವಾಗ್ಗೆ ಯಾವನೋ ಒಬ್ಬ ದುಷ್ಟನು ಹಾಕಿದ್ದ ಮದ್ದಿನ ಗುಂಡು ಮಸೀತಿಯ ಅಂಗಳದಲ್ಲಿ ಬಿದ್ದು ಒಡೆಯಿತು. ಸುಲ್ತಾನರನ್ನು ಕೊಲ್ಲಬೇಕೆಂಬುದೇ ಈ ಗುಂಡಿನ ಉದ್ದೇಶವಾದರೂ ದೇವರ ದಯದಿಂದ ಅವರಿಗೆ ಯಾವ ಅಪಾಯವೂ ಸಂಭವಿಸಲಿಲ್ಲ. ಆದರೆ ಅವರ ಸುತ್ತುಮುತ್ತು ಸುತ್ತಿಕೊಂಡಿದ್ದ ಬೆಂಗಾವಲಿನ ಸೈನಿಕರಲ್ಲಿ ತುಂಬಾ ಪ್ರಾಣಹಾನಿಯಾಯಿತು. ೨೪ ಮಂದಿ ಸತ್ತರು, ೫೭ ಜನರಿಗೆ ಗಾಯಗಳಾದವು. ೫೫ ಕುದುರೆಗಳು ಮೃತಪಟ್ಟವು. ಅರಮನೆಯಿಂದ ಮಸೀತಿಯ ವರೆಗೆ ರಸ್ತೆಯ ಎರಡು ಕಡೆಗಳಲ್ಲೂ ಉದ್ದಕ್ಕೂ ಸೈನಿಕರು ಲೈನ್ ಕಟ್ಟಿ ನಿಂತಿರುತ್ತಾರೆ. ಮಸೀತಿಯ ಸುತ್ತಲೂ ಮುಂಭಾಗದಲ್ಲೂ ಸುಮಾರು ೪ ಸಾವಿರ ಸೈನಿಕರು ಪಹರೆ ಇರುವರು. ಮತ್ತು ಸುಲ್ತಾನರ ಬೆಂಗಾವಲಿನವರೇ ನೂರಾರು ಮಂದಿ ಅವರ ಅಕ್ಕಪಕ್ಕಗಳಲ್ಲಿ ಇದ್ದೇ ಇರುವರು. ಇಷ್ಟು ಭದ್ರತೆ ಇದ್ದಾಗ್ಯೂ ಆ ದುಷ್ಟನು ಮದ್ದಿನ ಗುಂಡನ್ನು ಮಸೀತಿಯ ಅಂಗಳಕ್ಕೆ ಹ್ಯಾಗೆ ತೆಗೆದುಕೊಂಡು ಹೋದನೋ ಪರಮಾಶ್ಚರ್ಯವಾಗಿದೆ. ರಾಜಧಾನಿಯಾದ ಕಾನಸ್ಟ್ಯಾಂಟಿನೋಪಲ್ ಪಟ್ಟಣದಲ್ಲಿ ಈಚೆಗೆ ಪ್ರಾಯಸ್ಥರು ಕೆಲವರು ಸೇರಿಕೊಂಡು, ಸುಲ್ತಾನರ ಮೇಲೆ ಕತ್ತಿ ಕಟ್ಟಬೇಕೆಂದು ಅಂತರಂಗದಲ್ಲೇ ಮಸಲತ್ತು ಮಾಡುತ್ತಿರುವುದಾಗಿಯೂ ಈ ಗುಂಪಿಗೆ ಸೇರಿದವರೊಬ್ಬರು ಮದ್ದಿನ ಗುಂಡನ್ನು ಸುಲ್ತಾನರ ಮೇಲೆ ಎಸೆದರೆಂತಲೂ ಕೆಲವರು ಊಹಿಸುತ್ತಾರೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

32

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ನಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪. "ರೋಮನರ ಚರಿತ್ರೆ" ಕ್ರಯ ೦—೨—೦
೫. "ಗ್ರೀಕರ ಚರಿತ್ರೆ" ,, ೦—೨—೦
೬ "ಅನುಭವಾನಂದ" ,, ೦—೬—೦
೭ "ಗಣಿತ ಸಂಜೀವಿನಿ" ೧—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ" ೦—೧೨—೦
೧೦ "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ" ೦—೧೨—೦
೧೧ "೧೯೦೫ನೇ ವರುಷದ ಡೈರಿಗಳು"

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦.

ಮಾನೇಜರ್,
ಸಿ. ಎಚ್. ಎಸ್ ಬುಕ್ ಡಿಪೋ,
ಮೈಸೂರು

ಜ್ವರಹರಿ. 35

ಇದು ಸಾಧಾರಣ ಜ್ವರ, ಚಳೀಜ್ವರ, ಪಾರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗುತ್ತದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ. ೨—೧೨ ಆ., ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಅಮೃತ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಮುದಲಿ—ಅಮೃತ ಕರ್ಪೂರವನ್ನು ನಾನು ನನ್ನ ಕಾಬೇದಾರರೂ ಮ್ಯಾನೆಜಿಸುವ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಪ್ರೊಪ್ರಯಟರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಕಲಂಕ್ ಪೇಟ್ ರೋಡ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ .. .. ರೂ ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪ್ರೀತಾಂಬೂಲ.

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬವರಿನ ದುರ್ಗಂಧ ನಾಶವಾಗುವ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶ್ಲೇಷ್ಮ ಸಂಬಂಧ ರೋಗಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಕೆಮ್ಮು, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ ನಮ್ಮ ವಿಳಾಸ.—

ದೇವನಹಳ್ಳಿ ಟವರ್, ಬೆಂಗಳೂರು ಡಿಸ್ಟ್ರಿಕ್ಟ್
ಎಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್.

ಕಷ್ಟ ಪರಿಹಾರ. ತಗಲುತ್ತಲೇ ನೋವು ನಾಶವಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಚೇರಿ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧವು ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ [illegible] ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು ತುರಿಕಜ್ಜಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಕೈಕಾಲಿನಲ್ಲಿ ಮುಳ್ಳು ಚುಚ್ಚಿಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮಿಯೋಪತಿಯ [illegible]

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮಿಯೋಪತಿಯ ಕಂಪೆನಿ, ೫೩ [illegible] ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

14-7-1905 ರಿಂದ 21-7-1905 ರ ವರೆಗೆ.

ಸ್ಥಳ	ಪ್ಲೇಗಿಗೆ ಅಗಲಿ ಬಿದ್ದ	ಸತ್ತ	ಕೊನೆವರೆಗಿನ ಸಂಖ್ಯೆ	
ಬೆಂಗಳೂರು ಪಟ್ಟಣ	0	0	[illegible]	1
ಮೈಸೂರು ,,	0	0	7	[illegible]
ಬೆಂಗಳೂರು ಡಿಸ್ಟ್ರಿಕ್ಟು	21	14	[illegible]5	[illegible]
ಮೈಸೂರು ,,	15	[illegible]	11[illegible]	10[illegible]
ಕೋಲಾರ ,,	0	0	[illegible]	4[illegible]
ಕೋಲಾರ ಚಿನ್ನದ ಗಣಿಗಳು	0	0	[illegible]1	[illegible]
ತುಮಕೂರು ಡಿಸ್ಟ್ರಿಕ್ಟು	8	8	[illegible]9	1[illegible]
ಹಾಸನ ,,	4	1	3[illegible]	[illegible]
ಚಿತ್ರದುರ್ಗ ,,	0	0	64	1[illegible]
ಕಡೂರು ,,	0	0	[illegible]68	11[illegible]
ಶಿವಮೊಗ್ಗ ,,	28	25	05	66
ಜುಮ್ಲಾ	[illegible]	[illegible]5	72[illegible]	5[illegible]

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ಶ್ರಾವಣ ಶುದ್ಧ ಬಿದಿಗೆ ಗುರುವಾರದಿಂದ ಶ್ರಾವಣ ಶುದ್ಧ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ತೇದಿ
3	ಗುರು *	ಬಿದಿಗೆ	1 2[illegible]	ಉತ್ತರ	[illegible]	19
4	ಶುಕ್ರ ‡	ಚೌತಿ	51 21	ಹಸ್ತ	7 6	20
5	ಶನಿವಾ ,,	ಪಂಚಮಿ	[illegible]	[illegible]	16	21
6	ರವಿವಾ	ಷಷ್ಠಿ	39 11	[illegible]	20 [illegible]	22
7	ಚಂದ್ರ	ಸಪ್ತಮಿ	33 12	ಸ್ವಾ	31 1[illegible]	23
8	ಕುಜ †	ಅಷ್ಟಮಿ	27 [illegible]	ವಿ	[illegible]	24
9	ಬುಧ †	ನವಮಿ	21 25	ಅ	11 1[illegible]	25

* ಪುನ್ನಾಗಗೌರೀವ್ರತ ‡ ನಾಗರ ಚತುರ್ಥಿ [illegible]
,, ಗರುಡಪಂಚಮಿ, ಶ್ರಾವಣ ಶನಿವಾರ
† ಮಂಗಳಗೌರೀವ್ರತ
ಮಹಾವ್ಯತೀಪಾತ, ತಿಥಿದ್ವಯಂ

ಪೇಟೆ ಧಾರಣೆ

ದಿನಸಿ.	ಮೈಸೂರು	ಬೆಂಗಳೂರು
[illegible] ಅಕ್ಕಿ ಪಲ್ಲ ೧ಕ್ಕೆ	ರೂ. ೧೦-೮-೦	೧೨—೦—೦
ಕೆಂಬತ್ತಿ ಅಕ್ಕಿ [illegible]	೧೦-೪-೦	೧೯-೮-೦
ಮಧ್ಯಮ	೯-೧೨-೦	೧೧ ೪-೦
ಜಾವಾರಿ ಅಕ್ಕಿ	೯-೮-೦	೧೧ ೮-೦
ಸಣ್ಣಕ್ಕಿ ಅವಲ	೧೨-೦-೦	೧೩-೮-೦
ಮಧ್ಯಮ	೧೧ ೮ ೦	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	೧೦-೮-೦	೧೧ ೮-೦
,, ಮಧ್ಯಮ	೧೧-೦-೦	೧೧-೦-೦
[illegible] ರಾಗಿ ಪಲ್ಲ ೧ಕ್ಕೆ	೪ ೧೨-೦	೫-೪
ಕಾರಾಗಿ	೪-೧-೦	೫-೦
ಜೋಳ	೪-೧೨-೦	೬-೧೨
ಹುಸಂದೆ ಪಲ್ಲ ೧ಕ್ಕೆ	೮-೧೨-೦	೯-೦
ಬಿಳೀ ಅವರೆ	೬ ೧೨-೦	೯-೦
ಹೆಸರು	೯ ೧೨-೦	೧೦-೪
ಉದ್ದು	೮ ೧೪ ೦	೯-೪
ಕಡಲೆ	೯-೦-೦	೮-೮
ಎಳ್ಳು	೧೬ ೦-೦	೧೫-[illegible]
ಹುರುಳಿ	೮-೦ ೦	೯-೨
ಹರಳು ೧೨೩ ಸೇರಿಗೆ	೯-೮-೦	೧೨-೮
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-೬
[illegible]	೪-೮-೦	೪-೨
ಮಧ್ಯಮ	೩-೧೨-೦	೩-೧೨
ಬೆಲ್ಲ ದೊಡ್ಡ ಅಚ್ಚು	೭-೪-೦	೫-೨-೪
ಒಳ್ಳೆಣ್ಣೆ ಮಣ ೧ಕ್ಕೆ	೪-೦ ೦	೪-೪
ಹರಳೆಣ್ಣೆ ,,	೪-೦-೦	೪-೧೨
ಕೊತ್ತುಂಬರಿ ಪಲ್ಲ ೧ಕ್ಕೆ	೬-೦-೦	೮-೧೨
ಉಪ್ಪು	೮-೦-೦	೬-೧೨
ಹುಣಸೇ ಹಣ್ಣು	೧ ೪-೦	೧-೦
,, ಹಳೇದು	೦-೧೪-೦	೭-೧೪
ತುಪ್ಪ	೧೨ ೦-೦	೧೧-೪
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೩-೦	೩-೧೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೪-೦
ಅಡಿಕೇಕಾಯಿ ಮಣ ೧ಕ್ಕೆ	೧-೦-೦	೦-೧೪
ಅಂಬ್ಯಾಡಗಕಾಯಿ ಮಣ ೧ಕ್ಕೆ	೦-೧೪-೦	೦-೧೩
ಚರ್ಮ (ಪೌಂ) ಕಂಡು	೧೫-೮-೦	೧೫-೬
,, ,, ಮದ್ದು	೧೫-೧೦-೦	೧೫-೧೪
,, ,, ಗಟ್ಟಿ ತೊಲ ೧ಕ್ಕೆ	೨೬-೦-೦	೨೪-೬
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೨-೦-೦	೬೩-೦

Printed and Published by the Rev H SPENCER, B the Proprietor and Manager, Wesleyan Mission Pres Mysore 3/8/1905

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಆಗಸ್ಟ್ ತಾರೀಖು ೧೦ ನೇ ಗುರುವಾರ. — ಸಂಚಿಕೆ ೧೮

WESLEYAN MISSION PRESS, MYSORE.

ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್.

23

ನಮ್ಮ ಕಾರ್ಖಾನೆಯಲ್ಲಿ ಸಮಸ್ತ ವಿಧವಾದ ಪ್ರಿಂಟಿಂಗ್ ಕೆಲಸಗಳನ್ನು ಸುಲಭ ಛಾರ್ಜಿಗೆ ಜಾಗ್ರತೆಯಲ್ಲಿ ಬಹಳ ನೇತ್ರಾನಂದಕರವಾಗಿ ಮಾಡಿ ಕೊಡುವೆವು.

ಇವಲ್ಲದೆ ಕನ್ನಡ ಅಕ್ಷರಗಳು—ಟೂಫೈಸ್ ಮಿಷಿನ್, ಪೈಕ್, ಲಾಂಗ್ ಪ್ರಿಮರ್ ಮೊದಲಾದವುಗಳೂ, ಇವು ಕ್ಯಾಷು ಮುಂತಾದವೂ ಸುಲಭ ಕ್ರಯಕ್ಕೆ ಸಿಕ್ಕುವವು. ಅಕ್ಷರಗಳು ಬಹು ಸುಂದರವಾಗಿವೆ. ಬೇಕಾದವರು ಪ್ರೆಸ್ ಇಟ್ಟಿರುವವರು ಪತ್ರ ಕೆಳಗಿನ ವಿಳಾಸಕ್ಕೆ ಬರೆದು ಮಾದರಿಗಳನ್ನು ಅಕ್ಷರಗಳ ಮೊನೆಯನ್ನು ತರಿಸಿಕೊಳ್ಳಬಹುದು.

ವಿಳಾಸ:—ಮ್ಯಾನೇಜರ್,

ಮಿಷನ್ ಪ್ರೆಸ್, ಮೈಸೂರು.

ಈ ಕೆಳಗಿನ ಪುಸ್ತಕಗಳು ಕೊಂಡವಾಗಿವೆ. ಬೇಗನೆ ತರಿಸಿಕೊಳ್ಳಿ. ಅನೋಕ ಸುಲಭವಾಗಿ ಈ ಕಡಿಮೆ ದರಗೆ ಸಿಕ್ಕಲಾರವು. ಇದು ಒಳ್ಳೇ ಸಮಯವು.

3

ಕನ್ನಡ ಹಿಂದೂಸ್ತಾನ.—ಇದು ಎಲ್ಲಾ ಕೈಕೋರ್ಟುಗಳ ತೀರ್ಮಾನಗಳೂ ವನೆ ಸೇರಿ, ಸಮಸ್ತ ವಿಷಯಗಳನ್ನೂ ಕನ್ನಡದಲ್ಲಿ ತಿಳಿಸುವದು ಸರಕಾರಿ ನ್ಯಾಯಸ್ಥಾನಗಳಲ್ಲಿ ಎಲ್ಲಾ ಜನರಿಗೂ ಅವಶ್ಯಕವಾಗಿದೆ. ಇದರ ಬೆಲೆ ರೂ ೨—೪—೦.

ಕನ್ನಡ ಮುಹೂರ್ತ ಶಾಸ್ತ್ರವು.—ಇದರಲ್ಲಿ ಲೋಕಜ್ಞಾನಕ್ಕೆ ಬೇಕಾಗಿರುವ ಸಮಸ್ತ ಶಾಸ್ತ್ರತತ್ತ್ವ ವಿಷಯಗಳೂ ಸುಲಭವಾದ ಭಾಷೆಯಲ್ಲಿ ನಿರೂಪಿಸಲ್ಪಟ್ಟಿದೆ ಎಲ್ಲರಲ್ಲಿಯೂ ಇರಬೇಕಾಗಿರುವ ಆವಶ್ಯಕ ಪುಸ್ತಕವು ಬೆಲೆ ರೂ. ೧.

ಕನ್ನಡ ಕೇಸರೀ ವಿಲಾಸವು.—ಇದು ಅತ್ಯದ್ಭುತ ರಸವುಳ್ಳ ನಾವಲ್ ಎಂಬ ನಾಟಕ ವಿನೋದ ಕಥೆ. ಬಹಳ ಸುಲಭ ಶೈಲಿಯಿಂದ ಬರೆಯಲ್ಪಟ್ಟಿದೆ. ಬೆಲೆ ಆಣೆ ೦—೮—೦

ವಿಳಾಸ—ರತ್ನಾಕರ್ ಅಂಡ್ ಕಂಪೆನಿ,

ತಿರುವಲ್ಲಿಕ್ಕೇಣಿ, ಮದರಾಸ್.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

7

ಮೈಸೂರು ಸೆಂಟ್ರಲ್ ಕಾಲೇಜಿ ವೆಸ್ಲಿಯನ್ ಮಿಷನ್ ಶಾಲೆಗಳ ಹಾರಿಯಾಳಿಯ ಹೆಡ್ ಮಾಸ್ಟರಾದ ಮಿ. ಪಿ. ಜಿ. ರಾಮಸ್ವಾಮಿ ಅಯ್ಯಂಗಾರ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಹೆಚ್ಚಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ತೆಗೆದುಕೊಳ್ಳುವವರಿಗೆ ಕಡಾ ೧೨½ ಯಂತೆ ಡಿಸ್ಕೌಂಟು ಕೊಡಲಾಗುವುದು. ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೆ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ:—೧ ಪ್ರತಿಗೆ ೬ ಆಣೆ, ಪೋಸ್ಟೇಜು ೧ ಆಣೆ.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

18

ಎಲ್ಲಾ ಬಗೆಯ ಕಾಡು ಮೃಗಗಳು, ಮೈಸೂರು ಜೂಸೂದ ರೇಂಜ್ ಮಿ॥ ಹ್ಯೂಸ್ ಯವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo.

ಕಥಾಸಂಗ್ರಹ—ಮೊದಲನೆ ಭಾಗ.

19

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಸಾಯಿ ಕಥಾಸಂಗ್ರಹದಲ್ಲಿ ೧, ೨, ೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಪದಗಳನ್ನೂ ವಾಕ್ಯ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುತ್ತದೆ. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣುಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೇ. ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಿ. ಸುಬ್ಬರಾಯ್ಯರವರ

P. SUBBAROY'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯ್ಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

2

ಲಕ್ಷ್ಮೀಕರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು. ಬೆಳಗ್ಗೆ



ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುತ್ತವೆ. ಇದರಲ್ಲಿ ಅಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ, ಬಂಗಾರ ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇಮಕ್ಕಳಿಂದ ಮುದುಕರವರೆಗೆ ಎಲ್ಲರೂ ತಾಂಬೂಲದೊಡನೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು. ಕ್ರಯ:—ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ—ದಿ ಮಹಮದ್ ಸಮಾಚಾರಿ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಆಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೇನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು—ಪುತ್ತೂರು ಪೊಲೀಸ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ.—ಜಿ. ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕ್ವಿಲಾನ್.

Apply to.—P. SUBBAROY,

Porto Novo, South Arcot.

ವಿಳಾಸ—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

"ಬಕ್ಕಲತನವೂ ಬಕ್ಕಲಿಗನೂ."—ಪಕ್ಷಕೆಡ್ಡಂದು.

4

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗಣಿ ಪೋಸ್ಟೇಜು ಸಹಿತ ರೂ ೧—೮—೦. ತ್ವರೆಯೇ, ಬೇಗ ತರಿಸಿ.

ವಿಳಾಸ—ದಿ ಮ್ಯಾನೇಜರ್, ೧೯೯, ಸಿವಿಲ್ ಲೈನ್ಸ್, ಪೂನ.

ಯಸ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

3

ಮೆಕ್ಮಿಲ್ಲನ್ ಕನ್ನಡದ ೫ನೆ ಪುಸ್ತಕದ ನೋಟ್ಸ್	೦—೪—೦
ಡಿಟೋ ,, ,, ೬ ನೆ ಪುಸ್ತಕದ ನೋಟ್ಸ್	೦—೪—೦
ಡಿಟೋ ೩—೪ ನೆಯ ಪುಸ್ತಕಗಳ ನೋಟ್ಸ್	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಷೆ)	೦—೧—೦
೭ನೆ ತರಗತಿ ಪದ್ಯಸಂಗ್ರಹದ ನೋಟ್ಸ್	೦—೧—೬

ಚೇಂಬರ್ಸ್ ರಸಾಯನ

ಇದನ್ನು ಸೇವನೇ ಮಾಡಿ ಪಿತ್ತವನ್ನು ಕಳೆದುಕೊಳ್ಳಿ ದಬ್ಬಿ ೧ಕ್ಕೆ ೮ ಆಣೆ ಕಸ್ತೂರಿ ಮಾತ್ರೆ ಸೀಸೆಗೆ ೪ ಆಣೆ. ತಾಂಬೂಲ ರಕ್ಷಾಕರ ೧ ಡಬ್ಬಿಗೆ ೨ ಆಣೆ ಪದ್ಮಾಜಿಗಂಧ ೧ ತೊಲೆಗೆ ೧ ರೂ. ಅಂಬರ್‌ವಾಲಿ ೧ ಡಬ್ಬಿಗೆ ೨ ಆಣೆ ಬಾತ್ರಾಸ ಹಲ್ಲುಪುಡಿ ಡಬ್ಬಿಗೆ ೩ ಆಣೆ. ದೇಹಕಾಂತಿ ಚೂರ್ಣ ಡಬ್ಬಿಗೆ ೩ ಆಣೆ ಭೃಂಗಾಮಲಕ ತೈಲ ೧ ಸೀಸೆಗೆ ೧೨ ಆಣೆ ಪುಷ್ಪಾಂಜನ ಸೀಸೆ ೧ಕ್ಕೆ ೫ ಆಣೆ.

ವಿಳಾಸ—ಸಿ. ಪಿ. ಅಂಡ್ ಕೋ, ಬೆಂಗಳೂರು ಸಿಟಿ.

ಪ್ರಿಯ ದೊಡ್ಡಮನುಷ್ಯರೇ!

ಈ ನಮ್ಮ ಗುಲಾಬಿ ಮೊಗ್ಗನ್ನು ಪರೀಕ್ಷಿಸಿರುವಿರಾ ?

"ಗುಲಾಬಿಮೊಗ್ಗಿನ ಉಂಗುರ"

3

ಈ ಉಂಗುರದ ಮಧ್ಯೆ ಗುಲಾಬಿ ಮೊಗ್ಗಿನಂತೆ ಇದ್ದು ನೋಡು

ವವರಿಗೆ ನಿಜವಾದ ವಜ್ರದಂತೆ ಥಳಥಳಿಸುವ ಹರಳುಗಳು ಸುತ್ತಲೂ ಕೂರಿಸಲ್ಪಟ್ಟಿವೆ. ಯಾವಾಗಲೂ ಕೆಡದಿರತಕ್ಕಂಥ ಭಂಗಾರದಿಂದ ಇಂಗ್ಲೀಷ್ ಕಂಪೆನಿಯಲ್ಲಿ ತಯಾರಿಸಲ್ಪಟ್ಟಿರುತ್ತದೆ. ಸಹಜವಾದ ಭಂಗಾರದಂತೆ ಇದರ ಬಣ್ಣವು ಕಾಂತಿಯೂ ಇರುವುದಲ್ಲದೆ ಎಷ್ಟೋ ದಿನಗಳಲೀ ನೀರಾಗಲೀ ಎಷ್ಟುಬಿದ್ದಾಗ್ಯೂ ಕೆಡುವುದಿಲ್ಲವೆಂದು ನಾವು ಭರವಸದಿಂದ ಹೇಳುತ್ತೇವೆ. ಒಂದು ವೇಳೆ ಕೊಳೆಯು ಕೂತು ಇದರ ಬಣ್ಣವೇನಾದರೂ ಮಂಕಾದರೆ ಸ್ವಲ್ಪ ಸೀಮೆಸುಣ್ಣದ ಪುಡಿಯನ್ನು ಹಾಕಿ ಒಂದು ಸಣ್ಣ ಬ್ರಷ್ಷಿನಿಂದ ಉಜ್ಜಿದರೆ ಎಂದಿನಂತೆ ಹೊಳೆಯುವುದು. ಈ ಉಂಗುರವು ನೋಡುವವರಿಗೆ ರೂ. ೨,೦೦೦ ಬೆಲೆ ಬಾಳತಕ್ಕದರಂತೆ ಕಾಣಿಸಿಕೊಳ್ಳುತ್ತದೆ

ಇದರ ನಗದು ಬೆಲೆ ೨ ರೂ ಮಾತ್ರ.

ಬಹುಮಾನ! ಬಹುಮಾನ!! ಬಹುಮಾನ!!!

೧೨ ಉಂಗುರಗಳನ್ನು ಒಟ್ಟಾಗಿ ತರಿಸಿಕೊಳ್ಳತಕ್ಕವರಿಗೆ ನಿಕ್ಕಲ್ ಬೆಳ್ಳಿಯ ಸರಪಣಿ ಸಮೇತವಾದ ಒಂದು ವಾಚು; ೬ ನ್ನು ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ಟೈಂಪೀಸು; ೩ ನ್ನು ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ೧ ಸೆಟ್ ಗುಂಡಿಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಇಷ್ಟವುಳ್ಳವರಿಗೆ ಒಂದು ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುವುದು ಈ ವಿಳಾಸದಾತರಿಗೆ ಬರೆದು ತರಿಸಿಕೊಳ್ಳಿರಿ.

ವಿಳಾಸ:—ಗುರುಬಸವ ಅಂಡ್ ಕೊ, ಸಾಹುಕಾರಪೇಟೆ, ಮದರಾಸ್.

ಯೋಗ್ಯತಾಪತ್ರ. ಕೊಲ್ಲಾಪುರ ಸಿಟಿಯಿಂದ ರಾಮಪ್ಪ ಗುರಪ್ಪ, ಹೋಳಲೂರು, ಮಾಹುನ ಸರಕಾರ. ತಾವು ಕಳುಹಿಸಿದ ಗುಲಾಬಿ ಮೊಗ್ಗಿನ ಉಂಗುರವನ್ನೇ ಇಲ್ಲಿ ಸರಾಫರಿಂದ ಬೆಲೆ ಕಟ್ಟಲಸಾಧ್ಯವಾಗಿದೆ. ನೋಡಿದರೆ ತಾವು ಬರೆದಂತೆ ೨,೦೦೦ ರೂ. ಗಿಂತಲು ಹೆಚ್ಚು ಬಾಳುವುದು. ಕೂಡಲೆ ೧೨ ಉಂಗುರವನ್ನು (ಪ್ರೆಜೆಂಟ್ ವಾಚನ್ನು ಸಹ) ನನ್ನ ಹೆಸರಿಗೆ ವಿ. ಪಿ. ಮಾಡುವುದು. ವಿಶ್ವಾಸವುಳ್ಳ ಜ್ಯೋತಿಷ್ಯ ಪಂಡಿತ.

ಮದರಾಸು ನಶ್ಯದ ಪುಡಿ.

ಬಹಳ ಮೇಲಾದದ್ದು.

ಮದರಾಸು ನಶ್ಯದಪುಡಿ ಡಬ್ಬಿ ೧ ಕ್ಕೆ ..... 0—6—0
ಭಾಂಗಿ ಬಹಾರ್ ... . 0—3—0

೧ ರೂಪಾಯಿಗೆ ಕಮ್ಮಿಯಿಲ್ಲದೆ ಪದಾರ್ಥವನ್ನು ಕಳುಹಿಸತಕ್ಕ ವರ್ತಕರು ಮೊದಲಾದವರುಗಳಿಗೆ ರೂಪಾಯಿಗೆ ೦—೧—೦ ಕಮಿಷನ್ ಕೊಡುತ್ತೇವೆ. ನಮ್ಮ ವೈದ್ಯಶಾಲೆಯಲ್ಲಿ ತಯಾರಿಸುವ ಪುಡಿಯು ಮೇಲಾದ ಉಡಿಯಾನಾದೇಶದ ಹೊಗೆಸೊಪ್ಪಿನಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟದ್ದು. ಎಷ್ಟು ದಿವಸಗಳ ಪರಿಯಂತ್ರ ಇಟ್ಟಾಗ್ಯೂ ಘಾಟು ಹೋಗದ ಹಾಗೆ ಪುಡಿಯನ್ನು ಮಾಡುವದರಲ್ಲಿ ಅಧಿಕ ಪರಿಶ್ರಮವುಳ್ಳವರುಗಳಿಂದ ತಯಾರಿಸಲ್ಪಟ್ಟಿರುತ್ತೆ. ೧ ಸಾರಿ ಹಾಕಿಕೊಂಡರೆ ಸಾಕಾಗಿರುತ್ತೆ. ಅನೇಕ ದೊಡ್ಡಮನುಷ್ಯರು ಇದನ್ನೇ ಉಪಯೋಗಿಸುತ್ತಾರೆ. ೧ ಡಬ್ಬಿಗೆ ೯ ತೋಲ ಪುಡಿ ಇರುತ್ತೆ.

ವಿಳಾಸ—ಮ್ಯಾನೇಜರ್ ಧರ್ಮ ವೈದ್ಯಶಾಲಾ,
69 ಚ್ಯೆನಾಬಜಾರು ರೋಡ್, ಸಾಹುಕಾರ್ ಪೇಟೆ, ಮದರಾಸು.

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

31



ಕೆಳಹೊಟ್ಟೆಯ ನೋವು ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲರಾ ಳ ಕೀಲುಗಳ ನೋವು, ಹೊಟ್ಟೆಶೂಲಿ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚಿಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ —"ಕೆಳಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ನಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವಿಕೆ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು ಈಚೆಗೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮುಖ್ಯ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಇನು ಕಳೆದ ಜನವರಿ ತಿಂಗಳ ಪ್ರಜೆಂಟೇಷನ್ ವಾಚು.

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಪೇಟೆಂಟ್ ಲಿವರ್ ವಾಚು ಓಪನ್ ಕೇಸ್ ಕಿಲೆಸ್ ಕ್ಯಾನೆನ್ ಸೇವನ್ ಜ್ಯೂಯಲ್ಸ್ ಉಳ್ಳ ಉತ್ಕೃಷ್ಟವಾದ ಗಡಿಯಾರ. ೫ ವರುಷ ಗ್ಯಾರಂಟೀ ಕ್ರಯ ರೂ ೫—೮—೦ ಈ ವಾಚನ್ನು ಆಳಿದ ದಸರ ಮಹೋತ್ಸವಕ್ಕಾಗಿ ೩ ಸೆಂಬರ್ ೧ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವದರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ



ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರವು ಜಾಗ್ರತೆ ದರಖಾಸ್ತು ಕಳುಹಿಸಿ. ಪ್ರಜೆಂಟೇಷನ್ ಸಾಮಾನುಗಳು

	ಕ್ರಯವುಳ್ಳದ್ದು
ಮೇಲಾದ ಜರ್ಮನ್ ಸಿಲ್ವರ್ ಶರಟುಗುಂಡಿ ೧ ಸೆಟ್ಟು	೦—೧೦—೦
ಚಿಕ್ಕ ಹಣದ ಪೆಟ್ಟಿಗೆ ಇಂಗ್ಲಿಷ್ ಮೋಡ್ (Cash Box)	೧—೧—೦
ಸುಗಂಧ ಪರ್ಫ್ಯೂಮ್ ತುಂಬಿದ ಪೆಟ್ಟಿ ೧	೦—೮—೦
ಮುಳುಗುವ ಮನೆ ದೀಪ ಬಹಳ ಸುಂದರವಾದದ್ದು	೦—೬—೦
ಬಹಳ ಸೊಗಸಾದ ಗಡಿಯಾರದ ಸರಪಣಿ	೦—೮—೦

೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರಿಗೆ ಬರುವ ಜುಲೈ ಆಖೈರ್ ವರಿಗ ಬಹುಮತಿ ಸಹಿತ ಗಡಿಯಾರವನ್ನು ಕೊಡುತ್ತೇವೆಂದು ಪ್ರಕಟಿಸಿದ್ದಾಗ್ಯೂ ಕಳೆದ ೧ ವಾರದ ಲಾಗಾಯ್ತು ಅನೇಕ ದರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜಂಟರು ಇನ್ನೂ ಕೆಲವು ಕಾಲವರಿಗೆ ಜಾರಿಯಲ್ಲಿ ತರಬೇಕೆಂದು ಕೋರಿದ್ದರಿಂದಲೂ ನಮ್ಮ ಹೆಡ್ಡಾಫೀಸಿನ ಆಜ್ಞೆಯ ಮೇರಿಗೆ ಪುನಃ ಕೊಡಲ್ಪಡುತ್ತೆ ಇದುವರಿಗೆ ವಾಚು ಬಹುಮತಿ ಪಡೆಯದೆ ಇರುವವರು ಜಾಗ್ರತೆ ಡಿಪಾಸಿಟ್ ಕಳುಹಿಸಿ ಬಹುಮಾನ ಸಮೇತ ವಾಚು ಪಡೆಯಿರಿ.

ವಿಳಾಸ:—ಮ್ಯಾನೇಜರ್, ಫ್ರಾಂಕ್ಲಿನ್ ವಾಚ್ ಕಂಪೆನಿ,
ಸಾಕಾರ್ ಟವನ್, ಮದರಾಸ್

ವೃತ್ತಾಂತ ಪತ್ರಿಕೆ.

೩೯ ೧೯೦೫ ನೇ ಇಸವಿ ಆಗಸ್ಟ್ ತಾ॥ ೧೦ ನೇ ಗುರುವಾರ

ಘಾತಕಿಗಳನ್ನು ಹಿಡಿಯುವದಕ್ಕೆ ಪ್ರೋತ್ಸಾಹವು

ಕಲ್ಕತ್ತಾ ಪಟ್ಟಣದ ಸೋವಾ ಬಜಾರವೆಂಬ ಬೀದಿಯಲ್ಲಿ ಕೆಲವು ದಿನಗಳ ಕೆಳಗೆ ಬಹು ಭಯಂಕರವಾದ ಕೊಲೆಯೊಂದು ನಡೆಯಿತು. ಪೋಲೀಸಿನವರು ಆ ಘಾತಕಿಗಳನ್ನು ಪತ್ತೆಮಾಡಿ ಹಿಡಿಯಲಾರದೆ, ನಿರಪರಾಧಿಗಳನ್ನು ದಸ್ತಗಿರಿ ಮಾಡಿ, ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆ ಮಾಡಿಸಿದರು ಈ ವಿಚಾರಣೆಯಲ್ಲಿ ಪೋಲೀಸಿನವರು ಮಾಡಿದ ಉಪಾಯಗಳೂ ಅನ್ಯಾಯಗಳೂ ಪ್ರಕಾಶವಾದವು. ಅವರು ನಿರಪರಾಧಿಗಳನ್ನು ಹಿಡಿದು ತಂದಿದ್ದಾರೆಂಬುದೂ ಗೊತ್ತಾಯಿತು. ಜಡ್ಜಿಯು ಅವರನ್ನು ಖುಲಾಸ್ ಮಾಡಿಸಿ, ಪೋಲೀಸಿನವರ ಕಾರ್ಯಕರ್ಮಗಳನ್ನು ಕುರಿತು ಬಹಳ ಕಠಿಣವಾಗಿ ಬರೆದಿರುತ್ತಾರೆ ಈಗ ಕಲ್ಕತ್ತಾ ಪಟ್ಟಣದ ಪೋಲೀಸ್ ಕಮಿಷನರ್‌ರವರು ಆ ಕೊಲೆಗೆ ಕಾರಣರಾದವರನ್ನು ಪತ್ತೆಮಾಡಬೇಕೆಂದು ಬಹಳ ಸಾಹಸಪಡುತ್ತಿದ್ದಾರೆ. ಇದಕ್ಕಾಗಿ ಅವರು ಯಾವನಾದರೂ ಈ ಅಪರಾಧಕ್ಕೆ ಕಾರಣರಾದವರನ್ನು ಹಿಡಿದುಕೊಟ್ಟರೆ ಅಂಥವನಿಗೆ ೫,೦೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಪ್ರಕಟಮಾಡಿದ್ದಾರೆ. ಹೀಗೆ ಅವರು ಮೊದಲೇ ಬಹುಮಾನ ಕೊಡುತ್ತೇವೆಂದು ಸಾರಿಸಿದ್ದರೆ ಇದುವರೆಗ ಆ ಘಾತಕಿಗಳು ಸಿಕ್ಕಿಬೀಳುತ್ತಿದ್ದರೆನ್ನುವದಕ್ಕೆ ಸಂದೇಹವಿಲ್ಲ ಈಗಲಾದರೂ ಬಹುಮಾನ ಕೊಡುವದಕ್ಕೆ ಒಪ್ಪಿಕೊಂಡದ್ದು ಎಷ್ಟೋ ಅನುಕೂಲವಾಯಿತು ಆದರೆ ಇದುವರೆಗೆ ಸಾಮಾನ್ಯವಾಗಿ ಕೊಲೆಗಾರನನ್ನು ಪತ್ತೆಮಾಡುವದಕ್ಕೆ ಆ ಪಟ್ಟಣದ ಲ್ಲಾಗಲೀ ಈ ರಾಷ್ಟ್ರದ ಬೇರೆ ಯಾವ ಊರುಗಳಲ್ಲಾಗಲೀ ಪೋಲೀಸಿನವರು ೫೦೦ ರೂಪಾಯಿಗಿಂತ ಹೆಚ್ಚು ಬಹುಮಾನವನ್ನು ಕೊಟ್ಟಿರುವುದಿಲ್ಲ ಈಗ ೫,೦೦೦ ರೂಪಾಯಿ ಇನಾಮು ಕೊಡುವುದಾಗಿ ತಿಳಿಸಿರುವುದನ್ನು ನೋಡಿದರೆ ಆ ಕೊಲೆಯು ಎಷ್ಟು ಭಯಂಕರವಾದುದೋ ಊಹಿಸಿಕೊಳ್ಳಬಹುದಾಗಿದೆ.

ಇತ್ತಲಾಗಿ ಮೈಸೂರು ಪಟ್ಟಣದ ಬಂದೀಖಾನೆಯಿಂದಾಗ ಕಳೆದ ಜುಲೈ ೩ನೇ ತಾರೀಖಿನ ಮಧ್ಯಾಹ್ನ ೧ ಗಂಟೆ ಸಮಯದಲ್ಲಿ ಇಬ್ಬರು ಖೈದಿಗಳು ತಮ್ಮ ಮೇಲೆ ಕಾವಲಿದ್ದ ಸರ್ಕಾರಿ ಜೈಲ್ ಸಂತ್ರಿ ಎನ್ನು ಕೊಂದುಹಾಕಿ, ಜೈಲು ಗೋಡೆಗಳನ್ನು ಹತ್ತಿ ಹೊರಕ್ಕೆ ಇಳಿದು ತಪ್ಪಿಸಿಕೊಂಡು ಹೋಗಿದ್ದಾರೆ. ಈ ಖೈದಿಗಳು ಅದಕ್ಕೆ ಹಿಂದೆ ಯಡತೊರೆ ತಾಲ್ಲೂಕಿನಲ್ಲಿ ಕೊಲೆಗಳನ್ನು ಮಾಡಿದವರಾದ್ದರಿಂದ ಮರಣದಂಡನೆಯನ್ನು ಅನುಭವಿಸಬೇಕಾದವರಾಗಿದ್ದರು.! ಇವರು ಬಂದೀಖಾನೆಯಿಂದ ತಪ್ಪಿಸಿಕೊಂಡು ಹೋಗಿ ಒಂದು ತಿಂಗಳ ಮೇಲಾಗಿದ್ದಾಗ್ಯೂ ಇನ್ನೂ ಸಿಕ್ಕದೆ ಇರುತ್ತಾರೆ ಇದರಿಂದ ಪೋಲೀಸ್ ಇಲಾಖೆಯವರು ಅಪರಾಧಿಗಳನ್ನು ಕಂಡು ಹಿಡಿಯುವದಕ್ಕೆ ಇಟ್ಟುಕೊಂಡಿರುವ ಸಲಕರಣೆಗಳು ಸಮರ್ಪಕವಾಗಿಲ್ಲವೆಂದು ಧಾರಾಳವಾಗಿ ಗೊತ್ತಾಗುವುದು ಇದಲ್ಲದೆ ಇಂಥಾ ಅಪರಾಧಿಗಳನ್ನು ಹಿಡಿಯಬೇಕೆಂಬುವ ವಿಷಯದಲ್ಲಿ ಅವರಿಗಿರುವ ಉತ್ಸಾಹವೂ ಶ್ರದ್ಧೆಯೂ ಎಷ್ಟುಮಟ್ಟಿನದೋ ನಮಗೆ ತಿಳಿಯದು ಇಂಥಾ ಘಾತಕಿಗಳನ್ನು ಹಿಡಿದು ಕೊಡುವವರಿಗೆ ೨೫ ರೂಪಾಯಿಸಂತೆ ಬಹುಮಾನ ಕೊಡುತ್ತೇವೆಂದು ಪ್ರಕಟಿಸಿರುತ್ತಾರಲ್ಲಾ! ಕೊಲೆಘಾತಕಿಗಳನ್ನು ಹಿಡಿದು ಕೊಡುವವರಿಗೆ ಕಲ್ಕತ್ತೆಯವರು ಕೊಡುವ ಬಹುಮಾನವನ್ನೂ ಇಲ್ಲಿನ ಪೋಲೀಸಿನವರು ಕೊಡುವ ಬಹುಮಾನವನ್ನೂ ಹೋಲಿಸಿ ನೋಡತಕ್ಕದ್ದಾಗಿದೆ ಈ ೨೫ ರೂಪಾಯಿ ಬಹುಮಾನಕ್ಕೆ ಆಸೆಪಟ್ಟು ಯಾರಾದರೂ ಅವರನ್ನು ಹಿಡಿದು ಕೊಡುವುದು ಸಾಧ್ಯವೇ? ಈ ಭಾಗವು ಪೋಲೀಸ್ ಇಲಾಖೆಯವರ ಅವಗಾಹನೆಗೆ ಬಾರದೆ ಯಾಕೆ ತಪ್ಪಿಸಿಕೊಂಡು ಹೋಯಿತೋ ತಿಳಿಯುವುದಿಲ್ಲ. ಇದಲ್ಲದೆ ಪ್ರಜೆಗಳು ಇಂಥಾ ಘಾತಕಿಗಳನ್ನು ಹಿಡಿದು ಕೊಡುವುದರಲ್ಲಿ ಪೋಲೀಸಿನವರಿಗೆ ಸಹಾಯಕರಾಗಿರದಿದ್ದರೆ ಪ್ರಜಾ ನೆಮ್ಮದಿಯನ್ನು ಪೋಲೀಸಿನವರಿಂದ ಮಾತ್ರವೇ ಕಾಪಾಡುವುದು ಸಾಧ್ಯವೆಂದು ಊಹಿಸುವುದಕ್ಕಾಗದು. ಅಪರಾಧಿಗಳನ್ನು ಶಿಕ್ಷೆಗೆ ತರುವುದಕ್ಕೆ ಪರರಾಜ್ಯಗಳ ಪ್ರಜೆಗಳು ಪೋಲೀಸಿನವರಿಗೆ ಸಹಾಯಮಾಡುವಷ್ಟು ಈ ರಾಷ್ಟ್ರದ ಪ್ರಜೆಗಳು ಮಾಡುವುದಿಲ್ಲವೆಂಬುವುದು ಪ್ರಸಿದ್ಧವಾಗಿದೆ ಇದರಿಂದ ಅಪರಾಧ ಹೆಚ್ಚುವುದಕ್ಕೆ ತುಂಬಾ ಪ್ರೋತ್ಸಾಹವಾಗುತ್ತದೆ ಆದಕಾರಣ ಪ್ರಜೆಗಳು ಪೋಲೀಸಿನವರಿಗೆ ಸಹಾಯಮಾಡಿ, ಕಳ್ಳರನ್ನೂ ಇತರ ವಿಧವಾದ ಅಪರಾಧಿಗಳನ್ನೂ ಪತ್ತೆಮಾಡಿ ಹಿಡಿದುಕೊಡುವುದರಲ್ಲಿ ಸಾಹಸ ಕುತೂಹಲಗಳನ್ನು ತೋರಿಸಬೇಕಾಗಿದೆ.

ಬಳಹೇವದ ವೃತ್ತಾಂತಗಳು.

ಇಬ್ಬರು ಬಂಗಾಳೀ ಬಾಬುಗಳು ಬೆಂಗಳೂರಿಗೆ ಬಂದು ಕೆಲವು ವರ್ತಕರಿಗೆ ಮೋಸಮಾಡಿ. ಅವರಿಂದ ಹಣ ತೆಗೆದುಕೊಂಡದ್ದರಿಂದ ಅವರಿಬ್ಬರಿಗೂ ಸಜಾ ಶಿಕ್ಷೆ ವಿಧಿಸಲ್ಪಟ್ಟಿತು

*****

ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆ॥ ಎ. ವಿಲ್ಲಿಯಂನ್ ಯವರು ಕೆಲವು ಸರ್ದಾರರುಗಳ ಸಮೇತ ಕಳೆದ ವಾರ ಕೋಲಾರಕ್ಕೆ ಹೋಗಿ, ಗಣಿಗಳಲ್ಲಿ ಚಿನ್ನ ತೆಗೆಯುವ ವಿಧಾನವನ್ನೆಲ್ಲಾ ನೋಡಿಕೊಂಡು ಬಂದರು

*****

ರಾಜಧಾನಿಯಲ್ಲಿ ಚೀಫ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನಡೆಸುತ್ತಿದ್ದು ಈಗ ತುಂಕೂರಿಗೆ ವರ್ಗವಾಗಿರುವ ಮ॥ ಕವಿಶಾಸ್ತ್ರಿ ವೆ॥ ಬಿ ಶ್ರೀನಿವಾಸರಾಯರನ್ನು ಇಲ್ಲಿನ ಮ ವಿಜಾರ್ ನ್ಯಾಯಾಧೀಶ ಅಲ್ಲಿಮಾರರವರು ತಮ್ಮ ಬಂಗಲಿಗೆ ಕರೆಸಿಕೊಂಡು, ಕಳೆದ ಶನಿವಾರ ಅವರಿಗಾಗಿ ಒಂದು ಪಾರ್ಟಿ ಮಾಡಿದರು ಅಲ್ಲಿಗೆ ಇಲ್ಲಿ ದೊಡ್ಡ ಮನುಷ್ಯರು ಕೆಲವರು ಹೋಗಿದ್ದರು.

*****

ರಾಜಧಾನಿಯಲ್ಲಿರುವ ಅಡ್ವೊಕೇಟ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಮೆ॥ ಕೃಷ್ಣಯ್ಯಂಗಾರ್ಯರವರ ೩—೪ ವರುಷದ ಮಗುವನ್ನು ಯಾವನೋ ಎತ್ತಿಕೊಂಡು ಹೋಗಿ, ಅದರ ಕೈಗೆ ಹಾಕಿದ್ದ ಚಿನ್ನದ ಬಳೆಯನ್ನು ಕಸುಕೊಂಡು ಮಗುವನ್ನು ವಾಪಸು ಬಿಟ್ಟನು. ಆ ನ್ಯಾರೆಂಬುದು ಇದುವರೆಗೆ ಗೊತ್ತಿಲ್ಲ ಮನೆಯವರಾದರೋ ಸಹ ಮಗು ವಾಪಸು ಬಂತಲ್ಲಾ ಎಂದು ಸಂತೋಷಪಡುತ್ತಾರೆ

*****

ಶ್ರೀಮನ್ ಮಹಾರಾಜರವರು ಈ ತಿಂಗಳ ೧೯ನೇ ತಾರೀಖು ಶುಕ್ರವಾರ ನೀಲಗಿರಿ ಬೆಟ್ಟದಿಂದ ಹೊರಟು, ಸಿಂಲಾ ಪಟ್ಟಣಕ್ಕೆ ದಯಮಾಡಿ, ವೈಸ ರಾಯರವರನ್ನು ಕಂಡು, ರಾಜಕೀಯ ವಿಷಯವಾಗಿ ಮಾತನಾಡಿಕೊಂಡು ಸೆಪ್ಟಂಬರ್ ೨ನೇ ತಾ. ಶನಿವಾರ ವಾಪಸು ರಾಜಧಾನಿಗೆ ಬರುವವರಾಗಿದ್ದಾರೆ ಇವರ ಸಂಗಡ ಪ್ರೈವೇಟ್ ಸೆಕ್ರೆಟರಿ ಮೆ॥ ಇ. ಮೆಕಾನಕಿಯವರೂ, ಅ॥ ಪ್ರೈವೇಟ್ ಸೆಕ್ರೆಟರಿ ಮೆ॥ ಬಿ ರಾಘವೇಂದ್ರ ರಾಯರೂ ಮಹಾರಾಜರವರ ಸಂಗಡ ಹೋಗುವರು.

*****

ಕಳೆದ ಗುರುವಾರ ಸಾಯಂಕಾಲ ರೆಸಿಡೆಂಟರು, ದಿವಾನರು ಮುಂತಾದವರೆಲ್ಲಾ ಬೆಂಗಳೂರು ಕೋಟೆಯ ಬಳಿ ಸಭೆಸೇರಿ, ಪಟ್ಟಣಕ್ಕೆಲ್ಲಾ ರಾತ್ರಿಕೊತ್ತು ವಿದ್ಯುಚ್ಛಕ್ತಿಯ ದೀಪ ಹಚ್ಚುವದನ್ನು ಪ್ರಾರಂಭಿಸಿದರು. ಅಂದಿನ ದ ರಾತ್ರಿ ಹೊತ್ತು ಆ ದೀಪವು ಎಲ್ಲಾ ಬೀದಿಗಳಲ್ಲೂ ಬೆಳದಿಂಗಳಂತೆ ಪ್ರಕಾಶಿಸುತ್ತಿದೆ ಅನೇಕ ದೊಡ್ಡ ಮನುಷ್ಯರು ತಮ್ಮ ಮನೆಗಳಿಗೂ ಈ ದೀಪವನ್ನು ಇಟ್ಟುಕೊಂಡಿದ್ದಾರೆ ಮಲ್ಲೇಶ್ವರ, ಬಸವನ ಗುಡಿ ಎಂಬೀ ಭಾಗಗಳಿಗೆ ಈ ದೀಪವನ್ನು ಇಟ್ಟಿಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ್ ಚಿನ್ನದಗಣಿಗಳ ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಭಾರವನ್ನು ವಹಿಸಿರುವ ಅ॥ ಕಮಿಷನರ್ ಮೆ॥ ಎಫ್ ಬೌರಿಂಗ್ ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ಒಂಬತ್ತು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದೆ ಮೆ॥ ಬ್ಲಾಮ ಯವರು ಬಂದು ಭಾರ್ಜು ವಹಿಸಿಕೊಂಡನಂತರ ಅವರು ಈ ರಜವನ್ನು ಉಪಯೋಗಿಸಿಕೊಳ್ಳತಕ್ಕದ್ದು.

ನೆಲಮಂಗಲ ತಾಲ್ಲೂಕು ಅಮಲ್ದಾರ್ ಮೆ॥ ವಿ. ಸುಬ್ಬಾರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಈಗ ರಜದ ಮೇಲಿರುವ ಅಮಲ್ದಾರ್ ವೆ॥ ಎ. ಕೃಷ್ಣಯರು ರಜದಿಂದ ವಾಪಸು ಬಂದು ಹಂಗಾಮಿಯಾಗಿ ನೆಲಮಂಗಲ ತಾಲ್ಲೂಕಿನಲ್ಲಿ ಅಮಲ್ದಾರರಾಗಿರತಕ್ಕದ್ದು.

ಟಿ. ನರಸೀಪುರದ ತಾಲ್ಲೂಕು ಸಬ್ ಪ್ರೊಬೇಷನರ್ ಅಮಲ್ದಾರ್ ಮೆ॥ ಎಫ್. ಎಸ್ ರಾಘವಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೇದಾರ್ ಕೃಷ್ಣಪ್ಪನವರು ಟಿ. ನರಸೀಪುರದ ಅಮಲ್ದಾರ್ ಖುದ್ದು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡತಕ್ಕದ್ದು.

ಕುಂಕಣದ ತಾಲ್ಲೂಕು ರೆವಿನ್ಯೂ ಪ್ರೊಬೇಷನರ್ ಮೆ॥ ಎಸ್ ಎ. ಅಪ್ಪಣ್ಣಯ್ಯರುಂಗಾರಿಗೆ ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಕೊಟ್ಟಿದೆ.

ಕಂಟ್ರೋಲರವರ ಆಫೀಸ್ ಎಕ್ಸಾಮಿನರ್ ಮೆ॥ ಟಿ. ಲಕ್ಷ್ಮೀ ನಾರಾಯಣರಾಯರನ್ನು ಆ॥ ಕಂಟ್ರೋಲರಾಗಿ ನೇಮಕಮಾಡಿದೆ.

ಶಿರೀಶೆರೆ ತಾಲ್ಲೂಕು ಅಮಲ್ದಾರ್ ಮೆ॥ ಸಿ ಕೃಷ್ಣರಾಯರು ಶಿರೀಶೆರೆ ತಾಲ್ಲೂಕಿನಲ್ಲಿರುವ ತನಕ ಅವರಿಗೆ ೨ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಕೊಟ್ಟಿದೆ.

ಮೈಸೂರು ಪಬ್ಲಿಕ್ ವರ್ಕ್ಸ ಅಕೌಂಟ್ಸ್ ಎಕ್ಸಾಮಿನರ್ ಮೆ॥ ಪಿಲ್ಲಯ. ಎಚ್ ಸ್ವಾಮಿ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆ॥ ಎಕ್ಸಾಮಿನರ್ ಮೆ॥ ಎ ಅಬ್ದುಲ್ ಮೊಹಿದಿನಸಾಹೇಬ್ರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಎಕ್ಸಾಮಿನರಾಗಿ ಕೆಲಸ ನೋಡತಕ್ಕದ್ದು.

ಮೈಸೂರು ಭೂಗರ್ಭ ಪರೀಕ್ಷೆಯ ರಜಿಸ್ಟ್ರಾರ್ ಮೆ॥ ಬಿ. ಕೃಷ್ಣರಾಯರಿಗೆ ಒಂದು ತಿಂಗಳ ತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಸಂಬಳವಿಲ್ಲದ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೆ॥ ಎ ಟಿ. ಸೆಟ್ಲೂರ್‌ಯವರು ರಜಿಸ್ಟ್ರಾರ್ರವರ ಚಾರ್ಜಿ ಕೆಲಸಗಳ ಭಾರವನ್ನು ವಹಿಸತಕ್ಕದ್ದು.

ರಷ್ಯಾ ಜಪಾನ್ ಯುದ್ಧ ಪ್ರ.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು

ಸೆಘೇಲಿಯನ್ ದ್ವೀಪವು ಸ್ವಾಧೀನವಾಯಿತು

ಲಂಡನ್, ಜುಲೈ ೩೧. ಜಪಾನ್ ಸೈನಿಕರು ಸಘೇಲಿಯನ್ ದ್ವೀಪದಲ್ಲಿ ೨೭ನೇ ತಾ ದಿಂದ ಮುತ್ತಿಗೆ ಹಾಕಿ ಬಹಳ ನುಗ್ಗಿ ಹೋರಾಟ ಯುದ್ಧಗಳನ್ನು ಮಾಡಿ ಶತ್ರುಗಳನ್ನು ಸೋಲಿಸಿ ದ್ವೀಪವನ್ನು ಸ್ವಾಧೀನಪಡಿಸಿಕೊಂಡರು. ಜಪಾನ್ ಹಡಗಿನ ಸೈನಿಕರು ಆ ದ್ವೀಪಕ್ಕೆ ಸಮುದ್ರದ ಕಡೆಯಿಂದ ಮುತ್ತಿಗೆ ಹಾಕಿ, ಯುದ್ಧಮಾಡಿ ಶತ್ರುಗಳ ಫಿರಂಗಿಗಳನ್ನು ಕಿತ್ತುಕೊಂಡರು. ರೈಕಾಫ್ ಎಂಬ ರಾಜ್ಯದಲ್ಲಿ ೪,೦೦೦ ರಷ್ಯಾ ಸೈನಿಕರು ೧೨ ಫಿರಂಗಿಗಳನ್ನು ಇಟ್ಟುಕೊಂಡು ಯುದ್ಧಮಾಡಿ ಕಡೆಗೆ ಸೋತುಹೋದರು

ವ್ಲಾಡಿವೋಸ್ಟಾಕಿನ ಮುತ್ತಿಗೆ.

ಲಂಡನ್, ಆಗಸ್ಟ್ ೧.—ಜಪಾನಿನವರು ವ್ಲಾಡಿವೋಸ್ಟಾಕ್ ಪಟ್ಟಣವನ್ನು ಮುತ್ತಿಗೆ ಹಾಕಿಕೊಂಡಿದ್ದಾರೆ. ಒಳಗಿರುವ ಪ್ರಜೆಗಳು ಗುಂಪು ಗುಂಪಾಗಿ ಆ ಪಟ್ಟಣವನ್ನು ಬಿಟ್ಟು, ಬ್ಲಾಗೋವೆಚಂಸ್ಕ್ ಪಟ್ಟಣಕ್ಕೆ ಹೊರಟುಹೋಗುತ್ತಿದ್ದಾರೆ

ಮ್ಯಾಂಚೂರಿಯಾದಲ್ಲಿ ಯುದ್ಧ ಕಾರ್ಯಗಳು.

ಜಪಾನ್ ಸೈನಿಕರು ರಷ್ಯಾ ಸೈನಿಕರನ್ನು ಸುತ್ತಿಕೊಂಡು ಅವರಿಗೆ ಹೋಗದಂತೆ ಅಡ್ಡಿಮಾಡುವುದರಲ್ಲಿ ಯಶಸ್ಸು ವಿಶ್ವವಿಲ್ಲವೆಂದೂ, ಜಪಾನಿನವರು ರಷ್ಯಾ ಸೈನ್ಯದ ಬಳಿಗೆ ಬರಬೇಕೆಂದು ಮಾಡಿದ ಪ್ರಯತ್ನಗಳೆಲ್ಲಾ ನಿರರ್ಥಕವಾಗಿರುತ್ತವೆ ಎಂತಲೂ ಜನರಲ್ ಲಿನೆವಿಚ್‌ಯವರು ತಿಳಿಸುತ್ತಾರೆ

ಸಘೇಲಿಯನ್ ದ್ವೀಪದ ವಿಚಾರ.

ಈ ದ್ವೀಪವು ಮೊದಲು ಜಪಾನಿನವರಿಗೆ ಸೇರಿತ್ತು. ರಷ್ಯಾದವರು ಅದಕ್ಕೆ ಸಘೇಲಿಯನ್ ಎಂಬ ಹೆಸರು ಇಟ್ಟಿದ್ದರು. ಈಗ ಅದು ಜಪಾನಿನವರ ಸ್ವಾಧೀನವಾಯಿತು. ಅವರು ಅದಕ್ಕೆ ಮೊದಲಿನ ಹೆಸರನ್ನೇ ಅಂದರೆ ಕರಫ್ಟೊ ಎಂಬ ಹೆಸರನ್ನು ಇಟ್ಟಿದ್ದಾರೆ. ಈ ದ್ವೀಪದಲ್ಲಿ ಜಪಾನಿನವರು ಯುದ್ಧಕಾಲದ ಕಾನೂನನ್ನು ಜಾರಿಗೆ ತಂದಿದ್ದಾರೆ.

ರಷ್ಯಾ ಸೈನಿಕರ ಸ್ಥಿತಿ.

ಲಂಡನ್, ಆಗಸ್ಟ್ ೨.—ಜನರಲ್ ಲಿನೆವಿಚ್ ಯವರು ರಷ್ಯಾ ಚಕ್ರವರ್ತಿ ಜಾರ್ ಯವರಿಗೆ—ಈಗ ನಮ್ಮ ಸೈನಿಕರ ಸ್ಥಿತಿಗತಿಗಳು ಸಮರ್ಪಕವಾಗಿವೆ ಅವರನ್ನು ಎಂಥಾ ಕೆಲಸಕ್ಕಾದರೂ ಬಹು ಧೈರ್ಯದಿಂದ ಕಳುಹಿಸಬಹುದು. ಎಲ್ಲಾ ಹುಟ್ಟಾ ಸನ್ನದ್ಧರಾಗಿದ್ದಾರೆ ಎಂದು ತಂತೀ ವರ್ತಮಾನ ಕೊಟ್ಟಿದ್ದಾರೆ.

ಸಘೇಲಿಯನ್ ದ್ವೀಪದ ರಾಜ್ಯಭಾರ.

ಲಂಡನ್, ಆಗಸ್ಟ್ ೩.—ಜಪಾನಿನವರು ಸಘೇಲಿಯನ್ ದ್ವೀಪದಲ್ಲಿ ಆಳ್ವಿಕೆಯ ನಾನಾ ಕ್ರಮಗಳನ್ನು ಮಾಡಲಾರಂಭಿಸಿರುತ್ತಾರೆ.

ಲಂಡನ್, ಆಗಸ್ಟ್ ೪.—ಸಘೇಲಿಯನ್ ದ್ವೀಪದಲ್ಲಿದ್ದ ರಷ್ಯಾ ಸೈನಿಕರೇ ಮುಂತಾದವರೆಲ್ಲಾ ಜಪಾನಿನವರಿಗೆ ಕೈಸೆರೆ ಸಿಕ್ಕಿದರು. ಆ ಗವರ್ನರು, ೭೦ ಮಂದಿ ಸೈನ್ಯಾಧಿಪತಿಗಳು, ೩,೨೦೦ ಜನ ಸೈನಿಕರು—ಇವರೆಲ್ಲಾ ಕಳೆದ ಜುಲೈ ೩೧ರಲ್ಲಿ ಬೈದಿಗಳಾದರು

ಮ್ಯಾಂಚೂರಿಯಾದಲ್ಲಿ ಯುದ್ಧ ಕಾರ್ಯಗಳು.

ಮ್ಯಾಂಚೂರಿಯಾದಲ್ಲಿ ಮಳೆ ಅಪಾರವಾಗಿ ಸುರಿದದ್ದರಿಂದ ಲಿಯೋ ನದಿಯಲ್ಲಿ ತುಂಬಾ ಪ್ರವಾಹಬಂದಿತು. ರಷ್ಯಾಸೈನ್ಯವು ಎರಡು ಭಾಗವಾಗಿದೆ ಅತ್ತಲಾಗಿ ಜಪಾನಿನವರು ಅವಸ್ತ್ರ ಸೈನಿಕರನ್ನು ಆ ಶತ್ರುಗಳ ಮೇಲೆ ನುಗ್ಗುವುದಕ್ಕಾಗಿ ಕಳುಹಿಸಿದ್ದಾರೆ. ಶತ್ರುಗಳ ಸೈನ್ಯಗಳಲ್ಲಿ ಮುಂಭಾಗಗಳವರು ಆಗಲೇ ಎದುರಾಗಿ ರಾಜ್ಯ ಹಾಕಿಕೊಂಡಿದ್ದಾರೆ.

ಡಾಲ್ನಿ ಮತ್ತು ಪೋರ್ಟ್ ಆರ್ಥರ್ ಕೋಟೆಗಳು.

ಲಂಡನ್ ಆಗಸ್ಟ್ ೫.—ಜಪಾನಿನವರು ರಷ್ಯಾದವರಿಂದ ಗೆದ್ದು ತೆಗೆದುಕೊಂಡಿರುವ ಡಾಲ್ನಿ ಮತ್ತು ಪೋರ್ಟ್ ಆರ್ಥರ್ ಎಂಬೀ ಕೋಟೆಗಳಲ್ಲಿ (ಭಾರೀ ತೀರದಪಟ್ಟಣಗಳು) ಅವರು ಈಗೀಗ ರಾಜ್ಯಭಾರದ ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ಆಗಲೇ ೫,೦೦೦ ಜಪಾನಿನವರು ಡಾಲ್ನಿ ನಗರದಲ್ಲಿ ಸಂಸಾರವಮಾಡುತ್ತಾರೆ ದ್ದಾರೆ.

ಸಘೇಲಿಯನ್ ದ್ವೀಪವು ಸ್ವಾಧೀನವಾದ ವೃತ್ತಾಂತ

ಲಂಡನ್, ಆಗಸ್ಟ್ ೬.—ಜಪಾನಿನವರು ಸಘೇಲಿಯನ್ ದ್ವೀಪವನ್ನು ಸ್ವಾಧೀನಪಡಿಸಿಕೊಂಡ ಸಂದರ್ಭ ಹ್ಯಾಗೆಂದರೆ—ಜಪಾನ್ ಸೈನ್ಯಗಳು ರಷ್ಯಾದವರನ್ನು ಸೋಲಿಸಿ ಓಡಿಸಿಕೊಂಡು ಬರುತ್ತಿದ್ದದ್ದನ್ನು ನೋಡಿ ರಷ್ಯಾ ಜನರಲ್ ಲಿಯಾಪುನೋವ್ (ಇವರೇ ಆ ದ್ವೀಪದ ಗವರ್ನರಾಗಿದ್ದರು) ಜಪಾನ್ ಸೈನ್ಯಾಧಿಪತಿಗೆ ಒಂದು ಕಾಗದ ಬರೆದು—ನಮ್ಮ ಬಳಿ ಗಾಯಪಟ್ಟವರಿಗೆ ಉಪಚರಿಸುವುದಕ್ಕೆ ಔಷಧಾದಿಗಳೇನೂ ಉಳಿದಿಲ್ಲವಾದ್ದರಿಂದ ಕರುಣವಿಟ್ಟು ಯುದ್ಧಕಾರ್ಯವನ್ನು ನಿಲ್ಲಿಸಬೇಕು ಎಂದು ತಿಳಿಸಿದರು. ಅದಕ್ಕೆ ಜಪಾನ್ ಸೈನ್ಯಾಧಿಪತಿಯು—ನಿಮ್ಮಲ್ಲಿರುವ ಸಮಸ್ತ ಯುದ್ಧದ ಸಾಮಾನುಗಳನ್ನೂ, ಗವರ್ನಮೆಂಟಿಗೆ ಸೇರಿದ ಎಲ್ಲಾ ಸ್ಥಿರಚರ ಸೊತ್ತುಗಳನ್ನೂ, ಆಳ್ವಿಕೆಯ ಮತ್ತು ಯುದ್ಧದ ವಿಷಯವಾದ ಸಮಸ್ತ ಕಾಗದ ಪತ್ರಗಳನ್ನೂ ೩ನೇ ತಾರೀಖು ಬೆಳಗ್ಗೆ ೧೦ ಗಂಟೆಯೊಳಗಾಗಿ ನಮಗೆ ಕಂದೊಪ್ಪಿಸಬೇಕು ಎಂದು ಜವಾಬು ಕೊಟ್ಟರು. ಅದೇ ರೀತಿ ಆ ಗವರ್ನರ ಕಡೆಯವನು ಆ ದಿನ ಜಪಾನ್ ಸೈನ್ಯಾಧಿಪತಿಯ ಬಳಿಗೆ ಬಂದು ಸ್ವಾಧೀನಕೊಟ್ಟು ಮಾತನಾಡಿಕೊಂಡು ಹೋದನು. ಕೂಡಲೇ ಗವರ್ನರು ಕರಾರಿನ ಪ್ರಕಾರ ೭೦ ಜನ ಹುದ್ದೇದಾರರ ಮತ್ತು ೩,೨೦೦ ಸೈನಿಕರ ಸಮೇತ ಹೋಗಿ ಕೈಸೆರೆಯಾದನು ಇದು ಜಪಾನ್ ಸರ್ಕಾರದವರೇ ಪ್ರಕಟಿಸಿರುವ ವೃತ್ತಾಂತ.

ಕರಾರಿನ ಮಾತುಕತೆಗಳು.

ಕಳೆದವಾರ ಬಂದ ಮುಖ್ಯ ತಂತೀ ವರ್ತಮಾನಗಳು

ಲಂಡನ್, ಜುಲೈ ೩೧.—ಜಪಾನಿನವರು ಅಪೇಕ್ಷಿಸುವ ಕಲಮುಗಳು ಇಂಥಿಂಥವೆಂದು ಪ್ರಕಟವಾಗಿವೆ ಈ ಕಲಮುಗಳು ನಿಜವಲ್ಲ. ಜನರು ಬೇಕೆಂದು ಹುಟ್ಟಿಸಿಕೊಂಡು ಹೇಳುವವುಗಳಾಗಿವೆ. ಆ ಕಲಮುಗಳೇನೋ ನಮಗೆ ತಿಳಿಯದು ಎಂದು ಎಂ ಸಾಟೋ ಯವರು ಹೇಳಿದ್ದಾರೆ.

ರಷ್ಯಾ ರಾಯಭಾರಿಯಾದ ಎಂ. ಡಿವಿಟ್ಟೆ ಯವರು ಅಮೇರಿಕದಲ್ಲಿ ಇಳಿಯುವಾಗ್ಗೆ ಅವರನ್ನು ಯಥಾ ಗೌರವವಾಗಿ ಎದುರುಗೊಂಡು ಸತ್ಕರಿಸುವುದಕ್ಕೆ ಏರ್ಪಾಡು ಮಾಡತಕ್ಕ ವಿಚಾರವಾಗಿ ಬ್ಯಾರನ್ ರೋಸನ್ ಯವರು ಅಮೇರಿಕದ ಪ್ರೆಸಿಡೆಂಟರನ್ನು ಕಂಡು ಬಂದರು.

ಜಾರ್ ಯವರ ಇನ್ನೊಂದು ಉತ್ತರ

ಲಂಡನ್, ಆಗಸ್ಟ್ ೨.—ಇನ್ನೊಂದು ವಿಜ್ಞಾಪನಾ ಪತ್ರಿಕೆಗೆ ರಷ್ಯಾ ಚಕ್ರವರ್ತಿ ಜಾರ್ ಯವರು ಪ್ರತ್ಯುತ್ತರವಾಗಿ ತಂತೀ ವರ್ತಮಾನ ಕೊಟ್ಟಿರುತ್ತಾರೆಂದರೆ—ಶತ್ರುಗಳು ನಿಶ್ಶೇಷವಾಗಿ ಹತರಾಗುವ ತನಕ ಯುದ್ಧವನ್ನು ನಿಲ್ಲಿಸದೆ ನಡಸುತ್ತಲೇ ಬರಬೇಕೆಂಬ ಮಾತನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ ಶತ್ರುಗಳಿಗೆ ಭೂಮಿಯನ್ನಾಗಲಿ ಪರಿಹಾರ ದ್ರವ್ಯವನ್ನಾಗಲಿ ಕೊಡಲು ಎಷ್ಟು ಮಾತ್ರಕ್ಕೂ ಸ್ವೀಕರಿಸಲಾರೆನು ಎಂಬುದೇ.

ರಷ್ಯಾ ರಾಯಭಾರಿಯು.

ರಷ್ಯಾ ರಾಯಭಾರಿ ಎಂ. ಡಿ ವಿಟ್ಟೆಯವರು ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ಹಡಗು ಇಳಿದರು. ಕೂಡಲೇ ಒಬ್ಬ ಬಾತ್ಮೀದಾರನು ಹೋಗಿ ಅವರನ್ನು ಕಂಡು ಮಾತನಾಡಿದಾಗ್ಗೆ ರಾಯಭಾರಿಯು ಹೇಳಿದ್ದೇನೆಂದರೆ—ಕರಾರಿನ ಸಂಧಾನಗಳೆಲ್ಲಾ ಒಂದು ವಾರದೊಳಗೇ ಮುಕ್ತಾಯವಾಗಬಹುದೆಂದು ಊಹಿಸುತ್ತೇನೆ. ಯಾಕೆಂದರೆ ಜಪಾನಿನವರು ಕೇಳುವ ಕಲಮುಗಳು ಕೇಳಿ ಸಹಿಸಲಸಾಧ್ಯವಾಗಿವೆ ಇಂಥಾ ಅಸಾಧ್ಯ ವಿಷಯಗಳನ್ನು ಚರ್ಚಿಸಿ ಫಲವೇನೂ ಕಾಣುವುದಿಲ್ಲ ಎಂಬುದೇ.

ಕರಾರಾಗುವಂತೆ ಕಾಣುವುದಿಲ್ಲ.

ಈಗಿನ ರಷ್ಯಾ ಗವರ್ನಮೆಂಟಿನವರು ಕರಾರು ಮಾಡಿಕೊಳ್ಳುವಂತೆ ಕಾಣುವುದಿಲ್ಲ ಯಾಕೆಂದರೆ ರಷ್ಯಾ ಪ್ರಜೆಗಳು ಜಪಾನಿನವರಿಗೆ ರಾಜ್ಯವನ್ನು ಬಿಟ್ಟುಕೊಡುವುದಕ್ಕಾಗಲಿ ಯುದ್ಧದ ಖರ್ಚನ್ನು ಒದಗಿಸುವುದಕ್ಕಾಗಲಿ ಸರ್ಕಾರದವರಿಗೆ ಪ್ರೋತ್ಸಾಹಕೊಡುವುದಿಲ್ಲ. ಜಪಾನಿನವರಾದರೋ ಅನೇಕವೂ ದೊರಕಿಲ್ಲದೆ ಅಥವಾ ಎರಡರಲ್ಲಿ ಒಂದಾದರೂ ಸಿಕ್ಕದಿದ್ದ ಯುದ್ಧವನ್ನು ನಿಲ್ಲಿಸುವವರಾಗಿಲ್ಲ. ಸಖಾಲೀನ ಪ್ರಾಂತ್ಯವೇನೋ ರಷ್ಯಾದವರಿಗೆ ಎಂದೆಂದಿಗೂ ಕೈತಪ್ಪಿ ಹೋಯಿತು. ಅಮೂರ್ ನದಿಯ ಉದ್ದಕ್ಕೂ ಇರುವ ಪ್ರದೇಶವೆಲ್ಲಾ ಜಪಾನಿನವರ ಸ್ವಾಧೀನವಾಗಿದೆ.

ಜಪಾನ್ ರಾಯಭಾರಿಗಳಿಗೆ ಔತಣ

ನ್ಯೂಯಾರ್ಕ್ ಪಟ್ಟಣದ ನಿರ್ಮ್ಸ ಸಂಘದವರು ಜಪಾನ್ ರಾಯಭಾರಿಗಳಿಗೆ ಕಿನ್ನೆರಾತ್ರಿ ಔತಣಮಾಡಿದರು. ಬ್ಯಾರನ್ ಕೊಮೂರಾಯವರು ಜಪಾನಿನವರಿಗೂ ಅಮೇರಿಕದವರಿಗೂ ಪರಸ್ಪರ ಸ್ನೇಹವು ವೃದ್ಧಿಯಾಗಬೇಕೆಂಬ ವಿಷಯವನ್ನು ಕುರಿತು ಮಾತನಾಡಿದರಲ್ಲದೆ ಕರಾರಿನ ವಿಷಯವಾಗಿ ಏನೂ ಹೇಳಲಿಲ್ಲ

ರಷ್ಯಾ ರಾಯಭಾರಿಗಳು.

ರಷ್ಯಾ ರಾಯಭಾರಿ ಎಂ. ಸೊಕೊಟಿಲಾಫ್‌ಯವರು ಪಾಂಕೋವರ್ ದ್ವೀಪವನ್ನು ತಲುಪಿದರು. ಎಂ. ಡಿವಿಟ್ಟೆಯವರು ಹಡಗಿನಿಂದ ಇಳಿವಾಗ ಒಬ್ಬ ಬಾತ್ಮೀದಾರನಿಗೆ ಕರಾರಿನ ವಿಷಯವಾಗಿ ಏನೇನೋ ತಿಳಿಸಿದರಷ್ಟೆ. ಇದು ನಿಜವಲ್ಲವೆಂದು ಎಂ. ಡಿವಿಟ್ಟೇಯವರೇ ಹೇಳುತ್ತಾರೆ.

ರಷ್ಯಾ ಅಮೇರಿಕಗಳಿಗೆ ಸ್ನೇಹ.

ಲಂಡನ್, ಆಗಸ್ಟ್ ೩.—ರಷ್ಯಾ ರಾಯಭಾರಿ ಎಂ ಡಿ. ವಿಟ್ಟೆ ಯವರು ನ್ಯೂಯಾರ್ಕಿನಲ್ಲಿ ಹಡಗು ಇಳಿದ ಕೂಡಲೇ ತಮ್ಮ ಅಭಿಪ್ರಾಯವನ್ನು ತಮ್ಮ ಕಡೆಯ ಪ್ರೊಫೆಸರ್ ಮಾರ್ಟೆನ್ಸ್ ಯವರ ಮುಖಾಂತರ ಪ್ರಕಟಪಡಿಸಿದರು. ಅದರ ಅಭಿಪ್ರಾಯವೇನೆಂದರೆ—ಅಮೇರಿಕದವರು ಈ ಯುದ್ಧವನ್ನು ನಿಲ್ಲಿಸಬೇಕೆಂದು ಸಂಧಿ ಮಾಡುವ ಪ್ರಯತ್ನವನ್ನು ಕೈಕೊಂಡದ್ದರಲ್ಲಿ ಅವರು ರಷ್ಯಾದವರ ಮೇಲೆ ತುಂಬಾ ಅಭಿಮಾನ ಉಳ್ಳವರಾಗಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಈ ವಾತ್ಸಲ್ಯವೇ ಶಾಶ್ವತವಾಗಿರಬೇಕಾಗಿದೆ ಜಪಾನರ ಕೋರಿಕೆಗಳನ್ನೂ ಕಲಮುಗಳನ್ನೂ ತಿಳಿದುಕೊಳ್ಳುವುದಕ್ಕೆ ಮೊದಲೇ ರಷ್ಯಾದವರು ಅಮೇರಿಕದವರ ಮಾತಿನಂತೆ ನಮ್ಮ ರಾಯಭಾರಿಗಳನ್ನು ನೇಮಿಸಿ ಅಮೇರಿಕಕ್ಕೆ ಕಳುಹಿಸಿರುವುದರಿಂದ ರಷ್ಯಾದವರಿಗೆ ಅಮೇರಿಕದವರಲ್ಲಿರುವ ಅನುರಾಗವು ವ್ಯಕ್ತಪಡುತ್ತದೆ ಈಗ ಕರಾರಿನ ಸಂಧಾನದಲ್ಲಿ ಫಲಿತಾಂಶವೇನೂ ಒಂದುವೇಳೆ ಆಗದೆ ತಪ್ಪಿಹೋದರೂ ಅಮೇರಿಕಕ್ಕೂ ರಷ್ಯಾವಿಗೂ ಇರುವ ಸ್ನೇಹಕ್ಕೆ ಎಂದಿಗೂ ಚ್ಯುತಿಯಾಗುವುದಿಲ್ಲ ಎಂಬುದೇ.

ರಷ್ಯಾದವರ ಭಾವ.

ಎಂ. ಡಿವಿಟ್ಟೆ ಯವರು ಅಮೇರಿಕಕ್ಕೆ ಪ್ರಯಾಣ ಮಾಡುತ್ತಿದ್ದಾಗ ಒಬ್ಬ ಬಾತ್ಮೀದಾರನ ಸಂಗಡ ಹೇಳಿದ್ದೇನೆಂದರೆ—ರಷ್ಯಾದವರು ಜಪಾನಿನವರನ್ನು ಸರಿಸಮಾನರಾದ ಶತ್ರುಗಳೆಂತೆ ಕಾಣುವುದಕ್ಕೆ ಜಪಾನಿನವರು ಅಂಥಾ ಉನ್ನತ ಪದವಿಯನ್ನು ಸಂಪಾದಿಸಿಕೊಂಡಿಲ್ಲ. ಈಗ ಅವರು ನುಗ್ಗಿ ಬಂದಿರುವುದಕ್ಕಿಂತ ಇನ್ನೂ ನಾಲ್ಕರಷ್ಟು ದೂರ ನುಗ್ಗಿ ಬಂದಾಗ ಅವರು ಹೇಳುವ ಕಲಮುಗಳಿಗೆ ನಾವು ಕಿವಿಕೊಡಬಹುದು. ರಷ್ಯಾ ರಾಜ್ಯದೊಳಗೆ ಈಗ ಪ್ರಾಪ್ತವಾಗಿರುವ ಸ್ಥಿತಿಯು ಕರಾರಿನ ಕಲಮುಗಳನ್ನು ವ್ಯತ್ಯಸ್ತ ಮಾಡಲಾರದು. ರಷ್ಯಾದವರೆಲ್ಲಾ ಈ ಯುದ್ಧವನ್ನು ಎಲ್ಲೋ ತಮ್ಮ ದೂರ ಪ್ರಾಂತ್ಯದಲ್ಲಿ ನಡೆಯುವ ಯುದ್ಧವೆಂದು ಭಾವಿಸಿರುವರೇ ಹೊರತು ಇದರಿಂದ ತಮ್ಮ ರಾಜ್ಯಕ್ಕೆ ಯಾವ ಅಪಾಯವೂ ಇಲ್ಲವೆಂದು ತಿಳಿದುಕೊಂಡಿದ್ದಾರೆ ನಾನೇನೋ ಕರಾರಾಗುವುದೇ ಒಳ್ಳೇದೆಂದು ಒಪ್ಪಿಕೊಳ್ಳತಕ್ಕವನೇ ಸರಿ. ಆದರೆ ಕರಾರಾಗಬೇಕೆಂಬುದು ರಷ್ಯಾದವರಿಗೆ ಅಗತ್ಯವಾಗಿದೆ ಎಂದು ಜಪಾನಿನವರು ತಿಳಿದುಕೊಂಡಾರು. ತಮ್ಮ ಸ್ವಾತಂತ್ರ್ಯಕ್ಕೂ ಮರ್ಯಾದೆಗೂ ಕುಂದಕವನ್ನುಂಟುಮಾಡುವಂಥಾ ಕರಾರನ್ನು ರಷ್ಯಾದವರು ಎಂದಿಗೂ ಮಾಡಿಕೊಳ್ಳಲಾರರು. ಈ ವಿಷಯವನ್ನು ಜಪಾನಿನವರು ಚೆನ್ನಾಗಿ ತಿಳಿದಿರಲಿ ಎಂಬುದೇ.

ಕರಾರಿಗಾಗಿ ಸಭೆ ಸೇರುವ ಕಾಲ.

ಲಂಡನ್, ಆಗಸ್ಟ್ ೪.—ಕರಾರಿನ ವಿಷಯಗಳನ್ನು ಚರ್ಚೆಮಾಡುವುದಕ್ಕೆ ರಾಯಭಾರಿಗಳೆಲ್ಲಾ ೮ನೆ ತಾರೀಖಿನ ದಿನ ಸಭೆ ಸೇರುವರು.

ರಷ್ಯಾದವರ ಪ್ರತಿಷ್ಠೆ, ಜಪಾನಿನವರ ಅಸಮಾಧಾನ.

ರಷ್ಯಾದವರು ತಮ್ಮ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಸ್ವಪ್ರತಿಷ್ಠಾಪೂರ್ವಕವಾದ ಮಾತುಗಳನ್ನು ಆಡಿಕೊಳ್ಳುತ್ತಿದ್ದಾರೆ. ಜಪಾನಿನವರು ಈ ಮಾತನ್ನು ಕೇಳಿ, ಕರಾರು ಆಗಲಾರದೆಂದೇ ಹೇಳಲಾರಂಭಿಸಿದ್ದಾರೆ.

ಜಪಾನಿನವರ ಯುದ್ಧದ ಖರ್ಚು.

ಅಮೇರಿಕಕ್ಕೆ ಸೇರಿದ ವಾಷಿಂಗ್ಟನ್ ಪಟ್ಟಣದಲ್ಲಿ ಎಂ. ಸಾಟೋ ರಾಯಭಾರಿಯು—ಇದುವರೆಗೆ ಜಪಾನಿನವರಿಗೆ ಈ ಯುದ್ಧಕ್ಕಾಗಿ ೨೫೦ ಕೋಟಿ ರೂಪಾಯಿ ಖರ್ಚಾಗಿದೆ ಎಂತಲೂ ಅದರ ಇಮ್ಮಡಿಯಲೂ ಹೆಚ್ಚು ಹಣವನ್ನು ಕೊಡಬೇಕೆಂದು ರಷ್ಯಾದವರನ್ನು ಕೇಳುವುದು ನ್ಯಾಯವಾಗಿದೆ ಎಂತಲೂ ತಿಳಿಸಿದರು.

ರಾಯಭಾರಿಗಳು ತಲುಪಿದ್ದು.

ಲಂಡನ್, ಆಗಸ್ಟ್ ೫.—ರಷ್ಯಾ ಜಪಾನ್ ರಾಯಭಾರಿಗಳೆಲ್ಲಾ ಆಯಿಸ್ಟರ್ ಕೊಲ್ಲಿಯನ್ನು ತಲುಪಿದರು ಜಪಾನ್ ರಾಯಭಾರಿಗಳು ಮೊದಲು ಹೋಗಿ ಇಳಿದರು ಇವರನ್ನು ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್‌ಯವರು ಹೋಗಿ ಹಡಗಿನಲ್ಲೇ ಎದುರುಗೊಂಡು ಕರೆದುಕೊಂಡು ಹೋದರು. ಅನಂತರ ರಷ್ಯಾ ರಾಯಭಾರಿಗಳು ಹೋಗಿ ಇಳಿದರು

ಪ್ರೆಸಿಡೆಂಟರ ಭಾಷಣ

ಲಂಡನ್, ಆಗಸ್ಟ್ ೬.—ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ಮಧ್ಯಸ್ಥಗಾರರಾಗಿ ನಿಂತು ರಷ್ಯಾ ರಾಯಭಾರಿಗಳನ್ನು ಜಪಾನಿನವರಿಗೂ ಜಪಾನ್ ರಾಯಭಾರಿಗಳನ್ನು ರಷ್ಯಾದವರಿಗೂ ಕಾಣಿಸಿ ಪರಸ್ಪರ ಭೇಟಿ ಮಾಡಿಸಿದರು ಅದು ವಾದ ಎಲ್ಲರೂ ಒಂದು ಬಂಗಲೆಯಲ್ಲಿ ಸೇರಿ ಒಟ್ಟಿಗೆ ಲಘು ಭೋಜನ ಮಾಡಿದರು ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ರಷ್ಯಾ ಜಪಾನ್ ರಾಜ್ಯಗಳ ಹೆಸರು ಹೇಳಿ, ಎರಡು ರಾಜ್ಯಗಳಿಗೂ ಶ್ರೇಯೋಭಿವೃದ್ಧಿಯುಂಟಾಗಲೆಂದು ಹರಸಿದ ತರುವಾಯ—ಇವೆರಡು ರಾಜ್ಯಗಳಿಗೂ ನ್ಯಾಯವಾದ ಮತ್ತು ಶಾಶ್ವತವಾದ ಕರಾರು ಆಗಬೇಕೆಂಬುದೇ ನನ್ನ ಮನೋಗತವೆಂಬುದಾಗಿ ಹೇಳಿದರು. ಆ ಮೇಲೆ ರಾಯಭಾರಿಗಳೆಲ್ಲಾ ಅಲ್ಲಿಂದ ಪ್ರಯಾಣಮಾಡಿ, ಪೋರ್ಟ್ಸ್‌ಮತ್ ಎಂಬ ತೀರಪಟ್ಟಣಕ್ಕೆ ಹೋದರು.

ಪ್ರೀತಿಯಿಂದ ಕೈಹಿಡುಕೊಂಡರು

ರಾಯಭಾರಿಗಳು ಒಬ್ಬರಿಗೊಬ್ಬರು ಪರಿಚಯಮಾಡಲ್ಪಟ್ಟಾಗ ಒಬ್ಬರಕೈಯನ್ನೊಬ್ಬರು ಪ್ರೀತಿಪೂರ್ವಕವಾಗಿ ಹಿಡಿದು, ತಮ್ಮ ಸಂತೋಷವನ್ನು ಪ್ರಕಾಶಪಡಿಸಿದರು. ಜಪಾನ್ ರಾಯಭಾರಿಯವರೋ—ಇಂಥಾ ಸಂತೋಷಪ್ರದವಾದ ಸಂಧಿಯು ತಮಗೆ ಉಂಟಾದದ್ದು ಅಪೂರ್ವವೆಂದೂ ಇದಕ್ಕಾಗಿ ತಾವು ತುಂಬಾ ಆಶೀರ್ವದಿಸುವೆವೆಂತಲೂ ಹೇಳಿದರು.

ಕಡೇ ನ್ಯಾಯತೀರ್ಪು

ಈ ವಿಷಯದಲ್ಲಿ ಯೇಸು ಸ್ವಾಮಿಯು ಬೋಧಿಸಿರುವದನ್ನು ಇಲ್ಲಿ ಉದಾಹರಿಸಿದ್ದೇವೆ—

ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ, ನನ್ನನ್ನು ನಂಬುವವನು ಸತ್ತರೂ ಬದುಕುವನು, ಮತ್ತು ಬದುಕುತ್ತಾ ನನ್ನನ್ನು ನಂಬುವಂಥ ಪ್ರತಿಯೊಬ್ಬನು ಎಂದೆಂದಿಗೂ ಸಾಯುವದಿಲ್ಲ.

ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿಕೊಟ್ಟವನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ. ತೀರ್ಪಿಗೆ ಅವನು ಗುರಿಯಾಗುವದಿಲ್ಲ, ಆದರೆ ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಒಂದು ಕಾಲವು ಬರುವದು, ಅದು ಈಗ ಬಂದದೆ, ಆ ಕಾಲದಲ್ಲಿ ಸತ್ತವರು ದೇವಕುಮಾರನ ಧ್ವನಿಯನ್ನು ಕೇಳುವರು, ಕೇಳಿದವರು ಬದುಕುವರು. ತಂದೆಯು ತಾನು ಹ್ಯಾಗೆ ಸ್ವತಃ ಜೀವವುಳ್ಳವನಾಗಿದ್ದಾನೋ ಹಾಗೆಯೇ ಮಗನೂ ಸ್ವತಃ ಜೀವವುಳ್ಳವನಾಗಿರುವಂತೆ ಕೊಟ್ಟಿದನು ಮತ್ತು ಮಗನು ತೀರ್ಪುಮಾಡುವ ಅಧಿಕಾರವನ್ನೂ ಕೊಟ್ಟನು.

ಇದಕ್ಕೆ ಆಶ್ಚರ್ಯಪಡಬೇಡಿರಿ, ಯಾಕಂದರೆ ಒಂದು ಕಾಲ ಬರುತ್ತದೆ, ಆ ಕಾಲದಲ್ಲಿ ಸಮಾಧಿಗಳಲ್ಲಿರುವವರೆಲ್ಲ ಆತನ ಧ್ವನಿಯನ್ನು ಕೇಳಿ, ಎದ್ದು ಹೊರಗೆ ಬರುವರು. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು, ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು.

ಯಾವನು ಮನುಷ್ಯರ ಮುಂದೆ ನನ್ನನ್ನು ಸ್ವಾಮಿ ಎಂದು ಒಪ್ಪಿಕೊಳ್ಳುವನೋ, ಅವನನ್ನು ನಾನು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನೆಂದು ಒಪ್ಪಿಕೊಳ್ಳುವೆನು. ಆದರೆ ಯಾವನು ಮನುಷ್ಯರ ಮುಂದೆ ನನ್ನನ್ನು ಅರಿಯೆನೆನ್ನುವನೋ, ಅವನನ್ನು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನಾನೂ ಅರಿಯೆನೆನ್ನುವೆನು.

ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡ ಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು, ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಆಗ ಕುರುಬನು ಆಡುಗಳನ್ನೂ ಕುರಿಗಳನ್ನೂ ಬೇರೆ ಬೇರೆ ಮಾಡುವಂತೆ, ಆತನು ಜನರನ್ನು ಬೇರೆ ಬೇರೆ ಮಾಡಿ, ಕುರಿಗಳನ್ನು ತನ್ನ ಬಲಗಡೆಯಲ್ಲಿ, ಆಡುಗಳನ್ನು ಎಡಗಡೆಯಲ್ಲಿ ನಿಲ್ಲಿಸುವನು.

ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ—ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತಕ್ಕೊಳ್ಳಿರಿ. ಯಾಕಂದರೆ ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ, ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ, ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ, ಬಟ್ಟೆ ಇಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ, ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ, ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು. ಆಗ ಆ ನೀತಿವಂತರು ಆತನಿಗೆ—ಸ್ವಾಮಿ, ಯಾವಾಗ ನೀನು ಹಸಿದದ್ದನ್ನು ಕಂಡು, ನಿನಗೆ ಊಟಕ್ಕೆ ಕೊಟ್ಟೆವು? ಇಲ್ಲವೆ ನೀನು ಬಾಯಾರಿದ್ದನ್ನು ಕಂಡು, ಕುಡಿಯುವದಕ್ಕೆ ಕೊಟ್ಟೆವು? ಯಾವಾಗ ನೀನು ಪರದೇಶಿಯಾಗಿರುವದನ್ನು ಕಂಡು, ಸೇರಿಸಿಕೊಂಡೆವು? ಇಲ್ಲವೆ ನಿನಗೆ ಬಟ್ಟೆ ಇಲ್ಲದ್ದನ್ನು ಕಂಡು, ಉಡುವದಕ್ಕೆ ಕೊಟ್ಟೆವು? ಯಾವಾಗ ನೀನು ರೋಗದಲ್ಲಿ ಬಿದ್ದದ್ದನ್ನು ಅಥವಾ ಸೆರೆಮನೆಯಲ್ಲಿ ಇದ್ದದ್ದನ್ನು ಕಂಡು, ನಿನ್ನನ್ನು ನೋಡುವದಕ್ಕೆ ಬಂದೆವು? ಎಂದು ಉತ್ತರವಾಗಿ ಕೇಳುವರು. ಅದಕ್ಕೆ ಅರಸನು—ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ, ಅದನ್ನು ನನಗೆ ಮಾಡಿದಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು.

ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ—ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ. ನಾನು ಹಸಿದಿದ್ದೆನು, ನೀವು ನನಗೆ ಊಟಕ್ಕೆ ಕೊಡಲಿಲ್ಲ; ನಾನು ಬಾಯಾರಿದ್ದೆನು, ನೀವು ನನಗೆ ಕುಡಿಯುವದಕ್ಕೆ ಕೊಡಲಿಲ್ಲ, ಪರದೇಶಿಯಾಗಿದ್ದೆನು, ನೀವು ನನ್ನನ್ನು ಸೇರಿಸಿಕೊಳ್ಳಲಿಲ್ಲ, ಬಟ್ಟೆ ಇಲ್ಲದವನಾಗಿದ್ದೆನು, ನೀವು ನನಗೆ ಉಡುವದಕ್ಕೆ ಕೊಡಲಿಲ್ಲ, ರೋಗದಲ್ಲಿ ಬಿದ್ದಿದ್ದೆನು, ಸೆರೆಮನೆಯಲ್ಲಿದ್ದೆನು, ನೀವು ನನ್ನನ್ನು ಆರೈಕೆ ಮಾಡುವದಕ್ಕೆ ಬರಲಿಲ್ಲವೆಂದು ಹೇಳುವನು. ಅದಕ್ಕೆ ಅವರು ಸಹ—ಸ್ವಾಮಿ, ಯಾವಾಗ ನೀನು ಹಸಿದದ್ದನ್ನೂ ನೀನು ಬಾಯಾರಿದ್ದನ್ನೂ ನೀನು ಪರದೇಶಿಯಾಗಿದ್ದದ್ದನ್ನೂ ಬಟ್ಟೆ ಇಲ್ಲದವನಾಗಿದ್ದದ್ದನ್ನೂ ರೋಗದಲ್ಲಿ ಬಿದ್ದದ್ದನ್ನೂ ಸೆರೆಮನೆಯಲ್ಲಿದ್ದದ್ದನ್ನೂ ಕಂಡು, ನಿನಗೆ ಉಪಚಾರ ಮಾಡದೆ ಹೋದೆವು? ಅನ್ನುವರು. ಆಗ ಆತನು—ನೀವು ಈ ಕೇವಲ ಅಲ್ಪರಾದವರಲ್ಲಿ ಒಬ್ಬನಿಗೆ ಏನೇನು ಮಾಡದೆ ಹೋದಿರೋ, ಅದನ್ನು ನನಗೂ ಮಾಡದೆ ಹೋದಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು.

ಮತ್ತು ಇವರು ನಿತ್ಯ ಶಿಕ್ಷೆಗೂ, ನೀತಿವಂತರು ನಿತ್ಯ ಜೀವಕ್ಕೂ ಹೋಗುವರು.

ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆ ಒಬ್ಬನಿಗೆ ಹೊರತು ಮತ್ತಾರಿಗೂ ತಿಳಿಯದು, ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು. ನಿಮ್ಮ ಪ್ರಭುವು ಬರುವ ದಿನವನ್ನು ನೀವು ಅರಿಯದಿರುವದರಿಂದ ಎಚ್ಚರವಾಗಿರಿ. ಕಳ್ಳನು ಬರುವ ಜಾವವನ್ನೇ ಯಜಮಾನನಿಗೆ ತಿಳಿದಿದ್ದರೆ, ಅವನು ಎಚ್ಚರವಾಗಿದ್ದು, ತನ್ನ ಮನೆಗೆ ಕನ್ನ ಹಾಕಗೊಡಿಸುತ್ತಿದ್ದಿಲ್ಲವೆಂಬದು ತಿಳುಕೊಳ್ಳಿರಿ. ಆದಕಾರಣ ನೀವು ಸಹ ಸಿದ್ಧವಾಗಿರಿ. ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ. ಹಾಗಾದರೆ ಯಜಮಾನನು ತನ್ನ ಮನೆಯವರಿಗೆ ಹೊತ್ತುಹೊತ್ತಿಗೆ ಆಹಾರ ಕೊಡಲಿಕ್ಕೆ ಅವರ ಮೇಲಿಟ್ಟ ನಂಬಿಗಸ್ತನೂ ವಿವೇಕಿಯೂ ಆದಂಥ ಆಳು ಯಾರು? ಯಜಮಾನನು ಬಂದು ಯಾವ ಆಳು ಹೀಗೆ ಮಾಡುತ್ತಿರುವದನ್ನು ಕಾಣುವನೋ, ಆ ಆಳು ಧನ್ಯನು. ಅಂಥವನನ್ನು ಆತನು ತನ್ನ ಎಲ್ಲಾ ಬದುಕಿನ ಮೇಲೆ ಇಡುವನು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ಆ ಕೆಟ್ಟ ಆಳು ನನ್ನ ಯಜಮಾನನು ಬರುವದಕ್ಕೆ ತಡಮಾಡುತ್ತಾನೆ ಅಂತ ತನ್ನ ಮನಸ್ಸಿನಲ್ಲಿ ಅಂದುಕೊಂಡು, ತನ್ನ ಜೊತೇ ಆಳುಗಳನ್ನು ಹೊಡೆಯುತ್ತಾ ಕುಡುಕರ ಸಂಗಡ ತಿನ್ನುತ್ತಾ ಕುಡಿಯುತ್ತಾ ಇರುವದಾದರೆ, ಆ ಆಳು ನೆನಸದ ದಿವಸದಲ್ಲಿಯೂ ತಿಳಿಯದ ಗಳಿಗೆಯಲ್ಲಿಯೂ ಅವನ ಯಜಮಾನನು ಬಂದು, ಅವನನ್ನು ಕಠಿಣವಾಗಿ ಹೊಡಿಸಿ ಕಪಟಿಗಳಿಗೆ ಆಗತಕ್ಕ ಗತಿಯನ್ನು ಅವನಿಗೆ ನೇಮಿಸುವನು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು.

ತನ್ನ ಯಜಮಾನನ ಚಿತ್ತವನ್ನು ತಿಳಿದು, ಆ ಚಿತ್ತಕ್ಕೆ ಅನುಸಾರವಾಗಿ ಸಿದ್ಧಮಾಡದೆಯೂ ನಡೆಯದೆಯೂ ಇರುವ ಆಳು ಬಹಳ ಪೆಟ್ಟು ತಿನ್ನುವನು. ತಿಳಿಯದೆ ಪೆಟ್ಟುಗಳಿಗೆ ಯೋಗ್ಯನಾದದ್ದನ್ನು ನಡಿಸಿದವನು ಸ್ವಲ್ಪ ಪೆಟ್ಟು ತಿನ್ನುವನು. ಯಾವನಿಗೆ ವಿಶೇಷವಾಗಿ ಕೊಟ್ಟದೆಯೋ ಅವನ ಕಡೆಯಿಂದ ವಿಶೇಷವಾಗಿ ನಿರೀಕ್ಷಿಸಲ್ಪಡುವದು.

ಒಳ್ಳೇ ಮರಗಳೆಲ್ಲಾ ಒಳ್ಳೇ ಫಲವನ್ನು ಕೊಡುವವು, ಕೆಟ್ಟ ಮರವು ಕೆಟ್ಟ ಫಲವನ್ನು ಕೊಡುವದು. ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು, ಕೆಟ್ಟ ಮರವು ಒಳ್ಳೇ ಫಲವನ್ನು ಕೊಡಲಾರದು. ಒಳ್ಳೇ ಫಲವನ್ನು ಕೊಡದ ಮರಗಳನ್ನೆಲ್ಲಾ ಕಡಿದು ಬೆಂಕಿಯಲ್ಲಿ ಹಾಕುತ್ತಾರೆ. ನನಗೆ ಸ್ವಾಮಿ, ಸ್ವಾಮಿ, ಅನ್ನುವವರೆಲ್ಲರೂ ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ. ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು. ಸ್ವಾಮಿ, ಸ್ವಾಮಿ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ತುಗಳನ್ನು ಮಾಡಲಿಲ್ಲವೇ? ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ—ನಾನೆಂದೂ ನಿಮ್ಮ ಗುರುತು ಕಾಣೆನು, ಧರ್ಮವನ್ನು ಮೀರಿ ನಡೆಯುವವರೇ, ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು.

ಇಂಡಿಯಾ ದೇಶದ ವೃತ್ತಾಂತಗಳು

ಬೊಂಬಾಯಿ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಪ್ರಬಲವಾಗದಂತೆ ಸರ್ಕಾರದವರು ಪ್ರಜೆಗಳಿಗೆ ಪ್ಲೇಗ್ ಟಿಕಾವನ್ನು ಹಾಕಿಸುವ ಪ್ರಯತ್ನ ಮಾಡುತ್ತಾರೆ.

✦✦✦✦

ಕೋಲಾರ ಚಿನ್ನದ ಗಣಿಯ ಬಳಿ ಮಾನಾಲಿ ಎಂಬ ನ್ಯೂಡಾನಿನಲ್ಲಿ ನೂರಾರು ಕೂಲಿಗಳು ಕೆಲಸಮಾಡುತ್ತಿರುವಾಗ್ಗ ಅಕಸ್ಮಾತ್ತಾಗಿ ಕಿಲುಬಿದ್ದು ಆ ಮಂದಿಯಲ್ಲಿ ೩೩ ಕೂಲಿಗಳು ಮೃತಪಟ್ಟರು.

✦✦✦✦

ಕಾಶೀ ಪಟ್ಟಣದಲ್ಲಿ ಒಂದು ಸಂಸ್ಕೃತ ಸಂಸ್ಕೃತಿ ಭಂಡಾರವನ್ನು ಏರ್ಪಡಿಸುವದಕ್ಕೆ ಘನವನ್ನೈದಿದ ಮಾಧವಲಾಲ್ ಎಂಬಾತನು ೧೫,೦೦೦ ರೂಪಾಯನ್ನು ದಾನವಾಗಿ ಕೊಟ್ಟಿರುತ್ತಾನೆ.

✦✦✦✦

ನೀಲಗಿರಿ ಬೆಟ್ಟದಲ್ಲಿರುವ ಮದರಾಸ್ ಗವರ್ನಮೆಂಟ್ ಹೌಸ್ ಎಂಬ ಗವರ್ನರವರ ಬಂಗಲೆಗೆಲ್ಲಾ ರಾತ್ರಿಯೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಇಡುವ ಏರ್ಪಾಡಾಗಿದೆ. ಇದಕ್ಕೆ ೩೫,೦೦೦ ರೂಪಾಯಿ ಖರ್ಚಾಯಿತು.

✦✦✦✦

ಬಲುಚರ ಸಂಸ್ಥಾನದ ಮಹಾರಾಜ ರಾಣಾಸಾಹೆಬ್ ಬಹದೂರ್‌ರವರು ತಮ್ಮ ರಾಜಭವನದಲ್ಲಿ ದೊಡ್ಡ ದರ್ಬಾರ್‌ಮಾಡಿ, ಪ್ಲೇಗ್ ಉಪದ್ರವನ್ನು ಅಡಗಿಸುವದರಲ್ಲಿ ತುಂಬಾ ಸಾಹಸಪಟ್ಟ ನಾಲ್ಕುಮಂದಿ ಡಾಕ್ಟರುಗಳಿಗೆ ಬಹುಮಾನವನ್ನು ಮಾಡಿದರು.

✦✦✦✦

ಪಂಜಾಬ್ ಆಧಿಪತ್ಯದಲ್ಲಿ ನಾಲೆಗಳ ಕೆಳಗೆ ವ್ಯವಸಾಯವಾಗದೆ ಬಂಜರುಬಿದ್ದಿರುವ ಸರ್ಕಾರಿ ಜಮೀನಿನಲ್ಲಿ ಸುಮಾರು ೫,೦೦೦ ಎಕರೆಯಷ್ಟನ್ನು ವಿಲಾಯಿತಿಯ ಒಂದು ಕಂಪನಿಯವರು ಕೇಣಿಯಾಕ್ಕೆ ತೆಗೆದುಕೊಂಡು ವ್ಯವಸಾಯ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ.

✦✦✦✦

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಕೆಲವು ಮಂದಿ ದೊಡ್ಡ ಮನುಷ್ಯರನ್ನು ಒಂದು ಕಮಿಟಿಯಾಗಿ ನೇಮಿಸಿ, ಅವರ ಮೂಲಕ ತಮ್ಮ ಪ್ರಜೆಗಳ ಆಚಾರವ್ಯವಹಾರಗಳನ್ನೂ ಸ್ಥಿತಿಗತಿಗಳನ್ನೂ ತನಿಖೆಮಾಡಿ, ರಿಪೋರ್ಟು ಕೊಡಬೇಕೆಂದು ಏರ್ಪಾಡು ಮಾಡಿದಾರೆ.

✦✦✦✦

ರಂಗೂನ್ ಪಟ್ಟಣದಲ್ಲಿ ಮಾಂಗ್ ಬರ್ಹ ಫ್ಯೆ, ಸಿ ಐ ಇ ಎಂಬ ದೊಡ್ಡಮನುಷ್ಯರ ಮಗಳನ್ನು ಅಪಹರಿಸಿಕೊಂಡು ಹೋದ ಮೋಸಗಾರರು ಇನ್ನೂ ಪತ್ತೆ ಆಗಲಿಲ್ಲ. ಅವರನ್ನು ಹಿಡಿದುಕೊಟ್ಟವರಿಗೆ ೧,೫೦೦ ರೂಪಾಯಿ ಬಹುಮಾನ ಸಿಕ್ಕೇತೆಂದು ಆ ಹುಡುಗಿಯ ತಾಯಿ ಪ್ರಕಟಿಸುತ್ತಾಳೆ.

✦✦✦✦

ಜರೂಲುದ್ದೀನ್ ಎಂಬೊಬ್ಬ ಮಹಮದೀಯನು ವರ್ತಕನು ನೇಪಾಳ ಸಂಸ್ಥಾನಕ್ಕೆ ಹೋಗಿ ಆ ಸಂಸ್ಥಾನದಲ್ಲಿ ಸಿಕ್ಕುವ ಮರವನ್ನೆಲ್ಲಾ ತನಗೇ ಕೊಡಬೇಕೆಂದು ಕಂಟ್ರಾಕ್ಟು ಮಾಡಿಕೊಂಡು ಅದಕ್ಕಾಗಿ ವರ್ಷಕ್ಕೆ ೨೫,೦೦೦ ರೂಪಾಯಿಗಳನ್ನು ಕೊಡುವದಾಗಿ ಕರಾರು ಮಾಡಿಕೊಂಡು ಬಂದಿದಾನೆ.

✦✦✦✦

ಬನಾರ್ ಆಧಿಪತ್ಯಕ್ಕೆ ಸೇರಿದ ಅಜಯಾಬ್ ಪಟ್ಟಣದ ಮ್ಯುನಿಸಿಪಾಲಿಟಿಯವರು ತಮ್ಮ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ತಂದು ಒದಗಿಸುವದಕ್ಕೆ ತಮ್ಮಲ್ಲಿ ಹಣವಿಲ್ಲದೆ ಈಗ ಮೂರು ಲಕ್ಷ ರೂಪಾಯಿ ಸಾಲ ಪಡೆಯುವದಕ್ಕೆ ನಿರ್ಧರಿಸಿದಾರೆ. ಈ ಸಾಲಕ್ಕೆ ಪ್ರತಿ ವರ್ಷಕ್ಕೆ ನೂರಕ್ಕೆ ೪॥ ರೂಪಾಯಿನಂತೆ ಬಡ್ಡಿ ಕೊಡುವರು.

✦✦✦✦

ಹಿಂದುಸ್ಥಾನದ ರೈಲ್ವೇ ಕಂಪನಿಗಳಲ್ಲಿ ಸರಕು ಸಾಗಿಸತಕ್ಕ ವಾಗನ್ ಭಂಡಿಗಳಿಗೆ ಕೊರತೆಯಾಗಿರುವದರಿಂದ ಇಂಡಿಯಾ ಗವರ್ನಮೆಂಟಿನವರು ಇನ್ನು ಮುಂದೆ ಪ್ರತಿ ವರುಷವೂ ಒಂದು ಕೋಟಿ ರೂಪಾಯಿನಂತೆ ಖರ್ಚು ಮಾಡಿ, ವರ್ಷಕ್ಕೆ ೩,೦೦೦ ವಾಗನ್ ಭಂಡಿಗಳಂತೆ ಹೊಸದಾಗಿ ಮಾಡಿಸಿ ತರಿಸಿಕೊಡುವವರಾಗಿದಾರೆ.

✦✦✦✦

ಜನಾರೋಗ್ಯದಿಂದ ಬಾಧಿತವಾದ ಪ್ರದೇಶಗಳನ್ನು ನೋಡಿಕೊಂಡು ಹೋಗುವದಕ್ಕೆ ಬಂದಿದ್ದ ಡಾಕ್ಟರ್ ಬಿವೇರಿಯವರು ಆತುರವಾಗಿ ಹಿಂತಿರುಗಿ ಜರ್ಮನಿ ದೇಶಕ್ಕೆ ಹೊರಟುಹೋಗಬೇಕಾಯಿತು. ಆದರೆ ಅವರು ಇದುವರೆಗೆ ಪರೀಕ್ಷಿಸಿ ಬರೆದಿರುವ ರಿಪೋರ್ಟನ್ನು ಇಂಡಿಯಾ ಗವರ್ನಮೆಂಟಿನವರಿಗೆ ಕಳುಹಿಸಿಕೊಟ್ಟಿದ್ದಾರೆಂದು ತಿಳಿಯುವದು.

✦✦✦✦

ಮಂಡಿ ಸಂಸ್ಥಾನದಲ್ಲಿ ಎರಡು ಉಪ್ಪಿನ ಮೋಳೆಗಳಿದ್ದವೆ, ಪ್ರತಿ ವರುಷವೂ ಬಹಳ ಉಪ್ಪು ತಯಾರಾಗುತ್ತದೆ. ಅಲ್ಲಿ ಪ್ರಾಪ್ತವಾದ ಭಾರಿ ಭೂಕಂಪದ ದೆಸೆಯಿಂದ ಒಂದು ಉಪ್ಪಿನ ಮೋಳೆಯು ಮುಚ್ಚಿಹೋಗಿದೆ. ಅದರಲ್ಲಿ ಉಪ್ಪು ತಯಾರಾಗುತ್ತಿಲ್ಲ. ಆದರೆ ಸರ್ಕಾರದವರು ಆ ಪ್ರದೇಶವನ್ನು ಶೋಧನೆ ಮಾಡಿಸುತ್ತಿದಾರೆ.

✦✦✦✦

ಇಂಡಿಯಾ ಗವರ್ನಮೆಂಟಿನವರು ಇಲ್ಲಿನ ಸೈನ್ಯಕ್ಕಾಗಿ ಅರ್ಜಂಟೈನಾ ದೇಶದಿಂದ ೭,೦೦೦ ಹೇಸರಕತ್ತೆಗಳನ್ನು ಕೊಂಡು ತರಿಸಿದಾರೆ. ಒಂದೊಂದು ಹೇಸರಕತ್ತೆಗೆ ೩೩೨ ರೂಪಾಯಿನಂತೆ ಕ್ರಯ ಕೊಟ್ಟರು. ಇದು ತುಂಬಾ ಅಗ್ಗವೆಂತಲೂ ಇನ್ನು ಮೇಲೆ ಅಲ್ಲಿಂದಲೇ ಹೇಸರಕತ್ತೆಗಳನ್ನು ತರಿಸಿಕೊಳ್ಳಬೇಕೆಂತಲೂ ಗೊತ್ತುಮಾಡಿದಾರೆ.

✦✦✦✦

ಬಂಗಾಳದ ಕ್ಷತ್ರಿಯ ಕುಲದ ಹುಡುಗರ ವಿದ್ಯಾಭಿವೃದ್ಧಿ ಒಂದು ಫಂಡು ಏರ್ಪಡಿಸಿಕೊಂಡಿದಾರೆ. ಈ ಫಂಡಿಗೆ ಬಂಗಾಳದವರು ಈಗತಾನೇ ೩೩,೫೦೦ ರೂಪಾಯಿ ಉಚಿತವಾಗಿ ಕೊಟ್ಟರು. ಈ ಫಂಡಿನಲ್ಲಿ ಈಗ ೬೦,೭೦೦ ರೂಪಾಯಿ ಸೇರಿದೆ. ಈ ಹಣದ ಉತ್ಪತ್ತಿಯಿಂದ ಪ್ರತಿ ವರುಷವೂ ೩೦ ಮಂದಿ ಹುಡುಗರಿಗೆ ವೇತನ ಕೊಟ್ಟು ವಿದ್ಯೆ ಕಲಿಸುತ್ತಿದಾರೆ.

✦✦✦✦

ಉತ್ತರ ದೇಶಕ್ಕೆ ಸೇರಿದ ಪಾಟಿಯಾಲಾ, ಭಾವಲ್ಪುರ, ನಭಾ, ಜೀಂದ್, ಈ ಮೊದಲಾದ ದೇಶೀಯ ಸಂಸ್ಥಾನಗಳ ರಾಜರುಗಳು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ತಮ್ಮ ಸಂಸ್ಥಾನಗಳಿಗೆ ಕರೆದುಕೊಂಡು, ಯಥಾಯೋಗ್ಯವಾಗಿ ಸತ್ಕರಿಸಿ ಸಂತೋಷಪಡಿಸಬೇಕೆಂದು ಕುತೂಹಲ ಭರಿತರಾಗಿದಾರೆ. ಆದರೆ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಅಲ್ಲಿಗೆಲ್ಲಾ ಹೋಗಲು ಅವಕಾಶವಿಲ್ಲವೆಂದು ತಿಳಿಯುವದು.

✦✦✦✦

ಮದರಾಸ್ ಪಟ್ಟಣದಲ್ಲಿ ಬಚ್ಚಲನೀರು ಸಾಗಿಹೋಗುವ ಮೋರಿ ಮಾಡಿಸುವದಕ್ಕೂ ಕುಡಿಯುವ ನೀರಿನ ಸರಬರಾಯಿಗೂ, ಸ್ಕೂಲೂ, ಪ್ರಜಾ ಆರೋಗ್ಯಾಭಿವೃದ್ಧಿಗೆ ಇತರ ಕಾರ್ಯಗಳನ್ನು ಮಾಡಿಸುವದಕ್ಕೂ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲದ್ದನ್ನು ನೋಡಿ ಇಂಡಿಯಾ ಗವರ್ನಮೆಂಟಿನವರು ೧೩ ಲಕ್ಷ ರೂಪಾಯಿ ಉಚಿತವಾಗಿಯೂ ೨೫ ಲಕ್ಷ ರೂಪಾಯಿ ಸಾಲವಾಗಿಯೂ ಮ್ಯುನಿಸಿಪಾಲಿಟಿಗೆ ಕೊಡುವದಾಗಿ ತಿಳಿಸಿದಾರೆ.

✦✦✦✦

ಲಂಕಾ ದ್ವೀಪದಲ್ಲಿ ಮೆ॥ ಡಿಸಿಲ್ವ ಎಂಬೊಬ್ಬ ವರ್ತಕ ಒಬ್ಬ ಹಳ್ಳಿಯವನಿಂದ ಕೆಲವು ರೂಪಾಯಿಗೆ ಒಂದು ಗೋಮೇದವೆಂಬ ರತ್ನವನ್ನು ಕೊಂಡುಕೊಂಡಿದಾನೆ. ಇದು ೫೭ ಕ್ಯಾರೆಟ್ ಉಳ್ಳ ರತ್ನವಾಯಿತು. ಅಲ್ಲಿನ ವರ್ತಕರು ಅದಕ್ಕೆ ೩೦,೦೦೦ ರೂಪಾಯಿ ಕ್ರಯ ಕಟ್ಟುತ್ತಾರೆ. ಅವನು ಇನ್ನೂ ಹೆಚ್ಚು ಲಾಭ ಬರಮಾಡಬೇಕೆಂದು ಯೋಚಿಸಿ, ಆ ರತ್ನವನ್ನು ಲಂಡನ್ ನಗರದ ಪ್ರಸಿದ್ಧ ವರ್ತಕರಿಗೆ ಕಳುಹಿಸಿಕೊಟ್ಟಿದಾರೆ.

ಮದರಾಸ್ ಪಟ್ಟಣದಲ್ಲಿ ವರ್ತಕರು ಬಿಕರಿಮಾಡತಕ್ಕ ಆಹಾರ ಪದಾರ್ಥಗಳನ್ನೂ ಹಣ್ಣು ಹಂಪಲು ಮೊದಲಾದ ಪದಾರ್ಥಗಳನ್ನೂ ಮ್ಯುನಿಸಿಪಾಲಿಟಿಯವರು ಆಗಿಂದಾಗ್ಗೆ ಪರೀಕ್ಷೆಮಾಡಿ, ಆರೋಗ್ಯಕರವಾದ ವಸ್ತುಗಳನ್ನೇ ವರ್ತಕರಿಂದ ಬಿಕರಿ ಮಾಡಿಸುವುದಕ್ಕೆ ಏರ್ಪಾಡುಮಾಡುತ್ತಿದಾರೆ. ಇದಕ್ಕಾಗಿ ಮ್ಯುನಿಸಿಪಾಲಿಟಿಯವರು ಒಂದು ಪರೀಕ್ಷಾಮಂದಿರವನ್ನು ಬೇಗನೆ ಕಟ್ಟಿಸುವಂತೆ ಮದರಾಸ್ ಗವರ್ನಮೆಂಟಿನವರು ಅವರಿಗೆ ಹುಕುಂ ಕೊಟ್ಟದಾರೆ.

◆◆◆◆

ದೆಹಲಿ ಪಟ್ಟಣದಲ್ಲಿ ೫೦—೬೦ ಸಹಸ್ರ ಸೈನ್ಯವನ್ನು ತಂದು ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ಅವರಿಂದ ಕವಾತು ಮುಂತಾದ್ದನ್ನು ಮಾಡಿಸಿ ತೋರಿಸಿರುತ್ತಾರೆ. ಇದಕ್ಕೆಲ್ಲಾ ಸುಮಾರು ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ. ಸೈನಿಕರ ಉಪಯೋಗಕ್ಕೋಸ್ಕರ ೧೮ ಕೆರೆಗಳನ್ನೂ ೬೯ ಬಾವಿಗಳನ್ನೂ ಕಟ್ಟುತ್ತಿದಾರೆ. ನೆಹಲಿಯ ಒಬ್ಬ ಕಂಟ್ರಾಕ್ಟರು ನಿಂತು ೪೨,೦೦೦ ಕೂಲಿಯವರನ್ನಿಟ್ಟು ಬಹಳ ಆತುರವಾಗಿ ಕೆಲಸಮಾಡಿಸುತ್ತಾ ಇರುತ್ತಾರೆ.

◆◆◆◆

ಕಳೆದ ೧೯೦೪ ನೆ ಇಸವಿ ಮಾರ್ಚಿ ೩೧ ಕ್ಕೆ ಆಖೈರಾದ ೧ ವರ್ಷದಲ್ಲಿ ಹಿಂದುಸ್ಥಾನದ ಪೋಸ್ಟ್ (ಅಂಚೆ) ಇಲಾಖೆಯವರು ೩,೯೯,೦೮,೦೦೦ ಕಾಗದ ಕವರು ಥಾಂಗಿ ಮುಂತಾದವುಗಳನ್ನು ಪಟುವಾಡೆ ಮಾಡಿರುತ್ತಾರೆ. ಅಂದರೆ ಹಿಂದಿನ ವರ್ಷಕ್ಕಿಂತ ೬ ಕೋಟಿ ೩೦ ಲಕ್ಷದ ೫೬ ಸಾವಿರ ವಸ್ತುಗಳು ಹೆಚ್ಚು. ಇದಲ್ಲದೆ ಕಳೆದ ವರ್ಷ ೧೧೧ ಲಕ್ಷ ಕಾಗದ, ೬೩೦ ಲಕ್ಷ, ೭೮ ಲಕ್ಷ ವರ್ತಮಾನಪತ್ರಿಕೆ, ೫೦ ಸಾವಿರ ಥಾಂಗಿಗಳ ತೆಗೆದುಕೊಂಡು ವಿಳಾಸದಾರರಿಗೆ ಪಟುವಾಡೆಮಾಡಿರುತ್ತಾರೆ.

◆◆◆◆

ಚಿಕ್ಕಗಿರಿಯ ಮ್ಯಾಜಿಸ್ಟ್ರೇಟರು ಬಾಲೂ ಎಂಬ ಅಪರಾಧಿಗೆ ಒಂದು ಕಳವಿಗೋಸ್ಕರ ೫೦ ರೂಪಾಯಿ ಜುಲ್ಮಾನೆ ಕೊಡಬೇಕೆಂದೂ ಜುಲ್ಮಾನೆ ಕೊಡದಿದ್ದರೆ ೧೦ ದಿನ ಏಟು ತಿನ್ನಬೇಕೆಂದೂ ಶಿಕ್ಷೆವಿಧಿಸಿದರು. ಅವನು ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಮೇಲೆ ತೀರ್ಪು ಬರೆದು ನಾಗ್ಪುರ ಹೈಕೋರ್ಟಿನ ಮ್ಯಾಜಿಸ್ಟ್ರೇಟರು ಕೈದಿಗೆ ಏಕಕಾಲದಲ್ಲಿ ಎರಡು ಶಿಕ್ಷೆ ಅನುಭವಿಸಬೇಕೆಂದು ಹೇಳಿರುವುದು ಕಾನೂನಿಗೆ ವಿರೋಧವೆಂದು ಹೇಳಿ, ಆ ಶಿಕ್ಷೆಯನ್ನು ವಜಾಮಾಡಿದರು.

◆◆◆◆

ಬರಹಂಪುರದ ಹತ್ತಿರದಲ್ಲಿರುವ ತ್ರಿಮೂರ್ತಿ ಎಂಬ ಜಂಗಲಿನೊಳಗೆ ಕೆಲವು ದಿನಗಳ ಹಿಂದೆ ಒಂದು ಕಂಠಗೂ ಒಂದು ಕಿರಬನಿಗೂ ಜಗಳವಾಯಿತು. ಗೋಪಾಲಕರು ದೂರದಲ್ಲಿದ್ದು ಈ ಕಾಳಗವನ್ನು ನೋಡಿ ಪರವಶರಾದರು. ಕರಡಿಯು ಕಿರಬನನ್ನು ಹೊಡೆದು ಕೆಡವಿ ಕೊಂದುಹಾಕಿದ ಮೇಲೂ ಅದು ಆ ಹೆಣವನ್ನು ಬಿಡದೆ ಸುಮಾರು ಅರ್ಧಗಂಟೆಯ ತನಕ ಕಚ್ಚಿ ಪರಚಿ ಚೂರು ಚೂರು ಮಾಡುತ್ತಿತ್ತು. ಅಷ್ಟರಲ್ಲಿ ಗೋಪಾಲಕರು ಬಿಲ್ಲು ನಾಯಿಗಳನ್ನು ಹೂಡಿಟ್ಟು ಕರಡಿಯನ್ನು ಓಡಿಸಿ, ಕಿರಬನ ದೇಹವನ್ನು ಎತ್ತಿಕೊಂಡು ಬಂದರು.

◆◆◆◆

ನೇಪಾಳ ಸಂಸ್ಥಾನದಲ್ಲಿ ರೆಸಿಡೆಂಟರಾಗಿದ್ದು ರಾಜಕಾರ್ಯಾರ್ಥವಾಗಿ ವೈಸರಾಯರವರನ್ನು ಕಾಣುವುದಕ್ಕೆ ಸಿಂಲಾ ಪಟ್ಟಣಕ್ಕೆ ಬಂದಿದ್ದ ಕರ್ನಲ್ ರೇವೆನ್ಷಾರವರ ಬಂಗಲೆಗೆ ಕಳ್ಳರು ನುಗ್ಗಿ ಸುಮಾರು ೧೫—೨೦ ಸಾವಿರ ರೂಪಾಯಿನ ಸಾಮಾನುಗಳನ್ನು ಹೊತ್ತುಕೊಂಡು ಹೋದರು. ಕೆಲವು ದಿನಗಳಾದ ಮೇಲೆ ಕೆಲವು ನೌಕರರು ಆ ಬಂಗಲೆಯ ಬಳಿ ಅಡವಿಯಲ್ಲಿ ಹುಡುಕುತ್ತಿರುವಾಗ ಅಲ್ಲಿ ಒಂದು ಗಂಟು ಸಿಕ್ಕಿತು. ಅದನ್ನು ನೋಡುವಾಗ್ಗೆ ಕೆಲವು ಸಾಮಾನುಗಳೆಲ್ಲಾ ಅದರಲ್ಲಿದ್ದವು. ಹೀಗೆ ಸಿಕ್ಕಿದ್ದು ಮೂರನೆಯ ಒಂದು ಭಾಗವನ್ನು ಮೀರುವುದಿಲ್ಲವೆಂದು ಹೇಳುತ್ತಾರೆ.

◆◆◆◆

ಪ್ರಸಿದ್ಧ ಸ್ಯಾಂಡೋ ಪೈಲ್ವಾನನು ಮದರಾಸಿನಿಂದ ಬೆಂಗಳೂರಿಗೆ ಶಿಷ್ಯಸಮೇತ ಪ್ರಯಾಣಮಾಡಿ, ಅಲ್ಲಿ ನಾಟಕಶಾಲೆಯಲ್ಲಿ ತನ್ನ ಮತ್ತು ತನ್ನ ಶಿಷ್ಯರ ಸಾಹಸ ಚಮತ್ಕಾರಗಳನ್ನು ತೋರಿಸುವಲ್ಲಿ ಆ ಶಿಷ್ಯರ ಪೈಕಿ ಹಾವಾರ್ಡ್ ಎಂಬುವನು ಕುಡಿದು ಅಮಲಿನಲ್ಲಿ ಇದ್ದನೆಂದು ಸ್ಯಾಂಡೋ ಪೈಲ್ವಾನನು ಅವನನ್ನು ಕೆಲಸದಿಂದ ವಜಾಮಾಡಿದನು. ಆ ಶಿಷ್ಯನು ಸ್ಯಾಂಡೋ ಮೇಲೆ ೩,೦೦೦ ರೂಪಾಯಿ ಮಾನನಷ್ಟಕ್ಕೆ ದಾವಾ ತಂದನು. ಈ ಮೊಕದ್ದಮೆ ವಜಾರ್ಫ್ತಿ ಆಗಿ ಸ್ಯಾಂಡೋ ಪೈಲ್ವಾನನು ಫಿರ್ಯಾದಿಗೆ ಸ್ವಲ್ಪ ಹಣ ಕೊಡಿಸಿರುತ್ತಾರೆ.

◆◆◆◆

ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು ತಮ್ಮ ತಂದೆಯವರ ಹೆಸರನ್ನು ಶಾಶ್ವತವಾಗಿಸುವುದಕ್ಕೆ ಅವರ ಹೆಸರಿನ ಮೇಲೆ ಒಂದು ಭಾರೀ ಆಸ್ಪತ್ರೆಯನ್ನು ತಮ್ಮ ರಾಜಧಾನಿಯಲ್ಲಿ ಕಟ್ಟಿಸಿದಾರೆ. ಇಲ್ಲಿ ಸುಮಾರು ೮೦ ರೋಗಿಗಳು ಏಕಕಾಲದಲ್ಲಿದ್ದುಕೊಂಡು ಔಷಧ ತೆಗೆದುಕೊಂಡು ಹೋಗುವುದಕ್ಕೆ ಸ್ಥಳಾವಕಾಶವು ಒದಗಿಸಲ್ಪಟ್ಟದೆ. ಹೆಂಗಸರಿಗೂ ಗಂಡಸರಿಗೂ ಬೇರೆ ಬೇರೆಯಾಗಿ ಆಸ್ಪತ್ರೆಯು ಒಳಗಡೆ ಪ್ರತ್ಯೇಕ ಪ್ರತ್ಯೇಕವಾದ ಕೊಠಡಿಗಳ ಮುಂತಾದ್ದನ್ನು ಕಟ್ಟಿಸಿದಾರೆ. ಇಂಥಾ ಈ ಆಸ್ಪತ್ರೆಯು ಸಂಸ್ಥಾನಕ್ಕೆಲ್ಲಾ ನಾಗರಿಕರಿಗೆ ಯೋಗ್ಯವಾಗಿರುವವು.

◆◆◆◆

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಮೈಮುನ್ ಸಿಂಗ್ ಪಟ್ಟಣದಲ್ಲಿ ಸ್ವಲ್ಪ ದಿವಸ ಡಿಸ್ಟ್ರಿಕ್ಟ್ ಜಡ್ಜಿಯಾಗಿದ್ದ ಮೆ|| ಲೀ ಸಾಹೇಬರು ಆ ಊರಿನಲ್ಲಿರುವ ಮಿಸ್ ಮೆಲ್ ಎಂಬ ಹುಡುಗಿಯ ಮೇಲೆ ಆವಳು ಮೈಮುನ್ ಸಿಂಗಿನ ಮಹಾರಾಜರನ್ನು ಇಟ್ಟುಕೊಂಡಿದಾಳೆಂದು ಎಲ್ಲರ ಸಂಗಡಲೂ ಹೇಳಿದರು. ಇದರಿಂದ ಅವಳು ತನಗೆ ಅವಮಾನವಾಯಿತೆಂದು ಮೆ|| ಲೀ ಸಾಹೇಬರ ಮೇಲೆ ಕಲ್ಕತ್ತಾ ಹೈ ಕೋರ್ಟಿನಲ್ಲಿ ಮಾನನಷ್ಟದ ದಾವಾ ತಂದಳು. ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಆ ಸಾಹೇಬರಿಂದ ಆ ಸ್ತ್ರೀಗೆ ೧೨,೫೦೦ ರೂಪಾಯಿ ಡಾಮೇಜು ಕೊಡಿಸಿರುತ್ತಾರೆ.

◆◆◆◆

ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ಕುಷ್ಠರೋಗಿಗಳಿಗಾಗಿ ಕ್ಯಾಪ್ಟನ್ ರಾಸ್ಟ್ ಎಂಬ ಡಾಕ್ಟರು ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಿ, ಚಿಕಿತ್ಸೆ ಮಾಡುತ್ತಿದಾರೆ. ಈಗ ಈ ಆಸ್ಪತ್ರೆಯಲ್ಲಿ ೧೮೦ ಮಂದಿ ಕುಷ್ಠರೋಗಿಗಳು ಇರುವರು. ಪ್ರತಿ ಒಬ್ಬ ರೋಗಿಗೂ ಅನ್ನಬಟ್ಟೆ ಮುಂತಾದ್ದಕ್ಕೆ ಆ ಡಾಕ್ಟರು ತಿಂಗಳಿಗೆ ೮| ರೂಪಾಯಿನಂತೆ ಖರ್ಚುಮಾಡುತ್ತಿದಾರೆ. ಅವರು ಕಂಡುಹಿಡಿದಿರುವ ದ್ರಾವಕವನ್ನೇ ರೋಗಿಗಳಿಗೆ ಕೊಟ್ಟು ಚಿಕಿತ್ಸೆ ಮಾಡುತ್ತಿರುವದರಿಂದ ಈ ರೋಗವು ಬಹಳಮಟ್ಟಿಗೆ ಗುಣಪಡುವುದೆಂದು ಆ ಆಸ್ಪತ್ರೆಗಳ ಸೂಪರಿಂಟೆಂಡೆಂಟರಾದ ಮೆ|| ಬೆಸ್ವಾಲ್ ರವರು ತಿಳಿಸಿದಾರೆ.

◆◆◆◆

ಮದರಾಸ್ ಪಟ್ಟಣದಲ್ಲಿ ಈಗ ವಾಂತಿಭೇದಿ ಉಪದ್ರವು ಹಿಡಿದುಕೊಂಡು ಪ್ರಜೆಗಳನ್ನು ತುಂಬಾ ಕಳವಳಪಡಿಸುತ್ತಿದೆ. ದಿನ ೧ಕ್ಕೆ ೩೦–೪೦ ಜನರಂತೆ ಸಾಯುತ್ತಿದಾರೆ. ಅದರ ಸುತ್ತಮುತ್ತಲೂ ಇರುವ ಗ್ರಾಮಗಳಿಗೂ ಉಪದ್ರ ವ್ಯಾಪಿಸಿಕೊಂಡಿದೆ. ಅಲ್ಲಲ್ಲಾಗಿ ಸ್ವಲ್ಪ ಬೀಡುತರಾದ ಜನರುಗಳನ್ನು ಪಟ್ಟಣದ ಹೊರಗಡೆ ಮೈದಾನದಲ್ಲಿ ಎಂಬಲ್ಲಿ ಜೋಪಡಿಗಳನ್ನು ಕಟ್ಟಿ ಅಲ್ಲಿಗೆ ಕಳುಹಿಸಿ ಸಾಕುತ್ತಿದಾರೆ. ಸುಮಾರು ೪,೦೦೦ ಜನರುಗಳು ಈಗ ಸರ್ಕಾರದವರ ಪೋಷಣೆಯಲ್ಲಿ ಬಿದ್ದುಕೊಂಡದಾರೆ. ಇವರ ಶೈತ್ಯೋಪಚಾರಕ್ಕೆ ಸರ್ಕಾರದವರು ಒಬ್ಬ ಕಲೆಕ್ಟರನ್ನೂ ಒಬ್ಬ ಡಾಕ್ಟರನ್ನೂ ಇನ್ನೂ ಕೆಲವು ನೌಕರರನ್ನೂ ನೇಮಕ ಮಾಡಿದಾರೆ.

◆◆◆◆

ಪನ್ನಾ ಸಂಸ್ಥಾನದ ಮಹಾರಾಜರವರಾಗಿದ್ದ ಮಾಧವಸಿಂಗರವರು ಅವರ ಚಿಕ್ಕಪ್ಪನಿಗೆ ವಿಷಹಾಕಿ ಕೊಲ್ಲಿಸಿದರೆಂದು ಎರಡು ವರ್ಷಗಳ ಕೆಳಗೆ ಮೊಕದ್ದಮೆ ಆಗಿ, ಇಂಡಿಯಾ ಗವರ್ನಮೆಂಟಿನವರಿಂದ ನೇಮಕವಾದ ಸ್ಪೆಷಲ್ ಜಡ್ಜಿಗಳು ಆ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ತಮ್ಮ ತೀರ್ಮಾನವನ್ನು ಗವರ್ನಮೆಂಟಿಗೆ ತಿಳಿಸಿದ್ದರ ಮೇಲೆ ಅವರು ಮಹದೇವ ಸಿಂಗರಿಗೆ ರಾಜ್ಯ ಪದವಿಯನ್ನು ತಪ್ಪಿಸಿ, ಅವರನ್ನು ಗಡೀಪಾರು ಮಾಡಿದರು. ಈಚೆಗೆ ಅವರ ಪ್ರಜೆಗಳಲ್ಲಿ ಮುಖಂಡರಾದ ೬೦೦ ಜನರು ಅರ್ಜಿಯನ್ನು ಬರೆದು ವಿಲಾಯಿತಿ ಪಾರ್ಲಿಮೆಂಟಿಗೆ ಒಪ್ಪಿಸಿ, ಅವರಿಗೆ ಮತ್ತೆ ರಾಜ್ಯಾಧಿಕಾರವನ್ನು ಕೊಡಬೇಕೆಂದು ಹೊಡೆದಾಡುತ್ತಿದಾರೆ.

◆◆◆◆

ಬೊಂಬಾಯಿ ಪಟ್ಟಣದಲ್ಲಿ ಶಂಕರರಾವ ಪ್ರಸಾದನೆಂಬುವನು ವಿಠ್ಠಲ ನಾಥ ಕರಾಂ ಎಂಬ ೧೨ ವರ್ಷದ ಒಬ್ಬ ಹುಡುಗನನ್ನು ಒಂದು ಭಾವಿಯ ಬಳಿಗೆ ಕರೆದುಕೊಂಡು ಹೋಗಿ ಅವನಿಗೆ ತಿಂಡಿ ಕೊಟ್ಟು, ಅವನ ಮೈಮೇಲಿದ್ದ ಒಡವೆಯನ್ನು ತೆಗೆದುಕೊಂಡು, ಅವನನ್ನು ಭಾವಿಯೊಳಕ್ಕೆ ದೊಬ್ಬಿ, ಓಡಿಹೋದನು. ಭಾವಿಯಲ್ಲಿ ನೀರು ಸ್ವಲ್ಪ ಮಾತ್ರ ಇದ್ದದರಿಂದ ಆ ಹುಡುಗನು ಒಂದು ದಿನವೆಲ್ಲಾ ಅದರೊಳಗೆ ನಿಂತಿದ್ದನು. ಯಾರೋ ಇವನ ಧ್ವನಿ ಕೇಳಿ ಮೇಲಕ್ಕೆ ಎತ್ತಿಹಾಕಿದರು. ಪೋಲೀಸಿನವರು ಆ ಕಳ್ಳನನ್ನು ಹುಡುಕಿ ತಂದು, ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆ ಮಾಡಿಸಿದರು. ಜಡ್ಜಿಯು ಅವನಿಗೆ ಒಂಬತ್ತು ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ.

◆◆◆◆

ಕ್ಯಾಪ್ಟನ್ ಸಿಡ್ ಎಂಬೊಬ್ಬ ವಿಲಾಯಿತಿಯವನು ಲಂಕಾ ದ್ವೀಪದಲ್ಲಿ ಮೊದಲು ದೋಣಿ ನಡಿಸುವ ಉದ್ಯೋಗದಲ್ಲಿದ್ದು, ಸ್ವಲ್ಪ ಹಣ ಸಂಪಾದನೆ ಮಾಡಿಕೊಂಡು, ಬಂಗಾಳಾ ಅಧಿಪತ್ಯಕ್ಕೆ ಸೇರಿದ ಚಿತ್ತಗೊಂಡವೆಂಬ ಪಟ್ಟಣದಲ್ಲಿ ವ್ಯಾಪಾರಮಾಡುತ್ತಿದ್ದನು. ಇವನಿಗೆ ಕಲ್ಕತ್ತಾ ಪಟ್ಟಣದಲ್ಲಿ ನಡೆದ ಕುದುರೇ ಜೂಜಿನಲ್ಲಿ ಈಸಲ ೩,೯೦,೦೦೦ ರೂಪಾಯಿ ಬಂದಿತು. ಕೂಡಲೆ ಅವನು ತನ್ನ ವ್ಯಾಪಾರದ ಅಂಗಡಿಯನ್ನು ಅನಾಮತ್ತಾಗಿ ೨೦೦,೦೦೦ ರೂಪಾಯಿಗೆ ವಿಕರಿಮಾಡಿ, ಈ ಎರಡು ಬಾಬಿನ ಹಣವನ್ನೂ ಕೂಡಿಸಿ, ಮತ್ತೆ ಈ ಪ್ರಾಂತ್ಯ ಬರುವುದಿಲ್ಲವೆಂದು ಗೊತ್ತುಮಾಡಿಕೊಂಡು, ಕಳೆದವಾರ ಹಡಗಿನಮೇಲೆ ತನ್ನ ಜನ್ಮಭೂಮಿಯಾದ ವಿಲಾಯಿತಿಗೆ ಪ್ರಯಾಣಮಾಡಿರುತ್ತಾನೆ.

◆◆◆◆

ಲಾಹೋರ್ ಪಟ್ಟಣದ ಮಕ್ಲಾಗನ್ ರಸ್ತೆಯಲ್ಲಿ ವಾಸಮಾಡುವ ಒಂದು ಬ್ಯಾಂಕಿನ ಏಜಂಟರು ಚೀಫ್ ಕೋರ್ಟಿನಲ್ಲಿ ಮ್ಯುನಿಸಿಪಾಲಿಟಿಯವರ ಮೇಲೆ ಅವರು ತಮ್ಮ ಬೀದಿಯನ್ನು ತುಂಬಾ ಅನಾರೋಗ್ಯಕರವಾದ ಸ್ಥಿತಿಯಲ್ಲಿಟ್ಟುಕೊಂಡಿದಾರೆಂತಲೂ ಇದರಿಂದ ಅವರಿಗೆ ಶರೀರದ ಆರೋಗ್ಯ ಸ್ಥಿತಿಯು ಕೆಡುವುದಕ್ಕೆ ಕಾರಣವಾಯಿತೆಂತಲೂ ಇದಕ್ಕಾಗಿ ಮ್ಯುನಿಸಿಪಾಲಿಟಿಯಿಂದ ತಮಗೆ ೩,೦೦೦ ರೂಪಾಯಿ ಪರಿಹಾರ ಕೊಡಿಸಬೇಕೆಂತಲೂ ದಾವಾ ಮಾಡಿದಾರೆ. ಮ್ಯುನಿಸಿಪಾಲಿಟಿಯವರಾದರೋ ತಾವು ಮಾಡಬೇಕಾದ ಕಾರ್ಯಗಳನ್ನೆಲ್ಲಾ ಲೋಪವಿಲ್ಲದೆ ಮಾಡಿಸುತ್ತೇವೆಂತಲೂ ಈ ವಾದಿಗೆ ಆರೋಗ್ಯ ತಪ್ಪಿದ್ದಕ್ಕೆ ತಾವು ಹೊಣೆಗಾರರಾಗುವುದಿಲ್ಲವೆಂತಲೂ ಪ್ರತ್ಯುತ್ತರವನ್ನು ಕೊಟ್ಟದಾರೆ. ಮೊಕದ್ದಮೆ ನಡೆಯುತ್ತಾ ಇದೆ.

◆◆◆◆

ಜಾರ್ಜ ಫ್ರಾಂಕೋ ಎಂಬೊಬ್ಬ ಪೋರ್ಚುಗೀಸ್ ಬೈದಿಯನ್ನು ಅಸೋಷಿಯೇಟೆಡ್ ಪೋಲೀಸಿನವರು ಅಲ್ಲಿನ ಪಟ್ಟಣದಲ್ಲಿ ದಸ್ತಗಿರಿಮಾಡಿ, ತಿರುವಾಂಕೂರು ರಾಜಧಾನಿಗೆ ಕರತಂದಿದಾರೆ. ಇವನಿಗೆ ೫೧ ವರ್ಷ ವಯಸ್ಸಾಗಿದೆ. ಟ್ರಾನ್ಸ್ವಾಲ್ ಯುದ್ಧದಲ್ಲಿ ಇಂಗ್ಲಿಷರು ಹಿಡಿದುಕೊಂಡ ಬೈದಿಗಳಲ್ಲಿ ಇವನೂ ಒಬ್ಬನು. ಇವನು ಶರಣಾಗತನಾಗುವುದಿಲ್ಲವೆಂದು ಹಟಹಿಡಿದದ್ದರಿಂದ ಇಂಗ್ಲಿಷ್ ಗವರ್ನಮೆಂಟಿನವರು ಇವನನ್ನು ವಾಪಸು ಟ್ರಾನ್ಸ್ವಾಲಿಗೆ ಬಿಡಲಿಲ್ಲ. ಇವನ ಹೆಂಡತಿ ಯುದ್ಧಕಾಲದಲ್ಲಿ ಮೃತಪಟ್ಟುಹೋದಳು. ಇವನ ಮೂರು ಮಂದಿ ಮಕ್ಕಳು ತಪ್ಪಿಸಿಕೊಂಡು, ಫ್ರಾನ್ಸಿಗೆ ಹೋಗಿ ಸೇರಿಕೊಂಡರು. ಇವನು ದಕ್ಷಿಣ ದೇಶದ ಪ್ಲಾಂಟೇಷನುಗಳಲ್ಲಿ ಕೂಲಿನಾಲಿ ಮಾಡಿ ಜೀವಿಸುತ್ತಿದ್ದನು. ಈಗ ಇವನಿಗೆ ಕೆಲಸವೇನೂ ಸಿಕ್ಕದೆ ತುಂಬಾ ಹೀನಸ್ಥಿತಿಯಲ್ಲಿದಾನೆ.

◆◆◆◆

ಹಿಮಾಚಲ ಪರ್ವತದಲ್ಲಿ ಕಾಂಚನಗಂಗಾ ಎಂಬ ಶಿಖರದ ಮೇಲೆ ಹತ್ತಿ ಅದರ ಪರಿಮಾಣವನ್ನು ಗೊತ್ತುಮಾಡುವುದಕ್ಕೆ ಮೆ|| ಎ. ಕ್ರೌಲೆ, ಡಾಕ್ಟರ್ ಜೆಕಟ್ ಗಿಲಾರ್ಮಾಡ್, ಮೆ|| ರೇಮಂಡ್, ಮೆ|| ಪೆಕ್ಕೆ ಎಂಬೀ ನಾಲ್ವರು ಮುಂದಿನ ಸೆಪ್ಟಂಬರ್ ತಿಂಗಳಲ್ಲಿ ಪ್ರಾರಂಭಿಸುವವರಾಗಿದಾರೆ. ಈ ನಾಲ್ವರ ಪೈಕಿ ಮೊದಲನೆ ಇಬ್ಬರಿಗೆ ಹಿಮಾಲಯ ಬೆಟ್ಟವನ್ನು ಹತ್ತಿ ಅಭ್ಯಾಸವಾಗಿದೆ. ಇವರು ಡಾರ್ಜಿಲಿಂಗಿನಿಂದ ಹೊರಟು, ಪಮಯಾಂಚಿಜೋಗ್ರಿಂ ಕಣಿವೆಯನ್ನೂ ಕಾಂಗ್ಲಾ ನದಿಯನ್ನೂ ದಾಟಿ ೧೬,೦೦೦ ಅಡಿ ಎತ್ತರದಲ್ಲಿರುವ ತ್ಸೇರಾಂ ಎಂಬ ರಾಜ್ಯದ ಮಾರ್ಗವಾಗಿ ಹತ್ತಿ ಹೋಗುವರು. ಇದಕ್ಕೆ ನೇಪಾಳಸಂಸ್ಥಾನದ ಮಹಾರಾಜರವರ ಅನುಜ್ಞೆಯನ್ನು ಅವರು ನಿರೀಕ್ಷಿಸಿಕೊಂಡಿದಾರೆಂತಲೂ ಪರ್ವತ ಶಿಖರವನ್ನು ಕಂಡು ಹಿಡಿಯಬೇಕೆಂಬ ಉತ್ಸಾಹಶೀಲ ಉಳ್ಳವರಾಗಿದಾರೆಂತಲೂ ತಿಳಿದುಬಂದಿದೆ.

◆◆◆◆

ಪಂಜಾಬಿನ ಲೆಫ್ಟಿನೆಂಟ್ ಗವರ್ನರಾದ ಸರ್ ಜೇಮ್ಸ್ ಲಾಟೋಷೆಯವರು ಕಳೆದ ವಾರ ಕಾಶೀ ಪಟ್ಟಣಕ್ಕೆ ದಯಮಾಡಿದ್ದರು. ಅಲ್ಲಿನ ಸಂಸ್ಕೃತ ವಿದ್ಯಾಶಾಲೆಯ ಪಂಡಿತರೂ ಮುಖ್ಯ ಮುಖ್ಯ ಜಹಗೀರುದಾರರೂ ಕಾಶೀ ಮಹಾರಾಜರವರ ಪ್ರತಿನಿಧಿಗಳೂ ಲೆಫ್ಟಿನೆಂಟ್ ಗವರ್ನರವರನ್ನೂ ಭೇಟಿಮಾಡಿ, ಸಂಸ್ಕೃತ ವಿದ್ಯಾಭಿವೃದ್ಧಿಗೆ ದ್ರವ್ಯಸಹಾಯ ಮಾಡಬೇಕೆಂದು ಮುಂತಾಗಿ ಅರಿಕೆಮಾಡಿಕೊಂಡರು. ಆ ಫಂಡಿಗೆ ಕಾಶೀ ಮಹಾರಾಜರು ೩೦,೦೦೦ ರೂಪಾಯಿ ಕೊಟ್ಟದಾರೆಂತಲೂ, ಇದುವರೆಗೆ ಈ ಫಂಡಿನಲ್ಲಿ ೭೫,೦೦೦ ರೂಪಾಯಿ ಕೂಡಿದೆ ಎಂತಲೂ ತಿಳಿಸಿದರು. ಗವರ್ನರವರು ಅವರನ್ನೆಲ್ಲಾ ಬಹು ಆದರದಿಂದನೆ ಕಂಡು ಅವರು ಉದ್ದೇಶಪಟ್ಟಿರುವ ಈ ಒಳ್ಳೇ ಕಾರ್ಯಕ್ಕೆ ಗವರ್ನಮೆಂಟಿನಿಂದ ಅವಶ್ಯವಾದ ಸಹಾಯ ಸಂಪತ್ತುಗಳನ್ನೆಲ್ಲಾ ಒದಗಿಸಿಕೊಡುವದಾಗಿ ಅಪ್ಪಣೆ ಕೊಟ್ಟಿರುತ್ತಾರೆ.

◆◆◆◆

ಕಲ್ಕತ್ತಾ ಪಟ್ಟಣದ ಹೆಲ್ತ್ ಆಫೀಸರ್ (ಆರೋಗ್ಯವಿಚಾರವನ್ನು ನೋಡಿಕೊಳ್ಳುವ ಅಧಿಕಾರಿ) ಡಾ|| ಸಿಂಪ್ಸನ್ ರವರು ಅಲ್ಲಿ ಪ್ಲೇಗನ್ನು ಅಣಗಿಸುವುದಕ್ಕೆ ತುಂಬಾ ಸಾಹಸಪಟ್ಟು ನಾನಾ ಪರಿಶೋಧನಗಳನ್ನು ನಡಿಸುತ್ತಿದಾರೆ. ಅವರು ಆ ವಿಷಯವನ್ನು ಕುರಿತು ಬರೆದಿರುವುದೇನೆಂದರೆ—ಪ್ಲೇಗ್ ಆದ ಮನೆಗಳಲ್ಲೇ ಪ್ರತಿವರ್ಷವೂ ಮತ್ತೆ ಮತ್ತೆ ರೋಗಕಾಣಿಸಿಕೊಳ್ಳುವುದು. ಇದು ಈ ಪಟ್ಟಣಕ್ಕೆ ಮಾತ್ರ ಬಂದ ಅನುಭವವೆಂದು ತಿಳಿಯಬಾರದು. ಹಿಂದುಸ್ಥಾನದ ಇತರ ಪಟ್ಟಣಗಳಲ್ಲೂ ಇದೇ ರೀತಿ ಆಗುತ್ತಿದೆ. ಇದರಿಂದ ಈಗ ಸರ್ಕಾರದವರು ಮಾಡಿಸುವ ಡಿಸಿನ್ಫೆಕ್ಷನಲ್ಲಿ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಹೇಳಬಹುದಾಗಿದೆ. ಉಪದ್ರವಾದ ಮನೆಗಳನ್ನು ಬಿಟ್ಟುಬಿಡುವುದು, ಇಲ್ಲವೇ ಅಂಥಾ ಮನೆಗಳನ್ನು ಸಂಪೂರ್ಣವಾಗಿ ಕೆಡವಿಹಾಕುವುದು—ಇವೆರಡೇ ಈ ಉಪದ್ರವನ್ನು ಅಣಗಿಸುವುದಕ್ಕೆ ಖಂಡಿತವಾದ ಉಪಾಯಗಳಾಗಿರುತ್ತವೆ. ಆದರೆ ಈ ಉಪಾಯಗಳು ಪ್ರಜೆಗಳಿಗೆ ಹಿತವಾಗಿಲ್ಲ. ಅಂಥಾ ಮನೆಯನ್ನು ಬಿಡುವುದಕ್ಕಾಗಲಿ ಒಡೆಯುವುದಕ್ಕಾಗಲಿ ಒಪ್ಪುವುದಿಲ್ಲ. ಕಲ್ಕತ್ತೆಯಂಥಾ ಮಹಾ ಪಟ್ಟಣದಲ್ಲಿ ತುಂಬಾ ಬಾಡಿಗೆ ಮುಂತಾದ ವರಮಾನಗಳನ್ನು ಕೊಡುವ ಭಾರಿ ಭಾರಿ ಕಟ್ಟಡಗಳನ್ನು ಒಡೆದು ಹಾಳುಮಾಡುವುದಕ್ಕೆ ಪ್ರಜೆಗಳು ಒಪ್ಪುವರೆಂದು ನಿರೀಕ್ಷಿಸುವುದೂ ತರವಲ್ಲ. ಆದಕಾರಣ ಸರ್ಕಾರದವರು ಹೊಸ ತರಹ ಡಿಸಿನ್ಫೆಕ್ಷನ್ ಮಾಡುವುದನ್ನು ಕಂಡುಹಿಡಿದು ಈ ಮೂಲಕವೇ ಉಪದ್ರವನ್ನು ಅಣಗಿಸಬೇಕಾಗಿದೆ. ಇಂಥಾ ಹೊಸ ವಿಧಾನವನ್ನು ಡಾಕ್ಟರುಗಳೆಲ್ಲಾ ಸೇರಿ ಪರೀಕ್ಷೆಗಳ ಮೂಲಕ ಪ್ರಯತ್ನಪಟ್ಟರೆ ಕಂಡುಹಿಡಿಯುವುದು ಅಸಾಧ್ಯವಲ್ಲ ಎಂಬುದೇ.

ತಾಲ್ಲೂಕು ವರ್ತಮಾನಗಳು

ಅನೇಕಲ್ಲು.—ಈ ಅನೇಕಲ್ ಕಸಬೆಯಲ್ಲಿರುವ ಲಂಡನ್ ಮಿಷನ್ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಹಾಲಿನಲ್ಲಿ ೧೯೦೫ ನೇ ಜುಲೈ ೨೭ ತಾರೀಖು ಗುರುವಾರದ ದಿನ ಸದರಿ ಸ್ಕೂಲಿನ ಬಾಲಕ ಬಾಲಕಿಯರಿಗೆ ಬಹುಮಾನ ಕೊಡಲ್ಪಟ್ಟಿತು. ಈ ಸಭೆಯಲ್ಲಿ ನಮ್ಮ ತಾಲ್ಲೂಕ್ ಅಮಲ್ದಾರ್ ಮೆ|| ಮಹಮ್ಮದ್ ರಜಾ ಸಾಹೇಬರವರೂ, ರೆವರೆಂಡ್ ಜೇ ಮಾಥರ್, ಬಿ. ಎ., ಬಿ. ಡಿ. ಯವರೂ ಅಗ್ರಾಸನವನ್ನಲಂಕರಿಸಿ ಇದ್ದರು. ಸಮಸ್ತರಾದ ಸರ್ಕಾರಿ ನೌಕರರೂ ಈ ಗ್ರಾಮದ ದೊಡ್ಡಮನುಷ್ಯರೂ ಸಭಾಸದರಾಗಿ ಇದ್ದರು. ಸ್ಕೂಲಿನ ವಿದ್ಯಾರ್ಥಿಗಳು ಕನ್ನಡ ಮತ್ತು ಇಂಗ್ಲೀಷು ಭಾಷೆಗಳಲ್ಲಿ ಡೈಲಾಗ್ ವಗೈರೆ ವಿನೋದಗಳನ್ನು ನಡಸಿ, ಸಭಾಸದರಿಗೆ ಮನೋರಂಜನವನ್ನುಂಟುಮಾಡಿದರು.—ಈ ಅನೇಕಲ್ ಕಸಬೆಯಲ್ಲಿ ಯಂಗ್ ಮೆನ್ಸ್ ಯೂನಿಯನ್ ಎಂಬ ಒಂದು ಸಭೆ ಏರ್ಪಟ್ಟಿರುವದು. ಇದಕ್ಕೆ ಎಂ

ಡನೆಯ ವರ್ಷ ವರ್ಧಂತಿಯ ಉತ್ಸವಕ್ಕೆ ಸೇರಿದ್ದ ಮಹನೀಯರು ಲೈಬ್ರರಿ ಏರ್ಪಡಿಸುವ ಬಗ್ಗೆ ಪ್ರಯತ್ನವನ್ನು ಮಾಡಿ ಇದ್ದರು. ಸದರಿ ಲೈಬ್ರರಿಯು ಅಂದರೆ ಪುಸ್ತಕಭಂಡಾರವು ಈ ಸಂದರ್ಭದಲ್ಲಿ ಪ್ರಾರಂಭಿಸಲ್ಪಟ್ಟಿತು. ಸಭೆಗೆ ಬಂದಿದ್ದವರೆಲ್ಲಾ ಪುಷ್ಪಮಾಲಾ ಭೂಷಣ ಭೂಷಿತರಾಗಿ ಅವರವರ ಗೃಹವಂ ಕುರಿತು ಬಿಜಯಂಗೈದರು.

ಮೈಸೂರು.—ಈಗ ಸುಮಾರು ೮—೧೦ ವರ್ಷಗಳಿಂದಲೂ ಈ ಊರಿನ ವೈಶ್ಯರಲ್ಲಿ ಪೆಂಡರ್ ಮ॥ ರಾಮಶೆಟ್ಟಿಯವರು ಒಂದು ಪಾರ್ಟಿಯಾಗಿಯೂ ವೆಂಕಟೇಶ ಶೆಟ್ಟರವರ ಮಕ್ಕಳಾದಂಥ ಮ॥ ರಾಮಶೆಟ್ಟಿಯವರು ಒಂದು ಪಾರ್ಟಿಯಾಗಿಯೂ ಕೋರ್ಟು ಕಛೇರಿಗಳನ್ನು ಹತ್ತಿ ಬಹಳ ಹಣ ವ್ಯಯಮಾಡುತ್ತಾ ಅನುಪಯೋಗವಾದ ಕೆಲಸಗಳನ್ನೆಲ್ಲಾ ಏರ್ಪಡಿಸಿ, ಇದ್ದ ಆಸ್ತಿಗಳನ್ನೆಲ್ಲಾ ಕಳೆದುಕೊಳ್ಳುತ್ತಾ ಇದ್ದು, ಇವರಿವರ ಜಿದ್ದಿನಿಂದ ಉಭಯ ಕಕ್ಷಿಯವರು ತುಂಬಾ ತೊಂದರೆಪಡುತ್ತಾ ಇ[...] ಶ್ರೀ ಶೃಂಗೇರಿ ಮಠಕ್ಕೆ ಸೇರಿರುವ ಯಜ್ಞೇಶ್ವರ ಶಾಸ್ತ್ರಿಗಳವರು ಕಳೆದ ತಿಂಗಳು ೨೩ರಲ್ಲಿ ಯಾತ್ರೋತ್ತರ ಮಾರ್ಗವಾಗಿ ಮೈಸೂರಿಗೆ ಬಂದು, ಮ॥ ಅಪ್ಪಯ್ಯ ಶಾಸ್ತ್ರಿಯವರ ಗೃಹದಲ್ಲಿ ಉಭಯ ಕಕ್ಷಿಯವರನ್ನೂ ಸೇರಿಸಿ, ಉಭಯರುಗಳ ವಾಜ್ಮೂಲವನ್ನೂ ಪರಾಂಬರಿಸಿ, ಅವರವರಿಗಿದ್ದ ಮನಸ್ತಾಪಗಳನ್ನು ಪರಿಹರಿಸಿ, ಅವರವರಿಗಿದ್ದ ಲೇವಾದೇವಿಗಳನ್ನೂ, ಕೋರ್ಟುಗಳಲ್ಲಿ ನಡೆಯುತ್ತಿದ್ದ ನೋಕದ್ದಮೆಗಳನ್ನೂ ಸಹ ವ್ಯವಸ್ಥೆಮಾಡಿ, ಉಭಯಸ್ಥರನ್ನು ಒಂದೇ ಪಾರ್ಟಿಯಾಗಿ ಮಾಡಿದ್ದರಿಂದ ಸರ್ವರೂ ಅವರನ್ನು ಕೊಂಡಾಡುತ್ತಿದ್ದಾರೆ. ಅವರು ಹೊರಟುಹೋದ ನಂತರ ವೈಶ್ಯರೆಲ್ಲಾ ಒಂದಾಗಿ ಸೇರಿ, ತಮ್ಮ ಕುಲದೇವತೆ ಪೂಜೆಪುರಸ್ಕಾರಗಳನ್ನು ಬಹು ಸಂತೋಷದಿಂದ ಮಾಡಿದರು. ವೈಶ್ಯರಲ್ಲಿದ್ದಂತೆಯೇ ಇನ್ನು ಬೇರೆ ಮತಸ್ಥರಲ್ಲಿಯೂ ಪಾರ್ಟಿಗಳಿರುವದುಂಟು. ಅಂಥವರು ಇವರ ಮೇಲ್ಪಂಕ್ತಿಯನ್ನು ಅನುಸರಿಸಿ, ಒಂದೇ ಸಂಗಡವಾದರೆ ಎಷ್ಟೋ ಉತ್ತಮವಾಗಿರುವದು.—ಸಂತೆಗಳಲ್ಲಿ ಈಗೀಗ ಸ್ವಲ್ಪ ಕಳ್ಳತನ ನಡೆಯುತ್ತದೆಂದು ವರ್ತಮಾನ ಕೇಳುತ್ತೇನೆ.—ಈ ವಿಷಯದಲ್ಲಿ ನಮ್ಮ ಪೊಲೀಸ್ ಇನ್ಸ್‌ಪೆಕ್ಟರು ನಿಗಾ ಕೊಡುವರೆಂದು ನಂಬುತ್ತೇನೆ.—ಈ ಟವರಿಗೆ ಸೇರಿದ ಸೇತುವೆಯಲ್ಲೂ, ಕಲ್ಲಹಳ್ಳಿ ಎಂಬ ಗ್ರಾಮದಲ್ಲೂ ಮ್ಯುನಿಸಿಪಾಲಿಟಿ ಚನ್ನಾಗಿಲ್ಲ. ರಸ್ತೆಯಲ್ಲೇ ಜನರು ಹೇಸಿಗೆ ಮಾಡುತ್ತಾರೆ. ಚರಂಡಿಗಳಲ್ಲಿ ಕಸ ಬೆಳೆದುಕೊಂಡು ವಿಷಕ್ರಿಮಿಗಳಿಗೆ ಸ್ಥಾನವಾಗಿದೆ. ಸಾಕಾದಷ್ಟು ಆಳುಗಳು ಇಲ್ಲದಿರುವದರಿಂದ ಈ ರೀತಿಯಲ್ಲಿದೆಯೋ ಏನೋ. ಈ ಊರಿನ ಸುತ್ತು ಮುತ್ತಲೂ ರಾಗಿ ಫಸಲು ಬಹು ಚನ್ನಾಗಿದೆ. ಕೆಲವು ದಿವಸದಿಂದಲೂ ಮಳೆ ಇಲ್ಲದೆ ಫಸಲು ಒಣಗುವದಕ್ಕೆ ಪ್ರಾರಂಭವಾಗಿದೆ ಇನ್ನು ಒಂದೇ ಒಂದು ಹದ ಮಳೆಯಾದರೆ ರಾಗಿ ಫಸಲಿಗೆ ಏನೂ ಭಯವಿಲ್ಲ. ಇಲ್ಲದಿದ್ದರೆ "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ" ಎಂಬುವಹಾಗಾಗುತ್ತದೆ.

ತ್ರಿಕ್ಷ್ಮ್ಯಾರು.—ನಮ್ಮ ಅಮಲ್ದಾರರ ಪತ್ನಿಯವರಿಗೆ ಕಾಮಾಲೆಯು ಪ್ರಾಪ್ತಿಸಿತ್ತು. ಕರ್ನಾಟಕ ಪಂಡಿತರು ಮ॥ ಯಂಬಾರಾಜೇಯರು ಚಿಕಿತ್ಸೆ ಮಾಡಿದ್ದರಿಂದ ಕಾಯಿಲೆಯು ಕೊಂಚ ಹಿಮ್ಮೆಟ್ಟುತ್ತಿದೆ ಎಂದು ತಿಳಿದು, ಶ್ರೀ ಭಗವಂತನು ಅವರಿಗೆ ಸಂಪೂರ್ಣ ಕ್ಷೇಮವನ್ನಿಯಲೆಂದು ಪ್ರಜೆಗಳು ಹಾರೈಸುತ್ತಾರೆ.—ಕೃಷ್ಣಪಕ್ಷ, ಶುಕ್ಲಪಕ್ಷಗಳೆರಡರಲ್ಲಿಯೂ ಮ್ಯುನಿಸಿಪಲ್ ಲಾಂದ್ರಗಳು ಉರಿಯುತ್ತಿರಬೇಕೆಂದು ಏರ್ಪಾಡಾಗಿರುವದು ಪ್ರಜೆಗಳಿಗೆ ಮಹಸುಖಕಾರವಾಯಿತು. ಆದರೆ ಯಾಕಕ್ಕೆ ಕೆಲವು ದೀಪಗಳು ಕಾಲಕ್ಕೆ ಮುಂಚೆಯೇ ಆರಿಹೋಗುತ್ತವೆ—ಕಳ್ಳರ ಮನೆಗಳೂ ಇದಕ್ಕಾಗಿ ಇಬ್ಬರು ಜಾಡಮಾಲಿಗಳೂ ಆಗಬೇಕೆಂದು ಮುಂಬೂರು ಆಗಿರುತ್ತಿಂದು ವರ್ತಮಾನ—ಕೆರೆತೊಟ್ಟಿಯಲ್ಲಿದ್ದ ಒಬ್ಬ ಅಕ್ಕಸಾಲಿಗನು ಬೆಳ್ಳಿ ಬಂಗಾರಗಳನ್ನು ಕದ್ದನೆಂದು ತಪ್ಪು ಸಾಬೀತಾಗಿ ೩ ತಿಂಗಳ ಸಜಾ ನೇಮಕವಾಯಿತು. ಬುತ್ತಿ ಅನ್ನವನ್ನು ಉಣ್ಣಿಸುವದಕ್ಕಾಗಿ ಒಬ್ಬ ಪೊಲೀಸಿನವನು ಬಾವಿಯ ಬಳಿ ಕರೆದುಕೊಂಡು ಹೋಗಲು ಆಚಾರಿಯು ನೀರೊಳಕ್ಕೆ ಬಿದ್ದನಂತೆ ಪೊಲೀಸಿನವನು ಇನ್ನೇನು ಗತಿಯಪ್ಪಾ ಎಂದು ಕಳ್ಳನನ್ನು ಹಿಡಿಯುವದಕ್ಕೆ ತಾನೂ ನೀರಿನೊಳಗೆ ಧುಮುಕಿ ಇಬ್ಬರೂ ಗಂಗಮ್ಮನ ಪಾದ ಹಿಡಿಯುವಷ್ಟರೊಳಗಾಗಿ ಇಸೆಯುವನು ಅವರೀರ್ವರನ್ನೂ ಮೇಲಕ್ಕೆ ತೆಗೆದನೆಂದು ವರ್ತಮಾನ. ಈಗ ಸದರಿ ಆಚಾರಿಯ ಗ್ರಹಚಾರ ನೆಟ್ಟಗೆ ಮಾಡುವದಕ್ಕೆ "ಆತ್ಮಹತ್ಯದ ಕೇಸ್" ನಡೆಯುತ್ತಿದೆಯೆಂದು ಕೇಳುತ್ತೇನೆ. ಪೊಲೀಸಿನವರೆಲ್ಲರೂ ಈಸು ಕಲಿತಿದ್ದರೆ ಇಂಥಾ ಸಂದರ್ಭಗಳಲ್ಲಿ ಪ್ರಯೋಜನವಾಗುತ್ತಲ್ಲವೇ?—ಲಗ್ನಕಾಲಗಳಲ್ಲಿ ೮.೯ ಸೇರು ಬಿಕ್ಕಿ ಮಾರುತಿತ್ತು. ಈಗ ೭—೮ ಸೇರಿಗೆ ಇಳಿದಿರುತ್ತೆ. ಇದೀಗ ವಿಶೇಷ.—ಕೂಲಿ ಕೆಲಸಮಾಡುವ ಜನರು ಬಹಳ ಮಂದಿ ಇಲ್ಲಿರುತ್ತಾರೆ ಅಲ್ಪಸ್ವಲ್ಪ ರಾಗಿಯು ಸಂತೆಗೆ ಬಂದರೆ ಬೇರೆ ಕಡೆಗೆ ಬತರ್ಮಾಡುವ ಚಿಲ್ಲರೆ ವರ್ತಕರು ಧಾರಣೆಯನ್ನು ಸಹಾ ಕೆಡಿಸಿ ಬಡವರಿಗೆ ರಾಗಿಯೂ ಸಿಕ್ಕದಂತೆ ಮಾಡುತ್ತಾರೆ. ಬಡವರಾಧಾರಿಗಳಾದ ನಮ್ಮ ಘನ ಅಮಲ್ದಾರರು ಈ ವಿಷಯವನ್ನು ಚಿತ್ತಕ್ಕೆ ತಂದುಕೊಂಡು, ಬಡವರ ಮನಸ್ಸಂತೋಷಪಡಿಸುವಂತೆ ನಿರೀಕ್ಷಿಸಲ್ಪಟ್ಟಿದೆ.—ಈ ಊರು ಟಾಪ್ ವಾಲಿಗಳು ಸಹಾ ತಸ್ತೀಮು ಬ್ಬಗೆ ಆಫೀಸರೆಂದು ತೋರುತ್ತದೆ. ವಿಶೇಷವರ್ಣನೆ ಯಾತಕ್ಕೆ? ತೊಗಲನ್ನು ಕದ್ದ ಒಬ್ಬನಿಗೆ ಒಂದು ತಿಂಗಳ ಸಜವೂ, ಸಹಾಯಕಿಯೊಬ್ಬಳಿಗೆ ೧೦ ರೂಪಾಯಿ ಜುಲ್ಮಾನೆಯೂ ಆಯಿತಂತೆ.

ಚಿಕ್ಕಬಳ್ಳಾಪುರ.—ಇಲ್ಲಿ ಮಾನ್ಯ ಗೃಹಸ್ಥರಾಗಿದ್ದ ಮೆಡಿಕಲ್ ಪ್ರಾಕ್ಟಿಷನರ್ ಆನೆಕಲ್ಲು ವೆಂಕಟಸ್ವಾಮಿ ನಾಯಡು ಎಂಬವರು ಇದೇ ಜುಲಾಯಿ ತಿಂಗಳ ೭ ನೇ ತಾ. ಶುಕ್ರವಾರ ರಾತ್ರಿ ೯ ಗಂಟೆಗೆ ತಮ್ಮ ಗೃಹದಲ್ಲಿ ಕಾಲವಾದರು ಎಂಬುದನ್ನು ತಿಳಿಸಲು ವಿಷಾದಿಸುತ್ತೇವೆ. ಇವರು ೪೩ ವರುಷ ಪ್ರಾಯದವರೂ ಹಲವಾರು ಗುಣಶೀಲ್ಯವನ್ನೂ ಹೊಸ್ತ್ರೀಯರೂ ದೈವಭಕ್ತಿ ನಿರತರೂ ಆಗಿದ್ದರು. ಇವರು ಯೌವನ ಕಾಲದಲ್ಲಿ ೧೦ ವರುಷ ಸರಕಾರಿ ಆಸ್ಪತ್ರೆಯಲ್ಲಿ ಕಾಂಪೌಂಡರಾಗಿದ್ದು ವೈದ್ಯ ವಿಧಾಯದಲ್ಲಿ ಚನ್ನಾಗಿ ಅನುಭವ ಮಾಡಿಕೊಂಡದ್ದಲ್ಲದೆ ಆ ಕಾಲದಲ್ಲಿ ಫಸ್ಟ್ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್ ಮ॥ ಮುನಿಸ್ವಾಮಿ ಮೊದಲಿಯಾರ್‌ರಿಂದ ವೈದ್ಯವನ್ನು ಕಲಿತು, ಅವರ ಸಹಾಯದಿಂದಲೇ ಸ್ವಂತ ವೈದ್ಯಶಾಲೆಯನ್ನು ಸ್ಥಾಪಿಸಿ ೨೫ ವರುಷಗಳಿಂದಲೂ ನಡೆಸುತ್ತಾ ಇಂಗ್ಲಿಷ್ ಮತ್ತು ದೇಶೀಯ ಔಷಧಗಳಿಂದ ಅನೇಕರಿಗೆ ಬಹಳ ಉಪಕಾರವನ್ನು ಮಾಡುತ್ತಾ ಬಂದರು. ದಿನ ೧ಕ್ಕೆ ಸರಾಸರಿ ೫೦—೬೦ ಜನರು ಇವರ ಬಳಿ ಔಷಧೋಪಚಾರ ಕೊಂಡುತ್ತಾ ಇದ್ದರು. ಬಡಬಗ್ಗರಿಂದ ಏನೂ ಪ್ರತಿಫಲ ನಿರೀಕ್ಷಿಸದೆ ಔಷಧಗಳನ್ನು ಕೊಟ್ಟು ಉಪಕಾರ ಮಾಡುತ್ತಾ ಇದ್ದರು. ಈ ಊರು ಜನರಿಗೆಲ್ಲಾ ಕೇವಲ ಬೇಕಾದವರಾಗಿದ್ದು ಸರಕಾರಿ ಆಫೀಸರುಗಳ ಕೂಡ ಸಹಾ ಅನ್ಯೋನ್ಯತೆಯನ್ನು ಸಂಪಾದಿಸಿಕೊಂಡಿದ್ದರು. ತಾವೇ ತಮ್ಮ ಸ್ವಂತವಾಗಿ ಔಷಧಗಳನ್ನು ತಯಾರುಮಾಡುವಷ್ಟು ಅನುಭವವನ್ನು ಪಡೆದಿದ್ದರಲ್ಲದೆ ಆ ಔಷಧಗಳನ್ನು ಪರಸ್ಥಳಗಳಿಗೆ ಕಳುಹಿಸಿ ಯೋಗ್ಯತಾ ಪತ್ರಿಕೆಗಳನ್ನು ಹೊಂದಿದ್ದರು ಇವರು ಯಾವದೊಂದು ಕಾರ್ಯಕ್ಕೂ ಕೋರ್ಟು ಕಚೇರಿ ಹತ್ತಿದವರಲ್ಲ ಇವರು ಪತ್ನಿಯನ್ನು ಕಳಕೊಂಡ ವ್ಯಸನದಿಂದಿದ್ದು ಆಗ್ಯಾಗ್ಯೆ ಪೀಡಿಸುತ್ತಿದ್ದ ಉಬ್ಬಸ ರೋಗವು ಹೆಚ್ಚಾಗಿ ಜಲೋದರವು ಪ್ರಾಪ್ತವಾಗಿ ಕಾಲವಾದರು ಇವರ ಹೆಸರನ್ನು ಹೇಳುವದಕ್ಕೆ ವೆಂಕಟರಾಯಪ್ಪ ನಾಯಡು ಎಂಬ ಒಬ್ಬ ಕುಮಾರನಿರುವನು. ಈತನು ಲಾಯರ್ ಪರೀಕ್ಷೆಗೆ ಓದುತ್ತಿರುವನು ಇನ್ನೂ ಕಾಲೂರುವದಕ್ಕೆ ಮೊದಲೇ ತಂದೆಯವರು ಮರಣಪಟ್ಟದ್ದರಿಂದ ಸರ್ವರು ಶೋಕಪಡುತ್ತಿದ್ದಾರೆ. ಮೊದಲಿನಿಂದಲೂ ಇವರ ಮೇಲೆ ವಿಶ್ವಾಸವಾಗಿದ್ದ ಮ॥ ಪ್ಲೀಡರ್ ನಾರಾಯಣಸ್ವಾಮಿ ಶೆಟ್ಟರವರೂ ಇನ್ನೂ ಇತರ ದೊಡ್ಡ ಮನುಷ್ಯರೂ ಇನ್ನು ಮೇಲೆಯೂ ಅನಾಥರಾಗಿ ಬಿಡಲ್ಪಟ್ಟ ವೆಂಕಟರಾಯಪ್ಪರವರಿಗೂ ಇವರ ಕುಟುಂಬಕ್ಕೂ ವಿಶ್ವಾಸಪೂರ್ವಕವಾಗಿ ಸಹಾಯ ಮಾಡ ಬರೆಂಬು ಕೇಳಿ ಸಂತೋಷಪಡುತ್ತೇವೆ.

ಚಿಕ್ಕಮಗಳೂರು.—ಕಳೆದ ಎರಡು ವಾರಗಳಿಂದಲೂ ಮಳೆಯು ಸುಮಾರಾಗಿ ಬಂದು, ರಾಗಿ ಪೈರಿಗೆ ತಕ್ಕಮಟ್ಟಿಗೂ ಹದವಾಗಿದೆ ಆದರೆ ಕೆರೆಗೆ ನೀರು ಬರುವಷ್ಟು ಮಳೆ ಆಗಿಲ್ಲ. ಕಾಫೀ ತೋಟಗಳ ಪ್ರಾಂತ್ಯ ಕಳೆದ ವಾರ ಒಳ್ಳೇ ಮಳೆಯಾಗಿದೆ ಎಂದು ಹೇಳುತ್ತಾರೆ.—ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ತರೀಕೆರೆ ಪ್ರಾಂತ್ಯ ಸರ್ಕೀಟು ಹೋಗಿದ್ದಾರೆ.—ತರೀಕೆರೆ ನಾಗಪ್ಪನೆಂಬ ಬ್ರಾಹ್ಮಣನು ಕೆಲವು ದಿನಗಳ ಹಿಂದೆ ಇಲ್ಲಿನ ಚರ್ಚ ನಾಲ, ಸಹಾಜೆ ಮುವರ ಅಂಗಡಿಗಳಲ್ಲಿ ವ್ಯಾಪಾರ ಮಾಡುವವನಂತೆ ಕೆಲವು ಜರಿಪೇಟಾಗಳನ್ನು ತೆಗೆಸಿ ಅವರಿಗೆ ತಿಳಿಯದಂತೆ ಪ್ರತಿ ಒಂದರಲ್ಲೂ ಹದಿನೈದು ರೂಪಾಯಿ ಬಾಳುವ ಮೂರು ಪೇಟಾಗಳನ್ನು ಅಪಹರಿಸಿ ಪರಾರಿಯಾಗಿದ್ದು, ಕಳೆದ ಜುಲೈ ೧೯ ರಲ್ಲಿ ತರೀಕೆರೆಯಲ್ಲಿ ಸದರಿ ಪೇಟಾಗಳನ್ನು ಬಿಕರಿ ಮಾಡುತ್ತಿರುವಾಗ ಪೊಲೀಸಿನವರು ಗುಮಾನಿ ಮೇಲೆ ಹಿಡಿದು, ಚಿಕ್ಕಮಗಳೂರಿಗೆ ತಂದು ತನಿಖೆ ಮಾಡಿದ್ದರಲ್ಲಿ ಕಳವು ಸದರಿ ನಾಗಪ್ಪನ ಮೇಲೆ ರುಜುವಾತಾದ್ದರಿಂದ ಇಲ್ಲಿನ ಟ್ರೆಜರಿ ಅಸಿಸ್ಟೆಂಟ್ ಕಮಿಷನರ ಕೋರ್ಟಿನಲ್ಲಿ ಕೇಸು ತಯಾರಾಗುತ್ತಲಿದೆ.—ಕಳೆದ ಜುಲೈ ೧೫ರಲ್ಲಿ ಕಡೂರಿಗೂ ಬೀರೂರಿಗೂ ಮಧ್ಯದಲ್ಲಿ ತರೀಕೆರೆಗೆ ಹೋಗುತ್ತಿದ್ದ ಗಾಡಿಗಳ ಮೇಲೆ ಕಳ್ಳರು ಬಿದ್ದು ಬಂಡಿಯಲ್ಲಿದ್ದವರನ್ನು ಹೊಡೆದು, ಅವರಲ್ಲಿದ್ದ ಹಣಕಾಸು ಚಿನ್ನ ಬೆಳ್ಳಿಯನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಆ ಕಾಲದಲ್ಲಿ ಡೆಪ್ಯುಟಿ ಕಮಿಷನರು ಬೀರೂರಿನಲ್ಲಿದ್ದಂತೆಯೂ ಪೊಲೀಸು ಸುಪ್ರೆಂಟು ಕಡೂರಿನಲ್ಲಿದ್ದಂತೆಯೂ ಹೇಳುತ್ತಾರೆ. ಈ ವರ್ತಮಾನಗಳನ್ನು ತಿಳಿದು ಪೊಲೀಸ್ ಸೂಪರಿಂಟೆಂಡರು ಹೊರಟು, ಬೀರೂರು ಸಮೀಪದಲ್ಲಿದ್ದ ಕೊರಚರ ಗ್ಯಾಂಗನ್ನು ತನಿಖೆ ಮಾಡಿದಾಗ ಎಂಟು ಜನ ಕಳ್ಳರು ಮಾಲು ಸಹಿತ ಸಿಕ್ಕಿದರೆಂತಲೂ ಅವರನ್ನು ಜನರಲ್ ಅಸಿಸ್ಟೆಂಟ್ ಕಮಿಷನರು ವಿಚಾರಣೆ ಮಾಡಿ, ಸೆಷನ್ಸ್ ಕೋರ್ಟಿಗೆ ಕಮಿಟ್ ಮಾಡಿದಾರೆಂತಲೂ ವರ್ತಮಾನವಿದೆ.—ಇಲ್ಲಿನ ಗವರ್ನಮೆಂಟ್ ಕನ್ನಡಾ ಸ್ಕೂಲಿನಲ್ಲಿ ಸುಮಾರು ೫ ವರ್ಷಗಳಿಂದಲೂ ಹೆಡ್ ಮಾಸ್ಟರಾಗಿದ್ದ ಮ॥ ವೆಂಕಣ್ಣಯ್ಯನವರು ಕೋಲಾರಕ್ಕೆ ವರ್ಗವಾದ್ದರಿಂದ ಸ್ಕೂಲಿನ ವಿದ್ಯಾರ್ಥಿಗಳೂ ಅಸಿಸ್ಟೆಂಟ್ ಮಾಸ್ಟರುಗಳೂ ಸೇರಿ ಅವರಿಗಾಗಿ ಒಂದು ಟೀಪಾರ್ಟಿಯನ್ನು ಏರ್ಪಡಿಸಿ ಎಲ್ಲರಿಗೂ ತಿಂಡಿಯಾದ ನಂತರ ಅದೇ ಸ್ಕೂಲಿನ ಹಾಲಿನಲ್ಲಿ ಸೇರಿ ಅವರಿಗೆ ಒಬ್ಬ ಚಿಕ್ಕ ಹುಡುಗನ ಕೈಯಲ್ಲಿ ಒಂದು ಅಡ್ರಸ್ಸನ್ನು ಓದಿ ಒಪ್ಪಿಸಿದ್ದಲ್ಲದೆ, ಇನ್ನೂ ಅವರು ಈ ಸ್ಕೂಲನ್ನು ಅಭಿವೃದ್ಧಿ ಮಾಡಿದ ವಿಷಯ ಮಾತನಾಡಿ, ಕಡೆಯಲ್ಲಿ ಅಲ್ಲಿ ಸೇರಿದ್ದವರಿಗೆಲ್ಲಾ ಪುಷ್ಪ ಗಂಧ ತಾಂಬೂಲಾದಿಗಳನ್ನು ಕೊಟ್ಟು ಸಂತೋಷದೊಡನೆ ಹೆಡ್ ಮಾಸ್ಟರನ್ನು ಕಳುಹಿಸಿಕೊಟ್ಟರು.

ಕಡೂರು.—ಕಳೆದ ತಿಂಗಳು ೩೦ನೆ ಭಾನುವಾರ ಮಧ್ಯಾಹ್ನದ ಇದೇ ಕಡೂರು ಆಂಗ್ಲೋ ವರ್ನಾಕ್ಯುಲರ್ ಸ್ಕೂಲಿನಲ್ಲಿ ಬಾಲಕ ಬಾಲಕಿಯರ ಬಹುಮಾನ ಸಭೆಯು ಕೂಡಿತು ಸ್ಕೂಲ್ ಕಟ್ಟಡವು ಬಾಳೆಕಂಬ ಮಾವಿನ ತೋರಣ ವಿಧವಿಧವಾದ ಪುಷ್ಪಗಳಿಂದ ಅಲಂಕರಿಸಿ ನೋಡುವವರಿಗೆ ಕೇವಲ ಆನಂದವನ್ನುಂಟು ಮಾಡುತ್ತಿತ್ತು. ಈ ಸಭೆಗೆ ಜನರಲ್ ಅ॥ ಕಮಿಷನರ್ ಮ॥ ಚೊಕ್ಕಣ್ಣನವರು, ಅಮಲ್‌ದಾರ್ ಮ॥ ರಾಮರಾಯರು, ಸಬ್ ಡಿವಿಜನ್ ಆಫೀಸರ್ ಮ॥ ನರಸಿಂಹ್ಯಂಗಾರ್ರವರು, ಸಬ್ ರಿಜಿಸ್ಟ್ರಾರ್ ಮ॥ ಖಾಸಿಂ ಮಿಯವರು ಮುಂತಾದ ಅಧಿಕಾರಿಗಳಿಂದಲೂ, ಮ॥ ಗಳಾದ ಟಿ ನರಸಿಂಹ್ಯಂಗಾರ್ರು, ಮಲ್ಲಯ್ಯಶೆಟ್ಟರು, ಹೊನ್ನಪ್ಪಶೆಟ್ಟರು, ರಾಮಯ್ಯಶೆಟ್ಟರು, ನಾಷ್ಟಯ್ಯಶೆಟ್ಟರು ಮುಂತಾದ ಮೆಂಬರು ಮತ್ತು ವರ್ತಕ ಸಮುದಾಯದಿಂದಲೂ, ಅಲಂಕೃತರಾದ ಬಾಲಿಕಾ ಬಾಲಕರ ಸಮುದಾಯದಿಂದಲೂ ಇತರೇ ಗ್ರಾಮಸ್ಥರಿಂದ[...] ಕಟ್ಟಡವು ನಿಬಿಡೀಕೃತವಾಗಿತ್ತು. ಸ್ಕೂಲ್ ಹೆಡ್ ಮಾಸ್ಟರ್ ಚಿದಂಬರೈಯನವರು ಕೇಳಿಕೊಂಡ ಮೇರೆ ಮ॥ ಚೊಕ್ಕಣ್ಣ[...] ಅಗ್ರಾಸನವನ್ನು ವಹಿಸಿದರು ತರುವಾಯ ಹೆಡ್ ಮಾಸ್ಟ[...] ಸ್ಕೂಲ್ ರಿಪೋರ್ಟು ಓದಿದರು. ಇದರಿಂದಲೂ ನನಗ[...] ದಲೂ ಈ ಸ್ಕೂಲು ಉನ್ನತ ಸ್ಥಿತಿಯಲ್ಲಿ ಇದೆ ಎಂದು ಹೇಳ[...] ಇದಕ್ಕೆ ಸ್ಕೂಲ್ ಮಾಸ್ಟರುಗಳ ಐಕಮತ್ಯವೇ ಕಾರಣ[...] ನಂತರ ಕಾಲು ಗಂಟೆ ಬಾಲಕಿಯರ ಹಾಡುಗಳೂ, ಅರ್ಧ[...] ಬಾಲಕರ ಅತಿ ಚಮತ್ಕಾರವಾದ ಪ್ರಸಂಗ, ಅರ್ಧ ಗಂಟೆ[...] ಸ್ಕೂಲ್ ಹೆಡ್ ಮಾಸ್ಟರ್ ಮ॥ ವೆಂಕಟೇಶ್ಯಯನವರ ಸಂಗೀ[...] ಡಿಸಲ್ಪಟ್ಟಿತು. ಬಾಲಕ ಬಾಲಕಿಯರಿಗೋಸ್ಕರ ತರಿಸಲ್ಪಟ್ಟ[...] ಗಳೂ ಜರ್ಮನ್ ಸಿಲ್ವರ್ ಪಾತ್ರೆಗಳೂ ಮ॥ ಚೊಕ್ಕಣ್ಣನವರ[...] ಸ್ತದಿಂದ ವಿನಿಯೋಗಿಸಿ ಬುದ್ಧಿವಾದಗಳನ್ನು ಹೇಳಿದರು.[...] ವಾಯ ಮ॥ ಚೊಕ್ಕಣ್ಣನವರು ಈ ಸ್ಕೂಲಿನ ನಡವಳಿಕೆ[...] ವಾಗಿಯೂ ಮುಂದೆ ನಡೆಯಬೇಕಾದ ವಿಚಾರಗಳಿಗೂ ಇ[...] ನಲ್ಲಿ ಸುಮಾರು ಅರ್ಧ ಗಂಟೆ ವರಿಗೆ ಉಪನ್ಯಾಸಮಾಡಿದರು[...] ಯವರಿಗೆ ಗಂಧ ತಾಂಬೂಲ ಪುಷ್ಪಾದಿಗಳನ್ನು ಹಂಚಿ ಸಭೆ ಬರಖಾಸ್ತಾಯಿತು.—ಈ ಊರಿನಲ್ಲಿ ೪—೬ ವರುಷ ಮಳೆ[...] ದಾಗ್ಯೂ ಕುಡಿಯುವ ನೀರಿಗೆ ಲಕ್ಷ್ಯ ತೊಂದರೆ ಇರುತ್ತಿ[...] ಈ ವರುಷ ನಮ್ಮಗಳ ದೌರ್ಭಾಗ್ಯದಿಂದ ಅಧಿಕಾರಿಗಳು[...] ನರ ಮಾತಿಗೆ ಬೇಗನೆ ಕೆರೆ ಬಂದುಮಾಡಿಸಿಬಿಟ್ಟರು ಈ[...] ರ ದಯದಿಂದ ಕೆರೆಯಲ್ಲಿ ನೀರು ಬಂದರೂ ಅಳುವವರ[...] ಒರಸಿದಂತೆ ಇವತ್ತು ಬರುತ್ತೆ ನಾಳೆ ಬರುತ್ತೆ ಎಂದು ಆಸೆ[...] ಸುತ್ತಿದಾರೆ. ನ್ಯಾಯದ ನೀರಿನ ವಿಚಾರಣೆಯು ಮೇಲ್ಪಟ್ಟ[...] ದಾರರು ಕ್ರಮವಾಗಿ ನೋಡಿಕೊಳ್ಳದಿರುವನೇ ಇಷ್ಟಕ್ಕೆ[...] ವೆಂಬಾ ತೋರುತ್ತೆ ಈಗಲೂ ನಮ್ಮ ಅಮಲ್ದಾರರವರು[...] ಏರ್ಪಾಡು ಇರಿಸಿ ನೀರು ಬಿಡಿಸಿಕೊಡುವರೆಂಗಿ ನಂಬಿದ್ದೇನೆ[...]

ಚಿತ್ರದುರ್ಗ.—ಮಳೆ ಇಲ್ಲದ್ದರಿಂದ ಕೆರೆಗೆ ನೀರು[...] ಇರುವ ನೀರನ್ನೆಲ್ಲಾ ಒಕ್ಕಿಗೆ ಬಿಟ್ಟುಕೊಂಡಿರುವರು ಇ[...] ಸರಿಯಾಗಿ ಉಪಯೋಗಿಸಿಕೊಂಡರೆ ೧ ವರ್ಷಕಾಲ ಸಿರು[...] ಬಾಳೆತೋಟ, ದಪ್ಪ ಹತ್ತಿ ಲಾಟಗಳು ಇವುಗಳಿಗೂ ಉ[...] ಗಿಸುತ್ತಾ ಇರುವರು. ಒಳ್ಳೇ ರೀತಿಯಲ್ಲಿ ಕಾಪಾಡಿಕೊ[...] ವರ್ಷದ ಕಳಗೆ ಬಂದಿದ್ದ ನೀರನ್ನು ಪಾಳು ಬಿಟ್ಟುಕೊಳ್ಳದೆ[...] ಹುದು. ಇಂದು ಮಳೆಗಾಲದಲ್ಲಿಯೂ ಸಂದರ್ಭದಲ್ಲಿ ನೀ[...] ಆಗದು ೩ ಮೈಲು ಆಚೆ ಇರುವ ಗೋನೂರು ಕೆರೆಗೆ[...] ತ್ತಾರೆ.—ಸಂತೆ ಪೈಲಿನಲ್ಲಿ ೧—೨ ಮಳಿಗೆ ಸಾಲಾಗರೂ[...] ಬಹಳ ಒಳ್ಳೆಯದು ಮಳಿಗೆಗಳಲ್ಲಿ ಅನೇಕವಾದ ವರ್ತಕ[...] ರಾಲು ರೂಪಾಯಿನ ಧಾನ್ಯಾದಿಗಳನ್ನು ಬೈಲಲ್ಲಿ ಹಾಕಿಕೊ[...] ರು. ಅಕಸ್ಮಾತ್ತಾಗಿ ಮಳೆಬಂದರೆ ಇವರ ಕಷ್ಟಗಳನ್ನು ಹೇ[...] ಲು ಸಾಧ್ಯವಿಲ್ಲ. ಪ್ರತಿಸಂತೆಗೂ ಇದು ಅನುಭವದಲ್ಲೇ ಇರು[...] ಯಾವದಾದರೂ ಉಪಾಯದಿಂದ ಈ ತೊಂದರೆಯು ತಪ್ಪಿ[...] ಪರಿಹಾರವಾದರೆ ಒಳ್ಳೆಯದು.—ಈಗ ಇರುವದರ ಜೊತೆಗೆ[...] ೨—೩ ಕನ್ಸರ್‌ವೆನ್ಸಿ ರೋಡುಗಳು ಆಗುತ್ತವೆಂತ ಕಾ[...] ಕೆಲವು ಮನೆಗಳ ಜಾಗಗಳು ಹೋಗುತ್ತವೆ. ಆದರೆ[...] ಸರ್ವರಿಗೂ ಅನುಕೂಲ್ಯ ಸರಿ. ಶುಚಿಯಾಗಿದ್ದರೆ ಒಳ್ಳೇ[...] ಈಗ ೪ ಸಲ ರೇಲ್ವೆ ಗಾಡಿಗಳು ಓಡಾಡುತ್ತವೆ ಇದಕ್ಕಾಗಿ[...] ಗಾಡಿಯವರು ಪ್ರತ್ಯೇಕವಾದ ಕುದುರೆಗಳನ್ನು ಬಹಳ[...] ಪಡಿಸುವರು. ೭—೮ ದಿನಗಳ ಕೆಳಗೆ ಒಂದು ಗಾಡಿಯಲ್ಲಿ[...] ಕೂತಿದ್ದರು. ೬ನೇ ಸಲ ಹೋಗಲಾರದೆ ಸೋತಿದ್ದ[...] ಹೊಡೆತ್ತು ಅದು ಏಟನ್ನು ತಡೆಯಲಾರದೆ ರಸ್ತೆ ಪಕ್ಕದ[...] ಕೆಡವಿ, ಒಬ್ಬನಿಗೆ ಮೊಣಕಾಲು ಮುರಿದು, ಇನ್ನೊಬ್ಬನಿಗೆ[...] ಘಾಯವಾಯಿತು ತಾ. ೪ರಲ್ಲಿಯೂ ಹೊಡ ಊರಿಗೆ ನಾಲ್ಕು[...] ದೂರದಲ್ಲಿ ಗಾಡಿ ಬಿದ್ದು, ೩ ಜನಗಳಿಗೆ ಸ್ವಲ್ಪ ಸ್ವಲ್ಪ ಘಾ[...] ಗಿವೆ ಇನ್ನು ಮುಂದೆ ಈ ಗಾಡಿಯವರ ವಿಚಾರದಲ್ಲಿ [...] ವರು ತಕ್ಕ ಬುದ್ಧಿವಾದವನ್ನು ಕೊಡುವರೆಂತ ನಂಬಿದ್ದೇನೆ.—[...] ಮೂರ್ತಿ ಭುಜಂಗಾಚಾರ್ಯರವರ ಪುರಾಣ ಮುಗಿದು, ೨[...] ವರಿವಿಗೂ ಲಾಭವಾಯಿತು. ಇನ್ನು ಎಲ್ಲಾ ಜನಗಳನ್ನೂ[...] ಆಗಾಗ್ಯೆ ಬ್ರಹ್ಮತ ಮತ ವಿಚಾರವಾಗಿ ಉಪನ್ಯಾಸಗಳನ್ನು[...] ತ್ತಲೇ ಇದ್ದಾರೆ.—ಕೆಲವು ಹಳ್ಳಿಯವರಾದ ಇಬ್ಬರು ದೊ[...] ಇಬ್ಬರು ಹುಡುಗರೂ ಸಾಯಂಕಾಲ ಪೂರ್ವಾದಿ ಅಂಗ[...] ವ್ಯಾಪಾರಮಾಡುತ್ತಾ ಜವಳಿ ಕದ್ದರೆಂತ ವಿಚಾರಣೆಯಾಗಿ[...] ರಿಗೆ ಸೆರೆಮನೆಯಾಯಿತು. ೨ ಹುಡುಗರಿಗೆ ಛಡಿ ಹೊಡತಗಳ[...] ರಾಜಾರಾಮ ಎಂಬುವನು ೧ ಸೀರೆಯನ್ನು ಒಬ್ಬರಿಗೆ ತಲ[...] ನೆಂದು ಒಪ್ಪಿಕೊಂಡು, ಕೊಡದೆ ದುರುಪಯೋಗದಿಂದ[...] ದ್ರೋಹಮಾಡಿದನೆಂದು ಅವನನ್ನು ವಿಚಾರಣೆಗಾಗಿ ಲಾ[...] ಟ್ಟಿದಾರೆ.—ಲೋಕಲ್ಲಿ ಸ್ವಾಮಿಗಳವರ ವಿಚಾರದಲ್ಲಿ ಅವನ[...] ವಾಗಿ ಮಾತನಾಡಿದ ದಾವಣಗೆರೆಯ ಒಬ್ಬ ವರ್ತಕನ ಮೊ[...] ಯು ಈ ದಿವಸ ವಿಚಾರಣೆಯಾಗುವದರಲ್ಲಿದೆ.

ಸೊಂಡೆಕ್ಕೊಪ್ಪ.—ಈ ಪ್ರಾಂತ್ಯ ಮಳೆ ಸುತರಾಂ ಇಲ್ಲ. ಪೈರೆಲ್ಲಾ ಒಣಗಿಹೋಯಿತು. ರಾಗಿ ಬಿತ್ತಿದಾರೆ. ಆದರೆ[...] ಇಲ್ಲ. ಜನರು ಆಕಾಶವನ್ನೇ ನೋಡುತ್ತಾ ಇದಾರೆ[...] ತ್ತದೆಂದು ತಲ್ಲಣಿಸುತ್ತಾರೆ. ಅಕ್ಕಿ ರಾಗಿ ಮಿಕ್ಕಾದ ದಿನಸಿ[...] ಭಯವಾಗುತ್ತಿದೆ ಸಂತೆಗೆ ವಿಪರೀತ ರಾಗಿ ಗಾಡಿಗಳು[...] ಆದರೆ ರೂಪಾಯಿಗೆ ೧೬ ಸೇರು ಮಾರುತ್ತಾರೆ. ಮನೆಗೆ[...] ಅಳತೆ ಮಾಡಿದರೆ ೧೪—೧೫ ಸೇರು ಆಗುತ್ತೆ ಆಗ್ಗದ[...] ತೆಗೆದುಕೊಂಡು ಬಂದರೂ ಅಳತೆ ಸರಿಯಾಗಿಲ್ಲ. ಕೆಲ[...] ರಾಗಿ, ಮುಗ್ಗಿದ ರಾಗಿ ಸಂತೆಯಲ್ಲಿ ಮಾರುತ್ತಾರೆ. ಒಳ್ಳೆ[...]

ರಿಗೆ ಅಂಥ ಉಂಟುಮಾಡುತ್ತ ಇದೆ. ಪೊಲೀಸಿನವರು ಬದ ...ಕೆಟ್ಟರೆ ಉತ್ತಮ — ಹಿಂದಿನ ವಾರ ಈ ಊರಿನ ಅವ... ಡಿಸ್ಟ್ರಿಕ್ಟ್ ಕಚೇರಿಯಲ್ಲಿ ಇಲ್ಲಿನ ಉದ್ಯೋಗಸ್ಥರನ್ನೂ ...ರನ್ನೂ ಸೇರಿಸಿ, ಶತಾವಧಾನಿಗಳ ವಿದ್ಯವನ್ನೂ ಚಮತ್ಕಾರ ...ತೋರ್ಪಡಿಸಿದರು ಇವರ ವಿದ್ಯ ಬಹು ವಿಶೇಷವಾದದ್ದು ...ಬಹರು ಅವರಿಗೆ ಒಂದು ಪಾಕಿನ ಅಭಿಪ್ರಾಯವನ್ನು ...ಭಾಷೆಗಳಲ್ಲಿ ಏಕಕಾಲದಲ್ಲಿ ಹೇಳಿದರೂ ಇಂಥಾ ಮಾತನ್ನೇ ...ಹೇಳಿದಿರೆಂದು ಅವರವರಿಗೆ ಹೇಳಿ ಸಮಾಧಾನ ಮಾಡುವರು. ...ಒಂದು ಲೆಕ್ಕವನ್ನು ಕೂಡಿಸಲು ಒಂದು ಅಂಕೆಯನ್ನು ...ರೆಂದು ಭಾವಿಸೋಣ ಅದರಂತೆ ಮಿಕ್ಕಾದವರು ತಮ್ಮ ...ಗಳ ಒಂದು ಭಾಗವನ್ನು ಕೇಳುತ್ತಾರೆ ಈ ಪ್ರಕಾರ ಎಲ್ಲಾ ...ಗಳನ್ನು ತಮ್ಮ ತಮ್ಮ ಸರದಿ ಬಂದಾಗ್ಗೆ ಕೇಳುವರು ...ಕೇಳುವರು ಎಲ್ಲಾ ಅಂಕೆಗಳನ್ನು ಒಂದೇ ಸಲ ಹೇಳದೆ ...ರವಾಯು ಒಬ್ಬರು ಹೇಳುತ್ತಾರೆ. ಕಡೆಯಲ್ಲಿ ಈ ಲೆಕ್ಕದ ...ಇಷ್ಟಾಯಿತೆಂದು ಹೇಳುವರು ಅದನ್ನು ಬರೆದು ಲೆಕ್ಕಮಾ ...ಹಾರ್ದ ಹೇಳಬಹುದು ಅದೇ ಪ್ರಕಾರ ಮಿಕ್ಕಾದವರ ...ಗಳು ಸಹ ಇಂಥಾದ್ದೇ ಎಂದು ಹೇಳುವರು. ಈ ರೀತಿ ನಮ್ಮ ...ಮಾಡಿದರು ಇವರಿಗೆ ನೂರಾರು ರೂಪಾಯಿಗಳನ್ನು ಸಭಿ ...ಬಹುಮಾನ ಮಾಡಿದರು ಈ ಮಾನ್ಯರು ಕಲ್ಕತ್ತಾದಲ್ಲಿ ...ಗಿನ ವೈಸ್‌ರಾಯಿಯವರಲ್ಲಿಯೂ ಹಿಂದಿನ ವೈಸ್‌ರಾಯಿ ...ಲ್ಲಿಯೂ ತಮ್ಮ ವಿದ್ಯಾಶಕ್ತಿಯನ್ನು ಪ್ರಚುರಪಡಿಸಿ ಸರ್ಟಿ ...ಫಿಕೇಟ್‌ಗಳನ್ನು ಸಂಪಾದಿಸಿಕೊಂಡಿದ್ದಾರೆ ಇವರ ಬುದ್ಧಿಯನ್ನೂ ...ಶಕ್ತಿಯನ್ನೂ ನೋಡಿ ಯಾರು ತಾನೇ ಆಶ್ಚರ್ಯಪಡಲಾರರು ?— ...ತಿಂಗಳಾಯಿ ವೀಳ್ಯದೆಲೆ, ಹೊಗೆಸೊಪ್ಪು, ಬದನೆ ಮುಂ ...ಪದಾರ್ಥಗಳಿಗೆ ಗೋಣಿಗೆ ಗುಂಡ ಹಾಕಿ ವಸೂಲ್ಮಾಡುತ್ತಾ ...ವೀಳ್ಯದೆಲೆ ಒಂದು ಕಟ್ಟಿಗೆ ಒಂದು ದುಡ್ಡಿನಂತೆ ವಸೂಲ ...ತ್ತಾರೆ ಇದರಿಂದ ವರ್ತಕರಿಗೂ ಕೊಳ್ಳುವವರಿಗೂ ತುಂ ...ಬಾ ತೊಂದರೆಯಾಗಿದೆ ಊರಿನ ಸುತ್ತು ಮುತ್ತು ಜನರು ವೀಳ್ಯದೆ ...ಮುಂತಾದವುಗಳನ್ನು ಮಾರಿಕೊಂಡರೆ ಸುಂಕವಿಲ್ಲ ಊರಿಗೆ ...ರೆ ಸುಂಕವಿದೆ ಆದಕಾರಣ ಕೊಂಗೆ ಕೊಳ್ಳುವವರಿಗೂ ಮಾ ...ರುವರಿಗೂ ಅನುಕೂಲವಾಯಿತು ಊರಲ್ಲಿ ಉಭಯತ್ರರಿಗೂ ...ತೊಂದರೆಯಾಯಿತು ಇದರಿಂದ ಸರ್ಕಾರಕ್ಕೆ ಲಾಭವೋ ? ಪಟ್ಟಣ ...ದವರಿಗೆ ಲಾಭವೋ ? ಇದನ್ನು ವಾಚಕರೇ ತಿಳಿಸಿಕೊಳ್ಳ ...ಮ್ಯಾರ್ಕೆಟಿನ ಆಚೆ ೩ ಮೈಲಿಯಲ್ಲಿರುವ ಮಾದನಾಯಕನ ...ಹಳ್ಳಿ ಜೂಲೈ ೩೧ ರಲ್ಲಿ ಮಲ್ಲಿ ಎಂಬ ಹೆಂಗಸು ತನ್ನ ಗಂಡ ...ನೆಂಬವನನ್ನು ಕೊಲ್ಲಿಸುವ ಪ್ರಯತ್ನ ಮಾಡಿದಳು ಸೋಮ ...ವಾರ ೮—೯ ಗಂಟೆ ಸಮಯದಲ್ಲಿ ಗಂಡನಿಗೆ ಕಾಗೆ ...ಗೂಡಿಯನ್ನು ತರೋಣ ಬಾ ಎಂದು ಪ್ರೇರಣೆ ಮಾಡಿ ಕರೆ ...ದುಕೊಂಡು ಹೋದಳು ಅದಕ್ಕೆ ಮುಂಚೆಯೇ ತಾನು ಇಟ್ಟು ...ಕೊಂಡಿದ್ದ ಒಬ್ಬ ಮನುಷ್ಯನಿಗೆ ಎಲ್ಲಾ ಸಂಗತಿಗಳನ್ನೂ ಹೇಳಿ ...ಹೊತ್ತಿಗೆ ಕಾಗೆಯಿರುವದ್ದು ಜಂಗಲಿಗೆ ಹೋಗುತ್ತೇವೆ ಆ ...ಸರಿಯಾಗಿ ನಿನ್ನ ಜೊತೆಯಲ್ಲಿ ಯಾರನ್ನಾದರೂ ಕರೆ ...ದುಕೊಂಡು ಬಾ ಎಂದು ಕಲಿಸಿ ಕೊಟ್ಟಿದ್ದಳು ಅದರಂತೆ ಇವ ...ಳು ಆ ಗಂಡನ್ನ ಕರೆದುಕೊಂಡು ಹೋಗಿ ಹದನಿಯನ್ನು ತೋರಿಸುತ್ತಾ ...ಹಗಲು ಸುಮಾರು ೧೧ ಗಂಟೆ ಹೊತ್ತಿನಲ್ಲಿ ಆ ಗಿಡ್ಡ ...ಗೆಯ್ಯ, ಲಿಂಗ ಎಂಬವರು ಬಂದು ಉಗನಿ ಹಂಚಿನಲ್ಲಿ ...ಕೈ ಕಾಲುಗಳನ್ನು ಕಟ್ಟಿ ಹಳ್ಳಕ್ಕೆ ಕೆಡವಿಕೊಂಡು, ...ಕಲ್ಲುಗಳಿಂದ ಅವನನ್ನು ಹೊಡೆದು ಹಿಂಸೆಪಡಿಸಿ ಕೊಂದು ...ರು. ಇಂಥಾ ಕ್ರೂರ ಕೃತ್ಯಕ್ಕೆ ಹೆಂಡತಿಯು ಭಾಗಸ್ಥಳಾಗಿದ್ದ ...ಳು ತಮ್ಮ ಇಷ್ಟವನ್ನು ತೀರಿಸಿಕೊಂಡು ಊರಿಗೆ ಬಂದು ...ರು. ನೆರೆಹೊರೆಯವರು ಮಲ್ಲಿ ಎಂಬವಳನ್ನು ನಿನ್ನ ಗಂಡನೆ ...ಲ್ಲಿ ಕೇಳಲು, ಅಲ್ಲಿ ಹೋಗಿರುತ್ತಾನೆ ಇಲ್ಲಿ ಹೋಗಿರು ...ತ್ತಾನೆ ಸುಳ್ಳು ಸುಳ್ಳಾಗಿ ಹೇಳಿದಳು ೧ನೇ ತಾರೀಖಿನಲ್ಲಿ ರಣ ...ಹದ್ದುಗಳೂ ಕಾಗೆಗಳೂ ಆ ಹೆಣಕ್ಕೆ ಮುತ್ತಿಕೊಂಡು, ಮಾಂಸವ ...ನ್ನು ಭಕ್ಷಿಸಿ, ಬರೀ ಅಸ್ಥಿಗಳನ್ನು ಬಿಟ್ಟದ್ದನ್ನ ಸುತ್ತು ಮುತ್ತಲಿ ...ನವರು ಹೋಗಿ ನೋಡಲು, ಅವನೇ ಬೋರನೆಂದು ಗೊತ್ತಾಗಿ ...ಹೆಂಡತಿಯನ್ನು ವಿಚಾರಿಸಲು ತಾನು ಏನೂ ಕಾಣೆನೆಂದು ...ಹೇಳಿದಳು ಆದರೆ ಪೊಲೀಸಿನವರು ವಿಚಾರಿಸುವಾಗ್ಯ ಈ ಕೃತ್ಯ ...ವನ್ನು ಇಂಥಿಂಥವರಿಂದ ಮಾಡಿಸಿದ್ದು ಯಥಾರ್ಥವೆಂದು ಒಪ್ಪಿ ಅವರ ...ನ್ನು ತೋರಿಸಿದಳು. ಪೊಲೀಸಿನವರೂ ಅಮಲ್ದಾರರೂ ಈ ...ವನ್ನು ವಿಚಾರಿಸಿ, ಇಬ್ಬರನ್ನೂ ಲಾಕಪ್ಪಿನಲ್ಲಿಟ್ಟಿರುತ್ತಾರೆ ...ಸಭ್ಯರೆಂದು ಕಾಣುತ್ತಾರೆ ಆದರೆ ಘೋರಕೃತ್ಯ ನಡೆ ...ಸಲು ಕಾರಣರೇ ಆಗಿದ್ದಾರೆ ಇನ್ನು ಮುಂದೆ ಇದರ ಫಲಿತಾಂಶ ...ವೇನಾಗುವದೋ ನೋಡಬೇಕು.—ಶಿರುಕನ್ಯಗಳು ನಡೆಯುತ್ತಾ ...ಇಂದು ಜನರು ಮಾತನಾಡುತ್ತಾರೆ ಗಂಡಂದಿರನ್ನು ಕೊ ...ವಿಧವೆಯರು ಜಾರತ್ವದ ದೋಷದಿಂದ ಗರ್ಭಿಣಿಯರಾಗಿ ...ನ್ನು ತಿಂದು, ಶಿಶುಗಳನ್ನು ಕೊಲ್ಲುವದು ರೂಢಿಯಾ ...ಇವರನ್ನು ನಿಗಾ ಇಟ್ಟು ಪೊಲೀಸಿನವರು ಕಠಿಣ ಶಿಕ್ಷೆ ...ಯನ್ನು ವಿಧಿಸಿದರೆ ಇದು ತಪ್ಪಿಹೋಗುವದು ಹಿಂದೆ ಹೆಮ್ಮಿಗ ...ಲ್ಲಿ ಒಬ್ಬ ಹೆಂಗಸು ಇಂಥಾ ಕೃತ್ಯ ಮಾಡಿದ್ದಕ್ಕಾಗಿ ಈಗ ...ಜೈಲಿನಲ್ಲಿ ತಕ್ಕ ಶಿಕ್ಷೆಯನ್ನು ಅನುಭವಿಸುತ್ತಾ ಇದ್ದಾಳೆ ...ಕೆಲವರಿಗೆ ಶಿಕ್ಷೆಯಾದರೆ ಉತ್ತಮ — ಆಟಿಗೆ ಮ.॥ ಕೆ. ...ಮುಜ್ಜಾರು ಸ್ಟೇಷನ್ನಲ್ಲಿ ಹೊಸೇಲನ್ನು ಇಟ್ಟು ...ಪ್ರಯಾಣಿಕರಿಗೆ ತಕ್ಕ ನೀರು, ಫಲಹಾರ ಮುಂತಾದ್ದ ...ನ್ನು ಒದಗಿಸುತ್ತಾರೆ. ಹಿಂದೂ ಪ್ರಯಾಣಿಕರಿಗೆ ತುಂಬಾ ಅನು ...ಕೂಲವಾಯಿತು. ರೈಲ್ವೆ ಅಧಿಕಾರಿಗಳು ಕೆಲವು ಸ್ಟೇಷನುಗಳಲ್ಲಿ ...ಕೆಲವು ಟಿಕೇಟನ್ನು ಕೊಡುವಂತೆ ಒಪ್ಪಿದಾರೆ. ಆದರೆ ಫಲಹಾ ...ರಕ್ಕೆ ಟಿಕೆಟ್ಟನ್ನು ಕೊಡಬೇಕೆಂದು ನಿರ್ಬಂಧ ಮಾಡಿದರೆ ಮೆ॥ ಕೆ. ವ್ಯಾಸ ರಾಯರ ಪ್ರಯಾಸವು ಸಾರ್ಥಕವಾಗುತ್ತೆ. ರೈಲ್ ಅಧಿಕಾರಿಗಳು ಇದನ್ನು ಯೋಚಿಸಬೇಕಾಗಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ತಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ವಿದ್ಯಾಪಕ್ಷಪಾತಿ—ತಿಪ್ಟೂರು ; ಬೆಂಗಳೂರು ನಿವಾಸಿಯು ನಾಟಕ ವಿಚಾರ — ಈ ಬಾತ್ಮಿಗಳನ್ನು ಪ್ರಕಟಿಸಲಾರೆವು.

ವರ್ತಕ—ಚನ್ನಪಟ್ಟಣ —ಹೆಸರುಗಳನ್ನು ಪ್ರಕಟಿಸೋಣದರಿಂದ ಯಾವ ಪ್ರಯೋಜನವೂ ಆಗುವುದೆಂದು ಕಾಣುವುದಿಲ್ಲ.

—ಎಡಿ.]

ಕರೆಸ್ಪಾಂಡೆನ್ಸ್.

ಪ್ರಶ್ನೆ.

ಅಯ್ಯಾ,

ಮಂಗಳೂರಿಗೆ ಎಲ್ಲಿಯ ವರೆಗೆ ರೈಲಿನಲ್ಲಿ ಪ್ರಯಾಣ ಮಾಡಬಹುದು ? ಮುಂದಕ್ಕೆ ಪ್ಯಾಟ್ಟಾ ಛಂಡಿಯೋ ಅಥವಾ ಸಾಧಾರಣ ಬಂಡಿಯೋ ? ಅಂಥಾ ಬಂಡಿಗಳಲ್ಲಿ ಒಬ್ಬ ಮನುಷ್ಯನಿಗೆ ಮಂಗಳೂರಿಗೆ ಛಾರ್ಜೆಷ್ಟು ? ಎಷ್ಟು ದಿವಸಗಳಲ್ಲಿ ಮಂಗಳೂರನ್ನು ಸೇರಬಹುದು ?

ಪ್ರಯಾಣಿಕ.

ಸಮಾರಾಧನೆ.

ಅಯ್ಯಾ,

ನೆಲಮಂಗಲ ತಾಲ್ಲೂಕು ಹೆಸರುಘಟ್ಟ ಗ್ರಾಮದಲ್ಲಿರುವ ಮುಸಲ್ಮಾನರ ಮೆ॥ ಉಮ್ಮರ್ ಸಾಬ್ ಎಂಬುವರ ಮನೆಯಲ್ಲಿ ಅವರ ಕುಮಾರನಿಗೆ ಮುಂಜಿ ಎಂಬ ಶುಭಕಾರ್ಯವು ನೆರವೇರಿತು ಇದರ ಜ್ಞಾಪಕಾರ್ಥವಾಗಿ ಜುಲೈ ತಿಂಗಳ ೨೬ನೆ ತಾರೀಖಿನ ದಿನ ಹೆಸರುಘಟ್ಟ ಗ್ರಾಮದಲ್ಲಿ ಸರ್ವರಿಗೂ ದಾವತ್ ಎಂಬ ಸಂತರ್ಪಣೆ ನಡಸಿದರು ಹಿಂದು ಜನಗಳು ಅಂದರೆ ಸಮಸ್ತ ಜಾತಿಯವರು ಸೇರಿ ನಾಲ್ಕು ಸಾವಿರ ಜನಗಳು ಹೆಸರುಘಟ್ಟ ಗ್ರಾಮಕ್ಕೆ ಸುಮಾರು ೧೫—೨೦ ಗ್ರಾಮಗಳಿಂದಲೂ ಭೋಜನಕ್ಕೆ ಬಂದು ಇದ್ದರು ಮುಸಲ್ಮಾನರ ಜನಗಳು ಬೆಂಗಳೂರು ವಗೈರೆ ಪ್ರಾಂತ್ಯಗಳಿಂದ ಒಂದು ಸಾವಿರಕ್ಕೆ ಮೇಲ್ಪಟ್ಟು ಬಂದು ಇದ್ದರು ಮತ್ತು ಹೆಸರುಘಟ್ಟ ಗ್ರಾಮದಲ್ಲಿ ಭೋಜನಕ್ಕೆ ಬಾರದೆ ಇದ್ದ ಜನಗಳಿಗೆಲ್ಲಾ ಅವರವರ ಮನೆಗಳಿಗೆ ಅವಲ್ ತರಹಾ ಪದಾರ್ಥಗಳನ್ನು ಕಳುಹಿಸಿದ್ದರು. ಭೋಜನವಾದನಂತರ ಇಷ್ಟು ಜನಗಳನ್ನು ತಮ್ಮ ಮನೆಗೆ ಬರಮಾಡಿಕೊಂಡು ಗಂಧ, ಪುಷ್ಪ, ತಾಂಬೂಲಾದಿಗಳಿಂದ ಸಂತೋಷಪಡಿಸಿದರು ಇದಾದನಂತರ ರಾತ್ರಿ ೭ ಘಂಟೆಗೆ ಸದರಿ ಮುಂಜಿ ಹುಡುಗನನ್ನು ಜೋಡಿ ಗಾಡಿಯಲ್ಲಿ ಕೂರಿಸಿ, ಇದಕ್ಕಾಗಿ ಬೆಂಗಳೂರಿಂದ ತರಿಸಿದ್ದ ಬ್ಯಾಂಡ್ ವಾದ್ಯಗಾರರ ಸಹಿತ ಊರಿನಲ್ಲಿ ಬಹಳ ವಿಜೃಂಭಣೆಯಿಂದ ಮೆರವಣಿಗೆ ಉತ್ಸವ ನೆರವೇರಿಸಿದರು ಮೆ॥ ಉಮ್ಮರ್ ಸಾಬ್ ಎಂಬುವರು ಹೆಸರುಘಟ್ಟ ಗ್ರಾಮದ ವಾಸಸ್ಥರು ಮತ್ತು ಒಳ್ಳೇ ಹೆಸರುವಾಸಿ ಪಡೆದ ಮನೆತನದವರು. ಇವರು ಮುಸಲ್ಮಾನರಾದಾಗ್ಯೂ ಮತಭೇದವಿಲ್ಲದೆ ಸರ್ವರು ಒಂದೇ ಎಂಬ ಸಂಭಾವನೆಯನ್ನಿಟ್ಟು ನಡಸಿರುವ ಕೆಲಸವು ಸ್ತೋತ್ರಾರ್ಹವಾದದ್ದಾಗಿರುತ್ತೆ. ಇದೇ ರೀತಿ ವರುಷಕ್ಕೆ ೨—೩ ದಫಾ ದನಗಳಿಗೆ ದಾವತ್ ಮಾಡಿಸುತ್ತಾ ಇರುತ್ತಾರೆ ಪರೋಪಕಾರಮಾಡಬೇಕೆಂಬ ಇವರ ಧಾರಾಳ ಮನಸ್ಸು ಮತ್ತು ಬಡವರಾದವರಲ್ಲಿ ಇವರಿಗೆ ಕನಿಕರವೂ ಅಪೂರ್ವವಾಗಿರುತ್ತೆ. ಈ ಸಂತರ್ಪಣೆ ಮತ್ತು ಮೆರವಣಿಗೆಗೆ ಸುಮಾರು ೧೫೦೦ ರೂಪಾಯಿಗೆ ಮೇಲ್ಪಟ್ಟು ಖರ್ಚಾಗಿರಬಹುದೆಂದು ಹೇಳಬಹುದು ಮತಭೇದವಿಲ್ಲದೆ ಒಬ್ಬರನ್ನೊಬ್ಬರು ಪ್ರೀತಿಸುವದಕ್ಕೆ ಇವರು ನಡಸಿರುವ ಕೆಲಸವೇ ಮೇಲ್ಪಂಕ್ತಿಯಾಗಿರುತ್ತೆ.

ಪ್ರತ್ಯಕ್ಷದರ್ಶಿ.

ವಿಶೇಷ ವರ್ತಮಾನಗಳು.

ಸಯಾಂ ರಾಜ್ಯದ ಚಕ್ರವರ್ತಿಯವರು ಯೂರೋಪ್ ಖಂಡದ ಪಟ್ಟಣಗಳಲ್ಲಿ ಅಪಾರವಾದ ದ್ರವ್ಯವನ್ನು ಖಾಲಿಮಾಡಿ ತಂದು, ಆ ದೇಶದ ಅನೇಕ ಕೋಟೆಯನ್ನು ರೈಲ್ ರಸ್ತೆಯ ಬದಲಾವಣೆಗೆ ವಿನಿಯೋಗಿಸಿದಾರೆ.

****

ಹಾವುಗಳ ಹೊಟ್ಟೆಯಲ್ಲಿ ಒಂದು ವಿಧವಾದ ರಸ ತುಂಬಿದೆ ಅದ್ದೂ ಬೇಲವಿದೆ ಎಂತಲೂ, ಹಾವು ಕಡಿದ ಸ್ಥಳಕ್ಕೆ ಈ ರಸವನ್ನು ಕೊಟ್ಟು ಹಚ್ಚಿದರೆ ವಿಷವೇರದೆ ಬದುಕುವರೆಂತಲೂ ಮೆಕ್ಸಿಕೋ ದೇಶದ ಒಬ್ಬ ವೈದ್ಯನು ಹೇಳುತ್ತಾನೆ.

ಸ್ಪೇಯಿನ್ ರಾಜ್ಯಕ್ಕೆ ಸೇರಿದ ಬರ್ಗೋಸ್ ಎಂಬ ಪಟ್ಟಣದಲ್ಲಿ ಒಬ್ಬ ಗೃಹಸ್ಥನ ಹೆಂಡತಿಯು ಕಳೆದ ೩೧ ವರುಷಗಳಿಂದಲೂ ಮೈಮೇಲೆ ಸ್ಮರಣೆಯಿಲ್ಲದೆ ಬಿದ್ದುಕೊಂಡಿದ್ದಳು. ಕೆಲವು ದಿನಗಳ ಕೆಳಗೆ ಅವಳಿಗೆ ಪ್ರಜ್ಞೆಯುಂಟಾಯಿತೆಂತಲೂ ಈಗ ಅವಳ ಶರೀರಸ್ಥಿತಿಯು ಆರೋಗ್ಯವಾಗಿದೆ ಎಂತಲೂ ತಿಳಿದು ಬಂದಿದೆ

****

ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ಹಾಡ್ರೇವಸ್ಕಿ ಎಂಬಾತನು ರೈಲಿನಲ್ಲಿ ಪ್ರಯಾಣಮಾಡುತ್ತಿರುವಲ್ಲಿ ಅವನ ಕೈ ಬೆರಳೊಂದು ಕತ್ತರಿಸಿ ಹೋಯಿತು ಇದಕ್ಕೆ ಅವನು ಕಂಪನಿಯವರ ಮೇಲೆ ದಾವಾ ತಂದನು. ಕೋರ್ಟಿನಲ್ಲಿ ಅವನಿಗೆ ಕಂಪನಿಯವರಿಂದ ೨೧ ಸಾವಿರ ರೂಪಾಯಿ ಪರಿಹಾರ ದ್ರವ್ಯವನ್ನು ಕೊಡಿಸಿದಾರೆ.

****

ಪ್ಯಾಂಟೋರಿಯಾದಲ್ಲಿ ರಷ್ಯಾ ಸೈನ್ಯದ ಕೆಲವು ಹುದ್ದೇದಾರರು ತಮ್ಮ ಕೈಕೆಳಗಣ ಸೈನಿಕರನ್ನು ದಂಗೆ ಎಬ್ಬಿಸುವಂಥಾ ರಾಜದ್ರೋಹಕರವಾದ ನೋಟೀಸುಗಳನ್ನು ಹಂಚಿ ಗಲಭೆಯನ್ನುಂಟು ಮಾಡಿದ್ದರಿಂದ ಜನರಲ್ ಲಿನೆವಿಚ್ ಯವರು ಅಂಥಾ ಹುದ್ದೇದಾರರನ್ನು ಪತ್ತೆಮಾಡಿಸಿ ಹಿಡಿಸಿ, ಸೈನಿಕರಿಗೆ ಅವರನ್ನೆಲ್ಲಾ ಗುಂಡಿನಿಂದ ಹೊಡೆದು ಕೊಲ್ಲಿಸಿದರು. ಹೀಗೆ ಸುಮಾರು ೩೦—೩೫ ಮಂದಿ ಹುದ್ದೇದಾರರು ಏಕಕಾಲದಲ್ಲಿ ಪ್ರಾಣ ಕಳೆದುಕೊಂಡರು.

****

ಚೀನಾ ರಾಜ್ಯಕ್ಕೆ ಸೇರಿದ ಟೀಂಟ್ಸಿನ್ ನಗರದಲ್ಲಿ ಚೀನಾ ವರ್ತಕರು ಒಂದು ಸಂಘವನ್ನು ಮಾಡಿಕೊಂಡು, ಯಾವ ವರ್ತಕನಾದರೂ ಅಮೇರಿಕದ ಸಾಹುಕಾರರಿಂದ ಯಾವ ಪದಾರ್ಥಗಳನ್ನಾದರೂ ಕೊಂಡುಕೊಳ್ಳಕೂಡದೆಂತಲೂ ಹಾಗೆ ಕೊಂಡುಕೊಂಡಲ್ಲಿ ಆ ಚೀನಾ ವರ್ತಕನಿಗೆ ೧೦,೦೦೦ ರೂಪಾಯಿ ದಂಡವನ್ನು ವಿಧಿಸಿ ವಸೂಲ್ಮಾಡಬೇಕೆಂತಲೂ ಕಟ್ಟುಮಾಡಿಕೊಂಡಿದ್ದಾರೆ ಅಮೇರಿಕದವರು ಚೀನೀಯರನ್ನು ಅಮೇರಿಕದಲ್ಲಿ ವ್ಯಾಪಾರ ಮಾಡದಂತೆ ಅಡ್ಡಮಾಡಿರುವುದೇ ಇದಕ್ಕೆ ಕಾರಣವೆಂದು ತಿಳಿಯುವುದು.

****

ಅಮೇರಿಕದವರು ಚೀನೀಯರನ್ನು ತಮ್ಮ ದೇಶಕ್ಕೆ ಬಾರದಂತೆ ಕಾನೂನ್ ಮಾಡಿ ತಡೆದಿರುವುದರಿಂದ ಅಮೇರಿಕದವರಿಗೂ ಚೀನೀಯರಿಗೂ ವೈಷಮ್ಯಗಳು ಹೆಚ್ಚುತ್ತಾ ಬಂದಿವೆ. ಚೀನಾ ರಾಜ್ಯಕ್ಕೆ ಸೇರಿದ ಕ್ಯಾಂಟನ್, ಷಾಂಘಾಯಿ ಮೊದಲಾದ ಪಟ್ಟಣಗಳಲ್ಲಿ ಅಮೇರಿಕದ ವರ್ತಕರನ್ನು ಚೀನೀಯರು ಬಹಳವಾಗಿ ನಿರ್ಬಂಧಪಡಿಸುತ್ತಲೂ ನಾನಾಪ್ರಕಾರದಿಂದ ನಷ್ಟಪಡಿಸುತ್ತಲೂ ಬಂದಿದಾರೆ. ಅಮೇರಿಕದ ವರ್ತಕರ ಸರಕುಗಳನ್ನು ಯಾರೂ ಕೊಂಡುಕೊಳ್ಳುವುದಿಲ್ಲ. ಇದನ್ನು ನೋಡಿ ಅಮೇರಿಕದವರು ತಮ್ಮ ಯುದ್ಧದ ಹಡಗುಗಳನ್ನು ಆ ಪಟ್ಟಣಗಳಲ್ಲಿ ಸಿದ್ಧಪಡಿಸಿಕೊಂಡು ಇರುತ್ತಾರೆ ಈ ವೈಷಮ್ಯಗಳು ಇನ್ನೆಷ್ಟುಮಟ್ಟಿಗೆ ವೃದ್ಧಿಹೊಂದುವವೋ ನೋಡಬೇಕು

****

ರಷ್ಯಾ ರಾಜ್ಯಕ್ಕೆ ಸೇರಿದ ಮಾಸ್ಕೋ, ಒಡೆಸ್ಸ, ಸೇಂಟ್ ಪೀಟರ್ಸ್‌ಬರ್ಗ್, ಈ ಮೊದಲಾದ ಮುಖ್ಯ ನಗರಗಳಿಂದ ಜೆಂಸ್ಟ್ವೋ ಎಂಬ ಸ್ವದೇಶೀಯ ಸಂಘಗಳ ಪ್ರತಿನಿಧಿಗಳು ಚಕ್ರವರ್ತಿಯವರನ್ನು ಕಂಡು ಅವರಿಗೆ ರಾಜ್ಯಭಾರ ಕ್ರಮಗಳನ್ನು ಬದಲಾವಣೆ ಮಾಡದೆ ಹೋದರೆ ಆತಂಕ ತಪ್ಪುವುದು ಎಂಬುದಾಗಿ ಅರಿಕೆಮಾಡಿಕೊಂಡರು. ಚಕ್ರವರ್ತಿಯವರು ಈ ಪ್ರತಿನಿಧಿಗಳನ್ನು ಕುರಿತು—ನಮ್ಮ ಚಕ್ರಾಧಿಪತ್ಯದ ಪ್ರಜೆಗಳು ಆಷೇರಿಯಿಂದ ಬಂದಿರತಕ್ಕ ಅಲ್ಪಕಾಲ ಕ್ರಮಗಳನ್ನು ಭಕ್ತಿ ಶ್ರದ್ಧೆಗಳಿಂದ ಅನುಸರಿಸುತ್ತಾ ಬಂದದ್ದಾದರೆ ರಾಜ್ಯವು ಎಂದಿನಂತೆ ಬಿಗಿಯಾಗಿಯೇ ಇದ್ದೀತು ಈ ಭಾಗದಲ್ಲಿ ನಮ್ಮ ರಾಜ್ಯವು ಅಪರಾಧ ಮಾಡಿರೋಣದರಿಂದಲೇ ದೇವರು ಕೋಪಿಸಿಕೊಂಡು ಈಗ ರಾಜ್ಯವನ್ನು ಈ ರೀತಿ ಶಿಕ್ಷಿಸುತ್ತಿದಾನೆ ಇದಕ್ಕೆ ಯಾವ ರೀತಿಯಲ್ಲಿ ಪರಿಹಾರಮಾಡಬೇಕಾಗಿದೆಯೋ ನನಗೆ ಅನುಭವಸಿದ್ಧವಾಗಿ ತಿಳಿದಿರುತ್ತಿಯಾದ್ದರಿಂದ ನಾನು ಅವಶ್ಯವಾದ ಬದಲಾವಣೆಗಳನ್ನು ಮಾಡುವೆನು ಎಂಬುದಾಗಿ ಉತ್ತರವನ್ನಿತ್ತರು.

****

ಅಮೇರಿಕ ಸಂಸ್ಥಾನದ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ಮ್ಯಾಜಿಸ್ಟ್ರೇಟ್ ಮೆ॥ ಹೆಗ್ಗಿನ್‌ಬಾಥಂ ಯವರು ಗಂಡಹೆಂಡರ ಒಂದು ವ್ಯಾಜ್ಯವನ್ನು ವಿಚಾರಿಸಿ, ವಿಚಿತ್ರವಾದ ತೀರ್ಪುಕೊಟ್ಟಿದಾರೆ ಈ ತೀರ್ಪಿನ ಮುಖ್ಯಾಂಶವೇನೆಂದರೆ—ಗಂಡನು ವಾರಕ್ಕೊಂದು ದಿನ ತನ್ನ ಹೆಂಡತಿ ಮಕ್ಕಳ ಬಳಿಗೆ ಹೋಗಿದ್ದು ಸಂತೋಷದಿಂದ ಆ ದಿವಸವನ್ನು ಕಳೆಯಬೇಕು. ದಿನಕ್ಕೆ ಒಂದು ಸಲ ಅವನು ತನ್ನ ಹೆಂಡತಿಯನ್ನು ಮುತ್ತಿಟ್ಟುಕೊಳ್ಳಬೇಕು. ವಾರಕ್ಕೊಂದಾವರ್ತಿ ಅವನು ಒಂದು ಹೂವಿನ ಗುಚ್ಛವನ್ನು ತನ್ನ ಹೆಂಡತಿಗೆ ಒಪ್ಪಿಸಬೇಕು. ಒಂದು ತಿಂಗಳ ಮೇಲೆ ಹೆಂಡತಿಯು ಕೋರ್ಟಿಗೆ ಹಾಜರಾಗಿ ತನ್ನ ಗಂಡ ಆ ರೀತಿ ನಡೆಕೊಳ್ಳುತ್ತಿದಾನೋ ಇಲ್ಲವೋ ವಾಜ್ಮೂಲ ಕೊಡಬೇಕು ಎಂಬುದೇ. ಅಪ್ಪಾಲ ಮೇಲೆ ಗಂಡನು ಮ್ಯಾಜಿಸ್ಟ್ರೇಟರನ್ನು ಕುರಿತು—ತನ್ನ ಅತ್ತೆ (ಹೆಂಡತಿಯ ತಾಯಿ) ಆ ಮನೆಯಲ್ಲಿ ಸೇರಿಕೊಂಡಿರುವುದರಿಂದ ಇಷ್ಟಕ್ಕೆಲ್ಲಾ ಕಾರಣವಾಯಿತು. ಅವಳನ್ನು ಪ್ರಕೃತ ಹಲಿಹಾಕತಕ್ಕ ಆಜ್ಞೆ ಮಾಡಿ, ಮನೆಯಿಂದ ಹೊರಡಿಸಬೇಕು ಎಂಬುದಾಗಿ ಬೇಡಿಕೊಂಡನು. ಮ್ಯಾಜಿಸ್ಟ್ರೇಟರು ಇದೇ ಪ್ರಕಾರ ಹುಕುಂಮಾಡಿದರು.

ಪ್ರಪಂಚದಲ್ಲಿ ದೊಡ್ಡದು ಯಾವದು?

33

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅಧ್ಯಾತ್ಮ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲಾ ಶಾಲೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪	"ರೋಮನರ ಚರಿತ್ರೆ"	ಕ್ರಯ ೦—೨—೦
೫.	"ಗ್ರೀಕರ ಚರಿತ್ರೆ"	,, ೦—೨—೦
೬.	"ಅನುಭವಾನಂದ",,	೦—೬—೦
೭.	"ಗಣಿತ ಸಂಜೀವಿನಿ"	೧—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ."	೦—೧೨—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೨—೦
೧೧.	"೧೯೦೫ನೇ ವರುಷದ ಡೈರಿಗಳು"	

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦

ಮ್ಯಾನೇಜರ್,

ಸಿ. ಎಲ್. ಎಸ್ ಬುಕ್ ಡಿಪೋ,

ಮೈಸೂರು.

ಜ್ವರಹರ.

39



ಇದು ಸಾಧಾರಣ ಜ್ವರ, ಚಳೀಜ್ವರ, ವಿಷಮಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ನಾಶಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ, ೧೧ ರೂ; ಜನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಎಂಥ ಬಿಡಲಾಗುವದು

* * * * * * * *

ಸಿಮಂತಕಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆನೋವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕೋಲಾರದ ಅಸಿಸ್ಟಂಟ್ ಸರ್ಜನ್ ಗಣಪತಿಯವರು—ಜ್ವರಹರ ಮತ್ತು ಕರ್ಪೂರವನ್ನು ನಾನೂ ನನ್ನ ಕಾಂಪೌಂಡರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ದಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ:— ಚಿಪ್ರಿಯಾಸ್ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ.

ಕೋರಂಪ್ ಚೀಫ್ ರೋಡ್, ಮದರಾಸ್

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೧—೦
ಸರಕ್ಕಾರದವರು ಆಫೀಸಿನಿಂದ ಲೇಬಲು ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ. ೧—೦೪—೦
,, ,, ೬ ,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಶ್ರೀತಾಂಬೂಲ.

ಇದನ್ನು ಓದಿ! ಜಿಪದೇಡ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಬಿಡಿ ಮಾರುತ್ತಿದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯುವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೨ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮರ್ಯಾದಸ್ಥರುಳ್ಳ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ಆರು ಸೀಸೆಗೆ ಒಂದು ಜಾಸ್ತಿ ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ ನಮ್ಮ ವಿಳಾಸ.—

ದೇವನಹಳ್ಳಿ ಟವರ್, ಬೆಂಗಳೂರು ಡಿಸ್ಟ್ರಿಕ್ಟ್ ಯಂ ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್

ಹೋಮಿಯೋಪತಿ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೇವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ವೈದ್ಯರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ದಾರುಣವಾದ ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊತಗಳು, ಗಡ್ಡೆಗಳು, ಗಾಯಗಳು, ಸುಟ್ಟಗಾಯ, ಸೊಳ್ಳೆ ಮತ್ತು ಚೇಳು ಕಡಿತವನ್ನು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ ೨—೮ ಆ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

* * * * * * * *

ಹೋಮಿಯೋಪತಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಲ್ಲದೆ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಹುಂಡಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ದಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪೋಸ್ಟರುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಹೋಮಿಯೋಪತಿಕ್ ಕಂಪನಿ, ೬೩ ನೆಕಂಡು ಬೀಚ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

21—7—1905 ರಿಂದ 28—7—1905 ರ ವರೆಗೆ,

ಸ್ಥಳ.	ಪ್ಲೇಗ್ ಆಗದಿ ಬಿದ್ದ.	ಸತ್ತ ವರು	ಮೊದಲಿನಿಂದ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	0	0	0	
ಮೈಸೂರು ,,	0	0	1	
ಬೆಂಗಳೂರು ಡಿಸ್ಟ್ರಿಕ್ಟ್	7	5	151	0[illegible]
ಮೈಸೂರು ,,	4	3	178	[illegible]
ಕೋಲಾರ್ ,,	0	0	73	[illegible]
ಕೋಲಾರ್ ಚಿನ್ನದ ಗಣಿಗಳು	0	0	6	
ತುಂಕೂರು ಡಿಸ್ಟ್ರಿಕ್ಟ್	4	10	24	[illegible]
ಹಾಸನ ,,	0	2	33	[illegible]
ಚಿತ್ರದುರ್ಗ ,,	0	0	105	[illegible]
ಕಡೂರ್ ,,	0	0	102	[illegible]
ಶಿವಮೊಗ್ಗ ,,	48	33	21	[illegible]
ಯಾವತ್ತೂ	71	53	597	59[illegible]

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ಶ್ರಾವಣ ಶುದ್ಧ ದಶಮಿ ಗುರುವಾರದಿಂದ ಶ್ರಾವಣ ಬಹುಳ ಪಾಡ್ಯ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಅಗಸ್ಟ್

ತಾ	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ತೆ[illegible] ವಾ[illegible]
10	ಗುರು *	ದಶಮಿ	16 20	ಜ್ಯೇ	11 12	26
11	ಶುಕ್ರ ‡	ಏಕಾದಶಿ	11-18	ಮೂ	39-[illegible]	27
1[illegible]	ಶನಿವಾ ,,	ದ್ವಾದಶಿ	5 26	ಪೂಷಾ	3[illegible] 37	28
13	ರವಿವಾ	ತ್ರಯೋ	6 1	ಉತ್ತಷಾ	3[illegible]	29
14	ಚಂದ್ರ	ಚತುರ್ದಶಿ	1 [illegible]	ಶ್ರ	39 36	30
15	ಕುಜ ⁊	ಪೌರ್ಣಮಿ	1-[illegible]0	ಧ	12 [illegible]0	31
16	ಬುಧ	ಪಾಡ್ಯ	6-10	ಶ	16 6	1

* ಏಕಾದಶೀ ತಿಥಿ

‡ ವರಮಹಾಲಕ್ಷ್ಮೀವ್ರತ, ಆತಿಶುಕ್ರವಾರ, ಸರ್ವತ ಏಕಾದಶಿ

,, ಶನಿಪ್ರದೋಷ, ಅಶ್ವಲಾಯನ ಉಪಾಕರ್ಮ

⁊ ಗಾಯತ್ರೀಜಪ, ಮಂಗಳಗೌರೀವ್ರತ

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು
ಕಡ್ಲೀ ಅಕ್ಕಿ ಸಲ್ಲಾ ೧ಕ್ಕೆ	ರೂ. ೧೨—೮—೦	೧೨—[illegible]
ಕೆಂಪುಕಿರಿ ಅಕ್ಕಿ ಅವಲ ..	.. ೧೨—೪—೦	೧೧-೧೨
,, ಮಧ್ಯಮ	.. ೧೨—೦—೦	೧೧-೮
ಬಾಸ್ಮತಿ ಅಕ್ಕಿ ..	.. ೧೨—೦—೦	೧೧ ೧೨
ನಚ್ಚಕ್ಕಿ ಅವಲ್ ..	.. ೧೪ ೦—೦	೧೩—೮
,, ಮಧ್ಯಮ ..	.. ೧೩ ೮ ೦	೧೨ ೧೨
ತೊಗರೀ ಬೇಳೆ ಪಲ್ಲಾ ೧ಕ್ಕೆ	.. ೧೧ ೦—೦	೧೦ ೮
,, ಮಧ್ಯಮ ..	.. ೧೦—೮—೦	೧೦—[illegible]
ಜೋಳ ರಾಗಿ ಪಲ್ಲಾ ೧ಕ್ಕೆ ..	.. ೬—೪—೦	೫—೪
ಕಾರ್ರಾಗಿ ..	. ೬—೦—೦	೫—[illegible]
ಜೋಳ	೬—೦—೦	೬—೧[illegible]
ಹಲಸಂದೆ ಪಲ್ಲಾ ೧ಕ್ಕೆ	. ೧೦—೦—೦	೯—[illegible]
ಬಿಳೀ ಅವರೆ	೮ ೧೨ ೦	೯—[illegible]
ಹೆಸರು	೯ ೧೨—೦	೧೦—೮
ಉದ್ದು	.. ೧೦ ೦ ೧	೯—[illegible]
ಕಡಲೆ	.. ೧೦ ೦—೦	೯—[illegible]
ಎಳ್ಳು	.. ೧೬ ೦—೦	೦೫—[illegible]
ಹುರಳಿ	. ೧೦—೦ ೦	೯—[illegible]
ಕಡಲೆ ೧—೨ ಸೇರಿಗೆ	.. ೧೨—೮—೦	೧೨—೮
ಸೀಗೇಕಾಯಿ ಮಣ ೧ಕ್ಕೆ	೩—೮—೦	೩—೦[illegible]
ಮೆಣಸಿನಕಾಯಿ	೪—೮—೦	೪—[illegible]
,, ಮಧ್ಯಮ ..	.. ೩—೧೨—೦	೩—೧೨
ಬೆಲ್ಲ ದೊಡ್ಡ ಅಚ್ಚು ..	.. ೩—೪—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ .	.. ೪—೪ ೦	೪—[illegible]
ಹರಳೆಣ್ಣೆ ,, ..	.. ೫—೦—೦	೪—೮
ಕೊಬ್ಬರಿ ಪಲ್ಲ ೧ಕ್ಕೆ ..	.. ೧೦ ೮—೦	೧೦—[illegible]
ಉಪ್ಪು ,, ..	. ೩ -೦—೦	೩—೦[illegible]
ಹುಣಸೇ ಹಣ್ಣು ..	. ೧ ೦—೦	೧—[illegible]
,, ಹಳೇದು	೨—೦೪—೦	೨—[illegible]
ಹುಳ್ಳು ..	.. ೧೨ ೮—,	೦೦—[illegible]
ಸೀಮೆಯಿಂದ ಬಟ್ಟೆ ೧ಕ್ಕೆ	.. ೫—೦—೦	೩—[illegible]
ತೆಂಗಿನಕಾಯಿ ೧೦೦ ಕ್ಕೆ	.. ೫—೦—೦	೪—೮
ಅಡಕೇಕಾಯಿ ಮಣ ೧ಕ್ಕೆ	. ೧—೦—೦	೨—೦[illegible]
ಅಂಟ್ವಾಳದಕಾಯಿ ಮಣ ೧ಕ್ಕೆ	. ೨—೦೪—೦	೨—೦[illegible]
ತುಪ್ಪ (ಹಸು) ಶೆಂಡ್ರು	.. ೧೫—೮—೦	೦೫—[illegible]
,, ,, ಎಮ್ಮೆ	.. ೧೫—೧೦—೦	೧೫—೦
,, ,, ಗಟ್ಟಿ ತೊಲ ೧ಕ್ಕೆ ..	೨೬—೦—೦	೨೪—[illegible]
ಬೆಣ್ಣೆ ಗಟ್ಟಿ ತೊಲ ೧೦೦ ಕ್ಕೆ ..	೩೨—೦—೦	೩೩—[illegible]

Printed and Published by the Rev. H Spencer, the Proprietor and Manager, Wesleyan Mission P[illegible] Mysore 10/8/1905.

REGISTERED M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ ಮೈಸೂರು--ಸನ್ ೧೯೦೫ ನೇ ಇಸವಿ ಆಗಸ್ಟ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೧೨

"ಬಕ್ತ ಲತಸವೂ ಬಕ್ತ ಬಿಗಸೂ."—ಪೆಕ್ಷ ಕೋಂದು. 5

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗ ಪೋಸ್ಟೇಜು ಸಹಿತ ರೂ ೧—೮—೦. ರೈತರೇ, ಬೇಗ ತರಿಸಿ. ವಿಳಾಸ:—ದಿ ಮ್ಯಾನೇಜರ್, ೧೯೯, ಸಿವಿಲ್ ಲೈನ್ಸ್, ಪೂನ.

ಯಸ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

1

ಮೆಟ್ರಿಕ್ಯುಲೇಷನ್ ಕನ್ನಡದ ೫ನೆ ಪುಸ್ತಕದ ನೋಟ್ಸ್	೦—೪—೦
ಬಿ.ಎ. ,, ,, ೬ ನೆ ಪುಸ್ತಕದ ನೋಟ್ಸ್	೦—೪—೦
ಬಿ.ಎ. ೩—೪ ನೇ ಪುಸ್ತಕಗಳ ನೋಟ್ಸ್	೦—೬—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೦
ನೆರಗತಿ ಪದ್ಯಸಂಗ್ರಹದ ನೋಟ್ಸ್	೦—೧—೬

ಮಹಾರಾಜರ ನಶ್ಯದ ಪುಡಿ.

ಬಹಳ ಮೇಲಾದದ್ದು.

ಮದರಾಸು ನಶ್ಯದ ಡಬ್ಬಿ ೧ ಕ್ಕೆ . . . . . 0—6—0
ಅಂಚೆ ಖರ್ಚು . . . . 0—3—0

೧ ರೂಪಾಯಿಗೆ ಕಡಿಮೆಯಿಲ್ಲದೆ ದರಖಾಸ್ತು ಕಳುಹಿಸತಕ್ಕ ಕೊಂಡುಕೊಳ್ಳುವವರುಗಳಿಗೆ ರೂಪಾಯಿಗೆ ೦—೧—೦ ಕಮಿಷನ್ ಕೊಡುತ್ತೇವೆ. ನಮ್ಮ ವೈದ್ಯಶಾಲೆಯಲ್ಲಿ ತಯಾರಿಸುವ ಪುಡಿ ಮೇಲಾದ ಲಂಕಾದ್ವೀಪದ ಹೊಗೆಸೊಪ್ಪಿನಿಂದ ಕಾರವಾಗಿ ತಯಾರಿಸಲ್ಪಟ್ಟದ್ದು. ಎಷ್ಟು ದಿವಸಗಳ ಪರಿಯಂತ ಗಾಳಿ ಪಾಟು ಹೋಗದ ಹಾಗೆ ಪುಡಿಯನ್ನು ಮುಚ್ಚುವದರಲ್ಲಿ ಎಚ್ಚರಿಕೆಯುಳ್ಳ ಪಾತ್ರೆಗಳಲ್ಲಿ ತಯಾರಿಸಲ್ಪಟ್ಟಿರುತ್ತೆ. ೧ ಸಾರಿ ತರಿಸಿನೋಡಿದರೆ ಸಾಕಾಗಿರುತ್ತೆ. ಅನೇಕ ದೊಡ್ಡಮನುಷ್ಯರು ಇದ ತರಿಸಿಕೊಂಡರೆ ಸಾಕಾಗಿರುತ್ತೆ. ೧ ಡಬ್ಬಿಗೆ ೯ ತೋಲ ಪುಡಿ ಇರುತ್ತೆ. ಉಪಯೋಗಿಸುತ್ತಾರೆ.

ವಿಳಾಸ—ಮ್ಯಾನೇಜರ್ ಧನ್ವಂತ್ರಿ ವೈದ್ಯಶಾಲಾ, ತ್ರಿಪ್ಲಿಕೇನ್ ರೋಡ್, ಸಾಹುಕಾರ್ ಪೇಟೆ, ಮದರಾಸು.

ಪ್ರಿಯ ಸೊಕ್ಕ ಮನುಷ್ಯರೇ!
ಈ ನಮ್ಮ ಗುಲಾಬಿ ಮೊಗ್ಗನ್ನು ಪರೀಕ್ಷಿಸಿರಿ.
'ಗುಲಾಬಿಮೊಗ್ಗಿನ ಉಂಗುರ'

4

ಈ ಉಂಗುರದ ಮಧ್ಯೆ ಗುಲಾಬಿ ಮೊಗ್ಗಿನಂತೆ ಇದ್ದು ನೋಡುವವರಿಗೆ ವಿಚಿತ್ರವಾದ ವಜ್ರದಂತೆ ಥಳಥಳಿಸುವ

ಹರಳುಗಳು ಸುತ್ತಲೂ ಕೂರಿಸಲ್ಪಟ್ಟವೆ. ಇದು ಬಂಗಾರದ ಹಾಗೆ ಹೊಳೆಯುವ ಛಾಯೆಯುಳ್ಳ ಭಂಗಾರದಿಂದ ಇಂಗ್ಲೆಂಡ್ ಕಂಪನಿಯಲ್ಲಿ ತಯಾರಿಸಲ್ಪಟ್ಟಿರುತ್ತದೆ. ಸಹಜವಾದ ಭಂಗಾರದ ಉಂಗುರಕ್ಕೂ ಇದಕ್ಕೂ ವ್ಯತ್ಯಾಸವಿಲ್ಲ. ಇದರ ಬಣ್ಣವೂ ಕಾಂತಿಯೂ ಹೋಗುವದಿಲ್ಲವೆಂದು ನಾವು ಧೈರ್ಯದಿಂದ ಹೇಳುತ್ತೇವೆ. ಒಂದು ವೇಳೆ ಹಳೆಯ ಕೂತುಹಲದಿಂದ ನೋಡಬೇಕಾದರೆ ಮಂಕಾದರೆ ಸ್ವಲ್ಪ ಸೀಮೆಸುಣ್ಣದ ಪುಡಿ ಬಣ್ಣನೇನಾದರೂ ಮಂಕಾದರೆ ಸ್ವಲ್ಪ ಸೀಮೆಸುಣ್ಣದ ಪುಡಿಯನ್ನು ಹಾಕಿ ಒಂದು ಸಣ್ಣ ಬಟ್ಟೆಯಿಂದ ಉಜ್ಜಿದರೆ ಎಂದಿನಂತೆ ಹೊಳೆಯುವದು. ಈ ಉಂಗುರವು ನೋಡುವವರಿಗೆ ರೂ ೫೦೦ ಬೆಲೆ ಬಾಳತಕ್ಕವರಂತೆ ಕಾಣಿಸಿಕೊಳ್ಳುತ್ತದೆ.

ಇದರ ನಗದು ಬೆಲೆ ೨ ರೂ ಮಾತ್ರ.

ಬಹುಮಾನ! ಬಹುಮಾನ!! ಬಹುಮಾನ!!!

೭ ಉಂಗುರಗಳನ್ನು ಒಟ್ಟಾಗಿ ತರಿಸಿಕೊಳ್ಳತಕ್ಕವರಿಗೆ ನಿಕ್ಕಲ್ ಕೈಯ ಸರಪಣಿ ಸಹಿತವಾದ ಒಂದು ವಾಚು; ೬ ನ್ನು ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ಬ್ರೂಚಿಯು, ೩ ನ್ನು ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ೧ ಸೆಟ್ ಗುಂಡಿಗಳು ಬಹುಮಾನವಾಗಿ ಕೊಡಲ್ಪಡುತ್ತವೆ. ಇಷ್ಟವುಳ್ಳವರಿಗೆ ಒಂದು ಕ್ಯಾಟಲಾಗು ಉಚಿತವಾಗಿ ಕಳುಹುತ್ತೇವೆ. ಇಷ್ಟವುಳ್ಳವರಿಗೆ ಒಂದು ಕ್ಯಾಟಲಾಗು ಉಚಿತವಾಗಿ ಕಳುಹುತ್ತೇವೆ. ಬರೆದು ತರಿಸಿಕೊಳ್ಳಿರಿ.

ಸ್ಥಳದಿಂದೇ ಈ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿರಿ.
ವಿಳಾಸ—ಗುರುಬಸವ ಅಂಡ್ ಕೋ, ಸಾವಕಾರಪೇಟೆ, ಮದರಾಸ್.

ಯೋಗ್ಯತಾಪತ್ರ. ಕೊಲ್ಲಾಪುರ ಸಿಟಿಯಿಂದ ರಾಮಪ್ಪ ಗುರು ಶೆಟ್ಟಿ ಹೊಳಲೂರು, ಬರೆಯುವ ಶರಣಾರ್ಥಿ. ತಾವು ಕಳುಹಿಸಿದ ಗುಲಾಬಿ ಮೊಗ್ಗಿನ ಉಂಗುರವನ್ನೇ ಇಲ್ಲಿ ಸರಾಫರಿಂದ ಬೆಲೆ ಕಟ್ಟಲಿಸಾಗಿ ತೃಪ್ತಿಯಾಗಿದೆ. ನೋಡಿದರಿಗೆ ತಾವು ಬರೆದಂತೆ ೨,೦೦೦ ರೂ ಗಿಂತ ಹೆಚ್ಚು ಬಾಳುತ್ತದೆ. ಇನ್ನೊಂದು ೧೨ ಉಂಗುರವನ್ನು (ಪ್ರಯಿಜ್ ಬಹುಮಾನ ಸಹ) ನನ್ನ ಪತ್ರಿಗೆ ವಿ. ಪಿ. ಮಾಡಬೇಕು. ವಿಶ್ವಾಸವು ಹೀಗೆ ಇರಲಿ ಪ್ರಾರ್ಥನೆ.

WANTED WILD ANIMALS.
ಬೇಕಾಗಿದೆ. ಬೇಕಾಗಿದೆ.

19

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ರವರು ಕೊಂಡುಕೊಳ್ಳುವರು.
Apply to—MR. HUGHES, MYSORE ZOO.

ಕಥಾಸಂಗ್ರಹ—ಮೊದಲನೆ ಭಾಗ.

20

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ನುಡಿಯ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ವಾಕ್ಯಗಳ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಮುದ್ರಿಸಿದೆ; ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ. ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಶೇಕಡಾ ೨೫ ರಂತೆ ಡಿಸ್ಕೌಂಟು ಸಿಕ್ಕುವುದು. ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮುಖಾಂತರವೂ ಕಳುಹಿಸುತ್ತೆ. ವಿಳಾಸ—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ
ಆಯುರ್ವೇದ ಔಷಧಗಳು.

3

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ.
"ರಕ್ಷಾಮೃತಂ."—ಕಾಫಿ ಅಥವಾ ಟೀಗೆ ಪ್ರತಿರೂಪು.

"ರಕ್ಷಾಮೃತಂ."—ಸನ್ಯವರ್ತನಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯೆಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರು ಮಾಡಲ್ಪಟ್ಟಿರುತ್ತದೆ. ಕಾಫಿ, ಟೀಯೆಲೆಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ

ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರು ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ, ಬಸರು, ಹರಿಗೆ, ರೂ ಉಪಯೋಗಿಸಬಹುದಾಗಿದೆ. ಈ ಮೊದಲಾದವುಗಳು ಸಂಭವಿಸಿರುವ ಕಾಲಗಳ ವಾಂತಿಭೇದಿ, ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡಿಸಿಡುವುದಲ್ಲದೆ, ಯಾವದೊಂದು ರೋಗವೂ ಶಾಲುಕಾಕಿಕೊಳ್ಳ ದಂತೆ ಕಾಪಾಡುವುದು. ಪಿತ್ತಹಾಯುವು, ಗುಲ್ಮ ಉಬ್ಬಸಗಳು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ. ಪ್ರಾಣಾಧಾರವಾದ ರಕ್ತವನ್ನು ಒದ್ದಿ ಮಾಡಿ, ಧಾತು ವೃದ್ಧಿ ಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯವುಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು.

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಜಿಗರಿನಲ್ಲಿರತಕ್ಕ ಸಕ್ಕರೆಯನ್ನು ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಪಡಿಸುವುದು; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು ಉದ್ಯೋಗಸ್ಥರು, ವಿರೋಧಶಾರಿಯಾದ ಗುಣವುಳ್ಳ ಕಾಫಿ, ಟೀಯೆಲೆಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು.

ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ಆಣೆ ೬. ವಿ. ಪಿ. ಛಾರ್ಜು ಆಣೆ ೩ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪಿಟ್ಟು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರಿಯಿರಿ.
ವಿಳಾಸ:—ಪಿ. ಸುಬ್ಬರಾಯರ್,
ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

೨ನೆ ಛಾಪಿ ಪ್ರಶ್ನೋತ್ತರ ಜ್ಯೋತಿಷಬೋಧಿನಿ.

ಕ್ರಯ ಪ್ರತಿ ೧ಕ್ಕೆ ೧ ರೂ. ೪ ಆಣೆ ಮಾತ್ರ. ಸಿವಿಲ್, ಕ್ರಿಮಿನಲ್, ಮುಲ್ಕಿ, ರೆವಿನ್ಯೂ, ಲೇವಾದೇವಿ, ರೋಜು ವರ್ಗ, ಕಾನು ಭಾವಿಕೆ ಲೆಕ್ಕ, ಇತ್ಯಾದಿ ಸಮಸ್ತ ಸಾರಾಂಶಗಳನ್ನೂ ತಿಳಿಸತಕ್ಕ ಬಹು ಸುಲಭಕ್ರಮದ ಲಾ ಪುಸ್ತಕವು. ಕ್ರಯ ೧ ರೂ. ೪ ಆಣೆ.

ಮೋಜಣಿ ಪುಸ್ತಕ.—ಕ್ರಯ ೧ ರೂ ಮಾತ್ರ:—ರೆವಿನ್ಯೂ ಇನ್ಸ್ಪೆಕ್ಟರ್ ಸ್ಕೀಂ ಅನುಸರಿಸಿ ವೃದ್ಧಿಗೆ ಬರತಕ್ಕ ಸಮಸ್ತ ಶೇಕದಾರು ಮುಂತಾದವರಿಗೆಲ್ಲಾ ಬಹು ಉಪಯೋಗವಾದದ್ದು.
ವಿಳಾಸ—ಬಿ. ತಿ. ಮೂರ್ತಿ ಕಂಪನಿ, ಬೆಂಗಳೂರು ಸಿಟಿ.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

ದೇವಾಂಗಮಠ ಅನುಭವಶಾಸ್ತ್ರ | ದೇವಾಂಗಮಠ ಪ್ರಕಾಶಿಕೆ 4

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮಠಪ್ರಕಾಶಿಕೆ. ಸಹಸ್ರಾವತಾರಕ್ಕೂ ಸುಂದರವಾದ ೧೪ ತಸ್ವೀರಿವೆ. ಕ್ರಯ ಸುಲಭಮಾಡಿದೆ. ೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮. ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮. ತಕ್ಷಣ ಮಣಿಆರ್ಡರಿಗೂ ವಿ. ಪಿ. ಲೂ ಕಳುಹಿಸುತ್ತೆ. ವಿಳಾಸ— ಮೈಸೂರು ಪವಳ ಅಂಗಡಿ ಲಕ್ಷ್ಮೀನರಸಿಂಹಯ್ಯನವರ ಪುತ್ರ ಮಲ್ಲಯ್ಯ.

ಇದು ಕಳೆದ ಏಳನೇ ತಿಂಗಳ ಪ್ರಜೆಂಟೇಷನ್ ವಾಚು.

2

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಪೇಟೆಂಟ್ ಲಿವರ್ ವಾಚು ಓಪನ್ ಫೇಸ್ ಕೀಲೆಸ್ ಕಂಪೆನಿ ಸ್ಪೇರ್ ಜ್ಯೂಯಲ್ಸ್ ಬಹು ಬಲಿಷ್ಟವಾದ ಗಡಿಯಾರ. ಇವರು ವ ಗ್ಯಾರಂಟೀ. ಕ್ರಯ ರೂ. ೭—೮—೦. ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವವರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ



ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರವು ಜಾಗ್ರತೆ ದರಖಾಸ್ತು ಕಳುಹಿಸಿ. ಪ್ರಜೆಂಟೇಷನ್ ಸಾಮಾನುಗಳು.

ಕ್ರಯವುಳ್ಳದ್ದು.

ಮೇಲಾದ ಜರ್ಮನ್ ಸಿಲ್ವರ್ ಕರಟುಗುಂಡಿ ೧ ಸೆಟ್ಟು	೦—೧೦—೦
ಚಿಕ್ಕ ಹಣದ ಪೆಟ್ಟಿಗೆ ಇಂಗ್ಲಿಷ್ ಮೇಡ್ (Cash Box)	೦—೮—೦
ಸುಗಂಧ ನಶ್ಯಪುಡಿ ತುಂಬಿದ ಡಬ್ಬಿ ೧	೦—೮—೦
ಮಲಗುವ ಮಕೆ ದೀಪ ಬಹಳ ಸುಂದರವಾದದ್ದು	೦—೬—೦
ಬಹಳ ಸೊಗಸಾದ ಗಡಿಯಾರದ ಸರಪಣಿ	೦—೮—೬

೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರೆಗೆ ಬರುವ ಜುಲೈ ಅಕ್ಟೋಬರ್ ವರೆಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡುತ್ತೇವೆಂದು ಪ್ರಕಟಿಸಿದ್ದಾಗ್ಯೂ ಕಳೆದ ೧ ವಾರದ ಲಾಗಾಯ್ತು ಅನೇಕ ದರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜಂಟರು ಇನ್ನೂ ಕೆಲವು ಕಾಲದವರೆಗೆ ಜಾರಿಯಲ್ಲಿ ತರಬೇಕೆಂದು ಕೋರಿದ್ದರಿಂದಲೂ ನಮ್ಮ ಹೆಡ್ಡಾಫೀಸಿನ ಅಪ್ಪಣೆಯ ಮೇರೆಗೆ ಪುನಃ ಕೊಡಲ್ಪಡುತ್ತೆ. ಇದುವರಿಗೆ ವಾಚು ಬಹುಮತಿ ಪಡೆಯದೆ ಇರುವವರು ಜಾಗ್ರತೆ ದರಖಾಸ್ತು ಕಳುಹಿಸಿ ಬಹುಮಾನ ಸಮೇತ ವಾಚು ಪಡೆಯಿರಿ.

ವಿಳಾಸ:—ಮ್ಯಾನೇಜರ್, ಫ್ಲಾರಿನ್ ವಾಚ್ ಕಂಪೆನಿ,
ಬ್ಲಾಕ್ ಟವನ್, ಮದರಾಸ್.

ಜೀರಿಗೇ ರಸಾಯನ.

4

ಇದನ್ನು ಸೇವಿಸಿದರೆ ಸಾಕು ಪಿತ್ತವನ್ನು ಕಳೆದುಕೊಳ್ಳಿ. ಡಬ್ಬಿ ಒಂದಕ್ಕೆ ೬ ಆಣೆ. ಕಸ್ತೂರಿ ಮಾತ್ರೆ ಸೀಸೆಗೆ ೪ ಆಣೆ. ತಾಂಬೂಲ ಸಕ್ಕರೆ ೧ ಡಬ್ಬಿಗೆ ೨ ಆಣೆ. ಜವ್ವಾಜಿಗಂಧ ೧ ತೊಲೆಗೆ ೧ ರೂ. ಸಂಬರ್ ಮಾಲತಿ ೧ ಡಬ್ಬಿಗೆ ೨ ಆಣೆ. ಬಾಲರಾಜ ಹಲ್ಲು ಪುಡಿ ಡಬ್ಬಿ ೩ ಆಣೆ. ದೇಹಕಾಂತಿ ಚೂರ್ಣ ಡಬ್ಬಿಗೆ ೩ ಆಣೆ. ಭೃಂಗಾಮಲಕ ತೈಲ ೧ ಸೀಸೆಗೆ ೧೨ ಆಣೆ. ಪುಷ್ಪಾಂಜನ ಸೀಸೆ ೧ಕ್ಕೆ ೫ ಆಣೆ.

ವಿಳಾಸ—ಸಿ. ಪಿ. ಅಂಡ್ ಕೋ, ಬೆಂಗಳೂರು ಸಿಟಿ.

ಈ ಕೆಳಗಣ ಪುಸ್ತಕಗಳು ಕೊಂಚವಾಗಿವೆ. ಬೇಗನೆ ತರಿಸಿಕೊಳ್ಳಿ. ಆಮೇಲೆ ಸುಲಭವಾಗಿ ಈ ಕಡಿಮೆ ಬೆಲೆಗೆ ಸಿಕ್ಕಲಾರವು. ಇದು ಒಳ್ಳೇ ಸಮಯವು.

1

ಕನ್ನಡ ಹಿಂದೂಲಾ.—ಇದು ಎಲ್ಲಾ ಹೈಕೋರ್ಟುಗಳ ತೀರ್ಮಾನಗಳೊಡನೆ ಸೇರಿ, ಸಮಸ್ತ ವಿಷಯಗಳನ್ನೂ ಕನ್ನಡದಲ್ಲಿ ತಿಳಿಸುತ್ತದೆ. ಸರಕಾರಿ ವ್ಯವಹಾರಗಳುಳ್ಳ ಎಲ್ಲಾ ಜನರಿಗೂ ಅತ್ಯಾವಶ್ಯಕವಾಗಿದೆ. ಇದರ ಬೆಲೆ ರೂ. ೨—೪—೦.

ಕನ್ನಡ ಮರ್ಮಶಾಸ್ತ್ರವು.—ಇದರಲ್ಲಿ ಲೋಕಜ್ಞಾನಕ್ಕೆ ಬೇಕಾಗಿರುವ ಸಮಸ್ತ ಶಾಸ್ತ್ರತತ್ತ್ವವಿಷಯಗಳೂ ಸುಲಭವಾದ ವಚನದಲ್ಲಿ ನಿರೂಪಿಸಲ್ಪಟ್ಟಿದೆ. ಎಲ್ಲರಲ್ಲಿಯೂ ಇರಬೇಕಾಗಿರುವ ಅತ್ಯಾವಶ್ಯಕ ಪುಸ್ತಕವು. ಬೆಲೆ ರೂ. ೧

ಕನ್ನಡ ಕೇಸರೀ ವಿಲಾಸವು.—ಇದು ಅತ್ಯದ್ಭುತ ಚಮತ್ಕಾರವಾದ ನಾವಲ್ ಎಂಬ ನಾಟಕ ವಿನೋದ ಕಥೆ. ಬಹಳ ಸುಲಭವಚನ ಶೈಲಿಯಿಂದ ಬರೆಯಲ್ಪಟ್ಟಿದೆ. ಬೆಲೆ ಆಣೆ ೦—೮—೦

ವಿಳಾಸ:—ರತ್ನಾಕರ ಅಂಡ್ ಕಂಪೆನಿ,
ತಿರುವಲ್ಲಿಕ್ಕೇಣಿ, ಮದರಾಸ್.

ಬಾವಾ ಯೂಸುಫ್ ಬ್ರದರ್ಸ್,
ಮೌಂಟ್ ರೋಡ್ ಮತ್ತು ಗುಜರಿ, ಮದರಾಸ್.

ಆಭರಣಗಳು, ಕನ್ನಡಕಗಳು, ಸಣ್ಣ ಮತ್ತು ದೊಡ್ಡ ಗಡಿಯಾರಗಳು, ಅಮೇರಿಕ ದೊಡ್ಡ ಗಡಿಯಾರಗಳು, ಇಂಗ್ಲಿಷ್ ಬೈಸಿಕಲ್‌ಗಳು ಮತ್ತು ಬೈಸಿಕಲ್ ಸಾಮಾನುಗಳು—ಇವನ್ನು ತರಿಸಿ ಮಾರುತ್ತೇವೆ. ಗವರ್ನಮೆಂಟಿಗೂ ರೈಲ್ವೆಯವರಿಗೂ ಸಾಮಾನು ಮುಂತಾದವನ್ನು ಸಪ್ಲೈ ಮಾಡತಕ್ಕವರು ನಾವೇ

[illegible]

ನಮ್ಮ ಇಂಗ್ಲಿಷ್ ಹಜಾರಿ ೧೮ ಕ್ಯಾರೆಟ್ ಚಿನ್ನ ತುಂಬಿದ ಆಲ್ಬರ್ಟ್ ಸರಪಣಿಗಳು. ತಗಡಿನ ಕೊಳವೆ ಎಂದು ಊಹಿಸುವುದು ತಪ್ಪು. ಚಿನ್ನದಲ್ಲಿ ಕೊಳವೆ ಮಾಡಿದೆ ಶುದ್ಧವಾದ ಚಿನ್ನ. ಇತರ ಲೋಹದ ಸರಪಣಿಗೆ ಚಿನ್ನದ ಮುಲಾಮು ಮಾಡಿದ್ದಲ್ಲ. ಇದನ್ನು ನೈಟ್ರಿಕ್ ಆಸಿಡ್ ದ್ರಾವಕದಲ್ಲಿ ಅದ್ದಿದಾಗ್ಯೂ ಚಿನ್ನದ ಹೊಳಪು ಹೋಗದು. ಈ ಪರೀಕ್ಷೆಯಲ್ಲಿ ನಮ್ಮ ಸರಪಣಿ ಕೆಟ್ಟುಹೋದರೆ ೧೦೦ ರೂಪಾಯಿ ಬಹುಮಾನ ಕೊಡುತ್ತೇವೆ.

೮ ಅಂಗುಲ ಉದ್ದದ ಸರಪಣಿಗೆ ಕ್ರಯ ರೂಪಾಯಿ		೮—೮—೦
೧೩॥ ,, ,, ,,	,,	೧೦—೦—೦
ಡಬ್ಬಲ್ ಸರಪಣಿ (ಕಾಂಡಂ)	,,	೧೨—೦—೦
೫೩ ಅಂಗುಲದ ಕತ್ತಿನ ಸರಪಣಿ		೧೮—೦—೦

ಈ ಸರಪಣಿಗಳಿಗೆ ಅನುಕೂಲವಾದ ಚಿನ್ನದ ಚಾರಂ ಲಾಕೆಟ್ಟುಗಳಿಗೆ ರೂ. ೩ ರಿಂದ ರೂ ೫. ನಾಲ್ಕು ಬಾಲ್ ಸ್ಟಡ್ಡುಗಳು ರೂ. ೩. ಕೊಕ್ಕೆ ಸಹಿತವಾದ ಸ್ಟಡ್ಡುಗಳು ರೂ. ೫.

ಅನೇಕರು ಬೇಕೆನ್ನುತ್ತಾರೆ. ಇಂಥವು ಹಿಂದುಸ್ಥಾನದಲ್ಲೆಲ್ಲಾ ಸಿಕ್ಕವು. ಸಾವಿರಾರು ಗಡಿಯಾರಗಳು ಬಿಕರಿಯಾಗಿವೆ.

ಯಾರೂ ಆಕ್ಷೇಪಣೆ ಮಾಡಿದ್ದಿಲ್ಲ. ಸರ್ವೋತ್ತಮವಾದವು, ಶಾಶ್ವತವಾಗಿರತಕ್ಕವು, ಅಗ್ಗವಾದವು.

ನಮ್ಮ ಪ್ರಖ್ಯಾತವಾದ ಪಕ್ಕಾ ರೈಲ್ವೆ ರೆಗ್ಯುಲೇಟರ್ ವಾಚುಗಳು ಬಹು ಸುಂದರವಾಗಿವೆ, ಗಟ್ಟಿಯಾಗಿವೆ, ಮದ್ರಾಸ್ ಬಿರಂಗಿಗೆ ರಿಜಿಸ್ಟರಾಗಿದೆ. ಒರಟಾಗಿ ಉಪಯೋಗಿಸಿದರೂ ಕೆಡದೆಂದು ಜಾಮೀನು ಕೊಡುತ್ತೇವೆ. ಇವು ಇನ್ನ್ಯಾರಲ್ಲೂ ದೊರೆಯತಕ್ಕ ಗಡಿಯಾರಗಳಲ್ಲ.

ನಿಜವಾದ ನಿಕ್ಕಲ್ ಲೋಹ, ಓಪನ್, ಕೀಲೆಸ್, ಹಾರಿಜಾಂಟಲ್ ಗಡಿಯಾರ ೧ಕ್ಕೆ ರೂ. ೭. ಇದೇ ತರದ ಚೊಕ್ಕಬೆಳ್ಳಿ ಗಡಿಯಾರ ೧ಕ್ಕೆ ರೂ ೧೧—೮—೦

ನಿಜವಾದ ನಿಕ್ಕಲ್‌ಲೋಹ, ಓಪನ್, ಕೀಲೆಸ್, ಪೇಟೆಂಟ್ ರಾಚುಲ್ ಲೀವರ್ ಗಡಿಯಾರ ೧ಕ್ಕೆ ರೂ. ೧೦. ಇದೇ ತರದ ಚೊಕ್ಕಬೆಳ್ಳಿಯ ಗಡಿಯಾರ ೧ಕ್ಕೆ ರೂ ೧೮.

ವೃತ್ತಾಂತ ಪತ್ರಿಕೆ.

ಸನ್ ೧೯೦೪ ನೇ ಇಸವಿ ಆಗಸ್ಟ್ ತಾ॥ ೧೭ ನೇ ಗುರುವಾರ.

ಕಾಶ್ಮೀರ ಸಂಸ್ಥಾನದ ಮಹಾರಾಜರವರು.

ಕಾಶ್ಮೀರ ಸಂಸ್ಥಾನದ ಮಹಾರಾಜಾ ಸರ್ ಪ್ರತಾಪಸಿಂಗರವರಿಗೆ ಸಂಪೂರ್ಣ ರಾಜ್ಯಾಧಿಕಾರವನ್ನು ಕೊಡಬಹುದೆಂದು ವೈಸ್‌ರಾಯಿ ಲಾರ್ಡ್ ಕರ್ಸನ್‌ರವರು ಬ್ರಿಟಿಷ್ ಗವರ್ನಮೆಂಟಿಗೆ ಬರೆದು ಇದ್ದ ಶಿಫಾರಸನ್ನು ಇಂಗ್ಲಿಷ್ ಸರ್ಕಾರದವರು ಒಪ್ಪಿ ಅದರಂತೆ ಸ್ಯಾಂಕ್ಷನ್ ಮಾಡಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ. ಕಳೆದ ೧೮೮೫ನೇ ಇಸವಿಯಲ್ಲಿ ಮಹಾರಾಜಾ ರಣವೀರಸಿಂಗರವರು ಕಾಲವಾದರು. ಆಗ ಅವರ ಪುತ್ರರಾದ ಸರ್ ಪ್ರತಾಪಸಿಂಗರಿಗೆ ಪಟ್ಟಾಭಿಷೇಕವಾಯಿತು. ಇವರು ಇಬ್ಬರು ಮಂತ್ರಿಗಳನ್ನಿಟ್ಟುಕೊಂಡು ಸಂಸ್ಥಾನವನ್ನಾಳುತ್ತಾ ಬಂದರು. ತರುವಾಯ ೧೮೮೭ ರಲ್ಲಿ ಇಂಡಿಯಾ ಗವರ್ನಮೆಂಟಿನವರು ಒಂದು ಕೌನ್‌ಸಿಲ್ ಸಭೆಯನ್ನು ಮಾಡಿಟ್ಟರು. ದಿವಾನ್‌ರವರೇ ಈ ಸಭೆಯ ಪ್ರೆಸಿಡೆಂಟರಾಗಿದ್ದುಕೊಂಡು ರಾಜಕಾರ್ಯಗಳನ್ನು ನಡಿಸುತ್ತಾ ಬಂದರು. ಮಾರನೆ ವರ್ಷದಲ್ಲಿ ಆ ಸಂಸ್ಥಾನದೊಳಗೆ ತುಂಬಾ ಗಲಭೆಯುಂಟಾಯಿತು. ಇಂಡಿಯಾ ಗವರ್ನಮೆಂಟಿನವರು ಮಹಾರಾಜರವರಿಗೆ ರಾಜ್ಯಾಧಿಕಾರವನ್ನು ತಪ್ಪಿಸಿ, ಒಂದು ಕೌನ್‌ಸಿಲನ್ನು ಏರ್ಪಡಿಸಿ, ಈ ಕೌನ್‌ಸಿಲ್ ಮೆಂಬರುಗಳು ಬ್ರಿಟಿಷ್ ರೆಸಿಡೆಂಟರವರ ಅಭಿಪ್ರಾಯವನ್ನು ಪಡೆದು ರಾಜ್ಯಭಾರ ನಡಸುವಂತೆ ಏರ್ಪಾಡು ಮಾಡಿದರು. ಈ ಕೌನ್‌ಸಿಲ್ ಸಭೆಯಲ್ಲಿ ಮಹಾರಾಜರವರ ಇಬ್ಬರು ಸಹೋದರರನ್ನೂ (ಅಮಾರ್ ಸಿಂಗ್, ರಾಂಸಿಂಗ್), ಇನ್ನಿಬ್ಬರು ದೇಶೀಯ ದೊಡ್ಡ ಮನುಷ್ಯರನ್ನೂ ಮೆಂಬರುಗಳಾಗಿ ನೇಮಿಸಿದರು. ಈಚೆಗೆ ೧೮೯೧ ರಲ್ಲಿ ಮಹಾರಾಜರವರಿಗೆ ಕೌನ್‌ಸಿಲಿನಲ್ಲಿ ಪ್ರೆಸಿಡೆಂಟ್ ಪದವಿಯೂ, ಮಾರನೇ ವರ್ಷ ಜಿ. ಸಿ. ಎಸ್. ಐ. ಎಂಬ ಘನತರವಾದ ಬಿರುದೂ ಕೊಡಲಾದವು. ಈಗ ಕೌನ್‌ಸಿಲ್ ಸಭೆಯೇನೋ ಇದ್ದೇ ಇದೆ. ಈ ಸಭೆಯಲ್ಲಿ ಮಹಾರಾಜರವರು ಪ್ರೆಸಿಡೆಂಟರಾಗಿಯೂ ಅವರ ಸಹೋದರರಾದ ಸರ್ ಅಮಾರ್ ಸಿಂಗರವರು ವೈಸ್ ಪ್ರೆಸಿಡೆಂಟರಾಗಿಯೂ ರಾಯಬಹದೂರ್ ನಾರಾಯಣ ಸಿಂಗರವರು ಜುಡಿಷಲ್ ಮೆಂಬರಾಗಿಯೂ ರಾಯಬಹದೂರ್ ಭವಾನಿದಾಸ್ ಯವರು ರೆವಿನ್ಯೂ ಮೆಂಬರಾಗಿಯೂ ಇದ್ದುಕೊಂಡು, ಸಂಸ್ಥಾನವನ್ನಾಳುತ್ತಿದ್ದಾರೆ. ಈ ಸಭಿಕರು ತೃಪ್ತಿಕರವಾಗಿ ಕಾರ್ಯಗಳನ್ನು ನಡಿಸಿರುವ ಕಾರಣ ಇನ್ನು ಮುಂದೆ ಸಭೆಯನ್ನೇ ವಜಾಮಾಡಿ, ಸಕಲ ಸ್ವಾತಂತ್ರ್ಯವನ್ನೂ ಮಹಾರಾಜಾ ಸರ್ ಪ್ರತಾಪಸಿಂಗರವರಿಗೇನೇ ವಹಿಸಬೇಕೆಂದು ವಿಲಾಯತಿ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ. ಕೆಲವು ವಾರಗಳೊಳಗಾಗಿ ವೈಸ್‌ರಾಯಿ ಲಾರ್ಡ್ ಕರ್ಸನ್‌ರವರು ಕಾಶ್ಮೀರಕ್ಕೆ ದಯಮಾಡಿ, ಬಹು ವಿಶೇಷವಾದ ದರ್ಬಾರು ನಡಿಸಿ, ಮಹಾರಾಜರವರಿಗೆ ಸಂಸ್ಥಾನದ ಆಳ್ವಿಕೆಯನ್ನು ವಹಿಸಿ ಬರುವವರಾಗಿದಾರೆ

ಒಳದೇಶದ ವೃತ್ತಾಂತಗಳು.

ಕರ್ನಲ್ ದೇಶರಾಜೇ ಅರಸಿನವರ ಮನೆಯ ಸಗನಾಭ್ಯಗಳು ಕಳುವಾಗಿ ಕೆಲವು ಕಳ್ಳರು ಸಿಕ್ಕಿರುತ್ತಾರೆ. ನಾಳೆ ಸೋಮವಾರ ಬೆಂಗಳೂರಿನಲ್ಲಿ ಈ ಮೊಕದ್ದಮೆ ದರ್ಯಾಪ್ತಿ ಆಗುವುದೆಂದು ಕೇಳುತ್ತೇವೆ.

****

ಮ॥ ಹಾಜಿ ಇಸ್ಮೈಲ್ ಸೇಟರು ಚಕ್ರವರ್ತಿಯವರ ಕಿರೀಟಧಾರಣೆ ಉತ್ಸವದ ಜ್ಞಾಪಕಾರ್ಥವಾಗಿ ಬ್ರಿಂಗ್‌ಪೇಟೆಯಲ್ಲಿ ಕಟ್ಟಿಸಿರುವ ಕಿಂಗ್ ಎಡ್ವರ್ಡ್ ಹಾಲ್ ಎಂಬ ಬಂಗಲೆಯಲ್ಲಿ ಮೂರು ಭಾರೀ ಕನ್ನಡಿಗಳನ್ನು ಇರಿಸಿದಾರೆ. ಈ ಪ್ರತಿ ನಮ್ಮ ಮಹಾರಾಜರವರ ದೊಡ್ಡ ಛಾಯಾಚಿತ್ರವು ಒಂದಾಗಿರುತ್ತದೆ.

ಚೇಂಬರ್ಲೆನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

32

ಶೀತ, ಕೆಮ್ಮು, ಗಂಟಲು ಗೊರಕೆನ್ನುವುದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿಸಲ್ಕೆ ಈ ಔಷಧವು ಬಹು ಪ್ರಖ್ಯಾತವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವುದು. ಶೀತವನ್ನು ಬಿಡದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಈ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಡಾಕ್ಟರ್ ಕುಪ್ಪಸಾಮಿ ಮೊದಲಿಯಾರ್ರಿಗೆ ರಾಜಧಾನಿಯ ಚಿಕ್ಕಮಗಳೂರು ಆಸ್ಪತ್ರೆಗೆ ವರ್ಗವಾದದರಿಂದ ಇಲ್ಲಿನ ಮ॥ [illegible] ಹುಳಾರ್ ಮಾದಪ್ಪನವರು ಮೊನ್ನೆ ರಾತ್ರಿ ಡಾಕ್ಟರನ್ನೂ ಅವರ [illegible] ಸ್ನೇಹಿತರನ್ನೂ ತಮ್ಮ ಮನೆಗೆ ಕರೆಸಿಕೊಂಡು, ಫಲಾಹಾರ [illegible] ಗೀತಾದಿಗಳಿಂದ ಸಂತೋಷಪಡಿಸಿ, ತಮ್ಮ ಕೃತಜ್ಞತೆಯನ್ನು ತೋರಿಸಿದರು

****

ಕೋಲಾರ್ ಗೋಲ್ಡ್‌ಫೀಲ್ಡ್ಸಿನ ಗಣಿಯಿಂದ ವಿಲಾಯಿತಿಗೆ ಕಳುಹಿಸಿದ್ದ ೪೮,೦೦೦ ರೂಪಾಯಿನ ಚಿನ್ನವು ಕಳುವಾಗಿ ಪತ್ತೆ ಆದದ್ದಕ್ಕೆ ಅಪರಾಧಿಗಳಿಗೆ ಚೀಫ್ ಕೋರ್ಟಿನಲ್ಲಿ ಶಿಕ್ಷೆ ವಿಧಿಸಲ್ಪಟ್ಟಿತು. ಈಚೆಗೆ ಆ ಕಂಪನಿಯವರು ಪೊಲೀಸಿನವರಿಗೂ ಇನ್ನು ಕೆಲವರಿಗೂ ಈ ಕಳುವನ್ನು ಪತ್ತೆ ಮಾಡಿದ್ದಕ್ಕೆ ಬಹುಮಾನ ಕೊಡಬೇಕೆಂದು ೨,೬೦೦ ರೂಪಾಯಿ ಹಂಚಿರುತ್ತಾರೆ

****

ಬೆಂಗಳೂರು ದಂಡಿನಲ್ಲಿ ಬ್ಯಾರಿಸ್ಟರಾಗಿದ್ದ ಮಿ॥ ಎಚ್ [illegible] ಬೆಕ್ ಯವರನ್ನು ನಾಲ್ಕು ತಿಂಗಳು ವಕಾಲತ್ತು ನಡಸಕೂಡದೆಂದು ರೆಸಿಡೆಂಟರು ಸಸ್ಪೆಂಡ್ ಮಾಡಿದ್ದರು. ಮಿ॥ ಬೋಲೆಕ್ ಯವರು ವಿಲಾಯತಿಯ ಪ್ರಿವಿ ಕೌನ್ಸಿಲ್ ಎಂಬ ನ್ಯಾಯಸ್ಥಾನದಲ್ಲಿ ಅಪೀಲ್ ಮಾಡಿ, ರೆಸಿಡೆಂಟರ ಹುಕುಮನ್ನು ರದ್ದುಪಡಿಸಿಕೊಂಡರೆಂತಲೂ ಅವರು ಇಷ್ಟರಲ್ಲೇ ವಾಪಸು ಬೆಂಗಳೂರಿಗೆ ಬರುವವರಾಗಿದಾರೆಂತಲೂ ತಿಳಿದುಬಂದಿದೆ.

****

ಕಳೆದ ೧೯೦೩ನೇ ಜುಲೈ ತಿಂಗಳಲ್ಲಿ ಲೇಟ್ ಪುರುಷೋತ್ತಮಾಚಾರ್ಯರವರು ಕಂಟ್ರಾಕ್ಟನ್ನು ಬಿಡಿ ಮಾಡಿದ ಸಂದರ್ಭದಲ್ಲಿ ರಾಜಧಾನಿಯಲ್ಲಿರುವ ಪ್ಲೀಡರ್ ಮಿ॥ ಬಿ ರಾಮಯ್ಯನವರ ಮೇಲೂ ಸರಸ್ವತಿ ಬಾಯಿ ಉರುಫ್ ಕೃಷ್ಣವೇಣೀ ಬಾಯಿ ಯವರ ಮೇಲೂ ಇವರು ೧೦,೦೦೦ ರೂಪಾಯಿ ತೆಗೆದುಕೊಂಡು ಮೋಸ ಮಾಡಿದರೆಂದು ಫಿರ್ಯಾದು ಮಾಡಿದ್ದರು. ಈ ಮೊಕದ್ದಮೆಯು ಅಲ್ಲಿಗಾಯಿತು ನಡೆಯುತ್ತಿತ್ತು. ಕಳೆದ ವಾರ ಮ್ಯಾಜಿಸ್ಟ್ರೇಟರು ಅಪರಾಧ ರುಜುವಾತಾಗಲಿಲ್ಲವೆಂದು ಹೇಳಿ ಈ ಮೊಕದ್ದಮೆಯನ್ನು ವಜಾ ಮಾಡಿದರೆಂದು ಕೇಳುತ್ತೇವೆ.

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರ ಬಂದ ಮುಖ್ಯ ತಂತೀ ವರ್ತಮಾನಗಳು.

ಲಂಡನ್, ಆಗಸ್ಟ್ ೭.—ರಷ್ಯಾದವರು ಆಮೂರ್ ನದೀ ಮುಖದಲ್ಲಿರುವ ತಮ್ಮ ಬಂದರುಗಳನ್ನು ಬಹು ಆತುರದಿಂದ ಬಲಪಡಿಸಿಕೊಳ್ಳುತ್ತಿದಾರೆಂತಲೂ, ಅಲ್ಲಿಗೆ ಹೊಸದಾಗಿ ರಷ್ಯಾ ಸೈನ್ಯಗಳು ಬಂದಿಳಿದವೆಂದೂ, ಆ ಬಂದರುಗಳಿಗೆ ಹೋಗುವ ಸಮುದ್ರ ಮಾರ್ಗದಲ್ಲಿ ರಷ್ಯಾದವರು ಯಂತ್ರಗಳನ್ನೂ ಫಿರಂಗಿಗಳನ್ನೂ ಇಟ್ಟಿದ್ದಾರೆಂದೂ ಜಪಾನ್ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ಪ್ರಕಟವಾಗಿದೆ.

ಮುಳುಗಿಸಿದ ಜಹಜುಗಳು.

ಪೋರ್ಟ್ ಆರ್ಥರಿನ ಬಳಿ ಸಮುದ್ರದಿಂದ ಎತ್ತಿದ ಪೊಲ್ಟಾವ ಮತ್ತು ಪೆರೆಸ್ವೆಟ್ ಎಂಬೀ ರಷ್ಯಾದವರ ಯುದ್ಧದ ಜಹಜುಗಳನ್ನು ಜಪಾನದವರು ಅಲ್ಲಿಂದ ತಮ್ಮ ರಾಜಧಾನಿಗೆ ಸಾಗಿಸಿಕೊಂಡು ಹೋಗುತ್ತಿದಾರೆ.

ಸಘಾಲಿಯನ್‌ನಲ್ಲಿ ಯುದ್ಧ ಕಾರ್ಯಗಳು.

ಲಂಡನ್, ಆಗಸ್ಟ್ ೧೧.—ಕಳೆದ ೮ನೇ ತಾರೀಖಿನಿಂದೀಚೆ ಸಘಾಲಿಯನ್ ದ್ವೀಪದಲ್ಲಿ ೨೪೧ ಮಂದಿ ರಷ್ಯಾ ಸೈನ್ಯದ ಉದ್ಯೋಗದಾರರೂ ಸೈನಿಕರೂ ಜಪಾನದವರ ಬಳಿಗೆ ಹೋಗಿ ಅವರಿಗೆ [illegible] ಶರಣಾಗತರಾದರು. ಜಪಾನದವರು ಇವರನ್ನೆಲ್ಲಾ ಯುದ್ಧದ ಖೈದಿಗಳಂತೆ ಹಿಡಿದು ಬಂಧನದಲ್ಲಿಟ್ಟಿದಾರೆ

ಕರಾರಿನ ಏರ್ಪಾಡುಗಳು.

ಕಳೆದ ವಾರ ಬಂದ ಮುಖ್ಯ ತಂತೀವರ್ತಮಾನಗಳು.

ಸಭೆ ಸಾವಕಾಶವಾಗುವುದು

ಲಂಡನ್, ಆಗಸ್ಟ್ ೭.—ರಷ್ಯಾ ಮತ್ತು ಜಪಾನ್ ರಾಯಭಾರಿಗಳು ಪೋರ್ಟ್ಸ್‌ಮತ್ ನಗರವನ್ನು ಕುರಿತು ಬೇರೆ ಬೇರೆ ಹಡಗುಗಳಲ್ಲಿ ಪ್ರಯಾಣಮಾಡುತ್ತಿದಾರೆ. ಆ ಪ್ರಾಂತ್ಯ ಮುಂಚಿನ ಅನಾರೋಗ್ಯ ಬಹಳ ಹೆಚ್ಚಾಗಿರುವುದರಿಂದ ಕರಾರಿನ ಸಭೆ ಸೇರುವುದು ಬಹುಶಾ ಬಾಧಕಾಂತರ ಬಹಳ ಸಾವಕಾಶವಾಗಬಹುದು.

ರಷ್ಯಾ ರಾಯಭಾರಿಯ ಕಾಯಿಲೆ

ಲಂಡನ್, ಆಗಸ್ಟ್ ೮ - ರಷ್ಯಾ ರಾಯಭಾರಿಯಾದ ಎಂ. ಡವಿಟ್ಟಿಯವರು ಸಮುದ್ರಯಾನದಿಂದುಂಟಾದ ಕಾಯಿಲೆಯಲ್ಲಿ ಬಿದ್ದಿದ್ದಾರೆ. ಅವರು ನ್ಯೂಯೋರ್ಕ ಎಂಬ ಬಂದರಿನಲ್ಲಿ ಹಡಗನ್ನಿಳಿದು, ಅಲ್ಲಿಂದ ಭೂಮಿಯ ಮೇಲೆಯೇ ಪೋರ್ಟ್ಸ್‌ಮತ್ ನಗರಕ್ಕೆ ಪ್ರಯಾಣಮಾಡಿದರು ಇವರು ನೆನ್ನೆಯಲ್ಲಾ ಬೋಸ್ಟನ್ ಪಟ್ಟಣದಲ್ಲಿದ್ದ ಹಾರ್ವರ್ಡ್ ಕಾಲೆಜ್ಜೆಂಬ ವಿದ್ಯಾಶಾಲೆಯನ್ನು ಹೋಗಿ ನೋಡಿಕೊಂಡುಬಂದರು.

ರಾಯಭಾರಿಗಳೆಲ್ಲಾ ಕಲಿತರು.

ರಾಯಭಾರಿಗಳೆಲ್ಲಾ ಈ ದಿನ ಪೋರ್ಟ್ಸ್‌ಮತ್ ನಗರವನ್ನು ಬಿಟ್ಟಿದ್ದಾರೆ.

ಸಭೆಯ ಏರ್ಪಾಡನ್ನು ನೋಡಿದರು.

ಲಂಡನ್, ಆಗಸ್ಟ್ ೯.—ಒಪ್ಪಂದ ಮಾಡಿಕೊಳ್ಳುವುದಕ್ಕಾಗಿ ಬಂದಿರುವ ರಾಯಭಾರಿಗಳೆಲ್ಲಾ ಒಂದೇ ಹೋಟೇಲಿನಲ್ಲಿ ಇಳಿದುಕೊಂಡಿದ್ದಾರೆ. ಇವರೆಲ್ಲಾ ಅಮೇರಿಕದ ಹಡಗುಗಳ ರಕ್ಷಣೆಯ ಕಡೆಗೆ ನೋಡಿಕೊಂಡು ಬಂದರು. ಅಲ್ಲಿ ಅಮೇರಿಕದ ಅಧಿಕಾರಿಗಳು ಪ್ರತಿಯೊಬ್ಬ ರಾಯಭಾರಿಗೂ ಸುಸ್ವಾಗತವನ್ನು ಬಯಸಿದರು. ಪ್ರತಿಯೊಬ್ಬ ರಾಯಭಾರಿಗೂ ಗೌರವಾರ್ಥಕ್ಕಾಗಿ ೧೯ ಫಿರಂಗಿಗಳನ್ನು ಹಾರಿಸಿದರು. ಅಮೇರಿಕದ ಅಡ್ಮಿರಲ್ ಮೀಡ್ ಯವರು ಅವರನ್ನು ಕರೆದುಕೊಂಡು ಹೋಗಿ ತಮ್ಮ ಆಯುಧಶಾಲೆ ಮುಂತಾದದ್ದನ್ನು ಅವರಿಗೆ ತೋರಿಸಿದರು. ಆಯುಧಶಾಲೆಯ ಉಗ್ರಾಣದ ಮನೆಯಲ್ಲಿ ರಾಯಭಾರಿಗಳು ಸೇರಿ ಕರಾರಿನ ವಿಷಯವನ್ನು ಚರ್ಚಿಸುವುದಕ್ಕೆ ಎಲ್ಲಾ ಏರ್ಪಾಡು ಮಾಡಿದಾರೆ. ಅಲ್ಲಿ ರಾಯಭಾರಿಗಳೆಲ್ಲಾ ಒಟ್ಟಾಗಿ ಕುಳಿತು ಭೋಜನಮಾಡಿದರು. ತರುವಾಯ ಅವರು ತಮ್ಮ ತಮ್ಮ ದಡದ ಹತ್ತಿರ ಹೋಟೆಲಿಗೆ ವಾಪಸು ಬಂದರು.

ರಷ್ಯಾ ರಾಯಭಾರಿಯ ಅಭಿಪ್ರಾಯ.

ಎಂ. ಡವಿಟ್ಟಿಯವರನ್ನು ಪ್ರಶ್ನೆಮಾಡಿದಾಗ ಅವರು — ಕರಾರು ಆಗುವುದಕ್ಕೆ ಮಾಡಬೇಕಾದ ಕಾರ್ಯಗಳಲ್ಲಿ ಒಂದನ್ನೂ ಬಿಡದೆ ಮಾಡಲು ಸಿದ್ಧನಾಗಿದ್ದೇನೆ. ಕರಾರು ಆಗುವುದೂ ಇಲ್ಲದೆ ಹೋಗುವುದೂ ಜಪಾನ್‌ನವರ ಮೇಲೆ ಬಿದ್ದ ಭಾರವಾಗಿದೆ. ಅವರು ರಷ್ಯದವರನ್ನು ಏನೇನು ಕೇಳುವರೆಂದು ನೋಡಬೇಕು ಕರಾರು ಆಗದೆ ಹೋಗುವುದಾದರೆ ಅದಕ್ಕೆ ಅಡ್ಡಿಮಾಡುವವರ್ಯಾರೆಂಬುದನ್ನು ಪ್ರಪಂಚದವರೆಲ್ಲಾ ತಮ್ಮಲ್ಲಿ ತಾವೇ ಗೊತ್ತುಮಾಡಿಕೊಳ್ಳಬಹುದಾಗಿದೆ ಎಂದು ಹೇಳಿದಾರೆ.

ಪ್ರಾರಂಭದ ಕಾರ್ಯಗಳು.

ರಾಯಭಾರಿಗಳು ಸಭೆ ಸೇರಿ ಅವರವರು ತಮ್ಮ ತಮ್ಮ ಚಕ್ರವರ್ತಿಯವರಿಂದ ಪಡೆದು ಬಂದಿದ್ದ ಅಧಿಕಾರ ಪತ್ರಿಕೆಯನ್ನು ಒಬ್ಬರಿಗೊಬ್ಬರು ತೋರಿಸಿದರು ರಾಯಭಾರಿಗಳು ಆ ಪತ್ರಿಕೆಗಳನ್ನು ನೋಡಿ ತೃಪ್ತಿಪಟ್ಟುಕೊಂಡರು.

ಭಾಷೆಗಳು.

ಇಂಗ್ಲಿಷಿನಲ್ಲೂ ಫ್ರೆಂಚ್ ಭಾಷೆಯಲ್ಲೂ ರಾಯಭಾರಿಗಳು ನಡೆಸುವುದೆಂತಲೂ ಬರವಣಿಗೆಯನ್ನು ಕೂಡ ಆ ಎರಡು ಭಾಷೆಗಳಲ್ಲಿ ಇಡಬೇಕೆಂತಲೂ ಅವರು ತೀರ್ಮಾನಿಸಿಕೊಂಡಿದಾರೆ. ನಾಳೆಯಿಂದ ಈ ಸಭೆಯ ಕಾರ್ಯಗಳು ಕ್ರಮವಾಗಿ ನಡೆಯುವವು.

ಸಭೆಯ ಕಾಲ

ಲಂಡನ್, ಆಗಸ್ಟ್ ೧೦—ರಾಯಭಾರಿಗಳೆಲ್ಲಾ ಕರಾರಿನ ವಿಷಯಗಳನ್ನು ಚರ್ಚಿಸುವುದಕ್ಕೆ ಬೆಳಗಿನ ಹೊತ್ತು ಮೂರು ಗಂಟೆಗಳ ಕಾಲವೂ ತರುವಾಯ ಮಧ್ಯಾಹ್ನಾತ್ಪರ ಎರಡುವರೆ ಗಂಟೆಗಳ ಕಾಲವೂ ಸಭೆ ಸೇರತಕ್ಕದ್ದೆಂದು ಗೊತ್ತಾಗಿದೆ.

ಕರಾರಾಗುವುದು ಅನುಮಾನವಾಗಿದೆ

ಜಪಾನ್‌ನವರ ಯುದ್ಧದ ಖರ್ಚನ್ನು ರಷ್ಯಾದವರು ಕೊಡುವುದು ಒಪ್ಪತಕ್ಕದ್ದಾಗಿರುವಂತೆ ಕಂಡು ಬರುವುದಿಲ್ಲವಾದಕಾರಣ ಕರಾರಿನ ಸಂಧಾನಗಳು ಸಾರ್ಥಕವಾಗಲಾರವೆಂದು ಪೋರ್ಟ್ಸ್‌ಮತ್ ನಗರದಲ್ಲೆಲ್ಲಾ ಪ್ರವಾದ ಉಂಟಾಗಿದೆ.

ಜಪಾನ್‌ನವರು ಕೇಳುವುದು.

ಜಪಾನ್‌ನವರ ಕರಾರಿನ ಕಲಮುಗಳನ್ನು ಬರೆದಿದ್ದ ಪತ್ರಿಕೆಯನ್ನು ಬ್ಯಾರನ್ ಕೊಮುರಾ ಯವರು ರಷ್ಯಾ ರಾಯಭಾರಿ ಎಂ. ಡವಿಟ್ಟಿಯವರಿಗೆ ಕೊಟ್ಟರು. ರಷ್ಯಾ ರಾಯಭಾರಿಗಳು ಅದನ್ನು ತೆಗೆದುಕೊಂಡು, ಅದರಲ್ಲಿ ಕಂಡ ವಿಷಯಗಳನ್ನು ಕುರಿತು ತಮ್ಮೊಳಗೆ ಚರ್ಚಿಸಿ ಆಲೋಚನೆ ಮಾಡಿ, ಜವಾಬನ್ನು ಕೊಡುವುದಾಗಿಯೂ ಪ್ರತ್ಯೇಕವಾಗಿ ಲಿಖಿತ ಮೂಲಕ ಕೊಡುತ್ತೇವೆಂದು ಹೇಳಿದರು. ಅಲ್ಲಿಯವರೆಗೆ ಸಭೆ ಸೇರುವುದನ್ನು ನಿಲ್ಲಿಸುವಂತೆ ಗೊತ್ತುಮಾಡಿದರು.

ಜಪಾನ್‌ನವರ ಕಲಮುಗಳು.

ಲಂಡನ್, ಆಗಸ್ಟ್ ೧೧ —ಜಪಾನ್‌ನವರು ನಷ್ಟದ್ರವ್ಯವೆಂಬುದನ್ನು ನಿಜಮಾಡಿ, ಯುದ್ಧಕ್ಕಾಗಿ ತಮಗೆ ಖರ್ಚಾಗಿರುವುದನ್ನು ಒಪ್ಪಿಸಿಕೊಡಬೇಕೆಂದೂ ಸಘೇಲಿಯನ್ ದ್ವೀಪವನ್ನು ರಷ್ಯದವರು ಬಿಟ್ಟುಕೊಡಬೇಕೆಂದೂ ಕೇಳಿದಾರೆ. ಇವೆರಡೇ ಮುಖ್ಯ ಕಲಮುಗಳೆಂದು ಕಾಣುತ್ತದೆ.

ರಷ್ಯಾ ರಾಯಭಾರಿಗಳ ಚರ್ಚೆ.

ಎಂ. ಡವಿಟ್ಟಿಯವರೂ ಬ್ಯಾರನ್ ರೋಸನ್‌ರವರೂ ಅವರ ಮಂತ್ರಾಲೋಚನೆಗೆ ಸೇರಿದ ಮೆಂಬರುಗಳ ಸಮೇತ ಒಂದು ಕೋಣೆಯಲ್ಲಿ ಸೇರಿ, ನೆನ್ನೆ ಮಧ್ಯಾಹ್ನ ನಾಲ್ಕು ಗಂಟೆಗಳ ತನಕ ಜಪಾನ್‌ನವರ ಕಲಮುಗಳನ್ನು ಕುರಿತು ಚರ್ಚೆಮಾಡಿಕೊಂಡರು.

ಜಪಾನ್‌ನವರು ಕೇಳುವ ವಿಷಯಗಳು.

ಜಪಾನ್‌ನವರು ರಷ್ಯಾದವರನ್ನು ಕೇಳುವ ಕಲಮುಗಳ್ಯಾವುವೆಂದರೆ—ಯುದ್ಧದ ಖರ್ಚುಕೊಡಬೇಕು, ಸಘೇಲಿಯನ್ ದ್ವೀಪವನ್ನು ಕೊಡಬೇಕು, ವಿಯಾಡಿವೋಸ್ಟಾಕ್ ಎಂಬ ಪಟ್ಟಣದ ಕೋಟೆ ಕೊತ್ತಳಗಳನ್ನು ಕೆಡವಬೇಕು, ಲಿಯಾಟೊಂಗ್ ಎಂಬ ಪರ್ಯಾಯದ್ವೀಪದಲ್ಲಿ ಅವರಿಗಿರುವ ಹಕ್ಕುಬಾಧ್ಯತೆಗಳನ್ನೆಲ್ಲಾ ಬಿಟ್ಟುಬಿಡಬೇಕು, ರಷ್ಯದವರು ಮ್ಯಾಂಚೂರಿಯಾವನ್ನು ಸಂಪೂರ್ಣವಾಗಿ ಬಿಟ್ಟು ಹೊರಟುಹೋಗಬೇಕು, ಹಾರ್ಬಿನ್ ನಗರದಿಂದ ದಕ್ಷಿಣಕ್ಕಿರುವ ರೈಲ್‌ರಸ್ತೆಯನ್ನು ಜಪಾನ್‌ನವರಿಗೆ ವಹಿಸಿ ಉತ್ತರಭಾಗದ ರೈಲನ್ನು ಇಟ್ಟುಕೊಳ್ಳಬೇಕು, ಕೊರಿಯಾ ರಾಜ್ಯದ ಮೇಲೆ ರಷ್ಯದವರು ಯಾವ ಅಧಿಕಾರವನ್ನೂ ನಡಿಸದೆ ಜಪಾನ್‌ನವರಿಗೆ ವಹಿಸಬೇಕು, ಪೂರ್ವಸಮುದ್ರದಲ್ಲಿ ರಷ್ಯದವರು ತಮ್ಮ ನೌಕಾಸೈನ್ಯವನ್ನು ಕಡಿಮೆ ಮಾಡಬೇಕು, ರಷ್ಯದವರು ಮ್ಯಾಂಚೂರಿಯಾದಲ್ಲಿ ಯಾವುದಾದರೂ ಹಕ್ಕು ಬಾಧ್ಯತೆಗಳನ್ನು ಪಡೆದುಕೊಂಡಿದ್ದರೆ ಅಂಥವುಗಳನ್ನು ವಾಪಸು ಚೀನದವರಿಗೆ ವಹಿಸಬೇಕು, ವ್ಲಾಡಿವೋಸ್ಟಾಕಿನಿಂದ ಬೇರಿಂಗ್ ಸಮುದ್ರ ದವರೆಗಿನ ಸಮುದ್ರದಲ್ಲಿ ಮೀನು ಹಿಡಿಯುವ ಹಕ್ಕನ್ನು ಜಪಾನ್‌ನವರಿಗೆ ವಹಿಸಿಕೊಡಬೇಕು, ಸಮುದ್ರದಲ್ಲಿ ಮುಳುಗಿಹೋಗಿರುವ ರಷ್ಯಾ ಹಡಗುಗಳನ್ನು ಜಪಾನ್‌ನವರು ತೆಗೆದುಕೊಳ್ಳುವಂತೆ ಅವರಿಗೆ ವಹಿಸಬೇಕು ಇವೇ.

ರಾಯಭಾರಿಗಳ ಅಧಿಕಾರಪತ್ರ.

ರಾಯಭಾರಿಗಳು ಪಡೆದು ಬಂದಿರುವ ಅಧಿಕಾರಪತ್ರಿಕೆಗಳನ್ನು ಓದಿ ನೋಡಿದಾಗ ತಿಳಿದು ಬಂದದ್ದೇನೆಂದರೆ—ರಷ್ಯಾರಾಯಭಾರಿಗಳು ಯಾವ ಕಲಮುಗಳನ್ನು ಒಪ್ಪಿಕೊಂಡು ರುಜು ಹಾಕುತ್ತಾರೋ ಅದಕ್ಕೆಲ್ಲಾ ಅವರ ಚಕ್ರವರ್ತಿಯವರೂ ಸಮ್ಮತಿಪಟ್ಟು ಅದರಂತೆ ರುಜು ಹಾಕುವವರಾಗಿದಾರೆ. ಆದರೆ ಜಪಾನ್ ಚಕ್ರವರ್ತಿಯವರು ಪ್ರತಿ ಕಲಮನ್ನೂ ತಮ್ಮ ರಾಯಭಾರಿಗಳ ಮೂಲಕ ಕೇಳಿ ತಿಳಿಕೊಂಡಲ್ಲದೆ ಯಾವುದಕ್ಕೂ ಸಮ್ಮತಿಪಟ್ಟು ರುಜು ಮಾಡುವವರಾಗಿಲ್ಲ; ರಾಯಭಾರಿಗಳು ಪ್ರತಿ ಕಲಮನ್ನೂ ತಮ್ಮ ಚಕ್ರವರ್ತಿಯವರಿಗೆ ತಿಳಿಸಿ ಅವರ ಅನುಮತಿಯನ್ನು ಪಡೆಯಬೇಕಾಗಿದೆ ಎಂದು ಗೊತ್ತಾಯಿತು. ಆದಕಾರಣ ರಷ್ಯಾ ರಾಯಭಾರಿಗಳು ತಮ್ಮ ಚಕ್ರವರ್ತಿಯವರ ಅಪ್ಪಣೆಯನ್ನು ತೆಗೆದುಕೊಂಡ ಹೊರತು ತಾವು ಸಹ ಯಾವ ಕಲಮಿಗೂ ರುಜು ಹಾಕುವುದಿಲ್ಲವೆಂದು ನೆನ್ನೆ ನಡೆದ ಮೀಟಿಂಗಿನಲ್ಲಿ ಹೇಳಿಬಿಟ್ಟರು.

ರಷ್ಯಾದವರು ಬರೆದುಕೊಟ್ಟ ಜವಾಬು.

ಲಂಡನ್, ಆಗಸ್ಟ್ ೧೨ —ರಷ್ಯಾದವರು ಜಪಾನ್‌ನವರ ಕಲಮುಗಳನ್ನು ನೋಡಿಕೊಂಡು ಜವಾಬನ್ನು ಬರೆದು ತಂದು ಒಪ್ಪಿಸಿದಾರೆ. ಈ ಜವಾಬಿನಲ್ಲಿ ಕಂಡು ಬರುವ ಮುಖ್ಯ ಸಂಗತಿಗಳೇನೆಂದರೆ—ರಷ್ಯಾದವರು ನಷ್ಟ ದ್ರವ್ಯ ಕೊಡಬೇಕೆಂಬುದನ್ನು ತಿರಸ್ಕಾರ ಮಾಡುವರು. ಮತ್ತು ಅವರು ಭೂಪ್ರದೇಶವನ್ನು ಜಪಾನ್‌ನವರಿಗೆ ವಹಿಸಲು ಸ್ವಲ್ಪವೂ ಒಪ್ಪುವುದಿಲ್ಲ. ರಷ್ಯಾದವರು ಯುದ್ಧದಲ್ಲಿ ಸೋತುಹೋಗಲಿಲ್ಲವೆಂದು ಹೇಳುತ್ತಾರೆ. ಆದರೆ ತಮಗೆ ಕೆಲವು ಅಪಜಯಗಳಾದವೆಂದು ಒಪ್ಪಿಕೊಳ್ಳುತ್ತಾರೆ. ಇಷ್ಟುಮಾತ್ರಕ್ಕೇ ಅವರು ಎಷ್ಟಾದರೂ ನಷ್ಟಮಾಡಿಕೊಂಡು ಕರಾರು ಮಾಡಿಕೊಳ್ಳಬೇಕೆಂಬ ಅಗತ್ಯವಿರುವುದಿಲ್ಲ. ಈ ಯುದ್ಧದ ಕಾರ್ಯಕಾರಣಗಳೆಲ್ಲಾ ಜಪಾನ್‌ನವರಿಗೇ ಸೇರಿದ್ದಾಗಿರುವುದರಿಂದ ಅದರ ಆದಾಯ ನಷ್ಟಗಳನ್ನು ಅವರೇ ವಹಿಸತಕ್ಕದ್ದಾಗಿದೆ ಎಂಬುದೇ.

ಕಲಮುಗಳನ್ನು ಕುರಿತು ಚರ್ಚೆ.

ಲಂಡನ್, ಆಗಸ್ಟ್ ೧೩.—ರಾಯಭಾರಿಗಳು ನೆನ್ನೆ ಸಭೆಸೇರಿ ಕರಾರಿನ ಮೊದಲನೇ ಕಲಮನ್ನು ಹಿಡಿದು ದಿನವೆಲ್ಲಾ ವಾಗ್ವಾದ ನಡಿಸಿ ಅಷ್ಟಕ್ಕೇ ನಿಲ್ಲಿಸಿದರು. ಅವರು ಈ ಕರಾರಿನಲ್ಲಿ ಕಂಡ ಎರಡು ಮುಖ್ಯಾಂಶಗಳನ್ನು ಅಂದರೆ ಯುದ್ಧದ ಖರ್ಚು ಕೊಡುವುದನ್ನೂ ಸಘೇಲಿಯನ್ ದ್ವೀಪವನ್ನು ಬಿಟ್ಟುಕೊಡುವುದನ್ನೂ ಸದ್ಯದಲ್ಲಿ ಚರ್ಚಿಸದೆ ಹಾಗೇ ತೆಗೆದಿಟ್ಟು, ಇತರ ವಿಷಯಗಳನ್ನು ಮೊದಲು ಚರ್ಚೆಮಾಡುವವರಾಗಿರುವಂತೆ ಪೋರ್ಟ್ಸ್‌ಮತ್ ನಗರದಿಂದ ತಿಳಿದುಬಂದಿದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ಪ್ರಶ್ನೆಗೆ ಉತ್ತರ.

ಅಯ್ಯಾ,

ಮಂಗಳೂರಿಗೆ ಬರುವ ಪ್ರಯಾಣಿಕರು ನಿಮ್ಮ ವೃತ್ತಾಂತ ಪತ್ರಿಕೆಯಲ್ಲಿ ಹಾಕಿಸಿದ ಪ್ರಶ್ನೆಯನ್ನು ಓದಿದೆನು. ಆದರಂತೆ ಪ್ರಯಾಣಿಕರು ಮಂಗಳೂರಿಗೆ ಯಾವದಿಕ್ಕಿಂದ ಬರುವರೆಂದು ತಿಳಿಯಲಿಲ್ಲ. ಅವರು ದಕ್ಷಿಣ ದಿಕ್ಕಿನಿಂದ ಬರುವವರಾದರೆ ಮಲಬಾರ್ ಜಿಲ್ಲೆಗೆ ಸೇರಿದ ಅಜೆಕಲ್ಲಿನ ವರೆಗೆ ರೈಲಿನಲ್ಲಿ ಬರಬಹುದು. ನಂತರ ಕಾಸರಗೋಡು ಮಂಜೇಶ್ವರಕ್ಕಾಗಿ ಮಂಗಳೂರಿಗೆ ಬರಬಹುದು. ಜಟಕಾಭಂಡಿ ಸಿಕ್ಕುವದಿಲ್ಲ. ಗಾಡಿ ಬಾಡಿಗೆಗೆ ಮಾಡಬೇಕು. ಅಥವಾ ಮಂಗಳೂರಿಗೆ ಬರುತ್ತಿರುವ ಭಂಡಿ ಸಿಕ್ಕಿದರೂ ಸಿಕ್ಕಬಹುದು. ಇದು ನಿರ್ಣಯವಲ್ಲ. ಬಾಡಿಗೆಗೆ ಮಾಡಿದರೆ ಮಳೆಗಾಲವಾದ್ದರಿಂ ೧೫ ರೂಪಾಯಿಗೆ ಕಡಿಮೆಯಾಗಿ ಗಾಡಿ ಸಿಕ್ಕುವಂತೆ ತೋರುವದಿಲ್ಲ. ಪೂರ್ವದಿಕ್ಕಿನಿಂದ ಬರುವದಾದರೆ ಮೈಸೂರಿನ ವರೆಗೆ ರೈಲಿನಲ್ಲಿ ಬರಬಹುದಷ್ಟೆ. ಆ ಮೇಲೆ ಮಡಿಕೇರಿ ವರೆಗೆ ರೈಲಿನಲ್ಲಿ ಬರಬಹುದಷ್ಟೆ. ಆ ಮೇಲೆ ಮಡಿಕೇರಿ ವರೆಗೆ ೫ ರೂಪಾಯಿ ಕೊಟ್ಟರೆ ಟಪ್ಪಾಲ್ ಟಾಂಗಾದಲ್ಲಿ ಬರಬಹುದು. ಆ ಮೇಲೆ ಬಾಡಿಗೆ ಗಾಡಿಯಲ್ಲಿ ಹೋಗಬೇಕಾಗುತ್ತದೆ. ಬಾಡಿಗೆ ಸುಮಾರು ೧೦ ರೂಪಾಯಿ ಕೊಡಬೇಕಾದೀತು. ಉತ್ತರ ದಿಕ್ಕಿನಿಂದ ಬರುವದಾದರೆ ಅಲ್ಲಿಲ್ಲಿ ಜಟಕಾ ಭಂಡಿ ಸಿಕ್ಕುತ್ತದೆ.

ಮಂಗಳೂರು ನಿವಾಸಿ.

ಫಸಲು ಕದ್ದದ್ದಕ್ಕೆ ಶಿಕ್ಷೆ.

ಅಯ್ಯಾ,

ಕೊಟ್ಟೂರಿಗೆ [ಸಬ್ ತಾಲ್ಲೂಕು] ಹೊಸಹಳ್ಳಿ ಸಮ್ಮತು ಮಾತ್ರ ವೆಂಕಟಪುರದ ಗ್ರಾಮದ ೧೮೩ ನೆ ನಂಬರು [ಇನಾಮು ಮಾಡಿಕೊಂಡವ]ರು ಶ್ಯಾನುಭೋಗರು ಪ್ರಸ್ತಾಪಿಸದ ಪಡದು ೨ ವರುಷಗಳಿಂದ ವಾರಕ್ಕೆ ಸಾಗುವಳಿ ಮಾಡುತ್ತಿದ್ದ ಮಾದಕ್ಕರು ಮುರಾರ್ಯಪ್ಪ, ಪುಟ್ಟತಿಮ್ಮಯ್ಯ, ತಿಮ್ಮಯ್ಯ ವಗೈರೇರು ಕಳೆದ ವೈಶಾಖ ಫಸಲಿಗೆ ಗದ್ದೆ ಸಾಗುವಳಿಮಾಡಿ ಇದ್ದದ್ದನ್ನು ಕಟಾವಿಗೆ ಬಂದನಂತರ ಭತ್ತದ ರಾಶಿ ಕಣದಲ್ಲಿ ಇದ್ದದ್ದನ್ನು ಇದೇ ಗ್ರಾಮದ ಶ್ಯಾನುಭೋಗ ಗಂಗಪ್ಪ, ಮಲ್ಲಯ್ಯ, ಹೊನ್ನಯ್ಯ, ತೋಡಯ್ಯ, ಚಿಕ್ಕಸಾಗರೆಯಲ್ಲಿರುವ ಲಿಂಗಾಪುರದ ಶ್ಯಾನುಭೋಗ ಸಾಬಾಂಡಪ್ಪನ ಮಗ ಬಸಣ್ಣ ಕೊಟ್ಟೂರಿಗೆ ರಾಜಪುರದ ಸಿದ್ದಣ್ಣನ ಬಸಪ್ಪದೇವರು, ದೊಡ್ಡಬಳ್ಳಾಪುರದ ತಾಲ್ಲೂಕು ಗೌಡನಕಟ್ಟೆ ಮಜರ ಕರೆಕಲ್ಲಹಳ್ಳಿ ಊರಗೌಡರ ದೊಡ್ಡಣ್ಣನ ಮಗ ಚಿಕ್ಕಸುಬ್ಬೇಗೌಡ ಮತ್ತು ಸಾಗ್ಗರೆ ನಾಯ್ಕರು ಮಾದಿಗರು ಗೊಲ್ಲರು ವಗೈರೇರು ಬಣದಲ್ಲಿದ್ದ ೧೦—೧೨ ಖಂಡುಗ ಭತ್ತದ ರಾಶಿಯನ್ನು ಕಳೆದ ಮೇ ತಿಂಗಳು ೧೭ ನೆ ತಾರೀಖು ಬುಧವಾರ ಬೆಳಗಿನ ೮—೯ ಗಂಟೆ ಸಮಯದಲ್ಲಿ ಬಂಡಿ ಜನಗಳು ಸಹ ಬಂದು ದೋಚಿಕೊಂಡು ಹೋಗಿದ್ದರು ಮತ್ತು ಬಣದಲ್ಲಿದ್ದ ತ್ರಿಮ್ಮಣ್ಣನನ್ನು ಹೊಡದು ಓಡಿಸಿ ದೋಚಿಕೊಂಡು ಹೋದ ಮೊಕದ್ದಮೆಯನ್ನು ರೈತ ಮುರಾರ್ಯಪ್ಪ ತಿಮ್ಮಯ್ಯರು ಡಿಸ್ಟ್ರಿಕ್ಟ್ ಪೊಲೀಸ್ ಸುಪ್ರೇಂಟ್ ಸಾಹೇಬರಲ್ಲಿ ಅರ್ಜಿ ಮೂಲಕ ತಿಳಿಸಿದ್ದಕ್ಕೆ ಕೊಟ್ಟೂರಿಗೆ ಅಮಲ್ದಾರರು ಜಮಾದಾರರು ಸಹ ಬಂದು ಮಾಡಿ, ಅಪರಾಧಿಗಳಿಂದ ನಿಜತ್ವವನ್ನು ಕಂಡುಹಿಡಿದು, ಮೊಕದ್ದಮೆಯನ್ನು ಮಧ್ಯಗಿರಿ ಪ್ರಾರ್ಸನಲ್ ಪರ ಕೋರ್ಟಿಗೆ ಹಾಜರು ಮಾಡಿದರು. ಅವರು ಈಗ ಗುಂಪಿನ ಮೇಲ್ಕಂಡ ಸುಬ್ಬೇಗೌಡ ವಗೈರೆ ೫ ಜನಗಳಿಗೆ ಫೀ ಇಸಂ ೧ ಕ್ಕೆ ೩ ತಿಂಗಳು ಕಠಿಣ ಸಜ ೫೦ ರೂಪಾಯಿ ಜುಲ್ಮಾನೆಯೂ ಬಾಕಿ ಮೂರು ಜನಕ್ಕೆ ಫೀ ಇಸಂ ೨೦ ರೂಪಾಯಿ ಜುಲ್ಮಾನೆಯೂ ೧ ತಿಂಗಳು ಸಜವೂ ವಿಧಿಸಿ ಇದಾರೆ

ಪ್ರತ್ಯಕ್ಷದರ್ಶಿ.

ಮಲೆನಾಡು ಕೆಲವು ವೇಳೆ ಬೈಲುಸೀಮೆಯೆನ್ನಿಸಿಕೊಳ್ಳಲಾರದೋ?

ಅಯ್ಯಾ,

ಈ ಮಲೆನಾಡಿನಲ್ಲಿ ಅನೇಕ ಕಾಡುಗಳಿದ್ದದರಿಂದ ಯಾವಾಗಲು ತರಕತ್ ಇಲ್ಲದೇ ಮಳೆ ಸುರಿಯುತ್ತಾ ಇತ್ತು. ಇತ್ತಲಾಗಿ ಆಗದಿ ಎರಡು ವರುಷಗಳಿಂದ ಮಳೆಯು ಬಹಳ ಕಮ್ಮಿಯಾಗುತ್ತಾ ಬಂದಿದೆ ಇದಕ್ಕೆ ಸರ್ಕಾರದವರೇ ಕಾರಣವೆಂದು ಈ ಪ್ರಾಂತ್ಯದವರೆಲ್ಲಾ ಗೊಣಗುಟ್ಟುತ್ತಾರೆ ಏತಕ್ಕೆಂದರೆ ಈ ಪ್ರಾಂತ್ಯಗಳಿಂದ ವಿಪರೀತವಾಗಿ ನಾಟಾ ಕತ್ತರಾಯಿಸಿ ಸಾಗಿಸುತ್ತಾರೆ ಮೊದಲು ಮರುವಿನಲ್ಲಿ ಭೋಗಿ ಎಂಬ ಒಂದೇ ಜಾತಿ ನಾಟಾವನ್ನು ಕಡಿಸುತ್ತಾರೆ ಎಂದು ಕೇಳುತ್ತಿದ್ದೆವು. ಈಗಲಾದರು ಬೇರೆ ಬೇರೆ ನಾಲ್ಕೈದು ಜಾತಿಯ ನಾಟಾಗಳನ್ನು ಕಡಿಸುತ್ತಿದ್ದಾರೆ. ರೈತರು ತಮ್ಮ ಜಮೀನಿಗೆ ಆಶ್ರಯವಾಗಿ ಬೆಳಸಿಕೊಂಡ ಮರಗಳನ್ನು ಸಹ ಅವರ ಬೊಟ್ಟಿಗಳನ್ನ ಕಿವಿಗೆ ಹಾಕಿಕೊಳ್ಳದೆ ಕತ್ತರಾಯಿಸುತ್ತಾ ಕಾಡುಗಳನ್ನು ಸೂರೆಮಾಡಿಸುತ್ತಾ ಇದ್ದಾರೆ. ಒಂದು ಮರವು ಕಡಿಯಲ್ಪಟ್ಟರೆ ಅದರ ಸುತ್ತುಮುತ್ತಲಿನ ನೂರಾರು ಚಿಕ್ಕ ಮರಗಳು ಏಳೆ ಕಾಲದಲ್ಲಿ ದೊಡ್ಡ ಮರದ ಬೀಳುವಿಕೆಯಿಂದ ನಾಶವಾಗುತ್ತವೆ. ಹೀಗೆ ಕಾಡುಗಳೆಲ್ಲವು ಬಯಲಾಗುತ್ತಾ ಬಂದಿದೆ ಈ ರೀತಿ ಕಾಡುಗಳು ನಾಶವಾಗುವದರಿಂದ ಮಳೆಯು ಕಮ್ಮಿಯಾಗುತ್ತದೆಂದು ಜನರು ಹೇಳುತ್ತಾರೆ ರೈತರಿಗೆ ರಿಯಾತಿಯಾಗಿ ನಾಟ ದೊರೆಯುತ್ತಿತ್ತು. ಇನ್ನು ಮುಂದೆ ಡಿಪೋದಿಂದಲೇ ನಾಟ ಕೊಂಡುಕೊಳ್ಳಬೇಕಾದೀತು. ರಿಯಾತಿಯಾಗಿ ಲೈಸೆನ್ಸು ಕೊಟ್ಟರೂ ನಾಟ ಸಿಕ್ಕುವದೇ ದುರ್ಲಭವೇ ಸರಿ ಯಾಕೆಂದರೆ ಗ್ರಾಮಾಂತರಗಳ ಕಾಡೆಲ್ಲಾ ನಾಶವಾಗುತ್ತಾ ಬಂದವೆ. ರೈತರು ಮಳೆಯಿಲ್ಲದುದಕ್ಕೂ ಕಾಡುಗಳು ಬಯಲಾಗುವದಕ್ಕೂ ಸಹ ಬಹು ದುಃಖದಲ್ಲಿ ಮುಳುಗಿದ್ದಾರೆ. ಚಕ್ಕಮಗಳೂರು ಟೈಲ್ ಕೃಷ್ಣಪ್ಪನವರ ತೋಟ ಗದ್ದೆಗಳ ಸುತ್ತಲು ಇದ್ದ ನಾಟ ಮರಗಳೆಲ್ಲಾ ಸೂರೆಮಾಡಲ್ಪಟ್ಟಿಟ ಅನೇಕ ಅರ್ಜಿ ಬರೆದುಕೊಂಡು ಬಿದ್ದಿದ್ದರು. ಇವರ ದೂರನ್ನು ಕೇಳುವವರೇ ಇಲ್ಲ. ದಸರಾ ಮೀಟಿಂಗಿಗೆ ಹೋಗುವ ಮೆಂಬರುಗಳು ಯೇನು ತಿಳಿಸುತ್ತಾರೋ ಶಿವನೇ ಬಲ್ಲ. ರೈತರ ಪ್ರತಿನಿಧಿಗಳೆಂದು ಹೋಗಿ ರೈತರ ತೊಂದರೆ ತಿಳಿಸದೇ ಇರುವರೋ? ಅಥವ ತಿಳಿಸಿದರೂ ಸರ್ಕಾರದವರು ವಿಚಾರಿಸುವದಿಲ್ಲವೋ? ಅಥವ ಸುನೀತಿಗೆ ವಿರೋಧವಾಗಿ ರೈತರಿಂದ ವಸೂಲು ಮಾಡುತ್ತಿರುವ ಅಡಿಕೆ ಸುಂಕದ ಗತಿಯಂತೇ ಇತರರೇ ಅಹವಾಲ್‌ಗಳು. ಗುರಿತಪ್ಪಿ ಗುಂಡಿಗೆ ಬೀಳುವವೋ ಗೊತ್ತು ಆಗುವದಿಲ್ಲ ಈ ಮೇಲೆ ಹೇಳಿದಂತೆ ಕಾಡುಗಳು ನಿರ್ನಾಮವಾಗಿ ಮಳೆ ಹೋದರೆ ಮಲೆನಾಡು ಮೇಲೆಗೆ ತನ್ನ ಹೆಸರು ಬದಲಾಯಿಸಿಕೊಳ್ಳದಿದ್ದಾಗ್ಯೂ ಕೇಡಿನ ಮಟ್ಟಿಗೆ ಅಡ್ಡಿ ಇಲ್ಲದೇ ತನ್ನ ಹೆಸರನ್ನು ಬದಲಾಯಿಸಿಕೊಳ್ಳಬಹುದೆಂತ ನಂಬಬಹುದು. ಅಂತು ಮಲೆನಾಡು ವಾಸಿಗಳು ಕ್ಷೀಣದೆಶಗೆ ಬಂದಿರುತ್ತಾರೆ. ಕೊಳೆಯ ರೋಗದಿಂದ ಅರೆಜೀವವಾಗಿದ್ದತು ಮಳೆಯ ದೆಸೆಯಿಂದ ಪೂರಾ ಪ್ರಾಣಬಿಡುವ ಕಾಲ ಬಂದಿರುತ್ತೆ.

ಮಲೆನಾಡಿನ ಒಬ್ಬ ರೈತ.

ಯೇಸುಸ್ವಾಮಿಯು ಮಾಡಿದ ಪ್ರಾರ್ಥನೆ

ನನ್ನ ತಂದೆಯೇ, ಸಾಧ್ಯವಾಗಿದ್ದರೆ, ಈ ಪಾತ್ರೆಯು (ಅಂದರೆ ಕಷ್ಟ) ನನ್ನನ್ನು ಬಿಟ್ಟುಹೋಗಲಿ, ಆದರೆ ನನ್ನ ಚಿತ್ತದಂತಲ್ಲ, ನಿನ್ನ ಚಿತ್ತದಂತೆಯೇ ಆಗಲಿ!

ತಂದೆಯೇ, ಕಾಲಬಂದದೆ; ನಿನ್ನ ಮಗನನ್ನು ಮಹಿಮೆಪಡಿಸು, ಆಗ ಮಗನು ನಿನ್ನನ್ನು ಮಹಿಮೆಪಡಿಸುವದಕ್ಕಾಗುವದು. ನೀನು ಅವನಿಗೆ ಯಾರ್ಯಾರನ್ನು ಕೊಟ್ಟಿದ್ದೀಯೋ, ಅವರೆಲ್ಲರಿಗೆ ಅವನು ನಿತ್ಯಜೀವವನ್ನು ಕೊಡಬೇಕೆಂದು ಅವನಿಗೆ ಎಲ್ಲಾ ಮನುಷ್ಯರಮೇಲೆ ಅಧಿಕಾರವನ್ನು ಕೊಟ್ಟಿಯಲ್ಲಾ. ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು. ಮಾಡಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ, ನಿನ್ನನ್ನು ಭೂಲೋಕದಲ್ಲಿ ಮಹಿಮೆಪಡಿಸಿದೆನು. ಈಗ ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು; ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು

ಲೋಕದೊಳಗಿಂದ ನೀನು ನನಗೆ ಕೊಟ್ಟ ಮನುಷ್ಯರಿಗೆ (ಶಿಷ್ಯರಿಗೆ) ನಿನ್ನ ಹೆಸರನ್ನು ತಿಳಿಯಪಡಿಸಿದೆನು. ಅವರು ನಿನ್ನವರಾಗಿದ್ದರು. ನೀನು ಅವರನ್ನು ನನಗೆ ಕೊಟ್ಟೆ, ಮತ್ತು ಅವರು ನಿನ್ನ ವಾಕ್ಯವನ್ನು ಕೈಕೊಂಡು ನಡೆದಿದ್ದಾರೆ. ನೀನು ನನಗೆ ಕೊಟ್ಟದ್ದೆಲ್ಲಾ ನಿನ್ನಿಂದಲೇ ಬಂದದೆ ಎಂದು ಈಗ ಅವರು ತಿಳುಕೊಂಡಿದ್ದಾರೆ. ಹ್ಯಾಗಂದರೆ ನೀನು ನನಗೆ ಕೊಟ್ಟ ಮಾತುಗಳನ್ನು ನಾನು ಅವರಿಗೆ ಕೊಟ್ಟಿದ್ದೇನೆ; ಅವರು ಅವುಗಳನ್ನು ಕೈಕೊಂಡು ನಾನು ನಿನ್ನ ಬಳಿಯಿಂದ ಹೊರಟುಬಂದವನೆಂದು ನಿಜವಾಗಿ ತಿಳಿದು, ನೀನೇ ನನ್ನನ್ನು ಕಳುಹಿಸಿಕೊಟ್ಟಿರುವದನ್ನು ನಂಬಿದ್ದಾರೆ. ನಾನು ಅವರಿಗೋಸ್ಕರ ಕೇಳಿಕೊಳ್ಳುತ್ತೇನೆ; ಲೋಕಕ್ಕೋಸ್ಕರ ಕೇಳಿಕೊಳ್ಳದೆ, ನೀನು ನನಗೆ ಕೊಟ್ಟವರಿಗೋಸ್ಕರವೇ ಕೇಳಿಕೊಳ್ಳುತ್ತೇನೆ, ಯಾಕಂದರೆ ನಿನ್ನವರಾಗಿದ್ದಾರೆ. ನನ್ನದೆಲ್ಲಾ ನಿನ್ನದೇ, ನಿನ್ನದೆಲ್ಲಾ ನನ್ನದೇ. ಮತ್ತು ಅವರಿಂದ ನನಗೆ ಮಹಿಮೆ ಉಂಟಾಗಿದೆ ಇನ್ನು ನಾನು ಲೋಕದಲ್ಲಿ ಇರುವದಿಲ್ಲ, ಅವರು ಲೋಕದಲ್ಲಿ ಇರುತ್ತಾರೆ ನಾನು ನಿನ್ನ ಬಳಿಗೆ ಬರುತ್ತೇನೆ. ಪವಿತ್ರನಾದ ತಂದೆಯೇ, ನಾವು ಒಂದಾಗಿರುವಹಾಗೆ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಅವರನ್ನು ಕಾಯುತ್ತಾಬಂದೆನು, ಅವರನ್ನು ಕಾಪಾಡಿದೆನು. ನಾಶನಕ್ಕೆ ಗುರಿಯಾದ ಆ ಮನುಷ್ಯನೇ [ಆತನನ್ನು ಶತ್ರುಗಳಿಗೆ ಹಿಡುಕೊಟ್ಟ ಯೂದನೆಂಬ ಶಿಷ್ಯನು] ಹೊರ್ತು ಅವರಲ್ಲಿ ಮತ್ಯಾರೂ ನಾಶವಾಗಲಿಲ್ಲ. ಆದರೆ ಈಗ ನಿನ್ನ ಬಳಿಗೆ ಬರುವವನಾಗಿದ್ದೇನೆ ಆದದರಿಂದ ಅವರಲ್ಲಿ ನನ್ನ ಆನಂದವು ಪರಿಪೂರ್ಣವಾಗಿರುವಂತೆ, ಲೋಕದಲ್ಲಿದ್ದು ಈ ಮಾತುಗಳನ್ನು ಆಡುತ್ತೇನೆ ನಾನು ನಿನ್ನ ವಾಕ್ಯವನ್ನು ಅವರಿಗೆ ಕೊಟ್ಟಿದ್ದೇನೆ; ಯಾಕಂದರೆ ನಾನು ಲೋಕದವನಲ್ಲದೆ ಇರುವ ಪ್ರಕಾರ ಅವರೂ ಲೋಕದವರಲ್ಲ ಆದಕಾರಣ ಲೋಕವು ಅವರಮೇಲೆ ದ್ವೇಷವಾಗಿ ಅದೆ. ಅವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವದಿಲ್ಲ, ಅವರನ್ನು ಕೆಡಕಿನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಲೋಕದವನಲ್ಲದೆ ಇರುವ ಪ್ರಕಾರ ಅವರೂ ಲೋಕದವರಲ್ಲ ಅವರನ್ನು ಸತ್ಯದ ಮೂಲಕವಾಗಿ ಪವಿತ್ರವಾಗಿ ಪ್ರತಿಷ್ಠೆಪಡಿಸು. ನಿನ್ನ ವಾಕ್ಯವೇ ಸತ್ಯವು. ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಅವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು ಅವರು ನಿಜವಾಗಿ ಪವಿತ್ರರಾಗಬೇಕೆಂದು ಅವರಿಗೋಸ್ಕರ ನಾನು ನನ್ನನ್ನು ಪವಿತ್ರವಾಗಿ ಪ್ರತಿಷ್ಠೆಪಡಿಸಿಕೊಳ್ಳುತ್ತೇನೆ.

ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿರುವದನ್ನು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರು ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ. ಇದಲ್ಲದೆ ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ. ನಾವು ಒಂದಾಗಿರುವ ಪ್ರಕಾರ ಅವರೂ ಒಂದೇ ಆಗಿರಬೇಕೆಂತಲೂ ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಸಿದ್ಧಿಗೆ ಬರಬೇಕೆಂತಲೂ ನೀನು ನನ್ನನ್ನು ಕಳುಹಿಸಿಕೊಟ್ಟಿರುವದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿರುವದೂ ಅವರಿಂದ ಲೋಕಕ್ಕೆ ತಿಳಿಯಬೇಕೆಂತಲೂ ನನ್ನ ಮಹಿಮೆಯನ್ನು ಕೊಟ್ಟಿದ್ದೇನೆ ತಂದೆಯೇ, ನೀನು ನನಗೆ ಕೊಟ್ಟವರು ಸಹ ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛೈಸುತ್ತೇನೆ. ನ್ಯಾಯಪರನಾದ ತಂದೆಯೇ, ಲೋಕವಂತೂ ನಿನ್ನನ್ನು ತಿಳಿಯಲಿಲ್ಲ, ಆದರೆ ನಾನು ನಿನ್ನನ್ನು ತಿಳಿದಿದ್ದೇನೆ, ಮತ್ತು ಇವರು ನೀನೇ ನನ್ನನ್ನು ಕೊಟ್ಟಿರುವದನ್ನು ತಿಳುಕೊಂಡಿದ್ದಾರೆ. ಇದಲ್ಲದೆ ನೀನು ನನ್ನಮೇಲೆ ಇಟ್ಟಂಥ ಪ್ರೀತಿಯು ಅವರಲ್ಲಿ ಇರಬೇಕೆಂತಲೂ ನಾನೂ ಅವರಲ್ಲಿ ಇರಬೇಕೆಂತಲೂ ನಾನು ಅವರಿಗೆ ನಿನ್ನ ಹೆಸರನ್ನು ತಿಳಿಸಿದ್ದೇನೆ, ಇನ್ನೂ ತಿಳಿಸುವೆನು.

ಒಬ್ಬ ಫರಿಸಾಯನು ಮಾಡಿದ ಪ್ರಾರ್ಥನೆ.

ಕೇವಲ ಪ್ರಾರ್ಥನೆಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು. ಅವರಲ್ಲಿ ಒಬ್ಬನು ಫರಿಸಾಯನು, [ಯೆಹೂದ್ಯ ಜನಗಳಲ್ಲಿ ಒಂದು ಗಂಗಡದವರು] ಇನ್ನೊಬ್ಬನು ಸುಂಕದವನು. [ಸುಂಕಾ ವಸೂಲು ಮಾಡುತ್ತಿದ್ದವರು] ಫರಿಸಾಯನು ನಿಂತುಕೊಂಡು [ಅಂದರೆ ರೀವಿಯಿಂದ ನಿಂತು] ತನಗೇ ಪ್ರಾರ್ಥಿಸಿದ್ದೇನಂದರೆ—ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ. ಆದ್ದರಿಂದ ನಿನಗೆ ಸ್ತೋತ್ರವಾಗಲಿ. ವಾರಕ್ಕೆ ಎರಡಾವರ್ತಿ ಉಪವಾಸಮಾಡುತ್ತೇನೆ. ನಾನು ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ ಅಂದನು. ಆದರೆ ಆ ಸುಂಕದವನು ದೂರದಲ್ಲಿ ನಿಂತುಕೊಂಡು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ತನ್ನ ಎದೆಯನ್ನು ಬಡುಕೊಳ್ಳುತ್ತಾ—ದೇವರೇ, ಈ ಪಾಪಿಯಾದ ನನಗೆ ಪ್ರಸನ್ನನಾಗು ಅಂದನು

ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ಇಳಿದು ತನ್ನ ಮನೆಗೆ ಹೋದನು. ಆ ಫರಿಸಾಯನು ಹಾಗೆ ಹೋಗಲಿಲ್ಲ ಯಾಕಂದರೆ ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನೂ ತಗ್ಗಿಸಲ್ಪಡುವನು. ಆದರೆ ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು.

ಇಂಡಿಯಾ ದೇಶದ ವೃತ್ತಾಂತಗಳು.

ಮಂಡಿ ಸಂಸ್ಥಾನದ ರಾಜಧಾನಿಯಲ್ಲಿ ಕಳೆದ ವಾರ ಭೂಕಂಪವಾಗಿ ಒಂದು ಮನೆ ಬಿದ್ದು ಐದು ಜನರು ಹತರಾದರು

❖❖❖❖

ಹಿಂದಿನ ವಾರ ಗುಜರಾತ್ ಪ್ರಾಂತ್ಯದಲ್ಲಿ ಸುರಿದ ಅಪಾರವಾದ ಮಳೆಯು ದೆಸೆಯಿಂದ ಅಹಮದಾಬಾದ್ ಪಟ್ಟಣದಲ್ಲೇ ಸುಮಾರು ೧೫ ಲಕ್ಷ ರೂಪಾಯಿನ ಸ್ಥಿರಚರ ಆಸ್ತಿಗಳು ಕೊಚ್ಚಿ ನಾಶವಾದವು.

❖❖❖❖

ಹಿಮಾಚಲ ಪರ್ವತದಲ್ಲಿ ಕಾಂಚನಗಂಗಾ ಎಂಬ ಶಿಖರದ ಮೇಲೆ ಹತ್ತಿ ಅದರ ಎತ್ತರವನ್ನು ಗೊತ್ತುಮಾಡುವದಕ್ಕೆ ಕಳೆದ ವಾರ ಹೇಳಿದ್ದ ದೊಡ್ಡ ಮನುಷ್ಯರು ಡಾರ್ಜಿಲಿಂಗಿನಿಂದ ಪ್ರಯಾಣ ಮಾಡಿದ್ದಾರೆ.

❖❖❖❖

ವಿಶಾಖಪಟ್ಟಣದ ಡಿಸ್ಟ್ರಿಕ್ಟಿನಲ್ಲಿ ನಾಗವಳ್ಳಿ ಎಂಬ ನಾಲಾ ಕಾಮಗಾರಿ ಮಾಡುವುದಕ್ಕೆ ಗವರ್ನಮೆಂಟನವರು ೧೦,೮೩,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಇದರಿಂದ ಆ ಪ್ರಾಂತ್ಯ ಸಾವಿರಾರು ಎಕರೆ ಜಮೀನು ತರೀ ಫಸಲಿಗೆ ಬರುವುದು.

❖❖❖❖

ಕಲ್ಕತ್ತಾ ಪಟ್ಟಣದಲ್ಲಿರುವ ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ ಎಂಬ ಸಂಘದವರು ಹಿಂದುಸ್ಥಾನದಲ್ಲಿ ಛಡಿ ಶಿಕ್ಷೆ ಮಾಡುವ ಕಾನೂನನ್ನು ವಜಾಮಾಡಬೇಕೆಂಬುದಾಗಿ ಬಂಗಾಳಾ ಗವರ್ನಮೆಂಟಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದಾರೆ

❖❖❖❖

ಬೊಂಬಾಯಿ ಪಟ್ಟಣದಲ್ಲಿರುವ ಎಲ್ಲಾ ಕೋಮಿನ ಸ್ತ್ರೀಯರೂ ಸೇರಿ, ವಿಲಾಯತಿ ರಾಜ್ಯದ ಯುವರಾಜರವರು ಬಂದು ಅಲ್ಲಿ ಇಳಿಯುವಾಗ್ಗೆ ಅವರ ಪತ್ನೀರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಬೇಕೆಂದು ಗೊತ್ತುಮಾಡಿಕೊಂಡಿದಾರೆ

❖❖❖❖

ಕಾಂಗ್ರಾ ಕಣಿವೆಯಲ್ಲಿ ಮೊನ್ನೆ ಭೂಕಂಪಕ್ಕೆ ಸಿಕ್ಕಿ ಬಿದ್ದುಹೋಗಿರುವ ಹಿಂದುಗಳ ಭಾರೀ ದೇವಸ್ಥಾನವನ್ನು ಮತ್ತೆ ಕಟ್ಟಬೇಕೆಂದು ಏರ್ಪಾಡುಮಾಡಿ, ಚಂದಾಹಣವನ್ನು ಎತ್ತುತ್ತಿದಾರೆ. ಇದಕ್ಕೆ ಎರಡು ಲಕ್ಷ ರೂಪಾಯಿ ಬೇಕಾಗುವುದೆಂದು ಅಂದಾಜು ಆಗಿದೆ.

❖❖❖❖

ಅಯೋಧ್ಯೆಯ ಬಹು ಮಂದಿ ತಾಲ್ಲೂಕ್‍ದಾರರು (ಭಾರಿ ಭಾರಿ ಜಮೀನ್‍ದಾರರು) ಸಭೆ ಸೇರಿ ಲಕ್ಷಾಂತರ ರೂಪಾಯಿ ಚಂದಾ ಕೂಡಿಸಿ, ಆ ಪ್ರಾಂತ್ಯ ಒಂದು ವೈದ್ಯವಿದ್ಯಾಶಾಲೆಯನ್ನು ಸ್ಥಾಪಿಸಿ ಅದಕ್ಕೆ ಪ್ರಿನ್ಸ್ ಆಫ್ ವೇಲ್ಸರವರ ಹೆಸರನ್ನಿಡಬೇಕೆಂದು ಗೊತ್ತುಮಾಡಿಕೊಂಡಿದಾರೆ.

❖❖❖❖

ಇಂಡಿಯಾ ಗವರ್ನಮೆಂಟನವರು ಟಿಬೆಟ್ಟಿನವರ ಸಂಗಡ ಕರಾರು ಮಾಡಿಕೊಂಡು ಬಂದಿದಾರಷ್ಟೆ. ಕರಾರಿನ ಪ್ರಕಾರ ಮೂವತ್ತು ವರುಷಗಳಿಂದ ತರುವಾಯ ಅವರು ಟಿಬೆಟ್ ರಾಜ್ಯವನ್ನು ಹಿಂತಿರಿಗಿ ಚೀಣಕ್ಕೆ ವಾಪಸು ಬಿಟ್ಟು ಕೊಡುವುದಿಲ್ಲವೆಂದು ನಿರಾಕರಿಸಿದಾರೆಂದು ಟೋಕಿಯೋ ಪಟ್ಟಣದ ವರ್ತಮಾನ ಪತ್ರಿಕೆಗಳು ತಿಳಿಸಿರುತ್ತವೆ.

❖❖❖❖

ಮದರಾಸ್ ಗವರ್ನರ್ ಲಾರ್ಡ್ ಆಂಪ್ಟಿಲ್ ಯವರು ಕೊಚ್ಚಿ ಸಂಸ್ಥಾನಕ್ಕೆ ದಯಮಾಡುವವರಾಗಿದಾರೆ. ಇವರನ್ನು ಸತ್ಕರಿಸುವುದಕ್ಕೋಸ್ಕರ ಆ ಸರ್ಕಾರದವರು ೫೦,೦೦೦ ರೂಪಾಯಿಗಳನ್ನು ಖರ್ಚುಮಾಡುವರು. ದೀಪದ ಕಮಲಂ, ಅನಂತತ್ತಂ, ಪೆರುಂಬಿಕಾಳಂ, ಈ ಪಟ್ಟಣಗಳಲ್ಲಿ ನಾನಾ ಪ್ರಕಾರವಾದ ಏರ್ಪಾಡುಗಳನ್ನು ಮಾಡುತ್ತಿದಾರೆ.

❖❖❖❖

ಕೊಚ್ಚಿ ಸಂಸ್ಥಾನದಲ್ಲಿ ಪಾಲ್ಘನಾಥ ಅಯ್ಯರ್ ಎಂಬೊಬ್ಬನು ತನ್ನ ಪಿತ್ರಾರ್ಜಿತವಾದ ೫—೬ ಲಕ್ಷ ರೂಪಾಯಿ ಜಮೀನುಗಳನ್ನು ಸರ್ಕಾರದವರು ತನ್ನಿಂದ ಕಿತ್ತುಕೊಂಡಿದಾರೆಂದೂ ಅವನ್ನು ತನಗೆ ಕೊಡಿಸಬೇಕೆಂದೂ ಸರ್ಕಾರದವರ ಮೇಲೆ ದಾವಾ ತಂದಿದಾನೆ. ಪ್ರಸಿದ್ಧ ವಕೀಲರಾದ ಸರ್ ಭಾಷ್ಯಂ ಅಯ್ಯಂಗಾರ್ಯರು ಅವನ ಕಡೆ ವಕೀಲರಾಗಿದಾರೆ.

ಹಿಂದುಸ್ಥಾನದ ಸಮಸ್ತ ಪಾಠಶಾಲೆಗಳಲ್ಲೂ ಬಾಲಕರಿ… ಧರ್ಮ ಸನ್ನಡತೆ ಭಕ್ತಿ ಶ್ರದ್ಧೆಗಳನ್ನು ಬಲಾತ್ಕಾರದಿಂದಲಾ… ಕಲಿಸುವುದಕ್ಕೆ ಏರ್ಪಾಡು ಮಾಡಿ ಹುಕುಂ ಕೊಡಬೇಕೆಂಬು… ಕಲ್ಕತ್ತೆಯಲ್ಲೂ ಅದರ ಸುತ್ತುಮುತ್ತಲೂ ಇರುವ ಅನೇಕ ಜ… ಳು ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು, ವೈಸ್‍ರಾ… ಲಾರ್ಡ್ ಕರ್ಜನ್‍ರವರಿಗೆ ಒಪ್ಪಿಸಿರುತ್ತಾರೆ

❖❖❖❖

ದೆಹಲಿ ಪಟ್ಟಣದ ಹಿಂದೂ ಕಾಲೇಜೆಂಬ ದೊಡ್ಡ ವಿದ್ಯಾ… ಯಲ್ಲಿ ರಾಮಾಯಣವನ್ನು ಹೇಳಿಕೊಡುವುದಕ್ಕಾಗಿ ಒಂದು … ಯನ್ನು ಇಟ್ಟಿದಾರೆ ಸಂಸ್ಕೃತ ಪಂಡಿತರಾದ ಮೆ॥ ರಘುವೀ… ದಯಾಳು, ಎಂ. ಎ. ಎಂಬ ಶಾಸ್ತ್ರಿಗಳು ರಾಮಾಯಣವನ್ನು … ಳಿಕೊಡುವರು ಈ ತರಗತಿಗೆ ಅನೇಕ ಮಂದಿ ಮಹಮದೀಯ… ಸೇರಿಕೊಂಡು, ಬಹು ಉತ್ಸಾಹದಿಂದ ರಾಮಾಯಣ ಮಹಾಭಾ… ಗಳನ್ನು ಓದಿ ಕಲಿತುಕೊಳ್ಳುತ್ತಾ ಬಂದಿದಾರೆ

❖❖❖❖

ಪಾರ್ವತೀಪುರದಲ್ಲಿ ಪೆದ್ದಮೆರಂಗಿ ರಾಜಕುಮಾರನನ್ನು … ಸೇವಕನೊಬ್ಬನು ಕಳೆದವಾರ ಕೊಂದುಹಾಕಿದನು. ಆ … ರನು ಆ ಸೇವಕನಿಗೆ ಯಾವ ಭಾಗದಲ್ಲೋ ತುಂಬಾ ಮೋಸ… ದನಂತೆ ಈ ಚಿಕ್ಕ ವಯಸ್ಸಿನ ರಾಜನಿಗೆ ಮದುವೆಯಾಗಿ … ತಿಂಗಳಾಗಿತ್ತು. ಇಂಥಾ ಭಯಂಕರವಾದ ಕೊಲೆಯು ಆ … ಶ್ಯದಲ್ಲಿ ತುಂಬಾ ಗಲಭೆಯನ್ನುಂಟುಮಾಡಿರುವುದೇನೂ ಆಶ್ಚ… ವಲ್ಲ ಆ ಪಾತಕಿಯಾದರೋ ಕೂಡಲೇ ಆತ್ಮಹತ್ಯಮಾಡಿಕೊಂಡ…

❖❖❖❖

ಕಳೆದ ಡಿಸೆಂಬರ್ ತಿಂಗಳಲ್ಲಿ ಮದರಾಸ್ ಗವರ್ನ… ಪತ್ನೀರವರು ಬೆಜವಾಡಾ ಪಟ್ಟಣದಲ್ಲಿ ಒಂದು ಆಸ್ಪತ್ರೆಯ ಕಟ್ಟ… ಕ್ಕೆ ಅಸ್ತಿಭಾರವನ್ನು ಹಾಕಿ ಬಂದರು. ಇದಕ್ಕೆ ಒಂದು ಲಕ್ಷ … ಪಾಯಿ ಖರ್ಚಾಗಿದೆ. ಆಸ್ಪತ್ರೆಯ ಕಟ್ಟಡವೆಲ್ಲಾ ಪೂರೈಸಿದ್ದರಿ… ಕಳೆದ ವಾರ ಮ್ಯುನಿಸಿಪಲ್ ಛೇರ್ಮನ್‍ರಾದ ಮೆ॥ ತಾಡಂಕಿ ವ… ಕಟನರಸೈಯನವರು ಪ್ರತಿಷ್ಠೆ ಮಾಡಿದರು ಅದಕ್ಕೆ ಮ್ಯುನಿಸಿ… ಪಾಲಿಟಿಯವರು ಅರ್ಧ ಹಣವನ್ನೂ ಗವರ್ನಮೆಂಟಿನವರು ಅ… ಹಣವನ್ನೂ ಕೊಟ್ಟಿದಾರೆ

❖❖❖❖

ಬೆಂಗಳೂರ್ ಪಟ್ಟಣದಲ್ಲಿರುವ ಹಿಂದುಗಳೆಲ್ಲಾ ಇದುವರೆಗೆ … ಗಳನ್ನು ಚಟ್ಟಕ್ಕೆ ಕಟ್ಟಿ ಬಹಿರಂಗವಾಗಿ ಹೊತ್ತುಕೊಂಡು … ಗುತ್ತಿದ್ದರು. ಇದೇ ಎಲ್ಲೆಲ್ಲೂ ಇರುವ ಹಿಂದುಗಳು ಇಟ್ಟುಕೊ… ಡಿರುವ ಪದ್ಧತಿಯಷ್ಟೆ. ಈಗ ಈ ಪದ್ಧತಿಯು ಅಸಹ್ಯಕರವಾ… ತಲೂ ಇನ್ನು ಮುಂದೆ ಪೆಟ್ಟಿಗೆಯಲ್ಲಿಟ್ಟು ಮುಚ್ಚಿ ಹೊಗಳ… ರುದ್ರಭೂಮಿಗೆ ಸಾಗಿಸಿಕೊಂಡು ಹೋಗಬೇಕೆಂತಲೂ ಅಲ್ಲಿ "ಸಮರಸಜ್ಞಾನ ಸನ್ಮಾರ್ಗ" ಸಭಾ ಎಂಬ ಸಮಾಜದವರು … ತ್ತುಮಾಡಿಕೊಂಡಿದಾರೆ.

❖❖❖❖

ಕಾಶೀ ಪಟ್ಟಣದ ಸಮೀಪದ ಘಾಟಿಯಲ್ಲಿ ೧೬ ವರುಷದ … ರು ಹುಡುಗರು ಸ್ನಾನಮಾಡುತ್ತಾ ಹಾಗೇ ಗಂಗೆಯಲ್ಲಿ ಮುಳು… ಕೊಂಡರು. ಬಾಬೂ ಹರಿಚರಣ ಭಟ್ಟಾಚಾರ್ಜಿ ಎಂಬೊಬ್ಬ… ಮಾಸ್ತರು ನದಿಯ ದಡದಿಂದ ಅವರನ್ನು ಕಂಡು, ತುಂಬಾ … ರದಿಂದ ನೀರಿನಲ್ಲಿ ಇಳಿದು, ಬಹಳ ಪ್ರಯಾಸಪಟ್ಟು ಅವರ… ನ್ನೂ ಎಳೆದು ತಂದು ಬದುಕಿಸಿದನು. ಅಲ್ಲಿನ ಡೆಪ್ಟಿ ಕಮಿಷನ… ವರು ಅವನ ಸಾಹಸಕ್ಕೆ ಮೆಚ್ಚಿ ಅವನಿಗೆ ಒಂದು ಚಿನ್ನದ ಪದಕ… ಬಹುಮಾನ ಮಾಡಿದರು.

❖❖❖❖

ಹೈದರಾಬಾದ್ ಸಂಸ್ಥಾನದ ನೈಜಾಮರವರು ತಮ್ಮ ರಾಜ… ನಿಯಲ್ಲಿ ಕೈಗಾರಿಕೆಗಳ ವಸ್ತು ಪ್ರದರ್ಶನೋತ್ಸವವನ್ನು … ಬೇಕೆಂದು ಗೊತ್ತುಮಾಡಿ, ಅದಕ್ಕೆ ಸರ್ಕಾರದಿಂದ ಒಂದು … ರೂಪಾಯಿ ಕೊಟ್ಟಿದಾರೆ. ಈ ಕಾರ್ಯಕ್ಕೆ ಸನ್ನಾಹ ಮಾಡುವ… ಕ್ಕಾಗಿ ಜಾಯಿಂಟ್ ರೆವಿನ್ಯೂ ಸೆಕ್ರೆಟರಿ ಮೆ॥ ಮಹಮ್ಮದ್ ಅಬ್ದು… ರಹೀಂ ಎಂಬ ಅಧಿಕಾರಿಯನ್ನು ನೇಮಕ ಮಾಡಿದರು. ಆ … ಸ್ಥಾನದಲ್ಲಿ ವ್ಯವಸಾಯವನ್ನೂ ಕೈಗಾರಿಕೆಗಳನ್ನೂ ಅಭಿವೃ… ಕರಬೇಕೆಂಬುವುದೇ ನೈಜಾಮರವರ ಮುಖ್ಯ ಉದ್ದೇಶವಾಗಿದೆ

❖❖❖❖

ಕಪೂರ್ಥಲ ಸಂಸ್ಥಾನದ ಮಹಾರಾಜರವರು ಫ್ರೆಂಚರ … ನಲ್ಲಿ ಪ್ರಯಾಣಮಾಡಿ, ಚೀನಾ ಜಪಾನ್ ರಾಜ್ಯಗಳಿಗೆ ಹೋಗಿ… ದರು. ಈಗ ಅವರು ತಮ್ಮ ಪ್ರಯಾಣದ ವೃತ್ತಾಂತವನ್ನೆಲ್ಲಾ … ದು ಒಂದು ಪುಸ್ತಕವನ್ನು ಪ್ರಕಟಿಸಿದಾರೆ ಅದರಲ್ಲಿ ಇಂಗ್ಲಿ… ಜಹಜಿನಲ್ಲಿ ಪ್ರಯಾಣಮಾಡಿದ್ದರೆ ಎಲ್ಲಾ ಸೌಕರ್ಯಗಳೂ ದೊ… ರಕುತ್ತಿದ್ದವೆಂತಲೂ ಫ್ರೆಂಚರ ಹಡಗಿನಲ್ಲಿ ಪ್ರಯಾಣ ಮಾಡಿ ನಾ… ತೊಂದರೆಗಳಿಗೆ ಗುರಿಯಾದೆನಾದ್ದರಿಂದ ಹಾಗೆ ಪ್ರಯಾಣಮಾ… ರದಾಗಿತ್ತೆಂದು ಈಗ ಪಶ್ಚಾತ್ತಾಪಪಡುತ್ತೇನೆಂತಲೂ ಬರೆದಿ…

❖❖❖❖

ಕಾಳಹಸ್ತಿ ರಾಜರು ಕಾಲವಾದಾಗಿನಿಂದ ಆ ಜಹಗೀರಿಯು ಮದರಾಸ್ ಗವರ್ನಮೆಂಟಿನವರು ಕೋರ್ಟ್ ಆಫ್ ವಾ… ಎಂಬ ಅಧಿಕಾರಿಗಳಿಂದ ನಡೆಸುತ್ತಿದ್ದರು. ಈಗ ಆ ರಾಜರ … ತಂದೆಗೇ ಆ ಜಹಗೀರಿ ಸೇರತಕ್ಕದ್ದೆಂದು ಗೊತ್ತಾದ್ದರಿಂದ ಸ… ರದವರು ಆ ಜನಕ ತಂದೆಯಾದ ಮೆ॥ ತಿಮ್ಮನಾಯುಡುಸಾಮಿ… ಯವರಿಗೆ ಅದನ್ನು ವಹಿಸಿರುತ್ತಾರೆ. ಇದನ್ನು ನೋಡಿ, ಗ… ರಾಜರ ಪತ್ನಿಯವರು (ಜನಕ ತಂದೆಯ ಸೊಸೆ) ಈಗ … ಆ ಜಹಗೀರಿಯು ತನ್ನಕ್ಕಿರುವುದೆಂತಲೂ ಅದನ್ನು ತನಗೇ ಕೊಡ… ಕೆಂತಲೂ ದಾವಾ ಮಾಡಿದಾರೆ.

ಪ್ರಿನ್ಸ್ ಆಫ್ ವೇಲ್ಸ್ ರವರು ಹಿಂದುಸ್ಥಾನದಲ್ಲಿ ಸಂಚಾರ ಮಾಡುವಾಗ್ಗೆ ಅವರ ತೈನಾತಿಯಲ್ಲಿ ಮೂರು ಸ್ಪೆಷಲ್ ರೈಲ್ ಗಾಡಿಗಳು ಇರುವವು. ಮುಂದೆ ಹೋಗುವ ಸ್ಪೆಷಲ್ ರೈಲಿನಲ್ಲಿ ಹಿಂದುಸ್ಥಾನದಲ್ಲೂ ವಿಲಾಯತಿಯೇ ಮೊದಲಾದ ಪರರಾಜ್ಯಗಳಲ್ಲೂ ಪ್ರಕಟವಾಗುವ ಮುಖ್ಯ ಮುಖ್ಯವಾದ ವರ್ತಮಾನ ಪತ್ರಿಕೆಗಳ ಬಾತ್ಮೀದಾರರುಗಳನ್ನು ಕೂರಿಸುವರು ಎರಡನೆಯ ಸ್ಪೆಷಲ್ ರೈಲಿನಲ್ಲಿ ಪ್ರಿನ್ಸ್ ರಾಯರವರೂ ಅವರ ಪತ್ನಿ ಪರಿವಾರದವರೂ ಪ್ರಯಾಣ ಮಾಡುತ್ತಾರೆ. ಮೂರನೇ ರೈಲನ್ನು ಅವರೆಲ್ಲರ ಸಾಮಾನು ಮುಂತಾದವುಗಳಿಗೆ ಬಿಡುವರು.

❖❖❖❖❖

ಕೆಲವು ದಿನಗಳ ಕೆಳಗೆ ಉತ್ತರ ದೇಶದಲ್ಲಿ ಈಸ್ಟ್ ಇಂಡಿಯಾ ರೈಲ್ವೆ ಕಂಪನಿಯ ನೌಕರನಾದ ಒಬ್ಬ ಟಿಕ್ಕೇಗಾರನು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಒಬ್ಬ ಮುಸಲ್ಮಾನ ಹೆಂಗಸನ್ನು ಬಲಾತ್ಕಾರದಿಂದ ಕೆಡಿಸಿದನೆಂದು ಮೊಕದ್ದಮೆ ಆಗಿ ಡಿಪ್ಯುಟಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿದಾಗ ಅವನ ಮೇಲೆ ಅಪರಾಧ ಸಾಬೀತಾಗದೆ ಹೋದ್ದರಿಂದ ಅವನನ್ನು ಖುಲಾಸ್ ಮಾಡಿಸಿದ ರಿಂದ ಈ ಮೊಕದ್ದಮೆಯಲ್ಲಿ ಅನ್ಯಾಯವಾಗಿದೆ ಎಂದು ಬಂಗಾಳದ ಲೆಫ್ಟಿನೆಂಟ್ ಗವರ್ನರವರಿಗೆ ಅನುಮಾನ ಕಂಡು ಬಂದದ್ದರಿಂದ ಹುಕುಂ ಕಳುಹಿಸಿ, ಈ ಮೊಕದ್ದಮೆಯ ಕಟ್ಟನ್ನೆಲ್ಲಾ ತರಿಸಿಕೊಂಡಿದಾರೆ.

❖❖❖❖❖

ಬಂಗಾಳಾ ಆಧಿಪತ್ಯವನ್ನು ಒಡೆದು ಅದರಲ್ಲಿ ಒಂದು ಭಾಗವನ್ನು ಆಸಾಮಿಗೆ ಸೇರಿಸಕೂಡದೆಂದು ಆ ಆಧಿಪತ್ಯದಲ್ಲಿರತಕ್ಕ ಬಂಗಾಳಿ ಪ್ರಜೆಗಳೆಲ್ಲಾ ಅನೇಕವೇಳೆ ನಾನಾ ಪ್ರಕಾರವಾಗಿ ಗವರ್ನಮೆಂಟಿನವರನ್ನು ಕೇಳಿಕೊಳ್ಳುತ್ತಿದಾರೆ. ಆದರೆ ಫರೀದ್ ಪುರದ ಅನೇಕ ಮಹನೀಯರು ಸಭೆಸೇರಿ—ಗವರ್ನಮೆಂಟಿನವರು ಮಾಡಿರುವ ಹೊಸ ಏರ್ಪಾಡು ಸರ್ವ ಸಮ್ಮತವಾಗಿದೆ ಎಂತಲೂ ಇದಕ್ಕಾಗಿ ವೈಸ್ರಾಯಿಯವರನ್ನು ವಂದಿಸುತ್ತೇವೆಂತಲೂ ತೀರ್ಮಾನಿಸಿ ಸರ್ಕಾರಕ್ಕೆ ತಿಳಿಸಿರುತ್ತಾರೆ ಈ ಸಭೆಯಲ್ಲಿ ಮೌಲ್ವಿ ಖಾಜಿ ಅಬ್ದುಸ್ ಸಮಾದ್ ಎಂಬೊಬ್ಬ ಮ್ಯಾಜಿಸ್ಟ್ರೇಟರು ಅಧ್ಯಕ್ಷತೆಯನ್ನು ವಹಿಸಿದ್ದರು.

❖❖❖❖❖

ಪಟ್ನಾ ಸಂಸ್ಥಾನದ ರಾಜರು 'ಸಿಕ್' ಮತ ವಿವೇಕವೆಂಬೊಂದು ಪುಸ್ತಕವನ್ನು ಬರೆದು ಪ್ರಕಟಿಸಿದಾರೆ ಈಗ ಸಿಕ್ ಮತದಲ್ಲಿ ಜನರು ವಿಗ್ರಹಗಳನ್ನು ಪೂಜಿಸಕೂಡದೆಂದು ಹೇಳಿ, ತಮ್ಮ ಪ್ರಸಿದ್ಧವಾದ ಸ್ವರ್ಣ ದೇವಾಲಯದಲ್ಲಿ ಪುರಾತನ ಕಾಲದಿಂದಲೂ ಇದ್ದ ವಿಗ್ರಹಗಳನ್ನೆಲ್ಲಾ ತೆಗೆದುಹಾಕಿಬಿಟ್ಟದ್ದರಿಂದ ಸಿಕ್ಕರಲ್ಲಿ ಎರಡು ಪಂಗಡಗಳುಂಟಾಗಿ ವಾಗ್ವಾದ ನಡೆಯುತ್ತಿದೆ ರಾಜರು ಪೂರ್ವಿಕರ ಆಚಾರ ಪದ್ಧತಿಗಳನ್ನು ಬಿಡುವುದು ತರವಲ್ಲವೆಂತಲೂ ವಿಗ್ರಹಗಳನ್ನು ಪೂಜಿಸುವುದು ಅವಶ್ಯವೆಂತಲೂ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದಾರೆ ಇದರಿಂದ ಆ ಮತಸ್ಥರಲ್ಲಿ ಸಭೆಗಳೂ ಚರ್ಚೆಗಳೂ ಉಂಟಾಗಿರುತ್ತವೆ

❖❖❖❖❖

ತಿರುವಾಂಕೂರು (ಅನಂತಶಯನ) ಸಂಸ್ಥಾನದ ಅರಮನೆಯಲ್ಲಿ ಕೆಲವು ಕಾಲಕ್ಕೆ ಮುಂಚೆ ಒಬ್ಬ ಸೇವಕನು ಸತ್ತುಹೋದನು. ಅವನಿಗೆ ಮೂರ್ಛೆ ರೋಗವಿತ್ತೆಂದು ಆಗ ಕಾರಣ ಹೇಳಿದರು. ಈಚೆಗೆ ಮತ್ತೆ ಇನ್ನೊಬ್ಬ ಸೇವಕನು ಮೃತಪಟ್ಟನೆಂದು ತಿಳಿದು ಬಂದಿದೆ. ಡಾಕ್ಟರ ಪರೀಕ್ಷೆಯಲ್ಲಿ ಇವನು ಆತ್ಮಹತ್ಯ ಮಾಡಿಕೊಂಡಂತೆಯೂ, ಯಾರೋ ಕೊಂದುಹಾಕಿದಂತೆಯೂ ವಿಧವಿಧವಾಗಿ ಹೇಳಿಕೊಳ್ಳುತ್ತಾರೆ. ಅರಮನೆಯಲ್ಲಿ ಅನುಮಾನಕ್ಕೆ ಕಾರಣವಾಗುವ ಕೃತ್ಯಗಳು ನಡೆಯುತ್ತವೆಂಬುದು ಜನರ ಅಭಿಪ್ರಾಯವಾಗಿರುವುದರಿಂದ ಅಧಿಕಾರಿಗಳು ಈ ವಿಷಯದಲ್ಲಿ ತನಿಖೆಮಾಡಿ ಸರಿಯಾದ ನಿಜಸ್ಥಿತಿಯನ್ನು ಬೇಗನೆ ಪ್ರಕಟಿಸುವುದು ಉತ್ತಮ.

❖❖❖❖❖

ಹಿಂದುಗಳಲ್ಲಿ ಬಾಲವಿತಂತು (ವಿಧವೆ) ಗಳಿಗೆ ಪುನರ್ವಿವಾಹ ಮಾಡಲೇ ಕೂಡದು ಎಂಬುವುದನ್ನು ಹಿಂದೂ ಶಾಸ್ತ್ರ ರೀತಿಯಾಗಿ ಸ್ಥಾಪಿಸತಕ್ಕ ಪುರುಷನಿಗೆ ೧,೦೦೦ ರೂಪಾಯಿ ಬಹುಮಾನ ಕೊಡುತ್ತೇನೆ ಎಂಬುದಾಗಿ "ಅಬಲಾ ಹಿತಕಾರಕ" ಎಂಬ ಪತ್ರಿಕೆಯ ಎಡಿಟರಾದ ಬಾಬೂ ಶಂಕರ ಲಾಲ್ ಎಂಬಾತನು ಪ್ರಕಟಿಸಿರುತ್ತಾನೆ. ಈಚೆಗೆ ಅತ್ತಲಾಗಿ ಬಿಜನೂರಿನಲ್ಲಿ ಬಾಲವಿಧವೆಯರಿಗೆ ಪುನರ್ವಿವಾಹ ಮಾಡಿಸುವುದಕ್ಕೋಸ್ಕರಲೇ ಕೆಲವರು ಸೇರಿ ಒಂದು ಸಂಘವನ್ನು ಮಾಡಿಕೊಂಡಿದಾರೆ. ಇವರು ಕಾಶಿ, ಅಲಹಾಬಾದ್ (ಪ್ರಯಾಗ), ಕಾನ್ಪುರ, ಲಕ್ನೋ, ಈ ಪಟ್ಟಣಗಳಿಂದ ಹಿಂದುಗಳಲ್ಲಿ ಶಾಸ್ತ್ರಗಳನ್ನು ಓದಿ ಪಂಡಿತರಾಗಿರುವಂಥಾ ಬ್ರಾಹ್ಮಣರನ್ನು ಕರೆಸಿಕೊಂಡು, ವಿಧವಾ ವಿವಾಹವಾಗಬಹುದೇ ಕೂಡದೇ ಎಂಬುದಾಗಿ ಚರ್ಚೆ ಮಾಡಿಸುತ್ತಿದಾರೆ.

❖❖❖❖❖

ಕುಷ್ಠ ರೋಗವನ್ನು ವಾಸಿಮಾಡುವುದಕ್ಕೆ ರಂಗೂನ್ ಪಟ್ಟಣದ ಡಾಕ್ಟರಾದ ಕ್ಯಾಪ್ಟನ್ ರಾಸ್ ಯವರು ಒಂದು ವಿಧವಾದ ಔಷಧವನ್ನು ಕಂಡುಹಿಡಿದು, ಅದರಿಂದ ಕುಷ್ಠರೋಗಿಗಳಿಗೆ ಚಿಕಿತ್ಸೆಮಾಡುತ್ತಿದಾರಷ್ಟೆ. ಈ ಔಷಧದಲ್ಲಿ ಅವರು ಹೇಳುವ ಸುಗುಣಗಳು ಇರುವವೋ ಇಲ್ಲವೋ ಎಂಬುದನ್ನು ಕಸೌಲಿ ಆಸ್ಪತ್ರೆಯ ಡಾಕ್ಟರ್ ಲೆಫ್ಟಿನೆಂಟ್ ಕರ್ನಲ್ ಸೆಂಪಲ್‌ರವರು ಪರೀಕ್ಷೆಮಾಡಿ ಒಂದು ರಿಪೋರ್ಟ್ ಪ್ರಕಟಿಸಿದಾರೆ. ಕ್ಯಾಪ್ಟನ್ ರಾಸ್ ಯವರು ಕಂಡು ಹಿಡಿದ ಔಷಧವನ್ನು ನಾನು ಅವರು ಹೇಳುವ ಪ್ರಕಾರ ಪರೀಕ್ಷೆ ಮಾಡಿದೆನು. ಅವರು ಹೇಳುವಂಥಾ ಸುಗುಣಗಳು ಈ ಔಷಧದಲ್ಲಿ ಕಂಡುಬರಲಿಲ್ಲ. ಈ ಔಷಧದ ಚಿಕಿತ್ಸೆಯನ್ನು ಮಾಡಿಸಿಕೊಂಡ ಕುಷ್ಠರೋಗಿಗಳಿಗೆ ಕೆಲವು ಕಾಲ ಗುಣವಾದಂತೆ ಕಂಡುಬರುತ್ತಿದಾಗ್ಯೂ ದರೂ ಸಂಪೂರ್ಣವಾಗಿ ಆರೋಗ್ಯವು ಅದರಿಂದ ನಿವಾರಣೆಯಾಗಲಾರದು ಎಂಬೀ ರೀತಿಯಾಗಿ ಹೇಳಿದಾರೆ.

❖❖❖❖❖

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಟಿನಾಸಿರಂ ಡಿವಿಜನ್ ಕಮಿಷನರಾದ ಮೆ॥ ಬಿ ಹ್ಯಾರಿಸವರು ಪೈನೆಪ್ಪೊಲಿ ಎಂಬೊಬ್ಬ ಹಿಂದುವನ್ನು ಹಿಡಿದು ಹೊಡೆದರು ಇವನು ಕೋರ್ಟಿನಲ್ಲಿ ಅವರ ಮೇಲೆ ಫಿರ್ಯಾದು ತಂದನು ಮೌಲ್ವಿ ಡಿಸ್ಟ್ರಿಕ್ಟ್ ಜಡ್ಜಿಯವರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡುವಲ್ಲಿ ಅಪರಾಧಿ ಕಮಿಷನರವರು ತಾವು ಅತನನ್ನು ಹೊಡೆದದ್ದು ತಪ್ಪೆಂತಲೂ ಅದಕ್ಕಾಗಿ ಪಶ್ಚಾತ್ತಾಪಪಡುವೆವೆಂತಲೂ ಹೇಳಿದರು. ಆ ಮೊದಲಿ ಹೇಳಿದಂತೆ ಕಮಿಷನರವರು ಕುಷ್ಠರೋಗಿಗಳ ಆಸ್ಪತ್ರೆಯ ಫಂಡಿಗೆ ೫೦೦ ರೂಪಾಯಿಗಳನ್ನೂ ಕುರುಡರ ಪಾಠಶಾಲೆಯ ಫಂಡಿಗೆ ೫೦೦ ರೂಪಾಯಿಗಳನ್ನೂ ಕೊಡುವುದಾಗಿ ಒಪ್ಪಿದರು ಫಿರ್ಯಾದಿಯು—ಆ ಪ್ರಕಾರ ಅವರು ಹಣಕೊಡುವುದಾದರೆ ನಾನು ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳುವೆನು ಎಂದು ಹೇಳಿದನು. ಜಡ್ಜಿಯವರು ಅದರಂತೆ ಮೊಕದ್ದಮೆಯನ್ನು ವಜಾಮಾಡಿದರು.

❖❖❖❖❖

ಬಂಗಾಳಾ ಆಧಿಪತ್ಯದಲ್ಲಿ ಈಗಿರುವ ಕೆಲವು ಭಾಗಗಳನ್ನು ಆಸಾಂ ಪ್ರಾಂತ್ಯಕ್ಕೆ ಸೇರಿಸಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ. ಇದರಿಂದ ಆ ಪ್ರಾಂತ್ಯದ ಬಂಗಾಳಿ ಪ್ರಜೆಗಳು ತುಂಬಾ ಅಸಮಾಧಾನಪಟ್ಟು, ಗವರ್ನಮೆಂಟಿಗೂ ವಿಲಾಯತಿಗೂ ಈ ಹುಕುಮನ್ನು ರದ್ದುಮಾಡಬೇಕೆಂದು ಅರ್ಜಿಗಳನ್ನು ಬರೆದುಕೊಂಡಿರುವರು ಕಾಸಿಂಬಜಾರಿನ ಮಹಾರಾಜರವರು, ಮಹಾರಾಜಾ ಸರ್ ಜ್ಯೋತೀಂದ್ರಮೋಹನ ಟಾಗೂರ್‌ಯವರು, ರಾಜಷಾಹಿ ಡಿವಿಜನ್ನಿನಲ್ಲಿರುವ ಮಹಾರಾಜರುಗಳು, ರಾಜರುಗಳು, ಜಮೀನ್ದಾರರು, ಈ ಮೊದಲಾದ ಮಹನೀಯರು ಸಹ ಅದರಂತೆಯೇ ವಿಲಾಯತಿಗೆ ಬರೆದುಕೊಂಡಿದಾರೆ ಇದಲ್ಲದೆ ಕಳೆದ ವಾರ ಕಲ್ಕತ್ತ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಸುಮಾರು ೮,೦೦೦ ಜನರು ಸಭೆ ಸೇರಿ, ಗವರ್ನಮೆಂಟಿನವರು ಕೊಟ್ಟಿರುವ ಹುಕುಮು ಪ್ರಜೆಗಳಿಗೆ ತುಂಬಾ ಕಷ್ಟ ದುಃಖ ಅನಾನುಕೂಲಗಳನ್ನುಂಟುಮಾಡಿದೆ ಎಂತಲೂ, ಆ ಹುಕುಮನ್ನು ವಾಪಸು ತೆಗೆದುಕೊಂಡು, ಇದುವರೆಗೆ ಇದ್ದಂತೆಯೇ ಬಂಗಾಳಾ ಆಧಿಪತ್ಯವನ್ನು ಒಡೆಯದೆ ಇಡಬೇಕೆಂತಲೂ ತೀರ್ಮಾನಮಾಡಿ, ಈ ತೀರ್ಮಾನಗಳನ್ನು ಇಂಡಿಯಾ ಗವರ್ನಮೆಂಟಿನ ಮೂಲಕ ವಿಲಾಯತೀ ಗವರ್ನಮೆಂಟಿಗೆ ಕಳುಹಿಸುತ್ತೇವೆ. ಈ ಹುಕುಮನ್ನು ಸರ್ಕಾರದವರು ರದ್ದುಮಾಡದೆಹೋದರೆ ಆ ಪ್ರಾಂತ್ಯದ ಪ್ರಜೆಗಳ್ಯಾರೂ ವಿಲಾಯತಿಯಿಂದ ಬರತಕ್ಕ ಯಾವ ಸರಕನ್ನೂ ಕೊಂಡುಕೊಳ್ಳದಂತೆ ಈ ಸಭಿಕರು ಕಟ್ಟುಮಾಡಿಕೊಂಡಿದಾರೆ. ಈಗಾಗಲೇ ಅಲ್ಲಿನ ಕೆಲವರು ಸೀಮೆಯಿಂದ ಬರುವ ಸಕ್ಕರೆಯನ್ನು ಕೊಂಡುಕೊಳ್ಳದೆ ಒಳದೇಶದಲ್ಲಿ ಆಗತಕ್ಕ ಬೆಲ್ಲ ಸಕ್ಕರೆಗಳನ್ನೇ ಉಪಯೋಗಿಸಲಾರಂಭಿಸಿರುವಂತೆ ಪ್ರಕಟವಾಗಿದೆ. ಈ ವಿಷಯದಲ್ಲಿ ಆ ಪ್ರಾಂತ್ಯದ ಜನರಿಗೂ ಗವರ್ನಮೆಂಟಿನವರಿಗೂ ಈಗ ಉಂಟಾಗಿರುವಷ್ಟು ವಿಶೇಷ ಅಸಮಾಧಾನವು ಹಿಂದೆ ಯಾವಾಗಲೂ ಆಗಿರಲಿಲ್ಲ.

ವಿದೇಶ ವರ್ತಮಾನಗಳು.

ಸ್ವೀಡನ್ ರಾಜ್ಯದ ದೊರೆಯವರು ಮತ್ತೆ ಕಾಯಿಲೆ ಬಿದ್ದುಕೊಂಡಿದಾರಾದ್ದರಿಂದ ಅವರ ಹಿರೀ ಮಗನು ರೀಜೆಂಟೆಂಬ ಹೆಸರನ್ನು ವಹಿಸಿ ರಾಜ್ಯಭಾರವಮಾಡುತ್ತಿದಾನೆ.

❖❖❖❖❖

ಜರ್ಮನಿಯ ವರ್ತಕಸಂಘದವರು ಆಸ್ಟ್ರೇಲಿಯಾ ದ್ವೀಪದೊಳಗೆ ಕಲ್ಲಿದ್ದಲು ಸಿಕ್ಕುವ ೬,೦೦೦ ಎಕರೆ ಜಮೀನನ್ನು ೩೮ ಲಕ್ಷ ದ್ರವ್ಯವನ್ನು ಕೊಟ್ಟು ಕೊಂಡುಕೊಂಡು, ಗಣಿಗಳನ್ನು ತೆಗೆಯಲಾರಂಭಿಸುತ್ತಿದಾರೆ.

❖❖❖❖❖

ಕಳೆದ ವಾರ ಯೂರೋಪ್, ಅಮೇರಿಕ ಖಂಡಗಳ ಕೆಲವು ಭಾಗಗಳಲ್ಲಿ ಕೆಲವು ವೇಳೆ ಬಹು ಉಷ್ಣವಾದ ಗಾಳಿ ಬೀಸಿತು. ಅನೇಕ ಪ್ರಜೆಗಳು ಈ ಸೆಕೆಯನ್ನು ಸಹಿಸಿಕೊಳ್ಳಲಾರದೆ ಮೂರ್ಛೆಹೋದರು ಆ ಪೈಕಿ ಕೆಲವರು ಪ್ರಾಣವನ್ನು ಬಿಟ್ಟರು

❖❖❖❖

ಸಯಾಂ ರಾಜ್ಯದಲ್ಲಿ ಬ್ಯಾಂಕಾಕ್ ನಗರದ ಸರ್ಕಾರಿ ಖಜಾನೆಯಲ್ಲಿ ಅಪಾರವಾದ ದ್ರವ್ಯ ಕಳುವಾಗಿರುವುದು. ಖಜಾನಾಧಿಪತಿಯವರೂ ಅವರ ಸಹೋದರನೂ ಸೇರಿ ೩ ಲಕ್ಷ ದ್ರವ್ಯವನ್ನು ಅಪಹರಿಸಿದರೆಂದು ಅವರನ್ನು ಹಿಡಿದು ಬಂದೀಖಾನೆಯಲ್ಲಿ ಇಟ್ಟಿದಾರೆ.

❖❖❖❖

ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರ ಕುಮಾರ್ತೆಯು ದೇಶಾಟನೆ ಮಾಡಿಕೊಂಡು, ಜಪಾನ್ ರಾಜ್ಯಕ್ಕೆ ಹೋಗಿದಾರೆ ಚಕ್ರವರ್ತಿಯವರು ಆಕೆಯನ್ನು ವಿಶೇಷ ಸನ್ಮಾನ ಪೂರ್ವಕವಾಗಿ ಎದುರುಗೊಂಡು ನಾನಾ ಸಂತೋಷೋತ್ಸವಗಳನ್ನು ಮಾಡಿಸಿ ಸತ್ಕರಿಸುತ್ತಿರುವರು

❖❖❖❖❖

ವಿಲಾಯತಿಯಲ್ಲಿ ಲಿವರ್‌ಪೂಲ್ ಪಟ್ಟಣದಿಂದ ಸೌತ್‌ಪೋರ್ಟಿಗೆ ಅತ್ಯಂತ ವೇಗವಾಗಿ ಹೋಗುತ್ತಿದ್ದ ವಿದ್ಯುಚ್ಛಕ್ತಿಯ ರೈಲ್‌ಗಾಡಿಯು ಒಂದು ಕಡೆ ನಿಂತಿದ್ದ ರೈಲ್‌ಗಾಡಿಗೆ ಬಡಿದು ಅನಾಹುತವಾಯಿತು. ಇದರಿಂದ ೨೨ ಮಂದಿ ಪ್ರಯಾಣಿಕರು ಮೃತಪಟ್ಟರು, ಅನೇಕರಿಗೆ ನಾನಾ ಗಾಯಗಳಾದವು.

ಸ್ವತಂತ್ರವಾಗಿ ಓಡುವ ಮೋಟರ್ ಕಾರ್ ಎಂಬ ಗಾಡಿಗಳಲ್ಲಿ ಕುಳಿತು ಆಗಿಂದಾಗ್ಗೆ ಒಂದೆರಡು ಸಲ ಸ್ವಲ್ಪ ದೂರ ಸವಾರಿ ಮಾಡುತ್ತಾ ಇದ್ದರೆ ದೇಹಸ್ಥಿತಿಯು ಬಹಳ ಸೌಖ್ಯವಾಗುತ್ತೆಂತಲೂ, ನಿದ್ರೆ ಚನ್ನಾಗಿ ಹತ್ತಿ, ತಿಂದ ಆಹಾರ ಪಚನವಾಗಿ ಬಲ ಬರುವುದೆಂತಲೂ, ಈ ಮೂಲಕ ಆಯುರ್ದಾಯವೂ ಹೆಚ್ಚುವುದೆಂತಲೂ ಕೆಲವು ಡಾಕ್ಟರುಗಳು ಹೇಳುತ್ತಾರೆ.

❖❖❖❖❖

ಲಂಡನ್ ಪಟ್ಟಣದಲ್ಲಿ ಮೂಗು ಪ್ರಾಣಿಗಳ ಚಿಕಿತ್ಸೆಗೋಸ್ಕರ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಲಾರಂಭಿಸಿದಾರೆ. ಸುಮಾರು ೨೦೦ ಮಂದಿ ವಿದ್ಯಾರ್ಥಿಗಳು ಈ ಮೂಗು ಪ್ರಾಣಿಗಳ ರೋಗ ಚಿಕಿತ್ಸೆ ಮಾಡುವುದು ತುಂಬಾ ಪುಣ್ಯಕಾರ್ಯವಾಗಿರುತ್ತೆಂಬುದಾಗಿ ಉಪನ್ಯಾಸಗಳನ್ನು ಮಾಡುತ್ತಲೂ ಧರ್ಮಾತ್ಮರುಗಳಿಂದ ಚಂದಾ ಕೂಡಿಸುತ್ತಲೂ ಇದಾರೆ.

❖❖❖❖❖

ರಷ್ಯಾ ರಾಜ್ಯದ ಸೈನ್ಯದ ಇಲಾಖೆಯಲ್ಲಿರುವ ಲೆಕ್ಕಪತ್ರಗಳನ್ನೂ ಜಮಾಖರ್ಚನ್ನೂ ತನಿಖೆಮಾಡುತ್ತಿದಾರೆ. ಇದುವರೆಗೆ ತನಿಖೆ ಮಾಡಿದ್ದರಲ್ಲಿ ಆ ಇಲಾಖೆಯೊಳಗಿರುವ ನೌಕರರು ಮೂರುಕೋಟಿ ದ್ರವ್ಯವನ್ನು ತಿಂದುಹಾಕಿದಾರೆಂದು ಗೊತ್ತಾಗಿದೆ. ತನಿಖೆಯೆಲ್ಲಾ ಪೂರೈಸುವಾಗ್ಗೆ ಇನ್ನೆಷ್ಟು ಹಣ ದುರುಪಯೋಗವಾದದ್ದು ಹೊರಪಡುವುದೋ ಹೇಳಲಾಗದು.

❖❖❖❖❖

ಕೆಲವು ದಿನಗಳ ಕೆಳಗೆ ಲಂಡನ್ ಪಟ್ಟಣದ ಮೂರು ಮೊಹಲ್ಲಾಗಳಲ್ಲಿ ಒಂದು ತರಹಾ ಸೊಳ್ಳೆಗಳು ಗುಂಪು ಗುಂಪಾಗಿ ಕಾಣಿಸಿಕೊಂಡು, ಅನೇಕ ಪ್ರಜೆಗಳನ್ನು ಕಚ್ಚಿದವು ಡಾಕ್ಟರುಗಳು ಅವರಿಗೆ ಚಿಕಿತ್ಸೆ ಮಾಡುವುದರಲ್ಲಿ ಆಸಕ್ತರಾಗಿದಾರೆ ಎಂದು ತಿಳಿದು ಬರುವ ಕಾರಣ ಈ ಸೊಳ್ಳೆಗಳು ಸಾಧಾರಣವಾದವುಗಳಲ್ಲವೆಂತಲೂ ವಿಜಾತೀಯವಾದವುಗಳೆಂತಲೂ ತೋರುವುದು.

❖❖❖❖❖

ದಕ್ಷಿಣ ಆಫ್ರಿಕಕ್ಕೆ ಹಿಂದುಸ್ಥಾನದಿಂದ ಹೋಗಿ ನಾನಾ ಉದ್ಯೋಗಗಳನ್ನು ಮಾಡುತ್ತಿರುವ ಹಿಂದು ಮೊದಲಾದ ಜನಾಂಗದವರಿಗೆ ಅಲ್ಲಿನ ಸರ್ಕಾರದವರು ನಾನಾ ಪ್ರತಿಬಂಧಕಗಳನ್ನಿಟ್ಟು, ಕರೆಯುತ್ತದಂತೆ ಮಾಡುತ್ತಿದಾರೆ. ಇದರ ನಿಜಸ್ಥಿತಿಯನ್ನು ಕುರಿತು ತನಿಖೆ ಮಾಡುವುದಕ್ಕಾಗಿ ಕೆಲವು ದೊಡ್ಡ ಮನುಷ್ಯರನ್ನು ವಿಲಾಯತಿ ಸರ್ಕಾರದವರು ನೇಮಿಸಿರುವರು

❖❖❖❖❖

ಜಪಾನ್ ರಾಜ್ಯದವರು ಯುದ್ಧದಲ್ಲಿ ಹಿಡಿದು ಹಿಮೋಜಿ ಎಂಬ ರಾಜ್ಯದ ಬಂದೀಖಾನೆಯಲ್ಲಿಟ್ಟಿರುವ ರಷ್ಯಾಸೈನಿಕರು ಇದ್ದ ತಮ್ಮಲ್ಲೇ ಒಗ್ಗಟ್ಟು ಮಾಡಿಕೊಂಡು, "ಖೈದಿಗಳ ಪತ್ರಿಕೆ" ಎಂಬ ಒಂದು ವರ್ತಮಾನ ಪತ್ರಿಕೆಯನ್ನು ಬರೆದು ಪ್ರಕಟಿಸಲಾರಂಭಿಸಿದಾರೆ. ಇದನ್ನು ಜಪಾನಿಗೆ ಖೈದಿಗಳಾಗಿ ಹೋಗಿರುವ ರಷ್ಯಾಸೈನಿಕರೆಲ್ಲಾ ತರಿಸಿಕೊಂಡು ಓದುತ್ತಿರುವರು

❖❖❖❖❖

ರಷ್ಯಾ ರಾಜ್ಯದ ಯುದ್ಧದ ಹಡಗುಗಳ ಅಧಿಪತಿಯಾಗಿದ್ದು ಟ್ಸುಷೀಮಾ ಎಂಬ ಸಮುದ್ರಯುದ್ಧದಲ್ಲಿ ಗಾಯಪಟ್ಟು ಸೋತು ಜಪಾನವರಿಗೆ ಕೈಸೆರೆ ಸಿಕ್ಕಿ ಅವರ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವ ಅಡ್ಮಿರಲ್ ರಾಸ್‌ಡೆಸ್ಟ್‌ವೆನ್ಸ್ಕಿಯವರು ವಯಸ್ಸಾದವರಾದಕಾರಣ ಅವರ ಗಾಯಗಳು ಬೇಗನೆ ವಾಸಿಯಾಗುತ್ತಾ ಇಲ್ಲ. ಅವರ ಮುಖದ ಒಂದು ಎಲುಬನ್ನು ಶಸ್ತ್ರಹಾಕಿ ತೆಗೆಯಬೇಕಾಗಿದೆ. ಅವರ ಮೆದುಳು ಕೆಟ್ಟಿಲ್ಲ. ಕಾಲಿನ ಮೇಲಿರುವ ಗಾಯಗಳು ವಾಸಿಯಾಗುತ್ತಿವೆ.

❖❖❖❖❖

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಹಿಂದುಸ್ಥಾನದಲ್ಲಿ ಸಂಚಾರಮಾಡಿ ಆದ ನಂತರ ಇಲ್ಲಿಂದ ಜಪಾನ್ ರಾಜ್ಯಕ್ಕೆ ಹೋಗಿಬರುವವರಾಗಿರುವಂತೆ ಕಾಣುತ್ತದೆ. ಜರ್ಮನಿ ರಾಜ್ಯದ ಯುವರಾಜರವರೂ ಜಪಾನಿಗೆ ಪ್ರಯಾಣಮಾಡುವರು ಕೆಲವು ದಿನಗಳ ಹಿಂದೆ ಜಪಾನ್ ರಾಜಕುಮಾರರಾದ ಪ್ರಿನ್ಸ್ ಅರಿಸುಗಾವಾರವರು ಜರ್ಮನಿಗೆ ಹೋಗಿದ್ದಾಗ್ಗೆ, ಅಲ್ಲಿನ ಯುವರಾಜರವರು ಜಪಾನಿಗೆ ಬರುತ್ತೇವೆಂದು ವಾಗ್ದಾನಮಾಡಿದಾರೆಂದು ತಿಳಿದುಬರುವುದು

❖❖❖❖❖

ಚೀನಾ ರಾಜ್ಯಕ್ಕೆ ಸೇರಿದ ಅಮಾಯ್ ಎಂಬ ಸಮುದ್ರ ತೀರ ಪಟ್ಟಣಕ್ಕೆ ಸಮುದ್ರದ ಮೇಲಣ ಭಯಂಕರವಾದ ಸುಂಟರಗಾಳಿಯು ಬೀಸಿತು. ಸಮುದ್ರತೀರದಲ್ಲಿದ್ದ ಅನೇಕ ದೋಣಿಗಳೂ ಹಡಗುಗಳೂ ಬಡಿದಾಡಿ ನುಚ್ಚುನುಚ್ಚಾದವು. ಪಟ್ಟಣದೊಳಗೂ ಅನೇಕಾನೇಕ ಮನೆಗಳು ಬಿದ್ದು ಅನಾಹುತವಾಗಿದೆ. ನೂರಾರು ಮಂದಿ ಸಮುದ್ರತೀರದಲ್ಲೂ ಊರಿನೊಳಗೂ ಪ್ರಾಣ ಕಳೆದುಕೊಂಡರು ಇಂಥಾ ಭಯಂಕರವಾದ ಸುಂಟರಗಾಳಿ ಕಳೆದ ನಾಲ್ವತ್ತು ವರುಷಗಳಿಂದ ಇಲ್ಲಿ ಪ್ರಾಪ್ತವಾಗಿರಲಿಲ್ಲವೆಂದು ಹೇಳುತ್ತಾರೆ.

❖❖❖❖❖

ಐರ್ಲಾಂಡಿಗೆ ಸೇರಿದ ಆಗ್ನೆಲ್ ಫೈರೆಂಬ ಡಿಸ್ಟ್ರಿಕ್ಟಿನಲ್ಲಿ ಅಲ್ಯುಮಿನಿಯಂ ಎಂಬ ಲೋಹವನ್ನು ತಯಾರುಮಾಡುವ ಕಂಪನಿಯವರು ೫ ಮೈಲಿ ವಿಸ್ತಾರವುಳ್ಳ ಒಂದು ಕೆರೆಯನ್ನು ನಿರ್ಮಾಣಮಾಡಿ, ಅದರಿಂದ ಜಲಪಾತವಾಗುವಂತೆ ಏರ್ಪಡಿಸಿ, ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿಕೊಂಡು, ತಮ್ಮ ಕಾರ್ಖಾನೆಗಳಲ್ಲಿರತಕ್ಕ ಯಂತ್ರಗಳು ಆ ಶಕ್ತಿಯ ಸಹಾಯದಿಂದ ಕೆಲಸ ಮಾಡುವಂತೆ ಮಾಡಿಕೊಳ್ಳಬೇಕೆಂದು ಕೆರೆಯ ಕಾಮಗಾರಿಯನ್ನು ಪ್ರಾರಂಭಿಸಿದಾರೆ. ಇದು ಸಮುದ್ರ ಮಟ್ಟಕ್ಕಿಂತ ೧,೦೦೦ ಅಡಿ ಎತ್ತರದಲ್ಲಿ ಕಟ್ಟಲಾಗುವುದು.

ಐರ್ಲಾಂಡಿಗೆ ಸೇರಿದ ಕಿಲ್ಕಿ ಡಿಸ್ಟ್ರಿಕ್ಟಿನಲ್ಲಿ ಒಂದು ಸಂಸಾರ ವಿದೆ. ಈ ಸಂಸಾರಕ್ಕೆ ಸೇರಿದ ಒಬ್ಬ ಗಂಡಸು ಪೂರ್ವ ಕಾಲ ದಲ್ಲಿ ದೇಶಾಟನೆ ಮಾಡಿಕೊಂಡು ಅಮೇರಿಕಕ್ಕೆ ಸೇರಿದ ಟೆಕ್ಸಾಸ್ ಡಿಸ್ಟ್ರಿಕ್ಟಿನಲ್ಲಿ ಹೋಗಿ ನಿಂತು, ತುಂಬಾ ಜಮೀನನ್ನು ಸಂಪಾದಿಸಿ ಹಾಕಿದನು. ಆಗ್ಗೆ ಆ ಜಮೀನು ಮೂರು ಕಾಸೂ ಬಾಳುತ್ತಿರಲಿಲ್ಲ. ಈಗ ಅವನ ವಂಶೀಕರು ಅದರಿಂದ ಪ್ರಯೋಜನವನ್ನು ಪಡೆಯುವ ಕಾಲ ಬಂದಿದೆ. ಆ ಜಮೀನು ಈಗ ೪೦೩ ಕೋಟಿ ರೂಪಾಯಿ ಗಳು ಬಾಳುವುದಾದ್ದರಿಂದ ಆ ಸಂಸಾರಕ್ಕೆ ಸೇರಿದವರ ಸುಖ ಸಂತೋಷಗಳು ಅಪಾರವಾಗಿವೆ.

****

ವಿಲಾಯತಿಗೆ ಸೇರಿದ ಪ್ರತಿ ಒಂದು ಮ್ಯುನಿಸಿಪಾಲಿಟಿಯಿಂದ ಲೂ ಪ್ರತಿನಿಧಿಗಳು ಕಳೆದ ವಾರ ಲಂಡನ್ ಪಟ್ಟಣಕ್ಕೆ ಬಂದು ಒಂದು ದೊಡ್ಡ ಸಭೆಯನ್ನು ನಡಿಸಿದರು. ಹಿಡುಬಿನ ಉಪದ್ರವನ್ನು ಅಡಗಿ ಸುವುದಕ್ಕೆ ಪ್ರಜೆಗಳೆಲ್ಲಾ ಸರ್ಕಾರದವರಿಗೆ ಸಹಾಯಮಾಡಬೇಕಾ ಗಿದೆ ಎಂದು ಉಪನ್ಯಾಸಗಳನ್ನು ಮಾಡಿದ್ದಲ್ಲದೆ ಪ್ರತಿ ಮನೆಯವರೂ ತಮ್ಮ ಮಕ್ಕಳಿಗೆ ಹದಿಮೂರನೇ ವಯಸ್ಸಿನಲ್ಲಿ ಎರಡನೆಯ ಸಲ ಹಿಡುಬು ಹಾಕಿಸುವುದು ತುಂಬಾ ಅವಶ್ಯವೆಂದು ತೀರ್ಮಾನ ಮಾಡಿ ಕೊಂಡರು. ಜರ್ಮನಿ ರಾಜ್ಯದಲ್ಲಿಯೂ ಮಕ್ಕಳಿಗೆಲ್ಲಾ ಹದಿಮೂ ರು ವರುಷ ತುಂಬುವಾಗ್ಗೆ ಎರಡಾವರ್ತಿ ಹಿಡುಬು ಹಾಕಿಸುತ್ತಿರಾದಾ ದ್ದರಿಂದ ಅಲ್ಲಿ ಈ ಉಪದ್ರವದ ಹಾವಳಿ ಸ್ವಲ್ಪವೂ ಇಲ್ಲವೆಂದು ತಿಳಿಸಿ ದಾರೆ.

****

ಈಜಿಪ್ಟ್ ರಾಜ್ಯದ ಗಿರ್ಘೆ ಎಂಬ ಅಧಿಪತ್ಯದ ಗವರ್ನರಾದ ಹರ್ಸಬೇ ವಾಸೀಫ್'ಯವರು ಒಂದಾನೊಂದು ಸಂದರ್ಭದಲ್ಲಿ ಒಬ್ಬ ತಂದೆಯನ್ನು ಹಿಡಿದು ಅವನ ಮಗ ಬರೆದಿದ್ದ ಒಂದು ಪತ್ರಕ್ಕೆ ಬಲಾತ್ಕಾರ ಮಾಡಿ ರುಜು ಹಾಕಿಸಿದರು. ಆ ಪತ್ರದಲ್ಲಿ ಬರೆದಿದ್ದ ವಿಷಯವನ್ನು ತಂದೆಗೆ ತಿಳಿಸದೆ ಮೋಸಪಡಿಸಿದರು. ಇದು ಒಂದು ಮೊಕದ್ದಮೆ ಆಗಿ ಮೂವರು ಜಡ್ಜಿಗಳು ಅಸಿಯುಟ್ ಪಟ್ಟಣದಲ್ಲಿ ಆ ಗವರ್ನರನ್ನು ಕರಸಿಕೊಂಡು ವಿಚಾರಣೆ ಮಾಡಿ, ಕಡೆಗೆ ಅವ ರ ಮೇಲೆ ಯಾವ ಅಪರಾಧವೂ ಹೊರುವುದಿಲ್ಲವೆಂದು ತೀರ್ಮಾನ ಹೇಳಿ ಬಿಟ್ಟರು. ಈ ಮೊಕದ್ದಮೆಯಲ್ಲಿ ಗವರ್ನರಿಗೂ ಅವರ ಜೊತೆಗೆ ಸೇರಿದ್ದ ಇತರ ನಾಲ್ಕಾರು ಮಂದಿ ದೊಡ್ಡ ಮನುಷ್ಯರಿಗೂ ಬಿಡುಗಡೆ ಆಯಿತೆಂಬ ಸುದ್ದಿಯನ್ನು ಕೇಳಿ ಅನೇಕ ಪ್ರಜೆಗಳೂ ಅಧಿಕಾರಿಗಳೂ ಸಂತೋಷಪಟ್ಟು, ತಂತೀವರ್ತಮಾನಗಳನ್ನು ಅವ ರಿಗೆಲ್ಲಾ ಕಳುಹಿಸಿದರು. ಆದರೆ ಸರ್ಕಾರದವರು ಈ ಮೊಕದ್ದ ಮೆಯ ತೀರ್ಮಾನವನ್ನು ಒಪ್ಪದೆ ಮೇಲಿನಕೋರ್ಟಿನಲ್ಲಿ ಅಪೀಲ್ ಮಾಡಿಸಿದರು. ಮೂರು ಮಂದಿ ಹೈ ಕೋರ್ಟ್ ಜಡ್ಜಿಗಳು ಕುಳಿತು ಎರಡು ದಿನ ಈ ಮೊಕದ್ದಮೆಯ ಕಾಗದಗಳನ್ನೆಲ್ಲಾ ಪರಾಂಬರಿಸಿ, ಕೆಳಕೋರ್ಟಿನ ತೀರ್ಮಾನವನ್ನು ರದ್ದುಮಾಡಿ, ಹರ್ಸಬೇ ಎಂಬ ಗವರ್ನರಿಗೂ ಒಬ್ಬ ಪೇಷ್ಕರ್ ಜಡ್ಜಿಗೂ ತಲಾ ಎರಡೆರಡುವರು ಷದಂತೆ ಕಠಿಣ ಸಜಾ ವಿಧಿಸಿದಾರೆ. ಇತರ ಕೆಲವು ಅಪರಾಧಿಗಳಿಗೂ ಶಿಕ್ಷೆಯಾಯಿತು ಈ ತೀರ್ಮಾನವು ಈಜಿಪ್ಟ್ ರಾಜ್ಯದಲ್ಲೆಲ್ಲಾ ತುಂಬಾ ಅಸಮಾಧಾನವನ್ನುಂಟು ಮಾಡಿದೆ. ಹರ್ಸಬೇ ಎಂಬೀ ಗವರ್ನರು ಇನ್ನೂ ಚಿಕ್ಕ ವಯಸ್ಸಿನವರು; ವಿಲಾಯತಿಗೆ ಹೋಗಿ ವಿದ್ಯಾಭ್ಯಾಸ ಮಾಡಿಬಂದವರು.

ಕ್ಷೌರಕ್ಕೆ ದಿನ ಶುದ್ಧಿ.

ಆಚಾರ್ಯರಿಗೂ ಶಾಮಯ್ಯನಿಗೂ ನಡೆದ ಸಂವಾದ

ಅಮಲ್ದಾರು.—ಆಚಾರ್ರೇ, ಈ ದಿನ ಹಜಾಮತ್ತು ಮಾಡಿಸಿಕೊಂಡೆ ನಲ್ಲ! ಆಗಬಹುದೇ?

ಆಚಾರು.—ಈ ದಿನ ಏಕಾದಶಿ, ಆದರೂ ರಾಜಸ್ಥಾನವಾದುದ ರಿಂದ ದೋಷವಿಲ್ಲ.

ಶಾಮಯ್ಯ.—ಆಚಾರ್ರೇ, ಈ ದಿನ ಸಾಹೇಬರವರು ಬರುತ್ತಾರೆಂತ ಕ್ಷೌರವನ್ನು ಮಾಡಿಸಿಕೊಂಡೆನು. ದಿವಸ ಚನ್ನಾಗಿತ್ತೇ?

ಆಚಾರು.—ಅಯ್ಯೋ! ಈ ದಿನ ದ್ವಾದಶಿ! ಇವರ ಮೇಲೆ ದಗ್ಧ ಯೋಗ! ಕ್ಷೌರಮಾಡಿಸಿಕೊಂಡೆನೆಂದು ನನ್ನಲ್ಲೇ ಹೇಳುತ್ತಾನಲ್ಲ! ಇವನಿಗೆ ಧೈರ್ಯವೆಷ್ಟು? ಈ ರಂಥವರು ಹುಟ್ಟಿ ಬ್ರಾಹ್ಮಣಿಕೆಯನ್ನು ಹಾಳುಮಾಡು ತ್ತಾರಲ್ಲ! ಕೃಷ್ಣ! ಕೃಷ್ಣ! ಕೃಷ್ಣ! ಎಂದು ಕಿವಿ ಗಳನ್ನು ಮುಚ್ಚಿಕೊಂಡು—ಇವನ ಮುಖವನ್ನು ನೋಡಬಾರದೆಂದು ವಿಮುಖರಾದರು.

ಶಾಮಯ್ಯ.—ಆಚಾರ್ರೇ, ಏಕಾದಶಿ ದಿನ ಅಮಲ್ದಾರು ಮಾಡಿಸಿ ಕೊಳ್ಳಬಹುದು. ನಾನು ಈ ದಿನ ಮಾಡಿಸಿಕೊಳ್ಳಬಾ ರದೇ? ಇದೆಂಥಾ ಪಕ್ಷಪಾತ ಸ್ವಾಮಿ!

ಆಚಾರು.—ಅದು ರಾಜಾಸ್ಥಾನ; ಅದಕ್ಕೆ ದೋಷವಿಲ್ಲವಯ್ಯಾ.

ಶಾಮಯ್ಯ.—ಅವರು ರಾಜಾಸ್ಥಾನದಲ್ಲಿದ್ದಾಗ ಮಾಡಿಸಿಕೊಂಡ ರೋ? ಅಥವಾ ಮನೆಯಲ್ಲಿದ್ದಾಗ ಮಾಡಿಸಿಕೊಂ ಡರೋ?

ಆಚಾರು.—ನಿನ್ನ ಒರಟು ಪ್ರಶ್ನೆಗಳಿಗೆ ಉತ್ತರ ನನ್ನಲಿಲ್ಲ. ಆದೇ ವರಿಗೂ ನೋಡು, ನನ್ನಲ್ಲಿ ಬರುವುದು ಯೋಗ್ಯ ವಾದ ಉತ್ತರಗಳೇನೇ.

ಶಾಮಯ್ಯ.—ಅಮಲ್ದಾರುವರೇ ಮೊದಲಾದ ದೊಡ್ಡವರು ಬೇಕಾದ ದಿನ ಮಾಡಿಸಿಕೊಳ್ಳಬಹುದು. ನಾವು ಮಾಡಿಸಬಾರ ದೋ? ಹಾಗೆಂದು ನಿಮ್ಮಲ್ಲಿ ಶಾಸ್ತ್ರ ಉಂಟೇನು?

ಆಚಾರು.—ಹಾಗಲ್ಲವಯ್ಯಾ, ಕೇಳು; ಶಾಸ್ತ್ರವಿಲ್ಲದಿದ್ದರೂ ಅವ ರು ನನ್ನ ಮಾತನ್ನು ಕೇಳುವುದಿಲ್ಲ. ಮಾಡಿಸಿಕೊಂ ಡುಬಿಡುತ್ತಾರೆ. ಆಗ್ಯೆ ಒಪ್ಪಬೇಕೋ ಬೇಡವೋ?

ಶಾಮಯ್ಯ.—ಶಾಸ್ತ್ರಕ್ಕೆ ಯಾವ ರೀತಿಯಾದರೂ ಇರಲಿ. ಅವರಿಗೆ ಹೆದರಿ ನೀವು ಒಪ್ಪಬೇಕಾಯಿತಲ್ಲ! ನಾನೂ ಅವರಂತೆ ಮಾಡಿಸಿಕೊಂಡೆನಲ್ಲ? ಯಾತಕ್ಕೆ ಒಪ್ಪಬಾರದು?

ಆಚಾರು.—ಇಂಥಾ ನಾಸ್ತಿಕವಾದವನ್ನು ಮಾಡತಕ್ಕವರು ಹುಟ್ಟಿ ಹೋ ಪ್ರಪಂಚದಲ್ಲೆಲ್ಲ ಪ್ಲೇಗುರೋಗವು ವ್ಯಾಪಿಸಿ ಜನಗಳನ್ನು ಆಹುತಿಗೊಳ್ಳುವುದು!

ಶಾಮಯ್ಯ.—ಅಲ್ಲ ಧರ್ಮಶಾಸ್ತ್ರವನ್ನು ಮುಚ್ಚಿಟ್ಟು ವಿನುಗೆ ಬೇಕುಬೇಕಾದವರಿಗೆ ಬೇಕು ಬೇಕಾದ ಹಾಗೆ ಶಾ ಸ್ತ್ರಗಳನ್ನು ಕಲ್ಪಿಸಿಕೊಳ್ಳುವ ನಿಮ್ಮಂಥವರಿಂದ ಹೆಚ್ಚಿತು.

ಆಚಾರು.—ಸಾಕಯ್ಯಾ, ಸಾಕು! ನೀನು ದೊಡ್ಡಮನುಷ್ಯ! ಹೋಗಯ್ಯಾ, ಹೋಗು! ಎಂದು ಹೇಳಿ—ಬೆಳಗ್ಗೆ ಎದ್ದಕೂಡಲೇ ಇವನೆಲ್ಲಿಸಿಕ್ಕಿದನಪ್ಪಾ ಗಂಟುಪ್ರ್ಯಾ ಪ್ಯಕ್ಕೆ ಎಂದುಕೊಳ್ಳುತ್ತಾ ಹೊರಟುಹೋದರು.

ಮೈಸೂರು ಗೆಜೆಟ್ ಸಂಗ್ರಹ.

ಟಿಂಪರರಿ ಸಬ್ ಅ॥ ಸರ್ಜನ್ ಮೆ॥ ಪಿ. ಮಾಧವ ನಾಯುಡು ಯವರಿಗೆ ಕೊಟ್ಟಿದ್ದ ಸಂಬಳವಿಲ್ಲದ ಒಂದು ವರ್ಷದ ರಜವನ್ನು ಇನ್ನೊಂದು ವರ್ಷಕ್ಕೆ ಜಾಸ್ತಿಮಾಡಿದೆ.

ಈಗ ಸಾಗರದ ಅಮಲ್ದಾರರಾಗಿರುವ ಮೆ॥ ವಿ. ಪಾರ್ಥಸಾರ ಥಿ ಐಯ್ಯಂಗಾರ್ರಿಗೆ ಕೊಟ್ಟಿದ್ದ ೨೯ ದಿನಗಳ ಪ್ರಿವಿಲೆಜ್ ರಜವನ್ನು ಇನ್ನು ೬೦ ದಿನಗಳಿಗೆ ಜಾಸ್ತಿ ಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಸಿ. ನಾರಾಯಣರಾಯರು ಸಾಗರದ ತಾಲ್ಲೂಕ್ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ.

ಚಿಂತಾಮಣಿ ತಾಲ್ಲೂಕ್ ಸಬ್ ಪ್ರೊಬೇಷನರ್ ಅಮಲ್ದಾರ್ ಮೆ॥ ಬಿ. ಎನ್. ಚನ್ನಿಗಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀ ಖಿನಾರಭ್ಯ ಮೂರು ತಿಂಗಳ ಪ್ರಿವಿಲೆಜ್ ರಜಾಕೊಟ್ಟಿದೆ.

ಕೋಲಾರ್ ಡಿಸ್ಟ್ರಿಕ್ಟ್ ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಪಿ. ಸುಬ್ಬರಾಯರು ಚಿಂತಾಮಣಿ ತಾಲ್ಲೂಕಿನ ಅಮಲ್ದಾರ್ ಮತ್ತು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿ ದಾರೆ

ಹೊಳಲ್ಕೆರೆ ತಾಲ್ಲೂಕ್ ಅಮಲ್ದಾರ್ ಮೆ॥ ಎ. ಎಸ್. ರಾಜ ಗೋಪಾಲಾಚಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿ ನಾರಭ್ಯ ಒಂದು ತಿಂಗಳ ಪ್ರಿವಿಲೆಜ್ ರಜಾಕೊಟ್ಟಿದೆ

ಹರಿಹರದ ಡೆಪ್ಟಿ ಅಮಲ್ದಾರ್ ಮಹಮದ್ ಪೀರ್ ಯವರು ಹೊಳಲ್ಕೆರೆ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾ ಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ.

ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಬಿಲ್ಗಿ ಕೃಷ್ಣರಾ ಯರು ಹರಿಹರದ ಡಿಪ್ಟಿ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾ ಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮೆ॥ ಎಂ. ಎಸ್. ನಾರಾಯಣರಾಯರು ಜುಲೈ ೨೦ ರಲ್ಲಿ ಕೆಲಸದ ಮೇಲೆ ಹಾಜರಾದುದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ

ಕಡೂರ್ ತಾಲ್ಲೂಕ್ ಅಮಲ್ದಾರ್ ಮೆ॥ ಇ. ಸಿ. ಸದಾಶಿವಂ ಪಿಳ್ಳೆಯವರಿಗೆ ಜುಲೈ ೧೧ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಆಗ್ಗೆ ಶಿರಸ್ತೇದಾರರು ತಾಲ್ಲೂಕಿನ ಛಾರ್ಜನ್ನು ವಹಿ ಸಿದ್ದರು

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಕೆ. ಮುತ್ತಯ್ಯನ ವರಿಗೆ ಆಗೀಷ್ಟು ೨ ರಿಂದ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಗುಬ್ಬಿ ತಾಲ್ಲೂಕು ಅಮಲ್ದಾರ್ ಮೆ॥ ಎಂ. ರಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗ ಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮೆ॥ ಸಿ. ಗೋಪಾಲಾಚಾರ್ರು ಗುಬ್ಬಿ ತಾಲ್ಲೂಕ್ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ ರಾಗಿ ನೇಮಕಮಾಡಲ್ಪಟ್ಟಿದಾರೆ.

ಮೆ॥ ಗಳಾದ ಡಿ. ಸದಸುಂಪ್ಪಯನವರನ್ನೂ ಬಿ ಸುಬ್ರಾಯ ಶೆಟ್ಟರನ್ನೂ ಪುತ್ತೆ ಚಾಮರಾಜನಗರದ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಕಮಾಡಿದೆ. ಮತ್ತು

ಮೆ॥ ಗಳಾದ ಜಮೀನ್ದಾರ್ ಶಾಮಯ್ಯಂಗಾರ್, ಪಟೇಲ್ ಶೆಟ್ಟಿ ಸುಬ್ಬಣ್ಣನವರು, ಜವಳಿ ವರ್ತಕ ಮಹಮದ್ ಉಮ್ಮರ್ ಸಾ ಹಿಬರು, ಇವರನ್ನು ಅದೇ ಬೋರ್ಡಿನ ಮೆಂಬರಾಗಿ ನೇಮಕಮಾ ಡಿದೆ

ಸ್ಟೇಟ್ ತಸೂರೀ ಕಾರ್ಖಾನೆಯ ಛಾರ್ಜಿನಲ್ಲಿರುವ ಮೆ॥ ಟಿ. ರಾಯಲು ಚೆಟ್ಟಿಯವರನ್ನು ೧೯೦೫ನೇ ಜೂನ್ ೧ ರಿಂದ ೪ನೇ ಕ್ಲಾಸ್ ಎಕ್‌ಸ್ಟ್ರಾ ಅ॥ ಕಮಿಷನರಾಗಿ ನೇಮಕ ಮಾಡಿದೆ.

ಮೈಸೂರು ಇಂಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ಬಡ್ತಿಗಳು ತಾತ್ಕಾಲ ಮಾಡಲ್ಪಟ್ಟಿರುತ್ತವೆ.—ಮೆ॥ ವೈ. ಶ್ರೀನಿವಾಸ ರಾಯರನ್ನು ಸೂ॥ ಇಂಜನಿಯರ್ ಪದವಿಗೆ, ಮೆ॥ ಎ. ಸಿ. ಮಹ ದೇವಶಾಸ್ತ್ರಿಗಳನ್ನು ೧ನೇ ಕ್ಲಾಸ್ ಎ॥ ಇಂಜನೀರ್, ಮೆ॥ ಬಿ. ಸುಬ್ಬರಾಯರು ೨ನೇ ಕ್ಲಾಸಿಗೆ, ಮೆ॥ ಎ. ರಂಗಸ್ವಾಮಿಯ್ಯಂಗಾ ರು ೩ನೇ ಕ್ಲಾಸಿಗೆ, ಮೆ॥ ಕೆ. ಕೃಷ್ಣರಾಯರು ೪ನೇ ಕ್ಲಾ... ಮೆ॥ ಜಾನ್ ಥೋರ್ ಯವರು ಅ॥ ಇಂಜನಿಯರ್ ೧ನೇ ಕ್ಲಾ... ಮೆ॥ ಟಿ. ಎಸ್. ಶೇಷೈಯಂಗಾರು ೨ನೇ ಕ್ಲಾಸಿಗೆ, ಮೆ॥ ... ಗರುಡಾಚಾರು ೨ನೇ ಕ್ಲಾಸಿಗೆ, ಮೆ॥ ಎನ್. ರಾಮರಾಯರು ... ಕ್ಲಾಸಿಗೆ, ಸಿ. ವಿಜಯರಂಗಂ ನಾಯ್ಡುರು ಸಬ್ ಅ॥ ಇಂಜನಿ... ೧ನೇ ಕ್ಲಾಸಿಗೆ, ಮೆ॥ ಬಿ ಸುಂದರರಾಜ್ಯರು ಅ॥ ಇಂಜನಿ... ೩ನೇ ಕ್ಲಾಸಿಗೆ; ಮೆ॥ ಟಿ. ಕೆ. ಅರುಣಾಚಲಂ ಐಯರು ಸಬ್ ಇಂಜನಿಯರ್ ೧ನೇ ಕ್ಲಾಸಿಗೆ

ತಾಲ್ಲೋಕು ವರ್ತಮಾನಗಳು

ಚಾಮರಾಜನಗರ.—ಈ ಊರಿನ ರಸ್ತೆಗಳಲ್ಲೂ ಬೀ... ಳಲ್ಲೂ ಗಾಡಿಗಳನ್ನೂ ದನಕರುಗಳನ್ನೂ ಬಹು ವೇಗವಾಗಿ ... ಸಿಕೊಂಡು, ಹೋಗುವದರಿಂದ ಜನರಿಗೆ ಅಪಾಯ ಸಂಭವಿಸ... ದು ಈ ವಿಷಯದಲ್ಲಿ ಪೊಲೀಸಿನವರು ನಿಗಾಕೊಡಬೇಕಾಗಿ... ಈ ಊರಿನ ರಿಜರ್ವ್ ಪೊಲೀಸಿನವರು ಬಂದು ೩ ತಿಂಗಳಾ... ದ್ದರಿಂದ ಅವರು ಹೊರಟು ಹೋಗುವರೆಂಬ ವದಂತಿ ಇದೆ ... ರನ್ನು ಇನ್ನು ಕೆಲವು ಕಾಲ ಪ್ರಯಾಣಿಕರಿಗೆ ತೊಂದರೆ... ಸಹಾಯಕರಾಗಿರುವಂತೆ ನೇಮಿಸಿದರೆ ಉತ್ತಮ.—೨—೩ ... ಗಳಿಗೆ ಮುಂಚೆ ಈ ಊರಿನಲ್ಲಿರುವ ಮುಸಗಾಪ್ರರದ ಪ್ಯಾ... ನವರ ಹೆಂಡತಿಯು ಒರೆಯ ಬಳಿ ಇರುವಾಗ್ಗೆ ಆಕಸ್ಮಾತ್ತು ... ಬೆಂಕಿ ತಗಲಿ ಮೈ ಸುಟ್ಟುಹೋಯ್ತು ನಂತರ ಅಳಿಯು ಸ... ರದೆ ಬಾವಿಗೆ ಬಿದ್ದಳು. ಆ ಹೊಪ್ಪೆಗಳೆಲ್ಲಾ ಒಡೆದು ಮ... ನೋವಾದ್ದರಿಂದ ಆಕೆ ನೆನ್ನೆ ಮಂಗಳವಾರ ಮೃತಪಟ್ಟಳು... ಇಲ್ಲಿ ಅವಶ್ಯಕವಾದ ೬ಟಿ ಕೆಲವು ಸ್ಥಳಗಳಲ್ಲಿ ಲಾಂದ್ರ ಬೇಕಾ... ಒಂದು ದೇವಾಂಗದ ಬೀದಿಯಲ್ಲಿ ಸ್ಕೂಲಿನ ಹತ್ರ, ಮತ್ತೊ... ಅದೇ ಬೀದಿಯಲ್ಲಿ ಅಸ್ಸೂರೈಯನವರ ಮನೆ ಬಳಿಯಲ್ಲಿ, ... ನ್ನೊಂದು ಪೂರ್ವ ಕೋನೆಯಾದ ತಿಮ್ಮಮ್ಮನಕಟ್ಟೆ ಬಳಿ ... ದರೆ ಸಕಲರಿಗೂ ಅನುಕೂಲವಾಗುತ್ತೆ

ಕುಣಿಗಲು.—ಈ ಪ್ರಾಂತ್ಯ ಮಳೆ ಇಲ್ಲದೆ ಪೈರುಗಳ... ಒಣಗುತ್ತಾ ಬಂದಿವೆ ಸರ್ವರೂ ಮೇಘಮಂಡಲವನ್ನೇ ನೋ... ತ್ತಿರುವರು. ಈ ಊರಿನ ಸಮೀಪದಲ್ಲಿರುವ ಎರಡು ಕೆರೆಗ... ಯೂ ನೀರಿಲ್ಲದೆ, ಜನಗಳು ಕುಡಿಯುವ ನೀರಿಗೆ ಬಹಳ ಶ್ರ... ದುತ್ತಿರುತ್ತಾರೆ.—ಗತ ಸಾಲು ಅಕ್ಟೋಬರ್ ತಿಂಗಳ ಲಾಗಾ... ಈ ಟವರ್ ಪ್ಲೇಗ್ ರೋಗಕ್ಕೆ ಆಕರವಾಗಿದ್ದದ್ದು, ೪—೫ ತಿ... ಮುಂಚೆ ಬಿಡುಗಡೆಯಾಗಿ ಊರಿನಲ್ಲಿ ಸರ್ವರೂ ಸುಖವಾಗಿರು... ರೆ. ಇಂಥಾ ಸಾಂಕ್ರಾಮಿಕ ಜಾಡ್ಯಗಳು ತಲೆದೋರದಂತೆ ಮ... ಬೇಕಾದರೆ ಮ್ಯುನಿಸಿಪಾಲಿಟಿಯು ಬಹುಮಟ್ಟಿಗೆ ಕಾಪಾಡಬೇ... ಗಿದೆ ಅಲ್ಲವೇ? ಆದ್ದರಿಂದ ಜಾಡಮಾಲಿಗಳು ದೊಡ್ಡ ರಸ್ತೆಗ... ಅಲ್ಲದೆ, ಸಂದು ಗೊಂದುಗಳಲ್ಲಿಯೂ ತೃಪ್ತಿಕರವಾಗಿ ಗು... ತಾರೋ, ಚರಂಡಿಗಳನ್ನು ಶುಚಿಮಾಡುತ್ತಾರೋ, ಕಸ್ಮಲವ... ಹೊರಗೆ ಸಾಗಿಸುತ್ತಾರೋ ಎಂಬುವದನ್ನೂ ಮ್ಯುನಿಸಿಪಲ್ ... ದ್ರಗಳಿಗೆ ರಾತ್ರಿಕಾಲದಲ್ಲಿ ಉಂಟಾಗುವ ವ್ಯವಸ್ಥೆಯೂ ವೈಫಲ್ಯ... ಕರೀಮಂಘದ ಆಕಾರವೂ ಹೋಗಿ, ಸರಿಯಾಗಿ ಉರಿಯುತ್ತಿ... ವವೋ ಇಲ್ಲವೋ ಎಂಬುವದನ್ನೂ ಮ್ಯುನಿಸಿಪಲ್ ಅಧಿಕಾರಿ... ಪರಿಪೂರ್ಣ ಮನವಿಟ್ಟು ಇನ್ಸ್ಪೆಕ್ಟ್ ಮಾಡಿ, ಸಾಂಕ್ರಾಮಿಕ ಜಾ... ಗಳಿಗೆ ಆಸ್ಪದವಿಲ್ಲದಂತೆ ಟವರ್ ಮ್ಯುನಿಸಿಪಲ್ ವಿಚಾರವನ್ನು ... ಬಾ ತೃಪ್ತಿಕರವಾದ ರುಚಿಯಲ್ಲಿ ಇನ್ನುಮೇಲಾದರೂ ಇಡು... ರೆಂದು ನಿರೀಕ್ಷಿಸಲ್ಪಟ್ಟದೆ. ದಯಾಪೂರ್ಣರೂ ನ್ಯಾಯಾನುವ... ಗಳೂ ಆದ ನಮ್ಮ ಅಮಲ್ದಾರರೂ ಗಮನ ಕೊಟ್ಟು ಪ್ರಜೆಗಳ... ಸಾಂಕ್ರಾಮಿಕ ಜಾಡ್ಯದಿಂದ ಬಿಡುಗಡೆ ಮಾಡುತ್ತಾರೆಂದು ... ರುತ್ತೇನೆ — ನಮ್ಮ ಊರು ಆಸ್ಪಿಟಲ್ ಅಸಿಸ್ಟೆಂಟರು ಬಂದ ರೋ... ಗಳಿಗೆ ಅತ್ಯುತ್ತಮವಾದ ಔಷಧಿಗಳನ್ನು ಕೊಟ್ಟು ಗುಣಮಾಡು... ದೂರದಿಂದ ಬರತಕ್ಕ ರೋಗಿಗಳಿಗೆ ಭತ್ಯಕೊಟ್ಟು ಆಸ್ಪತ್ರೆಯಲ್ಲಿ ಇಟ್ಟುಕೊಂಡು, ಔಷಧಿಕೊಟ್ಟು ಜಾಗ್ರತೆ ಗುಣಮಾಡುತ್ತಾ, ... ಬಾ ಕೀರ್ತಿಪಡೆಯುತ್ತಿರುತ್ತಾರೆ ೪—೫ ತಿಂಗಳ ಲಾಗಾಯ... ಈ ಪ್ರಾಂತ್ಯದಲ್ಲೆಲ್ಲಿಯೂ ಸಾಂಕ್ರಾಮಿಕ ಜಾಡ್ಯಗಳ ಸೋಂ... ಇಲ್ಲ.

ಹೊಸದುರ್ಗ ಬಿಜಾಪುರ ಈ ಪ್ರಾಂತ್ಯದಲ್ಲಿ ಮಳೆ ಇಲ್ಲದೆ ... ರುಗಳು ಒಣಗುತ್ತಾ ಇವೆ ತಾ. ೧೦ ರಲ್ಲಿ ಕೆಲವು ಕಡೆ ಸ್ವ... ಮಳೆ ಬಂತು ಕೆಲವು ಕೆರೆಗಳಲ್ಲಿ ನೀರಿಲ್ಲ. ಇಲ್ಲಿ ನೀರಿಗೆ ಕ... ಪಡುತ್ತಾರೆ —ಡಾಕ್ಟರ್ ಮೆ॥ ನಂಜಪ್ಪನವರು ಲಿಂಗಾಯತರ ... ಹಿಸ ಹಣವನ್ನು ಎತ್ತುವದಕ್ಕಾಗಿ ಬಂದು ಇದ್ದರು. ಇಲ್ಲಿನವ... ಒಬ್ಬಿಬ್ಬರು ಕಮ್ಮಿ ಹಣವನ್ನು ಕೊಟ್ಟರಂತೆ —ಇಲ್ಲಿದ್ದ ಸಬ್ ... ಸ್ಟ್ರಾರು ಒಳ್ಳೇಯವರಾಗಿದ್ದರು. ನಂಜನಗೂಡಿಗೆ ವರ್ಗವಾ... ರು. ಈಗ ಮೈಸೂರಿಂದ ಮೆ॥ ರಾಮರಾಯರು ಬಂದು ಇದ್ದಾ... ರಜಾದ ಮೇಲೆ ಹೋಗಿದ್ದ ಪೊಲೀಸ್ ಇನ್ಸ್ಪೆಕ್ಟರ್ ಮೆ॥ ರಾಮ... ದ್ರರಾಯರು ಈಗ ತಮ್ಮ ಕೆಲಸದ ಮೇಲೆ ಬಂದು ಇದಾರೆ. ಇ... ಪೋಸ್ಟ್‌ಮಾಸ್ಟರಾಗಿರುವ ಮೆ॥ ಶ್ರೀನಿವಾಸರಾವ್ ಎಂಬವರಿಗೆ ... ಮೇಲೆ ಚಿಕ್ಕಮಗಳೂರಿಗೆ ವರ್ಗವಾಗಿ ಹೋಗುವದರಲ್ಲಿ ಇದಾ... ಇವರಿಗೆ ಅದೇ ಬಡ್ತಿಯನ್ನು ಕೊಟ್ಟು ಇಲ್ಲಿಯೇ ಇರಿಸಿದರೆ ... ರಿಗೆ ತುಂಬಾ ಸಂತೋಷ ಇವರು ಬಹು ಸಾಧುಗಳು, ಜನುಮ... ವಿನಂಥಾ ಗುಣಸ್ಥರು. ತಮ್ಮ ಕೆಲಸದಲ್ಲಿ ಬಹು ಶ್ರಮಸ್ಥ... ಎಂಥಾ ಕೆಲಸವಿದ್ದರೂ ಗುಣುಗುಟ್ಟದೆ ಜನರ ಕೆಲಸಗಳನ್ನು ... ದಲ್ಲಿ ಪೂರೈಸಿಕೊಡುತ್ತಾರೆ. ಇವರು ಇಲ್ಲಿಗೆ ಹೋದರೂ ದೇವ... ಇವರಿಗೆ ಕ್ಷೇಮಕೊಡಲಿ ಎಂಬುವದೇ ಜನರ ಕೋರಿಕೆಯಾಗಿ... ಇಲ್ಲಿಗೆ ಗಾರಡಿಗರು ಬಂದಿದ್ದರು. ಇಲ್ಲಿ ಇವರು ಮೋಡಿಯ...

ದ್ದರು ಈ ತಮಾಷೆಯನ್ನು ನೋಡುವದಕ್ಕೆ ಎಲ್ಲಾ ಹಳ್ಳಿಗಳು ಜನರು ಬಂದಿದ್ದರು. ೩—೪ ಸಾವಿರ ಜನರ ವರೆಗೆ ದ್ದರು ಜನರ ಕಾನ್ಯೂಟವೂ ಇವರನ್ನು ಕೂಡಿಸುವದರಲ್ಲಿ ಸಿನವರ ಓಡ್ಯಾಟವೂ ವಿಶೇಷವಾಗಿತ್ತೇ ಹೊರ್ತು ತಮಾಷೆ ಇಲ್ಲಿರ ಮಂತ್ರವಾದಿಗಳಲ್ಲಿ ಮನಸ್ಸಿನ ಬಂಟಕಾರಣ ಮ ಯೂ ಮಂತ್ರವಾಡದ್ದರಿಂದ ಗಾರುಡಿಗರು ಮೋಡಿ ತೆಗೆದ ೩ನೇ ದಿನಕ್ಕೆ ತಿರಿಗಿ ಮೋಡಿ ತೆಗೆಯಲು ಇಲ್ಲಿನವರು ಗೊ ದರು. ತಿರಿಗಿ ಒಂದು ದಿನದಲ್ಲೇ ಗಾರುಡಿಗರು ತೆಗೆಯುವಿ ನ್ನು ಹತ್ತು ಜನಕ್ಕೆ ನಾವೇ ಮುಕ್ಕಳೆಂದು ಹೇಳಹೋದರಂತೆ. ನ್ನು ನೋಡುವುದಕ್ಕೆ ಬನರು ಕೆಲಸ ಕೆಟ್ಟು ಹಣಿದರು. ಹೀಗೆ ಟ್ಟಿನೂ ಪಿಶಾಚನು ಹಾಕಿರುವ ಹಾದದ ಮೋಡಿ ತೆಗೆಯ ರು

ಆನೇಕಲ್ಲು.—ಮೈಸೂರು ಸಂಸ್ಥಾನದಲ್ಲೆಲ್ಲಾ ಈ ಆನೇಕಲ್ಲು ನಿಂದ ಪ್ರತಿ ವರ್ಷವೂ ನೋವುಪಟ್ಟಿದೆ. ಈ ವರ್ಷ ಇದು ಗೂ ಅದು ಕಲೆದೋರದೆ ಇರುವದನ್ನು ನೋಡಿ ಗ್ರಾಮಸ್ಥರು ಸಂತೋಷಪಡುತ್ತಾರೆ.—ಇಲ್ಲಿ ಮಳೆಗಳಿಲ್ಲದ ಕಾರಣ ಗೆ ಬಹಳ ವ್ಯಾಕುಲಹುಟ್ಟಿದೆ ಬೆಳೆಗಳು ಹೀನ ಸ್ಥಿತಿಯಲ್ಲಿ ವೆ—ಈ ತಾಲ್ಲೋಕಿನಲ್ಲಿ ಸರ್ಕಾರದ ನೌಕರರಲ್ಲಿ ಕೆಲವು ವರ್ಗಗಳು ಆಗಿವೆ. ಇಲ್ಲಿ ಅಮಲ್ದಾರರಾಗಿದ್ದ ಮೆ|| ರಾಮ ಮಯ್ಯರು ಚಿತ್ರದುರ್ಗಕ್ಕೆ ವರ್ಗವಾಗಿ ಹೊರಟುಹೋದರು. ಇವಲು ಚಿಕ್ಕಮಗಳೂರಿನಿಂದ ಇಲ್ಲಿಗೆ ಮೆ|| ಮಹಮದ್ ಸಾಹೇಬರವರು ಬಂದು ಛಾರ್ಜು ವಹಿಸಿರುತ್ತಾರೆ ಇಲ್ಲಿದ್ದ ಅಸಿಸ್ಟೆಂಟ್ ಎಸ್. ಹನುಮಂತನಾಯುಡು ಯವರು ಗು ರ್ಗಾಯಿಸಲ್ಪಟ್ಟರು. ಮೆ|| ಲಕ್ಷ್ಮಣರಾಯರು ಅವರಿಗೆ ಗಿ ಬಂದಿರುತ್ತಾರೆ. ಮೇಲ್ಕಂಡ ಎಸ್. ಹನುಮಂತನಾಯು ನವರು ಈ ಕಸಬೆಯಲ್ಲಿ ವ್ಯಾಧಿಗಳಿಂದ ಪೀಡಿತರಾಗಿದ್ದವರನ್ನು ಬುದ್ಧಿಯಿಂದ ನೋಡಿಕೊಂಡು ಬಂದದ್ದಕ್ಕಾಗಿಯೂ ವಿಶೇಷವಾಗಿ ಪ್ಲೇಗಿನ ಹಾವಳಿಯಲ್ಲಿ ಐಶ್ವರ್ಯವಂತರೆಂತಲೂ ಬಡವರೆಂತಲೂ ನೋಡದೆ ಎಲ್ಲಾ ವೇಳೆಗಳಲ್ಲಿಯೂ ಅವರ ಮಧ್ಯ ಹೋಗಿ ಔಷಧ ಮೂಲಕವಾಗಿಯೂ ಬುದ್ಧಿ ಬೋಧನೆಗಳ ಕವಾಗಿಯೂ ಜನಗಳಿಗೆ ಬಹಳ ಸಹಾಯವನ್ನು ಮಾಡಿ ರಲೂ ಇಲ್ಲಿನ ಪ್ರಜೆಗಳು ಅವರಿಗೆ ವರ್ಗವಾದದ್ದನ್ನು ಕೇಳಿ ವ್ಯಸನಪಟ್ಟರು ಆಸ್ಪತ್ರೆ ಅಸಿಸ್ಟೆಂಟರಿಗೆ ಪ್ರಜೆಗಳು ತಮ್ಮ ಷವನ್ನು ಮತ್ತು ಕೃತಜ್ಞತೆಯನ್ನು ಬಾಯಿಮಾತುಗಳಿಂದ ಸುವದು ಸಾಲದೆಂದು ತಿಳಿದು, ಅವರಿಗೆ ಜ್ಞಾಪಕಾರ್ಥವಾಗಿ ದು ಬಹುಮಾನವನ್ನು ಕೊಡಬೇಕೆಂದು ಅಪೇಕ್ಷಿಸಿ, ಇದೇ ೨೦ ಕೆಲವು ಮುಖ್ಯ ಪ್ರಜೆಗಳು ಸೇರಿ ಒಂದು ಸಭೆಯನ್ನು ರು. ಆ ಸಂಘದಲ್ಲಿ ಚಂದಾ ಎತ್ತಿದ ೭೦ ರೂಪಾಯಿನ ಚಿನ್ನದ ಸರಿಗೆಯನ್ನು ಮಾಡಿಕೊಡುವ ಹಾಗೆಯೂ ಇಂತಾ ಮಾನವನ್ನು ಪ್ರಜೆಗಳು ಮೆ|| ಹನುಮಂತನಾಯುಡು ಯವರಿಗೆ ವ ಹಾಗೆಯೂ ಸೀನಿಯರ್ ಸರ್ಜನ್ ಸಾಹೇಬರು ಅಪ್ಪಣೆ ಲಿಸಬೇಕೆಂದು ಒಂದು ಬಿನ್ನಹವನ್ನು ಬರೆದು ಕಳುಹಿಸಿ ಆ ಅಪ್ಪಣೆಯು ಶೀಘ್ರದಲ್ಲಿ ಬರುವದೆಂದು ನಂಬುತ್ತೇನೆ.

ದೇವನಹಳ್ಳಿ —ಮಳೆ ಇಲ್ಲದೆ ದವಸಗಳ ಧಾರಣೆಯು ಏರು ಬಡವರ ಜೀವನಕ್ಕೆ ಬಹು ಕಷ್ಟವಾಗಿತ್ತು. ೧೨ ನೆ ತಾ|| ಸ್ವಲ್ಪ ಬಂದು, ಒಣಗುತ್ತಿದ್ದ ಪೈರುಗಳಿಗೂ ಕಂಗೆಡುತ್ತಿದ್ದ ಪ್ರಜೆ ಸ್ವಲ್ಪ ಉಪಶಮನವಾಯಿತು. ಬಿತ್ತನೆಗೆ ತಕ್ಕ ಹದ ಇಲ್ಲದೆ ಇನ್ನೂ ಬಿತ್ತಲೇ ಇಲ್ಲ.—ಇದೇ ಸಾಯಂಕಾಲ ಈ ಊರಿ ಒಬ್ಬನು ಮೃತಪಟ್ಟನು ತಕ್ಷಣ ಆತನ ಹೆಂಡತಿಯು ತನ್ನ ಕೊಯಿದು ಆತ್ಮಹತ್ಯ ಮಾಡಿಕೊಂಡಳು, ಗಂಡನಮೇಲಿ ತಿಯಿಂದ ಇವಳು ಹೀಗೆ ಮಾಡಿಕೊಂಡಳೇ ಹೊರ್ತು ಬೇರೆ ವೂ ಇಲ್ಲ ಬದುಕುವುದು ಕಷ್ಟವೆಂದೂ ಹೇಳುತ್ತಾರೆ. ಅಸಿಸ್ಟೆಂಟರು ಆಕೆಗೆ ಇಲಾಜು ನಡಿಸುತ್ತಿದ್ದಾರೆ —ಈ ವರೆ ಯಲ್ಲಿ ಸುಂಕವನ್ನು ಮ್ಯುನಿಸಿಪಾಲಿಟಿ ಮೆಂಬರುಗಳಲ್ಲಿ ವಸೂಲಿ ಮಾಡುತ್ತಿದ್ದರು. ಇನ್ನುಮೇಲೆ ಇವರಿಗೆ ಈ ವನ್ನು ತಪ್ಪಿಸಿದಾರೆ ಎಂದು ಕೇಳುತ್ತೇನೆ. ಈ ಸಂತೆಯಲ್ಲಿ ರೇ ಸುಂಕ ವಸೂಲಿಗೆ ದಯಮಾಡಿದ್ದರು ಈಗ ಸಂತೆ ತ್ತಿದ್ದ ಸ್ಥಳವನ್ನು ತಪ್ಪಿಸಿ, ಕಚೇರಿ ಹತ್ತಿರ ಇರುವ ತೋಪಿನ ನಡಿಯುವ ಏರ್ಪಾಡು ಮಾಡಬೇಕೆಂಬ ಆಲೋಚನೆ ನಡಿ ಹಾಗೆ ಕಾಣುತ್ತದೆ ವಸೂಲಾದ ಸುಂಕವು ಸರಿಯಾಗಿ ಸರ್ಕಾ ಸೇರುವದರಲ್ಲಿ ಅನುಮಾನವಾದದ್ದೇ ಇದಕ್ಕೆಲ್ಲಾ ಕಾರಣ ಹೇಳುತ್ತಾರೆ ಈ ಸುಂಕದ ಬಾಬನ್ನು ಗುತ್ತಿಗೆ ಕೊಟ್ಟರೆ ತೊಂದರೆಯೂ ಇರದು —ಕರ್ನಾಟಕ ವೈದ್ಯಶಾಲೆಯನ್ನು ಕೊಂಡು ಧರ್ಮಾರ್ಥವಾಗಿ ಔಷಧ ಕೊಡುತ್ತಲೂ ಕೇವಲ ಹೊಲೆಮಾದಿಗರೇ ಮುಂತಾದ ಜನರಿಗೆ ಔಷಧ ಸೇವನೆ ಸ್ವಲ್ಪ ದುಡ್ಡಿನ ಸಹಾಯ ಮಾಡುತ್ತಲೂ ಇರುವ ಪಂಡಿತ ಮೆ|| ನಂದಿಗಿರಿ ದೀಕ್ಷಿತರಿಗೆ ಸರ್ಕಾರದಿಂದ ತಿಂಗಳಿಗೆ ೫ ರು ಸಹಾಯಕೊಡುತ್ತಿದಾರೆ. ಪ್ರಜೆಗಳಿಗೆ ಬಹು ಉಪಕಾ ಕುವ ಇವರಿಗೆ ಸರ್ಕಾರದವರು ಇನ್ನು ಸ್ವಲ್ಪ ಹೆಚ್ಚುದ್ರವ್ಯ ಕೊಟ್ಟು ಪ್ರೋತ್ಸಾಹಪಡಿಸಿದರೆ ಪ್ರಜೆಗಳಿಗಾಗಿ ಮಾಡಿದ ಆಗುತ್ತದೆ ಎಂಬುವದರಲ್ಲಿ ಸಂದೇಹವಿಲ್ಲ ಮೆ|| ಗೋ ವರು ವೈದ್ಯಶಾಲೆಯನ್ನು ಬಹು ಅಭಿವೃದ್ಧಿಸ್ಥಿತಿಯಲ್ಲಿ ತ್ತಾರೆ. ಇವರೂ ಧರ್ಮಾರ್ಥವಾಗಿ ಔಷಧ ಕೊಟ್ಟು ಊರ ರಿಗೆ ಉಪಕಾರ ಮಾಡುವವರಾಗಿದ್ದಾರೆ. ಪರಸ್ಥಳಗಳಿಗೆ ಔಷಧವೂ ಬಹಳವಾಗಿ ಹೋಗುತ್ತಿರುತ್ತದೆ. ಈ ಮಧ್ಯ ಡಾಕ್ಟರ್ ತಪಾಸಿ ಮಾಡುವದಕ್ಕೆ ವಿರ್ಷ ಬಂದಿರುತ್ತಾರೆ. ಇವ ಸಾಹಸಪರರೂ ಆಗಿರುತ್ತಾರೆ.

ತಿಪ್ಪೂರು ತಾ. ನೊಣವಿನಕೆರೆ—ಮಳೆ ಸುತರಾಂ ಇಲ್ಲ. ಹಿಂದೆ ಬಿತ್ತಿದ್ದ ಪೈರುಗಳ ಪೈಕಿ ಕೆಲವು ಸಂಪೂರ್ಣವಾಗಿ ಒಣಗಿ ಹೋದವು. ಕೆಲವು ಒಣಗುತ್ತಿವೆ. ಈಚೆಗೆ ಬಿತ್ತಿದ ಬೀಜಗಳು ಹುಟ್ಟಲೇ ಇಲ್ಲ. ‘ಮಳೆಯನ್ನು ನಂಬಿಕೊಂಡು ಮನೆಯಲ್ಲಿದ್ದ ಕಾಳುಕಡ್ಡಿಗಳನ್ನು ಭೂಮಿಗೆ ಹಾಕಿ ಇನ್ನೂ ಎರಡುಮೂರು ತಿಂಗಳುಗಳ ಗ್ರಾಸವಾಗುತ್ತಿದ್ದ ಧಾನ್ಯವನ್ನು ಕಳೆದುಕೊಂಡೆವು’ ಎಂದು ಕೆಲವರೂ, ‘ಧಾರಣೆವಾಸಿಗಳು ಬಹಳ ಅಗ್ಗಾಗಿ ಕ್ಷಾಮದ ಸೂಚನೆ ತೋರುವದರಿಂದ ಪದಾರ್ಥಗಳನ್ನು ಕೊಂಡು ತಿನ್ನುವ ನಾವು ಪೂರೈಸುವ ಬಗೆ ಹೇಗೆ’ ಎಂದು ಕೆಲವರೂ, ತಟತಪಡುತ್ತ ಮಳೆ ಬಂದರೆ ಬದುಕಿಕೊಂಡೇವು ಎಂದು ಅಂಗಲಾಚುತ್ತಿರುವರು.—ಹಿಂದೆ ಎರಡು ಸಂವತ್ಸರಗಳು ಪ್ಲೇಗು ಗಲಾಟೆಯಿಂದ ಬಾಲಕರ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗಿತ್ತು. ಈ ವರುಷ ರೋಗಾದ್ಯುಪದ್ರವಗಳೇನೂ ಇಲ್ಲದಂತೆ ದೇವರು ಕಾಪಾಡುತ್ತಾನೆ ಈ ವಿಚಾರವಾಗಿಯೂ ತಮ್ಮ ಮಹತ್ತು ಪ್ರಯೋಜನವಾದೀತೆಂದು ನಂಬಿ ಮಾಸ್ಟರುಗಳು ಮುತುವರ್ಜಿಯಿಂದ ಕೆಲಸ ಮಾಡುತ್ತಿರುವರು. ಜನಗಳಾದರೋ ತಮ್ಮ ಮಕ್ಕಳುಮರಿಗಳೊಡನೆ ಗಾಳಿ, ಸೊಳ್ಳೆಗಳ ಹೊಡೆತವನ್ನು ತಪ್ಪಿಸಿಕೊಂಡು, ತಮ್ಮ ತಮ್ಮ ಮನೆಗಳಲ್ಲಿ ಸೌಖ್ಯವಾಗಿರುವರು. ಇದನ್ನು ನೋಡಿ ಸಹಿಸಲಾರದ ದುಷ್ಟರ್ಯಾರೋ ಕೆಲವರ ಮನೆಗಳಲ್ಲಿ ಇಲಿಗಳು ಬೀಳುತ್ತವೆಂದು ವರ್ತಮಾನ ಹುಟ್ಟಿಸಿ, ಜನಗಳಿಗೆ ಗಾಬರಿಯನ್ನುಂಟುಮಾಡುತ್ತಿರುವರು.—ಈ ಊರಿನ ತೊಳಸಿರಾಮ. ಹೊಸಬರ ತಿಮ್ಮ, ಇವರಿಬ್ಬರೂ ತೆಂಗಿನಕಾಯಿ ಕಳವಿನಲ್ಲಿ ಸಿಕ್ಕಿಬಿದ್ದು ಅಮಲ್ದಾರರಿಂದ ಫೀ ಇಸಂ ಮೂರು ತಿಂಗಳಿನಂತೆ ಸಜಾ ವಿಧಿಸಲ್ಪಟ್ಟರು ಇವರಂತೆಯೇ ಕಳ್ಳತನವನ್ನು ಮಾಡತಕ್ಕ ಇನ್ನು ಕೆಲವರಿರುವರು. ಪೋಲೀಸಿನವರು ತಕ್ಕ ನಿಗಾ ಇಟ್ಟರೆ ಅವರೂ ಇಷ್ಟರಲ್ಲೇ ಸಿಕ್ಕಿಬೀಳಬಹುದು —ದನಗಳ ಮೇವಿಗೆ ತುಂಬಾ ತೊಂದರೆಯಾಗಿರುತ್ತೆ ದಯಾಳುಗಳಾದ ನಮ್ಮ ಅಮಲ್ದಾರರು ಈ ಕಷ್ಟವನ್ನು ಬುದ್ಧಿ ಪುರಾಂಬರಿಸಿ, ಒಂದು ತಿಂಗಳಿನ ವರೆಗೆ ಈಚಲು ಗರಿಗಳನ್ನು ಕೊಯ್ದು ದನಗಳಿಗೆ ಹಾಕಬಹುದೆಂದು ಅಪ್ಪಣೆಯನ್ನಿತ್ತಿರುವ ಹಾಗೆ ಕೇಳಿ ತುಂಬಾ ಸಂತೋಷಪಡಬೇಕಾಗಿದೆ ಮೂಗು ಪ್ರಾಣಿಗಳ ವಿಷಯದಲ್ಲಿ ಇವರಿಗಿರುವ ದಯಾರ್ದ್ರ ಹೃದಯವು ಬಹಳ ಶ್ಲಾಘನೀಯವಾದುದು —ಪಂಜಾಬಿಗೆ ಸೇರಿದ ಲೂಧಿಯಾನದ ಒಂದಾನೊಂದು ಕಂಪೆನಿಯ ಒಬ್ಬ ಏಜೆಂಟನು ಸದರಿ ಕಂಪೆನಿಯಲ್ಲಿ ಸರ್ಜ್, ಟ್ವೀಡು, ಕೇಸರಿ ಕಸ್ತೂರಿ ಮೊದಲಾದ ಅತ್ಯುತ್ತಮವಾದ ಸರಕುಗಳನ್ನು ಬೇಕಾದವರಿಗೆ ಕಳುಹಿಸುತ್ತಾರೆಂಬ ನಂಬಿಕೆಯನ್ನು ಜನಗಳಿಗೆ ತೋರಿಸಿ, ತನ್ನಲ್ಲಿದ್ದ ಆ ಕಂಪೆನಿಯ ಬಾಬ್ತು ಉತ್ತಮವಾದ ಕೆಲವು ಮಾದ್ರಿಗಳನ್ನು ಸಹಾ ತೋರಿಸಿ, ತನ್ನ ಇಂಡೆಂಟು ಫಾರಂನಲ್ಲಿ ಇಲ್ಲಿನ ಕೆಲವರ ಹೆಸರುಗಳನ್ನು ಬರೆದುಕೊಂಡು, ರುಜುಮಾಡಿಸಿಕೊಂಡು, ಸರಕು ಬರುವದರೊಳಗೆ ಈ ಊರಿನಿಂದ ಹೊರಟುಹೋದರು. ಕಂಪೆನಿಯವರಾದರೋ ಈ ಊರಿನವರು ಟೋಪಿಗಳ ಬೆಲೆಯನ್ನು ಕೊಡದೇಹೋದರೂ ಇವರಲ್ಲಿ ದಯವಿಟ್ಟು ಒಳ್ಳೇ ಟೋಪಿಗಳೊಡನೆ ಸರಕನ್ನು ಕಳುಹಿಸಿರುವರು. ಈಗ ಬಂದಿರತಕ್ಕ ಸರಕುಗಳ ಬೆಲೆಯಲ್ಲಿ ಒಂದು ರೂಪಾಯನ್ನು ಬಿಟ್ಟುಕೊಡುತ್ತೇನೆಂದರೂ ಅದನ್ನು ಮುಟ್ಟುವವರಿಲ್ಲದಂತಾಗಿರುತ್ತೆ.

ಚನ್ನಪಟ್ಟಣ —ಹವಾ ತಕ್ಕಮಟ್ಟಿಗೂ ಆರೋಗ್ಯಕರವಾಗಿದೆ ತಾ. ೨, ೩, ೯, ೧೦ ರಲ್ಲಿ ಸುಮಾರು ಮಳೆಯಾದುದರಿಂದ ಪೈರು ಪಚ್ಚೆಗಳಿಗೆ ಜೀವ ಬಂದಂತಾಯಿತು ಆದರೂ ಕೆರೆಗೇನೂ ನೀರು ಶೇಖರವಾಗಲಿಲ್ಲ —ಈ ಊರು ಬಹು ಮಟ್ಟಿಗೂ ದೊಡ್ಡದಾಗಿ ಅನೇಕ ಗಲ್ಲಿಗಳನ್ನುಳ್ಳದ್ದಾಗಿರುವದು. ಆದರೇನು ? ಊರಿಗೆ ತಕ್ಕಷ್ಟು ದೀಪಗಳಿಲ್ಲ. ಇರತಕ್ಕ ಕೆಲವು ದೀಪಗಳಾದರೋ ಮಿಣುಂಗಿ ಹುಳಗಳೇ ಅನ್ನಬಹುದು ರಾತ್ರಿ ೮—೯ ಗಂಟೆ ವೇಳೆಯಲ್ಲಿ ದೊಡ್ಡ ಬಾಜಾರದಲ್ಲಿ ತಿರುಗಾಡುವದು ದುಸ್ತರವಾದರೆ ಇತರ ಗಲ್ಲಿಗಳಲ್ಲಿನ ಬೆಳಕು ಎಷ್ಟರಮಟ್ಟಿಗಿರಬಹುದು ? ಊರಿನ ಮಧ್ಯೆ ಬೇರೆ ಬೇರೆ ಗಲ್ಲಿಗಳಲ್ಲಿ ಗೊಬ್ಬರದ ತಿಪ್ಪೆಗಳೂ, ದುರ್ವಾಸನೆಯುಳ್ಳ ಬಚ್ಚಲುಗಳೂ ಇರುವದು ತುಂಬಾ ಅನಾರೋಗ್ಯಕರ ಮುಖ್ಯ ಇಲ್ಲಿ ಪೋಸ್ಟ್ ಆಫೀಸ್ ಬಳಿ ಇರುವ ಚರ್ಮದ ಮಂಡಿಗಳೂ ಸಾಹುಕಾರ್ ನುಸ್ರತ್ ಸಾಬರ ಮನೆಯ ಕಡೆ ಒಂದು ಬಚ್ಚಲೂ ತುಂಬಾ ಅನಾರೋಗ್ಯವಾಗಿರುತ್ತವೆ ಇಂಥಾ ವಿಷಯಗಳಿಗೆ ಇಲ್ಲಿನ ವೈಸ್ ಪ್ರೆಸಿಡೆಂಟರವರೂ ಹೆಲ್ತ್ ಆಫೀಸರರೂ ಗಮನಕೊಟ್ಟರೆ ಉತ್ತಮವಾದೀತು —ಇಲ್ಲಿನ ವೈಶ್ಯ ಮಂಡಲಿಯವರೆಲ್ಲಾ ಸೇರಿ ಶ್ರೀ ಕನ್ನಿಕಾಪರಮೇಶ್ವರೀ ದೇವಸ್ಥಾನವನ್ನು ಕಲ್ಲಿನಿಂದಲೂ ಚಿತ್ರ ಕೆಲಸಗಳಿಂದಲೂ ಸುಂದರವಾಗಿ ಕಟ್ಟಿಸುತ್ತಾ ಇದಾರೆ ಈ ದೇವಸ್ಥಾನ ಜೀರ್ಣೋದ್ಧಾರ ಮಾಡುವದಕ್ಕಾಗಿ ಎರಡು ವರುಷಗಳ ಹಿಂದೆ ರಾಮಶೆಟ್ಟಿ ಎಂಬ ಒಬ್ಬರು ತಮ್ಮ ಆಸ್ತಿಯಲ್ಲಿ ಸುಮಾರು ಆರು ಸಾವಿರ ರೂಪಾಯಿ ಕೊಟ್ಟು ಕಾಲವಾದರು. ಸದರಿ ದೇವಸ್ಥಾನವು ಪೂರೈಸುವದಕ್ಕೆ ಮುಂಚೆಯೇ ತಂತಮ್ಮಲ್ಲಿನ ವೈಮನಸ್ಯದಿಂದಲೋ ಏನೋ ಕೆಲಸ ನಿಲ್ಲಿಸಿಬಿಟ್ಟಿರುತ್ತಾರೆ. ಈ ದೇವಸ್ಥಾನದ ಹಣದ ವಿಷಯ ಕೋರ್ಟಿನಲ್ಲಿ ದಾವಾ ಹಾಕಿಕೊಂಡಿದ್ದಾರೆಂಬ ಸುದ್ದಿ ಇರುತ್ತೆ.—ಇಲ್ಲಿನ ಕೆಲವು ವರ್ತಕ ಶಿರೋಮಣಿಗಳಾದವರು ಒಂದು ವಿಸ್ತಾರವಾದ ನಾಟಕಶಾಲೆ (ಥರ್ಮ ಶಾಲೆ) ಯನ್ನು ಕಟ್ಟಿಸಿ, ನಾಟಕಕ್ಕೆ ಬೇಕಾಗುವ ಪರದೆ ಮೊದಲಾದ ಎಲ್ಲಾ ಸಾಮಗ್ರಿಗಳನ್ನು ಕೊರತೆಯಿಲ್ಲದಂತೆ ಒದಗಿಸಿ, ಇಷ್ಟಬಂದ ಯಾರಾದರೂ ಇಲ್ಲಿ ಬಂದು ಆಡಲು ಅನುಕೂಲವನ್ನು ಮಾಡಿದಾರೆ —ಊರು ಗ್ರಾಮಗಳ ಕಂದಾಯಗಳನ್ನು ವಸೂಲ್ಮಾಡುವ ಪಟೇಲರುಗಳಿಗೆ ವರ್ಷಕ್ಕೆ ಇಷ್ಟೆಂತ ಸಂಬಳ ಕೊಡುವದು ಚಲಾವಣೆಯಲ್ಲಿರುತ್ತದೆ. ಆದರೂ ಈ ತಾಲ್ಲೋಕಿನ ಕೆಲವು ಗ್ರಾಮಗಳ ಪಟೇಲರು ತಾವು ೮—೧೦ ವರ್ಷಗಳಿಂದ ಪಟೇಲಿ ಕೆಲಸ ಮಾಡುತ್ತಾ ಇದ್ದರೂ ಅವರಿಗೆ ಯಾವ ವಿಧವಾದ ವರಮಾನವೂ ಸರ್ಕಾರದವರಿಂದ ಸಿಕ್ಕದೆ ವ್ಯಥೆಪಡುತ್ತಾ ಇರುವದನ್ನು ನೋಡಿದರೆ ಆಶ್ಚರ್ಯವಾಗುತ್ತೆ. ಮತ್ತು ರೈತರ ಹೊಲಗಳಲ್ಲಿರುವ ಪ್ರತಿಯೊಂದು ಈಚಲಗಿಡಕ್ಕೂ ಸರ್ಕಾರದವರು ಗಿಡ ಒಂದಕ್ಕೆ ಒಂದು ರೂಪಾಯಿನಂತೆ ರೈತನಿಗೆ ಕೊಡತಕ್ಕದ್ದೆಂದು ಶಾಸನಿಸಿದೆಯಂತೆ. ಹೀಗಿರುವಲ್ಲಿ ಗಿಡ ಒಂದಕ್ಕೆ ೪ ಆಣೆ ಕೊಡುವದು, ಹಾಗೂ ಗಂಡಾಗುಂಡಿಮಾಡಿ ೪ ಆಣೆಗೆ ಒಪ್ಪದೆ ಹೋದರೆ ೫—೬ ಆಣೆ ಕೊಟ್ಟು ರೈತರನ್ನು ಸಮಾಧಾನ ಮಾಡುತ್ತಾರೆಂಬ ಗೋಣಗಾಟಗಳು ಹೇರಳವಾಗಿವೆ ಅಧಿಕಾರಿಗಳು ಇದಕ್ಕೆಲ್ಲಾ ಗಮನಕೊಡುವದು ಒಳ್ಳೇದು. ಇಲ್ಲಿ ಅನಾಮಧೇಯರು ಯಾರೋ ಕಂಪನಿಯವರು ಕಷ್ಟವನ್ನು ಹೊಂದಬೇಕೆಂತಲೋ ತಮಾಷೆಗಾಗಿಯೋ ಗಡಿಯಾರಗಳನ್ನು ವಿ ಪಿ. ಮೂಲಕ ಕಳುಹಿಸಬೇಕೆಂತ ಬರೆದು, ತಮ್ಮ ಹೆಸರನ್ನು ಮಾಜಿ ಇತರ ಹೆಸರುಗಳನ್ನು ಬರೆದರೆಂತಲೂ ಸದರಿ ವಿ ಪಿ ಭಾಂಗಿಗಳು ಬಂದಾಗ ತಾವು ಬರೆದವರಲ್ಲವೆಂದು ವಿಳಾಸದಾರರು ಹೇಳಿ ವಾಪಸ್ ಮಾಡಿದ್ದರಿಂದ ಸದರಿ ಕಂಪನಿಯವರಿಗೆ ಈ ಊರಿನವರ ನಂಬಿಕೆ ತಪ್ಪಿ, ಇನ್ನು ಮುಂದೆ ಪೋಸ್ಟ್ ಮಾಸ್ಟರ ಮೂಲಕ ಆರ್ಡರು ಬಂದಹೊರ್ತು ಸಾಮಾನು ಕಳುಹಿಸುವದಿಲ್ಲವೆಂಬುದಾಗಿ ಹೇಳಿದರೆಂತಲೂ ತಿಳಿದುಬರುತ್ತೆ.

ಮೇಲುಗೋಟೆ ಉಭಯ ವೇದಾಂತ ಸಭೆಯು ಈ ಸಂವತ್ಸರ ತಿರುನಾರಾಯಣಪುರದಲ್ಲಿ ಶ್ರೀ ಭಾಷ್ಯಕಾರರ ತಿರುನಕ್ಷತ್ರದಲ್ಲಿ ನಡೆಯಿತು. ಈ ಸಭೆಗೆ ಮೈಸೂರಿಂದ ಪರೀಕ್ಷೆಗೋಸ್ಕರ ಹೋಗಿದ್ದ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರಿದ್ದಕ್ಕಾಗಿ ಪಾಠ ಹೇಳಿದ ಮೆ|| ಬಟ್ಟಾವಲ್ಲಭ ವೆಂಕಟಾಚಾರ್ಯರಿಗೆ ಬಹುಮಾನ ಅಲ್ಲಿಯ ಗೋಷ್ಠಿಯಲ್ಲಿ ಗೊತ್ತಾದ ಹನ್ನೆರಡು ರೂಪಾಯಿ ಕೊಡಲು ಸದರಿ ವೆಂಕಟಾಚಾರ್ಯರು ಕಾರ್ಯಾಂತರದಿಂದ ದಯಮಾಡಿಸಲಿಲ್ಲವಾಗಿ ಕಳೆದ ವಾರ ತಾ ೧೩ನೆಯ ಭಾನುವಾರ ಬೆಂಗಳೂರಿನಿಂದ ಎಸ್. ವೆಂಕಟರಂಗಯ್ಯಂಗಾರ್ಯ, ಆನಂದಾಳ್ವಾರರು ದಯಮಾಡಿಸಿ ಮಳೂರು ಶ್ರೀ ಅಪ್ರಮೇಯ ಸ್ವಾಮಿ ದೇವಸ್ಥಾನದ ಅಮ್ಮನವರ ಸನ್ನಿಧಿಯ ಬಳಿ ಸಭೆ ನಡಿಸಿದರು. ಈ ಸಭೆಗೆ ಚನ್ನಪಟ್ಟಣದ ಹೈಸ್ಕೂಲ್ ಹೆಡ್ ಮಾಸ್ಟರ್ ಮೆ|| ಕೃಷ್ಣಯ್ಯಂಗಾರ್ಯ, ಅ|| ಮಾಸ್ಟರುಗಳು, ಕನ್ನಡ ಸ್ಕೂಲ್ ಹೆಡ್ ಮಾಸ್ಟರು, ತಾಲ್ಲೂಕು ಕಚೇರಿ ಹೆಡ್ ಗುಮಾಸ್ತರೇ ಆದಿಯಾಗಿ ಸಮಸ್ತ ಲೌಕೀಕ ಉದ್ಯೋಗಸ್ಥರೂ ಚನ್ನಪಟ್ಟಣದಲ್ಲಿ ದಯಮಾಡಿಸಿರುವ ವೇ|| ವೆಂಕಟಾಚಲ ಜೋಸ್ಯರೇ ಆದಿಯಾಗಿ ಅನೇಕ ವೈದೀಕ ಮಂಡಲಿಯೂ ದಯಮಾಡಿಸಿದ್ದಲ್ಲದೆ, ಮಳೂರಲ್ಲು ಮೆ|| ಶ್ರೀನಿವಾಸಚಾರ್ಯರೇ ಆದಿಯಾಗಿ ಅನೇಕ ವೈದೀಕ ಲೌಕೀಕರು ಸಭಾ ಮಂಟಪವನ್ನು ಅಲಂಕರಿಸಿದ್ದರು. ಈ ಸಭೆಯ ಅಗ್ರಾಸನವನ್ನು ಬೆಂಗಳೂರಿಂದ ದಯಮಾಡಿಸಿದ್ದ ಎಸ್. ವೆಂಕಟರಂಗಯ್ಯಂಗಾರ್ಯರ ಅಭಿಪ್ರಾಯದಂತೆ ಸಭಿಕರು ಅನುಮೋದಿಸಿದ ಮೇರಿಗೆ ಚನ್ನಪಟ್ಟಣದ ಹೈಸ್ಕೂಲ್ ಹೆಡ್ ಮಾಸ್ಟರ್ ಮೆ|| ಕೃಷ್ಣಯ್ಯಂಗಾರ್ಯ ವಹಿಸಿದರು. ಆನಂದಾಳ್ವಾರರು ಉಭಯ ವೇದಾಂತ ಸಭಾ ವಿಷಯವಾಗಿ ಪ್ರಕೃತೋಚಿತವಾದ ಉಪನ್ಯಾಸಮಾಡಿದರು ನಂತರ ಚನ್ನಪಟ್ಟಣದ ಹೈಸ್ಕೂಲ್ ಸಂಸ್ಕೃತ ಮುನ್ಷಿರಾದ ಮೇ|| ಆನಂದಾಳ್ವಾರರು ಮಾಡಿದ ಉಪನ್ಯಾಸ ವಿಷಯವು ಬಹಳ ಶ್ಲಾಘ್ಯವಾಗಿರುತ್ತೆ. ಇದರಂತೆ ಎಲ್ಲರೂ ತಮ್ಮ ತಮ್ಮ ವಿದ್ಯಾ ಕೌಶಲ್ಯವನ್ನು ಪ್ರಚುರಪಡಿಸತಕ್ಕದ್ದು ಅವಶ್ಯಕವಾದದ್ದಾಗಿರುತ್ತೆಂದು ಸರ್ವರಿಗೂ ವಿಜ್ಞಾಪಿಸಿದ್ದರಲ್ಲಿ ಎಲ್ಲರೂ ಕೇಳಿ ಬಹಳ ಸಂತೋಷದಿಂದ ಅನುಮೋದಿಸಿದರು. ನಂತರ ಬಟ್ಟಾವಲ್ಲಭ ವೆಂಕಟಾಚಾರ್ಯರಿಗೆ ಆನಂದಾಳ್ವಾರರು ಮೇಲೆ ಹೇಳಲ್ಪಟ್ಟ ಬಹುಮಾನವನ್ನು ಕೊಟ್ಟರು ಅನಂತರ ಸರ್ವರಿಗೂ ಸ್ವಸ್ತಿವಾಚನದೊಡನೆ ಗಂಧ, ಪುಷ್ಪ ತಾಂಬೂಲಗಳು ನಡೆಯಿತು ಅಗ್ರಾಸನವನ್ನು ವಹಿಸಿದ್ದ ಮೆ|| ಕೃಷ್ಣಯ್ಯಂಗಾರ್ಯ—ಆನಂದಾಳ್ವಾರರು ಮಾಡಿದ ಉಪನ್ಯಾಸ ಸರ್ವರಿಗೂ ತಿಳಿದು ಇರಬಹುದು. ಅದರಂತೆ ಎಲ್ಲರೂ ತಮ್ಮ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸತಕ್ಕದ್ದು ಮುಖ್ಯವಾದದ್ದಾಗಿರುತ್ತೆ ಆದರೆ ಸಭಿಕರು ನನಗೆ ಅಗ್ರಾಸನವನ್ನು ವಹಿಸಿದ್ದಕ್ಕಾಗಿ ನಾನು ಸರ್ವರಿಗೂ ವಂದನೆ ಮಾಡುತ್ತೇನೆ ಎಂಬೀ ರೀತಿ ಹೇಳಿದರು —೧೨ನೇ ಶನಿವಾರ ಮಧ್ಯಾಹ್ನ ಸುಮಾರು ೨ ಗಂಟೆ ಸಮಯದಲ್ಲಿ ಮದ್ದೂರು ಶ್ರೀ ನೃಸಿಂಹಸ್ವಾಮಿ ದೇವಸ್ಥಾನದಲ್ಲಿ ಮಧ್ಯಾಹ್ನದ ಪೂಜೆಯಾದ ನಂತರ ಒಬ್ಬ ಕಳ್ಳನು ಪ್ರಾಕಾರದ ಗೋಡೆಯ ಮೇಲೆ ಹತ್ತಿ ಒಳಕ್ಕಿಳಿದು, ರಾಮದೇವಸ್ಥಾನದ ಬೀಗವನ್ನು ಒಡೆದು, ದೇವರ ಮೇಲಿದ್ದ ಎರಡು ಪಂಚೆಗಳನ್ನು ತೆಗೆದುಕೊಂಡು, ಉಗ್ರಾಣದ ಬಾಗಲಿಗೆ ಹಾಕಿದ್ದ ಬೀಗವನ್ನು ಒಡೆದು, ಅಲ್ಲಿದ್ದ ೧೦—೧೨ ಸೇರಕ್ಕಿಯನ್ನು ಆ ಪಂಚೆಗಳಲ್ಲಿ ಕಟ್ಟಿಕೊಂಡು, ಮತ್ತಿಯ ಮೇಲಕ್ಕೆ ಹೋಗಿ, ಕಿಟಕಿಯ ಕೆಳಗೆ ದಯಮಾಡಿಸಿದ್ದ ಉತ್ಸವ ವಿಗ್ರಹದ ಮೇಲಿನ ಸುಮಾರು ೧೬—೧೮ ರೂಪಾಯಿ ಬಾಳತಕ್ಕ ಒಂದು ಕಲಾಪತ್ತಿನ ಪಂಚೆಯನ್ನು ಕೊಕ್ಕೆಯಿಂದ ತೆಗೆದುಕೊಂಡು, ಅದೇ ದಾರಿಯಿಂದ ಹೊರಕ್ಕೆ ಹೋಗಬೇಕೆಂದು ಭಾವಿಯ ಬಳಿಗೆ ಬಂದನು. ಅಲ್ಲಿ ಮುತ್ತಣ್ಣಯ್ಯಂಗಾರ್ಯೆಂಬುವರು ಇವನನ್ನು ಬಿಟ್ಟು ಕಾಲತಿರಲು ಆಗ ಅವರು ಇವನನ್ನು ನೋಡಿ, ಅನುಮಾನದಿಂದ ಅವನನ್ನು ಹಿಡಿದು, ಅಲ್ಲಿಯೇ ಕೂರಿಸಿಕೊಂಡು, ಹೊರಕ್ಕೆ ಬಂದು ಜನಗಳನ್ನು ಕೂಗುವಷ್ಟರಲ್ಲಿ ಕಳ್ಳನು ಓಡಿಹೋದನು. ಅನಂತರ ಬಹಳ ಪ್ರಯತ್ನದಿಂದ ಒಂದು ತೋಟದಲ್ಲಿ ಅವನನ್ನು ಹಿಡಿದು ಪೋಲೀಸಿಗೆ ತಿಳಿಸಿದರು. ಆದರೆ ಕಳ್ಳನನ್ನು ಹಿಡಿದುಕೊಟ್ಟಾಗ್ಯೂ ಕಲಾಪತ್ತಿನ ಪಂಚೆಯು ಪತ್ತೆ ಆಗದೆಹೋದದ್ದು ಆಶ್ಚರ್ಯವಾಗಿದೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

31

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಸಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ಕರಿಸಿ ನೋಡಿರಿ:—

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ|| ರಾ|| ಕರಿಬಸವಶಾಸ್ತ್ರಿಗಳು ಬರೆದಿದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ; ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ.

೩. "ಸ್ವಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪. "ರೋಮನರ ಚರಿತ್ರೆ" ಕ್ರಯ ೨—೨—೦
೫. "ಗ್ರೀಕರ ಚರಿತ್ರೆ." ,, ೦—೨—೦
೬. "ಅನುಭವಾನಂದ.",, ೦—೬—೦
೭. "ಗಣಿತ ಸಂಜೀವಿನಿ." ೧—೮—೦
೮. "ಗಣಿತ ಚಿಂತಾಮಣಿ" ೦—೧೦—೦
೯. "ಚಾಮರಾಜೇಂದ್ರ ವಿಲಾಸ." ೦—೧೨—೦
೧೦. "ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ." ೦—೧೨—೦
೧೧. "೧೯೦೫ನೇ ವರುಷದ ಡೈರಿಗಳು"

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎಸ್ ಬುಕ್ ಡಿಪ್ರೋ,
ಮೈಸೂರು.

ಜ್ವರಹರಿ. 10



ಇದು ಸಾಧಾರಣ ಜ್ವರ, ಚಳೀಜ್ವರ, ಕೆಂಡಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಶೀಘ್ರವಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ.—ಸೀಸೆ ೧ಕ್ಕೆ ೮ ಆಣೆ, ೧ ರೂ., ೧—೮ ರೂ. ... —೧೨ ಆ., ೧೧ ರೂ.; ಡಜನ್ ರಷ್ಟು ಸೀಸೆ ತರಿಸಿಕೊಂಡರೆ [illegible] ಬಿಡಲಾಗುವದು

****

ಓ ಮಂ ಕ ರ್ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು ಶಾಂತಿಭೇದಿ. ನಾನಾತರದ ಹೊಟ್ಟೆನೋವುಗಳು—ಮುಂತಾದ್ದೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟಂಟ್ ಸರ್ಜನ್ ಗಣಪತಿ ರಾಯರು—ಜನ್ಗಿಯ ಓಮಂ ಕರ್ಪೂರವನ್ನು ನಾನು ನನ್ನ ಕಾಬೇದಾರರೂ ಮೈಸೂರಿನ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಜನ್ಗಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಲೇನ್ ಬೀಚ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ .. .. ರೂ. ೧—೦೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಶ್ರೀತಾಂಬೂಲ.

10

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೆವರಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವದು. ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮರ್ಯಾದಸ್ಥರ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ.—

ದೇವನಹಳ್ಳಿ ಟವುನ್, ಬೆಂಗಳೂರು ಡಿಸ್ಟ್ರಿಕ್ಟ್ — ಯಂ ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್

ಪೇನೇಸಿಯ

ಕೃತ್ರಿಮ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಛತ್ರವು, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಜೇಲು, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಯಾವುದೂ ಇಲ್ಲವೆಂಬುದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ವೇದನೆಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ನೋವು ಉಂಟಾದ ಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಕರ್ಣಶೂಲ, ಮೂಲವ್ಯಾಧಿ, ಉಬ್ಬಸ, ಗಾಯಗಳು, ನರ ಹೊರಳುವದು, ಉಳುಕು ಶೀಲವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಜ್ಜಿಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿದರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ನೋವು ನೀಗಿಸುವ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಾಗಲೂ ಇದರಲ್ಲಿ ಇನ್ನಿತರ ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೭ ಸೆಕೆಂಡ್ ಬೀಚ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

28—7—1905 ರಿಂದ 4—8—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕೋಡವ... ಸಂಖ್ಯೆ
ಬೆಂಗಳೂರು ಪಟ್ಟಣ	6	4	2
ಮೈಸೂರು ,,	0	0	4
ಬೆಂಗಳೂರು ಡಿಸ್ಟ್ರಿಕ್ಟ್	18	7	103
ಮೈಸೂರು ,,	12	8	187
ಕೋಲಾರ್ ,,	0	0	70
ಕೋಲಾರ್ ಚಿನ್ನದ ಗಣಿಗಳು	0	0	40
ತುಂಕೂರು ಡಿಸ್ಟ್ರಿಕ್ಟ್	4	5	13
ಹಾಸನ ,,	0	0	18
ಚಿತ್ರದುರ್ಗ ,,	0	0	65
ಕಡೂರ್ ,,	23	19	141
ಶಿವಮೊಗ್ಗ ,,	37	25	162
ಜುಮ್ಲಾ.	94	68	805

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಶ್ರಾವಣ ಬಹುಳ ಬಿದಿಗೆ ಗುರುವಾರದಿಂದ ಶ್ರಾವಣ ಬಹುಳ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಆಗಸ್ಟ್.

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.
17	ಗುರು	ಬಿದಿಗೆ	5 15	ಪೂಭಾ	50 54
18	ಶುಕ್ರ *	ತದಿಗೆ	12 30	ಉ	56-32
19	ಶನಿವಾ ,,	ಚೌತಿ	16 55	ರೇ	60-0
20	ರವಿವಾ ‡	ಪಂಚಮಿ	21 06	ರೇ	2 15
21	ಚಂದ್ರ ¶	ಷಷ್ಠಿ	26-58	ಅ	9 30
22	ಕುಜ §	ಸಪ್ತಮಿ	31-12	ಭ	15 15
23	ಬುಧ †	ಅಷ್ಟಮಿ	35-32	ಕೃ	21-25

* ಸಂಕಷ್ಟಚತುರ್ಥಿ. ‖ ಶ್ರಾವಣಶನಿವಾರ
‡ ಶೂನ್ಯತಿಥಿ. ¶ ಮಹಾವ್ಯಪ.
§ ಶ್ರೀಕೃಷ್ಣಜನ್ಮಾಷ್ಟಮಿ, ಮಂಗಳಗೌರೀವ್ರತ
† ಮಧ್ವಾರು ಸಂಪ್ರದಾಯಕ್ಕೆ ಅರುಣೋದಯ ಸಹ ಶ್ರೀಜಯಂ...

ಪೇಟೆ ಧಾರಣೆ.

ದಿನಸು.	ಮೈಸೂರು	ಬೆಂಗಳೂರು
ಕಳ್ಳೆ ಬತ್ತ ಪಲ್ಲ ೧ಕ್ಕೆ	ರೂ. ೧೨—೮—೦	೧೬—
ಕೆಂಬೂತ ಅಕ್ಕಿ ಅವಲ್	೧೭—೪—೦	೧೨—
,, ಮಾಯಂ	೧೨—೨—೦	೧೯—೦
ಬಾಬ್ರಾತ ಅಕ್ಕಿ	೧೨—೦—೦	೧೨—
ಸಣ್ಣಕ್ಕಿ ಅವಲ	೧೪—೦—೦	೧೨—೦
,, ಮಾಯಂ	೧೩—೮—೦	೧೭—೧
ತೊಗರೀ ಬೇಳೆ ಪಲ್ಲ ೧ಕ್ಕೆ	೧೧—೨—೦	೧೦—
,, ಮಾಯಂ	೧೦—೮—೦	೧೧—
ಹೈನ ರಾಗಿ ಪಲ್ಲ ೧ಕ್ಕೆ	೧—೪—೦	೫—
ಕಾರಾಗಿ	೬—೦—೦	೫—
ಜೋಳ	೬—೦—೦	೬—೦
ಹಲಸಂದೆ ಪಲ್ಲ ೧ಕ್ಕೆ	೧೦—೦—೬	೯—
ಬಿಳೀ ಅವರೆ	೮ ೧೨ ೦	೯—
ಹೆಸರು	೯ ೦ ೬—೦	೧೦—೮
ಉದ್ದು	೯ ೦ ೦ ೦	೯—
ಕಡಲೆ	೧೦ ೬—೦	೯—
ಎಳ್ಳು	೧೬ ೦—೦	೧೫—
ಹುರುಳಿ	೧೯—೦ ೦	೯—
ಹರಳು ೧೨ ಸೇರಿಗೆ	೧೨—೮—೦	೧೨—೦
ಸೀಗೇಕಾಯಿ ಮಣ ೧ಕ್ಕೆ	೩—೮—೦	೩—೦
ಮೆಣಸಿನಕಾಯಿ	೪—೮—೦	೪—
,, ಮಾಯಂ	೩—೧೨—೦	೩—೦
ಬೆಲ್ಲ ದೊಡ್ಡ ಅಚ್ಚು	೫—೪—೦	೫—೨
ಒಳ್ಳೆಣ್ಣೆ ಮಣ ೧ಕ್ಕೆ	೪—೪ ೦	೪—
ಹರಳೆಣ್ಣೆ ,,	೫—೦—೦	೪—
ಕೊತ್ತುಂಬರಿ ಪಲ್ಲ ೧ಕ್ಕೆ	೧೦ ೮—೦	೧೧—
ಉಪ್ಪು ,,	೭—೦—೦	೬—
ಹುಣಸೇ ಹಣ್ಣು	೧ ೦—೦	೦
,, ಹಳೇದು	೦—೧೪—೦	೦—
[illegible]	೧೨ ೮—೦	೧೦
ಸೀಮೆಯೆಣ್ಣೆ ಟಿನ್ನು ೧ಕ್ಕೆ	೫—೦—೦	೩—
ತೆಂಗಿನಕಾಯಿ ೧೦೦ ಕ್ಕೆ	೫—೦—೦	೪
ಅಳಲೇಕಾಯಿ ಮಣ ೧ಕ್ಕೆ	೧—೦—೦	೦—
ಅಂಟುವಾಳದಕಾಯಿ ಮಣ ೧ಕ್ಕೆ	೦—೧೪—೦	೦—
ಚರ್ಮ (ದನ) ಕೆಂಪು	೧೫—೮—೦	೧೫
,, ,, ಹಸಿರು	೧೫—೧೦—೦	೧೫
,, ,, ಗಟ್ಟಿ ತೂಕ ೧ಕ್ಕೆ	೨೬—೦—೦	೨
ಬೆಳ್ಳಿ ಗಟ್ಟಿ ತೂಕ ೧೦೦ಕ್ಕೆ	೭೬—೦—೦	೭೬

Printed and Published by the Rev. H. Spencer the Proprietor and Manager, Wesleyan Mission Mysore. 17/8/1905.

ವೃತ್ತಾಂತ ಪತ್ರಿಕೆ.

REGISTERED N 20

ಕ್ರಯ ೧ ದುಡ್ಡು

ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಚಿಕೆ ೧೩

ಮೈಸೂರು—ಸನ್ ೧೯೦೫ ನೇ ಇಸವಿ ಆಗಸ್ಟ್ ತಾರೀಖು ೨೪ ನೇ ಗುರುವಾರ.

ಸಂಪುಟ ೧೯

ಈ ಕೆಳಗಣ ಪುಸ್ತಕಗಳು ಕೊಂಚವಾಗಿವೆ. ಬೇಗನೆ ತರಿಸಿಕೊಳ್ಳಿ. ಆಮೇಲೆ ಸುಲಭವಾಗಿ ಈ ಕಡಿಮೆ ಬೆಲೆಗೆ ಸಿಕ್ಕಲಾರವು. ಇದು ಒಳ್ಳೇ ಸಮಯವು.

ಕನ್ನಡ ಹಿಂದೂಲಾ.—ಇದು ಎಲ್ಲಾ ಹೈಕೋರ್ಟುಗಳ ತೀರ್ಮಾನಗಳೊಡನೆ ಸೇರಿ, ಸಮಸ್ತ ವಿಷಯಗಳನ್ನೂ ಕನ್ನಡದಲ್ಲಿ ತಿಳಿಸುವುದು. ಸರಕಾರಿ ವ್ಯವಹಾರಗಳುಳ್ಳ ಎಲ್ಲಾ ಜನರಿಗೂ ಆವಶ್ಯಕವಾಗಿ ಇದರ ಬೆಲೆ ರೂ ೨—೪—೦.

ಕನ್ನಡ ಮನುಧರ್ಮಶಾಸ್ತ್ರವು.—ಇದರಲ್ಲಿ ಲೋಕಜ್ಞಾನಕ್ಕೆ ಬೇಕಾಗಿರುವ ಸಮಸ್ತ ಶಾಸ್ತ್ರತತ್ವವಿಷಯಗಳೂ ಸುಲಭವಾದ ವಚನದಲ್ಲಿ ನಿರೂಪಿಸಲ್ಪಟ್ಟಿದೆ. ಎಲ್ಲರಲ್ಲಿಯೂ ಇರಬೇಕಾಗಿರುವ ಆವಶ್ಯಕ ಪುಸ್ತಕವು. ಬೆಲೆ ರೂ. ೧.

ಕನ್ನಡ ಕೇಸರೀ ವಿಲಾಸವು.—ಇದು ಅತ್ಯದ್ಭುತ ಹವು ಕವಾದ ನಾವಲ್ ಎಂಬ ನಾಟಕ ವಿನೋದ ಕಥೆ. ಬಹಳ ಸುಲಭವಾದ ಶೈಲಿಯಿಂದ ಬರೆಯಲ್ಪಟ್ಟಿದೆ ಬೆಲೆ ಆ ೦—೮—೦

ವಿಳಾಸ—ರತ್ನಾಕರ್ ಅಂಡ್ ಕಂಪೆನಿ,
ತಿರುವಲ್ಲಿಕ್ಕೇಣಿ, ಮದರಾಸ್.

ಜ್ವರಹರಿ.



ಇದು ಸಾಧಾರಣ ಜ್ವರ, ಚಳೀಜ್ವರ, ಪಾಳೀಜ್ವರ, ಚಿತ್ತಜ್ವರ, ಪಿತ್ತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುನಿಸಿಪಲ್ ಸಬ್ ಓವರ್ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೪ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಈ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆರೋಗ್ಯ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬಿಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಡಿಸ್ಕೌಂಟು ಮಾಫಿ ಬಿಡಲಾಗುವದು.

****

ಅಮೃತಾಂಜನ ಕರ್ಪೂರ.

ಈ ಔಷಧವು ಅಜೀರ್ಣ, ಕೀಲುಬೇಧಿ, ಸಾಧಾರಣ ಹೊಟ್ಟೆಯ ಕಳ್ಳ ಮುರುಕು, ವಾಂತಿಬೇಧಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಎಲ್ಲಕ್ಕೂ ಮಹೌಷಧವಾಗಿ ಪರಿಣಮಿಸಿ, ಕಾಲರೋಗದಿಂದ ಕಾಪಾಡುವದು. ಇದು ಎಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುವದು. ಇದು ಪ್ರಯದ ಪರವು ಪ್ರವರ್ತಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಉಡುಪದ ಅಸಿಸ್ಟೆಂಟ್ ಸರ್ಜನ್ ಗಣಪತಿರಾಯರು—ಹೆನ್ರಿಯು ಅಮೃತಾಂಜನ ಕರ್ಪೂರವನ್ನು ನಾನೂ ನನ್ನ ಹಾಸ್ಪಿಟಲು ಮುನಿಸಿಪಲ್ ಕರ್ಪೂರವನ್ನು ನಾನೂ ಆಸ್ಪತ್ರೆಯಲ್ಲಿ ಅನೇಕ ಸಂದರ್ಭಗಳಲ್ಲಿಯೂ ಕಾಲರಾ, ಅತಿಸಾರ ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಕೊಟ್ಟಾಗ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವುಗಳ ಕೆಳಗಿನ ವಿಳಾಸದಲ್ಲಿ ವಿಶೇಷ:—

ಅಮೃತಾಂಜನ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಬಿಲ್ಲಿಂಗ್ ಸ್ಟ್ರೀಟ್, ಮದರಾಸ್.

ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

ಮೆಟ್ರಿಕ್ಯುಲೇಷನ್ ಕನ್ನಡದ ೬ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ,, ,, ೭ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಷೆ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

೨ನೆ ಭಾಷೆ ಪ್ರಶ್ನೋತ್ತರ ಲೇಖ್ಯಬೋಧಿನಿ.

ಕ್ರಯ ಪ್ರತಿ ೧ಕ್ಕೆ ೧ ರೂ ೪ ಆಣೆ ಮಾತ್ರ. ಸಿವಿಲ್, ಕ್ರಿಮಿನಲ್, ಮುಲ್ಕಿ, ರೆವಿನ್ಯೂ, ಲೇವಾದೇವಿ, ರೋಡು ವರ್ಗ, ಖಾನು ಭಾವಿಕೆ ಲೆಕ್ಕ, ಇತ್ಯಾದಿ ಸಮಸ್ತ ಸಾರಾಂಶಗಳನ್ನೂ ತಿಳಿಸತಕ್ಕ ಬಹು ಸುಲಭಕ್ರಮದ ಈ ಪುಸ್ತಕವು ಕ್ರಯ ೧ ರೂ. ೪ ಆಣೆ.

ಯೋಜನ ಪುಸ್ತಕ.—ಕ್ರಯ ೧ ರೂ. ಮಾತ್ರ —ರೆವಿನ್ಯೂ ಇನ್ಸ್‌ಪೆಕ್ಟರ್ ಸ್ಕೀಂ ಅನುಸರಿಸಿ ವೃದ್ಧಿಗಳಿರತಕ್ಕ ಸಮಸ್ತ ಲೆಕ್ಕದ ರು ಮುಂತಾದರಿಗೆಲ್ಲಾ ಬಹು ಉಪಯೋಗವಾದದ್ದು.

ವಿಳಾಸ—ಬಿ. ಕೆ. ಮೂರ್ತಿ ಕಂಪೆನಿ, ಬೆಂಗಳೂರು ಸಿಟಿ.

ಪೋ ೯ ಮೋ ೯ ಸಿ ಯಾ.

ತಕ್ಷಣ ಪರಿಹಾರ.

ತಗಲುತ್ತಲೇ ನೋವು ವಾಸಿ ಯಾಗುತ್ತೆ.

ಈ ಔಷಧಿಯು ಮನೆ, ಆರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಬೇರೆ ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಜಾಕರ್ನವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಮುಳಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ಊತ, ಕಿವಿನೋವು, ಊದುಗಳು, ಗಡ್ಡೆಗಳು, ರಣಗಳು, ಮುಳುಕತ್ತಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯ ಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೩ ಪಟ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಎಂಬ್ರೊಕೇಷನ್.

ಈ ತೈಲವು ಪಶು ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕೂ ಹೊರತು ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೆಳೆದುಕೊಳ್ಳುವದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕ್ರಯ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ. ೬೩ ಸಳಾದು ಬೀದಿ ಲೈನ್, ಕಲಕತ್ತಾ.

ಬಿ. ಬಸವಲಿಂಗಶೆಟ್ಟಿ ಅಂಡ್ ಸನ್ಸ್, ಪಾರಿಜಾತ ವಿಳಾಸ, ಅರಳೇಪೇಟೆ, ಬೆಂಗಳೂರು ಸಿಟಿ

ಹರವಾಯಿಸಿ ಕಮಂವಾರ್ ಊದುಬತ್ತಿಗಳು, ಜವ್ವಾಜಿ ಗಂಧ, ಅತ್ತರ್ ಬಿಲ್ಲೆಗಳು, ದಶಾಂಗ, ಪುನುಗು, ಪಚ್ಚಕರ್ಪೂರ, ವಗೈರೆ ಸುಗಂಧದ್ರವ್ಯಗಳು ಬಹಳ ಸುಲಭಬೆಲೆಯಿಂದ ದೊರೆಯುವದಲ್ಲದೆ, ವ್ಯಾಪಾರಗಾರರಿಗೆ ಬಹಳ ಲಾಭಬರುವಂತೆ ಮಾರಲ್ಪಡುತ್ತೆ. ಒಂದು ಸಲ ಪರೀಕ್ಷೆಮಾಡಿದರೆ, ನಿಮಗೇ ಗೊತ್ತಾಗುತ್ತೆ.

ಮದರಾಸು ನಶ್ಯದ ಪುಡಿ.

ಬಹಳ ಮೇಲಾದದ್ದು.

ಮದರಾಸು ನಶ್ಯದಪುಡಿ ಡಬ್ಬಿ ೧ ಕ್ಕೆ . . .	೦—೬—೦
ಭಾಂಗಿ ಖರ್ಚು	೦—೩—೦

೧ ರೂಪಾಯಿಗೆ ಕಮ್ಮಿಯಿಲ್ಲದೆ ದರಖಾಸ್ತು ಕಳುಹಿಸತಕ್ಕ ವರ್ತಕರು ಮೊದಲಾದವರುಗಳಿಗೆ ರೂಪಾಯಿಗೆ ೦—೧—೦ ಕಮಿಷನ್ ಕೊಡುತ್ತೇವೆ. ನಮ್ಮ ವೈದ್ಯಶಾಲೆಯಲ್ಲಿ ತಯಾರಿಸುವ ಪುಡಿಯು ಮೇಲಾದ ಉಪಯೋಗಿಸಿದ ಹೊಗೆಸೊಪ್ಪಿನಿಂದ ಕಾರಣ ಶುದ್ಧವಾಗಿ ತಯಾರಿಸಲ್ಪಟ್ಟದ್ದು. ಎಷ್ಟು ದಿವಸಗಳ ಪರಿಯಂತರ ಇಟ್ಟಾಗ್ಯೂ ಘಾಟು ಹೋಗದ ಹಾಗೆ ಪುಡಿಯನ್ನು ಮಾಡುವದಕ್ಕೆ ಅಧಿಕ ಪರಿಶ್ರಮವುಳ್ಳವರಿಂದ ತಯಾರಿಸಲ್ಪಟ್ಟಿರುತ್ತೆ. ೧ ಸಾರಿ ಹಾಕಿಕೊಂಡರೆ ಸಾಕಾಗಿರುತ್ತೆ. ಅನೇಕ ದೊಡ್ಡಮನುಷ್ಯರು ಇದ ನ್ನೇ ಉಪಯೋಗಿಸುತ್ತಾರೆ. ೧ ಡಬ್ಬಿಗೆ ೯ ತೊಲ ಪುಡಿ ಇರುತ್ತೆ.

ವಿಳಾಸ—ಮ್ಯಾನೇಜರ್ ಧರ್ಮ ವೈದ್ಯಶಾಲೆ,
(೫) ಚೈನಾಬಜಾರು ರೋಡ್, ಶಾಹುಕಾರ್ ಪೇಟೆ, ಮದರಾಸು

ನಾಸರ್ ಯೂಸುಫ್ ಬ್ರದರ್ಸ್,
ಮೌಂಟ್ ರೋಡ್ ಮತ್ತು ಗುಜಿಲಿ, ಮದರಾಸ್

ಆಭರಣಗಳು, ಕನ್ನಡಕಗಳು, ಸಣ್ಣ ಮತ್ತು ದೊಡ್ಡ ಗಡಿಯಾರಗಳು, ಅಮೇರಿಕ ದೊಡ್ಡ ಗಡಿಯಾರಗಳು, ಇಂಗ್ಲಿಷ್ ಬೈಸಿಕಲ್ ಗಳು ಮತ್ತು ಬೈಸಿಕಲ್ ಸಾಮಾನುಗಳು—ಇವನ್ನು ತರಿಸಿ ಮಾರುತ್ತೇವೆ ಗವರ್ನಮೆಂಟಿಗೂ ರೈಲ್ವೆಯವರಿಗೂ ಸಾಮಾನು ಮುಂತಾದವನ್ನು ಸಪ್ಲೈ ಮಾಡತಕ್ಕವರು ನಾವೇ.

ನಮ್ಮ ಇಂಗ್ಲಿಷ್ ತಯಾರಿ ೧೮ ಕ್ಯಾರೆಟ್ ಚಿನ್ನ ತುಂಬಿದ ಆಲ್ಬರ್ಟ್ ಸರಪಣಿಗಳು. ಆಗಾಗ ಕೊಳೆ ಎಂದು ಊಹಿಸುವದಕ್ಕೆ ಶಕ್ಯ. ಚಿನ್ನದಲ್ಲಿ ಕೊರತೆ ಮಾಡಿದೆ. ಶುದ್ಧವಾದ ಚಿನ್ನ. ಇತರ ಲೋಹದ ಸರಪಣಿಗೆ ಚಿನ್ನದ ಮುಲಾಮು ಮಾಡಿದ್ದಲ್ಲ. ಇದನ್ನು ನೈಟ್ರಿಕ್ ಆಸಿಡ್ ಪಾತ್ರೆಯಲ್ಲಿ ಅದ್ದಿದಾಗ್ಯೂ ಚಿನ್ನದ ಹೊಳಪು ಹೋಗದು. ಈ ಪರೀಕ್ಷೆಯಲ್ಲಿ ನಮ್ಮ ಸರಪಣಿ ಕೆಟ್ಟುಹೋದರೆ ೧೦೦ ರೂಪಾಯಿ ಬಹುಮಾನ ಕೊಡುತ್ತೇವೆ

೮ ಅಂಗುಲ ಉದ್ದದ ಸರಪಣಿಗೆ ಕ್ರಯ ರೂಪಾಯಿ	೮—೮—೦
೧೩॥ ,, ,, ,, ,,	೧೦—೧—೦
ಡಬ್ಬಲ್ ಸರಪಣಿ (ತಾಂಡಂ) ,,	೧೨—೦—೦
೬೦ ಅಂಗುಲದ ಕತ್ತಿನ ಸರಪಣಿ	೧೮—೦—೦

ಈ ಸರಪಣಿಗಳಿಗೆ ಅನುಕೂಲವಾದ ಚಿನ್ನದ ಚಾದು ಲಾಕೆಟ್ಟುಗಳಿಗೆ ರೂ. ೩ ರಿಂದ ರೂ ೫. ನಾಲ್ಕು ಬಾಲ್ ಸ್ಟಡ್ಡುಗಳು ರೂ. ೩. ಕೊಂಡಿಗೆ ಸಹಿತವಾದ ಸ್ಟಡ್ಡುಗಳು ರೂ. ೫.

ಅನೇಕರು ಬೇಕೆನ್ನುತ್ತಾರೆ. ಇಂಥತ್ತೆ ಹಿಂದುಸ್ಥಾನದಲ್ಲೆಲ್ಲೂ ಸಿಕ್ಕವು ಸಾವಿರಾರು ಗಡಿಯಾರಗಳು ಬಿಕರಿಯಾಗಿವೆ. ಯಾರೂ ಆಕ್ಷೇಪಣೆ ಮಾಡಿದ್ದಿಲ್ಲ. ಸರ್ವೋತ್ಕೃಷ್ಟವಾದವು, ಖಾತ್ರಿಯಾಗಿರತಕ್ಕವು, ಅಗ್ಗವಾದವು.

ನಮ್ಮ ಪ್ರಖ್ಯಾತವಾದ ಪಕ್ಕಾ ರೈಲ್ವೆ ರೆಗ್ಯುಲೇಟರ್ ವಾಚುಗಳು ಬಹು ಸುಂದರವಾಗಿವೆ, ಗಟ್ಟಿಯಾಗಿವೆ, ಮದ್ರಾಸ್ ಸೀಮೆಗೆ ಬಿಡಲ್ಪಟ್ಟಿವೆ. ಒಳ್ಳೇದಾಗಿ ಉಪಯೋಗಿಸಿದರೂ ಕೆಡದೆಂದು ಜವಾಬ್ದಾರಿ ಕೊಡುತ್ತೇವೆ. ಇವು ಇನ್ಯಾರಲ್ಲೂ ದೊರೆಯತಕ್ಕ ಗಡಿಯಾರಗಳಲ್ಲ.

ನಿಜವಾದ ನಿಕ್ಕಲ್ ಲೋಹ, ಓಪನ್, ಕೀಲೆಸ್, ಪಾರಿಸಾಂಟ್ ಗಡಿಯಾರ ೧ ಕ್ಕೆ ರೂ. ೬. ಇದೇ ತರದ ಚಿಕ್ಕಬೆಲ್ಲ ಗಡಿಯಾರ ೧ ಕ್ಕೆ ರೂ. ೧೧—೮—೦

ನಿಜವಾದ ನಿಕ್ಕಲ್ ಲೋಹ, ಓಪನ್, ಕೀಲೆಸ್, ಪೇಟೆಂಟ್ ರಾಚಲ್ ಲೀವರ್ ಗಡಿಯಾರ ೧ ಕ್ಕೆ ರೂ. ೧೦. ಇದೇ ತರದ ಚಿಕ್ಕ ಬೆಲ್ಲದ ಗಡಿಯಾರ ೧ ಕ್ಕೆ ರೂ. ೧೮.

ಸೊರ್ಘವಳ್ಳಿ ಸಂಜೀವನ ನೋಟೀಸು.

ಇದರಿಂದ ತಿಳ್ಸುವದು ಏನಂದರೆ, ಸೊರ್ಘವಳ್ಳಿ ಗ್ರಾಮದ ವೀರಪ್ಪ ಸಂಜೀವ್ಯನವರ ಮಗ ಸಂಜಯ್ಯನು ಸರ್ವರಿಗೂ ತಿಳಿಯಪಡಿಸುವದೇನಂದರೆ—ಇದೇ ಸೊರ್ಘವಳ್ಳಿಯಲ್ಲಿರುವ ನಮ್ಮ ಅಣ್ಣ ಸಂಜ್ಯವನ ಹೆಂಡತಿ ಸಂಜವ್ವನು ನಮ್ಮ ಸ್ಥಿರ ಚರ ಸೊತ್ತುಗಳನ್ನು ತನಗೆ ಮೋಸಪಡಿಸಿ ಬೇರೆ ಮಾಡುವದಕ್ಕೆ ತರದೂದು ಮಾಡುತ್ತಿರುವದಾಗಿ ಕೇಳುತ್ತೇನೆ. ಈಗ ಹೆಂಗಸು, ಆಕೆಗೆ ಇದೂರಲು ಶಕ್ತಿಲ್ಲ. ಬೇಕಾದಷ್ಟು ವರ್ಷ೦ ಪ್ರತಿ ಆದಾಯವಿರುವುದರಿಂದಲೂ, ಸಾಲವಗೈರೆ ಏನೂ ಇಲ್ಲದ್ದರಿಂದಲೂ ಆಧಾರ ಭೋಗ್ಯವಗೈರೆ ಮಾಡಲು ಕಾರಣವಿಲ್ಲ. ಹೀಗಿರುವ ಸೊತ್ತನ್ನು ಯಾರು ಕ್ರಯ, ಆಧಾರ ವಗೈರೆಗಳಿಂದ ಪಡೆದರೂ ಅವರು ನನ್ನ ದಾವಿಯಜಿಗೆ ಗುರಿಯಾಗುವರೆಂದು ಈ ಮೂಲಕ ತಿಳಿಯಪಡಿಸಿರುತ್ತೇನೆ.

ತಾ. ೧೯—೮—೧೯೦೫ ಸಂಜ್ಯೆಯ

ವೃತ್ತಾಂತ ಪತ್ರಿಕೆ.

—:೦,—

ಸನ್ ೧೯೦೫ ನೇ ಇಸವಿ ಆಗಸ್ಟ್ ತಾ|| ೨೪ ನೇ ಗುರುವಾರ.

ಲಾರ್ಡ್ ಕರ್ಸನ್‌ರವರು ರಾಜೀನಾಮೆ ಕೊಟ್ಟರು.

ಹಿಂದುಸ್ಥಾನವನ್ನು ಸುಮಾರು ಆರು ವರ್ಷಗಳಿಂದ ಆಳುತ್ತಿರುವ ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರಾದ ಲಾರ್ಡ್ ಕರ್ಸನ್‌ರವರು ರಾಜೀನಾಮೆ ಕೊಟ್ಟುಬಿಟ್ಟರೆಂಬ ವರ್ತಮಾನವು ನಮ್ಮ ವಾಚಕರಲ್ಲಿ ವಿಷಾದವನ್ನುಂಟುಮಾಡೀತೆನ್ನುವುದಕ್ಕೆ ಸಂಶಯವಿಲ್ಲ. ಈ ರಾಷ್ಟ್ರದ ಸೇನಾಪತಿ ಲಾರ್ಡ್ ಕಿಚ್ನರ್ ಯವರು ಸೈನ್ಯದ ಏರ್ಪಾಡು ಸಮರ್ಪಕವಾಗಿಲ್ಲವೆಂದು ಹೇಳಿ, ಕೆಲವು ಹೊಸ ಕ್ರಮಗಳನ್ನು ರೂಢಿಸಬೇಕಾಗಿದೆ ಎಂದು ತಿಳಿಸಿದರು. ಇದರಿಂದ ವೈಸ್‌ರಾಯಿ ಯವರ ಸ್ವಾತಂತ್ರ್ಯಕ್ಕೆ ಲೋಪ ಬರುವುದೆಂದೂ ಹೊಸ ಕ್ರಮಗಳನ್ನು ಜಾರಿಗೆ ತರಕೂಡದೆಂದೂ ಲಾರ್ಡ್ ಕರ್ಸನ್‌ರವರು ವಿಲಾಯತಿ ಗವರ್ನಮೆಂಟಿಗೆ ಅರಿಕೆ ಮಾಡಿದರು. ವಿಲಾಯತಿ ಗವರ್ನಮೆಂಟಿನವರು ಕಳೆದ ಮೇ ತಿಂಗಳ ೨೬ರಲ್ಲಿ ಇನ್ನು ಮೇಲೆ ಹಿಂದುಸ್ಥಾನದ ಮಿಲ್ಟೇರಿ ವಿಚಾರವನ್ನೆಲ್ಲಾ ಸೇನಾಪತಿಯೇ ನೋಡಿಕೊಳ್ಳಬೇಕೆಂತಲೂ ಆ ಇಲಾಖೆಗೆ ಸಂಬಂಧಪಟ್ಟ ಚಿಲ್ಲರೆ ಕೆಲಸಗಳನ್ನು ಮಾತ್ರ ನಡಿಸುವದಕ್ಕೆ ವೈಸ್‌ರಾಯಿಯವರು ತಮ್ಮ ಮಂತ್ರಾಲೋಚನಾ ಸಭೆಯಲ್ಲಿ ಒಬ್ಬ ಮಿಲ್ಟೇರಿ ಸಪ್ಲೈ ಮೆಂಬರನ್ನು ನೇಮಿಸಿಕೊಳ್ಳಬೇಕೆಂತಲೂ ಹುಕುಂ ಕೊಟ್ಟರು. ಅದರ ಮೇಲೆ ಲಾರ್ಡ್ ಕರ್ಸನ್‌ರವರು ಜನರಲ್ ಸರ್ ಎಡ್ಮಂಡ್ ಬ್ಯಾರೋ ಯವರನ್ನು ಮೆಂಬರಾಗಿ ನೇಮಿಸಿದರೆ ಗವರ್ನಮೆಂಟಿನ ಸೈನ್ಯದ ಕೆಲಸಗಳು ತೃಪ್ತಿಕರವಾಗಿ ನಡೆಯುತ್ತವೆಂದು ಜುಲೈ ೧೩ ರಲ್ಲಿ ಶಿಫಾರಸು ಮಾಡಿ ತಿಳಿಸಿದರು. ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಬ್ಯಾರೋ ಯವರನ್ನು ಸೈನ್ಯದಿಂದ ತೆಗೆದು ಮೆಂಬರಾಗಿ ನೇಮಿಸುವುದಕ್ಕಾಗುವುದಿಲ್ಲವೆಂದು ಜವಾಬು ಕೊಟ್ಟರು. ಅಲ್ಲಿಂದೀಚೆಗೆ ಹಿಂದುಸ್ಥಾನದ ವೈಸ್‌ರಾಯಿ ಯವರಿಗೂ ವಿಲಾಯತಿ ಗವರ್ನಮೆಂಟಿನವರಿಗೂ ಈ ಮೆಂಬರನ್ನೇ ನೇಮಿಸುವ ವಿಚಾರದಲ್ಲಿ ಕಾಗದ ಪತ್ರಗಳೂ ತಂತೀ ವರ್ತಮಾನಗಳೂ ನಡೆದು, ಕಡೆಗೆ ಆಗೀಸ್ಟು ೫ ರಲ್ಲಿ ಲಾರ್ಡ್ ಕರ್ಸನ್‌ರವರು—ಬ್ಯಾರೋ ಯವರನ್ನು ಮೆಂಬರಾಗಿ ನೇಮಿಸದೆ ಹೋಗುವ ಪಕ್ಷದಲ್ಲಿ ತಾವು ಕೆಲಸಕ್ಕೆ ರಾಜೀನಾಮೆ ಕೊಡುತ್ತೇವೆಂದು ಅರಿಕೆ ಮಾಡಿದರು. ವಿಲಾಯತಿ ರಾಜ್ಯದ ಮಂತ್ರಿಯಾದ ಮಿ|| ಬಾಲ್ಫರ್ ಯವರು ಆಗೀಸ್ಟು ೮ ರಲ್ಲಿ ಲಾರ್ಡ್ ಕರ್ಸನ್‌ರವರಿಗೆ—ಇನ್ನೊಂದು ಸಲ ನೀವು ಚನ್ನಾಗಿ ಯೋಚಿಸಿ ಜವಾಬು ಕೊಡಿ ಎಂದು ಅಪ್ಪಣೆ ಕೊಟ್ಟರು. ಲಾರ್ಡ್ ಕರ್ಸನ್‌ರವರು ೧೦ ಮತ್ತು ೧೨ನೇ ತಾರೀಖುಗಳಲ್ಲಿ—ಬ್ಯಾರೋ ಯವರನ್ನು ಮೆಂಬರಾಗಿ ನೇಮಿಸಿ ಕೊಡದೆಹೋದರೆ ನಾನು ನನ್ನ ಮನಸ್ಸೊಪ್ಪುವಂತೆ ಹಿಂದುಸ್ಥಾನದಲ್ಲಿ ಕಾರ್ಯಗಳನ್ನು ನಡಸುವುದು ಅಸಾಧ್ಯವಾಗುತ್ತಾ ಧಕಾರಣ ನನ್ನ ರಾಜೀನಾಮೆಯನ್ನು ದೊರೆಯವರಿಗೆ ಒಪ್ಪಿಸಬಹುದು; ಮತ್ತು ಜಾಗ್ರತೆಯಲ್ಲೇ ನನ್ನನ್ನು ಕೆಲಸದಿಂದ ಬಿಡುಗಡೆ ಮಾಡಬೇಕು ಎಂಬುದಾಗಿ ತಂತೀ ವರ್ತಮಾನ ಕೊಟ್ಟರು. ಆಗೀಸ್ಟು ೧೬ ರಲ್ಲಿ ಮಂತ್ರಿಯವರು—ನಿಮ್ಮ ರಾಜೀನಾಮೆಯನ್ನು ದೊರೆಯವರಿಗೆ ಒಪ್ಪಿಸಿದೆನು; ಅವರದನ್ನು ಅಂಗೀಕರಿಸಿರುತ್ತಾರೆ ಎಂದು ಜವಾಬು ಕೊಟ್ಟರು.

ಲಾರ್ಡ್ ಕರ್ಸನ್‌ರವರು ಇದುವರೆಗೆ ಹಿಂದುಸ್ಥಾನದ ಆಳ್ವಿಕೆಯಲ್ಲಿ ಅನೇಕವಾದ ಪ್ರಜೋಪಕಾರಕ ಕಾರ್ಯಗಳನ್ನು ಮಾಡಿ, ಇಂಡಿಯಾ ಗವರ್ನಮೆಂಟಿನ ದರ್ಪವನ್ನೂ ಕೀರ್ತಿಯನ್ನೂ ಬಹಳವಾಗಿ ಹೆಚ್ಚಿಸಿರುತ್ತಾರೆ. ಅವರ ಚತುರಮನಸ್ಸೂ, ಅವರ ಧೈರ್ಯಸ್ಥೈರ್ಯಾದಿಗಳೂ ಅವರ ಸೌಹಾರ್ದ ಹೃದಯವೂ ಹಿಂದುಸ್ಥಾನದೊಳಗೂ ಹೊರಗೂ ಅವರ ಹೆಸರನ್ನು ತುಂಬಾ ಪ್ರಸಿದ್ಧಿಗೆ ತಂದಿರುತ್ತವೆ. ಇಷ್ಟು ಪಂಡಿತವಾದಿಯಾದ ಮತ್ತು ಕಾರ್ಯದಕ್ಷತೆಯುಳ್ಳ ವೈಸ್‌ರಾಯಿಯು ಹಿಂದುಸ್ಥಾನಕ್ಕೆ ಕೆಲವು ಕಾಲದಿಂದೀಚೆಗೆ ಬಂದಿರುವುದಿಲ್ಲ. ಲಾರ್ಡ್ ಕರ್ಸನ್‌ರವರು ಹಿಂದುಸ್ಥಾನದ ಶ್ರೇಯೋಭಿವೃದ್ಧಿಯನ್ನು ಬಯಸಿದರೇ ಮೇಲ್ಕಂಡಂತೆ ಹೊಣೆಯಾದವರು. ಇನ್ನು ಮೇಲೆ ಸೇನಾಪತಿಯೇ ಸೈನ್ಯವಿಚಾರದಲ್ಲಿ ಸ್ವತಂತ್ರಾಧಿಕಾರವನ್ನು ವಹಿಸುವನಾದುದರಿಂದ ಆ ಅಧಿಕಾರಿಯು ಏರ್ಪಾಡುಗಳು ರಾಜಾದಾಯದಲ್ಲಿ ವಿಶೇಷ ಭಾಗವನ್ನು ನುಂಗುವುದಕ್ಕೂ ಈ ರಾಷ್ಟ್ರದ ಶ್ರೇಯೋಭಿವೃದ್ಧಿಗೆ ಕುಂದಕ ಬರುವುದಕ್ಕೂ ಸಹಕಾರಿಗಳಾಗುವವೆಂದು ಹೇಳಬಹುದಾಯಿತು. ಇದರ ಯುಕ್ತಾಯುಕ್ತತೆಯನ್ನು ತಿಳಿಯದ ವಿಲಾಯತಿ ಗವರ್ನಮೆಂಟಿನವರು ಲಾರ್ಡ್ ಕರ್ಸನ್‌ರವರ ಅಭಿಪ್ರಾಯವನ್ನು ತಿರಸ್ಕಾರ ಮಾಡಿ ಅವರು ಕೊಟ್ಟ ರಾಜೀನಾಮೆಯನ್ನು ಅಂಗೀಕರಿಸಿಕೊಂಡದ್ದು ಸಹಜವಲ್ಲವೆಂದು ಹಿಂದುಸ್ಥಾನದವರೆಲ್ಲಾ ಹೇಳದಿರಲಾರರು. ಈಗ ವಿಲಾಯತಿ ಪಾರ್ಲಿಮೆಂಟ್ ಸಭೆಯು ಬರಖಾಸ್ತಾಗಿರೋಣದರಿಂದ ಈ ವಿಷಯವನ್ನು ಅಲ್ಲಿ ತಿಳಿಸಿ ಚರ್ಚೆಗೆ ತರುವುದಕ್ಕೆ ಅವಕಾಶವಿಲ್ಲ. ಆ ಸಭೆಯು ಮತ್ತೆ ಕೂಡಿದಾಗ ಮೆಂಬರುಗಳು ಲಾರ್ಡ್ ಕರ್ಸನ್‌ರವರ ಪಕ್ಷವನ್ನು ವಹಿಸಿ, ಈ ರಾಷ್ಟ್ರದ ಸೈನ್ಯ ವಿಚಾರವನ್ನು ಕುರಿತು ಚರ್ಚೆಮಾಡದಿರಲಾರರೆಂದು ನಿರೀಕ್ಷಿಸುತ್ತೇವೆ.

ಹೊಸ ವೈಸ್‌ರಾಯಿ ಯವರ ನೇಮಕ.

ಲಾರ್ಡ್ ಮಿಂಟೋ ಯವರು ಹಿಂದುಸ್ಥಾನಕ್ಕೆ ವೈಸ್‌ರಾಯಿ ಮತ್ತು ಗವರ್ನರ್ ಜನರಲಾಗಿ ನೇಮಕವಾದರೆಂದು ತಂತೀ ವರ್ತಮಾನ ಬಂದಿದೆ. ಇವರ ಮುತ್ತಾತಂದಿರು ಕಳೆದ ೧೮೦೭ ರಿಂದ ೧೮೧೩ ನೇ ಇಸವಿ ವರೆಗೆ ಹಿಂದುಸ್ಥಾನದಲ್ಲಿ ಗವರ್ನರ್ ಜನರಲ್ಲಾಗಿ ಆಳಿರುತ್ತಾರೆ. ಈಗ ನೇಮಕವಾಗಿರುವ ಲಾರ್ಡ್ ಮಿಂಟೋ ಯವರಿಗೆ ೬೦ ವರ್ಷ ವಯಸ್ಸಾಗಿದೆ. ಇವರು ಇಂಗ್ಲಿಷ್ ಸೈನ್ಯದಲ್ಲಿ ಉದ್ಯೋಗದಾರರಾಗಿದ್ದು, ಈಚೆಗೆ ೧೮೯೮ ರಲ್ಲಿ ಕನಡಾ ಎಂಬ ಇಂಗ್ಲಿಷರ ಆಧಿಪತ್ಯದ ಗವರ್ನರ್ ಜನರಲ್ ಕೆಲಸವನ್ನು ಅಂಗೀಕರಿಸಿ ಹೋಗಿ ೧೯೦೪ ರ ತನಕ ಅಲ್ಲಿ ಅಧಿಕಾರ ಮಾಡಿ, ವಾಪಸು ಬಂದು ವಿಲಾಯತಿಯಲ್ಲಿದ್ದರು. ಸೈನ್ಯ ವಿಚಾರದಲ್ಲಿ ಇವರಿಗೆ ತುಂಬಾ ಅನುಭವವಿರುವುದೆಂದು ಗವರ್ನಮೆಂಟಿನವರು ಇವರನ್ನು ಈ ರಾಷ್ಟ್ರಕ್ಕೆ ನೇಮಿಸಿರುತ್ತಾರೆ. ಲಾರ್ಡ್ ಮಿಂಟೋ ಯವರಿಗೆ ಇಬ್ಬರು ಗಂಡು ಮಕ್ಕಳೂ ಮೂರು ಮಂದಿ ಹೆಣ್ಣು ಮಕ್ಕಳೂ ಇರುವರು.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.



33

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಹೋರಿಯಂಥ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜುವದರಿಂದ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಪಕ್ಕಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲುಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವತೀ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲು ಒಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಭಗವಂತನು ಕೃಪೆಯಿಂದ ಕೂಡಿ ಕರೆಯುವುದು.

ಎಲೋ, ನೀರಡಿಕೆಯಿಂದ ಕಷ್ಟಪಡುವವರೇ, ನೀರಿನ ಬಳಿಗೆ ಬನ್ನಿ. ಹಣವಿಲ್ಲದವರು ಸಹ ಬಂದು ಕೊಂಡುಕೊಂಡು ಉಣ್ಣಿರಿ. ಸಾರು ಬನ್ನಿ. ಹಣವಿಲ್ಲದೆ ಕ್ರಯವಿಲ್ಲದೆ ಹಾಲನ್ನು ಕೊಂಡುಕೊಳ್ಳಿರಿ. ರೊಟ್ಟಿಯಲ್ಲದ್ದಕ್ಕೆ (ಅಂದರೆ ಆಹಾರವಲ್ಲದ ಪದಾರ್ಥ) ನಿಮ್ಮ ಹಣವನ್ನು ಯಾಕೆ ಕೊಡುತ್ತೀರಿ? ಯಾವದು ತೃಪ್ತಿಯನ್ನು ಕೊಡುವಂಥದ್ದಲ್ಲವೋ ಅದಕ್ಕಾಗಿ ಕಷ್ಟಪಡುವುದು ಯಾಕೆ? ನಾನು ಹೇಳುವದನ್ನು ಲಕ್ಷ್ಯವಿಟ್ಟು ಕೇಳಿರಿ. ಯಾವದು ಮೇಲಾದ ಪದಾರ್ಥವೋ ಅದನ್ನು ತೆಗೆದುಕೊಂಡು ಊಟಮಾಡಿರಿ. ಆಗ ನಿಮ್ಮ ಪ್ರಾಣವು ಆನಂದಪಡುವದು. ನನ್ನ ಮಾತನ್ನು ಕಿವಿಗೊಟ್ಟು ಕೇಳಿರಿ; ಆಗ ನಿಮ್ಮ ಪ್ರಾಣವು ಬದುಕುವದು. ದಾವೀದನೊಂದಿಗೆ ನಿಸ್ಸಂದೇಹವಾದ ಕೃಪಾಪೂರ್ಣವಾದ ನಿತ್ಯವಾದ ಯಾವ ಒಡಂಬಡಿಕೆಯನ್ನು ಮಾಡಿದೆನೋ ಅದನ್ನೇ ನಿಮ್ಮೊಂದಿಗೂ ಮಾಡುವೆನು. ಇದೋ ಆ ಪುರುಷನನ್ನು ಜನಗಳಿಗೆ ಸಾಕ್ಷಿಯಾಗಿಯೂ ನಾಯಕನಾಗಿಯೂ ಆಜ್ಞೆಯನ್ನು ಕೊಡುವವನಾಗಿಯೂ ಇಟ್ಟಿದ್ದೇನೆ. ನೀನು ತಿಳಿಯದ ಜನಾಂಗವನ್ನು ಕರೆಯುವಿ, ಮತ್ತು ನಿನ್ನನ್ನು ತಿಳಿಯದ ಜನಾಂಗಗಳು ನಿನ್ನ ಬಳಿಗೆ ಓಡಿಬರುವವು.

ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಹುಡುಕಿರಿ; ಆತನು ಸಮೀಪವಾಗಿರುವಾಗಲೇ ಆತನನ್ನು ಕರೆಯಿರಿ. ದುಷ್ಟನು ತನ್ನ ಮಾರ್ಗವನ್ನೂ, ಅಕ್ರಮಗಾರನು ತನ್ನ ಆಲೋಚನೆಗಳನ್ನೂ ಬಿಟ್ಟುಬಿಟ್ಟು ಯೆಹೋವನ ಬಳಿಗೆ ತಿರುಗಲಿ. ಆಗಲಾತನು ಅವನನ್ನು ಕರುಣಿಸುವನು. ನಮ್ಮ ದೇವರ ಬಳಿಗೆ ತಿರುಗಲಿ; ಯಾಕಂದರೆ ಆತನು ಬಹಳವಾಗಿ ಮನ್ನಿಸುವಂಥವನು. ಇದಕ್ಕೆ ಕಾರಣವೇನಂದರೆ—ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ (ಅದಗಜಾಂತರ ವ್ಯತ್ಯಾಸವುಂಟು) ಎಂದು ಯೆಹೋವನು ಹೇಳುತ್ತಾನೆ. ಆಕಾಶಕ್ಕೂ ಭೂಮಿಗೂ ಎಷ್ಟು ಉನ್ನತವುಂಟೋ ನನ್ನ ಮಾರ್ಗಗಳಿಗೂ ನಿಮ್ಮ ಮಾರ್ಗಗಳಿಗೂ ನನ್ನ ಆಲೋಚನೆಗಳಿಗೂ ನಿಮ್ಮ ಆಲೋಚನೆಗಳಿಗೂ ಅಷ್ಟು ಅಂತರವುಂಟು.

ಮಳೆಯೂ ಹಿಮವೂ ಆಕಾಶದಿಂದ ಇಳಿದು ಬಂದು ಅಲ್ಲಿಗೆ ಹಿಂದಿರುಗಿ ಹೋಗದೆ ಭೂಮಿಯನ್ನು ತೋಯಿಸಿ, ಬಿತ್ತುವವನಿಗೆ ಧಾನ್ಯವನ್ನೂ ಉಣ್ಣುವವನಿಗೆ ಆಹಾರವನ್ನೂ ದೊರಕಿಸುವ ಹಾಗೆ ಫಲವನ್ನು ಹುಟ್ಟಿಸಿ ಚಿಗುರ ಮಾಡುವದು ಹ್ಯಾಗೋ ಹಾಗೆಯೇ ನನ್ನ ಬಾಯಿಯಿಂದ ಹೊರಡುವ ವಾಕ್ಯವೂ ಇರುವದು. ಅದು ನನ್ನ ಬಳಿಗೆ ನಿರರ್ಥಕವಾಗಿ ಹಿಂದಿರುಗಿ ಬರಲಾರದು. ನಾನು ಯಾವದನ್ನು ಮೆಚ್ಚುತ್ತೇನೋ ಅದನ್ನೇ ಮಾಡುವದು. ನಾನು ಯಾವ ನಿಮಿತ್ತವಾಗಿ ಅದನ್ನು ಕಳುಹಿಸಿದೆನೋ ಅದರಲ್ಲಿ ಸಫಲವಾಗುವದು.

ಸಂತೋಷದಿಂದ ಹೊರಡುವಿರಿ. ಸಮಾಧಾನದಿಂದ ನಡಿಸಲ್ಪಡುವಿರಿ. ಬೆಟ್ಟಗಳೂ ಗುಡ್ಡಗಳೂ ನಿಮ್ಮ ಮುಂದೆ ಹರ್ಷಧ್ವನಿ ಮಾಡುವವು. ಬಯಲಿನ ಮರಗಳೆಲ್ಲಾ ಕೈ ತಟ್ಟುವವು. ಮುಳ್ಳಿನ ಗಿಡಕ್ಕೆ ಬದಲಾಗಿ ಸುರಗಿ ಮರವು ಬೆಳೆಯುವದು. ತುರುಚಿನ ಗಿಡಕ್ಕೆ ಬದಲಾಗಿ ಗಂಧದ ಗಿಡವು ಬೆಳೆಯುವದು. ಅದು ಯೆಹೋವನಿಗೆ ಹೆಸರಾಗಿಯೂ ಕಡಿಯಲ್ಪಡದ ನಿತ್ಯವಾದ ಗುರುತಾಗಿಯೂ ಇರುವದು.—ಯೆಶಾ. ೫೫.

ಇಲ್ಲಿ ನಾವು ಅನುವಾದ ಮಾಡಿಕೊಂಡಿರುವ ಶ್ರುತಿವಾಕ್ಯ ಯೇಸು ಸ್ವಾಮಿಯ ವಿಷಯದಲ್ಲಿ ನೆರವೇರಿದ ಪ್ರವಾದನೆಗಳೊಂದು. ಇದರಲ್ಲಿ ಎರಡು ಭಾಗಗಳಿವೆ. ಸ್ವದೇಶದೊಳಗಿಂದ ಸೆರೆಸೈನ್ಯಯುಳ್ಳಪಟ್ಟಿದ್ದ ಯೆಹೂದ್ಯರು ಪುನಃ ಬಿಡುಗಡೆಯಾಗುವ ವಿಷಯವಾಗಿ ಬರೆದಿರುವ ಭಾಗವೊಂದು. ಇದಕ್ಕಿಂತಲೂ ವಿಶೇಷವಾದ ಪಾಪಕ್ಕೆ ಸೆರೆಸಿಕ್ಕಿರುವವರೆಲ್ಲರೂ ಬಿಡುಗಡೆಯಾಗುವ ವಿಷಯವಾಗಿ ಹೇಳಿರುವ ಭಾಗವು ಮತ್ತೊಂದು.

ದೇವರು ನಮಗೆ ಸಂತೃಪ್ತಿಯನ್ನು ಕೊಡುತ್ತೇನೆಂದು ಹೇಳುತ್ತಾನೆ. ಭೂಲೋಕದಲ್ಲಿ ಮನುಷ್ಯರು ಅನ್ನಪಾನ ಉಡಿಗೆ ತೊಡಿಗೆಗಳೆಂಬೀ ಪದಾರ್ಥಗಳನ್ನು ಸಂಪಾದಿಸುವದರಲ್ಲಿ ಬಹಳ ಆತುರರಾಗಿರುತ್ತಾರೆ. ದೇಹವನ್ನು ಪೋಷಿಸುವ ರೊಟ್ಟಿ ಹಾಲು ಎ

...ಗಳು ಆತ್ಮವನ್ನು ಪೋಷಿಸಲಾರವು ದೇವರು ಹೇಳುವ ವಾಕ್ಯಗಳನ್ನು ಕೇಳಿದರೆ ನಮ್ಮ ಆತ್ಮಗಳನ್ನು ಪೋಷಿಸುವ ಆಹಾರವನ್ನೂ ನಿತ್ಯಜೀವವನ್ನೂ ಉಂಟುಮಾಡಿ ಕೊಡುತ್ತೇನೆಂದು ದೇವರು ಹೇಳುತ್ತಾನೆ. ಹೊಸ ಒಡಂಬಡಿಕೆಯ ಯೋಹಾನನ ಸುವಾರ್ತೆಯಲ್ಲಿ ೬ನೇ ಅಧ್ಯಾಯವನ್ನೂ ೪ನೇ ಅಧ್ಯಾಯ ಮತ್ತು ೩೦—೩೯ ನ್ನೂ ಪರಾಂಬರಿಸಿದರೆ ಆ ಅನ್ನಪಾನಗಳು ಯಾವವು ಗೊತ್ತಾಗುವದು. ಇದರಲ್ಲಿ ಇನ್ನೊಂದು ವಿಶೇಷವಾದದ್ದು ಬಂದಿದೆ. ಅದನ್ನು ಮರೆಯಬಾರದು. ಅಗೇನೆಂದರೆ— "ಕೊಡುತ್ತೇನೆಂದು ಉಚ್ಚರಿ" ಎಂಬುದು. ಹಾಗಂದರೆ ಉಚಿತವಾಗಿ ದೇವರಿಂದ ಬರತಕ್ಕದ್ದನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯಾಸಪಡಬೇಕಾದ್ದಾಗ ಆಗದೆಂಬುದೇ ಇದರ ಅಭಿಪ್ರಾಯ.

ದೇವರು ಈ ಮಾತುಗಳನ್ನು ಯಾರಿಗೆ ಹೇಳಕಳುಹಿಸಿದನೋ ಆ ಜನರು ಸೆರೆಯಿಂದ ಹಿಂತಿರುಗಿ ಬಂದಮೇಲೆ ಸ್ವದೇಶದಲ್ಲಿ ನೆಲೆಯುಳ್ಳ ಜನಾಂಗ ಬೇಕೆಂದು ನಿರೀಕ್ಷಿಸುತ್ತಿದ್ದರು. ಅವರಿಗೆ ದೇವರು—ನೀವು ನನಗೆ ವಿಧೇಯರಾಗಿದ್ದರೆ ದಾವೀದನಿಗೆ ವಾಗ್ದಾನ ಮಾಡಿದ್ದ (ಕೀರ್ತನೆ ೮೯ ೩೩—೩೭) ನಿಬಂಧನ ಮಹಿಮೆಯನ್ನು ನಿಮಗೂ ಕೊಡುವೆನೆಂದು ಆತನು ಹೇಳುತ್ತಾನೆ. ಅವರು ದೇವರ ಮಾತಿಗೆ ವಿಧೇಯರಾಗಿರುವವರಾದರೆ ಆಗ ಅವರು ಜನಾಂಗಗಳಲ್ಲಿ ಶ್ರೇಷ್ಠವಾದ ಪದವಿಯನ್ನು ಹೊಂದುವದಲ್ಲದೆ ದೇವರನ್ನು ಕುರಿತು ಅವರಿಂದ ಕಲಿತುಕೊಳ್ಳುವಂತೆ ಇತರರನೇಕರು ಬಂದು ಅವರನ್ನು ಸೇರಿಕೊಳ್ಳುವರು ಎಂದೂ ಹೇಳುತ್ತಾನೆ.

"ಯೆಹೋವನು ಸಿಕ್ಕುವ ಕಾಲದಲ್ಲಿ ... ಆತನು ಬಳಿಯಾಗಿ ಇರುವಾಗ ಆತನನ್ನು ಪ್ರಾರ್ಥಿಸಿರಿ" — ಈ ಅತಿಶಯವಾದ ವಾಗ್ದಾನಗಳು ನಮ್ಮಲ್ಲಿಯೂ ನೆರವೇರಬೇಕಾದರೆ ನಾವು ದೇವರ ಸಮೀಪಕ್ಕೆ ಬರುವಂತೆ ಸಿದ್ಧಮಾಡಿಕೊಳ್ಳಬೇಕು. ದೇವರ ಬಳಿಗೆ ಬರುವದು ಕೆಲವು ಸಮಯಗಳಲ್ಲಿ ಸುಲಭವಾಗಿದೆ. ತನ್ನ ಬಳಿಗೆ ಬರುವವರನ್ನು ಆತನು ಕಳುಹಿಸಿಬಿಡುವದಿಲ್ಲವೆಂಬುವದು ನಿಜ. ಆತನ ಒಪ್ಪಿಗೆಯನ್ನು ವಾಗ್ದಾನಗಳನ್ನೂ ಲಕ್ಷ್ಯವಿಟ್ಟು ಕೇಳುವಂತೆ ಆತನು ತನ್ನ ಪವಿತ್ರಾತ್ಮನ ಮುಖಾಂತರ ಪ್ರೇರಿಸುತ್ತಾನೆ. ನಾವು ನಮ್ಮ ದುಷ್ಟಗಳ ನಿಮಿತ್ತವಾಗಿ ಮಾನಸಾಂತರಪಡಬೇಕು. ಅಂದರೆ, ನಾವು ಅವುಗಳನ್ನು ಬಿಟ್ಟುಬಿಡುವದಲ್ಲದೆ ದೇವರು ಸಹಾಯಮಾಡಲಿಕ್ಕಾಗಿ ಅವುಗಳನ್ನು ಇನ್ನೆಂದಿಗೂ ಮಾಡುವದಿಲ್ಲವೆಂದು ನಿಶ್ಚಯಿಸಿಕೊಳ್ಳತಕ್ಕದ್ದು. ಹಾಗೆ ದೃಢವಾಗಿ ಪ್ರತಿಜ್ಞೆಯನ್ನು ಮಾಡಿಕೊಂಡರೆ ದೇವರು ನಮ್ಮನ್ನು ಉಚಿತಾರ್ಥವಾಗಿ ಕ್ಷಮಿಸುವನೆಂದು ಹೇಳುತ್ತಾನೆ.

ನಾವು ನಮ್ಮ ಜೀವಿತವನ್ನು ದೇವರಿಗೆ ಒಪ್ಪಿಸಿಕೊಡುವವರಾದರೆ ತನ್ನ ಆಶ್ಚರ್ಯಕರವಾದ ಉದ್ದೇಶಗಳನ್ನು ಆತನು ನಮ್ಮಲ್ಲಿ ನೆರವೇರಿಸುವನು. ನಮಗೆ ಒಳ್ಳೇದನ್ನು ಮಾಡಬೇಕೆಂಬುದೇ ಆತನ ಉದ್ದೇಶವಾಗಿದೆ. ನಮ್ಮ ಜೀವಿತಕ್ಕೆ ಆತನನ್ನೇ ದೊರೆಯಾಗಿ ಮಾಡಿಕೊಂಡು ಆತನ ಮಾತಿನಂತೆ ನಡೆದುಕೊಂಡರೆ ಆತನು ನಮಗೆ ಎಂಥೆಂಥ ವರಗಳನ್ನು ಕೊಡುವನೋ ಅದನ್ನು ಊಹಿಸುವದಕ್ಕೂ ನಮ್ಮಿಂದಲಾಗದು. ಯಾಕಂದರೆ ಆಕಾಶಕ್ಕೂ ಭೂಮಿಗೂ ಎಷ್ಟು ಅಂತರವುಂಟೋ ನಮ್ಮ ಯೋಚನೆಗಳಿಗಿಂತ ಆತನ ಯೋಚನೆಯು ಅಷ್ಟು ಅತಿಶಯವಾಗಿದೆ.

ದೇವರು ತನ್ನ ವಾಗ್ದಾನಗಳನ್ನು ನೆರವೇರಿಸುವನೆಂದು ನಾವು ತಿಳಿಯುವ ಬಗೆ ಹ್ಯಾಗೆ? ದೇವರು ಹೇಳುವ ಬೋಧಾಗಲಿ ಆತನು ಮಾಡುವ ಕಾರ್ಯವಾಗಲಿ ನಿಷ್ಫಲವಾಗಿ ಹೋಗತಕ್ಕದ್ದು. ಆಕಾಶದಿಂದ ಬೀಳುವ ಮಳೆಯು ವ್ಯರ್ಥವಾಗುವದುಂಟೇ? ಇಲ್ಲ. ಒಣಗಿದ ನೆಲಕ್ಕೆ ಪೋಷಣೆಯನ್ನು ಕೊಟ್ಟು ಅದರೊಳಗಿನಿಂದ ಫಲವನ್ನು ಬರಮಾಡಿ ಮನುಷ್ಯರಿಗೆ ಆಹಾರವನ್ನೂ ಜೀವವನ್ನೂ ಕೊಡುತ್ತದೆಯಲ್ಲವೇ? ಹಾಗೆಯೇ ದೇವರ ವಾಗ್ದಾನವು ಉಂಟು. ಆತನು ನಮ್ಮ ಆತ್ಮಗಳಿಗೆ ಜೀವವನ್ನೂ ಆರೋಗ್ಯವನ್ನೂ ಕೊಡುವದಾಗಿ ಮಾತು ಕೊಡುತ್ತಾನೆ. ನಾವು ಆತನ ಮಾತನ್ನು ಕೇಳಿದರೆ ತಾನು ಹೇಳಿದ್ದನ್ನು ಸಂಶಯವಿಲ್ಲದೆ ಕೊಡುವನು. ಆಗ ನಾವು ಒಂದು ಹೊಸ ಲೋಕದಲ್ಲಿ ಜೀವಿಸುತ್ತಿರುವಂತೆಯೂ ಮರಗಳೂ ಗುಡ್ಡಗಳೂ ನಮ್ಮ ಸಂಗಡ ಸಂತೋಷಿಸುತ್ತಿರುವಂತೆಯೂ ತೋರುವದು.

ದೇವರು ಕೊಡುವ ವರವನ್ನು ಪಡೆಯುವ ಹಾಗೆ ನಾವು ಮಾಡತಕ್ಕದ್ದೇನು? ೧—ನಾವು ಪಾಪವನ್ನು ಬಿಡಬೇಕು. ೨ ದೇವರ ಕಡೆಗೆ ತಿರುಗಬೇಕು. ೩ ಆತನು ತನ್ನ ವಾಗ್ದಾನಗಳನ್ನು ನೆರವೇರಿಸುವಂತೆ ಕೇಳಿಕೊಳ್ಳಬೇಕು. ೪ ಆತನು ಹಾಗೇ ಮಾಡುವನೆಂದು ನಂಬಬೇಕು.

ಬಳದೇಶದ ವೃತ್ತಾಂತಗಳು

ಹಿಂದಿನ ವಾರ ಬೆಂಗಳೂರು ಸಿಟಿಯಲ್ಲಿ ನಾಲ್ಕಾರು ಜನರಿಗೆ ಪ್ಲೇಗ್ ತಗಲಿತು. ಸರಕಾರದವರು ಕೂಡಲೆ ಅವರ ಗುಡಿಸಲುಗಳನ್ನು ಸುಟ್ಟುಹಾಕಿದರು. ಈಚೆಗೆ ಆ ಉಪದ್ರವ ಹೆಸರೇ ಇಲ್ಲ.

*****

ಶ್ರೀಮನ್ ಮಹಾರಾಜರವರ ಆಜ್ಞಾನುಸಾರ ಮೆ। ಎಂ. ಕಾಂತರಾಜೇ ಅರಸಿನವರು ಕಳೆದ ಬುಧವಾರ ಮೋಟರ್ ಕಾರ್ ಎಂಬ ಗಾಡಿಯಲ್ಲಿ ರಾಜಧಾನಿಯಿಂದ ನೀಲಗಿರಿಗೆ ಹೋಗಿರುತ್ತಾರೆ.

*****

ಇಲ್ಲಿ ಬಹುಕಾಲ ಸೀನಿಯರ್ ಸರ್ಜನ್ನರಾಗಿದ್ದು ಈಚೆಗೆ ಮದರಾಸಿಗೆ ವರ್ಗಮಾಡಿಸಲ್ಪಟ್ಟು ಹೋದ ಡಾಕ್ಟರ್ ಬ್ರೆರ್ನರವರನ್ನು ಇಂಡಿಯಾ ಗವರ್ನಮೆಂಟಿನವರು ಮತ್ತೆ ಬೆಂಗಳೂರಿಗೆ ದಂಡಿನ ಡಾಕ್ಟರ್ ಕೆಲಸಕ್ಕೆ ವರ್ಗಮಾಡಿದಾರೆ.

*****

ಬೆಂಗಳೂರು ಹೊಸ ತರಗುಪೇಟೆಯಲ್ಲಿ ಮೆ। ಹಾಜೆ ಇಸ್ಮೈಲ್ ಸೇಟರ ಮಳಿಗೆಯಲ್ಲಿ ಅಕಸ್ಮಾತ್ತಾಗಿ ಬೆಂಕಿಯೆದ್ದು ಬೇಗಳು ಹಿಂದಿನ ಭಾನುವಾರ ಹತ್ತಿಕೊಂಡು, ಮಾಲೀಕರಿಗೆ ಸುಮಾರು ೫೦,೦೦೦ ರೂಪಾಯಿ ನಷ್ಟವಾಯಿತು.

ಕಳೆದ ಶನಿವಾರ ರಾತ್ರಿ ಬೆಂಗಳೂರಿನಲ್ಲೂ ಅದರ ಸುತ್ತಮುತ್ತಲೂ ಬಹಳ ಒಳ್ಳೇ ಮಳೆ ಆಯಿತು. ರಾಜಧಾನಿಯಲ್ಲಿ ಮೋಡವಾಗುತ್ತಲೂ ಕೆಲವು ಹನಿ ಬೀಳುತ್ತಲೂ ಇದ್ದರೂ ಮಳೆ ಬಂದಿಲ್ಲ. ಧಾರಣೆಗಳು ಮುಂಚಿಗಿಂತ ಹೆಚ್ಚಾಗುತ್ತಾ ಬಂದಿರುವವು.

*****

ಬೆಂಗಳೂರು ದಂಡಿನಲ್ಲಿ ಪ್ರಕಟವಾಗುವ ಡೇಲಿ ಪೋಸ್ಟ್ ಎಂಬ ಪತ್ರಿಕೆಯನ್ನೂ ಆ ಅಚ್ಚಿನ ಕಾರ್ಖಾನೆಯನ್ನೂ ಸಾಮಗ್ರಿ ಸಹಿತ ಕಳೆದ ವಾರ ಹರಾಜಿನಲ್ಲಿ ಮಿಸ್ ಎ ಇ. ಡಾಸನ್ ಎಂಬಾಕೆಯು ೧೮,೪೦೦ ರೂಪಾಯಿಗೆ ಕೊಂಡುಕೊಂಡಳು.

*****

ಮೈಸೂರು ಪಟ್ಟಣವನ್ನು ಅಭಿವೃದ್ಧಿಮಾಡುವ ಸಂಘಕ್ಕೆ ಛೇರ್ಮನ್ ಆಗಿರುವ ಮೆ॥ ಕೆ ಸೀತಾರಾಮಯ್ಯನವರು ತಮ್ಮ ಸಹೋದರರ ಕುಮಾರನ ಮದುವೆಗೋಸ್ಕರ ಎರಡು ವಾರ ರಜಾ ಪಡೆದು, ರಾಮಮಹೇಂದ್ರಕ್ಕೆ ಕಳೆದ ವಾರ ಪ್ರಯಾಣಮಾಡಿದರು.

*****

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಹಳೇ ತಾಲ್ಲೂಕ್ ಕಛೇರಿ ಕಟ್ಟಡವನ್ನು ಸರಕಾರದವರು ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಮೆ॥ ಸಿ. ಎಸ್. ಬಾಲಸುಂದರಂ ಐಯರವರ ಮೂಲಕ ನಾಳೆ ಸೋಮವಾರ ಮಧ್ಯಾಹ್ನ ಪಬ್ಲಿಕ್ ಹರಾಜು ಹಾಕಿಸುತ್ತಾರೆ.

*****

ರಾಜಧಾನಿಯಲ್ಲಿ ವಿದ್ಯಾರ್ಥಿಗಳಿಗೂ ಪ್ರಜೆಗಳಿಗೂ ಆರೋಗ್ಯಕರವಾದ ನೀರುಳ್ಳ ಈಜುವ ಕೊಳವನ್ನು ಕಟ್ಟಿಸಬೇಕೆಂದು ಮೈಸೂರು ಪ್ರೆಸಿಡೆಂಟ್ ಮೆ॥ ಸಿ ವೆಂಕಟರಾಯರು ನಾಳೆ ಶನಿವಾರ ನಡೆಯುವ ಮ್ಯುನಿಸಿಪಲ ಮೀಟಿಂಗಿನಲ್ಲಿ ಸೂಚಿಸುವವರಾಗಿದಾರೆ.

*****

ರಾಜಧಾನಿಯಲ್ಲಿ ಅರಮನೆಯ ಇಂಜನಿಯರ್ ಮೆ॥ ರಾಘವಾಲು ನಾಯುಡು ಯವರ ಮನೆಗೆ ಮದರಾಸಿನಿಂದ ಒಬ್ಬನು ಬಂದು ಕಳೆದ ವಾರ ವಾಂತಿಭೇದಿ ಪ್ರಾರಂಭಿಸಿಕೊಂಡನು. ಅವನನ್ನು ಕೂಡಲೆ ಆಸ್ಪತ್ರೆಗೆ ಕಳುಹಿಸಿ, ಮನೆಯನ್ನೆಲ್ಲಾ ಶುದ್ಧಿಮಾಡಿದರು. ಅವನು ಆಸ್ಪತ್ರೆಯಲ್ಲೇ ಗುಣಹೊಂದುತ್ತಿದಾನೆಂದು ಕೇಳಿಕೆವು.

*****

ಗತಿಸಿದ ಮೆ ತಾತಾಚಾರರ ಧರ್ಮದಿಂದ ಏರ್ಪಡುವ ಸರ್ವಕಲಾ ವಿದ್ಯಾಶಾಲೆಯನ್ನು ಬೆಂಗಳೂರಿನಲ್ಲೇ ಇಡಬೇಕೆಂದು ಇಂಡಿಯಾ ಗವರ್ನಮೆಂಟಿನವರು ತೀರ್ಮಾನ ಮಾಡಿದಾರೆ. ಇದಕ್ಕಾಗಿ ನಮ್ಮ ದಿವಾನರವರು ಮಾಡಿದ ಸಾಹಸವೆಲ್ಲ ಸಾರ್ಥಕವಾಯಿತು. ಇದರಿಂದ ನಮ್ಮ ಸಂಸ್ಥಾನದ ಪ್ರಾಶಸ್ತ್ಯವು ಇನ್ನೂ ಹೆಚ್ಚುವದಕ್ಕೆ ಸಂಶಯವಿಲ್ಲ.

*****

ಮೈಸೂರಿನ ಜೈಲ್‌ಖಾನೆಗಳಲ್ಲಿರುವ ಚೀಫ್ ವಾರ್ಡರೂ ಇವರಿಗೆ ಮೇಲ್ಪಟ್ಟ ಅಧಿಕಾರಿಗಳೆಲ್ಲರೂ ಮತ್ತು ಲೋಕಲ್ ಆಫೀಸರುಗಳೂ, ಮುನಿಸಿಪಲ ಆಫೀಸರುಗಳ ಹೊರತು, ಜೈಲ್‌ಖಾನೆಗಳ ವಿಚಾರವಾಗಿ ಸರಕಾರದಿಂದ ಪ್ರಕಟವಾಗಿರುವ ಕಾನೂನನ್ನು ಓದಿ ಅದರಲ್ಲಿ ಬೇಗನೆ ಪರೀಕ್ಷೆಗೆ ಹೋಗಬೇಕೆಂದು ಗವರ್ನಮೆಂಟಿನವರು ವಿಧಾಯಕಮಾಡಿದಾರೆ.

*****

ಮಾಗಡಿಗೆ ಸೇರಿದ ತಿಪ್ಪಸಂದ್ರ ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸು ಸತ್ತಳೆಂದು ಬಂಧುಗಳು ಅವಳ ಶವವನ್ನು ಕಟ್ಟಿ ಹೊತ್ತುಕೊಂಡು ಹೋಗುವಾಗ್ಗೆ ಅವಳಿಗೆ ಪುನಃ ಪ್ರಜ್ಞೆ ಬಂತೆಂತಲೂ ಅವಳನ್ನು ಅಲ್ಲಿಂದ ವಾಪಸು ಮನೆಗೆ ಕರೆದು ತಂದು ಶೈತ್ಯೋಪಚಾರಗಳನ್ನು ಮಾಡುತ್ತಿದಾರೆಂತಲೂ ಈಗ ಅವಳು ದಿನೇ ದಿನೇ ಚೇತರಿಸಿಕೊಳ್ಳುತ್ತಿದಾಳೆಂತಲೂ ಪ್ರಕಟವಾಗಿದೆ.

*****

ಶ್ರೀಮನ್ ಮಹಾರಾಜರವರು ಸಿಂಲಾ ಪಟ್ಟಣಕ್ಕೆ ಹಯಮಾಡಲು ಏರ್ಪಾಡೆಲ್ಲಾ ಸಿದ್ಧವಾಗುವಷ್ಟರಲ್ಲೇ ವೈಸ್‌ರಾಯಿಯವರಿಗೆ ದೇಹಾಲಸ್ಯ ಉಂಟಾಗಿದೆ ಎಂದು ತಿಳಿದುಬಂದುದರಿಂದ ಈ ಪ್ರಯಾಣವನ್ನು ನಿಲ್ಲಿಸಿರುತ್ತಾರೆಂದೂ ಇನ್ನು ಒಂದು ವಾರ ಶ್ರೀಮನ್ ಮಹಾರಾಜರವರು ನೀಲಗಿರಿ ಬೆಟ್ಟದ ಮೇಲೆಯೇ ಇದ್ದು, ಅನಂತರ ಅಂದರೆ ಈ ೨೯ನೇ ಸೋಮವಾರ ಸಾಯಂಕಾಲ ರಾಜಧಾನಿಗೆ ಚಿತ್ತೈಸುವವರಾಗಿದಾರೆಂದೂ ಪ್ರಕಟವಾಗಿದೆ.

*****

ಇಂಡಿಯಾ ಗವರ್ನಮೆಂಟಿನ ಫಾರಿನ್ ಸೆಕ್ರೆಟರಿಯಾದ ಮೆ॥ ಫ್ರೇಸರ್ ಸಾಹೇಬರು ಹಿಂದಿನವಾರ ನೀಲಗಿರಿ ಬೆಟ್ಟಕ್ಕೆ ಬಂದು ಅಲ್ಲಿ ನಮ್ಮ ಮಹಾರಾಜರವರ ಸಂಗಡ ಮಾತನಾಡಿಕೊಂಡು, ಮೆ। ಮೊಳಾನಿರಿಯವರ ಸಂಗಡ ಅಲ್ಲಿಂದ ಬೆಂಗಳೂರಿಗೆ ಬಂದು, ಇಬ್ಬರೂ ಸೇರಿ ದಿವಾನ್ ಸರ್ ಕೃಷ್ಣಮೂರ್ತಿಯವರನ್ನು ಕಂಡು ಸ್ವಲ್ಪ ಹೊತ್ತು ಸಂಭಾಷಣೆ ಮಾಡಿಕೊಂಡು ಮಾರುದಿನವೇ ಮೆ। ಫ್ರೇಸರ್‌ಯವರು ಸಿಂಲಾಕ್ಕೆ ಪ್ರಯಾಣಮಾಡಿದರೆಂದು ತಿಳಿಯುವುದು.

*****

ಬ್ಯಾರಿಂಗ್‌ಪೇಟೆಯಲ್ಲಿ ನಾಲ್ಕೈದು ತಿಂಗಳಿಂದಲೂ ಪ್ಲೇಗ್ ಉಪದ್ರವ ಹೆಸರೇ ಇಲ್ಲದಿದ್ದರೂ ಅಲ್ಲಿನ ರೈಲ್ವೆ ಸ್ಟೇಷನ್ನಿನಲ್ಲಿ ಪ್ರಯಾಣಿಕರ ದೇಹಸ್ಥಿತಿಯನ್ನು ಸರಕಾರದವರು ಪರಿಶೋಧಿಸುತ್ತಲೇ ಇದಾರೆಂತಲೂ ಇದರಿಂದ ವೃಥಾ ಸರಕಾರಕ್ಕೆ ತಿಂಗಳೊಂದಕ್ಕೆ ೩೦೦ ರೂಪಾಯಿನಂತೆ ಖರ್ಚಾಗುತ್ತಿದೆ ಎಂತಲೂ, ಡೆಪ್ಯುಟಿ ಕಮಿಷನರು ಕೂಡ ಆ ಶಿಬ್ಬಂದಿಯನ್ನು ವಜಾಮಾಡಬೇಕೆಂದು ಗವರ್ನಮೆಂಟಿಗೆ ರಿಪೋರ್ಟ್ ಕೊಟ್ಟಿದಾರೆಂತಲೂ ಕೋಲಾರದ ಬಾತ್ಮಿದಾರರು ತಿಳಿಸುತ್ತಾರೆ.

ಮೆ॥ ಟಿ. ವಿ ಕುಪ್ಪುಸ್ವಾಮಿ ಮೊದಲಿಯಾರ್ರು

ಮೈಸೂರು ಪಟ್ಟಣದಲ್ಲಿ ಬಹು ಕಾಲದಿಂದಲೂ ಅಸಿಸ್ಟೆಂಟ್ ಸರ್ಜನ್ನರಾಗಿಯೂ ಈಚೆಗೆ ಪ್ಲೇಗ್ ಉಪದ್ರ ಬಂದಲಾಗಾಯತು ರಾಜಧಾನಿಯ ಚೀಫ್ ಪ್ಲೇಗ್ ಆಫೀಸರ್ ಮತ್ತು ಹೆಲ್ತ್ ಆಫೀಸರಾಗಿಯೂ ಇರುವ ಮೆ॥ ಟಿ. ವಿ ಕುಪ್ಪುಸ್ವಾಮಿ ಮೊದಲಿಯಾರ್ರನ್ನು ಸರಕಾರದವರು ಈಗ ಕಡೂರು ಡಿಸ್ಟ್ರಿಕ್ಟಿಗೆ ಮೆಡಿಕಲ್ ಆಫೀಸರಾಗಿ ನೇಮಿಸಿ ವರ್ಗಮಾಡಿರುತ್ತಾರೆ. ಹೀಗೆ ಇವರು ವರ್ಗವಾದದ್ದನ್ನು ರಾಜಧಾನಿಯ ಪ್ರಜೆಗಳು ಕೇಳಿ, ಅವರಿಗೆ ಒಂದೆರಡು ವಾರಗಳಿಂದಲೂ ದಿನವೇ ಮೊದಲಾದ ನಾನಾ ಸಂತೋಷೋತ್ಸವಗಳನ್ನು ಮಾಡಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸುತ್ತಿದಾರೆ. ವರ್ತಕರಾದ ಮೆ॥ ಮೂದಪ್ಪನವರು, ಕಾಸ್ಮಾಪಾಲಿಟನ್ ಕ್ಲಬ್ಬಿನವರು, ಮೆ॥ ವಿಕಾರ್ ಸ್ಟೈಫಾಮುದ್ದೀನ್ ಅಲ್ಲಿ ಖಾನರವರು, ಪ್ಲೇಗ್ ಮತ್ತು ಹೆಲ್ತ್ ಆಫೀಸಿನ ನೌಕರವರ್ಗದವರು—ಇವರೆಲ್ಲಾ ಮೆ। ಕುಪ್ಪುಸ್ವಾಮಿ ಮೊದಲಿಯಾರ್ರನ್ನೂ ಅವರ ಮಿತ್ರರನ್ನೂ ಅಲ್ಲಿನ ಇತರ ದೊಡ್ಡ ಮನುಷ್ಯರನ್ನೂ ಬರಮಾಡಿಕೊಂಡು, ಸಂಗೀತ ಮೊದಲಾದ ವಿನೋದಗಳನ್ನು ಕಲ್ಪಿಸಿ ಸಂತೋಷಪಡಿಸಿದರು. ಈ ವಾರದಲ್ಲೂ ಇನ್ನು ಕೆಲವು ಪ್ರಜೆಗಳು ಅವರಿಗೆ ದಿನನಾದಿಗಳನ್ನು ಮಾಡುವವರಾಗಿದಾರೆಂದು ತಿಳಿದುಬಂದಿದೆ. ಡಾಕ್ಟರ್ ಕುಪ್ಪುಸ್ವಾಮಿಯವರು ಇಲ್ಲಿನ ಸಿವಿಲ್ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದಾಗಲೂ ಈಚೆಗೆ ಪ್ಲೇಗ್ ಮತ್ತು ಹೆಲ್ತ್ ಆಫೀಸರಾಗಿ ನೇಮಕವಾಗಿ ಬಂದ ಮೇಲೂ ಪ್ರಜೆಗಳಿಗಾಗಲಿ ತಮ್ಮ ಕೈ ಕೆಳಗಿನ ನೌಕರರು ಮುಂತಾದ ಕಾಬೇದಾರರಿಗಾಗಲಿ ಯಾವ ವಿಧವಾದ ಅಸಮಾಧಾನವನ್ನೂ ಉಂಟುಮಾಡದೆ ಗಂಭೀರವಾಗಿಯೂ ಪ್ರೀತಿ ದಯೆ ದಾಕ್ಷಿಣ್ಯಯುಕ್ತವಾಗಿಯೂ ಅಧಿಕಾರ ನಡೆಸಿಕೊಂಡು ಬಂದಿರೋಣದರಿಂದ ಪ್ರಜೆಗಳು ಅವರಲ್ಲಿ ಭಕ್ತಿವಿಶ್ವಾಸಗಳನ್ನಿಟ್ಟು ಈಗ ವರ್ಗವಾಗಿ ಹೋಗುವ ಅವರಿಗೆ ತಮ್ಮ ಕೃತಜ್ಞತೆಯನ್ನು ಮೇಲ್ಕಂಡ ಪ್ರಕಾರ ಸಂತೋಷೋತ್ಸವಗಳನ್ನು ಮಾಡಿ ಪ್ರಕಾಶಪಡಿಸುತ್ತಿದಾರೆ. ಹೀಗೆ ಅಧಿಕಾರಿಗಳು ಪ್ರಜೆಗಳಲ್ಲೂ ಪ್ರಜೆಗಳು ಅಧಿಕಾರಿಗಳಲ್ಲೂ ಪರಸ್ಪರವಾದ ಪ್ರೀತಿ ಅನುರಾಗ ಅನ್ಯೋನ್ಯಾದಿ ಲಕ್ಷಣಗಳನ್ನು ಪ್ರಕಾಶಪಡಿಸುವುದು ಸಂತೋಷಪ್ರದವಾಗಿರುತ್ತದೆ. ಮೆ॥ ಎ ವಿ ವರದಾಚಾರ್ಯರು ಮೊನ್ನೆ ನಡೆದ ಉತ್ಸವ ಕಾಲದಲ್ಲಿ—"ಕಾಯಿಲೆ ಹರಡುತ್ತಿರುವ ಕಾಲದಲ್ಲಿ ಪತಿಯ ಮನೆಗೆ ಕಳುಹಿಸುವಾಗ್ಗೆ ಎಷ್ಟು ವ್ಯಸನಪಟ್ಟರೋ ಮೈಸೂರಿನ ಪ್ರಜೆಗಳು ಮೆ॥ ಕುಪ್ಪುಸ್ವಾಮಿಯವರನ್ನು ಅಗಲುವುದಕ್ಕೆ ಅಷ್ಟು ವ್ಯಾಕುಲಪಡುತ್ತಾರೆ, ಆದರೆ ಮಾತೃವಂತಳಾದ ಪತಿವ್ರತೆಯನ್ನು ಯಥಾಪ್ರಕಾರ ಸಂಧಿಸಿ ಕೊಂಡಾಗ ಹ್ಯಾಗೆ ಸಂತೋಷಪಟ್ಟರೋ ಹಾಗೆ ಸಂತೋಷಪಡೋಣವೆಂದು ಪ್ರಜೆಗಳು ಮೆ॥ ಕುಪ್ಪುಸ್ವಾಮಿಯವರನ್ನು ಮತ್ತೆ ರಾಜಧಾನಿಯಲ್ಲಿ ಕಾಣಬೇಕೆಂದು ಹಾರೈಸುತ್ತಿದಾರೆ" ಎಂಬುದಾಗಿ ತಿಳಿಸಿದರು. ಕಾಸ್ಮಾಪಾಲಿಟನ್ ಕ್ಲಬ್ಬಿನಲ್ಲಿ ಡಾಕ್ಟರ್ ಬಿ ಎಸ್ ಅಚ್ಯುತರಾಯರು ನಿರೀಕ್ಷೆಪಟ್ಟು ಹೇಳಿದಂತೆ ಮೆ॥ ಕುಪ್ಪುಸ್ವಾಮಿಯವರು ಪುನಃ ಇಲ್ಲಿಗೇ ಸಿವಿಲ್ ಸರ್ಜನ್ನರಾಗಿ ಬಂದಾರೆಂದು ಸಕಲರೂ ಹಾರೈಸುವರು.

ಕೊರಿಯಾದ ಸಮಾಚಾರಗಳು.

ರಷ್ಯಾ ಜಪಾನ್ ರಾಯಭಾರಿಗಳು ಪೋರ್ಟ್ಸ್‌ಮತ್ ನಗರದಲ್ಲಿ ಸೇರಿ, ಕರಾರಿನ ಕಲಮುಗಳನ್ನು ಚರ್ಚೆಮಾಡುತ್ತಿದಾರಷ್ಟೆ. ಕಳೆದ ವಾರ ಬಂದ ತಂತೀ ವರ್ತಮಾನಗಳಿಂದ ರಷ್ಯಾದವರು ಜಪಾನರವರ ಕೆಲವು ಕಲಮುಗಳನ್ನು ಒಪ್ಪಿಕೊಂಡಿರುವಂತೆಯೂ ಇನ್ನು ಕೆಲವನ್ನು ಒಪ್ಪದೆ ಚರ್ಚೆ ನಡೆಸುತ್ತಿರುವಂತೆಯೂ ತಿಳಿದು ಬರುತ್ತದೆ. ಅವರು ಸದ್ಯ ಒಪ್ಪಿಕೊಂಡಿರತಕ್ಕ ಕಲಮುಗಳು ಯಾವವೆಂದರೆ—(೧) ರಷ್ಯಾದವರು ಕೊರಿಯಾ ರಾಜ್ಯದ ಮೇಲೆ ಯಾವ ಅಧಿಕಾರಗಳನ್ನು ಪಡೆದಿದ್ದರೋ ಅವುಗಳನ್ನೆಲ್ಲಾ ಅವರು ಜಪಾನವರಿಗೆ ವಹಿಸುತ್ತಾರೆ, ಇನ್ನು ಮುಂದೆ ಜಪಾನವರೇ ಕೊರಿಯಾದಲ್ಲಿ ಸರ್ವಸ್ವಾತಂತ್ರ್ಯವನ್ನು ಪಡೆಯುವರು. (೨) ರಷ್ಯಾದವರು ಮ್ಯಾಂಚೂರಿಯಾ ಸೀಮೆಯನ್ನು ಸಂಪೂರ್ಣವಾಗಿ ಬಿಟ್ಟುಹೋಗುವುದಕ್ಕೂ ಅದರ ಮೇಲೆ ತಮಗಿರುವ ಹಕ್ಕು ಬಾಧ್ಯತೆಗಳನ್ನೆಲ್ಲಾ ಚೀನಾಯವರಿಗೆ ವಹಿಸುವುದಕ್ಕೂ, ಹಾರ್ಬಿನ್ ನಗರದಿಂದ ದಕ್ಷಿಣಕ್ಕೆ ಇರುವ ರೈಲ್ ರಸ್ತೆಯನ್ನು ಬಿಟ್ಟುಬಿಡುವುದಕ್ಕೂ ಸಮ್ಮತಿಸಿರುತ್ತಾರೆ. ಅಂದರೆ, ಮ್ಯಾಂಚೂರಿಯಾ ಸೀಮೆಯ ಆಳ್ವಿಕೆಯನ್ನು ಯಥಾಪ್ರಕಾರ ಚೀನಾದವರೇ ನಡೆಯಿಸುವಂತಾಯಿತು. (೩) ಪರರಾಜ್ಯಗಳವರು ಮ್ಯಾಂಚೂರಿಯಾ ಮೊದಲಾದ ಪ್ರದೇಶಗಳಿಗೆ ಹೋಗಿ ವ್ಯಾಪಾರ ಮುಂತಾದ್ದನ್ನು ನಡಸುವುದಕ್ಕೆ ಜಪಾನವರಾಗಲಿ ರಷ್ಯಾದವರಾಗಲಿ ಯಾವ ಅಡ್ಡಿಯನ್ನೂ ಮಾಡಕೂಡದು. (೪) ರಷ್ಯಾದವರು ಚೀನಾಯವರಿಂದ ಭೋಗ್ಯಮಾಡಿಕೊಂಡು ಅನುಭವಿಸುತ್ತಿರುವ ಲಿಯೋಟಾಂಗ್ ಪರ್ಯಾಯದ್ವೀಪ, ಪೋರ್ಟ್ ಆರ್ಥರ್ ಮತ್ತು ಡಾಲ್ನಿ ನಗರಗಳು, ಬ್ಲಾಂಡ್ ಮತ್ತು ಎಲ್ಲಿಯಟ್ ದ್ವೀಪಗಳು ಇವುಗಳನ್ನು ಜಪಾನವರಿಗೆ ಬಿಟ್ಟುಕೊಡುವುದಕ್ಕೆ ಒಪ್ಪಿಕೊಂಡರು. (೫) ಸೈಬೀರಿಯಾ ದೇಶದ ಸಮುದ್ರತೀರದಲ್ಲಿ ರಷ್ಯಾದವರು ಪಡೆದುಕೊಂಡಿದ್ದ ಮೀನುಗಳನ್ನು ಹಿಡಿಯುವ ಹಕ್ಕು ಬಾಧ್ಯತೆಗಳನ್ನು ಜಪಾನವರಿಗೇ ಬಿಟ್ಟುಬಿಡುವುದಾಗಿ ಮಾತುಕೊಟ್ಟಿದಾರೆ. (೬) ಪೂರ್ವದಿಕ್ಕಿನ ಸಮುದ್ರತೀರಗಳಲ್ಲಿ ರಷ್ಯಾದವರು ತಮ್ಮ ಹಡಗುಗಳನ್ನೂ ಹೆಚ್ಚಾಗಿ ಇಡುವುದಿಲ್ಲವೆಂತಲೂ ಇಡುವ ಹಡಗುಗಳ ಸಂಖ್ಯೆಯು ಬಹಳ ಕೊಂಚವೇ ಆದೀತಾದ್ದರಿಂದ ಇದರಿಂದ ಜಪಾನವರಿಗಾಗಲಿ ಇನ್ನ್ಯಾವ ರಾಜ್ಯಗಳವರಿಗಾಗಲಿ ಯಾವ ವಿಧವಾದ ಬಾಧಕವೂ ಭೀತಿಯೂ ಉಂಟಾಗದಂತೆ ಏರ್ಪಾಡುಮಾಡುತ್ತೇವೆಂತಲೂ ಸಮ್ಮತಿಪಟ್ಟಿದಾರೆ.

ಜಪಾನವರು ಪರಿಹಾರದ್ರವ್ಯವೇ ಮೊದಲಾದ ಇನ್ನು ಕೆಲವು ವಿಷಯಗಳನ್ನು ಕೇಳಿದಾರೆ. ಇವುಗಳನ್ನು ರಷ್ಯಾ ರಾಯಭಾರಿಯು ಒಪ್ಪದೆ ತಮ್ಮ ಚಕ್ರವರ್ತಿಯವರೇ ಇತ್ಯರ್ಥಮಾಡಬೇಕಾಗಿದೆ ಎಂದು ಹೇಳಿದಾರೆ. ಈ ಕಲಮುಗಳನ್ನು ರಷ್ಯಾ ಚಕ್ರವರ್ತಿಯವರೂ ಜಪಾನ್ ಚಕ್ರವರ್ತಿಯವರೂ ಯಾವ ರೀತಿಯಲ್ಲಿ ಇತ್ಯರ್ಥಪಡಿಸುವರೋ ಮುಂದೆ ತಿಳಿಯತಕ್ಕದ್ದಾಗಿದೆ. ರಷ್ಯಾ ರಾಯಭಾರಿಗಳು ಕರಾರಾಗುವುದು ಕಷ್ಟವೆಂತಲೂ, ಜಪಾನ್ ರಾಯಭಾರಿಗಳು ಕರಾರು ನಡೆಯುವ ವಿಷಯದಲ್ಲಿ ಅನುಮಾನವೇನೂ ಕಾಣುವುದಿಲ್ಲವೆಂತಲೂ ಹೇಳುತ್ತಾರೆ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಗಣೇಶ, ಅರಳೇಪೇಟೆ, ಬೆಂಗಳೂರು.—ನಿಮ್ಮ ಪುಸ್ತಕವನ್ನು ಪ್ರಕಟಿಸಲಾರೆವು.

ರಾಮನಾಥಪುರದ ಬಾತ್ಮಿ.—ನಿಮ್ಮ ಉದ್ದೇಶವೇನೋ ಈ ಬಾತ್ಮಿಯಿಂದ ಗೊತ್ತಾಗುವುದಿಲ್ಲ.

ಧರ್ಮವೋ ಅಧರ್ಮವೋ, ಬೆಂಗಳೂರು—ದೇವನಹಳ್ಳಿ ತಾಲ್ಲೂಕು ಬಿದಲೂರು ಬಾತ್ಮಿ—ದೇವನಹಳ್ಳಿ ಮದುವೆ ವಿಷಯ—ಚಿತ್ರದುರ್ಗದ ಉಪನ್ಯಾಸಗಳು.—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು.

ಯಡೇಹಳ್ಳಿ ಪೋಲೀಸ್ ವಿಚಾರ.—ನೀವು ಆ ಸಂಗತಿಗಳನ್ನು ಡೆಪ್ಯುಟಿ ಕಮಿಷನರಿಗೂ, ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ರವರಿಗೂ ಬರೆದುಕೊಂಡರೆ ಅವರು ತನಿಖೆಯಿಂದ ಸರಿಯಾದ ಬಂದೋಬಸ್ತು ಮಾಡುವರೆಂದು ನಂಬಿದೇವೆ.

ಯಲಹಂಕದ ಸ್ಕೂಲ್ ವಿಚಾರ ಮತ್ತು ಹರಿಹರದ ಪೋಸ್ಟ್ ವಿಚಾರ.—ಆ ಪ್ರಾಂತ್ಯ ಮುಖಂಡರಾಗಿಯೂ ಮಾಹುಖಸರಾಗಿಯೂ ಇರುವವರು ಸೇರಿ ಆ ಇಲಾಖೆಗೆ ಬರೆದುಕೊಂಡರೆ ಅವರ ಅಪ್ಪವು ನೆರವೇರುವುದಕ್ಕೆ ಸಂಶಯವಿಲ್ಲ.—ಎಡಿ.]

ಕರೆಸ್ಪಾಂಡೆನ್ಸ್.

ಕಾಫಿ ತೋಟದ ಬಳಿ ಕೊಲೆ.

ಅಯ್ಯಾ,

ಇದೇ ಆಗಸ್ಟ್ ತಾ. ಆದಿತ್ಯವಾರ ಸಾಯಂಕಾಲ ೫ ಗಂಟೆ ಸಮಯದಲ್ಲಿ ಮಂಜರಾಬಾದು ತಾಲ್ಲೂಕು ಕೆಂಚಮ್ಮನಹೊಸಕೋಟೆ ಹೋಬಳಿ ಕರಡಿಬೆಟ್ಟ ಕಾಫಿತೋಟದ ಬಾಲ್ಡಿಕೋಟ್ ಸಾಹೇಬರು ಕಾಗ್ನೂರು ತೋಟದ ಸಾಹೇಬರಿಗೆ ಆಳುಗಳ ಸಂಬಳವ ಆಳುಗಳ ಅಡ್ವಾನ್ಸು ಬಗ್ಗೆ ೩೯೫ ಚಿಲ್ಲರೆ ರೂಪಾಯಿಗಳನ್ನು ೨ ಆಳುಗಳ ಕೈಯಲ್ಲಿ ಕೊಟ್ಟುಕಳುಹಿಸಿದರು. ದಾರಿಯಲ್ಲಿ ಒಬ್ಬನು ಕಾಡಿನಲ್ಲಿ ಕೂತುಕೊಂಡು, ಹಣಹೊತ್ತುಕೊಂಡು ಹೋಗುವವನನ್ನು ಕೋವಿಯಿಂದ ಹೊಡೆದನು. ಹಣವು ಮೇಣವಾಗಿ ನೆಲಕ್ಕೆ ಬಿದ್ದಕ್ಷಣ ಹಿಂದೆ ಇದ್ದವನು ಹಣದ ಚೀಲವನ್ನು ಎತ್ತಿಕೊಂಡು ಶೀಘ್ರ ಬಂಗ್ಲೆಗೆ ಓಡಿಹೋಗಿ ದೊರೆಗೆ ಕೊಟ್ಟನು. ಪೋಲೀಸಿನವರು ಕೋವಿ ಹೊಡೆದವನನ್ನು ಹಿಡಿದು ತನಿಖೆ ಮಾಡುತ್ತಿದ್ದಾರೆ. ಕೋವಿ ಏಟುತಿಂದವನು ಸತ್ತುಹೋದನು.

ಚಂದಾದಾರ.

ಯಾಜುಷೋಪಾಕರ್ಮ.

ಅಯ್ಯಾ,

ಈ ಸಾರಿ ಬೆಂಗಳೂರು ಪ್ರಾಂತದಲ್ಲಿ ಸ್ಮಾರ್ತ ಬ್ರಾಹ್ಮಣರೊಳಗೆ ಯಜುಶ್ಶಾಖೆಯವರು ಉಪಾಕರ್ಮವನ್ನು ನಡೆಸಿದ ರೀತಿಯು ನೋಡುವುದಕ್ಕೂ ಕೇಳುವುದಕ್ಕೂ ಆಶ್ಚರ್ಯಕರವಾಗಿದೆ. ಶ್ರೀ ಶೃಂಗೇರಿ ಮಠಕ್ಕೆ ಸಂಬಂಧಪಟ್ಟ ಬೆಂಗಳೂರು ಪ್ರಾಂತ ಸರ್ವಾಧಿಕಾರಿಗಳಾಗಿರುವ ಮೆ॥ ಪಂಡಿತ ವಿಶ್ವೇಶ್ವರ ಶಾಸ್ತ್ರಿಗಳವರು ತಮ್ಮ ಶಿಷ್ಯ ಗೃಹಸ್ಥರೊಡನೆ ಚಾಮರಾಜಪೇಟೆಯಲ್ಲಿ ೧೬ ನೇ ತಾ. ಮಂಗಳವಾರ ನೆರವೇರಿಸಿದರು. ದಂಡಿನಲ್ಲಿ ಪಯಮಾತಿಸಿರುವ ಶ್ರೀ ಶಿವಗಂಗಾ ಮಠದಲ್ಲಿ ಅಲ್ಲಿನ ಸರ್ವಾಧಿಕಾರಿಗಳು ನೆಲಮಂಗಲ ವಿ॥ ಮಹದೇವ ಶಾಸ್ತ್ರಿಗಳು ಮುಂತಾದವರು ೧೫ನೆ ಸೋಮವಾರವೇ ಮುಗಿಸಿಕೊಂಡರಂತೆ. ಅಕ್ಕಿಪೇಟೆ ಅರಳೆಪೇಟೆ ಕೋಟೆಯವರೂ ಶಿವಗಂಗಾ ಮಠವನ್ನು ಮೇಲುಪಟ್ಟಿ ಮಾಡಿಕೊಂಡರು. ಬಸವನಪುರದಲ್ಲಿ ಆಮರಾಪದೇಶಿಯವರನ್ನು ಅನುಸರಿಸಿದರು. ಮಲ್ಲೇಶ್ವರದಲ್ಲಿರತಕ್ಕವರು ಕೆಲವರು ಸೋಮವಾರವೇ ಆಯಿತು ಎನ್ನಿಸಿಕೊಂಡರು ; ಮತ್ತೆ ಕೆಲವರು ಮಂಗಳವಾರ ನೆರವೇರಿಸಿದರು. ಉಲಸೂರು ಪೇಟೆಯ ಪಂಗಡದವರಲ್ಲಿ ಕೆಲವರು ಸೋಮವಾರ ಸಲ್ಲಿಸಿಕೊಂಡರು. ವೆ॥ ಸೀತಾರಾಮ ಶಾಸ್ತ್ರಿಗಳವರು ಕೆಲವು ಪದಗಳನ್ನು ಸೂಚಿಸಿ, ಉಪಾಕರ್ಮವು ಈಗ ನಡೆಯತಕ್ಕದ್ದೇ ಅನುಚಿತವೆಂದು ಕೆಲವು ಪತ್ರಿಕೆಗಳನ್ನು ಪ್ರಿಂಟು ಮಾಡಿಸಿ, ಜನಗಳಿಗೆ ಹಂಚಿ, ಭಾದ್ರಪದ ಮಾಸಕ್ಕೆ ಪೀಠಿಂಗು ಹಾಕಿಕೊಂಡರು. ಹೀಗೆ ಊರೂರಿಗೂ ಕೇರಿ ಕೇರಿಗೂ ಗುರು ಶಿಷ್ಯರಿಗೂ ಧರ್ಮಶಾಸ್ತ್ರಗಳು ಬದಲಾಯಿಸಿ, ಭಿನ್ನ ಭಿನ್ನ ಮಾರ್ಗವು ಕಲಿತೋರುವಂತೆ ಆದದ್ದು ಆಶ್ಚರ್ಯವಾಗಿದೆ. ಶ್ರೀ ಶೃಂಗೇರಿ ಮಠಕ್ಕೆ ಸಂಬಂಧಪಟ್ಟ ಪಂಚಾಂಗದಲ್ಲಿ ಮಂಗಳವಾರವೇ ಆಗತಕ್ಕದ್ದೆಂದು ಧರ್ಮಶಾಸ್ತ್ರ ವಚನದೊಂದಿಗೆ ಕಾಣಬರುತ್ತಿದೆ. ಇವರೊಳಗೆ ಯಾವುದು ಶಾಸ್ತ್ರೀಯವೋ ಮತ್ತೆ ಯಾವುದು ಅಶಾಸ್ತ್ರೀಯವೋ ಗೊತ್ತಿಲ್ಲ. ಈ ಎಲ್ಲಾ ಭೇದಗಳು ಸ್ಮಾರ್ತ ಬ್ರಾಹ್ಮಣರಲ್ಲಿಯೇ ನಡೆದ ಹಾಗೆ ಆಯಿತು. ಮೇಲ್ಕಂಡ ವಿ॥ ಮಹದೇವ ಶಾಸ್ತ್ರಿಗಳು ಇದರ ಇತ್ಯರ್ಥಕ್ಕಾಗಿ ಸಭೆಯನ್ನು ಮಾಡುವರಂತೆ. ಇದರ ಫಲಿತಾಂಶವೇನೋ ನಿರೀಕ್ಷಿಸಬೇಕಾಗಿದೆ.

ತಿ. ಸುಬ್ರಹ್ಮಣ್ಯಶಾಸ್ತ್ರಿ.

ನಂದಗೂಡಿನ ವಿಷಯಗಳು.

ಅಯ್ಯಾ,

ಈ ತಾಲ್ಲೋಕಿನಲ್ಲಿ ಮಳೆ ಇಲ್ಲದೆ ಕ್ಷಾಮವು ತಲದೋರಿರುತ್ತೆ. ಜನಗಳಿಗೆ ಮೇವು ಸುಖರಾಂ ಇರುವದಿಲ್ಲ. ದಿನಸಿ ಧಾರಣೆಗಳು ದಿನೆ ದಿನೆ ಹೆಚ್ಚಾಗುತ್ತಾ ಬರುತ್ತಿದೆ.—ಇಲ್ಲಿರುವ ಮುನ್ಸಿಫ್ ಮೆ॥ ಯಸ್. ಶೇಷಗಿರಿರಾಯರು ಬಹು ಒಳ್ಳೆಯವರು. ಕಕ್ಷಿಗಾರರ ಅಹವಾಲನ್ನು ಸಾವಧಾನದಿಂದ ಕೇಳಿ ನ್ಯಾಯವನ್ನು ಹೊರಪಡಿಸಲು ಬಹು ಆಸಕ್ತರಾಗಿರುತ್ತಾರೆ. ಮತ್ತು ಕೋರ್ಟ್ ನೌಕರರನ್ನು ತುಂಬಾ ವಿಶ್ವಾಸದಿಂದ ಕಾಣುತ್ತಾರೆ. ಆದರೆ ಇವರ ಸೌಮ್ಯಗುಣವು ಕೋರ್ಟ್ ನೌಕರರಲ್ಲಿ ಕೆಲವರಿಗೆ ದಾಕ್ಷೀಷ್ಟಗಳಿಗೆ ಹೆಚ್ಚಾದ ಅವಕಾಶವನ್ನುಂಟುಮಾಡಿರುವಂತೆ ಕಾಣುತ್ತೆ. ಪ್ರೋಸೆಸ್ಸು ಜಾರಿಯಾಗಿ ಬರುವದೇ ವಿಶ್ವ ಪ್ರಯತ್ನವಾಗಿರೋಣದರಿಂದ ಕಕ್ಷಿಗಾರರಿಗೆ ಬಹು ತೊಂದರೆಗೆ ಆಕಾರವಾಗಿರುತ್ತೆ. ಕೆಲವು ದಿನಗಳ ಹಿಂದೆ ಡೆಪ್ಯುಟಿ ನಾಜರು ಒಬ್ಬ ಜವಾನನಿಗೆ ೩೦—೪೦ ಪ್ರೋಸೆಸ್ಸುಗಳನ್ನು ಜಾರಿಮಾಡಿಕೊಂಡು ಬರುವದಕ್ಕೆ ಕೊಟ್ಟದ್ದು, ಯಾಕೋ ಅವನಿಂದ ವಾಪಸು ಕಿತ್ತುಕೊಂಡು, ಇತರ ಜವಾನರಿಗೆ ಕೊಟ್ಟಂತೆಯೂ, ಮೊದಲು ಸಮ್ಮನ್ ವಾರಂಟುಗಳನ್ನು ತೆಗೆದುಕೊಂಡಿದ್ದ ಜವಾನನು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿಗೆ ಅರ್ಜಿ ಬರೆದುಕೊಂಡಿರುವಂತೆಯೂ ಕೇಳುತ್ತೇನೆ.—ಈ ಊರಿನ ಮುನಿಸಿಪಾಲಿಟಿಯು ಬಹುವಾಗಿ ಕೆಟ್ಟುಹೋಗುತ್ತಾ ಬರುತ್ತಿದೆ. ನಾಲಾ ಸಮಿಪದಲ್ಲಿ ಕೆಟ್ಟ ಜನಗಳು ದಾರಿಯ ಉಭಯಪಾರ್ಶ್ವದಲ್ಲೇ ಬಹಿರ್ಭೂಮಿಗೆ ಹೋಗುತ್ತಾರೆ. ಹೆಂಗಸರು ಮಕ್ಕಳು ಓಡ್ಯಾಡುವದಕ್ಕೆ ಮಾರ್ಗವಿಲ್ಲ. ಈ ವಿಷಯವನ್ನು ಮುನಿಸಿಪಲ್ ಅಧಿಕಾರಿಗಳು ತಪ್ಪಿಸುವದಕ್ಕೆ ಪ್ರಯತ್ನಮಾಡಬೇಕು. ಬೀದಿಗಳಲ್ಲಿ ೮—೯ ಗಂಟೆಗಳಾದರೂ ಕಸ ತುಂಬುವರೇ ಇಲ್ಲದಂತೆ ಬಿದ್ದಿರುತ್ತೆ. ರಾತ್ರಿ ವೇಳೆ ಕೆಲವು ಸ್ಥಳಗಳಲ್ಲಿ ದೀಪ ಹತ್ತಿಸುವದೇ ಇಲ್ಲ. ಹತ್ತಿಸಿದ ದೀಪಗಳೂ ಮಿಣುಕು ಹುಳುಗಳೋಪಾದಿಯಲ್ಲಿ ಪ್ರಕಾಶಮಾನವಾಗಿರುತ್ತೆ. ಮುನಿಸಿಪಲ್ ಕಮಿಷನರು ಈ ವಿಷಯಕ್ಕೆ ಯಾಕೆ ನಿಗಾ ಕೊಡುವದಿಲ್ಲವೋ. ಮುಂದೆಯಾದರೂ ಎಲ್ಲಾ ಕಡೆಗೂ ಸರಿಯಾಗಿ ದೀಪ ಹಚ್ಚಸಲು ಏರ್ಪಾಡು ಮಾಡ್ಯಾರೆಂದು ನಂಬಿರುತ್ತೇನೆ.—ಈ ಊರಿನಲ್ಲಿ ಕಿಡುಬಿನ ಗಲಭೆ ಹೆಚ್ಚಾಗಿದೆ. ಒಂದೊಂದು ಮನೆಯಲ್ಲಿ ೫—೬ ಜನಗಳಿಗೆ ಒಟ್ಟಿಗೆ ಏಳುತ್ತೆ. ಇದೇ ರೀತಿ ಅನೇಕ ಮನೆಗಳಲ್ಲಿ ಎದ್ದು ಅನೇಕರಿಗೆ ತುಂಬಾ ವ್ಯಸನವನ್ನುಂಟುಮಾಡುತ್ತದೆ.

ಒಬ್ಬ ಬಾತ್ಮೀದಾರ.

ಜೋಳ್ದಾಳು ಸಂತೆಯ ವಿಚಾರ

ಅಯ್ಯಾ,

ಚಿಕ್ಕಮಗಳೂರು ತಾಲ್ಲೂಕು ಜೋಳ್ದಾಳು ಗ್ರಾಮದಲ್ಲಿ ಪ್ರತಿ ಗುರುವಾರವೂ ಸಂತೆ ಆಗುತ್ತೆ. ಸುತ್ತ ಮುತ್ತಲೂ ಅನೇಕ ಕಾಫಿ ತೋಟಗಳು ಇರುವದರಿಂದಲೂ ಸುತ್ತಮುತ್ತ ಬಹಳ ದೂರ ಪ್ರಸ್ಥಳವರಿಗೆ ಇನ್ಯಾವ ಗ್ರಾಮದಲ್ಲೂ ಸಂತೆ ನಡೆಯುವದಿಲ್ಲವಾದ್ದರಿಂದಲೂ ಮಲ್ನಾಡು ಪ್ರಾಂತ್ಯದ ಅನೇಕ ಜನಗಳಿಗೆ ಇದೇ ಆಶ್ರಯವಾಗಿದೆ. ಈ ಗ್ರಾಮದ ಸಂತೆ ನಡೆಯತಕ್ಕ ಜಾಗದ ವರ್ಣನೆ ಮಾಡಲು ಯಾರಿಂದಲೂ ಅಸಾಧ್ಯ.—ಈ ಮಳೆಗಾಲದಲ್ಲಂತೂ ಅಂಗಡಿ ಇಡುವವರ ಗೋಳು ಹೇಳಲಿಕ್ಕಿಲ್ಲ. ಮೊಳಕಾಲುದ್ದ ಕೆಸರಿನಲ್ಲಿಯೇ ನಿಂತುಕೊಳ್ಳಬೇಕು. ಮತ್ತು ಗ್ರಾಮದ ಮಧ್ಯದಲ್ಲಿ ಇರುವದರಿಂದ ಸ್ಥಳ ಸಂಕೋಚ ವ್ಯಾಪಾರಕ್ಕಾಗಿ ಬಂದ ಜನರ ಗೋಳಂತೂ ಹೇಳಲಸಾಧ್ಯ.—ಆ ಕೆಸರಲ್ಲಿ ಎಲ್ಲಾದರೂ ಕಾಲು ಜಾರಿದಲ್ಲಿ ಅಂಥವನನ್ನು ಮತ್ತೊಬ್ಬನು ಹಿಡಿದು ಎಬ್ಬಿಸಬೇಕು. ಮಳೆ ಬಂದರೆ ಜನಗಳು ನಿಂತುಕೊಳ್ಳಲು ಮಾರ್ಗವಿಲ್ಲ. ಅಂಗಡಿಗಳಲ್ಲಿ ಅಳತೆ ಸೇರು ತೂಕದ ಬಟ್ಟು ಇವುಗಳ ಪರಿಮಿತಿ ಇಷ್ಟೆಂಬುದು ಅಂಗಡಿಕಾರರ ಮನಸ್ಸಿನಲ್ಲಿಯೇ ಹೊರ್ತು ಕೃತಿ ಮತ್ತು ಆಚರಣೆಯಲ್ಲಿಲ್ಲ. ಇದನ್ನು ಕೇಳುವವರೇ ದಿಕ್ಕಿಲ್ಲ. ಈ ಮಧ್ಯೆ ವೀಳ್ಯದೆಲೆಯವರು ಉಪ್ಪು ಮುಂತಾದ ಸರಕಿನವರು ಎಲ್ಲ ಒಂದಾಗಿ ಕಂಟ್ರಾಕ್ಟು ಎಂಬ ಪದ್ಧತಿ ಮಾಡಿಕೊಂಡು, ಎಲ್ಲರೂ ಸೇರು ಒಂದಕ್ಕೆ ಇಷ್ಟೇ ಕ್ರಯಕ್ಕೆ ಮಾರಬೇಕು ಎಂಬ ಮತಿನಿಂದಲೂ ಇನ್ನೂ ಅನೇಕ ತರಹದಿಂದ ಬಡ ಪ್ರಜೆಗಳಿಗೆ ತೊಂದರೆ ಕೊಡುತ್ತಿದ್ದಾರೆ. ಇದಕ್ಕೆಲ್ಲಾ ಪೋಲೀಸಿನವರು ನಿಗಾಕೊಡಬೇಕು. ಮೇಲ್ಪಟ್ಟ ತಾಲ್ಲೂಕು ಅಧಿಕಾರಿಗಳು ಪೂರ್ಣಗಮನಕ್ಕೆ ತೆಗೆದುಕೊಂಡು ಮೇಲ್ಕಂಡ ದುಷ್ಪದ್ಧತಿಗಳನ್ನೆಲ್ಲಾ ತಪ್ಪಿಸಿ ಬಡ ಪ್ರಜೆಗಳಿಗೆ ಉಪಕಾರ ಮಾಡಿಯಾರೆಂತ ನಂಬಿರುತ್ತೇನೆ. ಮತ್ತು ಸಂತೆ ನಡಿಯುವ ಜಾಗಾ ತಪ್ಪಿಸಿ, ಬೇರೇ ಎತ್ತರವಾದ ಜಾಗದಲ್ಲಿ ನಡಿಯುವಂತೆ ಮಾಡಿಸಿದರೂ ಸರಿಯೇ, ಇಲ್ಲವೇ ಅದೇ ಜಾಗಕ್ಕೆ ಮೆಟ್ಲು ಗ್ರಾವಲ್ ಹಾಕಿಸಿ, ನೀರು ನಿಲ್ಲದಂತೆ ಮಾಡಿಸಿ, ಪರಸ್ಥಳದ ಜನರು ನಿಲ್ಲುವದಕ್ಕೂ ಚಳ್ಳದೆ ಅಂಗಡಿಗಳು ಪಗ್ಗರೆ ಇಟ್ಟುಕೊಳ್ಳುವದಕ್ಕೂ, ಮಾರ್ಕೆಟ್ಟು ಕಟ್ಟಿಸಿ ಅಂಗಡಿಯವರಿಗೆ ಯಾವದಾದರೂ ಒಂದು ತರಹ ಸುಂಕ ಹಾಕಿ ಅದರ ಖರ್ಚು ಹುಟ್ಟಿಸಿಕೊಳ್ಳಬಹುದು. ಸಂತೆಯಲ್ಲಿ ಫಕೀರರ ಹಾವಳಿಯಂತೂ ಹೇಳಲಸಾಧ್ಯ. ಅಂಗಡಿ ಒಂದಕ್ಕೆ ೩ ಕಾಸಿಗೆ ಕಮ್ಮಿ ಇಲ್ಲದಂತೆ ಮಾಯಂ ಸುಂಕಾ ಕೊಟ್ಟೇ ತೀರಬೇಕು. ಈ ತೊಂದರೆಗಳನ್ನೆಲ್ಲಾ ಗವರ್ನಮೆಂಟಿನವರು ಗಮನಕ್ಕೆ ತೆಗೆದುಕೊಂಡು ಕ್ರಮಪಡಿಸಿಯಾರೆಂತ ಅರಿಕೆ ಮಾಡಿಕೊಂಡಿರುತ್ತೇನೆ.

ಪ್ರಜಾಹಿತೈಷಿ.

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಗವರ್ನರಾದ ಲಾರ್ಡ್ ಲಾಮಿಂಗ್ಟನ್ನರವರು ಈ ತಿಂಗಳ ೨೬ಕ್ಕೆ ನೀಲಗಿರಿಗೆ ದಯಮಾಡಿ, ಮದರಾಸ್ ಗವರ್ನರವರನ್ನು ಕಂಡು ಹೋಗುವವರಾಗಿದ್ದಾರೆ.

ಕಾಂಗ್ರಾ ಕಣಿವೆಯ ಭೂಕಂಪದ ರಿಲೀಫ್ ಫಂಡಿಗೆ ಈಗ ... ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಚಂದಾ ವಸೂಲಾಗಿರು...

*****

ಉತ್ತರ ದೇಶದಲ್ಲೂ ದಕ್ಷಿಣ ದೇಶದಲ್ಲೂ ಅನೇಕ ಕಡೆಗ... ಈಗಲ ಇನ್ನು ಒಂದೆರಡು ವಾರಗಳಲ್ಲಿ ಮಳೆ ಬಾರದಿದ್ದರೆ ಕ್ಷಾಮ ಪ್ರಾಪ್ತವಾಗಬಹುದೆಂದು ಸರ್ಕಾರಿ ಅಧಿಕಾರಿಗಳು ರಿಪೋರ್ಟುಗಳನ್ನು ಬರೆದಿದ್ದಾರೆ.

*****

ಕಲ್ಕತ್ತಾ ಪಟ್ಟಣದ ಯೂನಿವರ್ಸಿಟಿ ವಿದ್ಯಾ ಸಂಘದ... ಆ ಪಟ್ಟಣದಲ್ಲಿ ಒಂದು ಸರಸ್ವತಿಭಂಡಾರವನ್ನು ಕಟ್ಟಬೇಕೆಂದು ಗೊತ್ತುಮಾಡಿದ್ದಾರೆ. ಅದರ ನಿವೇಶನ ಒಂದಕ್ಕೇ ಅವರು ೩ ಲ... ೨೨ ಸಹಸ್ರ ರೂಪಾಯಿ ಕೊಡುವರು.

*****

ಬೊಂಬಾಯಿ ಪಟ್ಟಣದಲ್ಲಿದ್ದು ಲಕ್ಷಾಂತರ ದ್ರವ್ಯವನ್ನು ಧರ್ಮಖರ್ಚಿಗೂ ಜನಗಳ ಅಭಿವೃದ್ಧಿಗೂ ವಿನಿಯೋಗಿಸಿದ ಲೇ... ಮೆ॥ ತಾತಾ ಯವರ ಹೆಸರನ್ನು ಶಾಶ್ವತಪಡಿಸಬೇಕೆಂದು ಕೆ... ಬೊಂಬಾಯಿ ದೊಡ್ಡ ಮನುಷ್ಯರು ಗೊತ್ತುಮಾಡಿ, ಅದಕ್ಕಾಗಿ ...ದಾ ಕೂಡಿಸುತ್ತಿದ್ದಾರೆ.

*****

ಕಳೆದ ವಾರ ಡಾರ್ಜಿಲಿಂಗ್ ಪಟ್ಟಣದಲ್ಲಿ ಎರಡು ಬ್ಯಾ... ಅಂಗಡಿಗಳು ಉರಿದುಹೋದವು. ಲಕ್ಷಾಂತರ ರೂಪಾಯಿನ ...ಮಾನೆಲ್ಲಾ ಅಂಗಡಿ ಸಹಿತ ಬೂದಿಯಾಯಿತು. ಎರಡೂ ಇಂಗ್ಲಿ... ವರ್ತಕರ ದೊಡ್ಡ ಅಂಗಡಿಗಳಾಗಿದ್ದವು. ಎರಡೂವರೆ ಲಕ್ಷ ರೂಪಾಯಿ ನಷ್ಟವಾಗಿರುವಂತೆ ತಿಳಿದುಬಂದಿದೆ.

*****

ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ಒಪ್ಪಿಸುವ ವಿಜ್ಞಾಪನಾ ಪತ್ರಿಕೆಯನ್ನು ಬಹಳ ಸುಂದರವಾಗಿ ಅಚ್ಚುಹಾಕಿಸುವುದಕ್ಕೆ ೧,೦... ರೂಪಾಯನ್ನೂ ಇದನ್ನು ಇಟ್ಟು ಒಪ್ಪಿಸುವ ಪೆಟ್ಟಿಗೆಗೆ ೩,೦... ರೂಪಾಯನ್ನೂ ಖರ್ಚುಮಾಡತಕ್ಕದ್ದೆಂದು ಕಲ್ಕತ್ತಾ ಪಟ್ಟಣದ ಮುನಿಸಿಪಾಲಿಟಿಯವರು ತೀರ್ಮಾನಮಾಡಿದ್ದಾರೆ.

*****

ಬೊಂಬಾಯಿ ಪಟ್ಟಣದ ಜೈನ ಮತಸ್ಥರಲ್ಲಿ ತುಂಬಾ ಪ್ರ...ವಂತನಾಗಿರುವ ಮಾಣಿಕ್‌ಚಂದ್ ಪಾನಾಚಂದ್ ಎಂಬ ವರ್ತಕ... ಕೊಲ್ಲಾಪುರದಲ್ಲಿರುವ ಜೈನ ಬಾಲಕರಿಗೆ ೧೮,೦೦೦ ರೂಪಾಯಿ ಮುಟ್ಟಿಸಿ ಒಂದು ವಿದ್ಯಾರ್ಥಿ ನಿಲಯವನ್ನು ಕಟ್ಟಿಸಿಕೊಟ್ಟ... ಕೊಲ್ಲಾಪುರಸಂಸ್ಥಾನದ ಮಹಾರಾಜರವರು ಈ ಕಟ್ಟಡವನ್ನು ...ದವಾರ ಪ್ರತಿಷ್ಠೆಮಾಡಿದರು.

*****

ಇಂಡಿಯಾ ಗವರ್ನಮೆಂಟಿನಲ್ಲಿ ಸಿವಿಲ್ ಸರ್ವಿಸ್ ಪರೀ... ಕೊಟ್ಟು ಅಧಿಕಾರವನ್ನು ಮಾಡುತ್ತಿದ್ದು ಪೆನ್ಷನ್ ಪಡೆದು ಕೆ... ಬಿಟ್ಟಂತಹ ದೊಡ್ಡ ಮನುಷ್ಯರನ್ನು ದೇಶೀಯ ಸಂಸ್ಥಾನದ... ಯಾರೂ ಇಂಡಿಯಾ ಗವರ್ನಮೆಂಟಿನವರಿಗೆ ತಿಳಿಸದೆ ಅವರ ಅ... ಜ್ಞೆಯನ್ನು ಹೊಂದದೆ ಕೆಲಸಕ್ಕೆ ನೇಮಿಸಿಕೊಳ್ಳಕೂಡದೆಂದು ... ರ್ನಮೆಂಟಿನವರು ತಿಳಿಸಿರುತ್ತಾರೆ.

*****

ಸಿಲೋನ್ (ಲಂಕಾ) ದ್ವೀಪದಲ್ಲಿ ಕಳೆದ ಏಪ್ರಿಲ್ ೩೦ನೆ ...ರೀಖಿನದಿನ ೩೮,೩೬,೩೫೦ ಪ್ರಜೆಗಳಿದ್ದರು. ಅಂದರೆ, ಹಿಂದಿನ ವರ್ಷಕ್ಕಿಂತ ೨೩,೪೧೯ ಮಂದಿ ಹೆಚ್ಚು. ಅಲ್ಲಿ ಮರಣಸಂಖ್ಯೆ...ತಲೂ ಜನನಸಂಖ್ಯೆಯೇ ೧೫,೫೧೮ ಹೆಚ್ಚಾಗಿದೆ. ಹಿಂದೂಸ್ಥಾ...ದಿಂದ ಅಲ್ಲಿಗೆ ೩೦,೪೬೯ ಜನ ಕೂಲಿಕಾರರು ಹೋಗಿ ಸೇರಿ ಕಾಫಿ ತೋಟಗಳಲ್ಲಿ ಕೆಲಸಮಾಡುತ್ತಿದ್ದಾರೆ.

*****

ಮದರಾಸ್ ಪಟ್ಟಣದಲ್ಲಿ ಈಗ ವಾಂತಿ ಭೇದಿ ಉಪದ್ರವು ಬಹು ಕಠಿಣವಾಗಿದೆ. ದಿನಕ್ಕೆ ೪೦—೫೦ ಜನರಿಗೆ ಕಮ್ಮಿ ಇಲ್ಲ... ಈ ಉಪದ್ರದಲ್ಲಿ ಸಾಯುತ್ತಿದ್ದಾರೆ. ಮದರಾಸಿನ ಸುತ್ತಮುತ್ತಲ ಚಂಗಲ್ಪಟ್ ಡಿಸ್ಟ್ರಿಕ್ಟಿನಲ್ಲೂ ಕ್ಷಾಮಬಾಧೆಯಿಂದ ಪ್ರಜೆಗಳು ಕೊರಗಲಾರಂಭವಾಗಿದೆ. ಸರ್ಕಾರದವರೂ ದ್ರವ್ಯವುಳ್ಳ ಧರ್ಮಿಷ್ಠರೂ ಹಣ ಮುಂತಾದ ಸಹಾಯವನ್ನು ಮಾಡುತ್ತಿದ್ದಾರೆ.

*****

ಮದರಾಸ್ ಪಟ್ಟಣದಲ್ಲಿ ಹೈ ಕೋರ್ಟ್ ಜಡ್ಜಿಯವರಾದ ಮೆ॥ ಶಂಕರನ್ನಾಯರ್ ಯವರು ತಮ್ಮ ಬಂಗಲೆಯನ್ನು ಬಡಾ... ಹೊಸಮಾಡಿ ಕಟ್ಟಿಸುತ್ತಿದ್ದರು. ಈ ಹೊಸ ಕಟ್ಟಡವು ಅನಾಮತ್ತು ಕಳೆದವಾರ ಕುಸಿದುಬಿದ್ದುಹೋಯಿತು. ಒಬ್ಬ ಹೆಂಗಸು ಸಿಕ್ಕಿ ಸತ್ತಳು. ನಾಲ್ಕಾರುಮಂದಿ ಕೂಲಿಯವರಿಗೆ ಗಾಯಗಳಾ... ಮತ್ತು ಮಾಲಿಕರಿಗೆ ಹತ್ತಾರುಸಾವಿರ ರೂಪಾಯಿ ನಷ್ಟವಾಯಿ...

*****

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಮಹಮ್ಮದೀಯನೂ ಇಬ್ಬರು ಮಾರ್ವಾಡವರೂ ಸೇರಿಕೊಂಡು, ಚೀನಬಜಾರೆಂಬ ಬೀದಿಯಲ್ಲಿ ವಾ...ಮಾಡುವ ಸೈಯಾಂ ದೊಡ್ಡ ಮನುಷ್ಯರ ಎರಡು ಮನೆಗಳಿಗೆ ಕನ್ನ ಹಾಕಿ, ಸುಮಾರು ೭೦,೦೦೦ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿದರು. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತುಮಾಡಿ, ಅವರಿಗೆಲ್ಲಾ ಸಜಾವನ್ನೂ ಜುಲ್ಮಾನೆಯನ್ನೂ ವಿಧಿಸಿದರು.

*****

ಬೊಂಬಾಯಿ ಪಟ್ಟಣದಲ್ಲಿ ನೂಲಿನ ಕಾರ್ಖಾನೆಗಳನ್ನು ...ಸುವ ವ್ಯಾಪಾರಿಗಳೆಲ್ಲಾ ಒಂದು ಸಂಘವನ್ನು ಮಾಡಿಕೊಂ... ತಮ್ಮ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಕೂಲಿಯವರಿಗೆ...

...ಮಾಡುತಿ ಕೋರಿಸಿ ಪ್ಲೇಗ್ ಔಷಧಿ ಹಾಕಿಸಬೇಕೆಂತಲೂ, ಪ್ರತಿ ನಿತ್ಯ ೧೨ ಗಂಟೆ ಹೊತ್ತು ಕೆಲಸ ಮಾಡಿಸಬೇಕೆಂತಲೂ, ಇದ ಕ್ಕಿಂತ ಹೆಚ್ಚಾಗಿ ಯಾವ ಕಾರ್ಖಾನೆಯವರೂ ಕೆಲಸ ಮಾಡಿಸಬಾರ ದೆಂತಲೂ ತೀರ್ಮಾನಿಸಿಕೊಂಡಿದಾರೆ.

****

ಮದರಾಸ್ ಗವರ್ನರಾದ ಲಾರ್ಡ್ ಆಂಪ್ಟ್‌ಹಿಲ್‌ರವರು ಪತ್ನಿ ಪರಿ ವಾರ ಸಹಿತ ಹೈದರಾಬಾದಿಗೆ ಹೋಗಿ ಈ ವಾರವೆಲ್ಲಾ ಅಲ್ಲಿ ನೈಜಾ ಮರವರ ಆತಿಥ್ಯವನ್ನು ಅಂಗೀಕರಿಸಿದ್ದರು. ತುಂಗಭದ್ರಾ ನದಿಯ ಅಣೆಕಟ್ಟಿನ ವಿಚಾರವಾಗಿ ಬಹು ಕಾಲದಿಂದಲೂ ಮದರಾಸ್ ಗವ ರ್ನಮೆಂಟಿನವರಿಗೂ ಹೈದರಾಬಾದ್ ಸಂಸ್ಥಾನದವರಿಗೂ ವಾಗ್ವಾದ ನಡೆಯುತ್ತಲೇ ಬಂದಿದೆ. ಇದನ್ನು ಇತ್ಯರ್ಥಮಾಡಿಕೊಂಡು ಬರು ವದಕ್ಕಾಗಿಯೇ ಗವರ್ನರವರು ಅಲ್ಲಿಗೆ ಹೋಗಿದ್ದರೆಂದು ಗೊತ್ತಾ ಗಿದೆ

****

ವಿಲಾಯತಿ ರಾಜ್ಯದ ಯುವರಾಜರವರು ನೊವೆಂಬರ್ ೯ನೇ ತಾರೀಖಿನದಿನ ಬೊಂಬಾಯಿ ಪಟ್ಟಣಕ್ಕೆ ದಯಮಾಡುವರಷ್ಟೆ. ಆದಿನ ಮಹಮದೀಯರಿಗೆ ರಂಜಾನ್ ಎಂಬ ಉಪವಾಸದ ಹಬ್ಬದ ೨೦ನೇ ದಿನವಾಗುವದು ಅವರು ಉತ್ಸವದಲ್ಲಿ ಬೆರೆದು ಸಂತೋ ಷವಾಗಿರುವದಕ್ಕೆ ಅಡ್ಡಿಯಾಗುತ್ತಾದ್ದರಿಂದ ಪ್ರಿನ್ಸ್ ಆಫ್ ವೇಲ್ಸ್‌ರವರು ಬರುವದನ್ನೇ ಇನ್ನೂ ಇಪ್ಪತ್ತು ದಿನಗಳು ಸಾವಕಾ ಶಮಾಡಿದರೆ ಅನುಕೂಲ ಎಂಬುದಾಗಿ ಒಬ್ಬ ಬಾತ್ಮೀದಾರನು ಪತ್ರಿಕೆ ಯಲ್ಲಿ ಬರೆದಿರುತ್ತಾನೆ.

****

ಭೂಕಂಪವಾದ ಪ್ರದೇಶದಲ್ಲಿ ಅಂದರೆ ಕಾಂಗ್ರಾ ಕೂಲು ಕಣಿವೆಗಳಲ್ಲಿ ಈ ತಿಂಗಳ ಪ್ರಾರಂಭದಿಂದಲೂ ಸಾರೋದ್ಧಾರ ವಾಗಿ ಮಳೆ ಸುರಿಯುತ್ತಿದೆ ಅಸಂಖ್ಯವಾದ ಪ್ರವಾಹಗಳು ಬಂ ದು ಬಡಬಗ್ಗರ ಜೋಪಡಿಗಳನ್ನು ಸಮೂಲವಾಗಿ ಕೊಚ್ಚಿಕೊಂಡು ಹೋದವು. ನಾಲ್ಕಾರು ಜನರು ಪ್ರಾಣ ಕಳೆದುಕೊಂಡರು. ನೂ ರಾರು ಗೋವುಗಳೂ ರೈತರು ಮಾಡಿದ್ದ ಹುಲುಸಾದ ಬೆಳೆ ಗಳೂ ನಾಶಹೊಂದಿದವು. ಸರ್ಕಾರದವರು ಆ ಪ್ರಾಂತ್ಯದ ಜನರ ಕಷ್ಟನಿವಾರಣೆಗೆ ತಕ್ಕ ಸಲಕರಣೆಗಳನ್ನು ಒದಗಿಸುತ್ತಿದಾರೆ.

****

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಹಟ್ಟಿ ಮತ್ತು ತೋಪು ಲ್ದಿ ಎಂಬೀ ಕಡೆಗಳಲ್ಲಿ ಎರಡು ಕಂಪನಿಯವರು ಗಣಿಗಳನ್ನು ತೋಡಿ ಚಿನ್ನ ತೆಗೆಯುತ್ತಿರುವದನ್ನೂ ಇದರಿಂದ ತುಂಬಾ ಆದಾ ಯವಾಗುತ್ತಿರುವದನ್ನೂ ನೋಡಿ, ಕೆಲವರು ಸೇರಿ ಒಂದು ಹೊಸ ಕಂಪನಿ ಏರ್ಪಡು ಮಾಡಿ, ೨೪೦ ಚದರ ಮೈಲಿ ವಿಸ್ತಾರವುಳ್ಳ ಜ ಮೀನನ್ನು ರಾಯಚೂರಿನ ಬಳಿ ಸಂಪಾದಿಸಿಕೊಂಡು, ಗಣಿಗಳನ್ನು ತೋಡಿ ಚಿನ್ನವನ್ನು ತೆಗೆಯುವವರಾಗಿದಾರೆ. ಈ ಕಂಪನಿಯವರು ೧ ರೂಪಾಯಿಗೆ ಒಂದು ಷೇರಿನಂತೆ ೧೪॥ ಲಕ್ಷ ರೂಪಾಯಿ ಮೂಲಧನವನ್ನು ಕೂಡಿಸಿದಾರೆ.

****

ಮದರಾಸ್ ಗವರ್ನಮೆಂಟಿನವರು ನೀಲಗಿರಿ ಬೆಟ್ಟದ ಮೇಲೆ ಕ್ವಿನೈನ್ ಎಂಬ ಜ್ವರದ ಪುಡಿಯನ್ನು ತಯಾರುಮಾಡಿಸುತ್ತಿದಾರಷ್ಟೆ. ಕಳೆದ ವರುಷ ಈ ಕಾರ್ಖಾನೆಯಿಂದ ಗವರ್ನಮೆಂಟಿಗೆ ೧೪,೦೦೦ ರೂಪಾಯಿ ಆದಾಯವಾಯಿತು. ಒಟ್ಟು ೧೨,೯೨೦ ಪೌಂಡು ಕ್ವಿ ನೈನ್ ಚೂರ್ಣವನ್ನು ತಯಾರುಮಾಡಿದರು. ಪೌಂಡು ೧ಕ್ಕೆ ೧೧ ರೂ ಪಾಯಿ ಅಸಲ್ ಖರೀದಿ ಬಿದ್ದಿತು. ಅದನ್ನು ೧೪ ರೂಪಾಯಿಗೆ ೧ ಪೌಂಡಿನಂತೆ ವಿಕ್ರಯಮಾಡಿಸಿದಾರೆ. ೭ ಗ್ರೇಯಿನ್ ತೂಕವುಳ್ಳ ಪುಡಿ ಇರುವ ೨೦ ಲಕ್ಷ ಪೊಟ್ಟಣಗಳನ್ನು ಕಟ್ಟಿ ಪೋಸ್ಟ್ ಆಫೀಸುಗ ಳಿಗೆ ಮಾರಾಟಕ್ಕೆ ಕಳುಹಿಸಿದರು.

****

ಮದರಾಸಿನಲ್ಲಿ ಚಿದಂಬರಂ ಶೆಟ್ಟಿ ಎಂಬೊಬ್ಬ ನಾಟುಕೋಟೆ ಶೆಟ್ಟಿಯು ಅಂಗಡಿ ಮಳಿಗೆಯನ್ನಿಟ್ಟು, ಮಧುರೆಗೆ ಸಾವ್ಕಾರ ನಾಗಿ ವ್ಯಾಪಾರ ನಡಸುತ್ತಿದಾನೆ. ಈತನ ಅಂಗಡಿಯಲ್ಲಿ ಗೋಪಾಲೈ ಯ್ಯಂಗಾರಿ, ರಂಗಾರಂ ಪಿಳ್ಳೆ, ವೆಂಕಟೇಶ್ವರ ಅಯ್ಯರು ಎಂಬೀ ಮೂರು ಮಂದಿ ಗುಮಾಸ್ತರಾಗಿದ್ದುಕೊಂಡು ಸಾಹುಕಾರನಿಗೆ ಸೇ ರಿದ ೨೬,೦೦೦ ಚಿಲ್ಲರೆ ರೂಪಾಯನ್ನು ತಿಂದುಹಾಕಿ, ಲೆಕ್ಕದ ಪುಸ್ತಕಗಳನ್ನು ಸುಟ್ಟು, ಸೃಷ್ಟನೆ ಲೆಕ್ಕಗಳನ್ನು ಮಾಡಿಟ್ಟರು. ಈ ಮೂವರನ್ನೂ ಮದರಾಸ್ ಪಟ್ಟಣದಲ್ಲಿ ಹಿಡಿದು, ಸೆಷನ್ಸ್ ಕೋರ್ಟಿನಲ್ಲಿ ದರ್ಯಾಫ್ತಿ ಮಾಡುತ್ತಿದಾರೆ.

****

ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಚಿಲ್ತಾರಿ ಎಸ್ಟೇಟ ಸೂಪರಿಂಟೆಂಡೆಂಟ್ ಮಿ॥ ಲೀ ಎಂಬ ಸಾಹೇಬನು ಸುಮಾರು ೬ ದಿನಗಳ ಕೆಳಗೆ ಜೇಕಬ್ ಎಂಬೊಬ್ಬ ಕೂಲಿಯವನನ್ನು ದೊ ಣ್ಣೆಯಿಂದ ಹೊಡೆದು ಕೊಂದುಹಾಕಿ ಹೂಳಿಸಿದ್ದನೆಂತಲೂ, ವೋ ಸ್ ಎಂಬುವನು ಪೋಲೀಸಿಗೆ ತಿಳಿಸಿದ್ದರ ಮೇಲೆ ಸರ್ಕಾರದವರು ಹೆಣವನ್ನು ತೆಗೆಸಿ ಪರೀಕ್ಷೆ ಮಾಡಿಸಿದಾಗ ಪೆಟ್ಟುಬಿದ್ದ ಗಾಯಗಳು ಕಂಡುಬಂದವೆಂತಲೂ ಒಂದು ಮೊಕದ್ದಮೆ ಆಗಿ ಆ ಸಾಹೇಬನ ನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿದಾರೆ ಈ ಮೊಕದ್ದಮೆಯು ಮದರಾಸ್ ಸೆಷನ್ಸ್ ಕೋರ್ಟಿನಲ್ಲಿ ದರ್ಯಾಫ್ತಿ ಆಗುವದು.

****

ಮದರಾಸಿನಲ್ಲಿರುವ ಲೇಟ್ ಹಾಜಿ ಮೌಲಿ ಮಹಮದ್ ಹುಸೇನ್ ಖಾನ್ ಸಾಹೆಬ್ ಬಹದೂರ್‌ರವರ ಪತ್ನಿ ಅಜೀಜುನ್ನಿಸಾ ಬೇಗಂ ಎಂಬ ಸ್ತ್ರೀಯು ತಾನು ಪ್ರಸಿದ್ಧ ಟೀಪೂಸುಲ್ತಾನರ ವಂಶಕ್ಕೆ ಸೇರಿದವಳೆಂತಲೂ, ತನ್ನ ಪತಿಯೂ ಹಿರಿಯರೂ ಗವರ್ನಮೆಂಟಿನಲ್ಲಿ ದೊಡ್ಡ ನೌಕರಿಗಳನ್ನು ಮಾಡಿದವರೆಂದೂ, ಈಗ ತನ್ನ ಪ್ರಿಯಕುಮಾರನಿಗೆ ಗವರ್ನಮೆಂಟ್ ಪೋಲೀಸ್ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಕೆಲಸವನ್ನು ಕೊಡಬೇಕೆಂದೂ ವೈಸ್‌ರಾಯಿ ಯವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದಾರೆ. ಈ ವಿಜ್ಞಾಪನಾ ಪತ್ರಿಕೆಯು ಚರಿತ್ರೆಗೆ ಯೋಗ್ಯವಾದದ್ದಾಗಿರುವದು.

****

ಬೊಂಬಾಯಿಪಟ್ಟಣದ ಮಹನೀಯರು ಕಳೆದವಾರ ಸಭೆ ಸೇರಿ, ಹಿಂದುಸ್ಥಾನಕ್ಕೆ ದಯಮಾಡುವ ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸ ರನ್ನು ಬೊಂಬಾಯಿನಲ್ಲಿ ಶಾಶ್ವತಪಡಿಸಬೇಕೆಂದು ಗೊತ್ತುಮಾಡಿ, ಅವರ ಹೆಸರಿನ ಮೇಲೆ ಒಂದು ಪಬ್ಲಿಕ್ ತಮಾಷೆ ಬಂಗಲೆ, ಚಿತ್ರ ಶಾಲೆ, ಉದ್ಯಾನವನ ಮುಂತಾದವುಗಳನ್ನು ನಿರ್ಮಾಣ ಮಾಡಬೇ ಕೆಂದು ತೀರ್ಮಾನಿಸಿ, ಅದಕ್ಕೆ ಚಂದಾ ಕೂಡಿಸಲಾರಂಭಿಸಿದರು. ಮಿ॥ ಕರೀಂಭಾಯಿಯವರು ೬॥ ಲಕ್ಷ ರೂಪಾಯಿ ಕೊಟ್ಟಿದಾರೆ. ಮಿ॥ ಸಸೂನ್ ಡೇವಿಡ್ ಎಂಬವರು ಪ್ರಿನ್ಸ್ ಆಫ್ ವೇಲ್ಸ್‌ರವರ ಪ್ರತಿ ಮೆಯೊಂದನ್ನು ಸ್ವಂತ ಲಾಗವಿನಿಂದ ಮಾಡಿಸಿ ಇರಿಸಿಕೊಡುವದಾ ಗಿ ವಾಗ್ದಾನಮಾಡಿದಾರೆ.

****

ಪೂನಾ ಪಟ್ಟಣದಲ್ಲಿ ಮಿ॥ ಕೇಲಕ್ಕರವರ ಪತ್ನಿಯ ಬಳಿ ಸೇವಾ ವೃತ್ತಿಗೆ ಸೇರಿಕೊಂಡಿದ್ದ ಒಬ್ಬ ಹೆಂಗಸು ಅವರ ಮನೆಯಲ್ಲಿ ೧೧ ವಸ್ತ್ರಗಳನ್ನು ಕದ್ದುಕೊಂಡುಹೋಗಿ ತುಳಸೀರಾಂ ಧೋಂಡುರಾಂ ಎಂಬೊಬ್ಬ ಮಾರ್ವಾಡಿ ಸಾಹುಕಾರನಿಗೆ ವಿಕರಿ ಮಾಡಿದಳು. ಕೆಲವು ದಿನಗಳೊಳಗಾಗಿ ಅವಳು ಸಿಕ್ಕಿ, ತಾನು ಕದ್ದುದುಂಟೆಂದೂ ಅವನಿಗೆ ಮಾರಿರುತ್ತೇನೆಂದೂ ಹೇಳಿ ಒಪ್ಪಿಕೊಂಡು, ಅವನನ್ನು ತೋರಿಸಿದಳು. ಮ್ಯಾಜಿಸ್ಟ್ರೇಟರು ಆ ಸಾಹುಕಾರನನ್ನು ದರ್ಯಾ ಫ್ತಿಮಾಡಿ, ಅವನು ಕಳುವಿನ ಮಾಲನ್ನು ತೆಗೆದುಕೊಂಡನೆಂದು ಹೇಳಿ, ಅವನಿಗೆ ೬ ತಿಂಗಳ ಕಠಿಣಸಜವನ್ನೂ ೧೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು

****

ಕಲ್ಕತ್ತಾ ಪಟ್ಟಣದಲ್ಲಿ ಭಾರೀ ಜಮೀನ್ದಾರನೂ ದೊಡ್ಡ ವರ್ತ ಕನೂ ಆದ ಬಾಬೂ ದಾರುಗೋವಿಂದಲಾ, ಸಿ. ಐ. ಇ. ಎಂಬಾತ ನು ತನ್ನ ಆಸ್ತಿಯಲ್ಲಿ ಒಂದು ಲಕ್ಷ ರೂಪಾಯಿನ ಪತ್ರಗಳನ್ನು ಬಂಗಾಳಾ ಲೆಫ್ಟಿನೆಂಟ್ ಗವರ್ನರವರ ವಶಕ್ಕೆ ಕೊಟ್ಟು, ಆ ಹಣದ ಲ್ಲಿ ಪ್ರತಿ ವರುಷಕ್ಕೂ ಬರುವ ೪,೦೦೦ ರೂಪಾಯಿಯನ್ನು ಬಂಗಾಳಾ, ಬೀಹಾರ್, ಚೋಟಾನಾಗಪುರ, ಒರಿಸಾ ಪ್ರಾಂತ್ಯಗಳಲ್ಲಿ ಬಡಬಗ್ಗರ ಕಷ್ಟನಿವಾರಣೆಯ ನಾನಾ ಕಾರ್ಯಗಳಿಗೆ ವಿನಿಯೋಗಿಸುತ್ತಾ ಬರ ಬೇಕೆಂದು ತಿಳಿಸಿರುತ್ತಾನೆ ಗವರ್ನರವರು ಈ ಹಣವನ್ನು ಅಂಗೀ ಕರಿಸಿ, ಆತನ ಉದಾರ ಮನಸ್ಸನ್ನು ಹೊಗಳಿ, ಸರ್ಕಾರಿ ಗೆಜೆಟ್ಟಿನ ಲ್ಲಿ ಆತನನ್ನು ವಂದಿಸಿರುತ್ತಾರೆ.

****

ಕೊಡಗಿನಲ್ಲಿರುವ ಸಾರಸ್ವತ ಬ್ರಾಹ್ಮಣರು ಸಭೆಗಳನ್ನು ಕೂ ಡಿಸದೆ, ಉಪನ್ಯಾಸಗಳನ್ನು ಮಾಡದೆ, ಪುಸ್ತಕ ಮುಂತಾದ್ದನ್ನು ಬ ರೆದು ಪ್ರಕಟಿಸದೆ ಗಂಭೀರವಾಗಿ ತಮ್ಮ ತಮ್ಮಲ್ಲೇ ಸಂಘಪರಿಷ್ಕರ ಣ ಕಾರ್ಯವನ್ನು ಮಾಡಲಾರಂಭಿಸಿದಾರೆಂದು ಬೊಂಬಾಯಿನ ಪತ್ರಿ ಕೆಯೊಂದು ಹೇಳುವದು. ಜಾತಿಯ ತಾರತಮ್ಯವಿಷಯದ ಅವರು ಆಗಾ ಗ್ಗೆ ಒಂದು ಕಡೆ ಸೇರಿ ಸಹಪಂಕ್ತಿ ಭೋಜನಮಾಡುತ್ತಾರೆಂತಲೂ, ತಮ್ಮ ಹೆಣ್ಣು ಮಕ್ಕಳಿಗೆ ಬಾಲ್ಯವಿವಾಹ ಮಾಡುವದನ್ನು ವರ್ಜ ಮಾಡಿಬಿಟ್ಟರೆಂತಲೂ, ಅವರಿಗೆ ಇಂಗ್ಲಿಷ್, ಕನಡ, ಮರಾಠಿ, ಮುಂ ತಾದ ಭಾಷೆಗಳನ್ನೂ ಹೊಲಿಗೆ, ಚಿತ್ರ ಬರೆವುದು, ಸಂಗೀತ ಮೊದಲಾ ದುವುಗಳನ್ನೂ ಕಲಿಸುತ್ತಿದಾರೆಂತಲೂ ತಿಳಿಸುಬಂದಿದೆ.

****

ಪೂನಾ ಡಿಸ್ಟ್ರಿಕ್ಟಿನಲ್ಲಿ ಖೇಡ್ ತಾಲ್ಲೂಕಿಗೆ ಸೇರಿದ ಘೋಂಡಾ ಎಂಬೂರಿನಲ್ಲಿ ಮೋತಿ ಶೇಟ್ ಡೋಂಗಾರ್ ಎಂಬೊಬ್ಬ ಕೋಟ್ಯಾ ಧೀಶ್ವರನಿರುವನು. ಇವನ ಹಿರಿಯರು ೨೦೦ ವರುಷಗಳಿಂದ ಆ ಗ್ರಾ ಮದಲ್ಲಿದ್ದುಕೊಂಡು, ಸಾಲ ಕೊಡುವ ಉದ್ಯೋಗ ನಡಸುತ್ತಿದ್ದರು. ಇವನೂ ಲೇವಾದೇವಿ ನಡಸುತ್ತಿದಾನೆ. ಈ ಸಾಹುಕಾರನು ಸುಮಾ ರು ಎರಡು ವರುಷಗಳಿಂದೀಚೆಗೆ ಅಂತರಂಗದಲ್ಲೇ ಖೋಟಾ ನಾಣ್ಯ ಗಳನ್ನು ತಯಾರುಮಾಡುತ್ತಾ, ಖೇಡ್ ತಾಲ್ಲೂಕಿನ ಖಜಾನೆಗೆ ಕೊ ಟ್ಟು ಮೋಸ ಮಾಡುತ್ತಿದ್ದನೆಂದು ಈಗ ಅವನ ಮೇಲೆ ಮೊಕದ್ದಮೆ ಬಂದಿವೆ ಸರ್ಕಾರದವರು ಅವನನ್ನು ದಸ್ತಗಿರಿಮಾಡಿ, ತನಿಖೆ ನಡಸು ತ್ತಾ ಬಂದಿದಾರೆ. ಈ ಮೊಕದ್ದಮೆಯನ್ನು ಪೂನಾ ಪಟ್ಟಣದ ಸೆಷನ್ ಸ್ ಜಡ್ಜರು ದರ್ಯಾಫ್ತಿ ಮಾಡುತ್ತಾರೆ.

****

ಹೈದರಾಬಾದಿನಲ್ಲಿ ನವಾಬ್ ಜಫರ್ ಜಂಗ್ ಬಹದೂರ್ ಯವ ರ ಸೆಕ್ರೆಟರೀಯಾಗಿದ್ದ ನಾರಾಯಣರಾಯನೆಂಬುವನು ಬೊಂಬಾ ಯಿನ ನ್ಯಾಷನಲ್ ಬ್ಯಾಂಕಿಗೆ ಸುಳ್ಳು ತಂತೀ ವರ್ತಮಾನಗಳನ್ನು ಕಳುಹಿಸಿದನೆಂದು ಮೊಕದ್ದಮೆ ಆಗಿ ದರ್ಯಾಫ್ತಿಯಲ್ಲಿ ಅವನ ಮೇಲೆ ಅಪರಾಧ ರುಜುವಾತಾಗಲಿಲ್ಲ. ಆದ್ದರಿಂದ ಅವನನ್ನು ಬಂ ಧನದಿಂದ ಬಿಟ್ಟುಬಿಟ್ಟರು. ಆದಾಗ್ಯೂ ಅಂಥಾ ಮನುಷ್ಯನು ತಮ್ಮ ಸಂಸ್ಥಾನದಲ್ಲಿ ಇರಕೂಡದೆಂದೂ ಅವನಿಗೆ ಗಡೀಪಾರು ಮಾಡಿದೆ ಎಂತಲೂ ಎರಡು ದಿನಗಳೊಳಗಾಗಿ ಅವನು ಆ ಸಂಸ್ಥಾನವನ್ನೇ ಬಿ ಟ್ಟು ಹೊರಕ್ಕೆ ಹೋಗಬೇಕೆಂದೂ ಹೈದರಾಬಾದ್ ಸಂಸ್ಥಾನದ ನೈ ಜಾಮರವರು ಆಜ್ಞೆಮಾಡಿದರು. ಅವನು ಅದೇ ಪ್ರಕಾರ ಆದರಂತೆ ಆ ಸಂಸ್ಥಾನದಿಂದ ಹೊರಟುಹೋದನು.

****

ಬೊಂಬಾಯಿ ಗವರ್ನರವರ ಮಂತ್ರಾಲೋಚನಾ ಸಭೆಯ ಮೆಂಬರಾಗಿ ನೇಮಿಸಲ್ಪಟ್ಟಿರುವ ಮಿ॥ ಮೂರ್ ಮ್ಯಾಕೆಂಜಿಯ ವರು ಕಳೆದವಾರ ಪೂನಾ ಪಟ್ಟಣದಲ್ಲಿ ಪತ್ನಿ ಸಹಿತ ಜೋಡು ಕು ದುರೆ ಗಾಡಿಯಲ್ಲಿ ಕುಳಿತು ಗಾಳಿಸವಾರಿ ಹೋಗುತ್ತಿರುವಾಗ ಎದು ರಿಗೆ ಮೋಟರ್ ಕಾರ್ ಎಂಬ ಸ್ವತಂತ್ರವಾಗಿ ಓಡತಕ್ಕ ಗಾಡಿಯು ಬಹು ವೇಗವಾಗಿ ಬಂದಿತು. ಎರಡು ಕುದುರೆಗಳೂ ಗಾಬರಿಬಿದ್ದು ಹತೋಟಿ ತಪ್ಪಿ ಗಾಡಿಯನ್ನು ಸ್ವೇಚ್ಛೆಯಾಗಿ ಎಳೆದುಕೊಂಡು ಹೋ ಗಿ ಒಂದು ಆಳವಾದ ಹಳ್ಳದೊಳಕ್ಕೆ ಕೆಡವಿದವು ಗಂಡಹೆಂಡರಿಬ್ಬ ರಿಗೂ ಮತ್ತು ಕುದುರೆಯವರಿಬ್ಬರಿಗೂ ಪೂರಾ ಪೆಟ್ಟು ತಗಲಿ ಗಾಯ ಗಳಾಗಿರುತ್ತವೆ. ಇವರಲ್ಲಿ ಯಾರು ಬದುಕುವರೋ ಇನ್ನೂ ಹೇಳ ಲಾಗದು. ಇವರೆಲ್ಲಾ ಸಧ್ಯ ಆಸ್ಪತ್ರೆಯಲ್ಲಿದ್ದುಕೊಂಡು ಚಿಕಿತ್ಸೆ ಹೊಂದುತ್ತಿದಾರೆ.

****

ಹುಬ್ಬಳಿಯಲ್ಲಿ ೨೦ ವರುಷದ ಫಕೀರವ್ವನೆಂಬೊಬ್ಬ ದೊಡ್ಡ ಹುಡುಗಿಯು ೪ ವರುಷದ ಗಂಗವ್ವನೆಂಬ ಹುಡುಗಿಯನ್ನು ಅಂಗ ಡಿಬೀದಿಯಿಂದ ಕರೆದುಕೊಂಡು ಊರ ಹೊರಕ್ಕೆ ಹೋಗಿ ಒಂದು ಬಾವಿಯ ಹತ್ತಿರ ನಿಲ್ಲಿಸಿಕೊಂಡು, ಆ ಹುಡುಗಿಯ ಕತ್ತಿನಲ್ಲಿದ್ದ ಸು ಮಾರು ೨೦ ರೂಪಾಯಿನ ತಾಳೀಸರವನ್ನು ಕಿತ್ತುಕೊಂಡಳು. ಮ ಗುವು ಅಳುವದಕ್ಕಾರಂಭಿಸಿತು. ಆಗ ಫಕೀರವ್ವನು ಆ ಮಗುವ ನ್ನು ಎತ್ತಿ ಬಾವಿಯೊಳಕ್ಕೆ ಹಾಕಿ ಕೊಂದುಬಿಟ್ಟಳು. ಸೆಷನ್ಸ್ ಜಡ್ಜರು ಧಾರವಾಡದಲ್ಲಿ ಅಪರಾಧಿಗೆ ಮರಣ ದಂಡನೆಯನ್ನು ವಿಧಿಸಿ ದರು. ಅದರ ಮೇಲೆ ಅವಳು ಬೊಂಬಾಯಿ ಹೈ ಕೋರ್ಟಿನಲ್ಲಿ ಅ ಪೀಲ್ ಮಾಡಿಕೊಂಡಳು. ಇಬ್ಬರು ಹೈ ಕೋರ್ಟ್ ಜಡ್ಜಿಗಳು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಅಪರಾಧಿಗೆ ಕೆಳಕೋ ರ್ಟಿನಲ್ಲಿ ವಿಧಿಸಿದ್ದ ಮರಣ ದಂಡನೆಯನ್ನೇ ಖಾಯಂ ಮಾಡಿದಾರೆ.

****

ಬಂಗಾಳಾ ಅಧಿಪತ್ಯದಲ್ಲಿ ಒಂದು ಭಾಗವನ್ನು ಅಸಾಮಿಗೆ ಸೇರಿಸಕೂಡದೆಂದು ಬಂಗಾಳಾದವರು ನಾನಾ ಪ್ರಯತ್ನಗಳನ್ನು ಮಾಡುತ್ತಿದಾರೆ. ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಮಿ॥ ಭವನ ಗರಿಯವರು ಗವರ್ನಮೆಂಟಿನವರ ಪಕ್ಷವಾಗಿ ಮಾತನಾಡಿದರೆಂಬು ದನ್ನು ಕೇಳಿ, ಬಂಗಾಳಿಯವರು ಅವರ ಚಿತ್ರವನ್ನು ಮಾಡಿಸಿ ತಂ ದು ದೊಡ್ಡ ಸಭೆ ಮಾಡಿ, ಆ ಸಭೆಯಲ್ಲಿ ಆ ಚಿತ್ರವನ್ನು ಸುಟ್ಟು ಹಾಕಿ, ತಮ್ಮ ಆಗ್ರಹವನ್ನೂ ಅಸಮಾಧಾನವನ್ನೂ ಪ್ರಕಾಶಪಡಿಸಿ ದರು. ವಿಲಾಯತಿಯಿಂದ ಬಂಗಾಳಕ್ಕೆ ಬರುವ ಸಾಮಾನುಗಳ ನ್ನು ಯಾರೂ ಕೊಂಡುಕೊಳ್ಳಕೂಡದೆಂದು ನಿರ್ಧರಮಾಡಿಕೊಂಡಿ ದಾರೆ. ಹೋದ ವರುಷ ೨೧,೦೭,೨೦೭ ರೂಪಾಯಿನ ವಿಲಾಯ ತಿಯ ಸಿಗರೆಟ್ಟುಗಳು ಬಂಗಾಳಾದಲ್ಲಿ ವಿಕರಿ ಆದವು ಈಗ ಯಾ ರೂ ಶೀಮೆಯ ಸಿಗರೆಟ್ಟನ್ನು ಕೊಂಡುಕೊಳ್ಳದೆ ಇರುತ್ತಾರೆ. ಇ ದೆಲ್ಲಾ ಎಷ್ಟು ದಿನ ನಡೆಯುವದೋ ನೋಡಬೇಕು.

****

ಅಹಮದಾಬಾದಿನಲ್ಲಿ ೧೪ ವರುಷದ ನಾನಿಬಾಯಿ ಎಂಬ ಹುಡು ಗಿಯು ತನ್ನ ಗಂಡನ ಹಿಂಸೆಯನ್ನು ತಡೆಯಲಾರದೆ ಅವನಿಗೆ ಒಂದು ದಿನ ಚಟ್ನಿಯಲ್ಲಿ ಗಾಜನ್ನು ಹಾಕಿ ಸಣ್ಣಗೆ ರುಬ್ಬಿ ಬಡಿಸಿದಳು. ಅವನು ತಿಂದು ಕಾಯಿಲೆ ಬಿದ್ದುಕೊಂಡನು. ಆಸ್ಪತ್ರೆಯಲ್ಲಿ ಅವ ನಿಗೆ ಔಷಧಿಕೊಟ್ಟು ವಾಂತಿಮಾಡಿಸಿ, ಅದನ್ನು ಪರೀಕ್ಷೆಮಾಡಿದಾಗ ಗಾಜಿನ ಚೂರುಗಳಿದ್ದುದು ಗೊತ್ತಾಯಿತು. ತರುವಾಯ ಅವಳನ್ನು ಹಿಡಿದು ದರ್ಯಾಫ್ತುಮಾಡಿದರು. ಸೆಷನ್ಸ್ ಜಡ್ಜರು ಅವಳ ಕೈಫಿ ಯತ್ತನ್ನೇ ತೆಗೆದುಕೊಳ್ಳದೇನು ಪಂಚಾಯತರ ಅಭಿಪ್ರಾಯವನ್ನು ಕೇಳದೇನೂ ಅವಳಿಗೆ ಮೂರು ವರುಷ [illegible] ವಿಧಿಸಿ ದರು. ಈಗ ಬೊಂಬಾಯಿ ಹೈ ಕೋರ್ಟಿನಲ್ಲಿ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಕೆಳಕೋರ್ಟಿನವರು ಕೊಟ್ಟಿದ್ದ ಶಿಕ್ಷೆಯನ್ನು ವಜಾಮಾಡಿ, ಅವಳನ್ನು ಖುಲಾಸ್ ಮಾಡು ವಂತೆ ಹುಕುಂ ಕೊಟ್ಟರು. ಅವಳು ಕಳೆದ ಆರುತಿಂಗಳಿಂದ ಜೈಲಿ ನಲ್ಲಿ ಇದ್ದುದೇ ಸಾಕಾಗಿದೆ ಎಂದು ಹೇಳಿ, ಮೊಕದ್ದಮೆಯನ್ನು ಪುನರ್ವಿಚಾರಣೆ ಮಾಡಿಸಲಿಲ್ಲ.

****

ತಿರುಚಿನಾಪಳ್ಳಿಯಲ್ಲಿ ಬಂಗಾರು ಎಂಬುವನನ್ನು ಅವನ ಮಗನಾದ ನಾಯನ ಎಂಬುವನು ಹಣಕೊಡೆಂದು ಕೇಳಿದ್ದಕ್ಕೆ ತಂದೆಮಕ್ಕಳಿಗೆ ಜಗಳವಾಯಿತು. ಮಗನು ಒನಕೆಯಿಂದ ತನ್ನ ತಂ ದೆಯನ್ನು ಹೊಡೆದನು ಅವನ ತಲೆ ಒಡೆದುಹೋಯಿತು. ಅವನು ೪ ದಿನಗಳ ತನಕ ಆಸ್ಪತ್ರೆಯಲ್ಲಿದ್ದು ಸತ್ತುಹೋದನು. ಪೋಲೀಸ್ ವಿಚಾರಣೆಯಲ್ಲಿ ಅವನ ಇಬ್ಬರು ಸಹೋದರಿಯರೂ ತಮ್ಮ ಅಣ್ಣ ನೇ ತಮ್ಮ ತಂದೆಯನ್ನು ಹೊಡೆದನೆಂದು ಹೇಳಿದರು ಸೆಷನ್ಸ್ ಕೋರ್ಟಿನಲ್ಲಿ ಅವರು ಆ ರೀತಿ ಹೇಳಲಿಲ್ಲ. ಆದರೂ ಸೆಷನ್ಸ್ ಜಡ್ಜರು ಆ ಮಗನ ಏಟಿನಿಂದಲೇ ತಂದೆ ಪ್ರಾಣಬಿಟ್ಟನೆಂದು ತೀ ರ್ಮಾನಿಸಿ, ಅವನಿಗೆ ಫಾಸಿಶಿಕ್ಷೆಯನ್ನು ವಿಧಿಸಿದರು. ತರುವಾಯ ಅಪ ರಾಧಿಯು ಮದರಾಸ್ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂ ಡನು ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಸಾರಾಂಶವನ್ನು ಕೇಳಿ, ಮಗನು ತಂದೆಯನ್ನು ಕೊಂದುದೇನೋ ಖಂಡಿತವಾಗಿ ದ್ದರೂ ಅವನಿಗೆ ತನ್ನ ತಂದೆಯನ್ನು ಕೊಲ್ಲಬೇಕೆಂಬ ಉದ್ದೇಶವಿ ರಲಿಲ್ಲವೆಂದು ತೀರ್ಮಾನಿಸಿ, ಅವನಿಗೆ ಫಾಸೀ ಶಿಕ್ಷೆಯನ್ನು ತಪ್ಪಿಸಿ, ಸಾಯುವ ತನಕ ಸಜಾ ಅನುಭವಿಸಬೇಕೆಂಬ ಶಿಕ್ಷೆಯನ್ನು ವಿಧಿಸಿ ದರು.

ತಾಲ್ಲೋಕು ವರ್ತಮಾನಗಳು.

ತರೀಕೆರೆ.—ಈ ಊರು ಮಲನಾಡಾದಾಗ್ಯೂ ಕಾಲಕ್ಕೆ ಸರಿ ಯಾಗಿ ಮಳೆಬಾರದೆ ಪ್ರಜೆಗಳಿಗೆ ಬಹಳ ಕಷ್ಟವನ್ನುಂಟುಮಾಡಿದೆ. ರೈತರು ಬಿತ್ತನೆಗಳನ್ನು ಹಾಕಿದ್ದರೂ ಮಳೆ ಯಾವಾಗ ಬರುತ್ತದೋ ಎಂದು ಆಕಾಶದ ಕಡೆಗೆ ದೃಷ್ಟಿಯನ್ನು ಇಟ್ಟಿದಾರೆ. ಕ್ಷಾಮ ತಲೆ ದೋರುತ್ತಲಿದೆ. ಧಾರಣೆಮಾಪುಗಳು ಬಹಳ ತಗ್ಗಿಗಿದೆ.—ಶಿವಮೊಗ್ಗ ಯಿಂದ ಕೂಡ್ಲಿ ಸ್ವಾಮಿಗಳವರು ತಮ್ಮ ಪರಿವಾರ ಸಹಿತ ಇಲ್ಲಿಗೆ ದಯಮಾಡಿಸಿ ಎರಡು ತಿಂಗಳಾಯಿತು. ಇವರು ಬ್ರಾಹ್ಮಣ ಸಂಗ

ದಕ್ಕೆ ಸೇರಿದ ಗುರುಗಳು ಇವರು ಇಲ್ಲಿಗೆ ದಯಮಾಡಿಸಿರುವ ಉದ್ದೇಶವು ತಮ್ಮ ಮಠಸ್ಥರಿಂದ ಕಾಣಿಕೆ ವಸೂಲ್ಮಾಡುವದಕ್ಕಾಗಿಯೇ ಎಂದು ತೋರುತ್ತೆ. ಕೊಡದೆ ಇದ್ದರೆ ಪೋಸ್ಟು ಮೂಲಕ ನೋಟೀಸು ಕಳುಹಿಸುತ್ತಾರೆಂತಲೂ ಅವರನ್ನು ಸ್ವಾಮಿಗಳ ಬಳಿಗೆ ಎಳಕೊಂಡುಹೋಗುತ್ತಾರೆಂತಲೂ ವರ್ತಮಾನ ಕೇಳುತ್ತೇನೆ. ಈಗ್ಯೆ ಎರಡು ವಾರಗಳ ಕೆಳಗೆ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ರವರ ಸವಾರಿಯು ಇಲ್ಲಿಗೆ ದಯಮಾಡಿಸಿತ್ತು. ಆಗ ಮದರಾಸ್ ಕಡೆಯಿಂದ ಮೈಸೂರು ಅರಮನೆಯ ಭಕ್ಷಿ ನೀಡ ವಿದ್ವಾಂಸರಾದ ಮ॥ ಸುಬ್ಬಣ್ಣನವರು ಇಲ್ಲಿಗೆ ಬಂದು, ಎರಡು ದಿನ ಇಲ್ಲಿನ ಮ॥ ಕಾಳ್ಗಸಾಮಿ ಪಿಳ್ಳೆಯವರ ಮನೆಯಲ್ಲಿ ವೀಣಾಗಾನವನ್ನು ಮಾಡಿ, ಎಲ್ಲರ ಮನಸ್ಸನ್ನು ಸಂತೋಷಪಡಿಸಿದರು.

ತಿಪ್ಟೂರು.—ದೇವರ ದಯದಿಂದ ೧೯ನೇ ತಾರೀಖು ಶನಿವಾರ ಬಹಳ ೩॥ ಅಂಗುಲ ಮಳೆ ಆಯಿತು. ಹಿಂದಿನ ಕೆಲವು ಬೆಳೆಗಳು ಕೆಟ್ಟುಹೋದವು. ಉಳಿದ ಬೆಳೆಗಳು ಬದುಕುತ್ತವೆಂದು ಇದ್ದಷ್ಟಕ್ಕೇ ಸಂತೋಷಪಡುತ್ತಿದಾರೆ.—ಶಿವಪ್ಪ ಶಾಸ್ತ್ರಿಗಳು ಭಕ್ತಿಯ ವಿಷಯವಾಗಿ ಒಂದು ಕಥೆಯನ್ನು ಸಾಹುಕಾರ್ ಮ॥ ಮಾಸ್ತರ್ ರಾಮಯ್ಯನವರ ಮನೆಯಲ್ಲಿ ನಡಿಸಿ, ಪ್ರೋತ್ಸಾಹಕರಾದ ಬಾಳಾಜಿ ರಾಯರು, ಸಭಾಪತಿಪಿಳ್ಳೆಯವರು, ಸಿದ್ದಬಸಪ್ಪನವರೇ ಮುಂತಾದ ಸಭಾಸದರಿಗೆ ಸಂತೋಷಪಡಿಸಿದರೆಂದು ತಿಳಿಯಿತು.—ನಾಟಕದ ಪ್ರಾಕ್ಟಿಸ್ ಮ್ಯಾನೇಜರ್ ಗುಬ್ಬಿ ಸಂಜೀವಯ್ಯನವರೂ, ಶಿವಪ್ಪ ಶಾಸ್ತ್ರಿಗಳೂ ನಾಟಕದ ಆ ದಿನರಿಗೆ ಹೆಚ್ಚಿನ ಸಂತೋಷಪಡಿಸಿದರೆಂದು ತಿಳಿಯಿತು.—ಬ್ರಹ್ಮಚಾರಿಗಳಾದ ಇಬ್ಬರು ಕ್ರೈಸ್ತರು ಹೇಳಿದ್ದೇನೆಂದರೆ—ನಾವು ಮಾರಿಕಣಿವೆಯಿಂದ ಹೊರಟು, ೧ಳಿಯೂರಿಗೆ ಬರುವಾಗ ಮಧ್ಯೆ ಒಂದು ಭಾವಿ ಬಳಿ ಊಟಕ್ಕೆ ಕೂತೆವು. ಆಗ ಕಾದುರೆ ಕಣಿವೆ ಸ್ಟೇಷನ್ನಿನ ಇಬ್ಬರು ಪೋಲೀಸಿನವರು ನಮ್ಮ ಬಳಿಗೆ ಬಂದು, ನೀವು ಯಾವ ಮತದವರು ಎಂದು ಕೇಳಲು, ಅಯ್ಯಾ ನಾವು ಕ್ರೈಸ್ತರು ಅನ್ನಲು, ಹಾಗಂದರೆ ಪಾದ್ರಿಗಳು ತಾನೇ, ತಿರಿಗಿ ಆ ಭಾವಿ ನೀರನ್ನು ಮುಟ್ಟಕೂಡದೆಂದು ಹೇಳಿ, ನಮ್ಮ ಅನ್ನವನ್ನೆಲ್ಲಾ ಬಿಸಾಡಿ, ಎಂಬಲು ಕೈಯಿಂದಲೇ ನಮ್ಮನ್ನು ಕರೆದುಕೊಂಡು, ನೀವು ಕಳ್ಳರೂ ಬನ್ನೆನಳ್ಳಿಯವರೂ ಎಂದು ಬಹಳವಾಗಿ ಹೊಡೆದು ಬೈದು, ಬಾಳೆಯಾರ್ ಸ್ಟೇಷನ್ನಿಗೆ ಪೈದು, ಅಲ್ಲಿಯೂ ಹಿಂಸೆಗಳನ್ನು ಮಾಡಿ, ಒಂದೊಂದು ರೂಪಾಯಿ ಕೊಟ್ಟರೆ ಬಿಡುತ್ತೇವೆ ಅಂದರು. ಅದಕ್ಕೆ ನಾವು—ಅಯ್ಯಾ, ಕೊಂಚ ದುಡ್ಡು ಮಾತ್ರ ನಮ್ಮ ಖರ್ಚಿಗಿತ್ತು, ಈಗ ಏನೂ ಇಲ್ಲ ಅಂದೆವು ಆಗ ಅವರು ನಮ್ಮ ಕೈಗಳಿಗೆ ಕೋಳವನ್ನು ಹಾಕಿ, ಲಾಕಪ್‌ನಲ್ಲಿಟ್ಟದ್ದು, ಪೋಲೀಸ್ ಪಹರೆ ಮೇಲೆ ಈಗ ತಿಪ್ಟೂರಿಗೆ ಕಳುಹಿಸಿರುತ್ತಾರೆ. ಎರಡು ದಿನಗಳಿಂದಲೂ ನಮಗೆ ಅನ್ನವಿಲ್ಲ. ಇದೆಂಥಾ ಅನ್ಯಾಯವೆಂದು ಗೋಳಾಡುತ್ತಾ, ಗ್ಯಾಂಗ್ ಮೂಲಕ ತುಮಕೂರಿಗೆ ಹೊರಟರು ಅಲ್ಲಿಯ ಅಧಿಕಾರಿಗಳಲ್ಲಿ ಗೇವರು ಕನಿಕರ ತೋರಿಸದೆ ಇರಲಾರರು.

ಚಿತ್ರದುರ್ಗ.—ಮಳೆಯ ಸೂಚನೆಗಳಿಲ್ಲ. ಬಿಸಿಲು ಆಗಾಗ್ಯೆ ಚನ್ನಾಗಿ ಕಾಯುತ್ತಲೇ ಇರುತ್ತೆ ತಾ. ೧೩ರಲ್ಲಿ ಮಾತ್ರ ೪೦ ಸೆಂಟ್ಸ್ ಮಳೆ ಆಯಿತು. ಸಂತೆಯಲ್ಲಿ ಧಾರಣೆ ಹೆಚ್ಚುತ್ತಲೇ ಹೋಗುತ್ತಿದೆ. ಜೋಳ ರೂಪಾಯಿಗೆ ೨೪—೨೨ ಸೇರು, ರಾಗಿ ೨೨ ಸೇರು, ಅಕ್ಕಿ ೮—೯ ಸೇರಿಗೆ ಬಂದಿದೆ. ಹೀಗೆ ಮಳೆ ಹೋಗುವ ಭಾಗದಲ್ಲಿ ಬಡವರು ಜೀವಿಸುವದು ಕಷ್ಟವಾಗುವದು. ಧಾನ್ಯಗಳಲ್ಲಿ ೧೦ಕ್ಕೆ ೪ ಸೇರು ಕಲ್ಲು ಮಿಶ್ರಮಾಡುವರು. ಸಂತೆಗಳಲ್ಲಿ ತೂಕದ ಕಲ್ಲು ಮತ್ತು ಅಳತೆ ಸೇರುಗಳನ್ನು ಕಡಿಮೆಯಾದವುಗಳನ್ನು ಇಡುವರು. ಈ ದುಷ್ಕೃತ್ಯಗಳನ್ನು ನಿಲ್ಲಿಸುವದಕ್ಕೆ ಪೋಲೀಸಿನವರು ನಿಗಾಕೊಡುವದು ಒಳ್ಳೇದು.—ಈಗ ಹೊಸದಾಗಿ ಬಂದಿರುವ ವೈಸ್ ಪ್ರೆಸಿಡೆಂಟರು ಪ್ರತಿನಿತ್ಯವೂ ಗಲ್ಲಿಗಳನ್ನು ನೋಡುತ್ತಾರಾದ್ದರಿಂದ ಅವು ಶುಚಿಯಾಗಿರುತ್ತವೆ. ಸುಮಾರು ೧೩ ಕನ್ಸರ್ವೆನ್ಸಿ ರೋಡುಗಳನ್ನು ಮಾಡುತ್ತಾರೆಂತ ಕೇಳುತ್ತೇವೆ. ಗುಡ್ಡದ ಸಾಲಿನ ಮನೆಗಳ ಹಿಂಭಾಗದಲ್ಲಿ ಜಾಗು ಇಳಿದು ವಾಸಕ್ಕೆ ಅನಾನುಕೂಲವಾಗುವದು. ತಮಂಗು ಹೊಡೆದು ಇದನ್ನು ತಪ್ಪಿಸಿದರೆ ಎಷ್ಟೋ ಉಪಕಾರವಾಗುವದು. ಲಾಂದ್ರಗಳು ಮೊದಲಿಗಿಂತ ಈಗ ಕಡಿಮೆ ಮಾಡಿದ್ದಾರೆಂಬುದಾಗಿ ತಿಳಿಯಬಂತು. ಕಾರಣವೇನೋ ತಿಳಿಯದು. ಕೆಲವು ನಲ್ಲಿಗಳ ಬೀರುಟೆಗಳು ಒಡೆದು, ಆಗಾಗ್ಯೆ ಸೋರುತ್ತಲೇ ಇರುತ್ತವೆ, ೧—೨ ದಿವಸಗಳಾದರೂ ಸರಿಮಾಡುವವರು ಬರುವದಿಲ್ಲ. ಕೆಲವು ನಲ್ಲಿಗಳ ಹತ್ತಿರ ಮಾತ್ರ ಜನಗಳು ಬಟ್ಟೆ ಒಗೆದು ನೀರು ತುಂಬುವವರಿಗೆ ಅನಾನುಕೂಲಮಾಡುತ್ತಾರೆ. ಇದರ ಉಸ್ತುವಾರಿಗೆ ಒಬ್ಬ ಜವಾನನಿದ್ದರೆ ಇಂಥಾದ್ದಕ್ಕೆ ಅವಕಾಶವಾಗುವದಿಲ್ಲ.—ಸಾಹುಕಾರ್ ವಿಬಂಧವಾಗಿ ಕೆಲವರು ನಾನಾ ಸುದ್ದಿಯನ್ನು ಹುಟ್ಟಿಸುತ್ತಾ ಇರುವರು. ಡಾಕ್ಟರುಗಳು ಹೇಳಿದ ವಿನಹ ಯಾರೂ ನಂಬಕೂಡದಲ್ಲವೇ?—ಹೊಸ ಆಫೀಸರುಗಳು ಬಂದರೆ ಇಳಿದುಕೊಳ್ಳುವದಕ್ಕೆ ಪ್ರತ್ಯೇಕವಾದ ಛತ್ರ ಇರುವದು ಒಳ್ಳೇದು. ಪೂರ್ಣಯ್ಯನವರ ಛತ್ರವನ್ನು ೧—೨ ತಿಂಗಳಗಟ್ಟಲೆ ಯಾದರೂ ಬಿಡುವದಿಲ್ಲ. ಪರಸ್ಥಳದವರು ಭಾವಿ ದಡದಲ್ಲಿ ಮತ್ತು ಮರದ ಕೆಳಗೆ ಇದ್ದು ಹೋಗುತ್ತಿರುವದನ್ನು ಈಗ ೧೪ ದಿವಸದಿಂದಲೂ ನೋಡುತ್ತಲೇ ಇದೇವೆ ಈ ಬಡಪ್ರಯಾಣಿಕರನ್ನು ಕೇಳುವವರು ಯಾರು?—ಮ॥ ವಕೀಲ್ ರಂಗಾರಾಯರವರ ಮನೆಯಲ್ಲಿ ಹೋದವಾರ ಕಳುವಾಗಿ ಸುಮಾರು ೭೦—೩೦ ರೂ ಮಾಲುಹೋಯಿತು ಎಂತ ಹೇಳುತ್ತಾರೆ. ಬಹಿರಂಗವಾದ ಸ್ಥಳದಲ್ಲೇ ಹೀಗಾದರೆ ಸಂದು ಗೊಂದುಗಳಲ್ಲಿ ತುಂಬಾ ಎಚ್ಚರವಾಗಿರಬೇಕಾಯಿತು. ಸೆಷನ್ ಕೋರ್ಟು ಬಂದು ೨ ವಾರಗಳಾದವು. ಈ ದಫ ೪ ಮೊಕದ್ದಮೆಗಳಿವೆ. ಅಸೆಸರುಗಳು ಬಹಳ ಜಾಗ್ರತೆಯಾಗಿ ಹಾಜರಾಗುತ್ತಾ ಇರುವರು. ಹೋದ ಸಾರಿ ೧—೨ ಜನರಿಗೆ ಜುಲ್ಮಾನೆಯಾದದ್ದು ಯಾರೂ ಮರೆಯಲಿಲ್ಲ. ಸೀರೆಯನ್ನು ಕಲಪಿಸುವದರಲ್ಲಿ ಮೋಸ ಪಡಿಸಿದ್ದ ರಾಜಾರಾಯನಿಗೆ ೪೦ ದಿನಗಳ ಸಜಾ ಆಯಿತು. ದಾವಣಗೆರೆ ದೊಂಬಿ ಮೊಕದ್ದಮೆಯನ್ನು ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಕಳುಹಿಸಿರುತ್ತಾರೆಂಬುದಾಗಿ ತಿಳಿದಿದೆ.

ಚಿಕ್ಕಮಗಳೂರು.—ಮಳೆ ಸಾಕಾದಷ್ಟು ಬರಲಿಲ್ಲ. ಗಿಡ್ಡರಾಗಿ ಪೈರು ಕೆಲವು ಕಡೆಯಾಗಿದೆ. ಕಾಳು ಬಲಿಯುವದಕ್ಕೆ ಮಾರ್ಗವಿಲ್ಲ. ಒಂದು ಹದ ಒಳ್ಳೇ ಮಳೆಯಾದರೆ ಕೆಲವು ದಿನಗಳಲ್ಲಿ ರಾಗಿ ಕಟಾವಾಗಬಹುದು. ಮೋಡವಾದರೋ ಯಾವಾಗಲೂ ಮುಚ್ಚಿಕೊಂಡು ಈಗಲೋ ಆಗಲೋ ಸಾಕಾದಷ್ಟು ಮಳೆ ಬರುತ್ತದೆಂಬ ನಿರೀಕ್ಷೆಯನ್ನೇ ಹುಟ್ಟಿಸುತ್ತಲಿದೆ. ಮಳೆ ಕಮ್ಮಿಯಾದ ಹಾಗೆಲ್ಲಾ ದಿನಸಿಗಳ ಧಾರಣೆಯು ಏರುತ್ತಲಿದೆ.—ನಮ್ಮ ಟೌನಿಗೆ ನೀರು ಸಪ್ಲೈ ಆಗುತ್ತಿರುವ ಕೆರೆಯಲ್ಲಿ ಬೇಕಾದಷ್ಟು ನೀರು ಇಲ್ಲದೆ ಇರುವದರಿಂದ ನಲ್ಲಿಗಳಲ್ಲಿ ಬೆಳಿಗ್ಗೆ ೧೦ ಗಂಟೆಯ ವರಿಗೆ ಮಾತ್ರ ನೀರನ್ನು ಬಿಟ್ಟು ನಂತರ ನಿಲ್ಲಿಸಿ ಸಾಯಂಕಾಲ ೪ ಗಂಟೆಯಿಂದ ಮತ್ತೆ ಬಿಡುವರು ಇದರಿಂದ ನೀರಿನ ವಿಷಯ ಸ್ವಲ್ಪ ತೊಂದರೆ ಎಂತಲೇ ಹೇಳಬೇಕಾಗಿದೆ.—ನಮ್ಮ ಡೆಪ್ಯುಟಿ ಕಮಿಷನರು ಕೊಪ್ಪ, ಎಡೇಹಳ್ಳಿ ಕಡೆ ಸರ್ಕೀಟಿನಲ್ಲಿಯೇ ಇದಾರೆ. ಇದೇ ತಿಂಗಳು ೩ ನೆ ತಾ. ಸೋಮವಾರ ಮಧ್ಯಾಹ್ನ ಈ ಊರಿನ ಅಂಡಾ ಛತ್ರದ ಒಂದು ಕೊಠಡಿಯಲ್ಲಿ ಅಕ್ಕಸಾಲಿಗರ ಕೇಮಮ್ಮನೆಂಬ ಸುಮಾರು ೨೪ ವರುಷ ವಯಸ್ಸಿನ ವಿಧವೆಯು ಗಂಡು ಕೂಸನ್ನು ಹೆತ್ತು ಅದನ್ನು ಭೂಮಿಯಲ್ಲಿ ಹಾಕಿ ಅದರ ಮೇಲೆ ಮೊರವನ್ನು ಮುಚ್ಚಿ ಹೋಗಿದ್ದಳು. ಸದರಿ ಕೂಸು ಅಳುವದನ್ನು ಪಕ್ಕದ ಕೊಠಡಿಯಲ್ಲಿದ್ದ ಫಕೀರ ಹೆಂಗಸೊಬ್ಬಳು ಕೇಳಿ ಅದನ್ನು ಉಪಚಾರಮಾಡುವದರೊಳಗಾಗಿ ಬೀಟಿನಲ್ಲಿದ್ದ ಕಾನ್ಸ್ಟೆಬಲ್ ತಿಳಿದು, ಸ್ಟೇಷನಿಗೆ ರಿಪೋರ್ಟು ಮಾಡಿದ್ದರ ಮೇಲೆ ಜಮಾದಾರರೂ ಇನ್ಸ್ಪೆಕ್ಟರೂ ಸೂಪರೇಂಟರೂ ಹೋಗಿ ನೋಡಿ, ಆ ಕೂಸನ್ನು ಡಾಕ್ಟರ ಬಳಿಗೆ ಕಳುಹಿಸಿದರು. ಅದು ಮೂರು ದಿನ ಇದ್ದು ಸತ್ತುಹೋಯಿತು. ಇತ್ತಲಾಗಿ ಆ ಹೆಂಗಸು ಮಾತ್ರ ಪತ್ತೆ ಆಗಿರಲಿಲ್ಲ. ಅನಂತರ ಪೋಲೀಸಿನವರು ಕೃತ್ಯನಡಿಸಿದ ಆಸಾಮಿಯನ್ನು ಪತ್ತೆಮಾಡಿಸಿ ಡಿಸು ಕೋರ್ಟು ಕಚೇರಿಗಳ ದರ್ಶನಮಾಡಿಸಿ, ಮುಂದಿನ ಸೆಷನ್ ವಿಚಾರಣೆಗೆ ಗುರಿಮಾಡಿದಾರೆ ಈಕೆಯು ಶಿವಮೊಗ್ಗೆಯಿಂದ ಈ ಊರಿಗೆ ಬಂದು ಎರಡು ತಿಂಗಳಾದಂತೆಯೂ ಮಗುವನ್ನು ಹೆತ್ತು ವಾಪಸುಹೋಗುವವಳಾಗಿದ್ದಂತೆಯೂ ಕಾಣುವದು.—ಇಲ್ಲಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿದ್ದ ಮ॥ ಸಿ. ಎ ನಂಜಪ್ಪನವರೂ ಅವರ ಅಸಿಸ್ಟೆಂಟರಾಗಿದ್ದ ಮ॥ ಅನಂತರಾಮಯ್ಯಂಗಾರ್ರೂ ಏಕ ಕಾಲದಲ್ಲಿಯೇ ಈ ಸ್ಥಳವನ್ನು ಬಿಟ್ಟು ಬೆಂಗಳೂರಿಗೂ ಸಕಲೇಶಪುರಕ್ಕೂ ವರ್ಗವಾದ ಸಮಾಚಾರವನ್ನು ಕೇಳಿ ಇಲ್ಲಿನ ಯುರೋಪಿಯರ್ ಮತ್ತು ದೇಶೀಯ ಜನರಿಗೆಲ್ಲಾ ತುಂಬಾ ವ್ಯಸನವಾಯಿತು ಈ ದೊಡ್ಡ ಮನುಷ್ಯರಿಬ್ಬರೂ ಸರಳ ಒಳ್ಳೇವರೂ ಉಪಕಾರಿಗಳೂ ಬಡಬಗ್ಗರಿಗೆ ತುಂಬಾ ಸಹಾಯಕರೂ ರೋಗಿಷ್ಟರ ವಿಷಯದಲ್ಲಿ ತುಂಬಾ ನಿಗಾ ಇಟ್ಟು ನೋಡಿಕೊಳ್ಳುವವರೂ ಆಗಿದ್ದು, ಬಹು ಜನರ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು ಇಲ್ಲಿನ ಆಸ್ಪತ್ರೆಗಳ ಕಾಂಪೌಂಡರುಗಳೂ ಮಿಡ್ವೈಫುಗಳೂ ಸೇರಿ ಹಾರ ತುರಾಯಿ ಸಹಿತ ಬ್ಯಾಂಡ್ ಮಾಡಿಸಿಕೊಂಡು ಹಗಲುಬತ್ತಿ ಮಹತಾಪು ಹಚ್ಚಿಸಿಕೊಂಡು ಹೋಗಿ ಅವರವರ ಬಂಗಲೆಗಳಲ್ಲಿ ಅವರಿಗೆ ಹಾರ ತುರಾಯಿಗಳನ್ನೊಪ್ಪಿಸಿ ಬಂದರು. ಇಲ್ಲಿನ ಆಸ್ಪಿಟಲ್ ಅಸಿಸ್ಟೆಂಟರೆಲ್ಲಾ ಸೇರಿ ಸಾಂಡ್ರರ್ಸ್ ವಾರ್ಡಿನಲ್ಲಿ ಅವರಿಗೂ ಅವರ ಜೊತೆಯಲ್ಲಿ ಯೂರೋಪಿಯರ್ ಮತ್ತು ದೇಶೀಯ ದೊಡ್ಡ ಮನುಷ್ಯರಿಗೂ ಫಲಹಾರಗಳನ್ನು ಕೊಟ್ಟು ನಮ್ಮ ಕೃತಜ್ಞತೆಯನ್ನು ತೋರಿಸಿದರು ಇದಕ್ಕೆ ಬದಲಾಗಿ ಮ॥ ನಂಜಪ್ಪನವರು ತಮ್ಮ ಅಧಿಕಾರಕ್ಕೊಳಪಟ್ಟ ನೌಕರರಿಗೆಲ್ಲಾ ಆಸ್ಪತ್ರೆಯಲ್ಲಿಯೂ ಇತರ ದೊಡ್ಡ ಮನುಷ್ಯರಿಗೆಲ್ಲಾ ಕ್ಲಬ್ಬಿನಲ್ಲಿಯೂ ಔತಣಮಾಡಿಸಿದರೆಂದೂ ೨೦ನೇ ತಾ ಆದಿತ್ಯವಾರ ಸಾಯಂಕಾಲ ಇಲ್ಲಿನ ಯೂರೋಪಿಯರ್ ಕ್ಲಬ್ಬಿನಲ್ಲಿ ಇಪ್ಪತ್ತು ಜನ ಯುರೋಪಿಯರ್ರಿಗೆ ಔತಣವನ್ನು ಮಾಡಿಸುತ್ತಾರೆಂದೂ ವರ್ತಮಾನವಿದೆ.

ತೀರ್ಥಹಳ್ಳಿ.—ಈ ಸಾರಿ ಮಲ್ನಾಡಿನಲ್ಲಿ ಸಹ ಸರಿಯಾದ ಮಳೆ ಆಗಿಲ್ಲ. ಪ್ರತಿಯೊಂದು ಮಳೆಯೂ ಕಡಿಮೆ ಎಂದು ರೈತರು ಗೋಳಾಡುತ್ತಿದಾರೆ. ಅಡಿಕೆ ಫಸಲಂತು ತೀರಾ ಕೊರತೆಯಾಗಿದೆ. ಕೆಲವು ಸಮಯಗಳಲ್ಲಿ ಮಳೆಗಾಲವು ಬೇಸಿಗೆ ಕಾಲಕ್ಕೆ ಸಮವಾಗಿದೆ ಹೀಗಾದರೆ ಮುಂದೆ ರೈತರ ಕಷ್ಟ ಹೇಳತೀರದು. ಇಲ್ಲಿನ ಮಿಷನುಕೇರಿ ರಸ್ತೆ ಮತ್ತು ಪಕ್ಕದ ರಸ್ತೆಗಳನ್ನು ದುರಸು ಮಾಡಿಸಿದ್ದರಿಂದ ವೈಸ್ ಪ್ರೆಸಿಡೆಂಟರು ಜನಗಳಿಗೆ ಉಪಕಾರ ಮಾಡಿದಂತಾಯ್ತು - ಇಲ್ಲಿನ ಗಂಧದ ಕೋಠಿಯಲ್ಲಿ ಪ್ರತಿ ವರ್ಷವೂ ಆದಾಯ ಹೆಚ್ಚುತ್ತಲೇ ಬರುತ್ತಿದೆ. ಇಷ್ಟೆಲ್ಲಾ ಅಭಿವೃದ್ಧಿ ಸ್ಥಿತಿಯಲ್ಲಿರುವದು ನೋಡಿದರೆ ಕೋಠಿ ನರೋಗರ ಚಮತ್ಕಾರವೂ ರೇಂಜರ ಶ್ರಮವೂ ಎಂದು ತಿಳಿದುಬರುತ್ತದೆ.—ಬುಧವಾರ ಅರಗದ ಪ್ರಾಂತ್ಯದಿಂದ ಲಿಂಗೇಗೌಡರೆಂಬ ಒಬ್ಬ ದೊಡ್ಡ ಮನುಷ್ಯರನ್ನು ೧೦—೧೨ ಜನರು ಡೋಲಿಯಲ್ಲಿ ಹೊತ್ತುಕೊಂಡು ಆಸ್ಪತ್ರೆಗೆ ತಂದರು. ಇವರಿಗೆ ಕಳ್ಳರ ಪೆಟ್ಟುಗಳಿಂದ ಬಹಳ ಜಖಂ ಆಗಿದೆ. ಆಸ್ಪತ್ರೆ ಅಸಿಸ್ಟೆಂಟರು ಬಹು ಪ್ರಯಾಸದಿಂದ ಚಿಕಿತ್ಸೆ ಮಾಡುತ್ತಿದಾರೆ.—ಇಲ್ಲಿನ ರಂಗಾರೆಯವರು ಸೇರಿ ಬುಧವಾರದ ದಿನ ತಮ್ಮ ಕಾಮನ ನೋರವಣಿಗೆ ಉತ್ಸವಮಾಡಿಕೊಂಡರು. ಕೆಲವರು ಮೊದಲು ಆಟಕಾವು ಮಾಡಿದ್ದರಿಂದ ಮೇಲ್ಕಂಡ ಜನಗಳು ಡೆಪ್ಯುಟಿ ಕಮಿಷನರಲ್ಲಿ ಹೋಗಿ ಅರ್ಜಿ ಕೊಟ್ಟು ಹುಕುಂಪಡಕೊಂಡು ಕಾರ್ಯ ನೆರವೇರಿಸಿಕೊಂಡರು. ಮ್ಯುನಿಸಿಪಲ್ ರಸ್ತೆಗಳೂ ಲಾಂದ್ರಗಳೂ ಹಾಳಾಗುತ್ತಾ ಇವೆ.—ಶಿವಮೊಗ್ಗೆಯಿಂದ ಆಗುಂಬೆ ತನಕ ಓಡುವ ರನ್ನರುಗಳನ್ನು ತೆಗೆದು ಹಾಕಿ ಪೋಸ್ಟನ್ನು ಜಟ್ಕಾ ಕಂಟ್ರಾಕ್ಟರಿಗೆ ಕೊಡುತ್ತಾರೆಂದು ಬಲವಾದ ವರ್ತಮಾನವಿದೆ ಹೀಗಾದರೆ ೮—೧೦ ನೌಕರರಿಗೆ ಸಂಬಳ ನಿಂತುಹೋಗಿ ಜೀವನಕ್ಕೆ ತೊಂದರೆಯಾಗುವದು.—ಇಲ್ಲಿನ ಮಾರ್ವಾಡಿಗಳಲ್ಲಿ ಒಬ್ಬರಿಗೂ ರಾಮಚಂದ್ರಯ್ಯ ಎಂಬುವರಿಗೂ ಬಾಕಿ ವಸೂಲ್‌ಮಾಡುವ ವಿಷಯದಲ್ಲಿ ಕರೋ ಪಾಕ್ಕಿಗಳು ನಡೆದವೆಂತಲೂ, ನಂತರ ರಾಮಚಂದ್ರಯ್ಯನವರು ಮೊದಲು ಹೋಗಿ ಅಮಲ್ದಾರರಲ್ಲಿ ಅರ್ಜಿ ಕೊಟ್ಟು ಅದೇ ದಿನ ವಾರಂಟ್ ಸಹ ಕೊಡಿಸಿದರೆಂದೂ, ನಂತರ ಜಾಮೀನಿನ ಮೇಲೆ ಬಿಟ್ಟರೆಂದೂ ವರ್ತಮಾನವಿತ್ತು. ಅಷ್ಟರಲ್ಲಿ ರಾಮಚಂದ್ರಯ್ಯನವರು ಬಾಕಿ ತಂದುಕೊಟ್ಟು, ರಾಜಿಮಾಡಿಸಿಕೊಂಡು ಹೋದರಂತೆ.—ಈ ಮಲ್ನಾಡಿನಲ್ಲಿ ದಿನಸಿಗಳ ಧಾರಣೆಯು ಈ ವರುಷ ವಿಪರೀತ ಹೆಚ್ಚಿಹೋಗಿದೆ ಬಡಬಗ್ಗರು ಬರೀ ಗಂಜಿಗೂ ಎಷ್ಟೋ ಕಷ್ಟಪಡಬೇಕಾಗಿದೆ ಕೆಲವು ಸರಕುಗಳಿಗೆ ಸುಂಕವನ್ನಾದರೂ ವಜಾ ಮಾಡಿದರೆ ವರ್ತಕರು ಜನಗಳಿಗೆ ಸ್ವಲ್ಪ ಸುಲಭ ಕ್ರಯಕ್ಕೆ ದಿನಸಿಗಳನ್ನು ಕೊಟ್ಟಾರು. ಸರ್ಕಾರದವರು ಹ್ಯಾಗೂ ಕೆಲವು ಮಾಲುಗಳಿಗಾದರೂ ಈ ಸಣ್ಣ ಊರಿನಲ್ಲಿ ಸುಂಕ ವಜಾಮಾಡ್ಯಾರೆಂದು ನಂಬಿದೇವೆ.—ಹಳ್ಳಿ ಗ್ರಾಮಗಳ ಅನೇಕ ಜನರು ರೋಗ ನಿವಾರಣೆಗೋಸ್ಕರ ಬೇರೆ ಬೇರೆ ಸ್ಥಳಗಳಿಂದ ಬಂದು ಔಷಧಗಳನ್ನು ನೂರಾರು ರೂಪಾಯಿಗಳಿಗೆ ತರಿಸುತ್ತಿದ್ದರು ಈಗ ಅಂಥಾ ಔಷಧಗಳಲ್ಲಿ ಪ್ರಸಿದ್ಧವಾದ ಆಯುರ್ವೇದ ಔಷಧದ ಕಂಪನಿಯ ಏಜೆಂಟರು ಬಂದು ಇಲ್ಲಿನ ಬಂಗ್ಲೆಕೇರಿಯ ಮುಸಾಫರ್ ಛತ್ರದ ಹತ್ತಿರ ಒಂದು ಮನೆಯಲ್ಲಿ ಔಷಧಗಳನ್ನು ಬಿಕರಿ ಮಾಡುತ್ತಾರೆ.—ಎ[illegible]ಹಳ್ಳಿಯ ಮುನ್ಸಿಫ್ ಕೋರ್ಟನ್ನು ತರೀಕೆರೆಗಾಗಲಿ ತೀರ್ಥಹಳ್ಳಿಗಾಗಲಿ ಹಾಕಬೇಕೆಂದು ಗವರ್ನಮೆಂಟಿನವರು ಯೋಚಿಸುತ್ತಿದಾರೆ. ಈ ಪ್ರಾಂತ್ಯದಿಂದ ಅನೇಕರು ಮಹಾರಾಜರವರಿಗೆ ಅರ್ಜಿ ಬರೆದುಕೊಂಡಿದಾರೆ ಈ ಕೋರ್ಟನ್ನು ತೀರ್ಥಹಳ್ಳಿಯಲ್ಲಿ ಇಡುವದು ಬಹು ಅಗತ್ಯವಾಗಿಯೂ ಕಕ್ಷಿಗಾರರಿಗೆ ಬಹು ಅನುಕೂಲವಾಗಿಯೂ ಇದೆ. ಈಗ ಆಗುಂಬೆಯಿಂದ ೫೬ ಮೈಲಿ ದೂರ ಮೊಗ್ಗೆಗೆ ಹೋಗಬೇಕಾಗಿದೆ ಬಹಳ ಇಷ್ಟು ಪ್ರಯಾಸ ಇರುವುದು ಮತ್ತೆಲ್ಲಿಯೂ ಇರಲಾರದು ಇದುವರಿಗೂ ಇತ್ತಕಡೆ ಜನರು ಬಹು ಕಷ್ಟಪಟ್ಟಿದಾರೆ ಈಗಲಾದರೂ ಗವರ್ನಮೆಂಟಿನವರು ತೀರ್ಥಹಳ್ಳಿಯಲ್ಲಿ ಮುನ್ಸಿಫ್ ಕೋರ್ಟು ಇಡುವುದು ಸರ್ಕಾರಕ್ಕೆ ತುಂಬಾ ಫಾಯದೆಯೂ ಜನಗಳಿಗೆ ಕಷ್ಟನಿವಾರಣೆಯೂ ಆಗುವದು.

ತುಮಕೂರು.—ಒಂದು ವಾರದಿಂದೀಚೆಗೆ ೩—೪ ಹದ ಒಳ್ಳೆ ಮಳೆಯಾದ್ದರಿಂದ ಧಾರಣೆವಾಸಿಯು ತಗ್ಗಿದೆ ಹಿಂದೆಯೇ ಹೊಲಗಳನ್ನು ಉತ್ತುಬಿತ್ತಿದ್ದ ಅನೇಕರ ಪೈರುಗಳು ನಾಶವಾದ್ದರಿಂದ ಅನೇಕರು ಪುನಹ ಉತ್ತು ಬಿತ್ತಿದಾರೆ. ಮೂಗು ಪ್ರಾಣಿ ಕಾಡಿಯವುದಕ್ಕೆ ನೀರಿಲ್ಲದೆ ಇದ್ದದ್ದರಿಂದ ಸಂಕಟವು ಸಹ ಹೋಗಿದೆ.—ಈ ಟವ್ನ್ ನಿವಾಸಿಗಳು ಅವರವರ ಮನೆಗಳಿಗೆ ಬಂದು ಇನ್ನೂ ೬—೮ ತಿಂಗಳುಗಳಾಗಲಿಲ್ಲವಾದರೂ ಆಗಲೇ ಅ ಮೂಷಕಗಳ ಮರಣವಾರ್ತೆಯನ್ನು ಕೇಳಿ ತುಂಬಾ ಗಾಬರಿ ತ್ತಿದಾರೆ.—ಮಂಡಿಪೇಟೆಯಲ್ಲಿ ಹೋಗುತ್ತಿದ್ದ ಎರಡು ವರ್ತ ಗಳ ವಿಷಯಕ್ಕಾಗಿ ಇಬ್ಬರು ವರ್ತಕರಿಗೆ ಮಾತುಗಳು ನಡೆದ ಲೂ ಪಬ್ಲಿಕ್ ಕಲಹ ಮಾಡಿದರೆಂತಲೂ ಇನ್ನು ಮುಂತಾದ ಕಾ ಗಳನ್ನು ಸೇರಿಸಿಕೊಂಡು ಪೋಲೀಸಿನವರು ಬಂದು ಮೊಕದ್ದ ಮಾಡಿ, ತಾಲ್ಲೂಕು ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಫಿ ದು ಮಾಡಿರುವುದಾಗಿಯೂ ಮ್ಯಾಜಿಸ್ಟ್ರೇಟರು ಅಪರಾಧಿ (ವರ್ತಕರ) ಮೇಲೆ ಛಾರ್ಜು ಮಾಡಿರುತ್ತಾರೆಂತಲೂ ಕೇಳುತ್ತೇನೆ. ಇಂಥಾ ಮೊಕದ್ದಮೆಗಳೆಷ್ಟೋ ಮಂಡಿಪೇಟೆಯಲ್ಲಿ ನಡೆ ತ್ತಲೇ ಇರುವವು ಅಂದರೆ ಗಾಡಿಗಳು ಬಂದರೆ ಪ್ರತಿಯೊಬ್ಬ ಕರೂ ತಮ್ಮ ತಮ್ಮ ಮಂಡಿಗಳಿಗೆ ಗಾಡಿಯವರನ್ನು ಕರೆಯು ವದು ಸ್ವಾಭಾವಿಕವಾದದ್ದಾಗಿರುತ್ತೆ ಈ ಮಂಡಿ ಪೇಟೆಯು ಟವ್ನಿಗೆ ಮಧ್ಯರಾಷ್ಟ್ರವಾಗಿರುತ್ತೆ ಬಹು ಚಿಕ್ಕದಾದ ರಸ್ತೆ ಇರುತ್ತೆ. ಇಲ್ಲಿಗೆ ಗಾಡಿಗಳು ಬಂದರೆ ಗಲಾಟೆ ಹೆಚ್ಚಾಗುತ್ತೆ ವ ಅನುಭವದಿಂದಲೇ ಹಿಂದೆ ಇದ್ದ ಡೆಪ್ಟಿ ಕಮಿಷನರ್ ಮ॥ ಯಣರಾಯರು ಆ ಸ್ಥಳವನ್ನು ತಪ್ಪಿಸಬೇಕೆಂದು ಬೇರೆ ಸ್ಥಳ ಏರ್ಪಡಿಸಿದ್ದರು. ಆದರೆ ಈಚೆಗೆ ದಕ್ಷಿಣ ಬಡಾವಣೆಯಿಂದ ಸ್ಥಳವು ಊರಿಗೆ ಮಧ್ಯವಾಗಿ ಸೇರಿ ಹೋಯಿತು ಅದಕಾರಣ ಇರುವ ಮಂಡಿ ಪೇಟೆಯೇ ಈ ವರಿವಿಗೂ ಸ್ಥಿರವಾಗಿ ನಿ ಕಾರಣವಾಗಿದೆ. ಈ ಟವ್ನಿಗೆ ಪೂರ್ವದಲ್ಲಿ ಅಲ್ಲಾಸಾಬರಗೊ ಬಳಿ ದಂಡಿನ ಬೀಳೆಂಬುವ ಅತಿ ವಿಶಾಲವಾದ ಮೈದಾನವಿದೆ ಮಂಡಿಗಳನ್ನು ಕಟ್ಟಲು ಏರ್ಪಾಡು ಮಾಡಿದರೆ ಗಾಡಿ ಬಂದು ಇಳಿಯಲು ಛತ್ರಗಳೂ ಇವೆ ನೀರಿಗೆ ಅನುಕೂ ತೆಯೂ ಇದೆ. ಇಲ್ಲಿಂದ ಗೂಡ್ಸು ಗಾಡಿಗಳನ್ನು ಸಾಗಿಸಲು ಹಳ್ಳಿ ಗೇಟಿಗೆ ಒಂದು ರಸ್ತೆಯನ್ನು ಮಾಡಿಸಿದರೆ ಎತ್ತುಗಳ ಟವೂ ತಪ್ಪುತ್ತೆ. ರೈಲ್ವೆಯವರು ಗೂಡ್ಸು ಷೆಡ್ಡುಗಳನ್ನು ಇಲ್ಲಿ ಡುವುದರಿಂದ ಅವರಿಗೂ ವಿಶೇಷ ಗಲಾಟೆಗೆ ಅವಕಾಶವಿರು ಪ್ರತಿ ವರ್ಷವೂ ಪ್ಲೇಗ್ ರೋಗವು ಬಾರದಂತೆ ಅದ್ದಿಯೂ ತ್ತೆ.—ಹಾಲಿ ಇರುವ ತಾಲ್ಲೂಕ್ ಆಫೀಸನ್ನು ಬಾಲಿಕಾ ಪಾ ಗೆ ಬಿಟ್ಟುಕೊಡಬೇಕೆಂತಲೂ ತಾಲ್ಲೂಕ್ ಆಫೀಸಿಗೋಸ್ಕರ ಕಟ್ಟಡವನ್ನು ಕಟ್ಟಬೇಕೆಂಬುವದಾಗಿಯೂ ಏರ್ಪಾಡು ನಡೆ ದೆ ಎಂದು ಕೇಳುತ್ತೇನೆ. ಇದು ಬಂದಕ್ಕೊಂದಕ್ಕೆ ಪ್ರ ವಾದ ಏರ್ಪಾಡಾಗಿರುತ್ತೆ. ಹ್ಯಾಗಂದರೆ ತಾಲ್ಲೂಕ್ ಆಫೀ ರಿಜಿಸ್ಟ್ರೇಷನ್ ಇಲಾಖೆಯೂ ಪೋಲೀಸ್ ಆಫೀಸೂ, ಜೈಲೂ ತಾದ ಅನೇಕ ಆಫೀಸುಗಳಿರುತ್ತವೆ. ಈ ಕಚೇರಿ ಇರುವ ಬಹಳ ಅನುಕೂಲವಾದದ್ದಾಗಿರುತ್ತೆ. ಕೆರೆಯೂ ಆಸ್ಪ ಕಕ್ಷಿಗಾರರೂ ಪ್ರಯಾಣಸ್ಥರೂ ಕೂಡುಕೊಳ್ಳಲು ಮರಗ ಇರುವುದರಿಂದ ಇಂಥಾ ಸ್ಥಳವು ಮತ್ತೆಲ್ಲಿಯೂ ಇರ

ಸ್ಕೂಲಿಗೋಸ್ಕರ ಈ ಕಟ್ಟಡವನ್ನು ಉಪಯೋಗಿಸುವವಾದರೆ ವಿದ್ಯಾರ್ಥಿಗಳು ಬರುವುದಕ್ಕೆ ಬಹಳ ದೂರವಾಗುವುದರಿಂದಲೂ ಕೆರೆಯು ಸಮೀಪವಾಗಿರುವುದರಿಂದ ಅಪಾಯಕ್ಕೆ ಗುರಿಯಾಗಬಹುದಾಗಿರುವುದರಿಂದಲೂ ಅನೇಕ ಕಟ್ಟಡಗಳು ಹಾಗೇ ಉಳಿದುಹೋಗುವುದರಿಂದಲೂ ಈ ಏರ್ಪಾಡು ಸಮಂಜಸವಾಗಿರುವಂತೆ ತೋರುವುದಿಲ್ಲ.—ಸರ್ಕಾರಿ ನೌಕರಿ ಏನೋ ತಪ್ಪಿಹೋದದ್ದು ಬಹಳ ಜನಗಳಿಗೆ ತುಂಬಾ ತೊಂದರೆಯಾಗಿದೆ. ಊರ ಹೊರಗೆ ಪ್ಲೇಗ್ ಕಾಲದಲ್ಲಿ ಹೋದ ಬಿಡಾರಗಳು ವಾಸಕ್ಕೆ ಅನುಕೂಲವಿಲ್ಲದೆ ತುಂಬಾ ಪೇಚಾಡುತ್ತಿದ್ದಾರೆ.—ಇಲ್ಲಿಗೆ ಬಂದಿರುವ ಡಾಕ್ಟರ್ ಮತ್ತು ಸ್ವಾಮಿಯವರು ದರಿದ್ರರ್ ಐಶ್ವರ್ಯವಂತರೆಂಬುವ ಪಕ್ಷಪಾತವನ್ನಿಡದೆ, ಮನೆ ಮನೆಗೂ ಹೋಗಿ ರೋಗಿಗಳನ್ನು ಪರಾಮರಿಸುತ್ತಾ, ಅನೇಕ ಮಕ್ಕಳುಮರಿಗಳನ್ನು ಗುಣಪಡಿಸುತ್ತಾ ಬಂದಿರುತ್ತಾರೆ. ಇಂಥಾವರು ಈ ಡಿಸ್ಟ್ರಿಕ್ಟಿಗೆ ಅನೇಕ ಕಾಲಗಳಿಂದಲೂ ಬಂದಿರಲಿಲ್ಲವೆಂದು ಹೇಳುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಇವರು ಇಲ್ಲಿಗೆ ಹಂಗಾಮಿ ತರೀಖಾಗಿ ಬಂದಿರುತ್ತಾರೆಂತಲೂ ಇವರನ್ನೇ ಇಲ್ಲಿಗೆ ಖಾಯಂ ಆಗಿ ನೇಮಿಸಬೇಕೆಂತಲೂ ಅನೇಕ ಜನರು ಶ್ರೀರ ಸೀನಿಯರ್ ಸರ್ಜನ್ರವರಿಗೆ ಅರ್ಜಿ ಬರೆದುಕೊಳ್ಳುವ ಯೋಚನೆಯಲ್ಲಿರುತ್ತಾರೆ. ಸದರಿ ಪ್ರಜೆಗಳ ಅಭಿಪ್ರಾಯದಂತೆ ಸರ್ಕಾರದವರು ನಡಸಿಕೊಡುವರೆಂದು ನಂಬುತ್ತೇನೆ.

ಸೊರಬ.—ಈ ತಾಲ್ಲೂಕಿನಲ್ಲಿ ಸುಮಾರು ೩—೪ ವರ್ಷದಿಂದ ಅಮಲ್ದಾರರಾಗಿರುವ ಮೆ॥ ಕೃಷ್ಣಪ್ಪಯ್ಯನವರು ಪಕ್ಷಪಾತವಿಲ್ಲದೆ ಕೆಲಸಮಾಡಿಕೊಂಡು ಬರುವದು ಶ್ಲಾಘನೀಯವಾಗಿದೆ. ಇವರಿಗೆ ಈ ಕಾಲದಲ್ಲಿ ಪತ್ನಿಯರ ವಿಯೋಗ ವ್ಯಸನವು ಪ್ರಾಪ್ತವಾದ್ದಕ್ಕೆ ನಾವೆಲ್ಲರೂ ವಿಷಾದಿಸುತ್ತೇವೆ. ಈ ವ್ಯಸನ ನಿವಾರಣೆಗಾಗಿ ೨ ತಿಂಗಳು ಪ್ರಿವಿಲೆಜ್ ರಜಾ ತೆಗೆದುಕೊಂಡ ಕಾಲದಲ್ಲಿ ಇವರ ಆಕ್ಟಿಂಗ್ ಆಗಿ ಬಂದಿದ್ದ ಶಿವಮೊಗ್ಗ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಮೆ॥ ಸಿ. ನಾರಾಯಣರಾಯರನ್ನು ಎಷ್ಟು ಸ್ತೋತ್ರಮಾಡಿದರೂ ಕಡಿಮೆಯಾಗಿದೆ. ಇವರು ಚಿಕ್ಕವಯಸ್ಸಿನವರಾಗಿಯೂ ಒಳ್ಳೆ ವಿದ್ಯಾವಂತರಾಗಿಯೂ ದೊಡ್ಡ ಅಧಿಕಾರವಿದ್ದಾಗ್ಯೂ ಅಲ್ಪತಾಬೇದಾರರು ಪ್ರಜೆಗಳನ್ನು ನೋಡಿ ಧಿಕ್ಕರಿಸದೆ ಬಹು ಸಮಾಧಾನದಿಂದ ಸಂಗತಿ ವಿಚಾರಿಸಿ, ಕೆಲಸಮಾಡಿಕೊಂಡು ಸ್ವಲ್ಪಕಾಲದಲ್ಲಿಯೇ ಒಳ್ಳೇ ಹೆಸರು ತೆಗೆದುಕೊಂಡಿರುವದು ಸ್ತೋತ್ರಾರ್ಹವಾಗಿದೆ.—ಈ ತಾಲ್ಲೂಕಿನ ಆಸ್ಪಟಲ್ ಅಸಿಸ್ಟೆಂಟ್ ಮೆ॥ ವಿದ್ವತ್ ಶಿರೋಮಣಿ ಪಿಳ್ಳೆಯವರು ತಮ್ಮ ಸ್ವಂತ ಕೆಲಸಕ್ಕೋಸ್ಕರ ೩ ತಿಂಗಳು ಪ್ರಿವಿಲೆಜ್ ರಜಾ ತೆಗೆದುಕೊಂಡು ತಮ್ಮ ದೇಶಕ್ಕೆ ಪ್ರಯಾಣಮಾಡಿದ ಕಾಲದಲ್ಲಿ ಅವರ ಬದಲಿಗೆ ಬಂದ ಮೆ॥ ಫ್ರಾನ್ಸಿಸ್ ಪಿಳ್ಳೆ ಎಂಬ ಡಾಕ್ಟರವರು ಇಲ್ಲಿಗೆ ಹೊಸಬರಾಗಿದ್ದಾಗ್ಯೂ ಮೆ॥ ವಿದ್ವತ್ ಶಿರೋಮಣಿ ಪಿಳ್ಳೆಯವರಂತೆಯೇ ಎಲ್ಲಾ ಜನಗಳಲ್ಲಿಯೂ ಪ್ರೀತಿ ವಿಶ್ವಾಸವನ್ನು ಇಟ್ಟುಕೊಂಡು, ಕೆಲಸಮಾಡುತ್ತಾ ಇದ್ದು ಕಳೆದ ವಾರ ತಮ್ಮ ಕೆಲಸದ ಮೇಲೆ ಪುನಃ ಶಿವಮೊಗ್ಗಕ್ಕೆ ಹೋದರು.—ಈ ಊರಿಗೆ ಸರ್ಕಾರಿ ಸ್ಕೂಲಿಗೆ ಆಗಿಬಂದ ಮಿಸಸ್ ಮೇರಿಡೆಸಸ್ ಎಂಬುವವರು ಕಳೆದ ೧। ವರುಷದಿಂದಲೂ ಎಲ್ಲಾ ಜನಗಳಲ್ಲಿಯೂ ಪ್ರೀತಿಯುಳ್ಳವರಾಗಿ ಹೆರಿಗೆಗಳನ್ನು ನಡಸಿಕೊಂಡು ಬರುವದು ಸಮಸ್ತ ಜನಗಳಿಗೂ ಸಂತೋಷಕರವಾಗಿದೆ. ಇವರು ಈ ತಾಲ್ಲೂಕಿನ ಕೆಲವು ಗ್ರಾಮಗಳಿಗೂ ಸಾಗರ ಮತ್ತು ಶಿಕಾರಿಪುರಕ್ಕೂ ಹೋಗಿ ತಮ್ಮ ಶಕ್ತಿಮೀರಿ ಹೆರಿಗೆಗಳನ್ನು ಮಾಡಿಕೊಂಡು ಬಂದದ್ದು ಕೊಂಡಾಡತಕ್ಕದ್ದಾಗಿದೆ.—ಕಳೆದ ವರ್ಷದಲ್ಲಿ ಮೈಸೂರು ಸೀಮೆ ರೆವಿನ್ಯೂ ಕಮಿಷನರ್ ಸಾಹೇಬರವರು ಸೊರಬಕ್ಕೆ ಚಿತ್ತೈಸಿದಾಗ್ಯೆ ಈ ಊರ ದೊಡ್ಡಮನುಷ್ಯರುಗಳ ಅಭಿಪ್ರಾಯಕ್ಕೂ ಅವರ ಕೆಲಸ ಚಾತುರ್ಯಕ್ಕೂ ಸಂತೋಷಿಸಿ, ಒಳ್ಳೆ ರಿಪೋರ್ಟು ಬರೆದದ್ದು ಸಂತೋಷಕರವಾಗಿದೆ.—ಈ ತಾಲ್ಲೂಕಿನ ಶಿರಸ್ತೇದಾರ್ ಮೆ॥ [illegible]ರಾಯರಿಗೆ ಸಾರ್ವೀಸು ಗತಿಸಿ ಪೆನ್ಷನ್ ಹೊಂದಿದರು. ಅವರ ಬದಲಿಗೆ ಬಂದ ಮೆ॥ ಎಚ್. ಹನುಮಂತರಾಯರು ಚಾರ್ಜು ವಹಿಸಿದ ೧ ತಿಂಗಳಲ್ಲಿಯೇ ತಾಲ್ಲೂಕಿನ ನೌಕರರು ಪ್ರಜೆಗಳಲ್ಲಿ ಬಹು ಸ್ನೇಹದಿಂದ ಕೆಲಸಮಾಡಿಕೊಂಡು ಬರುವದು ಸರ್ವರಿಗೂ ಸಂತೋಷವಾಗಿದೆ.—ಈ ತಾಲ್ಲೂಕಿನ ವ್ಯಾಕ್ಸಿನೇಟರ್ ಅಬ್ದುಲ್‌ಗಫೂರ್ ಸಾಹೇಬರಿಗೆ ೬—೭ ತಿಂಗಳಿಂದಲೂ ಇಲ್ಲಿಯ ಎಸರ್ಕಲ್ ಇನ್ಸ್‌ಪೆಕ್ಟರಿಗೂ ೨ ತಿಂಗಳಿಂದಲೂ ಸಂಬಳ ಬಂದಿಲ್ಲವೆಂಬ ಸಮಾಚಾರ ಕೇಳಿ, ತುಂಬಾ ಆಶ್ಚರ್ಯವಾಗುತ್ತೆ. ವರಸ್ಥಳದಿಂದ ಈ ಬಡನೌಕರರಿಗೆ ಈ ರೀತಿ ಆದಲ್ಲಿ ಅವರ ಕುಟುಂಬ ಸಂರಕ್ಷಣೆ ಯಾವರೀತಿ ಮಾಡಬೇಕೋ. ಸಾಹುಕಾರರು ಜಿನಸು ವಗೈರೆಗಳನ್ನು ೧ ತಿಂಗಳು ಕಡವಾಗಿ ಕೊಟ್ಟು, ಮಾಹೆ ಆಖೈರಿಗೆ ಸರಿಯಾಗಿ ಕೊಡದೆ ಹೋದರೆ ಜಿನಸು ಕೊಡುವದನ್ನು ಮುನ್ನಾ ಮಾಡುತ್ತಾರೆ. ಸದರಿಯವರು ಯಾವರೀತಿ ಜೀವನಮಾಡಬೇಕೆಂಬುವದನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ಗಮನಕ್ಕೆ ಬರತಕ್ಕ ಸಂಗತಿಯಾಗಿದೆ.—ಸೊರಬ ತಾಲ್ಲೂಕು ತತ್ತೂರಲ್ಲಿ ತಾಯಿ, ಮಗಳು ೨ ಜನ ಹೆಂಗಸರು ಭಾವಿಗೆ ಬಿದ್ದು ಪ್ರಾಣಹತ್ಯ ಮಾಡಿಕೊಂಡಿರುವದು ಬಹಳ ದುಃಖಕರ. ಈ ಸಮಾಚಾರ ಕೇಳಿ ಪೋಲೀಸ್ ಇನ್ಸ್‌ಪೆಕ್ಟರು ಸ್ಥಳಕ್ಕೆ ಹೋಗಿದ್ದಾಗಿ ಸಮಾಚಾರ ಕೇಳುತ್ತೇನೆ.—ಇಲ್ಲಿಗೆ ಸಬ್ ರಿಜಿಸ್ಟ್ರಾರು ಬಂದ ಈಚೆಗೆ ಜನರಿಗೆ ರಿಜಿಸ್ಟರ್ ಆಫೀಸು ಅದೇ ದಿನವೇ ಖಾವತಿ ಆಗುವದೆಂದು ಕೇಳಿ ತುಂಬಾ ಸಂತೋಷಿಸುತ್ತೇನೆ.—ಈ ಪ್ರಾಂತ್ಯ ಬಿತ್ತುವದಕ್ಕೆ ಹದವಾಗಿದ್ದರೂ ಈವರಿಗೂ ಸರಿಯಾದ ಮಳೆ ಇಲ್ಲದೆ ಜನಗಳೆಲ್ಲಾ ಆಕಾಶವನ್ನೇ ನೋಡುತ್ತಾರೆ. ಜಿನಸಿ ಧಾರಣೆ ಧಡಾವು ಆಗಿದೆ. ಬಡನೌಕರ ಮತ್ತು ಬಡಪ್ರಜೆಗಳ ವ್ಯಸನವು ಅಪಾರವಾದ್ದಾಗಿದೆ.—ಈ ವರ್ಷದ ಮಳೆಕಾಲದ ಸ್ಥಿತಿಯನ್ನು ನೋಡುವಲ್ಲಿ ಮುಂದೆ ಕ್ಷಾಮ ಬರುವಂತೆ ಅಪ್ಪಬೇಕಾಗಿದೆ. ಈಗಾಗಲೇ ಜನಗಳೆಲ್ಲಾ ಬಹು ಭಯಗ್ರಸ್ತರಾಗಿ, ಹಗಲಿರುಳೂ ಭಗವಂತನನ್ನು ಸ್ತೋತ್ರ ಮಾಡುತ್ತಿದ್ದಾರೆ.—ಇಂಥಾದ್ದರಲ್ಲಿ ಈ ತಾಲ್ಲೂಕಿನ ಸುತ್ತುಮುತ್ತು ಗ್ರಾಮಗಳಲ್ಲಿ ವಾಂತಿಭೇದಿ ಉಪದ್ರ ಪ್ರಬಲವಾಗಿ ಜನಗಳನ್ನು ಕೊಲ್ಲುತ್ತಿರುವದು ದುಃಖಕರವಾಗಿದೆ. ಮೆ॥ ವಿದ್ವತ್ ಶಿರೋಮಣಿ ಪಿಳ್ಳೆಯವರು ಆಯಾ ಗ್ರಾಮಗಳಿಗೆ ಈ ಮಳೆಗಾಲದ ಕೆಸರಿನಲ್ಲಿ ಸ್ವಲ್ಪವೂ ಬೇಸರವಿಲ್ಲದೆ ಹೋಗಿ ರೋಗಿಗಳಿಗೆ ಚಿಕಿತ್ಸೆಮಾಡಿ ಬರುವದು ಶ್ಲಾಘನೀಯವಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಓರಿಯಂಟಲ್ ಲೈಬ್ರರಿ ಕ್ಯೂರೆಟರ್ ಮೆ॥ ಎ. ಮಹದೇವಶಾಸ್ತ್ರಿಯವರಿಗೆ ಆಗೇಷ್ಟು ೪ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಪುರಾಭಿವೃದ್ಧಿಗಾಗಿ ಏರ್ಪಟ್ಟ ಟ್ರಸ್ಟ್ ಬೋರ್ಡಿನ ಛೇರ್ಮನ್ರಾದ ಮೆ॥ ಶ್ರೀ ಸೀತಾರಾಮರಾಯರಿಗೆ ಆಗೇಷ್ಟು ೨೧ರ ಲಾಗಾಯತು ಎರಡು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅದೇ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ಜೆ. ಇ. ಎ. ಡಿಕ್ರೂಸ್‌ಯವರು ತಮ್ಮ ಇತರ ಕೆಲಸಗಳೊಂದಿಗೆ ಛೇರ್ಮನ್ರ ಆಫೀಸ್ ಛಾರ್ಜನ್ನೂ ವಹಿಸತಕ್ಕದ್ದು.

ಕಳೆದ ಜನವರಿ ೩ರಲ್ಲಿ ಮೆ॥ ಎಂ. ಕಾಂತರಾಜೇ ಅರಸಿನವರಿಗೆ ಕೊಟ್ಟಿದ್ದ ರಜವನ್ನು ಇನ್ನೂ ಆರು ತಿಂಗಳಿಗೆ ಜಾಸ್ತಿಮಾಡಿದೆ. ಈ ರಜಾ ಕಾಲದಲ್ಲಿ ಅವರಿಗೆ ತಲಬು ಇಲ್ಲ.

ಮೆ॥ ಜೆ. ಎಸ್. ಡೇವಿಡ್‌ಯವರನ್ನು ಜುಲೈ ೪ರ ಲಾಗಾಯತು ಅ॥ ಸರ್ಜನ್ರ ದರ್ಜೆಯಲ್ಲಿ ೪ರಿಂದ ೩ನೆ ತರಗತಿಗೆ ಬಡ್ತಿಮಾಡಿದೆ.

ಮೆ॥ ಮಹಮ್ಮದ ಅನ್ವರ್‌ಯವರನ್ನು ಜುಲೈ ೪ರ ಲಾಗಾಯತು ಅ॥ ಸರ್ಜನ್ರ ದರ್ಜೆಯಲ್ಲಿ ೪ರಿಂದ ೩ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮೆ॥ ಟಿ. ವಿ. ಕುಪ್ಪುಸ್ವಾಮಿ ಮೊದಲಿಯಾರ್ರನ್ನು ಜೂನ್ ೨೮ರ ಲಾಗಾಯತು ಅ॥ ಸರ್ಜನ್ರ ದರ್ಜೆಯಲ್ಲಿ ೧ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಚಿತ್ರದುರ್ಗದ ಮುನ್ಸಿಫ್ ಮೆ॥ ಎಸ್. ಕೃಷ್ಣರಾಯರನ್ನು ಅಲ್ಲಿನ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯ ಮೇಲ್ವಿಚಾರಣಾ ಕಮಿಟಿಯ ಮೆಂಬರಾಗಿ ನೇಮಿಸಿದೆ.

ಮೆ॥ ಜೆ. ಕ್ಲಾಫಂರವರು ಪೆನ್ಷನ್ ಪಡೆದು ಕೆಲಸದಿಂದ ನಿವೃತ್ತರಾದುದರಿಂದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ಸೂಪರಿಂಟೆಂಡೆಂಟ್ ಮೆ॥ ಬಿ. ಬಸವಾರಾಧ್ಯರನ್ನು ಮೈಸೂರು ಛೀಫ್ ಕೋರ್ಟಿನ ಡಿಪ್ಟಿ ರಿಜಿಸ್ಟ್ರಾರ್ ಕೆಲಸಕ್ಕೆ ಛೀಫ್ ಕೋರ್ಟಿನವರು ನೇಮಿಸಿಕೊಂಡಿರುವುದನ್ನು ಗವರ್ನಮೆಂಟಿನವರು ಒಪ್ಪಿ ಮಂಜೂರು ಮಾಡಿದಾರೆ.

ಮುಂದೆ ಹೇಳುವ ಅಮಲ್ದಾರರುಗಳ ಬಡ್ತಿ ಹುಕುಂ ಆಗಿದೆ—ಮೆ॥ ಜಿ. ಆರ್. ಶ್ರೀನಿವಾಸಯ್ಯಂಗಾರ್ರು—೩ ರಿಂದ ೨ನೇ ಕ್ಲಾಸಿಗೆ, ಮೆ॥ ಎನ್. ಗೋಪಾಲಕೃಷ್ಣಯ್ಯಂಗಾರ್ರು, ಮತ್ತು ಆರ್. ನಾನಾಸಾಮಿರಾಯರು—೪ ರಿಂದ ೩ನೇ ತರಗತಿಗೆ.

ಮುಂದೆ ಹೇಳುವ ಸಬ್ ಪ್ರೊಬೆಷನರಿ ಅಮಲ್ದಾರರನ್ನು ಖಾಯಂ ಮಾಡಿದೆ.—ಮೆ॥ ಗಳಾದ ಬಿ. ಎನ್. ಚನ್ನಿಗಪ್ಪನವರು, ಸಿ. ಆರ್. ನಾರಾಯಣಸ್ವಾಮಿ ಮೊದಲಿಯಾರ್ರು, ಕೆ. ಕೇಶವಾಚಾರ್ರು, ಬಿ. ಜಗನ್ನಾಥರಾಯರು, ಮೊಹದೀನ್ ಷರೀಫ್ರು, ಷೇಕ್ ಅಬ್ದುಲ್ಲಾಯವರು, ಕೆ. ಹನುಮಂತರಾಯರು, ಗುಲಾಂ ಮಹಮದ್ ಮೆಕ್ಕಿಯವರು, ಜೆ. ನಾರಾಯಣರಾಯರು (ಡಿಪ್ಟಿ ಅಮಲ್ದಾರ್ ಆರ್. ರಾಮರಾಯರನ್ನು ಶೃಂಗೇರಿ ಜಹಗೀರಿಗೆ ವರ್ಗಮಾಡಿದೆ).

ಕಡೂರ್ ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮತ್ತು ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಟಿ. ಚೊಕ್ಕಣ್ಣನವರಿಗೆ ಅವರು ದರ್ಯಾಫ್ತಿ ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಕೈಫಿಯತ್ತನ್ನು ಇಂಗ್ಲಿಷಿನಲ್ಲಿ ಸ್ವಹಸ್ತ ಬರೆದುಕೊಳ್ಳುವ ಅಧಿಕಾರಕೊಟ್ಟಿದೆ.

ಕಡೂರ್ ಡಿಸ್ಟ್ರಿಕ್ಟ್ ಆಕ್ಟಿಂಗ್ ಎಕ್‌ಸ್ಟ್ರಾ ಅ॥ ಕಮಿಷನರ್ ಮತ್ತು ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ॥ ಕೆ. ಮೈಲಾರಿರಾಯರಿಗೆ ಅವರು ದರ್ಯಾಫ್ತಿಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಕೈಫಿಯತ್ತನ್ನು ಇಂಗ್ಲಿಷಿನಲ್ಲಿ ಸ್ವಹಸ್ತ ಬರೆದುಕೊಳ್ಳುವ ಅಧಿಕಾರ ಕೊಟ್ಟಿದೆ.

ಹಾಸನ್ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ಎಚ್. ಜೆ. ಮೊಲ್ಲಾಯ್‌ಯವರಿಗೆ ಆಗೇಷ್ಟು ೧೬ರ ಲಾಗಾಯತು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ವಿದೇಶ ವರ್ತಮಾನಗಳು.

ಪಶ್ಚಿಮ ಆಫ್ರಿಕಾದಲ್ಲಿ ಕಾಮೆರೂನ್ ಎಂಬ ಪ್ರದೇಶವು ಜರ್ಮನಿಯವರಿಗೆ ಸೇರಿರುತ್ತದೆ. ಅಲ್ಲಿನ ನರಮಾಂಸ ಭಕ್ಷಕರು ಕಳೆದ ಒಂದು ತಿಂಗಳಲ್ಲಿ ೨,೦೦೮ ಜನರನ್ನು ಕೊಂದು ತಿಂದುಹಾಕಿದರೆಂದು ಅಲ್ಲಿಂದ ಸಮಾಚಾರ ಬಂದಿರುವುದು.

*****

ಜಪಾನ್ ರಾಜ್ಯದವರು ರಷ್ಯಾದವರ ಮೇಲೆ ನಡಸುತ್ತಿರುವ ಯುದ್ಧದ ಖರ್ಚಿಗೋಸ್ಕರ ಇದುವರೆಗೆ ೩೦೦ ಕೋಟಿ ರೂಪಾಯಿಗಳನ್ನು ಸಾಲಮಾಡಿರುತ್ತಾರೆ. ಆದುದರಿಂದ ಅವರು ರಷ್ಯಾದವರಿಂದ ೨೫೫ ಕೋಟಿ ರೂಪಾಯಿ ನಷ್ಟ ದ್ರವ್ಯ ಬರಬೇಕೆಂದು ಕೇಳಿದಾರೆ. ಇದು ಹೆಚ್ಚಲ್ಲವೆಂದು ಯಾರೂ ಹೇಳಬಲ್ಲರು.

*****

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟಿನ ಬಳಿ ಬೆನ್ನಿಂಗ್ಟನ್ ಎಂಬೊಂದು ಹಡಗು ಆಕಸ್ಮಾತ್ತಾಗಿ ಒಡೆದುಹೋಯಿತು. ಆಗ್ಗೆ ಅದರಲ್ಲಿ ೩೦೦ ಮಂದಿಗಿಂತಲೂ ಹೆಚ್ಚಾಗಿ ಜನರಿದ್ದರು. ಈ ಅನಾಹುತದಲ್ಲಿ ಅನೇಕರು ಪ್ರಾಣ ಕಳೆದುಕೊಂಡರು. ೫೫ ಹೆಣಗಳು ಸಿಕ್ಕಿರುತ್ತವೆ. ೨೧ ಜನರು ಏನಾದರೋ ತಿಳಿಯಲಿಲ್ಲ. ೮೦ ಮಂದಿಗೆ ಗಾಯಗಳಾದವು.

*****

ರಷ್ಯಾ ಚಕ್ರವರ್ತಿಯವರು ನವರತ್ನ ಖಚಿತವಾದ ಒಂದು ಫೋಟೋವನ್ನು ಟಿಬೆಟ್ಟಿನ ದಲಾಯಿಲಾಮಾ ಎಂಬ ದೊಡ್ಡ ಗುರುವಿಗೆ ಬಿಲ್ಲತ್ತು ಸಹಿತ ಕೊಟ್ಟು ಕಳುಹಿಸಿದಾರೆಂತಲೂ, ಈಗ ರಷ್ಯಾ ದಳಪತಿಯಾದ ಕ್ಯಾಪ್ಟನ್ ಕೊಜಾಕಾಫ್ ಎಂಬಾತನು ರಷ್ಯಾ ಸೈನ್ಯಗಳನ್ನು ಟಿಬೆಟ್ಟಿನ ಮೇಲೆ ಯುದ್ಧಕ್ಕೆ ತರುತ್ತಿದಾನೆಂತಲೂ ಒಂದಾನೊಂದು ರಷ್ಯಾ ಪತ್ರಿಕೆಯು ಹೇಳುತ್ತಿದೆ.

*****

ಇಂಗ್ಲಿಷರಿಗೆ ಸೇರಿದ ಮಧ್ಯ ಆಫ್ರಿಕದಲ್ಲಿನ ಪ್ರಜೆಗಳಿಗೆ ವಿಕ್ಟೋರಿಯಾ ಮಹಾರಾಜ್ಞೀರವರು ಕಾಲವಾದರೆಂಬ ವರ್ತಮಾನವು ಈಗೀಗ ತಿಳಿದು ಬರುತ್ತಿದೆ. ಇದನ್ನು ಕೇಳಿ ಆಳಿಯುವರ ತಲೆಯ ನಾಣ್ಯಗಳು ಇನ್ನು ಚಲಾವಣೆಯಾಗುವುದಿಲ್ಲವೆಂದು ಹೇಳಿಕೊಂಡು ಆ ನಾಣ್ಯಗಳನ್ನು ಅಂಗೀಕರಿಸದೆ ಇರುತ್ತಾರೆ. ವರ್ತಕರಿಗೆ ಇದರಿಂದ ತುಂಬಾ ಕಷ್ಟ ಉಂಟಾಗಿದೆ.

*****

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಪಟ್ಟಣದಲ್ಲಿ ಈಗತಾನೇ ಕಾಲವಾದ ಮೆ॥ ಮೋಸೆಸ್ ಡ್ರಾಪ್ಸಿಕ್ ಎಂಬ ಧನ್ಯಾತ್ಮನು ತನ್ನ ಆಸ್ತಿಯಲ್ಲಿ ೨೪ ಲಕ್ಷ ರೂಪಾಯಿ ಧರ್ಮಮಾಡಿ, ಈ ಹಣದಿಂದ ಒಂದು ವಿದ್ಯಾಶಾಲೆಯನ್ನು ಕಟ್ಟಿಸಬೇಕೆಂತಲೂ ಅದರಲ್ಲಿ ಸಮಸ್ತ ಜನಾಂಗಗಳ ವಿದ್ಯಾರ್ಥಿಗಳಿಗೂ ಬೈಬಲ್ ಎಂಬ ಸತ್ಯವೇದವನ್ನೂ ಹೀಬ್ರೂ ಭಾಷೆಯನ್ನೂ ಕಲಿಸಬೇಕೆಂತಲೂ ಮರಣಶಾಸನವನ್ನು ಬರೆದಿರುತ್ತಾನೆ.

*****

ಚೀನಾ ರಾಜ್ಯಕ್ಕೆ ಸೇರಿದ ಟಂಕಿನ್ ಮತ್ತು ಹೊನಾನ್ ಪ್ರಾಂತ್ಯಗಳಲ್ಲಿ ಪ್ರಜೆಗಳು ಕ್ರೈಸ್ತರಿಗೆ ವಿರೋಧವಾದ ಮತ್ತು ಹಾನಿಕರವಾದ ಕಾರ್ಯಗಳನ್ನು ಮತ್ತೆ ನಡಸಲು ಪ್ರಾರಂಭಿಸಿದಾರೆ. ಈ ದಂಗೇಕೋರರ ಜೊತೆಗೆ ಎರಡು ರಿಜಿಮೆಂಟಿನ ಸೈನ್ಯಗಳು ಸೇರಿಕೊಂಡವು. ೩೦,೦೦೦ ಜನರು ದಂಗೆಮಾಡಿ ಸುಕಾಹಿನ್ ಎಂಬ ಪಟ್ಟಣವನ್ನು ತಮ್ಮ ಸ್ವಾಧೀನ ಮಾಡಿಕೊಂಡಿದಾರೆ ಎಂದು ತಂತೀ ವರ್ತಮಾನ ಬಂದಿದೆ.

*****

ಏಷ್ಯಾ ಖಂಡದ ಆನೆಗಳ ದಂತಕ್ಕಿಂತಲೂ ಆಫ್ರಿಕಾ ಖಂಡದಲ್ಲಿರುವ ಆನೆಗಳ ದಂತವು ಬಹಳ ಬೆಲೆಗಿದೆ, ತುಂಬಾ ಗಟ್ಟಿಯಾಗಿದೆ, ಆದ್ದರಿಂದ ತುಂಬಾ ಪ್ರಿಯವಾಗಿದೆ. ಬೇಟೆಗಾರರು ಆಫ್ರಿಕಾ ಖಂಡದಲ್ಲಿ ಸುಲಭವಾಗಿ ಆನೆಗಳನ್ನು ಶಿಕಾರಿಮಾಡುತ್ತಾರೆ. ಏಷ್ಯಾ ಖಂಡದಲ್ಲಿ ಆನೆಗಳನ್ನು ಬೇಟೆಯಾಡುವುದು ಕಷ್ಟ. ಆದಕಾರಣ ಆಫ್ರಿಕಾ ಖಂಡದಲ್ಲಿರುವ ಆನೆಗಳ ಜಾತಿಯೇ ನಿರ್ನಾಮವಾಗುವ ಕಾಲ ಬಂದಿದೆ ಎಂದು ಹೇಳುತ್ತಾರೆ.

*****

ಅರಿಬ್ಬೀ ದೇಶಕ್ಕೆ ಸೇರಿದ ಯೇಮೆನ್ ಪ್ರಾಂತ್ಯದಲ್ಲಿ ಅನೇಕ ಸಹಸ್ರ ಜನರು ತುರ್ಕಿಯವರ ಮೇಲೆ ದಂಗೆಎದ್ದು, ಅನೇಕ ಗ್ರಾಮಗಳನ್ನು ಹಾಳು ಕೆಡವಿದರು. ಇಮಾಂ ಎಂಬಾತನು ಇವರ ಮುಖಂಡನಾಗಿರುತ್ತಾನೆ. ತುರ್ಕಿ ಸೈನ್ಯಗಳು ಸುಮಾರು ೬೦—೭೦ ಪಟಾಲಂ ಈ ದಂಗೇಕೋರರನ್ನು ಸಂಧಿಸಿ, ಇದುವರೆಗೆ ನಾಲ್ಕಾರು ಯುದ್ಧಗಳನ್ನು ನಡಸಿದವು. ದಂಗೇಕೋರರಲ್ಲಿ ೨,೦೦೦ ಜನರು ನಷ್ಟವಾದರು; ಮತ್ತು ೬೦೦ ಮಂದಿ ತುರ್ಕಿಯವರಿಗೆ ಕೈಸೆರೆ ಸಿಕ್ಕಿದರು. ಈ ಯುದ್ಧಗಳು ಇನ್ನೂ ಮುಕ್ತಾಯವಾಗಲಿಲ್ಲ.

*****

೨೬ ಜನ ರಷ್ಯಾ ಸೈನಿಕರು ಒಂದು ದೋಣಿಯಲ್ಲಿ ಕುಳಿತು ತೊಡೊಸಿಮಾ ಎಂಬ ಜಪಾನಿನವರ ದ್ವೀಪಕ್ಕೆ ಹೋಗಿ ಅವರನ್ನು ಸ್ವಲ್ಪ ಆಹಾರ ಪದಾರ್ಥ ಬೇಕೆಂದು ಕೇಳಿದರು. ಜಪಾನಿನವರು ಅವರಿಗೆ ೮ ಮೂಟೆ ಅಕ್ಕಿಯನ್ನೂ ಕೆಲವು ಪೀಪಾಯಿಗಳ ಮದ್ಯವನ್ನೂ ಕೊಟ್ಟರು. ರಷ್ಯಾದವರು ಮದ್ಯವನ್ನು ಕುಡಿದು, ಆ ದ್ವೀಪದೊಳಕ್ಕೆ ನುಗ್ಗಿ ಲೂಟಿಮಾಡುತ್ತಾ ಬಂದರು. ಜಪಾನಿನವರು ಕೈಲಾಗದೆ ಓಡಿಹೋದರು. ಆ ಮೇಲೆ ರಷ್ಯಾದವರು ಅಲ್ಲಿದ್ದ ಮನೆಗಳನ್ನೆಲ್ಲಾ ಸುಟ್ಟು, ಇಬ್ಬರನ್ನು ಕೊಂದುಹಾಕಿ ಹೊರಟುಹೋದರೆಂದು ತಿಳಿಯುವುದು.

*****

ರಷ್ಯಾ ರಾಜ್ಯಕ್ಕೆ ಸೇರಿದ ಒಡೆಸಾ ಡಿಸ್ಟ್ರಿಕ್ಟಿನಲ್ಲಿ ಬಡ ರೈತರು ಒಗ್ಗಟ್ಟಾಗಿ ಹೋಗಿ ತಮ್ಮ ಜಮೀನ್ದಾರರನ್ನು ಕಂಡು—ನಾವು ಕೊಡತಕ್ಕ ಕಂದಾಯ ದುಬಾರಿಯಾಗಿದೆ; ಕೊಡಲಾರೆವು. ದರವನ್ನು ಸ್ವಲ್ಪ ಕಡಿಮೆಮಾಡಿ ಕೊಡಬೇಕು ಎಂದು ಬೇಡಿಕೊಂಡರು. ಜಮೀನ್ದಾರರು ಇಷ್ಟಕ್ಕೇನೇ ಸಿಟ್ಟಾಗಿ, ಪೋಲೀಸಿನವರಿಗೆ ಹೇಳಿ ಕಳುಹಿಸಿದರು. ಅವರು ಬಂದು ದಾಂಧಳೆಮಾಡಿ, ಗುಂಡು ಹೊಡೆದು, ಬಡಪಾಯಿಗಳಾದ ರೈತರನ್ನು ಚದರಿಸಿ ಓಡಿಸಿದ್ದಲ್ಲದೆ, ಅವರಲ್ಲಿ ಇಬ್ಬರನ್ನು ಕೊಂದುಹಾಕಿದರು. ೧೧ ಜನರಿಗೆ ಗಾಯಮಾಡಿ, ೧೨೦ ಜನರನ್ನು ದಸ್ತಗಿರಿ ಮಾಡಿದಾರೆ.

*****

ರಷ್ಯಾ ರಾಜ್ಯದಲ್ಲಿ ಸದ್ಯ ಕ್ಷಾಮ ಪ್ರಾಪ್ತವಾಗಬಹುದೆಂದು ಗವರ್ನಮೆಂಟಿನವರಿಗೆ ಸೂಚನೆ ತಿಳಿದುಬಂದುದರಿಂದ ಆ ರಾಜ್ಯದಿಂದ ಗೋಧಿಯನ್ನು ಯಾರೂ ಪರದೇಶಗಳಿಗೆ ರಫ್ತುಮಾಡಲೇಕೂಡದೆಂದು ಚಕ್ರವರ್ತಿಯವರು ಆಜ್ಞೆಮಾಡಿದಾರೆ. ಇದರಿಂದ ಹಿಂದೂಸ್ಥಾನದ ಗೋಧಿಗೆ ಹೆಚ್ಚು ಕ್ರಯ ಸಿಕ್ಕುವುದಕ್ಕೆ ಸಹಾಯವಾಯಿತು. ರಷ್ಯಾ ರಾಜ್ಯದಲ್ಲಿ ೫೬೦ ಲಕ್ಷ ಎಕರೆಯನ್ನು ಗೋಧಿ ಬೆಳೆಗೆ ಬಿಟ್ಟಿದಾರೆ. ಈ ಬೆಳೆಯಲ್ಲಿ ಬಹು ಭಾಗವನ್ನು ವಿಲಾಯಿತಿಗೆ ರಫ್ತುಮಾಡುತ್ತಿದ್ದರು. ಇದು ನಿಂತುಹೋಯಿತಾದ್ದರಿಂದ ವಿಲಾಯಿತಿಯವರು ಹಿಂದೂಸ್ಥಾನದ ಗೋಧಿಯನ್ನು ಇನ್ನು ಅಧಿಕವಾಗಿ ತರಿಸಿಕೊಳ್ಳಬೇಕಾಗಿದೆ.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

20

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪ ರೇಂಟ್ ನ್ಯಾಪರ್ ಯವರು ತೆಗೆದುಕೊಳ್ಳುವರು.

Apply to—Mr. Hughes, Mysore Zoo

ಇದು ಕಳೆದ ಜನವರಿ ತಿಂಗಳ ಪ್ರಜೆಂಟೇಷನ್ ವಾಚು

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್‌ಕೋಫ್ ಪೇಟೆಂಟ್ ಲಿವರ್ ವಾಚು ಓಪನ್ ಕೇಸ್ ಕೀಲೆಸ್ ಕಂಪೆನ್ ಸೇಷನ್ ಬ್ಯಾಲನ್ಸ್ ಖಚಿತ ವಿಷ್ಟವಾದ ಗಡಿಯಾರ ಇವರು ಮ ಗ್ಯಾರಂಟೀ. ಕ್ರಯ ರೂ ೫—೮—೦ ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವದರೊಳಗಾಗಿ ದರ ಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ



ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ ... ಪ್ರಜೆಂಟೇಷನ್ ದೊರೆಯಲಾರದೆಂದು ಪ್ರಚಾರ ಪಡಿಸಿದ ಮೇರೆಗೆ ೧,೦೦೦ ವಾಚುಗಳು ಮುಗಿದು ಹೋ ದಾಗ್ಯೂ ಅನೇಕರು ... ಮೇರಿಗೆ ಕಳೆದ ಜುಲೈ ಆಖೈರ್ ವರೆಗೆ ಒಪ್ಪುವಂತೆ ... ಗಡಿಯಾರವನ್ನು ಕೊಡುತ್ತೇವೆಂದು ಪ್ರಕಟಿಸಿದ್ದಾಗ್ಯೂ ಕಳೆದ ೧ ... ಲಾಗಾಯ್ತು ಅನೇಕ ದರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜಂಟರು ಇನ್ನೂ ಕೆಲವು ಕಾಲದವರಿಗೆ ... ತರಬೇಕೆಂದು ಕೋರಿದ್ದರಿಂದಲೂ ನಮ್ಮ ಕಪ್ಪಾಸ್ಪರ ... ಮೇರಿಗೆ ಪುನಃ ಕೊಡಲ್ಪಡುತ್ತೆ. ಇದುವರಿಗೆ ವಾಚು ಸಹಾಯತಿ ಪಡೆಯದೆ ಇರುವವರು ಜಾಗ್ರತೆ ದರಖಾಸ್ತು ಕಳುಹಿಸಿ ಬರುವಾಗ ಸಮೇತ ವಾಚು ಪಡೆಯರಿ

... ಈ ಕೆಳಗಿನ ನಕ್ಷೆಯಲ್ಲಿ ತೋರಿಸಿ ಇರುವ ಪ್ರಜೆಂಟೇಷನ್ ಸಾಮಾನುಗಳು ವೊದಲು ಕಳುಹಿಸಿದ ಸಾಮಾನಿಗಿಂತ ಮೇಲಾಗಿಯೂ ನಕ್ಷೆಗೆ ವ್ಯತ್ಯಾಸವಿಲ್ಲದೆಯೂ ಇರುತ್ತೆ

ನಶ್ಯದ ಡಬ್ಬಿ ಇದು ಮೇಲಾದ ಬರ್ಮಾ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು ಕ್ರಯ, ೦—೮—೦



ಗಡಿಯಾರ ಸರಪಳಿ ಇದು ಮೇಲಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದರ ಕೊನೆಯಲ್ಲಿ ಸುಂದರವಾದ ಚಕ್ರಮುಖಿ ಕೆತ್ತಲ್ಪಟ್ಟಿರುತ್ತೆ ಎಂದಿಗೂ ಕೆಡಲಾರದು ಕ್ರಯ, ೦—೮—೦



ಮುಲಗುವ ಮನೆ ದೀಪ—ಇದು ಮೇಜಿನ ಮೇಲಿರಿಸುವದಕ್ಕೂ ಗೋಡೆಗೆ ತಗಲಿಸುವದಕ್ಕೂ ಲಾಯಕ್ಕಾದದ್ದು ಎಣ್ಣೆಯ ವೆಚ್ಚ ಕಡಮೆ ಸಾಕಾದಷ್ಟು ಬೆಳಕು ಕ್ರಯ, ೦—೧೦—೦



ಶರಟ್ ಗುಂಡಿ—ಇದು ಮೇಲಾದ ಬರ್ಮಾ ಸಿಲ್ವರ್ ಬೆಳ್ಳಿಯಿಂದ ಹೊಸ ಮಾದರಿಯಾಗಿ ತಯಾರು ಮಾಡಲ್ಪಟ್ಟದ್ದು ಇಲ್ಲಿನ ಷಾಪಿನ ಕ್ರಯ, ೧—೪—೦ ಪ್ರತಿ ದೊಡ್ಡ ಮನುಷ್ಯರೂ ಇದನ್ನೇ ಉಪಯೋಗಿಸುತ್ತಾರೆ ರಂಗುಕೆಡದು. ಕ್ರಯ, ೦—೧೦—೦



... ಪೆಟ್ಟಿಗೆ—ಇಂಗ್ಲಿಷ್ ಮೇಡ್ ಕ್ಯಾಷ್‌ಬಾಕ್ಸ್—ಹಣ ಆಭರಣ ಭದ್ರವಾಗಿ ಇಡಬಹುದು ಕ್ರಯ, ೮—೧೦—೦

ವಿಳಾಸ:—ಮ್ಯಾನೇಜರ್, ಫ್ಲಾರಿನ್ಸ್ ವಾಚ್ ಕಂಪೆನಿ, ಮಾಕ್ಸ್ ಟವನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ .. .. ರೂ ೧—೧೪—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಸುಧಾ.

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಾರೆ ಶೈತ್ಯ, ತಲೆನೋವು, ಅರತಲೆನೋವು, ಬೆನ್ನುಕಳುಕು, ಕೈಕಾಲು ನೋವು ಮುಂತಾದವುಗಳನ್ನು ದೈನಾಮೈಟಿನಂತೆ ದಿಗಂತರಕ್ಕೆ ಹಾರಿಸಬಲ್ಲದು 'ಸುಧಾ' ಅಂದರೆ ಅಮೃತವನ್ನು ಸೇವಿಸಿದರೆ ಯಾವ ವಿಧವಾದ ರೋಗವು ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸೀಸೆ ಔಷಧಿಯಲ್ಲಿ ಕಂಡುಬರುವ ಅಮೋಘಗುಣವನ್ನು ಪತ್ರಿಕಾ ವರ್ಣನೆ ಮಾಡಿ ತೀರದು ಸೀಸೆ ೧ಕ್ಕೆ ೦—೮—೦ ಪೋಸಲು ಬೇರೆ.

ಜೀವನಸುಧಾ—ಜ್ವರ ನಿಂತ ತರುವಾಯ ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧಮಂಡಲ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ ಸೀಸೆ ೧ಕ್ಕೆ ರೂಪಾಯಿ ೧—೦—೦

ಶ್ರೀರಾಂಬೂಲ—ಜಗತ್ಪ್ರಖ್ಯಾತವಾದ ತಾಂಬೂಲ ಮಾತ್ರೆಗಳ ಸೀಸೆ ೧ಕ್ಕೆ ೪ ಆಣೆ ... ಸೀಸೆ ವರೆಗೆ ವಿ ಪಿ ಛಾರ್ಜು ೫ ಆಣೆ.

ದೇವನಹಳ್ಳಿ ಟವನ್, ಬೆಂಗಳೂರು ಡಿಸ್ಟ್ರಿಕ್ಟ್ — ಯಂ ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್

ಪಿ ಸುಬ್ಬರಾಯರವರ

P. SUBBAROY'S

World Renowned and most Efficacious Ayurvedic Medicines

ಪಿ. ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಲಕ್ಷ್ಮೀಕರ ಕಸ್ತೂರಿಮಾತ್ರೆ

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ, ಒರಟು ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇಮಕ್ಕಳಿಂದ ಮುದುಕರವರೆಗೆ ಎಲ್ಲರೂ ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು ಕ್ರಯ—ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ರಿಂದ ೬ ಸೀಸೆಗೆ ವಿ ಪಿ ಛಾಂಗಿ ಚಾರ್ಜು ೫ ಆಣೆ

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ —ದಿ ಮಹಮ್ಮದ್ ನವಾಬ್‌ಜಾನಿ

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಎಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ ಬೇರೆ ಔಷಧ ಅವಶ್ಯವಿಲ್ಲ —ದೇಶೋಪಕಾರಿ

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು —ಕ್ಯಾತೂರು ಪೊಲೀಸ್ ಇನ್ಸ್‌ಪೆಕ್ಟರ್

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ —ಜಿ. ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕ್ಯಾಲೂರ್

Apply to —P. SUBBAROY,
Porto Novo, South Arcot.

ವಿಳಾಸ—ಪಿ. ಸುಬ್ಬರಾಯರ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೪—೮—೧೯೦೫ ರಿಂದ ೧೧—೮—೧೯೦೫ ರ ವರೆಗೆ,

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದವಾರ ... ಸಂಖ್ಯೆ	
ಬೆಂಗಳೂರು ಪಟ್ಟಣ	7	2	1	1
ಮೈಸೂರು "	0	0	1	0
ಬೆಂಗಳೂರು ಡಿಸ್ಟ್ರಿಕ್ಟು	32	22	163	121
ಮೈಸೂರು "	40	20	197	155
ಕೋಲಾರ್ "	0	0	67	10
ಕೋಲಾರ್ ಚಿನ್ನದ ಗಣಿಗಳು	2	2	18	11
ತುಂಕೂರು ಡಿಸ್ಟ್ರಿಕ್ಟು	4	3	25	11
ಹಾಸನ "	0	0	35	28
ಚಿತ್ರದುರ್ಗ "	1	0	159	81
ಕಡೂರ್ "	14	8	150	121
ಶಿವಮೊಗ್ಗ "	24	23	203	169
ಜುಮ್ಲಾ	124	78	1038	718

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ಶ್ರಾವಣ ಬಹುಳ ನವಮಿ ಗುರುವಾರದಿಂದ ಶ್ರಾವಣ ಬಹುಳ ಅಮಾವಾಸ್ಯ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ವೃ...
24	ಗುರು *	ನವಮಿ	15 30	ರೋ	26 ...	9
25	ಶುಕ್ರ	ದಶಮಿ	10 17	ಮೃ	29 18	10
26	ಶನಿವಾ ,,	ಏಕಾದಶಿ	10 56	ಆ	32 12	11
27	ರವಿವಾ ‡	ದ್ವಾದಶಿ	10 1.	ಪು	33 15	12
28	ಚಂದ್ರ ¶	ತ್ರಯೋ	35-16	ಪು	35 16	13
29	ಕುಜ ⸜	ಚತುರ್ದಶಿ	30-19	ಶ್ಲೇ	... 11	14
30	ಬುಧ †	ಅಮಾ	31 21	ಮ	30 13	15

* ತೋಳಪ್ಪರ್ ಸಂಪ್ರದಾಯ ಶ್ರೀಜಯಂತಿ, ಉತ್ಪಾತಯೋಗ
,, ಸರ್ವತ್ರಏಕಾದಶಿ, ಶ್ರಾವಣಶನಿವಾರ ‡ ದಗ್ಧಯೋಗ
¶ ಸೋಮಪ್ರದೋಷ ⸜ ಮಂಗಳಗೌರೀವ್ರತ
† ಸರ್ವತ್ರ ಅಮಾವಾಸ್ಯ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ ರೂ	೧೨—೮—೦	೧೨—[illegible]
ಕೆಂಬೂತಿ ಅಕ್ಕಿ ಅವಲ್	೧೨—೪—೦	೧೨—೮—[illegible]
" ಮಾಯಂ	೧೨—೨—೦	೧೧—೧೨—[illegible]
ಬಾಸ್ಮತಿ ಅಕ್ಕಿ	೧೨—೦—೦	೧೨—[illegible]
ಸಣ್ಣಕ್ಕಿ ಅವಲ	೧೪—೦—೦	೧೩—೧೦—[illegible]
" ಮಾಯಂ	೧೩—೮—೦	೧೨—೦—[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೧—೦—೦	೧೧—೮—[illegible]
" ಮಾಯಂ	೧೦—೮—೦	೧೧—[illegible]
ಹೈ ರಾಗಿ ಪಲ್ಲಾ ೧ಕ್ಕೆ	೬—೪—೦	೫—೪—[illegible]
ಕಾರಾಗಿ	೬—೦—೦	೫—[illegible]
ಜೋಳ	೬—೦—೦	೬—೦—[illegible]
ಹಲಸಂದೆ ಪಲ್ಲಾ ೧ಕ್ಕೆ	೧೦—೦—೦	೧೦—[illegible]
ಬಿಳೀ ಅವರೆ	೮—೧೨—೦	೯—[illegible]
ಹೆಸರು	೯—೧೨—೦	೧೧—[illegible]
ಉದ್ದು	೧೦—೦—೦	೯—೮—[illegible]
ಕಡಲೆ	೧೦—೦—೦	೯—[illegible]
ಎಳ್ಳು	೧೬—೦—೦	೧೫—[illegible]
ಹುರುಳಿ	೧೧—೦—೦	೯—[illegible]
ಹರಳು ೧೨ ಸೇರಿಗೆ	೧೨—೮—೦	೧೨—೧[illegible]
ಸೀಗೇಕಾಯಿ ಮಣ ೧ಕ್ಕೆ	೩—೮—೦	೩—೧[illegible]
ಮೆಣಸಿನಕಾಯಿ	೪—೮—೦	೪—[illegible]
" ಮಾಯಂ	೩—೧೨—೦	೩—೧[illegible]
ಬೆಲ್ಲ ದೊಡ್ಡ ಅಚ್ಚು	೭—೪—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೪—೪—೦	೪—[illegible]
ಹರಳೆಣ್ಣೆ "	೫—೦—೦	೪—೫[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೧೧—೮—೦	೧೧—[illegible]
ಉಪ್ಪು "	೭—೦—೦	೬—೧[illegible]
ಹುಣಸೇ ಹಣ್ಣು	೧—೦—೦	೦—೧[illegible]
" ಹಳೇದು	೦—೧೪—೦	೦—೧[illegible]
ತುಪ್ಪ	೧೨—೮—೦	೧೧—೮[illegible]
ಸೀಮೆಯಂಚಿ ಪೆಟ್ಟಿ ೧ಕ್ಕೆ	೫—೦—೦	೩—೦[illegible]
ತೆಂಗಿನಕಾಯಿ ೧೦೦ ಕ್ಕೆ	೫—೦—೦	೪—[illegible]
ಅರಳೀಕಾಯಿ ಮಣ ೧ಕ್ಕೆ	೧—೦—೦	೦—೧[illegible]
ಅಂಟ್ವಾಳಕಾಯಿ ಮಣ ೧ಕ್ಕೆ	೦—೧೪—೦	೦—೧[illegible]
ಚಿನ್ನ (ಪವನ್) ತೊಲ	೧೫—೮—೦	೧೫—[illegible]
" " ಪಸಿಮೆ	೧೫ ೧೦—೦	೧೫—೦[illegible]
" " ಗಟ್ಟಿ ತೊಲ ೧ಕ್ಕೆ	೨೬—೦—೦	೨೪—[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩೨—೦—೦	೭೪—[illegible]

Printed and Published by the Rev. H. Spencer ... the Proprietor and Manager, Wesleyan Mission Press, Mysore 24/8/1905

ವೃತ್ತಾಂತ ಪತ್ರಿಕೆ.

REGISTERED M 29

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಆಗಸ್ಟ್ ತಾರೀಖು ೩೧ ನೇ ಗುರುವಾರ. — ಸಂಚಿಕೆ ೧೩

ಹೊಸಪುಸ್ತಕ "ಆಂಗ್ಲೇಯ ವೈದ್ಯಶಾಸ್ತ್ರ"

ಕ್ರಯ ರೂ ೧-೮-೦, ಅಂಚೆ ೨ ಆ., ವಿ. ಪಿ. ೬ ಆಣೆ.

ಈ ಪುಸ್ತಕವು ಇಂಗ್ಲೀಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿದಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಇವುಗಳನ್ನು ಉಪಯೋಗಿಸುವ ಕ್ರಮ, ದೇಹದ ಅನೇಕ ಅಂಗಗಳನ್ನು ಕುರಿತು ೩೩೦ ಪುಟಗಳುಳ್ಳದ್ದು. ಶಾಸ್ತ್ರವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿ ಯಾವದು ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವದಕ್ಕೂ, ಹಾಗೆ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೂ ಇದು ತುಂಬಾ ಸಹಾಯಕರವಾಗಿರುವುದು.

ವಿಳಾಸ — ಎಂ. ಗುರುರಾವ್, ಆಸ್ಪಿಟಲ್ ಅಸಿಸ್ಟೆಂಟ್, ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

ಜ್ವರಹರಿ. 12

ಇದು ಸಾಧಾರಣ ಜ್ವರ, ಚಳೀಜ್ವರ, ಸನ್ನಿಜ್ವರ, ಪಿತ್ತಜ್ವರ, ಕಫಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಖಾತಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಈ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ದೊಡ್ಡ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೩ ರೂ., ೧—೮ ರೂ., ೩—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಅಂಚೆ ಖರ್ಚು ಮಾಫಿ ಬಿಡಲಾಗುವದು.

* * * * * * * * *

ಓ ಮ ಂ ಕ ರ್ಪೂ ರ.

Omum-Carpoor
TRADE MARK

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುತ್ತದೆ. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವು ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮ ಓಮಂ ಕರ್ಪೂರವನ್ನು ನಾನೂ ನನ್ನ ಡಾಪೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಜನರುಗಳಿಗೆ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—

ಕಲ್ಯಾಣಕರ ಸ್ಟೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕಲ್ಯಾಣ ಹೌಸ್ ಲೈನ್, ಮದರಾಸ್.

ಸಕಲೋಪಯುಕ್ತ ರಾಮಾನುಜಾಚಾರ್ಯರ ಸಂಗ್ರಹ.

ಇದು ವೀರಶೈವರಿಗೆ ಅತ್ಯಾವಶ್ಯಕವಾದದ್ದು.

ಸಂಸ್ಕೃತಸಿದ್ಧಾಂತಶಿಖಾಮಣಿಯಲ್ಲಿರುವ ನೂರೊಂದು ಸ್ಥಳಗಳ ವಿಷಯಗಳೆಲ್ಲಾ ಕನ್ನಡದಲ್ಲಿ ವಚನರೂಪವಾಗಿ ಸಂಗ್ರಹಿಸಿ ಈ ಗ್ರಂಥದಲ್ಲಿ ಬರೆಯಲ್ಪಟ್ಟಿವೆ. ಸಕಲರೂ ಕೂಡ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಕ್ರಯ ವಿ. ಪಿ. ಮೂಲಕ ೧೦ ಆಣೆ.

ವಿಳಾಸ.—ಬಿ. ಚಂದ್ರಶೇಖರಶಾಸ್ತ್ರಿ, ವೀರನಗರ, ಮೈಸೂರು.

ಮೆ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

ಮೆಟ್ರಿಕ್ಯುಲೇಷನ್ ಕನ್ನಡದ ೧ನೆ ಪುಸ್ತಕದ ನೋಟ್ಸು	೦—೬—೦
ಡಿಟೋ ,, ,, ೭ ನೆ ಪುಸ್ತಕದ ನೋಟ್ಸು	೧—೩—೦
ಡಿಟೋ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಷೆ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಹೋಮೋಸಿಯಾ.

ಕಷ್ಟ ಪರಿಹಾರ. — ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಬಾರ್ಗವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ಸರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ತುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

* * * * * * * * *

ಹೋಮೋಸಿಯಾ ಎಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪೆನಿ, ೨೭ ಸಕಂಡು ಬೀಚ್ ಲೈನ್, ಮದರಾಸ್

ಬಿ. ಬಸವಲಿಂಗಶೆಟ್ಟಿ ಅಂಡ್ ಸನ್ಸ್, ಪಾರಿಜಾತ ವಿಲಾಸ, ಅವಲೇಪೇಟೆ, ಬೆಂಗಳೂರು ಸಿಟಿ

2

ಚಲವಾಯಿಸಿ ಕಬಿಂವಾಲ್ ಊದುಬತ್ತಿಗಳು, ಜವ್ವಾಜಿ ಗಂಧ, ಅತ್ತರ್‌ಬಿಲ್ಲೆಗಳು, ದಶಾಂಗ, ಪುನುಗು, ಪಚ್ಚಕರ್ಪೂರ, ಪನ್ನೀರ ಸುಗಂಧದ್ರವ್ಯಗಳು ಬಹಳ ಸುಲಭಬೆಲೆಗೆ ದೊರೆಯುವದಲ್ಲದೆ, ವ್ಯಾಪಾರಗಾರರಿಗೆ ಬಹಳ ಲಾಭಬರುವಂತೆ ಮಾರಲ್ಪಡುತ್ತೆ. ಒಂದು ಸಲ ಅಜಮಾಯಿಸಿದರೂ, ನಿಮಗೇ ಗೊತ್ತಾಗುತ್ತೆ.

ದೇವಾಂಗ ಪಂಚರಿಗೆ ಅಗತ್ಯ ಬೇಕಾದದ್ದು.

ದೇವಾಂಗಮಠ ಮೂಲಸ್ತಂಭ | ದೇವಾಂಗಮಠ ಪ್ರಕಾಶಕ

5

ಸ್ವಲ್ಪ ಪ್ರತಿಗಳಿವೆ ಜಾಗ್ರತೆಪಟ್ಟರೆ ಸಿಕ್ಕುತ್ತೆ, ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುಮ್ಮಡಿಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಪುರಾಣ ಕೆ. ಸಪ್ತಾಷ್ಟಕಾರಕ್ಕೂ ಸುಂದರವಾದ ೧೩ ಚಿತ್ರವಿದೆ. ಕ್ರಯ ಸುಲಭವಾಗಿದೆ. ೧೩ ಚಿತ್ರವಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮. ಚಿತ್ರವಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮. ತಪ್ಪದೆ ಮಣಿಆರ್ಡರಿಗೂ ವಿ. ಪಿ. ಲೂ ಕಳುಹಿಸುತ್ತೆ. ವಿಳಾಸ—ಮೈಸೂರು ಬವಳಿ ಲಿಂಗಪ್ಪಶೆಟ್ಟಿ ಯಜಮಾನ ಪುಟ್ಟಮಲ್ಲಯ್ಯ.

ಮದರಾಸು ನಶ್ಯದ ಮದು.

ಬಹಳ ಮೇಲಾದದ್ದು.

ಮದರಾಸು ನಶ್ಯದಪುಡಿ ಡಬ್ಬಿ ೧ ಕ್ಕೆ . . .	೦—೧—೦
ಭಾಂಗಿ ಖರ್ಚು	೦—೩—೦

೧ ರೂಪಾಯಿಗೆ ಕಮ್ಮಿಯಿಲ್ಲದೆ ದರಖಾಸ್ತು ಕಳುಹಿಸತಕ್ಕ ವರ್ತಕರು ಮೊದಲಾದವರುಗಳಿಗೆ ರೂಪಾಯಿಗೆ ೦—೧—೦ ಕಮಿಷನ್ ಕೊಡುತ್ತೇವೆ. ನಮ್ಮ ವೈದ್ಯಶಾಲೆಯಲ್ಲಿ ತಯಾರಿಸುವ ಪುಡಿಯು ಮೇಲಾದ ಉಂಡಿಯಾದೇಶದ ಹೊಗೆಸೊಪ್ಪಿನಿಂದ ಕಾರವುಳ್ಳದ್ದಾಗಿ ತಯಾರಿಸಲ್ಪಟ್ಟದ್ದು. ಎಷ್ಟು ದಿವಸಗಳ ಪರಿಯಂತ್ರ ಇಟ್ಟಾಗ್ಯೂ ಘಾಟು ಹೋಗದ ಹಾಗೆ ಪುಡಿಯನ್ನು ಮಾಡುವದರಲ್ಲಿ ಅಧಿಕ ಪರಿಶ್ರಮವುಳ್ಳವರುಗಳಿಂದ ತಯಾರಿಸಲ್ಪಟ್ಟಿರುತ್ತೆ. ೧ ಸಾರಿ ಹಾಕಿಕೊಂಡರೆ ಸಾಕಾಗಿರುತ್ತೆ. ಅನೇಕ ದೊಡ್ಡಮನುಷ್ಯರು ಇದನ್ನೇ ಉಪಯೋಗಿಸುತ್ತಾರೆ. ೧ ಡಬ್ಬಿಗೆ ೯ ತೊಲ ಪುಡಿ ಇರುತ್ತೆ.

ವಿಳಾಸ—ಮ್ಯಾನೇಜರ್ ಧರ್ಮ ವೈದ್ಯಶಾಲಾ,
(೨೫) ಬೈನಾಬಜಾರು ರೋಡ್, ಸಾಹುಕಾರ್ ಪೇಟೆ, ಮದರಾಸು.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮೆ| ಟಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨½ ಯಂತೆ ಡಿಸ್ಕೌಂಟು ಕೊಡಲಾಗುವದು. ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ:—೧ ಪ್ರತಿಗೆ ೬ ಆಣೆ, ಪೋಸ್ಟೇಜು ೧ ಆಣೆ.

ವೃತ್ತಾಂತ ಪತ್ರಿಕೆ.
—:o:—
ಸನ್ ೧೯೦೫ ನೇ ಇಸವಿ ಆಗಸ್ಟ್ ತಾ॥ ೩೧ ನೇ ಗುರುವಾರ.

ಇಂಡಿಯಾ ಪೋಸ್ಟ್ ಇಲಾಖೆಯು.

ಈ ಇಲಾಖೆಯ ವಿಷಯವಾಗಿ ಗವರ್ನಮೆಂಟಿನವರು ಪ್ರಕಟಿಸಿರುವ ಸಂವತ್ಸರದ ವರದಿಯನ್ನು ವಿಮರ್ಶೆ ಮಾಡಲಾಗಿ ಇದರಲ್ಲಿ ಹಿಂದೆ ಪತ್ತು ವರ್ಷಗಳಿಂದೀಚೆಗೆ ಉಂಟಾಗಿರುವ ಅಪೂರ್ವವಾದ ಅಭಿವೃದ್ಧಿಯು ವ್ಯಕ್ತಪಡುವುದು. ಇಲಾಖೆಯು ಇಷ್ಟು ಮಟ್ಟಿಗೆ ಅಭಿವೃದ್ಧಿ ಹೊಂದಿರುವದರಿಂದಲೇ ಈಚೆಗೆ ಗವರ್ನಮೆಂಟಿನವರು ಮೊದಲಿಗಿಂತ ಹೆಚ್ಚು ತೂಕದ ಲಕ್ಕೋಟೆಗಳನ್ನು ಅರ್ಧಾಣೆಗೆ ಕಳುಹಿಸಬಹುದೆಂಬ ರಿಯಾಯತಿ ತೋರಿಸುವುದಕ್ಕೆ ಕಾರಣವಾಗಿದೆ. ಈ ಇಲಾಖೆಯ ಪೂರ್ವೋತ್ತರವನ್ನು ಸಂಕ್ಷೇಪವಾಗಿ ತಿಳಿಸಲಪೇಕ್ಷಿಸುವೆವು. ೧೮೩೭ನೆಯ ಸಂವತ್ಸರದ ವರೆಗೂ ಪ್ರಜಾ ಸಾಮಾನ್ಯಕ್ಕೆ ಅನುಕೂಲವಾಗಿ ಯಾವ ಏರ್ಪಾಡನ್ನೂ ಸರ್ಕಾರದವರು ಮಾಡಿರಲಿಲ್ಲ. ಸರ್ಕಾರೀ ಕಾಗದಗಳನ್ನು ಕಳುಹಿಸುವ ಮಾರ್ಗವಾಗಿ ದೊಡ್ಡ ಮನುಷ್ಯರ ಕಾಗದಗಳನ್ನು ಮಾತ್ರ ಸರ್ಕಾರದವರು ದಯೆಯಿಂದ ಕಳುಹಿಸುತ್ತಿದ್ದರು. ಆದರೆ ಆ ಸಂವತ್ಸರದಲ್ಲಿ ಗವರ್ನರ್ ಜನರಲ್‌ರಾಗಿದ್ದ ಲಾರ್ಡ್ ಆಕ್ಲಂಡ್ ಪ್ರಭುಗಳು ಕಾಗದಗಳನ್ನು ಊರಿಂದೂರಿಗೆ ಅಂಚೆಯ ಮೂಲಕ ಕಳುಹಿಸುವ ಏರ್ಪಾಡನ್ನು ತಮ್ಮ ಕೌನ್ಸಿಲರುಗಳ ಮೂಲಕ ರೂಢಿಸತಕ್ಕ ಅಧಿಕಾರ ಹೊಂದಿದ್ದಾರೆಂದು ವಿಧಾಯಕವಾಯಿತು. ಆಗ ಲಕ್ಕೋಟೆಗಳನ್ನೂ ಬುಕ್ಕುಗಳ ಕಟ್ಟನ್ನೂ ಇತರ ಸಾಮಾನಿನ ಭಾಂಗಿಗಳನ್ನೂ ಮಾತ್ರ ಕಳುಹಿಸುವಂತೆ ಏರ್ಪಾಡಾಯಿತು. ಆಗ ಲಕ್ಕೋಟೆಯ ಅಂಚೆ ಹಾಸಲನ್ನು ರವಾನಿಸುವವರಾಗಲಿ ವಿಳಾಸದಾರರಾಗಲಿ ಕೊಡಬಹುದಾಗಿತ್ತು. ಹಾಸಲನ್ನು ವಿಳಾಸದಾರರಿಂದ ವಸೂಲ್ಮಾಡುವಾಗ ದ್ವಿಗುಣವಾಗಿ ತೆಗೆದುಕೊಳ್ಳುತಲಿರಲಿಲ್ಲ; ಅದನ್ನು ನಾಣ್ಯರೂಪವಾಗಿಯೇ ವಸೂಲ್ಮಾಡುತಿದ್ದರು. ಪ್ರವೇಶದಲ್ಲಿ ಕೊಡದೆ ಇದ್ದ ಲಕ್ಕೋಟೆಗಳ ಹಾಸಲನ್ನು ದ್ವಿಗುಣವಾಗಿ ವಸೂಲ್ಮಾಡಬೇಕೆಂಬ ವಿಧಿಯು ೧೮೫೪ ರಲ್ಲಿ ರೂಢಿಗೆ ಬಂದಿತು.

ದೂರವನ್ನು ಪರಿಗಣಿಸಿ ಹಾಸಲು ತೆಗೆದುಕೊಳ್ಳುತಲಿದ್ದರು. ಒಂದು ಲಕ್ಕೋಟೆಗೆ ಕಡೇಪಕ್ಷ ಒಂದಾಣೆ ಹಾಸಲು ಇತ್ತು, ಅದರ ತೂಕ ಮಾತ್ರ ಒಂದು ತೊಲೆಯ ಒಳಗೇ ಇರಬೇಕಾಗಿತ್ತು. ೨೦ ಮೈಲಿಯೊಳಗಿದ್ದರೆ ಒಂದಾಣೆ, ೩೦೦ ಮೈಲಿಗೆ ೯ ಆಣೆ, ೬೦೦ ಮೈಲಿಗೆ ೧೧ ಆಣೆ, ೧,೦೦೦ ಮೈಲಿಗೆ ಮೇಲ್ಪಟ್ಟದ್ದರೆ ಒಂದು ರೂಪಾಯಿ, ಈ ರೀತಿ ಹಾಸಲಿತ್ತು. ೧೮೩೭ನೇ ಇಸವಿಯ ಈ ಕಟ್ಟಳೆಯು ೧೮೫೪ ರಲ್ಲಿ ರದ್ದಾಗಿ ಅಂದಿನಿಂದ ನಾಣ್ಯರೂಪದಲ್ಲಿ ಹಾಸಲು ಕೊಡುವುದು ತಪ್ಪಿಹೋಯಿತು. ಜನರು ಈಗಿನಂತೆ ಸ್ಟಾಂಪುಗಳನ್ನು ಕೊಂಡು ಹಚ್ಚಬೇಕೆಂದು ವಿಧಿಸಿದರು. ಈ ಹೊಸ ಕಟ್ಟಳೆಯ ಪ್ರಕಾರ ದೂರವನ್ನು ಲೆಕ್ಕಿಸದೆ ಒಂದು ತೊಲಾ ತೂಕವುಳ್ಳ ಲಕ್ಕೋಟೆಗಳ ಮೇಲೆ ೨ ಆಣೆ ಹಾಸಲನ್ನು ತೆಗೆದುಕೊಳ್ಳುತಲಿದ್ದರು. ಈ ಹಾಸಲಿನ ದರವನ್ನು ೧೮೬೬ ರಲ್ಲಿ ಒಂದಾಣೆಗೂ, ೧೮೬೯ ರಲ್ಲಿ ಅರ್ಧಾಣೆಗೂ, ತೂಕವನ್ನು ಅರ್ಧತೊಲೆಗೂ ಇಳಿಸಿದರು. ೧೮೯೯ ರಲ್ಲಿ ಒಂದಾಣೆಯ ಹಾಸಲಿಗೆ ೧॥ ತೊಲಾ ತೂಕದ ಲಕ್ಕೋಟೆಯನ್ನು ಕಳುಹಿಸಬಹುದಾಯಿತು.

ಭಾಂಗಿಯ ಹಾಸಲು ಪೂರ್ವದಲ್ಲಿ ಬಹಳ ಹೆಚ್ಚಾಗಿತ್ತು. ೬೦೦ ತೊಲಾ ತೂಕವುಳ್ಳ ಭಾಂಗಿಯನ್ನು ತೆಗೆದುಕೊಳ್ಳುತಿರಲಿಲ್ಲ; ಇಂಥಾ ಭಾಂಗಿಗಳಿಗೆ ೩೦೦ ಮೈಲುಗಳಿಗೆ ಒಳಗಾಗಿದ್ದರೆ ೨೦ ರೂಪಾಯಿ ಹಾಸಲು. ೧,೦೦೦ ಮೈಲುಗಳಿಗೆ ಮೇಲ್ಪಟ್ಟದ್ದರೆ ರೂ. ೩೧—೨—೦. ಈ ದರವನ್ನು ೧೮೬೬ ರಲ್ಲೂ ಈಚೆಗೆ ೧೮೮೦ ರಲ್ಲೂ ಇಳಿಸಿ, ೧೮೯೯ ರಲ್ಲಿ ೨೦ ತೊಲಾ ತೂಕವುಳ್ಳ ಭಾಂಗಿಗಳಿಗೆ ೨ ಆಣೆ ಹಾಸಲೆಂದು ತೀರ್ಮಾನ ಮಾಡಿದರು. ಭಾಂಗಿಯ ಹಾಸಲನ್ನು ವಿಳಾಸದಾರರಿಂದ ವಸೂಲ್ಮಾಡಲೂಬಹುದೆಂಬ ಕಟ್ಟಳೆಯು ೧೯೦೧ರ ವರೆಗೂ ಇದ್ದದ್ದು ಆಗ ತಪ್ಪಿಹೋಯಿತು.

ವರ್ತಮಾನ ಪತ್ರಿಕೆಗಳ ಹಾಸಲು ೧೮೩೭ ರಲ್ಲಿ—೨೦ ಮೈಲಿ ದೂರಕ್ಕಿಂತ ಹೆಚ್ಚಾಗಿಲ್ಲದಿದ್ದರೆ ೩॥ ತೊಲೆ ತೂಕಕ್ಕೆ ೧ ಆಣೆಯಾಗಿದ್ದಿತು. ೧೮೫೪ ರಲ್ಲಿ ಸ್ಟಾಂಪುಗಳನ್ನು ಹಚ್ಚಬೇಕೆಂಬ ಕಟ್ಟಳೆಯು ರೂಢಿಗೆ ಬಂತಷ್ಟೆ. ಆಗ ೨ ಆಣೆಗೆ ೨॥ ತೊಲಾ ತೂಕದಷ್ಟು ಕಳುಹಿಸಬಹುದಾಗಿತ್ತು. ೧೮೬೬ ರಲ್ಲಿ ದರವು ೧೦ ತೊಲೆಗಳ ತೂಕಕ್ಕೆ ಒಂದಾಣೆಯೆಂತಲೂ, ೧೮೭೨ ರಲ್ಲಿ ಅಷ್ಟೇ ತೂಕಕ್ಕೆ ಅರ್ಧಾಣೆಯೆಂತಲೂ, ಕಡೆಗೆ ೧೯೦೫ ರಲ್ಲಿ ಆರು ತೊಲಾ ತೂಕದ ಪರಿಯಂತರ ಕಾಲಾಣೆಯೆಂತಲೂ ವಿಧಾಯಕವಾಯಿತು. ಈ ಹಾಸಲನ್ನು ನಾಣ್ಯರೂಪವಾಗಿ ಕೊಡಬೇಕೆಂಬ ಕಟ್ಟಳೆಯನ್ನು ೧೮೯೯ ರಲ್ಲಿ ರದ್ದುಮಾಡಿದರು.

ವ್ಯಾಲ್ಯೂಪೇಬಲ್ ಮತ್ತು ಇನ್ಸೂರೆನ್ಸ್ ಎಂಬ ಏರ್ಪಾಡುಗಳು ೧೮೭೭ ರಿಂದ ರೂಢಿಗೆ ಬಂದವು. ಪೋಸ್ಟ್ ಕಾರ್ಡುಗಳನ್ನು ೧೮೭೯ ರಲ್ಲಿ ಉಪಯೋಗಕ್ಕೆ ತರಲಾಯಿತು. ಮನಿಯಾರ್ಡರ್ ಏರ್ಪಾಡನ್ನು ೧೮೮೦ ರಲ್ಲಿ ಪೋಸ್ಟ್ ಇಲಾಖೆಗೆ ಸೇರಿಸಿದರು. ಪೋಸ್ಟ್ ಆಫೀಸಿನ ಸೇವಿಂಗ್ಸ್ ಬ್ಯಾಂಕುಗಳನ್ನು ೧೮೮೨ರಲ್ಲಿ ಸ್ಥಾಪಿಸಿದರು. ಅದೇ ವರ್ಷ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಗಳನ್ನು ಒಂದಾಗಿ ಕೂಡಿಸಿದರು. ಇದಲ್ಲದೆ ಕ್ವಿನೈನ್ ಎಂಬ ಔಷಧ ಪೊಟ್ಟಣಗಳನ್ನು ವಿಕ್ರಯಿಸುವ ಏರ್ಪಾಡೇ ಮೊದಲಾದ ಅನೇಕ ಬಾಬುಗಳನ್ನು ಸ್ಥಾಪಿಸಿ, ಪೋಸ್ಟ್ ಇಲಾಖೆಯವರು ಪ್ರಜೆಗಳ ಸೌಕರ್ಯವನ್ನು ಹೆಚ್ಚಿಸಿದ್ದಾರೆ. ಈ ಭಾಗದಲ್ಲಿ ಅಧಿಕಾರಿಗಳು ಮಾತ್ರವಲ್ಲದೆ, ಚಿಲ್ಲರೆ ನೌಕರರು ಕೂಡ ಬಹು ಪ್ರಯಾಸಿಗಳಾಗಿಯೂ ಸತ್ಯಸಂಧತೆಯಿಂದಲೂ ಕೆಲಸ ಮಾಡುತ್ತಾ ಬಂದಿರುವುದರಿಂದ ಈ ಅಂಚೆ ಇಲಾಖೆಯು ಅತ್ಯಂತ ಸಮರ್ಪಕವಾದ ಸ್ಥಿತಿಯಲ್ಲಿದೆಯೆಂದು ಹೇಳಬೇಕಾಗಿದೆ.

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



31

ಕೆಳಹೊಟ್ಟೆಯ ನೋವು ವಾಂತಿಭೇದಿ ಉಪದ್ರ, ಖರೀ ಭೇದಿಯಾಗುವದು, ಅಮಶಂಕೆ, ಕಾಲುಗಳುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಬಲ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿದ್ದೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಗಲೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮುಂದೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಒಳದೇಶದ ವರ್ತಮಾನಗಳು.

ಕೋಲಾರದ ಬಂಗಾರದ ಗಣಿಗಳಲ್ಲಿ ಉತ್ಪತ್ತಿ ಮಾಡಲ್ಪಟ್ಟ ೧೭,೬೭೬,೦೫೫ ರೂಪಾಯಿ ಚಿನ್ನವು ಕಳೆದ ವಾರ ಬೊಂಬಾಯಿ ಮಾರ್ಗವಾಗಿ ವಿಲಾಯಿತಿಗೆ ಸಾಗಿಹೋಯಿತು

****

ರಜಾ ಪಡೆದು ಸೀಮೆಗೆ ಹೋಗಿದ್ದ ಮ॥ ಕಾಂಪ್ ಸಾಹೇಬರು ಕಳೆದ ವಾರ ವಾಪಸು ಬೆಂಗಳೂರಿಗೆ ಬಂದು, ಮ॥ ಮಾಧ್ಯೆಯವರಿಂದ ಪೊಲೀಸ್ ಇನ್ಸ್ಪೆಕ್ಟರ್ ಜನರಲ್ ಅಧಿಕಾರದ ಭಾರವನ್ನು ವಹಿಸಿಕೊಂಡಿದ್ದಾರೆ.

****

ರಾಜಧಾನಿಯ ಹಳ್ಳದಕೇರಿಯಲ್ಲಿ ಕಳ್ಳರು ಒಂದು ಮನೆಗೆ ನುಗ್ಗಿ ಒಬ್ಬನನ್ನು ಕೈಕಾಲು ಕಟ್ಟಿ ಬಾಯಿಗೆ ಬಟ್ಟೆ ತುರುಕಿ, ಅವನ ಕೈಯಲ್ಲಿದ್ದ ಚಿನ್ನದ ಬಳೆಗಳನ್ನು ಕಸುಕೊಂಡು ಹೋದರೆಂದು ಪ್ರಕಟವಾಗಿದೆ.

****

ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ನಿನ್ನೆ ದಿನ ರಾಜಧಾನಿಗೆ ಪಯಣಮಾಡಿ, ರೆವಿನ್ಯೂ ಬೋರ್ಡು ಮುಂತಾದ್ದರ ಏರ್ಪಾಡಿನ ವಿಚಾರವನ್ನು ಕುರಿತು ಶ್ರೀಮನ್ಮಹಾರಾಜರವರ ಸಂಗಡ ಮಾತನಾಡಿ ಗೊತ್ತುಮಾಡುತ್ತಿದ್ದಾರೆ

****

ಒಂದುವರೆ ವರ್ಷದ ರಜಾ ಪಡೆದು ವಿಲಾಯಿತಿಗೆ ಹೋಗಿ ಬ್ಯಾರಿಸ್ಟರ್ ಪರೀಕ್ಷೆಗೆ ಓದುತ್ತಿದ್ದ ಮ॥ ಆರ್. ಬಿ. ಪ್ರಭುಮರ್ ಯವರು ಕಳೆದ ವಾರ ವಾಪಸು ಬಂದು, ಕೋಲಾರದ ಚಿನ್ನದ ಗಣಿಗಳಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಭಾರವನ್ನು ವಹಿಸಿಕೊಂಡರು.

****

ಮೈಸೂರು ಸಂಸ್ಥಾನದ ಚೀಫ್ ಕೋರ್ಟಿನ ಚೀಫ್ ಜಡ್ಜರಾದ ಮ॥ ಎ. ಇ. ಸ್ಟೀಲಿ ಸಾಹೇಬರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಇದ್ದಾರೆಂತಲೂ ಅವರು ಮುಂದಿನ ಅಕ್ಟೋಬರ್ ತಿಂ... ಸೀಮೆಗೆ ಹೊರಟುಹೋಗುವವರಾಗಿದ್ದಾರೆಂತಲೂ ಪ್ರಕಟವಾಗಿ...

****

ರಾಜಧಾನಿಯಲ್ಲಿ ಕಳೆದ ವಾರ ೨—೩ ದಿವಸ ಒಳ್ಳೇ ... ಆಯಿತು. ಇನ್ನೂ ಮಳೆ ಬರುವ ಹಾಗೆ ಕಾಣುತ್ತಿದೆ. ... ಧಾರಣೆಗಳೆಲ್ಲಾ ಬಹಳ ಹೆಚ್ಚಾಗಿರುವವು. ಆದರೆ ಈ ಸ... ಇಲ್ಲದೆ ಕ್ಷಾಮ ಪ್ರಾಪ್ತವಾಗುವ ಹಾಗಿದ್ದ ಭೀತಿಯು ಕಳೆದು... ಯಿತೆಂದು ಎಲ್ಲರೂ ಸಂತೋಷಪಡುವರು

****

ಲೆಫ್ಟಿನೆಂಟ್ ಕರ್ನಲ್ ದೇಸರಾಜೇ ಅರಸಿನವರ ಸೇನ... ಬ್ಬನು ಅವರ ಬಾಬತು ಕೆಲವು ಸಾವಿರ ರೂಪಾಯಿಗಳ ... ನ್ನು ಅಪಹರಿಸಿದ್ದುದು ಪತ್ತೆ ಆಗಿ ನಾಲ್ವರು ಅಪರಾಧಿಗಳು ... ರುತ್ತಾರೆ. ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಮೊನ್ನೆ ... ವಾರ ಈ ಮೊಕದ್ದಮೆಯನ್ನು ಸ್ವಲ್ಪ ಪರ್ಯಂತ ಮಾಡಿ, ... ಸೋಮವಾರಕ್ಕೆ ಹೀರಿಂಗು ಇಟ್ಟಿದ್ದಾರೆ

****

ಮುಂದಿನ ವರುಷದ ಪ್ರಾರಂಭದಲ್ಲಿ ನಮ್ಮ ಸಂಸ್ಥಾನಕ್ಕೆ ದಯಮಾಡುವ ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯಕ್ಕಾಗಿ ... ಡುಗಳನ್ನು ಮಾಡಬೇಕಾಗಿರೋಣದರಿಂದ ಮೈಸೂರು ಸರ್ಕಾರದವರು ಆ ಏರ್ಪಾಡುಗಳ ಮೇಲ್ವಿಚಾರಣೆಗಾಗಿ ಮಿಲಿಟರಿ ಸೆ... ಕರ್ನಲ್ ಜೋನ್ಸ್ ಸಾಹೇಬರನ್ನೂ ಡೆಪ್ಟಿ ಕಮಿಷನರ್ ಕೆ. ಪಿ. ಪುಟ್ಟಣ್ಣಚೆಟ್ಟಿಯವರನ್ನೂ ನೇಮಕಮಾಡಿದ್ದಾರೆ.

****

ರಾಜಧಾನಿಯ ಪ್ಲೇಗ್ ಮತ್ತು ಹೆಲ್ತ್ ಆಫೀಸರಾದ ಮ... ವಿ. ಕುಪ್ಪುಸ್ವಾಮಿ ಮೊದಲಿಯಾರ್ರವರು ಈ ದಿನ ಮ॥ ಎಂ. ಜಗನ್ನಾಥಂ ಪಿಳ್ಳೆಯವರಿಗೆ ತಮ್ಮ ಕೆಲಸದ ಭಾರವನ್ನು ವಹಿಸಿ, ನಾಳೆ ... ರಿಗೆ ಪ್ರಯಾಣಮಾಡುವವರಾಗಿದ್ದಾರೆಂದು ಕೇಳುತ್ತೇವೆ. ಮ॥ ಜಗನ್ನಾಥಂ ಪಿಳ್ಳೆಯವರು ಇದುವರೆಗೆ ಜನರಲ್ ಆಸ್ಪತ್ರೆಯ... ಪ್ರಜೆಗಳ ಪ್ರೀತಿ ಗೌರವಗಳನ್ನು ಪಡೆದಿರುತ್ತಾರಾದ್ದರಿಂದ ಮ॥ ಕುಪ್ಪುಸ್ವಾಮಿ ಯವರಂತೆ ಈ ಕೆಲಸದಲ್ಲೂ ಒಳ್ಳೇ ಹೆಸರು ... ಯುವರೆಂದು ನಿರೀಕ್ಷಿಸುತ್ತೇವೆ.

****

ತುಮಕೂರು ತಾಲ್ಲೂಕು ಅಜ್ಜಪ್ಪನ ಹಳ್ಳಿಯಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಗ್ರಹಕ್ಕೆ ದೇವಸ್ಥಾನದ ಹಳೇ ಒಡವೆಗಳನ್ನು ಕರಗಿಸಿ, ಪಡಗಲೆ ನಾಮವನ್ನೂ ಕಿ... ನ್ನೂ ಗ್ರಾಮಭೋಗ ಪಟೇಲರುಗಳು ಮಾಡಿಸಿಕೊಡುವೆವು ... ಳುತ್ತಾರೆಂದೂ ಮಾಡಿಸೋಣವೇ ಎಂದೂ ಡೆಪ್ಟಿ ಕಮಿಷನರ್ ... ಗವರ್ನಮೆಂಟಿನವರನ್ನು ಕೇಳಿದರು. ಸರ್ಕಾರದವರು ... ಕಿರೀಟವನ್ನೂ ಒಂದು ತಿಲಕವನ್ನೂ ಮಾಡಿಸಬೇಕೆಂತಲೂ ... ಲೆ ನಾಮವಾಗಲಿ ತೆಂಗಲೆ ನಾಮವಾಗಲಿ ಮಾಡಿಸಕೂಡದೆ... ಹುಕುಂ ಕೊಟ್ಟಿದ್ದಾರೆ.

****

ಮೊನ್ನೆ ಸೋಮವಾರ ಸಾಯಂಕಾಲ ಶ್ರೀಮನ್ಮಹಾರಾಜರವರೂ ಯುವರಾಜರವರೂ ನೀಲಗಿರಿ ಬೆಟ್ಟದಿಂದ ಮೋಟಾರ್ ಕಾರ್ ಎಂಬ ಗಾಡಿಯ ಮೇಲೆ ರಾಜಧಾನಿಗೆ ಸುರಕ್ಷಿತವಾಗಿ ... ಮಾಡಿದರು. ಅವರ ಸಂಗಡ ಮ॥ ಗಳಾದ ಕಾಂತರಾಜೇ ಅರಸಿನವರು, ಮೆಕಾನಕಿ ಯವರು, ರಾಘವೇಂದ್ರರಾಯರು, ... ಹೇಲ್ ಯವರು ಬಂದರು. ಅರಸುಮಕ್ಕಳೂ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಅರಮನೆಯಲ್ಲಿ ಕಾದಿದ್ದು, ಶ್ರೀಮನ್ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿದರು. ಗೌರವಾರ್ಥ ೨೧ ತೋಪುಗಳು ಹಾರಿಸಲ್ಪಟ್ಟವು.

****

ಮೋಟರ್ ಕಾರ್ ಎಂಬ ಸ್ವತಂತ್ರವಾಗಿ ಓಡುವ ಗಾಡಿ... ಕುದುರೆ ಟಪಾಲ್‌ಗಾಡಿಗಳಿಗೆ ಪ್ರತಿಯಾಗಿ ಊರಿಂದೂರಿಗೆ ... ಬರುವಂತೆ ಇಡಬೇಕೆಂತಲೂ ಅವುಗಳಲ್ಲಿ ಜನರನ್ನೂ ಸಾ... ನನ್ನೂ ಸಾಗಿಸಬೇಕೆಂತಲೂ ಕೆಲವರು ಆಲೋಚನೆ ಮಾಡುತ್ತಿ... ಚಾಮರಾಜನಗರದಿಂದ ಸದ್ಯ ಒಬ್ಬರು ಈ ಗಾಡಿಯನ್ನು ... ಕೆಂದು ಯೋಚಿಸಿರುವಂತೆ ವರ್ತಮಾನವಿದೆ. ಇದಕ್ಕೆ ...

…ಕ್ಕೆ ಕೊಂಕಲಾಗಲಿ ಹಳ್ಳತಿಟ್ಟುಗಳಾಗಲಿ ಇಲ್ಲದೆ ಒಂದೇ …ವಾಗಿರಬೇಕು. ಇಲ್ಲವಾದರೆ ಮೋಟರ್‌ಗಾಡಿಗಳು ಬೇಗನೆ …ಹೋಗಿ ಮಾಲೀಕರಿಗೆ ತುಂಬಾ ನಷ್ಟವಾಗುವದು.

* * * *

…ಮೂರು ಡಿಸ್ಟ್ರಿಕ್ಟಿಗೆ ಸೇರಿದ ಶಿವನೆ ಎಂಬ ರೈಲ್ವೆ ಸ್ಟೇಷನ್ … ಕಳೆದವಾರ ಆರು ಪಾರಿವಾಳ ಪಕ್ಷಿಗಳನ್ನು ಬೆಂಗಳೂರು ಆ… ಹಾರಿಸಿದರು. ಅಲ್ಲಿಂದ ಬೆಂಗಳೂರಿಗಿರುವ ೧೫೦ ಮೈಲಿ ದೂ… ಒಂದು ಪಕ್ಷಿಯು ೬ ಗಂಟೆ ೪೩ ನಿಮಿಷಗಳಲ್ಲಿ ಹಾರಿ ಬಂ… ಎರಡನೆ ಪಕ್ಷಿಯು ೬ ಗಂಟೆ ೫೬ ನಿಮಿಷದಲ್ಲೂ …ನೆ ಪಕ್ಷಿಯು ೭ ಗಂಟೆ ೬ ನಿಮಿಷಗಳಲ್ಲೂ ಬೆಂಗಳೂರಿಗೆ …ಬಂದವು. ಈ ಮೂರು ಪಾರಿವಾಳಗಳ ಮಾಲೀಕರಿಗೂ ಬ…ಮಾನಗಳು ಕೊಡಲ್ಪಟ್ಟವು. ಈ ಪಕ್ಷಿಗಳು ಒಂದು ನಿಮಿಷಕ್ಕೆ …೦೦ ಗಜಗಳ ದೂರದ ಪ್ರಕಾರ ಅಂತರಿಕ್ಷದಲ್ಲಿ ಹಾರಿಕೊಂಡು …ರುತ್ತವೆ.

* * * *

ನಮ್ಮ ಮಹಾರಾಜರವರು ಕಳೆದ ೧೮ ನೆ ತಾರೀಖಿನ ದಿನ ನೀ…ಯಿಂದ ನೆಟ್ಟಗೆ ಸಿಂಲಾ ಪಟ್ಟಣಕ್ಕೆ ವೈಸ್‌ರಾಯಿಯವರನ್ನು …ಬರುವ ಉದ್ದೇಶ್ಯ ಪ್ರಯಾಣಮಾಡುವವರಾಗಿದ್ದರೂ ಲಾ… …ವರ್ನರವರು ವೈಸ್‌ರಾಯಿ ಕೆಲಸಕ್ಕೆ ರಾಜೀನಾಮೆ ಕೊಟ್ಟ… ನಮ್ಮ ಮಹಾರಾಜರವರು ಆ ಪ್ರಯಾಣವನ್ನು ನಿಲ್ಲಿಸಿಬಿ…ಟ್ಟ ಗೊತ್ತಾಗಿದೆಯಷ್ಟೆ. ಆ ದಿನ ಮಹಾರಾಜರವರು ನೀಲಗಿರಿ… ಪ್ರಯಾಣಮಾಡಿದರೆಂದು ತಿಳಿದು ಅಲ್ಲಿನ ತೋಫ್‌ಖಾನೆ… ಗೌರವಾರ್ಥವಾದ ೨೧ ಗುಂಡುಗಳನ್ನು ಹಾರಿಸಿದರು …ಯು ಮಹಾರಾಜರವರು ತಂತೀ ವರ್ತಮಾನಕೊಟ್ಟು ತಮ…ಗಾಗಿ ಮಾಡಿದ ಏರ್ಪಾಡನ್ನೆಲ್ಲಾ ನಿಲ್ಲಿಸುವಂತೆ ಹುಕುಂಮಾಡಿದರು.

* * * *

ಸರ್ಕಾರಿ ಬಾಲಿಕಾ ಪಾಠಶಾಲೆಗಳಲ್ಲಿ ಉಪಾಧ್ಯಾಯಿನಿಯರಾ…ದ ಸ್ತ್ರೀಯರಿಗೆ ಮುಂದೆ ಹೇಳುವಂತೆ ಮಾಹೆಯಾನ ಸಂಬ…ಳವನ್ನು ಕೊಡತಕ್ಕದ್ದೆಂದು ಗವರ್ನಮೆಂಟಿನವರು ಅಪ್ಪಣೆಕೊಡಿಸಿ… ಆ ದರಗಳು ಯಾವವೆಂದರೆ—ಲೋವರ್ ಸೆಕಂಡರಿ ಪರಿಕ್ಷೆ …ಪ್ಯಾಸಾದವರಿಗೆ ೨೦ ರೂಪಾಯಿ, ಲೋವರ್ ಸೆಕಂಡರಿ ಆಗಿ ಟೀಚರ… …ಫಿಕೇಟ್ ಪಡೆದವರಿಗೆ ೨೫ ರೂಪಾಯಿ, ಅಪ್ಪರ್ ಸೆಕಂಡ… …ವರಿಗೆ ೩೦ ರೂಪಾಯಿ, ಅಪ್ಪರ್ ಸೆಕಂಡರಿ ಆಗಿ ಟೀಚರ್ ಸರ್ಟಿ… …ಟ್ ಪಡೆದವರಿಗೆ ೪೦ ರೂಪಾಯಿ, ಮೆಟ್ರಿಕ್ಯುಲೇಷನ್ ಆದವ… ೩೦ ರಿಂದ ೫೦ ರೂಪಾಯಿವರೆಗೆ, ಎಫ್. ಎ ಪರಿಕ್ಷೆ ಕೊಟ್ಟ…ವರಿಗೆ ೫೦ ರೂಪಾಯಿನಿಂದ ೧೦೦ ರೂಪಾಯಿ ತನಕ, ಈ ಪ್ರಕಾರ …ನಿಷ್ಕರ್ಷೆ ಮಾಡಿ ಸರ್ಕಾರದವರು ಹುಕುಂ ಕೊಟ್ಟವಾರೆ.

* * * *

ಮೈಸೂರಿಗೂ ನಂಜನಗೂಡಿಗೂ ಹೋಗಿಬರುವ ರಸ್ತೆಯಲ್ಲಿ …ಬಡು ರಸ್ತೆಯ ಮೇಲೆ ಟೋಲ್ ಗೇಟ್ ಎಂಬ ತೆರಿಗೆಯನ್ನು ವ…ಸೂಲ್ಮಾಡುವುದಕ್ಕೆ ಸರ್ಕಾರದವರು ಟೋಲ್ ಗೇಟನ್ನು ಬಾಪಲಿ, …ಕೋಟೆ, ಕರಪುರ, ಈ ಊರುಗಳಿಗೆ ಆಗಾಗ್ಗೆ ವರ್ಗಾಯಿ…ಸುತ್ತ ಬಂದರು. ಈಗ ಮೈಸೂರು ಡೆಪ್ಯುಟಿ ಕಮಿಷನರಾದ ಮಿ' …ರ್ನರ್ ಸಾಹೇಬರು ಆ ಪ್ರಾಂತ್ಯವೆಲ್ಲಾ ಸುತ್ತಿಬಂದು, ಕೊಳ್ಳೇ… …ಹಳ್ಳಿಯಲ್ಲಿ ಈ ಟೋಲ್ ಗೇಟನ್ನು ನೇಮಿಸಿದರೆ ಅನುಕೂ…ಲವೆಂದು ಸೂಚಿಸಿದರು. ಗವರ್ನಮೆಂಟಿನವರು ಅದರಂತೆ ಒಪ್ಪಿ… …ರ್ಡರ್ ಮಾಡಿ, ಆ ಪ್ರಾಂತ್ಯದ ಬಾಗಾಯತುದಾರರಿಗೆ ಮಾಫಿ… …ನಸು ಕೊಡುವುದಕ್ಕೂ ಅವರಿಂದ ಈ ಟೋಲ್ ಸುಂಕವನ್ನು …ಮಾಡದೆ ಇರುವುದಕ್ಕೂ ಸರಿಯಾದ ಏರ್ಪಾಡನ್ನು ಗವರ್ನ…ಮೆಂಟಿಗೆ ಸೂಚಿಸಬೇಕೆಂದು ಹುಕುಂ ಕೊಟ್ಟಿದಾರೆ.

* * * *

ಕಳೆದ ಶನಿವಾರ ನಡೆದ ರಾಜಧಾನಿಯ ಮ್ಯುನಿಸಿಪಲ್ ಮೀ…ಟಿಂಗಿನಲ್ಲಿ ಚಾಮರಾಜ ಮೊಹಲ್ಲೆ ಮತ್ತು ನಜರ್‌ಬಾದ್ ಮೊಹಲ್ಲೆಗ…ಳಿಗೆ ಮ್ಯುನಿಸಿಪಾಲಿಟಿಯವರೇ ಸಿಬ್ಬಂದಿಯನ್ನಿಟ್ಟು ಪಾಯಿ…ಖಾನೆಯನ್ನು ಗುಡಿಸಿ, ಆ ಮೊಹಲ್ಲೆಗಳ ನಿವಾಸಿಗಳಿಂದ ಅದಕ್ಕಾ…ಗಿ ಬೇರೆ ತೆರಿಗೆ ಹಾಕಿ ವಸೂಲ್ಮಾಡಬೇಕೆಂತಲೂ, ವಿದ್ಯಾರ್ಥಿ…ಗಳು ಇತರರಿಗೂ ಈಜುವ ಕೊಳವನ್ನು ಕಟ್ಟಿಸುವುದಕ್ಕೆ ಸ್ಥಳ… …ಮಾಡಬೇಕೆಂತಲೂ ತೀರ್ಮಾನವಾಗಿದೆ. ಟೋಲ್ ಗೇಟ …ಸ್ಪೆಕ್ಟರ್ ಬಾಲಕೃಷ್ಣಯ್ಯಂಗರು ಮ್ಯುನಿಸಿಪಾಲಿಟಿಯವರ ಮೇ…ಲೆ ದಾವಾಮಾಡಿ ೨೫೦ ಚಿಲ್ಲರೆ ರೂಪಾಯಿಗೆ ಡಿಕ್ರಿ ಪಡೆದು ಇರು…ರೆ. ಈ ಮೊಬಲಗನ್ನು ಮ್ಯುನಿಸಿಪಾಲಿಟಿಯಿಂದ ಕೊಡತಕ್ಕದ…ಲೂ, ಮಿ॥ ನಂದುಂಪರಾಜೇ ಅರಸಿನವರು ಕಾನೂನಿಗೆ ವಿರೋ…ಧವಾಗಿ ನಡಿಸಿದ್ದರಿಂದ ಅವರಿಂದಲೇ ಕೊಡಿಸಬೇಕೆಂತಲೂ ಕೆಲ…ರು ಅಭಿಪ್ರಾಯ ಪಟ್ಟರು. ಆದರೆ ಈ ರೀತಿ ಅವರಿಂದ ವಸೂಲ್ಮಾ…ಡು ಧರ್ಮವಲ್ಲವೆಂದು ಕಡೆಗೆ ತೀರ್ಮಾನವಾಯಿತು.

ತಾಲ್ಲೋಕು ವರ್ತಮಾನಗಳು.

ಸಕಲೇಶಪುರ —ಇಲ್ಲಿನ ಡಾಕ್ಟರ್ ಮಿ॥ ಆಶೀರ್ವಾದಂಯವರು ಮೈಸೂರಿಗೆ ವರ್ಗಾಯಿಸಲ್ಪಟ್ಟರು. ಇವರು ಅಲ್ಲಿನ ಪ್ರಜೆಗಳಿಗೆ ಬಡವರೆಂತಲೂ ಐಶ್ವರ್ಯವಂತರೆಂತಲೂ ಪಕ್ಷಪಾತವಿಲ್ಲದೆ …ಉಪಚಾರಗಳನ್ನು ಮಾಡುತ್ತಲಿದ್ದರು. ಈ ಊರಿಗೆ ೧೯೦೪ …ಪ್ಲೇಗು ಬಂದಾಗ ಇವರು ಮಾಡಿದಂಥ ಪ್ರಜೋಪಕಾರ ಕಾ…ರ್ಯಗಳನ್ನು ಎಷ್ಟು ವಿವರಿಸಿದಾಗ್ಯೂ ಕೊಂಚವಾಗಿರುತ್ತೆ. ಇವ…ರಿಗೆ ಇಲ್ಲಿನ ಪ್ರಜೆಗಳು ತಮ್ಮ ಕೃತಜ್ಞತೆಯನ್ನು ತೋರಿಸಲು ಮೊದಲೇ ಏರ್ಪಡಿಸಿದ್ದ ಪ್ರಕಾರ ಕನ್ನಡಾ ಸ್ಕೂಲನ್ನು ಕದಳಿಸ್ತಂಭ ತೋರಣ ಪುಷ್ಪಗಳಿಂದಲೂ ವಿವಿಧ ಚಿತ್ರಗಳಿಂದಲೂ ಅಲಂಕರಿಸಿದ್ದರು. ಈ ಸಭೆಗೆ ಇಲ್ಲಿನ ಸಬ್ ಡಿವಿಜನ್ ಸಾಹೇಬರು, ತಾಲ್ಲೂಕು ಎ.ಟ ಬ್ಲಾಂಡರು ಮತ್ತು …ಧಿಕಾರಿಗಳು, ಪ್ಲೀಡರುಗಳು, ಸಾಹುಕಾರರು, ಮುಂತಾದ ದೊಡ್ಡ ಮನುಷ್ಯರೇ ಅಧಿಕವಾಗಿ ಬಹು ಜನಗಳು ದಯಮಾಡಿಸಿದ್ದರು. ಸಭೆಯ ಅಧ್ಯಕ್ಷರು ಏರ್ಪಡಿಸಿದ್ದ ಮೇರೆ ಮೆಂಬರುಗಳು ಹೋಗಿ ಡಾಕ್ಟರವರನ್ನು ಮರ್ಯಾದೆಯೊಡನೆ ಕರೆದುಕೊಂಡು ಬಂದರು ಮಿ॥ ಶ್ರೀಕಂಠಯ್ಯನವರಾದಿಯಾಗಿ ಎದುರುಗೊಂಡು ಅವರಿಗಾಗಿ ಏರ್ಪಡಿಸಿದ್ದ ಉಚಿತಾಸನದಲ್ಲಿ ಅಲಂಕರಿಸಿದರು. ನಂತರ ಸಭೆಯ ಉದ್ದೇಶವನ್ನೂ ಡಾಕ್ಟರವರ ಗುಣಕಥನವನ್ನೂ ಮಿ॥ ಸುಬ್ಬಯ್ಯನವರು ಕನ್ನಡದಲ್ಲಿಯೂ ಖಾಜಿ ಸಾಹೇಬರು ಹಿಂದುಸ್ಥಾನಿಯಲ್ಲಿಯೂ ಸಬ್ ರಿಜಿಸ್ಟ್ರಾರು ಇಂಗ್ಲೀಷಿನಲ್ಲಿಯೂ ಉಪನ್ಯಾಸ ಮಾಡಿದರು. ವೇದಮೂರ್ತಿ ಸೂರಶಾಸ್ತ್ರಿಗಳು ಡಾ॥ ಆಶೀರ್ವಾದಂಯವರನ್ನು ದೇವರು ಆಶೀರ್ವಾದಿಸಲೆಂದು ಸಂಸ್ಕೃತದಲ್ಲಿ ರಚಿಸಿದ್ದ ಕವನವನ್ನು ಓದಿ, ಅರ್ಥ ಹೇಳಿದರು. ಸಬ್ ಡಿವಿಜನ್ ಸಾಹೇಬರವರು ಸಂಕ್ಷೇಪವಾಗಿ ಉಪನ್ಯಾಸ ಮಾಡಿದರು. ಮನೋಹರವಾದ ಸಂಗೀತವು ನಡಸಲ್ಪಟ್ಟಿತು. ಡಾಕ್ಟರವರು ಕೆಲವು ವಿಶ್ವಾಸಪೂರ್ವಕವಾದ ಮಾತುಗಳಿಂದ ಸಭಿಕರನ್ನು ವಂದಿಸಿದರು ಅನಂತರ ಮಿ॥ ಶ್ರೀಕಂಠಯ್ಯನವರು ಸಭೆಯ ಪರವಾಗಿ ನಿಂತು ಡಾಕ್ಟರವರಿಗೆ ಇಲ್ಲಿನ ಪ್ರಜೆಗಳ ಜ್ಞಾಪಕಾರ್ಥವಾಗಿ ಬಹುಮಾನ ಕೊಡಲು ಮೈಸೂರು ಗವರ್ನಮೆಂಟಿನವರನ್ನು ಟೆಲಿಗ್ರಾಂ ಮೂಲಕ ಕೇಳಿಕೊಂಡಿರುತ್ತೇವೆ. ಜವಾಬು ಬಂದ ನಂತರ ತಾಲ್ಲೂಕು ಅಮಲ್ದಾರರವರ ಮುಖಾಂತರ ತಮ್ಮಲ್ಲಿಗೆ ರವಾನಿಸಲಾಗುತ್ತೆ. ಸದರಿ ಬಹುಮಾನವನ್ನು ಸ್ವೀಕರಿಸಿ, ಪುರಜನಗಳ ಮನಸ್ಸಂತೋಷಪಡಿಸಬೇಕೆಂದು ವಂದಿಸಿ ವಿಜ್ಞಾಪನ ಪತ್ರಿಕೆಯನ್ನು ಫಲಪುಷ್ಪಗಳೊಂದಿಗೆ ಒಪ್ಪಿಸಿದರು. ಸಭಿಕರೆಲ್ಲಾ ಕರತಾಡನಗಳಿಂದ ಜಯಘೋಷವನ್ನು ಮಾಡಿದರು. ಎಲ್ಲರಿಗೂ ಗಂಧ ಪುಷ್ಪ ತಾಂಬೂಲ ಸಕ್ಕರೆ ಸಹಾ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು ವಾದ್ಯಘೋಷಗಳೊಡನೆ ಡಾಕ್ಟರವರನ್ನು ಅವರ ಬಂಗ್ಲೆಗೆ ಸಾಗಕಳುಹಿಸಿ ಬಂದರು. ಮುಂದೆ ಬರತಕ್ಕ ಡಾಕ್ಟರವರು ಇವರಂತೆ ಪ್ರಜೆಗಳ ಪ್ರೀತಿಗೌರವಕ್ಕೆ ಪಾತ್ರರಾಗುವರೆಂದು ಕೋರುತ್ತೇನೆ.

ತುಮಕೂರು.—ಸುಮಾರು ಎರಡು ವಾರಗಳಿಂದಲೂ ಈ ಷ್ಟೀ ಫಸಲಿಗೆ ಅನುಕೂಲವಾಯ್ತೇ ಹೊರ್ತು ಕೆರೆ ಕಟ್ಟೆಗಳಿಗೆ ಸಾಕಾದಷ್ಟು ನೀರು ಬಂದಿಲ್ಲ ರೈತರು ಮಳೆ ಸರಿಯಾಗಿ ಬಿದ್ದದೆ ಹೋದ್ದರಿಂದಲೂ ಹಿಂದೆ ಬಿತ್ತಿದ ಫಸಲಿಗೆ ಕಲದೀ ಹುಳವೆಂಬುವದು ಸೇರಿ ಅನೇಕ ಭಾಗವನ್ನು ನಾಶಮಾಡಿದ್ದರಿಂದಲೂ ಪುನಹ ಬೀಜ ಹೇರಾವುಮಾಡುತ್ತಿದಾರೆ. ಇದರಿಂದ ಹಿಂಗಾರಿನ ಮಳೆ ಸಂಪೂರ್ಣವಾಗಿ ನಡಸಿದ ಹೊರ್ತು ಫಸಲು ಕೈಗೂಡುವ ಆಸೆಯಿಲ್ಲ.—ಬೆಂಗಳೂರು ಡಿಸ್ಟ್ರಿಕ್ಟ್ ಕ್ಯಾಮುಗೊಂಡ್ಲುನಲ್ಲಿ ಪ್ಲೇಗ್ ಶುರುವಾಗಿರುವದರಿಂದಲೂ ಅಲ್ಲಿನ ವೈಶ್ಯ ಮಂಡಲಿಯವರು ತಮ್ಮ ನಿವಾಸದಿಂದ ರೋಗದ ಸೋಂಕಿನೊಡನೆ ಇಲ್ಲಿಯ ನಂಟರಿಷ್ಟರ ಮನೆಯನ್ನು ಪರೋಕ್ಷವಾಗಿಯೂ ಪ್ರತ್ಯಕ್ಷವಾಗಿಯೂ ಬಂದು ಸೇರುತ್ತಲಿದಾರೆ ಗತ ಸಾಲಿನಲ್ಲೂ ಇದೇ ಕಾರಣದಿಂದ ಇಲ್ಲಿನ ರೋಗೋತ್ಪತ್ತಿಗೆ ಕಾರಣವಾಯಿತೆಂದು ಧಾರಾಳವಾಗಿ ಹೇಳಬಹುದು. ಈ ವಿಷಯದಲ್ಲಿ ನಮ್ಮ ಊರಿನ ಮಹಾ ಜನಗಳೆಲ್ಲರೂ ಒಗ್ಗಟ್ಟಾಗಿ ಸೇರಿ ಈ ವಿಷಯವನ್ನು ಆಲೋಚನೆ ಮಾಡಿ, ಸೋಂಕಿನ ಪ್ರದೇಶದಿಂದ ಬರತಕ್ಕ ಜನರನ್ನು ನಿರೋಧಿಸುವ ಏರ್ಪಾಡನ್ನು ಮಾಡತಕ್ಕದ್ದು ತುಂಬಾ ಅವಶ್ಯಕವಿದೆ. ಹಾಗಲ್ಲದೆ ತಟಸ್ಥರಾದಲ್ಲಿ ಮುಂದೆ ಅಪಾರವಾದ ಕಷ್ಟನಷ್ಟಗಳಿಗೆ ಗುರಿಯಾಗುವದರಲ್ಲಿ ಯಾವ ಸಂಶಯವೂ ಇಲ್ಲ.—ಕಳೆದವಾರ ತಮ್ಮ ಪತ್ರಿಕೆಯಲ್ಲಿ ಪ್ರಕಟವಾದಂತೆ ಇಲ್ಲಿನ ಮಂಡಿಪೇಟೆಯನ್ನು ಊರ ಹೊರಗೆ ನಡೆಸುವದಕ್ಕೆ ಈ ಪಟ್ಟಣದ ಮುಕ್ಕಾಲುಪಾಲು ಜನರೂ ಅಲ್ಲದೆ ವರ್ತಕರು ಸಹ ಸಮ್ಮತಿಸದುವರಾದ್ದರಿಂದ ಸರ್ಕಾರದವರು ಈ ವಿಷಯದಲ್ಲಿ ತಕ್ಕ ಏರ್ಪಾಟಿನೊಡನೆ ಊರ ಹೊರಗಡೆ ವ್ಯಾಪಾರಕ್ಕೆ ಅನುಕೂಲಪಡಿಸಿ ಕೊಡುವಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.—ವರ್ತಕರು ತಮ್ಮ ಮೂಟೆಗಳು ಆಸಾಮಿಗಳಿಗೆ ಸಕಾಲಕ್ಕೆ ದೊರೆಯುವಂತೆ ರೈಲ್ವೆ ಸ್ಟೇಷನ್ನಿನಲ್ಲಿ ಪಾಸ್ ಮಾಡಿಕೊಡುವದಕ್ಕೆ ಗುಮಾಸ್ತೆ ಮುಂತಾದ ನೌಕರರಿಗೆ ಸಹಾಯ ಮಾಡುವ ಪದ್ಧತಿ ಬಹಳ ಕಾಲದಿಂದಲೂ ನಡೆದುಬರುತ್ತದೆ ಎಂದು ಕೇಳುತ್ತೇವೆ. ಇದರಿಂದ ಬಡವರೂ ಕೂಡ ಸಾಹುಕಾರರಂತೆ ಸಹಾಯಮಾಡಲು ಶಕ್ತಿ ಸಾಲದ್ದರಿಂದ ತಿಬಟೂರು ಗುಬ್ಬಿಗಳಿಗೆ ಹೋಗತಕ್ಕವರ ದಿನಸು ಸಕಾಲಕ್ಕೆ ದೊರೆಯದೆ ಅವರ ಅಂಗಲಾಚುವಿಕೆಯು ತುಂಬಾ ಪರಿತಾಪವಾಗಿದೆ. ಈ ವಿಷಯದಲ್ಲಿ ರೈಲ್ವೆ ಅಧಿಕಾರಿಗಳು ಬಡವರ ಕಷ್ಟವನ್ನು ತಪ್ಪಿಸುವಂತೆ ಅರಿಕೆಮಾಡಿಕೊಳ್ಳುತ್ತೇವೆ.— ನಮ್ಮ ತಾಲ್ಲೋಕಿಗೆ ಮಂಡ್ಯದಿಂದ ವರ್ಗವಾಗಿ ಬಂದಿರುವ ಸಬ್ ರಿಜಿಸ್ಟ್ರಾರ್ ಮಿ॥ ದೊರಸಾಮೈಯಂಗಾರ್ಯರು ಕೆಲಸವನ್ನು ನಿಷ್ಪಕ್ಷಪಾತದಿಂದಲೂ ಅಲ್ಲದೆ ಶಾಂತತ್ವದಿಂದಲೂ ನಡೆಸುತ್ತಲಿದಾರೆ. ಇವರು ಇಲ್ಲಿಗೆ ಬಂದಲಾಗಾಯ್ತು ತಮ್ಮ ಕಲಾಖೆಯಲ್ಲಿ ಉಂಟಾಗಿದ್ದ ಅನೇಕ ವಿಷಯಗಳನ್ನು ತಿದ್ದಿಪಾಟುಮಾಡಿ, ಜನರಿಗೆ ಅಲ್ಪ ನೌಕರರಿಂದುಂಟಾಗುವ ತೊಂದರೆಗಳನ್ನು ತಪ್ಪಿಸಿ, ಎಲ್ಲವನ್ನೂ ತಾವೇ ಖುದ್ದಾಗಿ ಪರಾಮರಿಸುತ್ತಿರುವದರಿಂದ ಪತ್ರಗಳ ರಿಜಿಸ್ಟರಿಗೆ ಹೋಗತಕ್ಕ ಜನಗಳು ಸಕಾಲಕ್ಕೆ ತಮ್ಮ ಕೆಲಸವನ್ನು ಯಾವ ತೊಂದರೆಯೂ ನಷ್ಟವೂ ಇಲ್ಲದೆ ಪೂರೈಸಿಕೊಂಡು ಬರುತ್ತಾರೆ.—ಕಳೆದ ವಾರ ಕುಣಿಗಲ ಮಾರ್ಗವಾಗಿ ಬಂದಾನೊಂದು ಸರ್ಕಸ್ ಕಂಪನಿಯವರು ಇಲ್ಲಿಗೆ ಬಂದು, ಕೆಲವು ಆಟಗಳನ್ನು ಆಡಿ, ಜನರ ಮನಸ್ಸನ್ನು ಆನಂದಪಡಿಸಿದರು. ಅವರಲ್ಲಿ ಒಬ್ಬ ಬಾಲಿಕೆಗೆ ಕಾಲೀಸು ಪೇಟೆ ಮಹಾ ಜನಗಳಿಂದ ಕಳುಹಿಸಲ್ಪಟ್ಟದ್ದ ಒಂದು ಭಂಗಾರದ ಪದಕ ಇಲ್ಲಿನ ಯಿಂಪ್ರೆಸ್ ಗರ್ಲ್ಸ್ ಸ್ಕೂಲ್ ಹೆಡ್ ಮಿಸ್ಟ್ರೆಸ್ ರವರಿಂದ ಕೊಡಲ್ಪಟ್ಟಿತು.—ನಮ್ಮ ಮಿಷನ್ ಪಾದ್ರಿಗಳಾದ ರೆ. ಇ. ಎಸ್. ಎಡ್ವರ್ಡ್ಸ್ ಸಾಹೇಬರವರಿಗೆ ಕೆಲವು ದಿನಗಳಿಂದ ವಾಯು ಉಪದ್ರವು ಪ್ರಾರಂಭವಾಗಿ ತುಂಬಾ ತೊಂದರೆ ಕೊಡುತ್ತಿದ್ದದ್ದರಿಂದ ಅದರ ನಿವಾರಣಾರ್ಥವಾಗಿ ಅವರು ಮದರಾಸಿಗೆ ದಯಮಾಡಿಸಿರುತ್ತಾರೆ. ಜಗದಂತಕನು ಅವರಿಗೆ ಜಾಗ್ರತೆ ಗುಣವನ್ನು ಮಾಡಲೆಂದು ಪ್ರಾರ್ಥಿಸುತ್ತೇವೆ —ಇದೇ ಶನಿವಾರ ಕೊಯಮುತ್ತೂರಿನಿಂದ ಇಲ್ಲಿಗೆ ಬಂದಿದ್ದ ಮಿ॥ ಪ್ರೊಫೆಸರ್ ಸಿ. ವಿ ಸುಂದರ ರಾಜರಾವ್ ಎಂಬುವರು ಇಲ್ಲಿನ ಗೌರ್ನಮೆಂಟು ಮತ್ತು ಮಿಷನ್ ಶಾಲೆಗಳ ವಿದ್ಯಾರ್ಥಿಗಳಿಗೆಲ್ಲಾ ಅತಿ ಚಮತ್ಕಾರವಾದ ಯಕ್ಷಿಣೀ ವಿದ್ಯವನ್ನು ತಮ್ಮ ಕರಚಮತ್ಕಾರದಿಂದ ಪ್ರದರ್ಶನಮಾಡಿ ತುಂಬಾ ಆನಂದಗೊಳಿಸಿದರು.

ಚಿಂತಾಮಣಿ —ಈ ಭಾಗದಲ್ಲಿ ಮಳೆಗಳಿಲ್ಲದೆ ರೈತರೂ ಬಡಜನಗಳೂ ಗೋಕಾಯಿಗಳೂ ತುಂಬಾ ಹೀನಸ್ಥಿತಿಯಲ್ಲಿರುವದಾಗಿತ್ತು. ದೇವಾನುಗ್ರಹದಿಂದ ಕೆಲವು ದಿನಗಳಿಂದಲೂ ಮಳೆಯಾಗಿ ಭೂಮಿಯು ಹಸಿರಾದ್ದಲ್ಲದೆ ಬಡಜನಗಳಿಗೆ ಧೈರ್ಯವೂ ಗೋಕಾಯಿಗಳಿಗೆ ನೀರು ಮೇವುಗಳ ಆಧಾರವೂ ವರ್ತಕರಿಗೆ ಗೋಳಾಟಕ್ಕೂ ಹೇತುವಾಯಿತು. ಈ ಕೆಲಭಾಗಗಳಲ್ಲಿ ಒಂದೇ ರಾತ್ರಿ ಎಂಟು ಹದ ಮಳೆಯಾಗಿ ಕೆರೆ ಕುಂಟೆಗಳು ತುಂಬಿದವು —ಊರಿನ ಮಧ್ಯಭಾಗದಲ್ಲಿ ಹಗಲು ವೇಳೆಯಲ್ಲಿಯೇ ಖೂನಿ ಆಗಿ ಕೆಲವರನ್ನು ಗುಮಾನಿಯ ಮೇಲೆ ಹಿಡಿದು ಇದ್ದರು. ಇವರಲ್ಲಿ ರವಿನ್ಯೂ ದಫೇದಾರನೇ ಈ ಕೃತ್ಯ ನಡಿಸಿದಾನೆಂಬುದಾಗಿಯೂ ಇದನ್ನು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಯಾಗಿ ಮುಕ್ತ್ಯಂದು ಹೀರಂಗು ಹಾಕಿದಾರೆಂಬುದಾಗಿಯೂ ತಿಳಿಯಬರುತ್ತೆ. ಈ ಮೊಕದ್ದಮೆಯಲ್ಲಿ ಅಮಲ್ದಾರರಾದ ಮಿ॥ ಬಿ. ಎನ್ ಚನ್ನಿಗಪ್ಪನವರು ತುಂಬಾ ಮುತುವರ್ಜಿ ವಹಿಸಿದ್ದರು. ಫಲಿತಾಂಶ ಮುಂದೆ ತಿಳಿಯಬೇಕು.— ಚಿಂತಾಮಣಿ ನೀರಿನ ಪ್ರಾಮುಖ್ಯ ಕೌಮನೆಯೆಂದೇ ಹೇಳಬೇಕು. ಇಂಥಾದ್ದನ್ನು ಹೋಗಲಾಡಿಸುವದಕ್ಕೆ ಊರಿನಲ್ಲಿ ಎಲ್ಲಾ ಭಾಗಗಳಲ್ಲಿಯೂ ನಲ್ಲಿಗಳನ್ನು ಹಾಕಲಾಗುತ್ತದೆ. ಆದರೆ ಮುಸಲ್ಮಾನರ ಮಸೀತಿಯ ಪಕ್ಕದಲ್ಲಿ ಒಂದು ನಲ್ಲಿ ಇಟ್ಟಿದ್ದರೆ ಮುಸಲ್ಮಾನರಿಗೂ ಆ ಭಾಗದ ಬಂದಿರುವ ಗಲ್ಲಿಗಳಿಗೂ ತುಂಬಾ ಪ್ರಯೋಜನವಾಗಿತ್ತು. ಈಗಲಾದರೂ ಇಲ್ಲಿ ನಲ್ಲಿ ಹಾಕದ ಪಕ್ಷಕ್ಕೆ ಈ ಭಾಗದ ಜನರಿಗೆ ಯಾವ ಪ್ರಯೋಜನ ವಾಯಿತೆಂದು ಹೇಳಬಹುದು ? ನಮ್ಮ ಮೈಸ್ ಪ್ರೆಸಿಡೆಂಟರವರು ಇದನ್ನು ಆಲೋಚಿಸಿ ಈ ಭಾಗದಲ್ಲಿ ನಲ್ಲಿ ಇರಿಸುವಹಾದರೆ ಅವರಿಗೆ ಕೀರ್ತಿ ತಪ್ಪಲಾರದು.—ಆಸ್ಪತ್ರೆ ಎಲ್ಲಿದೆ ? ಎಂಬ ಈ ಪ್ರಶ್ನೆಗೆ ನಾನೇ ಉತ್ತರ ಕೊಡಬೇಕಾಗಿದೆ ಕತ್ತಾಳೆ ಪೊದೆಯ ಮಧ್ಯದಲ್ಲಿ ಸಿಕ್ಕಿಕೊಂಡು ಏನೂ ಇಲ್ಲದಂತೆ ತೋರುತ್ತದೆ. ಸುತ್ತಲೂ ಇದುವಳೆತ್ತಾಳೆಯು ವಿಪರೀತವಾಗಿ ಬೆಳೆದು, ದೊಡ್ಡ ದೊಡ್ಡ ವಿಷಜಂತುಗಳು ಸೇರಿಕೊಂಡು ಹಾವಳಿ ಮಾಡುತ್ತವೆ ಇದನ್ನು ತೆಗೆಸಿ ಶುದ್ಧೀನಾದರೂ ಉಪಾಯ ಮಾಡುವದಕ್ಕೆ ಪುರಸ್ಯತ್ರರು ಯಾರು ಮುಂದಾಳಾಗಿ ನಿಂತುಕೊಳ್ಳುವರೋ ತಿಳಿಯದು ಮತ್ತು ಶವಗಳನ್ನು ಅಜಮಾಯಿಷಿ ಮಾಡುವ ಡೆಡ್ ಹೌಸ್ ಎಂಬ ಮನೆಯು ಆಸ್ಪತ್ರೆ ತಾಲ್ಲೂಕ್ ಕಛೇರಿ, ಇಂಜನೀರ್ ಆಫೀಸು, ಊರಿನ ಮಧ್ಯಭಾಗವಾಗಿರುವದರಿಂದ ಕೊಳೆತ ಶವಗಳ ಬಂದಾಗ್ಯ ಆಫೀಸರಿಗೂ ಪ್ರಜೆಗಳಿಗೂ ಲಭಿಸುವ ಭಾಗ್ಯವು ಎಷ್ಟೆಂದು ಹೇಳಿದರೂ ಸಾಲದು. ಮುಖ್ಯವಾಗಿ ಹೆಂಗಸರೂ ಮಕ್ಕಳೂ ಆಸ್ಪತ್ರೆಗೆ ಹೋಗಲು ಹಿಂಜರಿಯುವದನ್ನು ಅನೇಕಜನರು ನೋಡಿದಾರೆ ಆದದರಿಂದ ನಮ್ಮ ಡಿಸ್ಟ್ರಿಕ್ಟ್ ಸರ್ಕಾರದವರು ಇದನ್ನು ಬೇರೆ ಸ್ಥಳದಲ್ಲಿ ಏರ್ಪಾಡು ಮಾಡುವರಾದರೆ ಅವರು ಪ್ರಜಾನುರಾಗಕ್ಕೆ ಪಾತ್ರರಾಗುವರೆಂಬುವದಕ್ಕೆ ಸಂಶಯವೇ ಇಲ್ಲ —ಇಲ್ಲಿಗೆ ಕೆಲವರು ಸೇರಿ ಎಣ್ಣೆಯ ಯಂತ್ರವನ್ನು ತಂದು ಕೆಲವು ತಿಂಗಳಿನಿಂದಲೂ ಸಲೀಸಾಗಿ ಕೆಲಸ ನಡಿಸುತ್ತಾ ಬುದ್ಧಿಯಲ್ಲಿ ನೂತನವನ್ನು ಪಡೆದಿದಾರೆ. ಇವರಂತೆಯೇ ನಮ್ಮ ದೇಶೀಯರು ನಾನಾ ಪ್ರಯೋಜನಕರವಾದ ಅನೇಕ ನವೀನ ಏರ್ಪಾಡುಗಳಿಗೆ ತಮ್ಮ ಹಣವನ್ನೂ ಮನಸ್ಸನ್ನೂ ಕೊಟ್ಟು ಯಾಕೆ ಭಾಗ್ಯವಂತರಾಗಬಾರದು ?—ಮೈಸೂರು ಶೀಮೆಯ ಸ್ಯಾನಿಟರಿ ಕಮಿಷನರಾದ ಡಾ॥ ಪಲ್ಪುಯವರ, ತಾ. ೨೪ರಲ್ಲಿ ಬಂದು, ಮೂರು ದಿನಗಳಿದ್ದು ನೋಡಬೇಕಾದದ್ದನ್ನು ನೋಡಿ, ೨೭ ನೇ ತಾ. ಹೊರಟು ಹೋದರು. ಈ ಗ್ರಾಮವು ದೊಡ್ಡದು, ಚಿಕ್ಕ ಬಳ್ಳಿಯ ವ್ಯಾಪಾರದಲ್ಲಿ ಹೆಸರುವಾಸಿಯನ್ನು ಪಡೆದಿರುತ್ತೆಯೆಂಬುದು ಹೊಸ ಸಂಗತಿಯಲ್ಲ. ಅಲ್ಲದೆ ದೊಡ್ಡ ಸಂತೆಯೂ ನಡೆಯುತ್ತದೆ. ಸಂತೆಯಲ್ಲಿ ಸುಮಾರು ೩೦—೪೦ ಸಾವಿರ ರೂಪಾಯಿ ಕ್ರಯವಿಕ್ರಯವಾಗುವದುಂಟು. ಮ್ಯುನಿಸಿಪಾಲಿಟಿಗೆ ತುಂಬಾ ಆದಾಯವಿರುತ್ತೆ. ಆದರೇನು ? ಗ್ರಾಮವು ಸುತ್ತಲೂ ಹೇಸಿಗೆಯಿಂದ ತುಂಬಿ, ಮುಖವನ್ನಾದರೂ ಇಡಲಿಕ್ಕೆ ಆಗದಂತೆ ಇದೆ. ಇದರೊಳಗೂ ಸಂತೆಯ ಜನರು ಶನಿವಾರವೂ ಭಾನುವಾರವೂ ವಿಪರೀತವಾಗಿ ಹೇಸಿಗೆ ಮಾಡುವದರಿಂದ ಇನ್ನಷ್ಟು ಹಸ್ಯವಾಗಿದೆ. ನಮ್ಮ ಮ್ಯುನಿಸಿಪಾಲಿಟಿಯವರು ಹಣವನ್ನು ಕೂಡಿಸುವವರೇ ಆಗಿರದೆ, ಪ್ರಜೆಗಳ ಹಣವನ್ನು ಪ್ರಜೆಗಳ ಪ್ರಯೋಜನಕ್ಕೆ ಉಪಯೋಗಿಸಿ, ಕೆಲವು ಕಕ್ಕಸುಗಳನ್ನು ಕಟ್ಟಿಸಿದರೆ ಗ್ರಾಮವು ಶೋಕಿಜಾಗಿಯೂ ಪ್ರಜೆಗಳಿಗೆ ಉಪಕಾರವಾಗಿಯೂ ಮ್ಯುನಿಸಿಪಾಲಿಟಿಗೆ ಕೀರ್ತಿಪ್ರದವಾಗಿಯೂ ಇರುವದಲ್ಲವೇ ?—ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿ ಊರಿನಲ್ಲಿ ಶುಕ್ಲಕೃಷ್ಣಪಕ್ಷಗಳೆರಡರಲ್ಲಿಯೂ ದೀಪೋತ್ಸವವಾಗಿರಲೆಂದು ಹುಕುಂ ದಯಪಾಲಿಸಿದ್ದು ನಮ್ಮ ಪುಣ್ಯೋದಯ.

"ದೇವಭಕ್ತರ ಸುತ್ತಲೂ ದೇವದೂತರು ದಂಡಿಳಿದಿರುತ್ತಾರೆ."

ಹೀಗೆಂದು ದೇವಭಕ್ತನೊಬ್ಬನು ಹೇಳಿದನು. ಇದಕ್ಕನುಸಾರವಾಗಿ ಒಂದು ಸಂದರ್ಭದಲ್ಲಿ ನಡೆದ ಅದರ ಸಂಕ್ಷೇಪ ಚರಿತ್ರೆಯನ್ನು ಇಲ್ಲಿ ತಿಳಿಸುತ್ತೇವೆ. ಒಂದಾನೊಂದು ಕಾಲದಲ್ಲಿ ಅಂದರೆ ಸುಮಾರು ಮೂರು ಸಾವಿರ ವರ್ಷಗಳ ಕೆಳಗೆ ಪಾಲೆಸ್ತಿನ್ ದೇಶದಲ್ಲಿ ಒಬ್ಬ ಪ್ರವಾದಿಯಿದ್ದನು. ಆಗ್ಗೆ ಆ ದೇಶದ ನಿವಾಸಿಗಳಾದ ಇಸ್ರಾಯೇಲ್ ಜನರಿಗೂ ಸಿರಿಯದೇಶದವರಿಗೂ ಯುದ್ಧವುಂಟಾಯಿತು. ಸಿರಿಯ ದೇಶದ ದೊರೆಯು ಯುದ್ಧದಲ್ಲಿ ಶತ್ರುಗಳ ಮೇಲೆ ಇಂಥಿಂಥ ಸ್ಥಳದಲ್ಲಿ ಇಂಥಿಂಥ ವಿಧವಾಗಿ ಕವಿದು ಯುದ್ಧ ಮಾಡಬೇಕೆಂದು ತನ್ನ ದಂಡಿನಲ್ಲಿ ರಹಸ್ಯವಾಗಿ ಆಲೋಚಿಸುತ್ತಿರುವಾಗ್ಯೆ ಅವನ ಆಲೋಚನೆಗಳನ್ನೆಲ್ಲಾ ದೇವರು ಆ ಪ್ರವಾದಿಗೆ

ಹ್ಯಾಗೋ ತಿಳಿಸುವವನಿದ್ದನು. ಅದನ್ನೆಲ್ಲಾ ಪ್ರವಾದಿಯು ತನ್ನ ಅರಸನಿಗೆ ತಿಳಿಸುತ್ತಿದ್ದನು. ಈ ಪ್ರಕಾರ ಸಿರಿಯದೇಶದ ದೊರೆಯು ಮಾಡಿದ ಆಲೋಚನೆಗಳು ನಿಷ್ಫಲವಾಗಿ ಹೋದದ್ದಲ್ಲದೆ ಇಸ್ರಾಯೇಲ್ ದೇಶದ ದೊರೆಯು ಶತ್ರುಗಳ ಕೈಯಿಂದ ಅನೇಕಾವೃತ್ತಿ ತಪ್ಪಿಸಿಕೊಳ್ಳುವದಕ್ಕೆ ಹೇತುವಾಯಿತು. ತಾನು ಮಾಡುವ ಆಲೋಚನೆಯೆಲ್ಲಾ ಹೀಗೆ ನಿಷ್ಫಲವಾಗಿ ಹೋಗುತ್ತಿರುವದನ್ನು ಆ ಸಿರಿಯದ ದೊರೆಯು ನೋಡಿ ತನ್ನ ಸಾಮಾಜಿಕರಲ್ಲಿ ಸಂಶಯಪಟ್ಟು ಆಲೋಚನಾ ಸಭೆಯಲ್ಲಿ ಕುಳಿತಿರುವಾಗ್ಗೆ ಅವರ ಮೇಲೆ ಕೋಪಿಸಿಕೊಳ್ಳಲು ಅವರು ಅರಸನಿಗೆ—ಸ್ವಾಮಿ ದೊರೆಯೇ, ನಾವು ನಿಮ್ಮ ಉಪ್ಪು ತಿಂದು ದ್ರೋಹ ಮಾಡುವವರಲ್ಲ. ಆ ಇಸ್ರಾಯೇಲ್ ದೊರೆಯ ಬಳಿಯಲ್ಲಿ ಒಬ್ಬ ಪ್ರವಾದಿಯಿದ್ದಾನೆ ಅವನು ಬಹಳ ಶಕ್ತನು. ಇಲ್ಲಿ ನಾವು ಎಷ್ಟು ಗುಪ್ತವಾಗಿ ಆಲೋಚಿಸಿದರೂ ಅದನ್ನೆಲ್ಲ ಅವನು ಜ್ಞಾನದೃಷ್ಟಿಯಿಂದ ತಿಳಿದುಕೊಂಡು ಅದನ್ನು ತನ್ನ ಅರಸಿಗೆ ಅರಿಕೆಮಾಡುತ್ತಾನೆ. ಇದೀಗ ನಿಶ್ಚಯವಾಗಿ ನಡೆಯುವ ವಿಷಯವಾಗಿದೆ ಎಂದು ಬಿನ್ನವಿಸಿದರು. ಅದನ್ನು ಕೇಳಿದ ಅರಸು ನಿಜವೆಂದೊಪ್ಪಿ ಕೆಲವು ಸೇನೆಯನ್ನು ಕಳುಹಿಸಿ—ನೀವು ಹೋಗಿ ಆ ಪ್ರವಾದಿಯಿರುವ ಊರನ್ನು ಸುತ್ತಿಕೊಂಡು ಮುತ್ತಿಗೆ ಹಾಕಿ ಆ ಪ್ರವಾದಿಯನ್ನು ಹಿಡಿದುಕೊಂಡು ಬನ್ನಿರೆಂದು ಅಜ್ಞಾಪಿಸಿದನು. ಆ ಸೈನಿಕರು ಅದೇ ಪ್ರಕಾರ ಆ ಊರಿಗೆ ರಾತ್ರಿ ವೇಳೆಯಲ್ಲಿ ಬಂದು ಮುತ್ತಿಕೊಂಡರು. ಬೆಳಗ್ಯೆ ಆ ಪ್ರವಾದಿಯು ತನ್ನ ಸೇವಕನನ್ನು ಸಂಗಡ ಕರೆದುಕೊಂಡು ಹೊರಡುವಲ್ಲಿ ಊರ ಹೊರಗೆ ಶತ್ರುಗಳು ದಂಡಿಳಿದಿರುವದನ್ನು ಕಂಡು ಬಹಳವಾಗಿ ಭಯಪಟ್ಟು—ಇನ್ನೇನು ಗತಿಯೆಂದು ಪ್ರಲಾಪಿಸಿದನು. ಆಗ ಪ್ರವಾದಿಯು ಆ ಸೇವಕನಿಗೆ—ಎಲಾ ಹೇಡಿಯೇ, ನಮ್ಮ ಕಡೆಯಲ್ಲಿ ನಿಂತು ಯುದ್ಧ ಮಾಡುವ ಸಿಪಾಯರ ಸಂಖ್ಯೆಯು ಶತ್ರುಗಳ ಸಂಖ್ಯೆಗಿಂತ ಹೆಚ್ಚಾಗಿದ್ದಾರೆ ಎಂದು ಹೇಳಿ ಅವನನ್ನು ಸಮಾಧಾನಪಡಿಸಿದ್ದಲ್ಲದೆ, ಅವನನ್ನು ಆಕಾಶದ ಕಡೆಗೆ ನೋಡೆಂದು ಹೇಳುತ್ತ ದೇವರನ್ನು ಕುರಿತು—ಸ್ವಾಮಿ, ಈ ನನ್ನ ಆಳಿಗೆ ಕಣ್ಣು ಕಾಣುವಂತೆ ಮಾಡು ಎಂದು ಬೇಡಿಕೊಂಡನು. ಆಗ ಬೆಂಕಿಯ ರೂಪವಾಗಿರುವ ರಥಿಕರೂ ಸವಾರರೂ ರಥಾಶ್ವಾರೂಢರಾಗಿ ಅಪರಿಮಿತವಾದ ಸೈನ್ಯವಾಗಿ ಸುತ್ತುಮುತ್ತಲೂ ನಿಂತಿರುವದನ್ನು ಆ ಸೇವಕನು ಕಂಡು ಧೈರ್ಯಗೊಂಡನು.

ಬಳಿಕ ಆ ಪ್ರವಾದಿಯು ಆ ಶತ್ರುಸೈನಿಕರ ಬಳಿಗೆ ಹೋಗಿ—ನೀವು ಬಂದಿರುವ ಕಾರಣವೇನು? ಎಂದು ಕೇಳಲು ಅವರು ನಿರ್ವಂಚನೆಯಾಗಿ ತಿಳಿಸಿದರು. ಆಗ ಆ ಪ್ರವಾದಿಯು ಮನಸ್ಸಿನಲ್ಲಿ ದೇವರ ಸಹಾಯವನ್ನು ಸ್ಮರಿಸಲು ಆ ಸೈನಿಕರಿಗೆ ಪ್ರವಾದಿಯ ಗುರುತು ತಿಳಿಯದೆಹೋಯಿತು. ಪ್ರವಾದಿಯು ಅವರನ್ನು ಕುರಿತು—ನಿಮಗೆ ಆ ಮನುಷ್ಯನನ್ನು ಹಿಡಿದುಕೊಡುತ್ತೇನೆ ಬನ್ನಿರಿ ಎಂದು ಹೇಳುತ್ತ ಅವರನ್ನು ಕರೆದುಕೊಂಡು ಇಸ್ರಾಯೇಲಿನ ರಾಜಧಾನಿಯಾದ ಸಮಾರಿಯವೆಂಬ ಊರಿಗೆ ಹೋಗಿ ತನ್ನ ಅರಸನ ಮುಂದೆ ಬಿಟ್ಟನು. ಆಗ ಆ ಸೈನಿಕರಿಗೆಲ್ಲಾ ನಿಜಸ್ಥಿತಿಯು ಗೊತ್ತಾಯಿತು. ಅವರು ಗಾಬರಿಗೊಂಡಿರುವ ವೇಳೆಯಲ್ಲಿ ಆ ಅರಸನು ಪ್ರವಾದಿಗೆ—ಸ್ವಾಮಿ, ಈ ಶತ್ರುಗಳನ್ನೆಲ್ಲಾ ಸಂಹರಿಸಿ ಬಿಡಲೇ ಎಂದು ಕೇಳಿದನು. ಅದಕ್ಕೆ ಪ್ರವಾದಿಯು—ಎಲೈ ಅವಿವೇಕಿಯೇ, ಹಾಗೆ ಮಾಡಬೇಡ. ಇವರನ್ನು ರಾಜೋಪಚಾರಗಳಿಂದ ಸತ್ಕರಿಸು ಎಂದು ಅಪ್ಪಣೆಕೊಟ್ಟನು. ಹಾಗೇ ಅರಸನು ಆ ಸೈನಿಕರಿಗೆಲ್ಲಾ ಅನ್ನಪಾನಗಳನ್ನು ಕೊಟ್ಟು ಆದರಿಸಿ ಕಳುಹಿಸಿದನು. ಎಲೀಷನೆಂಬ ಆ ಪ್ರವಾದಿಯು ಮಾಡಿದ ಈ ಉಪಾಯದಿಂದ ಇಸ್ರಾಯೇಲಿನ ಅರಸಿಗೂ ಸಿರಿಯದ ಅರಸಿಗೂ ಇದ್ದ ವೈರತ್ವವು ತೊಲಗಿ ಇಬ್ಬರಿಗೂ ಸಮಾಧಾನವಾಯಿತು. ಯುದ್ಧವು ನಿಂತು ಉಭಯ ದೇಶವಾಸಿಗಳಿಗೂ ಕ್ಷೇಮವುಂಟಾಯಿತು.

ಈ ವೃತ್ತಾಂತದಿಂದ ನಾವು ಮೂರು ಸಂಗತಿಗಳನ್ನು ತಿಳಿಯುತ್ತೇವೆ.

೧. ದೇವರು ತನ್ನ ಜನಗಳನ್ನು ಸಂರಕ್ಷಿಸುತ್ತಾನೆ. ಹಗಲಿನಲ್ಲಿ ನಕ್ಷತ್ರಗಳು ಕಾಣಿಸುವದಿಲ್ಲ. ಆದರೂ ರಾತ್ರಿಯಲ್ಲಿ ಪ್ರಕಾಶಿಸುತ್ತಿರುವಂತೆಯೇ ಹಗಲಿನಲ್ಲಿಯೂ ಪ್ರಕಾಶಿಸುತ್ತಿರುತ್ತವೆ. ಅದೇ ಪ್ರಕಾರ ದೇವರು ನಮ್ಮನ್ನು ಕಾಪಾಡುವದಕ್ಕೆ ಇಟ್ಟಿರುವ ಸೈನ್ಯವು ಕಣ್ಣಿಗೆ ಮಾತ್ರ ತೋರದಿದ್ದರೂ ನಮ್ಮ ಸುತ್ತಾ ಇದ್ದೇ ಇರುತ್ತದೆಯೆಂದು ತಿಳಿದಿರಬೇಕು. ನಾವು ನಡೆಯುತ್ತಿರುವ ಮಾರ್ಗಗಳಲ್ಲಿ ನಮ್ಮನ್ನು ಕಾಪಾಡುವದಕ್ಕಾಗಿ ದೇವರು ನಮ್ಮ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುತ್ತಾನೆ ಎಂದು ಕೀರ್ತನೆ ೯೧ : ೧೧ ರಲ್ಲಿ ಹೇಳಿದೆ. ಇದಲ್ಲದೆ ಇನ್ನೊಬ್ಬ ಭಕ್ತನು—ಎಲ್ಲಾ ಜನಾಂಗದವರು ನನ್ನನ್ನು ಮುತ್ತಿಕೊಂಡರು. ನನ್ನನ್ನು ಸುತ್ತಿಕೊಂಡರು, ಯೆಹೋವನ ಹೆಸರಿನಲ್ಲಿ ಅವರನ್ನು ಕಡಿದುಬಿಡುವೆನು. ಜೇನ್ನೊಣಗಳ ಹಾಗೆ ನನ್ನನ್ನು ಸುತ್ತಿಕೊಂಡರು, ಆದರೂ ಮುಳ್ಳುಗಳ ಬೆಂಕಿಯ ಹಾಗೆ ಅವರು ಆರಿಹೋಗುತ್ತಾರೆ ಎಂದು ದೃಢವಾಗಿ ಹೇಳುತ್ತಾನೆ. ನಮ್ಮ ಹಗೆಯವರು ಎಷ್ಟು ಮಂದಿಯಿದ್ದರೂ ಅವರ ಹಾವಳಿಯು ಎಷ್ಟು ಹೆಚ್ಚಾಗಿದ್ದರೂ ಅದನ್ನೆಲ್ಲಾ ದೇವರ ಸಹಾಯದಿಂದ ನಾವು ಜಯಿಸಬಹುದು.

೨. ದೇವರು ನಮ್ಮ ಕಣ್ಣನ್ನು ತೆರೆದರೆ ನಮ್ಮ ಸಂರಕ್ಷಕರು ಯಾರೆಂಬುದು ಗೊತ್ತಾಗುತ್ತದೆ—ಯಾಕೋಬನೆಂಬೊಬ್ಬ ಪುರುಷನು ಒಂದು ಸಂದರ್ಭದಲ್ಲಿ ತನ್ನ ಅಣ್ಣನ ಕೈಯಿಂದ ತಪ್ಪಿಸಿಕೊಂಡು ದೂರದೇಶಕ್ಕೆ ಓಡಿಹೋಗಬೇಕಾಯಿತು. ದಾರಿಯಲ್ಲಿ ಅವನೊಂದೆಡೆಯಲ್ಲಿ ನಿದ್ರಿಸುತ್ತಿರುವಾಗ ಅಪೂರ್ವವಾದ ಒಂದು ಸ್ವಪ್ನವನ್ನು ಕಂಡನು. ಅದರಲ್ಲಿ ಆಕಾಶದಿಂದ ಭೂಮಿಗೂ ಭೂಮಿಯಿಂದ ಆಕಾಶಕ್ಕೂ ದೇವದೂತರು ಹೋಗಿ ಬರುತ್ತಾ ಇರುವದನ್ನು ಯಾಕೋಬನು ಕಂಡನು. ದೇವರು ಭಕ್ತರನ್ನು ಸಂರಕ್ಷಿಸುವ ನಿಮಿತ್ತವಾಗಿ ತನ್ನ ಸೇವಕರನ್ನು ಈ ಭೂಲೋಕಕ್ಕೆ ಕಳುಹಿಸುತ್ತಲೆ ಇದ್ದಾನೆಂದೂ ಆ ದೇವದೂತರು ಅಹರ್ನಿಶಿಯಲ್ಲಿ ಆಕಾಶಕ್ಕೂ ಭೂಮಿಗೂ ಹೋಗುತ್ತಾ ಬರುತ್ತಾ ತಮ್ಮ ಸೇವೆಯಲ್ಲಿ ನಿರತರಾಗಿದ್ದಾರೆಂದೂ ಯಾಕೋಬನು ತಿಳಿದುಕೊಂಡನು. ದೇವರು ಈ ಸಂಗತಿಯನ್ನು ತಿಳಿಸುವ ಪರ್ಯಂತರ ಯಾಕೋಬನಿಗೆ ತಿಳಿಯದೆ ಹೋಯಿತು. ನಮಗೆ ಸಹಾಯ ಮಾಡುವಂತೆ ದೇವರು ಕಳುಹಿಸಿಕೊಡುವ ದೇವದೂತರನ್ನು ನಾವು ಕಣ್ಣಿಂದ ನೋಡಲಾರೆವು. ಆದರೆ ಇದನ್ನೆಲ್ಲಾ ತಿಳಿಯುವದಕ್ಕೆ ನಮಗೆ ದೇವರು ಬೇರೆ ಕಣ್ಣನ್ನು ಕೊಟ್ಟಿದ್ದಾನೆ ಅದು ನಮ್ಮ ಶರೀರದಲ್ಲಿಲ್ಲ. ಅದು ಆತ್ಮದಲ್ಲಿರುವ ನಂಬಿಕೆ ಎಂಬ ಕಣ್ಣು. ಈ ಕಣ್ಣನ್ನು ತೆರೆದು ನೋಡುವದರಿಂದಲೆ ನಮಗೆ ದೇವರ ವಿಷಯವಾಗಿ ಗೊತ್ತಾಗುತ್ತದೆ. ನಮಗೆ ದೇವರಲ್ಲಿ ನಂಬಿಕೆಯಿದ್ದರೆ ಮಾತ್ರ ಆತನು ನಮ್ಮನ್ನು ಕಾಪಾಡುತ್ತಾನೆಂಬ ವಿಷಯವು ಗೊತ್ತಾಗುವದು.

೩. ಕ್ರೂರತ್ವಕ್ಕಿಂತ ದಯೆಯೇ ಬಲಶಾಲಿಯಾಗಿದೆ—ಇಸ್ರಾಯೇಲಿನ ದೊರೆಯು ಸಿರಿಯದ ಸೇನೆಗೆ ದಯೆಯನ್ನು ತೋರಿಸಿದುದರಿಂದಲೇ ಈ ಯುದ್ಧವು ನಿಂತು ಹೋಯಿತು. ಅವನು ಅವರನ್ನು ಕೊಂದುಹಾಕಿ ಬಿಟ್ಟಿದ್ದರೆ ಯುದ್ಧವು ಇನ್ನೆಷ್ಟು ಕಾಲದವರೆಗೂ ನಡೆಯುವದಕ್ಕಿತ್ತೋ ಹೇಳಲಾಗುವದಿಲ್ಲ. ಈ ವಿಷಯದಲ್ಲಿ ಯೇಸುಸ್ವಾಮಿಯು ಹೇಳಿರುವ ಬೋಧನೆಯು ಇಲ್ಲಿ ಸ್ಮರಣೀಯವಾಗಿರುವದು. ಅದೇನಂದರೆ—.

ನಿನ್ನ ನೆರೆಯವನನ್ನು ಪ್ರೀತಿಸಬೇಕು, ನಿನ್ನ ವೈರಿಯನ್ನು ಹಗೆ ಮಾಡಬೇಕು ಎಂದು ಹೇಳಿದ ಮಾತನ್ನು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ನಿಮ್ಮ ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ಪ್ರಾರ್ಥನೆ ಮಾಡಿರಿ. ಹೀಗೆ ಮಾಡಿದರೆ ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನನ್ನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ. ನಿಮ್ಮನ್ನು ಪ್ರೀತಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು?—ಮತ್ತಾಯ ೫ : ೪೩—೪೬.

ಇದಕ್ಕನುಗುಣವಾಗಿ ಪೌಲನೆಂಬ ಮಹಾತ್ಮನು ಹೇಳಿರುವದೂ ಚನ್ನಾಗಿ ಒಪ್ಪುತ್ತದೆ. ಅದೇನಂದರೆ—

ನಿನ್ನ ವೈರಿಯು ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು.
ಅವನಿಗೆ ಬಾಯಾರಿಕೆಯಾಗಿದ್ದರೆ ಕುಡಿಯುವದಕ್ಕೆ ಕೊಡು;
..........ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಜಯಿಸು—ರೋಮ. ೧೨ : ೨೦—೨೧.

ಇಂಡಿಯಾ ದೇಶದ ವೃತ್ತಾಂತಗಳು.

ಅಜ್ಮೀರದಲ್ಲಿ ೪,೦೦೦ ಪ್ರಜೆಗಳು ಕ್ಷಾಮ ಪೀಡಿತರಾಗಿ ಸರ್ಕಾರಿ ರಿಲೀಫ್ ಕಾಮಗಾರಿಗಳನ್ನು ಮಾಡಿ ಹೊಟ್ಟೆ ಹೊರಕೊಳ್ಳುತ್ತಿದ್ದಾರೆ.

✽✽✽✽✽

ಬಂಗಾಳದಿಂದ ನಾಲ್ಕು ಮಂದಿ ಹುಡುಗರು ಅಮೇರಿಕಕ್ಕೆ ಹೋಗಿ ವ್ಯವಸಾಯ ಶಾಸ್ತ್ರವನ್ನು ಕಲಿತು ಬರುವಂತೆ ಚುನಾಯಿಸಲ್ಪಟ್ಟಿದ್ದಾರೆ.

ಮದರಾಸ್ ಪಟ್ಟಣದಲ್ಲಿ ವಾಂತಿಭೇದಿ ಉಪದ್ರವದ [...] ಸ್ವಲ್ಪ ಕಡಿಮೆಯಾಗಿದ್ದರೂ ಇನ್ನೂ ದಿನವಹಿ ೩೦—೪೦ ಜನ[...] ಸಾಯುತ್ತಿದ್ದಾರೆ. ಹೀಗೆಯೇ ಅದು ಕಾಲಕ್ರಮದಲ್ಲಿ ಕಡಿಮೆಯಾ[...]ದೀತೆಂದು ನಿರೀಕ್ಷಿಸಬಹುದಾಗಿದೆ.

✽✽✽✽✽

ಉತ್ತರ ದೇಶದ ಭೂಕಂಪದ ರಿಲೀಫ್ ಫಂಡಿಗೆ ಫರಿದ್‌ಕೋಟೆಯ ರಾಜರು ೧೦,೦೦೦ ರೂಪಾಯಿ ಧರ್ಮ ಮಾಡಿದರು. [...] ಫಂಡನ್ನು ಈ ತಿಂಗಳ ಆಖೈರಿಗೆ ಮುಕ್ತಾಯ ಮಾಡುವರು. [...] ವರೆಗೆ ಒಟ್ಟು ೧೪ ಲಕ್ಷ ರೂಪಾಯಿ ಧನಕ ಚಂದಾ ವಸೂಲಾಗಿ[...]

✽✽✽✽✽

ಮದರಾಸ್ ಅಧಿಪತ್ಯದ ಗವರ್ನರಾದ ಲಾರ್ಡ್ ಅಂಟ್ಹಿ[...]ವರ ಅಧಿಕಾರದ ಅವಧಿಯು ಈ ವರ್ಷದ ಕಡೆಯಲ್ಲಿ ಮುಕ್ತಾಯವಾಗುವದು. ಅವರು ಮುಂದಿನ ಫೆಬ್ರುವರಿ ತಿಂಗಳ ಎರಡನೇ[...]ರ ಸೀಮೆಗೆ ವಾಪಸು ಹೋಗುವದಕ್ಕೆ ಈಗಿನಿಂದಲೂ ಸನ್ನಾಹ ಮಾಡುತ್ತಿದ್ದಾರೆ.

✽✽✽✽✽

ಹಿಂದುಸ್ಥಾನದ ವಾಯುವ್ಯ ಸರಹದ್ದಿನ ಆಚೆ ಇರುವ [...] ಜನರು ಗುಲಿಸ್ತಾನವೆಂಬ ರಾಜ್ಯಕ್ಕೆ ನುಗ್ಗಿಬಂದು ಇಬ್ಬರು [...]ಯವರನ್ನು ಕೊಂದು, ಇನ್ಸ್‌ಪೆಕ್ಟರನ್ನು ಕೈಸೆರೆ ಹಿಡಿದುಕೊಂಡು ಹೋದರು. ಇದಲ್ಲದೆ ಅವರು ೨೦ ಬಂದೂಕುಗಳನ್ನೂ ಅಪಹರಿಸಿಕೊಂಡು ಹೋಗಿದ್ದಾರೆ.

✽✽✽✽✽

ಲಾರ್ಡ್ ಕರ್ಜನ್ನರವರು ಅಕ್ಟೋಬರ್ ತಿಂಗಳಲ್ಲಿ ಕಾಶ್ಮೀರಕ್ಕೆ ದಯಮಾಡಿ, ಅಲ್ಲಿ ಮಹಾರಾಜರವರಿಗೆ ರಾಜ್ಯಾಧಿಕಾರವನ್ನು ವಹಿಸುವಂತೆ ಏರ್ಪಾಡಾಗಿತ್ತು. ಈಗ ಅವರು ರಾಜೀನಾಮೆ ಕೊ[...]ರಣದಿಂದ ಕಾಶ್ಮೀರದ ಪ್ರಯಾಣವನ್ನು ನಿಲ್ಲಿಸಿಬಿಟ್ಟರೆಂದು ಪ್ರಕಟವಾಗಿದೆ.

✽✽✽✽✽

ಬೊಂಬಾಯಿ ಪಟ್ಟಣದ ನಿಶಸದಾದ ರೋಡಿನಲ್ಲಿ ಮೆ॥ ಮಹಮ್ಮದ್‌ಭಾಯಿ ನೇಕಸಿ ಪೈರಾಸ್ ಎಂಬ ಭಾರೀ ವರ್ತಕನು ಒಂದು ಕಾರ್ಖಾನೆಯಲ್ಲಿ ಹತ್ತಿಯನ್ನು ತುಂಬಿಸಿಟ್ಟಿದ್ದನು. ಈ ಕಾರ್ಖಾನೆಗೆ ಬೆಂಕಿ ಬಿದ್ದು ಎಲ್ಲಾ ಹಾಳಾಯಿತು. ಇದರಿಂದ ಆ ವರ್ತಕನಿಗೆ ೨೦,೦೦೦ ರೂಪಾಯಿ ನಷ್ಟವಾಗಿದೆ.

✽✽✽✽✽

ಕಲ್ಕತ್ತಾ ಪಟ್ಟಣದ ರಾಲಿಕಂಪನಿಯಲ್ಲಿ ಸರಾಫನಾಗಿದ್ದ [...]ದತ್ತಸಾದರಾಯ ಎಂಬುವನು ಸುಮಾರು ೧೦ ವರುಷಗಳ ಕೆ[...] ಆ ಕಂಪನಿಯಲ್ಲಿ ೪೦,೦೦೦ ರೂಪಾಯಿ ತಿಂದುಹಾಕಿ ತಲೆತಪ್ಪಿಸಿಕೊಂಡಿದ್ದನು. ಪೋಲೀಸಿನವರು ಭವಾನಿಪುರದಲ್ಲಿ ಸನ್ಯಾಸಿ ವೇಷದಲ್ಲಿದ್ದ ಆ ಮನುಷ್ಯನನ್ನು ಹಿಡಿದು ತಂದಿದ್ದಾರೆ.

✽✽✽✽✽

ಧೋಲ್‌ಪುರ ಸಂಸ್ಥಾನದಲ್ಲಿ ಕ್ಯಾಪ್ಟೆನ್ ಲಾರೆನ್ಸ್ ಎಂಬುವನು ಕಳೆದವಾರ ಅಂತರಿಕ್ಷದಲ್ಲಿ ಸಂಚರಿಸುವ ಒಂದು ವಿಮಾನವನ್ನು ಕಟ್ಟಿ, ತಾನೇ ಅದರಲ್ಲಿ ಕೂತುಕೊಂಡು, ಆಕಾಶಕ್ಕೆ ಹೋಗಿ ಸ್ವಲ್ಪ ಹೊತ್ತು ಅಲ್ಲೇ ಸಂಚರಿಸುತ್ತಿದ್ದು ಇಳಿದು ಬಂದನು. ಮಹಾರಾಜ ರಾಣಾರವರು ಎದುರಿಗಿದ್ದು ಈ ವಿಮಾನ ಸಂಚಾರವನ್ನು ನೋಡಿ ತುಂಬಾ ಸಂತೋಷಪಟ್ಟರು.

✽✽✽✽✽

ಬೊಂಬಾಯಿ ಪಟ್ಟಣದಲ್ಲಿ ಪೋಲೀಸಿನವರು ಕಾಯಪುಷ್ಟರಾಗಿಯೂ ಕಸರತ್ತುಗಳನ್ನು ಮಾಡಿ ಚಟುವಟಿಕೆಯಾಗಿ ಕೆಲಸ ಮಾಡು[...] ತತ್ಪರರಾಗಿಯೂ ಇರಬೇಕೆಂದು ಸರ್ಕಾರದವರು ಆಗಾಗ್ಗೆ [...]ರಿಂದ ನಾನಾ ಬೈಲುಸಾಧನೆಗಳನ್ನು ಮಾಡಿಸಿ, ಸಮರ್ಥರಾದವರೆಲ್ಲಾ ಹಣವನ್ನು ಬಹುಮಾನವಾಗಿ ಕೊಡುವಂತೆ ಒಟ್ಟು [...] ೧,೨೦೦ ರೂಪಾಯಿ ಮಂಜೂರ್ ಮಾಡಿದ್ದಾರೆ.

✽✽✽✽✽

ಭೋಪಾಲ್ ಸಂಸ್ಥಾನದಲ್ಲಿ ಬೇಗಂ ರಾಣಿಯವರು ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಪಡಿಸಲಾರಂಭಿಸಿದ್ದಾರೆ. ಅವರೇ [...]ದು ಜನಾನಾ ಸ್ಕೂಲನ್ನು ಪ್ರಾರಂಭಮಾಡಿ, ಅದರಲ್ಲಿ ಓದುವ ವಿದ್ಯಾರ್ಥಿನಿಯರಿಗೆ ತಲಾ ೨—೩ ರೂಪಾಯಿನಂತೆ ಮಾಸಾ[...] ಕೊಡುತ್ತಾರೆ. ಉಪಾಧ್ಯಾಯರ ಸಂಬಳ ಮುಂತಾದ್ದನ್ನೂ ಅ[...]ಯವರೂ ಯುವರಾಜರವರೂ ಹಂಚಿಕೊಂಡು ಕೊಡುತ್ತಿದ್ದಾರೆ.

✽✽✽✽✽

ಬರ್ಮಾ ಅಧಿಪತ್ಯಕ್ಕೆ ಸೇರಿದ ಚಿಂಡ್ವಿನ್ ಪ್ರಾಂತ್ಯದಲ್ಲಿ [...] ಸಲ ಬಂದಿರುವಷ್ಟು ಪ್ರವಾಹವನ್ನು ಹಿಂದೆ ೧೫ ವರ್ಷಗಳ[...] ಕಂಡಿಲ್ಲವೆಂದು ಹೇಳುತ್ತಾರೆ. ಮೂರು ಬಾರೀ ಪಟ್ಟಣಗಳೂ [...] ಮನೆಗಳೂ ನೂರಾರು ಗ್ರಾಮಗಳೂ ಪ್ರವಾಹಕ್ಕೆ ಸಿಕ್ಕಿ ಅನೇಕ ಗೋಕಾಯಿಗಳೂ ಆಸ್ತಿಪಾಸ್ತಿಗಳೂ ನಷ್ಟವಾದವು. ರೈಲ್ ಪ್ರಯಾಣವು ನಾಲ್ಕು ದಿನ ನಿಂತು ಹೋಗಿತ್ತು. ಪ್ರಜೆಗಳು ಬಹಳ ಕಷ್ಟಕ್ಕೆ ಸಿಕ್ಕಿ ನರಳುತ್ತಿದ್ದಾರೆ.

✽✽✽✽✽

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯವರು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಒಂದು [...] ಪೆಟ್ಟಿಗೆಯಲ್ಲಿಟ್ಟು ಒಪ್ಪಿಸುತ್ತಾರೆ. ಈ ಪೆಟ್ಟಿಗೆಯನ್ನು ಚಿತ್ರವಿಚಿತ್ರವಾಗಿ ತಯಾರುಮಾಡುವದಕ್ಕೆ ಆ ಪಟ್ಟಣದಲ್ಲಿ ಜವಾಹಿರಿ ಕೆಲಸದ ಒಂದು ಕಂಪನಿಯವರಿಗೆ ಕಂಟ್ರಾಕ್ಟು ವಹಿಸಿದ್ದಾರೆ. ಇದಲ್ಲದೆ ಯುವರಾಜರ ಪತ್ನಿಯವರಿಗೆ ಒಂದು ಮುತ್ತಿನ ಕಂಠಿಯನ್ನು ಅರ್ಪಿಸುವರು. ಇವೆರಡನ್ನೂ ಅಂಗೀಕರಿಸುತ್ತೇವೆಂತ, ಅವರು ಒಪ್ಪಿಕೊಟ್ಟಿದ್ದಾರೆ.

ಹಿಂದುಸ್ಥಾನದಲ್ಲೆಲ್ಲಾ ಕಳೆದ ವಾರ ೧,೭೪೦ ಜನರು ಪ್ಲೇಗ್ ಜಾಡ್ಯ ತಗಲಿ ಕಾಲವಾದರು. ಬೊಂಬಾಯಿ ಅಧಿಪತ್ಯದಲ್ಲೇ ಸ್ವಲ್ಪ ಕಟ್ಟಿಗಿರುತ್ತದೆ. ಆ ಅಧಿಪತ್ಯದಲ್ಲಿ ೧,೨೯೪ ಜನರೂ, ಬಂಗಾಳದಲ್ಲಿ ೯೯ ಜನರೂ, ಮೈಸೂರು ಸಂಸ್ಥಾನದಲ್ಲಿ ೧೪೦ ಜನರೂ ಮೃತಪಟ್ಟರು. ಸಾಧಾರಣವಾಗಿ ವಾರವೊಂದರಲ್ಲೇ ೪೦೦ ಜನರಿಗಿಂತಲೂ ಹೆಚ್ಚು ಕಾಲವಾಗಲು ಶೀತಕಾಲ ಪ್ರಾಪ್ತವಾಗಿರೋಣದರಿಂದ ಉಪದ್ರವ ಮತ್ತೆ ಹೆಚ್ಚಬಹುದೆಂದು ಕಾಣುತ್ತದೆ.

✿✿✿✿✿

ಹೌರಾ ಪಟ್ಟಣದಲ್ಲಿ ಗೂಕರಿ ಎಂಬ ನಾರಿನ ಕಾರ್ಖಾನೆಯ ನಗದೀ ದೇವೇಂದ್ರನಾಥಘೋಸ್ ಎಂಬುವನು ಗುಮಾಸ್ತೆಯಾಗಿದ್ದನು. ಇವನು ಆ ಕಂಪನಿಯವರಿಗೆ ೧೦,೦೦೦ ರೂಪಾಯಿಗೆ ಮೋಸ ಮಾಡಿ, ತಿಂದು ಹಾಕಿದನು. ಸುಮಾರು ನಾಲ್ಕು ವರುಷಗಳಿಂದ ಇವನು ಪೋಲೀಸಿನವರಿಗೆ ಸಿಕ್ಕದೆ ತಲೆ ತಪ್ಪಿಸಿಕೊಂಡು, ಒಂದು ಮಠದೊಳಗೆ ಹಾಲಿನವನಂತೆ ವೇಷ ಮರೆಸಿಕೊಂಡಿದ್ದನು. ಪೋಲೀಸಿನವರು ಇವನನ್ನು ಹಿಡಿದು ತಂದಿದ್ದಾರೆ.

✿✿✿✿✿

ದಕ್ಷಿಣ ಕನಡಾ, ಮಲಬಾರು, ಕೊಯಮುತ್ತೂರು, ನೀಲಗಿರಿ, ಈ ಪ್ರಾಂತ್ಯಗಳಲ್ಲಿ ರೈತ ಪ್ರಜೆಗಳು ಆನೆಗಳ ಕಾಟವನ್ನು ತಡೆಯಲಾರದೆ ಅವನ್ನು ಹಿಡಿಯುವ ಉಪಾಯ ಕಾಣದೆ ಗುಂಡು ಹೊಡೆದು ಕೊಲ್ಲುತ್ತಾರೆಂದು ಸರ್ಕಾರಕ್ಕೆ ತಿಳಿದು ಬಂದುದರಿಂದ ಈ ರೀತಿ ಕೊಂದುಹಾಕದಂತೆಯೂ ಆನೆಗಳನ್ನು ಹಿಡಿಯಬೇಕೆಂತಲೂ ಹುಕುಂ ಕೊಟ್ಟು, ಹಿಡಿಯುವ ಉಪಾಯಗಳನ್ನು ಪ್ರಜೆಗಳಿಗೆ ತಿಳಿಸಬೇಕೆಂದು ಇಸ್ತಿಹಾರು ಹಾಕಿಸಿದ್ದಾರೆ.

✿✿✿✿✿

ಈ ಸಲ ಡಿಸೆಂಬರ್ ತಿಂಗಳ ವಾರದಲ್ಲಿ ಕಾಶೀ ಪಟ್ಟಣದಲ್ಲಿ ನಡೆಯುವ ಹಿಂದುಸ್ಥಾನದ ರಾಷ್ಟ್ರೀಯ ಸಭೆಗೆ ಸರ್ ಗುರುದಾಸ್ ಬಾನರ್ಜಿ ಎಂಬ ಬಂಗಾಳದ ದೊಡ್ಡ ಮನುಷ್ಯನನ್ನು ಪ್ರೆಸಿಡೆಂಟ್ (ಅಧ್ಯಕ್ಷ) ರನ್ನಾಗಿ ಚುನಾಯಿಸಬೇಕೆಂದು ಚರ್ಚೆ ನಡೆಯುತ್ತಿದೆ. ಇವರು ಕಲ್ಕತ್ತೆಯ ಹೈ ಕೋರ್ಟ್ ಜಡ್ಜಿಗಳಾಗಿ ಬಹುಕಾಲ ಸರ್ಕಾರಿ ಕೆಲಸ ಮಾಡಿ, ಪ್ರಜೆಗಳಿಂದಲೂ ಸರ್ಕಾರದವರಿಂದಲೂ ತುಂಬಾ ಗೌರವವನ್ನು ಸಂಪಾದಿಸಿಕೊಂಡಿರುವರು.

✿✿✿✿✿

ಕೊಲ್ಲೂ ಕಣಿವೆಯಲ್ಲಿ ಕಳೆದ ೧೮೯೯ ರಲ್ಲಿ ೧ ಲಕ್ಷ ೩೦ ಸಾವಿರ ರೂಪಾಯಿ ಖರ್ಚು ಮಾಡಿ ಕಟ್ಟಿಸಿದ್ದ ಬೀಯಾಸ್ ನದಿಯ ಭಾರೀ ಸೇತುವೆಯು ಕಳೆದ ಭೂಕಂಪಕ್ಕೆ ಸಿಕ್ಕಿ ಸಂಪೂರ್ಣವಾಗಿ ಮುರಿದುಹೋಗಿತ್ತು. ಸರ್ಕಾರದವರು ಕಳೆದ ಮಾರ್ಚಿ ತಿಂಗಳಲ್ಲಿ ಸೈನಿಕರನ್ನು ಬಿಟ್ಟು ಕಾಮಗಾರಿ ಮಾಡಿಸಿ, ಹಂಗಾಮಿಯಾಗಿ ಒಂದು ಸೇತುವೆಯನ್ನು ಕಟ್ಟಿಸಿದ್ದಾರೆ. ಇದಕ್ಕೆ ೫,೦೦೦ ರೂಪಾಯಿ ಖರ್ಚಾಯಿತು. ಕಳೆದ ವಾರದಿಂದ ಅದರ ಮೇಲೆ ಜನರು ಸಂಚರಿಸುತ್ತಾರೆ.

✿✿✿✿✿

ಕಾಶ್ಮೀರ ಸಂಸ್ಥಾನದ ಮಹಾರಾಜರವರಿಗೆ ಸಂಸ್ಥಾನವನ್ನಾಳುವ ಅಧಿಕಾರವನ್ನು ಹಿಂತಿರುಗಿಸಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ. ಮಹಾರಾಜರವರ ಸಹೋದರರಾದ ಜನರಲ್ ರಾಜಾ ಸರ್ ಅಮರ್ ಸಿಂಗರವರು ಮಂತ್ರಿಗಳಾಗಿರುವರು. ಇದುವರೆಗೆ ಆ ಸಂಸ್ಥಾನದಲ್ಲಿ ಯಾವ ಯೂರೋಪ್ಯನೇ ಆಗಲಿ ಜಮೀನನ್ನು ಕ್ರಯ ಅಥವಾ ಬೋಗ್ಯಾದಿಗಳ ಮೂಲಕ ಪಡೆಯಕೂಡದೆಂಬ ವಿಧಿಯನ್ನು ಇಟ್ಟಿದ್ದರು. ಈ ವಿಧಿಯನ್ನು ಮಹಾರಾಜರವರ ದೌಲತ್ತಿನಲ್ಲಿ ತಪ್ಪಿಸುತ್ತಾರೆಂದು ತಿಳಿದುಬಂದಿದೆ.

✿✿✿✿✿

ಲಾಹೋರ್ ಪಟ್ಟಣದಲ್ಲಿ ಭಾರೀ ಜಮೀನ್ದಾರರೆಲ್ಲಾ ಸೇರಿ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಈ ಸಂಘದವರು ವಿಲಾಯತಿಯ ಯುವರಾಜರವರಿಗೆ ಸುಸ್ವಾಗತವನ್ನು ಬಯಸಿ ಒಂದು ಅಡ್ರೆಸ್ಸನ್ನು ಬರೆದು ಒಪ್ಪಿಸಬೇಕೆಂದು ಗೊತ್ತುಮಾಡಿ, ಇದಕ್ಕೆ ಗವರ್ನ್‌ಮೆಂಟಿನವರ ಅನುಮತಿಯನ್ನು ಕೇಳಿರುವರು. ಇದಲ್ಲದೆ ಈ ಜಮೀನ್ದಾರರು ತಮ್ಮ ಗುಂಪಿಗೆ ಯಾವಯಾವ ಕೊರತೆಗಳುಂಟಾಗಿವೆಯೋ ಗೊತ್ತುಮಾಡಿ, ಅವುಗಳನ್ನು ಪರಿಹರಿಸಿಕೊಡುವಂತೆ ಗವರ್ನ್‌ಮೆಂಟಿನವರನ್ನು ಕೇಳಬೇಕೆಂದು ತೀರ್ಮಾನ ಮಾಡಿಕೊಂಡರು.

✿✿✿✿✿

ಗೊಂಡಾಲ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದ ಸಮಸ್ತ ಅಧಿಕಾರಿಗಳನ್ನೂ ಕರೆಸಿ, ಇನ್ನು ಮುಂದೆ ಅರಮನೆಗಾಗಲಿ ಸರ್ಕಾರಿ ಕೆಲಸಕಾರ್ಯಗಳಿಗಾಗಲಿ ಬೇಕಾಗುವ ಸರಕುಗಳನ್ನು ಕೊಂಡುಕೊಳ್ಳುವಾಗ್ಗೆ ವಿಲಾಯತಿಯ ಅಥವಾ ಪರದೇಶಗಳ ಸರಕನ್ನು ನಿರಾಕರಿಸಿ, ಈ ರಾಷ್ಟ್ರದಲ್ಲಿ ಇಲ್ಲಿನ ಜನರಿಂದ ತಯಾರಾಗಿ ಬಿಕರಿ ಮಾಡಲ್ಪಡುವವುಗಳನ್ನೇ ಕೊಂಡುಕೊಳ್ಳಬೇಕೆಂದು ಅಪ್ಪಣೆ ಕೊಟ್ಟಿರುವಂತೆ ಪ್ರಕಟವಾಗಿದೆ. ಇದರಿಂದ ದೇಶೀಯ ಕೈಗಾರಿಕೆಗಳಿಗೆ ತುಂಬಾ ಪ್ರೋತ್ಸಾಹವಾಗುವುದಕ್ಕೆ ಸಂಶಯವಿಲ್ಲ.

✿✿✿✿✿

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರೂ ಕಪೂರ್ತಲ ಮಹಾರಾಜರವರೂ, ಹಿಂದುಸ್ಥಾನದ ಇನ್ನೂ ಒಂಬತ್ತು ಮಂದಿ ರಾಜರುಗಳೂ ಈಗ ವಿಲಾಯತಿಯಲ್ಲಿ ಇರುತ್ತಾರೆ. ಇವರೆಲ್ಲಾ ಸೇರಿ ಹಿಂದುಸ್ಥಾನದ ಜನರನ್ನು ಕೈಗಾರಿಕೆಗಳಲ್ಲಿ ತರಪೇತು ಮಾಡುವುದಕ್ಕೂ ಅವರ ಕಸಬುಗಳನ್ನು ಪ್ರೋತ್ಸಾಹಪಡಿಸುವುದಕ್ಕೂ ಸಹಾಯಮಾಡಬೇಕೆಂದು ಗೊತ್ತುಮಾಡಿಕೊಂಡಿರುವುದಾಗಿಯೂ, ಈ ಕಾರ್ಯಕ್ಕೆ ಅವಶ್ಯವಾಗಿರುವ ಹಣವನ್ನು ಅವರು ಕಾಪಾಡಿಕೊಟ್ಟು ಕೊಡಿಸಿರುವುದಾಗಿಯೂ, ಹಿಂದುಸ್ಥಾನದ ಇತರ ರಾಜರು ಮತ್ತು ಜಮೀನ್ದಾರರುಗಳಿಂದಲೂ ಹಣ ಕೊಡಿಸಬೇಕೆಂತಲೂ ತೀರ್ಮಾನಿಸಿಕೊಂಡಿದ್ದಾರೆಂದು ಲಂಡನ್ ಪಟ್ಟಣದ ಒಂದು ಪತ್ರಿಕೆಯು ತಿಳಿಸುತ್ತದೆ.

✿✿✿✿✿

ರಂಗೂನ್ ಪಟ್ಟಣದಲ್ಲಿ ಒಬ್ಬ ಬರ್ಮೀಯ ದೊಡ್ಡ ಮನುಷ್ಯನ ಮಗಳನ್ನು ಯಾರೋ ಅಪಹರಿಸಿಕೊಂಡು ಹೋದರೆಂತಲೂ, ಅವಳ ಪ್ರವರ್ತ್ತರವನ್ನು ಯಾರಾದರೂ ಕಂಡು ಹಿಡಿದು ತಿಳಿಸಿದರೆ ಅವಳ ತಾಯಿ ೯,೦೦೦ ರೂಪಾಯಿ ಬಹುಮಾನ ಕೊಡುವುದಾಗಿ ಪ್ರಕಟಿಸಿದಳೆಂತಲೂ ವಾಚಕರಿಗೆ ಗೊತ್ತಿದೆಯಷ್ಟೆ. ಆ ಹುಡುಗಿಯ ತಂದೆಯು ವಿಲಾಯತಿಯಿಂದ ಬಂದು, ಒಂದು ತಿಂಗಳಿಂದಲೂ ಪೋಲೀಸಿನವರು ತನ್ನ ಮಗಳನ್ನು ಪತ್ತೆ ಮಾಡದೆ ಹೋದರೆಂದು ಆಕ್ಷೇಪಿಸಿದರು. ಹುಡುಗಿಯನ್ನು ಎತ್ತಿಕೊಂಡು ಹೋದಾಗ ಒಬ್ಬ ಪೋಲೀಸಿನವನು ಆ ಸಂಗತಿಯನ್ನು ಇನ್ಸ್‌ಪೆಕ್ಟರಿಗೆ ತಿಳಿಸದೆ ಹೋದದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಆ ಪೋಲೀಸಿನವನಿಗೆ ಒಂದು ತಿಂಗಳ ಕಠಿಣ ಸಜಾ ವಿಧಿಸಿದರು.

✿✿✿✿✿

ಅನಂತಶಯನ (ತಿರುವಾಂಕೂರು) ಸಂಸ್ಥಾನದ ಮಹಾರಾಜರವರು ಆಳ್ವಿಕೆಯನ್ನು ಪ್ರಾರಂಭಿಸಿ ೩೦ ಸಂವತ್ಸರಗಳಾದವು. ಕಳೆದ ವಾರ ಈ ಸಂತೋಷೋತ್ಸವವನ್ನು ಬಹು ಉತ್ಸಾಹಪೂರ್ವಕವಾಗಿ ನೆರವೇರಿಸಿದರು. ಬಾಲಕರಿಗೆ ವಿನೋದಗಳನ್ನು ಕಲ್ಪಿಸಿದರು, ಸುಮಾರು ೩,೦೦೦ ಜನರಿಗೆ ಸಮಾರಾಧನೆಗಳನ್ನು ಮಾಡಿಸಿದರು. ದೇವಸ್ಥಾನ ಸತ್ರ ಮುಂತಾದವುಗಳಲ್ಲಿ ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ನೆರವೇರಿಸಿದರು. ಆನೆಯ ಮೇಲೆ ಮಹಾರಾಜರವರ ಚಿತ್ರವನ್ನು ಇಟ್ಟು ಮಹಾ ವಿಭವದೊಡನೆ ಪಟ್ಟಣದಲ್ಲಿ ಮೆರವಣಿಗೆ ಮಾಡಿದರು. ಒಂದು ದೊಡ್ಡ ಸಭೆ ಕೂಡಿತು. ಮುಖ್ಯ ಮುಖ್ಯ ದೊಡ್ಡ ಮನುಷ್ಯರೆಲ್ಲ ಸೇರಿ ಮಹಾರಾಜರವರ ಆಳ್ವಿಕೆಯನ್ನು ಕೊಂಡಾಡಿದರು. ರಾತ್ರಿ ಪಟ್ಟಣದಲ್ಲಿ ದೀಪೋತ್ಸವವನ್ನು ಮಾಡಿ, ಸಂತೋಷಪಟ್ಟರು.

✿✿✿✿✿

ಉತ್ತರ ದೇಶಕ್ಕೆ ಸೇರಿದ ರಾವಲ್ಪಿಂಡಿಯಲ್ಲಿ ಒಬ್ಬ ಕಪಟ ಸನ್ಯಾಸಿಯು ಚಿನ್ನ ಮಾಡುತ್ತೇನೆಂದು ಒಬ್ಬ ಸರ್ಕಾರಿ ಜವಾನನಿಗೆ ಮೋಸಗೊಳಿಸಿ, ಕೆಲವು ಚಿನ್ನದ ಗಟ್ಟಿಗಳನ್ನು ಅವನ ಕೈಗೆ ಕೊಟ್ಟು ಅವನಿಂದ ೬೦೦ ರೂಪಾಯಿ ತೆಗೆದುಕೊಂಡನು. ಆ ಜವಾನನು ಕೆಲವು ಕಾಲದ ಮೇಲೆ ಆ ಚಿನ್ನದ ಗಟ್ಟಿಗಳನ್ನು ಬಿಕರಿ ಮಾಡುವುದಕ್ಕೆ ಹೋದಾಗ ಅದೆಲ್ಲಾ ತಾಂಬ್ರವೆಂದು ಗೊತ್ತಾಯಿತು. ಅವನು ಪೋಲೀಸಿಗೆ ತಿಳಿಸಿದನು. ಆ ಸನ್ಯಾಸಿಯು ಅಲ್ಲಿಂದ ತಲೆ ತಪ್ಪಿಸಿಕೊಂಡು ಕಲ್ಕತ್ತೆಗೆ ಹೋಗಿಬಿಟ್ಟನು. ಪೋಲೀಸಿನವರು ಅಲ್ಲಿ ಅವನನ್ನು ಹಿಡಿದು ವಿಚಾರಿಸುವಲ್ಲಿ ಅವನು ಮಹಮದೀಯನೆಂದೂ ಸನ್ಯಾಸಿಯ ವೇಷದಲ್ಲಿ ಅವನು ಅನೇಕರನ್ನು ಮೋಸಪಡಿಸಿದಾನೆಂದೂ ಗೊತ್ತಾಯಿತು. ಮ್ಯಾಜಿಸ್ಟ್ರೇಟರು ಇಂಥಾ ಮೋಸಗಾರನಿಗೆ ೩ ವರ್ಷದ ಸಜಾ ವಿಧಿಸಿದರು.

✿✿✿✿✿

ಬೊಂಬಾಯಿ ಪಟ್ಟಣದಲ್ಲಿ ಮ್ಯುನಿಸಿಪಲ್ ಕಮಿಷನರು ಸಭೆ ಸೇರಿ, ವಿದ್ಯಾವಂತರಾಗಿಯೂ ಯೋಗ್ಯರಾಗಿಯೂ ಇರುವ ಸ್ತ್ರೀಯರನ್ನೂ ಮೆಂಬರಾಗಿ ಇನ್ನು ಮೇಲೆ ಚುನಾಯಿಸುವಂತಾಗಬೇಕೆಂದೂ ಸ್ತ್ರೀಯರು ಮ್ಯುನಿಸಿಪಲ್ ಕಮಿಷನರಾದರೆ ಪ್ರಜೆಗಳ ಆರೋಗ್ಯ ವಿಚಾರವನ್ನು ಅವರು ಚೆನ್ನಾಗಿ ನೋಡಿಕೊಳ್ಳಬಲ್ಲರೆಂತಲೂ ಕೆಲವು ಮೆಂಬರುಗಳು ಚರ್ಚೆ ಮಾಡಿದರು. ಇನ್ನು ಕೆಲವು ಮೆಂಬರುಗಳು—ವಿದ್ಯಾವತಿಯರಾದ ಸ್ತ್ರೀಯರು ಈಗ ವಿರಳರಾಗಿದ್ದಾರೆ. ಅಂದವರು ತಮ್ಮ ಸಹೋದರವರ್ಗಕ್ಕೆ ಸೇರಿದ ಇತರ ಸ್ತ್ರೀಯರನ್ನು ವಿದ್ಯಾವತಿಯರಾಗುವಂತೆಯೂ ಪ್ರಪಂಚಜ್ಞಾನವನ್ನು ತಿಳಿದವರಾಗುವಂತೆಯೂ ಮಾಡಲಿ. ಅನಂತರ ಅವರನ್ನು ಸಂಘಗಳಿಗೆ ಮೆಂಬರನ್ನಾಗಿ ಚುನಾಯಿಸುವಂತೆ ಮಾಡಬಹುದೆಂದು ಹೇಳಿದರು. ಜನಾನಾ ಪದ್ಧತಿಯೂ ಬಾಲ್ಯ ವಿವಾಹಗಳೂ ಜಾತಿ ಪಂಗಡಗಳೂ ಎಂದಿಗೆ ಈ ರಾಷ್ಟ್ರದಲ್ಲಿ ಅದೃಶ್ಯವಾಗುವವೋ, ಪುರುಷರಂತೆಯೇ ಸ್ತ್ರೀಯರೂ ಸಮಾನವಾಗಿ ವಿದ್ಯಾದಿ ಸಾಮರ್ಥ್ಯಗಳನ್ನು ಸಂಪಾದಿಸಿಕೊಳ್ಳುವರೋ ಅಂದಿನವರೆಗೂ ಈ ರಾಷ್ಟ್ರವು ಶ್ರೇಯೋಭಿವೃದ್ಧಿಯನ್ನು ಪಡೆಯಲಾರದೆಂದು ದೇಶಾಭಿಮಾನಿಗಳು ಹೇಳುತ್ತಾರೆ. ಈ ವಿಷಯಕ್ಕೆ ಸಕಲ ಪ್ರಜೆಗಳೂ ಗಮನಕೊಡಬೇಕಾಗಿದೆ.

✿✿✿✿✿

ಪೋಸ್ಟ್ ಆಫೀಸುಗಳಲ್ಲಿ ಬಿಕರಿ ಮಾಡುವ ಒಂದಾಣೆಯ ಮತ್ತು ಅರ್ಧಾಣೆಯ ಹಲೇ ಚೀಟಿ (ಸ್ಟಾಂಪು) ಗಳನ್ನು ಕಾಗದಗಳಿಗೆ ಹಚ್ಚುವುದಕ್ಕೂ ರಶೀತಿಗಳಿಗೆ ಅಂಟಿಸುವುದಕ್ಕೂ ಉಪಯೋಗಿಸಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ. ಈ ಹುಕುಮು ನಾಳೆಯಿಂದ ಅಂದರೆ ಅಕ್ಟೋಬರ್ ೧ ರಿಂದ ಜಾರಿಗೆ ಬರುವುದು. ಕಾಗದಗಳ ಲಕೋಟೆಗಳಿಗೆ ಈ ಸ್ಟಾಂಪುಗಳನ್ನು ಹಚ್ಚಿ ಅದರ ಮೇಲೆ ಯಾವ ತರಹ ಗುರುತನ್ನೂ ಯಾರೂ ಮಾಡಕೂಡದೆಂತಲೂ ಹಾಗೆ ಶಾಯಿಯ ಗೀಟು ಮುಂತಾದ್ದುಳ್ಳ ಸ್ಟಾಂಪು ಕಾಗದಗಳಿಗೆ ಅಂಚೆಯವರು ದುಗುಣ ಹಾಸಲನ್ನು ವಿಧಾಯಿಸುವರೆಂದೂ ಮನಸ್ಸಿಲ್ಲದಿರಬೇಕೆಂದು ಸರ್ಕಾರದವರು ಕಾನೂನು ಮಾಡಿದ್ದಾರೆ. ಆದಕಾರಣ ಯಾರೇ ಆಗಲಿ ಲಕೋಟೆಗಳ ಮೇಲೆ ಸ್ಟಾಂಪು ಅಂಟಿಸಿ ಆ ಸ್ಟಾಂಪಿನ ಮೇಲೆ ಯಾವ ವಿಧವಾದ ಗುರುತನ್ನೂ ಮಾಡಬಾರದು. ಹಣ ಸಂದ ರಶೀತಿಯೇ ಮುಂತಾದ ಕೈಕಾಗದಗಳಿಗೆ ಈಗ ಅಂಟಿಸುವ ಪ್ರತ್ಯೇಕವಾದ ಒಂದಾಣೆ ಬಾಬತು ರಶೀತಿ ಸ್ಟಾಂಪನ್ನು ಇನ್ನು ಮುಂದೆ ಸರ್ಕಾರದವರು ಬಿಕರಿ ಮಾಡುವುದಿಲ್ಲ. ಅಂಚೆ ಕಾಗದಗಳಿಗೆ ಅಂಟಿಸುವ ಒಂದಾಣೆ ಸ್ಟಾಂಪನ್ನೇ ಅಥವಾ ಅರ್ಧಾಣೆಯ ಎರಡು ಸ್ಟಾಂಪುಗಳನ್ನೇ ಕೊಂಡು, ರಶೀತಿಗಳಿಗೂ ಅಂಟಿಸಬೇಕು.

✿✿✿✿✿

ಲಾರ್ಡ್ ಕರ್ಜನರವರು ವೈಸ್‌ರಾಯ ಕೆಲಸಕ್ಕೆ ರಾಜೀನಾಮೆ ಕೊಟ್ಟರಷ್ಟೆ. ಈ ವಿಷಯವಾಗಿ ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರಾದ ಏಳನೇ ಎಡ್ವರ್ಡ್ ಪ್ರಭುಗಳು ಲಾರ್ಡ್ ಕರ್ಜನರವರಿಗೆ ತಂತೀವರ್ತಮಾನ ಕೊಟ್ಟು ತಿಳಿಸಿದ್ದೇನೆಂದರೆ—"ನೀವು ಮಹಾ ಅವಸರದಿಂದ ಕೊಟ್ಟಿರುವ ರಾಜೀನಾಮೆಯನ್ನು ನಾವು ಅಂಗೀಕರಿಸದೆ ಇರುವುದಕ್ಕಿಲ್ಲವಾದ್ದರಿಂದ ತುಂಬಾ ದುಃಖಪಡುತ್ತೇವೆ. ನೀವು ನಿಮ್ಮ ಪ್ರಭುವಿಗೋಸ್ಕರಲೂ ನಿಮ್ಮ ದೇಶಕ್ಕೋಸ್ಕರಲೂ ಬಹು ಅಮೂಲ್ಯವಾದ ಸರ್ವೀಸನ್ನು ಮಾಡಿರುತ್ತೀರಿ. ಇದಕ್ಕಾಗಿ ನಾವು ನಿಮ್ಮನ್ನು ಅತ್ಯಂತ ಪ್ರೀತಿಪೂರ್ವಕವಾಗಿ ವಂದಿಸುತ್ತೇವೆ. ನೀವು ಹಿಂದುಸ್ಥಾನದಲ್ಲಿ ಅಮೋಘವಾದ ಕಾರ್ಯಗಳನ್ನು ಮಾಡಿರುವಿರಿ. ನಿಮ್ಮ ಶರೀರಸ್ಥಿತಿಯು ಎಂದಿನಂತೆ ಆರೋಗ್ಯವಾಗಲೆಂದು ನಾವು ಮನಃಪೂರ್ವಕವಾಗಿ ಕೋರುತ್ತೇವೆ" ಎಂಬುದೇ. ಈ ತಂತೀ ವರ್ತಮಾನವನ್ನು ಲಾರ್ಡ್ ಕರ್ಜನರವರು ನೋಡಿಕೊಂಡು, ಪ್ರತಿಯಾಗಿ ಚಕ್ರವರ್ತಿ ಸಾರ್ವಭೌಮರಿಗೆ ಜವಾಬು ಅರಿಕೆ ಮಾಡಿದ್ದೇನೆಂದರೆ—"ಘನವನ್ನೈದಿದ ಮಹಾಪ್ರಭುಗಳು ದಯಾಪೂರ್ವಕವಾಗಿ ಕಳುಹಿಸಿದ ತಂತೀ ವರ್ತಮಾನವು ನನಗೆ ಹೃದಯಂಗಮವಾಗಿ ನನ್ನನ್ನು ಬಹಳವಾಗಿ ಸಂತೋಷಪಡಿಸಿರುತ್ತದೆ. ನಾನು ಹಿಂದುಸ್ಥಾನದಲ್ಲಿ ಮಾಡಿರುವ ಸರ್ವೀಸು ತಮ್ಮ ನಿರಂತರವಾದ ಮೆಚ್ಚಿಕೆಯನ್ನೇ ಪಡೆದಿದೆ ಎಂದು ಕೃತಜ್ಞತಾಪೂರ್ವಕವಾಗಿ ಅರಿಕೆ ಮಾಡುವೆನು" ಎಂಬುದೇ.

✿✿✿✿✿

ಬಂಗಾಳಾ ಜಮೀನ್ದಾರರಲ್ಲಿ ಮುಖ್ಯಮುಖ್ಯರಾದವರು ಕಲ್ಕತ್ತೆಯಲ್ಲಿ ಒಂದು ಸಂಘವನ್ನು ಮಾಡಿಕೊಂಡು, ಬಂಗಾಳಾದಲ್ಲಿ ಹುಟ್ಟಿಬೆಳೆದಂಥ ಪ್ರಜೆಗಳೆಲ್ಲಾ ವಿಲಾಯತಿಯಿಂದ ಬರತಕ್ಕ ಬಟ್ಟೆ ಮೊದಲಾದ ವ್ಯಾಪಾರ ಸರಕುಗಳನ್ನು ಸ್ವಲ್ಪ ಮಾತ್ರವೂ ಕೊಂಡುಕೊಳ್ಳಕೂಡದೆಂದು ನಮ್ಮ ದೇಶದಲ್ಲಿ ನಮ್ಮ ಜನರಿಂದ ತಯಾರು ಮಾಡಲ್ಪಡುವಂಥಾ ಬಟ್ಟೆಬರೆಗಳನ್ನೇ ಕೊಂಡುಕೊಳ್ಳಬೇಕೆಂತಲೂ ತೀರ್ಮಾನಿಸಿಕೊಂಡಿದ್ದಾರೆ. ಅಲ್ಲಿನ ವ್ಯಾಪಾರಸ್ಥರಾದ ಮಾರ್ವಾಡಿಗಳು ಈ ಜಮೀನ್ದಾರರ ಮತ್ತು ಜನಗಳ ಚಿತ್ತವನ್ನು ನೋಡಿ ಸಂತೋಷಪಟ್ಟು, ವಿಲಾಯತಿಯಿಂದ ಹೊಸ ಜವಳಿ ಮುಂತಾದ್ದನ್ನು ತರಿಸುವುದೇ ಇಲ್ಲವೆಂದೂ ಈ ದೇಶದ ಜವಳಿಯನ್ನೇ ತರಿಸಿ ಬಿಕರಿ ಮಾಡುತ್ತೇವೆಂತಲೂ ಮಾತು ಕೊಟ್ಟಿದ್ದಾರೆ. ವರ್ತಕರು ಈ ಮಾತಿನಂತೆ ನಡೆಕೊಂಡ ಪಕ್ಷದಲ್ಲಿ ಈ ನಿರ್ಧಾರವು ಸಾರ್ಥಕವಾಗುವುದಕ್ಕೆ ಸಂಶಯವಿಲ್ಲ. ಇತ್ತಲಾಗಿ ಪೂನಾಪಟ್ಟಣದಲ್ಲಿ ಕಳೆದ ವಾರ ಸುಮಾರು ೩,೦೦೦ ಜನ ವಿದ್ಯಾರ್ಥಿಗಳೇ ಮುಂತಾದವರು ಸಭೆ ಸೇರಿ, ಈ ಸ್ವದೇಶೀ ನಿರ್ಧಾರವನ್ನು ಅನುಮೋದಿಸಿ, ತಮ್ಮ ಸಂತೋಷವನ್ನು ಬಂಗಾಳಾ ಪ್ರಜೆಗಳಿಗೆ ತಿಳಿಸಿದರು. ಈ ಸಭೆಯಲ್ಲಿ ಮಿ॥ ಬಾಲಗಂಗಾಧರತಿಲಕರವರೂ ಮಿ॥ ಪರಾಂಜಪೆಯವರೂ ಉಪನ್ಯಾಸಗಳನ್ನು ಮಾಡಿ, ಯಾರೂ ವಿಲಾಯತಿಯ ಜವಳಿ ಮುಂತಾದ ಯಾವ ಸರಕನ್ನೂ ಕೊಂಡುಕೊಳ್ಳಬಾರದೆಂತಲೂ ನಮ್ಮ ದೇಶದ ಕಾರೀಗರರಿಂದ ತಯಾರಾದವುಗಳನ್ನೇ ಪದಾರ್ಥಗಳನ್ನೇ ನಾವೆಲ್ಲಾ ಕೊಂಡುಕೊಳ್ಳಬೇಕೆಂತಲೂ ಉಪನ್ಯಾಸ ಮಾಡಿದರು. ಈ ಸ್ವದೇಶೀ ನಿರ್ಧಾರವು ಮೊದಲು ಪೂನಾಪಟ್ಟಣದಲ್ಲಿ ಸುಮಾರು ೩೪ ವರುಷಗಳ ಕೆಳಗೆ ಲೇಟ್ ಗಣೇಶ ವಾಸುದೇವ ಜೋಷಿ ಎಂಬಾತನು ಪ್ರಾರಂಭಿಸಿದನು. ಅಂದಿನಿಂದ ಪೂನಾ ಕಡೆಯವರೆಲ್ಲಾ ವಿಲಾಯತಿಯ ಬಟ್ಟೆಬರೆಗಳನ್ನು ಕೊಂಡುಕೊಳ್ಳುವುದಿಲ್ಲ. ಇದರಿಂದ ಒಳದೇಶದ ಕಸಬುದಾರರಿಗೆ ತುಂಬಾ ಪ್ರೋತ್ಸಾಹವಾಗಿದೆ.

✿✿✿✿✿

ಮದರಾಸ್ ಗವರ್ನ್‌ಮೆಂಟಿನವರು ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿದ ಹೊಸಕೋಟೆಯ ಹತ್ತಿರ ಮೂರು ಮೈಲಿ ದೂರದಲ್ಲಿ ತುಂಗಭದ್ರಾನದಿಗೆ ಅಡ್ಡಕಟ್ಟೆ ಹಾಕಿ ಒಂದು ದೊಡ್ಡ ಕೆರೆಯನ್ನು ಕಟ್ಟಬೇಕೆಂದು ಯೋಚಿಸಿದ್ದಾರೆ. ಈ ಕೆರೆಯು ೫೭೦ ಚದರಮೈಲಿಯಷ್ಟು ಫಲವತ್ತಾದ ಭೂಪ್ರದೇಶವನ್ನು ಆವರಿಸಿಕೊಳ್ಳುತ್ತದೆ. ಮೂವತ್ತು ಗ್ರಾಮಗಳು ಒಳಗೆರೆಗೆ ಸೇರಿ ಹೋಗುವವು. ಮತ್ತು ನಾಲಾರ್ ಜಂಗಲ್ ಜಹಗೀರಿಗೆ ಸೇರಿದ ಎಂಟು ಗ್ರಾಮಗಳಲ್ಲಿ ಕೆಲವು ಭಾಗಗಳೂ ಒಳಗೆರೆಗೆ ಸೇರುತ್ತವೆ. ಮದರಾಸ್ ಗವರ್ನ್‌ಮೆಂಟಿನವರು ಕಳೆದ ೧೯೦೩ನೆ ಇಸವಿಯಲ್ಲಿ ಈ ಕೆರೆಯನ್ನು ನಿರ್ಮಾಣ ಮಾಡುವುದಕ್ಕೆ ಒಪ್ಪುತ್ತೀರಾ ಎಂತಲೂ, ಇದರ ಕಾಮಗಾರಿಗೆ ಸ್ವಲ್ಪ ಹಣವನ್ನು ಕೊಟ್ಟಲ್ಲಿ ಅದರಲ್ಲಿ ಬರುವ ಆದಾಯದೊಳಗೆ ಒಂದಂಶವನ್ನು ಕೊಡುತ್ತೇವೆ ಎಂತಲೂ ಹೈದರಾಬಾದ್ ಸರ್ಕಾರದವರನ್ನು ಪ್ರಶ್ನೆಮಾಡಿದರು. ಆರುಮಾಯ ಎರಡು ಗವರ್ನ್‌ಮೆಂಟುಗಳವರೂ ಆ ಪ್ರಾಂತ್ಯ ಆವಮಾಯಿಷಿ ಮಾಡಿಸಿದ್ದರಲ್ಲಿ ಹೈದರಾಬಾದಿನವರು ಕಾಮಗಾರಿಗೆ ಹಣಕೊಡುವುದರಿಂದ ಅವರಿಗೆ ಆದಾಯವೇನೂ ಬರಲಾರದೆಂತಲೂ, ಆದ್ದರಿಂದ ಮದರಾಸ್ ಗವರ್ನ್‌ಮೆಂಟಿನವರು ಆ ನದಿಯ ನೀರನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಅವರು ಹೈದರಾಬಾದಿಗೆ ಕೆಲವು ಹಣವನ್ನು ಪರಿಹಾರ ಕೊಡಬೇಕೆಂತಲೂ, ಹೈದರಾಬಾದ್ ಸಂಸ್ಥಾನದ ಜಮೀನುಗಳಿಗೆ ಸಾಗುವಳಿಗೆ ಮದರಾಸಿನವರು ಸರ್ವದಾ ನೀರು ಕೊಡಬೇಕೆಂತಲೂ ಗೊತ್ತುಮಾಡಿದರು. ಕಳೆದವಾರ ಮದರಾಸ್ ಗವರ್ನರವರು ಹೈದರಾಬಾದಿಗೆ ಹೋಗಿದ್ದಾಗ ಅಲ್ಲಿನ ಬ್ರಿಟಿಷ್ ರೆಸಿಡೆಂಟರವರೂ ಗವರ್ನರವರೂ ನೈಜಾಮರವರ ಮಂತ್ರಿಯವರೂ ಅವರ ಚೀಫ್ ಇಂಜನಿಯರವರೂ ಒಂದು ಕಡೆ ಸೇರಿ, ಈ ಕೆರೆಯ ವಿಚಾರವನ್ನೂ ಮದರಾಸ್ ಗವರ್ನ್‌ಮೆಂಟಿನವರ ನೈಜಾಮರವರ ಪ್ರಜೆಗಳಿಗೂ ಸರ್ಕಾರಕ್ಕೂ ಕೊಡಬೇಕಾಗುವ ಪರಿಹಾರ ದ್ರವ್ಯವನ್ನೂ ಗೊತ್ತುಮಾಡಿರುತ್ತಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರೆದ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಮಂಡ್ಯದ ತಾಲ್ಲೂಕು ಗುಳಲು ಗ್ರಾಮದ ಸ್ಕೂಲು, ತೀರ್ಥಹಳ್ಳಿ ತಾಲ್ಲೂಕು ಸ್ಕೂಲು—ಈ ವಿಷಯವಾದ ಬಾತ್ಮಿಗಳನ್ನು ಪ್ರಕಟಿಸಲಾರೆವು.

ಕರೆಸ್ಪಾಂಡೆನ್ಸ್.

ವ್ಯಾಕರಣ ವಿಷಯ.

ಅಯ್ಯಾ,

ಈ ಇತ್ತೀಚೆ ಮೈಸೂರ ಇಲಾಖೆಯಲ್ಲಿ "ಹೋಗುತ್ತೆ, ಬರುತ್ತೆ, ಇರುತ್ತೆ" ಇದೇ ಮೊದಲಾದ ಅಪೂರ್ಣ ಕ್ರಿಯಾಪದಗಳನ್ನು ಪ್ರತಿಯೊಬ್ಬರೂ ಪ್ರಯೋಗಿಸುತ್ತಿರುವರು. ಇದನ್ನು ಪ್ರಯೋಗ ಮಾಡಲಿಕ್ಕೆ ಯಾವ ವ್ಯಾಕರಣದ ಎಷ್ಟನೇ ಸೂತ್ರದಲ್ಲಿ ಹೇಳಿರುತ್ತದೆ? ಈ ವಿಷಯವಾಗಿ ಯಾರಲ್ಲಿ ಪ್ರಶ್ನೆ ಮಾಡಿದರೂ ಪರಿಷ್ಕಾರದ ಉತ್ತರ ದೊರೆಯಲಿಲ್ಲ. ಸಾಕಾದಷ್ಟು ಆಧಾರ ದೊರೆಯಲಿಲ್ಲ. ಇದರ ಮೇಲಿಂದ ವ್ಯಾಕರಣಸೂತ್ರವಿಲ್ಲವೆಂತ ನಂಬಿದರೆ ದೊಡ್ಡ ದೊಡ್ಡ ವಿದ್ವಾಂಸರೂ ಪತ್ರಿಕಾಕರ್ತರೂ ಆದಿಯಾಗಿ ಪ್ರಯೋಗ ಮಾಡುವದರಿಂದ ಇಲ್ಲವೆಂತಲೂ ನಂಬುವ ಕಾರಣವಿಲ್ಲ. ಆದ್ದರಿಂದ ತಮ್ಮಲ್ಲಿಗೆ ಬರೆಕೊಂಡಿದ್ದೇನೆ. ತಾವಾಗಲೀ, ತಮ್ಮ ಪತ್ರಿಕಾವಾಚಕರಾಗಲೀ ವ್ಯಾಕರಣಸೂತ್ರದ ಆಧಾರವನ್ನು ತಿಳಿಸಿ ಮನಸ್ಸಂಶಯ ನಿವಾರಣೆ ಮಾಡಬೇಕಾಗಿ ಪ್ರಾರ್ಥನೆಯು.

ಚಂದಾದಾರ

ಗ್ರಾಮಾಂತರ ವಿಚಾರಗಳು.

ಅಯ್ಯಾ,

ಈ ಮಲ್ಲಿಪಟ್ಟಣ ಗ್ರಾಮದಲ್ಲಿ ಒಬ್ಬ ಶ್ಯಾನುಭೋಗರು ತಕ್ಕ ಮಟ್ಟಿಗೆ ಅನುಕೂಲವಾಗಿದ್ದಾರೆಂದು ತಾಲ್ಲೋಕು ಅಮಲ್‍ದಾರ್ರಲ್ಲಿ ಮುಂದಾಳಾಗಿ ನಿಂತಿರುವಂತೆ ವಾರ್ತೆ ಇರುವದರಿಂದ ರೈತರ ಕಷ್ಟ ಹೆಚ್ಚತ್ತೆ.

ಬೆಳಲೇಗೆ (ಮ) ಸೋಮವಾರ ಸಂತೆ ವಜಾ ಆದ್ದರಿಂದ ಈ ಪಟ್ಟಗ್ರಾಮದಲ್ಲಿ ಸಂತೆ ಕಾಯಂ ಮಾಡಿಸುವದಕ್ಕೋಸ್ಕರ ರೈತರಿಂದ ಚಂದಾ ವಸೂಲ್ ಮಾಡುತ್ತಿದ್ದಾರೆ. ಈಗ ನೂರಾರು ರೂಪಾಯಿನ ಮೇಲೆ ಆಗಿದೆ. ಮುಂದೆ ಪರ್ಯವಸಾನ ಹ್ಯಾಗಾಗುತ್ತೋ ಕಾಣೆನು.

ತಾಲ್ಲೂಕಿನಲ್ಲಿ ಆಗುವ ಸ್ಪೆಷಲ್ ಕಂಟ್ರಾಕ್ಟುಗಳಿಗೆಲ್ಲಾ ಒಬ್ಬರು ಮುಂದಾಳಾಗಿದ್ದಾರೆ. ಕಳೆದ ಸಾಲಿನಲ್ಲಿ ಈ ಗ್ರಾಮಕ್ಕೆ ಕುಡಿಯುವ ನೀರು ಬಹಳ ಕೆಟ್ಟುಹೋಗಿತ್ತು. ಇದಕ್ಕಾಗಿ ಸರ್ಕಾರದವರು ೧೫೦ ರೂಪಾಯಿಗಳನ್ನು ಮೇಲ್ಕಂಡ ನೀರು ಪಾನಕ್ಕೆ ಯೋಗ್ಯವಾಗುವಂತೆ ಮಾಡುವದಕ್ಕಾಗಿ ಇವರಿಗೆ ಕಂಟ್ರಾಕ್ಟು ಕೊಟ್ಟರು. ಸರ್ಕಾರಕ್ಕೆ ನಷ್ಟವೇ ಹೊರ್ತು ಪ್ರಜೆಗಳಿಗೆ ಉಪಯೋಗವಿಲ್ಲ. ಈಗಲೂ ನೀರು ಕೊಳತಿದೆ. ಕೇಳತಕ್ಕವರೆ ಇಲ್ಲ.

ಹಿತಚಿಂತಕ

ತೀರ್ಥಹಳ್ಳಿ ತಾ ಅರಗ

ಅಯ್ಯಾ,

ಈ ಊರು ಪೇಟೆಯಲ್ಲಿ ಅನೇಕ ಜನರು ವಾಸಮಾಡುತ್ತಾರೆ. ಬಹಳ ಮನೆಗಳಿವೆ. ಇಲ್ಲಿಯೂ ಸ್ಯಾನಿಟರಿ ರೂಲ್ಸು ಇಲ್ಲದ ಕಾರಣ ಈ ಊರಿನಲ್ಲಿ ರಸ್ತೆಯಲ್ಲಿ ದನಗಳ ಸಗಣಿ ಮನುಷ್ಯರ ಸಗಣಿ ಮುಂತಾದವು ಬಹಳ ಬಿದ್ದು ಪ್ಲೇಗ್ ತರಿದೋರುವಂತಿದೆ. ಈ ಊರಿನಲ್ಲಿರುವ ಜನಗಳಿಗೆ ಯಾಕೆ ಅಸಹ್ಯವಿಲ್ಲವೋ ತಿಳಿಯದು.

ಈ ಊರಿಗೂ ಪೋಸ್ಟಾಫೀಸಿಗೂ ಬಹಳ ಅಂದರೆ ॥—॥ ಮೈಲಿ ದೂರವಿದೆ. ಇಲ್ಲಿ ಒಂದು ಲೆಟರ್ ಬಾಕ್ಸ್ ಪೋಸ್ಟಾಫೀಸಿನವರು ದಯಮಾಡಿ ಇಡಿಸಿದರೆ ಇಲ್ಲಿ ಮತ್ತು ಈ ಊರು ಸಮೀಪದಲ್ಲಿರುವ ಜನಗಳ ಶ್ರಮ ಕಡಮೆಯಾಗಿ ಕಾಗದಗಳ ಉತ್ಪತ್ತಿ ಹೆಚ್ಚುವದು.

ಈಗ ೪—೫ ದಿವಸಗಳಿಂದ ಸುತರಾಂ ಮಳೆಯಿಲ್ಲ. ಅರಗದ ಸದಾಶಿವಪುರ ಅಗ್ರಹಾರದಲ್ಲಿ ಇಲ್ಲಿಯಂತೆಯೇ ಊರಿನಲ್ಲಿ ಎರಡು ಕ್ರೇಣಿಗಳಲ್ಲಿಯೂ ಕೊಳೆ ಜಾಸ್ತಿಯಾಗಿರುತ್ತೆ. ಈಗ ೩ ವಾರಗಳ ಕೆಳಗೆ ಪ್ಲೇಗ್ ಸೂಪರವೈಜರು ಬಂದಿದ್ದರಂತೆ. ಯಾವ ಬಗ್ಯೋ ತಿಳಿಯದು. ಈ ಊರಿಗೆ ಯಾವ ದೊಡ್ಡ ಮನುಷ್ಯರು ಬರುವದಿಲ್ಲವಲ್ಲ! ಈ ಊರಿನ ಕೊಳೆ ಹೇಗೆ ಹೋದೀತು! ಈ ಊರಿನಲ್ಲಿ ದೊಡ್ಡಗಳಿಲ್ಲ. ಈ ಅರಗದ ಪೇಟೆಯಲ್ಲಿ ಅನೇಕ ಜನ ಮಾಪಿಳ್ಳೆಯವರು ಅಡಿಕೆ ವ್ಯಾಪಾರಮಾಡಿ ಹಳ್ಳಿಗಳಲ್ಲಿರುವ ಬಹಳ ಜನ ಬಡವರಿಗೆ ಮೋಸವಾಗಿದೆ ಎಂದು ಕೇಳುತ್ತೇನೆ.

ನಿವಾಸಿ.

ದಯಾಳುಗಳಾದ ಮೈಸೂರು ಸರ್ಕಾರಕ್ಕೆ ಪ್ರಾರ್ಥನೆ.

ಅಯ್ಯಾ,

ದಸ್ರಾ ಮೊದಲಾದ ಸಂತೋಷ ಕಾಲಗಳಲ್ಲಿ ಪಟಾಕಿ, ಮತಾಪು ಪುಳಕಿತ್ತು, ಮೊದಲಾದ ಹುಡುಗರ ಆಟದ ಸಾಧಾರಣ ಮದ್ದಿನ ಪದಾರ್ಥಗಳನ್ನು ಮಾರಲಿಕ್ಕೆ ಸಹಾ ಲೈಸನ್ಸು ಪಡೆಯಲೇಬೇಕಾಗಿ ಮೈಸೂರು ಸರ್ಕಾರದವರು ಹೊಸದಾಗಿ ಕಾನೂನು ಜಾರಿಗೆ ತಂದು ಇರುತ್ತಾರೆ. ಇಂಥಾ ಕಾನೂನು ಬೊಂಬಾಯಿ ಸೀಮೆಯಲ್ಲಿ ಕಾಣುವದಿಲ್ಲ. ಆ ಪ್ರಾಂತ್ಯ ಸಾಧಾರಣವಾಗಿ ಲೈಸನ್ಸು ಇಲ್ಲದೇನೇ ಬಿಕರಿ ಆಗುತ್ತಾ ಇದೆ. ಇದೇ ರೀತಿ ಅಲ್ಲಿಯೂ ಮೊದಲು ಕಾನೂನು ಹುಟ್ಟಿ, ನಂತರ ಇದು ಹುಡುಗರ ಆಟದ ಸಾಮಾನು, ಇದರಿಂದ ಅಪಾಯವೇನೂ ಇಲ್ಲ ಎಂಬುದನ್ನು ಆಲೋಚಿಸಿ, ಸದರಿ ಕಾನೂನು ವಜಾ ಮಾಡಿದಂತೆ ಕೇಳುತ್ತೇನೆ. ಅಂದಿನಿಂದ ಈಚೆಗೆ ಎಷ್ಟೋ ಕಡೆ ಲೈಸನ್ಸು ಇಲ್ಲದೆ ಬಿಕರಿ ಮಾಡುತ್ತಾ ಇರುವರು. ದಯಾಳುಗಳಾದ ಈ ಸರ್ಕಾರದವರೂ ಸದರಿ ಪಟಾಕಿ ಆಟದ ಮದ್ದಿನ ಸಾಮಾನುಗಳಿಗೆ ಲೈಸನ್ಸು ಇಲ್ಲದೆ ಪೂರ್ವದಂತೆ ಬಿಕರಿ ಮಾಡಿಕೊಳ್ಳಲಿಕ್ಕೆ ಅಪ್ಪಣೆ ಕೊಡಿಸೋಣವಾದಲ್ಲಿ ವರ್ತಕರಿಗೆ ಬಹಳೇ ಅನುಕೂಲವಾದೀತು. ಅಥವ ಆ ರೀತಿ ವಿಚಾರಮಾಡಲಿಕ್ಕೆ ಆಗುವಹಾಗಿಲ್ಲದ ಪಕ್ಷಕ್ಕೆ ಬಂದೂಖ್ ಲೈಸನ್ಸು ಮೊದಲಾದ್ದಕ್ಕೆ ಇಟ್ಟಿರುವಂತೆ ಪಟಾಕಿ ಮಾರಲು ಸಾಲಿಯಾನ ನಾಲ್ಕಾಣೆ ಅಥವ ಎಂಟಾಣೆ ಛಾಪಾ ಕಾಗದದ ಮೂಲಕ ಲೈಸನ್ಸು ಪಡೆದುಕೊಳ್ಳುವಂತೆ ಎಲ್ಲಾ ಬಡವರ್ತಕರಿಗೂ ಸಾಧ್ಯವಾಗುವಂತೆ ಮಾಡಬೇಕಾಗಿ ಪ್ರಾರ್ಥನೆ.

ಶಿಕಾರಿಪುರ. ಬಡವರ್ತಕ.

ಬಾಲಿಕಾ ಪಾಠಶಾಲೆಯ ಬಹುಮಾನಸಭೆ

ಅಯ್ಯಾ,

ತುಮಕೂರು ತಾಲ್ಲೋಕ್ ಗೂಳೂರು ಕಸಬಾದಲ್ಲಿರುವ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಗೆ ಸನ್ ೧೯೦೫ ನೆ ಇಸವಿ ಆಗಸ್ಟ್ ೧೬ ನೇ ತಾರೀಖು ಬುಧವಾರ ಬೆಳಿಗ್ಯೆ ೮ ಗಂಟೆಗೆ ಬಹುಮಾನ ಕೊಡುವದಕ್ಕಾಗಿ ತುಮಕೂರಿಂದ ಬೆಂಗಳೂರಲ್ಲಿರುವ ಘನವನ್ನು ಹೊಂದಿದ ಥಾಮ್ಸನ್ ದೊರೆಸಾನಮ್ಮನವರು, ತುಮಕೂರು ಡಿಸ್ಟ್ರಿಕ್ಟ್ ವೆಸ್ಲಿಯನ್ ಮಿಷನ್ ಸ್ಕೂಲ್ಗಳ ಸೂಪರಿಂಟೆಂಡೆಂಟರಾದ ಘನ ಹೊಂದಿದ ಮಿಸ್ ಪ್ಯಾಜೆಟ್ ಅಮ್ಮನವರು, ತುಮಕೂರು ಮಿಷನ್ ಶಾಬರ್ನೆ ಸೂಪರಿಂಟೆಂಡೆಂಟರಾದ ಪ್ಲಾಟ್ ದೊರೆಸಾನಮ್ಮನವರು, ಘನನೇಟಿವ್ ಪಾದ್ರಿಗಳಾದ ರಾಮವೇಲು ಮೋಕ್ಷ್ಯನವರು ದಯಮಾಡಿದ್ದರಲ್ಲದೆ, ಗೂಳೂರು ಗ್ರಾಮದ ಪೋಸ್ಟ್ ಮಾಸ್ಟರ್ ವೆಂಕಟರಾಮಯ್ಯನವರು ಪರ್ಷಿಯನ್ ರಿಕಾರ್ಡುಕೀಪರು ವೆಂಕಟಸುಬ್ಬಯ್ಯನವರು, ಸಾಯರ್ ಶ್ಯಾನುಭೋಗರು, ಗ್ರಾಮದ ಪಾಟೀಲ್ ಶ್ಯಾನುಭೋಗರು, ಸಾಹುಕಾರ್ ಸಿದ್ಧರಾಮಣ್ಣನವರು, ದೊಡ್ಡಬಸಪ್ಪನವರು ಪೇಟೆ ವರ್ತಕರು ಪವಿರ್ದಾರರಾದ ರೈತರು ವಗೈರ ಬಹಳ ಜನ ದೊಡ್ಡಮನುಷ್ಯರು ಸಭೆ ಸೇರಿದ್ದರು. ಸ್ಕೂಲ್ ಹೊರಗೂ ಒಳಗೂ ಬಹಳವಾಗಿ ಅಲಂಕರಿಸಲ್ಪಟ್ಟಿತ್ತು. ಘನ ಥಾಮ್ಸನ್ ದೊರೆಸಾನಮ್ಮನವರು ಅಗ್ರಾಸನವನ್ನು ವಹಿಸಿದ್ದರು. ನೇಟಿವ್ ಪಾದ್ರಿಗಳಾದ ರಾಮವೇಲು-ಮೋಕ್ಷ್ಯನವರು ಮೊದಲು ಭಗವತ್ಪ್ರಾರ್ಥನೆ ಮಾಡಿದರು. ನಂತರ ಸ್ಕೂಲ್ ಹೆಡ್ ಮಾಸ್ಟರಾದ ವೆಂಕಟರಂಗಯ್ಯನವರು ಬಾಲಕಿಯರಿಂದ ವಂದನಾಪತ್ರಿಕೆ ಕೊಡಿಸಿ ಫಿಡೇಲ್‍ನೊಂದಿಗೆ ಇಂಪಾದ ಸಂಗೀತ ಹಾಡಿಸಿದರು. ರಾಮವೇಲಾಮೋಕ್ಷ್ಯನವರು ಎದ್ದು ಬಾಲಕಿಯರ ವಿದ್ಯಾಭ್ಯಾಸದ ವಿಷಯವಾಗಿ ಉಪನ್ಯಾಸ ಮಾಡಿದರು. ನಂತರ ಮಿಸ್ ಪ್ಯಾಜೆಟ್ ಅಮ್ಮನವರು ಇಂಗ್ಲಿಷ್ ಯಂತ್ರದ ರಾಗದ ಪೆಟ್ಟಿಗೆಯಿಂದ ರಾಗಕ್ಕೆ ಸರಿಯಾಗಿ ಬಾಲಕಿಯರಿಂದ ಕಿಂಡರ್‌ಗಾರ್ಟನ್ ಮಾಡಿಸಿದರಲ್ಲದೆ ಘನಥಾಮ್ಸನ್ ದೊರೆಸಾನಮ್ಮನವರ ಕೈಯಿಂದ ೫೫ ಜನ ಬಾಲಕಿಯರಿಗೆ ಬಹುಮಾನ ಕೊಡಿಸಿದರು. ಬಳಿಕ ಸ್ಕೂಲ್ ಹೆಡ್ ಮಾಸ್ಟರು ಬಾಲಕಿಯರಿಗೆ ಮಿಠಾಯಿ ಬಾಳೆಹಣ್ಣು ವಗೈರೆ ತಿಂಡಿ ಪದಾರ್ಥಗಳು ಹಂಚಿದರು. ಕಡೆಯಲ್ಲಿ ಬಾಲಕಿಯರು ಭಗವಂತನನ್ನು ಕುರಿತು ಮಂಗಳ ಹಾಡಿದ ಮೇಲೆ ಸಭಾಸದರು ಎದ್ದು ಗೃಹಗಳನ್ನು ಕುರಿತು ದಯಮಾಡಿದರು.

ಪ್ರತ್ಯಕ್ಷದರ್ಶಿ.

ಅಯ್ಯೋ ದುರಾದೃಷ್ಟವೇ ?

ಅಯ್ಯಾ,

ಹುಣಸೂರು ತಾಲ್ಲೂಕಿನಲ್ಲಿ ಕಳೆದ ಮಾರ್ಚ್ ೧೩ ನೆ ತಾ ನಲ್ಲಿ ಟಪ್ಪಾಲು ಗೈರ್ವಿಲೆ ಆದ ಸಂದರ್ಭದಲ್ಲಿ ತನಿಖೆ ಕ್ರಮ ಜರಿಗಿ ತಪ್ಪಿತಸ್ಥರು ಇಂಥಾವರೆಂದು ಕಂಡುಬಂದು, ಜುಡಿಷಿಯಲ್ ಗುಮಾಸ್ತಗೂ ದಫ್ತರಬಂದಿಗೂ ಬರತರಫ ಮತ್ತು ಮಾಹೇವಾರ ೨೦ ರೂ ತಲಬಿನ ಒಬ್ಬ ಶೇಕದಾರನಿಗೂ ಒಬ್ಬ ಪಟೇಲನಿಗೂ ಸಸ್ಪೆಂಡ್ ಆಗಿರುವದು ಸರಿಯಷ್ಟೆ. ತನಿಖೆಯಲ್ಲಿ ತಪ್ಪಿತಸ್ಥನು ಹೊರಪಟ್ಟ ಅವರಿಗೆ ಶಿಕ್ಷೆಯಾಗಿರುವದೇನೋ ನ್ಯಾಯ. ತಪ್ಪುಮಾಡಿದರೆ ಸಂಘದವರೆಲ್ಲಾ ಶಿಕ್ಷೆಗೆ ಅರ್ಹರೇ? ಈ ತಾಲ್ಲೂಕಿನಲ್ಲಿ ಮಾಹೇಯಾನಾ ೬—೭—೮—೧೦—೧೨—೧೫—೨೦ ರೂ ತಲಬನ್ನು ಹೊಂದುತ್ತಾ ಬಸ್ತಿಗೆ ಅರ್ಹರಾಗಿಯೂ ನಿರಪರಾಧಿಗಳಾಗಿಯೂ ಇರತಕ್ಕ ಈ ಒಡನ್‍ಕರರ ದುರಾದೃಷ್ಟ ಎಷ್ಟೆಂದು ಹೇಳಲಿ!

ಖಾಲಿಬಿದ್ದ ಜುಡಿಷಿಯಲ್ ಗುಮಾಸ್ತೆ ಕೆಲಸಕ್ಕೇನೋ ಖಾಯಂಗೊಳ್ಳ ಕೆಲಸದಲ್ಲಿ ಮಾಹೇಯಾನಾ ೭ ರೂ ತಲಬು ತೆಗೆದುಕೊಳ್ಳುತ್ತಲಿದ್ದ ಇಸಂ ಬಂದೇಬಿಟ್ಟನು. ಈ ತಾಲ್ಲೂಕಿನಲ್ಲಿ ಖಾಲಿಬಿದ್ದಿದ್ದ ಡೆಪ್ಯುಟಿ ಗುಮಾಸ್ತೆ ಕೆಲಸಕ್ಕೆ ಮಾಹೇಯಾನಾ ೮ ರೂ. ತಲಬು ತೆಗೆದುಕೊಳ್ಳುತ್ತಿದ್ದ ದಫ್ತರಬಂದಿ ಬಂದೇ ಇದಾನೆ. ಖಾಲಿ ಇದ್ದ ದಫ್ತರಬಂದಿ ಕೆಲಸಕ್ಕೆ ಪರಭಾರಿ ಒಬ್ಬನು ಬಂದೇಬಿಟ್ಟನು. ಖಾಲಿಯಾಗಿರುವ ಶೇಕದಾರಿಕೆಲಸವನ್ನು ಒಬ್ಬ ಶ್ಯಾನುಭೋಗನು ನೋಡಿ ಆಗಲೇ ೨ ತಿಂಗಳ ಸಂಬಳ ೪೦ ರೂ. ಜೋಬಿಗೆ ಇಳೀಬಿಟ್ಟನು. ಮುಂದಣ ತಿಂಗಳು ತುಂಬುವದು ನೋಡುತ್ತಿದ್ದಾನೆ. ಶೇಕದಾರಿ ಕೆಲಸಕ್ಕೂ ಶ್ಯಾನುಭೋಗನಿಗೂ ಸಂಬಂಧ ಏನೋ ಗೊತ್ತಾಗಲಿಲ್ಲ. ಆದರೆ ಈತನಿಗೆ ಅರ್ಧ ಸಂಬಳ ದೊರಕುತ್ತಾ ಇದೆಯೋ ಅಥವ ಪೂರ್ತಿ ಸಂಬಳ ದೊರಕುತ್ತೋ? ಅರ್ಧ ಸಂಬಳ ದೊರಕಿದರೆ ಬಾಕಿ ಅರ್ಧ ಸಂಬಳ ಏನಾಗುತ್ತೋ ಇಲ್ಲ. ಪೂರ್ತಿ ದೊರಕಬಹುದು. ಹಾಲಿ ಖಾಲಿ ಇರುವ ಡೆಪ್ಯುಟಿ ಗುಮಾಸ್ತೆ ಕೆಲಸಕ್ಕೆ ಆಗಲೇ ಮತ್ತೊಬ್ಬ ಇಣಿಕಿನೋಡುವ ಹಾಗಿದೆ.

ಬಸ್ತಿಗೆ ಅರ್ಹರಾಗಿಯೂ, ನಿರಪರಾಧಿಗಳಾಗಿಯೂ ಇರತಕ್ಕ ಈ ಒಡನ್‍ಕರರ ದುರಾದೃಷ್ಟವನ್ನು ಎಷ್ಟು ಹೇಳಿದಾಗ್ಯೂ ಪಾರಾವಾರವೇ ಇಲ್ಲ. ಇವರುಗಳು ಮಾಡಿರತಕ್ಕ ಮೇಲ್ಕಂಡ ಅಪರಾಧದ ಅಪವಾದದಿಂದ ಹ್ಯಾಗೆ ತಪ್ಪಿಸಿಕೊಳ್ಳಬಹುದೋ ಬಲ್ಲವರಾದವರು ಹೇಳ್ಯಾರೇ?

ಲಾಗಾಯತಿನಿಂದ ತಾಲ್ಲೂಕಿನಲ್ಲಿ ಖರವಳಿಗೆ ಕೆಲಸದಲ್ಲಿ ಇದ್ದ ಕೆಲವು ಜನಿವಾರಗಳು ಕಳೆದ ಉಪಾಕರ್ಮದಲ್ಲಿ ಹೊಸ ಜನಿವಾರಕ್ಕೆ ಬದಲಾಗಿ ದವಾಲಿ ಧರಿಸಿಕೊಂಡು ಗ್ರಾಮಾಂತರ ಹೋಗಬೇಕಾಯಿತಲ್ಲಾ. ಜನಿವಾರಕ್ಕೆ ಜನಿವಾರ ಸೇರಿ ಏನಾದರೂ ಹೀಗಾಯಿತೋ ಏನೋ! ಈ ಉಪಾಕರ್ಮದಲ್ಲಿ ಜನಿವಾರಕ್ಕೆ ಜನಿವಾರ ಸೇರಿ ದವಾಲಿ ಬಂತು. ಇನ್ನೊಂದು ಉಪಾಕರ್ಮದ ಹೊತ್ತಿಗೆ ಇನ್ನೇನು ಬರುತ್ತದೆಯೋ ಎಂದು ಭಯಪಡಬೇಕಾಗಿದೆ. ಜೋತಿಷ್ಯ ಬಲ್ಲವರು ಇದಕ್ಕೆ ಪರಿಹಾರ ಏನು ಎಂಬುದನ್ನು ಹೇಳ್ಯಾರೇ?

ಈ ಊರಿನ ಸ್ಕೂಲಿನಲ್ಲಿ ಮಾಸ್ಟರುಗಳ ಪೈಕಿ ಕೆಲವರಲ್ಲಿ ಒಬ್ಬೊಬ್ಬರಿಗೆ ವೈಷಮ್ಯ ಇರಬಹುದು. ಕೆಲವು ಹುಡುಗರಿಗೆ ಮನೆಯಲ್ಲಿ ಅವರ ಮನೆಯವರು ಪಾಠ ಹೇಳಿಸುತ್ತಾರೆ. ಸದರಿ ಸ್ಕೂಲಿನ ಮಾಸ್ಟರು ಹುಡುಗರನ್ನು ಅವರಿಂದ ಪಾಠ ಹೇಳಿಸಿಕೊಂಡರೆ ಸ್ಕೂಲಿಗೆ ಬರಬ್ಯಾಡವೆಂದು ಅಟ್ಟುತ್ತಾರೆ. ನಮ್ಮ ಮನೆಗೆ ಬಾ, ಪಾಠ ಹೇಳಿಸಿಕೊಡುತ್ತೇನೆಂದು ಹೇಳುತ್ತಾರೆ. ಅವರ ಮನೆಗೆ ಹೋದರೆ ಹೂವಿನ ಗಿಡಕ್ಕೆ ನೀರು ಹಾಕು. ಕಸರ ಕೀಳು ಎಂತ ಹೇಳುತ್ತಾರೆ. ಹುಡುಗರು ಸ್ಕೂಲು ಬಿಡಬೇಕೇ, ಪಾಠ ಹೇಳಿಸಿಕೊಳ್ಳುವದು ಬಿಡಬೇಕೇ. ಈ ಸಂದರ್ಭ ಹೀಗೆ ಅಭಿವೃದ್ಧಿಗೆ ಬಂದಲ್ಲಿ ಹುಡುಗರು ಸ್ಕೂಲನ್ನೇ ಬಿಡಬೇಕಾಗುತ್ತೆ. ಸ್ಕೂಲು ಬಿಟ್ಟರೆ ಸರ್ಕಾರಕ್ಕೆ ನಷ್ಟವೂ ಹುಡುಗರಿಗೆ ದಡ್ಡತನವೂ ಪ್ರಾಪ್ತವಾಗುತ್ತೆ. ಸ್ಕೂಲ್‍ಮಾಸ್ಟರಿಗೆ ಸಂಬಳವು ದೊರಕುತ್ತೆ. ಬಾರವೂ ಕಮ್ಮಿ ಆಗುತ್ತೆ.

ಬಾತ್ಮಿದಾರ್

ವಿದೇಶ ವರ್ತಮಾನಗಳು

ಲಂಡನ್ ಪಟ್ಟಣದಲ್ಲಿದ್ದ ಕಾಲವಾದ ಮಿಸ್ ಮೇರಿಯಾನೆ ಹ್ಯಾಸ್ಕರ್ ಎಂಬಾಕೆಯು ತನ್ನ ಆಸ್ತಿಯಲ್ಲಿ ಒಂದೂವರೆ ಲಕ್ಷ ರೂಪಾಯನ್ನು ಎಡ್ವರ್ಡ್ ದೊರೆಯವರ ಆಸ್ಪತ್ರೆ ಫಂಡಿಗೆ ಕೊಟ್ಟಿರುತ್ತಾಳೆ.

*****

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ವಿಕ್ಟೋರಿಯಾ ನಗರದಲ್ಲಿ ಸರ್ಕಾರಿ ಮಂತ್ರಾಲೋಚನಾ ಸಭೆಗೆ ಪ್ರಜೆಗಳು ಸ್ತ್ರೀಯರನ್ನೂ ಮೆಂಬರಾಗಿ ಚುನಾಯಿಸಬಹುದೆಂದು ಅಲ್ಲಿನ ಸರ್ಕಾರದವರು ಕಾನೂನುಮಾಡಿ ಜಾರಿಗೆ ತಂದಿದ್ದಾರೆ.

*****

ಅರೇಬಿಯಲ್ಲಿ ದಂಗೆಯೆದ್ದಿರುವ ತುರ್ಕಿ ಪ್ರಜೆಗಳನ್ನು ಸಮಾಧಾನ ಮಾಡುವುದಕ್ಕೆ ತುರ್ಕಿ ಸುಲ್ತಾನರು ಒಂದು ಸೈನ್ಯವನ್ನು ಕಳುಹಿಸಿದರು. ಇವರಿಗೂ ದಂಗೇಕೋರರಿಗೂ ಯುದ್ಧಗಳಾಗಿ ದಂಗೇಕೋರರಲ್ಲಿ ಒಂದು ಸಾವಿರ ಜನರು ಮಡಿದುಹೋದರು. ಆದರೆ ದಂಗೆಯು ಇನ್ನೂ ಶಮನವಾಗಲಿಲ್ಲ.

*****

ಫ್ರಾನ್ಸಿಗೆ ಸೇರಿದ ವರ್ಸೆ ಎಂಬ ನಗರದಲ್ಲಿ ಒಂದು ಕಾರ್ಖಾನೆಯೊಳಗೆ ಒಂದು ತರಹಾ ಕವಚವನ್ನು ಹೊಸದಾಗಿ ತಯಾರುಮಾಡುತ್ತಾರೆ. ಈ ಕವಚವನ್ನು ಹಾಕಿಕೊಂಡು, ಪಿಸ್ತೂಲುಗಳನ್ನು ಹಿಡಿದು ಹೊಡೆದಾಡಿದರೂ ಗುಂಡಿನೇಟು ಮೈಗೆ ತಗಲುವುದಿಲ್ಲ. ಕವಚವು ತುಂಬಾ ಹಗುರವಾಗಿರುವುದು.

*****

ವಿಲಾಯತಿ ಸರ್ಕಾರದವರು ಈಗ ೬,೫೫,೦೦೦ ಸೈನ್ಯವನ್ನು ಇಟ್ಟಿದ್ದಾರೆ. ಈ ಸೈನಿಕರಿಗೆ ಈಗ ತಿಂಗಳೊಂದಕ್ಕೆ ತಲಾ ೧೩.೫ ರೂಪಾಯಿನಂತೆ ಖರ್ಚುಮಾಡುವರು. ಈಗ್ಗೆ ೨೦ ವರುಷಗಳ ಕೆಳಗೆ ಒಟ್ಟು ೪,೮೬,೦೦೦ ಸೈನಿಕರಿದ್ದರು. ಈಗ ತಲಾ ತಿಂಗಳೊಂದಕ್ಕೆ ೧೦೯ ರೂಪಾಯಿನಂತೆ ಖರ್ಚುಮಾಡುತ್ತಿದ್ದರು.

*****

ಚೀಣಕ್ಕೆ ಸೇರಿದ ಷಾಂಟಂಗ ಪಟ್ಟಣದಲ್ಲಿ ಚೀಣಾ ಪ್ರಜೆಗಳು ಅಲ್ಲಿರುವ ಜರ್ಮನಿವರ್ತಕರೇ ಮುಂತಾದವರ ಮೇಲೆ ಅಸಮಾಧಾನವುಳ್ಳವರಾಗಿದ್ದಾರೆ. ಅವರು ಮುಂದಿನ ತಿಂಗಳು ೧೬ ನೆ ತಾರೀಖಿಗೆ ಜರ್ಮನಿಯವರನ್ನು ದಂಗೆ ಎದ್ದು ಕಷ್ಟನಷ್ಟಗಳಿಗೆ ಗುರಿಪಡಿಸಬೇಕೆಂದು ಸನ್ನಾಹ ಮಾಡಿಕೊಂಡಿರುವಂತೆ ಅಲ್ಲಿನ ಒಂದು ಪತ್ರಿಕೆಯು ತಿಳಿಸುವುದು.

*****

ರಷ್ಯಾ ರಾಜ್ಯದಲ್ಲಿ ದಕ್ಷಿಣ ಭಾಗಕ್ಕೆ ಸೇರಿದ ಅಲೆಕ್ಸಾಂಡ್ರೋವ್ಸ್ಕ ಎಂಬ ನಗರದಲ್ಲಿ ಕಾರ್ಖಾನೆಯು ಕೂಲಿಕಾರರಿಗೆ ಸಂಬಳವನ್ನು ಬಟವಾಡೆ ಮಾಡಿದರು. ಕೂಲಿಕಾರರೆಲ್ಲಾ ತೆಗೆದುಕೊಂಡು ಹೋಗುತ್ತಿದ್ದಾಗ ಅವರಲ್ಲೇ ಗಂಡಸರು ಸೇರಿಕೊಂಡು ೧೪ ಮಂದಿ ಹುಡುಗಿಯರನ್ನು ತಡೆದು, ಅವರ ಬಳಿ ಇದ್ದ ಹಣವನ್ನು ಕಿತ್ತುಕೊಂಡದ್ದಲ್ಲದೆ ಅವರನ್ನೆಲ್ಲಾ ಕೊಂದುಹಾಕಿಬಿಟ್ಟರು.

*****

ನಾಯಿ ನರಿಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ಮಾಡುವುದಕ್ಕೆ ಪ್ಯಾರಿಸ್ ನಗರದಲ್ಲಿ ಒಂದು ಆಸ್ಪತ್ರೆ ಇರುತ್ತದೆ. ಅಂಥಾ ರೋಗಿಗಳಿಗೆ ಯೂರೋಪ್ ಖಂಡದಲ್ಲಿ ಇದನ್ನು ಬಿಟ್ಟರೆ ಇನ್ಯಾವ ಆಸ್ಪತ್ರೆಯೂ ಇರುವುದಿಲ್ಲ. ಕಳೆದ ವರುಷ ಈ ಆಸ್ಪತ್ರೆಯಲ್ಲಿ ೬೫೫ ಜನರು ಚಿಕಿತ್ಸೆ ಮಾಡಿಸಿಕೊಂಡರು. ಆ ಪೈಕಿ ಮೂರು ಮಂದಿಗೆ ಮಾತ್ರ ವಾಸಿಯಾಗದೆ ಸತ್ತುಹೋದರು. ಉಳಿದವರೆಲ್ಲಾ ಆರೋಗ್ಯಹೊಂದಿದರು.

ಜರ್ಮನಿ ರಾಜ್ಯಕ್ಕೆ ಸೇರಿದ ಬ್ರೆಸ್ಲಾ ನಗರದ ಬಳಿ ಗ್ರಾಬ್ಷರ್ ಎಂಬ ಗ್ರಾಮದಲ್ಲಿ ಸರ್ಕಾರದವರು ಪ್ರಾಚೀನ ಕಾಲದ ಕಟ್ಟಡಗಳನ್ನು ಅಗೆದು ಶೋಧನೆ ಮಾಡಿದ್ದರಲ್ಲಿ ಒಂದು ಕಡೆ ೫೦೦ ಸಮಾಧಿಗಳೂ ೨೦೦ ನೆಲಮನೆಗಳೂ ಸಿಕ್ಕಿರುತ್ತವೆ. ಆ ಗೋರಿಗಳೊಳಗೆ ಶವಗಳ ಅಸ್ಥಿಗಳೂ ಅನೇಕ ವಿಚಿತ್ರತರಗಳಾದ ಸಾಮಾನುಗಳೂ ಇದ್ದವು. ಈ ಜನರು ಸುಮಾರು ೨,೫೦೦ ವರುಷಗಳ ಹಿಂದೆ ಬದುಕಿದ್ದವರೆಂದು ವಿದ್ಯಾನ್ವೇಷಕರು ತಿಳಿಸಿದಾರೆ.

*****

ದಕ್ಷಿಣ ಆಫ್ರಿಕಾ ಯುದ್ಧದಲ್ಲಿ ಮೃತಪಟ್ಟ ಇಂಗ್ಲೀಷ್ ಸೈನಿಕರ ಶವಗಳನ್ನು ಆಗ ಸಿಕ್ಕ ಸಿಕ್ಕದ ಸ್ಥಳಗಳಲ್ಲಿ ಹೂತುಬಿಟ್ಟಿದ್ದರು. ಯುದ್ಧವು ಮುಕ್ತಾಯವಾದಂದಿನಿಂದ ಈಚೆಗೆ ಇಂಗ್ಲಿಷ್ ಸರ್ಕಾರದವರು ಶಿಬ್ಬಂದಿಯನ್ನಿಟ್ಟು, ಆ ಹೆಣಗಳನ್ನೆಲ್ಲಾ ಕೀಳಿಸಿ, ಸರಿಯಾದ ಗೋರಿಗಳಲ್ಲಿಡಿಸಿ ಕ್ರಮ ಪ್ರಕಾರ ಉತ್ತರಕ್ರಿಯೆಗಳನ್ನು ನಡಿಸುತ್ತಿದ್ದರು. ಇಂಥಾ ಗೋರಿಗಳು ಈಗ ಪ್ರಿಟೋರಿಯಾ, ಮಿಡಲ್‌ಬರ್ಗ್, ಬಾರ್ಬರ್ಟನ್, ಪೋಚಫ್‌ಸ್ಟ್ರೂಂ, ಜೊಹಾನಸ್‌ಬರ್ಗ್, ಸ್ಟ್ಯಾಂಡರ್ಟನ್, ಲೈಡನ್‌ಬರ್ಗ್, ಈ ಮುಂತಾದ ನಗರಗಳಲ್ಲಿ ಸಾವಿರಗಟ್ಟಲೆ ಇರುತ್ತವೆ.

*****

ಪರ್ಷಿಯಾ ರಾಜ್ಯದ ಷಾಸುಲ್ತಾನರವರು ದೇಶಾಟನೆ ಮಾಡಿಕೊಂಡು ಹೋಗಿ ಈಗ ಒಂದು ವಾರದಿಂದ ಪ್ಯಾರಿಸ್ ಪಟ್ಟಣದಲ್ಲಿರುತ್ತಾರೆ. ಅವರು ಬೀದಿಯಲ್ಲಿ ಹೋಗುತ್ತಿರುವಾಗ ಫ್ರೆಂಚರ ಒಂದು ಮನೆಯಲ್ಲಿ ಮದುವೆಯಾಗಿ ಗಂಡು ಹೆಣ್ಣು ನಿಂತು ಫೋಟೋ ತೆಗೆಸಿಕೊಳ್ಳುತ್ತಿದ್ದುದನ್ನು ಕಂಡು, ತಾವೂ ಅವರ ಸಂಗಡ ನಿಂತುಕೊಂಡು, ಒಟ್ಟಿಗೆ ಫೋಟೋ ತೆಗಿಸಿಕೊಂಡರು. ತರುವಾಯ ಗಂಡ ಹೆಂಡರು ಷಾಸುಲ್ತಾನರನ್ನು ನಡುವೆ ನಿಲ್ಲಿಸಿ, ಸಂತೋಷದೊಡನೆ ಅವರ ಸುತ್ತಲೂ ನರ್ತನ ಮಾಡಿದರು. ಸುಲ್ತಾನರವರು ಈ ಪ್ರಕಾರ ಸಂತೋಷವಾಗಿ ಕಾಲಯಾಪನೆ ಮಾಡುತ್ತಿದ್ದಾರೆ

*****

ಜರ್ಮನಿ ರಾಜ್ಯದಲ್ಲಿ ಅನೇಕರು ಕಾಯಿಲೆ ಬಿದ್ದುಕೊಂಡು ಜ್ಞಾನತಪ್ಪಿ ಹೋದಲ್ಲಿ ಅವರ ಬಂಧುಗಳು ಅವರಿಗೆ ಪ್ರಾಣಹೋಯಿತೆಂದು ಊಹಿಸಿ ಪೆಟ್ಟಿಗೆಯಲ್ಲಿಟ್ಟು ಗೋರಿಮಾಡುವುದೂ ಆ ಸಮಯದಲ್ಲಿ ರೋಗಿಗಳಿಗೆ ಪ್ರಾಣವಾಯು ಕಾಣಿಸಿಕೊಳ್ಳುವುದೂ ವಾಡಿಕೆಯಾಗಿದೆ. ಪ್ರಾಣವಿದೆಯೋ ಹೋಯಿತೋ ಗೊತ್ತುಮಾಡಿ ತಿಳಿದುಕೊಳ್ಳಲಾರದೆ ಅನೇಕರು ಸಂಶಯ ಪಡುತ್ತಿದಾರೆ. ಡಾಕ್ಟರ್ ಇಕಾರ್ಡ್ ಎಂಬ ವೈದ್ಯನು ಅದಕ್ಕೆ ಒಂದು ದ್ರಾವಕವನ್ನು ಕಂಡುಹಿಡಿದು, ಈ ದ್ರಾವಕವನ್ನು ಪಿಚಕೋಳವೆಯಿಂದ ಸ್ಮೃತಿತಪ್ಪಿದ ಮನುಷ್ಯನ ದೇಹದೊಳಕ್ಕೆ ಹಾಕಬೇಕೆಂತಲೂ, ಪ್ರಾಣವಿದ್ದರೆ ಕೂಡಲೇ ಗೊತ್ತಾಗುವುದೆಂತಲೂ ತಿಳಿಸಿದಾನೆ.

*****

ರಷ್ಯಾ ಜಪಾನ್ ಯುದ್ಧವು ಪ್ರಾರಂಭವಾದಾರಭ್ಯ ಅಂದರೆ, ೧೯೦೪ ನೆ ಫೆಬ್ರವರಿ ಲಾಗಾಯತು ೧೯೦೫ ನೆ ಜೂನ್ ಆಖೈರು ವರೆಗೆ ಈ ಯುದ್ಧದಲ್ಲಿ ಜಪಾನ್ ಸೈನಿಕರಲ್ಲಿ ೧,೩೭,೦೦೦ ಜನರು ನಷ್ಟಹೊಂದಿದರು; ೬೦೦ ಮಂದಿ ರಷ್ಯಾದವರಿಗೆ ಕೈಸೆರೆ ಸಿಕ್ಕಿದರು. ರಷ್ಯಾದವರ ಸೈನಿಕರಲ್ಲಿ ೩,೨೦,೦೦೦ ಜನ ನಷ್ಟವಾದರು; ೬೩,೦೦೦ ಜನರು ಜಪಾನಿನವರಿಗೆ ಕೈಸೆರೆ ಸಿಕ್ಕಿದಾರೆ. ಜಪಾನಿನವರು ೧೨ ಯುದ್ಧದ ಹಡಗುಗಳನ್ನೂ ಜಹಜುಗಳನ್ನೂ ಕಳೆದುಕೊಂಡರು. ರಷ್ಯಾದವರ ಹಡಗಿನ ಸೈನ್ಯದಲ್ಲಿ ೧೯ ಜಹಜುಗಳು ಸಮುದ್ರದ ಪಾಲಾದವು, ಇದಲ್ಲದೆ ಜಪಾನಿನವರು ೬೩ ರಷ್ಯಾ ಹಡಗು ಜಹಜುಗಳನ್ನು ಸ್ವಾಧೀನಪಡಿಸಿಕೊಂಡಿದಾರೆ.

*****

ಅಮೇರಿಕಕ್ಕೆ ಸೇರಿದ ಕೆಂಟಕಿ ಡಿಸ್ಟ್ರಿಕ್ಟಿನಲ್ಲಿ ೩೩ ವರುಷದ ಮೆಟಿಲ್ಡಾ ಜೇನ್ ಆಯರ್ಸ್ ಎಂಬ ಸುಂದರಿಯು ಕಳೆದ ವಾರ ಒಂಬತ್ತನೇ ಗಂಡನನ್ನು ಮದುವೆ ಮಾಡಿಕೊಂಡಳು. ಅವಳ ೮ ಜನ ಗಂಡಂದಿರೂ ಕ್ರೂರವಾದ ಮರಣವನ್ನು ಹೊಂದಿದ್ದರಿಂದ ಅವರೆಲ್ಲರ ಆಸ್ತಿಯೂ ಸೇರಿ ಸುಮಾರು ೧೫ ಲಕ್ಷ ರೂಪಾಯಿ ಇವಳಿಗೆ ಸಿಕ್ಕಿತು. ಅವಳ ೧೭ ನೆ ವಯಸ್ಸಿನಲ್ಲಿ ಮೊದಲನೆ ಮದುವೆಯಾಯಿತು ಏಳು ವರುಷ ಕಾಲದಲ್ಲಿ ಐದು ಜನ ಗಂಡಂದಿರು ಕಾಲವಾಗಿ ಹೋದರು. ಈಗ ಅವಳು ಮದುವೆ ಮಾಡಿಕೊಂಡಿರುವ ಒಂಬತ್ತನೇ ಗಂಡನನ್ನು ಆದಿಯಿಂದಲೂ ವರಿಸಬೇಕೆಂದು ಪ್ರೀತಿಮಾಡುತ್ತಿದ್ದಳಂತೆ. ಇವನನ್ನು ಮದುವೆಮಾಡಿಕೊಳ್ಳುವುದಕ್ಕೆ ಯಾಕೆ ಇಷ್ಟು ಸಾವಕಾಶವಾಯಿತೋ ಅವಳು ಕಾರಣವನ್ನು ತಿಳಿಸಲಿಲ್ಲ.

ಲಾರ್ಡ್ ಕರ್ಜನ್‌ರವರ ರಾಜೀನಾಮೆ.

"ಬೆಂಗಳೂರು ಸೂರ್ಯೋದಯ"—ಲಾರ್ಡ್ ಕರ್ಜನ್‌ರವರಿಗೂ ಲಾರ್ಡ್ ಕಿಚ್ನರವರಿಗೂ ಸೈನ್ಯಗಳ ವಿಷಯದಲ್ಲಿ ಮನಸ್ತಾಪ ಹುಟ್ಟಿತಷ್ಟೆ. ತಮ್ಮ ಹಟಸಾಗದೆ ಇದ್ದರೆ ತಮಗೆ ಇಂಡಿಯಾ ವೈಸರಾಯ್ ಗವರ್ನರ್ ಜೆನರಲ್ ಪದವಿಯು ಅವಶ್ಯಕವಿಲ್ಲವೆಂದು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರು. ಈ ರಾಜೀನಾಮೆಯನ್ನು ಇಂಗ್ಲೆಂಡ್ ಮಂತ್ರಿಗಳಾದ ಲಾರ್ಡ್ ಬ್ಯಾಲ್‌ಫರವರು ಎಡ್ವರ್ಡ್ ಚಕ್ರವರ್ತಿಗಳ ಮುಂದೆ ಇಡಲಾಗಿ ಅವರು ಆಲೋಚಿಸಿ ಲಾರ್ಡ್ ಕರ್ಜನ್‌ರವರ ರಾಜೀನಾಮೆಯನ್ನು ಅಂಗೀಕರಿಸಿದರು. ಈ ವರ್ತಮಾನ ಮೊನ್ನೆ ದಿವಸ ಈ ಜಂಬೂದ್ವೀಪಕ್ಕೆ ತಂತಿ ವರ್ತಮಾನದ ಮೂಲಕ ಬಂತು. ಲಾರ್ಡ್ ಕರ್ಜನ್‌ರವರಿಗೆ ಬದಲಾಗಿ ಲಾರ್ಡ್ ಮಿಂಟೋಯವರು ಇಲ್ಲಿಗೆ ವೈಸರಾಯ್ ಗವರ್ನರ್ ಜೆನರಲ್‌ರವರ ಪದವಿಗೆ ಬರುವರು. ಲಾರ್ಡ್ ಕರ್ಜನ್‌ರವರು ಇಲ್ಲಿ ಅನೇಕರ ಅಪ್ರೀತಿ ಸಂಪಾದಿಸಿಕೊಂಡಿದ್ದರಿಂದ ಅಂತವರಿಗೆಲ್ಲರಿಗೂ ಆನಂದವಾಯಿತೆಂತಲೇ ಹೇಳಬೇಕು. ಈಗ ಬರುವ ಲಾರ್ಡ್ ಮಿಂಟೋಯವರು ೬೦ ವರುಷ ವಯಸ್ಸಿನ ಅನುಭವಧಾರರಾಗಿರುವದರಿಂದ ಪ್ರಕೃತಸ್ಥಿತಿಯಲ್ಲಿ ವಯಸ್ಸಾಗಿರುವವರೇ ಇಲ್ಲಿನ ವೈಸರಾಯ್ ಪದವಿಯನ್ನಲಂಕರಿಸಬೇಕಾದುದು ಅತ್ಯವಶ್ಯಕವಾಗಿತ್ತು. ಲಾರ್ಡ್ ಕರ್ಜನ್‌ರವರ ರಾಜೀನಾಮೆಯು ಎಡ್ವರ್ಡ್ ಚಕ್ರವರ್ತಿಗಳಿಗೆ ತಲುಪಿದಾಗ ಬಹಳ ಆಲೋಚನೆ ಮಾಡಬೇಕಾಯಿತು. ಪ್ರಕೃತದಲ್ಲಿ ಇಂಡಿಯಾ ಸಂರಕ್ಷಣೆಗೋಸ್ಕರ ಸೈನ್ಯಗಳಲ್ಲಿ ಅನೇಕ ಏರ್ಪಾಡುಗಳು ಮಾಡಬೇಕಾಗಿರುವದ್ದರಿಂದ ಮಿಲಿಟರಿ ಇಲಾಖೆಗೆ ಅಧ್ಯಕ್ಷರಾಗಿರುವ ಲಾರ್ಡ್ ಕಿಚ್ನರವರನ್ನು ತೆಗೆದುಹಾಕುವದಕ್ಕಿಂತಲೂ ಇಂಡಿಯಾದಲ್ಲಿ ಅನೇಕ ಜನಗಳ ದ್ವೇಷವನ್ನು ಸಂಪಾದಿಸಿಕೊಂಡಿರುವದ್ದರಿಂದ ಲಾರ್ಡ್ ಕಿಚ್ನರವರ ರಾಜೀನಾಮೆಯನ್ನು ಅಂಗೀಕರಿಸುವದು ಇಂಡಿಯಾ ದೇಶೀಯರಿಗೂ ಬ್ರಿಟಿಷ್ ರಾಜ್ಯಭಾರಕ್ಕೂ ಕ್ಷೇಮಕರವೆಂದು ಭಾವಿಸಿ ಲಾರ್ಡ್ ಕರ್ಜನ್‌ರವರ ರಾಜೀನಾಮೆಯನ್ನೊಪ್ಪಿ ಅನುಭವಸ್ಥರಾದ ಲಾರ್ಡ್ ಮಿಂಟೋಯವರನ್ನು ನೇಮಕ ಮಾಡಿದರು. ಆದುದರಿಂದ ಯಾರೇ ಆಗಲಿ ಬಹುಜನಗಳ ದ್ವೇಷವನ್ನು ಸಂಪಾದಿಸಿಕೊಳ್ಳುವದು ಶ್ರೇಯಸ್ಸಲ್ಲ.

*****

"ಸಡಿಗನ್ನಡಿ."—ಲಾರ್ಡ್ ಕರ್ಜನ್ ಸಾಹೇಬರು ಕಳೆದ ೭ ವರ್ಷಗಳಿಂದಲೂ ಅತ್ಯಂತ ಆಸಕ್ತಿಯಿಂದಲೂ ಚಮತ್ಕಾರದಿಂದಲೂ ಈ ರಾಜ್ಯದ ಆಡಳಿತವನ್ನು ನೋಡುತ್ತಾ ಲೋಕದಲ್ಲಿ ಬಹಳ ಕೀರ್ತಿಯನ್ನು ಸಂಪಾದಿಸಿದ್ದರು. ಇಂತಾವರ ಅಭಿಪ್ರಾಯಕ್ಕೆ ವಿರೋಧವಾಗಿ ಈಗ ಬದಲಾವಣೆಯನ್ನು ನಡೆಸಿರುವದು ಎಲ್ಲರಿಗೂ ಅತ್ಯಂತ ಅಸಮಾಧಾನವಾಗಿದೆ. ಲಾರ್ಡ್ ಕರ್ಜನ್ ಸಾಹೇಬರು ಈ ೭ ವರ್ಷಗಳಲ್ಲಿ ಮಾಡಿದ ಕೆಲಸಗಳ ಪೈಕಿ ಎಲ್ಲಾ ಈ ದೇಶಕ್ಕೆ ಸಹಕಾರಿಯಾದವುಗಳೆಂದು ಹೇಳಲಸಾಧ್ಯ. ಯಾಕೆಂದರೆ—ನಾವು ಅಧೀನರಾಗಿಯೂ ಸರ್ಕಾರದವರು ಆಳುವವರಾಗಿಯೂ ಇರುವದರಿಂದ ಈ ಇಂಡಿಯಾ ದೇಶೀಯರಿಗೆ ಅನ್ಯರಿಂದ ಬಹಳ ಪ್ರಯೋಜನವು ಆಗಲಾರದು. ಉತ್ತರದೇಶದಲ್ಲಿ ಲಾರ್ಡ್ ಕರ್ಜನ್ ಸಾಹೇಬರು ಅತ್ಯಂತ ಪ್ರಜಾದ್ವೇಷವನ್ನು ಸಂಪಾದಿಸಿದರು. ಆದ್ದರಿಂದ ಇವರು ಈಗ ರಾಜೀನಾಮೆಯನ್ನು ಕೊಟ್ಟಿರುವ ಭಾಗದಲ್ಲಿ ಅನೇಕರಿಗೆ ಸಂತೋಷವೇ ಆಗಿದೆ. ಆದರೂ ಇದುವರೆಗೆ ಈ ದೇಶಕ್ಕೆ ಬಂದ ವೈಸರಾಯಿಗಳಲ್ಲೆಲ್ಲಾ ಇವರು ಅತ್ಯಂತ ಗಟ್ಟಿಗರೆನ್ನಿಸಿಕೊಂಡಿದಾರೆ. ಮುಂದೆ ಇವರಿಗೆ ಇನ್ನೂ ಅತಿಶಯವಾದ ಪದವಿಯು ದೊರಕೀತೆಂದು ತಿಳಿಯಬೇಕು. ಆಗಲಾದರೂ ಇವರು ಇಂಡಿಯಾ ದೇಶೀಯರನ್ನು ಮರೆಯದೆ ಉಪಕಾರ ಮಾಡಲೆಂದು ಕೋರುತ್ತೇವೆ. ಇವರು ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದು ಇಂಡಿಯಾ ದೇಶೀಯರಿಗೆ ಎಲ್ಲರಿಗೂ ಬಹಳ ಸಂತೋಷವಾಗಿದೆ. ಇಂಗ್ಲೀಷರೂ ಸಹ ಇವರು ಮಾಡಿದ ಕಾರ್ಯವು ಬಹಳ ಶ್ಲಾಘ್ಯವಾದದ್ದಲ್ಲವೆಂದು ಹೇಳುವರು. ಕೊನೆಕೊನೆಗೆ ಈ ವೈಸರಾಯಿ ಸಾಹೇಬರು ಮೊದಲಿನಂತೆ ದೃಢಚಿತ್ತರಾಗಿಯೂ, ಧೈರ್ಯವಂತರಾಗಿಯೂ ಇರದೆ ದುರ್ಬಲವನ್ನು ತೋರ್ಪಡಿಸಿಕೊಂಡದ್ದರಿಂದ ಜನರಿಗೆ ಇವರಲ್ಲಿ ಮೊದಲಿದ್ದ ಅಭಿಮಾನವು ತಪ್ಪಿತೆಂದು ಗೊತ್ತಾಗಿದೆ. ಕಲ್ಕತ್ತಾದಲ್ಲಿ ಇವರ ರಾಜೀನಾಮೆಯ ಸಮಾಚಾರವು ತಿಳಿದಕೂಡಲೇ ಸಾವಿರಾರು ಜನರು ಅನೇಕ ಸಭೆಗಳನ್ನು ಮಾಡಿ, ಸಂತೋಷಕರವಾದ ವಚನಗಳನ್ನು ಹಾಡುಗಳನ್ನು ಹೇಳಿ, ಈಗಿನ ಅಧಿಕಾರಿಯು ತೊಲಗಿದ್ದಕ್ಕೆ ದೇವರನ್ನು ವಂದಿಸಿದರು. ಅಲ್ಲದೆ, ಬಾಣಬಿರುಸುಗಳನ್ನು ಬಿಟ್ಟರು. ಈ ವಿಧವಾದ ಪ್ರಜಾದ್ವೇಷವು ಬೇರೆ ಯಾವಾಗಲೂ ತೋರ್ಪಟ್ಟಿರಲಿಲ್ಲ.

*****

ಧಾರವಾಡದ "ರಾಜಹಂಸ"—ಕಟ್ಟಕಡೆಗೆ ನಮ್ಮ ಹಿಂದುಸ್ಥಾನದ ಮೇಲೆ ಏಳು ವರ್ಷದ ವರೆಗೆ ಸುಲ್ತಾನೀ ಅಮಲನ್ನು ನಡಿಸಿದ ಲಾರ್ಡ್ ಕರ್ಝನ್ ಸಾಹೇಬರವರು ತಮ್ಮ ಗವರ್ನರ್ ಜನರಲ್ ಜಾಗೆಯ ರಾಜೀನಾಮೆಯನ್ನು ಕೊಟ್ಟರು. ಈ ರಾಜೀನಾಮೆಯಿಂದ ಕಲಕತ್ತೆಯೊಳಗಿನ ದೇಶೀ ಮತ್ತು ಆಂಗ್ಲೋ ಇಂಡಿಯನ್ ಪತ್ರದ ವರಿಗೆ ಸಹ ಆನಂದವಾಗಿರುತ್ತದೆ. ಲಾರ್ಡ್ ಕರ್ಝನ್‌ರವರಿಗೆ ತಮ್ಮ ಕರ್ಮದ ಬಗ್ಗೆ ಯೋಗ್ಯ ಪ್ರಾಯಶ್ಚಿತ್ತವು ದೊರೆಯಿತೆಂತ ಹಿಂದೀ ಜನರು ಅನ್ನುತ್ತಾರೆ. ಇವರ ರಾಜೀನಾಮೆಯ ಸುದ್ದಿಯು ಕಲಕತ್ತಾ ಶಹರದಲ್ಲಿ ತಿಳಿದ ಕೂಡಲೆ ಎಷ್ಟೋ ವರ್ತಮಾನ ಪತ್ರಕರ್ತರು ಜಾದಾ ಪತ್ರಕಗಳನ್ನು ಛಾಪಿಸಿ ಅವುಗಳ ವಿಕ್ರಯವನ್ನು ಮಾಡಿದರು. ಮತ್ತು ವಿಕ್ರಯ ಬಹಳವಾಯಿತು. ರಾಜೀನಾಮೆಯ ವಿಷಯದಲ್ಲಿ ಪ್ರತಿಯೊಬ್ಬನಿಗೆ ಸಮಾಧಾನವಾಗಿರುತ್ತದೆ. ತಾರೀಖು ೨೧ ನೇ ದಿನ ರಾತ್ರಿ ಕಲಕತ್ತಾದಲ್ಲಿ ಎಷ್ಟೋ ಕಡೆಗೆ ದೀಪಾವಳಿಯಂತೆ ದೀಪೋತ್ಸವವನ್ನು ಮಾಡುವದರಲ್ಲಿ ಬಂತು. ಕೆಲವು ಕಡೆ ಪ್ರಸ್ತಾಪಗಳಾದವು, ಕೆಲವು ಕಡೆಯಲ್ಲಿ ಆತಷಬಾಜಿ ಸಮಾರಂಭವಾಯಿತು. ಈ ಪ್ರಕಾರ ಅಲ್ಲಿಯ ಜನರು ಆನಂದೋತ್ಸವವನ್ನು ಮಾಡಿದರು. ಇದು ಸಹಜೀಕವೇ ಯಾಕಂದರೆ ಈ ಲಾರ್ಡ್ ಕರ್ಝನ್ ವೈಸ್ರಾಯಿ ಯವರು ಆವತ್ತಿನ ವರಿಗೆ ಹಿಂದುಸ್ಥಾನದೊಳಗಿನ ಲೋಕಮತವನ್ನು ತುಚ್ಛಮಾಡಿ ಜನರಿಗೂ ಮತ್ತು ಸಂಸ್ಥಾನಿಕರಿಗೂ ಸಹ ತೊಂದರೆಯಾಗುವಂಥ ಕಾಯಿದೆಗಳನ್ನು ಮಾಡಿ ಎಲ್ಲಾ ಹಿಂದುಸ್ಥಾನಕ್ಕೆ ಅಪ್ರಿಯರಾಗಿದ್ದರೆ. ಇಷ್ಟೇ ಅಲ್ಲ. ಆದರೆ ಬಂಗಾಲ ಪ್ರಾಂತ್ಯದ ಎರಡು ತುಂಡು ಮಾಡೋಣದರಿಂದ ಅಲ್ಲಿಯ ಜನರಲ್ಲಿ ಸ್ವದೇಶದ ವ್ಯಾಪಾರಕ್ಕೆ ಉತ್ತೇಜನವನ್ನು ಕೊಡುವ ಇಚ್ಛೆಯು ಹುಟ್ಟಿದ್ದರಿಂದ ತಮ್ಮ ದೇಶಬಾಂಧವರಿಗೆ ಸಹ ಇವರು ಅಪ್ರಿಯರಾಗುವರು. ನಮ್ಮ ಬಡ ಒಕ್ಕಲತನದವರಿಗೆ ನಿರಾಧಾರ ಮಾಡಿದ ಹೊಸ ಲ್ಯಾಂಡ ರಿವಿನ್ಯೂ ಬಿಲ್ಲು ಪಟ್ಟಿಯನ್ನು ಕೊಡಲಿಕ್ಕೆ ತಪ್ಪಿದರೆ ರೈತನ ಜಮೀನು ಸರಕಾರ ಜಮಾ ಗುವದು. ಇವರ ಆಳುವಿಕೆಯಲ್ಲಿಯೇ ಪಾಸವಾಯಿತು. ನಮ್ಮ ದೇಶದ ದುಃಖಗಳನ್ನು ಸರಕಾರಕ್ಕೆ ತಿಳಿಸುವ ವರ್ತಮಾನ ಪತ್ರಗಳ ಬಾಯಿಯನ್ನು ಗಪ್ಪಗೊಳಿಸುವ ಕಾಯಿದೆಯು ಇವರೇ ಮಾಡಿದರು. ಆದಷ್ಟು ಸಣ್ಣ ಸಣ್ಣ ಹುದ್ದೆಯ ನೌಕರಿಗಳನ್ನು ಸಹ ಹಿಂದೂ ಜನರಿಗೆ ಆದಷ್ಟು ಮಟ್ಟಿಗೆ ಸಿಗಬಾರದೆಂತ ಇವರ ಪ್ರಯತ್ನವಿತ್ತು. ಮತ್ತು ಕಟ್ಟಕಡೆಗೆ ನಮ್ಮ ದೇಶೀ ಸಂಸ್ಥಾನಿಕರು ತಮ್ಮ ಸಂಸ್ಥಾನದಲ್ಲಿ ಕಾರಭಾರಿಯನ್ನು ನೇಮಿಸಬೇಕಾದರೆ ಸರಕಾರದ ಅಪ್ಪಣೆಯನ್ನು ತಕ್ಕೊಳ್ಳಬೇಕು ಅಂತ ಒಂದು ಕಾಯಿದೆ ಹೊಸದಾಗಿ ಮಾಡಿ ನಮ್ಮ ದೇಶಿ ಸಂಸ್ಥಾನಿಕರ ಒಂದು ಕೈಯನ್ನು ಕಡಿದುಬಿಟ್ಟಿದ್ದಾರೆ. ಈ ಪ್ರಕಾರ ಹಿಂದುಸ್ಥಾನದವರಿಗೆ ಎಷ್ಟೋ ಅಪ್ರಿಯವಾದ ಕೃತ್ಯಗಳನ್ನು ಇವರು ಮಾಡಿದ್ದರಿಂದ ಇವರ ರಾಜೀನಾಮೆಯಿಂದ ಹಿಂದುಸ್ಥಾನವಾಸಿಯವರಿಗೆ ಆನಂದವಾಗುವದು ಸ್ವಾಭಾವಿಕವೇ ಸರಿ.

*****

"ಮೈಸೂರ್ ಸ್ಟಾರ್."—ಲಾರ್ಡ್ ಕರ್ಜನ್‌ರವರಿಗೂ ಮುಖ್ಯ ಮಂತ್ರಿಗಳು ಮತ್ತು ಸ್ಟೇಟ್ ಸೆಕ್ರೆಟರಿಗಳಿಗೂ ನಡೆದ ಪರಸ್ಪರ ಲೇಖನಗಳಲ್ಲಿ ಲಾರ್ಡ್ ಕರ್ಜನ್‌ರವರ ಅಭಿಪ್ರಾಯವು ಎಂಥಾದ್ದು, ಲಂಡನ್ನಿನ ಮಂತ್ರಿಮಂಡಲದವರ ಅಭಿಪ್ರಾಯವೆಂಥಾದ್ದು ಸರ್ವರಿಗೂ ಗೊತ್ತಾಗುವಂತಿರುತ್ತದೆ. ಈಗಿನ ಇಂಗ್ಲೆಂಡಿನ ಮಂತ್ರಿವರ್ಗದವರೆಲ್ಲ ಸಾಧಾರಣವಾಗಿ ಸೈನ್ಯಶಾಖೆಯಲ್ಲೇ ಇದ್ದು ಕೆಲಸಮಾಡಿ ಯುದ್ಧಾಭಿನಿವೇಶವುಳ್ಳ ಜನರಾಗಿರುತ್ತಾರೆ. ಇಂಥವರಿಗೆ ಭರತಖಂಡದ ಸೈನ್ಯಶಾಖೆಯ ಮುಖ್ಯಾಧಿಕಾರಿಗಳಾದ ಲಾರ್ಡ್ ಕಿಚನರ್‌ರವರ ವಿಷಯದಲ್ಲಿ ಇರುವಷ್ಟು ಅಭಿಮಾನವು ಸಿವಿಲಿಯನ್ನರಾದ ಲಾರ್ಡ್ ಕರ್ಜನ್‌ರವರ ವಿಷಯದಲ್ಲಿ ಇರಲಾರದೆಂಬುವುದು ಸಿದ್ಧವೇ. ಈ ಕಾರಣದಿಂದಲೇ ಲಾರ್ಡ್ ಕರ್ಜನ್ನರ ಅಭಿಪ್ರಾಯವು ಮಂತ್ರಿಮಂಡಲದವರಿಗೆ ಸರಿಬೀಳದೆ ಹೋಯಿತು. ತಮ್ಮ ಮಾತು ನಡೆಯದುದರಿಂದಲೂ ಈಗಿನ ಮಂತ್ರಿಮಂಡಲದವರ ಅಭಿಪ್ರಾಯವೆಲ್ಲ ಸೈನ್ಯಶಾಖೆಯ ತಿದ್ದುಪಾಟಿಗೇ ಹೆಚ್ಚಾಗಿ ಪ್ರವರ್ತಿಸುತ್ತಿರುವುದರಿಂದ ಅಂಥಹ ಅಭಿಪ್ರಾಯವು ಕರ್ಜನರವರಿಗೆ ಇಲ್ಲದಿರುವುದರಿಂದಲೂ ಇಂಥ ಮಂತ್ರಿಮಂಡಲದ ಕೈಕೆಳಗೆ ತಮ್ಮ ಮಾತು ನಡೆಯದ ಅವಮಾನದ ಅವಸ್ಥೆಯಲ್ಲಿ ಕೆಲಸವನ್ನು ಮಾಡುವುದಕ್ಕೆ ಸರಿಬೀಳದೆ ಅವಮಾನವನ್ನು ತಾಳಿಕೊಂಡು ಅಧಿಕಾರವನ್ನು ಅನುಭವಿಸುವದಕ್ಕಿಂತಲೂ ಅದನ್ನು ಬಿಟ್ಟು ಬಿಟ್ಟಾದರೂ ಮಾನದಿಂದಿರುವುದು ಲೇಸೆಂದು ಯೋಚಿಸಿ, ಕರ್ಜನ್‌ರವರು ತಮ್ಮ ವೈಸ್ರಾಯಿಗಿರಿಯಿಂದ ವಿಮುಕ್ತತೆಯನ್ನು ಅಪೇಕ್ಷಿಸಿದರು. ತಮ್ಮ ಅಭಿಪ್ರಾಯದಲ್ಲಿ ಎಷ್ಟೋ ಸಾಧುತೆಯಿರುವುದೆಂದು ಕರ್ಜನ್‌ರವರು ತೋರಿಸುತ್ತ ಬಂದರೂ ಮಂತ್ರಿಮಂಡಲಕ್ಕೆ ಅದು ರುಚಿಸಲಿಲ್ಲ. ಮತ್ತು ಕಸ್ತರಾದ ತಾವು ರಾಜೀನಾಮೆಯನ್ನು ಕೊಟ್ಟುಬಿಡುತ್ತೇವೆಂದು ತಿಳಿಸಿದರೆ ಒಂದು ಪಕ್ಷ ತಮ್ಮನ್ನು ಕಳೆದುಕೊಳ್ಳಲಾರದೆ ಮಂತ್ರಿಮಂಡಲದವರು ತಮ್ಮ ಅಭಿಪ್ರಾಯದಂತೆಯೇ ನಡೆದುಕೊಳ್ಳಬಹುದೆಂಬ ಊಹೆಯಿಂದಲೂ ಕರ್ಜನ್‌ರವರು ರಾಜೀನಾಮೆಯನ್ನು ಕೋರಿದರೆಂದು ಕೆಲವರು ಊಹಿಸುತ್ತಾರೆ. ಆದರೆ ಈಗಿನ ಮಂತ್ರಿಮಂಡಲಕ್ಕೆ ಮುಂದಾಲೋಚನೆಯು ಕಡಮೆಯಾಗಿರುವದರಿಂದಲೇ ಹಿಡಿದಹಟ್ಟನ್ನು ಬಿಡದೆಹೋಗಿ ಲಾರ್ಡ್ ಕರ್ಜನ್‌ರವರ ರಾಜೀನಾಮೆಯನ್ನು ಅಂಗೀಕರಿಸುವಂತೆ ಮಾಡಿಬಿಟ್ಟರು.

ಆದರೆ ಲಾರ್ಡ್ ಕರ್ಜನ್‌ರವರು ವೈಸ್‌ರಾಯಿಗಿರಿಯನ್ನು ಬಿಟ್ಟುಹೋದುದಕ್ಕೆ ಅಷ್ಟೇನೂ ವಿಷಾದವಿಲ್ಲ. ಇವರು ಇಂಥಹ ವಿಷಮಪ್ರಕರಣದಲ್ಲಿ ರಾಜೀನಾಮೆ ಕೊಡಬೇಕಾಗಿಬಂದು ಮನೋವ್ಯಥೆಯಿಂದ ಕೆಲಸವನ್ನು ಬಿಟ್ಟುಬಿಡುವಂತಾದುದಕ್ಕೂ ನ್ಯಾಯವಾದ ವೈಸ್‌ರಾಯಿಗಿರಿಯ ಗೌರವದಿಂದ ಕೊನೆಗೆ ಸಾಗಕಳಿಸಿಕೊಂಡು ಈ ದೇಶದಿಂದ ಹೋಗುವುದಕ್ಕೆ ಅವಕಾಶವಿಲ್ಲದಂತಾದುದಕ್ಕೂ ವ್ಯಸನಪಡಬೇಕಾಗುತ್ತದೆ. ಕಟ್ಟಕಡೆಗೆ ಇವರು ಬಂಗಾಳಾ ವಿಭಜನ ಮೊದಲಾದ ಕೆಲವು ಪ್ರಜಾವಿರುದ್ಧಕಾರ್ಯಗಳನ್ನು ಹಟದಿಂದ ಆಚರಿಸಿ, ಜನಾನುರಾಗವನ್ನು ಕಳೆದುಕೊಳ್ಳುತ್ತ ಬಂದರು. ಆದರಿಂದ ಕೆಲವರು ಇವರ ಉದ್ಯೋಗನಿವೃತ್ತಿಯ ವಿಷಯದಲ್ಲಿ ಸಂತೋಷವನ್ನೇ ಪ್ರದರ್ಶನಮಾಡುತ್ತಿದಾರೆ. ಇವರು ಸೈನ್ಯಶಾಖೆಯ ಅವಿಹಿತವಾದ ವೆಚ್ಚಕ್ಕೆ ಹೆಚ್ಚು ಆಸ್ಪದಕೊಡದೆ ರಾಜಕೀಯವಾದ ಅನೇಕ ಇತರವಿಷಯಗಳಲ್ಲಿ ಉತ್ತಮವಾದ ಕೆಲವು ಬದಲಾವಣೆಗಳನ್ನು ಮಾಡಿ ಕಾರ್ಯದಕ್ಷತೆಯನ್ನು ಚೆನ್ನಾಗಿ ಪ್ರದರ್ಶನಮಾಡಿಕೊಂಡಿದ್ದರು. ೫ ವರ್ಷದವರೆಗೇ ಇವರು ಅಧಿಕಾರವನ್ನು ಮಾಡಿಬಿಟ್ಟು ಒಂದೇವೇಳೆ ಲಂಡನ್ನಿಗೆ ಹೋಗಿಬಿಟ್ಟಿದ್ದರೆ ಇವರಿಗೆ ಉತ್ತಮವಾದ ಗೌರವವೇ ಉಳಿದುಕೊಳ್ಳುತ್ತಿತ್ತು. ಅದನ್ನು ಬಿಟ್ಟು ಮತ್ತಷ್ಟು ಅಧಿಕಾರದ ಆಸೆಯಿಂದ ಅವಧಿಯನ್ನು ಹೆಚ್ಚಿಸಿಕೊಂಡು ಪುನಃ ಭರತಖಂಡದ ವೈಸ್‌ರಾಯಿಗಿರಿಗೆ ಬಂದದ್ದರಿಂದಲೇ ಇಂತಹ ಸ್ಥಿತಿಯೊದಗಿತೆಂದು ಈಗ ಅನೇಕರು ಆಡಿಕೊಳ್ಳುತ್ತಿದಾರೆ. ಅಂತೂ ಲಾರ್ಡ್ ಕರ್ಜನ್‌ರವರು ಭರತಖಂಡಕ್ಕೆ ಬಂದು ಎರಡನೇ ಚಕ್ರವರ್ತಿಗಳಾಗಿಯೇ ಇಲ್ಲಿನ ರಾಜಾಧಿರಾಜರಿಂದೆಲ್ಲ ಒಪ್ಪಿಸಿಕೊಂಡು, ದಿಲ್ಲಿ ದರ್ಬಾರಿನ ಕಾಲದಲ್ಲಿ ತಮ್ಮ ತಲೆತಲಾಂತರದಲ್ಲೂ ಕಾಣದ ಅಪರಿಮಿತವಾದ ರಾಜವೈಭವವನ್ನು ಅನುಭವಿಸಿಬಿಟ್ಟರು. ಆ ಯೋಗವು ಇವರಿಗೆ ಅಷ್ಟಕ್ಕೇ ತೀರಿಹೋಗುವಂತೆ ಮಾಡುವ ವಿಷಯದಲ್ಲಿ ಲಾರ್ಡ್ ಕಿಚನರ್‌ರವರು ಭರತಖಂಡಕ್ಕೆ ಬಂದದ್ದೇ ಲಾರ್ಡ್ ಕರ್ಜನ್‌ರವರಿಗೆ ಶನಿಯು ಜನ್ಮಕ್ಕೆ ಬಂದಂತಾಯಿತು. ಅದಂತಿರಲಿ. ಮುಂದೆ ಇಲ್ಲಿಗೆ ವೈಸ್‌ರಾಯಿಗಳಾಗಿ ಬರುವ ಲಾರ್ಡ್ ಮಿಂಟೋರವರು (ಕನ್ನಡಾ ಸೀಮೆಯ ಗೌರ್ನರು ಜನರಲ್) ಸೈನ್ಯಶಾಖೆಯಲ್ಲೇ ಇದ್ದು ಅವರೂ ಯುದ್ಧಾಭಿನಿವೇಶವುಳ್ಳವರೇ ಆಗಿರುವುದರಿಂದ ಲಾರ್ಡ್ ಕಿಚನರ್‌ರವರ ಮತ್ತು ಲಾರ್ಡ್ ಮಿಂಟೋರವರ ದರ್ಬಾರಿಗೆ ಬ್ರಾಡ್ರಿಕ್ ಮತ್ತು ಬಾಲ್ಫರ್‌ರವರ ಸಹಾಯಗಳು ನಿರಾತಂಕವಾಗಿ ಒದಗುವಂತಾದರೆ ಭರತಖಂಡವು ಸೈನ್ಯಶಾಖೆಯವರ ವಿಜೃಂಭಣಕ್ಕೆ ತುತ್ತಾಗಿ ಇನ್ನೆಷ್ಟು ನರಳಬೇಕಾಗುವುದೋ ಎಂದು ಈಗಿನಿಂದಲೇ ಎಲ್ಲರೂ ವ್ಯಸನಪಡಬೇಕಾಗಿದೆ.

WANTED WILD ANIMALS

ಬೇಕಾಗಿದೆ ಬೇಕಾಗಿದೆ

21

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು

Apply to—Mr Hughes Mysore Zoo

ಇದು ಕಳೆದ ಜನವರಿ ತಿಂಗಳ ಪ್ರಜೆಂಟೇಷನ್ ವಾಚು

2

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್‌ಕೋಫ್ ಪೇಟೆಂಟ್ ಲಿವರ್ ವಾಚು ಓಪನ್ ಕೇಸ್ ಕೀಲೆಸ್ ಕಂಪೆನ್ಸೇಷನ್ ಬ್ಯಾಲನ್ಸ್ ಬಹು ಬಲಿಷ್ಟವಾದ ಗಡಿಯಾರ ೫ವರುಷ ಗ್ಯಾರಂಟೀ ಕ್ರಯ ರೂ ೫—೮—೦ ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವದರೊಳಗಾಗಿ ಧರಖಾಸ್ತು ಕಳುಹಿಸತಕ್ಕವರಿಗೆ ಈ ಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರದೆಂದು ಪ್ರಚಾರ ಪಡಿಸಿದ್ದ ಮೇರಿಗೆ ೧ ೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರಿಗೆ ಕಳೆದ ಜುಲೈ ಆಖೈರ್ ವರೆಗೆ ಬಹುಮತಿ ಸಹಿತ ಗಡಿಯಾರವನ್ನು "ಕೊಡುತ್ತೇವೆಂದು ಪ್ರಕಟಿಸಿದ್ದಾಗ್ಯೂ ಕಳೆದ ೧ ವಾರದ ಲಾಗಾಯ್ತು ಅನೇಕ ಧರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜಂಟರು ಇನ್ನೂ ಕೆಲವು ಕಾಲದವರೆಗೆ ಜಾರಿಯಲ್ಲಿ ಇರಬೇಕೆಂದು ಕೋರಿದ್ದರಿಂದಲೂ ನಮ್ಮ ಹೆಡ್ಡಾಫೀಸರ ಅಪ್ಪಣೆಯ ಮೇರಿಗೆ ಪುನಃ ಕೊಡಲ್ಪಡುತ್ತೆ ಇದುವರೆಗೆ ವಾಚು ಬಹುಮತಿ ಪಡೆಯದೆ ಇರುವವರು ಜಾಗ್ರತೆ ಧರಖಾಸ್ತು ಕಳುಹಿ ಬಹುಮಾನ ಸಮೇತ ವಾಚು ಪಡಿಯಿರಿ

ಈ ಕೆಳಗಣ ನಕ್ಷೆಯಲ್ಲಿ ತೋರಿಸಿರುವ ಪ್ರಜೆಂಟೇಷನ್ ಸಾಮಾನುಗಳು ಮೊದಲು ಕಳುಹಿಸಿದ ಸಾಮಾನಿಗಿಂತ ಮೇಲಾಗಿಯೂ ನಕ್ಷೆಗೆ ವ್ಯತ್ಯಾಸವಿಲ್ಲದೆಯೂ ಇರುತ್ತೆ





ನಸ್ಯದ ಡಬ್ಬಿ ಇದು ಮೇಲಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು ಕ್ರಯ, ೦—೮—೦



ಗಡಿಯಾರ ಸರಪಣಿ ಇದು ಮೇಲಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದರ ಕೊನೆಯಲ್ಲಿ ಸುಂದರವಾದ ಛತ್ರಮುಖಿ ಕಟ್ಟಲ್ಪಟ್ಟಿರುತ್ತೆ ಎಂದಿಗೂ ಕೆಡಲಾರದು ಕ್ರಯ, ೦—೮—೦



ಮೇಜಿನ ದೀಪ—ಇದು ಮೇಜಿನ ಮೇಲಿರಿಸುವದಕ್ಕೂ ಗೋಡೆಗೆ ತಗಲಿಸುವದಕ್ಕೂ ಉಪಯೋಗಿಸಬಹುದು ಎಣ್ಣೆಯ ವೆಚ್ಚ ಕಡಮೆ ಸಾಕಾದಷ್ಟು ಬೆಳಕು ಕ್ರಯ, ೦—೧೦—೦



ಶರಟ್ ಗುಂಡಿ—ಇದು ಮೇಲಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ಹೊಸ ಮಾದರಿಯಾಗಿ ತಯಾರ್ಮಾಡಲ್ಪಟ್ಟದ್ದು ಇಲ್ಲಿನ ಪಾಲಿಸಿನಿಂದ ೧—೫—೦ ವರ್ಷ ದಿನ ಮನುಷ್ಯರೂ ಇದನ್ನೇ ಉಪಯೋಗಿಸುತ್ತಾರೆ ಬಂಗಾರದ. ಕ್ರಯ, ೦—೧೦—೦.



—ಣದ ಪೆಟ್ಟಿಗೆ—ಇಂಗ್ಲಿಷ್ ಮೇಡ್ ಕ್ಯಾಷ್‌ಬಾಕ್ಸ್—ಹಣ ಆಭರಣ ಭದ್ರವಾಗಿ ಇರಿಸಬಹುದು ಕ್ರಯ, ೦—೧೦—೦

ವಿಳಾಸ—ಮ್ಯಾನೇಜರ್, ಫ್ಯಾರಿನ್ ವಾಚ್ ಕಂಪೆನಿ, ಪಾರ್ಕ್ ಟವನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ..	ರೂ ೧—೧—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ . ..	ರೂ ೧—೧೪—೦
,, ,, ೬ ,, ,,	೧—೨೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರ ಸುಧಾ

ಇದನ್ನು ಓದಿ ! ಬಿಡಬೇಡಿ !! ಗುಣ ನೋಡಿ !!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಿದ್ದಾರೆ ಶೈತ್ಯ, ತಲೆನೋವು, ಅರತಲೆನೋವು ಬೆನ್ನುಛಳುಕು, ಕೈಕಾಲು ನೋವು ಮುಂತಾದವುಗಳನ್ನು ಗೈನಾಮೈಟಿನಂತೆ ದಿಗಂತರಕ್ಕೆ ದಾರಿಸಬಲ್ಲದು 'ಸುಧಾ' ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವು ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಶೀಸೆ ಔಷಧಿಯಲ್ಲಿ ಕಂಡುಬರುವ ಅಮೋಘಗುಣವನ್ನು ಪರೀಕ್ಷಿಸಿ ನಿರ್ಣಯಮಾಡಿಕೊಳ್ಳಿರಿ ಶೀಸೆ ಒಂದಕ್ಕೆ ೦ ೮ ೦ ಹಾಸಲು ಬೇರೆ

ಜೀವನಸುಧಾ—ಜ್ವರ ನಿಂತಕೂಡಲೇ ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧಮಂಡಲ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ ಶೀಸೆ ಒಂದಕ್ಕೆ ರೂಪಾಯಿ ೧—೦—೦

ಪ್ರೀತಾಂಬೂಲ—ಜಗತ್ಪ್ರಖ್ಯಾತವಾದ ತಾಂಬೂಲ ವಸ್ತುಗಳ ಶೀಸೆ ಒಂದಕ್ಕೆ ೩ ಆಣೆ ೬ ಶೀಸೆ ವರೆಗೆ ವಿ ಪಿ ಛಾರ್ಜು ಅಲ್ಲದೆ

ದೇವನಹಳ್ಳಿ ಟರ್ವ, ಬೆಂಗಳೂರು ಡಿಸ್ಟ್ರಿಕ್ಟ

ಯಂ ಗೋವಿಂದಶೆಟ್ಟಿ, ಮೆಡಿಕಲ್ ಪ್ರ್ಯಾಕ್ಟಿಷನರ್

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ

'ರಕ್ಷಾಮೃತ' ... ಸರ್ವರೋಗ ಪ್ರತಿರೂಪ

"ರಕ್ಷಾಮೃತಂ"—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ತೇಯಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರ್ಮಾಡಲ್ಪಟ್ಟಿರುತ್ತದೆ ಕಾಫಿ, ತೇಯಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ ಜ್ವರ, ಸನ್ನಿ, ಬಿಸರು ಹರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಶಾಲುಹಾಕಿಕೊಳ್ಳದಂತೆ ಅಭಾವಮಾಡುವುದು. ಪಿತ್ತವಾಯುವು, ಗುಲ್ಮ ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ. ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಬುದ್ಧಿಶಕ್ತಿಯನ್ನು ವೃದ್ಧಿಗೊಳಿಸುವುದು ವಿದ್ಯಾರ್ಥಿಗಳು, ವಕೀಲರು ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ತೇಯಲೆಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು

ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ಒಂದಕ್ಕೆ ಕ್ರಯ ಆಣೆ ೬. ವಿ ಪಿ ಛಾರ್ಜು ಆಣೆ ೩ ಹೆಚ್ಚಾಗುವುದು ಮುಂಗಡ ೮ ಆಣೆ ಸ್ಟಾಂಪುಕಟ್ಟಿ ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ

ವಿಳಾಸ—ಪಿ ಸುಬ್ಬರಾಯ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಶೀಮೆಯಲ್ಲಿ ಪ್ಲೇಗಿನ ಸ್ಥಿತಿ

11 8—1905 ರಿಂದ 18—8—1905 ರ ವರೆ

ಸ್ಥಳ		ಪ್ಲೇಗ್ ತಗಲಿದ್ದು	ಸತ್ತದ್ದು	ಹೋದವಾರ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ		1	0	12	[illegible]
ಮೈಸೂರು	,,	0	0	19	1
ಬೆಂಗಳೂರು ಡಿಸ್ಟ್ರಿಕ್ಟ		13	32	218	141
ಮೈಸೂರು	,,	2	20	317	154
ಕೋಲಾರ್	,,	0	0	60	74
ಕೋಲಾರ್ ಚಿನ್ನದ ಗಣಿಗಳು		7	4	25	11
ತುಂಕೂರು ಡಿಸ್ಟ್ರಿಕ್ಟ		3	3	16	11
ಹಾಸನ	,,	0	0	6	31
ಚಿತ್ರದುರ್ಗ	,,	1	2	136	109
ಕಡೂರ್	,,	5	1	183	76
ಶಿವಮೊಗ್ಗ	,,	45	41	91	[illegible]
	ಜುಮ್ಲಾ	133	105	1055	71

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಭಾದ್ರಪದ ಶುದ್ಧ ಪಾಡ್ಯಮಿ ಗುರುವಾರದಿಂದ ಭಾದ್ರಪದ ಶುದ್ಧ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೫ ನೇ ಇಸವಿ ಆಗಸ್ಟ್ ಮತ್ತು ಸೆಪ್ಟಂಬರು

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕೆ ...
1	ಗುರು	ಪಾಡ್ಯ	20 30	ಪ್ಪ	7 10	16
1	ಶುಕ್ರ *	ಬಿದಿಗೆ	21 17		23 18	11
[illegible]	ಶನಿ	ತದಿಗೆ	[illegible]	ಹ	1 19	18
3	ರವಿ	ಚೌತಿ	[illegible]	ಚಿ	10 16	19
4	ಸೋಮ	ಪಂಚಮಿ	1 12	ಉಬರಿ	0 1	90
[illegible]	ಕುಜ	ಸಪ್ತಮಿ	10 35	ವಿ	7 57	91
[illegible]	ಬುಧ	ಅಷ್ಟಮಿ	11 10	ಅ	3 05	93

* ತಿಥಿದ್ವಯಂ

ಚತುರ್ಥೀ ತಿಥಿ, ಗೌರೀವ್ರತ ಸಿದ್ಧಿವಿನಾಯಕವ್ರತ, ಪಂಚಮಿ ಋಷಿಪಂಚಮೀವ್ರತ ‡ ಮಹಾಲಕ್ಷ್ಮೀವ್ರತ ಜ್ಯೇಷ್ಠಾಲಕ್ಷ್ಮೀ ಸಿದ್ಧಲಕ್ಷ್ಮೀ ಮಹಾಲಕ್ಷ್ಮೀವ್ರತ

ಪೇಟೆ ಧಾರಣೆ.

ಸಿಸಕು.	ಮೈಸೂರು	ಬೆಂಗಳೂರು
ಕಪ್ಪೆ ಅಕ್ಕಿ ಪಲ್ಲ ಒಕ್ಕೆ	೩—೧—೮—೦	೦—೮—೦
ಬೆಂಬತಿ ಅಕ್ಕಿ ಅನಲ್ ..	೦—೧೨—೦	೦—೧—೦
,, ಮಧ್ಯಮ	೦—೦—೦	೦೨—೦
ಬಾಸ್ಮತಿ ಅಕ್ಕಿ	೦—೦—೦	೦—೦
ಸಣ್ಣಕ್ಕಿ ಅನಲ್	೧೨ ೦—೦	೦೩—೦
,, ಮಧ್ಯಮ	೧೨ ೪—೦	೧೦—೦
ತೊಗರಿ ಬೇಳೆ ಪಲ್ಲ ಒಕ್ಕೆ	೧೦ ೦—೦	೧೦—೮
,, ಮಧ್ಯಮ ..	೧೦—೮—೦	೧೧—೦
ಹೈನ ರಾಗಿ ಪಲ್ಲ ಒಕ್ಕೆ ..	೬—೭—೦	೬—೮
ಆರ್ದ್ರಾಗಿ	೬—೦—೦	೫—೦
ಜೋಳ	೬—೦—೦	೬—೦
ಹೆಸರುಬೇಳೆ ಪಲ್ಲ ಒಕ್ಕೆ	೦೦—೦—೦	೦೦—೦
ಬಳ್ಳೀ ಅವರೆ	೮ ೦—೦	೯—೦
ಹೆಸರು	೯ ೦—೦	೦೦—೦
ಉದ್ದು	೦೦ ೦ ೦	೦೦—೦
ಕಡಲೆ	೦೦ ೦ ೦	೯—೦
ಎಳ್ಳು	೦೬ ೦ ೦	೦೬—೦
ಹುರುಳಿ	೦೦—೦ ೦	೯—೦
ಹರಳು ೦—೩ ಸೇರಿಗೆ	೦—೮—೦	೦—೩—೦
ಸೀಗೇಕಾಯಿ ಮಣ ಒಕ್ಕೆ	೩—೮—೦	೩—೦
ಮೆಣಸಿನಕಾಯಿ	೪—೮—೦	೪—೮
,, ಮಧ್ಯಮ	೩—೦—೦	೩—೦
ಬೆಲ್ಲ ದೊಡ್ಡ ಅಚ್ಚು	೭—೪—೦	೭ ೦ ೫
ಒಳ್ಳೆಣ್ಣೆ ಮಣ ಒಕ್ಕೆ	೩—೪ ೦	೩—೮
ಹರಳೆಣ್ಣೆ ,,	೫—೦—೦	೩—೦
ಕೊತ್ತುಂಬರಿ ಪಲ್ಲ ಒಕ್ಕೆ .	೧೦—೮—೦	೨—೦
ಉಪ್ಪು ,, ..	೬—೦—೦	೬—೦
ಹುಣಿಸೇ ಹಣ್ಣು	೧ ೦—೦	೦—೦
,, ಹಳೇದು	೦—೧೪—೦	೦—೦
ತುಪ್ಪ	೦—೮—೦	೦೧—೦
ಸೀಮೆಯಂಚಿ ಪೆಟ್ಟಿ ಒಕ್ಕೆ	೫—೦—೦	೩—೦
ತೆಂಗಿನಕಾಯಿ ೧೦೦ ಕ್ಕೆ	೫—೦—೦	೩—೦
ಅಡಿಕೆಕಾಯಿ ಮಣ ಒಕ್ಕೆ	೧—೦—೦	೦—೦
ಬಂಬ್ಳಿಯಡಕಾಯಿ ಮಣ ಒಕ್ಕೆ ..	೦—೧೪—೦	೦—೦
ಚಿನ್ನ (ಪರ್) ತೊಲ ..	೦೫—೮—೦	೦೫—೦
,, ,, ಪವನು ..	೨೫—೦—೦	೨೫—೦
,, ,, ಗಟ್ಟಿ ತೊಲ ಒಕ್ಕೆ .	೨೪—೦—೦	೨೪—೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೩ ೭—೦—೦	೩—೦

Printed and Published by the Rev H Sinter the Proprietor and Manager, Wesleyan Mission Press Mysore 31/8/1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು— ಸನ್ ೧೯೦೫ ನೇ ಇಸವಿ ಸೆಪ್ಟಂಬರ್ ತಾರೀಖು ೭ ನೇ ಗುರುವಾರ. — ಸಂಚಿಕೆ ೧೪

"ಭೂಗೋಳ" ಸಂಗ್ರಹ—ಐದನೇ ಮುದ್ರಣ

ಮೈಸೂರು ತಿಪರಾಂಪೇಟೆ ವಸ್ಲಿಯನ್ ಮಿಷನ್ [illegible] ಶಾಲೆಯ ಹೆಡ್ ಮಾಸ್ಟರಾದ ಮ [illegible] ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ಸಿವಿಲ್ ಸರ್ವಿಸ್ [illegible] ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಪಠ್ಯ ಪುಸ್ತಕವಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಸೇರಿಸಿ ಪ್ರಕಟಿಸಲಾಗಿ [illegible] ೧೦ [illegible] ಅಧಿಕವಾದ [illegible] ಒಂದೇ [illegible] ಪ್ರತಿಗಳನ್ನು [illegible] ಬೇಕಾದವರು ವಿ. ಸೂಪರಿಂಟೆಂಡೆಂಟ್, ವಸ್ಲಿಯನ್ ಮಿಷನ್ ಪ್ರೆಸ್, ಮೈಸೂರು.—ಈ ವಿಳಾಸಕ್ಕೆ [illegible] ವಿ. ಪಿ. ಮೂಲಕ [illegible] ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. [illegible] ೧ ಪ್ರತಿಗೆ ೨ ಆಣೆ, ಪೋಸ್ಟೇಜು ೧ ಆಣೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

31

ಜ್ಞಾನವೋ? ಧನವೋ? ಸ್ನೇಹಿತರೋ? ಜಾಗ್ರತೆ ತಿಳಿ[illegible]. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು [illegible] ನೋಡಿರಿ —

೧. "ಅನುಭವಸಾರ"

ಈ ಪುಸ್ತಕವನ್ನು ಮ. ನಿಶ್ರೀಷ್ಮರಾದ ನಿಜಗುಣ ಯೋಗಿಗಳು [illegible] ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ [illegible] ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜು ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆ[illegible] ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರ[illegible]. ಇದರ ಕ್ರಯ ೧೨ ಆಣೆ, ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ"

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. [illegible] ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾ[illegible] ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರು[illegible]. ಕ್ರಯ ೨ ಆಣೆ.

೩. "ಸ್ವಪ್ನಪ್ರವಾಸ ಫಲದೀಪಿಕೆ."

[illegible] ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ

೪	"ರೋಮನರ ಚರಿತ್ರೆ" ಕ್ರಯ	೦—೨—೦
೫	"ಗ್ರೀಕರ ಚರಿತ್ರೆ." ,,	೦—೨—೦
೬.	"ಅನುಭವಾನಂದ.",,	೦—೬—೦
೭.	"ಗಣಿತ ಸಂಜೀವಿನಿ."	೦—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ."	೦—೧೨—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೨—೦
೧೧	"೧೯೦೫ನೇ ವರುಷದ ಡೈರಿಗಳು" [illegible] ಪೆನ್ಸಿಲ್ ಸಹಿತ ೦—೬—೦ ; ಸಾದಾ	೦—೪—೦

ಮ್ಯಾನೇಜರ್,

ಸಿ. ಎಲ್. ಎಸ್ ಬುಕ್ ಡಿಪೋ,

ಮೈಸೂರು.

ವೀರಶೈವ ಶತಸ್ಥಲ ಸಾರಸಂಗ್ರಹ

ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರು ಶ್ರೀ ಅಗಸ್ತ್ಯಮುನಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತವು ಸಿದ್ಧಾಂತ ಶಿಖಾಮಣಿಯೆಂಬ ಸಂಸ್ಕೃತ ಗ್ರಂಥದಿಂದ ಕನ್ನಡ ವಚನ ರೂಪವಾಗಿ ಸಂಗ್ರಹಿಸಿ ಬರೆಯಲ್ಪಟ್ಟಿದೆ. ಈ ಗ್ರಂಥದಿಂದ ವೀರಶೈವ ಸಿದ್ಧಾಂತವನ್ನು ಸಕಲರೂ ಸುಲಭವಾಗಿ ತಿಳಿದುಕೊಳ್ಳಬಹುದು. ಕ್ರಯ— ವಿ ಪಿ ಮೂಲಕ ೧೦ ಆಣೆ ವಿಳಾಸ—ಬಿ ಚಂದ್ರಶೇಖರಶಾಸ್ತ್ರಿ ವೀರನಗೆರೆ, ಮೈಸೂರು.

ಯಮ್. ಆರ್. ವೆಂಕಟಸುಬ್ಬಾಚಾರ್ಯರ್,

ಸುಬೋಧ ಗ್ರಂಥಾಲಯ, ಮೈಸೂರು

ಮೆಟ್ರಿಕ್ಯುಲೇಷನ್ ಕನ್ನಡದ ೧ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ,, ,, ೭ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಚರಿತ್ರೆ (೨ನೆ ಭಾಷೆ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಜ್ವರಹರಿ

13



ಇದು ಸಾಧಾರಣ ಜ್ವರ, ಚಳೀಜ್ವರ, ಸೋರೇಜ್ವರ, ಪಿತ್ತಜ್ವರ, [illegible]ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ನಾನಾವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುನಸಬ್ ಇರ್ರಿಗೇಷನ್ ಸಬ್ ಡಿವಿಜನ್ ಆಫೀಸರ್ ಎಸ್ ಸಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೧೦ [illegible] ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬಿಳುತ್ತಿರು[illegible] ಆದ್ದರಿಂದ ದಯವಿಟ್ಟು ಇನ್ನೊಂದು ೧೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮ್ ಕ ರ್ಪೂ ರ.

ಈ ಔಷಧವು ಅಜೀರ್ಣ, ರಕ್ತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದನ್ನೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಒಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಅಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ಕಪ್ರಿಯುನ್ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಕಳಂಕ್ ಹೌಸ್ ರೋಡ್, ಮದರಾಸ್.

"ಇಂಗ್ಲೀಷ್ ವೈದ್ಯಶಾಸ್ತ್ರ"

ಕ್ರಯ ರೂ ೧-೮-೦, ಹಾಸಲು [illegible] , ವಿ. ಪಿ ೩ ಆಣೆ.

2

ಇಂಗ್ಲೀಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಇವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ಅಂಶಗಳನ್ನು ಕುರಿತು ೩೨೦ ಪುಟಗಳುಳ್ಳ ಈ ಪುಸ್ತಕವು ರಾಜ್ಯಕ್ಕೆ [illegible] ಕೂಡಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವುದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ ಹಾಗೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೂ, ಇದು ತುಂಬಾ ಸಹಾಯಕರವಾಗಿರುವದು.

ವಿಳಾಸ —ಎಂ. ಗುರುರಾವ್, ಆಸ್ಪಿಟಲ್ ಅಸಿಸ್ಟೆಂಟ್,

ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

ಹ ನ್ಸೀ ಮೋ ನ್ಸಿ ಯಾ.

ಅಷ್ಟ[illegible] ಪರಿಹಾರ. — ತಗಲುತ್ತಲೇ ನೋವು ಮಾಯವಾಗುತ್ತೆ.

ಈ ಔಷಧಿಯು ಮಸೂರು, ಅಡವಾನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕಚೇರಿ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟಿರಬೇಕು ಇದಕ್ಕೆ ಸಮಾನವಾದ ಔಷಧವು ಕ್ಯಾಪಿದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ವೇದನೆಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೆ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಸಂಧಿವಾಯು ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ರಣಗಳು, ಚಳುಕು, ಜೊಣ್ಣ ಮತ್ತು ಚೇಳು ಕಡಿದದ್ದು, ಚುಚ್ಚಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಉಪಶಮನಗೊಳಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೇವೆ ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ಪಟ್ಟು ಹೆಚ್ಚು ಔಷಧವಿರುತ್ತೆ ಈ ರೂ. ೨—೮ ಆ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮಿಯೋಪತಿ ಯುಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕೇ ಅಲ್ಲದೆ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸುವರಿಗೆ ಕಳುಹಿಸುವೆವು.

ವಿಳಾಸ.—ಹೋಮಿಯೋಪತಿ ಕಂಪೆನಿ, ೨೩ ಸೆಕೆಂಡ್ ಫ್ಲೀಟ್ ಲೈನ್, ಮದರಾಸ್

ಬಿ. ಬಸವಲಿಂಗಶೆಟ್ಟಿ ಅಂಡ್ ಸನ್ಸ್, ಪಾರಿಜಾತ ವಿಳಾಸ, ಅರಳೇಪೇಟೆ, ಬೆಂಗಳೂರು ಸಿಟಿ.

3

ಹರವಾಯಿಷಿ ರಖಂವಾರ್ ಊದುಬತ್ತಿಗಳು, ಜವ್ವಾಜಿ ಗಂಧ, ಅತ್ತರ್‌ಬಿಲ್ಲೆಗಳು, ದಶಾಂಗ, ಧೂಪಗಳು, ಪಚ್ಚಕರ್ಪೂರ, ವಗೈರೆ ಸುಗಂಧದ್ರವ್ಯಗಳು ಬಹಳ ಸುಲಭಬೆಲೆಗೆ ದೊರೆಯುವದಲ್ಲದೆ, ವ್ಯಾಪಾರಗಾರರಿಗೆ ಬಹಳ ಲಾಭಬರುವಂತೆ ಮಾರಲ್ಪಡುತ್ತೆ. ಒಂದು ಸಲ ಅಜಮಾಯಿಷಿ ಮಾಡಿ, ನಿಮಗೇ ಗೊತ್ತಾಗುತ್ತೆ.

ಚೇಂಬರ್ಲೀನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

35



ಶೀತ, ಕೆಮ್ಮು, ಗಂಟಲು ಗೊರೆಸ್ಸುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿಕಿಳ್ಳಕ್ಕೆ ಈ ಔಷಧವು ಬಹಳಪ್ರಯೋಜನವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತಹಿಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಲಕ್ಷ್ಯ ಮಾಡದಿದ್ದರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಎಲ್ಲಾ ಹೊತ್ತೂ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧವು ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ಸೆಪ್ಟಂಬರ್ ತಾ|| ೭ ನೇ ಗುರುವಾರ.

ಯುದ್ಧವು ಕೊನೆಮುಟ್ಟಿತು

ಈ ರಷ್ಯಾ ಜಪಾನ್ ಯುದ್ಧದಲ್ಲಿ ವಿಸ್ಮಯವನ್ನುಂಟುಮಾಡುವ ಅನೇಕ ಕಾರ್ಯಗಳು ನಡೆದಿರುತ್ತವೆ. ಆದರೂ ಈಗ ಯುದ್ಧಾಂತ್ಯದಲ್ಲಿ ನಡೆದಿರುವ ಸಂಗತಿಗಳು ಅದಕ್ಕಿಂತಲೂ ವಿಶೇಷವಾದ ಆಶ್ಚರ್ಯವನ್ನುಂಟುಮಾಡತಕ್ಕವುಗಳಾಗಿವೆ. ರಷ್ಯಾ ಜಪಾನ್ ರಾಜ್ಯಗಳ ರಾಯಭಾರಿಗಳು ಅಮೇರಿಕ ಸಂಸ್ಥಾನಗಳಿಗೆ ಸೇರಿದ ಪೋರ್ಟ್ಸ್‌ಮತ್ ನಗರದಲ್ಲಿ ಸಭೆಸೇರಿ, ಕೆಲವು ವಾರಗಳಿಂದಲೂ ಕರಾರಿನ ನಿಬಂಧನೆಗಳನ್ನು ಕುರಿತು ಚರ್ಚಿಸುತ್ತಾ ಬಂದಿರುವುದು ನಮ್ಮ ವಾಚಕರಿಗೆ ತಿಳಿದೇ ಇದೆ. ಆ ಸಭೆಯಿಂದ ಆಗಿಂದಾಗ್ಗೆ ಬಂದಿರುವ ವರ್ತಮಾನಗಳು [illegible]; ಬಹಳ [illegible] ವಾಗಿರುತ್ತವೆ. ಅಲ್ಲಿನ ಕೆಲವು ನಿರ್ಣಯಗಳನ್ನು ಕೇಳಿದ ಜನರು ಒಂದು ಸಮಯ—ಇನ್ನೇನು, ಯುದ್ಧ ನಿಂತುಹೋಗುವುದೇ ನಿಶ್ಚಯವೆಂದೂ, ಇನ್ನೊಂದು ವೇಳೆ ಈ ಸಂಧಾನಗಳಿಂದ ಫಲವಾಗುವುದಿಲ್ಲ, ಯುದ್ಧವೇ ನಡೆಯುತ್ತಾ ಬರುವದೆಂದೂ ಹೇಳುತ್ತಿದ್ದರು. ಆದರೆ ಕಡೆಯ ಬುಧವಾರ ಉಭಯ ರಾಜ್ಯಗಳವರೂ ಕರಾರು ನಿಬಂಧನೆಗಳು ಪ್ರಕಾರಕ್ಕೆ ಒಪ್ಪಿಕೊಂಡರೆಂದು ಪ್ರಕಟವಾಯಿತು. ಈ ಕರಾರಿನ ಕಾಗದಗಳನ್ನು ಇನ್ನೂ ಹೊರಡಿಸಿಲ್ಲ. ಆದರೆ ಅವುಗಳ ಸ್ಥಿತಿ ಮುಖ್ಯವಾದ ಎರಡು ವಿಷಯಗಳು ಗೋಚರಕ್ಕೆ ಬಂದಿವೆ. ಆ ಸಭೆಯಲ್ಲಿ ರಾಯಭಾರಿಗಳು ಎರಡು ಕಲಮುಗಳನ್ನು ಕುರಿತು ಬಹಳ ಕಾಲ ತರ್ಕಿಸುತ್ತಿದ್ದರು. ಮೊದಲನೆಯದಾಗಿ, ಜಪಾನಿನವರು ತಮ್ಮ ಯುದ್ಧದ ಖರ್ಚು [illegible] ರಷ್ಯಾದವರು ೧೨೦ ಕೋಟಿ ರೂಪಾಯಿ ಕೊಡಬೇಕೆಂದು ಕೇಳಿದರು. ಎರಡನೆಯದಾಗಿ, ಯುದ್ಧದ ಅಂತ್ಯಭಾಗದಲ್ಲಿ ಜಪಾನ್ ಸೈನಿಕರು ಜಪಾನಿನ ದ್ವೀಪಗಳ ಉತ್ತರ ಪಾರ್ಶ್ವದಲ್ಲಿರುವ ರಷ್ಯಾದವರ ಸಘಾಲಿಯನ್ ಎಂಬ ದ್ವೀಪವನ್ನು ಅವರಿಂದ ಕಿತ್ತು ಸ್ವಾಧೀನಪಡಿಸಿಕೊಂಡರಷ್ಟೆ; ಈ ದ್ವೀಪವನ್ನು ರಷ್ಯಾದವರಿಗೆ ಬಿಟ್ಟುಕೊಡುವುದಿಲ್ಲವೆಂತಲೂ ತಾವೇ ಇಟ್ಟುಕೊಳ್ಳುತ್ತೇವೆಂತಲೂ ಕೇಳಿದರು. ರಷ್ಯಾದವರು ಉಳಿದ ಕಲಮುಗಳಿಗೆಲ್ಲಾ ಜಪಾನಿನವರ ಅಪೇಕ್ಷೆಯ ಪ್ರಕಾರ ಸಮ್ಮತಿಪಟ್ಟಾಗ್ಗ್ಯೂ ಮೇಲ್ಕಂಡ ಎರಡು ಕಲಮುಗಳನ್ನು ಮಾತ್ರ ಒಪ್ಪಿಕೊಳ್ಳದೆ ಹೋದರು. ಜಪಾನಿನವರು ಇವೆರಡು ಕಲಮುಗಳನ್ನೂ ಬಿಟ್ಟು ಬಿಡಬಾರದೆಂದು ರಷ್ಯಾ ರಾಯಭಾರಿಯೂ ಆ ಸಭೆಯಲ್ಲಿ ಹೇಳಿ ಸಂಧಿಯಾಗದಂತೆ ಇದ್ದನು. ಕಡೆಗಲ್ಲಿ ಜಪಾನ್ ಗವರ್ನಮೆಂಟಿನವರು ಯುದ್ಧವನ್ನು ಮುಕ್ತಾಯಮಾಡಬೇಕೆಂಬ ಉದ್ದೇಶದಿಂದ ಹಿಂದೆಗೆದವರಾಗಿ ತಮಗೆ ಯುದ್ಧದ ಖರ್ಚು ಬೇಡವೇ ಬೇಡ ಎಂದು ಒಪ್ಪಿಕೊಂಡುದಲ್ಲದೆ ಸಘಾಲಿಯನ್ ದ್ವೀಪವನ್ನು ಉಭಯ ರಾಜ್ಯಗಳವರೂ ಸಮಭಾಗವಾಗಿ ಹಂಚಿಕೊಳ್ಳೋಣವೆಂದು ಹೇಳಿರುತ್ತಾರೆ. ಇಷ್ಟೊಂದು ಭಾರಿಯಾದ ಹಣವನ್ನು ಜಪಾನಿನವರು ಯಾಕೆ ಬಿಟ್ಟುಬಿಟ್ಟರೋ ಗೊತ್ತಾಗುವುದಿಲ್ಲ. ಆದರೂ ಅವರು ತಮಗೆ ಅನುಕೂಲವಾಗದೆಹೋದರೆ ಸಾಕೆಂದು ಇಷ್ಟೆಲ್ಲಾ ಕಷ್ಟನಷ್ಟಗಳನ್ನು ಅನುಭವಿಸಿ ಕರಾರಿಗೆ ಒಪ್ಪಿಕೊಂಡಿರುವರಲ್ಲದೆ, ಅವರಲ್ಲಿ ಮತ್ತೊಂದು ಅಭಿಪ್ರಾಯವೂ ಇಲ್ಲವೆಂಬುದಾಗಿ ಅನೇಕರು ನುಡಿಯುತ್ತಾರೆ. ಒಂದೇ ನಿಜವಾಗಿರುವ ಪಕ್ಷದಲ್ಲಿ ಜಪಾನಿನವರು ತೋರಿಸಿರುವ ಮೇಲ್ಪಂಕ್ತಿಯು ಈ ಪ್ರಸಂಗದಲ್ಲಿ ಅದ್ವಿತೀಯವಾದದ್ದಾಗಿರುತ್ತದೆ. ಈ ಕರಾರು ನಡೆಯುವುದಕ್ಕೆ ಕೆಲವು ದಿನಗಳ ಹಿಂದೆ ಜಪಾನಿನವರು ಇಂಗ್ಲಿಷ್ ಗವರ್ನಮೆಂಟಿನವರ ಸಂಗಡ ಹೊಸದಾಗಿ ಒಂದು ಕೌಲನ್ನು ಮಾಡಿಕೊಂಡರು. ಈ ಕರಾರಿನಿಂದ ಅವರಿಗುಂಟಾಗುವ ಪ್ರಯೋಜನಗಳು ಮೇಲ್ಕಂಡ ೧೨೦ ಕೋಟಿ ರೂಪಾಯಿಗಿಂತಲೂ ತುಂಬಾ ಮಿಗಿಲಾದವುಗಳೆಂದು ಅನೇಕರು ಊಹಿಸುತ್ತಾರೆ. ಹ್ಯಾಗಾದರೂ ಈ ಭಾಗದಲ್ಲಿ ಮೇಲು ಸಂಗತಿಗಳು ಮುಂದೆ ಪ್ರಕಟವಾಗುವ ತನಕ ನಿರೀಕ್ಷಿಸಬೇಕಾಗಿದೆ. ಅಂತೂ ಈ ಮಹಾ ಘೋರವಾದ ಯುದ್ಧವು ಮುಕ್ತಾಯವಾದದ್ದಕ್ಕೆ ನಾವು ಎಲ್ಲಾ ದೇವರಿಗೆ ಸ್ತೋತ್ರಗಳನ್ನು ಒಪ್ಪಿಸೋಣ.

ಬಾಲ್ಯ ವಿವಾಹ ಪ್ರಸಂಗ.

[illegible] ತಿಂಗಳಲ್ಲಿ [illegible] ರಾಜ್ಯ ಸಭೆಯಲ್ಲಿ [illegible] ಹಿಂದೂ ಸಮಾಜಕ್ಕೆ [illegible] ಎಂಬ ಬಿಲ್ಲನ್ನು [illegible] ಭಾರ್ಗವರನ್ನು [illegible] ಶಾಸ್ತ್ರಕಾರಾಗಿ [illegible] ಶಾಸನ [illegible] ವಿಷಯದಲ್ಲಿ ತುಂಬಾ ಅನುಭವಶಾಲಿ [illegible] ಪ್ರಿನ್ಸ್ ಆಫ್ ವೇಲ್ಸ್ [illegible] ಬಾರ್ಗವ ಶಾಸನಾರ್ಥದೇ [illegible] ಅಂದರೆ [illegible] ಬಿಲ್ಲಿನ [illegible] ರಾಜಕೀಯ [illegible] ಗವರ್ನಮೆಂಟಿನವರು [illegible] ಮಾಡಿ [illegible] ನಿಜವಾಗಿಯೂ [illegible] ಪಾತ್ರನಾಗಿದೆ. [illegible] ಶಾಸನ [illegible] ಯುವರಾಜರ [illegible] ಬಾಲ್ಯ [illegible] ವಿವಾಹಗಳನ್ನು [illegible] ಬಹಳ [illegible] ಸಮರ್ಥರೆಂದು ಹೇಳಬಹುದಾಗಿದೆ.

ಬಗೆಬಗೆಯ ವೃತ್ತಾಂತಗಳು.

ನೊನ್ನೆ ಸೋಮವಾರ ರಾತ್ರಿ ದಿವಾನ್‌ರವರು ಪರಿವಾರಸಹಿತ ಬೆಂಗಳೂರಿಗೆ ಪ್ರಯಾಣಮಾಡಿದರು.

*****

ಕೊಲ್ಲಾಪುರದ ಮಹಾರಾಜರವರು ಬೊಂಬಾಯಿಯಿಂದ ಬಂದು, ಮುಂದಿನ ವಾರ ಬೆಂಗಳೂರಿನಲ್ಲಿ ಕೆಲವು ದಿನ ಇದ್ದು ಮುಂದಕ್ಕೆ ತೆರಳುವವರಾಗಿದ್ದಾರೆ.

*****

ಬೆಂಗಳೂರಿಂದ ಪೂನಾ ಪಟ್ಟಣಕ್ಕೆ ಹೋಗಿರುವ ರೈಲ ಗಾಡಿಗಳಿಗೆ ಈಗ ಹೊಸ ತರಹ ಇಂಜಿನುಗಳನ್ನು ಕಟ್ಟುತ್ತಿದ್ದಾರೆ. ಇದರಿಂದ ಗಾಡಿಗಳು ತುಂಬಾ ವೇಗವಾಗಿ ಓಡುವವು.

*****

ರಾಜಧಾನಿಗೆ ಇನ್ನು ೨—೩ ತಿಂಗಳೊಳಗಾಗಿ ಶಿವನಸಮುದ್ರದಿಂದ ತಂತಿಗಳನ್ನು ಹಾಕಿ ರಾತ್ರಿಹೊತ್ತು ದೀಪಗಳನ್ನು ಹಚ್ಚುವ ವ್ಯವಸ್ಥೆ ದಿವಾನರವರು ಏರ್ಪಾಡು ಮಾಡುತ್ತಿದ್ದಾರೆ.

*****

ಬೆಂಗಳೂರಿನಲ್ಲಿ ಬ್ಯಾರಿಸ್ಟರ್ ಅಡ್ವೊಕೇಟರಾಗಿರುವ ಮ|| ಎಚ್. ನಾರಾಯಣರಾಯರಿಗೆ ಮೈಸೂರು ಸರ್ಕಾರದವರು ಗವರ್ನಮೆಂಟ್ ಅಡ್ವೊಕೇಟ್ ಕೆಲಸವನ್ನು ದಯಪಾಲಿಸಿದರೆಂದು ತಿಳಿದು ಬಂದಿದೆ.

*****

ಮೈಸೂರು ಸಂಸ್ಥಾನದ ಛೀಫ್ ಇಂಜನಿಯರಾದ ಮ|| ಸ್ಟೀಲಿಯವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮುಂದಿನ ತಿಂಗಳು ಸೀಮೆಗೆ ಹೊರಟುಹೋಗುವರೆಂದು ಪ್ರಕಟವಾಗಿದ್ದ ವರ್ತಮಾನವು ನಿಜವಲ್ಲವೆಂದು ಗೊತ್ತಾಗುತ್ತದೆ.

ಬೆಂಗಳೂರು ಪಟ್ಟಣದಲ್ಲಿದ್ದ ಹಳೇ ತಾಲ್ಲೂಕ್ ಕಚೇರಿ ಕಟ್ಟಡವನ್ನು ಕಳೆದ ವಾರ ಹರಾಜು ಹಾಕಿದರು. ಮ|| ಹಾಜೀ ಇಸ್ಮಾಯಿಲ್ ಸೇಟರು ಅದನ್ನು ೩೦,೦೦೦ ರೂಪಾಯಿ ವರೆಗೆ ಕೂಗಿ ಕೊಂಡುಕೊಂಡರು. ಈಗ ಅವರು ಅದನ್ನು ಕಿತ್ತು ಬೇರೆ ಕಟ್ಟಡವನ್ನು ಕಟ್ಟುವವರಾಗಿದ್ದಾರೆ.

*****

ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿ ಯವರು [illegible] ಗುಮಾಸ್ತರನ್ನು ಕರೆದುಕೊಂಡು, ನಾಳೆ ಬೆಂಗಳೂರಿಗೆ ಪ್ರಯಾಣಮಾಡಿ, ಕಡೂರು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಸಂಚಾರಮಾಡಿಕೊಂಡು, ಈ ತಿಂಗಳ ಕಡೇ ವಾರದಲ್ಲಿ [illegible] ಬೆಂಗಳೂರಿಗೆ ದಯಮಾಡುವವರಾಗಿದ್ದಾರೆಂದು ಕೇಳುತ್ತೇವೆ. ಇವರು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಪ್ರಜೆಗಳು ದಿವಾನರವರನ್ನು [illegible] ಅವರಿಗೆ [illegible] ಕೊಡಬೇಕೆಂದು ನಾವು ಕೇಳಿದ್ದೇವೆ.

*****

ಬೆಂಗಳೂರು ಪಟ್ಟಣದಲ್ಲಿ ಅನೇಕ ಕಾಲದಿಂದ ಗವರ್ನಮೆಂಟ್ ಅಡ್ವೊಕೇಟರಾಗಿದ್ದ ಮ|| ಎಸ್. ಸಾಮಣ್ಣಶಾಸ್ತ್ರಿಯವರು ಕಳೆದ ಗುರುವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಮೊದಲು ಮೈಸೂರಿನಲ್ಲಿ ಅಡ್ವೊಕೇಟರಾಗಿದ್ದು ಬಹು ಪ್ರಖ್ಯಾತರಾದರು. ತರುವಾಯ ಬೆಂಗಳೂರಿನಲ್ಲಿ ಅವರಿಗೆ ಗವರ್ನಮೆಂಟ್ ಅಡ್ವೊಕೇಟ್ ಕೆಲಸ ದೊರೆಯಿತು. ಇವರು ಮರಣಕಾಲದಲ್ಲಿ ೬೭ ವರ್ಷ ವಯಸ್ಸಾಗಿತ್ತು. ಇವರಿಗೆ ಒಬ್ಬ ಮಗ ಮತ್ತು ಕೆಲವು ಪುತ್ರಿಯರೂ ಇರುತ್ತಾರೆ. ಇವರು ಮೈಸೂರಿನಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಮೈಸೂರಿನಲ್ಲಿ ಒಂದು ಅಡ್ವೊಕೇಟರಾಗಿ ವಕಾಲತು ನಡೆಸಬೇಕೆಂದು ಇಚ್ಛಿಸಿದ್ದರು.

*****

ನೊನ್ನೆ ಸೋಮವಾರ ರಾತ್ರಿ ಸುಮಾರು ೮ ಗಂಟೆ ಹೊತ್ತಿನಲ್ಲಿ ರಾಜಧಾನಿ [illegible] ಮೊದಲನೇ ಮಹಾರಾಜ ಕುಮಾರಿಯವರ ಸಾರೋಟಿನಲ್ಲಿ ಕುಳಿತು ಅರಮನೆ [illegible] ಬಂಗಲೆಯಿಂದ ಮನೆಗೆ [illegible] ಬರುತ್ತಿರುವಾಗ್ಗೆ ಡಿಸ್ಟ್ರಿಕ್ಟ್ ಆಫೀಸ್ ಕಾಂಪೌಂಡಿನಲ್ಲಿ ಕುದುರೆಗಳು ಹಿಂಜರಿದು, ಸಾರೋಟನ್ನು ರಸ್ತೆಯ ಅಂಚಿಗೆ [illegible] ಮೇಲೆ [illegible] ಹೋದದ್ದರಿಂದ [illegible] ಕೆಳಗೆ [illegible] ತುಂಬಾ ಗಾಯ ಪಟ್ಟದ್ದಲ್ಲದೆ ಸಾರೋಟು ಒಡೆದುಹೋಯಿತು. ಮಹಾರಾಜ ಕುಮಾರಿಯವರು ಬೇಗ ಎದ್ದು [illegible] ಮಹಾರಾಜರವರು [illegible] ಬಂಗಲೆಗೆ ದಯಮಾಡಿ, ಅಲ್ಲಿಂದ ಅರಮನೆಗೆ [illegible], ಮಹಾರಾಣಿಯವರು [illegible] ದಯಮಾಡಿ, ಅವರ ಸಾರೋಟಿನಲ್ಲಿ ಕರೆದುಕೊಂಡು ಬಂದರೆಂತಲೂ ಕೇಳುತ್ತೇವೆ.

*****

ಕಳೆದ ಬುಧವಾರ ಮಧ್ಯಾಹ್ನ ಕೋಲಾರ್ ಜಿಲ್ಲಾ ನಂದಿದುರ್ಗದ ಗಣಿಯಲ್ಲಿ ಬೆಂಕಿಯ ಅನಾಹುತವಾಗಿ ಭೂಮಿಯೊಳಗೆ ಸುಮಾರು ೫೦ ಮಂದಿ ಕೂಲಿಯವರು ಆ ಗಣಿ ಕೆಲಸ ಮಾಡುತ್ತಿರುವಾಗ್ಗೆ ಬೆಂಕಿ ಹುಟ್ಟಿ ಒಳಗಿದ್ದ ಮರದ ಮುಂತಾದವು ಹತ್ತಿಕೊಂಡವು. ಮಾರನೆ ದಿನ ಬೆಳಗ್ಗೆ ಗಣಿಯ ಒಳಗೆ ಹೊಗೆ ತುಂಬಿದ್ದರಿಂದ ಈ ಅನಾಹುತವು ತಿಳಿದು ಕೂಡಲೇ ಒಳಗಿದ್ದ ಜನರನ್ನು ಬದುಕಿಸಬೇಕೆಂದು ಬಹಳ ಶ್ರಮಪಟ್ಟು, ಗಣಿಯೊಳಗಿಂದ ೧೨ ಮಂದಿಯನ್ನು ಮೇಲಕ್ಕೆ ತಂದರು. ಇದುವರೆಗೆ ೧೫—೨೦ ಶವಗಳು ಸಿಕ್ಕಿರುತ್ತವೆ. ಮಂದಿ ಪ್ರಾಣ [illegible] ಇನ್ನೂ ಖಂಡಿತವಾಗಿ ತಿಳಿದಿಲ್ಲ. ಜನರನ್ನು ಬದುಕಿಸಬೇಕೆಂದು ಸಾಹಸಪಟ್ಟವರಲ್ಲಿ ನಾಲ್ಕಾರು ಮಂದಿಗೆ ಗಾಯಗಳಾಗಿವೆ. ಕೂಲಿಕಾರರ ಅಜಾಗರೂಕತೆಯಿಂದಲೇ ಈ ಅನಾಹುತ ಸಂಭವಿಸಿತೆಂದು ತಿಳಿಯಬರುತ್ತದೆ.

*****

ರಾಜಧಾನಿಯ ಕೋಟೆಯಲ್ಲಿದ್ದ ಮ|| ಅಳಿಯ [illegible] ಲಿಂಗರಾಜೇ ಅರಸಿನವರು ಇದೇ ಸೆಪ್ಟಂಬರು ೫ನೇ ಮಂಗ

ಬೆಳಗಿನ ಜಾವ ೪ ಗಂಟೆ ಸಮಯದಲ್ಲಿ ಬೆನ್ನುಫಳೆ ಎಂಬ ವ್ರಣರೋಗದಿಂದ ಸ್ವಗೃಹದಲ್ಲಿ ಅಕಾಲಮೃತ್ಯುವಿಗೆ ತುತ್ತಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಸುಮಾರು ೪೦ ವರ್ಷವಯಸ್ಸು. ಹೋದ ವರುಷ ಇದೇ ಸಮಯದಲ್ಲಿ ಇವರ ಪತ್ನಿಯವರು ಕಾಲವಾದುದನ್ನು ವಾಚಕರು ಮರೆತಿಲ್ಲದರು. ಇವರ ವಿಯೋಗ ದುಃಖವನ್ನು ಸಹಿಸುವುದಕ್ಕೆ ೧೯ ವಯಸ್ಸಿನ ಒಬ್ಬ ಕುಮಾರರೂ, ಇಬ್ಬರು ಕುಮಾರಿಯರೂ ಇರುವರು. ಮ॥ ಅರಸಿನವರಿಗೆ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ತುಂಬಾ ಪರಿಶ್ರಮವಿತ್ತು. ಅವರು ರಚನೆಮಾಡಿದ ಕೆಲವು ಪದ್ಯಗಳನ್ನು ಹಿಂದೆ ಈ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ. ಇವರು ಬಂಗಾರದ ಗ್ರಂಥ್ಯರಾದ್ದರು. ಇವನ್ನು ಸಾಗಿಸುವಾಗ್ಗೆ ಅರಸು ರವರ ಮರ್ಯಾದೆಗಳು ಬಿದ್ದಿದ್ದುವು. ಬಿದುಜರ ಗಣ್ಯರಾದ ಅರಸು ಮಕ್ಕಳು ಶವದ ಸಂಗಡ ಹೋಗಿದ್ದರು.

*****

ಕಳೆದ ತಿಂಗಳ ೧೫ ನೆ ತಾರೀಖಿನಲ್ಲಿ ಸಕಲೇಶಪುರದ ಬ್ಯಾಪ್ಟಿಸ್ಟ್ ಬಂಗಲೆಯಲ್ಲಿ ಪ್ಲಾಂಟರುಗಳೂ ಸರ್ಕಾರಿ ಅಧಿಕಾರಿಗಳೂ ಸೇರಿ, ಅಲ್ಲಿ ಒಂದು ಫಲವೃಕ್ಷ ಪ್ರದರ್ಶನವನ್ನು ನಡಿಸಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ. ಮ॥ ಗ್ರಾಹಂ ಅಧ್ಯಕ್ಷರವರು ಸಭಾನಾಯಕರಾಗಿ, ಇಂಥಾ ಪ್ರದರ್ಶನಗಳಿಂದಾಗುವ ಪ್ರಯೋಜನಗಳನ್ನು ಕುರಿತು ಉಪನ್ಯಾಸಮಾಡಿದರು. ಈಗಿಗೆ ಈ ಪ್ರದರ್ಶನವು ಸಕಲೇಶಪುರದ ವಿಕ್ಟೋರಿಯಾ ಪಾರ್ಕ್ ಎಂಬ ಉದ್ಯಾನವನದಲ್ಲಿ ನಡೆಯುವ ಹಾಗೂ, ಈ ಪ್ರದರ್ಶನಕ್ಕೆ ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಮಲ್ನಾಡು ತಾಲ್ಲೂಕುಗಳ ಪ್ರಜೆಗಳು ಕಾಯಿಪಲ್ಯ, ಹಣ್ಣು ಹಂಪಲು, ಪುಷ್ಪಗಳು, ಧಾನ್ಯ, ಗೋಕಾಯಿಗಳು ಪಕ್ಷಿ, ವ್ಯವಸಾಯೋತ್ಪನ್ನಗಳು ಮೊದಲಾದವನ್ನು ತಂದು ಇಡುವ ಹಾಗೂ, ಚೆನ್ನಾಗಿರತಕ್ಕವುಗಳಿಗೆ ಬಹುಮಾನಗಳನ್ನು ಕೊಡುವ ಹಾಗೂ ಗೊತ್ತುಮಾಡಿ ಈ ಪ್ರದರ್ಶನವು ಮುಂದಿನ ಜನವರಿ ತಿಂಗಳಲ್ಲಿ ನಡೆಯುವಂತೆ ಏರ್ಪಾಡಾಗಿದೆ. ಬಹುಮಾನ ಕೊಡುವುದೇ ಮುಂತಾದ ಖರ್ಚುಗಳಿಗೆ ದಿನದಿಂದ ತಲಾ ೧೦ ರೂಪಾಯಿಗೆ ವಿಚಾರದಂತೆ ಚಂದಾ ವಸೂಲ್ಮಾಡುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಶಿವಸಮುದ್ರದಲ್ಲಿ ಸಬ್ ಅ ಸರ್ಜನ್ನಾಗಿರುವ ಮ॥ ಜೆ ವಿ. ಬಾಸ್ಕರ್ವಿಲ್ ಹಾಸ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಮೂವತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮ॥ ಪಿ ನಂಜಪ್ಪನವರು ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಶಿವಸಮುದ್ರದಲ್ಲಿ ಹಂಗಾಮಿಯಾಗಿ ಸಬ್ ಅ ಸರ್ಜನ್ನಾಗಿ ಕೆಲಸನೋಡತಕ್ಕದ್ದು.

ಹುಣಸೆಹಳ್ಳಿ ಮುನ್ಸಿಫ್ ಮ॥ ಎನ್ ನರಸಿಂಹಯ್ಯಂಗಾರ್ರಿಗೆ ಕೊಟ್ಟಿರುವ ಎರಡು ತಿಂಗಳ ಕಾಯಿಲೆ ರಜವನ್ನು ಇನ್ನೂ ನಾಲ್ಕು ದಿನಗಳಿಗೆ ಜಾಸ್ತಿ ಮಾಡಿದೆ.

ಪೋಲೀಸ್ ಅ ಸೂಪರಿಂಟೆಂಡೆಂಟ್ ಮ॥ ಸಿ. ಡಿ ರಾಮಸ್ವಾಮಯ್ಯನವರಿಗೆ ಜುಲೈ ೧೧ರ ಲಾಗಾಯಿತು ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಅವರು ರಜಾ ಪೂರೈಸಿದ ಮೇಲೆ ಕೆಲಸ ವಹಿಸಿಕೊಳ್ಳಾಗತಕ್ಕದ್ದು.

ಅರಕಲಗೂಡು ತಾಲ್ಲೂಕು ಅಮಲ್ದಾರ್ ಮ॥ ಟಿ ಕೆ ಲಕ್ಷ್ಮಣಯ್ಯನವರಿಗೆ ಕೊಟ್ಟಿದ್ದ ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ಅವರ ಇಷ್ಟಪ್ರಕಾರ ರದ್ದುಮಾಡಿದೆ.

ವೈದ್ಯ ಇಲಾಖೆಯಲ್ಲಿ ಮುಂದೆ ಕೇಳುವ ವರ್ಗಾವರ್ಗಿಗಳನ್ನು ಹುಕುಂ ಮಾಡಿದೆ—

ಸಿವಿಲ್ ಸರ್ಜನ್ ಮ॥ ಟಿ ವಿ ಅಮುರ್ಗಂ ಮೊದಲಿಯಾರ್ರವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿರತಕ್ಕದ್ದು. ಅ॥ ಸರ್ಜನ್ ಮ॥ ಸಿ ಎ ಸಂಜೀವಿನವರನ್ನು ಕೋಲಾರದಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿ. ಮೈಸೂರು ಪ್ಲೇಗ ಡ್ಯೂಟಿ ಅ॥ ಸರ್ಜನ್ ಮ॥ ಟಿ ವಿ ಕೃಷ್ಣಸ್ವಾಮಿ ಮೊದಲಿಯಾರ್ರನ್ನು ಕೋಲಾರು ಡಿಸ್ಟ್ರಿಕ್ಟಿಗೆ. ಮೈಸೂರು ಜನರಲ್ ಆಸ್ಪತ್ರೆಯಿಂದ ಸಬ್ ಅ॥ ಸರ್ಜನ್ ಮ॥ ಎಂ ಜಗನ್ನಾಥಂಪಿಳ್ಳೆಯವರನ್ನು ಮೈಸೂರು ಪ್ಲೇಗ್ ಡ್ಯೂಟಿಗೆ. ಸಬ್ ಅ॥ ಸರ್ಜನ್ ಮ॥ ಜೆ ಆಶೀರ್ವಾದಂ ಯವರನ್ನು ಸಕಲೇಶಪುರದಿಂದ ಮೈಸೂರಿಗೆ. ಸಬ್ ಅ॥ ಸರ್ಜನ್ ಮ॥ ಕೆ ನಂಜುಂಡಯ್ಯಂಗಾರ್ರನ್ನು ಚಿಕ್ಕಮಗಳೂರಿನಿಂದ ಸಕಲೇಶಪುರಕ್ಕೆ. ಅ॥ ಸಬ್ ಅ॥ ಸರ್ಜನ್ ಮ॥ ವಿ ಪಿ ಸದಾಶಿವರಾಯರನ್ನು ದಾವಣಗೆರೆಯಿಂದ ಚಿಕ್ಕಮಗಳೂರಿಗೆ.

ಡೆ॥ ಕಮಿಷನರ್ ಮ॥ ಕೆ. ದೊರೆಸ್ವಾಮಿ ಐಯರವರು ತುಮಕೂರು ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಭಾರವನ್ನು ಜುಲೈ ೨೦ ರಲ್ಲಿ ಮ॥ ಎನ್. ವೆಂಕಟರಾಯರಿಂದ ವಹಿಸಿಕೊಂಡರು.

ಸ್ಮಾಲ್ಕಾಸ್ ಮೊಕದ್ದಮೆಗಳನ್ನು ಹಿಡಿದು ಪರ್ಯಾಪ್ತಿ ಮಾಡುವ ಅಧಿಕಾರವನ್ನು ಶಿವಮೊಗ್ಗ ಮುನ್ಸಿಫರಿಗೆ ತಪ್ಪಿಸಿ, ಶಿವಮೊಗ್ಗ ಸಬ್ ಜಡ್ಜಿಯವರಿಗೆ ವಹಿಸಿದೆ.

ಮೈಸೂರು ಅರಮನೆ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಮ॥ ಬಿ ಪಿ ರಾಘವಲುನಾಯುಡು ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗಳು ಹದಿನಾಲ್ಕು ದಿನದ ಪ್ರಿವಿಲೆಜ್ ರಜಾಕೊಟ್ಟಿದೆ.

ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟ್ ಮ॥ ಎಚ್. ನಂಜುಂಡರಾಜೇ ಅರಸಿನವರಿಗೆ ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಟ್ಟಿತ್ತು.

ಡೆಪ್ಯುಟಿ ಕಮಿಷನರ್ ಮ॥ ಎಂ ನಾರಾಯಣರಾಯರಿಗೆ ಮೊದಲು ಕೊಟ್ಟಿದ್ದ ಆರುತಿಂಗಳ ಕಾಯಿಲೆ ರಜವನ್ನು ಇನ್ನೂ ಆರುತಿಂಗಳಿಗೆ ಜಾಸ್ತಿ ಮಾಡಿದೆ.

ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅ॥ ಕನ್ಸರ್ವೇಟರ್ ಮ॥ ಬಿ. ಹಿರಣ್ಯಲಿಂಗಯ್ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಹತ್ತುದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಂತೆಬ ತಾಲ್ಲೂಕಿನ ಅಮಲ್ದಾರ್ ಮ॥ ಎಸ್. ಕೃಷ್ಣಪ್ಪನವರು ರಜದಿಂದ ವಾಪಸು ಬಂದು ಜುಲೈ ೨೮ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ.

ಎಕ್ಸ್ಟ್ರಾ ಅ॥ ಕಮಿಷನರಾಗಿ ಕೆಲಸನೋಡುತ್ತಿದ್ದ ಮ॥ ಟಿ. ಕೆ ಸುಂದರರಾಜೈಯ್ಯಂಗಾರ್ರು ಮೈಸೂರು ತಾಲ್ಲೂಕಿಗೆ ತಮ್ಮ ಖಾಯಂ ಅಮಲ್ದಾರಿ ಕೆಲಸಕ್ಕೆ ವಾಪಸು ಹೋಗತಕ್ಕದ್ದು.

ಅಮಲ್ದಾರ್ ಮ॥ ಟಿ. ವೆಂಕಟರಾಮಯ್ಯನವರು ಮ॥ ಸುಂದರರಾಜೈಯ್ಯಂಗಾರ್ರಿಗೆ ಭಾರ್ಜಾವಹಿಸಿದ ಮೇಲೆ ಮುಳಬಾಗಲ್ ತಾಲ್ಲೂಕಿನ ಭಾರ್ಜನ್ನು ವಹಿಸುವರು.

ಅಮಲ್ದಾರ್ ಮ॥ ಬಿ. ಎಂ ವೆಂಕಟೇಶಯ್ಯನವರು ಭಾರ್ಜ್ ಕೊಟ್ಟ ಮೇಲೆ ೬ ರಿಯೂರ್ ತಾಲ್ಲೂಕ್ ಛಾರ್ಜನ್ನು ತೆಗೆದುಕೊಳ್ಳುವರು.

ಕೋಲಾರದ ಸಬ್ ಪ್ರೊಬೇಷನರಿ ಡೆಪ್ಯುಟಿ ಅಮಲ್ದಾರ್ ಎಸ್ ಅನಂತರಾಮಯ್ಯಂಗಾರ್ರು ಚಾರ್ಜ್ ಕೊಟ್ಟ ತರುವಾಯ ಫಾರೆಸ್ಟ್ ಕನ್ಸರ್ವೇಟರ್ ಆಫೀಸಿಗೆ ವಾಪಸು ಹೋಗುವರು.

ರೆವಿನ್ಯೂ ಪ್ರೊಬೇಷನರ್ ಮ॥ ಎಂ. ಎಸ್. ರಾಮಚಂದ್ರರಾಯರನ್ನು ಸಬ್ ಪ್ರೊಬೇಷನರಿ ಅಮಲ್ದಾರ್ರನ್ನಾಗಿ ನೇಮಕಮಾಡಿದೆ.

ಸಬ್ ಪ್ರೊಬೇಷನರಿ ಅಮಲ್ದಾರ್ ಮ॥ ಗುಲಾಂ ಮಹಮ್ಮದ್ ಮೊಕ್ರಿಯವರು ಛಾರ್ಜ್ ಕೊಟ್ಟ ಮೇಲೆ ಕೋಲಾರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ರಾಗಿರತಕ್ಕದ್ದು.

ಮ॥ ಕೆ ನುತ್ತೈಯನವರು ಷಿಕಾರಿ ಆಫೀಸರಾಗಿ ಕೆಲಸ ನೋಡುವಾಗ್ಗೆ ಅವರಿಗೆ ೨೦೦ ರೂಪಾಯಿ ತಲಬು ಸಲ್ಲತಕ್ಕದ್ದೆಂದು ಗೊತ್ತುಮಾಡಿದೆ.

ಸಬ್ ಅ॥ ಸರ್ಜನ್ ಮ॥ ಎಂ. ಜಗನ್ನಾಥಂ ಪಿಳ್ಳೆಯವರು ಮೈಸೂರು ಪಟ್ಟಣದ ಇನ್ಸ್ಪೆಕ್ಟಿಂಗ್ ಮೆಡಿಕಲ್ ಮತ್ತು ಹೆಲ್ತ್ ಆಫೀಸರಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಡಿವಿಜನ್ ಅ॥ ಇಂಜನಿಯರ್ ಮ॥ ಎಫ್ ಎ. ಸ್ಟೀಲ್ ಯವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಎಂಟು ದಿನ ಜಾಸ್ತಿಮಾಡಿದೆ.

ಬೊಗಬರ್ ಇಲಾಖೆಯ ರೆಜಿಸ್ಟ್ರಾರ್ ಮ॥ ಬಿ ಸುಬ್ಬರಾಯರಿಗೆ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ರಜಾ ಕೊಟ್ಟಿದೆ.

ಮ॥ ಎ ಟಿ ಸೇಟ್ಲೂರ್ ಯವರು ರೆಜಿಸ್ಟ್ರಾರ್ ಕೆಲಸವನ್ನೂ ನೋಡತಕ್ಕದ್ದು.

ಮೈಸೂರು ಕಾರುಣಿಕ ಮೂಕರ ಪಾಠಶಾಲೆ.

[ಒಬ್ಬ ಬಾತ್ಮೀದಾರರು ಬರೆದುದು]

ಈ ಪಾಠಶಾಲೆಯು ೧೯೦೧ನೆ ಅಕ್ಟೋಬರಿನಲ್ಲಿ ಇದರ ಆನರರಿ ಸೆಕ್ರೆಟರಿಗಳಾಗಿರುವ ಮ॥ ಎಂ ಶ್ರೀನಿವಾಸರಾವ್, ಬಿ ಎ. ಯವರಿಂದ ಸ್ಥಾಪಿಸಲ್ಪಟ್ಟಿತು. ಪ್ರಾರಂಭದಲ್ಲಿ ಒಬ್ಬ ಕುರುಡನೂ, ಇಬ್ಬರು ಮೂಕರೂ ವಿದ್ಯಾರ್ಥಿಗಳಾಗಿದ್ದರು. ಈಗ ೨೦ ಮಂದಿ ಕುರುಡರೂ ೧೨ ಜನ ಮೂಕರೂ ಈ ಪಾಠಶಾಲೆಯಲ್ಲಿ ಓದುತ್ತಿದ್ದಾರೆ. ಈ ಮೂವತ್ತೆರಡು ಜನಗಳ ಪೈಕಿ ೧೩ ಮಂದಿ ಬ್ರಾಹ್ಮಣರು, ೧೩ ಜನ ಮೇಲುಜಾತಿಯ ಹಿಂದುಗಳು, ೫ ಜನ ಮುಸಲ್ಮಾನರು, ಒಬ್ಬನು ಮದರಾಸು ಪ್ರಾಂತ್ಯದವನು, ಒಬ್ಬ ಬೊಂಬಾಯಿ ಅಧಿಕಶ್ಯಕ್ಕೆ ಸೇರಿದವನೂ ಇದ್ದಾನೆ.

ಅಂಗಹೀನರಾದ ಕುರುಡರಿಗೂ ಮೂಕರಿಗೂ ಜೀವನ ಸಾಧಕವಾದ ವಿದ್ಯವನ್ನು ಕಲಿಸಿ, ಅವರು ಪ್ರಾಪ್ತವಯಸ್ಕರಾದ ಮೇಲೆ ತಮ್ಮ ಜೀವನವನ್ನು ತಾವೇ ಸಂಪಾದಿಸಿಕೊಳ್ಳುವಂತೆ ಮಾಡುವುದೇ ಈ ಪಾಠಶಾಲೆಯ ಮುಖ್ಯೋದ್ದೇಶವಾಗಿರುತ್ತೆ. ಸರ್ಕಾರಿ ಮತ್ತು ಮ್ಯುನಿಸಿಪಲ್ ಗ್ರಾಂಟುಗಳಿಂದಲೂ ಜನರಿಂದ ಕೊಡಲ್ಪಡುವ ಚಂದಾ ಹಣದಿಂದಲೂ ಈ ಪಾಠಶಾಲೆಯ ಕೆಲಸಗಳು ನಡೆಯುತ್ತಲಿವೆ. ಯಾವಾಗಲೂ ಪ್ರಾರಂಭ ದೆಸೆಗೆ ಸಹಜವಾದ ಕಷ್ಟಗಳು ಅನೇಕವಿದ್ದಾಗ್ಯೂ ಈ ಪಾಠಶಾಲೆಯು ೬ ಜನ ಮೂಕರನ್ನು ಕನ್ನಡ ಬಾಲಬೋಧೆ ಓದುವುದರಲ್ಲೂ, ಕಪ್ಲೀಕೋಟೆ ಚಕ್ಕೆ ಬಟ್ಟೆಗಳನ್ನೂ ಚೀಲಗಳನ್ನೂ ನೇಯುವುದರಲ್ಲೂ ತರಪೇತು ಮಾಡಿದೆ. ಕಲ್ಕತ್ತಾ ಬೊಂಬಾಯಿಗಳಲ್ಲಿರತಕ್ಕ ಮೂಕಾಂಧರ ಪಾಠಶಾಲೆಗಳಲ್ಲಿ ಸುಶಿಕ್ಷಿತರಾದ ಮ॥ ಟಿ ವೆಂಕಟರಾವ್, ಬಿ ಎ ಯವರು ಮೂಕರಿಗೆ ಉಚ್ಚಾರಣೆಯ ಮೂಲಕ ವಿದ್ಯೆಯನ್ನು ಕಲಿಸುವುದರಲ್ಲಿ ಶ್ಲಾಘನೀಯವಾದ ಶಕ್ತಿಯನ್ನು ತೋರಿಸುತ್ತಿದ್ದಾರೆ. ಈ ವಿಧವಾದ ಶಿಕ್ಷಾಕ್ರಮವು ಅತ್ಯುತ್ತಮವಾದುದೆಂದು ವಿದ್ವಾಂಸರು ಒಪ್ಪಿರುತ್ತಾರೆ. ಮೂಕಾಂಧರಿಗೆ ಉಪಾಧ್ಯಾಯರನ್ನಾಗಿ ನೇಮಿಸುವುದಕ್ಕೋಸ್ಕರ ಇವರನ್ನು ನಮ್ಮ ಶ್ರೀಮನ್ಮಹಾರಾಜರವರು ಖರ್ಚು ಕೊಟ್ಟು ಆ ಪಟ್ಟಣಕ್ಕೆ ಕಳುಹಿಸಿದ್ದರು. ಇವರು ಬಂದ ಕೂಡಲೆ ಈ ಪಾಠಶಾಲೆಗೆ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಿ, ದೇಶಕ್ಕೆ ಶಾಶ್ವತವಾದ ಉಪಕಾರವನ್ನು ಮಾಡಿರುತ್ತಾರೆ. ಬ್ರೈಲಿನಲ್ಲಿ ಅಚ್ಚು ಹಾಕಿದ ಪುಸ್ತಕಗಳನ್ನು ಓದುವುದಕ್ಕೂ ಬರೆಯುವುದಕ್ಕೂ ಗಣಿತಮಾಡುವುದಕ್ಕೂ ೧೨ ಮಂದಿ ಕುರುಡು ವಿದ್ಯಾರ್ಥಿಗಳು ಸಮರ್ಥರಾಗಿದ್ದಾರೆ. ಕೆಲವರ ಧ್ವನಿಯು ಬಹು ಮನೋಹರವಾಗಿದೆ. ಇವರು ರಾಮಾಯಣ ಮಹಾಭಾರತ ಮುಂತಾದ ಗ್ರಂಥಗಳನ್ನು ಚನ್ನಾಗಿ ಓದುತ್ತಾರೆ. ಕೆಮಿಸ್ಟ್ರಿ ಅಥವ ರಸಾಯನ ಶಾಸ್ತ್ರವನ್ನೂ ಅಭ್ಯಾಸ ಮಾಡುತ್ತಿದ್ದಾರೆ. ಇವುಗಳಲ್ಲದೆ ಸಂಗೀತ, ಪಿಟೀಲು, ತಬಲ, ಈ ಮೂರರಲ್ಲಿಯೂ ಸುಶಿಕ್ಷಿತರಾಗಿರುತ್ತಾರೆ. ಇವರಿಂದ ಮಾಡಲ್ಪಟ್ಟ ಜಂಖಾನೆಗಳು, ರಗ್ಗುಗಳು ಬಹು ಜಾಗ್ರತೆಯಾಗಿ ಖರ್ಚಾಗುತ್ತಿವೆ.

ಈ ಪಾಠಶಾಲಾಭಿವೃದ್ಧಿಯ ವಿಷಯದಲ್ಲಿ ಅತ್ಯಂತಾಸಕ್ತಿಯುಳ್ಳ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರಾದ, ಮ॥ ಭಾಭಾ ಸಾಹೇಬರವರು ಕಳೆದ ಜೂನ್ ತಿಂಗಳಲ್ಲಿ ಇನ್ಸ್ಪೆಕ್ಷನ್ ಮಾಡಿ, ಈ ಪಾಠಶಾಲೆಯಲ್ಲಿ ಮೊದಲಿಂದಲೂ ಬಹು ಕಷ್ಟಪಟ್ಟು ಕೆಲಸ ಮಾಡಿದ ಕುರುಡರ ತರಗತಿಗೆ ಉಪಾಧ್ಯಾಯರಾದ ಎಸ್. ಶಂಕರನಾರಾಯಣಪ್ಪನವರ ಕೆಲಸವನ್ನು ನೋಡಿ ಸಂತೋಷಪಟ್ಟು, ಕೂಡಲೇ ಬಡ್ತಿಯನ್ನು ಕೊಡಿಸಿರುತ್ತಾರೆ. ಈ ಪಾಠಶಾಲೆಯ ವಿದ್ಯಾರ್ಥಿಗಳಿಗಾಗಿ ಒಂದು ಭೋಜನ ಶಾಲೆಯು ಸ್ಥಾಪಿತವಾಗಿದೆ. ಇದರಲ್ಲಿ ೧೨ ಮಂದಿ ವಿದ್ಯಾರ್ಥಿಗಳು ಊಟಮಾಡಿಕೊಂಡಿರುತ್ತಾರೆ. ಈ ವಿದ್ಯಾರ್ಥಿಗಳ ಆರೋಗ್ಯವನ್ನು ಡಾಕ್ಟರ್ ಟಿ ಎಸ್. ಅಚ್ಯುತರಾಯರವರು ಪೂರ್ಣಾಭಿಮಾನದಿಂದ ನೋಡಿಕೊಳ್ಳುವರು. ಮ॥ ಅಂಬಳೆ ಅಣ್ಣಯ್ಯ ಪಂಡಿತರವರು ಆಗಾಗ್ಗೆ ಸ್ಕೂಲಿಗೆ ಹೋಗಿ ಎಲ್ಲಾ ಸಂಗತಿಗಳನ್ನು ತನಿಖೆಮಾಡುತ್ತಿದ್ದಾರೆ. ಈ ಕಾರಣಗಳಿಂದ ಅನೇಕ ಮಂದಿ ಮೂಕಾಂಧರು ಸ್ಕೂಲಿಗೆ ದಾಖಲಾಗಬೇಕೆಂಬ ಉದ್ದೇಶದಿಂದ ಬರುತ್ತಿರುವರು. ಆದರೆ ಸ್ಥಳವೂ ಹಣವೂ ಸಂಕೋಚವಾಗಿರುವುದರಿಂದ ಮ್ಯಾನೇಜಿಂಗ್ ಕಮಿಟಿಯವರಿಗೆ ಅವರನ್ನು ಸೇರಿಸಿಕೊಳ್ಳಲು ಸಾಧ್ಯವಿಲ್ಲದೆ ಇದೆ. ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ॥ ಎಚ್ ಎಚ್ ಸ್ಪಾರ್ಕ್ಸ್ ಸಾಹೇಬರವರು ಕಳೆದ ಏಪ್ರಿಲ್ ತಿಂಗಳಲ್ಲಿ ಈ ಪಾಠಶಾಲೆಯನ್ನು ನೋಡಿ ಬಹಳ ಆನಂದಗೊಂಡು, ಈ ಸಂಸ್ಥಾನದಲ್ಲಿರತಕ್ಕ ಡಿಸ್ಟ್ರಿಕ್ಟ್ ಫಂಡ್ ಮತ್ತು ಮ್ಯುನಿಸಿಪಲ್ ಬೋರ್ಡುಗಳಿಂದ ಸಹಾಯವನ್ನು ಮಾಡಿಸಿ, ಈ ಪಾಠಶಾಲೆಯನ್ನು ಸ್ಥಿರಪಡಿಸಲು ಹೆಚ್ಚು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ದಯಾಳುಗಳೂ ತಿಳುವಳಿಕೆಯುಳ್ಳವರೂ ಶ್ರೇಷ್ಠರೂ ದೊಡ್ಡ ಅಧಿಕಾರಿಗಳೂ ಆಗಿರುವ ಇವರ ಪ್ರಯತ್ನವು ಸಫಲವಾಗುವುದೆಂದು ನಂಬುತ್ತೇವೆ.

ನಮ್ಮ ದಿವಾನ್ ಸಾಹೇಬರವರಾದ ಸರ್ ಪಿ ಎನ್. ಕೃಷ್ಣಮೂರ್ತಿಗಳವರು ಸ್ವಭಾವವಾಗಿ ಕರುಣಾಶಾಲಿಗಳು. ಇವರು ಪಾಠಶಾಲೆಗೆ ದಯಮಾಡಿಸಿ, ಅಲ್ಲಿ ನಡೆಯತಕ್ಕ ಕೆಲಸಗಳೆಲ್ಲವನ್ನೂ ಪರಾಂಬರಿಸಿ ಹೀನರ ವಿಷಯದಲ್ಲಿ ತಮಗಿರುವ ದಯೆಯನ್ನು ತೋರ್ಪಡಿಸಿರುತ್ತಾರೆ. ಇದರಿಂದ ತಮ್ಮ ಗಂಭೀರವಾದ ಔದಾರ್ಯವನ್ನು ಈ ಪಾಠಶಾಲೆಗೆ ತೋರಿಸುವರೆಂದು ನಂಬುತ್ತೇವೆ.

ಈ ಪಾಠಶಾಲೆಗೆ ಮೂರು ಜನ ಪೇಟ್ರನ್ಗಳಾಗಿ ಇದ್ದುಕೊಂಡು ಮಾಹೆಯಾನಾ ೪—೯ ರೂಪಾಯಿ ಸಹಾಯ ಮಾಡುತ್ತಿರುವ ಮಹನೀಯರುಗಳು—ರಾಜಮಂತ್ರಪ್ರವೀಣರಾದ ಮ॥ ಸಿ. ಶ್ರೀನಿವಾಸೈಯ್ಯಂಗಾರ್ರವರು, ಮ॥ ಜಸ್ಟಿಸ್ ಪಿ ರಂಗಸ್ವಾಮಯ್ಯಂಗಾರ್ರವರು, ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ ಮ॥ ಯಂ. ರಾಮಸ್ವಾಮಯ್ಯನವರು. ಇವರಲ್ಲದೆ ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಗಳಾದ ಮ॥ ಇ ಮೆಕಾನಕಿ ಸಾಹೇಬರವರು, ಮ॥ ಜಸ್ಟಿಸ್ ಎಚ್. ವಿ. ನಂಜುಂಡೈಯನವರು ಸ ತಿಂಗಳಿಗೆ ೫ ರೂಪಾಯಿನಂತೆ ಚಂದಾ ಕೊಡುತ್ತಿದ್ದಾರೆ. ಇನ್ನೂ ಅನೇಕ ಮಂದಿ ದೊಡ್ಡ ಮನುಷ್ಯರು ಪ್ರತಿ ಮಾಹೆಯಲ್ಲೂ ೨ ರೂಪಾಯಿ ಮೊದಲ್ಗೊಂಡು ೪ ಆಣೆಗಳ ವರೆಗೂ ಚಂದಾ ಕೊಡುವರು. ಆದರೆ ಈ ಚಂದಾ ಮೂಲಕ ಬರತಕ್ಕ ದ್ರವ್ಯವು ನಿಜ ಕವಾದುದೆಂದು ನಂಬುವಹಾಗಿಲ್ಲ.

ಈ ಪಾಠಶಾಲೆಯ ರೂಲ್ಸುಗಳಿಗನುಸಾರವಾಗಿ ೫೦೦ ಅಥವ ಹೆಚ್ಚಾದ ಡೊನೇಷನ್ ಕೊಡತಕ್ಕ ಮತ್ತು ತಿಂಗಳಿಗೆ ೩ ರೂಪಾಯಿಗೆ ಕಡಿಮೆಯಿಲ್ಲದೆ ಚಂದಾ ಕೊಡತಕ್ಕ ದೊಡ್ಡ ಮನುಷ್ಯರು ಈ ಪಾಠಶಾಲೆಯ ಪೇಟ್ರನ್ (ಪೋಷಕರು)ಗಳೆಂದು ಕರೆಯಲ್ಪಡುವರು. ಇಂಥಾ ಪೇಟ್ರನ್ಗಳ ಕಡೆಯ ಒಬ್ಬ ವಿದ್ಯಾರ್ಥಿಯನ್ನು ಈ ಸ್ಕೂಲಿನಲ್ಲಿ ಇಟ್ಟುಕೊಂಡು ಪೋಷಣೆಮಾಡಿ, ವಿದ್ಯೆ ಕಲಿಸಲು ಮ್ಯಾನೇಜಿಂಗ್ ಕಮಿಟಿಯವರು ಒಪ್ಪಿರುತ್ತಾರೆ. ಆದ್ದರಿಂದ ಧರ್ಮಿಷ್ಠರಾದವರು ಈ ಪಾಠಶಾಲೆಗೆ ಪೇಟ್ರನ್ಗಳಾಗುವರೆಂದು ಕೋರುತ್ತೇವೆ.

ಕಳೆದ ಜನೇಷುಮಾರಿ ಲೆಕ್ಕಗಳಿಂದ ಮೈಸೂರು ಸಂಸ್ಥಾನದೊಳಗೆ ೪,೦೦೦ ಮಂದಿ ಕುರುಡರೂ ೩,೦೪೦ ಮಂದಿ ಮೂಕರೂ ಇರುವರೆಂದು ಗೊತ್ತಾಗಿದೆ. ಶೇಕಡಾ ೧೦ ರಂತೆ ತೆಗೆದುಕೊಂಡರೂ ವಿದ್ಯಾರ್ಥಿಗಳಾಗತಕ್ಕವರ ಸಂಖ್ಯೆಯು ೧,೦೫೦ ಆಗುವುದು. ಇಂಥಾ ಬಡವರೂ ಅಂಗಹೀನರೂ ಆದವರಿಗೆ ತಕ್ಕ ಪಾಠಶಾಲೆಯು ಇಲ್ಲದ ಪಕ್ಷದಲ್ಲಿ ಈ ಜನರು ತಮ್ಮ ಜೀವಮಾನವನ್ನು ಅತ್ಯಂತ ದುಃಖದಿಂದಲೂ ಭಿಕ್ಷಾವೃತ್ತಿಯಿಂದಲೂ ಕಳೆಯಬೇಕಾಗುವುದು.

ಈ ಪಾಠಶಾಲೆಗೆ ಅತ್ಯವಶ್ಯವಾಗಿ ಬೇಕಾಗಿರತಕ್ಕವುಗಳ್ಯಾವವೆಂದರೆ—(೧) ಸುತ್ತಲೂ ಮೈದಾನವುಳ್ಳ ವಿಶಾಲವಾದ ಒಂದು ಕಟ್ಟಡ, (೨) ಚಿತ್ರ, ಮರ, ದಂತ, ಬೆತ್ತದ ಕೆಲಸಗಳನ್ನು ಹೇಳಿಕೊಡತಕ್ಕ ಮೇಸ್ತ್ರಿಗಳು, (೩) ಹೊರಗಿನಿಂದ ಬರತಕ್ಕ ಮೂಕಾಂಧರಿಗೆ ಅನ್ನ ಹಾಕುವುದಕ್ಕೂ ಇಲ್ಲಿನ ಭೋಜನಶಾಲೆಯಲ್ಲಿ ಊಟಮಾಡುವ ಇತರಕ್ಕೆ ಶಿವಭಕ್ತರು ಮುಂತಾದ ಮಾತ್ಸರಿಗೆ ವೇತನಕೊಡುವುದಕ್ಕೂ ತಿಂಗಳು ಒಂದಕ್ಕೆ ನೂರೈವತ್ತು ರೂಪಾಯಿಗಳು.

ಇದಕ್ಕೆ ತಕ್ಕ ಸಹಾಯ ಉಂಟಾಗುವುದಾದರೆ ಈ ಪಾಠಶಾಲೆಯು ಮೈಸೂರು ಸರ್ಕಾರಕ್ಕೆ ವಿಶೇಷ ಯಶಸ್ಸನ್ನೂ ದಕ್ಷಿಣ ಹಿಂದುಸ್ಥಾನಕ್ಕೆ ಕೀರ್ತಿಯನ್ನೂ ತಾರದೆ ಬಿಡದು ಎಂಬುದಾಗಿ ಮೈಸೂರು ಮಹಾರಾಜರವರ ಕಾಲೇಜ್ ಚರಿತ್ರೆಬೋಧಕರಾದ ಎಜುಕೇಷನ್ ರಿವ್ಯೂಗೆ ಎಡಿಟರಾಗಿದ್ದ ಮ॥ ಟಿ ಡೆನ್ಹ್ಯಾಮ್ ಸಾಹೇಬರವರು ಈ ಸ್ಕೂಲನ್ನು ನೋಡಿದಾಗ ವಿಜಿಟರ್ಸ್ ಬುಕ್ಕಿನಲ್ಲಿ ಬರೆದಿರುತ್ತಾರೆ. ಆದ್ದರಿಂದ ಈ ದೇಶದಲ್ಲಿಯೂ ಇತರ ಪ್ರಾಂತ್ಯಗಳಲ್ಲಿಯೂ ಇರತಕ್ಕ ಮಹನೀಯರು ಈ ಪಾಠಶಾಲಾಭಿವೃದ್ಧಿಗಾಗಿ ತಕ್ಕ ಸಹಾಯವನ್ನು ಜಾಗ್ರತೆಯಿಂದ ಮಾಡುವರೆಂದು ನಿರೀಕ್ಷಿಸುತ್ತಿರುವೆವು.

ನಿಮ್ಮ ಜೀವಮಾನದ ಉದ್ದೇಶ್ಯವೇನು?

ನಮ್ಮ ಜೀವಮಾನದಲ್ಲಿ ಸಾರ್ಥಕವನ್ನು ಪಡೆಯಬೇಕಾದರೆ ನಮ್ಮ ಜೀವಮಾನದ ಉದ್ದೇಶವೇನೆಂದು ಮೊದಲು ತಿಳಿಯಬೇಕಷ್ಟೆ. ಇಲ್ಲದಿದ್ದರೆ ನಮ್ಮ ಅಮೂಲ್ಯವಾದ ನಮ್ಮ ಜೀವಮಾನವೆಲ್ಲವೂ ವ್ಯರ್ಥವಾಗಿ ಕಳೆದುಹೋಗಿ ಬಿಡುವದು. ಎಂದೆಂದಿಗೂ ಕೂಸಾಗಿಯೇ ಇರುವದು ಹಿತವಾಗಿದ್ದೀತೇ? ಎಷ್ಟುಮಾತ್ರಕ್ಕೂ ಇಲ್ಲ. ಈ ಹೊತ್ತು ಕೂಸಾಗಿರುವವನು ನಾಳೆ ಹುಡುಗನಾಗಿ ನಾಳಿದ್ದು ಯೌವನಸ್ಥನಾಗಿ ಗೃಹಸ್ಥನಾಗಿ ಬಾಳಬೇಕೆಂದು ಸಕಲರೂ ಅಪೇಕ್ಷಿಸುವದಿಲ್ಲವೇ? ಚಿಕ್ಕಮಕ್ಕಳು ಆಯಾ ನಿಮಿಷಕ್ಕೆ ತೋರುವ ಯಾವ ಸಂತೋಷಕರವಾದ ವಿಷಯವು ಅವಶ್ಯವೋ ಅದನ್ನೇ ಅಪೇಕ್ಷಿಸಿ ತಮ್ಮ ಕಾಲವನ್ನು ಕಳೆಯುವವು. ಹೀಗೆ ನಡೆಯುವದರಿಂದ ಆ ಮಕ್ಕಳ ಮೇಲೆ ಯಾರಾದರೂ ತಪ್ಪುಹೊರಿಸುವರುಂಟೇ? ತಮ್ಮ ವಯಸ್ಸಿಗೂ ಸ್ಥಿತಿಗೂ ಉಚಿತವಾಗಿ ತೋರುವದನ್ನೇ ಅವು ಮಾಡುತ್ತವೆ. ಆದರೆ ಆ ಮಕ್ಕಳು ಬಾಲ್ಯವಯಸ್ಸನ್ನು ಕಳೆದು ಪ್ರಾಯಸಮರ್ಥರಾಗುತ್ತ ಬರುವಾಗ್ಯೆ ಮಕ್ಕಳಾಟವನ್ನು ಬಿಟ್ಟು "ಜೀವಮಾನವೆಂದರೇನು? ಈ ಜೀವಿತದಲ್ಲಿ ನಾವು ನೆರವೇರಿಸತಕ್ಕ ಮುಖ್ಯ ಕಾರ್ಯವು ಯಾವದು?" ಎಂದು ಘನ ಗಂಭೀರವಾದ ಯೋಚನೆಯನ್ನು ಮಾಡುವದು ಹಿತವಾಗಿರಲಿಲ್ಲವೇ? ಕೆಲವು ಜನರಾದರೋ ಆಟಪಾಟಗಳಲ್ಲಿ ವಿನೋದವಾಗಿ ಕಾಲಕಳೆಯುವದನ್ನು ಮಾಡುವ ಎಳೇ ಮಕ್ಕಳಂತೆಯೇ ಕೇವಲ ಅಲಕ್ಷ್ಯವಾಗಿ ತಮ್ಮ ಜೀವಿತವನ್ನು ಕಳೆದುಬಿಡುವವರಾಗಿದ್ದರೆ ಇಂಥವರು ಕಾಲವು ಮಿತಿ ಮೀರಿ ಹೋಗುವದಕ್ಕಿಂತ ಮುಂಚಿತವಾಗಿಯೇ ಸಾವಧಾನವಾಗಿ ಕುಳಿತು ನಾವು ಮೇಲೆ ಹೇಳಿರುವ ಪ್ರಶ್ನೆಯನ್ನು ತಮ್ಮ ಮನಸ್ಸಿಗೆ ಹಾಕಿಕೊಂಡು ಸತ್ಯೋತ್ತರವನ್ನು ಕಂಡುಕೊಳ್ಳುವದು ಅವಶ್ಯವಾಗಿದೆ.

ಮನುಷ್ಯರೆಲ್ಲರೂ ಅಪೇಕ್ಷಿಸುವಂಥಾದ್ದೇನು? ಏನೆಂದರೆ ನಾವು ಸುಖವನ್ನು ಪಡೆಯಬೇಕೆಂಬುದೇ. ಈ ಉದ್ದೇಶವೇನೋ ಸರಿಯೇ. ಆದರೆ ಅದನ್ನು ಹೊಂದಿಕೊಳ್ಳತಕ್ಕ ಮಾರ್ಗವು ಮಾತ್ರ ತಪ್ಪಿರಬಹುದು. ಅಥವಾ ಆ ಸುಖವು ಇಂಥಾದ್ದೆಂಬ ವಿಷಯದಲ್ಲಿಯೂ ತಪ್ಪು ಅಭಿಪ್ರಾಯವಿರಬಹುದು. ದೃಷ್ಟಾಂತವಾಗಿ ಒಬ್ಬ ಮನುಷ್ಯನು [illegible] ತನಗೆ ಯಾರ ಸಹಾಯ ಮನುಷ್ಯನು [illegible] ಕೆಲಸವನ್ನು ಮಾಡುವೆನೆಂದು ಹೇಳುತ್ತಿದ್ದಾನೆಂದುಕೊಳ್ಳಿ. ಅವನು ಆ ಕೆಲಸವನ್ನು [illegible] ತನ್ನ ಮನಸ್ಸಿಗೆ ಹಿತವಾಗಿ ತೋರುವ ಮಾರ್ಗದಲ್ಲಿ ಅಲ್ಲ ನಾನು ನಡೆಸುವೆನೆಂದು ಹೇಳಿಕೊಳ್ಳುತ್ತಾನೆ. ಅವನು ಈ ತರದ ಜೀವಿತದಲ್ಲಿ ಅವಶ್ಯವಾಗಿರುವದು ಯಾತಕ್ಕೆಂದು ವಿಚಾರಿಸಿದರೆ ಇದರಲ್ಲಿ ತನಗೆ ಸುಖವೆಂದು ತಿಳಿಯುವದರಿಂದಲೇ ಹೀಗೆ ಮಾಡುತ್ತಾನೆಂಬುದು ನಮಗೆ ಗೊತ್ತಾಗುತ್ತದೆ. ಆದರೆ ತನಗೆ ಯಾವದು ಸುಖವೆಂದು ಗೊತ್ತಾಗುತ್ತದೆಯೋ ಅದನ್ನು ಹೊಂದುವದಕ್ಕೆ ತನಗಿರುವ ಅಭ್ಯಂತರಗಳನ್ನೆಲ್ಲಾ ಬೇರೆ ಮಾರ್ಗವಿಲ್ಲದವನಂತೆ ಪ್ರಯತ್ನಿಸುತ್ತಾನಷ್ಟೆ. ಈ ವಿಷಯದಲ್ಲಿ ಘೋರದುಷ್ಕರ್ಮಿಯಾಗಿ ಜೀವಿಸುತ್ತಿರುವ ಮನುಷ್ಯನಿಗೂ ಪರಮ ಭಕ್ತನಾಗಿರುವ ಮನುಷ್ಯನಿಗೂ ವ್ಯತ್ಯಾಸವೇನೂ ಇರುವದಿಲ್ಲ.

ಹಾಗಾದರೆ ಸಾಧನೆ ಬೇರೆ ಅಭ್ಯಾಸ ಬೇರೆ [illegible] ಸಾಧಾರಣವಾದುದೊಂದು ತಪ್ಪೆಂದು [illegible] ವನ್ನು ಪಡೆಯಬೇಕೆಂದು ಎಲ್ಲರೂ ಉದ್ದೇಶಿಸಲು ಅವರಲ್ಲಿ ಕೆಲವು ದುರ್ಮಾರ್ಗದ ಮಾರ್ಗಾಂತರ ಅದನ್ನು ಸಂಪಾದಿಸಲುದ್ಯೋಗಿಸಿದರೆ ಅವರ ಬುದ್ಧಿವಿಕಲ್ಪದ ಗತಿಯು ಹೀಗಾಯಿತೆಂದೂ ಅಂಥವರನ್ನು ದಂಡಿಸುವುದಕ್ಕಿಂತಲೂ ಕನಿಕರಿಸುವದು ನ್ಯಾಯವಾಗಿದೆ ಎಂದೂ ಯಾರಾದರೂ ವಾದಿಸಬಹುದು. ಆದರೆ ಇಲ್ಲಿ ನಿಜವಾದ ಸಂಗತಿಯೇನೆಂದರೆ ಸತ್ಯವಾದ ಸುಖವು ಬುದ್ಧಿಗಭಿಮುಖವಾಗಿ ಆಲೋಚಿಸುವದರಿಂದಲೇ ಸಂಪೂರ್ಣತೆಯನ್ನು ಹೊಂದಲಾಗುವದಿಲ್ಲ. ಒಳ್ಳೇ ನಡತೆಯುಂಟಾಗಬೇಕಾದರೆ ಮನುಷ್ಯನೊಳಗಿರುವ ಬುದ್ಧಿಯೊಂದರಿಂದಲೇ ಅಲ್ಲ, ಅದಕ್ಕಿಂತ ಹೆಚ್ಚಾದ ಮನಸ್ಸಾಕ್ಷಿಯೂ ಅದರೊಂದಿಗೆ ಅವನ ಗುಣಸ್ವಭಾವವಾದ ಹೃದಯವೂ ಇವೆಲ್ಲಕ್ಕಿಂತ ಮೇಲಾದ ಚಿತ್ತವೂ ಒಟ್ಟಾಗಿ ಸೇರಿ ಒಳ್ಳೇ ನಡತೆಗೆ ಕಾರಣವಾಗಬೇಕು. ಬುದ್ಧಿಯು ಎಷ್ಟು ವಿಪರೀತವಾಗಿದ್ದರೂ ಆ ತಪ್ಪುಗಳನ್ನು ತಿದ್ದುವದಕ್ಕೆ ಮನಸ್ಸಾಕ್ಷಿಯು ಯಾವದು ಕರ್ತವ್ಯವೋ ಅದನ್ನು ಮಾಡಬೇಕೆಂದು ನಿರ್ಧರಿಸತಕ್ಕ ಚಿತ್ತವು ಮನುಷ್ಯನಿಗೆ ಸಹಾಯವಾಗಿ ಇದ್ದೇ ಇವೆ.

ನಾವು ಈ ಜೀವಿತದಲ್ಲಿ ಸುಖವನ್ನು ಪಡೆಯಬೇಕೆಂದೇ ಭಗವಂತನು ನಮ್ಮನ್ನು ಸೃಷ್ಟಿಸಿದ್ದಾನೆ. ಆದಕಾರಣ ಆ ಸುಖವನ್ನು ಪಡೆಯತಕ್ಕ ಸರಿಯಾದ ಮಾರ್ಗವ್ಯಾವದು? ಸುಖಕ್ಕೆ ಮುಖ್ಯವಾದ ತತ್ವಗಳೆಂದು ತೋರಿಸಲ್ಪಟ್ಟ ಸುಳ್ಳು ದಾರಿ ಯಾವದು ಎಂಬುದನ್ನು ಕಂಡುಹಿಡಿಯುವಂತೆ ಭಗವಂತನು ಕೊಟ್ಟಿದ್ದಾನೆ. ಪ್ರತಿಯೊಬ್ಬ ಮನುಷ್ಯನಿಗೂ ಕೊರತೆಯು ಸ್ವಭಾವವಾಗಿ ಇದೆ. ಆ ಕೊರತೆಗಳು ತೃಪ್ತಿಯಾದರೆ ಒಂದು ವಿಧವಾದ ಸಂತೋಷವುಂಟಾಗುತ್ತದೆಯಷ್ಟೆ. ಈ ಕೊರತೆಗಳನ್ನು ವಿಮರ್ಶೆ ಮಾಡಿ ನೋಡಿದರೆ ಒಂದಕ್ಕೊಂದು ಗುಣದಲ್ಲಿ ಮೇಲ್ಪಟ್ಟವುಗಳೆಂದು ಕಂಡುಬರುವವು. ಮೇಲಕ್ಕೆ ಹೋಗುತ್ತ ಹೋಗುತ್ತ ಆ ಕೊರತೆಗಳ ಸಂತೃಪ್ತಿಯು ಸ್ಥಿರವಾದವುಗಳಾಗಿಯೂ ಇರುತ್ತವೆಂದು ಕಾಣಬರುತ್ತದೆ. ದೃಷ್ಟಾಂತವಾಗಿ ಹಸಿವೆಂಬ ದೇಹಸಂಬಂಧವಾದ ಕೊರತೆಯು ಬುದ್ಧಿಗೆ ಸಂಬಂಧಪಟ್ಟ ಕೊರತೆಗಿಂತ ಕೀಳಾದುದೆಂದೂ ದೇಹಸಂಬಂಧವಾದ ಕೊರತೆಯ ಪರಿಹಾರವು ಕೆಲವು ಗಂಟೆಗಳು ಇಲ್ಲವೆ ಕೆಲವು ದಿವಸಗಳ ವರೆಗೂ ಇದ್ದು ಪುನಃ ಕೊರತೆಯು ಎಂದಿನಂತೆ ಉಂಟಾಗುತ್ತದೆಯೆಂದೂ ಬುದ್ಧಿಗೆ ಸಂಬಂಧಪಟ್ಟ ಕೊರತೆಯ ಪರಿಹಾರವು ಅನೇಕ ವರ್ಷಗಳವರೆಗೆ ಸ್ಥಿರವಾಗಿರುತ್ತದೆಂದೂ ಗೊತ್ತಾಗುತ್ತದೆ. ಹೀಗೆ ಆಲೋಚಿಸುತ್ತಾ ಮುಂದು ಮುಂದಕ್ಕೆ ಹೋದಲ್ಲಿ ಬುದ್ಧಿಗೆ ಸಂಬಂಧಪಟ್ಟ ಕೊರತೆಯ ಪರಿಹಾರದಿಂದ ಉಂಟಾಗುವ ಸಂತೋಷಕ್ಕಿಂತಲೂ ಪರಿಶುದ್ಧವಾದ ಪ್ರೀತಿಯ ದೆಸೆಯಿಂದ ಹುಟ್ಟುವ ಸಂತೋಷವೇ ಸರ್ವೋತ್ಕೃಷ್ಟವಾದದ್ದೆಂದು ಸುಲಭವಾಗಿ ಗ್ರಹಿಸಬಹುದು. ಏಕಾಂತವಾಗಿ ಜೀವಿಸುವ ಮನುಷ್ಯನು ಎಂದಿಗೂ ಸಂತೋಷಪಡಲಾರನು. ಅವನು ಸರ್ವದಾ ತನ್ನ ಪ್ರೀತಿಗೆ ವಿಷಯವಾದ ಯಾವದೋ ಒಂದು ಪದಾರ್ಥದಲ್ಲಿ ಆಸಕ್ತನಾಗಿರತಕ್ಕವನಾಗಿ ನಿರ್ಮಿಸಲ್ಪಟ್ಟಿದ್ದಾನೆ. ಆದದರಿಂದ ತನ್ನ ಪ್ರೀತಿಗೆ ಸಕಲ ಭಾಗಗಳಲ್ಲಿಯೂ ಒಪ್ಪುವ ಪ್ರೀತಿಯುಳ್ಳ ವಸ್ತುವನ್ನು ಪಡೆಯುವವನಾದರೆ ಅವನಿಗೆ ಸಂಪೂರ್ಣವಾದ ಸುಖವು ದೊರಕಿತೆಂದು ಹೇಳಬಹುದು.

ಆಶೆಯಿಂದ ಮನುಷ್ಯನಿಗೆ ಎಷ್ಟುಮಾತ್ರವೂ ಸುಖವಿಲ್ಲವೆಂದೂ ಆಶೆಯನ್ನು ಸಂಪೂರ್ಣವಾಗಿ ಅಡಗಿಸಿಬಿಟ್ಟು ಸ್ವಪ್ನ ರಹಿತವಾದ ನಿದ್ರೆಯನ್ನು ಹೊಂದಿದವನಂತೆ ಜೀವಿಸುವದೇ ಸುಖವೆಂದೂ ಅನೇಕರು ವಾದಿಸುವದುಂಟು. ಆದರೆ ಮನುಷ್ಯನು ಒಂದು ಸಸಿಯ ಹಾಗೆ ಜಡವಸ್ತುವಾಗಿರುವದಕ್ಕಿಂತ ಹುಟ್ಟದೆ ಇದ್ದರೆ ವಾಸಿಯಲ್ಲವೇ? ಕ್ರೈಸ್ತ ಮತತತ್ವವನ್ನು ಪರೀಕ್ಷಿಸಿ ನೋಡಿದರೆ ಮನುಷ್ಯನಲ್ಲಿ ದೇವರನ್ನು ಪಡೆಯಬೇಕೆಂಬ ಆಶೆ ಬಹಳವಾಗಿದೆಯೆಂಬುದು ಗೊತ್ತಾಗುತ್ತದೆ. ಆತನನ್ನು ತಿಳಿದು ಸೇವಿಸುವುದರಿಂದಲೇ ಆ ಆಶೆಯು ತೃಪ್ತಿಯನ್ನು ಹೊಂದುತ್ತದೆ. "ನನ್ನ ಪ್ರಾಣವು ದಾಹಗೊಳ್ಳುತ್ತಿದೆ, ಜೀವವುಳ್ಳ ದೇವರನ್ನು ಪಡೆಯಬೇಕೆಂದು ನನ್ನ ಪ್ರಾಣವು ಆಶಿಸುತ್ತದೆ" ಎಂದು ಒಬ್ಬ ಭಕ್ತನು ಹೇಳುತ್ತಾನೆ. ಅವನು ಹೇಳುವ ಈ ಮಾತು ಸಮಗ್ರ ಮನುಷ್ಯರಲ್ಲಿಯೂ ಬಾಧಕಕ್ಕೆ ಸಮಾನವಾದ ಕೊರತೆಯಾಗಿರಲಿ. ದೇವರಲ್ಲಿ ನಮಗೆ ಬೇಕಾದ ಅನ್ಯೋನ್ಯವನ್ನು ಪಡೆಯಬೇಕೆಂದು ನಾವು ಬಯಸುತ್ತೇವೆ. ಅದರಿಂದ ದೇವರನ್ನು ತಿಳಿಯುವದೇ ನಮ್ಮ ಜೀವಮಾನದ ಮುಖ್ಯೋದ್ದೇಶವಾಗಿದೆ. ದೇವರನ್ನು ತಿಳಿಯಬೇಕಾದರೆ ಆತನಲ್ಲಿರುವ ಗುಣವು ನಮ್ಮಲ್ಲಿಯೂ ಸ್ವಲ್ಪ ಮಟ್ಟಿಗಾದರೂ ಇರಬೇಕು. ನಾವು ಯಾರ ವಿಷಯವಾಗಿಯಾದರೂ ಮಾತಾಡುವಲ್ಲಿ—"ನಿನ್ನ ಸ್ನೇಹಿತರನ್ನು ಬಲ್ಲೆನು" ಎಂದು ಹೇಳಬೇಕಾದರೆ ಮೊದಲನೆಯದು ಮನಸ್ಸು ಮುಖ್ಯವಾದರೂ ನಡವಳಿಕೆಯು ಬೇರೆಯಾಗಿ ಪರಿಚಯವಾಗಿ ಬೇಕಾದರೆ ಅವರೊಡನೆ ಬಹುಕಾಲ ನಡೆದಾಡಿ ಬೇಕು. ಇದೇ ದೃಷ್ಟಾಂತವನ್ನು ದೇವರ ವಿಷಯದಲ್ಲಿಯೂ ನಾವು ಅನ್ವಯಿಸಿಕೊಳ್ಳತಕ್ಕದ್ದು. ನಮಗೆ ಗೋಚರವಾದ ಈ ಜೀವಿತವು ದೇವರ ವಿಷಯವಾಗಿ ಕಲಿಸತಕ್ಕ ಪಾಠಶಾಲೆಯಾಗಿದೆಯೆಂದು ತಿಳಿಯತಕ್ಕದ್ದು. ಆ ಪಾಠಶಾಲೆಯಲ್ಲಿ ಕಲಿಸುವವನು ದೇವರು ತೋರಿಸಿಕೊಟ್ಟಿರುವ ದಾರಿ ಯಾವದೆಂದರೆ—ನನ್ನ [illegible] ದಲ್ಲಿ ಸೇರಿಕೊಂಡಿರುವ ದೋಷವನ್ನು ತೊಲಗಿಸಿ ಶುದ್ಧಮಾಡಿಕೊಳ್ಳತಕ್ಕದ್ದು. ಇದು ಸುಲಭಸಾಧ್ಯವಾದ ಮಾರ್ಗವಲ್ಲ. ದೋಷವು ನಮ್ಮಲ್ಲಿ ಬಹಳ ಬೇರೂರಿದೆ. ಪಾಪವೆಂಬ ಭಯಂಕರವಾದ ವ್ಯಾಧಿಯು ಅಂಟಿಕೊಂಡಿದೆ. ಇದರ ದೆಸೆಯಿಂದ ನಾವು ದುರ್ಬಲರಾಗಿ ಮಂದರಾಗಿದ್ದೇವೆ. ಹಾಗಾದರೆ ದೇವರು ನಮಗೆ ಮಾರ್ಗವನ್ನು ತೋರಿಸಿದರೂ ಹೀಗೆ ಅಶಕ್ತರಾಗಿ ನಡೆಯುವದು ನ್ಯಾಯವೇ? ಎಂದು ಕೇಳಬಹುದು. ಈ ಪ್ರಶ್ನೆಗೆ ಉತ್ತರವು ಒಂದು ಕಡೆ ಇರಲಿ. ಮನುಷ್ಯನು ಪಾಪದ ದೆಸೆಯಿಂದ ಎಷ್ಟೇ ದುರ್ಬಲನಾಗಿ ಜೀವಿಸುವದಾದರೂ ದೇವರು ಇದ್ದಾರೆ ಅವನಿಗೆ ಸಹಾಯಮಾಡುತ್ತಾನೆಂದು ಕಡೆಯಲ್ಲಿ ಅವನನ್ನು ಸನ್ಮಾರ್ಗದಲ್ಲಿ ಜೀವಿಸಮಾಡಲು ಸಹಾಯವು ದೇವರಿಂದ ಬಳಿಯಿಂದ ಅನುಗ್ರಹಿತವಾಗಿ ಬರುತ್ತದೆ. ಮನಸ್ಸಿನಲ್ಲಿ ಸ್ವಭಾವವಾಗಿ ಬಂದಿರುವ ಪಾಪಸ್ಥಿತಿಯನ್ನು ತೆಗೆದುಹಾಕಿ ಅದಕ್ಕೆ ಬದಲಾಗಿ ಅವನಲ್ಲಿ ನೂತನವಾದಂಥ ಪವಿತ್ರ ಸ್ಥಿತಿಯನ್ನು ಹುಟ್ಟಿಸುವದಕ್ಕೆ ದೇವರು ಯೋಗ್ಯ ಮಾರ್ಗ [illegible] ಆ ಜೀವಿತದಲ್ಲಿ ಅದನ್ನಿರಿಸಿ, ತನ್ನ ಮನುಷ್ಯರೆಲ್ಲರಿಗೆ ಆ ಸಂಜೀವನವನ್ನು ದೊರಕಿಸಿ ಕೊಡುವದಾಗಿ ಹೇಳಿದ್ದಾನಲ್ಲ. ಆ ಸಂಜೀವನವೆಂಬ ದಿವ್ಯ ಮೂಲಿಕೆಯನ್ನು ನಮ್ಮಲ್ಲಿ ಪ್ರಯೋಗಿಸಿಕೊಂಡರೆ ಮೊದಲಿನ ಪಾಪವೆಂಬ ರೋಗ ಸ್ಥಿತಿಯನ್ನು ಅದು ಹೋಗಿಸಿ ಪಾಪದ ದುರ್ಬಲ್ಯವನ್ನು ಕ್ರಮಕ್ರಮವಾಗಿ ಅಡಗಿಸುತ್ತಾ ಬಂದು ಕಡೆಯಲ್ಲಿ ಅದು ನಿಶ್ಚಯವಾಗಿ ನಿರ್ಮೂಲವಾಗುವಂತೆ ಮಾಡುತ್ತದೆ. ಈ ಸಂಜೀವನವೆಂಬ ನೂತನ ಮನಸ್ಸತ್ವವು ಯೇಸು ಕ್ರಿಸ್ತನೆಂಬ ಮಹಾ ವ್ಯಕ್ತಿಯಲ್ಲಿಯೇ ದೊರಕುತ್ತದೆ. ಆತನು ತನ್ನನ್ನು ಹುಡುಕಿ ಬರುವವರೆಲ್ಲರಲ್ಲಿ ಪಾಪಪತ್ರ ಹೋಗಲಾಡಿಸಿ ದೇವರ ವಿಷಯವಾದ ತಿಳುವಳಿಕೆಯನ್ನೂ ಪ್ರೀತಿಯನ್ನೂ ಮನುಷ್ಯರಿಗೆ ಅನ್ಯಥಾ ದೊರೆಯುವಂತೆ ತನ್ನ ಪವಿತ್ರ ಸ್ಥಿತಿಯನ್ನೇ ಅವರೊಳಗೂ ಬರುವಂತೆ ಮಾಡುತ್ತಾನೆ. ಮನಸ್ಸಿಗೆ ಸ್ವಭಾವವಾಗಿರುವಂಥ ಸುಖದ ತೀವ್ರವಾದ ಅಂಥ ಮೇಲಾದ ಆಶೆಯನ್ನು ತೃಪ್ತಿಪಡಿಸುವಂತೆ ಆತನು ತನ್ನ ಬಳಿಯಲ್ಲಿರುವ ನಿತ್ಯಜೀವನವನ್ನು ಅನುಗ್ರಹಿಸುತ್ತಾನೆ. ಆ ನಿತ್ಯಜೀವವು ಯಾವದೆಂದರೆ—ನಿಜವಾದ ದೇವರನ್ನೂ ಆತನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನೂ ಅರಿಯುವದೇ.

ಆದಕಾರಣ ಜೀವಿತದ ಮುಖ್ಯೋದ್ದೇಶವು ನಿತ್ಯಜೀವವನ್ನು ಪಡೆಯುವದೇ ಆಗಿದೆ. ಅದನ್ನು ಪಡೆಯುವ ಮಾರ್ಗವು ಯೇಸುಕ್ರಿಸ್ತನೇ.

ಮೈಸೂರು ದೇಶದ ವೃತ್ತಾಂತಗಳು.

ಮೈಸೂರಿನ ಸಂತ್ರ್ಯಲೋಕನ ಸಭೆಯ ಮೇಲ್ವಿಚಾರಕರಾಗಿರುವ ಮಿ॥ ಜೆ. ಬಿ. "ಇಲಿಕೊಡುವವರನ್ನು ಈ ಸಲ ಕಾರ್ಪೊರೇಷನಲ್ಲಿ ನಡೆಯುವ ನ್ಯಾಶನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಯ ಪ್ರತಿನಿಧಿಯಾಗಿ ಚುನಾಯಿಸಬೇಕೆಂದಿರುತ್ತಾರೆ.

ಹಿಂದುಸ್ಥಾನದ ವೈಸ್‌ರಾಯರಾಗಿ ನೇಮಕವಾಗಿರುವ ಲಾರ್ಡ್ ಮಿಂಟೋ ಯವರು ಮುಂದಿನ ತಿಂಗಳ ಅಂತ್ಯಭಾಗದಲ್ಲಿ ಸೀಮೆಯಿಂದ ಪ್ರಯಾಣವಾಗಿ ಬರುವವರಾಗಿದ್ದಾರೆ.

****

ರಾಯಬ್ಯಾಗಿನ ಪಟ್ಟಣದಲ್ಲಿ ಕಳೆದ ವಾರ ಮಳೆ ಗುಡುಗು ಮಿಂಚು ಬಹಳ ಜೋರಾಗಿ ಪ್ರಾರಂಭವಾದವು. ಸಿಡಿಲು ಬಿದ್ದು [illegible] ಸತ್ತುಹೋದರು. [illegible] ಗಾಯಗೊಂಡರು. [illegible] ಪ್ರಾಣಬಿಟ್ಟವು.

****

ಪಾಟಿಯಾಲಾ ಸಂಸ್ಥಾನದ ಧಾರ್ ಮಹಾರಾಜ ಸರ್ [illegible] ಸಿಂಗ್‌ಜೀ ಸರ್ ಸಿಂಗ್‌ಜೀ, ಕೆ.ಸಿ.ಎಸ್.ಐ ಯವರು ಕಳೆದ ವಾರ ಕಾಲವಾದರೆಂದು ತಂತಿ ವರ್ತಮಾನ ಬಂದಿದೆ. ಇವರು ೧೯[illegible]ನೆ ಇಸವಿಯಲ್ಲಿ ಜನಿಸಿ, ೧೮೯೯ನೆ ನೊವೆಂಬರ್ ೨೯ರಲ್ಲಿ ಸಂಸ್ಥಾನದ ಆಳ್ವಿಕೆಯನ್ನು ಪ್ರಾರಂಭಿಸಿದರು.

****

ಮಧ್ಯ ಪ್ರಾಂತ್ಯಗಳಲ್ಲಿ ಗಣಿಗಳೊಳಗೆ ಕೆಲಸ ಮಾಡುತ್ತಿರುವ ಮಿ॥ ಬಾಲಿರಾಂ ಪಾಂಡುರಂಗ್ ಎಂಬಾತನು ಗಣಿಗಳ ವಿದ್ಯೆಯನ್ನು ಚನ್ನಾಗಿ ಕಲಿತು ಬರುವದಕ್ಕೆ ವಿಲಾಯತಿಗೆ ಪ್ರಯಾಣ ಮಾಡಿದನು. ಈತನಿಗೆ ಸರ್ಕಾರದವರು ತಿಂಗಳಿಗೆ ೧೦೦ ರೂಪಾಯಿ ವೇತನ ಕೊಡುವದಾಗಿ ಗೊತ್ತುಮಾಡಿದಾರೆ.

****

ನಾಗಪುರ ಪಟ್ಟಣದ ರಾತ್ರಿಶಾಲೆ ವಿದ್ಯಾರ್ಥಿಗಳು [illegible] ಗಳನ್ನು [illegible] ಸಬೇಕೆಂದು ಗವರ್ನಮೆಂಟಿನವರು ಕಾಂಟ್ರಾಕ್ಟರರಿಗೆ ಕಟ್ಟಪ್ಪಣೆ ಮಾಡಿದ್ದಾರೆ. ಈ ಕಂಪನಿಯವರು ಸೀಮೆಯಲ್ಲಿ [illegible] ಗಳ ಮೂಲಕ ತರಿಸಿ, ಯಂತ್ರ [illegible] ಗಳನ್ನು ತರುವದಕ್ಕೆ [illegible] ಸಿದ್ಧರಾಗಿದ್ದಾರೆ.

****

ಕಳೆದ ವಾರ [illegible] ೧೦೦ [illegible] ಪೇಟೆಗಳ [illegible] ಮನೆ, ಅಂಗಡಿ [illegible] ಸುಮಾರು [illegible] ಸೇರಿ [illegible] ೧೯,೦೦೦ ರೂಪಾಯಿ [illegible]

****

ಬಿಹಾರ ಅಧಿಕಾರಕ್ಕೆ ಸೇರಿದ ಅನೇಕ ಕಡೆಗಳಲ್ಲಿ ಬಂದ ಮಳೆ ಪ್ರವಾಹದ ದೆಸೆಯಿಂದ ಬೀದಿಗಳು ರೈಲ್ ಮಾರ್ಗಗಳು ದೊಡ್ಡ ಸೇತುವೆಗಳು ಎಲ್ಲಾ ಕೊಚ್ಚಿಹೋಗಿ ಸುಮಾರು [illegible] ನೀರು ನಿಂತಿರುವದು. ಕಳೆದ [illegible] ತಾರೀಖಿನಿಂದ [illegible] ನಿಲ್ಲಿಸಿದಾರೆ. ಅನೇಕ ಹಳ್ಳಿಗಳ ಅಂಗಡಿಗಳು ನಾಶ ಆಗಿ ಇವೆ.

****

ಹಿಂದುಸ್ಥಾನದ ಪುರೋಭಿವೃದ್ಧಿಗಾಗಿ ಏರ್ಪಡಿಸಿರುವ [illegible] ಎಂಬ ಸಂಘಕ್ಕೆ [illegible] ಸೇರಿಸಿಕೊಂಡು [illegible] ಎಂಬ ಮತ್ತ್ರೊಬ್ಬ ಮಿಸ್ ಎಲಿಜ ಬೆತ್ ಮ್ಯಾನಿಂಗ್ ಎಂಬ [illegible] ಕಳೆದವಾರ ವಿಲಾಯತಿಯಲ್ಲಿ ಕಾಲವಾದಳೆಂಬ ದುಃಖಕರವಾದ ತಂತೀವರ್ತಮಾನ ಬಂದಿರುತ್ತದೆ.

****

ರಂಗೂನ್ ಪಟ್ಟಣದಲ್ಲಿ ಮಾಂಗ್ ಬಾ ಫ್ಯೆ ಎಂಬ ದೊಡ್ಡ ಮನುಷ್ಯನು ತನ್ನ [illegible] ಗಳನ್ನು ಪತ್ತೆ ಮಾಡುವವರಿಗೆ ೩,೦೦೦ ರೂಪಾಯಿ ಇನಾಮು ಕೊಡುವದಾಗಿ ಪ್ರಕಟನ ಮಾಡಿದ್ದನು. ಈಗ [illegible] ಆ ಹುಡುಗಿ ಸಿಕ್ಕಿದ್ದರಿಂದ ಆ ಇನಾಮನ್ನು [illegible] ರೂಪಾಯಿಗೆ ಕೊಟ್ಟಿದ್ದಾನೆ. ಪೊಲೀಸಿನವರು ನಗರದಲ್ಲಿ [illegible] ವಿಚಾರಣೆ ಮಾಡುತ್ತಿದ್ದಾರೆ.

****

ನೀಲಗಿರಿ ಬೆಟ್ಟದ ಮೇಲೆ ಗವರ್ನರವರ ಬಂಗಲೆಯೊಳಗೆ [illegible] ಭತ್ತೇದಾರನಾದ [illegible] ನಾಲ್ಕುರಾತ್ರಿ [illegible] ರಾತ್ರಿ ಪಾಳಿಗೆ ನಿದ್ದೆ ಮಾಡುತ್ತ [illegible] ದೆಸೆಯಿಂದ ಇದ್ದರು. ಇವರು ರಾತ್ರಿ ಪಾಳಿ ಕೊಡಿಸಿ ಅವರಿಗೆ ಹೀಗೇ ಮಾಳಿಗೆಯಿಂದ ಅವರಿಗೆ ಈ ದೀರ್ಘನಿದ್ರೆ ಪ್ರಾಪ್ತವಾಯಿತೆಂದು ತಿಳಿದು ಬರುತ್ತದೆ.

****

ಮುಜಾಫರಪುರ ಜಿಲ್ಲಾಕಿನಲ್ಲಿ ಕಳೆದ ಬುಧವಾರದಂದು ಮೂರು ದರೋಡೆಗಳು ನಡೆದವು. ಪೊಲೀಸ್ ಇನ್ಸ್‌ಪೆಕ್ಟರು ಬೆನ್ನಟ್ಟಿ ಹೋಗಿ ಕಳ್ಳರನ್ನು ಹಿಡಿದು, ಸೆಷನ್ಸ್ ಕೋರ್ಟಿಗೆ ವಿಚಾರಣೆಗೆ ಒಪ್ಪಿಸಿದಾರೆ. ಈ ಮಾಸ ಕಳ್ಳತನಗಳನ್ನು ನಡಸಿದ [illegible] ಜನರ ಪೈಕಿ ಸರ್ಕಾರಿ ನೌಕರನೂ ಒಬ್ಬ ಸೇರಿಕೊಂಡಿದ್ದಾನೆ. ಇವನು ಗ್ರಾಮಮುನಿಸಿಪಾಲನಾಗಿದ್ದನು.

****

ಕಾಶ್ಮೀರಸಂಸ್ಥಾನದ ಮಹಾರಾಜರವರು ಈ ಸಲ [illegible] ವರ್ಷದ ಉತ್ಸವ ಕಾಲದಲ್ಲಿ ಆ ಸಂಸ್ಥಾನದ ಕೌನ್ಸಿಲ್ ರಾಜಾ ಸರ್ ಅಮರ ಸಿಂಗ್ ಚಂದ್ರಶೇಖರವರಿಗೆ ತಾಜೀಂ ಎಂಬ ಗೌರವವಾದ ಬಿರುದನ್ನು ದಯಪಾಲಿಸಿರುವರು. ಇವರು ಸಂಸ್ಥಾನದಲ್ಲಿ ಅನೇಕ ಪ್ರಯೋಜನಕರ ಕಾರ್ಯಗಳನ್ನು ಮಾಡಿ ಮಹಾರಾಜರವರ ಮತ್ತು ಪ್ರಜೆಗಳ ಪ್ರೀತಿ ಗೌರವಗಳನ್ನು ಪಡೆದುಕೊಂಡಿದ್ದಾರೆ.

ತುಂಗಭದ್ರಾ ನದಿಯಿಂದ ನಾಲೆಗಳನ್ನು ಮಾಡಿ ನೀರು [illegible] ತವಿಳುಗಳಿಗೆ ಹಾಯಿಸಬೇಕೆಂದು ಮದರಾಸ ಗವರ್ನಮೆಂ[ಟ್] [illegible] ತೀರ್ಮಾನ ಮಾಡಿಕೊಂಡು, ಅದರ ಅಂದಾಜಾ ಪಟ್ಟಿಗಳನ್ನು ಇಂಡಿಯಾ ಗವರ್ನಮೆಂಟಿಗೆ ಅವರ ಸ್ಯಾಂಕ್ಷನ್[ಗಾ]ಗಿ ಕಳುಹಿಸಿಕೊಟ್ಟಿದ್ದಾರೆ ಅವರು ಅದನ್ನು ಪರಿಶೋಧನೆ [ಮಾಡು]ತ್ತಿದ್ದಾರೆ ಈ ನೀರಾವರಿ ಕಾಮಗಾರಿಗೆ ಹನ್ನೆರಡು ಕೋಟಿ [ರೂಪಾ]ಯಿ ಖರ್ಚಾಗಬಹುದೆಂದು ಕಾಣುವುದು

****

ಕಲ್ಕತ್ತಾ ಪಟ್ಟಣದ ಪೋಲೀಸಿನವರು ಹನ್ನೊಂದು ಜನರನ್ನು [ದಸ್ತ]ಗಿರಿಮಾಡಿದ್ದಾರೆ ಇವರೆಲ್ಲಾ ಖೋಟಾ ನೋಟುಗಳನ್ನೂ ಬ್ಯಾಂ[ಕು]ಗಳಲ್ಲಿ ಅಂತರಂಗದಲ್ಲೇ ಚಲಾವಣೆ ಮಾಡುತ್ತಿದ್ದರೆಂದು ತಿ[ಳಿದುಬಂದಿ]ದೆ ಇವರಲ್ಲಿ ಮುಖಂಡರಾದವರಿಬ್ಬರು ಇನ್ನೂ ಸಿಕ್ಕಿಲ್ಲ [ಸಿಕ್ಕಿ]ಬಿದ್ದಿರುವವರ ಪೈಕಿ ನಾಗೇಂದ್ರನಾಥ ಚಟರ್ಜಿ, ಸಂತ್ [ದಯಾ]ಳ್ ಎಂಬುವರು ಪ್ರಜೆಗಳಲ್ಲಿ ಗಣ್ಯರಾಗಿದ್ದಾರೆ ಈ ಮೊ[ಕದ್ದ]ಮೆಯು ಕಲ್ಕತ್ತೆಯಲ್ಲಿ ತುಂಬಾ ಗಲಭೆಯನ್ನುಂಟುಮಾಡಿರು[ವ]ದೆ

****

ಮದರಾಸ ರೈಲ್ವೆ ಕಂಪನಿಯವರು [illegible] ಉದ್ಯೋಗ[ಸ್ಥ]ರನ್ನು ಬಿಡುವಳಿ ಮಾಡಬೇಕೆಂದು ಕಾಮಗಾರಿ [illegible] [ಮಾಡಿ]ದ್ದಾರೆ [illegible] ಪ್ರಾರ್ಥಿಸಿದರು ಅನೇಕ ಸಣ್ಣ ಹೊಳೆ ತೊರೆಗಳಿಗೆ [illegible]ಗಳನ್ನು ಕಟ್ಟಿದ್ದಾಯಿತು [illegible] ಕಟ್ಟಡಗಳು ಪೂರೈಸು[illegible] [illegible] ಬಹಳ ತ್ವರಿತವಾಗಿ [illegible] ರೈಲು ಗಾಡಿಗಳನ್ನು ಬಿಡಬಹು[ದಾ]ಗಿ ಕಾಣುತ್ತದೆ

****

ಬೊಂಬಾಯಿ ಪಟ್ಟಣದಲ್ಲಿ [illegible] ಪ್ರದರ್ಶನ [illegible] [illegible] ಬಿಂಗಲೆಯನ್ನೂ ಉದ್ಯಾನವನ್ನೂ [illegible] ವೇಲ್ಸ್‌ರವರ ಹೆಸರಿನ ಮೇಲೆ ಕಟ್ಟ[ಬೇ]ಕೆಂದು [illegible] ಮಾಡಲು [illegible] ಬಂದಿ[ದ್ದಾ]ರೆ ಈ ಫಂಡಿಗೆ ಬೊಂಬಾಯಿ ಗವರ್ನರರವರು ೧,೦೦೦ [ರೂ]ಪಾಯಿಯನ್ನು [illegible] ರೂಪಾಯಿ [illegible] ವರೆಗೆ ೧೦ ಲಕ್ಷ ರೂಪಾಯಿ [illegible] [illegible]

****

ಕಲ್ಕತ್ತಾ ಪಟ್ಟಣದ [illegible] ಪ್ರಿನ್ಸ್ ಆಫ್ ವೇಲ್ಸ್‌ರವರು [ಬರು]ವಾಗ ಅನೇಕ ಸಂತೋಷೋತ್ಸವಗಳು ನಡೆಯ[ಬೇಕೆಂ] [illegible] ಮಾಡುತ್ತಿದ್ದಾರೆ ಬಂದುದಿನ ರಾತ್ರಿ ದೀಪೋತ್ಸವ [illegible] ಬಹು ವಿಚಿತ್ರವಾದ ಬಾಣಬಿರುಸುಗಳನ್ನು ಹಚ್ಚುವುದು ಇದ[ಕ್ಕಾ]ಗಿ ೧೫,೦೦೦ ರೂಪಾಯಿ ತೆಗೆದಿಟ್ಟಿದ್ದಾರೆ ಕಲ್ಕತ್ತೆಯಲ್ಲಿ [ಇಂತ]ಹ ಉತ್ಸವವನ್ನು ಎಂದಿಗೂ ನೋಡಿಲ್ಲವೆಂದು ಹೇಳುವಷ್ಟು [ಆ]ನಂದಕರವಾಗಿದ್ದಿತು ಎಂಬುದಾಗಿ ಬಾಣಬಿರುಸುಗಳ ಕಂ[ಟ್ರಾ]ಕ್ಟರು ಹೇಳುತ್ತಾರೆ

****

ಪೂನಾ ಪಟ್ಟಣದ [illegible] ಬಂದು ಗ್ರಾಮದಲ್ಲಿ ಘೋರ ಸಾಹ[ಸ] [illegible] ದೋಂಗಾರಿ ಎಂಬುವನು [illegible] [illegible], ಅಲ್ಲಿನ [illegible] [illegible] ಇವನನ್ನು ಪ್ರೋಲೀಸಿನವರು [illegible] [illegible] ಕಳೆದವಾರ [illegible] [illegible] [illegible] ಅವನಿಗೆ [illegible] ತ್ವ [illegible] ದಂಡ [illegible] ವಿಧಿಸಿದರ[ು]

****

ತಂಜಾವೂರು ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಫಂಡ ಬೋರ್ಡಿನವರು [illegible] ಗೆ [illegible] ಪ್ರಜೆಗಳಿಂದಲೂ [illegible] [illegible] ಆ ಡಿಸ್ಟ್ರಿಕ್ಟಿನೊಳಗೆ ಹೊಸ [illegible] ಮಾಡಿದ್ದಾರೆ ಅದೇ ರೀತಿ ಮದುರೆ [ಜಿ]ಲ್ಲೆಯವರೂ ರೈಲ್ ರಸ್ತೆಗಳನ್ನು ಕಟ್ಟುವದಕ್ಕೆ ರೂಪಾಯಿ [illegible] ಪ್ರಜೆಗಳಿಂದಲೂ ಎತ್ತಬೇಕೆಂದು [illegible] [illegible] ಮಾಡಿಕೊಂಡರು ಈ ಫಂಡಿನಿಂದ [illegible] [illegible] ಉತ್ತಮವಾದ್ದರಿಂದ [illegible] ಸರಿನಿಂದ [illegible] ರೈಲು ಗಾಡಿಗಳು ಹೋಗಿಬರು[ವಂ]ತೆ ಮಾಡಬೇಕೆಂಬುವುದೇ ಅವರ ಉದ್ದೇಶವಾಗಿದೆ

****

ಬಂಗಾಳಾ ಅಧಿಪತ್ಯದಲ್ಲಿ ಗವರ್ನಮೆಂಟಿನವರು ವಿದ್ಯಾಭ್ಯಾ[ಸ] [illegible] ಡೈರೆಕ್ಟರ್ [illegible] ಈಗ [illegible] [illegible] ನೇಮಕ ಮಾಡಿದ್ದಾರೆ ಇವರಿಗೆ ವಿದ್ಯಾ[illegible] [illegible] ಅನುಭವ [illegible] ಇಂಗ್ಲೆಂಡಿನ [illegible] [illegible] ತುಂಬಾ [illegible] [illegible] ವಾಗಿದೆ ಎಂತಲೂ, ಇದರಿಂದ ಗವರ್ನಮೆಂಟ [illegible] [illegible] ಯಾಗುತ್ತದೆಂತಲೂ, ಅದರಿಂದ ಇವರನ್ನು [illegible] ಅನುಭವವುಳ್ಳವರನ್ನು ಡೈರೆಕ್ಟರ್ [illegible] ನೇಮಕ [illegible] ಬಂಗಾಳ ಅಧಿಪತ್ಯದ [illegible] ಗವರ್ನಮೆಂಟಿಗೆ ಮನವಿ[ಯ]ನ್ನು ಬರೆಸಿಕೊಂಡಿದ್ದಾರೆ

****

ಬಂಗಾಳಾ ಅಧಿಪತ್ಯವನ್ನು ಒಡೆದು [illegible] ಡಿಸ್ಟ್ರಿಕ್ಟುಗಳನ್ನು [illegible] ಪ್ರಾಂತ್ಯಕ್ಕೆ ಸೇರಿಸಬೇಕೆಂದು [illegible] [illegible] ಪ್ರಕಾರ ವಿಲಾಯತಿ ಗವರ್ನಮೆಂಟಿನವರು ಒಪ್ಪಿ [illegible]ಷ್ಟ್ರ ಮಾಡಿದ್ದಾರೆ ಈ ಹುಕುಮನ್ನು ಕಳೆದವಾರದ ಇಂಡಿಯಾ ಸ[ರ]ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿ, ಅಕ್ಟೋಬರ್ ೧೬ ರಿಂದ ಹೊಸ ಅಧಿಪತ್ಯವು ಏರ್ಪಡಾಗುವುದೆಂದು ತಿಳಿಸಿ, ಅದರ ಎಲ್ಲೆ ಕಟ್ಟುಗ[ಳ]ನ್ನು ಕಾಣಿಸಿದ್ದಾರೆ ಬಂಗಾಳಾ ಅಧಿಪತ್ಯದ ಪ್ರಜೆಗಳು ಎಷ್ಟು ವಿಧವಾಗಿ ಅದನ್ನು ಒಪ್ಪದೆಹೋದರೂ ಅದು ಜಾರಿಗೆ ಬಂದೇಬಿಟ್ಟಿತು ಅಲ್ಲಿನ ಪ್ರಜೆಗಳು ಸೀಮೆಯ ಪದಾರ್ಥಗಳನ್ನು ಕೊಂಡುಕೊಳ್ಳಕೂಡದೆಂದು ನಿಶ್ಚಯಿಸಿಕೊಂಡಿದ್ದಾರೆ ಇದರಿಂದ ಈ ರಾಷ್ಟ್ರದ ಬಟ್ಟೆಬರೆಗಳಿಗೂ ಇತರ ವಿಸರುಗಳಿಗೂ ಮಾರಾಟ ಸಿಕ್ಕಿ ದೇಶೀಯ ಕೈಗಾರಿಕೆ ಜನರಿಗೆ ಪ್ರೋತ್ಸಾಹವಾಯಿತು

****

ಅಫ್ಘಾನಿಸ್ಥಾನದ ಅಮೀರ್ ಅಬ್ದುಲ್ ರಹಮಾನರವರು ಕಾಲವಾಗಿ ಐದು ವರುಷಗಳಾದವು ಬೊಂಬಾಯಿ ಪಟ್ಟಣದಲ್ಲಿರುವ ಮೌಲ ಮಿರ್ಜಾ ಫಸ್ಲ ಅಹಮದ್‌ಖಾನರವರು ಕಳೆದ ಶನಿವಾರವೂ ಭಾನುವಾರವೂ ಲೇಟ ಅಮೀರರವರ ವರ್ಷದಿನವನ್ನೂ ಈಗಿನ ಅಮೀರರವರ ಪಟ್ಟಾಭಿಷೇಕದ ದಿನವನ್ನೂ ಆಚರಿಸಿದರು ಸುಮಾರು ೪೫,೦೦೦ ಮಹಮ್ಮದೀಯರಿಗೆ ಆ ದಿನ ಸುಖಭೋಜನ ಮಾಡಿಸಿ, ಒಂದು ದೊಡ್ಡ ಸಭೆಯನ್ನು ಕೂಡಿಸಿ ಅಮೀರರುಗಳ ಗುಣಕಥನವನ್ನು ಮಾಡಿದರು ತುರ್ಕಿ ರಾಯಭಾರಿಯು ಸಭಾನಾಯಕರಾಗಿದ್ದರು ಅಮೀರರವರು ಮಹಮ್ಮದೀಯ ಸಭೆಗೆ ೫,೦೦೦ ರೂಪಾಯಿಯನ್ನೂ ಲಾಹೋರ್ ಪಟ್ಟಣದಲ್ಲಿ ಮಹಮ್ಮದೀಯ ಬಾಲಕರ ವಿದ್ಯಾಭ್ಯಾಸಕ್ಕೋಸ್ಕರ ಒಂದು ಕಾಲೇಜನ್ನು ಕಟ್ಟಿಸುವುದಕ್ಕೆ ೩೦,೦೦೦ ರೂಪಾಯಿಯನ್ನೂ ಕಳುಹಿಸಿಕೊಟ್ಟಿದ್ದಾರೆಂಬ ವರ್ತಮಾನವನ್ನು ಸಿ[illegible]ರಿಯವರು ಆ ದಿನದ ಸಭೆಯಲ್ಲಿ ತಿಳಿಸಿದರು ಈ ಸುದ್ದಿಯು ಮಹಮ್ಮದೀಯ ಪ್ರಜೆಗಳಿಗೆಲ್ಲಾ ತುಂಬಾ ಆನಂದವನ್ನುಂಟುಮಾಡುತ್ತದೆ

****

ಬೊಂಬಾಯಿ ಪಟ್ಟಣದಲ್ಲಿ ಇಬ್ರಾಹಿಂಜಿ ಎಂಬೊಬ್ಬ ವರ್ತಕನು ತನ್ನ ಮೇಲೆ ಮೊಕದ್ದಮೆ ನಡೆಯುತ್ತಿದ್ದ ಕಾರಣ ತನ್ನ ಮನೆಯಲ್ಲಿದ್ದ ೧೫,೦೦೦ ರೂಪಾಯಿನ ನಗನಾಣ್ಯಗಳನ್ನು ಒಂದು ಪೆಟ್ಟಿಗೆಯಲ್ಲಿಟ್ಟು ತನ್ನ ಸ್ನೇಹಿತನ ಮನೆಗೆ ಕಳುಹಿಸಿದನು ಪೆ[illegible] ಎಂಬೊಬ್ಬ ಹುಡುಗನು ಆ ಪೆಟ್ಟಿಗೆಯಲ್ಲಿದ್ದ ನಗಗಳ ಪೈಕಿ ೧೫,೦೦೦ ರೂಪಾಯಿಗಳಷ್ಟು ಕಳ್ಳತನದಿಂದ ಅವುಗಳ ಬದಲಾಗಿ ಗಾಜಿನ ನಗಗಳನ್ನು ಅದರಲ್ಲಿಟ್ಟುಬಿಟ್ಟನು ಮೊಕದ್ದಮೆ ಪೂರೈಸಿದ ಮೇಲೆ ಇಬ್ರಾಹಿಂಜಿಯು ತನ್ನ ಪೆಟ್ಟಿಗೆಯನ್ನು ತೆರೆದು [illegible] ಮೋಸವಾಗಿದ್ದದ್ದು ಗೊತ್ತಾಯಿತು ಕೂಡಲೇ ಅವನು ಪೋಲೀಸಿಗೆ ತಿಳಿಸಿದನು ಆ ಹುಡುಗನನ್ನು ಹಿಡಿದು ತನಿಖೆ ಮಾಡಿದರು ಅವನು ತೆಗೆದುಕೊಂಡದ್ದು ನಿಜವೆಂದು ಒಪ್ಪಿಕೊಂಡನು [illegible] [illegible], ಈ ಸ್ಥಳಗಳಲ್ಲೂ ಬೊಂಬಾಯಿ ಪಟ್ಟಣದಲ್ಲಿ ಅನೇಕ ವರ್ತಕರ [illegible] ಅವನಿಂದ ಆ ನಗಗಳನ್ನು ಕೊಂಡುಕೊಂಡಿದ್ದರು ಅವೆಲ್ಲಾ ಸಿಕ್ಕಿದವು ಆ ಹುಡುಗನ ಮೇಲೆ ಮೊಕದ್ದಮೆ ಆಗಿ ಅವನಿಗೆ ಕಳೆದವಾರ ಒಂಬತ್ತು ತಿಂಗಳ [illegible] ಸಜಾ ವಿಧಿಸಲ್ಪಟ್ಟಿತು

****

ಮಹಮ್ಮದೀಯರ ಯಾತ್ರಾಸ್ಥಾನಕ್ಕೆ ರೈಲು ರಸ್ತೆ ಹಾಕುವ [illegible] ತುರ್ಕಿ [illegible]ನರವರು ಪ್ರಯತ್ನಪಟ್ಟಿರುವುದೂ ಅದಕ್ಕಾಗಿ ಬಹುಜನ ಕೊಡುವಂತೆ ರೂಪಾಯಿ ನಮ್ಮ ವಾಚಕರಿಗೆ ತಿಳಿದಿರಬಹುದು [illegible] ಪಟ್ಟಣದ [illegible] ಪತ್ರಿಕೆಯು ಎಂಟರ [illegible] ವರೆಗೆ ೨೧,೩೨೦ ರೂಪಾಯಿಯನ್ನು ಮಹಮ್ಮದೀಯರಿಂದ ಕೂಡಿಸಿ ಕಳುಹಿಸಿದರು ಬೊಂಬಾಯಿ ಮುಂತಾದ ಕಡೆಗಳಿಂದಲೂ ಈ ರೈಲ್ವೆಗಾಗಿ ಹಣ ಕಳುಹಿಸಿದ್ದಾರೆ ಅಫ್ಘಾನಿಸ್ಥಾನದ ಅಮೀರರವರು ಮಾತ್ರ ಇನ್ನೂ ದ್ರವ್ಯಸಹಾಯ ಮಾಡಲಿಲ್ಲ ಜೋಹಾರು ಅಮೀರರೂ [illegible] ಗಳೂ, [illegible] [illegible] ಸರಿಯೂ, [illegible] ಕೊಡುವ ಸುಲ್ತಾನರುಗಳೂ [illegible] ದಲ್ಲಿರುವ ಮುಸಲ್ಮಾನ ದೊಡ್ಡ ಮನುಷ್ಯರ[illegible] ಕೊಟ್ಟಿರುವ[illegible]ರ ಇದಲ್ಲದೆ [illegible] ಮಹಮ್ಮದೀಯರು [illegible] ರೂಪಾಯಿ ಕಳುಹಿಸಿರುತ್ತಾರೆ ಇಂತು ಈ ರೈಲ್ ರಸ್ತೆ[ಯ] ಫಂಡಿಗೆ ಕಳೆದ [illegible] ಒಂದು ಕೋಟಿ ನಾಲ್ಕು[illegible] ರೂಪಾಯಿ [illegible] [illegible] ರೈಲ್ ರಸ್ತೆಯು [illegible] ಕೆಲಸ ಅತುರದಿಂದ ನಡೆಸುತ್ತಿದ್ದಾರೆ [illegible] ಎಂಬ ಪಟ್ಟಣದ ತನಕ ಮೊನ್ನೆ ೩೧ನೆ ತಾರೀ[ಖಿ]ನ ದಿನ ರೈಲುಗಾಡಿ ಬರುವದನ್ನು [illegible]

****

[illegible] ಮಹಮ್ಮದೀಯರು [illegible] [illegible] [illegible] [illegible] [illegible] [illegible] [illegible] [illegible] ಕುರಾನ್ ಎಂಬ [illegible] ಹೆಸರಿನ [illegible] ವಿಷಯದಲ್ಲಿ [illegible] ಉಪನ್ಯಾಸಗಳನ್ನು [illegible] ಮಾಡಿಯೂ ಗ್ರಂಥಗಳನ್ನು ಬರೆದ [illegible] [illegible] [illegible] [illegible] [illegible] ಮೇಲೂ [illegible] ಮಾಡಿದ್ದಲ್ಲದೆ [illegible] [illegible] [illegible] ತಿಂಗಳ ಸಜೆಯನ್ನೂ ಎರಡನೇ [illegible]ಗೆ ೫೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದ್ದಾರೆ ಇವರ ಮೇಲೆ ಸವಾಲ್ ಕೋರ್ಟ್ [illegible] [illegible] ನಲ್ಲೂ ಹರಿಕಂಗರು [illegible] ಕೋರ್ಟಿನಲ್ಲೂ ಅಪೀಲು ಮಾಡಿಕೊಂಡು ಈ ಅಪೀಲು ಎರಡು ಕೋರ್ಟುಗಳಲ್ಲೂ ವಜಾ ಆಗಿ ಕೆಳಕೋರ್ಟಿನ ತೀರ್ಪೇ ಖಾಯಂ ಆಯಿತು ಈಗ ಈ ಶಿಕ್ಷೆಗಳು ಅವರು ಮಾಡಿರುವ ಅಪರಾಧಕ್ಕೆ ತಕ್ಕವುಗಳಲ್ಲವೆಂತಲೂ ಅವನ್ನು ಹೆಚ್ಚುಮಾಡುವುದು ನ್ಯಾಯವಾಗಿದೆ ಎಂತಲೂ ಕೆಲವು ಪ್ರಜೆಗಳು ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡಿದ್ದಾರೆ

ವಿದೇಶ ವರ್ತಮಾನಗಳು

ಫ್ರೆಂಚರ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ೧೯೦೭ನೆ ಇಸವಿಯಲ್ಲಿ ಇನ್ನೊಂದು ಸರ್ವಪದಾರ್ಥ ಪ್ರದರ್ಶನೋತ್ಸವವನ್ನು ನಡೆಸಬೇಕೆಂದು ಏರ್ಪಡಾಗುತ್ತಿದೆ ಅದಕ್ಕೆ ಆಗಲೇ ಅಧಿಕಾರಿಗಳನ್ನು ನೇಮಕಮಾಡಿದ್ದಾರೆ

****

ಕಾಕಸಸ್ ಪರ್ವತಪ್ರಾಂತ್ಯದಲ್ಲಿ [illegible] ಎಂಬ ಪಟ್ಟಣದೊಳಗೆ ೧,೦೦೦ ರಷ್ಯಾ ಪ್ರಜೆಗಳಿಗೂ ರಷ್ಯಾ ಸೈನಿಕರಿಗೂ ಕಳೆದವಾರ ದೊಡ್ಡ ಕಾದಾಟವಾಗಿ ರೈತಪ್ರಜೆಗಳಲ್ಲಿ ಎಪ್ಪತ್ತು ಮಂದಿಯು ಹತರಾದರೆಂದು [illegible] ಬಂದಿದೆ

****

ವಿಲಾಯತಿಯಲ್ಲಿರುವ ಮಾರ್ಕ್ವಿಸ್ ಆಫ್ [illegible]ಯವರ ಕುಮಾರನಾದ ಅರ್ಲ್ [illegible]ಯವರು [illegible] ವರುಷಗಳಲ್ಲಿ ೩,೨೦,೦೦೦ ಕಾಡು ಮೃಗಗಳನ್ನು ಕೊಂದಿದ್ದಾರೆ ಜರ್ಮನಿ ಚಕ್ರವರ್ತಿಯವರು ೩೦ ವರುಷಗಳಲ್ಲಿ ೪೦,೦೦೦ ಮೃಗಗಳನ್ನು ಕೊಂದಿರುವರು

****

[illegible] ಪಟ್ಟಣದಲ್ಲಿ ಈಗಿನ ಕಾಲಕ್ಕೆ ತಕ್ಕ [illegible] ಅಗಲವಾದ ದೊಡ್ಡ ಪೋಸ್ಟ್ ಆಫೀಸನ್ನು ಕಟ್ಟಬೇಕೆಂದು [illegible]ಗಿದೆ ಇದಕ್ಕೆ ೧-೨ ಕೋಟಿ ರೂಪಾಯಿ ತನಕ ಖರ್ಚಾಗಬಹುದು ಈ ಕಟ್ಟಡಕ್ಕೆ ಎಡ್ವರ್ಡ್ ಪ್ರಭುಗಳು ಮುಂದಿನ [illegible] ತಿಂಗಳಲ್ಲಿ ಅಸ್ತಿಭಾರ ಹಾಕುವರಾಗಿದ್ದಾರೆ

****

ಜರ್ಮನಿಗೆ [illegible] ಪೂರ್ವ ಆಫ್ರಿಕಾ[illegible] [illegible] ಸರ್ಕಾರದವರ ಮೇಲೆ ದಂಗೆಯೆದ್ದು [illegible] [illegible] ಮಾಡಿದ್ದಾರೆ [illegible] [illegible] ಸರ್ಕಾರಿ [illegible] ೧,೦೦೦ ದಂಗೆಕೋರರನ್ನು [illegible] ಆದಾಗ್ಯೂ ದಂಗೆಯೇನೂ ಇನ್ನೂ ಶಮನವಾಗಿಲ್ಲ

****

ದಕ್ಷಿಣ ಆಫ್ರಿಕಕ್ಕೆ ಸೇರಿದ [illegible] ಪಟ್ಟಣದಲ್ಲಿ ವಾಸಮಾಡುವ ಯೂರೋಪಿಯನರೂ ಸ್ವದೇಶಸ್ಥರೂ, ಏಷ್ಯಾ ಖಂಡದವರೂ [illegible] [illegible] [illegible] [illegible] ಸರ್ಕಾರಕ್ಕೆ [illegible], ಕೊಡಬೇಕೆಂದು ಅಲ್ಲಿನ ಮುಂ[ಸಿಪಾ]ಲಿಟಿ ಸಭಿಕರು ಕಾನೂನುಮಾಡಿದ್ದಾರೆ.

****

ರಷ್ಯಾ ಜಪಾನ್ ರಾಯಭಾರಿಗಳು ಅಮೇರಿಕಕ್ಕೆ ಸೇರಿದ ಪೋರ್ಟ್ಸ್‌ಮತ್ ಪಟ್ಟಣದಲ್ಲಿ ಸಭೆ ಸೇರಿ ಯುದ್ಧದ ವಿವಾದವನ್ನು [illegible] ಗೊತ್ತುಮಾಡುವದಕ್ಕೆ [illegible] [illegible] ಪ್ರಾರಂಭವಾಗಿ, [illegible] [illegible] ಅವರ [illegible] ನಿಶ್ಚಯವಾಗಲಿಲ್ಲ

****

ವಿಲಾಯತಿಗೆ ಸೇರಿದ [illegible] [illegible] ಕಾಲವಾದ [illegible] [illegible] [illegible] [illegible] ರೂಪಾಯಿಗಳನ್ನು [illegible] ಪಟ್ಟಣದಲ್ಲಿ [illegible] ಕಾಲವನ್ನು [illegible] ಬಡವರ [illegible] ಧರ್ಮ [illegible] ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆ

****

[illegible] ನಗರದ [illegible] [illegible] [illegible] ಎಂಬಾತನು ಸರ್ಕಾರಿ [illegible] ಆ [illegible] ಸ್ವಂತ ವ್ಯಾಪಾರಕ್ಕೆ ಉಪಯೋಗಿಸಿ, [illegible] ಮಾಡುತ್ತಿದ್ದನು ಆದರೆ [illegible] ವ್ಯಾಪಾರದಲ್ಲಿ ೩ [illegible] ರೂಪಾಯಿ [illegible] ಹೋಯಿತು ಬಡವ ಮೇಲೆ ಅವನು [illegible] ತುಂಬಾ ಅವಮಾನವಾಗುವದೆಂದು ಆತ್ಮಹತ್ಯ ಮಾಡಿಕೊಂಡನು

****

ಆಫ್ರಿಕಾ ಖಂಡದ ಸೋಮಾಲಿ [illegible] [illegible] [illegible] ಜರ್ಮನಿಯವರಿಗೆ ಸೇರಿದ [illegible] [illegible] ೩೦ ೦೦೦ [illegible] ೧೦೦ [illegible] [illegible], ಇಂಗ್ಲೀಷರ ಸೈ[illegible] [illegible] [illegible] [illegible] [illegible] [illegible] ಸೈನ್ಯದಲ್ಲಿ ಸೇರಿ [illegible] ಆ [illegible] ಇಂಗ್ಲೀಷರ [illegible] [illegible] ಕೂಡಬೇಕೆಂದು [illegible] ತಿಳಿಸಿದರು

****

[illegible] ಸೈನಿಕರು ಯುದ್ಧಭೂಮಿಯಿಂದ [illegible] ಬಂದು ಜಹಜಿನಲ್ಲಿ [illegible] ವಾಪಸು [illegible] ಮಾಡಿಕೊಂಡು [illegible] [illegible] ಸಮುದ್ರ ಮಧ್ಯದಲ್ಲಿ ಇಂಗ್ಲೀಷರ [illegible] ಜಹಜು ಸಂಚರಿಸುತ್ತಿದ್ದು ಆ [illegible] ಜಹಜಿಗೆ ಬಡಿಯಿತು. ಮೂರು ನಿಮಿಷಗಳೊಳಗಾಗಿ [illegible] ಜಹಜು [illegible] ಮುಳುಗಿಹೋಯಿತು. ಅದರಲ್ಲಿದ್ದವರ ಪೈಕಿ [illegible] ಮಂದಿ ಮಾತ್ರ ಬದುಕಿ ಬಂದರು ೧೨೭ ಜನರು ಸಮುದ್ರಕ್ಕೆ ಬಲಿಯಾದರೆಂದು ಕಂತಿ[illegible] ವರ್ತಮಾನ ಬಂದಿದೆ

ಫ್ರಾನ್ಸಿಗೆ ಸೇರಿದ ಲಿಥೂನಿಯಾ ಪಟ್ಟಣದಲ್ಲಿ ಫ್ರೇಡಾರ್ ಬ್ರೋರಿಡ್ಜ್ ಎಂಬೊಬ್ಬ ಕಾರೀಗಾರನು ಬಹು ಭಯಂಕರವಾದ ಬಂದೂಕುಗಳನ್ನು ಹೊಸದಾಗಿ ಕಂಡುಹಿಡಿದಿರುತ್ತಾನೆ. ಈ ಬಂದೂಕು ಒಂದು ನಿಮಿಷದಲ್ಲಿ ೪,೦೦೦ ದಿಂದ ೧೨,೦೦೦ದ ವರೆಗೆ ಗುಂಡುಗಳನ್ನು ಸರಂಪರೆಯಾಗಿ ಹೊಡೆಯಬಲ್ಲದು. ಮೂರು ಮೈಲಿ ದೂರದಲ್ಲಿರುವ ಶತ್ರುಗಳನ್ನು ಸಹಾ ಕೊಲ್ಲಬಹುದು. ಈ ನೂತನವಾದ ಬಂದೂಕಿನ ವಿಚಾರವು ಯೂರೋಪ್ ಖಂಡದಲ್ಲಿ ತುಂಬಾ ಆಶ್ಚರ್ಯವನ್ನುಂಟುಮಾಡಿದೆ.

****

ಸ್ವಿಟ್ಸರ್‌ಲೆಂಡ್ ದೇಶದಲ್ಲಿ ಕೊಲೆಗಾರರಿಗೆ ಸರ್ಕಾರದವರು ಮೊದಲು ಮರಣದಂಡನೆಯನ್ನು ವಿಧಿಸುತ್ತಿದ್ದರು. ಆಚೆಗೆ ಅಪರಾಧಿಗಳನ್ನು ಗಲ್ಲಿಗೆ ಏರಿಸುವುದರಿಂದ ಪ್ರಯೋಜನವಿಲ್ಲವೆಂದು ಹೇಳಿ ೧೮೭೪ನೆ ಇಸವಿಯಿಂದ ಮರಣದಂಡನೆಯನ್ನೇ ತೆಗೆದುಹಾಕಿದರು. ಆದರೆ ೧೮೭೯ ರಲ್ಲಿ ಪ್ರಜೆಗಳು ಸರ್ಕಾರದವರಿಗೆ ಪ್ರೋತ್ಸಾಹಕೊಟ್ಟದ್ದರಿಂದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ಕೊಲೆಗಾರರಿಗೆ ಘಾಸೀಸಜಾ ವಿಧಿಸುತ್ತಿದ್ದಾರೆ. ಈಗಲಾದರೋ ಹೀಗೆ ಕೊಂದವರನ್ನು ಗಲ್ಲಿಗೆ ಹಾಕದೇಇರುವದರಿಂದ ಕೊಲೆಗಳ ಸಂಖ್ಯೆ ಕಡಿಮೆಯಾಗುವುದಿಲ್ಲವೆಂತಲೂ ಈ ಮರಣದಂಡನೆಯನ್ನೇ ವಜಾಮಾಡಬೇಕೆಂತಲೂ ಸರ್ಕಾರದವರು ಚರ್ಚೆಮಾಡುತ್ತಿದ್ದಾರೆ.

****

ಅಮೇರಿಕಕ್ಕೆ ಸೇರಿದ ಬ್ರೆಜಿಲ್ ಪ್ರಾಂತ್ಯದಲ್ಲಿ ನಾರುಹುಣ್ಣಿನ ಹಿಂಸೆ ಪ್ರಜೆಗಳಿಗೆ ಸಹಿಸಕೂಡದ್ದಾಗಿದೆ. ಅಲ್ಲಿನ ವರ್ತಕರುಗಳಿಯವರು ಈ ಹುಣ್ಣಿಗೆ ಸರಿಯಾದ ಔಷಧಾದಿ ಚಿಕಿತ್ಸೆಗಳನ್ನು ಕಂಡುಹಿಡಿದು ಸಿದ್ಧಾಂತಪಡಿಸತಕ್ಕ ಪಂಡಿತರಿಗೆ ೧೦ ಲಕ್ಷ ರೂಪಾಯಿ ಬಹುಮಾನ ಕೊಡುತ್ತೇವೆಂದು ಪ್ರಕಟಿಸಿರುವರು. ಆರು ಜನ ದೊಡ್ಡ ಪಂಡಿತರು ಸೇರಿ, ಚಿಕಿತ್ಸೆ ಔಷಧಿಗಳನ್ನು ಕಂಡು ಹಿಡಿದಿದ್ದೇವೆಂದು ಹೇಳುವ ವೈದ್ಯರನ್ನು ಪರೀಕ್ಷೆಮಾಡಬೇಕೆಂತಲೂ ಯಾವ ಪಂಡಿತನ ಔಷಧ ಚಿಕಿತ್ಸೆಗಳಿಂದ ಆ ಹುಣ್ಣು ಸಂಪೂರ್ಣವಾಗಿ ವಾಸಿಯಾಗುವುದೋ ಅಂಥಾವನಿಗೆ ಆ ಬಹುಮಾನ ಕೊಡುವಂತೆ ತೀರ್ಮಾನ ಮಾಡಬಹುದೆಂತಲೂ ನಿರ್ಧಾರಕವಾಗಿದೆ.

****

ಚೀನಾ ರಾಜ್ಯದ ಚಕ್ರವರ್ತಿಯವರ ಮಾತೃಶ್ರೀ ಯವರು ತಮ್ಮ ಆಸ್ಥಾನ ಮಂತ್ರಿಗಳನ್ನು ಕರೆದು ತಮ್ಮ ಚಕ್ರಾಧಿಪತ್ಯದಲ್ಲಿ ರಾಜ್ಯಭಾರ ಕ್ರಮಗಳನ್ನು ಪಶ್ಚಿಮ ರಾಜ್ಯಗಳಲ್ಲಿರುವಂತೆ ಬದಲಾವಣೆ ಮಾಡಬೇಕೆಂತಲೂ ಪ್ರಜಾಪ್ರತಿನಿಧಿಗಳನ್ನು ತಮ್ಮ ರಾಜ್ಯದಲ್ಲೂ ಚುನಾಯಿಸಿ ಪಾರ್ಲಿಮೆಂಟ್ ಸಭೆಗಳನ್ನು ನಿರ್ಮಾಣ ಮಾಡಬೇಕೆಂತಲೂ ಅಪ್ಪಣೆ ಕೊಡಿಸಿದಾರೆ. ಪರರಾಜ್ಯಗಳಲ್ಲಿ ರಾಜ್ಯಭಾರ ರೀತಿಗಳನ್ನು ನೋಡಿ ಬಂದ ಚೀನಾ ಅಧಿಕಾರಿಗಳೂ ಆ ರೀತಿ ರಾಜ್ಯಭಾರ ಕ್ರಮವನ್ನು ಬದಲಾಯಿಸುವುದು ಅವಶ್ಯವಾಗಿದೆ ಎಂಬುದಾಗಿ ಚಕ್ರವರ್ತಿಯವರಿಗೆ ಅರಿಕೆಮಾಡಿಕೊಂಡಿದ್ದಾರೆ. ಇದನ್ನೆಲ್ಲಾ ನೋಡಲಾಗಿ ಇನ್ನು ಎರಡು ಮೂರು ಸಂವತ್ಸರಗಳೊಳಗಾಗಿ ಚೀನಾ ರಾಜ್ಯದಲ್ಲಿ ಪ್ರಜಾಪ್ರತಿನಿಧಿ ಪ್ರಭುತ್ವವು ನೆಲೆಗೊಳ್ಳಬಹುದೆಂದು ಕಾಣುತ್ತಿದೆ.

****

ವಿಲಾಯತಿ ರಾಜ್ಯಕ್ಕೂ ಜರ್ಮನ್ ರಾಜ್ಯಕ್ಕೂ ಕಳೆದ ವಾರ ಹೊಸ ಕರಾರಾಯಿತು. ಇವೆರಡು ರಾಜ್ಯಗಳ ಪೈಕಿ ಯಾವುದಾಗಲಿ ಇನ್ಯಾವ ರಾಜ್ಯದ ಮೇಲಾದರೂ ಯುದ್ಧಮಾಡುವುದಾದರೆ ಇನ್ನೊಂದು ರಾಜ್ಯದವರು ಅವರಿಗೆ ಸಹಾಯಮಾಡಬೇಕೆಂಬುವುದೇ ಈ ಕರಾರಿನ ಮುಖ್ಯ ಉದ್ದೇಶವಾಗಿದೆ. ಅಂದರೆ ವಿಲಾಯತಿಯವರ ಮೇಲೆ ಇನ್ಯಾವ ರಾಜ್ಯದವರಾದರೂ ನುಗ್ಗಿ ಬಂದು ಯುದ್ಧಮಾಡಿದರೆ ಜರ್ಮನಿಯವರು ವಿಲಾಯತಿಯವರಿಗೆ ಸಹಾಯಮಾಡಬೇಕು. ಹಾಗೆಯೇ ಜರ್ಮನಿಯವರಿಗೆ ವಿಲಾಯತಿಯವರೂ ಸಹಾಯಮಾಡಬೇಕು. ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿ ಇಂಗ್ಲೀಷರಿಗೂ ರಷ್ಯಾದವರಿಗೂ ಯುದ್ಧವಾಗುವ ಸಂಭವವಿದೆ ಎಂತಲೂ ಆಗ್ಗೆ ಜರ್ಮನಿಯವರು ಬಂದು ವಿಲಾಯತಿಯವರಿಗೆ ಸಹಾಯಮಾಡಬೇಕಾಗಿದೆ ಎಂತಲೂ ಕೆಲವರು ಊಹಿಸುತ್ತಾರೆ.

****

ಜರ್ಮನ್ ಸೈನಿಕರು ಕೋರಿಗಿ ರಷ್ಯಾದವರನ್ನು ಸೋಲಿಸಿ ಸಘೋಲಿಯನ್ ದ್ವೀಪವನ್ನು ಅವರಿಂದ ಕಿತ್ತು ಸ್ವಾಧೀನಪಡಿಸಿಕೊಂಡರಷ್ಟೆ. ಆಗ ಆ ದ್ವೀಪದ ಬಂದೀಖಾನೆಗಳೊಳಗೆ ೪,೦೦೦ ರಷ್ಯಾ ಖೈದಿಗಳಿದ್ದರು. ಜರ್ಮನಿಯವರು ಇವರನ್ನೆಲ್ಲಾ ಜೈಲಿನಿಂದ ಕರೆಸಿ ಯಾರೂ ಜರ್ಮನ್ ರಾಜ್ಯಕ್ಕೆ ಮಾತ್ರ ಹೋಗಕೂಡದೆಂದು ಆಜ್ಞೆ ಮಾಡಿ ಅವರಿಂದ ವಾಗ್ದಾನ ತೆಗೆದುಕೊಂಡು, ಅವರನ್ನೆಲ್ಲಾ ಆ ದ್ವೀಪದಿಂದ ಹೊರಕ್ಕೆ ಬಿಟ್ಟುಬಿಟ್ಟರು. ಈ ರಷ್ಯಾ ಖೈದಿಗಳೆಲ್ಲಾ ಏನಾದರೋ ಎಲ್ಲಿಗೆ ಹೋದರೋ ಯಾರಿಗೂ ತಿಳಿಯಲಿಲ್ಲ. ಈಚೆಗೆ ಇವರು ಚೀನಾ, ಸಯಾಂ, ಅರೇಬಿಯಾ ಪ್ರಾಂತ್ಯಗಳಲ್ಲಿ ಅಲೆಯುತ್ತಿದ್ದಾರೆಂತಲೂ ಕೆಲವರು ಹಿಂದುಸ್ಥಾನಕ್ಕೂ ಬರುವುದರಲ್ಲಿದ್ದಾರೆಂತಲೂ ಪ್ರಕಟವಾಯಿತು. ಇಂಡಿಯಾ ಗವರ್ನಮೆಂಟಿನವರು ಇಲ್ಲಿ ಅವರಿಗೆ ಆಶ್ರಯ ಸಿಕ್ಕದಂತೆ ಎಲ್ಲ ಕಟ್ಟುಗಳಲ್ಲಿ ಏರ್ಪಾಡು ಮಾಡಿದಾರೆ.

****

ರಷ್ಯಾ ರಾಜ್ಯದಲ್ಲಿ ಸರ್ಕಾರದವರು ದಂಗೆಯನ್ನು ಅಡಗಿಸುವುದಕ್ಕೆ ಒಡಿಸಾ ಪಟ್ಟಣದೊಳಗೆ ಒಂದು ಉಪಾಯ ಮಾಡಿದರು. ದಂಗೆಕೋರರಾದ ಪ್ರಜೆಗಳ ಹಾವಳಿಯು ಆ ಡಿಸ್ಟ್ರಿಕ್ಟಿನಲ್ಲಿ ಬಹಳವಾಗಿದ್ದಿತು. ಗವರ್ನರವರು ಅಧಿಕಾರಿಗಳಿಗೆ ಗುಟ್ಟಾಗಿ ಒಂದು ಸಲಹೆಯನ್ನು ಕೊಟ್ಟರು. ಅವರು ಪ್ರಜೆಗಳನ್ನೆಲ್ಲಾ ಸಭೆ ಕೂಡಿಸಿ, ಅವರಿಗೆ ಬುದ್ಧಿವಾದ ಹೇಳಿ—ನಿಮ್ಮಲ್ಲಿ ಮುಖಂಡರಾದವರೆಲ್ಲಾ ಬಟ್ಟಾಗಿ ಪೊಲೀಸ್ ಠಾಣಾಗಳಿಗೆ ಹೋಗಿ ತಮ್ಮ ಹೆಸರು ವಿಳಾಸಗಳನ್ನು ಹೇಳಿ ಬರಸಿ ಬಳಿಕ ಆ ಮುಖಂಡರೆಲ್ಲಾ ಗವರ್ನರ ಬಳಿಗೆ ಹೋಗಿ ಪ್ರಜೆಗಳ ಕಷ್ಟನಿಷ್ಠೂರಗಳನ್ನು ಅರಿಕೆಮಾಡಿಕೊಳ್ಳಬಹುದೆಂತಲೂ ಗವರ್ನರವರು ಆ ರೀತಿ ಬರತಕ್ಕವರನ್ನು ಉಚಿತವಾಗಿ ಕಂಡು ಮಾತನಾಡುವರೆಂತಲೂ ಕಷ್ಟ ನಿವಾರಣೆಯಾಗುವುದೆಂತಲೂ ತಿಳಿಸಿದರು. ಅದೇ ಪ್ರಕಾರ ಪ್ರಜೆಗಳು ತಮ್ಮಲ್ಲಿ ಮುಖಂಡರಾದ ೬೦೦ ಮಂದಿಯನ್ನು ಚುನಾಯಿಸಿದರು. ಇವರೆಲ್ಲಾ ಪೊಲೀಸ್ ಠಾಣಾಗಳಿಗೆ ಹೋಗಿ ತಮ್ಮ ತಮ್ಮ ಹೆಸರು ವಿಳಾಸಗಳನ್ನು ಬರಸಿ ಅದನಂತರ ಪೊಲೀಸಿನವರು ಅವರನ್ನೆಲ್ಲಾ ಗವರ್ನರ ಬಳಿಗೆ ಕಳುಹಿಸಿದರು. ಗವರ್ನರವರು ಇವರನ್ನು ಬಹು ಪ್ರೀತಿಪೂರ್ವಕವಾಗಿ ಬರಮಾಡಿಕೊಂಡು, ಅವರ ಅಹವಾಲುಗಳನ್ನೆಲ್ಲಾ ಬಹು ಆದರದಿಂದ ಲಾಲಿಸಿ, ಅವರಿಗೆ ಸದುತ್ತರಗಳನ್ನು ಕೊಟ್ಟು, ತುಂಬಾ ಸಂತೋಷಪಡಿಸಿ, ಅವರವರ ಮನೆಗಳಿಗೆ ಕಳುಹಿಸಿಕೊಟ್ಟರು. ಈ ಮುಖಂಡರು ಬಹು ಸಂತೋಷದಿಂದ ವಾಪಸು ಬರುವಷ್ಟರಲ್ಲೇ ಪೊಲೀಸಿನವರು ಅವರನ್ನೆಲ್ಲಾ ಅವರವರ ಮನೆಗಳಿಗೆ ನುಗ್ಗಿ ದಸ್ತಗಿರಿ ಮಾಡಿ, ಬಂದೀಖಾನೆಗೆ ಕಳುಹಿಸಿಬಿಟ್ಟರು. ಪ್ರಜೆಗಳಿಗೆಲ್ಲಾ ತುಂಬಾ ಗಾಬರಿಯುಂಟಾಗಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ವಿಳಾಸಕ್ಕೆ ಕಾಗದ ಬರೆಯುವಾಗಲೂ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಪ್ರಜಾಹಿತಚಿಂತಕ ಪಂಚೇನಹಳ್ಳಿ—ಮುದ್ರಾಯ ಸೆಕ್ರೆಟರಿಯವರಿಗೆ ಬರೆದುಕೊಳ್ಳಿ. ಅವರು ಸರಿಪಡಿಸುತ್ತಾರೆ.

ಎಂ. ಆರ್. ಮು., ದೊಡ್ಡಬಳ್ಳಾಪುರ—ನಿಮ್ಮ ಬಾತ್ಮಿಯನ್ನು ಪ್ರಕಟಿಸುವದರಿಂದ ಉಪಕಾರಕ್ಕೆ ಪ್ರತಿಯಾಗಿ ಅಪಕಾರ ಸಂಭವಿಸೀತು.

—ಎಡಿ.

ಕರೆಸ್ಪಾಂಡೆನ್ಸ್.

ದಾವಣಗೆರೆಯ ಪ್ಲೇಗ್ ವಿಚಾರ.

ಆಯ್ಯಾ,

ಈಗ ದಾವಣಗೆರೆಯು ತುಂಬಾ ಆರೋಗ್ಯವಾಗಿಯೂ ಜನರಿಗೆ ಆನಂದವನ್ನು ಕೊಡುವಂಥಾದ್ದಾಗಿಯೂ ಇದೆ. ಆದರೆ ಈ ಮಧ್ಯೆ ಕೆಲವು ಪ್ಲೇಗು ತಗಲಿದ ಸ್ಥಳಗಳಿಂದ ಜನರು ಬಂದು ತುಂಬಿ, ಇಲ್ಲಿನ ಜನರ ಕ್ಷೇಮಕ್ಕೆ ಹಾನಿಮಾಡುವವರಾಗಿದಾರೆ. ಮುಖ್ಯವಾಗಿ ತಿಮ್ಮನಹಟ್ಟಿ, ಹರೀಕೆರೆ, ಕೊಟ್ಟೂರು, ಈ ಮೂರು ಸ್ಥಳಗಳಲ್ಲಿಯೂ ವಿಶೇಷ ಪ್ಲೇಗ್ ಇದೆ ಎಂದೂ ಜನರನ್ನು ಇಲ್ಲಿ ಕೆಲವರು ತಂದು ತಮ್ಮ ಮನೆಗಳಲ್ಲಿ ಸ್ಥಳ ಕೊಟ್ಟಿದ್ದಾರೆಂತಲೂ ಅವರ ಪೈಕಿ ಒಬ್ಬ ಹೆಂಗಸು ತೀರಿಹೋದಳೆಂತಲೂ ಜನರು ತುಂಬಾ ಗಾಬರಿಯಾಗಿ ಮಾತನಾಡಿಕೊಳ್ಳುತ್ತಾರೆ. ಇದರ ವಿಷಯದಲ್ಲಿ ತಾಲೂಕಿನ ಅಮಲ್‌ದಾರರು ಮತ್ತು ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರು ಚಿಂತೆ ತೆಗೆದುಕೊಳ್ಳದೆಹೋದರೆ ಕಳೆದ ವರ್ಷದ ಗತಿಯೇ ಈಗಲೂ ಈ ಊರಿಗೆ ಪ್ರಾಪ್ತವಾಗುವುದೆಂಬುವದಕ್ಕೆ ಏನೂ ಸಂದೇಹವಿಲ್ಲ. ಅಂಥಾ ಜನರನ್ನು ಊರಿನ ಆಚೆ ೧೦ ದಿನಗಳ ಮಟ್ಟಿಗೂ ಇಟ್ಟು ಆ ಮೇಲೆ ಊರಿಗೆ ಬಿಡುವಂತೆ ಏರ್ಪಾಡು ಮಾಡುವದು ಒಳ್ಳೇದು.

ಪುರನಿವಾಸಿ.

ಹೊಳೆನರಸೀಪುರದ ಮಧ್ಯ ಪೇಟೆಯಲ್ಲಿ ನಡೆದ ಕಳುವು

ಆಯ್ಯಾ,

ಹೊಳೆನರಸೀಪುರದ ಪೇಟೆಯ ಪಬ್ಲಿಕ್ ರೋಡಿನಲ್ಲಿ ಅರಸೀಕೆರೆ ನರಸಿಂಹಸೆಟ್ಟಿಯವರ ಮನೆಯ ಮುಂಭಾಗದ ಕಿಟಕಿಯ ಕೆಳಗೆ ಒಂದು ಮೊಳ ಚದರವಾದ ಕನ್ನಾಹಾಕಿ ಒಳಗಿದ್ದ ಸುಮಾರು ಐದು ಸಾವಿರ ರೂಪಾಯಿ ಬೆಳ್ಳಿ ಬಂಗಾರದ ಒಡವೆಗಳನ್ನೂ ನಾಣ್ಯಗಳನ್ನೂ ಯಾರೋ ಅಪಹರಿಸಿದರು. ಪೇಟೆಯ ಇಷ್ಟು ದೊಡ್ಡ ರಸ್ತೆಯಲ್ಲಿ ನಿರ್ಭಯವಾಗಿ ನಡೆದ ಈ ಕಳ್ಳತನವನ್ನು ನೋಡಿದರೆ ಊರಿನ ಜನಗಳಿಗೆಲ್ಲಾ ತುಂಬಾ ಆಶ್ಚರ್ಯವಾಗಿದೆ. ಪೊಲೀಸ್ ಬೀಟು ಇರುವ ಈ ಬೀದಿಯಲ್ಲಿಯೇ ಈ ಪ್ರಕಾರವಿದ್ದಲ್ಲಿ ಸಂದುಗೊಂದುಗಳಲ್ಲಿರುವ ಮನೆಗಳ ಪಾಡು ಏನು ! ಗುಮಾನಿಯ ಮೇಲೆ ಕೆಲವು ಜನಗಳನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿ ವಿಚಾರಣೆ ಮಾಡುತ್ತಿದಾರೆ. ಈ ಅವಸ್ಥೆಯು ಕಡೆಗೆ ಹ್ಯಾಗೆ ವ್ಯವಸ್ಥೆಯಾಗುವದೋ ನೋಡಬೇಕು. ಹಾಸನದಿಂದ ಪೊಲೀಸ್ ಸೂಪರಿಂಟ್ ಸಾಹೇಬರು ಬಂದು ಬಹು ಶ್ರದ್ಧೆಯಿಂದ ತನಿಖೆ ಮಾಡುತ್ತಿದ್ದಾರೆ. ಏನಾಗುವದೋ ತಿಳಿಯದು. ಕಳ್ಳತನ ಪತ್ತೆಯಾಗದೆ ಹೋದಲ್ಲಿ ಊರಿನಲ್ಲಿ ಕಳ್ಳರು ಭಯವಿಲ್ಲದೆ ಊರನ್ನೆಲ್ಲಾ ಹಾಳುಮಾಡುವದರಲ್ಲಿ ಸಂದೇಹವಿಲ್ಲ. ಆದ್ದರಿಂದ ಪೊಲೀಸ್ ಇಲಾಖೆಯವರು ಹೆಚ್ಚು ನಿಗಾ ಇಡಬೇಕೆಂದು ಹಂಬಲಿಸುತ್ತೇನೆ.

ತಿ. ಆರ್. ವೈ.

ನಮ್ಮ ಪುಸ್ತಕ ಭಂಡಾರವು

"ಶರಣಾಗತ."

ಇದು ಪ್ರಸಿದ್ಧ ಉಪನ್ಯಾಸ ಲೇಖಕರಾದ ಹೆನ್ರಿ ಫೀಲ್ಡಿಂಗ್ ಎಂಬುವರಿಂದ ಇಂಗ್ಲೀಷಿನಲ್ಲಿ ರಚಿಸಲ್ಪಟ್ಟು ಬೆಂಗಳೂರು ಪ್ಯಾರ ನಿವಾಸಸ್ಥರಾದ ಮ॥ ಎಮ್. ಆರ್. ಅಶ್ವತ್ಥರಾಯರಿಂದ ಹೊಸ ಕನ್ನಡಕ್ಕೆ ಪರಿವರ್ತನೆ ಮಾಡಲ್ಪಟ್ಟಿರುವುದು. ಇದು ಒಳ್ಳೆ ನೀತಿ ಬೋಧಕವಾದದ್ದು. ಮನುಷ್ಯನು ಎಷ್ಟೇ ವಿದ್ಯಾವಂತನಾದರೂ ನೀಚ ಸ್ನೇಹದಿಂದ ದ್ರೋಹ ವೇಶ್ಯಾಸಕ್ತನಾಗಿ ಬಹು ಭವಮಾನಭಂಗಪಡುವನೆಂದು ವಾಚಕರಿಗೆ ಪಾತ್ರಗಳಿಂದ ವ್ಯಕ್ತವಾಗುವುದು. ಪುಸ್ತಕವು ಸುಲಭಶೈಲಿಯಲ್ಲಿ ಬರೆಯಲ್ಪಟ್ಟು ಅಂದವಾಗಿ ಮುದ್ರಿಸಲ್ಪಟ್ಟಿರುತ್ತದೆ. ಇದು ಗ್ರಂಥಕರ್ತರಲ್ಲಿ ೬ ಆಣೆ ಕ್ರಯಕ್ಕೆ ದೊರೆಯುವುದು.

"ವಾಗ್ದೇವಿ"

ಇದು ಮಂಗಳೂರು ವಾಸಸ್ಥರಾದ ರಿವ್ರೆಂಡ್ ಚಟ್ಟೀಲ್ಡ್ ಮ॥ ಬೊಳಾರ್ ಬಾಬೂರಾಯರಿಂದ ರಚಿಸಲ್ಪಟ್ಟು ಐವತ್ತು ಅಧ್ಯಾಯಗಳನ್ನೊಳಗೊಂಡಿರುತ್ತದೆ. ಒಂದಾವರ್ತಿ ಪುಸ್ತಕವನ್ನು ಓದಲು ಪ್ರಾರಂಭಿಸಿದರೆ ಮುಗಿಯುವವರೆಗೂ ಮುಚ್ಚಗೊಡದ ರಸಭರಿತವಾಗಿರುವುದು. ಇದರಲ್ಲಿ ಮಠಾಧಿಪತಿಗಳ ದುರಾಚಾರ, ಈ ದುರಾಚಾರಕ್ಕೆ ಅನುಕೂಲಪಡಿಸತಕ್ಕ ಮಠಾಧಿಕಾರಿಗಳ ದುಷ್ಪ್ರವರ್ತನೆಯೂ, ಸ್ತ್ರೀಯರು ಅಗಾಗ್ಯ ಮಠಕ್ಕೆ ಹೋಗುವುದರಿಂದ ಆಗುವ ಕೇಡನ್ನೂ, ಹೀಗೆ ಒಂದು ಸಲ ಕೇಡಿಗೆ ಸಿಕ್ಕಿದ ಸ್ತ್ರೀಗೆ ಪದೇಪದೇ ಆಗತಕ್ಕ ಮಾನಭಂಗವೂ, ವಿಷಯಾಸಕ್ತರಾದವರು ತಪ್ಪದೆ ಬರುವ ಪ್ರಾಣಭಯವೂ, ಲಂಚಕೊಡುವ ಗ್ರಾಮಾಧಿಕಾರಿಗಳ ಅನ್ಯಾಯವೂ, ಸದಾಚಾರನಿಗಾಗತಕ್ಕ ಅಪಜಯಗಳೂ, ಕೊನೆಗೆ ಸತ್ಯವಂತನಿಗುಂಟಾಗುವ ಜಯವೂ ಇದರಲ್ಲಿ ಸೂಚಿಸಿರುವ ಮನೋಹರವಾದ ಪಾತ್ರಗಳಿಂದ ವಾಚಕರಿಗೆ ವಿಶದವಾಗಿ ತಿಳಿದುಬರುವುದು. ಗ್ರಂಥಸಮುಚ್ಚಯದ ಸುಪದ ಬೈಂಡಿಂಗ್‌ ಕೂಡಿ, ಮನೋಹರವಾಗಿ ಮುದ್ರಿಸಲ್ಪಟ್ಟಿರುತ್ತದೆ. ಪುಸ್ತಕದ ಕ್ರಯ ಒಂದು ರೂಪಾಯಿ ; ಗ್ರಂಥಕರ್ತರಲ್ಲಿ ದೊರೆಯುವುದು.

"ಕರ್ನಾಟಕ ಕೃಷ್ಣ ವಿಜಯವ್ಯಾಯೋಗಂ."

ಸಂಸ್ಕೃತದಲ್ಲಿ ಸರಸ ಕವಿ ಕುಲಾಲನಂದಬಾಣನೇ ಮೊದಲಾದ ಗ್ರಂಥಗಳನ್ನು ರಚಿಸಿರುವ ರಾಮಚಂದ್ರನೆಂಬ ಕವಿಯಿಂದ ನಿರ್ಮಿತವಾದ ಕೃಷ್ಣ ವಿಜಯವ್ಯಾಯೋಗವನ್ನು ಕರ್ನಾಟಕ ಕವಿದರ್ಶಿಕ ಗ್ರಂಥಕರ್ತರಾದ ಮ॥ ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಹಳಗನ್ನಡದಲ್ಲಿ ಪರಿವರ್ತನೆ ಮಾಡಿರುವರು. ಗ್ರಂಥವು ನಾನಾಭಾಷಾಮಯವಾಗಿರದೆ ಹಳಗನ್ನಡ ಪದಗಳಿಂದಲೂ ಕಂದಪದ್ಯಗಳಿಂದಲೂ ವಿಧ ವಿಧವಾದ ವೃತ್ತ ಜಾತಿಗಳಿಂದಲೂ ಪೂರ್ವ ಪದ ಪ್ರಯೋಗಗಳಿಂದಲೂ ಕೂಡಿ, ವೀರರಸಭರಿತವಾಗಿರುವುದು. ಹಳಗನ್ನಡದಲ್ಲಿ ಉತ್ಸಾಹ ವಿಶಿಷ್ಟರಾದವರು ಇದನ್ನು ಮನವಿಟ್ಟು ಓದಿದಲ್ಲಿ ಅದರಲ್ಲಿ ತುಂಬಾ ಪರಿಶ್ರಮವನ್ನು ಹೊಂದುವುದರಲ್ಲಿ ಸಂದೇಹವಿಲ್ಲ. ಶಿಶುಪಾಲನ ವಿವಾಹಕ್ಕಾಗಿ ಸಂಕಲ್ಪಿಸಿಟ್ಟ ರುಕ್ಮಿಣಿಯನ್ನು ಅವಳ ಸಮ್ಮತಿಯಿಂದಲೇ ಕೃಷ್ಣನು ಅಪಹರಿಸಿಕೊಂಡು ಹೋದ ಕಥೆಯಾಗಿರುವುದರಿಂದ ಗ್ರಂಥವು ಬಹಳ ರಸಯುಕ್ತವಾಗಿರುತ್ತದೆ. ಗ್ರಂಥದ ರಕ್ಷಾಪತ್ರಿಕೆಯಲ್ಲಿ "ದರಿದ್ರನಾದ ತನಗೆ ಆಭರಣಕ್ಕೆ ಗತಿಯಿಲ್ಲದಿದ್ದರೂ ಕೆರವರಿಂದ ಎರವಲು ತೆಗೆದುಕೊಂಡು ಇತರರ ಆಭರಣವು ಇದಕ್ಕೆ ಸಮಬಂಧೀಕೆಯೆಂದು ಹಾಸ್ಯಮಾಡುವಂತೆ ಕಾವ್ಯನು ತನಗೆ ಕವಿತಾಶಕ್ತಿಯಿದ್ದರೂ ಇತರ ಗ್ರಂಥಗಳನ್ನು ಓದಿ ಸತ್ವವಿ ನಿರ್ಮಿತವಾದ ಕಾವ್ಯ ಪುರಾತನ ಕಾವ್ಯಕ್ಕೆ ಸಮಬಂಧೀಕೇ ಎಂದು ದೂಷಿಸುವುದನ್ನು ನೋಡಿ ವಿದ್ವಾಂಸರು ನಗುವುದಿಲ್ಲವೇ" ಎಂಬ ಅರ್ಥಗರ್ಭಿತವಾದ ಪೂರ್ವಕವಿಯ ಪದ್ಯವನ್ನು ಸೂಚಿಸಿದೆ. ಇದನ್ನು ನೋಡಲಾಗಿ ಕವಿಯು ಪೂರ್ವ ಕಾವ್ಯಕ್ಕೆ ಸರಿಯಾಗಿ ಗ್ರಂಥಗಳನ್ನು ರಚಿಸಲ್ಲರೆಂದು ವ್ಯಕ್ತವಾಗುತ್ತದೆ. ಭಾಷಾಭಿಮಾನಿಗಳೆಲ್ಲರೂ ಗ್ರಂಥಕರ್ತರಿಗೆ ಪ್ರೋತ್ಸಾಹಕೊಡುವರೆಂದು ಕೋರುವೆವು. ನಂಜನಗೂಡು ಶ್ರೀಕಂಠ ಶಾಸ್ತ್ರಿಗಳು, ಕಶ್ಯಾಪಿಪುರ ಅಗ್ರಹಾರ, ಮೈಸೂರು—ಈ ವಿಳಾಸಕ್ಕೆ ಬರೆದು ಪುಸ್ತಕವನ್ನು ೬ ಆಣೆಗೆ ಹೊಂದಬಹುದು.

ತಾಲ್ಲೋಕು ವರ್ತಮಾನಗಳು.

ಚಾಮರಾಜನಗರ.—ಈ ಕಡೆ ಸುಮಾರಾಗಿ ಮಳೆ ಆಗುತ್ತಿರುವುದರಿಂದ ರೈತರಿಗೆಲ್ಲ ಬಹು ಸಂತೋಷವಾಗಿದೆ. ಭತ್ತ ವಿನಹ ಮಿಕ್ಕ ದಿನಸಿ ಧಾರಣೆಗಳು ಸುಮಾರಾಗಿ ಇಳಿಯುತ್ತಿವೆ.—ಹಿಂದೆ ಕೆಲವರ ಮೇಲೆ ಗಾಂಜಾ ಮೊಕದ್ದಮೆ ಆಗಿತ್ತು. ಇವರಲ್ಲಿ ಅಪರಾಧಿಗೆ ೧೫ ರೂ. ಜುಲ್ಮಾನೆ ವಿಧಿಸಿದರು.—ಈ ಊರಿನ ರಾಜಮಾರ್ಗಗಳಲ್ಲಿ ಪಾಳುಜಾಗಗಳು ಇರುತ್ತವೆ. ಜನರು ಅಲ್ಲಿ ಜಲಮಲವಿಸರ್ಜನೆ ಮಾಡುವುದಕ್ಕೆ ಅನುಕೂಲವಾಗಿರುತ್ತೆ. ಇದಕ್ಕೆ ಮ್ಯುನಿಸಿಪಾಲಿಟಿಯವರು ಗಮನಕೊಟ್ಟು, ಹೇಸಿಕೆ ತಪ್ಪುವಂತೆ ಏರ್ಪಾಟು ಮಾಡಿದರೆ ಅನುಕೂಲ.—ಈ ಊರಿನಲ್ಲಿ ಕೆಲವು ಜನ ಗಾಡಿಯವರು ಗಾಡಿ ಹೊಂದಿ ಸಹಿಯಲಾರದ ಮತ್ತು ಎಳೆಯಲಾರದ ಎತ್ತುಗಳನ್ನು ಕಟ್ಟಿ ಬಹುತರವಾಗಿ ಹಿಂಸಿಸುತ್ತಾರೆ. ಆ ಎತ್ತುಗಳ ಶ್ರಮವನ್ನು ನೋಡುವವರಾರು ? ಇನ್ನು ಮೇಲಾದರೂ ದಯಾಳುಗಳಾದ ಅಮಲ್ದಾರರವರು ಇದಕ್ಕೆ ತಕ್ಕ ಏರ್ಪಾಡು ಮಾಡಿದರೆ ಬಡ ಪ್ರಾಣಿಗಳ ಗೋಳು ತಪ್ಪುವುದು.—ಶನಿವಾರದ ರಾತ್ರಿ ವೆಂಕಣ್ಣನವರ ಮನೆ ಹಿಂಭಾಗದ ರಸ್ತೆಯಲ್ಲಿ ಒಬ್ಬ ಕಿರುಬನು ಬಂದು, ಕತ್ತೆಯನ್ನು ಕೊಂದು ಎಳೆದುಕೊಂಡು ಹೋಗಿ ಅಬ್ಬಾ ಬಿಟ್ಟುಬಿಟ್ಟನು

...ವಸ್ಥೆಯಲ್ಲಿ ಬಿಂದುಹಾಕಿತ್ತು. ಈಚೆಗೆ ಕಿರುಬವು ಊರೊಳಕ್ಕೆ ...ವಹಾಗಾಗಿರುವುದರಿಂದ ಜಾನುವಾರುಗಳಿಗೆ ತೊಂದರೆ ಸಂಭವಿಸುವುದು. ಆದ್ದರಿಂದ ಈಗಲೇ ಅದನ್ನು ಶಿಕಾರಿ ಮಾಡಿದರೆ ...ವಾಗಿಲ

ಚಿಕ್ಕಮಗಳೂರು.—ಈ ಪ್ರಾಂತ್ಯ ಮಳೆ ಹೆಚ್ಚಾಗಿ ಬರ... ಮಲೆನಾಡಿನಲ್ಲಿ ಅಂದರೆ ಚಿಕ್ಕಮಗಳೂರು ಬಿಟ್ಟು ಆರು ...ಯಿಂದ ಆಚೆಗೆ ಕಾಫಿತೋಟಗಳ ಪ್ರಾಂತ್ಯ ಸಾಧಾರಣವಾಗಿ ...ಳೆ ಬೀಳುತ್ತಲೇ ಇದೆ. ಈ ಕಡೆಯಲ್ಲಿ ಮಾತ್ರ ಮಳೆಯು ಸರಿ...ಗಿ ಆಗದೆಹೋದದ್ದರಿಂದ ಕೆರೆಗಳಿಗೆ ನೀರು ಇಲ್ಲದೆಯೂ ಕೆರೆ...ಯ ಇರುವ ಪೈರುಗಳಿಗೆ ಹದವಾಗದೆಯೂ ಬಿತ್ತಿದ ಪೈರೆಲ್ಲಾ ...ಗಿಹೋಗುತ್ತಲಿದೆ. ದಿನಸಿ ಧಾರಣೆಯಾದರೋ ಏರುತ್ತಲಿದೆ. ...ರಾಗಿ ಪೈರು ಮಾತ್ರ ತಕ್ಕಮಟ್ಟಿಗೂ ಆಗಿ, ಕಟಾವಿಗೆ ಬಂದಿದೆ. ...ಡೆಪ್ಯುಟಿ ಕಮಿಷನರ್ ಸಾಹೇಬರು ಎರಡು ದಿನ ರಜಾ ಪಡೆ...ಗೌರೀ ಹಬ್ಬಕ್ಕಾಗಿ ಬೆಂಗಳೂರಿಗೆ ಹೋಗಿದ್ದಾರೆಂದು ವರ್ತ...ಮಾನವಿದೆ.—ಇಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮೆ॥ ಕಾಳಪ್ಪಚೆಟ್ಟಿ...ಯವರು ಎರಡು ತಿಂಗಳ ರಜಾ ಪಡೆದು ತಮ್ಮ ಸ್ಥಳಕ್ಕೆ ಹೋಗಿರು...ದರಿಂದ ಅವರ ಬದಲಿಗೆ ಮಂಗಳೂರಿಂದ ಮೆ॥ ಕಾಡೋರ್‌ನಾ...ಯವರು ಬಂದು ಕೆಲಸ ನೋಡುತ್ತಿದಾರೆ.—ಆಚೇ ವಾರದಲ್ಲಿ ಸ...ರಾಯಪಟ್ಟಣಕ್ಕೂ ಕಡೂರಿಗೂ ಮಧ್ಯದಲ್ಲಿ ದರೋಡೆ ನಡೆದ...ಗೂ ಕಳ್ಳರು ಬಂಡಿಯಲ್ಲಿದ್ದವರನ್ನು ಬಹಳವಾಗಿ ಹೊಡೆದ ...ವರ್ತಮಾನ ಬಂದ ಕಾರಣ ಪೋಲೀಸ್ ಸೂಪರೆಂಟರು ಅಲ್ಲಿಗೆ ...ಗಿ ನೋಡಿ ಬಂದು, ಕಳ್ಳರನ್ನು ಪತ್ತೆ ಮಾಡುವ ಏರ್ಪಾಡಿನಲ್ಲಿ...ರುವುದಾಗಿ ವರ್ತಮಾನವಿದೆ.—ನಮ್ಮ ಡಾಕ್ಟರ್ ಸಾಹೇಬರು ಬರು...ವಾರ ಹೊರಡುತ್ತಾರೆಂದು ಕೇಳುತ್ತೇನೆ. ಆದರೆ ಇಲ್ಲಿಗೆ ಹೊಸ...ಬ್ಬರು ಇನ್ನು ಬಂದಿಲ್ಲ. ...ವರು ಬಂದ ಮೇಲೆ ಇವರು ಹೊ...ರಡುವರಾಗಿದಾರೆ.—ಸಂತೆಯಲ್ಲಿ ಆಗಾಗ್ಗೆ ಮುನಿಸಿಪಾಲಿಟಿಯ ಅ...ಧಿಕಾರಿಗಳು ಅಳತೆ ಸೇರು, ತೂಕದ ಬಟ್ಟುಗಳನ್ನು ತನಿಖೆ ಮಾಡುವ ...ದರೆ ವರ್ತಕರ ಅನ್ಯಾಯವಾದ ಅಳತೆ ತೂಕಗಳನ್ನು ಇಟ್ಟು...ಕೊಳ್ಳುವವರು ಕೊಂಡುಕೊಳ್ಳುವವರಿಗೆ ಉಪಕಾರ ಮಾಡಿದಂತಾ...ಗುವುದು

ಮೊಳಕಾಲ್ಮೂರು.—ಈ ಪ್ರಾಂತ್ಯದಲ್ಲಿ ಒಂದು ತಿಂಗಳಿ...ನಿಂದಲೂ ಸುತರಾಂ ಮಳೆ ಇಲ್ಲದೆ ಪೈರು ಪಚ್ಚೆಗಳೆಲ್ಲಾ ಒಣಗಿ ಬಾ...ಡಿಹೋಗುತ್ತಾ ಇದ್ದವು. ದನಕರುಗಳಿಗೆ ಮೇವಿಲ್ಲದೆ ಕ್ಷೀಣಿಸುತ್ತಿ...ದ್ದುವು. ಇವುಗಳ ಪೋಷಣೆಗಾಗಿ ಈಬುಬು ಮರಗಳು ...ರ ಕಡಿದು ಜನರು ಕಾಲಿನಾಲಿ ಸಿಕ್ಕದೆ ಕಷ್ಟಕ್ಕೆ ಗುರಿಯಾ...ದರು. ಆದಾ ಮನುಷ್ಯರು ಮಳೆಗಾಗಿ ಅನ್ನದೇವತೆಗಳನ್ನು ಪ್ರಾ...ರ್ಥಿಸಿ, ಭಗವಂತನೇ ಮಳೆಯನ್ನು ದಯಪಾಲಿಸಬೇಕೆಂದು ಹೇಳು...ತ ಆಕಾಶವನ್ನೇ ನೋಡುತ್ತಿದ್ದರು. ಸರ್ವ ಸೃಷ್ಟಿಕರ್ತನಾದ ...ಭಗವಂತನು ಮಳೆಯನ್ನು ದಯಪಾಲಿಸಿದನು. ಈ ಮಳೆಯು ...ಕೆಲವು ಸ್ಥಳಗಳಲ್ಲಿ ಮೂರು ನಾಲ್ಕು ಹದವನ್ನೂ ಇನ್ನು ...ಕೆಲವು ಸ್ಥಳಗಳಲ್ಲಿ ಐದಾರು ಹದವನ್ನೂ ಉಂಟುಮಾಡಿತು. ದಸರ...ದ ಹಬ್ಬದ ಬೀಡಿ ತಪ್ಪಿಸಿ ಮಳೆ ಬಂದ ಸಮಯಕ್ಕೆ ಧಾರಣೆ...ಗಳು ಕಮ್ಮಿ ಆಗಲಿಲ್ಲ. ... ಕೆರೆಗಳಾದರೂ ... ಯಾಗಿ ...ದೆ. ನೀರುಗಳ ಮೇಲೆ ... ಪೋಲೀಸ್ ... ಹೆಚ್ಚಾಗಿದ್ದರೆ ಒಳ್ಳೆಯದು.—ಗಡದಿನ ಮಾರ್ಗವು ಬಾಹ್ಯವಾಗಿ ...ಮೈಲಿ ದೂರದಲ್ಲಿದೆ. ಇದರ ಮೇಲೆ ಕೆಲವು ... ಬ... ಶಿವನಲ್ಲಿಯೂ ಯಾತ್ರೆಯೂ ... ದೇವಸ್ಥಾನ...ವೆ. ಅನೇಕ ಯಾತ್ರಾರ್ಥಿಗಳೂ, ಸರಕಾರದ ಅಧಿಕಾರಿಗಳೂ ...ಗ್ಗ ಇಲ್ಲಿಗೆ ಬರುವರು. ಮಾರ್ಗದ ಮೇಲೆ ... ಗು... ...ಡಿರುವ ಮಾರ್ಗವಿರಲಿಲ್ಲ. ಸದರಿ ಗ್ರಾಮದ ಪಟೇಲರಾದ ...ಪ್ಪಯ್ಯನವರು, ಬೆಂಗಳೂರು ಮೈಸೂರು ಮೊದಲಾದ ಪಟ್ಟ...ಣಗಳಿಗೂ ಗ್ರಾಮಾಂತರಗಳಿಗೂ ... ದ್ರವ್ಯ ಸಂಪಾದಿಸಿ, ಈ ...ದಿಂದ ಮಾರ್ಗವನ್ನು ... ಸಾಧ್ಯವಾದ ಮೆಟ್ಟಿಲು...ಗಳನ್ನು ಕಟ್ಟಿಸಿ ... ಗಳಿಂದ ಮಾಡಿಸುತ್ತಾರೆ. ಮೇಲಕ್ಕೆ ...ಗಳನ್ನು ... ಉಪಕಾರವನ್ನು ನೆನಸದೆ ಇರಲಾರರು. ... ಕಾಲುಭಾಗ ದಾರಿ ಮೆಟ್ಟಿಲಾಗದೆ ನಿಂತಿದೆ. ಈ ದೇವಸ್ಥಾನವು ...ಬದಿಯಾಗಿ ಸೇರಿದಂತೆ ಸರ್ಕಾರದವರು ಸಹಾಯ ಮಾಡಿ...ದ ಕೆಲಸ ಪೂರ್ತಿಯಾಗುವುದು.

ತಿಪಟೂರು.—ಮಳೆಯು ಬೆಳೆಗೆ ಅನುಕೂಲವಾಗಿರುತ್ತದೆ. ...ಕ್ಕೆ ರೂಪಾಯಿಗೆ ೭॥ ಸೇರಾಯಿತು. ... ದಿವಾನರವರ ... ...ಗಳನ್ನು ಯಾರ ... ಇಲ್ಲದೆ ಮಾರುತ್ತಾರೆ. ... ...ಕೊಂಡು ... ಮೇಲೆ ತನಿಖೆಗೆ ಬರಬಹುದು ...ನ ಬೀದಿ ಎಂಬ ... ಬೀದಿಯಲ್ಲಿ ... ನೀರ...ನ್ನು ... ನಿಲ್ಲಿಸುವದರಿಂದ ಆ ಬೀದಿಯ ನಿವಾಸಿಗಳ ... ತೊಂದರೆ ಎಂಬ ತಿಳಿಯುತು ... ಧಿಕಾರಿಗಳು ... ...ರುವರೆಂದು ನಿರೀಕ್ಷಿಸುತ್ತೇನೆ. ಕೆಲವು ಮಕ್ಕಳು ... ...ದ ತೊಂದರೆಪಡುತ್ತವೆ. ಇಂಥಾ ಸುಭಿಕ್ಷಕಾಲದಲ್ಲಿ ಕೆಲವರು ...ದರಿಕೊಂಡು ತಮ್ಮ ಮಕ್ಕಳಿಗೆ ... ಹಾಕಿಸದೆ ... ...ವ್ಯಸನಪಡುತ್ತೇನೆ.—ಆಸ್ಪತ್ರೆಯು ಊರಿಗೆ ... ...ನರು ಔಷಧಿಯನ್ನು ... ...ಧವನ್ನು ಕೇಳಿದರೆ ... ...ಅತ್ಯವಸರವಾಗುತ್ತದೆ. ... ... ಹೀಗಿದ್ದರೆ ಯಾವ ಔಷಧವಾನೇ ... ... ಅನುಭವವು ... ಮಾತ್ರ ಗೊತ್ತುಂಟು.—... ... ಮುನಿಸಿಪಲ್ ಬಾವಿಯು ಒಂದು ... ಬಹಳ ...ಇಂದಲೂ ... ಮಾಡಿಕೊಂಡಿರುತ್ತದೆ. ಮು...ನಿಸಿಪಲ್‌ನವರು ಮಾತ್ರ ನೋಡಿದ್ದರೆ ಆ ಮುಖವನ್ನು ನೆಟ್ಟಗೆ ಮಾಡುತ್ತಿದ್ದರೆನ್ನುವದಕ್ಕೆ ಸಂದೇಹವಿಲ್ಲ.—ರಸ್ತೆಯ ಪಡಗುಗ...ಳನ್ನು ... ಮುಚ್ಚಿಸಿದರು. ಆದರೆ ಇಲ್ಲಿನ ಸ್ಕೂಲಿನಲ್ಲಿ ಕೆಲವರಿಗೆ ... ... ಕಲ್ಲು ಎಂದು ಅನೇಕರು ... ... ಸ್ಕೂಲಿನ ... ...ವರ ... ... ಯೋಚನೆ ಮಾಡಿದರೆ ಒಳ್ಳೇದೆಂದು ನೆನಸುತ್ತೇನೆ.—ಕೆಲವು ದಿನಗಳ ಕೆಳಗೆ ... ... ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದ ಇಬ್ಬರು ಬ್ರಾಹ್ಮಣರನ್ನು ಸದರಿ ಸ್ಟೇಷನ್ ... ಸಾಧಾರಣ ... ಮಾಡಲು ಹೋ...ದ ಗುಮಾಸ್ತನು ... ... ವಿಚಾರಿಸಲು ಸುಮಾರು ೩೦೦ ರೂಪಾಯಿ ಬೆಳ್ಳಿ ಬಂಗಾರ ಸಿಕ್ಕಿತು. ಬೊಂಬಾಯಿ ಜಿಲ್ಲಾ ಧಾರವಾಡ ಡಿಸ್ಟ್ರಿಕ್ಟ್ ... ... ಮನೆಯಲ್ಲಿ ಎಗರಿಸಿದವರೆಂದು ಗೊತ್ತಾಯಿತು. ಪೋಲೀಸ್ ಇನ್ಸ್‌ಪೆಕ್ಟರಿಗೆ ತಂತಿ ಬಿಡಲು, ಕೂಡಲೇ ... ... ಆಸಾಮಿಗಳನ್ನು ವಿಚಾರಣೆಯಿಂದ ದಸ್ತಗಿರಿ ಮಾಡಿ, ... ಲಾಕಪ್ ಮನೆಯಲ್ಲಿಟ್ಟು ವಿಚಾರಣೆ ನಡೆಯುತ್ತಿದೆ. ಮತ್ತು ಆ ಡಿಸ್ಟ್ರಿಕ್ಟಿಗೂ ... ... ತಿಳಿಯಿತು. ಇದೀಗ ಸೂಕ್ಷ್ಮಬುದ್ಧಿ. ಆದರೆ ಹಿಂದೆ ... ಪೋಲೀಸಿನವರು ಆಸಾಮಿಗಳನ್ನು ನೋಡಿ, "ನಿನ್ನ ... ... ಹಾಕಿರುತ್ತೀ; ನೀನು ಕಳ್ಳ" ಎಂದು ಹೇಳಿದರೆ ಅದು ಯಾವ ಬುದ್ಧಿ?

ಚನ್ನಪಟ್ಟಣ.—ಇದುವರೆಗೆ ಆದ ಮಳೆಯಿಂದ ಈ ತಾಲ್ಲೋಕಿನ ಎಲ್ಲಾ ಭಾಗಗಳಲ್ಲೂ ಪೈರು ಸೊಂಪಾಗಿ ತೋರುತ್ತಿರುವದು. ಬೆಂಗಳೂರಿನಲ್ಲಿರುವ ... ...ಡೆಯವರಾದ ಮಿಸ್ ... ... ಯವರು ಅವರ ಸಹಾಯಕರಾದ ಮಿಸ್ ... ... ಯವರ ಸಂಗಡ ಚನ್ನಪಟ್ಟಣ ... ಮತ್ತು ಮಡವ ... ... ಯರ ಮೇಲೆ ... ... ಅವರು ... ... ಇಲ್ಲಿ ಒಂದು ಮನೆ ... ... ಕೆಲವು ಕಾಲದ ಮಟ್ಟಿಗೂ ಕೆಲಸ ನಡೆಸಿ, ಬಹು ಸಹಾಯ ಮಾಡು...ತ್ತಿದ್ದರು. ಈ ಊರಿಗೆ ಪ್ಲೇಗ್ ... ... ಸಂತೋಷ. ಆದರೆ ಅವರಿಗೆ ಇಲ್ಲಿನವರ ಮೇಲಣ ಅಭಿಮಾನ ಬಿಟ್ಟು ಹೋಗಲಿಲ್ಲ. ಈಗ ಇಲ್ಲಿನ ಎಲ್ಲಾ ಸ್ತ್ರೀಯರಿಗೂ ಹೆಚ್ಚು ಸಹಾಯ ಮಾಡುವದಕ್ಕಾಗಿ ... ... ಒಂದು ಸ್ವಂತ ಕಟ್ಟಡವನ್ನೇ ಕಟ್ಟಿಸಲು ಪ್ರಯತ್ನಪಟ್ಟಿರುವರು. ಕಟ್ಟಡವು ಆಗಲೇ ಪ್ರಾರಂಭವಾಗಿದೆ. ಭಗವಂತನು ಇವರನ್ನೂ ಇವರ ಪ್ರಯತ್ನಕ್ಕೆ ... ... ಇವರ ಮೂಲಕ ಬಹು ಜನರಿಗೆ ಆಯುರಾರೋಗ್ಯಭಾಗ್ಯಗಳನ್ನು ಉಂಟುಮಾಡಲೆಂದು ಬೇಡುತ್ತೇನೆ.—ಈ ... ... ನೀರಿನಿಂದಲೇ ಊರಿನವರೆಲ್ಲರೂ ಜೀವಿಸಬೇಕಾಗಿದೆ. ಈ ನೀರಿನ ... ... ವಿಷಯ ... ... ಈ ಕೆರೆಯು ನೀರು ... ... ಮಂದಗತಿಯ ... ... ಮನುಷ್ಯರ ... ... ಮೇಲೆಯೇ ಹರಿದು ಬಂದು ಸೇರುತ್ತೆ. ... ಆರೋಗ್ಯಕ್ಕೆ ... ... ಅಸಹ್ಯವೂ ಆಗಿದೆ. ಈ ಕಾಲದಲ್ಲಾದರೂ ... ... ಈ ನೀರಿನ ವಿಷಯದಲ್ಲಿ ಬಹು ದಿನಗಳಿಂದ ಪ್ರಜೆಗಳು ... ... ಸರ್ಕಾರಕ್ಕೆ ... ... ಈ ವಿಷಯದಲ್ಲಿ ತುಂಬಾ ... ... ಇಲ್ಲಿಗೆ ... ... ಗುಡ್ಡಗಳನ್ನು ಒಂದಾಗಿ ಸೇರಿಸಿ, ನೂತನವಾಗಿ ... ... ಈ ಪಟ್ಟಣಕ್ಕೆ ನೀರು ... ... ಗಿನ ... ... ರೂಪಾಯಿ ... ... ಈ ... ... ಈ ವರ್ಷವಾದರೂ ... ... ಪ್ರಜೆಗಳು ... ... ಇರುವರು. ಸರ್ಕಾರದವರ ಈ ಏರ್ಪಾಡು ಬಹು ಅನುಕೂಲವೂ ಆದಾಯವೂ ಸುಲಭಸಾಧ್ಯವೂ ಆಗಿರುತ್ತೆ.

ಚಿತ್ರದುರ್ಗ.—ಆಗಾಗ್ಗೆ ಮಳೆ ಬರುವಂತೆ ಅರ್ಭಟವಿರುತ್ತದೆ. ... ... ಈ ಪ್ರಾಂತ್ಯ ಕೃಷಿ ಭೂಮಿಗಳಲ್ಲಿ ಬತ್ತಿಯೇ ಇಲ್ಲ. ... ... ಭೂಮಿಗಳಲ್ಲಿ ... ... ಪೈರು ... ... ಮಳೆ ಬಂದು ... ... ಇಲ್ಲದಿರುವರು ... ... ಹಿಂದಿನ ... ... ನಲ್ಲಿಗಳನ್ನು ... ... ಇಲ್ಲವೋ ... ... ಅನೇಕ ... ... ಬಹಳ ... ... ಸರ್ಕಾರಿ ... ...

ತಿಪಟೂರು ... ಮನುಷ್ಯನೂ ಕೊಡಬೇಕು. ಇದೂ ಒಂದು ಸಕಾಲದಲ್ಲಿ ... ... ಇಲ್ಲದೆ ಬರದೆ ಇರಲು ಕಾರಣವಾಗಿದೆ. ... ... ಸರ್ಕಾರದಿಂದ ಬರು... ... ... ಒಂದು ವರ್ಷದಿಂದ ನಿಂತಿತ್ತು. ... ... ಗವರ್ನಮೆಂಟಿನವರು ... ... ಪ್ರಜೆಗಳು ... ... ಸಂಗೀತದಿಂದ ಜನಗಳನ್ನು ... ... ಹಿಂದೆಯೇ ತಿಳಿಸಿದೆ. ... ... ಸರ್ಕಾರ ... ... ಹಿಂದಿನಿಂದ ತಿಳಿಯಲಾಗುವದು.

ದೊಡ್ಡಬಳ್ಳಾಪುರ.—ಆಗಾಗ್ಗೆ ಮಳೆಯು ಸಕಾಲಕ್ಕೆ ಸರಿಯಾಗಿ ಸುರಿಯುವದರಿಂದ ರಾಗಿ ಬೆಳೆ ಬಹು ಚನ್ನಾಗಿದೆ. ಇನ್ನು ಬೀಗೆಯೇ ಒಂದು ತಿಂಗಳು ಮಳೆಯು ನಡೆದಲ್ಲಿ ರಾಗಿ ಬೆಳೆ ... ... ಪ್ಲೇಗ್ ಊರಿಗೆ ಬರುವದಕ್ಕೆ ಮಾರ್ಗವಿರುವದಿಲ್ಲ. ... ... ಸಂದೇಹವಿಲ್ಲ. ಪೋಲೀಸಿನವರಿಗೇನೇ ... ... ಉಪಕಾರಿಗಳು.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

22

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ರವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo.

ಇದು ಕಳೆದ ಐವರು ತಿಂಗಳ ಪ್ರಜೆಂಟೇಷನ್ ವಾಚು.

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್‌ಕೋಫ್ ಪೇಟೆಂಟ್ ಲಿವರ್ ವಾಚು ಆರು ಕಲ್ಲುಗಳುಳ್ಳ ಓಪನ್ ಫೇಸ್



ತೀರಿತ್ ಕಾಂಪೆನ್‌ಸೇಷನ್ ಬ್ಯಾಲನ್ಸ್ ಬಹು ಬಲಿಷ್ಠವಾದ ಗಡಿಯಾರ. ೫ ವರುಷ ಗ್ಯಾರಂಟೀ. ಕ್ರಯ ರೂ ೫—೮—೦. ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವವರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಅವರುಗಳು ಕೊಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರದೆಂದು ಪ್ರಚಾರ ಪಡಿಸಿದ್ದ ಮೇರೆಗೆ ೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರೆಗೆ ಕಳೆದ ಜುಲೈ ಆಖೈರ್ ವರೆಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡುತ್ತೇವೆಂದು ಸಮ್ಮೋದಿಸಿದ ಮೇರೆಗೆ ಜುಲೈ ಆಖೈರ್ ಆದಾಗ್ಯೂ ಅನೇಕ ದರಖಾಸ್ತುಗಳು ಬರುತಿರುವುದರಿಂದಲೂ ನಮ್ಮ ಏಜೆಂಟರು ಇನ್ನೂ ಕೆಲವು ಕಾಲದವರೆಗೆ ಜಾರಿಯಲ್ಲಿ ಇರಬೇಕೆಂದು ಕೋರಿದ್ದರಿಂದಲೂ ನಮ್ಮ ಕಳೆದ ಜೂನ್ ೩೦ ಆಜ್ಞೆಯ ಮೇರೆಗೆ ಪುನಃ ಬಹುಮತಿ ವಾಚು ಕೊಡಲ್ಪಟ್ಟಿತು. ಇದುವರೆಗೆ ವಾಚು ಬಹುಮತಿ ಪಡೆಯದೆ ಇರುವವರು ಜಾಗ್ರತೆ ದರಖಾಸ್ತು ಕಳುಹಿಸಿ ಬಹುಮಾನ ಪಡೆಯಬಹುದು.

ಈ ಕೆಳಗಿನ ನಕ್ಷೆಯಲ್ಲಿ ತೋರಿಸಿ ಇರುವ ಪ್ರಜೆಂಟೇಷನ್ ಸಾಮಾನುಗಳು ಮೊದಲು ಕಳುಹಿಸಿದ ಸಾಮಾನಿಗಿಂತ ಮೇಲಾಗಿಯೂ ಶಾಶ್ವತವಾಗಿಯೂ ಇರುತ್ತೆ.

ಕನ್ನಡ ಡಬ್ಬಿ ಇದು ಮೇಲಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿದ್ದು. ಕ್ರಯ, ೦—೮—೦.



ಗಡಿಯಾರ ಸರಪಳಿ ಇದು ಮೇಲಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದರ ಕೊನೆಯಲ್ಲಿ ಸುಂದರವಾದ ಉತ್ತಮ ಬುಕ್ ಕಟ್ಟಲ್ಪಟ್ಟಿರುತ್ತೆ ಎಂದಿಗೂ ಕೆಡಲಾರದು. ಕ್ರಯ, ೦—೮—೦.



ಮುಳುಗುವ ಮನೆ ದೀಪ—ಇದು ಮೇಜಿನ ಮೇಲಿರಿಸುವದಕ್ಕೂ ಗೋಡೆಗೆ ತಗಲಿಸುವದಕ್ಕೂ ಲಾಯಕ್ಕಾದದ್ದು ಎಣ್ಣೆಯು ಹೆಚ್ಚು ಕಡಿಮೆ ಸಾಕಾದಷ್ಟು ಬೆಳಕು. ಕ್ರಯ, ೦—೧೦—೦



ಶರಟ್ ಗುಂಡಿ—ಇದು ಮೇಲಾದ ಜರ್ಮನ್ ಸಿಲವರ್ ಬೆಳ್ಳಿಯಿಂದ ಹೊಸ ನಮೂನೆಯಾಗಿ ತಯಾರಿಸಲ್ಪಟ್ಟದ್ದು. ರೂ ೦—೧೦—೦.



ಆಭರಣ ಪೆಟ್ಟಿಗೆ—ಇಂಗ್ಲಿಷ್ ಮೇಡ್ ಕ್ಯಾಷ್ ಬಾಕ್ಸ್—ಈ ಆಭರಣ ಭದ್ರವಾಗಿ ಇರಿಸಬಹುದು. ಇದರೊಳಗೆ ಎರಡು ಖಾನೆಗಳುಳ್ಳ ೧ ಸಣ್ಣ ಪೆಟ್ಟಿಗೆ ಇದೆ. ಭದ್ರವಾದ ಬೀಗದಕೈ. ನೋಟಕ್ಕೆ ಸುಂದರವಾದದ್ದು. ಕ್ರಯ ೬—೧೦—೦

ವಿಳಾಸ:—ಮ್ಯಾನೇಜರ್, ಫ್ರಾಂಕ್ಲಿನ್ ವಾಚ್ ಕಂಪೆನಿ,
ಬ್ಲಾಕ್ ಟವನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೦೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಸುಧಾ.

ಇದನ್ನು ಓದಿ! ಬಿಡಬೇಡಿ !! ಗುಣ ನೋಡಿ !!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಾರೆ. ಕೆಮ್ಮು, ತಲೆನೋವು, ಅರತಲೆನೋವು, ಬೆನ್ನು ಕಳಕು, ಕೈಕಾಲು ನೋವು ಮುಂತಾದವುಗಳನ್ನು ಡೈನಾಮೈಟನಂತೆ ದಿಗಂತರಕ್ಕೆ ಹಾರಿಸಬಲ್ಲದು 'ಸುಧಾ' ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವು ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ. ಒಂದು ಸೀಸೆ ಔಷಧಿಯಲ್ಲಿ ಕಂಡುಬರುವ ಅಮೋಘಗುಣವನ್ನು ಹೆಚ್ಚು ವರ್ಣಿಸಿ ಮಾಡತೀರದು. ಸೀಸೆ ೧ಕ್ಕೆ ೦-೮-೦ ಹಾಸಲು ಬೇರೆ.

ಜೀವನಸುಧಾ—ಜ್ವರ ನಿಂತಕೂಡಲು ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧಮಂಡಲ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ. ಸೀಸೆ ೧ಕ್ಕೆ ರೂಪಾಯಿ ೧—೦—೦.

ತ್ರಿಶೂಲಾಂಬುಜಲ.—ಜಗತ್ಪ್ರಖ್ಯಾತವಾದ ತಾಂಬೂಲ ಮಾತ್ರೆಗಳ ಸೀಸೆ ೧ಕ್ಕೆ ೪ ಆಣೆ ೬ ಸೀಸೆವರೆಗೆ ವಿ. ಪಿ ಛಾರ್ಜು ೫ ಆಣೆ.

ದೇವನಹಳ್ಳಿ ಟವನ್, ಎಂ. ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟೀಷನರ್

ಪಿ. ಸುಬ್ಬರಾಯುಡುವರ

P. SUBBAROY'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯುಡುವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

ಅಕ್ಷಿಲ್ಲೇಶರ ಕಸ್ತೂರಿಮಾತ್ರೆ.

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು ಇದರಲ್ಲಿ ಅಸ್ಪೃಶ್ಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ, ಬಂಗಾರ ಮುಂತಾದ ಅಮೂಲ್ಯವಸ್ತುಗಳು ಸೇರಿರುವುದರಿಂದಲೂ, ಎಳೇಮಕ್ಕಳಿಂದ ಮುದುಕರವರೆಗೆ ಎಲ್ಲರೂ ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು. ಕ್ರಯ— ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೬ ಸೀಸೆಗೆ ವಿ. ಪಿ. ಛಾರ್ಜು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ —ದಿ ಮಹಮದ್ ಸಮದಾನಿ

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ.

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು.—ಕಾತ್ರೂರು ಪೋಲೀಸ್ ಇನ್ಸ್‌ಪೆಕ್ಟರ್.

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ — ಜಿ. ಕೃಷ್ಣಯ್ಯಂಗಾರ್, ಕೇರಾಫ್ ದಿವಾನ್ ಪೇಷ್ಕಾರ್, ಕೋಲಾರ.

Apply to :—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

19—8—1905 ರಿಂದ 25—8—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಪ್ರಾರಂಭದಿಂದ ಈ ವರೆಗೆ ಸಂಖ್ಯೆ.	
ಬೆಂಗಳೂರು ಪಟ್ಟಣ	2	[illegible]	[illegible]	[illegible]
ಮೈಸೂರು ,,	0	0	3	[illegible]
ಬೆಂಗಳೂರು ಡಿಸ್ಟ್ರಿಕ್ಟ್	39	27	317	16[illegible]
ಮೈಸೂರು ,,	19	18	176	14[illegible]
ಕೋಲಾರ್ ,,	1	1	119	9[illegible]
ಕೋಲಾರ್ ಚಿನ್ನದ ಗಣಿಗಳು	0	3	29	1[illegible]
ತುಂಕೂರು ಡಿಸ್ಟ್ರಿಕ್ಟ್	2	2	7	[illegible]
ಹಾಸನ ,,	0	0	46	4[illegible]
ಚಿತ್ರದುರ್ಗ ,,	0	0	152	1[illegible]
ಕಡೂರ್ ,,	8	5	176	1[illegible]
ಶಿವಮೊಗ್ಗ ,,	62	47	68	6[illegible]
ಒಟ್ಟು.	133	104	1004	7[illegible]

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರದ ಭಾದ್ರಪದ ಶುದ್ಧ ನವಮಿ ಗುರುವಾರದಿಂದ ಭಾದ್ರಪದ ಶು॥ ಪೌರ್ಣಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ. ೧೯೦೫ ನೇ ಇಸವಿ ಸೆಪ್ಟಂಬರ್

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	[illegible]
7	ಗುರು	ನವಮಿ	12 12	ಜ್ಯೇ	0 58	23
8	ಶುಕ್ರ	ದಶಮಿ	38 19	ಮೂಲಾ	56-58	24
9	ಶನಿ ,,	ಏಕಾದಶಿ	36 10	ಪೂ॥	57 50	25
10	ರವಿ ‡	ದ್ವಾದಶಿ	35 20	ಉ	58 21	26
11	ಚಂದ್ರ *	ತ್ರಯೋ	35-25	ಶ್ರ	0 0	27
12	ಕುಜ ¶	ಚತುರ್ದಶಿ	34-2	ಧ	1-2	28
13	ಬುಧ ✕	ಪೌರ್ಣಮಿ	39 20	ಶ	4-50	29

,, ಸರ್ವತ್ರಪರಿವರ್ತನೈಕಾದಶಿ.
‡ ವಾಮನಜಯಂತಿ, ದಗ್ಧಯೋಗ, ಪರಿವರ್ತನದ್ವಾದಶಿ.
* ಸೋಮಪ್ರದೋಷ.
¶ ವ್ಯತೀಪಾತಯೋಗ, ಶ್ರೀಮದನಂತಪದ್ಮನಾಭವ್ರತಂ.
✕ ಉಮಾಮಹೇಶ್ವರವ್ರತಂ.

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು
ಕಳ್ಳೇ ಅಕ್ಕಿ ಪಲ್ಲ ೧ಕ್ಕೆ	ರೂ ೧೨—೮—೦	೧೨—೮—೦
ಕೆಂಬೂತಿ ಅಕ್ಕಿ ಅವಲ್ ..	೧೬—೪—೦	೧೨—೧೨—೦
,, ಮಧ್ಯಮ	೧೨—೦—೦	೧೧—೧೨—೦
ಜಾಡ್ಯಾನ್ ಅಕ್ಕಿ	೧೨—೧—೦	೧೨—೯—೦
ಸಣ್ಣಕ್ಕಿ ಅವಲ್	೧೪—೦—೦	೧೩—೮—೦
,, ಮಧ್ಯಮ	೯ ೨ ೮—೦	೧೨—೮—೦
ತೊಗರಿ ಬೇಳೆ ಪಲ್ಲ ೧ಕ್ಕೆ	೧೧ ೬—೦	೧೧—೪—೦
,, ಮಧ್ಯಮ	೧೧—೮—೦	೧೧—೦—೦
ಹ್ಯಾರಾಗಿ ಪಲ್ಲ ೧ಕ್ಕೆ	೬—೪—೦	೫—೨—೦
ಕಾರ್ರಾಗಿ	೬—೦—೦	೫—೦—೦
ಜೋಳ	೬—೦—೦	೬—೬—೦
ಹಲಸಂದೆ ಪಲ್ಲ ೧ಕ್ಕೆ	೧೦—೦—೦	೧೧—೦—೦
ಬಿಳೀ ಅವರೆ	೮ ೧೨ ೦	೯—೨—೦
ಹೆಸರು	೯ ೧೨—೬	೧೧—೦—೦
ಉದ್ದು	೧೦ ೦ ೦	೯—೮—೦
ಕಡಲೆ	೧೦ ೦—೦	೯—೦—೦
ಎಳ್ಳು	೧೬ ೦ ೦	೧೫—೪—೦
ಹುರುಳಿ	೧೦—೦ ೦	೯—೨—೦
ಹರಳು ೧೦೬ ಸೇರಿಗೆ	೧೨—೮—೦	೧೨—೧೨—೦
ಸೀಗೆಕಾಯಿ ಮಣ ೧ಕ್ಕೆ	೩—೮—೦	೩—೧೨—೦
ನೆಲಗಡಲೆಕಾಯಿ	೪—೮—೦	೪—೮—೦
,, ಮಧ್ಯಮ	೩—೧೨—೦	೩—೧೨—೦
ಬೆಲ್ಲ ದೊಡ್ಡ ಅಚ್ಚು	೩—೪—೦	೫ ೨—೫—೦
ಒಳ್ಳೆಣ್ಣೆ ಮಣ ೧ಕ್ಕೆ	೪—೪ ೦	೪—೮—೦
ಹರಳೆಣ್ಣೆ ,,	೫—೦—೦	೪—೬—೦
ಕೊತ್ತಂಬರಿ ಬೀಜ ೧ಕ್ಕೆ	೧೦—೮—೦	೧೦—೪—೦
ಉಪ್ಪು ,,	೩—೦—೦	೬—೧೨—೦
ಹುಣಸೇ ಹಣ್ಣು	೧ ೦—೦	೦—೧೪—೦
,, ಜಳೇದು	೦—೧೪—೦	೦—೧೩—೦
ತುಪ್ಪ	೧೨—೮—೦	೧೧—೪—೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫—೦—೦	೩—೧೦—೦
ತೆಂಗಿನಕಾಯಿ ೧೦೦ಕ್ಕೆ	೫—೦—೦	೪—[illegible]
ಅಡಿಕೆಕಾಯಿ ಮಣ ೧ಕ್ಕೆ	೧—೦—೦	೦—೯—[illegible]
ಹಂಬಾಕೆಲೆ ಕಾಯಿ ಮಣ ೧ಕ್ಕೆ	೦—೧೪—೦	೧—೧—೦
ಚಿನ್ನ (ಪೌನ್) ಕೆಂಪು	೧೫—೮—೦	೧೫—೬—[illegible]
,, ,, ಹಸಿರು	೧೫—೧೦—೦	೧೬—[illegible]
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೨೪—೬—[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೬೨—೦—೦	೬೪—೮—[illegible]

Printed and Published by the Rev. H. Spencer, B.A. the Proprietor and Manager, Wesleyan Mission Press, Mysore. 7/9/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಸೆಪ್ಟಂಬರ್ ತಾರೀಖು ೧೪ ನೇ ಗುರುವಾರ. — ಸಂಚಿಕೆ ೧೬

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮ|| ಟಿ. ಹಿ. ರಾಮಸ್ವಾಮ್ಯಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಮೇಲಿನ ತರಗತಿಗಳಿಗೂ ಎಲ್ಲಾ ಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೦ ಮೇರೆ ಡಿಸ್ಕೌಂಟು ಕೊಡಲಾಗುವದು. ಪ್ರತಿಗಳನ್ನು ಬೇಕಾಗಿ ತರಿಸಿಕೊಳ್ಳುವವರು—ಮಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಿಕೊಳ್ಳುವ ವಿದ್ಯಾರ್ಥಿಗಳು ಮೆ|| ಶಾವನರು ಪಿ. ವಾ. ಸ್ಟೋರ್ಸ್, ಸಿ. ಎಚ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ:—೧ ಪ್ರತಿಗೆ ೬ ಅಣೆ, ಪೋಸ್ಟೇಜು ೧ ಆಣೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

ಜ್ಞಾನಪ್ರೇಮಿ ! ದ್ರವ್ಯಪ್ರೇಮಿ ! ಸ್ನೇಹಿತರೇ ! ಜಾಗ್ರತೆ ತಿಳಿಸಿ. ಜ್ಞಾನಸಂಪಾದನೆಗೋಸ್ಕರ ಕೆಳಗೆ ಕಂಡ ಪುಸ್ತಕಗಳನ್ನು ಓದಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮಾಸಿಶ್ರೇಷ್ಠರಾದ ನಿರ್ಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮಾ|| ರಾ|| ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿದೆ. ಇದರ ಕ್ರಯ ೧೦ ಅಣೆ; ವಿ. ಪಿ. ಮೂಲಕ ೧೪ ಅಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್‌ರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಅಣೆ.

೩. "ಸ್ವಪ್ನಪ್ರವಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಅಣೆ.

೪	"ರೋಮನರ ಚರಿತ್ರೆ"	ಕ್ರಯ ೦—೨—೦
೫.	"ಗ್ರೀಕರ ಚರಿತ್ರೆ."	,, ೦—೨—೦
೬.	"ಅನುಭವಾನಂದ.",,	೦—೬—೦
೭.	"ಗಣಿತ ಸಂಜೀವಿನಿ."	೦—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ."	೦—೧೨—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೨—೦
೧೧.	"೧೯೦೫ನೇ ವರುಷದ ಡೈರಿಗಳು."	

ಕ್ಲಾತ್, ಪೆನ್ಸಿಲ್ ಸಹಿತ ೦—೬—೦ ; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಚ್. ಎಸ್ ಬುಕ್ ಡಿಪೋ,
ಮೈಸೂರು.

ಏಕೋತ್ತರ ಶತಸ್ಥಲ ಸಾರಸಂಗ್ರಹ.

ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರು ಶ್ರೀ ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತವು ಸಿದ್ಧಾಂತ ಶಿಖಾಮಣಿಯೆಂಬ ಸಂಸ್ಕೃತ ಗ್ರಂಥದಿಂದ ಕನ್ನಡ ವಚನ ರೂಪವಾಗಿ ಸಂಗ್ರಹಿಸಿ ಬರೆಯಲ್ಪಟ್ಟಿದೆ. ಈ ಗ್ರಂಥದಿಂದ ವೀರಶೈವ ಸಿದ್ಧಾಂತವನ್ನು ಸಕಲರೂ ಸುಲಭವಾಗಿ ತಿಳಿದುಕೊಳ್ಳಬಹುದು. ಕ್ರಯ—೨ ವಿ. ಪಿ. ಮೂಲಕ ೧೦ ಅಣೆ. ವಿಳಾಸ—ಬಿ. ಚಂದ್ರಶೇಖರಶಾಸ್ತ್ರಿ, ವೀರನಗೆರೆ, ಮೈಸೂರು.

ಮ|| ರಾ|| ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

ಮೆಟ್ರಿಕ್ಯುಲೇಷನ್ ಕನ್ನಡದ ೧ನೆ ಪುಸ್ತಕದ ನೋಟ್ಸು	೦—೪—೦
ಡಿಟ್ಟೋ ,, ,, ೨ನೆ ಪುಸ್ತಕದ ನೋಟ್ಸು	೦—೪—೦
ಡಿಟ್ಟೋ ೩—೪ ನೆಯ ಪುಸ್ತಕಗಳ ನೋಟ್ಸು	೦—೬—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಷೆ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಜ್ವರಾರಿ.



ಎಲ್ಲಾ ಪ್ರಕಾರದ ಜ್ವರ, ಚಳಿಜ್ವರ, ಕೆಂಡರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಬರುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಾಜಿ ... ಆಫೀಸರ್ ಎಸ್. ಎ. ವೆಂಕಟಸುಬ್ಬಯ್ಯನವರು—ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬಿದ್ದಿರುವರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಶಿವಮೊಗ್ಗ ಅಸಿಸ್ಟೆಂಟ್ ಸರ್ಜನ್ ಗೋಪಾಲರಾಯರು—ಹೆಸ್ರಿಯ ... ಕರ್ಪೂರವನ್ನು ನಾನೂ ನನ್ನ ಕಾಯಿಲೆಯವರಿಗೂ ಉಪಯೋಗಿಸಿದ ಆಸ್ಪತ್ರೆಯಲ್ಲಿ ಅನೇಕ ಸಂದರ್ಭಗಳಲ್ಲಿಯೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:— ಕೆಮಿಕಲ್ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಕೆಮಿಕಲ್ ಹಾಲ್ ಬ್ರಿಜ್, ಮದರಾಸ್.

"ಇಂಗ್ಲೀಷ್ ವೈದ್ಯಶಾಸ್ತ್ರ"

ಕ್ರಯ ರೂ. ೧ ೮-೦, ಹಾಸಲು ೨ ಆ., ವಿ. ಪಿ. ೩ ಆಣೆ.

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಇವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ಅಂಶಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಾಶಸ್ತ್ಯವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ ಹಾಗೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೂ, ಇದು ಬಹಳ ಸಹಾಯಕರವಾಗಿರುವುದು.

ವಿಳಾಸ —ಎಂ. ಗುರುರಾವ್, ಆಸ್ಪಿಟಲ್ ಅಸಿಸ್ಟೆಂಟ್,
ಹರೀಹರ, ಚಿತ್ರದುರ್ಗ ಡಿಸ್ಟ್ರಿಕ್ಟ್.

ಪೋ ೀ ಪೋ ೀ ಸಿ ಯಾ.



ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಕ್ವಾಪಿ ಇಲ್ಲವೆಂಬುದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಬೇನೆಗಳಿಗೆ ಮುಖ್ಯವಾಗಿ ಸಿದ್ಧೌಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಬಂದಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಕೀಲುವ್ಯಾಧಿ, ಉಳುಕು, ಗಾಯಗಳು, ಸಣ್ಣ ಹೊರಳುವದು, ಊತ, ಶೀತವಾಯು, ಗುಳ್ಳೆಗಳು, ಹಲ್ಲುನೋವು, ಮಾಂಸ ಖಂಡದ ನೋವು, ಊತಗಳು, ಗಡ್ಡೆಗಳು, ಚರ್ಮಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಟ್ಟೆರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಕುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬೆಲೆಯ ಡಬ್ಬಿಯಲ್ಲಿ ೧ ರೂ ಡಬ್ಬಿನಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಪೋಲೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಪೋಲೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಬೇಕಾದರೆ ಕೋಟೆಸನುಗಳನ್ನು ಅಪೇಕ್ಷಿಸುವರಿಗೆ ಕಳುಹಿಸಲಾಗುತ್ತೆ.

ವಿಳಾಸ:—ಪೋಲೋಸಿಯಾ ಕಂಪೆನಿ. ೨೨ ನೆಂಬರು ಬ್ರಾಡ್‌ವೇ, ಮದರಾಸ್.

—ಅವಲ್ ತರಹದ ಕಸ್ತೂರಿ.—

ನೇಪಾಳದಿಂದ ತರಿಸಿ ಮಾರುತ್ತ ವರ್ಷಗಳಿಂದಲೂ ಇದರಲ್ಲಿ ಖ್ಯಾತಿಯನ್ನು ಪಡೆದಿರುವೆವು. ನಮ್ಮಲ್ಲಿ ಸರ್ವದಾ ದೊರೆಯುವದು. ಅನೇಕರು ನಮ್ಮಲ್ಲಿಯೇ ತರಿಸಿಕೊಳ್ಳುವರು ವರ್ತಕರಿಗೆ ವಿಶೇಷ ತೊಲ ೧ಕ್ಕೆ ೩೦ ರೂ ಇತರರಿಗೆ ಚಿಲ್ಲರೆಗೆ ೧-೨-೦. ವಿಳಾಸ—ಮುದ್ದುರಾಮಯ್ಯ ಅಂಡ್ ಸನ್ಸ್ ದೊಡ್ಡಪೇಟೆ, ಬೆಂಗಳೂರು ಸಿಟಿ.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

G

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ, ನಂತರ ಬಂದರೆ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮಹಾತ್ಮೆ. ಸಪ್ತವ ಕಾಂಡಕ್ಕೆ ಸಂಬಂಧವಾದ ೧೭ ಚಿತ್ರಗಳಿದೆ. ಕ್ರಯ ಸುಲಭವಾಗಿದೆ. ೧೭ ಚಿತ್ರಗಳಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೨—೮. ಚಿತ್ರಗಳಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮. ಕಡ್ಡಾಯ ಮಣಿಆರ್ಡರಿಗೂ ವಿ. ಪಿ. ಯೂ ಕಳುಹಿಸುತ್ತೆ. ವಿಳಾಸ—ಮೈಸೂರು ದವಳ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ.

ನೋಟೀಸು

ಮೈಸೂರು ಮರ್ಕಂಟೈಲ್ ಟ್ರೇಡಿಂಗ್ ಬ್ಯಾಂಕ್ ಲಿಮಿಟೆಡ್ ಆಫೀಸಿಗೆ, ೧೯ರ ಸರಸುಂದ್ರಯ್ಯ, ಸರಸುಂದ್ರ ಪಂಡಿತ ಉರುಫ್ ಅಪ್ಪಣ್ಣ ಪಂಡಿತರು, ದಶರಥ ಶೀತಾರಾಮಶಾಸ್ತ್ರಿ, ಯಸ್. ಪಿ ಬಸವಯ್ಯ ಸಹ ಬರೆದುಕೊಟ್ಟಿರತಕ್ಕ ೧೩—೬—೧೯೦೫ನೆ ಮಾರ್ಚ್ ನಂಬರು ೪೬ನೆ ನಾಲಕ್ಕು ಸಾವಿರ ರೂಪಾಯಿಗಳು ಬಾಬತು ರಿಜಸ್ಟರ್ ಆಧಾರ ಈ ಡಸ್ಟ್ರೀಬ್ಯುಸನ್ಸ್ ಸಬ್ ಜಡ್ಜರವರ ಕೋರ್ಟಿಗೆ ಹಾಜರುಮಾಡುವ ಉದ್ದೇಶ್ಯ ಮಿಮೋ ಸಹಿತ ಒಂದು ಕವರಿನಲ್ಲಿ ತಾರೀಖು ೮-೯-೦೫ ರಲ್ಲಿ ಮಧ್ಯಾಹ್ನ ಹನ್ನೆರಡೂವರೆ ಘಂಟೆಯಲ್ಲಿ ಮನೆಯಿಂದ ಹೊರಟಾಗ ಜೇಬಿನಲ್ಲಿ ಹಾಕಿಕೊಂಡು ಬಂದೆ ಕೋರ್ಟು ಬಳಿ ಹಾಜರುಮಾಡಲು ನೋಡಿಕೊಂಡಾಗ್ಯೆ ಇರಲಿಲ್ಲ. ದಾರಿಯಲ್ಲೋ ಅಥವ ಕೋರ್ಟುಬಳಿಯೋ ಬಿದ್ದು ಗರ್ಮಿಲಿಯಾಗಿದೆ ಇದನ್ನು ಪತ್ತೆಮಾಡಿಕೊಟ್ಟವರಿಗೆ ೫ ರೂಪಾಯಿ ಬಹುಮಾನ ಕೊಡುತ್ತೇನೆ.

ಮೈಸೂರು. ಎಂ ಪಿ ಸುಬ್ಬರಾವ್.

೯—೯—೧೯೦೫. ಏಜಂಟ್, ಮರ್ಕಂಟೈಲ್ ಟ್ರೇಡಿಂಗ್ ಬ್ಯಾಂಕ್,

"ಪ್ರಸಿದ್ಧ ಪತ್ರಿಕೆ."

"ಲೋಕಮಿತ್ರ ಐಕಮತ್ಯವು" 'ನಗದು

"ಶ್ರೀ ಆತ್ಮನಂದಕರ ಕಂಪೆನಿ"

ತಿರಮಕೂಡ್ಲು ನರಸೀಪುರ, ಮೈಸೂರು ಡಿಸ್ಟ್ರಿಕ್ಟು.

"ಸುಲಭಮಾರ್ಗ"

I A. ಈ ಸಂಘ. (ಕಂಪನಿ) ದಿಂದಾಗಲಿ, ಇವರಿಂದ ರಸೀತಿ ಪಡೆದವರಿಂದಾಗಲಿ ನಾಲ್ಕಾಣೆ ಬಾಳುವ ಒಂದು ಟಿಕೆಟ್ಟನ್ನು ಪಡೆಯಬೇಕು.

(B) ಈ ರೀತಿ ಪಡೆದ ಟಿಕೆಟ್ಟಿನ ಸಂಗವ ಕಂಪನಿಗೆ ಒಂದು ರೂಪಾಯಿಯನ್ನು ಮಣಿಆರ್ಡರ್ ಮೂಲಕ ಕಳುಹಿಸಬೇಕು. ಮೇಲ್ಕಂಡ ಮಣಿಆರ್ಡರ ಹಣವನ್ನು ಕಂಪನಿ ಹೊಂದಿದ ತಕ್ಷಣ ಒಂದು ರೂಪಾಯಿ ಕಳುಹಿಸಿಕೊಟ್ಟ ಚಂದಾದಾರರಿಗೆ ಟಿಕೆಟ್ ೧ಕ್ಕೆ ನಾಲ್ಕಾಣೆ ಕ್ರಯಬಾಳುವ ನಾಲ್ಕು ಟಿಕೆಟ್ಟು ಕಳುಹಿಸಲ್ಪಡುತ್ತೆ.

II (A) ಈ ರೀತಿ ಪಡೆದ ಟಿಕೆಟ್ಟುಗಳನ್ನು ಬೇರೆ ಮಾಡಿಬಂದ ಮೊಬಲಗು ಒಂದು ರೂಪಾಯಿಯನ್ನು "ನೀವೆ" ಇಟ್ಟುಕೊಳ್ಳಬಹುದು.

(B.) ನಿಮ್ಮಿಂದ ಕ್ರಯಕ್ಕೆ ಪಡೆದವರು ನಾಲ್ಕು "ಜನ"ಗಳು ನಿನ್ನಂತೆಯೇ ಒಂದೊಂದು ರೂಪಾಯನ್ನು ಟಿಕೆಟ್ಟಿನಿಸಿ ಕಂಪನಿಗೆ ಕಳುಹಿಸಬೇಕು, ಈರೀತಿ ಬಂದ ಮಣಿಆರ್ಡರನ್ನು ಕಂಪನಿ ಹೊಂದಿದ ತಕ್ಷಣ ನಿಮಗೆ ಮೂರು ರೂಪಾಯನ್ನು ಮಣಿ ಆರ್ಡರ "ಮೂಲಕ ಕಳುಹಿಸಲ್ಪಡುತ್ತೆ.

(C.) ಒಂದು ವೇಳೆ ನಿಮಗೆ ಕಳುಹಿಸಿದ ನಾಲ್ಕು ಟಿಕೆಟ್ಟುಗಳು ಖರ್ಚಾಗದೆ ಮೂರು ಟಿಕೆಟ್ಟುಗಳು ಖರ್ಚಾಗಿ ಅದರ ಮೂಲಕ ಹಣ ಬಂದಲ್ಲಿ ಎರಡು ರೂಪಾಯಿಯೂ, ಎರಡು ಟಿಕೆಟ್ಟು ಖರ್ಚಾಗಿ ಹಣ ಬಂದಲ್ಲಿ ಒಂದು ರೂಪಾಯಿಯೂ, ಒಂದು ಟಿಕೆಟ್ಟು ಖರ್ಚಾಗಿ ಹಣಬಂದಲ್ಲಿ ಬೆಲೆ ಬಾಳತಕ್ಕ ಸುಂದರವಾದ, ಸರಸ್ವತಿ, ಮತ್ತು ಲಕ್ಷ್ಮಿಯ ರವಿವರ್ಮ ಫೋಟೋಗಳು ಕಳುಹಿಸಲ್ಪಡುತ್ತವೆ.

(D.) ಕಂಪನಿಯಿಂದ ನಾಲ್ಕು ಟಿಕೆಟ್ಟುಗಳು ಒಳಗೊಂಡ ಸರ್ಟಿಫಿಕೇಟು ಪಡೆಯಬೇಕಾದಲ್ಲಿ ಒಂದಾಣೆಯ ರೂಪಾಯಿ ಕಂಪನಿಗೆ ಕಳುಹಿಸಬೇಕು. ಒಂದು ವೇಳೆ ನಾಲ್ಕು ಕಾಲಾಣೆಯ ಪೋಸ್ಟೇಜು ಸ್ಟ್ಯಾಂಪನ್ನಾಗಲಿ ಅಥವಾ "ನಗದಾಗಿ" ನಾಲ್ಕಾಣೆಯನ್ನಾಗಲಿ ಕಳುಹಿಸಿದರೆ ನಾಲ್ಕಾಣೆ ಬಾಳುವ ಒಂದು ಟಿಕೆಟ್ಟು ಕಳುಹಿಸಲ್ಪಡುತ್ತೆ.

N. B. ಹೆಚ್ಚು ವಿವರಗಳು ತಿಳಿಯಬೇಕಾದವರು ಅರ್ಧಾಣೆ ಸ್ಟ್ಯಾಂಪ್ ಇಟ್ಟು ಬರೆದುಕೊಳ್ಳಬೇಕು. 'ಪ್ರತಿ ತಾಲ್ಲೂಕು ಹೆಡ್' ಕ್ವಾರ್ಟರುಗಳಲ್ಲಿಯೂ ಚುರುಕಾದ ಏಜಂಟುಗಳು ಬೇಕಾಗಿದೆ. ಇಷ್ಟಪಟ್ಟವರು ಅಪ್ಲೈ ಮಾಡಿಕೊಳ್ಳಬಹುದು.

ವಿಳಾಸ.—ಶ್ರೀ ಆತ್ಮಾನಂದಕರ ಕಂಪೆನಿ, ಟಿ ನರಸೀಪುರ, ಮೈಸೂರು.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

೨೫

ಈ ಔಷಧವು ಪ್ರತಿ ಮನೆಯವರಿಗೂ ಅಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಹೋರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಪೂರ್ತಿಯಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವದಕ್ಕೂ ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇವಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು.—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮವುಂಟ್ ರೋಡ್,

ಮದರಾಸ್.

ವೃತ್ತಾಂತ ಪತ್ರಿಕೆ.

—:೦.—

ಸನ್ ೧೯೦೫ನೇ ಇಸವಿ ಸೆಪ್ಟಂಬರ್ ತಾ॥ ೧೪ನೇ ಗುರುವಾರ.

ಮೈಸೂರು ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನವು.

ಮುಂಬರುವ ವರ್ಷದ ಆದಿ ಭಾಗದಲ್ಲಿ ನಮ್ಮ ಈ ಸಂಸ್ಥಾನವನ್ನು ದರ್ಶಿಸುವುದಕ್ಕೆ ಘನತೆಯನ್ನು ಹೊಂದಿದ ಪ್ರಿನ್ಸ್ ಆಫ್ ವೇಲ್ಸ್ ಯುವರಾಜರವರು ಪತ್ನೀ ಸಮೇತರಾಗಿ ದಯಮಾಡಿಸುವವರಾಗಿದ್ದಾರಷ್ಟೆ ಈ ವಿಶೇಷವಾದ ಸಂದರ್ಭವನ್ನು ಸ್ಮರಣೀಯವಾದುದನ್ನಾಗಿ ಮಾಡುವುದಕ್ಕೋಸ್ಕರ ಶ್ರೀಮನ್ಮಹಾರಾಜರವರ ಸರ್ಕಾರದವರು ಈ ರಾಜಧಾನಿಯಲ್ಲಿ ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸುವ ನಿಮಿತ್ತವಾಗಿ ಅಪ್ಪಣೆಯನ್ನು ಕೊಟ್ಟಿರುವರು. ಈ ಪ್ರದರ್ಶನವನ್ನು ಶ್ರೀಮಂತರವರೂ ಬಂದು ನೋಡಿ, ನಮ್ಮ ಈ ಸಂಸ್ಥಾನದ ಉತ್ಪನ್ನಗಳನ್ನೂ ಪ್ರಜೆಗಳ ಅಭಿವೃದ್ಧಿಯನ್ನೂ ಗ್ರಹಿಸುವುದಕ್ಕೆ ಅವಕಾಶವುಂಟಾಗಬೇಕೆಂಬುದು ನಮ್ಮ ಗವರ್ನಮೆಂಟಿನವರ ಸದುದ್ದೇಶವಾಗಿದೆ. ಇಷ್ಟೇ ಅಲ್ಲ. ಈ ವಸ್ತುಪ್ರದರ್ಶನವನ್ನು ನೋಡಬೇಕೆಂದು ಸಂಸ್ಥಾನದ ಚತುರ್ದಿಕ್ಕುಗಳಿಂದಲೂ ಬರಬಹುದಾದ ಪ್ರಜೆಗಳು ತಮ್ಮ ಸಾರ್ವಭೌಮರಾಗಿರುವ ಎಡ್ವರ್ಡ್ ಚಕ್ರವರ್ತಿಗಳ ಪುತ್ರರನ್ನು ನೋಡಿ ಸಂತೋಷಪಡುವುದಕ್ಕೂ ಈ ಸಂದರ್ಭವು ಒಂದು ನಿಮಿತ್ತವಾಗಿರುವುದು.

ಈ ಪ್ರದರ್ಶನೋತ್ಸವಕ್ಕೆ ಅವಶ್ಯಕವಾದ ಏರ್ಪಾಡುಗಳನ್ನು ಮಾಡುವುದಕ್ಕೆ ಇನ್ನೂ ಪೂರ್ಣವಾಗಿ ತೊಡಗಲಿಲ್ಲ. ಆದರೂ ಪ್ರದರ್ಶನವು ಯಾವ ಪರಿಯಾಗಿರತಕ್ಕದೆಂಬ ವಿಷಯವನ್ನೂ ಅದನ್ನು ಯಾವ ಸ್ಥಾನದಲ್ಲಿ ನಡಸತಕ್ಕದ್ದು, ಬಹುಮಾನಗಳನ್ನು ಹೇಗೆ ವಿನಿಯೋಗಿಸತಕ್ಕದ್ದು, ಪ್ರದರ್ಶನದ ಕಟ್ಟಣಗಳಿಗೆ ಅಂದಾಜಾಗಬಹುದಾದ ವೆಚ್ಚವನ್ನು ಹೇಗೆ ನಿರ್ಣಯಿಸತಕ್ಕದ್ದು ಎಂಬೀ ವಿಷಯಗಳನ್ನೂ ನಿರ್ಧರಿಸುವುದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿದ್ದಾರೆ. ಈ ಕಮಿಟಿಗೆ ಮೆ॥ ರಾಯಬಹದರ್ ಸಿ. ಮಾದಯ್ಯನವರನ್ನೇ ಅಧ್ಯಕ್ಷರನ್ನಾಗಿಯೂ ಮೆ॥ ಎ ಆನಂದರಾಯರವರನ್ನೇ ಸೆಕ್ರೆಟೆರಿಯವರನ್ನಾಗಿಯೂ ನೇಮಿಸಿರುವರು. ಕಮಿಟಿ ಮೆಂಬರುಗಳು—ಘನ ಸಾಹೆಬ ಮಾದ್ರಿಯವರು, ಮೆ॥ ಕ್ಯಾಮರನ್ ಸಾಹೇಬರು, ಡಾಕ್ಟರ್ ಲೆಹ್ಮಾನ್ ರವರು, ಮೆ॥ ಮುತ್ತಣ್ಣನವರು, ಮೆ ಸ್ಲಾಕ್ಸ್ ಸಾಹೇಬರು, ಡಾಕ್ಟರ್ ಅಚ್ಯುತರಾಯರು, ಮೆ ಸಿ. ವೆಂಕಟರಾಯರು, ಮೆ॥ ಡಿ. ಸೀತಾರಾಮರಾಯರು, ಮೆ॥ ಬಿ. ರಾಮಕೃಷ್ಣರಾಯರು, ಮೆ॥ ಜಿ ಸುಬ್ಬಸ್ವಾಮಿ ಅಯ್ಯರವರು, ಎಂಬಿವರಲ್ಲದೆ ಪ್ರತಿಯೊಂದು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರುಗಳೂ. ಪ್ರತಿಯೊಬ್ಬ ಡೆ॥ ಕಮಿಷನರವರೂ ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿ ಒಂದೊಂದು ಕಮಿಟಿಯನ್ನು ನೇಮಿಸಿ ಪ್ರದರ್ಶನಯೋಗ್ಯಗಳಾದ ವಸ್ತುಗಳನ್ನು ಕೂಡಿಸಿ ಕಳುಹಿಸುವರು. ಇದೇ ಪ್ರಕಾರವಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಆಯಾ ತಾಲ್ಲೂಕಿನ ಅಮಲ್ದಾರರು ಅಧ್ಯಕ್ಷರಾಗಿ ನಿಂತು ಕಾರ್ಯವನ್ನು ಫಲಪ್ರದವನ್ನಾಗಿ ಮಾಡಿಸುವವರಾಗಿದ್ದಾರೆ. ಈ ವಸ್ತುಪ್ರದರ್ಶನಾರ್ಥವಾಗಿ ನಮ್ಮ ಸರ್ಕಾರದವರು ರೂ॥ ೨೫,೦೦೦ ನ್ನು ಸ್ಯಾಂಕ್ಷನ್ ಮಾಡಿರುತ್ತಾರೆ ಈ ದ್ರವ್ಯ ವಿನಿಯೋಗದಿಂದ ನಮ್ಮ ಸಂಸ್ಥಾನಕ್ಕೆ ಅನುರೂಪವಾದ ಕ್ರಿಯೆಯು ಸಿದ್ಧಿಸಲೆಂದು ಕೋರುತ್ತೇವೆ.

ದೇಶಾಂತರ ವಿಶೇಷ ಸಮಾಚಾರವು.

ಇದೇ ತಿಂಗಳ ೮ ನೇ ತಾರೀಕಿನ ಬೆಳಗ್ಗೆ ಇಟಲಿ ದೇಶದಲ್ಲಿ ಮಹಾ ಭಯಂಕರವಾದ ಭೂಕಂಪವುಂಟಾಯಿತು. ಮುಖ್ಯವಾಗಿ ಕೆಲಬ್ರಿಯವೆಂಬ ಸೀಮೆಯಲ್ಲಿ ಅನರ್ಥವು ಹೆಚ್ಚಾಯಿತು ಮೂರು ಪಟ್ಟಣಗಳು ಸಂಪೂರ್ಣವಾಗಿ ನಾಶವಾದುವು ಹೀಗೆಂಬ ತಂತೀವರ್ತಮಾನವು ಮೊದಲು ಬಂದಿತು. ತರುವಾಯ ಬಂದ ತಂತೀ ಸಮಾಚಾರವೇನಂದರೆ—ಆ ಭೂಕಂಪದಲ್ಲಿ ೩೭೦ ಮಂದಿ ಕೊಲ್ಲಲ್ಪಟ್ಟರೆಂತಲೂ ಹತ್ತು ಹನ್ನೆರಡು ಊರುಗಳೂ ಗ್ರಾಮಗಳೂ ಸಂಪೂರ್ಣವಾಗಿಯೋ ಸ್ವಲ್ಪವಾಗಿಯೋ ಹಾಳಾದುವೆಂತಲೂ ಗೊತ್ತಾಯಿತು. ೧೧ನೇ ತಾರೀಕಿನಲ್ಲಿ ಮೇಲ್ಕಂಡ ಮುನ್ನೂರು ಚಿಲ್ಲರೆ ಮಂದಿಯಲ್ಲದೆ ಜಾಸ್ತಿ ಎಂಬಲ್ಲಿ ೭೦೦ ಮಂದಿಯೂ ಮಾರ್ಟಿರಾನೊ ಎಂಬ ಸುಮಾರು ೬,೦೦೦ ಮಂದಿಯೂ ಕೊಲ್ಲಲ್ಪಟ್ಟರು ಅಥವ ಗಾಯಪಟ್ಟರು ಎಂಬುದಾಗಿ ವರ್ತಮಾನ ಬಂದಿದೆ ಭೂಮಿಯು ಗುಡುಗುವುದು ಇನ್ನೂ ನಿಂತಿಲ್ಲ. ಪ್ರಜೆಗಳು ಮಹಾ ಭಯಪೀಡಿತರಾಗಿದ್ದಾರೆ ಮರಹಮ್ಮತ್ ಇಲಾಖೆಯ ಪ್ರಮುಖರು ಜನರ ಸಹಾಯಾರ್ಥವಾಗಿ ರೈಲುಗಾಡಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಆ ಪ್ರಾಂತ್ಯದಲ್ಲಿ ವಿಸ್ತಾರವಾದುದೊಂದು ಹಿತ ವನದಂತೆ ಇರುವುದಾಗಿಯೂ ಎಲ್ಲಿ ನೋಡಿದರೂ ಗ್ರಾಮಾಂತರಗಳೆಲ್ಲಾ ತೊಡೆದು ಹೋಗಿ ಕೊಳತು ನಾರುವ ಶವಗಳು ಬಿದ್ದಿರುವುದಾಗಿಯೂ ಕೆಲವು ಮೈಲುಗಳ ಉದ್ದಕ್ಕೂ ನೆಲದಲ್ಲಿ ಬಿರುಕು ಬಿಟ್ಟಿರುವುದಾಗಿಯೂ ಇದೆ. ಕಷ್ಟಕ್ಕೆ ಗುರಿಯಾಗಿರುವ ನಿವಾಸಿಗಳನ್ನು ಆದರಿಸುವುದರಲ್ಲಿ ಸರ್ಕಾರದವರು ಸಾಧ್ಯವಾದ ಮಟ್ಟಿಗೂ ಪ್ರಯಾಸಪಡುತ್ತಿದ್ದಾರೆ. ಮುಖ್ಯವಾಗಿ ಸೈನ್ಯಕ್ಕೆ ಸೇರಿದ ಯುದ್ಧವೀರರು ಈ ಕೆಲಸದಲ್ಲಿ ವಿರಾಮವಿಲ್ಲದೆ ಸಹಾಯ ಕೊಡುವವರಾಗಿದ್ದಾರೆಂದು ತಿಳಿದುಬರುತ್ತದೆ.

ಒಳದೇಶದ ವೃತ್ತಾಂತಗಳು.

ಕೊಡಗಿನ ಕಾಡುಗಳಲ್ಲಿ ಹಿಡಿದ ಹನ್ನೊಂದು ಆನೆಗಳನ್ನು ಕೊಡಗಿಗೆ ಸೇರಿದ ತಿತ್ತಿಮತ್ತಿಯಲ್ಲಿ ೧೯೦೫ನೇ ಅಕ್ಟೋಬರ್ ೨೪ ರಲ್ಲಿ ಹರಾಜು ಹಾಕುವವರಾಗಿದ್ದಾರೆ.

*****

ಕುಮಾರಿ ಡಿ॥ ಅಮೃತೂರಿನಲ್ಲಿ ನಡೆಯುತ್ತಿದ್ದ ಸಂತೆ ನಿಂತುಹೋಗಿತ್ತು ಈಗ ಪ್ರತಿ ಮಂಗಳವಾರದಲ್ಲೂ ಪುನಃ ನಡೆಯಬೇಕೆಂದು ತೀರ್ಮಾನಿಸಿದ್ದಾರೆ.

*****

ಮೈಸೂರಲ್ಲಿರುವ ಕುರುಡ ಮೂಕರ ಪಾಠಶಾಲೆಗೆ ಹಾಲ್ಸ್ ಬೋರ್ಡುಗಳವರ ಸಹಾಯವನ್ನೂ ಅಪೇಕ್ಷಿಸಲಾಗಿ ಕುಮಾರ ಡಿಸ್ಟ್ರಿಕ್ಟ್ ಫಂಡು ಬೋರ್ಡಿನವರು ಅದಕ್ಕಾಗಿ ಸಾಲಿಯಾನಾ ೫೦ನ್ನು ವಿನಿಯೋಗಿಸಬೇಕೆಂದು ಗೊತ್ತುಮಾಡಿದ್ದಾರೆ.

ಶ್ರೀ ಶ್ರೀನರಸಿಂಹಭಾರತಿಯವರು ನಿನ್ನೆ ಪ್ರಾತಃಕಾಲವೇ ಸಂಗಮಕ್ಕೆ ಹೋಗಿ ದೇವದರ್ಶನಾದಿಗಳನ್ನು ಮಾಡಿಕೊಂಡು ಮಧ್ಯಾಹ್ನಕಾಲವೇ ರಾಜಧಾನಿಗೆ ಹಿಂದಿರುಗಿದರು. ಈ ದಿವಸ ಲೇಟ್ ಚಾಮರಾಜ ಒಡೆಯರವರ ಪ್ರತ್ಯಬ್ದಿಕ ಕರ್ಮವನ್ನು ನಡೆಸುವವರಾಗಿದ್ದಾರೆ.

* * * *

ರಾಜಧಾನಿಯ ಇಂಡಸ್ಟ್ರಿಯಲ್ ಸ್ಕೂಲಿನ ಕೆಲಸವು ತೃಪ್ತಿಕರವಾಗಿ ನಡೆಯುತ್ತಿರುವುದೆಂಬುದಕ್ಕೆ ಗವರ್ನ್ಮೆಂಟಿನವರು ಅಲ್ಲಿನ ವಿದ್ಯಾರ್ಥಿಗಳಿಗೆ ಸಹಾಯ ದ್ರವ್ಯವನ್ನು ೩ ರೂಪಾಯಿನಿಂದ ೪ ರೂಪಾಯಿಗಳ ವರೆಗೆ ಹೆಚ್ಚಿಸಿರುವುದು ಸಾಕ್ಷಿಯಾಗಿದೆ. ಇದರಿಂದ ವಿದ್ಯಾಭ್ಯಾಸಿಗಳಿಗೆ ಅನುಕೂಲವಾಯಿತು.

* * * *

ನಾಳೆ ಬರುವ ನವೆಂಬರ್ ೧೫ ರಿಂದ ತುಮಕೂರು ಡಿ|| ತುಮಕೂರು, ಮಧುಗಿರಿ, ಕೊರಟಗೆರೆ (ಮಾಜಿ) ತಾಲ್ಲೂಕುಗಳಲ್ಲಿಯೂ ಶಿವಮೊಗ್ಗ ಡಿ|| ಅನಂತಪುರ (ಮಾಜಿ) ಹೊನ್ನಾಳಿ (ಹುಲ್ಲಿ ಬಾಕಿ ಉಳಿದಿರುವ) ತಾಲ್ಲೂಕುಗಳಲ್ಲಿಯೂ ಸರ್ಕಾರದವರು ಪುನಃ ಸರ್ವೆಮಾಡುವುದಾಗಿ ಉದ್ದೇಶಪಟ್ಟಿದ್ದಾರೆಂದು ಕೇಳುತ್ತೇವೆ.

* * * *

ರಾಜಧಾನಿಯ ಹುಡುಗರ ಪಾಠಶಾಲೆಗೆ ಪ್ರೋತ್ಸಾಹ ಸಾಲದೆಂತಲೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಹೆಚ್ಚು ಪ್ರೋತ್ಸಾಹ ದೊರೆಯಬೇಕೆಂದೂ ಅಪೇಕ್ಷಿತವಾಗಿದೆ. ಈಗ ಒಟ್ಟು ೩೦ ಹುಡುಗರಿರುವರು ಈ ಪೈಕಿ ೨೦ ಹುಡುಗರು, ೧೦ ಮೂವರು. ೧೬ ಜನ ಮೈಸೂರು ಸೀಮೆಯವರು, ೨ ಮದ್ರಾಸ್ ಪ್ರಾಂತದವರೂ ಆಗಿದ್ದಾರೆ.

* * * *

ತಿಪಟೂರು ಗುಬ್ಬಿ ಬೆಳ್ಳಾವಿ ಎಂಬೀ ಊರುಗಳೊಳಗೆ ಬರುವ ರಸ್ತೆಗಳ ಮೇಲೆ ಸುಂಕ ವಸೂಲ್ಮಾಡಬಾರದೆಂದು ವಿಧಾಯಕ ಮಾಡಿಕೊಂಡಿದ್ದಾರೆ ಇದರಿಂದ ಉತ್ಪತ್ತಿಯಾಗಬಹುದಾದ ಹಣ ರೂ ೧೯,೦೦೦ ನ್ನು ಆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರು ಮತ್ತು ತಾಲ್ಲೂಕುಗಳ ರಸ್ತೆಗಳಲ್ಲಿ ಐದು ಮೈಲು ಫಾಸಲೆಯ ವರೆಗೂ ಅಭಿವೃದ್ಧಿಮಾಡುವುದಕ್ಕೆ ವಿನಿಯೋಗಿಸಬಹುದೆಂದು ತೋರುತ್ತದೆ

* * * *

“ಅಸ್ಸಾಂ ದೇಶದಲ್ಲಿ ನಡೆಯುತ್ತಿರುವ ಟೀ ತೋಟಗಾರರ ಕೂಲಿಗಾರರ ವಾದ ಕಾರ್ಯ” ಎಂಬ ವಿಷಯಾಂಕಿತದಿಂದ ಮುದ್ರಿಸಲ್ಪಟ್ಟಿರುವ ಒಂದು ಪತ್ರಿಕೆಯನ್ನು ಒಬ್ಬ ಚಂದಾದಾರರು ನಮ್ಮಲ್ಲಿಗೆ ಕಳುಹಿಸಿರುವರು ಇದು ಕ್ರೈಸ್ತರಿಗೆ ಬಹಳ ಪ್ರಯೋಜನಕರವಾದದ್ದು. ಕ್ರಯ ೩ ಪೈ. ೧೦೦ಕ್ಕೆ ರೂ ೧ ಟಪಾಲು ಖರ್ಚು ಸೇರಿ ೧೦೦ಕ್ಕೆ ರೂ ೧| ವಿಳಾಸ —ಮ್ಯಾನೇಜರ್ ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು

* * * *

ತುಮಕೂರು ಡಿ ಡಿ| ಅ|| ಕಮಿಷನರವರು ೧೯೦೫ ನೇ ಜುಲೈ ೩ ರಲ್ಲಿ ಪಾಯಸಂದ್ರವೆಂಬ ಗ್ರಾಮವನ್ನು ಬೇರೊಂದು ಆರೋಗ್ಯಪ್ರದವಾದ ಸ್ಥಳಕ್ಕೆ ವರ್ಗಾಯಿಸುವುದರ ವಿಷಯದಲ್ಲಿ ತುಮಕೂರು ಡಿ ಬೋರ್ಡಿಗೆ ಬರೆದ ಯಾದಿಯನ್ನು ಆ ಬೋರ್ಡಿನ ಮೆಂಬರುಗಳು ಅನುಮೋದಿಸಿ ಗ್ರಾಮವನ್ನು ಕಟ್ಟಿಸುವ ಜಮೀನಿಗೋಸ್ಕರ ಬರಬಹುದಾದ ನಷ್ಟವನ್ನು ನಿರ್ಮಿಸುವುದಕ್ಕಾಗಿ ತಗಲುವ ರೂ ೧,೪೦೫ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಒಪ್ಪಿದ್ದಾರೆ

* * * *

ಈ ವಾರ ನೆಲಮಂಗಲದ ರಸ್ತೆಯಲ್ಲಿ ರಾತ್ರಿ ವೇಳೆ ಟಪಾಲ್ ಚೀಲಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಅಂಚೆಯವನನ್ನು ಚೋರರು ಹಿಡಿದು ಅಂಚೆ ಕಾಗದಗಳನ್ನು ಕಿತ್ತುಕೊಂಡು ಹೋದರೆಂಬ ವರ್ತಮಾನ ಬಂದಿದೆ. ಆ ರಾತ್ರಿಯೇ ಮೂರು ಮೈಲಿಗಳ ಫಾಸಲೆಯಲ್ಲಿ ಗಾಡಿಯ ಮೇಲೆ ಕೆಲವರು ಪ್ರಯಾಣ ಮಾಡುತ್ತಿದ್ದವರನ್ನೂ ಕಳ್ಳರು ಅಡ್ಡಗಟ್ಟಲು ಉಭಯರಿಗೂ ಕೋಲಾಹಲವಾಗಿ ದೊಂಬಿಯಾಗಲು ಕಳ್ಳರು ಓಡಿಹೋದರೆಂದು ತಿಳಿದುಬರುವುದು. ಇದರ ವಿಚಾರಣೆಗಾಗಿ ಬೆಂಗಳೂರಿಂದ ಸೂಪರಿಂಟೆಂಡೆಂಟರವರು ಅಲ್ಲಿಗೆ ಹೋಗಿದ್ದಾರೆ.

* * * *

ರಾಜಧಾನಿಯಲ್ಲಿ ಹಿಲ್ಲದಾರ್ ಕಚೇರಿಗೆ ಸೇರಿದ ಕಾದರ ಷಾ|| ಷೇರ ಸಾಹೇಬರು ಆಕಸ್ಮಾತ್ತಾಗಿ ಮೊನ್ನೆ ೨೨ ನೇ ಮಂಗಳವಾರ ಬೆಳಿಗ್ಗೆ ಸ್ವಗೃಹದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಜನರಂಜಕರಾಗಿದ್ದರು. ಇವರು ಹಿಂದಣ ಶನಿವಾರ ಸಾಯಂಕಾಲ ರೆಸಿಡೆನ್ಸಿ ಮೈದಾನದಲ್ಲಿ ಫುಟ್‌ಬಾಲ್ ಆಟವನ್ನು ನೋಡುತ್ತಿರುವಾಗ್ಗೆ ಚೆಂಡು ಅವರ ಕುದುರೆಯ ಕಾಲಿಗೆ ತಗಲಿ ಕುದುರೆಯು ಬೆದರಿ ಸಾಹೇಬರು ಕೆಳಗೆ ಬಿದ್ದರೂ ವಿಪತ್ತಿಗೆ ಕಾರಣವೇನೂ ಉಂಟಾಗಲಿಲ್ಲ. ಮೊನ್ನೆ ದಿನ ಬೆಳಿಗ್ಗೆ ಕೆಲಸಕ್ಕೆ ಹೋಗುವಾಗ್ಗೆ ತಲೆತಿರುಗುತ್ತದೆಂದು ಹೇಳಿ ಮಲಗಿದವರು ದೀರ್ಘನಿದ್ರೆಯನ್ನು ಹೊಂದಿದರೆಂದು ಗೊತ್ತಾಗುತ್ತದೆ

* * * *

ರಾಜಧಾನಿಯ ಬಾಲಕರ ಪಾಠಶಾಲೆಯ ವಿದ್ಯಾರ್ಥಿಗಳು ಸಂಗೀತ ವಿದ್ಯೆಯಲ್ಲಿ ಎಷ್ಟರಮಟ್ಟಿಗೆ ಅನುಭವವನ್ನು ಸಂಪಾದಿಸಿರುವರೆಂಬುವುದನ್ನು ಪರೀಕ್ಷಿಸಲು ನಿನ್ನೆ ೨೩ ಶನಿವಾರ ಸಂಗೀತ ವಿದ್ವಾಂಸರ ಕೂಟದಲ್ಲಿ ಪರೀಕ್ಷೆಯಾಯಿತು. ಆ ವಿದ್ಯಾರ್ಥಿಗಳು ಗುರುಗಳಲ್ಲಿ ಅಭ್ಯಾಸಮಾಡಿದ್ದ ಪಿಟೀಲು ಮೃದಂಗ ಗಾನ ಮುಂತಾದವುಗಳನ್ನೆಲ್ಲಾ ತಾವೇ ಬಾರಿಸಿ ತೋರಿಸಿದರು. ಇದರಿಂದ ಅಲ್ಲಿದ್ದ ಸಂಗೀತ ವಿದ್ವಾಂಸರ ಮನಸ್ಸಿಗೆ ಸಂತುಷ್ಟಿಯುಂಟಾಗಿ ಆ ಶಾಲೆಯ ಅಧ್ಯಾಪಕರಾದ ಮ|| ಕೃಷ್ಣರಾಯರ ಶ್ರಮವು ಶ್ಲಾಘಿಸಲ್ಪಟ್ಟಿತೆಂದು ವ್ಯಕ್ತವಾಗಿದೆ. ಅನಂತರದಲ್ಲಿ ಸಂಗೀತ ವಿದ್ವಾಂಸರ ಪ್ರಶಂಸೆಗಳಿಗೆಲ್ಲಾ ವಿದ್ಯಾರ್ಥಿಗಳು ಚಮತ್ಕಾರವನ್ನು ತೋರ್ಪಟ್ಟರು ಇಂಥಾ ಅಂಗಹೀನರಾದವರು ಇನ್ನೂ ಬಂದರೆ ಸಂವತ್ಸರಕಾಲ ಶಿಕ್ಷಿತರಾದರೆ ಸ್ವತಂತ್ರ ಜೀವನವನ್ನು ಮಾಡುವರೆಂಬುದರಲ್ಲಿ ಸಂಶಯವಿರದು. ಕಡೆಗೆ ಸ್ಕೂಲ್ ಕಮಿಟಿಯ ಸೆಕ್ರೆಟರಿಯವರಾದ ಮ|| ಶ್ರೀನಿವಾಸರಾಯರು ಸಭಿಕರಿಗೆಲ್ಲಾ ಪುಷ್ಪ ತಾಂಬೂಲಗಳನ್ನು ಹಂಚಿ ಕಳುಹಿಸಿಕೊಟ್ಟರು.

* * * *

ಈಗ ಯಳಂದೂರು ಜಹಗೀರ್‌ದಾರರಾದ ಸರ್ ಕೃಷ್ಣಮೂರ್ತಿಯವರ ಮೇಲೆ ಒಂದು ದಾವಾ ವಿಚಾರಣೆಯಾಗುತ್ತಿದೆ. ಇದಕ್ಕೆ ಯಳಂದೂರು ಅಮಲ್ದಾರರೂ ಇತರ ನೌಕರರೂ ಪ್ರತಿವಾದಿಗಳಾಗಿರುವರು. ವಿವಾದ ಸಾರಾಂಶ—ಯಳಂದೂರು ಸಮೀಪದಲ್ಲಿರುವ ಗುಂಬಜ ಹಳ್ಳಿಗೆ ಸೇರಿದ ಒಂದು ಬಂಡೆಯ ಕಲ್ಲನ್ನು ಜಹಗೀರಿಯವರು ಅಕ್ರಮವಾಗಿ ಉಪಯೋಗಿಸಿಕೊಂಡಿರುವುದರಿಂದ ಜೋಡಿದಾರರಾದ ವಾದಿ ಮ|| ನರಸಿಂಹ ಉಪಾಧ್ಯಾಯರಿಗೆ ೫೦ ರೂಪಾಯಿಗಳು ನಷ್ಟವಾಗಿರುವುದಾಗಿ ಹೇಳುವರು ಆ ಬಂಡೆಯು ಸ್ಥಳವು ಆದಿಯಿಂದಲೂ ಜಹಗೀರ್ದಾರರ ವಶದಲ್ಲಿರುವುದೆಂದು ಪ್ರತಿವಾದಿಯರು ಹೇಳುತ್ತಾರೆ. ಅಲ್ಲದೆ ಜಹಗೀರ್‌ದಾರರ ಮೇಲೆ ಯಾವ ವಿಧವಾದ ಮೊಕದ್ದಮೆಯು ಬಂದರೂ ಮೈಸೂರು ಕೋರ್ಟುಗಳು ವಿಚಾರಿಸಕೂಡದೆಂಬ ಒಂದು ನ್ಯಾಯವಿದೆ ಎಂದು ಕೆಲವರು ಹೇಳುವುದರಿಂದ ಚಾಮರಾಜನಗರಕ್ಕೆ ಬಂದ ಈ ಮೊಕದ್ದಮೆಯನ್ನು ಸಂಬಂಧಿಸಿದ ಮುನಸೀಫರು ಕಳೆದ ೨೯ನೆ ತಾರೀಖಿನ ದಿನ ವಜಾಮಾಡಿದರು ಅದರ ಮೇಲೆ ವಾದಿಯು ಈಗ ಅದನ್ನು ಬೆಂಗಳೂರು ಛೀಫ್ ಕೋರ್ಟಿನಲ್ಲಿ ಅಪೀಲ್ಮಾಡಿರುವನು. ಇಷ್ಟು ಪ್ರಖ್ಯಾತರ ಮೇಲೆ ಇಂಥ ಸಣ್ಣ ವಿವಾದವು ಬಂದಿರುವುದು ಆಶ್ಚರ್ಯಜನಕವಾಗಿರುವುದು. ಇದರ ಫಲಿತಾಂಶವು ಮುಂದೆ ನೋಡತಕ್ಕದ್ದಾಗಿದೆ.

ರಷ್ಯ ಜಪಾನ್ ರಾಜ್ಯಗಳ ವಿಚಾರ

ರಷ್ಯ ಜಪಾನ್ ರಾಜ್ಯಗಳವರು ಸಮಾಧಾನದ ಕರಾರನ್ನು ಕಳೆದ ೫ ನೇ ತಾರೀಖು ಮಂಗಳವಾರದ ದಿನದಲ್ಲಿ ಒಪ್ಪಿ ರುಜು ಹಾಕಿದರಷ್ಟೆ. ಇದನ್ನು ಸ್ಥಿರಪಡಿಸುವುದಕ್ಕೆ ಇನ್ನೂ ೫೦ ದಿನಗಳು ಕಳೆಯಬೇಕಾಗಿದೆ. ಅವರೂ ಕರಾರಿಗೆ ರುಜು ಹಾಕಿದನಂತರ ಯುದ್ಧವು ಕೊನೆಗಂಡಿತೆಂದೇ ತಿಳಿಯತಕ್ಕದ್ದು. ಈಗ ಮುಗಿದಿರುವ ಈ ಯುದ್ಧದ ವಿಷಯದಲ್ಲಿ ರಷ್ಯದ ಚಕ್ರವರ್ತಿಯವರು ಹೇಳಿಕೊಳ್ಳುವ ಕಥನವು ಸಕಲರಿಗೂ ನಗೆಗೀಡಾಗಿರುವುದರಲ್ಲಿ ಸಂಶಯವಿಲ್ಲ. ಅದೇನಂದರೆ—ಸಮಾಧಾನವನ್ನು ಮಾಡಿಕೊಳ್ಳಬೇಕೆಂಬ ಬಲಾತ್ಕಾರಕ್ಕೆ ಒಳಗಾಗದೆ ಹೋಗಿದ್ದರೆ ತಾವು ಕಳುಹಿಸುವುದಕ್ಕಿದ್ದ ಅಪಾರವಾದ ಸೈನ್ಯದವರು ಜಪಾನಿನವರನ್ನು ಸೋಲಿಸುತ್ತಿದ್ದರೆಂತಲೂ ಇದನ್ನು ಜಪಾನಿನವರು ತಿಳಿದಿದ್ದುದರಿಂದಲೆ ರಷ್ಯದವರು ಕೇಳಿದುದಕ್ಕೆಲ್ಲ ಆಗಲೆಂದು ಒಪ್ಪಿ ಕರಾರು ಮಾಡಿಕೊಂಡರೆಂತಲೂ ಅವರು ಹೇಳಿಕೊಂಡಿದ್ದಾರೆ ಹೀಗೆ ಹೇಳಿಕೊಳ್ಳುವುದರಲ್ಲಿ ಆ ರಷ್ಯ ಚಕ್ರವರ್ತಿಯವರಿಗೂ ಪ್ರಜೆಗಳಿಗೂ ಬಹಳ ಸಂತೋಷವೆಂಬುದರಲ್ಲಿ ಸಂಶಯವಿಲ್ಲ ಅವರೇನು ಹೇಳಿದರೂ ಇತರರಾಜರೆಲ್ಲರ ಅಭಿಪ್ರಾಯವು ಬೇರೆಯಾಗಿಯೇ ಇದೆ ಜಪಾನಿನವರು ಪ್ರಥಮದಲ್ಲಿ ಕೇಳಿಕೊಂಡ ಪ್ರಕಾರ ರಷ್ಯದವರಿಂದ ಯುದ್ಧದ ನಷ್ಟದ್ರವ್ಯವನ್ನು ತೆಗೆದುಕೊಳ್ಳದೆ ಬಿಟ್ಟುಬಿಟ್ಟದಕ್ಕೆ ಯಾವ ಕಾರಣವಿರುವುದೋ ಇನ್ನು ವಿವರವಾಗಿ ತಿಳಿಯುವುದಕ್ಕವಕಾಶವಿಲ್ಲ ಹೀಗೆ ನಷ್ಟಪರಿಹಾರ ದ್ರವ್ಯವನ್ನು ತೆಗೆದುಕೊಳ್ಳದೆ ಬಿಟ್ಟುಬಿಟ್ಟದರಿಂದ ಜಪಾನಿನ ಪ್ರಜೆಗಳಲ್ಲಿ ಬಹಳ ಅತೃಪ್ತಿಯುಂಟಾಗಿದೆ. ಅದಕಾರಣ ಅವರು ಕಳೆದ ೫ ನೇ ತಾರೀಖಿನ ದಿನ ರಾಜಧಾನಿಯಾದ ಟೋಕಿಯೋ ನಗರದಲ್ಲಿ ದೊಡ್ಡ ಸಭೆ ಕೂಡಿ ಸರ್ಕಾರದವರ ಪ್ರವರ್ತನೆಯನ್ನು ಖಂಡಿಸಿದುದಲ್ಲದೆ ಬಹಳ ಗಲಭೆಯನ್ನು ಮಾಡಲು ಈ ಗಲಭೆಯಲ್ಲಿ ಇಬ್ಬರು ಪ್ರಾಣಗಳನ್ನು ಕಳೆದುಕೊಂಡರು, ೫೦೦ ಮಂದಿಗೆ ಗಾಯವಾಯಿತು ಒಬ್ಬ ಮಂತ್ರಿಯ ಮನೆಯನ್ನು ಸುಟ್ಟು ಹಾಕಿದರು. ಪೋಲೀಸಿನವರು ಈ ದಂಗೆಕೋರರನ್ನು ಅಡಗಿಸುವುದಕ್ಕೆ ಹೋಗಲು ಅವರನ್ನು ಹಿಂಸಿಸಿ ೧೭ ಸ್ಟೇಷನುಗಳನ್ನು ಧ್ವಂಸಮಾಡಿ ಬಿಟ್ಟರು ಇಷ್ಟೇ ಅಲ್ಲ. ಕ್ರೈಸ್ತರ ಹತ್ತು ದೇವಾಲಯಗಳನ್ನೂ, ಪಾದ್ರಿಗಳದೊಂದು ಬಂಗಲೆ ಮುಂತಾದವನ್ನೂ ಒಂದು ಮಿಷನ್ ಸ್ಕೂಲನ್ನೂ ಸುಟ್ಟುಹಾಕಿದರು. ಇದೇನು ? ಸರ್ಕಾರದವರು ಮಾಡಿದ ಒಪ್ಪಂದಕ್ಕೆ ಕ್ರೈಸ್ತ ಪಾದ್ರಿಗಳನ್ನು ಹಿಂಸಿಸಬೇಕಾಯಿತೋ ? ಜಪಾನಿನ ಗವರ್ನ್ಮೆಂಟಿನವರು ರಷ್ಯದವರ ಮೇಲೆ ನಷ್ಟಪರಿಹಾರದ್ರವ್ಯವೆಂಬ ದೊಡ್ಡ ಹೊರೆಯನ್ನು ಹೊರಿಸದೆ ಕ್ಷಮಿಸಿದ ದಾಕ್ಷಿಣ್ಯಕ್ಕೆ ಕ್ರೈಸ್ತಮತದ ಬೋಧನೆಯೇ ಹೇತುವಾಯಿತೆಂಬುದಾಗಿ ಈ ದಂಗೆಕೋರರು ಭಾವಿಸಿದಂತೆ ತೋರುವುದು ಹಾಗಾದರೆ ಜಪಾನಿನವರಿಗೆ ಉದಾರಶೀಲತೆಯೂ ಐಶ್ವರ್ಯದಲ್ಲಿ ಉದಾಸೀನತೆಯೂ ಹುಟ್ಟುವುದಕ್ಕೆ ಅವರು ಹಿಡಿದಿರುವ ಬೌದ್ಧಮತ ಬೋಧನೆಯೇ ಕಾರಣವೆಂದು ಕೆಲವರು ಹೇಳಿಕೊಳ್ಳುವುದು ತಪ್ಪೆಂದು ಸೂಚಿಸುವುದಕ್ಕೆ ಹೀಗಾಯಿತೋ ? ಅದು ಹೇಗೂ ಇರಲಿ. ಟೋಕಿಯೋ ರಾಜಧಾನಿಯಲ್ಲಿ ಹುಟ್ಟಿದ ಈ ಗಲಭೆಯು ಅಧಿಕಾರಿಗಳ ಸಾಮರ್ಥ್ಯದ ದೆಸೆಯಿಂದ ಒಂದೆರಡು ದಿನಗಳಲ್ಲಿಯೇ ಶಾಂತವಾಗಿ ಬುಧವಾರದ ದಿನವೇ ಸರ್ವರೂ ಯಥಾಪ್ರಕಾರ ತಮ್ಮ ತಮ್ಮ ಕಾರ್ಯಾಸಕ್ತರಾಗಿದ್ದರೆಂದು ವರ್ತಮಾನವು ಬಂದಿರುವುದು.

ವಿದೇಶ ವರ್ತಮಾನಗಳು.

ರಷಿಯಾ ರಾಜ್ಯದ ಕೆಲವು ಪಟ್ಟಣಗಳಲ್ಲಿ ಜಾತಿಭೇದ ಉಪದ್ರವು ಜಾಸ್ತಿಯಾಗಿ ಮುಂದುವರಿದು ಅನೇಕ ಜನರ ಕೊಲೆಯಾಯಿತು. ಇತರ ರಾಜ್ಯಗಳವರೆಲ್ಲಾ ಈ ಉಪದ್ರವವನ್ನು ತಡೆಯುವುದಕ್ಕೆ ಬಹು ಕಠಿಣವಾದ ಏರ್ಪಾಡುಗಳನ್ನು ಮಾಡುತ್ತಿದ್ದಾರೆ.

ಟರ್ಕೀ ರಾಜ್ಯಕ್ಕೆ ಸೇರಿದ ಏಡ್ರಿಯಾನೋಪಲ್ ಪಟ್ಟಣದಲ್ಲಿ ಗ್ರೀಕರೂ ಅರ್ಮೇನಿಯನರೂ, ಬಲ್ಗೇರಿಯನರೂ, ಯಹೂದ್ಯರೂ, ವಾಸವಾದುವ ಪೇಟೆಗಳಿಗೆ ಬೆಂಕಿ ಬಿದ್ದು ಸುಟ್ಟುಹೋದವು ಬಹು ಜನರೂ ಅನೇಕ ಗೋದಾಮುಗಳೂ ಅಪಾರವಾದ ಪದಾರ್ಥಗಳೂ ಅಗ್ನಿಸಾತ್ಯವಾದವು.

* * * *

ಪರ್ಷಿಯಾ ರಾಜ್ಯದ ಷಾಸುಲ್ತಾನರು ಕಳೆದವಾರ ರಷ್ಯಾರಾಜ್ಯಕ್ಕೆ ಹೋದರು. ಚಕ್ರವರ್ತಿಯವರು ಅವರನ್ನು ವಿಶೇಷ ಸನ್ಮಾನಗಳೊಡನೆ ಎದುರುಗೊಂಡು, ಬಹಳ ಆದರಪೂರ್ವಕವಾಗಿ ಸತ್ಕರಿಸುತ್ತಿದ್ದಾರೆ ಚಕ್ರವರ್ತಿಯವರು ಸುಲ್ತಾನರನ್ನು ತಮ್ಮ ಸಂಗಡ ಕೂರಿಸಿಕೊಂಡು ಭೋಜನಮಾಡಿದರು.

* * * *

ಸ್ಪೇಯಿನ್ ರಾಜ್ಯಕ್ಕೆ ಸೇರಿದ ಬಾರ್ಸಿಲೋನಾ ಪಟ್ಟಣದಲ್ಲಿ ಕಳೆದ ವಾರ ದೊಡ್ಡ ಮೆರವಣಿಗೆಯಾಯಿತು. ಮುಷ್ಕರ್ಯಾರೋ ಮದ್ದು ತುಂಬಿದ ಗುಂಡನ್ನು ಮೆರವಣಿಗೆಯ ಮಧ್ಯ ಎಸೆದದ್ದರಿಂದ ಅದು ಒಡೆದು ನೂರಾರು ಜನರಿಗೆ ಗಾಯಗಳಾದವು. ಪೋಲೀಸಿನವರು ಆಗಲೇ ಕೆಲವರನ್ನು ದಸ್ತಗಿರಿ ಮಾಡಿ ತನಿಖೆ ನಡಿಸುತ್ತಿದ್ದಾರೆ.

* * * *

ರಷ್ಯಾರಾಜ್ಯದ ವ್ಯಾಪಾರಿಗಳಿಗೆ ಮಂಚೂರಿಯಾದಲ್ಲಿ ಇನ್ನು ಮುಂದೆ ವ್ಯಾಪಾರ ನಡೆಯುವುದು ಕಷ್ಟವಾಯಿತು. ಈಗ ಅವರು ಪರ್ಷಿಯಾದಲ್ಲಿ ದೊಡ್ಡ ಬ್ಯಾಂಕನ್ನು ಏರ್ಪಾಡು ಮಾಡಬೇಕೆಂತಲೂ ರಷ್ಯಾ ಸರಕುಗಳನ್ನು ಸರ್ವದಾ ಎಲ್ಲರೂ ನೋಡುವಂತೆ ಒಂದು ಪ್ರದರ್ಶನಶಾಲೆಯನ್ನು ಕಟ್ಟಿಸಬೇಕೆಂತಲೂ ತಯಾರು ಮಾಡುತ್ತಿದ್ದಾರೆ.

* * * *

ಮೊರೊಕ್ಕೋ ಸುಲ್ತಾನನು ಫ್ರಾಂಚರಿಗೆ ವಿರೋಧಿಯಾಗಿ ಕೆಲವು ಫ್ರೆಂಚ್ ಪ್ರಜೆಗಳನ್ನು ಹಿಡಿದು ಸೆರೆಮನೆಯಲ್ಲಿ ಹಾಕಿದಾನೆ. ಫ್ರೆಂಚ್ ಸರ್ಕಾರದವರು ಅವರನ್ನು ಸೆರೆಯಿಂದ ಬಿಡುಗಡೆಮಾಡಬೇಕೆಂತಲೂ ಪರಿಹಾರ ದ್ರವ್ಯವನ್ನು ಕೊಟ್ಟು ಕ್ಷಮಾಪಣೆ ಕೇಳಬೇಕೆಂತಲೂ ಇಲ್ಲವಾದರೆ ಸೈನ್ಯವನ್ನು ಕಳುಹಿಸುವುದಾಗಿಯೂ ಆಜ್ಞಾಪತ್ರವನ್ನು ಕಳುಹಿಸಿದಾರೆ.

* * * *

ಕಾಕಸಸ್ ಪರ್ವತದ ತಪ್ಪಲಲ್ಲಿರುವ ಟಾರ್ಟರ್ ಪಂಗಡದವರು ಗುಂಪುಕಟ್ಟಿ ಹೊರಟು ಗ್ರಾಮಗಳನ್ನೇ ಲೂಟಿಮಾಡುತ್ತಲೂ ಜನರನ್ನು ಕೊಲ್ಲುತ್ತಲೂ ಬಹಳ ದಾಂಧಲೆ ನಡೆಸುತ್ತಿದ್ದಾರೆ. ಷೂಷಾ ಎಂಬ ಸ್ಥಳದಲ್ಲೇ ಇದುವರೆಗೆ ೩೦೦ ಜನರು ಮೃತರಾದರೆಂದೂ ಬಾಕೂ ಪಟ್ಟಣದಲ್ಲಿರುವ ಎಣ್ಣೆ ಕಾರ್ಖಾನೆಗಳೆಲ್ಲಾ ಹತ್ತಿಕೊಂಡು ಉರಿಯುತ್ತಿವೆ ಎಂದೂ ತಂತೀ ವರ್ತಮಾನ ಬಂದಿದೆ.

* * * *

ಪೂರ್ವ ಆಫ್ರಿಕಾದಲ್ಲಿ ಜರ್ಮನಿಯವರಿಗೆ ಸೇರಿದ ಭಾಗಗಳಲ್ಲಿ ಜನರು ಸರ್ಕಾರದವರ ಮೇಲೆ ದಂಗೆಯೆದ್ದು ಬಹಳ ಗಲಭೆಯನ್ನು ಮಾಡುತ್ತಿದ್ದಾರೆ. ವ್ಯಾಪಾರಸ್ಥರೇ ಮೊದಲಾದವರನ್ನು ಹಿಡಿದು ಹಿಂಸಿಸುವುದಲ್ಲದೆ ಯೂರೋಪಿಯನ್ ಜನಗಳನ್ನು ಕೊಲ್ಲುತ್ತಿರುವರು. ಈ ದಂಗೆಯನ್ನು ಅಡಗಿಸುವದಕ್ಕೆ ಹೆಚ್ಚಾಗಿ ಸೈನ್ಯ ಕಳುಹಿಸಬೇಕೆಂದು ಜರ್ಮನಿ ಸರ್ಕಾರದವರು ಸನ್ನಾಹ ಮಾಡುತ್ತಿದ್ದಾರೆ.

* * * *

ರಷ್ಯಾ ರಾಜ್ಯದಲ್ಲಿ ಬಾಲ್ಟಿಕ್ ಕಡಲಿನಿಂದ ಕಪ್ಪುಕಡಲಿನವರೆಗೆ ಒಂದು ದೊಡ್ಡ ಕಾಲುವೆಯನ್ನು ತೆಗೆಸಬೇಕೆಂದು ಗವರ್ನ್ಮೆಂಟಿನವರು ಅಂದಾಜು ಪಟ್ಟಿಯನ್ನು ಅಂಗೀಕರಿಸಿದಾರೆ. ಈ ಕಾಲುವೆಯು ೨೩೪ ಗಜ ಅಗಲವಾಗಿಯೂ ೩೪ ಗಜ ಆಳವಾಗಿಯೂ ಭಾರೀ ಹಡಗುಗಳು ಕೂಡ ಧಾರಾಳವಾಗಿ ಸಂಚರಿಸುವಂತೆಯೂ ತಯಾರಾಗುತ್ತಿದೆ ಈ ಕಾಮಗಾರಿಗೆ ೬೦ ಕೋಟಿ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚಾಗಬಹುದೆಂದು ಹೇಳುವರು

* * * *

ಗ್ರೀಸ್ ರಾಜ್ಯಕ್ಕೆ ಸೇರಿದ ಅಥೆನ್ಸ್ ಪಟ್ಟಣದಲ್ಲಿ ಅರ್ಮೇನಿಯ ಜನರಿಗೂ ಟರ್ಕಿ ಜನರಿಗೂ ಮನಸ್ತಾಪಗಳುಂಟಾಗಿವೆ ಆ ಅರ್ಮೇನಿಯನವರು ಪರರಾಜ್ಯಗಳವರನ್ನೆಲ್ಲಾ ತಮ್ಮ ಸಹಾಯಕ್ಕೆ ಎಳೆದುಕೊಳ್ಳಬೇಕೆಂದು, ಅಂತರಂಗದಲ್ಲೇ ಪಿತೂರಿಗಳನ್ನು ನಡೆಸುತ್ತಾ ಬಂದಿದಾರೆ. ಸರ್ಕಾರದವರು ಪತ್ತೆ ತರದೂದು ನಡಿಸಿ ಅವರಲ್ಲಿ ಮುಖಂಡರಾಗಿದ್ದ ಅನೇಕ ಜನರನ್ನು ದಸ್ತಗಿರಿಮಾಡಿದರು ಆದರೂ ಆ ಗುಂಪಿನವರ ಕಾರ್ಯಗಳು ಶಮನವಾಗಲಿಲ್ಲ

* * * *

ಈಚೆಗೆ ಅಮೇರಿಕ ಸಂಸ್ಥಾನದಲ್ಲಿ ಸ್ತ್ರೀಯರು ನಾನಾ ಇಲಾಖೆಗಳಲ್ಲಿ ನೌಕರಿಗೆ ಸೇರಿಕೊಳ್ಳುವುದು ಹೆಚ್ಚಾಯಿತು. ಆ ಜನರಲ್ಲಿ ಮಕ್ಕಳು ಹುಟ್ಟುವುದು ಕಡಿಮೆಯಾಗುತ್ತಾ ಬಂದಿದೆ. ಪರರಾಜ್ಯಗಳಿಂದ ಅಲ್ಲಿಹೋಗಿ ನಿಂತಿರುವವರು ಹೆರುವಷ್ಟು ಮಕ್ಕಳನ್ನು ಅಮೇರಿಕದ ಸ್ತ್ರೀಯರು ಹೆರುವುದಿಲ್ಲ. ಆದರಿಂದ ಆ ಸಂಸ್ಥಾನದಲ್ಲಿ ಪ್ರಜಾಭಿವೃದ್ಧಿಯು ಕಡಿಮೆಯಾಗುವುದಕ್ಕೆ ಕಾರಣವಾಗಿದೆ ಎಂದು ಅಲ್ಲಿನ ಸೆನ್ಸಸ್ ಲೆಕ್ಕಗಳನ್ನು ನೋಡಿದವರು ಪ್ರಕಟಿಸಿದಾರೆ.

* * * *

ರಷ್ಯಾ ರಾಜ್ಯಕ್ಕೆ ಸೇರಿದ ಲಿಬಾವೂ ಎಂಬ ಪಟ್ಟಣದಲ್ಲಿ ಸರ್ಕಾರಿ ಸೈನಿಕರು ದಂಗೆಕೋರರಾದ ಪ್ರಜೆಗಳ ಮೇಲೆ ನುಗ್ಗಿ ಅವರ ಮೇಲೂ ಮನೆಗಳಿಗೂ ಗುಂಡುಹೊಡೆದರು. ೬೦ ಜನರು ಮೃತಪಟ್ಟರು; ೧೫೦ ಮಂದಿಯನ್ನು ದಸ್ತಗಿರಿ ಮಾಡಿದಾರೆ. ಈ ಸ್ಥಿತಿಯಲ್ಲಿ ಯಹೂದ್ಯ ಜನರು ಗುಂಪುಕಟ್ಟಿಕೊಂಡು ಬಂದು ಕಲಹವನ್ನು ಸಾಗಿಸುತ್ತಿದ್ದರು. ಸೈನಿಕರು ಅವರ ಮೇಲೂ ಗುಂಡು ಹೊಡೆದದ್ದರಿಂದ ಅನೇಕರು ಮೃತಪಟ್ಟರು; ಬಹು ಜನರಿಗೆ ಗಾಯಗಳಾಗಿವೆ.

ಯೇಸುಕ್ರಿಸ್ತನು ಯಾರು?

ಕಳೆದ ತಿಂಗಳ ೩ನೇ ತಾರೀಖಿನ ಸಂಚಿಕೆಯಲ್ಲಿ ನಾವು ಮೇಲ್ಕಂಡ ವಿಷಯವನ್ನು ಕುರಿತು ಪ್ರಸ್ತಾಪಿಸುವಾಗ್ಗೆ ಮರುದಿನ ವಾರವೂ ಇದಕ್ಕೆ ಸಂಬಂಧಪಟ್ಟ ಬೇರೊಂದು ಅಂಶವನ್ನು ತಿಳಿಸುವುದಾಗಿ ಹೇಳಿದೆವು. ಹಾಗೇ ಬರೆಯಲು ಅನನುಕೂಲವಾದುದರ ದೆಸೆಯಿಂದ ನಾವು ನಿಧಾನಿಸುತ್ತೇವೆ. ಈಗ ಆ ವಿಷಯವನ್ನು ಪುನರಾರಂಭ ಮಾಡುವಲ್ಲಿ ನಾವು ಆ ಸಂಚಿಕೆಯಲ್ಲಿ ಹೇಳಿದ ಅಂಶಗಳನ್ನು ಇಲ್ಲಿ ಸಂಗ್ರಹಿಸಿ ಹೇಳಬೇಕಾಗಿದೆ. ಅದೇನೆಂದರೆ—ಯೇಸುಕ್ರಿಸ್ತನಲ್ಲಿ ಯಾರು ಯಾವ ಸ್ಥಿತಿಗತಿಗಳುಳ್ಳವರಾಗಿದ್ದರೂ ಯಾವ ಕಾಲದಲ್ಲಿ ಯಾವ ಜನಾಂಗಕ್ಕೆ ಸೇರಿದವರಾಗಿದ್ದರೂ ಅವರ ಗುಣವನ್ನು ಬದಲಾಯಿಸತಕ್ಕ ಶಕ್ತಿಯು ಆತನಲ್ಲಿರುತ್ತದೆ. ಇದಲ್ಲದೆ ಕಾಲವು ಗತಿಸಿದ ಹಾಗೆಲ್ಲಾ ಆತನ ಕೀರ್ತಿಯೂ ಹಬ್ಬಿ ಆತನ ಶಿಷ್ಯರ ಸಂಖ್ಯೆಯೂ ಹೆಚ್ಚಿಹೋಯಿತು. ಇಷ್ಟೇ ಅಲ್ಲ, ಆತನ ಜೀವಿತವನ್ನು ನೋಡುವಾಗ್ಗೆ ಒಂದೇ ಒಂದು ವಿಷಯದಲ್ಲಿ ವಿನಾ ಮಿಕ್ಕಾದ ಸಕಲ ವಿಷಯಗಳಲ್ಲಿಯೂ ಆತನು ಕೇವಲ ಮನುಷ್ಯನಾಗಿಯೇ ಇದ್ದನೆಂದು ಪ್ರಕಟವಾಗುತ್ತದೆಂದು ಗೊತ್ತಾಗುವುದು. ಆದ ಕಾರಣ ಆ ಯೇಸುಕ್ರಿಸ್ತನು ಯಾರೆಂದು ಕೇಳಿದ ಪ್ರಶ್ನೆಗೆ ಆತನು ಪಾಪರಹಿತನಾದ ಸರ್ವಜ್ಞ ಪೂರ್ಣ ಮನುಷ್ಯನೇ ಎಂದು ಉತ್ತರವನ್ನು ಕೊಡಬೇಕಾಗುತ್ತದೆಂಬುದಾಗಿ ನೋಡಿದೆವಷ್ಟೆ.

ಆದರೆ ಆ ಪ್ರಶ್ನೆಗೆ ಈ ಉತ್ತರವು ಅರ್ಧಭಾಗವನ್ನು ಮಾತ್ರ ಸೂಚಿಸುವಂಥದಾಗಿದೆ. ಆತನ ಜೀವಿತಚರಿತ್ರೆಯನ್ನು ನಾವು ಪುನಃ ವಿಮರ್ಶೆಯಿಂದ ನೋಡಿದರೆ ಆತನು ಮನುಷ್ಯ ಸಾಮಾನ್ಯರಿಗೆ ಸಲ್ಲತಕ್ಕಂಥ ಮಾತುಗಳನ್ನು ನುಡಿದನೆಂತಲೂ ಕಾರ್ಯಗಳನ್ನು ಮಾಡಿದನೆಂತಲೂ ಗೊತ್ತಾಗುವುದು. ತಾನು ಸಾಧಾರಣವಾದ ಮನುಷ್ಯನಲ್ಲವೆಂದು ವಿರೋಧಿಗಳ ಮುಂದೆ ಸ್ಥಾಪಿಸುವದಕ್ಕಾಗಿಯೇ ಮಹತ್ಕಾರ್ಯಗಳನ್ನು ಮಾಡಲಿಲ್ಲವೆಂಬುದಾಗಿ ಹಿಂದೆ ಹೇಳಿದೆವಷ್ಟೆ. ಅದಾಗ್ಯೂ ಆತನು ಮಹತ್ಕಾರ್ಯಗಳನ್ನು ಮಾಡಿದನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ತನ್ನಲ್ಲಿ ನಂಬಿಕೆಯಿಟ್ಟವರ ನಂಬಿಕೆಯನ್ನು ಸ್ಥಿರಪಡಿಸುವದಕ್ಕೋಸ್ಕರವೂ ತಾನು ಗ್ರಾಮಾಂತರಗಳಲ್ಲಿ ಸಂಚರಿಸುತ್ತಿರುವಾಗ್ಗೆ ನಾನಾವಿಧ ಕಷ್ಟಗಳಿಗೂ ಉಪದ್ರವಗಳಿಗೂ ಗುರಿಯಾದಂಥ ಜನಗಳನ್ನು ನೋಡಿ ಸಂತಾಪಿಸಿ ಅವರ ಕಷ್ಟಗಳನ್ನು ಪರಿಹರಿಸುವದಕ್ಕಾಗಿಯೂ ಆತನು ಮಹತ್ಕಾರ್ಯಗಳನ್ನು ಮಾಡಿದನು. ಮುಟ್ಟಿದ ಮಾತ್ರದಲ್ಲಿಯೇ ಕುರುಡರಿಗೆ ಕಣ್ಣು ಬರುವಂತೆಯಾಗಲಿ ಹೇಳಿದ ಮಾತ್ರದಲ್ಲಿಯೇ ಸತ್ತವರಿಗೆ ಪ್ರಾಣವು ಬರುವಂತೆ ಯಾವ ಮನುಷ್ಯನಾಗಲಿ ಮಾಡಬಲ್ಲನೋ? ಎಷ್ಟುಮಾತ್ರಕ್ಕೂ ಇಲ್ಲ. ಆದರೂ ಯೇಸುಕ್ರಿಸ್ತನು ಮನುಷ್ಯರಿಗೆ ಅಸಾಧ್ಯವಾದ ಅನೇಕ ಮಹತ್ಕಾರ್ಯಗಳನ್ನು ಮಾಡಿದನು. ಇದನ್ನು ನೋಡುವಾಗ್ಗೆ ಆತನೇ ದೇವರಾಗಿರಬೇಕು, ಅಥವಾ ದೇವರು ಆತನಿಗೆ ಅತ್ಯತಿಶಯವಾದ ದೈವಶಕ್ತಿಯನ್ನು ಕೊಟ್ಟಿರಬೇಕು ಎಂದು ನಾವು ಒಪ್ಪಬೇಕಾಗುತ್ತದೆ.

ಆತನು ನಡಿಸಿದ ಕೆಲಸಗಳು ಹ್ಯಾಗೆ ಆಶ್ಚರ್ಯಕರವಾಗಿದ್ದವೋ ಹಾಗೆಯೇ ಆತನು ನುಡಿದ ವಾಕ್ಯಗಳೂ ಆಶ್ಚರ್ಯಕರಗಳಾಗಿದ್ದವು. ಆತನು ಹೇಳಿರುವ ಬೋಧನೆಯನ್ನು ನೋಡಿದಲ್ಲಿ ಅದರಷ್ಟು ಪವಿತ್ರವಾಗಿಯೂ ಉತ್ಕೃಷ್ಟವಾಗಿಯೂ ಇರುವ ಬೋಧನೆಯನ್ನು ಭೂಲೋಕದಲ್ಲಿ ಯಾರೂ ಎಂದೂ ಹೇಳಲಿಲ್ಲವೆಂದು ಕೇಳುಬರುವದು. ಈ ಮಾತು ನಿಜವೆಂದು ಆತನನ್ನು ಗುರುವಾಗಿ ಅಂಗೀಕರಿಸದೆ ಇರುವವರು ಸಹ ಒಪ್ಪಿಕೊಳ್ಳುವರು. ಮನುಷ್ಯರೂ ಸಹೋದರರು ಎಂದು ಮೊದಲು ಬೋಧಿಸಿದಾತನು ಕ್ರಿಸ್ತನೇ. ಇದು ಹೇಗೆಂದರೆ ದೇವರು ತಂದೆಯೆಂಬ ಈತನಿಗೆ ಮುಂಚೆ ಯಾರೂ ಬೋಧಿಸಿರಲಿಲ್ಲ. ದೇವರು ತಂದೆಯೆಂದು ಒಪ್ಪದಿದ್ದರೆ ಮನುಷ್ಯರೆಲ್ಲರೂ ಪರಸ್ಪರ ಸಹೋದರರೆಂದು ಹೇಳುವದಕ್ಕೆ ಮಾರ್ಗವಿಲ್ಲಿಯದು. ಆದಕಾರಣವೇ ಮನುಷ್ಯರೆಲ್ಲರೂ ಸಹೋದರರೆಂದು ಬೋಧಿಸಿದವನು ಕ್ರಿಸ್ತನೇ ಎಂದು ಸಾಧಿಸಬಲ್ಲವರಾಗಿದ್ದೇವೆ. ಯೇಸುಕ್ರಿಸ್ತನು ದೇವರ ವಿಷಯವಾಗಿ ಹೇಳಿದ ಬೋಧನೆಯನ್ನಲ್ಲದೆ ಆತನು ಸ್ವವಿಷಯವಾಗಿ ಹೇಳಿದ ಅನೇಕ ಮಾತುಗಳನ್ನು ನೋಡುವಲ್ಲಿ ಆಶ್ಚರ್ಯವಾಗದಿರಲಾರದು. ಹೇಗೆಂದರೆ—ದೈವಶಕ್ತಿಯು ಅಪರಿಮಿತವಾಗಿ ದೊರಕಿರುವ ಮನುಷ್ಯನೇ ತಾನು ಎಂದು ಆತನು ಬೋಧಿಸದೆ ತಾನೇ ದೇವರು ಎಂದು ಸ್ಥಾಪಿಸಿದನು. ಆತನ ಗುಣವೆಂಥದೆಂದು ನಾವು ಪರೀಕ್ಷಿಸಿದಲ್ಲಿ ಆತನ ಈ ಸಾಧನೆಯು ನಿಜವಾಗಿಲ್ಲದಿದ್ದಪಕ್ಷಕ್ಕೆ ಆತನು ಹೀಗೆ ಎಷ್ಟುಮಾತ್ರವೂ ಹೇಳುತ್ತಿರಲಿಲ್ಲವೆಂದು ನಾವು ಊಹಿಸಬೇಕಾಗುತ್ತದೆ. ತಾನು ನಿಜವಾಗಿ ದೇವರಾಗಿರದೆ ಇಂಥ ಮಾತನ್ನು ಹೇಳುವನಾದರೆ ಆತನು ಸುಳ್ಳು ಹೇಳುವವನೂ ದೇವದೂಷಣೆ ಮಾಡುವವನೂ ಎಂಬ ಅಪವಾದಕ್ಕೆ ಗುರಿಯಾಗುವನು. ಆದರೆ ಆತನ ಸಚ್ಚರಿತೆಯನ್ನು ನೋಡುವಲ್ಲಿ ಆತನಿಂಥ ಅಪವಾದಕ್ಕೆ ಒಳಗಾಗುವವನಲ್ಲವೆಂದು ಗೊತ್ತಾಗುತ್ತದೆ.

ಆತನ ನಡೆನುಡಿಗಳಲ್ಲಿ ವ್ಯಕ್ತವಾಗುವ ಅತಿಶಯದ ಪವಿತ್ರತೆಯಿಂದಲೇ ಆತನ ದೇವತ್ವವು ಸ್ಥಾಪಿತವಾಗುತ್ತದೆಂದೂ ನಿಶ್ಚಯಿಸಲವಶ್ಯಕವಿಲ್ಲ. ಆತನು ಭೂಲೋಕದಲ್ಲಿ ಜೀವಿಸುತ್ತಿರುವಾಗ ಎಂಥವನಾಗಿದ್ದನೋ ಎಂಬುವುದನ್ನು ನೋಡಿಯೇ ನಾವು ಆತನ ದೇವತ್ವವನ್ನು ಸ್ಥಾಪಿಸುತ್ತೇನೆ. ಆತನು ಆರಿಸಿಕೊಂಡ ಶಿಷ್ಯರು ವಿದ್ಯಾಹೀನರು, ಮೂಢರಾದ ಬೆಸ್ತರು. ಆದರೆ ಅವರು ಆತನೊಡನೆ ಮೂರೇ ಮೂರು ವರ್ಷಗಳು ಸಹವಾಸವನ್ನು ಮಾಡಿದ ಮೇಲೆ ಅವರು ಭೂಮಂಡಲಕ್ಕೆಲ್ಲಾ ಸದ್ಬೋಧನೆಯನ್ನು ಮಾಡತಕ್ಕ ಸಮರ್ಥರಾದರು. ನಾವು ಕ್ರಿಸ್ತನ ವಿಷಯದಲ್ಲಿ ತಿಳಿಯತಕ್ಕದನ್ನೆಲ್ಲಾ ಅವರು ಬರೆದಿಟ್ಟಿರುವ ಮಾತುಗಳಿಂದಲೇ ನಾವು ತಿಳಿಯುತ್ತೇವೆ. ಅವರ ಗುಣವನ್ನು ನೋಡಿದರೆ—ಚಂಚಲರಾಗಿದ್ದರು. ಒಳ್ಳೆಯದನ್ನು ನಡಸುವುದರಲ್ಲಿ ಬಲಹೀನರಾಗಿದ್ದರು. ಅಂಥವರು ಸತ್ಯದ ಪರವಾಗಿ ಬಲಿಷ್ಠರೂ ಪರಾಕ್ರಮಿಗಳೂ ಆದರು. ಇದನ್ನು ನೋಡುವಲ್ಲಿ ಕ್ರಿಸ್ತನು ಸರ್ವಜ್ಞಾನಿಯಾಗಿರುವಾಗ್ಗೆ ತನ್ನನ್ನು ಅನುಸರಿಸಿದ ಮನುಷ್ಯರಿಗೆ ಸದಾಚಾರದಲ್ಲಿ ಶಕ್ತಿಯನ್ನೀಯುವಂಥ ಮಹಾ ಪುರುಷನೆಂಬುದನ್ನು ಪ್ರಕಟಿಸಿದನು.

ಆತನ ದೇವತ್ವವನ್ನು ನಿಸ್ಸಂದೇಹವಾಗಿ ಸ್ಥಾಪಿಸುವಂಥ ಕಾರ್ಯವು ಯಾವದೆಂದರೆ—ಆತನು ಸತ್ತವರೊಳಗಿಂದ ಜೀವಿತನಾಗಿ ಎದ್ದುಬಂದುದೇ. ಆತನು ದೇವರಾಗಿದ್ದುದರಿಂದಲೇ ಮರಣವು ಆತನನ್ನು ತನ್ನ ವಶದಲ್ಲಿ ಹಿಡಿದುಕೊಂಡಿರಲಾರದೆ ಹೋಯಿತು. ಆತನ ಪುನರುತ್ಥಾನ ವಿಷಯವಾಗಿ ನಾವು ಕೆಲವು ದಿನಗಳ ಹಿಂದೆಯೇ ಪ್ರಕಟಿಸಿದ ಲೇಖನಗಳು ವಾಚಕರ ನೆನಪಿನಲ್ಲಿದ್ದೀತು. ಅದನ್ನೆಲ್ಲಾ ಪುನಃ ಇಲ್ಲಿ ಸೂಚಿಸುವದಕ್ಕವಶ್ಯವಿಲ್ಲ.

ಕ್ರಿಸ್ತನು ದೇವರೇ ಎಂಬುದು ಆತನಲ್ಲಿ ನಂಬಿಕೆಯಿಟ್ಟಿರುವ ಭಕ್ತರಲ್ಲಿ ಆತನು ನಿತ್ಯವೂ ಪ್ರಸನ್ನನಾಗಿರುವುದರಿಂದಲೇ ಸಿದ್ಧಾಂತವಾಗುತ್ತದೆ. ಯಾರು ಪಾಪವನ್ನು ಬಿಡಿಸುವುದಕ್ಕಾಗಲಿ ಒಳ್ಳೆಯವರಾಗಿ ನಡೆಯುವುದಕ್ಕಾಗಲಿ ಶಕ್ತಿಯಿಲ್ಲದೆ ಆತನ ಬಳಿಗೆ ಬರುತ್ತಾರೋ ಅಂಥವರಿಗೆ ಆತನು ಶಕ್ತಿಯನ್ನು ಅನುಗ್ರಹಿಸುತ್ತಾನೆಂಬುದಾಗಿ ಮೊದಲೇ ಹೇಳಿದ್ದೇವಷ್ಟೆ. ಆತನು ತನ್ನನ್ನು ನಂಬಿದವರಿಗೆ ಮಾಡುವ ಉಪಕಾರವು ಇಷ್ಟೇ ಅಲ್ಲ. ಆತನು ಅವರ ಹೃದಯಗಳಲ್ಲಿ ವಾಸಮಾಡುತ್ತಾ ದೇವರಿಂದಲೇ ಬರತಕ್ಕ ಸತ್ಯವನ್ನು ಸ್ಥಿರವಾಗಿ ಉಪದೇಶಿಯಾಗಿ ಸರ್ವ ಜನಗಳಿಗೂ ತಿಳಿಸುತ್ತಾ ತಾನು ಭೂಲೋಕದಲ್ಲಿದ್ದಾಗ ಹ್ಯಾಗೆ ಶಿಷ್ಯರ ಗುಣವನ್ನೂ ನಡತೆಯನ್ನೂ ಬದಲಾಯಿಸುತ್ತಾ ಬಂದನೋ ಹಾಗೆಯೇ ಈಗಲೂ ಪ್ರವರ್ತಿಸುತ್ತಾ ಬರುತ್ತಿದ್ದಾನೆ. ಆತನು ನಿತ್ಯನಾಗಿ ಈಗಲೂ ಮುಂದೆಯೂ ಜೀವಿಸುವ ಪುರುಷನಾದುದರಿಂದಲೇ ಆತನು ದೇವರೆಂದು ನಾವು ನಂಬಿದ್ದೇವೆ. ಆತನೊಂದಿಗೆ ಸಂಭಾಷಿಸುವುದಕ್ಕೂ ಆತನೊಂದಿಗೆ ಅನ್ಯೋನ್ಯತೆಯನ್ನು ಬೆಳಸುವುದಕ್ಕೂ ಆತನಿಂದ ಸಹಾಯವನ್ನು ಹೊಂದಿ ನಡಸಲ್ಪಡುವುದಕ್ಕೂ ಸಾಧ್ಯವಾಗಿರುವದರಿಂದಲೇ ಆತನು ಇನ್ನೂ ಜೀವಿಸುತ್ತಾನೆಂದು ಸಿದ್ಧಾಂತವಾಗುತ್ತದೆ. ನಾವು ಬರೆಯುವ ಈ ವಿಷಯವು ಗೊತ್ತಾಗಬೇಕಾದರೆ ಆ ಸ್ವಾಮಿಯಲ್ಲಿ ಸಹಾಯವನ್ನು ಅಪೇಕ್ಷಿಸಿ ನಂಬಿಕೆಯ ಮೂಲಕವಾಗಿ ಆತನಲ್ಲಿಗೆ ಯಾರು ಬರುವರೋ ಅವರಿಗೆ ಮಾತ್ರ ಗೊತ್ತಾಗುವದು. ಯಾರು ಆತನಲ್ಲಿ ನಂಬಿಕೆಯನ್ನಿಟ್ಟಿದ್ದಾರೆಯೋ ಅವರು ನಾವಿಲ್ಲಿ ಹೇಳಿರುವುದು ನಿಶ್ಚಯವೆಂದು ಸಾಕ್ಷಿಕೊಡುವರು. ಯಾರು ನಂಬಿಕೆಯಿಂದಲೂ ಯಥಾರ್ಥ ಮನಸ್ಸಿನಿಂದಲೂ ಆತನ ಬಳಿಗೆ ಬರುತ್ತಾರೆಯೋ ಅವರೆಲ್ಲರಿಗೂ ಕ್ರಿಸ್ತನು ತನ್ನನ್ನು ಪ್ರಕಟಪಡಿಸಿಕೊಳ್ಳುವದಕ್ಕೆ ಸಿದ್ಧವಾಗಿದ್ದಾನೆ. "ನನ್ನ ಬಳಿಗೆ ಬರುವವನನ್ನು ನಾನೆಷ್ಟುಮಾತ್ರಕ್ಕೂ ತಿರಸ್ಕರಿಸುವುದಿಲ್ಲ" ಎಂದು ಆತನು ಹೇಳಿದ್ದಾನೆ.

ಡಾಕ್ಟರ್ ಸತ್ಯನಾಧನರು ಮಂಗಳೂರಿನಲ್ಲಿ ಮಾಡಿದ ಭಾಷಣವು

[ಮದರಾಸ್ ಯೂನಿವರ್ಸಿಟಿ ಕಮಿಷನಿನ ಮೆಂಬರುಗಳಲ್ಲಿ ಒಬ್ಬರಾದ ಮೇಲ್ಕಂಡ ಮಹನೀಯರು ಮಂಗಳೂರಿನಲ್ಲಿ "ಬಾಸೆಲ್ ಕ್ರಿಶ್ಚಿಯನ್ ಅಸೋಸಿಯೇಷನ್ ಎಂಬ ಸಮಾಜದವರಿಗೆ ಹೇಳಿದ ಭಾಷಣವನ್ನು ಇಲ್ಲಿ ಸಂಗ್ರಹಿಸಿ ಬರೆಯುತ್ತೇವೆ. ಕ್ರೈಸ್ತಸಮಾಜದವರಿಂದ ಈ ದೇಶಕ್ಕೆ ಆಗತಕ್ಕದೇನು" ಎಂಬ ವಿಷಯದಲ್ಲಿ ಆ ಸಾಮಾಜಿಕರಲ್ಲಿ ಪ್ರಸಿದ್ಧರಾದವರ ಅಭಿಪ್ರಾಯವನ್ನು ನೋಡುವಲಾಗಿ ಆ ಸಾಮಾಜಿಕರಿಗೇ ಅಲ್ಲ ಸರ್ವಜನಗಳಿಗೂ ಅನ್ವಯಿಸತಕ್ಕ ಕರ್ತವ್ಯವು ಪ್ರಕಟವಾಗುತ್ತದೆಂದು ತಿಳಿಯಬರುವದು—ಎಡಿ.]

ನಾನು ಕೆಲವು ತಿಂಗಳಿಂದ . ದಕ್ಷಿಣ ಹಿಂದುಸ್ಥಾನದಲ್ಲೆಲ್ಲಾ ಸಂಚರಿಸುತ್ತಿರುವಲ್ಲಿ ಎಲ್ಲಾ ಕಡೆಗಳಲ್ಲಿ ಕ್ರೈಸ್ತರ ಪ್ರಾಬಲ್ಯವನ್ನು ಕಂಡು ಬಹು ಆನಂದ ಪಡುವವನಾದೆನು. ಬಹು ಉತ್ತರದಲ್ಲಿರುವ ಬರಂಪೂರಿನಲ್ಲಿ ಸಹ ಕ್ರೈಸ್ತರು ವೃದ್ಧಿಯಾಗಿದ್ದಾರೆ. ಹತ್ತುಹನ್ನೆರಡು ವರ್ಷಗಳ ಮೊದಲು ಅಲ್ಲಿ ಕ್ರೈಸ್ತರೇ ಇರಲಿಲ್ಲ. ಈಗಲೋ ಸುಮಾರು ಸಾವಿರ ಮಂದಿ ಇರುವ ಉನ್ನತಿಯುಳ್ಳ ಕ್ರೈಸ್ತಸಭೆಯು ಅಲ್ಲಿ ಉಂಟು . . . ದಕ್ಷಿಣದಲ್ಲಿ ತಿನ್ನವೆಲ್ಲಿ, ತ್ರಿವಂಕೂರು ಮೊದಲಾದ ಸ್ಥಳಗಳಲ್ಲಿಯೂ ದೊಡ್ಡ ದೊಡ್ಡ ಕ್ರೈಸ್ತಸಭೆಗಳು ಇರುತ್ತವೆ. ಹೈದರಾಬಾದಿಗೆ ಮಾತ್ರ ಹೋಗಲಿಕ್ಕೆ ನನಗೆ ಅನುಕೂಲವಾಗಲಿಲ್ಲ. ಎಲ್ಲಿ ಹೋದರೂ ಕ್ರೈಸ್ತ ದೇವಾಲಯಗಳೂ ಎತ್ತರವಾದ ಗೋಪುರಗಳ ಸಹಿತವಾಗಿ ನಾಲ್ಕು ದಿಕ್ಕಿಗೂ ಶೋಭಿಸುವ ದೇವಾಲಯಗಳೂ ಶಾಲೆಗಳೂ ಕೊನ್ವೆಂಟುಗಳೂ ಕಣ್ಣಿಗೆ ಬೀಳುತ್ತವೆ . . ಮಿಷನುಗಳ ಕೆಲಸದಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ ಎಂತ ಕೆಲವರು ಆಪಾದಿಸುವರು. ಕ್ರೈಸ್ತರ ಸಂಖ್ಯೆಯು ಮಿಷನರಿಗಳ ಫಲವಾಗಿ ಈ ದೇಶದಲ್ಲಿ ಹೆಚ್ಚುತ್ತಾ ಬರುತ್ತದೆ. ಬಾನೆಸುಮಾಕಿ ಲೆಕ್ಕದ ಪ್ರಕಾರ ಕಳೆದ ೩೦ ವರ್ಷಗಳಲ್ಲಿ ಈ ದೇಶದಲ್ಲಿ ಕ್ರೈಸ್ತರ ಸಂಖ್ಯೆಯು ಬೆಳೆದಂತೆ ಮುಂದಕ್ಕೂ ವೃದ್ಧಿಯಾಗುತ್ತಾ ಬಂದರೆ, ಇನ್ನು ೧೦೦ ವರ್ಷಗಳಲ್ಲಿ ಈ ದೇಶದ ಜನರೆಲ್ಲರೂ ಕ್ರೈಸ್ತರಾಗಿರುವರು.

ಆದರೆ ಕ್ರೈಸ್ತರ ಬಾಹ್ಯವೃದ್ಧಿಯು ನನಗೆ ಅಷ್ಟು ವಿಶೇಷವಾದದ್ದಲ್ಲ. ಅವರು ನೀತಿ ಭಕ್ತಿಗಳಲ್ಲಿಯೂ ಐಕ್ಯಭಾವದಲ್ಲಿಯೂ ಬೆಳೆಯುತ್ತಿದ್ದಾರೆ ಎಂತಲೂ ಮನಗಂಡಿದ್ದೇನೆ, ಇದು ಅಧಿಕ ಸಂತೋಷಕರವು. ನಾವು ನೀತಿವಿಚಾರದಲ್ಲಿ ವೃದ್ಧಿಯಾಗಲೇಬೇಕಾದವರು. ನಮ್ಮಷ್ಟು ಒಳ್ಳೆಯವರು ಹಿಂದುಜನರಲ್ಲಿ ಯಾರೂ ಇರುವದಿಲ್ಲ ಎಂತ ನಾನು ಹೇಳುವದಿಲ್ಲ, ಆದರೆ ನಮಗೂ ಅವರಿಗೂ ಮಹದಂತರವಿದೆ. ನೀತಿವಿಚಾರದಲ್ಲಿ ಉತ್ತರೋತ್ತರ ಅಭಿವೃದ್ಧಿಯಾಗುವದಕ್ಕೆ ನಮಗೆ ನಮ್ಮ ರಕ್ಷಕರಾದ ಯೇಸು ಕ್ರಿಸ್ತರೇ ಮೇಲ್ಪಂಕ್ತಿಯಾಗಿದ್ದಾರೆ. ಅಂಥಾದ್ದೊಂದು ಪವಿತ್ರ ಆದರ್ಶನ ಅವರಿಗಿಲ್ಲ. ನಾವು ಈ ಆದರ್ಶವನ್ನು ಮುಂದಿಟ್ಟುಕೊಂಡು ನಮ್ಮ ಸ್ವಾಮಿಯ ಹಾಗೆ ಆಗುವದಕ್ಕೆ ಪ್ರಯತ್ನಿಸುತ್ತಾ ಹೋಗುವವರು, ಎಷ್ಟು ಸಾಧನೆ ಮಾಡಿದರೂ ನಾವು ಆ ಪವಿತ್ರ ಮೂರ್ತಿಗೆ ಸರಿ ಹೋಗಲಿಕ್ಕಿಲ್ಲ ಎಂತ ಅನುಭವವಾಗುತ್ತದಲ್ಲ. ಈ ಅನುಭವವೇ ನಾವು ನೀತಿ ಭಕ್ತಿವಿಚಾರದಲ್ಲಿ ವೃದ್ಧಿಯಾಗುವದಕ್ಕೆ ಒಂದು ದೊಡ್ಡ ಪ್ರೇರಕ ಬಲವಾಗಿದೆ.

ಈಗಿನ ಕಾಲದಲ್ಲಿ ಎಲ್ಲಾ ಜಾತ್ಯಸ್ಥರ ಸಮುದಾಯಗಳೂ ಪುರೋಭಿವೃದ್ಧಿಯಾಗಬೇಕೆಂದು ಸಾಧನೆ ಮಾಡುವಲ್ಲಿ, ಕ್ರೈಸ್ತರಲ್ಲಿಯೂ ಎಲ್ಲಾ ಕಡೆಯಲ್ಲಿ ಇದೇ ಪರಿಶ್ರಮವು ತೋರಿಯುತ್ತದೆ. ಈ ದೇಶವು ಕ್ರಿಸ್ತನ ಪಾದಾರವಿಂದಕ್ಕೆ ಎರಗಬೇಕಾದರೆ, ಈ ದೇಶದ ಕ್ರೈಸ್ತರಿಂದಲೇ ಅದು ಸಾಧ್ಯವಾಗಿದೆ. ನಾವು ಪಾರತಂತ್ರ್ಯವನ್ನು ಬಿಟ್ಟು ಸ್ವತಂತ್ರ್ಯಪ್ರವರ್ತಕರಾಗಬೇಕು. ಇಂಥಾ ಉದ್ದೇಶವನ್ನು ಮುಂದಿಟ್ಟು ನಮ್ಮವರೂ ಅಲ್ಲಲ್ಲಿ ಕ್ರಿಶ್ಚಿಯನ್ ಅಸೋಸಿಯೇಷನ್ ಎಂಬ ಸಂಘಗಳನ್ನು ಸ್ಥಾಪಿಸಿದರು. ನಾನು ೨೦ ವರ್ಷಗಳಿಂದ ಇಂಥಾದ್ದೊಂದು ಸಂಘದಲ್ಲಿ ಇದ್ದೇನೆ. ನಮ್ಮ ಮದ್ರಾಸ ಸಂಘದಿಂದ ನಮ್ಮ ಸಮುದಾಯಕ್ಕೆ ಎಷ್ಟು ಲಾಭ ಆಗತಕ್ಕಿತ್ತೋ, ಅಷ್ಟು ಲಾಭವಾಯಿತು ಎಂದು ನಾನು ಹೇಳಲಾರೆನು. ಅದಾಗ್ಯೂ ಅವರು ಕೂಡುವ ಮಟ್ಟಿಗೆ ನಮ್ಮ ಸಮುದಾಯಕ್ಕೆ ಪ್ರಯೋಜನಕರವಾದ ಕೆಲಸಗಳನ್ನು ನೆರವೇರಿಸಿದ್ದಾರೆ, ಮತ್ತು ಇನ್ನು ಹೆಚ್ಚು ನೆರವೇರಿಸುವರು. ನಾವು ಈ ದೇಶದಲ್ಲಿ ಒಂದು ಬಲವಾಗಿರಬೇಕಾದರೆ, ನಮ್ಮಲ್ಲಿ ಕೆಲವು ಸದ್ಗುಣಗಳು ಬೆಳೆಯುವದು ಅಗತ್ಯ.

೧ ನಾವು ಸ್ವಾರ್ಥವಿಸರ್ಜನೆ ಮಾಡಬೇಕು — . . . ಮಿಷನರಿಗಳನ್ನು ದೂರುವದೂ ಅವರ ದೋಷಗಳನ್ನು ಕುರಿತು ಖಂಡಿಸುವದೂ ಸಮಂಜಸವಲ್ಲ. ಅವರಲ್ಲಿಯೂ ಅವರ ಕೆಲಸಗಳಲ್ಲಿಯೂ ಕುಂದುಕಗಳೂ ದೋಷಗಳೂ ಇಲ್ಲವೆಂತ ನಾನು ಹೇಳುವದಿಲ್ಲ . ಆದರೆ ಅವರ ದೋಷಗಳನ್ನಲ್ಲ, ಅವರ ಗುಣಗಳನ್ನೇ ನಾವು ನೋಡಬೇಕು. ನಾವು ಇಷ್ಟು ಉಚ್ಛ್ರಾಯಕ್ಕೆ ಬಂದದ್ದಕ್ಕೆ ಅವರೇ ಕಾರಣಭೂತರಾಗಿದ್ದಾರೆ . . . ಮಿಷನರಿಗಳು ಬಹು ಸಮರ್ಥರಾದ ಮನುಷ್ಯರನ್ನು ಆರಿಸಿ ತೆಗೆದು ಕಳುಹಿಸಿಕೊಡುತ್ತಾರೆ. ಇವರು ದೇವರ ರಾಜ್ಯದ ಪ್ರಸಾರಣಸೇವೆಯಲ್ಲಿ ಪ್ರಾಣವ್ಯಯ ಮಾಡುತ್ತಾರೆ. ಇದೇ ಪ್ರಕಾರ ಸ್ವಾರ್ಥವನ್ನು ಬಿಟ್ಟು ಪರೋಪಕಾರಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡುವವರು ನಮ್ಮಲ್ಲಿ ಎಷ್ಟು ಮಂದಿ ಇದ್ದಾರೆ? ಈ ಸದ್ಗುಣವು ನಮ್ಮಲ್ಲಿ ಬೆಳೆಯಬೇಕು.

೨ ಪರಸ್ಪರ ಐಕ್ಯಭಾವದಲ್ಲಿರಬೇಕು — ನಮ್ಮಲ್ಲಿ ಮತ್ತೊಬ್ಬರ ದೋಷಗಳನ್ನು ನೋಡುವದೇ ಹೆಚ್ಚು. ಹೀಗೆ ಭೇದವಾಗಿ ಪರಸ್ಪರ ವೈರಭಾವವು ಬೆಳೆಯುವದು. ಐಕ್ಯವು ತಪ್ಪುವದು. ನಾವು ಮತ್ತೊಬ್ಬರ ದೋಷಗಳನ್ನಲ್ಲ, ಅವರಲ್ಲಿರುವ ಗುಣಗಳನ್ನೇ ನೋಡಿ ಪ್ರೀತಿಸಿ ಸನ್ಮಾನಿಸಿ ಪರಸ್ಪರ ಐಕ್ಯದಲ್ಲಿರುವಂತೆ ನೋಡಬೇಕು.

೩ ಆತ್ಮಭಾವದವರಾಗಿರಬೇಕು — ನಮ್ಮ ಸಮುದಾಯವು ಪ್ರಪಂಚವಿಚಾರದಲ್ಲಿ ಏಳಿಗೆಯಾಗುವದು ಮುಖ್ಯ ಸಂಗತಿಯಲ್ಲ. ಆತ್ಮಭಾವದಲ್ಲಿ ಏಳಿಗೆಯಾಗುವದೇ ವಿಶೇಷವು. ಇದು ಮೊದಲು. ಆದರೆ ಪ್ರಪಂಚವಿಚಾರದಲ್ಲಿ ತನ್ನಷ್ಟಕ್ಕೆ ಏಳಿಗೆಯಾಗುವದು. ಮೊದಲು ದೇವರ ರಾಜ್ಯವನ್ನೂ ಆತನ ನೀತಿಯನ್ನೂ ಹುಡುಕಿರಿ, ಆಗ ಇವುಗಳೆಲ್ಲಾ ನಿಮಗೆ ಅದರ ಕೂಡ ಕೊಡಲ್ಪಡುವವು ಎಂಬುದು ಸ್ವಾಮಿಯವರ ವಾಗ್ದಾನ. ಅವರು ಈ ಕ್ರೈಸ್ತ ಧರ್ಮವನ್ನು ಒಂದು ರಾಜ್ಯವೆಂತ ಅನೇಕಾವರ್ತಿ ಹೇಳಿದ್ದಾರೆ . . . ನಾವು ಈ ರಾಜ್ಯಕ್ಕಾಗಿಯೇ ದುಡಿಯುವವರಾಗಬೇಕು. ದೇವರು ನಮ್ಮನ್ನು ಎಷ್ಟು ಉನ್ನತವಾದ ಪದವಿಗೆ ಏರಿಸಿದರೂ, ನಾವು ಹೊಗಳಿಕೊಳ್ಳದೆ ವಿನಯಭಾವ ತಾಳಬೇಕು.

ಸ ದೀ

ಇಂಡಿಯಾ ದೇಶದ ವೃತ್ತಾಂತಗಳು

ಐದು ರೂಪಾಯಿನ ಹೊಸ ಕರೆನ್ಸಿ ನೋಟುಗಳು ಮುಂದಿನ ತಿಂಗಳ ಎರಡನೇ ವಾರದಲ್ಲಿ ಸಿದ್ಧವಾಗುವವು. ಈ ನೋಟುಗಳು ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲೂ ಸ್ಥಳ ವ್ಯತ್ಯಾಸವಿಲ್ಲದೆ ಚಲಾವಣೆಗೆ ಬರುತ್ತವೆ.

* * * *

ಮುರ್ಷಿದಾಬಾದಿನ ನವಾಬರ ಇಬ್ಬರು ಹೆಣ್ಣುಮಕ್ಕಳು ತಮ್ಮ ತಂದೆಯ ಬಳಿ ಇರುವ ತಮ್ಮ ಬಾಬತು ನಗನಾಣ್ಯಗಳನ್ನು ತಮಗೆ ಕೊಡಿಸಿಕೊಡಬೇಕೆಂದು ಕಲ್ಕತ್ತಾ ಪಟ್ಟಣದಲ್ಲಿ ೧೦,೦೦೦ ರೂಪಾಯಿನ ದಾವಾ ತಂದಿದ್ದಾರೆ.

* * * *

ಹಿಂದುಸ್ಥಾನದ ವೈಸ್‌ರಾಯಿ ಕೆಲಸಕ್ಕೆ ಹೊಸದಾಗಿ ನೇಮಕವಾಗಿರುವ ಲಾರ್ಡ್ ಮಿಂಟೋಯವರು ಸತಿಸಹಿತ ಅಕ್ಟೋಬರ್ ೨೦ರಲ್ಲಿ ಶೀವೆ ಯಿಂದ ಹಿಂದುಸ್ಥಾನವನ್ನು ಕುರಿತು ಪ್ರಯಾಣ ಮಾಡುವರೆಂದು ತಂತೀ ವರ್ತಮಾನ ಬಂದಿದೆ.

* * * *

ಪೂನಾ ಪಟ್ಟಣದ ಗಣೇಶಖಿಂಡ ಎಂಬ ಬಂಗಲೆಯಲ್ಲಿ ಬೊಂಬಾಯಿ ಗವರ್ನರಾದ ಲಾರ್ಡ್ ಲ್ಯಾಮಿಂಗ್ಟನ್‌ರವರು ಸುಮಾರು ೫೦೦ ಮಂದಿ ದೊಡ್ಡ ಮನುಷ್ಯರನ್ನೂ ಸ್ತ್ರೀಯರನ್ನೂ ಕರೆಕೊಂಡು, ದೊಡ್ಡ ಔತಣ ಮಾಡಿ, ಸಂತೋಷಪಡಿಸಿದರು.

ಮದರಾಸ್ ಯೂನಿವರ್ಸಿಟಿ ವಿದ್ಯಾ ಸಂಸ್ಥೆಗೆ ಕಳೆದ ವರುಷ ೨,೪೮,೯೬೩ ರೂಪಾಯಿ ಉತ್ಪತ್ತಿಯಾಯಿತು. ಈ ಪೈಕಿ ೨,೫೭,೬೨೨ ರೂಪಾಯಿ ಖರ್ಚಾಗಿದೆ. ಈಗ ಯೂನಿವರ್ಸಿಟಿಯ ಫಂಡಿನಲ್ಲಿ ೫೭ ಲಕ್ಷವೂ ೬೩ ಸಾವಿರ ರೂಪಾಯಿ ಉಳಿದಿರುತ್ತದೆ.

* * * *

ಕಲ್ಕತ್ತಾ ಪಟ್ಟಣದಲ್ಲಿ ಬರ್ನ ಕಂಪನಿಯಲ್ಲಿ ಕೆಲಸಮಾಡುವ ೩೦೦ ಗುಮಾಸ್ತರು ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ಅಲ್ಲಿನ ಸ್ವದೇಶೀಯ ಗುಂಪಿನವರಿಗೆ ಇದು ತುಂಬಾ ಸಂತೋಷವನ್ನುಂಟುಮಾಡಿದೆ. ಅವರು ಚಂದಾ ಎತ್ತಿ ಆ ಗುಮಾಸ್ತರ ಜೀವನವನ್ನು ನಡಸ ಹೊರಟಿದ್ದಾರೆ.

* * * *

ಮದರಾಸ್ ಪಟ್ಟಣದಲ್ಲಿ ವಾಂತಿಭೇದಿ ಉಪದ್ರವು ಇನ್ನೂ ಇದ್ದೇ ಇದೆ. ಅದರ ಜೊತೆಗೆ ಈಗ ಸಿಡುಬಿನ ಉಪದ್ರವೂ ಪ್ರಾರಂಭವಾಗಿರುವದು. ದಿನ ಒಂದಕ್ಕೆ ನಾಲ್ವತ್ತು ಜನರಿಗೆ ಕಡಿಮೆ ಇಲ್ಲದೆ ವಾಂತಿಭೇದಿ ಉಪದ್ರವದಲ್ಲೂ ೩೦—೪೦ ಮಂದಿ ಸಿಡುಬಿನ ಉಪದ್ರವದಲ್ಲೂ ಸಾಯುತ್ತಿದ್ದಾರೆ.

* * * *

ಕೊಯಮುತ್ತೂರು ಪಟ್ಟಣದಲ್ಲಿ ಕೊಳಕಾಗಿರುವ ಕೆಲವು ಪ್ರದೇಶಗಳನ್ನು ಒಡೆದು ಹಾಕಿ, ಪ್ರಜಾ ಆರೋಗ್ಯವನ್ನು ಅಭಿವೃದ್ಧಿ ಮಾಡುವುದಕ್ಕೆ ಮ್ಯುನಿಸಿಪಾಲಿಟಿಯವರಿಗೆ ಚೈತನ್ಯವಿಲ್ಲವೆಂಬುದನ್ನು ತಿಳಿದು ಸರ್ಕಾರದವರು ೬೦ ಸಾವಿರ ರೂಪಾಯಿ ಸಾಲ ಮಾಡುವಂತೆ ಹುಕುಂ ಕೊಟ್ಟಿದ್ದಾರೆ.

* * * *

ಮದರಾಸು ಪಟ್ಟಣದಲ್ಲಿ ಅಬ್ದುಲ್‌ಖಾದರ್ ಎಂಬೊಬ್ಬ ಚರ್ಮ ವ್ಯಾಪಾರಿಯು ತನ್ನ ಮನೆಗೆ ಎರಡನೇ ಅಂತಸ್ತನ್ನು ಕಟ್ಟಿಸುತ್ತಿದ್ದನು. ಕಳೆದ ವಾರ ಈ ಕಲ್ಲು ಕಟ್ಟಡವು ಹಳೇ ಕಟ್ಟಡದ ಸಹಿತ ಕುಸಿದು ಬಿದ್ದುಹೋಯಿತು. ಕೂಲಿಯ ಮನುಷ್ಯರು ಸತ್ತರು. ಒಬ್ಬ ಹೆಂಗಸಿಗೆ ಗಾಯವಾಗಿದೆ.

* * * *

ಹೈದರಾಬಾದ್ ಸಂಸ್ಥಾನದ ಸಿಕಂದರಾಬಾದಿನಲ್ಲಿ ಕಳೆದ ವಾರ ರಂಗನಾಯಕಮ್ಮ ಎಂಬೊಬ್ಬ ವಿಧವೆಯನ್ನು ಯಾರೋ ಕ್ರೂರತರವಾಗಿ ಕಡಿದುಹಾಕಿದ್ದಾರೆ. ಆಕೆ ಬಹಳ ಐಶ್ವರ್ಯವಂತಳಾಗಿದ್ದಳು. ಈ ಕೊಲೆಯು ಆ ಪಟ್ಟಣದಲ್ಲಿ ತುಂಬಾ ಗಲಿಬಿಲಿಯನ್ನುಂಟುಮಾಡಿದೆ. ಅಪರಾಧಿಗಳು ಇನ್ನೂ ಸಿಕ್ಕಿಲ್ಲ.

* * * *

ಲಕ್ನೋ ಪಟ್ಟಣದಲ್ಲಿ ಕಳೆದವಾರ ಅಪೂರ್ವವಾದ ಮಳೆ ಸುರಿಯಿತು. ಎರಡು ಮೂರು ಕಡೆಗಳಲ್ಲಿ ಸಿಡಿಲು ಬಿದ್ದು ಭಾರೀ ಮನೆಗಳು ಒಡೆದುಹೋದವು. ಹುಸೇನಾಬಾದ್ ಎಂಬ ಅರಮನೆಯ ಮುಂಭಾಗದ ಕಲ್ಲು ಕಟ್ಟಡವು ಅನಾಮತ್ತಾಗಿ ಬಿದ್ದುಹೋಯಿತು. ಒಂದು ಮಸೀತಿಗೂ ಸಿಡಿಲು ಬಿದ್ದು ಬಿರುಕುಬಿಟ್ಟಿದೆ.

* * * *

ಕಲ್ಲೀಕೋಟೆ ಡಿಸ್ಟ್ರಿಕ್ಟಿಗೆ ಸೇರಿದ ಮಿ। ಮಾಮ್ಮೋ ಎಂಬ ಪೋಲೀಸ್ ಇನ್ಸ್ಪೆಕ್ಟರು ಒಂದು ಮೊಕದ್ದಮೆಯಲ್ಲಿ ಅಪರಾಧಿಗಳನ್ನು ಕ್ರೂರವಾಗಿ ಹಿಂಸೆ ಪಡಿಸಿದ್ದಲ್ಲದೆ ಅವರಿಂದ ಹಣವನ್ನು ತೆಗೆದುಕೊಂಡರೆಂಬುದಾಗಿ ಮೊಕದ್ದಮೆ ಆಗಿದೆ. ಇದರಲ್ಲಿ ಪೋಲೀಸಿನವರೂ ಇತರರೂ ಫಿರ್ಯಾದಿಯ ಕಡೆ ಸಾಕ್ಷಿಗಳಾಗಿದ್ದಾರೆ.

* * * *

ಸಿಲೋನ್ ದ್ವೀಪದ ಸುಲ್ತಾನರಿಂದ ಬರಬೇಕಾಗಿದ್ದ ಸಂಬಳದ ಬಾಕಿಗಾಗಿ ಮಿ। ದಾದಾಭಾಯಿ ನವರೋಜಿ ಯವರು ಕೊಲಂಬೋ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ದಾವಾ ಮಾಡಿದ್ದರು. ಅದರ ಮೇಲೆ ಜಡ್ಜಿಯವರು ಫಿರ್ಯಾದಿಗೆ ಕೋರ್ಟು ಖರ್ಚು ಸಹಿತ ೩೦೦ ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿರುತ್ತಾರೆ.

* * * *

ಕಲ್ಕತ್ತಾ ಪಟ್ಟಣದಲ್ಲಿ ಸುರಥ ಚಂದ್ರದಾಸ್, ಶಶಿಭೂಷಣ ಚಕ್ರವರ್ತಿ ಎಂಬಿಬ್ಬರು ಬಂಗಾಳಿಗಳು ಸೇರಿಕೊಂಡು, ಒಂದು ಲಕ್ಷ ರೂಪಾಯಿನ ಸರ್ಕಾರಿ ಪತ್ರಗಳನ್ನು ಸೃಷ್ಟನೆ ಮಾಡಿದರೆಂತಲೂ ಅಲಹಾಬಾದ್ ಬ್ಯಾಂಕಿಗೆ ಸುಳ್ಳು ದಸ್ತಕಗಳನ್ನು ಕೊಟ್ಟು ಎಂಟು ಸಾವಿರ ರೂಪಾಯಿ ತೆಗೆದುಕೊಂಡರೆಂತಲೂ ಮೊಕದ್ದಮೆ ಆಗಿದೆ.

* * * *

ಬೊಂಬಾಯಿಪಟ್ಟಣದ ಕೋಟೆಯಲ್ಲಿರುವ ಸರ್ದಾರ್ ಬಂಗಲಿ ಎಂಬ ಕಟ್ಟಡವೂ ಅದರ ಅಕ್ಕಪಕ್ಕಗಳಲ್ಲಿರುವ ೧೬,೧೦೫ ಚದರ ಗಜ ವಿಸ್ತಾರವಾದ ಮೈದಾನವೂ ಕಳೆದವಾರ ೧೩ ಲಕ್ಷ ರೂಪಾಯಿಗೆ ಬಿಕರಿ ಆಯಿತು. ಮಾಲೀಕರಾದ ಸರ್ದಾರ್ ಸಯ್ಯದ್ ಅಲ್ಲಿ ಖಾನರವರಿಂದ ರಾಜಾ ಛಬಿಲಾಲ್ ಮೋತೀಲಾಲ್ ಎಂಬ ಸಾಹುಕಾರರು ಕೊಂಡುಕೊಂಡಿದ್ದಾರೆ.

* * * *

ರಾಜಪುತಾನದಲ್ಲಿ ಪಶ್ಚಿಮ ಭಾಗದ ಸಂಸ್ಥಾನಗಳೊಳಗೆ ಸುಮಾರು ಆರು ಸಂವತ್ಸರಗಳಿಂದಲೂ ಸರಿಯಾದ ಮಳೆಗಳು ಆಗದಿಲ್ಲವಾದ ಕಾರಣ ಈಗ ಅಲ್ಲಿನ ಭಾವಿ ಕೆರೆ ಕುಂಟೆಗಳು ಬಿಡಾಲವಾಗುತ್ತಿರುವವು. ಗೋಶಾಲೆಗಳಿಗೆ ಮೇವು ಸಿಕ್ಕದೆ ಪ್ರಜಾ ಸಮಾಗಿದೆ. ರೈತ ಪ್ರಜೆಗಳೂ ಇತರ ಗ್ರಾಮವಾಸಿಗಳೂ ಮನೆಮಾರುಗಳನ್ನು ಬಿಟ್ಟು, ಪಂಜಾಬ್ ಮಾಲ್ವಾ ಕಾಮಗಾರಿ ಆಗುವ ಕಡೆಗಳಿಗೆ ಹೋಗುತ್ತಿದ್ದಾರೆ. ಇನ್ನು ಕೆಲವು ಕಾಲದೊಳಗಾಗಿ ಮಳೆ ಬಾರದಿದ್ದರೆ ಆ ಪ್ರಾಂತ್ಯ ದೊಡ್ಡ ಕ್ಷಾಮವು ಪ್ರಾಪ್ತವಾಗುತ್ತದೆಂದು ಸರ್ಕಾರಿ ರಿಪೋರ್ಟು ಬಂದಿದೆ.

ಕಲ್ಕತ್ತಾ ಪಟ್ಟಣದಲ್ಲಿ ಮ್ಯುನಿಸಿಪಲ್ ಕಚರಾ ಗುಡಿಸುವವರ ಪೈಕಿ ಒಂದು ಸಾವಿರ ಮಂದಿಗಿಂತಲೂ ಹೆಚ್ಚಾಗಿ ಕೆಲಸಕ್ಕೆ ಬಾರದೆ ನಿಂತುಬಿಟ್ಟಿದ್ದಾರೆ. ಒಂದು ವಾರದಿಂದ ಕೆಲವು ಬೀದಿಗಳಲ್ಲಿ ಕೊಳಕೂ ರೊಚ್ಚೂ ಅಸಹ್ಯವಾಗಿದೆ. ಕೂಲಿ ಕಡಿಮೆ, ಹೆಚ್ಚು ಕೆಲಸ, ಓವರ್ಸಿಯರ್ ಮುಂತಾದ ನೌಕರರ ಹಿಂಸೆ ಹೆಚ್ಚು ಎಂಬಿವೇ ಅವರ ಕಷ್ಟಗಳು. ಈ ಸಂಗತಿಯನ್ನು ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಖುದ್ದಾಗಿ ತನಿಖೆ ಮಾಡುತ್ತಿದ್ದಾರೆ.

* * * *

ಚೀನ ಜಪಾನ್ ಯುದ್ಧವು ಮುಕ್ತಾಯವಾದದ್ದರಿಂದ ಕಲ್ಕತ್ತಾ ಪ್ರಾಂತ್ಯದಲ್ಲಿರುವ ಅನೇಕ ವರ್ತಕರಿಗೆ ನಷ್ಟವಾಗಿರುವುದು. ಧಾನ್ಯಗಳನ್ನು ಅನೇಕರು ಕೊಂಡು ತುಂಬಿಕೊಂಡಿದ್ದರು. ಬಹು ಜನರು ಗೋಣೀ ಚೀಲಗಳನ್ನು ಬಹಳವಾಗಿ ಕೊಂಡು ಇಟ್ಟುಕೊಂಡಿದ್ದಾರೆ. ಇವನ್ನೆಲ್ಲಾ ಜಪಾನಿನವರು ಹೆಚ್ಚು ಕ್ರಯಕೊಟ್ಟು ತೆಗೆದುಕೊಂಡುಹೋಗುತ್ತಾರೆಂಬ ನಿರೀಕ್ಷೆಯಿತ್ತು. ಇದು ತಪ್ಪಿಹೋದ್ದರಿಂದ ಅವರಿಗೆ ತುಂಬಾ ನಷ್ಟವಾಗಿದೆ.

* * * *

ಬರ್ಮಾ ಆಧಿಪತ್ಯದಲ್ಲಿ ಇರವಾಡಿ ಮಯಿತ್ಕಾ ಎಂಬೀನದಿಗಳಲ್ಲಿ ಈ ಸಲ ಅಪಾರವಾದ ಪ್ರವಾಹ ಬಂದಿದೆ. ೪೦,೦೦೦ ಎಕರೆ ಜಮೀನಿನಲ್ಲಿ ನೀರು ನಿಂತು ಬೆಳೆಯೆಲ್ಲಾ ಕೊಳೆತುಹೋಗುತ್ತಿದೆ. ಒಂದು ವಾರದ ಮೇಲಾದರೂ ಇನ್ನೂ ಪ್ರವಾಹ ಇಳಿಯಲಿಲ್ಲ. ಬಡ ರೈತರ ಕಷ್ಟನಷ್ಟಗಳನ್ನೂ ಅವರ ಗೋಳನ್ನೂ ವಿವರಿಸಲು ತೀರದು. ಮುಂದೆ ಆ ಪ್ರಾಂತ್ಯದಲ್ಲಿ ಕ್ಷಾಮವೂ ಕಳ್ಳತನಗಳೂ ಪ್ರಾಪ್ತವಾದಾವೆನ್ನುವದಕ್ಕೆ ಸಂಶಯವಿಲ್ಲ.

* * * *

ಇಂಡಿಯಾ ಗವರ್ನಮೆಂಟಿನವರು ಯಾರೇ ಆಗಲಿ ಒಂದು ಸ್ಥಳದಲ್ಲಿ ಪಕ್ಷಿಪಕ್ಷಿಗಳನ್ನು ಅವುಗಳ ಗರಿಗಳಿಗೋಸ್ಕರ ಕೊಲ್ಲಕೂಡದೆಂದು ಕಾನೂನು ಮಾಡಿರುತ್ತಾರೆ. ಆದಾಗ್ಯೂ ಕಳೆದ ವಾರ ಕಲ್ಕತ್ತೆಯಿಂದ ಚೀಣಕ್ಕೆ ಹೋಗುತ್ತಿದ್ದ ಒಂದು ಹಡಗಿನಲ್ಲಿ ಹದಿನೆಂಟು ಪೆಟ್ಟಿಗೆಗಳ ತುಂಬಾ ಪಕ್ಷಿಪಕ್ಷಿಗಳ ಗರಿಗಳನ್ನು ತುಂಬಿ ಸಾಗಿಸುತ್ತಿದ್ದರು. ಸರ್ಕಾರದವರು ಈ ಪೆಟ್ಟಿಗೆಗಳನ್ನು ದಸ್ತಗಿರಿ ಮಾಡಿ ಮಾಲೀಕರಾದ ವರ್ತಕರನ್ನು ತನಿಖೆಮಾಡುತ್ತಿದ್ದಾರೆ.

* * * *

ಕಳೆದ ವಾರ ರಂಗೂನ್ ಪಟ್ಟಣದಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಬಂಗಾಳಿ, ಮದರಾಸಿ, ಮಾರ್ವಾಡಿ, ಗುಜರಾತಿ, ಮರಾಟಿ, ಪಂಜಾಬಿ, ಮಹಮ್ಮದೀಯ ವರ್ತಕರೆಲ್ಲಾ ಹಾಜರಾಗಿದ್ದರು. ಸೀಮೆಯ ಬಟ್ಟೆಬರೆ ಮುಂತಾದ ಯಾವ ವಸ್ತುವನ್ನೂ ಯಾರೂ ಖರೀದಿ ಬಿಕರಿ ಮಾಡಕೂಡದೆಂತಲೂ ಯಾರೂ ಕೊಂಡುಕೊಳ್ಳಕೂಡದೆಂತಲೂ, ಸ್ವದೇಶದಲ್ಲಿ ತಯಾರಾಗುವುದನ್ನೇ ಎಲ್ಲರೂ ಉಪಯೋಗಿಸಬೇಕೆಂತಲೂ ಗೊತ್ತುಮಾಡಿಕೊಂಡಿದ್ದಾರೆ.

* * * *

ಅಮೃತಸರದಲ್ಲಿ ೧೯ ವರುಷದ ಒಬ್ಬ ಮಹಮ್ಮದೀಯನು ರಶೀತಿ ಪುಸ್ತಕಗಳನ್ನು ಇಟ್ಟುಕೊಂಡು, ದೊಡ್ಡ ಮನುಷ್ಯರ ಮನೆಗಳಿಗೆಲ್ಲಾ ಹೋಗಿ ಲಾಹೋರ್ ಪಟ್ಟಣದಲ್ಲಿರುವ ಇಸ್ಲಾಮಿಯಾ ಕಾಲೇಜಿನ ಫಂಡಿಗೆ ಚಂದಾ ವಸೂಲುಮಾಡುತ್ತಿದ್ದನು. ಇವನನ್ನು ಪೋಲೀಸಿನವರು ಹಿಡಿದು ತನಿಖೆಮಾಡುವಲ್ಲಿ ಮೋಸಗಾರನೆಂತಲೂ ಸ್ವಪ್ರಯೋಜನಕ್ಕಾಗಿ ಹಣವನ್ನು ವಸೂಲುಮಾಡುತ್ತಿದ್ದನೆಂದು ತಿಳಿದುಬಂದ ಕಾರಣ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಪಡಿಸಿದ್ದಾರೆ.

* * * *

ರಂಗೂನ್ ಪಟ್ಟಣದ ಪೋಲೀಸ್ ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರು ಕಳೆದವಾರ ಸಾಕ್ಷಿಯನ್ನು ತನಿಖೆ ಮಾಡುತ್ತಿದ್ದಾಗ ಕೋರ್ಟಿನ ಕಿಟಕಿಯ ಬಳಿ ಒಬ್ಬನು ಮರೆಯಾಗಿ ನಿಂತು, ಸನ್ನೆಮಾಡಿ ಸಾಕ್ಷಿಗೆ ಹೇಳಿಕೊಡುತ್ತಿದ್ದನು. ಇವನನ್ನು ಮ್ಯಾಜಿಸ್ಟ್ರೇಟರೂ ಕೋರ್ಟಿನಲ್ಲಿದ್ದವರೂ ಕಂಡರು. ಮ್ಯಾಜಿಸ್ಟ್ರೇಟರು ಅವನನ್ನು ಹಿಡಿದು ತರಿಸಿ, ದರ್ಖಾಸ್ತಿಯಿಂದ ಅವನಿಗೆ ೧೦ ರೂಪಾಯಿ ಜುಲ್ಮಾನೆ, ಇಲ್ಲವೇ ೭ ದಿನಗಳ ಸಾದಾ ಸಜಾ ಶಿಕ್ಷೆಯನ್ನು ವಿಧಿಸಿದರು.

* * * *

ಪೂನಾ ಪಟ್ಟಣದಲ್ಲಿ ಕಳೆದ ವಾರ ನಡೆದ ಕುದುರೇ ಜೂಜಿಗೆ ರೈಲ್ ಗಾಡಿಯಲ್ಲಿ ಹೋಗುತ್ತಿದ್ದ ಮೂವತ್ತೆಂಟು ಜನರನ್ನು ರೈಲ್ವೆ ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ. ಇವರು ಮೂರನೇ ತರಗತಿ ಗಾಡಿಯಲ್ಲಿ ಕುಳಿತು ಅನೇಕ ಸಹಸ್ರ ರೂಪಾಯಿಗಳನ್ನಿಟ್ಟುಕೊಂಡು ಜೂಜಾಡುತ್ತಿದ್ದರು. ಅವರಲ್ಲಿ ಮಹಮ್ಮದೀಯರೂ ಪಾರ್ಸಿಗಳೂ ಹಿಂದೂಗಳೂ ಇರುತ್ತಾರೆ. ಇವರನ್ನೆಲ್ಲಾ ಲಾನೌಲಿ ಪಟ್ಟಣದ ಮ್ಯಾಜಿಸ್ಟ್ರೇಟರು ದರ್ಖಾಸ್ತಿ ಮಾಡಿ, ಪೋಲೀಸಿನವರು ಅವರಿಂದ ಕಿತ್ತುಕೊಂಡಿದ್ದ ಸಾವಿರಾರು ರೂಪಾಯಿಗಳನ್ನು ಅವರಿಗೆ ಕೊಡಿಸಿ, ಅವರನ್ನೆಲ್ಲಾ ಜಾಮೀನಿನ ಮೇಲೆ ಬಿಟ್ಟಿದ್ದಾರೆ.

* * * *

ತಿರುಚನಾಪಲ್ಲಿಯ ಜೈಲಖಾನೆಯ ಹತ್ತಿರ ಒಂದು ನಾಗೀ ಬಂಡೆ ಇರುವುದು. ಇದರ ಕೆಳಗೆ ಅನೇಕ ಕೋಟಿ ದ್ರವ್ಯ ಅಡಗಿಸಿದೆ ಎಂದು ಬಹು ಕಾಲದಿಂದಲೂ ಜನರು ಹೇಳುತ್ತಾ ಬಂದಿದ್ದಾರೆ. ಕೆಲವು ವರುಷಗಳ ಕೆಳಗೆ ಸರ್ಕಾರದವರು ಕೆಲವು ಜನರನ್ನು ಬಿಟ್ಟು ಶೋಧನೆ ಮಾಡಿಸಬೇಕೆಂದು ಹುಕುಂ ಕೊಟ್ಟರು. ಕೂಲಿಯವರು ಅಲ್ಲಿ ಭೂಮಿಯನ್ನಗೆದು ಶೋಧನೆ ಮಾಡುವಷ್ಟರಲ್ಲಿ ಅನೇಕ ಹಾವುಗಳು ಅವರನ್ನು ತೊಂದರೆಪಡಿಸಿದವು. ಆದ್ದರಿಂದ ಆ ಕೆಲಸವನ್ನು ಬಿಟ್ಟುಬಿಟ್ಟರು. ಈಗ ಮತ್ತೆ ಆ ಸ್ಥಳವನ್ನು ಶೋಧನೆ ಮಾಡುವಂತೆ ಸರ್ಕಾರದಿಂದ ಅಪ್ಪಣೆ ಆಗಿದೆ.

* * * *

ಪಂಜಾಬು ಆಧಿಪತ್ಯದ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು ಇನ್ನು ಮೇಲೆ ಪಾಠಶಾಲೆಗಳಲ್ಲಿ ಓದುವ ಮತ್ತು ಪಾಠ ಹೇಳಿಕೊಡುವ ಮಹಮ್ಮದೀಯ ಬಾಲಕರಿಗೂ ಉಪಾಧ್ಯಾಯರಿಗೂ ಪ್ರತಿ ಶುಕ್ರವಾರವೂ ಮಸೀತಿಗಳಿಗೆ ಹೋಗಿ ಪ್ರಾರ್ಥನೆಮಾಡುವದಕ್ಕೆ ಸಹಾಯವಾಗುವಂತೆ ಸಾಯಂಕಾಲ ಅರ್ಧ ಗಂಟೆಯ ಹೊತ್ತು ರಜ ಕೊಡಬೇಕೆಂದು ಹುಕುಂ ಮಾಡಿದ್ದಾರೆ. ಮಹಮ್ಮದೀಯ ಪ್ರಜೆಗಳು ಇದಕ್ಕಾಗಿ ಗವರ್ನಮೆಂಟಿನವರನ್ನು ಬಹಳವಾಗಿ ಹೊಗಳುತ್ತಿದ್ದಾರೆ. ಇದನ್ನು ನೋಡಿ ಇತರ ಆಧಿಪತ್ಯಗಳಲ್ಲಿರುವ ಮಹಮ್ಮದೀಯರು ಅದೇ ರೀತಿ ತಾವೂ ರಜಾ ಪಡೆಯಬೇಕೆಂದು ಪ್ರಯತ್ನಪಡುತ್ತಿದ್ದಾರೆ.

* * * *

ಕೊಯಮುತ್ತೂರು ಜಿಲ್ಲೆಯ ಹತ್ತಿರ ಒಂದು ಹಳ್ಳಿಯಲ್ಲಿ ಒಬ್ಬ ಮಗನು ತನ್ನ ತಂದೆಯನ್ನು ಕೊಂದುಹಾಕಿದನು. ತಂದೆಯು ತನ್ನ ಮಗನೂ ಇತರರೂ ಮಾಡಿದ್ದ ತೋಟಕ್ಕೆ ಹೋಗಿ ಅಲ್ಲಿದ್ದ ಹುಲ್ಲನ್ನು ಮಾರುವದಕ್ಕೆ ಯತ್ನಿಸಿದನು. ಮಗನು ಇದಕ್ಕೆ ಅಡ್ಡಿಮಾಡಿದನು. ಆದರೂ ಮಗನ ಮಾತನ್ನು ತಂದೆಯು ಲಕ್ಷ್ಯ ಮಾಡದೆ ಹೋಗಿ ಹುಲ್ಲಿನ ಕಂತೆಗಳನ್ನು ಎತ್ತುತ್ತಿದ್ದನು. ಅಷ್ಟ್ರೊತ್ತಿಗೆ ಮಗನು ಕೈಯಲ್ಲಿ ಚೂರಿಯನ್ನು ತೆಗೆದುಕೊಂಡು ಬಂದು ತಂದೆಯ ತಲೆಯನ್ನು ಕಡಿದುಹಾಕಿದನು. ಸೆಷನ್ ಜಡ್ಜಿ ವಿಚಾರಣೆ ಮಾಡಿ ಅವನಿಗೆ ಯಾವಜ್ಜೀವವೂ ಕಠಿಣ ಸಜಾ ಅನುಭವಿಸಬೇಕೆಂದು ವಿಧಿಸಿದರು.

* * * *

ಹೈದರಾಬಾದ್ ನೈಜಾಮರವರ ಹಿರೀ ಸಹೋದರಿಯು ಕಳೆದ ವಾರ ಕಾಲವಾದರು. ಸಾಯುವದಕ್ಕೆ ಮೊದಲು ಆಕೆ ನೈಜಾಮರವರನ್ನು ಕರೆಸಿಕೊಂಡು, ತಾನು ಸಾಕುತ್ತಿರುವ ಹದಿನಾಲ್ಕು ವರುಷದ ಹುಡುಗನನ್ನು ತನ್ನ ದತ್ತು ಮಗನಂತೆ ಭಾವಿಸಬೇಕೆಂತಲೂ ತನ್ನ ಮನೆಯಲ್ಲೂ, ಜಹಗೀರಿ ಗ್ರಾಮಗಳಲ್ಲೂ ಇರುವ ನೌಕರರನ್ನು ವಜಾ ಮಾಡದೆ ಪೋಷಿಸಿಕೊಂಡು ಬರಬೇಕೆಂತಲೂ ತನ್ನ ಮತ್ತು ತನ್ನ ಪತಿಯ ಆಸ್ತಿಯಲ್ಲಿ ಎಳ್ಳಷ್ಟು [illegible]ವನ್ನೂ ಅರಮನೆಗೆ ಸೇರಿಸಿಕೊಳ್ಳಕೂಡದೆಂತಲೂ ಕೇಳಿಕೊಂಡರು. ನೈಜಾಮರು ಅದೇ ಪ್ರಕಾರ ನಡಸುವದಾಗಿ ವಾಗ್ದಾನಮಾಡಿದ್ದಾರೆ. ಆಕೆಯ ಆಸ್ತಿಯು ಹೈದರಾಬಾದ್ ಸಂಸ್ಥಾನದಲ್ಲೆಲ್ಲಾ ಬಹಳ ಮುಖ್ಯವಾದದ್ದು. ಇದರಲ್ಲಿ ವರುಷಕ್ಕೆ ಹದಿನೇಳು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಉತ್ಪತ್ತಿಯಾಗುತ್ತದೆ. ಆಕೆಯ ಪತಿ ಸರ್ ಅಸ್ಮಾನ್‌ಜಾ ಯವರು ಬದುಕಿದ್ದಾಗ್ಗೆ ಹೈದರಾಬಾದ್ ಸಂಸ್ಥಾನದ ಮಂತ್ರಿಗಳಾಗಿದ್ದುಕೊಂಡು ಸಂಬಳವನ್ನಪೇಕ್ಷಿಸದೆ ಕೆಲಸಮಾಡಿ ತುಂಬಾ ಯಶಸ್ಸನ್ನು ಪಡೆದರು.

ತಾಲ್ಲೋಕು ವರ್ತಮಾನಗಳು.

ಮಾಗಡಿ—ಬಾಣವಾಡಿ ಗ್ರಾಮದಲ್ಲೂ ಆಜುಬಾಜು ಗ್ರಾಮಾಂತ್ರಗಳಲ್ಲೂ ಸಹ ಈಗ ಸುಮಾರು ೧೪—೧೫ ದಿವಸದ ಲಾಗಾಯಿತು ಪ್ರತಿ ದಿನವೂ ಮಳೆ ಹಿಡಿದುಕೊಂಡು ಪೈರುಗಳೆಲ್ಲಾ ಕೆಂಪಗಾಗಿ ರೈತರ ಪೈರು ಕೆಡುವದೆಂದು ಬಹಳ ವ್ಯಸನಪಟ್ಟವರಾಗಿ ಇದ್ದಾರೆ.—ಈ ಗ್ರಾಮದಲ್ಲಿ ಸಿಡುಬಿನ ದೆಸೆಯಿಂದ ೮—೯ ಮಕ್ಕಳು ಮೃತಪಟ್ಟು ಇರುತ್ತಾರೆ.

ಸಿರಾ—ಇಲ್ಲಿ ಸುಮಾರು ೧೨ ದಿವಸಗಳಿಂದಲೂ ಮಳೆ ಇಲ್ಲ. ಕೆರೆಗಳು ಕೆಲವು ಕಾಲುಪಾಲು ತುಂಬಿದ್ದಾಗ್ಯೂ ಸೀಮೆಯ ಚಿಕ್ಕ ಕೆರೆಯಲ್ಲಿ ನೀರಿಲ್ಲ. ಪೈರು ಸುತ್ತಮುತ್ತಲೂ ಸುಮಾರಾಗಿದೆ. ಇನ್ನೂ ಮಳೆಯನ್ನು ಎದುರುನೋಡಬೇಕಾಗಿದೆ. ಇಲ್ಲಿ ಈಗ ಇರುವ ಮಿ। ಡಾ। ಅಮಲ್ದಾರರವರು ತುಂಬಾ ಪ್ರೀತಿಯಿಂದ ತಮಗೆ ನೇಮಕವಾದ ಕೆಲಸವನ್ನು ಮಾಡತಕ್ಕವರೆನ್ನುವದಕ್ಕೆ ಇವರು ಕೆಲವು ಕಾಲಗಳಿಂದ ಮುಚ್ಚಿಹೋಗಿರುವ ಕ್ರಿಮಿನಲ್ ಕೇಸುಗಳನ್ನು ತ್ವರಿತ ವಿಚಾರಿಸಿ ಶಿಕ್ಷೆಗೆ ಒಳಪಡಿಸಿದ್ದೇ ಸಾಕ್ಷಿಯಾಗಿರುತ್ತದೆ. ಇವರು ಪಕ್ಷಪಾತವಿಲ್ಲದೆ ಬಡವರ ವ್ಯಾಜ್ಯಗಳನ್ನು ವಿಚಾರಿಸಿ ಪ್ರಜೆಗಳಲ್ಲಿ ತುಂಬಾ ಪ್ರೀತಿಯುಳ್ಳವರಾಗಿದ್ದಾರೆ. ಹೀಗೆಯೇ ಮುಂದೆಯೂ ಇರಲಿ ಎಂಬುದೇ ನಮ್ಮ ಕೋರಿಕೆ.—ಇಲ್ಲಿ ಸುಮಾರು ವರ್ಷಗಳಿಂದಲೂ (ಮಿಡ್‌ವೈಫ್', ಕೆಲಸದಲ್ಲಿದ್ದ ಎಸ್ತರಮ್ಮನವರು ಈಗ ವರ್ಗಾಯಿಸಲ್ಪಟ್ಟಿದ್ದನ್ನು ಕೇಳಿ ಪ್ರಜೆಗಳೂ ಸರ್ಕಾರಿ ಅಧಿಕಾರಿಗಳೂ ಅವರಿಂದ ಸಹಾಯ ಪಡೆದ ಕೆಲವು ದಿಕ್ಕಿಲ್ಲದ ಬಡಹೆಂಗಸರೂ ಬಹಳ ದುಃಖಪಡುತ್ತಿದ್ದಾರೆ. ಇವರು ಇಲ್ಲಿ ಕೆಲವು ವರುಷಗಳಿದ್ದರೂ ಸತ್ಯವಾಗಿ ತಮ್ಮ ಕೆಲಸವನ್ನು ಮಾಡಿದ್ದಾರೆ. ಹೆರಿಕಾಲದಲ್ಲಿ ಬಡವರಿಗೆ ತನ್ನ ಸ್ವಂತ ಖರ್ಚಿನಿಂದ ಔಷಧಿ ಸಹ ಕೊಟ್ಟಿದ್ದಾರೆಂದು ಜನಗಳಿಂದ ತಿಳಿಯಬರುತ್ತದೆ. ಇಷ್ಟಲ್ಲದೆ ಪ್ರಜೆಗಳೆಲ್ಲಾ ಒಟ್ಟಾಗಿ ಸೇರಿ ಸರ್ಕಾರಕ್ಕೆ ಅರ್ಜಿ ಬರೆದು ಇವರನ್ನು ಇಲ್ಲಿಯೇ ಇರಿಸಿಕೊಳ್ಳಬೇಕೆಂದು ಯೋಚಿಸಿದ್ದಾರೆ.

ನಂಜನಗೂಡು—ಇಲ್ಲಿ ಇರುವ ಸ್ಕೂಲ್ ಮೈಸೂರು ಡಿಸ್ಟ್ರಿಕ್ಟಿನ ಎಲ್ಲಾ ಸ್ಕೂಲ್‌ಗಳಿಂತಲೂ ಉತ್ತಮಸ್ಥಿತಿಯಲ್ಲಿರುತ್ತೆ. ೧೮೯೪ನೆ ಸಂವತ್ಸರದ ಲೋವರ್ ಸೆಕೆಂಡರಿ ಪರೀಕ್ಷೆಗೆ ೧೦ ಜನಗಳು ಹೋದದ್ದಕ್ಕೆ ೮ ಹುಡುಗರು ತೇರ್ಗಡೆಯಾದರು. ಈ ವರುಷ ೧೦—೧೨ ಜನ ಬಾಲಕರು ಅಪ್ಲಿಕೇಷನ್ ಕಳುಹಿಸುತ್ತಾರೆ. ಸದ್ಯ ಹೆಡ್ ಮಾಸ್ಟರ್ ಬಿ. ವೆಂಕಟರಮಣಯ್ಯನವರು ಬಾಲಕರಿಗೆ ವ್ಯವಸಾಯದ ಸಂಗತಿಯನ್ನು ತಿಳಿಸಲು ಸರಸ್ವತೀನವರ ಅಗ್ರಹಾರದ ಹಾಗೆ ೧—೨ ಎಕರೆ ಜಮೀನು ಸರ್ಕಾರದಿಂದ ಬಿಡಿಸಿಕೊಂಡು ಅದರಲ್ಲಿ ಆಲೂಗೆಡ್ಡೆ ಬಟಾಣಿ ಮಕ್ಕರೆ ಪೈರು ಮಾಡಲು ಏರ್ಪಾಡು ಮಾಡಿ ಬಾಲಕರಿಗೆ ದಿನವಹಿ ೩ ವೇಳೆ ವ್ಯವಸಾಯದ ರೀತಿ ತೋರಿಸುತ್ತಾ ತುಂಬಾ ಮುತವರ್ಜಿ ಮಾಡುತ್ತಿರುತ್ತಾರೆ. ಇವರ ಪ್ರಯತ್ನ ಸಾರ್ಥಕವಾಗುವದಕ್ಕೆ ಸರ್ಕಾರದವರು ಕಾಲುವೆಯಿಂದ ಬಂದ ನಲ್ಲಿಯನ್ನು ಇಡಿಸಿರುತ್ತಾರೆ. ಇದರಿಂದ ಸದರಿ ತೋಟವು ಅಭಿವೃ

ದ್ಧಿಗೆ ಬಹಳ ಅನುಕೂಲವಾಯಿತು. ಟವರ್‌ನಲ್ಲಿ ಪೋಲೀಸ್ ಸ್ಟೇಷನ್ ಏರ್ಪಾಡಾಗಿ ೧-೨ ವರುಷಗಳಾದವು. ಮಿ|| ಪೋಲೀಸ್ ಇನ್. ಶಿರಾಬುದ್ದೀನ್ ಸಾಹೇಬರವರು ಇರುವವರೆಗೂ ಜವಾನರುಗಳು ದುರ್ವರ್ತನೆಯಿಂದ ಕೆಲಸ ಮಾಡುತ್ತಿದ್ದರು. ಈಚೆಗೆ ಕೆಲವು ತಿಂಗಳಿಂದ ರಾತ್ರಿವೇಳೆ ಬೀಟುಮಾಡುವದೇ ಇಲ್ಲ. ಈ ವಿಷಯಕ್ಕೆ ಆ ಇಲಾಖೆ ಅಧಿಕಾರಿಗಳು ಗಮನಕೊಟ್ಟರೆ ಜನಗಳಿಗೆ ಕ್ಷೇಮವಾಗುತ್ತೆ. ತಾಲ್ಲೂಕು ಕಚೇರಿ ಖಜಾನೆ ಬಾಬಿನಲ್ಲಿ ಸುಮಾರು ೬೦ ವರುಷ ವಯಸ್ಸುಳ್ಳ ಸರಾಫರಿಟ್ಟು ಖಜಾನೆ ಗುಮಾಸ್ತೆಯಾಗಿ ಇರುತ್ತಾರೆ. ಪಬ್ಲಿಕ್‌ನ ಹಣ ವಗೈರೆ ಖಂಜರೆ ಹಣ ತೆಗೆದುಕೊಳ್ಳುವದೇ ಅಗಲಿ ರಾತ್ರಿ ೬ ಗಂಟೆ ವೇಳೆಗೆ ಕಳಿಸ್ಕೊಡುವದೇ ಇಲ್ಲ. ಗ್ರಾಮದ ಪಟೇಲರುಗಳು ಕಿರದಿ ವಗೈರೆ ವಾಪಸು ತೆಗೆದುಕೊಂಡು ಹೋಗಬೇಕಾದರೆ ೧-೨ ದಿವಸ ಇದ್ದೇ ಇರಬೇಕು. ಸರಾಫರಿಗೆ ತನ್ನ ರಿಕಾರ್ಡು ಬರಿಯಲು ಕೈನಡೆಯುವದೇ ಇಲ್ಲ. ಇದಕ್ಕಾಗಿ ಒಬ್ಬ ಗುಲ್ಲನನ್ನ ಕೊಟ್ಟದ್ದಾಗ್ಯೂ ಜನಗಳ ತೊಂದರೆ ತಪ್ಪಲಿಲ್ಲ. ಈ ಟವನ್ನಿಗೆ ಒಬ್ಬರು ಕಾವಿ ಮಳಯಾಳ ದೇಶದಲ್ಲಿ ಮಂತ್ರೋಪದೇಶ ಮಾಡಿಸಿಕೊಂಡು ಬಂದಿರುವಂತೆ ಹೇಳಿಕೊಂಡು ಬಂದು ಸುಮಾರು ೧ ತಿಂಗಳಿಂದಲೂ ವಾಸಮಾಡುತ್ತಾ ಕಣ್ಣು ಇಲ್ಲದವರಿಗೆ ಕಣ್ಣು ಬರುವದಾಗಿಯೂ ಹೊಟ್ಟೆ ಹಣ ತೋರಿಸುವದಾಗಿಯೂ ಹುಚ್ಚು ಹಿಡಿದವರಿಗೆ ಹುಚ್ಚು ಬಿಡಿಸುವುದಾಗಿಯೂ ಮಕ್ಕಳಿಲ್ಲದವರಿಗೆ ಮಂತ್ರೋಪದೇಶ ಮಾಡುವದಾಗಿ ವಗೈರೆ ಮೂಢಜನಗಳಿಗೆ ನಟನೆ ತೋರಿಸಿ ಕೆಲವರಿಂದ ೧೦-೨೦ ರೂಪಾಯಿಗಳನ್ನು ತೆಗೆದುಕೊಂಡು ಯಾರಿಗೂ ಏನನ್ನೂ ಮಾಡದೇನೆ ಒಬ್ಬರೂ ಅರಿಯದಂತೆ ಹೊರಟುಹೋಗಿರುತ್ತಾರೆ. ಇವರು ಇನ್ಯಾವ ಸ್ಥಳಕ್ಕಾದರೂ ಹೋದರೆ ಅಲ್ಲಿನ ಜನಗಳು ಈ ಸಂಗತಿಗೂಸು ಜನಗಳಂತೆ ಮೋಸಹೋಗಲಾರರೆಂದು ನಂಬುತ್ತೇನೆ.

ತಿಪಟೂರು ತಾ|| ನೊಣವಿನಕೆರೆ.—ನಾಶವಾಗುವುದಕ್ಕೆ ಸಿದ್ಧವಾಗಿದ್ದ ಪೈರುಗಳೆಲ್ಲವೂ ಈಚೆಗೆ ಬಂದ ಮಳೆಯಿಂದ ತಲೆಎತ್ತಿ ಸಂಭ್ರಮಪಡುತ್ತಿರುವವು. ಆದರೇನು! ಕೆರೆಗೆ ನೀರು ಬಂದಿಲ್ಲವಾಗಿ ಭಾರೀ ತರೀ ಜಮೀನ್ದಾರರೆಲ್ಲಾ ಹಾಳು ಕಂದಾಯವನ್ನು ತೆರಲಾರಗೆ ಹಲ್ಲು ಕಿರಿಯುವಂತಾಯಿತು. ಮುಖ್ಯ ಅಲ್ಲಲ್ಲಿ ಕೆಜ್ಜಗೆಹುಲ್ಲು ಬಿದ್ದಿರುವದರಿಂದ ದನಕರುಗಳಿಗೆ ತೊಂದರೆ ಉಪಶಮನವಾಯಿತು. ಈ ಊರು ಮುನ್ಸಿಪಾಲಿಟಿ ಕೆಲಸಕ್ಕೆ ನಾಲ್ಕು ಮಂದಿ ಭೂಪಮಾಲಿಗಳೂ ಒಬ್ಬ ಕಚಡಾ ಸಾಗಿಸುವವನೂ ಇವರ ಮೇಲ್ವಿಚಾರಣೆಗೆ ಒಬ್ಬ ಜವಾನನೂ ಈ ರೀತಿ ೬ ಬ್ಬಂದಿಗಳಿರುವರು. ಇವರುಗಳಿಗೆ ಟ್ರಾವಲರ್ಸ್ ಬಂಗಲೆಯಿಂದ ಬೇಟರಾಯಸ್ವಾಮಿ ದೇವಸ್ಥಾನದವರಿಗಿರುವ ಒಂದು ರಸ್ತೆ ಕೊತ್ತ ಬಾಕಿ ಗಲ್ಲಿಗಳ ಪರಿಚಯವೇ ಇಲ್ಲವೆಂದು ತೋರುತ್ತೆ. ಅಯ್ಯೋ! ಪಾಪ! ಆ ಒಂದು ರಸ್ತೆಯನ್ನು ಪಾಕು ಮಾಡುವುದಕ್ಕೆ ಅವರಿಗೆ ಹೊತ್ತು ಸಾಲದು. ಬಾಕಿ ಗಲ್ಲಿಗಳನ್ನು ಪಾಕು ಮಾಡುವುದಕ್ಕೆ ಹೊತ್ತು ಎಲ್ಲಿಂದ ತಂದಾರು? ಇವರು ನೋಡದೆ ಇರುವ ಗಲ್ಲಿಗಳನ್ನು ತೋರಿಸಬೇಕೆಂದು ಅಫೀಸರೇನಾದರೂ ಇವರನ್ನು ಕೇಳಿದರೆ ಇವರ ಗತಿಯೇನು! ಮೂರು ಸಂವತ್ಸರಗಳಿಂದ ಈ ಊರ ಬೀದಿಗಳು ಮ್ಯುನಿಸಿಪಲ್ ದೀಪಗಳ ಮುಖವನ್ನೇ ಕಾಣದು. ನಾವು ಕೊಡುವ ತೆರಿಗೆಗ ಇದೇ ಮುಖ್ಯವಾದ ಫಲ. ಇದು ಭಾರಿ ಗ್ರಾಮವಾಗಿಯೂ ಹೆಚ್ಚು ಪ್ರಜಾಸಂಖ್ಯೆಯುಳ್ಳದ್ದಾಗಿಯೂ ತಿಪಟೂರು ತುರುವೆಕೆರೆ ಈ ಊರುಗಳಿಗೆ ೮-೯ ಮೈಲಿ ಫಾಸಲೆಯುಳ್ಳದ್ದಾಗಿರುವದರಿಂದ ಬಡಸಗ್ಗಂಗೆ ಖಾಹಿಲೆಯಾದರೆ ಮೇಲ್ಕಂಡ ಊರುಗಳ ಆಸ್ಪತ್ರೆಗಳಿಗೆ ಹೋಗಿ ಔಷಧೋಪಚಾರಗಳನ್ನು ಹೊಂದಲು ಬಹಳ ತೊಂದರೆಯಾಗಿರುತ್ತೆ. ಇಲ್ಲಿಗೇ ಒಂದು ಆಸ್ಪತ್ರೆಯನ್ನು ಸರ್ಕಾರದವರು ದಯಪಾಲಿಸಬೇಕೆಂದು ದಸರಾ ವಿಜ್ಞಾಪನೆಯಲ್ಲಿ ಡೆ|| ಕಮಿಷನರ್ ಸಾಹೇಬರವರಲ್ಲಿ ಅರಿಕೆಮಾಡಿಕೊಂಡು ಇರುತ್ತಾರೆ. ಇದುವರೆಗೂ ಯಾವದೂ ಇತ್ಯರ್ಥವಾಗಲಿಲ್ಲವು. ದಯಾಳುಗಳಾದ ಸರ್ಕಾರದವರು ಈ ಗ್ರಾಮಸ್ಥರ ವಿಷಯದಲ್ಲಿ ತುಂಬಾ ಅಭಿಮಾನವಿಟ್ಟು ಒಂದು ಆಸ್ಪತ್ರೆಯನ್ನು ಜಾಗ್ರತೆ ದಯಪಾಲಿಸುವದಾದರೆ ಅನೇಕರು ರೋಗಾದಿಗಳಿಗೆ ತುತ್ತಾಗದೆ ಬದುಕಿಕೊಂಡಾರು. ಈ ಊರಿನ ಬಾಯ್ಸ್ ಸ್ಕೂಲ್ ಕಟ್ಟಡದ ಸುತ್ತಲೂ ಕೇಸಿಗೆ ಮಾಡುವದು ಇನ್ನೂ ತಪ್ಪಿಲ್ಲ. ಮತ್ತು ಅನೇಕ ಗುಂಡಿಗಳಿಂದಲೂ ಕಚರಾಗಳಿಂದಲೂ ತುಂಬಿದೆ. ಇದರಿಂದ ಬಾಲಕರಿಗೂ ಉಪಾಧ್ಯಾಯರಿಗೂ ಆರೋಗ್ಯ ಕೆಡುವುದಕ್ಕೆ ಮಾರ್ಗವಾಗಿದೆ. ಇದನ್ನು ನಮ್ಮ ತಾಲೋಕು ಅಮಲ್ದಾರರು ಖುದ್ದು ಪರಾಂಬರಿಸಿ ಸುತ್ತಲೂ ಇರುವ ಗುಂಡಿಗಳನ್ನೆಲ್ಲಾ ಮುಚ್ಚಿಸಿ ಕಟ್ಟಡಗಳು ಬೀಳುವುದಕ್ಕೆ ಅವಕಾಶವಿಲ್ಲದಂತೆ ಮಾಡಿದರೆ ಬಾಲಕರ ಮತ್ತು ಉಪಾಧ್ಯಾಯರ ಆರೋಗ್ಯವನ್ನು ಕಾಪಾಡಿದಂತಾಗುತ್ತಲ್ಲದೆ ಬಾಲಕರ ಆಟಪಾಟಗಳಿಗೆ ಅನುಕೂಲವಾಗುತ್ತೆಂದು ಯೋಚಿಸಿ ಕೂಡ್ಲೆ ಈ ಬಗ್ಗೆ ವ್ಯವಸ್ಥೆ ಮಾಡುವದಾಗಿ ಅಪ್ಪಣೆಮಾಡಿ ಹೋದರು. ಜಾಗ್ರತೆ ವ್ಯವಸ್ಥೆ ಮಾಡಿ ಅನುಕೂಲಪಡಿಸಿಕೊಟ್ಟರೆ ಬಾಲಕರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ ಇವರ ಕೀರ್ತಿಯು ಆಚಂದ್ರಾರ್ಕವಾಗಿರುವದರಲ್ಲಿ ಸಂಶಯವಿಲ್ಲ.

ತರೀಕೆರೆ.—ಈಗ ಎರಡು ವಾರಗಳಿಂದ ಇಲ್ಲಿ ಮಳೆ ಸುಮಾರಾಗಿ ಬರುತ್ತಿದ್ದರೂ ಧಾರಣೆವಾಸಿಗಳು ಇದ್ದಂತೆಯೇ ಇರುತ್ತವೆ. ಮೈಸೂರು ಸಂಸ್ಥಾನದ ದಿವಾನ್ ಬಹದ್ದೂರ್ ಶ್ರೀಮಾನ್ ಪಿ. ಎನ್. ಕೃಷ್ಣಮೂರ್ತಿ ಕೆ. ಸಿ. ಐ. ಇ. ಯವರು, ಮ|| ಎ. ಆರ್. ಹರಿಸಿಂಗರಾವ್ ಬಿ. ಎ. ಬಿ ಯಲ್ ಯವರುಗಳು ಕಳೆದ ಶುಕ್ರವಾರ ಪ್ರಾತಃಕಾಲ ೮ ಗಂಟೆಗೆ ಇಲ್ಲಿಗೆ ದಯಮಾಡಿಸಿದರು. ಪ್ರಾತಃಕಾಲದಲ್ಲಿ ಆಸ್ಪತ್ರೆ ವೈದ್ಯಶಾಲೆ ಬಾಲಕ ಮತ್ತು ಬಾಲಿಕಿಯರ ಪಾಠಶಾಲೆಗಳು ಮತ್ತು ಟವರ್ ಇವುಗಳನ್ನು ಇನ್ಸ್ಪೆಕ್ಟ್ ಮಾಡಿದರು. ಬಾಲಿಕಿಯರ ಪಾಠಶಾಲೆಯಲ್ಲಿ ಒಬ್ಬ ವಿದ್ಯಾರ್ಥಿನಿಯು ಅವರ ಮೇಲೆ ಕವಿತ್ವ ಮಾಡಿದ್ದ ಒಂದೆರಡು ಹಾಡುಗಳನ್ನು ಕೇಳಿ ಸಂತೋಷಪಟ್ಟರು. ಮಧ್ಯಾಹ್ನದಲ್ಲಿ ಮ್ಯುನಿಸಿಪಲ್ ಮೆಂಬರುಗಳನ್ನು ಕರೆದು ಪ್ರತಿನಿತ್ಯದ ಅವಾಲುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಚಾರಿಸಿದರೆಂದು ಕೇಳುತ್ತೇನೆ. ಇವರ ಸಕ್ಯೂರ್ಟನಿಂದ ಜನಗಳಿಗೆ ಬಹಳ ಪ್ರಯೋಜನ ಉಂಟಾದೀತೆಂದು ನಂಬುತ್ತೇನೆ. ಈ ತಿಂಗಳು ೭ ನೇ ತಾರೀಖು ಪ್ರಾತಃಕಾಲ ಹುಲ್ಲುಗಾವಲಿನಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ಒಬ್ಬ ಹುಡುಗನಿಗೆ ನಾಗರಹಾವು ಕಾಲಿನ ಬೆರಳಿನ ಮೇಲೆ ಕಚ್ಚಿದಂತೆಯೂ, ಸಮೀಪದಲ್ಲಿದ್ದ ತಂದೆಯು ಕಚ್ಚಿದ ಭಾಗದ ಮೇಲೆ ಒಂದು ದಾರವನ್ನು ಭದ್ರವಾಗಿ ಕಟ್ಟಿ ಕೂಡ್ಲೆ ಆಸ್ಪತ್ರೆಗೆ ತಂದಂತೆಯೂ ಇಲ್ಲಿನ ಡಾಕ್ಟರವರು ಕಚ್ಚಿದ ಪ್ರದೇಶವನ್ನು ಆಳವಾಗಿಯೂ ಒಂದು ಅಂಗುಲ ಉದ್ದವಾಗಿಯೂ ಕೊಯಿದು, ಕೆಟ್ಟ ರಕ್ತವನ್ನು ವಿಶೇಷವಾಗಿ ಹೊರಡಿಸಿ ಯಾವದೋ ಒಂದು ಔಷಧವನ್ನು ಕೊಯಿದ ಪ್ರದೇಶಕ್ಕೆ ಹಾಕಿ ೩೦ ನಿಮಿಷಗಳು ತಿಕ್ಕಿದಂತೆಯೂ ಈಗ ಹುಡುಗನು ನೆಮ್ಮದಿಯಾಗಿರುವಂತೆಯೂ ಕೇಳುತ್ತೇನೆ. ವಿಚಾರ ಮಾಡಿದ್ದರಲ್ಲಿ ಕೊಯಿದ ಪ್ರದೇಶಕ್ಕೆ ಹಾಕಿ ತಿಕ್ಕಿದ ಔಷಧವು "ಪೊಟಾಸಿಯಂಪರ ಮ್ಯಾಂಗನೇಟ್" ಎಂಬಂತೆಯೂ ಈ ಚಿಕಿತ್ಸೆಯನ್ನು ಪ್ರತಿಯೊಂದು ಆಸ್ಪತ್ರೆಯಲ್ಲಿ ಅವಲಂಬಿಸಬೇಕಾಗಿ ಸೀನಿಯರ್ ಸರ್ಜನರವರಿಂದ ಸರ್ಕ್ಯುಲರ್ ಬಂದಿರುವಂತೆಯೂ ಇಲ್ಲಿನ ಡಾಕ್ಟರವರು ತಿಳಿಸಿರುತ್ತಾರೆ. ಈ "ಪೊಟಾಸಿಯಂಪರ್ ಮ್ಯಾಂಗನೇಟ್" ಎಂಬುವುದು ಕೆಟ್ಟ ನೀರನ್ನು ಶುದ್ಧ ಮಾಡುವುದಕ್ಕಾಗಿ ಪ್ರಕೃತದಲ್ಲಿ ಉಪಯೋಗಿಸುತ್ತಿರುವ ಔಷಧವೇ ಹೊರ್ತು ಬೇರೆ ಅಲ್ಲ.

ಚಿಕ್ಕಮಗಳೂರು.—ಇದೇ ತಿಂಗಳು ೪ನೇ ತಾ. ಸಾಯಂಕಾಲ ಪಾರ್ಕಿನಲ್ಲಿ ಡಾಕ್ಟರ್ ಸಿ. ಎ. ನಂಜಪ್ಪನವರಿಗೆ ಅಡ್ರೆಸ್ಸನ್ನು ಕೊಡುವುದಕ್ಕಾಗಿ ಯೂರೋಪಿಯನ್ ಹಿಂದೂ ಮಹಮ್ಮದೀಯ ದೊಡ್ಡ ಮನುಷ್ಯರೆಲ್ಲಾ ಸೇರಿದ್ದರು. ಸುಮಾರು ೫|| ಗಂಟೆಗೆ ಪಾರ್ಕಿನಿಂದ ಅವರು ಬಂಗಲೆಗೆ ನೇಟಿವ್ ಬ್ಯಾಂಡು ನರ್ತಕಿಯರೊಡನೆ ಹೋಗಿ ಡಾಕ್ಟರವರನ್ನು ಕರೆದುಕೊಂಡು ಬಂದರು. ಆ ಕಾಲದಲ್ಲಿ ಡಾಕ್ಟರು ತಮ್ಮ ಸೀಮೆಯ ಕೊಡಗಿನ ಉಡುಪನ್ನು ಧರಿಸಿಕೊಂಡಿದ್ದರು. ಅವರು ಬಂದಮೇಲೆ ಟೆನ್ನಿಸ್ ಕೋರ್ಟಿನಲ್ಲಿ ಯೂರೋಪಿಯನ್ನರೂ ಹಿಂದುಗಳೂ ಸೇರಿ ಒಂದು ಸೆಟ್ ಆಟವಾಡಿದ ಮೇಲೆ ಅಲ್ಲಿದ್ದವರೆಲ್ಲರಿಗೂ ಫಲಹಾರ ತಾಂಬೂಲಗಳಾದನಂತರ ಇಲ್ಲಿನ ಹೈಸ್ಕೂಲ್ ಜಿಮ್ನಾಸ್ಟಿಕ್ ಮ್ಯಾಸ್ಟರು ತಯಾರುಮಾಡಿರುವ ಸರ್ಕಸ್ ಆಟವಾಯಿತು. ಅದನ್ನು ನೋಡಿ ಎಲ್ಲರೂ ಸಂತೋಷಪಟ್ಟು, ಅಡ್ರೆಸ್ಸನ್ನು ಒಪ್ಪಿಸುವಹಾಗೆ ಪೇರಾಗಳಲ್ಲಿ ಕೂತಿದರು. ಅಲ್ಲಿ ಎಲ್ಲಾ ದೊಡ್ಡಮನುಷ್ಯರೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡನಂತರ ಸಭಿಕರು ಕೇಳಿಕೊಂಡಂತೆ ಇಲ್ಲಿನ ಸಬ್ ಜಡ್ಜಿಯವರಾದ ಮಿ|| ಸಿ. ಜಾ. ಹುಸೇನ್ ಸಾಹೇಬರವರು ಅಗ್ರಾಸನವನ್ನು ವಹಿಸಿದರು. ಆಗ ನರ್ತಕಿಯರು ಬಂದು ತಮ್ಮ ಸ್ಥಾನದಲ್ಲಿ ಕುಳಿತನಂತರ ಅಡ್ರೆಸ್ ಓದಲು ಪ್ರಾರಂಭವಾಯಿತು. ಇಂಗ್ಲೀಷಿನಲ್ಲಿ ಮಿ. ವಾಸುದೇವರಾಯರವರೂ ಹಿಂದುಸ್ಥಾನಿಯಲ್ಲಿ ಮಿ|| ಅಬ್ದುಲ್ ಖಾಲಿಕ್ ಸಾಹೇಬರೂ ಕನ್ನಡದಲ್ಲಿ ಮಿ|| ಪ್ಲೀಡರ್ ಶ್ರೀನಿವಾಸರಾಯರೂ ಓದಿದರು. ಆ ಅಡ್ರೆಸ್ಸುಗಳಲ್ಲಿ ಡಾಕ್ಟರವರು ಸುಮಾರು ಹನ್ನೆರಡು ವರುಷ ಇಲ್ಲಿ ಕೆಲಸ ಮಾಡಿರುವದಾಗಿಯೂ ಅವರು ದೊಡ್ಡವರು ಚಿಕ್ಕವರು ಎನ್ನುವ ಭೇದವಿಡದೆ ಎಲ್ಲರನ್ನು ಬಹಳವಾಗಿ ಸ್ನೇಹಿಸಿ ತಮ್ಮ ವೈದ್ಯ ಚಿಕಿತ್ಸೆಯನ್ನು ಏಕರೀತಿಯಾಗಿ ಎಲ್ಲರಿಗೂ ಮನಃಪೂರ್ವಕವಾಗಿ ಮಾಡುತ್ತಿದ್ದರೆಂದೂ ಮುಖ್ಯವಾಗಿ ಪ್ಲೇಗ್ ಕಾಲದಲ್ಲಿ ಇವರು ಮಾಡಿದ ಕೆಲಸವು ಶ್ಲಾಘನೀಯವಾಗಿತ್ತೆಂತಲೂ ಕಂಡ ಬಂತು. ಇಂಥವರನ್ನು ಬಿಟ್ಟು ಅಗಲುವದು ಕಷ್ಟ ಎಂಬುವ ಮನಸ್ಸು ಎಲ್ಲರಲ್ಲಿಯೂ ಇತ್ತು ಎಂಬುವದನ್ನು ಹೇಳಬೇಕಾದ್ದಿಲ್ಲ. ಅನಂತರ ಅಗ್ರಾಸನರು ಎದ್ದು ಸ್ವಲ್ಪ ಹೊತ್ತು ತಮಗೂ ಅವರಿಗೂ ಇದ್ದ ಬಾಲ್ಯಸ್ನೇಹವನ್ನಲ್ಲದೆ ಆ ಕಾಲದಿಂದಲೂ ಈಗಿನವರೆಗೂ ಡಾಕ್ಟರವರಲ್ಲಿರುವ ಸದ್ಗುಣವೂ ಸ್ನೇಹಭಾವವೂ ವಿಶೇಷವಾದವುಗಳೆಂಬುವದು ಅವರ ನಡತೆಯಿಂದಲೇ ತಿಳಿದುಬಂದಿದೆ ಎಂದೂ ಇಲ್ಲಿನ ಡೆ|| ಕಮಿಷನರ್ ಮಿ|| ಮೈಲಾರರಾಯರವರು ಈ ದಿನ ಯೂರೋಪಿಯನ್ನರೂ ಸ್ವದೇಶಿಯರೂ ಸೇರಿ ಟೆನ್ನಿಸ್ ಆಡಿದ್ದನ್ನೂ ಫಲಹಾರ ಮಾಡಿದ್ದನ್ನೂ ಅಡ್ರೆಸ್ಸನ್ನು ಒಪ್ಪಿಸುವದಕ್ಕಾಗಿ ಒಂದೇ ಕಡೆ ಸೇರಿದ್ದನ್ನೂ ಸೂಚಿಸಿ ಇನ್ನು ಮುಂದೆ ಪಾಶ್ಚಿಮಾತ್ಯರಿಗೂ ಪೂರ್ವದಿಗ್ದೇಶಗಳವರಿಗೂ ಐಕಮತ್ಯವಿರುವದೆಂಬುವದಕ್ಕೆ ಇದು ಸಾದೃಶ್ಯವೆಂದೂ ಸೂಚಿಸಿದರು. ಅನಂತರ ಎಕ್ಸಿಕ್ಯೂಟಿವ್ ಇಂಜನಿಯರ್ ಮಿ|| ಮುಲ್ಲಾಯಿ ಸಾಹೇಬರವರು ಕೆಲವು ಮಾತುಗಳನ್ನು ಹೇಳಿದರು. ತರುವಾಯ ಸುಮಾರು ಮುನ್ನೂರು ರೂಪಾಯಿನ ಭಂಗಾರದ ಒಂದು ಗಡಿಯಾರವನ್ನು ಡಾಕ್ಟರವರಿಗೆ ಒಪ್ಪಿಸಿದರು. ಆಗ ಡಾ|| ನಂಜಪ್ಪನವರು ಎದ್ದು ಸ್ವಲ್ಪ ಮಾತಾಡಿದನಂತರ ಯೂರೋಪಿಯನ್ ಸರದಾರರಿಗೆಲ್ಲಾ ಹುವ್ವಿನ ಚಂಡುಗಳನ್ನು ಕೊಟ್ಟು ಸಂತೋಷದ ಧ್ವನಿಗಳನ್ನು ಮಾಡಿದ ಮೇಲೆ ಹೊರಗೆ ಆದ ಮದ್ದಿನ ತಮಾಷೆಯನ್ನು ನೋಡಿದನಂತರ ಪಾರ್ಕಿನ ದೊಡ್ಡ ಗೇಟಿನ ಮೂಲಕ ಹೊರಟು ಡಾಕ್ಟರವರನ್ನು ಮೆರವಣಿಗೆ ಮಾಡಿಸಿಕೊಂಡು ಸಬ್ ಜಡ್ಜಿಯವರ ಕೋರ್ಟ್ ಇಂಜನಿಯರ್ ಆಫೀಸ್ ಮುಂಭಾಗದ ದೊಡ್ಡ ರಸ್ತೆಯಲ್ಲಿ ಹೊರಟು ಕೋಟೆಯ ಹೊಸ ಅಗ್ರಹಾರದ ಬೀದಿಯಲ್ಲಿ ಹಾದು ಅವರ ಬಂಗಲೆಗೆ ಕರೆದುಕೊಂಡು ಹೋದರು. ಹೊಸದಾಗಿ ಬಂದ ಡಾಕ್ಟರವರಿಗೆ ನಂಜಪ್ಪನವರು ಬುಧವಾರ ಚಾರ್ಜ್ ಒಪ್ಪಿಸಿದ ಹಾಗೆ ಕಾಣುತ್ತೆ. ಈಗ ಹೊಸ ಡಾಕ್ಟರ್ ಕೆಲಸ ನೋಡುತ್ತಿದ್ದಾರೆ. ೪ನೇ ತಾರೀಖು ಶುಕ್ರವಾರ ಇಲ್ಲಿನ ನೇಟಿವ್ ಕ್ಲಬ್ಬಿನಲ್ಲಿ ೨ನೇ ಸಾರಿ ಈ ಊರಿನ ಎಲ್ಲಾ ಅಧಿಕಾರಿಗಳಿಗೂ ದೊಡ್ಡ ಮನುಷ್ಯರಿಗೂ ಕಛೇರಿಗಳಲ್ಲಿನ ಅಫಿಷಿಯಲ್‌ಗಳಿಗೂ ಸ್ಕೂಲ್ ಮಾಷ್ಟರುಗಳಿಗೂ ಸ್ಕೂಲ್ ಬಾಲಕರಿಗೂ ಫಲಹಾರಗಳನ್ನು ಕೊಟ್ಟು, ಸಂತೋಷಪಡಿಸಿದರು. ಈ ದಿನ ಫಲಹಾರ ಒಂದು ಕಡೆಯಲ್ಲಿಯೂ ಹರಿಕಥೆ ಇನ್ನೊಂದು ಕಡೆಯಲ್ಲಿಯೂ ಇಂಗ್ಲಿಷ್ ಸ್ಕೂಲ್ ಹುಡುಗರ ಸಭೆ ಮತ್ತೊಂದು ಕಡೆಯಲ್ಲಿಯೂ ನಡೆಯುತ್ತಿದ್ದದ್ದು ಎಲ್ಲರಿಗೂ ತುಂಬಾ ಆನಂದಕರವಾಗಿತ್ತು. ಈ ಊರಿಗೆ ಇದುವರೆಗೂ ಬಂದ ಯಾವ ಅಧಿಕಾರಿಗೂ ಇಷ್ಟರಮಟ್ಟಿನ ಮರ್ಯಾದೆ ಆಗಲಿಲ್ಲವೆಂದು ಜನರು ಹೇಳಿಕೊಳ್ಳುತ್ತಾರೆ. ಡಾಕ್ಟರ್ ನಂಜಪ್ಪನವರಿಗೆ ವರ್ಗಾಕ್ಕ ಹುಕುಂ ಬಂದ ಲಾಗಾಯಿತು ಈ ವರೆಗೂ ಡಿನ್ನರ್, ಟೀ, ಟಿಫಿನ್ ಮೊದಲಾದ ಊಟಉಪಚಾರಗಳು ನಡೆಯುತ್ತಲೇ ಇರುತ್ತವೆ. ೯ನೇ ತಾ. ಸಾಯಂಕಾಲ ಡಾಕ್ಟರವರು ಬೆಂಗಳೂರಿಗೆ ದಯಮಾಡಿಸಿದರು. ಸರ್ವಶಕ್ತನಾದ ಸ್ವಾಮಿಯು ಅವರು ಹೋಗುವ ಸ್ಥಳದಲ್ಲಿ ಅವರನ್ನು ಆಶೀರ್ವದಿಸಿ ಅಭಿವೃದ್ಧಿ ಸ್ಥಿತಿಗೆ ತರುವವನಾಗಲಿ ಎಂದು ಹಾರೈಸುತ್ತೇನೆ. ಇಲ್ಲಿನ ಮುನ್ಸಿಪಾಲಿಟಿಯ ವಿಚಾರವು ಆಶ್ಚರ್ಯವಾದದ್ದೇ. ಮುನ್ಸಿಪಾಲಿಟಿಯ ಅಧಿಕಾರಿಗಳು ಸಹ ದೊಡ್ಡವರ ಮನೆಗಳಿಗೆ ನೀರನ್ನು ಬಿಟ್ಟು, ಬಡಬಗ್ಗರು ಇರುವ ಕಡೆಯಲ್ಲಿ ನೀರನ್ನು ಬಿಡದೆ ಇರುವದು ನ್ಯಾಯವೋ ಅನ್ಯಾಯವೋ ವಿಚಾರಪರರೇ ಯೋಚಿಸಬೇಕಾಗಿದೆ. ದೊಡ್ಡವರನ್ನು ಆಶ್ರಯಿಸಿ, ಅವರ ಮನೆಯಿಂದ ಬಡವರು ನೀರನ್ನು ತಂದುಕೊಳ್ಳಬೇಕಾಗಿದೆ. ಇದನ್ನು ನಮ್ಮ ವೈಸ್ ಪ್ರೆಸಿಡೆಂಟರು ವಿಚಾರಿಸಿ ಕೃಪೆಮಾಡದೆ ಇರಲಾರರೆಂದು ನಂಬುತ್ತೇನೆ

ಮೈಸೂರು ಗೆಜೆಟ್ ಸಂಗ್ರಹ.

೧೯೦೪ನೆ ಜುಲೈ ೧೦ನೇ ತಾ. ನಿಂದ ರಜದ ಮೇಲಿದ್ದ ಡಾ|| ಟಿ. ಎಸ್. ನಂಜಪ್ಪನವರು ಹಿಂದಕ್ಕೆ ಕರೆಯಿಸಲ್ಪಟ್ಟು ಅವರು ಉಪಯೋಗಿಸಿಕೊಳ್ಳದೆ ಬಿಟ್ಟಿರುವ ರಜವನ್ನು ರದ್ದುಮಾಡಿದೆ.

ಕೋಲಾರ ಚಿನ್ನದ ಗಣಿಗಳ ಸಿ|| ಸರ್ಜನರಾದ ಮಿ|| ಇ. ಎಸ್. ಕೃಷ್ಣಸ್ವಾಮಯ್ಯನವರಿಗೆ ೧ನೇ ಸೆಪ್ಟಂಬರಿನಿಂದ ಅಥವ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್‌ರಜವನ್ನು ಕೊಟ್ಟಿದೆ. ಸಬ್ ಅ|| ಸ|| ಮಿ|| ಎ. ಕೇಶಗಿರಿರಾಯರು ಆ ಕಾಲದಲ್ಲಿ ಸಿವಿಲ್ ಸರ್ಜನರ ಕೆಲಸವನ್ನು ನೋಡಿಕೊಳ್ಳತಕ್ಕದ್ದು.

ಮೈಸೂರು ಪ್ರೊ|| ಇ. ಜ|| ರಾದ ಮಿ|| ಕಾರ್ ಸಾಹೇಬರಿಗೆ ೧೯೦೪ನೇ ಫೆಬ್ರವರಿ ೨೯ರಲ್ಲಿ ಕೊಡಲ್ಪಟ್ಟಿದ್ದ ೩ ತಿಂಗಳ ಪ್ರಿವಿಲೆಜ್ ರಜದೊಂದಿಗೆ ಅಲೋಯನ್ಸ್ ಇಲ್ಲದೆ ೨ ದಿನಗಳ ವಿಶೇಷ ರಜವನ್ನು ಕೊಟ್ಟಿತ್ತು.

ಗುಂಡ್ಲುಪೇಟೆ ತಾ|| ಅಮಲ್ದಾರ್ ಮಿ|| ಕೃಷ್ಣೋಜಿರಾಯರವರಿಗೆ ೧೯೦೪ನೇ ಜುಲೈ ೨೪ರಲ್ಲಿ ಕೊಟ್ಟಿದ್ದ ಒಂದು ತಿಂಗಳು ಐದು ದಿವಸಗಳ ಪ್ರಿವಿಲೆಜ್ ರಜವನ್ನು ಇನ್ನು ೫ ದಿನಗಳಿಗೆ ಹೆಚ್ಚಿಸಿದೆ. ಆ ಐದು ದಿನಗಳಲ್ಲಿ ೨ ದಿನವನ್ನು ಪ್ರಿವಿಲೆಜ್ ರಜವೆಂಬುದಾಗಿಯೂ ಉಳಿದ ೩ ದಿನವನ್ನು ಅಲೋಯನ್ಸ್ ಇಲ್ಲದೆ ವಿಶೇಷ ರಜವೆಂಬುದಾಗಿಯೂ ಭಾವಿಸತಕ್ಕದ್ದು.

ಆ ತಾ|| ಮಿ|| ಸಿ. ರಾಮರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೨ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ|| ರಾಮರಾಯರು ರಜದಮೇಲಿರುವಾಗ ಆ ತಾ|| ಮಿ|| ಶೇಷಾದ್ರಿ ಅಯ್ಯಂಗಾರ್ರು ಚಿಕ್ಕಬಳ್ಳಾಪುರಕ್ಕೆ ಸೇರಿದ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು. ಮೈಸೂರು ತಾ|| ಅಮಲ್ದಾರ್ ಮಿ|| ಟಿ. ಕೆ. ಸುಂದರರಾಜಯ್ಯಂಗಾರ್ರು ಮೇಲ್ಕಂಡ ಕಾಲದಲ್ಲಿ ಎಕ್ಸಟ್ರಾ ಅ|| ಕಮಿಷನರಾಗಿ ಕೋಲಾರ ಡಿಸ್ಟ್ರಿಕ್ಟಿನ ಪ್ರಿಜರಿ ಚಾರ್ಜಿನಲ್ಲಿರತಕ್ಕದ್ದು.

ರವಿನ್ಯೂ ಪ್ರೊ|| ಮತ್ತು ೩ನೇ ಕ್ಲಾಸ್ ಮ್ಯಾ|| ಮಿ|| ಎಂ. ಎ. ಶ್ರೀನಿವಾಸಯ್ಯಂಗಾರ್ ಬಿ.ಎ. ಬಿ.ಎಲ್. ಯವರು ಮಿ|| ಸುಂದರರಾಜಯ್ಯಂಗಾರ್ರ ಗೈರ್ಹಾಜರಿಯಲ್ಲಿ ಅಥವ ಮತ್ತೊಂದು ಹುಕುಂ ಕೊಡುವ ವರೆಗೆ ೪ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೈಸೂರು ತಾಲ್ಲೂಕು ಚಾರ್ಜಿನಲ್ಲಿರತಕ್ಕದ್ದು.

ಮೈಸೂರು ರೆ|| ಸ|| ಸಬ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ|| ಯೆಲ್ಲೋ ಶ್ರೀನಿವಾಸರಾಯರಿಗೆ ೧೯೦೪ನೇ ಸೆಪ್ಟಂಬರ್ ೧೫ನೇ ತಾರೀಖಿನಿಂದ ಅಥವ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಕೊಟ್ಟಿದೆ.

ಕಡೂರು ತಾ|| ಅಮಲ್ದಾರ್ ಮಿ|| ಇ. ಸಿ. ಸದಾಶಿವಂಪಿಳ್ಳೆಯವರಿಗೆ ೧೯೦೪ನೇ ಆಗಸ್ಟ್ ೯ರಲ್ಲಿ ಕೊಟ್ಟಿದ್ದ ೧ ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ೧೫ ದಿನಗಳಿಗೆ ಹೆಚ್ಚಿಸಿದೆ.

ರಾವ್ ಬಹದೂರ್ ಮಿ|| ಸಿ. ಮಾದೈಯನವರು ಮಿ|| ಕಾರ್‌ಯವರಿಗೆ ೧೯೦೪ನೇ ಆಗಸ್ಟ್ ೨೦ರ ಪೂರ್ವಾಹ್ನದಲ್ಲಿ ಮೈ|| ಪ್ರೊ|| ಇ|| ಜ|| ಆಫೀಸ್ ಚಾರ್ಜನ್ನು ವಹಿಸಿದರು.

ಮುದಗೆರೆ ತಾ|| ಶಿರಸ್ತೆದಾರ್ ಸಿ. ವ್ಯಾಸರಾಯರು ೧೯೦೪ನೇ ಜುಲೈ ೧೮ರಿಂದ ಆಗಸ್ಟ್ ೬ರ ವರೆಗೂ ತಾಲ್ಲೂಕ್ ಚಾರ್ಜನ್ನು ವಹಿಸಿದ್ದರು.

ಚಿತ್ರದುರ್ಗದ ೧ನೇ ಗ್ರೇಡ್ ಪ್ಲೀಡರಾದ ಮಿ|| ತಿರುಮಲರಾಯರು ಮಿ|| ಬಿ. ಕೃಷ್ಣರಾಯರಿಗೆ ಬದಲಾಗಿ ಚಿತ್ರದುರ್ಗ ಟವುನ್ ಮ್ಯುನಿಸಿಪಲ್ ಬೋರ್ಡಿನ ನಾನಫಿಷಿಯಲ್ ಮೆಂಬರಾಗಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ಪಬ್ಲಿಕ್ ವರ್ಕ್ಸ್ ಡಿಪಾ|| ೧ನೇ ಕ್ಲಾಸ್ ಸೂಪರ್‌ವೈಜರಾದ ಮಿ|| ಸಿ. ಸೂರ್ಯನಾರಾಯಣರಾಯರಿಗೆ ಶ್ರೀಮನ್ ಮಹಾರಾಜಾ ಸರ್ಕಾರದವರು ೧೯೦೪ನೇ ಆಗಸ್ಟ್ ೧೦ರಿಂದ ಅಸಿ|| ಇಂಜಿನಿಯರ್ ಎಂಬ ಬಿರುದನ್ನು ದಯಪಾಲಿಸಿರುತ್ತಾರೆ.

ಮೈಸೂರು ಇನ್‌ಫೆಂಟ್ರಿ ೩ನೇ ಬಟಾಲಿಯನ್ ಹವಾಲ್ದಾರ್ ಬಾಪರ್ ಹುಸೇನರಿಗೆ ೧೯೦೪ನೇ ಜೂನ್ ೧೦ರಿಂದ ೨ನೇ ಗ್ರೇಡ್ ಜಮೇದಾರಿಗೆ ಬಡ್ತಿ ಹುಕುಂ ಆಗಿದೆ.

ಮೈಸೂರು ಭೂಗರ್ಭಶೋಧನಾ ಇಲಾಖೆಯಲ್ಲಿ ಗಣಿಗಳ ಡೆ|| ಅ|| ಮಿ|| ಜಾರ್ಜ್ ಲ್ಯಾವೆಲ್ ಯವರಿಗೆ ೧೯೦೪ನೇ ಆಗಸ್ಟ್ ೨೨ರಿಂದ ಒಂದು ತಿಂಗಳ ಪ್ರಿ|| ರಜಾ ಕೊಟ್ಟಿದೆ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಬಾತ್ಮಿದಾರರು ತಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಶಿವಚಾರ್‍, ನಂಜನಗೂಡು, ಯಂಕಣ್ಣ, ಯು.೯. ನರಸಿಂಗರಾವ್ —ಪ್ರಕಟನಾರ್ಹವಾದುವಲ್ಲ.

ಕರೆಸ್‌ಪಾಂಡೆನ್ಸ್.

ಸಂತೆಯ ವಿಚಾರ.

ಅಯ್ಯಾ,

ತಮ್ಮ ತಾ॥ ೩೧—೮—೧೯೦೫ ನೆ ಪತ್ರಿಕೆಯಲ್ಲಿ ಪ್ರಕಟಿಸಿರುವ ಮಳಲು, ಸೋಮವಾರ ಸಂತೆ ವಿಚಾರದಲ್ಲಿ ಸರ್ಕಾರದವರು ಆಗ ಸಂತೆ ಪಟ್ಟಾವಣಿ ಹೈರೋಡು ಮತ್ತು ಹೋಬಳಿಗೆ ಕಸಬೆ ಆದ ಈ ಮಳ್ಳಿಪಟ್ಟಣ ಗ್ರಾಮದಲ್ಲಿ ನಡೆಯುವಂತೆ ಗೌರ್ನಮೆಂಟಿನಿಂದ ಆರ್ಡರಾಯಿತು ಅದರಂತೆ ಈ ಊರಲ್ಲಿ ಸಂತೆ ನಡೆಯುತ್ತಿದೆ.

ಮೇಲ್ಕಂಡ ಸೋಮವಾರ ಸಂತೆ ಮಾತ್ರ ನಿಂತಿಲ್ಲ. ಇದಾಗಿ ಇಲ್ಲಿಂದ ಸಮ್ಮತಿ ಶೇಕದಾರ್ರು ಪೋಲೀಸು ದಫೇದಾರ್ರೂ ಸಹ ಹೋಗಿ ಅಲ್ಲಿನ ಜನಗಳಿಗೆ ಎಷ್ಟು ವಿಧವಾಗಿ ಹೇಳಿದಾಗ್ಯೂ ಸಂತೆ [illegible] ನಡೆಯುತ್ತಲಿದೆ.

ಲೈಸನ್ಸ್ ಇಲ್ಲದೆ ಸಂತೇಲಿ ಶೇಂದಿ ಮತ್ತು ಸರಾಯಿ ಬಿಕರಿ ಮಾಡುತ್ತಿದ್ದದರಿಂದಲೂ ಮತ್ತು ತಮ್ಮ ಆಳಿಕೇಲಿ ಬಿಕರಿ ಮಾಡುತ್ತಿದ್ದ ವರ್ತಕರಿಂದ ಕೇರು ತೆಗೆದುಕೊಂಡು ಮಹಜರು ವಗೈರೆ ರಿಕಾರ್ಡು ಮಾಡಿಕೊಂಡು ಬಂದು ಮೇಲ್ಕಂಡ ಮೊಕದ್ದಮೆಯನ್ನು ತಾಲ್ಲೂಕು ಕಚೇರಿಯಲ್ಲಿ ದಾಖಲ್ ಮಾಡಿರುವದಾಗಿ ವರ್ತಮಾನ ಕೇಳುತ್ತೇನೆ.

ಮುಖ್ಯ ಸರ್ಕಾರದ ಭಯವಿಲ್ಲದೆ ಸಂತೆ ನಡೆಸುತ್ತಿರುವ ಕೆಲವು ಪುಂಡು ಜನಗಳಿಗೆ ಸರಿಯಾದ ಶಿಕ್ಷೆ ಆದ ಹೊರತು ಸಂತೆ ನಿಲ್ಲುವದಿಲ್ಲ

ಮಳ್ಳಿಪಟ್ಟಣ
೯. ೯. ೦೫ — ವ್ಯ. ಸೂರ್ಯನಾರಣಪ್ಪ

ಪ್ರಯಾಣಿಕರ ಕಷ್ಟ.

ಅಯ್ಯಾ,

೧ ಈ ಸಂಸ್ಥಾನದಲ್ಲಿ ಅನೇಕ ಮುಸಲ್ಮಾನರಿರುವುದರಿಂದ ಅವರಿಗೆ ಓದಲು ಯಾವ ಪತ್ರಿಕೆಯೂ ಈ ಸಂಸ್ಥಾನದಲ್ಲಿ ಇಲ್ಲ. ಆದ್ದರಿಂದ ನಿಮ್ಮ ವೃತ್ತಾಂತ ಪತ್ರಿಕೆಯನ್ನು ಪಾರ್ಸಿ ಭಾಷೆಯಲ್ಲಿ ಪ್ರಕಟಿಸುವುದಾದರೆ ಅನೇಕರು ಚಂದಾದಾರರಾಗುತ್ತಾರೆ ಆದ್ದರಿಂದ ಪ್ರಕಟಿಸಲು ಅನುಕೂಲವಾಗುತ್ತೆಯೆ?

೨ ಚಾಮರಾಜನಗರಕ್ಕೂ ನಂಜನಗೂಡಿಗೂ ತಿರುಗಾಡತಕ್ಕ ಪ್ರಯಾಣಿಕರನ್ನು ಸುರಕ್ಷಿತವಾಗಿ ನೋಡಿಕೊಳ್ಳಲು ಪೋಲೀಸಿನವರು ನೇಮಿಸಲ್ಪಟ್ಟಿರುವರಷ್ಟೆ. ಈ ಪೋಲೀಸಿನವರು ಸರಿಯಾದ ಹೊತ್ತಿಗೆ ಗಾಡಿ ಬಿಡದೆ ಪ್ರಯಾಣಿಕರಿಗೂ ವರ್ತಕರಿಗೂ ತೊಂದರೆ ಮಾಡುತ್ತಾರೆಂದು ಕೇಳುತ್ತೇನೆ. ಅನೇಕರಿಗೆ ತುರ್ತು ಕೆಲಸಗಳಿರುತ್ತಾದ್ದರಿಂದ ರೈಲು ಕಾಲವು ಮೀರಿಹೋಗಿ ಅನೇಕ ವಿಧದಲ್ಲಿ ನಷ್ಟವಾಗುತ್ತೆ ಯಾರಾದರೂ ಪೋಲೀಸಿನವರನ್ನು ಕೇಳಿದರೆ "ನಾವು ಬಂದ ಹೊತ್ತು ಗಾಡಿ ಬಿಡಕೂಡದೆಂತಲೂ" "ದಫೇದಾರ್ರವರ ಅಪ್ಪಣೆಯಾಗಬೇಕೆಂತಲೂ" ಹೇಳಿ ರಾತ್ರಿ ೧೦—೧೧ ಗಂಟೆಗಳವರಿಗೆ ತಡದು ಬಿಡುತ್ತಾರಂತೆ. ಹೀಗೆ ಮಾಡುವುದರಲ್ಲಿ ಪೋಲೀಸಿನವರು ತಮ್ಮ ಅಧಿಕಾರವು ಎಷ್ಟರಮಟ್ಟಿಗೆ ಇದೆ ಎಂಬುದನ್ನು ತೋರ್ಪಡಿಸಿಕೊಳ್ಳುವವರಾಗಿರುತ್ತಾರೆ ಪ್ರಜೆಗಳು ಇವರಿಗೆ ತಿಳಿಸಿದರೆ ಅಲಕ್ಷ್ಯರಾಗಿರುವುದರಿಂದ ಪತ್ರಿಕಾ ಮುಖೇನ ತಿಳಿಸಬೇಕಾಗಿದೆ. ಕಳ್ಳರ ಅವಾಂತ್ರ ಅಕಸ್ಮಾತ್ತು ಸಂಭವಿಸುತ್ತಿದ್ದರೂ ಪೋಲೀಸಿನವರ ಅವಾಂತ್ರವು ದಿನವೂ ತಪ್ಪಲಿಲ್ಲ. ಮೇಲ್ಪಟ್ಟ ಅಧಿಕಾರಿಗಳು ನಿಗಾ ಕೊಟ್ಟು ಸರಿಯಾದ ಏರ್ಪಾಡು ಮಾಡಿಸಿದರೆ ಉತ್ತಮ.

೮—೯—೦೫ — ಸತ್ಯವಾದಿ.

[ನಾವು ಕೆಲವು ಮಂದಿಯ ನಿಮಿತ್ತವಾಗಿ ಪಾರ್ಸಿ ಬಾಷೆಯಲ್ಲಿ ಪತ್ರಿಕೆಯನ್ನು ಮುದ್ರಿಸುವುದಕ್ಕಿಂತ ನಮ್ಮ ಮುಸಲ್ಮಾನ ಸ್ನೇಹಿತರೆಲ್ಲರೂ ಕನ್ನಡವನ್ನು ಕಲಿತು ದೇಶಭಾಷಾ ಪತ್ರಿಕೆಗಳ ಪ್ರಚಾರಕ್ಕೆ ಹೆಚ್ಚು ಅವಕಾಶವನ್ನು ಕಲ್ಪಿಸಿಕೊಟ್ಟರೆ ಒಳ್ಳೆಯದಲ್ಲವೇ?
—ಎಡಿಟರ್.]

ಹೆಗ್ಗಡದೇವನಕೋಟೆ ತಾಲ್ಲೂಕು ಫಾರೆಸ್ಟ್ ಇಲಾಖೆಯ ನಿಬಂಧ.

ಅಯ್ಯಾ,

ಈ ತಾಲ್ಲೂಕಿನಲ್ಲಿ ಸ್ಟೇಟ್ ಫಾರೆಸ್ಟ್, ಡಿಸ್ಟ್ರಿಕ್ಟ್ ಫಾರೆಸ್ಟ್ ಎಂತ ಎರಡು ವಿಧವಾಗಿ ವಿಂಗಡಿಸಿ, ಸ್ಟೇಟ್ ಫಾರೆಸ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ಆಡಳಿತದಲ್ಲಿಯೂ ಡಿಸ್ಟ್ರಿಕ್ಟ್ ಫಾರೆಸ್ಟ್ ರೆವಿನ್ಯು ಡಿಪಾರ್ಟ್‌ಮೆಂಟಿನವರ ಆಡಳಿತದಲ್ಲಿಯೂ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ರೈತರು ದನಕರುಗಳು ಮೇಯಿಸಿಕೊಳ್ಳಬಹುದೆಂತಲೂ, ರೈತರುಗಳಿಗೆ ವ್ಯವಸಾಯಕ್ಕೆ ಅನುಕೂಲವಾದಂತ ಮರ ಬಿದರು ತಂದುಕೊಳ್ಳಬಹುದೆಂತಲೂ ೧೮೬೪ ನೇ ಇಸವಿ ಲಾಗಾಯತು ನಡೆದು ಬರುತ್ತಲಿತ್ತು. ಈಚೆಗೆ ನಾಲ್ಕೈದು ವರುಷದಿಂದ ಎಲ್ಲಾ ಆಡಳಿತವು ಫಾರೆಸ್ಟ್ ಇಲಾಖೆಯವರಿಗೆ ವಹಿಸಿದ್ದರಿಂದ ಮೇಲ್ಕಂಡ ರೀತಿಯು ತಪ್ಪಿ ಗ್ರಾಮದ ಸಮೀಪದಲ್ಲಿ "ಡಿಮಾರ್ಕೇಷನ್ ಲೈನ್" ಎಂತ ಮಾಡಿ, ದನಗಳಿಗೆ ರಾಸುವೊಂದಕ್ಕೆ ೪ ಆಣೆ ಗ್ರೇಜಿಂಗ್‌ಫೀಜ ಕೊಡಬೇಕೆಂತಲೂ, ಬೇಸಾಯಕ್ಕೆ ಉಪಯೋಗವಾದ ಕೆಲವು ಜಾತಿ ಮರಗಳನ್ನು ಕ್ಲಾಸ್‌ಫೈ ಮಾಡಿ, ಸರ್ಕಾರಕ್ಕೆ ಉಳಿಸಿಕೊಂಡು ಬೇಸಾಯಕ್ಕೆ ಅನುಪಯೋಗವಾದ ಕೆಲವು ಮರಗಳು ಮಾತ್ರ ರೈತರಿಗೆ ಬಿಟ್ಟುಕೊಟ್ಟಿರುತ್ತಾರೆ. ಈ ತಾಲ್ಲೂಕಿನಲ್ಲಿ ಇರತಕ್ಕ ದನಗಳು ಕೇವಲ ಸಣ್ಣರಾಸುಗಳು ಗೊಬ್ಬರಕ್ಕೆ ಇಟ್ಟುಕೊಂಡಿದೆಯೇ ಹೊರ್ತು ಇವುಗಳಿಂದ ಇನ್ನು ಯಾವ ವಿಧವಾದ ಉತ್ಪತ್ತಿಯು ಇಲ್ಲ. ಇಂಥಾದ್ದರಲ್ಲಿ ಈ [illegible]ಗೆ ಹುಲ್ಲುಮೇವಿಗೆ ತೊಂದರೆಯಾಗಿ, ಅನೇಕ ರಾಸುಗಳು ಮೃತಪಟ್ಟವು. ಬಡಕೃಷಿಕರಾದ ನಮ್ಮಗಳಿಗೆ ಬೇಸಾಯದ ಕೆಲಸಕ್ಕೆ ಅನುಕೂಲವಾದ ಮರಗಳು ಹಣಕ್ಕೆ ಅನುಕೂಲವಾದ ಸೌದೆಯು ಸಹ ದೊರೆಯದೆ, ತುಂಬಾ ತೊಂದರೆಯಾಗಿರುವದನ್ನು ಕುರಿತು ಅನೇಕ ವಿಧವಾಗಿ ಸರ್ಕಾರದವರನ್ನು ಬೇಡಿಕೊಂಡರೂ ಕೂಡ ಪ್ರಜೆಗಳಿಗೆ ಅನುಕೂಲವಾದ ರಿಯಾಯಿತಿ ಯಾವದೂ ದೊರೆಯದಿಲ್ಲ. ಹಾಲಿ ಫಾರೆಸ್ಟ್ ಇಲಾಖಾ ರೂಲ್ಸುಗಳು ಸ್ಥಿರವಾಗಿರುವ ಪಕ್ಷಕ್ಕೆ ಈ ತಾಲ್ಲೂಕಿನ ರೈತರು ಅಭಿವೃದ್ಧಿಯೂ ಕೇವಲ ಕಡಿಮೆಯಾಗುವದಲ್ಲದೆ, ಬೇಸಾಯ ಕೆಲಸಗಳು ಕ್ಷೀಣಗತಿಯನ್ನೈದುವವು

ಈ ಪ್ರಾಂತ್ಯ ಹುಲ್ಲಿನ ಗುಡಿಸಲು ವಿಶೇಷವಾಗಿರುವದ್ದರಿಂದ, ಹುಲ್ಲು ಹೊದಿಸುವದಕ್ಕೆ ಹುಲ್ಲಿಗೆ ಅವಕಾಶವಿಲ್ಲದೆ ತೊಂದರೆ ಪಡತಕ್ಕದ್ದಾಗಿದೆ. ಈ ಫಾರೆಸ್ಟ್ ಇಲಾಖೆಯ ಏರ್ಪಾಡುಗಳಿಂದ ದಿನೇ ದಿನೇ ಬೇಸಾಯ ಹುಟ್ಟುವಳಿ ಕಡಿಮೆಯಾಗುವದಕ್ಕೆ ಈ ಸಾಲಿನಲ್ಲಿ ಈ ತಾಲ್ಲೂಕು ಆ ಮಳೆಯಲ್ಲಿ ಸುಮಾರು ೨ ಸಾವಿರ ರೂಪಾಯಿನ ವರಿಗೆ ಹುಟ್ಟುವಳಿ ಕಮ್ಮಿಯಾಗಿರುವದೇ ಇದಕ್ಕೆ ದೃಷ್ಟಾಂತರವಾಗಿರುತ್ತೆ. ಮುಂದೆಯಾದರೂ ಸರಿಯಾದ ರಿಯಾಯಿತಿಗಳನ್ನು ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜಾಸಾಹೇಬ್‌ಬಹದ್ದೂರ್‌ರವರು ತಮ್ಮ ದಿವ್ಯ ಚಿತ್ತಕ್ಕೆ ತಂದುಕೊಂಡು, ೧೮೬೪ ನೇ ಇಸವಿಯಲ್ಲಿ ಇದ್ದ ಏರ್ಪಾಡನ್ನು ದಯಪಾಲಿಸುವರೆಂದು ನಂಬಿದ್ದೇನೆ.

ವಿಧೇಯ,
ದೇಶಾಭಿಮಾನಿ.

"ಮಹಾಭಾರತ"

ಅಯ್ಯಾ,

ಕನ್ನಡಿಗರಲ್ಲಿ ಪೂರ್ವಕಾಲದಿಂದಲೂ ಪ್ರಸಿದ್ಧವಾಗಿ ಬಳಕೆಯಲ್ಲಿರುವ ಪದ್ಯಕಾವ್ಯಗಳು—ಜೈಮಿನಿ ಭಾರತ, ಮತ್ತು ಕನ್ನಡ ಭಾರತ ಇವು ಮಾತ್ರವೆ: ಇವುಗಳಲ್ಲಿ ಜೈಮಿನಿ ಭಾರತದ ಪ್ರತಿಗಳಲ್ಲಿ ವಿಶೇಷ ಹೆಚ್ಚು ಕಡಮೆಗಳಿಲ್ಲ ಅಲ್ಲಲ್ಲಿ ಸ್ವಲ್ಪಮಟ್ಟಿಗೆ ಪಾಠಾಂತರಗಳಿದ್ದರೂ ಕಥಾ ಭಾಗಗಳಲ್ಲಿ ಯಾವ ವ್ಯತ್ಯಾಸವೂ ಕಾಣಬರುವುದಿಲ್ಲ.

ಭಾರತದ ವಿಷಯದಲ್ಲಿ ಅನೇಕ ಸಂಶಯಗಳಿವೆ. ಇವುಗಳನ್ನು ಇದರಡಿ ವಿವರಿಸುವೆನು

ಕೋಳಿವಾಳದ ನಾರಣಪ್ಪನೆಂಬುವನು ಕುಮಾರವ್ಯಾಸನೆಂಬ ಬಿರುದಿನಿಂದ ಕನ್ನಡ ಭಾರತದ ಹತ್ತು ಪರ್ವಗಳನ್ನು ೧೫೦೮ ರಲ್ಲಿ ವಿಜಯನಗರದ ಕೃಷ್ಣರಾಯರ ಪಟ್ಟಾಭಿಷೇಕ ಕಾಲದಲ್ಲಿ ರಚಿಸಿ ಒಪ್ಪಿಸಿದನೆಂತಲೂ, ತಿಮ್ಮಣ್ಣನೆಂಬುವನು ಉಳಿದ ೮ ಪರ್ವಗಳನ್ನು ಬರೆದನೆಂತಲೂ, ಮಿ॥ ರೈಸ್ ಸಾಹೇಬರವರು ಪ್ರಕಟಿಸಿರುವ [ಶಬ್ದಾನುಶಾಸನ, ಪುಟ ೪೧] ಕೆಲವರು ೧೮ ಪರ್ವಗಳನ್ನೂ ಕುಮಾರವ್ಯಾಸನೇ ರಚಿಸಿದನೆಂದು ಹೇಳುತ್ತಾರೆ. ಅಚ್ಚಾಗಿರುವ ಪ್ರತಿಗಳಲ್ಲಿ ಮೊದಲಿನ ೧೦ ಪರ್ವಗಳ ಶೈಲಿಗೂ ಉತ್ತರದ ೮ ಪರ್ವಗಳ ಶೈಲಿಗೂ ಭೇದ ತೋರುವುದಲ್ಲದೆ ಉಪ್ಪಾರಹಳ್ಳಿ ರಾಮಣ್ಣನವರು ರಚಿಸಿದ ಭಗವದ್ಗೀತೆಯೂ ಸೇರಿಸಲ್ಪಟ್ಟಿದೆ. ಒಂದು ಪರ್ವವು ತಿರುಮಲ ಶ್ರೀನಿವಾಸ ಕವಿಯಿಂದ ವಿರಚಿತವಾಗಿ ಮುದ್ರಿಸಲ್ಪಟ್ಟಿದೆ.

ಈಗ ಸಿಕ್ಕಿರುವ ೧ ಪ್ರತಿಯಲ್ಲಿ.

ಶ್ರೀಮದಾಪಸ್ತಂಭಸೂತ್ರ। ನಾಮಹರಿತಸಗೋತ್ರಪಾವ್ಯ
ದ। ಸೋಮಯಾಜಿಯಮೊಮ್ಮ ತಿಮ್ಮರಸಯ್ಯನಾತ್ಮಜನಾ॥
ಪ್ರೇಮಸುತ ವೇಂಕಟರಮಣನೊಲಿ। ದೀ ಮಹಾಭಾರತವನು
ರೆದನು ಪ್ರೇಮಿವಿದ್ವಜ್ಜನರು ತಪ್ಪನು ತಿದ್ದಿ ಪಾಲಿಪುದು॥

ಈ ಪದ್ಯವು ಆದಿಪರ್ವ ಮೊದಲನೇ ಸಂಧಿಯ ೪೬ ನೇ ಪದ್ಯದಲ್ಲಿದೆ—ನಾರಣಪ್ಪ ಮಾಡಿದ್ದೆಂಬುವದಕ್ಕೆ ಆಧಾರವೇನೋ ತಿಳಿಯದು. ಪ್ರತ್ಯಂತರಗಳನ್ನು ಒಟ್ಟುಗೂಡಿಸಿ ನಿಷ್ಕೃಷ್ಟಾಂಶವನ್ನು ಯಾರೂ ಹೊಂದಿಸಲಿಲ್ಲ.

ಅಚ್ಚಿನ ಪ್ರತಿಗಳಲ್ಲಿ ಆದಿಪರ್ವದಲ್ಲಿ ೯೦೦ ಪದ್ಯಗಳಿವೆ. ಕೆಲವು ಮಾತೃಕೆಗಳಲ್ಲಿ ೪,೦೦೦ ಪದ್ಯಗಳಿವೆ ಇತರಪರ್ವಗಳಲ್ಲಿಯೂ ಹೀಗೆಯೇ ಹೆಚ್ಚು ಕಡಮೆಗಳಿವೆ. ಮುದ್ರಿಸುವವರಿಗೆ ಸಮಗ್ರವಾದ ಪ್ರತಿ ದೊರೆಯದ್ದರಿಂದಲೇ ಹೀಗೆ ಆಗಿರಬಹುದು.

ಪದ್ಯಭಾಗಗಳುಸಹಾ ಮುದ್ರಿತ ಪುಸ್ತಕಕ್ಕಿಂತ ಮೂಲ ಪ್ರತಿಗಳಲ್ಲಿ ತುಂಬಾ ಹೆಚ್ಚಾಗಿವೆ. ಸಂಸ್ಕೃತ ಭಾರತದ ಕಥೆಗಳಿಗೆ ಕೆಲವು ಪ್ರತಿಗಳು ಹೋಲುತ್ತವೆ.

ಭಾಷಾಸರಣಿಯು ಒಂದೊಂದು ಪ್ರತಿಯಲ್ಲಿ ಒಂದೊಂದು ಬಗೆಯಾಗಿವೆ ಬಹು ಪುರಾತನ ಗ್ರಂಥವಾದ್ದರಿಂದ ಆಗಿನ ಜನರು ಆಡುತ್ತಿದ್ದ ಭಾಷೆಯು ಈ ಮೂಲ ಗ್ರಂಥದಿಂದಲೇ ತಿಳಿಯಬೇಕಾಗಿದೆ. ಬಹು ಪ್ರಚಾರದಲ್ಲಿರುವ ಈ ಪುಸ್ತಕವು ಶುದ್ಧವಾಗಿ ಇರಬೇಕಾದುದು ಅಗತ್ಯ.

ಆದುದರಿಂದ ವಾಚಕರು ಈ ಪುಸ್ತಕದ ವಿಷಯವಾಗಿ ತಮಗೆ ತಿಳಿಯುವಂತ ಅಭಿಪ್ರಾಯಗಳನ್ನು ತಮ್ಮ ಪತ್ರಿಕಾ ಮುಖದಿಂದ ಪ್ರಕಟಿಸಿ ಸಂದೇಹಗಳನ್ನು ಪರಿಹರಿಸಬೇಕೆಂದು ಬೇಡುತ್ತೇನೆ.

ತಾ॥ ೯—೯—೦೫ — ವಿ. ರಾಮು.

ಬಡಮಾಸ್ಟರುಗಳ ಗೋಳಾಟ.

ಅಯ್ಯಾ,

ಹೋಬಳಿ ಸ್ಕೂಲ್‌ಮಾಸ್ಟರುಗಳಿಗೆ ಸಲ್ಲುತ್ತಿರುವ ತಲಬು ಅವರುಗಳ ಕಷ್ಟಜೀವನಕ್ಕೆ ಸುದಾ ಸಾಲದೆ ಪಡುತ್ತಿರುವ ತೊಂದರೆಯು ಜಗದೀಶ್ವರನಿಗೆ ವೇದ್ಯವಾಗಬೇಕೆ ಹೊರ್ತು ಮನುಷ್ಯಮಾತ್ರದವನಿಗೆ ಗೊತ್ತಾಗುವುದಿಲ್ಲವೆಂಬುದು ಈ ಕೆಳಗಿನ ಕಾರಣಗಳಿಂದ ವ್ಯಕ್ತವಾಗುತ್ತೆ. ಎಲ್ಲಾ ಇಲಾಖೆಯ ನೌಕರರಿಗೂ ಅವರವರ ಸರ್ವಿಸ್ಸಿಗೂ, ಮೆಹನತ್ತಿಗೂ, ತಕ್ಕ ಹಾಗೆ ಗ್ರೇಡುಗಳು, ಬಡತಿಗಳು, ದೊರಕುತ್ತ ಮಾಸ್ಟರುಗಳಿಗೆ ಮಾತ್ರ 'ಹಾಕಿಟ್ಟ ಹುಯ್ಯಗಂಟೆ' ಎಂಬ ಹಾಗೆ ಇರುತ್ತೆ. ಈ ಮಾಸ್ಟರುಗಳ ಯೋಗ್ಯತೆಗೂ ಸರ್ವಿಸ್ಸಿಗೂ ಮೆಹನತ್ತಿಗೂ ತಕ್ಕ ಹಾಗೆ ಸಂಬಳಗಳನ್ನು ಕೊಡದೆ ಇರುವಲ್ಲಿ ಹೊಟ್ಟೆ ಪಾಡಿಗಾಗಿ ಇವರು ಇತರ ವೃತ್ತಿಗಳನ್ನು ಅವಲಂಬಿಸಬೇಕಾಗುತ್ತೆ ಆಗ್ಯೆ ವಿದ್ಯಾಭ್ಯಾಸದ ವಿಷಯದಲ್ಲಿ ಸರ್ಕಾರದವರ ಉದ್ದೇಶವು ಸಂಪೂರ್ಣವಾಗಿ ನೆರವೇರಿದಂತಾಗುವುದಿಲ್ಲವಾಗಿ ಇವರುಗಳ ತಲಬಿನ ವಿಚಾರದಲ್ಲಿ ಸರ್ಕಾರದವರು ಸಂಪೂರ್ಣ ಅಭಿಮಾನವಿಟ್ಟು ಬಡತಿ ಮೂಲಕ ಇವರಿಗೆ ಪ್ರೋತ್ಸಾಹ ಕೊಟ್ಟಾಗ್ಗ ಸುಲಲಿತವಾಗಿ ವಿದ್ಯಾಭ್ಯಾಸವು ಜರಗುವಂತೆ ಮಾಡಿದರೆ ಬಹಳ ಉತ್ತಮವೆಂದು ಭರತಖಂಡದ ಅನೇಕ ವರ್ತಮಾನ ಪತ್ರಿಕೆಗಳು ಕೂಗಿ ಕೂಗಿ ಅಂಗಲಾಚಿ ತಮ್ಮ ಕೂಗಿಗೆ ಪ್ರತಿಫಲವಾವುದೂ ಉಂಟಾಗಲಿಲ್ಲವಾಗಿರುವ ಮನೋರಥಗಳಾಗಿ ತಾಟಸ್ಥ್ಯವನ್ನು ವಹಿಸಿಬಿಟ್ಟವು. ಹಾಲಿ ದುರ್ಭಿಕ್ಷಕಾಲವು ಒದಗಿ ಮಾಸ್ಟರುಗಳ ತಲಬು ಜೀವನಕ್ಕೆ ಸಾಲದೆ ತಮ್ಮ ತಮ್ಮ ಹುಕುಂ ಇನ್ಸ್‌ಪೆಕ್ಟರವರಲ್ಲಿ ಹೋಗಿ ಅಹವಾಲುಗಳನ್ನು ಹೇಳಿಕೊಂಡು ಬಡತಿಯನ್ನು ಕೊಡಿಸಬೇಕೆಂದು ಕೇಳಿಕೊಂಡರೆ ಇನ್ಸ್‌ಪೆಕ್ಟರುಗಳು ತಾನೆ ಎಷ್ಟು ಮಂದಿಗೆ ಎಲ್ಲಿಂದ ತಂದುಕೊಟ್ಟಾರು? ಒಂದು ವೇಳೆ ಇವರ ಜಂಜಾಟವನ್ನು ಸಹಿಸಲಾರದೆ ಗದರಿಸಿಕೊಂಡು ಅವರನ್ನು ಹೊರಗೆ ಕಳುಹಿಸಲು ಪ್ರಯತ್ನಪಟ್ಟಾರೆ! ಈ ಮಾಸ್ಟರುಗಳು ತಮ್ಮ ಅಹವಾಲುಗಳನ್ನು ಮತ್ತಾವ ದಣಿಗಳಲ್ಲಿ ಹೇಳಿಕೊಂಡಾರು! ಇದನ್ನೆಲ್ಲಾ ಆಲೋಚಿಸಿ ಸದ್ಯದಲ್ಲಿ ಮಾಸ್ಟರುಗಳ ತೊಂದರೆ ತಪ್ಪಿದರೆ ಸಾಕೆಂತ 'ನೀನು ಅಪ್ಪರ್‌ಸೆಕಂಡರಿ ಪಾಸುಮಾಡಿದನಂತರ ಬಡತಿ ಕೊಡುತ್ತೇನೆ' ಎಂತಲೂ 'ನಿನಗೆ ಸರ್ವಿಸ್ಸು ಸಾಲದು ನಾನೇನು ಮಾಡಲಿ' ಎಂದೂ 'ನಿಮ್ಮಗಳಿಗೆಲ್ಲಾ ಗ್ರೇಡುಗಳಾಗಿವೆ ಅದು ಜಾರೀಗೆ ಬಂದ ಕೂಡಲೆ ಕೊಡುತ್ತೆ' ಎಂದೂ ಧಾರಾಳವಾಗಿ ಹೇಳಿ ಇವರನ್ನು ಇವರಿರುವ ಹಳ್ಳಿಗಳಿಗೆ ಸಂತೋಷದಿಂದ ಕಳುಹಿಸುತ್ತಾರೆ ಮಾಸ್ಟರುಗಳಾದರೋ ಬರುಗ ಮರಕ್ಕೆ ಗಿಡಕಾದ ಹಾಗೋ ಇಲ್ಲವೆ ಹನುಮಂತನು ಬ್ರಹ್ಮಪಟ್ಟಕ್ಕೆ ಕಾದ ಹಾಗೂ ಗ್ರೇಡುಗಳನ್ನು ಎದುರುನೋಡುತ್ತಾ ಇರುವರು. ಈ ಗ್ರೇಡುಗಳ ವಿಚಾರ ಹತ್ತಾರು ಸಂವತ್ಸರಗಳಿಂದ ಪ್ರಸಂಗ ಮಾತ್ರದಲ್ಲೇ ಇರುವದರಿಂದ ಗ್ರೇಡುಗಳಾದರೆ ಕೆರೆ ಕಟ್ಟೆಯ ಮೇಲೆ ಇರತಕ್ಕ ಗ್ರೇಡುಕಲ್ಲುಗಳು ತಮಗೋಸ್ಕರವೇ ನಿರ್ಮಾಣವಾಗಿರುವುದೆಂದು ತಿಳಿದು ಮಾಸ್ಟರುಗಳ ಎದೆಯಮೇಲೊಂದು ತಲೆಯಮೇಲೊಂದು ಎಳೆದುಕೊಂಡು ಸಂತೋಷಪಡಬೇಕೋ ಇಲ್ಲವೇ ಉಮೇದಂತನಗತಿಯನ್ನು ಹೊಂದಬೇಕೋ ಎಂಬ ಸಂಶಯ ಉಂಟಾಗಿರುತ್ತೆ. ಇವರುಗಳ ತಲಬಿನ ವಿಚಾರವೇನೋ ಈ ರೀತಿ ಇದೆಯಷ್ಟೆ. ಮರ್ಯಾದೆ ವಿಚಾರವೋ, "ಒಳ್ಳೆಯವನ ಮಾನ ಹಳ್ಳಿಯಲ್ಲಿ ಹೋಯಿತು" ಎಂಬ ಗಾದೆಗನುಸಾರವಾಗಿಯೇ ಇರುತ್ತೆ. ಹೋಬಳಿ ಸ್ಕೂಲಿನಲ್ಲಿ ಉಪಾಧ್ಯಾಯನಾಗಿರತಕ್ಕವನು ಆ ಹಳ್ಳಿಯ ಹೆಂಗಸರು ಗಂಡಸರು ಮೊದಲ್ಗೊಂಡು ಯಾರು ಹೇಗೆ ಹೇಳಿದರೂ ಹಾಗೆ ನಡೆಯಬೇಕು. ಹಾಗೆ ನಡೆಯದೆ ಇರುವಲ್ಲಿ ಹಿಂದೆಯೇ ದ್ವೇಷಾಸೂಯೆಗಳು ತಪ್ಪದೆ ಬರುತ್ತೆ ಕೊನೆಪಕ್ಷ ಒಬ್ಬ ಸಾಧಾರಣನಾದವನೂ ಇವನ ಮೇಲೆ ಅಮಲನ್ನು ಹಸಲು ಪ್ರಯತ್ನಪಡುತ್ತಾನೆ ಬಡದೇವರ ಕಂಡರೆ ಬಿಲ್ಪತ್ರೆ ಬುಸ್‌ಎಂದ ಹಾಗೆ, ಆಗ್ಯೆ ಈ ಮಾಸ್ಟರು ತನಗುಂಟಾದ ಕಿರುಕುಳವನ್ನು ತಪ್ಪಿಸಿಕೊಳ್ಳಲು ಪ್ರಯತ್ನಪಡಬೇಕಷ್ಟೆ. ಆಗ್ಯೆ ಇವನಿಗೆ ಸಾಕ್ಷಿ ಹೇಳುವನಾರು? ಒಂದು ವೇಳೆ ಯಾವನಾದರೂ ಧರ್ಮಾತ್ಮನಿರುತ್ತಾನೆಂದು ಭಾವಿಸುವ! ಆದರೇನು 'ಆ ಧರ್ಮವನ್ನು ಪೋಲಾಡಿಸಿರುತ್ತೆಂದು ಧರ್ಮವು ಅವನೆದೆಯಲ್ಲಿ ನೆಲೆಗೊಳ್ಳುವಂತ ಮಾತಕ್ಕ ಸ್ಕೂಲುಗಳು ಹಳ್ಳಿಯಲ್ಲಿ ಅನೇಕ ಉಂಟು. "ಸಂಘಶಕ್ತಿ ಕಲೌಯುಗೆ" ಎಂಬ ಹಾಗೆ ಜನಸಂದರ ಅವರುಗಳಿಂದ ಮೊಸ[illegible] ನಿಗಾಗುವ ಕಿರುಕುಳಗಳನ್ನು ಹೇಳಬೇಕಾದ್ದೇನು? ಹಳ್ಳಿಯವರಲ್ಲಿ ಇನ್ನೊಂದು ವಿಶೇಷ ಉಂಟು. ಶೇಕದಾರ್ರು ಪೋಲೀಸ್ ದಫೇದಾರು ಕೊನೆಪಕ್ಷ ಒಬ್ಬ ಕಾನಿಸ್ಟೇಬಲನು ತಮ್ಮ ಗ್ರಾಮಕ್ಕೆ ಬಂದರೆ ಅವರಲ್ಲಿ ಹಳ್ಳಿಯವರೆಲ್ಲಾ ಕೇವಲ ಭಯಭಕ್ತಿಯುಳ್ಳವರಾಗಿ ಇವರು ಹೇಳಿದ ಹಾಗೆ ಕೇಳುತ್ತಾ ಚಾಚೂ ತಪ್ಪದೆ ನಡೆದುಕೊಳ್ಳುತ್ತಾರಲ್ಲ, ಮಾಸ್ತರನೆಂದರೋ 'ಬಡವನ ಅದರ ಮೇಲೆ ಬ್ರಸ್ತ್ರೇತಿ' ಎಂಬ ಹಾಗೆ ಅರಕೊಟ್ಟು ತಿನ್ನುತ್ತಾ ಗೋಳಾಡುವುದೂ ಕುಂಟರ ಹಿಂಸೆಯನ್ನು ಸಹಿಸುವುದೂ ಇದೇ ಕೆಲಸ ಮಾಡಬೇಕಾಗುತ್ತೆ.

ವಿದ್ಯಾಭಿಮಾನಿ.

WANTED WILD ANIMALS

ಬೇಕಾಗಿದೆ ಬೇಕಾಗಿದೆ.

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ನೋಡುವ ರೇಂಜ್ ದಿ ಹ್ಯೂಗ್ಸ್ ಯವರು ಕೊಂಡುಕೊಳ್ಳುವರು

Apply to—Mr. Hughes Mysore Zoo

ಇದು ಕಳೆದ ಜನವರಿ ತಿಂಗಳ ಪ್ರಜೆಂಟೇಷನ ವಾಚು

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ಲಾಕ್ ಕೋಶ್ ಪೇಟೆಂಟ್ ಪಿನ್ ವಾಚು ಆರು ರತ್ನಗಳುಳ್ಳ ಓಪನ್ ಕೇಸ್



ಕೀಲೆಸ್ ಕಂಪೆನ್ಸೇಟರ್ ಬ್ಯಾಲನ್ಸ್ ಬಹು ಬಲಿಷ್ಠವಾದ ಗ ತಿಯಾರ ೫ ವರುಷ ಗ್ಯಾರಂಟೀ ಕ್ರಯ ರೂ ೫—೮—೦ ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವದರೊಳಗಾಗಿ ಹಣವನ್ನು ಕಳುಹಿಸತಕ್ಕವರಿಗೆ ಈಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ... ಆಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ ಇದು ... ಪ್ರಜೆಂಟೇಷನು ದೊರೆಯಲಾರದೆಂದು ಪ್ರಚಾರ ... ೧,೦೦೦ ವಾಚುಗಳು ಮುಗಿದು ಹೋದಾಗ್ಯೂ, ... ಕಳೆದ ಜುಲೈ ಆಖೈರ್ ವರೆಗೆ ... ಸಹಿತ ಗಿರಾಕಿಯರನ್ನು ಕೊಡುತ್ತೇವೆಂದು ಸಮಾಪಿಸ ... ಹಾಗ್ಯೂ ಅನೇಕ ದರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜಂಟರು ಇನ್ನೂ ಕೆಲವು ಕಾಲದವರೆಗೆ ... ತರಬೇಕೆಂದು ಕೋರಿದ್ದರಿಂದಲೂ ನಮ್ಮ ... ಇಚ್ಛೆಯ ಮೇರೆಗೆ ಪುನಃ ಬಹುಮತಿ ... ಇರುವರಿಗೆ ವಾಚು ಬಹುಮತಿ ... ಜಾಗ್ರತೆ ದರಖಾಸ್ತು ಕಳುಹಿಸಬೇಕಾಗಿ ... ಕೋರಿದೆ

... ಈ ಕೆಳಗಣ ನಕ್ಷೆಗಳಲ್ಲಿ ತೋರಿಸಿ ಇರುವ ಪ್ರಜೆಂಟೇಷನ್ ಸಾಮಾನುಗಳು ... ಕಳುಹಿಸುವ ಸಾಮಾನುಗಳ ... ಲಾಗಿಯೂ ... ವ್ಯತ್ಯಾಸವಿಲ್ಲದೆಯೂ ಇರುತ್ತೆ



ನಶ್ಯದ ಡಬ್ಬಿ ಇದು ಮೇಲಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು ಕ್ರಯ, ೦—೮—೦



ಗಡಿಯಾರ ಸರಪಣಿ ಇದು ಮೇಲಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದರ ಕೊನೆಯಲ್ಲಿ ಸುಂದರವಾದ ಉತ್ತಮ ಬಿಲ್ಲೆ ಕಟ್ಟಲ್ಪಟ್ಟಿರುತ್ತೆ ಎಂದಿಗೂ ಕೆಡಲಾರದು ಕ್ರಯ, ೦—೮—೦.

ಮಲಗುವ ಮನೆ ದೀಪ—ಇದು ಮೇಜಿನ ಮೇಲಿರಿಸುವದಕ್ಕೂ ಗೋಡೆಗೆ ತಗಲಿಸುವದಕ್ಕೂ ಲಾಯಕ್ಕಾದದ್ದು ಎಣ್ಣೆಯು ವೆಚ್ಚ ಕಡಮೆ ಸಾಕಾದಷ್ಟು ಬೆಳಕು. ಕ್ರಯ, ೦—೧೦—೦



ಶರಟ್ ಗುಂಡಿ—ಇದು ಮೇಲಾದ ಜರ್ಮನ್ ಸಿಲವರ್ ಬೆಳ್ಳಿಯಿಂದ ಹೊಸ ನಮೂನೆಯಾಗಿ ತಯಾರ್ಮಾಡಲ್ಪಟ್ಟದ್ದು ರೂ ೦—೧೦—೦



ಹಣದ ಪೆಟ್ಟಿಗೆ—ಇಂಗ್ಲಿಷ್ ಮೇಡ್ ಕ್ಯಾಷ್ ಬಾಕ್ಸ್—ಹಣ ಆಭರಣ ಭದ್ರವಾಗಿ ಇರಿಸಬಹುದು ಇದರೊಳಗೆ ಎರಡು ಖಾನೆಗಳುಳ್ಳ ೧ ಸಣ್ಣ ಪೆಟ್ಟಿಗೆ ಇದೆ ಭದ್ರವಾದ ಬೀಗದಕ್ಕೆ ಕೋಟೆಕ್ಕೆ ಸುಂದರವಾದದ್ದು ಕ್ರಯ ೦ ೧೦ ೦

ವಿ. ಎಸ್—ಮ್ಯಾನೇಜರ್, ಫ್ಲೋರಿನ್ ವಾಚ್ ಕಂಪೆನಿ ಪಾರ್ಕ್ ಟವನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . . ರೂ ೧—೨—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ . . . . . . ರೂ ೧—೦೪—೦

,, ,, ,, ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರ ಸುಧಾ

ಇದನ್ನು ಓದಿ! ಬಿಸಬೇಡಿ!! ಗಮನಿಸಿರಿ!!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಿದ್ದಾರೆ ಶೈತ್ಯ, ತಲೆನೋವು, ಜರತಲೆನೋವು, ಚಿನ್ನುಳಿಕೆ, ಕೈಕಾಲು ನೋವು ಮುಂತಾದವುಗಳನ್ನು ದೈನಾಮೈಟಿನಂತೆ ದಿಗಂತರಕ್ಕೆ ಹಾರಿಸಬಲ್ಲದು 'ಸುಧಾ' ಎಂಬದೆ ಅನ್ವರ್ಥವನ್ನು ಸೇವಿಸಿದಲ್ಲಿ ಯಾವ ವಿಷವಾದ ರೋಗವು ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಶೀಸೆ ಔಷಧಿಯಲ್ಲಿ ಕಂಡುಬರುವ ಆರೋಗ್ಯಗುಣವನ್ನು ಹೆಚ್ಚು ವರ್ಣನೆಮಾಡಿತೀರದು ಶೀಸೆ ೧ಕ್ಕೆ ೦ ೮ ೦ ಹಾಸಲು ಬೇರೆ

ಜೀವನಸುಧಾ—ಜ್ವರ ನಿಂತಿತೆಂದು ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧಮಾಸ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ. ಶೀಸೆ ೧ಕ್ಕೆ ರೂಪಾಯಿ ೧ ೦—೦

ತ್ರಿಶೂಲಾಂಬುಜ—ಜಗತ್ಪ್ರಖ್ಯಾತವಾದ ತಾಂಬೂಲ ಪವಿತ್ರಗಳು ಶೀಸೆ ೧ಕ್ಕೆ ೪ ಆಣೆ ೩ ಶೀಸೆವರೆಗೆ ವಿ ಪಿ ಛಾರ್ಜ ೫ ಆಣೆ

ದೇವನಹಳ್ಳಿ ಟವರ್, ಯಂ ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟೀಷನರ್

ಲೋಕಪ್ರಸಿದ್ಧವಾದ ... ಗುಣಕಾರಿಯಾದ ... ಔಷಧಿಗಳು

ದಯವಿಟ್ಟು ... ನೋಡಿರಿ
... ಪ್ರತಿರೂಪ

"ರಕ್ಷಾಮೃತಂ"—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಿ ಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರ್ಮಾಡಲ್ಪಟ್ಟಿರುತ್ತದೆ ಕಾಫಿ, ಟೀಯಿಲೆಗಳಲ್ಲಿರುವ ದುರ್ಗುಣ

ಗಳು ಇದಕ್ಕಿಲ್ಲ. ಕಾಫಿ ಪುಡಿಯನ್ನು ಉಪಯೋಗಿಸುವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸತಕ್ಕದ್ದಾಗಿದೆ ಜ್ವರ, ಸನ್ನಿ, ಬಿಸಿವು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗುಲ್ಮ ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಿಲೆಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವ ವಸ್ತುವಾಗಿ ಪರಿಣಮಿಸುವುದು

ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ಆಣೆ ೬. ವಿ ಪಿ ಛಾರ್ಜಿ ಆಣೆ ೩ ಹೆಚ್ಚಾಗುವುದು ಮುಂಗಡ ೮ ಆಣೆ ಸ್ಟಾಂಪುಕಟ್ಟಿ ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ

ವಿಳಾಸ—ಪಿ. ಸುಬ್ಬರಾಯರ್,
ಪ್ರೋಪ್ರೈಟರ್, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೫—೮—೧೯೦೫ ರಿಂದ ೧—೯—೧೯೦೫ ರ ವರೆಗೆ

ಸ್ಥಳ	ಪ್ಲೇಗ್ ಹಿಡಿದವರು	ಸತ್ತವರು	ಹೋದವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	8	3	26	22
ಮೈಸೂರು ,,	0	0	40	35
ಬೆಂಗಳೂರು ಡಿಸ್ಟ್ರಿಕ್ಟ್	14	14	230	181
ಮೈಸೂರು ,,	7	1	186	178
ಕೋಲಾರ್ ,,	4	1	116	66
ಕೋಲಾರ್ ಚಿನ್ನದ ಗಣಿಗಳು	2	0	17	20
ತುಂಕೂರು ಡಿಸ್ಟ್ರಿಕ್ಟ್	1	1	89	28
ಹಾಸನ ,,	0	0	4	38
ಚಿತ್ರದುರ್ಗ ,,	0	0	171	210
ಕಡೂರ್ ,,	2	2	191	184
ಶಿವಮೊಗ್ಗ ,,	13	23	13	61
ಜುಮ್ಲಾ	63	51	1268	[illegible]

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಭಾದ್ರಪದ ಬಹುಳ ಪಾಡ್ಯಮಿ ಗುರುವಾರದಿಂದ ಭಾದ್ರಪದ ಬಹುಳ ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಸೆಪ್ಟಂಬರ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
14	ಗುರು §	ಪಾಡ್ಯ	15 25	ಪೂಭಾ	8 35	30
15	ಶುಕ್ರ ¶	ಬಿದಿಗೆ	17 .	ಉತ್ತ್ರಭಾ	11 12	31
16	ಶನಿವಾ ,,	ತದಿಗೆ	35	ರೇ	10 40	1
17	ರವಿವಾ ‡	ಚತುರ್ಥಿ	07 [illegible]	ಅ	- 12	2
18	ಚಂದ್ರ *	ಪಂಚಮಿ	10 0	ಭ	35	3
19	ಕುಜ	ಪಂಚಮಿ	[illegible]	ಕೃ	[illegible]	4
20	ಬುಧ	ಷಷ್ಠಿ	6 45	ರೋ	11 0	5

§ ಮಹಾಲಯ ಪಕ್ಷಾರಂಭ ¶ ಯಮುನಾವ್ರತೀ ...
, ಮಹಾವ್ಯತೀಪಾತ ... ಚತುರ್ಥಿ
‡ ಸಂಕಷ್ಟಹರ ... * ಮಹಾಭರಣಿ

ಪೇಟೆ ಧಾರಣೆ.

ಹೆಸರು.	ಮೈಸೂರು	ಬೆಂಗಳೂರು
ಕಡ್ಲೇ ಅಕ್ಕಿ ಪಲ್ಲ ೧ಕ್ಕೆ	೧೨—೮—	೧೨—೮—೦
ಚಂಪಕೂತಿ ಅಕ್ಕಿ ಅವಲ್	೧೨—೪—೦	೨೨—೧೨—೦
,, ಗುಯ್ಯೋ	೧೨—೨—೦	೧೧—೧೨—೦
ಜಾಪಾಳ ಅಕ್ಕಿ	೧೨—೨—೦	೧೨—೦—೦
ಸಣ್ಣಕ್ಕಿ ಅವಲ	೧೪—೦—೦	೧೪—೮—೦
,, ಮಧ್ಯಮ	೧೪—೮—೦	೧೨—೮—೦
ಹೊಗರಿ ಬೇಳೆ ಪಲ್ಲ ೧ಕ್ಕೆ	೧೧—೧—೨	೧೨—೪—೦
,, ಸಾಧಾರಣ	೨೦—೮—೯	೯೧—೦—೦
ಕೈರ ರಾಗಿ ಪಲ್ಲ ೧ಕ್ಕೆ	೬—೪—೦	೫—೩—೦
ಹಾರಕ್ಕಿ	೬—೦—೦	೫—೦—೦
ಜೋಳ	೬—೦—೦	೬—೬—೦
ಹಲಸಂದೆ ಪಲ್ಲ ೧ಕ್ಕೆ	೧೦—೦—೦	೧೦—೦—೦
ಬಿಳೇ ಅವರೆ	೮ ೦—೦	೯—೨—೦
ಹೆಸರು	೯ ೧೨—೦	೧೧—೦—೦
ಉದ್ದು	೧೦ ೦—೦	೯—೮—೦
ಕಡಲೆ	೧೦ ೦—೦	೯—೦—೦
ಎಳ್ಳು	೧೬ ೦ ೦	೦೫—೪—೦
ಹುರಳಿ	೧೯—೦ ೦	೯—೨—೦
ಹರಳು ೧೨೩ ಸೇರಿಗೆ	೧೨—೮—೦	೧೨—೨—೦
ಸೀಗೇಕಾಯಿ ಮಣ ೧ಕ್ಕೆ	೩—೮—೦	೩—೨—೦
ಮೆಣಸಿನಕಾಯಿ	೪—೮—೦	೪—೬—೦
,, ಮಧ್ಯಮ	೩—೧೨—೦	೩—೧೨—೦
ಬೆಲ್ಲ ದೊಡ್ಡ ಅಚ್ಚು	೭—೪—೦	೯—೨—೦
ಒಳ್ಳೆ ಕೊಬ್ಬರಿ ಮಣ ೧ಕ್ಕೆ	೪—೪ ೦	೪—೬—೦
ಹರಳೆಣ್ಣೆ ,,	೫—೦—೦	೪—೪—೦
ಕೊಬ್ಬರಿ ಪಲ್ಲ ೧ಕ್ಕೆ	೧೦—೮—೦	೧೦—೪—೦
ಉಪ್ಪು ,,	೬—೨—೦	೬—೧೨—೦
ಹುಣಿಸೇ ಹಣ್ಣು	೧ ೦—೦	೦—೧೪—೦
,, ಹಳೇದು	೧—೦೪—೦	೦—೧೪—೦
ತುಪ್ಪ	೧೨—೮—೦	೧೧—೪—೦
ಸೀಮೆಯಂತೆ ಬೆಟ್ಟ ೧ಕ್ಕೆ	೫—೦—೦	೩—೧೦—೦
ತೆಂಗಿನಕಾಯಿ ೧೦೦ಕ್ಕೆ	೫—೦—೦	೪— [illegible]
ಅಡಿಕೆ ಕಾಯಿ ಮಣ ೧ಕ್ಕೆ	೧—೦—೦	೦—೧೦—೦
ಅಂಟುವಾಳದ ಕಾಯಿ ಮಣ ೧ಕ್ಕೆ	೦—೧೪—೦	೦—೧೨—೦
ಚಕ್ಕೆ (ಹೊಗೆ) ಸೊಪ್ಪು	೨೫—೮—೦	೧೫—೬—೦
,, ,, ಮಧ್ಯಮ	೧೫—೧೦—೦	೧೬—೨—೦
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೨೪—೬—೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩೨—೦—೦	೩೪—೮—೦

Printed and Published by the Rev. H. Spencer, B.A., the Proprietor and Manager, Wesleyan Mission Press, Mysore 14/9/1905.

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೮ — ಮೈಸೂರು—ಸನ್ ೧೯೦೪ ನೇ ಇಸವಿ ಸೆಪ್ಟೆಂಬರ್ ತಾರೀಖು ೨೨ ನೇ ಗುರುವಾರ. — ಸಂಚಿಕೆ ೧೨

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

ಮೈಸೂರು ಸೆಂಟ್ರಲ್ ಕಾಲೇಜಿನ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮ. ರಾ. ರಾಮಸ್ವಾಮಿಅಯ್ಯಂಗಾರರವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಸ್ಕೂಲುಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನೇಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ತೆಗೆದುಕೊಳ್ಳುವವರಿಗೆ ಶೇಕಡಾ ೧೨ ಮಾಂತ್ರ ಡಿಸ್ಕೌಂಟು ಕೊಡಲಾಗುತ್ತದೆ. ಪ್ರತಿಗಳನ್ನು ಬೇಕಾಗಿ ತರಿಸಿಕೊಳ್ಳುವವರು ಪಿ. ಎಸ್. ಶೇಷಗಿರಿ ರಾಯರು, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೆ, ಬಿಡಿ ಪ್ರತಿಗಳನ್ನು ತರಿಸಬೇಕೆನ್ನುವ ವಿದ್ಯಾರ್ಥಿಗಳು ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು ಈ ವಿಳಾಸಕ್ಕೂ ಬರೆಯತಕ್ಕದ್ದು.
ಕ್ರಯ:—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

ವಿಷ್ಣುವೋ? ಬ್ರಹ್ಮವೋ? ಶ್ರೀಹಂತರೋ? ಜಾಗ್ರತೆ ತಿಳಿದು ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ಓದಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳು ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು. ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದ್ದಾರೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿದೆ. ಇದರ ಕ್ರಯ ೨ ಆಣೆ, ವಿ. ಪಿ. ಮೂಲಕ ೧೪ ಆಣೆ.

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ.

೩. "ಸ್ವಪ್ನಪ್ರಯಾಣ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೩ ಆಣೆ.

೪.	"ರೋಮನರ ಚರಿತ್ರೆ." ಕ್ರಯ	೦—೨—೦
೫.	"ಗ್ರೀಕರ ಚರಿತ್ರೆ." ,,	೦—೨—೦
೬.	"ಅನುಭವಾನಂದ." ,,	೦—೬—೦
೭.	"ಗಣಿತ ಸಂಜೀವಿನಿ"	೦—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ."	೦—೧೨—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೨—೦
೧೧.	"೧೯೦೪ನೇ ವರುಷದ ಡೈರಿಗಳು."	

ಕ್ಲಾತ್, ಪೆನ್ಸಿಲ್ ಸಹಿತ ೦—೬—೦; ಸಾದಾ ೦—೪—೦

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ವೀರಶೈವ ತತ್ವ ಸಾರಸಂಗ್ರಹ

ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರು ಶ್ರೀ ಅಗಸ್ತ್ಯಮುನಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತವು ಸಿದ್ಧಾಂತ ಶಿಖಾಮಣಿಯೆಂಬ ಸಂಸ್ಕೃತ ಗ್ರಂಥದಿಂದ ಕನ್ನಡ ವಚನ ರೂಪವಾಗಿ ಸಂಗ್ರಹಿಸಿ ಬರೆಯಲ್ಪಟ್ಟಿದೆ. ಈ ಗ್ರಂಥದಿಂದ ವೀರಶೈವ ಸಿದ್ಧಾಂತವನ್ನು ಸಕಲರೂ ಸುಲಭವಾಗಿ ತಿಳಿದುಕೊಳ್ಳಬಹುದು. ಕ್ರಯ—ವಿ. ಪಿ. ಮೂಲಕ ೧೦ ಆಣೆ. ವಿಳಾಸ—ಬಿ ಚಂದ್ರಶೇಖರಶಾಸ್ತ್ರಿ, ವೀರನಗೆರೆ, ಮೈಸೂರು.

ಯಸ್. ಆರ್. ವೆಂಕಟಸುಬ್ಬಾಚಾರ್ಯ,
ಬಿ
ಸಾಹುಕಾರ್ ಸ್ಟ್ರೀಟು, ಮೈಸೂರು.

ಮೆಟ್ರಿಕ್ಯುಲೇಷನ್ ಕನ್ನಡದ ೧ನೆ ಪುಸ್ತಕದ ನೋಟ್ಸ್	೦—೪—೦
ಡಿಟ್ಟೋ ,, ,, ೬ ನೆ ಪುಸ್ತಕದ ನೋಟ್ಸ್	೦—೪—೦
ಡಿಟ್ಟೋ ೩—೪ ನೆಯ ಪುಸ್ತಕಗಳ ನೋಟ್ಸ್	೦—೨—೦
ಮೈಸೂರು ಸಂಸ್ಥಾನದ ವಂಶಾವಳಿ (೨ನೆ ಭಾಗ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸ್	೦—೧—೬

ಜ್ವರಹರಿ.

ಇದು ಸಾಧಾರಣ ಜ್ವರ, ಚಳೀಜ್ವರ, ಸನ್ನಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಾಜಿ ಅಮಲ್ದಾರ್ ಹಾಗೂ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಜ್ವರಹರಿ ಸೀಸೆಯೂ ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಔಷಧಿಗೆ ಬರುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಜ್ವರಹರಿ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ ಎಂದು ಬರೆಯುತ್ತಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೦—೮ ರೂ., ೩॥ ೦—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಕೊಡಲಾಗುವದು.

* * * * * * * *

ಅಮೃತಾಂಜನ ಪ್ರಕಾರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಮುಂತಾದವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುತ್ತದೆ. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮಿಂದ ಬಂದ ಕರ್ಪೂರಕವನ್ನು ನಾನೂ ನನ್ನ ಕಾಪೌಂಡರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲವಾದರೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—
ಪೆನಿನ್ಸುಲರ್ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಕಾಲೇಜ್ ರೋಡ್ ಲೈನ್, ಮದರಾಸ್.

"ಇಂಗ್ಲೀಷು ವೈದ್ಯಶಾಸ್ತ್ರ."

ಕ್ರಯ ರೂ ೧—೮—೦, ಹಾಸಲು ೨ ಆ., ವಿ. ಪಿ. ೩ ಆಣೆ.

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಅವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ಅಂಶಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಾಶಸ್ತ್ಯವನ್ನು ಹೊಂದಿದ ಅನೇಕ ಇಂಗ್ಲೀಷು ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವುದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ ಹಾಗೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೂ, ಇದು ತುಂಬಾ ಸಹಾಯಕರವಾಗಿರುವುದು.

ವಿಳಾಸ—ಎಂ. ಗುರುರಾವ್, ಆಸ್ಪಿಟಲ್ ಅಸಿಸ್ಟೆಂಟ್,
ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

ಹೋಮಿಯೋಪತಿಯಾ.

ಕಷ್ಟದ ಪರಿಹಾರ

ಜಗಲಿಂದ ಲೇಸಾದ ವಾಸನೆ ಮುಲಾಮು.

ಈ ಔಷಧಿಯು ಪಾಳ್ಯ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತನ್ನ ಬಳಿಯಲ್ಲಿ ದೇವರಾಣೆಗಳಿಗೆ ಮಹತ್ತಾಗಿ ಸಿಕ್ಕತಕ್ಕ ವಿಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಉಂಟಾದರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ತಲೆ ಕಲೆನೋವು, ಸೊಂಟನೋವು, ಕಾರ್ಬಂಕಲ್ ಮುಂತಾದ ವಾಯುವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಕಾಲುಗಳು ಸೇದುವದು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಗಾಯಗಳು, ಗಡ್ಡೆಗಳು, ರೋಗಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಟ್ಟಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲು ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

* * * * * * * * *

ಹೋಮಿಯೋಪಿಯಾ ಎಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ೧೨ ಒಂದರಂತೆ ಬಳಕೆ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪಿಯಾ ಕಂಪನಿ, ೨೩ ಸಳಂಕು ಸ್ಟ್ರೀಟ್ ಲೈನ್, ಮದರಾಸ್.

"ಬಳ್ಳಲತನವೂ ಬಕ್ಕರಿಗನೂ."—ಪಕ್ಷ ಕೆಗ್ಗ ಂದು.

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗ ಪೋಸ್ಟೇಜು ಸಹಿತ ರೂ ೧—೮—೦. ರೈತರೇ, ಬೇಗ ತರಿಸಿ.

ವಿಳಾಸ —ದಿ ಮ್ಯಾನೇಜರ್, ೧೧೯, ಸಿವಿಲ್ ಲೈನ್ಸ್, ಪೂನ.

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

37



ಕೆಳಹೊಟ್ಟೆಯ ನೋವು, ವಾಂತಿಭೇದಿ (ಕಲರಾ), ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಬಾಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬನೊಬ್ಬ ಪ್ರಾರೀ ಡಾಕ್ಟರು ಹೇಳಿರುವದನ್ನು ಕೇಳಿ —"ಈ ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟದ ಔಷಧ, ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವಿಕೆ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ, ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ ; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಮಾರು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮುಳ್ಳುಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

೧೯೦೬ನೇ ವರುಷದ ರಾಯಲ್ ಡೈರಿಗಳು.

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚಿತ್ರಾಂಬಿಕೆ, ವಾರಶೂಲೆ, ಟಪಾಲಿನ ಮುಖ್ಯವಿಷಯಗಳು, ಸ್ಟ್ಯಾಂಪು ಆಕ್ಟು, ರಿಜಿಸ್ಟರ್ ಫೀ, ಕೋರ್ಟು ಫೀ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು ಮೆಜೆಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಬಡ್ಡಿ ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ ರಲ್ಲಿನ ಏಕಾದಶಿ, ಪೌರ್ಣಿಮೆ, ಅಮಾವಾಸ್ಯೆ, ಸಂಕ್ರಮಣ, ಗೌರೀಪಂಚಾಂಗ, ರೈಲ್ವೆ ಪಾರಸಲ್ ಛಾರ್ಜು, ಯದುವಂಶರತ್ನಾಕರ, ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ.

ನಂ॥ ೧	ದೊಡ್ಡ ಸೈಜು ರೂಲು ಹಾಕಿದ ಕ್ರಯ					೦—೮—೦
,, ೨	,,	,,	,,	ಪುಟ್ಟಗಳ ಇರತಕ್ಕದ್ದು		೦—೧೦—೦
,, ೩	ಚಿಕ್ಕ ,,	,,	,,	,,		೦—೬—೦
,, ೪	,,	,,	,,	,,	,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ವಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ದೊರೆಯುತ್ತೆ

ಬಿ ಬನಲ್ ಏಜನ್ಸಿ, ಮೈಸೂರು.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು

[ಸ್ಥಾಪಿತವಾದದ್ದು ೧೯೦೨ರಲ್ಲಿ]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಆದರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು

ಈ ಆಫೀಸಿನ (\) ತರಗತಿಗೆ ಸೇರಿದವರು ಪಡೆಯಬೇಕೆಂದು ಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆಯಾನಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೬ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಬಾಸ್ತ್ರರೀತಿಯಾಗಿ ನಡಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W. I. P. ರೇಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಾಣದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿವೆ. ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ —The Manager,
The India Agricultural and Helping Office,
Vengurla Post, Bombay Presidency

ವೃತ್ತಾಂತ ಪತ್ರಿಕೆ.

—.೦:—

ಸನ್ ೧೯೦೫ ನೇ ಇಸವಿ ಸೆಪ್ಟಂಬರ್ ತಾ॥ ೨೧ ನೇ ಗುರುವಾರ.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು.

ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಮೇಲ್ವಿಚಾರಕರಾಗಿರುವ ಇ. ಸ್ಪೆನ್ಸರ್ ಜೆನರಲ್ ಸಾಹೇಬರವರು ಕಳೆದ ೧೯೦೩—೦೪ನೆಯ ಸಂವತ್ಸರದ ರಿಪೋರ್ಟನ್ನು ಈಗತಾನೆ ಪ್ರಕಟಿಸಿದ್ದಾರೆ ಇದನ್ನು ಆರು ತಿಂಗಳ ಹಿಂದೆಯೇ ಹೊರಪಡಿಸಬೇಕಾಗಿದ್ದ ಈ ವರದಿಯನ್ನು ಇಷ್ಟು ಸಾವಕಾಶವಾಗಿ ಪ್ರಕಟಿಸಿರುವುದನ್ನು ನೋಡುವಲ್ಲಿ ನಾವು ಕೆಲವು ವಾರಗಳ ಕೆಳಗೆ ಸರ್ಕಾರಿ ರಿಪೋರ್ಟುಗಳ ವಿಷಯ ಹೇಳಿದುದನ್ನೇ ಈಗಲೂ ಹೇಳಬೇಕಾಯಿತು. ಅದೇನೆಂದರೆ—ಪ್ರಜಾಸಾಮಾನ್ಯಕ್ಕೆ ಸರ್ಕಾರದವರು ತಮ್ಮ ಆಳಿಕೆಯ ಮುಖ್ಯಾಂಶಗಳನ್ನು ತಿಳಿಯಪಡಿಸುವ ವಿಷಯದಲ್ಲಿ ಕಾಲಹರಣವನ್ನು ಮಾಡಿದರೆ ಅವರ ಆ ರಿಪೋರ್ಟುಗಳಿಂದ ಪ್ರಜಾನಿಕರಕ್ಕೆ ಉಂಟಾಗತಕ್ಕ ಪ್ರಯೋಜನವು ಕಡಮೆಯಾಗುವುದರಲ್ಲಿ ಸಂದೇಹವಿಲ್ಲ. ಪ್ರಕೃತದಲ್ಲಿ ಮೇಲ್ಕಂಡ ರಿಪೋರ್ಟನ್ನು ನೋಡುವಾಗ ೧೯೦೩ನೆಯ ಸಂವತ್ಸರದ ಅಂತ್ಯಭಾಗದಲ್ಲಿ ಸಂಸ್ಥಾನವು ಪ್ಲೇಗ್ ರೋಗದ ಹಾವಳಿಗೆ ವಶವರ್ತಿಯಾಗಿದ್ದುದರಿಂದ ವಿದ್ಯಾಭ್ಯಾಸಕ್ಕೆ ಅಭ್ಯಂತರವುಂಟಾಯಿತೆಂದು ತಿಳಿದುಬರುತ್ತದೆ. ಹಿಂದಿನ ವರ್ಷದಲ್ಲಿ ಓದಿದ ವಿದ್ಯಾರ್ಥಿಗಳ ಸಂಖ್ಯೆಗಿಂತ ಪ್ರಕೃತ ವರ್ಷದ ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಕಡಮೆಯಾಯಿತು. ಹೈಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ವಿದ್ಯಾಭ್ಯಾಸವು ಸಮರ್ಪಕವಾಗಿದ್ದಿತು. ಇದಲ್ಲದೆ ನಾರ್ಮಲ್ ಸ್ಕೂಲಿನಲ್ಲಿಯೂ ಕೈಗಾರಿಕೆಯೆಂಬ ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿಯೂ ನಡೆಸಿದ ವಿದ್ಯಾಭ್ಯಾಸವು ವೃದ್ಧಿಯನ್ನು ಹೊಂದಿತು. ಇದಂತಿರಲಿ ನಾವೀಗ ಮುಖ್ಯವಾಗಿ ವಾಚಕರ ಗಮನಕ್ಕೆ ತರತಕ್ಕ ವಿಶೇಷವೇನೆಂದರೆ ಸರ್ಕಾರದವರು ಪ್ರೈಮರಿ ಮತ್ತು ಗ್ರಾಮಾಂತರ ಪಾಠಶಾಲೆಗಳಲ್ಲಿ ಓದತಕ್ಕ ಮಕ್ಕಳ ವಿಷಯದಲ್ಲಿ ಮಾಡಿರುವ ಏರ್ಪಾಡು ಬಹು ಶ್ಲಾಘನೀಯವಾಗಿದೆ. ಇಂಥ ತರಗತಿಗಳಿರುವ ಪಾಠಶಾಲೆಗಳಲ್ಲಿ ಆ ಮಕ್ಕಳಿಂದ ಸ್ಕೂಲ್ ಫೀಯನ್ನು ತೆಗೆದುಕೊಳ್ಳದೆ ಉಚಿತವಾಗಿ ವಿದ್ಯೆಯನ್ನು ಹೇಳಿಕೊಡಬೇಕೆಂಬುದಾಗಿ ಸರ್ಕಾರದವರು ದಯಾಪೂರ್ವಕವಾಗಿ ಮಾಡಿರುವ ಕಟ್ಟಳೆಯು ಸಕಲಪ್ರಜೆಗಳ ಕೃತಜ್ಞತೆಯನ್ನು ವಹಿಸತಕ್ಕದಾಗಿದೆ. ಪ್ರೈಮರಿ ತರಗತಿಗಳಲ್ಲಿ ಓದುವವರಿಗೆ ಫೀಯನ್ನು ಮಾಫು ಮಾಡಿದ್ದಾಗ್ಯೂ ಅಪ್ಪರ್ ಪ್ರೈಮರಿ ಮತ್ತು ಮಿಡ್ಲ್ ತರಗತಿಗಳವರು ಫೀಯನ್ನು ಕೊಡಬೇಕೆಂದು ವಿಧಿಸಿದ್ದಾರೆ. ಮಿಡ್ಲ್ ಸ್ಕೂಲಿನವರ ಮತ್ತು ಹೈಸ್ಕೂಲಿನವರ ಫೀ ಮೊಬಲಗನ್ನು ಹೆಚ್ಚಿಸಿದ್ದಾರೆ. ಈ ಏರ್ಪಾಡು ಸಹ ವಿಹಿತವಾಗಿದೆ ವಿದ್ಯೆಯು ಮನುಷ್ಯರಿಗೆ ಅತ್ಯವಶ್ಯವಾದ ವಸ್ತುವಾಗಿದೆ ಗಾಳಿಯೂ ನೀರೂ ಇಲ್ಲದೆ ಹೇಗೆ ಬದುಕುವುದಕ್ಕಾಗುವುದಿಲ್ಲವೋ ಹಾಗೇ ವಿದ್ಯೆಯಿಲ್ಲದೆ ಮನುಷ್ಯರು ಮನುಷ್ಯರೆನಿಸಿಕೊಳ್ಳಲಾಗುವುದಿಲ್ಲ. ಹೀಗಿರುವದರಿಂದ ಗಾಳಿಯೂ ನೀರೂ ಉಚಿತವಾಗಿ ಲಭ್ಯವಾಗುವಂತೆ ಭಗವಂತನು ನಿರ್ಮಿಸಿರುವ ಪ್ರಕಾರವೇ ಸರ್ಕಾರದವರು ಲೋವರ್ ಪ್ರೈಮರಿ ಎಂಬ ಕನಿಷ್ಟವರ್ಗದಲ್ಲಿರುವ ಮಕ್ಕಳಿಗೆ ವಿದ್ಯೆಯೆಂಬುದು ಉಚಿತವಾಗಿ ದೊರಕುವಂತೆ ಮಾಡಿಕೊಟ್ಟಿರುವುದು ಮಹೋಪಕಾರವಾಗಿದೆ ಮಕ್ಕಳು ಪ್ರಾಯಸಮರ್ಥರಾದಾಗ ತಾವೇ ಸ್ವತಂತ್ರವಾಗಿ ಆಹಾರ ವಸ್ತುಗಳನ್ನು ಕೊಂಡುಕೊಳ್ಳುವಂತೆ ಮಿಡ್ಲ್ ಮತ್ತು ಹೈಸ್ಕೂಲಿನ ತರಗತಿಗಳವರು ತಮ್ಮ ವಿದ್ಯೆಯ ನಿಮಿತ್ತವಾಗಿ ದ್ರವ್ಯವನ್ನು ಫೀ ರೂಪದಲ್ಲಿ ವೆಚ್ಚ ಮಾಡುವುದು ನ್ಯಾಯವಾಗಿದೆ

ಸಂಸ್ಥಾನದಲ್ಲಿ ಓದತಕ್ಕವರ ಸಂಖ್ಯೆಯನ್ನು ನೋಡುವಲ್ಲಿ—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಪಾಠಶಾಲೆಗೆ ಹೋಗುವುದಕ್ಕೆ ಉಚಿತವಯಸ್ಕರಾದ ಪ್ರತಿ ೧೦೦ ಮಂದಿ ಹುಡುಗರೊಳಗೆ ೨೩ ಮಂದಿಯೂ ಕಡೂರು ಮೊದಲಾದ ದೂರ ಸ್ಥಳಗಳಲ್ಲಿ ೧೪ ಮಂದಿಯೂ ಮಾತ್ರ ಪಾಠಶಾಲೆಗೆ ಹೋಗುವವರಾಗಿದ್ದಾರೆಂದು ಗೊತ್ತಾಗುತ್ತದೆ. ಪಾಠಶಾಲೆಗಳಲ್ಲಿ ಓದುವ ಹುಡುಗಿಯರ ಲೆಕ್ಕವನ್ನು ನೋಡಿದರೆ ಒಟ್ಟು ಸಂಸ್ಥಾನಕ್ಕೆ ಪ್ರತಿಯೊಂದು ನೂರು ಮಂದಿಗೆ ಮೂರು ಮಂದಿ ಮಾತ್ರ ಓದುವ ಪಾಠಶಾಲೆಗಳಿಗೆ ಹೋಗುವವರಾಗಿದ್ದಾರೆ ಈ ಲೆಕ್ಕವನ್ನು ನೋಡುವಾಗ ಸರ್ಕಾರದವರು ಅಮೂಲ್ಯರತ್ನಪ್ರಾಯವಾದ ವಿದ್ಯೆಯನ್ನು ಸುಲಭಸಾಧ್ಯವಾಗಿ ಮಾಡಿಕೊಟ್ಟಿದ್ದರೂ ಅದನ್ನು ಸ್ವೀಕರಿಸುವುದರಲ್ಲಿ ಪ್ರಜೆಗಳು ತಮ್ಮ ತಾಮಸಭಾವವನ್ನು ವಹಿಸಿದ್ದಾರೆಂದು ನಾವು ವಿಷಾದಿಸಬೇಕಾಗಿದೆ. ಇಂಗ್ಲಾಂಡಿನ ಪ್ರೈಮರಿ ಪಾಠಶಾಲೆಗಳ ವಿದ್ಯಾರ್ಥಿಗಳಿಗೆ ವಿದ್ಯೆಯು ಉಚಿತಾರ್ಥವಾಗಿ ಕೊಡಲ್ಪಡಬೇಕೆಂದು ವಿಧಾಯಕ ಮಾಡಿರುವದಲ್ಲದೆ ಆ ತರಗತಿಯ ಪರಿಯಂತವಾದರೂ ಪ್ರತಿಯೊಂದು ಹುಡುಗನೂ ಓದಲೇ ಬೇಕೆಂದು ನಿಬಂಧವು ಉಂಟು ಇದೇ ಪ್ರಕಾರ ಬರೋಡಾ ಸಂಸ್ಥಾನದ ಮಹಾರಾಜರವರೂ ತಮ್ಮ ರಾಜ್ಯಕ್ಕೆ ಸೇರಿದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಪ್ರತಿಯೊಬ್ಬರೂ ಸ್ವಲ್ಪ ದೂರದ ವರೆಗೂ ವಿದ್ಯೆಯನ್ನು ಕಲಿತಿರಬೇಕೆಂದು ವಿಧಾಯಕಮಾಡಿದರು. ಇದಾಗಿ ಸ್ವಲ್ಪ ಕಾಲದಲ್ಲಿಯೇ ಸಫಲಾಂಶದಿಂದ ಬಹಳ ಪ್ರಯೋಜನವಾಯಿತೆಂದು ಕಂಡುಬಂದಿದೆ ಇಂಥ ಕಟ್ಟಳೆಯನ್ನೇ ನಮ್ಮ ಮೈಸೂರು ಸಂಸ್ಥಾನದಲ್ಲಿ ಸಹ ಶೀಘ್ರದಲ್ಲಿಯೇ ಸ್ಥಾಪಿಸುವರೆಂದು ನಾವು ಕೋರುತ್ತೇವೆ ವಿದ್ಯೆಯು ಉಚಿತವಾಗಿ ದೊರಕುವ ಕಾಲದಲ್ಲಿ ನಮ್ಮ ದೇಶೀಯರು ತಮ್ಮ ಮಕ್ಕಳನ್ನು ಮನೆಗಳಲ್ಲಿಯೇ ಇರಿಸಿಕೊಂಡಿರುವುದು ತುಂಬಾ ಅವಮಾನಕರವಾಗಿದೆ

ರಿಪೋರ್ಟಿನಲ್ಲಿ—ಗ್ರಾಮಾಂತರ ಪಾಠಶಾಲೆಗಳ ಉಪಾಧ್ಯಾಯರ ಸಂಬಳವನ್ನು ಹೆಚ್ಚು ಮಾಡುವುದಕ್ಕಿದ್ದಾರೆಂದು ತಿಳಿಸಿರುವ ಅಂಶವು ಬಹಳ ಸಂತೋಷಕರವಾದುದೇ. ಬೇಳಲಿಸ್ಸಿಕಸ್ನಲ್ಲಿ ಉಪಾಧ್ಯಾಯರನ್ನು ಸಮರ್ಪಕವಾದ ಬೋಧನಾಶಕ್ತಿಯುಳ್ಳವರನ್ನಾಗಿ ಮಾಡಬೇಕೆಂದು ನಾರ್ಮಲ್ ಸ್ಕೂಲುಗಳಲ್ಲಿ ಅವಶ್ಯಕವಾದ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಾ ಬಂದಿದ್ದಾರೆ. ಹೀಗಿರುವುದರಿಂದ ಸರ್ಕಾರದವರ ಉದ್ದೇಶವನ್ನು ಪ್ರಜೆಗಳೂ ಗ್ರಹಿಸಿ ಪಾಠಶಾಲೆಗಳಲ್ಲಿ ಓದುವ ಮಕ್ಕಳ ಸಂಖ್ಯೆಯು ಅಭಿವೃದ್ಧಿಯಾಗುವಂತೆ ಬಹಳ ಪ್ರಯಾಸ ಪಡತಕ್ಕದು ಎಂದು ನಾವು ಹೇಳಬೇಕಾದುದಿಲ್ಲವಷ್ಟೆ.

ಬಳದೇಶದ ವೃತ್ತಾಂತಗಳು.

ಪ್ರಿನ್ಸ್ ಆಫ್ ವೇಲ್ಸರವರ ಸ್ವಾಗತವನ್ನು ಬಹು ವಿಜೃಂಭಣದಿಂದಕ್ಕಾಗಿ ರಾಜಧಾನಿಯಲ್ಲಿ ಮಾಡಬೇಕಾದ ಏರ್ಪಾಡುಗಳ ವಿಷಯದಲ್ಲಿ ಕರ್ನಲ್ ಜೋನ್ಸ್‌ರವರೇ ಮೊಖ್ತೇಸರಾಗಿ ನಿಯಮಿಸಲ್ಪಟ್ಟಿರುತ್ತಾರೆ

****

ನಮ್ಮ ಸಂಸ್ಥಾನದಲ್ಲಿ ರಬ್ಬರ್ ಎಂಬ ವಸ್ತುವನ್ನು ಉತ್ಪತ್ತಿ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರದವರು ಮ॥ ಬಿಲ್ಕಿನ್ಸ್ ಸಾಹೇಬರವರಿಗೆ ೫೦ ವರ್ಷಗಳ ವರೆಗೂ ಕಂದಾಯವಿಲ್ಲದೆ ೫೦ ಎಕರೆ ಭೂಮಿಯನ್ನು ಬಿಟ್ಟುಕೊಟ್ಟಿದ್ದಾರೆ.

****

ಸ್ವಲ್ಪ ದಿನಗಳ ಕೆಳಗೆ ಕರ್ನಲ್ ಜೋನ್ಸ್‌ರವರು ಗವರ್ನಮೆಂಟ್ ಹೌಸನ್ನು ಇನ್ಸ್‌ಪೆಕ್ಷನ್ ಮಾಡಿದಾಗ ಕೆಲವು ಬದಲಾವಣೆಗಳನ್ನು ಮಾಡಲಾರಂಭಿಸಿ, ಇದಕ್ಕಾಗಿ ಸೂಪರಿಂಟೆಂಡಿಂಗ್ ಇಂಜಿನಿಯರ್ ರಾದ ಕ್ಯಾಪ್ಟನ್ ಟೈಲರ್‌ರವರನ್ನು ಕೆಲಸ ಪೂರ್ತಿ ಮಾಡುವುದಕ್ಕಾಗಿ ನಿಯಮಿಸಿರುತ್ತಾರೆ.

ಮೇಲೆ ಕಂಡ ಶ್ರೀಮಂತರವರ ಆಗಮನ ಕಾಲದಲ್ಲಿ ಉಪ ಹಾರಗಳಿಗಾಗಿ ಸುಮಾರು ನಲವತ್ತು ಸಾವಿರ ರೂಪಾಯಿಗಳ ಸಾ ಮಾನುಗಳನ್ನು ಹೊರಗಿನಿಂದ ತರಿಸುವಂತೆ ಗೊತ್ತು ಮಾಡಿದಾರೆ. ಆ ಕಾಲದಲ್ಲಿ ಬೇಕಾದ ಆಹಾರ ಪದಾರ್ಥಗಳನ್ನು ಸಿದ್ಧ ಮಾಡುವು ದಕ್ಕಾಗಿ ಮೆ॥ ಫಾರೆಟ್ ಮುಂತಾದವರಿಗೆ ಕಂಟ್ರಾಕ್ಟ್ ವಹಿಸಲ್ಪಟ್ಟಿದೆ

****

ಕೃಷ್ಣರಾಜ ಪೇಟೆ ತಾಲ್ಲೂಕಿನಲ್ಲಿರುವ ಹೇಮಾವತಿ ಗ್ರಾಮದ ಮಲ್ಲಯ್ಯನ ಮನೆಯಲ್ಲಿ ಒಂದು ಹಾರಿವಾಳವು ಎರಡು ತಲೆಯು ಳ್ಳ ಒಂದು ಮರಿಯನ್ನು ಹಾಕಿರುವದು. ತಲೆಯನ್ನು ಬಿಟ್ಟು ಮಿಕ್ಕ ವಿಷಯದಲ್ಲಿ ಇತರ ಹಾರಿವಾಳದ ಮರಿಗಳಂತೆ ಇದೆ. ತಾಯಿಯು ಮರಿಯ ಒಂದೇ ತಲೆಯ ಕೊಕ್ಕಿನ ಮುಖಾಂತರ ಗುಟುಕನ್ನು ಕೊಡುತ್ತದೆ. ಮರಿಯು ಇನ್ನೊಂದು ದಿವಸದಾಗಿ ಇರುತ್ತದೆ.

****

ಶ್ರೀಮಾನ್ ದಿವಾನ್ ಸಾಹೇಬರವರು ೧೩ ನೇ ಬುಧವಾರ ಬೆಳ ಗ್ಗೆ ೮ ಗಂಟೆ ಸುಮಾರಿನಲ್ಲಿ ಶೃಂಗೇರಿಗೆ ದಯಮಾಡಿಸುವದಕ್ಕೆ ಕುದುರೆ ಗಾಡಿಯನ್ನೇರಿ ಬಂಗ್ಲೆಯಿಂದ ಹೊರಟು ತಾಲ್ಲೋಕು ಕ ಚೇರಿಯ ಹತ್ತಿರ ಹೋಗುವದರಲ್ಲಿ ಗಾಡಿಯ ಚಕ್ರಗಳು ಹೂತು ಹೋಗಿ ಕುದುರೆಗಳು ಮುಗ್ಗರಿಸಿಹೋದವು ಅನಂತರ ೨೦—೩೦ ಜನಗಳಿಂದ ಗಾಡಿಯನ್ನು ನೂಕಿಸಿ ಕಚೇರಿಯ ಆಚೆಗೆ ಬಿಟ್ಟರು ಎಂದು ಒಬ್ಬ ಬಾತ್ಮೀದಾರರು ಕೊಪ್ಪದಿಂದ ಬರೆದಿದ್ದಾರೆ.

****

೧೩ ನೇ ತಾ॥ ಸಂಜೆ ಮಾಕಳಿ ಸ್ಟೇಷನ್ ಹತ್ತಿರ ಇಳಿಜಾರಿನಲ್ಲಿ ಜೋರಾಗಿ ಹೋಗುತ್ತಿದ್ದ ಗೂಡ್ಸ್ ಗಾಡಿಗೆ ಡ್ರೈವರ್ ಬ್ರೇಕ್ ಹಾ ಕಿದರೂ ನಿಲ್ಲದ ಕಾರಣ ಇಂಜನ್‌ಗೆ ಹಿಂದೆ ಇದ್ದ ಗಾಡಿಗೆ ಬ್ರೇಕ್ ಹಾಕುವದಕ್ಕೆ ಹೋಗಿ ಜಾರಿ ಬಿದ್ದು ರೈಲ್‌ಗೆ ಸಿಕ್ಕಿ ರಂಗಯ್ಯ ಎಂ ಬ ಡ್ರೈವರು ೧ ಗಂಟೆಯೊಳಗೆ ಸತ್ತನು ದೊಡ್ಡಬಳ್ಳಾಪುರದ ಡಾಕ್ಟ ರು ಹೋಗಿ ಎಷ್ಟು ಪ್ರಯಾಸಪಟ್ಟರೂ ಬದುಕಲಿಲ್ಲ. ಈತನು ಡ್ರೈವರುಗಳಲ್ಲಿ ಬಹು ಒಳ್ಳೆಯವನೆಂದು ಹೇಳುತ್ತಾರೆ.

****

ನಮ್ಮ ಮೈಸೂರಿನ ಅರಮನೆಯು ವಿಶೇಷವಾಗಿ ಕಲ್ಲು ಕಟ್ಟಡ ಗಳಿಂದಲೇ ಅತಿ ಬಂಧುರವಾಗಿಯೂ ಉನ್ನತವಾಗಿಯೂ ರಮ ಣೀಯವಾಗಿಯೂ ಕಟ್ಟಲ್ಪಡುತ್ತಿರುವದು ಸರಿಯಷ್ಟೆ. ಇದರ ದೃಷ್ಟಿ ದೋಷಪರಿಹಾರಕ್ಕಾಗಿ ನರಬಲಿಯನ್ನು ಕೊಡುತ್ತಾರೆಂಬ ಪ್ರವಾ ದವು ಹೇಗೋ ಹುಟ್ಟಿ ಕೆಲವು ಹುಡುಗರು ಸ್ಕೂಲಿಗೆ ಹೋಗುವದಿಲ್ಲ ದೇ ಕೆಲವರು ಐದು ಗಂಟೆಯ ಮೇಲೆ ಹೊರಗೆ ಹೋಗುವದಿ ಕ್ಕೂ ಹೆದರುತ್ತಿರುವರಂತೆ. ಇಂಥ ನವನಾಗರೀಕ ಕಾಲದ ಲ್ಲೂ ಹೀಗೆ ಸುಳ್ಳು ಸುದ್ದಿಯು ಹುಟ್ಟಿ ಪ್ರಚಾರವಾಗಿ ಬಯಗೊ ಳಿಸುತ್ತಿರುವದಕ್ಕಾಗಿ ವ್ಯಸನಪಡಬೇಕಾಗಿದೆ

****

ಶ್ರೀರಂಗಪಟ್ಟಣದ ತಾ॥ ಬೆಳಗೊಳ ಗ್ರಾಮದ "ಶ್ರೀನಿವಾಸ ಸ್ವಾಮಿ" ಬಸವೇಗೌಡ ಗುರುಪುತ್ರ ಎಂಬವರು ಬರೆವು ದೇನೆಂದರೆ—"ನಾನು ಗುರು ಸೇವೆಮಾಡಿ ೬ ವರ್ಷಗ ಳಿಂದಲೂ ಸರ್ವಸಂಗಪರಿತ್ಯಾಗದಿಂದ ಒಬ್ಬರಿಗೂ ಯಾವ ತೊಂದ ರೆಯೂ ಉಂಟಾಗದಂತೆ ಮನೆಯೊಳಗೆ ಇರುವಲ್ಲಿ ೧೯೦೫ ನೇ ಏ ಪ್ರಿಲ್‌ನಲ್ಲಿ ಪಟೇಲನು ಗ್ರಾಮದ ಗಸ್ತಿಗೆ ಬರಬೇಕೆಂದು ನಿರ್ಬಂಧ ಪಡಿಸಿದನು. ನಾನು ಶರೀರದ ಅಶಕ್ತಿಯಿಂದಲೂ ತಪಸ್ಸಿನ ಭಯದಿಂದಲೂ ಪಟೇಲನ ಮಾತನ್ನು ತಿರಸ್ಕರಿಸಿದೆನು. ಮತ್ತು ಈ ಗ್ರಾಮದಲ್ಲಿ ಗಸ್ತು ಮಾಡುವ ಪದ್ಧತಿಯಿಲ್ಲ ಆದ್ದರಿಂ ದಲೇ ತಿರಸ್ಕರಿಸಲು ಕಾರಣವಾಯಿತು. ನಂತರ ಪಟೇಲನು ಮೇಲ್ಪಟ್ಟ ಆಫೀಸರಿಗೆ ತಿಳಿಸಿದ್ದರಿಂದ ತಾ॥ ಅಮಲ್ದಾರರು ಎಂಟಾಣೆ ಜುಲ್ಮಾನೆ ವಿಧಿಸಿದರು. ಸಾಧುಗಳಿಗೆ ತೊಂದರೆ ಕೊಟ್ಟು ಅವ ರಿಂದ ವಸೂಲ್ಮಾಡಲ್ಪಟ್ಟ ಧನವು ರಾಜನ ಭಂಡಾರಕ್ಕೆ ಸೇರಿದರೆ ರಾಜ್ಯಕ್ಕೆ ಹಾನಿ ಬರುತ್ತೆ!"

ಮೈಸೂರು ಗೆಜೆಟ್ ಸಂಗ್ರಹ.

'ಸಬ್ ಪ್ರೊಟೆಂ ಅಮಲ್ದಾರ್' ಮೆ॥ ಎಚ್. ಕೇಶವಾಚಾರ್ಯರಿಗೆ ೬ ತಿಂಗಳು ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ. ಅನಂತರ ಅವರು ಕೆ ಲಸದಿಂದ ನಿವೃತ್ತರಾಗಿ ಪೆನ್ಷನ್ ಪಡೆಯತಕ್ಕವರು.

ಗೌರ್ನ್ಮೆಂಟ್ ಅಡ್ವೋಕೇಟ್ ಮೆ॥ ರಾಮಸ್ವಾಮಯ್ಯನವರು ಡಿಸ್ಚಾರ್ಜ್ ಹೊಂದಿದುದರಿಂದ ಮೆ॥ ಅಡ್ವೋಕೇಟ್ ಎಸ್. ನಾರಾಯಣರಾ ಯರನ್ನು ಅವರಿಗೆ ಬದಲಾಗಿ ನೇಮಿಸಿದೆ.

ರೆವಿನ್ಯೂ ಮತ್ತು ಜನರಲ್ ಡಿಪಾರ್ಟ್‌ಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಮೆ॥ ಎಂ ಶಾಮರಾವ್ ಎಂ ಎ. ಯವರನ್ನು ಕೋಆಪರೇಟೀವ್ ಸಂಘಗಳ ರಿಜಿಸ್ಟ್ರಾರನ್ನಾಗಿ ನೇಮಿಸಿದೆ.

ತುಮಕೂರ್ ಡಿಸ್ಟ್ರಿಕ್ಟ್ ಟ್ರೆಜರಿ ಕೆಲಸವನ್ನು ನೋಡುತ್ತಿರುವ ಮೆ॥ ರಾಯಲು ಚಟ್ಟಿಯವರನ್ನು ೩ ನೇ ಕ್ಲಾಸ್ ಮೇಜಿಸ್ಟ್ರೇಟರ ನ್ನಾಗಿ ನೇಮಿಸಿದೆ.

೩ನೇ ಕ್ಲಾಸ್ ಅಸಿಸ್ಟೆಂಟ್ ಸರ್ಜನ್‌ರಾದ ಮೆ॥ ಎಸ್. ರಂಗ ಸ್ವಾಮಿಯವರನ್ನು ೨ನೇ ಕ್ಲಾಸಿಗೂ ೨ನೇ ಕ್ಲಾಸಿನವರಾದ ಮಿಸ್ ಹಾಜ್ ಎಂಬವರನ್ನು ಮೊದಲನೇ ಕ್ಲಾಸಿಗೂ ಬಡ್ತಿ ಮಾಡಿದೆ

ಫಸ್ಟ್ ಕ್ಲಾಸ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆ॥ ಬಿ. ಹೇ ಸ್ಟಿಂಗ್‌ಯವರನ್ನು ೩ನೇ ಕ್ಲಾಸ್ ಡೆಪ್ಯುಟಿ ಕನ್ಸರ್ವೇಟರ ಪ ದವಿಗೆ ಪ್ರಮೋಷನ್ ಮಾಡಿದೆ.

ಇಂಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವಂತೆ ಬಡ್ತಿ ಕೊಡಲ್ಪಟ್ಟಿದೆ —

ಮೆ॥ ಗಳಾದ ಎಚ್. ವೀರ್ ಮತ್ತು ಬರ್‌ಯವರು ೨ನೇ ಕ್ಲಾಸ್ ಸೂಪರ್ವೈಸರ್ ಆಗಿಯೂ, ಮೆ॥ ಸಿ ರಾಮಕೃಷ್ಣಯ್ಯನ ವರು ೩ನೇ ಕ್ಲಾಸ್ ಸೂಪರ್ವೈಸರಾಗಿಯೂ, ಮೆ॥ ಹೆ. ಎಲಿಸ್ ೩ನೇ ಕ್ಲಾಸ್ ಓವರ್ಸಿಯರಾಗಿಯೂ, ಮೆ॥ ಎಲ್. ನರಸಿಂಹೈ ಯ್ಯಂಗಾರ್‌ರನ್ನು ೨ನೇ ಕ್ಲಾಸ್ ಓವರ್ಸಿಯರಾಗಿಯೂ, ಮೆ॥ ಕೃಷ್ಣವೇಲ್‌ರವರನ್ನು ೧ನೇ ಕ್ಲಾಸ್ ಸಬ್ ಅ॥ ಇಂಜನೀಯರಾ ಗಿಯೂ ಬಡ್ತಿ ಕೊಡಲ್ಪಟ್ಟಿದಾರೆ.

ಬಂಗಾಳ ಪ್ರಾಂತ್ಯ ವಿಭಾಗವು—ಸ್ವದೇಶೀ ಆಂದೋಲನೆ.

[ನಮ್ಮ ಇಂಡಿಯಾ ಸರ್ಕಾರದವರು ಬಂಗಾಳ ಪ್ರಾಂತ್ಯವನ್ನು ಎರಡು ವಿಭಾಗವಾಡಿ ಲೆಫ್ಟಿನೆಂಟ್ ಗವರ್ನರುಗಳ ಕೈಕೆಳಗೆ ಇರಿಸು ವದಾಗಿ ಉದ್ದೇಶಿಸಿ ಹಾಗೆಯೇ ನಡಸಿದರಷ್ಟೆ. ಈ ವಿಷಯದಲ್ಲಿ ಆ ದೇಶವಾಸಿಗಳು ಅತ್ಯಂತ ಅತೃಪ್ತಿಪಟ್ಟು ಇಂಗ್ಲಿಷಿನವರು ತಯಾ ರ್ಮಾಡಿದ ಬಟ್ಟೆ ಸಿಗರೆಟ್ ಮುಂತಾದ ಪದಾರ್ಥಗಳನ್ನು ಉಪಯೋ ಗಿಸಲೆ ಬಾರದೆಂದು ನಿಷ್ಕರ್ಷಿಸಿಕೊಂಡು ಸರ್ಕಾರದವರ ಮೇಲೆ ಪ್ರ ತೀಕಾರವನ್ನು ಮಾಡಲೆತ್ನಿಸಿರುವ ಭಾಗವು ವಾಚಕರಿಗೆ ತಿಳಿದಿರಬ ಹುದು. ಈ ವಿಷಯವು ನಮ್ಮ ದೇಶೀಯರಲ್ಲಿ ಹೇಗೆ ಪರಿಣಮಿಸಿದೆ ಯೆಂಬುದನ್ನು ಕುರಿತು ಕೆಲವು ಅಂಶಗಳನ್ನು ಇಲ್ಲಿ ಸೂಚಿಸುವೆವು. ಎಡಿ]

ಬಾರಿ ಸಾಲಿನಲ್ಲಿ ೧೦,೦೦೦ ಮಂದಿ ಗುಂಪಾಗಿ ಕೂಡಿ ಬರಿ ಯ ಕಾಲಿನಲ್ಲೇ ಬೀದಿ ಬೀದಿಗಳಲ್ಲಿ ದುಃಖಸೂಚಕವಾಗಿ ಕಪ್ಪು ಬಣ್ಣದ ಧ್ವಜಗಳನ್ನು ಹಿಡಿದು ನಡೆದರು. ಒಂದು ವರ್ಷದ ವರೆಗೂ ಯಾವ ಉತ್ಸವಾದಿಗಳನ್ನು ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಕೊಳ್ಳುವಂತೆ ಬಂಗಾಳ ದೇಶೀಯರನ್ನು ಪ್ರೇರಿಸಬೇಕೆಂದು ಈ ಊರಿನವರು ಒಬ್ಬ ಪ್ರತಿನಿಧಿಯನ್ನು ಕಳುಹಿಸುವುದಕ್ಕಿದ್ದಾರೆ ಬಾ ಕರಗಂಜಿನಲ್ಲಿ ಪಾಠಶಾಲಾ ವಿದ್ಯಾರ್ಥಿಗಳೆಲ್ಲರೂ ಒಟ್ಟಾಗಿ ಒಂದು ವಾರದ ವರೆಗೂ ಕಾಲಿಗೆ ಜೋಡು ಮೆಟ್ಟಿಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡಿಕೊಂಡರು.

* * *

ವಿದ್ಯಾರ್ಥಿಗಳ ಪ್ರತಿಭಟನವಿಕೆಯು ಕಲ್ಕತ್ತಾ ಪಟ್ಟಣದಲ್ಲಿ ಯೇ ಅತಿ ವಿಶೇಷವಾಗಿರುವುದು. ದೃಢಕಾಯರಾದ ವಿದ್ಯಾರ್ಥಿಗ ಳು ಇಂಗ್ಲಿಷ್ ವರ್ತಕರ ಅಂಗಡಿಗಳ ಬಳಿಯಲ್ಲಿ ನಿಂತು ಅಲ್ಲಿಗೆ ಬರತಕ್ಕವರನ್ನು ಹೆದರಿಸಿ ಓಡಿಸುವವರಾಗಿದ್ದಾರೆ

* * *

ಒಂದಾನೊಂದು ಪ್ರಸಿದ್ಧವಾದ ಕಾಲೇಜಿನ ಹೆಡ್ಮಾಸ್ಟರು ಪತ್ನಿ ಯೊಡನೆ ಗಾಡಿಯಲ್ಲಿ ಕುಳಿತು ಹೋಗುತ್ತಿರುವಾಗ ಅಕಸ್ಮಾತ್ತಾ ಗಿ ಗಾಡಿಯವನು ನಿಲ್ಲಿಸಲು ಇದಕ್ಕೆ ಕಾರಣವೇನೆಂದು ಆಕೆಯು ಕಿಟಕಿಯಿಂದ ಇಣಕಿ ನೋಡಲಾಗಿ ಆ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕೆಲವು ಮಂದಿ ಗಾಡಿಯ ಎದುರಿಗೆ ರಸ್ತೆಯಲ್ಲಿ ಅಡ್ಡವಾಗಿ ಬಿದ್ದು ಕೊಂಡಿದ್ದರು ಆಕೆಯು ಇದರ ಅಭಿಪ್ರಾಯವನ್ನು ತಿಳಿದು ತಾನು ಇಂಗ್ಲಿಷ್ ಷಾಪಿನಿಂದ ಕೊಂಡು ತಂದಿದ್ದ ಕೆಲವು ರೇಷ್ಮೆ ಬಟ್ಟೆಗಳ ನ್ನು ಅವರ ವಶಕ್ಕೆ ಕೊಟ್ಟಳು. ಅವರು ಅದನ್ನು ತೆಗೆದುಕೊಂಡು ಅಲ್ಲೆ ಸುಟ್ಟು ಹಾಕಿದರು.

* * *

ಕೆಲವು ದೇಶೀಯ ವರ್ತಕರು ಇಂಗ್ಲಾಂಡಿಗೆ ಬಂದು ಸೇರ ಬೇಕಾಗಿದ್ದ ಅಕ್ಕಿಯನ್ನು ಹಡಗು ರಫ್ತು ಮಾಡುವುದಿಲ್ಲವೆಂದು ನಿರ್ಧರಿಸಿ ಕೊಳ್ಳಲು ಅಕ್ಕಿಯ ಧಾರಣೆಯು ಬಹಳ ಕಡಮೆಯಾಯಿತು. ಒ ಬ್ಬನೊಬ್ಬ ವರ್ತಕನು ಇದೇ ಒಳ್ಳೇ ಸಮಯವೆಂದರಿತು ಒಳದೇ ಶದ ಇಂಗ್ಲಿಷ್ ವರ್ತಕರಿಗೆ ರೂ ೮೪,೦೦ ಬೆಲೆಯಷ್ಟು ಅಕ್ಕಿಯ ನ್ನು ಗುಪ್ತವಾಗಿ ವಿಕ್ರಯಿಸಿದನು. ಇವನಿಗೆ ತಕ್ಕ ಪ್ರತೀಕಾರವ ನ್ನು ಮಾಡುವುದಾಗಿ ದೇಶಾಭಿಮಾನಿಗಳು ನಿಶ್ಚಯಿಸಿಕೊಂಡಿದ್ದಾರೆ. ಬೇರೊಬ್ಬ ಬಂಗಾಳೀ ವರ್ತಕನು ಇಂಗ್ಲಾಂಡಿನಲ್ಲಿ ತಯಾರಾದ ಬ ಟ್ಟೆಗಳ ಮೇಲೆ ಬೊಂಬಾಯಿನ ಮಗ್ಗಗಳ ಮುದ್ರೆಯನ್ನು ಒತ್ತಿ ಮಾರುತ್ತಿರುವನಂತೆ! ಇವನ ಕೃತ್ರಿಮವು ಇನ್ನೂ ಹೊರಗಾಗಿಲ್ಲ

* * *

ಒಳದೇಶದಲ್ಲಿ ತಯಾರಾದ ಪದಾರ್ಥಗಳನ್ನೇ ಮಾರುವ ಅಂಗ ಡಿಗಳು ಎಲ್ಲಿ ನೋಡಿದರೂ ಹುಟ್ಟಿವೆ ಒಬ್ಬ ಅಂಗಡಿಯವನು— "ಜರ್ಮನಿಯಲ್ಲಿ ನಮ್ಮ ಸ್ವಂತ ಕಾರ್ಖಾನೆಯಲ್ಲಿ ತಯಾರಾದ ವ ಸ್ತುಗಳನ್ನು ತೆಗೆದುಕೊಳ್ಳಿ!" ಎಂದು ನೋಟೀಸನ್ನು ಹಚ್ಚಿರುವ ನು ಬಂಗಾಳದ ಗ್ರಾಮಾಂತರಗಳಲ್ಲಿ ಮಾತ್ರವೇ ತಯಾರಾದ ಪಂ ಚೆಗಳು ಲಕ್ಷ ಸಂಖ್ಯೆಯಾಗಿ ಕಲ್ಕತ್ತೆಯೊಳಗೆ ಬಂದು ಬೀಳುತ್ತಲಿವೆ. ಬೊಂಬಾಯಿ ಪಟ್ಟಣವೊಂದರಲ್ಲೆ ತಯಾರಾದ ಪಂಚೆಗಳು ೩ ಲಕ್ಷ ಜೊತೆಗಳು ಕಲ್ಕತ್ತಾ ಪಟ್ಟಣಕ್ಕೆ ತರಿಸಲ್ಪಟ್ಟವಂತೆ!

* * *

ಚಾಂದ್ನಿಯೆಂಬ ಬೀದಿಯಲ್ಲಿರುವ ಜೋಡಿನ ಅಂಗಡಿಗಳಲ್ಲಿ ವ್ಯಾಪಾರವೇ ಇಲ್ಲ. ಬೈಸಿಕಲುಗಳನ್ನು ಉಪಯೋಗಿಸುವವರು ಜರ್ಮನಿ ದೇಶದ ರಬ್ಬರ್‌ಟೈರುಗಳನ್ನು ತೆಗೆದುಕೊಳ್ಳುತ್ತಾರೆ. ಈ ಸಾರಿ ಯೂನಿವರ್ಸಿಟಿ ಪರೀಕ್ಷೆಗಳಿಗೆ ಅನೇಕರು ಹೋಗುವದಿ ಲ್ಲವೆಂದು ನಿರ್ಣಯಿಸಿಕೊಂಡಿದ್ದಾರೆ. ಮತ್ತೆ ಕೆಲವರು ಒಂದು ವರ್ಷದ ರಜಾ ಪಡೆದು ಜಪಾನಿಗೆ ಹೋಗಿ "ಜಿಯೂಜಿತ್ಸು" ಎಂಬ ಸಾಧನೆಯನ್ನು ಕಲಿತು ಬರುವುದಾಗಿ ಆಲೋಚಿಸಿದ್ದಾರೆ.

* * *

ಪ್ರತಿ ಸಾಯಂಕಾಲದಲ್ಲಿಯೂ ಪಟ್ಟಣದ ಚೌಕಗಳಲ್ಲಿಯೂ ಆಟದ ಮೈದಾನಗಳಲ್ಲಿಯೂ ವಿದ್ಯಾರ್ಥಿಗಳೂ ಬಾಯರುಗಳೂ ಪ ತ್ರಿಕರ್ತರೂ ಆಪಾರವಾಗಿ ಗುಂಪು ಕೂಡಿ ದೇಶೀಯ ಪದಾರ್ಥಗಳ ನ್ನೇ ಪ್ರಜೆಗಳೆಲ್ಲರೂ ಕೊಂಡುಕೊಳ್ಳುವಂತೆ ಪ್ರೇರಿಸತಕ್ಕ ಉಪ ನ್ಯಾಸಗಳನ್ನು ಮಾಡುವವರಾಗಿದ್ದಾರೆ.

* * *

— ಸರ್ಕಾರಿ ಮುಂತಾದ ಆಫೀಸುಗಳಲ್ಲಿ ಉದ್ಯೋಗ ಮಾಡುತಲಿ ರುವ ರೈಟರ್‌ಗಳಲ್ಲಿ ಸುಮಾರು ೨೦೦೦ ಮಂದಿ ಬಂಗಾಳಿಗಳು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುವವರಾಗಿದ್ದಾರೆಂದು ತಿಳಿದು ಬರುತ್ತದೆ ಇವರಲ್ಲಿ ೩೦೦ ಜನರು ಕೆಲಸವನ್ನು ಬಿಡಲಾಗಿ ಅವರ ಸಹಾಯಾರ್ಥವಾಗಿ ಒಬ್ಬ ಪತ್ರಿಕರ್ತರು ಚಂದಾವಸೂಲ್ಮಾಡುತ್ತಾ ರಂತೆ. ಈ ಚಂದಾಪಟ್ಟಿಗೆ ಒಬ್ಬ ಮನುಷ್ಯನು ರೂ॥ ೬,೦೦೦ ನ್ನು ಕೊಟ್ಟನಂತೆ.

ವಿದೇಶ ವರ್ತಮಾನಗಳು.

ಜರ್ಮನಿಗೆ ಸೇರಿದ—ಒಂದು ಕ್ರೂಸರ್ ಹಡಗು ಸಿಂಗಪೂರನ್ನು ಬಿಟ್ಟು ಕೊಲಂಬೊವಿಗೆ ಹೊರಟು ಹತ್ತು ಮೈಲು ದೂರ ಹೋ ಗುವುದರೊಳಗಾಗಿ ಬಂಡೆಗಳಿಗೆ ತಾಕಿತೆಂದು ವರ್ತಮಾನವು ಬಂ ದಿದೆ

****

ವಿಲಾಯಿತಿಯ ಮಹಾರಾಣಿಯವರಾಗಿರುವ ಅಲೆಕ್ಸಾಂಡ್ರಾ ಅ ವರ್ಮನವರ ಪ್ರತಿಮೆಯೊಂದನ್ನು ಹಾಂಗ್‌ಕಾಂಗ್ ಸರ್ಕಾರದವರು ಮೆ॥ ವೇಡ್ ಎಂಬ ಶಿಲ್ಪಿಗೆ ಹೇಳಿ ಮಾಡಿಸುವವರಾಗಿದ್ದಾರೆ ಇವರ ಪ್ರತಿಮೆಯನ್ನು ಮಾಡಿಸಿದುದು ಇದೇ ಮೊದಲನೇ ಸಾರಿಯೆಂದು ತಿಳಿದು ಬರುತ್ತದೆ.

****

ಸೊಮಾರಿಲ್ಯಾಂಡಿನ ಮುಲ್ಲನು ಇಟಲಿ ದೇಶದ ಕಮಿಷನರಿಗೆ ಕೊಟ್ಟಿದ್ದ ಮಾತನ್ನು ನಡಿಸದೆ ಹೋದಕಾರಣ ಅವನ ಮೇಲೆ ಕಾ ರ್ಯಭಾಗ ನಡಸುವದಕ್ಕಾಗಿ ಗ್ರೇಟ್ ಬ್ರಿಟನಿನವರೂ ಇಟಲಿ ಸ ವರೂ ಒಂದು ಕೌಲನ್ನು ಮಾಡಿಕೊಂಡಿದ್ದಾರೆಂದು ರೋಮ್ ನಗ ರದ ಒಂದು ಪತ್ರಿಕೆಯು ಹೇಳುತ್ತಿದೆ

****

ಲಂಡನ್ ನಗರದಲ್ಲಿ ಮರಣಸಂಖ್ಯೆಯು ಬಹಳ ಕಡಮೆಯಾಗಿ ರುವುದನ್ನು ನೋಡಿ ಅಮೇರಿಕದ ನಿವಾಸಿಗಳು ದೇಹಾರೋಗ್ಯ ಕ್ಕಾಗಿ ಆ ಪಟ್ಟಣಕ್ಕೆ ಹೋಗಿ ಕೆಲವು ಕಾಲವನ್ನು ಕಳೆಯುವುದಕ್ಕೆ ಅಪೇಕ್ಷಿಸುವರು. ಇಂಥವರ ಸೌಲಭ್ಯಕ್ಕಾಗಿ ಅಮೇರಿಕದ ಕಂಪೆನಿ ಯವರು ಏರ್ಪಾಡುಗಳನ್ನು ಮಾಡಬೇಕೆಂದಿರುವರು

****

ರಷ್ಯ ರಾಜ್ಯಕ್ಕೆ ಸೇರಿದ ನೌಕಾಸೈನ್ಯದಲ್ಲಿ ಒಂದು ನಾವೆಯ ಲ್ಲಿ ದಂಗೆಕೋರರಾದವರನ್ನು ಸರ್ಕಾರದವರು ನ್ಯಾಯವಿಚಾರಣೆ ಮಾಡಿ ಮೂರು ಮಂದಿಗೆ ಮರಣದಂಡನೆಯನ್ನು ೧೯ ಮಂದಿಗೆ ಮರಣಾವಧಿ ಕಾಪು ಸಜಾವನ್ನೂ ೩೩ ಮಂದಿಗೆ ಸಾಧಾರಣ ಶಿಕ್ಷೆ ಯನ್ನೂ ವಿಧಿಸಿ ೨೦ ಮಂದಿಯನ್ನು ಖುಲಾಸ ಮಾಡಿದರು.

****

ಅಮೇರಿಕ ಸಂಸ್ಥಾನಕ್ಕೆ ಸೇರಿದ ೩೬ ಡಿಸ್ಟ್ರಿಕ್ಟ್‌ಗಳಲ್ಲಿ ೧೪,೧೫,೧೬,೧೭, ೧೮ ವರ್ಷ ವಯಸ್ಸಿನೊಳಗಿರುವ ಹುಡುಗರು ಹೊಗೆಬತ್ತಿಯನ್ನು ಸೇದಕೂಡದೆಂದು ಕಾನೂನ್ ಮಾಡಿದಾರೆ. ಇನ್ನು ಹತ್ತು ಡಿಸ್ಟ್ರಿಕ್ಟ್‌ಗಳಲ್ಲಿ ೨೧ ವರ್ಷದೊಳಗಿರುವವರ್‍ಯಾರೂ ಚುಟ್ಟಾ ಮುಂತಾದ್ದನ್ನು ಸೇದಕೂಡದೆಂದು ವಿಧಿಸಲ್ಪಟ್ಟಿದೆ. ಉಳಿ ದ ೩೪ ಡಿಸ್ಟ್ರಿಕ್ಟ್‌ಗಳಲ್ಲಿ ಬಾಲಕರಿಗೆ ಹೊಗೆಸೊಪ್ಪಿನ ಉಪಯೋ ಗದಿಂದುಂಟಾಗುವ ಅನರ್ಥಗಳನ್ನು ವಿವರಿಸಿ ತಿಳಿಸುವಂತೆ ಏರ್ಪಾ ಡು ಮಾಡಿದಾರೆ.

****

ರಷ್ಯಾ ರಾಜ್ಯದಲ್ಲಿ ಪ್ರಾಯಶಃ ಗಲಭೆಯೂ ಬಲಾತ್ಕಾರಗಳೂ ನಡೆಯುತ್ತಿರುವದರಿಂದ ಅಲ್ಲಿನ ವಿದ್ಯಮಾನವು ಬಹು ಶೋಚನೀ ಯವಾಗಿದೆಯೆಂದು ಹೇಳಬೇಕಾದುದಿಲ್ಲವಷ್ಟೆ ಆದರೆ ಪ್ರಾಚ್ಯದೇಶ ದಿಂದ ಸಾಯುತ್ತ ಧಿಕ್ಕಾರವಾದಿರುವ ದಂಗೆಕೋರರಾದ ರೈತಾ ಬಿ ಜನಗಳು ಸರ್ಕಾರಕ್ಕೆ ಸೇರಿದ ೨೦ ಮ್ಯುನಿಸಿಪಲ್ ಕಟ್ಟಡಗ ಳನ್ನೂ ಕಾಗದಪತ್ರಗಳನ್ನೂ ನಾಶಮಾಡಿ ಖಜಾನೆಯನ್ನು ಲೂಟಿ ಮಾಡುವವರಾಗಿದ್ದಾಗ್ಯೂ ಅನಾಥರಾದವರಿಗಾಗಿ ಸರ್ಕಾರದಲ್ಲಿ ತೆಗೆ ದಿರಿಸಿದ ಹಣವನ್ನು ಮಾತ್ರ ಅವರು ಮುಟ್ಟುತ್ತಿರಲಿಲ್ಲವೆಂದು ತಿಳಿ ದುಬರುತ್ತದೆ!

****

ಪೋರ್ಚುಗೀಸರಿಗೆ ಸೇರಿದ ಆಫ್ರಿಕಾ ವಿಭಾಗದಲ್ಲಿ ಕಾರ್ಹಾವಾ ಎಂಬ ಸ್ವದೇಶೀಯ ಪ್ರಜೆಗಳು ಸುಮಾರು ೬,೦೦೦ ಮಂದಿ ದಂಗೆ ಯೆದ್ದು, ಕಾವೋಂಡಾ ಡಿಸ್ಟ್ರಿಕ್ಟಿನ ಅನೇಕ ಗ್ರಾಮಗಳ ಮೇಲೆ ನುಗ್ಗಿಹೋಗಿ, ನಿಷ್ಕಾರಣವಾಗಿ ಅನೇಕ ಪ್ರಜೆಗಳನ್ನು ಕೊಂದು ಹಾಕಿ, ಸಿಕ್ಕಿದ ಮನೆಮಠಗಳನ್ನೂ ಬಂಗಲೆ ಗ್ರಾಮಗಳನ್ನೂ ಹಾಳು ಮಾಡಿದರು ಮೂವರು ಫ್ರೆಂಚ್ ಪಾದ್ರಿಗಳನ್ನೂ ಅವರು ಎತ್ತಿಕೊಂ ಡು ಹೋಗಿದ್ದರು. ಇವರು ಈಚೆಗೆ ತಪ್ಪಿಸಿಕೊಂಡು ಬಂದಿದಾರೆ. ಪೋರ್ಚುಗೀಸ್ ಸರ್ಕಾರದವರು ಆ ದಂಗೆಯನ್ನು ಅಡಗಿಸುವ ದಕ್ಕೆ ಸೈನ್ಯ ಮುಂತಾದ್ದನ್ನು ಅಲ್ಲಿಗೆ ಕಳುಹಿಸುತ್ತಿದಾರೆ.

****

ಅಫ್ರಿಕದ ಕೊಂಗೊ ಎಂಬ ಪ್ರದೇಶದಲ್ಲಿ ಯೂರೋಪಿಗೆ ಸೇರಿದ ಒಂದು ರಾಜ್ಯದವರು ಸ್ಥಾಪಿಸಿಕೊಂಡಿರುವ ಆಧಿಪತ್ಯದಲ್ಲಿ ಅವರ ಅಧಿಕಾರಿಗಳು ನಡೆಸುತ್ತಿರುವ ಬಲಾತ್ಕಾರಗಳನ್ನು ಕುರಿತು ಅದೇ ಪ್ರಾಂತ್ಯದಲ್ಲಿ ಮತ ಪ್ರಸಾರಕ ಕಾರ್ಯವನ್ನು ಮಾಡುತ್ತಿ ರುವ ಒಬ್ಬ ಪಾದ್ರಿಯು ಇಂಗ್ಲಾಂಡಿನಲ್ಲಿ ತಿಳಿಯಪಡಿಸಿದನು. ಅದೇ ನು ಹೇಳುವದೇನೆಂದರೆ—ಆ ಆಧಿಪತ್ಯಕ್ಕೆ ಸಮೀಪದಲ್ಲಿರುವ ಪಿ ಕೋಟ ಎಂಬ ಜನಗಳು ರಬ್ಬರೆಂಬ ವಸ್ತುವನ್ನು ತಂದುಕೊಡದೆ ಹೋದಕಾರಣ ಅವರ ಮೇಲೆ ಸರ್ಕಾರದವರು ಜನನ್ನೊಪ್ಪಿಯೊಂದು ಏಜೆಂಟನೊಂದಿಗೆ ಕೆಲವು ಮಂದಿಯನ್ನು ಕಳುಹಿಸಿದರು. ಇವರ ಲ್ಲಿ ಕೆಲವರು ತುಪಾಕಿಗಳನ್ನು ತಂದಿದ್ದರು. ಇವರಿಗೆ ಸಹಾಯ ವಾಗಿ ಹೋಗಿದ್ದ ಸಂಬಾ ಎಂಬ ಪ್ರಾಂತ್ಯದವರು ದೇಶೀಯ ಆ ಯುಧಗಳಾದ ಬಿಲ್ಲು ಬಾಣಗಳನ್ನು ತೆಗೆದುಕೊಂಡು ಹೋದರು. ಇವರು ಆ ಜನಗಳಲ್ಲಿ ಅನೇಕರನ್ನು ಸಂಹರಿಸಿದ ಮೇಲೆ ಮುಖಂ ಡನಾದ ಸೆಂಗಿ ಎಂಬವನು ಬಂದು ಜನನ್ನೊಪ್ಪಿಯೊಂದಿಗೆ ಸಮಾಧಾ ನಮಾಡಿಕೊಂಡು ಇನ್ನು ಮೇಲೆ ರಬ್ಬರನ್ನು ಕ್ರಮವಾಗಿ ತಂದೊಪ್ಪಿ ಸುವದಾಗಿ ವಾಗ್ದಾನ ಮಾಡಿದನಂತೆ. ಈ ಜನನ್ನೊಪ್ಪಿಯೆಂಬವನು ಜನಗಳನ್ನು ಸಂಹರಿಸಿದುದೂ ಅಲ್ಲದೆ ತನ್ನೊಂದಿಗೆ ಬಂದಿದ್ದ ಸಂ ಬಾ ಜನಗಳು ಸಂಹರಿಸಲ್ಪಟ್ಟವರನ್ನು ಕಡಿದು ತಿನ್ನುವಂತೆಯೂ ಬಲಾತ್ಕಾರ ಮಾಡಿದನೆಂತಲೂ ಗೊತ್ತಾಗಿದೆ.

ಜನ್ಮಾಂತರ ವಿಚಾರವು.

[ಒಬ್ಬ ಖಾತ್ರಿದಾರರಿಂದ ಬಂದುದು.]

ಹಿಂದು ಜನರೆಲ್ಲಾ ಜನ್ಮಾಂತರ ಉಂಟೆಂತ ವಾದಿಸುತ್ತಾರೆ ಅದನ್ನು ಸ್ಥಾಪಿಸುವಂತೆ ಋಷಿವಾಕ್ಯಗಳನ್ನು ಆಧಾರವಾಗಿ ತರುತ್ತಾರೆ. ಮತ್ತು ಮನುಷ್ಯರ ಸ್ಥಿತಿಗಳನ್ನು ದೃಷ್ಟಾಂತವೆಂತ ಹೇಳುತ್ತಾರೆ. ಅದರ ಉತ್ತರಗಳನ್ನೆಲ್ಲ ಸಂಪೂರ್ತಿಯಾಗಿ ವಿಮರ್ಶೆ ಮಾಡಿದವರಿಗೆ ತೋರಿಬರುವ ಸಂಸ್ತಾನ್ಯಾಂಶಗಳೇನೆಂದರೆ—

೧ ಮನುಷ್ಯ ಮೃಗ ಪಕ್ಷಿ ಕ್ರಿಮಿಕೀಟಾದಿಗಳೂ ಸಸ್ಯಾದಿಗಳೂ ಅಂದರೆ ಎಲ್ಲಾ ವಿಧ ಪಾಚಿಗಳು ಹುಲ್ಲು ಸೊಪ್ಪು ಗಿಡ ಮರ ಗಿಡ ಬಳ್ಳಿಗಳೂ ಮೊದಲಿಂದಲೂ ಅಂದರೆ ದೈವಶಕ್ತಿಯ ಮೂಲಕ ಸೃಷ್ಟಿಯಾದಾರಭ್ಯದಿಂದ ಅವುಗಳು ತಮ್ಮ ತಮ್ಮ ಪಂಚಾನುವರ್ತಿಗಳಾಗಿ ಬೇರೆ ಬೇರೆ ವ್ಯಕ್ತವಾಗಿಯೂ ಅವುಗಳ ಚೈತನ್ಯವೂ ಕೂಡ ಬೇರೆ ಬೇರೆ ಲ್ಲಿಯೇ ಅವಕಾಶವಾಗಿರೋಣಶರಿಂದಲೂ ಪ್ರತಿಯೊಂದು ಪ್ರಾಣಿಯೂ ತನ್ನ ಜಾತ್ಯಾನುಸಾರವಾಗಿ ಮಾತ್ರ ಅನುವರ್ತಿಸುವದು ಸ್ವಭಾವ ಸಿದ್ಧವಾಗಿದೆ ಇದನ್ನು ಒಪ್ಪದೆ ತಪ್ಪೆಂತ ತಿಳಿಸತಕ್ಕ ಮಹನೀಯರು ದಯಮಾಡಿಟ್ಟು ಈ ಪತ್ರಿಕಾ ಮೂಲಕ ಸದುತ್ತರವನ್ನು ದಯಪಾಲಿಸುವರೆಂತ ಪ್ರಾರ್ಥಿಸುತ್ತೇನೆ.

೨. ಹುಲ್ಲು ಬಳ್ಳಿ ಗಿಡ ಧಾನ್ಯಾದಿಗಳು ಯಾವ ಕೆಲಸಕ್ಕೋಸ್ಕರ ಭೂಮಿಯಿಂದ ಪಂಚ ಬೀಜದ ಸ್ವರೂಪವಾಗಿ ಉತ್ಪನ್ನವಾಗುತ್ತವೆಂತ ಸರ್ವರೂ ಬಲ್ಲವರೇ ಇದ್ದಾರೆ. ಹೀಗಿದ್ದರೆ ಇವುಗಳಿಗೆ ಜನ್ಮಾಂತರ ಉಂಟೇ? ಕರ್ಮ ಉಂಟೇ? ಜನ್ಮಾಂತರಕ್ಕೆ ಆಧಾರವಾವದು? ಮೃಗ ಪಕ್ಷಿ ಕ್ರಿಮಿಕೀಟಾದಿಗಳೂ ಬೇರೆ ಬೇರೆ ದೇಶಗಳ ಹಗೆಯನ್ನು ಅನುಸರಿಸಿ ಹುಟ್ಟುವದೂ ಬೆಳೆಯುವದೂ ಲಯವಾಗುವದೂ ಉಂಟಷ್ಟೆ. ದೃಷ್ಟಾಂತವಾಗಿ ಕೇವಲ ಶೀತ ದೇಶಗಳಲ್ಲಿ ಹುಟ್ಟುವ ಸ್ಥಾವರ ಜಂಗಮಾದಿಗಳಿಗೂ ಸಮಶೀತೋಷ್ಣ ಪ್ರದೇಶದಲ್ಲಿ ಹುಟ್ಟುವವುಗಳಿಗೂ ಕೇವಲ ಉಷ್ಣವಲಯಗಳಲ್ಲಿ ಹುಟ್ಟಿ ಬೆಳೆಯುವವುಗಳಿಗೆ ಜಾತ್ಯಂತರ ವ್ಯತ್ಯಾಸವಿಲ್ಲವೆ? ಅಮೇರಿಕಾ ದೇಶದ ಗಿಡಗಳೂ ಪಕ್ಷಿಗಳೂ ಮೂಲಿಕೆಗಳೂ ಮೃಗಗಳೂ ಆಫ್ರಿಕಾದವುಗಳು ಇಂಡಿಯಾ ದೇಶದವುಗಳು ಕೇವಲ ಶೀತ ದೇಶದವುಗಳೂ ಬೇರೆ ಬೇರೆ ಯಾಗಲು ಜನ್ಮಾಂತರ ಕಾರಣವೋ ಯೋಗ ಇವು ಕಾರಣವೋ? ಬದಗಂತೆಯೇ ಪಲಚನಗಳಿಗೂ ವ್ಯತ್ಯಾಸವುಂಟಲ್ಲವೇ? ಮನುಷ್ಯಾದಿಗಳು ಈ ಬೇರೆ ಬೇರೆ ವಿಧ ದೇವಲೋಕಗಳಲ್ಲಿ ಸೇರುತ್ತಾರೆಂತ ಭೌತಿಕ ಸ್ವರ್ಗ ಬಾಧ್ಯಾಧಾರವಿಂದ ದಯವಿಟ್ಟು ತಿಳಿಸಿದರೆ ಆಗ ಪರಿಷ್ಕಾರವಾಗುತ್ತದೆ ಮನುಷ್ಯನ ಚಿಹ್ನೆ ಲಕ್ಷಣಗಳು ಕಲ್ಪಾದಿಗಳಲ್ಲಿಯಾಗಲೀ ಮೃಗ ಪಕ್ಷಿ ಕ್ರಿಮಿಕೀಟಾದಿಗಳಲ್ಲಿಯಾಗಲೀ ಸೇರಿದ್ದರೆ ಅವುಗಳು ಸೇರಿದ ರೀತಿಯನ್ನು ಈಗ ಈ ತರುಲತಾದಿಗಳಲ್ಲಿ ಮನುಷ್ಯನಾತ್ಮವು ಇಲ್ಲದಿರುವದನ್ನು ಸ್ಥಾಪಿಸಬೇಕಾಗಿದೆ. ಪ್ರತಿ ಬಂದರ ಪ್ರಥಮ ಜನ್ಮವ್ಯಾವದು? ಅಥವಾ ವ್ಯಾವದು? ದಯವಿಟ್ಟು ತಿಳಿಸಬೇಕಾಗಿದೆ.

೩. ಮನುಷ್ಯರು ಅಂತಸ್ತುಗಳಲ್ಲಿ ವ್ಯತ್ಯಾಸವಾಗಲಿಕ್ಕೆ ತೋರಿಬರುವ ಕಾರಣಗಳ್ಯಾವವೆಂದರೆ—ಮೊದಲನೇದು ವಂಶಪಾರಂಪರ್ಯ ಅಥವ ತಂದೆತಾಯಿಗಳ ಸ್ಥಿತಿಗತಿಗಳು, ಎರಡನೇದು ಸ್ವಂತ ವ್ಯವಸಾಯ. ಮೂರನೇದು ಸಂಸರ್ಗ ಇಷ್ಟರ ಮೇಲೆ ಭಗವದನುಗ್ರಹ, ಇದು ಅವರವರ ಸ್ಥಿತಿಗತಿಗಳ ಪ್ರಕಾರವಾಗಿಯೂ ಅವನ ಚಿತ್ತದಂತೆಯೂ ಲಭ್ಯವಾಗುತ್ತದೆ ಈ ಲೋಕದ ಸಮಸ್ತ ವಸ್ತುಗಳೂ ಮನುಷ್ಯನ ಪ್ರಯೋಜನಕ್ಕೋಸ್ಕರವಾಗಿವೆ. ಆದರೆ ಮನುಷ್ಯನು ಮಾತ್ರ ದೇವರ ಸೇವೆಗೋಸ್ಕರ ಉಂಟು ಮಾಡಲ್ಪಟ್ಟಿದ್ದಾನೆ. ಈ ಪ್ರತ್ಯಕ್ಷ ಕಾರಣಗಳನ್ನು ಬಿಟ್ಟರೆ ಪರೋಕ್ಷವಾದ ಯಾತ್ಯಾವ ಕಾರಣಗಳೂ ಸಿದ್ಧಾಂತವಾಗಲಾರವು. ಆದ್ದರಿಂದ ಜನ್ಮಾಂತರವು ಭೌತಿಕ ಶಾಸ್ತ್ರಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿದೆ. ಇದನ್ನು ನಂಬುವದರಿಂದ ಪ್ರಯೋಜನವಿಲ್ಲ ಗುಣವಿಲ್ಲ. ಶ್ರೀಭಗವಂತನು ತಿಳಿಸಿದಂತೆ ಪುನರ್ಜನ್ಮಿಯಾಗಿ ನೂತನ ಸದ್ಗುಣ ಸಚ್ಛಕ್ತಿಗಳನ್ನು ಪ್ರಕಟಿಸುವಂತೆ ಮಾನಸಾಂತರ ಪಟ್ಟುಸುವಾರ್ಗಯಲ್ಲಿ ವಿಚಾರಿಸಬೇಕಾಗಿದೆ ಈ ಒಂದೇ ಮಾರ್ಗವಲ್ಲದೆ ನಾವು ಜೀವವಿಮುಕ್ತರಾಗುವಂತೆ ಈ ಲೋಕದಲ್ಲಿ ಮತ್ಯಾವ ರಕ್ಷಣಾ ಮಾರ್ಗವೂ ಇರುವದಿಲ್ಲವು.

ಅನುಭವಸಾಕ್ಷಿ.

ಹಳ್ಳಿಯವರು ಹೋಬಳಿ ಸ್ಕೂಲ್ ಮಾಸ್ತರುಗಳಿಗೆ ಮಾಡುವ ಮರ್ಯಾದೆ.

ನಾರಣಪ್ಪ—ಡಿ! ಇ ಸ್ಪೆಕ್ಟರನರಿಂದ ವರ್ಗವಾಗಿ ಹುಕುಂ ಹಿಡಿದು ವರ್ಗವಾದ ಊರಿಗೆ ಹೋಗಿ ದಾರಿಯಲ್ಲಿ ಬರುತ್ತಿರುವ ಬೋರಿಯನ್ನು ಕುರಿತು, ಅಪ್ಪಾ! ಇಲ್ಲಿನ ಮಾಸ್ತರಿನ ಮನೆಯೆಲ್ಲಿರುತ್ತೆ?

ಬೋರಿ—ಯಾಪ್ರೂರು ಬುದ್ಧಿ.

ನಾರ.—ನಾನು ಇಂಥಾ ಪೂರು ಇಲ್ಲಿನ ಸ್ಕೂಲ್ ಮಾಸ್ತರಾಗಿ ಬಂದಿರುವೆನು.—

ಬೋ.—ಹೋ! ನೀನೇನಯ್ಯ ಬಂದೋನು? ನಿನ್ನ ಹೆಸರೇನು

ನಾರ.—ನನ್ನ ಹೆಸರು ನಾರಣಪ್ಪ

ಬೋ.—ಹಿಂದೆ ಇಲ್ಲಿದ್ದವ ನಾರಣಪ್ಪನೇಯ—ಅವಯ್ಯನಂತೂ ಬೋ ಆಸಾಮಿಕ್ಕೋನು. ನಾವು ಯಾರಂಗಿದ್ದರು ಹಾಕ್ತಾರುವ ಮಾಟ್ಟಕೋಪರೆ ಬಾ ಕುಂತ್ಕೊ ಅನ್ನಾಕಿಲ್ಲ ಅವಯ್ಯಕಿಂದ ನಾನಾ ಗಂಡೆ—ಏನಯ್ಯಾ! ನಾವು ನಾಲೋರೂ ಮುಂಡ ಮಕ್ಕಿ ಕಳುಹಿಸಿದರಲ್ಲನಾ, ನಿಂಗೂ ಒಬ್ಬಣ ಸಂಬ್ಳ? ನಮ್ಮ ಲೋರಿಗೂ ಮನಿಸುಬಂದರೆ ನಿಂಗೆ ಸಂಬಳೆಂಗೆ ಬರ್ತದೆ ಮುಂದೇಳು ಗುಮಾಸ್ತೆರೆಲ್ಲಾ ಗಂ ಅನಿಸಿ ಪಾಠೂದಬೇತಿ ಮಾಡಿಬಿಟ್ಟ—ಇನ್ನು ಸವೋಟಲಾಗೆ ಕಿವಿಕಿತ್ತು ಕಿರಿಬೆಳ್ಳಿಗುಂಗ್ರು ಮಾಡ್ತಿದ್ದಯೆಂದು ಪುರಾಣವನ್ನು ಯತ್ತಿದಳು.

ನಾರ—ಇವಳನ್ನು ಕೇಳಿದ್ದು ಪಟೇಲಿಗವಕಾಶವಾಯ್ತೆಂತ ಯೋಚಿಸಿ ಮುಂದಕ್ಕೆ ಬಂದು ಕರಗನೆಂಬ ಮತ್ತೊಬ್ಬನನ್ನು ಕೇಳಿದರವನು—

ಕರಂಗ.—ಜಾಪ್ರೂರು

ನಾರ.—ಪ್ರೂರನ್ನು ಕೇಳುವನು ಮತ್ತು ಹುದ್ದೆಯನ್ನು ಕೇಳುವನು

ಕ—ನೆಗಡಾಗಯ್ತೆ ರಮಾಟ ನಸಿಕೊಡಯ್ಯ

ನಾರ.—ನಾನು ನಸ್ಯಹಾಕುವದಿಲ್ಲವಯ್ಯ.

ಕ.—ಏಳೋವಪ್ಪಗೆ ಸನೇಸ್ವರನ ಛ ಳಿದುಗಾಯ್ತು ಇಲ್ಲಾ ಅನ್ನಾದ್ದು ಕೊಡಯ್ಯ ರವೋಟ

ನಾರ.—ನಾನು ಬೀಡಿತ ಹಾಕುವದಿಲ್ಲಪ್ಪಾ

ಕ—ನಿಮ್ಮುಕಾ ಗೌಡನಿಂದ ಪಿಳೇಕ ಸರ್ಟೀಟು ತಂದಿದೀಯೋ?

ನಾರ.—ನಮ್ಮುರಿನಲ್ಲಿ ಗಲಾಟೆ ಮುಂತಾದ್ದೇನೂ ಇಲ್ಲವಪ್ಪಾ.

ಕ.—ಇಲ್ಲಿ ಬೆಟ್ಟೋ ಆಯ್ತು ಯಿಲ್ಲವ್ನೆ. ಆಸಾಮಿನೆಲ್ಲಾ ನಮ್ಮರಂಗಪ್ಪನ ವಶಕ್ಕೆ ಕೊಟ್ಟು ಬಿಟ್ಟೋದ ರಂಗಪ್ಪಯಾರು ಅಂತೀಯೋ? ಪಟೇಲ ಅವನ

ನಾರ.—ಪಟೇಲರ ಮನೆಯೆಲ್ಲಿರುತ್ತೆ?

ಕ.—ವಯ್ಯಗಳಟ್ಟ ಕಿಗನಿಂಗನವುಪಠಾವ ಆಸಿ ಅಂಗೆ ಮ್ಯಾಕೋಗು. ಅಲ್ಲಿ ಒಂದು ಸೊಪ್ಪು ಕ ಸೊಂಬಿಲ್ಲಗ ಪ್ರೊಬ್ಬಿಯಯ್ಯನೋರು ಯಾರಂತೀಯೋ? ಮುಂಬಯ್ಯನೋರು ಕೂಪಿನಾರದಯ್ಯ ನೋಡು ಅವರು ತೋರಸ್ತಾರೆ ಸೂಪಮುಂದಾಗಿ ಹೋಗು

ನಾರ.—ಪಟೇಲನ ಮನೆ ಹತ್ತಿರ ಹೋಗಿ ಪಟೇಲರಿದ್ದಾರೇನಮ್ಮ

ಪಟೇಲ ಹೆಂಡತಿ,—ಯಾಪ್ರೂರು ಸಾಮಿ.

ಮಾಸ್ತರು—ಎಷ್ಟು ಹೊತ್ತಿಗೆ ಬರುವರವ್ವ

ಪ. ಹೆಂ—ಇಷ್ಟೊತ್ತಿಗೆ ಬರ್ತಾರೆ ಅಂತ ನಂಗೆ ಗಾಜ್ನಾ ಬಂದ್ಕೊಡ್ತಾ? ಬರೋತನಕ ಬದ್ದಿರಯ್ಯ! ಇಲ್ಲದ್ರೆ ಹೋಗಯ್ಯ ಅತ್ತ

ಮಾಸ್ತರು—ಸುಮ್ಮನೆ ಕೂರುವನು.

ಪ ಹೆಂ—ಗೌಡ ಕಾರಿಕೊಡಪ್ಪಲ್ಲಾವ ಆವನಂತೆ ಬಗಯ್ಯ.

ಮಾಸ್ತರು—ಕೊಪ್ಪಲಹತ್ತಿರನೋಡ ಇಂಬಿಲ್ಲ. ಅನಂತರ ಕುರಿಗಳು ಹೊಡಕೊಂಡು ಬರುವನು ಎನಸು ಹೆಂಗಿ ಕಾಣುವನು

ಪಟೇಲ—ನಾರಣಪ್ಪನನ್ನು ನೋಡಿ ನಾನು ಹೆಸರು ಗಿ ನಂಬಿರು ಅನ್ನೋದು ಗ್ಯಾಸ ಆಯ್ತೋ ಇಲ್ಲವಯ್ಯ? ಮಾನವಮಠ್ವಾಡಿಯಲ್ಲಿ ಬಿಟ್ಟು ದೋಸ್ತಿಯಂಥ ಮನತಾನೋಕ ಬಂದೆ ಯಂದು ಹೊಗುತ್ತಿಯಮಾಗ್ಗ ಮಂದಿಯಿಂದ ಕೆಲವು ಕುರಿಗಳು ಚದರಿಹೋದವು. ನಾರಣಪ್ಪನನ್ನು ಕುರಿತು ಅಯ್ಯೋ! ಅಂಗೇವೂಡಿಲಪ್ಪೋ ಆ ಕುರಿಗಳ ಇತ್ತ ಬೆನರಿಸಲಾರ್ಯ.

ಮಾಸ್ತರು—ನಾನು ಬಹುದೂರದಿಂದ ಬಂದಿರುವೆನು ದಣಿವಾರೆನು.

ಪಟೇಲ—ಪ್ರೂ, ಅಯ್ಯ ಬಡಿಪಾರವಾ ಸ್ತ್ಯ ಸ್ತ್ಯ. ಸ್ತ್ಯ. ಜಂಗಾವಗೆ ತಗೊಂತೇಯಪ್ಪಾ ಕ್ಯಾಗೆ ಬಿಸಿನೀರು, ಯಂದು ಹೇಳುತ್ತಾ ತಾನೆ ಹೋಗಿ ಕುರಿಗಳನ್ನು ಕೊಪ್ಪಕ್ಕೆ ಸೇರಿಸಿ ಮಾಸ್ತರನ್ನು ಕರೆದುಕೊಂಡು ಮನೆಗೆ ಬರುವನು.

ಮಾಸ್ತರು—ನಿಮ್ಮಲ್ಲಿರುವ ಸ್ಕೂಲ್ ಛಾರ್ಜನ್ನು ಕೊಡುವಿರಾ

ಪಟೇಲ.—ನಾನೀಗಲೆ ಎರ್ಡ್ತೇನಿ ನಾನೇಳಿದಂಗೆ ಕೇಳ್ಕೊಂಡು ನಿಬ್ಬಾಯಾ ನಮ್ಮನೆಗೆ ಬಂದು ನಮ್ಮ ರೈಗೆ ಪಾಟ ಏಳ್ಕೋದೋ ಅಂಗಿತ್ತು ಕೊಡ್ತೀನಿ. ಇಲ್ದೇನ ಪಂದಾರಿ ಇಡಕ್ಕೊಂಡು ಸರಿತಿರೋದೆಯಾ.

ಮಾಸ್ತರು.—ಹಾಗೆ ಆಗಲಪ್ಪ.

ಪಟೇಲ.—ಕೂಲಿ ಮಠದಯ್ಯನಾದ ರಾಮಾನುಜಯ್ಯನನ್ನು ಜತೆ ಮಾಡಿಕೊಂಡು ನಾರಣಪ್ಪನನ್ನು ಕುರಿತು ನೀನು ಇಂಗೆಬಾರಯ್ಯ ಆಯ್ನೋರು ಮ್ಯಾಕೆ ಬರಲಿ ಯೆಂದು ಹೇಳಿ ನಾರಣಪ್ಪನನ್ನು ಕೆಳಕ್ಕೆ ಬರಮಾಡಿ ಕೂಲಿಮಠದಯ್ಯನನ್ನು ಚಾಪೆಯ ಮೇಲೆ ಕೂರಿಸುವನು.

ಕೂಲಿಮಠದಯ್ಯ.—ಪಟೇಲನನ್ನು ಕುರಿತು ಇವರು ಯಾಪ್ರೂರು ಗೌಡ.

ಪಟೇಲ—ಇವನೇ ಮಸ್ತಾಗಿ ಬಂದಿರೋ ಸರ್ಕಾರಿ ಮೇಟ್ರು ಅನ್ನೋನು.

ಕೂ. ಮ.—ನಾರಣಪ್ಪನನ್ನು ಕುರಿತು ನಿಮ್ಗೆ ಸಂಸ್ಕೃತ ಬರ್ತಯ್ತೋ?

ಮಾಸ್ತರು—ಸಾಧಾರಣವಾಗಿ ಬರುತ್ತೆ.

ಕೂಲಿ ಮ—ನನಗೂ ಸಂಸ್ಕೃತ ಬರ್ತಿತ್ತು ಪೂರಾಕ ಪುರಸತ್ತು ಇಲದೆ ಪ್ರೊಟೂ ಮರೀತಾಬಿಂತು ಆದ್ರೂ ಯಾರಂಗೀ ಸಂಗ್ತಾಗ ನಿಮಗ್ಯಾರಿಗೂ ಬಗ್ಗೋಕಿಲ್ಲಾ.

ಪಟೇಲ—ಕೂಮಠದಯ್ಯನ ಕಡೆ ನೋಡಿ ನೀವಾದರೆ ಪ್ರೊಸ್ತಯ್ಯನೋರು ಆರೋರು ಪಟಪ್ರೋದ್ಲಿ, ನಿಮ್ಮಂಗೆ ಬರಾವಿ, ರಾಮುಳ್ಳೇವು, ಸಂಬ್ಸವಪುರಾಣ, ಚೋಲಕತೆ, ದಶಾವತಾರ, ರಾಗಸವಪನೆಯಾದ ಪ್ರೋಧಾಕ ಬರಾಕಿಲ್ಲ ಇಗೋ! ನೀವ್ಹೋದ ಬೇಕು ಕೇಳ್ಳೆ ಇಂಥಾಯ್ತದೆ. ಯಾರಗಾದರು ಅಗ್ಲಿ ಆಪಟ್ಟೇರಿ ಆವಯ್ಯಗೆ ಸಾಮಾನೆಲ್ಲಾ ಕೊಟ್ಟುಬಿಡೋ.

ಕೂ. ಮ. ಅ—ಹಿಂದಿನ ಛಾರ್ಜುಪಟ್ಟಿ ಅನುಸರಿಸಿ ಬರೆದು ಪಟೇಲನ ಲೇಖಣಿ ಮುಟ್ಟಿದರುಜುವಿಗೆ ತನ್ನ ಬರಹವನ್ನು ಹಾಕಿ ಅನಂತರ ಪಟೇಲನನ್ನು ಗೋಪ್ಯವಾಗಿ ಹೊರಗೆ ಕರೆದುಕೊಂಡು ಹೋಗಿ ನೀನು ಮಟಾಕ್ಕೇಗಿ ಆ ಆಯ್ಯಗೆ ಟೀಚಿಂಗು ಪ್ರೋರಯ್ತಾ ಯಿಲ್ಲವೋ ನೋಡಪ್ಪಾ ಸದರಿ ಕೊಡಬೇಡ ಯೆಂದನ್ನುವನು.

ಪಟೇಲ—ಟೀಚಿಂಗ್‌ಪೂ; ಅಂದರೇನು ಬುದ್ಧಿ?

ಕೂ. ಮ. ಅ.—ಬಾಬುಮೇಳೋಕೆ ಬತ್ತದೋ ಇಲ್ಲವೋ ನೋಡೋದು.

ಪಟೇಲ—ಸ್ತ್ಯ! ಸ್ತ್ಯ! ಸ್ತ್ಯ! ನಾಳೆ ಬೆಳಿಗ್ಗೆ ಇಸ್ಕೂಲಿಗೋಗಿ ನೋಡೋವಾ ಎಂದ್ಹೇಳಿ ಪ್ರಾತಃಕಾಲ ವಿದ್ಯಾಭ್ಯಾಸದ ಇರಾದೆ ನನ್ನಿ ದಿನೋಪನಿ (ಪೆಂಬರ್‌ಷಿಪ್ಪಿನ ಪುಸ್ತಕದು) ಸ್ಕೂಲಿಗೆ ಹೋಗುವನು. ನಾರಣಪ್ಪ ಬನ್ನಿ ಪಟೇಲರೆ ಕೂತುಕೊಳ್ಳಿರಿ.

ಪಟೇಲ—ನೆನ್ನೇ ದಿನ ನಾನೇಳಿದ್ದು ನೋಡಿಬಿಡೋ, ನೀಬಂತಕ್ಕೋ ಬಾಗುಂತಕ್ಕೋ ಅಂತೆಯಲ್ಲ.

ನಾರ.—ಇನ್ನು ಹೇಗೆ ಹೇಳಬೇಕು?

ಪಟೇಲ—ನಾಳತ್ತಾಲೆ ನೀವಯ್ಯ ಕೆದ್ದು ಮರ್ಯಾದಿ ಮಾಡಬೇಕಾದವಯ್ಯ.

ನಾರ—ನೀವು ಬಂದರೆ ನಾನು ಮೇಲಕ್ಕೇಳಬೇಕೆ?

ಪಟೇಲ—ನೀನೂ ನಿಮ್ಮಪ್ಪನೂ ಎಳೋದೇಯ ಕೇಕದಾರ್ರೂ ದಾರ್ರೂ ಬಂದರೆ ನಾನೇಳೋಕಿಲ್ಲಾ

ನಾರ—ಅವರಂತೂ ನಿಮಗೆ ಅಧಿಕರು.

ಪಟೇಲ—ನಾನಿನಗಲ್ಲಾ ನೋಡಿದಾ ನಿಮ್ಮಪ್ಪ ಕೊಟ್ಟರೂ ಕಾಬೆವ ಎಂದು ಎಂಟು ಹತ್ತು ಕೆರೆ ಬಿಸ್ಸಿಗಳಿಂದ ಬಿಗಿದಿರುವ ಸಿದನ್ನು ಎಲೆ ಚೀಲ ಬೇಲದಿಂದ ತೆಗೆಯುವನು,

ನಾರ.—ಅದರಲ್ಲೇನಿರುತ್ತೆ?

ಪಟೇಲ—ಅದರಾಗೇನಯ್ತಾ ನೋಡಿಲ್ಲಾ ಆಯ್ತು.

ನಾರ—ಏನು ರೂಲ್ಸು ಇದೆ ಹೇಳಿರಿ?

ಪಟೇಲ—ಸೂಲ್ಸು ಕಿಸೀಬ್ಯಾಡಾ ಎದ್ದು ಈಚೆಗೆ ಬಾರಯ್ಯ ನಿಂತಾತೆ ಏದೇನಿ ನೇಕೊತ್ಕೊಬೇ ಮಾಡಾತ್ತಯಲ್ಲ.

ಪಟೇಲ—ಹಾಗೆ ನಿಮ್ಮ ಇಷ್ಟಾನುಸಾರ ನಡೆಯುವದಕ್ಕೆ ಆಗುದಿಲ್ಲ. ನನಗೆ ನೀವು ಹೀಗೆ ಅವಮಾನಪಡಿಸುವದಾದರೆ ಸಬ್‌ಇನ್‌ಸ್ಪೆಕ್ಟರವರಿಗೆ ರಿಪೋರ್ಟು ಮಾಡುವೆನು

ಪಟೇಲ—ಬಿಡೆಯೆಂದು ಕೆಂಚ್ಯಾ ಎಂದು ಕೇಳಿ ಮಾಸ್ತರ ಸವಿಸ್ತಾರ ಬಂದು ಕೆನ್ನೆಗೆ ಬಿಸಿಯನ್ನು ತೋರಿಸುವನು

ನಾರ.—ಡೆ. ಇನ್ ರವರಿಗೆ ರಿಪೋರ್ಟು ಬರೆಯುವನು.

ಪಟೇಲ—ಮಾಸ್ತರನು ರಿಪೋರ್ಟು ಬರೆಯುವದನ್ನು ನೋಡಿ ಕೂ. ಮ. ಅ. ಸಹಿತ ಕೆಲ್ಸಕ್ಕೆ ಬಂದು ಬರೀರಿ ಬು ಆಪು ಈ ಮಾಟ್ಟನಮ್ಯಾಗೆ ಬಂದು ರಿಪೋರ್ಟು

ಕೂ. ಮ. ಅ.—ಏನಂತ,

ಪಟೇಲ—ಆ ಮಯ್ಯಗೆ ಟೀಚಿಂಗ್‌ಪ್ರೋ ಇಲ್ಲ. ನಮ್ಮುಡ್ಗೆ ಕಾಗ ಏಳಕೊಡಾಕಿಲ್ಲ ನಮ್ಯಾಗಲ್ಲಾ ಅರ್ಜಿ ಬರೀತಾ ನಮ್ಮಗ ಮ ಪುಂಡಬಿಸ್ತಾನೆ ಅಂತಾವ ಒಳ್ಳೆ ಗುಮಸ್ತರ ಆಕೆ ಬ ಆಮ್ಯಾಂಗೆ ಕೆಲ್ಲವೂಗೂ ಬಂ ರವೇರು ಇಸ್ಪೆಟರಿಗೆ ಬ್ಯಾಡಿ ದೊಡ್ಡ ಸಾಬ್ರಿಗೆ ಬರೀರಿ. ಮರ್ತಿದ್ದೆ ಕೂಲಿಮಯ್ಯನೋರಿಗೆ ಟೀಚಿಂಗ್ ಪ್ರೋಸಯ್ತೆ ಕೆಲ್ಸ ಅವರಿಗೆ ಆ ಕಾ ಬರೀರಿ.

ಕೂ. ಮ. ಅ! ಇವನು ಹೇಳಿದ ಹಾಗೆಲ್ಲ ನೊಂದಿಕೆಯ ಅರ್ಜಿಯನ್ನು ಬರೆದು ಈ ಪಟೇಲನೇ ಮೊದಲಾದ ಅನೇಕರುಜುಗಳಿಗೆ ಇವನ ಬರಹವನ್ನು ಹಾಕಿ ಅದನ್ನು ಇನ್‌ಸ್ಪೆ, ರವರ ಆಫೀಸಿಗೆ ರವಾನಿಸುವನು ಈ ಅರ್ಜಿಯು ಮಿ ರಹೆ ಬಗ್ಗೆ ಡೆ. ಇನ್. ರವರಲ್ಲಿ ಬರುವರಿಗೆ ನಾರಣಪ್ಪನ ಅರ್ಜಿ ಇನ್. ರವರಲ್ಲಿ ಬರುವುದು. ನಾರಣಪ್ಪನಿಗೆ ಇದೇ ರೀತಿ ಪರಂಪರೆಗಳು ಜಾಸ್ತಿಯಾಗುತ್ತಾ ಬಂದು ಕೆಲವು ಅನಂತರ ಆ ಪಟೇಲನೇ ಮೊದಲಾದ ಗಾ ಮಸ್ತರ ಅರಕೆ ಕ್ಕೆಗೊಳಿರುತ್ತೆ.

ವಿದ್ಯಾರ್ಥಿ ಮಾಸ್ತಿ.

[ದೀರ್ಘವಾದ ಈ ಲೇಖನವನ್ನು ವಾಚಕರ ಗಮನಕ್ಕೆ ತರುವ ಸಂದರ್ಭದಲ್ಲಿ ನಮ್ಮ ಸಂಸ್ಥಾನದ ಸಕಲ ಭಾಗಗಳಲ್ಲಿ ಸ್ಕೂಲ್‌ಮಾಸ್ತರುಗಳಿಗೆ ಈ ವಿಧ ಅಗೌರವವು ನಡೆಯುತ್ತದೆಯೆಂದು ನಾವು ನಂಬಿರುವದಿಲ್ಲವೆಂಬ ಅಂಶವನ್ನು ತಿಳಿಯಪಡಿಸಬೇಕಾಗಿದೆ. ಹಾಗೇನಾದರೂ ಈ ವಿಷಯವು ಸರ್ವಸಾಮಾನ್ಯವಾಗಿದ್ದರೆ ಆದರೆ ಅಧಿಕಾರಿಗಳು ಇದನ್ನು ತಮ್ಮ ಗಮನಕ್ಕೆ ತಾರದಿರಲಾರರೆಂದು ನಂಬಿದ್ದೇವೆ —ಎಡಿ.]

ಬಿದಿರನ್ನು ಆಹಾರಪದಾರ್ಥವಾಗಿ ಉಪಯೋಗಿಸುವರು

ಬಿದಿರಕ್ಕಿಯನ್ನು ನಮ್ಮ ದೇಶದಲ್ಲಿಯೂ ಆಹಾರಪದಾರ್ಥವಾಗಿ ಉಪಯೋಗಿಸುವ ಕೆಲವು ಕಾಪಾದಿನಗಳುಂಟಷ್ಟೆ. ಬಿದಿರಿನ ಚಿಗುರನ್ನು ಬರ್ಮಾ ದೇಶಸ್ಥರು ಆಹಾರಕ್ಕೆ ಉಪಯೋಗಿಸುವದು ಹೊರತಾಗಿ ಬೇರೆ ಯಾವ ದೇಶಸ್ಥರೂ ಉಪಯೋಗಿಸುವುದಿಲ್ಲವೆಂದು ತೋರುತ್ತದೆ ಆ ದೇಶೀಯರಲ್ಲಿ ಬಡವರಿಗೆ ಇದು ಸರ್ವಸಾಮಾನ್ಯವಾದ ಆಹಾರವಾಗಿಯೂ ನಮ್ಮಡಿವಂತರಿಗೆ ವಿಶೇಷಕಾಲದ ಆಹಾರವಾಗಿಯೂ ಇದೆಯೆಂದು ಗೊತ್ತಾಗುವದು. ಇದನ್ನು ರು ಬಹು ಎಳೆಯದಾಗಿರುವಾಗಲೆ ತಂದು ಮೇಲೆಲ್ಲಾ ಬರೆದು ಚೆನ್ನಾಗಿ ತೊಳೆದ ಬಳಿಕ ಅರಿಸಿನದ ಸಂಗಡಲಾಗಲಿ ಪ್ರತ್ಯೇಕವಾಗಿಯೇ ಆಗಲಿ ಬೇಯಿಸಿ ಆರುವಾಯ ನೀರನ್ನೆಲ್ಲಾ ಬಸಿದು ಬಿಟ್ಟು ಅಂಗಡಿಯಲ್ಲಿ ಮಾರುತ್ತಾರೆ. ಬೇಯಿಸಿದ ಈ ಚಿಗುರು ಮೂರು ದಿವಸಗಳ ಮೇಲೆ ಇರಿಸಲಾಗದು. ಆದಕಾರಣ ಅಷ್ಟರಲ್ಲಿ ಇದನ್ನು ವಿಕ್ರಯಿಸಬೇಕಾಗುತ್ತದೆ. ಇದೇ ವ್ಯಾಪಾರದಲ್ಲಿ ಸಿಕ್ಕೋತಿರುವವರು ಅನವಿಧಾಂದ ಇದನ್ನು ತಂದು ಮಾರುತ್ತಾರೆ ಅವರು ಮ್ಯಾಂಡಲೆ ರಂಗೂನ್ ಮೊದಲಾದ ಪಟ್ಟಣಗಳಿಗೆ ರೈಲಿನ ಮೇಲೆ ಕಳುಹಿಸಿ ೧೦೦ ವೀಸಗಳಿಗೆ ಏಳು ರೂಪಾಯಿಗಳಂತೆ ಮಾರುತ್ತಾರೆ. ಇದರಿಂದ ಇವರಿಗೆ ಖರ್ಚು ಹೋಗಿ ರೂಪಾಯಿ ಲಾಭವು ದೊರಕುತ್ತದೆ ಈ ಚಿಗುರಿನಲ್ಲಿ ಪೋಷಣ ವಸ್ತುವು ಅಲ್ಪವಾಗಿದ್ದರೂ ಅದನ್ನು ಸರ್ವಸಾಧಾರಣವಾಗಿ ಸೇವಿಸುವವರಿಗೆ ಯಾವ ವಿಪತ್ತು ಉಂಟಾಗುವುದಿಲ್ಲವೆಂದು ತಿಳಿದುಬಂದಿದೆ.

ಮರಿಷಿಯಸ್ ದ್ವೀಪದಲ್ಲಿರುವ ಇಂದ್ಯಾದೇಶೀಯರು.

ಮರಿಷಿಯಸ್ (ಪೋರಿಸ್) ದ್ವೀಪದಲ್ಲಿ ಪ್ರವಾಸವಾಗಿರುವ ದೇಶೀಯರು ೧೯೦೪ರ ವರ್ಷದಲ್ಲಿ ಸ್ವದೇಶಗಳಿಗೆ ಬಂದು ಹೋಗುವಾಗ್ಗೆ ಒಟ್ಟು ೨೨,೬೪೯ ರೂಪಾಯಿಗಳನ್ನು ಅ... ತೆಗೆದುಕೊಂಡು ಹೋದರೆಂದು ಸರ್ಕಾರದ ರಿಪೋರ್ಟಿನಿಂದ ಗೊತ್ತಾ... ದೆ.

ಇವರಲ್ಲಿ ಮದ್ರಾಸಿಗೆ ಹೋದವರಲ್ಲಿದ್ದುದು ರೂ॥ ೭,೧೦೦

ಕಲ್ಕತ್ತೆಗೆ ,, ,, ,, ೧೦,೫೯೦

ಬೊಂಬಾಯಿಗೆ ,, ,, ,, ೬,೩೩೩

ಕೊಲಂಬೊಗೆ ,, ,, ,, ೨,೭೬೫

ಕೊಲಂಬೊ ನಗರಕ್ಕೆ ಹೋದ ಪೆರುಮಾಳ್ ಎಂಬವನಲ್ಲಿ ೩೦,೬೦೦ ಇತ್ತು. ಇದೇ ಹೆಚ್ಚು. ಇದಲ್ಲದೆ ಅಲ್ಲಿನ ಬ್ಯಾಂಕ್ಗಳಲ್ಲಿ ೧೯೦೩—೦೪ನೇ ಸಾಲಿಗೆ ಈ ದೇಶೀಯರು ಹಾಕಿಟ್ಟಿದ್ದ ಹಣದ ತಖ್ತೆ ಹ್ಯಾಗಂದರೆ—

ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ರೂ॥ ೧೨,೨೨,೫೪೨

ಮರಿಷಿಯಸ್ ಕಮ್ಮರ್ಷಿಯಲ್ ,, ,, ೪,೦೦೧

ಮರಿಷಿಯಸ್ ಬ್ಯಾಂಕ್ ಲಿಮಿಟೆಡ್ ,, ೨೦೧,೯೫೦

ಮರಿಷಿಯಸಿನಲ್ಲಿ ಈ ದೇಶೀಯರು ಸಂಪಾದಿಸಿರುವ ಸ್ಥಿರಾಸ್ತಿಗಳ ವಿವರ:

ಇಂಡಿಯಾ ದೇಶೀಯರು ರೂ॥ ೨,೬೩,೯೫೩

ಅರಬಿ ಮುಂತಾದ ಅರಬಿಯವರೇ ಮೊದಲಾದವರು ರೂ॥ ೧೩,೦೯ ೦೬೨

ಒಟ್ಟು ರೂ॥ ೧೫,೬೯,೪೨೦

೧೯೦೨ನೇ ಸಾಲಿನ ಅಂತ್ಯದ ವರೆಗೆ ಈ ದೇಶೀಯರು ಆ ದ್ವೀಪದಲ್ಲಿ ಒಟ್ಟು ೧ ಕೋಟಿ ೫೦ ಲಕ್ಷ ರೂಪಾಯಿಗಳು ಬಾಳುವ ಸ್ಥಿರಾಸ್ತಿಗಳನ್ನು ಗಳಿಸಿದ್ದರೆಂದು ಗೊತ್ತಾಗಿದೆ. ಮತ್ತು ಅವರು ಈ ದೇಶದಲ್ಲಿರುವ ಬಂಧುಮಿತ್ರರುಗಳಿಗೆ ಪೋಸ್ಟ್ ಇಲಾಖೆಯ ಮೂಲಕವೂ ಇಮಿಗ್ರೇಷನ್ ಇಲಾಖೆಯ ಮೂಲಕವೂ ಕಳುಹಿಸಿದ ಹಣ ರೂ॥ ೪೮,೨೬೯.

ಅನಾಥವಿಧವೆಯರ ಸೇವಾ ಸದನಕ್ಕೆ ಧನಸಹಾಯ ಮಾಡಬೇಕಾಗಿ ಪ್ರಾರ್ಥನೆ

ಕಳೆದ ೩ ನೇ ತಾರೀಖಿನಲ್ಲಿ ವಿಶಾಖಪಟ್ಟಣದ ಬಳಿಯ ಅನಕಾಪಲ್ಲಿಯಿಂದ ಊರಿನಲ್ಲಿ ಕಾಸಿಮ್‌ಕೋಟೆಯ ಜಮೀನುದಾರರೇ ಮೊದಲಾದ ದೊಡ್ಡ ಮನುಷ್ಯರೂ ಕೃಷ್ಣಾ ನಾರಿನ ಮತ್ತು ಹತ್ತಿಯ ಗಿರಣಿ ಕಂಪೆನಿಯ ಡೈರೆಕ್ಟರವರಾದ ಮ॥ ಶಂಕರಂ ಎಂಬುವವರೇ ಮೊದಲಾದ ದೇಶಾಭಿಮಾನಿಗಳು ಸೇರಿ ಶಾಲಾ ಕಟ್ಟಡಕ್ಕೆ ಅಸ್ತಿಭಾರ ಶಿಲಾನ್ಯಾಸವನ್ನು ನಡಿಸಿದರು. ಡೆಪ್ಯುಟೀ ಕಲೆಕ್ಟರಾದ ಶಿವರಾವ್ ಎಂಬವರು ಅಗ್ರಾಸನವನ್ನು ವಹಿಸಿ ವಿಧವೆಯರ ಸ್ತ್ರೀಯರಿಗೆ ಪ್ರಾಮಾಣಿಕವಾದ ಸ್ಥಿತಿಗತಿಗಳನ್ನು ವಿವರಿಸಿ ಈಗ ಕೈಕೊಂಡಿರುವ ಈ ಕಾರ್ಯಸಿದ್ಧಿಯ ಉದ್ದೇಶವನ್ನು ನೆರವೇರಿಸುವದಕ್ಕೆ ದೇಶಾಭಿಮಾನಿಗಳೆಲ್ಲರೂ ಸಹಾಯ ಮಾಡಬೇಕೆಂದು ಹೇಳಿದರು. ಬಳಿಕ ಈ ಕಾರ್ಯಕ್ರಮದಲ್ಲಿ ಅತ್ಯಂತಾಸಕ್ತರಾಗಿದ್ದ ಮ॥ ನಾರಾಯಣರಾಯರು ಎದ್ದು ತಮಗೆ ಕಾರ್ಯದ ಆರಂಭದಿಂದ ಇದುವರೆಗೂ ಸ್ನೇಹಿತರ ಆಸಕ್ತಿಯನ್ನು ಪ್ರೇರೇಪಿಸುವ ವಿಷಯದಲ್ಲಿ ಉಂಟಾದ ತೊಂದರೆಗಳನ್ನೆಲ್ಲಾ ತಿಳಿಸಿದುದಲ್ಲದೆ ಪಟ್ಟಣ ಸಮೀಪದಲ್ಲೇ ಶೀತವೂ ಮರವೂ ಸುಲಭಗ್ರಾಹ್ಯವಾಗಿರುವದರಿಂದ ಕಾರ್ಯಸಿದ್ಧಿಯು ಚೆನ್ನಾಗಿ ನಡೆಯುವದಕ್ಕೆ ಅನುಕೂಲವಾಗಿರುವ ಅಂಶವನ್ನು ಸಕಲರಿಗೂ ಮನಗೊಳ್ಳುವಂತೆ ವಿವರಿಸಿದರು. ತರುವಾಯ ಮ॥ ಶಂಕರಂಯವರು ಅತ್ಯಂತ ಪ್ರಶಂಸನೀಯವಾಗಿ ಉಪನ್ಯಾಸ ಮಾಡಿದರು. ಇಂಡ್ಯಾದೇಶೀಯರು ಮುಳುಗಿರುವ ದಾರಿದ್ರ್ಯದಿಂದ ತಪ್ಪಿಸಿಕೊಳ್ಳುವದಕ್ಕೆ ಆಶೆ ಮಾರ್ಗಗಳು ಈಗ ಕಂಡು ಬರುತ್ತಲಿವೆಯೆಂದೂ ನಮ್ಮ ದೇಶೀಯರ ಕೈಗಾರಿಕೆಯ ಅಭಿವೃದ್ಧಿಯನ್ನು ಸಾಧಕಪಡಿಸುವದಕ್ಕೆ ಸರ್ಕಾರದವರು ಸಿದ್ಧರಾಗಿರುವರೆಂದೂ ಇಷ್ಟರಲ್ಲಿ ಸ್ತ್ರೀಯರಾಗಲಿ ದೇಶೀಯರು ತಾವಾಗಿ ಪ್ರಯತ್ನಪಟ್ಟು ಕಾರ್ಯಸಾಧನೆ ಮಾಡದಲ್ಲಿ ದೇಶಕ್ಕೆ ಶ್ರೇಯಸ್ಸುಂಟಾಗುವದರಲ್ಲಿ ಸಂಶಯವೇನೂ ಇಲ್ಲವೆಂದೂ ದೃಷ್ಟಾಂತಪೂರ್ವಕವಾಗಿ ಹೇಳಿ ಸಭಿಕರನ್ನೆಲ್ಲಾ ಆನಂದಗೊಳಿಸಿದರು. ದೇಶದ ಕೈಗಾರಿಕೆಯಲ್ಲಿ ಉತ್ಕೃಷ್ಟ ಸ್ಥಿತಿಯನ್ನೈದುವದಕ್ಕೆ ಏಕಮತ್ಯವೂ ಪರಸ್ಪರ ಸಹಾಯವೂ ಸತ್ಯತೆಯೂ ತಾಳ್ಮೆಯೂ ಸ್ಥಿರಭಾವವೂ ಅವಶ್ಯವೆಂದು ಹೇಳಿ ಮುಗಿಸಿದರು. ಈ ಮಹನೀಯರ ಉಪನ್ಯಾಸದ ಫಲವಾಗಿ ಅಲ್ಲಿ ನೆರೆದಿದ್ದ ದೊಡ್ಡ ಮನುಷ್ಯರಲ್ಲನೇಕರು ಕೂಡಲೆ ತಮ್ಮ ಸಂತೃಪ್ತಿಯನ್ನು ಸೂಚಿಸಿ ಕಾರ್ಯಸಿದ್ಧಿಯ ಪೇರುಗಳಲ್ಲಿ ಅನೇಕರನ್ನು ಕೊಂಡುಕೊಂಡರು. ಕಡೆಯಲ್ಲಿ ಅಧ್ಯಕ್ಷರಾದ ಶ್ರೀರಾಜವಿಶ್ವಮಹೇಶ್ವರ ಶಿವರಾಯರು ಸಭಿಕರಿಗೆ ಸಮಯೋಚಿತವಾಗಿ ಕೆಲವು ಮಾತುಗಳನ್ನಾಡಿದರು. ಬಳಿಕ ಸಭೆಯು ಉಪಚಾರಾದಿಗಳು ಮಾಡಲ್ಪಟ್ಟು ಸಕಲರೂ ತಾಂಬೂಲಾದಿಗಳನ್ನು ಸ್ವೀಕರಿಸಿ ತೆರಳಿದರು. ಇಂಥ ಕಾರ್ಯಕ್ರಮಗಳು ದೇಶವೆಲ್ಲಾ ವ್ಯಾಪಕವೆಂದು ತೋರುವುದು.

ಪ್ರೊನಾದಲ್ಲಿರುವ ಹಿಂದೂ ಅನಾಥ ಬಾಲಿಕಾ ಆಶ್ರಮ.

ಈ ಆಶ್ರಮವು ಹಿಂದೂ ವಿಧವೆಯರ ಉಪಯೋಗಾರ್ಥವಾಗಿ ಪ್ರೊಫೆಸರ್ ಕಾರ್ವೆಯೆಂಬ ವಿದ್ವಾಂಸರಿಂದ ಕೆಲವು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿತು. ಅವರು ಈ ಆಶ್ರಮವನ್ನು ಪ್ರಾರಂಭಿಸಿದ ಕಟ್ಟಡವು ಒಂದು ಗುಡಿಸಲಾಗಿತ್ತು. ಈಗ ಆ ಗುಡಿಸಲನ್ನು ಹಲವು ಗಳು ಕಟ್ಟುವ ಕೊಟ್ಟಿಗೆಯಾಗಿ ಮಾಡಿಕೊಂಡಿದ್ದಾರೆ. ವಿಧವೆಯರ ವಾಸಕ್ಕಾಗಿ ಹೊಸದಾಗಿ ಕಟ್ಟಿ ಈಗತಾನೇ ಪೂರೈಸಿರುವ ಕಟ್ಟಡಕ್ಕೆ ರೂ ೩೬,೦೦೦ ಮುಟ್ಟಿತು. ಆಶ್ರಮವನ್ನು ಸ್ಥಾಪಿಸಿದ ಕಾಲದಲ್ಲಿ ಆರುಮಂದಿಯಿದ್ದರು. ಈಗ ಐವತ್ತೆರಡುಮಂದಿಯಿದ್ದಾರೆ. ಇವರಿಗೆ ಮರಾಠಿ ಸಂಸ್ಕೃತ ಇಂಗ್ಲಿಷ್ ಭಾಷೆಗಳಲ್ಲಿ ಪಾಠಗಳನ್ನು ಹೇಳಿಕೊಡುವುದಲ್ಲದೆ ಇವರು ಉತ್ತರೋತ್ತರ ಬಾಲಿಕೆಯರ ಪಾಠಶಾಲೆಗಳಲ್ಲಿ ಉಪಾಧ್ಯಾಯಿನಿಯರಾಗಿ ಸ್ವತಂತ್ರ ಜೀವನೋಪಾಯವನ್ನು ನಡಸಿಕೊಳ್ಳಲು ಸಮರ್ಥರಾಗಬೇಕೆಂಬುದೆ ಆಶ್ರಮ ಸ್ಥಾಪಕರ ಆಶಯವಾಗಿದೆ. ಈ ವಿಧವಾಲಯದಲ್ಲಿರುವ ಮೇಲ್ತರದವರಿಗೆ ಭಗವದ್ಗೀತೆಯಲ್ಲಿಯೂ ಕೆಳಗಿನ ತರದವರಿಗೆ ರಾಮದಾಸ ತುಕಾರಾಮ ಎಂಬ ಕವಿಗಳು ಬರೆದ ಗ್ರಂಥಗಳಲ್ಲಿಯೂ ಪಾಠಗಳನ್ನು ಹೇಳಿಕೊಡುತ್ತಾರೆ. ಬಹುಕಾಲದ ವರೆಗೂ ಪ್ರೊಫೆಸರ್ ಕಾರ್ವೆಯವರೇ ಪಾಠಶಾಲೆಗೆ ಸಂಬಂಧಪಟ್ಟ ಒಳಗಣ ಕಾರ್ಯಗಳ ಮೇಲ್ವಿಚಾರಣೆಯನ್ನು ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಆ ರೀತಿ ದೇವಧರರೆಂಬೊಬ್ಬ ವಿಧವೆಯು ಸಹಾಯವಾಗಿದ್ದಾರೆ. ಈಕೆಯು ಎಫ್ ಎ ವರೆಗೂ ವಿದ್ಯಾಭ್ಯಾಸ ಮಾಡಿದವರಾಗಿಯೂ ಧಾರವಾಡದಲ್ಲಿ ರೂ ೧೫೦ ಸಂಬಳದ ಕೆಲಸ ಸಿಕ್ಕುವದಾಗಿದ್ದರೂ ಹೋಗದೆ ಆಶ್ರಮವಾಸಿಗಳಿಗೋಸ್ಕರವೇ ತಮ್ಮ ಜೀವಿತವನ್ನು ವಿನಿಯೋಗಿಸಬೇಕೆಂಬ ದೃಢಚಿತ್ತರಾಗಿಯೂ ಇದ್ದಾರೆ.

ಹೀಗೆ ಧನರಂಜನೆಯನ್ನಪೇಕ್ಷಿಸದೆ ಜನೋಪಕಾರಾರ್ಥವಾಗಿಯೇ ಆಸಕ್ತರಾಗಿರುವ ಮ॥ ಕಾರ್ವೆಯವರೂ ಅವರ ಸಹಾಯಕರೂ ನಡಸುತ್ತಲಿರುವ ಕಾರ್ಯವು ಪ್ರಶಂಸನೀಯವಾಗಿಯೂ ಶ್ಲಾಘನೀಯವಾಗಿಯೂ ಇದೆ. ಈಗ ಆಶ್ರಮಕ್ಕೆ ಇನ್ನೂ ಸೇರದೆ ಹೊರಗೆ ನಾನಾವಿಧಸಂಕಟಗಳಿಗೆ ಗುರಿಯಾದ ಬಾಲವಿಧವೆಗಳನ್ನು ಅನೇಕರನ್ನಾಗಿ ಇಂದು ಸೇರಿಸಿಕೊಳ್ಳಬೇಕೆಂದೂ ಈ ವಿಧವಾಗಿ ಹಿಂದೂ ದೇಶದಲ್ಲಿ ಆಶ್ರಮವನ್ನು ಆದರಿಸಬೇಕೆಂದೂ ಪ್ರಜಾಸರದಾತಲಿರುವ ಈ ಮಹನೀಯರ ಉದ್ದೇಶವನ್ನು ಸಾರ್ಥಕಪಡಿಸುವದಕ್ಕೆ ಅನೇಕರು ಸಹಾಯವನ್ನು ಕೊಡುತ್ತಿದ್ದಾರೆ. ಒಬ್ಬ ಯೂರೋಪಿಯನ್ ಮಹನೀಯರು ಸಾಲಿಯಾನಾ ರೂ. ೫೦ನ್ನು ಕೊಡುತ್ತಿರುವರು. ಮ॥ ದಂಡಕರೆಂಬುವರು ತಿಂಗಳಿಗೆ ಐವತ್ತು ರೂಪಾಯಿಗಳನ್ನು ಕೊಡುತ್ತಾ ಬರುವದಲ್ಲದೆ ಆಶ್ರಮದ ಹೊಸ ಕಟ್ಟಡಗಳ ಧಂಡಿಗೂ ರೂ ೩,೦೦೦ ರೂ. ೫೦ ಚಂದಾ ಕೊಡುತ್ತಾರೆ.

ಆಶ್ರಮದ ವ್ಯವಸ್ಥಾಪಕರುಗಳು ಬಾಲವಿಧವೆಗಳ ಪುನರ್ವಿವಾಹ ವಿಷಯದಲ್ಲಿ ಎಷ್ಟುಮಾತ್ರವೂ ಯಾತನೆಯಿಲ್ಲದ ಬಲಾತ್ಕಾರವನ್ನು ಮಾಡುವುದಿಲ್ಲ. ಆಶ್ರಮಸ್ಥಾಪಕರಾದ ಕಾರ್ವೆಯವರೇ ವಿಧವೆಯನ್ನು ವಿವಾಹಮಾಡಿಕೊಂಡಿದ್ದರೂ ತಮ್ಮ ಆಶ್ರಿತರಾಗಿರುವವರಿಗೆ ಈ ಭಾಗದಲ್ಲಿ ಸರ್ವ ಸ್ವಾತಂತ್ರ್ಯವನ್ನು ಕೊಟ್ಟು ನೋಡಿಕೊಳ್ಳುತ್ತಿರುವ ವಿಧಾನವು ಶ್ಲಾಘನೀಯವಾಗಿಯೂ ಈ ಕಾಲವನ್ನು ಪ್ರಜೆಗಳಲ್ಲಿ ಸಕಲ ವರ್ಣಾಶ್ರಮದವರ ಪೋಷಣೆಗೆ ಯೋಗ್ಯವಾದುದನ್ನಾಗಿ ಮಾಡುವುದಾಗಿಯೂ ಇದೆ. ಇಂಥ ಆಶ್ರಮಗಳು ಅನೇಕವಾಗಿ ಹೆಚ್ಚಬೇಕೆಂದೂ ಈ ದೇಶದ ಸಕಲ ಭಾಗಗಳಲ್ಲಿಯೂ ಇರುವ ವಿಧವೆಗಳಿಗೆ ಆಶ್ರಯಸ್ಥಾನಗಳಾಗಬೇಕೆಂದೂ ನಾವು ಹಾರೈಸುವೆವು.

ಇಂಡಿಯಾ ದೇಶದ ವೃತ್ತಾಂತಗಳು.

ಟಿಬೆಟ್ಟಿನ ದಲಾಯಿಲಾಮಾಹರವರು ಆರ್ಗಾ ಎಂಬಲ್ಲಿಯೇ ಇದ್ದಾರೆ. ತಮ್ಮ ರಾಜಧಾನಿಯಾದ ಲ್ಹಾಸಾಪಟ್ಟಣಕ್ಕೆ ಹಿಂದಿರುಗಿ ಬರುವ ಸಂಭವವು ಇನ್ನೂ ಇಲ್ಲವೆಂದು ತೋರುವುದು.

*****

ಈ ತಿಂಗಳ ೧೬ ನೇ ತಾರೀಖಿನಲ್ಲಿ ಆಫ್ಗನಿಸ್ಥಾನದ ಅಮೀರರವರು ತಮ್ಮ ರಾಜಧಾನಿಯಿಂದ ಹೊರಟು ಫಿಷ್ಮ ಡಿಸ್ಟ್ರಿಕ್ಟಿನಲ್ಲಿ ಸಕ್ಕೀಟುಮಾಡುವವರಾಗಿದ್ದರು.

*****

ಇಂಡಿಯಾ ಸರ್ಕಾರದವರು ಬಂಗಾಳದಲ್ಲಿ ಉತ್ತರ ಇಂಡಿಯಾದಲ್ಲಿಯೂ ನಿಜಾಮರ ಸೀಮೆಯಲ್ಲಿಯೂ ವಾಯವ್ಯ ಪ್ರಾಂತ್ಯದಲ್ಲಿಯೂ ಅಯೋಧ್ಯಾ ರೋಹಿಲ್‌ಖಂಡ ಪ್ರಾಂತ್ಯದಲ್ಲಿಯೂ ಹೊಸದಾಗಿ ರೈಲ್ವೆಗಳನ್ನು ಹಾಕುವದಾಗಿ ಮಂಜೂರ್ ಮಾಡಿದ್ದಾರೆ.

*****

ಮುಂದಣ ಜನವರಿ ತಿಂಗಳಿನಲ್ಲಿ ನಡೆಯುವದಕ್ಕಿರುವ ಹೈದರಾಬಾದಿನ ನಿಜಾಮರವರ ನ್ಯಾಷನಲ್ ವರ್ಷವರ್ಧಂತ್ಯುತ್ಸವದ ಜ್ಞಾಪಕಾರ್ಥವಾಗಿ ಆ ಸಂಸ್ಥಾನದ ಕೈಗಾರಿಕೆ ಕಲಾವಿದ್ಯೆ ಫಲ ಪುಷ್ಪಾದಿ ಪದಾರ್ಥಗಳನ್ನು ಪ್ರದರ್ಶನಮಾಡುವುದಕ್ಕಿದ್ದಾರೆಂದು ಗೊತ್ತಾಗಿದೆ.

*****

ಇಂಡಿಯಾ ದೇಶದಲ್ಲಿ ಜರ್ಮನ್ ದೇಶದ ಬೀರ್ ಎಂಬ ಮಾದಕ ಪದಾರ್ಥದ ಉಪಯೋಗವು ಹೆಚ್ಚುತ್ತಲಿರುವದಕ್ಕೆ ಅಲಾಸಿ ಬೀರ್ ಬ್ರೂವರಿ ಕಂಪೆನಿಯವರೆಂಬವರು ಕಳೆದ ಆರು ತಿಂಗಳ ಅಂತ್ಯಕ್ಕೆ ತಮ್ಮ ಪೇರುದಾರರಿಗೆ ಸೇಕಡಾ ೧೪ ರಂತೆ ಲಾಭವನ್ನು ಹಂಚುವದೇ ಸಾಕ್ಷಿಯಾಗಿದೆ.

*****

ಮದ್ರಾಸ್ ಮೇಲ್ ಎಂಬ ಪತ್ರಿಕೆಯ ಆಫೀಸಿನಲ್ಲಿ ದಿವಾನನಾಗಿದ್ದ ಗೋವಿಂದರಾಜಲು ನಾಯುಡು ಎಂಬವನು ರಾತ್ರಿವೇಳೆಯಲ್ಲಿ ಮಲಗಿರುವ ಸರಪಿಯಮೇಲಿರುವ ವೇಳೆಯಲ್ಲಿ ಆ ರಾತ್ರಿ ಆರು ವ್ಯಕ್ತಿಗಳನ್ನು ಕದ್ದನೆಂಬ ತಪ್ಪಿಗೆ ಗುರಿಯಾಗಿ ನಾಲ್ಕು ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ಹೊಂದಿದನು.

ಉತ್ತರ ಹಿಂದುಸ್ಥಾನದಲ್ಲಿ ವಿಜಾಟ್ ಡಿಸ್ಟ್ರಿಕ್ಟಿನ ಜೊತೆಯಲ್ಲಿನ ಕೆಲವು ಮುಖ್ಯವಾದ ಸ್ಥಳಗಳಲ್ಲಿ ಕಳೆದ ನಾಲ್ಕೈದು ತಿಂಗಳ ಕಾಲದಲ್ಲೇ ಹತ್ತು ವಿಧವಾವಿವಾಹಗಳು ನಡೆದಿವೆ. ವಿಜಾಟದಲ್ಲಿ ವಿಧವಾವಿವಾಹಕ ಸಭೆಗೆ ಕಾರ್ಯದರ್ಶಿಯಾಗಿರುವ ಲಾಲಾತಿಲೋಕಿನಿ ಸಹಾಯ ಎಂಬ ಸಾಹುಕಾರರು ಈ ವಿಷಯದಲ್ಲಿ ಬಹಳ ಮುತುವರ್ಜಿಯನ್ನು ತೆಗೆದುಕೊಂಡಿರುತ್ತಾರೆ.

*****

ಬರ್ಮಾ ರಾಜಧಾನಿಯಾದ ರಂಗೂನಿನಲ್ಲಿ ಇಲಿಗಳನ್ನು ನಿರ್ಮೂಲ ಮಾಡುವ ಕೆಲಸವು ಬಹು ಆಸಕ್ತಿಯಿಂದ ನಡೆಯುತ್ತಲಿದೆಯೆಂದೂ ಆಗಸ್ಟ್ ತಿಂಗಳೊಂದರಲ್ಲೇ ೧೩೦೦೪ ಇಲಿಗಳು ನಾಶವಾದವೆಂದೂ ಅತ್ಯವಶ್ಯಕವಾಗಿ ನಡೆಯಬೇಕಾದ ಈ ಕೆಲಸವನ್ನು ಮ್ಯುನಿಸಿಪಾಲಿಟಿಯವರು ನಿಲ್ಲಿಸಬಾರದೆಂದೂ ಅಲ್ಲಿನ ಪ್ಲೇಗ್‌ಕಮಿಷನರವರು ರಿಪೋರ್ಟು ಮಾಡಿದ್ದಾರೆ.

*****

೧೯೦೩ ನೇ ವರ್ಷದಲ್ಲಿ ಇಂಡಿಯಾದೊಳಗೆಲ್ಲಾ ರೈಲ್ವೆ ಅಪಾಯಗಳಲ್ಲಿ ಮಡಿದವರು ಒಟ್ಟು ೧೦ ಮಂದಿ ಮಾತ್ರವೇ ಮಡಿದವರ ಸಂಖ್ಯೆ ೮೩; ರೈಲ್ವೆ ನೌಕರರಲ್ಲಿ ಪ್ರಾಣವನ್ನು ಕಳೆದುಕೊಂಡವರು ಅಥವಾ ಘಾಯಪಟ್ಟವರು ೭೩ ಮಂದಿಯೆಂಬಲೂ ಆತ್ಮಹತ್ಯಾ ಇತರ ಕಾರಣಗಳಿಂದ ಮೃತಪಟ್ಟವರು ೩೪೫೮, ಘಾಯ ಮಾಡಿದವರು ೬೫೪ ಮಂದಿಯೆಂಬಲೂ ತಿಳಿದು ಬಂದಿದೆ.

*****

ಬೊಂಬಾಯಿನ ರೇವಿನಲ್ಲಿ ಪೆಟ್ರೋಲ್ ಎಂಬ ದ್ರಾವಕವನ್ನು ತುಂಬಿದ್ದ ಹಲವು ನೋಕೆಗಳು ಹತ್ತಿಕೊಂಡು ಉರಿದುಹೋದವು. ಈ ದ್ರಾವಕವು ಮೋಟಾರ್ ಎಂಬ ಗಾಡಿಗಳ ಉಪಯೋಗಕ್ಕೋಸ್ಕರ ಅಮೇರಿಕದ ಕಂಪೆನಿಯವರು ಭರ್ತಿಮಾಡಿ ಕಳುಹಿಸಿದ ಸರಕಾಗಿದ್ದಿತು. ಆ ದೋಣಿಗಳ ಅಂಬಿಗರು ಅದಿಗೆ ಸೇದಿದ ಬೆಂಕಿಯಿಂದಲೆ ಈ ಅನಾಹುತವುಂಟಾಯಿತೆಂದು ಊಹಿತವಾಗಿದೆ.

*****

ಹಿಮಾಲಯದಲ್ಲಿ ಕಾಂಚನಗಂಗಾ ಶಿಖರವನ್ನು ಪರಿಶೋಧಿಸಿ ಬರುವದಕ್ಕೆಂದು ಹೊರಟಿದ್ದ ನಾಲ್ಕು ಮಂದಿ ವಿದೇಶೀಯರೊಳಗೆ ಒಬ್ಬನು ಮೂರು ಮಂದಿ ದೇಶೀಯರೊಂದಿಗೆ ಕೊಲ್ಲಲ್ಪಟ್ಟನೆಂದು ವರ್ತಮಾನ ಬಂದಿದೆ. ಇವರು ಸುಮಾರು ೨೨,೦೦೦ ಅಡಿಗಳ ಎತ್ತರದಲ್ಲಿ ಹತ್ತುತ್ತಿರುವಾಗ್ಗೆ ಮೇಲಿನಿಂದ ಮಂಜು ಗಡ್ಡೆಗಳ ಒಂದು ಪ್ರವಾಹವು ಅವರ ಮೇಲೆ ಬಿದ್ದು ನಾಶವಾದರೆಂದು ತಿಳಿದು ಬರುತ್ತದೆ.

*****

ಗಿಲ್ಗಿಟ್ ಎಂಬಲ್ಲಿ ಮಂಜು ಗಡ್ಡೆಯ ಹೊಳೆಗೆ ಕಟ್ಟಿದ್ದ ಏಕ ಕಟ್ಟು ಒಡೆದು ಇಷ್ಕೋಮನ್ ಎಂಬ ಕಣಿವೆಯಲ್ಲಿ ಪ್ರವಾಹವುಂಟಾಗಿ ಅಪಾರವಾದ ನಷ್ಟವುಂಟಾಯಿತಷ್ಟೆ. ಅಧಿಕಾರಿಗಳ ದೂರದೃಷ್ಟಿಯ ಫಲವಾಗಿ ಪ್ರಾಣನಷ್ಟವೇನೂ ಆಗಲಿಲ್ಲ. ಈಗ ನಷ್ಟವಾಗಿರುವುದನ್ನು ಭರ್ತಿ ಸರಿಪಡಿಸುವುದಕ್ಕಾಗಿ ಅಲ್ಲಿ ಮುಂತಾದವರುಗಳಿಗೋಸ್ಕರ ೨೯೦೦೦ ರೂಪಾಯಿಗಳನ್ನು ಸರ್ಕಾರದವರು ಮಂಜೂರ್ ಮಾಡಿದ್ದಾರೆ.

*****

ಕೂನೂರಿನಲ್ಲಿ ಪಾಸ್ಟ್ಯೂರ್ ಇನ್ಸ್ಟಿಟ್ಯೂಟೆಂಬ (ಹುಚ್ಚು ನಾಯಿ ಕಡಿತಕ್ಕೆ ಚಿಕಿತ್ಸೆಯನ್ನು ಮಾಡುವ ವೈದ್ಯಶಾಲೆ) ಶಾಲೆಗೆ ಹೆಚ್ಚಾಗಿ ಕಟ್ಟಡಗಳನ್ನು ಸೇರಿಸುವದಕ್ಕೆ ಮದ್ರಾಸ್ ಸರ್ಕಾರದವರು ಸುಮಾರು ೪೦ ಸಾವಿರ ರೂಪಾಯಿಗಳನ್ನು ಮಂಜೂರ್ ಮಾಡಿದರು. ಇದರೊಳಗೆ ೨೦ ಮಂದಿ ದೇಶೀಯರಾದ ರೋಗಿಗಳಿಗಾಗಿ ರೂ. ೨೨೫೦ ವೆಚ್ಚದ ಮೇಲೆ ಕಟ್ಟಬೇಕೆಂದಿದ್ದ ಕಟ್ಟಡಗಳನ್ನು ಬೇಡವೆಂದು ತಳ್ಳಿ ೬ ಮಂದಿಗೆ ಸಾಕಾಗುವಷ್ಟನ್ನು ಮಾತ್ರ ಕಟ್ಟಬೇಕೆಂದು ಸರ್ಕಾರದವರು ಅಪ್ಪಣೆ ಕೊಟ್ಟಿರುವರು.

*****

ಮದ್ರಾಸಿನಲ್ಲಿ ಕಾಲರಾ ಉಪದ್ರವ ಶಾಂತಿಗಾಗಿ ಕೆಲವರು ಗ್ರಾಮ ದೇವತೆಯ ಉತ್ಸವವನ್ನು ಮಾಡುತ್ತಾ ವಿಯಾಸ್‌ಸಾಹೆಬ್ ಪೇಟೆಯೊಳಕ್ಕೆ ಹೋಗುವಷ್ಟರಲ್ಲಿ ಆ ಬಳಿಯಲ್ಲಿದ್ದ ಕೆಲವು ಪುಂಡರು ಅಡ್ಡಿಮಾಡಿದರು. ಆದರೂ ಉತ್ಸವವು ಮುಂದುವರಿಯಲು ಆ ಪುಂಡರು ಇನ್ನು ಕೆಲವರನ್ನು ಜೊತೆಯಲ್ಲಿ ಸೇರಿಸಿಕೊಂಡು ಕಲ್ಲು ದೊಣ್ಣೆಗಳಿಂದ ಉತ್ಸವಗಾರರನ್ನು ಹೊಡೆಯಲುದ್ಯುಕ್ತರಾದರು. ಅಷ್ಟರೊಳಗೆ ಪೋಲೀಸಿನವರು ಬರಲಾಗಿ ಆ ಪುಂಡರು ಪಲಾಯನವನ್ನು ಮಾಡಿದರು. ಈಗ ಆ ಪುಂಡರಲ್ಲಿ ಮುಖಂಡರಾದವರನ್ನು ಹಿಡಿಯುವದಕ್ಕೆ ವಾರಂಟುಗಳು ಹುಟ್ಟಿವೆ.

*****

ಬೊಂಬಾಯಿ ಗವರ್ನರವರಿಂದ ಲಾರ್ಡ್ ಲೇಮಿಂಗ್ಟನ್‌ರವರೇ ರು ಪೂನಾದಿಂದ ಮೋಟಾರ್‌ಗಾಡಿಯಲ್ಲಿ ಸವಾರಿ ಹೋಗುತ್ತಿರುವಾಗ ಒಬ್ಬ ಮುದುಕಿಯು ಬಂದು ಅವರ ಗಾಡಿಯ ಮುಂದೆ ಸಾಷ್ಟಾಂಗವಾಗಿ ಬಿದ್ದುಕೊಂಡರು. ಗವರ್ನರವರು ಆ ಕ್ಷಣವೇ ಗಾಡಿಯನ್ನು ನಿಲ್ಲಿಸದೆ ಹೋಗಿದ್ದರೆ ಅವಳು ಸತ್ತು ಹೋಗುತ್ತಿದ್ದಳು. ಅವಳು ಪಿತ್ರಾರ್ಜಿತವಾದ ಭೂಸ್ಥಿತಿಯೇ ಒಂದು ಆಸ್ತಿಯ ವಿಷಯದಲ್ಲಿ ಗವರ್ನರ್ ಸಾಹೇಬರಿಂದಲೇ ಇತ್ಯರ್ಥವನ್ನು ಪಡೆಯಬೇಕೆಂಬುದಾಗಿ ಬಹು ದಿನಗಳಿಂದ ಪೋಲೀಸಿನ ಮುಖಾಂತರವಾಗಿ ಅರ್ಜಿಗಳನ್ನು ಕೊಟ್ಟುಕೊಟ್ಟು ಸಾಕಾಗಿ ಈಗ ಮೇಲೆಕಂಡ ವಿಧದಲ್ಲಿ ಗವರ್ನರವರ ಗಮನವನ್ನು ಆಕರ್ಷಿಸಬೇಕೆಂದು ಪ್ರಯತ್ನಿಸಿದಳು. ಆಕೆಯ ಪ್ರಯತ್ನವು ಆತ್ಮಹತ್ಯವಾಗಿ ಪರಿಣಮಿಸದಂತೆ ಗವರ್ನರವರು ತಪ್ಪಿಸಿದರು. ತರುವಾಯ ಈಗ ಆಕೆಯನ್ನು ಪೋಲೀಸಿನವರು ಹಿಡಿದುಕೊಂಡು ಹೋಗಿ ವಶದಲ್ಲಿ ಇರಿಸಿದರು.

ಮಾಳವ ಮೊದಲಾದ ಪ್ರಾಂತ್ಯಗಳಲ್ಲಿ ಈ ವರ್ಷ ಅನಾವೃಷ್ಟಿಯ ಭಯವಿಲ್ಲದಿದ್ದರೂ ಇವುಗಳ ಉತ್ತರದ ಭಾಗಗಳಲ್ಲಿ ಮಳೆಯಿಲ್ಲದೆ ಜನರ ಹಾಹಾಕಾರವು ಹೆಚ್ಚಿದೆಯೆಂದು ಗ್ವಾಲಿಯರಿನಿಂದ ವರ್ತಮಾನವು ಬಂದಿದೆ.

*****

ಕಳೆದವಾರದಲ್ಲಿ ರಾಜಪುಟಾನ ಸೀಮೆಗೆ ಸೇರಿದ ರಿಲೀಫ್ ಕಾಮಗಾರಿಗಳಲ್ಲಿ ೧೩,೦೦೦ ಜನರು ಕೆಲಸವನ್ನು ಮಾಡುತ್ತಿದ್ದರು. ಇವರಲ್ಲಿ ೯೦೦೦ ಮಂದಿಗಿಂತಲೂ ಹೆಚ್ಚು ಜನರು ಮೊರ್ವಾರವೆಂಬ ಪ್ರಾಂತ್ಯದವರೆಂದು ತಿಳಿದುಬರುತ್ತದೆ.

*****

ಪಂಜಾಬಿನಲ್ಲೂ ಕ್ಷಾಮಸೂಚನೆಗಳು ತಲದೋರಿವೆ. ಹಿಸ್ಸಾರ್, ಡೆಹಲಿ, ಅಂಬಾಲಾ, ಜಲಂಧರ್, ಲಾಹೋರ್ ಅಮೃತಸಾರ್ ಮೊದಲಾದ ಡಿಸ್ಟ್ರಿಕ್ಟುಗಳಲ್ಲಿ ಖರೀ ಫಸಲೆಲ್ಲಾ ಸುಮಾರಾಗಿದ್ದರೂ ಕಾಷ್ಕೀ ಬೆಳೆಯು ಕೆಲವು ಕಡೆ ಒಣಗುತ್ತಲೂ ಇತರ ಕಡೆಗಳಲ್ಲಿ ಸಂಪೂರ್ಣವಾಗಿ ಒಣಗಿ ಹೋಗಿಯೂ ಇದ್ದು, ಜನರು ಮಳೆಗೆ ಬಹಳವಾಗಿ ನಿರೀಕ್ಷಣೆಯನ್ನು ಮಾಡುತಲಿದ್ದಾರೆ.

*****

ರಾಜಪುಟಾನ ಸೀಮೆಯಲ್ಲಿ ಅನಾವೃಷ್ಟಿಯು ಹಾವಳಿಯು ಸಹ ಸಹೋದರನಷ್ಟಾಗಿರುವದರಿಂದ ಅಲ್ಲಿನ ನಿವಾಸಿಗಳು ಸಾವಿರಗಟ್ಟಲೆಯಾಗಿ ದಕ್ಷಿಣದಿಕ್ಕಾಗಿ ಹೊರಟುಹೋಗುತ್ತಿದ್ದಾರೆ. ಅವರ ದನಗಳನ್ನು ಕಾಪಾಡಿಕೊಳ್ಳುವದಕ್ಕೋಸ್ಕರ ಇಂಡ್ಯಾ ಸರ್ಕಾರದವರು ಒಂದು ಲಕ್ಷ ರೂಪಾಯಿಯನ್ನು ವ್ಯಯಮಾಡಿ ರಾಜಪುಟಾನದಿಂದ ಅಹಮದಾಬಾದಿನ ವರೆಗೂ ದಾರಿಯ ಉದ್ದಕ್ಕೂ ಅಲ್ಲಲ್ಲಿ ದನಗಳಿಗೆ ಮೇವನ್ನು ಒದಗಿಸಿಕೊಡುವವರಾಗಿದ್ದಾರೆ. ಹೀಗೆಯೇ ಇಂದೋರ್ ಸಂಸ್ಥಾನದವರೂ ಸೌಲಭ್ಯಗಳನ್ನು ಕಲ್ಪಿಸಿಕೊಡುವರೆಂದು ಗೊತ್ತಾಗಿದೆ.

*****

ಉತ್ತರ ಹಿಂದುಸ್ಥಾನದ ಸಂಯುಕ್ತ ಪ್ರಾಂತ್ಯಗಳಲ್ಲಿ ಮಳೆಯು ಚೆನ್ನಾಗಿ ನಡನಡೆ ಹೋಗಿರುವದರಿಂದ ಆಗ್ರ ಡಿಸ್ಟ್ರಿಕ್ಟಿನ ರೈತರು ತಮ್ಮ ದನಗಳಿಗೆ ಮರದೆಲೆಗಳನ್ನೇ ತಿನ್ನಿಸುವವರಾಗಿದ್ದಾರೆ. ಕೆಲವೆಡೆಗಳಲ್ಲಿ ನಿವಾಸಿಗಳು ತಮ್ಮ ಗ್ರಾಮಾಂತರಗಳನ್ನು ಬಿಟ್ಟು ಹೊರಟುಹೋಗುವವರಾಗಿದ್ದಾರೆ. ರೋಹಿಲಖಂಡ ಅಯೋಧ್ಯಾ ಡಿಸ್ಟ್ರಿಕ್ಟುಗಳಿಗೆ ಮಳೆಯು ಅತ್ಯಾವಶ್ಯಕವಾಗಿದೆ. ಹಮೀರಪುರ ಮೊದಲಾದ ಸ್ಥಳಗಳಲ್ಲಿ ಹುಲ್ಲು ನೀರುಗಳು ಸಿಕ್ಕದೆ ದನಗಳಿಗೆ ಬಹಳ ಕಷ್ಟವಾಗಿದೆ. ಕೆಲವು ಸ್ಥಳಗಳಲ್ಲಿ ಗೋಧಿಯನ್ನು ೧೯೦೦ ನೆ ವರ್ಷದ ಕ್ಷಾಮದಲ್ಲಿ ಮಾರುತ್ತಿದ್ದದಕ್ಕಿಂತ ಹೆಚ್ಚು ಕ್ರಯಕ್ಕೆ ಮಾರುತ್ತಾರೆ.

*****

ರಾಜಪುಟಾನದಲ್ಲಿ ಕ್ಷಾಮೋಪದ್ರವವನ್ನು ತಾಳಲಾರದೆ ಜನರು ನಿತ್ಯವೂ ಗುಂಪು ಗುಂಪಾಗಿ ಹೊರಟು ಸಿಂಧೂದೇಶಕ್ಕೆ ಹೋಗುವವರಾಗಿದ್ದಾರೆ. ಈಗಾಗಲೆ ೨,೦೦೦ ಕ್ಕಿಂತ ಹೆಚ್ಚು ಮಂದಿ ಹೋಗಿದ್ದಾರೆ. ಇವರ ದೆಸೆಯಿಂದ ಉತ್ತರಕ್ಕೆ ಹೋಗುವ ರೈಲ್ವೆಗಳಲ್ಲಿ ಟ್ರೇನುಗಳನ್ನು ಹೆಚ್ಚಾಗಿ ನಡಿಸುತ್ತಾರೆ. ಜೋಧಪುರ ಸಂಸ್ಥಾನಾಧಿಪತಿಗಳು ತಮ್ಮ ಎಲ್ಲೆಯೊಳಗಿರತಕ್ಕ ನಿವಾಸಿಗಳ ಸಹಾಯಾರ್ಥವಾಗಿ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟು ರಿಲೀಫ್ ಕಾಮಗಾರಿಗಳನ್ನು ಮಾಡಿಸಲುದ್ಯುಕ್ತರಾಗಿದ್ದಾರೆ. ಇದಲ್ಲದೆ ಧರ್ಮಾರ್ಥವಾದ ಫಂಡುಗಳೂ ಹುಟ್ಟಿವೆ. ಇತರ ಸಂಸ್ಥಾನಾಧಿಪರೂ ಇದೇ ರೀತಿ ಉದ್ಯೋಗಿಸಿದ್ದಾರೆ.

*****

ಉತ್ತರ ಇಂಡಿಯಾದಲ್ಲಿ ಮಳೆಯಿಲ್ಲದೆ ಕ್ಷಾಮಪ್ರಾಪ್ತಿಯಾದೀತೇನೋ ಎಂಬ ಭೀತಿಯು ಕಳೆದ ವಾರದಲ್ಲಿ ಬಿದ್ದ ಮಳೆಗಳಿಂದ ಸಂಪೂರ್ಣವಾಗಿ ನಿವರ್ತಿಯಾಗಿದೆ. ಒಣಗಿ ನಿಂತಿದ್ದ ಕೆರೆಗಳಲ್ಲಿ ೬ ಅಡಿಯಷ್ಟು ನೀರು ಬಂದಿದೆ. ಇದರಿಂದ ದನಗಳಿಗೆ ಮೇವು ನೀರುಗಳ ಭಯವೂ ತಪ್ಪಿತು. ವರ್ಷದ ಮೊದಲಿನ ಫಸಲು ನಷ್ಟವಾದರೂ ಎರಡನೇ ಫಸಲಾದರೂ ಕೈಸೇರುವದೆಂಬ ನಂಬಿಕೆಯು ಹುಟ್ಟಿ ಜನರು ಹರ್ಷಿತರಾಗಿದ್ದಾರೆ.

*****

ಪಂಜಾಬಿನಲ್ಲಿ ಒಂದಾನೊಂದು ಕ್ರಿಮಿನಲ್ ಕೇಸಿನಲ್ಲಿ ಐವತ್ತು ಹೀರಿಂಗುಗಳು ಆದವಂತೆ. ಇದನ್ನು ನೋಡಿ ಆ ಪ್ರಾಂತದ ಚೀಫ್ ಕೋರ್ಟಿನವರು ನ್ಯಾಯವಿಚಾರಣೆಯಲ್ಲಿ ಮುಂದೆ ಇಷ್ಟು ತಡವಾಗಬಾರದೆಂದು ಆಜ್ಞೆಯನ್ನು ಕೊಟ್ಟಿದ್ದಾರೆ. ಅಪರಾಧಿಸ್ಥಾನದಲ್ಲಿ ಎಳೆಂಟು ವಾರಗಳ ವರೆಗೂ ನಿಂತುಕೊಂಡು ಕಷ್ಟಪಡಬೇಕಾದ ಅಪರಾಧಿಗಳಿಗೆ ಕಾರಾಗೃಹವಾಸವು ಕೋರ್ಟಿನಲ್ಲೇ ಮುಕ್ಕಾಲುಪಾಲು ಮುಗಿಯುವಂತಾಗುವುದರಿಂದ ನ್ಯಾಯಾಧಿಪತಿಯು ಫೈಸಲನ್ನು ಯಾವಾಗ ಹೇಳುವನೋ ಎಂದು ಅಪರಾಧಿಗಳು ಕಾದುಕೊಂಡಿರುವಂತೆ ಮಾಡುವದು ಉಚಿತವಾಗಿರಲಾರದು.

*****

ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ಇಂಡಿಯಾ ದೇಶದಲ್ಲೆಲ್ಲಿಯೂ ಆನೆ ಶಿಕಾರಿಯಲ್ಲಿ ಪ್ರಸಿದ್ಧರಾಗಿದ್ದ ಮಿ॥ ಸಾಂಡರ್ಸ್‌ಯವರು ಬಂಗಾಳದಲ್ಲಿ ಹತ್ತು ಅಡಿಯ ಮೇಲೆ ಒಂದೆರಡು ಅಂಗುಲ ಪ್ರಮಾಣ ಮಾತ್ರ ಎತ್ತರವಾಗಿರುವ ಆನೆಯಿದೆಯೆಂದು ಕೇಳಿ ಇಲ್ಲಿಂದ ಸಾವಿರಾರು ಮೈಲು ದೂರ ಹೋಗಿ ನೋಡಿಬಂದರಂತೆ. ಈಗಲಾದರೋ ಟಿಪ್ಪಾಜಿನ ಅಂಬಾರಿ ಎಂಬ ತೇಯುವ ತೋಟದ ಬಳಿಯಲ್ಲಿ ೧೦—೧೨ ಅಡಿಗಳ ಎತ್ತರವಾಗಿರುವ ಒಂದು ಸಲಗವು ಬಹಳ ಹಾವಳಿಯನ್ನುಂಟುಮಾಡುತ್ತಿರುವುದಾಗಿಯೂ ಅದನ್ನು ಕೊಂದವರಿಗೆ ಸರ್ಕಾರದವರು ಬಹುಮಾನವನ್ನು ಕೊಡುವುದಾಗಿಯೂ ತಿಳಿದು ಬರುತ್ತದೆ.

*****

ಮದ್ರಾಸಿನಲ್ಲಿ ಮುನಿಸಾಮಿಯೆಂಬೊಬ್ಬ ಪೊಲೀಸು ಜವಾನನು ರತ್ನನಾಯ್ಕನೆಂಬ ಅಕ್ಕಿ ಅಂಗಡಿಯವನಲ್ಲಿ ಒಂದು ರೂಪಾಯಿ ಲಂಚವನ್ನು ತೆಗೆದುಕೊಂಡನೆಂಬ ತಪ್ಪಿಗೆ ಗುರಿಯಾಗಿದ್ದನು. ಸೀನಿಯರ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ॥ ಅಜೀದುದ್ದೀನ್ ಸಾಹೇಬರವರು ಕಳೆದ ಎರಡು ತಿಂಗಳಿಂದ ಈ ಕೇಸನ್ನು ವಿಚಾರಿಸಿ ಮಾಡಿ ಮುನಿಸಾಮಿಯು ತಪ್ಪಿತಸ್ಥನೆಂದು ತೀರ್ಮಾನಿಸಿ ೬ ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು. ಪೊಲೀಸಿನ ಇಲಾಖೆಯಲ್ಲಿ ಎಚ್ಚರಿಕೆಯನ್ನುಂಟುಮಾಡುವದು ಅತ್ಯಾವಶ್ಯಕವಾಗಿರುವದರಿಂದಲೆ ಅಪರಾಧಿಗೆ ಇಷ್ಟು ಕಠಿಣವಾದ ಶಿಕ್ಷೆಯನ್ನು ಕೊಡಲಾಯಿತೆಂದು ಮ್ಯಾಜಿಸ್ಟ್ರೇಟು ಸಾಹೇಬರು ಹೇಳಿದರು.

*****

ಕಳೆದವಾರದಲ್ಲಿ ಕಲ್ಕತ್ತಾನಗರದ ಸೆರೆಮನೆಯಲ್ಲಿ ಒಬ್ಬ ಯೂರೋಪಿಯನ್ ಕೈದಿಯು ಪಾಷಾಣವನ್ನು ತಿಂದು ಆತ್ಮಹತ್ಯ ಮಾಡಿಕೊಂಡನು. ಇವನು ಜರ್ಮನಿನವರ ಪಕ್ಷವಾಗಿ ಚಂದಾ ವಸೂಲ್ಮಾಡುತ್ತೇನೆಂದು ಹೇಳುತ್ತ ಅನೇಕರಿಂದ ದ್ರವ್ಯವನ್ನು ಸೇರಿಸಿ ದುರುಪಯೋಗಪಡಿಸಿಕೊಂಡು ಅಂಬಾಲಾ ಪಟ್ಟಣದಿಂದ ಕಲ್ಕತ್ತೆಗೆ ಓಡಿಹೋದನೆಂದು ಗೊತ್ತಾಗಿದ್ದದರಿಂದ ಅವನನ್ನು ಇಲ್ಲಿನ ಪೊಲೀಸಿನವರು ಪತ್ತೆಮಾಡಿದರು. ಇವನ ವಶದಲ್ಲಿದ್ದ ಕಾಗದಪತ್ರಗಳನ್ನು ನೋಡುವಾಗ್ಗೆ ಇವನು ಬೇರೆ ಬೇರೆ ಹೆಸರುಗಳನ್ನಿಟ್ಟುಕೊಂಡು ಬಹು ಕಾಲದಿಂದ ದುಷ್ಪ್ರವರ್ತನೆಯಲ್ಲಿದ್ದವನೆಂದು ಹೊರಪಟ್ಟಿದೆ. ಹಿಂದೆ ಇವನ ನಡತೆಯನ್ನು ಕಂಡುಹಿಡಿದ ಕೆಲವು ಪೊಲೀಸಿನವರಿಗೆ ಇವನು ಅಪಾರವಾದ ದ್ರವ್ಯವನ್ನು ಲಂಚವಾಗಿ ಕೊಟ್ಟನೆಂಬುದೂ ಈಗ ಪತ್ತೆಯಾಗಿದೆ.

*****

ಮದ್ರಾಸಿನಲ್ಲಿ ಸುಂದರಂ ಅಯ್ಯರ್ ಎಂಬೊಬ್ಬ ವಿದ್ಯಾರ್ಥಿಯು ತನ್ನ ಜ್ಞಾತಿಯ ಮನೆಯಲ್ಲಿದ್ದುಕೊಂಡು ತಿರುವಳಕ್ಕೇಣಿಯಲ್ಲಿರುವ ಹೈಸ್ಕೂಲಿನಲ್ಲಿ ಓದಿಕೊಳ್ಳುತ್ತಲಿದ್ದನು. ಒಂದು ದಿನ ಮನೆಯಲ್ಲಿ ರೂ॥ ೬೦೦ ಬೆಲೆಯುಳ್ಳ ಒಡವೆಗಳೂ ರೂ॥ ೨೦೦ ನಗದು ಸಹ ಮಾಯವಾದವು. ಕೂಡಲೆ ಮನೆಯವರು ಪೊಲೀಸಿಗೆ ತಿಳಿಸಲು ಅವರು ಬಂದು ಹುಡುಕುವದರೊಳಗೆ ಮೇಲ್ಕಂಡ ವಿದ್ಯಾರ್ಥಿಯು ತಾನೇ ಅವುಗಳನ್ನು ಅಪಹರಿಸಿದುದಾಗಿ ತಿಳಿಸಿದನು. ಒಡವೆಗಳೆಲ್ಲಾ ಅವನು ಓದಿಕೊಳ್ಳುವ ಕೊಟಡಿಯೊಳಗೇ ಸಿಕ್ಕಿದವು. ನಗದು ಹಣವನ್ನು ಅವನೊಬ್ಬ ಸ್ನೇಹಿತನ ಬಳಿಯಲ್ಲಿಟ್ಟಿರುವದಾಗಿ ತಿಳಿಸಿದನು. ಈ ಹುಡುಗನನ್ನು ಕೋರ್ಟಿನಲ್ಲಿ ವಿಚಾರಿಸುವಾಗ್ಗೆ ಇವನಿಗೆ ೧೫ ವರ್ಷ ವಯಸ್ಸಿಂತಲೂ ಬುದ್ಧಿಶಾಲಿಯಾದುದರಿಂದ ಸ್ಕೂಲಿನಲ್ಲಿ ಫ್ರೀ ವಿದ್ಯಾರ್ಥಿಯೆಂತಲೂ ಗುಣಶಾಲಿಯೆಂತಲೂ ತಿಳಿದುಬಂತು. ಆದರೂ ಈ ಕೆಟ್ಟನಡತೆಯಿಂದ ಹೆಸರು ಕೆಟ್ಟುಹೋದುದೇ ಅವನಿಗೆ ತಕ್ಕ ಶಿಕ್ಷೆ ಆದುದೆಂದು ಜಡ್ಜಿಯವರು ಊಹಿಸಿ ೩೦ ರೂ॥ ಜಾಮೀನಿನ ಮೇಲೆ ಬಿಡುಗಡೆಮಾಡಿದರು.

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದ ಬರಹ್ಯ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊವಾಬುದಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

'ಮೈಸೂರು ದೇಶದ ನಿವಾಸಿ.'—ಹೆಸರು ವಿಳಾಸಗಳಿಲ್ಲ.

ಟಿ ವೆಂಕಟವರದಾಚಾರ್, ತಿಪ್ಟೂರು.—ನಿಮ್ಮ ಬಾತ್ಮಿಯನ್ನು ಪ್ರಕಟಿಸುವುದರಿಂದ ಯಾರಿಗೂ ಯಾವ ಪ್ರಯೋಜನವೂ ಇಲ್ಲ. ಆ "ಸಾಧು" ಎಂಬುವರಿಗೆ ನೀವೇ ಬುದ್ಧಿ ಹೇಳಬಾರದೇ?—ಎಡಿ.

ಕರೆಸ್‌ಪಾಂಡೆನ್ಸ್.

ಮಿ॥ ಮಹಮ್ಮದ್ ಮೆಕ್ಕೆಯವರು.

ಅಯ್ಯಾ,

ಈ ಹಿರಿಯೂರಿಗೆ ಕಳೆದ ಮೂರು ವರುಷಗಳಿಂದ ಅಮಲ್‌ದಾರ್ರಾಗಿ ದಯಮಾಡಿಸಿರುವ ಗುಲಾಂಮಹಮ್ಮದ್ ಮೆಕ್ಕೆಯವರು ಈ ತಾಲ್ಲೋಕಿಗೆ ಒಂದ ಲಾಗಾಯತು ಜನೋಪಯೋಗವಾದ ಅನೇಕ ಕೆಲಸಗಳನ್ನು ಮಾಡಿ ಈ ಹಿರಿಯೂರನ್ನು ರೋಗದ ಭಯದಿಂದ ತಪ್ಪಿಸಿದರು.

ಮುನಿಸಿಪಾಲಿಟಿ ವಿಷಯದಲ್ಲಿ ಸಂಪೂರ್ಣವಾದ ಗಮನಕೊಟ್ಟು ಜನಗಳ ಆರೋಗ್ಯಕ್ಕೆ ತಕ್ಕಂತೆ ಕ್ರಮಪಡಿಸಿದರು. ರಾತ್ರಿವೇಳೆಯಲ್ಲಿ ಬಡವರಿಗೂ, ಭಾಗ್ಯವಂತರಿಗೂ, ಸಮಾನೋಪಯೋಗವಾಗುವಂತೆ ಬೆಳಕನ್ನು ಉಪಯೋಗಪಡಿಸಿದರು. ಮುನಿಸಿಪಲ್ ಸುಂಕವು ದೊಡ್ಡ ಹುಟ್ಟುವಳಿ ಸಿಗದೆ ಸುಂಕಗಳು ಅತ್ಯಲ್ಪವಾಗಿದ್ದದ್ದನ್ನು ಕ್ರಮಪಡಿಸಿ ಹೊಸದಾಗಿ ಒಂದೆರಡು ಭಾವಿಗಳನ್ನು ತೆಗಸಿ ಜನಗಳ ಕಷ್ಟವನ್ನು ಬಿಡಿಸಿದರು. ಶಿಥಿಲವಾಗಿದ್ದ ಹಿಂದೂ ಮತ್ತು ಮಹಮ್ಮದೀಯ ದೇವಸ್ಥಾನಗಳನ್ನು ದುರಸ್ತು ಮಾಡಿಸಿದರು. ಸ್ಕೂಲ್‌ಗಳಲ್ಲಿ ಬಾಲಕಬಾಲಕಿಯರ ಆಟಪಾಟಕ್ಕೆ ತಕ್ಕ ಹಾಗೆ ಕ್ರಮಗಳನ್ನು ಏರ್ಪಡಿಸಿ ಬಾಲಕರಿಗೆ ಅತ್ಯಂತ ಪ್ರೋತ್ಸಾಹವನ್ನುಂಟುಮಾಡಿ ಮಾಸ್ಟರುಗಳ ಗೌರವವನ್ನು ಹೆಚ್ಚಿಸಿದರೂ ಈ ವಿಷಯದಲ್ಲಿ ಉತ್ಸಾಹದಿಂದ ಎಷ್ಟೋ ದುಡ್ಡನ್ನು ಸ್ವಂತವಾಗಿ ಖರ್ಚು ಮಾಡಿದರು.

ಇಂಥಾ ಮಹಾನುಭಾವರನ್ನು ಕೋಲಾರ್ ಪೇಟೆಗೆ ವರ್ಗಮಾಡಿರುವುದಾಗಿ ವರ್ತಮಾನ ತಿಳಿದು ಆ ಬಾಲವೃದ್ಧರೂ ಬಹಳ ವ್ಯಸನಪಡುತ್ತಿದ್ದಾರೆ.

ಹಿರಿಯೂರು ವೆಂ. ರಂ.

೧೦—೯—೦೫

ಕೆರೆ ಕಾಮಗಾರಿ ಮಾಗಡಿ ತಾ॥ ಬಾಣವಾಡಿ.

ಅಯ್ಯಾ,

ಈ ಗ್ರಾಮದ ಕೆರೆ ಕಾಮಗಾರಿ ಒಂದು ವರ್ಷ ಬಾಗ... ನಡಿಯುತ್ತಾ ಇದ್ದು. ಈ ಬಾಬ್ತು ಆಬ್ಕಾರ್‌ವರೆಗೆ ಕಾಮಗಾರಿ ... ಸುಮಾರಲ್ಲಿ ಇಂಜನಿಯರ್ ಸಾಹೇಬರವರು ದಯಮಾಡಿಸಿ ... ಗಾರಿಯಲ್ಲಾ ಪರಾಂಬರಿಸಿ ಈ ಕೆರೆಗೆ ಹೊರಗಲಿಂದ ... ವಗೈರೆ ಬಂದು ಕೆರೆ ಮುಚ್ಚಿಕೊಳ್ಳುವಂತೆ ಹೇಳಲುಕಟ್ಟೆಯು ... ಹಿಂದೆ ಕಲ್ಲು ಕಟ್ಟಡವೂ ಇನ್ನು ವಗೈರೆ ಕೆಲಸಗಳಿಗೆ ... ರೂಪಾಯಿ ಸ್ಯಾಂಕ್ಷನ್ ಮಾಡಿದಂತೆ ವರ್ತಮಾನ ಕೇಳ... ಧರ್ಮಪ್ರಭುಗಳಾದ ಗವರ್ನಮೆಂಟಿನವರು ಈ ಗ್ರಾಮದ ... ತರ ಮೇಲೆ ದಯವಿಟ್ಟು ಕೆರೆ ಕೋಡಿಯನ್ನು ಅರ್ಧ ಅಡಿ ... ಮಾಡಿಸಿಕೊಟ್ಟರೆ ಅನುಕೂಲವಾಗಿರುತ್ತೆ. ಕೆರೆ ಹಿಂದೆ ... ೫೦೦ ರೂಪಾಯಿನ ಅಚ್ಚುಗಟ್ಟು ಇರುತ್ತೆ. ರೈತರು ೪–೫ ರೂ... ಕಂಟ್ರಿಬ್ಯೂಷನ್ ಮೊಬಲಗು ಕೊಟ್ಟು ಇದ್ದಾರೆ. ಅದರಿಂದ ಕೆ... ದಾವರ್ತಿ ತುಂಬಿದರೆ ಫಸಲು ಪೂರೈಸುತ್ತೆ. ಒಂದು ದಪ... ಫಸಲು ಆಗುವದಿಲ್ಲ. ಈ ಸಂಗತಿ ಗವರ್ನಮೆಂಟಿನವರಿಗೆ ... ವರ್ತಿ ರೂಬರೂಬು ಹೇಳಿಕೊಂಡಾಗ್ಯೂ ಅರ್ಜಿ ಕೊಟ್ಟ... ಬಹತ್ತರ ಅಹವಾಲ್ ಚಿತ್ತಕ್ಕೆ ತರಲಿಲ್ಲ. ಈಗಲಾದರೂ ಗ... ಮೆಂಟಿನವರು ಕೆರೆ ಕೋಡಿಯನ್ನು ಅರ್ಧ ಅಡಿ ಪ್ರಟಾವ... ಸಿಕೊಡಬೇಕು.

ದೇಶಾಭಿಮಾ...

ಋಷ್ಯಶೃಂಗಾಶ್ರಮ.

ಅಯ್ಯಾ,

ಮೈಸೂರು ಸಂಸ್ಥಾನಕ್ಕೆ ಸೇರಿದ ಕಡೂರು ಡಿಸ್ಟ್ರಿಕ್ಟ್ ... ಪ್ಪ ತಾಲ್ಲೂಕ್ ಕಿಗ್ಗ ಯೆನ್ನುವ ಗ್ರಾಮದಲ್ಲಿ ಋಷ್ಯಶೃಂ... ದೇವಸ್ಥಾನವೆಂದು ಒಂದು ಗುಡಿ ಇರುತ್ತೆ. ಈ ದೇವಾಲಯ... ಋಷ್ಯಶೃಂಗಮುನಿಗಳು ಶಿಲಾಕಾರವಾಗಿ ಉದ್ಭವಿಸಿರುತ್ತಾ... ಮುನಿಗಳು ತಮಗೆ ತಪಸ್ಸು ಮಾಡುವದಕ್ಕೆ ಯೋಗ್ಯವಾದ ... ವನ್ನು ಹುಡುಕಿಕೊಂಡು ಬರುತ್ತಿರುವಾಗ್ಗೆ ಈ ಕಿಗ್ಗ ಯ... ಗ್ರಾಮದಲ್ಲಿ ಒಂದು ಕಲ್ಲಿನೊಳಗೆ ಐಕ್ಯನಾಗಿರುತ್ತಾರೆ. ಈ ... ಸ್ಥಾನದ ಎಡಭಾಗದಿಂದ ನಂದಿನಿಯೆಂಬ ನದಿಯೂ ಬಲಭಾ... ದ ನಳಿನಿಯೆಂಬ ನದಿಯೂ ಹಿಂಭಾಗದ ನರಸಿಂಹಪರ್ವತ... ಬೆಟ್ಟದಿಂದ ಉದ್ಭವಿಸಿ ಈ ದೇವಸ್ಥಾನದ ಮುಂಭಾಗದಲ್ಲಿ ... ವಿಸಿ ಮುಂದಕ್ಕೆ ಹರಿದು ಹೋಗುತ್ತವೆ. ಹಿಂದೆ ಜನಕಮ... ಯನು ಪ್ರಜಾಪೇಕ್ಷೆಯಿಂದಲೂ ತನ್ನ ರಾಜ್ಯದಲ್ಲಿ ದುರ್ಭಿಕ್ಷ... ದ್ದರಿಂದಲೂ ಈ ಮುನಿಗಳಿಂದ ತಮಗೆ ಬಂದಂಥಾ ಕಷ್ಟ... ಹೊಂದಿದ್ದರಿಂದಲೂ ಈ ಮುನಿಗಳಿಂದ ತನಗೆ ಬಂದಂಥಾ ಕ... ನಿವಾರಣೆಯಾಗುವದೆಂದು ತಿಳಿದು ಈ ಶೃಂಗಮುನಿಗಳು ... ಗಿರುವ ಈ ಕಿಗ್ಗ ಯೆಂಬ ಗ್ರಾಮದಲ್ಲಿ ಬಂದು ಅವರನ್ನು ಪ್ರಾ... ತಮ್ಮ ರಾಜ್ಯಕ್ಕೆ ಕರೆದುಕೊಂಡು ಹೋಗುವದರಲ್ಲಿಯೇ ... ಜ್ಯದಲ್ಲಿ ಮಳೆಬೆಳೆ ಬಂದು ಬಹಳ ಸುಭಿಕ್ಷವಾಯಿತು. ಹೀ... ಈ ದೇಶದಲ್ಲಿರತಕ್ಕ ಜನಗಳು ಸಹ ಗೇನರ ಮಹಾತ್ಮೆಯ... ಯದೆ ಮಳೆಬೆಳೆಯೂ ಇಲ್ಲದೆ ದಾರಿದ್ರ್ಯಾವಸ್ಥೆಯಿಂದ ಕಷ್ಟ... ಜೀವನ ಮಾಡಿಕೊಳ್ಳುತ್ತಾ ಇದ್ದಾರೆ. ಈ ಗ್ರಾಮಕ್ಕೆ ಬಂದ... ಲಿ ಅಥವಾ ತಮ್ಮ ತಮ್ಮ ವಾಸಸ್ಥಳದಲ್ಲಿಯೇ ಆಗಲಿ ಯೋ... ನುಸಾರ ಪೂಜೆ ವಗೈರೆಯಿಂದ ದೇವರನ್ನು ಪ್ರಾರ್ಥಿಸಿ ... ಕಾರ್ಯವನ್ನು ನೆರವೇರಿಸಿಕೊಂಡು ತಮಗೆ ಪ್ರಾಪ್ತವಾಗಿರುವ ... ದಾರಿದ್ರ್ಯಾವಸ್ಥೆಯನ್ನು ಹೋಗಲಾಡಿಸಿಕೊಂಡು ಸುಖವಾಗಿರಬೇ... ಯೂ ದೇಶಕ್ಕೆಲ್ಲಾ ಕ್ಷೇಮವಾಗಬೇಕಾದ್ದು ಸಹ ನನ್ನ ... ನೇಜಾಗಿರುತ್ತೆ.

ತಮ್ಮ ವಿಧೇಯ...

೧೧—೯—೦೫

ಜಿ. ಕೃಷ್ಣಯ್ಯ...

[ಈ ಲೇಖನದ ಪ್ರಕಾರ ನಿಜವಾಗಿ ನಡೆಯುವುದೆಂದು ... ರುವವರು ಆ ಸ್ಥಳಕ್ಕೆ ಹೋಗಿ ತಮ್ಮ ಕಷ್ಟಗಳನ್ನು ಪರಿಹಾ... ಡಿಕೊಂಡರೆ ನಾವು ಬಹಳವಾಗಿ ಸಂತೋಷಿಸುವೆವು—ಎಡಿ.]

ಪ್ರಜೆಗಳ ಕ್ಷೇಮಚಿಂತನೆ,

ಅಯ್ಯಾ,

ಜನಾಧೀಶ್ವರರಾದ ನಮ್ಮ ಶ್ರೀಮನ್ಮಹಾರಾಜರವರು ... ಪ್ರಜೆಗಳ ಕಷ್ಟಗಳನ್ನು ತಿಳಿಯುವ ಸಲುವಾಗಿ ಪ್ರತಿ... ವು ದಸರಾ ದರ್ಬಾರಿನಲ್ಲಿ ಪ್ರಜಾಪ್ರತಿನಿಧಿಗಳೆಂದು ಪ್ರತಿ... ಕಿಗೂ ೨—೩ ಜನ ಲಕ್ಷ್ಮೀಕಟಾಕ್ಷವುಳ್ಳ ಮಹನೀಯರನ್ನು ... ಮನೆಯಿಂದ ಖರ್ಚು ಕೊಟ್ಟು ಬಹು ಆದರದಿಂದ ಬರಮಾಡಿ... ಡು ಪ್ರಜೆಗಳ ಕಷ್ಟವೇನು, ಅದಕ್ಕೆ ಪ್ರತ್ಯಾಮ್ನಾಯ ಅ... ಕಾದ ಪ್ರತಿಫಲ ಏನು, ಎಂದು ವಿಚಾರ ನಡೆಯುತ್ತಾಗಿ ಕೇಳ... ಇದ್ದೇವೆ. ಹೊರತು ಪ್ರಜೆಗಳ ಕಷ್ಟವನ್ನು ಈ ಮೆಂಬರುಗಳು ... ಜೆ ಮಾಡಿಕೊಂಡ ಹಾಗೂ ಅದಕ್ಕೆ ತಕ್ಕ ಶಮನವನ್ನು ... ಹಾಗೂ ಚರ್ಚಿಸಿದ್ದು ಉತ್ತಮವೇ ಅಥವ ಮಧ್ಯಮವೇ? ... ದನಾಗಲಿ ಆ ಮೆಂಬರುಗಳ ಪೈಕಿ ಇಂಥಾವರೆ ಕೋ... ಸಭಾನಾಯಕರಾಗಿದ್ದರು ಎಂಬ ಅಂಶವು ತಮ್ಮ ಪತ್ರಿಕಾ... ಕವೇ ಆಗಲಿ ಬೇರೆ ವಿಧವಾಗಿಯೇ ಆಗಲಿ ನಮ್ಮವರು ಹೋ... ರು, ಪ್ರಜೆಗಳಿಗೆ ಕ್ಷೇಮಕರವಾದ ಮಾತುಗಳನ್ನು ಪ್ರಭು... ಅರಿಕೆ ಮಾಡಿಕೊಂಡರು ಎಂಬ ವಾರ್ತೆಯೇ ನಾನು ಕೇಳ... ಇದರಿಂದ ಅರಿಕೆ ಮಾಡಿಕೊಳ್ಳುವದೇನಂದರೆ—

ಸಭೆಗೆ ಸೇರುವ ಮಾ॥ ಯಮಾದ ಮೆಂಬರುಗಳೆಂಬ... ಪ್ರಜಾಕಂಡದಲ್ಲಿ ಪ್ರಸಿದ್ಧರು. ಇವರಿಗೆ ಪ್ರಜೆಗಳ ಕಷ್ಟ ತಿಳಿ... ದೋ ದೇವರಿಗೆ ಗೊತ್ತು. ಅಥವ ಅವರ ವಿದ್ಯಾಬಲದಿಂದ ತಿ... ಬಹುದೋ? ತಿಳಿಯದು. ಇದೇ ಪ್ರಜಾಕ್ಷೇಮಕ್ಕಾಗಿ ಇನ್ನು ... ದೆ ದಸರಾ ದರ್ಬಾರಿಗೆ ಮುಂಚೆ ಆಯಾಯ ತಾಲ್ಲೂಕು ... ಮಾಗಣೆಗಳ ಪ್ರಜೆಗಳವರು ತಾವೆ ಚುನಾಯಿಸಿ ತಮ್ಮ ಸುಖ... ಗಳನ್ನು ಬೋಧಿಸಿ ಪ್ರಜಾಪ್ರತಿನಿಧಿಯಾಗಿ ಕಳುಹಿಸಬೇ...

...ಗಾರರವರು ... ಮುಂದೆ ಶಿಫಾರಸು ಮಾಡಿದರೆ ಪ್ರಜೆಗಳ ...ಯುಕ್ತ ಸರಕಾರಕ್ಕೆ ತಿಳಿಯುವದರಲ್ಲಿ ಅನ್ನಕೂಲವಾಗಿರು... ಈ ಪ್ರಜೆಗಳು ಚುನಾಯಿಸುವ ಪ್ರತಿನಿಧಿಗಳಿಗೆ ಸಂಸ್ಥಾನ ...ದ ಖರ್ಚುಕೊಟ್ಟರೆ ಬಹಳ ಪರವಶೀ ಆಯಿತು, ಇಲ್ಲವಾದರೆ ... ಖರ್ಚುಕೊಟ್ಟು ಕಳುಹಿಸುತ್ತೇವೆ ಮೊದಲು ಇದ್ದ ಭಾವಿ ...ಚುನಾವಣಾ ಪ್ರತಿನಿಧಿಗಳಿಗೆ ಮೊದಲಿನಂತೆ ಮಹಾಸಭೆಗೆ ಸನ್ಮಾನ ...ಕೊಟ್ಟು ಕರಿಸುವದರಲ್ಲಿ ನಾವು ತುಂಬಾ ಸಂತೋಷಪಡ...ತ್ತ ಇದ್ದೇವೆ

...ಶ್ವರ ನಗರ ತಾ॥ ೧೧—೯—೦೫.

ಪ್ರಾಂತೀಕ ವರ್ತಮಾನಗಳು.

ದೊಡ್ಡಬಳ್ಳಾಪುರ.—ಇಲ್ಲಿ ೨೦ ದಿನಗಳಿಗೆ ಮುಂದೆ ಬಂದ ...ಮಳೆ ೧—೨ ತಿಂಗಳು ನೀರು ಬಂದು ಹೊಲಗಳು ಚನ್ನಾಗಿ ... ಮಳೆ ಬಾರದೆ ಕಡಮೆಯಾಗಿದೆ ೧೬ನೇ ತಾ॥ ನಲ್ಲಿ ಸ್ವಲ್ಪ ...ಬಂತು ಈಗ ಮಳೆ ಮುಖ್ಯವಾಗಿ ಬೇಕಾಗಿದೆ. ಇಲ್ಲಿ ಪ್ರೋ... ನೂತನರಾಗಿದ್ದ ಶ್ರೀನಿವಾಸರಾಯರು ಚಿಕ್ಕಮಗಳೂರಿಗೆ ಹೋ... ಇವರಿಗೆ ಬದಲಾಗಿ ವಿ ಪ್ರಹಲ್ಲಾದರಾಯರು ಬಂದಿದ್ದಾರೆ ...ನಡ ಬಹು ಒಳ್ಳೆಯವರು ಈಗಾಗಲೇ ಜನರ ಪ್ರೀತಿಗ...ಗಳನ್ನು ಸಂಪಾದಿಸಿಕೊಂಡಿದಾರೆ ಚನ್ನಪಟ್ಟಣದಲ್ಲಿ ಇವರನ್ನು ...ದ್ದೇನೆ ಅಲ್ಲಿಯೂ ಒಳ್ಳೇ ಹೆಸರನ್ನು ಹೊಂದಿದ್ದರು. ಇವ... ಅಭಿವೃದ್ಧಿಗೆ ಬರುವದರಲ್ಲಿ ಸಂದೇಹವಿಲ್ಲ.

ಕೊಪ್ಪ—ನಮ್ಮ ಮೈಸೂರು ಸಂಸ್ಥಾನದ ದಿವಾನ್ ಬಹದೂರ್ ...ವಿ ಯರ್ ಕೃಷ್ಣಮೂರ್ತಿ ಕೆ. ಸಿ ಎಸ್ ಐ. ಯವ... ಕಮಿಷನರ್ ಡಿ. ಡೆಪ್ಟಿ ಕಮಿಷನರರವರು ಬೇರೆ ಬೇರೆ ಇಲಾಖಾ ...ಗಳೊಡನೆ ೩ನೇ ತಾ॥ ಸೋಮವಾರ ಬೆಳಿಗ್ಗೆ ದಯಮಾ... ಬಾಳಗದ್ದೆಯಲ್ಲಿರುವ ಮುಸಾಫರ್ ಬಂಗ್ಲೆಯಲ್ಲಿ ಇಳುಕೊಂ... ಆಫೀಸರುಗಳಿಗೋಸ್ಕರ ಡೇರೆಗಳು ಹಾಕಲ್ಪಟ್ಟಿದ್ದವು. ರೈ...ಜೆಗಳ ಅಹವಾಲುಗಳನ್ನು ವಿಚಾರಿಸಿ ಅಡಿಕೆಯ ಸುಂಕವನ್ನು ...ವದು ಒಳ್ಳೇದೋ ಇಲ್ಲವೇ ತೆಗೆಯುವದು ಒಳ್ಳೇದೋ ಎಂ... ವಿಚಾರಿಸಿ ತೆಗೆಯುವದು ಒಳ್ಳೇದೆಂಬರ್ಥಕ್ಕೆ ನಮ್ಮ ನೋಟು ...ಕ್ಕಿನಲ್ಲಿ ಬರೆದುಕೊಂಡರು ಮಂಗಳವಾರ ತಾಲೂಕ್ ಕಚೇರಿ... ಇನ್ಸ್ಪೆಕ್ಟರ್ ಮತ್ತು ಆಫಿಷಿಯಲ್ ಕ್ವಾರ್ಟರ್ಸ್‌ಗಳನ್ನು ...ನೋಡಿ ಬಂದರು ಅನಂತರದಲ್ಲಿ ನಾಭದ್ರವನ್ನು ಇಲ್ಲಿ ...ಆಚರಿಸಿದರು. ಮಳೆಯ ನಿಮಿತ್ಯ ಸ್ವಲ್ಪ ತಡೆದು ದಯಮಾಡಿ... ಬುಧವಾರ ಬೆಳಿಗ್ಗೆ ೮ ಘಂಟೆಯ ಸಮಯದಲ್ಲಿ ಆಫೀಸ...ರೊಡನೆ ಶೃಂಗೇರಿಗೆ ದಯಮಾಡಿಸಿದರು. ೩ನೇ ತಾ॥ ಭಾನು... ಸಂತೆಯ ದಿನ ದಿನಸಿ ಗಾಡಿಗಳು ಬಾರದೆ ಹರೀಕೆರೆಯಲ್ಲಿ ...ಗಾಗಿ ನಿಲ್ಲಿಸಲ್ಪಟ್ಟಿದ್ದರಿಂದ ಇಲ್ಲಿ ಅಲ್ಪಸ್ವಲ್ಪ ದಾಸ್ತಾನವಾಗಿ ... ವರ್ತಕರ ಅಕ್ಕಿರಾಗಿಯು ಬಹಳ ಪ್ರಿಯವಾಗಿ ಮಾರಾಟ... ಕಾಫಿತೋಟದ ಕೂಲಿ ಆಳುಗಳಲ್ಲಿ ಅನೇಕರು ಅಕ್ಕಿ... ಬಹಳ ತುಟ್ಟಿಯಾಗಿದೆಯಲ್ಲಾ ಎಂದು ಗೋಳಾಡಿಕೊಂಡು ...ಗಳ ಕಡೆಗೆ ಹೊರಟು ಹೋದರು

ಚಿಕ್ಕನಾಯಕನಹಳ್ಳಿ.—ಎಲ್ಲಿ ಮಳೆ ಇಲ್ಲದೆ ಕೆರೆಗಳ ಅಚ್ಚು... ಪೈರುಗಳೆಲ್ಲಾ ಒಣಗುತ್ತಲಿವೆ ದಿನಸಿಯ ಧಾರಣೆಯಾದ...ಕ್ಕೆ ಸಂತೆಗೂ ಏರುತ್ತಲಿದೆಯೇ ಹೊರತು ಇಳಿಯಲಿಲ್ಲ. ...ಗ್ಗರ ಕಷ್ಟಕಾಲ ಪ್ರಾಪ್ತವಾಯಿತು ನಮ್ಮ ಡಿಸ್ಟ್ರಿಕ್ಟ್ ಎಕ್ಸಿಕ್ಯೂಟಿವ್ ಇಂಜಿನೀಯರ್ ಸಾಹೇಬರೂ ಸರ್ಕೀಟಿನಲ್ಲಿದಾರೆ ಈ ಊ...ಲ್ಲಿ ಹುಚ್ಚನಾಯಿಗಳು ಹೆಚ್ಚಾಗಿವೆ ಅವುಗಳ ಮೂಲಕ ಜನರಿಗೆ ...ಬರುವದರಲ್ಲಿ ಸಂಶಯವಿಲ್ಲ ಇದಲ್ಲದೆ ನಾಯಿಗಳಿಗೆ ಹು...ಚ್ಚು ಹಿಡಿದು ಇತರ ಪ್ರಾಣಿಗಳಿಗೂ ನಷ್ಟವಾಗುವದರಲ್ಲಿ ಸಂಶಯ... ಆದಕಾರಣ ಮುನ್ಸಿಪಾಲಿಟಿಯವರು ನಾಯಿಗಳನ್ನು ಕೊಲ್ಲಿಸುವದು ಒಳ್ಳೇದು ಕೆಲವು ಬೀದಿಗಳಲ್ಲಿನ ಚರಂಡಿಗಳ ನೀರು ...ದುರ್ವಾಸನೆಯನ್ನುಂಟುಮಾಡುವದರಿಂದ ಮುನ್ಸಿಪಾಲಿಟಿ...ಯವರು ಅಂಥಾ ಚರಂಡಿಗಳ ನೀರು ಸಲೀಸಾಗಿ ಹೋಗುವಂತೆ ...ಗುಂಡಿಗಳಿಗೆ ಕಲ್ಲು ಕಟ್ಟಿಸುವದು ಒಳ್ಳೇದಲ್ಲವೇ? ನೀರಿನ ವಿಷಯ ಕಷ್ಟವೇ ಸರಿ. ನಲ್ಲಿಗಳ ಸಂಖ್ಯೆಯು ಹೆಚ್ಚಿದಹಾಗೆಲ್ಲಾ ...ನ್ನು ವಿಸ್ತರಿಸುವ ಕೆಲಸವು ಮುನ್ಸಿಪಾಲಿಟಿಯ ಆಳುಗಳಿಗೆ ಹೆ...ಯಿತು ನಲ್ಲಿಗಳ ನೀರನ್ನೇ ನಂಬಿಕೊಂಡಿರುವವರ ಕೂಗು ...ಮುನ್ಸಿಪಲ್ ಅಧಿಕಾರಿಗಳಿಗೆ ಮುಟ್ಟಲಿಲ್ಲ ಹಾಗೂ ಕೇಳಿದರೆ ...ಮೊದಲು ನಲ್ಲಿಗಳ ಸಂಖ್ಯೆಯು ಕಮ್ಮಿಯಾಗಿದ್ದಾಗ ಕೆರೆಯಿಂದ ...ಲ್ಟರ್ ಬೆಡ್ಡಿಗೆ ಬರುವ ನೀರು ಸಾಕಾಗುತ್ತಿತ್ತಂತಲೂ ಈಗ ಬರು... ನೀರು ಸಾಲಾಗುವದಿಲ್ಲವೆಂತಲೂ ಹೇಳುತ್ತಾರೆ ಕಾರಣವೇನೆಂ... ಕೆರೆಯಿಂದ ಫಿಲ್ಟರ್ ಬೆಡ್ಡಿಗೆ ಇಟ್ಟಿರುವ ನಲ್ಲಿಯು ಸಣ್ಣದು ...ನ್ನು ತೆಗೆದು ದೊಡ್ಡ ನಲ್ಲಿಯನ್ನು ಇಟ್ಟಹೊರ್ತು ನಲ್ಲಿಗಳಲ್ಲಿ ...ಚೆನ್ನಾಗ್ಯೂ ನೀರು ಬಿಡುವದು ಅಸಾಧ್ಯವೆಂದು ಹೇಳುತ್ತಾರೆ. ...ಹೇಕೆಂದರೆ ಫಿಲ್ಟರ್‌ಬೆಡ್ಡಿನಲ್ಲಿ ನೀರೇ ಇರುವದಿಲ್ಲವಂತೆ. ನೀರು ...ವ ನಲ್ಲಿಯನ್ನು ನಮ್ಮ ಇಂಜಿನೀಯರ್ ಸಾಹೇಬರೂ ವೈಸ್ ಪ್ರೆಸಿಡೆಂಟರೂ ಹೋಗಿ ನೋಡಿ ಬಂದರೆಂದು ಕೇಳುತ್ತೇನೆ. ಇವಾ...ಗ ದೊಡ್ಡ ನಲ್ಲಿಯನ್ನು ಹಾಕಿಸಿ ಫಿಲ್ಟರ್ ಬೆಡ್ಡನ್ನು ತುಂಬಿಸಿ ...ಮೂಲಕ ಪಟ್ಟಣಕ್ಕೆ ಬೇಕಾದಷ್ಟು ನೀರನ್ನು ಬಿಡುವಂತೆ ಅಪ್ಪಣೆ ...ಮಾಡುವರೋ ನೋಡಬೇಕು ಕಳೆದ ಸೋಮವಾರ ಮಂಗಳ...ವಾರಗಳಲ್ಲಿ ಮೈಸೂರಿನಿಂದ ಬಂದಿದ್ದ ವೀಣೆ ಸುಬ್ಬಣ್ಣನವರು ...ಮ್ಮ ಸಂಗೀತದಿಂದ ಇಲ್ಲಿನ ಎಲ್ಲಾ ದೊಡ್ಡಮನುಷ್ಯರನ್ನು ಸಂ...ತೋಷಪಡಿಸಿದರು.

ಕೆಸ್ಲೀಸ್‌ಪೇಟೆ—ಹೊ ಚನ್ನಾಗಿಟೆ ಪೈರುಗಳೆಲ್ಲಾ ಉತ್ಕೃಷ್ಟ ...ಸ್ಥಿತಿಯಲ್ಲಿವೆ. ಆದರೆ ಇನ್ನು ಒಂದೆರಡು ವಾರಗಳಲ್ಲಿ ಮಳೆ ...ಚೆನ್ನಾಗಿ ಬಾರದಿದ್ದರೆ ಪೈರುಗಳೆಲ್ಲಾ ಸಂಪೂರ್ಣವಾಗಿ ಕೆಟ್ಟುಹೋ... ಈ ವರ್ಷ ರಾಗಿ ಫಸಲು ಆಗುವದಿಲ್ಲವೆಂಬ ತೀರ್ಮಾನಿಸಬ...

...ಹೆಚ್ಚಾಗಿದೆ ಇಲ್ಲಿನ ನದಿಯಲ್ಲಿ ಜನರು ಮಾಡುವ ಅಸಹ್ಯಕೃತ್ಯಗಳಿಂದ ನೀರು ಬಹು ಹೇಸಿಕೆಯಾಗಿರುತ್ತೆ. ಈ ನೀರೇ ಊರಿನ ಜನರಿಗೆ ಪಾನಯೋಗ್ಯವಾಗಿದೆ ಇದರಲ್ಲಿ ಜನರು ಹೇಸಿಗೆ ಮಾಡುವದು ವಾಡಿಕೆಯಾಗಿದೆ. ಜನರ ಕ್ಷೇಮಕ್ಕೆ ಕುಡಿಯುವ ನೀರು ಮುಖ್ಯ. ಹೀಗಿದ್ದರೂ ಇಲ್ಲಿನ ಅಯೋಗ್ಯರಾದ ಜನರು ತಮಗೆ ಮಾತ್ರವಲ್ಲ ಊರಿನ ಜನರಿಗೆಲ್ಲಾ ಕೇಡು ಮಾಡುವದನ್ನು ತಪ್ಪಿಸುವಂತೆ ಸರ್ಕಾರದವರು ತುಂಬಾ ಶ್ರದ್ಧೆತಕ್ಕೊಂಡು ಯಾವಾಗಲೂ ಒಬ್ಬ ಕಾವಲುಗಾರನನ್ನು ನೇಮಿಸುವದು ಅತ್ಯವಶ್ಯವಾಗಿದೆ ಆಗಾಗ್ಗೆ ಅಪರೂಪವಾಗಿ ಒಬ್ಬ ಪೋಲೀಸ್ ಜವಾನನು ನೀರಿನ ಮೇಲೆ ನಿಂತುಕೊಳ್ಳುವದು ಸಾಲದು. ಜನರು ತಕ್ಕ ತಿಳುವಳಿಕೆ ಸಂಪಾದಿಸಿ ತಾವು ಕುಡಿಯುವ ನೀರನ್ನು ತಾವೇ ಭದ್ರವಾಗಿ ಕಾಪಾಡುವಂತೆ ಮೂಢರೂ ತುಂಟರೂ ಆದ ಕೆಲವರಿಗೆ ತಿದ್ದುಪಾಟುಗಳು ಬುದ್ಧಿಮಾತುಗಳು ಅತ್ಯವಶ್ಯವಾಗಿದೆ. ಮುನಿಸಿಪಲ್ ವೈಸ್ ಪ್ರೆಸಿಡೆಂಟರವರು ಮುಖ್ಯವಾಗಿ ಸುಕೀರ್ತಿವಂತರಾದ ಮ॥ ಅನಂತರಾಯರು ದಯವಿಟ್ಟು ಈ ಉಪಕಾರಗಳನ್ನು ಪ್ರಜೆಗಳಿಗೋಸ್ಕರ ಮಾಡುವರೆಂತ ನಿರೀಕ್ಷಿಸಬೇಕಾಗಿದೆ. ಮ್ಯುನಿಸಿಪಲ್ ಲಾಂದ್ರಗಳ ಸ್ಥಿತಿ ಸ್ವಲ್ಪ ಉತ್ತಮ ಸ್ಥಿತಿಗೆ ಬಂದಿವೆ. ಜನರಿಗೆ ಸಂತೋಷಕರವಾಗಿದೆ. ಈ ಪ್ರಾಂತ್ಯದಲ್ಲಿನ ಜನರಿಗೆ ವಿದ್ಯಾಭ್ಯಾಸವೂ ಉತ್ತಮ ಸಂಸರ್ಗವೂ ಬಹು ಕಮ್ಮಿಯಾಗಿರುವದರಿಂದಲೇ ಅಲ್ಪಕಾರ್ಯಗಳಿಗೋಸ್ಕರ ಜನರು ಗುದ್ದಾಟ ಜಗಳಮಾಡುತ್ತಾ ಕೋರ್ಟುಗಳಿಗೆ ತಿರುಗುತ್ತಿದ್ದಾರೆ, ಬಹು ಕಾಲದಿಂದಲೂ ಇಲ್ಲಿನ ಡೆಪ್ಟಿ ಅಮಲ್ದಾರಿಯನ್ನು ನೋಡುತ್ತಿದ್ದ ಮ॥ ಅನಂತರಂಗಯ್ಯಂಗಾರ್ಯರು ಪೂರ್ವದ ಪೋರೆಸ್ಟ್ ಆಫೀಸಿಗೆ ಹೋಗುವಂತೆ ಸರ್ಕಾರದವರು ತಿಳಿಸಿದ್ದಾರೆ ಇವರು ಒಳ್ಳೇ ಗುಣ ನಡತೆ ಸಾಹಸ ಸಾಮರ್ಥ್ಯಗಳಲ್ಲಿ ಪ್ರಾಶಸ್ತ್ಯವನ್ನು ತೋರ್ಪಡಿಸುತ್ತ ಬಂದಿರುವದರಿಂದಲೂ ಪ್ರಜಾರಂಜಕರಾಗಿರುವದರಿಂದಲೂ ಶ್ರೀಮನ್ ಮಹಾರಾಜ ಸರ್ಕಾರದವರೂ ಮುಖ್ಯವಾಗಿ ಶ್ರೀ ಭಗವಂತನು ಇವರಿಗೆ ಪುನಃ ಶೀಘ್ರವಾಗಿ ಮುಂಚಿನ ಪದವಿಯನ್ನು ಅಂದರೆ ಡೆಪ್ಟಿ ಅಮಲ್ದಾರಿಯನ್ನು ದಯಪಾಲಿಸುವಂತೆ ಪ್ರಾರ್ಥಿಸುತ್ತೇವೆ ಇಲ್ಲಿನ ವೆಸ್ಲಿಯನ್ ಮಿಶನ್ ಇಂಗ್ಲಿಷ್ ಸ್ಕೂಲ್ ಪಂಚಮ ಸ್ಕೂಲ್ ಮಾತ್ರವಲ್ಲ ಹೊಸದಾಗಿ ಹೆಡ್ ಮ್ಯಾಸ್ಟರು ಮೂರ್ತ್ಯಯ್ಯನವರನ್ನು ಧರಿಸಿರುವ ಕನ್ನಡ ಪಾಠಶಾಲೆಯೂ ಅಭಿವೃದ್ಧಿಯ ಸ್ಥಿತಿಯಲ್ಲಿರುವಂತೆ ತಕ್ಕ ಅನುಕೂಲಗಳನ್ನು ಮಾರ್ಗದರ್ಶಕರುಗಳು ದಯಪಾಲಿಸುತ್ತಾ ಬಂದಿದಾರೆ. ಆದರೆ ಸ್ತ್ರೀವಿದ್ಯಾಭ್ಯಾಸವು ಒಳ್ಳೇ ಸ್ಥಿತಿಯಲ್ಲಿಲ್ಲವೆಂತ ತೋರುತ್ತೆ. ಯಾಕೆಂದರೆ ಜನರು ಎಲ್ಲಿ ತಾವಾಗಿ ಸ್ತ್ರೀವಿದ್ಯಾಶಾಲೆಗೆ ಸಾಕಾದಷ್ಟು ಪ್ರೋತ್ಸಾಹ ಕೊಡುವದಿಲ್ಲವೋ ಅಲ್ಲಿ ಕ್ಷೀಣ ಸ್ಥಿತಿಗೆ ಬರುವದು ಆಶ್ಚರ್ಯವಲ್ಲ. ಮಹಮ್ಮದೀಯರ ಬಾಲಕಬಾಲಿಕೆಯರ ಶಾಲೆಗಳು ಕೂಡಿದ ಮಟ್ಟಿಗೂ ಒಳ್ಳೇ ಸ್ಥಿತಿಯಲ್ಲಿವೆ. ಇಲ್ಲಿನ ಪ್ರೈವರವರಾದ ಮ॥ ಜಿ ಸಾಮ್ಯುಯಲ್ ಅಯ್ಯನವರು ವಾಪಸ್ ಕೆಲಸಕ್ಕೆ ಬಂದು ಅನೇಕಾನೇಕರಿಗೆ ಆನಂದವನ್ನುಂಟುಮಾಡಿದ್ದಾರೆ.

ತೀರ್ಥಹಳ್ಳಿ—ಈಚೆಗೆ ಈ ಪ್ರಾಂತ್ಯ ಮಳೆಯು ತಕ್ಕಷ್ಟು ಬಂದದ್ದರಿಂದ ರೈತಾಪಿ ಜನಗಳೆಲ್ಲರು ಗದ್ದೆಗಳಲ್ಲಿ ನಾಟಿನೆಟ್ಟು ಪ್ರಾರ್ಥಿಸಿ ಮುಂದಿನ ಕಾಲದ ಬೆಳೆಯನ್ನು ನಿರೀಕ್ಷಿಸುತ್ತಿದ್ದಾರೆ ಆದರೆ ಅದಕ್ಕೆ ಪಸಲೇ ಏನೂ ಜೀನಾಳವಿಲ್ಲದೆ ಕೊನೆಗಳು ಪಾಬರ್ಲಾವಸ್ಥೆಯಲ್ಲಿವೆ ಅನೇಕ ಅಡಿಕೆ ತೋಟಗಳು ಹಾಳುಬೀಳುವ ಕಾಲ ಬಂದಿದೆ. ಸಾಹುಕಾರರಲ್ಲಿ ಕೆಲವರು ೫—೬ ಸಾವಿರ ರೂಪಾಯಿ ಬಾಳುತ್ತಿದ್ದ ತೋಟಗಳನ್ನು ಒಂದು ಸಾವಿರ ರೂಪಾಯಿಗೆ ಮಾರುತ್ತಿದ್ದಾರೆ. ಈ ತಾಲ್ಲೂಕಿಗೆ ಸೇರಿದ ಮಂಡಗದ್ದೆಯಲ್ಲಿ ಒಂದು ಮನೆಯಲ್ಲಿ ಇಬ್ಬರು ವಾಂತಿಭೇದಿ ರೋಗದಿಂದ ಸತ್ತರು. ಆ ಸ್ಥಳಕ್ಕೆ ಇಲ್ಲಿನ ಹಾಸ್ಪಿಟಲ್ ಅಸಿಸ್ಟೆಂಟರು ಮತ್ತು ಸಿವಿಲ್ ಸರ್ಜನರು ಸಹ ಬಂದು ವಿಚಾರಿಸಿ ಔಷಧಿ ಮುಂತಾದ್ದು ಕೊಡಿಸಿಹೋದರು. ಮಂಡಗದ್ದೆಯು ಬಹು ಕೊಳಚೆ ರೊಚ್ಚುಗಳಿಂದ ತುಂಬಿ ಆರೋಗ್ಯ ಸೂತ್ರಕ್ಕೆ ವಿರೋಧವಾಗಿದೆ. ತೀರ್ಥಹಳ್ಳಿಯನ್ನು ಸಹ ಶಿವಮೊಗ್ಗೆಯಿಂದ ಸಿವಿಲ್ ಸರ್ಜನರು ಬಂದು ಎಲ್ಲಾ ಭಾಗಗಳನ್ನು ಸಂಚರಿಸಿಕೊಂಡು ಹೋದರು. ಇಲ್ಲಿ ಕೂಡ ಅನೇಕ ಭಾಗಗಳಲ್ಲಿ ಗಲೀಜು ತುಂಬಿಕೊಂಡಿರುವದರಿಂದ ತಕ್ಕ ಏರ್ಪಾಡು ಮಾಡಿಸಬಹುದೆಂದು ತೋರುತ್ತದೆ ಹೊಸದಾಗಿ ಲಾಂದ್ರಗಳನ್ನು ಹಚ್ಚಿಸುವದಕ್ಕೆ ನೇಮಕವಾಗಿರುವವನು ಈಗ ಬಹು ಕ್ರಮವಾಗಿ ಕೆಲಸಮಾಡುತ್ತಾ ಕ್ರಮವಾಗಿ ದೀಪಗಳನ್ನು ಹಚ್ಚುತ್ತಾ ಇದ್ದಾನೆ. ದೀಪಗಳು ರಾತ್ರಿಯಲ್ಲಿ ಚನ್ನಾಗಿ ಪ್ರಕಾಶಿಸುತ್ತವೆ. ಇಂಥವನನ್ನು ಪ್ರೋತ್ಸಾಹಪಡಿಸಿದರೆ ಇನ್ನೂ ಚನ್ನಾಗಿ ಕೆಲಸಮಾಡುತ್ತಾನೆ. ರದದ ಮೇಲೆ ಹೋಗಿದ್ದ ರೇಂಜರ್ ವಾಪಸ್ ಬಂದು ಕೆಲ್ಸದ ಚಾರ್ಜು ವಹಿಸಿದರು ಇವರು ಈ ತಾಲ್ಲೂಕಿಗೆ ಬಂದ ಲಾಗಾಯ್ತು ಸರ್ಕಾರಕ್ಕೆ ಸಾವಿರಾರು ರೂಪಾಯಿಗಳು ಫಾಯಿದೆಯಾಗುವ ರೀತಿ ಕೆಲಸ ಮಾಡುತ್ತಿದ್ದಾರೆ ದಿವಾನ್ ಸಾಹೇಬರ ಸವಾರಿಯು ಆಗುಂಬೆಯ ಮಾರ್ಗವಾಗಿ ಇಲ್ಲಿಗೆ ದಯಮಾಡಿಸುವದರಿಂದ ಅವರನ್ನು ಎದುರುಗೊಂಡು ಗೌರವಪೂರ್ವಕವಾಗಿ ಕರತರುವದಕ್ಕೆ ಡಿಸ್ಟ್ರಿಕ್ಟಿನ ಎಲ್ಲಾ ದೊಡ್ಡ ಆಫೀಸರುಗಳು ಆಗುಂಬೆಗೆ ಹೋಗಿದ್ದಾರೆ. ಅಲ್ಲಲ್ಲಿ ತೋರಣ ಚಪ್ಪರಗಳಿಂದ ಅಲಂಕರಿಸಿದ್ದಾರೆ ತೀರ್ಥಹಳ್ಳಿಯಲ್ಲಿ ಎರಡು ದಿನ ಮೊಕ್ಕಾಂ ಮಾಡುತ್ತಾರೆಂದು ತಿಳಿದುಬಂದಿದೆ ಮುಖ್ಯ ಯಾತಕ್ಕೋಸ್ಕರ ಬರುತ್ತಾರೆಂದು ಕೆಲವರಿಗೆ ತಿಳಿಯದೆ ಕೇಳುತ್ತಾರೆ. ಇನ್ನು ಕೆಲವರು ಅಡಿಕೆ ಸುಂಕ ರೈತರಿಗೂ ವರ್ತಕರಿಗೂ ಬಹು ಹಿಂಸೆಯಾಗಿದೆ ಅದನ್ನು ವಜಾಮಾಡುವ ನಿಮಿತ್ತ ಬಂದು ವಿಚಾರಿಸಿಕೊಂಡುಹೋಗಿ ದಸರಾ ವಿಚಾರಣೆಯಲ್ಲಿ ತೀರ್ಮಾನಹೇಳುತ್ತಾರೆಂದು ಗ್ರಹಿಸಿದ್ದಾರೆ ಖಂಡಿತವಾಗಿಯೂ ಅಡಿಕೆ ಹಾಸಲು ತೆಗೆಯದಿದ್ದರೆ ತಾಲ್ಲೂಕಿನ ಪ್ರಜೆಗಳು ತೀರಾ ಕಷ್ಟಕ್ಕೊಳಗಾಗುವರು. ಭಾನುವಾರ ಇಲ್ಲಿದ್ದು ದಾರಣೆ ದಿನ ದಿವಾನರ ಸವಾರಿಯು ಶಿವಮೊಗ್ಗೆಗೆ ಹೊರಡುವದಾಗಿದೆ.

ಚಿತ್ರದುರ್ಗ—ಈ ವರ್ಷ ಮಳೆ ಕಡಿಮೆ ಆಗಸ್ಟು ೧ ರ ಲಾಗಾಯಿತು ಸೆಪ್ಟೆಂಬರ್ ೧೪ ರ ವರಿವಿಗೆ ದಾವಣಗೆರೆ ತಾಲ್ಲೂಕಿನಲ್ಲಿ ೭ ಇಂಚು, ಹರಿಹರ, ಹೊಳಲಕೆರೆ ೫ ಇಂಚುಗಳು, ಹಿರಿಯೂರು ಮೊಳಕಾಲ್ಮುರು, ೪ ಇಂಚು, ಚಿತ್ರದುರ್ಗ, ಚಳ್ಳಕೆರೆ ೨ ಇಂಚುಗಳು ಎಂದು ತಿಳಿಯಬಂದಿದೆ. ಇನ್ನು ದೊಡ್ಡ ಮಳೆ ಬರುವ ನಿರೀಕ್ಷಣೆಯಿದೆ. ದೇವರೇ ಕಾಪಾಡಬೇಕು. ಊರಲ್ಲಿರುವ ಭಾವಿಗಳಲ್ಲೆಲ್ಲಾ ನೀರು ಕಡಿಮೆಯಾಗುತ್ತ ಬಂತು ತಾ॥ ೩ ರ ಲಾಗಾಯ್ತು ನಲ್ಲಿಗಳಲ್ಲಿ ಕೊಳೆ ನೀರು ಬರುವದಕ್ಕೆ ಪ್ರಾರಂಭವಾದದ್ದು ತಾ॥ ೧೩ ರ ವರಿವಿಗೂ ಬಂದಿತು ಈಗಲೂ ಸ್ವಲ್ಪ ಕೊಳೆ ಬರುತ್ತಲೇ ಇದೆ. ಮುನಸಿಪಲ್ ಕಮಿಷನರು ಯಾಕೆ ಸುಮ್ಮನಿದ್ದಾರೋ ತಿಳಿಯದು; ಪ್ರಜೆಗಳ ಆರೋಗ್ಯವನ್ನು ಕಾಪಾಡುವದಕ್ಕೆ ಬದಲಾಗಿ ರೋಗವನ್ನೇ ತಂದುಕೊಟ್ಟಂತಾಯಿತಲ್ಲವೇ! ಶೋಧಿಸಿಬಿಡುವದು ಅವಶ್ಯಕವಾಗಿದೆ ಅಬುಚಿಯಾದ ನೀರಿನಿಂದಲೂ ಅದರ ದುರ್ವಾಸನೆಯಿಂದಲೂ ಎಷ್ಟು ಅನರ್ಥಗಳು ಸಂಭವಿಸುತ್ತವೆಂಬದನ್ನು ವರ್ಣಿಸಲಶಕ್ಯವಿಲ್ಲ. ಈ ಊರ ಸೇವಿಂಗ್ಸ್‌ಬ್ಯಾಂಕ್ ಹೌಸಿನ ಕೆಳಗಡೆ ೧ ಜನರ ಬ್ಯಾಂಕು ಇತ್ತು. ಈಗ ಅದು ನಜಾ ಆದಂತೆ ಹೇಳುತ್ತಾರೆ. ಕಾರಣವೇನೋ ತಿಳಿಯದು ತಾ॥ ೧೨ ರಲ್ಲಿ ಬ್ಯಾಂಕು ಹೌಸಿನಲ್ಲಿ ೧ ಗಣಪತಿ ಉತ್ಸವವನ್ನು ಮಾಡಿದರು. ಸಂಘದ ದ್ರವ್ಯವನ್ನು ಸುಮಾರು ೩೦ ರೂ ವರಿವಿಗೂ ಉತ್ಸವಗಳಿಗೆ ಖರ್ಚು ಮಾಡಿದುದರಿಂದಲೇ ಸ್ವಂತ ಜನಗಳನ್ನೇ ನೌಕರರನ್ನಾಗಿ ನೇಮಿಸಿಕೊಳ್ಳುವದರಿಂದಲೇ ಈಗಿನ ವಿಘಾಟವನ್ನು ಜನಗಳು ವಿಚಾರಿಸುವಂತೆ ಕಾಣುವದಿಲ್ಲ. ಇಲ್ಲಿ ಎ. ವಿ. ಸ್ಕೂಲು ಆಗಿ ೪ ವರ್ಗಗಳಾದವು ೪ ಜನ ಹೆ॥ ಮಾಸ್ಟರುಗಳು ಬದಲಾಯಿಸಿದರು ಆದರೂ ಸ್ಕೂಲು ಒಳ್ಳೆಸ್ಥಿತಿಯಲ್ಲೇ ಇದೆ ಕಳೆದ ವರ್ಷ ಬೋ, ಸೆ, ಪ, ೧೬ ಕ್ಕೆ ೧೪ ಜನ ಪ್ಯಾಸಾಗಿದ್ದಾರೆ. ಪೂರ್ವದ ಹೈಸ್ಕೂಲು ಹೆ॥ ಮಾ॥ ಸ್ಟೂಡೆಂಟ್ಸ್‌ಹೋಂ ನ್ನು ಸ್ವಂತ ಮನೆಯಂತೆ ನೋಡಿಕೊಳ್ಳುತ್ತಿದ್ದರು ಹೊಸ ಹೆಡ್ಮಾಸ್ಟರು ಸ್ಟೂಡೆಂಟ್ಸ್‌ಹೋಂ ಎಲ್ಲಿದೆಯೋ ಕಾಣರು. ೬ ತಿಂಗಳಿಂದಲೂ ಹುಡುಗರೇ ಮ್ಯಾನೇಜ್ ಮಾಡುತ್ತಾ ಇದ್ದರೆಂತ ತಿಳಿಯ ಬರುತ್ತದೆ. ಮೇಲ್ವಿಚಾರಕರು ಬೇಕಲ್ಲವೇ! ಸೀರ್ಯಡ ನರಿಗಪ್ಪನೆಂಬುವರ ಕೇಸು ಡಿ॥ ಜ॥ ಕಮಿಷನರ ಕೋರ್ಟಿನಲ್ಲಿ ವಿಚಾರಣೆಯಾಗಿ ೧೫೦ ರೂ ಜುಲ್ಮಾನೆಯಾಗಿರುವಂತೆ ಚೀಫ್‌ಕೋರ್ಟಿನವರು ಪುನರ್ವಿಚಾರಣೆ ಮಾಡುವಂತೆ ಅಪ್ಪಣೆ ಮಾಡಿದ್ದರಿಂದ ಸೆಷನ್ ವಿಚಾರಣೆಗೆ ಗುರಿ ಮಾಡಿದರು. ಆತನನ್ನು ಜಾಮೀನಮೇಲೆ ಬಿಟ್ಟಿರುತ್ತಾರೆ. ಸೆಷನ್ಸ್ ಕೇಸುಗಳಲ್ಲಿ ಸಂಗ ಎಂಬುವನು ಕೊಲೆಪಾತಕ ಮಾಡಿದ್ದರಿಂದ ಜೀವಾಂತ್ಯದ ವರಿವಿಗೂ ಕಾರಾಗೃಹವಾಯಿತು. ದಾವಣಗೆರೆ ತಾಲ್ಲೂಕಿನ ಚೂರಿ ಕೇಸು ಇತ್ತು. ತಾಳಿಕಟ್ಟೆ ಕೆಂಚ ಎಂಬುವನು ಇಬ್ಬರನ್ನು ಹೊಡೆದು ಕೊಂದದ್ದರಿಂದ ಬೆಂಗಳೂರಲ್ಲಿ ಗಲ್ಲಿಗೇರ್ಸುವಂತೆ ಅಪ್ಪಣೆಯಾಯಿತು. ಇನ್ನು ೨ ಕೇಸುಗಳನ್ನು ನಜಾ ಮಾಡಿದರು. ೩ ನೇ ಕೇಸಿನಲ್ಲಿ ಆರೋಗಳು ಕೋರ್ಟು ರೂಬರೂವು ಹಾಜರಾಗಿದ್ದರು. ೧೫—೨೦ ದಿವಸಗಳ ವರಿವಿಗೂ ಪೋಷಣೆ ಸರಿಯಾಗಿಲ್ಲದ್ದರಿಂದ ೩ ಆರೋಗಳು ಬಿಡಲ್ಪಟ್ಟರು. ಥಿಯಸಾಫಿಕಲ್ ಸೊಸೈಟಿ ಬಾಲಸರಸ್ವತೀ ಸಭಾ ಇವುಗಳು ಬಹಳ ಉತ್ಸಾಹದಿಂದ ನಡೆಯುತ್ತಿವೆ. ಬಾಲಸರಸ್ವತೀ ಸಭಾದಲ್ಲಿ ಅದ್ವೈತಿಗಳೇ ಕಾರ್ಯದರ್ಶಿಗಳು ಆಗಿ ಅದಕ್ಕೆ ಹೆಚ್ಚು ಪ್ರಾಮುಖ್ಯತೆಯಿರುವದರಿಂದ ಅದ್ವೈತಿಗಳು ಪ್ರತ್ಯೇಕವಾಗಿ ಸಭೆಯನ್ನು ಸ್ಥಾಪಿಸಲು ಇಷ್ಟಪಡುತ್ತಿರುವರು ಮುಂದೆ ತಿಳಿಯಬೇಕು.

ತೀರ್ಥಹಳ್ಳಿ ತಾ॥ ಬೆರಗ.—ಈಗ ಎರಡು ವಾರಗಳಿಂದ ಮಳೆ ಆಗಿರುತ್ತೆ ಜನಸಿ ಧಾರಣೆಗಳು ಏರುತ್ತವೆ ಬಡವರ ಜೀವನಕ್ಕೆ ತೊಂದರೆ ಆಗಿರುತ್ತೆ. ಆಗಸ್ಟ್ ೨೪ ರಲ್ಲಿ ತಾಲ್ಲೂಕ್ ಅಮಲ್ದಾರವರ ಸವಾರಿ ಬಂದು ತಾ॥ ೨೫ ರಲ್ಲಿ ದಯಮಾಡಿದರು ಇವರು ಬರುವಕಾರಣ ಜನಗಳು ಊರಿನ ರಸ್ತೆಗಳನ್ನು ಪಾಕೀಜ್ ಮಾಡುತ್ತೇವೆಂದು ಚರಂಡಿಗಳಲ್ಲಿರುವ ಹುಲ್ಲಿನ ದಿಬ್ಬಗಳನ್ನು ಕಿತ್ತು ರಸ್ತೆಗೆ ಹಾಕಿರುತ್ತಾರೆ. ಇದರಿಂದ ಉಪಕಾರಕ್ಕೆ ಪ್ರತಿಯಾಗಿ ಅಪಕಾರವಾಗಿರುತ್ತೆ ಆಗಸ್ಟು ತಾರೀಖು ೩೦ನೇ ರಾತ್ರಿ ಈ ಆಗರದ ಪೇಟೆಯಲ್ಲಿರುವ ಶ್ರೀತಲಾನಾಥ ದೇವರ ದೇವಸ್ಥಾನದಲ್ಲಿ ದೇವರಿಗಿದ್ದ ಪ್ರಭಾವಳಿಯೆಂಬ ಆಭರಣವು ಕಳುವಾಗಿರುತ್ತೆ. ಈ ಬಗ್ಗೆ ಜವಾಬ್ದಾರನು ಬಂದು ತತ್ತರದಿಂದ ನಡೆಸಿದರು. ಇವರಿಗೂ ಪತ್ತೆಯಿಲ್ಲ. ಪೇಟೆಯಲ್ಲಿ ಈ ಊರಿನ ಪ್ರಜೆಗಳೇ ದಿನ ಒಂದಕ್ಕೆ ರಾತ್ರಿ ಮೂರುದಿನಗಳು ಬೆಳಗಿನವರಿಗೆ ಗಸ್ತು ತಿರುಗಬೇಕಾಗಿ ಯೋಚನೆ ಮಾಡುವದು ಪ್ರಜೆಗಳ ಪೂರ್ವ ಸುಕೃತವೆಂದೆಣಿಸಬೇಕಾಗಿರುತ್ತೆ ಈ ಊರಿನಲ್ಲಿ ಒಂದು ಪೋಲೀಸ್ ಸ್ಟೇಷನ್ ಸಹ ಇರುವದಿಲ್ಲ ಸಧ್ಯದಲ್ಲಿಯೇ ಸರ್ಕಾರದವರು ಇಡಿಸಿರಾಗಿ ನಂಬುತ್ತೇವೆ ಅಗ್ರಹಾರದ ಸ್ಕೂಲಿನಲ್ಲಿ ಬಹುಕಾಲದಿಂದ ಕೆಲಸಮಾಡುತ್ತಿದ್ದ ವೆಂಕಟಕೃಷ್ಣಪ್ಪನವರಿಗೆ ಪೆನ್ಷನ್ ಆಗಿರುವದು. ಈ ಆಗರಕ್ಕೆ ಎರಡು ಮೈಲಿ ದೂರದಲ್ಲಿರುವ ಗುತ್ತೆ ಕೊಪ್ಪದಲ್ಲಿ ಒಂದು ಕ್ಯಾಟಿಕಿಸ್ಟ್ ಸ್ಕೂಲ್ ಇರುತ್ತೆ ಇಲ್ಲಿಯ ಮಾಸ್ಟರು ನಾರ್ಮಲ್‌ಸ್ಕೂಲ್ ಟ್ರೇನಿಂಗ್ ಆಗಿ ವಾಪಸ್ಸು ಬಂದರು. ಈಗ ಇರುವ ಸ್ಕೂಲು ಗುಡಿಸಲು ೧೦-೧೨ ವರ್ಷಗಳಿಂದ ಕಟ್ಟಡಗಳಿಲ್ಲದೆ ನಡೆಯುತ್ತಿರುವದು. ಈ ಕಟ್ಟಡವನ್ನು ಹೊಸದಾಗಿ ಕಟ್ಟಬೇಕೆಂದು ಈ ಊರಿನ ಕೆಲವು ದೊಡ್ಡಮನುಷ್ಯರು ಚಂದಾ ಎತ್ತಿದ್ದರು. ಆದರೆ ಈ ಪೈಕಿ ಯಾರೋ ಒಬ್ಬ ಪ್ರಜಾಭಕ್ತರು ಈ ಧರ್ಮಕೆಲಸಕ್ಕೆ ಅಡ್ಡಿಮಾಡಿರುತ್ತಾರೆಂದು ಕೇಳುತ್ತೇನೆ. ಇನ್ನು ಮುಂದಾದರೂ ಇಂಥ ಧರ್ಮಕಾರ್ಯಕ್ಕೆ ದೇವರು ಇವರಿಗೆ ಬುದ್ಧಿ ಮರುಕಳಿಸಿ ಹೊಸಕಟ್ಟಡಕ್ಕೆ ತಕ್ಕ ಏರ್ಪಾಟು ಮಾಡಿಸಿ ಬಾಲಕರ ಶ್ರೇಯೋಭಿವೃದ್ಧಿಯನ್ನು ಕಾಪಾಡುವರೆಂದು ನಂಬಿರುತ್ತೇನೆ.—ಮತ್ತು ಈ ಊರಿಗೆ ಒಂದು ಮೈಲಿ ದೂರದಲ್ಲಿರುವ ಹಕ್ಕೆಗಿರಿ ವೆಂಕಟರಮಣ ದೇವಸ್ಥಾನದಲ್ಲಿ ಈ ಹಿಂದೆ ಕೆಲವುದಿನಗಳ ನಂತರ ಕೆಲವು ಮಾಲುಗಳು ಕಳುವಾಗಿತ್ತು ಇವರಿಗೂ ಪತ್ತೆಯಿಲ್ಲ. ಹೀಗೆ ಈಗೀಗ ದೇವರುಗಳಿಗೇನೇ ಗ್ರಹಚಾರ ಬಂದಿರುತ್ತೆ.

WANTED WILD ANIMALS

ಬೇಕಾಗಿದೆ ಬೇಕಾಗಿದೆ

21

ಎಲ್ಲಾ ಬಗೆಯ ಕಾಡ ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ರವರು ಕೊಂಡುಕೊಳ್ಳುವರು

Apply to—Mr Hughes Mysore Zoo

ಇದು ೧೯೦೬ ನೇ ಜನವರಿ ತಿಂಗಳ ಪ್ರೆಜೆಂಟೇಷನ್ ವಾಚು

1

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್‌ಕೋಫ್ ಪೇಟೆಂಟ್ ಲಿವರ್ ವಾಚು ಆರು ಚಕ್ರಗಳುಳ್ಳ ಓಪನ್ ಕೇಸ್



ಕೀಲೆಸ್ ಕಂಪೆನ್‌ಸೇಷನ್ ಬ್ಯಾಲನ್ಸ್ ಬಹು ಬಲಿಷ್ಟವಾದ ಗ್ಯಾರಂಟಿಯಾದ ೫ ವರುಷ ಗ್ಯಾರಂಟೀ ಕ್ರಯ ರೂ ೫—೮—೦ ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವುದರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಈಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರೆಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರೆಜೆಂಟೇಷನ್ ದೊರೆಯಲಾರದೆಂದು ಪ್ರಚುರ ಪಡಿಸಿದ್ದ ಮೇರಿಗೆ ೧೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರಿಗೆ ಕಳೆದ ಜುಲೈ ಆಖೈರ್ ವರಿಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡುತ್ತೇವೆಂದು ಪ್ರಚುರಪಡಿಸಿದ ಮೇರಿಗೆ ಜುಲೈ ಆಖೈರ್ ಆದಾಗ್ಯೂ ಅನೇಕ ದರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜಂಟರು ಇನ್ನೂ ಕೆಲವು ಕಾಲದವರಿಗೆ ಜಾರಿಯಲ್ಲಿ ಇರಬೇಕೆಂದು ಕೋರಿದ್ದರಿಂದಲೂ ನಮ್ಮ ಹೆಡ್ಡಾಫೀಸಿನ ಅಪ್ಪಣೆಯ ಮೇರಿಗೆ ಪುನಃ ಬಹುಮತಿ ವಾಚು ಕೊಡಲ್ಪಡುತ್ತೆ ಇದುವರಿಗೆ ವಾಚು ಬಹುಮತಿ ಪಡೆಯದೆ ಇರುವವರು ಜಾಗ್ರತೆ ದರಖಾಸ್ತು ಕಳುಹಿಸಿ ಬಹುಮಾನ ಸಮೇತ ವಾಚು ಪಡೆಯಿರಿ

ಈ ಕೆಳಗಣ ನಕ್ಷೆಯಲ್ಲಿ ತೋರಿಸಿ ಇರುವ ಪ್ರೆಜೆಂಟೇಷನ್ ಸಾಮಾನುಗಳು ಮೊದಲು ಕಳುಹಿಸಿದ ಸಾಮಾನಿಗಿಂತ ಮೇಲಾಗಿಯೂ ನಕ್ಷೆಗೆ ವ್ಯತ್ಯಾಸವಿಲ್ಲದೆಯೂ ಇರುತ್ತೆ.

ನಶ್ಯದ ಡಬ್ಬಿ ಇದು ಮೇಲಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು ಕ್ರಯ, ೦—೮—೦



ಗಡಿಯಾರ ಸರಪಣಿ ಇದು ಮೇಲಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದರ ಕೊನೆಯಲ್ಲಿ ಸುಂದರವಾದ ಉತ್ತರಾಯಿ ಕಟ್ಟಲ್ಪಟ್ಟಿರುತ್ತೆ ಎಂದಿಗೂ ಕೆಡಲಾರದು ಕ್ರಯ, ೦—೮—೦

ಮುಲಗುವ ಮನೆ ದೀಪ—ಇದು ಮೇಜದ ಮೇಲಿರಿಸುವದಕ್ಕೂ ಗೋಡೆಗೆ ತಗಲಿಸುವದಕ್ಕೂ ಲಾಯಕ್ಕಾದದ್ದು ಎಣ್ಣೆಯು ವೆಚ್ಚ ಕಡಮೆ ಸಾಕಾದಷ್ಟು ಬೆಳಕು. ಕ್ರಯ, ೦—೧೦—೦



ಶರಟ್ ಗುಂಡಿ—ಇವು ಮೇಲಾದ ಜರ್ಮನ್ ಸಿಲವರ್ ಬೆಳ್ಳಿಯಿಂದ ಹೊಸ ನಮೂನೆಯಾಗಿ ತಯಾರ್ಮಾಡಲ್ಪಟ್ಟದ್ದು ರೂ ೧—೧೦—೦



ಹಣದ ಪೆಟ್ಟಿಗೆ—ಇಂಗ್ಲಿಷ್ ಮೇಡ ಕ್ಯಾಷ್‌ಬಾಕ್ಸ್—ಹಣ ಆಭರಣ ಭದ್ರವಾಗಿ ಇರಿಸಬಹುದು ಇದರೊಳಗೆ ಎರಡು ಖಾನೆಗಳುಳ್ಳ ೧ ಸಣ್ಣ ಪೆಟ್ಟಿಗೆ ಇದೆ ಭದ್ರವಾದ ಬೀಗದಕೈ ನೋಟಕ್ಕೆ ಸುಂದರವಾದ್ದು ಕ್ರಯ ೬—೧೦—೦

ವಿಳಾಸ—ಮ್ಯಾನೇಜರ್, ಫ಼ಾರಿನ್ ವಾಚ್ ಕಂಪೆನಿ, ಪಾರ್ಕ್ ಟವನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ ೧—೧೪—೦
,, ,, ,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ – ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಸುಧಾ

ಇದನ್ನು ಓದಿ! ಬಿಡಬೇಡಿ!! ಗಣ ನೋಡಿ!!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹಾಗೆ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಾರೆ ಕೃಶತ್ವ, ತಲೆನೋವು, ಅರತಲೆನೋವು ಬೆನ್ನುಬಳುಕು ಕೈಕಾಲು ನೋವು ಮುಂತಾದವುಗಳನ್ನು ಧೈನಾಮೈಟನಂತೆ ದಿಗಂತರಕ್ಕೆ ಹಾರಿಸಬಲ್ಲದು 'ಸುಧಾ' ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗಪ್ರವೇಶಿಸುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧೆಯು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸೀಸೆ ಔಷಧಿಯಲ್ಲಿ ಕಂಡುಬರುವ ಅವೇಘಗುಣವನ್ನು ಹೆಚ್ಚು ವರ್ಣನೆ ಮಾಡಿ ತೀರದು ಸೀಸೆ ೧ಕ್ಕೆ ೧ ೮ ೧ ಪಾಸಲು ಸೇರಿ

ಜೀವನಸುಧಾ—ಜ್ವರ ನಿಂತಿತೆಂದು ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧದಬಕ್ತ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ ಸೀಸೆ ೧ಕ್ಕೆ ರೂಪಾಯಿ ೧—೦—೦

ಪ್ರೀತಿತಾಂಬೂಲ—ಜಗತ್ಪ್ರಖ್ಯಾತವಾದ ತಾಂಬೂಲ ಮಾತ್ರೆಗಳ ಸೀಸೆ ೧ಕ್ಕೆ ೪ ಆಣೆ ೩ ಸೀಸೆವರೆಗೆ ವಿ ಪಿ ಚಾರ್ಜು ೫ ಆಣೆ

ದೇವನಹಳ್ಳಿ ಟವನ್, ಬೆಂಗಳೂರು ಡಿಸ್ಟ್ರಿಕ್ಟ್

ಯಂ ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್

P SUBBAROY S

World renowned and most Efficacious Ayurvedic Medicines

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಲಕ್ಷ್ಮೀಕರ ಕಸ್ತೂರಿಮಾತ್ರೆ

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಿಯ ದುರ್ಗಂಧವು ಹೋಗುವುದು ಬೆಳಗ್ಗೆ

ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ ಇವುಗಳು ವಾಸಿಯಾಗುವುವು ಇದರಲ್ಲಿ ಆಕ್ಷೇಪಣೀಯವಾದ ಯಾವ ವಸ್ತುವೂ ಇಲ್ಲದ್ದರಿಂದಲೂ ಇದರ ತಯಾರಿಗೆ ಕಸ್ತೂರಿ, ಸುವರ್ಣ, ಬರಾಸು ಮುಂತಾದ ಅನರ್ಘ್ಯವಸ್ತುಗಳು ಸೇರಿರುವುದರಿಂದಲೂ, ಎಳೇಮಕ್ಕಳಿಂದ ಮುದುಕರವರೆಗೆ ಎಲ್ಲರೂ ತಾಂಬೂಲದೊಂದಿಗೆ ಅಥವ ಬರಿ ಬಾಯಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣಕಾಣುವದು ಕ್ರಯ—ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೬ ಸೀಸೆಗೆ ವಿ ಪಿ ಬಾಂಗಿ ಚಾರ್ಜು ೫ ಆಣೆ

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ —ದಿ ಮಹಮದ್ ಸಮಾನಾನಿ

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಅಡಿಕೆಲೆಯ ಸಂಗಡ ಹಾಕಿಕೊಂಡರೆ ಪಿತ್ತ, ತಲೆನೋವು, ಚಳಿಜ್ವರಗಳು ನಿವಾರಣೆಯಾಗುತ್ತವೆ. ಬೇರೆ ಔಷಧ ಅವಶ್ಯವಿಲ್ಲ —ದೇಶೋಪಕಾರಿ

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವುದು —ಪುತ್ತೂರು ಪೊಲೀಸ್ ಇನ್ಸ್‌ಪೆಕ್ಟರ್

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕನ್ನೇಕ ಜನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿರುತ್ತವೆ —ಜೆ ಕೃಷ್ಣೈಯಂಗಾರ್, ಟೆಲಿಗ್ರಾಫ್ ಡಿಪಾರ್ ಮೆಂಟ್ ಇನ್ಸ್‌ಪೆಕ್ಟರ್, ಕ್ಲೆರ್ಕ್

Apply to —P SUBBAROY,
Porto Novo, South Arcot

ವಿಳಾಸ—ಪಿ ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ

ಪ್ಲೇಗು ರೋಗ ಮೈಸೂರಿನಲ್ಲಿ ಹರಡಿರುವ ಸ್ಥಿತಿ

ತಾ ೧೦ ನೇ ಸೆಪ್ಟೆಂಬರ್ ೧೬ ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಸತ್ತದ್ದು	ಜನವರಿ ೧ ನೆ ತಾ ಮೊದಲ್ಗೊಂಡು ಸಂಖ್ಯೆ	
ಬೆಂಗಳೂರು ಸಿಟಿ		6	೪	31	
ದೈಸೂರು	,,	0	0	23	
ಬೆಂಗಳೂರು ಡಿಸ್ಟ್ರಿಕ್ಟು		21	14	21*	1[illegible]
ಮೈಸೂರು	,,	[illegible]	[illegible]	178	1[illegible]
ಕೋಲಾರ್	,,	4	–	15	
ಕೋಲಾರ್ ಚಿನ್ನದ ಗಣಿಗಳು		3	8	11	
ತುಂಕೂರು ಡಿಸ್ಟ್ರಿಕ್ಟು		5	[illegible]	20	1
ಹಾಸನ	,,	0	0	34	
ಚಿತ್ರದುರ್ಗ	,,	0	0	132	1
ಕಡೂರ್	,,	1	1	69	1
ಶಿವಮೊಗ್ಗಾ	,,	17	16	42	
	ಜುಮ್ಲಾ	15	1[illegible]	02.71	

ಶಾಲಿವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಭಾದ್ರಪದ ಬಹುಳ ಸಪ್ತಮಿ ಗುರುವಾರದಿಂದ ಭಾದ್ರಪದ ಬಹುಳ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೫ ನೇ ಇಸವಿ ಸಪ್ಟೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
21	ಗುರು ⌐	ಸಪ್ತಮಿ	9 41	ಮೃ	47 07
22	ಶುಕ್ರ ¶	ಅಷ್ಟಮಿ	11 50	ಆ	50 16
23	ಶನಿ ,,	ನವಮಿ	12 8	ಪು	52 4
24	ರವಿ	ದಶಮಿ	1[illegible]	ಪು	[illegible] 18
25	ಚಂದ್ರ *	ಏಕಾದಶಿ	10 2	ಶ್ಲೇ	51 35
26	ಕುಜ ‡	ದ್ವಾದಶಿ	7-10	ಮ	49 18
27	ಬುಧ	ತ್ರಯೋ	3 1	ಉಪುರಿ	1[illegible]

⌐ ಮಹಾವ್ಯತೀಪಾತ, ಮಧ್ಯಾಷ್ಟಮಿ

¶ ಹರಿತಸೋಪವ್ರತಂ ,, ದಕ್ಷದರ್ವಿಮಾ

* ಯತೀನಾಂಮಹಾಲಯ ‡ ೧೪ ಕಾಂತ್ರಿಯೂ ಪ್ರಗಂಗ ರೀವ್ರತಂ, ಶಾಸ್ತ್ರ ಶಸ್ತ್ರಹಾಲಯ

ಪೇಟೆ ಧಾರಣೆ.

ವಿಷಯ.		ಮೈಸೂರು	ಬೆಂಗಳೂರು
ಸೋಮೇ ಅಕ್ಕಿ ಪಲ್ಲ ೧ಕ್ಕೆ		೨—೨—೮	೦—[illegible]
ಕೆಂಪುಭತ್ತ ಅಕ್ಕಿ ಅವಲ್		೧೨—೪—೦	೨—[illegible]
,, ಮಾಯಂ		೧೨—೨—೦	೧೧—[illegible]
ಸಾದಾಭ್ರಾಮ ಅಕ್ಕಿ		೧೨—೦—೦	೧೨
ಸಣ್ಣಕ್ಕಿ ಅವಲ		೧೪ ೦—೦	೧೩—
,, ಮಾಯಂ		೧೩ ೮—೦	೧೨
ಕೊಗರೀ ಬೇಳೆ ಪಲ್ಲ ೧ಕ್ಕೆ		೧೧ ೦ ೦	೧೧
,, ದಾಯಂ		೧೦—೮—೦	೧೨—೦
ಜೈಗರಾಗಿ ಪಲ್ಲ ೧ಕ್ಕೆ		೬—೪—೦	೫—
ಸಾದಾರಾಗಿ		೬—೦ ೦	೪—೦
ಜೋಳ		೬—೦—೦	೬—
ಹುರುಳಿ ಪಲ್ಲ ೧ಕ್ಕೆ		೧೦—೦—೦	೧೦
ಬಿಳೀ ಅವರೆ		೮ ೧೨ ೦	೯—
ಹೆಸರು		೯ ೧೨—೦	೧೦
ಉದ್ದು		೧೦ ೦ ೦	೯—
ಕಡಲೆ		೧೦ ೦—೦	೧೦
ಎಳ್ಳು		೧೬ ೦ ೦	೧೫
ಹುರುಳಿ		೧೦—೦ ೦	೯
ಬೆಲ್ಲ ೧೦೬ ಸೇರಿಗೆ		೧೨—೮—೦	೧೨—
ಸಿಂಗೇಕಾಯಿ ಮಣ ೧ಕ್ಕೆ		೩—೮—೦	೩—[illegible]
ಮೆಣಸಿನಕಾಯಿ		೪—೮—೦	೪
,, ಮಾಯಂ		೩—೧೨—೦	೩—
ಬೆಲ್ಲ ದೊಡ್ಡ ಅಚ್ಚು		೩—೪—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ		೪—೪ ೦	೪
ಹರಳೆಣ್ಣೆ ,,		೫—೦—೦	೪
ಕೊತ್ತುಂಬರಿ ಪಲ್ಲ ೧ಕ್ಕೆ		೧೦—೮—೦	೧೦
ಉಪ್ಪು ,,		೩—೦—೦	೩—
ಹುಣಸೇ ಹಣ್ಣು		೧ ೨—೦	೧—
,, ಪಳೇದು		೨—೧೪—೦	೦—
ತುಪ್ಪ		೧೨—೮—೦	೧೧
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫—೦—೦	೪
ತೆಂಗಿನಕಾಯಿ ೧೦೦ಕ್ಕೆ		೫—೦—೦	೪
ಅಡಕೇಕಾಯಿ ಮಣ ೧ಕ್ಕೆ		೧—೦—೦	೦—
ಅಂಟ್ವಾಳಕಾಯಿ ಮಣ ೧ಕ್ಕೆ		೦—೧೪—೦	೦—
ಹಸ್ಸು (ಹೋರ್) ಕೆಂಪು		೧೫—೮—೦	೧೫
,, ,, ಹಸಿರು		೧೫—೧೦—೦	೧೬
,, ,, ಗಟ್ಟಿ ಕೋಲು ೧ಕ್ಕೆ		೨೩—೦—೦	೨೪
ಬೆಳ್ಳಿ ಗಟ್ಟಿ ತೋಲ ೧೦೦	ಕ್ಕೆ	೩ ೦—೦—೦	೩೩

Printed and Published by the Rev H Spencer the Proprietor and Manager, Wesleyan Mission Mysore 21/9/1905

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ರುಪ್ಯ — ಕ್ರಯ ೧ ರುಪ್ಯ

ಪ್ರತಿ ಗುರುವಾರ ಮೈಸೂರಿನಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಸೆಪ್ಟಂಬರ್ ತಾರೀಖು ೨೮ ನೇ ಗುರುವಾರ. — ಸಂಚಿಕೆ ೩೯

ಸಚಿತ್ರಮಸೋವಿನೋದಿನಿ ಮಾಸಪತ್ರಿಕೆ.

ವಾರ್ಷಿಕಚಂದಾ ರೂ ೧—೮—೦

. . . . ವಿನೋದಿನಿ ಎಂಬ . . . . ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದಪಡಿಸುವದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹವಿಲ್ಲ.

ಸತ್ಯದೀಪಿಕೆ ೨೮ ೭೮

ವಿಳಾಸ —ಮ್ಯಾನೇಜರ್ ವಿನೋದಿನಿ ಆಫೀಸು ಶಾರವಾರ

ಇಂಗ್ಲೀಷು ವೈದ್ಯಶಾಸ್ತ್ರ.

ಕ್ರಯ ರೂ ೧ ೮ ೦, ಹಾಸಲು ೨ ಆ.; ವಿ ಪಿ ೩ ಆಣೆ.

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಆಯಾ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಪಥ್ಯಪಾನಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ವಿಷಯಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಖ್ಯಾತವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಯುವುದಕ್ಕೂ ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವದಕ್ಕೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡುವದಕ್ಕೂ, ಇದು ತುಂಬಾ ಸಹಾಯಕರವಾಗಿರುವದು

ವಿಳಾಸ —ಎಂ ಗುರುರಾವ್, ಆಸ್ಪಿಟಲ್ ಅಸಿಸ್ಟೆಂಟ್,

ತರೀಕೆರೆ, ಕಡೂರು ಡಿಸ್ಟ್ರಿಕ್ಟ

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

ಸ್ಥಾಪಿತವಾದದ್ದು ೧೯೦೨ರಲ್ಲಿ |

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಯಾವ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸೆಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (\ ) ತರಗತಿಗೆ ಸೇರಿದವರು ಪಡೆಯಬೇಕೆಂದು ಇಚ್ಛಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆ ವಾರು ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೭ನ್ನು ಮಾತ್ರವೇ ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ವ್ಯವಸ್ಥಿತರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬರುವ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು \\ I.P. ರೇಲ್ವೆ ಸ್ಟೇಷನ್ನಿನ ಹತ್ತಿರದ " ಕೊಲ್ಲಂ ಎಸ್ಟೇಟ್ " ಎಂಬ ಸವುರ್ಗೋಲ್ಡ್ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಿಮೆಯಾಗುವ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸೆಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಪಾಲುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಮಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸೆಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಫಲವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ. ವಿವರವಾಗಿ ತಿಳಿಯಬೇಕೆಂದಿಚ್ಛಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲೀಷಿನಲ್ಲಿ ಬರೆಯತಕ್ಕದ್ದು.

ವಿಳಾಸ.—The Manager,
The India Agricultural and Helping Office,
Vengurla Post, Bombay Presidency.

ವೀರಶೈವ ಸಿದ್ಧಾಂತ ಶಿಖಾಮಣಿ ಸಾರಸಂಗ್ರಹ.

ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರು ಶ್ರೀ ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತವು ಸಿದ್ಧಾಂತ ಶಿಖಾಮಣಿಯೆಂಬ ಸಂಸ್ಕೃತ ಗ್ರಂಥದಿಂದ ಕನ್ನಡ ವಚನ ರೂಪವಾಗಿ ಸಂಗ್ರಹಿಸಿ ಬರೆಯಲ್ಪಟ್ಟಿದೆ. ಈ ಗ್ರಂಥದಿಂದ ವೀರಶೈವ ಸಿದ್ಧಾಂತವನ್ನು ಸಕಲರೂ ಸುಲಭವಾಗಿ ತಿಳಿಯಬಹುದು. ಕ್ರಯ—ವಿ. ಪಿ ಮೂಲಕ ೧೦ ಆಣೆ. ವಿಳಾಸ—ಬಿ ಚಂದ್ರಶೇಖರಶಾಸ್ತ್ರಿ, ವೀರಶೈವಸಿದ್ಧಾಂತ . . . ದಾವಣಗೆರೆ, ಮೈಸೂರು.

ಯಸ್. ಆರ್. ವೆಂಕಟಸುಬ್ಬಾ ಚಾರ್ಯ್,
ಸುಬೋಧ ಗ್ರಂಥಾಲಯ, ಮೈಸೂರು.

ಮುಲ್ಕಿಲ್ಲ ಕನ್ನಡದ ೫ನೆ ಪುಸ್ತಕದ ನೋಟ್ಸು	೦—೪—೦
ಲೋಯರ್ ,, ,, ೬ ನೆ ಪುಸ್ತಕದ ನೋಟ್ಸು	೦—೩—೦
ಅಪ್ಪರ್ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಜ್ವರಹರಿ.



ಇದು ಸಾಧಾರಣ ಜ್ವರ, ಚಳಿಜ್ವರ, ವಿಷಮಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾವಣಿ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ ೨—೧೨ ಆ., ೧೧ ರೂ.; ಡಜನ್ನರ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಹೊನ್ನಾವರ.



ಈ ಔಷಧವು ಅಜೀರ್ಣ, ಬೇಧಿ, ಸಾಧಾರಣ ಹೊಟ್ಟೆಕಳೆತ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆಪ್ಪರ್‌ಮಿಂಟ್ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲವೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಪಶ್ಚಿಮದ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಕೆನಿಂಗ್ ಟೌನ್ ರೈಟ್, ಮದರಾಸ್.

೧೯೦೬ನೇ ವರುಷದ ರಾಯಲ್ ಡೈರಿಗಳು.

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚಹರೆ, ವಾರಶೂಲೆ, ಟಪಾಲಿನ ಮುಖ್ಯವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟ್ರೇಷನ್ ಕೋರ್ಟು ಫೀ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು ಮ್ಯಾಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಬಡ್ಡಿ ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ ರಲ್ಲಿನ ಏಕಾದಶೀ ಪೌರ್ಣಮಿ, ಅಮಾವಾಸ್ಯೆ, ಸಂಕ್ರಮಣ, ಗೋಧೂಳಿ ಬಾಂಬೆ, ರೈಲ್ವೆ ಪಾರಸಲ್ ಛಾರ್ಜು, ಜುಬುಸಂವತ್ಸರ, ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ.

ನಂ ೧ ದೊಡ್ಡ ಸೈಜು ರೂಲು ಹಾಕಿದೆ ಕ್ರಯ	೦—೮—೦
,, ೨ ,, ,, ,, ಮುಚ್ಚಳ ಇರತಕ್ಕದ್ದು	೦—೧೦—೦
,, ೩ ಚಿಕ್ಕ ,, ,, ,, ,,	೦—೬—೦
,, ೪ ,, ,, ,, ,, ,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ. ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ದೊರೆಯುತ್ತೆ

ವಿ ಪಸರಲ ಪರ್ಗಿ, ಮೈಸೂರು

ಕೇಶವರ್ಧಿನಿ ತೈಲ.

ತಕ್ಷಣ ಪರಿಹಾರ. — ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಬಾಬು, ಅರಮನೆ, ಕಾಮಾನೆ, ಆಸ್ಪತ್ರೆ ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಆಫೀಸು, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಅನೇಕಕಾಲದಿಂದಲೂ ಜನರಿಗೆ ಮಹೋಪಕಾರಕ್ಕಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಇಂದಕಾಗೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಶಿರಃಶೂಲೆ, ಮೂಲವ್ಯಾಧಿ, ಉಬ್ಬಸ, ವಾಯುಗಳು, ಪರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊತಗಳು, ಗಡ್ಡೆಗಳು, ಗಾಯಗಳು, ತುರಿಕಜ್ಜಿ, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಚಪ್ಪರಿಸುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿನಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮಿಯೋಪತಿ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕೆಂತಲೂ ಇದರಲ್ಲಿ ಇನ್ನೂ ಕೆಲವು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಬುಂಬಿ ೮ ಆಣೆಗೂ, ೧ ರೂ. ಗೂ ಬಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಪತ್ರಿಕೆಯೂ, ಸರ್ಟಿಫಿಕೇಟುಗಳೂ ಉಚಿತವಾಗಿ ಬೇಕಾದವರುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿ ಕಂಪೆನಿ, ೨೩ ಸೆಕೆಂಡ್ ಲೇನ್ ಲೈನ್, ಮದರಾಸ್.

"ಒಕ್ಕಲತನವೂ ಒಕ್ಕಲಿಗನೂ."—ಪಕ್ಷಕ್ಕೊಂದು.

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗ ಪೋಸ್ಟೇಜು ಸಹಿತ ರೂ ೧—೮—೦. ಕೈಸರೇ, ಬೇಗ ಬರಿಸಿ ವಿಳಾಸ.—ದಿ ಮ್ಯಾನೇಜರ್, ೧೧೯, ಸಿವಿಲ್ ಲೈನ್ಸ್, ಪೂನ.

ದೇವಾಂಗ ಮಂಬಸ್ಥರಿಗೆ ಅಗತ್ಯ ಬೇಕಾದದ್ದು.

ದೇವಾಂಗಮತ ಮೂಲಸ್ತಂಭ | ದೇವಾಂಗಮತ ಪ್ರಕಾಶಿಕೆ

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಮುಂದೆ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಶಿವಾಸ್ತವಕಾರಕ್ಕೂ ಸುಂದರವಾದ ೧೨ ಚಿತ್ರಗಳಿವೆ. ಕ್ರಯ ಸುಲಭವಾಗಿದೆ. ೧೨ ಚಿತ್ರಗಳಿರುವ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೨—೮. ಚಿತ್ರಗಳಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮. ಪಕ್ಷಣ ಮಣಿಆರ್ಡರಿಗೂ ವಿ. ಪಿ. ಲೂ ಕಳುಹಿಸುತ್ತೆ ವಿಳಾಸ— ಮೈಸೂರು ದವಳ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

ಪ್ರಕಟನೆ.

ಕನ್ನಡದ ರಾಮಾಯಣ ನಾಟಕವು ವಿದ್ಯಾರ್ಥಿಗಳಿಗೆ ಓದುವುದಕ್ಕೆ ಅನುಕೂಲವಾಗಿಯೂ ನಾಟಕ ಸಂಘದವರಿಗೆ ಆಡುವುದಕ್ಕೆ ಅನುಕೂಲವಾಗಿಯೂ ಇರುವುದು. ಮತ್ತು ಸ್ತ್ರೀಯರಿಗೂ ಪಠನಯೋಗ್ಯವಾಗಿರುವದು ಈ ಪುಸ್ತಕವು ಪ್ರತಿ ೧ಕ್ಕೆ ೧-೦ ೦ ಮೇರೆ ಇದುವರಿಗೂ ಮಾರಲ್ಪಟ್ಟಿತು ಪ್ರಕೃತದಲ್ಲಿ ಸ್ವಲ್ಪ ಪ್ರತಿಗಳೇ ಉಳಿದಿರುವದರಿಂದ ೨೮—೯—೧೯೦೫ರ ಲಾಗಾಯ್ತು ೩೧—೧೨—೧೯೦೫ರ ವರಿಗೆ ಪ್ರತಿ ಒಂದಕ್ಕೆ ೦—೮—೦ ಮೇರೆ ಮಾರಲ್ಪಡುವುದು. ಈ ಪುಸ್ತಕವು ಗ್ರಂಥಕರ್ತರಲ್ಲಿಯೂ ಮೈಸೂರು ಜನರಲ್ ಏಜನ್ಸಿಯಲ್ಲಿಯೂ ಮತ್ತು ಜಿ. ಟಿ ಎ ಷಾಪಿನಲ್ಲಿಯೂ ದೊರೆಯುವುದು ಪೋಸ್ಟೇಜನ್ನು ಪ್ರತ್ಯೇಕವಾಗಿ ಕೊಡಬೇಕು.

ಸೋಸಲೆ ಅಯ್ಯಶಾಸ್ತ್ರಿ
ಆಸ್ಥಾನ ಪಂಡಿತ, ಮೈಸೂರು

ಮಹಾರಾಜ ನಸ್ಯದಪುಡಿ.

ವರ್ತಕರು ವಿಕ್ರಯಿಸಿ ಲಾಭಪಡಿಯುವಷ್ಟು ಸುಲಭಕ್ರಯ.

ಮಹಾರಾಜ ನಸ್ಯದಪುಡಿ ಡಬ್ಬಿ ೧ಕ್ಕೆ ()—()—()
ಬಾಂಗಿ ಕರ್ಚು . ()—೩—()

೧ ರೂಪಾಯಿಗೆ ಕಮ್ಮಿಯಿಲ್ಲದೆ ದರಖಾಸ್ತು ಕಳುಹಿಸತಕ್ಕ ವರ್ತಕರು ಮೊದಲಾದವರುಗಳಿಗೆ ರೂಪಾಯಿಗೆ ೦—೧—೦ ಕಮಿಷನ್ ಕೊಡುತ್ತೇವೆ ನಮ್ಮ ವೈದ್ಯಶಾಲೆಯಲ್ಲಿ ತಯಾರಿಸುವ ಪುಡಿಯೂ ಮೇಲಾದ ಉಡಿಯಾನಾ ದೇಶದ ಹೊಗೆಸೊಪ್ಪಿನಿಂದ ಕಾರವುಳ್ಳದ್ದಾಗಿ ತಯಾರಿಸಲ್ಪಟ್ಟದ್ದು



ಎಷ್ಟು ದಿವಸಗಳ ಪರಿಯಂತ್ರ ಇಟ್ಟಾಗ್ಯೂ ಘಾಟು ಹೋಗದಹಾಗೆ ಪುಡಿಯನ್ನು ಮಾಡುವದರಲ್ಲಿ ಅಧಿಕ ಪರಿಶ್ರಮವುಳ್ಳವರುಗಳಿಂದ ತಯಾರಿಸಲ್ಪಟ್ಟಿರುತ್ತದೆ. ೧ ಸಾರಿ ಹಾಕಿಕೊಂಡರೆ ಖಾಕಾಗಿರುತ್ತೆ. ಅನೇಕ ದೊಡ್ಡ ಮನುಷ್ಯರು ಇದನ್ನೇ ಉಪಯೋಗಿಸುತ್ತಾರೆ.

ಪರಿಮಳ ನಸ್ಯದಪುಡಿ

ಪರಿಮಳ ನಸ್ಯದಪುಡಿ ಡಬ್ಬಿ ೧ಕ್ಕೆ . ()—೨—()
ಬಾಂಗಿ ಕರ್ಚು . . . . ()—೩—()

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿ ಪೂರ್ತಿ ಗಮಗಮಿಸುತ್ತದೆ. ಉಪಯೋಗಿಸುವವರಿಗೆ ಸುವಾಸನೆಯನ್ನು ಆನಂದವನ್ನು ಉಂಟುಮಾಡುತ್ತದೆ.

ತಲೆನೋವು, ಪೀನಸ, ದಂತರೋಗ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

ಸೂಚನೆ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಸ್ಯದಪುಡಿ ಇರುತ್ತೆ

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ಸೆಪ್ಟಂಬರ್ ತಾ॥ ೨೮ ನೇ ಗುರುವಾರ

ಮೆ॥ ಎಸ್. ಎಮ್. ಫ್ರೇಸರ್, ಸಿ. ಐ. ಇ. ಯವರು.

ಮುಂದಣ ಅಕ್ಟೋಬರ್ ಮಾಸದ ಅಂತ್ಯಭಾಗದಲ್ಲಿ ಮೆ॥ ಫ್ರೇಸರ್ ಸಾಹೇಬರವರು ಈ ಮೈಸೂರು ಸಂಸ್ಥಾನದ ರೆಸಿಡೆಂಟರಾಗಿ ದಯಮಾಡುವರೆಂಬುದಾಗಿ ವರ್ತಮಾನ ಬಂದಿರುವಲ್ಲಿ ಈ ಸುದ್ದಿಯು ನಿಜವೋ ನಿಜವಲ್ಲವೋ ಎಂದು ಬೆಂಗಳೂರಿನಲ್ಲಿ ಸಂಶಯಪಡುತ್ತಿರುವರು ಆದರೆ ರಾಜಧಾನಿಯಲ್ಲಿ ಈ ಮಾತು ನಿಶ್ಚಯವೆಂದೇ ಸರ್ವಸಾಮಾನ್ಯವಾಗಿ ತಿಳಿದಿದಾರೆ. ಈ ಮಹನೀಯರ ನಿಯಾಮಕದಿಂದ ಸಂಸ್ಥಾನದ ಪ್ರಜೆಗಳು ಹರ್ಷಿತರಾಗಿರುವರೆಂದು ನಾವು ಹೇಳಬೇಕಾದುದಿಲ್ಲವಷ್ಟೆ. ನಮ್ಮ ಶ್ರೀಮನ್ಮಹಾರಾಜರವರಿಗೆ ಅನೇಕ ವರ್ಷಗಳ ವರೆಗೂ ವಿದ್ಯಾಗುರುಗಳಾಗಿದ್ದ ಮೆ॥ ಫ್ರೇಸರ್ ಸಾಹೇಬರವರು ಸಂಸ್ಥಾನಕ್ಕೆ ಅನರ್ಘ್ಯವಾದ ಪ್ರಯೋಜನವನ್ನುಂಟುಮಾಡಿ ಪ್ರಜೆಗಳೆಲ್ಲರ ಕೃತಜ್ಞತೆಗೆ ಅರ್ಹರಾಗಿದ್ದಾರೆ

ನಮ್ಮ ಈ ಸಂಸ್ಥಾನಕ್ಕೆ ರೆಸಿಡೆಂಟರುಗಳಾಗಿ ದಯಮಾಡಿರುವ ದೊಡ್ಡ ಮನುಷ್ಯರಲ್ಲಿ ಅನೇಕ ಪ್ರಸಿದ್ಧರುಂಟು. ಆದರೂ ಅವರಲ್ಲಿ ಬಹುದೂರು ಉದ್ಯೋಗಪ್ರಾರಂಭದಲ್ಲಿ ಈ ಸಂಸ್ಥಾನದ ಸ್ಥಿತಿಗತಿಗಳ ವಿಷಯದಲ್ಲಿಯೂ ಪ್ರಜೆಗಳ ವಿದ್ಯಾಭ್ಯಾಸದ ವಿಷಯದಲ್ಲಿಯೂ ಮೆ॥ ಫ್ರೇಸರ್ ಸಾಹೇಬರಿಗಿರುವಷ್ಟು ಅನುಭವವನ್ನು ಹೊಂದಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದುದರಿಂದ ಇಂಥ ಅನುಭವಶಾಲಿಗಳನ್ನು ನಮ್ಮ ಸಂಸ್ಥಾನಕ್ಕೆ ರೆಸಿಡೆಂಟರನ್ನಾಗಿ ನೇಮಿಸಿರುವುದು ರಾಜ್ಯಾಭ್ಯುದಯಕ್ಕೆ ಕಾರಣವೆಂದು ನಾವು ನಿಸ್ಸಂದೇಹವಾಗಿ ತಿಳಿದಿದ್ದೇವೆ. ಇವರ ನಿಯಾಮಕದ ವರ್ತಮಾನವು ಶೀಘ್ರದಲ್ಲಿ ಸ್ಥಿರಪಡುವುದೆಂದೂ ಇವರು ಈ ಸಂಸ್ಥಾನದಲ್ಲಿ ಅನೇಕ ವರ್ಷಗಳ ವರೆಗೂ ಸ್ಥಿರವಾಗಿರುವರೆಂದೂ ನಂಬಿದ್ದೇವೆ

ಕರ್ಜನ್ ಪ್ರಭುಗಳು ವಿದ್ಯಾ ವಿಷಯವಾಗಿ ಮಾಡಿದ ಭಾಷಣವು

ಇಂಡಿಯಾ ದೇಶದ ವಿವಿಧ ಭಾಗಗಳಲ್ಲಿ ವಿದ್ಯಾಭ್ಯಾಸವನ್ನು ನಡಸುತ್ತಿರುವ ಇಲಾಖೆಯ ಡೈರೆಕ್ಟರುಗಳೆಲ್ಲಾ ಸೇರಿ ಕೆಲವು ವಾರಗಳಿಂದ ಸಿಮ್ಲಾ ಪಟ್ಟಣದಲ್ಲಿ ಸಭೆಯನ್ನು ಮಾಡುತ್ತಿರುವರಷ್ಟೆ. ಇವರು ಕಳೆದ ೨೦ನೆಯ ತಾರೀಖಿನಲ್ಲಿ ಲಾರ್ಡ್ ಕರ್ಜನರವರನ್ನು ಸಭೆಗೆ ಕರೆಯಿಸಲು ಅವರು ತಮ್ಮ ವೈಸ್‍ರಾಯಿ ಪದವಿಗೆ ರಾಜಿನಾಮೆ ಕೊಟ್ಟ ನಿಮಿತ್ತವಾಗಿ ಮೇಲೆ ಕಂಡ ಈ ವಿದ್ವನ್ಮಂಡಲಿಯವರಿಗೆ ಅಂತ್ಯೋಕ್ತಿಗಳನ್ನು ನುಡಿಯುವಾಗ್ಗೆ ಕಳೆದ ಐದಾರು ವರ್ಷಗಳ ತಮ್ಮ ಆಳ್ವಿಕೆಯಲ್ಲಿ ವಿದ್ಯಾಭ್ಯಾಸಕಾರ್ಯಗಳು ಎಷ್ಟರಮಟ್ಟಿಗೆ ವೃದ್ಧಿಯನ್ನು ಹೊಂದಿವೆಯೆಂಬುದನ್ನು ತಿಳಿಯಪಡಿಸಿದರು. ಪ್ರಭುಗಳ ಭಾಷಣವು ದೀರ್ಘವಾಗಿರುವುದರಿಂದ ಅದಷ್ಟನ್ನೂ ಇಲ್ಲಿ ಉದಾಹರಿಸಲಸಾಧ್ಯವಾಗಿದೆ. ಇದಲ್ಲದೆ ವಿಷಯಗರ್ಭಿತವಾದ ಆ ಭಾಷಣವನ್ನು ಸಂಕ್ಷೇಪಿಸಿ ಹೇಳುವುದೂ ಕಷ್ಟವಾಗಿದೆ. ಆದುದರಿಂದ ಅದರಲ್ಲಿ ಒಂದೆರಡು ಅಂಶಗಳನ್ನು ಮಾತ್ರ ಇಲ್ಲಿ ತಿಳಿಸುತ್ತೇವೆ.

ಕರ್ಜನ್ ಪ್ರಭುಗಳೂ ಅವರ ಸರ್ಕಾರದ ಉದ್ಯೋಗಸ್ಥರೂ ನಮ್ಮ ಈ ದೇಶದಲ್ಲಿ ವಿದ್ಯಾಭ್ಯಾಸದ ಕೊರತೆಗಳೆಷ್ಟಿವೆಯೆಂದು ತಿಳಿದುಕೊಳ್ಳುವುದಕ್ಕೆ ಬಹಳವಾಗಿ ಪ್ರಯತ್ನಿಸಿರುವುದರಿಂದ ನಮ್ಮ ದೇಶೀಯರು ಅವರಿಗೆ ತುಂಬಾ ಕೃತಜ್ಞರಾಗಿರಬೇಕು. ದೇಶೀಯರಲ್ಲಿ ಪ್ರೈಮರಿ ತರಗತಿಗಳ ವಿಧ್ಯಾಭ್ಯಾಸವು ಇನ್ನೂ ವೃದ್ಧಿಸ್ಥಿತಿಗೆ ಬರತಕ್ಕದೆಂಬ ವೈಸ್ರಾಯರು ಹೇಳಿದುದು ಸಹಜವಾಗಿದೆ. ಏತಕೆಂದರೆ ಜನರು ಸಾಮಾನ್ಯವಾಗಿ ಅಸ್ತಿವಾರಕ್ಕೆ ಸಮಾನವಾದ ಪ್ರೈಮರಿ ತರಗತಿಗಳಲ್ಲಿಯೇ ಚೆನ್ನಾಗಿ ಅಭ್ಯಾಸಿತರಾಗದಿದ್ದರೆ ಮಧ್ಯ ತರಗತಿಯ ಮತ್ತು ಉತ್ತಮ ತರಗತಿಯ ವಿದ್ಯೆಯಲ್ಲಿ ಯಾವ ಪ್ರಯೋಜನವನ್ನಾದರೂ ಪಡೆಯಲಾರರು. ಇದಲ್ಲದೆ ದೇಶೀಯರಿಗೆ ಸ್ವಭಾಷೆಯಲ್ಲಿ ಪರಿಶ್ರಮವು ಯಥಾಯೋಗ್ಯವಾಗಿ ಇರದೆ ಹೋದರೆ ವಿದೇಶೀಯರಾದ ಇಂಗ್ಲಿಷ್ ಭಾಷೆಯಿಂದೇನೂ ಉಪಯೋಗವಿಲ್ಲವೆಂದು ವೈಸ್ರಾಯಿಯವರು ಹೇಳಿದುದೂ ಒಪ್ಪತಕ್ಕದ್ದಾಗಿದೆ "ಯಾವ ಜನರಾದರೂ ಮೊದಲು ಸ್ವಭಾಷೆಯನ್ನು ಧಾರಾಳವಾಗಿ ಉಪಯೋಗಿಸಲಾರದೆ ಹೋದರೆ ಅನ್ಯಭಾಷೆಯಿಂದ ಪ್ರಯೋಜನಕರನಾಗಿ ಬಳಸಿಕೊಳ್ಳಲಾರರು" ಎಂದು ಹೇಳಿದ್ದು ನಿಜವಲ್ಲವೇ? ಈ ಕಾರಣಗಳನ್ನೆಲ್ಲಾ ವಿಮರ್ಶಿಸಿದವರಾದ ಲಾರ್ಡ್ ಕರ್ಜನ್ ಸಾಹೇಬರ ಸರ್ಕಾರದವರು ಪ್ರೈಮರಿ ವಿದ್ಯಾಭ್ಯಾಸ ನಿಮಿತ್ತವಾಗಿ ೩೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಬೇಕೆಂದು ನಿಷ್ಕರ್ಷೆ ಮಾಡಿದಾರೆ.

ಪ್ರೈಮರಿ ವಿದ್ಯಾಭ್ಯಾಸವನ್ನು ಬಿಡು ಹೈ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಯೂನಿವರ್ಸಿಟಿಗಳಲ್ಲಿಯೂ ನಡೆಯುವ ವಿದ್ಯಾಭ್ಯಾಸದ ವಿಷಯವಾಗಿ ಕರ್ಜನ್ ಪ್ರಭುಗಳ ಆಳ್ವಿಕೆಯಲ್ಲಿ ನಡೆದಿರುವ ಪ್ರಯತ್ನಗಳನ್ನು ಕುರಿತು ಇಲ್ಲಿ ಪುನಃ ವಾಚಕರಿಗೆ ಹೇಳಬೇಕಾದ ಆವಶ್ಯಕವಿಲ್ಲ. ಅದಿರಲಿ ವಿದ್ಯಾಭ್ಯಾಸಪ್ರೋತ್ಸಾಹಕ್ಕಾಗಿ ದೇಶೀಯರಾದ ಅರಸುಗಳೂ ಶ್ರೀಮಂತರೂ ಕೊಟ್ಟಿರುವ ಸಹಾಯವನ್ನು ಕರ್ಜನ್ ಪ್ರಭುಗಳು ಸ್ಮರಣೆಗೆ ತಂದರು ಸಂಸ್ಥಾನದ ರಾಜರ ಪ್ರೋತ್ಸಾಹದಿಂದ ಸಿಕ್ಕಿ ಮಹಾರಂಗದವರು ಅಮೃತಸರದಲ್ಲಿರುವ ಖಾಲ್ಸಾ ಕಾಲೇಜಿಗೆ ೨೦ ಲಕ್ಷ ರೂಪಾಯಿ ಕೊಟ್ಟಿದ್ದರು. ರಾಂಚಿಯೆಂಬಲ್ಲಿ ಒಂದು ಕಾಲೇಜನ್ನು ಸ್ಥಾಪಿಸುವದಕ್ಕೆ ಬಂಗಾಳಾ ದ್ರವ್ಯಸಹಾಯವನ್ನು ಮಾಡಿದರು. ಮಾ ಎಂಬಲ್ಲಿ ಒಂದು ಕಾಲೇಜನ್ನು ಸ್ಥಾಪಿಸುವದಕ್ಕಾಗಿ ರಾಂಪುರ ನವಾಬರು ನಿವೇಶನವನ್ನೂ ಬಲರಾಂಪುರದ ಮಹಾರಾಜರು ಲಕ್ನೋ ಪಟ್ಟಣದಲ್ಲಿ ವಿದ್ಯಾಭ್ಯಾಸಕ್ಕೂ ವಿದ್ಯಾರ್ಥಿಗಳ ವಾಸಕ್ಕೆ ಅನುಕೂಲವಾದ ಶಾಲೆಯನ್ನು ಹೊಸದಾಗಿ ಕಟ್ಟಿಸುವುದಕ್ಕೆ ೩ ರೂಪಾಯಿಗಳನ್ನೂ ದಾನಮಾಡಿದರು ಇದೇ ಪ್ರಕಾರ ವ್ಯವಸಾಯಕ್ಕಾಗಿ ಕಲಾವಿದ್ಯೆ ಮೊದಲಾದ ವಿಷಯಗಳಲ್ಲಿ ದೇಶವನ್ನು ಅಭಿವೃದ್ಧಿಗೆ ತರತಕ್ಕಂಥ ಪ್ರಯತ್ನಗಳು ಅನೇಕವಾಗಿ ನಡೆದಿರುತ್ತವೆ ಇದಲ್ಲದೆ ಕಳೆದ ನಾಲ್ಕು ವರ್ಷಗಳಲ್ಲಿ ಬಂಗಾಳಾ ಪ್ರಾಂತವೊಂದರಲ್ಲೇ ವಿದ್ಯಾರ್ಥಿನಿಯರ ಸಂಖ್ಯೆಯು ಇಮ್ಮಡಿಯಾಗಿರುವದನ್ನು ನೋಡುವಲ್ಲಿ ಸ್ತ್ರೀವಿದ್ಯಾಭ್ಯಾಸವು ಬಹಳ ವೃದ್ಧಿಯಾಗುತ್ತಿದೆಯೆಂದು ಗೊತ್ತಾಗುವುದು. ಹೀಗೆ ಕರ್ಜನ್ ಪ್ರಭುಗಳ ಆಳ್ವಿಕೆಯು ನಮ್ಮ ದೇಶದ ವಿದ್ಯಾಭ್ಯಾಸ ಕಾರ್ಯಕ್ಕೆ ಅತ್ಯಂತ ಪ್ರೋತ್ಸಾಹಕರವಾಗಿದ್ದಿತೆಂದು ಸ್ಮರಿಸಲ್ಪಡತಕ್ಕದಾಗಿದೆ.

ಸ್ವದೇಶದ ವೃತ್ತಾಂತಗಳು.

ಕರ್ನಲ್ ದೇಶರಾಜೆಅರಸಿನವರ ಮನೆಯಲ್ಲಿ ಒಡವೆಗಳ ಚೋರಿ ಮಾಡಿದವರ ವಿಚಾರಣೆಯು ಮುಂದಣ ತಿಂಗಳು ೨೩ ತಾರೀಖಿಗೆ ಇಟ್ಟಿದೆ

✱✱✱✱✱

ಕೋಲಾರದ ಚಿನ್ನದ ಗಣಿಯ ಬಾಲ್‍ಘಾಟನ ಒಬ್ಬ ಪೋಲೀಸ್ ಕಾನ್ಸ್‌ಟೇಬಲನು ಕಳೆದ ಮಂಗಳವಾರ ರಾತ್ರಿಯಲ್ಲಿ ಮೆಟ್ರಿಯನಿಗೆ ಸಿಕ್ಕಿ ಮೃತನಾದನು

✱✱✱✱✱

ಈ ವರ್ಷ ಪ್ಲೇಗ್ ರೋಗದ ತೊಂದರೆಯಿಲ್ಲದಿರುವುದರಿಂದ ನವರಾತ್ರ್ಯುತ್ಸವಕಾರ್ಯಗಳೆಲ್ಲವೂ ಸಂತೋಷಕರವಾಗಿಯೂ ಸಮಾಗಿಯೂ ನಡೆಯುವವೆಂದು ಭಾವಿತವಾಗಿದೆ.

✱✱✱✱✱

ಮೆ॥ಗಳಾದ ಜೋನ್ಸ್‌ರವರು ಮೆಕಾನಿಕಿಯವರು ಪ್ರಿನ್ಸ್ ಆಫ್ ವೇಲ್ಸ್‌ರವರ ಷಿಕಾರಿಗೋಸ್ಕರ ಕಾಕನಕೋಟೆ ೩' ಮೈಲಿ ದೂರದಲ್ಲಿ ಒಂದು ಕ್ಯಾಂಪಿಗೆ ಜಾಗವನ್ನು ಗುರುತು ಮಾಡಿಯಿರುತ್ತಾರೆ.

✱✱✱✱✱

ನಮ್ಮ ಶ್ರೀಮನ್ಮಹಾರಾಜರವರು ೩೦,೦೦೦ ರೂ. ಕೊಟ್ಟು ಆಸ್ಟ್ರೇಲಿಯದಿಂದ ತರಿಸಿರುವ ಮಂದೆರಾ ಎಂಬ ಕುದುರೆಯನ್ನು ಈ ವರ್ಷ ಕಲ್ಕತ್ತೆಯಲ್ಲಿ ನಡೆಯುವ ಪಂದ್ಯಕ್ಕೆ ಕಳುಹಿಸಿಕೊಡುವರೆಂದು ಕೇಳುತ್ತೇವೆ.

✱✱✱✱✱

ಮೈಸೂರು ಅರಮನೆ ಡಾ॥ ಜಯರಾಂಪಂಡಿತರಲ್ಲಿರುವ ಶ್ರಾಸಂಧಾಂಜನವು ನೇತ್ರಕ್ಕೆ ಬಹಳ ಒಳ್ಳೆಯದೆಂತಲೂ ಇದು ಜ್ವರ ಮೊದಲಾದ ಕೆಲವು ವ್ಯಾಧಿಗಳು ಗುಣವಾಗುತ್ತವೆಂತಲೂ ಇದು ಅನೇಕ ದೊಡ್ಡ ಮನುಷ್ಯರಿಂದ ಪರೀಕ್ಷಿಸಲ್ಪಟ್ಟಿತೆಂತಲೂ ಕೇಳುತ್ತೇವೆ.

ಚೇಂಬರ್ಲೇನ್ ಯವರು ಕಂಡುಹಿಡಿದ ಕೆಮ್ಮು ಔಷಧವು.

38



ಶೀತ, ಕೆಮ್ಮು, ಗಂಟಲು ಗಾರೆನ್ನುವದು, ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಾಳಪ್ರಿಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಆದರ ಮೇಲೆ ಜ್ವರ ಹುಟ್ಟುವದು; ಎದೆಯು ಬಾಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮೌಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಯಾವಾಗಲೂ ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧ ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವ್ರುಂಟ್ ರೋಡ್,
ಮದರಾಸ್.

ಕಳೆದ ವಾರ ಆದಿವಾರಗಳಲ್ಲಿ ಮೈಸೂರು ನಜರ್‌ಬಾದಿನಲ್ಲಿ ... ಆತ್ಮಹತ್ಯ ಮಾಡಿಕೊಂಡರೆಂದೂ ಕಳೆದ ವಾರ ಪ್ರಕಟವಾದ ... ಕಾರ್ಯವನ್ನು ಮಾಡಿದವನೆಂದು ಪೊಲೀಸ್ ಬಂಧನದ ... ತಪ್ಪಿಸಿಕೊಂಡು ಓಡಿ ಹೋದವನೆಂದೂ ಅರಿಯುತ್ತೇವೆ.

*****

ಮೈಸೂರು ರಾಜಧಾನಿಯ ನಿವಾಸಿಗಳಾದ ಮ॥ ಸಿಂಗರಯ್ಯ ... ರೆಟ್ ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರ ... ಚರಿತ್ರೆಯನ್ನು ಬರೆದಿರುವರು. ಇದು ಈಗಂಗಲೆ ಅಚ್ಚಾಗು ... ಗುತ್ತಿರುವದರಲ್ಲಿದೆ. ಇನ್ನೊಂದು ಮಾಸದೊಳಗಾಗಿ ಕನ್ನ ... ಜನೋಪಯೋಗಕ್ಕೆ ಹೇತುವಾಗಿ ಈ ಗ್ರಂಥವು ಸಿದ್ಧವಾಗು ... ತಿಳಿದಿದೇವೆ. ಇದರಲ್ಲಿ ಗರ್ಭೀಕರಿಸಿರುವ ವಿಷಯಗಳು ... ಪೂರ್ವಗಳೆಂದು ತಿಳಿದು ಬರುತ್ತದೆ.

*****

ಪರಸ್ಪರ ಸಹಾಯಕರಣಾರ್ಥವಾಗಿ ಬೆಂಗಳೂರಿನಲ್ಲಿ ಸ್ಥಾಪಿತ ... ಕೋ ಆಪರೇಟಿವ್ ಸಭೆಯವರು ಸ್ವದೇಶೀಯ ಪದಾರ್ಥ ... ಪ್ರೋತ್ಸಾಹವನ್ನು ಂಟುಮಾಡಬೇಕೆಂದು ಒಂದು ಅಂಗಡಿಯು ... ಯೋಚನೆಯಲ್ಲಿದ್ದಾರೆ ಈ ನಮ್ಮ ಜನರು ಪರದೇಶದ ... ಅಪೇಕ್ಷೆಯನ್ನು ಬಿಟ್ಟು ಮೈಸೂರು ಸಂಸ್ಥಾನದಲ್ಲಿ ಆಗು ... ಮೊದಲಾದವುಗಳನ್ನೇ ಉಪಯೋಗಕ್ಕೆ ತಂದ ... ಪ್ರೋತ್ಸಾಹವಾಗುವುದು. ಅಂತರ ಕೈಗಾರಿಕೆಯು ಅ ... ವೃದ್ಧಿಯಾಗುತ್ತದೆ

*****

ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಜಾರ್ಜ ಎಂಬೊಬ್ಬ ದಿವಾ ... ಪೈದಿಯೊಬ್ಬನನ್ನು ಚನ್ನಾಗಿ ಕಾಯದೆ ಹೋದಕಾರಣ ಆ ... ಪೈದಿಯು ತಪ್ಪಿಸಿಕೊಂಡು ಓಡಿಹೋದರು ಇದಕ್ಕೆ ಆ ದಿವಾನ ... ಪೈದಿಯು ಜೈಲ್ ಸೂಪರಿಂಟೆಂಡರಾದ ಹ್ಯಾರ್ಲೆಟ್ ಸಾ॥ ರವರ ... ಬಂಗಲೆಯಲ್ಲಿ ಒಂಟಿಯಾಗಿ ಕೆಲಸ ಮಾಡುತ್ತಿದ್ದದರಿಂದಲೂ, ಆ ಸಾ ... ತೋರಿಸುವಿಯು ಸಾದೆಯನ್ನು ತರುವ ನಿಮಿತ್ತ ತನ್ನನ್ನು ... ಕಳುಹಿಸಿದುದರಿಂದಲೂ ಪೈದಿಯನ್ನು ಕಾಯುವದಕ್ಕೆ ... ಅವಕಾಶ ದೊರೆಯಲಿಲ್ಲವೆಂದು ಕೇಳಿದನು

ಸ್ವದೇಶೀಯ ವಿಪ್ಲವತೆಯು.

ದೇಶೀಯ ವ್ಯಾಪಾರ ವೃದ್ಧ್ಯರ್ಥವಾಗಿ ಬಂಗಾಳ್ ನಿವಾಸಿ ... ಮಾಡುತ್ತಿರುವ ಪ್ರಯತ್ನಗಳನ್ನು ಈ ದೇಶದ ಇತರ ಭಾಗ ... ದಲ್ಲಿರುವ ಜನರೂ ಅನುಸರಿಸಿ ಕಾರ್ಯಾರಂಭವನ್ನು ಮಾಡಿರು ... ಸ್ವಭಾವವಾಗಿದೆ ಇಂಡಿಯಾ ನಿವಾಸಿಗಳನ್ನು ನೋಡಿ ಬ ... ದೇಶೀಯರೂ ಕಾರ್ಯೋದ್ಯೋಗಿಗಳಾಗಿರುವುದನ್ನು ನೋ ... ಆಗಿ ಬಹುಮುಖ್ಯವೆಂಬ ಅಪೂರ್ವ ಪದಾರ್ಥವು ನಮ್ಮ ದೇಶದೂ ... ಪ್ರವೇಶ ಮಾಡಿ ನೆಲೆಗೊಳ್ಳುತ್ತದಕ್ಕೆದೆಯೆಂದು ತಿಳಿಯಬೇ ... ಗಿದೆ. ಸ್ವದೇಶೀಯ ಹಿತಕಾರಿಗಳು ಕಳೆದ ೫ನೇ ತಾರೀಖಿನಲ್ಲಿ ... ರಾಜಧಾನಿಯಾದ ರಂಗೂನ್ ಪಟ್ಟಣದಲ್ಲಿ ಸಭೆಗೂಡಿದ್ದರು. ... —ಬಂಗಾಳ ಹಿಂದುಸ್ಥಾನ ಮದ್ರಾಸು ಮಹಾರಾಷ್ಟ್ರ ಗುಜರಾತಿ ... ಪಂಜಾಬಿ ಮಹರ್ಮ್ಮದೀಯ ವರ್ತಕ ಮಹನೀಯರು ಏಕ ... ದಿಂದ ಕೂಡಿ ಇಂಡ್ಯಾ ದೇಶೀಯರಲ್ಲಿ ದೇಶೀಯರಿಂದಲೆ ... ತಯಾರಿಸಲ್ಪಟ್ಟ ವಸ್ತುಗಳನ್ನು ಉಪಯೋಗಕ್ಕೆ ತರುವಂಥ ಪ್ರ ... ಯತ್ನಗಳನ್ನು ಮಾಡಬೇಕೆಂದು ಉದ್ದೇಶಿಸಿದರು. ಇದರ ಸಂಬಂ ... ಧ ನಿಮಿತ್ತ ಆ ಸಭೆಯಲ್ಲಿ ಮಾಡಿದ ರೆಜಲ್ಯೂಷನುಗಳು ಯಾವ ... ವೆಂದರೆ—೧ ಇಂಡಿಯಾ ದೇಶೀಯರು ಪ್ರಾರಂಭಿಸಿರುವ ಈ ಕಾ ... ರ್ಯವನ್ನು ಆ ಸಭೆಯವರು ಕೇವಲ ಸಂತೋಷದೊಡನೆ ಅನು ... ಮೋದಿಸುತ್ತಾರೆ. ಮತ್ತು ಪರದೇಶೀಯ ವಸ್ತುವಿಶೇಷಗಳನ್ನು ... ಉಪಯೋಗಿಸದೆ ಬಿಡುವದರಿಂದ ಕೊರತೆಯಾದರೂ ಚಿಂತೆಯಿಲ್ಲ, ... ಸ್ವದೇಶೀಯ ಪದಾರ್ಥಗಳನ್ನೇ ಉಪಯೋಗಿಸುವದಾಗಿ ಒಪ್ಪುತ್ತಾ ... ರೆ ೨ ಇಂಡಿಯಾ ನಿವಾಸಿಗಳಲ್ಲಿ ಸಕಲ ವರ್ಣಾಶ್ರಮದವರೊಳ ... ಗಿನವರೂ ಪ್ರತಿನಿಧಿಗಳನ್ನು ಆರಿಸಿಕೊಂಡು ದೇಶೀಯರಿಂದ ನಿ ... ರ್ಮಿತವಾದ ಪದಾರ್ಥಗಳನ್ನೇ ಸರ್ವರೂ ಕೊಂಡುಕೊಳ್ಳುವಂತೆ ... ಪ್ರೇರಿಸರೋಸು ; ಇವರನ್ನು ಕಳುಹಿಸಿಕೊಡತಕ್ಕದ್ದು. ಮತ್ತು ... ಆ ವಸ್ತುಗಳು ಎಲ್ಲಿ ತಯಾರಾಗುತ್ತವೆಂಬೀ ಮೊದಲಾದ ಸಂಗ ... ತಿಗಳನ್ನು ತಿಳಿಯುವದಕ್ಕೂ ಮುಂದೆ ಮಾಡತಕ್ಕ ಕಾರ್ಯಗಳು ... ಯಾವವೆಂದು ಆಲೋಚಿಸುವದಕ್ಕೂ ಉಪಸಭೆಗಳನ್ನು ನಿಯಾಮಕ ... ಮಾಡತಕ್ಕದ್ದು

*   *   *

“ಬಂಗಾಳಿ” ಎಂಬ ಪತ್ರಿಕೆಯಲ್ಲಿ ವಿದ್ಯಾರ್ಥಿಗಳಿಗೆ ಹೇಳಿ ... ದ ಬುದ್ಧಿವಾದವು ಬಹು ಸಮರ್ಪಕವಾಗಿದೆ. ಅದೇನೆಂದರೆ— ನಮ್ಮ ದೇಶೀಯ ಹಿತದ ವಿಷಯವಾಗಿ ನೀವು ಮಾಡುವ ಪ್ರಯತ್ನಗ ... ಳನ್ನು ನೋಡಿ ಕೆಲವರು ಇದಕ್ಕೆ ಅಕೃತ್ಯವೆಂಬ ಹೆಸರನ್ನು ಕಟ್ಟ ... ಬರಾಗಿದ್ದಾರೆ. ಹೀಗಿರಲಾಗಿ ನೀವು ತೊಡಗಿರುವ ಕಾರ್ಯದಲ್ಲಿ ... ಅತ್ಯಾತುರಕ್ಕೆಡೆಗೊಡದೆ ಶಾಂತವಾಗಿಯೂ ಸ್ಥಿರವಾಗಿಯೂ ಸಾಧಿ ... ಸುತ್ತಬಂದರೆ ಪ್ರಯೋಜನವುಂಟೇ ಹೊರತು ವಿದೇಶವಸ್ತುಗಳ ... ನ್ನು ಕೊಂಡುಕೊಳ್ಳುವುದಕ್ಕೆ ಹೋಗುವವರನ್ನು ಹಿಂಸಿಸುವದೇ ... ಮೊದಲಾದ ಬಲಾತ್ಕಾರಗಳನ್ನು ನಡೆಸಿದರೆ ದೇಶೋನ್ನತ್ಯಕ್ಕಾಗಿ ... ಆರಂಭಿಸಿರುವ ಈ ಕಾರ್ಯವೆಲ್ಲಾ ನಿಷ್ಫಲವಾಗಿ ಹೋಗುವದು ... ಎಂಬುದೇ.

*   *   *

ಕಲ್ಕತ್ತಾ ನಗರದಲ್ಲಿ ಮಾರ್ವಾಡಿಗಳು ಉರಿಯರು ಮೊದಲಾದ ... ದೊಡ್ಡ ದೊಡ್ಡ ವರ್ತಕರೂ ಅಂಗಡಿಯವರೂ ಬ್ರಿಟಿಷರಿಂದ ತಯಾ ... ರಿಸಲ್ಪಟ್ಟ ವಸ್ತುಗಳನ್ನು ಮಾರುವುದೇ ಇಲ್ಲವೆಂದು ತಮ್ಮ ತಮ್ಮ ... ಮನೆಗಳಲ್ಲಿ ಪ್ರತಿಜ್ಞೆಯನ್ನು ಮಾಡಿಕೊಂಡಿರುತ್ತಾರೆ. ಈ ದೇಶಾ ... ಭಿಮಾನವು ಕಲ್ಲಿಯವರಲ್ಲಿಯೂ ಪಟ್ಟಣದ ಕೂಲಿ ಜನರಲ್ಲಿಯೂ ... ಹುಟ್ಟಿದೆ. ಒಬ್ಬ ಬಾಡಿಗೆ ಗಾಡಿಯವನು ಇಂಗ್ಲಿಷ್ ಮೋಟಾ ... ರನ್ನು ಬಾಡಿಗೆಗೆ ಕೂರಿಸಿಕೊಳ್ಳದೆಹೋದನು.

ಸ್ವದೇಶಾಭ್ಯುದಯಪರವಾದ ವಿಹ್ವಲತೆಯು ಕೆಲವು ಭಾಗಗ ಳಲ್ಲಿ ಸಡ್ಡೆಹೋಯಿತೆಂತಲೂ ಇನ್ನು ಕೆಲವು ಕಡೆಗಳಲ್ಲಿ ಸಾಯು ತ್ತಿದೆಯೆಂದೂ ಕೆಲವು ಪತ್ರಿಕಾಕರ್ತರು ಹೇಳುತ್ತಿರುವರು. ಬರೋ ಡ್ಯ ವರ್ತಕಮಂಡಲಿಯವರಾದರೋ ಇದೆಲ್ಲವೂ ಬೇಗ ಆರಿಹೋಗ ತಕ್ಕ ಒಣಹುಲ್ಲಿನ ಬೆಂಕಿಯಂತಿರುವುದೇ ಹೊರತು ವಿಶೇಷ ಪರಿಗ ಣನೆಗೆ ಯೋಗ್ಯವಾದ ಪ್ರಮಾದಕಾರ್ಯವೆಂದು ಎಷ್ಟು ಮಾತ್ರ ಕ್ಕೂ ತಿಳಿಯಬಾರದೆಂದು ಧಿಕ್ಕರಿಸುತ್ತಿರುವರು. ಇದೇ ಮೊದಲಾದ ಅಭಿಪ್ರಾಯಗಳನ್ನು ಕುರಿತು ಸ್ಟೇಟ್ಸ್‌ಮನ್ ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಹೇಳಿರುವದೇನೆಂದರೆ—ಯಾರೇನಾದರೂ ಹೇಳಲಿ. ಈ ವಿಹ್ವಲತೆಯು ನ್ಯಾಯಾತಿರಿಕ್ತವಾದಂಥ ಪುಂಡುತನವೆಂದಾಗಲಿ ಜಾತಿವೈಷಮ್ಯವನ್ನು ಎಬ್ಬಿಸತಕ್ಕಂಥ ಮೂರ್ಖತ್ವವೆಂದಾಗಲಿ ತಿಳಿ ಯುವದು ಬಹು ಅನ್ಯಾಯವಾಗಿದೆ. ಮೊದಲೊಂದಲು ಕಾಣಿಸಿ ಕೊಂಡ ಪುಂಡುತನವು ಈಗ ಈ ವಿಹ್ವಲತೆಯಲ್ಲಿ ನಿರ್ನಾಮವಾ ಗಿದೆ ಇದು ಹೀಗಾಗಿರುವದರಿಂದಲೆ ಸ್ವದೇಶೀಯ ವಿಹ್ವಲತೆಯೇ ನಿರ್ನಾಮವಾಯಿತೆಂದು ಯೋಚಿಸುವುದು ಶುದ್ಧ ಮೂರ್ಖತ್ವವಾ ಗಿದೆ ಕಾರ್ಯವು ನಿಶ್ಶಬ್ದವಾಗಿ ನಡೆಯುವುದರಿಂದಲೇ ಗ್ರಾಮಾಂ ತರ ನಿವಾಸಿಗಳಲ್ಲಿ ಸಹಾ ಈ ದೇಶಾಭಿಮಾನವು ನೆಲೆಗೊಳ್ಳುತ್ತಿದೆ ಯೆಂದು ತಿಳಿಯತಕ್ಕದು.

*   *   *

ಇಂಡಿಯಾ ಕುಶಲವಿದ್ಯಾಭಿವೃದ್ಧ್ಯರ್ಥವಾಗಿ ಒಂದು ಸಮಾ ಜವು ಮದ್ರಾಸಿನಲ್ಲಿ ಏರ್ಪಟ್ಟಿದೆ. ಈ ಸಾಮಾಜಿಕರು ದೇಶೀಯ ರಿಗೆಲ್ಲಾ ಸಾಮಾನ್ಯವಾದ ಒಂದು ಫಂಡನ್ನು ಏರ್ಪಡಿಸಿ ಉತ್ಪತ್ತಿ ಯಾದ ಹಣದಿಂದ ಯೂರೋಪ್ ಅಮೆರಿಕ ದೇಶಗಳಲ್ಲಿ ನಮ್ಮ ದೇಶೀ ಯರಾದ ಯೌವನಸ್ಥರಿಗೆ ಕೈಗಾರಿಕೆಯನ್ನು ಕಲಿತುಕೊಳ್ಳುವುದ ಕ್ಕೋಸ್ಕರ ವೇತನಗಳನ್ನು ಕೊಟ್ಟು ಕಳುಹಿಸಬೇಕೆಂದು ಉದ್ದೇ ಶಿಸಿದ್ದಾರೆ ಹಣವನ್ನು ಉತ್ಪತ್ತಿ ಮಾಡುವುದಕ್ಕೆ ಪ್ರತಿ ವರ್ಷವೂ ದೀಪಾವಳಿ ದಿನದಲ್ಲಿ ಯೌವನಸ್ಥರಾದವರು ಮದ್ರಾಸಿನ ದೊಡ್ಡ ದೊಡ್ಡ ಬೀದಿಗಳಲ್ಲಿ ಹೊರಟು ವಾರ್ಷಿಕ ಚಂದಾವನ್ನು ವಸೂಲ್ಮಾ ಡುವರು ಈ ಸಮಾಜಕ್ಕೆ “ಸ್ವದೇಶಮಿತ್ರ” ಎಂಬ ಪತ್ರಿಕೆಗೆ ಎಡಿಟರಾಗಿಯೂ ಪ್ರಸಿದ್ಧಪುರುಷರಾಗಿಯೂ ಇರುವ ಮ॥ ಜಿ ಸುಬ್ರಹ್ಮಣ್ಯ ಅಯ್ಯರವರು ಅಧ್ಯಕ್ಷರಾಗಿದ್ದಾರೆ ಇದೇ ಉದ್ದೇಶಕ್ಕೆ ಸೇಲಂ ಕೊಯಮುತ್ತೂರು ತಿರುಚನಾಪಲ್ಲಿಗಳಲ್ಲಿಯೂ ದೇಶಾಭಿ ಮಾನಿಗಳು ಚಂದಾ ಎತ್ತಬೇಕೆಂದು ನಿಶ್ಚಯಿಸಿದಾರೆ ಇತರ ಭಾಗ ಗಳಲ್ಲಿಯೂ ಇಂಥ ಕಾರ್ಯಕ್ಕೆ ಪ್ರೋತ್ಸಾಹವನ್ನು ಕೊಡಬೇ ಕೆಂದಿರುವವರು ೧೦೭ ಅರ್ಮೇನಿಯನ್ ಸ್ಟ್ರೀಟ್, ಮದ್ರಾಸ್ ಎಂಬ ವಿಳಾಸಕ್ಕೆ ಬರೆದುಕೊಳ್ಳತಕ್ಕದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ತಮ್ಮ ತಿಳುವಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆನೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರ ರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು ಎಡಿ.

ಕರೆಸ್‌ಪಾಂಡೆನ್ಸ್.

ಕೋಲಿ

ಅಯ್ಯಾ,

ನೆನ್ನೆ ತಾರೀಖು ೧೦ ನೇ ಭಾನುವಾರ ಇದೇ ತಾಲ್ಲೂಕಿಗೆ ಸೇರಿದ ಆಲೂರು ಗ್ರಾಮದಲ್ಲಿ ಕಾಡು ಬಸಪ್ಪನೆಂಬುವನನ್ನು ಯಾರೋ ಹೊಮ್ಮದ ಕೆರೆ ಬಳಿ ಹೊಡೆದು ಕೊಂದುಹಾಕಿದ್ದರು. ಅಲ್ಲದೆ ಅವನಿಗೆ ಆಲೂರು ಗ್ರಾಮದಲ್ಲಿ ಕೆಲವರು ಶತ್ರುಗಳಿದ್ದರೆಂ ತಲೂ, ಈ ರೀತಿ ಮಾಡಲು ಕೆಲವು ತಿಂಗಳುಗಳಿಂದ ಆಲೋಚನೆ ಮಾಡಿದರೆಂತಲೂ ಜನರು ನಾನಾವಿಧವಾಗಿ ಅಡಿಕೊಳ್ಳುತ್ತಾರೆ ಆ ದಿವಸ ಅಮಲ್ದಾರರು ಬಾಜೂ ಗ್ರಾಮದಲ್ಲೇ ಇದ್ದರೆಂದು ಗೊತ್ತಾಗುತ್ತೆ. ಇಷ್ಟು ಸಮೀಪದಲ್ಲಿ ಇದ್ದೂ ಕೂಡ ಭಯವಿಲ್ಲದೆ ಈ ರೀತಿ ಮಾಡಿರುವುದು ಆಶ್ಚರ್ಯವಾಗಿದೆ. ಇದನ್ನು ಪತ್ತೆಮಾಡ ಲು ಪೊ॥ ಸೂ॥ ಸಾಹೇಬರು ಬಂದಿರುತ್ತಾರೆ. ಈ ಮೊಕದ್ದಮೆ ಯನ್ನು ಹ್ಯಾಗಾದರೂ ಪತ್ತೆಮಾಡಬೇಕು. ಇಲ್ಲದ ವಿಷಯದಲ್ಲಿ ಇನ್ನು ಮುಂದೆ ಇಂಥಾ ಅನಾಹುತಗಳು ಗ್ರಾಮದಲ್ಲಿ ಸಂಭವಿಸ ಬಹುದೆಂದು ಜನರು ಹೇಳಿಕೊಳ್ಳುತ್ತಿದ್ದಾರೆ

ದುರ್ಜನವಿರೋಧಿ

ಚಾಮರಾಜನಗರದ ತಾಲ್ಲೂಕು ಮ್ಯಾಜಿಸ್ಟ್ರೇಟರವರ ಸ॥ ಕ್ಲ॥ ರಾಮಕೃಷ್ಣಾಚಾರ್ಯರು ಬರೆದುಕೊಂಡ ಅರ್ಜಿ.

ಅಯ್ಯಾ,

ನಾನು ನಡಗನ್ನಡ ವೃತ್ತಾಂತ ಪತ್ರಿಕೆ ನಗರ ಪತ್ರಿಕೆಗಳಿಗೆ ನನ್ನ ಕೈಲಾದ ಮಟ್ಟಿಗೂ ನಿಜವಾದ ಬಾತ್ಮಿಗಳನ್ನೇ ಕೊಡುತ್ತಿದ್ದೇ ನೆ. ಹಾಲಿ ಈ ಊರಿನ ಪೊಲೀಸಿನವರ ಮೇಲೆ ಬಾತ್ಮಿಯನ್ನು ಬರೆ ದಿರಲು, ತಪ್ಪು ದುರ್ದಶೆಯು ಹೊರಟಿತೆಂತಲೋ ಅಥವಾ ಮತ್ಯಾವ ಕಾರಣದಿಂದಲೋ ನನ್ನ ಮೇಲೆ ವಿಶ್ವಾಸಲಾಗಿ ಊರಿ ನಲ್ಲಿ ದೂಷಣೆ ಮಾಡುತ್ತಿರುವರು. ನಾನಾದರೋ ಪರೋಪಕಾರಾಂ ಕ್ಕಾಗಿ ಹೊಡದಾಡುವವನೇ ವಿನಹ ಸುಳ್ಳು ಬಾತ್ಮಿಗಳನ್ನು ಕೊಡ ಲಾರೆ. ಅಲ್ಲದೆ ಸದರಿ ಪೊಲೀಸಿನವರು ಭಯೋತ್ಪಾದಕಗಳಾದ ಮಾತುಗಳನ್ನು ಅಲ್ಲಲ್ಲಿ ಹೇಳುತ್ತಿದ್ದಾರೆಂತ ವರ್ತಮಾನ ಕೇಳುತ್ತೇ ನೆ. ನಾನು ವ್ಯಾಪಾರಿಯಾದ್ದರಿಂದ ಸಂತೆ ವಗೈರೆ ಸ್ಥಳಗಳಿಗೆ ಆವೇಳೆಯಲ್ಲಿ ಹೋಗತಕ್ಕವನಾದ್ದರಿಂದ ಈ ಪೊಲೀಸಿನವರಿಂದ ಏನಾದರೂ ತೊಂದರೆ ಸಂಭವಿಸಬಹುದು. ಆದ್ದರಿಂದ ತಮ್ಮ ದೇಹಪೋ ಷಣೆ ವಿಷಯದಲ್ಲಿ ಸರ್ಕಾರದವರು ನಿಗಾ ಕೊಡಬೇಕಾಗಿ ಪ್ರಾರ್ಥನೆ.

ಸತ್ಯವಾದಿ.

ದಿವಾನರ ಸವಾರಿಯೂ ಬಿಟ್ಟಿಯೂ.

ಅಯ್ಯಾ,

ದೊಡ್ಡದೊಡ್ಡ ಉದ್ಯೋಗಸ್ಥರು ಸಂಚಾರ ಹೊರಡುವಾಗ್ಯೆ ಚಿಕ್ಕಅಧಿಕಾರಿಗಳು ಮುಖ್ಯವಾಗಿ ಶೇಕ್ದಾರು ಪಟೇಲರು ಅಮಲ್ದಾ ರ ಮುಂತಾದವರು ಜನಗಳನ್ನು ಬಿಟ್ಟಿ ಕೆಲಸಕ್ಕೆ ಹಿಡಿಯುವದು ಮಾತ್ರವಲ್ಲದೆ ಅವರಿಂದ ಹುಲ್ಲು, ಕೋಳಿಮೊಟ್ಟೆ, ಬೆಣ್ಣೆ ತುಪ್ಪ ಅಕ್ಕಿ ಸಹ ಏನಾದರೂ ದುಡ್ಡು ಕೊಡದೆ ತೆಗೆದುಕೊಂಡು ಹೋಗುವ ದು ಇನ್ನೂ ತಪ್ಪಿಲ್ಲ. ಈ ಸಾರಿ ಪ್ರತಿಯೊಂದು ಇಂಥಾ ತಪ್ಪುವಿಷ ಯಗಳನ್ನೇ ಕೆಲವರು ನೋಡಿ ಬಹು ಸಂತಾಪಪಟ್ಟರು. ಮತ್ತೆ ಕೆಲವರು ಖುದ್ದು ದಿವಾನರನ್ನು ಕಂಡುಹೇಳಿಕೊಳ್ಳಬೇಕೆಂದು ಕಾದಿದ್ದಾರೆ ಡೆಪ್ಯುಟಿಕಮೀಷನರು ಮುಂತಾದ ಅಧಿಕಾರಿಗಳು ಎಲ್ಲಿ ತಡೆಯುತ್ತಾರೋ ಎಂದು ಯೋಚಿಸುತ್ತಿದ್ದಾರೆ. ಆಗುಂಬೆಯಲ್ಲಿ ಸುಮಾರು ೫೦ ಜನಕ್ಕಿಂತ ಹೆಚ್ಚಾಗಿ ಬಿಟ್ಟಿ ಆಳುಗಳು ಮೂರುದಿನ ಗಳಿಂದಲೂ ಕಾದಿದ್ದಾರೆ ಇವರ ಗೋಳು ಸಂಕಟಗಳನ್ನು ವಿಚಾರಿ ಸುವವರೇ ಇಲ್ಲವಾಗಿದೆ ಈ ಮಲ್ನಾಡಿನ ಜನಗಳ ಇಂಥಾ ಕಷ್ಟ ಗಳನ್ನು ಯಾರಿಗೆ ಹೇಳಬೇಕೆಂದು ಅನೇಕರು ದಿಕ್ಕುತೋಚದೆ ಅರೆಯುತ್ತಿದ್ದಾರೆ ಇವಾವುದರೂ ತಕ್ಕ ಸಮಾಧಾನ ಕೊಡುವಿರೆಂದು ಬಿನ್ನೈಸುವ.

ಪ್ರಜಾಹಿತೈಷಿ.

ಮಲೆನಾಡಿನವರ ಅಹವಾಲು.

ಸ್ವಾಮಿ,

ಈ ಮಹಿಸೂರು ಸೀಮೆಯಲ್ಲಿ ಪ್ರಜಾಕ್ಷೇಮಕ್ಕಾಗಿ ಪ್ರತಿ ಸಾಲ್ ದಸರಾದಲ್ಲಿ ನಡೆಯುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಜೆ ಗಳ ಕಡೆಯಿಂದ ಕೊಡಲ್ಪಡುತ್ತಾ ಬರುವ ಸಬ್ಜೆಕ್ಟುಗಳ ಪೈಕಿ ಈ ಮಲೆನಾಡು ಪ್ರಾಂತ್ಯದ ಸಬ್ಜೆಕ್ಟುಗಳ ವಿಷಯವನ್ನು ಅಂಗೀಕರಿಸಿ ತೀರ್ಮಾನಿಸಲು ಯಾವ ಕಾರಣದಿಂದಲೋ ನಿಲ್ಲಿಸುತ್ತಾ ಬಂದದ್ದರ ಮೇಲೆ ಪ್ರಜೆಗಳಿಗುಂಟಾದ ಅನುತಾಪದ ದೆಸೆಯಿಂದ ತೊಂದರೆಗ ಳನ್ನೆಲ್ಲಾ ಯತ್ನವಿಲ್ಲದೆ ಅನುಭವಿಸುತ್ತಾ ಇಂಥಾ ತೊಂದರೆಗಳ ನ್ನೆಲ್ಲಾ ಪರಿಹಾರಮಾಡಲೋಸುಗ ಮಹಿಸೂರು ರಾಜ್ಯವನ್ನಾಳುವ ಶ್ರೀಮಾನ್ ದಿವಾನ್ ಸರ್. ಪಿ ಎನ್. ಕೃಷ್ಣಮೂರ್ತಿಗಳವರು ಕ ಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳ ಮೇಲೆ ಚಿತ್ತೈಸಿ ಈ ತೀರ್ಥಹಳ್ಳಿ ತಾಲ್ಲೂಕಿಗೆ ದಯಮಾಡಿಸಿ ಅಲ್ಲಲ್ಲಿ ಪ್ರಜೆಗಳ ಅ ವಾಲುಗಳನ್ನು ಸಾವಧಾನದಿಂದ ಕೇಳಿದ್ದಕ್ಕಾಗಿ ಈ ಮಲ್ನಾಡು ಪ್ರಜೆಗಳಿಗೆ ಇನ್ನು ಇನ್ಯಾವ ತೊಂದರೆಗಳೂ ಉಂಟಾಗಲಾರ ವೆಂದು ಪ್ರಜೆಗಳೆಲ್ಲರೂ ... ನಿಶ್ಚಿತವಾಗಿ ನಂಬಿರುವರು. ಆದರೆ ಪ್ರಜೆಗಳ ಮನಸ್ಸಿನಲ್ಲಿ ... ವಿಧವಾದ ಅನುಮಾನ ಬಾಧಿ ಸುತ್ತಾ ಇದೆ. ಅದು ಯಾವದೆಂದರೆ—(೧) ಬಾಗಾಯಿತುಗಳಿಗೆ ಅದರ ಸುತ್ತಲೂ ಕಾಡುಗಳನ್ನು ಬೆಳಸಿಕೊಂಡು ಅದರ ನೆರಳಾಗ ಲಿಂದ ತೋಟಗಳನ್ನು ಕಾಪಾಡಿಕೊಳ್ಳಬೇಕು ಯಾವದೊಂದು ದಿಕ್ಕಿನಲ್ಲಾದರೂ ಹಾಗೆ ಮರಗಳು ಇಲ್ಲದ ಪಕ್ಷದಲ್ಲಿ ಅಡಕೆಯಲ್ಲಿ ರತಕ್ಕ ಅಡಕೆ ಮರಗಳ ಒಂದು ಭಾಗವೆಲ್ಲಾ ಬಿಸಿಲಿನ ಝಳದಿಂದ ಸುಟ್ಟು ನಾಶಹೊಂದತಕ್ಕ ಸಂಗತಿ, (೨) ಬಾಗಾಯಿತು ಜಮೀನು ಗಳ ಹಿಂಬಾಗಕ್ಕೂ ಬಾಗಾಯಿತುಗಳ ವ್ಯವಸಾಯಕ್ಕೂ ಈ ಮ ಲ್ನಾಡು ಜನಗಳ ಉಪಯೋಗಕ್ಕೂ ಇರುವ ಕಾಡುಗಳಲ್ಲಿನ ಮರಗ ಳನ್ನೆಲ್ಲಾ ೩ ವರುಷಗಳಿಂದ ಸರ್ಕಾರದವರು ಇಷ್ಟುಬಂದ ಮರಗಳ ನ್ನೆಲ್ಲಾ ಕಡಿಯಿಸಿ ಬೈಲುಸೀಮೆಗೆ ಒಯ್ಯುತ್ತಾ ಬಂದದ್ದರ ಮೇಲೆ ಈಗ ಉಂಟಾಗಿರತಕ್ಕ ನಷ್ಟವೂ ಮುಂದೆ ಉಂಟಾಗತಕ್ಕ ಹಾನಿಯೂ, (೩) ಸದರಿ ಬಾಗಾಯಿತುಗಳಿಗೆ ಕೊಳೆ ರೋಗ ವ್ಯಾ ಪಿಸಿದ ಒಂದೆರಡು ವರುಷಗಳಲ್ಲೇ ಫಲಭರಿತವಾದ ಸಸಿಗಳು ಕೂಡ ಒಣಗಿ ಹೋಗುತ್ತವೆ ಎಂಬ ಸಂಗತಿಯೂ, (೪) ಬಾಗಾಯಿತು ಗಳಿಗೆ ಹೆಚ್ಚು ಕಂದಾಯ ದಾಖಲ್ಮಾಡಿರುವದಲ್ಲದೆ ಅದರ ಮೇಲೆ ಸದರಿ ಫಸಲಿಗೆ ಕೂಡ ಸಾಯರ್ ಹಾಸಲು ದಾಖಲ್ಮಾಡಿರುವದರಿಂದ ಸರ್ಕಾರದ ಕಂದಾಯ ಜೀವನ ಈ ಎರಡಕ್ಕೆ ಅಸಾಧ್ಯವಾಗಿ ಜಮೀನ್ ದಾರರುಗಳೆಲ್ಲಾ ಸಾಲ ಮಾಡಿಕೊಂಡಿರುವ ಕಾರಣ ಜಮೀನ್ ವ್ಯವ ಸಾಯಗಳು ಪೂರ್ವದಂತೆ ನಡೆಸಲು ಸಾಧ್ಯವಿಲ್ಲದೆ, ಜಮೀನುಗಳು ಹಾಳುಬಿದ್ದಿರುವ ಸಂಗತಿಯೂ, ಇವೆ ಮುಂತಾದ ವಿಷಯಗಳನ್ನು ಪ್ರತ್ಯಕ್ಷವಾಗಿ ಆಗಭರ್ಶ್ರೀಮಂತರಾದ ಶ್ರೀಯುತ ದಿವಾನ್ ಸಾ ಹೇಬ್ ಬಹದ್ದೂರವರ ಪರಾಂಬರಿಕೆಗೆ ತರಬೇಕೆಂಬ ಉದ್ದೇಶ ವಿತ್ತು. ಆದರೆ ಈ ತೀರ್ಥಹಳ್ಳಿ ಮುಂತಾದ ಕಡೆ ಮೊಕ್ಕಾಂಗಳು ಜಾಸ್ತಿ ಇಲ್ಲದ ಕಾರಣದಿಂದ ಪ್ರತ್ಯಕ್ಷವಾಗಿ ಪರಾಂಬರಿಸಬೇ ಕೆಂಬ ಸಂಗತಿ ಅರಿಕೆ ಮಾಡಲು ಅವಕಾಶವಿಲ್ಲದೆ ಹೋಯಿತು ಈ ಭಾಗಗಳೆಲ್ಲಾ ಪ್ರತ್ಯಕ್ಷವಾಗಿ ಕಾಣತಕ್ಕ ಸಂಗತಿಯಾದದರಿಂದ ಪ್ರಜೆಗಳ ಹೇಳಿಕೆಯ ಮೇಲೆ ಎಷ್ಟು ಮಾತ್ರಕ್ಕೂ ಅನುಮಾನಕ್ಕೆ ಕಾರಣವಿಲ್ಲವೆಂಬುವದಾಗಿ ಯೋಚಿಸುತ್ತೇನೆ.

ಇದುವರಿಗೂ ಮಲ್ನಾಡು ಪ್ರಾಂತ್ಯದ ದುರದೃಷ್ಟದ ದೆಸೆಯಿಂ ದ ಆಧುನಿಕ ಯುವಕರಾದ ಶ್ರೀಮಾನ್ ದಿವಾನ್ ಸಾಹೇಬರವರ ದರ್ಶನಮಾಡಿಸಲು ಅವಕಾಶವಿಲ್ಲದೆ ನಿಂತಿದ್ದಾಗಿತ್ತು. ಪ್ರಜಾಕ್ಷೇಮ ಕ್ಕಾಗಿ ಈ ಸಾಲಿನಲ್ಲಿ ದಯಮಾಡಿಸಿದ್ದರ ದೆಸೆಯಿಂದ ನಮ್ಮಗಳ ಗುಂಟಾದ ಎಲ್ಲಾ ತೊಂದರೆಗಳೂ ನಿವಾರಣೆಯಾಯಿತೆಂದು ಎಲ್ಲಾ ಪ್ರಜೆಗಳೂ ಆನಂದಭರಿತರಾಗಿರುತ್ತೇವೆ.

ನಾಹುದಸ್ಯ ಸದಾರಸ್ಯ । ಅಮಾತ್ಯಸಹಿತಸ್ಯಚ ॥
ಅಸ್ತು ಶ್ರೀಕೃಷ್ಣಕೃಪತೇ । ರಾಯುರ್‌ವರ್ಗಪ್ರದಾಯಿನೀ ।
ಅಗ್ರಹಾರಸ್ಥಿತಾಶ್ಚ । ಭಾವಿಷ್ಯನ್ನಸವಿಸಾರಿತಾ ।
ಭಾಗ್ಯದುಸ್ಸ್ವಾಮರೂಪೇಯ । ಮಾಶೀರ್ವಾದಪರಂಪರಾ ॥೧॥

ವಿಷ್ಣುಕ್ಷಹಾತಿ.

ಸರ್ವರಿಗೂ ದೇವರಾಗಿರುವಾತನ ಲಕ್ಷಣಗಳು.—I

ಭೂಲೋಕದ ನಿವಾಸಿಗಳು ಅನೇಕಾನೇಕ ದೇವರುಗಳನ್ನು ಆರಾಧಿಸುತ್ತಾರೆಂಬುದು ಸರ್ವರಿಗೂ ತಿಳಿದ ವಿಷಯವೇ. ಈ ದೇಶದಲ್ಲಿಯೂ ಕೂಡ ನಾವು ಎತ್ತಕಡೆ ನೋಡಿದಾಗ್ಯೂ ಹಿಂದೂ ದೇವಸ್ಥಾನಗಳೂ ಮಹಮ್ಮದೀಯರ ಮಸೀದಿಗಳೂ ಕ್ರೈಸ್ತ ದೇವಾಲಯಗಳೂ ಕಂಗೊಳಿಸುತ್ತಲಿವೆ ಒಂದೊಂದು ಮತದವರು ಒಂದೊಂದು ಬಂಗಡದವರು ತಮತಮಗೆ ಇಷ್ಟವಾದ ಆರಾಧನಾಸ್ಥಾನಗಳನ್ನು ಮಾಡಿಕೊಂಡಿದ್ದಾರಷ್ಟೆ. ಇದನ್ನು ನೋಡುವಾಗ ನಾವೇನು ಹೇಳಬೇಕು? ಭೂಲೋಕವನ್ನೆಲ್ಲಾ ಆಳುವ ದೇವರೊಬ್ಬನೋ, ಅನೇಕರೋ? ಏನೆಂದು ಹೇಳೋಣ! ಈ ವಿಷಯದಲ್ಲಿ ವಿಚಾರಣೆ ಮಾಡಿದರೆ ಅನೇಕರು—ಭೂಲೋಕಕ್ಕೆಲ್ಲಾ ಒಬ್ಬನೇ ದೇವರು. ಆದರೆ ಆತನನ್ನು ಬೇರೆಬೇರೆ ಜನಗಳು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ ಅನ್ಯೇ ಹೊರತು ಎಲ್ಲಾ ಜನಗಳನ್ನೂ ಆಳುವ ದೇವರು ಒಬ್ಬನೇ ಎಂದು ಹೇಳುತ್ತಾರೆ ಇನ್ನು ಕೆಲವರು—ನಾವು ಆರಾಧಿಸುವ ದೇವರೇ ಸತ್ಯವಾದಂಥ ಸರ್ವಶ್ರೇಷ್ಠನಾದ ದೇವರು ಇತರರು ಪೂಜಿಸುವ ದೇವರು ದೇವರೇ ಅಲ್ಲ ಎಂದು ಹೇಳುವರು. ಹಾಗಾದರೆ ನಾವು ಏನು ಹೇಳೋಣ? ಸರ್ವರಿಗೂ ಕೇವಲವಾದ ದೇವರು ಒಬ್ಬನಿರುವದಾದರೆ ಆತನ ಲಕ್ಷಣಗಳೇನು ಎಂದು ನಾವು ವಿಚಾರಿಸುವದು ಅವಶ್ಯವಾಗಿದೆ

ಪೂರ್ವಕಾಲದಲ್ಲಿ ಜೀವಿಸಿದ ಒಬ್ಬ ಗ್ರಂಥಕಾರನು ದೇವರನ್ನು ಕುರಿತು—

“ಪ್ರಾರ್ಥನೆಯನ್ನು ಕೇಳುವನೇ,
ನಿನ್ನ ಬಳಿಗೆ ಎಲ್ಲಾ ನರಪ್ರಾಣಿಗಳು ಬರುವರು
ಅಕ್ರಮಕಾರ್ಯಗಳು ನನ್ನ ಮೇಲೆ ಪ್ರಬಲವಾಗಿವೆ,
ಆದಾಗ್ಯೂ ನೀನೇ ನಮ್ಮ ಅಪರಾಧಗಳನ್ನು ಪರಿಹರಿಸುವಿ”

ಎಂದು ಹೇಳಿರುತ್ತಾನೆ

ಈ ಗ್ರಂಥಕಾರನು ಹೇಳಿರುವದನ್ನು ನೋಡಿದರೆ ಅವನು ದೇವರ ವಿಷಯದಲ್ಲಿ ಎರಡು ಸಂಗತಿಗಳನ್ನು ತಿಳಿಸುತ್ತಾನೆಂದು ತೋರುವದು.

೧ ದೇವರು ಪ್ರಾರ್ಥನೆಗಳನ್ನು ಕೇಳುತ್ತಾನೆ, ೨ ಆತನು ಪಾಪವನ್ನು ನಿರ್ಮೂಲ ಮಾಡುತ್ತಾನೆ ಇಂಥ ಎರಡು ಲಕ್ಷಣಗಳಿಂದ ಕೂಡಿರುವ ದೇವರು ಬಹಳ ಜನ ಮನುಷ್ಯರಿಗೆ ಬೇಕಾಗಿದೆಯೆಂದು ಮೇಲೆ ಉದ್ಧೃತವಾಗಿರುವ ವಾಕ್ಯದಿಂದ ಗೊತ್ತಾಗುತ್ತದೆ

ಯಾವ ಸ್ಥಳಕ್ಕೆ ಹೋದರೂ ಸಕಲ ಮನುಷ್ಯರೂ ದೇವರನ್ನು ಪ್ರಾರ್ಥಿಸುತ್ತಾರೆಂಬುದು ಕಾಣಬರುತ್ತದೆ ಎಲ್ಲಾ ಮನುಷ್ಯರೂ ಒಂದೇ ವಿಧವಾಗಿ ಪ್ರಾರ್ಥಿಸುವದಿಲ್ಲ ಒಬ್ಬೊಬ್ಬರು ಒಂದೊಂದು ವಿಧವಾಗಿ ಪ್ರಾರ್ಥಿಸುತ್ತಾರೆ ಕೆಲವರು ತಮ್ಮ ಹೃದಯದಲ್ಲಿ ಹುಟ್ಟುವ ಬಯಕೆಗಳನ್ನು ದೇವರಿಗೆ ತಿಳಿಯಪಡಿಸುವದಕ್ಕಾಗಿ ತಾವಾಗಿ ಕಲ್ಪಿಸಿದ ಮಾತುಗಳನ್ನು ಹೇಳಿ ದೇವರನ್ನು ಪ್ರಾರ್ಥಿಸಿಕೊಳ್ಳುತ್ತಾರೆ ಬೇರೆ ಕೆಲವರು ತಮಗೆ ತಂದೆತಾಯಿಗಳೋ ಗುರುಗಳೋ ಕಲಿಸಿಕೊಟ್ಟ ಪ್ರಾರ್ಥನೆಗಳನ್ನು ಹೇಳಿ ಪ್ರಾರ್ಥಿಸುತ್ತಾರೆ. ಇನ್ನು ಕೆಲವರು ಪುರೋಹಿತನಿಗೆ ಕೂಲಿಯನ್ನು ಕೊಟ್ಟು ತಮಗೆ ಪ್ರತಿಯಾಗಿ ಜಪಗಳನ್ನು ಹೇಳುವಂತೆ ಮಾಡಿ ಈ ವಿಧವಾಗಿ ಪ್ರಾರ್ಥಿಸಿಕೊಳ್ಳುತ್ತಾರೆ ಹೀಗೆ ಬೇರೆ ಬೇರೆ ವಿಧವಾಗಿ ಪ್ರಾರ್ಥಿಸಿಕೊಳ್ಳುವವರ ಬಿನ್ನಹಗಳು ದೇವರ ಕಿವಿಯಲ್ಲಿ ಬೀಳುತ್ತವೆಯೋ? ದೇವರ ಕಿವಿಗೆ ಈ ಬಿನ್ನಹಗಳು ಬೀಳದಿದ್ದರೆ ಪ್ರಾರ್ಥಿಸಿ ಫಲವೇನು? ನಾವು ಪ್ರಾರ್ಥಿಸಿಕೊಂಡ ಪ್ರಾರ್ಥನೆಗಳನ್ನು ದೇವರು ಕೇಳಿದ್ದಾನೆಂಬದು ನಾವು ತಿಳಿಯದೆ ಹೋದರೆ ಪ್ರಾರ್ಥಿಸುತ್ತಲೇ ಇರುವದರಿಂದ ಲಾಭವೇನು? ಒಬ್ಬಾನೊಬ್ಬ ಭಿಕ್ಷುಕನು ಒಬ್ಬ ಐಶ್ವರ್ಯವಂತನ ಮನೆಯ ಬಾಗಿಲಲ್ಲಿ ಬಹುಕಾಲದ ವರೆಗೂ ಕೂತುಕೊಂಡು ಭಿಕ್ಷವನ್ನು ಕೇಳುತಲಿದ್ದನು. ಇವನಿಗೆ ಸಹಾಯಮಾಡಬೇಕೆಂಬ ಮನಸ್ಸು ಆ ಸಾಹುಕಾರನಿಗಿರಲಿಲ್ಲ ಆದದರಿಂದ ಆ ಬಡವನು—ನಾನು ಇಲ್ಲಿಯೇ ಕೂತುಕೊಂಡಿದ್ದರೆ ಹಸಿವಿನಿಂದ ಪ್ರಾಣ ಹೋಗುವದೇ ನಿಜ, ಆದಕಾರಣ ನಾನು ಇಲ್ಲಿಂದ ಎದ್ದು ಬೇರೊಬ್ಬ ಪುಣ್ಯಾತ್ಮನ ಮನೆಗಾದರೂ ಹೋದರೆ ಅವನು ನನ್ನ ಬಡತನವನ್ನು ಹೋಗಲಾಡಿಸುವನು ಎಂದು ಹೇಳಿಕೊಂಡು ಇನ್ನೊಬ್ಬನ ಬಳಿಗೆ ಹೋದನು. ಆ ಭಿಕ್ಷುಕನು ವಿವೇಕಿಯಲ್ಲವೇ? ಇನ್ನೊಂದು ದೃಷ್ಟಾಂತವನ್ನು ನೋಡಿರಿ—ಆಫೀಸಿನಲ್ಲಿ ಒಂದು ಕೆಲಸವು ಖಾಲಿಯಾಗಿರಲು ಒಬ್ಬನು ಅಧಿಕಾರಿಗೆ ಅರ್ಜಿಯನ್ನು ಬರೆದುಕೊಳ್ಳುತ್ತಾನೆ. ಆದರೆ ಅಧಿಕಾರಿಯು ಅವನಿಗೆ ಕೆಲಸವನ್ನು ಕೊಡುವದಕ್ಕೆ ಮನಸ್ಸಿಲ್ಲದೆ ಅವನು ಬರೆಯುವ ಅರ್ಜಿಯನ್ನು ಸಹ ಓದಲೊಲ್ಲದೆ ಹರಿದು ಬಿಸಾಡುತ್ತಾನೆ ಹೀಗಿದ್ದರೂ ಆ ಮನುಷ್ಯನು ಅಧಿಕಾರಿಗೆ ಪದೇ ಪದೇ ಅರ್ಜಿಗಳನ್ನು ಬರೆಯುತ್ತಲೇ ಇರುವದುಂಟೇ? ಹಾಗೆ ಬರೆಯುತ್ತಿದ್ದರೆ ಆ ಮನುಷ್ಯನನ್ನು ನೋಡಿದವರು ಇವನಿಗೇನು ಹುಚ್ಚು ಹಿಡಿದಿದೆಯೋ ಎಂದು ಹೇಳುವರಲ್ಲವೇ? ಅದೇ ಪ್ರಕಾರ ಪ್ರಜೆಗಳು ತಮ್ಮ ಕಷ್ಟವನ್ನು ನೂರಾರು ಸರ್ತಿ ಹೇಳಿಕೊಂಡಾಗ್ಯೂ ಸರ್ಕಾರದವರು ಕಿವಿಗೇ ಹಾಕಿಕೊಳ್ಳದೆ ಇರುವದಾದರೆ ಅಂಥ ಸರ್ಕಾರದ ನೆರಳಿನಲ್ಲಿರುವ ಪ್ರಜೆಗಳ ಸ್ಥಿತಿಯು ಶೋಚನೀಯವಾದುದಲ್ಲವೇ? ಈ ದೃಷ್ಟಾಂತಗಳನ್ನು ನೋಡುವಲ್ಲಿ ಮನುಷ್ಯರು ಸಹ ತಮ್ಮ ಭಕ್ತಿವಿಚಾರದಲ್ಲಿ ಅವಿವೇಕವಾಗಿ ವರ್ತಿಸುತ್ತಿರುವದು ಆಶ್ಚರ್ಯಕರವಾಗಿದೆಯಲ್ಲವೇ? ಯಾವದೋ ಒಂದು ಗುಡಿಗೆ ಹೋಗಿ ಅನ್ನವನ್ನೋ ಹೂಹಣ್ಣುಗಳನ್ನೋ ಅರ್ಪಿಸುತ್ತಿದ್ದರೂ ಆ ಗುಡಿಯೊಳಗಿರುವ ಶಿಲಾವಿಗ್ರಹವು ಅವರಿಗೆ ಒಂದು ಮಾತನ್ನಾದರೂ ಹೇಳುವದಿಲ್ಲ. ಅಥವಾ ತನ್ನ ಅಂಗಾಂಗಗಳನ್ನಾದರೂ ಅಲುಗಿಸುವದಿಲ್ಲ. ಆ ವಿಗ್ರಹವನ್ನು ಪೂಜಿಸುವವರಾದರೋ ತಾವು ಹೇಳಿಕೊಂಡದನ್ನು ಆ ವಿಗ್ರಹವು ಕಿವಿಗೆ ಹಾಕಿಕೊಂಡಿತೋ ಇಲ್ಲವೋ ಎಂಬುದನ್ನೂ ತಿಳಿಯದೆ ಇದ್ದಾಗ್ಯೂ ಕೂಡ ಎಂದಿನಂತೆ ತಮ್ಮ ಅರ್ಪಣೆಗಳನ್ನು ತೆಗೆದುಕೊಂಡು ಹೋಗಿ ಆ ವಿಗ್ರಹಕ್ಕೆ ಕೊಟ್ಟು ಕೈಮುಗಿದು ಬೇಡಿಕೊಳ್ಳುವದನ್ನು ಬಿಡುವದಿಲ್ಲ ಇದನ್ನೇನೆಂದು ಹೇಳಬೇಕೋ ತಿಳಿಯದು ಇನ್ನು ಕೆಲವರು—ನಾವು ಗುಡಿಗೆ ಹೋದರೂ ಸರಿಯೇ ಹೋಗದಿದ್ದರೂ ಸರಿಯೇ, ಹಾಗಾದರೆ ಗುಡಿಗೆ ಹೋಗುವದು ತೊಂದರೆ ನಮಗೆ ಯಾಕೆ? ಎಂದು ಹೇಳಿಕೊಂಡು ಯಾವ ದೇವರನ್ನೂ ಪೂಜಿಸದೆ ಸುಮ್ಮನೆಯಿರುತ್ತಾರೆ

ಆದರೆ ನಾವು ನಿಜಸ್ಥಿತಿಯನ್ನು ಪರೀಕ್ಷಿಸಲಾಗಿ ಮನುಷ್ಯರು ಮಾಡುವ ಪ್ರಾರ್ಥನೆಗಳನ್ನು ಕೇಳುವಂಥ ದೇವರು ಇದ್ದಾನೆ ಎಂದು ನಿಸ್ಸಂದೇಹವಾಗಿ ತಿಳಿಯುವದು ಅಂಥ ದೇವರೇ ಸತ್ಯವಾದ ದೇವರು. ಆತನೇ ಭೂಲೋಕವನ್ನೂ ಪರಲೋಕವನ್ನೂ ಆಳುವನು ತಾನು ನಿರ್ಮಿಸಿರುವ ವಸ್ತುಗಳನ್ನು ಆತನು ತಿಳಿಯುವದರಿಂದಲೂ ಪ್ರೀತಿಸುವದರಿಂದಲೂ ಅತ್ಯಲ್ಪವಾಗಿರುವ ಸಣ್ಣ ಪಕ್ಷಿಯ ವಿಷಯವೂ ಆತನ ಗಣನೆಗೆ ಬರುತ್ತದೆ ಹೂಗಳಿಗೆ ಅಸದೃಶವಾದ ಸೌಂದರ್ಯವನ್ನೂ ಪ್ರಾಣಿಗಳಿಗೆ ತಕ್ಕ ಕಾಲದಲ್ಲಿ ಆಹಾರವನ್ನೂ ದಯಪಾಲಿಸುವವನು ಆತನೇ. ಇಷ್ಟೇ ಅಲ್ಲ. ಸಾಧಾರಣವಾದ ವಸ್ತುಗಳಿಗಿಂತಲೂ ಪ್ರಾಣಿಗಳಿಗಿಂತಲೂ ಅಧಿಕರಾಗಿರುವ ಸ್ತ್ರೀಪುರುಷರನ್ನೂ ಮಕ್ಕಳನ್ನೂ ದೇವರು ತಾನೇ ಉಂಟುಮಾಡಿ ಅವರ ತಂದೆಯೆನಿಸಿಕೊಳ್ಳುವದರಿಂದ ಅವರನ್ನು ಸಂಪೂರ್ಣವಾಗಿ ಅರಿತು ಪ್ರೀತಿಸುವವನಾಗಿದ್ದಾನೆ ಸರ್ವರಿಗೂ ದೇವರಾಗಿರುವ ಈ ಭಗವಂತನನ್ನು ಯೇಸುಸ್ವಾಮಿಯು ಅರಿತವನಾಗಿದ್ದನು ಆತನು ಲಾಜರನೆಂಬ ಸಂದರ್ಭದಲ್ಲಿ—“ತಂದೆಯೇ ನೀನು ನನ್ನ ಬಿನ್ನಹಗಳನ್ನು ಕೇಳುತ್ತೀಯಾದ್ದರಿಂದ ನಾನು ನಿನ್ನನ್ನು ಸ್ತುತಿಸುತ್ತೇನೆ” ಎಂದು ಹೇಳಿದ್ದಾನೆ ಆತನು ನಮ್ಮನ್ನು ಕುರಿತು—“ನನ್ನ ಹೆಸರಿನಲ್ಲಿ ನೀವು ತಂದೆಯನ್ನು ಏನು ಬೇಡಿಕೊಂಡರೂ ಆತನು ನಡಸಿಕೊಡುವನು” ಎಂದು ಹೇಳಿದ್ದಾನೆ ಆ ಸ್ವಾಮಿಯ ಶಿಷ್ಯರಾದ ನಾವಾದರೋ ನಾವೇನು ಬೇಡಿಕೊಂಡರೂ ದೇವರು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆಂದು ಅರಿತಿದ್ದೇವೆ ನಾವು ಪ್ರಾರ್ಥಿಸಿದ್ದು ವ್ಯರ್ಥವಾಗಿ ಹೋಗುವದಿಲ್ಲ ನಮಗೆ ಆತನು ಲೋಕಯಾತ್ರೆಯಲ್ಲಿ ಅವಶ್ಯಕವಾದ ಪದಾರ್ಥಗಳನ್ನೂ ಬಲವನ್ನೂ ಕೊಟ್ಟು ನಮಗೆ ಮಾರ್ಗದರ್ಶಿಯಾಗಿದ್ದಾನೆಂದು ಸಂಶಯವಿಲ್ಲದೆ ತಿಳಿದಿರುತ್ತೇವೆ ಇಷ್ಟೇ ಅಲ್ಲ ಆ ಭಗವಂತನ ಚಿತ್ತವನ್ನು ನಡಸುವದಕ್ಕೂ ಆತನ ವಾಕ್ಯವನ್ನು ವಿಧೇಯಿಸಿ ನಡೆಯುವದಕ್ಕೂ ನಮಗೆ ಶಕ್ತಿಯನ್ನು ಕೊಡುತ್ತಾನೆ ಇದು ಖಂಡಿತ

ದೇವರನ್ನು ತಿಳಿಯುವದು ಅಸಾಧ್ಯವೆಂದು ವೇದಾಂತ ಬೋಧಕರು ಹೇಳುವರು. ಮತ್ತು ದೇವರಿಗೆ ನಮ್ಮನ್ನು ತಿಳಿಯುವದೂ ಅಸಾಧ್ಯವಾಗಿರುವದರಿಂದ ಆತನಿಗೆ ಪ್ರಾರ್ಥನೆಯನ್ನು ಮಾಡುವದು ನಿಷ್ಪ್ರಯೋಜನವೆಂದು ಹೇಳುವರು ಆದರೆ ಕ್ರೀಸ್ತಸ್ವಾಮಿಯು—ದೇವರು ನಿಜವಾಗಿ ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ ಎಂದು ಹೇಳುತ್ತಾನೆ ಈ ಎರಡು ಬೋಧನೆಗಳಲ್ಲಿ ಯಾವದು ಮನುಷ್ಯನಿಗೆ ಆದರಣೆಯನ್ನು ಕೊಡುವಂಥದೋ ವಾಚಕರೇ ಊಹಿಸತಕ್ಕದ್ದು ಸಕಲ ಮನುಷ್ಯರಿಗೂ ಆಶ್ರಯಕರ್ತನಾದ ಭಗವಂತನು ಯಾರ? ಎಂಬುದನ್ನು ನಾವು ವಿವರಿಸಿ ಹೇಳಬೇಕಾದದಿಲ್ಲ.

[ಸಶೇಷ]

ಗತಿಸಿದ ಮಿಸ್ ಮ್ಯಾನಿಂಗ್ ಯವರು

ನಮ್ಮ ಇಂಡಿಯಾ ದೇಶೀಯರ ಕ್ಷೇಮಾಭಿವೃದ್ಧಿಯಲ್ಲಿ ಅತ್ಯಂತಾಸಕ್ತರಾಗಿರುವ ಇಂಗ್ಲಿಷರೊಳಗೆ ಮಿಸ್ ಮ್ಯಾನಿಂಗ್ ಎಂಬಾಕೆಯು ಪ್ರಸಿದ್ಧಳೇ ಸರಿ ಇಲ್ಲಿಂದ ವಿದ್ಯಾಭ್ಯಾಸ ನಿಮಿತ್ತವಾಗಿ ಇಂಗ್ಲಾಂಡಿಗೆ ತೆರಳುವ ಈ ದೇಶೀಯರನ್ನು ನಾನಾ ವಿಧದಲ್ಲಿ ಸಂರಕ್ಷಿಸುತ್ತಿದ್ದಳು. ಇದರಿಂದಲೂ ಮತ್ತು ಆಕೆಯು ಇಂಗ್ಲಿಷಿನವರಿಗೂ ಹಿಂದೂ ದೇಶೀಯರಿಗೂ ಪರಸ್ಪರ ಐಕಮತ್ಯವೂ ಸ್ನೇಹವೂ ವೃದ್ಧಿಯಾಗುವ ನಿಮಿತ್ತವಾಗಿ ಅಮರಣಾಂತವೂ ನಡಸುತ್ತ ಬಂದ ಹಲವು ವಿಧ ಕಾರ್ಯಗಳ ದೆಸೆಯಿಂದಲೂ ಆಕೆಯು ಹೆಸರು ಚಿರಸ್ಮರಣೀಯವಾಗಿರುವದು ಆಕೆಯು ನ್ಯಾಷನಲ್ ಇಂಡಿಯನ್ ಅಸೋಷಿಯೇಷನೆಂಬ ಸಮಾಜಕ್ಕೆ ಕಾರ್ಯದರ್ಶಿಯಾಗಿ ಈ ದೇಶಕ್ಕೆ ಎರಡು ಸಾರಿ ಬಂದಿದ್ದು ಆ ಸಮಾಜದ ಶಾಖೆಗಳನ್ನು ಈ ದೇಶದ ಬೇರೆ ಬೇರೆ ಸ್ಥಳಗಳಲ್ಲಿ ಸ್ಥಾಪಿಸಿದಳು ಮೇಲೆ ಕಂಡ ಸಮಾಜದ ಮುಖಾಂತರವೂ ಅಲ್ಲದೆ ತಾನು ಈ ದೇಶದ ಬ್ರಹ್ಮಸಮಾಜ, ಪ್ರಾರ್ಥನಾಸಮಾಜ ಆರ್ಯಸಮಾಜಗಳೆಂಬ ಮತಸಂಬಂಧವಾದ ಸಂಘಗಳಲ್ಲಿ ಕೇವಲ ಹಿತಚಿಂತಕಳೂ ಆಗಿದ್ದದರಿಂದ ಈ ದೇಶೀಯರು ಆಕೆಯಲ್ಲಿ ಮತ್ತೂ ಹೆಚ್ಚಾಗಿ ಸ್ನೇಹಪರರಾಗಲು ಅವಕಾಶವಾಯಿತು. ಆಕೆಯು ಈ ದೇಶದ ಶ್ರೇಯಸ್ಸಿನಲ್ಲಿ ಅಧಿಕಾಸಕ್ತಳಾಗಿದ್ದದನ್ನು ಇಂಡ್ಯಾ ಸರ್ಕಾರದವರು ಗಣನೆಗೆ ತಂದು ಕೈಸರ್, ಇ. ಹಿಂದ್ ಎಂಬ ಬಿರುದನ್ನು ಆಕೆಗೆ ಕೆಲವು ದಿನಗಳ ಹಿಂದೆ ದಯಪಾಲಿಸಿದ್ದರು

೧೯೦೩ನೇ ವರ್ಷದಲ್ಲಿ ಇಂಡಿಯಾ ವ್ಯಾಪಾರವು.

ಈ ವರ್ಷ ಏಪ್ರಿಲ್ ತಿಂಗಳಿನಿಂದ ಜೂಲೈ ತಿಂಗಳ ವರೆಗೆ ನಾಲ್ಕು ತಿಂಗಳಿಗೆ ಇಂಡಿಯಾ ದೇಶದಲ್ಲಿ ಚಿನ್ನ ಬೆಳ್ಳಿಯ ಹೊರತು ಉಳಿದ ಸಮಸ್ತ ಆಮದು ಪದಾರ್ಥಗಳ ಬೆಲೆ ೩೦ ಕೋಟಿ ರೂಪಾಯಿ. ಕಳೆದ ವರ್ಷ ಅದೇ ಕಾಲಕ್ಕೆ ರೂ॥ ೨೮ ಆಗಿತ್ತು. ರಫ್ತಾದ ಸರಕುಗಳ ಬೆಲೆಯು ರೂ. ೪೮॥ ಕೋಟಿ. ಆಮದು ಸರಕಿನಲ್ಲಿ ಹೆಚ್ಚು ಬೆಲೆಯುಳ್ಳದ್ದು ಹತ್ತಿಯ ಬಟ್ಟೆ. ಇದರ ಒಟ್ಟು ೧೧ ಕೋಟಿ, ೪೪ ಲಕ್ಷ ರೂ॥ ಸಕ್ಕರೆಯನ್ನು ತರಿಸುವದರಲ್ಲಿ ಕಳೆದ ವರ್ಷಕ್ಕಿಂತ ೬೦ ಲಕ್ಷ ರೂ ಕಡಮೆಯಾಯಿತು. ಹಾಗೇ ಲೋಹ ಸಾಮಾನುಗಳಲ್ಲಿ ರೂ॥ ೬೦ ಲಕ್ಷವೂ, ಎಣ್ಣೆ ಮೊದಲಾದ ಸರಕುಗಳಲ್ಲಿ ರೂ॥ ೦೪ ಲಕ್ಷವೂ ಕಡಮೆಯಾಯಿತು. ಯಂತ್ರದ ಸಾಮಾನುಗಳು ಹೆಚ್ಚುಕಡಮೆ ಕಳೆದ ಸಾಲಿನಂತೆಯೇ, ಅಂದರೆ ಸುಮಾರು ೧ ಕೋಟಿ ೩೦ ಲಕ್ಷ. ವಿದೇಶಗಳಲ್ಲಿ ತಯಾರಾಗಿ ಬರುವ ವಸ್ತುಗಳನ್ನು ನಮ್ಮ ದೇಶೀಯರು ಹೋದವರ್ಷಕ್ಕಿಂತ ೬೦ ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ವೆಚ್ಚಮಾಡಿ ತರಿಸಿಕೊಂಡಿದ್ದಾರೆ ಪ್ಲಾಟ್ಸ್ ರಿನಲ್ಲಿ ೧೯೦೩ ನೇ ವರ್ಷದ ಕೊನೆಯಲ್ಲಿಯೂ ೧೯೦೪ರ ವರ್ಷದ ಆದಿಯಲ್ಲಿಯೂ ಘೋರಣೆ ಹೆಚ್ಚಾಗಿದ್ದರೂ ನಮ್ಮ ದೇಶೀಯರು ಮೇಲೆ ಸಮಾಧಿಸಿರುವಷ್ಟು ಹೆಚ್ಚು ಮೊಬಲಗನ್ನು ವ್ಯಯ ಮಾಡಿರುವದನ್ನು ನೋಡಿದರೆ ಶೋಚನೀಯವೇ ಸರಿ

ರಫ್ತಾಗಿರುವ ವಸ್ತುಗಳಲ್ಲಿ ಅರಳೆಯು ಬೆಲೆಯೇ ಹೆಚ್ಚು (ರೂ. ೭ ಕೋಟಿ) ನೂಲು ರೂ. ೪ ಕೋಟಿ. ಇದರಲ್ಲಿ ಕಳೆದ ವರ್ಷಕ್ಕಿಂತ ಸುಮಾರು ರೂ॥ ೧ ಕೋಟಿ ೨೦ ಲಕ್ಷ ಹೆಚ್ಚಿತು ಗೋಣಿಚೀಲಗಳೇ ಮುಂತಾದ ಸರಕು ರೂ॥ ೩ ಕೋಟಿ ೯೦ ಲಕ್ಷ. ಇದರಲ್ಲಿ ೧೯೦೩ ಕ್ಕಿಂತ ೧ ಕೋಟಿ ಹೆಚ್ಚಿತು. ಅಕ್ಕಿ ಗೋಧಿ ಬೇಳೆ ದೊಂದರಲ್ಲಿ ರೂ ೫॥ ಕೋಟಿ. ಇದರಲ್ಲಿ ಕಳೆದ ವರ್ಷಕ್ಕಿಂತ ಅಕ್ಕಿಯ ಬಾಬಿನಲ್ಲಿ ೫೮ ಲಕ್ಷವೂ ಗೋಧಿಯಲ್ಲಿ ೫೦ ಲಕ್ಷವೂ ಕಡಮೆಯಾಯಿತು ಬೇಳೆಯು ರೂ॥ ೧ ಕೋಟಿ ೩೫ ಲಕ್ಷ. ಇದರಲ್ಲಿ ೨ ಲಕ್ಷ ಕಡಮೆ ಅಫೀಮಿನ ವ್ಯಾಪಾರದಲ್ಲಿ ಸುಮಾರು ೪೪ ಲಕ್ಷ ಕಡಮೆಯಾಯಿತು. ನೀಲಿ ವ್ಯಾಪಾರವು ರೂ॥ ೨೭ ಲಕ್ಷದಿಂದ ೧೧ ಲಕ್ಷಕ್ಕೆ ಇಳಿಯಿತು ಚರ್ಮಗಳ ವ್ಯಾಪಾರದಲ್ಲಿ ೧ ಕೋಟಿ ರೂಪಾಯಿ ಹೆಚ್ಚಾಯಿತು ನಾರಿನಲ್ಲಿ ೨ ಲಕ್ಷ ಹೆಚ್ಚಿತು, ಆಮದು ರಫ್ತುಗಳನ್ನು ಒಟ್ಟಾಗಿ ನೋಡಿದಲ್ಲಿ ಅರಳೆಯ ವ್ಯಾಪಾರದಲ್ಲಿ ಲಾಭನಷ್ಟಗಳು ಸಮವಾದವೆಂದು ತಿಳಿದುಬರುವದು

ಇಂಡಿಯಾ ದೇಶದ ವೃತ್ತಾಂತಗಳು.

ನಮ್ಮ ಇಂಡಿಯಾ ದೇಶಕ್ಕೆ ವೈಸ್ರಾಯರಾಗಿ ಬರುವ ಲಾರ್ಡ್ ಮಿಂಟೋ ಅವರು ಪತ್ನೀಪುತ್ರಿಯರ ಸಮೇತರಾಗಿ ಅಕ್ಟೋಬರ್ ೨೦ ನೇ ತಾರೀಖಿಗೆ ಪ್ಯಾಸಿಡೋನಿಯಾ ಎಂಬ ಹಡಗನ್ನು ಮಾರ್ಸೇಲ್ಸ್ ರೇವುಪಟ್ಟಣದಿಂದ ಹೊರಡುವವರಾಗಿದ್ದಾರೆ

❖❖❖❖

ರಂಗೂನಿನಲ್ಲಿ ಕಳೆದ ಜೂಲೈ ೧ ನೇ ತಾರೀಖಿನಲ್ಲಿ ಒಬ್ಬ ದೊಡ್ಡ ಮನುಷ್ಯನ ಮಗಳನ್ನು ಯಾರೋ ಕುಂಟರು ಎತ್ತಿಕೊಂಡು ಹೋಗಿದ್ದರಷ್ಟೆ ಆಕೆಯನ್ನು ಈಗ ರಂಗೂನಿಗೆ ೧೩೦ ಮೈಲು ದೂರದಲ್ಲಿರುವ ಒಂದು ಸ್ಥಳದಲ್ಲಿ ಕಂಡು ಹಿಡಿದಿದ್ದಾರೆ.

❖❖❖❖

ಬಂಗಾಳಕ್ಕೆ ಸೇರಿದ ನಾರಾಯಣಗಂಜೆಯಲ್ಲಿ ಸ್ಥಾಪಿತವಾಗಿದ್ದ ಸೋನಕಾಂಡಾ ನಾರಿನ ಕಂಪೆನಿಯವರ ಕಾರ್ಖಾನೆಗೆ ಬೆಂಕಿ ಬಿದ್ದು ಕಟ್ಟಡಕ್ಕೆಲ್ಲಾ ಬೆಂಕಿ ಹತ್ತಿಕೊಂಡು ಸಂಪೂರ್ಣವಾಗಿ ಸುಟ್ಟು ಹೋಯಿತು ಸುಮಾರು ೩॥ ಲಕ್ಷ ರೂಪಾಯಿ ನಷ್ಟವಾಯಿತು

❖❖❖❖

ಬಂಗಾಳದಲ್ಲಿ ಬಹು ಕಾಲದಿಂದ ಸಿಕ್ಕದೆ ಇದ್ದ ಡಕಾಯಿತಿಯವರ ಒಂದು ಗುಂಪನ್ನು ಬ್ಯಾರಕ್‌ಪೂರಿನ ಪೋಲೀಸಿನವರು ಹಿಡಿದು ವಿಚಾರಣೆಗೆ ಗುರಿಮಾಡಿದ್ದಾರೆ ಅವರಲ್ಲಿ ಮೂರು ಮಂದಿಯ ಮೇಲೆ ಅಪರಾಧವು ಹೊತ್ತದರಿಂದ ಪ್ರತಿಯೊಬ್ಬರಿಗೂ ೭ ವರ್ಷ ಕಠಿಣಸಜಾ ಆಯಿತು. ಉಳಿದವರಿಗೆ ಬಿಡುಗಡೆಯಾಯಿತು

❖❖❖❖

ಕಾಶ್ಮೀರ ದೇಶದಲ್ಲಿ ಮಳೆಯು ಅಪರಿಮಿತವಾಗಿ ಬಿದ್ದು ರಾಜಧಾನಿಯಾದ ಶ್ರೀನಗರದಲ್ಲಿ ಹೆಚ್ಚುಕಡಮೆ ಎಲ್ಲಾ ಭಾಗವೂ ನೀರಿನಲ್ಲಿ ಮುಳುಗಿದೆಯೆಂದು ತಿಳಿದುಬರುತ್ತದೆ ಜೇಲಂ ನದಿಯ ಪ್ರವಾಹವು ಅಧಿಕವಾಗಿದೆ ಶ್ರೀನಗರಕ್ಕೆ ಹೋಗುವ ರಸ್ತೆಯು ಕೆಲವು ಮೈಲಿಗಳ ದೂರದ ವರೆಗೂ ನೀರಿನಿಂದ ತುಂಬಿದೆ. ಜೇಲಂ ಕಣಿವೆಯ ಕೆಲವು ಕಡೆ ಭೂಮಿಯು ಕುಸಿದು ಹೋಗಿದೆ.

❖❖❖❖

ಗತಿಸಿದ ಮಿ॥ ರಾನಡೆ ಎಂಬ ದೊಡ್ಡ ಮನುಷ್ಯರ ಸ್ಮರಣಾರ್ಥವಾಗಿ ಪೂನಾ ಪಟ್ಟಣದಲ್ಲಿ ಈಗ ಒಂದು ಕಟ್ಟಡವನ್ನು ಸ್ಥಾಪಿಸಬೇಕೆಂದು ಗೊತ್ತುಮಾಡಿದಾರೆ ಇದರಿಂದ ದೇಶದ ಅಭಿವೃದ್ಧಿಯನ್ನು ಹೆಚ್ಚಿಸುವದಕ್ಕೆ ಅವಕಾಶವಾದ ವಿಧಗಳನ್ನು ನಮ್ಮವರು ಕಲಿಯುವದಕ್ಕೆ ಸಹಾಯವಾಗುವದು. ಈ ಸ್ಮಾರಕಚಿಹ್ನೆಗಾಗಿ ವಾಗ್ದಾನಮಾಡಲ್ಪಟ್ಟಿರುವ ೯೦ ಸಾವಿರ ರೂಪಾಯಿ ಚಂದಾದಲ್ಲಿ ಈಗ ರೂ. ೬೬,೦೦೦ ವಸೂಲಾಗಿದೆ

❖❖❖❖

ಇಂಡ್ಯಾ ದೇಶದಲ್ಲಿ ಪ್ಲೇಗು ರೋಗವು ಪುನಃ ತಲೆದೋರಿರುವದು ವಿಷಾದಕರವಾಗಿದೆ ಈ ರೋಗವು ಬೊಂಬಾಯಿ ಅಧಿಕಾರದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಸಾಂಕ್ರಾಮಿಕವಾಗಿ ಕಾಣಿಸಿಕೊಂಡಿದೆ. ಸತಾರೆಯಲ್ಲಿ ಒಂದೇ ಒಂದು ವಾರಕ್ಕೆ ೯೬೫ ಮಂದಿಗೆ ಆಗಿ ೬೬೫ ಮಂದಿ ಮೃತರಾದರು. ನಾಸಿಕ್ ಧಾರವಾಡ ಬೆಳಗಾಂ ಖಾಂದೇಷ್ ಸೋಲಾಪುರಗಳ ಸುತ್ತುಮುತ್ತಲೂ ರೋಗವು ವ್ಯಾಪಿಸಿದೆ. ಕಥ್ಯವಾಡ ಬರೋಡ ಕೊಲ್ಹಾಪುರ ದಕ್ಷಿಣ ಮಹಾರಾಷ್ಟ್ರ ದೇಶಗಳಲ್ಲಿಯೂ ಕಾಣಿಸಿಕೊಂಡಿದೆ.

❖❖❖❖

ಮುಂದಣ ಡಿಸೆಂಬರ್ ತಿಂಗಳಿನಲ್ಲಿ ಕಾಶೀಪಟ್ಟಣದಲ್ಲಿ ನಡೆಯುವುದಕ್ಕಿರುವ ಕಾಂಗ್ರೆಸ್ ಮಹಾಜನಸಭೆಗೆ ಮಿ॥ ಗೋಖಲೆಯವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆಂತಲೂ ಅವರು ಆ

...ವನ್ನು ಸ್ವೀಕರಿಸಿದ್ದಾರೆಂತಲೂ ಗೊತ್ತಾಗಿದೆ. ಮೆ॥ ಗೋಖಲೆಯವರು ಈ ತಿಂಗಳು ೩೦ರಲ್ಲಿ ಇಂಡ್ಯಾ ದೇಶದ ಪ್ರತಿನಿಧಿಗಳಾಗಿ ಇಂಗ್ಲೆಂಡಿಗೆ ಪ್ರಯಾಣವಾಗಿ ಹೋಗಿದ್ದಾರೆ. ಆದರೂ ಅಲ್ಲಿನ ಕಾರ್ಯಗಳನ್ನೆಲ್ಲಾ ತೀರಿಸಿಕೊಂಡು ಡಿಸೆಂಬರಿನಲ್ಲಿ ನಡೆಯುವ ಶಾಸನ ನಿರ್ಮಾಪಕ ಕೌನ್ಸಿಲ್ ಕೂಟಗಳಿಗೂ ಕಾಂಗ್ರೆಸ್ ಕೂಟಕ್ಕೂ ಹಾಜರಾಗಿರುವಂತೆ ಸಕಾಲದಲ್ಲಿಯೇ ಹಿಂದಿರುಗಿ ಬರುವರು.

*****

ಹೈದರಾಬಾದ್ ಸಂಸ್ಥಾನದ ನಿಜಾಮರ ಕಾಲೇಜಿನಲ್ಲಿ ಶಾಸ್ತ್ರಗಳನ್ನು ಹೇಳುವ ಪ್ರೊಫೆಸರುಗಳಲ್ಲಿ ವಿಲಾಯಿತಿಯ ಡಿಗ್ರಿಗಳನ್ನು ಪಡೆದು ಬಂದವರಿಗೆ ಮಾತ್ರ ಸಂಬಳ ಹೆಚ್ಚು ಮಾಡಿರುವ ನಿಯಮವು ಈ ವಿಧಾಯಕವನ್ನು ಮುಂದಿನ ಅಕ್ಟೋಬರ್ ೩ನೇ ತಾರೀಖಿನಿಂದ ಜಾರಿಗೆ ತರುವುದಾಗಿಯೂ ಗೊತ್ತಾಗಿದೆ. ಈ ಪ್ರಕಾರವನ್ನು ಗಮನಿಸಿ ತಕ್ಕ ವಿಶೇಷವೇನೆಂದರೆ ಸಂಬಳವನ್ನು ಹೆಚ್ಚಿಸಿಕೊಂಡಿರುವ ಆ ಐರೋಪ್ಯ ಕಲಾಕೋವಿದರು ರಜಾ ಪಡೆದು ಹೋಗಿರುವ ಕಾಲದಲ್ಲಿ ಅವರ ಕೆಲಸವನ್ನು ಬದಲಿಯಾಗಿ ನೋಡುತ್ತಿರುವ ಸ್ವದೇಶೀಯ ಉಪಾಧ್ಯಾಯರು ಯಥಾರ್ಥರೆಂದು ತಿಳಿಸಿದ್ದರೂ ಅವರಿಗೆ ಮಾತ್ರ ಸಂಬಳವನ್ನು ಹೆಚ್ಚು ಮಾಡಿಲ್ಲ. ಇದೀಗ ಶೋಚನೀಯವಾದುದು.

*****

ಪ್ರಜಾ ಕ್ಷೇಮಾರ್ಥವಾಗಿ ದುಷ್ಟ ಮೃಗಗಳನ್ನು ಕೊಲ್ಲುವಂಥವರು ಸರ್ಕಾರದಿಂದ ಬಹುಮಾನ ದ್ರವ್ಯವನ್ನು ಹೊಂದಿದ ಬಳಿಕ ಆ ಮೃಗ ಚರ್ಮವನ್ನು ಅವರೇ ತೆಗೆದುಕೊಳ್ಳಬೇಕೋ ಸರ್ಕಾರದವರು ತೆಗೆದುಕೊಳ್ಳಬೇಕೋ ಎಂಬ ವಿಷಯದಲ್ಲಿ ಬರ್ಮಾ ದೇಶದಲ್ಲಿ ಚರ್ಚೆಯಾಗಲು ಅಲ್ಲಿನ ಲೆಫ್ಟಿನೆಂಟ್ ಗವರ್ನರವರು ಕೊಟ್ಟಿರುವ ಆಜ್ಞೆಯೇನೆಂದರೆ ಚರ್ಮವು ಆ ಬೇಟೆಗಾರರಿಗೇ ಸೇರತಕ್ಕದು. ಚರ್ಮಕ್ಕೆ ಒಳ್ಳೆ ಬೆಲೆಯು ಬಳಿಯಲ್ಲಿಯೂ ಬಂಗಾಳದಲ್ಲಿಯೂ ಇಂಡಿಯಾ ಗವರ್ನಮೆಂಟಿನವರ ಪ್ರಾಂತ್ಯಗಳಲ್ಲಿಯೂ ಬೇಟೆಗಾರರು ಚರ್ಮವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡದಿದ್ದರೆ ಸರ್ಕಾರದವರೇ ಅದನ್ನು ಮಾರಿ ಹಣವನ್ನು ತೆಗೆದುಕೊಳ್ಳುವರು.

*****

ಬಂಗಾಳದಲ್ಲಿ ಮುಂದಿನ ನವೆಂಬರ್ ತಿಂಗಳಿನಿಂದ "ಸ್ವದೇಶಿ" ಎಂಬ ನಾಮಧೇಯದಿಂದ ಒಂದು ದೇಶಭಾಷಾ ಪತ್ರಿಕೆಯು ಪ್ರಾರಂಭವಾಗುವುದೆಂದು ತಿಳಿದುಬಂದಿದೆ. ಆ ಪತ್ರಿಕೆಯ ಉದ್ದೇಶವು ನಾಮಧೇಯದಿಂದಲೇ ಗೊತ್ತಾಗುತ್ತದೆ. ಆದರೂ ದೇಶೀಯ ಸ್ತ್ರೀಪುರುಷರೆಲ್ಲರಿಗೆ ಮುಖ್ಯವಾಗಿ ಯುವಕರಿಗೆ ಕೇವಲ ಕ್ಷೇಮಕರವಾದ ವಿಷಯಗಳನ್ನು ಬೋಧಿಸುವುದೂ ಉಳಿದವರಿಗೆ ಓದುವುದಕ್ಕೆ ಯೋಗ್ಯವಾದಂಥ ಮತ್ತು ಶ್ರೇಯಸ್ಕರವಾದ ಸಂಗತಿಗಳನ್ನು ಬರೆಯುವುದೂ ಪತ್ರಿಕೆಯ ಉದ್ದೇಶವೆಂದು ತಿಳಿಸಿದರೆ ಈ ಪತ್ರಿಕೆಗೆ ಇಂಗ್ಲೀಷಿನಲ್ಲಿಯೂ ದೇಶಭಾಷೆಯಲ್ಲಿಯೂ ಕೋವಿದನಾಗಿಯೂ ಚನ್ನಾಗಿ ಬರೆಯಬಲ್ಲವನಾಗಿಯೂ ಗಣನೀಯನಾಗಿಯೂ ಇರುವ ಒಬ್ಬ ಪ್ರಸಿದ್ಧ ಪುರುಷನು ಎಡಿಟರಾಗಿದ್ದಾನೆ.

*****

ಬಿಜಾಪುರದಿಂದ ಸುಮಾರು ೧೦೦ ಮಂದಿ ಮರಾಟ ಸ್ತ್ರೀಪುರುಷರು ಉತ್ತರ ಇಂಡಿಯಾಕ್ಕೆ ಗುಂಪು ಕೂಡಿ ಪ್ರಯಾಣ ಮಾಡುತ್ತ ಬಂಗಳೂರಿನಲ್ಲಿಳಿದು ಅಲ್ಲಿನ ನಿವಾಸಿಗಳಿಗೆ ಭಯಂಕರವಾಗಿ ತೋರಿಸುದರಿಂದ ಪೊಲೀಸಿನವರು ಅವರನ್ನೆಲ್ಲಾ ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ಕರೆದೊಯ್ಯಲು ಆ ಗುಂಪಿಗೆ ಸೇರಿದ ಸುಮಾರು ೩೦ ಮಂದಿಯು ತಮ್ಮ ನಡತೆಯ ವಿಷಯದಲ್ಲಿ ತಕ್ಕ ಜಾಮೀನನ್ನು ಕೊಡಲಾರದೆ ಹೋದಕಾರಣ ನ್ಯಾಯಾಧೀಶರು ಅವರಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ವರ್ಷದ ಸಜಾ ವಿಧಿಸಿ ಆ ಗುಂಪಿಗೆ ಸೇರಿದ ಬಾಕಿ ಜನಗಳನ್ನು ಬಂಗಳೂರಿನಿಂದ ಬಲಾತ್ಕಾರವಾಗಿ ಹೊರಟುಹೋಗುವಂತೆ ಮಾಡಿದರು. ಆ ಗುಂಪಿನವರ ಬಳಿಯಲ್ಲಿ ಸುಮಾರು ರೂ ೧,೦೦೦ ವರೆಗೂ ದೊರಕಿತು.

*****

ಪ್ರಾಣಿಗಳ ಕಷ್ಟಪರಿಹಾರವನ್ನು ಮಾಡುತ್ತಿರುವ ಕಲ್ಕತ್ತಾ ಪಟ್ಟಣದ ಒಂದು ಸಮಾಜದ ಕಾರ್ಯದರ್ಶಿಯವರು ನಾಯಿಗಳಿಗಾಗಿ ಒಂದು ಸದನವನ್ನು ಸ್ಥಾಪಿಸಬೇಕೆಂದುದ್ದೇಶಿಸಿ ಅದಕ್ಕೆ ರೂ ೫೦೦೦ ಅವಶ್ಯವೆಂದು ಹೇಳಿದ್ದಾರೆ. ಅವರ ಉದ್ದೇಶವೇನೆಂದರೆ— ೧—ಯಜಮಾನರನ್ನು ಕಳೆದುಕೊಂಡ ಅಥವ ದಿಕ್ಕಿಲ್ಲದೆ ಅಲೆಯುವ ನಾಯಿಗಳನ್ನು ಕರತಂದು ಪೋಷಿಸುವುದು, ೨ ಬೀದಿಯಲ್ಲಿ ಬಿದ್ದಿರುವ ನಾಯಿಗಳನ್ನು ಒಂದೆಡೆಯಲ್ಲಿ ಸೇರಿಸಿ ಬೀದಿಯಲ್ಲಿ ತಿರುಗುವವರಿಗೆ ಸೌಲಭ್ಯವನ್ನು ಕಲ್ಪಿಸಿಕೊಡುವುದು, ೩ ಅವುಗಳನ್ನು ಕೊಲ್ಲಲೇಬೇಕಾದ ಸಂದರ್ಭ ಬಿದ್ದರೆ ಅವಕ್ಕೆ ಸ್ವಲ್ಪವೂ ಸಂಕಟವಿಲ್ಲದಂತೆ ಕೊಲ್ಲುವದಕ್ಕಾಗಿ ತಕ್ಕ ಏರ್ಪಾಡು ಮಾಡುವದು, ೪ ನಿಜವಾಗಿ ಉಪಯೋಗಕ್ಕೆ ಬರತಕ್ಕಂಥ ನಾಯಿಗಳಿಗೆ ಸ್ವಂತಗಾರರನ್ನು ಹುಡುಕಿಕೊಡುವದು.

*****

ಬಂಗಾಳ ಪ್ರಾಂತದ ಬ್ಯಾರಕಪೂರಿನಲ್ಲಿ ಒಬ್ಬ ಮನುಷ್ಯನು ಹಾವುಕಚ್ಚಿ ಸತ್ತುಹೋದನು. ಆ ಶವವನ್ನು ಹದಿನೈದು ಮಂದಿ ತೆಗೆದುಕೊಂಡು ಒಬ್ಬ ಮನುಷ್ಯನ ಮನೆಗೆ ಹೋಗಿ ಆ ಮನೆಯ ಹೆಂಗಸನ್ನು ಕರೆದು—ನೀನು ಶವವನ್ನು ಮುಟ್ಟಿದರೆ ಈ ಮನುಷ್ಯನು ಬದುಕುವನೆಂದು ಹೇಳಿದರು. ಅವಳು ಹಾಗೆಯೇ ಮಾಡಿದಳು. ಏನೂ ಪ್ರಯೋಜನವಾಗಲಿಲ್ಲ. ಕೆಲವು ಹೊತ್ತಾದ ಮೇಲೆ ಎರಡನೇ ಸಲವೂ ಮುಟ್ಟಬೇಕೆನ್ನಲು ಅವಳು ಹಾಗೇ ಮಾಡಿದಳು. ಇನ್ನು ಸ್ವಲ್ಪ ಹೊತ್ತಾದ ಬಳಿಕ ತಿರುಗಿ ಆ ಶವವನ್ನು ಮುಟ್ಟಬೇಕೆಂದು ಕೇಳಿಕೊಂಡರು. ಅವಳು ಒಪ್ಪದೆಹೋದಳು. ಆಗ ಆ ಜನರು ಅವಳ ಮನೆಯ ಕದಗಳನ್ನು ಮುರಿದು ಒಳಗೆ ನುಗ್ಗಿ ಅವಳ ಗಂಡನನ್ನೂ ಮಗಳನ್ನೂ ಹೊಡೆದು ಬಡಿದು ಬಹಳ ತೊಂದರೆಯನ್ನು ಮಾಡಿದರು. ಈ ವ್ಯಾಜ್ಯವು ಆ ಊರಿನ ಮ್ಯಾಜಿಸ್ಟ್ರೇಟರಲ್ಲಿ ದರ್ಯಾಪ್ತಿಯಾಗುತ್ತಿದೆ.

*****

ಲಾಹೋರಿನಲ್ಲಿ ಒಬ್ಬನು ದುರಾಚಾರಕ್ಕೆ ಆಧಾರಭೂತವಾದಂಥ ಒಂದು ಪುಸ್ತಕದಲ್ಲಿ ಸ್ವಲ್ಪವನ್ನು ಒಂದು ಮುದ್ರಾಶಾಲೆಯಲ್ಲಿಯೂ ಉಳಿದ ಭಾಗವನ್ನು ಬೇರೊಂದು ಮುದ್ರಾಲಯದಲ್ಲಿಯೂ ಅಚ್ಚುಹಾಕಿಸಿದನು. ಈ ಪುಸ್ತಕದ ವಿಚಾರವು ಸರ್ಕಾರಕ್ಕೆ ತಿಳಿದು ವಿಚಾರಿಸಲಾಗಿ ಮೊದಲನೆ ಮುದ್ರಾಲಯದ ಪ್ರೊಪ್ರೈಟರು ತಾನು ಊರಲ್ಲಿಲ್ಲದ ವೇಳೆಯಲ್ಲಿ ಮ್ಯಾನೇಜರು ಮಾಡಿದ ಕೆಲಸಕ್ಕೆ ತಾನು ಜವಾಬ್ದಾರನಲ್ಲವೆಂದು ಹೇಳಿಬಿಟ್ಟನು. ಎರಡನೆಯವನು— ತನ್ನ ಮುದ್ರಾಲಯದಲ್ಲಿ ನಡೆಯುವ ಅಚ್ಚಿನ ಕೆಲಸಕ್ಕೂ ತನಗೂ ಸಂಬಂಧವು ಇಲ್ಲವೆಂದು ಹೇಳಿದನು. ಲಾಹೋರಿನ ಮ್ಯಾಜಿಸ್ಟ್ರೇಟರು ಎರಡನೆಯವನಿಗೆ ರೂ ೨೫ ಜುಲ್ಮಾನೆಯನ್ನು ವಿಧಿಸಿದರು. ಇದನ್ನು ಸೆಷನ್ಸ್ ಜಡ್ಜರು ಒಪ್ಪದೆ ಚೀಫ್‌ಕೋರ್ಟಿಗೆ ಹಾಕಿ, ಪ್ರತಿವಾದಿಯ ತಿಳುವಳಿಕೆ ಮತ್ತು ಒಪ್ಪಿಗೆಯಿಂದಲೇ ಆ ಪುಸ್ತಕವು ಮುದ್ರಿಸಲ್ಪಟ್ಟಿತೆಂದು ರುಜುವಾತಾದರೆ ಹೊರತು ಶಿಕ್ಷೆಯನ್ನು ವಿಧಿಸುತ್ತಿರುವುದು ನ್ಯಾಯವಲ್ಲವೆಂದು ತೀರ್ಮಾನ ಹೇಳಿದರು. ಚೀಫ್‌ಕೋರ್ಟಿನವರು ಸೆಷನ್ ಜಡ್ಜರ ತೀರ್ಮಾನವನ್ನು ಸ್ಥಿರಪಡಿಸಿದರು.

*****

ಬಂಗಾಳದಲ್ಲಿ ಜಮೀನುದಾರರ ಸಂಘದವರು ತಮ್ಮ ದೇಶದಲ್ಲಿ ನೇಯ್ಗೆ ಉದ್ಯೋಗವನ್ನು ಉದ್ಧಾರ ಮಾಡುವ ಬಗ್ಗೆ ಆಲೋಚಿಸಿ ಪ್ರಜಾಸಮೂಹಕ್ಕೆ ಕೇಳಿಕೊಂಡಿದ್ದಾರೆ. ಈ ಉದ್ದೇಶಕ್ಕೆ ಅವರು ಕೊಟ್ಟಿರುವ ಸಲಹೆಗಳು ಮೂರು. ಅವು ಯಾವುವೆಂದರೆ— ೧.—ಬಂಗಾಳದಲ್ಲಿ ನೇಯ್ಗೆ ಕಾರ್ಖಾನೆಗಳನ್ನು ಸ್ಥಾಪಿಸತಕ್ಕದ್ದು. ೨—ಯುರೋಪಿಯನ್ ಅಮೇರಿಕಾ ದೇಶಗಳ ಉತ್ತಮವಾದ ಮಗ್ಗಗಳನ್ನು ತರಿಸುವುದು. ೩—ನೇಯ್ಗೆಯವರಿಗೆ ಸುಲಭವಾಗಿ ಲಭಿಸತಕ್ಕವಾಗಿಯೂ ಕಡಿಮೆ ಕ್ರಯಕ್ಕೆ ಬರುವಂಥವಾಗಿಯೂ ಇರುವ ಮಗ್ಗಗಳನ್ನೂ ನೂಲನ್ನೂ ಕೊಟ್ಟು ಸಹಾಯ ಮಾಡತಕ್ಕದ್ದು. ಈ ಕನಿಷ್ಟ ಪಕ್ಷದಲ್ಲಿ ಬಹು ಕಾರ್ಖಾನೆಗಳು ಬೇಕು. ಆದರೆ ಇದಕ್ಕೆ ಧಾರಾಳವಾದ ಹಣವು ಉತ್ಪತ್ತಿಯಾಗುವ ವಿಷಯದಲ್ಲಿ ಸಂಶಯವಿರುವದರಿಂದ ಸದ್ಯಕ್ಕೆ ೨೦೦ ಮಗ್ಗಗಳಿರುವ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದು ಅನುಕೂಲವೆಂತಲೂ ಇದಕ್ಕೆ ೨ ಲಕ್ಷ ರೂಪಾಯಿಗಳು ಬೇಕಾಗುತ್ತದೆಂದೂ ಆಲೋಚಿಸುತ್ತಾರೆ. ಆದರೆ ಮೊದಲು ೫೦ ಮಗ್ಗಗಳಿರುವ ಸಣ್ಣ ಕಾರ್ಖಾನೆಯೊಂದನ್ನು ಸ್ಥಾಪಿಸಿ ಕಾರ್ಯಾರಂಭವನ್ನು ಮಾಡಬೇಕೆಂದು ತೀರ್ಮಾನಿಸಿದ್ದಾರೆ. ಇದಕ್ಕೆ ರೂ ೧೦,೦೦೦ ಮುಟ್ಟುವದು.

ತಾಲೂಕು ವರ್ತಮಾನಗಳು.

(೧)

ಬೆಂಗಳೂರು ಜಿಲ್ಲೆ ೧೯—೨೦ ದಿವಸಗಳಿಂದ ಮಳೆಯೇ ಇಲ್ಲ. ಕೆರೆ ಕುಂಟೆಗಳಿಗೆ ನೀರು ಮೊದಲೇ ಇಲ್ಲ. ಪೈರುಗಳೆಲ್ಲಾ ಕೆಲವು ಕಡೆ ಮಾತ್ರ ಚನ್ನಾಗಿದ್ದರೂ ಒಣಗುತ್ತಾ ಬಂತು. ರೈತರೆಲ್ಲಾ ಮುಗಿಲು ನೋಡುತ್ತಾ ಇದ್ದಾರೆ. ಇಂಥಾ ಕಾಲದಲ್ಲಿ ಪರಸ್ಥಳದಿಂದ ಒಬ್ಬ ಮುಸಲ್ಮಾನ ಹೆಂಗಸು ಪ್ಲೇಗಿನ ಸ್ಥಳದಿಂದ ಇಲ್ಲಿಗೆ ಬಂದು ಕಾಯಿಲೆಯಾಗಿ ಪ್ಲೇಗ್ ಗಡ್ಡೆ ಆಯಿತು. ಅನಂತರ ಸರ್ಕಾರದವರು ಈ ಊರು ಆಸ್ಪತ್ರೆ ಅಸಿಸ್ಟೆಂಟರವರಿಂದ ವಿಚಾರಿಸಿ ತಿಳಿದು ಪ್ಲೇಗ್ ಹೆಂಗಸಿಗೂ ಆ ಮನೆಯಲ್ಲಿರುವವರಿಗೆಲ್ಲಾ ಊರಾಚೆ ತಕ್ಕ ಸ್ಥಳವನ್ನು ತೋರಿಸಿದರು. ಪ್ಲೇಗ್ ಮನೆಗೆ ಆಸ್ಪತ್ರೆ ಔಷಧವನ್ನು ಶುದ್ಧವಾಗಿ ಡಿಸಿನ್‌ಫೆಕ್ಟ್ ಮಾಡಿಸಿದರು. ಆದರೆ ಈ ಊರಲ್ಲಿ ಕಳೆದ ವರ್ಷ ಪ್ಲೇಗ್ ಬಂದಾಗ ಸರ್ಕಾರದವರು ಪ್ರಜೆಗಳಿಗೆ ತಕ್ಕ ಸಹಾಯ ಮಾಡದೆ ತೊಂದರೆ ಕೊಡುತ್ತಿದ್ದರೇ ಹೊರತು ಈಗಿನಹಾಗೆ ಸಹಾಯ ಮಾಡುತ್ತಿರಲಿಲ್ಲ. ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರವರು ಪ್ಲೇಗ್ ಬಂದವರ ವಿಷಯದಲ್ಲಿಯೂ ಬಡವರ ವಿಷಯದಲ್ಲಿಯೂ ತುಂಬಾ ನಿಗಾ ಕೊಟ್ಟು ತಕ್ಕ ಔಷಧವನ್ನು ಕೊಡುವದರಿಂದ ಪ್ರಜೆಗಳ ಅನುರಾಗಕ್ಕೆ ಪಾತ್ರರಾಗಿದ್ದಾರೆ.

ತರೀಕೆರೆ.—ಈಗ ಎರಡು ವಾರಗಳಿಂದ ಇಲ್ಲಿ ಪ್ಲೇಗ್ ಉಪದ್ರವು ಪ್ರಾರಂಭವಾಗಿ ಈವರಿಗೂ ೧೨ ಜನರಿಗೆ ತಗಲಿರುತ್ತದೆ. ಅವರಲ್ಲಿ ೯ ಜನರು ಮೃತಪಟ್ಟರು. ಜನರಲ್ಲಿ ಅನೇಕರು ಮನೆಗಳನ್ನು ಬಿಟ್ಟು ಶೆಡ್ಡುಗಳಲ್ಲಿ ವಾಸಮಾಡುತ್ತಿದ್ದಾಗ್ಯೂ ಇನ್ನೂ ಈ ವ್ಯಾಧಿಯು ಬಿಟ್ಟುಹೋಗದೆ ಆಗಿಂದಾಗ್ಯೆ ಪ್ರಬಲವಾಗುತ್ತಾ ಬರುತ್ತಿದೆ. ಈ ತಿಂಗಳು ೧೪ನೆ ತಾ॥ ನಲ್ಲಿ ಇಲ್ಲಿನ ಸಂಡಲ್‌ಕೋಠಿಯಲ್ಲಿ ಬಹುಗೆ ಕೆಲಸಮಾಡುತ್ತಿದ್ದ ಜಾರ್ಜಿಟರ್ ಎಂಬ ಪ್ರಾಟೆಸ್ಟೆಂಟ್ ಕ್ರೈಸ್ತರಿಗೆ ಸಾಯಂಕಾಲದಲ್ಲಿ ಜ್ವರವು ಕಾಣಿಸಿತು. ಮಾರನೆದಿನ ತೊಡೆಯಲ್ಲಿ ಗಡ್ಡೆಬಂದು, ಇಲ್ಲಿನ ಡಾಕ್ಟರು ಪರೀಕ್ಷೆ ಮಾಡಿದಾಗ ಪ್ಲೇಗ್ ವ್ಯಾಧಿಯೇ ಎಂದು ಗೊತ್ತಾಯಿತು. ಅಮಲ್ದಾರರು ತಿಳಿದು ಕೂಡಲೆ ಬೇಕಾದ ಎಲ್ಲಾ ಏರ್ಪಾಡುಗಳು ಮಾಡತಕ್ಕದ್ದೆಂದು ಅಪ್ಪಣೆ ಕೊಟ್ಟು ಪ್ಲೇಗ್ ಷೆಡ್ಡಿಗೆ ಒಂದು ಮಂಚದ ಮೇಲೆ ಮಲಗಿಸಿ ತೆಗೆದುಕೊಂಡುಹೋಗಿ ಜಾರ್ಜಿಟರನ್ನು ನೋಡಿಕೊಳ್ಳುವದಕ್ಕಾಗಿ ಒಬ್ಬ ಜವಾನನನ್ನೂ ನೇಮಿಸಿದರು. ಈಗ ಕಾಯಿಲೆಯವರು ತಕ್ಕಮಟ್ಟಿಗೆ ಗುಣಮುಖಸ್ಥಿತಿಯಲ್ಲಿ ಇರುತ್ತಾರೆ. ಈ ಸಮಯಗಳಲ್ಲಿ ಡಾಕ್ಟರವರೂ ಅಮಲ್ದಾರರೂ ಪಟ್ಟಿದ್ದ ಪ್ರಯಾಸ ತೆಗೆದುಕೊಂಡದ್ದರಿಂದ ಇಲ್ಲಿನವರೆಲ್ಲರೂ ಅವರುಗಳನ್ನು ಬಹಳವಾಗಿ ವಂದಿಸುವವರಾಗಿರುತ್ತಾರೆ.—ಕಳೆದ ಬುಧವಾರ ಪ್ರಾತಃಕಾಲ ಒಬ್ಬ ಬ್ರಾಹ್ಮಣ ವಿಧವೆ ಗುಂಡಮ್ಮ ಎಂಬಾಕೆಯು ಗರ್ಭಿಣಿಯಾಗಿದ್ದಳೆಂದು ಯಾರೋ ಗುರುಗಳ ಬಳಿಗೆ ಒಂದು ಮೂಗರ್ಜಿಯ ಮೂಲಕ ತಿಳಿಯಪಡಿಸಿದರು. ಸ್ವಾಮಿಗಳು ಅದನ್ನು ವಿಚಾರಿಸಿ ಸಂಗತಿಯು ನಿಜವಾಗಿದ್ದುದರಿಂದ ಆಕೆಯನ್ನು ಜಾತಿಯಿಂದ ಬಹಿಷ್ಕರಿಸಿದರೆಂತಲೂ ಆಕೆಯು ಈ ಅಪವಾದವನ್ನು ತಡೆಯಲಾರದೆ ಬಾವಿಯಲ್ಲಿ ಬಿದ್ದಳೆಂತಲೂ ವರ್ತಮಾನ ಕೇಳುತ್ತೇನೆ.

ನಂಜನಗೂಡು.—ವಿಕ್ಟೋರಿಯಾ ಶ್ರೀಮನ್ಮಹಾರಾಜ್ಞಿಯವರ ಅರವತ್ತನೆಯ ವರ್ಷದ ಜೂಬಿಲೀ ಮಹೋತ್ಸವವು ಹಿಂದೆ ಬ್ರಿಟಿಷ್ ರಾಜ್ಯದಲ್ಲೆಲ್ಲಾ ಅತ್ಯಂತ ವಿಜೃಂಭಣೆಯಿಂದ ನಡೆದುದು ಸರಿಯಷ್ಟೆ. ಈ ಮಹೋತ್ಸವ ಜ್ಞಾಪಕಾರ್ಥವಾಗಿ ಈ ನಂಜನಗೂಡಿನಲ್ಲಿ ಮುನಸೀಫರಾಗಿದ್ದ ಮೆ॥ ಸಿಂಗಳಾಚಾರ್ರವರು ಎಲ್ಲಾ ದೊಡ್ಡ ಮನುಷ್ಯರನ್ನೂ ಪ್ರೇರಿಸಿ ಚಂದಾ ವಸೂಲ್ಮಾಡಿ, ಒಂದು ಕಟ್ಟಡವನ್ನು ಕಟ್ಟಿಸಿ, ಅಲ್ಲೊಂದು ಗಣಪತಿ ವಿಗ್ರಹವನ್ನು ಸ್ಥಾಪಿಸಿ ಸಂಸ್ಕೃತ ವೇದ ಇವುಗಳ ಅಭ್ಯಾಸ ನಡೆಯುವಂತೆ ಮಾಡಿ ಅದಕ್ಕೆ ಜ್ಯೂಬಿಲಿ ಸಂಸ್ಕೃತ ಪಾಠಶಾಲೆ ಎಂದು ಹೆಸರಿಟ್ಟರು. ಅನಂತರದಲ್ಲಿ ಮೇಲ್ಕಂಡ ಪಾಠಶಾಲಾ ಅಧ್ಯಕ್ಷರಾದ ಮೆ॥ ಶ್ರೀಕಂಠಶಾಸ್ತ್ರಿಗಳೇ ಮೊದಲಾದವರ ಪರ್ಯಾಲೋಚನೆಯಿಂದ ಪ್ರತಿವರ್ಷ ಭಾದ್ರಪದ ಶುದ್ಧ ೪ ರಿಂದ ಶುದ್ಧ ಪೌರ್ಣಮಿಯ ವರೆಗೆ ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ವಿನಾಯಕನ ಸಭೆಯು ನಡೆಯುವಂತೆಯೇ ಇಲ್ಲಿಯೂ ಏರ್ಪಡಿಸಬೇಕೆಂದು ಗೊತ್ತುಮಾಡಿದರು. ಇಂಥಾ ಸಭಾಕಾರ್ಯ ಸಹಾಯಕ್ಕಾಗಿ ಮೆ॥ ಅಮಲ್ದಾರ್ ನರಸಣ್ಣನವರ ಮುಖ್ಯಳಾದ ರಾಮರಾಯರು ಮೊದಲಾದ ನಾಲ್ಕು ಜನಗಳು ಸ್ವಲ್ಪ ಸ್ವಲ್ಪ ಜಮೀನುಗಳನ್ನು ಕೊಟ್ಟಿರುತ್ತಾರೆ. ಅಲ್ಲದೆ ಇನ್ನೂ ಆಸ್ತಿಕರಾದ ದೊಡ್ಡಮನುಷ್ಯರು ಪ್ರತಿವರ್ಷವೂ ಚಂದಾರೂಪದಿಂದ ಸಹಾಯ ಮಾಡುತ್ತಾ ಇದಾರೆ. ಮತ್ತು ಆಗ ಇಲ್ಲಿ ಕಂಟ್ರಾಕ್ಟುದಾರರಾಗಿದ್ದ ಸಿದ್ದಪ್ಪನವರು ಮೂರು ಸಾವಿರ ರೂಪಾಯಿಗಳನ್ನು ಈ ಪಾಠಶಾಲೆಯ ಫಂಡಿಗೆ ಕೊಟ್ಟಿರುತ್ತಾರೆ. ಇತ್ಯಾದಿ ಸಹಾಯಗಳಿಂದ ಈ ವರ್ಷವೂ ಸಭಾ ಕಾರ್ಯವು ನೆರವೇರಿತು. ಗೊತ್ತುಮಾಡಿದ ಕಾಲದಲ್ಲಿ ಪರೀಕ್ಷೆಯು ನಡೆದು ೧೯—೨೪ ವಿದ್ಯಾರ್ಥಿಗಳು ಕ್ರಮವಾಗಿ ಉತ್ತಮ ಮಧ್ಯಮ ತರಗತಿಗಳಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರುಗಳಿಗೆ ಬಹುಮಾನದಾನಾರ್ಥವಾಗಿ ಅಧಿಕಾರಸ್ಥರೇ ಮೊದಲಾದ ದೊಡ್ಡಮನುಷ್ಯರ ಸಭೆಯು ಈ ತಿಂಗಳು ೧೪ ನೇ ತಾರೀಖಿನ ದಿನ ಪಾಠಶಾಲೆಯಲ್ಲಿ ಸೇರಿತು. ಅಲ್ಲಿ ದೊಡ್ಡಮನುಷ್ಯರ ಚಂದಾದಿಂದ ತರಿಸಲ್ಪಟ್ಟಿದ್ದ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಬಹುಮಾನ ಕೊಡಲ್ಪಟ್ಟವು. ಆ॥ ಮೆ॥ ಶ್ರೀಕಂಠಶಾಸ್ತ್ರಿಗಳು ಪಾಠಶಾಲೆಯ ವಾರ್ಷಿಕ ರಿಪೋರ್ಟನ್ನು ಓದಿದರು. ಇದರಿಂದ ಪಾಠಶಾಲೆಯ ಕಾರ್ಯವು ತೃಪ್ತಿಕರವಾಗಿ ನಡೆಯುವುದೆಂದು ತಿಳಿದು ಸರ್ವರೂ ಸಂತೋಷಿಸಿದರು. ಅನಂತರ ಕಾರ್ಯದರ್ಶಿಗಳು ಮಾಡಿದ ಉಪನ್ಯಾಸದಲ್ಲಿ ಮಹನೀಯರು ಇನ್ನು ಸ್ವಲ್ಪ ಜಮೀನುಗಳನ್ನು ಸಹಾಯ ಮಾಡಿದರೆ ಈ ಸಭಾಕಾರ್ಯವು ಸಾಂಗವಾಗಿ ನಡೆಯುವುದೆಂದೂ ಇಲ್ಲದಿದ್ದರೆ ತೊಂದರೆ ಎಂದೂ ತಿಳಿಸಿದರು. ಅನಂತರ ವಿನಾಯಕನ ಉತ್ಸವವು ವಿಜೃಂಭಣೆಯಿಂದ ನಡೆದು ಹೊಳೆಯ ಬಳಿಯಲ್ಲಿ ಪೂಜಾರ್ಪಣಾದಿಗಳಾದ ಮೇಲೆ ಬಂದಿದ್ದವರಿಗೆಲ್ಲವೂ ಪ್ರಸಾದಾದಿಗಳು ಕೊಡಲ್ಪಟ್ಟವು.

ಎಡೆಯೂರು.— ನಮ್ಮ ಮೈಸೂರು ಸಂಸ್ಥಾನದ ದಿವಾನ್ ಬಹದರ್ ಶ್ರೀಮಾನ್ ವಿ. ಪಿ. ಮಾಧವರಾವ್, ಸಿ. ಐ. ಇ. ಯವರು, ಮತ್ತು ಮಿ॥ ಕೃಷ್ಣಮೂರ್ತಿ ಬಿ. ಎ. ಬಿ. ಎಲ್. ಯವರೂ ನಮ್ಮ ಡೆಪ್ಯುಟಿ ಕಮಿಷನರರೂ ಇನ್ನೂ ಅನೇಕ ದೊಡ್ಡ ಮನುಷ್ಯರೂ ಸಹ ಇದೇ ತಾರೀಖು ೬ನೇ ಬುಧವಾರ ಪ್ರಾತಃಕಾಲ ೧೦॥ ಗಂಟೆಗೆ ಲಕ್ಕವಳ್ಳಿಯಿಂದ ಈ ಊರಿಗೆ ದಯಮಾಡಿಸಿದ್ದರು. ಊರಹೊರಗೆ ಕಟ್ಟಿಸಿದ್ದ ಚಪ್ಪರದಲ್ಲಿ ಊರಿನವರೆಲ್ಲರೂ ಕಾದಿದ್ದು ಶ್ರೀಮಂತರ ಸುಸ್ವಾಗತವನ್ನು ಬಯಸಿ ಸವಾರಿ ಮುಂದೆ ಸಾಗಿ ಗುರುವಾರ ಟ್ರಾವೆಲರ್ಸ್ ಬಂಗಲೆಗೆ ದಯಮಾಡಿಸಿ ಒಂದುಗಂಟೆ ವಿಶ್ರಾಂತಿಯನ್ನು ಹೊಂದಿ ಅನಂತರ ಇಲ್ಲಿಗೆ ೪ ಮೈಲು ದೂರದಲ್ಲಿರುವ ಎಡೆಯೂರು ಎಂಬ ಕ್ಷೇತ್ರಕ್ಕೆ ದಯಮಾಡಿಸಿ ಅಲ್ಲಿ ಶ್ರೀಸಿದ್ಧಲಿಂಗೇಶ್ವರದೇವರ ದರ್ಶನ ಮಾಡಿ ನೋಡತಕ್ಕ ವಿಷಯಗಳನ್ನು ನೋಡಿಕೊಂಡು ಸಾಯಂಕಾಲ ನಾಲ್ಕು ಗಂಟೆಗೆ ವಾಪಸು ದಯಮಾಡಿಸಿದರು. ಸಾಯಂಕಾಲ ೬ ಗಂಟೆಗೆ ಪ್ರಸಿದ್ಧ ಊರಿನವರೆಲ್ಲರಿಗೂ ಬೇಟಿಕೊಟ್ಟು ಈ ಊರಲ್ಲಿ ಸ್ಥಾಪಿತವಾಗಿರುವ ಪುರೋಭಿವೃದ್ಧಿ ಸಂಘದ ವಿಷಯವನ್ನು ವಿಚಾರಿಸಿ ಸಂತೋಷಪಟ್ಟು ಪ್ರಜೆಗಳ ಇಷ್ಟದಂತೆ ಇಲ್ಲಿ ಮುನ್ಸಿಫ್ ಕೋರ್ಟನ್ನು ಖಾಯಂ ಇಡುವುದಾಗಿಯೂ ಸಬ್ ಟ್ರಜರಿಯನ್ನು ಇಡಿಸಿಕೊಡುವುದಾಗಿಯೂ ವಾಗ್ದಾನವನ್ನು ದಯಪಾಲಿಸಿದರು. ಮಾರನೇ ದಿನ ಪ್ರಾತಃಕಾಲ ೭ ಗಂಟೆಗೆ ತಾಲ್ಲೂಕು ಕಚೇರಿ, ಮುನ್ಸಿಫ್ ಕೋರ್ಟು, ಆಸ್ಪತ್ರೆ, ಇವುಗಳನ್ನು ಇನ್‌ಸ್ಪೆಕ್ಟ್ ಮಾಡಿಕೊಂಡು ಗವರ್ನಮೆಂಟು ಎ. ವಿ. ಸ್ಕೂಲಿಗೆ ದಯಮಾಡಿಸಿ ಪ್ರತಿಯೊಬ್ಬ ವಿದ್ಯಾರ್ಥಿಯ ವಿಷಯವನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಚಾರಿಸಿ ನಂತರ ಗರ್ಲ್ಸ್ ಸ್ಕೂಲಿಗೆ ಬಿಜಯಂಗೈದರು. ಅಲ್ಲಿ ಪರೀಕ್ಷೆಯಂ ಪೂರೈಸಿ ಬಾಲಿಕೆಯರಿಂದ ಹೇಳಲ್ಪಟ್ಟ ಹಾಡುಗಳನ್ನು ಪುರಸ್ಕರಿಸಿ ಸಂತೋಷಭರಿತರಾದರು. ನಂತರ ಎರಡನೇ ತರಗತಿಯ ವಿದ್ಯಾರ್ಥಿನಿಯೊಬ್ಬಳು ಸುಲಲಿತವಾದ ಒಂದು ಅಡ್ರೆಸ್ಸನ್ನು ಗಂಭೀರ ಸ್ವರದಿಂದ ಸ್ಪಷ್ಟವಾಗಿ ಓದಿ ಒಪ್ಪಿಸಿದಳು. ಶ್ರೀಮಂತರವರು ವಿದ್ಯಾರ್ಥಿನಿಯರಿಗೆ ಮೃಷ್ಟಾನ್ನಗಳನ್ನೂ ಉಪಾಧ್ಯಾಯರಿಗೆ ಉಪಚಾರಗಳನ್ನೂ ಹೇಳಿ ಸಂತೋಷಭರಿತರಾಗಿ ಮುಂದೆ ಕೊಪ್ಪಕ್ಕೆ ದಯಮಾಡಿಸಿದರು. ಕೆಲವು ವಾರಗಳಿಂದ ಸುತರಾಂ ಮಳೆ ಇಲ್ಲ. ಪೈರುಗಳೆಲ್ಲ ಒಣಗುತ್ತಿವೆ. ಧಾರಣೆಯು ದಿನೇ ದಿನೇ ಜಾಸ್ತಿಯಾಗುತ್ತಿದೆ. ಬಡವರ್ಗ ಗೋಳಾಟ ಹೇಳತೀರದು. ಊರಮಧ್ಯದಲ್ಲಿರತಕ್ಕ ಮುನಸಾಫ...

ಕಖಾನೆ ಹತ್ತಿರ ಕಸಾಯಿಖಾನೆ ಅಂಗಡಿ ಇದೆ. ಬೇಗಿರುವುದು ತುಂಬಾ ಅನಾರೋಗ್ಯಕ್ಕೆ ಕಾರಣ. ಅಮಲ್ದಾರರವರು ಇದನ್ನು ಕೂಡಲೆ ಇಲ್ಲಿಂದ ತೆಗಿಸಿ ಊರಹೊರಗೆ ಇಡಿಸಿದರೆ ಉತ್ತಮ. ಊರಸುತ್ತಲೂ ಲಂಟೋನಾ ಹೆಚ್ಚಾಗಿ ಹಬ್ಬಿಕೊಂಡಿರುವುದರಿಂದ ದುಷ್ಟ ಮೃಗಗಳಿಗೆ ಆಶ್ರಯವಾಗಿ ಪೈರುಗಳಿಗೂ ಜಾನವಾರುಗಳಿಗೂ ತುಂಬಾ ನಷ್ಟಕರವಾಗಿದೆ. ಬೀದಿಯಲ್ಲಿ ತಿರುಗಾಡತಕ್ಕ ಜಾನವಾರುಗಳು ದಿನ ದಿನಕ್ಕೆ ಕಡಿಮೆಯಾಗುತ್ತಿವೆ ಈ ಊರಿನಲ್ಲಿ ಯಾರೋ ಕೆಲವರು ದುಷ್ಟರು ಸೇರಿಕೊಂಡು ತಿರುಗಾಡತಕ್ಕ ಗೋಕಾಯಿಗಳನ್ನು ಹಿಡಿದುಕೊಂಡು ಹೋಗಿ ಚೋರಿಮಾರಿ ಚರ್ಮಸಮೇತ ಸುಲಿದುಕೊಂಡು ಹೋಗಿ ಧನಿಕರಾಗುತ್ತಿದ್ದಾರೆ ಈಗಾಗಲೆ ೩೦—೪೦ ಕಾಲ್ನಡೆಗಳು ಈ ರೀತಿಯಾದುವು ಮಾಲೀಕರಲ್ಲಿ ಕೆಲವರು ಪೋಲೀಸಿಗೆ ಅರ್ಜಿಯನ್ನು ಕೊಟ್ಟದ್ದಾಗಿ ತಿಳಿಯುತ್ತೆ. ಪೋಲೀಸರ ನಿಷ್ಕಾಳಜಿಯಿಂದಲೋ ಮೊಗಸಾಲೆಗಳ ದುರದೃಷ್ಟದಿಂದಲೋ ಪುಂಡರ ಪುಣ್ಯವಶದಿಂದಲೋ ಅಥವಾ ಅಧಿಕಾರಗಳ ಔದಾಸೀನ್ಯದಿಂದಲೋ ಪತ್ತೆಯೇ ಆಗುವುದಿಲ್ಲ ಅರ್ಜಿಗಳು ಎಲ್ಲಿ ಬೀಳುತ್ತವೆಯೋ ಗೊತ್ತೇ ಆಗುವುದಿಲ್ಲ. ಹೋದ ವರ್ಷವೂ ಇದೇ ರೀತಿಯಲ್ಲಿ ನಡೆಯುತ್ತಾ ಇದ್ದು ಪತ್ತೆ ಆಗಿ ದುಷ್ಟರಿಗೆ ತಕ್ಕ ಶಿಕ್ಷೆ ಆಗಿರುತ್ತದೆ. ಈಗ ಮಾತ್ರ ಆಫೀಸರ ನೋಟೀಸಿಗೆ ಯಾಕೆ ಬಂದಿಲ್ಲವೋ ತಿಳಿಯದು. ಇನ್ನಾದರೂ ತಾಲ್ಲೂಕು ಅಮಲ್ದಾರರವರು ತಕ್ಕ ಪತ್ತೆ ಹರಡೂದು ಮಾಡಿ ದುಷ್ಟರಿಗೆ ತಕ್ಕ ಬಂದೋಬಸ್ತು ಮಾಡಿಸದೆ ಹೋದರೆ ಕುರುವಿನ ಮೇಲೆ ಬೊಕ್ಕೆ ಎದ್ದಂತೆ ಜನಗಳ ಸಂಕಟವು ಹೆಚ್ಚಾಗಿ ಉಳಿಗಾಲವು ಇಲ್ಲದಂತೆ ಆಗುವುದರಲ್ಲಿ ಸಂದೇಹವಿಲ್ಲ ಜನಗಳೆಲ್ಲರೂ ತಮ್ಮತಮ್ಮ ಕೆಲಸಕಾರ್ಯಗಳನ್ನು ಬಿಟ್ಟು ಗೋಕಾಯಿಗಳನ್ನು ಕಾದುಕೊಳ್ಳತಕ್ಕ ಕೆಲಸ ಒಂದನ್ನೇ ಮಾಡಬೇಕಾದ ಕಾಲ ಬಂದಿದೆ ಇಂಥಾ ಘೋರ ಕೃತ್ಯಗಳು ನಡೆಯುತ್ತಲಿರುವುದು ಪತ್ರಿಕಾಮುಖದಿಂದಲಾದರೂ ಇಲ್ಲಿನ ಆಫೀಸರವರಿಗೆ ತಿಳಿಸದೆ ಹೋಗಲಾರದಾಗಿಯೂ ಮುಂದೆ ದುಷ್ಟರ ಬಾಧೆಯು ನಿವಾರಣೆಯಾಗದೆ ಇರಲಾರದಾಗಿಯೂ ನಂಬುತ್ತೇನೆ.

ತಿಪ್ಟೂರು.—ಕೆಲವು ದಿನಗಳಿಂದಲೂ ಮಳೆಯಿಲ್ಲದ್ದರಿಂದ ಪೈರಿನ ಗರ್ಭ ಕೆಟ್ಟುಹೋಯಿತೆಂದು ರೈತರು ವ್ಯಸನಪಡುತ್ತಿದ್ದಾರೆ. ಆದರೂ ತಕ್ಕಮಟ್ಟಿಗೆ ಮೋಡಗಳಾಡುತ್ತಿರುವದರಿಂದ ನಿರೀಕ್ಷೆಯೂ ಇರುತ್ತದೆ. ನಮ್ಮ ಹೊಸ ಅಮಲ್ದಾರರ ನಾದಿನಿಯವರ ಕುಮಾರಿಗೆ ಬಹಳ ಉತ್ಸಾಹದಿಂದ ಲಗ್ನವು ಬೆಳೆಯಿತು, ಊರಿನ ದೊಡ್ಡ ಮನುಷ್ಯರೂ ವರ್ತಕ ಮಹನೀಯರೂ, ಇತರರೂ, ನರಸಿಂಹಯ್ಯಂಗಾರ್ಯರ ಧರ್ಮಸತ್ರದಲ್ಲಿ ಸಭೆಕೂಡಿರಲು ಸಕಲರಿಗೂ ಪುಷ್ಪ, ಗಂಧ, ತಾಂಬೂಲ ಹಂಚೋಣಾಯ್ತು. ಶಿವಪ್ಪ ಶಾಸ್ತ್ರಿಗಳು ಅಮಲ್ದಾರರ ಮನೆಯಲ್ಲಿಯೂ ಸಾಹುಕಾರ್ ಊರುಮಕೊಂಡೆ ಮಲ್ಲೇಶಪ್ಪನವರ ಮಹಡಿಮೇಲೂ ನಡೆಸಿದ ಕಥೆಗಳಲ್ಲಿ ಸಭಿಕರಿಗೆ ಮಹದಾನಂದವನ್ನುಂಟುಮಾಡಿದರೆಂದು ತಿಳಿಯಿತು. ಕೆಲವರು ಹಿಂದು ಯೌವನಸ್ಥರು ಒಂದು ರೀಡಿಂಗ್ ರೂಮು ಏರ್ಪಡಿಸಿಕೊಂಡಿರುತ್ತಾರೆ. ಆದರೆ ಅನೇಕ ಪೇಪರುಗಳನ್ನು ತರಿಸಿಡುವದಕ್ಕೆ ಅಷ್ಟು ಶಕ್ತಿಸಾಲದವರಾಗಿದ್ದಾರೆ. ವಿದ್ಯಾಭ್ಯೋತ್ಸಾಹಕರಾದ ಮಹಾತ್ಮರು ಪೇಪರುಗಳನ್ನಾಗಲೀ ಪುಸ್ತಗ್ರಂಥಗಳನ್ನಾಗಲೀ ಉಚಿತವಾಗಿ ಕಳುಹಿಸಿಕೊಟ್ಟಲ್ಲಿ ಇವರು ಉಪಕಾರವನ್ನು ಸ್ಮರಿಸುತ್ತಿರುವರು. ತಾಲ್ಲೂಕ್ ಶಿರಸ್ತೆದಾರ್ ಮೆ॥ ಸಂಜೀವರಾಯರಿಗೆ ವರ್ಗವಾಯಿತೆಂಬ ಸುದ್ದಿ ಹುಟ್ಟಲು ಬಹಳ ಜನರು ವ್ಯಸನಪಡಲ್ಲಿದ್ದರು, ಪುನಃ ಇಲ್ಲಿಯೇ ಇರುತ್ತಾರೆಂದು ನಿಶ್ಚಿತವಾದಮೇಲೆ ಎಲ್ಲರೂ ಹಸನ್ಮುಖಿಗಳಾದರು. ರೈಲ್ವೆ ಸ್ಟೇಷನ್ ಮಾಸ್ಟರ್ ಮೆ॥ ರಾಮಯ್ಯನವರು ಬಂದಲಾಗಾಯ್ತು ತಮ್ಮ ಆಫೀಸಿನಲ್ಲಿ ಅನೇಕ ಒಳ್ಳೇ ಬದಲಾವಣೆಗಳನ್ನು ಮಾಡಿರುವದಲ್ಲದೆ ಊರಿನ ವರ್ತಕರು ಪ್ರಯಾಣಿಕರೇ ಮುಂತಾದವರನ್ನು ಬಹು ಪ್ರೀತಿಯಿಂದ ಕಾಣುತ್ತಾ ತಮ್ಮ ಕೆಲಸವನ್ನು ಮುತುವರ್ಜಿಯಿಂದ ಮಾಡುತ್ತಾರೆ. ಪ್ರಮೋಷನ್ ಮೇಲೆ ಬೇರೂರಿಗೆ ವರ್ಗವಾಯಿತೆಂಬ ಸಮಾಚಾರ ಕೇಳುತ್ತೇನೆ. ಮುನಿಸಿಪಲ್ ಜಾಡಮಾಲಿಗಳಲ್ಲಿ ಕೆಲವರಿಗೆ ಕಾಲಕ್ಕೆ ಸರಿಯಾಗಿ ಸಂಬಳ ಸಿಕ್ಕದಿರುವದರಿಂದ ಅದುವರಿಗೂ ಜೀವನಕ್ಕೆ ಕಷ್ಟವೇ ಗತಿಯೋ ಎಂದು ಗೋಳಾಡುತ್ತಾರೆ ಅಂತೂ ಎಲ್ಲರ ಹೊಟ್ಟೆಯೂ ಒಂದೇ ಎಂದು ಮರೆಯಲಾರರು. ಮಾದಿಗರ ಹಟ್ಟಿಯನ್ನು ಊರು ಹೊರಗೆ ಹಾಕಿದ್ದೇನೋ ಆಯಿತು. ಆದರೆ ತಕ್ಕ ಮನೆಗಳನ್ನು ಕಟ್ಟಿಕೊಳ್ಳುವದಕ್ಕೆ ಇನ್ನೂ ಜಾಗ್ರತೆಯಾಗಲಿಲ್ಲ. ಗುಡಿಸಲುಗಳಲ್ಲಿ ಹೆಚ್ಚಿನ ಛಳಿಯಾದಾಗ ಗಾಳಿಯಿಂದ ಗುಡಿಸಲು ಆಕಾಶವನ್ನು ನೋಡುತ್ತಿರುವಾಗ ಮಕ್ಕಳುಮರಿಗಳಿಗೆ ಬಹಳ ತೊಂದರೆ ಎಂದು ಗೋಳಾಡುತ್ತಾರೆ. ಇಷ್ಟರಲ್ಲೇ ಅನುಕೂಲವಾಗಬಹುದೆಂಬ ಊಹೆ ಉಂಟು.

ತೀರ್ಥಹಳ್ಳಿ.—ದಿವಾನ್ ಸಾಹೇಬರವರ ಸವಾರಿಯು ೧೭ ನೇ ತಾರೀಖು ಭಾನುವಾರ ೧೧ ಗಂಟೆಗೆ ಸರಿಯಾಗಿ ತೀರ್ಥಹಳ್ಳಿಗೆ ದಯಮಾಡಿಸಿತು. ಮ॥ ರಾ॥ ಗಿರಿಯಪ್ಪ ಗೌಡರವರ ಮನೆಯ ಮುಂದೆ ಮ್ಯುನಿಸಿಪಾಲಿಟಿಯವರು ಸುಂದರವಾದ ಲತಾ ತೋರಣಗಳನ್ನು ಸಿದ್ಧಪಡಿಸಿ ಫಲಪುಷ್ಪಾದಿಗಳಿಂದಲೇ ಚಪ್ಪರಮಂಟಪವನ್ನು ನಿರ್ಮಿಸಿದ್ದರು. ನೋಡುವದಕ್ಕೆ ಬಹು ಅಲಂಕಾರವಾಗಿತ್ತು. ದಿವಾನರು ಗಾಡಿಯನ್ನು ಚಪ್ಪರದ ಕೆಳಗೆ ನಿಲ್ಲಿಸಿಕೊಂಡು ದೊಡ್ಡಮನುಷ್ಯರು ಮುಂತಾದವರು ಮರ್ಯಾದೆಯಿಂದ ಒಪ್ಪಿಸಿದ ಫಲಪುಷ್ಪಾದಿಗಳನ್ನು ಸ್ವೀಕರಿಸಿದ್ದಲ್ಲದೆ ನೆರೆದು ಬಂದಿದ್ದ ಜನಗಳ ಕರಮುಗಿದ ಸ್ತುತಿಗಳನ್ನು ಅಂಗೀಕರಿಸಿಕೊಂಡು ಅಲ್ಲಿಂದ ನೆಟ್ಟನೆ ಟ್ರಾವಲರ್ಸ್ ಬಂಗಲೆಗೆ ದಯಮಾಡಿಸಿದರು. ಊರನ್ನು ಅಲ್ಲಲ್ಲಿ ತೋರಣಾದಿಗಳಿಂದ ಶೃಂಗರಿಸಿದ್ದರು. ಸೋಮವಾರ ಬೆಳಗ್ಗೆ ದಿವಾನರು ಪಟ್ಟಣದಲ್ಲಿ ಸಂಚಾರ ಹೊರಟು ದೇವಸ್ಥಾನಕ್ಕೆ ದಯಮಾಡಿಸಿ ಅಲ್ಲಿಂದ ಹೊಳೆಯ ಆಚೆ ಇರುವ ಪುತ್ತಿಗೆ ಮಠಕ್ಕೆ ಹೋಗಿ ಮಠದವರ ಸನ್ಮಾನಗಳನ್ನು ಸ್ವೀಕರಿಸಿ ಅಲ್ಲಿಂದ ಗರ್ಲ್ಸ್ ಸ್ಕೂಲಿಗೆ ಭೇಟಿಕೊಟ್ಟರು. ಬಾಲಿಕೆಯರು ಶುಚಿರ್ಭೂತರಾಗಿ ಹಾಜರಾಗಿದ್ದರು. ದಿವಾನರು ಅನೇಕ ವಿಚಾರ ಮಾಡಿ ಪಾಸ್ ಬಗುವ ಕಾಲದಲ್ಲಿ ಬಾಲಿಕೆಯರು ಗಾನಮಾಡಿದರು. ಆ ಗಾನವನ್ನು ತಕ್ಕ ರೀತಿಯಲ್ಲಿ ಹಾಡಲಿಲ್ಲವೆಂದು ಕಂಡುಬಂತು ಅನಂತರ ತಾಲ್ಲೂಕು ಕಚೇರಿಗೂ ಸಂದಲ್ ಕೋಠಿಗೂ ಆಸ್ಪತ್ರೆಗೂ ದಯಮಾಡಿಸಿ ಅಲ್ಲಿನ ಕೆಲಸಗಳನ್ನೆಲ್ಲಾ ವಿಚಾರಿಸಿಕೊಂಡು ಮಾರಣೆ ದಿನ ಮಹಿಷೆಗೆ ಹೋಗಿ ಅಲ್ಲಿ ಸಂತರ್ಪಣೆ ನಡೆಸಿ ಮಂಡಗದ್ದೆ ಮಾರ್ಗವಾಗಿ ಶಿವಮೊಗ್ಗೆಗೆ ದಯಮಾಡಿಸಿದರು. ತೀರ್ಥಹಳ್ಳಿಯಲ್ಲಿ ಕೆಲವು ಜನಗಳು ತಮ್ಮ ಕಷ್ಟಸುಖಗಳನ್ನು ಕುರಿತು ದಿವಾನರ ಸನ್ನಿಧಿಯಲ್ಲಿ ಅರ್ಜಿಯನ್ನು ಒಪ್ಪಿಸಬೇಕೆಂದು ಕಾದಿದ್ದರು ಅದಕ್ಕೆ ಅನೇಕರಿಗೆ ಇತರ ಅಧಿಕಾರಿಗಳು ಅವಕಾಶಕೊಡದಂತೆ ಮಾಡಿದರೆಂದು ಹೇಳುತ್ತಾರೆ. ಇಂಥಾ ಸಂದರ್ಭಗಳಲ್ಲಿ ದಿವಾನ್ ಸಾಹೇಬರು ಸ್ವತಃ ಪ್ರಜೆಗಳ ಅಹವಾಲುಗಳನ್ನು ಕೇಳುವದು ಅತ್ಯುತ್ತಮವೆಂದು ಒಪ್ಪಬೇಕಾಗಿದೆ ಅಲ್ಲಲ್ಲಿ ಶುರುವಾಗಿದ್ದ ಕಾಲರ ಉಪದ್ರವು ಈಗ ನಿಂತಿತೆಂದು ಕಾಣುತ್ತದೆ ಆದರೆ ಊರಿನ ಗಲೀಜು ಬಾಕಾಗುವಂತೆ ಪರ್ಗಡಿಸುವದುತ್ತಮ ಈ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಕಳುವು ನಡೆಯುವದಕ್ಕೆ ಶುರುವು ಆಗಿದೆ ಪೋಲೀಸಿನವರು ಅಜಾಗ್ರತೆಯನ್ನು ಬಿಟ್ಟು ಹುಷಾರಾಗಿರುವುದುತ್ತಮ ಈ ತಾಲ್ಲೂಕಿನ ಸುತ್ತುಮುತ್ತಲು ಇರುವ ರಸ್ತೆಗಳನ್ನು ಬಂದೋಬಸ್ತಾಗಿಡುವದರಲ್ಲಿಯೂ ದುರಸ್ತು ಮಾಡಿಸುವದರಲ್ಲಿಯೂ ಇಲ್ಲಿನ ಡಿ. ಪಿ. ಡಬ್ಲ್ಯು ಆಫೀಸರ್ ಮೆ॥ ರಾಮಸ್ವಾಮಿ ಅಯ್ಯರವರು ಬಹು ಮೆಹನತ್ತು ಮಾಡುತ್ತಿದ್ದಾರೆ. ಈ ಸಾರಿ ಮಳೆಗಾಲದಲ್ಲಿ ಇವರು ಸಂಚರಿಸಿ ಕಂಟ್ರಾಕ್ಟ್‌ದಾರರು ಮೋಸಮಾಡದಂತೆ ರೋಡುಗಳನ್ನು ರಲ್ಲ ಮತ್ತು ಗ್ರಾವಲ್ ಬಿಚಾವಣೆಗಳನ್ನು ಅಜಮಾಯಿಷಿ ಮಾಡುತ್ತಾ ವಂಚನೆ ಇಲ್ಲದೆ ಕೆಲಸಮಾಡುತ್ತಾರೆ ಇತರರೂ ಇವರಹಾಗೆ ಸರ್ಕಾರಿ ಕೆಲಸಗಳನ್ನು ಮಾಡಿಸಿದರೆ ಎಷ್ಟೋ ಒಳ್ಳೇದು

ತುಮಕೂರು ಡಿ ! ಕೊರಟಗೆರೆ.—ಮಳೆಯಿಲ್ಲ ಬೆಳೆಗಳು ಸುತರಾಂ ಆಗುವುದೇ ಇಲ್ಲವೆಂದು ಜನರು ಗೋಳಾಡುತ್ತಿದ್ದಾರೆ ಧಾರಣೆಗಳು ವಿಷಮವಾದಂತೆ ದಿನ ದಿನಕ್ಕೂ ಏರುತ್ತಿದೆ. ಉತ್ತರೆ ಮಳೆಯು ಪೂರಾ ಬರದೇ ಹೋದರೆ ಕುಡಿಯುವುದಕ್ಕೆ ನೀರು ಸಹಾ ದೊರೆಯುವಂತಿಲ್ಲ ದನಕರುಗಳ ಗೋಳಂತೂ ಬರೆಯಲಾಗದು ಅನೇಕರು ಅನ್ನ ಸಾಮಗ್ರಿಗಳಿಲ್ಲದೆ ಕಂಗಾಲಿಗಳಾಗಿದ್ದಾರೆ ಷಾಮಿಯಾನ ಈ ಪ್ರಾಂತ್ಯ ಸಂಚಾರ ಹೊರಟ ಪ್ರಥಮೋದ್ಯಮವೇ ಹೀಗಿರುವಲ್ಲಿ ಮುಂದೆ ಹೇಗೆಂಬುದು ವಾಚಕರೇ ಊಹಿಸಿಕೊಳ್ಳಬೇಕು ? ಇನ್ನೂ ಸರ್ಕಾರದವರು ಯೋಚನೆ ಮಾಡದಿರುವುದು ತುಂಬಾ ಆಶ್ಚರ್ಯ. ಇಲ್ಲಿಗೆ ಸಮೀಪವಾಗಿರುವ ತುಂಬಾಡಿ ಬಳಿ ಕೆರೆಯೊಂದನ್ನು ಮಾಡಿಸಿಕೊಟ್ಟು ಆ ಪ್ರಾಂತ್ಯಕ್ಕೆ ಜಲವಸತಿಯುಂಟುಮಾಡಬೇಕೆಂದು ಯೋಚಿಸಿರುವ ನಮ್ಮ ಸರ್ಕಾರದವರಿಗೆ ಈ ಸಮಯವಲ್ಲದೆ ಕಾಂಗಾರಿಯನ್ನು ಶುರು ಮಾಡಲು ಮತ್ತಾವ ಸಮಯವಾದೀತು ? ಶೀಘ್ರವಾಗಿ ಇದರ ಕಾಮಗಾರಿಯನ್ನು ಶುರುಮಾಡಿದರೆ ಅನೇಕ ಕಂಗಾಲಿಗಳಿಗೆ ಜೀವನಕ್ಕೆ ಅನುಕೂಲವಾಗುತೆ. ಇಲ್ಲಿಗೆ ಹಾಲಿ ದಯಮಾಡಿಸಿರುವ ಅಮಲ್ದಾರ್ ಮ. ರಾ. ನರಸಿಂಹಾಚಾರ್ಯರವರು ಸ್ಯಾನಿಟೇಷನ್ ವಿಷಯದಲ್ಲಿಯೂ ಪೋಲೀಸ್ ದುರಸ್ತಿ ವಿಷಯದಲ್ಲಿಯೂ ಸಾಯರು ಬಾಬಿನಲ್ಲಿಯೂ ವಿಶೇಷವಾಗಿಯೂ ಇತರ ವಿಷಯಗಳಲ್ಲಿ ತಕ್ಕ ಮಟ್ಟಿಗೂ ನಿಗಾ ಕೊಡುತ್ತಾ ಪ್ರಜಾವತ್ಸಲರಾಗಿರುವರು ! ಆದರೂ ಈ ಊರಿನಲ್ಲಿ ಅಲ್ಲಲ್ಲಿ ಸಣ್ಣ ಗಣ್ಣ ಕಳ್ಳತನಗಳು ನಡೆಯುತ್ತಿರುವುದು ನೋಡಿದರೆ ಆಶ್ಚರ್ಯವಾಗಿದೆ ದೈವಭಕ್ತಿ ಇವರಲ್ಲಿಯೇ ಮೂರ್ತೀಭವಿಸಿರುವದೆಂಬುದು ಸೋಮಪುರದ ಗೋಪಾಲಕೃಷ್ಣಸ್ವಾಮಿ ಸಂಪ್ರೋಕ್ಷಣಾದಿಗಳ ವಿವರಣೆಯಿಂದಲೇ ಗೊತ್ತಾಗುತ್ತೆ ಈ ಊರು ಆಂಗ್ಲೋವರ್ನ್ಯಾಕ್ಯುಲರ್ ಸ್ಕೂಲ್ ಅಭಿವೃದ್ಧಿಸ್ಥಿತಿಯಲ್ಲೇ ಇರುತ್ತೆ. ಇದಕ್ಕೆ ಇಲ್ಲಿನ ಮಾಸ್ತರುಗಳೆಲ್ಲರೂ ಐಕಮತ್ಯದಾಗಿರುವುದೇ ಕಾರಣವಾಗಿದೆ ಮ॥ ರಾ॥ ಹೆಡ್ಮಾಸ್ಟರ್ ಬಿ. ಸುಬ್ಬಯ್ಯನವರು ದಯಮಾಡಿಸಿ ಸುಮಾರು ಹತ್ತು ವರ್ಷಗಳಾಗುತ್ತಾ ಬಂತು ತದಾರಭ್ಯ ಮಕ್ಕಳ ವಿದ್ಯಾಭಿವೃದ್ಧಿಯನ್ನು ಮಾಡಿಸುತ್ತಿರುವ ಇವರು ಇಷ್ಟರಲ್ಲಿಯೇ ರಿಟೈರಾಗುವರೆಂದು ವರ್ತಮಾನ ಕೇಳಿ ಅನೇಕರು ವಿಷಾದಪಡುತ್ತಿದ್ದರೂ ಇಲ್ಲಿಯೇ ಸ್ಥಳ ಮಾಡಿಕೊಂಡು ಮನೆಯನ್ನು ಕಟ್ಟಿಸುತ್ತಿರುವದನ್ನು ನೋಡಿ ಕೇಳಿ ಇಂಥಾ ಸತ್ಸಂಗತ್ಯಲಭ್ಯರಾಗುವೆವಲ್ಲಾ ಎಂಬ ಸಂತೋಷದಿಂದಿರುವರು. ಇಲ್ಲಿ ಒಂದು ಅಗ್ರಿಕಲ್ಚರಲ್ ಫಾರಂ ಸ್ಕೂಲಿನ ಹಿಂದೆಯೇ ಏರ್ಪಡಿಸಿರುವುದು. ಆದರೆ ಇನ್ನೂ ಅಭಿವೃದ್ಧಿಸ್ಥಿತಿಗೆ ಬಂದಿಲ್ಲ. ನಮ್ಮ ಹೆಡ್‌ಮಾಸ್ತರವರ ಆದರದಿಂದ ಅಭಿವೃದ್ಧಿಗೆ ಬರಬಹುದೆಂದು ನಿಶ್ಚಯಿಸಿದಾರೆ. ಜನಾನುರಾಗಿಗಳಾದ ಇಲ್ಲಿನ ಹಾಸ್ಪಿಟಲ್ ಅಸಿಸ್ಟೆಂಟರು ಕೇವಲ ರಸಿಕರು, ದಯಾಳುಗಳು. ರೋಗಿಗಳ ಮೇಲೆ ಮತ್ತಷ್ಟು ನಿಗಾ ಕೊಡಬಲ್ಲರೆಂದು ನಂಬುತ್ತೇವೆ. ಮ್ಯುನಿಸಿಪಾಲಿಟಿಯಲ್ಲಿ ದೀಪಗಳು ಸದಾ ಆಹಾರವಿಲ್ಲದೆ ನರಳುತ್ತಿರುವವು. ಎಲ್ಲೆಲ್ಲಿಯೂ ಕಕ್ಕಸುಗಳು ತುಂಬುತ್ತಿರುವುವು. ಅನೇಕರು ಮತ್ತೆಲ್ಲಿ ಪ್ಲೇಗು ಮಾರಿಯು ಜನಾ ಬಂಡಿಗೆ ಬರುವಳೋ ಎಂದು ಭಯಪಡುತ್ತಿರುವರು. ಇಷ್ಟರಲ್ಲೇ ನಮ್ಮ ಡೆ॥ ಕ॥ ಸಾ॥ ರು ಇಲ್ಲಿಗೆ ದಯಮಾಡಿಸುವರೆಂತಲೂ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಒಂದು ಡಿಸ್ಟ್ರಿಬ್ಯೂಷನ್ ನಡೆಯುವುದೆಂತಲೂ ವರ್ತಮಾನವಿದೆ ವರ್ಗಪಟ್ಟು ಹೊರಟುಹೋದ ಇಲ್ಲಿನ ಸಬ್‌ಡಿವಿಜನ್ ಛಾರ್ಜಿನಲ್ಲಿದ್ದ ಮ॥ ರಾ॥ ಸಿ. ಶೇಷಾದ್ರಿಅಯ್ಯಂಗಾರ್ಯರವರು ಮಹೋಪಕಾರವನ್ನು ಸರ್ವಪ್ರಜೆಗಳೂ ನಿತ್ಯಸ್ಮರಣೆಯನ್ನು ಮಾಡುತ್ತಿರುವರು.

ಸಂತೆಬೆನ್ನೂರು, ಚೆನ್ನಗಿರಿ ತಾ.—ಹವ—ಇಲ್ಲಿ ಮಳೆಯಿಲ್ಲದೆ ಹದಿನೈದು ದಿನಗಳಾಗುತ್ತಾ ಬಂತು ಬಿಸಿಲು ಜೋರಾಗುತ್ತಾಯಿದೆ ಇನ್ನೊಂದು ಹದ ಮಳೆ ಬಂದರೆ ಹತ್ತಾರು ಭಾಗ ಪೈರಾಗಲು ಅಭ್ಯಂತರವೇನು ಇಲ್ಲ. ಈ ವರ್ಷ ಪ್ಲೇಗುಬಾಧೆಯು ಇಲ್ಲದಿರುವುದರಿಂದ ವಾರ್ಷಿಕ ಹಬ್ಬಗಳು ವಿಜೃಂಭಣೆಯಿಂದ ಜರಗಿದವು ಕಾಮಗಾರಿ—ಇಲ್ಲಿಗೆ ಕಳೆದ ತಿಂಗಳ ಅಂತ್ಯಭಾಗದಲ್ಲಿ ನಮ್ಮ ಡಿಸ್ಟ್ರಿಕ್ಟ್ ಡೆಪ್ಟಿ ಕಮೀಷನರ್ ಸಾಹೇಬರವರು ಹಜರ್ ಮಾಡಿಸಿ ಗ್ರಾಮವನ್ನೆಲ್ಲಾ ಸುತ್ತಿ ಹಿಂದಿರುಗಿ ಸೂಳೆಕೆರೆಗೆ ಹೊರಡುವ ಮಾಡಿಸುವಾಗ್ಯೆ ಇಲ್ಲಿನ ಬಡಜನಗಳು ಕೂಲಿ ಇಲ್ಲದೆ ಜೀವನ ಮಾಡುವದು ಕಷ್ಟವಾಗಿದೆ ಎಂದು ಹೇಳಿಕೊಂಡದ್ದರಮೇಲೆ ರೈಲ್ವೆ ಸ್ಟೇಷನ್‌ಗೆ ಹೋಗುವ ರೋಡಿನಿಂದ ಪೇಟೆಯ ಒಳಗೆ ಹಾಯ್ದು ಶ್ರೀ ದೇವರ ದೇವಸ್ಥಾನಕ್ಕೆ ಒಂದು ರಸ್ತೆಯನ್ನು ಮಾಡಿಸುವುದಕ್ಕೆ ರೂ॥ .೦೦೦ ಸರ್ಕಾರಿ ಬಂದರು ಬಾಂಡುಗಳನ್ನು ಹಾಕುವುದಕ್ಕೆ ಬಾಂಡು ಒಂದಕ್ಕೆ ಎರಡಾಣೆಯಂತೆ ರೂ॥ ೧೦೦ ನ್ನು ಮುಂಜೂರು ಮಾಡುತ್ತೇನೆಂದು ಅಪ್ಪಣೆಕೊಡಿಸಿ ಮುಂದಕ್ಕೆ ತೆರಳಿದರು. ಆ ಕಾಲದಲ್ಲಿ ನಮ್ಮ ತಾಲ್ಲೂಕು ಆಫೀಸರವರು ಹಾಜರಿದ್ದರು ಸಾಹೇಬರವರು ಹೊರಟುಹೋದ ೨—೩ ದಿನಗಳಾದಮೇಲೆ ಇಲ್ಲಿಗೆ ಡಿವಿಜನ್ ಆಫೀಸರವರಾದ ೧ನೇ ಅ॥ ಕಮೀಷನರ್ ಸಾಹೇಬರವರ ಸವಾರಿಯು ಮತ್ತು ಈ ತಾಲ್ಲೂಕು ಅಮಲ್ದಾರರವರು ಸಹಾ ದಯಮಾಡಿಸಿದರು ಆಗ್ಯೆ ಕೆಲವು ರೈತರುಗಳು ತಮ್ಮ ಜಮೀನುಗಳಲ್ಲಿ ಕಾಮಗಾರಿಗಳನ್ನು ಮಾಡಿಸುವದಕ್ಕೆ ಸರ್ಕಾರದಿಂದ ತಕಾವಿ ಹಣಗಳನ್ನು ಕೊಡಿಸಿಕೊಡಬೇಕಾಗಿ ದರಖಾಸ್ತುಗಳನ್ನು ಕೊಟ್ಟದ್ದರ ಮೇಲೆ ರೈತರುಗಳ ಆಸ್ತಿಗಳನ್ನು ಪರಾಂಬರಿಸಿ ಅವರವರ ಯೋಗ್ಯತಾನುಸಾರವಾಗಿ ಹಣಗಳನ್ನು ಕೊಡುವದಾಗಿ ಅಪ್ಪಣೆ ಕೊಡಿಸಿದರು. ಎರಡನೇ ದಿವಸ ಹಿಂದೆ ಡೆ॥ ಕಮೀಷನರ್ ಸಾಹೇಬರವರು ಹುಕುಂ ಮಾಡಿದ ರೋಡಿನ ಕೆಲಸವನ್ನು ಪ್ರಾರಂಭಿಸಿ ಆ ದಿವಸ ನಡೆದ ಕಾಂಗಾರಿಯನ್ನು ನೋಡಿ ಆ ದಿವಸದ ಕೂಲಿ ಜನಗಳಿಗೆ ಮೊಬಲಗು ಖುದ್ದು ಪಾವತಿ ಮಾಡಿ ಅಮಲ್ದಾರರವರಿಗೂ ಮ॥ ಲೋಕಲ್ ಫಂಡು ಬೋರ್ಡ್ ಮೆಂಬರು ನಾಡಿಗ ಭೀಮರಾಯರವರಿಗೂ ಈ ಕೆಲಸವನ್ನು ಪೂರೈಸಿ, ರಿಪೋರ್ಟ್ ಮಾಡಬೇಕಾಗಿ ತಿಳಿಸಿ ಮಾರನೇ ದಿವಸ ಚನ್ನಗಿರಿಗೆ ಹೊರಟುಹೋದರು ಈ ಕೆಲಸ ಅರ್ಧದ ವರಿಗೂ ನಡದು ನಿಂತಿರುವ ಕಾರಣವೇನು ಗೊತ್ತಿಲ್ಲ. ಪೋಲೀಸು—ಇಲ್ಲಿನ ಪೋಲೀಸು ಆಫೀಸು ಕಟ್ಟಡ ಬಹು ದಿನಗಳಿಂದಲೂ ರಿಪೇರಿ ಇಲ್ಲದೆ ಬಹಳ ಗಲಿಬಿಲಿ ಸ್ಥಿತಿಯಲ್ಲಿದೆ. ಅಲ್ಲಿರತಕ್ಕ ಪೋಲೀಸು ಸಿಬ್ಬಂದಿಗಳು ರಾತ್ರಿ ಕಾಲದಲ್ಲಿ ಯಾವಾಗ ಅಪಾಯ ಸಂಭವಿಸೀತೋ ಎಂಬ ಭಯದಿಂದ ಅಲ್ಲೇ ಪಕ್ಕದಲ್ಲಿ ದೇವಸ್ಥಾನ ಮೊದಲಾದ ಕಟ್ಟಡಗಳಲ್ಲಿ ಮಲಗುತ್ತಾರೆ ತಿಂಗಳಿಗೆ ಮೂರು ನಾಲ್ಕು ಸಾರಿ ಜಮಾದಾರರು, ಇನ್ಸ್‌ಪೆಕ್ಟರೂ ಬರುತ್ತಾ ಇರುತ್ತಾರೆ. ಅವರಾದರೂ ನೋಡಲಿಕ್ಕಿಲ್ಲವೇ! ನಮ್ಮ ಅಮಲ್ದಾರರವರು ಸಹ ಇಲ್ಲಿಗೆ ಬಂದಾಗಲೆಲ್ಲಾ ಈ ಮುರುಕು ಜೋಪಡಿಯಲ್ಲಿಯೇ ಆಫೀಸು ಮಾಡುವರು. ಇದರ ರಿಪೇರಿ ವಿಷಯದಲ್ಲಿ ಇವರಿಗಾದರೂ ಕರುಣೆ ಹುಟ್ಟಬಾರದೇ ? ಮಳೆ ಬರುವ ಕಾಲದಲ್ಲಿ ಅಲ್ಲಿನ ನವಕರುಗಳ ಪುಸ್ತಕಗಳು ಮತ್ತು ರಿಕಾರ್ಡುಗಳು ಸಹಾ ನೆನದು ಹಾಳಾದವೆಂಬ ಗೋಳಾಟವನ್ನು ದೇವರೇ ಬಲ್ಲ. ಆಸ್ಪತ್ರೆ—ಸರ್ಕಾರಿ ವೈದ್ಯಶಾಲೆಯು ಈ ಗ್ರಾಮಕ್ಕೆ ಮುಖ್ಯವಾಗಿ ಇಡಿಸಬೇಕೆಂದು ರಿಕಾರ್ಡ್ ನಡದು ಗವರ್ನಮೆಂಟಿಗೆ ಮಂಜೂರು ಬಗ್ಗೆ ಹೋಗಿದೆ. ಮೇಲಿನಿಂದ ಆರ್ಡರು ಬರುವ ವರಿಯಿಗರ ಪ್ರತಿ ಗುರುವಾರವೂ ಚನ್ನಗಿರಿ ಡಾಕ್ಟರವರು ಹೋಗಿ ಕಾಹಿಲೆ ಜನಗಳಿಗೆ ಔಷಧೋಪಚಾರಗಳನ್ನು ಮಾಡಬೇಕಾಗಿ ಸರ್ಕಾರದ ಅಪ್ಪಣೆಯನ್ನನುಸರಿಸಿ ಪ್ರತಿ ವಾರವೂ ೧೨ ಘಂಟೆಗೆ ಬಂದು ೪ ಗಂಟೆಗೆ ಹೊರಟುಹೋಗುತ್ತಾರೆ. ಇಲ್ಲಿ ನಿಲ್ಲುವ ಕಾಲದ ಬಂದು ವಿಶ್ರಮಿಸಿಕೊಳ್ಳುವುದರಲ್ಲಿಯೇ ಕಳೆದುಹೋಗುತ್ತೆ. ಯಾವಾಗ ಜನಗಳ ಆರೋಗ್ಯವನ್ನು ವಿಚಾರಿಸಿಕೊಳ್ಳಬೇಕು ? ಡಾಕ್ಟರವರು ಬಂದಿದ್ದರೆ ? ಯಾವಾಗ ಬಂದರು ? ಎಲ್ಲಿ ಇಳಿದುಕೊಂಡಿದ್ದರು ? ಎಂದು ಪ್ರಜೆಗಳು ಆಡಿಕೊಳ್ಳುವ ಮಾತುಗಳು ಕೇಳುತ್ತೇವೆ. ಡಾಕ್ಟರವರು ಸಾಯಂಕಾಲದ ವರಿಗೆ ಇದ್ದು ಮಾರನೆ ದಿನ ಹೊರಟುಹೋಗುವಂತೆ ಮಾಡಿ ಜನಗಳ ಸಂಕಟವನ್ನು ಪರಿಹರಿಸಬೇಕಾಗಿ ಬೇಡಿಕೊಳ್ಳುತ್ತೇನೆ. ಗರಲ್ಸ್ಕೂಲ್—ನಮ್ಮ ಡಿಸ್ಟ್ರಿಕ್ಟಿನ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರವರ ಸವಾರಿಯು ಚಿತ್ತೈಯಿಸಿ ಹೊರಟುಹೋದಂದಿನೀಚೆನಿಂದ ದಿನದಿನಕ್ಕೆ ಅಭಿವೃದ್ಧಿಯನ್ನೈದುತ್ತಿರುವದನ್ನ ನೋಡಿ ಇಲ್ಲಿನ ಜನಗಳು ಹರ್ಷೋನ್ಮುಖಿಗಳಾಗಿರುತ್ತಾರೆ. ಬಾಯಿಸ್‌ಸ್ಕೂಲ್—ಈ ಶಾಲೆಗೆ ಹೊಸದಾಗಿ ವರ್ಗವಾಗಿ ಬಂದಿರುವ ಹೆಡ್ಮಾಸ್ಟರವರು ಆಯನೂರು, ಮತ್ತು ಹಾರ್ನಹಳ್ಳಿ ಮೊದಲಾದ ತಾಲ್ಲೂಕು ಬ್ರಾಂಚ್ ಸ್ಕೂಲುಗಳಲ್ಲಿ ಮೊದಲಿನಿಂದ ಕೆಲಸಮಾಡಿ ಹೆಸರುವಾಸಿಪಡೆದವರು, ಬಹು ಸಾಧುಸ್ವಭಾವರು, ಮೃದುಮನುಷ್ಯರು, ವಿದ್ಯಾವಂತರು, ನಿಷ್ಪಕ್ಷಪಾತಿಗಳು, ಔದಾರಿಗಳು, ಇವರು ಬಂದನಂತರ ನಮ್ಮ ಸ್ಕೂಲ್ ಅಭಿವೃದ್ಧಿಯನ್ನೈದೀತೆಂದು ಗ್ರಾಮಸ್ಥರೆಲ್ಲರೂ ನಂಬಿಕೊಂಡಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ.

...ಸರ್ವೆ ಮೆ॥ ಎಸ್. ರಂಗಾಚಾರ್ ೧೯೦೫ನೇ ಜೂ...ಯು ೨೪ರ ಲಾಗಾಯತು ೩ನೇ ತರಗತಿಯಿಂದ ೧ನೇ ...ಸರ್. ಆ ಸರ್ವೆ ದಾಗಿ ನೇಮಿಸಲ್ಪಟ್ಟಿರುತ್ತಾರೆ.

...ಪ್ರೊಬೇಷನ್ ಅಮಲ್ದಾರ್ ಮೆ॥ ಎಂ. ಎಸ್ ರಾಮಚಂದ್ರ ...ಬಿ. ಎ. ಬಿ ಎಲ್ ರವರು ೪ನೇ ತರಗತಿ ಖಾಯಂ ಅಮಲ್ದಾ...ಗಿ ನಿಯಮಿತರಾಗಿರುತ್ತಾರೆ

...ಅಮಲ್ದಾರ್ ಮತ್ತು ೩ನೇ ತರಗತಿ ಮೇಜಿಸ್ಟ್ರೇಟ್ ಮೆ॥ ಎಂ ...ರಾಮಚಂದ್ರರಾಯರು ಕಡೂರು ತಾಲ್ಲೂಕಿಗೂ ಕಡೂರಿನ ...ದಾರ್ ಮೆ॥ ಇ. ಸಿ. ಸ್ಟಾಂಡವಂಪಿಳ್ಳೆಯವರು ಬಗಳೂರಿಗೂ ...ರಿನ ಅಮಲ್ದಾರ್ ಮೆ॥ ಬಿ ಕೃಷ್ಣಸಿಂಗರು ಡಾ॥ ...ಬಾಬರ್ ವಹಿಸಿ ಅರಕಲಗೂಡಿಗೂ ಹೋಗತಕ್ಕದ್ದು.

ಅರಕಲಗೂಡಿನ ನಂ॥ ಪ್ರೊಬೇಷನ್ ಅಮಲ್ದಾರ್ ಮೆ॥ ಎಸ್. ರಾಮ...ಸ್ವಾಮಯ್ಯಂಗಾರ್ರು ತಮ್ಮ ಪೂರ್ವದ ಕೆಲಸಕ್ಕೂ ಹೊನ್ನಾಳಿ ...ದಾರ್ ಮೆ॥ ಎಂ ಕೃಷ್ಣರಾಯರು ಮಾಗಡಿಗೂ ಮಾಗಡಿ ಅಮ...ದಾರ್ ಮೆ॥ ಟಿ ಸಿ. ಕೃಷ್ಣಶಾಸ್ತ್ರಿಗಳು ಹೊಸಕೋಟೆಗೂ ಅಲ್ಲಿನ ...ದಾರ್ ಮೆ॥ ಎಸ್. ಗುರುರಾಯರು ಹೊನ್ನಾಳಿಗೂ ಅಲ್ಲಿನ ...ಅಮಲ್ದಾರ್ ಮೆ ಡಿ॥ ನರಸಿಂಗರಾಯರು ತಮ್ಮ ಮೊದ...ಕೆಲಸಕ್ಕೂ ಶ್ರೀರಂಗಪಟ್ಟಣದ ಅಮಲ್ದಾರ್ ಮೆ॥ ಕೃಷ್ಣಾಜಿ ...ರಾವ್‌ರವರು ಮಾಗಡಕ್ಕೂ ಅಲ್ಲಿನ ಅಮಲ್ದಾರ್ ಮೆ॥ ...ಎಸ್ ವೆಂಕಟಾಚಾರ್ರು ಶ್ರೀರಂಗಪಟ್ಟಣಕ್ಕೂ ವರ್ಗಾಯಿಸ...ತ್ತಾರೆ.

ಮುನ್ಸೀಫರುಗಳಾದ ಮೆ॥ ಎಸ್ ಟಿ ಗೋಪಾಲೈಂಗಾರ್ರು ...ರಿಂದ ಹೊಳೇನರಸೀಪುರಕ್ಕೂ ಎಂ ಎಲ್ ಶ್ರೀಕಂಠೇ...ರು ಹೊಳೆ ನರಸೀಪುರದಿಂದ ದೊಡ್ಡಬಳ್ಳಾಪುರಕ್ಕೂ ಟಿ. ...ರಾಯರು ದೊಡ್ಡಬಳ್ಳಾಪುರದಿಂದ ಮಧ್ಗಿರಿಗೂ ಟಿ. ...ಯ್ಯಂಗಾರ್ರು ಮಧ್ಗಿರಿಯಿಂದ ತುಮಕೂರಿಗೂ ಟಿ. ಇ. ...ಅಯ್ಯರು ತುಮಕೂರಿನಿಂದ ಬೆಂಗಳೂರಿಗೂ ವರ್ಗ...ಲ್ಪಟ್ಟಿರುತ್ತಾರೆ

ವಿದೇಶ ವರ್ತಮಾನಗಳು.

...ಲಾಸುಲಿಯಮಸು ಅರ್ಗ್ಯ ಎಂಬ ಊರನ್ನು ಟಿಬೆಟ್ಟಿಗೆ ... ಮಾಡುತ್ತಿರುವದಾಗಿ ತಿಳಿದುಬಂದಿದೆ

*****

ಇಟಲಿಗೆ ಸೇರಿದ ಕಲಬ್ರಿಯವೆಂಬ ಪ್ರದೇಶದಲ್ಲಿ ಪುನಃ ಭೂಕಂಪವಾಗಿ ಮತ್ತೂ ಹೆಚ್ಚಿನ ಅನರ್ಥಗಳನ್ನುಂಟುಮಾಡಿತು

*****

ರಷ್ಯಾ ರಾಜ್ಯಕ್ಕೆ ಸೇರಿದ ಟಿಫ್ಲಿಸ್ ಎಂಬಲ್ಲಿ ದಂಗೆಕೋರರ ...ರು ತಮ್ಮ ಪ್ರಾಂತದಲ್ಲೆಲ್ಲಾ ಜನರು ಸರ್ಕಾರದ ಮೇಲೆ ತಿರುಗಬೇಕೆಂದು ಒಂದು ಪ್ರಕಟನೆಯನ್ನು ಪ್ರಚುರಪಡಿಸಿದೆ

*****

ಇಟಲಿಯಲ್ಲಿ ಮೊನ್ನೆ ನಡೆದ ಭೂಕಂಪದಿಂದ ಕಷ್ಟಪಡುತ್ತಿರುವವರನ್ನು ಧೈರ್ಯಪಡಿಸುವುದಕ್ಕಾಗಿ ಆ ದೇಶದ ಅರಸಾದ ವಿಕ್ಟರ್ ಇಮ್ಯಾನ್ಯುಯೆಲ್ ಎಂಬ ದೊರೆಗಳು ಹಳ್ಳಿ ಹಳ್ಳಿಗೂ ಹೋಗುತ್ತಲಿದಾರೆ

*****

ಅಮೆರಿಕದವರು ಸಮುದ್ರಗರ್ಭದಲ್ಲೇ ಸಂಚರಿಸತಕ್ಕ ನೌಕಾ...ಗಳನ್ನು ಕಲ್ಪನೆಮಾಡಿದ್ದಾರೆ. ಇಂಥಾದ್ದೊಂದು ನಾವೆಯನ್ನು ಪರೀಕ್ಷಿಸುವುದಕ್ಕಾಗಿ ಪ್ರಸಿಡೆಂಟ್ ರೂಸ್‌ವೆಲ್ಟ್ ಸಾಹೇಬರವರು ...ಗಿ ಆ ನಾವೆಯಲ್ಲಿ ಮೂರು ಗಂಟೆಗಳ ಕಾಲ ನೀರಿನೊಳಗಡೆ ಇದ್ದು ಎಲ್ಲವನ್ನು ನೋಡಿಬಂದರು.

*****

ಬಾಕು ಎಂಬಲ್ಲಿ ಕಳ್ಳರ ಅಪಾಯವನ್ನು ತಪ್ಪಿಸುವುದಕ್ಕೆ ಅಲ್ಲಿನ ಪೊಲೀಸಿನವರು ಕೇವಲ ಅಶಕ್ತರಾಗಿರುವ ಕಾರಣ ತೈಲದ ಕಾರ್ಖಾನೆಗಳವರು ತಮ್ಮ ಆಸ್ತಿಪಾಸ್ತಿಗಳನ್ನು ಕಾಪಾಡಿಕೊಳ್ಳುವದಕ್ಕೆ ಆ ಕಳ್ಳರಿಗೆ ವರ್ಷವರ್ಷವೂ ಅಪಾರವಾದ ದ್ರವ್ಯವನ್ನು ಕೊಡುವುದಾಗಿ ಒಪ್ಪಂದಮಾಡಿಕೊಳ್ಳಬೇಕೆಂದು ತೀರ್ಮಾನಿಸಿಕೊಂಡಿದ್ದಾರೆ.

*****

ರಷ್ಯ ದೇಶಕ್ಕೆ ಸೇರಿದ ಬಾಕು ಎಂಬಲ್ಲಿ ಸರ್ಕಾರದವರು ಅರ್ಮೇನ್ಯರನ್ನು ಕೊಲ್ಲುವಂತೆ ಟಾರ್ಟರ್ ಜನರನ್ನು ರೇಗಿಸಿದುದರಿಂದ ಅವರು ಕ್ರೈಸ್ತಮತಸ್ಥರೆಲ್ಲರನ್ನೂ ಕೊಲ್ಲಲುಪಕ್ರಮಿಸಿದರು. ಬ್ರಿಟಿಷ್ ಪ್ರಜೆಗಳಾದ ನಾಲ್ವರನ್ನು ಬಾಲಖನಿಯೆಂಬಲ್ಲಿ ...ಗೆ ಹಾಕಿರಲು ಅವರನ್ನು ಬಿಡಿಸುವದಕ್ಕೆ ಬಾಕು ಪ್ರಾಂತ್ಯದ ...ರಿಗೇ ಕೈಲಾಗದಂತಿದೆ.

*****

ಜಪಾನಿಗೆ ಸೇರಿದ ಹಕ್ಕಾಯಿಡೊ ಎಂಬ ಸೀಮೆಯ ಉತ್ಪನ್ನಗಳು ವಿದೇಶಗಳಲ್ಲಿಯೂ ವಿಕ್ರಯಿಸಬೇಕೆಂಬ ಅಭಿಪ್ರಾಯದಿಂದ ...ಪ್ರಾಂತದ ಗವರ್ನರಾದ ಮೆ॥ ಸೊನೊಡಾ ಎಂಬವರು ಕಳೆದ ...ಯುದ್ಧದಲ್ಲಿ ಸಿಕ್ಕಿರುವ ನಾವೆಗಳಲ್ಲಿ ಮಾದ್ರಿಗಾಗಿ ಆ ಉತ್ಪನ್ನಗಳನ್ನು ತುಂಬಿ ಏಷ್ಯಾ ಯುರೋಪ್ ಅಮೆರಿಕ ದೇಶಗಳ ತೀರಪಟ್ಟಣಗಳಿಗೆ ಕಳುಹಿಸಿ ಪ್ರದರ್ಶನಪಡಿಸಿದರೆ ಒಳ್ಳೆಯದೆಂಬ ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸಿದ್ದಾರೆ.

ದಕ್ಷಿಣ ಆಫ್ರಿಕದಲ್ಲಿ, ಬಸೂಟೊ ಎಂಬ ಕಪ್ಪುಜನಗಳ ಒಬ್ಬ ದೊರೆಯು ಸತ್ತುಹೋದನು. ಇವನ ಪದವಿಗೆ ಬರಬೇಕಾದ ಹಿರಿಯಮಗನು ಬಹು ಕ್ರೂರಿಯಾಗಿ ಜನರಂಜನೆಯನ್ನು ಕಳೆದುಕೊಂಡುದರಿಂದ ಆ ದೊರೆಯ ಇತರ ಮಕ್ಕಳು ಪ್ರಭುತ್ವಕ್ಕೆ ಹೊಡೆದಾಡುವವರಾಗಿದ್ದಾರೆ. ಈ ಕಾರ್ಯದಿಂದ ಆ ಪ್ರಾಂತ್ಯದಲ್ಲಿ ಜನವಿಭಾಗಗಳು ಹೆಚ್ಚಿರುವ ಕಾರಣ ಸಾವಿರಾರು ಜನಗಳು ಮಡಿದು ಹೋಗುವ ಸಂದರ್ಭವೇ ಒದಗಿದಂತಿರುವದು.

*****

ದಕ್ಷಿಣ ಆಫ್ರಿಕದವರು ತಮ್ಮ ದೇಶದಲ್ಲಿ ಉತ್ಕೃಷ್ಟವಾದ ಉಣ್ಣೆಯನ್ನು ಉತ್ಪತ್ತಿ ಮಾಡಿಕೊಳ್ಳುವುದಕ್ಕಾಗಿ ಆಸ್ಟ್ರೇಲಿಯಾದ ಸಿಡ್ನಿಯಿಂದ ಒಂದು ಟಗರನ್ನು ಕೊಂಡುಕೊಂಡು ಹೋದರು. ಇದರ ಕ್ರಯ ೫೪೦ ಗಿನಿಗಳು ಅಂದರೆ ೮,೬೪೦ ರೂಪಾಯಿಗಳು ಇನ್ನೊಂದು ಟಗರಿಗೆ ೩೦೦ ಗಿನಿಗಳು ಅಂದರೆ ೪,೮೦೦ ರೂಪಾಯಿಗಳು ಇದರಿಂದ ಮುಂದೆ ದಕ್ಷಿಣ ಆಫ್ರಿಕದ ಉಣ್ಣೆಯ ವ್ಯಾಪಾರವು ಅತಿಶಯವಾಗುತ್ತದೆಂದು ಊಹಿಸಬಹುದು.

*****

ಬೆರ್ಲಿನ್ ಪಟ್ಟಣದವನಾದ ಒಬ್ಬ ವೈದ್ಯನು ವಿಕಾರವಾದ ಮೂಗುಗಳನ್ನು ಸರಿಮಾಡುವವನೆಂದು ಹೆಸರುಗೊಂಡಿದ್ದಾನೆ. ಇವನ ಚಿಕಿತ್ಸಾರೀತಿಯು ಅಂತರ್ಯಾಮವಾದುದರಿಂದ ಮೇಲುಗಡೆಯಲ್ಲಿ ಚಿಕಿತ್ಸೆಯ ಗುರುತು ತೋರುವದೇ ಇಲ್ಲ. ವಿಕಾರವಾದ ಮೂಗುಗಳ ದೆಸೆಯಿಂದ ಆಫೀಸುಗಳಲ್ಲಿ ಉದ್ಯೋಗಗಳನ್ನು ಪಡೆಯಲಾರದೆ ಹೋದ ಕೆಲವು ಹೆಣ್ಣುಮಕ್ಕಳು ಈ ವೈದ್ಯನಲ್ಲಿ ಚಿಕಿತ್ಸೆಯನ್ನು ಮಾಡಿಸಿಕೊಂಡು ಸುಂದರರೂಪಿಗಳಾಗಿ ಉದ್ಯೋಗಗಳನ್ನು ಸಂಪಾದಿಸಿಕೊಂಡರೆಂದು ತಿಳಿದುಬರುತ್ತದೆ.

*****

ಕೆಲವು ವಾರಗಳ ಹಿಂದೆ ಉಂಟಾದ ಸೂರ್ಯಗ್ರಹಣಕಾಲದಲ್ಲಿ ಸ್ಪೇನ್ ದೇಶದ ಬರ್ಗೋಸೆಂಬ ಊರಿನ ಬೀದಿಗಳಲ್ಲಿ ಕತ್ತಲಾಯಿತು ಅಕಸ್ಮಾತ್ತಾಗಿ ಉಂಟಾದ ಕತ್ತಲೆಗೆ ಪಕ್ಷಿಗಳು ಕೆದರಿ ಒಡದುವು ಉತ್ತರ ಆಫ್ರಿಕದ ಟೇರೊಂದೂರಿನಲ್ಲಿ ದೇಶೀಯರು ಯುರೋಪಿಯನರಿರುವ ಭಾಗದಿಂದ ಅರಬಿಯವರು ವಾಸವಾಗಿರುವ ಭಾಗಕ್ಕೆ ಓಡಿಹೋದರು ಅವರ ಹೆಂಗಸರು ಸೂರ್ಯನ ವಿಪತ್ತಿಗೆ ಯಾವದೋ ಒಂದು ಭೂತವು ಕಾರಣವಾಗಿದೆಯೆಂದು ಹೇಳಿ ಅದನ್ನೋಡಿಸುವದಕ್ಕೆ ಪಾತ್ರೆಪದಾರ್ಥಗಳನ್ನು ಕುಟ್ಟುತ್ತ ಶಬ್ದಮಾಡಿದರಂತೆ!

*****

ಜಪಾನಿನವರ ನೌಕಾ ಸೇನೆಗೆ ಸೇರಿದ ಮಿಕಾಸವೆಂಬ ನಾವೆಯು ಬೆಂಕಿಯಾಗಿ ಸುಟ್ಟು ಮುಳುಗಿಹೋಯಿತು. ಅದಕೆ ಸಹಾಯಾರ್ಥವಾಗಿ ಇತರ ನಾವೆಗಳಿಂದ ಬಂದ ನಾವಿಕರ ಸಮೇತ ಒಟ್ಟು ೫೯೯ ಮಂದಿ ಸಮುದ್ರಪಾಲಾದರೆಂದು ತಿಳಿದು ಬಂದಿರುತ್ತದೆ. ಜಪಾನಿನ ನೌಕಾ ಸೇನೆಯ ದಳವಾಯಿಯವರಾದ ಟೋಗೋಯವರು ಬೇರೆ ಎಲ್ಲಿಗೋ ಹೋಗಿದ್ದರು. ಇವರು ತಪ್ಪಿಸಿಕೊಂಡುದರಿಂದ ಸರ್ವರೂ ಸಂತೋಷಪಡುತ್ತಾರೆ. ಇಂಗ್ಲಾಂಡಿನ ರಾಜರೂ ವರ್ತಮಾನ ಪತ್ರಿಕಾಕರ್ತರೂ ತಮ್ಮ ಸಂತಾಪವನ್ನು ತಂತೀ ಮೂಲಕ ತಿಳಿಸಿದ್ದಾರೆ ನಾವೆಯನ್ನು ಪುನಃ ಮೇಲಕ್ಕೆತ್ತಿ ದುರಸ್ತು ಮಾಡಬಹುದೆಂದು ತಿಳಿಯ ಬರುತ್ತದೆ

*****

ವ್ಯವಸಾಯಸಂಬಂಧವಾದ ಸರ್ಕಾರೀ ಡಿಪಾರ್ಟ್‌ಮೆಂಟಿನವರು ಬೆಳೆಗಳನ್ನು ಕ್ರಿಮಿಗಳ ಉಪದ್ರದಿಂದ ತಪ್ಪಿಸುವದಕ್ಕಾಗಿ ಸಾಲಿಯಾನಾ ವ್ಯಯಮಾಡುತಲಿರುವ ದ್ರವ್ಯವು ಅಪಾರವಾಗಿರುವುದು ಚಿಂಚ್ ಬಗ್ಗೆಂಬುದೊಂದು ಕ್ರಿಮಿಯನ್ನು ನಾಶಮಾಡುವುದಕ್ಕಾಗಿ ೧೫ ಕೋಟಿ ೨೦ ಲಕ್ಷ ರೂಪಾಯಿಗಳನ್ನೂ ಮಿಡತೆಗಳಿಗಾಗಿ ೧೫ ಕೋಟಿಯನ್ನೂ ಹೆಸ್ಸಿಯನ್ ಫ್ಲೈ ಎಂಬ ನೊಣವನ್ನು ಕೊಲ್ಲುವದಕ್ಕೆ ೧೦ ಕೋಟಿಯನ್ನೂ ಇನ್ನೊಂದು ಬಗೆಯ ಹುಳುವನ್ನು ಕೊಲ್ಲುವುದಕ್ಕೆ ೪ ಕೋಟಿ ೬೦ ಲಕ್ಷ ರೂಪಾಯಿಗಳನ್ನೂ ವ್ಯಯಮಾಡುವರು ಇದಲ್ಲದೆ ಹೆಚ್ಚು ಭಾಗವು ಆಫ್ರಿಕ ಖಂಡದಲ್ಲೇ ವ್ಯಯವಾಗುವದೆಂದು ತೋರುತ್ತಿದೆ.

*****

ರಷ್ಯ ರಾಜ್ಯದವರಿಗೆ ಕ್ಷಿಪ್ರದಲ್ಲೇ ದಿವಾಳಿಯಾಗುವ ಸ್ಥಿತಿಯೂ ಒದಗುವಂತಿದೆಯೆಂದು ರಷ್ಯ ರಾಜಧಾನಿಯಲ್ಲಿ ದೊಡ್ಡಮನುಷ್ಯನೊಬ್ಬನು ಹೇಳುತ್ತಿದ್ದಾನೆ ಆ ರಷ್ಯಕ್ಕೆ ಈಗಾಗಲೆ ಪರದೇಶೀಯ ವರ್ತಕರು ೧೨ ಕೋಟಿ ಪವನುಗಳನ್ನು ಸಾಲ ಕೊಟ್ಟಿದ್ದಾರೆ. ಪುನಃ ಅವರು ಕೇಳಿದ ಸಾಲದಲ್ಲಿ ೭ ಲಕ್ಷ ಪವನುಗಳು ಮಾತ್ರ ದೊರಕಿದವು ಇದರ ದೆಸೆಯಿಂದ ರಷ್ಯ ರಾಜ್ಯದಲ್ಲಿ ಸಾಹುಕಾರರ ನಂಬಿಕೆಯು ಅಡಮೆಯಾಗಿರುವಂತೆ ತೋರುತ್ತದೆ ರಷ್ಯ ಸ್ಥಿತಿಯು ಹೀಗಿರುವದರಿಂದ ಅಧಿಕಾರಿಗಳು ನೋಟುಗಳನ್ನಾದರೂ ಚಲಾವಣೆಗೆ ತರಬೇಕು, ಇಲ್ಲವೆ ರಷ್ಯ ಸಾಮ್ರಾಜ್ಯಗಳಲ್ಲಿ ಗರ್ಭೀಕರಿಸಿರುವ ಅಪಾರ ನಿಕ್ಷೇಪವನ್ನು ಬಲಾತ್ಕಾರವಾಗಿ ತೆಗೆದುಕೊಳ್ಳಬೇಕು.

*****

ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಬೋಸ್ಟನ್ ನಗರದ ವಾಸಸ್ಥರಾದ ಮೆ॥ ಗ್ಲಿಡ್ಡನ್ ಎಂಬವರು ತಮ್ಮ ಮೋಟರ್ ಗಾಡಿಯ ಮೇಲೆ ಭೂಲೋಕವನ್ನೇ ಪ್ರದಕ್ಷಿಣ ಮಾಡಿಕೊಂಡು ಬರಬೇಕೆಂಬುದಾಗಿ ಪತ್ನೀಸಮೇತ ಹೊರಡುವವರಾಗಿದ್ದಾರೆ. ಇವರು ಹಿಂದೆಯೇ ಒಂದು ಸಲ ಹೀಗೇ ಹೊರಟು ಸುಮಾರು ೨೪ ದೇಶಗಳಲ್ಲಿ ಒಟ್ಟು ೨೫,೦೦೦ ಮೈಲು ದೂರ ಸಂಚರಿಸಿ ಬಂದಿರುವರು. ಈ ಎರಡನೇ ಸಾರಿ ಅಮೇರಿಕದಿಂದ ನಮ್ಮ ಇಂಡಿಯಾಕ್ಕೆ ಬಂದು ನವಂಬರಿನಲ್ಲಿ ಪ್ರಯಾಣಾರಂಭವನ್ನು ಮಾಡಿ ಈ ದೇಶದಲ್ಲಿಯೂ ಸಿಲೋನ್ ಬರ್ಮಾ ಸಯಾಂ ಫಿಲಿಪ್ಪೈನ್ ದ್ವೀಪಗಳು ಚೀನ ಜಪಾನ್ ದೇಶಗಳಲ್ಲಿಯೂ ಸಂಚರಿಸಿ ಬರುವ ವರ್ಷ ಸ್ವದೇಶವನ್ನು ಸೇರುವವರಾಗಿದಾರೆ.

*****

ಯೇಮೆನ್ ಪ್ರಾಂತ್ಯದಲ್ಲಿ ತುರ್ಕಿ ಸಂಸ್ಥಾನದ ಮೇಲೆ ದಂಗೆ ಎದ್ದಿದ್ದ ಅರಾಬ್ಯರನ್ನು ತುರ್ಕಿಯವರು ಬೋರ್ವಾ ಎಂಬಲ್ಲಿ ಸೋಲಿಸಿದ ತರುವಾಯ ಮುಂದುವರಿದು ಹೋಗಿ ಜಾಯ್ದೀಯರ ಅನೇಕ ಗ್ರಾಮಗಳನ್ನು ನಾಶಪಡಿಸಿದರು. ಯಾಕಂದರೆ ಈ ಜಾತಿಯವರು ದಂಗೆಕೋರನಾದ ಇಮಾಮನಿಗೆ ಸಹಾಯಮಾಡಿರುವದಲ್ಲದೆ ತುರ್ಕಿಯವರಿಗೆ ಆಹಾರ ಸಾಮಗ್ರಿಗಳು ದೊರಕದಂತೆ ಅಭ್ಯಂತರ ಮಾಡಿದರಂತೆ ಈಗ ಇಮಾಮನು ಸಾನಾ ಎಂಬಲ್ಲಿಂದ ಓಡಿಹೋಗಿರುತ್ತಾನೆಂದೂ ಅಲ್ಲಿನ ಅರಾಬ್ಯರು ತುರ್ಕಿಯವರಿಗೆ ಶರಣಾಗತರಾದರೆಂದೂ ಇನ್ನೂ ಕೆಲವು ಸ್ಥಳಗಳಲ್ಲೂ ಅರಾಬ್ಯರು ಶತ್ರುಗಳಿಗೆ ತಮ್ಮನ್ನು ಒಪ್ಪಿಸಿಕೊಟ್ಟಿರುವುದರಿಂದ ದಂಗೆಯು ಕೊನೆಗಂಡಿತೆಂದೂ ತಿಳಿದು ಬರುತ್ತದೆ.

*****

ರಷ್ಯಾ ರಾಜ್ಯದವರು ತಮ್ಮ ಪ್ರಜೆಗಳ ಅತೃಪ್ತಿಯನ್ನು ಪರಿಹರಿಸುವುದಕ್ಕಾಗಿ ರಾಜ್ಯಭಾರದಲ್ಲಿ ಬದಲಾವಣೆಗಳನ್ನು ಮಾಡಿದರು ಸ್ವದೇಶೀಯರಿಗಾಗಲಿ ಇತರ ದೇಶೀಯರಿಗಾಗಲಿ ತೃಪ್ತಿಕರವಾಗಿಲ್ಲ. ಏತಕೆಂದರೆ ಅವರು ಬದಲಾವಣೆಗಳನ್ನು ಕುರಿತು ಬರೆದಿರುವ ಲೇಖನಗಳನ್ನು ಪರಾಂಬರಿಸಲಾಗಿ ಅಧಿಕಾರವೆಲ್ಲಾ ಚಕ್ರವರ್ತಿಗೆ ವಹಿಸಿರುವುದರಿಂದ ಪ್ರಜೆಗಳಿಗೆ ತೆರಿಗೆ ವಿಷಯದಲ್ಲಿ ಹೆಚ್ಚು ಅಧಿಕಾರವೂ ಇರುವುದಿಲ್ಲ, ಚಕ್ರವರ್ತಿಗಳ ಮಂತ್ರಾಲೋಚನಾ ಸಭಿಕರನ್ನು ಚುನಾಯಿಸುವ ಅಧಿಕಾರವೂ ಇರುವುದಿಲ್ಲ. ಇವೆರಡು ವಿಷಯಗಳು ಪ್ರಜೆಗಳ ಪಕ್ಷವಾಗಿರದಿದ್ದರೆ ರಾಜ್ಯಭಾರ ಕ್ರಮಗಳು ಹಿಂದೆ ಇದ್ದಂತೆಯೇ ಈಗಲೂ ಇವೆಯೆಂಬುದು ಪರಿಷ್ಕಾರವಾಗಿದೆಯಷ್ಟೆ. ಪ್ರಜೆಗಳ ಅಸಮಾಧಾನವು ಹೇಗೆ ತಪ್ಪೀತು!

*****

ಇಂಡಿಯಾ ದೇಶದಿಂದ ವಿದ್ಯಾಭ್ಯಾಸಕ್ಕಾಗಿ ಇಂಗ್ಲಾಂಡಿಗೆ ಹೋಗುವ ವಿದ್ಯಾರ್ಥಿಗಳ ಸಾಂಸರ್ಗಿಕವಾದ ಮತ್ತು ಭಕ್ತಿಸಂಬಂಧವಾದ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ ಇಂಗ್ಲಾಂಡಿನಲ್ಲಿ ಒಂದು ಸಭೆಯು ಸ್ಥಾಪಿತವಾಗಿದೆಯೆಂತಲೂ ಅದಕ್ಕೆ ಸರ್ ಆಂಡ್ರೂ ವಿಂಗೇಟರು ಪ್ರೆಸಿಡೆಂಟರಾಗಿದ್ದಾರೆಂತಲೂ, ವಿದ್ಯಾರ್ಥಿಗಳು ಇಳುಕೊಳ್ಳುವುದಕ್ಕೆ ಯೋಗ್ಯಗಳಾದ ಕೆಲವು ಬಿಡಾರಗಳನ್ನು ಲಂಡನ್ ನಗರದಲ್ಲಿ ನೋಡಿಟ್ಟಿದ್ದಾರೆಂತಲೂ ಲಂಡನಿನಲ್ಲಿ ಇಳಿದ ಕೂಡಲೆ ವಿದ್ಯಾರ್ಥಿಗಳನ್ನು ಎದುರುಗೊಂಡು ಕರೆದೊಯ್ಯುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿದೆಯೆಂತಲೂ ಆ ಸಭಾಕಾರ್ಯದರ್ಶಿಯವರು ಈ ದೇಶದ ಸ್ಕೂಲುಗಳ ಮತ್ತು ಕಾಲೇಜುಗಳ ಮುಖ್ಯೋಪಾಧ್ಯಾಯರಿಗೆಲ್ಲಾ ಒಂದು ಸರ್ಕ್ಯುಲರನ್ನು ಕಳುಹಿಸಿದ್ದಾರೆ.

*****

ಜಪಾನಿನವರು ಚೀನಾ ದೇಶದಲ್ಲಿ ತಮ್ಮ ಪ್ರಾಬಲ್ಯವನ್ನು ಮತ್ತೂ ಸ್ಥಾಪಿಸುವುದಕ್ಕೆ ಮುಂಕೊಂಡಿದ್ದಾರೆ ಅಲ್ಲಿ ಅವರು ನಾಂಚಂಗ್ ಎಂಬ ಮುಖ್ಯ ಸ್ಥಳದಿಂದಾರಂಭಿಸಿ ಕ್ಯಾಂಗ್ಸಿಯೆಂಬ ಡಿಸ್ಟ್ರಿಕ್ಟಿನೊಳಗೆಲ್ಲಾ ವ್ಯಾಪಿಸುವಂತೆ ರೇಲ್ವೆಗಳನ್ನು ಹಾಕುವವರಾಗಿದ್ದಾರೆ. ಈ ಕಾರ್ಯಕ್ಕೆ ಚೀನವೇ ಹಣವನ್ನು ಒದಗಿಸಬೇಕಾಗಿದೆ. ಅವರಿಂದ ಒದಗಿಸಲ್ಪಡಕೂಡದೆ ಉಳಿಯುವ ಹಣವನ್ನು ಜಪಾನಿನವರೇ ಕೊಡಿಸುವರು ಈ ಪ್ರಕಾರ ಜಪಾನಿನವರು ಚೀನದಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡು ಆ ದೇಶದಲ್ಲಿ ಸ್ಥಿರವಾಗಿ ನಿಲ್ಲುವದಕ್ಕೆ ಆವಶ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡುತ್ತಾರೆ. ಅವರ ರಾಜ್ಯಕ್ಕೆ ಸೇರಿದ ಇಂಜನಿಯರುಗಳೇ ಸ್ವಾಟೊವಿಂದ ಕ್ಯಾಂಟನ್‌ವರೆಗೆ ರೇಲ್ವೆಯನ್ನು ಹಾಕುತ್ತಿರುವಲ್ಲಿ ಅವರ ನಾವೆಗಳು ಚೀಣ ದೇಶದ ಕರಾವಳಿಯ ವ್ಯಾಪಾರದಲ್ಲಿ ಅಧಿಕ ಭಾಗವನ್ನು ನಿರ್ವಹಿಸಿಕೊಳ್ಳುತ್ತಲಿವೆ.

*****

ಕೆಲವು ವರ್ಷಗಳಿಂದೀಚೆಗೆ ಜಪಾನಿನವರು ಆಸ್ಟ್ರೇಲಿಯಾದಿಂದ ಉಣ್ಣೆಯನ್ನು ಹೆಚ್ಚು ಹೆಚ್ಚಾಗಿ ತರಿಸುವವರಾಗಿದ್ದಾರೆಂದು ಗೊತ್ತಾಗುತ್ತದೆ ಮೊದಲು ಮೊದಲು ಸಾಲಿಯಾನಾ ೫,೦೦೦ ಬೇಲುಗಳನ್ನು ತರಿಸುತ್ತಿದ್ದರು ೨ ವರ್ಷಗಳ ಹಿಂದೆ ೧೨,೦೦೦ಕ್ಕೆ ಏರಿತು. ಕಳೆದ ಜೂನ್ ತಿಂಗಳಿಗೆ ಅಂತ್ಯವಾಗುವ ಒಂದು ವರ್ಷಕ್ಕೆ ೨೭,೦೦೦ ಬೇಲುಗಳಾಯಿತು. ಇದರ ಬೆಲೆಯು ೬೫ ಲಕ್ಷ ರೂಪಾಯಿಗಳಾಗುವುದು. ಇದುವರೆಗೂ ಜಪಾನಿನಲ್ಲಿ ಉಣ್ಣೆಯ ಕಾರ್ಖಾನೆಗಳನ್ನೆಲ್ಲಾ ಸರ್ಕಾರದವರೇ ನಡೆಸುತ್ತಿದ್ದರು. ಈಗ ಪ್ರಜೆಗಳು ಸಹ ಕಾರ್ಖಾನೆಗಳನ್ನು ಆರಂಭಿಸಿರುವ ಕಾರಣ ಉಣ್ಣೆಯ ಆಮದು ವ್ಯಾಪಾರವು ಹೆಚ್ಚುವದೆಂದು ತೋರುತ್ತದೆ. ಜಪಾನಿನವರಿಂದ ಆಸ್ಟ್ರೇಲಿಯದಲ್ಲಿ ಉಣ್ಣೆಯ ವ್ಯಾಪಾರವೊಂದೇ ಅಲ್ಲ, ಈಗತಾನೆ ಮುಗಿದ ಯುದ್ಧದಲ್ಲಿ ಜಪಾನಿನವರು ಆಸ್ಟ್ರೇಲಿಯದಿಂದ ಕುದುರೆಗಳನ್ನು ಬಹಳವಾಗಿ ತರಿಸಿದುದರಿಂದಲೂ ವ್ಯಾಪಾರವು ಹೆಚ್ಚಿತು. ಇದರ ದೆಸೆಯಿಂದ ಮೊದಲ್ಗೊಂಡು ಸುಮಾರು ೭೫ ರೂಪಾಯಿಗೆ ಸಿಕ್ಕುತ್ತಿದ್ದ ಕುದುರೆಗೆ ಈಗ ಕ್ರಯವು ಸುಮಾರು ನಾಲ್ಕರಷ್ಟು ಹೆಚ್ಚಿರುತ್ತದೆ

WANTED WILD ANIMALS.

ಬೇಕಾಗಿದೆ ಬೇಕಾಗಿದೆ.

25

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr Hughes, Mysore Zoo

ಇದು ಕಳೆದ ಜನವರಿ ತಿಂಗಳ ಪ್ರಜೆಂಟೇಷನ್ ವಾಚು.

2

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್‌ಕೋಫ್ ಪೇಟೆಂಟ್ ಲಿವರ್ ವಾಚು ಆರು ರತ್ನಗಳುಳ್ಳ ಓಪನ್ ಕೇಸ್

ಕೀಲೆಸ್ ಕಂಪೆನ್‌ಸೇಷನ್ ಬ್ಯಾಲನ್ಸ್ ಬಹು ಬಲಿಷ್ಠವಾದ ಗಡಿಯಾರ. ೫ ವರುಷ ಗ್ಯಾರಂಟೀ ಕ್ರಯ ರೂ ೫—೮—೦. ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮಾಗಿ ಯುವವರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಅದಕ್ಕೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರದೆಂದು ಪ್ರಚುರ ಪಡಿಸಿದ್ದ ಮೇರೆಗೆ ೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರೆಗೆ ಕಳೆದ ಜುಲೈ ಆಖೈರ್ ವರೆಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡುತ್ತೇವೆಂದು ನಮೂದಿಸಿದ ಮೇರೆಗೆ ಜುಲೈ ಆಖೈರ್ ಆದಾಗ್ಯೂ ಅನೇಕ ದರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜೆಂಟರು ಇನ್ನೂ ಕೆಲವು ಕಾಲದವರೆಗೆ ಜಾರಿಯಲ್ಲಿ ತರಬೇಕೆಂದು ಕೋರಿದ್ದರಿಂದಲೂ ನಮ್ಮ ಹೆಡ್ಡಾಫೀಸರ ಅಪ್ಪಣೆಯ ಮೇರೆಗೆ ಪುನಃ ಬಹುಮತಿ ವಾಚು ಕೊಡಲ್ಪಡುತ್ತೆ ಇದುವರೆಗೆ ವಾಚು ಬಹುಮತಿ ಪಡೆಯದೆ ಇರುವವರು ಜಾಗ್ರತೆ ದರಖಾಸ್ತು ಕಳುಹಿಸಿ ಬಹುಮಾನ ಸಮೇತ ವಾಚು ಪಡೆಯಿರಿ

☞ ಈ ಕೆಳಗಿನ ನಕ್ಷೆಯಲ್ಲಿ ತೋರಿಸಿ ಇರುವ ಪ್ರಜೆಂಟೇಷನ್ ಸಾಮಾನುಗಳು ನೋಡಲು ಕಳುಹಿಸಿದ ಸಾಮಾನಿಗಿಂತ ಮೇಲಾಗಿಯೂ ನಕ್ಷೆಗೆ ವ್ಯತ್ಯಾಸವಿಲ್ಲದೆಯೂ ಇರುತ್ತೆ.

ನಶ್ಯದ ಡಬ್ಬಿ ಇದು ಮೇಲಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು

ಕ್ರಯ, ೦—೮—೦



ಗಡಿಯಾರ ಸರಪಣಿ ಇದು ಮೇಲಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದರ ಕೊನೆಯಲ್ಲಿ ಸುಂದರವಾದ ಉತ್ರಮುಖ ಕಟ್ಟಲ್ಪಟ್ಟಿರುತ್ತೆ ಎಂದಿಗೂ ಕೆಡಲಾರದು.

ಕ್ರಯ, ೦—೮—೦



ಮ ಲ ಗು ವ ಮ ನೆ ದೀಪ—ಇದು ಮೇಜದ ಮೇಲಿರಿಸುವದಕ್ಕೂ ಗೋಡೆಗೆ ತಗಲಿಸುವದಕ್ಕೂ ಲಾಯಕ್ಕಾದ್ದು ಎಣ್ಣೆಯು ವೆಚ್ಚ ಕಡಮೆ ಸಾಕಾದಷ್ಟು ಬೆಳಕು.

ಕ್ರಯ, ೦—೧೦—೦



ಬಟನ್ ಗುಂಡಿ—ಇದು ಮೇಲಾದ ಜರ್ಮನ್ ಸಿಲವರ್ ಬೆಳ್ಳಿಯಿಂದ ಹೊಸ ನಮೂನೆಯಾಗಿ ತಯಾರ್ಮಾಡಲ್ಪಟ್ಟದ್ದು

ರೂ ೧—೧೦—೦



ಹಣದ ಪೆಟ್ಟಿಗೆ—ಇಂಗ್ಲಿಷ್ ಮೋಡ ಕ್ಯಾಷ್ ಬಾಕ್ಸ್—ಹಣ ಆಭರಣ ಭದ್ರವಾಗಿ ಇರಿಸಬಹುದು ಇದರೊಳಗೆ ಎರಡು ಖಾನೆಗಳುಳ್ಳ ೧ ಸಣ್ಣ ಪೆಟ್ಟಿಗೆ ಇದೆ. ಭದ್ರವಾದ ಬೀಗದಕ್ಕೆ. ನೋಟಕ್ಕೆ ಸುಂದರವಾದ್ದು, ಕ್ರಯ ೮ ೧೦-೦

ವಿಳಾಸ.—ಮ್ಯಾನೇಜರ್, ಫ್ಲೋರಿನ್ ವಾಚ್ ಕಂಪೆನಿ, ಪಾರ್ಕ್ ಟವನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೦೪—೦

" " ೬ " " ೦—೧೨—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರ ಸುಧಾ.

10

ಇದನ್ನು ಓದಿ! ಚಿಂತಿಸಿರಿ!! ಗುಣ ನೋಡಿ!!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಿದ್ದಾರೆ ಕೃತ್ಯ, ತಲೆನೋವು, ಅರತಲೆನೋವು, ಬೆನ್ನುಹುಳುಕು, ಕೈಕಾಲು ನೋವು ಮುಂತಾದವುಗಳನ್ನು ದೈನಾಮ್ಯಟನಂತೆ ನಿಗ್ರಹಿಸಿ ಹರಿಸಬಲ್ಲದು 'ಸುಧಾ' ಎಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವು ಹೇಗೆ ಮೈಯ್ಯ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸೀಸೆ ಔಷಧಿಯಲ್ಲಿ ಕಂಡುಬರುವ ಆರೋಗ್ಯಗುಣವನ್ನು ಹೆಚ್ಚು ವರ್ಣನೆಮಾಡಿ ತೀರದು ಸೀಸೆ ೧ಕ್ಕೆ ೦-೮-೦ ಹಾಸಲು ಬೇರೆ.

ಜೀವನಸುಧಾ—ಜ್ವರ ನಿಂತಿತೆಂದು ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧಪಕ್ಷ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ ಸೀಸೆ ೧ಕ್ಕೆ ರೂಪಾಯಿ ೧—೦—೦.

ಪ್ರಿಯತಾಂಬೂಲ—ಜಗತ್ಪ್ರಖ್ಯಾತವಾದ ತಾಂಬೂಲ ಮಾತ್ರೆಗಳ ಸೀಸೆ ೧ಕ್ಕೆ ೪ ಆಣೆ ೩ ಸೀಸೆವರೆಗೆ ವಿ ಪಿ ಛಾರ್ಜು ೫ ಆಣೆ.

ದೇವನಹಳ್ಳಿ ಟವನ್, ಬೆಂಗಳೂರು ಡಿಸ್ಟ್ರಿಕ್ಟು

ಎಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್

ಲೋಕ ಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

ಬಯಲಾಟ ಇದ ... ಷ್ಟಾನೇರಿ

"ರಕ್ಷಾಮೃತಂ"—ಕಾಫಿ ಟೀಗೆ ಪ್ರತಿರೂಪ

"ರಕ್ಷಾಮೃತಂ."—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯೆಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ ಕಾಫಿ, ಟೀಯೆಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ. ಕಾಫಿ ಪ್ರತಿನಿತ್ಯ ಯಾವ ಕ್ರಮದಲ್ಲಿ ಉಪಯೋಗಿಸುತ್ತೀವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ ಜ್ವರ, ಸನ್ನಿ, ಕೆಮ್ಮು, ಹರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನಗಳನ್ನು ಸಮಸ್ತ ವ್ಯಾಧಿಗಳಿಂದಲೂ ಶೀಘ್ರವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗುಲ್ಮ ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆ ಹೊಂದುತ್ತವೆ. ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು

ಈ ಚೂರ್ಣವನ್ನು ಕ್ರಮಾನುಸಾರವಾಗಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು ; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯೆಲೆಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು

ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ಆಣೆ ೬. ವಿ. ಪಿ. ಛಾರ್ಜು ಆಣೆ ೩ ಹೆಚ್ಚಾಗುವುದು ಮುಂಗಡ ೮ ಆಣೆ ಸ್ಟಾಂಪುಟ್ಟು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

ವಿಳಾಸ:—ಪಿ. ಸುಬ್ಬರಾಯ್, ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

8—9—1905 ರಿಂದ 15—9—1905 ರ ವರೆಗೆ.

ಸ್ಥಳ.		ಪ್ಲೇಗ್ ತಗಲಿದ್ದು.	ಸತ್ತದ್ದು.	ಗೋರಿಪಾಡಿದ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ		7	5	18	13
ಮೈಸೂರು	,,	0	0	26	45
ಬೆಂಗಳೂರು ಡಿಸ್ಟ್ರಿಕ್ಟು		17	10	251	140
ಮೈಸೂರು	,,	0	2	07	15
ಕೋಲಾರ್	,,	1	1	84	75
ಕೋಲಾರ್ ಚಿನ್ನದ ಗಣಿಗಳು		3	0	1.	13
ತುಮಕೂರು ಡಿಸ್ಟ್ರಿಕ್ಟು		0	0	31	15
ಹಾಸನ	,,	0	0	29	20
ಚಿತ್ರದುರ್ಗ	,,	0	0	157	51
ಕಡೂರ್	,,	1	2	67	7.
ಶಿವಮೊಗ್ಗ	,,	29	14	139	50
	ಜುಮ್ಲಾ.	51	3.	926	645

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರದ ಭಾದ್ರಪದ ಬಹುಳ ಅಮಾವಾಸ್ಯ ಗುರುವಾರದಿಂದ ಆಶ್ವೀಜ ಶುದ್ಧ ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೫ ನೇ ಇಸವಿ ಸೆಪ್ಟೆಂಬರ್ ಮತ್ತು ಅಕ್ಟೋಬರ್

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ತಾ
28	ಗುರು ‡	ಅಮಾ	51 3	ಉ	11 16	13
29	ಶುಕ್ರ *	ಪಾಡ್ಯ	17 17	ಹ	20 15	14
30	ಶನಿವಾ	ಬಿದಿಗೆ	11 12	ಚಿ	35 18	15
1	ರವಿವಾ	ತದಿಗೆ	35 20	ಸ್ವಾ	31 32	16
2	ಚಂದ್ರ	ಚೌತಿ	29 29	ವಿ	27 24	17
3	ಕುಜ	ಪಂಚಮಿ	23 ...	ಅ	23 16	18
4	ಬುಧ ¶	ಷಷ್ಠಿ	19 10	ಜ್ಯೆ	20 50	19

‡ ಸರ್ವತ್ರ ಮಹಾಲಯ ಅಮಾವಾಸ್ಯ

* ನವರಾತ್ರಾರಂಭ.

¶ ಕಾತ್ಯಾಯನೀ ಪೂಜಾ

ಪೇಟೆ ಧಾರಣೆ.

ಜಿನಸಿ.	ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲ ೧ಕ್ಕೆ	ರೂ. ೧೨-೮-	೧೭-೪
ಕಂಬಳಿ ಅಕ್ಕಿ ಲಗಲ್	೧೭-೪-೦	೨೭-೪
,, ದಪ್ಪ	೧೨-೦-೦	೧೦-೧೦
ಸಾಧಾರಣ ಅಕ್ಕಿ	೧೨-೧-೦	೦-೧೪
ನೆಲ್ಲಕ್ಕಿ ಅವಲ	೧೪-೦-೦	೦೪-೮
,, ದಪ್ಪ	೧೩ ೮-೦	೦-೭-೮
ತೊಗರಿ ಬೇಳೆ ಪಲ್ಲ ೧ಕ್ಕೆ	೧೧ ೦ ೦	೧೧ ೦
,, ದಪ್ಪ	೧೦-೮-೦	೧೦-೧೨
ರಾಗಿ ಪಲ್ಲ ೧ಕ್ಕೆ	೬-೪-೦	೫-೦
ಜೋಳ	೬-೦-೦	೪-೦
ಕಡಲೆ	೬-೦-೦	೬-೪
ಹುರುಳಿ ಪಲ್ಲ ೧ಕ್ಕೆ	೧೦-೦-೦	೯-೧೨
ಬಿಳೀ ಅವರೆ	೮ ೧೨-೦	೯-೦
ಹೆಸರು	೯ ೧೨-೦	೧೦-೧೨
ಉದ್ದು	೧೦ ೦ ೦	೯-೮
ಕಡಲೆ	೧೦ ೦-೦	೧೦-೦
ಎಳ್ಳು	೧೬ ೦ ೦	೧೫-೦
ಹುರುಳಿ	೧೦-೦ ೦	೯-೪
ಬೆಲ್ಲ ೧೨೭ ಸೇರಿಗೆ	೧೨-೮-೦	೧೨-೧೨
ತೆಂಗಿನಕಾಯಿ ಮಣ ೧ಕ್ಕೆ	೩-೮-೦	೩-೧೨
ಮೆಣಸಿನಕಾಯಿ	೪-೮-೦	೪-೬
,, ದಪ್ಪ	೩-೧೨-೦	೩-೦೪
ಸಿಲ್ಲ ದೊಡ್ಡ ಅಕ್ಕಿ	೬-೪-೦	೫-೬
ಒಳ್ಳೆಣ್ಣೆ ಮಣ ೧ಕ್ಕೆ	೪-೪ ೦	೪-೪
ಹರಳೆಣ್ಣೆ ,,	೫-೦-೦	೪-೬
ಕೊತ್ತುಂಬರಿ ಪಲ್ಲ ೧ಕ್ಕೆ	೧೦-೮-೦	೯-೧೨
ಉಪ್ಪು ,,	೭-೦-೦	೬-೧೦
ಹುಣಸೇ ಹಣ್ಣು	೧ ೦-೦	೦-೧೨
,, ಹಳೇದು	೦-೧೪-೦	೦-೧೦
ತುಪ್ಪ	೧೨-೮-೦	೧೧-೮
ಸೀಮೆಯಂಣೆ ಪೆಟ್ಟಿ ೧ಕ್ಕೆ	೫-೦-೦	೪-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೪-೦
ಅಳಲೇಕಾಯಿ ಮಣ ೧ಕ್ಕೆ	೧-೦-೦	೨-೧೦
ಅಂಟುವಾಳಕಾಯಿ ಮಣ ೧ಕ್ಕೆ	೦-೧೪-೦	೦-೧೨
ಹತ್ತಿ (ಪರ್ಮ) ಕಂಡಿ	೧೫-೮-೦	೨೫-೬
,, ,, ಪಸಿಮೆ	೧೫-೧೦-೦	೧೬-೩
,, ,, ಗಟ್ಟಿ ತೊಲ ೧ಕ್ಕೆ	೨೬-೦-೦	೨೯-೪
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩೨-೦-೦	೬೩-೮

Printed and Published by the Rev. H Spencer, B the Proprietor and Manager, Wesleyan Mission Fr Mysore. 28/9/1905.

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ಪುಷ್ಟು — ಕ್ರಯ ೧ ಪುಷ್ಟು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಅಕ್ಟೋಬರ್ ತಾರೀಖು ೫ ನೇ ಗುರುವಾರ. — ಸಂಚಿಕೆ ೧೯

ಸಚಿತ್ರವಿನೋದಿನಿ ಮಾಸಪತ್ರಿಕೆ.

ವಾರ್ಷಿಕಚಂದಾ ರೂ ೧—೮—೦

. . . . . ವಿನೋದಿನಿ ಎಂಬ . . . . . . ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹ . . . . .

ಸತ್ಯವಿಷಿತ ೬೮೩೦೫

ವಿಳಾಸ.—ಮ್ಯಾನೇಜರ್ ವಿನೋದಿನಿ ಆಫೀಸು ಶಾಂವಾಡ.

"ಆಂಗ್ಲೇಯ ವೈದ್ಯ ಶಿಕ್ಷ."

ಕ್ರಯ ರೂ ೧ ೮ ೦, ಹಾಸಲು ೨ ಆ ; ವಿ. ಪಿ ೩ ಆಣೆ.

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಇವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ವಿಷಯಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಾಚೀನವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ, ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡುವದಕ್ಕೂ ಇದು ತುಂಬಾ ಸಹಾಯಕರವಾಗಿರುವುದು.

ವಿಳಾಸ —ಎಂ. ಗುರುರಾವ್, ಆಸ್ಪಿಟಲ್ ಅಸಿಸ್ಟೆಂಟ್,

ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

[ಸ್ಥಾಪಿತವಾದದ್ದು ೧೮೯೨ರಲ್ಲಿ]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅವರ ಭರವಸೆ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (\ ) ತರಗತಿಗೆ ಸೇರಿದವರು ಪಡೆಯಬೇಕೆಂದು ಇಚ್ಛಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆ ವಾರು ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೬ನ್ನು ಮಾತ್ರವೇ ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಸ್ವಸ್ತರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W I P ರೇಲ್ವೆ ಬದಿಯಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವ ಸಂಭವವೇ ಇಲ್ಲ.

ಈ ಆಫೀಸಿನಲ್ಲಿ ಭರವಸೆಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಪಾಲುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಮಿಯು ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸೆಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಸಹಾಯವು ತೃಪ್ತಿಕರವಾಗಿ ತೋರದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ. ವಿವರವಾಗಿ ತಿಳಿಯಬೇಕೆಂದಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ.—The Manager,

The India Agricultural and Helping Office,

Vengula Post, Bombay Presidency.

೨ನೇ ಭಾಗ ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಜಾಗ್ರತೆ ತರಿಸಿಕೊಳ್ಳಿ! ಸಿವಿಲ್, ಕ್ರಿಮಿನಲ್ ಮುಂತಾದ ಎಲ್ಲಾ ವಿಧವಾದ ಲಾ ಸಾರಾಂಶಗಳನ್ನು ತಿಳಿಸತಕ್ಕ ಈ ಪುಸ್ತಕವು ಕ್ರಯ ೧ ಕ್ಕೆ ೧ ರೂ. ೪ ಆಣೆ ಮಾತ್ರವೇ. ಮುಗಿದು ಹೋದನಂತರ ದೊರೆಯಲಾರದು ಬೇಗ ಬರೆಯಿರಿ ಮೋಜಿಣಿ ಕಲಿಯತಕ್ಕ ಪುಸ್ತಕ. ಕ್ರಯ ೧ ಕ್ಕೆ ೧ ರೂಪಾಯಿ ಮಾತ್ರವೇ. ವಿಳಾಸ ಬಿ. ಕೆ ಮಾಲೀಕ ಕಂಪನಿ,

ಬೆಂಗಳೂರು ಸಿಟಿ

ಯಸ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

ಮೆಕ್ಮಿಲ್ಲನ್ ಕನ್ನಡದ ೧ನೆ ಪುಸ್ತಕದ ನೋಟ್ಸ್	೦—೪—೦
ಡಿಟೊ ,, ,, ೭ ನೆ ಪುಸ್ತಕದ ನೋಟ್ಸ್	೦—೪—೦
ಡಿಟೊ ೩—೪ ನೆಯ ಪುಸ್ತಕಗಳ ನೋಟ್ಸ್	೦—೬—೦
ಮೈಸೂರು ಸಂಸ್ಥಾನದ ಭೂವಿವರಣೆ (೬ನೆ ಭಾಷೆ)	೦—೧—೦
೬ನೆ ತರಗತಿ ಪದ್ಯಸಂಗ್ರಹದ ನೋಟ್ಸ್	೦—೧—೬

ಜ್ವರಹರಿ.

ಇದು ಸಾಧಾರಣ ಜ್ವರ, ಚಳಿಜ್ವರ, ಮಲೇರಿಯಜ್ವರ, ಪಿತ್ತಜ್ವರ, ಶೀತಜ್ವರ, ವಿಷಮಜ್ವರ, ಪ್ಲೇಗ ಹಿಡಿಯುವದು, ಎಂಬ ನಾನಾವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಾನ್ಯ ಇನಾಮು ಸಬ್ ಡಿವಿಜನ್ ಆಫೀಸರ್ ಎಸ್ ಪಿ ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ಔಷಧಿಯನ್ನು ಉಪಯೋಗಿಸಿ ಸ್ವಲ್ಪ ಕಾಲದಲ್ಲೇ ಇದರ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬಿಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುವರು.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ಮತ್ತು ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಮಾಡಲಾಗುವದು.

ಓನಿಯನ್ ಕಾಪ್ಪರ್.

ಈ ಔಷಧವು ಅಜೀರ್ಣ ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದೆಲ್ಲಕ್ಕೂ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪತಿರಾಯರು—ಜ್ವರಹರಿಯ ಮತ್ತು ಕಪ್ಪೂರದನ್ನು ನಾನು ನನ್ನ ಕಾರ್ಯದಾತರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ವಾಂತಿಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವು ರೋಗಿಗಳ ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ

ಈ ನಾಲ್ಕು ಔಷಧಗಳು ಊರುಗಳಲ್ಲಿರುವ ವೈದ್ಯಶಾಲೆಗಳಲ್ಲಿಯೂ, ದೊಡ್ಡ ಅಂಗಡಿಗಳಲ್ಲಿಯೂ, ಔಷಧ ವ್ಯಾಪಾರಿಗಳಲ್ಲಿಯೂ ಕ್ರಯಕ್ಕೆ ಸಿಕ್ಕುತ್ತವೆ. ಅಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ:—

ಜೆನ್ರಲ್ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಕೊಂಡಿ ಚೆಟ್ಟಿ ಸ್ಟ್ರೀಟ್, ಮದರಾಸ್.

೧೯೦೬ನೇ ವರುಷದ ರಾಯಲ್ ಡೈರಿಗಳು.

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಪಟಗಳತೆ, ವಾರಶೂಲೆ, ಟಪಾಲಿನ ಮುಖ್ಯವಿಷಯಗಳು, ಸ್ಟ್ಯಾಂಪು ಆಕ್ಟು, ರಿಜಿಸ್ಟರ್ ಫಿ, ಕೋರ್ಟ ಫಿ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೇಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಬಡ್ಡಿ ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ರಲ್ಲಿನ ಏಕಾದಶಿ, ಪೂರ್ಣಿಮಾ, ಅಮಾವಾಸ್ಯೆ, ಸಂಕ್ರಮಣ, ಗ್ರಹಣ ಪಂಚಾಂಗ, ರೈಲ್ವೆ ಪಾರಸಲ್ ಛಾರ್ಜ, ಯಮವಂಶರತ್ನಾಕರ, ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ.

ನಂ ೧ ದೊಡ್ಡ ಸೈಜು ರೂಲು ಹಾಕಿದೆ ಕ್ರಯ.	೦—೮—೦
,, ೨ ,, ,, ,, ಮಾಳ್ಕ ಇರತಕ್ಕದ್ದು	೦—೧೦—೦
,, ೩ ಚಿಕ್ಕ ,, ,, ,, ,,	೦—೬—೦
,, ೪ ,, ,, ,, ,, ,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ ಡೈರಿಗಳು ಅಕ್ಟೋಬರು ೧೦ ರ ಒಳಗಾಗಿ ದೊರೆಯುತ್ತೆ

ದಿ ಜನರಲ್ ಏಜನ್ಸಿ, ಮೈಸೂರು.

ಶೂ ರೆ ಮೊ ರೆ ಸಿ ಯಾ.

ಚಿಕ್ಕಾ ಪರಿಹಾರ.  ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ರಾಣಾ, ವಿದ್ಯಾಶಾಲೆ, ಕೋರ್ಟ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತೆ ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಕತ್ತಲೆಯಲ್ಲಿ ಜೀವರಾಶಿಗಳಿಗೆ ನಿಜಕ್ಕಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಎಂತಹದೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ದಾರ್ಖಾವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ಗಾಯಗಳು, ತುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚ ಮಾಫಿ ಬಿಡುತ್ತಾರೆ. ೧೨. ೨—೮ ಆಣೆ ಬಾಬ್ತು ಡಬ್ಬಿಗಳಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚ ಮಾಫಿ ಬಿಡುತ್ತೆ.

ಹೋಮೋಸಿಯಾ ಎಂಬ್ರೋಕೇಷನ್.

ಈ ತೈಲವು ಹಳೇ ರೋಗಗಳಿಗೆ ಉಪಯೋಗಿಸತಕ್ಕದ್ದು. ಅಮೃತ ಬಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡವರಿಗೆ ಟಪ್ಪಾಲ್ ಖರ್ಚ ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಚಿತವಾಗಿ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ, ೨೩ ನೆಕಿಂಡ್ ಚರ್ಚ ಲೇನ್, ಮದರಾಸ್.

"ಒಕ್ಕಲತನವೂ ಒಕ್ಕಲಿಗನೂ."—ಪಕ್ಷಕ್ಕೊಂದು.

8

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗಣಿ ಪೋಸ್ಟೇಜು ಸಹಿತ ರೂ ೧—೮—೦. ರೈತರೇ, ಬೇಗ ತರಿಸಿ

ವಿಳಾಸ —ಧಿ ಮ್ಯಾನೇಜರ್, ೧೧೯, ಸಿವಿಲ್ ಲೈನ್ಸ್, ಪೂನ.

ನೋಟೀಸು.

ಶಿವಮೊಗ್ಗ ಈ। ಗಾಜನೂರು ಸೀ। ಮತ್ತೂರು ಅಗ್ರಹಾರದ ಲ್ಲಿರುವ ವಿಶ್ವೇಶ್ವರ ಅವಧಾನಿ ಮಗ ಪ್ರತಿವಾದಿ ಚನ್ನಕೇಶವಶಾಸ್ತ್ರಿ ಗಳಮೇಲೆ ವಾದಿ ಗೌರಮ್ಮ ಕೊಡುಪ ಚನ್ನಮ್ಮನಾದ ನಾನು ೪೦೦ ರೂ. ಗೆ ಶ್ರೀರಂಗಪಟ್ಟಣದ ಮುನ್ಸಿಫ್ ಕೋರ್ಟಿನಲ್ಲಿ ೧೬೨ನೆ ನಂಬರ್ ಮೊಕದ್ದಮೆಯನ್ನು ನಡಿಸಿರುತ್ತೇನೆ. ನೋಡಸವಾಡಲು ಪ್ರಿವ್ಯ ತನ್ನ ಯಾವತ್ತು ಸ್ಥಿರಸ್ವತ್ತುಗಳನ್ನು ಕೋರ್ಟ್ ಆರ್ಡರ್ ಉಲ್ಲಂಗಿಸಿ ಪರಭಾರೆ ಮಾಡುವದಾಗಿ ತಿಳಿಯಬರುತ್ತದೆ. ಈತನ ಆಸ್ತಿಗಳು ನನ್ನ ಹಣಕ್ಕೂ ಕೋರ್ಟುಖರ್ಚಿಗೂ ಈಡಾಗಿರುವ ವೆಂದು ಪ್ರಕಟಿಸಿದೇನೆ. ಗೌರಮ್ಮನವರು.

ನೋಟೀಸು.

ತೀರ್ಥಹಳ್ಳಿ ಹೋಬಳಿ ಕುರುವಳ್ಳಿ ಗ್ರಾಮದ ಕಾಟೋಟ ಸುಬ್ರಾಯರ ಅಗ್ರಹಾರ ವಾಸಸ್ಥಳವಾದ ದೇಶಸ್ಥ ಬ್ರಾಹ್ಮಣ ದಿವಂಗತ ವೆಂಕಣ್ಣನವರ ಸಿದ್ಧಗಿರಿಯಪ್ಪನವರ ಮಗಳು ದೇವೂಬಾಯಿಯು ಇದರಿಂದ ತಿಳಿಯಪಡಿಸುವದೇನಂದರೆ—ಚಿಕ್ಕವಳಾಗಿರುವಾಗಲೆ ಗಂಡನನ್ನು ಕಳೆದುಕೊಂಡದ್ದರಿಂದ ಅವನ ಆಸ್ತಿಯಾವದೂ ನನಗೆ ದೊರೆಯಲಿಲ್ಲ, ತಾಯಿಯೂ ತೀರಿ ಹೋಗಿದ್ದಳು. ಇತರ ಮಕ್ಕಳಿಲ್ಲದ ನನ್ನ ತಂದೆಯು ಒಬ್ಬಳೇ ಮಗಳಾದ ನನ್ನನ್ನು ಕಾಪಾಡಿಕೊಂಡು ಬಂದು ಸಾಯುವದಕ್ಕೆ ಮುಂಚೆ ತನ್ನ ವಿಶಿಷ್ಟ ಸ್ವತ್ತನ್ನು ನನ್ನ ಹೆಸರಿಗೆ ಉಯಿಲು ಬರದು ರಿಜಿಸ್ಟರು ಮಾಡಿ ತನ್ನ ೮೭ ನೇ ವಯಸ್ಸಿನಲ್ಲಿ ಕಾಲವಾದನು. ತಂದೆಯು ಮನೆಯಲ್ಲೆ ವಾಸ ಮಾಡುತ್ತಾ ಆತನಿಗೆ ಪರಲೋಕಪ್ರಾಪ್ತಿಯಾಗಲು ಮಾಡಬೇಕಾದ ಕರ್ತವ್ಯಗಳನ್ನೆಲ್ಲಾ ಮಾಡುತ್ತಾ ಬಂದಿರುವೆನು ಅಲ್ಲದೆ ನೀಲಕಂಠರಾಯನೆಂಬುವನನ್ನು ದತ್ತು ಮಾಡಿಕೊಂಡು ಇವನಿಗೆ ಮದುವೆ ಮುಂಜಿ ಮುಂತಾದವುಗಳನ್ನು ಮಾಡಿರುವೆನು. ಈತನ ಹೆಂಡತಿಯನ್ನು ಕೂಡ ನನ್ನಲ್ಲೆ ಇಟ್ಟುಕೊಂಡು ಕಾಪಾಡುತ್ತಾ ಬಂದಿರುವೆನು ಇವನು ಹೆಂಡತಿಯನ್ನು ಬಿಟ್ಟು ದುರ್ವ್ಯಸನಾರ್ಥಕವಾದ ತುಗ್ಗಿಮನೆಯಲ್ಲಿ ನಾಟಕಾದಿ ದುರ್ವ್ಯಾಪಾರಗಳಿಂದ ಕಾಲವನ್ನು ಕಳೆಯುತ್ತಾ ಹೊರಗೆ ಸಾಲಾ ವಗೈರೆಗಳನ್ನು ಮಾಡಿರುವಂತೆ ಕೇಳುತ್ತೇನೆ ೪—೬ ಸಾವಿರ ರೂಪಾಯಿ ಬಾಳುವ ತಂಗಿಯ ಆಸ್ತಿಯನ್ನು ಹಾಳು ಮಾಡಿ ನನ್ನ ತಂದೆಯ ಆಸ್ತಿಯನ್ನು ಖಿಲು ಮಾಡುವಂತೆ ತೋರುವದು ನನ್ನ ತಂದೆಯು ಉತ್ತಮಲೋಕಪ್ರಾಪ್ತಿಯಾಗುವದಕ್ಕೋಸ್ಕರ ತನ್ನ ಆಸ್ತಿಯನ್ನು ಧರ್ಮಕೆಲಸಕ್ಕೆ ವಿನಿಯೋಗಿಸಬೇಕೆಂದು ನನಗೆ ಹೇಳಿರುವನಾದ್ದರಿಂದ ನನ್ನ ದತ್ತು ಮಗನ ಸಾಲಕ್ಕೆ ಜವಾಬ್ದಾರಿ ಆಗತಕ್ಕದ್ದಲ್ಲವು.

ದೇವೂಬಾಯಿ ರುಜು.

ಬಹಳ ಮೇಲಾದ ಮದರಾಸು ನಶ್ಯದಪುಡಿ

2

ವರ್ತಕರು ವಿಕ್ರಯಿಸಿ ಲಾಭಪಡೆಯುವಷ್ಟು ಸುಲಭಕ್ರಯ.

ಮದರಾಸು ನಶ್ಯದಪುಡಿ ಡಬ್ಬಿ ೧ ಕ್ಕೆ 0—6—0
ಬಾಂಗಿ ಕರ್ಚು. . . . . . 0—3—0

೧ ರೂಪಾಯಿಗೆ ಕಮ್ಮಿಯಿಲ್ಲದೆ ದರಖಾಸ್ತು ಕಳುಹಿಸತಕ್ಕ ವರ್ತಕರು ಮೊದಲಾದವರುಗಳಿಗೆ ರೂಪಾಯಿಗೆ ೦—೧—೦ ಕಮಿಷನ್ ಕೊಡುತ್ತೇವೆ. ನಮ್ಮ ವೈದ್ಯಶಾಲೆಯಲ್ಲಿ ತಯಾರಿಸುವ ಪುಡಿಯೂ ಮೇಲಾದ ಒಂದನೆಯಾ ದೇಶದ ಹೊಗೆಸೊಪ್ಪಿನಿಂದ ಆದ ದ್ದಾಗಿ. ತಯಾರಿಸಲ್ಪಟ್ಟದ್ದು



ಎಷ್ಟು ದಿವಸಗಳ ಪರಿಯಂತ್ರ ಇಟ್ಟಾಗ್ಯೂ ಘಾಟು ಹೋಗದಹಾಗೆ ಪುಡಿಯನ್ನು ಮಾಡುವದರಲ್ಲಿ ಅಧಿಕ ಪರಿಶ್ರಮವುಳ್ಳವರುಗಳಿಂದ ತಯಾರಿಸಲ್ಪಟ್ಟಿರುತ್ತದೆ ೧ ಸಾರಿ ಹಾಕಿಕೊಂಡರೆ ಸಾಕಾಗಿರುತ್ತೆ. ಅನೇಕ ದೊಡ್ಡ ಮನುಷ್ಯರು ಇದನ್ನೇ ಉಪಯೋಗಿಸುತ್ತಾರೆ.

ಪರಿಮಳ ನಶ್ಯದಪುಡಿ.

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ. . 0—9—0
ಬಾಂಗಿ ಕರ್ಚು . . . . 0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆ ಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿ ಯೆಲ್ಲಾ ಗಮಗಮಿಸುತ್ತದೆ. ಉಪಯೋಗಿಸುವವರಿಗೆ ಸುವಾಸನೆಯನ್ನು ಆನಂದವನ್ನು ಉಂಟುಮಾಡುತ್ತದೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

ಪ್ರತಿ ೧ ಡಬ್ಬಿಯಲ್ಲಿ ೫ ತೋಲ ನಶ್ಯದಪುಡಿ ಇರುತ್ತೆ.

ವಿಳಾಸ.—ಮನೇಜರ್, ಧರ್ಮವೈದ್ಯಶಾಲಾ,
೪೩ ಜೈಪಾಪಚಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

39



ಈ ಔಷಧವು ಪ್ರತಿ ಮನೆಯವರಿಗೂ ಅಗತ್ಯ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಪಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ನಾಶವಾಗುತ್ತೆ ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು ಇದರಿಂದ ವಾಯುನೋವು ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು ಒಂದಾವರ್ತಿ ಹಚ್ಚುವದರಿಂದಲೇ ಬಹಳ ಸುಖ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು ಕ್ರಯ ಬಾಟ್ಲಿ ೧ಕ್ಕೆ ೧ ರೂ. ; ೬ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಹಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್‌ಕಂಪೆನಿ,
ಮವುಂಟ್ ರೋಡ್,
ಮದರಾಸ್.

ಹೊಸ ಪುಸ್ತಕಗಳು.

ಒಬ್ಬ ಸಿಪಾಯಿಯ ಸಾಹಸಗಳು —"ಒಂದು ಎತ್ತು ಮತ್ತು ಆರು ಗುರುಗಂಜಿಗಳ ಸುದ್ದಿ." ಇದನ್ನು ಮುಟ್ಟಿದ ಮೊದಲು ಮುಗಿಸುವಪರಿಯಿಗೂ ಮೇಲಕ್ಕೆ ಏಳುವ ಆಸೆ ಇಲ್ಲ. ಚಿತ್ರವಿಚಿತ್ರವಾದ ಸಾಹಸಗಳು. ಚಮತ್ಕಾರವಾದ ಮಾತುಗಳು ಸ್ವಲ್ಪಸಂಕೋಚವಿಲ್ಲದ ಇಲ್ಲಿ ಸ್ವಲ್ಪವೆಷ್ಟಾದರೂ ವಿವರಿಸಿಲ್ಲ ಕ್ರಯ ೪ ಆಣೆ

ಇಪ್ಪತ್ತನೆಯ ಶತಮಾನದ ಇರಳು —ನಿಪ, ಗತಿಯಾದ ಜೋಬಿನ ಸ್ಕೆಚ್ ನೀವು ಕೋಡ ಕಡೆಯಲ್ಲಾ ಗತಿಯಾದ ಜೋಕೆಯಲ್ಲಿ ನಾನೊಬರು ಪನೆಸ್ಸು ವದು "ಪ್ರವಾದಕ್ಕೆ ಆಸ್ಪದವನ್ನು ಒಟುವ ಮಾನ ತಿಳುವಳಿಕೆಗಿಂತಲೂ ಅಜ್ಞಾನವೇ ಶ್ರೇಯಸ್ಕರವಲ್ಲವೆ ?" ಎಂಬುವ ಇವರ ಸಾರಾಂಶ ಕ್ರಯ ೨ ಆಣೆ

ವಿಳಾಸ —ಬಿ. ಆರ್ ಗೋವಿಂದರಾವ್‌ಲು,
೧೨೮ ಅರಳೇಪೇಟೆ, ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ.

ಸ್ಟ್ ೧೯೦೫ ನೇ ಇಸವಿ ಅಕ್ಟೋಬರ್ ತಾ॥ ೫ ನೇ ಗುರುವಾರ

ವಿಲಾಯತಿ ಮತ್ತು ಜಪಾನು

ರಷ್ಯಾ ಜಪಾನ್ ರಾಜಗಳಿಗೆ ಕರಾರಾಗುವುದಕ್ಕೆ ಕೆಲವು ದಿನಗಳ ಹಿಂದೆ ವಿಲಾಯಿತಿಯವರೂ ಜಪಾನವರೂ ಸೇರಿ ಒಂದು ಹೊಸ ಕರಾರನ್ನು ನಡಿಸಿಕೊಂಡರು. ಈ ಕರಾರು ನಡೆದುದರಿಂದಲೇ ಜಪಾನವರು ರಷ್ಯಾದವರಿಂದ ವಸೂಲ್ಮಾಡಿಕೊಳ್ಳಬೇಕಾಗಿದ್ದ ಯುದ್ಧದ ಖರ್ಚನ್ನು ಕೇಳದೆ ಬಿಟ್ಟುಬಿಟ್ಟರೆಂದು ಹೇಳುತ್ತಾರೆ ಅವರೆ ಜಾಣರಾದ ಜಪಾನವರು ಸೋತುಹೋದ ರಷ್ಯಾದವರಿಂದ ಅಪಾರವಾದ ಹಣವನ್ನು ತಮ್ಮ ನಷ್ಟ ಪರಿಹಾರಕ್ಕೆಂದು ಬಲಾತ್ಕಾರ ಮಾಡಿ ವಸೂಲ್ಮಾಡಿ ಬಿಟ್ಟಿದ್ದರೆ ರಷ್ಯಾದವರು ಬಹು ಕಾಲದ ವರೆಗೆ ಯುದ್ಧಕ್ಕೆ ಹೊರಡುವುದೇ ಅಸಾಧ್ಯವಾಗುತ್ತಿತ್ತು. ಈ ಉದ್ದೇಶವು ಇನ್ನೊಂದು ರೀತಿಯಲ್ಲಿ ಎಂದರೆ ಜಪಾನವರು ವಿಲಾಯತಿಯವರ ಕೂಡ ಮಾಡಿಕೊಂಡಿರುವ ಮೇಲ್ಕಂಡ ತಡನಾಮೆಯ ಮೂಲಕ ಸಿದ್ಧಿಯಾಗಿ ನೆರವೇರಿರುವುದು ಯಾವ ರಾಜ್ಯದವರಾದರೂ ನಿಷ್ಕಾರಣವಾಗಿ ಜಪಾನವರ ಮೇಲಾಗಲಿ ವಿಲಾಯತಿಯವರ ಮೇಲಾಗಲಿ ಯುದ್ಧಕ್ಕೆ ಒಂದಲ್ಲಿ ವಿಲಾಯತಿಯವರು ಜಪಾನವರಿಗೂ ಜಪಾನವರು ವಿಲಾಯತಿಯವರಿಗೂ ಆ ಕೂಡಲೇ ಸಹಾಯಕರಾಗಿ ಹೊರಡುವರು. ಇವೆರಡು ರಾಜ್ಯಗಳಿಗೂ ಮೊದಲು ನಡೆದಿದ್ದ ಕರಾರು ಈ ರೀತಿಯಾಗಿರಲಿಲ್ಲ, ಪರರಾಜ್ಯಗಳೆರಡು ಒಟ್ಟು ಸೇರಿ ಜಪಾನವರ ಮೇಲೋ ವಿಲಾಯತಿಯವರ ಮೇಲೋ ನುಗ್ಗಿ ಬಂದಲ್ಲದೆ ವಿಲಾಯತಿಯವರಾಗಲಿ ಜಪಾನವರಾಗಲಿ ಪರಸ್ಪರ ಸಹಾಯ ಮಾಡುವವರಾಗಿರಲಿಲ್ಲ. ಆದುದರಿಂದಲೇ ಈಗ ನಡೆದ ಯುದ್ಧದಲ್ಲಿ ಜಪಾನವರಿಗೆ ವಿಲಾಯತಿಯವರು ಸಹಾಯ ಮಾಡದೆ ತಟಸ್ಥರಾಗಿದ್ದರು. ಈಗತಾನೇ ಮುಕ್ತಾಯವಾದ ಯುದ್ಧವು ಮತ್ತೆ ಪ್ರಾರಂಭವಾಗುವುದಾದರೆ ರಷ್ಯಾದವರ ಎದುರುಕಕ್ಷಿಯಲ್ಲಿ ಜಪಾನವರೂ ವಿಲಾಯತಿಯವರೂ ಏಕವಾಗಿ ಬಂದು ನಿಂತಾರು ಅಗ್ಗೆ ಏನಾಗುವುದೆಂದರೆ, ಇನ್ನಾವುದೋ ಒಂದು ರಾಜ್ಯದವರು ರಷ್ಯಾದವರ ಬೆಂಬಲಕ್ಕೆ ಬಂದೇ ಬರುವರು. ಆಗ ಎರಡೆರಡು ರಾಜ್ಯಗಳವರು ಎದುರುಬದುರಾಗಿ ನಿಂತು ನಡೆಸುವ ಯುದ್ಧವು ಅತ್ಯಂತ ಘೋರವಾಗಿದ್ದೀತು ಆದುದರಿಂದ ಇಂಥಾ ಯುದ್ಧಕ್ಕೆ ಯಾವ ರಾಜ್ಯದವರೂ ನುಗ್ಗಲಾರರು ಈ ಕಾರಣದಿಂದಲೇ ವಿಲಾಯತಿಯವರೂ ಜಪಾನವರೂ ಮಾಡಿಕೊಂಡಿರುವ ಮೇಲ್ಕಂಡ ತಡನಾಮೆಯು ರಾಜ್ಯಗಳಿಗೆ ಸಮಾಧಾನವನ್ನು ಕೊಟ್ಟು ಕಾಪಾಡತಕ್ಕದಾಗಿದೆ ಎಂದು ಸಾರಾಂಶವಾಗಿ ಹೇಳಬಹುದು ಇತ್ತಲಾ ಹಿಂದೂಸ್ಥಾನದ ಸರಹದ್ದುಗಳನ್ನು ಭದ್ರಪಡಿಸಿಕೊಳ್ಳುವ ಭಾಗದಲ್ಲಿ ವಿಲಾಯತಿಯವರು ಸರ್ವಸ್ವತಂತ್ರರಾಗಿರುವ ರೆಂಬುದನ್ನು ಜಪಾನವರು ಒಪ್ಪಿಕೊಂಡಿದ್ದಾರೆ. ಈ ಕರಾರಿನಲ್ಲಿ ಇದೊಂದು ಮುಖ್ಯವಾದ ವಿಷಯವೆಂದು ತಿಳಿಯತಕ್ಕದಾಗಿದೆ ಏತಕ್ಕಾದರೆ ಇದರಿಂದಲೂ ವಿಲಾಯತಿಯವರು ಹಿಂದೂಸ್ಥಾನದ ಎಲ್ಲೆಕಟ್ಟುಗಳನ್ನು ಭದ್ರಪಡಿಸಿಕೊಳ್ಳುವುದಕ್ಕೆ ಬೇಕಾದಂಥಾ ಕಾರ್ಯಗಳನ್ನು ನಡೆಸಿದರೆ ರಷ್ಯಾದವರು ಅವರ ಮೇಲೆ ಯುದ್ಧಕ್ಕೆ ಬರಲು ಆ ಕಾರ್ಯಗಳು ಕಾರಣಗಳಾಗಿ ಎಣಿಸಲ್ಪಡುವುದು ತಪ್ಪಿಹೋಯಿತು. ಈಗ ನಡೆದಿರುವ ಹೊಸ ತಡನಾಮೆಯ ಪ್ರಕಾರ ಒಂದು ವೇಳೆ ರಷ್ಯಾದವರು ಹಿಂದೂಸ್ಥಾನದ ಮೇಲೆ ಕೈಹಾಕುವುದಾದರೆ ಜಪಾನವರು ನುಗ್ಗಿ ಬಂದು ಏಷ್ಯಾದಲ್ಲಿರುವ ರಷ್ಯಾದವರ ಆಸ್ತಿಪಾಸ್ತಿಗಳನ್ನು ಮುತ್ತಿಗೆಹಾಕಿಕೊಳ್ಳುವರು ಈ ಕಾರಣದಿಂದ ತಡನಾಮೆಯು ಈ ಕಲಮು ಇಂಗ್ಲಿಷ್ ಗವರ್ನಮೆಂಟಿನವರಿಗೆ ಈ ರಾಷ್ಟ್ರವನ್ನು ಭದ್ರತವಾಗಿಯೂ ಸುರಕ್ಷಿತವಾಗಿಯೂ ಆಳಿಕೊಂಡು ಬರುವುದರಲ್ಲಿ ತುಂಬಾ ಸಹಾಯ ಮಾಡುವದು.

ನವರಾತ್ರಿ ಉತ್ಸವಗಳು

ನವರಾತ್ರಿಯ ಸಂತೋಷೋತ್ಸವಗಳು ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಕಳೆದ ಶುಕ್ರವಾರ ಪ್ರಾರಂಭವಾಗಿ ನಡೆಯುತ್ತಿರುವವು. ಆ ದಿನ ಬೆಳಗ್ಗೆ ಶ್ರೀಮನ್ ಮಹಾರಾಜರವರು ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ದೀಕ್ಷೆಯನ್ನು ವಹಿಸಿ ಮನೆದೇವರಾದ ಶ್ರೀ ಚಾಮುಂಡೇಶ್ವರಿಯನ್ನು ಪೂಜೆಮಾಡಿ ಶ್ರೀ ಪರಕಾಲ ಗುರುಗಳಿಗೆ ವಂದಿಸಿ ಯುವರಾಜರವರೊಡನೆ ದರ್ಬಾರ್ ಮಂಟಪಕ್ಕೆ ದಯಮಾಡಿ ವರದಾನಗಳನ್ನು ಕೊಟ್ಟು ಸಿಂಹಾಸನದ ಬಳಿಯನ್ನೈದಿ ಯಥಾವಿಧಿಯಾಗಿ ಪೂಜಿಸಿ ಪ್ರದಕ್ಷಿಣೆ ಬಂದು, ಸಿಂಹಾಸನವನ್ನು ಹತ್ತಿ ಕುಳಿತುಕೊಂಡರು ಕೂಡಲೇ ಜಯಭೇರಿನಿನಾದಗಳಾದವು. ಸಮಸ್ತ ಸಭಿಕರೂ ಸಕಲ ಸೈನಿಕರೂ ಶ್ರೀಮನ್ ಮಹಾರಾಜರಿಗೆ ಸನ್ಮಾನ ಮಾಡಿದರು. ಗೌರವಾರ್ಥವಾದ ತೋಪುಗಳೂ ಸುರುಟುಗಳೂ ಹಾರಿಸಲ್ಪಟ್ಟವು. ರಾಜವರ್ಗದವರೂ ಅರಸುಮಕ್ಕಳೂ ದಿವಾನ್‌ರೇ ಮೊದಲಾದ ಉದ್ಯೋಗದಾರರೂ ಬಹು ಮಂದಿ ದೊಡ್ಡ ಮನುಷ್ಯರೂ ಹಾಜರಾಗಿದ್ದು ಮುಜರೇ ಮಾಡಿ ನಜರು ಒಪ್ಪಿಸಿದರು. ಬೆಳಿಗ್ಗೆ ಸುಮಾರು ೧೦ ಗಂಟೆಗೆ ದರ್ಬಾರ್ ಮುಗಿಯಿತು ಆ ಸಾಯಂಕಾಲ ಪದ್ಧತಿಯ ಪ್ರಕಾರ ಶ್ರೀಮನ್ ಮಹಾರಾಜರವರು ಸಿಂಹಾಸನದಲ್ಲಿ ಕುಳಿತು ದರ್ಬಾರ್ ನಡಿಸಿದರು ಈಚೆಗೆ ಪ್ರತಿ ದಿನವೂ ಸಾಯಂಕಾಲದ ಹೊತ್ತು ದರ್ಬಾರ್

ವು ಆಗುತ್ತಿವೆ. ಜಟ್ಟಿ ಕಾಳಗ, ಕರ್ನಾಟಕ ಕುಸ್ತಿ, ದೊಂಬರ ಆಟ ಸರ್ಕಸ್ಸಿನವರ ಮತ್ತು ಕಾಪಿ ಅನಿವರ ನಾನಾ ಕಸರತ್ತುಗಳು, ಪಂಜಿನ ಕಾಳಗ, ಪಟ್ಟಾವರಿಸೆ, ಪಟ್ಟದಾನೆ ಕುದುರೆಗಳ ಮೆರವಣಿಗೆ, ದೀವಟಿಗೆ ಸಲಾಮು, ಚಿತ್ರವಿಚಿತ್ರವಾದ ಬಾಣಬಿರುಸುಗಳು, ಈ ಮೊದಲಾದ ಉತ್ಸವಗಳು ನಡೆಯುತ್ತಲಿವೆ. ನಾಳೆ ಶನಿವಾರ ಸಾಯಂಕಾಲ ಯೂರೋಪಿಯನ್ ಸರ್ದಾರರಿಗೋಸ್ಕರ ಶ್ರೀಮನ್ ಮಹಾರಾಜರವರು ದರ್ಬಾರ್ ಮಾಡುವರು. ಬ್ರಿಟಿಷ್ ರೆಸಿಡೆಂಟರು ದಯಮಾಡುವವರಾಗಿದಾರೆ. ಭಾನುವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ಚತುರಂಗಬಲ ಸಮೇತರಾಗಿ ವಿಜಯೋತ್ಸವದಲ್ಲಿ ತೆರಳುವರು.

ಈ ಸಲ ರಾಜಧಾನಿಯಲ್ಲಿ ಉಪದ್ರಗಳ ಹಾವಳಿಯೇನೂ ಇಲ್ಲದೆ ಎಲ್ಲಾ ಸುರಕ್ಷಿತವಾಗಿರೋಣದರಿಂದ ಈ ವರುಷದ ನವರಾತ್ರಿ ಉತ್ಸವಗಳು ತುಂಬಾ ವಿಜೃಂಭಣೆಯಾಗಿಯೂ ಸಂತೋಷಪ್ರದವಾಗಿಯೂ ನೆರವೇರುತ್ತವೆಂದು ನಿರೀಕ್ಷಿಸಬಹುದಾಗಿದೆ.

ತಾ. ೧೧ನೆ ಬುಧವಾರ ಮಧ್ಯಾಹ್ನ ೧೨ ಗಂಟೆಗೆ ಇಲ್ಲಿನ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗುವುದು. ದಿವಾನ್ ಸರ್ ವಿ. ಪಿ. ಮಾಧವರಾಯರು? ... ಕೃಷ್ಣಮೂರ್ತಿಯವರು ಆ ದಿನ ಈ ಸಂಸ್ಥಾನದ ಗತಸಾಲಿನ ಆದಾಯವ್ಯಯಗಳನ್ನೂ ಬೇರೆ ಬೇರೆ ಇಲಾಖೆಗಳಲ್ಲಿ ನಡೆದಿರುವ ಕಾರುಬಾರುಗಳನ್ನೂ ಮುಂದಿನ ವರುಷದ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನೂ ಪ್ರತಿನಿಧಿಗಳಿಗೆ ತಿಳುಪಡಿಸುವರು. ಈ ವರುಷ ದಿವಾನರವರ ಆಡ್ರೆಸ್ಸಿನಲ್ಲಿ ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರ ಸವಾರಿ ನಮ್ಮ ಸಂಸ್ಥಾನಕ್ಕೆ ಚಿತ್ತೈಸುವ ಸಂತೋಷವಾರ್ತೆಯೂ ರಾಜಧಾನಿಯಲ್ಲಿ ಈ ಸಲ ನಡೆಯುವ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನೋತ್ಸವದ ವಿಷಯವೂ ವಿಶೇಷವಾಗಿರುತ್ತವೆಂದು ನಿರೀಕ್ಷಿಸಬಹುದು.

ಬಳನೇರದ ವೃತ್ತಾಂತಗಳು.

ಮೈಸೂರು ಲೋವರ್ ಮತ್ತು ಅಪ್ಪರ್ ಸೆಕಂಡರಿ ಪರೀಕ್ಷೆಗಳು ಡಿಸೆಂಬರ್ ೨೦, ೨೧ನೆ ತಾರೀಖುಗಳಲ್ಲಿ ಪ್ರಾರಂಭವಾಗುವವು.

*****

ಹುಣಸೂರಿನಿಂದ ೨೧ ಮೈಲಿ ಆಚೆ ಇರುವ ತಿಟ್ಟಮಾತಿ ಎಂಬಲ್ಲಿ ಗಂಡು ೮ ಹೆಣ್ಣು ಆನೆಗಳನ್ನು ಸರ್ಕಾರದವರು ಈ ತಿಂಗಳ ೨೪ಕ್ಕೆ ಹರಾಜು ಮೂಲಕ ವಿಕ್ರಯಮಾಡುವರು.

*****

ಮೆ॥ ಎಸ್. ಎಂ. ಫ್ರೇಸರ್ ಯವರು ನಮ್ಮ ಸಂಸ್ಥಾನಕ್ಕೆ ಬ್ರಿಟಿಷ್ ರೆಸಿಡೆಂಟರಾಗಿ ನೇಮಕವಾಗಿರುತ್ತಾರಷ್ಟೆ. ಇವರು ಈ ತಿಂಗಳ ಅಂತ್ಯದೊಳಗೆ ಇಲ್ಲಿಗೆ ದಯಮಾಡಿ ರೆಸಿಡೆಂಟ್ ಪದವಿಯ ಛಾರ್ಜ ವಹಿಸುವರೆಂದು ವರ್ತಮಾನವಿದೆ.

*****

ಬೆಂಗಳೂರು ದಂಡಿನಲ್ಲಿ ಪ್ಲೇಗಿನ ಕಾಟ ಇದ್ದೇ ಇದೆ. ಮ್ಯುನಿಸಿಪಾಲಿಟಿಯವರು ಅಲ್ಲಿರುವ ಹೆಗ್ಗಣ ಇಲಿಗಳನ್ನು ನಿರ್ಮೂಲ ಮಾಡಬೇಕೆಂದೂ ಇದಕ್ಕೆ ೩೦ ಸಾವಿರ ರೂಪಾಯಿ ತನಕ ಖರ್ಚು ಮಾಡಬೇಕೆಂದೂ ಗೊತ್ತು ಮಾಡಿದಾರೆ.

*****

ನವರಾತ್ರಿ ಉತ್ಸವದ ನಿಮಿತ್ತ ಸರ್ಕಾರಿ ಅಧಿಕಾರಿಗಳೂ ಪ್ರಜಾಪ್ರತಿನಿಧಿಗಳೂ ಯೂರೋಪಿಯನ್ ಸರ್ದಾರರೂ ಈ ವಾರ ರಾಜಧಾನಿಗೆ ಬರುವವರಾಗಿದಾರೆ. ಈ ಸಲ ಸರ್ದಾರರು ಸುಮಾರು ೫೦ ಮಂದಿ ಮಾತ್ರ ಬರುವರೆಂದು ಕೇಳುತ್ತೇವೆ.

*****

ಚಿಕ್ಕಬಳ್ಳಾಪುರದ ಕೆಲವು ದೊಡ್ಡ ಮನುಷ್ಯರು ತಮ್ಮ ಊರಿನಲ್ಲಿ ಒಂದು ಸ್ಟೂಡೆಂಟ್ಸ್ ಹೋಂ ಕಟ್ಟಿಸಿಕೊಡಬೇಕೆಂದು ದಿವಾನರನ್ನು ಕೇಳಿಕೊಂಡರು. ದಿವಾನರವರು ಖುದ್ದಾಗಿ ಅಲ್ಲಿಗೆ ಬಂದು ತನಿಖೆ ಮಾಡಿ ಹುಕುಂ ಕೊಡುವುದಾಗಿ ಅಪ್ಪಣೆಕೊಡಿಸಿದಾರೆ.

*****

ತಂಜಾವೂರಿನ ದಿವಾನ್ ಬಹದೂರ್ ಮೆ॥ ರಘುನಾಥರಾಯರು ಬೆಂಗಳೂರು ಪಟ್ಟಣದಲ್ಲಿ ಒಂದು ಧರ್ಮಶಾಲೆಯನ್ನು ಕಟ್ಟಿಸುತ್ತೇವೆಂದು ಗೊತ್ತಾದ ಕಾರಣ ಈ ಧರ್ಮ ಕೆಲಸಕ್ಕೆ ಮ್ಯುನಿಸಿಪಾಲಿಟಿಯವರು ನಿವೇಶನವನ್ನು ಉಚಿತವಾಗಿ ಕೊಡುವದಾಗಿ ತೀರ್ಮಾನಿಸಿದಾರೆ.

*****

ರಾಜಧಾನಿಯಲ್ಲಿ ಬಡಬಗ್ಗರು ಮನೆಕಟ್ಟಿಕೊಳ್ಳುವದಕ್ಕೆ ಅನುಕೂಲವಾಗುವಂತೆ ಪುರಾಭಿವೃದ್ಧಿಯ ಸಂಘದವರು ಅವರಿಗೆ ಖಾಲಿ ಜಾಗಗಳಲ್ಲಿ ಸ್ಥಳವನ್ನೂ ಹಳೇ ಮನೆಗಳ ಸಾಮಾನನ್ನೂ ಸಾಧ್ಯವಾಗುವ ಮಟ್ಟಿಗೂ ಕೊಟ್ಟು ಸಹಾಯಮಾಡುತ್ತಿದ್ದೇವೆಂದು ಗವರ್ನಮೆಂಟಿಗೆ ತಿಳಿಸಿದಾರೆ.

ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವನ್ನು ರಾಜಧಾನಿಯ ರೈಲ್ವೆ ಸ್ಟೇಷನ್ ಬಳಿ ಇರುವ ಪವಾರ್ ರೈನ್ ಎಂಬ ಕಟ್ಟಡದಲ್ಲಿ ನಡೆಸಬೇಕೆಂದು ತೀರ್ಮಾನವಾಗಿರುವಂತೆ ಕೇಳುತ್ತೇವೆ. ಈ ಕಟ್ಟಡವು ತುಂಬಾ ವಿಶಾಲವಾಗಿಯೂ ಅನುಕೂಲವಾಗಿಯೂ ಇರುವುದು.

*****

ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆ॥ ವಿಲ್ಲಿಯಂಸ್ ಯವರು ಕಳೆದವಾರ ಒಂದೆರಡು ದಿನ ಕಾಯಿಲೆಯಾಗಿದ್ದು ಈಗ ಸೌಖ್ಯವಾಗಿದಾರೆಂತಲೂ, ನವರಾತ್ರಿ ಉತ್ಸವದ ನಿಮಿತ್ತ ಪರಿವಾರ ಸಹಿತ ರಾಜಧಾನಿಗೆ ನಾಳೆ ಶನಿವಾರ ಒಂದು ದಿನದ ಮಟ್ಟಿಗೆ ದಯಮಾಡುವರೆಂದೂ ತಿಳಿಯುವವು.

*****

ಶಿವಗಂಗೆಯಲ್ಲಿ ಅಲ್ಲಿನ ಸ್ವಾಮಿಗಳು ಒಂದು ದೇವಾಲಯವನ್ನು ಕಟ್ಟಿ ಪ್ರತಿಷ್ಠೆ ಮಾಡುವವರಾಗಿದಾರೆ. ಇದಕ್ಕೆ ಹಿಂದುಸ್ಥಾನದ ಅನೇಕ ಕಡೆಗಳಿಂದ ಬಹು ಮಂದಿ ವೈದಿಕಪಂಡಿತರು ಬರುತ್ತಾರೆ. ಅಲ್ಲಿ ಪ್ರತಿಷ್ಠೆ ಮಾಡುವುದಕ್ಕೆ ಯೋಗ್ಯವಾದ ಹಾರದಾ ವಿಗ್ರಹವನ್ನು ಅರಮನೆಯ ಕಾರೇಗಾರರು ಕೆತ್ತಿ ತಯಾರುಮಾಡುತ್ತಿದಾರೆ.

*****

ರೈತ ಪ್ರಜೆಗಳು ವ್ಯವಸಾಯ ಮಾಡುವುದಕ್ಕೆ ಬಾವಿಗಳನ್ನು ತೋಡಿಕೊಳ್ಳಬೇಕೆಂದಪೇಕ್ಷಿಸಿ, ಅಡ್ವಾನ್ಸು ಹಣ ಬೇಕೆಂದು ಅರ್ಜಿ ಬರೆದುಕೊಂಡರೆ ಅಂಥವರಿಗೆ ಡೆಪ್ಯುಟಿ ಕಮಿಷನರು ಯೋಗ್ಯತಾನುಸಾರ ಹಣ ಕೊಡಬಹುದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟು, ಅದಕ್ಕಾಗಿ ೧೩,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

*****

ಬೆಂಗಳೂರಿನ ಹತ್ತಿರ ಶ್ರೀರಾಂಪುರವೆಂಬ ಗ್ರಾಮದಲ್ಲಿ ಕೆಲವರು ಒಂದು ಮಗುವನ್ನು ಕೊಂದು ದೇವತೆಯನ್ನು ತೃಪ್ತಿಪಡಿಸಿದ್ದರು. ಇದು ಪತ್ತೆ ಆಗಿ ಇಬ್ಬರಿಗೆ ಶಿಕ್ಷೆಯಾಗಿತ್ತು. ಅವರು ಛೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ಜಡ್ಜಿಗಳು ಒಬ್ಬನನ್ನು ಸೆರೆಯಿಂದ ಬಿಡಿಸಿ, ಇನ್ನೊಬ್ಬನಿಗೆ ಮಾತ್ರ ಮರಣಾವಧಿ ಸಜವನ್ನು ವಿಧಿಸಿದಾರೆ.

*****

ಬೊಂಬಾಯಿ ಪಟ್ಟಣದ ಬೇರೆ ಬೇರೆ ಕೈಗಾರಿಕೆ ಶಾಲೆಗಳಲ್ಲಿ ಓದುವುದಕ್ಕೆ ಮೈಸೂರು ಸಂಸ್ಥಾನದಿಂದ ಸರ್ಕಾರದವರು ವೇತನ ಕೊಟ್ಟು ಇಲ್ಲಿನ ವಿದ್ಯಾರ್ಥಿಗಳನ್ನು ಕಳುಹಿಸಬೇಕೆಂದು ಈ ವರುಷವೂ ಹಣ ಸ್ಯಾಂಕ್ಷನ್ ಮಾಡಿದಾರೆ. ಈ ಕಸುಬುಗಳನ್ನು ಕಲಿಯಬೇಕೆಂದಪೇಕ್ಷಿಸುವವರು ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅರ್ಜಿ ಬರೆದುಕೊಳ್ಳಬಹುದಾಗಿದೆ.

*****

ಮದರಾಸ್ ಸರ್ಕಾರಿ ಫಾರೆಸ್ಟ್ ಇಲಾಖೆಯವರು ಜಂಗಲ್ ವಿಚಾರವನ್ನೆಲ್ಲಾ ಕಲಿಸುವುದಕ್ಕೆ ಒಂದು ಪಾಠಶಾಲೆಯನ್ನು ಇಟ್ಟು ಆ ಇಲಾಖೆಯ ನೌಕರರನ್ನು ತರಬೇತು ಮಾಡುತ್ತಿದಾರೆ. ಅದೇ ಪ್ರಕಾರ ಮೈಸೂರು ಸರ್ಕಾರದವರೂ ಒಂದು ಸ್ಕೂಲನ್ನಿಟ್ಟು, ಫಾರೆಸ್ಟರುಗಳನ್ನೂ ಗಾರ್ಡುಗಳನ್ನೂ ತರಬೇತು ಮಾಡುವದು ಅವಶ್ಯವೆಂತಲೂ ಇಂಥಾ ಪಾಠಶಾಲೆಗೆ ಹೆಗ್ಗಡದೇವನಕೋಟೆ ಫಾರೆಸ್ಟು ತುಂಬಾ ಅನುಕೂಲವಾಗಿದೆ ಎಂತಲೂ ಸರ್ಕಾರದವರು ಈ ವಿಷಯಕ್ಕೆ ಗಮನಕೊಡಬೇಕೆಂತಲೂ ನಿರೀಕ್ಷಿಸಲ್ಪಟ್ಟಿದೆ.

*****

ರೈಲ್ವೆ ಕಂಪನಿಯವರು ಮೈಸೂರಿಗೆ ಬಂದು ಹೋಗುವ ರೈಲ್ ಗಾಡಿಗಳ ಕಾಲವನ್ನು ಈ ತಿಂಗಳ ಪ್ರಾರಂಭದಿಂದ ಬದಲಾಯಿಸಿರುತ್ತಾರೆ. ಮೈಸೂರಿನಿಂದ ಬೆಂಗಳೂರು ಕಡೆಗೆ ಬೆಳಿಗ್ಗೆ ೯ ೩೦ ಕ್ಕೆ, ೧೧ ೪೦ ಕ್ಕೆ ಮತ್ತು ರಾತ್ರಿ ೯. ೩೦ ಕ್ಕೆ ಮೂರು ಸಲ ಗಾಡಿಗಳು ಹೊರಡುವವು. ಬೆಂಗಳೂರಿನಿಂದ ಮೈಸೂರಿಗೆ ಬೆಳಿಗ್ಗೆ ೩ ಕ್ಕೆ, ಮಧ್ಯಾಹ್ನ ೧ ೨೫ ಕ್ಕೆ, ರಾತ್ರಿ ೮. ೧೦ ಕ್ಕೆ ಮೂರಾವರ್ತಿ ಬರುತ್ತವೆ. ಮೈಸೂರಿಗೂ ನಂಜನಗೂಡಿಗೂ ಹೋಗಿಬರುವ ರೈಲ್‌ಗಾಡಿಗಳ ಕಾಲವನ್ನು ಬದಲಾವಣೆ ಮಾಡಿಲ್ಲ.

*****

ರಾಜಧಾನಿಯಲ್ಲಿ ಭಾರೀ ವರ್ತಕರಾಗಿದ್ದು ಕಾಲವಾದ ಮೆ॥ ಬಾಬೂಮಿಯಾ ಸಾಹೇಬರು ತಮ್ಮ ಕಾಲಾನಂತರ ತಮ್ಮ ಆಸ್ತಿಯ ವಿನಿಯೋಗವನ್ನು ಕುರಿತು ಒಂದು ಉಯಿಲನ್ನು ಬರೆದು, ಇಲ್ಲಿನ ಡೆಪ್ಯುಟಿ ಕಮಿಷನರಿಗೆ ಒಪ್ಪಿಸಿದ್ದರು. ಅದನ್ನು ಡಿಸ್ಟ್ರಿಕ್ಟ್ ಆಫೀಸಿನ ಕಾಡಿರ್ನಲ್ಲಿ ಇಟ್ಟಿದ್ದರು. ಈಗ ಆ ವರ್ತಕರ ಮಕ್ಕಳು ಆಸ್ತಿಯ ಪಾಲಿನ ವಿಚಾರವಾಗಿ ವ್ಯಾಜ್ಯ ನಡೆಸುತ್ತಿದಾರೆ. ಒಂದು ಪಾರ್ಟಿಯವರು ಆ ಉಯಿಲಿನ ನಕಲಿಗಾಗಿ ಅರ್ಜಿಕೊಟ್ಟರು. ರೆಕಾರ್ಡಿನಲ್ಲಿ ಹುಡುಕಿದಾಗ ಅದು ಸಿಕ್ಕಲಿಲ್ಲ. ಡೆಪ್ಯುಟಿ ಕಮಿಷನರು ಹೆಡ್ ರಿಕಾರ್ಡ್‌ಕೀಪರರಾದ ನಾಗಪ್ಪನವರನ್ನು ಸಸ್ಪೆಂಡ್ ಮಾಡಿ ತನಿಖೆಮಾಡುತ್ತಿರುವಂತೆ ಪ್ರಕಟವಾಗಿದೆ.

*****

ಬೆಂಗಳೂರು ಪಟ್ಟಣದಲ್ಲಿ ಯಾರ ಮನೆಯಲ್ಲಾದರೂ ಕಿಡುಬು ಅಥವಾ ವಾಂತಿಭೇದಿ ಉಪದ್ರ ಕಾಣಿಸಿಕೊಂಡರೆ ಆ ಮನೆಯ ಯಜಮಾನನು ಕೂಡಲೇ ಮ್ಯುನಿಸಿಪಲ್ ಪ್ರೆಸಿಡೆಂಟರಿಗಾಗಲಿ ಅಥವಾ ಸಮೀಪದಲ್ಲಿರುವ ಪೋಲೀಸ್ ಠಾಣೆಕಾರ್ರಿಗಾಗಲಿ ಆ ಸಂಗತಿಯನ್ನು ತಿಳಿಸಬೇಕು. ಸರ್ಕಾರದವರು ಆ ಮನೆಗೆ ಹೋಗಿನೋಡಿ, ಅದು ವಿಸ್ತಾರವಾಗಿಯೂ ಗಾಳಿ ಬೆಳಕು ಧಾರಾಳವಾಗಿ ಬರುವಂತೆಯೂ ಇದ್ದಲ್ಲಿ ರೋಗಿಯನ್ನು ಪ್ರತ್ಯೇಕವಾಗಿ ಇಟ್ಟು ಆರೈಕೆ ಮಾಡುವಂತೆ ತಿಳಿಸಿ ಹೋಗುವರು. ಇಲ್ಲದಿದ್ದರೆ ರೋಗಿಯನ್ನು ಆಸ್ಪತ್ರೆಗೆ ಸಾಗಿಸುವರು. ಅದರ ವರ್ತಮಾನಕೊಡದೆ ತಪ್ಪುವ ಮನೆಯ ಯಜಮಾನನಿಗೆ ಸರ್ಕಾರದವರು ೨೦ ರೂಪಾಯಿ ತನಕ ಜುಲ್ಮಾನೆ ವಿಧಿಸುತ್ತಾರೆ.

*****

ರಾಜಧಾನಿಯಲ್ಲಿ ಈಗ ಪ್ರಜೆಗಳು ಮ್ಯುನಿಸಿಪಲ್ ಕಮಿಷನರುಗಳನ್ನು ಚುನಾಯಿಸಿರುತ್ತಾರೆ. ಇದುವರೆಗೆ ಚುನಾವಣೆಯಾಗಿರುವವರ್ಯಾರೆಂದರೆ:—ಕಿಲ್ಲೆ ಮೊಹಲ್ಲೆಗೆ ಮೆ॥ ಗಳಾದ ಶಿರಸ್ತಂ ಸ್ವಾಮಿಗಳು, ಎಂ. ಬಿ. ಕೃಷ್ಣಸ್ವಾಮಿ ಅರಸಿನವರು; ದೇವರಾಜ ಮೊಹಲ್ಲೆಗೆ ಮೆ॥ ತಿರುವೆಂಗಡ ಮೊದಲಿಯಾರು; ಲಷ್ಕರ್ ಮೊಹಲ್ಲೆಗೆ ಮೆ॥ ಗಳಾದ ಎಂ. ಅನಂತರಾಜೈಯನವರು, ರಹಿಮುತುಲ್ಲಾ ಅಹಮದ್ ಸೇಟರು; ಮಂಡಿ ಮೊಹಲ್ಲೆಗೆ ಮೆ॥ ಮಾದಪ್ಪನವರು; ಕೃಷ್ಣರಾಜ ಮೊಹಲ್ಲೆಗೆ ಮೆ॥ ಎನ್. ಶ್ರೀಕಂಠೈಯನವರು, ಚಾಮರಾಜ ಮೊಹಲ್ಲೆಗೆ ಮೆ॥ ಎಂ. ವೆಂಕಟಕೃಷ್ಣಯ್ಯನವರು; ದೇವರಾಜಮೊಹಲ್ಲೆಗೆ ಮೆ॥ ಗಳಾದ ಎಂ. ಸಿ. ರಂಗೈಯಂಗಾರ್ರು ಮತ್ತು ಎ. ಸುಬ್ಬಣ್ಣನವರು.

*****

ಕಳೆದ ಮೂರು ವರ್ಷಗಳಿಂದಲೂ ರಾಜಧಾನಿಯಲ್ಲಿ ಟೆಲಿಗ್ರಾಫ್ ಮಾಸ್ಟರಾಗಿರುವ ಮೆ॥ ಸಿ. ಒಡ್ಡಾರ್ಟ ಯವರನ್ನು ಇಂಡಿಯಾ ಗವರ್ನಮೆಂಟಿನವರು ಪ್ರಿನ್ಸ್ ಆಫ್ ವೇಲ್ಸ್‌ರವರ ಕ್ಯಾಂಪಿನ ಸಂಗಡ ಹಿಂದುಸ್ಥಾನದಲ್ಲೆಲ್ಲಾ ಸಂಚಾರಮಾಡುತ್ತಾ ಅವರ ಕ್ಯಾಂಪಿನ ಟೆಲಿಗ್ರಾಫ್ ವಿಚಾರವನ್ನು ನೋಡಿಕೊಳ್ಳುವಂತೆ ನೇಮಕಮಾಡಿದಾರೆ. ಕಳೆದ ದೆಹಲಿ ದರ್ಬಾರ್ ಕಾಲದಲ್ಲೂ ಗವರ್ನಮೆಂಟಿನವರು ಇವರನ್ನೇ ಅಲ್ಲಿ ಸ್ಪೆಷಲ್ ಡ್ಯೂಟಿಗೆ ಕಳಿಸಿಕೊಂಡಿದ್ದರು. ಮೆ॥ ಒಡ್ಡಾರ್ಟ ಯವರು ರಾಜಧಾನಿಯಲ್ಲಿ ವರ್ತಕರೇ ಮೊದಲಾದ ಪ್ರಜೆಗಳ ಪ್ರೀತಿ ಗೌರವವನ್ನು ಸಂಪಾದಿಸಿಕೊಂಡಿದಾರೆ. ಮುಂದಿನ ನವೆಂಬರ್ ೯ ರಿಂದ ೧೯೦೬ನೇ ಮಾರ್ಚಿ ೧೯ರ ತನಕ ಇವರು ಯುವರಾಜರವರ ಕ್ಯಾಂಪಿನಲ್ಲಿ ಕೆಲಸ ಮಾಡುವರು. ಇಂಥಾ ಗೌರವವಾದ ಸ್ಥಾನ ಇವರಿಗೆ ದೊರಕಿದ್ದು ಸಂತೋಷಕರವಾಗಿದೆ.

*****

ಕಳೆದ ಶನಿವಾರ ಬೆಳಿಗ್ಗೆ ಬೆಂಗಳೂರು ಪಟ್ಟಣದಲ್ಲಿರುವ ಸರ್ಕಾರಿ ಬಾಲಿಕಾ ಪಾಠಶಾಲೆಗಳಲ್ಲಿ ತೇರ್ಗಡೆ ಹೊಂದಿದ ಹೆಣ್ಣುಮಕ್ಕಳಿಗೆ ಅಲ್ಲಿನ ಸಾಂಸ್ಕೃತಕಾಲೇಜಿನಲ್ಲಿ ಬಹುಮಾನಗಳನ್ನು ಕೊಟ್ಟರು. ಸೀನಿಯರ್ ಸರ್ಜನರ ಪತ್ನಿಯವರು ಸಭಾನಾಯಕಿಯಾಗಿದ್ದರು. ಅಡೆಯಲ್ಲಿ ಮೆ॥ ಬಾಬೂಸಾಹೇಬರು ಸಭಿಕರನ್ನು ಕುರಿತು ಹೇಳಿದ್ದೇನೆಂದರೆ— ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ವಿದ್ಯಾವಂತರಾಗಿಯೂ ಪ್ರಪಂಚಜ್ಞಾನವನ್ನು ತಿಳಿದವರಾಗಿಯೂ ಇರತಕ್ಕ ಪ್ರಜೆಗಳು ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸುವುದು ಅವಶ್ಯವೆಂದು ಅರಿತು ಅವರನ್ನು ಪಾಠಶಾಲೆಗಳಿಗೆ ಕಳುಹಿಸಿ ಸ್ತ್ರೀವಿದ್ಯಾಭ್ಯಾಸಕ್ಕೆ ಸಹಾಯಕರಾಗುತ್ತಿದಾರೆ. ಬಾಲಿಕಾ ಪಾಠಶಾಲೆಗಳಲ್ಲೂ ಇನ್ನು ಮೇಲೆ ಸುಲಭವಾದ ಫೀಜಿನ ದರಗಳನ್ನು ರೂಢಿಗೆ ತರುವುದು ವಿದ್ಯಾಭಿವೃದ್ಧಿಗೆ ಸಹಕಾರಿಯಾಗುವುದೆಂದು ತೋರಿರುವ ಕಾರಣ ಇಷ್ಟರಲ್ಲೇ ಅದನ್ನು ಪ್ರಕಟಿಸಿ ಜಾರೀಲಿ ತರಬೇಕೆಂದಿರುತ್ತೇವೆ ಎಂಬುದೇ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಶ್ಯಾನುಭೋಗ್ ಮೆ॥ ಚೌಡಯ್ಯನವರನ್ನು ಮೈಸೂರು ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕಮಾಡಿದೆ.

ನವರಾತ್ರಿ ಹಬ್ಬದ ಪ್ರಯುಕ್ತ ಮೈಸೂರು ಸರ್ಕಾರದ ಎಲ್ಲಾ ಇಲಾಖೆಗಳಿಗೂ ಅಕ್ಟೋಬರ್ ೪ನೇ ಬುಧವಾರದಿಂದ ೧೬ನೇ ಸೋಮವಾರದ ತನಕ ಉಭಯ ದಿನಗಳೂ ಕೂಡಿ ರಜಾ ಕೊಟ್ಟಿದೆ.

ಬೆಂಗಳೂರು ಸಿಟಿ ಲಾಲ ಬಾಗಿನ ಬಳಿ ಮಾತ್ರ ಬಜಾರದಲ್ಲಿರುವ ಮಿ॥ ಸೈಯದ್ ಅಹಮದ್ ಷುತಾರ್ ಸಾಹೇಬ್ ಇವರು ಕೋರ್ಟಿಗೆ ಹಾಜರಾಗಬೇಕಾದ ಅಗತ್ಯವಿಲ್ಲವೆಂಬ ವಿನಾಯತಿಯನ್ನು ಕೊಟ್ಟಿದೆ. ಈ ವಿನಾಯತಿಯು ಅವರು ಜೀವಿಸಿರುವ ತನಕ ಅವರು ಮಾತ್ರ ಅನುಭವಿಸತಕ್ಕದ್ದು.

ಪೋಲೀಸ್ ಅ॥ ಸೂಪರಿಂಟೆಂಡೆಂಟ್ ಮೆ॥ ಸೈಯದ್ ಉದ್ದೀನ್ ಹುಸೇನ್ ಯವರಿಗೆ ಕೊಟ್ಟಿದ್ದ ಎರಡು ತಿಂಗಳು ಒಂಬತ್ತು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೂ ಇಪ್ಪತ್ತೊಂದು ದಿನಗಳಿಗೆ ಜಾಸ್ತಿ ಮಾಡಿದೆ.

ಹೊಳಲ್ಕೆರೆ ತಾಲ್ಲೂಕ್ ಅಮಲ್ದಾರ್ ಮೆ॥ ವಿ. ಎಸ್. ರಾಜಗೋಪಾಲಾ ಚಾರ್ಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಹತ್ತು ದಿನಗಳಿಗೆ ಜಾಸ್ತಿಮಾಡಿದೆ.

ಹೊಳೆನರಸೀಪುರ? ತಾಲ್ಲೂಕ್ ಅಮಲ್ದಾರ್ ಮೆ॥ ವಿ. ಎನ್. ಗುರುರಾಯರು ತಾಲ್ಲೂಕ್ ಶಿರಸ್ತೆದಾರ್ರಿಗೆ ಛಾರ್ಜ ವಹಿಸಿ, ಕೂಡಲೇ ಹೋಗಿ ಮಳವಳ್ಳಿ ತಾಲ್ಲೂಕಿನ ಛಾರ್ಜನ್ನು ಪಡೆಯಕೊಳ್ಳತಕ್ಕದ್ದು.

ಮಳವಳ್ಳಿ ತಾಲ್ಲೂಕ್ ಅಮಲ್ದಾರ್ ಮೆ॥ ಕೇಸರ್ ಸಿಂಗ್ ರವರು ಶಿರಸ್ತೆದಾರ್ರಿಗೆ ತಾಲ್ಲೂಕಿನ ಛಾರ್ಜನ್ನು ಕೊಟ್ಟು, ಕೂಡಲೇ ಹೋಗಿ ಪಾವಗಡ ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಶ್ರೀರಂಗಪಟ್ಟಣದ ತಾಲ್ಲೂಕ್ ಅಮಲ್ದಾರ್ ಮೆ॥ ಕೃಷ್ಣಾಜಿ ನಾರಾಯಣರವರು ಶಿರಸ್ತೆದಾರ್ರಿಗೆ ತಾಲ್ಲೂಕ್ ಛಾರ್ಜನ್ನು ಕೊಟ್ಟು, ಕೂಡಲೇ ಹೋಗಿ ಹೊನ್ನಾಳಿ ತಾಲ್ಲೂಕಿನ ಛಾರ್ಜ ವಹಿಸತಕ್ಕದ್ದು.

ಪ್ಲಾಂಟರುಗಳ ಸಪ್ಲೈ ಕಂಪನಿಯ ಮ್ಯಾನೇಜರ್ ಮೆ॥ ಎಚ್. ವಾಟ್ಸನ್‌ರವರನ್ನು ಚಿಕ್ಕಮಗಳೂರು ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಚಿತ್ರದುರ್ಗದ ಪ್ರೊ. ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಜಿ. ಭೀಮರಾಯರನ್ನು ಅಲ್ಲಿನ ಗವರ್ನಮೆಂಟ್ ಕನ್ನಡ ಬಾಲಿಕಾ ಪಾಠಶಾಲೆಯ ಮೇಲ್ವಿಚಾರಣಾ ಕಮಿಟಿ ಮೆಂಬರಾಗಿ ನೇಮಿಸಿದೆ.

ಸರ್ವರಿಗೂ ತಂದೆಯಾಗಿರುವಾತನ ಲಕ್ಷಣಗಳು.—II.

"ಪ್ರಾರ್ಥನೆಯನ್ನು ಕೇಳುವವನೇ,
ನಿನ್ನ ಬಳಿಗೆ ಎಲ್ಲಾ ನರಪ್ರಾಣಿಗಳು ಬರುವವು.
ಅಕ್ರಮಕಾರ್ಯಗಳು ನನ್ನ ಮೇಲೆ ಪ್ರಬಲವಾಗಿವೆ,
ಆದಾಗ್ಯೂ ನೀನೇ ನಮ್ಮ ಅಪರಾಧಗಳನ್ನು ಪರಿಹರಿಸುವಿ."

ನಾವು ಉದಾಹರಿಸುವ ಈ ವಾಕ್ಯದ ಮೊದಲನೆಯ ಭಾಗವನ್ನು ಕುರಿತು ಕಳೆದ ವಾರದಲ್ಲಿ ನೋಡಿದೆವಷ್ಟೆ. ಪ್ರಾರ್ಥನೆಯನ್ನು ಕೇಳುವಂಥವನಾದ ದೇವರು ಇರುವವನಾದನೆ ಆತನನ್ನು ಸಕಲ ಜನಗಳು ಆರಾಧಿಸುವರೆಂಬುದರಲ್ಲಿ ಸಂಶಯವಿಲ್ಲವೇ ಇಲ್ಲ. ಇದಲ್ಲದೆ ದೇವರು ತನ್ನನ್ನು ಬೇಡಿಕೊಳ್ಳುವವರ ಪ್ರಾರ್ಥನೆಯನ್ನು ಕೇಳಿ ನಡಸುವ ಲಕ್ಷಣವುಳ್ಳವನಾಗಿದ್ದಾನೆಂದು ಯೇಸುಸ್ವಾಮಿಯು ತಿಳಿಯಪಡಿಸಿರುತ್ತಾನೆಂಬ ಎರಡು ಸಂಗತಿಗಳನ್ನು ನಾವು ನೋಡಿರುತ್ತೇವಷ್ಟೆ.

ಮೇಲೆ ಸೂಚಿಸಿರುವ ಲಕ್ಷಣವಲ್ಲದೆ ದೇವರಲ್ಲಿ ಮತ್ತೊಂದು ಲಕ್ಷಣವುಂಟು. ಅದನ್ನು ಈ ವಾರ ಆಲೋಚಿಸುವೆವು. ಪಾಪವೆಂಬ ದೊಡ್ಡ ಹೊರೆಯನ್ನು ಹೊತ್ತು ಸಂಕಟಪಡದೆ ಇರುವ ಮನುಷ್ಯರನ್ನು ಭೂಲೋಕದಲ್ಲಿ ಯಾರಾಗಲಿ ಎಲ್ಲಿಯಾಗಲಿ ಕಂಡದ್ದುಂಟೋ? ಯಾರನ್ನು ನೋಡಿದರೂ ಪಾಪದಿಂದ ಸಂಕಟಪಡುವದನ್ನು ತಿಳಿಯಬಹುದು. ಪಾಪದ ಫಲವಾಗಿ ಬರುವಂಥ ದೇಹಸಂಬಂಧವಾದ ರೋಗಾದ್ಯುಪದ್ರವಗಳನ್ನು ನೋಡಿರಿ. ಆ ಪಾಪದ ಘೋರವಾದ ಫಲವನ್ನು ನೋಡಿ ಕೆಲವರು ಬಲಿಗಳನ್ನರ್ಪಿಸುವರು. ಪ್ಲೇಗು ಬಂದ ಕಾಲದಲ್ಲಿಯೋ ಬೇರೆ ಯಾವದೋ ಒಂದು ರೋಗವು ಸಂಭವಿಸಿದ ಕಾಲದಲ್ಲಿಯೋ ಜನರು—ಇದು ಮಾರಿಯಮ್ಮನಿಂದ ಬಂದದ್ದೆಂಬುದಾಗಿ ಊಹಿಸಿ ಆ ದೇವತೆಯನ್ನು ಶಾಂತಿಮಾಡುವದಕ್ಕಾಗಿ ಮೃಗಗಳನ್ನು ಕೊಂದು ಬಲಿ ಕೊಡುವರು. ಇದೊಂದು ವಿಧವಾಗಿ ಪಾಪದ ಘೋರತ್ವವನ್ನು ಜನರು ತಿಳಿದಿದ್ದಾರೆಂದು ಸೂಚಿಸುತ್ತದೆ. ಬೇರೆ ಕೆಲವರಲ್ಲಿ ಒಳ್ಳೆಯತನವನ್ನು ಮಾಡೋಣ ಎಂಬ ಮನಸ್ಸಿಗೆ ಪಾಪವು ಅವಕಾಶವನ್ನು ಕೊಡದೆ ಇರೋಣದರಿಂದ ಒಳಗೆ ಮಹಾ ಯುದ್ಧದಂಥ ಹೋರಾಟವು ಸಂಭವಿಸುವದರಿಂದ ದೇಹದಂಡನೆಯ ಮೂಲಕ ಪಾಪದ ಬಲವನ್ನು ಮುರಿಯಬೇಕೆಂಬ ಉದ್ದೇಶದಿಂದ ಅರಣ್ಯಕ್ಕೆ ಹೋಗುತ್ತಾರೆ. ಇನ್ನು ಕೆಲವರು ಕಾವೇರೀ ನದಿಗೋ ಗಂಗಾನದಿಗೋ ಅಥವಾ ಕ್ಷೇತ್ರವೆಂದು ಹೆಸರುಗೊಂಡ ಬೇರೆ ಯಾವದಾದರೊಂದು ದೂರಸ್ಥಳಕ್ಕೋ ಹೋಗಿ ತಮ್ಮ ಪಾಪವನ್ನು ತೊಳೆದುಕೊಂಡು ವಿಸರ್ಜಿಸಿ ಪುಣ್ಯವಂತರಾಗಬೇಕೆಂದು ತೀರ್ಥಯಾತ್ರೆಗೆ ಹೊರಡುತ್ತಾರೆ. ಇನ್ನು ಕೆಲವರನ್ನು ಕೇಳಿದರೆ—ಪಾಪವನ್ನು ಕಳೆದುಕೊಳ್ಳುವ ಮಾರ್ಗವೇ ಇಲ್ಲ. ದೇವರು ಮನುಷ್ಯರಿಗೆ ಕೋಟ್ಯಂತರ ಜನ್ಮಗಳನ್ನು ನಿಯಾಮಕ ಮಾಡಿದ್ದಾನೆ. ಆ ಭವಪಾರಂಪರ್ಯದಿಂದ ಪಾಪಪುಣ್ಯಗಳು ಲಭಿಸುತ್ತವೆ. ಪಾಪವನ್ನು ಕಳೆದುಕೊಂಡು ಪುಣ್ಯವಂತರಾಗಬೇಕಾದರೆ ಅನೇಕ ಜನ್ಮಗಳನ್ನು ಎತ್ತುತ್ತಲೆ ಇದ್ದು ಕಡೆಯಲ್ಲಿ ಮುಕ್ತಿಯನ್ನು ಹೊಂದಬೇಕೇ ಹೊರತು ಇದಕ್ಕೆ ಬೇರೆ ಯಾವ ಮಾರ್ಗವೂ ಇಲ್ಲವೇ ಇಲ್ಲವೆಂದು ಹೇಳುವರು.

ಮೇಲೆ ಹೇಳುವ ಬಗೆ ಬೇರೆ ವಿಧಗಳಲ್ಲಿ ಪಾಪವಿಮುಕ್ತರಾಗತಕ್ಕ ಪ್ರಯತ್ನಗಳಿಂದ ಫಲವೇನಾಯಿತೆಂದು ಕೇಳಿದರೆ ಏನು ಹೇಳಬೇಕು? ರೋಗಕಾಲದಲ್ಲಿ ಮಾರಿಗೆ ಬಲಿಕೊಟ್ಟದ್ದರಿಂದ ಆ ದೇವತೆಗೆ ಶಾಂತಿಯಾಯಿತೇ? ಎಂದು ಕೇಳಿದರೆ ಯಾವ ಉತ್ತರವು ಬಂದೀತು? ಆ ದೇವತೆಗೆ ಪ್ರತಿಯೊಂದು ಸಂದರ್ಭದಲ್ಲಿಯೂ ಶಾಂತಿಯಾಯಿತೆಂಬ ನಿಶ್ಚಯಾರ್ಥವು ಯಾವ ಅನುಭವಕ್ಕಾದರೂ ಬಂದಿದೆಯೋ? ಈ ಪ್ರಶ್ನೆಗೆ ಇಲ್ಲವೆಂಬ ಉತ್ತರವೇ ಬರುವದು. ಒಂದಾನೊಂದು ಊರಿನಲ್ಲಿ ಜನರು ಪ್ಲೇಗು ಮಾರಿಯನ್ನು ಶಾಂತಪಡಿಸಬೇಕೆಂದು ಅನೇಕ ಬಲಿಗಳನ್ನರ್ಪಿಸಿದರು. ಪ್ಲೇಗು ಶಾಂತವಾಗುವದಕ್ಕೆ ಬದಲಾಗಿ ಆ ಬಲಿಯನ್ನರ್ಪಿಸಿದ ಒಂದು ವಾರದೊಳಗೆ ಜನರು ಇಮ್ಮಡಿಯಾಗಿ ಸತ್ತರು. ಹಾಗೆ ಸತ್ತವರೊಳಗೆ ಬಲಿಯರ್ಪಿಸಿದ ಪೂಜಾರಿಯೇ ಮೊದಲನೆಯವನಾಗಿದ್ದನು. ಇದೀಗ ನಮ್ಮ ಸ್ವಂತ ಅನುಭವಸಾಕ್ಷಿಯಾಗಿದೆ. ಇದೇ ಪ್ರಕಾರ ಇನ್ನೂ ಅನೇಕರ ಅನುಭವಕ್ಕೆ ಬಂದಿರಬೇಕೆಂದು ನಾವು ತಿಳಿದಿದ್ದೇವೆ. ಹಾಗಾದರೆ ಆ ಜನರ ಪ್ರಾರ್ಥನೆಯನ್ನು ಮಾರಿಯು ಕೇಳಲಿಲ್ಲವೋ, ಅವರು ಕೊಟ್ಟ ಬಲಿಯನ್ನು ಸ್ವೀಕರಿಸಿ ಶಾಂತಿ ಹೊಂದಲಿಲ್ಲವೋ? ಎಂದು ಕೇಳಿದರೆ, ಶಾಂತಿಯನ್ನು ಹೊಂದಿದಳೋ ಇಲ್ಲವೋ ಒಬ್ಬರೂ ನಿಸ್ಸಂದೇಹವಾಗಿ ಹೇಳಲಾರರು. ಅಂಥಾ ಫಲವನ್ನು ನೋಡುವಲ್ಲಿ ಮಾರಿಗೆ ಶಾಂತಿಯಾದ ಹಾಗೆ ತೋರಲಿಲ್ಲ. ಇದೇ ಪ್ರಕಾರವಾಗಿ ಕಾಶೀಯಾತ್ರೆಯನ್ನು ಮಾಡಿದ ಪ್ರಯಾಣಿಕನು ಗಂಗಾನದಿಯಲ್ಲಿ ಸ್ನಾನ ಪೂಜೆ ಬಂದನಂತರ ತಾನು ಪಾಪದಿಂದ ವಿಮುಕ್ತನಾದೆನೆಂದು ಅನುಭವಪೂರ್ವಕವಾಗಿ ಹೇಳಬಲ್ಲನೋ? ಅಥವಾ ಸುಮ್ಮಸುಮ್ಮನೆ ತನ್ನ ಪಾಪವು ಕಳೆದೇ ಹೋಗಿರಬೇಕೆಂದು ಊಹಿಸಿಕೊಳ್ಳುತ್ತಾನೋ? ಇದಿರಲಿ. ಪಾಪವು ಪರಿಹರಿಸಲ್ಪಡದಿದ್ದರೆ ಕರ್ಮಪಾಶದಿಂದ ಬಿಡುಗಡೆಯೇ ಇಲ್ಲವೆಂದು ಹೇಳಬೇಕಾಯಿತು. ಹಾಗಾದರೆ ಮನುಷ್ಯರಿಗೆ ಭೂಲೋಕದಲ್ಲಿ ನಿರೀಕ್ಷೆಯೇ ಇಲ್ಲವಲ್ಲ!

ದೇವರು ಪಾಪವನ್ನು ಕ್ಷಮಿಸುವದು ಅಸಾಧ್ಯವೆಂದು ಭಾವಿಸುವದಕ್ಕೆ ಆಧಾರವೇನಾದರೂ ಇದೆಯೋ? ಪಾಠಶಾಲೆಯಲ್ಲಿ ಒಬ್ಬ ಹುಡುಗನು ಒಂದು ತಪ್ಪನ್ನು ಮಾಡುತ್ತಾನೆ. ಅವನನ್ನು ಉಪಾಧ್ಯಾಯನು ದಂಡಿಸಬೇಕೆಂದು ನಿಶ್ಚಯಿಸುತ್ತಾನೆ. ಹೀಗಿರುವಲ್ಲಿ ಆ ಹುಡುಗನು—"ಇದು ನನ್ನ ಕರ್ಮ! ಅದರ ಫಲವನ್ನು ನಾನು ತಿಂದೇ ತೀರಬೇಕು" ಎಂದು ಹೇಳುತ್ತಾನೋ? ಇಲ್ಲವೇ ಇಲ್ಲ. ಅವನು ಉಪಾಧ್ಯಾಯರ ಬಳಿಗೆ ಹೋಗಿ—"ಅಯ್ಯಾ, ನನ್ನನ್ನು ತಾವು ಕ್ಷಮಿಸಲೇ ಬೇಕು" ಎಂದು ಬೇಡಿಕೊಳ್ಳುತ್ತಾನಲ್ಲವೇ? ತಾನು ತಪ್ಪುಮಾಡಿದಾಗ್ಯೂ ಆ ಉಪಾಧ್ಯಾಯನಿಂದ ಕ್ಷಮೆಯನ್ನು ಹೊಂದುವದು ಸಾಧ್ಯವಾಗಿದೆಯೆಂದು ಆ ಹುಡುಗನು ತಿಳಿದಿರುತ್ತಾನಲ್ಲವೇ? ಅದೇಪ್ರಕಾರ ಪ್ರತಿಯೊಬ್ಬರೂ ಪರಸ್ಪರವಾಗಿ ಒಬ್ಬರ ತಪ್ಪನ್ನು ಮತ್ತೊಬ್ಬರು ಕ್ಷಮಿಸಬಹುದೆಂದು ನಂಬಿದ್ದೇವೆ. ಮನುಷ್ಯರೇ ಒಬ್ಬರ ತಪ್ಪನ್ನು ಮತ್ತೊಬ್ಬರು ಕ್ಷಮಿಸಿದರೆ ದೇವರು ತನಗೆ ವಿರೋಧಿಗಳಾಗಿ ತನ್ನ ಸೃಷ್ಟಿಗಳಾದವರು ಮಾಡಿದ ತಪ್ಪನ್ನು ಕ್ಷಮಿಸುವನೆಂದು ಯಾಕೆ ನಂಬಬಾರದು? ಈ ನ್ಯಾಯವನ್ನು ನೋಡಿದರೆ ಪಾಪಕ್ಷಮೆಯೆಂಬ ಬೋಧನೆಯು ಜನರ ನಂಬಿಕೆಗೆ ಅರ್ಹವಾದುದಲ್ಲವೆಂದು ಕೆಲವರು ಹೇಳುವದನ್ನು ನಾವು ಒಪ್ಪಲಾರೆವು.

ಪಾಪಕ್ಷಮೆಯ ವಿಷಯದಲ್ಲಿ ಕ್ರೈಸ್ತಸದ್ಧರ್ಮವು ಹೇಳುವದೇನೆಂದು ವಿಚಾರಿಸಿದರೆ ದೇವರು ನಿಜವಾಗಿ ಪಾಪವನ್ನು ಕ್ಷಮಿಸುತ್ತಾನೆಂದು ನಿಸ್ಸಂದೇಹವಾಗಿ ತಿಳಿಯತಕ್ಕದ್ದು. 'ತಂದೆಯು ಮಕ್ಕಳನ್ನು ಕನಿಕರಿಸುವ ಪ್ರಕಾರವೇ ದೇವರು ತನಗೆ ಭಯಪಡುವವರಮೇಲೆ ಕನಿಕರವನ್ನಿಟ್ಟಿರುತ್ತಾನೆ" ಎಂದು ಸತ್ಯವೇದದಲ್ಲಿ ಹೇಳಿರುತ್ತದೆ. ನಮ್ಮ ಪಾಪವನ್ನು ಕ್ಷಮಿಸಲೇ ಬೇಕೆಂದು ದೇವರನ್ನು ನಾವು ಬಲಾತ್ಕರಿಸಲಾರೆವು. ಘೋರವಾದ ತಪಸ್ಸನ್ನು ಮಾಡಿ ದೇವತೆಗಳಿಗೆ ಇಷ್ಟವಿದ್ದರೂ ಇಲ್ಲದಿದ್ದರೂ ತಪಸ್ವಿಯು ಇಷ್ಟದಂತೆ ನಡಿಸಿಕೊಡುವದಾಗಿ ಅವರನ್ನು ಬಲಾತ್ಕರಿಸಬಹುದೆಂಬುದಾಗಿ ಕೆಲವರು ಬೋಧಿಸಿರುವರು. ಈ ಬೋಧನೆಯಲ್ಲಿ ಹುರುಳಿಲ್ಲ. ದೇವರು ಪಾಪಿಯನ್ನು ಕ್ಷಮಿಸುವದು ಯಾತಕ್ಕೆಂದರೆ ಆತನು ಆ ಪಾಪಿಯನ್ನು ಪ್ರೀತಿಸುವದರಿಂದಲೇ. ಸ್ವಾಮಿಯು ಪಾಪವನ್ನು ಹಗೆಮಾಡಿದರೂ ಆ ಪಾಪಕ್ಕೆ ವಶನಾದ ಪಾಪಿಯನ್ನು ಪ್ರೀತಿಸುತ್ತಾನೆ. ಇದಲ್ಲದೆ ಆತನು ಪಾಪಿಷ್ಟರನ್ನು ಕ್ಷಮಿಸುವದಕ್ಕೆ ಬಹಳ ಉತ್ಸಾಹವುಳ್ಳವನಾಗಿದ್ದಾನೆಂದೂ ಪ್ರಕಟಿಸುವದಕ್ಕಾಗಿ ತನ್ನ ಕುಮಾರನನ್ನೇ ಭೂಲೋಕಕ್ಕೆ ಕಳುಹಿಸಿ, ರಕ್ಷಣೆಯ ಶುಭವಾರ್ತೆಯನ್ನು ಪ್ರಜೆಗಳಿಗೆಲ್ಲಾ ತಿಳಿಸುವವನು ಮತ್ತು ಸಕಲರೂ ರಕ್ಷಿಸಲ್ಪಡುವದು ಸಾಧ್ಯವಾಗುವಂತೆ ರಕ್ಷಣೋಪಾಯವನ್ನು ಕಲ್ಪಿಸಿಕೊಟ್ಟಿರುತ್ತಾನೆ.

ದೇವರು ಪಾಪವನ್ನು ಪರಿಹರಿಸುತ್ತಾನೆಂದು ಮನುಷ್ಯರು ತಿಳಿಯಬಲ್ಲರೋ? ತಿಳಿಯಬಲ್ಲರು. ಇದರಲ್ಲೇನೂ ಸಂಶಯವಿಲ್ಲ. ಕ್ರಿಸ್ತನನ್ನು ನಂಬಿರುವ ಆತನ ಶಿಷ್ಯರೆಲ್ಲಾ ತಾವು ಪಾಪದ ಪಾಶದಿಂದ ಬಿಡುಗಡೆಯನ್ನು ಹೊಂದಿದವರೆಂದು ನಿಸ್ಸಂದೇಹವಾಗಿ ತಿಳಿದಿದ್ದಾರೆ. ಅವರು ಪೂರ್ವದಲ್ಲಿ ಪಾಪಕೃತ್ಯಗಳನ್ನು ಮಾಡಿದ್ದಾಗ್ಯೂ ಮಾಡದೆ ಇದ್ದವರಂತೆಯೇ ಆಗಿದ್ದೇವೆಂತಲೂ, ಒಂದಾನೊಂದು ಕಾಲದಲ್ಲಿ ಪಾಪದ ಪಾಶಕ್ಕೆ ಸಿಕ್ಕಿದವರಾಗಿದ್ದರೂ ಈಗ ಅದರಿಂದ ಬಿಡುಗಡೆಯಾಗಿ ದೇವರ ಚಿತ್ತವನ್ನು ನಡಿಸುವದಕ್ಕೆ ಯಾವ ಅಭ್ಯಂತರವೂ ಇಲ್ಲದಂತಾಗಿದೆಯೆಂತಲೂ ಇದರ ಶ್ರೇಷ್ಠವಾದ ಜೀವನವು ತಮಗುಂಟೆಂತಲೂ ನಿಸ್ಸಂದೇಹವಾಗಿ ಬಲ್ಲವರಾಗಿದ್ದಾರೆ.

ಬಲಿಗಳಿಂದಲೂ ಯಾತ್ರೆಗಳಿಂದಲೂ ಪ್ರಾರ್ಥನೆಗಳಿಂದಲೂ ಯಾವದು ಅಸಾಧ್ಯವಾಗಿರುವದೋ ಅಂಥ ಕಾರ್ಯವನ್ನು ದೇವರು ಮನುಷ್ಯರಿಗೆ ಸಾಧ್ಯವನ್ನಾಗಿ ಕೊಟ್ಟಿದ್ದಾನೆ. ಪಾಪಿಷ್ಟರಾದ ಮನುಷ್ಯರಂತೆ ದೇವಕುಮಾರನು ಮನುಷ್ಯನಾಗಿ ಹುಟ್ಟಿ, ಪಾಪದ ನಿಮಿತ್ತ ತಾನೇ ಬಲಿಯಾಗಿ ಮನುಷ್ಯರೊಳಗಿರುವ ಪಾಪವನ್ನು ನಿರ್ಮೂಲ ಮಾಡಿದನು. ಇದರ ಮೂಲಕವಾಗಿ ಮನುಷ್ಯರು ದೇವರ ಸತ್ಯನ್ಯಾಯಪ್ರಮಾಣವನ್ನು ನೆರವೇರಿಸುವದಕ್ಕೆ ಅವಕಾಶವುಂಟಾಗಿದೆ. ಈ ಪ್ರಕಾರ ಮನುಷ್ಯರೆಲ್ಲರನ್ನು ಪೀಡಿಸುತ್ತಿರುವ ಕೊರತೆಯನ್ನು ಸರ್ವರಿಗೂ ತಂದೆಯಾಗಿರುವ ದೇವರೇ ಪರಿಹರಿಸಿಕೊಟ್ಟಿರುತ್ತಾನೆ. ಅಂಥ ತಂದೆಯಾದ ದೇವರನ್ನು ಯೇಸುಸ್ವಾಮಿಯು ಭೂಲೋಕಕ್ಕೆ ಪ್ರಕಟಪಡಿಸಿಕೊಟ್ಟಿರುತ್ತಾನೆ.

ವಂಗದೇಶ ವಿಭಜನ.

ವಂಗದೇಶವನ್ನು ವಿಭಾಗಮಾಡಿದ ವಿಷಯವು ವಾಚಕರಿಗೆ ವೇದ್ಯವಾಗಿಯೇ ಇದೆಯಷ್ಟೆ. ಈ ವಿಭಾಗವು ಸದುದ್ದೇಶದಿಂದ ಮಾಡಲ್ಪಟ್ಟಿತೋ ಇಲ್ಲವೋ ಎಂಬದನ್ನು ತರ್ಕಿಸುವದು ಈ ಲೇಖನದ ಉದ್ದೇಶವಾಗಿಲ್ಲ. ಪರಂತು ಇಂಡಿಯಾ ಹಿಂದೂಸ್ಥಾನಕ್ಕೆ ನಡುವೆ ಇರುವ ಈ ಮಧ್ಯಪ್ರಾಂತ್ಯಗಳ ರಾಜಧಾನಿಯಿಂದ, ನೆರೆ ರಾಜ್ಯಗಳಾದ ಬಂಗಾಳಾ, ಬ್ರಹ್ಮದೇಶ, ಉತ್ತರಭಾಗ, ವರ್‍ಹಾಡ (ಬೇರಾರು) ಮತ್ತು ಪೂರ್ವ ಈ ಕಡೆಗಳಲ್ಲಿ ಈ ವಿಭಜನದ ಫಲವು ಹೇಗೆ ಪರಿಣಮಿಸಿದೆಯೆಂಬದನ್ನು ನನ್ನ ಕಣ್ಣಾರೆ ಕಂಡು, ಕಿವಿಯಾರೆ ಕೇಳಿರುವ ಮಟ್ಟಿಗೂ ನನ್ನ ಸ್ವದೇಶೀಯರಾದ ಮೈಸೂರ ಸಂಸ್ಥಾನದ ಅನೇಕಾನೇಕ ಸ್ನೇಹಿತರ ಅವಗಾಹನೆಗೆ ತರಬೇಕೆಂದು ಇದನ್ನು ತಮ್ಮ ಬಳಿಗೆ ಕಳುಹಿಸಿರುತ್ತೇನೆ.

ಹಿಂದೂಸ್ಥಾನದ ನಿವಾಸಿಗಳೊಳಗೆ ಇಂಗ್ಲಿಷ್‌ನವರೇ ಮುಂತಾದ ಪರದೇಶಿಗಳನ್ನು ಮೆಚ್ಚಿ ಅವರ ಪದ್ಧತಿಗಳನ್ನೇ ಅನುಸರಿಸಿದದರಲ್ಲಿ ಬಂಗಾಳದ ಬಾಬುಗಳೇ ಮೊದಲನೆಯವರು. ಮೊದಲು ಜುಟ್ಟು ತೆಗೆಸಿಕೊಂಡವರು ಇವರೇ, ಇಂಗ್ಲಿಷ್ ತರಹೆಯ ಉಡುಪುಗಳನ್ನು ಧರಿಸಲು ಇವರೇ ಮೊದಲು ಮುಂದಾದರು; ರುಮಾಲಿಗೆ ಬದಲಾಗಿ ಇಂಗ್ಲಿಷ್ ಟೋಪಿಯನ್ನು ಹಾಕಿಕೊಂಡವರೂ ಇವರೇ, ಸಂಘಸಂಸ್ಕಾರಕರು ಮೊದಲು ಹುಟ್ಟಿದುದು ಇವರಲ್ಲಿಯೇ; ತಮ್ಮ ಸ್ವಂತ ಪೂರ್ವದ ಆಚಾರಗಳನ್ನು ಮೂಲೆಗೆ ಒತ್ತಿ, ಇಂಗ್ಲಿಷ್‌ನವರೊಂದಿಗೆ ಸಹಪಙ್ಕ್ತಿ ಭೋಜನವನ್ನು ಮಾಡುವುದಕ್ಕೆ ಅವರೇ ಪ್ರಾರಂಭಮಾಡಿದರು. ಲಾರ್ಡ್ ಕರ್ಜನರು ಇವರನ್ನು ಮೊಟ್ಟಮೊದಲು ನೋಡಿದಾಗ ಇವರನ್ನು 'ಜೆಂಟಲ್‌ಮೆನ್' ಎಂಬದಾಗಿ ಕರೆದರು. [ಹಾಗೆಯೇ ಬೊಂಬಾಯಿಯವರನ್ನು 'ಮರ್ಚಂಟ್‌ಸ್'' ಎಂಬದಾಗಿಯೂ ಮದರಾಸಿನವರನ್ನು 'ಬೆಗ್ಗರ್‌ಸ್'' ಎಂಬದಾಗಿಯೂ ಕರೆದರಂತೆ.] ಈಚೆಗೆ 'ಇವನು ಬಂಗಾಳಿ, ಇವನು ಯೂರೋಪಿಯನ್' ಎಂದು ನಿರ್ಣಯಿಸುವುದು ಕಷ್ಟವಾಗುತ್ತಿದ್ದಿತು. ವಿಮರ್ಶೆಯಿಂದ ಬಂಗಾಳಿಗಳು 'ಇಂಗ್ಲಿಷ್ ತಯಾರಿ' ಯನ್ನೇ ನೋಡುಕೊಳ್ಳಲಾರಂಭಿಸಿದರು. ಅವರು ಉಪಯೋಗಿಸಿದ ಪ್ರತಿಯೊಂದು ಪದಾರ್ಥವೂ 'ಇಂಗ್ಲಿಷ್ ಮೇಕ್'' ಆಗಿದ್ದರೆ ಅವರಿಗೆ ತೃಪ್ತಿಯಿಲ್ಲ. ಯಾರಾದರೂ ದೇಶೀಯ ಉಡುಪುಗಳನ್ನೇ ಧರಿಸಿ ದೇಶಾಚಾರ ಪ್ರವರ್ತಕರಾಗಿದ್ದರೆ ಅವರನ್ನು ನೋಡಿ ಮೊದಲು ನಕ್ಕವರು ಬಂಗಾಳಿಗಳೇ.

ಇಂಥವರು ಈಗ ಹೇಗೆ ನಡೆದುಕೊಳ್ಳುತ್ತಿದ್ದಾರೆ? ಸ್ವಪ್ನ... ಇಂಗ್ಲಿಷ್ ತಯಾರಿ ಪದಾರ್ಥಗಳನ್ನು ತ್ಯಜಿಸಿರುವರು; ಅಲ್ಲದೆ ತಮ್ಮ ನೆರೆಹೊರೆಯವರಲ್ಲಿ, ಗುರುತುಪರಿಚಿತಿಯವರಲ್ಲಿ, ಬಂಧುಗಳಲ್ಲಿ ಇದೇ ಪ್ರಕಾರವಾದ ಮನಸ್ಸನ್ನುಂಟುಮಾಡುತ್ತಾ ಇದಕ್ಕಾಗಿ ಅನೇಕಾನೇಕ ಪ್ರಯತ್ನಗಳನ್ನು ಮಾಡುತ್ತಿರುತ್ತಾರೆ. ಯಾವಾಗಲೂ ಬೂಟುಧಾರಿಗಳಾಗಿದ್ದ ಇವರು ಕೆಲವು ಕಾಲದವರೆಗೆ ಬರಿಯ ಕಾಲಲ್ಲಾದರೂ ನಡೆದರು. ಇವರು ಸತತವೂ ಧರಿಸಿಕೊಳ್ಳುತ್ತಿದ್ದ ಇಂಗ್ಲಿಷ್ ಮೇಡ್ ಹ್ಯಾಟ್ ಬೂಟ್ (ಟೋಪಿ ಮತ್ತು ಮೋಜಾ) ಮೊದಲಾದವು ಯಜ್ಞೇಶ್ವರನಿಗೆ ಆಹುತಿಯಾದವು. ಈಗ ಬೇಕಾದರೆ ಬಂಗಾಳಿಯು ಬಂದುವಿನಂತೆ ಕಾಣಿಸುತ್ತಾನೆ. ಬಾಬೂಗಳು ಹೋಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಿದ್ಯಾರ್ಥಿಗಳು ಮೊದಲಾದವರ ಮುಂದೆ ದೇಶೀಯ ಪದಾರ್ಥಗಳ ಅಭಿವೃದ್ಧಿ ವಿಷಯವಾಗಿ ಉಪನ್ಯಾಸ ಮಾಡುತ್ತಿದ್ದಾರೆ. ಇಂಗ್ಲೆಂಡ್ ದೇಶವು ನಮ್ಮ ದೇಶಕ್ಕೆ ವಿಸ್ತೀರ್ಣದಲ್ಲಿ ಅಜಗಜಾಂತರವಿದ್ದರೂ, ಇಂಗ್ಲಿಷ್‌ನವರ ದೇಶಾಭಿಮಾನವು ಹೇಗೆ ನಮ್ಮನ್ನು ಅವರ ಕೈಕೆಳಗಿನಂತೆ ಮಾಡಿದೆ? ಜಪಾನ್ ದೇಶವು ಅಷ್ಟು ಚಿಕ್ಕ ರಾಜ್ಯವಾದರೂ ಹೇಗೆ ಅತ್ಯಲ್ಪಕಾಲದಲ್ಲಿ ಜಪಾನಿನವರು ರಷಿಯಾದವರನ್ನು ಸೋಲಿಸುವಷ್ಟು ಶಕ್ತರಾಗಿ ಸಾಹಸ ವಿಕ್ರಮಾದಿ ಗುಣಗಳಲ್ಲಿ ಪ್ರಖ್ಯಾತರಾದರು? ಒಂದಾನೊಂದು ಕಾಲದಲ್ಲಿ ಐಶ್ವರ್ಯಭಾಗ್ಯಗಳಿಗೂ, ಪ್ರಖ್ಯಾತವಾದ ಐಶ್ವರ್ಯಗಳಿಗೂ, ಸರಸ್ವತಿಗೂ ಕಲಾಕೌಶಲ್ಯಗಳಿಗೂ ತವರುಮನೆಯಾಗಿದ್ದ ಭರತಖಂಡವು ದೇಶಭಕ್ತರಿಲ್ಲದುದರಿಂದ ಹೇಗೆ ಪರಾಧೀನದಲ್ಲಿ ಬಿದ್ದು ಹೀನಸ್ಥಿತಿಯಲ್ಲಿರುವುದು ಎಂಬೀ ವಿಷಯಗಳನ್ನು ಉಪನ್ಯಾಸದಲ್ಲಿ ವಿವರಿಸುವರು. ಇವರ ವಾಕ್ಚಾತುರ್ಯವನ್ನು ಕೇಳುವುದಕ್ಕೆ ತಂದ ಅನುಭವ ಸಂಪೂರ್ಣವಾಗಿ ನಮ್ಮ ಮೇಲೆಯೇ ಬೀಳುತ್ತದೆ. ನಾವು ಎಚ್ಚತ್ತುಕೊಂಡಿದ್ದರೆ ನಮಗಿಂತಹ ದುರ್ದೆಸೆ ಪ್ರಾಪ್ತವಾಗುತ್ತಿರಲಿಲ್ಲ. ನಮ್ಮ ದೇಶದಲ್ಲಿ ಈಗ ನಡೆ ನಮ್ಮನ್ನು ಉನ್ನತಸ್ಥಿತಿಗೆ ತರತಕ್ಕ ಸಾಧನಗಳು ಇಲ್ಲದೆ ಇಲ್ಲ, ಅವು ಸಂಪೂರ್ಣವಾಗಿವೆ. ಹೀಗಿರುವಲ್ಲಿ ಅವುಗಳ ಸರಿಯಾದ ಉಪಯೋಗವನ್ನು ಮಾಡಿಕೊಳ್ಳದೆ ದಾರಿದ್ರ್ಯದಲ್ಲಿ ಬಿದ್ದು ನರಳಿದರೆ ಇದು ಯಾರ ತಪ್ಪು? ಈ ದೇಶದ ಐಶ್ವರ್ಯ ಇಲ್ಲಿನವರಿಗೆ ಮಾತ್ರ ಲಭ್ಯವಿಲ್ಲ. ಪರದೇಶಿಗಳು ನಮ್ಮ ದೇಶದ ಐಶ್ವರ್ಯವನ್ನು ಹೊತ್ತುಕೊಂಡು ತೀರಿ ಮೇಲಾಗಿ ಕಟ್ಟಿಕೊಂಡು ಸಹ ಹೋಗುತ್ತಿದ್ದಾರೆ. ಇಲ್ಲಿನ ವ್ಯಾಪಾರವನ್ನು ಪರದೇಶಿಗಳು ಸಾಗಿಸುತ್ತಿರುವರು. ...ಗೆಯ ಬಂಬ ಅವರದೇ ಗಣಿಗಳು ಅವರವೇ. ದೊಡ್ಡ ದೊಡ್ಡ ಕಾರ್ಖಾನೆಗಳು ಅವರವೇ. ನಮ್ಮ ದೇಶದ ಕೈಗಾರಿಕೆಗಳಿಗೆ ಉತ್ತೇಜನ ಕೊಟ್ಟು ಹೊರತು ನಮ್ಮ ದೇಶವು ಅಭಿವೃದ್ಧಿಸ್ಥಿತಿಗೆ ಬಾರದೆಂದು ಖಂಡಿತವಾಗಿ ತಿಳಿಯಬೇಕು.

ಬಂಗಾಳಿಗಳು ಮೊದಲೇ ಬುದ್ಧಿಶಾಲಿಗಳು, ಇದರ ಮೇಲೆ ಈಗ ಅವರಿಗೆ ಉತ್ಸಾಹ ಮೇಲಾಗಿ, ಹಿಡಿದ ಕೆಲಸವನ್ನು ಬಿಡದೆ ನಡೆಸುವ ಅಧ್ಯವಸಾಯವು ಅವರಲ್ಲಿ ಉಂಟು. ಆದುದರಿಂದ ಅವರು ಕೈಕೊಂಡ ಕಾರ್ಯವನ್ನು ಜೈಸದೆ ಬಿಡರು. ಎಲ್ಲರೂ ದೇಶೀಯ ಪದಾರ್ಥಗಳನ್ನೇ ಉಪಯೋಗಿಸಬೇಕೆಂದು ಎಲ್ಲರ ಮನಸ್ಸಿನಲ್ಲಿ ನೆಟ್ಟು ಇದ್ದಾರೆ. ದೇಶಾಭಿಮಾನಿಗಳೆಲ್ಲರೂ ಇವರನ್ನು ಅನುಸರಿಸುತ್ತಿದ್ದಾರೆ. ಬಂಗಾಳದಲ್ಲಿ ಎಲ್ಲರೂ "ವಂದೇ ಮಾತರಂ ಸುಜಲಾಂ ಸುಫಲಾಂ ಮಲಯಜ ಶೀತಲಾಂ"* ಎಂಬದಾಗಿ ಮಾತೃಭೂಮಿಯನ್ನುದ್ದೇಶಿಸಿ ಭಜನೆಯನ್ನು ಮಾಡುತ್ತಿದ್ದಾರೆ. ದೇಶಭಕ್ತರೂ ಇವರಿಗೆ ಸಹಾಯಮಾಡಿ ಇವರ ಉದ್ದೇಶವನ್ನು ಸಫಲಮಾಡಬೇಕು! ಬಂಗಾಳದ ಅನೇಕ ಪ್ರದೇಶಗಳಲ್ಲಿ ಈ ಉತ್ಸಾಹವು ಹೇಗೆ ನೆಲೆಗೊಂಡಿದೆಯೆಂದು ಇದೇ ಪತ್ರಿಕೆಯಲ್ಲಿಯೇ ವಾಚಕರು ಓದಿರುವರು.

ಬ್ರಹ್ಮದೇಶದ ರಾಜಧಾನಿಯಾದ ರಂಗೂನ್ ಪಟ್ಟಣದಲ್ಲಿ ಸೇರಿದ ಸಭೆಯ ವಿಚಾರವು ವಾಚಕರಿಗೆ ತಿಳಿಯದೆ ಇಲ್ಲ; ಪೂನೆಯ ಮೆ॥ ಗಳಾದ ಪರಂಜಪೆ ತಿಲಕಪ್ರಭೃತಿಗಳು ನಡೆಸಿದ ಸಭೆಗಳ ಸಮಾಚಾರವನ್ನು ಪತ್ರಿಕೆಯು ಹಿಂದೆಯೇ ಪ್ರಕಟಿಸಿದೆ. ಇನ್ನು ವರ್‍ಹಾಡದ ಮುಖ್ಯಪಟ್ಟಣವಾದ ಅಮರಾವತಿಯಲ್ಲಿ ಮೆ॥ ಗಳಾದ ಖಾಪರ್ಡೆ, ಬ್ರಹ್ಮಪ್ರಭೃತಿಗಳು ಇದೇ ವಿಷಯವಾಗಿ ಸಭೆ ಸೇರಿದರು. ಅಲ್ಲಿನ ಹೈಸ್ಕೂಲಿನ ಹೆಡ್ ಮಾಸ್ತರು ಅಲ್ಲಿನ ವಿದ್ಯಾರ್ಥಿಗಳು ಸಭೆಗೆ ಹೋಗಕೂಡದೆಂದು ನಿಷೇಧಿಸಿದರು. ಆದರೆ ವಿದ್ಯಾರ್ಥಿಗಳು ಉಪನ್ಯಾಸ ಕೇಳದೆ ಬಿಡಲಿಲ್ಲ. ಹೆಡ್ ಮಾಸ್ತರು ವಿದ್ಯಾರ್ಥಿಗಳನ್ನು ಡಿಸ್‌ಮಿಸ್ ಮಾಡಿದರು. ಆದರೆ ಹುಡುಗರು ಕೆಡಲಿಲ್ಲ. ಪಟ್ಟಣದಲ್ಲಿ ಪ್ರಮುಖರಾದವರು ಪ್ರೈವೇಟ್ ಶಾಲೆಯನ್ನು ಒಂದೇ ದಿನದಲ್ಲಿ ಸ್ಥಾಪಿಸಿದರು. ದೇಶಭಕ್ತರಾದ ಕೆಲವು ಬಿ. ಎ. ಗಳು ಅಧ್ಯಾಪಕರಾಗಿ ನಿಂತರು. ಇನ್ನೇನು? ...

* ಬಂಗಾಳದಲ್ಲಿ ಇದು ಬಹಳ ಭಕ್ತಿ ಕಲಿಸುವ ... ಮಾತೃಭೂಮಿ ಸೇವಾಪರಾಯಣರು ಇದನ್ನು ಪಾಡಿಕೊಂಡು ಉತ್ಸಾಹಿಗಳಾಗುತ್ತಾರೆ ಇದೇ ಶ್ಲೋಕವನ್ನು 'ಆನಂದ ಮಠ' ... ವಾಚಕರನೇಕರು ನೋಡಿರಬಹುದು.

...ಯು ಅತ್ತಲಾಗಿ ದಯಮಾಡಿಸಿದು ; ಬಾಲಕರನ್ನು ಪೂರ್ವ ...ಕರಿಗೆ ಬಲವಂತವಾಗಿಯೂ, ಉಪಚಾರವಾಗಿಯೂ ಕರೆ ...; ಬಾಲಕರು ಬರಲೇ ಇಲ್ಲ. —ಇನ್ನು ಮಧ್ಯಪ್ರಾಂತ್ಯಗಳ ವಿ ... ಇಲ್ಲಿನವರು ಸ್ವದೇಶೋದ್ಯೋಗೋತ್ತೇಜಕ ವಿಷಯದಲ್ಲಿ ...ಗಳಷ್ಟೇ ಉತ್ಸಾಹಿಗಳಾಗಿದ್ದಾರೆ. "ಸ್ವದೇಶೀವಾಲ" ...ಂಗಡಿಗಳು ಎಲ್ಲೆಲ್ಲಿಯೂ ತುಂಬಿವೆ. ಇದರ ತುಂಬ ಗಿರಾ ...ಸಾಧಾರಣವಾಗಿ ನಮಗೆ ಬೇಕಾಗುವ ಎಲ್ಲ ವಸ್ತುಗಳೂ ...ಗುವುವು ಎಲ್ಲವೂ ದೇಶೀಯ ತಯಾರಿ, ಈ ದೇಶದಲ್ಲಿಯೆ ...ದ ಉತ್ಕೃಷ್ಟ ಬಟ್ಟೆಗಳೂ, ನಾನಾ ವಿಧವಾದ ಕಾಗದ ...ಸಿಲ್ ವಗೈರೆಗಳೂ, ಅಹಮದಾಬಾದು ಮತ್ತು ಕೋಟ ...ಗಳಲ್ಲಿ ತಯಾರಾದ ಬೆಂಕೀಕಡ್ಡಿಗಳೂ, ನಾಗಪುರದ ... ಉತ್ತಮ ಲೇಖಣಿ ಮುಂತಾದುವೂ, ಬಂಗಾಳದ ... ಸಂತವುಂಟು, ಕೇಶತೈಲ ಮತ್ತು ಮೇಣದ ಬತ್ತಿಗ ...ರಿನ ಕಾಫಿ ಅಸ್ಸಾಮಿನ ಟೀ ಮುಂತಾದುವೂ ಇಲ್ಲಿ ...ವುವು. ಕೆಲವು ದಿನಗಳ ಹಿಂದೆ ಬರೋಡೆಯ ಅಮಾತ್ಯ ... ರಮೇಶಚಂದ್ರದತ್ತ, ಐ ಸಿ ಎಸ್., ಸಿ. ಐ. ಇ. ... ನಾಗಪುರಕ್ಕೆ ಬಂದು ಉಪನ್ಯಾಸ ಮಾಡಿ ದೇಶೀಯ ಪದಾ ...ರ ಉಪಯೋಗವನ್ನು ಪ್ರೋತ್ಸಾಹ ಪಡಿಸಿದರು. ಅಂದಿನಿಂ ...ನ ವಿದ್ಯಾರ್ಥಿಗಳೆಲ್ಲರೂ ದೇಶೀಯ ಪದಾರ್ಥಗಳನ್ನೇ ಉ ...ಗಿಸಬೇಕೆಂದು ಶಪಥ ಮಾಡಿಕೊಂಡು ತಮ್ಮಲ್ಲಿಯೆ ಒಂದು ...ವನ್ನು ಮಾಡಿಕೊಂಡು ಇರುತ್ತಾರೆ. ಕಲ್ಕತ್ತೆಯಲ್ಲಿ ನಡೆದಂ ... ಇಲ್ಲಿಯೂ ಇಂಗ್ಲಿಷ್ ಸಾಮಾನು ಬಳಿ ಬಂದವರನ್ನು ಶಾಲಾ ...ದ ವಿದ್ಯಾರ್ಥಿಗಳು ಧರಿಸಿದ ಬಟ್ಟೆಗೆ ಸೇರಿಸುತ್ತಾರೆ ಎಲ್ಲಿ ...ವರೂ ಇದೇ ಗಲಾಟೆ, ಎಲ್ಲಿ ಕೇಳಿದರೂ ಇದೇ ಸುದ್ದಿ ... ಮಧ್ಯ ಪ್ರಾಂತ್ಯಗಳ ವರಿಗೆ ಬಂಗಾಳಾ ವಿಭಾಗದ ವಿಷಯ ...ವಿಷ ವೈಮನಸ್ಯವುಂಟೆಂದು ಹೇಳುವದಕ್ಕೆ ಆಧಾರಗಳು ... ಆದರೂ ದೇಶೀಯ ವಸ್ತುಗಳನ್ನೇ ಉಪಯೋಗಿಸುವುದ ...ಹಿಂದೂಸ್ಥಾನಕ್ಕೆ ಉಂಟಾಗತಕ್ಕ ಮಹಾ ಪ್ರಯೋಜ ...ನ್ನು ಅರಿತುಕೊಂಡಿರುವುದರಿಂದಲೆ ಅವರು ಈ ರೀತಿ ವರ್ತಿಸು ...ತ್ತಿರುವದಕ್ಕೆ ಸಂಶಯವಿಲ್ಲ.

ನಮ್ಮ ಮೈಸೂರು ಸಂಸ್ಥಾನದಲ್ಲಿ ಈ ಗಲಭೆಯು ಯಾವ ಪ್ರ ...ದಲ್ಲಿ ಪರಿಣಮಿಸಿದೆ ಎಂಬುದನ್ನು ನನ್ನ ಸ್ನೇಹಿತರಾದ ಸಭೆ ...ಗಳಲ್ಲಿ ಯಾರಾದರೂ ದಯವಿಟ್ಟು ಪತ್ರಿಕಾ ಮುಖೇನ ...ಪಡಿಸಿದಲ್ಲಿ ನಾನು ಅತ್ಯಂತ ಕೃತಜ್ಞನಾಗಿರುವೆನೆಂದು ಹೇಳಿ ...ಗೆ ಈ ದೀರ್ಘವಾದ ಬಾತುಮಿಯನ್ನು ಮುಗಿಸುವೆನು.

ನಾಗಪುರವಾಸಿ ಮೈಸೂರಿಗ.

ಈ ವರ್ಷದ ಸ್ವದೇಶೀ ಪ್ರಸಂಗದ ಸ್ವಲ್ಪ ಸಾರ

ಕಲ್ಕತ್ತಾ ನಗರದಲ್ಲಿ ಬಹಳ ವಿದ್ಯಾರ್ಥಿಗಳು ಮಾಡುತ್ತಿದ್ದ ...ಗಳನ್ನು ಆ ಡಿಸ್ಟ್ರಿಕ್ಟಿನ ಪೊಲೀಸ್ ಸೂಪರಿಂಟೆಂಡೆಂಟವರು ... ಇವರ ಕಡೆಯಿಂದ ಏರ್ಪಟ್ಟ ಪುಸ್ತಕ ... ಆ ವಿದ್ಯಾರ್ಥಿಗಳನ್ನು ಹಿಡಿದು ವಿಚಾರಿಸಿ ಆ ಪುಸ್ತಕಗಳ ...ಪರೀಕ್ಷಿಸಲಾಗಿ ಅವುಗಳಲ್ಲಿ ಪ್ರಜಾ ಪ್ರ ... ಪ್ರತಿಕೂಲ ...ವಿಷಯಗಳೇನೂ ಇಲ್ಲದಿರುವದನ್ನು ಕಂಡು ಆ ವಿದ್ಯಾರ್ಥಿ ...ಗಳನ್ನು ಬಿಟ್ಟುಬಿಟ್ಟರು. ಸ್ವದೇಶೀಯ ವಿಶ್ವಾಸಿಗಳಾಗಿರುವ ಕೆಲವು ...ಗಳು ಇದರ ವಿಷಯದಲ್ಲಿ ಬಹು ... ...ದ ಜನರಲ್ಲಿಯೂ ಕೋಪವನ್ನು ಹುಟ್ಟಿಸುವದಕ್ಕೆ ಬಹಳ ...ಗಳನ್ನು ಮಾಡುತ್ತಿದ್ದಾರೆಂದು ತಿಳಿದು ಬರುತ್ತದೆ.

ಬಂಗಾಳಾ ಪ್ರಾಂತ್ಯವನ್ನು ವಿಭಾಗಿಸಕೂಡದೆಂಬದಾಗಿ ಸರ್ಕಾರ ...ತಿಳಿಯಪಡಿಸುವ ಉದ್ದೇಶದಿಂದ ಕಲ್ಕತ್ತದಲ್ಲಿ ಮಹಾ ಜನಗ ...ಕೂಡಿದ್ದರು. ವಿಭಾಗ ವಿಷಯದಲ್ಲಿ ಪ್ರಜೆಗಳ ಅಭಿಪ್ರಾ ...ವನ್ನು ತಿರಸ್ಕರಿಸುವದು ದೊಡ್ಡ ಅವಮಾನವೆಂದೂ ಹೌಸ್ ...ಕಾಮನ್ಸರು ತೀರ್ಮಾನವನ್ನು ಹೇಳುವದಕ್ಕಿಂತ ಮುಂಚೆ ...ಹೊಸ ವೈಸ್ರಾಯರು ಬರುವದಕ್ಕೆ ಮುಂಚೆಯೂ ಈ ಕಾ ...ವನ್ನು ಮಾಡುವದು ಅನ್ಯಾಯವೆಂತಲೂ ಸಬಿಕರು ... ... ಮತ್ತು ಬಂಗಾಳವನ್ನು ಒಂದು ... ...ರವರ ಅಧೀನದ ...ಬೇಕೇ ಹೊರತು ವೈಸ್ರಾಯರಿಗೆ ಅಧೀನವಾಗಕೂಡದೆಂದು ...ಮಾಡಿಕೊಂಡರು.

...ಕೆಲವು ಹಿರಿಗಳು ದೇಶೀಯರನ್ನು ಸರ್ಕಾರದವರ ಮೇ ...ಕೆಟ್ಟದ ಬಗ್ಗೆ ಇಂಗ್ಲಿಷ್ ರಾಜ್ಯಭಾರವು ಕೇವಲ ದುಷ್ಟ ...ದಿಂದ ತುಂಬಿದೆಯೆಂತಲೂ ಪುನಃ ಸ್ವದೇಶೀಯ ಆಳ್ವಿಕೆ ...ಯೇ ಸ್ಥಾಪಿಸಿಕೊಳ್ಳುವ ನಿಮಿತ್ತ ಆಯುಧಪಾಣಿಗಳಾಗತಕ್ಕದ್ದು ...ವೆಂತಲೂ ಸೂಚಿಸುವ ಪತ್ರಗಳನ್ನು ದೇಶಭಾಷೆಯಲ್ಲಿ ಮು ...ಬಂಗಾಳ ಸೀಮೆಯ ಪೂರ್ವಭಾಗದಲ್ಲಿಯೂ ಅಸ್ಸಾಮಿನಲ್ಲಿ ...ಬಂಗಾಳಗಳಲ್ಲಿಯೂ ಗೋಪ್ಯವಾಗಿ ಹಂಚುತ್ತಿದ್ದಾರೆ. ಈ ...ಗಳು ಪ್ರತಿಯೊಂದು ಗ್ರಾಮದಲ್ಲಿಯೂ ಊರಿನಲ್ಲಿಯೂ ದೊ ...ರೆತವೆಯೆಂದು ತಿಳಿದುಬರುತ್ತದೆ

"ಹಿಂದೂ ದೇಶಾಭಿಮಾನಿ" ಎಂಬ ಪತ್ರಿಕಾ ಕರ್ತರು ಹೇಳಿ ...ರುವದೇನೆಂದರೆ—ಸ್ಥಳಿಕ ಅಂಗಡಿಗಳಲ್ಲಿ ದೇಶೀಯ ಸರಕುಗಳು ...ಕೋಬೇಕಾದರೆ ಆ ಸರಕಿನ ಉತ್ಪತ್ತಿಯು ಕಡಮೆಯಾಯಿತೆಂದು ...ಬೇಕಾದುದಷ್ಟೆ. ಉತ್ಪತ್ತಿಯು ಅವಶ್ಯಕವಾಗಿರುವದಕ್ಕಿಂತ ...ಮಾಗುತ್ತ ಹೋದರೆ ಅದರ ಅವಶ್ಯಕತೆಯು ಕ್ರಮೇಣ ...ಹೋಗುವದು. ಈಗ ಕೆಲವು ದಿವಸಗಳಿಂದ ಸ್ಥಳಿಕ ಬಟ್ಟೆಗಳು ... ಬರಾದುದರಿಂದ ಅವುಗಳ ಉತ್ಪನ್ನವು ಕಡಮೆಯಾಗಿ ...ಗಿ ಕಡೆಗೆ ಅವಶ್ಯವಾದಷ್ಟು ಸಿಕ್ಕದೇನೇ ಹೋಗುವಂತೆ ತೋ ...ತು. ಇಂಥ ... ಸಮಯದಲ್ಲಿ ಸ್ಥಳಿಕರಾದ ವರ್ತಕ ...ರೂ ಕಾರ್ಖಾನೆಗಳವರೂ ಬಟ್ಟೆಗಳ ತಯಾರಿಯನ್ನು ಸಾಧ್ಯವಾದ ಮಟ್ಟಿಗೂ ಹೆಚ್ಚು ಮಾಡುತ್ತಲಿರತಕ್ಕದ್ದು. ಇಲ್ಲದಿದ್ದರೆ ಇದರ ವ್ಯಾಪಾರವೇ ನಿರ್ಮೂಲನಾಗುವದು ತಾವು ಉತ್ಪತ್ತಿ ಮಾಡಿಕೊಡುವ ಈಗಿನ ಪ್ರಜೆಗಳು ಕಾದಿರಬೇಕೆಂದು ಕಾರ್ಖಾನೆಯವರು ತಿಳಿಯದೆ ಅಪೂರ್ವವಾದ ಪ್ರಯತ್ನಗಳನ್ನು ಮಾಡಿ ದೇಶದ ಸಂದುಗೊಂದುಗಳಲ್ಲಿಯೂ ದೇಶೀಯರಿಂದ ತಯಾರಾದ ಸರಕುಗಳೇ ತುಂಬುವಂತೆ ಪ್ರಯತ್ನಪಡತಕ್ಕದು ಇದಲ್ಲದೆ ಆ ಸಾಮಾನುಗಳು ಕೊಳ್ಳುವವರಿಗೆ ವಿದೇಶೀಯ ಸರಕುಗಳ ಬೆಲೆಗಿಂತ ಕಡಮೆಯಾಗಿಯೇ ದೊರಕುವಂತೆ ವಿಕ್ರಯಿಸಲ್ಪಡಬೇಕು. ವಾಯುವ್ಯ ಪ್ರಾಂತ್ಯಗಳಲ್ಲಿಯೂ ಬಂಗಾಳದಲ್ಲಿಯೂ ಸೋಪನ್ನು ತಯಾರುಮಾಡುವ ಕಾರ್ಖಾನೆಯುಂಟಷ್ಟೆ. ಇವುಗಳ ಉತ್ಪನ್ನಗಳನ್ನು ಯಾವ ಸ್ಥಳದಲ್ಲಿ ಕೊಂಡುಕೊಳ್ಳಬೇಕೋ ಯಾರಿಗೆ ತಿಳಿದಿದೆ? ಡೆಹಲಿಯಲ್ಲಿ ಬಿಸ್ಕತ್ತುಗಳನ್ನು ಮಾಡುತ್ತಾರೆ ಈ ಪದಾರ್ಥಗಳನ್ನು ಯಾವ ಸ್ಥಳದಲ್ಲಿ ಮಾರುತ್ತಾರೋ ಯಾರಿಗೆ ಗೊತ್ತು? ವಿದೇಶೀಯ ಸರಕುಗಳನ್ನು ಸಂಪೂರ್ಣವಾಗಿ ಹೊರತಳ್ಳುವದಕ್ಕೆ ಸ್ವದೇಶೀಯ ಸರಕುಗಳು ಎಲ್ಲೆಲ್ಲಿಯೂ ದೊರಕುವಂತೆ ಮಾಡದಿದ್ದರೆ ಆದೀತೇ?

ಸ್ವದೇಶೀಯ ಕೈಗಾರಿಕೆಯ ಪದಾರ್ಥಗಳನ್ನು ಸರಬರಾಯಿ ಮಾಡುವ ಮಳಿಗೆಯೊಂದನ್ನು ಸ್ಥಾಪಿಸುವದಕ್ಕಾಗಿ ಮದ್ರಾಸಿನಲ್ಲಿ ಕೆಲವು ದೊಡ್ಡ ಮನುಷ್ಯರು ಸೇರಿ ಒಂದು ಸಭೆ ನಡಿಸಿದರು. ಈ ಕಂಪನಿಗೆ ಸುಮಾರು ೧ ಲಕ್ಷ ರೂಪಾಯಿಗಳ ಮೂಲಧನವು ಬೇಕಾಗುವದೆಂತಲೂ ಒಂದೊಂದು ಷೇರಿಗೆ ರೂ ೧೦ ಪ್ರಕಾರ ೧,೦೦೦ ಷೇರುಗಳ ಮೂಲಕ ಈ ಮೂಲಧನವನ್ನು ಉತ್ಪತ್ತಿಮಾಡಿಕೊಳ್ಳಬೇಕೆಂತಲೂ ಗೊತ್ತುಮಾಡಿದಾರೆ. ಈ ಕಂಪನಿಯನ್ನು ಸ್ಥಾಪಿಸಿ ನಡಸುವ ವಿಷಯದಲ್ಲಿ ಮಿ॥ ಜಿ ಸುಬ್ರಹ್ಮಣ್ಯ ಅಯ್ಯರವರೂ ಮಿ ಎಂ. ರಾಮಚಂದ್ರಯ್ಯರವರೂ ಪ್ರಕೃತದಲ್ಲಿ ಸೆಕ್ರೆಟರಿಗಳಾಗಿ ನಿಯಮಿತರಾಗಿದಾರೆ

ಸ್ವದೇಶೀಯ ವ್ಯಾಪಾರ ವೃದ್ಧ್ಯರ್ಥವಾದ ಸಂಘಗಳನ್ನು ಸ್ಥಾಪಿಸುವಂತೆ ... ಒಂದು ಮಹಾ ಸಭೆಯು ... ರಲ್ಲಿ ನಡೆಯಿತು ಇದೇ ವಿಧವಾಗಿ ಹೈದರಾಬಾದಿನಲ್ಲಿಯೂ ದೊಡ್ಡ ಮನುಷ್ಯರು ಸೇರಿ ಜನಿಸಿದ ... ಮೊದಲಾದವರ ಸಹಾಯವನ್ನಪೇಕ್ಷಿಸಿ ಈ ಉದ್ದೇಶವನ್ನು ನೆರವೇರಿಸತಕ್ಕದ್ದೆಂದು ತೀರ್ಮಾನಿಸಿದರು.

ವರ್ತಮಾನದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ವಾರ್ತೆದಾರರು ತಮ್ಮ ವಿಳಾಸಗಳಿಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ವಾರ್ತೆಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂಬು ಹೇಳಿ ತಿರಸ್ಕರಿಸಿದ ವಾರ್ತೆಗಳನ್ನು ನಾವು ವಾರ್ತೆದಾರರಿಗೆ ವಾಪಸು ಕಳುಹಿಸಲಾರೆವು.

ವಾರ್ತೆದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ಹರೀಬಲ ಪೋಸ್ಟಾಫೀಸು ವಿಚಾರ.

ಅಯ್ಯಾ,

ಇಲ್ಲಿ ಪೋಸ್ಟಾಫೀಸನ್ನು ಎಕ್ಸಟ್ರಾ ಡಿಪಾರ್ಟ್ಮೆಂಟನ್ನಾಗಿ ಮಾಡಿದ್ದು ತಂಬಾ ಅಸ್ವಾಪ ಕರವಾಗಿ ಇದೆ. ಇದೇ ಮಾಹೆ ೧೦ನೆ ತಾರೀಖಿನಲ್ಲಿ ಪೋಸ್ಟಾಫೀಸುಗಳ ಇನ್ಸ್ಪೆಕ್ಟರವರು ಇಲ್ಲಿಗೆ ದಯಮಾಡಿ ಆಫೀಸು ಇನ್ಸ್ಪೆಕ್ಷನ್ ಪೂರೈಸಿಕೊಂಡು ಬಾಳೂರು ಪ್ರಾಂತ್ಯಕ್ಕೆ ವಾಪಸು ದಯಮಾಡಿಸಿದರು ನಮ್ಮಗಳಿಗೆ ಬರತಕ್ಕ ಕಾಗದ ಟಪಾಲುಗಳು ವಗೈರೆ ಬಾಳೂರು ಪೋಸ್ಟಾಫೀಸಿನಲ್ಲಿ ಒಂದು ರಾತ್ರಿ ನಿಲ್ಲುತ್ತೆ. ಇದನ್ನು ತಪ್ಪಿಸಿ ಸಾಯಂಕಾಲ ೪ ಘಂಟೆಗೆ ಡಿಸ್ಪ್ಯಾಚ್ ಆದಲ್ಲಿ ನಮಗೆ ಸಾಯಂಕಾಲವೇ ಪರೂರು ಕಾಗದಗಳು ವಗೈರೆ ಸಿಕ್ಕುತ್ತವೆ ಈ ಏರ್ಪಾಡಿನಿಂದ ಕಳಸದಲ್ಲಿ ಪ್ರಾತಃಕಾಲ ೭ ಘಂಟೆಗೆ ಡೆಲಿವರಿ ಸಹಾ ಆಗುತ್ತೆ. ಮಹನೀಯರಾದ ಪೋ।ಸೂಪರಿಂಟೆಂಡೆಂಟ ಸಾಹೇಬರೂ ಪೋ॥ ಇನ್ಸ್ಪೆಕ್ಟರಾದ ಮಿ॥ ರಾಮಕೃಷ್ಣನಾಯ್ಡುರವರು ಸಹಾ ಈ ಏರ್ಪಾಡನ್ನು ಶೀಘ್ರದಲ್ಲಿ ನೆರವೇರಿಸಿ ಕೊಟ್ಟಾರು ಎಂದು ನಂಬುವ

ಹರೀಬಳಲು — ಪ್ರಜೋಪಕಾರಿ.

ರೈತರ ಅಹವಾಲು.

ಅಯ್ಯಾ,

ತಿಪಟೂರು ತಾಲ್ಲೋಕು ಮತ್ತಿಹಳ್ಳಿ ಗ್ರಾಮದ ಕೆರೆ ಹಾಳಾಯಿತು. ಸುಮಾರು ೪೦ ವರ್ಷದ ಕೆಳಗೆ ಸದರೀ ಗ್ರಾಮದ ಕೆರೆಯು ಒಡೆದು ಹೋಗಲು ಶಾನುಭೋಗ ಸುಬ್ಬರಾಯರು ಪಟೇಲ್ ಚಿಕ್ಕರಾಮೇಗೌಡ ಕೆರೆ ಒಡೆದುಹೋಗಲು ರೈತರೂ ಶಾನುಭೋಗ ಉಭಯತ್ರರೂ ಸದರೀ ಕೆರೆ ಅಂಗಳವನ್ನು ಸರ್ಕಾರದ ಅನುಮತಿ ಬಿಟ್ಟು ಹುಲ್ಲುಗಾವಲನ್ನು ಮಾಡಿ ಕೊಂಡರು. ಹೀಗಾದ ಕೆಲವು ಕಾಲದ ನಂತರ ಶಾನುಭೋಗರು ರೈತರುಗಳಿಗೆ ಕೆರೆ ಕಟ್ಟಿಸಿಕೊಡುತ್ತೇನೆಂಬ ಭರವಸೆಯಿಂದ ಸದರೀ ಇನಾಮಿನೆಲ್ಲವನ್ನೂ ತಮ್ಮ ಸ್ವಾಧೀನ ಮಾಡಿಕೊಂಡು ಸರ್ವೆ ಸೆಟಲ್ಮೆಂಟು ಕಾಲದಲ್ಲಿ ಸದರೀ ಕೆರೆಯೇ ಇಲ್ಲದ ಹಾಗೆ ನಕಾಸೆ ಮಾಡಿಸಿ, ಪೂರಾ ಸುಖವನ್ನೆಲ್ಲಾ ಗಾದರು. ಈ ಸಂಗತಿಯನ್ನು ರೈತರು ತಿಳಿದ ಸ್ವಲ್ಪ ಕಟ್ಟಿವಲ್ಲ ಸ್ವಾಮಿ ಎಂದು ಮೇಲಕ್ಕೆ ಬರೆಕೊಂಡರು. ಈ ರೀತಿಯಾಗಿ ಸುಮಾರು ೨೦ ವರ್ಷದಿಂದಲೂ ರೈತರೂ ಕೇಳಿಕೊಳ್ಳುತ್ತಿದ್ದರೂ ರೈತಾಭಿಮಾನಿಗಳಾದ ಮಹಾತ್ಮರು ಹುಟ್ಟದೆ ಇದ್ದುದರಿಂದಾಗಿ ದೂರು ಸಬೇಕಾಗಿದೆ. ಈ ವರಿವಿಗೂ ನಡೆದ ವಿಚಾರಣೆಯಲ್ಲಿ ಮೊಸಳೆಯು ಸರ್ವ ಪ್ರಾಣಿಗಳನ್ನೂ ಸರ್ರನೆ ತನಗೆ ಸಿಕ್ಕಿದ ಒಡನೆಯೇ ಎಳೆದುಕೊಳ್ಳುವಂತೆ ಆಗಿದೆ. ಈಗಿನ ಮಹಾ ಪ್ರಭುಗಳಾದ ಶ್ರೀಮನ್ಮಹಾರಾಜ ಬಹದ್ದೂರವರು ಕ್ಷೇಮ ರೈತರ ಜೀರ್ಣೋದ್ಧಾರದಲ್ಲಿ ತುಂಬಾ ಮಮತೆಯುಳ್ಳವರೆಂದು ವರ್ತಮಾನ ಕೇಳಿ ಬಾಸಾ ಚರಣಸನ್ನಿಧಾನಗಳಲ್ಲಿ ಅರಿಕೆ ಮಾಡಲು ಜೀವನವೇ ನಡೆಯದೆ ಇರುವುದರಿಂದ ಸ್ಟಾಂಪಿಗೆ ಕೂಡಾ ದುಡ್ಡಿಲ್ಲದೆ ಹೊಂದರೆಪಡುತ್ತಲಿದೇವೆ. ಹ್ಯಾಗೂ ಮಹಾಸ್ವಾಮಿಗಳು ಯಾವ ಪರಿಯಲ್ಲಾದರೂ ಘನವಾದ ಚಿತ್ತದಲ್ಲಿ ಈ ನಮ್ಮಗಳ ಬಿನ್ನಹವನ್ನು ಲಾಲಿಸುವರೆಂದು ಪ್ರಾರ್ಥಿಸುತ್ತೇವೆ

ತಾ. ೨೩—೯—೦೫. — ಮುರಿಗಿಕಟ್ಟೆ ಮುಖ್ಯಸ್ಥ.

ಸರ್ಕಾರಿ ಸ್ಕೂಲಿನಲ್ಲಿ ರಾಸುಂ ವಸೂಲಾತಿ.

ಅಯ್ಯಾ,

ಕೊಪ್ಪ ತಾಲ್ಲೋಕು ಹೊಸಕೆರೆ ಹೋಬಳಿ ಭಂಡಿಗಡಿ ಗ್ರಾಮಸ್ಥರೆಲ್ಲರು ಸೇರಿ ಬಹುಕಾಲದಿಂದ ಸಾಹಸಪಟ್ಟು ಹೋಬಳಿ ಸ್ಕೂಲ್ ಒಂದನ್ನು ಭಂಡಿಗಡಿ ಗ್ರಾಮದ ಕಸಬಾದಲ್ಲಾ ಜಾರೀಲಿ ಡಬೇಕೆಂದು ಅರಿಕೆ ಮಾಡಿಕೊಂಡ ಮೇರೆ ಮೈಸೂರು ಗವರ್ನಮೆಂಟಿನವರು ಈಗ್ಯೆ ಸುಮಾರು ೧೫ ವರುಷದ ಕೆಳಗೆ ಜಾರೀಲಿ ಇರುವಂತೆ ಹುಕುಂ ದಯಪಾಲಿಸಿದರು. ಸದರಿ ಸ್ಕೂಲಿಗೆ ಕಟ್ಟಡವಿಲ್ಲದೆ ಇರುವಕಾರಣ ಇದೇ ಗ್ರಾಮದ ಇನಾಂದಾರ ಸಾಹೇಬರು ತಮ್ಮ ಸ್ವಂತ ಖರ್ಚಿನಿಂದ ಕಟ್ಟಡವನ್ನು ತಯಾರಿಸಿಕೊಟ್ಟರು. ಈ ಸ್ಕೂಲಿಗೆ ಬ್ರಾಹ್ಮಣ ಮತ್ತು ಮುಸಲ್ಮಾನ, ವೀರಶೈವಮತ ನಾಮಧಾರಿ ಜಾತಿ ಕನಡಾಜಲ್ಲಾ ಬಿಲ್ಲರ್ ಈ ಐದು ಮತದಿಂದ ಸುಮಾರು ೪೦ ಹುಡುಗರ ವರಿಗೆ ಸ್ಕೂಲಿಗೆ ಹಾಜರ್ ಆಗುತ್ತಾ ಬಂದಿದ್ದರಲ್ಲಿ ಸ್ಕೂಲ್ ಮಾಸ್ಟರು ಸ್ಕೂಲ್ ಪ್ರತಿಷ್ಠೆಯಾದ ಪ್ರಥಮದಿನವೇ ಸದರಿ ಬಿಲ್ಲರ್ ಮತದ ಹುಡುಗರನ್ನು ನಾನು ಓದಿಸಲು ಆಗುವದಿಲ್ಲ. ನಾನು ಬ್ರಾಹ್ಮಣನಾದವನು, ನನಗೆ ಮುಟಚಟ್ಟು ಆಗುತ್ತೆ ಎಂದು ಧಿಕ್ಕರಿಸಿ, ಉಳಿದ ಹುಡುಗರನ್ನು ಓದಿಸುತ್ತಾ ಇದಾರೆ. ಈ ಊರು ಶಿವಲಿಂಗಪ್ಪಶೆಟ್ಟರು, ಮುನಿಯೂರು ಕೃಷ್ಣಪ್ಪನವರು, ಇನಾಂದಾರ ಸಾಹೇಬರು ಕೂಡ ಸದರಿ ಮಾಸ್ಟರನ್ನ ವಿಚಾರಿಸುವಲ್ಲಿ ಬಿಲ್ಲರ್ ಹುಡುಗರನ್ನು ಓದಿಸಲು ರೂಲಸು ಇಲ್ಲವೆಂತಲೂ, ಅಲಾಯಿದ ತಿಂಗಳಗಟ್ಟೆ ಸಂಬಳ ಕೊಟ್ಟರೆ ಓದಿಸಲು ಅಡ್ಡಿಯಿಲ್ಲವೆಂತಲೂ ಹೇಳಿದರು. ಆಗ್ಯೆ ಫೀ ಇಸಂ ಒಂದಕ್ಕೆ ಮಾಹೆಯಾನ ೧-೦—೦೪ ಅಣಾ ಒಂದು ರೂಪಾಯಿನಂತೆ ಅವರು ಬಹಳ ಖಂಡಿತ ಮಾಡಿದನಂತರ ಆ ಬಿಲ್ಲರ್ ಜಾತಿಯವರು ಆ ಸಂಬಳಕ್ಕೆ ಒಪ್ಪಿಕೊಂಡು, ತಮ್ಮಲ್ಲಿ ಓದುವದಕ್ಕೆ ಯೋಗ್ಯತೆಯುಳ್ಳ ಹುಡುಗರನ್ನು ಬಿಟ್ಟಿದಾರೆ ಈ ಸ್ಕೂಲ್ ಇಲಾಖಾ ಮೇಲ್ಪಟ್ಟ ಆಫೀಸರವರು ಈ ರೀತಿ ರೂಲಸು ಜಾರೀಲಿ ತಂದದ್ದು ನಿಜವೇ? ಗವರ್ನಮೆಂಟಿನವರು ಸಹಾಯಕ್ಕೋಸ್ಕರ ಇಟ್ಟಿರುವ ಈ ಸ್ಕೂಲಿನಲ್ಲಿ ಸರ್ಕಾರದ ಸಂಬಳ ತೆಗೆದುಕೊಳ್ಳುತ್ತಾ ಇದ್ದು ಸದರಿ ಮಾಸ್ಟರು ಅರಿಯದಿರುವ ಜನರಲ್ಲಿ ಬೇರೆ ಸಂಬಳ ತೆಗೆದುಕೊಂಡು ಓದಿಸಬಹುದೇ ಎಂಬ ಸಂಗತಿ ದಯವಿಟ್ಟು ಇಲಾಖಾ ಆಫೀಸರೇ ಆಗಲಿ, ತಾವೇ ಆಗಲಿ ಮೇಲ್ಕಂಡ ವಿಷಯಕ್ಕೆ ಉತ್ತರಕೊಡಿಸಬೇಕೆಂದು ನನ್ನ ಕೋರಿಕೆ.

ಹಾಲ್ಮುತ್ತೂರು ಗ್ರಾಮದ ಕಾಗಿನಗೊಳ್ಳ. — ಒಬ್ಬ ಯೋಗ್ಯ.

ಮಂಡ್ಯದ ಮುನಿಸಿಪಾಲಿಟಿ ಮುಂತಾದ್ದು.

ಅಯ್ಯಾ,

ಪ್ರಜೆಗಳ ಪ್ರಯೋಜನಕ್ಕಾಗಿ ಈ ಕೆಳಗಿನ ವಿಷಯಗಳನ್ನು ತಾವು ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ. ಇಲ್ಲಿ ಸುಮಾರು ಐದು ಮಂದಿ ಮೆಂಬರುಗಳಿರುತ್ತಾರೆ. ಒಬ್ಬರು ಇಂಜನೀರ್ ಇಲಾಖ ಅಧಿಕಾರಿಗಳು, ಒಬ್ಬರು ಡಾಕ್ಟರು, ಇನ್ನೊಬ್ಬರು ಪ್ಲೀಡರು, ಮತ್ತೊಬ್ಬರು ಸಾಹುಕಾರರು. ಅಮಲ್ದಾರರು ಇದಕ್ಕೆ ಮುಖ್ಯಸ್ಥರು. ಇವರು ಒಂದು ತಿಂಗಳಿಗೊಂದುಸಾರಿ ಮೀಟಿಂಗ್ ನಡಸುತ್ತಾರೆ. ಡಾಕ್ಟರು ಆರೋಗ್ಯ ವಿಚಾರದಲ್ಲಿ ಅಗಾಗ್ಯೆ ಕೆಲವು ಮಾತುಗಳನ್ನು ಧೈರ್ಯವಾಗಿ ಹೇಳುವರು ಇಂಜನೀರು ಇಲಾಖಾ ಸಾಹೇಬರು ಕೆಲವು ವೇಳೆ ಊರಲ್ಲಿರುವದಿಲ್ಲ. ಡಾಕ್ಟರಂತೆ ಮಿಕ್ಕ ಮೂರು ಜನರು ಪ್ರಜೆಗಳ ಕೊರತೆಗಳನ್ನು ಪರಿಹರಿಸಲು ಪ್ರಯತ್ನ ಮಾಡಿದರೆ ಗ್ರಾಮದಲ್ಲಿ ಅನೇಕ ಹೊಸ ಮನೆಗಳು ಹೊಸ ಲಾಂದ್ರಗಳು ಹೆಚ್ಚುವದಲ್ಲದೆ ಚರಂಡಿಗಳೂ ಸಂದುಗೊಂದುಗಳೂ ಶುಚಿಯಾಗಿರುವದರಲ್ಲಿ ಸಂದೇಹವಿಲ್ಲ

ಮೊದಲು ಮಿಕ್ಕಾದ ತಾಲ್ಲೋಕುಗಳಂತೆ ಇಲ್ಲಿಯೂ ಮನೆ ಕಟ್ಟುವವರು ಅರ್ಜಿಗೆ ಒಂದಾಣೆ ಸ್ಟಾಂಪ್ ಹತ್ತಿಸಿ ಲೈಸೆನ್ಸ್ ಪಡೆಯುತ್ತಿದ್ದರು. ಅದು ಬಡ ಜನರಿಗೆ ಸುಲಭವಾಗಿತ್ತು. ಈಚೆಗೆ ಬಂದಿರುವ ನಮ್ಮ ಅಮಲ್ದಾರು ಅರ್ಜಿಗೆ ೮ ಅಣೆ ಸ್ಟಾಂಪನ್ನು ಹತ್ತಿಸಬೇಕೆಂದು ಹೇಳುತ್ತಾರೆ. ಇದು ಸ್ಥಿತಿವಂತರಿಗೆ ಸುಲಭವಾದರೂ ಬಡವರಿಗೇನೋ ತೊಂದರೆಯಾಗಿದೆ ಮುಂಚಿನಂತೆ ಒಂದಾಣೆ ಸ್ಟಾಂಪ್ ಹಚ್ಚುವ ಕ್ರಮವನ್ನು ಶಾಸಿತು ಮೆಂಬರುಗಳು ಯೋಚಿಸಬಹುದೆಂದು ನಂಬುತ್ತೇನೆ.

ಪೋಸ್ಟ್ ಆಫೀಸಿನ ಹತ್ತರ ಒಂದು ಹಾಳು ಮನೆ ಮೋಟು ಗೋಡೆಗಳ ಸಹಿತ ನಿಂತಿದೆ. ಅದರ ವಾರಸದಾರನು ಮನೆಯನ್ನು ಕಟ್ಟುವದನಕ ಅದನು ಲಗ್ನವಾಗದಂತೆ ಹೆಣ್ಣಿನ ಕಡೆಯವರು ಹೇಳುತ್ತಾರಂತೆ. ಅನೇಕಸಾರಿ ಆತ ಲೈಸೆನ್ಸಿಗೆ ಬರೆದುಕೊಂಡಾಗ್ಯೂ ಜವಾಬ್ ಇಲ್ಲ. ಆ ಮನೆ ಹಾಗಿರುವದು ಕಳ್ಳಕಾಕರಿಗೆ ಅಸ್ಪದವಾಗಿ ನೆರೆಯವರಿಗೆ ತೊಂದರೆಯಾಗಿಯೂ ಇದೆ. ಮತ್ತು ದೈವತ

ಬೀದಿಯಲ್ಲಿ ಇಲ್ಲಿನ ಶೆಟ್ಟರು ಮನೆಯನ್ನು ಬಿಟ್ಟು ಹಾಲಸ್ತ್ರ ವಗೈರೆ ಮಾಡಿಸಿ, ಅನಂತರ ಆ ಮನೆಯಲ್ಲಿ ಲಗ್ನಮಾಡಿಕೊಳ್ಳುವ ಯತ್ನ ಮಾಡಿದರು. ಅದಕ್ಕೆ ಕಡೆಯಾಗಿ ಛಾವಣಿ ಇಲ್ಲದ ಗೋಡೆಗಳು ಮಳೆಯ ಪೆಟ್ಟಿಗೆ ದಿನಾಲೂ ಕ್ಷೀಣಿಸುತ್ತಾ ಇವೆ. ಮೇಲ್ಕಂಡ ಎರಡು ಮನೆಗಳಿಗೆ ಲೈಸೆನ್ಸು ಕೊಟ್ಟರೆ ಮನೆಗಳನ್ನು ಕಟ್ಟಿಕೊಂಡು ಸುಖವಾಗಿದ್ದಾರು.

ಇದಲ್ಲದೆ ಈ ಊರಿನಲ್ಲಿ ಹೊಸ ಮನೆ ಕಟ್ಟುವವರು ಚರಂಡಿಯ ಆಚೆ ಐದು ಅಡಿ ಭೂಮಿಯನ್ನು ಬಿಡುವಂತೆ ಅಮಲ್ದಾರರು ಲೈಸೆನ್ಸಿನಲ್ಲಿ ಬರೆದುಕೊಡುತ್ತಾರೆ. ಈಚೆಗೆ ೫—೬ ಹೊಸ ಮನೆಗಳನ್ನು ಕಟ್ಟಿಸಿರುವವರು ೩ ಅಡಿ ಜಾಗ ಬಿಟ್ಟಿಲ್ಲ. ತಮ್ಮ ಅನುಕೂಲಕ್ಕೆ ಸರಿಯಾಗಿ ಮುಂದೆ ಪಡಸಾಲೆಯನ್ನೋ ಜಗಲಿಯನ್ನೋ ಮಾಡಿಕೊಂಡಿದಾರೆ. ಅದು ಅವರಿಗೂ ಇತರ ಪ್ರಯಾಣಿಕರಿಗೂ ಅನುಕೂಲವಾಗಿದೆಯೋ ಹೊರ್ತು ಕಷ್ಟವಾಗಿಲ್ಲ. ಆದರೆ ಘನ ಛಾಡೆ ಸಾಹೇಬರ ಲೈಸೆನ್ಸಿನಲ್ಲಿ ೫ ಅಡಿ ಬಿಡಬೇಕೆಂದು ಬರೆದಿತ್ತು. ಅಮಲ್ದಾರರೂ ಮೆಂಬರುಗಳೂ ಬಂದು ಐದು ಅಡಿ ಬಿಟ್ಟಿರುವುದನ್ನು ಅಳತೆಮಾಡಿ ನೋಡಿದರು. ಅಮಲ್ದಾರರು ಹೇಳಿದಂತೆ ಉಪದೇಶಿಯವರು ಒಬ್ಬರು, ೫ ಅಡಿ ಮುಂದೆ ಇದ್ದ ಹಳೇ ಕಟ್ಟಡ ಬಿಟ್ಟು ಹಿಂದೆ ಕಟ್ಟಿ ಪೂರ್ವಸಿರುವಾಗ್ಯೆ ಸರ್ಕಾರಕ್ಕೆ ಎಷ್ಟು ವಿಧೇಯತೆಯನ್ನು ತೋರಿಸಿದಾರೋ ವಾಚಕರೇ ಊಹಿಸಲಿ. ಈ ವಿಷಯದಲ್ಲಿ ಮುನಿಸಿಪಾಲಿಟಿಯವರು ಇತರ ಮನೆಗಳವರು ೩ ಅಡಿ ಬಿಡದೆ ಪಡಸಾಲೆ ಕಟ್ಟಿದಾಗ್ಯೂ ಆಕ್ಷೇಪಣೆ ಮಾಡಿಲ್ಲ. ಇದು ನ್ಯಾಯವೆ? ಇನರು ಉಪದೇಶಿಗಳ ಕೆಲಸ ಸಭೆಯವಾಗ್ಯೆ ಗುಂಪು ಕಟ್ಟಿಕೊಂಡು ಬಂದು, ಬೆದರಿಸಿದಂತೆ ವಿಕ್ಷ್ಮದವರಿಗೆ ಯಾಕೆ ಮಾಡಲಿಲ್ಲ? ಇದು ನಿಷ್ಪಕ್ಷಪಾತವೆಂದು ಹ್ಯಾಗೆ ತಿಳಿಯೋಣ? ಕೆಲವು ಮೆಂಬರುಗಳು ಈ ಮನೆ ಕಟ್ಟುವಾಗ್ಯೆ ಅಮಲ್ದಾರರ ಕಿವಿಯಲ್ಲಿ ಇಲ್ಲದ ಮಾತು ಹೇಳಿ, ಅವರ ಕೋಪವೆಬ್ಬಿಸಿದರಂತೆ. ಇದರಿಂದಲೇ ಅಮಲ್ದಾರರು ಲೈಸೆನ್ಸಿನಲ್ಲಿ ಅನವಶ್ಯವಾದ ಮಾತುಗಳನ್ನು ಬರೆದು ಕೊಟ್ಟರೋ ಏನೋ. ಅವರು ಉಪದೇಶಿಯವರ ಮನೆ ಮುಂದೆ ಬಹು ಆತುರದಿಂದ ನೋಡಿದರು.

ನಿವಾಸಿ.

ತಾಲ್ಲೋಕು ವರ್ತಮಾನಗಳು.

ಚಾಮರಾಜನಗರ.—ಆಗ್ಗೆ ಸುಮಾರು ೧೦—೧೨ ದಿನಗಳ ಹಿಂದೆ ಆದ ಮಳೆಯಿಂದ ಪೈರುಗಳು ಚನ್ನಾಗಿರುತ್ತವೆ. ಕೆರೆ ಕುಂಟೆಗಳಿಗೆ ನೀರು ಸಾಕಾದಷ್ಟು ಬರಲಿಲ್ಲ. ಕೆರೆ ಜಮೀನಿನ ರೈತರು ವ್ಯಸನಪಡುತ್ತಿದಾರೆ. ಬಿಸಲು ಈಗ ಸ್ವಲ್ಪ ಜೋರಾಗಿದೆ. ಅಕ್ಕಿ, ರಾಗಿ ವಗೈರೆ ಧಾನ್ಯಗಳು ಇನ್ನು ತಗ್ಗಾಗಿವೆ. ಎಲ್ಲರೂ ಮಳೆಯನ್ನೇ ನಿರೀಕ್ಷಿಸುತ್ತಿರುವರು.—ಈ ಮಧ್ಯೆ ಕೆಲವು ದೊಡ್ಡ ಮನುಷ್ಯರು ಮೋಟಾರ್ ಕಾರನ್ನು ತರಿಸಿ ಪರಸ್ಥಳಗಳಿಂದ ಜನ, ಸರಕುಗಳನ್ನು ಅವರವರ ಸ್ಥಳಕ್ಕೆ ತಲುಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದಕ್ಕೆ ಗವರ್ನಮೆಂಟಿನವರ ಸಹಾಯವು ಬೇಕು.—ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಅಂಗಸಾಧನ ದಿನಗಳನ್ನು ಮಾಡಲು ಛಾಕಾದಷ್ಟು ಸ್ಥಳವಿಲ್ಲವಾಗಿ ವ್ಯಸನಪಡುತ್ತೇವೆ. ನಮ್ಮ ಸರ್ಕಾರದವರು ಬೇರೆ ಸ್ಕೂಲನ್ನು ಯಾವಾಗ ಕಟ್ಟಿಸುವರೋ ಎಂದು ಯೋಚಿಸುತ್ತೇವೆ.

ದೊಡ್ಡಬಳ್ಳಾಪುರ.—ಈ ಊರಿನ ಹವೆ ಹಿತವಾಗಿರುತ್ತೆ. ಮೋಡವು ಆಗಾಗ್ಯೆ ಆಡುತ್ತ ವೃಷ್ಟಿಯು ಸುರಿಸುತ್ತಿದ್ದರೂ ಜನಗಳ ಗೋಳಾಟ ತಪ್ಪಲಿಲ್ಲ.—ಈ ಊರಿಗೆ ಬಂದ ತಿಪಟೂರು ನಾಟಕ ಸಂಘದವರು ೭—೮ ನಾಟಕಗಳನ್ನಾಡಿ ಇಲ್ಲಿನ ಪ್ರಜೆಗಳಿಗೆ ಆನಂದಪಡಿಸಿದರು.—ಮುನಿಸಿಪಾಲಿಟಿಯವರು ರಾತ್ರಿಕಾಲದಲ್ಲಿ ಸಂಚರಿಸುವ ಪ್ರಜಾ ಹಿತೈಷಿಗಳಾಗಲು ಯಾತಕ್ಕೆ ಯತ್ನಿಸಬಾರದೋ? ಅನೇಕ ಲಾಂದ್ರುಗಳು ಪೂರ್ಣಚಂದ್ರ ಗ್ರಹಣವನ್ನೇ ಹಿಂಬಾಲಿಸಿರುವುವಾಗಿವೆ ವಿಶೇಷ ಮಾತೇನಿಂದೆ. ಅಲ್ಲದೆ ಕುಂಬಾರ ಬೀದಿಗೆ ಹೋಗುವ ಮಾರ್ಗ ಅಂದರೆ ಆಸ್ಪತ್ರೆಯಿಂದ ದಕ್ಷಿಣಕ್ಕೆ ಬರುವ ಮಾರ್ಗದಲ್ಲಿ ಎತ್ತರವಾದ ಒಂದು ಜಂತೆ ಇರುವುದು ಸರ್ವರಿಗೂ ವೇದ್ಯವಾಗಿರುತ್ತೆ. ಮಹನೀಯರಾದ ಪುರಾಧ್ಯಕ್ಷರು ಇದನ್ನು ಪರಾಂಬರಿಸದೆ ಇರುವುದಕ್ಕೆ ವಿಷಾದಿಸಬೇಕು.—ಸರ್ಕಾರದ ಭಾವಿಗಳಲ್ಲಿ ಇಂಥವರೇ ನೀರು ಸೇದಬಾರದೆಂದು ನಿರ್ಬಂಧವುಂಟೇ? ಮೆಣ್ಣಿನ ಬ್ರಾಹ್ಮಣರೇ ನೀರು ಸೇದಬಹುದಾದರೆ, ವಿಚ್ಛೇಶ್ವರ ಮುತವಂದಿಗಳು ಅದಕ್ಕೊಲ್ಲದೇ ಹೋದ ಯಾವ ನ್ಯಾಯ?

ಮಂಡ್ಯ.—ಕಳೆದ ತಿಂಗಳು ೧೧ ನೇ ತಾ. ಮೈಸೂರಿನ ವೆಸ್ಲಿಯನ್ ಮಿಷನ್ ಛೇರಿಯ ಸೂಪರಿಂಟೆಂಡೆಂಟರಾದ ಘನ ಸಾಹೇಬರು ಇವರ ಜೊತೆಯಲ್ಲಿ ಸ್ವದೇಶ ಪಾದ್ರಿಗಳಾದ ಘನ ಲೂಕ್ ಯವರೂ ಇಲ್ಲಿಗೆ ಬಂದು, ಉಪದೇಶಿಗಳ ವಾಸಕ್ಕಾಗಿ ಕಟ್ಟಿಸಿದ ಮನೆಯಲ್ಲಿ ಇಲ್ಲಿನ ಕ್ರೈಸ್ತರೊಂದಿಗೆ ದೇವಾರಾಧನೆಯನ್ನು ನಡಸಿ, ಅವರ ವಾಸಕ್ಕೆ ಅನುಕೂಲಪಡಿಸಿದರು. ಈ ಮನೆಯನ್ನು ಘನ ಧೊರೆಯವರು ಸುತ್ತ ಇಟ್ಟಿಗೆಯಿಂದ ಕಟ್ಟಿಸಿ ಮುಂಗಳೂರು ಹೆಂಚುಗಳನ್ನು ಹಾಕಿಸಿದಾರೆ. ಇದು ಎತ್ತರವಾಗಿಯೂ ಘಾಳಿ ಬೆಳಕಿಗೆ ಅನುಕೂಲವಾಗಿಯೂ ಮಧ್ಯದಲ್ಲಿ ಅಲಂಕಾರವಾದ ದೊಡ್ಡ ಬಾಗಲುಳ್ಳದ್ದಾಗಿಯೂ ಇದೆ.—ಇಲ್ಲಿ ೩—೪ ವರ್ಷಗಳಿಂದ ಕ್ರಿಸ್ತಧಾರಣಿಗಿದ್ದ ಮ॥ ನರಸಿಂಗರಾಯರಿಗೆ ಚಿಕ್ಕಮಗಳೂರಿನ ಡಿಸ್ಟ್ರಿಕ್ಟ್ ಬಜಾಂಚಿಯ ಕೆಲಸವಾಗಿದೆ. ಈ ಮಹನೀಯರು ದಿವಾನರವರ ಸಂಬಂಧಿಗಳಾಗಿಯೂ ದೊಡ್ಡ ಮನುಷ್ಯರಾಗಿಯೂ ಇದ್ದಾರೆ. ಇಲ್ಲಿ ಎಲ್ಲರಲ್ಲಿ ಸ್ನೇಹಪರರಾಗಿಯೂ ಗೌರವಯುಳ್ಳವರಾಗಿಯೂ ಇದ್ದರು. ಇವರು ಹೊರಟುಹೋಗುವುದು ಅನೇಕರಿಗೆ ವ್ಯಸನವೇ ಆಗಿದೆ. ಹೀಗಿದ್ದಾಗ್ಯೂ ಯತ್ನ ಆಗಿ ದೊಡ್ಡ ಸ್ಥಳಕ್ಕೆ ಹೋಗುವುದು ಸಂ

ತೋಷವಾಗಿದೆ.—ಮದ್ದೂರಿನ ಹತ್ತಿರ ನಡೆದ ಕೊಲೆಯ ಮೊಕದ್ದಮೆಯಲ್ಲಿ ಅಪರಾಧಿಗಳಾಗಿ ಸಿಕ್ಕಿದವರನ್ನು ಬಿಟ್ಟುಬಿಟ್ಟರು. ಮಲ್ಲಿ ಎಂಬ ಹೆಂಗಸೇ ಸತ್ತುಹೋದವನ ಹೆಂಡತಿ. ಅವಳನ್ನು ಪೋಲೀಸಿನವರು ತಮ್ಮ ಅಧೀನದಲ್ಲಿಟ್ಟುಕೊಂಡಿದಾರೆ. ಅಮಲ್ದಾರರೂ ಪೋಲೀಸಿನವರೂ ೧೦—೧೫ ದಿನ ಪ್ರಯತ್ನಪಟ್ಟದ್ದು ಸಾರ್ಥಕವಾಗಲಿಲ್ಲ. ಪೋಲೀಸಿನವರು ಅಪರಾಧಿಗಳ ತಪ್ಪನ್ನು ರುಜುವಾತು ಪಡಿಸಿದಂತೆ ತೋರಲಿಲ್ಲ. ಪ್ರಕೃತ ಚೀಫ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತದೆಂದು ಹೇಳುತ್ತಾರೆ. ಆಗ್ಯೆ ಸರಿಯಾದ ಅಪರಾಧಿಗಳನ್ನು ಹಾಜರುಮಾಡ್ಯಾರೆಂದು ತೋರುತ್ತೆ.

ಚನ್ನಪಟ್ಟಣ.—ಎರಡು ವಾರಗಳಿಂದ ಮಳೆಯಿಲ್ಲ. ರೈತರಲ್ಲಿ ಅಂಗಲಾಚುವರು. ದವಸದ ಧಾರಣೆಗಳು ಇಳಿಯಲಿಲ್ಲ. ಬಡವರ ಕಷ್ಟ ಬಹಳವಾಗಿರುತ್ತೆ.—ತಾ ೨೬ ಸಲ್ಲು ನಿಡಗಟ್ಟದ ಸಂತೆಗೆ ಹೋಗಿ ಬರುತ್ತಾ ಇದ್ದ ಒಬ್ಬ ಮುಸಲ್ಮಾನಿಯನ ಗಾಡಿ ಎಮ್ಮ ಬೆದರಿ ಮಾರ್ಗಮಧ್ಯದಲ್ಲಿ ಇವನನ್ನು ಹಾಯಲು ಅವನು ಕೆಳಗೆ ಬಿದ್ದನೆಂತಲೂ ಗಾಡಿಯು ಅವನ ತೊಡೆಯ ಮೇಲೆ ಹರಿದು ಹೊಸೆಯು ಕಾಲು ಮುರಿದುಹೋಯಿತೆಂತಲೂ, ಸದರಿ ಗಾಡಿಯವನು ಸಂದರಿ ಯಾಗಿದ್ದಾನೆಂತಲೂ ತಿಳಿದು ಬಂದಿದೆ. ಗಾಯಪಟ್ಟವನನ್ನು ಇಲ್ಲಿನ ಆಸ್ಪತ್ರೆಯಲ್ಲಿ ಇಟ್ಟಿರುವರು. ಪ್ರಸ್ತುತವರು ಮುತುವರ್ಜಿಯಿಂದ ಪರಾಂಬರಿಸುತ್ತಿದಾರೆ.—ಇಲ್ಲಿನ ದಾಸಪ್ಪನೆಂಬ ಒಬ್ಬ ಶೆಟ್ಟಿ ಬಣಜಿಗರವನೊಬ್ಬನು ಮಂಗಳವಾರ ಪೇಟೆಯಿಂದ ಗೊಸರು ಮಾರುವದಕ್ಕೆ ಬಂದ ಒಬ್ಬ ಹೆಂಗಸನ್ನು ಮೋಸದಿಂದ ತೋಟ್ಟಿನ ನೆಪದಿಂದ ಒಂದು ಮನೆಗೆ ಕರೆದುಕೊಂಡು ಹೋಗಿ, ದುರ್ಬುದ್ಧಿಯಿಂದ ಅವಳಿಗೆ ಹಿಡಿದುಕೊಂಡನೆಂತಲೂ ಆಕೆ ಕೂಗಿಕೊಂಡದ್ದರಿಂದ ಅವನು ಅಪರಾಧಿಯಾದನೆಂತಲೂ ದಸರಲ್ಲಿ ಪ್ರಸ್ತಾಪ ನಡೆಯುತ್ತಾ ಇದೆ. ಇದು ಪೋಲೀಸಿನವರ ಕಿವಿಗೂ ಮುಟ್ಟಿದೆಯಂತೆ.—ಮಂಡ್ಯಕ್ಕೆ ಸೇರಿದವನೊಬ್ಬನು ಇಲ್ಲಿನ ಕೊತ್ತನಹಳ್ಳಿಯಲ್ಲಿ ಒಬ್ಬರ ಮನೆಯಲ್ಲಿ ಸಗದು ಸುಮಾರು ೧೯೦ ಚಿಲ್ಲರೆ ರೂಪಾಯಿ ಕದ್ದು, ವಿಚಾರಿಸಿದಾಗ ಮಂಗಳನಲ್ಲಿ ಗೌಡ ಒಕ್ಕಲಿಗರನನೊಬ್ಬನ ಕೈಯಲ್ಲಿ ಕೊಟ್ಟನೇನೆಂದು ಹೇಳಿದ್ದರ ಮೇಲೆ ಸರ್ಕಾರದವರು ನೋಟೀಸು, ವಾರಂಟು ಏನೂ ಇಲ್ಲದೆ ಸದರಿ ಮಂಗಳನಲ್ಲಿಯವನನ್ನು ಹಿಡಿತಂದು, ಮೂರು ನಾಲ್ಕು ದಿನಗಳ ವರಿಗೂ ಕ್ಯಾಧಿಸುತ್ತಾ, ವಿಚಾರಣೆ ಏನೊಂದೂ ಇಲ್ಲದೆ, ಇರಿಸಿಕೊಂಡಿದ್ದರು. ಅವನಾದರೋ ಹೊಲಗದ್ದೆ ದನ ಕರ ಮನೆಮಾರು ಏನಾಯಿತೋ, ನಾನು ಬಂದು ನಾಲ್ಕು ದಿನಗಳಾಯ್ತು, ಹೋಗುತ್ತೇನೆಂದರೆ ಬಿಡರು. ವಿಚಾರಿಸಲೂ ಒಲ್ಲರು ಎಂಬುದಾಗಿ ಪ್ರಲಾಪಿಸುತ್ತಿದ್ದನು. ಸಾ॥ ಆಕ್ಟ್ ೪೦—೫೦ ರೂ. ಕೆಂಡಾಯ ಕಟ್ಟುತ್ತಾ ನಮ್ಮಂದಿಯಾಗಿರುವ ಕುಳಗಳನ್ನು ಹೀಗೆ ಕ್ಯಾದಿಸುವುದಲ್ಲಿದೆ ಕೊಂಡರನ್ನಾದರೂ ಉದ್ದೇಶವನ್ನು ತಿಳಿಯದು.—ಇಲ್ಲಿನ ಅಮಲ್ದಾರರು ತಾ ೨೫ನೇ ಸಾಕ್ಷ್ಯವಾರ ಬೆಳ್ಳಿಗ್ಗೆ ಟರ್ನ್ ಅಪರಾಧದಲ್ಲಿ ಹೋಗಿದ್ದಲ್ಲಿ ಒಬ್ಬ ವರ್ತಕನು ಯಾವ ಕಾರಣದಿಂದಲೋ ಬಂದು ದೇ ಸ್ಥಾನದ ಮಾತಿಗೆ ಅಮಲ್ದಾರರಿಗೆ ಕೋಪ ಹುಟ್ಟುವಂತೆ ಮಾತನಾಡಿದರಿಂದ ಅಮಲ್ದಾರರು ಆ ನಡು ಸಂತೆಯಲ್ಲಿ ಆ ವರ್ತಕನನ್ನು ಚನ್ನಾಗಿ ದಂಡಿಸಿ ಪೋಲೀಸ್ ಸ್ಟೇಷನ್ನಿಗೆ ಒಪ್ಪಿಸಿ ಕೇಸುಮಾಡ್ಯೆ ಗಲಭೆಯಾಯಿತು.

ಮೊನ್ನೆ ತಾ ೨೫ ಸಲ್ಲು ಮಧ್ಯಾಹ್ನ ೨ ಘಂಟೆಗೆ ಬರಬೇಕಾಗಿದ್ದ ಮೈಸೂರು ಮೇಲ್ ಟ್ರೈನು ಸಾಯಂಕಾಲ ೫ ಘಂಟೆಗೆ ಬಂತು. ವಿಚಾರಿಸಲು ಇಂಜನ್ ಗಾಡಿಯ ಒಂದು ಕೀಲು ಮುರಿದುಹೋಯಿತಾದ್ದರಿಂದ ನಿಂತುಹೋಗಿತ್ತೆಂದು ತಿಳಿದು ಬಂತು.

ಚಿಕ್ಕಮಗಳೂರು.—ಇದೇ ತಿಂಗಳು ೨೦ನೇ ತಾರೀಖಿನಿಂದ ೨೫ ನೇ ತಾರೀಖಿನ ವರಿಗೂ ಇಲ್ಲಿ ವಾಲಂಟಿಯರ ನಿಷಾಟಿಂಗ್ ನಡೆಯಿತು. ಇದಕ್ಕೆ ಚಿಕ್ಕಮಗಳೂರು, ಕೊಪ್ಪ, ತರೀಕೆರೆ, ಮೂಡಿಗೆರೆ ತಾಲ್ಲೋಕುಗಳಿಂದ ೫೦ ಯೂರೋಪಿಯನ್ ಪ್ಲಾಂಟರುಗಳೂ, ಕುದುರೆ ಫೌಜಿಗಾಗಿ ಮಡಕೆರೆಯಿಂದಲೂ ಬೇಲೂರು ತಾಲ್ಲೋಕಿನಿಂದಲೂ ಕೆಲವರೂ ಬಂದಿದ್ದರು. ಈ ನಿಷಾಟಿಂಗಿನ ಕಾಲದಲ್ಲಿ ೨೧, ೨೩, ೨೫ ನೇ ತಾರೀಖುಗಳಲ್ಲಿ ಕುದುರೆ ರೇಜೂ ನಡೆಯಿತು. ಈ ಜೂಮಿಗಳಲ್ಲಿ ಬೇರೆ ಬೇರೆ ಸವಾರರ ಕುದುರೆಗಳು ಗೆದ್ದವೆಂದು ಕೇಳುತ್ತೇನೆ. ೨೫ ನೇ ತಾ॥ ಸಾಯಂಕಾಲ ಡಿಸ್ಟ್ರಿಕ್ಟು ಆಫೀಸಿನ ಮೈದಾನದಲ್ಲಿ ಯೂರೋಪಿಯನ್ ಪ್ಲಾಂಟರುಗಳು ಕುದುರೆಗಳ ಮೇಲೆ ಸವಾರಿ ಮಾಡುತ್ತಾ ಕೆಲವು ವಿನೋದವಾದ ಆಟಗಳನ್ನು ಆಡಿದರು. ಆಗ ಅಲ್ಲಿ ಸೇರಿದ್ದ ಎಲ್ಲಾ ಯೂರೋಪಿಯನ್ ಸರದಾರರಿಗೆ ಲೇಡಿಗಳಿಗೂ ಟೀ ಮೊದಲಾದ ಆಹಾರಪದಾರ್ಥಗಳನ್ನು ನಮ್ಮ ಡಿಸ್ಟ್ರಿಕ್ಟಿನ ಎಲ್ಲಾ ದೊಡ್ಡ ಅಧಿಕಾರಿಗಳೂ ಸೇರಿ ಕೊಡಿಸಿದ್ದರು. ಎಲ್ಲರೂ ಸಂತೋಷಪಟ್ಟರು. ವಾಲಂಟಿಯರುಗಳನ್ನು ಪರೀಕ್ಷಿಸುವದಕ್ಕಾಗಿ ಮಡಕೆರೆಯಿಂದ ಕ್ಯಾಪ್ಟನ್ ರಿಗ್ ಸಾಹೇಬರೂ ಬೆಂಗಳೂರಿನಿಂದ ಕರ್ನಲ್ ಟಾಡ್, ಕ್ಯಾಪ್ಟನ್ ಹುಡ್ ಸಾಹೇಬರೂ ಬಂದಿದ್ದರು. ಡ್ರಿಲಿಂಗ್ ಷೂಟಿಂಗ್ ನಡೆದವು. ಕ್ಲಬ್ಬಿನಲ್ಲಿ ರಾತ್ರಿ ಕಾಲಗಳಲ್ಲಿ ಯೂರೋಪಿಯನ್ನರಿಗೆಲ್ಲಾ ಪ್ರತಿನಿತ್ಯವೂ ಊಟಪದಾರ್ಥಗಳು ನಡೆಯುತ್ತಿದ್ದವು. ಎರಡು ಮೂರು ದಿನ ರಾತ್ರಿ ಊಟವಾದ ಮೇಲೆ ಬಾಲ್ ಎಂಬ ಆಟವಾಡಿದರು. ಆ ಕಾಲದಲ್ಲಿ ಸರದಾರರಲ್ಲಿ ವಿಧವಿಧವಾದ ಸೀನೋಡಕರವಾದ ಉಡುಪುಗಳನ್ನು ಲೇಡಿಗಳೆಲ್ಲಾ ಬಾಲ್ ದಿರಸುಗಳನ್ನೂ ಹಾಕಿಕೊಂಡು ವಿನೋದಕರವಾಗಿ ಆಡುತ್ತಾ ಇದ್ದರು.—ಕಳೆದ ವಾರ ಮೈಸೂರು ಸೀಮೆಯ ಸ್ಕೂಲುಗಳ ಸರ್ಕಲ್ ಇನ್ಸ್‌ಪೆಕ್ಟರ್ ಮ॥ ವೆಂಕಟಸ್ವಾಮಿನಾಯಡುರವರು ಬಂದು, ಇಲ್ಲಿನ ಸ್ಕೂಲುಗಳನ್ನೆಲ್ಲಾ ನೋಡಿಕೊಂಡು ಹೋದರು. ಅದೇ ಸೆಪ್ಟಂಬರ್ ತಿಂಗಳ ಮಧ್ಯಭಾಗದಲ್ಲಿ ಫಾರೆಸ್ಟ್ ಕನ್ಸರ್ವೇಟರ್ ಜನರಲ್ ಸಾಹೇಬರವರು ಬಂದು, ಇಲ್ಲಿನ ಆಫೀಸನಲ್ಲಿ ನೋಡಿಕೊಂಡು, ಕೊಪ್ಪ, ಮೂಡಿಗೆರೆ ತಾಲ್ಲೋಕುಗಳ ಅಧೀನಗಳನ್ನು ತನಿಖೆ ಮಾಡಿಕೊಂಡು ಬಂದು, ಇಲ್ಲಿಂದ ಮಂಗ

ಳೂರಿಗೆ ಟಾಂಗಾಮೂಲಕ ಟಪ್ಪಾಲನ್ನು ಕಳುಹಿಸಲು ಶಕ್ಯಕಾಲವಾಗಿದೆಯೋ ಇಲ್ಲವೋ ಎಂದು ನೋಡುವದಕ್ಕಾಗಿ ಮೂಡಿಗೆರೆಯಿಂದ ಮೈಸೂರು ಸೀಮೆಯ ಸರಹದ್ದಿನ ಚಾರ್ಮಾಡಿ ಘಾಟಿಗೂ ಹೋಗಿ ಬಂದರು. ಅವರ ಜೊತೆಯಲ್ಲಿ ಮೇಲ್ ಅಸಿಸ್ಟೆಂಟ್ ಮ॥ ಸಾಲಂಡೆಯವರು ಹೋಗಿದ್ದರು. ತಾ ೨೬ ಕ್ಕೆ ಇಲ್ಲಿಂದ ಹಾಸನದ ಡಿಸ್ಟ್ರಿಕ್ಟಿನ ಕಡೆ ಹೊರಟರು.—ಈ ಊರಿನಲ್ಲಿ ಕಳೆದ ವಾರ ಒಂದೆಂದು ಕಳವು ನಡೆದಂತೆ ಕೇಳುತ್ತೇನೆ. ೨೩ ನೇ ತಾ॥ ರಾತ್ರಿ ಬಸವನಹಳ್ಳಿಯಲ್ಲಿ ಒಂದು ಮನೆಗೆ ಕನ್ನಹಾಕಿ ಮನೆಯವರು ಮಲಗಿದ್ದ ಕೋಣೆಗೆ ಹಾಕಿ ಮಗುವಿನ ಕತ್ತಿನಲ್ಲಿದ್ದ ಭಂಗಾರದ ಅಡ್ಡಿಕೆಯನ್ನು ತೆಗೆದುಕೊಂಡು ಬರಾರಿಯಾದರೆಂತಲೂ ಪೇಟೆಯಲ್ಲಿ ಇನ್ನೊಂದು ಮನೆಯಲ್ಲಿನ ಹಿತ್ತಲಿನಲ್ಲಿ ಒಣಗಲು ಹಾಕಿದ್ದ ಸೀರೆಗಳನ್ನು ಎತ್ತಿಕೊಂಡು ಪರಾರಿಯಾದರೆಂತಲೂ ವರ್ತಮಾನವಿದೆ.—೨೫ ನೇ ತಾ॥ ಬೇಲೂರು ಕಡೆಯಿಂದ ಯಾವನೋ ಒಬ್ಬನು ಬಂದು ಗಸ್ತಿನ ದಿಮ್ಮೆಯನ್ನು ತೆಗೆದುಕೊಂಡು ಬಂದು ಪೇಟೆಯಲ್ಲಿ ತಮ್ಮ ಬೀದಿಗೆ ಮಾರುತ್ತಿದ್ದದ್ದು ಅಂತೋಣಿ ಎಂಬುವನಿಗೆ ಅನುಮಾನ ಬಂದು ಬಂದದ್ದರಿಂದ ಆ ಮನುಷ್ಯನನ್ನೂ ದಿಮ್ಮೆಯನ್ನೂ ಪೋಲೀಸ್ ಸ್ಟೇಷನಿಗೆ ತಂದು ಠಸಿ ಮಾಡಿ, ಬೇಲೂರು ತಾಲ್ಲೋಕಿಗೆ ಸರ್ವಮಾನ ಕೊಟ್ಟದ್ದರ ಮೇಲೆ ಯಿಮ್ಮೆಗಾಗಿ ತಂದದ್ದು ನಿಜವಾಗಿ ತೋರಿಬಂದಂತೆಯೂ ಈಗ ಆ ದಿಮ್ಮೆಯನ್ನು ಕಳವು ಮಾಡಿ ತಂದವನನ್ನು ಬೇಲೂರಿಗೆ ಕಳುಹಿದರೆಂದೂ ಕೇಳುತ್ತೇನೆ. ನಮ್ಮ ಡೆಪ್ಯುಟಿ ಕಮಿಷನರವರು ಸರ್ವೆ ನಿಷಾಟಿಂಗಿಗೆ ಮೈಸೂರಿಗೆ ಹೊರಟಿರುವರೆಂದಾಗಿ ತಿಳಿದಿದೆ. ೨೯ ನೇ ತಾ॥ ಇಲ್ಲಿ ಸ್ವಲ್ಪ ಮಳೆ ಆಯಿತು. ಇನ್ನು ಮಳೆ ಬರುವದೆಂದು ಕಾಣುತ್ತದೆ.

ಇಂಡಿಯಾ ದೇಶದ ವರ್ತಮಾನಗಳು.

ಪೂನಾ ಪಟ್ಟಣದಲ್ಲಿ ಕ್ಯಾಪ್ಟನ್ ಹಾಲ್ಸ್ಟಾರ್ ಎಂಬ ಸಭ್ಯನು ಪಿಸ್ತೂಲಿನಿಂದ ತನ್ನ ತಲೆಯನ್ನು ತಾನೇ ಆತ್ಮಹತ್ಯ ಮಾಡಿಕೊಂಡನು.

*****

ಅಫ್ಘಾನಿಸ್ತಾನದ ಅಮೀರರು ತಮ್ಮ ರಾಜಧಾನಿಯ ಅರಮನೆಯಲ್ಲಿ ಓದಿಯನ್ನು ಸಿದಾಯ ರಾಜ್ಯವನ್ನು ಕಟ್ಟಿ ಪಡಿಸಿದ್ದಾರೆಂದು ತಿಳಿದು ಬರುತ್ತದೆ.

*****

ಮಧ್ಯಪ್ರಾಂತ್ಯಗಳಲ್ಲಿ ಮಹಾರಾಜಾ ಸಿಂಧ್ಯರವರು ತಮ್ಮ ಸ್ವಂತ ಉಪಯೋಗಾರ್ಥವಾಗಿ ವಿಲಾಯತಿಯಲ್ಲಿ ಮೋಟಾರ್ ಎಂಬ ಗಾಡಿಗಳನ್ನು ಮಾಡಿಸಿ ತರಿಸುವವರಾಗಿದ್ದಾರೆ.

*****

ಬಿಜಾಪುರದಿಂದ ಬೆಜವಾಡಕ್ಕೆ ಬಂದಿದ್ದ ನಾಲ್ಕುಮಂದಿ ಕಳ್ಳರು ಖೋಟಾ ನಾಣ್ಯಗಳನ್ನು ಕೊಟ್ಟು ಒಳ್ಳೇ ನಾಣ್ಯಗಳನ್ನು ತೆಗೆದುಕೊಳ್ಳುತ್ತಿರುವದನ್ನು ಅಲ್ಲಿನ ಪೋಲೀಸು ಇನ್ಸ್‌ಪೆಕ್ಟರ್ ಹಿಡಿದಿದ್ದಾರೆ.

*****

"ಹಿಂದೂ" ಎಂಬ ಪತ್ರಿಕೆಯ ಎಡಿಟರವರಾಗಿದ್ದ ಮ॥ ಸುಬ್ರಹ್ಮಣ್ಯ ಅಯ್ಯರವರು ಈ ತಿಂಗಳಲ್ಲಿ "ಇಂಡಿಯಾ ದೇಶಾಭಿಮಾನಿ" ಎಂಬ ಹೆಸರಿನಿಂದ ಇಂಗ್ಲಿಷಿನಲ್ಲಿ ಒಂದು ದಿನಪತ್ರಿಕೆಯನ್ನು ಪ್ರಕಟಿಸಲಾರಂಭಿಸುವರೆಂದು ತಿಳಿದು ಬಂದಿದೆ.

*****

ತಿರುವಾಂಕೂರಿನ ಶ್ರೀಮೂಲಂ ಪಾಪ್ಯುಲರ್ ಮಹಾಜನ ಸಭೆಯು ಈ ತಿಂಗಳ ೨೧, ೨೩, ೨೫ ನೆಯ ತಾರೀಖುಗಳಲ್ಲಿ ನಡೆಯುವುದಾಗಿ ನೇಮಿಸಿದ್ದಾರೆ. ಆ ಕಾಲವು ಸಂಸ್ಥಾನದಲ್ಲೆಲ್ಲಾ ಕಚೇರಿಗಳಿಗೆ ರಜಾಗಿರುವದರಿಂದ ಉದ್ಯೋಗಸ್ಥರು ಮೊದಲಾದವರೆಲ್ಲರಿಗೂ ಬರುವುದಕ್ಕನುಕೂಲವಾಗಿರುವದು.

*****

ಮದ್ರಾಸಿನ ನೀರಿನ ಸರಬರಾಯಿ ಇಲಾಖೆಗೆ ಸೇರಿದ ಇಂಜನಿಯರು ನೇಲೆ ಅಲ್ಲಿದ್ದ ಕೂಲಿಯವರು ಕಲ್ಲುಗಳನ್ನು ಆತನ ಮೇಲೆ ಬಿದ್ದು ದೊಣ್ಣೆಗಳಿಂದ ಹೊಡೆದರೆಂತಲೂ ಆತನು ೨೫ ದಿನಗಳ ವರಿಗೂ ಆಸ್ಪತ್ರೆಯಲ್ಲಿರಬೇಕಾಯಿತೆಂದೂ ಫಿರ್ಯಾದಿಯಾಗಿದೆ. ಈ ವ್ಯಾಜ್ಯವು ಇನ್ನು ನಡೆಯುತ್ತಿದೆ.

*****

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರು ಬೆಜವಾಡದಿಂದ ಮಚಲೀಪಟ್ಟಣದ ವರೆಗೆ ೪೯॥ ಮೈಲು ದೂರವಾಗಿ ಹೊಸ ರೈಲನ್ನು ಹಾಕಬೇಕೆಂದು ಇಂಡಿಯಾ ಗವರ್ನಮೆಂಟಿನವರು ಒಪ್ಪಿಕೊಟ್ಟಿದ್ದಾರೆ. ಅಲ್ಲಿಯ ಬೆಳೆಯು ವಿಸ್ತಾರವಾಗಿರುವ ಕಾರಣ ವ್ಯಾಪಾರವು ರೈಲಿನಿಂದ ವೃದ್ಧಿಯಾಗುವದೆಂದು ನಿರೀಕ್ಷಿಸಿದೆ.

*****

ಪೆನುಗೊಂಡೆಯಲ್ಲಿ ವ್ಯವಸಾಯ ಸಂಬಂಧವಾದ ಸಭೆಯ ವಾರ್ಷಿಕೋತ್ಸವವನ್ನು ನಡಸುವ ಕಾಲದಲ್ಲಿ ಸ್ಥಳಿಕರನ್ನು ಪ್ರದರ್ಶನ ಮಾಡಿ ಹಲವು ಬಹುಮಾನಗಳನ್ನು ಕೊಟ್ಟು ಬಳ್ಳಾರಿ ಜಿಲ್ಲೆಗಳಿಂದ ಬಂದಿದ್ದ ನೆಯ್ಗೆಯವರಿಗೆ ನವೀನವಾದ ಮಗ್ಗಗಳನ್ನೂ ತೋರಿಸಲಾಯಿತು. ಪ್ರಜೆಗಳು ಬಹು ಸಂಭ್ರಮದಿಂದ ವರ್ತಿಸಿದರು.

*****

ಮದ್ರಾಸ್ ರೈಲ್ವೆಯ ಕಂಪೆನಿಯವರು ಸ್ವಲ್ಪ ಸ್ವಲ್ಪ ಜನಗಳನ್ನು ಒಡಿಸತಕ್ಕಂಥ ಮೂರು ಮೋಟಾರ್ ಗಾಡಿಗಳನ್ನು ವಿಲಾಯತಿಯಿಂದ ತರಿಸುವದಕ್ಕೆ ರೂ ೯೦,೦೦೦ ವ್ಯಯಮಾಡುವದಕ್ಕೊಪ್ಪಿಕೆ ಗಾಡಿಗಳನ್ನು ಅವರು ಯಾವ ಲೈನುಗಳ ಮೇಲೆ ಉಪಯೋಗಿಸುವರೋ ಇನ್ನೂ ಗೊತ್ತಿಲ್ಲ. ಈ ಗಾಡಿಗಳು ಕಂಬಿಗಳ ಮೇಲೆಯೇ ಓಡತಕ್ಕವುಗಳಾಗಿರುತ್ತವೆ.

ಇಂಗ್ಲಾಂಡಿನ ಯುವರಾಜರು ಬಂಬಾಯಿಗೆ ಬರುವಾಗ ದಾರಿಗಳಲ್ಲಿ ಬರುವ ಸುಮಾರು ೧೮—೨೦ ಸಾವಿರ ಬಾಲಕ ಬಾಲಿಕೆಯರಿಗೆಲ್ಲಾ ಉತ್ಸವಗಳು ನಡೆಯುವದಾಗಿ ನಿರ್ಧರಿಸಲಾಗಿ ದೆ. ಮಿಠಾಯಿಯೂ ಯುವರಾಜರ ಮತ್ತು ಅವರ ಪತ್ನಿಯವರ ಭಾವಚಿತ್ರಗಳನ್ನೂ ಅವರು ಇಂಡಿಯಕ್ಕೆ ಭೇಟಿಯಾಗಿ ಬಂದ ತಾರೀಖನ್ನು ಮುದ್ರಿಸಿರುವ ಸ್ಮಾರಕ ಚಿನ್ಹೆಗಳನ್ನೂ ಮಕ್ಕಳಿಗೆ ಹಂಚುವರು.

*****

ಕಲ್ಕತ್ತಾ ನಗರದ ಸರ್ಕಾರದ ಮುದ್ರಾಲಯಕ್ಕೆ ಸೇರಿದ ಸುಮಾರು ೨,೦೦೦ ಮಂದಿ ಪ್ರಿಂಟರುಗಳೂ ಅಕ್ಷರಸಂಯೋಜಕರೂ ಒಟ್ಟಿನಲ್ಲಿ ಸೇರಿ ತಮ್ಮ ಪ್ರತಿಬಂಧಕಗಳನ್ನು ಪರಿಹರಿಸಿಕೊಳ್ಳುವದಕ್ಕೆ ಏನು ಮಾಡಬೇಕೆಂದು ಆಲೋಚಿಸಿ ಇದರ ವಿಷಯ ವನ್ನು ಅಧಿಕಾರಿಗಳಿಗೆ ತಿಳಿಸಬೇಕೆಂದೂ ಅವರು ಕೇಳದೊಲ್ಲದಿದ್ದ ಪಕ್ಷದಲ್ಲಿ ಒಟ್ಟಾಗಿ ಕೆಲಸಕ್ಕೆ ರಾಜೀನಾಮೆಯನ್ನು ಕೊಡಬೇಕೆಂದೂ ತೀರ್ಮಾನಿಸಿದರು.

*****

ಪಟ್ನದಿಂದ ಕಲ್ಕತ್ತಾ ಪಟ್ಟಣಕ್ಕೆ ಒಬ್ಬ ಮಾರ್‍ವಾಡಿ ಸಾಹುಕಾರನು ಸುಮಾರು ೮ ಸಾವಿರ ರೂಪಾಯಿಗಳ ಬೆಳ್ಳಿ ನಾಣ್ಯಗಳ ನ್ನು ರೈಲುಮೇಲೆ ಕಳುಹಿಸಲಾಗಿ ಅದರ ವಿಷಯವನ್ನು ತಿಳಿದ ಒಬ್ಬ ಬಂಗಾಳಿಯವನು ತಾನೇ ವಿಳಾಸದಾರನೆಂದು ವಂಚಿಸಿ ತಗೆದುಕೊಂಡನು. ಇವನನ್ನು ಪೋಲೀಸಿನವರು ಹಿಡಿದುಕೊಂಡರು. ಇವನಿಷ್ಟರು ಕಳ್ಳರೂ ಸೇರಿ ಈ ಕೆಲಸವನ್ನು ನಡಿಸಿದರು. ಇವನ ಮೇಲೆ ತಪ್ಪು ಹೊರಿಸುವದಕ್ಕೆ ಆಸ್ಪದ ದೊರೆಯದಿದ್ದುದರಿಂದ ಕಾರಣ ಅವನನ್ನು ಬಿಟ್ಟು ಬಿಟ್ಟರು. ಮೂರನೆಯವನು ಪರಾರಿಯಾಗಿದ್ದಾನೆ

*****

ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಹು ದಿವಸಗಳಿಂದ ಉಪಾಧ್ಯಾಯರಾಗಿ ಗತಿಸಿದ ರೆ॥ ಕೆಲ್ಲಿಟ್ ಮಿಲ್ಲರಿಯವರ ಸ್ಮರಣಾರ್ಥವಾಗಿ ಆ ಕಾಲೇಜಿನ ವಿದ್ಯಾರ್ಥಿಗಳೇ ಮೊದಲಾದವರು ಹಣ ಹಾಕಿ ಅವರದೊಂದು ಭಾವಚಿತ್ರವನ್ನು ಬರೆಯಿಸಿದಾರೆ. ಇದನ್ನು ಕಾಲೇಜಿನ ಅಧ್ಯಕ್ಷರಾದ ಡಾ॥ ಮಿಲ್ಲರ್ ಸಾಹೇಬರು ಇಂದ್ಯಕ್ಕೆ ಬಂದಮೇಲೆ ಪ್ರಕಟವಾಗಿ ಪ್ರತಿಷ್ಟಿಸುವರೆಂದು ತಿಳಿದು ಬಂದಿದೆ. ಇದಲ್ಲದೆ ಅವರ ಹೆಸರಿನಲ್ಲಿ ಒಂದು ಚಿನ್ನದ ಮೆಡಲನ್ನು ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ಸ್ಥಾಪಿಸಲುದ್ದೇಶಿಸಿ ಕಮಿಟಿಯವರು ೧,೫೦೦ ನ್ನು ತೆಗೆದಿಟ್ಟಿದ್ದಾರೆ

*****

ಚೀನಾ ದೇಶದಲ್ಲಿಯೂ ಸೀಮೆ ಎಣ್ಣೆಯ ವ್ಯಾಪಾರವು ದುಬಾರಿಷ್ಟ. ಇದು ಬರುತ್ತ ಬರುತ್ತ ಬಹಳ ವೃದ್ಧಿಯಾಗುತ್ತದೆ ಎಂದು ತಿಳಿದು ಬರುತ್ತದೆ. ೧೯೦೩—೦೪ನೇ ವರ್ಷಕ್ಕೆ ಬಿರ್ಮಾ ಹೊಂಗ್‍ಕೊಂಗ್ ದ್ವೀಪಕ್ಕೂ ಚೀನದ ತೀರಪಟ್ಟಣಗಳಿಗೂ ಗ್ಯಾಲನುಗಳನ್ನು ಮಾತ್ರ ರವಾನಿಸಿದರು. ಕಳೆದ ವರ್ಷ ಹೊಂಗ್‍ಕೊಂಗ್ ಒಂದಕ್ಕೇನೇ ೯,೫೧,೬೦೦ ಗ್ಯಾಲನ್ನು ಕಳುಹಿಸಲಾಯಿತು. ಇತರ ದೇಶದ ಎಣ್ಣೆ ವ್ಯಾಪಾರದ ಪೈಪೋಟಿಯಿಂದ ಬರ್ಮಾದ ಎಣ್ಣೆ ಕಂಪನಿಯವರು ಗ್ಯಾಲನ್ನು ಒಂದರ ಎಂಟಾಣೆಯ ಪ್ರಕಾರ ವಿಕ್ರಯಿಸಿರುವರು. ಇವರಿಗೆ ಲಾಭವೇ ಬಂದಿಲ್ಲ.

*****

ಮೋರಿಗೆ ಸೇರಿದ ಕೊಲೊಂಬೊ ತೀರಪಟ್ಟಣದಲ್ಲಿರುವ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ೧೩೪ ಮಂದಿ ಆರಾಟ್ಯರಾದ ಕೆಲಸಗಾರರು ಆ ಕಂಪನಿ ಯಜಮಾನನು ತಕ್ಕ ಆಹಾರವನ್ನು ಒದಗಿಸಿ ಉಪಚರಿಸುವದಿಲ್ಲವಾದದರಿಂದ ಕೆಲಸಕ್ಕೆ ಹೋಗುವದಿಲ್ಲವೆಂದು ಹೇಳಿ ಮುಷ್ಕರ ಹಿಡಿದರು. ಅವರನ್ನು ಮ್ಯಾಜಿಸ್ಟ್ರೇಟರ ಮುಂದೆ ಹಿಡಿದುಕೊಂಡು ಹೋಗಿ ವಿಚಾರಿಸಲು ಅವರೆಲ್ಲರನ್ನು ಕೇಳಿದ ಬಳಿಕ ಹಡಗಿನ ಯಜಮಾನನು ಅವರಿಗೆ ಇನ್ನು ಮುಂದೆ ಒಳ್ಳೇ ಊಟವನ್ನು ಕೊಡುತ್ತೇನೆಂದು ಮಾತು ಕೊಟ್ಟದ್ದರಿಂದಲೂ ಅವರು ಸ್ವದೇಶಕ್ಕೆ ಹೋಗಿಬಿಡಬೇಕೆಂದಪೇಕ್ಷಿಸಿದ್ದರಿಂದಲೂ ಮ್ಯಾಜಿಸ್ಟ್ರೇಟರು ಅವರ ಸಂಬಳವನ್ನು ಯಜಮಾನನಿಂದ ಕೊಡಿಸಿದನು. ಅವರು ಬಹು ಸಂತುಷ್ಟರಾಗಿ ಮ್ಯಾಜಿಸ್ಟ್ರೇಟರನ್ನು ವಂದಿಸಿ ಕೋರ್ಟಿನಿಂದ ಹೊರಟುಹೋದರು.

*****

ಕೃಷ್ಣಾನದೀ ಪ್ರಾಂತ್ಯದಲ್ಲಿ ಶ್ಯಾಮಲಾಪುರಂ ಎಂಬ ಎಂಬುದು ಒಂದು ಜಮೀನುದಾರಿಯು. ಅಲ್ಲಿನ ರಾಜಾಯರ್ಲಗಡ್ಡ ದುರ್ಗಪ್ರಸಾದನು ಎಂಬವರಿಗೂ ಅವರ ಸಹೋದರರಿಗೂ ಕೆಲವು ದಿನಗಳಿಂದ ಕಲಹಗಳು ನಡೆಯುತ್ತಲಿದ್ದವು. ಕೆಲವು ದಿನಗಳ ಹಿಂದೆ ಜಮೀನುದಾರಿಯನ್ನು ಹಿಡಿದುಕೊಳ್ಳುವಂತೆ ಎರಡನೇ ಸಹೋದರನಾದ ರಾಜಾಯರ್ಲಗಡ್ಡ ವೆಂಕಟಾದ್ರಿಲಿಂಗಪ್ಪನು ಕೆಲವು ಮುಸಲ್ಮಾನರನ್ನು ಗುಂಪು ಕೂಡಿಸಿ ಕಳುಹಿಸಿದನು. ಇದರ ಮೇಲೆ ಆ ಜಮೀನುದಾರನು ಕೃಷ್ಣಾಡಿಸ್ಟ್ರಿಕ್ಟಿನ ಡಿ॥ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದಿ ಹೇಳಿಕೊಳ್ಳಲು ಅವರು ವೆಂಕಟಾದ್ರಿ ಯವರಿಂದ ಪ್ರಜಾಸಮಾಧಾನಕ್ಕೆ ಭಂಗವುಂಟಾಗದಂತೆ ಒಂದು ವರ್ಷದ ವರೆಗೂ ನಡೆದುಕೊಳ್ಳುವದಾಗಿ ಮಾಗ್ದಾನ ಮಾಡಿಸಿಕೊಂಡು ೨,೦೦೦ ರೂ. ಜಾಮೀನು ಮೇಲೆ ಬಿಟ್ಟರು. ಈ ಆಜ್ಞೆಯ ಮೇಲೆ ಅಪ್ಪೀಲು ಮಾಡಿಕೊಳ್ಳಲು ಹೈಕೋರ್ಟಿನವರು ಕೆಳಕೋರ್ಟಿನವರ ಫೈಸಲನ್ನೇ ಸ್ಥಿರಪಡಿಸಿದರು.

*****

ಕಳೆದ ವಾರದಲ್ಲಿ ಬೊಂಬಾಯಿಯ ಒಬ್ಬ ಪೋಲೀಸು ಜವಾನನು ಸಾಹಸಕೃತ್ಯವು ಸ್ತೋತ್ರಾರ್ಹವಾದದ್ದು. ಘಾರ್ಬೆಸು ರಾಜ್ಯದ ಬಳಿಯಲ್ಲಿ ಒಂದು ಬಾವಿಯಿರುವದು. ಇದರ ಮಗ್ಗುಲಲ್ಲಿ ಒಬ್ಬ ಬಡವನ ಗುಡಿಸಲು ಇರುವದು. ಇದರಲ್ಲಿ ಇಟ್ಟಿದ್ದ ಮೇಲೆ ಹಿಟ್ಟಿದ್ದ ಕಲ್ಲಿದೆಯನ್ನು ತೆಗೆಯುವ ಪ್ರಯತ್ನದಲ್ಲಿ ಮನೆ ಹೆಂಗಸು ಕಾಲುಜಾರಿ ಭಾವಿಯಲ್ಲಿ ಬಿದ್ದಳು. ಆ ಶಬ್ದವನ್ನು ಕೇಳಿ ಅವಳ ಗಂಡನು ಓಡಿಬಂದು ಹೆಂಡತಿಯ ಅವಸ್ಥೆಯನ್ನು ಕಂಡು ತಾನೂ ಒಳಕ್ಕೆ ಧುಮುಕಿದನು. ಇವನಿಗೆ ಈಜು ಬರುತ್ತಿರಲಿಲ್ಲ. ಈ ವಿವರವನ್ನೆಲ್ಲಾ ತಿಳಿದ ಒಬ್ಬ ಪೋಲೀಸಿನವನು ಊಟಮಾಡುವದನ್ನೂ ಬಿಟ್ಟು ಓಡಿ ಬಂದು ಬಾವಿಯಲ್ಲಿ ಧುಮುಕಿ ಹೆಂಗಸಿನ ತಲೆಕೂದಲನ್ನು ಒಂದು ಕೈಯಲ್ಲಿ ಹಿಡಿದೆತ್ತಿಕೊಂಡು ಮತ್ತೊಂದು ಕೈಯಿಂದ ಇವಳ ಗಂಡನನ್ನು ತಳ್ಳಿಕೊಂಡು ಹೋಗಿ ಭಾವಿಯ ಗೋಡೆಗೆ ಬಿಡಲು ಅವನು ಗೋಡೆಯಿಂದ ಹೊರಟು ಗೊಂಡಿದ್ದ ಒಂದು ಕಲ್ಲನ್ನು ಹಿಡಿದು ಬದುಕಿಕೊಂಡನು. ಹೀಗೆ ಪೋಲೀಸಿನವನು ಇಬ್ಬರ ಪ್ರಾಣಗಳನ್ನು ಕಾಪಾಡಿದನು.

*****

ಸಿಲೋನಿನಲ್ಲಿ ಪೋಸ್ಟ್ ಆಫೀಸ್ ಕ್ಲಬ್ ಎಂಬ ನವೀನವಾದ ಫಲಾಹಾರ ಭೋಜನಶಾಲೆಯೊಂದು ಏರ್ಪಟ್ಟು ಕಳೆದ ಆಗಸ್ಟ್ ತಿಂಗಳಿಗೆ ಮುಗಿಯುವ ಒಂದು ವರ್ಷದಲ್ಲಿ ಪೋಸ್ಟ್‍ಆಫೀಸಿನವರಿಗೆ ೫೫,೦೦೦ ಭೋಜನಗಳು ನಡೆದವೆಂತಲೂ ಆ ಕ್ಲಬ್ಬಿಗೆ ೭೦೦ ಮಂದಿ ಮೆಂಬರುಗಳು ಸೇರಿದ್ದಾರೆಂತಲೂ ಒಂದು ವರ್ಷಕ್ಕೆ ಒಟ್ಟು ಉತ್ಪತ್ತಿ ರೂ ೭,೮೦೦ ಯೆಂತಲೂ ಅದರಲ್ಲಿ ಸುಮಾರು ರೂ ೭೦೦ ಲಾಭಬಂತೆಂತಲೂ ತಿಳಿದು ಬಂದಿದೆ. ಈ ಲಾಭವನ್ನು ಮೆಂಬರುಗಳು ಯಾವದಾದರೊಂದು ವಿನೋದ ಕಾಲಕ್ಷೇಪಕ್ಕೆ ವಿನಿಯೋಗಿಸುತ್ತಾರೆ. ಈ ಕ್ಲಬ್ಬಿಗೆ ಒಬ್ಬ ಮ್ಯಾನೇಜರನ್ನು ಸಂಬಳಕ್ಕೆ ಗೊತ್ತು ಮಾಡಿದ್ದಾರೆ. ಮೆಂಬರುಗಳಲ್ಲಿ ಬೇಕಾದವರು ಪದಾರ್ಥಗಳನ್ನು ತರಿಸ್ಕೊಂಡು ಒಂದು ಚೀಟಿಯನ್ನು ಕೊಟ್ಟು ಹೋಗುತ್ತಾರೆ. ತಿಂಗಳಿಗೊಂದು ಸಾರಿ ಲೆಕ್ಕ ಮಾಡಿ ಬಾಕಿಯನ್ನು ಅವರ ಸಂಬಳದಲ್ಲಿ ವಜಾ ಮಾಡುತ್ತಾರೆ. ಮೆಂಬರುಗಳ ಉಪಯೋಗಕ್ಕೆ ಮೇಲಾದಂಥ ಒಂದು ಟೆನ್ನಿಸ್ ಕೋರ್ಟಿರುತ್ತದೆ. ಮುಂದೆ ಕ್ರಿಕೆಟ್ ಚಂಡಾಟಕ್ಕೆ ತಕ್ಕ ಏರ್ಪಾಡನ್ನು ಮಾಡುವವರಾಗಿದ್ದಾರೆ

*****

ಅಹ್ಮದಾಬಾದ ಸಂಸ್ಥಾನದ ಜೆಮ್ಮಾಗರ ಪಟ್ಟಣದ ಸೆರೆಮನೆಯಲ್ಲಿ ಬಿದ್ದಿದ್ದ ಕೆಲವು ಖೈದಿಗಳು ತಪ್ಪಿಸಿಕೊಳ್ಳುವದಕ್ಕೆ ಪ್ರಯತ್ನಿಸಿದರು. ಅವರಲ್ಲಿ ಸರ್ಜ ದೋಸಾಜಿ ಎಂಬವರಿಬ್ಬರು ಮುಖಂಡರಾಗಿದ್ದರು. ಸರ್ಜನು ಮೊದಲೆ ಡಕಾಯಿತಿ ನಡಿಸಿ ಸಜಾ ಅನುಭವಿಸುತ್ತಿರುವಾಗ್ಗೆ ತಪ್ಪಿಸಿಕೊಂಡಿರುವವನು. ಇವನನ್ನು ಪುನಃ ಹಿಡಿದು ೩೦ ವರ್ಷಗಳ ಸಜಾ ಶಿಕ್ಷೆಯನ್ನು ವಿಧಿಸಿದ್ದರು. ದೋಸಾಜಿ ರಾಂಸಿಂಗೆಂಬವನು ಒಬ್ಬ ಪೋಲೀಸು ಸಿಪಾಯಿಯನ್ನು ಕೊಂದದಕ್ಕೆ ಆಮರಣಾಂತದ ಸಜಾ ಶಿಕ್ಷೆಯನ್ನು ಅನುಭವಿಸುತ್ತಿದ್ದನು. ಇವನು ಕೆಲವು ಕಾಲದಿಂದ ಒಳ್ಳೇ ನಡತೆಯುಳ್ಳವನಾಗಿದ್ದದರಿಂದ ವಾರ್ಡರಾಗಿ ನೇಮಿಸಲ್ಪಟ್ಟಿದ್ದನು. ಇವನು ತ್ಯಾಗೋ ಪ್ರಯತ್ನ ಮಾಡಿ ಹಗ್ಗವನ್ನೂ ಚೂರಿಯನ್ನೂ ಸಂಪಾದಿಸಿಟ್ಟುಕೊಂಡಿದ್ದು ಕಳೆದ ವಾರದಲ್ಲಿ ಒಂದು ರಾತ್ರಿ ಅವನೂ ಸರ್ಜನೂ ಕೊಟಡಿಯ ಮೇಲ್ಮುಖಿಯ ಹೆಂಚುಗಳನ್ನು ಕಿತ್ತುಹಾಕಿ ಅವರಿಗೊಳಕ್ಕೆ ಬಂದು ಅಲ್ಲಿದ್ದ ಕಾವಲಿನವನ ಮೇಲೆ ಬಿದ್ದು ಅವನ ಕೈಯಲ್ಲಿದ್ದ ಬಂದೂಕನು ಕಿತ್ತುಕೊಂಡರು. ಬಳಿಕ ಸರ್ಜನು ಒಂದು ಗೋಡೆ ಕೆಲಕ್ಕೆ ಹಗ್ಗವನ್ನು ಕಟ್ಟಿ ಸೆರೆಮನೆಯ ಗೋಡೆಯ ಮೇಲಕ್ಕೆ ಹಾಕಿ ಕೊನೆಯನ್ನು ಹಿಡುಕೊಂಡು ಹತ್ತಿ ಗೋಡೆಯ ಮೇಲೆ ನಿಂತುಕೊಂಡು ಉಳಿದ ಖೈದಿಗಳನ್ನು ತಪ್ಪಿಸಿಕೊಳ್ಳಿರೆಂದು ಕೂಗಿದನು. ಇಷ್ಟರಲ್ಲಿ ಕಾವಲಿನವರೆಲ್ಲಾ ಕೂಗಿಕೊಳ್ಳಲು ಪೈಲು ಸೂಪರಿಂಟರು ಓಡಿಬಂದರು. ಅವರನ್ನು ಕಳ್ಳನು ಗುರಿಯನ್ನಿಟ್ಟು ಗುಂಡಿನಿಂದ ಹೊಡೆದು ಕೊಂದನು. ದೋಸಾಜಿಯು ಬಂದೂಕಿನ ಸಲಾಕಿಯಿಂದ ಒಬ್ಬ ಸಿಪಾಯಿಯನ್ನು ಕೊಂದು ಕೊಂಡು ಓಡಿಹೋಗುತ್ತಿರಲು ಇಬ್ಬರು ಜವಾನ ಸಿಪಾಯಿಗಳು ಅವನನ್ನು ಅಟ್ಟಿಕೊಂಡು ಹೋಗಿ ಅವನು ಕೈಗೆ ಸಿಕ್ಕದಿರಲು ಅವನನ್ನು ಗುಂಡಿನಿಂದ ಸುಟ್ಟುಕೊಂದರು. ಇಷ್ಟರಲ್ಲಿ ಸಿಪಾಯಿಗಳು ಗೋಡೆಯ ಮೇಲಿದ್ದ ಸರ್ಜನನ್ನು ಗುಂಡಿನಿಂದ ಹೊಡೆಯಲು ಗುರಿತಪ್ಪಿತು. ಅವನು ಅಲ್ಲಿಂದ ಕೆಳಕ್ಕೆ ಧುಮುಕಿ ಕಾಲು ಮುರಿದುಕೊಂಡನು. ಸಿಪಾಯಿಗಳು ಅವನನ್ನು ಅಲ್ಲೇ ಬಡಿದು ಕೊಂದುಹಾಕಿದರು.

ವಿದೇಶ ವರ್ತಮಾನಗಳು.

ದಕ್ಷಿಣ ಆಫ್ರಿಕದ ಪ್ರಿಟೋರಿಯದಲ್ಲಿ ಒಂದು ವಜ್ರದ ಗಣಿಯಲ್ಲಿ ಸುಮಾರು ೧೦ ತೊಲಾ ತೂಕವಿಟ್ಟಿರುವ ಒಂದು ಭಾರೀ ವಜ್ರವು ದೊರಕಿದೆ.

*****

ಬಾಕು ಡಿಸ್ಟ್ರಿಕ್ಟಿನಲ್ಲಿ ರೈಲಿನ ಗಾಡಿಗಳು ಹೋಗುತ್ತಿರುವಾಗ ಕಳ್ಳರ ಗುಂಪು ನುಗ್ಗಿ ಬಂದು ೧೩ ಮಂದಿ ಪ್ರಯಾಣಿಕರಿಗೆ ಗಾಯವನ್ನು ಮಾಡಿ ಒಟ್ಟನ್ನು ಕೊಂದರು.

*****

ರಷ್ಯಾದವರು ಮಧ್ಯ ಆಸಿಯದಲ್ಲಿ ಆಕ್ಸಸ್ ನದಿಯ ಮೇಲೆ ಒಂದು ಸೇತುವೆಯನ್ನು ಕಟ್ಟುತ್ತಿದ್ದಾರೆಂದೂ ಆ ಸ್ಥಾನವು ಆಫ್ಘಾನಿಸ್ಥಾನದ ಮೇರೆಗೆ ಅತಿ ಸಮೀಪವಾಗಿ ರಷ್ಯ ಸೀಮೆಯೊಳಗಡೆಯೇ ಇರುತ್ತದೆಂದೂ ಕಾಬೂಲಿನಿಂದ ವರ್ತಮಾನ ಬಂದಿದೆ.

*****

ಚೀನಾ ದೇಶದ ಕ್ವಾಂಟಂಗ್ ಪ್ರಾಂತ್ಯದಲ್ಲಿ ಆಳುಗಳು ವಂಚಕರೂ ಅವಿಧೇಯರೂ ಕೆಲಸಕ್ಕೆ ತಪ್ಪಿಸಿಕೊಳ್ಳುವವರೂ ಆಗಿರುವದರಿಂದ ಅಲ್ಲಿರುವ ವಿದೇಶೀಯ ವರ್ತಕರು ತಮ್ಮಲ್ಲಿರುವ ಆಳುಗಳ ಪಟ್ಟಿಯನ್ನೂ ಭಾವಚಿತ್ರಗಳನ್ನೂ ತೆಗೆದಿರಿಸಿಕೊಳ್ಳಬೇಕೆಂದು ನಿಶ್ಚಯಿಸಿದ್ದಾರಂತೆ.

ಇಂಗ್ಲಾಂಡಿನ ಆಕ್ಸ್‌ಫೋರ್ಡಿಗೆ ಸೇರಿದ ಒಬ್ಬ ವಿದ್ವಾಂಸನು ಐರ್ಲ್ಯಾಂಡಿನಲ್ಲಿ ಸಂಚರಿಸುತ್ತಿರುವಾಗ ಅಕಸ್ಮಾತ್ತಾಗಿ ಕಾಣದೆಹೋದನು. ಅದೇ ಪ್ರಕಾರ ಹೈಡಲ್‌ಬರ್ಗಿನಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬ ಉಪಾಧ್ಯಾಯನೂ ಕಾಣದೆಹೋಗಿದ್ದಾನೆ. ಇವರ ಸುದ್ದಿಯು ಇನ್ನೂ ಗೊತ್ತಾಗಲಿಲ್ಲ.

*****

ರಷ್ಯದ ರೈಗಾ ಎಂಬಲ್ಲಿ ಜನರು ದೊಂಬಿ ಮಾಡಿ ಅಲ್ಲಿನ ಸೆರೆಮನೆಯೊಳಗಿದ್ದ ಇಬ್ಬರು ರಾಜಕೀಯ ಸೆರೆಯವರನ್ನು ಬಿಡಿಸುವದಕ್ಕೆ ಯತ್ನಿಸಿ ಪಹರೆಯವರಲ್ಲಿ ೫ ಮಂದಿಯನ್ನು ಕೊಂದರು, ಇಲ್ಲವೇ ಜಖಂ ಮಾಡಿದರು. ಅವರು ಅಪರಾಧಿಗಳಾದ ಖೈದಿಗಳನ್ನು ಮಾತ್ರ ಬಿಡುಗಡೆ ಮಾಡಲಿಲ್ಲ.

*****

ರಷ್ಯಾ ರಾಜ್ಯಕ್ಕೆ ಸೇರಿದ ಮಧ್ಯಪ್ರದೇಶಗಳಲ್ಲಿ ಗೋಧಿಯನ್ನು ಬಿತ್ತುವದಕ್ಕೆ ಬೀಜವೇ ಇಲ್ಲದಿರುವದರಿಂದ ಒಳದೇಶದ ರಾಜ್ಯಭಾರಕ್ಕೆ ಮಂತ್ರಿಯಾಗಿರುವವನು ಸುಮಾರು ೫೦ ಲಕ್ಷ ದ್ರವ್ಯವನ್ನು ಹಾಕಿ ಗೋಧಿಯನ್ನೂ ರೈಯೆಂಬ ಧಾನ್ಯವನ್ನೂ ಕೊಂಡುಕೊಡುವದಕ್ಕಾಗಿ ಆಯಾ ಪ್ರಾಂತ್ಯಗಳ ಅಧಿಪತಿಗಳಿಗೆ ಹೇಳಿದ್ದಾನೆ.

*****

ಕೆಂಪು ಕಡಲಲ್ಲಿ ಸಂಚರಿಸುತ್ತಿರುವ ಇಂಗ್ಲಿಷರ ನಾವೆಗಳಿಗೆ ಸಮುದ್ರ ಕಳ್ಳರ ಕಾಟವು ಹೆಚ್ಚಾಗಿರುವದರಿಂದ ಅವರನ್ನು ಅಡಗಿಸುವದಕ್ಕೆ ತುರ್ಕಿ ರಾಜ್ಯದವರು ಪ್ರಯತ್ನವನ್ನು ಮಾಡದಿದ್ದರೆ ಬ್ರಿಟಿಷರು ತಾವಾಗಿ ಆ ಕಳ್ಳರನ್ನು ದಂಡಿಸಿ ನಷ್ಟದ್ರವ್ಯವನ್ನು ಕೇಳಬೇಕಾಗುತ್ತದೆಯೆಂದು ಬ್ರಿಟಿಷ ರಾಜ್ಯಭಾರಿಗಳು ತುರ್ಕಿ ರಾಜ್ಯದವರಿಗೆ ತಿಳಿಯಪಡಿಸಿದಾರೆ.

*****

ಗತಿಸಿದ ಮಿಸ್ ಮ್ಯಾನಿಂಗ್ ಎಂಬವರ ಒಟ್ಟು ಆಸ್ತಿಯು ೭೫ ಸಾವಿರ ಪೌನುಗಳೆಂದು ಗೊತ್ತಾಗಿದೆ. ಇವರು ಸೆಕ್ರೆಟರಿಯಾಗಿದ್ದ ನ್ಯಾಷನಲ್ ಇಂಡಿಯನ್ ಅಸೋಷಿಯೇಷನಿಗೆ ೩,೦೦೦ ನ್ನೂ, ಗರ್ಟನ್ ಎಂಬ ಸ್ತ್ರೀ ವಿದ್ಯಾಶಾಲೆಗೆ ೭,೦೦೦ ನ್ನೂ, ಇಂಡ್ಯಾ ಸ್ತ್ರೀ ವಿದ್ಯಾಭ್ಯಾಸದ ಫಂಡಿಗೆ ೫೦೦ ನ್ನೂ, ಕಲ್ಕತ್ತಾ ಸಾಧಾರಣ ಬ್ರಹ್ಮಸಮಾಜಕ್ಕೆ ೫೦೦ ನ್ನೂ ಕೊಡತಕ್ಕದೆಂದು ಉಯಿಲು ಬರೆಸಿದ್ದಾರೆ.

*****

ಮಿಕಾಸನೆಂಬ ಜಹಜು ಉರಿದುಹೋಯಿತೆಂದು ತಿಳಿಸಿದ್ದೆವಷ್ಟೆ. ಆ ಜಹಜಿನ ಮುಖ್ಯಸ್ಥನು ಬೆಂಕಿಯನ್ನು ಆರಿಸುವದರಲ್ಲಿ ಬಹಳ ಸಾಹಸ ಮಾಡಿದುದಲ್ಲದೆ ತನ್ನ ಅಜಾಗರೂಕತೆಯಿಂದಲೆ ಇಷ್ಟೆಲ್ಲಾ ಅನರ್ಥವಾಯಿತೆಂದೂಹಿಸಿ ಬಹು ದುಃಖಿತನಾಗಿ ಒಂದು ಮನೆಯ ಕಿಟಕಿಯಿಂದ ಕೆಳಗೆ ಬಿದ್ದು ಆತ್ಮಹತ್ಯಮಾಡಿಕೊಳ್ಳಲು ಪ್ರಯತ್ನಿಸಿದನು. ಅವನು ಈಗ ಬಹಳ ಅಪಾಯಕರವಾದ ಸ್ಥಿತಿಯಲ್ಲಿದ್ದಾನೆ

*****

ಲಂಡನ್ ಪಟ್ಟಣದ ಒಬ್ಬ ದೊಡ್ಡ ವ್ಯಾಪಾರಿಯು ೧ ಲಕ್ಷ ಪೌನುಗಳನ್ನು ಧರ್ಮಕಾರ್ಯಗಳಿಗೆ ಕೊಟ್ಟಿರುತ್ತಾನೆ. ವಿವರವೆಂತೆಂದರೆ—ವಿಶ್ವವಿದ್ಯಾಲಯಕ್ಕೆ ೭೭ ಸಾವಿರ; ವಲಸೆಹೋಗುವವರಿಗೆ ೧೭ ಸಾವಿರ; ಆಸ್ಪತ್ರೆಗಳಿಗೆ ೩೧,೫೦೦, ಬಡವರು ರಜಾ ಪಡೆಯುವದಕ್ಕೆ ೧೩ ಸಾವಿರ, ಬಾಯಿಲೆಯವರನ್ನು ಉಪಚರಿಸುವದಕ್ಕೆ ೧೦,೦೦೦, ಅಂಗಹೀನರೂ ಅನಾಥರೂ ಆದ ಮಕ್ಕಳ ಶಾಲೆಗಳಿಗೆ ೧೦,೫೦೦

*****

ಅಮೆರಿಕದ ಇನ್ಷುರನ್ಸ್ ಕಂಪನಿಗಳಲ್ಲಿ ಮಹತ್ತರವಾದ ಮೋಸಗಳು ನಡೆಯುತ್ತಿವೆಯೆಂದು ಸುದ್ದಿಯು ಹುಟ್ಟಲು ಇವುಗಳ ಕಾರುಬಾರುಗಳನ್ನು ಪರೀಕ್ಷಿಸುವದಕ್ಕೆ ಸರ್ಕಾರಿಯಾಗಿ ಒಂದು ಕಮಿಟಿಯು ಸ್ಥಾಪಿತವಾಯಿತು. ಇವರ ವಿಮರ್ಶೆಯ ಮೂಲಕ ಕಂಡುಬಂದಿರುವದೇನೆಂದರೆ, ಎಷ್ಟೋ ಮಂದಿಗೆ ಸಾಲವಾಗಿ ಕೊಟ್ಟಿದ್ದ ದೊಡ್ಡ ಮೊಬಲಗುಗಳ ಲೆಕ್ಕವೇ ಇರಲಿಲ್ಲ. ಮತ್ತು ರಾಜಕೀಯ ವಿಷಯಗಳಲ್ಲಿ ಲಂಚವನ್ನು ಕಟ್ಟುವದಕ್ಕೆ ಅಪರಿಮಿತವಾದ ಹಣಗಳನ್ನು ಕೆಲವರಿಗೆ ಕೊಟ್ಟಿರುತ್ತಾರೆ.

*****

ಸುಮಾರು ೭೦ ಟನ್ನುಗಳನ್ನು ಸಿಡಿಮದ್ದು ತುಂಬಿದ್ದ ಒಂದು ಹಡಗು ಸೂಯೆಜ್ ಕಾಲುವೆಯಲ್ಲಿ ಬೇರೊಂದು ಜಹಜಿಗೆ ತಗುಲಿ ಹತ್ತಿಕೊಂಡಿತು. ಅದರ ಬೆಂಕಿಯು ದೈವವಶದಿಂದ ಸಿಡಿಮದ್ದಿರುವ ಸ್ಥಾನಕ್ಕೆ ಬರುವದಕ್ಕಿಂತ ಮುಂಚೆಯೇ ಆರಿಹೋಯಿತು. ಅದರೂ ಸಿಡಿಮದ್ದಿನಿಂದ ಮುಂದೆ ಅಪಾಯವೇನಾದರೂ ಉಂಟಾಗದಂತೆ ಆ ಜಹಜನ್ನೇ ಸುಟ್ಟು ಹಾರಿಸಿಬಿಡಬೇಕೆಂದು ಅಧಿಕಾರಿಗಳು ಆಲೋಚಿಸಿ ಇದಕ್ಕೋಸ್ಕರ ಎರಡು ಮೈಲು ದೂರದಿಂದ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿ ಸುಡುವರೆಂದು ಗೊತ್ತಾಗಿದೆ

*****

ಅಮೆರಿಕದ ಸಂಯುಕ್ತ ಸಂಸ್ಥಾನಗಳವರು ಪನಾಮ ಕಾಲುವೆಯನ್ನು ಕಡಿದು ಜಲಸಂಧಿಯಾಗಿ ಮಾಡಬೇಕೆಂದು ಪ್ರಯತ್ನಿಸಿದಾರಷ್ಟೆ. ಆ ಪ್ರಾಂತ್ಯವು ಜ್ವರಕ್ಕೆ ವಾಸಸ್ಥಾನವಾಗಿರುವದರಿಂದ ಕಾಲುವೆಯ ಕೆಲಸವನ್ನು ಪ್ರಕೃತದಲ್ಲಿ ನಿಲ್ಲಿಸಿ ಬಚ್ಚಲು ನೀರು ಹೋಗುವದಕ್ಕೂ ಕುಡಿಯುವ ನೀರನ್ನು ಶರಿಸಿಕೊಳ್ಳುವದಕ್ಕೂ ಅಲ್ಲಲ್ಲಿ ನಿಂತಿರುವ ನೀರನ್ನು ಹರಿದುಹೋಗುವಂತೆ ಮಾಡುವದಕ್ಕೂ ತುಂಬ ಪ್ರಯತ್ನಗಳು ನಡೆಯುತ್ತಲಿವೆ. ಇದಕ್ಕಾಗಿ ಜಮೇಕದಿಂದ ನೀಗ್ರೋಜನಗಳನ್ನೂ ಚೀನದಿಂದ ಕೂಲಿಗಳನ್ನೂ ಸಾವಿರಗಟ್ಟಲೆಯಾಗಿ ಕರಿಸಿಕೊಳ್ಳುವವರಾಗಿದಾರೆ. ಈ ಕಾಲುವೆಯ ಕೆಲಸವೆಲ್ಲಾ ಮುಗಿಯುವದಕ್ಕೆ ೧೫ ಅಥವಾ ೨೦ ವರ್ಷಗಳು ಹಿಡಿಯುವವು.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

26

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು

Apply to—Mr. Hughes, Mysore Zoo

ಇದುವರೆಗೆ ಜನವರಿ ತಿಂಗಳ ಪ್ರಜೆಂಟೇಷನ್ ವಾಚು

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್‌ಕೋಫ್ ಪೇಟೆಂಟ್ ಲಿವರ್ ವಾಚು ಅರು ರತ್ನಗಳುಳ್ಳ ಓಪನ್ ಕೇಸ್

ಕೀಲೆಸ್ ಕಂಪೆನ್‌ಸೇಷನ್ ಬ್ಯಾಲನ್ಸ್ ಬಹು ಬಲಿಷ್ಟವಾದ ೧೦ ತಿಂಗಳ ೫ ವರುಷ ಗ್ಯಾರಂಟೀ ಕ್ರಯ ರೂ ೫—೮—೦ ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವದರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಈಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ ಇದು ಮುಗಿದನಂತರ ಪ್ರಜೆಂಟು ದೊರೆಯಲಾರದೆಂದು ಪ್ರಚುರ ಪಡಿಸಿದ್ದ ಮೇರೆಗೆ ೧,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರೆಗೆ ಕಳೆದ ಜುಲೈ ಅಖೈರ್ ವರೆಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡುತ್ತೇವೆಂದು ಸಮಾಧಿಸಿದ ಮೇರೆಗೆ ಜುಲೈ ಅಖೈರ್ ಆದಾಗ್ಯೂ ಅನೇಕ ದರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜೆಂಟರು ಇನ್ನೂ ಕೆಲವು ಕಾಲದವರೆಗೆ ಜಾರಿಯಲ್ಲಿ ತರಬೇಕೆಂದು ಕೋರಿದ್ದರಿಂದಲೂ ನಮ್ಮ ಡೈರೆಕ್ಟರ ಅಪ್ಪಣೆಯ ಮೇರೆಗೆ ಪುನಃ ಬಹುಮತಿ ವಾಚು ಕೊಡಲ್ಪಡುತ್ತೆ. ಇದುವರೆಗೆ ವಾಚು ಬಹುಮತಿ ಪಡೆಯದೆ ಇರುವವರು ಜಾಗ್ರತೆ ದರಖಾಸ್ತು ಕಳುಹಿಸಿ ಬಹುಮಾನ ಸಮೇತ ವಾಚು ಪಡೆಯಿರಿ

☞ ಈ ಕೆಳಗಣ ನಕ್ಷೆಯಲ್ಲಿ ತೋರಿಸಿ ಇರುವ ಪ್ರಜೆಂಟೇಷನ್ ಸಾಮಾನುಗಳು ನೆಂಬರು ಕಳುಹಿಸಿದ ಸಾಮಾನಿಗಿಂತ ಮೇಲಾಗಿಯೂ ನಕ್ಷೆಗೆ ವ್ಯತ್ಯಾಸವಿಲ್ಲದೆಯೂ ಇರುತ್ತೆ

ನಶ್ಯದ ಡಬ್ಬಿ ಇದು ಮೇಲಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು ಕ್ರಯ, ೧—೮—೦,



ಗಡಿಯಾರದ ಸರಪಣಿ ಇದು ಮೇಲಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದರ ಕೊನೆಯಲ್ಲಿ ಸುಂದರವಾದ ಉತ್ತಮ ಬಕ ಲ್ಸ್ ಇಟ್ಟಿರುತ್ತೆ ಎಂದಿಗೂ ಕೆಡಲಾರದು ಕ್ರಯ, ೦—೮—೦



ಮಲಗುವ ಮನೆ ದೀಪ—ಇದು ಮೇಜದ ಮೇಲಿರಿಸುವದಕ್ಕೂ ಗೋಡೆಗೆ ತಗಲಿಸುವದಕ್ಕೂ ಲಾಯಕ್ಕಾದದ್ದು ಎಣ್ಣೆಯು ವೆಚ್ಚ ಕಡಿಮೆ ಪ್ರಕಾಶವಷ್ಟು ಬೆಳಕು. ಕ್ರಯ, ೦—೧೦—೦



ಕರಟ್ ಗುಂಡಿ—ಇದು ಮೇಲಾದ ಜರ್ಮನ್ ಸಿಲವರ್ ಬೆಳ್ಳಿಯಿಂದ ಹೊಸ ನಮೂನೆಯಾಗಿ ತಯಾರಾಗಲ್ಪಟ್ಟದ್ದು. ರೂ ೧—೧೦—೦



ಹಣದ ಪೆಟ್ಟಿಗೆ—ಇಂಗ್ಲಿಷ್ ಮೋಡ ಕ್ಯಾಷ್‌ಬಾಕ್ಸ್—ಹಣ ಆಭರಣ ಭದ್ರವಾಗಿ ಇರಿಸಬಹುದು ಇದರೊಳಗೆ ಎರಡು ಖಾನೆಗಳುಳ್ಳ ೧ ಸಣ್ಣ ಪೆಟ್ಟಿಗೆ ಇದೆ ಭದ್ರವಾದ ಬೀಗದಕ್ಕೆ ನೋಟಕ್ಕೆ ಸುಂದರವಾದದ್ದು ಕ್ರಯ ೬ ೧೦ ೦



ವಿಳಾಸ:—ಮ್ಯಾನೇಜರ್, ಫ್ರಾಂಕ್ಲಿನ್ ಪಾರ್ಕ್ ಕಂಪೆನಿ, ಬ್ಲಾಕ್ ಟವನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ತಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಸುಧಾ

47

ಇದನ್ನು ಓದಿ ! ಬಿಸಬೇಡಿ !! ಗಮನಿಸಿರಿ !!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಾರೆ ಕೈಕ್ಯ, ತಲೆನೋವು, ಅರತಲೆನೋವು, ಬೆನ್ನುಳುಕು, ಕೈಕಾಲು ನೋವು ಮುಂತಾದವುಗಳನ್ನು ಧೈನ್ವಂತ್ರಿ ದಿಗಂತರಕ್ಕೆ ಓಡಿಸಬಲ್ಲದು 'ಸುಧಾ' ಎಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವು ಹೇಗೆ ಮೈ ಉಂಟಾವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧೆ ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸೀಸೆ ಔಷಧಿಯಲ್ಲಿ ಕಂಡುಬರುವ ಅಮೋಘಗುಣವನ್ನು ಹೆಚ್ಚು ವರ್ಣನೆಮಾಡಿ ತೀರದು ಸೀಸೆ ೧ಕ್ಕೆ ೦-೮ ೦ ಅಂಚೆ ಸಲು ಬೇರೆ

ಜೀವನಸುಧಾ—ಜ್ವರ ನಿಂತ ಕೂಡಲೆ ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧ ಪಕ್ಷ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ ಸೀಸೆ ೧ಕ್ಕೆ ರೂಪಾಯಿ ೧ ೦—೦

ಶ್ರೀರಾಂಬಾಲ—ಜಗತ್ಪ್ರಖ್ಯಾತವಾದ ತಾಂಬೂಲ ಮಾತ್ರೆಗಳ ಸೀಸೆ ೧ಕ್ಕೆ ೪ ಆಣೆ ೩ ಸೀಸೆ ಪಡೆಗೆ ವಿ ಪಿ ಖರ್ಚು ೯ ಆಣೆ.

ದೇವನಹಳ್ಳಿ ಟವನ್, ಬೆಂಗಳೂರು ಡಿಸ್ಟ್ರಿಕ್ಟ್

ಯಂ ಗೋವಿಂದಶೆಟ್ಟಿ ಮೆಡಿಕಲ್ ಪ್ರಾಕ್ಟೀಷನರ್

ಲೋಕಪ್ರಸಿದ್ಧವಾದ ಗುಣಗಳುಳ್ಳ ಅತ್ಯಂತ ಉಪಯುಕ್ತವಾದ ಔಷಧಗಳು.

11

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ

೧ ಪುಷ್ಟಿರಸಾಯನ—ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ ನರಗಳ ಸಂಬಂಧವಾದ ದರ್ಬಲಗಳೆಲ್ಲ ದೇಹಪುಷ್ಟಿಯಾಗುವದು, ಪೆಟ್ಟಿ ೧ಕ್ಕೆ ರೂ ೨

೨ ಅಜೀರ್ಣಗುಳಿಗೆ—ಬಾಯಿಯ ದುರ್ಗಂಧವನ್ನು ನಾಶಮಾಡಿ ನಿದ್ದೆಬಾರದಿರುವವರಿಗೆ ಸುಖನಿದ್ರೆಯನ್ನು ಕೊಡುವದು ಪೆಟ್ಟಿ ೧ಕ್ಕೆ ೮ ಆಣೆ.

೩ ಲಕ್ಷ್ಮೀಕರ ಕಸ್ತೂರಿಮಾತ್ರೆ—ಅತ್ಯಂತ ಶಕ್ತಿವಾದ ಆಹಾರವನ್ನು ಜೀರ್ಣಮಾಡಿ ಜ್ವರ, ಕೆಮ್ಮಲು, ಬಾಯಿಯ ದುರ್ಗಂಧ, ಇವುಗಳನ್ನು ಹೋಗಲಾಡಿಸುವದು ಸೀಸೆ ೧ಕ್ಕೆ ೪ ಆಣೆ

೪ ವೇದನಾ ಪರಿಹಾರತೈಲವು ಮೇಲೆ ತೊಡೆಯೋಣದರಿಂದ ಶರೀರದ ಎಲ್ಲಾ ವೇದನೆಗಳು ಹೋಗುವವು ಸೀಸೆ ೧ಕ್ಕೆ ೧ ರೂ

೫ ಪರಿಮಳ ಕೇಶತೈಲವು—ತೋಳುತಲೆ ಹೊಟ್ಟು ಉದುರುವಿಕೆ, ಇವುಗಳು ವಾಸಿಯಾಗುವದಲ್ಲದೆ ಮಿದುಳು ಸಂಬಂಧವಾದ ರೋಗಗಳನ್ನು ವಾಸಿಮಾಡುವದು ಸೀಸೆ ೧ಕ್ಕೆ ೮ ಆಣೆ

೬ ನೇತ್ರಬಿಂದು—ಮಬ್ಬುದೃಷ್ಟಿ, ನೀರು ಸುರಿಯುವದು, ಹುಳು, ಉರಿ ಮುಂತಾದ ರೋಗಗಳು ಗುಣವಾಗುವವು ಸೀಸೆ ೧ಕ್ಕೆ ೮ ಆಣೆ

೭ ಶ್ರೋತ್ರಬಿಂದು—ಕಿವಿಯ ಎಲ್ಲಾ ಜಾಡ್ಯವನ್ನೂ ಪರಿಹರಿಸುವದು ಸೀಸೆ ೧ಕ್ಕೆ ೮ ಆಣೆ

೮ ಹುಳುಕಲ್ಲಿಗೆ ಔಷಧ—ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರದು. ಸೀಸೆ ೧ಕ್ಕೆ ೪ ಆಣೆ

೯ ಸುಖಭೇದಿ—ಆಯಾಸ ಸ್ವಲ್ಪವೂ ಉಂಟಾಗದು ಸೀಸೆ ೧ಕ್ಕೆ ೮ ಆಣೆ.

೧೦ ದ್ರುಸಂಹಾರಿ—ಎಲ್ಲಾ ವಿಧವಾದ ದದರುಗಳನ್ನು ಪೂರ್ತಿಯಾಗಿ ಅಡಗಿಸುವದು. ಪೆಟ್ಟಿಗೆ ೧ಕ್ಕೆ ರೂ ೧

೧೧ ಕೂದಲು ಉದುರಿಹೋಗುವದಕ್ಕೆ—ಚರ್ಮಕ್ಕೆ ಹಚ್ಚಿದರೆ ಕೆಲವೆ ೫ ನಿಮಿಷದಲ್ಲಿ ಉದುರಿಹೋಗುವದು ಸೀಸೆ ೧ಕ್ಕೆ ೪ ಆ

೧೨ ಸುಗಂಧಕ ದಂತದ ಚೂರ್ಣ—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು ಸೀಸೆ ೧ಕ್ಕೆ ೩ ಆಣೆ

೧೩ ಅತ್ಯುತ್ತಮವಾದ ಕಾಶ್ಮೀರದ ಕಸ್ತೂರಿ—ಒಂದೇ ರಹಂ ಇರತಕ್ಕದ್ದು ತೊಲ ೧ಕ್ಕೆ ರೂ ೪೮ ಪಡ—ವಿ ಪಿ ಖರ್ಚು ಬೇರೆ ಬೇಳುವದು ಬಿಲ್ಲಿಯಾಗಿಯೂ ದೊರೆಯುವದು

ವಿಳಾಸ:—ಪಿ. ಸುಬ್ಬರಾಯರ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

[illegible]—೯—೧೯೦೫ ರಿಂದ [illegible]—೯—೧೯೦೫ ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಸತ್ತದ್ದು	ಕೂಡಿದ ಒಟ್ಟು ಸಂಖ್ಯೆ
ಬೆಂಗಳೂರು ಪಟ್ಟಣ	[illegible]	2	23
ಮೈಸೂರು ,,	0	0	59
ಬೆಂಗಳೂರು ಡಿಸ್ಟ್ರಿಕ್ಟ್	26	20	263
ಮೈಸೂರು ,,	0	0	143
ಕೋಲಾರ್ ,,	0	0	83
ಕೋಲಾರ್ ಚಿನ್ನದ ಗಣಿಗಳು	3	1	34
ತುಮಕೂರು ಡಿಸ್ಟ್ರಿಕ್ಟ್	6	0	14
ಹಾಸನ ,,	4	[illegible]	23
ಚಿತ್ರದುರ್ಗ ,,	0	0	1[illegible]7
ಕಡೂರ್ ,,	[illegible]5	8	8[illegible]
ಶಿವಮೊಗ್ಗ ,,	17	10	199
ಜುಮ್ಲಾ	78	45	[illegible]

ಶಾಲಿವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರದ ಆಶ್ವೀಜ ಶುದ್ಧ ಸಪ್ತಮಿ ಗುರುವಾರದಿಂದ ಆಶ್ವೀಜ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೫ ನೇ ಇಸವಿ ಅಕ್ಟೋಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
5	ಗುರು ✱	ಸಪ್ತಮಿ	11 10	ಮೂಲ	16 5
6	ಶುಕ್ರ *	ಅಷ್ಟಮಿ	11 [illegible]	ಪೂರ್ವಾ	16-18
7	ಶನಿವಾ	ನವಮಿ	9 2	ಉತ್ತರಾ	16 23
8	ರವಿವಾ ‡	ದಶಮಿ	7 [illegible]	ಶ್ರ	[illegible]
9	ಸೋಮ	ಏಕಾದಶಿ	5 2	ಧ	19 1
10	ಮಂಗಳ ¶	ದ್ವಾದಶಿ	1-32	ಶ	22 12
11	ಬುಧ	ತ್ರಯೋ	12 12	ಪೂರ್ವಾಭಾ	[illegible]

✱ ಸ್ವಪ್ತಮಿ ತಿಥಿ ಕಾಳರಾತ್ರೀವ್ರತ, ಸಂಸ್ಕೃತಿವ್ರತ * ದುರ್ಗಾಷ್ಟಮಿ, ಮಹಾಷ್ಟಮೀವ್ರತ ಆಯುಧಪೂಜಾ ಅಮ್ಮಲ್‌ದೇವಳ ಪೂಜಾ ‡ ವಿಜಯದಶಮಿ, ಶಮೀಪೂಜಾ ,, ¶ ದ್ವಾದಶೀ ¶ ಪ್ರದೋಷ

ಪೇಟೆ ಧಾರಣೆ.

ಜಿನಸು.	ಮೈಸೂರು	ಬೆಂಗ
ಕಾಫೀ ಅಕ್ಕಿ ಸಲ್ಲ ೧ಕ್ಕೆ	೧೨-೮—	೦[illegible]
ಕೆಂಪುಗಲು ಅಕ್ಕಿ ಅವಲ್	೧೩—೪—೦	೨[illegible]
,, ಸಾಧಾರಣ	೧೨—[illegible]—೦	೧೧[illegible]
ಬಾಸುಮತಿ ಅಕ್ಕಿ	೧೨—೦—೦	೧[illegible]
ಸಣ್ಣಕ್ಕಿ ಅವಲ	೧೪ ೦—೦	೧[illegible]
,, ಸಾಧಾರಣ	೧೩ ೮ ೦	೧
ಗೋಧಿ ಪೇಟೆ ಸಲ್ಲ ೧ಕ್ಕೆ	೨೧ ೦ ೦	೧[illegible]
,, ಸಾಧಾರಣ	೧೦—೮—೦	೧[illegible]
ಹೈದರಾಗಿ ಸಲ್ಲ ೧ಕ್ಕೆ	೬ ೪—೦	[illegible]
ಕಾರಾಗಿ	೬—೦—೦	೪[illegible]
ಜೋಳ	೬—೦—೦	[illegible]
ಹಲಸಂದೆ ಸಲ್ಲ ೧ಕ್ಕೆ	೧೦—೦—೦	೯[illegible]
ಬೇಳೆ ಅವರೆ	೮ ೧೨ ೦	[illegible]
ಹೆಸರು	೯ ೧೨—೦	೧[illegible]
ಉದ್ದು	೧೦ ೦ ೦	೯
ಕಡಲೆ	೧೦ ೦—೦	೧
ಎಳ್ಳು	೧೬ ೦ ೦	೧[illegible]
ಹುರುಳಿ	೧೦—೦ ೦	
ತೊಗರಿ ೧೨೩ ಸೇರಿಗೆ	೧೦—೮—೦	೧[illegible]
ಹೊಗೆಸೊಪ್ಪು ಮಣ ೧ಕ್ಕೆ	೩—೮—೦	೩[illegible]
ಮೆಣಸಿನಕಾಯಿ	೪—೮—೦	
,, ಸಾಧಾರಣ	೩—೧೨—೦	೩
ಬೆಲ್ಲ ಬೊಡ್ಡ ಅಚ್ಚು	೭—೪—೦	[illegible]
ಸಿಳ್ಳೆ ಮಣ ೧ಕ್ಕೆ	೪—೪ ೦	
ಸಕ್ಕರೆ ,,	೫—೦—೦	
ಕೊತ್ತುಂಬರಿ ಪಲ್ಲ ೧ಕ್ಕೆ	೧೦—೮—೦	೯
ಉಪ್ಪು ,,	೯—೦—೦	೬
ಜೀರಿಗೆ ಕಣ್ಣು	೧ ೦—೦	೦
,, ಬಿಳೀದು	೦—೧೪—೦	೦
ತುಪ್ಪ	೧೨ ೮—೦	೧
ಬೇವಿನೆಣ್ಣೆ ಪೆಟ್ಟ ೧ಕ್ಕೆ	೫—೦—೦	
ತೆಂಗಿನಕಾಯಿ ೧೦೦ ಕ್ಕೆ	೫—೦—೦	
ಹರಳೆಣ್ಣೆ ಮಣ ೧ಕ್ಕೆ	೧—೦—೦	೦
ಅಂಟುವಾಳದಕಾಯಿ ಮಣ ೧ಕ್ಕೆ	೦—೧೪—೦	೦
ಚೆನ್ನ (ಪವನ್) ತೊಲ	೧೫—೮—೦	೧
,, ,, ಪಟಿಮು	೧೫—೧೦—೦	೧
,, ,, ಗಟ್ಟಿ ತೊಲ ೧ಕ್ಕೆ	೧೬—೦—೦	೨
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೩—೦—೦	೭

Printed and Published by the Rev H Sience the Proprietor and Manager, Wesleyan Mission Mysore 5/10/1905

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ರು ಪ್ತು ——— ಕ್ರಯ ೧ ರು ಪ್ತು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ | ಮೈಸೂರು—ಸನ್ ೧೯೦೫ ನೇ ಇಸವಿ ಅಕ್ಟೋಬರ್ ತಾರೀಖು ೧೨ ನೇ ಗುರುವಾರ. | ಸಂಚಿಕೆ ೨೨

ಸಚಿತ್ರವಿನೋದಿನಿ ಮಾಸಪತ್ರಿಕೆ.

1

ವಾರ್ಷಿಕಚಂದಾ ರೂ. ೧—೮—೦.

.... ವಿನೋದಿನಿ ಎಂಬ ...ರುವ ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದವೆಂಬುದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹ ಇ... . .

ಸತ್ಯದೀಪಿಕೆ. ೨೮ ೬-೦೫

ವಿಳಾಸ.—ಮ್ಯಾನೇಜರ್ ವಿನೋದಿನಿ ಆಫೀಸು ಶಾಂತಾರ.

"ಇಂಗ್ಲೀಷು ವೈದ್ಯಸಾರ"

ಕ್ರಯ ರೂ. ೧ ೮ ೦, ಹಾಸಲು ೨ ಆ , ವಿ. ಪಿ. ೩ ಆಣೆ.

7

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿ ...ಸ್ವರೂಪ, ವಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ...ಲ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಿಗಳು ...ತ್ತು ಇತರೆಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ...ಷಯಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಾ...ರ್ಯವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾ...ಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳು...ವುದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ ...ಗೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿ...ಕೊಳ್ಳುವದಕ್ಕೂ, ಇದು ತುಂಬಾ ಸಹಾಯಕರವಾಗಿರುವುದು.

ವಿಳಾಸ —ಎಂ. ಗುರುರಾವ್, ಆಸ್ಪತ್ರೆ ಅಸಿಸ್ಟೆಂಟ್,
ಹರಿಹರ, ಕಡೂರು ಡಿಸ್ಟ್ರಿಕ್ಟ್.

...ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

1

[ಸ್ಥಾಪಿತವಾದದ್ದು ೧೮೯೭ರಲ್ಲಿ]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ...ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ...ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ...ಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (\) ತರಗತಿಗೆ ಸೇರಿದವರು ಪಡೆಯಬೇಕೆಂದ...ಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ನೊಬಲಿಗಾಗಿ ವರ್ಷ...ಕ್ಕೆ ಒಂದೊಂದು ರೂಪಾಯಿಯು ಪ್ರಕಾರ ಒಟ್ಟು ರೂ ೫೦ ನ್ನು ...ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ...ಕ್ರೀತಿಯಾಗಿ ನಡಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ...ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾ...ಗುವುದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೈಲ್ವೆ ...ಕ್ಕದಲ್ಲಿರುವ "ಕೋಲ್ಲಂ ಎಸ್ಟೇಟ್" ಎಂಬ ಸುಪ್ರಸಿದ್ಧ...ವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿ...ದೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ...ಸಿನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವ ...ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾ...ದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ...ಪಾಲುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂ...ಮಿಯು ಆಧಾರವಾಗಿರುತ್ತದೆ.

...ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ...ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಖರ್ಚಕ್ಕೆ ...ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ...ಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ. ವಿವರವಾಗಿ ...ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾ...ಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ.—The Manager,
The India Agricultural and Helping Office,
Vengurla Post, Bombay Presidency.

೨ನೆ ಛಾಪೆ ಪ್ರಶ್ನೋತ್ತರ ಲೇಖ್ಯಬೋಧಿನಿ.

2

ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಜಾಗ್ರತೆ ತರಿಸಿಕೊಳ್ಳಿ! ಸಿವಿಲ್, ಕ್ರಿಮಿನಲ್ ಮುಂತಾದ ಎಲ್ಲಾ ವಿಧವಾದ ಲಾ ಸಾ...ರಾಂಶಗಳನ್ನು ತಿಳಿಸತಕ್ಕ ಲಾ ಪುಸ್ತಕವು. ಕ್ರಯ ೧ ಕ್ಕೆ ೧ ರೂ. ೪ ಆಣೆ ಮಾತ್ರವೇ. ಮುಗಿದು ಹೋದನಂತರ ದೊರೆಯಲಾರದು ಬೇಗ ಬರೆಯಿರಿ ಮೋಜಿಣಿ ಕಲಿಯತಕ್ಕ ಪುಸ್ತಕ. ಕ್ರಯ ೧ ಕ್ಕೆ ೧ ರೂಪಾಯಿ ಮಾತ್ರವೇ. ವಿಳಾಸ ಬಿ ಕೆ ಮೂರ್ತಿ ಕಂಪನಿ,
ಬೆಂಗಳೂರು ಸಿಟಿ.

ಯಂ ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

12

ಮೆಕ್ಮಿಲ್ಲನ್ ಕಂಪೆನಿಯ ೫ನೆ ಪುಸ್ತಕದ ನೋಟ್ಸು	೦—೪—೦
ಡಿಟ್ಟೊ ,, ,, ೬ ನೆ ಪುಸ್ತಕದ ನೋಟ್ಸು	೦—೪—೦
ಡಿಟ್ಟೊ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಛಾಪೆ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಜ್ವರಹರಿ. 15



ಇದು ಸಾಧಾರಣ ಜ್ವರ, ಚಳಿಜ್ವರ, ಘೋರಜ್ವರ, ಪಿತ್ತಜ್ವರ, ...ಜ್ವರ, ವಾತಜ್ವರ, ಚಳಿ ೩ ದಿವಸದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಾಜಿ ಅಮಲ್ದಾರ್ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಗ್ರೇನಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೬೦ ಗ್ರೇನಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ— ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೭—೧೨ ಆ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

✱✱✱✱✱✱✱✱

ಓ ಮು ೦ ಕ ಪ್ರ ೯ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ...ಯುಬ್ಬರ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವರತೆ ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಈಸವದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜನ್ರಿಯ ಪದಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲವೆ ಕೆಳಗಿನ ವಿಳಾಸದಾರರಲ್ಲಿ ವಿಕ್ರಯ:—

ಪೆನ್ನಿಯೂಲರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೊಂಡ್ ಚೆಟ್ ಸ್ಟ್ರೀಟ್, ಮದರಾಸ್.

೧೯೦೬ನೇ ವರುಷದ ರಾಯಲ್ ಡೈರಿಗಳು.

4

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚದುರಳತೆ, ವಾರಕೂಲೆ, ಟಪಾಲಿನ ಮುಖ್ಯವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟರ್ ಫೀ, ಕೋರ್ಟು ಫೀ ಆಕ್ಟು, ಇಂಡಿಯಾದಲ್ಲಿ ಮಹಾಲ್ರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೇಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಖಚ್ಚು ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ ರಲ್ಲಿನ ಏಕಾದಶಿ, ಪೌರ್ಣಿಮಿ, ಅಮಾವಾಸ್ಯೆ, ಸಂಕ್ರಮಣ, ಗೌರೀಪಂಚಾಂಗ, ರೈಲ್ವೆ ಪಾರಸಲ್ ಛಾರ್ಜು, ಯದುವಂಶಶತ್ರಾಕತ, ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ.

ನಂ॥	೧	ದೊಡ್ಡ ಸೈದು	ರೂಲು	ಹಾಕಿದ	ಕ್ರಯ		೦—೮—೬
,,	೨	,,	,,	,,	ಮುಚ್ಚಳ ಇರತಕ್ಕದ್ದು		೧—೧೦—೦
,,	೩	ಚಿಕ್ಕ	,,	,,	,,	,,	೦—೬—೦
,,	೪	,,	,,	,,	,,	,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ವಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ ಡೈರಿಗಳು ಅಕ್ಟೋಬರು ೧೦ ರ ಒಳಗಾಗಿ ದೊರೆಯುತ್ತೆ

ದಿ ಜನರಲ್ ಏಜನ್ಸಿ, ಮೈಸೂರು.

ಹೋ ಮಿ ಯೋ ಪ ತಿ.

ತಪ್ಪದೆ ಪರಿಹಾರ ... ತಗಲುತ್ತದೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತೊಂದಿಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖರೋಗ, ಗಾಯಗಳು; ಗೆಡ್ಡೆಗಳು, ಗಾಯಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ. ೨—೮ ಆ., ಹಿಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

✱✱✱✱✱✱✱✱✱

ಹೋಮಿಯೋಪಥಿಕ್ ಯಂಬ್ರೋಕೇಷನ್,

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪಥಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಹುಂಡಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪಥಿ ಕಂಪನಿ, ೨೩ ಸೆಕೆಂಡ್ ಬೀಚ್ ಲೈನ್, ಮದರಾಸ್.

ಸುಲಭಕ್ರಯದ ಗಡಿಯಾರ.

ಜಿತರೀ! ಡಿಸೆಂಬರ್ ೩೧ನೇ ತಾರೀಖಿನ ವರಿವಿಗೆ ಮಾತ್ರ ಖರೀದಿ ಕವಿಸ್ತ ಮಾಡಬಹುದು. ನಂತರ ದೊರೆಯಲಾರದು. ನಿಕ್ಕಲ್ ಸಿಲ್ವರ್, ಟರ್ನ ಕೇಸ್ ಲಿವರ್, ಅತಿ ನಂಬಿಕೆಯಾದ ಗಡಿಯಾರ. ಕ್ರಯ ೩ ರೂ. ೮ ಆಣೆ. ಸ್ವಲ್ಪವೇ ಉಳಿದಿರುವವರಿಂದ ಜಾಗ್ರತೆ ತರಿಸಿಕೊಳ್ಳಿರಿ. ನಂತರ ಈ ಸುಲಭಕ್ರಯಕ್ಕೆ ದೊರೆಯಲಾರದು.

ವಿಳಾಸ —ಬಿ. ಕೆ ಮೋಹನ್ ಕಂಪನಿ, ಬೆಂಗಳೂರು ಸಿಟಿ

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

ದೇವಾಂಗಮತ ಮೂಲಸ್ತಂಭ | ದೇವಾಂಗಮತ ಪ್ರಕಾಶಿಕ 3

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುತ್ತುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸದ್ಭಾವ ತಾರಕಕ್ಕೆ ಸುಂದರವಾದ ೧೪ ಚಿತ್ರೇರಿದೆ. ಕ್ರಯ ಸುಲಭಮಾಡಿದೆ. ೧೪ ಚಿತ್ರೇರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೨—೮. ಚಿತ್ರೇರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೧—೮. ತಕ್ಷಣ ಮಣಿಆರ್ಡರಿಗೂ ವಿ. ಪಿ. ಲೂ ಕಳುಹಿಸುತ್ತೆ. ವಿಳಾಸ— ಮೈಸೂರು ಪವಳ ಅಂಗಡಿ ಬೃಸ್ಪತ್ರೀ ಯಜಮಾನ ಪುಟ್ಟಮಲ್ಲಯ್ಯ.

ಹೊಸ ಪುಸ್ತಕಗಳು.

2

ಒಬ್ಬ ಸಿಪಾಯಿಯ ಸಾಹಸಗಳು.—"ಒಂದು ಎತ್ತು ಮತ್ತು ಕರು ಗುರುಗಂಜಿಗಳ ಸುದ್ದಿ." ಇದನ್ನು ಮುಟ್ಟಿದ ಮೊದಲು ಮುಗಿಸುವವರೆವಿಗೂ ಮೇಲಕ್ಕೆ ಏಳುವ ಆಸೆಕಸೇ ಇಲ್ಲ. ಚಿತ್ರವಿಚಿತ್ರವಾದ ಸಾಹಸಗಳು. ಚಮತ್ಕಾರವಾದ ಮಾತುಗಳು. ಸ್ಥಳಸಂಕೋಚದಿಂದ ಇಲ್ಲಿ ಸ್ವಲ್ಪಮಟ್ಟಿಗೂ ವಿವರಿಸಲಳವಲ್ಲ. ಕ್ರಯ ೪ ಆಣೆ.

ಇಪ್ಪತ್ತನೆಯ ಶತಮಾನದ ಇರುಳು —ವಿಷ್ಣುಗಡಿಯಾರದ ಜೇಬಿನ ಸೈಜ್. ನೀವೆ ಹೋದ ಕಡೆಯಲ್ಲಾ ಗಡಿಯಾರದ ಜೊತೆಯಲ್ಲಿ ನಾಸೂ ಬರಾವೆನೆನ್ನುವದು. "ಪ್ರಮಾದಕ್ಕೆ ಅರ್ಥವನ್ನು ಬಿಟುವಮಾಡುವ ತಿಳುವಳಿಕೆಗಿಂತಲೂ ಅಜ್ಞಾನವೇ ಶ್ರೇಯಸ್ಕರವಲ್ಲವೆ?" ಎಂಬುದೆ ಇದರ ಸಾರಾಂಶ. ಕ್ರಯ ೨ ಆಣೆ

ವಿಳಾಸ —ಬಿ ಆರ್ ಗೋವಿಂದರಾಜುಲು,

೧೨೮ ಅರಳೇಪೇಟೆ, ಬೆಂಗಳೂರು ಸಿಟಿ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11

೧. ಬಾಲರ ಔಷಧಿ—ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿ ಇಡತಕ್ಕದ್ದು. ಸೀಸೆ ೧ಕ್ಕೆ ೪ ಆಣೆ.

೨. ಗುಣಕಾರಿ ತೈಲ—ಎಲ್ಲಾ ಗಾಯಗಳಿಗೂ ಸರ್ವೋತ್ಕೃಷ್ಟವಾದ ಔಷಧಿ. ಸೀಸೆ ೧ಕ್ಕೆ ೮ ಆಣೆ.

೩. ಮಧುಮೇಹನಿವಾರಿ—ನ್ಯೂನತೆಗಳನ್ನು ಸರಿಪಡಿಸಿ ಸ್ವಾಭಾವಿಕವಾಗಿ ಬೆಳೆಸಲು ಅನುಕೂಲಪಡಿಸಿಕೊಡುವದು. ಸೀಸೆಗೆ ೮ ಆ.

೪ ಸ್ನಾನಕ್ಕೆ ಸುವಾಸನಾ ಚೂರ್ಣ—ಬೆವರಿನ ವಾಸನೆಯನ್ನು ತೆಗೆದು ಚರ್ಮವನ್ನು ಮೃದುಮಾಡುವದು ಪೆಟ್ಟಿ ೧ಕ್ಕೆ ೮ ಆಣೆ

೫. ಸಂಜೀವನ ಮಾತ್ರೆಗಳು —ಜ್ವರ ಕೆಳತ ನೆಗಡಿ ಅಜೀರ್ಣ ಇವುಗಳ ಹುಟ್ಟನ್ನೇ ಅಣಗಿಸುವದು ಸೀಸೆ ೧ಕ್ಕೆ ೧೦ ಆಣೆ

೬. ಗೋರೋಚನಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೆ ಅದ್ವಿತೀಯವಾದ ಔಷಧವು, ಸೀಸೆ ೧ಕ್ಕೆ ೧೦ ಆಣೆ

೭. ಚರ್ಮರೋಗಗಳ ಔಷಧಿ—ಉರಿಯನ್ನುಂಟುಮಾಡುವ ಎಲ್ಲಾ ಹುಣ್ಣುಗಳಿಗೆ ಹೋಗೆ ಹಚ್ಚುವದರಿಂದಲೆ ಗುಣವಾಗುವದು. ಸೀಸೆ ೧ಕ್ಕೆ ೮ ಆಣೆ

೮. ಕೇಶಸುವಾಸಿನಿ—ತಲೆಗೂ ಮೆದುಳಿಗೂ ಕಣ್ಣುಗಳಿಗೂ ತಂಪುಕೊಡುತ್ತದೆ. ಸೀಸೆ ೧ಕ್ಕೆ ೧ ರೂಪಾಯಿ.

೯. ಅಪೂರ್ವ ಸುವಾಸನಾ ದ್ರವ್ಯಗಳು—ಅತ್ತರು, ಪುನುಗು, ಕಸ್ತೂರಿ, ಅಗರುಹೊಪ್ಪು, ಮುರಿಕೊಳಂದು, ಜಾಜಿ, ಸುಭಾನ್ ಹಿನಾ, ಮೊಗಲಿಹೂವು ಇವೆಲ್ಲಾ ತೊಲೆ ೧ಕ್ಕೆ ೧—೮—೦

೧೦ ಗೋರೋಚನ, ತೊಲೆ ೧ಕ್ಕೆ ೫ ರೂ ಕುಂಕುಮಕೇಸರಿ ೧ ರೂ ಪಚ್ಚಕರ್ಪೂರ, ತೊಲೆ ೧ಕ್ಕೆ ೨ ರೂ

೧೧. ರಕ್ಷಾಮೃತಂ —ಇದು ಊರಿನ ಗಿಡಮೂಲಿಕಾ ಔಷಧಿಗಳಿಂದ ತಯಾರಿಸಿದ ಪುಡಿ. ಕಾಫಿ, ಟೀ ಇವುಗಳ ಬದಲಾಗಿ ಉಪಯೋಗಿಸಿಕೊಳ್ಳಲಿಕ್ಕೆ ಅತಿ ಉತ್ತಮವಾದದ್ದು. ಕಾಫಿ ಮತ್ತು ಟೀ ಇವುಗಳಲ್ಲಿ ಇರುವ ಕೆಟ್ಟಗುಣಗಳಿಂದ ವಿರಹಿತವಾದದ್ದು ಮೂತ್ರರೋಗ ಮತ್ತು ಅಜೀರ್ಣರೋಗಗಳು ಉಳ್ಳವರಿಗೆ ಬಹು ಉತ್ತಮವಾದದ್ದು. ಅಜೀರ್ಣ, ತಲೆತಿರುಗುವಿಕೆ, ಕೆಮ್ಮು, ನರ ಎಳೆಯುವಿಕೆ, ಕ್ಷಯ, ಮಲಬಂಧ. ತಲೆನೋವು ಮುಂತಾದ ರೋಗಗಳನ್ನು ನಾಶಮಾಡುತ್ತದೆ. ರಕ್ತವನ್ನು ಶುದ್ಧಿಮಾಡಿ ನರಗಳ ಬಲವನ್ನು ಹೆಚ್ಚಿಸುತ್ತದೆ. ಮೈಯಲ್ಲಿರುವ ಉಷ್ಣವನ್ನು ತೆಗೆದುಹಾಕುತ್ತದೆ ಮೂತ್ರರೋಗದವರ ಮೂತ್ರದಲ್ಲಿ ಇರುವ ಶ್ವೇತ ಪದಾರ್ಥವನ್ನು ಕ್ರಮವಾಗಿ ನಾಶಪಡಿಸುತ್ತದೆ ಒಂದು ಪೆಟ್ಟಿಗೆ ೧ಕ್ಕೆ ೬ ಆಣೆ. ಪರ—ವಿ ಪಿ ಚಾರ್ಜು ಬೇರೆ ಬೀಳುವದು.

ವಿಳಾಸ:—ಪಿ. ಸುಬ್ಬರಾಯ್,

ಪ್ರೊಪ್ರೈಟರ್ಸ್‌ರೋಡ್, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲೇನ್ ರವರ ಹೊಟ್ಟೆಕೂಳೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

10



ಕೆಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕ, ಕಾಲುಗಳ ಉಗಳ ನೋವು, ಹೊಟ್ಟೆಕೂಳೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ.—"ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಗಲೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ.—

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,

ಮವುಂಟ್ ರೋಡ್,

ಮದರಾಸ್.

"ಬಕ್ಕಲತನವೂ ಬಕ್ಕಲಿಗನೂ."—ಪಕ್ಷ ಕೇಂದ್ರ.

9

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ಚಂದಾ ಪೋಸ್ಟೇಜು ಸಹಿತ ರೂ ೧—೮—೦ ರೈತರೇ, ಬೇಗ ತರಿಸಿ ವಿಳಾಸ.—ದಿ ಮ್ಯಾನೇಜರ್, ೧೧೯, ಸಿವಿಲ್ ಲೈನ್ಸ್, ಪ್ರೂನ

ವೃತ್ತಾಂತ ಪತ್ರಿಕೆ.

ಸರ್ ೧೯೦೪ ನೇ ಇಸವಿ ಅಕ್ಟೋಬರ್ ತಾ|| ೨೦ ನೇ ಗುರುವಾರ.

ವಂಗದೇಶ ವಿಭಜನೆ

ಬಂಗಾಳ ಆಧಿಪತ್ಯವನ್ನು ಇಂಡಿಯಾ ಗವರ್ನಮೆಂಟಿನವರು ಒಡೆದು, ಕೈಕಾ ಪಟ್ಟಣದಲ್ಲಿ ಹೊಸ ಸರ್ಕಾರಿ ಹೆಡ್ ಕ್ವಾರ್ಟರ್ ಮಾಡಿರುವಂತೆ ಕೇಳಿ ವಾರ್ತಾ ಪತ್ರಿಕೆದಾರರು ಈ ಪತ್ರಿಕೆಯಲ್ಲಿ ವಾಚಕರಿಗೆ ತಿಳಿಸಿದ್ದಾರೆ. ಹೀಗೆ ಒಡೆದು ಎರಡು ಭಾಗ ಮಾಡಿರುವುದು ಅಸಮರ್ಪಕವಾದುದೇ ಅಲ್ಲವೇ ಎಂಬುದನ್ನು ಅವರು ಚರ್ಚಿಸಿ ತಿಳಿಸಿದೆ, ಈ ವಿಷಯವನ್ನೇ ಬಿಟ್ಟು ಇನ್ನೊಂದು ಸಂಗತಿಯನ್ನು ಕುರಿತು ಪ್ರಸ್ತಾಪ ಮಾಡಿದುದು. ಆದರ ಚಾತ್ರಿಯು ತಿರಸ್ಕಾರವೋ ಏನೋ 'ವಂಗದೇಶ ವಿಭಜನೆ' ೨ ಬುದು. ಅವರು ಚರ್ಚಿಸಿರುವ ವಿಷಯವಾದರೋ ಪತ್ರಿಕೆಯ ವಸ್ತುಗಳ ಉಪಯೋಗ ಈ ವಿಭಜನೆಯ ವಿಷಯದಲ್ಲಿ ನಮ್ಮ ಅಭಿಪ್ರಾಯವೇನೆಂದರೆ ಬಂಗಾಳ ಆಧಿಪತ್ಯವು ೧೩೫೦,೦೦೦ ಜನರ ಮೈದಿಯುಳ್ಳ ಆಂದರೆ, ಮೈಸೂರು ಸಂಸ್ಥಾನಕ್ಕಿಂತ ೬ ಪಟ್ಟು ಹೆಚ್ಚು ದೊಡ್ಡದಾಗಿದೆ; ಅದು ಏಳು ಕೋಟಿ ಪ್ರಜಾಸಂಖ್ಯೆಯುಳ್ಳದ್ದಾಗಿದೆ. ಅಂದರೆ, ಅಲ್ಲಿ ಮೈಸೂರು ಸಂಸ್ಥಾನ ಪ್ರಜಾಸಂಖ್ಯೆಗಿಂತಲೂ ೧೩ ರಷ್ಟು ಹೆಚ್ಚು ಪ್ರಜೆಗಳಿದ್ದಾರೆ ಒಬ್ಬ ಮದ್ದೇವಾರನೇ ಕೆಲವು ನೌಕರರಿಟ್ಟುಕೊಂಡು ಒಂದೇ ಕಡೆಯಿಂದ ಅಷ್ಟು ವಿಸ್ತಾರವಾದ ಭೂಪ್ರದೇಶವನ್ನು ಅಷ್ಟು ಹೆಚ್ಚು ಪ್ರಜೆಗಳನ್ನೂ ಸಮರ್ಪಕವಾಗಿ ಆಳುವುದು ಸಾಧ್ಯವೆಂದು ಊಹಿಸಲಾದೀತೇ? ಅದನ್ನು ಒಡೆದು ಬೇರೆ ಮಾಡಿದ್ದರಿಂದ ಪೂರ್ವಭಾಗದ ಬಹು ಪ್ರಜೆಗಳಿಗೆ ಎಷ್ಟೋ ಉಪಕಾರವಾಯಿತು. ಆವರ ಬಿದ್ದಾಗ ಬಹು ದೂರ ಕಲ್ಕತ್ತಾ ಪಟ್ಟಣಕ್ಕೆ ಬರಿಯುವ ಕಷ್ಟ ಅವರಿಗೆ ತಪ್ಪಿಹೋಯಿತು. ಗ್ರಾಮವಾಸಿಗಳು, ರೈತ ಪ್ರಜೆಗಳು, ಇವರೇ ಪ್ರಜಾ ಸಂಖ್ಯೆಯಲ್ಲಿ ಬಹಳ ಹೆಚ್ಚಾಗಿರೋಣದರಿಂದ ಲಾರ್ಡ್ ಕರ್ಜನರವರೂ ಅವರ ಮಂತ್ರಾಲೋಚನಾ ಸಭಿಕರೂ ಅವರ ಕ್ಷೇಮಲಾಭವನ್ನು ಬಯಸಿ ಈ ವಿಭಜನೆಯನ್ನು ಮಾಡಿರುತ್ತಾರೆ ಇವಕ್ಕೆ ವಿರೋಧವಾದ ಪ್ರಾಯಗಳನ್ನು ಪ್ರಕಟಿಸುತ್ತಿರುವವರೆಲ್ಲಾ ಕಲ್ಕತ್ತಾ ಪಟ್ಟಣದವರೇ. ಅಲ್ಲಿನ ವಕೀಲರು ತಮಗೆ ಬರತಕ್ಕ ಮೊಕದ್ದಮೆಗಳು ಇನ್ನು ಮೇಲೆ ತಮ್ಮ ಕೈ ಬಿಟ್ಟುಹೋಗಿ, ಢಕ್ಕಾ ನಗರದಲ್ಲೇ ವ್ಯವಹರಿಸಲ್ಪಡುವವೆಂದು ತಿಳಿದು ಆಕ್ಷೇಪಣೆ ಮಾಡುವುದೇನೋ ಸ್ವಭಾವವೇ ಇದೇ ರೀತಿಯಾಗಿ ಸರ್ಕಾರಿ ನೌಕರವರ್ಗದವರೂ, ಕಲ್ಕತ್ತೆಯ ವರ್ತಕ ಮಂಡಲಿಯವರೂ, ಮನೆ ಬಾಡಿಗೆಗಳನ್ನು ಪಡೆಯುತ್ತಿದ್ದವರೂ ತಮ್ಮ ಸಂಪಾದನೆ ಕಡಿಮೆಯಾಗುವುದೆಂದು ಹೇಳಿ, ಈ ವಿಭಜನೆಗೆ ಪ್ರತಿಕಕ್ಷಿಗಳಾಗಿದ್ದಾರೆ. ಆದರೆ ಗವರ್ನಮೆಂಟಿನವರು ಸಾಮುಕಾರಿ ಜನಗಳ ಲಾಭನಷ್ಟವನ್ನು ಪರಿಗಣಿಸದೆ, ಸರ್ಕಾರಿ ಕೆಲಸಗಳು ಸರಾಗವಾಗಿಯೂ ಬಹುಪ್ರಜಾ ಸಮ್ಮತವಾಗಿಯೂ ತೃಪ್ತಿಕರವಾಗಿಯೂ ಜರುಗುವಂತೆ ಏರ್ಪಾಡು ಮಾಡುವುದು ಆವಶ್ಯಕವಾಗಿರುತ್ತದೆ ವಕೀಲರೂ, ಬರವಣಿಗಸ್ತರೂ ಇತರ ಬಾಬುಗಳೂ ಸೇರಿಕೊಂಡು ದೇಶವಾತ್ಸಲ್ಯವನ್ನು ಕುರಿತು ಬಹಳ ಹೊಗಳ್ಳೆ ಬೋಟಿಯನ್ನೆಬ್ಬಿಸಿ, ಈ ವಿಭಜನಾ ಕಾರ್ಯದಿಂದ ಪ್ರಜೆಗಳ ಏಕಮತವೂ ಸ್ನೇಹವೂ ಬ್ರಿಯೂ ಕ್ಷೀಣಿಸುವುವೆಂದು ಹೇಳುತ್ತಿದ್ದಾರೆ. ಇದಕ್ಕೆ ಅವರಿಗೆ ಏರತಕ್ಕ ಫೀಜು ಕಡಿಮೆಯಾಗುವುದೆಂಬುದೇ ಯಥಾರ್ಥವಾದ ಕಾರಣವೆಂದು ನಮಗೆ ತೋರುತ್ತದೆ ಮತ್ತು ಈ ವಿಭಜನೆಯು ಆ ಪ್ರಾಂತ್ಯದ ಬಡ ಪ್ರಜೆಗಳ ಕಷ್ಟನಿವಾರಣೆಗೆ ಸಹಕಾರಿಯಾಗಿರೋಣದರಿಂದ ಒಳ್ಳೇ ಏರ್ಪಾಡೆಂದು ಅಭಿಪ್ರಾಯಪಡುತ್ತೇವೆ.

ಬಳಿದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಸೋಮವಾರವೂ ಮಂಗಳವಾರವೂ ಒಳ್ಳೆ ಮಳೆ ಆಯಿತು.

*****

ನೆನ್ನೆ ಮಧ್ಯಾಹ್ನ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ೨೨ನೇ ಸಂವತ್ಸರದ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಯಿತು ಈ ಸಂಗತಿಯನ್ನು ಬರುವ ವಾರ ವಿವರವಾಗಿ ಪ್ರಕಟಿಸುವೆವು

*****

ಬೊಂಬಾಯಿ ಗವರ್ನರವರು ನೀಲಗಿರಿ ಬೆಟ್ಟದಿಂದ ವಾಪಸ್ ದಯಮಾಡುವಾಗ್ಗೆ ನಮ್ಮ ಸಂಸ್ಥಾನದಲ್ಲಿರುವ ಪ್ರಸಿದ್ಧ ಗರುಸೊಪ್ಪೆ ಜಲಪಾತವನ್ನು ನೋಡಿಕೊಂಡು ಹೋಗಬೇಕೆಂದು ಆಪೇಕ್ಷಿಸಿದ್ದರಂತೆ ಕೇಳುತ್ತೇವೆ

*****

ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಸತ್ಕರಿಸುವುದಕ್ಕಾಗಿ ಶ್ರೀ ಮಹಾರಾಜರವರು ನಾನಾ ಬಗೆಯ ಸಂತೋಷೋತ್ಸವಗಳನ್ನು ಮಾಡಿಸುವವರಾಗಿದ್ದಾರೆ ಇದಕ್ಕೆಲ್ಲಾ ಮೂರು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಖರ್ಚಾಗುವುದೆಂದು ಕಾಣುತ್ತದೆ

*****

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ನಮ್ಮ ಸಂಸ್ಥಾನದಲ್ಲಿ ಸಂಚರಿಸುವಾಗ್ಗೆ ಅವರಿಗೋಸ್ಕರ ಶ್ರೀ ಮಹಾರಾಜರವರು ಒಂದು ನವೀನವಾದ ರೈಲ್ ಗಾಡಿಯನ್ನು ಮಾರಿಡದ ಕಾರ್ಖಾನೆಯಲ್ಲಿ ತಯಾರುಮಾಡಿಸುತ್ತಿದ್ದಾರೆಂದು ತಿಳಿಯುತ್ತದೆ

*****

ನೆನ್ನೆ ರಾತ್ರಿ ಇಲ್ಲಿನ ಗವರ್ನಮೆಂಟ್ ಹೌಸ್ ಬಂಗಲೆಯಲ್ಲಿ ಯೂರೋಪಿಯನ್ ಸರ್ದಾರರಿಗೆಲ್ಲಾ ಶ್ರೀಮನ್ ಮಹಾರಾಜರವರು ಔತಣ ಮಾಡಿದರು. ಭೋಜನಾನಂತರ ಮೈದಾನಿನಲ್ಲಿ ವಿಚಿತ್ರವಾದ ನಾನಾ ಬಗೆಯ ಬಾಣಬಿರುಸುಗಳು ಹಾರಿಸಲ್ಪಟ್ಟವು. ಅವರು ನಾಳೆ ಪ್ರಯಾಣಮಾಡುವವರಾಗಿದ್ದಾರೆ.

*****

ರಾಜಧಾನಿಯ ರೈಲ್ ಸ್ಟೇಷನ್ ಬಳಿ ಇರುವ ಸರ್ಕಾರಿ ಕಟ್ಟಡದಲ್ಲಿ ಗವರ್ನಮೆಂಟಿನವರು ಪ್ರದರ್ಶನೋತ್ಸವವನ್ನು ನಡೆಸುವಂತೆ ತಿಳಿಸಿದೆಷ್ಟೆ ಈಚೆಗೆ ಇಲ್ಲಿನ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈದಾನಿನಲ್ಲೂ ನಡೆಸಬೇಕೆಂದು ಅಭಿಪ್ರಾಯಪಡುವರು ತಿಳಿಸುತ್ತಾ ಸರ್ಕಾರಕ್ಕೆ ಅರ್ಜಿ ಹಾಕಿರುವಂತೆ ಕೇಳುತ್ತೇವೆ.

*****

ಹೊಸಕೋಟೆ ತಾಲ್ಲೂಕ್ ಅಸಿಸ್ಟೆಂಟ್ ಮೆ|| ವಿ. ೯ ಗುಡಿಯರ್ ಸುಬ್ಬಯ್ಯನವರಿಗೂ, ಅಲ್ಲಿನ ಸಬ್ ರಿಜಿಸ್ಟ್ರಾರ್ ಮೆ|| ಬಿ. ಗಪ್ಪನವರಿಗೆ ಮಂಡ್ಯಕ್ಕೂ ವರ್ಗವಾದ್ದರಿಂದ ಹೊಸಕೋಟೆ ಪ್ರಜೆಗಳೂ ಸರ್ಕಾರಿ ನೌಕರರೂ ಸೇರಿ ಅವರ ವಾರ ಉಪಚಾರ ಸತ್ಕಾರಗಳನ್ನು ಜರುಗಿಸಿದರೆಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

*****

ನಮ್ಮ ಸಂಸ್ಥಾನದಲ್ಲಿ ಸದ್ಯ ಬ್ರಿಟಿಷ್ ರೆಸಿಡೆಂಟಾಗಿ ನೋಡುತ್ತಿರುವ ಮೆ|| ಎ ವಿಲ್ಲಿಯಂಸ್ ರವರು ಮುಂದಿನ ತಿಂಗಳ ಕಡೆಯಲ್ಲಿ ನಾಲ್ಕಾರು ತಿಂಗಳು ರಜಾ ಪಡೆದು ವಿ

...ಯಾಗುತ್ತಾರೆಂತಲೂ, ಇವರ ಬದಲಿಗೆ ಮೆ॥ ಎಸ್. ಎಂ ಫ್ರೇಸರ್ ಯವರು ರೆಸಿಡೆಂಟರಾಗಿ ದಯಮಾಡುತ್ತಾರೆಂತಲೂ, ಅವರು ರಜಾ ತೀರಿ ವಾಪಸು ಬಂದ ಮೇಲೆ ಅವರಿಗೇ ಈ ಸಂಸ್ಥಾನದ ರೆಸಿಡೆಂಟ್ ಕೆಲಸ ಖಾಯಂ ಆಗಬಹುದೆಂತಲೂ ವರ್ತಮಾನವಿದೆ.

****

ಒಬ್ಬ ಬಾತ್ಮಿದಾರರು ಬರೆಯುವುದು—"ಶ್ರೀಗುರುದತ್ತಾತ್ರೇಯ ಬಾಬಾಬುಡನ್‌ಗಿರಿ ಗುರುಗಳು ಮೈಸೂರಿಗೆ ದಯಮಾಡಿದ್ದಕ್ಕೆ ಶ್ರೀಮನ್ಮಹಾರಾಜರವರಿಂದ ಜಿರೋಪವಸ್ತ್ರ ಕಳುಹಿಸಿ ಬಹಳ ಮರ್ಯಾದೆಯಿಂದ ಕರಸಿ, ಖಿಲ್ಲತ್ತು ಮೋಹಿನಬಾನೆ ಲವಾಜಮೆ ಸಕ್ಕರೆ ಸಹಬ್ರಾಯಿ ಮೊದಲಾದ ಬಹುಮಾನವನ್ನು ಕೊಟ್ಟರು. ಮೈಸೂರಿನ ವೈದಿಕ ಮಠಸ್ಥರು ಸಹ ಅವರನ್ನು ತಮ್ಮ ಮನೆಗಳಿಗೆ ಕರೆಸಿಕೊಂಡು ಬಹಳ ಮರ್ಯಾದೆ ಮಾಡಿದರು. ಕಳೆದ ೨೮ನೆ ಗುರುವಾರ ಆ ಸ್ವಾಮಿಗಳು ಇಲ್ಲಿಂದ ಚಿಕ್ಕಮಗಳೂರು ಪ್ರಾಂತ್ಯ ದಯಮಾಡಿದರು."

****

ಮೊನ್ನೆ ಮಂಗಳವಾರ ರಾತ್ರಿ ಜಗನ್ಮೋಹನ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರು ದರ್ಬಾರ್ ನಡಸಿದರು. ಪ್ರಜಾಪ್ರತಿನಿಧಿಗಳ ಪದವು ಮುಂದರಿಗಳಾದವು. ಮುಖ್ಯವಾಯಿ ಸೂಪರಿಂಟೆಂಡೆಂಟು ರಾಜಧಾನಿಯ ಸಂಸ್ಕೃತ ಕಾಲೇಜಿನ ರಿಪೋರ್ಟನ್ನು ಓದಿ ವಿಜ್ಞಾಪನೆ ಮಾಡಿದ್ದಲ್ಲದೆ, ಈ ಸಲ ನಡೆದ ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಬಹುಮಾನ ಪಡೆಯತಕ್ಕವರ ಹೆಸರುಗಳನ್ನು ಓದಿ ಅರಿಕೆ ಮಾಡಿದರು. ಶ್ರೀಮನ್ಮಹಾರಾಜರವರು ಅವರಿಗೆಲ್ಲಾ ಬಹುಮಾನ ದ್ರವ್ಯವನ್ನೂ ಶಾಲು ಮೊದಲಾದ ಖಿಲ್ಲತ್ತುಗಳನ್ನೂ ಸ್ವಹಸ್ತದಿಂದ ದಯಪಾಲಿಸಿದರು.

ಮೈಸೂರು ಗೆಜೆಟ್ ಸಂಗ್ರಹ.

ಸೆಪ್ಟೆಂಬರ್ ತಾ. ೧೩ ರಿಂದ ಬೆಂಗಳೂರು ಡಿಸ್ಟ್ರಿಕ್ಟ್ ದೇವನಹಳ್ಳಿಯ ಪೋಲೀಸ್ ಆಫೀಸಿನಲ್ಲೇ ಟೆಲಿಗ್ರಾಫ್ ಆಫೀಸನ್ನೂ ಇಟ್ಟಿದೆ.

ಮಾಗಡಿ ತಾಲ್ಲೂಕ್ ಅಮಲ್‌ದಾರ್ ಮೆ॥ ಬಿ. ಸಿ. ಕೃಷ್ಣಯ್ಯಂಗಾರ್ಯರವರಿಗೆ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೇಜ್ ರಜವನ್ನು ಅವರ ಇಷ್ಟಪ್ರಕಾರ ರದ್ದು ಮಾಡಿದೆ.

ತಿಪಟೂರು ತಾಲ್ಲೂಕ್ ಅಮಲ್ದಾರ್ ಮೆ॥ ಸಿ. ವಿ. ನಾರಾಯಣಾಚಾರ್ಯರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದಕಾರಣ ರದ್ದುಮಾಡಿದೆ.

ಅಮಲ್ದಾರ್ ಮೆ॥ ಎಂ. ಪಿ ವಿಶ್ವನಾಥರಾಯರು ರಜದಿಂದ ವಾಪಸು ಬಂದ ಮೇಲೆ ಹೊಳಲ್ಕೆರೆ ತಾಲ್ಲೂಕಿನ ಛಾರ್ಜನ್ನು ವಹಿಸಿದ್ದು.

ಹೊಳಲ್ಕೆರೆ ಸಬ್ ಪ್ರೊಬೇಷನ್ ಅಮಲ್ದಾರ್ ಮೆ॥ ವಿ. ಎಸ್. ರಾಮಸ್ವಾಮಿರಾಯರು ಛಾರ್ಜನ್ನು ಕೊಟ್ಟ ತರುವಾಯ ಪೋಲೀಸ್ ಇಲಾಖೆಯಲ್ಲಿ ಮೊದಲಿದ್ದ ತಮ್ಮ ಕೆಲಸಕ್ಕೆ ವಾಪಸು ದಾಖಲಾಗತಕ್ಕದ್ದು.

ಮಂಜರಾಬಾದ್ ತಾಲ್ಲೂಕ್ ಅಮಲ್ದಾರ್ ಮೆ॥ ವಿ ಕಂಠೀರವಾಚಾರ್ರಿಗೆ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅರಕಲಗೂಡು ತಾಲ್ಲೂಕ್ ಅಮಲ್ದಾರ್ ಮೆ॥ ಬಿ ಕೃಷ್ಣಯ್ಯಂಗಾರ್ಯರನ್ನು ಮಂಜರಾಬಾದಿಗೆ ವರ್ಗ ಮಾಡಿದೆ.

ರೆವಿನ್ಯೂ ಪ್ರೊಬೇಷನರ್ ಮೆ॥ ಎಂ. ಸದಾಶಿವರಾಯರನ್ನು ಅರಕಲಗೂಡು ತಾಲ್ಲೂಕ್ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಿಸಿದೆ.

ಮೈಸೂರ್ ಇನ್‌ಫೆಂಟ್ರಿ ೧ನೆ ಬೆಟಾಲಿಯನ್ ಕಮಿಷನ್ಡ್ ರ್‍ಯಾಂಕಿನಲ್ಲಿ ಮುಂದೆ ಹೇಳುವ ಬಡ್ತಿಗಳು ಮೇ ೪ ರಿಂದ ಜಾರಿಗೆ ಮಾಡಲ್ಪಟ್ಟಿವೆ—

ಕೃಷ್ಣೋಜಿ ಅರಸಿನವರನ್ನು ೧ನೆ ಗ್ರೇಡ್ ಸುಬೇದಾರಿಯಿಂದ ಸುಬೇದಾರ್ ಮೇಜರಿಗೆ; ವಿಠಲ್ ಬಾಕರ್ ಅಲಿಯವರನ್ನೂ ಕೇಶವನಾಯಕರನ್ನೂ ೧ನೇ ಗ್ರೇಡ್ ಜಮಾದಾರಿಯಿಂದ ೨ನೇ ಗ್ರೇಡ್ ಸುಬೇದಾರಿಗೆ.

ಗಣಿಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ॥ ಜಾರ್ಜ್ ಲಾವೆಲ್ಲೆಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನಗಳಿಗೆ ಜಾಸ್ತಿ ಮಾಡಿದೆ.

ದೊಡ್ಡಬಳ್ಳಾಪುರದ ರೇಂಜಿನ ಛಾರ್ಜನ್ನು ವಹಿಸಿರುವ ಅ॥ ಕಮಿಷನರ್ ಮತ್ತು ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಕೆ. ಎಸ್. ಶ್ರೀನಿವಾಸಯ್ಯಂಗಾರ್ರಿಗೆ ಫಿರ್ಯಾದುಗಳನ್ನು ತಮ್ಮ ರೇಂಜಿನೊಳಗಿರುವ ೨ನೆ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರುಗಳಿಗೆ ವಿಲೇವಾರಿಗಾಗಿ ವರ್ಗ ಮಾಡಬಹುದೆಂಬ ಅಧಿಕಾರ ಕೊಟ್ಟಿದೆ.

[ನವರಾತ್ರಿ ಉತ್ಸವದ ನಿಮಿತ್ತ ರಜಾ ಬಂದಿರುವುದರಿಂದ ಮುಂದಿನ ವಾರದ ಮೈಸೂರು ಸರ್ಕಾರಿ ಗೆಜೆಟ್ಟು ಪ್ರಕಟವಾಗುವುದಿಲ್ಲ]

ನವರಾತ್ರಿ ಉತ್ಸವಗಳು.

ಇಂಗ್ಲಿಷ್ ದರ್ಬಾರು.

ಕಳೆದ ಶನಿವಾರ ಸಾಯಂಕಾಲ ಜಗನ್ಮೋಹನ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರು ಯೂರೋಪ್ಯನ್ ಸರ್ದಾರರುಗಳನ್ನು ಕರೆಸಿಕೊಂಡು, ದರ್ಬಾರ್ ನಡಸಿದರು. ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆ॥ ಎ. ವಿಲ್ಲಿಯಂಸ್ ಯವರು ಆ ದಿವಸ ದಯಮಾಡಿದರು. ಅವರನ್ನು ಮರ್ಯಾದೆಗಳೊಡನೆ ಕರೆತಂದು ರೆಸಿಡೆನ್ಸಿ ಬಂಗಲೆಯಲ್ಲಿ ಇಳಿಸಿದರು. ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು. ನವರಾತ್ರಿ ಉತ್ಸವಕ್ಕಾಗಿ ಶ್ರೀಮನ್ಮಹಾರಾಜರವರು ಯೂರೋಪ್ಯನ್ ಸರ್ದಾರರನ್ನೂ ದೊರೆಸಾನಿಗಳನ್ನೂ ಪದ್ಧತಿಯ ಪ್ರಕಾರ ಕರೆಸಿಕೊಂಡಿದ್ದಾರೆ. ಇವರಿಗೆ ರೆಸಿಡೆನ್ಸಿ ಬಂಗಲೆಯಲ್ಲಿಯೂ ಡೇರಾಗಳಲ್ಲಿಯೂ ಬಿಡಾರ ಮಾಡಿಕೊಟ್ಟು ಆಹಾರ ವಿಹಾರಗಳಲ್ಲಿ ಸಂತೃಪ್ತಿ ಸಂತೋಷಗಳುಂಟಾಗುವಂತೆ ಸತ್ಕರಿಸುತ್ತಿದ್ದಾರೆ. ಅದೇ ಶನಿವಾರ ಸಾಯಂಕಾಲ ೬ ಘಂಟೆಯನ್ನೂ ದಾಟಿದ ಬ್ರಿಟಿಷ್ ರೆಸಿಡೆಂಟರು ಶ್ರೇಷ್ಠವಾದ ನಾಲ್ಕು ಕುದುರೆ ಕಟ್ಟಿನ ಅರಮನೆ ಸಾರೋಟಿನಲ್ಲಿ ಕುಳಿತು, ಹಿಂದೆ ಮುಂದೆ ಮೈಸೂರು ಇಂಪೀರಿಯಲ್ ಸರ್ವಿಸ್ ಸವಾರರನ್ನು ಬಿಟ್ಟುಕೊಂಡು, ರೆಸಿಡೆನ್ಸಿ ಬಂಗಲೆಯಿಂದ ಹೊರಟು ಕರ್ಜನ್ ಪಾರ್ಕಿನಲ್ಲಿ ಹಾಸಿ ದರ್ಬಾರ್ ಮಂದಿರಕ್ಕೆ ದಯಮಾಡಿದರು. ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು. ಅಗ್ಗ ಅರಮನೆಯ ಮತ್ತು ಗವರ್ನ್‌ಮೆಂಟಿನ ಅಧಿಕಾರಿಗಳು ಬಂದು ರೆಸಿಡೆಂಟರನ್ನು ಎದುರುಗೊಂಡು ಸಿಂಹಾಸನದ ಬಳಿಗೆ ಕರೆದುಕೊಂಡು ಹೋದರು. ಶ್ರೀಮನ್ಮಹಾರಾಜರವರು ದಯಮಾಡಿ ಅವರನ್ನು ವಂದಿಸಿ ಅವರ ಸ್ಥಾನಕ್ಕೆ ಕಳುಹಿಸಿಕೊಟ್ಟು ತಾವು ಸಿಂಹಾಸನವನ್ನು ಹತ್ತಿ ಕುಳಿತುಕೊಂಡರು. ಇತರ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ ಸಿಂಹಾಸನದ ಬಲಗಡೆ ರೆಸಿಡೆಂಟರವರ ಪಕ್ಕದಲ್ಲಿ ಕುಳಿತರು. ಎಡಪಾರ್ಶ್ವದಲ್ಲಿ ಅರಸುಮಕ್ಕಳೂ ದಿವಾನರೇ ಮೊದಲಾದ ಹುದ್ದೆದಾರರೂ ಕುಳಿತರು. ವಾದ್ಯಗಳೂ ಓಲಗ ತಾಳಮೇಳಗಳೂ ಆಗುತ್ತಿದ್ದವು. ಕಸರತ್ತು ಕುಸ್ತಿ ಸೈನಿಕರ ಸಾಹಸಕಾರ್ಯಗಳು ನಡೆದವು. ಪಟ್ಟದಾನೆ ಕುದುರೆಗಳು ಬಂದು ದೀಪಟಿಗೆ ಸಲಾಂ ಆದ ಕೂಡಲೇ ಚಿತ್ರವಿಚಿತ್ರವಾದ ಬಾಣಬಿರುಸುಗಳನ್ನು ಹಾರಿಸಿದರು. ರೆಸಿಡೆಂಟರಿಗೂ ಸರ್ದಾರರಿಗೂ ಹಾರ ತುರಾಯಿ ಅತ್ತರ್ ಮೊದಲಾದುವನ್ನು ಕೊಟ್ಟು ಅವರನ್ನೆಲ್ಲಾ ಮೊದಲಿನಂತೆಯೇ ಮರ್ಯಾದೆಗಳೊಡನೆ ಬೀಳ್ಕೊಟ್ಟರು. ರೆಸಿಡೆಂಟರು ವಾಪಸು ಬರುವಾಗ್ಗೆ ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು.

ವಿಜಯದಶಮಿ ಉತ್ಸವ

ಭಾನುವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಪಟ್ಟದ ಕುದುರೆಯ ಮೇಲೆ ಕುಳಿತು ಕನ್ನಂಬಾಡಿ ಮುಟ್ಟಿಯ ತನಕ ಎಂದು ಎಲ್ಲಿ ಕುದುರೆಯಿಂದಿಳಿದು ಒಳಕ್ಕೆ ದಯಮಾಡಿ ದರ್ಬಾರು ನಡಸಿದರು. ಪಟ್ಟದಾನೆ ಕುದುರೆಗಳು ಸಕಲ ಬಿರುದುಗಳೊಡನೆಯೂ ಸೈನ್ಯಸಹಿತವಾಗಿಯೂ ಮೆರವಣಿಗೆ ಹೊರಟು ಕರ್ಜನ್ ಪಾರ್ಕ್, ದೊಡ್ಡ ಪೇಟೆಗಳ ಮಾರ್ಗವಾಗಿ ಬೋಸನಹಳ್ಳಿ ಕೆರೆ ಬಳಿ ಇರುವ ಬನ್ನಿಮಂಟಪಕ್ಕೆ ಹೋದವು. ಅತ್ತಲಾಗಿ ಅರಮನೆಯಲ್ಲಿ ಪಟ್ಟಕಾಳಗ, ಕರ್ನಾಟಕ ಕುಸ್ತಿಗಳು ಅನೇಕವಾಗಿ ನಡೆದವು. ಬಂಗಲೆಯೊಳಗೆ ಅನೇಕ ಜನರು ಮರದ ಮೇಲೆ ನಿಂತು ಕುಸ್ತಿಗಳನ್ನು ನೋಡುತ್ತಿದ್ದಾಗ್ಗೆ ಮರವು ಕಳಚಿ ಬಿದ್ದುಹೋಯಿತು. ಮೇಲಿದ್ದವರೆಲ್ಲಾ ಬಿದ್ದುಬಿಟ್ಟರು. ಆದರೆ ಯಾರಿಗೂ ವಿಶೇಷ ಅಪಾಯವೇನೂ ಆಗಲಿಲ್ಲವೆಂದು ಕೇಳುತ್ತದೆ.

ಭಾನುವಾರ ಸಾಯಂಕಾಲ ಶ್ರೀಮನ್ಮಹಾರಾಜರವರು ದಿವ್ಯಾಭರಣ ಭೂಷಿತರಾಗಿ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ವಿಜಯ ಯಾತ್ರೆ ದಯಮಾಡಿದರು. ಈ ಮೆರವಣಿಗೆಯು ಅತ್ಯಂತ ನೇತ್ರಾನಂದಕರವಾದುದೆಂದೂ ಅಪೂರ್ವವಾದುದೆಂದೂ ಚರಿತ್ರಕಾರರೇ ವಿವರಿಸಿದ್ದಾರೆ. ಮೆರವಣಿಗೆ ನಿಂತಿದ್ದುದು ಸುಮಾರು ಅರ್ಧಮೈಲಿ ಉದ್ದವಾಯಿತು. ಈ ಉತ್ಸವದಲ್ಲಿ ಕುದುರೆಗಳು, ಆನೆಗಳು, ಒಂಟೆಗಳು, ಸಿಪಾಯಿಗಳು, ವಾದ್ಯಗಳು, ಬಿರುದುಗಳು ಎಲ್ಲಾ ಹೊರಟಿದ್ದವು. ಯುವರಾಜರವರು ಅಶ್ವಾರೂಢರಾಗಿ ಮೆರವಣಿಗೆಯಲ್ಲಿ ದಯಮಾಡಿದರು. ರಾಜಬಂಧುಗಳೂ ದಿವಾನರೇ ಮೊದಲಾದ ಈ ಸಂಸ್ಥಾನದ ಭಾರಿಭಾರೀ ಹುದ್ದೆದಾರರೂ ಶ್ರೀಮನ್ಮಹಾರಾಜರವರ ಹಿಂಭಾಗದಲ್ಲಿ ಸಾರೋಟುಗಳೊಳಗೆ ಕುಳಿತು ಹೋಗಿ ಬಂದರು. ಈ ಸಂಸ್ಥಾನದಲ್ಲಿ ಬಹುಕಾಲ ನೌಕರಿ ಮಾಡಿ ಪೆನ್ಷನ್ ಪಡೆದಿರುವ ಮೆ॥ ಗಳಾದ ತಿಂಬೂಚೆಟ್ಟಿ ಯವರು, ದಳಾಳ್ ಯವರು, ನರಸಿಂಹಯ್ಯಂಗಾರ್ರು ಮೊದಲಾದವರು ಸಹ ಬಂದಿದ್ದರು. ಶ್ರೀಮನ್ಮಹಾರಾಜರವರು ಜಗನ್ಮೋಹನ ಬಂಗಲೆಯನ್ನು ಬಿಟ್ಟ ಕೂಡಲೆ ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಈ ಮೆರವಣಿಗೆಯು ಲಕ್ಷ್ಮೀ ವಿಲಾಸ್ ರೋಡ್, ಕರ್ಜನ್ ಪಾರ್ಕ್, ದೊಡ್ಡಪೇಟೆ ಈ ಮಾರ್ಗವಾಗಿ ಹೊರಟು ಬನ್ನಿಮಂಟಪಕ್ಕೆ ತಲುಪುವಾಗ್ಗೆ ಸಾಯಂಕಾಲ ಸುಮಾರು ೬॥ ಗಂಟೆಯಾಯಿತು. ಕರ್ಜನ್ ಪಾರ್ಕಿನಲ್ಲಿರುವ ಮೆಸಾನಿಕ್ ಲಾಡ್ಜ್ ಎಂಬ ಬಂಗಲೆಯ ಮೇಲ್ಗಡೆ ಮುಂಭಾಗದಲ್ಲಿ ಯೂರೋಪ್ಯನ್ ಸರ್ದಾರರೂ ದೊರೆಸಾನಿಗಳೂ ನಿಂತಿದ್ದು, ಶ್ರೀಮನ್ಮಹಾರಾಜರವರಿಗೆ ವಂದನೆ ಮಾಡಿದರು. ಬನ್ನಿಮಂಟಪದಲ್ಲಿ ಮಹಾರಾಜರವರು ಪಟ್ಟವಸ್ತ್ರಗಳನ್ನು ಧರಿಸಿ ಶಾಸ್ತ್ರೋಕ್ತವಾದ ಪೂಜೆ ಮುಂತಾದ್ದನ್ನು ಮಾಡಿ, ಅಶ್ವಾರೂಢರಾಗಿ ಮೈದಾನಿಗೆ ದಯಮಾಡಿ, ಇಂಪೀರಿಯಲ್ ಸರ್ವಿಸ್ ಸವಾರರೂ, ಲೋಕಲ್ ರಿಜಿಮೆಂಟಿನ ಸವಾರರೂ, ಬಾರ್ ಶಿಪಾಯಿಗಳೂ ಮಾಡಿದ ಸಾಹಸ ಚಮತ್ಕಾರ ಕಾರ್ಯಗಳನ್ನು ಪರಾಂಬರಿಸಿದರು. ಸಂತೋಷಸೂಚಕವಾದ ೨೧ ತೋಪುಗಳೂ ಸಾವಿರಾರು ಬಾಣಗಳೂ ಹಾರಿಸಲ್ಪಟ್ಟವು. ತರುವಾಯ ಶ್ರೀಮನ್ಮಹಾರಾಜರವರು ಜಿ.ಕಾರ್ಪ್ರಕಾರ ದಿವ್ಯವಾದ ಆಭರಣಗಳನ್ನೂ ದಿರಸುಗಳನ್ನೂ ಹಾಕಿಕೊಂಡು, ಅಂಬಾರಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ವಾಪಸು ಅದೇ ಮಾರ್ಗವಾಗಿ ದಯಮಾಡಿದರು, ಉದ್ದಕ್ಕೂ ಬಾಣಬಿರುಸುಗಳಾದವು. ಮೆರವಣಿಗೆಯು ಜಗನ್ಮೋಹನ ಬಂಗಲೆಗೆ ಬರುವಾಗ್ಗೆ ನಡುರಾತ್ರಿಯೇ ಆಯಿತು. ಆಗಲೂ ಗೌರವಾರ್ಥವಾದ ೨೧ ತೋಪುಗಳಾದವು. ಅರಮನೆಯಲ್ಲಿ ಶಾಸ್ತ್ರೋಕ್ತವಾದ ಆರತಿ ಮುಂತಾದ್ದು ಬೆಳೆದ ತರುವಾಯ ಶ್ರೀಮನ್ಮಹಾರಾಜರವರು ಈ ಸಲದ ನವರಾತ್ರಿ ಉತ್ಸವಗಳನ್ನು ಮುಕ್ತಾಯಕ್ಕೆ ತಂದರು.

ಅಲಂಕಾರ ಜನಸಂಘ ಮುಂತಾದ್ದು.

ಈ ಉತ್ಸವದ ನಿಮಿತ್ತ ಮ್ಯುನಿಸಿಪಾಲಿಟಿಯವರು ರಾಜಬೀದಿಗಳನ್ನೆಲ್ಲಾ ಬಹು ನಿರ್ಮಲವಾಗಿಟ್ಟು, ಮೆರವಣಿಗೆ ಹೋಗಿ ಬರುವ ರಸ್ತೆಗಳ ಉದ್ದಕ್ಕೂ ಎರಡು ಕಡೆಗಳಲ್ಲೂ ಚಿತ್ರ ಕಂಭಗಳನ್ನೂ ಬಾವುಟಗಳನ್ನೂ ತೋರಣಾದಿಗಳನ್ನೂ ಕಟ್ಟಿದ್ದರು. ಕರ್ಜನ್ ಪಾರ್ಕಿನಲ್ಲೂ, ದೊಡ್ಡಪೇಟೆಯ ಪ್ರಾರಂಭದಲ್ಲೂ ಎರಡು ಸುಂದರವಾದ ಕಮಾನುಗಳನ್ನು ಹಾಕಿಸಿದ್ದರು. ಸರಸ್ವತಿ ಬಾವಡಿಯ ಬಳಿಯಲ್ಲೂ ಒಂದು ಚಪ್ಪರ ಹಾಕಲ್ಪಟ್ಟಿತ್ತು. ದೊಡ್ಡಪೇಟೆಯಲ್ಲಿ ಉದ್ದಕ್ಕೂ ಉಭಯಪಾರ್ಶ್ವಗಳಲ್ಲೂ ವರ್ತಕ ಮುಂದಲಿರುವವರೂ ಪ್ರಜೆಗಳೂ ತಮ್ಮ ತಮ್ಮ ಅಂಗಡಿಗಳ ಮತ್ತು ಮನೆಗಳ ಮುಂಭಾಗಗಳನ್ನು ನಾನಾ ಪ್ರಕಾರವಾಗಿ ಅಲಂಕರಿಸಿ ನೇತ್ರಾನಂದಕರವಾಗಿ ಮಾಡಿದ್ದರು. ಈ ಉತ್ಸವದ ದಿನ ಲಕ್ಷ್ಮೀವಿಲಾಸ ರಸ್ತೆ, ಲಾನ್ಸ್‌ಡೌನ್ ಬಜಾರುಗಳು, ಕರ್ಜನ್ ಪಾರ್ಕ್, ದೊಡ್ಡಪೇಟೆ, ಕೋಟೆಯ ಮುಂಭಾಗ, ಈ ಮೊದಲಾದ ಪ್ರದೇಶಗಳಲ್ಲಿ ಬೆಳಗುತ್ತಿದ್ದ ದೀಪೋತ್ಸವವು ಮಹಾ ಆಹ್ಲಾದಕರವಾಗಿಯೂ ಅತ್ಯಂತ ನೇತ್ರಾನಂದಕರವಾಗಿಯೂ ಇತ್ತು.

ಸುಮಾರು ಎಂಟು ಸಂವತ್ಸರಗಳಿಂದಲೂ ಅಂದರೆ ನಮ್ಮ ಮಹಾರಾಜರವರಿಗೆ ರಾಜ್ಯಾಭಿಷೇಕವಾದ ಲಾಗಾಯ್ತು ಮೈಸೂರು ಸಂಸ್ಥಾನದ ಪ್ರಜೆಗಳು ನಾನಾ ಕಾರಣಗಳಿಂದ ರಾಜಧಾನಿಗೆ ಬಂದು, ನವರಾತ್ರಿ ಉತ್ಸವಗಳಲ್ಲಿ ಶ್ರೀಮನ್ಮಹಾರಾಜರವರ ದರ್ಶನಮಾಡಿ ಆನಂದಪಡಲು ಅವಕಾಶವಿಲ್ಲದೆ ಮನೋವ್ಯಥೆಯುಂಟಾಗಿತ್ತು.

ಈ ಸಲ ರಾಜಧಾನಿಯಲ್ಲಿ ಪ್ಲೇಗಿನ ಹೆಸರೇ ಇಲ್ಲ. ಇದಲ್ಲದೆ ಈ ಸಂಸ್ಥಾನದಲ್ಲಿ ಸಾಧಾರಣವಾಗಿ ಅನೇಕ ಕಡೆಗಳಲ್ಲಿ ಮಳೆ ಬೆಳೆಗಳು ತಕ್ಕಮಟ್ಟಿಗೆ ಆಗಿರುವವು. ಎಲ್ಲರೂ ಇಂಥಾ ಸಮಯವನ್ನು ನಿರೀಕ್ಷಿಸುತಲಿದ್ದರು. ಈ ವರುಷ ಪ್ರಜೆಗಳ ಅಂಥಾ ಅಭೀಷ್ಟವೆ ಸಂಪೂರ್ಣವಾಗಿ ಸಿದ್ಧಿಸಿತೆಂದು ಹೇಳುವಲ್ಲಿ ಅತಿಶಯೋಕ್ತಿಯಾಗಲಾರದು. ಈ ಸಂಸ್ಥಾನಕ್ಕೆ ಸೇರಿದ ಪ್ರಜೆಗಳೂ ಇತರ ದೂರ ದೇಶಗಳವರೂ ಅನೇಕವಾಗಿ ರಾಜಧಾನಿಗೆ ಬಂದಿದ್ದರು. ರೈಲ್ವೆ ಕಂಪನಿಯವರು ಪ್ರಜೆಗಳಿಗೆ ಮೊದಲೇ ಸರಿಯಾಗಿ ತಿಳಿಸಿ, ಹೆಚ್ಚಾಗಿ ಗಾಡಿಗಳನ್ನು ಬಿಡುವಂತೆ ಏರ್ಪಾಡು ಮಾಡಿದ್ದರೆ ಇನ್ನೂ ಸಹಸ್ರಾರು ಮಂದಿ ಬರುತ್ತಿದ್ದರೆನ್ನುವುದಕ್ಕೆ ಸಂಶಯವಿಲ್ಲ. ಆದರೂ ಈ ಸಲ ಕನಿಷ್ಠಪಕ್ಷ ೩೦,೦೦೦ ಹೊಸ ಜನರು ರಾಜಧಾನಿಯಲ್ಲಿದ್ದು ಉತ್ಸವಗಳನ್ನೆಲ್ಲಾ ನೋಡಿ ಪರಮಾನಂದಪಟ್ಟರೆಂದು ಧಾರಾಳವಾಗಿ ಹೇಳಬಹುದು. ದಿನವೂ ಮೈಸೂರಿಗೆ ಮೂರು ಸಲ ರೈಲ್ ಬರುತ್ತದು. ಇದಲ್ಲದೆ ರೈಲ್ವೇ ಕಂಪನಿಯವರು ಕಡೇ ದಿನಗಳಲ್ಲಿ ಇನ್ನೂ ಮೂರು ಸಲ ಸ್ಪೆಷಲ್ ಗಾಡಿಗಳನ್ನು ಬಿಟ್ಟರು. ಪ್ರತಿ ದಿನ ಅನೇಕ ಸಲವೂ ಗಾಡಿಗಳಲ್ಲಿ ಜನರು ಕಿಕ್ಕಿರಿಯುವಂತೆ ತುಂಬಿಬರುತ್ತಿದ್ದರು. ಗಾಡಿಗಳು ಸಾಲದೆ ಕೆಲವು ಸಲ ಸಾಮಾನ್ ಛರ್ತಿಮಾಡುವ ವಾಗಿನ್ ಬಂಡಿಗಳಲ್ಲೇ ಜನರು ಕೂತು ಬಂದಿರುತ್ತಾರೆ. ಹೀಗಾದರೂ ಬರುವ ಜನರು ಹೊರಟವರಿಗೆಲ್ಲಾ ಗಾಡಿಗಳಲ್ಲಿ ಸ್ಥಳವಿಲ್ಲದೆ ಹೋಯಿತು. ಅನೇಕರು ಅಲ್ಲಲ್ಲೇ ಸ್ಟೇಷನ್‌ಗಳಲ್ಲಿ ಕಾದು ಬಿಟ್ಟು ಹೋದರು. ರಾಜಧಾನಿಯಲ್ಲಿ ಹೊರಗಿನಿಂದ ಬಂದವರಿಗೆಲ್ಲಾ ಪ್ಲೇಗ್ ಇಲಾಖೆಯವರು ಟಿಕೆಟುಗಳನ್ನು ಕೊಡುತ್ತಿದ್ದುಂಟು. ಈ ಗಲಾಟೆಯಲ್ಲಿ ಪ್ಯಾಸ್ ಕೊಡುವುದೂ ತೆಗೆದುಕೊಂಡವರನ್ನು ೧೦ ದಿನಗಳ ತನಕ ಪರೀಕ್ಷೆಮಾಡುವುದೂ ಸಾಧ್ಯವಲ್ಲವೆಂದು ತಿಳಿದು ಪ್ಯಾಸ್ ಕೊಡುವುದನ್ನು ಕೆಲವು ದಿನಗಳಿಗೆ ನಿಲ್ಲಿಸಬೇಕಾಯಿತು.

ಈ ರೀತಿ ಉತ್ಸವವನ್ನು ನೋಡಿಕೊಂಡು ಹೋಗಲು ಬಂದಿದ್ದ ಪ್ರಜೆಗಳಲ್ಲಿ ಬ್ರಾಹ್ಮಣಾದಿ ವರ್ಣದವರಿಗೆ ಅರಮನೆ ಸತ್ರಗಳಲ್ಲೂ ಇತರ ಸಾಹುಕಾರಿ ಸತ್ರಗಳಲ್ಲೂ ಭೋಜನಕ್ಕೆ ಅನುಕೂಲ ಮಾಡಿದ್ದರು. ವೈಶ್ಯ ಮಂಡಲಿಯವರು ಸೇರಿ ಆಗಂತುಕರಾದ ವೈಶ್ಯ ಪ್ರಜೆಗಳಿಗೆ ಅನ್ನದಾನ ಮಾಡಿದರು. ಇನ್ನೂ ಅನೇಕರು ತಮ್ಮ ಶಕ್ತ್ಯನುಸಾರ ಅತಿಥಿಸತ್ಕಾರ ಮಾಡಿದರು. ಮ್ಯುನಿಸಿಪಾಲಿಟಿಯವರು ಮೊದಲು ಕೆಲವು ದಿನ ನಲ್ಲಿಗಳಲ್ಲಿ ಬಿಟ್ಟ ನೀರು ಪ್ರಜೆಗಳಿಗೆಲ್ಲಾ ಸಾಕಾಗಲಿಲ್ಲವೆಂಬುದನ್ನು ತಿಳಿದು, ಕಡೆಯ ಮೂರು ದಿನಗಳಲ್ಲೂ ಎಲ್ಲಾ ನಲ್ಲಿಗಳೊಳಗೂ ಸಾರ್ವದ ನೀರು ಇರುವಂತೆ ಏರ್ಪಾಡು ಮಾಡಿದ್ದುದು ಎಷ್ಟೋ ಅನುಕೂಲವಾಯಿತು. ನವರಾತ್ರಿ ಪ್ರಾರಂಭದಿಂದ ಈ ರೀತಿ ಮಾಡಿದ್ದರೆ ಇನ್ನೂ ಸಹಾಯವಾಗುತ್ತಿತ್ತೆನ್ನುವುದಕ್ಕೆ ಸಂಶಯವಿಲ್ಲ.

ಆಟಪಾಟಗಳೂ ವಿನೋದಗಳೂ

ಈ ಸಲ ರಾಜಧಾನಿಗೆ ಬಂದಿದ್ದ ಪ್ರಜೆಗಳಿಗೆ ಸಭ್ಯವಾದ ಅನೇಕ ಆಟಪಾಟಗಳೂ ವಿನೋದಗಳೂ ಏರ್ಪಡಾಗಿದ್ದವು. ಟೌನ್ ಹಾಲ್ ಬಂಗಲೆಯಲ್ಲಿ ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕ ಸಂಘದವರೂ ರತ್ನಾವಳೀನಾಟಕ ಸಂಘದವರೂ ರಾತ್ರಿಹೊತ್ತು ನಾಟಕಗಳನ್ನು ಆಡುತ್ತಿದ್ದರು. ಪಾರ್ಕಿನ್ಸನ್ ಬಿಗ್ ಗೇಟ್ಸ್ ಪ್ರೈಸ್ ಎಂಬ ಸರ್ಕಸ್ ಕಂಪನಿಯವರು ಆಟಗಳನ್ನು ಆಡಿ ಜನರಿಗೆ ಸಂತೋಷಪಡಿಸುತ್ತಿದ್ದರು. ಇತರ ವಿಧವಾದ ಅನೇಕ ವಿನೋದಗಳು ಅಲ್ಲಲ್ಲಿ ನಡೆಯುತ್ತಿದ್ದವು. ಸ್ಕೂಲ್ ಬಾಲಕರಿಗೆ ಟೆನಿಸ್ ಕ್ರಿಕೆಟ್ ಫುಟ್‌ಬಾಲ್ ಎಂಬೀ ಚೆಂಡಾಟದ ಪಂದ್ಯಗಳು ನಡೆಯುತ್ತಿವೆ. ಯೂರೋಪ್ಯನ್ ಸರ್ದಾರರು ಪೋಲೋ ಮೊದಲಾದ ಆಟಗಳಲ್ಲಿ ಬೆರೆತು ಸಂತೋಷಪಡುತ್ತಿದ್ದಾರೆ.

ಈ ರೀತಿ ಈ ವರುಷದ ನವರಾತ್ರಿ ಉತ್ಸವಗಳು ಸರ್ವಪ್ರಕಾರ ರಕ್ಷಿತವಾಗಿಯೂ, ಸಂತೋಷಪ್ರದವಾಗಿಯೂ, ಸಾಂಗವಾಗಿಯೂ ನೆರವೇರಿ ಮುಕ್ತಾಯವಾಯಿತೆಂದು ತಿಳಿಸಲು ಸಂತೋಷಪಡುತ್ತೇವೆ.

ಐಶ್ವರ್ಯಪರಿತ್ಯಾಗ.

ಒಂದಾನೊಂದು ದಿವಸ ಯೇಸುಸ್ವಾಮಿಯ ಬಳಿಗೆ ಒಬ್ಬ ಯೌವನಸ್ಥನು ಬಂದು—ಬೋಧಕನೇ, ನಿತ್ಯಜೀವವನ್ನು ಪಡೆಯುವದಕ್ಕೆ ನಾನೇನು ಮಾಡಬೇಕು? ಎಂದು ಕೇಳಿದನು. ಸ್ವಾಮಿಯು ಅವನಿಗೆ—ಕಳ್ಳತನ ಮಾಡಬಾರದು, ಕೊಲೆ ಮಾಡಬಾರದು, ಸುಳ್ಳು ಹೇಳಬಾರದು, ಈ ಮೊದಲಾದ ಧರ್ಮಶಾಸ್ತ್ರವಿಧಿಗಳನ್ನು ಅವನು ತಪ್ಪದೆ ಆಚರಿಸುತ್ತ ಬಂದಿದ್ದಾನೋ ಇಲ್ಲವೋ ಎಂದು ಪರೀಕ್ಷಿಸಿ ಅವನು ದೇವರ ಮತ್ತು ಮನುಷ್ಯರ ವಿಷಯಗಳಲ್ಲಿ ಸ್ವಲ್ಪವೂ ತಪ್ಪಿಲ್ಲದೆ ನಡೆದಿದ್ದಾನೆಂದು ಗೊತ್ತುಮಾಡಿದನು. ಆ ಯೌವನಸ್ಥನಾದರೋ ತಾನು ಧರ್ಮಾಚರಣೆಯಲ್ಲಿ ತಪ್ಪಿಲ್ಲದವನಾಗಿ ನಡೆಯುತ್ತ ಬಂದಿದ್ದಾಗ್ಯೂ ತನಗೆ ನಿತ್ಯಜೀವವನ್ನು ಪಡೆಯುವದಕ್ಕೆ ಇಷ್ಟು ಮಾತ್ರ ಸಾಲದೆಂದು ತಿಳಿದು—ನನಗೆ ಇನ್ನೂ ಏನು ಕೊರತೆಯುಂಟೋ ಅದನ್ನು ತಿಳಿಸಬೇಕು ಎಂದು ಬೇಡಿಕೊಂಡನು. ಅದಕ್ಕೆ ಸ್ವಾಮಿಯು ಪ್ರತ್ಯುತ್ತರವಾಗಿ—ನೀನು ಸರ್ವಸಂಪೂರ್ಣನಾಗಬೇಕೆಂದು ಅಪೇಕ್ಷಿಸಿದರೆ ಹೋಗಿ ನಿನ್ನಲ್ಲಿರುವ ಆಸ್ತಿಯನ್ನೆಲ್ಲಾ ಮಾರಿಬಿಟ್ಟು ಬಡವರಿಗೆ ದಾನಮಾಡಿ ಹಿಂದಿರುಗಿ ಬಂದು ನನ್ನನ್ನು ಹಿಂಬಾಲಿಸುವವನಾಗು ಎಂದು ಅಪ್ಪಣೆಕೊಟ್ಟನು. ಆ ಯೌವನಸ್ಥನು ಮಹದೈಶ್ವರ್ಯಸಂಪನ್ನನಾಗಿ ಅದರಲ್ಲಿ ಪ್ರಾಣವನ್ನಿಟ್ಟುಕೊಂಡಿದ್ದನಾದ ಕಾರಣ ಇಷ್ಟು ಹಣವನ್ನು ಹ್ಯಾಗೆ ಬಿಟ್ಟುಬಿಡಲಿ ಎಂದು ಹೇಳಿಕೊಂಡು ಬಹು ದುಃಖಾಕ್ರಾಂತನಾಗಿ ಹೊರಟು ಹೋದನು.

ಈ ವೃತ್ತಾಂತವನ್ನು ಓದಿದವರಲ್ಲಿ ಕೆಲವರು ಯೇಸುಸ್ವಾಮಿಯ ಅಭಿಪ್ರಾಯವನ್ನು ಸರಿಯಾಗಿ ಗ್ರಹಿಸದೆ ಹಣವನ್ನೇ ಗಳಿಸಬಾರದೆಂದು ಆತನು ಶಿಷ್ಯರಿಗೆ ಬೋಧಿಸಿದನೆಂಬುದಾಗಿಯೂ ಆ ಶಿಷ್ಯರಾದವರು ತಮ್ಮ ಕೊರತೆಗಳ ಪರಿಹಾರಕ್ಕೆ ಆವಶ್ಯವಾದ ವಸ್ತುಗಳನ್ನು ಸಂಪಾದಿಸುವದು ಅವಶ್ಯವಿಲ್ಲದ್ದರಿಂದ ಅವರು ಸನ್ಯಾಸಿಗಳಂತೆ ಐಶ್ವರ್ಯವನ್ನು ಪರಿತ್ಯಾಗಮಾಡಿ ಜೀವಿಸಬೇಕೆಂಬುದಾಗಿಯೂ ಹೇಳುವರು. ಆದರೆ ಯೇಸುಸ್ವಾಮಿಯ ಬೋಧನೆಗೆ ಈ ಅಭಿಪ್ರಾಯವು ಒಪ್ಪುವದಿಲ್ಲವೆಂದು ಸುವಾರ್ತಾ ಪುಸ್ತಕಗಳನ್ನೋದಿದರೆ ಗೊತ್ತಾಗುವದು. ದೃಷ್ಟಾಂತವಾಗಿ ಎಷ್ಟೋ ಮಂದಿ ಯೇಸುಸ್ವಾಮಿಯ ಬಳಿಗೆ ಬಂದು ಆತನ ಶಿಷ್ಯರಾಗುತ್ತೇವೆಂದು ಹೇಳಿದರು. ಅವರೊಳಗೆ ಈ ಯೌವನಸ್ಥನನ್ನು ವಿನಾಯಿಸಿ ಮತ್ತೆ ಯಾರಿಗೇ ಆಗಲಿ—ನಿನ್ನ ಆಸ್ತಿಯನ್ನೆಲ್ಲಾ ಮಾರಿ ಬಡವರಿಗೆ ಕೊಡು ಎಂದು ಅಪ್ಪಣೆಯನ್ನು ಕೊಟ್ಟನೋ? ಇಲ್ಲ. ಒಂದಾನೊಂದು ಕಾಲದಲ್ಲಿ ಒಬ್ಬ ಸ್ತ್ರೀಯು ಅತ್ಯಮೂಲ್ಯವಾದ ತೈಲವನ್ನು ತಂದು ಅದರಿಂದ ಆತನನ್ನು ಅಭಿಷೇಕಿಸಿದಳು. ಅದನ್ನು ನೋಡಿ ಶಿಷ್ಯರು—ಈ ತೈಲಕ್ಕೆ ಹಾಕಿದ ಹಣವು ವ್ಯರ್ಥವಾಗಿ ಹೋಯಿತಲ್ಲಾ; ಅದನ್ನು ಮಾರಿ ಆ ಹಣವನ್ನು ಬಡವರಿಗಾದರೂ ಕೊಡಬಾರದಾಗಿತ್ತೆ? ಎಂದು ಆಕ್ಷೇಪಿಸಿದರು. ಆದರೆ ಸ್ವಾಮಿಯು ಅವರನ್ನು ಗದರಿಸಿ ಆ ಸ್ತ್ರೀಯು ಮಾಡಿದ್ದನ್ನು ಮೆಚ್ಚಿದನು. ಆ ಯೌವನಸ್ಥನಿಗೆ ಅಪ್ಪಣೆ ಕೊಟ್ಟ ಪ್ರಕಾರವಾಗಿ ಆತನು ಆ ಸ್ತ್ರೀಗೆ ಅಪ್ಪಣೆ ಕೊಡಲಿಲ್ಲವಲ್ಲ! ಯೇಸುಸ್ವಾಮಿಯು ಪರಲೋಕಕ್ಕೆ ಹೋದ ಬಳಿಕ ಶಿಷ್ಯರು ತಮ್ಮಲ್ಲಿ ಇದ್ದಬದ್ದದನ್ನೆಲ್ಲಾ ಮಾರಿ ಆ ಹಣವನ್ನೆಲ್ಲಾ ಒಂದೇ ಬೊಕ್ಕಸದಲ್ಲಿರಿಸಿ ಎಲ್ಲರೂ ವಿಭಾಗಿಸಿ ಅದನ್ನು ವೆಚ್ಚಮಾಡಬೇಕೆಂದು ಕಟ್ಟುಮಾಡಿಕೊಂಡರು. ಆದರೆ ಈ ಕಟ್ಟಳೆಯು ಅವರಲ್ಲಿ ಬಹಳ ಕಾಲ ನಡೆಯಲಿಲ್ಲ. ಆ ಕಟ್ಟಳೆಯು ಸರ್ವಸಮ್ಮತವಾದದ್ದಲ್ಲವೆಂಬುದಕ್ಕೆ ಇದೇ ಒಂದು ದೃಷ್ಟಾಂತವಾಗಿದೆ. ಅದಿರಲಿ ಭೂಲೋಕದಲ್ಲಿ ದೇವರು ಐಶ್ವರ್ಯವನ್ನು ಸರ್ವರಿಗೂ ಸಮನಾಗಿ ಹಂಚದೆ ಇರುವದು ಉಚಿತವಲ್ಲವೆಂದು ಯೇಸುಸ್ವಾಮಿಯು ಎಂದಾದರೂ ಹೇಳಿದನೇ? ಎಷ್ಟುಮಾತ್ರವೂ ಇಲ್ಲ. ಆದರೆ ಆತನು—ಎಲ್ಲರಿಗೂ ಒಂದೇವಿಧವಾದ ಸಾಮರ್ಥ್ಯವಿಲ್ಲವೆಂತಲೂ ಆಯಾ ಮನುಷ್ಯನ ಸಾಮರ್ಥ್ಯಕ್ಕನುಗುಣವಾಗಿಯೇ ದೇವರು ಪ್ರತಿಯೊಬ್ಬರನ್ನು ತಿದ್ದುತ್ತಾನೆಂತಲೂ ಬೋಧಿಸುತ್ತಾನೆ. ಆದದರಿಂದ ದೇವರ ಸೇವೆಯನ್ನು ಮಾಡುವದಕ್ಕೆ ನಮ್ಮ ನಮ್ಮ ಆಸ್ತಿಗಳನ್ನೇ ಪರಿತ್ಯಾಗ ಮಾಡಬೇಕೆಂದು ಎಂದಿಗೂ ಯೋಚಿಸಬಾರದು. ಐಶ್ವರ್ಯವಂತನಾದವನು ತನ್ನ ದ್ರವ್ಯವನ್ನು ಉಚಿತ ಪ್ರಕಾರವಾಗಿ ವೆಚ್ಚಮಾಡದೆ ಇದ್ದರೆ ಅವನಿಂದ ಪ್ರಜೆಗೆ ಆಗುವ ಪ್ರಯೋಜನವು ಬ್ರಹ್ಮಚಾರಿಯಾದ ಬಡವನಿಂದ ಆದೀತೇ? ಆಗಲಾರದು. ಅಥವಾ, ಅವನು ತನ್ನಲ್ಲಿದ್ದದನ್ನೆಲ್ಲಾ ಮಾರಿಬಿಟ್ಟು ಮನೆ ಬಾಗಲಿಗೆ ಗುಂಪುಕಟ್ಟಿಕೊಂಡು ಬರುವ ಸೋಮಾರಿಗಳಾದ ಭಿಕ್ಷುಕರಿಗೆ ದಾನಮಾಡಿಬಿಡುವದಕ್ಕಿಂತ ಆ ಐಶ್ವರ್ಯವನ್ನು ತಾನೇ ಇಟ್ಟುಕೊಂಡು ಸದ್ವಿನಿಯೋಗ ಮಾಡುವದರಿಂದ ದೇವರಿಗೆ ನಿಜವಾಗಿ ಸೇವೆ ಮಾಡಿದಂತಾಗುವದಲ್ಲವೇ!

ಹಾಗಾದರೆ ಯೇಸುಸ್ವಾಮಿಯು ಆ ಯೌವನಸ್ಥನಿಗೆ—ನಿನ್ನ ಸಕಲವಾದ ಆಸ್ತಿಯನ್ನು ಮಾರಿ ಬಡವರಿಗೆ ದಾನಮಾಡು ಎಂದು ಅಪ್ಪಣೆ ಕೊಟ್ಟದ್ದು ಯಾಕೆ? ಆ ಮನುಷ್ಯನಲ್ಲಿ ಯಥಾರ್ಥವಾದ ಅಪೇಕ್ಷೆಯು ಇಲ್ಲವೆಂಬುದನ್ನು ಪ್ರದರ್ಶನಮಾಡುವದಕ್ಕೋಸ್ಕರವೇ ಹಾಗೆ ಹೇಳಿದನು. ಆ ಯೌವನಸ್ಥನು ನಿತ್ಯಜೀವವನ್ನು ಅಪೇಕ್ಷಿಸಿ ಕೇಳಿಕೊಂಡಾಗ್ಯೂ ಅವನ ಹೃದಯದಲ್ಲಿ ನಿತ್ಯ ಜೀವಕ್ಕಿಂತಲೂ ಬೇರೆ ಇನ್ನೊಂದು ಪದಾರ್ಥದ ಮೇಲೆ ಆಶೆ ಹೆಚ್ಚಾಗಿತ್ತೆಂದು ಸ್ವಾಮಿಗೆ ತಿಳಿದಿತ್ತು. ಅವನಿಗೆ ಕೊರತೆಯು ಹೆಚ್ಚಾಗಿತ್ತೆಂದು ತಿಳಿದುಕೊಂಡಿದ್ದದರಿಂದಲೇ ಆ ಯೌವನಸ್ಥನಿಗೂ ಅದು ಮಾತ್ರ ತನಗೆ ತಿಳಿಯುವಂತೆ ಮಾಡಬೇಕೆಂದಪೇಕ್ಷಿಸಿ ಆಸ್ತಿಯನ್ನೆಲ್ಲಾ ಮಾರಿ ಬಡವರಿಗೆ ಕೊಡು ಎಂದು ಹೇಳಿದನು. ಅವನು ಸ್ವಾಮಿಯ ಮಾತನ್ನು ಕೇಳಿ ದುಃಖಿಸಿಕೊಂಡು ಹೊರಟುಹೋದ ಬಳಿಕ ಆತನು ಶಿಷ್ಯರಿಗೆ—ಐಶ್ವರ್ಯವಂತರು ದೇವರ ರಾಜ್ಯದಲ್ಲಿ ಸೇರುವದು ಬಹು ಕಷ್ಟ ಎಂದು ಹೇಳಿದನು. ಅವರು ಆಶ್ಚರ್ಯಯುಕ್ತರಾಗಿ—ಐಶ್ವರ್ಯವಂತರು ದೇವರ ರಾಜ್ಯದಲ್ಲಿ ಸೇರುವದು ಕಷ್ಟವಾದರೆ ಇನ್ಯಾರು ತಾನೆ ಅಲ್ಲಿ ಸೇರುವದಕ್ಕಾದೀತು? ಎಂದು ಪ್ರಶ್ನಿಸಿದರು. ಆಗ ಯೇಸುಸ್ವಾಮಿಯು ಅವರಿಗೆ—ಐಶ್ವರ್ಯವನ್ನು ನಂಬಿಕೊಂಡಿರುವವರು ದೇವರ ರಾಜ್ಯದಲ್ಲಿ ಪ್ರವೇಶಿಸುವದು ಕಷ್ಟವೆಂದು ಹೇಳಿದನು. ಅಲ್ಲಿ ಸೇರುವದಕ್ಕೆ ಅಪೇಕ್ಷಿಸುವವರು ಐಶ್ವರ್ಯವಂತರಾಗಿಯೋ ಬಡವರಾಗಿಯೋ ಇರಬೇಕೆಂಬುದಲ್ಲ; ಆ ಮನುಷ್ಯರ ಹೃದಯದಲ್ಲಿ ದೇವರ ಮೇಲಣ ಪ್ರೀತಿಯು ತುಂಬಿದೆಯೋ ಅಥವ ಹಣದಾಶೆಯಾಗಲಿ ಇನ್ನಾವ ವಸ್ತುವಿನ ಮೇಲಣ ಭ್ರಾಂತಿಯಾಗಲಿ ತುಂಬಿದೆಯೋ ಎಂದು ತಿಳಿಯುವದೇ ಮುಖ್ಯ ವಿಷಯವಾಗಿದೆ. ಐಶ್ವರ್ಯವಂತನಾದವನಿಗೆ ಐಶ್ವರ್ಯದ ಮೇಲಣ ಆಶೆಯು ಇಲ್ಲದೆ ಇರಬಹುದು. ಅವನ ಹೃದಯದಲ್ಲಿ ದೇವರ ಮೇಲಣ ಪ್ರೀತಿಯೇ ತುಂಬಿರಬಹುದು. ಅಂಥವನು ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕೆ ಅವನ ಹಣವು ಅಭ್ಯಂತರವಾಗಿದ್ದೀತೇ? ಪರಂತು ಒಬ್ಬ ಬಡವನಾದವನ ಹೃದಯವು ಹಣದಾಶೆಯಿಂದ ತುಂಬಿದ್ದರೂ ಇರಬಹುದು. ಅಂಥವನು ದೇವರ ರಾಜ್ಯದಲ್ಲಿ ಸುಲಭವಾಗಿ ಸೇರಲಾದೀತೇ? "ಆತ್ಮದಲ್ಲಿ ಬಡವರು ಧನ್ಯರು" ಎಂದು ಯೇಸುಸ್ವಾಮಿಯು ಹೇಳಿದ್ದಾನೆ. ಇದರ ತಾತ್ಪರ್ಯವೇನಂದರೆ—ಯಾವ ಮನುಷ್ಯನೇ ಆಗಲಿ ಆಸ್ತಿಪಾಸ್ತಿ ಮನೆ ಭೂಮಿ ಯೇನೂ ಇಲ್ಲದ ಬಡವನಾಗಿದ್ದರೂ ಸಕಲವನ್ನೂ ಹೊಂದಿರುವ ಐಶ್ವರ್ಯವಂತನಾಗಿದ್ದರೂ ದೇವರು ಮೆಚ್ಚುವದಿಲ್ಲ. ಆತ್ಮದಲ್ಲಿ ಬಡವನಾಗಿರುವದೇ ಅವನಿಗೆ ಆವಶ್ಯವಾಗಿರುವ ಲಕ್ಷಣವಾಗಿದೆ. ಈ ಲಕ್ಷಣವನ್ನುಳ್ಳವನು ಐಶ್ವರ್ಯದಲ್ಲಿ ನಂಬಿಕೆಯಿಟ್ಟುಕೊಂಡಿರುವದಿಲ್ಲ, ಒಂದು ಕಾಸೂ ಗತಿಯಿಲ್ಲದಂಥ ಬಡವನಂತೆ ಅವನು ದೇವರನ್ನೇ ನಂಬಿಕೊಂಡಿರುತ್ತಾನೆ.

ಯೇಸುಸ್ವಾಮಿಯು ಬೋಧಿಸುವದು ಇಷ್ಟೇ ಅಲ್ಲ. ನಮ್ಮಲ್ಲಿ ಯಾವ ಪದಾರ್ಥವಾದರೂ ಇದ್ದು ಅದು ದಿನದಿಂದ ನಾವು ಪಾಪ ಮಾಡುವದಕ್ಕೆ ಹೇತುವುಂಟಾದರೆ ಅದನ್ನು ನಾವು ವರ್ಜಿಸಬೇಕಾದದ್ದು ಎಂದು ಆತನು ಅಪ್ಪಣೆ ಕೊಟ್ಟಿದ್ದಾನೆ. ನಮ್ಮ ಕಣ್ಣೇ ಆಗಲಿ ಕೈಯೇ ಆಗಲಿ [illegible] ಅದನ್ನು ನಾವು ಬಿಟ್ಟುಬಿಡಬೇಕು. ಈ ಯೌವನಸ್ಥನಿಗಾದರೋ ಐಶ್ವರ್ಯವೇ [illegible] ಅದು ಹ್ಯಾಗಂದರೆ, [illegible] ದೇವರ ಮೇಲಣ ಪ್ರೀತಿಯನ್ನು [illegible] ದೇವರ ಮೇಲಣ ಪ್ರೀತಿಯನ್ನು [illegible] ಅಲ್ಲ [illegible] ಸತ್ಯ [illegible] ಸ್ನೇಹಿತರೂ [illegible] ದೇವರನ್ನು [illegible] ದೇವರ ಮೇಲಣ ಪ್ರೀತಿಯು [illegible] ಸ್ಥಾನ [illegible] ಆಸ್ತಿಗಳನ್ನು ಪರಿತ್ಯಾಗ ಮಾಡಬೇಕು. ಹಾಗಾದರೆ ಒಬ್ಬ ಮನುಷ್ಯನಲ್ಲಿರುವ ಹೃದಯವು ದೇವರ ಮುಂದೆ [illegible] ಅಂದರೆ ದ್ರವ್ಯದಿಂದ [illegible] ಆದೀಗ [illegible] ಪರಿತ್ಯಾಗ [illegible] ಅಂಥ [illegible] ಐಶ್ವರ್ಯವಂತನಾದರೂ [illegible]

[illegible] ಜಪಾನ್ ರಾಜ್ಯಗಳ ಕರಾರು.

ಹೊಸ ಕರಾರಿನ ಕಲಮುಗಳು.

ವಿಲಾಯತಿ ರಾಜ್ಯದವರೂ ಜಪಾನ್ ರಾಜ್ಯದವರೂ ಸೇರಿ ಒಂದು ಹೊಸ ಕರಾರು ಮಾಡಿಕೊಂಡು ಅದರ ಕಲಮುಗಳನ್ನು ಲಂಡನ್ ಪಟ್ಟಣದಲ್ಲೂ ಟೋಕಿಯೋ ನಗರದಲ್ಲೂ ಪ್ರಕಟಮಾಡಿದಾರೆ. ಪ್ರಾರಂಭದಲ್ಲಿ ಈ ಕರಾರಿನ ಉದ್ದೇಶವನ್ನು ಕಾಣಿಸಿದೆ. ಏಷ್ಯಾಖಂಡದ ಪೂರ್ವಭಾಗಗಳಲ್ಲೂ ಹಿಂದೂಸ್ಥಾನದಲ್ಲೂ ಶಾಂತಿ ನೆಲೆಗೊಳ್ಳುವಂತೆಯೂ, ಚೀನಾ ರಾಜ್ಯದಲ್ಲಿ ಇತರ ರಾಜ್ಯಗಳ ಆಸ್ತಿಪಾಸ್ತಿಗಳಿಗೂ ಹಕ್ಕು ಬಾಧ್ಯತೆಗಳಿಗೂ ನ್ಯೂನತೆಯುಂಟಾಗದಂತೆಯೂ ಏಷ್ಯಾಖಂಡದಲ್ಲೂ ಹಿಂದೂಸ್ಥಾನದಲ್ಲೂ ಇಂಗ್ಲಿಷರ ಮತ್ತು ಜಪಾನರ ಅಧಿಕಾರವು ನಿರಾತಂಕವಾಗಿ ಕಾಪಾಡಿಕೊಂಡು ಬರುವದೇ ಈ ಕರಾರಿನ ಉದ್ದೇಶವಾಗಿದೆ.

೧ ಇಂಗ್ಲಿಷ್ ಜಪಾನ್ ರಾಜ್ಯಗಳವರು ತಮ್ಮ ತಮ್ಮ ಸ್ವಾಸ್ಥ್ಯಗಳಿಗಾಗಲಿ ಹಕ್ಕು ಬಾಧ್ಯತೆಗಳಿಗಾಗಲಿ ನ್ಯೂನತೆಯುಂಟಾಗುವದೆಂದು ತಿಳಿದಾಗ ಉಭಯತ್ರರೂ ಸಂಗಡವರ್ಗಗಳ ಮೂಲಕವಾದರೂ ತಮ್ಮ ತಮ್ಮ ರಾಯಭಾರಿಗಳ ಮೂಲಕವಾದರೂ ಆಲೋಚನೆ ಮಾಡಿ, ಅಂಥಾ ನ್ಯೂನತೆಯುಂಟಾಗದಂತೆ ಕಾರ್ಯಗಳನ್ನು ನಡಸಬಹುದು.

೨ ಪರರಾಜ್ಯಗಳವರ್ಯಾರಾದರೂ ನಿಷ್ಕಾರಣವಾಗಿ ವಿಲಾಯತಿಯ ಅಥವಾ ಜಪಾನಿನ ಮೇಲೆ ಯುದ್ಧಕ್ಕೆ ಬಂದರೆ ಅವರು ಒಬ್ಬರಿಗೊಬ್ಬರು ಸಹಾಯ ಮಾಡತಕ್ಕದ್ದು, ಮತ್ತು ಕಡೆಯಲ್ಲಿ ಇಬ್ಬರೂ ಒಪ್ಪುವಂಥಾ ಕರಾರು ಮಾಡಿಕೊಳ್ಳತಕ್ಕದ್ದು.

೩. ಕೊರಿಯಾ ರಾಜ್ಯದ ಆಡಳಿತದ ವಿಷಯದಲ್ಲಿ ಜಪಾನವರೇ ಸರ್ವಸ್ವತಂತ್ರರಾಗಿರುತ್ತಾರೆಂಬುದನ್ನು ವಿಲಾಯತಿಯವರು ಒಪ್ಪಿಕೊಂಡಿದಾರೆ. ಜಪಾನವರು ಆ ರಾಜ್ಯದಲ್ಲಿ ತಮಗೆ ತೋರುವ ಏರ್ಪಾಡುಗಳನ್ನೆಲ್ಲಾ ಮಾಡಿಕೊಳ್ಳಬಹುದು. ಆದರೆ ಪರರಾಜ್ಯಗಳವರ ವ್ಯಾಪಾರಕ್ಕೆ ಅವರು ಯಾವ ಅಡಚಣೆಯೂ ಉಂಟಾಗದಂತೆ ನೋಡಿಕೊಳ್ಳತಕ್ಕದ್ದು.

೪ ವಿಲಾಯತಿಯವರು ತಮ್ಮ ಹಿಂದೂಸ್ಥಾನದ ಎಲ್ಲೆಕಟ್ಟುಗಳನ್ನು ಕಾಪಾಡಿಕೊಳ್ಳುವದು ಸಹಜವೆಂಬುದನ್ನು ಜಪಾನವರು ಒಪ್ಪಿಕೊಂಡಿದಾರೆ.

೫. ಈ ಕರಾರಿನ ಪ್ರಾರಂಭದಲ್ಲಿ ಹೇಳಿರುವ ಉದ್ದೇಶಕ್ಕೆ ವಿರೋಧವಾಗಿ ವಿಲಾಯತಿಯವರಾಗಲಿ ಜಪಾನವರಾಗಲಿ ಒಬ್ಬರಿಗೊಬ್ಬರು ತಿಳಿಸದೆ ಇನ್ನೊಂದು ರಾಜ್ಯದವರ ಸಂಗಡ ಪ್ರತ್ಯೇಕವಾದ ಯಾವ ತರಹಾ ಕರಾರನ್ನೂ ಮಾಡಿಕೊಳ್ಳಕೂಡದು.

೬. ರಷ್ಯಾ ಜಪಾನ್ ಯುದ್ಧದ ವಿಷಯದಲ್ಲಿ ವಿಲಾಯತಿಯವರು ತಟಸ್ಥರಾಗಿರುತ್ತಾರೆ. ಆದರೆ ಇನ್ನೊಂದು ರಾಜ್ಯದವರು ರಷ್ಯದ ಸಂಗಡ ಸೇರಿ ಯುದ್ಧಕ್ಕೆ ಬಂದರೆ ಆಗ ಇಂಗ್ಲಿಷರು ಜಪಾನರಿಗೆ ಸಹಾಯ ಮಾಡುವರು.

೭. ವಿಲಾಯತಿ ಮತ್ತು ಜಪಾನಿನ ಸೈನ್ಯಗಳು ಪರಸ್ಪರ ಎಷ್ಟುಮಟ್ಟಿಗೆ ಯಾವ್ಯಾವ ರೀತಿಯಲ್ಲಿ ಸಹಾಯ ಮಾಡತಕ್ಕದ್ದೆಂಬ ಈ ಭಾಗವನ್ನೂ ಉಭಯ ರಾಜ್ಯಗಳವರೂ ಸೇರಿ ಆಲೋಚನೆ ಮಾಡಿ, ಗೊತ್ತುಮಾಡಬೇಕೆಂದು ಈ ಕಲಮಿನಲ್ಲಿ ವಿವರಿಸಿದೆ.

೮. ಈ ಕರಾರು ಹತ್ತು ವರುಷಗಳ ತನಕ ಜಾರಿಯಲ್ಲಿರತಕ್ಕದ್ದು. ಆದರೆ ಆ ಮಧ್ಯೆ ಈ ಕರಾರನ್ನು ರದ್ದು ಮಾಡಬೇಕಾಗಿ ಬಂದಲ್ಲಿ ಉಭಯ ರಾಜ್ಯಗಳವರೂ ಪರಸ್ಪರ ಒಂದು ವರುಷ ಮಾಯಿದೆ ಕೊಡಬೇಕು.

ರಷ್ಯಾ ಜಪಾನ ರಾಜ್ಯಗಳ ಕರಾರು.

ಕರಾರಿನ ಕಲಮುಗಳು.

ರಷ್ಯಾಜಪಾನ್ ರಾಜ್ಯಗಳವರು ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟರವರ ಮಧ್ಯಸ್ಥಿಕೆಯಲ್ಲಿ ಕಳೆದ ತಿಂಗಳಲ್ಲಿ ಕರಾರು ಮಾಡಿಕೊಂಡು ಯುದ್ಧವನ್ನು ಮುಕ್ತಾಯ ಮಾಡಿದರಷ್ಟೆ. ಆ ಕರಾರಿನ ಕಲಮುಗಳೇನೆಂಬುದು ಇದುವರೆಗೆ ಪ್ರಕಟವಾಗಿರಲಿಲ್ಲ. ಅವುಗಳ ಮುಖ್ಯಾಭಿಪ್ರಾಯವೇನೆಂದರೆ—

೧ ರಷ್ಯಜಪಾನ್ ರಾಜ್ಯಗಳವರು ಕರಾರು ಮಾಡಿಕೊಂಡ ಪ್ರಕಾರ ಸ್ನೇಹಿತರಾಗಿ ವರ್ತಿಸತಕ್ಕದ್ದು, ಮತ್ತು ರಷ್ಯ ಪ್ರಜೆಗಳಿಗೂ ಜಪಾನ್ ಪ್ರಜೆಗಳಿಗೂ ಎಂದಿನಂತೆ ಪರಸ್ಪರ ಸ್ನೇಹ ವಾತ್ಸಲ್ಯಾದಿಗಳು ನೆಲೆಗೊಳ್ಳತಕ್ಕದ್ದು.

೨. ರಷ್ಯ ಚಕ್ರವರ್ತಿಯವರು ಕೊರಿಯಾ ರಾಜ್ಯದಲ್ಲಿ ಸರ್ವಸ್ವಾತಂತ್ರ್ಯವನ್ನೂ ಜಪಾನವರಿಗೆ ಬಿಟ್ಟುಕೊಟ್ಟಿದಾರೆ. ಆ ರಾಜ್ಯದ ಕಾರುಬಾರನ್ನೆಲ್ಲಾ ಜಪಾನವರು ತಮ್ಮ ಇಷ್ಟಬಂದಂತೆ ನಡಿಸಿಕೊಳ್ಳುವ ಭಾಗದಲ್ಲಿ ರಷ್ಯದವರು ತಲೆಹಾಕುವದಿಲ್ಲ. ಆದರೆ ಅಲ್ಲಿರುವ ರಷ್ಯಾ ಪ್ರಜೆಗಳ ಮತ್ತು ಅವರ ಆಸ್ತಿಪಾಸ್ತಿ ಸಂರಕ್ಷಣೆಯನ್ನು ಜಪಾನವರು ಪಕ್ಷಪಾತವಿಲ್ಲದೆ ನೋಡಿಕೊಳ್ಳತಕ್ಕದ್ದು.

೩. ರಷ್ಯಜಪಾನ್ ರಾಜ್ಯಗಳವರು ತಮ್ಮ ತಮ್ಮ ಸೈನ್ಯಗಳನ್ನು ಏಕಕಾಲದಲ್ಲಿ ಮ್ಯಾಂಚೂರಿಯಾ ಸೀಮೆಯಿಂದ ವಾಪಸು ಕರೆಸಿಕೊಳ್ಳಬೇಕು. ಆದರೆ ಅವೆರಡು ರಾಜ್ಯಗಳ ಸಾಹುಕಾರೀ ಪಾಲ ಆ ಸೀಮೆಯಲ್ಲಿ ನಡೆದಿರುವಂಥಾ ಹಕ್ಕು ಬಾಧ್ಯತೆಗಳಿಗೆ ಯಾವ ನ್ಯೂನತೆಯೂ ಉಂಟಾಗಬಾರದು.

೪. ಪೋರ್ಟ್ ಆರ್ಥರ ಮತ್ತು ಡಾಲ್ನಿ ಎಂಬೀ ತೀರಪಟ್ಟಣಗಳಲ್ಲಿಯೂ ಅವುಗಳ ಬಳಿಯಿರುವ ಸಮುದ್ರತೀರದಲ್ಲೂ ರಷ್ಯಾದವರು ಪಡೆದಿದ್ದ ಸಮಸ್ತ ಹಕ್ಕು ಬಾಧ್ಯತೆಗಳೂ ಸಂಪೂರ್ಣವಾಗಿ ಜಪಾನವರಿಗೆ ಸೇರತಕ್ಕದ್ದು. ಆದರೆ ಅವೆರಡು ಪಟ್ಟಣಗಳಲ್ಲೂ ಇರುವ ರಷ್ಯಾ ಪ್ರಜೆಗಳ ಮತ್ತು ಅವರ ಆಸ್ತಿಪಾಸ್ತಿಗಳ ಸಂರಕ್ಷಣೆಯು ಜಪಾನರು ಸರಿಯಾಗಿ ನೋಡಿಕೊಳ್ಳಬೇಕು.

೫ ಚೀನಾ ರಾಜ್ಯದವರು ಮ್ಯಾಂಚೂರಿಯಾ ಸೀಮೆಯ ಅಭಿವೃದ್ಧಿಗೆ ತರುವ ಭಾಗದಲ್ಲಿ ಜಪಾನವರಾಗಲಿ ರಷ್ಯದವರಾಗಲಿ ಅವರ ಗೋಜಿಗೆ ಹೋಗಕೂಡದು. ಚೀನಾದವರು ಸಹ ಕಾರ್ಯಗಳೂ ಮಾಡತಕ್ಕ ಬದಲಾವಣೆಗಳೂ ಯಾವ ರಾಜ್ಯಕ್ಕೂ ಪಕ್ಷಪಾತವಿಲ್ಲದ್ದಾಗಿರಬೇಕು.

೬. ಕಾಉಲಂಗ್ ಚೆಂಗ್‌ಸಿಯಲ್ಲಿರುವ ಮ್ಯಾಂಚೂರಿಯಾ ರೈಲ್ವೆಯನ್ನು ರಷ್ಯಾ ಜಪಾನವರಿಬ್ಬರೂ ಸೇರಿ ನಡಸಬೇಕು. [illegible] ರವರಿಗೆ ಸೇರಿದ ರೈಲ್ವೆಯನ್ನು ವ್ಯಾಪಾರಕ್ಕೆ ಹೊರತಾಗಿ ಯುದ್ಧಕ್ಕೆ ಉಪಯೋಗಿಸಕೂಡದು. [illegible] ರಿಗೆ ಸೇರಿದ ರೈಲ ಮಾರ್ಗದಲ್ಲಿ ಇದಕ್ಕೆ ಸಮಸ್ತ [illegible] ಜಪಾನವರೇ ವಹಿಸಿಕೊಂಡು ಅನುಭವಿಸತಕ್ಕದ್ದು. [illegible] ಆ ಪ್ರಾಂತ್ಯ ಸಾಹುಕಾರಿ ಹಕ್ಕು ಬಾಧ್ಯತೆಗಳಿಗೆ ಕುಂದು ಬಾರದಂತೆ ಜಪಾನವರು ಮೇಲುಸ್ತುವಾರಿ ನೋಡಿಕೊಳ್ಳಬೇಕು.

೭ ರಷ್ಯದವರೂ ಜಪಾನವರೂ ತಮ್ಮ ತಮ್ಮ ರೈಲ್ವೆಯನ್ನು ಕಾಉಲಂಗ್ ಚೆಂಗಸಿ ಪಟ್ಟಣಕ್ಕೆ ತಂದು ಸೇರಿಸಬೇಕು.

೮. ಮ್ಯಾಂಚೂರಿಯಾದಲ್ಲಿರುವ ರೈಲ್ವೆ ಮಾರ್ಗಗಳನ್ನು ವ್ಯಾಪಾರ ವಿಷಯವಾದ ಅನುಕೂಲತೆಗಳಿಗಲ್ಲದೆ ಮತ್ತಾವ ವಿಧದಲ್ಲೂ ಉಪಯೋಗಿಸಕೂಡದೆಂದು ಉಭಯ ರಾಜ್ಯಗಳವರೂ ಒಪ್ಪಿಕೊಂಡಿದಾರೆ.

೯ ಸಖಾಲೀನ್ ಎಂಬ ಜಪಾನ್ ದ್ವೀಪದ ದಕ್ಷಿಣ ಭಾಗವನ್ನೂ ಅದಕ್ಕೆ ಸಂಬಂಧಪಟ್ಟ ದ್ವೀಪವನ್ನೂ ರಷ್ಯದವರು ಜಪಾನವರಿಗೆ ಬಿಟ್ಟುಕೊಟ್ಟಿದಾರೆ ಮತ್ತು ಲಾಪೆರೋಸ್ ಪಟಾರಿ ಎಂಬ ಕೊಲ್ಲಿಗಳಲ್ಲಿ ಜಪಾನರು ದಡಗಳು [illegible] ಳವಾಗಿ ಸಂಚರಿಸಬಹುದೆಂದು ರಷ್ಯದವರು ಒಪ್ಪಿಕೊಂಡಿದಾರೆ.

೧೦. ಸಖಾಲೀನಲ್ಲಿ ಜಪಾನವರ ಪಾಲಿಗೆ ಬಂದಿರುವ ಭಾಗದಲ್ಲಿ ವಾಸಿಸುವ ರಷ್ಯ ಪ್ರಜೆಗಳು ಸ್ವತಂತ್ರರಾಗಿರಬೇಕು

...ಪಕ್ಷಗಳಿಗೆ ಲೋಪವಾಗಬಾರದು. ಆದರೆ ಅಲ್ಲಿರತಕ್ಕ ರಷ್ಯ ...ಗಳನ್ನು ಜಪಾನಿನವರು ಬಲಾತ್ಕಾರವಾಗಿ ಅಲ್ಲಿಂದ ಹೊರಡಿಸ ...ಬಾರದು

೧೦ ಜಪಾನ್ ಸಮುದ್ರ, ಒಖಟಸ್ಕ ಸಮುದ್ರ ಬೆಹರಿಂಗ್ ಸಮುದ್ರಗಳಲ್ಲಿ ರಷ್ಯದವರಿಗೆ ಸೇರತಕ್ಕ ಕಡೆಗಳೊಳಗೆ ಮೀನು ಹಿಡಿಯುವ ಹಕ್ಕನ್ನು ರಷ್ಯದವರು ಒಂದು ಕರಾರು ಮಾಡಿಕೊಂಡು ಜಪಾನಿನವರಿಗೆ ವಹಿಸತಕ್ಕದ್ದು.

೧೧ ಉಭಯ ರಾಜ್ಯಗಳವರೂ ಯುದ್ಧಾರಂಭವಾಗುವುದಕ್ಕೆ ಮುಂಚೆ ವ್ಯಾಪಾರ ವಿಷಯದಲ್ಲಿ ಮಾಡಿಕೊಂಡಿದ್ದ ಕರಾರನ್ನೇ ಈಗ ಸ್ವಲ್ಪ ಸ್ವಲ್ಪ ಬದಲಾವಣೆ ಮಾಡಿ ಊರ್ಜಿತಪಡಿಸಿಕೊಳ್ಳುವುದಕ್ಕೆ ಒಪ್ಪಿಕೊಂಡಿದಾರೆ

೧೨ ರಷ್ಯದವರೂ ಜಪಾನಿನವರೂ ಹಿಡಿದಿಟ್ಟುಕೊಂಡಿರುವ ಯುದ್ಧದ ಖೈದಿಗಳನ್ನು ವಾಪಸು ಕಳುಹಿಸತಕ್ಕದ್ದು ಈ ಖೈದಿಗಳ ಸಂರಕ್ಷಣೆ ಮಾಡುವುದಕ್ಕೆ ನ್ಯಾಯವಾಗಿ ಖರ್ಚಾಗಿರುವಷ್ಟು ...ವನ್ನು ಲೆಕ್ಕಗಳ ದಾಖಲೆ ನೋಡಿ ಒಬ್ಬರಿಗೊಬ್ಬರು ಕೊಡುತ್ತಾರೆ

೧೩ ಈ ಕರಾರನ್ನು ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ...ದು ಮೊದಲನೆಯದನ್ನು ರಷ್ಯದವರೂ ಎರಡನೆಯದನ್ನು ಜಪಾನಿನವರೂ ತಮ್ಮ ತಮ್ಮ ದಾಖಲೆಗಾಗಿ ಇಟ್ಟುಕೊಳ್ಳುವರು ಈ ...ಗಳ ಅಭಿಪ್ರಾಯದ ವಿಷಯದಲ್ಲಿ ಜಿಜ್ಞಾಸೆ ಏನಾದರೂ ...ಬಂದರೆ ಫ್ರೆಂಚ್ ಭಾಷೆಯಲ್ಲಿ ಬರೆದಿರುವ ಅರ್ಥವೇ ಊರ್ಜಿತವಾಗಬೇಕು

೧೪. ಈ ಕರಾರಿಗೆ ಆಯಾ ರಾಜ್ಯಗಳ ರಾಯಭಾರಿಗಳು ರುಜು ಹಾಕಿದ ಐವತ್ತು ದಿವಸಗಳೊಳಗಾಗಿ ಉಭಯ ಚಕ್ರವರ್ತಿಗಳೂ ಸಮ್ಮತಿ ಕೊಡಬೇಕು ಹಾಗೆ ಒಪ್ಪಿ ದಸ್ತಖತ್ತು ಮಾಡಿದ ಸಂಗತಿಯನ್ನು ಫ್ರೆಂಚ್ ಮತ್ತು ಅಮೇರಿಕ ರಾಯಭಾರಿಗಳು ...ತಿಳಿದು ಕೂಡಲೇ ವರ್ತಮಾನ ಕೊಟ್ಟು ಪ್ರಕಟಪಡಬೇಕು.

ಕೆಳಗೆ ಹೇಳುವ ಎರಡು ಹೊಸ ಕಲಮುಗಳನ್ನು ಈಚೆಗೆ ರಾಯಭಾರಿಗಳು ಒಪ್ಪಿ ಸೇರಿಸಿರುತ್ತಾರೆ —

೧ ಈ ಕರಾರಿಗೆ ರುಜುಮಾಡಿದ ತಾರೀಖಿನಿಂದ ಹದಿನೆಂಟು ತಿಂಗಳೊಳಗಾಗಿ ಉಭಯ ರಾಜ್ಯಗಳವರೂ ತಮ್ಮ ತಮ್ಮ ಸೈನ್ಯಗಳನ್ನು ಮ್ಯಾಂಚೂರಿಯಾದಿಂದ ಸಂಪೂರ್ಣವಾಗಿ ವಾಪಸು ಕರೆಸಿಕೊಳ್ಳಬೇಕು ಹದಿನೆಂಟು ತಿಂಗಳಿಂದ ನಂತರ ರಷ್ಯದವರೂ ಜಪಾನಿನವರೂ ತಮತಮಗೆ ಸೇರಿದ ರೈಲ್ ರಸ್ತೆಯನ್ನು ಉಳಿಸಿಕೊಳ್ಳುವುದಕ್ಕೆ ಪ್ರತಿ ಆರು ಫರ್ಲಾಂಗ್ ದೂರಕ್ಕೆ ಹದಿನೈದು ಮಂದಿಯಂತೆ ತಮ್ಮ ಸೈನಿಕರನ್ನು ಇಡತಕ್ಕದ್ದು

೨ ಉಭಯ ರಾಜ್ಯಗಳ ರಾಯಭಾರಿಗಳೂ ಬುದ್ಧಿಗೆ ಹೋಗಿ ... ದಲ್ಲಿ ಅದರಂತೆ ಮಾಡಿ ಎಲ್ಲೆಕಟ್ಟನ್ನು ...ವಾಗಿ ಬೇರೆ ಹಾಕಬೇಕು

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದಲ್ಲಿ ಕಾಗೆಗಳ ಕಾಟ ಪ್ರಬಲವಾಗಿ ಬಹಳವಾಗಿರುವುದರಿಂದ ಮ್ಯುನಿಸಿಪಾಲಿಟಿಯವರು ಅವುಗಳ ಸಂಖ್ಯೆಯನ್ನು ಕಡಿಮೆಮಾಡಬೇಕೆಂದು ಯೋಚಿಸುತ್ತಾರೆ

*****

ವೈಸ್‌ರಾಯಿ ಲಾರ್ಡ್ ಕರ್ಜನ್ನರು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಬೊಂಬಾಯಿಯಲ್ಲಿ ಎದುರುಗೊಳ್ಳುವುದಕ್ಕೆ ಹೊರಡುವ ಮಾರ್ಗದಲ್ಲಿ ಇಂದೋರ್ ಪಟ್ಟಣದೊಳಗೆ ಒಂದು ದೊಡ್ಡ ವಿದ್ಯಾಶಾಲೆಗೆ ಅಸ್ತಿಭಾರವನ್ನು ಹಾಕುವವರಾಗಿದಾರೆ.

*****

ಬಳ್ಳಾರಿ ಜೈಲ್‌ಖಾನೆಯಲ್ಲಿ ಇನ್ನೂ ೧೦೦ ಜನ ಖೈದಿಗಳನ್ನು ಇರಿಸುವುದಕ್ಕೆ ಅನುಕೂಲವಿಲ್ಲದ ಕಾರಣ ಮದರಾಸ್ ಗವರ್ನಮೆಂಟಿನವರು ಆ ಕಟ್ಟಡವನ್ನು ಅಗಲವಾಗಿ ಮಾಡುವಂತೆ ಹುಕುಂ ಕೊಟ್ಟು, ಅದಕ್ಕಾಗಿ ೩೧,೮೦೦ ರೂಪಾಯಿ ಮಂಜೂರ್ ಮಾಡಿದಾರೆ

*****

ನೀಲಗಿರಿ ಬೆಟ್ಟದ ಮೇಲೆ ಕಳೆದವಾರ ಬುಧವಾರ ದಿನ ರಾತ್ರಿ ೬ ಅಂಗುಲ ಮಳೆ ಸುರಿಯಿತು. ಅನೇಕರ ಮನೆಗಳೂ ಅಸ್ತಿಪಾಸ್ತಿಗಳೂ ಕೊಚ್ಚಿಹೋದವು. ಎಸ್ಟೇಟುಗಳಲ್ಲಿ ಹೆಚ್ಚಾಗಿದ್ದ ನೀರು ನಿಂತಿದೆ. ಕೆಲವು ಸೇತುವೆಗಳು ಕಿತ್ತುಹೋಗಿವೆ. ನದಿಯಲ್ಲಿ ೮ ಹೆಣಗಳು ಸಿಕ್ಕಿದವು

*****

ಈ ಸಲ ಡಿಸೆಂಬರ್ ತಿಂಗಳಲ್ಲಿ ಹಿಂದುಸ್ಥಾನದ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನೋತ್ಸವವು ಕಾಶೀ ಪಟ್ಟಣದಲ್ಲಿ ನಡೆಯುವುದು ಈ ಪ್ರದರ್ಶನ ಸಂಘಕ್ಕೆ ಬರೋಡಾ ಸಂಸ್ಥಾನದ ದಿವಾನ್ ಮಿ॥ ಆರ್. ಸಿ. ದತ್ತ್, ಸಿ. ಐ. ಇ. ಯವರು ಅಧ್ಯಕ್ಷರಾಗಿ ನಿಂತಿದಾರೆ

*****

ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡಿದಾಗ್ಗೆ ಕಲ್ಕತ್ತೆಯಲ್ಲಿ ಒಂದು ಭಾರೀ ದರ್ಬಾರನ್ನು ನಡೆಸುತ್ತಾರೆ ಈ ದರ್ಬಾರಿಗೆ ಬರಬೇಕೆಂದು ಇಂಡಿಯಾ ಗವರ್ನಮೆಂಟಿನವರು ... ಸಂಸ್ಥಾನದ ದಿವಾನರಾದ ... ರವರಿಗೆ ಕೇಳಿಕೊಂಡದ್ದಕ್ಕೆ ಅವರು ಬರಲು ಒಪ್ಪಿಕೊಂಡಿದಾರೆ.

*****

ಕಳೆದ ವಾರ ಹಿಂದುಸ್ಥಾನದಲ್ಲಿ ಒಟ್ಟು ೩,೧೮೨ ಮಂದಿಗೆ ಪ್ಲೇಗ್ ತಗಲಿ ಮೃತಪಟ್ಟರು. ಈ ಪೈಕಿ ಬೊಂಬಾಯಿ ಅಧಿಪತ್ಯದಲ್ಲಿ ೨,೩೫೪ ಮಂದಿಯೂ, ಮದರಾಸ್ ಅಧಿಪತ್ಯದಲ್ಲಿ ೨೨೭, ಮಧ್ಯ ಇಂಡಿಯಾ ೩೨೦, ಬರ್ಮಾ ೬೬, ಸಂಯುಕ್ತ ಅಧಿಪತ್ಯ ೩೫, ಪಂಜಾಬ್ ೧೭, ಈ ಪ್ರಕಾರ ಮರಣಗಳಾಗಿವೆ.

*****

ಪ್ರಿನ್ಸ್ ಆಫ್ ವೇಲ್ಸ್‌ರವರು ರಜಪುತಾನದ ದೇಶೀಯ ಸಂಸ್ಥಾನಗಳ ಪೈಕಿ ಉದಯಪುರ ಜಯಪುರ, ಬಿಕಾನಿರ್‌ಗಳಿಗೆ ಮಾತ್ರ ದಯಮಾಡುವರು. ಅಜ್ಮೀರದಲ್ಲೂ ಮೇವಾರದಲ್ಲೂ ಈಗ ಕ್ಷಾಮಬಾಧೆಯಾಗಿರೋಣದರಿಂದ ಯುವರಾಜರನ್ನು ಅಲ್ಲಿಗೆ ಕರೆದುಕೊಂಡು ಹೋಗುವುದಿಲ್ಲವೆಂದು ಪ್ರಕಟವಾಗಿದೆ.

*****

ನೆಲ್ಲೂರು ಡಿಸ್ಟ್ರಿಕ್ಟಿನಲ್ಲಿ ೧,೭೧೭ ಗ್ರಾಮಗಳಿರುತ್ತವೆ ಈ ಪೈಕಿ ೧೧೨ ಗ್ರಾಮಗಳು ಈಗ ಹಾಳುಬಿದ್ದಿರುವವು. ಇವೆಲ್ಲಾ ಇನಾಮತಿ ಗ್ರಾಮಗಳು. ಈ ರೀತಿ ಇಷ್ಟೊಂದು ಗ್ರಾಮಗಳು ಬೇಚರಾಕಾಗಿರಲು ಕಾರಣವೇನೆಂಬುದನ್ನು ಸರ್ಕಾರದವರು ತನಿಖೆಮಾಡಿಸಬೇಕೆಂದು ಒಬ್ಬ ಬಾತ್ಮಿದಾರನು ಬರೆಯುತ್ತಾನೆ.

*****

ವೈಸ್‌ರಾಯಿಯವರು ತಮ್ಮ ಗೃಹಕೃತ್ಯಕ್ಕೆ ಸೇರಿದ ಹಿಂದೂ ಮಹಮದೀಯ ಸೇವಕರಿಗೆಲ್ಲಾ ಕಳೆದ ವಾರ ಸಿಮ್ಲಾ ಪಟ್ಟಣದಲ್ಲಿ ಭಾರೀ ಔತಣ ಮಾಡಿ ಸಂತೋಷಪಡಿಸಿದರು. ಭೋಜನವಾದ ಮೇಲೆ ಅವರನ್ನೆಲ್ಲಾ ಒಂದು ಸುಂದರವಾದ ಡೇರಾದಲ್ಲಿ ಕೂರಿಸಿ, ಅವರಿಗಾಗಿ ಸಂಗೀತ, ಯಕ್ಷಿಣಿ ಮೊದಲಾದ ವಿನೋದಗಳನ್ನು ಕಲ್ಪಿಸಿದ್ದರು

*****

ಬೊಂಬಾಯಿ ಅಧಿಪತ್ಯದ ಗವರ್ನರಾದ ಲಾರ್ಡ್ ಲಾಮಿಂಗ್ಟನ್‌ರವರು ಕಳೆದ ವಾರ ಪೂನಾ ಪಟ್ಟಣದಿಂದ ಹೊರಟು, ಬೆಳಗಾವ ಹುಬ್ಬಳಿ ಮುಂತಾದ ಪಟ್ಟಣಗಳನ್ನು ನೋಡಿಕೊಂಡು, ಮದರಾಸ್ ಅಧಿಪತ್ಯದ ಗವರ್ನರಾದ ಲಾರ್ಡ್ ಆಂಪ್ಟ್‌ಹಿಲ್‌ರವರನ್ನು ಕಂಡುಬರುವುದಕ್ಕಾಗಿ ಬೆಂಗಳೂರು ಕಡೆಯಿಂದ ನೀಲಗಿರಿ ಬೆಟ್ಟಕ್ಕೆ ಪ್ರಯಾಣ ಮಾಡಿದರು.

*****

ಬಂಗಾಳಾ ಕೊಲ್ಲಿಯಲ್ಲಿ ಕಳೆದ ವಾರ ಸುಂಟರಗಾಳಿ ಹುಟ್ಟಿ ಹಿಂದುಸ್ಥಾನದ ಪೂರ್ವಸಮುದ್ರತೀರದ ಉದ್ದಕ್ಕೂ ವ್ಯಾಪಿಸಿದ್ದರಿಂದ ಒಂದು ಕಡೆ ೧೦೦ ಮೈಲಿ ದೂರವೂ ಇನ್ನೊಂದು ಕಡೆ ೮೦ ಮೈಲಿ ದೂರವೂ ಟೆಲಿಗ್ರಾಫ್ ತಂತಿಗಳು ಕಿತ್ತುಹೋಗಿ, ವರ್ತಮಾನ ಕಳುಹಿಸುವುದಕ್ಕೆ ಅಡಚಣೆಯಾಗಿತ್ತು. ಈಗೀಗ ತಂತಿಗಳನ್ನು ಹಾಕಿ ಪೂರೈಸಿದಾರೆ

*****

ಸಿಯಾಲ್‌ಕೋಟ್ ಡಿಸ್ಟ್ರಿಕ್ಟಿಗೆ ಸೇರಿದ ನೂರಾರು ಸಣ್ಣ ದೊಡ್ಡ ಗ್ರಾಮಗಳಿಂದ ಗ್ರಾಮಪ್ರತಿನಿಧಿಗಳು ಕಳೆದವಾರ ಲಾಹೋರ್ ಪಟ್ಟಣಕ್ಕೆ ಬಂದು, ಒಂದು ದೊಡ್ಡ ಸಭೆಮಾಡಿ ತಮ್ಮ ಆಚಾರ ವ್ಯವಹಾರಗಳನ್ನು ಈಗಿನ ಕಾಲಕ್ಕೆ ತಕ್ಕ ಹಾಗೆ ಬದಲಾವಣೆ ಮಾಡಿಕೊಳ್ಳಬೇಕೆಂತಲೂ ವಿಧವಾ ಪುನರ್ವಿವಾಹವನ್ನು ಪ್ರೋತ್ಸಾಹಪಡಿಸಬೇಕೆಂತಲೂ ಗೊತ್ತುಮಾಡಿಕೊಂಡರು.

*****

ಬೊಂಬಾಯಿ ಪಟ್ಟಣದಲ್ಲಿ ಒಂದು ವರುಷದಿಂದ ಪ್ಲೇಗ್ ಉಪದ್ರವ ನಿಂತಿರುವುದನ್ನು ನೋಡಿ ರೋಮನ್ ಕ್ರೈಸ್ತರು ಅದಕ್ಕಾಗಿ ಭಗವಂತನಿಗೆ ಸ್ತೋತ್ರಗಳನ್ನರ್ಪಿಸಬೇಕೆಂದು ಗೊತ್ತುಮಾಡಿದಾರೆ ಆ ದಿನ ಈ ಪ್ರಾರ್ಥನಾ ಸಭೆಗೆ ಹಿಂದುಗಳು, ಪಾರ್ಸಿಗಳು, ಕ್ರೈಸ್ತರು, ಮಹಮ್ಮದೀಯರೇ ಮೊದಲಾದ ಎಲ್ಲಾ ಕೋಮಿನ ಪ್ರಜೆಗಳೂ ಹಾಜರಾಗುತ್ತೇವೆಂದು ಒಪ್ಪಿಕೊಂಡಿರುವರು

*****

ಕಳೆದ ೧೯೦೩–೦೪ ನೇ ಸಾಲಿನ ತನಕ ಹಿಂದುಸ್ಥಾನದಿಂದ ಕಬ್ಬಿಣದ ತುಕ್ಕನ್ನು ಪರದೇಶಗಳಿಗೆ ರಫ್ತು ಮಾಡುತ್ತಿರಲಿಲ್ಲ. ಈಗಲಾದರೋ ಕಳೆದ ೧೯೦೪–೦೫ ನೇ ಸಾಲಿನಲ್ಲಿ ಆ ಪದಾರ್ಥದ ಬೆಲೆಯು ಹೆಚ್ಚಾಗಿ ಹೆಚ್ಚಿದ್ದಲ್ಲದೆ ಅದನ್ನು ವಿಲಾಯತಿ, ಫ್ರಾನ್ಸ್, ಅಮೇರಿಕಗಳಿಗೆ ಕಳುಹಿಸಿದಾರೆ. ಹೀಗೆ ಕಳುಹಿಸಿದ ಕಬ್ಬಿಣದ ತುಕ್ಕಿನ ಬೆಲೆಯು ೧,೬೭,೮೯೦ ರೂಪಾಯಿ ಯೆಂದು ತಿಳಿದಿದೆ

*****

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಸಿಯಾಲ್ಕೋಟಿನಲ್ಲಿ ಈ ಸಲ ಪಶುಗಳ ಜಾತ್ರೆಯು ಅಪೂರ್ವವಾಗಿತ್ತು ಸುಮಾರು ೩೦ ಸಾವಿರ ಕೋಣ ಎಮ್ಮೆ ಕುದುರೆಗಳೂ ಪ್ರದರ್ಶನವಾಗಲ್ಪಟ್ಟವು. ಲಕ್ಷಾಂತರ ಜನರು ಈ ಜಾತ್ರೆಗೆ ಹೋಗಿದ್ದರು ಸರ್ಕಾರದವರು ಎಲ್ಲಾ ರಾಸುಗಳನ್ನೂ ಪರೀಕ್ಷಿಸಿ ಬಹಳ ಚನ್ನಾಗಿ ಸಾಕಿದ್ದ ದನಗಳ ಮತ್ತು ಕುದುರೆಗಳ ಮಾಲೀಕರಿಗೆ ಬಹುಮಾನಗಳನ್ನು ಕೊಟ್ಟರು

*****

ಬಿಜಾಪುರದಿಂದ ಮಚಲಿಬಂದರಿಗೆ ೫೦ ಮೈಲಿ ರೈಲ್ ರಸ್ತೆ ಹಾಕಬೇಕೆಂದು ಇಂಡಿಯಾ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿ, ಕೆಲಸವನ್ನು ದಕ್ಷಿಣ ಮರಾಟಾ ಕಂಪನಿಯವರಿಗೆ ವಹಿಸಿದಾರೆ ಈ ಕೆಲಸವು ಕೂಡಲೇ ಪ್ರಾರಂಭವಾಗುವುದು ಅಲ್ಲಿಂದ ... ಆಮದು ... ವಕ್ಕೆ ... ಯುವಿಲ್ಲ

*****

ಹಿಂದುಸ್ಥಾನದ ವಾಯುವ್ಯ ಸರಹದ್ದಿಗೆ ಸೇರಿದ ತೋಚಿ ಕಣಿವೆಯಲ್ಲಿ ವಜೀರಿ ಎಂಬ ಕಾಡುಜನರು ನುಗ್ಗಿ ಒಂದು ಇಂಗ್ಲಿಷ್ ರಾಜ್ಯಕ್ಕೆ ಮುತ್ತಿಗೆ ಹಾಕಿ ಇದ್ದವರ ಸಿಪಾಯಿಯನ್ನು ಕೊಂದು ಇನ್ನಿಬ್ಬರಿಗೆ ಗಾಯಮಾಡಿ ಮೂರು ಬಂದೂಕುಗಳನ್ನು ಅಪಹರಿಸಿಕೊಂಡು ಹೋದರು. ಆದರೆ ಸಿಪಾಯಿಯು ತುಂಬಾ ಸಾಹಸಪಟ್ಟು ಶತ್ರುಗಳ ಮುಖಂಡನನ್ನು ಹೊಡೆದು ಕೊಂದು ಹಾಕಿ, ಇನ್ನೊಬ್ಬನನ್ನು ಗಾಯಮಾಡಿ ಕೈಸೆರೆ ಹಿಡಿದಿರುತ್ತಾರೆ.

****

ಬಂಗಾಳಾ ಅಧಿಪತ್ಯವನ್ನು ವಿಭಾಗಮಾಡಿ ಇಂಡಿಯಾ ಗವರ್ನಮೆಂಟಿನವರು ಒಂದು ಭಾಗವನ್ನು ಅಸ್ಸಾಂ ಪ್ರಾಂತ್ಯಕ್ಕೆ ಸೇರಿಸಿದರಷ್ಟೆ. ಇದು ವಿಲಾಯತಿ ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಬೇಕಾಗುತ್ತೆಂತಲೂ ಹಾಗೆ ಆಗದೆ ಇರೋಣದರಿಂದ ಇಂಡಿಯಾ ಗವರ್ನಮೆಂಟಿನವರು ಮಾಡಿರುವ ಕಾರ್ಯವು ರದ್ದಾಗಬೇಕೆಂತಲೂ ಭೂಪೇಂದ್ರನಾಥ ಬಾಬೂ ಎಂಬ ದೊಡ್ಡಮನುಷ್ಯನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಒಂದು ಕಾಗದವನ್ನು ಬರೆದಿರುತ್ತಾನೆ.

****

ರಂಗೂನ್ ಪಟ್ಟಣಕ್ಕೆ ಇತರ ಕಡೆಗಳಿಂದ ಅಂಗಹೀನರೂ ರೋಗಿಷ್ಟರೂ ಬಹಳವಾಗಿ ಬರುತ್ತಿರುವುದನ್ನು ತಡೆಯಬೇಕೆಂದು ಅಲ್ಲಿನ ಮ್ಯುನಿಸಿಪಾಲಿಟಿಯವರು ತೀರ್ಮಾನಿಸಿ, ಇದಕ್ಕೆ ಒಂದು ಕಾನೂನ್ ಮಾಡಿ ಜಾರಿಗೆ ತರಬೇಕೆಂದು ಲೆಫ್ಟಿನೆಂಟ್ ಗವರ್ನರವರಿಗೆ ಅರಿಕೆ ಮಾಡಿಕೊಂಡರು. ಗವರ್ನಮೆಂಟಿನವರು ರಂಗೂನ್ ಪಟ್ಟಣದ ಪೊಲೀಸ್ ಕಾನೂನಿನಲ್ಲೇ ಬೇಕಾದದ್ದೆಲ್ಲಾ ಇದೆ ಎಂತಲೂ ಅದನ್ನೇ ಚಲಾವಣೆಗೆ ತಂದರೆ ಸಾಕಾಗಿದೆ ಎಂತಲೂ ಉತ್ತರ ಕೊಟ್ಟಿದಾರೆ.

****

ಸರ್ವೇಶ್ವರ ಮುಖರ್ಜಿ ಎಂಬೊಬ್ಬ ಬಂಗಾಳಿಯು ಕಲ್ಕತ್ತಾ ಪಟ್ಟಣದಲ್ಲಿ ಮೋಸಕರವಾದ ಒಂದು ಕಂಪನಿಯನ್ನು ಸ್ಥಾಪಿಸಿ, ಹಿಂದುಸ್ಥಾನದ ಅನೇಕ ಕಡೆಗಳಲ್ಲಿ ಏಜಂಟರು ಬೇಕೆಂದು ಪ್ರಕಟಮಾಡಿ ಬಹುಜನರಿಂದ ಹಣವನ್ನು ತರಿಸಿಕೊಂಡು ಊರಿಂದೂರಿಗೆ ತಿರುಗುತ್ತಾ ಇದ್ದನು. ಅವನು ಇದುವರೆಗೆ ೧೩,೦೦೦ ರೂಪಾಯಿ ತನಕ ಜನರಿಗೆ ಮೋಸಮಾಡಿರುತ್ತಾನೆ ಈಗ ಅವನನ್ನು ಸರ್ಕಾರದವರು ಪಂಜಾಬಿಗೆ ಸೇರಿದ ಫಿರೋಜ್‌ಪುರದಲ್ಲಿ ಗಸ್ತಿಗಿರಿಮಾಡಿ ತನಿಖೆ ನಡೆಸುತ್ತಿರುವರು

****

ಬೊಂಬಾಯಿ ಪಟ್ಟಣದ ನಾನಾ ಕಾರ್ಖಾನೆಗಳಲ್ಲಿ ಕೆಲಸಮಾಡುವ ಕೂಲಿಕಾರರ ಪೈಕಿ ಸುಮಾರು ೭,೦೦೦ ಜನರು ... ಎಂಬ ಸ್ಥಳದಲ್ಲಿ ಕಳೆದವಾರ ಸಭೆ ಸೇರಿ ಇನ್ನು ಮುಂದೆ ಕಾರ್ಖಾನೆಗಳಲ್ಲಿ ಗಂಡಸರಿಂದ ದಿನಕ್ಕೆ ಹನ್ನೆರಡು ಗಂಟೆ ಹೊತ್ತಿಗಿಂತ ಹೆಚ್ಚಾಗಿ ಕೆಲಸ ಮಾಡಿಸಕೂಡದೆಂತೆ ಒಂದು ಕಾನೂನ್ ಮಾಡಿ ಜಾರೀಲಿ ತರಬೇಕೆಂದು ವೈಸ್‌ರಾಯಿಯವರಿಗೆ ವಿಜ್ಞಾಪನೆ ಮಾಡಿಕೊಳ್ಳಬೇಕೆಂದು ತೀರ್ಮಾನ ಮಾಡಿದರು ಕಾರ್ಖಾನೆಗಳಲ್ಲಿ ಯಜಮಾನರು ಈಗ ಗಂಡಸರಿಂದ ಸಾಯಂಕಾಲವಾದ ಮೇಲೂ ವಿದ್ಯುಚ್ಛಕ್ತಿಯ ದೀಪಗಳನ್ನಿಟ್ಟು ಕೆಲಸ ಮಾಡಿಸಿಕೊಳ್ಳುತ್ತಿದಾರೆ. ದಿನಕ್ಕೆ ೧೪ ೧೫ ಗಂಟೆ ಹೊತ್ತು ಕೆಲಸ ಮಾಡಿ ಕೂಲಿಯವರು ದಣಿದು ಬಹಳ ಗೋಳಾಡುತ್ತಿದಾರೆ.

****

ಕಾಶ್ಮೀರ ಸಂಸ್ಥಾನದ ಮಹಾರಾಜರವರಿಗೆ ಇಂಡಿಯಾ ಗವರ್ನಮೆಂಟಿನವರು ರಾಜ್ಯಾಧಿಕಾರವನ್ನು ಒಪ್ಪಿಸುವಂತೆ ಪ್ರಕಟವಾಗಿದೆ ಇದನ್ನು ಕೇಳಿ ಅನೇಕ ವರ್ತಮಾನ ಪತ್ರಿಕೆಗಳು—ಈಗ ಆ ಸಂಸ್ಥಾನದಲ್ಲಿ ... ಭೂಸ್ಥಿತಿಯನ್ನು ಪಡೆಯಕೂಡದೆಂಬ ವಿಧಿಯು ಜಾರಿಯಲ್ಲಿದೆ. ಇನ್ನು ಮೇಲೆ ಯಾರು ಬೇಕಾದರೂ ಅಲ್ಲಿ ಭೂಸ್ಥಿತಿಯನ್ನು ಪಡೆದುಕೊಳ್ಳಬಹುದೆಂಬ ವಾಗ್ದಾನವನ್ನು ಮಹಾರಾಜರವರು ಕೊಟ್ಟರೋಣದರಿಂದಲೇ ಗವರ್ನಮೆಂಟಿನವರು ಅವರಿಗೆ ರಾಜಾಧಿಪತ್ಯವನ್ನು ವಹಿಸುವರು ಎಂಬುದಾಗಿ ಆಕ್ಷೇಪಣೆ ಮಾಡುತ್ತಿವೆ ಈಚೆಗೆ ವಿಚಾರ ಮಾಡಿದ್ದರಲ್ಲಿ ಇಂಡಿಯಾ ಗವರ್ನಮೆಂಟಿನವರು ಮಹಾರಾಜರಿಂದ ಅಂಥಾ ಯಾವ ಭಾಷೆಯನ್ನೂ ತೆಗೆದುಕೊಂಡಿಲ್ಲವೆಂದು ಗೊತ್ತಾಗಿದೆ

*****

ಹೊಸ ವೈಸ್‌ರಾಯಿ ಲಾರ್ಡ್ ಮಿಂಟೋಯವರು ನವೆಂಬರ್ ೧೭ನೆ ತಾರೀಖಿಗೆ ಬೊಂಬಾಯಿಗೆ ಬಂದು ಹಡಗು ಇಳಿಯುವರು. ಆದರೆ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಪರಿವಾರ ಸಹಿತ ಅದಕ್ಕೆ ಮೊದಲೇ ಅಂದರೆ ನೊವೆಂಬರ್ ೯ಕ್ಕೆ ಬೊಂಬಾಯಿಗೆ ಬಂದು ಹಡಗು ಇಳಿಯುತ್ತಾರೆಂದು ಗೊತ್ತಾಗಿರುವುದರಿಂದ ಲಾರ್ಡ್ ಕರ್ಜನ್ನರೇ ಅಷ್ಟುವರೆಗೆ ಹಿಂದುಸ್ಥಾನದ ವೈಸ್‌ರಾಯರಾಗಿರಬೇಕೆಂತಲೂ ಇವರೇ ಯುವರಾಜರವರನ್ನು ಬೊಂಬಾಯಿಯಲ್ಲಿ ಎದುರುಗೊಂಡು ಸತ್ಕರಿಸಬೇಕೆಂತಲೂ ಚಕ್ರವರ್ತಿ ಸಾರ್ವಭೌಮರವರಿಂದ ಆಜ್ಞೆಯಾಗಿದೆ ಲಾರ್ಡ್ ಕರ್ಜನ್ನರವರು ಅದರಂತೆ ಒಪ್ಪಿಕೊಂಡಿದಾರೆ. ಹ್ಯಾಗೂ ಇವರು ನೊವೆಂಬರ್ ೧೮ಕ್ಕೆ ಬೊಂಬಾಯಿಗೆ ಬಂದು ಹಡಗು ಹತ್ತಿ ವಿಲಾಯತಿಗೆ ಪ್ರಯಾಣಮಾಡುವರೆಂದು ಗೊತ್ತಾಗಿದೆ

*****

ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಮಹಾರಾಜ್ಞಿ ವಿಕ್ಟೋರಿಯಾರವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆಯನ್ನು ಕಟ್ಟಿಸುವ ಪ್ರಯತ್ನ ಮಾಡಿ, ಅದಕ್ಕಾಗಿ ಹಿಂದುಸ್ಥಾನದಲ್ಲೆಲ್ಲಾ ಕೋಟ್ಯಂತರ ದ್ರವ್ಯವನ್ನು ಕೂಡಿಸಿರುತ್ತಾರಷ್ಟೆ. ಈ ಕಟ್ಟಡದ ಕಾಮಗಾರಿಯು ಈಗಾಗಲೇ ಪ್ರಾರಂಭವಾಗಿ ಕೆಲಸ ನಡೆಯುತ್ತಿದ್ದರೂ ಅದು ಪೂರೈಸುವುದಕ್ಕೆ ಹತ್ತಾರು ವರ್ಷಗಳು ಹಿಡಿಯುವವು. ಪೂರೈಸಿದ ಮೇಲೆ ಪೂರ್ವದಿಗ್ಭಾಗದಲ್ಲೆಲ್ಲಾ ಇಷ್ಟು ಭಾರಿಯಾದ ಮತ್ತು ಸುಂದರವಾದ ಬಂಗಲೆಯು ಮೊದಲನೆಯದೆನಿಸುವುದು. ಈ ಕಟ್ಟಡಕ್ಕೆ ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಮುಂದಿನ ಜನವರಿ ೪ ನೆ ತಾರೀಖಿನ ದಿನ ಅಸ್ತಿಭಾರವನ್ನು ಹಾಕುವವರಾಗಿದಾರೆ.

ಪೂನಾ ಪಟ್ಟಣದ ಹಿಂಗೋಳಿ ಎಂಬ ಭಾಗದಲ್ಲಿ ರಾವ್ ಬಹದೂರ್ ಗೋಖಳೆ, ಡಾಕ್ಟರ್ ಭಂಡಾರಕರ್, ಪಂಡಿತ ಕಾರ್ವೆ, ಈ ಮೊದಲಾದ ಕೆಲವು ಹಿಂದೂ ಮಹನೀಯರು ಸೇರಿ ಒಂದು ನಿಲಯವನ್ನು ಕಟ್ಟಿಸಿ, ಅದರಲ್ಲಿ ಹಿಂದೂ ವಿಧವೆಯರಿಗೆ ವಿದ್ಯಾಬುದ್ಧಿಗಳನ್ನೂ ಗೃಹಕೃತ್ಯ ವಿಚಾರಗಳನ್ನೂ ಕಲಿಸುತ್ತಾ ಬಂದಿದ್ದಾರೆ. ಈ ವಿಧವಾ ನಿಲಯವು ಹಿಂದುಸ್ಥಾನದಲ್ಲಿ ಅಪೂರ್ವವಾದದ್ದು. ಈಗ ಅಲ್ಲಿ ಕಲಿತಿರುವ ೧೦ ಮಂದಿ ವಿಧವೆಯರು ಬೇರೆ ಬೇರೆ ದೊಡ್ಡ ಮನುಷ್ಯರ ಮನೆಗಳಲ್ಲಿ ಸೇರಿಕೊಂಡು ಕೆಲಸ ಮುಂತಾದ್ದು ಮಾಡುತ್ತಿದ್ದಾರೆ ಕೆಲವರು ಬಾಲಿಕಾ ಪಾಠಶಾಲೆಗಳಲ್ಲಿ ಉಪಾಧ್ಯಾಯಿನಿಯರಾಗಿಯೂ ಕೆಲಸ ಮಾಡುವರು. ಮಿಸೆಸ್ ಕಾಶೀಬಾಯಿ ದೇವಧರ ಎಂಬೀಕೆ ಆ ಮಂದಿರದ ಲೇಡಿ ಸೂಪರಿಂಟೆಂಡೆಂಟರಾಗಿದ್ದಾರೆ. ರಾವ್ ಬಹದೂರ್ ಗೋಖಲೆ ರವರು ಈ ಒಂದು ವಿಧವಾ ನಿಲಯವನ್ನು ಉಚಿತವಾಗಿ ಕಟ್ಟಿಸಿ ಕೊಟ್ಟರು. ಕಳೆದ ವಾರ ಬೊಂಬಾಯಿ ಅಧಿಪತ್ಯದ ಗವರ್ನರಾದ ಲಾರ್ಡ್ ಲಾಮಿಂಗ್ಟನ್ ರವರು ಆ ನಿಲಯವನ್ನು ಪ್ರತಿಷ್ಠೆ ಮಾಡುವ ಕಾಲದಲ್ಲಿ ಅಪ್ಪಣೆಕೊಡಿಸಿದ್ದೇನೆಂದರೆ—ಈ ವಿಧವಾ ಮಂದಿರವನ್ನು ನೋಡಿ ನಾನು ತುಂಬಾ ಸಂತೋಷಪಟ್ಟೆನು. ಜಾತಿಕಟ್ಟಳೆಯಲ್ಲಿ ಎಷ್ಟೇ ಒಳ್ಳೇ ಗುಣಗಳಿದ್ದಾಗ್ಯೂ ಅದರಿಂದ ವಿಧವೆಯರಿಗೆ ಅನೇಕ ಕಷ್ಟಗಳುಂಟೆಂದು ಎಲ್ಲರೂ ಒಪ್ಪಿಕೊಳ್ಳುವಿರಿ. ಇಂಥಾ ಸ್ತ್ರೀಯರನ್ನು ಉತ್ತಮಸ್ಥಿತಿಗೆ ತರುವ ವಿಷಯದಲ್ಲಿ ನೀವುಗಳು ಏಕೀಭವಿಸಿ ಮಾಡಿರುವ ಈ ಕಾರ್ಯವು ಸ್ತೋತ್ರಾರ್ಹವಾಗಿರುತ್ತದೆ ಸಮಸ್ತ ಹಿಂದು ಮಹನೀಯರುಗಳೂ ಇಂಥಾ ಉತ್ಕೃಷ್ಟವಾದ ಸದನವನ್ನು ಪ್ರೋತ್ಸಾಹಪಡಿಸಿ ತುಂಬಾ ಅಭಿವೃದ್ಧಿಗೆ ತರಬೇಕಾಗಿದೆ ಇಲ್ಲಿ ವಿಧವೆಯರಿಗೆ ಕಲಿಸತಕ್ಕ ವಿಷಯಗಳು ಬಹು ಉತ್ತಮವಾಗಿರುತ್ತವೆ. ಇಂಥಾ ಅವಶ್ಯವಾದ ಏರ್ಪಾಡುಮಾಡಿ ನಡಸುತ್ತಿರುವ ದೊಡ್ಡ ಮನುಷ್ಯರನ್ನು ಕೊಂಡಾಡತಕ್ಕದ್ದಾಗಿದೆ ಎಂಬುದೇ.

ಆರ್ಯಧರ್ಮೋಜ್ಜೀವಿನೀ ಸಭಾಸ್ಥಾಪನೆ

ದೊಡ್ಡ ಸಮಾಜವು.

ಆರ್ಯಧರ್ಮೋಜ್ಜೀವಿನಿ ಎಂಬ ಹೆಸರಿನಲ್ಲಿ ಒಂದು ಸಭೆಯನ್ನು ಈ ಸಂಸ್ಥಾನದ ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ಸ್ಥಾಪಿಸಿ, ಅದರಿಂದ ಆರ್ಯಧರ್ಮಗಳ ವಿಷಯವನ್ನು ಮೈಸೂರು ದೇಶದಲ್ಲೆಲ್ಲಾ ಪ್ರಚಾರಗೊಳಿಸಬೇಕೆಂಬುದಾಗಿ ಮೊನ್ನೆ ಸೋಮವಾರ ಬೆಳಿಗ್ಗೆ ಮಹನೀಯರನೇಕರು ಇಲ್ಲಿನ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಸಭೆ ಸೇರಿದ್ದರು ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು, ಜಸ್ಟಿಸ್ ಮ॥ ಎಚ್. ವಿ. ನಂಜುಂಡಯ್ಯನವರು, ಎಕ್ಸೈಜ್ ಕಮೀಷನರ್ ಮ॥ ಪಿ. ಎನ್ ಪೂರ್ಣಯ್ಯನವರು, ಡೆಪ್ಯುಟಿ ಸೆಕ್ರೆಟರಿ ಮ॥ ಶಾಮರಾಯರು, ಅರಮನೆ ಆಫೀಸರ್ ಮ॥ ಬಿ ರಾಮಕೃಷ್ಣರಾಯರು. ಪೆನ್ಷನ್ ಡಿ॥ ಜಡ್ಜ್ ಮ॥ ಬಿ. ತಿರುಮಲಾಚಾರ್ಯರು, ಸಬ್ ಜಡ್ಜ್ ಮ॥ ಸಿ. ಬಿ ಶೇಷಗಿರಿರಾಯರು, ವೈಸ್ ಪ್ರೆಸಿಡೆಂಟ್ ಮ॥ ಸಿ ವೆಂಕಟರಾಯರು, ಅ॥ ಕಮಿಷನರ್ ಮ॥ ಸಿ. ಕೃಷ್ಣರಾಯರೇ ಮೊದಲಾದ ಅನೇಕ ಮಂದಿ ಅಧಿಕಾರಿಗಳೂ, ರಾಜಧಾನಿಯಲ್ಲಿರುವ ಕಾಲೇಜ್ ಮತ್ತು ಹೈಸ್ಕೂಲುಗಳ ಉಪಾಧ್ಯಾಯರುಗಳೂ, ಅಡ್ವೊಕೇಟರೂ ಪ್ಲೀಡರುಗಳೂ, ಅರಮನೆ ವಿದ್ವಾಂಸರಾದ ಶಾಸ್ತ್ರಕೋವಿದರೂ ಪಂಡಿತರುಗಳೂ, ಪ್ರಜಾಪ್ರತಿನಿಧಿಗಳೂ ನೂರಾರು ಮಂದಿ ಸಭೆಯಲ್ಲಿ ಹಾಜರಾಗಿದ್ದರು.

ಚೀಫ್ ಕೋರ್ಟ್ ಜಡ್ಜರಾದ ಮ॥ ನಂಜುಂಡಯ್ಯನವರು ಅಗ್ರಾಸನವನ್ನು ವಹಿಸಿ, ಆರ್ಯಧರ್ಮಗಳನ್ನು ಕುರಿತು ಬರೆದು ತಂದಿದ್ದ ಉಪನ್ಯಾಸವನ್ನು ಓದಿ ಹೇಳಿದರು ಆ ಉಪನ್ಯಾಸದಲ್ಲಿ ಕಂಡು ಬಂದ ಮುಖ್ಯ ವಿಷಯಗಳ್ಯಾವವೆಂದರೆ—

ಆರ್ಯಧರ್ಮವು ಅಪೌರುಷೇಯವಾದದ್ದು. ವೇದಶಾಸ್ತ್ರಗಳಲ್ಲಿ ಆ ಧರ್ಮಗಳೆಲ್ಲಾ ವಿವರವಾಗಿ ಹೇಳಲ್ಪಟ್ಟಿವೆ. ಈಗಿನ ಜನರ ನಂಬಿಕೆಗೂ ಆಚರಣೆಗೂ ತಕ್ಕವುಗಳಾಗಿರುವವು. ಆದರೆ ನಾನಾ ಕಾರಣಗಳಿಂದ ಜನರು ಅನೇಕ ಮೂಲಧರ್ಮಗಳನ್ನು ತ್ಯಜಿಸಿ, ತಮತಮಗೆ ತೋರಿದ ಹೊಸ ಪದ್ಧತಿ ಆಚಾರಗಳನ್ನು ಮಾಡಿಟ್ಟುಕೊಂಡು ವರ್ತಿಸುತ್ತಾ ಬಂದಿರೋಣದರಿಂದ ಈಗ ನಾವು ನೋಡುವ ಒಳಪಂಗಡಗಳೂ, ಪದ್ಧತಿ ಆಚಾರಗಳೂ ಉಂಟಾದುವೆನ್ನುವುದಕ್ಕೆ ಸಂಶಯವಿಲ್ಲ ಆಯಾ ಜಾತಿಯವರು ತಮ್ಮ ತಮ್ಮ ಧರ್ಮವನ್ನು ತ್ಯಜಿಸಿರುವುದೇ ಈಗಿನ ಕ್ಷೀಣದಶೆಗೆ ಕಾರಣ ಧರ್ಮಾಚರಣೆಗೆ ಪೂರ್ವದಲ್ಲಿ ಅನೇಕ ಅಡ್ಡಿ ಆತಂಕಗಳಿದ್ದುವು. ಈಗ ಅಂಥಾ ಕಾಲವು ಅದೃಷ್ಟವಾಗಿ ಪ್ರಜಾಸ್ವಾತಂತ್ರ್ಯವು ನೆಲೆಗೊಂಡಿರುತ್ತದೆ ಜಾತಿಕುಲಭೇದವಿಲ್ಲದೆ ಎಲ್ಲರೂ ವಿದ್ಯೆ ಕಲಿಯಲವಕಾಶವಿದೆ. ಕುಶಲವಿದ್ಯೆಗಳು ಹೆಚ್ಚಿದವು. ಜನರು ಕಾರಣವಿಲ್ಲದೆ ಯಾವುದನ್ನೂ ನಂಬುವವರಾಗಿಲ್ಲ. ಆದಕಾರಣ ಲೌಕಿಕಕಾರ್ಯಗಳಲ್ಲಿ ಕುಶಲಬುದ್ಧಿಯನ್ನು ಹ್ಯಾಗೆ ಉಪಯೋಗಿಸಿ ಪ್ರಯೋಜನ ಹೊಂದುತ್ತಾರೋ ಹಾಗೆಯೇ ವೈದಿಕ ಮಾರ್ಗದಲ್ಲೂ ಭಕ್ತಿಶ್ರದ್ಧೆಗಳನ್ನಿಟ್ಟು ನಿತ್ಯಕರ್ಮಗಳನ್ನಾಚರಿಸಿ ಫಲಪ್ರಾಪ್ತಿಯನ್ನು ಪಡೆಯಬೇಕು ಹಿರಿಯರಾದವರನ್ನು ತಿದ್ದುವುದು ಸಾಧ್ಯವಲ್ಲ. ಎಲ್ಲರನ್ನೂ ಕರ್ಮನಿರತರನ್ನಾಗಿ ಮಾಡುವದವಶ್ಯ. ಎಲ್ಲರಿಗೂ ಸ್ವಧರ್ಮದಲ್ಲಿ ಅನುರಕ್ತಿ ಹುಟ್ಟಬೇಕು. ಪುರಾಣಗಳ ಕಥೆಗಳು ನಿಜವಲ್ಲವೆಂದು ಮಕ್ಕಳು ಕಲಿತು ಬರುತ್ತಾರೆ ತಾಯಿತಂದೆ ದೇವರು ಭಕ್ತಿಗಳು ಎಲ್ಲಾ ಮತಗಳಲ್ಲೂ ಉಂಟು, ತಾಯಿತಂದೆಗಳ ಅವಗುಣಗಳನ್ನು ತೋರಿಸುವುದು ಕೆಟ್ಟದ್ದು ಮಕ್ಕಳು ಮಾತಾಪಿತೃಗಳಲ್ಲಿ ದುರ್ಗುಣಗಳನ್ನು ಹುಡುಕುವುದಕ್ಕೆ ಪ್ರತಿಯಾಗಿ ತಮ್ಮ ಕರ್ತವ್ಯವನ್ನು ತಿಳಿದು ನಡೆಯುವುದು ಶ್ರೇಯಸ್ಕರ. ಮನುಷ್ಯನು ಒಳಗೂ ಹೊರಗೂ ಪರಿಶುದ್ಧನಾಗಿರಬೇಕು. ಭಕ್ತಿವಿಚಾರದಲ್ಲಿ ಮನಶ್ಶುದ್ಧಿ ಇದ್ದರೆ ಸಾಕು. ಇಷ್ಟದೇವತಾ ಪೂಜೆಯನ್ನು ಭಕ್ತಿಯಿಂದ ಮಾಡುತ್ತಿದ್ದರೆ ಚಿತ್ತಶುದ್ಧಿಯುಂಟಾಗುವುದು. ಮಾರಿಮಸಣಿಗಳ ಪೂಜೆಯೇ ಕೀಳುಪೂಜೆ. ಇದನ್ನು ಅಜ್ಞಾನರಾದ ಜನರು ನಡಸುವರು. ಏಕಕಾಲದಲ್ಲಿ ಇದನ್ನು ನಿಲ್ಲಿಸುವುದಸಾಧ್ಯ ಪ್ರಜೆಗಳು ವಿದ್ಯಾವಂತರಾದ ಹಾಗೆಲ್ಲಾ ಅಂಥಾ ಪೂಜೆಗಳೂ ಅಸ್ತ್ಯ ಹೊಂದುವವು.

ನಿರ್ಮಲವಾಗಿರುವ ದೇವಸ್ಥಾನವು ಮನಶ್ಶುದ್ಧಿಯನ್ನುಂಟುಮಾಡುತ್ತದೆ ಪೂಜಾರಿಯ ಯೋಗ್ಯತೆ ಗುಣ ನಡತೆಗಳು ಸರ್ವಶ್ರೇಷ್ಠಗಳಾಗಿರಬೇಕು ಇಂಥಾ ಪೂಜಾರಿಯಲ್ಲಿ ಜನರಿಗೆ ಭಕ್ತಿ ಶ್ರದ್ಧೆಗಳುಂಟಾಗುವವು. ಕೆಟ್ಟ ಪೂಜಾರಿಯು ಮೂಢರಾದ ಭಕ್ತ ಜನರಿಂದ ನಾನಾ ಪ್ರಕಾರ ಸುಲಿಗೆ ಮಾಡಿಕೊಳ್ಳುತ್ತಾನೆ ದೇವಸ್ಥಾನಗಳಲ್ಲಿ ವೇದಶಾಸ್ತ್ರಪುರಾಣಗಳನ್ನು ನಡಸುತ್ತಿರಬೇಕು. ಸಂಸ್ಕೃತ ತಿಳಿದಲ್ಲದೆ ಸದ್ಗತಿದೊರೆಯದೆಂಬ ಮಾತು ಸಲ್ಲತಕ್ಕದ್ದಲ್ಲ ಎಲ್ಲಾ ಭಾಗಗಳಲ್ಲೂ ಧರ್ಮ ಬೋಧವಾಗದಂತೆಯೂ ಈಗಿನ ಕಾಲಕ್ಕೆ ತಕ್ಕಂತೆಯೂ ನಮ್ಮ ಆಚಾರಪದ್ಧತಿಗಳನ್ನು ಬದಲಾಯಿಸಿಕೊಂಡು ನಡೆಯುತ್ತಾ ಬಂದರೆ ಇವೇ ಕಳೆದಾಗುತ್ತಾ ಬರುವವು ನಿತ್ಯಕರ್ಮಾಚರಣೆಯನ್ನು ಹಿರಿಯರು ಮಾಡಿ ಕಿರಿಯರಿಗೆ ಮೇಲ್ಪಂಕ್ತಿ ಹಾಕಿಕೊಡುತ್ತಾ ಬರಬೇಕು. ಯಾವಾಗಲೂ ಸ್ವಪ್ರಯೋಜನದಲ್ಲಿ ಮನಸ್ಸಿಡದೆ, ಚಿತ್ತಸ್ಥೈರ್ಯ, ಮನೋನಿರ್ಮಲ. ಪರಶ್ರೇಯಸ್ಸುಗಳನ್ನೇ ಅಭ್ಯಾಸಮಾಡಬೇಕು ದಾನವನ್ನು ವೈದಿಕನಿಗೇ ಮಾಡಬೇಕು ವೈದಿಕನು ತನ್ನ ಆಚಾರವ್ಯವಹಾರಗಳಲ್ಲಿ ಶಿಷ್ಯರ ಭಕ್ತಿ ಪ್ರೀತಿಗಳನ್ನು ಕಾಪಾಡಿಕೊಳ್ಳಬೇಕು. ಅಂತಃಶುದ್ಧಿಯಿಲ್ಲದೆ ಏನುಮಾಡಿದರೂ ನಿಷ್ಪ್ರಯೋಜನ.

ಹುಡುಗರಿಗೆ ೧೮—೨೦ ವರುಷಗಳ ತನಕ ಇಂಗ್ಲಿಷ್ ವಿದ್ಯವನ್ನು ಕಲಿಸಬೇಕು. ಚಿಕ್ಕಂದಿನಲ್ಲಿ ಮದುವೆ ನಿಶ್ಚಯಗಳನ್ನು ಮಾಡುವುದು ಹಾನಿಕರ. ೧೫—೧೬ ವರುಷಗಳಾಗುವ ವರೆಗೆ ಸಂಸಾರಿಗಳಾಗಬಾರದು. ಪ್ರಾಚೀನಧರ್ಮಗಳನ್ನು ಈಗಲೂ ರೂಢಿಗೆ ತಂದರೆ ನಮ್ಮ ಜನಾಂಗವು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿ ಹೊಂದುವೆವು. ಸಾಲಮಾಡಿ ಅಥವಾ ಆಸ್ತಿಯನ್ನು ದುಂದುಮಾಡಿ ಮದುವೆ ಮೊದಲಾದ ಶುಭಕಾರ್ಯಗಳನ್ನೂ ಅಪರಕ್ರಿಯಾದಿಗಳನ್ನೂ ನಡಿಸುವುದು ಬಹಳ ಕೆಟ್ಟ ಪದ್ಧತಿ. ಅಹಂಕಾರ, ಜಾತಿ ಮತಭೇದಗಳನ್ನು ಇಟ್ಟುಕೊಳ್ಳುವುದು ತುಂಬಾ ಕೆಡಕು. ಲೋಕದಲ್ಲಿ ಮನುಷ್ಯನಿಗೆ ಊಟ, ಮದುವೆಗಳಿಗಿಂತ ವಿಶೇಷವಾದ ಕಾರ್ಯಗಳು ಅನೇಕವಾಗಿರುವವು. ಸಮುದ್ರಯಾನಮಾಡಿ ದೇಶೋನ್ನತಿಗಾಗಿ ಸಾಹಸಪಡತಕ್ಕವರನ್ನು ಅಸೂಯೆಯಿಂದ ಕಡು ಜಾತಿಯ ಹೊರಗೆ ಹಾಕುವೆವು ಜನಸಮುದಾಯಕ್ಕೆ ಹಾನಿಕರ ಎಲ್ಲರೂ ಐಕಮತ್ಯದಿಂದ ಪರಸ್ಪರ ಕ್ಷೇಮವನ್ನು ಕಾಪಾಡಿ, ವೃದ್ಧಿಗೆ ತರುವುದಕ್ಕೆ ಪ್ರಯತ್ನಪಟ್ಟರೆ ಸುಖಸಂತೋಷಗಳು ಸರ್ವಸಾಮಾನ್ಯವಾಗಿ ದೊರೆಯುವವು ಎಂಬುದೇ

ತರುವಾಯ ಇಂಥಾ ಆರ್ಯಧರ್ಮೋಜ್ಜೀವಿನೀ ಸಭೆಯು ನಮ್ಮ ಸಂಸ್ಥಾನದಲ್ಲಿ ಅವಶ್ಯ ಸ್ಥಾಪನೆಯಾಗಬೇಕೆಂಬುದಕ್ಕೆ ಮ॥ ಅಂಬಳೆ ಅಣ್ಣಯ್ಯ ಪಂಡಿತರೂ, ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಶ್ರೀನಿವಾಸರಾಯರೂ, ಶ್ರೀ॥ ಪಂಡಿತರತ್ನಂ ಕಸ್ತೂರಿರಂಗಾಚಾರ್ಯರೂ ಉಪನ್ಯಾಸ ಮಾಡಿದರು. ಇದನ್ನು ಸಭಿಕರೆಲ್ಲಾ ಅನುಮೋದಿಸಿದರು

ಅನಂತರ ಮ॥ ಗೋಮಠಂ ಶ್ರೀನಿವಾಸಜೋಯಿಸರು ಉಪನ್ಯಾಸ ಮಾಡಿ ಈ ಸಭೆಯ ಉದ್ದೇಶವನ್ನು ವಿವರಿಸಿದರು.—(೧) ನಮ್ಮ ಆರ್ಯಧರ್ಮ ವಿಷಯವಾದ ಪ್ರಮಾಣಗಳನ್ನೆಲ್ಲಾ ಪರಾಮರ್ಶಿಸಿ ನಮ್ಮ ಐಹಿಕಾಮುಷ್ಮಿಕ ಶ್ರೇಯೋಭಿವೃದ್ಧಿಗೆ ಅವಶ್ಯಗಳಾದಂಥ ಧರ್ಮ ವಿಧಾಯಕ ಶಾಸ್ತ್ರಗಳನ್ನು ಕ್ರೋಡೀಕರಿಸುವುದು. (೨) ಇಂಥಾ ಧರ್ಮ ವಿಚಾರಜ್ಞಾನವನ್ನು ಮೈಸೂರು ದೇಶದ ನಿವಾಸಿಗಳಾದ ಆರ್ಯಜನ ಸಮುದಾಯದಲ್ಲಿ ಪ್ರಚಾರಪಡಿಸುವುದಕ್ಕೆ ತಕ್ಕ ಏರ್ಪಾಡು ಮಾಡುವುದು. ಇದೇ ಅರ್ಥವನ್ನು ಪುಷ್ಟೀಕರಿಸಿ ಮ॥ ಮಹದೇವಶಾಸ್ತ್ರಿಗಳೂ ಶ್ರೀ॥ ಅ. ಶ್ರೀನಿವಾಸಾಚಾರ್ಯರೂ ಉಪನ್ಯಾಸ ಮಾಡಿದರು ಇದರಂತೆ ಸರ್ವರೂ ಒಪ್ಪಿಕೊಂಡರು.

ಆ ಮೇಲೆ ಮ॥ ವೆಂಕಟಕೃಷ್ಣಯ್ಯನವರು ಉಪನ್ಯಾಸ ಮಾಡಿ ಈ ಸಭೆಗೆ ಮ॥ ಎಚ್. ವಿ. ನಂಜುಂಡಯ್ಯನವರು ಅಧ್ಯಕ್ಷರಾಗಿಯೂ, ಮ॥ ಬಿ. ರಾಮಕೃಷ್ಣರಾಯರು ಉಪಾಧ್ಯಕ್ಷರಾಗಿಯೂ, ಮ॥ ಗಳಾದ ಎ. ಮಹದೇವಶಾಸ್ತ್ರಿಗಳು, ಅಂ. ಪಂಡಿತರು, ಡಿ ವೆಂಕಟರಾಮಯ್ಯನವರು, ಎಂ. ಸಿ. ರಂಗಯ್ಯಂಗಾರ್ರು ಎಂ. ವೆಂಕಟಕೃಷ್ಣಯ್ಯನವರು ಸೆಕ್ರೆಟರಿಗಳಾಗಿಯೂ ಇರಬೇಕೆಂದು ಸೂಚಿಸಿದ್ದಲ್ಲದೆ ಕಮಿಟಿ ಮೆಂಬರುಗಳನ್ನೂ ಓದಿ ಹೇಳಿ, ಅದಕ್ಕೆ ಇನ್ನೂ ಹೆಚ್ಚು ಜನರನ್ನು ಸೇರಿಸಿಕೊಳ್ಳಬಹುದೆಂದು ತಿಳಿಸಿದರು. ಮ॥ ಸಿ ಕೃಷ್ಣರಾಯರು ಇದನ್ನು ಅನುಮೋದಿಸಿದರು. ಎಲ್ಲರೂ ಸಮ್ಮತಿಹಾಕಿದರು.

ಮ॥ ಬಿ ರಾಮಕೃಷ್ಣರಾಯರು ತರುವಾಯ ಈ ಸಭೆಯ ಕಾರ್ಯಗಳಿಗೆ ದ್ರವ್ಯಸಹಾಯ ಬೇಕಾಗಿದೆ ಎಂಬ ಉಪನ್ಯಾಸ ಮಾಡಿ ೫೦೦ ರೂ ಕೊಡತಕ್ಕ ಮಹನೀಯರು ಪೋಷಕರಾಗಬೇಕೆಂತಲೂ ವರುಷಕ್ಕೆ ಒಂದು ರೂಪಾಯಾಗಲಿ, ಒಟ್ಟಿಗೆ ೫೦ ರೂಪಾಯಾಗಲಿ ಕೊಡತಕ್ಕವರು ಸಭಾಮೆಂಬರುಗಳಾಗಿರಬೇಕೆಂತಲೂ ಸೂಚಿಸಿದ್ದನ್ನು ಡಾಕ್ಟರ್ ಮ॥ ಬಿ. ವೆಂಕೋಬರಾಯರು ಪುಷ್ಟೀಕರಿಸಿ, ಈ ಭಾಗದಲ್ಲಿ ಒಂದು ಪತ್ರಿಕೆಯನ್ನು ಪ್ರಚಾರ ಮಾಡುವುದು ಸಭಾಕಾರ್ಯಗಳಿಗೆ ತುಂಬಾ ಸಹಕಾರಿಯಾಗುವುದೆಂದು ಹೇಳಿದರು ಎಲ್ಲರೂ ಅದೇ ಪ್ರಕಾರ ಒಪ್ಪಿಕೊಂಡರು

ಕಡೆಯಲ್ಲಿ ಮ॥ ಅಂ. ಪಂಡಿತರು ಪ್ರತಿವರುಷವೂ ಆಶ್ವೀಜ ಶುದ್ಧ ಏಕಾದಶಿಯ ದಿನ ಈ ಸಭೆ ರಾಜಧಾನಿಯಲ್ಲಿ ನಡೆಯಬೇಕೆಂದೂ, ಪ್ರತಿಮಾಸದಲ್ಲೂ ಶುಕ್ಲ ಏಕಾದಶಿಯ ದಿನ ಆರ್ಯಧರ್ಮವಿಚಾರವಾದ ಉಪನ್ಯಾಸಗಳು ಜರುಗಬೇಕೆಂತಲೂ ಸೂಚಿಸಿ, ಎಲ್ಲರ ಸಮ್ಮತಿಯನ್ನು ಪಡೆದು, ಸಭೆಯನ್ನು ಮುಕ್ತಾಯ ಮಾಡಿದರು.

ತಾಲ್ಲೋಕು ವರ್ತಮಾನಗಳು.

ಮಂಡ್ಯ —ಇಲ್ಲಿ ಹಿಂದಿನ ವಾರ ಕೊಂಚ ಮಳೆಯಾ[...] ಹೊಲಗಳಿಗೆ ಸ್ವಲ್ಪ ಉಪಯೋಗವಾದರೂ ಕೆರೆಗಳಿಗೆ ನೀರು[...]ದಿಲ್ಲ. ಧಾಣಿವಾಸಿಗಳು ಯಥಾಪ್ರಕಾರವಿವೆ ರೈಲ್ವೆ ಪ್ರಯಾಣದ ಕಷ್ಟ—ಮೈಸೂರಿಗೆ ನವರಾತ್ರಿ ಉತ್ಸವಗಳಿಗೆ ಹೋಗು[...]ವ ಕಷ್ಟವು ಹೇಳತೀರದು. ದಿನಕ್ಕೆ ೪—೫ ಗಾಡಿಗಳನ್ನು ಬಿಟ್ಟು[...] ಪ್ರತಿ ಸ್ಟೇಷನ್ನಲ್ಲಿ ೫೦—೬೦ ಪ್ರಯಾಣಿಕರು ಸ್ಥಳ ಸಿಕ್ಕದೆ[...] ಉಳಿಯುತ್ತಾರೆ. ಅನ್ನ ನೀರಿಲ್ಲದೆ ಒಂದೆರಡು ದಿನಗಳಾದರೂ[...] ಒಬ್ಬರ ಮೇಲೆ ಒಬ್ಬರು ಬಿದ್ದು ಗುದ್ದಾಟದಿಂದ ಗಾಡಿಯ[...] ಸೇರುತ್ತಾರೆ. ಪ್ರಯಾಣಿಕರು ವ್ಯಾಗನ್ ಗಾಡಿಯಲ್ಲಿ ಹೆಂಗ[...] ಮಕ್ಕಳೂ ಗಂಡಸರೂ ಒಂದಾಗಿ ರಾತ್ರಿವೇಳೆ ಕೂಡು ಪ್ರ[...] ಮಾಡುವರು ಕತ್ತಲೆಯಲ್ಲಿ ಒಬ್ಬರ ಒಡನೆ ಒಬ್ಬರು ಕ[...] ತುಂಬರು ಮಾನಿಷ್ಟರ ಮೇಲೆ ಬಿದ್ದರೂ ಕೇಳುವವರ್ಯಾರು? ಇಂ[...]ಥಾ ತೊಂದರೆಗಳನ್ನು ರೈಲ್ ಅಧಿಕಾರಿಗಳು ತಪ್ಪಿಸಿ ಬೇರೆ ಕಡೆ[...]ದ ಪ್ರಯಾಣಿಕರ ಗಾಡಿಗಳನ್ನು ತರಿಸಿ ಪ್ರಯಾಣಿಕರಿಗೆ ಅನು[...]ಕೂಲಿಸಿದರೆ ಉತ್ತಮವಾಗಿರುವದು.—ಊರಲ್ಲಿ ನೂಲಿನ ಅಂಗ[...]ದರ್ಶಕರಾಗಿದ್ದ ನಾಗರಾಜಯ್ಯನವರು ಕಳೆದವಾರ ತೀರಿಹೋ[...] ಇವರು ಕೆಲವು ದಿನ ಕಾಯಿಲೆಯಾಗಿದ್ದು ಮೈಸೂರಲ್ಲಿ ಚಿ[...]ಕಿತ್ಸೆ ಹೊಂದಲು ಹೋಗಿದ್ದು ಅಲ್ಲಿಯೂ ಉಪಯೋಗವಾಗದೆ ಅಕ[...]ತ್ತ ತೀರಿಹೋದದ್ದು ಈ ಊರಿನ ಜನರೆಲ್ಲರಿಗೂ ವ್ಯಸನವಾ[...] ಇವರು ಅನೇಕರಿಗೆ ಸ್ನೇಹಿತರೂ, ಬಡವರಿಗೆ ಸಹಾಯಕರೂ, [...]ತೆಯಲ್ಲಿ ಯೋಗ್ಯರೂ ಆಗಿದ್ದರು ಇಂಥವರನ್ನು ಕಳಕೊ[...] ತುಂಬಾ ದುಃಖ

ಬೇಲೂರು.—ಕಳೆದ ೧೭ ನೇ ತಾ ಮಧ್ಯಾಹ್ನ ದೇ[...]ವಾರ್ ಎಂಬ ೧೬ ವರುಷದ ಹುಡುಗನು ಜೂಜು ಆಟ್ಟಕೆ[...] ಆರು ಕಾಸಿನ ತಾಂಬ್ರದ ಬಿಲ್ಲೆಯನ್ನು ನುಂಗಿದೆಂದು ತಿಳ[...]ಮ್ಮೆ ಡಾಕ್ಟರವರು ಅದನ್ನು ತೆಗೆಯಲು ಬಹಳ ಮೆಹನತ್ತು [...]ದರು ಅದು ಗಂಟಲಿನಿಂದ ಒಳಕ್ಕೆ ಒಂದು ಅಂಗುಲದ[...] ಹೋಗಿ ನೀರು ನುಂಗುವದಕ್ಕೂ ಕಡ ಅಡ್ಡಿಯಾಗಿ ಕುಳಿತಿ[...] ಅದನ್ನು ಹೇಗೋ ಉಪಾಯಾಂತರದಿಂದ ತೆಗೆದು ಆ ಹುಡು[...] ಪ್ರಾಣ ಉಳಿಸಿದರು —ಇದುವರೆಗೂ ಈ ಊರಿಗೆ ಅಮಲ್ದಾರ[...]ಗಿದ್ದ ತಾಜಿನಾಯ್ಕ[...]ರವರಿಗೆ ಪೆನ್ಷನ್ ಆದದ್ದನ್ನು ಕೇಳಿ, ಅವರ ಜನಾನು[...]ರಾಗವನ್ನೂ ಪ್ರಜೆಗಳ ಮಾನ ಧನ ಕಾಪಾಡುವುದರಲ್ಲಿ ಅವರು ನ[...] ಮೆಹನತ್ತನ್ನೂ ನೋಡಿ ಅನುಭವಿಸಿದ ಈ ತಾಲ್ಲೂಕು ಪ್ರ[...]ಲ್ಲಿ ಬಹು ಮಂದಿಯೂ ಈ ಊರು ದೊಡ್ಡ ಮನುಷ್ಯರೂ [...] ಅವರಿಗೆ ಈ ಊರು ನೇಟಿವ್ ಕ್ಲಬ್ಬಿನಲ್ಲಿ ಔತನವಮಾಡಿಸಿ, ಅವ[...] ಈ ಊರಿನ ಮುಖ್ಯ ಮುಖ್ಯ ಬೀದಿಗಳಲ್ಲಿ ನಾದು ಪ್ರಜೆಗಳ ಬ[...]ಬಂತ್ರಿಗಳೊಂದಿಗೆ ಮೆರವಣಿಗೆ ಮಾಡಿ ಕಳುಹಿಸಿಕೊಟ್ಟರು. ಊರು ಗಣೇಕೆರೆಯ ಪ್ರಜೆಗಳೂ ಇನ್ನು ಕೆಲವರೂ ಅವ[...] ಅಂತರಗಟ್ಟೆಯಮ್ಮನವರ ದೇವಸ್ಥಾನಕ್ಕೆ ಕರೆದುಕೊಂಡು [...]ಗಿ ಅವರ ಗುಣ ಕಥನಮಾಡುವದರ ಮೂಲಕ ಒಂದು ಅ[...] ಒಪ್ಪಿಸಿದರು ನಂತರ ಅವರು ಸ್ವಸ್ಥಾನಕ್ಕೆ ಪ್ರಯಾಣಮಾಡಿ[...] ಇಂಥಾ ಪರೋಪಕಾರಿಗಳಿಗೆ ಜಗದೀಶನು ಚಿರಕಾಲ ಆಯು[...]ರೋಗ್ಯವಂ ದಯಪಾಲಿಸಬೆಂದು ಕೋರುತ್ತೇನೆ. ಇವರಿಗ[...]ಯಾಗಿ ಈಗ ಬಂದಿರುವವರೂ ಇವರ ಮೇಲ್ಪಂಕ್ತಿಯನ್ನು ಅನು[...]ಸುವರೆಂದು ಹಾರೈಸುತ್ತೇನೆ —ಈ ಊರಿಗೆ ಡಾಕ್ಟರು ನಾರಾ[...]ಯಣರಾಯರು ಬಂದ ಮೇಲೆ ಮ್ಯುನಿಸಿಪಾಲಿಟಿಯೂ ಸ್ಯಾನಿಟರಿ ಪ[...]ನೂ ಬಹಳ ಅನುಕೂಲಸ್ಥಿತಿಗೆ ಬರುತ್ತಿರುವವೆಂದು ತಿಳಿಸಲು ಸಂತೋಷವಾಗಿದೆ

ಚಿತ್ರದುರ್ಗ —ತಾರೀಖು ೩೦ರ ಲಾಗಾಯಿತು ೨—೩ ದಿನಗಳಲ್ಲಿ ೨' ಇಂಚು ಮಳೆಯಾದ್ದರಿಂದ ಪೈರುಗಳೆಲ್ಲ ಜೀವ ಹೊಂದಿವೆ ಜನಗಳು ಹರ್ಷಿತರಾಗಿದ್ದಾರೆ. ಕೆರೆ ಕಟ್ಟೆಗ[...] ನೀರು ಬರುವಂಥ ಮಳೆ ಆಗಲಿಲ್ಲ. ದನಗಳಿಗೆ ತಿನ್ನುವದಕ್ಕೆ[...]ಲ್ಲು ಆಗುತ್ತದೆ ಆದವಿಯಲ್ಲಿ ಎಲ್ಲಿಯೂ ನೀರಿಲ್ಲದ್ದರಿಂದ [...] ಗುಪ್ರಾಣಿಗಳ ಕಷ್ಟವನ್ನು ವಿವರಿಸುವದು ಅಸಾಧ್ಯ ಒ[...] ಮಾತ್ರ ನೀರಿರುವದು. ನಲ್ಲಿಗಳಲ್ಲಿ ಜಗಳಕೊತ್ತು ಮಾತ್ರ ನಿ[...] ಬಿಟ್ಟಿರುವರು ಪಾತ್ರೆಗಳಲ್ಲದೆ ನೀರನ್ನು ಸುರಿಸಕೂಡದು [...]ದಾಗಿ ಎಲ್ಲಾ ನಲ್ಲಿಗಳ ಹತ್ತಿರದಲ್ಲಿಯೂ ಬೋರ್ಡು ಹಾಕ[...] ಒಳ್ಳೆಯದಲ್ಲವೇ ?—ಈ ಪ್ರಾಂತ್ಯ ರೋಗಾದ್ಯುಪದ್ರವಗಳ[...]ವು ಇಲ್ಲ. ಗಾಳಿ, ಬೆಳಕು ಸಂಚಾರವಾಗುವ ಹಾಗೂ ಮನೆ[...] ಕಸವು ಸಾಗುವ ಹಾಗೂ ರೋಡ್ ಮುಂತಾದ ಪ್ರಯೋಜನ[...] ಕಾರ್ಯಗಳು ಮ್ಯುನಿಸಿಪಾಲಿಟಿಯವರಿಂದ ನಡೆಯುತ್ತಿವೆ. [...]ವ ಕರ್ನವರ್ನಲ್ ಸ್ ರೋಡುಗಳು ಬಡವರ ಕಷ್ಟಗಳನ್ನು ಸ್ವಲ್ಪ[...] ಲಾಲಿಸದೆ ನುಗ್ಗಿ ಬಲಾಢ್ಯರ ಮನೆ ಪಕ್ಕದಲ್ಲಿ ನಿಂತುಬಿಟ್ಟವೆ - [...]ವಳ ಬ್ಯಾಂಕು ಷೇರ್ದಾರರು ಹಣವನ್ನು ತೆಗೆದುಕೊಂಡರು. [...]ತ್ತೆ ಕೆಲವರು ತೆಗೆದುಕೊಳ್ಳುತ್ತಲಿರುವರು. ಶಕ್ತರಾದ ಏವ[...] ಈ ಜವಳಿ ಬ್ಯಾಂಕು ಉದ್ಧೇಪಿಸುವಂತೆ ಪ್ರಯತ್ನಿಸಬಾರದೇ[...] ಡಿಸ್ಟ್ರಿಕ್ಟ್ ಟ್ರೆಜರಿಯ ಲೆಕ್ಕದಲ್ಲಿ ೪ ರೂ ವ್ಯತ್ಯಾಸ ಬಂದಿ[...]ದೆ. ಹೆಂಗಸರ ಆಸ್ಪತ್ರೆಗೆ ಮಾವತಿಯಾದಂತೆ ಹೇಳುತ್ತಾರೆ. [...] ಎಲ್ಲಿ ನಿಂತಿತೋ ತಿಳಿಯದು ಇದು ಮ್ಯಾಜಿಸ್ಟ್ರೇಟರಲ್ಲಿ ವಿ[...] ನಡೆಯುತ್ತಿದೆ —ಈ ಊರ ಬಂಗ್ಲೆ ಕೊತ್ವಾಲನೊಬ್ಬನು ಪ್ರ[...]ಜೇಕರಿಂದ ವಸೂಲಾದ ಹಣದಲ್ಲಿ ಸ್ವಲ್ಪ ಭಾಗವನ್ನು ಟ್ರೆ[...]ಜರಿಗೆ ಪಾವತಿ ಮಾಡಲಿಲ್ಲವೆಂತಲೂ, ರೆವಿನ್ಯು ಮತ್ತು ಫಾರೆಸ್ಟ್ ಸಂ[...]ಬಂಧವಾದ ಸ್ವಲ್ಪ ಹಣವನ್ನು ದುರುಪಯೋಗ ಮಾಡಿದಂತೆಯೂ ವಿ[...]ಚಾರಣೆ ನಡೆಸುತ್ತಿದ್ದಾರೆ —ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟ[...] ವಿಚಾರಣೆಯಲ್ಲಿದ್ದ ಬಾಲ್ಯ ವಿವಾಹದ ಕೇಸಿನಲ್ಲಿ ಪುರೋಹಿ[...]

...ಕ್ಷ್ಮಣನವನಿಗೆ ೧೦ ರೂ. ಬಾಲ್ಯಾನೆಯಾದಂತೆ ಕೇಳುತ್ತೇ... ಮೈಸೂರಿನಲ್ಲಿ ನಡೆಯುವ ದಸರ ಉತ್ಸವದಂತೆ ತಾ. ೫ ನೇ ...ವಾರ ಈ ಊರು [illegible] ಹಾಲಿನಲ್ಲಿ ಒಂದು ದರ್ಬಾರು ಮಾ... ಮಹಾರಾಜರವರ ಪ್ರೀತಿಯೂ ಇಟ್ಟು ರಾಜಭಕ್ತಿ ವಿಶ್ವಾಸವನ್ನು ...ನವಾಡಿದರು ಈ ಒಳ್ಳೆ ಪದ್ಧತಿಯನ್ನು ತೋರಿಸಿಕೊಟ್ಟ ...ಧೀರುರಾಜರನ್ನು ಅನೇಕರು ಕೊಂಡಾಡುತ್ತಿದ್ದಾರೆ.

...ರ್ತಾ ಬುಕ್ಕಾಪಟ್ಣ.—ಈ ಸಮೀಪದಲ್ಲಿ ಈಗ ಒಂ... ತಿಂಗಳಿಂದಲೂ ಮಳೆ ಇಲ್ಲ. ಬುಪ್ಪ ಪೈರೆಲ್ಲಾ ಹೊಗೆ ಒಂ... ಬಾಡುತ್ತವೆ. ಕಾರೇಹಳ್ಳಿ ಗ್ರಾಮಕ್ಕೆ ಒಂದು ಕೆರೆಯುಂ... ಅದಕ್ಕೆ ಮಾತ್ರ ಈಗ ಮೂರು ತಿಂಗಳ ಕೆಳಗೆ ಮೂರು ತಿಂ... ನೀರು ಅಂದರೆ ಹಳದಿ ನೀರು ಬಂದಿತ್ತು. ಆ ನೀರೆಲ್ಲಾ ಬುಕ್ಕಾ... ಪಟ್ಟಣದ ತೋಟದವರಿಗೆ ಹೊರಡೇ ವಿಲೇ ಆಯ್ತು. ಈಚೆಗೆ ಒಂ... ತಿಂಗಳಲ್ಲಿ ತಿರಿಗಿ ಹಳದಿ ನೀರು ಬಂತು. ಅದರಲ್ಲಿ ಕೆಲವು ಹರೀ... ಮನೆಸ್ನು ಸಾಗುವಳಿಗೆ ಕೆಲವು ಬಡವರು ಮಾಡಿರುತ್ತಾರೆ. ಈ... ಮೊದಲಿನಂತೆ ಬಡವರ ಬಾಯಲ್ಲಿ ಕಾಳ್ಕೆ ಇಡಲು ಬು... ಕ್ಕಾಪಟ್ಟಣದ ಕೆಲವು ತೋಟದವರು ಯೋಚಿಸುತ್ತಾ ಇರುವಂತೆ ...ವದು ಮಾತ್ರವಲ್ಲದೆ ಆಗಲೇ ಬುಕ್ಕಾಪಟ್ಟಣದ ಕಾಲ್ವೆಯಲ್ಲಿ ...ಮ ಕೂಪಿನ ನೀರು ಈಗ ಹದಿನೈದು ದಿವಸದಿಂದಲೂ ಬರು... ಇರುತ್ತೆ. ಇದನ್ನು ಕಾರೆಹಳ್ಳಿ ಗ್ರಾಮದ ಪಾಟೀಲ ನೀರು ...ಗಳು ಕಂಡೂ ಕಾಣದವನಂತೆ ಇರುತ್ತಾರೆ.—ಆದರೆ ಈಗಲೂ ...ಗ್ಗ ಎರಡು ತಿಂಗಳಿಗೆ ಮುಂಚೆಯೂ ನಡೆದ ನೀರಿನ ತಪಶೀಲಿನ ...ತಾಲ್ಲೂಕು ಅಧಿಕಾರಿಗಳಿಗೆ ತಿಳಿದಿರಬಹುದೋ ಇಲ್ಲವೋ ತಿಳಿ... ದು. ಈಗಲಾದರೂ ಅಮಲ್ದಾರರು ಈ ಕಾರೇಹಳ್ಳಿ ಕೆರೆ ವಿಷ... ದಲ್ಲಿ ಸ್ವಲ್ಪ ನಿಗಾ ಇಟ್ಟು, ಈಗ ಸಾಗುವಳಿ ಆಗಿರುವ ಹರೀಪಸ... ಬಡವರಿಗೆ ಅನ್ಯಾಯವಾಗದಂತೆ ಮಾಡಿಕೊಡಬೇಕು.—ಬುಕ್ಕಾಪಟ್ಟಣದ ಪೋಲೀಸ್ ಸ್ಟೇಷನ್ ಈಗ ಹೊಸದಾಗಿ ಹವೇಲಾ... ನರಸಿಂಗರಾಯರವರು ಬಂದು ಸುಮಾರು ಮೂರು ತಿಂಗಳ ಮೇ... ಯ್ತು. ಈ ಪ್ರಾಂತ್ಯ ಕಳವು ಕಳ್ಳತನಗಳನ್ನು ಪತ್ತೆ ಮಾಡಿ ತುಂ... ಬಿಗಿ ಶಿಕ್ಷೆ ಮಾಡಿಸಿದ್ದರ ಮೇಲೆ ಇಲ್ಲಿನ ರೈತರು ಕಳ್ಳರ ಭಯವಿ... ಲ್ಲದೆ ಕೇವಲ ನೆಮ್ಮದಿಯಾಗಿ ಇದ್ದಾರೆ. ಹಿಂದೆ ಇದ್ದ ಹುಳಿಯಾರು ...ಯಾಗಿ ಎಸ್ ವೆಂಕಟರಾಮಯ್ಯ ದೇವೀ ಸಾಹೇಬರು ಒಂ... ಇಲ್ಲಿನ ಪುಣಾಸುಗಳಲ್ಲಿ ಕೆಲವನ್ನು ಪರೀಕ್ಷಿಸಿ ಒಂದು ದಿನ ...ಲ್ಲಿಯೇ ಇದ್ದು ನಮ್ಮ ಗ್ರಾಮದ ಬಳಿ ಹನುಮನ್ನು ಕಡಿದಿರುವ ...ತೆಯನ್ನು ಪರಿಶೀಲಿಸಿ ಮಾಡುವವರಾಗಿದ್ದರು ಈ ಚರತೆ ಗೋಡೆ ...ಗಳಿಗೆ ಈ ವರ್ಷ ೫೦—೬೦ ಕೊಡುತ್ತಿರುವುದೆಂದು ತಿಳಿಯುವ ...ಕಾರೇಹಳ್ಳಿಗೆ ಹೋಗಿಬರಲು ಸರಿಯಾದ ರಸ್ತೆ ಇಲ್ಲ. ...ದನಗಳಿಗೂ ಗ್ರಾಮಕ್ಕೂ ಅರ್ಧ ಮೈಲಿ ಇರುತ್ತೆ. ಗ್ರಾಮದ ...ತ್ತ ಹರೀಸಾಗು ಮಾಡಿರುವುದರಿಂದ ಸಂಚಾರ ದಾರಿ ಇಲ್ಲ. ಈ ವಿಷಯ ಸರ್ವೆ ಅಮಲ್ದಾರರ ಮನಸ್ಸಿಗೆ ಬರಲೆಂದು ಅರಿಕೆ ಮಾಡಿದೇನೆ.

ಗೊತ್ತಿಬೀಳ್ಕೆ ಪ್ರಿವ.—ಈ ವಾರ ಬಂದ ೪—೫ ದಿನಗಳ ಮ... ಳೆಯು ಜನಗಳ [illegible] ಕಡೆಯಾಯಿತೆನ್ನಲು ಸಂದೇಹವಿಲ್ಲ ...ಲ ದಾಣೆಮಾಸಗಳು ಯಥಾಸ್ಥಿತಿಯಲ್ಲಿಯೇ ಇರುತ್ತವೆ.—ಇಲ್ಲಿನ ಮುನಿಸಿಪಾಲಿಟಿ, ಅಮಲ್ದಾರ್, ಪೋಲೀಸ್ ಸ್ಟೇಷನ್ ...ಗಳಿಂದ ಬೀಳದ್ದ ನಾಟಕ ಸಂಘದವರಿಗೆ ಒಂದು ಭಂಗಾರದ ಪದಕವನ್ನು ಬಹುಮಾನಿಸಿ, ಸಂಘದ ಶ್ರೇಯೋಭಿವೃದ್ಧಿಯನ್ನು ಬ... ಯಸಿದರು.—ಅತಲಾಗಿ ಇಲ್ಲಿನ ಮಾರ್ಜಿಸ್ ಮೆ॥ ವೆಂಕೋಬರಾ... ಯರು ಮದ್ದಗಿರಿ ಮಾರ್ಜಿಸ್ ಕೋರ್ಟಿಗೆ ವರ್ಗವಿಟ್ಟ ವಿಚಾ... ಸಾತಕರಿಗೆ ಗೊತ್ತೇ ಇದೆಯಷ್ಟೆ. ಮಹನೀಯರು ಈ ಸ್ಥಳವನ್ನು ಬಿಟ್ಟುಹೋಗುವುದು ಸರ್ವರಿಗೂ ವಿಷಾದವನ್ನುಂಟುಮಾಡಿದೆ.—ಇಲ್ಲಿನ ಪೋಸ್ಟ್ ಮಾಸ್ಟರವರು ದಿನ ನಿತ್ಯ ಪಡಗಳಲ್ಲಿ ಕೊಟ್ಟಿದ್ದ ಅನುರಾಗವನ್ನು ತೋರ್ಪಡಿಸುತ್ತಲಿರುವರು. ಮಹನೀಯರು ಈ ನಮ್ಮ ಶ್ರೀರಾಮ್ಯರು ತುಂಬ ಘನವಾದ ದೃಷ್ಟಿಯನ್ನು ಪ್ರಿರದ ಅದ ...ಯುಪ ಬಗ್ಗೆ ಟೀಕೆ ಇವರ ಗೌತ್ರ ಎಸ್ಟೇಗಳ ಪ್ರಾತ್ಯಭಾವವ ...ಗಲೀ, ಅಲ್ಲದೇ ಮುಸಲ್ಮಾನ ಗಿವ ಕೃಷ್ಣೋದಯವನ್ನಾಗಲೀ ...ದಿರುವೇಳಾಗಿಯಲ್ಲವೇ! ಕಳೆದ ವರ್ಷದಲ್ಲಿ ಇಲ್ಲಿನ ಪ್ರಮುಖ ...ದ ಮುಸಲ್ಮಾನ ಸಾಹೇಬರೂ ಇತರರೂ ಹಿಂದುಸ್ಥಾನಿ ಸ್ಕೂಲ್ ಮಾಸ್ತರುಗಳೂ ಸೇರಿ ಪಬ್ಲಿಕ್ ರೀಡಿಂಗ್ ರೂಮನ್ನು ಸ್ಥಾಪಿಸಿದರು ಇದು ಸ್ಕೂಲ್ ವಿದ್ಯಾರ್ಥಿಗಳಿಗೂ ಮಾಸ್ತರುಗಳಿಗೂ ಇತರ ದೊಡ್ಡ ಮನುಷ್ಯರಿಗೂ ವಿಶೇಷ ಪ್ರಯೋಜನಕಾರಿಯಾಗಿದೆ ಸೆಪ್ಟಂಬರ್ ತಾ ೯ರಲ್ಲಿ ರೀಡಿಂಗ್ ರೂಂ ಸಂಬಂಧವಾದ ಸ್ಪೆಷಲ್ ಮೀಟಿಂಗ್ ನಡೆಯಿತು ಇದಕ್ಕೆ ಮಹನೀಯರು ದೊಡ್ಡ ಮನುಷ್ಯರೂ ಇತರರೂ ದಯಮಾಡಿಸಿದ್ದರು. ಆಗ್ಯೆ ಎ ಪಿ ಸ್ಕೂಲ್ ಹೆಡ್ಮಾಸ್ಟರ್ ಮೆ॥ ಕೊಂಗಾಡಿ ರಾಮಯ್ಯ ರೀಡಿಂಗ್ ರೂಮಿನ ಪ್ರಯೋಜನ, ವೃತ್ತಾಂತ ಪತ್ರಿಕೆಗಳನ್ನು ಓದುವುದರ ಉಪಯೋಗ, ಪುಸ್ತಕಗಳನ್ನು ಓದಿ ತಿಳಿದುಕೊಳ್ಳತಕ್ಕ ವಿಶೇಷ ಸಂಗತಿಗಳು, ಇವೇ ಮೊದಲಾದವುಗಳನ್ನು ವಿಸ್ತಾರವಾಗಿ ಎಲ್ಲರಿಗೂ ತಿಳಿಯುವಂತೆ ಉಪನ್ಯಾಸ ಮಾಡಿದರು ಪ್ರಸಿದ್ಧ ಕಂಟ್ರಾಕ್ಟ್‌ದಾರ್ ಸುಬ್ಬಣ್ಣ ಶೆಟ್ ಮೆ॥ ಅಬ್ದುಲ್ಲಾ ಖಾನ್ ರವರು ಈ ರೀಡಿಂಗ್ ರೂಮಿಗೆ ನೂರು ರೂಪಾಯನ್ನು ಉಚಿತವಾಗಿ ಕೊಟ್ಟರು ಇದನ್ನೂ ಇತರರು ಅವರವರ ಯೋಗ್ಯತಾನುಸಾರ ಕೊಟ್ಟ ಚಂದಾ ಹಣವನ್ನೂ ಸಂತೋಷಪೂರ್ವಕವಾಗಿ ತೆಗೆದುಕೊಂಡರು. ಈ ಸಭೆಗೆ ಕೆಲವು ಜನ ಸಂಬಂಧವಾದ ಹಿಂದುಸ್ಥಾನಿ ಪುಸ್ತಕಗಳನ್ನೂ ನ್ಯೂಸ್ ಪೇಪರುಗಳನ್ನೂ ತರಿಸುವಂತೆ ಗೊತ್ತು ಮಾಡಿದರು. ಅಲ್ಲದೆ ಪುಸ್ತಕಗಳನ್ನು ಮಾತ್ರ ಇಲ್ಲಿನ ಹಿಂದುಸ್ಥಾನಿ ಸ್ಕೂಲ್ ಲೈಬ್ರರಿಗೆ ಸೇರಿಸಿದರೆ ಬಹಳ ಅನುಕೂಲವೆಂಬ ಮೆ॥ ಕೊಂಗಾಡಿ ರಾಮಯ್ಯನವರು ಕೊಟ್ಟ ಸಲಹೆಯನ್ನು ಎಲ್ಲರೂ ಅನುಮೋದಿಸಿದರು.—ಅಕ್ಟೋಬರ್ ೧ರಿಂ...

...ದ ಗುಂತಕಲ್ ಮಾರ್ಗವಾಗಿ ಮೆಯಿಲ್ ಟ್ರೈನ್ ಬಿಡುತ್ತಾರೆ ಇದ... ಕ್ಕೆ ಚಾರ್ಜನ್ನು ಜಾಸ್ತಿ ಮಾಡಿದ್ದಾರೆ. ಗಾಡಿಗಳು ದೊಡ್ಡಬಳ್ಳಾಪುರಕ್ಕೆ ಬೆಂಗಳೂರಿಂದ ಸಾಯಂಕಾಲ ೭. ೭ ಕ್ಕೂ ಹಿಂದೂಪುರದ ಕಡೆಯಿಂದ ಬೆಳಿಗ್ಗೆ ೫ ೫೦ ಕ್ಕೂ ಸೇರುತ್ತವೆ.—ಇಲ್ಲಿನ ಪುಲ್ಲಯ್ಯನ ತಿಮ್ಮಕ್ಕನು ೪ ವರ್ಷದ ಹಿಂದೆ ದೇವಂಡಳ್ಳಿ ತೌರು ಮನೆಗೆ ಹೋಗಿದ್ದ ತನ್ನ ಸೊಸೆಯನ್ನು ಸೆಪ್ಟಂಬರ್ ಪ್ರಾರಂಭದಲ್ಲಿ ತನ್ನ ಮನೆಗೆ ಕರಿಸಿಕೊಂಡು ಇರುವಾಗ ಸೊಸೆಗೆ ಕೆಮ್ಮಲು ಜ್ವರ ಇದೆ ಎಂದು ನಂಜಿನ ಮಾತ್ರೆಗಳನ್ನು ಕೊಟ್ಟಳಂತೆ. ಕೊಟ್ಟ ರಾತ್ರಿಯೇ ಸೊಸೆಗೆ ವಾಂತಿಯಾಗುವದೂ ಹೆಚ್ಚಾಗಿ, ಎದೆ ಉರಿಯುತ್ತೆ ಎಂದು ಕಷ್ಟಪಡುತ್ತಾ ಒಂದು ವಾರದಲ್ಲಿ ಸತ್ತಳು. ಮೃತಪಟ್ಟ ಮೋಟಮ್ಮನ ತಂದೆ ದೇವಂಡಳ್ಳಿ ಚಿಕ್ಕಅಪ್ಪನವರು ಇದು ವಿಷವಾಗಿರಬಹುದೆಂದು ಪರೀಕ್ಷೆ ಮಾಡಿಸುವುದಕ್ಕೆ ಬೆಂಗಳೂರು ಆಸ್ಪತ್ರೆಗೆ ಹೆಣವನ್ನು ತೆಗೆದುಕೊಂಡುಹೋದರು

ವಿದೇಶ ವರ್ತಮಾನಗಳು.

ವಿಕ್ಟೋರಿಯಾನೋಪಲ್ ಪ್ರಾಂತ್ಯದಲ್ಲಿ ಬೆಂಕಿಯ ಅನಾಹುತದಿಂದ ೧೪—೧ ಲಕ್ಷ ರೂಪಾಯಿನ ಆಸ್ತಿಪಾಸ್ತಿಗಳು ಸುಟ್ಟುಹೋದುವು.

* * * * *

ಷಾಂಘಾಯಿ ಪಟ್ಟಣದಲ್ಲಿ ಕಳೆದ ಜೂನ್ ತಿಂಗಳಲ್ಲಿ ಮೂರು ಮಂದಿ ಸಿಕ್ ಜನರು ಒಂದಾಗಿ ಒಬ್ಬನನ್ನು ಕೊಂದು ಹಾಕಿದರು. ಆ ಮೂರನ್ನೂ ಕಳೆದ ವಾರ ಗಲ್ಲಿಗೆ ಹಾಕಿರುತ್ತಾರೆ.

* * * * *

ರಷ್ಯಾ ರಾಜ್ಯದವರು ಫ್ರಾನ್ಸ್, ಜರ್ಮನಿ, ಇಟಲಿ, ಅಮೇರಿಕಗಳಲ್ಲಿರುವ ವರ್ತಕರಿಂದಲೂ ಬ್ಯಾಂಕುಗಳಿಂದಲೂ ೧೨೫ ಕೋಟಿ ದ್ರವ್ಯವನ್ನು ಸಾಲಮಾಡಬೇಕೆಂದು ಗೊತ್ತು ಮಾಡಿದ್ದಾರೆ.

* * * * *

ಪರ್ಷಿಯಾ ರಾಜ್ಯದಲ್ಲಿ ಕ್ಷಾಮ ಪ್ರಾಪ್ತಿಯಾದೀತೆಂಬ ಭೀತಿ ಕಂಡುಬಂದುದರಿಂದ ಗವರ್ನಮೆಂಟಿನವರು ವರ್ತಕರಿಗೆ ದವಸ ಧಾನ್ಯಾದಿ ಆಹಾರಪದಾರ್ಥಗಳನ್ನು ಹೊರಗಡೆಗೆ ರಫ್ತು ಮಾಡದಂತೆ ಹುಕುಂ ಕೊಟ್ಟದಾರೆ

* * * * *

ಆಸ್ಟ್ರಿಯಾ ರಾಜ್ಯಕ್ಕೆ ಸೇರಿದ ಬ್ರೂನ್ ಎಂಬ ಪಟ್ಟಣದಲ್ಲಿ ಕಳೆದ ವಾರ ಜರ್ಮನಿ ಜನರಿಗೂ ಚೆಕ್ ಎಂಬ ಜನರಿಗೂ ಬಹಿರಂಗವಾಗಿ ಕಲಹವಾಯಿತು. ಎರಡು ಕಡೆಗಳಲ್ಲೂ ನೂರಾರು ಜನರು ನಿಂತು ಕಾದಾಡಿದರು. ಇನ್ನೂ ೨೦ ಜನರಿಗಿಂತಲೂ ಹೆಚ್ಚಾಗಿ ಗಾಯಪಟ್ಟದ್ದಾರೆ

* * * * *

ಫಿಲಿಪ್ಪೈನ್ ದ್ವೀಪಗಳಲ್ಲಿ ಕೆಲವು ದಿನಗಳ ಕೆಳಗೆ ಬಹು ಭಯಂಕರವಾದ ಸುಂಟರಗಾಳಿ ಪ್ರಾಪ್ತವಾಗಿ ತುಂಬಾ ಅನಾಹುತವಾಯಿತು ಎರಡು ಹಡಗುಗಳು ಗಾಳಿಗೆ ಸಿಕ್ಕಿ ಬಡಿದಾಡಿ ಮುಳುಗಿಹೋದವು ೧೦೦ ಜನರು ಪ್ರಾಣ ಬಿಟ್ಟರು. ನಾರಿನ ತೋಟಗಳೆಲ್ಲಾ ನಾಶವಾದವು. ವ್ಯಾಪಾರಿಗಳಿಗೆ ೭೫ ಕೋಟಿ ದ್ರವ್ಯ ನಷ್ಟವಾಯಿತು

* * * * *

ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್ ದೊರೆ ಕುಮಾರಿ [illegible] ಪ್ರಾರ್ಥನೆಗಳಲ್ಲಿ ಸಾಂಚಾರ ನಡಸುತ್ತಿದ್ದಾರೆ ಯೂರೋಪ್ ಖಂಡಕ್ಕೆ ಸೇರಿದ ನಾರ್ವೇ ದೇಶದ ಪ್ರಜೆಗಳು ಆತನಿಗೆ ಅನೇಕ ಅರ್ಜಿಗಳನ್ನು ಬರೆದು—ನೀವು ನಮ್ಮ ದೇಶಕ್ಕೆ ಬಂದು ನಿಂತರೆ ನಿಮ್ಮನ್ನು ನಮ್ಮ ರಾಜನನ್ನಾಗಿ ಮಾಡಿಕೊಳ್ಳುತ್ತೇವೆ ಎಂಬುದಾಗಿ ತಿಳಿಸಿದರೆಂದು ಪ್ರಕಟವಾಗಿದೆ

* * * * *

ಅಮೇರಿಕಕ್ಕೆ ಸೇರಿದ ಷಿಕಾಗೋ ಪಟ್ಟಣದಲ್ಲಿ ವೈದ್ಯ ಡಾಕ್ಟರ್‌ಗಳು ಮನುಷ್ಯನ ಎದೆಯಲ್ಲಿರುವ ಹೃದಯವೆಂಬ ರಕ್ತ ಹರಿಯುವ ಮಾಂಸಖಂಡವನ್ನು ಅದು ಕೆಟ್ಟು ಹಾಳಾಗಿದ್ದರೆ ತೆಗೆದುಹಾಕಿ, ಮಿಕ್ಕಿರುವ ಕಡೆ ಎಲುಬಿಲ್ಲದ ರಕ್ತ ಹೃದಯವನ್ನು ಇಟ್ಟು, ಮನುಷ್ಯನ ದೇಹವನ್ನು ಗಟ್ಟಿಮಾಡಬೇಕೆಂದು ಪರೀಕ್ಷೆಗಳನ್ನು ಮಾಡುತ್ತಿದ್ದಾರೆ [illegible] ಮಾಡುವುದೇನೂ ಅಸಾಧ್ಯವಲ್ಲವೆಂದು ಆ ಡಾಕ್ಟರುಗಳು ಹೇಳುವರು

* * * * *

ಫ್ರಾನ್ಸ್ ಸಂಸ್ಥಾನದ ಮುಖ್ಯಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಪ್ರಸಿದ್ಧ ಲೂಯಿ ಪಾಸ್ಚರ್ [illegible] ಕಳೆದ ವಾರ ಡಾಕ್ಟರುಗಳ ಸಭೆಯನ್ನು [illegible] ಸುಮಾರು ೩,೦೦೦ ವೈದ್ಯರು ಸೇರಿ ತಮ್ಮಲ್ಲಿ ಗಟ್ಟಿಗರಾಗಿರುವಂಥ ೧೭ ಮಂದಿಯನ್ನು ಚುನಾಯಿಸಿ [illegible] ವೈದ್ಯರನ್ನು ಕಳುಹಿಸಿಕೊಟ್ಟಿದ್ದಾರೆ ಈ ಜಂತುಗಳ ಪೀಡೆ [illegible] ಚಿಕಿತ್ಸೆಗಳನ್ನು ಕುರಿತು ಚರ್ಚೆ ಮಾಡುವರು ಈ ಸಭೆ ಒಂದು ವಾರ ನಡೆಯುವುದು

* * * * *

[illegible] ದೇಶದಲ್ಲಿ ಹುಟ್ಟಿ ದೊಡ್ಡವನಾಗಿದ್ದ [illegible] ಚಕ್ರವರ್ತಿಯವರಿಂದ ಅಪ್ಪಣೆಪತ್ರಗಳನ್ನೂ ಬಹುಮಾನಗಳನ್ನೂ ತೆಗೆದುಕೊಂಡು ರಷ್ಯ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್‌ ಮಾಜಿ ನಗರವೆಂಬ ಮುಖ್ಯ ಗುರುವನ್ನು ಕಂಡು ಉಗ್ರ ಪಟ್ಟಣದಲ್ಲಿ ಆತನಿಗೆ ಆ ಬಹುಮಾನಗಳನ್ನು ಒಪ್ಪಿಸಿ, ಈಗ ಹಿಂತಿರುಗಿ ರಷ್ಯಾಕ್ಕೆ ಹೋಗಿರುವ ಜನರಲ್ ಕಾನ್‌ಟಾಫ್ ಎಂಬುವನು ಹೇಳುವುದೇನೆಂದರೆ—ದಲಾಯಿಲಾಮನು ಇಂಗ್ಲಿಷರನ್ನು ಟಿಬೆಟ್ಟಿನಿಂದ ಹೊರಡಿಸಿ ಟಿಬೆಟ್ಟನ್ನು ತಾನೇ ಎಂದಿನಂತೆ ಸ್ವತಂತ್ರವಾಗಿ ಆಳುತ್ತಾ ಬರುವಂತೆ ಆಗಬೇಕೆಂದು ಕುತೂಹಲ ಪಟ್ಟು ಈ ಅಭಿಪ್ರಾಯವನ್ನು ನನ್ನ ಸಂಗಡ ಹೇಳಿದನು ಎಂಬುದೇ. ಇದಕ್ಕೆ ದಲಾಯಿಲಾಮನಿಗೆ ರಷ್ಯಾದವರು ಸಹಾಯ ಮಾಡುವವರಾಗಿದ್ದಾರೆಯೋ ಏನೋ ಮುಂದೆ ತಿಳಿಯಬೇಕಾಗಿದೆ.

* * * * *

ಪಶ್ಚಿಮ ಏಷ್ಯಾದಲ್ಲಿರುವ ಟಿಫ್ಲಿಸ್ ನಗರದೊಳಗೆ ಜೋಹಾನ್ ಹೊಗ್ನರ್ ಎಂಬೊಬ್ಬ ಜರ್ಮನಿ ಕೋಟ್ಯಾಧೀಶ್ವರನು ವಾಸಮಾಡುತ್ತಿದ್ದನು. ಈತನಿಗೆ ಕರಡಿ ಬೇಟೆಯಾಡುವುದರಲ್ಲಿ ತುಂಬಾ ಇಷ್ಟವಿತ್ತು. ಅದಕ್ಕೆ ಅವನು ಸೀಸೆಗಳಲ್ಲಿ ಮದ್ಯವನ್ನು ತೆಗೆದುಕೊಂಡು ಕಾಕಸಸ್ ಬೆಟ್ಟದ ತಪ್ಪಲಿಗೆ ಹೋಗಿ, ಕರಡಿಗಳಿಗೆ ಮದ್ಯವನ್ನು ಕುಡಿಸಿ, ಅವುಗಳಿಗೆ ಪ್ರಜ್ಞೆ ತಪ್ಪಿದಾಗ ಅವುಗಳ ಮೇಲೆ ಬಿದ್ದು ಕೋಲಾಹಲ ಮಾಡುತ್ತಾ ಕುಸ್ತಿ ಮಾಡುತ್ತಾ ತಾನೇ ಜಯಶೀಲನಾಗುತ್ತಾ ಇದ್ದನು. ಕೆಲವು ದಿನಗಳ ಹಿಂದೆ ಅವನು ಒಂದು ಕರಡಿಗೆ ಅದೇ ಪ್ರಕಾರ ಮದ್ಯವನ್ನು ಕುಡಿಸಿದನು. ಕೂಡಲೇ ಅದಕ್ಕೆ ಮತ್ತೇರಿ ಇನ್ನೂ ರೌದ್ರಾಕಾರವನ್ನು ವಹಿಸಿ ಅವನ ಮೇಲೆ ನುಗ್ಗಿ ಅವನನ್ನು ಕೆಡವಿಕೊಂಡು, ಅಮುಕಿ ಕೊಂದುಬಿಟ್ಟಿತು. ಅವನ ಶವವು ಕೆಲವು ದಿನಗಳ ಮೇಲೆ ಕರಡಿಯ ಗುಹೆಯಲ್ಲಿ ಸಿಕ್ಕಿತು.

* * * * *

ಚೀನಾ ದೇಶೀಯರು ಬಹು ಕಾಲದಿಂದ ತಮ್ಮ ದೇಶದಲ್ಲಿ ಪಾಶ್ಚಾತ್ಯರು ನೆಲೆಗೊಳ್ಳುವುದಕ್ಕೆ ಅವಕಾಶವನ್ನು ಕೊಡುತ್ತಿರಲಿಲ್ಲ. ಈಗಲಾದರೋ ಅವರು ತಮ್ಮ ಅಭಿಪ್ರಾಯವನ್ನು ಬೇರೆ ಮಾಡಿದ್ದಾರೆಂದು ತೋರುವುದು. ಅವರು ಇತರ ದೇಶೀಯರ ಪದ್ಧತಿಗಳನ್ನೂ ಕಟ್ಟಳೆಗಳನ್ನೂ ನೋಡಿ ತಮ್ಮ ದೇಶಕ್ಕೂ ಪ್ರಯೋಜನವನ್ನುಂಟುಮಾಡಿಕೊಳ್ಳುವುದಕ್ಕಾರಂಭಿಸಿದ್ದಾರೆ. ಪ್ರಜಾಪ್ರತಿನಿಧಿಗಳಿಂದ ನಡೆಸಲ್ಪಡುವ ಸರ್ಕಾರಿ ಇಲಾಖೆಗಳನ್ನುಳ್ಳ ಬೇರೆ ಬೇರೆ ದೇಶಗಳ ಸ್ಥಿತಿಯನ್ನು ತಿಳಿದುಕೊಂಡು ಬರುವುದಕ್ಕಾಗಿ ಚೀನಾ ಸರ್ಕಾರದವರು ಕೆಲವು ಪ್ರತಿನಿಧಿಗಳನ್ನು ಕಳುಹಿಸುವವರಾಗಿದ್ದಾರೆ ಈ ಪ್ರತಿನಿಧಿಗಳು ರಾಜಮರ್ಯಾದೆಗಳೊಡನೆ ಹೊರಟು ಮೊದಲು ಜಪಾನ್ ರಾಜ್ಯವನ್ನು, ಆಮೇಲೆ ಪಸಿಫಿಕ್ ಸಾಗರವನ್ನು ದಾಟಿ ಅಮೇರಿಕ ದೇಶವನ್ನೂ, ಬಳಿಕ ಯೂರೋಪ್ ಖಂಡವನ್ನೂ ನೋಡಿಕೊಂಡು ಬರುವರು. ಇದಲ್ಲದೆ ಬರುವ ವರ್ಷದ ಆದಿಯಲ್ಲಿ ಚೀನಾ ಚಕ್ರವರ್ತಿನಿಯವರು ತಮ್ಮ ಪ್ರಜೆಗಳಿಗೆ ಒಂದು ಇಸ್ತಿಹಾರನ್ನು ಪ್ರಕಟಿಸುವವರಾಗಿದ್ದಾರೆ ಅದೇನೆಂದರೆ, ದೇಶದಲ್ಲಿ ಪಾರ್ಲಿಮೆಂಟೆಂಬ ಪ್ರತಿನಿಧಿ ಸಭೆಯು ಸ್ಥಾಪಿತವಾಗುವದು. ಆದರೆ ಆ ಸಭೆಯು ಕೂಡುವುದಕ್ಕೆ ೧೨ ವರ್ಷಗಳಾಗಬೇಕು. ಅದುವರೆಗೂ ಚೀನಾ ದೇಶೀಯರಾದ ವಿದ್ಯಾರ್ಥಿಗಳು ಸರ್ಕಾರದ ಖರ್ಚಿನಿಂದ ಪರದೇಶಗಳಿಗೆ ಹೋಗಿ ಅಲ್ಲಿನ ರಾಜ್ಯಭಾರ ಕ್ರಮಗಳನ್ನು ಕಲಿಯುತ್ತಿರುವರು ಹನ್ನೆರಡು ವರ್ಷಗಳಾದ ಮೇಲೆ ಅವರು ಸ್ವದೇಶಕ್ಕೆ ಬಂದು ದೇಶೀಯ ಪಾರ್ಲಿಮೆಂಟ್ ಸಭೆಯ ಕಾರ್ಯಗಳನ್ನು ಯಥೋಚಿತವಾಗಿ ನಡೆಸುವರು ಎಂಬುದೇ. ಈ ಸವಿಸ್ತಾರವಿನವರು ಪೀಕಿಂಗ್ ನಗರವನ್ನು ಬಿಟ್ಟು ಹೋಗುತ್ತಿರುವಾಗ ಅವರ ದೊಡ್ಡ ಗಾಡಿಯೊಳಗೆ ಡೈನಮೈಟ್ ಕಾಪಿ ಎಂಬ ಸಿಡಿಮದ್ದು [illegible] ಗಾಯವಾಯಿತು ಮದ್ದನ್ನು ಹಾಕಿದವನು ಸತ್ತೇ ಹೋದನು ಇಂಥಾ ಅನಾಹುತ ಸಂಭವಿಸಿದ್ದರಿಂದ ಅವರು ಈ ಪ್ರಯಾಣವನ್ನು ಸ್ವಲ್ಪದಲ್ಲಿ ನಿಲ್ಲಿಸಿದರೆಂದು ಗೊತ್ತಾಗಿದೆ

* * * * *

ಜಪಾನ್ ರಾಜಧಾನಿಯಾದ ಟೋಕಿಯೋ ಪಟ್ಟಣದ ಪ್ರಜೆಗಳು ರಷ್ಯಾ ಜಪಾನ್ ರಾಜ್ಯಗಳಿಗೆ ನಡೆದಿರುವ ಕರಾರನ್ನು ಕೇಳಿ ತುಂಬಾ ಅಸಮಾಧಾನಪಟ್ಟು ಬಹಳ ಗಲಭೆ ಮಾಡಿದರು. ರಾಜಧಾನಿಯ ಮ್ಯುನಿಸಿಪಲ್ ಕಮಿಷನರುಗಳು ಈ ಕರಾರಿನ ಕಲಮುಗಳು ಜಪಾನಿನವರಿಗೆ ತೃಪ್ತಿಕರವಾಗಿಲ್ಲವೆಂತಲೂ ಅದಕ್ಕೆ ಚಕ್ರವರ್ತಿಯವರು ಸಮ್ಮತಿಸಿ ರುಜು ಹಾಕಕೂಡದೆಂತಲೂ ಆಗ್ರಹಪಟ್ಟು ತೀರ್ಮಾನ ಮಾಡಿ ಚಕ್ರವರ್ತಿಯವರಿಗೆ ಅರಿಕೆ ಮಾಡಿಕೊಂಡರು. ಗವರ್ನಮೆಂಟಿನವರು ಹೆದರಿಕೊಂಡು ಐದು ವರ್ತಮಾನಪತ್ರಿಕೆಗಳನ್ನು ನಿಲ್ಲಿಸಿಬಿಟ್ಟರು. ಕಡೆಗಲ್ಲಿ ಒಬ್ಬರ್ ಕಾಟ್ಸುರಾ ಎಂಬ ಮಂತ್ರಿಯು ಒಂದು ದೊಡ್ಡ ಸಭೆಯನ್ನು ಕೂಡಿಸಿ, ಅದಕ್ಕೆ ನಿಮುಸ್ತ ಪ್ರಜೆಗಳನ್ನೂ ಮುಖ್ಯ ಮುಖ್ಯ ಅಧಿಕಾರಿಗಳನ್ನೂ, ವರ್ತಮಾನಪತ್ರಿಕೆಗಳ ಎಡಿಟರುಗಳನ್ನೂ ಕರೆಸಿಕೊಂಡು, ಕರಾರಿನ ಕಲಮುಗಳನ್ನೆಲ್ಲಾ ಸವಿಸ್ತಾರವಾಗಿ ತಿಳಿಸಿ, ಅವುಗಳ ಅಭಿಪ್ರಾಯವನ್ನೂ ಉದ್ದೇಶವನ್ನೂ ವಿವರಿಸಿದರು ಪ್ರಜೆಗಳು ಅಂದಿನಿಂದ ಸಮಾಧಾನಹೊಂದಿ ಗಲಭೆಮಾಡುವುದನ್ನು ನಿಲ್ಲಿಸಿ, ಚಕ್ರವರ್ತಿಯವರನ್ನೂ ಗವರ್ನಮೆಂಟಿನವರನ್ನೂ ಅನುಕೂಲವಾದ ಕರಾರು ಮಾಡಿಕೊಂಡಿದ್ದಾರೆಂದು ಹೊಗಳುವುದಕ್ಕಾರಂಭಿಸಿದರು

* * * *

ಈಗಿನ ವೈದ್ಯಶಾಸ್ತ್ರಗಳಲ್ಲಿ ಎಷ್ಟೋ ಕ್ರಮ ಚಿಕಿತ್ಸೆಗಳಿರುವುದಕ್ಕೆ ಒಂದು ದೃಷ್ಟಾಂತವನ್ನು ಅಮೇರಿಕ ದೇಶದ ಪತ್ರಿಕೆಯು ತಿಳಿಸುವುದು. ಹೇಗೆಂದರೆ—ಒಂದು ಆನೆಗೆ ಹಲ್ಲುನೋವು ಬಲವಾಗಿ ಕೆಲವು ಸಮಯಗಳಲ್ಲಿ ಬಹಳ ಕಷ್ಟಪಡುತ್ತಿತ್ತು. ಇದನ್ನು ಗುಣಮಾಡುವುದು ಹೇಗೆಂದು ಕೆಲವು ದಂತ ಡಾಕ್ಟರುಗಳು ಕೂಡಿ ಯೋಚಿಸಿ, ಕಡೆಗೆ ಆ ಆನೆಗೆ ಔಷಧಿಯನ್ನು ಕೊಟ್ಟು ಪ್ರಜ್ಞೆತಪ್ಪುವಂತೆ ಮಾಡಿ, ಅದನ್ನು ನೆಲದಮೇಲೆ ಬೀಳುವಂತೆ ಮಾಡಿ ಅದರ ಹಲ್ಲನ್ನು ಪರೀಕ್ಷಿಸಿದರು. ಹಲ್ಲು ತುಂಬಾ ಹುಳುಕಾಗಿತ್ತು. ಕೆಟ್ಟುಹೋಗಿದ್ದ ಭಾಗವನ್ನೆಲ್ಲಾ ಚೆನ್ನಾಗಿ ಉಜ್ಜಿ ತೆಗೆದು, ಹುಳುಗಳು ತಿಂದಿದ್ದ ಭಾಗಕ್ಕೆಲ್ಲಾ ಬಂಗಾರವನ್ನು ಕರಗಿಸಿ ತುಂಬಿ, ಹಲ್ಲು ಗಟ್ಟಿಯಾಗಿರುವಂತೆ ಮಾಡಿದರು. ಈ ಕೆಲಸಗಳನ್ನೆಲ್ಲಾ ಪೂರೈಸುವುದಕ್ಕೆ ಸುಮಾರು ೨೦ ನಿಮಿಷ ಹಿಡಿಯಿತು.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

27

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo

ಇದುಕಳೆದ ಜನವರಿ ತಿಂಗಳ ಪ್ರಜೆಂಟೇಷನ್ ವಾಚು.

1

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್‌ಕೋಫ ಪೇಟೆಂಟ್ ಲಿವರ್ ವಾಚು ಆರು ರತ್ನಗಳುಳ್ಳ ಓಪನ್ ಕೇಸ್

ಕೀಲೆಸ್ ಕಂಪೆನ್‌ಸೇಷನ್ ಬ್ಯಾಲೆನ್ಸ್ ಬಹು ಬಲಿಷ್ಟವಾದ ಗಡಿಯಾರ. ೫ ವರುಷ ಗ್ಯಾರಂಟೀ. ಕ್ರಯ ರೂ ೫—೮—೦. ಈ ವಾಚನ್ನು ಕಳೆದ ಜನವರಿ ಮಹೋತ್ಸವಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೧,೦೦೦ ವಾಚುಗಳು ಮುಗಿಯುವವರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಈಕೆಳಗೆ ಕಂಡ ಸಾಮಾನುಗಳಿಗೆ ಕ್ರಯವಿಲ್ಲದೆ ಪ್ರಜೆಂಟಾಗಿ ನಮ್ಮ ಕಂಪೆನಿಯಿಂದ ಕಳುಹಿಸುತ್ತೇವೆ. ಇದು ಮುಗಿದನಂತರ ಪ್ರಜೆಂಟೇಷನ್ ದೊರೆಯಲಾರದೆಂದು ಪ್ರಚಾರ ಪಡಿಸಿದ್ದ ಮೇರೆಗೆ ೯,೦೦೦ ವಾಚುಗಳು ಮುಗಿದು ಹೋದಾಗ್ಯೂ ಅನೇಕರ ಕೋರಿಕೆಯ ಮೇರೆಗೆ ಕಳೆದ ಜುಲೈ ಆಖೈರ್ ವರಿಗೆ ಬಹುಮತಿ ಸಹಿತ ಗಡಿಯಾರವನ್ನು ಕೊಡುತ್ತೇವೆಂದು ಸಮಾಧಿಸಿದ ಮೇರೆಗೆ ಜುಲೈ ಆಖೈರ್ ಆದಾಗ್ಯೂ ಅನೇಕ ದರಖಾಸ್ತುಗಳು ಬಂದಿರುವದರಿಂದಲೂ ನಮ್ಮ ಏಜಂಟರು ಇನ್ನೂ ಕೆಲವು ಕಾಲವವರಿಗೆ ಜಾರಿಯಲ್ಲಿ ತರಬೇಕೆಂದು ಕೋರಿದ್ದರಿಂದಲೂ ನಮ್ಮ ಹೆಡ್ಡಾಫೀಸಿನ ಅಪ್ಪಣೆಯ ಮೇರೆಗೆ ಪುನಃ ಬಹುಮತಿ ವಾಚು ಕೊಡಲ್ಪಡುತ್ತೆ. ಇದುವರೆಗೆ ವಾಚು ಬಹುಮತಿ ಪಡೆಯದೆ ಇರುವವರು ಜಾಗ್ರತೆ ದರಖಾಸ್ತು ಕಳುಹಿಸಿ ಬಹುಮಾನ ಸಮೇತ ವಾಚು ಪಡೆಯಿರಿ.

☞ ಈ ಕೆಳಗಣ ನಕ್ಷೆಯಲ್ಲಿ ತೋರಿಸಿ ಇರುವ ಪ್ರಜೆಂಟೇಷನ್ ಸಾಮಾನುಗಳು ಮೊದಲು ಕಳುಹಿಸಿದ ಸಾಮಾನಿಗಿಂತ ಮೇಲಾಗಿಯೂ ನಕ್ಷೆಗೆ ವ್ಯತ್ಯಾಸವಿಲ್ಲದೆಯೂ ಇರುತ್ತೆ.



ನಶ್ಯದ ಡಬ್ಬಿ ಇದು ಮೇಲಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು. ಕ್ರಯ, ೦—೮—೦



ಗಡಿಯಾರ ಸರಪಣಿ ಇದು ಮೇಲಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು ಇದರ ಕೊನೆಯಲ್ಲಿ ಸುಂದರವಾದ ಉತ್ತಮ ಬಿಲ್ಲೆ ಕಟ್ಟಲ್ಪಟ್ಟಿರುತ್ತೆ ಎಂದಿಗೂ ಕೆಡಲಾರದು. ಕ್ರಯ, ೦—೮—೦.



ಮುಳುಗು ಮಮನೆ ದೀಪ—ಇದು ಮೇಜದ ಮೇಲಿರಿಸುವದಕ್ಕೂ ಗೋಡೆಗೆ ತಗಲಿಸುವದಕ್ಕೂ ಲಾಯಕ್ಕಾದ್ದು ಎಣ್ಣೆಯು ಮೆಚ್ಚ ಆದನು ಸಾಕಾದಷ್ಟು ಬೆಳಕು. ಕ್ರಯ, ೦—೧೦—೦



ಶರಟ್ ಗುಂಡಿ—ಇದು ಮೇಲಾದ ಜರ್ಮನ್ ಸಿಲವರ್ ಬೆಳ್ಳಿಯಿಂದ ಹೊಸ ನಮೂನೆಯಾಗಿ ತಯಾರ್ಮಾಡಲ್ಪಟ್ಟದ್ದು. ರೂ ೦—೧೦—೦.



ಹಣದ ಪೆಟ್ಟಿಗೆ—ಇಂಗ್ಲಿಷ್ ಮೇಡ್ ಕ್ಯಾಷ್‌ಬಾಕ್ಸ್—ಹಣ ಆಭರಣ ಭದ್ರವಾಗಿ ಇರಿಸಬಹುದು. ಇದರೊಳಗೆ ಎರಡು ಖಾನೆಗಳುಳ್ಳ ೧ ಸಣ್ಣ ಪೆಟ್ಟಿಗೆ ಇದೆ ಭದ್ರವಾದ ಬೀಗದಕ್ಕೆ. ನೋಟಕ್ಕೆ ಸುಂದರವಾದದ್ದು ಕ್ರಯ ೦—೧೦—೦

ವಿಳಾಸ:—ಮ್ಯಾನೇಜರ್, ಫ್ಲಾರಿನ್ ವಾಚ್ ಕಂಪೆನಿ, ಪಾರ್ಕ್ ಟವನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೮—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ .. .. ರೂ. ೧—೧೪—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕಥಾಸಂಗ್ರಹ—ಮೊದಲನೆ ಭಾಗ.

21

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ಸುಡಿಯ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಮಾತಿನ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ ೧ ಪ್ರತಿಗೆ ಕ್ರಯ ೧ ರೂಪಾಯಿ. ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವಂಥಾ ಪುಸ್ತಕವ್ಯಾಪಾರಿಗಳಿಗೆ ಶೇಕಡ ೨೫ ರಂತೆ ಡಿಸ್ಕೌಂಟು ಸಿಕ್ಕುವುದು ಬೇಗ ಬರೆದು ತರಿಸಿಕೊಳ್ಳಿ. ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ. ಪಿ. ಮೂಲಕವೂ ಕಳುಹಿಸುತ್ತೆ. ವಿಳಾಸ —ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಜ್ವರಸುಧಾ.

15

ಇದನ್ನು ಓದಿ! ಚಿಕಿತ್ಸೆ!! ಗುಣ ನೋಡಿ!!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಿದ್ದಾರೆ. ಕೈಕಾಲು, ತಲೆನೋವು, ಆರತಲೆನೋವು, ಬೆನ್ನುಛಳ-ಛಳು ಕೈಕಾಲು ನೋವು ಮುಂತಾದವುಗಳನ್ನು ಜ್ಞಾನಾಮೃತನಂತೆ ದಿಗಂತಕ್ಕೆ ಹಾರಿಸಬಲ್ಲದು 'ಸುಧಾ' ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವು ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ. ಒಂದು ಶೀಸೆ ಔಷಧಿಯಲ್ಲಿ ಕಂಡುಬರುವ ಅಮೋಘಗುಣವನ್ನು ಬರೆದು ವರ್ಣನೆಮಾಡಿ ತೀರದು. ಶೀಸೆ ೧ಕ್ಕೆ ೦-೮-೦ ಪಾಸಲು ಬೇರೆ.

ಜೀವನಸುಧಾ—ಜ್ವರ ನಿಂತಕೆಂದು ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧಮಾಷ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ. ಶೀಸೆ ೧ಕ್ಕೆ ರೂಪಾಯಿ ೧—೦—೦.

ಶ್ರೀತಾಂಬೂಲ.—ದಿಗ್ವಿಖ್ಯಾತವಾದ ತಾಂಬೂಲ ಮಾತ್ರೆಗಳ ಶೀಸೆ ೧ಕ್ಕೆ ೪ ಆಣೆ ೬ ಶೀಸೆವರೆಗೆ ವಿ. ಪಿ. ಛಾರ್ಜು ೫ ಆಣೆ.

ದೇವನಹಳ್ಳಿ ಟವುನ್, ಬೆಂಗಳೂರು ಡಿಸ್ಟ್ರಿಕ್ಟ್. ಯಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

12

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮ॥ ಬಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨॥ ಯಂತೆ ಡಿಸ್ಕೌಂಟು ಕೊಡಲಾಗುವುದು. ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ:—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಮೈಸೂರು ಶೀಮೆಯಲ್ಲಿ ಪ್ಲೇಗಿನ ಸ್ಥಿತಿ

೨೨—೯—೧೯೦೫ ರಿಂದ ೨೮—೯—೧೯೦೫ ರ ವರೆಗೆ.

ಸ್ಥಳ.	ಪ್ಲೇಗ್ ಹಿಡಿದವು	ಪ್ಲೇಗ್ ಸತ್ತವು	ಹೋದವಾರ ಸಂಖ್ಯೆ	
ಬೆಂಗಳೂರು ಪಟ್ಟಣ	11	8	30	21
ಮೈಸೂರು "	0	0	50	31
ಬೆಂಗಳೂರು ಡಿಸ್ಟ್ರಿಕ್ಟು	[illegible]	78	196	141
ಮೈಸೂರು "	0	0	191	11
ಕೋಲಾರ್ "	2	0	61	[illegible]
ಕೋಲಾರ್ ಚಿನ್ನದ ಗಣಿಗಳು	9	7	23	[illegible]
ತುಂಕೂರು ಡಿಸ್ಟ್ರಿಕ್ಟು	11	9	38	[illegible]
ಹಾಸನ "	0	1	33	[illegible]
ಚಿತ್ರದುರ್ಗ "	0	0	190	10[illegible]
ಕಡೂರ್ "	26	13	240	[illegible]
ಶಿವಮೊಗ್ಗ "	7	4	154	[illegible]
ಒಟ್ಟು.	96	60	1155	730

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ಆಶ್ವೀಜ ಶುದ್ಧ ಚತುರ್ದಶಿ ಗುರುವಾರದಿಂದ ಆಶ್ವೀಜ ಬಹುಳ ಪಂಚಮಿ ಬುಧವಾರದ ವರೆಗೆ ಒಂದು ವಾರದ ಪಂಚಾಂಗ. ೧೯೦೫ ನೇ ಇಸವಿ ಅಕ್ಟೋಬರ್.

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ.	
12	ಗುರು ≻	ಚತುರ್ದಶಿ	15 55	ಉ ಭಾ	31 50	27
13	ಶುಕ್ರ *	ಪೌರ್ಣಮಿ	20 10	ರೇ	37 52	[illegible]
14	ಶನಿವಾ	ಪಾಡ್ಯ	25 18	ಅ	44 21	[illegible]
15	ರವಿವಾ ‡	ಬಿದಿಗೆ	30 05	ಭ	50-46	30
16	ಚಂದ್ರ	ತದಿಗೆ	35 17	ಕೃ	56 13	31
17	ಕುಜ ¶	ಚವತಿ	39-52	ರೋ	63 0	1
18	ಬುಧ	ಪಂಚಮಿ	13 10	ರೋ	1 56	2

≻ ಪೂರ್ಣಮಾತಿಥಿ, ಚಾಮರಾಜಮುಡಿಉತ್ಸವ.

* ಶೂನ್ಯತಿಥಿ, ಅಮೃತಸಿದ್ಧಿಯೋಗ

‡ ಶ್ರೀಚಾಮುಂಡೇಶ್ವರೀರಥೋತ್ಸವ

¶ ಸಂಕಷ್ಟಚತುರ್ಥಿ

ಪೇಟೆ ಧಾರಣೆ.

ವಿಷಯ	ಮೈಸೂರು.	ಬೆಂಗಳೂರು
ಕೆಂಪೇ ಅಕ್ಕಿ ಪಲ್ಲ ೧ಕ್ಕೆ	ರೂ. ೧೨—೮—೦	೧೨—೬[illegible]
ಸಂಬಾತಿ ಅಕ್ಕಿ ಉತಮ	೧೭—೪—೦	೧೨—೮—[illegible]
" ಮಧ್ಯಮ	೧೨—೦—೦	೧೧—೧೨[illegible]
ದಾಸಾಪ್ರಿ ಅಕ್ಕಿ	೧೨—೦—೦	೧೨—೮[illegible]
ಸಣ್ಣಕ್ಕಿ ಅವಲ್	೧೪—೦—೦	೧೪—೦[illegible]
" ಮಧ್ಯಮ	೧೩—೮—೦	೧೩—೦[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	೧೧—೦—೦	೧೧—೦[illegible]
" ಮಧ್ಯಮ	೧೦—೮—೦	೧೦—೮[illegible]
ಜೈರ್ ರಾಗಿ ಪಲ್ಲ ೧ಕ್ಕೆ	೬—೪—೦	೫—೦[illegible]
ಕಾರಾಗಿ	೬—೦—೦	೪—೧೨[illegible]
ಜೋಳ	೬—೦—೦	೬—೪[illegible]
ಬಲಸಂದೆ ಪಲ್ಲ ೧ಕ್ಕೆ	೧೦—೦—೦	೯—೮[illegible]
ಬಿಳೀ ಅವರೆ	೮—೧೨—೦	೯—೦[illegible]
ಹೆಸರು	೯—೧೨—೦	೧೦—೮[illegible]
ಉದ್ದು	೧೦—೦—೦	೯—೮[illegible]
ಕಡಲೆ	೧೦—೦—೦	೧೦—೦[illegible]
ಎಳ್ಳು	೧೬—೦—೦	೧೫—೦[illegible]
ಹುರುಳಿ	೧೮—೦—೦	೯—೪[illegible]
ಹರಳು ೧೨ ಸೇರಿಗೆ	೧೨—೮—೦	೧೨—೧೨
ಸೀಗೇಕಾಯಿ ಮಣ ೧ಕ್ಕೆ	೩—೮—೦	೩—೧೨[illegible]
ಮೆಣಸಿನಕಾಯಿ	೪—೮—೦	೪—೬[illegible]
" ಮಧ್ಯಮ	೩—೧೨—೦	೩—೧೨[illegible]
ಬೆಲ್ಲ ದೊಡ್ಡ ಅಚ್ಚು	೩—೪—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೪—೪—೦	೪—೪[illegible]
ಹರಳೆಣ್ಣೆ "	೫—೦—೦	೪—೪[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೧೦—೮—೦	೯—೧೨[illegible]
ಉಪ್ಪು "	೭—೦—೦	೬—೧೦[illegible]
ಮೆಣಸೇ ಹಣ್ಣು	೧—೦—೦	೦—೧೨[illegible]
" ಕಳೇದು	೦—೧೪—೦	೦—೧೦[illegible]
ಹುಣಸೆ	೧೨—೮—೦	೧೧—೧೨[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫—೦—೦	೪—೦[illegible]
ತೆಂಗಿನಕಾಯಿ ೧೦೦ ಕ್ಕೆ	೫—೦—೦	೪—[illegible]
ಅಳಲೇಕಾಯಿ ಮಣ ೧ಕ್ಕೆ	೧—೦—೦	೦—೧೦[illegible]
ಅಂತುವಳದಕಾಯಿ ಮಣ ೧ಕ್ಕೆ	೦—೧೪—೦	೦—೧೨[illegible]
ಚಿನ್ನ (ಪವನ್) ಕೆಂಪು	೧೫—೮—೦	೧೫—೬[illegible]
" " ಹಳದಿ	೧೫—೧೦—೦	೧೬—೬[illegible]
" " ಗಟ್ಟಿ ತೊಲ ೧ಕ್ಕೆ	೨೬—೦—೦	೨೪—೬[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩೨—೦—೦	೩೬—[illegible]

Printed and Published by the Rev. H. Spencer, BA the Proprietor and Manager, Wesleyan Mission Press Mysore. 12/10/1905.

ವೃತ್ತಾಂತ ಪತ್ರಿಕೆ.

REGISTERED No. 10

ಕ್ರಯ ೧ ಪುಷ್ಟ — ಕ್ರಯ ೧ ಪುಷ್ಟ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಅಕ್ಟೋಬರ್ ತಾರೀಖು ೧೯ ನೇ ಗುರುವಾರ. — ಸಂಚಿಕೆ ೭೦

ಸಚಿತ್ರವಿನೋದಿನಿ ಮಾಸಪತ್ರಿಕೆ.

ವಾರ್ಷಿಕಚಂದಾ ರೂ ೧—೮—೦

....ವಿನೋದಿನಿ ಎಂಬ ...ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹ ...

ಸತ್ಯದೀಪಿಕೆ. ೨೮ ೭ ೦೪

ವಿಳಾಸ—ಮ್ಯಾನೇಜರ್, ವಿನೋದಿನಿ ಆಫೀಸು, ಧಾರವಾಡ

"ಇಂಗ್ಲೀಷು ವೈದ್ಯ ಸಾರ"

ಕ್ರಯ ರೂ. ೧ ೮ ೦, ಅಂಚೆ ೨ ಆ, ವಿ. ಪಿ ೩ ಆಣೆ.

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು ... ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ... ಇವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ...ಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಾ...ವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳು...ಕ್ಕೆ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ ... ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡುವುದಕ್ಕೂ ಇದು ಬಹಳ ಸಹಾಯಕರವಾಗಿರುವುದು.

ವಿಳಾಸ—ಎಂ ಗುರುರಾವ್, ಆಸ್ಪತ್ರೆ ಅಸಿಸ್ಟೆಂಟ್, ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

...ಕೃಷಿ ವ್ಯವಸಾಯ ಮತ್ತು ಸಹಾಯಕ ಆಫೀಸು

[ಸ್ಥಾಪಿತವಾದದ್ದು ೧೯೦೩ರಲ್ಲಿ]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ...ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ...ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ...ಬಂಧವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (\) ತರಗತಿಗೆ ಸೇರಿದವರು ಪಡೆಯಬೇಕೆಂದಿರುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆ ... ದೂಪಾಯಿಯ ಪ್ರಕಾರ ಒಟ್ಟು ರೂ ೫೬ನ್ನು ...ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ...ರೀತಿಯಾಗಿ ನಡಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ...ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾ...ವು. ವ್ಯವಸಾಯ ನಿಮಿತ್ತವಾಗಿ ನಾವು \\ [ ]' ರೇಲ್ವೆ ...ಲ್ಲಿರುವ "ಕೊಲ್ಹಂ ಎಸ್ಟೇಟ್" ಎಂಬ ಸರ್ಕಾರದ್ದು ...ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿ...ವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ...ನ್ನು ತಂದುಕೊಂಡಿರುವದರಿಂದ ಪೈರಲು ಕಡಮೆಯಾಗುವ ...ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾ...ರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ...ದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂ...ಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ...ರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ...ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ...ಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ. ವಿವರವಾಗಿ ...ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾ...ಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ—The Manager, The India Agricultural and Helping Office, Vengurla Post, Bombay Presidency.

"ಒಕ್ಕಲತನವೂ ಒಕ್ಕಲಿಗನೂ." —ಪಕ್ಷಕ್ಕೊಂದು.

ಇದು ವ್ಯವಸಾಯ ವಿಷಯಗಳನ್ನು ತಿಳಿಸುವ ಪತ್ರಿಕೆ ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗಣಿ ಪೋಸ್ಟೇಜು ಸಹಿತ ರೂ. ೧—೮—೦. ರೈತರೇ, ಬೇಗ ತರಿಸಿ

ವಿಳಾಸ—ದಿ ಮ್ಯಾನೇಜರ್, ೧೦೯, ಸಿವಿಲ್ ಲೈನ್ಸ್, ಪೂನ.

ಯಸ್. ಆರ್. ವೆಂಕಟಸುಬ್ಬಾಚಾರ್ಯ, ಬಿ ಸುಜನೋದಯ ಗ್ರಂಥಾಲಯ, ಮೈಸೂರು.

ಮೆಟ್ರಿಕ್ಯುಲೇಷನ್ ಕನ್ನಡದ ೫ನೆ ಪುಸ್ತಕದ ನೋಟ್ಸು	೦—೪—೦
ಡಿಟೋ ,, ,, ೬ನೆ ಪುಸ್ತಕದ ನೋಟ್ಸು	೦—೪—೦
ಡಿಟೋ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಜ್ವರಹರಿ.

ಇದು ಸಾಧಾರಣ ಜ್ವರ, ಹಳೇಜ್ವರ, ಚಳಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಬಾಹಿರೇ ಬಿಳುತ್ತಿರು...ದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓ. ಮಂಕ ಪ್ರಾ ೯ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳಿಗೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಸೆಂಗನರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವಿವರ ಜ್ವರಹರಿ ಎಂಬ ಔಷಧದಂತೆಯೇ. ಸೀ...ಗಳಲ್ಲಿ ದೊರಕುವದು.

ಕಡಬದ ಅಸಿಸ್ಟಂಟ್ ಸರ್ಜನ್ ಗೋಪತಿಯವರು—ತಮ್ಮಿಂದ ... ಉದ್ಘಾರವನ್ನು ನಾನೂ ನನ್ನ ಕಾಬೇವಾರರೂ ಮ್ಯಾನಿಸಿ...ಪ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಗ್ರಾಮಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲವೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ—

ಪನ್ರಯಾಟಕ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೌತ್ ಇಂಡಿಯಾ ಬ್ರಾಂಚ್, ಮದರಾಸ್.

೧೯೦೬ನೇ ವರುಷದ ರಾಯಲ್ ಡೈರಿಗಳು.

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚಲನೆಗಳು, ವಾರಶೂಲೆ, ಟಪಾಲಿನ ನಿಬಂಧನೆಗಳು, ಸ್ಟಾಂಪು ಆಕ್ಟು, ರಿಜಿಸ್ಟರ್ ಫಿ, ಕೋರ್ಟು ಫಿ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೇಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಬಡ್ಡಿ ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ರಲ್ಲಿನ ಏಕಾದಶಿ, ಹುಣ್ಣಿಮೆ, ಅಮಾವಾಸ್ಯೆ, ಸಂಕ್ರಮಣ, ಗೌರೀಪಂಚಾಂಗ, ರೈಲ್ವೆ ಪಾರಸಲ್ ಛಾರ್ಜು, ಯುಗಾದಿ ವತ್ಸರಕ್ಕಾ... ಇನ್ನೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ

ನಂ ೧ ದೊಡ್ಡ ಸೈಜು ರೂಲು ಹಾಕಿದೆ ಕ್ರಯ	೦—೮—೬
,, ೨ ,, ,, ,, ಮುಚ್ಚಳ ಇರತಕ್ಕದ್ದು	೦—೧೦—೬
,, ೩ ಚಿಕ್ಕ ,, ,, ,, ,,	೦—೬—೬
,, ೪ ,, ,, ,, ,, ,,	೦—೪—೬

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ. ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ದೊರೆಯುತ್ತೆ.

ದಿ ಜನರಲ್ ಏಜನ್ಸಿ, ಮೈಸೂರು.

ಪೊಲೋಸಿಯಾ.

ಪಕ್ಷ ಪರಿಹಾರ

ತಗಲುತ್ತಲೇ ನೋವು ವಾಸಿ ಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಛತ್ರ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧವು ಇನ್ನೊಂದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತಕ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕ...ಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲು ವಾಯು, ಗುಳ್ಳೆಗಳು, ಹಲ್ಲುನೋವು, ಎದೆನೋವು, ಊತುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ. ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿದೆ. ಈ ರೂ. ೨—೮ ಆ. ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ.

ಹೋಮಿಯೋಪಥಿ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಪೋಲೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ... ದನ್ನು ಚರ್ಮವು ಬಹು ಬೇಗನೆ ಸೇವಿಸಿಕೊಳ್ಳುವಿಲ್ಲದು. ಸೀಸೆಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡುವದು. ೧೨ ಸೀಸೆ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪೋಸ್ಟರುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಪೊಲೋಸಿಯಾ ಕಂಪನಿ, ೨೩ ಸೆಕೆಂಡು ಬೀಚ್ ಲೈನ್, ಮದರಾಸು.

ವೃತ್ತಾಂತ ಪತ್ರಿಕೆ.

REGISTERED M. No.

ಕ್ರಯ ೧ ಮುದ್ದೆ — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಅಕ್ಟೋಬರ್ ತಾರೀಖು ೧೯ ನೇ ಗುರುವಾರ. — ಸಂಚಿಕೆ ೨೯

ಸಚಿತ್ರವಿನೋದಿನಿ ಮಾಸಪತ್ರಿಕೆ 1

ವಾರ್ಷಿಕ ಚಂದಾ ರೂ ೧—೮—೦

ವಿನೋದಿನಿ ಎಂಬ ... ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹ ...

ಸತ್ಯದೀಪಿಕೆ ೨೮ ೨ ೦೫

ವಿಳಾಸ —ಮ್ಯಾನೇಜರ್, ವಿನೋದಿನಿ ಆಫೀಸು, ಧಾರವಾಡ

ಇಂಗ್ಲೀಷು ವೈದ್ಯಸಾರ

ಕ್ರಯ ರೂ ೧ ೮ ೦ ಅಂಚೆ ... ೨ ಆಣೆ

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರಕೃತಿಯೊಂದು ವ್ಯಾಧಿ ಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ... ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ... ಇವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ...ಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ... ವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ, ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡುವದಕ್ಕೂ ಇದು ತುಂಬಾ ಸಹಾಯಕರವಾಗಿರುವುದು

ವಿಳಾಸ —ಎಂ ಗುರುರಾವ, ಆಸ್ಪತ್ರೆ ಅಸಿಸ್ಟೆಂಟ್, ತರೀಕೆರೆ, ಕಡೂರು ಡಿಸ್ಟ್ರಿಕ್ಟ್

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು

[ಸ್ಥಾಪಿತವಾದದ್ದು ೧೯೦೨ರಲ್ಲಿ]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಬಂಧುವರ್ಗಕ್ಕೆ ಸಹಾಯವು ಕೊಡಲ್ಪಡುವದು

ಈ ಆಫೀಸಿನ (\) ತರಗತಿಗೆ ಸೇರಿದವರು ಪಡೆಯಬೇಕೆಂದ ... ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ... ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೦ನ್ನು ... ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ... ರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು ವ್ಯವಸಾಯ ನಿಮಿತ್ತವಾಗಿ ನಾವು W I P ರೇಲ್ವೆ ... "ಕೆಲ್ಲಂ ಎಸ್ಟೇಟ್" ಎಂಬ ಸರ್ಕಾರದ ... ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದೆ ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ... ತಂದುಕೊಂಡಿರುವದರಿಂದ ಪೈರು ... ಭಯವೇ ಇಲ್ಲ

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರು ಮಾತ್ರ ಇದ್ದಾರೆ ಆದಾಯ ... ಭಾಗಿಗಳಾದ ... ಆದರೂ ಅವರ ಹಣಕ್ಕೆ ನಮ್ಮ ಭೂಮಿಯು ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ... ಚಂದಾದಾರನಿಗೆ ಆಫೀಸಿನಿಂದ ... ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ ವಿವರವಾಗಿ ... ಅಪೇಕ್ಷಿಸುವವರು ಅರ್ಧಾಣೆ ಸ್ಟ್ಯಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು

ವಿಳಾಸ —The Manager
The India Agricultural and Helping Office
Vengurla Post, Bombay Presidency

'ಒಕ್ಕಲತನವೂ ಒಕ್ಕಲಿಗನೂ' —ಪಕ್ಷಕ್ಕೊಂದು 10

ಇದು ಬೇಸಾಯಗಾರರಿಗತ್ಯವಶ್ಯಕವಾದ ಪತ್ರಿಕೆ ಕನ್ನಡದಲ್ಲಿ ಪ್ರತಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು ಇದರ ವಾರ್ಷಿಕ ವರ್ಗಣಿ ಪೋಸ್ಟೇಜು ಸಹಿತ ರೂ ೧—೮—೦ ರೈತರೇ, ಬೇಗ ತರಿಸಿ

ವಿಳಾಸ —ದಿ ಮ್ಯಾನೇಜರ್, ೧೯, ಸಿವಿಲ್ ಲೈನ್ಸ್, ಪೂನ

ಯಸ್ ಆರ್ ವೆಂಕಟರಾಮಯ್ಯ ... ಬಿ, ಸುಬೋಧ ಗ್ರಂಥಾಲಯ, ಮೈಸೂರು 11

ಮೆಟ್ರಿಕ್ಯುಲೇಷನ್ ಕನ್ನಡದ ೧ನೆ ಪುಸ್ತಕದ ನೋಟ್ಸು	೦—೪—೦
ಡಿಟೋ ,, ,, ೬ನೆ ಪುಸ್ತಕದ ನೋಟ್ಸು	೦—೪—೦
ಡಿಟೋ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೬
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಜ್ವರಹರಿ. 13

ಇದು ಸಾಧಾರಣ ಜ್ವರ, ಚಳೀಜ್ವರ, ವಿಷಮಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವುದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಾರಾಜ್ ... ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಗ್ರಾಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಗ್ರಾಸಿನ ಸೀಸೆಯನ್ನು ವಿ. ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುವರು

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ರಿಯಾಯಿತಿ ಬಿಡಲಾಗುವದು

****

ಓಮಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ್ಳು ನೋವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಸಕಲವ್ಯಾಧಿಗಳಲ್ಲಿ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಬದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ... ಕರ್ಪೂರವನ್ನು ನಾನೂ ನನ್ನ ಕಾರ್ಯನಿರ್ವಾಹಕರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿರುವರು.

ಈ ನಾಲ್ಕು ಔಷಧಗಳೂ ಮೈಸೂರು ಸೀಮೆಯಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಪಟ್ಟಣಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹನ್ರಿಯಸ್ ... ಔಷಧಗಳ ಕಂಪೆನಿ,
... ಸ್ಟ್ರೀಟ್, ಮದರಾಸ್.

೧೯೦೬ನೇ ವರುಷದ ರಾಯಲ್ ಡೈರಿಗಳು. 5

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ... , ವಾರಸೂಲೆ, ಟಪಾಲಿನ ಮತ್ತು ಮ್ಯುನಿಸಿಪಲ್ ವಿಷಯಗಳು, ಸ್ಟ್ಯಾಂಪು ಆಕ್ಟು, ರಿಜಿಸ್ಟರ್ ಫಿ, ಕೋರ್ಟು ಫಿ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ರಲ್ಲಿ ... ದಿನಗಳು ಮತ್ತು ವಿಶೇಷ ದಿವಸಗಳು ಮೇಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಬಡ್ಡಿ ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ರಲ್ಲಿನ ಏಕಾದಶಿ, ಪ್ರದೋಷ, ಅಮಾವಾಸ್ಯೆ, ಸಂಕ್ರಮಣ, ಗೌರಿ ಪಂಚಾಂಗ, ರೈಲ್ವೆ ಪಾರ್ಸಲ್ ಚಾರ್ಜು, ... ಇನ್ನೂ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ

ನಂ ೧ ದೊಡ್ಡ ಸೈಜು ರೂಲು ಹಾಕಿದೆ ಕ್ರಯ	೦—೮—೬
,, ೨ ,, ,, ,, ಮುಖ್ಯ ಇರತಕ್ಕನ್ನು	೦—೧೦—೬
,, ೩ ಚಿಕ್ಕ ,, ,, ,, ,,	೦—೬—೬
,, ೪ ,, ,, ,, ,, ,,	೦—೪—೬

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ ೩—೪ನೇ ನಂ ಡೈರಿಗಳು ಅಕ್ಟೋಬರು ೧೦ ರ ಒಳಗಾಗಿ ದೊರೆಯುತ್ತೆ

ದಿ ಜನರಲ್ ಏಜನ್ಸಿ, ಮೈಸೂರು

ಹೋಮೋಸಿಯಾ

ಕಷ್ಟ ಪರಿಹಾರ

ತಗಲುತ್ತಲೆ ನೋವು ವಾಸಿ ಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ... , ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಸಕಲ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ... ವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ಸರ ಹೊರಳುವದು, ಉಳುಕು, ಕೀಲು ವಾಯು, ಗುಳ್ಳೆಗಳು, ಹಲ್ಲುನೋವು, ಎದೆನೋವು, ಗಾಯಗಳು, ಗೆದ್ದೆಗಳು, ವ್ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ ೨—೮ ಆ , ಒಂದೇ ಸಲ ೬ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ಈ ರೂ ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮೋಸಿಯಾ ಯೆಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಹಮೋಸಿಯಾ ... ಇದನ್ನು ಹಚ್ಚಿಕೊಂಡು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ... ವನ್ನು ಹಮೋಸಿಯಾ ಬಹು ಬೇಗನೆ ಸೇದಿಕೊಳ್ಳುವುದಿಲ್ಲ. ಡಬ್ಬಿಗಳಲ್ಲಿ ... ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೬ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಪಟ್ಟಣಗಳಲ್ಲಿಯೂ ದೊರೆಯುವುದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಬೇಕಾದವರುಗಳಿಗೆ ... ಕಳುಹಿಸುವೆವು.

ವಿಳಾಸ —ಹೋಮೋಸಿಯಾ ಕಂಪೆನಿ, ೨೩ ... ಸ್ಟ್ರೀಟ್, ಮದರಾಸ್.

ಹೊಸ ಪುಸ್ತಕಗಳು.

1

ಒಬ್ಬ ಸಿಪಾಯಿಯ ಸಾಹಸಗಳು — "ಒಂದು ಎತ್ತು ಮತ್ತು ಕರು ಗುರುಗಂಬೆಗಳ ಸುದ್ದಿ." ಇದನ್ನು ಮುಟ್ಟಿದ ಮೊದಲು

ಮುಗಿಸುವವರೆವಿಗೂ ಮೇಲಕ್ಕೆ ಏಳುವ ರಸಿಕನೇ ಇಲ್ಲ. ಚಿತ್ರವಿಚಿತ್ರವಾದ ಸಾಹಸಗಳು ಚಮತ್ಕಾರವಾದ ಮಾತುಗಳು. ಸ್ಥಳಸಂಕೋಚದಿಂದ ಇಲ್ಲಿ ಸ್ವಲ್ಪಮಟ್ಟಿಗೂ ವಿವರಿಸಲಿಲ್ಲವಲ್ಲ. ಕ್ರಯ ೪ ಆಣೆ.

ಇಪ್ಪತ್ತನೆಯ ಶತಮಾನದ ಇರುಳು —ನಿಮ್ಮ ಗಡಿಯಾರದ ಜೋಬಿನ ಸ್ಪಜ್ ನೀವೆ ಹೋದ ಕಡೆಯಲ್ಲಾ ಗಡಿಯಾರದ ಜೊತೆಯಲ್ಲಿ ನಾನೂ ಬರುವೆನೆನ್ನುವದು. "ಪ್ರಪಂಚಕ್ಕೆ ಅಪ್ಪವನ್ನುಂಟುಮಾಡುವ ತಿಳುವಳಿಕೆಗಿಂತಲೂ ಅಜ್ಞಾನವೇ ಶ್ರೇಯಸ್ಕರವಲ್ಲವೆ ?" ಎಂಬುದೆ ಇದರ ಸಾರಾಂಶ ಕ್ರಯ ೨ ಆಣೆ.

ವಿಳಾಸ —ಬಿ. ಆರ್. ಗೋವಿಂದರಾಜುಲು,

೧೩೮ ಅರಳೇಪೇಟೆ, ಬೆಂಗಳೂರು ಸಿಟಿ

ಚೇಂಬರ್ಲೆನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.

11

ಶೀತ, ಕೆಮ್ಮು, ಗಂಟಲು ಗೂರಲು ಇವೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಔಷಧವು ಬಹು ಪ್ರಯೋಜನಕಾರಿಯಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ, ಜಾಗ್ರತೆಯಿಂದಲೂ ಸಂಪೂರ್ಣ ಗುಣ ಕೊಡುವದು. ಶೀತಹಿಡಿದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಲಕ್ಷ್ಯ ಮಾಡದೆಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು, ಎದೆಯು ಒಣಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತೆ. ಹೊತ್ತೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ಒಕ್ಕೆ ೧ ರೂ, ೨ ರೂ. ಈ ಔಷಧವು ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಈ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುತ್ತೆ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮವುಂಟ್ ರೋಡ್,

ಮದರಾಸ್.

SREEMADACHARYA SUKTI MUKTAVALI

ಶ್ರೀಮದಾಚಾರ್ಯಸೂಕ್ತಿ ಮುಕ್ತಾವಲೀ.

ಈ ಹೆಸರಿನಿಂದ ಪ್ರತಿ ತಿಂಗಳಲ್ಲಿಯೂ ಒಂದು ಸಂಚಿಕೆಯು ಪ್ರಕಟಿಸಲ್ಪಡುವುದು. ಇದರಲ್ಲಿ ಶ್ರೀರಾಮಾನುಜಸಿದ್ಧಾಂತ ಸ್ಥಾಪಕರಾದ ಪೂರ್ವಾಚಾರ್ಯರುಗಳು ಮಾಡಿರುವ ಸ್ತೋತ್ರ, ದ್ರಾವಿಡಪ್ರಬಂಧ, ಗ್ರಂಥಗಳಿಗೆ ಕನ್ನಡದಲ್ಲಿ ಪ್ರತಿಪದ ಟೀಕಾ ತಾತ್ಪರ್ಯಗಳು ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಾಗಿ ಬರೆದು ಮುದ್ರಿಸಲ್ಪಡುವವು. ಶ್ರೀವಿಷ್ಣುಸಹಸ್ರನಾಮಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತ ಭಾಷ್ಯಗಳೂ ಕನ್ನಡದಲ್ಲಿ ತರ್ಜುಮೆಮಾಡಿ ಮುದ್ರಿಸಲ್ಪಡುವವು. ಈ ಸಂಪೂರ್ಣ ಗ್ರಂಥಕ್ಕೆ ಪೋಸ್ಟೇಜು ದೇಖೀಲ್ ರು. ೭ , ಶ್ರೀಮದಾಚಾರ್ಯಸೂಕ್ತಿ ಮುಕ್ತಾವಲೀ ಸಾಂವತ್ಸರಿಕ ಚಂದಾ ಪೋಸ್ಟು ಚಾರ್ಜು ಸಹಿತ ರೂ ೧ ೧೪.

ಇದರ ವಿಶೇಷ ವಿವರಗಳನ್ನು ತಿಳಿಯಬೇಕೆಂದಪೇಕ್ಷಿಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆಯಬೇಕು

ತೂಪ್ಪಲ್ ವೆಂಕಟಾಚಾರ್ಯರು,

ತುಳಸೀ ತೋಟ, ಬೆಂಗಳೂರು ಸಿಟಿ

ತ್ವರೆಮಾಡಿರಿ ! ತ್ವರೆಮಾಡಿರಿ !!

ಒಮ್ಮೆ ಅನುಭವ ತೆಗೆದುಕೊಂಡು ನೋಡಿರಿ

ಅಲಭ್ಯಲಾಭ

ಪೇಟೆಂಟು ರಾಸ್ಕೋಪ್ ಸಿಸ್ಟಂ ಲೀವರ ವಾಚುಗಳು

ಈ ವಾಚ್‌ಗಳು ಬಹಳ ಮಜಬೂತ ಇದ್ದು ವರ್ಷಗಟ್ಟಲೆ ಬಾಳುವು ಬರುತ್ತವೆ. ಪ್ರತಿ ಒಂದು ಪ್ರೋಚಿನ ಕಿಮ್ಮತು ರೂ ೪, ರೂ. ೫, ರೂ ೬ ಇದ್ದು ಇವುಗಳಿಗೆ ಕ್ರಮವಾಗಿ ೪ ೫, ೭ ವರ್ಷ ಗ್ಯಾರಂಟಿ ಇರುತ್ತದೆ. ಇದರ ಜೊತೆಗೆ ಪ್ರೈಸ್ ಕಟ್ಟುವ ಲೇಡಿ ವಾಚ್‌ಗಳೂ, ೩॥ ಮತ್ತು ೩ ರೂ ಕಿಮ್ಮತ್ತಿನ (ಬಿ) ಟಯ್ಮಪೀಸುಗಳೂ, ೧। ರೂ ೨॥ ರೂ ಕಿಮ್ಮತ್ತಿನ ಖರೆ ಬೆಳ್ಳಿಯ ಪಾಕಿಟು ಸರಪಳಿಗಳೂ, ೪, ೭, ೮ ಆಣೆಯ ಜರ್ಮನಸಿಲ್ವರ ಸರಪಳಿಗಳೂ, ೩ ಆಣೆ ಕಿಮ್ಮತ್ತಿನ ಖರೇ ರೇಶ್ಮೆಯ ಸೋಪುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಇಂಚನೆ ಮೇಲೆ ಹೇಳಿದ ಯಾವದೇ ವಾಚ್‌ಗಳು ಒಮ್ಮೆಗಲೇ ೩ ತೆಕ್ಕೊಂಡರೆ (ಬಿ) ಟಾಯ್ಮಪೀಸ ಒಂದು ಇನಾಮು, ಮತ್ತು ೬ ತೆಕ್ಕೊಂಡರೆ ಒಂದು ವಾಚ ಇನಾಮು ಸಿಗುವದು

ವಿಳಾಸ —ಆರ್ ವಿ ಷ್ಣೈ, ವಾಚ್ ಮರ್ಚಂಟ್,

ಪೋಸ್ಟ್ ಅಂಕೋಲಾ, ಜಿಲ್ಲಾ ಉ ಕಾನಡಾ

ವೃತ್ತಾಂತ ಪತ್ರಿಕೆ.

ಸ ೧೯೦೫ನೇ ಇಸವಿ ಅಕ್ಟೋಬರ್ ತಾ॥ ೧೯ನೇ ಗುರುವಾರ

ಮತವನ್ನು ಬದಲಾಯಿಸುವವನೂ ಅವನ ಹಕ್ಕು ಬಾಧ್ಯತೆಗಳೂ

ಒಂದು ಮತವನ್ನು ಬಿಟ್ಟು ಇನ್ನೊಂದು ಮತವನ್ನವಲಂಬಿಸುವ ಮನುಷ್ಯನಿಗೆ ಅವನ ಪಿತ್ರಾರ್ಜಿತದ ಆಸ್ತಿಯಲ್ಲಿ ಪಾಲು ಕೊಡಬೇಕೆಂದಲೂ ಅವನ ಮಕ್ಕಳ ಪೋಷಣೆಯೂ ಅವನಿಗೇ ಸೇರತಕ್ಕದೆಂತಲೂ ನಾವು ಬಹು ಕಾಲದಿಂದಲೂ ಹೊಡೆದಾಡುತ್ತಿರುವುವನ್ನು ನಮ್ಮ ವಾಚಕರು ತಿಳಿದೇ ಇರುವರು. ಈ ದೇಶದಲ್ಲಿ ಸರ್ವಸಾಮಾನ್ಯವಾಗಿ ಹಿಂದುಗಳು ಮುಸಲ್ಮಾನ ಅಥವಾ ಕ್ರೈಸ್ತ ಮತವನ್ನು ಅವಲಂಬಿಸುತ್ತಾರೆ. ಇಂಥಾ ಮತಾವಲಂಬಿಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ಕಳಕೊಳ್ಳುವುದು ನ್ಯಾಯವಲ್ಲವೆಂಬುವನ್ನು ನಮ್ಮ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಒಪ್ಪಿ, ಅವುಗಳನ್ನು ಕಾಪಾಡುವದಕ್ಕಾಗಿ ಒಂದು ಮಸೂದೆ ರೆಗ್ಯುಲೇಷನ್ ಮಾಡಿದ್ದಾರೆ. ಇದನ್ನು ಈ ಪತ್ರಿಕೆಯು ಇನ್ನೊಂದು ಕಡೆ ಪ್ರಕಟಿಸಿರುವೆವು. ಈ ವಿಷಯಕ್ಕೆ ಸಂಬಂಧಪಟ್ಟವರೆಲ್ಲರೂ ತಮ್ಮ ಅಭಿಪ್ರಾಯಗಳನ್ನು ಇನ್ನು ಎರಡು ತಿಂಗಳೊಳಗಾಗಿ ಬರೆದು ಗವರ್ನಮೆಂಟು ಜನರಲ ಮತ್ತು ರೆವಿನ್ಯೂ ಸೆಕ್ರೆಟರಿ ಮಿ॥ ಪಿ ಕೆ ವೆಂಕಟವರದಯ್ಯಂಗಾರ್ರಿಗೆ ಕಳುಹಿಸಬೇಕೆಂದು ಕೇಳಿದ್ದಾರೆ. ನಾವಾದರೋ ಈ ಮಸೂದೆಯಲ್ಲಿ ವಿಶೇಷ ಬದಲಾವಣೆಗಳೇನೂ ಇಲ್ಲದೆ ಸ್ವಲ್ಪ ಹೆಚ್ಚು ಕಡಿಮೆ ಆದರಂತೆಯೇ ಕಾನೂನು ಆಗಿ ಜಾರಿಯಾಗುವುದೆಂದು ನಿರೀಕ್ಷಿಸುವೆವು. ಯಾಕಂದರೆ ಬದಲಾವಣೆಯಾಗಬೇಕಾದ ಭಾಗಗಳ್ಯಾವೂ ವಿಶೇಷವಿಲ್ಲವೆಂದು ಹೇಳಬಹುದು. ಈ ಮಸೂದೆಯ ಎರಡು ಮುಖ್ಯ ಭಾಗಗಳು ಏನೆಂದರೆ, (೧) ಒಬ್ಬನು ಒಂದು ಮತ ಅಥವಾ ಜಾತಿಯನ್ನು ಬಿಟ್ಟುಬಿಡುವದರಿಂದ ತನ್ನ ಹಕ್ಕು ಬಾಧ್ಯತೆಗಳನ್ನು ಕಳಕೊಳ್ಳುವದಿಲ್ಲ (೨) ಮದುವೆ ಮನುಷ್ಯನೂ ಜಾತಿ ಮತ ಬದಲಾವಣೆಯಿಂದ ಇನ್ನೊಬ್ಬನ ವಿಷಯದಲ್ಲಿ ತನ್ನ ಹಕ್ಕು ಬಾಧ್ಯತೆಯನ್ನು ಕಳಕೊಳ್ಳುವದಿಲ್ಲ ಎಂಬಿವೇ. ಇದೂ ಅಲ್ಲದೆ ದಾನಸಿಗಾದರೂ ತಾಸಿಪ್ಪ ಮತ ಅಥವಾ ಜಾತಿಯಲ್ಲಿ ಮಾತ್ರವೇ ಆತನಿಗೆ ಬರಬಹುದಾಗುತ್ತಿದ್ದ ಯಾವ ಹಕ್ಕು ಬಾಧ್ಯತೆಗಳೂ ಅಂದಾ ಜಾತಿ ಅಥವಾ ಮತವನ್ನು ಬಿಟ್ಟುಹೋದ ಮೇಲೆ ದೊರೆಯದೆ ಇರುವದಕ್ಕೆ ಈ ಮಸೂದೆಯಲ್ಲಿ ಕಂಡ ಮೊದಲನೆಯ ಭಾಗವು ಬದಲಾವಣೆ ಮಾಡಲ್ಪಟ್ಟಿರುವ ತಾತ್ಪರ್ಯವಾಗಿದೆ ಎಂದು ಅಭಿಪ್ರಾಯಪಡುತ್ತೇವೆ. ಮತಾಂತರವನ್ನು ಅವಲಂಬಿಸುವವನಿಗೆ ಹಕ್ಕು ಬಾಧ್ಯತೆಗಳು ಲಭಿಸುವಂತೆ ಇಲ್ಲ. ಈ ಮಸೂದೆಯು ಬರುವ ಪ್ರಕಾರದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗುವದು. ಒಬ್ಬನು ಮತಾಂತರವನ್ನು ಹೊಂದಿದರೆ ಅದರಿಂದ ಪರರ ಹಕ್ಕು ಬಾಧ್ಯತೆಗಳಿಗೆ ಬಾಧಕವೇನಾದರೂ ಆಗುವದಿಲ್ಲವೇನು? ಸಾಮಾನ್ಯವಾಗಿ ಸಮಾಜದವರೇ ಹೇಳುವದು. ಆದರೆ ಅಂಥವನ ಚಿಕ್ಕಮಕ್ಕಳ ಪೋಷಣೆ ಜವಾಬ್ದಾರಿ ಯಾರದೆಂಬುದರಲ್ಲಿ ವಿವಾದವಿದೆ. ಈ ಮಸೂದೆಯನ್ನು ನೋಡಿದರೆ ಮತಾಂತರವನ್ನು ಅವಲಂಬಿಸುವವನಿಗೆ ತನ್ನ ಮಕ್ಕಳ ಮೇಲೆ ಯಾವ ಹಕ್ಕನ್ನು ನಡಸಬೇಕಾಗಿದೆಯೆಂತೆ ಒತ್ತಿ ಹೇಳಿದೆ. ಮತಾಂತರವನ್ನು ಹೊಂದಿದವನು ಇತರರಂತೆ ಪಿತ್ರಾರ್ಜಿತದ ಆಸ್ತಿಯಲ್ಲಿ ಪಾಲು ಪಡೆಯಬಹುದಾದ ಹಕ್ಕಿನಲ್ಲಿ ಅಂಥವನು ತನ್ನ ಮಕ್ಕಳ ಪೋಷಣೆಯನ್ನೂ ಮಾಡಿ ಮಾಡಿಕೊಳ್ಳಬಹುದು. ಆದರೂ ಇಷ್ಟು ಮೈಸೂರು ಸರ್ಕಾರದವರು ಯಥಾರ್ಥತೆಯನ್ನು ತೋರಿಸಿರುವುದಕ್ಕಾಗಿ ನಾವು ತುಂಬಾ ಕೃತಜ್ಞರಾಗಿದ್ದೇವೆ. ಅಂತು ಮತಾಂತರವನ್ನು ಹೊಂದುವವರಿಗೆ ಅವರ ಸಮಸ್ತ ಹಕ್ಕು ಬಾಧ್ಯತೆಗಳೂ ಸಂಪೂರ್ಣವಾಗಿ ಲಭಿಸುವುದು ಬಹು ಬೇಗ ಕಾನೂನಾಗಿ ಜಾರಿಯಾಗುವದೆಂದು ನಂಬುವೆವು.

ಹುಟ್ಟುಕುರುಡನು

"ಒಂದಾನೊಂದು ದಿನ ಯೇಸುಸ್ವಾಮಿಯು ಹಾದುಹೋಗುತ್ತಿರಲಾಗಿ ಒಬ್ಬ ಹುಟ್ಟುಕುರುಡನನ್ನು ಕಂಡನು. ಆತನ ಶಿಷ್ಯರು— ಗುರುವೇ, ಇವನು ಕುರುಡನಾಗಿ ಹುಟ್ಟಿರುವದಕ್ಕೆ ಯಾರು ಪಾಪ ಮಾಡಿದರು ? ಇವನೋ ? ಇವನ ತಂದೆತಾಯಿಗಳೋ ? ಎಂದು ಆತನನ್ನು ಕೇಳಿದ್ದಕ್ಕೆ ಯೇಸು—ಇವನೂ ಪಾಪಮಾಡಲಿಲ್ಲ, ಇವನ ತಂದೆತಾಯಿಗಳೂ ಪಾಪಮಾಡಲಿಲ್ಲ ? ಆದರೆ ದೇವರ ಕ್ರಿಯೆಗಳು ಇವನಲ್ಲಿ ತೋರಿಬರುವದಕ್ಕೆ ಇದಾಯಿತು ಎಂದನು "—ಯೋ॥ ೯ ೧—೩

ಯೇಸುಸ್ವಾಮಿಯ ಕಾಲದಲ್ಲಿದ್ದ ಯೆಹೂದ್ಯರೂ ಜನ್ಮಾಂತರವೆಂಬ ಬೋಧನೆಯನ್ನು ನಂಬಿದ್ದರೆಂದು ಈ ವೃತ್ತಾಂತವನ್ನು ಓದಿದ ನಮ್ಮ ಜನಗಳು ಸಾಧಾರಣವಾಗಿ ಹೇಳುವದುಂಟು. ಈ ನಂಬಿಕೆಯು ಆ ಯೆಹೂದ್ಯರಲ್ಲಿ ಇದ್ದರೂ ಇರಬಹುದು. ಹೇಗೆಂದರೆ ಮಹಾ ಅಲೆಕ್ಸಾಂಡರನೆಂಬ ಗ್ರೀಕ್ ಜಯಶಾಲಿಯ ಕಾಲದಿಂದೀಚೆಗೆ ಗ್ರೀಕಗ್ರಂಥ ಪಠನವು ಯೆಹೂದ್ಯರಲ್ಲಿ ಹೆಚ್ಚಿ ಮತ್ತು ಗ್ರೀಕರ ತತ್ವಶಾಸ್ತ್ರದಲ್ಲಿ ಇದಕ್ಕೆ ಹಿಂದೆ ಸವಾರು ಶತಮಾನಗಳಿಂದಲೂ ಜನ್ಮಾಂತರವೆಂಬ ಬೋಧನೆಯು ಅಧಿಕವಾಗಿತ್ತೆಂದು ತಿಳಿಯಬರುತ್ತದೆ. ಸುಮಾರು ಕ್ರಿ ಪೂ ೧೫೦ ಬರೆಯಲ್ಪಟ್ಟ ಜ್ಞಾನಗ್ರಂಥನೆಂಬ ಒಂದು ಯೆಹೂದ್ಯರ ಗ್ರಂಥದಲ್ಲಿ—"ಒಳ್ಳೆಯವನಾಗಿದ್ದದರಿಂದ ಪವಿತ್ರದೇಹದಲ್ಲಿ ಬಂದೆ" ಎಂದು ಬರೆದಿದೆ. ಈ ವಚನವು ಮೇಲೆ ಉದಾಹರಿಸಿರುವ ವಚನ ಇವೆರಡು ವಚನಗಳ ಹೊರತು ಜನ್ಮಾಂತರವನ್ನು ಸೂಚಿಸುವ ಬೇರೆ ಯಾವ ವಾಕ್ಯವಾಗಲಿ ಯೆಹೂದ್ಯರ ಬೇರೆ ಯಾವ ಗ್ರಂಥದಲ್ಲಾದರೂ ಕಾಣಬರುವದಿಲ್ಲವೆಂದು ಚನ್ನಾಗಿ ತಿಳಿದವರು ಹೇಳುತ್ತಾರೆ. ಏನು ಹ್ಯಾಗಾದರೂ ಇರಲಿ ಯೆಹೂದ್ಯರಲ್ಲಿದ್ದ ಬೇರೆ ಬೇರೆ ಅಭಿಪ್ರಾಯವು ಮೇಲೆ ಉದಾಹರಿಸಲ್ಪಟ್ಟಿರುವ ಎರಡು ವಚನಗಳ ಅಭಿಪ್ರಾಯಕ್ಕೆ ಒಪ್ಪುತ್ತದೆ. ಅದೇನಂದರೆ—ಕೂಸು ತಾಯಿಯ ಗರ್ಭದಲ್ಲಿರುವಾಗಲೂ ಪಾಪವನ್ನು ಮಾಡಬಹುದೆಂಬುದೇ. ಸಂದೇಹ ಸರಿಯಲ್ಲವೋ ಆದರಲಿ ಮುಖ್ಯವಾಗಿ ಈ ಅಭಿಪ್ರಾಯವು ಯೆಹೂದ್ಯರಲ್ಲಿದ್ದದರಿಂದಲೆ ಮೇಲಣ ವಾಕ್ಯಗಳಲ್ಲಿ ಸೂಚಿಸಲ್ಪಟ್ಟ ವಂತೆ ಆ ಜನರು ಕೇಳುವದಕ್ಕೆ ಅಸ್ಪದವಾಯಿತೆಂಬುದರಲ್ಲಿ ಸಂದೇಹವಿಲ್ಲ. ಕ್ರಿಸ್ತನ ಕಾಲದ ತಲ್ಮೂದಿಯವಾದರೋ ಯೆಹೂದ್ಯ ಶಾಸ್ತ್ರಿಗಳು ಜನ್ಮಾಂತರ ಬೋಧನೆಯನ್ನು ನಂಬಿದ್ದರೆಂಬುದಕ್ಕೆ ಅವರಲ್ಲಿ ಸೂಚನೆಯಿಲ್ಲ.

ಮತ್ತಾಯ ೧೬ ೧೩—೧೪ ರಲ್ಲಿ ಸ್ನಾನಿಕನಾದ ಯೋಹಾನನು ಭೂಲೋಕಕ್ಕೆ ಬಂದು ಹೋದ ಎಲೀಯನೇ ಎಂದು ಯೇಸುಸ್ವಾಮಿಯು ಹೇಳಿದ ಮಾತನ್ನು ಇನ್ನು ಕೆಲವರು ತೋರಿಸಿ, ಅಲ್ಲಿಯೂ ಜನ್ಮಾಂತರ ವಿಷಯವನ್ನು ಸೂಚಿಸಿದೆಯೆಂದು ಹೇಳುವರು. ಆದರೆ ನಿಜ ಅದು ಹಾಗಲ್ಲ. ಸ್ನಾನಿಕನಾದ ಯೋಹಾನನು ಎಲೀಯನಾಗಿದ್ದನೆಂಬ ವಿಷಯವು ಲೂಕ ೧ ೧೭ ರಲ್ಲಿ ವಿವರವಾಗಿ ತಿಳಿಸಿದೆ. ಇದಲ್ಲದೆ ಆ ಯೋಹಾನನು ನಿಜವಾಗಿ ಎಲೀಯನಾಗಿದ್ದರೆ ಅವನೂ ಮೋಶೆಯೂ ಬೆಟ್ಟದ ಮೇಲೆ ಯೇಸು ಸ್ವಾಮಿಯು ಪ್ರಕಾಶರೂಪವನ್ನು ಧರಿಸಿದ ಕಾಲದಲ್ಲಿ ಪುನಃ ಕಾಣಬರಲಿಲ್ಲ. ಇಷ್ಟೇ ಅಲ್ಲ ಯೇಸು ಸ್ವಾಮಿಯನ್ನು ನೋಡಿದವರು—ಈತನು ಯೋಹಾನನೋ ಎಲೀಯನೋ ಯೆರೆಮೀಯನು ಇಲ್ಲವೆ ಪುರಾತನ ಪ್ರವಾದಿಗಳಲ್ಲಿ ಒಬ್ಬನೋ ಎಂದು ಅನ್ನುತ್ತಿದ್ದರು (ಮತ್ತಾಯ ೧೬ ೧೪) ಜನ್ಮಾಂತರ ವಿಷಯವು ಸ್ಪಷ್ಟವಾಗುತ್ತದೆಂದು ಊಹಿಸಬಹುದು. ಆದರೆ ಆ ಪುರಾತನ ಪುರುಷರು ಯೇಸುವಿನ ಶರೀರದಲ್ಲಿ ಪ್ರತ್ಯಕ್ಷರಾದರೆಂದು ಯೆಹೂದ್ಯರು ಹೇಳಲಿಲ್ಲ. ಆದರೆ ಅವರಲ್ಲೊಬ್ಬನು ತನ್ನ ದೇಹದಲ್ಲೇ ಹಾಗೆ ಸಿಕ್ಕಿಬಿದ್ದಾನೆಂದು ಯೋಚಿಸಿದರು. ಈ ವಚನೆಲ್ಲಾ ಹಾಗೆ ಜನ್ಮಾಂತರ ಬೋಧನೆಯನ್ನೇ ಯೇಸು ಸ್ವಾಮಿಯು ನಿಷೇಧಿಸಿದ ವಿಷಯವು ನಾವು ಮೇಲೆ ಉದಾಹರಿಸಿರುವ ವಾಕ್ಯದಿಂದ ಸ್ಥಾಪಿತವಾಗುತ್ತದೆ. ಹ್ಯಾಗಂದರೆ "ಇವನೂ ಪಾಪಮಾಡಲಿಲ್ಲ ಇವನ ತಂದೆತಾಯಿಗಳೂ ಪಾಪಮಾಡಲಿಲ್ಲ" ಎಂದು ಸ್ವಾಮಿ ನಿಸ್ಸಂದೇಹವಾಗಿ ಹೇಳಿದ್ದಾನೆ.

ಸತ್ಯವೇದದಲ್ಲಿ ಮಕ್ಕಳ ವಿಷಯವಾಗಿ ಹೇಳಿರುವ ಬೋಧನೆ ಏನಂದರೆ—ಅವರು ಹುಟ್ಟುವದಕ್ಕೆ ಮುಂಚೆ ಒಳ್ಳೇದನ್ನಾಗಲಿ ಕೆಟ್ಟದ್ದನ್ನಾಗಲಿ ಮಾಡಿರುವದಿಲ್ಲ (ರೋಮ್ ೯. ೧೧) ಅವರ ದೇಹಗಳು ಈ ಲೋಕದಲ್ಲಿ ಪೂರ್ವದಿಂದಲೂ ಸ್ಥಾಪಿತವಾಗಿರುವ ಸೃಷ್ಟಿಕ್ರಮಕ್ಕೆ ಒಳಪಟ್ಟಿರುತ್ತವೆ. ಈ ಕ್ರಮದ ಕಾರಣಕ್ಕೆ ಫಲವಾಗಿ ರೋಗ ಹೀನತೆವಾದ ದೇಹವು ಶ್ರಮೆಗಳಿಗೆ ಒಳಗಾಗುವದು ಸ್ವಭಾವವಾಗಿದೆ (ರೋಮ್ ೫ ೧೨) ಈ ಕ್ರಮ ಯಾವ ಪ್ರಕಾರ ನಡೆದಿರುವದನ್ನು ಕೆಲವು ಸಂದರ್ಭಗಳಲ್ಲಿ ಗೊತ್ತು ಮಾಡಬಹುದು ಕೆಲವು ಸಂದರ್ಭಗಳಲ್ಲಿ ಗೊತ್ತುಮಾಡುವದಕ್ಕಾಗುವದಿಲ್ಲ. ಕೇವಲ ವಿಷಯಭೋಗಿಯಾದ ಮನುಷ್ಯನ ದೇಹವು

...ಗಿರುವದರಿಂದ ಅವನಿಂದ ಉತ್ಪನ್ನವಾದ ಶಿಖಾಧಿ ಸಹ ಪುರುಷ ...ಗಬಹುದಾಗಿಯೇ ಹ್ಯಾವದು ಅವನ ಪಾಪದ ಫಲವು ...ಮಕ್ಕಳಲ್ಲೇ ತೋರಬೇಕಾದಾಗಲ್ಯು ಇನ್ನೊಂದು ತಲೆಗ ದ ...ಹೋಗದ ಹೋಗಬಾರದು ಇದೊಂದು ದೃಷ್ಟಾಂತವೇ ಅ ...ಭೂಲೋಕದ ಮನುಷ್ಯ ಜಾತಿಯವರೆಲ್ಲಾ ಒಂದೇ ಕುಟುಂ ...ಸೇರಿದವರಾದದರಿಂದ ಆ ಜಾತಿಗೆಲ್ಲಾ ಸಾಮಾನ್ಯವಾದ ಸು ...ಂದಲೋ ದುರ್ಗುಣದಿಂದಲೋ ಕೂಡಿದ ದೇಹಲಕ್ಷಣವು ...ಮನುಷ್ಯನಲ್ಲಾದರೂ ಅವನ ಸ್ವಂತ ವಂಶೀಯರಿಂದಾಗಲಿ ...ವಾದ ಅನುಬಂಧಿಗಳಿಂದಾಗಲಿ ಬರಬಹುದು. ಹೀಗೆ ತನ್ನ ತ ...ದೆ ಇರುವದಕ್ಕೆ ಫಲವಾಗಿ ಕೆಟ್ಟದನ್ನು ಅನುಭವಿಸುವದು ನ ...ಇಷ್ಟವಿಲ್ಲದಿದ್ದರೂ ಆ ಕಟ್ಟಳೆಯೇನೋ ನಡೆದೇ ನಡೆಯು ...ತ್ತದೆ. ನಮ್ಮ ಇಷ್ಟವಾಗಲಿ ಅನಿಷ್ಟವಾಗಲಿ ಅದನ್ನು ಬೇ ...ಪಡಿಸಲಾರದು ಹೀಗೆ ಮನುಷ್ಯ ಜಾತಿಯು ಪಾಪವು ಮನುಷ್ಯ ...ಯನ್ನೇ ಬಾಧಿಸುವದೆಂದು ಕ್ರೈಸ್ತ ಬೋಧನೆಯು ತಿಳಿಸುತ್ತ ...ರವನ್ನು ಮಾತ್ರ ಅಂಥವನೇ ಅದರ ಫಲವನ್ನು ತನ್ನ ದೇಹದ ...ಬಂದುವೇಳೆ ಅನುಭವಿಸದಿದ್ದರೂ ತನ್ನಂತೆಯೇ ಮನುಷ್ಯ ಜಾ ...ಸೇರಿದ ಯಾವನೋ ಒಬ್ಬ ಪುರುಷನು ಅದನ್ನು ಅನುಭವಿಸ ...ಗಾಗಿ ಬಂದರೂ ಬರಬಹುದು. ಇದೀಗ ಸೃಷ್ಟಿಕ್ರಮವಾಗಿದೆ ...ಸೃಷ್ಟಿಕ್ರಮವಾಗಿದ್ದ ಬಳಿಕ ದೇವರೇ ಸ್ಥಾಪಿಸಿರುವ ಕಟ್ಟಳೆ ...ಂದೇ ಗ್ರಹಿಸಬೇಕಾಗಿದೆ ಹೀಗಿರುವಲ್ಲಿ ದುಷ್ಟರು ಮಾತ್ರವೇ ...ಕ್ಷಿಸಲ್ಪಡಬೇಕೆಂದೂ ಸಜ್ಜನರು ಸಕಲ ಕಷ್ಟಗಳಿಂದ ಬಿಡುಗಡೆ ...ಯಾಗಬೇಕೆಂದೂ ನಾವು ದೇವರಲ್ಲಿ ನಿರೀಕ್ಷಿಸಿದರೆ, ಆತನು ತಾ ...ಪಿಸಿದ ಕಟ್ಟಳೆಯನ್ನೇ ಪದೇ ಪದೇ ಅತಿಕ್ರಮಿಸಿ ಮಹತ್ಕಾ ...ರ್ಯಗಳನ್ನು ನಡಸುತ್ತಲೆ ಇರಬೇಕೆಂಬದಾಗಿ ನಾವು ಅಪೇಕ್ಷಿಸಿದಂ ...ತಾಗುವದು ಭಗವಂತನು ತನಗೆ ಇಷ್ಟಬಂದಲ್ಲಿ ಭೂಲೋಕದ ಸೃ ...ಷ್ಟಿಕ್ರಮಕ್ಕೆ ಅತೀತವಾದಂಥ ಕಟ್ಟಳೆಗಳನ್ನು ಕೆಲವು ಸಂದರ್ಭಗಳಲ್ಲಿ ...ಮಾಡುವುದುಂಟು ಆದರೆ ಹಾಗೆಯೇ ನಿರಂತರವೂ ...ಮಾಡುತ್ತಿದ್ದರೆ ಕಟ್ಟಳೆಯು ಕಟ್ಟಳೆಯಾಗಿ ನೆಲೆಗೊಳ್ಳುವದೇ ? ಹಾ ...ಗಾದರೆ ಪ್ರಪಂಚವೆಂಬ ಈ ದಿವ್ಯವಾದ ಯಂತ್ರವು ಕ್ರಮತಪ್ಪಿ ...ಹೋಗಲಾರದೇ ? ಇದೆಲ್ಲಾ ಅಳಿವಂಥ ಪರಮಪಿತನೇ ತನ್ನ ...ಗಳನ್ನು ಕ್ರಮತಪ್ಪಿ ನಡಸುತ್ತಾನೆಂಬ ಅಪವಾದಕ್ಕೆ ಒಳಗಾಗ ...ಬೇಕಲ್ಲವೇ

[ಸಶೇಷ]

ಮೈಸೂರು ಗೆಜೆಟ್.

ವಿಶೇಷ ಪತ್ರಿಕೆ

ಸರ್ಕಾರದಿಂದ ಪ್ರಕಟಿಸಿದ್ದು.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರ್ರವರ
ಸರ್ಕಾರದಿಂದ ಹೊರಡಿಸಿದ
ಇಷ್ತಿಹಾರ್‌ನಾಮೆ.

ತಾರೀಖು ೧೩ನೆಯ ಅಕ್ಟೋಬರ್, ೧೯೦೫.

ನಂ. ಜಿ.—ಲೆಜಿಸ್. ೨೪—೦೪—೩೧.

೧೯೦೫ನೆಯ ವರ್ಷದ ಮಾರ್ಚಿ ೩ನೆಯ ತಾರೀಖು ಜಿ. ೫೪೦೦—೧೪ ಲೆಜಿಸ್ ನಂಬರಿನ ಸರ್ಕಾರಿ ಹುಕುಮಿನಲ್ಲಿ ಕಂ ... ಮತವನ್ನು ಬದಲಾಯಿಸುವುದರಿಂದ ಅಥವಾ ಜಾತಿಯಿಂದ ಹೊರಗೆ ಹಾಕಲ್ಪಡುವುದರಿಂದ ಹುಟ್ಟುವ ಕೆಲವು ಅಯೋಗ್ಯತೆಗಳ ... ನಿವಾರಿಸುವ ವಿಷಯವನ್ನು ಪರ್ಯಾಲೋಚಿಸುವುದಕ್ಕಾಗಿ ... ಕರಾದ ಕಮಿಟಿ ಯಾ ಸಭೆಯಿಂದ ಈ ವಿಷಯದಲ್ಲಿ ಗವರ್ನ್ ... ಮೆಂಟಿನವರಿಗೆ ಕಳುಹಿಸಲ್ಪಟ್ಟ ಇದರಡಿ ಕಂಡ ಮಸೂದೆ ರೆಗ್ಯುಲೇ ... ಷನನ್ನು ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಿದೆ

ಈ ವಿಷಯಕ್ಕೆ ಸಂಬಂಧಪಟ್ಟವರೆಲ್ಲರೂ ತಮ್ಮ ಅಭಿಪ್ರಾಯ ... ಗಳನ್ನು ಈ ತಾರೀಖು ಮೊದಲುಗೊಂಡು ಎರಡು ತಿಂಗಳೊಳಗೆ ಇದರ ... ನಿಮಿತ್ತ ಮಾಡಿರುವವರಿಗೆ ಕಳುಹಿಸಬೇಕೆಂದು ಕೇಳಿದೆ.

ಹುಕುಂ ಬಮೋಜಿಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಗವರ್ನ್ಮೆಂಟಿನ ಜನರಲ್ ವ ರೆವಿನ್ಯೂ ಸೆಕ್ರೆಟರಿ

ಡ್ರಾಫ್ಟ್ ಮಸೂದೆ ರೆಗ್ಯುಲೇಷನ್.

... ಮತವನ್ನು ಬದಲಾಯಿಸುವುದರಿಂದ ಅಥವಾ ಜಾತಿಯಿಂದ ಹೊರಗೆ ಹಾಕಲ್ಪಡುವುದರಿಂದ ಹುಟ್ಟುವ ಕೆಲವು ಅಯೋಗ್ಯತೆಗಳ ... ನಿವಾರಿಸುವುದು ಯುಕ್ತವಾಗಿರುವುದರಿಂದ ಮೈಸೂರು ಶ್ರೀ ... ಮಹಾರಾಜರವರು ಇದರಡಿ ಕಂಡಂತೆ ವಿಧಿಸಲು ಅಪ್ಪಣೆಯ ... ದಯಪಾಲಿಸಿರುತ್ತಾರೆ —

೧ ಈ ರೆಗ್ಯುಲೇಷನಿಗೆ ಮತಸಂಬಂಧವಾದ ಮತ್ತು ಜಾತಿ ಸಂಬಂಧವಾದ ಅಯೋಗ್ಯತೆಗಳನ್ನು ನಿವಾರಿಸುವದಕ್ಕೆ ಹುಟ್ಟಿದ ರೆಗ್ಯುಲೇಷನ್ ಎಂದು ಹೆಸರು. ಇದು ಮೈಸೂರು ದೇಶಕ್ಕೆಲ್ಲಾ ವ್ಯಾಪಿಸುತ್ತದೆ ಮತ್ತು ಒಡನೆಯೇ ಜಾರಿಗೆ ಬರುವುದು.

೨. ಯಾವದಾದರೂ ಮತವನ್ನು ಬಿಟ್ಟುಬಿಡುವುದರಿಂದ ಅಥವಾ ಅದರಿಂದ ಹೊರಗೆ ಹಾಕಲ್ಪಡುವುದರಿಂದ ಅಥವಾ ಜಾತಿಯಿಂದ ಹೊರಗೆ ಹಾಕಲ್ಪಡುವುದರಿಂದ ಮಾತ್ರವೇ ಯಾವ ಮನುಷ್ಯನಾಗಲಿ ಮತ್ತು ಅವನ ವಾರಸುದಾರ ಅಥವಾ ಪ್ರತಿನಿಧಿಯಾಗಲಿ,

(೧) ಸ್ವತ್ತಿಗೆ ಅಥವಾ ಸ್ವತ್ತಿನಲ್ಲಿ ಅವನಿಗಿರುವ ಬಾಧ್ಯತೆಯಿಂದ ನಿವೃತ್ತನಾಗಿ ಮಾಡಲ್ಪಡುವುದಿಲ್ಲ.

(೨) ದಾಯದ ಯಾವದಾದರೂ ಹಕ್ಕನ್ನು ಅಥವಾ ಸ್ವಂತ ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಆದರೆ, ಯಾವ ಮನುಷ್ಯನಾಗಲಿ ಮತ್ತು ಅಂಥಾ ಮನುಷ್ಯನ ವಾರಸುದಾರನಾಗಲಿ ಅಥವಾ ಅವನ ಪ್ರತಿನಿಧಿಯಾಗಲಿ ತಾನು ಬಿಟ್ಟುಬಿಟ್ಟಿರುವ ಅಥವಾ ತಾನು ಹೊರಗೆ ಹಾಕಲ್ಪಟ್ಟಿರುವ ಮತಕ್ಕೆ ಸಲ್ಲುವ ಅಥವಾ ಅದಕ್ಕೆ ಮಾತ್ರವೇ ಯುಕ್ತವಾಗಿರುವ ಅಥವಾ ತಾನು ನಿವೃತ್ತನಾಗಿರುವ ಜಾತಿಗೆ ಸಲ್ಲುವ ಅಥವಾ ಅದಕ್ಕೆ ಮಾತ್ರವೇ ಯುಕ್ತವಾಗಿರುವ ಯಾವದಾದರೂ ಸ್ವತ್ತನ್ನು ಅಥವಾ ಹಕ್ಕನ್ನು ಇಟ್ಟುಕೊಳ್ಳುವುದಕ್ಕಾಗಲಿ ಸಂಪಾದಿಸುವುದಕ್ಕಾಗಲಿ ಅಥವಾ ಅಂಥಾ ಯಾವದಾದರೂ ಹಕ್ಕನ್ನು ಚಲಾಯಿಸುವುದಕ್ಕಾಗಲಿ ಈ ರೆಗ್ಯುಲೇಷನಿನ ಮೂಲಕ ಹಕ್ಕುಳ್ಳವನಾಗತಕ್ಕದ್ದಲ್ಲ.

ಉದಾಹರಣೆಗಳು

(೧) ಏ ಎಂಬುವನು ತನ್ನ ಮತಕ್ಕೆ ಸಂಬಂಧಪಟ್ಟ ಧರ್ಮದ ಸ್ವತ್ತಿಗೆ ಟ್ರಸ್ಟೀ ಯಾ ನಿಕ್ಷೇಪಧಾರಿಯಾಗಿದ್ದಾನೆ. ಆ ಧರ್ಮದ ಸ್ವತ್ತಿನಿಂದ ಅವನ ಸ್ವಂತ ವಾಸಕ್ಕೂ ಜೀವನಾಂಶಕ್ಕೂ ಏರ್ಪಾಟು ಮಾಡಿಕೊಳ್ಳುವುದಕ್ಕೆ ಹಕ್ಕುಳ್ಳವನಾಗಿರುತ್ತಾನೆ. ಅವನು ಬೇರೆ ಮತಕ್ಕೆ ಪ್ರವರ್ತಿಸುವ ಹಾಗೆ ಮಾಡಲ್ಪಟ್ಟಾಗ ಆ ಧರ್ಮದ ಸ್ವತ್ತಿನಲ್ಲಿ ಅವನಿಗಿರುವ ಬಾಧ್ಯತೆಯು ನಿಂತುಹೋಗತಕ್ಕದ್ದು.

(೨) ಅವಿಭಕ್ತವಾದ ಕುಟುಂಬದ ಸ್ವತ್ತಿನಲ್ಲಿ ಬಾಧ್ಯತೆಯುಳ್ಳ ಹಿಂದುವಾದ ಏ ಎಂಬುವನು ಕ್ರಿಸ್ತಮತಕ್ಕೆ ಪ್ರವರ್ತಿಸಲ್ಪಡುತ್ತಾನೆ. ಅವನು ಅಂಥಾ ಮತಕ್ಕೆ ಪ್ರವರ್ತಿಸಲ್ಪಟ್ಟಾಗ ಅಂಥಾ ಸ್ವತ್ತಿನಲ್ಲಿ ತನಗಿರುವ ಬಾಧ್ಯತೆಯನ್ನು ಇಟ್ಟುಕೊಳ್ಳುವನು ಆದರೆ ಒಂದು ಅವಿಭಕ್ತವಾದ ಹಿಂದೂ ಕುಟುಂಬಕ್ಕೆ ಸೇರಿದವರಿಗೆ ಸಲ್ಲುವ ಅಥವಾ ಅವರಿಗೆ ಮಾತ್ರವೇ ಯುಕ್ತವಾಗಿರುವ ಸಂಗತಿಗಳು ಅವನ ವಿಷಯದಲ್ಲಿ ಇಲ್ಲದೆ ಇರುವವು

(೩) ಹಿಂದುವಾದ ಏ ಎಂಬುವನು ಕ್ರಿಸ್ತಮತಕ್ಕೆ ಪ್ರವರ್ತಿಸಲ್ಪಟ್ಟ ಬಿ ಎಂಬ ತನಗೆ ಧರ್ಮಪತ್ನಿಯಿಂದ ಹುಟ್ಟಿದ ಒಬ್ಬ ಮಗನನ್ನು ತನ್ನ ಹಿಂದೆಬಿಟ್ಟು ಮರಣಶಾಸನವನ್ನು ಬರೆಯದೆ ಸಾಯುತ್ತಾನೆ ಬಿ ಎಂಬುವನು ಏ ಗೆ ಉತ್ತರಾಧಿಕಾರಿ ಯಾ ವಾರಸುದಾರನಾಗುವನು, ಆದರೆ ಸತ್ತವನಿಗೆ ಮೇಲೆ ಉಳಿದ ಒಬ್ಬ ಹಿಂದೂ ದಾಯಾದನ ಹಾಗೆ ಅಲ್ಲ

(೪) ಹಿಂದುವಾದ ಏ ಎಂಬುವನು ತನಗೆ ಧರ್ಮಪತ್ನಿಯಿಂದ ಹುಟ್ಟಿದ ಕ್ರಿಸ್ತಮತಕ್ಕೆ ಪ್ರವರ್ತಿಸಲ್ಪಟ್ಟ ಬಿ ಎಂಬ ಮಗನನ್ನು ತನ್ನ ಹಿಂದೆಬಿಟ್ಟು ಸಾಯುತ್ತಾನೆ ಏ ಎಂಬುವನು ಸಾಯುವುದಕ್ಕೆ ಮುಂಚೆ ಒಂದು ಸಾಲುಪತ್ರಿಯಾಗುವ ವಿಲ್ ಯಾ ಮರಣಶಾಸನದ ಮೂಲಕ ತನ್ನ ಸ್ವತ್ತನ್ನು ಕೊಟ್ಟುಬಿಟ್ಟಿದ್ದಾನೆ. ಏ ಎಂಬುವನ ಸ್ವತ್ತು ಅಂಥ ಮರಣಶಾಸನದ ನಿಯಮಗಳನ್ನು ಅನುಸರಿಸುವುದು

(೫) ನ್ಯಾಯವಾಗಿ ಮದುವೆ ಮಾಡಿಕೊಂಡ ನಾಲ್ಕು ಮಂದಿ ಹೆಂಡತಿಯರುಳ್ಳ ಒಬ್ಬ ಮುಸಲ್ಮಾನನಾದ ಏ ಎಂಬುವನು ಕ್ರಿಸ್ತಮತಕ್ಕೆ ಪ್ರವರ್ತಿಸಲ್ಪಡುತ್ತಾನೆ ಏ ಎಂಬುವನು ಹಾಗೆ ಪ್ರವರ್ತಿಸಲ್ಪಟ್ಟ ತರುವಾಯ ಮುಸಲ್ಮಾನಿ ಆಚರಣೆಗಳಿಂದ ಅವರನ್ನು ಪರಿತ್ಯಾಗ ಮಾಡುವುದಕ್ಕೆ ಯೋಗ್ಯನಾಗುವುದಿಲ್ಲ

(೬) ಹಿಂದೂ ಪುತ್ರರುಳ್ಳ ಏ ಎಂಬ ಹಿಂದುವು ಮುಸಲ್ಮಾನನಾಗುತ್ತಾನೆ. ಹಾಗೆ ಅಂಥಾ ಮತಕ್ಕೆ ಪ್ರವರ್ತಿಸಲ್ಪಟ್ಟ ತರುವಾಯ ಅವನು ತನ್ನ ಹಿಂದೂ ಮಕ್ಕಳಲ್ಲಿ ಒಬ್ಬನನ್ನು ಒಬ್ಬ ಹಿಂದೂವಿಗೆ ದತ್ತು ಕೊಡುವ ಹಕ್ಕನ್ನು ಚಲಾಯಿಸುವುದಕ್ಕೆ ಯೋಗ್ಯನಾಗುವುದಿಲ್ಲ

(೭) ಬ್ರಾಹ್ಮಣನಾದ ಒಬ್ಬ ಹಿಂದುವು ತನ್ನ ಜಾತಿಯ ನಿಯಮಗಳನ್ನು ಬುದ್ಧಿಪೂರ್ವಕವಾಗಿ ಬಿಟ್ಟುಬಿಟ್ಟು ಸನ್ಯಾಸಿಯಾಗುತ್ತಾನೆ. ಅವನು ಈ ರೆಗ್ಯುಲೇಷನಿಂದ ಬಾಧಿಸಲ್ಪಡುವುದಿಲ್ಲ.

೩ ಯಾವ ಮನುಷ್ಯನೂ ಅಂಥಾ ಮನುಷ್ಯನ ವಾರಸುದಾರನೂ ಅಥವಾ ಪ್ರತಿನಿಧಿಯೂ, ಮತ್ತೊಬ್ಬ ಮನುಷ್ಯನು ಯಾವ ಮತವನ್ನಾಗಲಿ ಬಿಟ್ಟುಬಿಟ್ಟದ್ದರಿಂದ ಅಥವಾ ಅದರಿಂದ ಹೊರಗೆ ಹಾಕಲ್ಪಟ್ಟದ್ದರಿಂದ ಅಥವಾ ಜಾತಿಯಿಂದ ಹೊರಗೆ ಹಾಕಲ್ಪಟ್ಟದ್ದರಿಂದ,

(೧) ಅಂಥಾ ಇತರ ಮನುಷ್ಯನು ಆ ಮತದಲ್ಲಿ ಅಥವಾ ಆ ಜಾತಿಯಲ್ಲಿ ಇದ್ದಿದ್ದರೆ ತನಗೆ ಉಂಟಾಗಿರುತ್ತಿದ್ದ ಯಾವ ದಾಯದ ಸ್ವತ್ತಿನ ಹಕ್ಕಿನಿಂದಲೂ ಅಥವಾ ಸ್ವಂತ ಹಕ್ಕಿನಿಂದಲೂ ನಿವೃತ್ತನಾಗುವುದಿಲ್ಲ, ಅಥವಾ ಅದನ್ನು ಕಳೆದುಕೊಳ್ಳುವುದಿಲ್ಲ.

(೨) ತನ್ನ ಸ್ವಂತ ಮತಕ್ಕೆ ಅಥವಾ ಜಾತಿಗೆ ಅಸಂಗತವಾದ ಅಥವಾ ಅಯುಕ್ತವಾದ ಯಾವ ಕೃತ್ಯಕ್ಕಾಗಲಿ ಅಥವಾ ಯಾವ ಕೃತ್ಯವನ್ನು ಅನುಭವಿಸುವಂತಾಗಲಿ ಬಲಾತ್ಕರಿಸಲ್ಪಡತಕ್ಕದ್ದಲ್ಲ.

ವಿವರಣೆ—ಯಾವ ಮನುಷ್ಯನ ಮತವಾಗಲಿ ಅಥವಾ ಜಾತಿಯಾಗಲಿ ಅವನು ಯಾವದರಲ್ಲಿ ಹುಟ್ಟಿದನೋ ಅದೆಂದು ಭಾವಿಸಲ್ಪಡುವುದು ಯಾವ ಮತದಲ್ಲಿ ಅಥವಾ ಜಾತಿಯಲ್ಲಿ ಒಬ್ಬ ಮೈನರು ಯಾ ಅಪ್ರಾಯಸ್ಥನು ಹುಟ್ಟಿದನೋ ಅದರಲ್ಲಿಯೇ ಇರುವುದು ಅವನಿಗೆ ಒಳ್ಳೆಯದೆಂದು—ಅದಕ್ಕೆ ವಿರುದ್ಧವಾದುದು ತೋರಿಸಲ್ಪಡುವವರೆಗೂ—ಕೋರ್ಟಿನವರು ಭಾವಿಸತಕ್ಕದ್ದು

ಉದಾಹರಣೆಗಳು.

(೧) ಏ ಎಂಬುವನೂ ಬಿ ಎಂಬುವನೂ ಹಿಂದೂ ಸಹೋದರರು, ಮತ್ತು ಸಿ ಎಂಬುವನು ಅವರ ಭಿನ್ನೋದರನು. ಏ ಎಂಬುವನು ಕ್ರಿಸ್ತನಾಗುತ್ತಾನೆ ಸಿ ಎಂಬುವನು ಕ್ರಿಸ್ತನಾಗುವುದರಿಂದ ಏ ಎಂಬುವನ ವಿಷಯದಲ್ಲಿ ಬಿ ಎಂಬುವನ ದಾಯದ ಹಕ್ಕು ಬಾಧಿಸಲ್ಪಡುವುದಿಲ್ಲ.

(೨) ಒಂದು ಅವಿಭಕ್ತ ಕುಟುಂಬದ ಮನೆಯಲ್ಲಿ ಒಂದು ಭಾಗ್ಯವನ್ನುಳ್ಳ ಮತ್ತು ಅದರಲ್ಲಿ ವಾಸಿಸುವುದಕ್ಕೆ ಹಕ್ಕುಳ್ಳ ಒಬ್ಬ ಹಿಂದುವಾದ ಏ ಎಂಬುವನು ಕ್ರಿಸ್ತನಾಗುತ್ತಾನೆ ಅವನು ಆ ಕುಟುಂಬದಲ್ಲಿ ಹಿಂದೂ ಮತಕ್ಕೆ ಸೇರಿದವರ ಇಚ್ಛೆಗೆ ವಿರೋಧವಾಗಿ ಆ ಅವಿಭಕ್ತ ಕುಟುಂಬದ ಮನೆಯಲ್ಲಿ ವಾಸ ಮಾಡುವುದಕ್ಕೆ ತನಗಿರುವ ಹಕ್ಕನ್ನು ಜಾರಿ ಮಾಡುವುದಕ್ಕಾಗುವದಿಲ್ಲ.

(೩) ಏ ಎಂಬ ಒಬ್ಬ ಕ್ರಿಸ್ತನಿಗೆ ಬಿ ಎಂಬ ಒಬ್ಬಳು ಕ್ರಿಸ್ತ ಹೆಂಡತಿಯು ಇದ್ದಾಳೆ. ಏ ಎಂಬುವನು ಒಬ್ಬ ಮುಸಲ್ಮಾನನಾಗಿ ಮುಸಲ್ಮಾನಿ ಆಚರಣೆಗಳ ಮೇರೆ ಒಬ್ಬಳು ಎರಡನೆಯ ಹೆಂಡತಿಯನ್ನು ಮದುವೆ ಮಾಡಿಕೊಳ್ಳುತ್ತಾನೆ. ಏ ಎಂಬುವನು ಬಿ ಎಂಬುವಳ ಜೀವನಾಂಶಕ್ಕೆ ಗುರಿಯಾಗಿರುತ್ತಾನೆ, ಮತ್ತು ಬಿ ಎಂಬುವಳು ಕ್ರಿಸ್ತರಿಗೆ ಲಗಾವಾಗುವ ಕಾನೂನಿನ ಮೇರೆ, ಅವಳಿಗೆ ಇಷ್ಟವಾದರೆ, ಅವನನ್ನು ಪರಿತ್ಯಾಗ ಮಾಡುವ ಹಕ್ಕನ್ನು ಉಂಟಾಗಿರುವಳು. ಆದರೆ ಏ ಎಂಬುವನು ಕ್ರಿಸ್ತರಿಗೆ, ಲಗಾವಾಗುವ ಕಾನೂನಿನಲ್ಲಿ ಕಂಡ ಕಾರಣಗಳಿಗಾಗಿ ಮತ್ತು ಅದರಲ್ಲಿ ಅವಕಾಶಕೊಟ್ಟಿರುವ ವಿಧದಲ್ಲಿ ವಿನಾ ಅವಳಿಗೆ ವಿರೋಧವಾಗಿ ಯಾವ ದಾಂಪತ್ಯದ ಹಕ್ಕುಗಳನ್ನೂ ಜಾರಿ ಮಾಡಲಾಗದು, ಅಥವಾ ಅವಳನ್ನು ಪರಿತ್ಯಾಗ ಮಾಡಲಾಗದು.

(೪) ಅ ಪ್ರಾಯಸ್ಥರಾದ ಕ್ರಿಸ್ತ ಮಕ್ಕಳಿರುವ ಕ್ರಿಸ್ತನಾದ ಏ ಎಂಬುವನು ಮುಸಲ್ಮಾನನಾಗುತ್ತಾನೆ. ಅವನು ಅವರ ಜೀವನಾಂಶಕ್ಕೆ ಗುರಿಯಾಗಿರುವನು. ಆದರೆ ಅವನು ತನ್ನ ಅಪ್ರಾಯಸ್ಥರಾದ ಗಂಡು ಮಕ್ಕಳಿಗೆ ಸುನ್ನತಿ ಮಾಡುವುದು ಅಥವಾ ಮುಸಲ್ಮಾನರಿಗೆ ಅವನ ಅಪ್ರಾಯಸ್ಥರಾದ ಹೆಣ್ಣು ಮಕ್ಕಳನ್ನು, ಅವರನ್ನು ಮಹಮದೀಯ ಕಾನೂನಿಗೆ ಒಳಪಡಿಸುವ ಆಚರಣೆಗಳೊಡನೆ ಮದುವೆ ಮಾಡಿಕೊಡುವುದು, ಇವೇ ಮೊದಲಾದ ಅವರ ಮತಕ್ಕೆ ವಿರುದ್ಧವಾದ ಗಾರ್ಡಿಯನ್‌ಷಿಪ್ಪಿನ ಯಾ ರಕ್ಷಕತ್ವದ ಯಾವ ಹಕ್ಕನ್ನೂ ಅವರಿಗೆ ವಿರೋಧವಾಗಿ ಜಾರಿ ಮಾಡಲಾಗದು

(೫) ಹಿಂದುವಾದ ಬಿ ಎಂಬುವನ ಮಗನಾದ ಏ ಎಂಬುವನು ಕ್ರಿಸ್ತನಾಗುತ್ತಾನೆ, ಆದುದರಿಂದ ಜಾತಿಯಿಂದ ಹೊರಗೆ ಹಾಕಲ್ಪಡುತ್ತಾನೆ. ಸಿ ಎಂಬುವನು ಹಿಂದುವಾಗಿದ್ದುಕೊಂಡು ಜಾತಿಭ್ರಷ್ಟನಾದರೆ ಅಥವಾ ಅಯೋಗ್ಯನಾದ ಮಗನಾಗಿದ್ದಿದ್ದರೆ ದತ್ತು ತೆಗೆದುಕೊಳ್ಳುವದಕ್ಕೆ ಬಿ ಎಂಬುವನು ಯಾವ ಹಕ್ಕನ್ನು ಉಂಟಾಗಿರುತ್ತಿದ್ದನೋ ಅದೇ ಹಕ್ಕನ್ನು ಈಗಲೂ ಉಂಟಾಗಿರುವನು. ಆದರೆ ದತ್ತು ಮಾಡಲ್ಪಟ್ಟಿದ್ದರೆ ಅದು ಈ ರೆಗ್ಯುಲೇಷನಿನ ೨ನೆಯ ಪ್ರಕರಣದ ಮೇರೆ ಏ ಎಂಬುವನಿಗೆ ಬಾಧ್ಯತೆ ಇರುವ ಸ್ವತ್ತಾಗಲಿ ಹಕ್ಕಾಗಲಿ ಅವನಿಗೆ ತಪ್ಪಿ ಹೋಗುವಂತೆ ಮಾಡಲಾರದು.

(೬) ಹಿಂದುವಾದ ಬಿ ಎಂಬುವನ ಮಗನಾದ ಏ ಎಂಬುವನು ಕ್ರಿಸ್ತನಾಗುತ್ತಾನೆ. ಏ ಎಂಬುವನು ಅಂಥಾ ಮತಕ್ಕೆ ಪ್ರವರ್ತಿಸಲ್ಪಟ್ಟ ತರುವಾಯ ಬಿ ಎಂಬುವನಿಗೆ ಮತ್ತೊಬ್ಬ ಮಗ ಸಿ ಎಂಬುವನು ಹುಟ್ಟುತ್ತಾನೆ ಏ ಎಂಬುವನು ಹಿಂದುವಾಗಿದ್ದಿದ್ದರೆ ಪಿತ್ರಾರ್ಜಿತ ಸ್ವತ್ತಿನ ವಿಷಯದಲ್ಲಿ ಯಾವ ಹಕ್ಕುಗಳನ್ನು ಸಿ ಎಂಬುವನು ಉಂಟಾಗಿರುತ್ತಿದ್ದನೋ ಅದೇ ಹಕ್ಕುಗಳನ್ನು ಈಗಲೂ ಉಂಟಾಗಿರುವನು. ಆದರೆ ಸಿ ಎಂಬುವನ ಜನನವು ಈ ರೆಗ್ಯುಲೇಷನಿನ ೨ನೆಯ ಪ್ರಕರಣಕ್ಕನುಸಾರವಾಗಿ ಏ ಎಂಬುವನ ಹಕ್ಕುಗಳನ್ನು ಅನ್ಯಥಾ ಬಾಧಿಸುವುದಿಲ್ಲ

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು ಮೈಸೂರು ಡಿಸ್ಟ್ರಿಕ್ಟಿನ ಬಂಡೀಪುರ ತಾಲ್ಲೂಕುಗಳ ಮೇಲೆ ಬರುವ ವಾರ ಸಂಚಾರ ಹೊರಡುವರೆಂದು ತಿಳಿದುಬಂದಿದೆ

****

ಶ್ರೀಮನ್ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್‌ರವರ ಸುಬಾಗಮನವನ್ನು ಬಯಸುವುದಕ್ಕೋಸ್ಕರ ಇಷ್ಟರಲ್ಲೇ ಬೊಂಬಾಯಿಗೆ ಪ್ರಯಾಣಮಾಡುವರೆಂದು ವರ್ತಮಾನವಿದೆ.

****

ನಾಳೆ ಶನಿವಾರ ರಾಜಧಾನಿಯಲ್ಲಿ ದಿವಾನರವರು ಕೌನ್ಸಿಲ್ ಸಭೆಯನ್ನು ನಡಸುವರೆಂತಲೂ ರೆವಿನ್ಯೂ ಬೋರ್ಡಿನ ವಿಚಾರವೂ ಆಗ ಇತ್ಯರ್ಥವಾಗಬಹುದೆಂತಲೂ ಕೇಳುತ್ತೇವೆ.

****

ನವರಾತ್ರಿ ಉತ್ಸವಕ್ಕಾಗಿ ಪರದೇಶಗಳಿಂದ ಬಂದಿದ್ದ ಅನೇಕಮಂದಿ ಸಂಗೀತಗಾರರಿಗೆ ಶ್ರೀಮನ್ಮಹಾರಾಜರವರು ಸುಮಾರು ೬೦೦ ರೂಪಾಯಿ ವರೆಗೆ ಬಹುಮಾನಗಳನ್ನೂ ಖಿಲ್ಲತ್ತುಗಳನ್ನೂ ದಯಪಾಲಿಸಿದರು.

****

ಮೈಸೂರು ಪ್ರಜಾಪ್ರತಿನಿಧಿ ಸಭೆಯು ಕಳೆದ ಬುಧವಾರ ಪ್ರಾರಂಭವಾಯಿತು ಮಾರನೇ ಗುರುವಾರದಿಂದ ಮೊನ್ನೆ ಮಂಗಳವಾರದ ತನಕ ಗವರ್ನ್ಮೆಂಟಿನವರೂ ಪ್ರತಿನಿಧಿಗಳೂ ಕೂಡಿ, ಸಂಸ್ಥಾನದ ಮಳೆಯ ವಿಚಾರಗಳನ್ನೂ ಆಯಾ ಡಿಸ್ಟ್ರಿಕ್ಟುಗಳಿಗೆ ಸಂಬಂಧಿಸಿದ ಸಂಗತಿಗಳನ್ನೂ ಕುರಿತ ಚರ್ಚೆಮಾಡಿ ಪೂರೈಸಿದರು. ದಿವಾನರವರ ಉಪನ್ಯಾಸದ ಒಂದು ಭಾಗವನ್ನು ಇನ್ನೊಂದು ಕಡೆ ಪ್ರಕಟಿಸಿದೇವೆ. ಸಭೆಯಲ್ಲಿ ನಡೆದ ಚರ್ಚೆಗಳೂ ತೀರ್ಮಾನಗಳೂ ಇನ್ನು ಮುಂದೆ ತಿಳಿಸುವೆವು.

****

ಬೆಂಗಳೂರು ಪಟ್ಟಣದಲ್ಲಿ ಪ್ರಕಟವಾಗುವ "ಮೈಸೂರು ಸ್ಟ್ಯಾಂಡರ್ಡ್" ಎಂಬ ಪತ್ರಿಕಾ ಪ್ರತಿನಿಧಿಯನ್ನು ಮೊನ್ನೆ ಭಾನುವಾರ ಸರ್ಕಾರದವರು ಪ್ರಜಾಪ್ರತಿನಿಧಿ ಸಭೆಗೆ ಸೇರಿಸುವುದಿಲ್ಲವೆಂತಲೂ, ಆ ಪತ್ರಿಕೆಗೆ ಸರ್ಕಾರಿ ಹುಕುಮುಗಳ್ಯಾವುವನ್ನೂ ಕಳುಹಿಸುವುದಿಲ್ಲವೆಂತಲೂ ಆಜ್ಞೆ ಮಾಡಿದರು ಆ ಪತ್ರಿಕೆಯಲ್ಲಿ ನಿಜವಲ್ಲದ ಮತ್ತು ಗವರ್ನ್ಮೆಂಟಿನ ಮೇಲೆ ಅನುಚಿತವಾದ ದೂಷಣೆಗಳನ್ನು ಪ್ರಕಟಿಸುತ್ತಿದ್ದುದರಿಂದ ಸರ್ಕಾರದವರು ಈ ರೀತಿ ಹುಕುಂ ಮಾಡಿದರೆಂದು ಊಹಿಸಲ್ಪಟ್ಟಿದೆ.

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

೧೯೦೫ನೆಯ ಇಸವಿ ಅಕ್ಟೋಬರ್ ತಾರೀಖು ೧೧ನೆಯ ಬುಧವಾರ.

ಸಭಿಕರಿರಾ,

ಈ ದಿವಸದ ಕಾರ್ಯವನ್ನು ಉಪಕ್ರಮಿಸುವುದಕ್ಕೆ ಮೊದಲು, ನಾವು ಕಳೆದವರ್ಷ ಸಭೆ ಸೇರಿದಂದಿನಿಂದೀಚೆ ಮಹಾರಾಜರವರ ಮನೆತನಕ್ಕೆ ಪ್ರಾಪ್ತವಾದ ದುಃಖಕರವಾದ ವಿಷಯವನ್ನು ಪ್ರಸ್ತಾಪಕ್ಕೆ ತರದೆ ಇರಲಾರೆವು. ಎರಡನೆಯ ರಾಜಕುಮಾರಿಯವರು ಇನ್ನೂ ಪೂರ್ವವಯಸ್ಸಿನಲ್ಲಿರುವಾಗಲೇ ದೀರ್ಘಕಾಲ ಅಸ್ವಸ್ಥರಾಗಿದ್ದು ಕಳೆದ ನವಂಬರಿನಲ್ಲಿ ಸ್ವರ್ಗಸ್ಥರಾದರು. ಆಕಾಲದಲ್ಲಿ, ಈ ಸಂಸ್ಥಾನದ ಪ್ರಜೆಗಳೆಲ್ಲರೂ, ಅವರ ಬಂಧುವರ್ಗಗಳೊಡನೆ ವಿಶೇಷವಾಗಿ ಶೋಕದಲ್ಲಿ ಮಗ್ನರಾದರು. ಇಂಥ ದುಃಖವು ಪ್ರಾಪ್ತವಾದ ಬಳಿಕ, ಪ್ರಥಮತಃ ಸಭೆ ಸೇರಿರುವ ನಾವುಗಳು, ಅಂಥ ಮಹಾರಾಜರವರ ಮನೆತನದಲ್ಲಿ ಸಂಭವಿಸಿದ ಅಷ್ಟು ಪ್ರಿಯರಾದ ರಾಜಕುಮಾರಿಯವರ ವಿಯೋಗಕ್ಕಾಗಿ, ನಮ್ಮ ಗೌರವಪೂರ್ವಕವಾದ ಅನುತಾಪಶೋಕಗಳನ್ನು ಮಾತ್ರವೇ ವಿಜ್ಞಾಪಿಸಬಲ್ಲೆವು.

ಇನ್ನು ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ, ಕಳೆದ ವರ್ಷದ ಆಡಳಿತವನ್ನು ತಿಳಿಸಲು ಉಪಕ್ರಮಿಸುತ್ತೇವೆ

ಮಳೆಯೂ ಋತುಧರ್ಮವೂ.

ಈ ವರ್ಷ, ನಿಮಗೆಲ್ಲಾ ತಿಳಿದಿರುವಂತೆಯೇ ವ್ಯವಸಾಯಕಾರ್ಯಗಳಿಗೆ ವಿಶೇಷವಾಗಿ ಅನುಕೂಲವಾಗಿರಲಿಲ್ಲ. ಈ ಕಳೆದ ವರ್ಷ ಸರಾಸರಿ ಮಳೆಯು, ೨೯.೦೬ ಅಂಗುಲ ಎಂದರೆ ಹಿಂದಿನ ವರ್ಷಕ್ಕಿಂತ ೨೪.೫೩ ಅಂಗುಲದಷ್ಟು ಕಡಿಮೆಯಾಗಿಯೂ, ೧೮೭೦ ರಿಂದ ಈಚಿನ ಸರಾಸರಿಗೆ ೧೬ ಅಂಗುಲದಷ್ಟು ಕಡಿಮೆಯಾಗಿಯೂ ಇತ್ತು. ಮುಂಗಾರುಮಳೆಯಲ್ಲಿ ಸುಮಾರು ೮ ಅಂಗುಲದಷ್ಟೂ, ಹಿಂಗಾರುಮಳೆಯಲ್ಲಿ ಸುಮಾರು ೧೧ ಅಂಗುಲದಷ್ಟೂ ಕಡಿಮೆಯಾಗಿ ಬಿತ್ತು. ಮೃಗಶಿರ ಮತ್ತು ಆರ್ದ್ರಾ ಮಳೆಗಳು ಸುತರಾಂ ಆಗದೆ, ಬೆಳೆಯುತ್ತಿದ್ದ ಪೈರಿಗೆ ಬಹಳ ನಷ್ಟವಾಯಿತು. ರಾಗಿ ಭತ್ತ ಇವೇ ಮೊದಲಾದ ಆಹಾರಧಾನ್ಯದ ಪೈರುಗಳು ಬಹಳ ಮಟ್ಟಿಗೆ ಕೆಟ್ಟುಹೋಗಿ ಕಾರ್ತಿಕ ಫಸಲಿನ ಉತ್ಪತ್ತಿಯು ಎಂದಿಗಿಂತಲೂ ಬಹಳ ಕಡಿಮೆಯಾಯಿತು. ಶ್ರೀಮನ್ಮಹಾರಾಜರವರು, ತಿರುಮಕೂಡಲು ನರಸೀಪುರದ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ, ಸವಾರಿ ಚಿತ್ತೈಸಿದ್ದಾಗ್ಯೂ, ಈ ತಾಲ್ಲೂಕುಗಳ ಕೆಲಭಾಗಗಳ, ರಾಗಿ, ಹುರುಳಿ ಮತ್ತು ಇತರ ಖುಷ್ಕಿ ಪೈರುಗಳು ಬಹಳ ಹೀನಸ್ಥಿತಿಯಲ್ಲಿದ್ದುದನ್ನು ಸ್ವತಃ ಪರಾಮರ್ಶಿಸಿದರು.

ಅನಾವೃಷ್ಟಿ.

ಅನಾವೃಷ್ಟಿಯು ಪ್ರಾಪ್ತವಾದ್ದರಿಂದ ಜನಗಳ ಮತ್ತು ದನಕರುಗಳ ಸಹಾಯಾರ್ಥವಾಗಿ ಅನೇಕ ಏರ್ಪಾಡುಗಳು ಮಾಡಲ್ಪಟ್ಟವು. ಚಿತ್ರದುರ್ಗದ ಡಿಸ್ಟ್ರಿಕ್ಟು, ತುಮಕೂರು ಡಿಸ್ಟ್ರಿಕ್ಟಿನ ಸಿರಾ, ತಿಪಟೂರು, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳು; ಹಾಸನ ಡಿಸ್ಟ್ರಿಕ್ಟಿನ ಅರಸೀಕೆರೆ ಮತ್ತು ಚನ್ನರಾಯಪಟ್ಟಣದ ತಾಲ್ಲೂಕುಗಳು, ಈ ಪ್ರದೇಶಗಳ ರೈತರಿಗೆ ಕಂದಾಯಗಳನ್ನು ಕಡಿಮೆ ತೆಗೆದುಕೊಳ್ಳಬಹುದೆಂದೂ ಮತ್ತು ಕೆಲವು ಸರ್ಕಾರಿ ಜಂಗಲುಗಳಲ್ಲಿಯೂ ಕೆಲವು ಅಮೃತಮಹಲ್ ಕಾವಲುಗಳಲ್ಲಿಯೂ ಸುಂಕ ಕೊಡದೆ ರೈತರು ದನಕರುಗಳನ್ನು ಮೇಯಿಸಿಕೊಳ್ಳಬಹುದೆಂದು ಅಪ್ಪಣೆ ಕೊಡಲಾಯಿತು. ಕೆರೆಗಳ ಅಂಗಳಗಳನ್ನು ಹಂಗಾಮಿ ಸಾಗುವಳಿಗೆ ಕೊಡಬಹುದೆಂಬ ನಿಯಮವನ್ನು ವಿಶೇಷವಾಗಿ ಅವಧಾನವನ್ನು ಕೊಡುವಂತೆ ತಿಳಿಸಲಾಯಿತು. ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಈ ರಿಯಾಯತಿಯನ್ನು ವಿಶೇಷವಾಗಿ ಉಪಯೋಗಿಸಿಕೊಂಡರು

ಕಳೆದ ಜುಲೈ ಮತ್ತು ಆಗಸ್ಟು ತಿಂಗಳುಗಳಲ್ಲಿ ಕೋಲಾರ ಡಿಸ್ಟ್ರಿಕ್ಟಿನ ಕೆಲಭಾಗಗಳಲ್ಲಿ ಕಷ್ಟವು ಪ್ರಾಪ್ತವಾಗುವಂತೆ ತೋರಿತು ಎಂದರೆ ಕೋಲಾರದ ತಾಲ್ಲೂಕು, ಮಾಲೂರು ಮತ್ತು ಬಂಗಾರಪೇಟೆ ತಾಲ್ಲೂಕುಗಳ ಭಾಗಗಳು; ಮುಳಬಾಗಲು ಮತ್ತು ಬಾಗೇಪಲ್ಲಿ ತಾಲ್ಲೂಕುಗಳು, ಗುಡಿಬಂಡೆ ಸಬ್ ತಾಲ್ಲೂಕು—ಇವೆಲ್ಲವೂ ಬಹಳ ಕಷ್ಟಕ್ಕೆ ಸಿಕ್ಕಿದ್ದವು. ಮನುಷ್ಯರಿಗಿಂತಲೂ ದನಕರುಗಳು ಹೆಚ್ಚಾಗಿ ಶ್ರಮಪಡುತ್ತಿದ್ದ ಹಾಗೆ ತೋರಿತು ಮೇಲೆ ನಮೂದಿಸಿದ ರಿಯಾಯತಿಗಳಲ್ಲದೆ ಇನ್ನೂ ಹಲವು ಇತರ ರಿಯಾಯತಿಗಳನ್ನು ಸಹ ರೈತರಿಗೆ ತೋರಿಸುವಂತೆ ಹುಕುಂ ಮಾಡಲಾಯಿತು ಮೇವನ್ನು ಬೆಳೆಯಲನುಕೂಲವಾದ ಸ್ಥಳಗಳಲ್ಲಿ ಭಾವಿ ತೆಗೆಯಲು ಪ್ರೋತ್ಸಾಹಪಡಿಸುವುದಕ್ಕಾಗಿ ಸಾಲ ಕೊಡುವುದಕ್ಕೂ, ಕುಡಿಯುವ ನೀರನ್ನು ಒದಗಿಸಿ ಕೊಡುವುದಕ್ಕೂ, ದನಗಳ ಮೇವನ್ನು ಆಮದು ಮಾಡುವುದಕ್ಕೂ, ರೈತರು ಬಿತ್ತನೆಯ ಕಾಳುಗಳನ್ನು ಕೊಳ್ಳಲು ಸಹಾಯಮಾಡುವುದಕ್ಕೂ, ೧೫,೦೦೦ ರೂಪಾಯಿ ಮುಂಜೂರ್ ಮಾಡಲಾಯಿತು ಸಣ್ಣ ಕೆರೆಗಳ ದುರಸ್ತಿಗಾಗಿ ಇನ್ನೂ ವಿಶೇಷವಾದ ಮೊಬಲಗನ್ನು ಮುಂಜೂರ್ ಮಾಡುತ್ತಿರುವಾಗ, ಪುಣ್ಯವಶದಿಂದ ಆಗಸ್ಟಿನ ಕೊನೆಯಲ್ಲಿ ವಿಪುಲವಾಗಿ ಮಳೆಯಾದ ಪ್ರಯುಕ್ತ ಪರಿಹಾರ ಕಾಮಗಾರಿಗಳನ್ನಾಗಲಿ, ಬಡವರಿಗಾಗಿ ಧರ್ಮಶಾಲೆಗಳನ್ನಾಗಲಿ, ಅಥವಾ ಕ್ಷಾಮನಿವಾರಣೆಯ ಕಾರ್ಯಗಳನ್ನಾಗಲಿ, ಪ್ರಾರಂಭಿಸಬೇಕಾದ ಆವಶ್ಯಕ ತಪ್ಪಿಹೋಯಿತು.

ನಾವು ಈಚೆಗೆ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಹೋಗಿದ್ದಾಗ್ಗೆ ಕೆಲವು ಸ್ಥಳಗಳಲ್ಲಿ ಪೈರುಗಳು ಮಳೆಯಿಲ್ಲದೆ ಬಾಡುತ್ತಿದ್ದುದಾಗಿ ಕಂಡುಬಂದದ್ದರಿಂದ, ಆ ವಿಷಯದಲ್ಲಿ ತಕ್ಕ ಏರ್ಪಾಡು ಮಾಡುವಂತೆ ಡಿಪ್ಟಿ ಕಮೀಷನರಿಗೆ ತಿಳಿಸಿತು.

ಜಮಾ ಬಾಬುಗಳು

ಕಳೆದ ವರ್ಷ ಒಟ್ಟು ೨,೦೬,೧೦,೪೮೬ ರೂಪಾಯಿ ಜಮೆಯೂ, ೨,೧೬,೮೪,೭೯೯ ರೂಪಾಯಿ ಖರ್ಚೂ ಆದುವು—ಎಂದರೆ ಜಮೆಗಿಂತ ಖರ್ಚಿನಲ್ಲಿ ೭೪,೩೧೩ ರೂಪಾಯಿನಷ್ಟು ಸಣ್ಣ ಮೊಬಲಗು ಹೆಚ್ಚಾಯಿತು. ಇದಕ್ಕೆ ಪ್ರತಿಯಾಗಿ ಹಿಂದಿನ ವರ್ಷದಲ್ಲಿ ಜಮೆಗಿಂತ ೪,೪೯,೭೧೬ ರೂಪಾಯಿನಷ್ಟು ಖರ್ಚು ಹೆಚ್ಚಾಯಿತು. ಮತ್ತು ಗತವರ್ಷದ ಜಮಾಖರ್ಚಿನ ಅಂದಾಜುಪಟ್ಟಿಯಲ್ಲಿ ಜಮೆಗಿಂತ ೫,೧೦,೦೦೦ ರೂಪಾಯಿಗಳಷ್ಟು ಹೆಚ್ಚು ಖರ್ಚಾಗುವುದಾಗಿ ಅಂದಾಜಾಗಿತ್ತು.

ಬಡ್ಡಿಗೆ ಹಾಕಿರುವ ಮೊಬಲಗುಗಳಿಂದ ಬಂದ ೩,೦೮,೯೭೭ ರೂಪಾಯಿಯೂ, ರೈಲ್ವೆಗಳಿಂದ ಹುಟ್ಟುವಳಿಯಾದ ೭,೯೦,೦೦೩ ರೂಪಾಯಿಯೂ, ಚಿನ್ನದ ಗಣಿಯಿಂದ ಸಂದಾಯವಾದ ೧೬,೯೦,೬೭೦ ರೂಪಾಯಿಯೂ ಮತ್ತು ಕಾವೇರಿ ವೈದ್ಯುತಶಕ್ತಿಯಿಂದ ಉತ್ಪತ್ತಿಯಾದ ೧೨,೧೧,೮೮೬ ರೂಪಾಯಿಯೂ ಸಹ, ಕಳೆದ ವರ್ಷದ ಜಮೆಯಲ್ಲಿ ಸೇರಿದ್ದುವು.

ಹಿಂದಿನ ವರ್ಷಕ್ಕಿಂತ ಗತವರ್ಷದ ಜಮೆಯು ೫೨,೦೦೦ ರೂಪಾಯಷ್ಟು ಹೆಚ್ಚಾಗಿತ್ತು. ನಿಮಗೆ ತಿಳಿದ ಹಾಗೆಯೇ, ಕಳೆದ ವರ್ಷದ ಋತುಧರ್ಮವು ವ್ಯವಸಾಯದ ಕೆಲಸಗಳಿಗೆ ಅನುಕೂಲವಾಗಿ ಇದ್ದ ಪ್ರಯುಕ್ತ, ಜಮೀನುಗಳ ರಾಜೀನಾಮೆ ಬಂದು ಅದರಿಂದ ೨೮,೦೦೦ ರೂಪಾಯಿನಷ್ಟು ಉತ್ಪತ್ತಿಯು ಕಡಿಮೆಯಾಗುವದಕ್ಕೆ ಕಾರಣವಾಯಿತು. ಅದೇ ಕಾರಣದಿಂದಲೇ ಒಡವಳಿ ಜಮೀನುಗಳ ಹರಾಜಿನಲ್ಲಿಯೂ, ಅಮರಾಯಿ ಹುಟ್ಟುವಳಿಯಲ್ಲಿಯೂ, ಒಟ್ಟು ೩೭,೦೦೦ ರೂಪಾಯಿನಷ್ಟು ಕಡಿಮೆಯಾಯಿತು. ಅಲ್ಲದೆ ವ್ಯವಸಾಯದಿಂದ ಜೀವಿಸುವ ಪ್ರಜೆಗಳ ಹಿತಕ್ಕಾಗಿ ಕಂದಾಯದ ವಸೂಲಾತಿಯ ಬಿಗಿಯನ್ನು ಕೂಡ ತಕ್ಕಮಟ್ಟಿಗೆ ಕಡಿಮೆ ಮಾಡಬೇಕಾಯಿತು.

ಹಿಂದಿನ ವರ್ಷದಲ್ಲಿ, ಎರಡು ಗಣಿಗಳ ೧೩ ತಿಂಗಳ ಉತ್ಪತ್ತಿಯ ಮೇಲಿನ ರಾಜಾಯವನ್ನು ಜಮೆಕಟ್ಟಿ, ಗತವರ್ಷದಲ್ಲಿ ೧೧ ತಿಂಗಳ ಉತ್ಪತ್ತಿಯ ಮೇಲಿನ ರಾಜಾಯವನ್ನು ಮಾತ್ರ ಜಮೆಕಟ್ಟಿದ್ದೇ, ಚಿನ್ನದ ಗಣಿಯ ಬಾಬಿನಲ್ಲಿ ತೋರಿಸಿರುವ ಕಡಿಮೆಗೆ ಮುಖ್ಯ ಕಾರಣವಾಗಿದೆ. ಕಾವೇರಿ ವೈದ್ಯುತಶಕ್ತಿಯ ಹುಟ್ಟುವಳಿಯಲ್ಲಿ ೨,೬೦,೩೫೪ ರೂಪಾಯಿ ಕಡಿಮೆಯಾಗಿದೆ. ಆದರೆ ಈ ಕಡಿಮೆಗೆ ಪ್ರತಿಯಾಗಿ, ಜೀತಮಂಗಲದ ಕೆರೆಯಿಂದ ೪ ತಿಂಗಳ ವರೆಗೆ ಚಿನ್ನದ ಗಣಿಗಳಿಗೆ ಸರಬರಾಯಿ ಮಾಡಿದ ನೀರಿನ ಬೆಲೆಯಾದ ಕೋಶಬಾಬಿನಿಂದ ಬಂದ ೪೨,೦೦೦ ರೂಪಾಯಿಯು ಪ್ರಾಪ್ತಿ ಜಮೆಯನ್ನು ಸೂಚಿಸಬಹುದಾಗಿದೆ. ಹಿಂದಿನ ವರ್ಷದಲ್ಲಿ ಬಂದ ಪ್ರಬಲವಾದ ಮಳೆಗಳಿಂದ ಕೆರೆಯು ಕಿತ್ತುಹೋಗದೆಯೂ ಮತ್ತು ತದನಂತರ ಪ್ರಾಪ್ತವಾದ ಅನಾವೃಷ್ಟಿ ಬಾರದೆಯೂ ಇದ್ದು, ಕೆರೆ ತುಂಬಿದ್ದರೆ ಈ ಬಾಬಿನ ಹುಟ್ಟುವಳಿಯು ಇನ್ನೂ ಹೆಚ್ಚಾಗುತ್ತಾ ಇತ್ತು.

ಸಾರಾಯಿದ ಬಾಬಿನಲ್ಲಿ ೧,೦೮,೧೫೩ ರೂಪಾಯಿ ಹೆಚ್ಚು ಹುಟ್ಟುವಳಿಯಾಯಿತು ಆದರೆ ಸೇಂದಿ ಮತ್ತು [illegible] ಬಾಬುಗಳಲ್ಲಿ ಸುಮಾರು ೪೦,೦೦೦ ರೂಪಾಯಿನಷ್ಟು ಹುಟ್ಟುವಳಿ ಕಡಿಮೆಯಾಯಿತು. ಆದರೆ ಸೇಂದಿ ಅಂಗಡಿಗಳ ಗುತ್ತಿಗೆ ಮೊಬಲಗಿನಲ್ಲಿ ೩೨,೪೯೭ ರೂಪಾಯನ್ನು ಲೋಕಲ್ ಫಂಡ ದವರಿಗೆ ಕೊಡದೆ ಇದ್ದರೆ ಗತವರ್ಷದ ಸೇಂದಿ ಬಾಬಿನ ಹುಟ್ಟುವಳಿಯು ಇನ್ನೂ ಹೆಚ್ಚಾಗುತ್ತಿತ್ತು ಅಬ್ಕಾರಿ ಬಾಬಿನಲ್ಲಿ ೯೨,೦೦೦ ರೂಪಾಯಿಗಿಂತ ಸ್ವಲ್ಪ ಹೆಚ್ಚಾಗಿ ನಿವ್ವಳ ಜಾಸ್ತಿ ಹುಟ್ಟುವಳಿಯಾಯಿತು.

ಗತವರ್ಷದಲ್ಲಿ ಹಿಂದಿನವರ್ಷಕ್ಕಿಂತ ೨೨ ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಬಡ್ಡಿಗೆ ಹಾಕಿದ್ದರಿಂದಲೂ, ಗತವರ್ಷಕ್ಕೆ ಬರಬೇಕಾದ ಬಡ್ಡಿಯನ್ನ, ಮದರಾಸ್ ಬ್ಯಾಂಕಿನವರು, ಹಿಂದಿನ ವರ್ಷಗಳಲ್ಲಿ ಮಾಡಿದ ಹಾಗೆ ಬರುವವರ್ಷದ ಜುಲೈ ಮೊದಲನೆ ತಾರೀಖಿನಲ್ಲಿ ಜಮಾ ಕಟ್ಟುವುದಕ್ಕೆ ಬದಲಾಗಿ ಜೂನ್ ತಿಂಗಳ ಆಖೈರ್ ದಿನದಲ್ಲಿ ಜಮೆ ಕಟ್ಟಿದ್ದರಿಂದಲೂ ಸರ್ಕಾರಿ ಹಣಕ್ಕೆ ಬರಬೇಕಾದ ಬಡ್ಡಿ ಬ್ಯಾಂಕಿನ ಡಿಪಾಜಿಟ್ಟು ಬಡ್ಡಿ ಈ ಬಾಬುಗಳಲ್ಲಿ ೧,೨೩,೦೦೦ ರೂಪಾಯಿನಷ್ಟು ಹೆಚ್ಚು ಹುಟ್ಟುವಳಿಯಾಯಿತು.

ಖರ್ಚು ಬಾಬುಗಳು.

ಕಳೆದ ವರ್ಷದ ಖರ್ಚನ್ನು ಹಿಂದಿನ ವರ್ಷದ ಖರ್ಚಿನೊಡನೆ ಹೋಲಿಸಿ ನೋಡಲಾಗಿ ಒಟ್ಟು ೩,೭೩,೩೩೯ ರೂಪಾಯಿನಷ್ಟು ಕಡಿಮೆಯಾಯಿತು. ಮರಾಮತ್ತು ಕೆಲಸಗಳಿಗಾಗಿ ಕಡಿಮೆ ಮೊಬಲಗನ್ನು ಮಂಜೂರ್ ಮಾಡಿದ್ದೇ ಈ ಬಾಬಿನಲ್ಲಿ ೩ ಲಕ್ಷ ರೂಪಾಯಿ ಕಡಿಮೆಯಾಗುವುದಕ್ಕೆ ಮುಖ್ಯ ಕಾರಣವಾಗಿದೆ ಗತವರ್ಷ ವಿಶೇಷವಾದ ಭಾರಿ ಖರ್ಚುಗಳು ಯಾವುವೂ ಇಲ್ಲದೆ ಇದ್ದುದರಿಂದ ಚಿಲ್ಲರೆ ಬಾಬುಗಳಲ್ಲಿ ಖರ್ಚು ಬಹಳವಾಗಿ ಕಡಿಮೆಯಾಗುವುದಕ್ಕೆ ಕಾರಣವಾಯಿತು. ಆದರೆ ಇದಕ್ಕೆ ಪ್ರತಿಯಾಗಿ ಯುವರಾಜರವರ [illegible]ಗಾಗಿ ಒಂದು ಲಕ್ಷ ರೂಪಾಯಿ ಖರ್ಚು ಹೆಚ್ಚಾಯಿತು [illegible] ಬಾಬಿನಲ್ಲಿ ೬೩,೫೧೦ ರೂಪಾಯಿ ಜಾಸ್ತಿ ಖರ್ಚಾದುದಕ್ಕೆ ರೆವಿನ್ಯೂ ಕಮೀಷನರ ಮತ್ತು ಅವರ ಸಿಬ್ಬಂದಿಯ ಸಂಬಳಕ್ಕಾಗಿ ಸಲ್ಲುವ ಒಟ್ಟು ೪೧,೪೮೩ ರೂಪಾಯನ್ನು "ಸಂಸ್ಥಾನದ ಮೇಲ್ವಿಚಾರಣೆ" ಬಾಬಿನಿಂದ ಈ ಬಾಬಿಗೆ ವರ್ಗ ಮಾಡಿದ್ದೂ, ಡೆಪ್ಯುಟಿ ಕಮೀಷನರ್ ಮತ್ತು ಅಸಿಸ್ಟೆಂಟ್ ಕಮೀಷನರುಗಳಿಗೆ ಕಾಲಕ್ರಮೇಣ ಹಲವು ಇಜಾಫೆ ಮಾಡಿದ್ದು ಮತ್ತು ರೆವಿನ್ಯೂ, ಸರ್ವೆ ಇಲಾಖೆಯಲ್ಲಿ ಸಂಬಳಗಳು ಮತ್ತು ಸಿಬ್ಬಂದಿಗಳು ಎಂಬ ಬಾಬಿನಲ್ಲಿ ಖರ್ಚು ಹೆಚ್ಚಾದದ್ದು ಸ್ವಲ್ಪ ಮಟ್ಟಿಗೆ ಕಾರಣವಾಗಿವೆ.

ಕಾವೇರಿ ವೈದ್ಯುತಶಕ್ತಿಯ ಬಾಬಿನಲ್ಲಿ ೧,೯೫,೧೨೮ ರೂಪಾಯಿ ಹೆಚ್ಚು ಖರ್ಚಾದುದಕ್ಕೆ ಬೆಂಗಳೂರಿನಲ್ಲಿ ವೈದ್ಯುತ ದೀಪವನ್ನು ಇಟ್ಟದ್ದೇ ಮುಖ್ಯ ಕಾರಣವಾಗಿದೆ.

ಶಿಲ್ಕು.

ಹಿಂದಿನ ವರ್ಷದಲ್ಲಿ ೧,೩೪,೭೪,೬೮೫ ರೂಪಾಯಿ ಶಿಲ್ಕು ಉಳಿದಿದ್ದದ್ದು ಗತವರ್ಷದ ಜುಲೈ ೧ನೇ ತಾರೀಖಿನಲ್ಲಿ ರೂಪಾಯಿ ೧,೩೪,೨೫,೯೫೮ ಶಿಲ್ಕು ಉಳಿದಿತ್ತು. ಈ ಪೈಕಿ ರೂಪಾಯಿ ೭೪,೮೫,೭೦೦ ಇಂಡಿಯಾ ಸರ್ಕಾರದ ಪತ್ರರೂಪವಾಗಿಯೂ ಉಳಿದದ್ದು ನಗದಾಗಿಯೂ ಇತ್ತು. ಈ ನಗದು ಪೈಕಿ ಸಂಸ್ಥಾನದ ಖಜಾನೆಗಳಲ್ಲಿ ೩೭,೩೮,೫೩೧ ರೂಪಾಯಿಯೂ ಮದರಾಸ್ ಬ್ಯಾಂಕಿನಲ್ಲಿ ೩೮,೨೨,೬೩೭ ರೂಪಾಯಿಯೂ ಲಂಡನ್ ಮೆ॥ ಕೂಟ್ಸ್ ಅಂಡ್ ಕಂಪೆನಿಯವರ ಬಳಿಯಲ್ಲಿ ೨,[illegible] ರೂಪಾಯಿಯೂ ನಗದಾಗಿ ಇದ್ದುವು ವರ್ಷದ ಆಖೈರಿನಲ್ಲಿ [illegible] ಕಾಗದಲ್ಲಿ ೪೩,೬೬,೩೨೦ ರೂಪಾಯಿ ಶಿಲ್ಕು ಉಳಿದಿತ್ತು.

ಬಜೆಟ್ ಅಂದಾಜು,

ಸಾಲ್ ಮಜಕೂರಿನ ಜಮಾಖರ್ಚು ಅಂದಾಜು ಪಟ್ಟಿಯಲ್ಲಿ ಒಟ್ಟು ೨,೨೩,೪೯,೦೦೦ ರೂಪಾಯಿ ಜಮೆಯಾಗುವದಾಗಿಯೂ ಒಟ್ಟು ೨,೧೩,೪೦,೦೦೦ ರೂಪಾಯಿ ಖರ್ಚಾಗುವದಾಗಿಯೂ ವರ್ಷದ ಆಖೈರಿನಲ್ಲಿ ೧೪೪,೦೩,೦೦೦ ರೂಪಾಯಿ ಶಿಲ್ಕು ಉಳಿಯಬಹುದಾಗಿಯೂ, ಅಂದಾಜು ಮಾಡಿ ಇದೆ ಖರ್ಚಿಗಾಗಿ ಇಟ್ಟಿರುವ ೨,೧೩,೪೯,೦೦೦ ರೂಪಾಯಿ ಭಾರಿ ಮೊಬಲಗಿನಲ್ಲಿ ಅಸಾಧಾರಣವಾದ ಅನೇಕ ಖರ್ಚು ಬಾಬುಗಳು ಸೇರಿಇವೆ ಇವು ಯಾವುವೆಂದರೆ —ಮೈಸೂರು ಟ್ರಸ್ಟ್ ಬೋರ್ಡಿಗೆ ಕಾರ್ಪೊರೇಷನ್ ಸಹಾಯದ್ರವ್ಯ ೩ ಲಕ್ಷ ರೂಪಾಯಿ, ಶಿವಮೊಗ್ಗೆಯ ಜಲ[illegible]ಗಾರಿಗಾಗಿ ೩೦,೦೦೦ ರೂಪಾಯಿ, ಪ್ಲೇಗಿಗಾಗಿ ೧,೨೫,೦೦೦ ರೂಪಾಯಿ; ಮತ್ತು ಗೌರವಾರ್ಹರಾದವರ ಸತ್ಕಾರಕ್ಕಾಗಿ ರೂಪಾಯಿ ೧,೫೦,೦೦೦, ಇವೇ. ಮರಾಮತ್ತ್ ಕಾಮಗಾರಿಗಳಲ್ಲಿ, [illegible] ಚಿವೆಯ ಕಾಂಗಾರಿಗೆ ಇಟ್ಟಿರುವ ೩,೭೫,೦೦೦ ರೂಪಾಯಿಯನ್ನೂ ಅರಮನೆಯನ್ನು ಪೂರ್ತಿ ಕಟ್ಟುವುದಕ್ಕಾಗಿ ಇಟ್ಟಿರುವ ೬ ಲಕ್ಷ ರೂಪಾಯಿಯನ್ನೂ ಬೆಂಗಳೂರು ನಗರದ ಅಭಿವೃದ್ಧಿಗಾಗಿ ಇಟ್ಟಿರುವ ೧,೨೦,೦೦೦ ರೂಪಾಯಿಯನ್ನೂ; ವಿಕ್ಟೋರಿಯಾ ಆಸ್ಪತ್ರೆಗಾಗಿ ಇಟ್ಟಿರುವ ೫೦,೦೦೦ ರೂಪಾಯಿಯನ್ನೂ; ರಾಮಸಾಗರದ ಕೆರೆ ದುರಸ್ತಿಗಾಗಿ ಇಟ್ಟಿರುವ ೧ ಲಕ್ಷ ರೂಪಾಯಿಯನ್ನೂ; ಮತ್ತು ಜಲ ನೀರಾವರಿ ಕಾಮಗಾರಿಗಳಿಗಾಗಿ ಇಟ್ಟಿರುವ ೧ ಲಕ್ಷ ರೂಪಾಯಿಯನ್ನೂ ಇಲ್ಲಿ ಉದಾಹರಿಸಬಹುದಾಗಿದೆ.

ಶಿಲ್ಕು.

೧೯೦೩ನೆಯ ವರ್ಷದ ಉಪನ್ಯಾಸದಲ್ಲಿ ನಾವು, ಈ ಸಂಸ್ಥಾನದ ಆದಾಯವ್ಯಯದ ನಿರ್ವಹಣೆಗಳನ್ನು ವ್ಯತ್ಯಾಸಪಡಿಸುವ ಸನ್ನಿವೇಶಗಳನ್ನು ವಿವರಿಸಿದ್ದೂ, ಸಾಮಾನ್ಯ ವ್ಯಯವನ್ನು ನಿಯಮಿತಪಡಿಸುವುದು ಆವಶ್ಯಕವೆಂದು ತಿಳಿಸಿದ್ದೂ, ಪ್ರಬಲವಾದ ಕಾರ್ಯಗಳನ್ನು ಜಾಗರೂಕತೆಯಿಂದ ಕೈಕೊಳ್ಳಬೇಕೆಂದು ಹೇಳಿದ್ದೂ, ನಿಮಗೆ ಜ್ಞಾಪಕದಲ್ಲಿರಬಹುದು ಅಲ್ಲಿಂದೀಚೆಗೆ ಈ ವಿಷಯವನ್ನು ಕಂಟ್ರೋಲರವರು ಪರಿಶೋಧಿಸಿ ಈಗ ತಾನೇ ರಿಪೋರ್ಟನ್ನು ಸಲ್ಲಿಸಿ ಕೊಟ್ಟಿದಾರೆ ಈ ರಿಪೋರ್ಟೂ ಕೂಡ, ಸಂಸ್ಥಾನದ ಖರ್ಚು ವರಮಾನಕ್ಕೆ ಅನುಗುಣವಾಗಿಲ್ಲವೆಂಬುದಾಗಿ ಎರಡು ವರ್ಷಕ್ಕೆ ಹಿಂದೆ ನಾವು ಹೇಳಿದ ಅಭಿಪ್ರಾಯವನ್ನೇ ದೃಢೀಕರಿಸುತ್ತದೆ ಆದರೂ ಸರ್ಕಾರದವರು, ತಮ್ಮ ವರಮಾನಕ್ಕೆ ತಕ್ಕಷ್ಟು ಖರ್ಚನ್ನು ಮಾತ್ರ ಮಾಡುತ್ತಾ ಬರುವರು. ಅವಶ್ಯಕವೆಂಬುದನ್ನು ಚೆನ್ನಾಗಿ ತಿಳಿದಿದ್ದಾರೆ. ಇದುವರೆಗೆ ಉಪಕ್ರಮಿಸಿದ್ದ ಭಾರಿ ಕಾಮಗಾರಿ ಕೆಲಸ ಪ್ರಾರಂಭ ಮಾಡಿದ ಕಾರಣ ಇನ್ನು ಮುಂದೆ ನಾವು [illegible] ಸಾಕಾದಷ್ಟು ಶಿಲ್ಕು ಉಳಿಸುವ ವಿಷಯಕ್ಕೆ ಅವಧಾನವನ್ನು ಕೊಡಬೇಕಾಯಿತು. ಇದಕ್ಕೆ ಅನುಗುಣವಾಗಿ ಗತವರ್ಷ ೧೦ ಲಕ್ಷ ರೂಪಾಯಿ ಶಿಲ್ಕು ಉಳಿಸಿ ಆಗಲೇ ಈ ಕಾರ್ಯಕ್ಕೆ ಪ್ರಾರಂಭ ಮಾಡಲಾಯಿತು.

ಸೇವಿಂಗ್ಸ್ ಬ್ಯಾಂಕುಗಳು

ಗತವರ್ಷದಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಜನರು ಹಾಕಿದ್ದು ೪೧ [illegible] ರೂಪಾಯಿ; ವಾಪಸು ತೆಗೆದುಕೊಂಡದ್ದು ೩೩,೬೨,೩೨೨ ರೂಪಾಯಿ ಆಖೈರಿನಲ್ಲಿ ಗತವರ್ಷದ [illegible] ಬಡ್ಡಿಯು ಬಾಕಿತು ೨,೪೯,೦೦೦ ರೂಪಾಯಿ ಕೂಡ ಸೇರಿತ್ತು. ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣ ಹಾಕಿದವರ ಸಂಖ್ಯೆಯು ೨,೫೮ ರಷ್ಟು ಹೆಚ್ಚಿ, ಕಳೆದ ಜುಲೈ ಆಖೈರಿನಲ್ಲಿ ಅವರ ಒಟ್ಟು ಸಂಖ್ಯೆಯು ೨೨,೮೦೦ ಆಗಿತ್ತು. ೧೮೯೮ಕ್ಕೆ ಮುಂಚೆ ಇದ್ದ ಡಿಪಾಜಿಟ್ಟು ಮೊಬಲಿಗಿನ ಪರಿಮಾಣಾಧಿಯ ನಿಯಮವನ್ನು ಪುನಃ ಜಾರಿಗೆ ತರುವ ವಿಷಯವು ಪರ್ಯಾಲೋಚನೆಯಲ್ಲಿದೆ

ಸರ್ಕಾರಿ ಬಿಮಾ.

ಗತವರ್ಷದಲ್ಲಿ ಬಿಮಾವಿಗಾಗಿ ಬಂದ ೧,೪೦೮ ಅರ್ಜಿಗಳ ಪೈಕಿ [illegible] ೧,೬೫೦ ರೂಪಾಯಿನ [illegible] ಒಟ್ಟು ೪,೯೬,೭೦೪ ರೂಪಾಯಿ ಬೋನಸ್ [illegible] ಪ್ರತಿಫಲವನ್ನು ಬದ್ಧಪಡಿಸುವ ೧,೦೧೮ ಫಲಕಾರಿಯಾದ ಬೀಮಾದ ಪತ್ರಗಳು ಕೊಡಲ್ಪಟ್ಟವು.

ಸಾಲ್ ಆಖೈರಿನಲ್ಲಿ ಈ ಫಂಡಿಗೆ ಜಮೆಕಟ್ಟಿದ್ದ ಶಿಲ್ಕು ೧೧,೪೧,೦೩೨ ರೂಪಾಯಿ ೨ ಆಣೆ ೬ ಕಾಸು ಆಗಿತ್ತು. ಬೀಮಾ ವಿಭಾಗದ ಪ್ರಯೋಜನವನ್ನು ಅರಮನೆ ಇಲಾಖೆ [illegible] ಫಂಡಿಗೆ ಸೇರಿದ ನೌಕರರೂ ಉಪಯೋಗಿಸಿಕೊಳ್ಳುವಂತೆ ಮಾಡಲಾಯಿತು.

ಲೋಕಲ್ ಫಂಡು.

ಗತವರ್ಷದಲ್ಲಿ ೭ ಹೊಸ ವಿಲೇಜ್ ಯೂನಿಯನ್ ಪಂಚಾಯತಿಗಳು ಏರ್ಪಡಿಸಲ್ಪಟ್ಟವು

ಡಿಸ್ಟ್ರಿಕ್ಟ್ ಫಂಡುಗಳ ವರಮಾನವು ೭,೬೩,೯೭೫ ರೂಪಾಯಿ ೮ ಆಣೆ ೧ ಕಾಸು ಆಗಿತ್ತು. ಪುರಾ ಶಿಲ್ಕು ೪,೫೬,

ಪಾಯಿ ೧೫ ಆಣೆ ೧೦ ಕಾಸೂ ಸೇರಿ, ಗತವರ್ಷದಲ್ಲಿ ೧,೪೪,೦೪೨ ರೂಪಾಯಿ ೮ ಆಣೆ ೦ ಪೈ ಖರ್ಚಿಗೆ ಒದಗಿತ್ತು. ಇದರಲ್ಲಿ ೬,೪೬,೪೯೨ ರೂಪಾಯಿ ೧೪ ಆಣೆ ೯ ಪೈ ಖರ್ಚಾಯಿತು. ಮರಾಮತ್ ಕೆಲಸಗಳಿಗಾಗಿ ೨,೪೯,೩೭೯ ರೂಪಾಯಿಯೂ ಆರೋಗ್ಯಾಭಿವೃದ್ಧಿಗಾಗಿ ೨೪,೧೭೪ ರೂಪಾಯಿಯೂ ವೈದ್ಯ ಸಹಾಯಕ್ಕಾಗಿ ೮೬,೨೦೧ ರೂಪಾಯಿಯೂ, ಪ್ರಯಾಣಿಕರ ಸ್ಥಳ ವಸತಿಗಾಗಿ ೨೩,೧೭೦ ರೂಪಾಯಿಯೂ, ಉಳಿದ ಮೊಬಲಗು ನಾನಾ ಪ್ರಕಾರ ಚಿಲ್ಲರೆ ಬಾಬುಗಳಿಗಾಗಿಯೂ ಖರ್ಚಾದವು.

ಲೋಕಲ್ ಫಂಡ್ ಜನರಲ್ ಎಂಬ ಬಾಬಿನಲ್ಲಿ ೧,೭೦,೩೦೩ ರೂಪಾಯಿ ವರಮಾನವು ಬಂದು ಮರು ಶಿಲ್ಕು ೨,೩೨,೫೫೧ ರೂಪಾಯಿಯೂ ಸೇರಿ ಒಟ್ಟು ೩,೯೨,೮೫೪ ರೂಪಾಯಿಯ ಪೈಕಿ ೩೬,೭೨೮ ರೂಪಾಯಿಯನ್ನು ಖರ್ಚು ಮಾಡಲಾಯಿತು. ಮುಖ್ಯವಾಗಿ ಮರಾಮತ್ ಕಾಮಗಾರಿಗಳಿಗಾಗಿ ೧,೭೯,೮೩೦ ರೂಪಾಯಿಯನ್ನೂ, ಕೈಗಾರಿಕೆ ಪಾಠಶಾಲೆಗಳಿಗಾಗಿ ೩೩,೨೯೫ ರೂಪಾಯಿಯನ್ನೂ, ಇಂಜನಿಯರಿಂಗ್ ಸ್ಕೂಲಿಗಾಗಿ ೩,೯೮೩ ರೂಪಾಯಿಯನ್ನೂ, ಹಿಂದೂ ಮತ್ತು ಯುನಾನಿ ವೈದ್ಯಶಾಲೆಗಳಿಗಾಗಿ ೩,೬೭೦ ರೂಪಾಯಿಯನ್ನೂ, ಮಾದರಿ ತೋಟಗಳ ಪೋಷಣೆಗಾಗಿ ೪,೮೭೮ ರೂಪಾಯಿಯನ್ನೂ ಖರ್ಚು ಮಾಡಲಾಯಿತು. ಮರಾಮತ್ ಕೆಲಸಗಳಿಗಾಗಿ ಖರ್ಚಾದ ಮೊಬಲಗಿನಲ್ಲಿ, ಬಾವಿಗಳಿಗಾಗಿ ೪೪,೮೦೦ ರೂಪಾಯಿಯೂ ಕೆರೆಗಳಿಗಾಗಿ ೧೦,೯೦೦ ರೂಪಾಯಿಯೂ ಖರ್ಚಾದವು.

ಮ್ಯುನಿಸಿಪಲ್

ಗತವರ್ಷದಲ್ಲಿ ೮೭ ಮ್ಯುನಿಸಿಪಾಲಿಟಿಗಳಿದ್ದುವು. ಅವುಗಳ ವರಮಾನವು ೮,೦೮,೪೦೮ ರೂಪಾಯಿ ಆಗಿತ್ತು. ಮರು ಶಿಲ್ಕು ೧೦,೩೩,೦೮೭ ರೂಪಾಯಿ ಪೈಕಿ ೬,೯೧,೦೬೩ ರೂಪಾಯಿ ಖರ್ಚು ಮಾಡಲಾಯಿತು. ಈ ಪೈಕಿ ಆರೋಗ್ಯಾಭಿವೃದ್ಧಿ ಸಾಧನಕ್ಕಾಗಿ ೧,೬೭,೧೦೫ ರೂಪಾಯಿಯೂ ಜನನ ಮರಣ ರಿಜಿಸ್ಟ್ರೇಷನಿಗಾಗಿ ೭೪,೪೯೨ ರೂಪಾಯಿಯೂ ದೀಪಕ್ಕಾಗಿ ೩೫,೬೩ ರೂಪಾಯಿಯೂ, ಖರ್ಚಾದವು. ನೀರು ಸರಬರಾಯಿಗಾಗಿ ೨೪,೪೧೦ ರೂಪಾಯಿಯೂ, ಚರಂಡಿ ಕಾಮಗಾರಿ ಮುಂತಾದ್ದಕ್ಕಾಗಿ ೩೫,೩೦೦ ರೂಪಾಯಿಯೂ, ರಸ್ತೆಗಳು ಮತ್ತು ಇತರ ಮರಾಮತ್ ಕೆಲಸಗಳಿಗಾಗಿ ೨,೫೧,೦೯೩ ರೂಪಾಯಿಯೂ, ಆಸ್ಪತ್ರೆಗಳು, ಹಿಂದೂ ಮತ್ತು ಯುನಾನಿ ವೈದ್ಯಶಾಲೆಗಳು, ಸೂಲಗಿತ್ತಿಯರ ಸಂಬಳ ಇವುಗಳಿಗಾಗಿ ೨೩,೧೩೭ ರೂಪಾಯಿಯೂ ವಿದ್ಯಾಭ್ಯಾಸಕ್ಕಾಗಿ ೩೬,೩೯೩ ರೂಪಾಯಿಯೂ ಖರ್ಚಾದವು. ಚಿತ್ರದುರ್ಗ ಮತ್ತು ಆ ಡಿಸ್ಟ್ರಿಕ್ಟಿನಲ್ಲಿ ಇರುವ ಕೆಲವು ಇತರ ಮ್ಯುನಿಸಿಪಾಲಿಟಿಗಳಲ್ಲಿ ಆರೋಗ್ಯಾಭಿವೃದ್ಧಿಯ ಕಾರ್ಯಗಳಿಗಾಗಿ "ಲೋಕಲ್ ಫಂಡ್ ಜನರಲ್" ಇಂದ ೧೩,೪೭೫ ರೂಪಾಯಿ ಸಹಾಯ ಕೊಡಲ್ಪಟ್ಟಿತು.

ಸುಂಕದ ರಿಯಾಯಿತಿ

ಒಂದು ಮ್ಯುನಿಸಿಪಾಲಿಟಿಯಲ್ಲಿ ಸುಂಕವನ್ನು ಸಲ್ಲಿಸಿದ ಪದಾರ್ಥ ಖರ್ಚಾಗದೆ ಹೋಗಿ ತರುವಾಯ ಅದನ್ನು ಮತ್ತೊಂದು ಮ್ಯುನಿಸಿಪಾಲಿಟಿಗೆ ತೆಗೆದುಕೊಂಡು ಹೋಗುವಾಗ ಪುನಃ ಸುಂಕವನ್ನು ಕೊಡಬೇಕಾಗುತ್ತಿದ್ದುದರಿಂದ ವರ್ತಕರಿಗೆ ನಿರಂತರವಾದ ತೊಂದರೆ ಕಾರಣವಾಗುತ್ತಿದ್ದುದು ಇವರ ಸಿದ್ಧವಾಗಿ ಈ ಸಭೆಯಲ್ಲಿ ಗತವರ್ಷ ಬಹಳವಾಗಿ ಚರ್ಚೆಯೂ ನಡೆಯಿತು. ಪ್ರಕೃತದಲ್ಲಿ ಗುರುತಿಸಲ್ಪಡತಕ್ಕ ಬಾಬುಗಳ ವಿಷಯದಲ್ಲಿ ಮಾತ್ರ, ಒಂದು ಮ್ಯುನಿಸಿಪಾಲಿಟಿಯಲ್ಲಿ ಸುಂಕ ತೀರಿಸಿದ ಮೂರು ತಿಂಗಳೊಳಗಾಗಿ ಮತ್ತೊಂದು ಮ್ಯುನಿಸಿಪಾಲಿಟಿಯಲ್ಲಿ ಅದರ ಮೇಲೆ ಸುಂಕ ವಸೂಲ್ಮಾಡಕೂಡದೆಂದು ಹುಕುಂ ಮಾಡಲಾಯಿತು. ಈ ಏರ್ಪಾಟಿಯು ಮ್ಯುನಿಸಿಪಾಲಿಟಿಯವರಿಂದ ಅಂಥ ಪದಾರ್ಥಕ್ಕೆ ಸರಿಯಾಗಿ ಸುಂಕದ ಮೊಬಲಗನ್ನು ಬರಮಾಡಿಕೊಳ್ಳಬಹುದೆಂದೂ ಹುಕುಂ ಮಾಡಿದೆ.

ವ್ಯವಸಾಯ, ಕೈಗಾರಿಕೆ ಮತ್ತು ವ್ಯಾಪಾರ.

ಹತ್ತಿ ಬೀಜವನ್ನೂ ಮತ್ತು ಕೆಲವು ಬಳ್ಳಾರಿಯಿಂದ ತಂದ ಗುಜರಾತಿ ಬೀಜವನ್ನೂ ಹಾಕಲು ಸ್ಟೇಟ್ ಫಾರಂ ಎಂಬ ಹಗರಿಯಲ್ಲಿ ಕಾದು ಕಡಿಮೆ ಕರಾವ ಕ್ಷೇತ್ರದಲ್ಲಿ ಪ್ರಯತ್ನ ಮಾಡುವ ಪ್ರಯತ್ನವು ಸ್ವಲ್ಪ ಮಟ್ಟಿಗೆ ಸಫಲವಾಗಿ ನಡೆಯುತ್ತಿದೆ.

ವಿಶೇಷ ಧನ ಲಾಭಕರವಾಗಿ ಪರಿಣಮಿಸುತ್ತಿರುವ ರಬ್ಬರು ಮತ್ತು ಇತರ ಗಿಡಗಳನ್ನು, ಇಂಡಿಯಾ ದೇಶದ ನಾನಾ ಭಾಗಗಳಿಗೆ ಕಳುಹಿಸುವದಕ್ಕಾಗಿ, ಬೆಂಗಳೂರಿನಲ್ಲಿರುವ ಲಾಲ್‌ಬಾಗಿನಲ್ಲಿ ವಿಸ್ತಾರವಾಗಿ ಪೈರುಮಾಡುತ್ತಾ ಇದೆ. ನಾಟಿನ ಗಿಡಗಳಲ್ಲಿ ಆಸ್ಟ್ರೇಲಿಯಾದಿಂದ "ಕ್ಯಾರವಾನಿಕ" ಹತ್ತಿ ಗಿಡಗಳನ್ನು ತಂದಿರುವುದು ವಿಶೇಷವಾಗಿ ಇದೆ.

ಬೆಂಗಳೂರು ತಾಲ್ಲೂಕಿನಲ್ಲಿ ಹೆಬ್ಬಾಳಗ್ರಾಮದ ಹತ್ತಿರ ೩೦ ಎಕರೆ ವಿಸ್ತೀರ್ಣವುಳ್ಳ ಪ್ರದೇಶದಲ್ಲಿ ಒಂದು ವ್ಯವಸಾಯ ಪರೀಕ್ಷಾಕ್ಷೇತ್ರ ಸ್ಥಾಪನೆಯ ಕೆಲಸವನ್ನು ಅಗ್ರಿಕಲ್ಚರ್ ಕೆಮಿಸ್ಟ್ ಯಾ ವ್ಯವಸಾಯ ರಸಜ್ಞರು ಉದ್ಯಮಿಸಿ ಇದ್ದಾರೆ. ಅಲ್ಲಿನ ಭೂಮಿಯ ಸ್ವಭಾವವು ಪ್ರಾಯಶಃ ಒಂದೇ ರೀತಿಯಾಗಿದ್ದರೂ ಅಲ್ಲಿ ಮುಂಚೆ ಸಾಗುವಳಿ ಮಾಡುತ್ತಿದ್ದ ರೈತರು ತಮ್ಮ ತಮ್ಮ ಹೊಲಗಳನ್ನು ಬೇರೆ ಬೇರೆ ವಿಧವಾಗಿಯೇ ವ್ಯವಸಾಯ ಮಾಡುತ್ತ ಇದ್ದುದರಿಂದ, ಮೇಲ್ಕಂಡ ನಾಲ್ಕು ತಾಲ್ಲೂಕುಗಳ ಈಗಿನ ಉತ್ಪತ್ತಿಯಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಈ ವ್ಯತ್ಯಾಸಗಳು ಎಷ್ಟು ಮಟ್ಟಿಗೆ ಇವೆ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಮೇಲ್ಕಂಡ ಪ್ರದೇಶದ ಒಂದು ಭಾಗದಲ್ಲಿ ಪರೀಕ್ಷೆ ನಡೆಯಿಸದೆ ಉಳಿದ ಭಾಗದಲ್ಲಿ ನಾನಾ ವಿಧವಾದ ಬಾಗಾಯತು ಬೆಳೆಗಳನ್ನೂ ಬತ್ತವನ್ನೂ ಜನಗಳ ಉಪಯೋಗಕ್ಕಾಗಿ ಸ್ವಲ್ಪ ಜೋಳವನ್ನೂ ಕೂಡ ಪೈರುಮಾಡಿದೆ.

ಬೆಂಗಳೂರಿನಲ್ಲಿರುವ ಲ್ಯಾಬೊರೇಟರಿ ಯಾ ರಸಾಯನ ಶಾಲೆಯ ಸುತ್ತಲೂ ಇರುವ ಪರೀಕ್ಷಾಕ್ಷೇತ್ರದಲ್ಲಿ ಮುಖ್ಯವಾಗಿ ರಾಗಿಯನ್ನೂ ಕಬ್ಬನ್ನೂ ಪೈರು ಮಾಡಲಾಯಿತು. ಈ ಕಬ್ಬು ಕೂಳೆ ಪೈರಾಗಿತ್ತು. ಇದು ಕಳೆದ ವರ್ಷಕ್ಕಿಂತ ಅಧಿಕವಾಗಿ ನೆಲಕ್ಕೆ ಬಗ್ಗಿಕೊಂಡಿದ್ದಾಗ್ಯೂ ಸುಮಾರಾಗಿ ಹೋದವರ್ಷದ ಬೆಳೆಯಷ್ಟು ಒಳ್ಳೆಯದಾಗಿಯೇ ಇತ್ತು. ಕಬ್ಬಿನ ಪರೀಕ್ಷೆಯಲ್ಲಿ ಬೆಲ್ಲವನ್ನೂ ಹಸಿ ಸಕ್ಕರೆಯನ್ನೂ ತಯಾರುಮಾಡುವುದೇ ಮುಖ್ಯವಾದ ಅಂಶವಾಗಿದೆ.

ಮಡಿಕೇರಿಯ ಬಾನಿ ಯಾ ಮರ್ಕ್ಯಾರಾ ತೋಟಗಳಲ್ಲಿ ಗಿಡಗಳನ್ನು ಬೆಳಸುವ ಸಸ್ಯಾಲಯವು ತಯಾರಾಗುತ್ತಿದೆ. ವ್ಯವಸಾಯ ಮುಟ್ಟುಗಳ ನಿರಂತರವಾದ ಪ್ರದರ್ಶನಕ್ಕಾಗಿ ಒಂದು ಕೊಠಡಿಯುಳ್ಳ ಒಂದು ಕಟ್ಟಡವು ಪ್ರಾಯಶಃ ಪೂರ್ತಿಯಾಗಿದೆ. ವಿಷ (ಅಥವಾ ಬೂಜಿನ) ಶಾಸ್ತ್ರಜ್ಞನ ಮತ್ತು ಕ್ರಿಮಿಶಾಸ್ತ್ರಜ್ಞನ ಕೆಲಸಕ್ಕೆ ಒಬ್ಬ ಪಂಡಿತನನ್ನು ಉತ್ತರ ಅಮೇರಿಕದ ಕೆನಡಾ ದೇಶದಲ್ಲಿ ಚುನಾಯಿಸಲಾಯಿತು. ಇದಕ್ಕೆ ಇಂಡಿಯಾ ಸರ್ಕಾರದವರ ಮಂಜೂರಾತಿಯನ್ನು ಕೋರಿ ಇದೆ. ಇಬ್ಬರು ಪ್ರೊಬೇಷನರಿ ಕೆಮಿಸ್ಟ್ ಯಾ ರಸಜ್ಞರನ್ನು ಕೂಡ ನೇಮಕಮಾಡಲಾಯಿತು.

ಹಿಂದೂ ದೇಶದಲ್ಲಿ ಇನ್ನೂ ಬೆಳೆಯತಕ್ಕದ್ದಾಗಿರುವ ರಾಸಾಯನಿಕವಾದ ವ್ಯವಸಾಯದ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆಯು ಅವಶ್ಯಕವಾಗಿದೆ. ಏನೆಂದರೆ ಇಲ್ಲಿಯ ಹವವೂ ಭೂಸ್ವಭಾವವೂ ಇತರ ಸನ್ನಿವೇಶಗಳೂ ಭೇದವಾಗಿರುವ ಕಾರಣ ಯೂರೋಪ್ ದೇಶಗಳಲ್ಲಿಯೂ ಅಮೇರಿಕಾದಲ್ಲಿಯೂ ನಿಶ್ಚಿತವಾಗಿರುವ ಕ್ರಮಗಳನ್ನು ಯಥಾವತ್ತಾಗಿಯೇ ಇಲ್ಲಿ ಜಾರಿಗೆ ತರಲಾಗುವದಿಲ್ಲ. ಅವರೂ ಈ ಕ್ರಮಗಳು ನಮಗೆ ಪ್ರಯೋಜನಕಾರಿಗಳಲ್ಲದೆ ಇಲ್ಲ. ಮೈಸೂರು ಸಂಸ್ಥಾನದ ನಾನಾ ವಿಧವಾದ ಜಮೀನುಗಳಿಗೆ ಆ ಕ್ರಮಗಳನ್ನು ಸಫಲವಾಗಿ ಉಪಯೋಗಿಸಬೇಕಾದರೆ ಪೂರ್ವಭಾವಿಯಾಗಿ ಬಹಳ ಮಾಗಿ ಪರೀಕ್ಷೆಯನ್ನೂ ಕಾಲವನ್ನೂ ಆಲೋಚನೆಯನ್ನೂ ವಿನಿಯೋಗಿಸಬೇಕಾದ ಸ್ವಂತ ಬುದ್ಧಿ ಕಾರ್ಯವನ್ನು ಮಾಡಬೇಕಾಗಿದೆ. ಇವರ ಫಲಿತಾಂಶದಲ್ಲಿ ಜನರಿಗೆ ಅನವಶ್ಯಕವಾದ ಅತೃಪ್ತಿಯುಂಟಾಗದೆ ಇರುವದಕ್ಕಾಗಿ ಇಲ್ಲಿ ಈ ಅಂಶಗಳನ್ನು ಸೂಚಿಸಿದ್ದೇವೆ.

ಮಾರಿ ಕಣಿವೆಯ ಕೆರೆಯ ಕೆಳಗೆ ೫,೦೦೦ ಎಕರೆ ಜಮೀನನ್ನು ಮೆ॥ ಅರ್ಬತ್‌ನಾಟ್ ಅಂಡ್ ಕಂಪೆನಿಯವರಿಗೆ ಖಾಯಂ ಮಾದರಿ ಕಂದಾಯದ ಪಟ್ಟೆ ಕೊಡಲಾಯಿತು. ಈ ಜಮೀನಿನಲ್ಲಿ ಮಾರಿ ಕಂಪೆನಿಯವರು ಅತ್ಯಂತ ಉತ್ಕೃಷ್ಟವಾದ ಕೃಷಿ ಶಾಸ್ತ್ರದ ವಿಧಾನಗಳನ್ನು ಉಪಯೋಗಿಸಿ ಕಬ್ಬನ್ನು ಬೆಳೆಯಬೇಕೆಂದು ಉದ್ದೇಶಿಸಿದ್ದಾರೆ. ಈ ವಿಧಾನಗಳು ಮೈಸೂರು ದೇಶದ ಜನಗಳಿಗೆ ಅಂತಹ ಕ್ರಮಗಳನ್ನು ಪ್ರತ್ಯಕ್ಷವಾಗಿ ಬೋಧಿಸುವುದಲ್ಲದೆ ಇತರ ವಿಧಗಳಲ್ಲಿಯೂ ಕೂಡ ಪ್ರಯೋಜನಕಾರಿಯಾಗುವವೆಂದು ನಿರೀಕ್ಷಿಸಿದೆ. ಈ ರೀತಿಯಾಗಿ ಮಾರಿ ಕಣಿವೆ ಕೆರೆಯ ಪ್ರಯೋಜನವು ಈಗಲೇ ಕಾರ್ಯತಃ ವ್ಯಕ್ತವಾಗುತ್ತಾ ಇದೆ.

ನಾವು ಹಿಂದಿನ ಉಪನ್ಯಾಸದಲ್ಲಿ ತಿಳಿಸಿದಂತೆ ಶಿವಮೊಗ್ಗದಲ್ಲಿ ಸಾಹಸಿಗಳವರ ಮೇಲ್ಕಂಡ ಸಂಘದವರು ರಬ್ಬರ್ ವ್ಯವಸಾಯದ ವಿಷಯದಲ್ಲಿ ಹೇಗೆ ಪರೀಕ್ಷೆ ಮಾಡುತ್ತಿರುವರೆಂಬುದನ್ನೂ ಅವರ ಪ್ರಯತ್ನವು ಎಷ್ಟುಮಟ್ಟಿಗೆ ಅಭಿವೃದ್ಧಿ ಹೊಂದುತ್ತಿರುವದು ಎಂಬುದನ್ನೂ ತಿಳಿಯಲು ನೀವು ಕುತೂಹಲವುಳ್ಳವರಾಗಿರಬಹುದು. ಈ ರಬ್ಬರ್ ತೋಟವು ಶಿವಮೊಗ್ಗೆಗೆ ೧೨ ಮೈಲಿ ದೂರದಲ್ಲಿ ಭದ್ರಾ ನದಿಯ ತೀರದಲ್ಲಿದೆ. ಇದನ್ನು ನಾವು ಈಚೆಗೆ ನೋಡಿ ಸಂತೋಷಪಟ್ಟೆವು. ಆ ತೋಟವು ೭೫೦ ಎಕರೆ ವಿಸ್ತಾರವಾಗಿದೆ. ಈ ಪೈಕಿ ೭೦೦ ಎಕರೆಯಷ್ಟು ಭೂಮಿಯಲ್ಲಿ 'ಸೀರಾ ರಬ್ಬರ್' ಮರಗಳೂ ೧೦ ಎಕರೆಯಲ್ಲಿ ಹಿಪ್ಪುನೇರಳೆಯೂ, ೧ ಎಕರೆಯಲ್ಲಿ ಹತ್ತಿಯೂ ಇವೆ. ಪೈರು ನೆಡುವ ಕೆಲಸವು ೧೯೦೩ನೆಯ ಜೂನ್ ತಿಂಗಳಲ್ಲಿ ಆರಂಭವಾಯಿತು. ಆಗಲೇ ಹಲವು ಗಿಡಗಳು ಚೆನ್ನಾಗಿ ಬೆಳೆದಿರುವಂತೆ ಕಾಣುತ್ತವೆ. ಸಂಸ್ಥಾನದ ಪರವಾಗಿ ಈ ತೋಟವನ್ನು ನೋಡಿಕೊಳ್ಳುತ್ತಿರುವ ಮಿ॥ ಸ್ಟ್ರಿಕ್‌ಲ್ಯಾಂಡ್ ಅವರು ಈ ದೇಶದ ಭೂಗುಣಕ್ಕೆ 'ಸೀರಾ ರಬ್ಬರು' ಸರ್ವೋತ್ತಮವಾದುದೆಂದು ನಂಬುತ್ತಾರೆ. ಈ ಪರೀಕ್ಷೆಯು ನೆರವೇರಿದರೆ ರೈತರಿಗೆ ನಿದರ್ಶನವಾಗಿರುವದರಿಂದ ಪ್ರಯೋಜನಕರವಾಗಿಯೇ ಆಗಬಹುದಾಗಿ ತೋರುತ್ತದೆ.

ಇದಲ್ಲದೆ ಎಡೆಹಳ್ಳಿಯ ಸಮೀಪದಲ್ಲಿ ಚಿಬ್ಬೆಯೆಂಬ ಸ್ಥಳದಲ್ಲಿ ಸರ್ಕಾರಿ ಜಂಗಲ್ ಇಲಾಖೆಯವರು ಈಚೆಗೆ 'ಪಾರ ರಬ್ಬರು' ಎಂಬ ಬೇರೆ ಜಾತಿಯ ೭,೦೦೦ ರಬ್ಬರ್ ಗಿಡಗಳನ್ನು ಒಂದು ತೋಟದಲ್ಲಿ ನಾಟಿದಾರೆ. ಅವು ಕ್ಷೇಮವಾಗಿ ಬೆಳೆಯುತ್ತಿವೆ.

ರಿವಿಜನ್ ಸೆಟ್ಲ್‌ಮೆಂಟು.

ಜಗಳೂರು, ಹೊಳಲ್ಕೆರೆ, ಮತ್ತು ಚಿತ್ರದುರ್ಗ ಈ ಮೂರು ತಾಲ್ಲೂಕುಗಳಲ್ಲಿ ರಿವಿಜನ್ ಸೆಟ್ಲ್‌ಮೆಂಟನ್ನು ಜಾರಿಗೆ ತರಲಾಯಿತು. ಜಗಳೂರು ತಾಲ್ಲೂಕಿನಲ್ಲಿ ಈ ಹಿಂದೆ ಜಮೀನಿನ ಮೇಲಣ ಕಂದಾಯದಲ್ಲಿ ಸೇಕಡ ೭೩ರ ಮೇರೆ ಮಾತ್ರ ಹೆಚ್ಚಾಯಿತು. ಇದು ಸರ್ಕಾರದವರು ವಿಧಿಸುವ ಸೇಕಡ ೩೩ ರಷ್ಟರ ಪರಮ ಅವಧಿಗೆ ಬಹಳ ಕಡಿಮೆಯಾಗಿದೆ. ಸರಾಸರಿ ಖುಷ್ಕಿ ರಿವಾಜಿನ ಜಾಸ್ತಿಯು ೭ ಆಣೆ ೨ ಕಾಸಿನಿಂದ ೮ ಆಣೆಯೂ, ತರೀ ರಿವಾಜಿನ ಜಾಸ್ತಿಯು ೧ ರೂಪಾಯಿ ೧೨ ಆಣೆಯಿಂದ ೨ ರೂಪಾಯಿ ೧೦ ಕಾಸಿಗೂ ಏರಿತು. ಬಾಗಾಯತ್ ರಿವಾಜಿನ ಸರಾಸರಿಯು ೨ ರೂಪಾಯಿ ೮ ಆಣೆಯಿಂದ ೧ ರೂಪಾಯಿ ೧೧ ಆಣೆ ೩ ಕಾಸಿಗೆ ಇಳಿಯಿತು. ಈ ತಾಲ್ಲೂಕಿನ, ೧೮೭೫ನೆ ಇಸವಿಯಲ್ಲಿ ಮೊದಲು ಸೆಟಲ್‌ಮೆಂಟ್ ಮಾಡಲ್ಪಟ್ಟಿತು. ರಿವಿಜನ್ ಸೆಟ್ಲ್‌ಮೆಂಟ್ ಕಾಲದಲ್ಲಿ ಹಿಂದೆ ಇದ್ದುದಕ್ಕಿಂತ ಪ್ರಜಾಸಂಖ್ಯೆಯು ಸುಮಾರು ೧೩,೦೦೦ ದಷ್ಟು ಹೆಚ್ಚಾಗಿ ಒಡವಳಿಯ ಪ್ರದೇಶವು ೩೬,೦೦೦ ಎಕರೆಯಷ್ಟು ಹೆಚ್ಚಿದವು. ಹಿಂದೆ ಇದ್ದುದಕ್ಕಿಂತ ೧೨,೦೦೦ ದನಗಳು ಹೆಚ್ಚಿದವು. ಭೂಮಿಯನ್ನು ಪುನಃ ತರಂವಾರಾಗಿ ವಿಂಗಡಿಸಲಿಲ್ಲ. ಆದರೆ ತರೀ ಮತ್ತು ಬಾಗಾಯತು ಜಮೀನುಗಳ ನೀರು ವಿಷಯದ ತರಂವಾರು ವಿಭಾಗವನ್ನು ಮಾತ್ರ ಪುನರ್ನಿರ್ಮಾಣ ಮಾಡಲಾಯಿತು.

ಹೊಳಲ್ಕೆರೆ ತಾಲ್ಲೂಕಿನಲ್ಲಿ ಕಂದಾಯವು ಹಿಂದಿನ ಕಂದಾಯದ ಮೇರೆ ಸೇಕಡ ೧೮ ರಂತೆ ಹೆಚ್ಚಾಯಿತು. ಈ ತಾಲ್ಲೂಕಿನಲ್ಲಿಯೂ ಕೂಡ ಅದೇ ವಿಧವಾದ ಅಭಿವೃದ್ಧಿಯ ಚಿಹ್ನೆಗಳು ತೋರಿದವು. ಹಿಂದೆ ೧೮೭೬—೭೮ನೆಯ ಇಸವಿಯ ಮಹಾಕ್ಷಾಮವು ಈ ಪ್ರದೇಶದಲ್ಲಿ ಬಹಳ ಹಾವಳಿಯನ್ನು ಮಾಡಿತ್ತು. ಆದರೆ ಇದು ಈಚಿನ ೧೦—೧೨ ವರ್ಷಗಳಲ್ಲಿ ಮಾತ್ರ ಆ ಹೀನಸ್ಥಿತಿಯಿಂದ ಚೇತರಿಸಿಕೊಂಡ ಹಾಗೆ ಕಂಡುಬಂದಿತು. ಇಲ್ಲಿ ವ್ಯವಸಾಯದ ಅಭಿವೃದ್ಧಿಗೆ ಬಹಳ ಅವಕಾಶವಿರುವದರಿಂದ, ವ್ಯವಸಾಯಾಭಿವೃದ್ಧಿಗೆ ಹೆಚ್ಚಾದ ಪ್ರೋತ್ಸಾಹವನ್ನುಂಟುಮಾಡುವ ಉದ್ದೇಶದಿಂದ, ಕಂದಾಯವನ್ನು ಮಿತವಾಗಿ ಹೆಚ್ಚಿಸಿದೆ. ಚಿತ್ರದುರ್ಗದ ತಾಲ್ಲೂಕಿನಲ್ಲಿ ಕಂದಾಯವು ಸೇಕಡಾ ೧೯ ರಂತೆ ಮಾತ್ರ ಜಾಸ್ತಿಯಾಗಿದೆ. ಚಳ್ಳಕೆರೆ, [illegible] ಬೂದಿಹಾಳು, ಮತ್ತು ಸೊರಬದ ತಾಲ್ಲೂಕುಗಳ ಪಂಗಳು ಬರುವ ಚಳಿಗಾಲದಲ್ಲಿ ಪ್ರಕಟಿಸಲ್ಪಡಲು ಈಗ ಸಿದ್ಧವಾಗಿವೆ.

ಸರ್ವೆಸೆಟ್ಲ್‌ಮನ ಕ್ರಮ.

ರಿವಿಜನ್ ಸೆಟ್ಲ್‌ಮೆಂಟನ್ನು ಕ್ರಮವಾಗಿ ಜಾರಿಗೆ ತರುವುದಕ್ಕೆ ೨ ತಿಂಗಳು ಮುಂಚೆ, ಗ್ರಾಮಗಳನ್ನು ಗುಂಪಾಗಿ ಸೇರಿಸುವ ವಿಷಯದಲ್ಲಿಯೂ ಹಾಕತಕ್ಕ ಕಂದಾಯದ ಪರಮ ಅವಧಿಯ ದರಗಳ ವಿಷಯದಲ್ಲೂ ಏನಾದರೂ ಆಕ್ಷೇಪಣೆಗಳು ಇದ್ದರೆ ಮಾಡಬಹುದು ಎಂದು ಕೇಳುವ ಕ್ರಮವು ಜಾರಿಯಲ್ಲಿತ್ತು. ಇದರಿಂದ ರೈತರಿಗೆ ತಮ್ಮ ತಮ್ಮ ಹಿಡುವಳಿಗಳ ವಿಷಯದಲ್ಲಿ ಏನಾಗಿದೆ ಎಂದು ತಿಳಿಯುತ್ತಿರಲಿಲ್ಲವೆಂಬುದಾಗಿ ಕಂಡುಬಂತು. ಆದುದರಿಂದ ರಿವಿಜನ್ ಸೆಟ್ಲ್‌ಮೆಂಟು ಜಾರಿಗೆ ಬಂದಲಾಗಾಯಿತು ೩ ತಿಂಗಳೊಳಗೆ ಡೆಪ್ಯುಟಿ ಕಮಿಷನರಿಗೆ ಅಪೀಲು ಮಾಡಿಕೊಳ್ಳಬಹುದೆಂದು ಹುಕುಂ ಮಾಡಲಾಯಿತು. ಡೆಪ್ಯುಟಿ ಕಮಿಷನರಿಂದ ರಿಪೋರ್ಟು ತರಿಸಿಕೊಂಡು, ಅವಶ್ಯವಿದ್ದರೆ ಸರ್ವೆ ಕಮಿಷನರ ಅಭಿಪ್ರಾಯವನ್ನೂ ಕೇಳಿ, ಈ ಅಪೀಲುಗಳನ್ನು ಸರ್ಕಾರದವರು ಪರ್ಯಾಲೋಚಿಸುವರು. ಈ ಬದಲಾವಣೆಯಿಂದ ರೈತನು ತನ್ನ ಅಹವಾಲನ್ನು ಹೇಳಿಕೊಳ್ಳುವದಕ್ಕೆ ಮುಂಚೆ ತನ್ನ ನಿಜಸ್ಥಿತಿಯನ್ನು ತಿಳಿದುಕೊಳ್ಳುವಂತೆ ಆಗುವದು.

ರೆವಿನ್ಯೂ.

ಶೇಕ್‌ದಾರಿ ಅಭಿವೃದ್ಧಿಯ ಪದ್ಧತಿಯನ್ನು ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಪೂರ್ತಿಯಾಗಿ ಜಾರಿಗೆ ತರಲಾಯಿತು. ಇತರ ಡಿಸ್ಟ್ರಿಕ್ಟುಗಳಲ್ಲಿಯೂ ಜಾರಿಗೆ ತರುವ ಕಾರ್ಯವು ತಕ್ಕ ಮಟ್ಟಿಗೆ ನಡೆಯುತ್ತ ಇದೆ. ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಹೊಸ ಹೋಬಳಿಗಳನ್ನು ಏರ್ಪಡಿಸಲಾಯಿತು.

ವ್ಯವಸಾಯದ ಬ್ಯಾಂಕುಗಳು.

ಕಳೆದ ವರ್ಷ ೬೭,೦೮೦ ರೂಪಾಯಿ ಸಾಲ ಕೊಡಲಾಯಿತು, ೯,೧೦೮೩೬ ರೂಪಾಯಿ ವಸೂಲಾಯಿತು. ಬಾಕಿ ಬರಬೇಕಾಗಿದ್ದ ೫೩ ಲಕ್ಷದ ಪೈಕಿ ಇನ್ನೂ ೯೩ ಲಕ್ಷ ರೂಪಾಯಿ ಸರಕಾರಕ್ಕೆ ಬಾಕಿ ಬರಬೇಕಾಗಿತ್ತು. ಇನ್ನು ಕ್ರಮೇಣ ವಸೂಲ್ಮಾಡಬೇಕಾಗಿದೆ.

. ಸಾಲೆಪುರ ಮತ್ತು ಚಿಕ್ಕಮಗಳೂರು ಕಾಫಿ ಬ್ಯಾಂಕುಗಳ ಮೆಂಬರುಗಳು, ತಮ್ಮ ತೋಟಗಳಲ್ಲಿ ಕೆಲಸ ನಡಿಸುವದಕ್ಕಾಗಿ ಸರಕಾರದಿಂದ ಕೊಟ್ಟ ಮುಂಗಡದ ವಿಷಯವಾಗಿ ಕಳೆದ ವರ್ಷದ ಉಪನ್ಯಾಸದಲ್ಲಿ ನಾವು ಸೂಚಿಸಿದೆವಷ್ಟೆ. ಈ ಬ್ಯಾಂಕುಗಳನ್ನು ಪುನರುಜ್ಜೀವಿಸಿ ನಿಲ್ಲಿಸುವಂತೆ ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾಗಿ ಕೊನೆಗೆ ಅವುಗಳನ್ನೆಲ್ಲಾ ಮುಚ್ಚಿಬಿಡಲಾಯಿತು. ಸುತರಾಂ ನಷ್ಟವೇನು ತಿಳಿದು ಬಂದ ಒಂದೆರಡು ಕಾಫಿತೋಟಗಳು ವಿನಾ, ಉಳಿದ ಎಲ್ಲಾ ತೋಟಗಳನ್ನು ಕೆಲಸ ನಡಿಸುವದಕ್ಕಾಗಿ ಆಯಾ ತೋಟಗಾರರ ವಶದಲ್ಲಿಯೇ ಬಿಟ್ಟು ಬಿಡಲಾಯಿತು. ಈ ತೋಟಗಾರರು ಒಪ್ಪಿದ್ದರೂ ತಮ್ಮ ತಮ್ಮ ಪಾಲಿಗೆ ಬಂದ ಸಾಲದ ಭಾಗಗಳನ್ನು ಇಪ್ಪತ್ತು ವರ್ಷಗಳಲ್ಲಿ ಸಮವಾದ ಕಿಸ್ತುಗಳ ಮೇರೆ ಸರಕಾರಕ್ಕೆ ಪಾವತಿ ಮಾಡುವದಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಕರಾರು ಮಾಡಿಕೊಂಡಿದ್ದಾರೆ.

ಕೋಲಾರದಲ್ಲಿ ೨, ಶಿವಮೊಗ್ಗೆಯಲ್ಲಿ ೮, ಮೈಸೂರಿನಲ್ಲಿ ೩, ಈ ಮೇರೆ ಇತರ ಹದಿಮೂರು ವ್ಯವಸಾಯದ ಬ್ಯಾಂಕುಗಳಿಗೆ ಕೊಟ್ಟ ಸಾಲವನ್ನು ವಸೂಲ್ಮಾಡುವಂತೆ ಹುಕುಂ ಕೊಡಲಾಯಿತು. ಈ ಬ್ಯಾಂಕುಗಳಿಂದ ಒಟ್ಟು ೧,೫೧,೯೫೮ ರೂ ಬರಬೇಕಾಗಿತ್ತು. ಈ ಪೈಕಿ ೫೦,೩೯೫ ರೂ ಮಾತ್ರ ವಸೂಲಾಯಿತು. ಇನ್ನೂ ೧,೦೧,೫೬೩ ರೂ ವಸೂಲಾಗದೆ ಉಳಿದಿತ್ತು. ಸುಲಭವಾದ ಕಿಸ್ತುಗಳಿಂದ ಪಾವತಿ ಮಾಡಲು ಮಾಯಿದೆ ಕೊಟ್ಟಿದ್ದಾಗ್ಯೂ ಮೆಂಬರುಗಳು ಸಾಲ ತೀರಿಸುವ ವಿಷಯದಲ್ಲಿ ಬಹಳ ಉದಾಸೀನರಾಗಿದ್ದರು. ಆದ್ದರಿಂದ ಸರ್ಕಾರದವರು ನಿರ್ವಾಹವಿಲ್ಲದೆ ಬಲಾತ್ಕಾರ ಮಾಡಬೇಕಾಯಿತು. ಈ ಬ್ಯಾಂಕುಗಳಲ್ಲೆಲ್ಲಾ ಬ್ಯಾಂಕು ಉದ್ಯೋಗಸ್ಥರೇ ಹೆಚ್ಚು ಸಾಲಗಾರರಾಗಿಯೂ ಬಹಳ ಬಾಕಿದಾರರಾಗಿಯೂ ಇದ್ದಂತೆ ತಿಳಿದುಬಂದಿದೆ. ಶಿಕಾರಿಪುರದ ತಾಲ್ಲೂಕಿನ ಇಸ್ಸೂರು ಮತ್ತು ಗೊಗ್ಗ ಎಂಬ ಸ್ಥಳಗಳಲ್ಲಿರುವ ಬ್ಯಾಂಕುಗಳ ಪ್ರೆಸಿಡೆಂಟು, ಏಜಂಟು, ಇಬ್ಬರು ಮೆಂಬರುಗಳು, ಇವರೇ ಸರ್ಕಾರದಿಂದ ಸಾಲವಾಗಿ ಕೊಟ್ಟ ಮೊಬಲಗನ್ನೆಲ್ಲಾ ತೆಗೆದುಕೊಂಡಿರುವದಾಗಿ ತಿಳಿಯಬಂತು. ಇದೇ ಮೇರೆ ಮಂಡ್ಯದ ಬ್ಯಾಂಕು ಕೆಟ್ಟುಹೋದ್ದಕ್ಕೂ ಕೂಡ ಏಜಂಟನ ಸಂದೇಹಾಸ್ಪದವಾದ ನಡತೆಯೇ ಕಾರಣವಾಗಿದೆ. ಉಳಿದ ಬ್ಯಾಂಕುಗಳು ಅವುಗಳ ಮೊದಲ ಉದ್ದೇಶವನ್ನು ಸಂಪೂರ್ಣವಾಗಿ ನೆರವೇರಿಸದಿದ್ದಾಗ್ಯೂ ಸರ್ಕಾರದ ಸಾಲವನ್ನು ಮಾತ್ರ ಪ್ರಾಯಶಃ ಮಾಯಿದೆಗೆ ಸರಿಯಾಗಿಯೇ ಪಾವತಿ ಮಾಡುತ್ತಿದ್ದವು.

ಕೋ ಆಪರೇಟಿವ್ ಸೊಸೈಟಿಗಳು ಎಂಬ ಅನ್ಯೋನ್ಯ ಸಹಾಯಕ ಸಂಘಗಳು.

ನಮ್ಮ ಕಳೆದ ವರ್ಷದ ಉಪನ್ಯಾಸದಲ್ಲಿ ಸೂಚಿಸಿದಂತೆ ಬರ್ಮಿಂಗಳಲ್ಲಿ ಕೋ ಆಪರೇಟಿವ್ ಸೊಸೈಟೀಸ್ ರೆಗ್ಯುಲೇಷನೆಂಬ ಅನ್ಯೋನ್ಯ ಸಹಾಯಕ ಸಂಘಗಳ ಕಾನೂನನ್ನು ಮುಂಬೂರ್ವಾಧಿಪ ಸಂಗತಿಯನ್ನು ಈ ಸಂದರ್ಭದಲ್ಲಿ ನಿಮಗೆ ತಿಳಿಸಬಹುದಾಗಿದೆ. ಎಲ್ಲಾ ಜನಗಳಲ್ಲಿಯೂ ಮಿತವ್ಯಯವನ್ನೂ ಸ್ವಾವಲಂಬನೆಯನ್ನೂ ಅಭಿವೃದ್ಧಿಪಡಿಸುವುದರಲ್ಲಿ ಸಹಾಯವಾಗಬಹುದೆಂಬುದೇ ಈ ಕಾನೂನಿನ ಉದ್ದೇಶವಾಗಿದೆ. ಅದರಲ್ಲಿಯೂ ಮುಖ್ಯವಾಗಿ ವ್ಯವಸಾಯಗಾರರೂ ಕೈಗಾರಿಕೆಯವರೂ ಸಂಘಸೇರಿ ತಮ್ಮ ತಮ್ಮ ಕೆಲಸಗಳಿಗೆ ಬೇಕಾದ ಹಾಗೆ ಸಾಲ ಪಡೆಯುವದಕ್ಕೂ, ಇತರ ವಿಧವಾದ ಪ್ರಯೋಜನವನ್ನು ಹೊಂದುವದಕ್ಕೂ, ಇದು ಸುಲಭೋಪಾಯವನ್ನು ಉಂಟುಮಾಡುತ್ತದೆ. ಅಲ್ಲದೆ ಕೈಗಾರಿಕೆಯವರಿಗೂ ವ್ಯವಸಾಯಗಾರರಿಗೂ ಮುಖ್ಯವಾಗಿ ಬೇಕಾದ ಪದಾರ್ಥಗಳನ್ನೂ ಬಿತ್ತನೆ ಬಿತ್ತನೆಯನ್ನೂ ಗೊಬ್ಬರವನ್ನೂ ಒದಗಿಸಿಕೊಡುವದರಲ್ಲಿಯೂ, ಉಪಯೋಗಕ್ಕೆ ಬೇಕಾದ ಪದಾರ್ಥಗಳನ್ನು ಕೊಂಡು ಕೊಡುವದರಲ್ಲಿಯೂ, ವ್ಯವಸಾಯಕ್ಕೂ ಕೈಗಾರಿಕೆಗೂ ಬೇಕಾದ ದನಕರುಗಳನ್ನಾಗಲಿ ಮುಟ್ಟುಗಳನ್ನಾಗಲಿ ಇತರ ಪದಾರ್ಥಗಳನ್ನಾಗಲಿ ಕೊಳ್ಳುವದರಲ್ಲಿಯೂ, ಯಂತ್ರಗಳನ್ನು ಪದ್ಧತಿಯಲ್ಲಿ ಕೊಂಡು ಉಪಯೋಗಿಸುವದರಲ್ಲಿಯೂ, ಮನೆಗಳನ್ನು ಕಟ್ಟುವದರಲ್ಲಿಯೂ, ಭೂಮಿಯನ್ನು ಕೊಳ್ಳುವದರಲ್ಲಿಯೂ, ವ್ಯವಸಾಯದ ಅಥವಾ ಕೈಗಾರಿಕೆಯ ಕೆಲಸಗಳನ್ನು ನಡಿಸುವದರಲ್ಲಿಯೂ ಅಭಿವೃದ್ಧಿಪಡಿಸುವದರಲ್ಲಿಯೂ, ಅಥವಾ ಮೆಂಬರುಗಳಿಗೆ ಸಮ್ಮತವಾದ ಇತರ ಲಾಭಕರವಾದ ಕಾರ್ಯಗಳನ್ನು ನೆರವೇರಿಸುವದರಲ್ಲಿಯೂ, ಈ ಸಂಘವು ಮೆಂಬರುಗಳ ಪರವಾಗಿ ಕೆಲಸ ನಡಿಸಬಹುದು. ಇಂಥ ಸಂಘವನ್ನು ಆರಂಭಿಸಬೇಕಾದರೆ ಕನಿಷ್ಠ ಪಕ್ಷ ೧೦ ಮಂದಿ ಮೆಂಬರುಗಳಿರಬೇಕು. ಸಂಘದ ಜವಾಬ್ದಾರಿಯು ಮಿತವಾಗಿಯೇ ಆಗಲಿ ಅಮಿತವಾಗಿಯೇ ಆಗಲಿ ಇರಬಹುದು. ಸಂಘದ ಮೂಲಧನವನ್ನು ಷೇರುಗಳಿಂದಲೂ ಡಿಪಾಜಿಟ್ಟುಗಳಿಂದಲೂ ಸಾಲದಿಂದಲೂ ಪಡೆದುಕೊಳ್ಳಬಹುದು. ಯಾವ ಮೆಂಬರ ಹಿಸ್ಸೆಯಾಗಲಿ ಸಂಘದ ಮೂಲಧನದ ಮೇಲಿನ ಹಕ್ಕಾಗಲಿ, ಸಿವಿಲ್ ಕೋರ್ಟು ಡಿಕ್ರಿಗಳಿಗೆ ಅನುಸಾರವಾಗಿ ಜಪ್ತಿ ಯಾ ಹರಾಜಿಗೆ ಗುರಿಯಾಗುವದಿಲ್ಲ. ಆದರೆ ಜಮೀನ್ದಾರಿ ಕಂದಾಯ ಅಥವಾ ಅದೇ ತರದ ಇತರ ಕೆರಿಗೆಗಳು—ಇವುಗಳ ವಿಷಯದಲ್ಲಿ ಸರ್ಕಾರದ ಹಕ್ಕು ಏನಾದರೂ ಇದ್ದರೆ ಅದಕ್ಕೆ ಮೊದಲು ಒಳಪಟ್ಟು ತರುವಾಯ ಆ ಮೆಂಬರ ಪೈರಿನ ಅಥವಾ ಇತರ ವ್ಯವಸಾಯದ ಫಲದ ಮೇಲೆ ಸಂಘವು ತನ್ನ ಹಕ್ಕನ್ನು ಮೊದಲು ಜಾರೀ ಮಾಡುವುದಕ್ಕೆ ಬಾಧ್ಯತೆಯುಳ್ಳದಾಗಿದೆ. ಹೀಗೆಯೇ ಸಂಘದಿಂದ ಕೊಡಲ್ಪಟ್ಟ ಅಥವಾ ಸಂಘದಿಂದ ಸಾಲ ಕೊಟ್ಟದ್ದ ಹಣದಿಂದ ಕೊಂಡುಕೊಂಡ ದನಕರುಗಳು ವ್ಯವಸಾಯದ ಅಥವಾ ಕೈಗಾರಿಕೆಯ ಮುಟ್ಟುಗಳು ಅಥವಾ ಪಶು ಯು ಪದಾರ್ಥಗಳು ಇವುಗಳ ಮೇಲೆ ಸಂಘಕ್ಕೆ ಮೊದಲು ಹಕ್ಕು ಇರುವುದು. ಅಲ್ಲದೆ ಸಂಘಕ್ಕೆ ಮೆಂಬರ ಹಿಸ್ಸೆ ಡಿಪಾಜಿಟ್ಟು ಅಥವಾ ಇತರ ಮೊಬಲಗು ಇವುಗಳ ಮೇಲೆ ಹಕ್ಕಿದೆಯಾಗಿ ಆ ಮೆಂಬರಿಂದ ಬರತಕ್ಕ ಯಾವ ವಿಧವಾದ ಸಾಲವನ್ನು ಈ ಮೊಬಲಗಿನಿಂದ ಉತ್ತರ ಹಾಕಿಕೊಳ್ಳಬಹುದು.

ಸಂಘವನ್ನು ರಿಜಿಸ್ಟರ್ ಮಾಡತಕ್ಕ ಬಗ್ಗೆ ಯಾವ ರುಸುಮನ್ನೂ ವಸೂಲ್ಮಾಡುವದಿಲ್ಲ. ಅಲ್ಲದೆ ಯಾವ ಸಂಘವನ್ನಾಗಲಿ ಅಥವಾ ಸಂಘದ ತರಗತಿಯನ್ನಾಗಲಿ ಕಂದಾಯದಿಂದಲೂ ಸ್ಟಾಂಪ್ ಡ್ಯೂಟಿಯಿಂದಲೂ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಕೊಡಬೇಕಾದ ರಿಜಿಸ್ಟ್ರೇಷನ್ ಫೀಜುಗಳಿಂದಲೂ ವಿನಾಯಿಸಲು ಸರ್ಕಾರದವರು ಸ್ವತಂತ್ರರಾಗಿದ್ದಾರೆ ಅಲ್ಲದೆ ಈ ಸಂಘಗಳನ್ನು ಮೇಲ್ವಿಚಾರಣೆ ಮಾಡಿಕೊಳ್ಳುವದಕ್ಕಾಗಿಯೂ ನಡಿಸುವದಕ್ಕಾಗಿಯೂ ವಿಶೇಷವಾದ ಅಧಿಕಾರವುಳ್ಳ ಒಬ್ಬ ರಿಜಿಸ್ಟ್ರಾರನ್ನು ನೇಮಕಮಾಡುವದಕ್ಕೆ ಕೂಡ ಈ ಕಾನೂನಿನಲ್ಲಿ ಅವಕಾಶಕೊಟ್ಟಿದೆ ಈ ಅಧಿಕಾರಿಗಳು ಕಡೆಯ ಪಕ್ಷ ವರ್ಷಕ್ಕೆ ಒಂದಾವೃತ್ತಿಯಾದರೂ ಈ ಸಂಘಗಳ ಲೆಕ್ಕಪತ್ರಗಳನ್ನು ಯಾವ ರುಸುಮೂ ಇಲ್ಲದೆ ಪರೀಕ್ಷೆ ಮಾಡುವರು. ಅಲ್ಲದೆ ಸಂಘದ ಆವಳಿತಗಳಿಗೆ ಸಂಬಂಧಪಟ್ಟ ವಿವಾದಗಳನ್ನು ಫೈಸಲ್ ಮಾಡುವದಕ್ಕಾಗಲಿ ಪಂಚಾಯಿತಿಗೆ ಕಳುಹಿಸುವದಕ್ಕಾಗಲಿ ರಿಜಿಸ್ಟ್ರಾರಿಗೆ ಸರ್ಕಾರದವರು ಅಧಿಕಾರ ಕೊಡಬಹುದಾಗಿದೆ

ಸರಿಯಾಗಿ ಉಪಯೋಗಿಸಿಕೊಂಡಲ್ಲಿ ಈ ಕಾನೂನಿನ ಪ್ರಯೋಜನಗಳು ಅನೇಕವಾಗಿವೆ. ವ್ಯವಸಾಯಗಾರರೂ ಮತ್ತು ಕೈಗಾರಿಕೆಯವರೂ ಸಾಲಕ್ಕೆ ಗುರಿಯಾಗಿರುವ ವಿಷಯವನ್ನೂ ಅವರ ಸ್ಥಿತಿಯನ್ನೂ ಎಂಥಿಸಂತೆ ಉತ್ಸಾಹ ಮಾಡದೆ ಅಭಿವೃದ್ಧಿಗೆ ತರುವದು ಬಹಳ ಮುಖ್ಯವಾದ ವಿಷಯವೆಂದು ಎಲ್ಲರೂ ಅಂಗೀಕರಿಸಿದ್ದಾರೆ. ಮತ್ತು ಅವರ ಪುರೋವೃದ್ಧಿಯನ್ನು ವಿಶೇಷವಾಗಿ ನಡಿಸುವದೂ ಅತ್ಯವಶ್ಯಕವಾಗಿದೆ. ಈ ಹೊಸ ಕಾನೂನಿನ ಪ್ರಯೋಜನಗಳನ್ನೆಲ್ಲಾ ಜನರಿಗೆ ಮಂದಟ್ಟು ಮಾಡಿಕೊಡುವದಕ್ಕಾಗಿ ಅನುಭವವೂ ಮುತವರ್ಜಿಯೂ ಉಳ್ಳ ಒಬ್ಬ ಆಫೀಸರನ್ನು ರಿಜಿಸ್ಟ್ರಾರಾಗಿ ಮೊಕರ್ರ್ಮಾಡಲಾಯಿತು. ಈ ವಿಷಯದಲ್ಲಿ ನಾವು ಕಳೆದ ವರ್ಷ ಹೇಳಿದಂತೆಯೇ ಈಗಲೂ ಹೇಳಬೇಕಾಗಿದೆ ಅದೇನೆಂದರೆ ಯಾವ ಸಂದರ್ಭದಲ್ಲಿಯೂ ಈ ದೇಶದ ಮುಖಂಡರ ಆದರಪುರಸ್ಸರವಾದ ಪ್ರೋತ್ಸಾಹವೂ ಸಹಯೋಗವೂ ಇಲ್ಲದೆ ಈ ಕಾರ್ಯವು ಕೈಕೂಡಲಾರದು. ಆದ್ದರಿಂದ ಸ್ವಕೀಯರು, ಜನಗಳು ಸರ್ಕಾರದವರ ಉದಾರವಾದ ಉದ್ದೇಶಗಳಿಂದ ಪ್ರಯೋಜನಹೊಂದಲು ಪ್ರವರ್ತಿಸುವಂತೆ ಅವರಿಗೆ ಹಿತೋಪದೇಶ ಮಾಡಿ ಪ್ರೋತ್ಸಾಹಪಡಿಸುವದು, ನಿಮ್ಮ ಕೆಲಸವಾಗಿದೆ.

ಹೊಸ ರಿಜಿಸ್ಟ್ರಾರವರು ಈ ಸಂಸ್ಥಾನದಲ್ಲಿಯ ನಾನಾ ವಿಧವಾದ ಕೈಗಾರಿಕೆಗಳನ್ನೆಲ್ಲಾ ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕೋ ಅದನ್ನು ತಿಳಿಯುವದಕ್ಕಾಗಿ ಅವುಗಳ ವರ್ತಮಾನ ಸ್ಥಿತಿಯನ್ನೆಲ್ಲಾ ಚೆನ್ನಾಗಿ ವಿಚಾರಿಸುವರು. ಪ್ರಕೃತದಲ್ಲಿ ಸಂಸ್ಥಾನದ ವ್ಯಾಪಾರವನ್ನು ಕುರಿತು ಸರ್ಕಾರದವರಿಗೆ ವಿಶೇಷ ಸಂಗತಿಗಳು ತಿಳಿದು ಬಂದಿಲ್ಲ. ಆದ್ದರಿಂದ ಈ ರಿಜಿಸ್ಟ್ರಾರವರು ಸರ್ಕಾರದವರ ತಿಳುವಳಿಕೆಗೂ ವರ್ತಕರ ಉಪಯೋಗಕ್ಕಾಗಿಯೂ ವ್ಯಾಪಾರಸಂಬಂಧಪಟ್ಟ ಲೆಕ್ಕಗಳನ್ನೆಲ್ಲಾ ಶೇಖರಿಸಿ ಪ್ರಕಟಿಸುವರು

[ಸಶೇಷ]

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಟಿ. ಎಸ್. ಜಿ, ಂ(ರ್ಭರ್ಗಳ್ಳಿ —ನಿಮ್ಮ ಬಾತ್ಮಿಯನ್ನು ನಿಮ್ಮ ಹೆಸರಿನ ಮೇಲೆ ಪ್ರಕಟಿಸುವಂತೆ ತಿಳಿಸದೆ ಹೋದಲ್ಲಿ ನಾವು ಅದಕ್ಕೆ ಗಮನ ಕೊಡಲಾರೆವು.

ಪರೋಪಕಾರಿ, ಹಾರೋಹಳ್ಳಿ, ದೇಶಾಭಿಮಾನಿ, ಬೆಂಗಳೂರು —ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲ. —ಎಡಿ]

ಕರೆಸ್ಪಾಂಡೆನ್ಸ್.

ಸ್ಕೂಲ್ ಮಾಸ್ಟರುಗಳು

ಅಯ್ಯಾ,

ಬಡಸ್ಕೂಲ್ ಮಾಸ್ಟರುಗಳಿಗೆ ಸರಿಯಾಗಿ ಹೊಟ್ಟೆಗೆ ಹಾಕದಿದ್ದರೂ ಇವರುಗಳ ಮೇಲೆ ತನಿಖೆ ಬಗ್ಗೆ ಇನ್ಸ್‌ಪೆಕ್ಟರುಗಳ ಸಂಖ್ಯೆಯನ್ನು ಜಾಸ್ತಿ ಮಾಡಿ ಇರುವುದು ನೋಡಿದರೆ ಇತ್ತೀಚಿಗೆ ಈ ಬಡ ಸ್ಕೂಲ್ ಮಾಸ್ಟರುಗಳ ಜೀವನವು "ಗೋವಿಂದಾ ಚೆಂಬಟ್ಟು" ಎಂಬ ಗಾದೆ ಹೋಲುವಂತೆ ಕಾಣುತ್ತೆ.

ಬಂಟಿತವಾದಿ

ತಿಪಟೂರು ತಾಲ್ಲೋಕು ಬೆಸಿಗೆ ಬದಾಲು.

ಅಯ್ಯಾ,

ಈ ಗ್ರಾಮದಲ್ಲಿ ಅನೇಕ ಗಾಳಿಯು ಜಾಸ್ತಿಯಾಗಿ ಮಳೆಯ ಮೋಡವನ್ನು ಹೊತ್ತುಕೊಂಡು ಹೋಗುತ್ತೆ ಪೈರುಗಳೆಲ್ಲಾ ಒಣಗಿಹೋಯಿತು. ಈ ಗ್ರಾಮಕ್ಕೆ ಅನೇಕ ಕಡೆಗಳಿಂದ ಕಾಗದಗಳೂ ವೃತ್ತಾಂತ ಪತ್ರಿಕೆಗಳೂ ಬರುತ್ತವೆ. ತಿಪಟೂರು ತಾಲ್ಲೂಕು ಪ್ರೋಸ್ಟಿನಿಂದ ಈ ಗ್ರಾಮಕ್ಕೆ ಲೆಟರ್ ಪೀವ್ನರ್ ವಾರಕ್ಕೆ ಒಂದು ಸಲದಂತೆ ಬರುತ್ತಾ ಇದ್ದವನು ಈಗ ತಿಂಗಳಿಗೆ ಒಂದು ಸಲ ಬರುವುದಿಲ್ಲ. ದಯವಿಟ್ಟು ಈ ಗ್ರಾಮಕ್ಕೆ ವಾರಕ್ಕೆ ಒಂದು ಸಲ ಬರುವ ಹಾಗೆ ಮಾಡಬೇಕೆಂದು ಬೇಡುತ್ತೇನೆ

ರಾಮಯ್ಯ.

ಮದರಾಸ್ ನಕ್ಯದಪ್ರತಿ

ಅಯ್ಯಾ,

ತಮ್ಮ ವಾರ ಪತ್ರಿಕೆಯಲ್ಲಿ ಮದ್ರಾಸು ಚೈನಾ ಬಜಾರ್ ರೋಡಿನಲ್ಲಿರುವ ಧರ್ಮವೈದ್ಯಶಾಲೆಯಲ್ಲಿ ತಯಾರಾಗುವ ನಶ್ಯದಪುಡಿಯ ವಿಷಯದಲ್ಲಿ ಪ್ರಕಟಿಸುತ್ತಿರುವುದನ್ನು ನೋಡಿ ನಾನು ೨ ಟಿನ್ ತರಿಸಿಕೊಂಡೆನು. ನೋಡಲಾಗಿ ಮೂಗು ಉರಿಯುವುದು, ತಲೆನೋಯುವುದು ಇವೇ ಮೊದಲಾದ ದುರ್ಗುಣಗಳು ಕಂಡುಬಂದದ್ದರಿಂದ ನನ್ನ ಸ್ನೇಹಿತರುಗಳು ನಾಶಮಾಡುವಂತೆ ಹೇಳಿಸಿದರು. ನಾನು ಆರ್ಡರನ್ನು ಕಳುಹಿಸಿದೆನು. ಇದುವರಿಗೂ ಜವಾಬೂ, ಹಣವೂ ಬಾರದಿರಲು ಕಾರಣವೇನು ?

ಚಾಮರಾಜನಗರ. ರಾಮಕೃಷ್ಣಭಟ್ಟ.

ಬೆಂಗಳೂರು ಸಿಟಿ ಪೊಲೀಸು

ಅಯ್ಯಾ.

ಬೆಂಗಳೂರು ಸಿಟಿಗೆ ಸೇರಿದ ಅರ್ಬತ್ನಾಟ್ ಕಂಪನಿ ಹಿಂಭಾಗದ ವಿಸ್ತರಣದಲ್ಲಿ ಕೆಲಸ ಮಾಡುವವರಿಗೆ ಅದೇ ವಿಸ್ತರಣದಲ್ಲಿ ಕೈಮನೆಗಳನ್ನು ಕಟ್ಟಿಸಿಕೊಟ್ಟಿದಾರೆ ಆದರೆ ಇದು ಚಾಮರಾಜಪೇಟೆಗೆ ಸೇರಿದ ಸರಹದ್ದಾಗಿದೆ ಇದಕ್ಕೆ ಪೊಲೀಸಿನವರ ನಿಗಾ ಸ್ವಲ್ಪವಾದರೂ ಇರುವಂತೆ ಕಾಣುವದಿಲ್ಲ. ರಾತ್ರಿ ಹೊತ್ತು ಹತ್ತು ಗಂಟೆಯಿಂದ ಬೆಳಗಿನ ಝಾವದ ವರಿಗೂ ಕಳ್ಳಗಳು ಬೀಳುತ್ತಾ ಇವೆ. ಸ್ವಲ್ಪ ನಿದ್ದೆ ಹೋದರೆ ಮನೆಯ ಸಾಮಾನುಗಳನ್ನು ದೋಚಿಕೊಂಡು ಹೋಗುತ್ತಾರೆ. ಇಲ್ಲಿಗೆ ಒಂದು ಫರ್ಲಾಂಗ್ ದೂರದಲ್ಲಿ ಪೊಲೀಸ್ ಸ್ಟೇಷನ್ ಇದ್ದರೂ, ಈ ಕಳ್ಳರ ಕಾಟ ತಪ್ಪದೆ ಇರುವದು ನಮ್ಮ ದುರದೃಷ್ಟವೇ ಸರಿ. ಇನ್ನು ಎಷ್ಟು ದಿವಸಕ್ಕೆ ನಮ್ಮ ಗೋಳಾಟವನ್ನು ತಪ್ಪಿಸುವರೋ ತಿಳಿಯದೆಂದು ಪ್ರಾರ್ಥಿಸುತ್ತೇನೆ

ಆರ್ ಸಿ ನಡೆಸಮೊದಲಿಯಾರ್

[ಇದರ ನಿಜಸ್ಥಿತಿಯನ್ನು ಬೆಂಗಳೂರು ಸಿಟಿ ಪೊಲೀಸಿನವರು ವಿಚಾರಿಸುವರೆಂದು ನಂಬುತ್ತೇವೆ —ಎಡಿ]

ರಾಜಧಾನಿಯ ಸಮೀಪದಲ್ಲಿರುವ ಮುನ್ಸಿಫ್ ಕೋರ್ಟು.

ಅಯ್ಯಾ,

ಈ ಕೋರ್ಟಿನಲ್ಲಿ ನಡೆಯುತ್ತಿರುವ ನ್ಯಾಯಮಾರ್ಗದ ವೈಗ್ಯತೆಯನ್ನು ವರ್ಣಿಸಲಸಾಧ್ಯ. ಪ್ರತಿ ವ್ಯಾಜ್ಯದಲ್ಲೂ "ಕಾಲ್ಲಂ ಕಾರ್ಯಸಿದ್ಧಿರಸ್ತು" ಎಂದು ಹೇಳುತ್ತಾ ಅಂಥ ವ್ಯಾಜ್ಯನ್ನು ಕಕ್ಷಿಗಾರರಿಂದ ವಸೂಲ್ಮಾಡಿಕೊಳ್ಳುತ್ತಿದ್ದಾರೆ. ದಾಖಲಾದವರಿಗೆ ತೊಂದರೆ ಪಡಿಸುತ್ತಿದ್ದಲ್ಲದೆ ಕೆಲಸವನ್ನು ಜಾಗ್ರತೆ ಮಾಡಿಕೊಡುವುದಿಲ್ಲ. ಮಾರ್ಗಗಳಲ್ಲಿ ನಡೆಯತಕ್ಕ ಸುಲಿಗೆಗಳು ಈ ಕೋರ್ಟಿನಲ್ಲೇ ನಡೆಯುತ್ತಿವೆ ಕೋರ್ಟಿನ ಕ್ಷೌರ ಸುಮ್ಮನೇ ಇರುವುದೇ ಆಶ್ಚರ್ಯವಾಗಿರುವದು. ಮುನ್ಸಿಫರವರೋ ತುಂಬಾ ನಿಧಾನಿಗಳು. ಆದ್ದರಿಂದಲೇ ನ್ಯಾಯದಾರಿ ಇಲ್ಲ. ಇವರ ದುರ್ನಡತೆಯನ್ನು ಮರೆಮಾಚದೆ ಮೇಲ್ಪಟ್ಟವರು ತಿಳಿಸತಕ್ಕ ಗೂಢಚಾರರಿದ್ದರೆ ಈ ಭ್ರಷ್ಟತನ ನಿಲ್ಲುತ್ತಿತ್ತು. ಇಲ್ಲದಿದ್ದರೆ ವರ್ಗಾವರ್ಗಿ ಮಾಡಬೇಕು. ಮೇಲ್ಪಟ್ಟ ಅಧಿಕಾರಿ ಸರಿಯಾದ ವಿಚಾರಣೆ ಮಾಡಿದ ಹೊರತು ಕಕ್ಷಿಗಾರರ ಕಷ್ಟ ನಿಲ್ಲಲಾರದು.

ಪ್ರತ್ಯಕ್ಷದರ್ಶಿ.

ಸ್ವದೇಶಾಭಿಮಾನಕ್ಕೆ.

ಅಯ್ಯಾ,

ತಮ್ಮ ೫ ನೇ ತಾ. ಪತ್ರಿಕೆಯಲ್ಲಿ ಕೇವಲ ಸ್ವದೇಶಾಭಿಮಾನಿಗಳಾದ ನಾಗಪುರವಾಸಿ ಮೈಸೂರುದಾಸರು ಬರೆದ ಪತ್ರಿಕೆಯ ಬರವನ್ನೂ ಅತ್ಯಂತ ಉತ್ಸಾಹವನ್ನೂ ಕೊಡುವಂತಹ ಭಕ್ತಿಯನ್ನು ಬರಹವು ಎಲ್ಲರೂ ಓದಿದವರಿಗೆ ಸತ್ಯಂಶವೇ ಸರಿಯಾಗಿ ಗೋಚರಿಸಬಹುದು ನನ್ನ ಸ್ನೇಹಿತರೊಬ್ಬರು ಸ್ವಲ್ಪ ದಿನಗಳ ಮುಂಚೆ ಫರಿದಪುರವೆಂಬ ಬಂಗಾಳದ ಡಿಸ್ಟ್ರಿಕ್ಟಿಗೆ ಹೋಗಿ ಬಂದು ನಮ್ಮಲ್ಲಿ ಹೇಳಿದ ವಿಷಯಗಳು ಆಶ್ಚರ್ಯಕರಗಳಾಗಿದ್ದುವು. ಪಠ'ಪೂಲ' ಉಪ್ಪನ್ನೂ, ಕೇವಲ ಸಕ್ಕರೆಯನ್ನೂ ಬಿಟ್ಟಿದ್ದುದೇ ಅಲ್ಲದೆ, ರೈಲ್ವೆಯ ಕೂಲಿಕಾರರಲ್ಲಿಯೂ ಕೂಡ ಈ ಐಕ್ಯವುಂಟಾಗಿ, ವರ್ತಕರ ಪರದೇಶದ ಸರಕುಗಳು ಸ್ಟೇಷನಿನಲ್ಲಿ ನಾಗುವದೇ ನಿಂತು ಹೋಗಿ, ವರ್ತಕರು ಬಹಳ ಕಷ್ಟ ಪಡುತ್ತಿದ್ದಾರೆಂದು ಕೇಳಿದೆನು. ಮತ್ತು ಈ ದೇಶದಲ್ಲಿ ಶಿಗರೇಟುಗಳ ಪೆಟ್ಟಿಗೆಗಳು ೩—೪ ತಿಂಗಳ ಮುಂಚೆ ಅತಿಸುಲಭವಾಗಿ ದೊರೆಯುತ್ತಿದ್ದುವು ಈಗ ಅವುಗಳ ಸೊಂಕೇ ಇಲ್ಲದೆ ಇರುವದರಿಂದ ಈ ಪುಣ್ಯವು ಎಷ್ಟರಮಟ್ಟಿಗೆ ಕಡಿಮೆಯಾಗಿರಬಹುದೋ! ಸ್ವಾಮಿ, ನಮ್ಮ ದೇಶೀಯರು ಎಚ್ಚತ್ತು ಅಭಿವೃದ್ಧಿ ಹೊಂದುವ ಮಾರ್ಗವನ್ನು ಕೈಕೊಂಡರೆ ನಮ್ಮ ಭಾರತವು ಪರಾಧೀನತೆಯೂ ಕಾಲಕ್ಕಾದರೂ ಹಿಂಗದೆ ಹೋಗದು

ಡೇರಾಸರ್ನ ವಾಸಿ ಮೈಸೂರುದಾಸ.

ಕೆರೆ ಗ್ರಾಮಗಳ ಶಿಥಿಲತೆ

ಅಯ್ಯಾ,

ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮಕ್ಕೂ ಮತ್ತು ಅಕ್ಕಪಕ್ಕದ ಎಡಬಲಗ್ರಾಮಗಳಿಗೂ ಮಳೆಯೆಂಬುದೇ ಇಲ್ಲದೆ ಪೈರುಗಳೆಲ್ಲಾ ನಷ್ಟವಾಗುತ್ತಾ ಇವೆ. ಇಲ್ಲಿ ಈ ಗ್ರಾಮದ ಎರಡು ಕೆರೆಗಳು ಇದೆ. ಒಂದು ಕೆರೆ ಭಾರಿಯಾಗಿ ಇದೆ, ಮತ್ತೊಂದು ಕೆರೆ ಸಣ್ಣದು. ಇದರಲ್ಲಿ ಮಳೆ ಬಂದರೆ ನೀರೇ ನಿಲ್ಲುವದಿಲ್ಲ. ತೂಬು ಕೆಟ್ಟು ಹೋಗಿವೆ. ಮತ್ತೆ ಕಟ್ಟೆ ಕಲ್ಲುಗಳೆಲ್ಲಾ ಬಿಟ್ಟು ಇದೆ. ಈ ಕೆರೆಗಳಿಗೆ ೩೦೦—೭೦೦ ರೂಪಾಯಿ ಕಂದಾಯ ತೆರುತ್ತಾರೆ. ಗೌರ್ನಮೆಂಟಿಗೆ ಎಷ್ಟು ಅರ್ಜಿಗಳು ಕೊಟ್ಟರೂ ಸರಕಾರದವರು ಬಂದು ಪರಾಂಬರಿಸಿ ನೋಡುವುದಿಲ್ಲ. ಈ ಗ್ರಾಮದಲ್ಲಿ ರೈತರು ಬಹಳ ಸಾಲಗಾರರಾಗಿ ಬಿದ್ದಿದ್ದಾರೆ. ಪಟೇಲ ಶ್ಯಾನುಭೋಗರ ಮನೆ ನಷ್ಟವಾಗುತ್ತಾ ಇದೆ ಸಂಕೇತದವರು ಗ್ರಾಮಸ್ಥರನ್ನು ನಿರ್ಬಂಧ ಮಾಡಿ ಹೊಸ ಜಾಗಾ ಬಿಡಿಸಿ ಕೊಟ್ಟು ಗ್ರಾಮಸ್ಥರಿಗೆ ಹಾಕಿಸುವದಿಲ್ಲ. ಆದ್ದರಿಂದ ಸರಕಾರದ ಧರ್ಮಕರ್ತರುಗಳು ಬಡರೈತರನ್ನು ಕಾಪಾಡಿಕೊಂಡು ಕೆರೆ ಕಾಪಾಡಿ ಹಳ್ಳಿಯೂರು ಬಿಡಿಸಿ ಹೊಸ ಗ್ರಾಮ ನಿರ್ಮಾಣ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಮತ್ತೆ ಈ ಗ್ರಾಮದಲ್ಲಿ ೭೦—೮೦ ಬಾಲಕರು ಇದಾರೆ. ಸರಕಾರಿ ಸ್ಕೂಲ್ ಮಾಡಬೇಕೆಂದು ಈ ಸ್ಕೂಲ್ ಮನೆಯನ್ನು ಕಟ್ಟಿಸಿ ಇದೆ. ಸ್ಕೂಲ್ ಕಟ್ಟಿಸಿ ಇನ್ಸ್‌ಪೆಕ್ಟರಿಗೆ ಅರ್ಜಿ ಬರೆದುಕೊಂಡು ಇದ್ದೇವೆ. ಯಾವಾಗ ಸರಕಾರದವರು ಮಂಜೂರು ಮಾಡುವರೋ ಗೊತ್ತಿಲ್ಲ. ಇದು ಭಾರಿ ಗ್ರಾಮ. ೩೫ ಮನೆಗಳು ಇವೆ ದಾವಣಗೆರೆಯಿಂದ ಜಗಳೂರಿಗೆ ರೋಡು ಇದೆ. ಸರಕಾರದವರು ಹಗಲು ರಾತ್ರಿ ಓಡ್ಯಾಡುತ್ತಾರೆ.

ಗುರುರಾವ್ ಶ್ಯಾನುಭೋಗ

ಗುರುಮರ್ಯಾದೆ

ಅಯ್ಯಾ,

"ಪಂಚೈತೆ ಪಿತರಸ್ಮೃತಾಃ" ಎಂಬಂತೆ ಉಪದೇಶ ಕೊಡುವ ವಿದ್ಯಾಗುರುಗಳೂ ಒಬ್ಬರು. ಅಂತಹ ವಿದ್ಯಾಗುರುಗಳಲ್ಲಿ ವಿದ್ಯಾಭ್ಯಾಸವು ಪೂರ್ತಿಯಾದ ನಂತರ ಶಿಷ್ಯರು ಯಥಾಶಕ್ತಿ ಮರ್ಯಾದೆಯನ್ನು ಮಾಡುತಕ್ಕ ಪದ್ಧತಿಯು ಈ ಭಾರತದೇಶದಲ್ಲಿ ಬಹುಕಾಲದಿಂದಲೂ ನೆಲಸಿರುವುದು. ಅಪೇಕ್ಷಣೀಯವಾಗಿ, ಈ ತಾಲ್ಲೋಕಿನಲ್ಲಿ ಕಳೆದ ೧೯ ವರ್ಷಗಳ ಹಿಂದೆ ಕನ್ನಡ ಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ ನಾಮಮಾತ್ರದವರು ಸ್ಕೂಲನ್ನು ಶಾಶ್ವತವಾದ ಸ್ಥಿತಿಗೆ ತಂದು ಅನೇಕ ವಿದ್ಯಾರ್ಥಿಗಳನ್ನು ಉನ್ನತ ಸ್ಥಿತಿಗೆ ತಂದು, ...

...ಕಲ್ಲಿನ ವಿಲ್ಸನ್ ಗ್ರಾಮದ ಸ್ಕೂಲಿನ ಹೆ॥ ಮಾಸ್ತರಾಗಿ ...ಮೆ॥ ಅಳಸಿಂಗರಾಚಾರ್ಯರು ಶಿಷ್ಯ ಮಂಡಲಿಯವರ ಪ್ರಾರ್ಥನಾನುಸಾರ ಈ ಊರಿಗೆ ದಯಮಾಡಿ, ೩ ದಿನಗಳು ಇದ್ದರು. ...ರಿಗೆ ಮರ್ಯಾದೆ ಮಾಡಲು, ಈ ಗ್ರಾಮದ ಅನೇಕ ಸರ್ಕಾರಿ ...ನೌಕರರೂ, ಆರ್ಕೇಟ ಪಟ್ಟೆ ಶರೂ ಗ. ಎ ವಿ. ಸ್ಕೂಲಿನಲ್ಲಿ ಸರಿ ...ದ್ದರು ಅವರ ಶಿಷ್ಯಮಂಡಲಿಯಲ್ಲಿ ಮುಖ್ಯರಾದ ಮೆ॥ ಗಳು ...ವೆಂಕಟಪ್ಪನವರು, ನಗರ್ತರಾಮಣ್ಣನವರು, ನಾರಾಯಣಸ್ವಾಮಯ್ಯನವರು, ಕೆ ಆದಿನಾರಾಯಣ ಶೆಟ್ಟರು, ಈ. ಸುಬ್ಬರಾಯರು, ಚಿಕ್ಕ ತಿಮ್ಮರಾಯಯ್ಯನವರು, ಜೋ. ವೆಂಕಟರಮಣಯ್ಯನವರು, ಆದೆಪ್ಪನವರು, ರಂಗಪ್ಪನವರು, ಮುನಿದಾಸಯ್ಯ ..., ಈ ಹತ್ತು ಮಂದಿ ಶಿಷ್ಯರು ತಮ್ಮ ಗುರುವರ್ಯರಿಗೆ ಅನೇಕ ವಸ್ತ್ರಾಭರಣಾದಿಗಳನ್ನು ಮರ್ಯಾದಾಪೂರ್ವಕವಾಗಿ ಕೊಟ್ಟು ...ಸುಗುಣಕಥನವನ್ನು ಮಾಡಿ, ಆಯುರಾರೋಗ್ಯ ಭಾಗ್ಯಗಳ ...ಗುರುಗಳಿಗೆ ದಯಪಾಲಿಸುವಂತೆ ಶ್ರೀ ಭಗವಂತನನ್ನು ಪ್ರಾರ್ಥಿಸಿ, ಚಂದನ ಪುಷ್ಪ ತಾಂಬೂಲಾದಿಗಳಿಂದ ಸಭಾ ಜನರ ಮನೋರಂಜಕ ಮಾಡಿ, ಸಭೆಯನ್ನು ಮುಕ್ತಾಯ ಮಾಡಿದರು. ಮೂರನೇ ...ಗುರುವರ್ಯರ ಸ್ಮರಣೆಯು ಸದಾ ಇರಬೇಕೆಂದು ಅವರ ಭಾವಚಿತ್ರವನ್ನು ತೆಗಿಸಿದರು. ಈ ಚಿಂತಾಮಣಿಯ ಸುಜನ ಸಮುದಾಯದವರು ಮಾಡಿರುವ ಮೇಲ್ಪಂಕ್ತಿಯು ಅನೇಕ ಕಡೆಗಳಲ್ಲಿ ಅನುಸರಿಸಲ್ಪಟ್ಟು, ಆ ಮೂಲಕ ಗುರು ಶಿಷ್ಯರ ಮೈತ್ರಿಯು ಅತಿಶಯವಾಗಿ, ಪ್ರಪಂಚಕ್ಕೆ ಸುಖದಾಯಕವಾಗಲೆಂದು ಕಾಂಕ್ಷಿಸುವ

ಸುಜನಾಭಿಲಾಷಿ.

ಬೆಂಗಳೂರು ಬಿಸಮಾರ್ಪುರದ ಕಾರ್ಪೊರೇಷನ್

ಸ್ವಾಮಿ,

ತಮ್ಮ ಮತ್ತು ಬೇರೆ ವೃತ್ತಾಂತಪತ್ರಿಕೆಗಳಲ್ಲಿ ದಿ ಮ್ಯಾನೇಜರ್, ...ನರ್ ಥಿರಪ್ಯೂಟಿಕಲ್ ಕಾರ್ಪೊರೇಷನ್, ಬಿಸಮಾರ್ಪುರ, ಬೆಂಗಳೂರು ಸಿಟಿ, ಇವರ ಕಂಪನಿಯು ಪದಾರ್ಥಗಳನ್ನು ಮಾರಲಿಕ್ಕೆ ...ದ ಏಜಂಟರುಗಳು ಬೇಕೆಂಬದಾಗಿ ಪ್ರಕಟಿಸಿರುವದು ಸರಿಯಷ್ಟೆ. ಅದರಂತೆ ನಾನು ಏಜಂಟನಾಗಲು ಜುಲೈ ೯ ನೇ ತಾ. ಲ್ಲಿ ...ಬರೆದುಕೊಂಡದ್ದಕ್ಕೆ ನನ್ನನ್ನು ಏಜಂಟಾಗಿ ನೇಮಕ ಮಾಡಿ ...ಬಳ್ಳಿ ೨೩ ನೇ ತಾ. ನನಗೆ ಜವಾಬು ಕೊಟ್ಟರು. ನಂತರ ಔಷಧಗಳ ತನಿಖಾ ಮತ್ತು ಖರೀದಿ ಕೋರಿಸುವ ಕ್ಯಾಟಲಾಗ್ ಗಳು ...ಬೇಕೆಂದು ಬರೆದುಕೊಂಡದ್ದಕ್ಕೆ ಕ್ಯಾಟಲಾಗ್ ಸಮೇತ ಆಗಸ್ಟ್ ...ರಲ್ಲಿ ಜವಾಬು ಕೊಟ್ಟದ್ದು ಕಾರಣಾಂತರದಿಂದ ನನಗೆ ತಲಪಲು ತಡವಾಯಿತು. ಅನಂತರ ಸಾವಕಾಶಕ್ಕೆ ಕಾರಣ ಸಮಾಧಾನಿಸಿ ...ಟ್ ಹಣ ಕಳುಹಿಸಲೇ ಬೇಕೆ ಎಂತಾ ಕೇಳಿದ್ದಕ್ಕೆ ನನ್ನನ್ನು ಸದರಿ ಕಂಪೆನಿಯ ಏಜಂಟಾಗಿ ನೇಮಿಸಿ ಏಜಂಟರ ರಿಜಿಸ್ಟರಿನಲ್ಲಿ ದಾಖಲ್ಮಾಡಿಕೊಂಡಿರುವುದಾಗಿಯೂ ನನ್ನ ತಲಬನ್ನು ಸೆಪ್ಟೆಂಬರಿಂದ ಜಾರೀಲಿ ತರುವದಾಗಿಯೂ ಈ ಸ್ಥಳದಲ್ಲಿ ಮತ್ಯಾರನ್ನೂ ಏಜಂಟಾಗಿ ನೇಮಿಸುವದಿಲ್ಲವೆಂದು ವಗೈರೆ ತಾ. ೪ ರಲ್ಲಿ ...ಗೆ ಜವಾಬು ಕೊಟ್ಟದ್ದರ ಮೇಲೆ ತಾ ೧೪ ರಲ್ಲಿ ಡಿಪಾಜಿಟ್ ಬಾಬ್ತು ... ರೂಪಾಯಿಗಳನ್ನು ವಿ ಪೇಯಬಲ್ ಮೂಲಕ ಕಳುಹಿಸಿದೆ ... ನೋಟೀಸು ಆಫೀಸಿಗೆ ತಲಪಿದ ನಂತರ ಅಂದರೆ ತಾ ೧೯ ರಲ್ಲಿ ಅಪ್ಲಿಕೇಷನ್ ಫಾರಂ ಭರ್ತಿಮಾಡಿ ಕಳುಹಿಸಲು ಫಾರಮನ್ನು ...ಗೆ ಕಳುಹಿಸಿದರು. ಸದರಿ ಫಾರಂ ಭರ್ತಿಮಾಡಿ, ಸದರಿಯವರಿಗೆ ತಾ. ೨೧ ರಲ್ಲಿ ರವಾನಿಸಿದ್ದಕ್ಕೆ ತಹಲ್ ಜವಾಬಾಗಲಿ ಔಷಧಗಳಾಗಲಿ ...ಬಂದಿರುವದಿಲ್ಲ. ಕಡೆಗೆ ತಾ. ೨೩ ರಲ್ಲಿ ತಗಾದೆ ಕಾಗದ ...ಬರೆದದ್ದಕ್ಕೆ ಸಹಾ ಜವಾಬು ಬಂದಿರುವದಿಲ್ಲ.

ಈ ಕಂಪೆನಿಯವರು ನಂಬಿಗಸ್ತರೇ ಅಥವಾ ಅಲ್ಲವೇ ? ಹಣವಾಯವಾಗಿ ಇವರಿಗೆ ೧೯ ದಿವಸಗಳಾಗಿದ್ದಾಗ್ಯೂ ಅವರ ನಿಬಂಧನೆಗೆ ವಿರೋಧವಾಗಿ ಔಷಧಗಳನ್ನಾಗಲಿ, ಜವಾಬನ್ನಾಗಲಿ ಕಳುಹಿಸದೆ ಇರಲು ಕಾರಣವೇನಿರಬಹುದು ? ನಮ್ಮ ಹಣಕ್ಕೆ ಮೋಸವೇನಾದರೂ ಉಂಟೇ ? ನಮ್ಮ ಹಣವು ನಮಗೆ ಸೇರುವ ಮಾರ್ಗವ್ಯಾವದು ? ಎಂಬೀ ವಿಷಯಗಳನ್ನು ತಮ್ಮ ಮಾನ್ಯವಾದ ಪತ್ರಿಕೆಯಲ್ಲಿ ಪ್ರಕಟಿಸಿದರೆ ಸಕಲರಿಗೂ ಪ್ರಯೋಜನವಾಗುವದರಲ್ಲಿ ಸಂದೇಹವಿಲ್ಲ.

ಕೆಂಪೆನರಸಿಪುರದ ಚಂದಾದಾರ.

[ನಮ್ಮ ಪತ್ರಿಕೆಯಲ್ಲಿ ಬೇರೆ ಬೇರೆ ವರ್ತಕರೂ ಕಂಪನಿಯವರೂ ಪ್ರಕಟನೆ ಮಾಡುವ ಸಂಗತಿಗಳಿಗೆ ನಾವು ಜವಾಬ್ದಾರರಾಗಲಾರೆವು. ಅಂಥಾ ಕಂಪನಿಯವರಿಂದಾಗಲಿ ವರ್ತಕರಿಂದಾಗಲಿ ವಾಚಕರಿಗೆ ನಷ್ಟವಾಯಿತೆಂದು ತಿಳಿಸಿದರೆ ನಮ್ಮಿಂದ ಯಾವ ಪರಿಹಾರವೂ ಆಗಲಾರದು. ಆದರೂ ಸಾಧ್ಯವಾಗುವ ಮಟ್ಟಿಗೆ ನಾವು ವಿಚಾರ ಮಾಡಿ ನಮಗೆ ಸರಿಯಾಗಿರುವಂತೆ ಕಂಡು ಬರತಕ್ಕವುಗಳನ್ನೇ ಪ್ರಕಟಿಸುವೆವು —ಎಡಿ.]

ತಾಲ್ಲೂಕು ವರ್ತಮಾನಗಳು.

ನೆಲಮಂಗಲ.—ಚಿಕ್ಕಮಗಳೂರು ಪ್ರಾಂತ್ಯ ತಕ್ಕಮಟ್ಟಿಗೂ ...ಳೆಯಾಗಿದೆ ಎಂದು ಕೇಳುತ್ತೇನೆ. ಬೇಲೂರು ಮಂಜರಾಬಾದ್ ತಾಲ್ಲೂಕುಗಳಲ್ಲಿ ಈ ವಾರ ಒಳ್ಳೆ ಮಳೆಯಾಯಿತು. ಬಿತ್ತಿಕೊಂಡಿದ್ದ ಗದ್ದೆಗಳೆಲ್ಲಾ ಚನ್ನಾಗಿ ಬೆಳೆಯುತ್ತಿವೆ. ಕಾಫಿ ತೋಟಗಳಿಗೆ ತಕ್ಕ ಮಟ್ಟಿಗೂ ನೀರು ಬಂದಿದೆ. ಮಂಜರಾಬಾದ್ ತಾಲ್ಲೂಕಿನಲ್ಲಿ ಈಗ ದಾಲಕ್ಷ್ಮಿಯು ಉಗ್ರವಾದ್ದರಿಂದ ಗಡದಿಂದ ಕಾಯಿಯನ್ನು ಬಿಡಿಸುತ್ತಲಿದಾರೆ —ಇದೇ ತಿಂಗಳು ಮೊದಲನೆ ವಾರ ಸಕಲೇಶಪುರದಲ್ಲಿ ಶಾರದೆ ಪೂಜೆ ನಡೆಯಿತು. ಈ ಪೂಜೆಗೆ ಇಲ್ಲಿನ ...ಯೋಪಿಯನ್ ಪ್ಲಾಂಟರ್ ಸರದಾರರೆಲ್ಲಾ ಬಂದಿದ್ದರಲ್ಲದೆ ಚಿಕ್ಕಮಗಳೂರು ಕಡೆಯಿಂದಲೂ ಕೆಲವರು ಬಂದಿದ್ದರು. ನಾಲ್ಕು ದಿನ ಪೂಜೆ ನಡೆಯಿತು. ಇದರಲ್ಲಿ ಬೇರೆ ಬೇರೆ ಪ್ಲಾಂಟರುಗಳ ಕುದುರೆಗಳು ಗೆದ್ದವು —ಹೊಸ ರೆಡ್ರೆಂಡ್ ದೊರೆಯವರು ನಾಲ್ಕನೆ ತಾ ಮಂಜರಾಬಾದ್ ಕಡೆ ಸರ್ಕೀಟು ಹೊರಟು ೯ ನೆ ತಾ. ಸಕಲೇಶಪುರದಲ್ಲಿ ಇಂಗ್ಲಿಷ್ ಆರಾಧನೆ ನಡಿಸಿ. ಈಗ ಎಸ್ಟೇಟು ಪ್ರಾಂತ್ಯಗಳಲ್ಲಿ ಕೆಲಸ ನಡಿಸುತ್ತಲಿದಾರೆ ಇವರು ಚಿಕ್ಕಮಗಳೂರಿಗೆ ಹೋಗುವದಕ್ಕೆ ಇನ್ನೂ ಒಂದು ವಾರ ಹಿಡಿಯಬಹುದು —ದಂತವೈದ್ಯರಾದ ಡಾ॥ ಕಟ್ಸ್ನ್ ಸಾಹೇಬರು ಒಂದು ವಾರದ ವರಿಗೂ ಚಿಕ್ಕಮಗಳೂರಿನಲ್ಲೂ, ಅಲ್ಲಿಂದ ಸಕಲೇಶಪುರದಲ್ಲಿ ಒಂದು ವಾರವೂ ಇದ್ದು, ಈ ವಾರ ಕೊನೆಗೆ ಕಡೆ ಪ್ರಯಾಣ ಮಾಡುವವರಾಗಿದಾರೆ.

ತ್ರಿಪಟೂರು.—ಇಲ್ಲಿನ ಜನರು ಮಳೆ ಇಲ್ಲದೆ ಮಳೆಯನ್ನೇ ಎದುರುನೋಡುತ್ತಲಿದ್ದದ್ದಕ್ಕೆ ಸರಿಯಾಗಿ ಜಗದೀಶನು ಕರುಣಿಸಿ ಒಂದು ಹದ ಮಳೆಯನ್ನು ದಯಪಾಲಿಸಿದನು. ಈಗ ಪೈರುಗಳೆಲ್ಲವೂ ಅನುಕೂಲ ಸ್ಥಿತಿಯಲ್ಲಿವೆ. ಈಗ್ಯೆ ಸ್ವಲ್ಪ ದಿವಸಗಳಲ್ಲಿ ಈ ಗ್ರಾಮಕ್ಕೆ ೪ ಕಕ್ಕಸ್‌ಗಳು ಸ್ಯಾಂಕ್ಷನ್ ಆದ ಹಾಗೆ ವರ್ತಮಾನ ಕೇಳಿದೆನು. ತಹಲ್‌ವರಿವಿಗೂ ಅವುಗಳ ಏರ್ಪಾಡೇ ಇಲ್ಲದಿರುವುದು ಶೋಚನೀಯವಾಗಿದೆ. ಕಕ್ಕಸ್‌ಗಳು ಇಲ್ಲದೇ ಇರೋಣದರಿಂದ ಜನರೆಲ್ಲರೂ ಸಿಕ್ಕಿದ ಕಡೆಯಲ್ಲಿ ಹೇಸಿಗೆ ಮಾಡಿ ಗಲೀಜು ಮಾಡುತ್ತಲಿದ್ದಾರೆ. ಅಲ್ಲದೆ ಇಲ್ಲಿನ ಕೆರೆಯು ಜನರ ಅನುಕೂಲಕ್ಕೆ ತಕ್ಕದಾಗಿರುವುದರಿಂದ ಜನರು ಇದರಲ್ಲಿ ಸಿಕ್ಕಿದ ಹಾಗೆ ಗಲೀಜು ವಗೈರೆ ಮಾಡುತ್ತಲಿದ್ದಾರೆ. ಇದರಿಂದ ತುಂಬಾ ಅನಾರೋಗ್ಯಕ್ಕೆ ಕಾರಣವಾಗಿದೆ. ಹಾಗೆ ಮಾಡದಂತೆ ಒಬ್ಬ ಪೋಲೀಸಿನವನನ್ನಾದರೂ ಏರ್ಪಡಿಸಿದರೆ ಒಳ್ಳೇದು. ಇಲ್ಲಿನ ಕೆಟ್ಟುಹೋಗಿದ್ದ ಕೆಲವು ಮ್ಯುನಿಸಿಪಲ್ ಲಾಂದ್ರಗಳು ರಿಪೇರಿಗೆ ಹೋಗಿದ್ದವೆ. ಪ್ರಸಕ್ತ ಉಪಯೋಗಕ್ಕೆ ಬರಲೇ ಇಲ್ಲ. ಈ ಊರಿನ ಕೊಳೆ ನೀರೆಲ್ಲವೂ ಬಂದು ಈಡಿಗರ ಪಟ್ಟೆಯ ಬಳಿ ಇರುವ ಹಳ್ಳದಲ್ಲಿ ನಿಂತು ಅಲ್ಲಿರುವ ಜನರ ಆರೋಗ್ಯಕ್ಕೆ ಪ್ರತಿಬಂಧಕ ಉಂಟಾಗಿದೆ. ಇದು ಅಲ್ಲಿ ನಿಲ್ಲದಂತೆ ಮುಂದಕ್ಕೆ ಹೋಗುವ ಹಾಗೆ ಶೀಘ್ರವಾಗಿ ತಕ್ಕ ಏರ್ಪಾಡು ಮಾಡಬೇಕು. ಈ ವಿಷಯಗಳನ್ನೆಲ್ಲಾ ನಮ್ಮ ಅಮಲ್ದಾರರು ತಮ್ಮ ಚಿತ್ತಕ್ಕೆ ತಂದುಕೊಂಡಲ್ಲಿ ಅವರ ಹೆಸರು ಚಿರಸ್ಮರಣೀಯವಾಗುವುದು. [ಸ್ಕೂಲ್ ವಿಚಾರವನ್ನು ಆ ಇಲಾಖೆಗೆ ಬರೆದುಕೊಂಡಲ್ಲಿ ಕ್ರಮಪಡುವುದು - ಎಡಿ]

ಮಳವಳ್ಳಿ.—ಈಗ ೩—೪ ವರುಷಗಳಿಂದ ಈ ತಾಲ್ಲೂಕಿಗೆ ಅಮಲ್ದಾರರಾಗಿದ್ದು ಬಹು ಚಾತುರ್ಯದಿಂದ ಕಾರ್ಯಗಳನ್ನು ನಡಿಸಿಕೊಂಡು ಬಂದ ಮೆ॥ ಕೇಸರ್‌ಸಿಂಗ್ ರವರನ್ನು ಸರ್ಕಾರದವರು ಪಾವಗಡಕ್ಕೆ ವರ್ಗಮಾಡಿದ್ದರಿಂದ ಇಲ್ಲಿನ ಪ್ರಜೆಗಳಿಗೆ ಉಂಟಾದ ವ್ಯಾಕುಲವು ಬಹು ಹೆಚ್ಚಾಗಿತ್ತು. ಯಾಕೆಂದರೆ ಅಮಲ್‌ದಾರರು ಪ್ರಜೆಗಳಿಗೆ ನ್ಯಾಯವಂ ಮಾಡಿ ಯಾವ ಭಾಗದಲ್ಲಿಯೂ ಅವರ ಪ್ರಯೋಜನವನ್ನೇ ಬಯಸುತ್ತಾ ಇದ್ದದರಿಂದ ಎಲ್ಲಾ ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರೆಂಬಂಶವು ಪ್ರತ್ಯಕ್ಷವಾಗಿದೆ. ಇದು ಒಂದು ಒಳ್ಳೇ ಗುರುತು. ಯಾವ ಅಧಿಕಾರಿಯಾದರೆ ತನಗಿರುವ ಅಧಿಕಾರವು ತನ್ನ ದಕ್ಷತೆಯಿಂದಲೂ, ಯೋಗ್ಯತೆಯಿಂದಲೂ ಲಭಿಸಿದೆ ಎಂದು ತಿಳಿಯದೇ ಇದು ದೇವರ ಉಚಿತವಾದ ದಾನವೇ ಎಂದರಿತು, ಅಧಿಕಾರ ಕೊಟ್ಟ ದೇವರ ಮುಂದೆ ಭಯಭಕ್ತಿಯಿಂದಲೂ ಪ್ರಜೆಗಳ ಕಡೆಗೆ ನ್ಯಾಯಾನ್ಯಾಯಗಳನ್ನು ತಿಳಿದು ಸತ್ಯವನ್ನೇ ಮಾಡುವವನಾಗಿಯೂ ಇರಬೇಕು. ಅತ್ತಲಾಗಿ ಪ್ರಜೆಗಳು, "ದೇವರಿಂದಲೇ ಹೊರತು, ಯಾವ ಅಧಿಕಾರವೂ ಇಲ್ಲ" ಎಂಬ ಮಾತು ಪರಿತು ಅಧಿಕಾರಿಗೆ ಪೂರ್ಣ ವಿಧೇಯರಾಗಿ ಪ್ರೀತಿ ತೋರಿಸಿ ತಮ್ಮ ಕರ್ತವ್ಯವನ್ನು ಪೂರೈಸಬೇಕಾಗಿದೆ. ಹೀಗೇ ಪರಸ್ಪರ ಒಬ್ಬರನ್ನೊಬ್ಬರು ತಿಳಿದು ಸುಖ ಕಷ್ಟ ಪ್ರೀತಿ ದುಃಖಗಳಲ್ಲಿ ಸಮಭಾಗಿಗಳಾಗಿರುವರು. ಹೀಗಲ್ಲದೆ ಸತ್ಯವೇದದಲ್ಲಿ ಕೆಟ್ಟವರ ವಿಷಯದಲ್ಲಿ ಹೇಳಿರುವಂತೆ ಅವರು ಪ್ರಲಾಪ ಪಡೆವರೆ ಕೇಡು ಬರುವದು, ಅದೇನೆಂದರೆ, "ಒಬ್ಬ ಸಜ್ಜನ ಮಕ್ಕಳು ಅವನ ಮಾರ್ಗದಲ್ಲಿ ನಡೆಯದೆ ಲೋಭಿಗಳಾಗಿ ಮಾರ್ಗ ತಪ್ಪಿ, ಲಂಚವನ್ನು ತೆಗೆದುಕೊಂಡು, ನ್ಯಾಯವನ್ನು ತಪ್ಪಿಸಿದರು" ಇಂಥವರ ವಿಷಯ ಮತ್ತೊಂದು ಕಡೆ ಇರುವದೇನಂದರೆ, "ನಿಮ್ಮ ಅನೇಕ ಅಪರಾಧಗಳನ್ನೂ ನಿಮ್ಮ ಬಲವಾದ ಪಾಪಗಳನ್ನೂ ನಾನು ಬಲ್ಲೆನು, ನೀತಿವಂತರನ್ನು ಕಷ್ಟಪಡಿಸಿ ಲಂಚವನ್ನು ತಿಂದು, ಬಡವನನ್ನು ಬಾಗಿಲಲ್ಲಿ ತಿರಿಗಿಸಿಬಿಡುತ್ತೀರಲ್ಲ !" ಎಂದು ಸರ್ವಜ್ಞನಿಯಾದ ದೇವರು ಹೇಳುತ್ತಾನೆ ಇಂಥವರನ್ನು ದೇವರು ಖಂಡಿತವಾಗಿ ದಂಡಿಸುತ್ತಾನೆ ಮತ್ತು ಪ್ರಜೆಗಳು ಅಂಥವರನ್ನು ದ್ವೇಷಿಸುತ್ತಾರೆ. ಮೆ॥ ಕೇಸರಸಿಂಗ್‌ರವರಲ್ಲಿ ಬೇರೆ ಬೇರೆ ತಪ್ಪುಗಳಿದ್ದರೂ ಅವರು ಲಂಚತಿನ್ನುತ್ತಿರಲಿಲ್ಲ, ಅವರ ನ್ಯಾಯಾಧಿಕಾರವು ಪಕ್ಷಪಾತವಿಲ್ಲದ್ದಾಗಿತ್ತು. ಮೆ॥ ಕೃಷ್ಣೋಜಿರಾಯರನವರು ಹೋದಾಗಲೂ ಬಹು ಜನರು ವ್ಯಸನಪಟ್ಟರು. ಆದರೆ ಈ ಅಮಲ್‌ದಾರರು ಹೋಗುವಾಗ ಎಲ್ಲಾ ಕೋವಿದ ಜನರು ತಮ್ಮ ಪ್ರೀತಿ ಗೌರವಗಳನ್ನು ಉಚಿತ ಮರ್ಯಾದೆಗಳಲ್ಲಿಯೂ ತೋರಿಸುವದರಲ್ಲಿಯೂ ಪ್ರತ್ಯಕ್ಷಮಾಡಿದರು. ಇಂಥ ವಿಶೇಷವಾದ ಸ್ಥಳಕ್ಕೆ ಅವರು ತಕ್ಕವರಾಗಿದ್ದರು. ತಿಳುವಳಿಕೆಯುಳ್ಳ ನಮ್ಮ ಸರ್ಕಾರದವರು ಅಂಥವರನ್ನೇ ಇಂಥ ದವಾಬ್‌ದಾರಿಯುಳ್ಳ ತಾಲ್ಲೂಕಿನಲ್ಲಿಟ್ಟು ಎಲ್ಲಾ ಜನರಿಗೆ ಪ್ರಯೋಜನವನ್ನು ಉಂಟುಮಾಡಿಕೊಡಬೇಕೆಂದು ವಿಜ್ಞಾಪನೆ —ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಮೆ॥ ಸುಬ್ಬರಾಯರು ಬಹು ಯೋಗ್ಯರೂ, ದೊಡ್ಡ ಮನುಷ್ಯರೂ ನಿಷ್ಪಕ್ಷಪಾತಿಗಳೂ ಮತ್ತು ಮುಖ್ಯವಾಗಿ ತಮಗೆ ಕೊಡಲ್ಪಟ್ಟಿರುವ ಸರ್ಕಾರದ ಕೆಲಸವನ್ನು ಸ್ವಂತ ಕೆಲಸಕ್ಕಿಂತಲೂ ವಿಶೇಷ ಪಂಡಿತಿಸಿ ಬಹು ಮುತುವರ್ಜಿಯಿಂದಲೂ ಜ್ಞಾನವಾಗಿಯೂ ಮಾಡಿಕೊಂಡು ಬರುವವರೂ ಆಗಿದ್ದಾರೆ. ಇದನ್ನು ನೋಡಿ ಸಕಲ ಪ್ರಜೆಗಳೂ ಬಹು ಭಯ ಗೌರವಗಳಿಂ ಮಾಡಿದ ಭಾವದಿಂದ ಸನ್ಮಾನಿಸುತ್ತಿದ್ದಾರೆ. ಯಾವಾಗಲೂ ಬ್ರಾಂಚ್ ಸ್ಟೇಷನ್‌ಗಳ ಇನ್ಸ್‌ಪೆಕ್ಟರ್ ನಲ್ಲಿಯೂ ಬದ್‌ಮಾಷ್ ಜನರನ್ನು ಪತ್ತೆಮಾಡಿ ಪುಂಡು ಅಡಗಿಸುವದರಲ್ಲಿಯೂ ಬಹು ಆಸಕ್ತರಾಗಿದ್ದಾರೆ. ಹಿಂದೆ ತೂಗಡಿಸುತ್ತಿದ್ದ ಪೋಲೀಸಿನವರು ಈಗ ಎಚ್ಚರವಾಗಿರುವದಕ್ಕೂ ನಿರ್ಭಯವಾಗಿ ಎಲ್ಲಾ ತುಂಟಾಟಗಳನ್ನು ನಡಿಸುತ್ತಿದ್ದ ಕಳ್ಳಕಾಕರರೆಲ್ಲರಿಗೆ ಹೆದರಿಕೆ ಹಿಡಿದು ಸಜ್ಜನರಾಗಿ ನಡಿಯುವ ಹಾಗೆ ಪ್ರಯಾಸಪಡುವದಕ್ಕೂ ಕಾರಣ ಉಂಟಾಯಿತು. ನೀಚ ಲಾಭಕ್ಕೆ ಆಶಿಸದೆ ತಮ್ಮ ಕರ್ತವ್ಯವನ್ನು ನೆರವೇರಿಸುತ್ತಿದ್ದಾರೆ.—ಇಲ್ಲಿ ಅಷ್ಟು ಮಳೆ ಇಲ್ಲದ್ದರಿಂದ ಬೆಳೆಯು ಕೈಗೆಬರುವ ನಿರೀಕ್ಷೆ ಇಲ್ಲದ್ದಾಗಿ ಕಾಣುತ್ತದೆ. ಆದರೆ ಭಗವತ್ಕಟಾಕ್ಷವಿದ್ದರೆ ಎಲ್ಲಾ ಅನುಕೂಲವಾಗುವಂತೆ ಈಗ ಸಸ್ಯ ಬಡವರಿಗೆ ಹೆಚ್ಚು ಕಷ್ಟ. ಆದರೆ ವರ್ತಕಮಂಡಲಿಯವರಿಗೆ ಸಂತೋಷದ ಕಾಲವೇ ಆಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಮದರಾಸ್ ಅಧಿಪತ್ಯದ ಗವರ್ನರಾದ ಲಾರ್ಡ್ ಅಂಪ್ಟಿಲ್‌ರವರು ಪರಿವಾರಸಹಿತ ಕಳೆದ ವಾರ ಕೊಚ್ಚಿ ಸಂಸ್ಥಾನಕ್ಕೆ ದಯಮಾಡಿ ಅಲ್ಲಿನ ಕಾಡುಗಳಲ್ಲಿ ನಾಲ್ಕಾರು ದಿನಗಳ ತನಕ ಶಿಕಾರಿ ಮಾಡಿಕೊಂಡು ಬಂದರು. ಕೊಚ್ಚಿ ಸಂಸ್ಥಾನದ ಕಾಡುಗಳು ಬಹು ಪ್ರಸಿದ್ಧಿಯಾಗಿವೆ. ಬಹಳ ಪುರಾತನಕಾಲದಿಂದಲೂ ಮರಗಳು ಬೆಳೆದು ಇರುವವು. ಈ ಕಾಡುಗಳಿಗೆ ಆ ಸಂಸ್ಥಾನದವರು ೩॥ ಲಕ್ಷ ರೂಪಾಯಿ ಖರ್ಚುಮಾಡಿ ಒಂದು ಸಣ್ಣರೈಲನ್ನು ಹಾಕಿ ಜಂಗಲ್ ಉತ್ಪತ್ತಿಯನ್ನೆಲ್ಲಾ ರೈಲ್ ಸ್ಟೇಷನ್‌ಗೆ ಸಾಗಿಸಿ ಬಹಳ ಲಾಭಸಂಪಾದನೆ ಮಾಡಬೇಕೆಂಬ ಪ್ರಯತ್ನ ಮಾಡಿದಾರೆ. ಈ ರೈಲನ್ನು ಮೂರು ಕಡೆಗಳಲ್ಲಿ ೪೭ ಮೈಲಿ ದೂರ ಹಾಕಿ ಕಾಡುಗಳಿಗೆ ತಂದು ಬಿಟ್ಟಿದಾರೆ. ಗವರ್ನರವರು ನೊನ್ನೆ ಅಲ್ಲಿಗೆ ದಯಮಾಡಿದ್ದಾಗ್ಗೆ ಈ ರೈಲನ್ನು ಬಿಡುವಂತೆ ಪ್ರಾರಂಭಮಾಡಿದರು. ಈ ರೈಲ್ ಹಾಕಿದ್ದರಿಂದ ಕೊಚ್ಚಿ ಸಂಸ್ಥಾನದ ಜಂಗಲ್ ಉತ್ಪತ್ತಿಯೇ ವರುಷಕ್ಕೆ ಮೂರು ಲಕ್ಷ ರೂಪಾಯಿನಂತೆ ಹೆಚ್ಚಾಗುವುದೆಂದು ಅಂದಾಜು ಕಟ್ಟಿದಾರೆ.

* * * *

ಪೂನಾ ಪಟ್ಟಣದ ರವಿವಾರಪೇಟೆಯಲ್ಲಿ ರಾಧಾಬಾಯಿ ಎಂಬೊಬ್ಬ ಬಳೆಮಾರುವವಳಿದ್ದಾಳೆ. ಬಹುಕಾಲದಿಂದ ಅವಳ ಸ್ನೇಹಿತಳಾಗಿದ್ದು ಅವಳ ಮನೆಗೆ ಹೋಗಿಬರುತ್ತಿದ್ದ ಲಕ್ಷ್ಮಮ್ಮನೆಂಬುವಳು ಅವಳಿಗೆ ಒಂದುದಿನ ಸ್ವಲ್ಪ ಹಾಲನ್ನು ಕುಡಿಯುವುದಕ್ಕೆ ಕೊಟ್ಟು, ಅವಳ ಮನೆಯಲ್ಲೇ ಆ ರಾತ್ರಿ ಮಲಗಿದ್ದು, ಅವಳಿಗೆ ಪ್ರಜ್ಞೆತಪ್ಪಿದ ಮೇಲೆ ಅವಳ ಬಾಬತು ಸುಮಾರು ೭೦೪ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದಳು. ರಾಧಾಬಾಯಿಗೆ ಮೂರು ದಿನಗಳ ತನಕ ಮೈಮೇಲೆ ಜ್ಞಾನವಿರಲಿಲ್ಲ. ಅನಂತರ ಅವಳು ತನ್ನ ಜೊತೆಗಿ ಕಳುವಾಯಿತೆಂದು ಫಿರ್ಯಾದುಮಾಡಿದಳು. ಪೋಲೀಸಿನವರು ಗುಮಾನಿಯ ಮೇಲೆ ಲಕ್ಷ್ಮಮ್ಮನನ್ನು ಹಿಡಿದು ತನಿಖೆ ಮಾಡಿದಾಗ ಕೆಲವು ನಗಗಳು ಅವಳ ಬಳಿ ಸಿಕ್ಕಿದವು. ಅವಳು ಕಳವು ಮಾಡಿದ್ದೆಂದು ಒಪ್ಪಿಕೊಂಡಳು. ಸೆಷನ್ಸ್ ಜಡ್ಜರು ಅವಳಿಗೆ ನಾಲ್ಕುವರುಷ ಕಠಿಣಸಜಾ ವಿಧಿಸಿದರು. ಆದರ ಮೇಲೆ ಅವಳ ಬೊಂಬಾಯಿ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ.

* * * *

ಹಿಂದುಸ್ಥಾನದೊಳಗೆ ಕಾಡು ಮೃಗಗಳಿಂದ ೧೯೦೪ ನೇ ವರುಷದಲ್ಲಿ ಆದ ನಷ್ಟವನ್ನು ಸರ್ಕಾರದವರು ಪ್ರಕಟಿಸಿದಾರೆ ಇದರಿಂದ ತಿಳಿಯಬರುವದೇನೆಂದರೆ—ಆ ವರುಷ ಕಾಡು ಮೃಗಗಳು ೨,೧೫೩ ಜನರನ್ನು ಕೊಂದು ಹಾಕಿದವು ಈ ಪೈಕಿ ೭೯೬ ಜನರು ಹುಲಿಗಳ ಬಾಯಿಗೆ ತುತ್ತಾದರು ತೋಳಗಳು ೨೪೪ ಜನರನ್ನು ಕೊಂದು ಬಿಟ್ಟವು. ಇದಲ್ಲದೆ ಹಾವು ಕಡಿದು ೨೧,೮೮೦ ಜನರು ಮೃತಪಟ್ಟರು ಆಂಟಿ ವೆನೀನ್ ಎಂಬ ಔಷಧವನ್ನು ಹಾವು ಕಡಿದವರಿಬ್ಬರಿಗೆ ಹಾಕಿ ಚಿಕಿತ್ಸೆ ಮಾಡಿದ್ದರಲ್ಲಿ ಇಬ್ಬರಿಗೂ ವಾಸಿಯಾಯಿತು ಈಗ ಪರ್ಮಾಂಗನೇಟ್ ಆಫ್ ಪೊಟಾಸಿಯಂ ಎಂಬ ಔಷಧವನ್ನು ಹಾವಿನ ವಿಷಕ್ಕೆ ಕೊಟ್ಟು ವಾಸಿಮಾಡಬೇಕೆಂದು ಪ್ರಯತ್ನಪಡುತ್ತಿದಾರೆ ಆ ವರುಷ ಕಾಡು ಮೃಗಗಳು ೮೮,೨೦೭ ಗೋಕರುಗಳನ್ನು ಕೊಂದು ಹಾಕಿದವು ಹಾವು ಕಡಿದು ಬೇರೆ ೧೦ ೩೭೬ ದನಗಳು ಲಯವಾದವು ಕಳೆದ ವರುಷ ೧,೯೦,೦೦೦ ರೂಪಾಯಿ ಇನಾಮು ಕೊಟ್ಟು, ೧೭,೧೨೨ ಕಾಡು ಮೃಗಗಳನ್ನೂ ೬೯,೩೭೮ ಹಾವುಗಳನ್ನೂ ಕೊಲ್ಲಿಸಿದಾರೆ

* * * *

ರಂಗೂನ್ ಪಟ್ಟಣದಲ್ಲಿ ಒಬ್ಬ ಬರ್ಮಾ ದೊಡ್ಡಮನುಷ್ಯನು ವಿಲಾಯತಿಗೆ ಹೋಗಿದ್ದಾಗ ಆತನ ಮಗಳಾದ ಮಾಹ್ಲಾ ಎಂಬುವಳನ್ನು ಯಾರೋ ಅಪಹರಿಸಿಕೊಂಡು ಹೋಗಿದ್ದರೂ ಸರ್ಕಾರದವರು ಪತ್ತೆಮಾಡುತ್ತಿದ್ದದೂ ವಾಚಕರಿಗೆ ಗೊತ್ತಿದೆಯಷ್ಟೆ. ಈಚೆಗೆ ಆ ಹುಡುಗಿ ತಾನಾಗಿಯೇ ಮನೆಗೆ ಬಂದಳು. ಅವಳನ್ನು ಎತ್ತಿಕೊಂಡು ಹೋಗಿದ್ದ ಇ ಮಾಂಗ್ ಎಂಬುವನು ತಾನಾಗಿಯೇ ಕಳೆದ ವಾರ ಪೋಲೀಸಿನವರಿಗೆ ಸಿಕ್ಕಿ ದರ್ಯಾಫ್ತಿಯಲ್ಲಿ ಹೇಳಿದ್ದೇನೆಂದರೆ-ನಾನು ಮಾಹ್ಲಾ ಎಂಬ ಹುಡುಗಿಯನ್ನು ಎತ್ತಿಕೊಂಡು ಹೋದದ್ದುಂಟು ಅವಳಾಗಿಯೇ ತನ್ನನ್ನು ಕರೆದುಕೊಂಡು ಹೋಗುವಂತೆ ನನ್ನನ್ನು ಕೇಳಿಕೊಂಡಳು ಇದರಲ್ಲಿ ಅಬ್ದುಲ್ ರಹಮಾನನೂ ಬಾಅಂಗ್ ಎಂಬುವನೂ ನನಗೆ ಸಹಾಯಮಾಡಿದರು ನಾನು ಅವಳನ್ನು ಕರೆಸಿಕೊಂಡು ಹೋದ ಮೇಲೆ ಅವಳು ಮನೆಗೆ ಹೋದರೆ ಪೋಲೀಸಿನವರು ನನ್ನನ್ನು ದಸ್ತಗಿರಿ ಮಾಡುತ್ತಾರೆಂದು ಹೇಳಿ ಬಲಾತ್ಕಾರಮಾಡಿ, ದೋಣಿಯೊಳಗೇ ನಾವು ಇರುವಂತೆ ಕೇಳಿಕೊಂಡಳು ಎಂಬುದೇ. ಈಗ ಅವನನ್ನು ಜಾಮೀನ ಮೇಲೆ ಬಿಡಬೇಕೆಂದು ವಕೀಲರು ಮಾಡಿದ ಸಾಹಸವೆಲ್ಲಾ ವ್ಯರ್ಥವಾಯಿತಾದ್ದರಿಂದ ಅವನು ಜೈಲಿನಲ್ಲಿ ಇರುತ್ತಾನೆ.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

28

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರ್ ಇಂಟೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—MR. HUGHES, MYSORE ZOO

ಕಥಾಸಂಗ್ರಹ—ಮೊದಲನೆ ಭಾಗ

22

ವಿಶೇಷ ಪ್ರಖ್ಯಾತಿಗೆ ಬಂದಿರುವ ಕನ್ನಡ ನುಡಿಯ ಕಥಾಸಂಗ್ರಹದಲ್ಲಿ ೧,೨,೩ ನೆ ಭಾಗಗಳನ್ನು ಕೂಡಿಸಿ, ಪ್ರತ್ಯೇಕವಾಗಿ ಅಚ್ಚುಹಾಕಿದೆ. ಈಗಿನ ಕಾಲಕ್ಕೆ ತಕ್ಕಂತೆ ಮಾತುಗಳನ್ನೂ ಮಾತಿನ ಸರಣಿಯನ್ನೂ ಬದಲಾವಣೆ ಮಾಡಿದೆ. ಒಳ್ಳೇ ಕಾಗದದ ಮೇಲೆ ಪ್ರಿಂಟಾಗಿದೆ, ಅಂದವಾದ ಮತ್ತು ಗಟ್ಟಿಯಾದ ಬೈಂಡು ಕಟ್ಟಿದೆ ೧ ಪ್ರತಿಗೆ ಕ್ರಯ ೧ ರೂಪಾಯಿ ೧೦೦ ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವಂಥಾ ಪುಸ್ತಕವ್ಯಾಪಾರಿಗಳಿಗೆ ಶೇಕಡ ೨೫ ರಂತೆ ಡಿಸ್ಕೌಂಟು ಸಿಕ್ಕುವದು ಬೇಗ ಬರೆದು ತರಿಸಿಕೊಳ್ಳಿ ಗಂಡು ಹೆಣ್ಣು ಮಕ್ಕಳಿಗೂ ದೊಡ್ಡವರಿಗೂ ಓದಲು ಬಹು ಮನೋಹರವಾಗಿಯೂ ನೀತಿ ಬೋಧಕವಾಗಿಯೂ ಇರುವ ಪುಸ್ತಕ. ವಿ ಪಿ ಮೂಲಕವೂ ಕಳುಹಿಸುತ್ತೆ. ವಿಳಾಸ —ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

13

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮ॥ ಟಿ. ಎಂ ರಾಮಸ್ವಾಮ್ಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಲೋಯರ್ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ತೆಗೆದುಕೊಳ್ಳುವವರಿಗೆ ಶೇಕಡಾ ೧೨ ರಂತೆ ಡಿಸ್ಕೌಂಟು ಕೊಡಲಾಗುವದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಬಯಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು ಕ್ರಯ —೧ ಪ್ರತಿಗೆ ೩ ಆಣೆ, ಪೋಸ್ಟೇಜು ೧ ಆಣೆ.

ಪ್ರಪಂಚದಲ್ಲಿ ದೊಡ್ಡದು ಯಾವದು?

35

ಜ್ಞಾನವೋ? ಧನವೋ? ಸ್ನೇಹಿತರೋ? ಜಾಗ್ರತೆ ತಿಳಿರಿ. ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ"

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳರೆ ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯುವೇಕಾದ್ದು ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಮ॥ ರಾ॥ ಕರಿಬಸವಶಾಸ್ತ್ರಿಗಳು ಬರೆದಿದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ, ವಿ ಪಿ. ಮೂಲಕ ೧೪ ಆಣೆ

೨ "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ

೩. "ಸತ್ಪ್ರವಾಸ ದೀಪಿಕೆ"

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು ಕ್ರಯ ೪ ಆಣೆ

೪	"ರೋಮನರ ಚರಿತ್ರೆ"	ಕ್ರಯ ೦—೨—೦
೫.	"ಗ್ರೀಕರ ಚರಿತ್ರೆ"	,, ೦—೨—೦
೬	"ಅನುಭವಾನಂದ"	,, ೦—೬—೦
೭	"ಗಣಿತ ಸಂಜೀವಿನಿ"	೧—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯	"ಚಾಮರಾಜೇಂದ್ರ ವಿಲಾಸ"	೦—೧೨—೦
೧೦	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ"	೦—೧೨—೦
೧೧	"೧೯೦೫ನೇ ವರ್ಷದ ಡೈರಿಗಳು"	

ಡ್ರಾಫ್ ಪೆನ್ಸಿಲ್ ಸಹಿತ ೦—೬—೦ ; ಸಾದಾ ೦—೪—೦

ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪೋ,

ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಸುಧಾ.

19

ಇದನ್ನು ಓದಿ! ಬಿಡಬೇಡಿ!! ಗುಣ ನೋಡಿ!!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಿದ್ದಾರೆ ಕೈತ್ಯ, ತಲೆನೋವು, ಅರತಲೆನೋವು, ಬೆನ್ನುಛಳುಕು, ಕೈಕಾಲು ನೋವು ಮುಂತಾದವುಗಳನ್ನು ವೈನಾಮೃಟನಂತೆ ದಿಗಂತರಕ್ಕೆ ಹಾರಿಸಬಲ್ಲದು 'ಸುಧಾ' ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವು ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಶೀಸೆ ಔಷಧಿಯಲ್ಲಿ ಕಂಡುಬರುವ ಅಮೋಘಗುಣವನ್ನು ಹೆಚ್ಚು ವರ್ಣನೆಮಾಡಿ ತೀರದು ಸೀಸೆ ೧ಕ್ಕೆ ೦ ೮ ೦ ಹಾಸಲು ಬೇರೆ.

ಜೀವನಸುಧಾ—ಜ್ವರ ನಿಂತಿತೆಂದು ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರಾಗಿ ಸುಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧಮಾಸ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ. ಸೀಸೆ ೧ಕ್ಕೆ ರೂಪಾಯಿ ೧—೦—೦.

ಶ್ರೀತಾಂಬೂಲ—ದಿವ್ಯ ವ್ಯಾತರಾದ ತಾಂಬೂಲ ಮಾತ್ರೆಗಳ ಸೀಸೆ ೧ಕ್ಕೆ ೪ ಆಣೆ ೬ ಸೀಸೆವರಿಗೆ ವಿ ಪಿ ಛಾರ್ಜಿ ೫ಆಣೆ.

ದೇವನಹಳ್ಳಿ ಟವ್ನ — ಯಂ ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್ — ಮೆಡಿಕಲ್ ಪ್ರಾಕ್ಟೀಷನರ್.

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

21

ದಯವಿಟ್ಟು ಇದನ್ನು ಪರೀಕ್ಷಿಸಿ ನೋಡಿರಿ

೧ ಪುಷ್ಟಿರಸಾಯನ—ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ ನರಗಳ ಸಂಬಂಧವಾದ ದುರ್ಬಲಗಳಡಗಿ ದೇಹಪುಷ್ಟಿಯಾಗುವದು, ಪೆಟ್ಟಿ ೧ಕ್ಕೆ ರೂ ೨

೨ ಅಜೀರ್ಣಗುಳಿಗೆ—ಬಾಯಿಯ ದುರ್ಗಂಧವನ್ನು ನಾಶಮಾಡಿ ನಿದ್ದೆಬಾರದಿರುವವರಿಗೆ ಸುಖನಿದ್ರೆಯನ್ನು ಕೊಡುವದು ಪೆಟ್ಟಿ ೧ಕ್ಕೆ ೮ ಆಣೆ.

೩ ಲಕ್ಷ್ಮೀಕರ ಕಸ್ತೂರಿಮಾತ್ರೆ—ಅತ್ಯಂತ ಕಠಿಣವಾದ ಅಜೀರ್ಣವನ್ನು ಜೀರ್ಣಮಾಡಿ ಜ್ವರ, ಕೆಮ್ಮಲು, ಬಾಯಿಯ ದುರ್ಗಂಧ, ಇವುಗಳನ್ನು ಹೋಗಲಾಡಿಸುವದು ಸೀಸೆ ೧ಕ್ಕೆ ೪ ಆಣೆ

೪ ವೇದನಾ ಪರಿಹಾರ ತೈಲವು ಮೇಲೆ ತೊಡೆಯೋಣದರಿಂದ ಶರೀರದ ಎಲ್ಲಾ ವೇದನೆಗಳು ಹೋಗುವವು ಸೀಸೆ ೧ಕ್ಕೆ ೧ ರೂ

೫ ಪರಿಮಳ ಕೇಶತೈಲವು—ಬೋಳುತಲೆ ಹೊಟ್ಟು ಉದುರುವಿಕೆ, ಇವುಗಳು ವಾಸಿಯಾಗುವದಲ್ಲದೆ ಮಿದುಳು ಸಂಬಂಧವಾದ ರೋಗಗಳನ್ನು ವಾಸಿಮಾಡುವದು ಸೀಸೆ ೧ಕ್ಕೆ ೮ ಆಣೆ

೬ ನೇತ್ರಬಿಂದು—ಸಮೀಪದೃಷ್ಟಿ, ನೀರು ಸುರಿಯುವದು, ಹುಣ್ಣೆ, ಉರಿ ಮುಂತಾದ ರೋಗಗಳು ಗುಣವಾಗುವವು ಸೀಸೆ ೧ಕ್ಕೆ ೮ ಆಣೆ

೭ ಶ್ರೋತ್ರಬಿಂದು—ಕಿವಿಯ ಎಲ್ಲಾ ಜಾಡ್ಯವನ್ನೂ ಪರಿಹರಿಸುವದು ಸೀಸೆ ೧ಕ್ಕೆ ೮ ಆಣೆ.

೮ ಹುಳಕಡ್ಡಿಗೆ ಔಷಧ—ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರದು. ಸೀಸೆ ೧ಕ್ಕೆ ೪ ಆಣೆ.

೯ ಸುಖಭೇದಿ—ಆಯಾಸ ಸ್ವಲ್ಪವೂ ಉಂಟಾಗದು ಸೀಸೆ ೧ಕ್ಕೆ ೮ ಆಣೆ.

೧೦ ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರಗಳನ್ನು ಪೂರ್ತಿಯಾಗಿ ಅಡಗಿಸುವದು. ಪೆಟ್ಟಿಗೆ ೧ಕ್ಕೆ ರೂ ೧

೧೧ ಕೂದಲು ಉದುರಿಹೋಗುವದಕ್ಕೆ—ಚರ್ಮಕ್ಕೆ ತೊಂದರೆ ಕೊಡದೇ ನಿಮಿಷದಲ್ಲಿ ಉದರಿಹೋಗುವದು ಸೀಸೆ ೧ಕ್ಕೆ ೪ ಆ.

೧೨ ಸುಗಂಧಕ ದಂತಚೂರ್ಣ—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು ಸೀಸೆ ೧ಕ್ಕೆ ೩ ಆಣೆ.

೧೩ ಅತ್ಯುತ್ತಮವಾದ ಕಾಶ್ಮೀರದ ಕಸ್ತೂರಿ—ಒಂದೇ ರಂಗಿರತಕ್ಕದ್ದು ತೋಲಾ ೧ಕ್ಕೆ ರೂ ೪೮ ಪತ್ರ—ವಿ ಪಿ ಚಾರ್ಜಿ ಬೇರೆ ಬೇಕಾದವರು ಚಲ್ರೆಯಾಗಿಯೂ ದೊರೆಯುವದು.

ವಿಳಾಸ —ಪಿ. ಸುಬ್ಬರಾಯರ್,

ಪೋರ್ಟುನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

23—9—1905 ರಿಂದ 29—9—1905 ರ ವರೆ[illegible]

ಸ್ಥಳ.		ಪ್ಲೇಗ್ ತಗಲಿದ್ದು	ಸತ್ತದ್ದು	ಹೋದ ಕಾಲ ಸಂ[illegible]
ಬೆಂಗಳೂರು ಪಟ್ಟಣ		11	8	40
ಮೈಸೂರು	,,	0	0	50
ಬೆಂಗಳೂರು ಡಿಸ್ಟ್ರಿಕ್ಟ್		8[illegible]	58	196
ಮೈಸೂರು	,,	0	0	101
ಕೋಲಾರ್	,,	2	0	81
ಕೋಲಾರ್ ಚಿನ್ನದ ಗಣಿಗಳು		9	7	22
ತುಮಕೂರು ಡಿಸ್ಟ್ರಿಕ್ಟ್		74	9	38
ಹಾಸನ	,,	0	1	33
ಚಿತ್ರದುರ್ಗ	,,	0	0	190
ಕಡೂರ್	,,	26	13	240
ಶಿವಮೊಗ್ಗ	,,	7	1	154
	ಜುಮ್ಲಾ	80	60	1155

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರದ ಆಶ್ವೀಜ ಬಹುಳ ಷಷ್ಠಿ ಗುರುವಾರದಿಂದ ಆಶ್ವೀಜ ಬಹುಳ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಅಕ್ಟೋಬರ್

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ
19	ಗುರು ⌐	ಷಷ್ಠಿ	15 12	ಮೃ	6 20
20	ಶುಕ್ರ	ಸಪ್ತಮಿ	15 53	ಆರ್ದ್ರ	[illegible] 02
21	ಶನಿವಾ	ಅಷ್ಟಮಿ	15 3[illegible]	ಪು	11 12
22	ರವಿವಾ	ನವಮಿ	13 15	ಪುಷ್ಯ	11 16
23	ಚಂದ್ರ ‡	ದಶಮಿ	40 15	ಶ್ಲೇ	11 2
24	ಕುಜ ¶	ಏಕಾದಶಿ	36 15	ಮ	9 12
25	ಬುಧ *	ದ್ವಾದಶಿ	32 20	ಪು	6 15

⌐ ದಗ್ಧಯೋಗ, ಮೃತ್ಯುಯೋಗ

‡ ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥೋತ್ಸವ

¶ ಮಹಾವ್ಯತೀಪಾತ, ಸರ್ವತ್ರಏಕಾದಶಿ.

* ವೃಶ್ಚಿಕಾಯನಗತೋರವಿ.

ಪೇಟೆ ಧಾರಣೆ.

ದಿನಸು	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೨—೮—	೧೨—
ಕೆಂಪುಕೆಂಪುತ್ತು ಅಕ್ಕಿ ಅವಲ್ ..	.. ೧೨—೪—೦	—೨೮
,, ಸಾಯಂ	೧೨—೦—೦	೧೧—೧
ಸಾಧಾರಣ ಅಕ್ಕಿ	೧೨—೦—೦	೧೨—
ಸಣ್ಣಕ್ಕಿ ಅವಲ	೧೪—೦—೦	೪೦—
,, ಸಾಯಂ	೧೩—೮—೦	೧೩
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೧ ೦ ೦	೧೧—
,, ಸಾಯಂ	೧೦—೮—೦	೧೦—
ಹೈನ ರಾಗಿ ಪಲ್ಲಾ ೧ಕ್ಕೆ	೬—೪—೦	೫—
ಕಾರಾಗಿ ..	೬—೦ ೦	೪—೦
ಜೋಳ	೬—೦—೦	೬—
ಹಲಗಂಡೆ ಪಲ್ಲಾ ೧ಕ್ಕೆ ..	೧೦—೦—೦	೯—
ಬಳೇ ಅವರೆ	೮ ೧೨ ೦	೯—
ಹೆಸರು	೯ ೧೨—೦	೧೦—
ಉದ್ದು	೧೦ ೦ ೦	೯—
ಕಡಲೆ	೨೦—೦—೦	೧೦—
ಎಳ್ಳು	೧೩ ೦—೦	೧೫—
ಹುರುಳಿ	೧೦—೦ ೦	೯—
ಪರಳು ೧೨೬ ಸೇರಿಗೆ	೧೨—೮—೦	೧೨—೦
ಸೀಗೇಕಾಯಿ ಮಣ ೧ಕ್ಕೆ	೩—೮—೦	೩—೦
ಮೆಣಸಿನಕಾಯಿ	೪—೮—೦	೪—
,, ಸಾಯಂ	೩—೧೨—೦	೩—೦
ಬೆಲ್ಲ ದೊಡ್ಡ ಅಚ್ಚು	೭—೪—೦	ಮ ೨
ಒಳ್ಳೆಕ್ಕೆ ಮಣ ೧ಕ್ಕೆ	೪—೪ ೦	೪—
ಹರಳೆಣ್ಣೆ ,, ..	೫—೦—೦	೪—
ಕೊತ್ತುಂಬರಿ ಪಲ್ಲ ೧ಕ್ಕೆ	೧೦ ೮—೦	೯—೦
ಉಪ್ಪು ,, ..	೭—೦—೦	೬—೦
ಜಾಣಸೇ ಹಣ್ಣು	೧ ೦—೦	೦—೧
,, ಹಳೇದು	೦—೧೪—೦	೦—೧
ಹುಣಸೆ	೧೨—೮—೦	೧೧—೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫—೦—೦	೪—
ತೆಂಗಿನಕಾಯಿ ೧೦೦ ಕ್ಕೆ	೫—೦—೦	೪—
ಅಳಲೇಕಾಯಿ ಮಣ ೧ಕ್ಕೆ	೧—೦—೦	೦—೧
ಅಂಟ್ವಾಳದಕಾಯಿ ಮಣ ೧ಕ್ಕೆ	೦—೧೨—೦	೦—೧
ಚಿನ್ನ (ಪವನ್) ಕೆಂಪು	೧೫—೮—೦	೧೫—
,, , ಹಸಿರು	೧೫ ೧೦—೦	೧೬—
,, ,, ಗಟ್ಟಿ ತೊಲ ೧ಕ್ಕೆ	೬೬—೦—೦	೨೪—
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೭೬—೧—೦	೭೬—

Printed and Published by the Rev H Sp[illegible], [illegible] the Proprietor and Manager, Wesleyan Mission Pr[illegible] Mysore. 19/10/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಪ್ಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಅಕ್ಟೋಬರ್ ತಾರೀಖು ೨೬ ನೇ ಗುರುವಾರ. — ಸಂಚಿಕೆ ೨೨

"ಚಿಕ್ಕಲಿತಸಪ್ರೂ ಒಕ್ಕಲಿಗನೂ. —ಸರ್ಕ್ಕರ್ಕೊಂದು.

11

ಈ ದೇಸಾಯುವಿಗಳ್ಯವಶ್ಯಕವಾದ ಪತ್ರಿಕೆ. ಕನ್ನಡದಲ್ಲಿ ಪಕ್ಷಕ್ಕೊಮ್ಮೆ ಪ್ರಕಟಿಸಲ್ಪಡುವದು. ಇದರ ವಾರ್ಷಿಕ ವರ್ಗ ಪ್ಪ್ರಯ ಸಹಿತ ರೂ. ೧—೮—೦. ರೈತರೇ, ಬೇಗ ತರಿಸಿ ಳ—ದಿ ಮ್ಯಾನೇಜರ್, ೧೯, ಸಿವಿಲ್ ಲೈನ್ಸ್, ಪೂನ

ಯನ್. ಆರ್. ವೆಂಕಟಸುಬ್ಬಾ ಶಾಸ್ತ್ರಿ,
ಸುಜೋಧ ಗ್ರಂಥಾಲಯ, ಮೈಸೂರು.

11

ಸ್ಕೂಲ್ ಕನ್ನಡದ ೧ನೆ ಪುಸ್ತಕದ ನೋಟ್ಸು	೦—೪—೦
ಡಿ ,, ,, ೭ ನೆ ಪುಸ್ತಕದ ನೋಟ್ಸು	೦—೪—೦
ಡಿ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೬
ಸ್ಕೂಲು ಸಂಸ್ಕೃತದ ಬಾಲಪಿಡದ (೨ನೆ ಭಾಷೆ)	೦—೧—೦
ತಿರುಗಣಿ ವಿದ್ಯಾಸಂಗ್ರಹದ ನೋಟ್ಸು	೦—೧—೬

ಜ್ವರಹರಿ. 50

ಈ ಸಾಧಾರಣ ಜ್ವರ, ಚಳೀಜ್ವರ, ವಿಷಮಜ್ವರ, ಪಿತ್ತಜ್ವರ, ಪ್ರ, ವಾತಜ್ವರ, ಜ್ವರ ಬಿಡುಯುವದು, ಎಂಬ ಸಕಲವಿಧವಾದ ಜ್ವರ ಬಹು ಬೇಗನೆ ವಾಸಿಮಾಡುವದು.

ತುಮಕೂರು ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜರಾಯಿ ಇನಸ್ ಪೆಕ್ಟರ್ ಆಫೀಸರ್ ಎಸ್. ಬಿ. ವೆಂಕಟಪತಿ ಅ ವರು—ವಿಷಮ ಜ್ವರ ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬಾಟ್ಲಿಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆರಾಮ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬಿಳುತ್ತಿರು ತಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೨—೨ ಆ., ೧೧ ರೂ.; ಡಜನ್ನರಡು ಸೀಸೆ ತರಿಸಿಕೊಂಡರೆ ಖರ್ಚು ಮಾಫಿ ಬಿಡಲಾಗುವದು.

✦✦✦✦✦✦✦✦

ಬಿ. ಮಂಕ ಪ್ರೂಫ ರ.

Imum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ತ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂ ಲ್ಲಾ ಮುಖ್ಯೌಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾ ಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿ ಕ್ರಯದ ಪರವ್ರ ಜ್ವರಹರಿ ಎಂಬ ಔಷಧದಂತೆಯೇ. ಸೀ ಕೊಡಲಾಗುವದು.

ಮದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯು ಕರ್ಪೂರವನ್ನು ನಾನೂ ನನ್ನ ಕಾರ್ಯಾರ್ಥದಾರರೂ ಮ್ಯಾನಸಿಪ ಸ್ಪಿತ್ರಿಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀ ದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೆ ಇದೆ ಔಷಧಿವಾಗಿ

ಈ ಒಳ್ಳೆ ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ ಔಷಧಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕಿವೆ. ಇವಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ:— ಮುತ ಗ್ರೇಟ್ ಅಂತಮುನ್ ಔಷಧಗಳ ಕಂಪೆನಿ,

ಕೆನ್ಸಿಂಗ್ಟನ್ ಬೀಚ್ ಲೈನ್, ಮದರಾಸ್.

೧೯೦೬ನೇ ವರುಷದ ರಾಯಲ್ ಡೈರಿಗಳು.

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚದುರಂಕ, ವಾರಕೂಲಿ, ಬಡ್ಡಿಯ ಮು ಖ್ಯವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟರ್ ಫಿ, ಕೋರ್ಟ ಫಿ ಆಕ್ಟು, ಇಂಡಿಯಾದಲ್ಲಿ ಮಹಾಪ್ರಭುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೆಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಬಡ್ಡಿ ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ ರಲ್ಲಿನ ಏಕಾದಶಿ, ಹುಣ್ಣಿಮೆ, ಅಮಾವಾಸ್ಯೆ, ಸಂಕ್ರಮಣ, ಗೌರೀಪಂಚಾಂಗ, ರೈಲ್ವೆ ಪಾರಸಲ್ ಛಾರ್ಜು, ಯದುವಂಶರತ್ನಾಕರ, ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ.

ನಂ॥ ೧ ದೊಡ್ಡ ಸೈಜು ರೂಲು ಹಾಕಿದೆ ಕ್ರಯ.	೦—೮—೦
,, ೨ ,, ,, ,, ಮುಚ್ಚಳ ಇರತಕ್ಕದ್ದು	೧—೦೦—೦
,, ೩ ಚಿಕ್ಕ ,, ,, ,, ,,	೦—೬—೦
,, ೪ ,, ,, ,, ,, ,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ. ಡೈರಿಗಳು ಅಕ್ಟೋಬರು ೧೦ ರ ಒಳಗಾಗಿ ದೊರೆಯುತ್ತೆ.

ದಿ ಜನರಲ್ ಏಜನ್ಸಿ, ಮೈಸೂರು.

ಹಾರ್ಲಿಕ್ಸ್ ಮಾಲ್ಟೆಡ್ ಮಿಲ್ಕ್.

ಶಕ್ತಿ ಪರಿಹಾರ.

ಅಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಆಸ್ಪತ್ರೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ವೇದನಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಶಾಂತಪಡಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಟ್ಲು ಡಬ್ಬಿ ಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

✦✦✦✦✦✦✦✦✦

ಹೋಮಿಯೋಪತಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಅಮೆರಿಕ ಚಿತೆದ ಕರ ಇದನ್ನು ತಯಾರುಕೊಡುವು. ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಹಚ್ಚಿದವು ಬಹು ಬೇಗನೆ ನೇರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿ ಕಂಪೆನಿ. ೨೬ ನೆಕಂಡು ಬೀಚ್ ಲೈನ್, ಮದರಾಸ್.

ಸಚಿತ್ರವಿನೋದಿನಿ ಮಾಸಪತ್ರಿಕೆ.

ವಾರ್ಷಿಕಚಂದಾ ರೂ. ೧—೮—೦.

..............................ವಿನೋದಿನಿ ಎಂಬ ಈ ಶಿಶುವು ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದಪಡುವುದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹವಿಲ್ಲ..................

ಸತ್ಯದೀಪಿಕೆ. ೨೮-೬-೦೫

ವಿಳಾಸ.—ಮ್ಯಾನೇಜರ್, ವಿನೋದಿನಿ ಆಫೀಸು, ಕಾರವಾರ.

"ಆಂಗ್ಲೇಯ ವೈದ್ಯಶಾಸ್ತ್ರ"

ಕ್ರಯ ರೂ. ೧-೮-೦, ಹಾಸಲು ೨ ಆ ; ವಿ. ಪಿ. ೩ ಆಣೆ.

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿಧಾನ, ಚಿನ್ಹೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಇವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ಅಂಶಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ದಾರ್ಢ್ಯವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ ಹಾಗೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೂ, ಇದು ತುಂಬಾ ಸಹಾಯಕರವಾಗಿರುವುದು.

ವಿಳಾಸ.—ಎಂ. ಗುರುರಾವ್, ಆಸ್ಪಟಲ್ ಅಸಿಸ್ಟೆಂಟ್,
ಹರೀಕೆರೆ, ಕಡೂರು ಡಿಸ್ಟ್ರಿಕ್ಟ್.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

[ಸ್ಥಾಪಿತವಾದದ್ದು ೧೯೦೨ರಲ್ಲಿ]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಿಗಾಗಿ ಪ್ರತಿ ಮಾಸ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೬ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರೀಯವಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೇಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಅಪಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಾಣದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸುಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ. ವಿವರವಾಗಿ ತಿಳಿಯಬಪೇಕ್ಷಿಸುವವರು ಅರ್ಧಾಣೆ ಸ್ಟಾಂಪನ್ನು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ:—The Manager,
The India Agricultural and Helping Office,
Vengurla Post, Bombay Presidency.

"ಸವಿನುಡಿ."

ಲೋಕಹಿತಕ್ಕೋಸ್ಕರ ಪ್ರಕಟವಾಗುವ ಕನ್ನಡ ಮಾಸಪತ್ರಿಕೆ.

ವಾರ್ಷಿಕ ಚಂದಾ.— ಅಂಚೆ ವೆಚ್ಚದ ಸಮೇತ ಪೋಷಕರಿಗೆ ಒಂದು ರೂಪಾಯಿ ಎಂಟಾಣೆ, ಇತರರಿಗೆ ಹನ್ನೆರಡಾಣೆ; ವಿದ್ಯಾರ್ಥಿಗಳಿಗೆ ಹತ್ತಾಣೆ. ನಾಲ್ಕು ಅಥವಾ ಹೆಚ್ಚುಮಂದಿ ವಿದ್ಯಾರ್ಥಿಗಳು ಒಟ್ಟಾಗಿ ತರಿಸಿಕೊಂಡರೆ ಒಬ್ಬೊಬ್ಬರಿಗೆ ಆರಾಣೆಯಂತೆ ಬೀಳುವದು. ಚಂದಾ ಹಣ ವಿ. ಪಿ ದ್ವಾರ ಅಥವಾ ಮುಂಗಡ. ಮಾದರಿ ಸಂಚಿಕೆ ಪುಗಸಟ್ಟೆ. ಹಿಂದಿನ ಸಂಚಿಕೆಯೊಂದಕ್ಕೆ ನಾಲ್ಕಾಣೆ. ಪತ್ರಿಕೆಯ ಪ್ರಯೋಜನವನ್ನು ಕುರಿತು ನಾವಿಲ್ಲಿ ಬರೆಯುವದಿಲ್ಲ. ಓದುವವರಿಗೆ ತಾನಾಗಿ ತಿಳಿಯುವುದು.

ವಿಳಾಸ —ಭಾರತಿ ಸಂಪಂಗಿರಾಮು, ಸಂಪಾದಕ,
ಹೊಸಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್.

ತೀರ್ಮಾನವಾಯಿತು.

ಮೈಸೂರು ಆನೆಕಾರೋಟು ಬೀದಿಯಲ್ಲಿರುವ ಒಕ್ಕಲಿಗರ ಸಿದ್ದಾಯಿ ಕುಳ್ಳಣ್ಣನೆಂಬುವನು ೧೯೦೩ನೆ ವರ್ಷದಲ್ಲಿ ಮಕ್ಕಳಿಲ್ಲದ ವಾಗಿ ಹರಿಯಪ್ಪನ ಮೇಲೆ ಫಿರ್ಯಾದು ತಿಳಿಸಿದ್ದನು ಅಗ್ಗವಾಗಿ ಕುಲಗುರುಗಳೇ ಆದಿಯಾಗಿ ಸಭಾಸೇರಿ, ಯಾವ ವಿಧವಾದ ದುರಾಚಾರವೂ ಇವನು ಕೊಡದೆ ಹೋದಕಾರಣ ಹರಿಯಪ್ಪನ ಮೇಲೆ ಬಂದಿದ್ದ ದೋಷಾರೋಪಣೆ ತಪ್ಪನ್ನು ಖುಲಾಸೆಮಾಡಿ, ಈ ಕುಳ್ಳಣ್ಣನಮೇಲೆ ತಪ್ಪುಹೊರಿಸಿದ್ದರು. ಆದರೂ ಇವನು, ಹರಿಯಪ್ಪನು ಹೊಲತಿ ಮನೆಯಲ್ಲಿ ಊಟಮಾಡಿದ್ದಾನೆಂತಲೂ ಇವನ ಸಂಪರ್ಕ ಬೀಳಬಾರದೆಂದೂ ನಂಜಯ್ಯನೇ ಆದಿಯಾಗಿ ಕೆಲವರು ಮಾತಾಡಿದ್ದರೆಂದೂ ಬೇರೆ ಮೊದಲಾದ ಜನಗಳಿಗೆ ಕಾಗದ ಕೊಟ್ಟಿದ್ದರ ಮೇಲೆ ನಂಜಯ್ಯನು ಸಿಟಿ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಲು ಕುಳ್ಳಣ್ಣನ ಮೇಲೆ ಛಾರ್ಜು ಮಾಡಿದರು. ಅಗ್ಯೆಸ್ಟೊಂಬರು ದಿವಸ ಕೋರ್ಟು ರೂಲಿಂಗ್ ಫಿರ್ಯಾದಿ ಮೇಲೆ ಯಾವ ದೋಷಾರೋಪಣೆ ಇಲ್ಲವೆಂದು ಮುಚ್ಚಳಿಕೆ ಬರೆದು ರುಜು ಮಾಡಿದ್ದರ ಮೇಲೆ ಫಿರ್ಯಾದಿ ಒಪ್ಪಿ ರಾಜಿಯಿಂದ ಮೊಕದ್ದಮೆ ವಾಪಸು ತೆಗೆದುಕೊಂಡಿದಾನೆ.

ವಿದು ವರುಷದ ಪಂಚಾಂಗ. ಕ್ರಯ—೩ ಆಣೆ.

ಈ ವರುಷದ ಪಂಚಾಂಗದಲ್ಲಿ ಪರವರುಷದಂತೆ ಪಂಚಾಂಗಫಲಗಳನ್ನೆಲ್ಲಾ ಪೂರ್ಣವಾಗಿ ಬರೆದಿರುತ್ತೇವೆ. ಮತ್ತು ಪರಾಭವ, ಪ್ಲವಂಗ, ಕೀಲಕ, ಸೌಮ್ಯ, ಸಾಧಾರಣ ಸಂವತ್ಸರಗಳ ಫಲವನ್ನು ವಿಶದವಾಗಿ ಹಾಕಿರುತ್ತೇವೆ. ಹುಟ್ಟಿದ ಸಂವತ್ಸರಾದಿಗಳನ್ನು ತಿಳಿದುಕೊಳ್ಳುವ ನಷ್ಟಜಾತಕ, ಗಣಿತಕ್ರಮ, ಸಾಮುದ್ರಿಕಾಶಾಸ್ತ್ರ, ಅಶ್ವಪರೀಕ್ಷಾಶಾಸ್ತ್ರ, ಜಲಶಿಲ್ಪಶಾಸ್ತ್ರ ವಿಚಾರವು, ನವಗ್ರಹ ಶಾಂತಿಕ್ರಮ, ಪ್ರತಿ ಒಬ್ಬರಿಗೂ ಪರವರುಷ ಪ್ರತಿ ತಿಂಗಳಲ್ಲಿ ಬರುಗುವ ಸುಖಕಷ್ಟಫಲಗಳನ್ನು ತಿಳಿಯುವ ಕ್ರಮ, ದೇವಸ್ಥಾನಗಳಲ್ಲಿ ಇರತಕ್ಕ ಲಿಪಿ ಕಲ್ಲುಗಳನ್ನು ಓದುವದಕ್ಕೆ ಸುಲಭೋಪಾಯ, ಪ್ರತಿ ತಿಂಗಳಲ್ಲಿ ವ್ಯಾಪಾರವು ಲೇಪವಾಗಿ ಆಗುವದನ್ನು ತಿಳಿಯುವ ಕ್ರಮ, ಚೋರಪ್ರಶ್ನೆ ಮೊದಲಾದ ಅನೇಕ ವಿಧ ಪ್ರಶ್ನೆಗಳು, ಸಮಸ್ತ ಮುಹೂರ್ತಗಳು, ವ್ರತಾದಿ ಪುಣ್ಯದಿನಗಳು, ಜನನಕ್ಕೆ ದುಷ್ಟನಕ್ಷತ್ರಗಳ ವಿಚಾರ, ಸಮಸ್ತರ ಹೆಸರಿಗೂ ಪರಾಭವ ಸಂವತ್ಸರದ ಗುರು ಶನಿಗಳ ಗೋಚಾರ ಫಲಗಳನ್ನು ನಿರ್ಣಯಮಾಡಿ ಹಾಕಿರುತ್ತೇವೆ. ಇನ್ನೂ ಅನೇಕ ಅಪೂರ್ವ ವಿಷಯಗಳನ್ನೂ ಬರೆದಿರುತ್ತೇವೆ. ಅಪೇಕ್ಷೆಯುಳ್ಳವರು ೪ ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳಿರಿ.

ವಿದ್ಯಾವರ್ಧಿನೀ ಆಫೀಸು, } ಹರಪನಹಳ್ಳಿ ತೆಲಗಿಮಠದ ಬ್ರ. ಶ್ರೀ.
ಹರಪನಹಳ್ಳಿ. } ಸಿದ್ಧಾಂತಿ ಹೊಳೆ ಬಸವಶಾಸ್ತ್ರಿಗಳು.

ವೃತ್ತಾಂತ ಪತ್ರಿಕೆ.

೧೯೦೫ನೇ ಇಸವಿ ಅಕ್ಟೋಬರ್ ತಾ॥ ೨೬ನೇ ಗುರುವಾರ

ಪಿತ್ರಾರ್ಜಿತ ಸ್ವತ್ತಿನ ಹಕ್ಕು.

ಮೈಸೂರು ಗವರ್ನಮೆಂಟಿನವರು ಪ್ರಕಟಿಸಿರುವ ಹೊಸದ ಕಾನೂನಿನ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ತಕ್ಕಮಟ್ಟಿಗೆ ವಿವರವಾಗಿ ತಿಳಿಸಿದ್ದೇವೆ. ಕೆಳಗೆ ಹೇಳುವ "ಮೈಸೂರ್ ಸ್ಟಾರ್" ಪತ್ರಿಕೆಯ ಮಾತುಗಳನ್ನು ಈಗ ವಾಚಕರ ಅವಗಾಹನೆಗೆ ತರುವೆವು. ಈ ಪತ್ರಿಕೆ ಹೇಳುವುದೇನೆಂದರೆ—

ಸರ್ಕಾರದವರು ಕ್ರೈಸ್ತರ ಆಶಯವನ್ನು ಪೂರಯಿಸುವದಕ್ಕಿಲ್ಲದೆ ಸಂಘದವರು ಸೂಚಿಸಿರುವಂತೆಯೇ ಈ ವಿಧಿಯನ್ನು ವ್ಯವಹರಣೆಗೆ ತಂದರೆ, ಪೂರ್ವ ಕುಟುಂಬದ ಆಸ್ತಿಯ ಬಾಧ್ಯತೆಯನ್ನು ಕಳೆದುಕೊಳ್ಳುತ್ತೇವೆಂಬ ಹೆದರಿಕೆಯಿಂದ ದೀಕ್ಷಿತರಾಗದೆ ಇರುತ್ತಿದ್ದವರೆಲ್ಲರಿಗೂ ಆ ವಿಧವಾದ ಶಂಕೆಯನ್ನು ತಪ್ಪಿಸಿಬಿಟ್ಟಂತಾಗುವುದರಿಂದ ಇನ್ನು ಮೇಲೆ ಕ್ರೈಸ್ತ ಮತಕ್ಕೆ ಸೇರಿಕೊಳ್ಳುವ ವಿಷಯದಲ್ಲಿ ಹಿಂದುಗಳಿಗಾಗಲಿ ಮುಹಮ್ಮದೀಯರಿಗಾಗಲಿ ತಡೆಯೇ ಇಲ್ಲದಂತಾಗಿ ಈ ಮತಗಳು ಮತ್ತಷ್ಟು ಶಿಥಿಲವಾಗುವುದಕ್ಕೆ ಸರ್ಕಾರದವರು ಅವಕಾಶವನ್ನುಂಟುಮಾಡಿದಂತಾಗುವುದು

ಎಂಬುದೇ.

ಈ ಸಂದರ್ಭದಲ್ಲಿ ವಾಚಕರು ಮೂರು ಸಂಗತಿಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿದೆ. (೧) ಈ ಕಾನೂನು ಕ್ರೈಸ್ತರೊಬ್ಬರ ಕ್ಷೇಮಾರ್ಥವಾಗಿಯೇ ಉದ್ದೇಶಪಟ್ಟದ್ದಲ್ಲ. ಇದು ಮುಹಮ್ಮದೀಯ ಮತವನ್ನು ಅಂಗೀಕರಿಸುವಂಥಾ ಹಿಂದುವಿಗೂ ಕಾರಣಾಂತರದಿಂದ ಜಾತಿಕಟ್ಟಳೆಗಳಿಗೆ ಬಾಹಿರರಾಗಿ ಹಕ್ಕು ಬಾಧ್ಯತೆಗಳನ್ನು ಕಳೆದುಕೊಳ್ಳುವಂಥಾ ಇತರ ಪ್ರಜೆಗಳಿಗೂ ಅನ್ವಯಿಸತಕ್ಕದ್ದಾಗಿದೆ (೨) ಈ ವಿಧವಾದ ಕಾನೂನು ಬ್ರಿಟಿಷ್ ಇಂಡಿಯಾದಲ್ಲಿ ಜಾರಿಗೆ ಬಂದು ೫೦ ವರ್ಷಗಳಿಗಿಂತಲೂ ಮೇಲೆ ಆಯಿತು. ಇದರಿಂದ ಇದುವರೆಗೆ ಮುಹಮ್ಮದೀಯ ಮತವಾಗಲಿ ಹಿಂದುಮತವಾಗಲಿ ಶಿಥಿಲವಾಗಿರುವುದಿಲ್ಲ. (೩) ಈಗಿನ ನ್ಯಾಯದ ಪ್ರಕಾರ ಒಬ್ಬ ಹಿಂದುವು ಮುಹಮ್ಮದೀಯನಾದರೂ, ಕ್ರೈಸ್ತನಾದರೂ, ಇಲ್ಲವೇ ಇನ್ಯಾವ ರೀತಿಯಲ್ಲಾಗಲಿ ಜಾತಿಭ್ರಷ್ಟನಾದರೂ ಅಂಥವನಿಗೆ ಪೂರ್ವ ಕುಟುಂಬದ ಆಸ್ತಿಯಲ್ಲಿ ಪಾಲು ಸಿಕ್ಕುವುದಿಲ್ಲ. ಮತ್ತು ಕ್ರೈಸ್ತ ಮತಕ್ಕೆ ಸೇರಿಕೊಳ್ಳುವ ಮುಹಮ್ಮದೀಯನ ಪಾಡೂ ಹೀಗೆಯೇ ಸರಿ ಇದರಿಂದ ಕ್ರೈಸ್ತ ಮತಾವಲಂಬಿಯಾಗಬೇಕೆಂದು ಕುತೂಹಲ ಪಡುವ ಹಿಂದುವಿಗೂ ಮುಹಮ್ಮದೀಯನಿಗೂ ವಿಶೇಷ ಪ್ರತಿಬಂಧಕವಿರುತ್ತದೆ. ಅತ್ತಲಾಗಿ ಕ್ರೈಸ್ತನು ಮುಹಮ್ಮದೀಯ ಮತಕ್ಕೆ ಸೇರಿಕೊಂಡಲ್ಲಿ ಅವನಿಗೆ ಪೂರ್ವ ಕುಟುಂಬದ ಆಸ್ತಿಯ ಪಾಲೇನೂ ತಪ್ಪಿಹೋಗುವುದಿಲ್ಲ. ಕ್ರೈಸ್ತನು ಅನ್ಯಮತಾವಲಂಬಿಯಾಗುವುದಕ್ಕೆ ಯಾವ ಪ್ರತಿಬಂಧಕವೂ ಇಲ್ಲ ಇದರಿಂದ ಕ್ರೈಸ್ತಮತಕ್ಕಿಂತಲೂ ಹಿಂದೂ ಮುಹಮ್ಮದೀಯ ಮತಗಳಿಗೆ ವಿಶೇಷ ಪ್ರೋತ್ಸಾಹವಿದೆಯೆಂದು ಸ್ಪಷ್ಟವಾಗಿ ಕಾಣುವುದು. ಈಗ ಉದ್ದೇಶಪಟ್ಟಿರುವ ಕಾನೂನು ಪಕ್ಷಪಾತತೆಯನ್ನು ತೊಡೆದುಹಾಕಿ, ಸಕಲ ಮತಗಳನ್ನೂ ಏಕಪ್ರಕಾರವಾಗಿ ಕಾಪಾಡತಕ್ಕದ್ದಾಗಿದೆ ಆದರೆ "ಮೈಸೂರ್ ಸ್ಟಾರ್" ಪತ್ರಿಕೆಯು ಈ ಕಾನೂನು ರೂಢಿಗೆ ಬಂದಲ್ಲಿ ಮತಗಳು ಶಿಥಿಲವಾಗುವವೆಂದು ಹೇಳುವುದು. ಹಾಗಾದರೆ ಆ ಮತಗಳು ಕ್ರೈಸ್ತಮತವನ್ನು ಸಮದೃಷ್ಟಿಯಿಂದ ಕಾಣಲಾರದಷ್ಟು ದುರ್ಬಲಾವಸ್ಥೆಯಲ್ಲಿರುವವೋ? ಇದಲ್ಲದೆ ಅದೇ ಪತ್ರಿಕೆಯು—

ನಮ್ಮ ಮೈಸೂರು ದೇಶವನ್ನು ಭಾರತೀಯರೇ ಆಳುತ್ತಿದ್ದರೂ ಕ್ರೈಸ್ತರು ಕೇಳುವದಕ್ಕೆ ಇಲ್ಲವೆಂದೆನ್ನದೆ ತಮ್ಮ ಮೈದೊಗಲನ್ನಾದರೂ ಸುಲಿದುಕೊಡಬೇಕಾದ ಹೊತ್ತು ಬಂದಿರುವುದು

ಎಂದೂ ಹೇಳುತ್ತಿದೆ.

ಇದು ಶುದ್ಧ ಅವಿವೇಕವಾದ ಅಭಿಪ್ರಾಯ. ತೊಗಲನ್ನು ಮಾತ್ರವೇ ಅಲ್ಲ, ಇಟ್ಟಬರೆ ಮನೆ ಆಸ್ತಿ ಮುಂತಾದುವನ್ನು ಅಪಾರವಾಗಿ ಪಡೆದಿರುವವರಿಗೆ ಮತಾಂತರವನ್ನು ಹೊಂದಿದವರು ತಮ್ಮ ಚನ್ನಿಸಿದ ಚರ್ಮವನ್ನು ಕಿತ್ತೊಪ್ಪಿಸುತ್ತಿದ್ದುದು ಕೊನೆಗಾಣುವಂಥಾ ಕಾಲವು ಈಗ ಪ್ರಾಪ್ತವಾಗಿರುವುದು.

ಇತ್ತಲಾಗ "ಸತೆಗನ್ನಡಿ" ಪತ್ರಿಕೆಯು ಈ ಕಾನೂನಿನ ಅರ್ಥವನ್ನು ಸರಿಯಾಗಿ ತಿಳಿದುಕೊಂಡಿರುವಂತೆ ಕಾಣುವುದಿಲ್ಲ. ಕಾನೂನಿನ ಅಭಿಪ್ರಾಯಕ್ಕೂ ಈ ಪತ್ರಿಕೆ ಹೇಳುವ ಅಭಿಪ್ರಾಯ ಮತ್ತು ಉದಾಹರಣೆಗಳಿಗೂ ಸ್ವಲ್ಪವೂ ಸಮಂಜಸವೇ ಆಗುವುದಿಲ್ಲ. ಈ ಕಾನೂನಿನ ಅಭಿಪ್ರಾಯವನ್ನೂ ಉದ್ದೇಶವನ್ನೂ ಸರಿಯಾಗಿ ಮುಂಚಿಟ್ಟು ಮಾಡಿಕೊಂಡು, ಅದರ ವಿಷಯದಲ್ಲಿ ಪ್ರಜೆಗಳಿಗೆ ನ್ಯಾಯವಾದ ತಿಳುವಳಿಕೆಯನ್ನುಂಟುಮಾಡುವುದು ವರ್ತಮಾನ ಪತ್ರಿಕೆಗಳ ಸಹಜಧರ್ಮವಾಗಿದೆ. ಕಾನೂನಿನಲ್ಲಿ ಇಲ್ಲದಿರುವಂಥಾ ಸಂಗತಿಗಳನ್ನು ಎತ್ತಿಹಾಕಿ ಜನರಲ್ಲಿ ಗಾಬರಿ ಅನುಮಾನಗಳನ್ನು ಹುಟ್ಟಿಸುವುದು ತರವಲ್ಲ

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.



12

ಈ ಔಷಧವು ಪ್ರತಿ ಮನೆಯವರಿಗೂ ಅಗಾನ್ಯ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಪೆಟ್ಟು ಬಿದ್ದರೂ ಚೂರಿಯಿಂದ ಗಾಯವಾದರೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರವೆಂಬ ಔಷಧದ ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು ಒಂದಾವರ್ತಿ ಹಚ್ಚುವದರಿಂದಲೇ ಬಹಳ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು ಕ್ರಯ ಬಾಟ್ಲಿ ೧ಕ್ಕೆ ೧ ರೂ. ; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವ ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ವಿಳಾಸದಾರರಲ್ಲೂ ಸಿಕ್ಕುವದು.—

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,
ಮವುಂಟ್ ರೋಡ್,
ಮದರಾಸ್

ಸ್ವದೇಶೀ ವಿಚಾರದು.

ಕಲ್ಕತ್ತಾ ಪಟ್ಟಣದಲ್ಲಿ ಗಲಾಟೆಯನ್ನೆಬ್ಬಿಸಿರುವ ಬಂಗಾಳಾ ವಿಭಜನೆಯ ವಿಷಯದಲ್ಲಿ ತಮ್ಮ ಅಸಮ್ಮತಿಯನ್ನು ಪ್ರಕಾಶಪಡಿಸುವುದಕ್ಕೆ ಒಂದುಪಾಯವನ್ನು ಕಂಡುಹಿಡಿದರು. ಈ ಉಪಾಯದಿಂದ ಅವರು ಯೂರೋಪಿನಿಂದ ತಯಾರಾಗಿಬರುವ ಬಟ್ಟೆಬರೆ ಮುಂತಾದ ಪದಾರ್ಥಗಳನ್ನು ವರ್ಜಿಸಿ, ಸ್ವದೇಶದ ಕಾರ್ಖಾನೆಗಳ ಪದಾರ್ಥಗಳನ್ನೇ ಉಪಯೋಗಿಸುವಂತೆ ಮೊದಲಾಗಿ ಪ್ರಜೆಗಳನ್ನೂ ಕ್ರಮೇಣ ಹಿಂದುಸ್ಥಾನದ ಜನಗಳನ್ನೂ ಪ್ರೇರೇಪಣೆ ಮಾಡುತ್ತೇವೆಂದು ನಿಶ್ಚಯಿಸಿಕೊಂಡಿದಾರೆ. ನಮಗೆ ಬೇಕಾಗುವ ಸಕಲವನ್ನೂ ನಾವೇ ಕಾರ್ಖಾನೆಗಳನ್ನಿಟ್ಟು ತಯಾರುಮಾಡಿಕೊಂಡು ವಸ್ತುಗಳನ್ನೇ ಉಪಯೋಗಿಸುತ್ತಾ ಬರುವುದರ ಮೂಲಕ ಈ ದೇಶದ ಕಸಬುಗಳನ್ನು ಅಭಿವೃದ್ಧಿಗೆ ಭಾಗದಲ್ಲಿ ಈ ಪತ್ರಿಕೆಯು ಆಕ್ಷೇಪಣೆಯನ್ನು ಮಾಡಲಾರದು ಪ್ರಜೆಗಳು ಮೇಲೆಗೆ ಬರುವುದಕ್ಕಾಗಿ ಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಪೈಕಿ ತಮ್ಮ ಕಸಬುಗಳನ್ನು ಬೆಳೆಸಿಕೊಳ್ಳುವುದು ಒಂದು ವಿಧವನ್ನು. ಆದರೆ ಪರದೇಶದ ವಸ್ತುವಿಶೇಷಗಳನ್ನು ಕೊಂಡು ಉಪಯೋಗಿಸಕೂಡದೆಂದು ಸಂಕಲ್ಪಮಾಡುವುದು ಮಹಾ ಅವಿವೇಕ, ಮತ್ತು ಇದರಿಂದ ಕೇಡುಂಟಾಗುವುದು ಇಂಥಾ ಸಂಕಲ್ಪ ಮಾಡಿರೋಣದರ ಮೂಲಕ ಕಲ್ಕತ್ತಾ ಜನರು ವಿಲಾಯಿತಿ ವ್ಯಾಪಾರಕ್ಕೆ ನಷ್ಟವಾಗಬಹುದೆಂದು ಊಹಿಸಿಕೊಂಡಿರಬಹುದು; ಇದರಿಂದ ತಮಗೂ ತಮ್ಮ ಕಸಬುಗಳಿಗೂ ವಿಶೇಷ ಹಾನಿಯುಂಟಾದೀತೆನ್ನುವ ಸಂಶಯವಿಲ್ಲ. 'ಸ್ವದೇಶೀ' ಇಲ್ಲದೆ ಕಷ್ಟಕ್ರಮದಿಂದ ಅಭಿವೃದ್ಧಿಹೊಂದುತ್ತಾ ಬಂದು, ಈಗ ಜಗತ್ತಿನಲ್ಲಾ ಮಹಾ ಗಣ್ಯತೆಯನ್ನು ಸಂಪಾದಿಸಿರುವ 'ಜಪಾನ್' ಜನರನ್ನು ನೋಡಿ. ಅವರಂತೆಯೇ ಸ್ವಸಾಮರ್ಥ್ಯದಿಂದಲೇ ನಮ್ಮ ಜನಾಂಗವನ್ನು ಬೆಳೆಸಿಕೊಂಡು, ಅಭಿವೃದ್ಧಿಗೆ ತರೋಣ. ಅಗ್ಗ ದರದ ಕಾಟ ನಮಗೆ ತಪ್ಪುವಂತಾದೀತು ನಾವೂ ಸ್ವತಂತ್ರರಾಗಿ ದೊಡ್ಡ ಜನರೆಂಬ ಹೆಸರುವಾಸಿಯನ್ನು ಪಡೆಯುವೆವು ' ಎಂಬೀ ರೀತಿಯಾಗಿ ಸರ್ವದಾ ಬರೆಯುವವರು ಕೆಲವರಿರುತ್ತಾರೆ. ಆದರೆ ಜಪಾನಿನವರ ಉಚ್ಛ್ರಾಯ ಸ್ಥಿತಿಗೆ ಬಂದುದು ಹೇಗೆ? ಅವರು ಪರದೇಶದ ರಾಜ್ಯಗಳಲ್ಲಿರುವ ನಾನಾ ಬಗೆಯ ಕಸಬುಗಳನ್ನೂ ಕ್ರಮಗಳನ್ನೂ ವಿಚಾರಗಳನ್ನೂ ಅವುಗಳ ಪೂರ್ವೋತ್ತರಗಳನ್ನು ಚೆನ್ನಾಗಿ ಗ್ರಹಿಸಿ ಅವುಗಳಂತೆಯೇ ತಮ್ಮ ರಾಜ್ಯದಲ್ಲೂ ಪದ್ಧತಿ ಕ್ರಮಗಳನ್ನು ಮಾಡಿಕೊಂಡು, ಆಸಕ್ತಿಪೂರ್ವಕವಾಗಿ ಏಕಮನಸ್ಸಿನಿಂದಲೂ ಆಚರಿಸುತ್ತಾ ಬಂದಿರುತ್ತಾರಿಂದಲೇ ಅವರಿಗೆ ಅಂಥಾ ಪದವಿ ದೊರಕಿತೆಂದು ತಿಳಿಯತಕ್ಕದು. ಜಪಾನ್ ಜನರಲ್ಲಿ ಸ್ವದೇಶವಾತ್ಸಲ್ಯವು ಲಕ್ಷಣವಾಗಿರುತ್ತದೆ; ಆದರೆ ಅವರ ದೆಸೆಯಿಂದ ಪರದೇಶ ವಸ್ತುವಿಶೇಷಗಳನ್ನಾಗಲಿ ಪರಜನರ ಕಾರ್ಯಗಳನ್ನಾಗಲಿ ತಿರಸ್ಕಾರ ಮಾಡಿರುವುದಿ

ಉಪಯೋಗಿಸಬಾರದೆಂದು ವರ್ಜ್ಯವೂ ಮಾಡಿದುವು. ಇತ್ತಲಾಗಿ ಪಿತಾಯತಿ ರಾಜ್ಯವು ಪರದೇಶಗಳಿಂದ ವಾಗಿ ಬರತಕ್ಕ ಪದಾರ್ಥಗಳನ್ನು ತಡೆದು ಮಾರಾಗದಂತೆ ವಿರೋಧಿಸಲಾರಂಭಿಸಿದ್ದ ಪಕ್ಷದಲ್ಲಿ ಅದು ನಷ್ಟು ಪ್ರಾಸ್ತ್ಯವನ್ನು ಎಷ್ಟು ಮಾತ್ರಕ್ಕೂ ಪಡೆಯುತ್ತಿರಲಿಲ್ಲ. ಆ ಕಾಲ ಚೀನಾ ಚಕ್ರಾಧಿಪತ್ಯವು ಪರದೇಶದ ಪದಾರ್ಥಗಳನ್ನು ಬಳಕೆಗೆ ಬಿಡದಂತೆ ತನ್ನ ತೀರವಟ್ಟೆಗಳನ್ನು ಅವು ಮಾರಾಟವಾಗದಂತೆ ತನ್ನ ಒಳದೇಶದ ಪೇಟೆ ಸಂತೆಗಳನ್ನೂ ಕಟ್ಟಿಕೊಂಡಿರೋಣವರಿಂದ ಅದು ಅಭಿವೃದ್ಧಿಗೆ ಬಾರದೆ ಹಿಂದೆ ಬಿದ್ದುಕೊಂಡಿದೆ. ಈ ಸ್ವದೇಶೀ ಪರ್ವತವು ಹಿಂದುಸ್ಥಾನಕ್ಕೆ ಚೀನಾ ದೇಶದ ಗತಿಯನ್ನೇ ತಂದಿಡುವುದು. ಪರದೇಶೀಯರುಗಳ ಮೇಲಣ ದ್ವೇಷವನ್ನು ಬಿಟ್ಟಂಥಾ ಸ್ವಜಾದ ದೇಶಾಭಿಮಾನವಿದ್ದರೆ ತುಂಬಾ ಶ್ರೇಯಸ್ಸೂ ಅಭಿವೃದ್ಧಿಯೂ ಉಂಟಾಗುವವು. ಪರದೇಶದ ವಸ್ತುವಿಶೇಷಗಳು ಚೆನ್ನಾಗಿವೆ, ಅಗ್ಗವಾಗಿವೆ ಎಂಬೀ ಅಭಿಪ್ರಾಯವನ್ನು ನಮ್ಮ ಜನರಿಂದ ಪೋಗಲಾಡಿಸುವಂತೆ ನಮ್ಮ ದೇಶದ ಕಸಬುಗಳನ್ನು ಅಭಿವೃದ್ಧಿಗೆ ತಂದು, ಇಲ್ಲಿ ತಯಾರಾಗುವ ಪದಾರ್ಥಗಳನ್ನು ಅವುಗಳಿಗಿಂತಲೂ ಚೆನ್ನಾಗಿಯೂ ಅಗ್ಗವಾಗಿಯೂ ಇರುವಂತೆ ಮಾಡಿಕೊಳ್ಳಬೇಕು. ಇದು ಸಾಧ್ಯವಿದ್ದರೆ ಪರದೇಶದ ಸರಕುಗಳ ಆಮದು ನಿಲ್ಲುವುದೇನು. ಯಾಕಂದರೆ ಜನರಿಗೆ ಚೆನ್ನಾಗಿರುವ ಪದಾರ್ಥ ಅಗ್ಗವಾಗಿಯೂ ಸಿಕ್ಕಬೇಕು. ಇದು ಇಲ್ಲಿನ ಕಾರ್ಖಾನೆಗಳಲ್ಲೇ ದೊರೆಯುವ ಪಕ್ಷಕ್ಕೆ ಪರದೇಶದ ವಸ್ತುಗಳನ್ನು ಯಾರೂ ಅಪೇಕ್ಷಿಸಲಾರರು. ಆದುದರಿಂದ ಸರ್ವರೂ ಸ್ವದೇಶ ಕೈಗಾರಿಕೆ ಕಸಬುಗಳನ್ನು ಅಭಿವೃದ್ಧಿಪಡಿಸುವುದರ ಉತ್ಸಾಹಿಗಳೂ ಆಸಕ್ತರೂ ಆಗಬೇಕೆಂದು ಹಾರೈಸುತ್ತೇವೆ.

ಹುಟ್ಟುಕುರುಡನು.

[ಕಳೆದ ವಾರದ ಶೇಷವು]

ಪಾಪದ ದೆಸೆಯಿಂದ ಬರುವ ಫಲವು ಅಹಿತವಾದುದೇ. ಅಂಥ ಪಾಪ ಫಲವು ತಪ್ಪದೆ ಬಂದೇ ಬರುತ್ತದಷ್ಟೆ. ಯಾವನು ಪಾಪ ಮಾಡಿದನೋ ಅಂಥವನಿಗೆ ಆ ಫಲವು ಬಂದು ಬೀಳೆ ಬಾರದಿದ್ದಾಗ ಅದನ್ನು ಹಲವರುಂ ಹಂಚಿಕೊಳ್ಳಬೇಕಾಗಿ ಬರುವದೆಂತಲೂ ಪ್ರಪಂಚವಿಶೇಷವು ಒಂದು ಕಟ್ಟಳೆಗನುಸಾರವಾಗಿ ನಡೆಯುತ್ತಿರುವದೆಯೆಂತಲೂ ಆ ಕಟ್ಟಳೆಯನ್ನು ಅನುಲೋಮ್ಯವಾಗಿ ಇದು ವಿರೋಧಿಸಿ ತಿಳಿದಿಲ್ಲವೆಂತಲೂ ನೋಡಿದ್ದೇವಷ್ಟೆ. ಈ ಕಟ್ಟಳೆ ಯಾವದೋ, ಅದರ ಫಲವು ಎಷ್ಟರಮಟ್ಟಿಗೆ ನಡೆಯುತ್ತದೆ, ಇದೆಲ್ಲವೂ ಸಂಪೂರ್ಣವಾಗಿ ಗೋಚರಕ್ಕೆ ಬಾರದಿದ್ದಾಗ್ಯೂ ಒಬ್ಬ ಮನುಷ್ಯನ ಪಾಪಕೃತ್ಯದ ಫಲವು ಇನ್ನೊಬ್ಬನ ದೇಹಂಬಾರವಾಗಿ ಕಾಣುತ್ತಿರುವದು ಸರ್ವಸಾಮಾನ್ಯವಾಗಿದೆ. ಪಾಪದ ದೆಸೆಯಿಂದ ತಪ್ಪಿತಸ್ಥನಿಗೆ ಪ್ರತಿಯಾಗಿ ನಿರಪರಾಧಿಯೂ ಕಷ್ಟಪಡಬೇಕಾಗಿದೆ. ಇಂಥ ಕಟ್ಟಳೆಯು ದೇವರು ಸ್ಥಾಪಿಸಿದ ಕಟ್ಟಳೆಯಾಗಿದೆಯೆಂದು ಹೇಳಲಿಲ್ಲ. ಹಾಗಾದರೆ ದೇವರು ಸ್ಥಾಪಿತವಾದ ಈ ಕಟ್ಟಳೆಯಲ್ಲಿ ನೀತಿಯುಂಟೇ ? ಎಂದು ಯಾರೂ ಕೇಳಬಹುದು. ಹೀಗೆ ಕೇಳುವದು ನ್ಯಾಯಸಮ್ಮತಿಯೇ ಇದೆ. ಆದರೆ ಈ ಕಟ್ಟಳೆಯು ಅನ್ಯಾಯವಾದುದೆಂದು ಹೇಳುವದಕ್ಕಿಂತ ಮುಂಚೆ ಮನುಷ್ಯನಿಗೆ ಈ ಭೂಲೋಕವೇ ಶಾಶ್ವತವಾದ ಸ್ಥಳವೆಂದೂ ಇದರ ತರುವಾಯ ಬೇರೊಂದು ಲೋಕವಿಲ್ಲವೆಂದೂ ಅಥವಾ ಈ ಲೋಕದ ಸುಖದುಃಖಗಳೇ ಮನುಷ್ಯನಿಗೆ ಬರತಕ್ಕ ಅಂತ್ಯಾವಸ್ಥೆಗಳೆಂದೂ ಪಾರಲೌಕಿಕವಾದ ಸುಖವನ್ನಾಗಲಿ ದುಃಖವನ್ನಾಗಲಿ ಮನುಷ್ಯನು ನಿರೀಕ್ಷಿಸಬೇಕಾದದ್ದಿಲ್ಲವೆಂದೂ ಆಕ್ಷೇಪಕರು ನಿರ್ಧರಿಸಬೇಕಾಗಿದೆ. ಅಪರಾಧಿಯ ಬದಲಿಗೆ ನಿರಪರಾಧಿಯಾದವನೇ ಕಷ್ಟಪಡಬೇಕೆಂಬ ಈ ಕಟ್ಟಳೆಯನ್ನು ಅನುಮೋದಿಸುವದಾಗಿಯೂ ಅದರ ಆವಶ್ಯಕತೆಯನ್ನು ಚೆನ್ನಾಗಿ ಪರಿಭಾವಿಸುವದಾಗಿಯೂ ಇರುವ ಕ್ರಿಸ್ತಮತ ಸಿದ್ಧಾಂತವನ್ನು ನೋಡುವಲ್ಲಿ ನಮ್ಮ ಈ ಜೀವಮಾನವೇ ಮನುಷ್ಯನ ಮುಕ್ತಸ್ಥಿತಿಯನ್ನು ಕೊಡುವಂಥಾದಲ್ಲವೆಂದೂ ಬೇರೊಂದು ಲೋಕಕ್ಕೆ ಇದೊಂದು ಪರೀಕ್ಷಾಸ್ಥಿತಿ ಮಾತ್ರವಾಗಿದೆಯೆಂದೂ ಆ ಸುಖಸ್ಥಿತಿಗೆ ಆಕರವಾದ ಜೀವಮಾನವು ಬೇರೊಂದಿದೆಯೆಂದು ಬೋಧಿಸುತ್ತದೆ. ಆದಕಾರಣ ಮನುಷ್ಯ ಜಾತಿಗೇನೇ ಬರುವ ಶಿಕ್ಷೆಯನ್ನು ಆಯಾ ಜನಕ್ಕೆ ಸೇರಿದ ಪ್ರತಿಯೊಬ್ಬ ಪುರುಷನೂ ತನಗಿದು ಒಂದು ತಿದ್ದುಪಾಟೆಂಬುದಾಗಿ ಗ್ರಹಿಸಿ ತನ್ನನ್ನು ಪರಲೋಕಕ್ಕೆ ಅರ್ಹನನ್ನಾಗಿ ಮಾಡಿಕೊಳ್ಳುತ್ತಾನೆ. ಹೀಗೆ ಮನುಷ್ಯರ ಬುದ್ಧಿಯನ್ನು ಬಹಳವಾಗಿ ಕಳವಳಗೊಳಿಸುವ ಈ ಕರ್ಮಬೋಧನೆಯನ್ನು ಯೇಸು ಸ್ವಾಮಿಯು ಬಿಟ್ಟು ಕಂಡ, ನಮಗೆ ದೇಹ ಕಷ್ಟವು ಯಾವ ಮುಖದಿಂದ ಬಂದಿತೆಂಬುದನ್ನು ತಿಳಿಯಲಪೇಕ್ಷಿಸುವದಕ್ಕಿಂತ ಮುಂಚೆ ಅತಿ ವಿಶೇಷವಾದ ಬೇರೊಂದು ವಿಷಯವು ನಮ್ಮ ಲಕ್ಷ್ಯಕ್ಕೆ ಪಾತ್ರವಾಗಬೇಕೆಂದು ತಿಳಿಸುತ್ತಾನೆ. ಅದು ಯಾವದಂದರೆ—ಕಷ್ಟದಿಂದುಂಟಾಗುವ ಪ್ರಯೋಜನವೇ. ಕಷ್ಟವೆಂಬುದು ಪಾಪದ ಫಲವಾಗಿದ್ದರೂ ಸರಿಯೇ. ಆ ಪಾಪವು ನಮ್ಮದೋ ಅಥವಾ ಮತ್ತೊಬ್ಬರದೋ ಎಂಬ ಪ್ರಶ್ನೆಯು ವಿಶೇಷವಲ್ಲ. ಆ ಪಾಪವನ್ನು ಜಯಿಸಿ ಅದನ್ನು ನಮ್ಮ ಬಳಿಯಿಂದ ವಿಸರ್ಜಿಸುವುದು ಮಾತ್ರವಲ್ಲದೆ ಇತರರ ಬಳಿಯಿಂದಲೂ ಅದನ್ನು ದೂರಮಾಡುವ ಕಾರ್ಯದಲ್ಲಿ ನಾವು ಸಹಾಯಕರಾಗುವದು ಅತ್ಯವಶ್ಯವೆಂದು ಸ್ವಾಮಿಯು ಬೋಧಿಸುವವನಾಗಿದ್ದಾನೆ. ನಮಗೆ ಎಂಥ ಕಷ್ಟವು ಬಂದೊದಗಿದರೂ ಅದರ ಮೂಲಕವಾಗಿಯೇ ನಮ್ಮಲ್ಲಿ ದೇವರ ಕೃತ್ಯಗಳು ಪ್ರಕಟವಾಗಬೇಕೆಂದು ಭಗವಂತನು ಉದ್ದೇಶಿಸಿದ್ದಾನೆಂಬುದಾಗಿ ನಾವು ತಿಳಿದುಕೊಳ್ಳಬೇಕು. ಕುರುಡುತನವು ಭೂಲೋಕದಲ್ಲಿ ಮನುಷ್ಯನಿಗೆ ಅನೇಕ ವಿಧ ಪ್ರತಿಕೂಲಗಳಿಗೆ ಹೇತುವಾಗಿದೆಯೆಂಬುದು ಸರ್ವರಿಗೂ ತಿಳಿದ ವಿಷಯವೇ. ಭೂಲೋಕ ಸ್ಥಿತಿಗೆ ಪ್ರತಿಕೂಲವಾದ ಈ ಕುರುಡುತನವೇ ಪರಲೋಕ ವಿಷಯಕ್ಕೆ ಪ್ರತಿಕೂಲವಾಗಿಯಲ್ಲ ಅನುಕೂಲವಾಗಿಯೇ ಇರಬಹುದಲ್ಲವೇ ? ಇದಕ್ಕೊಂದು ಕಥೆಯನ್ನು ಸಾದೃಶ್ಯವಾಗಿ ಹೇಳುವದುಂಟು. ಅದೇನೆಂದರೆ—ಒಂದಾನೊಂದು ದಿನ ಸ್ತ್ರೀ ಸನ್ಯಾಸಿಗಳದೊಂದು ಮಠದಲ್ಲಿ ದೇಶ ಎಂಬೊಬ್ಬ ಬಾಲೆಯು ಕುರುಡುತನದಿಂದ ಯುಕ್ತಳಾಗಿ ದೇವಧ್ಯಾನ ಪರಾಯಣಳಾಗಿ ಕಾಲಕ್ಷೇಪವನ್ನು ಮಾಡುತ್ತಿದ್ದಳು. ಒಂದು ದಿನ ಅವಳೂ ಆ ಮಠಾಧಿಪತಿಯಾದ ಭಕ್ತಳೂ ಯೇಸುಸ್ವಾಮಿಯ ಪ್ರೀತಿಯನ್ನು ಕುರಿತು ಮಾತಾಡುತ್ತಿರಲು ಸೂರ್ಯಾಸ್ತಮಾನವಾಯಿತು. ಆದರೂ ಅವರಿಬ್ಬರೂ ಪರವಶರಾಗಿ ಮಾತಾಡುತ್ತಲೆ ಕಾಲಕಳೆದು ರಾತ್ರಿಯೂ ಪ್ರೌಢಿಸಿ ಉದಯ ಕಾಲಕ್ಕೆ ಸರಿಯಾಗಿ ಸೂರ್ಯನು ಅತಿ ಪ್ರಭೆಯಿಂದ ಕಾಣಿಸಿಕೊಂಡನು. ಆಗ ಭೂಮಂಡಲವೆಲ್ಲವೂ ಸೂರ್ಯಕಾಂತಿಯಿಂದ ಕೂಡಿ ಅತಿ ಸೌಂದರ್ಯದಿಂದ ಕೂಡಿದ್ದಾಗಲು ಆ ಭಕ್ತಳು ಪರಮ ಸಂತುಷ್ಟಳಾದರೂ ಅಂಧಳಾದ ಈ ಬಾಲೆಗೆ ಇಷ್ಟು ಸಂತೋಷವೂ ಇಲ್ಲದೆ ಹೋಯಿತಲ್ಲಾ ಎಂದು ಬಹು ಸಂಕಟಪಟ್ಟು ಬಿಸುಸುಯ್ದು ಭಗವಂತನನ್ನು ಪ್ರಾರ್ಥಿಸಿ ಆ ದೇಶಳೆಂಬ ಬಾಲೆಯ ಕಣ್ಣನ್ನು ಮುಟ್ಟಲು ಆಕೆಗೆ ದೃಷ್ಟಿ ಬಂತು. ಆಗಲು ಬಾಲೆಯು ಪೂರ್ವ ದಿಕ್ಕಿನಲ್ಲಿ ಪ್ರಜ್ವಲಿಸುತ್ತಿರುವ ಸೂರ್ಯನನ್ನೂ ಸೂರ್ಯಕಾಂತಿಯಿಂದ ಪ್ರಕಾಶಿಸುತ್ತಿರುವ ತರುಲತಾದಿಗಳ ಸೊಬಗನ್ನೂ ನೋಡುತ್ತಾ ಕೆಲವು ಹೊತ್ತನ್ನು ಕಳೆದು ಬಳಿಕ ತನಗೆ ಕಣ್ಣನ್ನು ಕರವಮಾಡಿದ ಆ ಭಕ್ತಳನ್ನು ಕುರಿತು— ತಾಯೇ, ನನಗೆ ಪುನಃ ಅಂಧತ್ವವು ಬರುವಂತೆ ಮಾಡಿರಿ. ಯಾಕಂದರೆ ಈ ಭೂಲೋಕವು ಇಷ್ಟು ಅಂದವಾಗಿ ಕಂಗೊಳಿಸುತ್ತಿರುವಲ್ಲಿ ಜಗತ್ಕರ್ತನಾದ ಆ ಭಗವಂತನು ಕಣ್ಣಿಗೆ ಕಾಣಿಸುವದು ತಪ್ಪಿ ಹೋಗುತ್ತದೆ ಎಂದು ಹೇಳಿದಳಂತೆ. ಅದೇ ಪ್ರಕಾರ ಆ ಭಕ್ತಳು ಪುನಃ ಭಗವಂತನನ್ನು ಪ್ರಾರ್ಥಿಸಲಾಗಿ ಆ ಬಾಲೆಯು ಪುನಃ ಕುರುಡಾದಳು.

ಈ ಕಥೆಯಲ್ಲಿ ಸೂಚಿಸಿರುವ ವಿಷಯವನ್ನು ಪರ್ಯಾಲೋಚಿಸುವಾಗ್ಯ ಕುರುಡುತನದಲ್ಲಿ ಅನೇಕ ದುಷ್ಪ್ರೇರಣೆಗಳಿಗೆ ತಪ್ಪಿಸಿಕೊಳ್ಳುವಂಥ ಅನುಕೂಲವಿದೆ. ಇದಲ್ಲದೆ ಕುರುಡರನ್ನು ನೋಡುವದರಿಂದ ಇತರರಿಗೆ ಅವರ ವಿಷಯದಲ್ಲಿ ಬಹಳ ಕನಿಕರವೂ ಪ್ರೀತಿಯೂ ಹುಟ್ಟುವದಕ್ಕೆ ಕಾರಣವಿದೆ. ಕ್ರಿಸ್ತನಿಂದ ಹುಟ್ಟಿದ ದೇಶಗಳಲ್ಲೆಲ್ಲಾ ಕುರುಡರಿಗಾಗಿ ಪಾಠಶಾಲೆಗಳುಂಟು. ಬಂಗಾಳದಲ್ಲಿಯೂ ನಮ್ಮ ರಾಜಧಾನಿಯಲ್ಲಿಯೂ ಕುರುಡರ ನಿಮಿತ್ತವಾಗಿ ಪಾಠಶಾಲೆಗಳನ್ನು ಏರ್ಪಡಿಸಿದ್ದಾರೆ. ಈ ಪ್ರಕಾರ ಕುರುಡರು ಸಹ ತಮಗೆ ಬಂದಿರುವ ಈ ಕಷ್ಟವು ತಮ್ಮ ತಂದೆಯ ಚಿತ್ತದಿಂದಲೆ ಬಂದಿದೆ ಎಂದು ತಿಳಿದು ಗುಣಗುಟ್ಟದೆ ಬಂದುದನ್ನೆಲ್ಲಾ ಶಾಂತವಾಗಿ ಸಹಿಸಿಕೊಳ್ಳುವದರ ಮೂಲಕ ಭಗವಂತನನ್ನು ಘನಪಡಿಸಬಹುದಾಗಿದೆ. ಅವರು ಹಾಗೆ ಮಾಡುವದಾದರೆ ಕಣ್ಣು ಕಾಣುತ್ತಿರುವದಕ್ಕಿಂತ ಕುರುಡರಾಗಿರುವದೇ ಉತ್ತಮವೆಂದು ಅನುಭವಕ್ಕೆ ಬರುವದು. ಕಣ್ಣುಳ್ಳವರಾದರೂ ತಮ್ಮ ಸ್ಥಿತಿಯನ್ನು ಭಗವಂತನ ಪ್ರಭಾವಕ್ಕೇ ಬಳಸುತ್ತಾ ಬಂದರೆ ಕಣ್ಣಿಲ್ಲದವರಿಗಿಂತ ನಿಜವಾಗಿ ಧನ್ಯರೆಂದೆನಿಸಿಕೊಳ್ಳಬಹುದು. ನಮ್ಮ ಸ್ವಾಮಿಯಾದ ಯೇಸು ಕ್ರಿಸ್ತನು ಆ ಹುಟ್ಟುಕುರುಡನನ್ನು ಸ್ವಸ್ಥಮಾಡಿದುದರ ಮುಖಾಂತರ ಎಲ್ಲರೂ "ಬೆಳಕಿನ ಮಕ್ಕಳಾಗಿ ನಡೆದುಕೊಳ್ಳಿರಿ" ಎಂದು ನಮ್ಮೆಲ್ಲರಿಗೆ ಬೋಧಿಸುತ್ತಾನೆ. ಇದರ ತಾತ್ಪರ್ಯವೇನೆಂದರೆ—ಯಾವಾತನು ಅಗೋಚರನಾಗಿದ್ದಾನೋ ಆ ಭಗವಂತನನ್ನು ಜ್ಞಾನ ನೇತ್ರದಿಂದ ಕಂಡು, ನಮ್ಮೊಳಗೆ ಹುಟ್ಟುವಂಥ ದುಷ್ಪ್ರೇರಣೆಗಳನ್ನು ಜಯಿಸಿ ಆತನಿಗೆ ಯೋಗ್ಯರಾದ ಮಕ್ಕಳಾಗಿ ಜೀವಿಸಬೇಕೆಂಬುದೇ.

ದೇಹ ಸಂಬಂಧವಾದ ಕಷ್ಟಕ್ಕೆಲ್ಲಾ ಆತ್ಮಸಂಬಂಧವಾಗಿ ಮಾಡಿದ ಪಾಪಕೃತ್ಯವೇ ಕಾರಣವೆಂದೂ ಇದಕ್ಕೆ ನಾವು ಬಾಧ್ಯರೇ ಎಂದೂ ತಿಳಿದು ಕಷ್ಟಪಡುವಂಥವರ ವಿಷಯದಲ್ಲಿ ಕೇವಲ ಕನಿಕರಯುಕ್ತರಾಗಿರಲು ಅವಕಾಶವುಂಟು. ದಾರಿದ್ರ್ಯದಿಂದಲಾಗಲಿ ರೋಗದಿಂದಾಗಲಿ ಕಷ್ಟಪಡುವಂಥವರನ್ನು ನೋಡಿ—ಇವರಿಗೆ ಪೂರ್ವ ಕರ್ಮದ ಫಲವು ಹೀಗೆ ಬಂದಿದೆಯೆಂದೂ ಇವರು ತಕ್ಕದ್ದನ್ನೇ ಅನುಭವಿಸುತ್ತಿದ್ದಾರೆಂದೂ ಹೇಳುವದಕ್ಕೆ ಬದಲಾಗಿ ನನಗೆ ಇಂಥ ಗತಿಯೇ ಬರಬಹುದಾಗಿತ್ತು, ಆದರೆ ದೇವರ ಕೃಪೆಯಿಂದ ನನಗೆ ಇಲ್ಲದಾಗಿದೆಯೆಂದು ಹೇಳಿಕೊಂಡು ಅವರನ್ನು ಉಪಚರಿಸುವದಕ್ಕೆ ಪ್ರಯತ್ನಿಸಲವಕಾಶವಿದೆ. ಹೀಗೆ ಸೋದರಭಾವದಿಂದ ಹುಟ್ಟುವ ಕನಿಕರವು ನಮ್ಮಲ್ಲಿ ಉಂಟಾಗಿ ನಾವು ಇತರರಿಗಿಂತ ಉತ್ತಮರಾದುದರಿಂದಲೇ ಸುಖವನ್ನನುಭವಿಸುತ್ತಿದ್ದೇವೆಂಬ ಅಹಂಭಾವವು ನಾಶವಾಗುವದಕ್ಕೆ ಮಾರ್ಗವಾಗುವದು. ಇಂಥ ಒಳ್ಳೇ ಅಭಿಪ್ರಾಯವು ಹುಟ್ಟುವದರಿಂದಲೂ ವಿಧವೆಯರ ಸ್ಥಿತಿಯು ಒಳ್ಳೇದಾಗುವದು. ಇನ್ನೂ ನಮ್ಮ ಈ ದೇಶದಲ್ಲಿ ಅನೇಕ ವಿಧವಾಗಿ ಕಂಗೊಳಿಸುತ್ತಿರುವ ಕಷ್ಟಪರಂಪರೆಗಳು ನಿರ್ಮೂಲವಾಗುವವು.

ಒಳದೇಶದ ವೃತ್ತಾಂತಗಳು.

ನಮ್ಮ ಯುವರಾಜರವರ ವಿದ್ಯಾಬೋಧಕರಾದ ಲೆಫ್ಟಿನೆಂಟ್ ಆರ್. ಜೆ. ಡಬ್ಲ್ಯು. ಹೀಲ್‌ರವರಿಗೆ ಮಿಸ್ ಆಲಿಸ್ ಇಸಬೆಲ್ ಎಂಬಾಕೆಯನ್ನು ಕೊಟ್ಟು ಇಷ್ಟರಲ್ಲೇ ವಿವಾಹವಾಗುವುದೆಂದು ಪ್ರಕಟವಾಗಿದೆ.

ಮೈಸೂರು ಲಿಂಗಾಯತ ವಿದ್ಯಾವರ್ಧಕ ಫಂಡಿಗೆ ಕಳೆದ ತಿಂಗಳ ೨೮ರ ವರೆಗೆ ೭,೦೩೩ ಚಿಲ್ಲರೆ ರೂಪಾಯಿ ಚಂದಾ ವಸೂಲಾಗಿದೆ ಎಂದು ಆ ಫಂಡಿನ ಸೆಕ್ರೆಟರಿ ಮೆ॥ ಬಿ ಎಸ್. ಶಿವಶಂಕರಪ್ಪನವರು ತಿಳಿಸಿರುತ್ತಾರೆ.

* * * * *

ಕಳೆದ ಬುಧವಾರ ಶ್ರೀಮದ್ಯುವರಾಜರವರು ಡೆಪ್ಯುಟಿ ಕಮಿಷನರ್ ಸಮೇತ ಜೆಗ್ಗದೇವನಕೋಟೆ ಪ್ರಾಂತ್ಯಕ್ಕೆ ಸಿಕಾರ್ಟಿಗೆ ಹೊರಟು ಮಾಡಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಅವರು ಈ ದಿನವೋ ನಾಳೆಯೋ ವಾಪಸು ಬರುವವರಾಗಿದ್ದಾರೆ.

* * * * *

ಮೈಸೂರು ಸಂಸ್ಥಾನದ ಖಾಯಂ ಬ್ರಿಟಿಷ್ ರೆಸಿಡೆಂಟರಾಗಿ ಈಗ ರಜಾಪಡೆದು ಸೀಮೆಗೆ ಹೋಗಿರುವ ಸರ್ ಜೇಂಸ್ ಬೌರ್ಡಿಲನ್‌ರವರು ಪುನಃ ಇದೇ ಕೆಲಸಕ್ಕೆ ಬರುತ್ತಾರೆಂಬ ವಾರ್ತೆಯು ನಿಜವಲ್ಲ. ಅವರು ನೊವೆಂಬರ್ ೨೧ ಕ್ಕೆ ಕೆಲಸದಿಂದ ನಿವೃತ್ತರಾಗುವರು.

* * * * *

ರಾಜಧಾನಿಯಲ್ಲಿರುವ ಸರ್ಕಾರಿ ಇಂಜನಿಯರ್ ಸ್ಕೂಲಿಗೆ ೧೫ ರೂ. ಸಂಬಳದ ಒಬ್ಬ ಗುಮಾಸ್ತೆಯನ್ನು ನೇಮಿಸಿಕೊಳ್ಳುವದಕ್ಕೂ, ಟಂಡಿಗೆಯೂ ಮತ್ತು ಕೆಲವು ಸಾಮಾನುಗಳನ್ನು ಕೊಂಡು ಕೊಳ್ಳುವದಕ್ಕೂ ಗವರ್ನಮೆಂಟಿನವರು ೧,೭೪೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

* * * * *

ಮೊನ್ನೆ ಶನಿವಾರ ರಾಜಧಾನಿಯ ಪಬ್ಲಿಕ್ ಆಫೀಸಿನಲ್ಲಿ ದಿವಾನರೂ, ಕೌನ್ಸಿಲ್ ಮೆಂಬರುಗಳೂ, ರೆವಿನ್ಯೂ ಕಮಿಷನರೂ, ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರೂ ಸಭೆಸೇರಿ ಬೇರೆಬೇರೆ ಇಲಾಖೆಗಳ ಉದ್ಯೋಗದವರ ಅಧಿಕಾರಗಳನ್ನು ಹೆಚ್ಚಿಸತಕ್ಕ ವಿಚಾರವಾಗಿ ಚರ್ಚೆ ಮಾಡಿದರೆಂದು ಪ್ರಕಟವಾಗಿದೆ.

* * * * *

ನಮ್ಮ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮೆ॥ ಇ. ಮೆಕಾನಕಿಯವರು ಇಷ್ಟರಲ್ಲೇ ರಜಾಪಡೆದು ಸೀಮೆಗೆ ಹೋಗಲಿರುತ್ತಾರೆಂತಲೂ ಆ ಕೆಲಸಕ್ಕೆ ಈಗ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾಗಿರುವ ಮೆ॥ ಕಾರ್‌ಯನವರು ನೇಮಕವಾಗುತ್ತಾರೆಂತಲೂ ಹೇಳುವ ಮಾತು ನಿರಾಧಾರವಾದುದೆಂದು ತಿಳಿಯುವುದು.

* * * * *

ನವರಾತ್ರಿ ಉತ್ಸವಕ್ಕಾಗಿ ರಾಜಧಾನಿಗೆ ಬಂದಿದ್ದ ಡೆಪ್ಯುಟಿ ಕಮಿಷನರುಗಳೇ ಮುಂತಾದ ಉದ್ಯೋಗಸ್ಥರು ಕಳೆದ ವಾರ ತಮ್ಮ ತಮ್ಮ ಸ್ಥಳಗಳಿಗೆ ವಾಪಸು ಪ್ರಯಾಣ ಮಾಡಿದರು. ದಿವಾನರೂ ಕೌನ್ಸಿಲ್ ಮೆಂಬರುಗಳೂ, ರೆವಿನ್ಯೂ ಕಮಿಷನರೂ ಈ ವಾರವೆಲ್ಲಾ ರಾಜಧಾನಿಯಲ್ಲೇ ಇರುವಂತೆ ಕಾಣುತ್ತದೆ.

* * * * *

ಕಳೆದ ಸೋಮವಾರ ಬೆಳಿಗ್ಗೆ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಇಬ್ಬರು ಖೈದಿಗಳನ್ನು ಗಲ್ಲಿಗೆ ಹಾಕಿದರು. ಸುಬ್ಬಕಿಂಗ್ ಎಂಬ ಮರಾಟೆಯವನು ಬೆಂಗಳೂರಿನಲ್ಲಿ ತನ್ನ ಅತ್ತಿಗೆಯನ್ನು ಕೊಂದು ಹಾಕಿದ್ದನು. ಚಿಕ್ಕಬಸ್ವಯ್ಯನೆಂಬ ಮಾದಿಗನವನು ಶಿವಮೊಗ್ಗದಲ್ಲಿ ತನ್ನ ಮಗಳನ್ನೇ ಕತ್ತರಿಸಿದ್ದನು. ಇವರಿಬ್ಬರೂ ಶಿಕ್ಷೆಯನ್ನು ಅನುಭವಿಸಿದರು.

* * * * *

ಒಬ್ಬ ಬಾತ್ಮೀದಾರರು ಬರೆಯುವದು—"ಬೆಂಗಳೂರು ಮಹಾರಾಜಾ ಮೈಸೂರು ೩ ನೆ ಇನ್‌ಫೆಂಟ್ರಿ ಬಾರ್ ಕ್ಯಾನಿಗೆ ಸೇರಿದ ಮಾರಿಯಮ್ಮನ ದೇವಸ್ಥಾನದಲ್ಲಿ ಕಳೆದ ೨೧ ನೆ ಶನಿವಾರ ರಾತ್ರಿ ಯಾರೋ ಚೋರರು ನಗನಾಣ್ಯಗಳನ್ನೂ ಸೀರೆ ಮುಂತಾದವುಗಳನ್ನೂ ಚೋರಿ ಮಾಡಿಕೊಂಡು, ಬೀಗಹಾಕಿದ ಬಾಗಿಲನ್ನು ತೆರೆದು ಪರಾರಿಯಾದರು. ಹ್ಯಾಗೆ ಪತ್ತೆಯಾಗುವುದೋ ನೋಡಬೇಕು" ಎಂಬುದೇ.

* * * * *

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿ ಮೆ॥ ಗುಲಾಂ ಮೊಹಿದೀನ್ ಎಂಬ ದೊಡ್ಡ ವರ್ತಕನ ಜಿನಸಾರೆ ಅಂಗಡಿಗೆ ಮೊನ್ನೆ ಸೋಮವಾರ ಬೆಳಗಿನ ಝಾಮದಲ್ಲಿ ಬೆಂಕಿ ಬಿದ್ದು, ಸುಮಾರು ೧,೫೦೦ ರೂ. ಮುಟ್ಟಿಸಿದ್ದ ಹೊಸ ಮಳಿಗೆಯೂ ಒಳಗಿದ್ದ ಸುಮಾರು ೩—೪ ಸಾವಿರ ರೂಪಾಯಿನ ಮಾರಿಕೆ ಸರಕುಗಳೂ ಸುಟ್ಟುಹೋದವು. ಪ್ರಾತಃಕಾಲ ೬ ಗಂಟೆ ಹೊತ್ತಿನಲ್ಲಿ ಅಂಗಡಿ ಹತ್ತಿ ಉರಿಯುತ್ತಿದ್ದುದು ಗೊತ್ತಾಯಿತು. ಕೂಡಲೇ ಬಹು ಜನ ಮಹಮ್ಮದೀಯರು ಸೇರಿ ಬೆಂಕಿ ಆರಿಸುವುದಕ್ಕೆ ಪ್ರಯತ್ನಪಟ್ಟರು. ೪ ಗಂಟೆ ತನಕ ನಲ್ಲಿಗಳಲ್ಲಿ ನೀರೇ ಇರಲಿಲ್ಲ. ಮಸೀದಿ ಬಾವಿಯಿಂದ ನೀರು ತಂದು ಹಾಕಿದರು. ಪೋಲೀಸಿನವರು ಸ್ವಲ್ಪ ನಿಗಾ ಕೊಟ್ಟು ನೋಡಿದ್ದರೆ ಇಷ್ಟು ನಷ್ಟವಾಗುತ್ತಿರಲಿಲ್ಲವೆಂದು ತಿಳಿದುಬಂದಿದೆ.

* * * * *

ಹರಿಹರ ಸಬ್ ತಾಲ್ಲೂಕು ಮತ್ತು ಪುರನಿವಾಸಿಗಳು ದಿವಾನರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನೊಪ್ಪಿಸಿ, ಅವರನ್ನು ಪ್ರಾರ್ಥಿಸಿಕೊಂಡಿರುವುದೇನೆಂದರೆ—"ಹರಿಹರಪುರದಲ್ಲಿ ಜನರ ಅನುಕೂಲ್ಯಕ್ಕಾಗಿ ಕಲ್ಪಿಸಿಕೊಟ್ಟಿರುವ ಹೊಸಛತ್ರ, ಸಧ್ಯದಲ್ಲೇ ತಯಾರಾಗಬಹುದಾದ ತಾಲ್ಲೂಕು ಕಛೇರಿ, ನಲ್ಲಿಯ ಮೂಲಕ ತುಂಗಭದ್ರಾನದೀ ನೀರಿನ ಸರಬರಾಯಿ, ಜಿನಸಿಗಳ ಮೇಲೆ ಆಕ್ಟ್ರಾಯ್ ಸುಂಕವನ್ನು ತೆಗೆದುಹಾಕಿದ್ದು, ಈ ಮುಂತಾದ ಸಹಾಯಗಳಿಗಾಗಿ ಸದಾ ನಿಜ್ವಚಿತ್ತದಿಂದ ವಂದಿಸುತ್ತೇವೆ. ಸ್ಥಳಪ್ರಶಸ್ತಿಯಿಂದಲೂ ಇತರ ೨—೩ ತಾಲ್ಲೂಕುಗಳಿಗಿಂತ ಸರ್ಕಾರಕ್ಕೆ ಹೆಚ್ಚಿಗೆ ಬರುವ ಸುವರ್ಣಾದಾಯದಿಂದಲೂ ಹರಿಹರವನ್ನು ತಾಲ್ಲೂಕಾಗಿ ಕಲ್ಪಿಸುವದರಿಂದ ಜನೋಪಕಾರವಾಗುವ ಕಾರ್ಯವು ತಮ್ಮ ಕಡೆಯಿಂದ ಆಗಬೇಕಾಗಿ ಪ್ರಾರ್ಥಿಸುತ್ತೇವೆ" ಎಂಬುದೇ.

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

[ಕಳೆದ ವಾರದ ಶೇಷ]

ಶಿಲ್ಪವಿದ್ಯಾಭ್ಯಾಸ

ಮೈಸೂರಿನಲ್ಲಿರುವ ಇಂಜನಿಯರಿಂಗ್ ಸ್ಕೂಲ್ ಬಹಳ ಅಭಿವೃದ್ಧಿಯನ್ನು ಹೊಂದಿತು. ಅಲ್ಲಿನ ಅನೇಕ ವಿದ್ಯಾರ್ಥಿಗಳು ಮದರಾಸಿನ ಶಿಲ್ಪವಿದ್ಯಾಪರೀಕ್ಷೆಗಳಲ್ಲಿ ಉನ್ನತವಾದ ಸ್ಥಾನಗಳನ್ನು ಪಡೆದರು. ಕಟ್ಟಡಕಟ್ಟುವದು, ನಕ್ಷೆ ತಯಾರುಮಾಡುವದು, ಅಂದಾಜು ತಯಾರುಮಾಡುವದು, ಪೈಮಾಯಿಷಿ ಮಾಡುವದು, ಮುಟ್ಟು ಕಾಂಗಾರಿ, ಬಸ್ತಿ ಕಾಂಗಾರಿ, ಮರಗೆಲಸ, ನೇಯುವಕೆಲಸ, ಚಿತ್ರಕೆಲಸ, ಮಾದರಿಯಂತೆ ಚಿತ್ರಿಸುವದು, ಇವೇ ಇವರು ವ್ಯಾಸಂಗಮಾಡಿದ ಕೆಲವು ವಿಷಯಗಳಾಗಿವೆ. ಪರೀಕ್ಷೆಯಲ್ಲಿ ತೇರ್ಗಡೆಯಾದ ಕೆಲವರು ತೇರ್ಗಡೆ ಪಟ್ಟಿಯಲ್ಲಿ ಅತ್ಯುತ್ತಮವಾದ ಸ್ಥಾನಗಳನ್ನು ಪಡೆದರು. ಮೈಸೂರು ಕೈಗಾರಿಕೆಯ ಸ್ಕೂಲು ಬಹುಮಟ್ಟಿಗೆ ಕಾರ್ಯಸಿದ್ಧಿಯನ್ನು ಹೊಂದಿ ಇದೆ. ಅಲ್ಲಿನ ಕುಂಬಾರ ಕಾರಖಾನೆಯು ಮನೆಗೆ ಹೊದಿಸುವ ಮತ್ತು ನೆಲಕ್ಕೆ ಹಾಸುವ ಹೆಂಚುಗಳನ್ನು ಸುಲಭವಾದ ದರಗಳಿಗೆ ತಯಾರುಮಾಡಿ ಒದಗಿಸುವಷ್ಟು ಸಾಮರ್ಥ್ಯವುಳ್ಳದ್ದಾಗಿ ಇದೆ. ಈ ಸಾಮಾನುಗಳು ಸ್ವಲ್ಪ ಕಾಲದಲ್ಲಿಯೇ ಈ ತರದ ಸಾಮಾನುಗಳಲ್ಲಿ ಅತ್ಯಂತ ಉತ್ಕೃಷ್ಟವಾದವುಗಳಿಗೆ ಸಮವಾಗುವವೆಂದು ಹೇಳಬಹುದು. ಮೇಲುಕೋಟೆಯ ಕೈಗಾರಿಕೆ ಪಾಠಶಾಲೆಯೂ ದೊಡ್ಡಬಳ್ಳಾಪುರದ ನೇಯಿಗೆಯ ಪಾಠಶಾಲೆಯೂ ರೇಷ್ಮೆಯ ಮತ್ತು ಹತ್ತಿಯ ಬಟ್ಟೆಗಳ ಉತ್ಕೃಷ್ಟವಾದ ಮಾದರಿಗಳನ್ನು ಮಾಡಿ, ಗತವರ್ಷದ ಆದಿಯಲ್ಲಿ ಬೊಂಬಾಯಿನಲ್ಲಿ ನಡೆದ ಕೈಗಾರಿಕೆಯ ಪ್ರದರ್ಶನಕ್ಕೆ ಕಳುಹಿಸಿ, ಬಿರುದಿನ ಬಿಲ್ಲೆಗಳನ್ನೂ ಬಿರುದಿನ ಪತ್ರಿಕೆಗಳನ್ನೂ ಪಡೆದುಕೊಳ್ಳುವಷ್ಟು ಸಾಮರ್ಥ್ಯವುಳ್ಳವುಗಳಾಗಿದ್ದುವು. ಹೊಳೆನರಸೀಪುರದಲ್ಲಿರುವ ನೇಯಿಗೆಯ ಪಾಠಶಾಲೆಗೆ ಈಗ ಒಂದು ಚಿಕ್ಕ ಪರೀಕ್ಷಾಲಯವನ್ನೂ ಒಂದು ಬಣ್ಣಹಾಕುವ ಮನೆಯನ್ನೂ ಏರ್ಪಡಿಸಿಕೊಟ್ಟಿದೆ. ಅಲ್ಲಿ ಸಸ್ಯೋತ್ಪನ್ನವಾದ ಮತ್ತು ಕೃತಕವಾದ ಬಣ್ಣಗಳಿಂದ ಬಟ್ಟೆಗಳಿಗೆ ಸುಲಭವಾಗಿ ಬಣ್ಣಹಾಕುವ ಪರೀಕ್ಷೆಗಳು ಸಫಲವಾಗಿ ನಡೆಯುತ್ತಿವೆ. ಗತವರ್ಷ ಒಟ್ಟು ೧೮ ಕೈಗಾರಿಕೆಗಳ ಪಾಠಶಾಲೆಗಳಿದ್ದುವು. ಈ ಪೈಕಿ ೬ ನೇಯಿಗೆಯ ಪಾಠಶಾಲೆಗಳು. ಇತರ ಪಾಠಶಾಲೆಗಳಲ್ಲಿ ಕಲಿಸಿಕೊಟ್ಟ ಕೆಲವು ವಿಷಯಗಳು ಯಾವವೆಂದರೆ:—ಮರಗೆಲಸ, ಕಬ್ಬಿಣಗೆಲಸ, ಚಿತ್ರಬರೆಯುವುದು, ಚಿತ್ರದಕೆಲಸ, ಕುಂಬಾರಗೆಲಸ, ಮಾದರಿಗಳನ್ನು ಮಾಡುವುದು, ಇಟ್ಟಿಗೆ ಜೋಡಿಸುವ ಕೆಲಸ, ಮತ್ತು ಹಗ್ಗಮಾಡುವುದು—ಇವೇ. ಈ ಪಾಠಶಾಲೆಗಳೆಲ್ಲವೂ ಚೆನ್ನಾಗಿ ಕೆಲಸಮಾಡಿದುವು.

ಗತವರ್ಷದಲ್ಲಿ ಬೆಂಗಳೂರಿನಲ್ಲಿರುವ ಮೆ॥ ಟಾಟಾ ಯವರ ರೇಷ್ಮೆಯ ತೋಟದಲ್ಲಿ ಶಿಕ್ಷಿತರಾದ ೧೦ ಮಂದಿ ಗ್ರಾಮಸ್ಕೂಲ್ ಮಾಸ್ಟರುಗಳು, ರೇಷ್ಮೆ ಹುಳಗಳನ್ನೂ ಹಿಪ್ಪುನೇರಿಲೆ ಗಿಡಗಳನ್ನೂ ಸಾಕುವ ಉತ್ಕೃಷ್ಟವಾದ ವಿಧಾನಗಳನ್ನು ಜನಗಳಿಗೆ ಬೋಧಿಸುವದಕ್ಕಾಗಿ, ಈ ಸಂಸ್ಥಾನದಲ್ಲಿ ಹಿಪ್ಪುನೇರಿಲೆ ಗಿಡಗಳನ್ನು ಬೆಳೆಯುವ ತಾಲ್ಲೂಕುಗಳಲ್ಲಿ, ರೇಷ್ಮೆ ವ್ಯವಸಾಯದ ಇನ್ಸ್ಪೆಕ್ಟರುಗಳಾಗಿ ನೇಮಕಮಾಡಲ್ಪಟ್ಟರು.

ಮಾಮೂಲಾಗಿ ಕೊಡುತ್ತಿದ್ದ ವೈದ್ಯ ಮತ್ತು ಇಂಜನಿಯರಿಂಗ್ ವಿದ್ಯಾರ್ಥಿವೇತನಗಳಲ್ಲದೆ ೨೬ ಶಿಲ್ಪವಿದ್ಯಾರ್ಥಿ ವೇತನಗಳನ್ನು ಕೊಡಲಾಯಿತು. ಈ ವಿದ್ಯಾರ್ಥಿಗಳ ಪೈಕಿ ಬೊಂಬಾಯಿನಲ್ಲಿರುವ ವಿಕ್ಟೋರಿಯಾ ಇನ್ಸ್ಟಿಟ್ಯೂಟಿನಲ್ಲಿ ೧೦ ಮಂದಿ ಮೆಕಾನಿಕಲ್ ಇಂಜನಿಯರಿಂಗ್ ಎಂಬ ಯಾಂತ್ರಿಕ ಶಿಲ್ಪವಿದ್ಯೆಯನ್ನೂ, ೧೫ ಮಂದಿ ಇಲೆಕ್ಟ್ರಿಕಲ್ ಇಂಜನಿಯರಿಂಗ್ ಎಂಬ ವೈದ್ಯುತ ಶಿಲ್ಪವಿದ್ಯೆಯನ್ನೂ ಕಲಿಯುತ್ತಿದ್ದಾರೆ. ಉಳಿದ ಇಬ್ಬರಲ್ಲಿ ಒಬ್ಬನು ಮದರಾಸಿನಲ್ಲಿರುವ ಸ್ಕೂಲ್ ಆಫ್ ಆರ್ಟ್ಸ್ ಎಂಬ ಕಲಾವಿದ್ಯಾಶಾಲೆಯಲ್ಲಿ ಕಂಡರಣೆ ಯಾ ಚಿತ್ರಕೊರೆಯುವ ಕೆಲಸವನ್ನೂ, ಮತ್ತೊಬ್ಬನು ಕಂಡರಣೆಯೊಡನೆ ಲೋಹಕಾರ್ಯವನ್ನೂ ಸಹ ಕಲಿಯುತ್ತಿದ್ದಾನೆ. ಅಲ್ಲದೆ ಬೊಂಬಾಯಿನಲ್ಲಿ ಪಶುವೈದ್ಯಶಾಲೆಯಲ್ಲಿ ೫ ಮಂದಿ ಮೈಸೂರು ವಿದ್ಯಾರ್ಥಿಗಳೂ, ಮದರಾಸು ಪಶುವೈದ್ಯಶಾಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳೂ ವ್ಯಾಸಂಗಮಾಡುತ್ತಿದ್ದರು.

ಗತವರ್ಷದಲ್ಲಿ ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಇರುವ ೮ ಸರ್ಕಾರಿ ಸ್ಕೂಲುಗಳಿಗೆ ಸಂಬಂಧಪಟ್ಟಹಾಗೆ ವ್ಯವಸಾಯವನ್ನು ಕಾರ್ಯತಃ ಬೋಧಿಸುವದಕ್ಕಾಗಿ ಪ್ರದರ್ಶನ ಕ್ಷೇತ್ರಗಳನ್ನು ಸ್ಥಾಪಿಸಲಾಯಿತು. ಶ್ರೀಮನ್ಮಹಾರಾಜರವರು ಕಳೆದ ನವೆಂಬರ್ ತಿಂಗಳಲ್ಲಿ ಇಂಥ ಒಂದು ತೋಟಕ್ಕೆ ದಯಮಾಡಿ ಬಿಜಯಮಾಡಿಸಿ—ಇವುಗಳು ಸಫಲವಾಗಬೇಕಾದರೆ ಇವುಗಳಲ್ಲಿ ಹಳ್ಳಿ ಕಾಯಿಪಲ್ಯಗಳ ಬಡಕಲು ಗಿಡಗಳನ್ನು ಮಾತ್ರವೇ ಇಟ್ಟಿರಬಾರದು, ರೈತರಲ್ಲಿ ತೋಟಮಾಡುವ ಆಸಕ್ತಿಯನ್ನು ಉಂಟುಮಾಡಬೇಕು. ಉತ್ಕೃಷ್ಟವಾದ ವ್ಯವಸಾಯಕ್ರಮವನ್ನು ಅದರ ಫಲಿತಾಂಶವನ್ನು ಸಹ ವ್ಯವಸಾಯಗಾರರಿಗೆ ತೋರಿಸಿಕೊಡಬೇಕು. ಅದರಿಂದ ಬಹಳ ಪ್ರಯೋಜನವಾಗುವುದು—ಎಂಬದಾಗಿ ಆ ಕಾಲದಲ್ಲಿ ಅಪ್ಪಣೆ ಕೊಡಿಸಿದರು. ಪ್ರೈಮರಿ ಮತ್ತು ಲೋಯರ್ ಸೆಕೆಂಡರಿ ಸ್ಕೂಲುಗಳ ಉಪಾಧ್ಯಾಯರು ತಮ್ಮ ತಮ್ಮ ಸ್ಕೂಲಿಗೆ ಸಂಬಂಧಪಟ್ಟ ಜಾಗೆ, ಮಾದರಿಯ ತೋಟಗಳನ್ನೂ ಹೊಲಗಳನ್ನೂ ಏರ್ಪಡಿಸಲು ಶಕ್ತರಾಗುವಂತೆ ಮಾಡುವದಕ್ಕಾಗಿ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ವ್ಯವಸಾಯವನ್ನು ಕಾರ್ಯತಃ ಬೋಧಿಸಲು ಉಪಕ್ರಮಿಸಲಾಯಿತು.

ಬೊಂಬಾಯಿ ಪ್ರದರ್ಶನ

ಕಳೆದ ಡಿಸೆಂಬರ್ ತಿಂಗಳಲ್ಲಿ ಬೊಂಬಾಯಿನಲ್ಲಿ ನಡೆದ ವ್ಯವಸಾಯದ ಮತ್ತು ಕೈಗಾರಿಕೆಯ ಪ್ರದರ್ಶನದಲ್ಲಿ ಮೈಸೂರು ದೇಶದ ಒಂದು ಪ್ರತ್ಯೇಕವಾದ ಭಾಗವನ್ನು ಏರ್ಪಡಿಸಲಾಯಿತು. ೩೨೬ ಪದಾರ್ಥಗಳನ್ನು ಅಲ್ಲಿ ಪ್ರದರ್ಶನಕ್ಕೆ ಇಡಲಾಯಿತು. ಈ ಪೈಕಿ ೩೦೯ ಪದಾರ್ಥಗಳು ಅಲ್ಲಿ ಒಡನೆ ಮಾರಿಹೋದವು. ೭ ಚಿನ್ನದ ಬಹುಮಾನ ಬಿಲ್ಲೆಗಳೂ, ೧೧ ಬೆಳ್ಳಿಯ ಬಿಲ್ಲೆಗಳೂ, ೭ ಕಂಚಿನ ಬಿಲ್ಲೆಗಳೂ, ೬ ಯೋಗ್ಯತಾಪತ್ರಿಕೆಗಳೂ ದೊರಕಿದವು. ಸಂಸ್ಥಾನದ ಕೈಗಾರಿಕೆಯ ಮುಖ್ಯ ಪ್ರದೇಶಗಳಿಂದ ಕೆಲವು ಜನ ಪ್ರದರ್ಶಕರನ್ನೂ ಕೈಗಾರಿಕೆಯವರನ್ನೂ ಪ್ರದರ್ಶನಕ್ಕಾಗಿ ತಂದಿಟ್ಟ ಪದಾರ್ಥಗಳನ್ನು ನೋಡಿ ಕಲಿತು ಬರುವದಕ್ಕಾಗಿಯೂ, ಬೊಂಬಾಯಿನಲ್ಲಿರುವ ಕೆಲವು ಕೈಗಾರಿಕೆ ಕಾರ್ಖಾನೆಗಳಲ್ಲಿ ನಡೆಯುವ ಕಾರ್ಯಕ್ರಮವನ್ನು ತಿಳಿದುಕೊಂಡು ಬರುವದಕ್ಕಾಗಿಯೂ ಕಳುಹಿಸಿತ್ತು. ಅಲ್ಲಿ ಪ್ರದರ್ಶನಕ್ಕೆ ತಂದಿದ್ದ ಉತ್ಕೃಷ್ಟವಾದ ವ್ಯವಸಾಯೋಪಕರಣಗಳನ್ನು ನೋಡಿಕೊಂಡು ಬರುವದಕ್ಕಾಗಿ ಶಿವಮೊಗ್ಗೆಯಿಂದ ಮುಖಂಡರಾದ ಕೆಲರೈತರನ್ನೂ ಕಳುಹಿಸಲಾಯಿತು.

ಕೆಲವು ಗೊತ್ತಾದ ಸ್ಥಳಗಳಲ್ಲಿ ವ್ಯವಸಾಯ ಪ್ರದರ್ಶನಗಳನ್ನು ಏರ್ಪಡಿಸುವದಾಗಿ ನಾವು ಹಿಂದಿನವರ್ಷ ಹೇಳಿದ ಅಂಶವು ನಿಮಗೆ ಜ್ಞಾಪಕದಲ್ಲಿರಬಹುದು. ಅದಕ್ಕನುಸಾರವಾಗಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಹಿರಿಯೂರಿನಲ್ಲಿ ಕಳೆದ ವರ್ಷ ನಡೆದ ತೇರುಮಲ್ಲೇಶ್ವರನ ಜಾತ್ರೆಯಕಾಲದಲ್ಲಿ ವ್ಯವಸಾಯದ ಮತ್ತು ಕಸಬುಗಳ ಪ್ರದರ್ಶನವೊಂದನ್ನು ನಡಿಸಲಾಯಿತು. ಆ ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ದನಕರುಗಳೂ ಪದಾರ್ಥಗಳೂ ಅಲ್ಲದೆ ಶ್ರೀರಂಗಪಟ್ಟಣದಿಂದ ಭತ್ತವನ್ನೂ, ಕಾಲಿಸ್‌ಪೇಟೆ ಮತ್ತು ತುಮಕೂರಿಂದ ರೇಷ್ಮೆಯನ್ನೂ ರೇಷ್ಮೆ ಗೂಡುಗಳನ್ನೂ, ಬಿರೂರಿನಿಂದ [illegible]ಯನ್ನೂ, ಪ್ರದರ್ಶನಕ್ಕೆ ತಂದಿದ್ದರು. ಪಾವಗಡದ ಇಂಡಿಯನ್ ಫೈಬರ್ ಕಂಪನಿ ಎಂಬ ನಾರಿನವರ್ತಕರ ಸಂಘವು ನಾರನ್ನು ಪ್ರದರ್ಶಿಸಿದರು. ಅಲ್ಲದೆ ಬಿನ್ನಿ ಮತ್ತು ಕಂಪನಿಯವರು ದಾವಣಗೆರೆ ಮುಂತಾದ ಈ ದೇಶಕ್ಕೆ ಅನುವಾದ ಈಜಿಪ್ಷಿಯನ್, ಅಮೇರಿಕನ ಮತ್ತು ಇತರ ಜಾತಿಯ ಹತ್ತಿಯನ್ನು ಪ್ರದರ್ಶನಕ್ಕೆ ಕಳುಹಿಸಿದ್ದರು. ಬಾಳೆಯ ನಾರನ್ನು ಎತ್ತುವ ಒಂದು ಸುಲಭವಾದ ಯಂತ್ರವನ್ನು ಮೊ॥ [illegible]ವಿನಿಂದ ತಂದು ಕೆಲಸಮಾಡಿಸಿ ತೋರಿಸಿದರು. ಒಬ್ಬ ಪ್ರದರ್ಶಕನು ಹಲವುತೆರದ ಗೊಬ್ಬರಗಳನ್ನು ತಂದು ಮಾದರಿಗೆ ತೋರಿಸಿ ಅವುಗಳ ಗುಣವನ್ನು ವಿವರಿಸಿ ಹೇಳಿದನು. ಉಳುಮೆ ಪಂದ್ಯದಲ್ಲಿ ಬೇರೆ ಬೇರೆ ತರದ ನೇಗಿಲನ್ನು ಉಪಯೋಗಿಸಿದರು. ಪಂದ್ಯಗಾರರು ಪಂದ್ಯವನ್ನು ಗೆಲ್ಲುವದರಲ್ಲಿ ತುಂಬಾ ಆಸಕ್ತಿಯನ್ನು ತೋರಿಸಿದರು. ಕಸಬಿಗೆ ಸಂಬಂಧಪಟ್ಟ ಸಾಮಾನುಗಳನ್ನು ಪೂರ್ತಿಯಾಗಿ ಪ್ರದರ್ಶಿಸಿದರು. ಅಲ್ಲದೆ ಕಪಿಲೆ ಹೊಡೆಯುವ ಒಂದು ಪಂದ್ಯವೂ ನಡೆಯಿತು. ಮೊಳಕಾಲ್ಮುರು ತಾಲ್ಲೂಕಿನ ಬೊಮ್ಮಗೊಂಡನ ಕೆರೆಯೆಂಬ ಊರಿನಿಂದ ಒಬ್ಬ ಕಬ್ಬಿಣಗೆಲಸದವನು ಕಬ್ಬಿಣದ ಮತ್ತು ಉಕ್ಕಿನ ಹಲವು ವ್ಯವಸಾಯದ ಮುಟ್ಟುಗಳನ್ನು ಕಳುಹಿಸಿದ್ದನು. ಅಲ್ಲಿ ಸೇರಿದ್ದ ರೈತರು ಈ ಪ್ರದರ್ಶನದ ಉದ್ದೇಶವನ್ನು ತಿಳಿದುಕೊಂಡು ಅದರಿಂದುಂಟಾಗುವ ಪ್ರಯೋಜನವನ್ನು ಕಂಡುಕೊಂಡಂತೆ ತೋರುತದೆ.

ಹೊಸಪ್ರದರ್ಶನ

ಮುಂದಿನ ಜನವರಿಯಲ್ಲಿ ಒಂದು ಕೈಗಾರಿಕೆಯ ಮತ್ತು ವ್ಯವಸಾಯದ ಪ್ರದರ್ಶನವನ್ನು ಮೈಸೂರಿನಲ್ಲಿ ನಡಸುವದಾಗಿ ಆಲೋಚಿಸಿದೆ. ಈ ಪ್ರದರ್ಶನದಿಂದ ಮೈಸೂರು ದೇಶದ ವ್ಯವಸಾಯದ ಮತ್ತು ಕೈಗಾರಿಕೆಯ ನಿಜವಾದ ವಿದ್ಯಮಾನವನ್ನೂ, ಅವುಗಳ ಪುರೋಭಿವೃದ್ಧಿಗಾಗಿ ಇಲ್ಲಿ ಒದಗುವ ಪದಾರ್ಥಸಂಪತ್ತನ್ನೂ ಕೂಡ ಬಹುಮಟ್ಟಿಗೂ ಸರಿಯಾಗಿ ತಿಳಿಯಲಾಗುವದೆಂದು ಉದ್ದೇಶಿಸಿದೆ. ಸಭಿಕರಿರಾ, ನೀವೆಲ್ಲರೂ ನಿಮ್ಮ ನಿಮ್ಮ ಪ್ರದೇಶಗಳಲ್ಲಿ ಜನರಿಗೆ ಈ ಪ್ರದರ್ಶನದ ಉದ್ದೇಶಗಳನ್ನು ತಿಳಿಯಪಡಿಸಿ, ಎಲ್ಲಾ ಜಾತಿಯ ಪ್ರದರ್ಶನ ವಸ್ತುಗಳನ್ನೂ ಒದಗಿಸಿಕೊಟ್ಟು, ಈ ಪ್ರದರ್ಶನವು ಮೈಸೂರು ದೇಶದ ಹೆಸರಿಗೆ ತಕ್ಕಹಾಗೆ, ಸಮರ್ಪಕವಾಗಿ ನಡೆಯುವಂತೆ ಮಾಡುವಿರೆಂದು ನಂಬುತ್ತೇನೆ.

ಅಬಕಾರಿ

ಹಿಂದಿನ ವರ್ಷ ೯೯೦ ಇದ್ದುದಕ್ಕೆ ಬದಲಾಗಿ ಗತ ವರ್ಷದಲ್ಲಿ ೯೭೩ ಚಿಲ್ಲರೆ ಸಾರಾಯಿ ಅಂಗಡಿಗಳಿದ್ದುವು. ಆದರೆ ಕುಡಿತವು ೩,೪೮,೦೮೭ ಗ್ಯಾಲನ್ನುಗಳಿಂದ ೩,೬೭,೧೦೬ ಗ್ಯಾಲನ್ನುಗಳಿಗೆ ಏರಿತು. ಈ ಹೆಚ್ಚು ಮುಖ್ಯವಾಗಿ ಕೋಲಾರ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಆಯಿತು. ಅಬಕಾರಿ ಹುಟ್ಟುವಳಿಯು ಹಿಂದಿನ ವರ್ಷದಲ್ಲಿ ಪ್ರಜೆಗಳಲ್ಲಿ ತಲೆ ಒಂದಕ್ಕೆ ೧೦ ಆಣೆ ೯ ಪೈ ಯಂತೆ ಇದ್ದದ್ದು ಗತವರ್ಷದಲ್ಲಿ ೧೧ ಆಣೆಯಂತೆ ಆಯಿತು.

ಜಂಗಲು

ಕಳೆದ ವರ್ಷ ೪೦.೬ ಚದರ ಮೈಲಿ ವಿಸ್ತಾರವುಳ್ಳ ಆರು ಭಾಗಗಳನ್ನು ಸೇರಿಸಿ ಸರ್ಕಾರಿ ಜಂಗಲಿನ ಪರಿಮಾಣವನ್ನು ಹೆಚ್ಚಿಸಲಾಯಿತು. ಮೈಸೂರು, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಉನ್ನತವಾದ ಜಂಗಲುಗಳಲ್ಲಿ ೧,೧೦೦ ಎಕರೆಯಷ್ಟು ಪ್ರದೇಶದಲ್ಲಿ ಗುಣಿಗಳನ್ನು ತೆಗಿಸಿ ಮುಖ್ಯವಾಗಿ ತೇಗದ ಸಸಿಗಳನ್ನು ನೆಡಿಸಲಾಯಿತು. ಮತ್ತು ಮೈದಾನ ಡಿಸ್ಟ್ರಿಕ್ಟುಗಳಲ್ಲಿ ಸಂಡಲ್ ಸಸಿಗಳಿಗೆ ನೆರಳಾಗುವದಕ್ಕೋಸ್ಕರ ಒಟ್ಟು ೫೯೬ ಎಕರೆ ಪ್ರದೇಶದಲ್ಲಿ ಒಳನಾಡು ಮರಗಳನ್ನು ನೆಡಿಸಲಾಯಿತು. ೧೧,೩೫೦ ಎಕರೆಯಷ್ಟು ಹೊಸದಾಗಿ ಪಡೆದ ಪ್ರದೇಶಗಳಲ್ಲಿಯೂ ಕುರುಚು ಕಾಡುಗಳಲ್ಲಿಯೂ ಕೂಡ ಹೊಡೆದು ಸಂಡಲ್ ಬೀಜಗಳನ್ನು ಬಿತ್ತುವದೇ ಮುಖ್ಯವಾದ ಪೈರು ನೆಡುವ ಕೆಲಸವನ್ನು ನಡಿಸಲಾಯಿತು. ಘಾಟು ಜಂಗಲುಗಳು ಇದುವರೆಗೆ ಕುಮ್ರಿ ಸಾಗುವಳಿಯವರಿಂದ ಏನು ಯೂರಿಂದಲೂ ಪರೀಕ್ಷಿತವಾಗದೆ ಕೆಲಸಕ್ಕೂ ಯಾವ ಉಪಯೋಗಕ್ಕೂ ಬಾರದೆ ಇದ್ದುವು. ಈಗ ಅವುಗಳ ರಕ್ಷೆಯನ್ನು ಕ್ರಮವಾಗಿ ಮಾಡಲಾರಂಭಿಸಿದೆ. ಶಿವಮೊಗ್ಗೆಯ [illegible]ವ ಉತ್ತರಭಾಗದಲ್ಲಿರುವ ಕೆಲವನ್ನು ವಿನಾ, ಉಳಿದ ಎಲ್ಲ[illegible]ವನ್ನೂ, ಅವುಗಳಲ್ಲಿ ಬೆಲೆಬಾಳುವ ಮರಗಳ ಉತ್ಪತ್ತಿಯೆಷ್ಟೆಂದು ತಿಳಿಯುವದಕ್ಕಾಗಿ ಪರೀಕ್ಷೆ ಮಾಡಲಾಯಿತು. ಈಗ ಬಲಿತು [illegible] ಕಡಿಯಲ್ಪಡಬಹುದಾದ ಬೆಲೆಬಾಳುವ ಮರಗಳನ್ನು ಇನ್ನು ಹದಿನೈದು ವರ್ಷಗಳೊಳಗಾಗಿ ಸಾಗಿಸುವದಕ್ಕೋಸ್ಕರ ಕೆಲಸ ಮಾಡುವದಾಗಿ ಉದ್ದೇಶಿಸಿದೆ.

ಮೈಸೂರು, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ತೇಗ ಮತ್ತು ಇತರ ಮರಗಳುಳ್ಳ ಕಾಡುಗಳನ್ನು ಪುನಃ ಅಭಿವೃದ್ಧಿಮಾಡುವದಕ್ಕಾಗಿ, ಅಲ್ಲಿ ದೊರಕುವ ಸಾಮಗ್ರಿಗಳನುಗುಣವಾಗಿ [illegible]ರಿಂದ ೧೦ ವರ್ಷಗಳೊಳಗಾಗಿ [illegible] ನೋಡ ಮಂಗಳನ್ನು [illegible]ಯುವ ವಿಚಾರವು ಮಾಡಿದೆ. ಗಂಧದ ಮರದ ಸ್ಪೈಕ್ ರೋಗವನ್ನು ತಡೆ [illegible] ಪ್ರಯತ್ನವನ್ನು ನಡಸುತ್ತಿತ್ತು. ಮುಖ್ಯವಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಬಾಧ್ಯತೆಗಳಿದ್ದ ೧೨,೫೦೦ ಮರಗಳನ್ನು ಬೇರುಸಹಿತ ಕಿತ್ತು ಹಾಕಲಾಯಿತು. ಇಷ್ಟು ಪ್ರಮಾಣದ ವಿಚಾರವು ಮಾಡಿದಾಗ್ಯೂ ರೋಗವು ಇನ್ನೂ ವೃದ್ಧಿಯಾಗುತ್ತಲೇ ಇದೆ. ಮೆ॥ ಹೆಚ್. ಜೆ. ಇಸ್ಮೇಲ್ ಸೇಠವರಿಗೆ ಚಿನ್ನದಗಣಿ ಬಳಿಯಾಗಿ ೧,೨೨,೦೯೬ ರೂ ಬೆಲೆ ಬಾಳುವ ಮರ[illegible] ಮಾರಲಾಯಿತು. ಈ ಮರಗಳು ಮುಖ್ಯವಾಗಿ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಬಹು ದೂರವಾಗಿಯೂ ಇದ್ದ ಉಪಯೋಗಿಸದೆಯೂ ಇದ್ದ ಕಾಡುಗಳಿಂದ ಸಂಗ್ರಹಿಸಲ್ಪಟ್ಟವು. ಕಳೆದ ತಿಂಗಳು ೨ ನೇ ಜಂಗಲ್ ವಿದ್ಯಾರ್ಥಿವೇತನವನ್ನು ಕೊಡಲಾಯಿತು. ಇಬ್ಬರು ವಿದ್ಯಾರ್ಥಿಗಳು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಜಂಗಲು ವಿದ್ಯೆಯನ್ನು ಅಭ್ಯಾಸಮಾಡಲು ಇಂಗ್ಲೆಂಡಿಗೆ ಹೋಗಿದ್ದಾರೆ, ಎರಡು ವರ್ಷಗಳ ತರುವಾಯ ಅವರು ಜರ್ಮನಿಗೆ ಹೋಗಿ ಒಂದು ವರ್ಷ ವ್ಯಾಸಂಗಮಾಡುವರು.

ಫಾರೆಸ್ಟ್ ರೇಂಜರುಗಳ ದರ್ಜೆಗಳ ಪುನರ್ವಿಭಾಗವು ಈಚೆಗೆ [illegible] ಮಾಡಲಾಯಿತು. ಈಗ್ಗೆ ಕೆಲವು ಕಾಲದಿಂದ ಈ ಇಲಾಖೆಗೆ ಹಿಂದೆ ಇದ್ದುದಕ್ಕಿಂತಲೂ ಯೋಗ್ಯರಾದ ಜನರು [illegible] ಸೇರುತ್ತಿದ್ದಾರೆ. ಇವರು ಒಳ್ಳೆರೀತಿಯಾಗಿ ಚೆನ್ನಾಗಿ ಕೆಲಸಮಾಡುವಂತೆ ಪ್ರೋತ್ಸಾಹಪಡಿಸುವದಕ್ಕಾಗಿ ಇವರ ಸ್ಥಿತಿ [illegible] ಪರಿಶೋಧನ ಮಾಡುವದು ಅವಶ್ಯಕವಾಯಿತು. [illegible] ದರ್ಜೆಗಳ [illegible] ಮೇಲು ದರ್ಜೆಗಳಲ್ಲಿ ಹಲವು ಜಾಗೆಗಳನ್ನು ಹೆಚ್ಚಿಸಿತು.

ಭೂಗರ್ಭಶೋಧನೆ

ಹಿಂದಿನ ವರ್ಷ ೧೩ ಇದ್ದದ್ದು ಕಳೆದ ವರ್ಷಾಂತ್ಯದಲ್ಲಿ ಗಣಿಗಳಲ್ಲಿ ಕೆಲಸ ನಡೆಯುತ್ತಿತ್ತು. ರೋಪ್‌ಬ್ಲಾಕ್ ನೈರ [illegible] ಗಣಿಗಳಲ್ಲಿ ಸ್ವಲ್ಪಕಾಲ ಕೆಲಸ ನಿಂತದ್ದೇ ಈ ಕಡಿಮೆಗೆ [illegible] ಕಾರಣ. [illegible] ಗಣಿಗಳಲ್ಲಿ ಲಾಭವನ್ನು ಹಂಚ [illegible] ಎಲ್ಲಾ ಗಣಿಗಳಲ್ಲಿಯೂ ಒಟ್ಟು ೩,೪೮,೬೭೬ ರೂ. ಬೆಲೆಯ [illegible] ಔನ್ಸಿನ ಚಿನ್ನದ ಗಟ್ಟಿಯು ಉತ್ಪತ್ತಿಯಾಯಿತು. ಹಿಂದಿನ ವರ್ಷದಲ್ಲಿ ೩,೪೭,[illegible] ರೂ ಬೆಲೆಯ [illegible] ಔನ್ಸ್ ಚಿನ್ನವು ಉತ್ಪತ್ತಿಯಾಗಿತ್ತು. ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಒಟ್ಟು ಜನರ ಸಂಖ್ಯೆಯು ಹಿಂದಿನ ವರ್ಷ [illegible] ಇದ್ದದ್ದು ಕಳೆದ ವರ್ಷ [illegible] ಆಯಿತು.

ಹಿಂದಿನ ವರ್ಷ ಚಿತ್ರದುರ್ಗ, ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಕಂಡು ಹಿಡಿದ ಶಿಲಾಶ್ರೇಣಿಯನ್ನು ಮೈಸೂರು ದೇಶದ [illegible] ಎಲ್ಲೆಯವರೆಗೂ ಗುರುತಿಸಲಾಯಿತು. ಅಲ್ಲದೆ ಕಾಡುಗಲ್—ನೆಲ್ಲಿರಸ್ತೆಯ ಪಶ್ಚಿಮಭಾಗದಲ್ಲಿ ಆ ಶಿಲಾಶ್ರೇಣಿಯ ದಕ್ಷಿಣ ಪ್ರದೇಶವನ್ನು ಕಂಡುಹಿಡಿಯಲಾಯಿತು. ಇದು ಸುಮಾರು ನೇರ[illegible]ವಷ್ಟು ಕಬ್ಬಿಣದೊಡನೆ ಮಿಶ್ರವಾದ ದೊಡ್ಡ ಶಿಲೆಗಳುಳ್ಳದ್ದಾಗಿ [illegible] ಘನವಾಗಿಯೂ ರೈಲುಮಾರ್ಗಕ್ಕೆ ೪೦ ಮೈಲಿಗಳಾಗಿ ಇರುವದರಿಂದ ಉಕ್ಕಿನ ಕೈಗಾರಿಕೆ ಏರ್ಪಾಡಿಗೆ ಅನುಕೂಲ ಸ್ಥಿತಿಯಲ್ಲಿರುವಂತೆ ತೋರುತ್ತದೆ. ಈ ಪ್ರದೇಶದಲ್ಲಿರುವ ಕ್ವಾರ್ಟ್ ಶಿಲೆಗಳಲ್ಲಿ ಚಿನ್ನವಿರುವಂತಿದೆ. ಈ ಹೊಸ ಶ್ರೇಣಿಯು ಕೋಲಾರದ ಶ್ರೇಣಿಗಳ ಶಿಲೆಗಳಂತೆಯೇ ಇವೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಮ್ಯಾಂಗನೀಸ್ ಲೋಹದ ಅದುರನ್ನು ಗುತ್ತಿಗೆಗೆ ಕೊಡಲಾಯಿತು. ಈ ಗುತ್ತಿಗೆದಾರರು ಆಗಲೇ ೫೦,೦೦೦ ಟನ್ನಷ್ಟು ಅದುರನ್ನು ಜಮಾಯಿಸಿದ್ದಾರೆ. ಇದನ್ನು ಸಾಗಿಸುವದಕ್ಕೆ ಬೇಕಾದ [illegible] ಕಾನೆಯಿಲ್ಲದೆ ಕಷ್ಟವಾಗಿರುವದರಿಂದ ಅವರು ಶಿವಮೊಗ್ಗ ಸ್ಟೇಷನ್ನಿಂದ ಈ ಗಣಿ ವರೆಗೆ ಎಂದರೆ ೧೮ ಮೈಲಿ ದೂರ [illegible] ಟ್ರಾಂ ರೈಲ್ವೆಯನ್ನು ಹಾಕಬೇಕೆಂದು ಯೋಚಿಸುತ್ತಿದ್ದಾರೆ. ಕಟ್ಟಡಕ್ಕೆ ಉಪಯೋಗವಾಗುವ ಕಲ್ಲುಗಳು, ಅಭ್ರಕ, [illegible]ಗದ ಕಲ್ಲು, ಹರಳುಗಲ್ಲು, ಇವುಗಳನ್ನು ಕಂಡು ಹಿಡಿಯುವ [illegible] ಈ ವೇಳೆ ಸ್ವಲ್ಪ ಸ್ವಲ್ಪವಾದ ಸಂಚಾರಗಳನ್ನು ಮಾಡಿ ಅವುಗಳ ಸ್ಥಳವನ್ನು ಗೊತ್ತು ಮಾಡಲಾಯಿತು.

ಮರಾಮತ್ತ್ ಕೆಲಸಗಳು.

ಒಟ್ಟು ೬೨,೧೧,೯೦೦ ರೂ. ಖರ್ಚಾಯಿತು. [illegible] ನೀರಾವರಿ ಕಾಂಗಾರಿಗೆ ೧೮ ಲಕ್ಷವೂ, ಸಿವಿಲ್‌ವರ್ಕ್ಸ್ ಯಾ [illegible]ಡಗಳಿಗೆ ೩೭ ಲಕ್ಷವೂ, ಕಾವೇರಿ ವೈದ್ಯುತಶಕ್ತಿಗೆ ೧೨ ಲ[ಕ್ಷವೂ] ಖರ್ಚಾಯಿತು. ಕೋಲಾರಡಿಸ್ಟ್ರಿಕ್ಟಿನಲ್ಲಿ ಈಗ ತ್ವರೆಯಾ[ಗಿ] ಕಾಂಗಾರಿ ನಡೆಯುತ್ತಿರುವ ರಾಮಸಾಗರಕೆರೆ ಶ್ರೇಣಿಯಲ್ಲಿ [illegible]ದಾದ ರಾಮಸಾಗರಕೆರೆಯೂ, ಇನ್ನು ಕೆಲವೂ ವಿನಾ, [illegible] ಹೋಗಿ ದುರಸ್ತಾಗುತ್ತಿದ್ದ ಕೆರೆಗಳ ಕಾಂಗಾರಿಯಲ್ಲಿ

...ಕಾರ್ಯಗಳು ಮುಗಿಯಿತು. ಮಾರಿಕಣಿವೆ ಕಾಂಗಾರಿ... ಮಾರಿಕಣಿವೆಯ ಮುಖ್ಯವಾದ ಕಟ್ಟೆಯ ಎತ್ತರವನ್ನು ... ಅಡಿಯಿಂದ ೧೩೦ ಅಡಿಗೆ ಹೆಚ್ಚಿಸಲಾಯಿತು. ಈಗ ... ೮೪ ಅಡಿ ಆಳ ನೀರಿದೆ. ಕತ್ರಿಗೇನಹಳ್ಳಿಯಲ್ಲಿರುವ ... ಸಂಬಂಧಪಟ್ಟ ಕಟ್ಟೆಯು ಕಾರ್ಯತಃ ಪೂರ್ತಿಯಾಗಿದೆ; ... ಅದರಿಂದ ಹೊರಡುವ ನಾಲೆ ಕಾಂಗಾರಿಯು ಚೆನ್ನಾಗಿ ನಡೆ... ಕಳೆದ ವರ್ಷ ಇದಕ್ಕಾಗಿ ೩,೨೬,೦೦೦ರೂ ಖರ್ಚಾಯಿತು. ...೦೦೦ ರೂ ಅಂದಾಜಿನ ಮೇರೆ ಕೃಷ್ಣರಾಜಪೇಟೆ ತಾಲೂಕು ...ಗಿರಿ ಅಣೆಕಟ್ಟನ್ನು ಪುನಃ ಕಟ್ಟುವ ಕಾಂಗಾರಿಯನ್ನು ಮುಂ... ಮಾಡಲಾಯಿತು. ಹಾಗೆಯೇ ಆ ಅಣೆಕಟ್ಟೆಯನ್ನು ಒಂದೇ ...ಗಾರಿ ಕಾಲದಲ್ಲಿ ಪೂರಾ ಎತ್ತರಕ್ಕೆ ಎತ್ತರಿಸಿ ಗತವರ್ಷದಲ್ಲಿ ...ಗುವರೆಗೆ ನೀರು ಕೊಡಲಾಯಿತು. ಈ ಕಾಂಗಾರಿಯನ್ನು ... ಗಳಿಯ ಮೇರೆ ಮಿತವಾದ ಖರ್ಚಿನಲ್ಲಿ ಮಾಡಿದ್ದರಿಂದ ...ಜಾದ ಮೊಬಲಗಿನಲ್ಲಿ ೩೯,೦೦೦ ರೂ ಮಿಕ್ಕಿತು. ಮೈಸೂರು ...ಡಿಸ್ಟ್ರಿಕ್ಟಿನಲ್ಲಿ ಚಿಕ್ಕದೇವರಾಯಸಾಗರದ ಅಣೆಕಟ್ಟನ್ನು ಪುನ... ಕಟ್ಟುವುದು ಕಾರ್ಯತಃ ಪೂರ್ತಿಯಾಯಿತು. ಗ್ರಾಮನಿವಾಸಕ್ಕೆ ...ದಾದ ಕಾಂಗಾರಿಗಳ ಪೈಕಿ ಕಳೆದ ವರ್ಷ ಸಹಗೂ ಸದೀಯ... ಒಂದಿಲ್ಲದಿದ್ದರೆ ಇನ್ನೊಂದನ್ನು ಕಟ್ಟಬೇಕೆಂದಿರುವ ಎರ... ಕಾಂಗಾರಿಗಳಿಗಾಗಿ ಸರ್ವೆಯನ್ನು ಮಾಡಿ ಮುಟ್ಟವನ್ನು ...ಲಾಯಿತು. ಆಗಲೆ ಅಂದಾಜು ಪೂರ್ತಿಯಾದ ನೂರು ...ಗಾರಿಗಳನ್ನು ಎಂದರೆ ಗೌರಿಬಿದನೂರು ತಾಲೂಕು ತಿಪ್ಪ... ...ಯಲ್ಲಿಯೂ, ಕುಣಿಗಲ್ ತಾಲೂಕು ನಿಡುಸಾಲೆಯಲ್ಲಿ ... ಹೊನ್ನಾಳಿ ತಾಲೂಕಿನಲ್ಲಿ ಸಾಲಂಗದಲ್ಲಿಯೂ ಒಟ್ಟು ...೯೩,೫೮೬ ರೂ ಮುಟ್ಟಬಹುದೆಂದು ಅಂದಾಜಾಗಿರುವ ಕೆರೆ ...ಗಾರಿಗಳನ್ನು — ಮಂಜೂರು ಮಾಡಲಾಯಿತು

ಸಣ್ಣ ಕೆರೆಗಳ ದುರಸ್ತು ಕಾಂಗಾರಿಗಾಗಿ ಈ ಕೆಳಗೆ ವಿವರಿಸು... ೧ ಲಕ್ಷ ರೂಪಾಯಿ ಕೊಡಲಾಯಿತು —

ಡಿಸ್ಟ್ರಿಕ್ಟು.	ಹಂಚಿಕೊಟ್ಟ ಮೊಬಲಗು.	ಖರ್ಚು.
ಕೋಲಾರ	೧೮,೦೦೦	೧೮,೦೦೪
ಹಾಸನ	೧೫,೦೦೦	೧೩,೨೫೯
ತುಮಕೂರು	೧೫,೫೦೦	೧೦,೪೭೯
ಮೈಸೂರು	೧೦,೦೦೦	೮,೦೬೮
ಚಿತ್ರದುರ್ಗ	೧೦,೦೦೦	೬,೫೫೦
ಬೆಂಗಳೂರು	೧೫,೦೦೦	೯,೨೯೪
ಕಡೂರು	೭,೦೦೦	೩,೪೯೭
ಶಿವಮೊಗ್ಗ	೧೦,೦೦೦	೩೬
ಮೊತ್ತ	೧,೦೦,೦೦೦	೬೪,೬೪೭

ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿಕಮಿಷನರ್ ಮೊ॥ ಪ್ರಟ್ಟ... ...ಯವರು ಜನಗಳ ಉತ್ಸಾಹವನ್ನು ಸುಲಭವಾಗಿ ನಡೆ... ಮಂಜೂರಾದ ಮೊಬಲಗನ್ನೆಲ್ಲಾ ಕೆಲಸದಲ್ಲಿ ವಿನಿಯೋ... ...ದರೆಂದು ಮೇಲಿನ ಪಟ್ಟಿಯಿಂದ ನಿಮಗೆ ವೇದ್ಯವಾಗಬಹುದು. ...ಗೆ ಆದದ್ದು ನಿಜವಾಗಿಯೂ ಬಹಳ ತೃಪ್ತಿಕರವಾಗಿಲ್ಲ. ಶಾಸನ ...ತ್ತುವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿಯೂ ಕೂಡ ನಡೆದ ಕೆಲ... ಪ್ರೋತ್ಸಾಹಕವಾಗಿದೆ ಎಂದು ಹೇಳಬಹುದು. ಬೆಂಗಳೂರು ...ದುರ್ಗ ಕಡೂರು ಡಿಸ್ಟ್ರಿಕ್ಟುಗಳಲ್ಲಿ ಇನ್ನೂ ಹೆಚ್ಚಾಗಿ ಕೆಲಸ ...ಸಲು ಅವಕಾಶವಿತ್ತು. ಆದರೆ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ...ಸಿದ ಕಾಂಗಾರಿಗಳು ಸುತರಾಂ ಅತೃಪ್ತಿಕರವಾಗಿವೆ. ಮೇಲ್ಕಂಡ ಮೊಬಲಗುಗಳನ್ನು ಈ ವರ್ಷವೂ ಪುನಃ ಮಂಜೂರು ಮಾಡಿದೆ. ಆದ ...ದ್ಯೋಗಸ್ಥರು, ಸಾಹುಕಾರರು, ನೀವು ಸರ್ವಸ್ವಾಯತ್ತ ಮಾಡಲೂ ಜನಗ... ...ಕ್ಷೇತ್ರದಲ್ಲಿಯೇ ಮುಂದೆ ಬರುವಂತೆ ಪ್ರೋತ್ಸಾಹಪಡಿಸಿ, ...ಯನ್ನು ಹಾರಾಜರವರು ನಯಪಾಲಿಸಿರುವ ಈ ರಿಯಾಯಿತಿಯ ...ರ್ಣ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಮಾಡುವರಿ... ...ಬಹುದಾಗಿ ನಂಬುತ್ತೇವೆ. ಕಳೆದ ಜನವರಿಯಿಂದ ಕೋಲಾರದ ...ಚಿನ್ನದ ಗಣಿಗೆ ಬೇತಮಂಗಲದ ಕೆರೆಯಿಂದ ನೀರು ಸರಬರಾಯಿ ...ಮಾಡಲಾರಂಭಿಸಿತು. ಇದುವರೆಗೂ ಕರಾರ್ ಮಾಡಿಕೊಂಡಿದ್ದರಲ್ಲಿ ...ರ್ಧಾಂಶ ಮಾತ್ರವೇ ಸರಬರಾಯಿ ಮಾಡುತ್ತಿತ್ತು. ಈ ತಿಂಗಳಿಂದ ಪೂರ್ಣ ಸರಬರಾಯಿ ಎಂದರೆ ರೋಜೀನಾ ೧೦ ಲಕ್ಷ ಗ್ಯಾಲನ್ ...ರನ್ನು ಕೊಡುತ್ತದೆ. ಬೆಂಗಳೂರಿನ ವೈದ್ಯುತ ದೀಪಸ್ಥಾಪನೆ ...ಏರ್ಪಾಡು ಪೂರ್ತಿಯಾಗಿ, ಕಳೆದ ಆಗಸ್ಟು ೩ ನೆಯ ತಾ ನಲ್ಲಿ ...ವ್ಯಾಪಾರ ಶೃಂಗಾರಿತ ಇಲಾಖೆಯ ಮೇಲ್ವಿಚಾರಣೆಕರ್ತರಾಗಿಯೂ ...ಸಾಯರವರ ಸಭೆಯ ಮೆಂಬರಾಗಿಯೂ ಇರುವ ಆನರೆಬಲ್ ಮೊ॥ ಪ್ಯಾಯಟ್ಟ್‌ರವರಿಂದ ಪ್ರಥಮ ಪ್ರತಿಷ್ಠೆಯು ನೆರವೇರಿಸಲ್ಪ...ತು. ಹಿಂದೂ ದೇಶದಲ್ಲಿ ವೈದ್ಯುತ ದೀಪದಿಂದ ಪ್ರಕಾಶಿಸುವ ...ಕ್ಕೆ ಬೆಂಗಳೂರೇ ಮೊದಲನೆಯದೆಂದು ಇವರು ಅಭಿಪ್ರಾಯಪ... ...ರು. ಇತರ ಶೃಂಗಾರಿಕೆಯವರೂ ಕೂಡ ತಮ್ಮ ಕೆಲಸಗಳಿಗೆ ವೈದ್ಯುತ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತಿರುವದು ಸಂತೋ... ...ಕರವಾಗಿದೆ. ಇವುಗಳ ಪೈಕಿ ಬೆಂಗಳೂರಲ್ಲಿರುವ ಹುಚಟ ಹತ್ತಿ ...ಮತ್ತು ರೇಷ್ಮೆ ಯಂತ್ರದ ಸಂಘದವರು; ಮತ್ತು ಕೋಲಾರದ ಚಿನ್ನದ ಗಣಿಯಲ್ಲಿರುವ ಮೊ॥ ಹಾಜಿ ಇಸ್ಮಾಯಿಲ್ ಸೇಟ್ರವರ ಮರ ಕೊಯ್ಯುವ ಯಂತ್ರ; ಇವುಗಳನ್ನು ಇಲ್ಲಿ ನಮೂದಿಸಬಹುದಾಗಿದೆ.

ರೈಲ್ವೆಗಳು.

ರೈಲ್ವೆ ಆದಾಯದ ನಿವ್ವಳ ಹುಟ್ಟುವಳಿ ೧೯೦೩—೪ ರಲ್ಲಿ ೯,೫೨,೬೯೫ ರೂ. ಇದ್ದದ್ದು, ಕಳೆದ ವರ್ಷ ೮,೦೭,೦೯೩ರೂ ಆಯಿತು. ಖರ್ಚುಜಾತಿ ನಿಂತ ನಿವ್ವಳ ಹುಟ್ಟುವಳಿಯನ್ನು ಮೂಲ ಧನದ ಮೇಲೆ ಹಂಚಿದರೆ ಕೆಳಗೆ ವಿವರಿಸುವ ಹಾಗೆ ಉತ್ಪತ್ತಿಯಾ... ...ಗುತ್ತದೆ

	೧೯೦೩—೪	೧೯೦೪—೫
ಮೈಸೂರು—ಹರಿಹರ	೩.೭೪	೩.೩೫
ಬೆಂಗಳೂರು—ಹಿಂದೂಪುರ	೪.೮೮	೫.೭೫
ಮೈಸೂರು—ನಂಜನಗೂಡು	೨.೨೧	೨.೧೪
ಬೀರೂರು—ಶಿವಮೊಗ್ಗ	೧.೦೦	೧.೦೩
ಚಿನ್ನದಗಣಿ ರೈಲ್ವೆ	೦.೯೬	೬.೩೯

ಎಲ್ಲಾ ರೈಲ್ವೆಗಳ ಬಂಡವಾಳದ ಮೇಲೆ ಆದ ನಿವ್ವಳ ಹುಟ್ಟುವಳಿಯು ಹಿಂದಿನ ವರ್ಷ ಸೇಕಡ ೩.೭೧ ರಂತೆ ಇದ್ದದ್ದು ಗತವರ್ಷದಲ್ಲಿ ೩.೪೯ ರಂತೆ ಆಯಿತು. ಬೆಂಗಳೂರು—ಚಿಕ್ಕಬಳ್ಳಾಪುರದ ಸಣ್ಣ ರೈಲ್ವೆಯನ್ನು ಹಾಕುವದಕ್ಕಾಗಿ ಕಂಪನಿಯವರು ಕಳುಹಿಸಿಕೊಟ್ಟ ತಪಶೀಲುವಾರು ನಕ್ಷೆಗಳೂ ಅಂದಾಜುಗಳೂ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಕೋಲಾರದ ಚಿನ್ನದ ಗಣಿಯಿಂದ ಮಾರ್ಗೋಪಾವಿಗೆ ಬ್ರಾಡ್‌ಗೇಜ್ ರೈಲುಮಾರ್ಗವನ್ನು ಹಾಕುವದಕ್ಕಾಗಿ ಸದರ್ನ್‌ಮರಾಟ ರೈಲ್ವೆ ಏಜೆಂಟರಿಂದ ಸಲಹೆಗಳು ಬಂದವು. ಸರ್ಕಾರದವರು ಅವುಗಳನ್ನು ಪರ್ಯಾಲೋಚಿಸಿ, ಅವಶ್ಯಕವಾದ ಸರ್ವೆಮೊದಲಾದದ್ದನ್ನು ಮಾಡುವಂತೆಯೂ ಕೋಲಾರದ ಚಿನ್ನದಗಣಿಯಿಂದ ಕೋಲಾರ ಮೇಡುಗಳು, ಬಂಗಾರಪೇಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ಈ ಮಾರ್ಗವಾಗಿ ದೊಡ್ಡಬೆಲೆ ಸ್ಟೇಷನ್‌ವರೆಗೆ ನಡೆಯುವ ಪ್ಯಾಸಾಶದ ಲೆಕ್ಕಗಳನ್ನು ಸೇರಿಸುವಂತೆಯೂ ಅಪ್ಪಣೆಕೊಟ್ಟರು. ರೈಲ್ವೆಗಳ ಬಿಡಾವಣೆಗಾಗಿ ಸರ್ಕಾರದ ಹುಟ್ಟುವಳಿಯಿಂದ ಸಾಲಿಯಾನ ಸ್ವಲ್ಪ ಹಣವನ್ನು ತೆಗೆದಿಡುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಮೈಸೂರು ನಗರಾಭಿವೃದ್ಧಿ

ಮೈಸೂರು ಟ್ರಸ್ಟ್ ಬೋರ್ಡಿನವರು ನಾನಾ ವಿಧವಾದ ಅಭಿವೃದ್ಧಿಯ ಕೆಲಸಗಳಿಗಾಗಿ ೪೧,೪೭೦ ರೂ ಖರ್ಚು ಮಾಡಿದರು. ಸರ್ಕಾರದ ನೌಕರರುಗಳಿಗೆ ಮನೆ ಕಟ್ಟುವದಕ್ಕೂ ಇತರ ವಿಧವಾಗಿ ಅಭಿವೃದ್ಧಿ ಮಾಡುವುದಕ್ಕೂ ಸಹಾಯವಾಗುವಂತೆ ಸಾಲ ಕೊಡುವದಕ್ಕಾಗಿ ಕೆಲವು ನಿಬಂಧನೆಗಳನ್ನು ಏರ್ಪಡಿಸಲಾಯಿತು. ಮುಂಗಡವಾಗಿ ಕೊಟ್ಟ ಹಣವನ್ನು, ಹರಮಾವಧಿ ೧೦ ವರ್ಷಗಳೊಳಗಾಗಿ ಮೂರು ತಿಂಗಳಿಗೊಂದಾವೃತ್ತಿ ಸುಲಭವಾದ ಕಿಸ್ತುಗಳ ಮೇಲೆ ವಸೂಲ್ಮಾಡುವಂತೆ ಈ ನಿಬಂಧನೆಗಳಲ್ಲಿ ಅವಕಾಶ ಕೊಟ್ಟಿದೆ ಈ ನಿಬಂಧನೆಗೆ ಒಳಪಟ್ಟು ಸಾಲ ಪಡೆದುಕೊಳ್ಳುವವರು ಖರೀದು ಕೊಡುವ ದಸ್ತಾವೇಜುಗಳ ಮೇಲಿನ ಸ್ಟ್ಯಾಂಪ್ ಡ್ಯೂಟಿಯನ್ನು ಮಾಫ್ ಮಾಡಿದೆ ರಿಜಿಸ್ಟ್ರೇಷನ್ ಫೀಯನ್ನೂ ಕೂಡ ಕಡಿಮೆಮಾಡಲಾಯಿತು ಈ ಮೇರೆ ಕಳೆದ ವರ್ಷ ದೊರೆಯು ೬,೧೮೦ ಸಾಲ ಕೊಡಲಾಯಿತು ಈ ನಿಬಂಧನೆಗಳಿಂದ ಉಂಟಾಗುವ ಅನುಕೂಲ್ಯಗಳು, ಈ ಪಟ್ಟಣದ ಉತ್ಪತ್ತಿಯಿಲ್ಲದ ಜನರು ಸಿಕ್ಕಾ ಬಿಟ್ಟಿ ಕೊಡದೆಯೂ ನಿರಂತರವಾಗಿ ಸಾಲಕ್ಕೆ ಸಿಕ್ಕಿಕೊಳ್ಳದೆಯೂ ತಮ್ಮ ಯೋಗ್ಯತೆಗೆ ತಕ್ಕ ಹಾಗೆ ಮನೆಗಳನ್ನು ಕಟ್ಟಿಕೊಳ್ಳಲು ಸಹಾಯ ಮಾಡುವವೆಂದು ನಿರೀಕ್ಷಿಸುತ್ತೇವೆ. ಮನೆ ಕಟ್ಟುವ ವಿಷಯವಾಗಿ ಕೆಲವು ಉಪನಿಬಂಧನೆಗಳನ್ನು ಕೂಡ ಮಂಜೂರುಮಾಡಲಾಯಿತು.

ಪೊಲೀಸ್.

ಹಿಂದಿನ ವರ್ಷ ಪೊಲೀಸಿನವರಿಗೆ ರಿಪೋರ್ಟಾಗಿದ್ದ ಮೊಕದ್ದಮೆಗಳ ಸಂಖ್ಯೆಯು ೫,೨೧೧ ಇದ್ದದ್ದು ಗತವರ್ಷದಲ್ಲಿ ೬,೬೦೦ ರಕ್ಕೆ ಏರಿತು. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಲವು ಡಕಾಯಿತಿಗಳು ನಡೆದವು; ಆದರೆ ಕೂಡಲೆ ಅವುಗಳನ್ನು ಅಡಗಿಸುವುದಕ್ಕೆ ತಕ್ಕ ಏರ್ಪಾಡು ಮಾಡಿದ್ದರಿಂದ ತಪ್ಪಿತವು ಕಡಿಮೆಯಾಗಿ ಹೋಗುವಂತೆ ಆಯಿತು ಸ್ಪೆಷಲ್ ರಿಸರ್ವ್ ಪೊಲೀಸಿನವರನ್ನು ಬೇರೆ ಬೇರೆ ಸ್ಥಳಗಳಲ್ಲಿ ಚದರಿಸಿ ಇಡುವದಕ್ಕೆ ಬದಲಾಗಿ ಅವರನ್ನೆಲ್ಲಾ ಬೆಂಗಳೂರಿನಲ್ಲಿ ಒಂದೇ ಕಡೆ ಇಡಲಾಯಿತು ಇವರ ಪೈಕಿ ಕೆಲವರನ್ನು ಕ್ಲಿಷ್ಟಕಾಲದಲ್ಲಿ ಮೈಸೂರು, ಕೋಲಾರ, ಮತ್ತು ಚಿನ್ನದ ಗಣಿಗಳಿಗೆ ಕಳುಹಿಸುವದಲ್ಲದೆ, ಆವಶ್ಯಕಬಿದ್ದಾಗ ಇತರ ಡಿಸ್ಟ್ರಿಕ್ಟುಗಳಿಗೆ ಸಹ ಕಳುಹಿಸಲಾಗುವದು ಮ್ಯಾಜಿಸ್ಟ್ರೇಟರುಗಳ ಮುಂದೆ ಮೊಕದ್ದಮೆಗಳನ್ನು ನಡಿಸುವದಕ್ಕೆ ಡಿಸ್ಟ್ರಿಕ್ಟಿಗೆ ಒಬ್ಬರ ಮೇರೆ ಎಂಟು ಮಂದಿ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡಲಾಯಿತು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪೊಲೀಸ್ ಸೈನ್ಯದ ತಿದ್ದುಪಾಟಿಗಾಗಿ ಒಂದು ಏರ್ಪಾಡನ್ನು ಈಚೆಗೆ ಮಂಜೂರುಮಾಡಲಾಯಿತು ಠಾಣೆ ಸ್ಥಳಗಳನ್ನು ಹೆಚ್ಚಿಸಿದ್ದೂ ಪೊಲೀಸಿನವರನ್ನು ಹಿಂದಿಗಿಂತಲೂ ಉತ್ತಮ ಕ್ರಮದಲ್ಲಿ ಹಂಚಿದ್ದೂ ಈ ಏರ್ಪಾಡಿನ ಮುಖ್ಯಾಂಶಗಳಾಗಿವೆ. ೨೦ ರೂಪಾಯಿಗಿಂತ ಕಮ್ಮಿ ಸಂಬಳವುಳ್ಳ ಯಾವ ಅಧೀನರನ್ನೂ ತನಿಖೆ ಸ್ಥಳದ ಭಾರ್ಜನಲ್ಲಿ ಡಕೊಡನೆಂದೂ ನಾರಂಟಿಲ್ಲದೆ ಹಿಡಿಯಬಹುದಾದ ಮೊಕದ್ದಮೆಗಳನ್ನು ತನಿಖೆ ಮಾಡುವ ಅಧಿಕಾರವನ್ನು ಅತನಿಗೆ ಕೊಡಕೂಡದೆಂದೂ ಹುಕುಂ ಮಾಡಲಾಯಿತು.

ರಿಜಿಸ್ಟ್ರೇಷನ್.

ರಿಜಿಸ್ಟರ್ ಮಾಡಲ್ಪಟ್ಟ ದಸ್ತಾವೇಜುಗಳ ಒಟ್ಟು ಸಂಖ್ಯೆಯು ಹಿಂದಿನ ವರ್ಷ ೫೬,೯೦೦ ಇದ್ದದ್ದು ಕಳೆದ ವರ್ಷ ೫೯,೯೮೯ ಕ್ಕೆ ಏರಿತು

ಕಳೆದ ವರ್ಷ ಸಬ್ ರಿಜಿಸ್ಟ್ರಾರುಗಳಿಗೆ ಲೋಕಲ್ಫಂಡ್ ಭಾಧ್ಯ, ಅಗ್ರಿಕಲ್ಚರಲ್ ಬ್ಯಾಂಕುಗಳು ಮತ್ತು ಜಾಯಿಂಟ್ ಸ್ಟಾಕ್ ಕಂಪನಿಗಳು ಇವುಗಳ ಅಪವಾಯಿತು, ಇವೇ ಮೊದಲಾದ ಕೆಲವು ಹೆಚ್ಚು ಕೆಲಸಗಳನ್ನು ವಹಿಸಲಾಯಿತು. ಅವರನ್ನು ಮ್ಯುನಿಸಿಪಲ್ ಮತ್ತು ತಾಲೂಕು ಬೋರ್ಡುಗಳಿಗೆ ಮೆಂಬರುಗಳಾಗಿಯೂ ಮೊದಲೂ ಮಾಡಿತು. ೩೦೦ ವಾಡಿಗೆ ಕಮ್ಮಿಯಾಗಿದ್ದ ದಸ್ತಾವೇಜುಗಳನ್ನು ರುಸುಂ ಇಲ್ಲದೆ ರಿಜಿಸ್ಟರ್ ಮಾಡುತ್ತಿದ್ದ ಪದ್ಧತಿಯನ್ನು ವಜಾಮಾಡಿ, ಏಕರೀತಿಯಾಗಿ ಹೊರು ಪಾತಿಗೆ ಎರಡಾಣೆಯ ಮೇರೆ ರುಸುಂ ವಸೂಲ್ಮಾಡುವಂತೆ ಹುಕುಂ ಮಾಡಲಾಯಿತು. ದಸ್ತಾವೇಜುಗಳನ್ನು ಇಟ್ಟುಕೊಳ್ಳುವದಕ್ಕಾಗಿ ನಿರಕಾಗಿದ್ದ ರುಸುಮನ್ನು ೧ ರೂಪಾಯಿಯಿಂದ ೮ ಆಣೆಗೆ ಇಳಿಸಿತು ಈ ತಿದ್ದುಪಾಟನ್ನು ಈ ಸಭೆಯ ಮೆಂಬರುಗಳ ಕೋರಿಕೆಯ ಮೇರೆ ಮಾಡಿದೆ.

ವಿದ್ಯಾಭ್ಯಾಸ.

ಸ್ಕೂಲಿಗೆ ಹೋಗತಕ್ಕ ವಯಸ್ಸಿನ ಹುಡುಗರ ಪೈಕಿ ಸ್ಕೂಲಿಗೆ ಹೋಗುತ್ತಿದ್ದವರ ಸಂಖ್ಯೆ ಸೇಕಡಾ ೨೧.೨೮ ರಿಂದ ೨೨.೬೮ ಕ್ಕೂ ಹುಡುಗಿಯರ ಸಂಖ್ಯೆಯು ೪.೦೫ ರಿಂದ ೪.೩೦ ಕ್ಕೂ ಹೆಚ್ಚಿತವು. ಎಲ್ಲಾ ವಿಧವಾದ ಪಾಠಶಾಲೆಗಳ ಸಂಖ್ಯೆಯೂ ಹೆಚ್ಚಿತು. ಈ ಅಭಿವೃದ್ಧಿಯನ್ನು ನೋಡಿದರೆ ೧೯೦೪ನೆಯ ಜನವರಿಯಿಂದ ಜಾರಿಗೆ ಬಂದ ಹೊಸ ದರದ ಸ್ಕೂಲ್ ಫೀಗಳಿಂದ ವಿದ್ಯಾಭ್ಯಾಸದ ಅಭಿವೃದ್ಧಿಗೆ ಯಾವ ವಿಧವಾದ ಕುಂದಕವೂ ಉಂಟಾಗಲಿಲ್ಲವೆಂಬು ತೋರುತ್ತದೆ. ಕಳೆದ ವರ್ಷದ ಜನವರಿ ತಿಂಗಳಿಂದ ಶಿವಮೊಗ್ಗೆಯ ಕಾಲೇಜನ್ನು ಹೈಸ್ಕೂಲ್ ದರ್ಜೆಗೆ ಇಳಿಸಲಾಯಿತು. ಎಫ್. ಎ. ತರಗತಿಗಳಲ್ಲಿ ಸ್ವಲ್ಪವೇ ವಿದ್ಯಾರ್ಥಿಗಳಿದ್ದರು. ಪ್ರಕೃತದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೆ ಶ್ರಮವಾಗುವ ಹಾಗಿದ್ದರೆ ಅದನ್ನು ನಿವಾರಣೆಮಾಡುವುದಕ್ಕೋಸ್ಕರ ಬಡ ವಿದ್ಯಾರ್ಥಿಗಳಿಗೆ ಬೆಂಗಳೂರಲ್ಲಾಗಲಿ ಮೈಸೂರಿನಲ್ಲಾಗಲಿ ಕೊಡುವಂತೆ ಸರ್ಕಾರದವರು ೧೦ ಡಿಸ್ಟ್ರಿಕ್ಟ್ ವಿದ್ಯಾರ್ಥಿ ವೇತನಗಳನ್ನು ಏರ್ಪಡಿಸಿದಾರೆ. ಮೂರು ಮಿಡಲ್ ಸ್ಕೂಲುಗಳಿಗೂ ಗ್ರಾಂಟು ಹೆಚ್ಚಿಸಲಾಯಿತು. ತುಮಕೂರ್ ಹೈಸ್ಕೂಲಿಗೆ ಸೇರಿದಂತೆ ಒಂದು ವಿದ್ಯಾರ್ಥಿ ನಿಲಯವನ್ನು ಕಟ್ಟುವುದಕ್ಕಾಗಿ ೧೪,೬೩೬ ರೂ. ಮಂಜೂರುಮಾಡಲಾಯಿತು. ಇದುವರೆಗೂ ಲೋವರ್ ಸೆಕಂಡರೀ ಸ್ಕೂಲಾಗಿದ್ದ ಮರಿಮಲ್ಲಪ್ಪನವರ ಸ್ಕೂಲನ್ನು ಹೈಸ್ಕೂಲಾಗಿ ಅಂಗೀಕರಿಸಿ ಗ್ರಾಂಟನ್ನು ಹೆಚ್ಚಿಸಲಾಯಿತು. ವಿತಂತುಗಳ ವಿದ್ಯಾಭ್ಯಾಸಕ್ಕೆ ಇದುವರೆಗೂ ದೇವರಾಜ ಬಹದೂರ್ ಫಂಡಿನ ವಿದ್ಯಾರ್ಥಿ ವೇತನಗಳೇ ಸಹಾಯವಾಗಿದ್ದವು. ಈಗ ಇದಕ್ಕೆ ಮತ್ತಷ್ಟು ಪ್ರೋತ್ಸಾಹವನ್ನುಂಟುಮಾಡಲು ಸರ್ಕಾರದವರು ಸಾಲೀಯಾನ ೨೭೩೬ ರೂಪಾಯಿ ಖರ್ಚಾಗುವ ೩೦ ವಿದ್ಯಾರ್ಥಿ ವೇತನಗಳನ್ನು ಮಂಜೂರುಮಾಡಿದಾರೆ. ಕಳೆದ ನವೆಂಬರ್ ಯಲ್ಲಿ ಬೆಂಗಳೂರಲ್ಲಿ ಪ್ರಥಮತಃ ಒಂದು ಜನರಲ್ ಎಜ್ಯುಕೇಷನ್ ಕಾನ್ಫರೆನ್ಸ್ ಎಂಬ ವಿದ್ಯಾಭಿಮಾನಿಗಳ ಸಭೆಯನ್ನು ನಡಿಸಲಾಯಿತು. ಈ ಸಭೆಯವರ ರಿಪೋರ್ಟು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಇನ್ಸ್‌ಪೆಕ್ಷನ್ ಇಲಾಖೆಯನ್ನು ಬಲಪಡಿಸಿ ಅಭಿವೃದ್ಧಿಪಡಿಸಬೇಕಾಗಿದ್ದ ಪ್ರಯುಕ್ತ ಎರಡು ಸರ್ಕಲ್ ಇನ್ಸ್‌ಪೆಕ್ಟರ್ ಕೆಲಸಗಳನ್ನೂ ೮ ಅಸಿಸ್ಟೆಂಟ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಕೆಲಸಗಳನ್ನೂ ಮಂಜೂರುಮಾಡಲಾಯಿತು. ಈ ಸಂಸ್ಥಾನದ ದೊಡ್ಡ ಮನೆತನಕ್ಕೆ ಸೇರಿದ ೮ ಮಂದಿ ಮಹಮ್ಮದೀಯ ವಿದ್ಯಾರ್ಥಿಗಳು, ಅಲಿಘರ್‌ನಲ್ಲಿರುವ ಮಹಮ್ಮದನ್ ಆಂಗ್ಲೋ ಓರಿಯಂಟಲ್ ಕಾಲೇಜಿನಲ್ಲಿ ಹೈಸ್ಕೂಲ್ ಅಥವಾ ಕಾಲೇಜು ಪಾಠಗಳನ್ನು ವ್ಯಾಸಂಗ ಮಾಡುವುದಕ್ಕಾಗಿ ಅವರಿಗಾಗಿಯೇ ವಿಶೇಷವಾಗಿ ಉದಾರವಾದ ವಿದ್ಯಾರ್ಥಿ ವೇತನಗಳನ್ನು ಕೊಡಲಾಯಿತು. ದಾಮೋದರದಾಸ್ ಧರ್ಮದ ಮೂಲಧನದಿಂದ ವರ್ಷಕ್ಕೆ ಸುಮಾರು ೨೦,೦೦೦ ರೂಪಾಯಿ ಹುಟ್ಟುವಳಿಯಾಗುತ್ತದೆ ಈ ಪೈಕಿ ಐದನೇ ಒಂದು ಭಾಗವನ್ನು ಗುಜರಾತಿ ಹುಡುಗರಿಗೆ ವಿದ್ಯಾರ್ಥಿವೇತನವಾಗಿ ಕೊಡುವ ವಿಷಯವು ಈ ವರ್ಷ ಆಲೋಚಿಸಲ್ಪಟ್ಟಿತು. ಇದಕ್ಕಾಗಿ ಅಹಮ್ಮದಾಬಾದಿನಲ್ಲಿರುವ ವೈಶ್ಯ ಸಭೆಯನ್ನೂ ಬೊಂಬಾಯಿಯಲ್ಲಿರುವ ಆನರೆಬಲ್ ಜೆ. ಪರೇಖ್‌ರವರನ್ನೂ ಮತ್ತು ಈಗ ಬರೋಡೆಯಲ್ಲಿ ಛೀಫ್ ಜಂಡ್ಜಿಯಾಗಿರುವ ರಾಜಭೂಷಣ ಮೊ॥ ಸಿ ಟಿ ದಲಾಲರವರನ್ನೂ ಕೇಳಿ ಅವರ ಅಭಿಪ್ರಾಯಾನುಸಾರವಾಗಿ ೧೦ ರಿಂದ ೨೦ ರೂ ವರೆಗೆ ೧೧ ವೇತನಗಳನ್ನು ಸಾಲಿಯಾನ ಕೊಡುವಂತೆ ಕಳೆದ ಮೇ ತಿಂಗಳಲ್ಲಿ ನಿಬಂಧನೆಗಳನ್ನು ಪ್ರಕಟಿಸಲಾಯಿತು. ಈ ಪೈಕಿ ಬೊಂಬಾಯಿ ವಿಶ್ವವಿದ್ಯಾ ಪರೀಕ್ಷೆಗಳಿಗಾಗಿ ವ್ಯಾಸಂಗಮಾಡುವವರಿಗೆ ೯ ವಿದ್ಯಾರ್ಥಿ ವೇತನಗಳನ್ನೂ ಇಂಜನಿಯರಿಂಗಾಗಲಿ ವ್ಯವಸಾಯಕ್ಕಾಗಲಿ ಓದುವ ವಿದ್ಯಾರ್ಥಿಗೂ ವೈದ್ಯವನ್ನು ಕಲಿಯುವ ವಿದ್ಯಾರ್ಥಿಗೂ ಒಂದೊಂದು ವಿದ್ಯಾರ್ಥಿ ವೇತನವನ್ನು ಕೊಡುವಂತೆ ಏರ್ಪಡಿಸಿದೆ. ಈ ಧನದಿಂದ ಬರುವ ಬಾಕಿ ಐದನೇ ನಾಲ್ಕು ಭಾಗ ವರಮಾನದಿಂದ ಪೋಸ್ಟ್ ಗ್ರಾಡ್ಯುಯೇಟ್ ಸ್ಕಾಲರ್‌ಷಿಪ್ ಎಂದರೆ ಬಿ ಎ ಪರೀಕ್ಷೆ ಕೊಟ್ಟವರು ಮುಂದೆ ವ್ಯಾಸಂಗ ಮಾಡುವುದಕ್ಕಾಗಿ ವಿದ್ಯಾರ್ಥಿ ವೇತನವನ್ನು ಕೊಡುವ ವಿಷಯವಾದ ನಿಬಂಧನೆಗಳು ಸರ್ಕಾರದವರ ಪುನರ್ವಿಮರ್ಶೆಯಲ್ಲಿವೆ. ಮದರಾಸ್ ವಿಶ್ವವಿದ್ಯಾ ಪರೀಕ್ಷೆಯಲ್ಲಿ ಪ್ರಖ್ಯಾತಿ ಹೊಂದಿದ ಎನ್. ಸುಬ್ಬರಾವ್, ಬಿ ಎ. ಎಂಬ ಒಬ್ಬ ಮೈಸೂರು ದೇಶದ ವಿದ್ಯಾರ್ಥಿಯು ಇಂಗ್ಲೆಂಡಿಗೆ ಹೋಗಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಹಿಸ್ಟರಿ ಎಂಡ್ ಎಕನಾಮಿಕ್ ಟ್ರೈಪಾಸ್ ಎಂಬ ಘನಪರೀಕ್ಷೆಗೆ ವ್ಯಾಸಂಗಮಾಡುವುದಕ್ಕಾಗಿ, ವರ್ಷ ಒಂದಕ್ಕೆ ೨೩೧ ಪೌನುಗಳ ಮೇರೆ ಮೂರು ವರ್ಷ ಕಾಲ ವಿದ್ಯಾರ್ಥಿ ವೇತನ ಕೊಡುವದಾಗಿ ಹುಕುಂ ಮಾಡಲಾಯಿತು. ಅಲ್ಲದೆ ಎಡಿಂಬರೊ ವಿಶ್ವವಿದ್ಯಾಲಯದಲ್ಲಿ ಎಂ. ಬಿ. ಮತ್ತು ಸಿ. ಎಂ ಎಂಬ ಪರೀಕ್ಷೆಗೆ ಓದುವದಕ್ಕಾಗಿ ಮೈಸೂರು ಇಂಜನಿಯರಿಂಗ್ ಇಲಾಖೆಯ ಮೆ॥ ವಿ. ಎಚ್. ಕವಿರ್‌ರವರ ಮಗನಾದ ಜೆ. ವಿ. ಕವಿರ್ ಎಂಬ ವಿದ್ಯಾರ್ಥಿಗೆ ವರ್ಷಕ್ಕೆ ೧೦೦ ಪೌನುಗಳ ಮೇರೆ ಮೂರು ವರ್ಷಕಾಲ ವಿದ್ಯಾರ್ಥಿವೇತನ ಕೊಡುವದಾಗಿ ಮಂಜೂರಾತಿದೆ ಸೂಕ್ಷ್ಮದರ್ಶಕದಿಂದ ಮಾಡುವ ಪರೀಕ್ಷಾ ಕಾರ್ಯದಲ್ಲಿ ನಮ್ಮವರಿಗೆ ಸಹಾಯ ಬೇಕಾಗಿ ತಿಳಿದು ಬಂದಿರುವದರಿಂದ, ಈ ವಿದ್ಯಾರ್ಥಿಯು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುವಾಗ ಸೂಕ್ಷ್ಮದರ್ಶಕದಿಂದ ಮಾಡುವ ಪರೀಕ್ಷಾ ಕಾರ್ಯಗಳಿಗೆ ವಿಶೇಷವಾಗಿ ಅವಧಾನವನ್ನು ಕೊಡಬೇಕೆಂದು ಕೇಳಿದೆ.

ಈ ಸಂದರ್ಭದಲ್ಲಿಯೇ, ತಾತಾ ಯವರ ವಿದ್ಯಾಲಯವು ಷಿಪ್ರದಲ್ಲಿಯೇ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಡುವ ಶುಭಸಮಾಚಾರವನ್ನು ಕೇಳಿ ನೀವೆಲ್ಲರೂ ಸಂತೋಷಪಡುವಿರಿ ಎಂದು ಕೋರುತ್ತೇವೆ. ಈ ವಿದ್ಯಾಲಯದಿಂದ ಉಂಟಾಗಬಹುದಾದ ವಿಶೇಷ ಪ್ರಯೋಜನಗಳನ್ನು ಪರ್ಯಾಲೋಚಿಸಿ, ಶ್ರೀಮನ್ಮಹಾರಾಜರವರು ಸಾಲಿಯಾನ ಕೊಡುವುದಾಗಿ ವಾಗ್ದಾನ ಮಾಡಿದ್ದ ೩೦,೧೦೦ ರೂಪಾಯನ್ನು ೫೦,೦೦೦ ರೂಪಾಯಿಗೆ ಹೆಚ್ಚಿಸುವಂತೆ ಅಪ್ಪಣೆ ದಯಪಾಲಿಸಿರುತ್ತಾರೆ.

ಮುಜರಾಯಿ

ಸತ್ರ ದೇವಾಲಯಗಳ ಮೇಲ್ವಿಚಾರಣೆಗಾಗಿ ೧೫ ಸ್ಥಳೀಯ ಕಮಿಟಿಯ ಸಭೆಗಳನ್ನು ಏರ್ಪಡಿಸಿತು ೮ ಆಲಯಗಳ ಖರ್ಚಿನ ಪಟ್ಟಿಯನ್ನು ತಿದ್ದುಪಾಟು ಮಾಡಿ, ಈ ಕಾಲದ ಸಂದರ್ಭಗಳಿಗೆ ಸರಿಯಾಗಿ ನಿರ್ಣಯಿಸಲಾಯಿತು ೧೪೭ ಆಲಯಗಳಲ್ಲಿ ೮೯,೦೦೦ ರೂಪಾಯಿಗೆ ಮಿಕ್ಕಿ ಖರ್ಚಾಗುವ ರಿಪೇರಿ ಕಾಮಗಾರಿಗಳನ್ನು ಮಂಜೂರ್ ಮಾಡಿತು. ದಕ್ಷಿಣ ಹಿಂದುಸ್ಥಾನದಲ್ಲಿ ದೊಡ್ಡ ಯಾತ್ರಾಸ್ಥಳವಾದ ಉಡುಪಿಯ ಮಾರ್ಗದಲ್ಲಿರುವ ಆಗುಂಬೆಯಲ್ಲಿ ಒಂದು ಅನ್ನಸತ್ರವನ್ನು ಪುನಃ ಕಟ್ಟಲು ೧೦,೦೦೦ ರೂ ಮಂಜೂರ್ ಮಾಡಲಾಯಿತು. ಎರಡು ಆಲಯಗಳ ಪರವಾಗಿ ಹೊಸತಾಗಿ ನಗದು ಟಸ್ತೀಕನ್ನು ಮಾಡಿಕೊಡಲಾಯಿತು. ಪಾಳುಬಿದ್ದಿದ್ದ ೫ ಆಲಯಗಳ ವಾಪಸು ತೆಗೆದುಕೊಂಡಿದ್ದ ಅಥವಾ ಜಪ್ತಿಮಾಡಿದ್ದ ಇನಾಂ ಜಮೀನುಗಳನ್ನು, ಆ ಆಲಯಗಳಿಗೆ ಪುನಃ ಕೊಡಲಾಯಿತು. ತಿರುಪತಿಯಲ್ಲಿ ನಡೆಯುವ ಶ್ರೀಮನ್ಮಹಾರಾಜರವರ ಧರ್ಮಸತ್ರದ ಖರ್ಚಿನ ಬಾಬನ್ನು ಅಭಿವೃದ್ಧಿಪಡಿಸಿತು ಸತ್ರಗಳಿಗೂ, ಹಿಂದಿನ ಮೈಸೂರು ಮಹಾರಾಜರುಗಳಿಂದ ದೇವಸ್ಥಾನಕ್ಕೆ ಕೊಡಲ್ಪಟ್ಟಿದ್ದ ಭಾರಿ ಸಾಮಾನುಗಳಿಗೂ, ಸಧ್ಯ ಆಗಬೇಕಾಗಿದ್ದ ದುರಸ್ತಿಗೆ ಹುಕುಂ ಮಾಡಲಾಯಿತು. ಅಲ್ಲದೆ ಬ್ರಾಹ್ಮಣೇತರರಾದ ಯಾತ್ರಿಕರ ಸ್ಥಳವಸತಿಗಾಗಿ ಬೇಕಾಗಿದ್ದ ಹೆಚ್ಚು ಕಟ್ಟಡಗಳನ್ನು ಕಟ್ಟುವದಕ್ಕೂ ಹುಕುಂ ಮಾಡಲಾಯಿತು ಮೈಸೂರಿನಲ್ಲಿ ಪ್ರಮುಖರಾದ ಕೆಲ ದೊಡ್ಡ ಮನುಷ್ಯರ ವಿಚಾರಣೆಯಲ್ಲಿರುವ ಅನಾಥಾಲಯಕ್ಕೆ ಮಾಹೆಯಾನಾ ೫೦ ರೂಪಾಯಿ ಗ್ರಾಂಟನ್ನು ಮಂಜೂರ್ ಮಾಡಲಾಯಿತು

ವೈದ್ಯ ಮತ್ತು ಆರೋಗ್ಯ.

ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಯು ಹಿಂದಿನವರ್ಷ ೧೧,೩೧,೨೫೦ ಇದ್ದದ್ದು ಗತವರ್ಷ ೧೧,೬೭,೬೧೦ ಆಯಿತು, ಎಂದರೆ ೩೬,೩೬೦ ಮಂದಿ ಹೆಚ್ಚು ರೋಗಿಗಳು ಚಿಕಿತ್ಸೆ ಹೊಂದಿದರು. ಕೆಲಸಮಾಡುತ್ತಿದ್ದ ಸೂಲಗಿತ್ತಿಯರ ಸಂಖ್ಯೆಯು ಹಿಂದಿನ ವರ್ಷ ೯೩ ಇದ್ದದ್ದು ಗತವರ್ಷ ೧೦೫ ಆಯಿತು. ಈ ಸಂಸ್ಥಾನದಲ್ಲಿ ಸಿಡುಬು ಹಾಕಿಸಿಕೊಂಡವರ ಒಟ್ಟು ಸಂಖ್ಯೆಯು ಹಿಂದಿನ ವರ್ಷ ೫೭,೩೭೬ ಇದ್ದದ್ದು ಗತವರ್ಷದಲ್ಲಿ ೬೧,೩೯೩ಕ್ಕೆ ಏರಿತು. ಒಟ್ಟು ಜನಸಂಖ್ಯೆಯು ೪,೪೯೧ ರಷ್ಟು ಕಡಿಮೆಯಾಯಿತು. ಒಟ್ಟು ಮರಣಸಂಖ್ಯೆಯು ತೃಪ್ತಿಕರವಾಗಿ ಎಂದರೆ ೧೧,೮೯೩ ರಷ್ಟು ಕಡಿಮೆಯಾಯಿತು. ಕಾಲರಾದಿಂದ ೪೪೫ ಮರಣಗಳೂ, ಸಿಡುಬಿನಿಂದ ೨,೧೭೦ ಮರಣಗಳೂ ಹೆಚ್ಚಾದಾಗ್ಯೂ ಜ್ವರದಿಂದ ಆಗುವ ಮರಣಸಂಖ್ಯೆಯಲ್ಲಿ ೭,೮೯೭ ರಷ್ಟು ಭಾರಿ ಸಂಖ್ಯೆಯು ಕಡಿಮೆಯಾಯಿತು ಪ್ಲೇಗು ತಗಲಿದವರ ಸಂಖ್ಯೆಯು ೨೭,೮೫೧ ರಿಂದ ೨೪,೩೭೫ಕ್ಕೂ ಪ್ಲೇಗಿನಿಂದ ಸತ್ತವರ ಸಂಖ್ಯೆಯು ೧೯,೯೨೨ ರಿಂದ ೧೭,೫೦೩ಕ್ಕೂ ಇಳಿದವು ವಿಶೇಷವಾದ ಆರೋಗ್ಯಾಭಿವೃದ್ಧಿಯ ಸಿಬ್ಬಂದಿಯನ್ನು ಮಂಜೂರ್ ಮಾಡುವಂತೆ ಹುಕುಂ ಮಾಡಲಾಯಿತು ಬೆಂಗಳೂರು ಮತ್ತು ಮೈಸೂರು ಮ್ಯುನಿಸಿಪಾಲಿಟಿಗಳಲ್ಲಿ ನಾಲ್ಕೈದು ಸ್ಯಾನಿಟರಿ ಇನ್ಸ್‌ಪೆಕ್ಟರುಗಳೂ ಅವರಮೇಲೆ ಒಬ್ಬ ಛೀಫ್ ಇನ್ಸ್‌ಪೆಕ್ಟರೂ ಇರಬೇಕೆಂದು ವಿಧಾಯಕವಾಗಿದೆ ಇತರ ಮ್ಯುನಿಸಿಪಲ್ ನಗರಗಳಲ್ಲಿ ಪ್ರಜಾಸಂಖ್ಯೆಯು ೫,೦೦೦ಕ್ಕೆ ಹೆಚ್ಚಾಗಿದ್ದರೆ ಒಬ್ಬ ಸ್ಯಾನಿಟರಿ ಮತ್ತು ಒಬ್ಬ ಅಸಿಸ್ಟೆಂಟು ಸ್ಯಾನಿಟರಿ ಇನ್ಸ್‌ಪೆಕ್ಟರೂ ಇರಬೇಕು ಕಮ್ಮಿಯಾಗಿದ್ದಲ್ಲಿ ಒಬ್ಬ ಸ್ಯಾನಿಟರಿ ಅಥವಾ ಅಸಿಸ್ಟೆಂಟ್ ಸ್ಯಾನಿಟರಿ ಇನ್ಸ್‌ಪೆಕ್ಟರಿರಬೇಕು ಮದರಾಸಿನಲ್ಲಿರುವ ಕಿಂಗ್ಸ್ ಇನ್ಸ್‌ಟಿಟ್ಯೂಟ್ ಎಂಬ ವಿದ್ಯಾಲಯದಲ್ಲಿ ಆಗಲೇ ಕೆಲ ವಿದ್ಯಾರ್ಥಿಗಳು ತಯಾರಾಗುತ್ತಿದ್ದಾರೆ.

ಉಪಸಂಹಾರ.

ಈ ಉಪನ್ಯಾಸವನ್ನು ಮುಗಿಸುವುದಕ್ಕೆ ಮುಂಚೆ ಶ್ರೀಮಂತರಾದ ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನಿಯವರೂ ಶ್ರೀಮನ್ಮಹಾರಾಜರವರ ಆಹ್ವಾನವನ್ನು ಅನುಗ್ರಹ ಪುರಸ್ಸರವಾಗಿ ಅಂಗೀಕರಿಸಿ, ಈ ಸಂಸ್ಥಾನವನ್ನು ತಮ್ಮಗಳ ಆಗಮನದಿಂದ ಗೌರವಪಡಿಸುವುದಾಗಿ ಅಪ್ಪಣೆ ದಯಪಾಲಿಸಿರುವ ಶುಭಸಮಾಚಾರವನ್ನು ನಿಮಗೆ ತಿಳಿಸಬೇಕೆಂಬುದಾಗಿ ಶ್ರೀಮನ್ಮಹಾರಾಜರವರು ಆಜ್ಞಾಪಿಸಿರುತ್ತಾರೆ. ಬ್ರಿಟಿಷ್ ಸಂಸ್ಥಾನದ ಯುವರಾಜರವರನ್ನೂ ಅವರ ರಾಣಿಯವರನ್ನೂ ಬರಮಾಡಿಕೊಳ್ಳುವ ಮಹಾಭಾಗ್ಯವೂ ಸಂತೋಷಾತಿಶಯವೂ ಮೈಸೂರು ಸಂಸ್ಥಾನಕ್ಕೆ ಈಗಲೇ ಪ್ರಥಮತಃ ಲಭಿಸಿದೆ ಆ ಮಹನೀಯರುಗಳು ಬರುವ ಜನವರಿ ತಿಂಗಳ ಕೊನೆಯಲ್ಲಿ ಇಲ್ಲಿಗೆ ಸವಾರಿ ಚಿತ್ತೈಸಿ, ಇಲ್ಲಿ ಸುಮಾರು ಹತ್ತು ದಿವಸಗಳ ಕಾಲ ಇರುವುದಾಗಿ ನಿರೀಕ್ಷಿಸುತ್ತೇವೆ. ಶ್ರೀಮತ್ ಚಕ್ರವರ್ತಿಯವರು ಈ ದೇಶಕ್ಕೆ ಯುವರಾಜರವರ ಆಗಮನವನ್ನು ಅನುಗ್ರಹಪೂರಸ್ಸರವಾಗಿ ದಯಪಾಲಿಸಿ, ಈ ಸಂಸ್ಥಾನದಲ್ಲಿಯೂ ಇಲ್ಲಿಯ ಪ್ರಜೆಗಳಲ್ಲಿಯೂ ತಮಗಿರುವ ಕೃಪಾತಿಶಯಕ್ಕೆ ವಿಶೇಷವಾದ ನಿದರ್ಶನವನ್ನು ತೋರಿಸಿರುವರು ಈ ಅನುಗ್ರಹಾತಿಶಯಕ್ಕಾಗಿ ನಾವು ಎಷ್ಟು ಕೃತಜ್ಞರಾಗಿದ್ದರೂ ತೀರದು ಸಭಿಕರಿರಾ, ಬ್ರಿಟಿಷ್ ಸಿಂಹಾಸನವು ಈ ಚಕ್ರಾಧಿಪತ್ಯದ ಐಕಮತ್ಯಕ್ಕೂ ಪುರೋಭಿವೃದ್ಧಿಗೂ ಒಂದು ಚಿಹ್ನವಾಗಿದೆಯೆಂಬ ವಿಷಯವು ನಿಮಗೆ ಗೊತ್ತೇ ಇದೆ ಮೈಸೂರು ಸಂಸ್ಥಾನವು ಈ ಮಹನೀಯರುಗಳನ್ನು ಬರಮಾಡಿಕೊಳ್ಳುವುದರಲ್ಲಿ ಯಾರಿಗೂ ಅದ್ವಿತೀಯವಾಗದಿರುವಂತೆಯೇ ಶ್ರೀಮತ್ ಚಕ್ರವರ್ತಿಗಳಲ್ಲಿ ಅಕೃತ್ರಿಮವಾಗಿಯೂ ವಿಶೇಷವಾಗಿಯೂ ಇರುವ ರಾಜಭಕ್ತಿಯನ್ನು ಪ್ರಕಟಿಸುವುದರಲ್ಲಿಯೂ ಅಗ್ರಗಾಮಿಯಾಗಿರುವದೆಂದು ಶ್ರೀಮನ್ಮಹಾರಾಜರವರು ನಂಬಿದ್ದಾರೆ

ಏ ಆರ್ ಕೃಷ್ಣಮೂರ್ತಿ,
ಮೈಸೂರು ಸಂಸ್ಥಾನದ ದಿವಾನರವರು.

ಮೈಸೂರು ಪ್ರಜಾಪ್ರತಿನಿಧಿ ಸಮಾಜದಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

ಮೊದಲನೆಯದಿನ.

ಮುಜರಾಯಿ ವಿಷಯಗಳು

ಮೈಸೂರು ಪಟ್ಟಣದ ಮ॥ ಎಂ ವೆಂಕಟಕೃಷ್ಣಯ್ಯನವರೂ ಮ॥ ಎ ಅಣ್ಣಯ್ಯಪಂಡಿತರೂ ದಿವಾನರವರಿಗೆ ಅರಿಕೆ ಮಾಡಿದ್ದೇನೆಂದರೆ—ಈ ಸಂಸ್ಥಾನದಲ್ಲಿರುವ ಮಠಗಳಿಗೆ ಲೇಟ್ ಮಹಾರಾಜಾ ಕೃಷ್ಣರಾಜ ಒಡೆಯರವರು ಇನಾಮತಿಗಳನ್ನೂ ಜಹಗೀರಿಗಳನ್ನೂ ಬಿಟ್ಟುಕೊಟ್ಟಿರುತ್ತಾರೆ, ಮತ್ತು ಭಾರಿಯಾದ ಸುವರ್ಣಾದಾಯವೂ ಇರುವುದು ಆದರೆ ಈ ಮಠಗಳಲ್ಲಿ ಮೇಲ್ವಿಚಾರಣೆ ಸಮರ್ಪಕವಾಗಿಲ್ಲದಕಾರಣ ಜಹಗೀರಿಗಳಲ್ಲೂ ಇನಾಮತಿಗಳಲ್ಲೂ ಬಾಕಿ ಬಹಳವಾಗಿ ನಿಂತಿರುತ್ತವೆ ಇದಲ್ಲದೆ ಹುಟ್ಟುವಳಿಯನ್ನು ಸತ್ಕಾರ್ಯಗಳಿಗೆ ವಿನಿಯೋಗಮಾಡುವುದಿಲ್ಲ, ಅನ್ಯಾಯವಾಗಿ ನಾನಾ ರೀತಿಯಲ್ಲಿ ದುರ್ವ್ಯಯವಾಗುತ್ತಿದೆ ಮಠಾಧಿಪತಿಗಳು ಜಹಗೀರಿ ಇನಾಮತಿಗಳ ಕಾರುಬಾರುಗಳನ್ನು ನೋಡಿಕೊಳ್ಳುವದಕ್ಕೆ ಸಮರ್ಥರಾಗಿಲ್ಲ. ಆಯಾ ಮಠದ ಶಿಷ್ಯಮಂಡಲಿಯಲ್ಲಿ ಪ್ರಮುಖರಾದ ಐದು ಮಂದಿಯನ್ನು ಚುನಾಯಿಸಿ, ಇವರು ಮಠದ ಆಡಳಿತಗಳನ್ನು ನೋಡಿಕೊಳ್ಳುವಂತೆಯೂ, ಮಠಾಧಿಕಾರಿಗಳು ಸರ್ವದಾ ವೈದಿಕ ಮಾರ್ಗದಲ್ಲೇ ಆಸಕ್ತರಾಗಿದ್ದುಕೊಂಡು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಮಾಡುವಂತೆಯೂ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕು, ಉದ್ದೇಶಪಟ್ಟ ಧರ್ಮಕಾರ್ಯಗಳು ನಡೆಯದೆ ಇರುವ ಸಂದರ್ಭಗಳಲ್ಲಿ ಅಂಥಾ ಜಹಗೀರಿ ಇನಾಮತಿಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕು ಮತ್ತು ರವಿನ್ಯೂ ಅಧಿಕಾರಿಗಳು ಜಮಾಬಂದಿ ಮುಂತಾದ್ದಕ್ಕೆ ಸಕೀಟು ಹೋದಾಗ ಸತ್ರ ದೇವಸ್ಥಾನಗಳ ಕಾರುಬಾರುಗಳನ್ನು ತನಿಖೆಮಾಡಿ, ಉದ್ದೇಶಪಟ್ಟ ಧರ್ಮ ಕೆಲಸಗಳು ಅವುಗಳಲ್ಲಿ ಯಥಾರ್ಥವಾಗಿ ನಡೆಯುವವೋ ಎಂದು ಗವರ್ನಮೆಂಟಿಗೆ ರಿಪೋರ್ಟು ಮಾಡುವಂತೆ ಹುಕುಂ ಕೊಡಬೇಕು.

ದಿವಾನರವರು ಈ ವಿಷಯಗಳನ್ನೆಲ್ಲಾ ಗುರುತು ಹಾಕಿಕೊಂಡು, ಸಾಧ್ಯವಾಗುವ ಪಟ್ಟಿಗೆ ಸಂಗತ್ಯನುಸಾರ ವಿಚಾರಮಾಡಿಸುತ್ತೇವೆಂದು ಅಪ್ಪಣೆ ಕೊಟ್ಟರು

ಪರಿಹರದ ಮ॥ ಶ್ರೀನಿವಾಸರಾಯರು—ಮುಜರಾಯಿ ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರಗಳೂ ನಿತ್ಯ ಕಟ್ಲೆ ಹೆಚ್ಚುಕಟ್ಲೆ ಅಭಿಷೇಕ ಉತ್ಸವಾದಿಗಳೂ ನಡೆಯುವಂತೆ ತಸ್ತೀಕು ಗೊತ್ತುಮಾಡಿ ಅನೇಕ ವರ್ಷಗಳಾಗಿವೆ. ಆದರಂತೆ ಉತ್ಸವಾದಿಗಳನ್ನು ನಡಸಲು ಹಣ ಸಾಕಾಗುವದಿಲ್ಲ ಆದ್ದರಿಂದ ಈ ತಸ್ತೀಕು ಪಟ್ಟಿಗಳನ್ನು ಈಗಿನ ಧಾರಣೆವಾಸಿಗಳಿಗೆ ತಕ್ಕಂತೆ ಹೆಚ್ಚು ಮಾಡುವುದು ಅಗತ್ಯವಾಗಿದೆ ಎಂದು ಅರಿಕೆ ಮಾಡಿದರು.

ದಿವಾನರವರು—ಇದಕ್ಕೆ ಹಣ ಬೇಕಾಗುತ್ತೆ ಸಿಕ್ಕಿದರೆ ಮಾಡಬಹುದು ಸಧ್ಯದಲ್ಲಿ ತಸ್ತೀಕು ಹೆಚ್ಚಿಸುವುದಕ್ಕಾಗುವುದಿಲ್ಲ ಎಂದು ಉತ್ತರ ಕೊಟ್ಟರು.

ತುರುವೇಕೆರೆ ಮ॥ ಕೃಷ್ಣಯ್ಯಂಗಾರ್ರು—ಅನೇಕ ಸ್ಥಳಗಳಲ್ಲಿ ಜನಗಳು ದೇವಸ್ಥಾನಗಳ ಒತ್ತಿನಲ್ಲಿ ಮನೆಗಳನ್ನು ಕಟ್ಟಿಕೊಂಡು, ಪ್ರದಕ್ಷಿಣೆಗೆ ಅವಕಾಶವಿಲ್ಲದಂತೆ ಮಾಡಿದಾರೆ. ಮತ್ತು ಅವುಗಳ ಹತ್ತರ ಕೊಳಕುಮಾಡಿ ಕೆಡಿಸುತ್ತಾರೆ ಆದ್ದರಿಂದ ದೇವಸ್ಥಾನಗಳ ಸುತ್ತಲೂ ಸ್ವಲ್ಪ ಮೈದಾನವಿರುವಂತೆ ಬಿಡಿಸಿ, ಸುತ್ತಲೂ ಪೌಳಿಗೋಡೆ ಹಾಕಿಸಿಕೊಡಬೇಕೆಂದು ಕೇಳಿಕೊಂಡರು

ದಿವಾನರವರು—ಅನಾದಿಯಿಂದ ಕಟ್ಟಿಕೊಂಡಿರುವ ಮನೆಗಳನ್ನು ಕೀಳುವುದಕ್ಕಾದೀತೇ? ಭಕ್ತಾದಿಗಳು ಆ ಜನರಿಗೆ ವಿವೇಕ ಹೇಳಿಯೋ ಇಲ್ಲವೇ ಚಂದಾ ಹಾಕಿ ಆ ಮನೆಗಳನ್ನು ಕೊಂಡುಕೊಂಡೋ ಸುತ್ತಲೂ ಮೈದಾನವನ್ನು ಬಿಡಿಸಬಹುದು ಆದರೆ ಆ ಬಳಿ ಜೇನಿಗೆ ಮೊದಲಾದ್ದನ್ನು ತೆಗೆಯುವ ವಿಷಯದಲ್ಲಿ ಸ್ಥಳೀಯ ಅಧಿಕಾರಿಗಳಿಗೆ ತಿಳಿಸಿದರೆ ಅವರು ಸರಿಪಡಿಸುತ್ತಾರೆ ಎಂದು ಉತ್ತರ ಕೊಟ್ಟರು.

ಬಾಗೇಪಲ್ಲಿ ಮ॥ ವೆಂಕಟಪ್ಪನವರು—ಮುಜರಾಯಿ ಸತ್ರ ದೇವಸ್ಥಾನಗಳ ಇನಾಮತಿಗಳನ್ನೂ ಸುವರ್ಣಾದಾಯವನ್ನೂ ವಸೂಲುಮಾಡಿಕೊಂಡು, ಆಯಾ ಕಡೆ ನಡೆಯಬೇಕಾಗಿರುವ ಧರ್ಮಕಾರ್ಯಗಳನ್ನೂ ಉತ್ಸವಾದಿಗಳನ್ನೂ ಕ್ರಮವಾಗಿ ಜರುಗಿಸುವದಕ್ಕೋಸ್ಕರ ಪ್ರತಿ ತಾಲ್ಲೋಕಿಗೂ ಒಂದು ಮುಜರಾಯಿ ಕಮಿಟಿಮಾಡಬೇಕು ಒಂದು ದೇವಸ್ಥಾನದ ಹುಟ್ಟುವಳಿಯನ್ನು ಇನ್ನೊಂದು ದೇವಸ್ಥಾನದ ಖರ್ಚಿಗಾಗಲಿ ಇನ್ಯಾವ ಇತರ ಬಾಬುಗಳಿಗಾಗಲಿ ವಿನಿಯೋಗಿಸಕೂಡದು. ಯಾವ ದೇವಸ್ಥಾನದಲ್ಲಾದರೂ ಖರ್ಚಿಗಿಂತ ಹುಟ್ಟುವಳಿ ಜಾಸ್ತಿಯಾಗಿದ್ದಲ್ಲಿ ಅಂಥಾ ಹೆಚ್ಚು ಹಣದಿಂದ ಪಾಠಶಾಲೆಗಳನ್ನಿಡಿಸಿ, ವೇದ ಉಪನಿಷತ್ತು ಶಾಸ್ತ್ರಾದಿಗನ್ನು ಕಲಿಸುವಂತೆ ಏರ್ಪಾಡು ಮಾಡಬೇಕೆಂದು ಸೂಚಿಸಿದರು

ದಿವಾನರವರು—ಸಾಧ್ಯವಾದ ಮಟ್ಟಿಗೆ ಹಾಗೇ ಮಾಡುತ್ತಾ ಇದೇವೆ. ಮೇಲುಕೋಟೆ, ಚಾಮರಾಜನಗರ, ಕಳಸ ಮುಂತಾದ ಸ್ಥಳಗಳಲ್ಲಿ ಅಂಥಾ ಪಾಠಶಾಲೆಗಳನ್ನು ಇಡಿಸಿದೇವೆ. ಆದರೂ ಈ ವಿಷಯವನ್ನು ಮುಜರಾಯಿ ಸೆಕ್ರೆಟರಿಯವರಿಗೆ ತಿಳಿಸುವೆವು.

ಕುಣಿಗಲ್ಲಿ ಮ॥ ಪುಟ್ಟೇಗೌಡರು—ಈಗಿರುವ ಹುಕುಂನ್ಪ್ರಕಾರ ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರವನ್ನು ಆಗಿಂದಾಗ್ಗೆ ಸರ್ಕಾರಕ್ಕೆ ಪ್ರಾರ್ಥಿಸಿದಾಗ, ದೇವಸ್ಥಾನಗಳ ಖರ್ಚಿಗೆ ಹಣ ಬೇಕಾದರೆ ಮೊದಲೇ ತಿಳಿಸಿ ಗೌವರ್ನಮೆಂಟಿನಿಂದ ಸ್ಯಾಂಕ್ಷನ್ ಪಡೆಯಬೇಕಾಗಿದೆ ಹೀಗೆ ಸ್ಯಾಂಕ್ಷನ್ ಆಗಿ ಬರುವುದಕ್ಕೆ ನಿಧಾನವಾಗುತ್ತೆ. ಧರ್ಮದರ್ಶಿಗಳೇ ಹುಟ್ಟುವಳಿಯನ್ನು ದೇವಸ್ಥಾನದ ಹೆಸರಿನಲ್ಲಿ ಹಣವನ್ನು ಲೇವಾದೇವಿಗೆ ಉಪಯೋಗಿಸುವಂತೆ ಅವರಿಗೆ ಅಧಿಕಾರ ಕೊಡಬೇಕು ಇಲ್ಲವಾದರೆ ಕೆಲವು ವೊಬಲಗಿನವರೆಗಾದರೂ ಅಮಲ್ದಾರರು ಸ್ಯಾಂಕ್ಷನ್ ಮಾಡುವಂತೆ ಅವರಿಗೆ ಅಧಿಕಾರ ಕೊಡಬೇಕು ಎಂದು ಕೇಳಿಕೊಂಡರು.

ದಿವಾನರವರು—ಈ ರೀತಿ ಹುಕುಂ ಇರುವುದೂ ಇದರಿಂದ ಸ್ವಲ್ಪ ಮಟ್ಟಿಗೆ ತೊಂದರೆಯಾಗುವುದೂ ನಿಜವೆಂದು ತೋರುತ್ತೆ. ಅಮಲ್ದಾರರಿಗೆ ಸ್ವಲ್ಪ ಹಣ ಖರ್ಚುಮಾಡುವಂತೆ ಅಧಿಕಾರ ಕೊಡುವ ಭಾಗದಲ್ಲಿ ಯೋಚಿಸುತ್ತೇವೆ ಎಂದು ಅಪ್ಪಣೆ ಕೊಡಿಸಿದರು.

ಯಡತೊರೆ ಮ॥ ಬಳ್ಳೆ ಚಿಕ್ಕಬಸವಣ್ಣನವರು—ಯಡತೊರೆ ದಾಸಶೆಟ್ಟರು ಅನ್ನ ಸತ್ರಕ್ಕಾಗಿ ಜಮೀನ್ ಬಿಟ್ಟಿದಾರೆ. ಇಂಥಾ ಧರ್ಮಕ್ಕೆ ಬಿಟ್ಟ ಜಮೀನಿಗೆ ೩೦ ವರಹಾ ರಿಮಿಷನ್ ಮಾಡೋಣವಾಗಿದೆ. ಇದು ಸಾಲದು ೬೦ ವರಹಾ ರಿಮಿಷನ್ ಕೊಡಬೇಕು ಎಂದು ಕೇಳಿಕೊಂಡರು

ದಿವಾನರವರು—ನೀವು ಈ ವಿಷಯವನ್ನು ಹೇಳಿ ಧರ್ಮಕ್ಕೆ ಯಾಕೆ ಬಂದಿರೋ ಹ್ಯಾಗೆ? ಅವರು ಗವರ್ನಮೆಂಟಿಗೆ ಅರ್ಜಿ ಬರೆದು ಕೊಳ್ಳಲಿ

ಮೇಲುಕೋಟೆ ಮ॥ ವರಹಾಸ್ವಾಮ್ಯಯ್ಯಂಗಾರ್ರು—ಸತ್ರ ಮತ್ತು ದೇವಸ್ಥಾನಗಳ ನೌಕರಮಾಡೆಯರಲ್ಲಿ ವಿದ್ವಾಂಸರನ್ನು ಚುನಾಯಿಸಿ, ಅವರು ಆಯಾ ಸ್ಥಳಗಳ ಪ್ರಜೆಗಳಿಗೆ ಸದ್ಗುಣ, ಸದಾಚಾರ, ಸದ್ಭಕ್ತಿ, ರಾಜವಾತ್ಸಲ್ಯ, ಈ ಮೊದಲಾದವುಗಳನ್ನು ಕುರಿತು ಆಗಾಗ್ಗೆ ಉಪನ್ಯಾಸ ಮಾಡುವಂತೆ ಅಪ್ಪಣೆಯಾಗಬೇಕು ಎಂದು ಸೂಚಿಸಿದರು

ದಿವಾನರವರು—ಮುಜರಾಯಿ ಇಲಾಖೆಯನ್ನು ಮಾಡಿದೇವೆ ಈ ವಿಷಯಗಳನ್ನೆಲ್ಲಾ ಅವರು ಗಮನಕೊಟ್ಟು ನೋಡುತ್ತಾರೆ.

ಮ॥ ಅಂ ಅಣ್ಣಯ್ಯಪಂಡಿತರು—ನಂಜನಗೂಡಿನಿಂದ ಕಲ್ಲೇಗಾಲಕ್ಕೆ ಹೋಗುತ್ತಿರುವ ಪ್ರಯಾಣಿಕರಿಗೆ ಮಧ್ಯರಾಷ್ಟ್ರವಾದ ಉಮ್ಮತ್ತೂರಿನಲ್ಲಿ ಅನ್ನಸತ್ರವನ್ನು ಇಡಿಸಬೇಕು ಚಾಮರಾಜನಗರದ ಶಿವಕೂಟದಲ್ಲಿ ಬ್ರಾಹ್ಮಣರಿಗೆ ಸತ್ರವನ್ನಿಡಬೇಕು. ಇತರ ಜಾತಿಯವರಿಗೆ ಅಕ್ಕಿ ಬೇಳೆ ಕೊಡಿಸಬೇಕು ಎಂದು ತಿಳಿಸಿದರು.

ದಿವಾನರವರು—ಡೆಪ್ಯುಟಿ ಕಮೀಷನರನ್ನು ವಿಚಾರಿಸಿ ಈ ರೀತಿ ಮಾಡಬಹುದೆಂದು ಹುಕುಂಕೊಡುತ್ತೇವೆ

ಚಾಮರಾಜನಗರದ ಮ॥ ಶಾಮೈಯಂಗಾರ್ರು—ಹರದನಹಳ್ಳಿ ಗೋಪಾಲಕೃಷ್ಣ ಸ್ವಾಮಿಯ ಮತ್ತು ದಿವ್ಯಲಿಂಗೇಶ್ವರಸ್ವಾಮಿಯ ದೇವಸ್ಥಾನಗಳು ಬಹು ಪುರಾತನವಾಗಿರುತ್ತವೆ. ಇವುಗಳ ತಸ್ತೀಕನ್ನು ಹೆಚ್ಚಿಸಬೇಕು ಎಂದು ಕೇಳಿಕೊಂಡರು

ದಿವಾನರವರು—ಈ ವಿಷಯವನ್ನು ಗವರ್ನಮೆಂಟಿನವರು ಚರ್ಚೆ ಮಾಡುತ್ತಿದಾರೆ. ವಿಚಾರ ಮಾಡುತ್ತೇವೆ.

ಶ್ರೀರಂಗಪಟ್ಟಣದ ಮ॥ ತಿಮ್ಮಣ್ಣಯ್ಯನವರು—ಅಂಕೆರೆ ಗ್ರಾಮದಲ್ಲಿರುವ ಶಿವದೇವಸ್ಥಾನವೂ ವಿಷ್ಣು ದೇವಸ್ಥಾನವೂ ಬಹಳ ಶಿಥಿಲವಾಗಿವೆ. ತಿರುಗಾಡುವವರಿಗೆ ಅದರಿಂದ ಕೆಡಕಾದೀತಾದ್ದರಿಂದ ಸರ್ಕಾರದವರು ಅವೆರಡನ್ನೂ ದುರಸ್ತುಮಾಡಿಸಿ ಕೊಡಬೇಕು. ಗ್ರಾಮಸ್ಥರೂ ಅಲ್ಪ ಸ್ವಲ್ಪ ದ್ರವ್ಯಸಹಾಯ ಮಾಡುವುದಕ್ಕೆ ಸಿದ್ಧರಾಗಿದಾರೆ ಎಂದು ಸೂಚಿಸಿದರು.

ದಿವಾನರವರು—ಶಾನುಗಾರಿಗೆ ಬೇಕಾಗುವ ಹಣದಲ್ಲಿ ಅರವಾತಿಯನ್ನು ಗ್ರಾಮಸ್ಥರು ಕೊಡಿಸಿ ಡೆಪ್ಯುಟಿ ಕಮೀಷನರಿಗೆ ಅರ್ಜಿ ಬರೆಯಲಿ. ಯೋಚಿಸುತ್ತೇವೆ.

ಹುಣಸೂರು ಮ॥ ಸುಬ್ಬರಾಯರು—ಬೆಟ್ಟದ ಪುರದ ಗುಡ್ಡದ ಮೇಲಣ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಕಾಮಗಾರಿ ವಿಷಯದಲ್ಲಿ ೧೯೦೩ ರಲ್ಲಿ ಕೇಳಿಕೊಂಡಿದ್ದೆವು. ಅರ್ಚಕ ಕಾವಲುಗಾರರಿಗೆ ಇರುವುದಕ್ಕೆ ಸ್ಥಳವಿಲ್ಲ. ದೇವಸ್ಥಾನ ಸೋರುತ್ತಿದೆ ಅದನ್ನೆಲ್ಲಾ ದುರಸ್ತುಮಾಡಿಸಿಕೊಡಬೇಕು

ದಿವಾನರವರು—ಡೆಪ್ಯುಟಿ ಕಮೀಷನರಿಗೆ ಬರೆದು ಕೇಳಿಕೊಳ್ಳಿ

ಬನ್ನೂರು ಹನುಮಂತೇಶ್ವರ ದೇವಸ್ಥಾನವು ಪ್ರಖ್ಯಾತವಾದ ಪುರಾತನ ದೇವಸ್ಥಾನ. ಅದಕ್ಕೆ ಅನೇಕ ಇನಾಮತಿ ಗ್ರಾಮಗಳುಂಟೆಂದು ಶಿಲಾ ಶಾಸನಗಳಿಂದ ಗೊತ್ತಾಗುತ್ತೆ. ಈಗ ನೋಡಿದರೆ ತಿಂಗಳಿಗೆ ರೂ ೧—೩—೨ ಪೈ ಪಡಿತರ ವಿನಹಾ ಇನ್ನೇನೂ ವರಮಾನವಿಲ್ಲ. ಕೈಂಕರ್ಯಗಳನ್ನೆಲ್ಲಾ ಭಕ್ತಾದಿಗಳೇ ಮಾಡುತ್ತಾರೆ ಶಿಥಿಲವಾಗಿರುವ ಈ ದೇವಸ್ಥಾನವನ್ನು ದುರಸ್ತು ಮಾಡಿಸಿ, ತಸ್ತೀಕನ್ನು ಹೆಚ್ಚಿಸಿಕೊಡಬೇಕೆಂದು ಅಲ್ಲಿನ ಮ॥ ಶ್ರೀನಿವಾಸ್ಯಯನವರು ಕೇಳಿಕೊಂಡದ್ದಕ್ಕೆ ದಿವಾನರವರು—ಡೆಪ್ಯುಟಿ ಕಮೀಷನರಿಗೆ ಬರೆದು ಕೇಳಿಕೊಳ್ಳಿ ಎಂದು ಅಪ್ಪಣೆಕೊಡಿಸಿದರು.

ತಲಕಾಡು ದೇವಸ್ಥಾನಗಳಿಗೆ ತಸ್ತೀಕು ಹೆಚ್ಚಿಸಿಕೊಡಬೇಕೆಂದೂ ರಿಪೇರಿ ಮಾಡಿಸಿಕೊಡಬೇಕೆಂದೂ ಅಲ್ಲಿನ ಮ॥ ಶಿವಬಸವದೇವರು ಸೂಚಿಸಿದ್ದಕ್ಕೆ ದಿವಾನರವರು—ತಲಕಾಡಿಗಾಗಿ ಸರ್ಕಾರದವರು ಬಹಳ ಹಣ ಖರ್ಚುಮಾಡಿದಾರೆಂತಲೂ ಅವರ ಪ್ರಾರ್ಥನೆಯನ್ನು ನಡಸಲಾಗುವುದಿಲ್ಲವೆಂತಲೂ ಉತ್ತರ ಕೊಟ್ಟರು.

ತಲಕಾಡಿನ ಮಧ್ವರಾಯ ಸ್ವಾಮಿ ದೇವಸ್ಥಾನವು ಬಿದ್ದುಹೋಗುವಂತಿರುವದರಿಂದ ಅದನ್ನು ಕಿತ್ತು ಬೇರೆ ದೇವಸ್ಥಾನ ಕಟ್ಟಿಸಿಕೊಡಬೇಕೆಂದು ಅದೇ ಮೆಂಬರು ಸೂಚಿಸಿದರು ರಿಪೇರಿ ಮಾಡಿಸುವುದಕ್ಕೆ ಮೆಂಬರುಗಳೂ ಇನಾಮತಿಯನ್ನನುಭವಿಸುವ ಪೂಜಾರಿಯೂ ಭಕ್ತಾದಿಗಳಿಂದ ಹಣ ಕೊಡಿಸುವುದಾಗಿ ಮೊದಲು ಒಪ್ಪಿಕೊಂಡು ಹೋಗಿ ಕೆಲವು ಕಾಲದ ಮೇಲೆ ಯಾರೂ ಹಣ ಕೊಡುವುದಿಲ್ಲವೆಂತಲೂ ಸರ್ಕಾರದವರೇ ಮಾಡಿಸಿಕೊಡಬೇಕೆಂತಲೂ ಒಪ್ಪಿ

...ಯಾದಾಗಿ ಮುಜರಾಯಿ ಸೆಕ್ರೆಟರಿ ಯವರು ತಿಳಿಸಿದ್ದರ ... ದಿವಾನರವರು—ಇದು ಆಗಲಾರದೆಂದು ಅಪ್ಪಣೆ ಕೊಡಿಸಿದರು.

...ಉಳ್ಳಲಗೆರೆಗಳಲ್ಲಿರುವ ಕೊನ್ನಾದೇವಿ, ವೀರಭದ್ರಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಗಳ ಒಡವೆ ಮುಂತಾದ್ದನ್ನು ಸರ್ಕಾರದವರು ಹರಾಜು ಹಾಕಿಸಿ ೩೦,೪೪೯ ಚಿಲ್ಲರೆ ರೂಪಾಯನ್ನು ಮುಜರಾಯಿ ಫಂಡಿಗೆ ಸೇರಿಸಿಕೊಂಡರು. ಈ ದೇವಸ್ಥಾನಗಳ ನೌಕರ ಮಾನ್ಯರ ಸಂಬಳವನ್ನು ಬಿಡಿ ಮಾಡಿ ಕೊಡಬೇಕೆಂದು ೧೦—೧೨ ವರ್ಷಗಳಿಂದಲೂ ಈ ಸಭೆಯಲ್ಲಿ ಕೇಳುತ್ತಿದ್ದೇವೆ. ಈಗಲಾದರೂ ಹುಕುಂ ಆಗಬೇಕೆಂದು ಅದೇ ಮೆಂಬರು ಸೂಚಿಸಿದ್ದಕ್ಕೆ ದಿವಾನರವರು—ಒಳ್ಳೇದು, ವಿಚಾರಿಸುತ್ತೇವೆಂದು ಉತ್ತರ ದಯಪಾಲಿಸಿದರು.

ದೊಡ್ಡಬಳ್ಳಾಪುರದ ರೈಲ್ವೆ ಸ್ಟೇಷನಲ್ಲಿ ಪ್ರಯಾಣಿಕರಿಗೋಸ್ಕರ ಅನ್ನಸತ್ರವನ್ನು ಇರಿಸಿಕೊಡಬೇಕೆಂಬ ಪ್ರಾರ್ಥನೆಗೆ ದಿವಾನರವರು—ಅದು ಅವಶ್ಯವಿಲ್ಲವೆಂದು ಅಪ್ಪಣೆ ಕೊಟ್ಟರು

ಪರಸ್ಥಳಗಳಿಂದ ರಾಜಧಾನಿಗೆ ಬಂದು ಸಂಸ್ಕೃತ ವಿದ್ಯೆ ಕಲಿಯುತ್ತಿರುವ ಬಡ ವಿದ್ಯಾರ್ಥಿಗಳಿಗೆ ಅಲ್ಲಿ ಭೋಜನಕ್ಕೆ ತುಂಬಾ ಅನಾನುಕೂಲವಾಗಿರುವುದರಿಂದ ಅಂಥಾ ವಿದ್ಯಾರ್ಥಿಗಳಿಗೆಲ್ಲಾ ಸತ್ರ ನಡೆಯುವಂತೆ ಏರ್ಪಾಡು ಮಾಡಿಕೊಡಬೇಕೆಂದು ಕೆಲವು ಮೆಂಬರುಗಳು ಕೇಳಿಕೊಂಡದ್ದಕ್ಕೆ ದಿವಾನರವರು—ಆಗಲಿ, ವಿಚಾರಿಸುತ್ತೇವೆಂದು ಹುಕುಂ ಕೊಟ್ಟರು.

ಮೆ॥ ಲಕ್ಷ್ಮೀನಾರಣಪ್ಪನವರು—ಜೆಗ್ಗದೇವನಕೋಟೆ ಬೆಟ್ಟದ ಮಲ್ಲದೇವಮ್ಮನಗುಡಿ ಅರ್ಚಕನಿಗೂ ಕಾವಲುಗಾರನಿಗೂ ಸಂಬಳ ಕೊಡಬೇಕೆಂತಲೂ ಅಲ್ಲಿನ ಛಾವಡಿಯನ್ನು ಜನರು ಉಪಯೋಗಿಸಿಕೊಳ್ಳುವದಕ್ಕೆ ಅನುಕೂಲವಾಗುವಂತೆ ದುರಸ್ತು ಮಾಡಿಸಿ ಕೊಡಬೇಕೆಂತಲೂ ಕೇಳಿಕೊಂಡರು.

ದಿವಾನರವರು—ಇದಕ್ಕೆ ಅಂದಾಜಾಪಟ್ಟಿ ತಯಾರಾಗಿ ಬಂದಿದೆ. ಈ ವಿಷಯವಾಗಿ ಚರ್ಚೆ ನಡೆಯುತ್ತಿದೆ. ಬೇಗ ಮಾಡಿಸುವಂತೆ ನೋಡಿಕೊಳ್ಳುತ್ತೇವೆಂದು ಅಪ್ಪಣೆ ಕೊಟ್ಟರು.

ಮೇಲ್ಕೋಟೆಯಲ್ಲಿ ಪರಸ್ಥಳದವರಿಗೆ ಭೋಜನನಡೆಯುವುದಕ್ಕೆ ... ಸತ್ರವನ್ನು ಹರಾಜುಹಾಕಿ, ಬೇರೆ ಸತ್ರ ಕಟ್ಟಿಸದೆ ಹಾಗೆ ಮಾಡಿರುವುದರಿಂದ ಅವರಿಗೆ ತುಂಬಾ ಅನಾನುಕೂಲ ಉಂಟಾಗಿರುವುದನ್ನು ಕೇಳಿ, ದಿವಾನರವರು ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರಿಂದ ರಿಪೋರ್ಟು ಇನ್ನೂ ಬಂದಿಲ್ಲ, ಬಂದ ಕೂಡಲೆ ಏರ್ಪಾಡು ಮಾಡುತ್ತೇವೆಂದು ತಿಳಿಸಿದಾರೆ.

ಮೇಲುಕೋಟೆ ದೇವಸ್ಥಾನದಲ್ಲಿ ಮಹಾ ನೈವೇದ್ಯವನ್ನು ಪೂರ್ವದಂತೆ ನಡೆಸಬೇಕೆಂಬ ವಿಚಾರದಲ್ಲಿ ಡೆಪ್ಯುಟಿ ಕಮಿಷನರಿಂದ ಮುಜರಾಯಿ ಸೆಕ್ರೆಟರಿಯವರಿಗೆ ರಿಪೋರ್ಟು ಬಂದಿದೆ. ಅವರಿಂದ ಸರ್ಕಾರಕ್ಕೆ ... ತಿಳಿದುಬಂದ ಕೂಡಲೆ ಅದನ್ನು ಇತ್ಯರ್ಥ ಮಾಡುತ್ತೇವೆಂದು ದಿವಾನರವರು ಅಪ್ಪಣೆ ಕೊಟ್ಟರು.

ಶಿವಸಮುದ್ರಕ್ಕೆ ಹೋಗಿಬರುವ ಪ್ರಯಾಣಿಕರಿಗೆ ಮಳವಳ್ಳಿಯಲ್ಲಿ ಅನ್ನಸತ್ರವಿಲ್ಲ. ಬಲಮುರಿ, ಮುಂತಾದ ಸ್ಥಳಗಳಲ್ಲಿರುವ ...ದಾದರೂ ಒಂದು ಸತ್ರವನ್ನು ತೆಗೆದು ಹಾಕಿ, ಮಳವಳ್ಳಿಯಲ್ಲಿ ಇಡಿಸಿ ಕೊಡಬೇಕೆಂದು ಸೂಚಿಸಿದ ಮೆಂಬರಿಗೆ ದಿವಾನರವರು—ಇದು ಆಗಲಾರದೆಂದು ಅಪ್ಪಣೆ ಕೊಟ್ಟರು

ಮೈಸೂರು ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನ.

ಸರ್ಕಾರೀ ನಿಬಂಧನೆಗಳು.

ಮೈಸೂರು ಪಟ್ಟಣದಲ್ಲಿ ಇನ್ನು ಮುಂದೆ ಗೊತ್ತುಮಾಡಿ ಎಲ್ಲರಿಗೂ ತಿಳಿಸುವ ತಾರೀಖಿನ ದಿನ ಎಕ್ಸಿಬಿಷನ್ (ಪ್ರದರ್ಶನಶಾಲೆ) ಪ್ರಾರಂಭವಾಗಿ   ದಿನಗಳ ವರಿಗೂ ನಡೆಯುವುದು. ಪ್ರದರ್ಶನಕ್ಕೆ ಸಾಮಾನುಗಳನ್ನು ಕಳುಹಿಸಲು ಇಷ್ಟಪಡುವವರು ಏ ನಮೂನೆಯನ್ನು ಭರ್ತಿ ಮಾಡಿ, ಅದನ್ನು ೧೯೦೫ನೆ ಇಸವಿ ನವಂಬರು ೩೦ನೆ ತಾ. ಒಳಗಾಗಿ ತಪ್ಪದೆ ಎಗ್ಜಿಬಿಷನ್ ಸೆಕ್ರೆಟರಿಯವರಿಗೆ ಕಳುಹಿಸಬೇಕು. ಇದರ ಇನ್ನೊಂದು ಪ್ರತಿಯನ್ನು ಕೂಡಲೆ ತಾಲ್ಲೋಕು ಅಮಲ್ದಾರರವರಿಗೆ ಕೊಡಬೇಕು [ಷರ—ಈ ನಮೂನೆಗಳನ್ನು ಅಮಲ್ದಾರರಿಂದ ಪಡೆಯಬಹುದು.] ಪ್ರದರ್ಶನಕ್ಕೆ ತರತಕ್ಕ ಸಾಮಾನುಗಳನ್ನು ಆ ಸಾಮಾನುಗಳ ಸ್ವಂತ ಕರ್ತರೇ ಆಗಲಿ ಅವರ ಕಡೆಯವರೇ ಆಗಲಿ ಖುದ್ದಾಗಿ ತಂದು ಮೈಸೂರಲ್ಲಿ ಸೆಕ್ರೆಟರಿಯವರಿಗೆ ೧೯೦೬ ನೆ ಇಸವಿ ಜನವರಿ ೫ನೆ ತಾರೀಖಿನ ಒಳಗಾಗಿ ಎಗ್ಜಿಬಿಷನ್ ಸ್ಟೋರಿನಲ್ಲಿ ಕೊಡಬಹುದು. ಆ ಸಾಮಾನುಗಳ ಸಂಗಡ ಎ ಮತ್ತು ಬಿ ನಮೂನೆಗಳನ್ನು ಭರ್ತಿ ಮಾಡಿ ಕೊಡಬೇಕು. ಎಗ್ಜಿಬಿಟರುಗಳು ಪ್ರದರ್ಶನಕ್ಕೆ ಕಳುಹಿಸಬೇಕೆಂಬ ಸಾಮಾನುಗಳನ್ನು ಅವರ ತಾಲ್ಲೋಕು ಅಮಲ್ದಾರರ ವಶಕ್ಕೇ ಆಗಲಿ ಡಿಸ್ಟ್ರಿಕ್ಟ ಕಮಿಟಿ ಪ್ರೆಸಿಡೆಂಟ (ಡೆಪ್ಯುಟಿ ಕಮಿಷನರ್) ರವರಲ್ಲಾಗಲೀ ಮೇಲೆ ಬರೆದ ನಮೂನೆಗಳ ಸಹಿತ ಕೊಡಬಹುದು. ಅಥವಾ ರೈಲ್ ಮೇಲೆ "ಪಾರ್ಸಲ್" ಅಥವಾ "ಗೂಡ್ಸ್" ಗಿಯಾಗಲಿ ರವಾನೆಮಾಡಬಹುದು. ಈ ದೇಶದಲ್ಲಿ ಆದ ಶಿಲ್ಪ, ಕೈಗಾರಿಕೆ ಮತ್ತು ಲೋಹ ಮತ್ತು ವ್ಯವಸಾಯ ಸಂಬಂಧವಾದ ಎಲ್ಲಾ ಪದಾರ್ಥಗಳೂ ಪ್ರದರ್ಶನಕ್ಕೆ ತೆಗೆದುಕೊಳ್ಳಲ್ಪಡುತ್ತೆ. ಎಗ್ಜಿಬಿಷನ್ ಕಮಿಟಿಯವರ ಅಭಿಪ್ರಾಯದಲ್ಲಿ ಒಳದೇಶದ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಬಹುದಾದ, ಅನ್ಯದೇಶದಲ್ಲಿ ಮಾಡಿದ ಯಂತ್ರಗಳು ಅಥವಾ ಹತ್ಯಾರುಗಳು ಪ್ರದರ್ಶನಕ್ಕೆ ಅಂಗೀಕರಿಸಬಹುದು. ಆದರೆ ಅಂಥಾ ಯಂತ್ರ ಯಾ ಹತ್ಯಾರುಗಳಿಗೆ ಬಹುಮಾನ ಕೊಡಲ್ಪಡುವುದಿಲ್ಲ. ಅಮಲುಕಾರಕವಾದ ವಸ್ತು ಹಾಕುವ ಮದ್ದು ಮುಂತಾದ ಯಾವ ಸಾಮಾನನ್ನೂ ಪ್ರದರ್ಶನಕ್ಕೆ ತೆಗೆದುಕೊಳ್ಳುವುದಿಲ್ಲ. ಯಂತ್ರ, ಕಸಬುದಾರಿ ಯಾ ಕೈಗಾರಿಕೆಯನ್ನು ಮಾಡಿ ಪ್ರತ್ಯಕ್ಷವಾಗಿ ತೋರಿಸಲು ಇಷ್ಟಪಡುವ ಎಗ್ಜಿಬಿಟರುಗಳು ಈ ವಿಷಯವನ್ನು ತಮ್ಮ ದರಖಾಸ್ತಿನಲ್ಲಿ ನಮೂದುಮಾಡಬೇಕಲ್ಲದೆ ಹಾಗೆ ಕೆಲಸ ಮಾಡುವುದಕ್ಕೇ ಆಗಲಿ ತೋರಿಸುವುದಕ್ಕೇ ಆಗಲಿ ಯಾವ ಯಾವ ಅನುಕೂಲಗಳು ಅಥವಾ ಸಹಾಯ ಬೇಕೆಂಬ ತಪಶೀಲುಗಳನ್ನು ಬರೆಯಬೇಕು. ಇಂಥಾ ಅನುಕೂಲತೆ ಯಾ ಸಹಾಯಬೇಕೆಂದು ಸಾಕಾದಷ್ಟು ದರಖಾಸ್ತುಗಳು ಬಂದರೆ ಆಗ್ಗೆ ಒಪ್ಪಿಗೆಮಾಡಿಕೊಳ್ಳುವ ನಿಬಂಧನೆಗಳ ಪ್ರಕಾರ ಅಂಥಾ ಸಹಾಯ ಮಾಡುವದಕ್ಕೆ ಕಮಿಟಿಯವರು ತಕ್ಕ ಏರ್ಪಾಡು ಮಾಡುತ್ತಾರೆ. ಪ್ರತಿಯೊಬ್ಬ ರಿಜಿಸ್ಟರ್ಡ ಎಗ್ಜಿಬಿಟರಿಗೆ ಸಾಮಾನು ಇಡಲು ಕಟ್ಟಡದಲ್ಲಿ ೧೦ ಅಡಿ ಚದರ ಜಾಗಾ ಮುಫತ್ತಾಗಿ ಸಿಕ್ಕುವುದು. ಇದಕ್ಕಿಂತಲೂ ಹೆಚ್ಚಾಗಿ ಸ್ಥಳ ಬೇಕೆಂದು ಅಪೇಕ್ಷೆಪಡುವವರು ಆ ಬಗ್ಗೆ ಸ್ಪೆಷಲ್ ಕರಾರು ಮಾಡಿ ಒಡಂಬಡಿಕೆಯಾದ ನಿಬಂಧನೆಗಳಂತೆ ಪಡೆಯಬಹುದು. ಎಗ್ಜಿಬಿಟರುಗಳು ಕಳುಹಿಸುವುದರಲ್ಲಿ, ವಾಪಸುಮಾಡುವುದರಲ್ಲಿ, ಎಗ್ಜಿಬಿಷನ್ ಪೂರೈಸಿದನಂತರ ವಾಪಸು ತೆಗೆದುಕೊಂಡುಹೋಗುವುದರಲ್ಲಿ ಉಂಟಾಗುವ ಖರ್ಚುಗಳನ್ನು ಅವರೇ ವಹಿಸಬೇಕು. ರೈಲ್ ಛಾರ್ಜು ಕೊಡದೆ ಕಳುಹಿಸಿದ ಸಾಮಾನುಗಳನ್ನು ತೆಗೆದುಕೊಳ್ಳುವುದಿಲ್ಲ.

ರಾಸುಗಳನ್ನು ಪ್ರದರ್ಶಿಸುವವರು ಅವುಗಳ ರಾತಿಬು ವಿಷಯದಲ್ಲಿ ಏನು ಏರ್ಪಾಡುಗಳು ಮಾಡಬೇಕೆಂದು ಅಪೇಕ್ಷಿಸುವರೋ ಅದನ್ನು ಕುರಿತು ತಮ್ಮ ರಾಸುಗಳು ಮೈಸೂರು ತಲಪುವ ೧೫ ದಿವಸಗಳ ಮುಂಚಿತವಾಗಿಯೇ ಸೆಕ್ರೆಟರಿಯವರಿಗೆ ಬರೆಯಬೇಕು. ಆ ಏರ್ಪಾಡುಗಳು ಮಾಲೀಕರ ಸ್ವಂತ ಖರ್ಚಿನಲ್ಲಿ ಇಲ್ಲಿ ಮಾಡಲ್ಪಡುವವು. ಆದರೆ ರಾಸುಗಳಿಗೆ ಮೈಸೂರಲ್ಲಿ ಅವು ಇರಬೇಕಾಗುವ ೮ ದಿನಗಳ ಮಟ್ಟಿಗೆ ಅಂದರೆ ಜನವರಿ ೨೯ನೇ ತಾ. ನಿಂದ ೫ನೇ ಫೆಬ್ರುವರಿ ವರೆಗೆ ಅವಶ್ಯವಾಗಿ ಬೇಕಾಗುವ ಹುಲ್ಲು ಮುಫತ್ತಾಗಿ ಸಿಕ್ಕುತ್ತೆ. ನೀರಿಗೆ ಕಮಿಟಿಯವರ ಖರ್ಚಿನಿಂದಲೇ ತಕ್ಕ ಏರ್ಪಾಡು ಆಗಿರುವುದು. ಕಾಯಿಲೆ ಆಗಿರುವ ಮತ್ತು ಜನಗಳಿಗೆ ಅಪಾಯ ಮಾಡುವ ರಾಸುಗಳನ್ನು ಅಂಗೀಕರಿಸುವುದಿಲ್ಲ. [ಡೆಪ್ಯುಟಿ ಕಮಿಷನರು ಪ್ರದರ್ಶಿಸುವುದಕ್ಕೆ ಯೋಗ್ಯವಾದ ರಾಸುಗಳನ್ನು ಮಾತ್ರ ಚುನಾಯಿಸುವರು ಅಥವಾ ಕಳುಹಿಸುವರೆಂದು ನಂಬಲ್ಪಟ್ಟಿದೆ.]

ಎಗ್ಜಿಬಿಷನ್ ಕಟ್ಟಡವನ್ನು ಕಾಯುವದರಲ್ಲಿಯೂ ಮತ್ತು ಪ್ರದರ್ಶಿಸಿದ ಸಾಮಾನಿನ ಸಂರಕ್ಷಣೆ ವಿಷಯದಲ್ಲಿಯೂ ಸಾಧ್ಯವಾದಷ್ಟು ಬಂದೋಬಸ್ತು ಮಾಡುತ್ತೆ. ಆದರೆ ಕಮಿಟಿಯವರು ಪ್ರದರ್ಶಿಸಿದ ಸಾಮಾನಿಗೆ ಉಂಟಾದ ಕಂದಾಯ ಅಥವಾ ಲುಕ್ಸಾನಿಗೆ ಜವಾಬ್ದಾರರಾಗಿರುವುದಿಲ್ಲ. ನಗಗಳು, ಭಂಗಾರ ಮತ್ತು ಬೆಳ್ಳಿ ಮುಂತಾದ ಬೆಲೆಯುಳ್ಳ ಸಾಮಾನುಗಳನ್ನು ಒಬ್ಬ ನೋಡಿಕೊಳ್ಳುವವನ ಸಂಗಡ ಕಳುಹಿಸಬೇಕು.

ಕ್ರಯಮಾಡಬಹುದಾದ ಸಾಮಾನುಗಳನ್ನು ಪ್ರದರ್ಶನವಿರುವ ಕಾಲದಲ್ಲಿಯೇ ಮಾರಬಹುದು. ಖರೀದಿಗೆ ತೆಗೆದುಕೊಳ್ಳುವವರ ಹೆಸರನ್ನು ರಿಜಿಸ್ಟರು ಮಾಡಿಕೊಳ್ಳುವುದಕ್ಕೂ ಅವರಿಂದ ಹಣ ತೆಗೆದುಕೊಳ್ಳುವುದಕ್ಕೂ ತಕ್ಕ ಏರ್ಪಾಡುಮಾಡಲ್ಪಡುತ್ತೆ.

ಲೋನ್ ಸೆಕ್ಷನ್ ಅಂದರೆ ಪ್ರದರ್ಶಿಸುವುದಕ್ಕೆ ಸಾಲವಾಗಿ ಸಾಮಾನುಗಳನ್ನು ಕೊಡಲು ಅಪೇಕ್ಷೆಯುಳ್ಳವರು ಸೆಕ್ರೆಟರಿಯವರಿಗೆ ಬರೆದು ಅವಶ್ಯವಾದ ತಪಶೀಲುಗಳನ್ನು ತಿಳಿಸಿದರೆ ಆ ವಸ್ತುಗಳ ಪ್ರದರ್ಶನವಿಷಯದಲ್ಲಿ ತಕ್ಕ ಏರ್ಪಾಡುಮಾಡಿ, ಸೆಕ್ರೆಟರಿಯವರು ಅವರಿಗೆ ಬರೆಯುತ್ತಾರೆ.

ಎಗ್ಜಿಬಿಷನ್‌ಗೆ ಸಂಬಂಧವಾದ ಲೇಖನಗಳು "ಎಗ್ಜಿಬಿಷನ್ ಕಮಿಟಿ ಸೆಕ್ರೆಟರಿಯವರಿಗೆ" ಮೈಸೂರಿಗೆ ಎಂದು ಬರೆಯಬೇಕು.

ಮೈಸೂರು ಗೆಜೆಟ್ ಸಂಗ್ರಹ.

ಗವರ್ನಮೆಂಟ್ ನೇತ್ರ ವೈದ್ಯರಾದ ಡಾ ಎಸ್ ವಿ ರಾಮಸ್ವಾಮಿಯಂಗಾರ್ರಿಗೆ ಅಕ್ಟೋಬರ್ ೨೦ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೆ॥ ಟಿ. ಎಸ್. ನಂಜಪ್ಪನವರು ಕಣ್ಣಾಸ್ಪತ್ರೆಯ ಮತ್ತು ಸೆಂಟ್ರಲ್ ಜೈಲ್ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು. ಮೆ॥ ಪಲ್ಪೇಯವರು ತಮ್ಮ ಇತರ ಕೆಲಸಗಳೊಂದಿಗೆ ಮೆ॥ ನಂಜಪ್ಪನವರ ಕೆಲಸವನ್ನೂ ನೋಡತಕ್ಕದ್ದು

ಸಬ್ ಅ॥ ಸರ್ಜನ್ ಮೆ॥ ಜೆ. ವಿ. ಮಾಸ್ಕರೆನ್ಹಾಸ್ ಯವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಆರು ದಿನಗಳಿಗೆ ಜಾಸ್ತಿ ಮಾಡಿದೆ

ಪೋಲೀಸ್ ಪ್ರೊ॥ ಅ॥ ಸೂಪರಿಂಟೆಂಟ್ ಮೆ॥ ಟಿಪ್ಪುಸುಲ್ತಾನ್ ಅಲ್ಲಿಖಾನರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ ಖಜಾನೆಯ ಛಾರ್ಜ ವಹಿಸಿರುವ ಪ್ರೊ॥ ಅ॥ ಕಮಿಷನರ್ ಮೆ॥ ಎಂ. ಜಸರ್ ಅಲಿಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ನಗರದ ಅಮಲ್ದಾರ್ ಮೆ॥ ಜಿ ಆರ್. ಶ್ರೀನಿವಾಸ್ಯಯಂಗಾರ್ರು ಬದಲಿ ಎಕ್‌ಸ್ಟ್ರಾ ಅ॥ ಕಮಿಷನರಾಗಿ ನೇಮಿಸಲ್ಪಟ್ಟು ಶಿವಮೊಗ್ಗ ಡಿಸ್ಟ್ರಿಕ್ಟ ಖಜಾನೆಯ ಛಾರ್ಜಿಗೆ ವರ್ಗ ಮಾಡಲ್ಪಟ್ಟಿದಾರೆ

ಮೈಸೂರು ಡಿಸ್ಟ್ರಿಕ್ಟ ಆಫೀಸ್ ಹೆಡ್ ಕ್ಲಾರ್ಕ್ ಮೆ॥ ಡಿ. ನರಸಿಂಗರಾಯರು ನಗರದ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದಾರೆ.

ಮುಂದೆ ಹೇಳುವ ಡಿಸ್ಟ್ರಿಕ್ಟ ಮತ್ತು ಸರ್ವೆ ಅಧಿಕಾರಿಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ. ನವರಾತ್ರಿ ರಜಾ ಪೂರೈಸಿದ ಮೇಲೆ ಜಾರೀಗೆ ಬರತಕ್ಕದ್ದು—

೧ ಮೆ॥ ಎಸ್. ವೆಂಕಟವರದ ಅಯ್ಯಂಗಾರ್ರು—ಶಿವಮೊಗ್ಗೆಯಿಂದ ಬೆಂಗಳೂರು ಡಿವಿಜನಿಗೆ, ೨. ಮೆ॥ ಎಸ್. ಆರ್ ಸುಬ್ಬರಾಯ ಅಯ್ಯರವರು—ಬೆಂಗಳೂರಿನಿಂದ ಶಿವಮೊಗ್ಗಾ ಡಿವಿಜನಿಗೆ.

ಮೆ॥ ಜೆ ವಿ ಮಾಸ್ಕರೆನ್ಹಾಸ್‌ಯವರನ್ನು ಜುಲೈ ೧೨ರ ಲಾಗಾಯತು ೩ರಿಂದ ೨ನೇ ಕ್ಲಾಸ್ ಸಬ್ ಅ॥ ಸರ್ಜನರ ತರಗತಿಗೆ ಬಡ್ತಿ ಮಾಡಿದೆ

ಮೆ॥ ಸಿ. ಶೇಷಾದ್ರಿ ಅಯ್ಯಂಗಾರ್ರನ್ನು ಜುಲೈ ೧೮ರ ಲಾಗಾಯತು ೩ರಿಂದ ೨ನೆ ಕ್ಲಾಸ್ ಎಕ್‌ಸ್ಟ್ರಾ ಅ॥ ಕಮಿಷನರ ತರಗತಿಗೆ ಬಡ್ತಿಮಾಡಿದೆ.

ಮೈಸೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ವಿ ಅರುಣಾಚಲ ಮೊದಲಿಯಾರ್ರಿಗೆ ಅಕ್ಟೋಬರ್ ೨೦ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು.

ಇಂಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಿದೆ.—೧. ಎಕ್ಸಿಕ್ಯುಟಿವ್ ಇಂಜನೀಯರ್ ಮೆ॥ ಬಿ ಸುಬ್ಬರಾಯರು ಕೋಲಾರದಿಂದ ಮೈಸೂರಿಗೆ; ೨. ಎ॥ ಇ॥ ಮೆ॥ ಕೆ. ಕೃಷ್ಣಯ್ಯಂಗಾರ್ರು ಶಿವಮೊಗ್ಗೆಯಿಂದ ಕೋಲಾರಕ್ಕೆ; ೩. ಅ॥ ಎ॥ ಇ. ಮೆ॥ ಆರ್. ವಿ. ಸುಂದರಂ ಅಯ್ಯರವರು ಚಿತ್ರದುರ್ಗದಿಂದ ಶಿವಮೊಗ್ಗೆಗೆ; ೪. ಅ॥ ಇಂಜನಿಯರ್ ಮೆ॥ ಫ್ರೇಚಕ್‌ಭಾಯಿ ಡಾಂಗೆಷಿ ಯವರು ಹಂಗಾಮಿಯಾಗಿ ಮೆ॥ ಜೆ. ಬೋರ್‌ಯವರು ವಿಲಾಯಿತಿಯಿಂದ ವಾಪಸ್ ಬರುವ ತನಕ ಚಿತ್ರದುರ್ಗದ ಡಿವಿಜನ್ ಅ॥ ಎಕ್ಸಿಕ್ಯುಟಿವ್ ಇಂಜನಿಯರಾಗಿ ಕೆಲಸ ನೋಡತಕ್ಕದ್ದು.

ಮೈಸೂರು ಇನ್‌ಫೆಂಟ್ರಿ ೩ನೆ ಬಟಾಲಿಯನ್ನಲ್ಲಿ ಸೈಯದ್ ಅಬ್ದುಲ್ಲಾಯವರನ್ನು ಸೆಪ್ಟೆಂಬರ್ ೧೪ರಿಂದ ೨ನೆ ಕ್ಲಾಸ್ ಜಮೆದಾರರನ್ನಾಗಿ ನೇಮಕ ಮಾಡಿದೆ.

ಮೈಸೂರು ಇನ್‌ಫೆಂಟ್ರಿ ೧ನೆ ಬಟಾಲಿಯನ್ ಕಮಿಷನ್ ರ್‍ಯಾಂಕಿಯಲ್ಲಿ ಮುಂದೆ ಹೇಳುವ ಬಡ್ತಿಗಳು ಜೂನ್ ೧ರಿಂದ ಹುಕುಂ ಮಾಡಲ್ಪಟ್ಟಿವೆ —

ಕಲರ್ ಹಾವಿಲ್‌ದಾರ್ ಕೃಷ್ಣರಾಯರು ೨ನೇ ಗ್ರೇಡ್ ಜಮೆದಾರಿಗೆ; ಹಾವಿಲ್‌ದಾರ್ ಅಬ್ದುಲ್ ಖಲೀಲ್‌ಯವರು ೨ನೇ ಗ್ರೇಡ್ ಜಮೆದಾರಿಗೆ.

ಇಂಡಿಯಾ ದೇಶದ ವೃತ್ತಾಂತಗಳು.

ಪೂನಾ ಪಟ್ಟಣದಲ್ಲಿ ಸ್ವದೇಶಿ ಸಮಾಜದ ಉದ್ದೇಶವನ್ನು ಪ್ರಕಾಶ ಪಡಿಸುವುದಕ್ಕಾಗಿ ಕಳೆದ ಬುಧವಾರ ಅನೇಕ ಬ್ರಾಹ್ಮಣ ದೊಡ್ಡ ಮನುಷ್ಯರು ಒಂದು ಮೆರವಣಿಗೆಯನ್ನು ಮಾಡಿದರು. ಮೆರವಣಿಗೆಯಲ್ಲಿ ಹೋಗುತ್ತಿದ್ದವರೆಲ್ಲರೂ ಹಿಂದುಸ್ಥಾನದಲ್ಲಿ ತಯಾರಾದ ಸಾಧಾರಣ ಬಟ್ಟೆಗಳನ್ನೇ ಉಟ್ಟು ಹೊದ್ದಿದ್ದರು. ಅದೂ ಅಲ್ಲದೆ ಅವರು ತಮ್ಮ ಸಂಗಡ ಕೆಲವು ಪರದೇಶೀಯ ಬಟ್ಟೆಗಳನ್ನು ತೆಗೆದುಕೊಂಡು ಊರಹೊರಗೆ ಹೋಗಿ ಅಲ್ಲಿ ಅವುಗಳನ್ನೆಲ್ಲಾ ಗುಡ್ಡೆ ಹಾಕಿ ಬೆಂಕಿ ಹಚ್ಚಿ ಸುಟ್ಟುಬಿಟ್ಟರು.

* * * *

ತಂಜಾವೂರಿನಲ್ಲಿ ಲೇಟ್ ಶಿವಾಜಿ ಮಹಾರಾಜರ ಕಿರೀ ಹೆಂಡತಿಯಾದ ದೀಪಾಳಿಯಾಲ್ ಬಾಯಿ ಸಾಹೇಬಾ ಎಂಬಾಕೆಯು ಪಾರ್ಶ್ವವಾಯುರೋಗದಿಂದ ತಮ್ಮ ಅರಮನೆಯಲ್ಲಿ ಕಾಲವಾದರು. ಆಕೆಗೆ ೭೭ ವರುಷ ವಯಸ್ಸಾಗಿತ್ತು. ಗವರ್ನಮೆಂಟಿನಿಂದ ಆಕೆಗೆ ೮೦೦ ರೂಪಾಯಿ ಪೆನ್ಷನ್ ಬರುತ್ತಿತ್ತು. ಶಿವಾಜಿಯು ಮದುವೆಯಾಗಿದ್ದ ೧೭ ಜನ ಹೆಂಡತಿಯರಲ್ಲಿ ಮೂವರು ಇನ್ನೂ ಜೀವಂತರಾಗಿದಾರೆ. ಇವರಿಗೆ ಗವರ್ನಮೆಂಟಿನಿಂದ ಪೆನ್ಷನ್ ಬರುತ್ತಿದ್ದದ್ದಲ್ಲದೆ ತಮ್ಮ ಅರಮನೆಯ ಜಹಗೀರಿಯಿಂದ ಪ್ರತಿಯೊಬ್ಬ ರಾಣಿಗೂ ೪೮ ಸಾವಿರ ರೂಪಾಯಿ ಸಲ್ಲುತ್ತಿತ್ತು. ಈಗ ಒಬ್ಬ ರಾಣಿಯು ಸತ್ತುಹೋದ್ದರಿಂದ ಆಕೆಗೆ ಕೊಡುತ್ತಿದ್ದ ಪೆನ್ಷನನ್ನು ಉಳಿದಿರುವ ಮೂವರು ರಾಣಿಗಳಿಗೂ ಸಮವಾಗಿ ಹಂಚುತ್ತಾರೆ. ಆದ್ದರಿಂದ ಪ್ರತಿ ಒಬ್ಬ ರಾಣಿಗೂ ೬೪ ಸಾವಿರ ರೂಪಾಯಿ ಸಲ್ಲುತ್ತದೆ.

* * * *

ಕಳೆದ ೧೯ ನೆ ತಾ ಗುರುವಾರ ವಿಲಾಯಿತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಹಿಂದುಸ್ಥಾನವನ್ನು ಕುರಿತು ಪ್ರಯಾಣಮಾಡಿದರು. ಲಂಡನ್ ಪಟ್ಟಣದ ವಿಕ್ಟೋರಿಯಾ ಸ್ಟೇಷನನಲ್ಲಿ ಬಹುಮಂದಿ ದೊಡ್ಡಮನುಷ್ಯರೂ ಪ್ರಜೆಗಳೂ ಸೇರಿ ಅವರನ್ನು ವಿಶೇಷ ಉತ್ಸಾಹಪೂರ್ವಕವಾಗಿ ಸಾಗಕಳುಹಿಸಿದರು. ಲಾರ್ಡ್ ಲ್ಯಾನ್ಸ್‌ಡೌನ್, ಮೆ॥ ಬ್ರಾಡ್ರಿಕ್, ಮಾರ್ಕ್ವೆಸ್ ಆಫ್ ಬ್ಯಾತ್, ಸರ್ ಎಡ್ವರ್ಡ್ ಕೋರ್ಲೆ, ಲಾರ್ಡ್ ವೆಲಕ್ ಮೊದಲಾದ ಮಹನೀಯರೆಲ್ಲಾ ಹಾಜರಾಗಿದ್ದರು. ಎಡ್ವರ್ಡ್ ಮಹಾರಾಜ ಚಕ್ರವರ್ತಿಯವರೂ ಮಹಾರಾಜ್ಞೀಯವರೂ ಸ್ಟೇಷನಿಗೆ ದಯಮಾಡಿದ್ದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ಸಕಲ ದೊಡ್ಡಮನುಷ್ಯರನ್ನೂ ಕಂಡು ಅವರ ಕೈಹಿಡಿದು ಹೋಗಿಬರುವುದಾಗಿ ತಿಳಿಸಿ ಅವರ ಅನುಜ್ಞೆಯನ್ನು ಪಡೆದು ಬಂದನಂತರ ಮಹಾರಾಜ ಚಕ್ರವರ್ತಿಯವರನ್ನೂ ಮಹಾರಾಜ್ಞೀಯವರನ್ನೂ ಕಾಣಿಸಿಕೊಂಡು ಅವರ ಅಪ್ಪಣೆಯನ್ನೂ ತೆಗೆದುಕೊಂಡು, ಗಾಡಿ ಹತ್ತಿದರು. ಚಕ್ರವರ್ತಿಯವರೂ ಮಹಾರಾಜ್ಞೀಯವರೂ ಗಾಡಿಯೊಳಕ್ಕೆ ದಯಮಾಡಿ, ತಮಗೂ ಅವರಿಗೂ ಉಂಟಾಗುವ ಅಗಲಿಕೆಯ ಸಂತಾಪದಲ್ಲಿ ಸ್ವಲ್ಪಹೊತ್ತು ಇದ್ದು, ಅವರಿಗೆ ಸುಖಪ್ರಯಾಣವನ್ನು ಬಯಸಿ ಹರಸಿ ಹಿಂದಿರುಗಿದರು. ಇದನ್ನು ಸ್ಟೇಷನಲ್ಲಿದ್ದವರೆಲ್ಲಾ ನೋಡಿ ಮರುಗಿದರು. ತಾ. ೨೦ರಲ್ಲಿ ಯುವರಾಜರವರು ಪ್ರಯಾಣ ಮಾಡಿಕೊಂಡು ಜಿನೋವಾ ಪಟ್ಟಣದಲ್ಲಿ ತಂಗಿದರು. ತಾ. ೨೨ ನೆ ಭಾನುವಾರ ಬೆಳಗ್ಗೆ ರಿನೌನ್ ಎಂಬ ಹಡಗು ಪ್ರಿನ್ಸ್ ಆಫ್ ವೇಲ್ಸ್ ರವರನ್ನು ಕೂರಿಸಿಕೊಂಡು, ಜಿನೋವಾದಿಂದ ಮುಂದಕ್ಕೆ ಪ್ರಯಾಣ ಮಾಡಿತು.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ರವರು ಕೊಂಡುಕೊಳ್ಳುವರು

Apply to—MR HUGHES MYSORE ZOO

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು

[illegible]

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದನಂಗ ಮುನಿಸ್ವಾಮಿಗಳು ರಚಿಸಿದ್ದ ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಪ್ತಾಷ್ಟ ಕಾರಕಕ್ಕೆ ಸುಂದರವಾದ ೧೪ ತಸ್ವೀರೆಳು ಕ್ರಯ ಸುಲಭಮಾಡಿದೆ ೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೨—೮ ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೧—೮ ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮ ಕೆಷ್ಣಿ ಮಾಡಿಆರ್ಡರಿಗೂ ವಿ ಪಿ ಟ್ಟೂ ಕಳುಹಿಸುತ್ತೆ ವಿಳಾಸ— ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

SREEMADACHARYA SUKTI MUKTAVALI

ಶ್ರೀಮದಾಚಾರ್ಯಸೂಕ್ತಿ ಮುಕ್ತಾವಲೀ

ಈ ಹೆಸರಿನಿಂದ ಪ್ರತಿ ತಿಂಗಳಲ್ಲಿಯೂ ಒಂದು ಸಂಚಿಕೆಯು ಪ್ರಕಟಿಸಲ್ಪಡುವುದು. ಇದರಲ್ಲಿ ಶ್ರೀರಾಮಾನುಜಸಿದ್ಧಾಂತ ಸ್ಥಾಪಕರಾದ ಪೂರ್ವಾಚಾರ್ಯರುಗಳು ಮಾಡಿರುವ ಸ್ತೋತ್ರ, ಪ್ರಾಬಂಧ, ಗ್ರಂಥಗಳಿಗೆ ಕನ್ನಡದಲ್ಲಿ ಪ್ರತಿಪದ ಟೀಕಾ ತಾತ್ಪರ್ಯಗಳು ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಾಗಿ ಬರೆದು ಮುದ್ರಿಸಲ್ಪಡುವುವು. ಶ್ರೀವಿಷ್ಣುಸಹಸ್ರನಾಮಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತ ಭಾಷ್ಯಗಳೂ ಕನ್ನಡದಲ್ಲಿ ತರ್ಜುಮೆಮಾಡಿ ಮುದ್ರಿಸಲ್ಪಡುವುವು. ಈ ಸಂಪೂರ್ಣ ಗ್ರಂಥಕ್ಕೆ ಪೋಸ್ಟೇಜು ಬೇರಿಲ್ಲ ರೂ. ೨-೭, ಶ್ರೀಮದಾಚಾರ್ಯಸೂಕ್ತಿ ಮುಕ್ತಾವಲೀ ಸಾಂವತ್ಸರಿಕ ಚಂದಾ ಪೋಸ್ಟು ಚಾರ್ಜು ಸಹಿತ ರೂ ೧ ೧೪.

ಇದರ ವಿಶೇಷ ವಿವರಗಳನ್ನು ತಿಳಿಯಬಯಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆಯಬೇಕು.

ತೂಪ್ಪಲ್ ವೆಂಕಟಾಚಾರ್ಯರು,

ಶ ಲಕ್ಷ್ಮೀ ತೋಟ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತ್ವರೆಮಾಡಿರಿ!!

ಒಮ್ಮೆ ಅನುಭವ ತಕೊಂಡು ನೋಡಿರಿ

ಅಲಭ್ಯಲಾಭ.

ಪೇಟೆಂಟು ರಾಸ್ಕೋಪ್ ಸಿಸ್ಟಂ ಲೀವರ ವಾಚುಗಳು

ಈ ವಾಚ್‌ಗಳು ಬಹಳ ಮಜಬೂತ ಇದ್ದು ವರ್ಷಗಟ್ಟಲೆ ಟಿಕಾವು ಬರುತ್ತವೆ. ಪ್ರತಿ ಒಂದು ವಾಚಿನ ಕಿಮ್ಮತು ರೂ ೪, ರೂ. ೫, ರೂ ೬ ಇದ್ದು ಇವುಗಳಿಗೆ ಕ್ರಮವಾಗಿ ೪, ೫, ೬ ವರ್ಷ ಗ್ಯಾರಂಟಿ ಇರುತ್ತದೆ ಇದರ ಜೊತೆಗೆ ಪೈಗೆ ಚಟ್ಟಿನ ಲೇಡಿ ವಾಚ್‌ಗಳೂ, ೨॥ ಮತ್ತು ೩ ರೂ ಕಿಮ್ಮತ್ತಿನ (ಬಿ) ಟಮ್ಮಪೀಸುಗಳೂ, ೧॥ ರೂ ೨॥ ರೂ ಕಿಮ್ಮತ್ತಿನ ಖರೆ ಬೆಳ್ಳಿಯ ಧಡಿಯಾಳ ಸರಪಳಿಗಳೂ, ೪, ೬, ೮ ಆಣೆಯ ಜರ್ಮನಸಿಲ್ವರ ಸರಪಳಿಗಳೂ, ೧ ಆಣೆ ಕಿಮ್ಮತ್ತಿನ ಖರೇ ರೇಷ್ಮೆಯ ಸೋಪುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಸೂಚನೆ—ಮೇಲೆ ಕಾಣಿಸಿದ ಯಾವದೇ ವಾಚ್‌ಗಳು ಒಮ್ಮೆಗರೆ ೩ ತಕ್ಕೊಂಡರೆ (ಬಿ) ಟಾಯ್ಮಪೀಸ ಒಂದು ಇನಾಮು, ಮತ್ತು ೬ ತಕ್ಕೊಂಡರೆ ಒಂದು ವಾಚ್ ಇನಾಮು ಸಿಗುವದು.

ವಿಳಾಸ—ಆರ್ ವಿ ಪೈ, ವಾಚ್ ಮರ್ಚಂಟ,

ಪೋಸ್ಟ ಅಂಕೋಲಾ, ಜಿಲ್ಲಾ ಉ ಕಾನಡಾ

"ಜೂಗೋಳ" ಸಂಗ್ರಹ—ಐದನೇ ಮುದ್ರಣ

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮಿ॥ ಟಿ. ಎಂ ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹುವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ ೧೦೦ ಪ್ರತಿಗಳು ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨॥ ರಂತೆ ಡಿಸ್ಕೌಂಟು ಕೊಡಲಾಗುವುದು. ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಬೇಕೆನ್ನುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್ ಎಸ್ ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು.

ಕ್ರಯ:—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರು ಸಂಸ್ಥಾನದಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪತ್ರಿಕೆ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . . . ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ

ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳುಗಳಿಗೆ ಹಾಸಲ್

ಸೇರಿ . . . . ರೂ ೧—೧೪—೦

" . . . ೬ " " ೦—೧೫—೦

ಚಂದಾದಾರರುಗಳು ತಪ್ಪದೆ ತಮ್ಮ ಪೂರಾ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ಸಕಲ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರ ಸುಧಾ.

ಇದನ್ನು ಓದಿ! ಬೆಚ್ಚಬೇಡಿ!! ಗುಣ ನೋಡಿ!!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ ಜ್ವರ, ಮಲೆನಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದಕ್ಕೆ ಸಮಾನ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರು ಹೇಳುತ್ತಿದ್ದಾರೆ ಕೃತ್ಯ, ತಲೆನೋವು, ಅರಕಲೆನೋವು, ಬೆನ್ನು ಛಳುಕು, ಕೈಕಾಲು ನೋವು ಮುಂತಾದವುಗಳನ್ನು ದೈವಾನುಗ್ರಹದಂತೆ ನಿಗಂತರಕ್ಕೆ ಹಾರಿಸಬಲ್ಲದು 'ಸುಧಾ' ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವು ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸೀಸೆ ಔಷಧಿಯಲ್ಲಿ ತಿಳಿಯಬರುವ ಅನೇಕ ಗುಣಗಳನ್ನು ಹೆಚ್ಚು ವರ್ಣನೆಮಾಡತೀರದು ಸೀಸೆ ೧ಕ್ಕೆ ೦-೮-೦ ಹಾಸಲು ಬೇರೆ

ಜೀವನಸುಧಾ—ಜ್ವರ ನಿಂತಮೇಲೆ ನಿಶ್ಚಯವಾಗಿ ತಿಳಿದ ಮೇರೆ ನಮ್ಮಿಂದ ತಯಾರಾಗಿ ಪ್ರಸಿದ್ಧವಾಗಿರುವ ಸಂಜೀವನವನ್ನು ಅರ್ಧಮಾಸಕ್ಕೆ ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ ಸೀಸೆ ೧ಕ್ಕೆ ರೂಪಾಯಿ ೧—೦—೦

ಶ್ರೀತಾಂಬೂಲ—ಅಗತ್ಯಬೇಕಾದ ತಾಂಬೂಲ ಮಾತ್ರೆಗಳ ಸೀಸೆ ೧ಕ್ಕೆ ೩ ಆಣೆ ೬ ಸೀಸೆ ವರೆಗೆ ವಿ ಪಿ ಛಾರ್ಜು ೫ ಆಣೆ

ದೇವನಹಳ್ಳಿ ಟವನ, ಕುಂ ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟೀಷನರ್.

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

೧ ಬಾಲಸ ಔಷಧಿ—ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿ ಇಟ್ಟಿರಬೇಕಾದ್ದು, ಸೀಸೆ ೧ಕ್ಕೆ ೪ ಆಣೆ

೨. ಗುಣಕಾರಿ ತೈಲ—ಎಲ್ಲಾ ಗಾಯಗ ಗೂ ಸರ್ವೋತ್ಕೃಷ್ಟವಾದ ಔಷಧಿ ಸೀಸೆ ೧ಕ್ಕೆ ೮ ಆಣೆ.

೩. ಮಧುಮೇಹವಿನಾಶಕ—ಮ್ಯೂನತೆಗಳನ್ನು ಸರಿಪಡಿಸಿ ಸ್ಫೂರ್ತಿ ತಾಗಿ ಮಾತನಾಡಲು ಅನುಕೂಲಪಡಿಸಿಕೊಡುವದು. ಸೀಸೆಗೆ ೮ ಆ.

೪ ಸ್ನಾನಕ್ಕೆ ಸುವಾಸನಾ ಭಸ್ಮ—ದೇಹದ ವಾಸನೆಯನ್ನು ತೆಗೆದು ಚರ್ಮವನ್ನು ಮೃದುಮಾಡುವದು ಪೆಟ್ಟಿಗೆ ೧ಕ್ಕೆ ೮ ಆಣೆ.

೫ ಸಂಜೀವನ ಮಾತ್ರೆಗಳು—ಜ್ವರ ಸೆಳೆತ ನೆಗಡಿ ಅಜೀರ್ಣ ಇವುಗಳ ಹುಟ್ಟನ್ನೇ ಅಡಗಿಸುವದು ಸೀಸೆ ೧ಕ್ಕೆ ೧೦ ಆಣೆ

೬. ಗೋರೋಚನಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೆ ಅದ್ವಿತೀಯವಾದ ಔಷಧವು ಸೀಸೆ ೧ಕ್ಕೆ ೧೦ ಆಣೆ

೭. ಚರ್ಮರೋಗಕ್ಕೆ ಔಷಧಿ—ಅರಿಯನ್ನುಂಟುಮಾಡುವ ಎಲ್ಲಾ ಕುರುಗಳಿಗೆ ಹೊರಗೆ ಹಚ್ಚುವದರಿಂದಲೆ ಗುಣವಾಗುವದು ಸೀಸೆ ೧ಕ್ಕೆ ೮ ಆಣೆ

೮. ಕೇಶಸುವಾಸಿನಿ—ತಲೆಗೂ ಮೆದುಳಿಗೂ ಕಣ್ಣುಗಳಿಗೂ ತಂಪುಕೊಡುತ್ತದೆ. ಸೀಸೆ ೧ಕ್ಕೆ ೧ ರೂಪಾಯಿ.

೯ ಅಪೂರ್ವ ಸುವಾಸನಾ ದ್ರವ್ಯಗಳು—ಅತ್ತರು, ಮಲ್ಲಿ, ಕಸ್ತೂರಿ, ತಾಳೆಹೂವು, ಮಾರಿಕೊಳುಂದು, ಜಾಜಿ, ಸುಭ್ರಾಸ್ ಹೀನಾ, ಮೊಗಲಿಪುವು ಇವೆಲ್ಲಾ ತೊಲೆ ೧ಕ್ಕೆ ೦—೮—೦

೧೦ ಗೋರೋಚನ, ತೊಲೆ ೧ಕ್ಕೆ ೫ ರೂ ಕುಂಕುಮಕೇಸರಿ ೧ ರೂ. ಪಚ್ಚಕರ್ಪೂರ, ತೊಲೆ ೧ಕ್ಕೆ ೨ ರೂ

೧೧ ರಕ್ತಾಮೃತಂ—ಇದು ಊರಿನ ಗಿಡಮೂಲಿಕಾ ಔಷಧಿಗಳಿಂದ ತಯಾರಿಸಿದ ಪ್ರತಿ ಕಾಫಿ, ಟೀ ಇವುಗಳ ಬದಲಾಗಿ ಉಪಯೋಗಿಸಿಕೊಳ್ಳಬೇಕು ಅತಿ ಉತ್ತಮವಾದದ್ದು ಕಾಫಿ ಮತ್ತು ಟೀ ಇವುಗಳಲ್ಲಿ ಇರುವ ಕೆಟ್ಟಗುಣಗಳಿಂದ ವಿರಹಿತವಾದದ್ದು ಮೂತ್ರರೋಗ ಮತ್ತು ಅಜೀರ್ಣರೋಗಗಳು ಉಳ್ಳವರಿಗೆ ಬಹು ಉತ್ತಮವಾದದ್ದು ಅಜೀರ್ಣ, ಅರುಚಿ, ಕೆಮ್ಮು, ನರ ಎಳೆಯುವಿಕೆ, ಕ್ಷಯ, ಮೂಲವ್ಯಾಧಿ ತಲೆನೋವು ಮುಂತಾದ ರೋಗಗಳನ್ನು ನಾಶಮಾಡುತ್ತದೆ. ರಕ್ತವನ್ನು ಶುದ್ಧಿಮಾಡಿ ನರಗಳ ಬಲವನ್ನು ಹೆಚ್ಚಿಸುತ್ತದೆ ಮ್ಯೂಬಲ್ಲಿರುವ ಉಷ್ಣವನ್ನು ತೆಗೆದುಹಾಕುತ್ತದೆ ಮೂತ್ರರೋಗದವರ ಮೂತ್ರದಲ್ಲಿ ಇರುವ ಶೀ ಸಕ್ಕರೆಯನ್ನು ಅಳಿವಿಲ್ಲದೆ ನಾಶಪಡಿಸುತ್ತದೆ ಒಂದು ಪೆಟ್ಟಿಗೆ ೧ಕ್ಕೆ ೬ ಆಣೆ ೩ರ—ವಿ ಪಿ ಚಾರ್ಜು ಬೇರೆ ಬೀಳುವದು

ವಿಳಾಸ—ಪಿ. ಸುಬ್ಬರಾಯ್,

ಪೋಲೀಸೋಪ್ಪೋ, ದಕ್ಷಿಣ ಅರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

6 0—1905 ರಿಂದ 13—10—1905 ರ ವರೆಗೆ.

ಸ್ಥಳ		ಪ್ಲೇಗ್ ತಗಲಿದ್ದು	ಸತ್ತದ್ದು	ಜೋಡಿಸಿದ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ		9	4	23	22
ಮೈಸೂರು	,,	0	0	58	೨೧
ಬೆಂಗಳೂರು ಡಿಸ್ಟ್ರಿಕ್ಟು		30	8	283	206
ಮೈಸೂರು	,,	೨	5	169	138
ಕೋಲಾರ್	,,	0	0	೭7	57
ಕೋಲಾರ್ ಚಿನ್ನದ ಗಣಿಗಳು		1	1	26	22
ತುಂಕೂರು ಡಿಸ್ಟ್ರಿಕ್ಟು		1	1	21	19
ಹಾಸನ	,,	0	0	31	23
ಚಿತ್ರದುರ್ಗ	,,	0	0	150	96
ಕಡೂರ್	,,	7	5	165	135
ಶಿವಮೊಗ್ಗ	,,	8	1	148	95
	ಒಟ್ಟು	63	31	122	813

ಕಲಿಯುಗದ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಆಶ್ವೀಜ ಬಹುಳ ತ್ರಯೋದಶಿ ಗುರುವಾರದಿಂದ ಕಾರ್ತೀಕ ಶುದ್ಧ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ಅಕ್ಟೋಬರ್ ಮತ್ತು ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ವ್ಯವಹಾರ
26	ಗುರು §	ತ್ರಯೋ	27 10	ಉ	೨-15	10
27	ಶುಕ್ರ *	ಚತುರ್ದ	21 32	ಹ	20-1	11
28	ಶನಿವಾ ,	ಅಮಾ	15 ೨೨	ಸ್ವಾ	೨ 23	12
29	ರವಿವಾ	ಪಾಡ್ಯ	9 56	ವಿ	1[illegible]	13
30	ಸೋಮ ‡	ಬಿದಿಗೆ	4 2	ಅನುರಾ	51 32	14
31	ಕುಜ	ಚೌತಿ	೨3-10	ಜೇ	10 31	15
1	ಬುಧ	ಪಂಚಮಿ	19 35	ಮೂ	38 1	16

§ ಪ್ರದೋಷ, ನರಕಚತುರ್ದಶಿ, ನೀರುತುಂಬುವಹಬ್ಬ

* ತಿಧಿದ್ವಯಂ, ಸರ್ವತ್ರಅಮಾವಾಸ್ಯ, ಧನಲಕ್ಷ್ಮೀಪೂಜ

, ಪ್ರತಿಪತ್ತಿಥಿ, ದೀಪಾವಳಿ, ಬಲೀಂದ್ರಪೂಜಾ ; ಉತ್ತಾರಯೋಗ, ಬಲೀಂದ್ರಪೂಜ, ದೀಪಾವಳಿ, ಚಂದ್ರದರ್ಶನ, ಕಾಮಧೇನು ಪೂಜ ‡ ಕಾರ್ತೀಕ ಸೋಮವಾರ

ಪೇಟೆ ಧಾರಣೆ.

ದಿನಸು.		ಮೈಸೂರು.	ಬೆಂಗಳೂರು
ಕಜ್ಜೀ ಅಕ್ಕಿ ಪಲ್ಲ ೧ಕ್ಕೆ			
ಕುಂಬುತಿ ಅಕ್ಕಿ ಅವಲ್			
,, ಮುಡಯಂ			
ಹಾಲ್ಯಾಣಿ ಅಕ್ಕಿ			
ಸಣ್ಣಕ್ಕಿ ಅವಲ್			
,, ಮುಡಯಂ			
ಕೋಗರೀ ಬೇಳೆ ಪಲ್ಲ ೧ಕ್ಕೆ			
,, ಮುಡಯಂ			
ಹೈಗ ರಾಗಿ ಪಲ್ಲ ೧ಕ್ಕೆ			
ಕಾರ್ರಾಗಿ			
ಜೋಳ			
ಹುರುಳಿ ಪಲ್ಲ ೧ಕ್ಕೆ			
ಬಿಳೀ ಅವರೆ			
ಹೆಸರು			
ಉದ್ದು			
ತೊಗರಿ			
ಎಳ್ಳು			
ಜೋಳ			
ಹರಳು ೨೫ ಸೇರಿಗೆ			
ಸೀಗೇಕಾಯಿ ಮಣ ೧ಕ್ಕೆ			
ಮೆಣಸಿನಕಾಯಿ			
,, ಮುಡಯಂ			
ಬೆಲ್ಲ ದೊಡ್ಡ ಅಚ್ಚು			
ಬಳ್ಳುಕ್ಕು ಮಣ ೧ಕ್ಕೆ			
ಹರಳೆಣ್ಣೆ ,,			
ಕೊತ್ತುಂಬರಿ ಪಲ್ಲ ೧ಕ್ಕೆ			
ಉಪ್ಪು ,,			
ಜೀರಿಗೆ ,,			
,, ಕಳಿಪು			
ಹುಣಸೆ			
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ			
ತೆಂಗಿನಕಾಯಿ ೧೦೦ಕ್ಕೆ			
ಅಡಕೇಕಾಯಿ ಮಣ ೧ಕ್ಕೆ			
ಅಂಟುವಾಳಕಾಯಿ ಮಣ ೧ಕ್ಕೆ			
ಬಟ್ಟು (ಕಾಗೆ) ಅಂಟು			
,, ,, ಪಚಿಮೆ			
,, ,, ಗಟ್ಟಿ ತೊಲ ೧ಕ್ಕೆ			
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ			

Printed and Published by the Rev H SPENCER, B.A. the Proprietor and Manager, Wesleyan Mission Press, Mysore 26/10/1905

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೯೦೯ ನೇ ಇಸವಿ ನವಂಬರ್ ತಾರೀಖು ೩ ನೇ ಗುರುವಾರ. — ಸಂಚಿಕೆ ೩೩

"ಚಿತ್ರಸಹಿತ ಪುಸ್ತಕಗಳು —ಕನ್ನಡ ಗ್ರಂಥ. 12

ಈ ದೇಶದ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಚಿತ್ರಗಳುಳ್ಳ ಪುಸ್ತಕಗಳು ... ಮಾರ್ಜಿನ್ ಬೆಲೆ ... ರೈಲ್ವೆ, ಬೇಗ ತರಿಸಿ ... ವಿಳಾಸ —ವಿ ... ಕ್ಯಾಪಿಟಲ್ ಸ್ಟ್ರೀಟ್

ಯಂ. ಆರ್. ವೆಂಕಟೇಶಯ್ಯ ...,

ಸುಜನೋದಯ ಗ್ರಂಥಾಲಯ, ಮೈಸೂರು.

ಮಿಸ್ಸಲ್ಲೇನಿಯಸ್ ಶ್ರೀ ಚಿತ್ರಪುಸ್ತಕದ ನೋಟ್ಸ್	೦—೪—೦
ಡಿಟೊ ,, ,, ೭ ನೇ ಪುಸ್ತಕದ ನೋಟ್ಸ್	೦—೪—೧
ಡಿಟೊ ೩—೪ ನೇ ಪುಸ್ತಕಗಳ ನೋಟ್ಸ್	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸ್	೦—೦—೬

ಜ್ವರಹರಿ. !



ಇದು ಸಾಧಾರಣ ಜ್ವರ, ಚಳೀಜ್ವರ, ... ಜ್ವರ, ಪಿತ್ತಜ್ವರ, ... ಜ್ವರ, ವಾತಜ್ವರ, ಚಳಿ ಹಿಡಿಯುವದು, ಇಂಥ ಸಕಲವಿಧವಾದ ಜ್ವರಗಳಿಗೂ ಬಹು ಬೇಗನೆ ವಾಸಿಮಾಡುವದು.

ಮದರಾಸಿನ ... ಸರ್ಜನ್ ... ಎಸ್. ಟಿ ... ಅವರು—ನೀವು ಕಳುಹಿಸಿಕೊಟ್ಟ ... ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಈ ಔಷಧದಿಂದ ಅನೇಕ ಮಂದಿ ... ಗುಣಹೊಂದಿರುವರು ... ಜನಗಳು ... ಇನ್ನೊಂದು ... ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿರುವದು—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ... ೩—೧೨ ಆ, ೧೧ ರೂ, ಐದ್ಕರದು ಸೀಸೆ ತರಿಸಿಕೊಂಡರೆ ... ಮಾಡಲಾಗುವದು.

ಓ ಮ್ ಪ್ರ ಕಾ ಶ ...

Dinum Carpoor

ಈ ಔಷಧವು ಅಜೀರ್ಣ, ಕಣಭೇದಿ, ಸಾಧಾರಣ ಹೊಟ್ಟೆಕಳೆ ... ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಋತುವಾಗಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಯಲ್ಲಿ ದೊರೆಯುವದು.

... ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮ ... ಕರ್ಪೂರವನ್ನು ನಾನೂ ನನ್ನ ಜಾಬೇದಾರರೂ ಮೈಸೂರಿನ ಆಸ್ಪತ್ರೆಯಲ್ಲಿ ಅನೇಕ ವಿಧವಾದ ... ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಅಂಗಡಿಗಳಲ್ಲಿ, ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲವೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ.—

ಪ್ರಿನ್ಸ್ ... ಔಷಧಗಳ ಕಂಪನಿ,

... ಪಾವರಾಸ್.

೧೯೧೦ನೇ ವರುಷದ ರಾಯಲ್ ಡೈರಿಗಳು. 7

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚಲನೆ, ವಾರಕೋಲೆ, ಟಪಾಲಿನ ಮುಖ್ಯವಿಷಯಗಳು, ಸ್ಟಾಂಪು ಅಕ್ಟು, ರಿಜಿಸ್ಟರ್ ಫಿ, ಕೋರ್ಟ್ ಫಿ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೧೦ರಲ್ಲಿ ... ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೆಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರ ... ಪ್ರತಿದಿವಸದ ಸಂಬಳವನ್ನು ತೋರಿಸುವ ಪಟ್ಟಿ, ೧೯೧೦ ... ಫ್ರೆಂಚ್ ... ಅಮಾವಾಸ್ಯೆ, ಸಂಕ್ರಮಣ, ... ರೈಲ್ವೆ ಪಾರ್ಸಲ್ ಛಾರ್ಜು, ... ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ

ನಂ ೧	ದೊಡ್ಡ ಸೈಜು ಪೂರಾ ಕಾಗದ ಕ್ರಯ	೦—೮—೦
,, ೨ ,, ,,	,, ಮುಚ್ಚಳ ಇರತಕ್ಕದ್ದು	೦—೧೦—೦
,, ೩ ಚಿಕ್ಕ ,, ,,	,, ,,	೦—೬—೦
,, ೪ ,, ,,	,, ,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ. ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ದೊರೆಯುತ್ತೆ

ದಿ ಜನರಲ್ ಏಜನ್ಸಿ, ಮೈಸೂರು

ಪ್ರ ... ಸಿ ಯಾ

ದಂತ ... ಪರಿಹಾರ — ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ... ವಿದ್ಯಾಶಾಲೆ, ಹೋಟಲು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತೊಂದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವ ಕಳೆದುಹಲವು ಲಕ್ಷಗಟ್ಟಲೆ ... ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ... ಗಳು, ಮುಂತಾದವರು ಇದರ ಗುಣವನ್ನು ... ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವ ಅರೆ ತಲೆನೋವು, ಸೊಂಟನೋವು, ... ಮು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು ... ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ... ಗಳು, ಗಡ್ಡೆಗಳು, ... ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ... ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ —ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

ಹೋಮಿಯೋಪಥಿ ಯಾಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ... ಇದನ್ನು ಹಚ್ಚಿಕೊಳಸು. ಇದರಲ್ಲಿ ಹೋಮಿಯೋಪಥಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ... ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ, ... ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ... ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮಿಯೋಪಥಿ ಕಂಪನಿ. ... ಸ್ಟ್ರೀಟ್. ಮದರಾಸ್.

ಸಚಿತ್ರವಿನೋದಿನಿ ಮಾಸಪತ್ರಿಕೆ. 6

ವಾರ್ಷಿಕಚಂದಾ ರೂ ೧—೮—೦.

.... ವಿನೋದಿನಿ ಎಂಬ ಈ ಶಿಶುವು ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದದಾಯಕವಾದದ್ದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹವಿಲ್ಲ.... ....

ಸತ್ಯವಾದಿ. ೨೮-೭-೦೯

ವಿಳಾಸ —ಮ್ಯಾನೇಜರ್, ವಿನೋದಿನಿ ಆಫೀಸು, ಧಾರವಾಡ.

"ಆಂಗ್ಲೇಯ ವೈದ್ಯಶಾಸ್ತ್ರ"

ಕ್ರಯ ರೂ. ೧-೮-೦, ಟಪಾಲು ೨ ಆ ; ವಿ. ಪಿ ೩ ಆಣೆ. 10

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಇವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ಅಂಶಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಾಶಸ್ತ್ಯವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವದಕ್ಕೂ ಹಾಗೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೂ, ಇದು ತುಂಬಾ ಸಹಾಯಕಾರಿಯಾಗುವದು.

ವಿಳಾಸ —ಎಂ. ಗುರುರಾವ್, ಆಸ್ಪಿಟಲ್ ಅಸಿಸ್ಟೆಂಟ್, ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು. 7

[ಸ್ಥಾಪಿತವಾದದ್ದು ೧೯೦೫ರಲ್ಲಿ]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತಸ್ಥರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (\) ತರಗತಿಗೆ ಸೇರಿದವರು ಪಡೆಯಬೇಕೆಂದು ಅಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆ ಮಾಹೆ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೯೬ನ್ನು ಮಾತ್ರವೇ ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರರೀತಿಯಾಗಿ ನಡಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೇಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವ ದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ. ಆದರೂ ಇವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಮಾಹೆ ಮಾಹೆ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾವು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸುಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಬಯಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ:—The Manager,
The India Agricultural and Helping Office,
Vengurla Post, Bombay Presidency.

P. SUBBAROY'S

World Renowned and most Efficacious

Ayurvedic Medicines.

ಪಿ ಸುಬ್ಬರಾಯಿಯವರ,

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

1

೧ ಪುಷ್ಟಿ ರಸಾಯನ —ಇದರ ಸೇವನೆಯಿಂದ ನರಗಳ ಸಂಕ್ಷೋಭವಾದ ಮತ್ತು ಇತರ ವಿವಿಧವಾದ ಎಲ್ಲಾ ಶರೀರದ ದೌರ್ಬಲ್ಯಗಳು ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ ದೇಹವು ಪುಷ್ಟಿ ಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವದು ಪೆಟ್ಟಿ ೧ ಕ್ಕೆ ರೂ ೨ ವಿ. ಪಿ ಛಾಂಗಿ ೩ ಆಣೆ.

೨. ಅಜೀರ್ಣ ಗುಳಿಗೆ —ಅಜೀರ್ಣ, ತೇಗುವದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ದೆ ಹತ್ತದಿರುವಿಕೆ, ತಲೆತಿರುಗುವುದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿ ೧ ಕ್ಕೆ ೮ ಆಣೆ ವಿ. ಪಿ ೨ ಪೆಟ್ಟಿಗೆ ವರೆಗೆ ಛಾಂಗಿ ಚಾರ್ಜು ೫ ಆಣೆ.

೩. ಲಕ್ಷ್ಮೀಶ್ವರ ಕಸ್ತೂರಿಮಾತ್ರೆ —ಇದು ತಾಂಬೂಲಕ್ಕೆ ಪ್ರಾಮುಖ್ಯವು. ಇದರಿಂದ ಬಾಯಿಯ ದುರ್ಗಂಧವು ಹೋಗುವದು ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾ ದ್ರವ್ಯಗಳು ಅನಾವಶ್ಯಕವಾಗಿರುವುವಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ನಾಶಿಯಾಗುವುವು. ಇದರಲ್ಲಿ ಅಫೀಣಿಯಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಹೊರತು ಮುಂತಾದ ಅಮೂಲ್ಯವಸ್ತುಗಳು ಸೇರಿರುವದರಿಂದಲೂ, ಎಳೆ ಮಕ್ಕಳಿಂದ ಮುದುಕರಿಗೆ ವರೆಗೂ ತಾಂಬೂಲದೊಂದಿಗೆ ಅಥವ ಬರಿಯದರಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಆಸ್ಪದ ಕೊಡದೆ ಸಹ ನೋಡಿಕೊಳ್ಳುವದು ಜ್ವರ, ನೆಗಡಿ, ಕೆಮ್ಮಲು ಮುಂತಾದ ವ್ಯಾಧಿಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ. ೧ ರಿಂದ ೧೨ ಸೀಸೆಗೆ ವಿ ಪಿ ಛಾಂಗಿ ಚಾರ್ಜು ೫ ಆಣೆ

೪ ವೇದನಾಪರಿಹಾರಕ ತೈಲವು.—ಇದನ್ನು ಮೇಲಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವದು, ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ, ಮೊಣಕಾಲು ಸೊಂಟ ಮತ್ತು ಎದೆ ಇವುಗಳ ನೋವು, ತೋಳು ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು, ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು ಸೀಸೆ ೧ ಕ್ಕೆ ೧ ರೂ ೩ ಬಾಟ್ಲಿ ವರೆಗೆ ವಿ ಪಿ. ಛಾಂಗಿ ಚಾರ್ಜು ೫ ಆಣೆ

೫ ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು – ಬೋಳು ತಲೆ, ಸುಂಡು ಅಥವ ಕೂದಲು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ, ತಲೆಯನ್ನೂ ಮಿದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಗಳ ಕೂದಲನ್ನು ಹೇರಳವಾಗಿ ಬೆಳೆಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿ ಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು ಬೆಲೆ ಸೀಸೆ ೧ ಕ್ಕೆ ೮ ಆಣೆ ೨ ಸೀಸೆ ವರೆಗೆ ವಿ ಪಿ ಚಾರ್ಜು ೫ ಆಣೆ

೬ ನೇತ್ರಬಿಂದು.—ಮಬ್ಬಾದದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು, ಹೂವು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ೧ ಕ್ಕೆ ೮ ಆಣೆ. ವಿ ಪಿ ಚಾರ್ಜು ೬ ಸೀಸೆ ವರಿಗೂ ೫ ಆಣೆ.

೭. ಕರ್ಣಬಿಂದು —ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಅದನ್ನೂ ಕೀವು ಸುರಿಯುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು ಬೆಲೆ ಸೀಸೆ ೧ ಕ್ಕೆ ೮ ಆಣೆ ವಿ ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೮. ಹುಳಕಡ್ಡಿಗೆ ಔಷಧಿ —ಚರ್ಮರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವುದಿಲ್ಲ ಸೀಸೆ ೧ಕ್ಕೆ ೪ ಆಣೆ ವಿ ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ

೯. ಸುಖಭೇದಿ.—ಸ್ವಲ್ಪವೂ ಹೊಟ್ಟೆನೋವು, ಆಯಾಸ ಯಾವದೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು ಮಲಬಂಧ, ಅಜೀರ್ಣ, ವಾಯು. ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ ೧ ಕ್ಕೆ ೮ ಆಣೆ ವಿ ಪಿ ಚಾರ್ಜು ೬ ಸೀಸೆ ವರಿಗೂ ೫ ಆಣೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —P. SUBBAROY.

Porto Novo, South Arcot.

ವಿಳಾಸ.—ಪಿ. ಸುಬ್ಬರಾಯ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

43



ಕಳಹೊಟ್ಟೆಯ ನೋವು ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ಕೀಲುಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಬಲವಾದ ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ —"ಕೆಳ ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ, ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು ಹೊಟ್ಟೆ ತೊಳಸುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ತತ್ಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು ಈಗಲೇ ಕೊಂಡು ತರಿಸಿ, ಪ್ರಾಣವನ್ನು ಬದುಕಿಸಿಕೊಳ್ಳಬಹುದು ಕ್ರಯ ೧ ಬಾಟ್ಲಿಗೆ ೧ ರೂ , ೨ ರೂ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಶಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ನುತ್ತು ಕೆಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್

WANTED WILD ANIMALS.

ಬೇಕಾಗಿದೆ ಬೇಕಾಗಿದೆ.

30

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಗಾರ್ಡನ್ ರೇಂಜ್ ನ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to— MR HUGHES MYSORE ZOO

ಸವಿನುಡಿ

2

ಲೋಕಹಿತಕ್ಕೋಸ್ಕರ ಪ್ರಕಟವಾಗುವ ಕನ್ನಡ ಮಾಸಪತ್ರಿಕೆ

ವಾರ್ಷಿಕ ಚಂದಾ.— ಅಂಚೆ ವೆಚ್ಚದ ಸಮೇತ ಪುಸ್ತಕದವರಿಗೆ ಒಂದು ರೂಪಾಯಿ ಎಂಟಾಣೆ, ಇತರರಿಗೆ ಹನ್ನೆರಡಾಣೆ, ವಿದ್ಯಾರ್ಥಿಗಳಿಗೆ ಒಂಭತ್ತಾಣೆ. ನಾಲ್ಕು ಅಥವಾ ಹೆಚ್ಚು ಮಂದಿ ವಿದ್ಯಾರ್ಥಿಗಳು ಒಟ್ಟಾಗಿ ತರಿಸಿಕೊಂಡರೆ ಒಬ್ಬೊಬ್ಬರಿಗೆ ಅರೆಯಾಣೆಯಂತೆ ಬಿಳುವದು ಚಂದಾ ಹಣ ವಿ ಪಿ ದ್ವಾರ ಅಥವಾ ಮುಂಗಡ ಮಾಡುವ ಸಂಚಿಕೆ ಪುಸ್ತಕಕ್ಕೆ ಹಿಂದಿನ ಸಂಚಿಕೆಯೊಂದಕ್ಕೆ ನಾಲ್ಕಾಣೆ. ಪತ್ರಿಕೆಯ ಪ್ರಯೋಜನವನ್ನು ಕುರಿತು ನಾವಿಲ್ಲಿ ಬರೆಯುವುದಿಲ್ಲ. ಓದುವವರಿಗೆ ತಾನಾಗಿ ತಿಳಿಯುತ್ತದೆ.

ವಿಳಾಸ —ಭಾರತಿ ಸಂಪಾದಕರು, ಸಂಪಾದಕ, ಹೊಸಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್

ಐದು ವರುಷದ ಪಂಚಾಂಗ. ಕ್ರಯ –೩ ಆಣೆ.

2

ಈ ವರುಷದ ಪಂಚಾಂಗದಲ್ಲಿ ದರವರುಷದಂತೆ ಪಂಚಾಂಗಭಾಗಗಳನ್ನೆಲ್ಲಾ ಪೂರ್ಣವಾಗಿ ಬರೆದಿರುತ್ತೇವೆ ಮತ್ತು ಪರಾಭವ, ಪ್ಲವಂಗ, ಕೀಲಕ, ಸೌಮ್ಯ, ಸಾಧಾರಣ ಸಂವತ್ಸರಗಳ ಫಲವನ್ನು ವಿಶದವಾಗಿ ಹಾಕಿರುತ್ತೇವೆ ಹುಟ್ಟಿದ ಸಂವತ್ಸರಾದಿಗಳನ್ನು ತಿಳಿದುಕೊಳ್ಳುವ ನಷ್ಟಜಾತಕ, ಗಣಿತಕ್ರಮ, ಸಾಮುದ್ರಿಕಾಶಾಸ್ತ್ರ, ಅಶ್ವಪರೀಕ್ಷಾಶಾಸ್ತ್ರ, ಜಲಶಿಲ್ಪಶಾಸ್ತ್ರ ವಿಚಾರವು ನವಗ್ರಹ ಶಾಂತಿಕ್ರಮ, ಪ್ರತಿ ಒಬ್ಬರಿಗೂ ದರವರುಷ ಪ್ರತಿ ತಿಂಗಳಲ್ಲಿ ಬರುವ ಸುಖಕಷ್ಟಫಲಗಳನ್ನು ತಿಳಿಯುವ ಕ್ರಮ, ದೇವಸ್ಥಾನಗಳಲ್ಲಿ ಇರತಕ್ಕ ಶಿಲಾ ಶಾಸನಗಳನ್ನು ಓದುವದಕ್ಕೆ ಸುಲಭೋಪಾಯ, ಪ್ರತಿ ತಿಂಗಳಲ್ಲಿ ವ್ಯಾಪಾರವು ತೇಜಮಂದ ಆಗುವದನ್ನು ತಿಳಿಯುವ ಕ್ರಮ, ಹೋರವೃಷ್ಟಿ ಮೊದಲಾದ ಅನೇಕ ವಿಧ ಸೂಕ್ತಿಗಳು, ಸಮಸ್ತ ಮುಹೂರ್ತಗಳು, ವೃತಾದಿ ಪುಣ್ಯದಿನಗಳು, ಜನನಕ್ಕೆ ದುಷ್ಟನಕ್ಷತ್ರಗಳ ವಿಚಾರ, ಸಮಸ್ತರ ಹೆಸರಿಗೂ ಪರಾಭವ ಸಂವತ್ಸರದ ಗುರು ಶನಿಗಳ ಗೋಚಾರ ಫಲಗಳನ್ನು ನಿರ್ಣಯಮಾಡಿ ಹಾಕಿರುತ್ತೇವೆ. ಇನ್ನೂ ಅನೇಕ ಅಪೂರ್ವ ವಿಷಯಗಳನ್ನೂ ಬರೆದಿರುತ್ತೇವೆ. ಅಪೇಕ್ಷೆಯುಳ್ಳವರು ೫ ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳಿರಿ

ವಿದ್ಯಾವರ್ಧಿನೀ ಆಫೀಸು, ಹರಪನಹಳ್ಳಿ. | ಹರಪನಹಳ್ಳಿ ತಲಗಿಮಠದ ಬ್ರ ಶ್ರೀ. ಸಿದ್ಧಾಂತಿ ಹೊಳೆ ಬಸವಶಾಸ್ತ್ರಿಗಳು.

ವೃತ್ತಾಂತ ಪತ್ರಿಕೆ.

ಸರ್ ೧೯೦೫ ನೇ ಇಸವಿ ನವೆಂಬರ್ ತಾ|| ೨ ನೇ ಗುರುವಾರ

ಕಾಶ್ಮೀರಸಂಸ್ಥಾನದ ಮಹಾರಾಜರವರು

ವೈಸ್‌ರಾಯಿ ಲಾರ್ಡ್ ಕರ್ಸನ್ ಪ್ರಭುಗಳು ಕಾಶ್ಮೀರ ಸಂಸ್ಥಾನಕ್ಕೆ ದಯಮಾಡಿ, ಶ್ರೀಮನ್ ಮಹಾರಾಜರವರಿಗೆ ಸಂಸ್ಥಾನವನ್ನಾಳುವ ಸಂಪೂರ್ಣಾಧಿಕಾರವನ್ನು ಕಳೆದ ಗುರುವಾರ ವಹಿಸಿ ಕೊಟ್ಟರು. ಆಗ್ಗೆ ಅವರು ಪ್ರಕಟಪಡಿಸಿದ ವಿಶೇಷ ಸಂಗತಿಯೇನೆಂದರೆ, ಚಕ್ರವರ್ತಿ ಸಾರ್ವಭೌಮರವರ ಗವರ್ನಮೆಂಟಿನವರು ಈ ಹಿಂದೂಸ್ಥಾನದ ದೇಶೀಯ ಸಂಸ್ಥಾನಗಳ ವಿಷಯದಲ್ಲೂ ರಾಜರುಗಳ ವಿಷಯದಲ್ಲೂ ಸರ್ವದಾ ಅವಿಚ್ಛಿನ್ನವಾದ ಪ್ರೀತಿವಾತ್ಸಲ್ಯಗಳಿಂದ ಕೂಡಿದವರಾಗಿರುತ್ತಾರೆ. ಈ ದೇಶವನ್ನಾಳುವ ಅಧಿಕಾರಿಗಳು ಇಲ್ಲಿನ ಪ್ರಜೆಗಳ ಸ್ವಭಾವಜನ್ಯವಾದ ಮತ್ತು ನ್ಯಾಯವಾದ ಇಂಗಿತಗಳನ್ನು ಕುತೂಹಲವನ್ನು ಬರ ಬರ ಹೊಂದಿಸಿ ನೊಂದಿಸುತ್ತಾ ಬರುವರೆಂಬ ಅಭಿಪ್ರಾಯವನ್ನು ಲೋಕರು ಇಟ್ಟುಕೊಂಡಿರಾರೆ ಇದಕ್ಕಿಂತಲೂ ಸಿಂಹಾಸನದ ಅಧಿಕಾರವು ಬೇರೊಂದಿರಲಾರದು ಅನೇಕ ದೇಶೀಯ ವರ್ತಮಾನ ಪತ್ರಿಕೆಗಳು ಇಂತಾ ಮರೆಮಾಚುವಷ್ಟು ಕೊಂಡು, ಆತುರತನ ರೀತಿ ಮೇರೆ ದೋಷಾರೋಪಣೆಗಳನ್ನು ಸುತ್ತಿರಾರೆ ಕಾಶ್ಮೀರದ ಮಹಾರಾಜರವರು—ಲಾರ್ಡ್ ಕರ್ಸನ್ ರವರ ಆಳಿಕೆಯು ಈ ರಾಷ್ಟ್ರದ ಪ್ರಜಾಕೋಟಿಗಳ ವಿಷಯದಲ್ಲಿ ದಯಾಪೂರ್ಣ ಪ್ರೀತವಾಗಿತ್ತೆಂಬ ಕೀರ್ತಿ ಮುಕ್ತವಾಗಿರುವದೆಂತಲೂ, ಅವರು ಪ್ರಜೆಗಳ ಶ್ರೇಯೋಭಿವೃದ್ಧಿಯನ್ನೇ ವಿಶೇಷವಾಗಿ ಬಯಸಿ ರಾಜ್ಯಭಾರ ನಡೆಸಿರುತ್ತಾರೆಂತಲೂ ಹೇಳಿರುವರು ಈ ವಾಕ್ಯಗಳು ಯಥಾರ್ಥವಾದುವುಗಳೆಂದು ನಾವು ಒಪ್ಪಿಕೊಳ್ಳುತ್ತೇವೆ ಚಕ್ರವರ್ತಿ ಸಾರ್ವಭೌಮರವರ ಗವರ್ನಮೆಂಟಿನವರಿಗೆ ಈ ರಾಷ್ಟ್ರದ ಪ್ರಜೆಗಳನ್ನು ಹಿಂಸಿಸಿ ಕಷ್ಟಕ್ಕೆ ಗುರಿಮಾಡುವುದರಿಂದ ಏನು ಪ್ರಯೋಜನವೇನು? ಹಿಂದೂಸ್ಥಾನದ ಏಳಿಗೆಯೂ ಇಂಗ್ಲಿಷ್ ರಾಜ್ಯದ ಏಳಿಗೆಯೂ ಒಂದಕ್ಕೊಂದು ಕಾರ್ಯಕಾರಣವಾಗಿರುವವು ಇಂಗ್ಲಿಷ್ ಗವರ್ನಮೆಂಟಿನವರ ಆಳ್ವಿಕೆಯಲ್ಲಿ ಈ ದೇಶವು ಸಕಲ ಭಾಗಗಳಲ್ಲೂ ಅಭ್ಯುದಯ ಸ್ಥಿತಿಯನ್ನೇ ಹೊಂದುತ್ತಾ ಬರುವುದೆಂದು ನಾವು ನಂಬುತ್ತೇವೆ ಇಂಥಾ ಸಾರ್ವಭೌಮರ ಭೌತಿಕ ಸಂಬಂಧವಾದ ಫಲ ಭಾರವನ್ನು ಳನ್ನುಳ್ಳವರೇ ಸ್ವಭಾವದ ದೇಶವನ್ನು ಆಳಿಸುವರು

ಮೆಟ್ರಿಕ್ಯುಲೇಷನ್ ಪರೀಕ್ಷೆಯೂ, ವಿದ್ಯಾರ್ಥಿಗಳ ವಯಸ್ಸೂ

ಪಂಜಾಬ್ ಆಧಿಪತ್ಯದ ಯೂನಿವರ್ಸಿಟಿ ವಿದ್ಯಾಸಂಘದವರು ವಿದ್ಯಾರ್ಥಿಗಳ ಹದಿನಾಲ್ಕು ವರುಷ ತುಂಬಿದ ಹೊರತು ಅವರನ್ನು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಸೇರಿಸಿಕೊಳ್ಳಕೂಡದೆಂದು ಈಚೆಗೆ ವಿಧಾಯಕ ಮಾಡಿಕೊಂಡರು. ಇಂಡಿಯಾ ಗವರ್ನಮೆಂಟಿನ ಸೆಕ್ರೆಟರಿ ಯವರು ಆ ವಿದ್ಯಾಭ್ಯಾಸ ಸಂಘದವರಿಗೆ—ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಯ ವಯಸ್ಸು ಹದಿನಾರಕ್ಕಿಂತ ಕಡಿಮೆಯಾಗಿರುವುದು ತರವಲ್ಲವೆಂದು ಗವರ್ನಮೆಂಟಿನವರಿಗೆ ಕಂಡ ಬರುತ್ತಿದೆ ಎಂದು ಬರೆದು ತಿಳಿಸಿದರು. ಹೀಗೆ ತಿಳಿಸುವುದಕ್ಕೆ ಕಾರಣವೇನೆಂದರೆ, ಹಿಂದುಸ್ಥಾನಕ್ಕೆ ಸೇರಿದ ವಿದ್ಯಾಸಂಘಗಳೆಲ್ಲಾ ಏಕರೀತಿಯಾದ ಕಟ್ಟಳೆ ಇರಬೇಕಾದದ್ದು ಅವಶ್ಯ, ಮತ್ತು ಈ ವಿದ್ಯಾಸಂಘಗಳು ಬಹುಮಟ್ಟಿಯೂ ಹದಿನಾರು ವರುಷಗಳೆಂದು ಕಂಡುಬರುತ್ತದೆ ಇದಲ್ಲದ ಚಿಕ್ಕ ವಯಸ್ಸಿನಲ್ಲಿ ಕಾಯಪುಷ್ಟಿ ಚನ್ನಾಗಿಲ್ಲದಿರುವಾಗ್ಗೆ ವಿದ್ಯಾರ್ಥಿಗಳಿಗೆ ಪ್ರೌಢವಿದ್ಯೆಯನ್ನು ಕಲಿಸುವುದಕ್ಕಾಗಲಿ ಕಲಿಯುವಂತೆ ಪ್ರೋತ್ಸಾಹಪಡಿಸುವುದಕ್ಕಾಗಲಿ ಕಟ್ಟಳೆಗಳನ್ನು ಮಾಡುವುದು ಯು

ವೆಂದು ಕಾಣುವುದಿಲ್ಲವೆಂತಲೂ ಸಹ್ಸ್ರವರಾಯವರು ತಿಳಿಸುತ್ತಾರೆ. ಗವರ್ನಮೆಂಟಿನವರು ಈ ರೀತಿ ತೀರ್ಮಾನ ಮಾಡಿರುವುದು ಸಹಜವಾಗಿದೆ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಹದಿನಾರು ವರುಷಕ್ಕಿಂತ ಚಿಕ್ಕವರು ಇಂಗ್ಲಿಷ ವಿದ್ಯೆಯನ್ನು ಕಲಿತರೂ ಅದರಿಂದ ಅವರಿಗಾಗುವ ಪ್ರಯೋಜನ ಅಷ್ಟರಲ್ಲೇ ಇದೆ. ಅವರಲ್ಲಿ ಅನ್ಯಭಾಷೆಯಲ್ಲಿ ಕಲಿಯುವುದೆಂದರೆ ಇನ್ನೂ ಕಷ್ಟ. ಅತ್ತಲಾಗಿ ಇಂಥ ಪಟ್ಟಣದ ಯೂನಿವರ್ಸಿಟಿಯವರು ಹದಿನಾರು ವರುಷ ತುಂಬದ ವಯಸ್ಸಿನ ಹುಡುಗರನ್ನು ಮೆಟ್ರಿಕ್ಯುಲೇಷನ್‍ಗೆ ಅಂಗೀಕರಿಸುವುದಿಲ್ಲ. ಮತ್ತು ಅಲ್ಲಿ ಅನೇಕ ಸಂದರ್ಭಗಳಲ್ಲಿ ಚಿಕ್ಕ ವಯಸ್ಸಿನವರಿಗೆ ಅಷ್ಟು ಯೋಗ್ಯತೆಯೇ ಇಲ್ಲವೆಂದೂ ಕಂಡುಬಂದಿದೆ. ಇಂಗ್ಲೀಷು ಮಾತೃಭಾಷೆಯಾಗುಳ್ಳವರ ಸ್ಥಿತಿಯೇ ಹೀಗಿರುವಲ್ಲಿ ಈ ದೇಶದ ಸಣ್ಣ ವಯಸ್ಸಿನ ವಿದ್ಯಾರ್ಥಿಗಳಿಗೆ ಅದನ್ನು ಅನ್ಯಭಾಷೆಯಾಗಿ ಕಲಿಯುವುದಕ್ಕೆ ಯೋಗ್ಯತೆ ಇರುತ್ತದೆಂದು ಹೇಳಲಾಗುವುದಿಲ್ಲ.

ಒಳದೇಶದ ವೃತ್ತಾಂತಗಳು

ಬೆಂಗಳೂರು ಚಾಮರಾಜಪೇಟೆಗೂ ಬಸವನಗುಡಿಗೂ ಮಧ್ಯೆ ಇರುವ ನಿವೇಶನವನ್ನು ಕೊಂಡುಕೊಂಡಿರುವ ಮ॥ ರಘುನಾಥರಾಯರು ಕಟ್ಟಿಸಬೇಕೆಂತಲೂ ಆ ನಿವೇಶನದಲ್ಲಿ ಅವರು ೧೦ ಸಾವಿರ ರೂಪಾಯಿಗೆ ಕಮ್ಮಿ ಇಲ್ಲದಂತೆ ಖರ್ಚು ಮಾಡಿ ಛತ್ರವನ್ನು ಕಟ್ಟಿಸಬೇಕೆಂತಲೂ ತೀರ್ಮಾನವಾಗಿದೆ

*****

ಚಿರಿಗಾವೆಯಲ್ಲಿದ್ದ ದೊಡ್ಡ ಬ್ರಾಹ್ಮಣನವರೆಂಬ ಸಾಹುಕಾರರು ಕಳೆದ ತಾ ೨೩ ರಲ್ಲಿ ಕಾಲವಾದರು. ಇವರು ಬಹಳ ದಾನ ಧರ್ಮಗಳನ್ನು ಮಾಡಿ ಆ ಪ್ರಾಂತ್ಯದ ಜನರ ಪ್ರೀತಿಗೆ ಪಾತ್ರರಾಗಿದ್ದರು. ಅವರ ಪತ್ನಿಯೂ ನಾಲ್ವರು ಪುತ್ರರೂ ವಿಯೋಗ ದುಃಖವನ್ನನುಭವಿಸುತ್ತಿದ್ದಾರೆಂದು ಒಬ್ಬ ಬಾತ್ಮೀದಾರರು ಬರೆಯುವರು.

*****

ಬರುವ ಜನವರಿ ತಿಂಗಳಲ್ಲಿ ಬೊಂಬಾಯಿನ ಪಶ್ಚಿಮದ ಮೋಟಾರ್ ಕಾರ್ ಎಂಬ ಗಾಡಿಗಳ ಜೂಜು ನಡೆಯುವುದು. ಈ ಜೂಜಿನಲ್ಲಿ ಗೆದ್ದವರಿಗೆ ಕೆಲವರು ಇನಾಮು ಕೊಡುವುದಾಗಿ ಹಣ ಕೊಟ್ಟಿದ್ದಾರೆ. ನಮ್ಮ ಮಹಾರಾಜರವರೂ ಸುಮಾರು ೩,೨೦೦ ರೂಪಾಯಿ ಬೆಲೆಯುಳ್ಳ ಒಂದು ಒಡವೆಯನ್ನು ಬಹುಮಾನ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

*****

ಮದರಾಸ್ ರೈಲ್ ಕಂಪನಿಯವರು ಬೆಂಗಳೂರು ಪಟ್ಟಣದ ಪೂರ್ವ ತಮ್ಮ ರೈಲು, ಸ್ಟೇಷನ್ ಸರಹದ್ದಿಗೆ ಸೇರಿದ ರೋಡ್, ನೀರಿನ ಹೋಗ, ಮೋರಿ ಕಂದಾಯ ಎಲ್ಲಾ ಒಟ್ಟು ವರುಷಕ್ಕೆ ೧,೬೦೦ ರೂಪಾಯಿಯಂತೆ ಇನ್ನು ಹತ್ತು ವರುಷಗಳ ತನಕ ಕೊಡುತ್ತೇವೆಂದು ಸಿಟಿ ಮ್ಯುನಿಸಿಪಲ್‌ಕಮಿಟಿಯವರಿಗೆ ತಿಳಿಸಿದರು. ಇವರು ಈ ಹಣವನ್ನು ಬದಲಾಗಿ ೨,೦೦೦ ರೂಪಾಯಿಯಂತೆ ಕೊಡುವುದು ಸಹಜವಾಗಿ ಬೇಕೆಂತಲೂ ಜವಾಬು ಕೊಟ್ಟಿದ್ದಾರೆ.

*****

ರಾಜಧಾನಿಯ ಅರಮನೆ ಅನೇಕರೋಡಿಪಟ್ಟಣದ ಬಳಿಗೆ ಕೆಲವು ದಿನಗಳಿಂದ ರಾತ್ರಿ ಹೊತ್ತು ಒಂದು ಕಿರುಬನು ಬರುತ್ತಾ, ಒಂದು ಕುರಿಯನ್ನು ಸಹ ಕೊಂಡುಹೋಗಿ, ಆ ಪ್ರಾಂತ್ಯದ ಜನರಿಗೆ ತುಂಬಾ ಗಾಬರಿಯನ್ನುಂಟುಮಾಡಿತ್ತು. ಭಕ್ಷಿಬಸಪ್ಪಾಜಿ ಅರಸಿನವರು ಅಲ್ಲಿ ಒಂದು ಬೋನು ಇಡಿಸಿ, ಅದನ್ನು ಹಿಡಿಯುವುದಕ್ಕೆ ಸನ್ನಾಹ ಮಾಡಿದರು. ಮೊನ್ನೆ ರಾತ್ರಿ ಕಿರುಬನು ಬಂದು ಬೋನಿನಲ್ಲಿ ಸಿಕ್ಕಿಬಿದ್ದಿತು. ಬಹು ಜನರು ಹೋಗಿ ಅದನ್ನು ನೋಡಿ ಬರುತ್ತಿದ್ದಾರೆ

*****

ದಿವಾನ್ ಸರ್ ವಿ. ಪಿ. ಮಾಧವರಾವ್ ಕೃಷ್ಣಮೂರ್ತಿಯವರು ಕಳೆದ ಶುಕ್ರವಾರ ಬೆಳಿಗ್ಗೆ ರಾಜಧಾನಿಯಿಂದ ಹೊರಟು ಹೆಗ್ಗಡದೇವನ ಕೋಟೆ ತಾಲ್ಲೂಕುಗಳ ಪ್ರಾಂತ್ಯ ಸಂಚಾರ ಮಾಡಿಕೊಂಡು, ಈ ದಿನ ವಾಪಸು ದಯಮಾಡುವವರಾಗಿದ್ದಾರೆ. ಅವರು ದಯಮಾಡುವ ಕಡೆಗಳಲ್ಲಿ ಚಪ್ಪರ ಮುಂತಾದ ಅಲಂಕಾರಗಳನ್ನು ಮಾಡಬೇಕಾದ್ದಿಲ್ಲವೆಂದು ಮೊದಲೇ ಆಯಾ ಸ್ಥಳಾಧಿಕಾರಿಗಳಿಗೆ ಅಪ್ಪಣೆ ಕೊಟ್ಟಿದ್ದರೆಂದು ತಿಳಿದು ಬರುತ್ತದೆ. ಪ್ರಿನ್ಸ್ ಆಫ್ ವೇಲ್ಸ್‌ರವರ ಶಿಕಾರಿಗೋಸ್ಕರ ಖೆಡ್ಡಾ ಶಿಕಾರಿ, ಆನೆಬಂಗಲೆ ಮೊದಲಾದ ಏರ್ಪಾಡುಗಳನ್ನು ಪರಿಶೀಲನೆ ಮಾಡಿಕೊಂಡು ಬರುವುದಕ್ಕಾಗಿ ದಿವಾನರವರು ಈ ಪ್ರಾಂತ್ಯ ಸಂಚಾರ ಹೊರಟಿದ್ದಾರೆ.

*****

ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡುವಾಗ್ಗೆ ರಾಜಧಾನಿಯಲ್ಲಿ ಅಲಂಕಾರ, ದೀಪೋತ್ಸವಾದಿಗಳನ್ನು ನಡೆಸುವುದಕ್ಕಾಗಿ ಒಂದು ಕಮಿಟಿ ಏರ್ಪಾಡಾಗಿದೆ. ಇದರಲ್ಲಿ ಡೆಪ್ಯುಟಿ ಕಮೀಷನರು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರು, ಅರಮನೆ ಕಾಮಗಾರಿಯ ಎಕ್ಸಿಕ್ಯುಟಿವ್ ಇಂಜಿನಿಯರವರು, ಅಮೃತಮಹಾಲ್ ಸೂಪರಿಂಟೆಂಡೆಂಟ್ ಮ॥ ಕಂಟುಂಡರಾಜೇ ಅರಸಿನವರು, ಅರಮನೆ ಮಾರಕ ಭಕ್ಷಿ ಮ॥ ಲಿಂಗರಾಜೇ ಅರಸಿನವರು, ಮ್ಯುನಿಸಿಪಲ್ ಕಮಿಷನರಾದ ಮ॥ ಗಳು ಜಂಗಲ್ಲಿ ಬೇಗ್ ಯವರು, ಅಣ್ಣಾಸ್ವಾಮಿ ಪಂಡಿತರು, ಮಾದಪ್ಪನವರು, ಅನಂತರಾಜೈಯನವರು. ತಿರುವೆಂಗಡಂ ಪಿಳ್ಳೆಯವರು, ವೆಂಕಟಕೃಷ್ಣಯ್ಯನವರು, ಈ ೧೧ ಮಂದಿಯೂ ಮೆಂಬರುಗಳಾಗಿದ್ದಾರೆ. ರಾಜಧಾನಿಯಲ್ಲಿ ೯,೦೦೦ ರೂಪಾಯಿ ಖರ್ಚುಮಾಡಿ ೧೩ ತರಹವಾದ ಕಮಾನುಗಳನ್ನೂ ೩ ಚಪ್ಪರಗಳನ್ನೂ ಹಾಕಿಸುತ್ತಾರೆಂತಲೂ, ದೀಪೋತ್ಸವದ ಖರ್ಚಿಗೆ ೩,೦೦೦ ರೂಪಾಯಿ ತೆಗೆದಿಟ್ಟಿದ್ದಾರೆಂತಲೂ ಕೇಳುತ್ತೇವೆ. ಇದಲ್ಲದೆ ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಒಂದು ದಿನ ರಾತ್ರಿ ಟೌನ್ ಹಾಲ್ ಬಂಗಲೆಗೆ ಕರೆಸಿಕೊಂಡು, ಅವರಿಗೋಸ್ಕರ ನಾನಾ ಆಟಪಾಟ ವಿನೋದಗಳನ್ನು ಕಲ್ಪಿಸುವವರಾಗಿದ್ದಾರೆ.

*****

ರಾಜಧಾನಿಯ ಸಬ್ ರಿಜಿಸ್ಟ್ರಾರ್ ಆಫೀಸಿನ ಹೆಡ್ ಕ್ಲಾರ್ಕ್ ಸುಬ್ಬರಾಯರು ಗುಲಾಂ ದಸ್ತಗೀರ್ ಎಂಬ ಇಲ್ಲಿನ ವರ್ತಕನಿಂದ ೭ ಆಣೆ ಲಂಚ ಕೇಳಿದರೆಂದು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದಾಗಿ ಅವರಿಗೆ ೫೦ ರೂ ಜುಲ್ಮಾನೆ ಅಥವಾ ೨ ತಿಂಗಳ ಸಾದಾ ಸಜಾ ಎಂಬ ಶಿಕ್ಷೆ ಆಯಿತೆಂದೂ ಆಬಳಿಕ ಸುಬ್ಬರಾಯರು ಸೆಷನ್ಸ್ ಕೋರ್ಟಿನಲ್ಲಿ ಅಪೀಲ್ ಮಾಡಿದ್ದಾರೆಂದೂ ತಿಳಿಸಿದ್ದೆವಷ್ಟೆ. ಸೆಷನ್ಸ್ ಜಡ್ಜರು ಈ ಮೊಕದ್ದಮೆಯನ್ನು ವಿಚಾರಿಸಿ ಮಾಡಿ, ಕಳೆದ ೧೭ನೇ ತಾರೀಖಿನಲ್ಲಿ ತೀರ್ಮಾನ ಹೇಳಿದರು. ೧೩ ವರುಷ ಸರ್ವಿಸ್ ಮಾಡಿದ ಸುಬ್ಬರಾಯರು ೭ ಆಣೆ ಲಂಚ ಕೇಳಿದರೆಂಬುವುದನ್ನು ಸೆಷನ್ಸ್ ಜಡ್ಜರು ನಂಬದೆ ಕೆಳಕೋರ್ಟಿನ ತೀರ್ಪನ್ನು ವಜಾ ಮಾಡಿರುತ್ತಾರೆ.

*****

ಕಳೆದ ಶನಿವಾರ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ರಾಜಧಾನಿಯ ತಿಂಗಳು ಕಮಿಟಿಯ ಮೀಟಿಂಗ್ ನಡೆಯಿತು. ಸೆಪ್ಟಂಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ೧೪,೨೩೭ ಚಿಲ್ಲರೆ ರೂಪಾಯಿ ಉತ್ಪತ್ತಿಯೂ, ೧೦,೮೩೯ ಚಿಲ್ಲರೆ ರೂಪಾಯಿ ಖರ್ಚೂ ಆಯಿತು. ಜನನ ೧೦೦, ಮರಣ ೧೩೬ ಆದವು. ಅಕ್ಟೋಬರು ಉತ್ಪತ್ತಿಯಲ್ಲಿ ೫೦೦ ರೂಪಾಯಿನ ಹಸಿರು ಕಡಿಮೆಯಾಯಿತು. ನೋಟೀಸ್ ಫಾರಂ ಬಾಬಿನಲ್ಲಿ ಇನ್ನೂ ೪೪,೨೦೦ ಚಿಲ್ಲರೆ ರೂಪಾಯಿ ವಸೂಲಾಗದೆ ಬಾಕಿ ನಿಂತಿದೆ. ಚಟ್ಟಹಳ್ಳಿ ಟೋಲ್ ಗೇಟ್ ಕಂಟ್ರಾಕ್ಟರು ಆ ಟೋಲ್ ಗೇಟನ್ನು ತೆಗೆದು ಹೊಸ ಹೊಲಗೇರಿ ಮತ್ತು ಇಟ್ಟಿಗೆಹಳ್ಳಿ ರಸ್ತೆಗಳು ಸೇರುವ ಕಡೆಯಲ್ಲಿ ಇಟ್ಟುಕೊಳ್ಳಬಹುದೆಂತಲೂ, ವಿರೂಪಾಕ್ಷ ಪಂಡಿತರಿಗೆ ವೈದ್ಯ ತಿಳಿಯದಿರೋಣದರಿಂದ ಕರ್ನಾಟಕ ಆಸ್ಪತ್ರೆಯಲ್ಲಿ ಕೆಲಸ ಕೊಡಲಾಗುವುದಿಲ್ಲವೆಂತಲೂ, ಟ್ರಸ್ಟ್ ಬೋರ್ಡಿನವರ ತೈನಾತಿಯಲ್ಲಿದ್ದ ಕನ್ಸರ್ವೆನ್ಸಿ ಕೆಲಸದವರನ್ನು ಮತ್ತೆ ಮ್ಯುನಿಸಿಪಾಲಿಟಿಯವರು ಸನಂಬರ್ ೧ರಿಂದ ವಹಿಸಿಕೊಳ್ಳಬೇಕೆಂತಲೂ, ಎನ್ಗಾಣ ರೈಲ್ ಮನೆಗಳ ಬಳಿ ಕಟ್ಟುರುವ ಹೊಸ ಆಸ್ಪತ್ರೆಗೆ ಸಾಮಾನುಗಳನ್ನು ಕೊಂಡು ತರಿಸಬೇಕೆಂತಲೂ, ಮ್ಯುನಿಸಿಪಲ್ ಇಂಜಿನಿಯರು ಕೇಳುವಂತೆ ಅವರ ಅಲೋವೆನ್ಸನ್ನು ೨೦ರಿಂದ ೩೦ ರೂಪಾಯಿಗೆ ಬದ್ಧಿಮಾಡಲು ಅವಕಾಶ ಕಾಣುವುದಿಲ್ಲವೆಂತಲೂ, ಇಲ್ಲಿನ ಅಯುರ್ವೇದಿಕ ಪಾಠಶಾಲೆಗೆ ಮೊದಲೇ ಸ್ಕೂಲ್ ಕಮಿಟಿಯವರು ತೀರ್ಮಾನಿಸಿ ಶಿಫಾರಸು ಮಾಡಿರುವಂತೆ ತಿಂಗಳಿಗೆ ೧೫ ರೂಪಾಯಿ ಗ್ರಾಂಟು ಕೊಡಬಹುದೆಂತಲೂ ಮೆಂಬರುಗಳು ತೀರ್ಮಾನ ಮಾಡಿದರು

*****

ಈಗ ಏರ್ಪಾಡಾಗಿರುವ ಪ್ರಕಾರ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನೀಸಮೇತರಾಗಿ ಜನವರೀ ತಿಂಗಳು ೨೯ನೇ ತಾರೀಖು ಸೋಮವಾರ ಮಧ್ಯಾಹ್ನ ರಾಜಧಾನಿಗೆ ದಯಮಾಡಿಸುವರು. ಆ ದಿನ ಮಧ್ಯಾಹ್ನವೇ ಪ್ರಿನ್ಸ್ ಆಫ್ ವೇಲ್ಸ್‌ರವರಿಗೂ ನಮ್ಮ ಶ್ರೀಮನ್ಮಹಾರಾಜರವರಿಗೂ ಭೇಟಿ ಮತ್ತು ಮರುಭೇಟಿಗಳಾಗುವವು. ಸಾಯಂಕಾಲ ಪ್ರೈವೇಟಾಗಿ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಔತಣವು ನಡೆಯುವುದು. ಜನವರೀ ೩೦ ನೇ ತಾ॥ ಮಂಗಳವಾರ ರಾಜಧಾನಿಯೆಲ್ಲಾ ಅಲಂಕಾರಮಾಡಲ್ಪಡುವುದು. ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರು ಶ್ರೀರಂಗಪಟ್ಟಣಕ್ಕೆ ದಯಮಾಡಿ, ಅಲ್ಲಿ ನೋಡತಕ್ಕವುಗಳನ್ನೆಲ್ಲಾ ನೋಡಿ ಭೋಜನ ಮಾಡಿಕೊಂಡು, ಮಂಗಳವಾರ ಮಧ್ಯಾಹ್ನವೇ ರಾಜಧಾನಿಗೆ ವಾಪಸು ದಯಮಾಡಿಸುವರು. ಆ ದಿನ ಸಾಯಂಕಾಲ ಪ್ರಿನ್ಸ್ ಆಫ್ ವೇಲ್ಸ್‌ರವರಿಗೂ ಮತ್ತು ಶ್ರೀಮನ್ಮಹಾರಾಜರವರಿಂದ ಕರೆಯಲ್ಪಡುವ ಯೂರೋಪಿಯನ್ ಅತಿಥಿಗಳಿಗೂ ರೆಸಿಡೆನ್ಸೀ ಬಂಗಲೆಯಲ್ಲಿ ಸ್ಟೇಟ್ ಡಿನ್ನರ್ ಎಂಬ ಔತಣ ನಡೆಯುವುದು. ತರುವಾಯ ಬಾಣಬಿರುಸುಗಳಾಗುವವು. ೩೧ನೇ ತಾ॥ ಬುಧವಾರ ಮಧ್ಯಾಹ್ನ ೨ ಗಂಟೆಗೆ ಅವರು ಮೋಟಾರ್ ಕಾರ್ ಗಾಡಿಗಳಲ್ಲಿ ಕಾಡಿನ ಶಿಕಾರಿಗೆ ದಯಮಾಡಿಸುವರು. ಫೆಬ್ರವರಿ ೧, ೨, ೩ನೇ ತಾರೀಖುಗಳೆಲ್ಲಾ ಶಿಕಾರಿಯಲ್ಲಿ ವಿನಿಯೋಗಿಸಲ್ಪಡುವವು. ಫೆಬ್ರವರಿ ೪ನೇ ತಾ॥ ಖೆಡ್ಡಾ ಶಿಕಾರಿ ಪೂರೈಸಿಕೊಂಡು ರಾಜಧಾನಿಗೆ ದಯಮಾಡಿ, ಅದೇ ದಿನ ಸಾಯಂಕಾಲ ಬೆಂಗಳೂರಿಗೆ ದಯಮಾಡಿಸುವರು. ಪ್ರಿನ್ಸ್ ಆಫ್ ವೇಲ್ಸ್‌ರವರ ಖೆಡ್ಡಾಕ್ಕಾಗಿ ಎಂಬತ್ತು ಸಾವಿರ ರೂ, ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನಕ್ಕಾಗಿ ಮೂವತ್ತು ಸಾವಿರ ರೂ, ಫರ್ನಿಚರ್ ಮತ್ತು ಡೇರಾಗಳನ್ನು ಕೊಂಡು ತರುವುದಕ್ಕೆ ನಾಲ್ವತ್ತು ಮೂರು ಸಾವಿರ ರೂ, ಗವರ್ನಮೆಂಟ್ ಹೌಸ್ ಮತ್ತು ಬಂಗಲೆಗಳ ಅಬಾದಿಗಾಗಿ ಇಪ್ಪತ್ತು ಸಾವಿರ ರೂ, ಔತಣಗಳಿಗಾಗಿ ಮೂವತ್ತು ಸಾವಿರ ರೂ, ಕುದುರೆ ಮತ್ತು ಪೋನಿಗಳ ರಾತೀಬಿಗಾಗಿಯೂ ನೌಕರರ ಭತ್ಯಕ್ಕಾಗಿಯೂ ಎರಡು ಸಾವಿರ ರೂ, ಡೇರೆ ಮೊದಲಾದವುಗಳನ್ನು ಹೊಡೆಯುವುದಕ್ಕಾಗಿ ನಾಲ್ಕು ಸಾವಿರ ರೂ, ಕ್ಯಾಂಪಿನ ವಿಚಾರಣೆಗೆ ಐದು ಸಾವಿರ ರೂ, ಹೊಸ ಮೋಟಾರ್ ಕಾರ್ ಗಾಡಿಗಳಿಗೆ ಹದಿನಾರು ಸಾವಿರ ರೂ., ಪ್ರಿನ್ಸ್ ಆಫ್ ವೇಲ್ಸ್‌ರವರ ಸ್ವಾಗತಪೂರ್ವಕವಾದ ಉಪಚಾರಾದೇಶಗಳಿಗೆ ಇಪ್ಪತ್ತು ಸಾವಿರ ರೂ, ರಾಜಧಾನಿಯಲ್ಲಿ ಬಾಣಬಿರುಸುಗಳಿಗೆ ಇಪ್ಪತ್ತು ಸಾವಿರ ರೂ., ಬೆಂಗಳೂರು ಪಟ್ಟಣದಲ್ಲಿ ಸ್ವಾಗತಪೂರ್ವಕವಾದ ಉಪಚಾರಾದಂಡೆಗಳಿಗೆ ಹದಿನೇಳು ಸಾವಿರ ರೂ, ರಾಜಧಾನಿಯಲ್ಲಿ ಚಿಲ್ಲರೇ ಖರ್ಚಿಗಾಗಿ ೩೪ ಸಾವಿರ ರೂ, ಈ ಪ್ರಕಾರ ಗವರ್ನಮೆಂಟಿನವರಿಂದ ವಿನಿಯೋಗಿಸಲ್ಪಡುವುದಾಗಿ ತೀರ್ಮಾನವಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಮಧುರೆಯಲ್ಲಿ ಸೌರಾಷ್ಟ್ರಸಭೆ ಎಂಬ ಸಂಘವು ಸೇರಿ ಅಲ್ಲಿ ಕಸಬುಗಳನ್ನು ಕಲಿಸುವ ವಿದ್ಯಾಶಾಲೆಯನ್ನು ಸ್ಥಾಪಿಸಿ, ನೇಯು ವದನ್ನೂ ಬಟ್ಟೆಗಳಿಗೆ ಬಣ್ಣಹಾಕುವದನ್ನೂ ಕಲಿಸಬೇಕೆಂದಿದಾರೆ.

*****

ಲಕ್ನೋಪಟ್ಟಣದ ಸದ್ದರ್ ಬಜಾರ್ ಎಂಬ ಪೇಟೆಯ ಮಗ್ಗುಲಲ್ಲಿ ಕಳೆದವಾರ ನಡೆಸಿದ ರಾಮರಾವಣರ ಯುದ್ಧವೆಂಬ ನಾಟಕವನ್ನು ನೋಡುವುದಕ್ಕೆ ಸುಮಾರು ೬೦,೦೦೦ ಜನ ಸೇರಿದ್ದರು. ದಸರಾ ಉತ್ಸವದ ಸಂತೋಷಾರ್ಥವಾಗಿ ಈ ಆಟವನ್ನು ಆಡಿದರಂತೆ.

*****

ಇಂಡಿಯಾದೇಶದ ಪೂರ್ವಭಾಗದ ಪ್ರಾಂತ್ಯದಲ್ಲೆಲ್ಲಾ ಈಸ್ಟ್ ಇಂಡಿಯನ್ ರೈಲ್ವೆ ಎಂಬ ರೈಲುಗಾಡಿಯು ಓಡಾಡುವುದಷ್ಟೆ. ಈ ಕಂಪನಿಯಲ್ಲಿ ಸುಮಾರು ೬೦ ಗಾಡಿಗಳ ವರೆಗೂ ಕೆಲಸಕ್ಕೆ ಬಾರದೆ ಹೋದಕಾರಣ ಪುನಃ ೧೨೦ ಗಾಡಿಗಳನ್ನು ತಯಾರುಮಾಡಿಸುವುದಕ್ಕೆ ೮ ಲಕ್ಷವೂ ೬೦ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

*****

ರಾಜಪುಟಾನಾಕ್ಕೆ ಸೇರಿದ ಅಜ್ಮೀರ್ ಮತ್ತು ಮೇವಾರಾ ಡಿಸ್ಟ್ರಿಕ್ಟುಗಳಲ್ಲಿ ಧವಸಗಳ ಧಾರಣೆ ಬಹಳ ಹೆಚ್ಚಾಗುತ್ತಾ ಬಂದಿದೆ. ವ್ಯವಸಾಯಗಾರರು ಹೆಚ್ಚಾಗಿ ಕ್ಷಾಮ ಪಡುತ್ತಿದಾರೆ. ರಿಲೀಫ್ ಕಾಮಗಾರಿ ಮಾಡಿ ಹೊಟ್ಟೆ ಹೊರೆಯುವ ಜನರು ದಿನೇ ದಿನೇ ಹೆಚ್ಚುತ್ತಿದಾರೆ. ಸುಮಾರು ೨೪,೭೦೧ ಜನರು ಈಗ ರಿಲೀಫ್ ಕಾಮಗಾರಿಗಳಲ್ಲಿ ಕೆಲಸ ಮಾಡುವರು

*****

ಧಾರ್ವಾಡದಲ್ಲಿರುವ ಗಂಡಸರ ಟ್ರೇನಿಂಗ್ ಕಾಲೇಜನ್ನು ಬಿಡಾವಣೆ ಮಾಡುವುದಕ್ಕೆ ೫೦ ಸಾವಿರ ರೂಪಾಯಿನ್ನೂ ಹೊಸದಾಗಿ ಹೆಂಗಸರ ಕಾಲೇಜನ್ನು ಕಟ್ಟುವುದಕ್ಕೆ ೬೦ ಸಾವಿರ ರೂಪಾಯಿಗಳನ್ನೂ ಸ್ಯಾಂಕ್ಷನ್ ಮಾಡಿದಾರೆ. ಹೆಂಗಸರ ಕಾಲೇಜನ್ನು ಪಟ್ಟಣದ ಮಧ್ಯೆ ಕಟ್ಟಬೇಕೆಂದಿದ್ದರು. ಆದರೆ ಅದನ್ನು ಈಗ ಪಟ್ಟಣದ ಹೊರಗೆ ಭಾಗವಾಗಿ ಕಟ್ಟ ಮಾಗಿಸಿರುತ್ತಾರೆ

*****

ಬೊಂಬಾಯಿ ಪಟ್ಟಣದ ಅನೇಕ ಹೆಂಗಸರು ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ನಿಯವರಿಗೆ ಇಂಗ್ಲಿಷ್, ಗುಜರಾತಿ, ಮರಾಟಿ, ಉರ್ದು, ಪಾರ್ಶಿ ಮತ್ತು ಕನ್ನಡ ಭಾಷೆಗಳಲ್ಲಿ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸುತ್ತಾರೆ. ಈ ಸಭೆಯು ಈ ತಿಂಗಳ ೧೧ ನೇ ತಾ॥ ಶನಿವಾರ ಸಾಯಂಕಾಲ ೬ ಗಂಟೆಗೆ ಸೇರುವುದು. ಚಂದಾದಾರರೆಲ್ಲರೂ ಈ ಸಭೆಗೆ ಕರೆಯಲ್ಪಡುವರು.

*****

ಇಂಡಿಯಾದಲ್ಲಿ ಇರುವ ಟೆಲಿಗ್ರಾಫ್ ಆಫೀಸುಗಳ ಕಳೆದ ವರ್ಷದ ರಿಪೋರ್ಟನ್ನು ಈಗ ಗೌರ್ನಮೆಂಟಿನವರು ಪ್ರಚುರಪಡಿಸಿರುತ್ತಾರೆ. ಅದರಿಂದ ತಿಳಿದು ಬರುವುದೇನೆಂದರೆ—ಕಳೆದ ವರುಷಕ್ಕಿಂತಲೂ ೫ ಲಕ್ಷ ರೂಪಾಯಿ ಹೆಚ್ಚು ಹುಟ್ಟುವಳಿ ಆಯಿತು. ಟೆಲಿಗ್ರಾಫ್ ಆಫೀಸುಗಳಲ್ಲಿ ಕೆಲಸ ಮಾಡುವವರ ಸಂಖ್ಯೆಯು ಹೆಚ್ಚಾದರಿಂದ ೧ ಲಕ್ಷವೂ ೨೯ ಸಾವಿರ ರೂಪಾಯಿ ಹೆಚ್ಚಾಗಿ ಖರ್ಚಾಯಿತು. ಕಳೆದ ವರ್ಷವೆಲ್ಲಾ ಒಟ್ಟು ೧,೧೧,೫೩ ೦೦೦ ಟೆಲಿಗ್ರಾಂಗಳು ಕಳುಹಿಸಲ್ಪಟ್ಟವು. ಅದೇ ವರುಷ ಸುಮಾರು ೧೫,೭೨೯ ಮೈಲಿ ದೂರ ಟೆಲಿಗ್ರಾಫ್ ತಂತಿಗಳನ್ನು ಹಾಕಿದರು.

*****

ಬೊಂಬಾಯಿನ ಅದಾಂಜಿ ಪೀರ್‌ಭಾಯ್‌ರವರ ಕಾರ್ಖಾನೆಯಲ್ಲಿ ಕೆಲಸಮಾಡುವವರೆಲ್ಲರೂ ಕಳೆದ ಶುಕ್ರವಾರ ಗುಂಪಾಗಿ ತಮ್ಮ ಆಫೀಸ್ ಮ್ಯಾನೇಜರಿನ ಹೊರಡಿಯ ಸುತ್ತಲೂ ಸೇರಿ ತಾವು ದಿನಕ್ಕೆ ೧೨ ಗಂಟೆಗಳಿಗಿಂತ ಹೆಚ್ಚಾಗಿ ಕೆಲಸಮಾಡುವುದಿಲ್ಲವೆಂತಲೂ, ರಾತ್ರಿ ಹೊತ್ತು ಕೆಲಸಮಾಡುವುದಕ್ಕಾಗುವುದಿಲ್ಲವೆಂತಲೂ ತಿಳಿಸಿದರು. ಮ್ಯಾನೇಜರವರು ಮಧ್ಯಾಹ್ನಕ್ಕೆ ತಿಳಿಸುತ್ತೇನೆಂದು ಜವಾಬು ಕೇಳಿದ್ದರ ಮೇಲೆ ಈಗಲೇ ಹೇಳಬೇಕೆಂದು ಹಟಹಿಡಿದರು. ಸ್ವಲ್ಪ ಹೊತ್ತಿನ ಮೇಲೆ ಮ್ಯಾನೇಜರು ಇನ್ನು ಮುಂದೆ ಕಾರ್ಖಾನೆಯು ಸಾಯಂಕಾಲ ೬ ಗಂಟೆಗೆ ಮುಚ್ಚಲ್ಪಡುತ್ತದೆಂದು ತಿಳಿಸಿದರು. ಆಗ ಅವರೆಲ್ಲಾ ಸಮಾಧಾನ ಹೊಂದಿ ಕೆಲಸದ ಮೇಲೆ ಹೋದರು.

*****

ಹೈದರಾಬಾದ್ ಸಂಸ್ಥಾನದ ನೈಜಾಮರು ತಮ್ಮ ರಾಜಧಾನಿಯಲ್ಲಿ ಹೆಂಗಸರಿಗೂ ಮಕ್ಕಳಿಗೂ ಒಂದು ಘೋಷಾ ಆಸ್ಪತ್ರೆಯನ್ನು ಕಟ್ಟುವುದಕ್ಕೆ ೩ ಲಕ್ಷ ರೂಪಾಯಿ ಕೊಟ್ಟಿರುತ್ತಾರೆ. ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ನಿಯವರೇ ತಾವು ಅಲ್ಲಿಗೆ ಬಂದಾಗ್ಗೆ ಇದಕ್ಕೆ ಅಸ್ತಿಭಾರವನ್ನು ಹಾಕುವರು. ಇದೂ ಅಲ್ಲದೆ ಈ ಆಸ್ಪತ್ರೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರ ಕೋನೇ ಪುತ್ರಿಯ ಹೆಸರನ್ನೇ ಇಡುತ್ತಾರೆ. ಲೇಡಿ ಕರ್ಜನ್, ಲೇಡಿ ಆಂಟ್ಹಿಲ್ ಮುಂತಾದವರೂ ಇದಕ್ಕೆ ಚಂದಾ ಹಾಕುತ್ತಾರೆ. ಈ ಆಸ್ಪತ್ರೆಯನ್ನು ಕಟ್ಟುವುದಕ್ಕೆ ನವಾಬ್ ಫಕ್ರುಲ್ ಮುಲ್ಕ್‌ರವರ ಅರಮನೆಯ ಮಗ್ಗುಲಲ್ಲಿರುವ ದೊಡ್ಡ ಮೈದಾನವನ್ನು ಗೊತ್ತುಮಾಡಿರುವರು.

ಒಬ್ಬರ ಪಾಪಪುಣ್ಯಗಳಿಗೆ ಬೇರೊಬ್ಬರು ಬಾಧ್ಯರಾಗಬಹುದೇ?

ಪಾಪಕ್ಷಮೆಯ ವಿಷಯದಲ್ಲಿ ಕ್ರೈಸ್ತಮತದಲ್ಲಿ ಹೇಳಿರುವ ಬೋಧಕೆಯನ್ನು ಕುರಿತು ಅನೇಕರು ಆಕ್ಷೇಪಣೆ ಮಾಡುತ್ತಾರೆ. ಹ್ಯಾಗೆಂದರೆ—ಕಾರ್ಯಕಾರಣಗಳು ಒಂದಕ್ಕೊಂದು ಸರಪಣಿಯಂತೆ ಬಂಧಿಸಿಕೊಂಡಿರುತ್ತದೆಂತಲೂ ಅಂಥ ಸಂಬಂಧವನ್ನು ಮುರಿಯುವದು ಅಸಾಧ್ಯವೆಂತಲೂ ಹೇಳುತ್ತಾರೆ ಇಷ್ಟೇ ಅಲ್ಲ. ಯಾವ ಮನುಷ್ಯನು ಎಂಥ ಕಾರ್ಯವನ್ನು ಮಾಡಿದಾಗ್ಯೂ ಅದರ ಫಲಾಫಲಗಳನ್ನು ತಾನೇ ಹೊಂದಬೇಕೇ ವಿನಾ ಬೇರೊಬ್ಬರು ಅದನ್ನು ಅನುಭವಿಸುವದಕ್ಕೆ ಕಾರಣವಿಲ್ಲ ಎಂದೂ ಹೇಳುತ್ತಾರೆ. ಹೀಗಿರುವಲ್ಲಿ ಯೇಸುಕ್ರೀಸ್ತನು ಮರಣವನ್ನು ಹೊಂದಿದುದರ ಮೂಲಾಂತರವಾಗಿ ಮನುಷ್ಯರು ಪಾಪಕ್ಷಮೆಯನ್ನು ಪಡೆಯಬಹುದು ಎಂಬುದಾಗಿ ಕ್ರೈಸ್ತವೇದದಲ್ಲಿ ಹೇಳುವದನ್ನು ನೋಡಿ ಕೆಲವರು ಎರಡು ವಿಧವಾಗಿ ಆಕ್ಷೇಪಿಸುತ್ತಾರೆ ಏತಂದರೆ (೧) ಇತರರು ಮಾಡಿದ ಪಾಪದ ಫಲವು ಅವನಲ್ಲಿ ಕೂಡುವದು ಸಾಧ್ಯವಲ್ಲ. (೨) ಪಾಪರಹಿತನಾದವನ ಪುಣ್ಯವು ಪುಣ್ಯಹೀನರಿಗೆ ಪ್ರಾಪ್ತಿಸತಕ್ಕದ್ದಕ್ಕೂ ಕಾರಣವಿಲ್ಲ.

ಇವೆರಡು ಆಕ್ಷೇಪಣೆಗಳಿಗೂ ಒಂದೇ ವಾಕ್ಯದಲ್ಲಿ ಸಮಾಧಾನವನ್ನು ಹೇಳಬಹುದು. ಹ್ಯಾಗೆಂದರೆ—ಒಬ್ಬರ ಪಾಪಪುಣ್ಯಗಳು ಬೇರೊಬ್ಬರಿಗೆ ಸೇರುತ್ತವೆಂಬುವದು ಕೇವಲ ಸಾಧ್ಯವಾದ ಸಂಗತಿಗಳಾಗಿರುವವಲ್ಲದೆ ನಮ್ಮ ಸುತ್ತಮುತ್ತಲೂ ಎಡೆಬಿಡದೆ ನಡೆಯುತ್ತಲಿರುವ ಪ್ರತ್ಯಕ್ಷವಿಷಯಗಳಾಗಿವೆ. ಇದಕ್ಕೆ ಒಂದೆರಡು ಸಾದೃಶ್ಯಗಳನ್ನು ಹೇಳುತ್ತೇವೆ. ಒಬ್ಬ ಇಂಜನೀರು ರೈಲ್ವೆ ಸೇತುವೆಯೊಂದನ್ನು ಕಟ್ಟುತ್ತಾನೆ. ಆದರೆ ಅವನು ಅದನ್ನು ಕೇವಲ ಅಜಾಗರೂಕತೆಯಿಂದ ಕಟ್ಟಿಸಿದಕಾರಣ ಅದರ ಮೇಲೆ ರೈಲ್ವೆ ಗಾಡಿಗಳು ಬಂದ ಕೂಡಲೆ ಕುಸಿದುಬಿದ್ದು ಅನೇಕ ಜನರು ತಮ್ಮ ಪ್ರಾಣಗಳನ್ನು ಕಳೆದುಕೊಳ್ಳುತ್ತಾರೆ. ಈ ವಿಷಯವನ್ನು ನೋಡಿ ಕೆಲವರು—ಆ ಜನಗಳು ಪೂರ್ವಜನ್ಮದಲ್ಲಿ ಮಾಡಿದ ಫಲವನ್ನು ಅನುಭವಿಸಿದರೇ ಹೊರತು ಮತ್ತೇನೂ ಅಲ್ಲವೆಂದು ಹೇಳಬಹುದು. ಆದರೆ ಪ್ರತ್ಯಕ್ಷವಾಗಿ ನಡೆದ ಕಾರ್ಯವನ್ನು ಕೇಳಿದರೆ ಆ ಇಂಜನೀರು ಸೇತುವೆಯನ್ನು ಕಟ್ಟುವದರಲ್ಲಿ ಜಾಗ್ರತೆಯಿಲ್ಲದೆ ಹೋದದರಿಂದಲೇ ಅಷ್ಟು ಮಂದಿ ವಿಪತ್ತಿಗೆ ಸಿಕ್ಕಿ ಪ್ರಾಣಗಳನ್ನು ಕಳೆದುಕೊಂಡರೆಂಬುವದು ಸಿದ್ಧವಾಗಿದೆ.

ಹಾಗೆಯೇ ರಾಜ್ಯಧುರಂಧರನಾದ ಒಬ್ಬ ಅಧಿಕಾರಿಯು ಕೇವಲ ಅಲಕ್ಷ್ಯಭಾವದಿಂದಲೂ ಅವಿವೇಕದಿಂದಲೂ ಪ್ರವರ್ತಿಸುವದರಿಂದ ತನ್ನಧೀನಕ್ಕೆ ಸಿಕ್ಕಿರುವಂಥ ಪ್ರಜೆಗಳನ್ನು ಸಂಕಟಕ್ಕೊಳಪಡಿಸುತ್ತಾನೆ ಆ ಪ್ರಜೆಗಳ ಸಂಕಟಕ್ಕೆ ಆ ಅಧಿಕಾರಿಯು ಕಾರಣನೇ ಹೊರತು ಪ್ರಜೆಗಳ ಪೂರ್ವಕರ್ಮವಲ್ಲವೆಂಬುದು ಗರಿಷ್ಠತರವಾಗಿ ತಿಳಿಯುತ್ತದೆ. ಈ ಉದಾಹರಣೆಗಳನ್ನು ನಾವು ಹಿಂದೆ ಎರಡು ವಾರಗಳಿಂದಲೂ ತಿಳಿಸುತ್ತಾ ಬಂದಿರುವ ಸಾದೃಶ್ಯಗಳನ್ನೂ ನೋಡಿದರೆ ತಂದೆತಾಯಿಗಳ ಕೃತ್ಯಗಳ ಫಲವನ್ನು ಅವರ ಮಕ್ಕಳು ಅನುಭವಿಸುತ್ತಾ ಬರುತ್ತಿರುವರೆಂಬುದು ಗೊತ್ತಾಗುತ್ತದೆ. ಒಂದು ಕೃತ್ಯವೂ ಅದರ ಫಲವೂ ಪ್ರತ್ಯೇಕಿಸಲ್ಪಡದಂಥ ರೀತಿಯಲ್ಲಿ ಒಂದಕ್ಕೊಂದು ಬಂಧಿತವಾಗಿವೆಯೆಂಬ ವಿಷಯವು ನಿಜವೇ ಸರಿ ಅದೇ ಪ್ರಕಾರವಾಗಿ ಭೂಲೋಕದ ಮೇಲಿರುವ ಸಕಲ ಜನರ ಜೀವಿತಗಳೆಲ್ಲವೂ ಒಂದಕ್ಕೊಂದು ಸರಪಣಿಯಿಂದ ಕಟ್ಟಿದ ಹಾಗೆ ಬಂಧಿತವಾಗಿವೆಯೆಂಬುದು ಗೊತ್ತಾಗಿದೆ. ಈ ಕಾರಣದಿಂದ ಒಂದು ಕೃತ್ಯದ ಫಲವು ಎಷ್ಟು ದೂರವಾಗಿ ಹರಡಿಕೊಳ್ಳುವದೋ ಅದರ ಫಲಕ್ಕೆ ಎಷ್ಟು ಮಂದಿ ಬಾಧ್ಯರಾಗುವರೋ ನಿರ್ಣಯಿಸಿ ಹೇಳುವದು ಅಸಾಧ್ಯವಾಗಿದೆ

ಒಳ್ಳೇದು ಸಕಲ ಜನಗಳನ್ನು ಬಂಧಿಸುವ ಈ ಕಟ್ಟಿನಿಂದ ತಪ್ಪಿಸಿಕೊಳ್ಳುವದು ಸಾಧ್ಯವೋ? ಇದು ಸಕಲ ಸಂದರ್ಭಗಳಲ್ಲಿಯೂ ಸಾಧ್ಯವೆಂದು ಹೇಳುವದಕ್ಕಾಗದು. ಈ ಕಟ್ಟಿನಿಂದ ಸಂಪೂರ್ಣವಾಗಿ ಬಿಡುಗಡೆಯನ್ನು ಹೊಂದುವದು ಸಾಧ್ಯವೇ ಅಲ್ಲವೆಂದು ಹೇಳುವದು ಸರ್ವಸಮ್ಮತವಾಗಿದೆ ಆದಾಗ್ಯೂ ಕೂಡ ನಾವು ಮೇಲೆ ಹೇಳಿದ ದೃಷ್ಟಾಂತದಲ್ಲಿ ಆ ರೈಲ್ವೆ ವಿಪತ್ತಿಗೆ ಸಿಕ್ಕಿದ ಜನಗಳು ಮೊದಲೇ ಆ ಸೇತುವೆಯ ವಿಷಯದಲ್ಲಿ ಅರಿತವರಾಗಿದ್ದರೆ ತಮಗೂ ಆ ಇಂಜನೀರಿನ ಅಜಾಗರೂಕತೆಗೂ ಸಂಬಂಧವನ್ನುಂಟುಮಾಡಿದ್ದ ಆ ಕಟ್ಟನ್ನು ಅವರು ಉಲ್ಲಂಘಿಸಿ ತಾವು ಆ ಅನಾಹುತಕ್ಕೆ ಸಿಕ್ಕದೆ ಹೋಗುತ್ತಿದ್ದರು. ಅದೇಪ್ರಕಾರವಾಗಿ ಅಧಿಕಾರಿಯ ಅವಿವೇಕಕ್ಕೆ ಸಿಕ್ಕಿ ಕಷ್ಟಪಡುವ ಆ ಪ್ರಜೆಗಳು ಆ ದೇಶವನ್ನು ಬಿಟ್ಟು ಬೇರೊಂದು ದೇಶಕ್ಕೆ ಹೊರಟುಹೋದರೆ ತಮಗೂ ಆ ಪೂರ್ವ ರಾಜ್ಯಕ್ಕೂ ಇದ್ದ ಸಂಬಂಧವನ್ನು ಮುರಿದುಹಾಕುವವರಾಗುವರು. ಹಾಗೆಯೇ ಪೂರ್ವಿಕರ ದುಷ್ಪ್ರವರ್ತನೆಯ ಫಲವಾಗಿ ರೋಗವನ್ನು ಹೊಂದಿರುವ ಬಾಲಕನಿಗೆ ಔಷಧೋಪಚಾರಗಳನ್ನು ಮಾಡಿಸಿ, ಅವನನ್ನು ಆರೋಗ್ಯ ಸೂತ್ರಗಳಿಗೆ ಒಳಪಡುವಂತೆ ಮಾಡಿದರೆ ಪೂರ್ವ ಜನರ ಪಾಪಕ್ಕೂ ತನಗೂ ಇರುವ ಕಟ್ಟನ್ನು ಆ ಬಾಲಕನು ಮುರಿಯಬಲ್ಲವನಾಗುತ್ತಾನೆ.

ನಾವು ಹೇಳಿದ ಈ ದೃಷ್ಟಾಂತಗಳನ್ನು ಪುನರ್ವಿಮರ್ಶಿಸಿದರೆ, ಪ್ರತಿಯೊಬ್ಬರೂ ಹಳೇ ಕಟ್ಟುಗಳಿಂದ ಬಿಡುಗಡೆಯಾದವರಾಗಿದ್ದರೂ ಹೊಸದಾಗಿರುವ ಬೇರೆ ಕಟ್ಟುಗಳಿಗೆ ಒಳಪಟ್ಟಿದ್ದಾರೆಂದು ಗೊತ್ತಾಗುವದು. ಇದರಿಂದ ನಾವು ಸಿದ್ಧಾಂತಪಡಿಸತಕ್ಕದ್ದೇನಂದರೆ—ಒಂದು ಕೃತ್ಯವನ್ನೂ ಅದರಿಂದ ಫಲವಾಗಿ ಬಂದ ವಿಷಯವನ್ನೂ ಸಂಬಂಧಪಡಿಸುವಂಥ ಕಟ್ಟನ್ನು ಮುರಿಯುವದಕ್ಕಾಗಿ ನಾವು ಬೇರೊಂದು ಕಟ್ಟಿಗೆ ಒಳಪಡಬೇಕಾಗಿರುತ್ತದೆ. ದೇಹದಲ್ಲಿ ಅನಾರೋಗ್ಯವನ್ನು ಪಡೆದು ಹುಟ್ಟಿದ ಬಾಲಕನು ಚಿಕಿತ್ಸೆಗೊಳಪಡಲಾಗಿ ತನ್ನ ಜೀವಿತವನ್ನು ಪೂರ್ವದ ಬಂಧದಿಂದ ಸ್ವಲ್ಪವಾಗಿಯೋ ಪೂರ್ಣವಾಗಿಯೋ ಬಿಡಿಸಿಕೊಂಡರೂ ಬೇರೊಂದು ಬಂಧಕ್ಕೆ ಒಳಪಡಿಸಿಕೊಳ್ಳುತ್ತಾನಷ್ಟೆ.

ನಾವೆಲ್ಲರೂ ಪಾಪಿಷ್ಠರೇ ನಮ್ಮ ಪಾಪಕ್ಕೆ ಇತರ ಜನಗಳ ಪಾಪವೂ ಒಂದು ಕಾರಣವಾಗಿದೆಯೆಂದು ತಿಳಿಯಬೇಕು. ನಾವು ಪಾಪದಿಂದ ಬಿಡುಗಡೆಯನ್ನು ಹೊಂದಬೇಕಾದರೆ ಅದಕ್ಕೆ ಕಾರಣನಾದವನು ಪಾಪರಹಿತನಾದ ಬೇರೊಬ್ಬ ಪುರುಷನೇ ಆಗಿರಬೇಕು. ಅಂಥ ಪಾಪರಹಿತನಾದ ಪುರುಷನು ಯೇಸುಸ್ವಾಮಿಯೇ ನಾವು ಆತನ ಪುಣ್ಯದಲ್ಲಿ ಪಾಲುಗಾರರಾಗುವದು ಹ್ಯಾಗೆ? ಆತನಲ್ಲಿ ನಂಬಿಕೆಯಿಟ್ಟು ನಮ್ಮನ್ನು ಆತನಿಗೆ ಒಪ್ಪಿಸಿಕೊಡುವದರಿಂದಲೇ ಇದು ಸಾಧ್ಯವಾಗುತ್ತದೆ. ಹೀಗೆ ಮಾಡುವದರಿಂದ ಆತನ ಪುಣ್ಯವು ನಮ್ಮಲ್ಲಿ ಫಲಿಸುತ್ತದೆ. ಪುಣ್ಯವು ಫಲಿಸುವಲ್ಲಿ ನಮ್ಮ ಪಾಪದ ಫಲವೇನಾಗಬೇಕು? ಅದನ್ನೆಲ್ಲಾ ಆತನೇ ಹೊತ್ತುಕೊಳ್ಳುತ್ತಾನೆ ಭಗವಂತನು ಆತನಿಗೇ ಈ ಕಾರ್ಯವನ್ನು ಒಪ್ಪಿಸಿಕೊಟ್ಟು ಇದನ್ನು ನೆರವೇರಿಸುವದಕ್ಕೋಸ್ಕರ ಆತನನ್ನು ನೇಮಿಸಿದ್ದಾನೆ ಆದಕಾರಣ ಆತನ ಮೂಲಾಂತರವಾಗಿಯೇ ನಮಗೆ ಪಾಪಕ್ಷಮೆಯುಂಟೆಂದು ತಿಳಿಸಲ್ಪಡುತ್ತಿರುವದಲ್ಲದೆ ಆತನಲ್ಲಿ ನಂಬಿಕೆಯಿಡುವವರೆಲ್ಲರೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿವಂತರೆಂದೆನ್ನಿಸಿಕೊಳ್ಳುವರೆಂದು ಸಾರಲ್ಪಡುತ್ತಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

ಮುಜರಾಯಿ ವಿಷಯಗಳು.

ಹಾಸನದ ಟೌನ ಉತ್ತರ ಬಡಾವಣೆಯಲ್ಲಿ ಪ್ರಜೆಗಳ ಉಪಯೋಗಾರ್ಥವಾಗಿ ಸರ್ಕಾರದವರು ಒಂದು ಈಶ್ವರ ದೇವಸ್ಥಾನವನ್ನು ಕಟ್ಟಿಸಿಕೊಡಬೇಕೆಂದು ಅಲ್ಲಿನ ಮೆಂಬರು ಕೇಳಿದ್ದಕ್ಕೆ ದಿವಾನರವರು—ಆ ಟೌನ ಬಡಾವಣೆ ಬಹಳ [illegible]. ಆದರೂ ಸಾಲದೆಂದೂ ಇನ್ನೂ ಹಣ ಬೇಕೆಂದೂ ಕೇಳುತ್ತಿದ್ದಾರೆ. ಇಂಥಾದ್ದರಲ್ಲಿ ಇದಕ್ಕೆ ದುಡ್ಡು ಎಲ್ಲಿಂದ ಕೊಡಬೇಕು? ಇದು ಆಗುವದಿಲ್ಲ ಎಂದು ಅಪ್ಪಣೆ ಕೊಟ್ಟರು

ಅಂಕಲಗೂಡು ತಾಲ್ಲೂಕು ಮೆಂಬರು—ಮಲ್ಲಿಪಟ್ಟಣದ ಉಮಾಮಹೇಶ್ವರ ದೇವಸ್ಥಾನವನ್ನು ದುರಸ್ತು ಮಾಡಿಸಿಕೊಡಬೇಕೆಂದು ಎರಡು ವರುಷದಿಂದ ಕೇಳಿಕೊಳ್ಳುತ್ತಿದೇವೆ. ಈಗಲಾದರೂ ಜಾಗ್ರತೆಯಾಗಿ ಮಾಡಿಸಿಕೊಡದಿದ್ದರೆ ಎಲ್ಲಾ ಬಿದ್ದುಹೋಗುತ್ತದೆ ಎಂದು ತಿಳಿಸಿದರು

ದಿವಾನರವರು—ಅದನ್ನು ದುರಸ್ತು ಮಾಡುವುದಕ್ಕೆ ಅಂದಾಜು ಪಟ್ಟಿ ತಯಾರಾಗುತ್ತಿದೆ. ಜಾಗ್ರತೆಯಾದ ನಂತರ ಹುಕುಂ ಕೊಡುತ್ತೇವೆ ಎಂದು ಅಪ್ಪಣೆ ಕೊಟ್ಟರು.

ಹೊಳೇನರಸೀಪುರದ ಮೆಂಬರು ಮಿ॥ ಎ. ವೆಂಕಟರಾಮಯ್ಯನವರು—ನಮ್ಮೂರಿನಲ್ಲಿರುವ ನೀಲಕಂಠೇಶ್ವರ ಸ್ವಾಮಿಯ ಮತ್ತು ಲಕ್ಷ್ಮೀನರಸಿಂಹ ಸ್ವಾಮಿಯ ದೇವಸ್ಥಾನಗಳನ್ನು ದುರಸ್ತು ಮಾಡಿಸಿಕೊಡಬೇಕು, ಮತ್ತು ಜಮಾವಣೆ ಮಾಡಿಸಿಕೊಡಬೇಕು ಇದಕ್ಕೆ ಅಂದಾಜು ಪಟ್ಟಿ ತಯಾರಾಗುತ್ತಿದ್ದರಲ್ಲೇ ಅದು ಜಾಗ್ರತೆ ಬರುವಂತೆ ಅಪ್ಪಣೆ ಆಗಬೇಕೆಂದು ಕೇಳಿಕೊಂಡರು

ಡೆಪ್ಟಿ ಕಮಿಷನರು—ಈ ದೇವಸ್ಥಾನಗಳ ರಿಪೇರಿ ಕಾಮಗಾರಿ ವಿಷಯವಾದ ಕಾಗದಪತ್ರಗಳ್ಯಾವೂ ನಮ್ಮಲ್ಲಿಗೆ ಬಂದಿಲ್ಲ. ಹೊಳೆನರಸೀಪುರದ ಅಮಲ್ದಾರ್ರಿಗೆ ಈ ವಿಷಯದಲ್ಲಿ ಜಾಗ್ರತೆಯಿಂದ ರಿಪೋರ್ಟು ಕಳುಹಿಸುವಂತೆ ಬರೆದಿದೆ ಎಂದು ತಿಳಿಸಿದರು.

ದಿವಾನರವರು—ಡೆಪ್ಟಿ ಕಮಿಷನರಿಗೆ ಅರ್ಜಿ ಕೊಟ್ಟು ಹೇಳಿಕೊಳ್ಳಿ ಎಂದು ಉತ್ತರ ಕೊಟ್ಟರು

ಹೊಳೇ ನರಸೀಪುರದಲ್ಲಿ ಸರ್ಕಾರದಿಂದ ಒಂದು ಅನ್ನಛತ್ರವನ್ನು ಇಡಿಸಿಕೊಡಬೇಕು. ಪ್ರಯಾಣಿಕರಿಗೆ ಈಗ ತುಂಬಾ ಕಷ್ಟವಾಗಿದೆ ಎಂದು ಒಬ್ಬ ಮೆಂಬರು ಕೇಳಿಕೊಂಡದ್ದಕ್ಕೆ ದಿವಾನರವರು—ಹೋದ ವರುಷವೇ ಇದು ಆಗುವದಿಲ್ಲವೆಂದು ಹುಕುಂ ಕೊಟ್ಟಿವೆ ಈಗಲೂ ಅದೇ ಉತ್ತರ ಕೊಡುತ್ತೇವೆ ಎಂದು ತಿಳಿಸಿದರು.

ಹೊಳೇನರಸೀಪುರದಲ್ಲಿ ಉತ್ತರಾದಿ ಮಠಕ್ಕೆ ಸಂಬಂಧಪಟ್ಟ ಸಂಸ್ಕೃತ ಪಾಠಶಾಲೆಯ ಮೇಲ್ವಿಚಾರಣೆ ನೋಡಿಕೊಳ್ಳುವದಕ್ಕೆ ಸರ್ಕಾರದವರು ಕೆಲವು ಧರ್ಮದರ್ಶಿಗಳನ್ನು ನೇಮಕಮಾಡಿ ಕೊಡಬೇಕೆಂದು ಆ ಮೆಂಬರು ಸೂಚಿಸಿದರು.

ದಿವಾನರವರು—ಈ ಮಠದ ಮೇಲ್ವಿಚಾರಣೆಯನ್ನೆಲ್ಲಾ ಸರ್ಕಾರದವರೇ ಇಟ್ಟುಕೊಂಡಿದ್ದಾರೆ. ಇನ್ನು ಧರ್ಮದರ್ಶಿಗಳು ಬೇರೆ ಯಾಕೆ? ಇದು ಆಗಲಾರದು ಎಂದು ಹುಕುಂ ಕೊಟ್ಟರು.

ಬೇಲೂರಿನಲ್ಲಿ ಒಂದು ಛತ್ರವನ್ನು ಕಟ್ಟಿಸಿಕೊಡಬೇಕೆಂದು ಅಲ್ಲಿನ ಮೆಂಬರು ಕೇಳಿಕೊಂಡದ್ದಕ್ಕೆ ದಿವಾನರವರು—ಅದನ್ನು ಸರ್ಕಾರದಿಂದ ಮಾಡಿಸಲಾಗುವದಿಲ್ಲವೆಂದು ಅಪ್ಪಣೆ ಕೊಟ್ಟರು.

ಮಿ॥ ಬಲವಂತರಾಯರು—ಅರಸೀಕೆರೆಯಲ್ಲಿ ಜನರಿಂದ ಚಂದಾ ವಸೂಲ್ಮಾಡಿ ಲೇಟ್ ದಿವಾನ ರಂಗಾಚಾರ್ಯ ಹೆಸರಿನ ಮೇಲೆ ಕಟ್ಟಿಸಿರುವ ಧರ್ಮಛತ್ರವನ್ನು ಸರ್ಕಾರದವರು ಮೇಲ್ವಿಚಾರಣೆ ನೋಡಿಕೊಳ್ಳುವಂತೆ ಬಿಟ್ಟುಕೊಟ್ಟಿದ್ದಾರೆ. ಈಗ ಈ ಛತ್ರವನ್ನು ಬಾಡಿಗೆಗೆ ಕೊಟ್ಟಿರೋಣದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯುಂಟಾಗಿದೆ. ಅದನ್ನು ತಪ್ಪಿಸಿಕೊಡಬೇಕೆಂದು ಕೇಳಿಕೊಂಡರು.

ಡೆಪ್ಟಿ ಕಮಿಷನರು—ಈ ವಿಷಯದಲ್ಲಿ ಛತ್ರದೊಳಗೆ ಯಾರಿಗೂ ಬಾಡಿಗೆಗೆ ಕೊಡಕೂಡದೆಂದು ಅಮಲ್ದಾರ್ರಿಗೆ ಖಂಡಿತವಾದ ಹುಕುಂ ಕೊಟ್ಟಿದೆ ಎಂಬುದಾಗಿ ತಿಳಿಸಿದರು.

ದಿವಾನರವರು ಈ ಸಂಗತಿಯನ್ನು ವಿಚಾರಿಸುತ್ತೇವೆಂದು ಹುಕುಂ ಕೊಟ್ಟರು

ಚನ್ನರಾಯಪಟ್ಟಣ ತಾಲ್ಲೂಕು ನರಸಾಪುರದಲ್ಲಿ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ರಿಪೇರಿ ಪ್ರಾರಂಭವಾಗಿ ಮೂರು ವರುಷವಾಯಿತು. ಕೆಲವು ಕಡೆ ಹದಿ ತೆರೆದಿದೆ; ಕೆಲವು ಸಾಮಾನು ಹಾಕಿದೆ; ಇನ್ನೂ ಕಾಪಾಡುವದು ಮಾಡಿಲ್ಲ. ಜಾಗ್ರತೆಯಿಂದ ಪೂರೈಸುವಂತೆ ಅಪ್ಪಣೆಯಾಗಬೇಕೆಂದು ಅಲ್ಲಿನ ಮೆಂಬರು ಕೇಳಿದರು

ದಿವಾನರವರು—ಡೆಪ್ಟಿ ಕಮಿಷನರಿಗೇನೇ ಇದನ್ನು ದಾಖಲು ಮಾಡಿ ಕೇಳಿಕೊಳ್ಳಿ ಎಂದು ತಿಳಿಸಿದರು.

[illegible] ೩೨ ಗ್ರಾಮಗಳನ್ನು ನರಸಾಪುರದ ಸತ್ರಕ್ಕೆ ಹಂಚಬೇಕಿದರೆ ಅನುಕೂಲವೆಂತಲೂ ಆ ರೀತಿ ಅಪ್ಪಣೆ ಆಗಬೇಕೆಂತಲೂ ಆ ಮೆಂಬರು ಕೇಳಿಕೊಂಡರು

ದಿವಾನರವರು—ಹೀಗೆ ಎರಡು ಕಡೆ ನಡೆಯುವದರಿಂದ ಅದೆಲ್ಲಾ ಕೆಟ್ಟು ಒಂದು ಕಡೆಗೇ ವಿನಿಯೋಗವಾಗುವದು ಇದು ಸಾಧ್ಯವಲ್ಲ ನರಸಾಪುರದಲ್ಲಿ ಸತ್ರ ಬೇಕಾಗಿದ್ದರೆ ಪ್ರಜೆಗಳು ಹಣ ಕೂಡಿಸಿ, ಡೆಪ್ಟಿ ಕಮಿಷನರಿಗೆ ಬರೆದುಕೊಂಡರೆ ಅವರ ರಿಪೋರ್ಟನ್ನು ನೋಡಿ, ಸರ್ಕಾರದಿಂದ ಎಷ್ಟು ಹಣ ಸಹಾಯ ಮಾಡಬಹುದೋ ಗೊತ್ತು ಮಾಡುತ್ತೇವೆ ಎಂದು ಅಪ್ಪಣೆಕೊಟ್ಟರು.

ಕೋಲಾರದಲ್ಲಿರುವ ಅನ್ನ ಸತ್ರವನ್ನು ವರ್ಷಕ್ಕೆ ಒಂದು ವಾರ ಉತ್ಸವ ಕಾಲದಲ್ಲಿ ಅಲ್ಲಿಗೆ ವರ್ಗ ಮಾಡಿಕೊಡಬೇಕು ಎಂದು ಕೇಳಿದರು, ದಿವಾನರವರು ಕೇಳಿ, ಡೆಪ್ಟಿ ಕಮಿಷನರ ಅಭಿಪ್ರಾಯ ಪ್ರಕಾರ ಅದು ಸಾಧ್ಯವಲ್ಲವೆಂದೂ ಭಕ್ತಾದಿಗಳೇ ಅದಕ್ಕೆ ಏರ್ಪಾಡು ಮಾಡಿಕೊಳ್ಳಬೇಕೆಂದೂ ತಿಳಿಸಿದರು

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಭೋಗನಂದೀಶ್ವರ ದೇವಸ್ಥಾನದ [illegible] ಗೋಪುರವನ್ನು ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಂಡದ್ದಕ್ಕೆ ದಿವಾನರವರು ಡೆಪ್ಟಿ ಕಮಿಷನರಿಗೆ ಅರ್ಜಿ ಕೊಟ್ಟುಕೊಳ್ಳಿ ಎಂದು ಹೇಳಿದರು.

ಗುಬ್ಬಿ ತಾಲ್ಲೂಕು ಕಂಬದ ರಾಮದೇವರ ದೇವಸ್ಥಾನದ ಗೋಪುರವನ್ನು ಸರ್ಕಾರದ ಕೈಯಿಂದ ಗೋಡೆಯನ್ನು ಕಟ್ಟಿಸಿಕೊಡಬೇಕೆಂಬ ವಿಚಾರಕ್ಕೆ ದಿವಾನರವರು—ಪ್ರಜೆಗಳು ಹಣ ಕೂಡಿಸಲಿ; ಸರ್ಕಾರದಿಂದಲೂ ಸಹಾಯ ಮಾಡುತ್ತೇವೆ ಎಂದು ಅಪ್ಪಣೆಕೊಟ್ಟರು

ಹೊಸದುರ್ಗದ ಕಸಬಾ ತಾಲ್ಲೂಕಿನಲ್ಲೆಲ್ಲಾ ಬಾಗೂರು ಚನ್ನಕೇಶವಸ್ವಾಮಿ ದೇವಸ್ಥಾನವೇ ಮುಖ್ಯವಾದದ್ದು ಇದಕ್ಕೆ ಈಗ ೩—೪ ವರ್ಷ ನಗದೀಯಾಗಿ ಮಾಡಿರುವ ತಸ್ತೀಕು ಬಹಳ ಸ್ವಲ್ಪವಾದ್ದರಿಂದ ಪೂಜೆ ಮುಂತಾದ್ದು ನಿಂತುಹೋಗಿ ಹಾಳಾಗುತ್ತಿದೆ. ಈ ನಗದೀಯಾತಸ್ತೀಕು ೧೦ ರೂ. ಮಾಡಬೇಕು ಎಂದು ಅಲ್ಲಿನ ಮೆಂಬರು ಕೇಳಿಕೊಂಡರು

ದಿವಾನರವರು—ಡೆಪ್ಟಿ ಕಮಿಷನರು ತಸ್ತೀಕು ಜಾಸ್ತಿ ಮಾಡಬೇಕೆಂದು ರಿಪೋರ್ಟು ಬರೆದಿದ್ದಾರೆ ಅವರಿಂದ ರಿಪೋರ್ಟು ಬಂದ ಮೇಲೆ ಈ ವಿಚಾರವನ್ನು ಇತ್ಯರ್ಥ ಮಾಡುತ್ತೇವೆ ಎಂದು ಉತ್ತರ ಕೊಟ್ಟರು.

ಮುಳಬಾಗಿಲು ತಾಲ್ಲೂಕು [illegible] ದೇವಸ್ಥಾನದಲ್ಲಿ ತಸ್ತೀಕು ಸ್ವಲ್ಪವಾಗಿರೋಣದರಿಂದ ಹಣವಿಲ್ಲದಕ್ಕಾಗಿ ಕೆಲವು ಪೂಜೆಗಳನ್ನು ಸರ್ಕಾರದವರು ನಿಲ್ಲಿಸಿ ಬಿಟ್ಟಿದ್ದಾರೆ ಅವೆಲ್ಲಾ ಪೂರ್ವದಲ್ಲಿದ್ದಂತೆ ನಡೆಯುವುದಕ್ಕೋಸ್ಕರ ತಸ್ತೀಕು ಪಟ್ಟಿಯನ್ನು ಬದಲಾಯಿಸಬೇಕೆಂದು ಕೇಳಿಕೊಂಡರು.

ದಿವಾನರವರು—ಹೋದ ೧೯೦೩ ನೆ ಡಿಸೆಂಬರಿನಲ್ಲಿ ತಸ್ತೀಕು ಪಟ್ಟಿಯನ್ನು ಬದಲಾಯಿಸಲಾಯಿತು ಇಷ್ಟು ಬೇಗ ಪುನಃ ಬದಲಾಯಿಸುವದೇತಕ್ಕೆ? ಆದರೂ ಮುಜರಾಯಿ ಸೆಕ್ರೆಟರಿಯವರು ಇಷ್ಟರಲ್ಲೇ ಆ ಪ್ರಾಂತ್ಯ ಸಂಚಾರಕ್ಕೆ ಬಂದು ಈ ವಿಷಯವನ್ನು ಸರಿಯಾಗಿ ವಿಚಾರಿಸುತ್ತಾರೆ ಎಂದು ಅಪ್ಪಣೆ ಕೊಟ್ಟರು

ಚಿಕ್ಕಮಗಳೂರು ತಾಲ್ಲೂಕು [illegible] ದೇವಸ್ಥಾನದ ವಿಷಯದಲ್ಲಿ ಮುಜರಾಯಿ ಸೆಕ್ರೆಟರಿಯವರು ಸರಿಯಾಗಿ ವಿಚಾರಿಸುತ್ತಾರೆಂದು ದಿವಾನರವರು ತಿಳಿಸಿದರು.

ಮಾಗಡಿ ತಾಲ್ಲೂಕಿಗೆ ಸೇರಿದ [illegible] ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವದೂ, ಹುಲಿಯೂರಿನಲ್ಲಿ ಅನ್ನಸತ್ರವನ್ನು ಇಡಿಸುವದೂ ಆಗತಕ್ಕದ್ದಲ್ಲವೆಂದು ದಿವಾನರಿಂದ ಅಪ್ಪಣೆಯಾಯಿತು.

ನ್ಯಾಯಸ್ಥಾನ ವಿಚಾರಗಳು.

ಮಿ॥ ರಂಗಯ್ಯಂಗಾರ್ಯರೇ ಮುಂತಾದ ಕೆಲವು ಮೆಂಬರುಗಳು—ಎಲ್ಲಾ ವಿಷಯಗಳಲ್ಲೂ ಮೈಸೂರು ಸಂಸ್ಥಾನವು ಹಿಂದೂಸ್ಥಾನದ ಇತರ ದೇಶೀಯ ಸಂಸ್ಥಾನಗಳಿಗೆ ಮೇಲ್ಪಂಕ್ತಿ ಹಾಕಿಕೊಡುತ್ತಿದ್ದಾಗ್ಯೂ ಹೈದರಾಬಾದು, ಅನಂತಶಯನ ಸಂಸ್ಥಾನಗಳಲ್ಲಿರುವಂಥ ನ್ಯಾಯವಿಧಾಯಕ ಮಂತ್ರಾಲೋಚನಾ ಸಭೆಯು ಇಲ್ಲಿ ಏರ್ಪಡಿಸಿರುವದಿಲ್ಲ. ಈ ಸಭೆಯು ರಾಜತಂತ್ರನಿರ್ವಾಹಕ್ಕೆ ಮುಖ್ಯಾಂಗವಾಗಿರುತ್ತದೆ ಈ ಸಂಸ್ಥಾನದಲ್ಲಿ ಹೊಸ ಕಾನೂನುಗಳನ್ನು ಮಾಡಬೇಕಾಗುವ ಸಂದರ್ಭಗಳು ಅನೇಕವಾಗಿ ಆಗಾಗ್ಗೆ ಉಂಟಾಗುವವು ಇದಕ್ಕೆ ಈಗ ನಮ್ಮ ಗವರ್ನಮೆಂಟಿನವರು ಇಟ್ಟುಕೊಂಡಿರುವ ಸಿಬ್ಬಂದಿಯು ಸಾಲದೆಂದು ಅನೇಕ ಸಂದರ್ಭಗಳಲ್ಲಿ ಕಂಡು ಬಂದಿದೆ. ನಮ್ಮ ಮಹಾರಾಜರವರ ಪ್ರಜಾರಂಜನಾದ ದೌಲತ್ತಿನಲ್ಲಿ ಈ ರಾಜ್ಯಾಂಗವನ್ನು ಸಾಕ್ಷಾತ್ತಾಗಿ ಸ್ಥಾಪಿಸಿಕೊಡುವಂತೆ ಆಗಬೇಕೆಂದೂ ಈ ನ್ಯಾಯವಿಧಾಯಕ ಸಭೆಗೆ ಮೂರು ಪ್ರಜಾಪ್ರತಿನಿಧಿಗಳು ಸೇರಿ ಎಂಟು ಮಂದಿ ಮೆಂಬರುಗಳನ್ನು ಆರಿಸಿ ಶ್ರೀಮನ್ಮಹಾರಾಜರವರಿಗೆ ಅರಿಕೆ ಮಾಡುವಂತೆ ಆಗಬೇಕೆಂದೂ ಪ್ರಾರ್ಥಿಸುತ್ತೇವೆಂಬುದಾಗಿ ಹೇಳಿಕೊಂಡಿದ್ದಲ್ಲದೆ ಅದೇ ಅರ್ಥಕ್ಕೆ ಒಂದು ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿದರು.

ದಿವಾನರವರು—ಇದು ಬಹಳ ದೊಡ್ಡ ವಿಷಯ, ಸಾವಕಾಶ ಮಾಡತಕ್ಕದ್ದಾಗಿದೆ ಈ ವಿಷಯವನ್ನು ಕುರಿತು ಇನ್ನೂ ಆಲೋಚನೆಗೆ ಪ್ರಾರಂಭ ಮಾಡಿಲ್ಲ ... ಕೊಟ್ಟರು.

... ಬಾಲಕೃಷ್ಣರಾಯರು—ವಿಶೇಷವಾದ ಶಾಸನಗಳನ್ನು ... ಸಂದರ್ಭದಲ್ಲಿ ಗವರ್ನವೆಂಟಿನವರು ಆ ಸಂಗತಿಯನ್ನು ... ಪ್ರತಿನಿಧಿ ಸಭಾಸದರಿಗೆ ತಿಳಿಸಿ ಇವರ ಅಭಿಪ್ರಾಯವನ್ನು ... ಬೇಕೆಂದು ಪ್ರಾರ್ಥಿಸುತ್ತೇವೆ

ದಿವಾನರವರು—ಒಳ್ಳೇದು, ಹಾಗೆ ತಿಳಿಸಬಹುದಾದ್ದನ್ನೆಲ್ಲಾ ... ತ್ತೇವೆ

... ತಾಲ್ಲೂಕ್ ಮೆಂಬರು—ಮೈಸೂರು ಲ್ಯಾಂಡ್ ರೆವಿ ... ೯೭ ನೇ ಸೆಕ್ಷನ್ ಪ್ರಕಾರ ಇನಾಂದಾರರು ತಮ್ಮ ... ದಿಂದ ಕಂದಾಯ ವಸೂಲ್ಮಾಡಿಕೊಳ್ಳುವುದಕ್ಕೆ ಅವಕಾಶ ... ಆದರೆ ಸರ್ಕಾರಿ ಜಮೀನು ಹಿಡುವಳಿದಾರರು ತಮ್ಮ ಹಿಡು ... ದಿಂದ ಕಂದಾಯ ವಸೂಲ್ಮಾಡಿಕೊಳ್ಳುವುದಕ್ಕೆ ಈ ಸೆಕ್ ... ಅವಕಾಶವಿಲ್ಲವಾದ್ದರಿಂದ ಮದರಾಸಿನಲ್ಲಿರುವ ಶಾಸನ ... ವನ್ನೂ ಜಾರೀಗೆ ತರಬೇಕೆಂದು ಹೋದವರುಷ ಕೇಳ ... ೯೭ ನೇ ಸೆಕ್ಷನ್ನೇ ಈ ವಿಷಯಕ್ಕೂ ಅನ್ವಯ ... ಅರ್ಥವು ಆದರೂ ಇರಬಹುದು ಅಂಥಾ ಕಂದಾಯ ... ಮಾಡಿಕೊಳ್ಳುವುದಕ್ಕೆ ಜಮೀನುದಾರರು ಶಿಕ್ಮಿದಾರರ ಮೇಲೆ ... ಕೋರ್ಟನಲ್ಲಿ ವ್ಯವಹರಿಸಬೇಕಾಗಿದೆ ಇದನ್ನು ತಪ್ಪಿಸಿ ...

ದಿವಾನರವರು—ಆ ೯೭ ನೆ ಸೆಕ್ಷನ್ ಪ್ರಕಾರ ಅಮಲ್ದಾರರು ... ಭಾಗ ತರಿಸಬೇಕೆಂತಲೂ, ಇಂಥಾದ್ದಕ್ಕೆ ಅದು ಅನ್ವಯ ... ಸರ್ಕ್ಯುಲರ್ ಹುಕುಂ ಕೊಡುತ್ತೇವೆ. ಇದಕ್ಕೆ ಹೊಸ ... ಅಗತ್ಯವಿಲ್ಲ

... ತಾಲ್ಲೂಕಿನ ಮೆಂಬರು—ಬ್ರೀಚ್ ಆಫ್ ಕಂಟ್ರ್ಯಾಕ್ಟ್ ... ಶಾಸನವನ್ನು ತುಂಕೂರು ಡಿಸ್ಟ್ರಿಕ್ಟಿಗೆ ಜಾರೀಗೆ ತರಬೇಕು.

ದಿವಾನರವರು—ಅದು ಎಲ್ಲಾ ಕಡೆಗಳಲ್ಲೂ ಜಾರೀಲಿ ಇದ್ದೇ ...

... ಮಂದಿ ಮೆಂಬರುಗಳು—ಮ್ಯುನಿಸಿಪಾಲಿಟಿಗಳ ಕಾ ... ಬೇಗ ಜಾರೀಲಿ ತರಬೇಕು ಅದು ಇಲ್ಲದಿರೋಣದರಿಂದ ... ಮುನಿಸಿಪಾಲಿಟಿಗಳ ಕಾರ್ಯಗಳು ಸಮರ್ಪಕವಾಗಿ ನಡೆಯಲು ... ವಾಗಿದೆ ಮೆಂಬರುಗಳ ಅಧಿಕಾರವೇನೆಂಬುದು ತಿಳಿಯು ...

ದಿವಾನರವರು—ಶಾಸನದ ಮಸೂದೆ ತಯಾರಾಗಿ ಚರ್ಚೆ ... ತ್ತಿದೆ ಅದು ಇನ್ನೂ ಗವರ್ನಮೆಂಟಿಗೆ ಬಂದಿಲ್ಲ ಆದ ... ಬೇಗ ಮಾಡುತ್ತೇವೆ

ಶ್ರೀ ವರದಾಸ್ವಾಮಿಯ್ಯಂಗಾರರು—ನಮ್ಮ ಸಂಸ್ಥಾನದಲ್ಲಿ ... ಪಾಲ್ ಬೋರ್ಡುಗಳು, ತಾಲ್ಲೂಕ್ ಬೋರ್ಡುಗಳು, ಯೂನಿ ... ಏರ್ಪಾಡಾಗಿವೆ. ಇದರಂತೆ ನಾಲ್ಕೈದು ಗ್ರಾಮಗಳು ... ಸೇರಿಸಲ್ಪಡುವವು ಗ್ರಾಮಮ್ಯುನಿಸಿಫ್ ಮುತ್ತು ಪಂಚಾ ... ಯಿತಿಗಳನ್ನು ಮಾಡಿಟ್ಟು ಜಾರಿಗೆ ತಂದರೆ ಪ್ರಜೆಗಳಿಗೆ ... ಅನುಕೂಲವಾದೀತು. ಗ್ರಾಮಾಂತರಗಳಲ್ಲಿ ತಕ್ಕಷ್ಟು ... ವಿಷಯಗಳಿಗೆಲ್ಲಾ ಬಹಳ ದೂರ ಕೋರ್ಟು ಕಚೇರಿಗಳಿಗೆ ... ಕಷ್ಟನಷ್ಟಗಳನ್ನು ಅನುಭವಿಸುವುದು ತಪ್ಪೀತು.

ದಿವಾನರವರು—ಹೋದ ವರುಷವೂ ಈ ವಿಚಾರವಾಗಿ ಚರ್ಚೆ ... ಸದ್ಯಕ್ಕೆ ಈ ಬದಲಾವಣೆಯು ಅವಶ್ಯಕತೆ ಕಾಣುವುದಿಲ್ಲ ... ದೆ ನೋಡೋಣ

... ಮಂದಿ ಪ್ರತಿನಿಧಿಗಳು—ಶಿಶುಹತ್ಯೆ ನಿಲ್ಲಿಸುವ ಶಾಸನ ... ಜಾರೀಗೆ ಬಂದಿಲ್ಲ. ಆದಕಾರಣ ಊರುಗಳಲ್ಲೂ ಗ್ರಾಮಾಂತ ... ಚಿಕ್ಕ ವಯಸ್ಸಿನವರು ದೂಬಾಟದಲ್ಲಿ ಬಿದ್ದು, ನಾನಾ ... ಗಳನ್ನು ಮಾಡಿ ಕೆಟ್ಟು ಹೋಗುತ್ತಿದ್ದಾರೆ ಬೇಗನೆ ... ಶಾಸನ ಜಾರೀಗೆ ಬಂದರೆ ಪ್ರಜೆಗಳು ಬದುಕಿಕೊಂಡಾರು

ದಿವಾನರವರು—ಗವರ್ನಮೆಂಟಿನವರು ಪೊಲೀಸ್ ರೆಗ್ಯುಲೇ ... ಎಂಬ ಶಾಸನವನ್ನು ಮಾಡಿ ಅದರಲ್ಲೇ ಈ ದೂಬಾಟವನ್ನು ... ಬಂದಿದಕ್ಕೂ ಏರ್ಪಾಡು ಮಾಡಿದ್ದಾರೆ. ಅದನ್ನು ಬೇಗನೆ ಇವೆ ... ಸ್ಯಾಂಕ್ಷನ್ ಮಾಡಿ ಜಾರೀಲಿ ತರುತ್ತೇವೆ.

ಗುಬ್ಬಿ ತಾಲ್ಲೂಕು ಮ॥ ತಿಮ್ಮಶೆಟ್ಟರು—ಮೊದಲಿದ್ದ ಸಣ್ಣ ಮುನಿಸಿಪಾಲಿಟಿಗಳನ್ನು ಸರ್ಕಾರದವರು ತೆಗೆದುಹಾಕಿ, ಯೂನಿ ... ಗಳನ್ನು ಮಾಡಿ, ಅಂಥಾ ಯೂನಿಯನ್‌ಗಳಲ್ಲಿ ರಾತ್ರಿಹೊತ್ತು ... ಕೊಡಬೇಕೆಂಬ ಪದ್ಧತಿಯನ್ನು ರೂಢಿಗೆ ತಂದಿದ್ದಾರೆ ಇದ ... ಜನಕ್ಕೆ ತೊಂದರೆಯಾಗಿದೆ. ಗಸ್ತು ತಿರುಗುವುದನ್ನು ... ಮಾಡಿಕೊಡಬೇಕು

ದಿವಾನರವರು—ಸದ್ಯಕ್ಕೆ ಅದನ್ನು ವಜಾ ಮಾಡಲಾಗದು ಈ ... ಪ್ರಕಾರವೇ ಇನ್ನು ಕೆಲವು ಕಾಲ ನಡೆಯಲಿ ಮುಂದೆ ... ನೋಣ

ಕೋಲಾರದ ಮ॥ ಗೋಪಾಲರಾಯರು—ಗಣಿಗಳ ಶಾಸನ ... ಸೆಕ್ಷನ್ ಯಾವ ಪ್ರದೇಶದಲ್ಲಿ ಜಾರಿಯಲ್ಲಿರುವುದೋ ಅಂ ... ದ ಯಾರ ಬಳಿಯಲ್ಲಾದರೂ ಗಣಿಗಳ ಕಂದನಿರುವದರಿಂ ... ಬೇಕಾದ ಪದಾರ್ಥಗಳೇನಾದರೂ ಅಂದರೆ, ಗಣಿಯ ... ಸಾಮಾನುಗಳು ಇದ್ದಲ್ಲಿ ಅಂಥಾವರನ್ನು ಹಿಡಿದು ಶಿಕ್ಷಿಸಬಹುದು ... ಸರ್ಕಾರದವರು ವಿಧಿಸಿದ್ದಾರೆ. ಈಗ ಈ ಶಾಸನವು ಜಾರಿ ... ಯಲ್ಲಿರುವ ಪ್ರದೇಶಗಳಲ್ಲಿ ಜನರಿಗೆ ತುಂಬಾ ಹಿಂಸೆಯೂ ನಷ್ಟವೂ ... ಆಗುತ್ತಿದೆ ಇಂಥಾ ಪ್ರದೇಶವನ್ನು ವಿಸ್ತರಿಸಕೂಡದು. ಅಥ ... ಈ ಶಾಸನವನ್ನು ಇನ್ನಾವ ಕಡೆಗಳಲ್ಲೂ ಜಾರಿ ಮಾಡಕೂಡದು ... ಕೇಳಿಕೊಳ್ಳುತ್ತೇವೆ.

ದಿವಾನರವರು—ಗಣಿಯ ಪ್ರದೇಶವನ್ನು ವಿಸ್ತರಿಸುವುದಿಲ್ಲ, ಅಂಥಾ ಅಭಿಪ್ರಾಯವಾಗಲಿ ಉದ್ದೇಶವಾಗಲಿ ಇರುವುದಿಲ್ಲ. ಆದರೆ ಹಾಗೆ ಮಾಡಲು ಗವರ್ನಮೆಂಟಿಗೆ ಅಧಿಕಾರವೇನೋ ಇದೆ.

ಅನೇಕ ಮೆಂಬರುಗಳು—ಸಂಸ್ಥಾನದೊಳಗೆ ಒಂದೇ ಸಮನಾದ ತೂಕದ ಬಟ್ಟುಗಳನ್ನೂ ಅಳತೆ ಸೇರು ಮುಂತಾದ್ದನ್ನೂ ಸರ್ಕಾರದವರು ಮಾಡಿಕೊಡದೆ ಇರೋಣದರಿಂದ ಪ್ರಜೆಗಳು ತುಂಬಾ ನಷ್ಟಪಡಲು ಕಾರಣವಾಗಿದೆ ಕರುಣವಿಟ್ಟು ಗವರ್ನಮೆಂಟಿನವರು ಈ ಶಾಸನವನ್ನು ಸಂಸ್ಥಾನಕ್ಕೆಲ್ಲಾ ಬೇಗನೆ ಜಾರಿಗೆ ತರಬೇಕೆಂದು ಪ್ರಾರ್ಥಿಸುತ್ತೇವೆ

ದಿವಾನರವರು—ಈ ವಿಷಯವಾದ ಶಾಸನವೇನೋ ಪ್ರಕಟಿಸಿಲ್ಲಾಗಿದೆ ಚೆಪ್ಪಿ ಜನಿಸಿದವರುಗಳಂಥ ಶಿಫಾರಸುಗಳೂ ಬಂದಿವೆ ಕೆಲವು ರೂಲುಸು ಮಾಡತಕ್ಕ ವಿಚಾರವನ್ನು ಮಾತ್ರ ಗವರ್ನಮೆಂಟಿನವರು ಪರ್ಯಾಲೋಚನೆ ಮಾಡುತ್ತಿದ್ದಾರೆ ಅದೂ ಎಲ್ಲಾ ಸಿದ್ಧವಾಗಿದೆ ಎಂಬೇ ಹೇಳಬಹುದು. ನಮಗೆ ಅವಕಾಶವಾಗದೆ ಅದು ಜಾರಿಗೆ ಬರಲಿಲ್ಲ. ಜಾಗ್ರತೆ ಮಾಡುತ್ತೇವೆ.

ಮ॥ ಬಾಲಕೃಷ್ಣರಾಯರೇ ಮುಂತಾದವರು—ಬಹಳ ಬಡಬಗ್ಗರಾದವರು ವಾರಸ್ ಸರ್ಟಿಫಿಕೇಟ್ ಪಡೆಯಬೇಕಾಗಿದ್ದರೆ ಮೊಬಲಗು ಎಷ್ಟೇ ಸ್ವಲ್ಪವಾಗಿದ್ದರೂ ಸರ್ಕಾರಕ್ಕೆ ರುಸುಂ ಕೊಡಬೇಕೆಂಬ ವಿಧಾಯಕವಾಗಿರೋಣದರಿಂದ ಬಹಳ ತೊಂದರೆಯಾಗಿದೆ ೨೦೦ ರೂ ಒಳಗಿನ ಸ್ವಲ್ಪ ಹಣವನ್ನು ವಸೂಲ್ಮಾಡಿಕೊಳ್ಳುವ ಸಂದರ್ಭದಲ್ಲಿ ಅಂಥಾ ವಾರಸ್ ಸರ್ಟಿಫಿಕೇಟಿಗೆ ರುಸುಮನ್ನು ಮಾಫ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ

ದಿವಾನರವರು—ಹೋದ ವರುಷವೂ ಈ ಸಭೆಯಲ್ಲಿ ಈ ವಿಷಯವನ್ನು ಚರ್ಚೆಮಾಡಿದೇವೆ. ಆಗ ಹೇಳಿದ ಉತ್ತರವನ್ನೇ ಮತ್ತೆ ಹೇಳಬೇಕಾಗಿದೆ ಬಹಳ ಪರ್ಯಾಲೋಚನೆಯಿಂದ ಜಾರೀಗೆ ತಂದಿರುವ ಈ ರೂಲನ್ನು ಬದಲಾಯಿಸಲಾರೆವು

ಮೈಸೂರು ಸಂಸ್ಥಾನದ ಜಮಾಖರ್ಚು.

೧೯೦೪—೦೫ ನೆ ಸಾಲಿಗೆ.

ಜಮಾ ಬಾಬುಗಳು.	1903 04 ನಿಶ್ಚಿತ ರೂ	1904-5 ಪ್ರಥಮ. ರೂ.
ಜಮೀನು ಕಂದಾಯ	97 99 9-9	96,(6,39J
ಉಪ್ಪು	31,070	16,402
ಸಾಧಾರಣ ಸ್ಟಾಂಪುಗಳು	2,11,5-7	2,,0,,06
ಕೋರ್ಟುಫೀಜ್ ಸ್ಟಾಂಪುಗಳು	4,38,315	1,29,949
ಚಿಲ್ಲರೆ ಬಾಬುಗಳು	4,,,1	31,960
ಸಾರಾಯಿ	18,61 183	20,02,636
ಶೇಂದಿ	17,07,5'5	16,51,616
ನಾನಾ ಚಿಲ್ಲರೆ ಬಾಬುಗಳು	1,32 369	1,32,1,1
ಸಾಂದ್ರ	,,52,5--	3,63,877
ಮೊಹತರ್ಫ	2'-,831	3 01,207
ಗಂಧದ ಮರ	10 12 999	12,13,606
ಟಿಂಬರ್	2,5,,022	3,,,119
ಇತರ ಜಂಗಲಿ ಬಾಬುಗಳು	3,01 312	3, 5 040
ಆನೆ ಬಿಂಗಡಿಗಳು	1 25-	2,13,
ಚಿನ್ನದಗಣಿ ಕೇಶಡ) ರಂತೆ ರಾಜಾಯ	1-9 ,019	16 79,7,0
ಖನಿಜಾನ್ವೇಷಣದ ಲೈಸನ್ಸುಗಳ ರುಸುಂ, ಹೊಸ ಗುತ್ತಿಗೆಗಳ ಮೇಲಿನ ರುಸುಂ	13,7''	10,900
ರಿಜಿಸ್ಟ್ರೇಷನ್	1 11,9-,	1 1- 498
ಅಮೃತ ಮಹಾಲ್	39,003	21 575
ಸರ್ಕಾರಿ ಪತ್ರಗಳ ಮೇಲಿನ ಬಡ್ಡಿ	1 51 '35	2 29 677
ಮದರಾಸ್ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಹಣದ ಮೇಲಿನ ಬಡ್ಡಿ	10 1(2	89 300
ಸಾಲಗಳ ಮತ್ತು ಕಂದಾಯದ ಬಾಕಿಗಳ ಮೇಲಿನ ಬಡ್ಡಿ	62,968	72,'0,
ಕೋರ್ಟುಗಳು	50 1,4	40 -19
ಬಂದೀಖಾನೆಗಳು	27,108	25 12
ಪೋಲೀಸ್	62,'54	16,-1-
ವಿದ್ಯಾಭ್ಯಾಸ	1,03,86;	1,12,7'7
ವೈದ್ಯ	72,016	1 29,603
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	13,875	16,950
ಲೇಖನಸಾಮಗ್ರಿ ಮತ್ತು ಅಚ್ಚುಹಾಕುವುದು	6 107	5,629
ಸರ್ಕಾರಿ ಬಂಗಲೆಗಳ ಜಮಾ	367	179
ಮರಾಮತ್ತು ಕೆಲಸಗಳು	30(50	72 7-1
ಇತರಬಾಬುಗಳು	2,9(060	1 50 70+
ಸರ್ಕಾರಿ ರೈಲ್ವೆ ಉಟ್ಟುವಳಿ	7,05,937	7,90,003
ಕಾವೇರೀ ಪ್ರಪಾತದ ವೈದ್ಯುತಶಕ್ತಿ ವಾರೋಪಾಯ	14 71 220	12 10 -(6
ಜುಮ್ಲಾ ಜಮಾ... ..	2,15,53,422	2,16,10,186

ಖರ್ಚುಬಾಬುಗಳು.	1903 04. ನಿಶ್ಚಿತ ರೂ.	1904 05 ಪ್ರಥಮ ರೂ
ಪೊಗದಿ	35,00,000	35,00 000
ಅರಮನೆಯ ಖರ್ಚು	16,00,000	16 00,0'0
ರಾಜವಂಶೀಯರ ವೇತನಗಳು	2,40,000	3,40 000
ರಾಜಕೀಯ ವೇತನವೇತನಗಳು ಜಹಗೀರಿಗಳಿಗೆ ಬದಲಾಗಿ ಕೊಟ್ಟವುಗಳು ಸೇರಿ	85,,21	82,625
ಜಮೀನು ಕಂದಾಯದಲ್ಲಿ ಸೇರಿ ಹೋದ ಇರಿಗೇಷನ್	1,56,441	1,,6,414
ಇತರ ಬಾಬುಗಳು	55 6,1	59,920
ಡೆಪ್ಯುಟಿ ಕಮೀಷನರುಗಳೂ ಅವರ ಸಿಬ್ಬಂದಿಗಳೂ	1,56,538	1,93,119
ಅಸಿಸ್ಟೆಂಟ್ ಕಮೀಷನರುಗಳೂ ಅವರ ತಾಲ್ಲೂಕ್ ಸಿಬ್ಬಂದಿಗಳು	1,0,,753	1,11,165
ತಾಲ್ಲೂಕ್ ಸಿಬ್ಬಂದಿಗಳೂ	3,92 055	3 -9,120
ಷಾಂದಿಲ್‌ವಾರ್ ಪಗ್ಗೆ	27,238	51,,13
ನಾನಾ ಚಿಲ್ಲರೆ ಬಾಬುಗಳು	37,631	31,495
ಪಟೇಲ ಶಾನಭೋಗರಿಗೆ ಪೋಟಿಗೆ	7,66,075	7,67,472
ಸರ್ವೆ ಅಂಡ್ ಸೆಟ್ಲ್‌ಮೆಂಟ್	1,66,541	1,74,201
ಇನಾಮು	9,131	7,934
ರೆವಿನ್ಯೂ ಕಮೀಷನರು	..	11,193
ಸ್ಟಾಂಪುಗಳು	26 913	26,5,6
ಅಬ್ಕಾರಿ	3,27,691	3,32,324
ಸಾಯರು	15,517	12,950
ಜಂಗಲು	5,24,1-8	6,47,128
ಚಿನ್ನದಗಣಿ	18,370	15 9-,
ರಿಜಿಸ್ಟ್ರೇಷನ್	51 +27	85,5,3
ಅಮೃತ ಮಹಾಲ್	,1 090	31,955
ಮೈಸೂರು ಡಿಬೆಂಚರ್ 20 ಲಕ್ಷದ ಮೇಲಿನ ಬಡ್ಡಿ	1,675	50
ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿರುವ ಡಿಪಾಜಿಟ್ಟಿನ ಬಡ್ಡಿ	2 37,795	2,51 973
ಧರ್ಮದ ಫಂಡಿನ ಬಡ್ಡಿ	17,091	15,865
ಇನ್ಷೂರೆನ್ಸ್ ಫಂಡಿನ ಬಡ್ಡಿ	29 896	33,391
ವಾಪಸು ಜಮಾ	.	531
ಮೇಲ್ವಿಚಾರಣೆಯ ಸಿಬ್ಬಂದಿ	1 -1,299	1,9(,662
ಕೋರ್ಟುಗಳು	9 10,001	9,10,947
ಬಂದೀಖಾನೆಗಳು	99 544	1,01,214
ಪೊಲೀಸು	9,7, 193	9,7, 650
ವಿದ್ಯಾಭ್ಯಾಸ	7,19 527	7,97,616
ಮುಜರಾಯಿ	3,28,662	3,27,517
ವೈದ್ಯ	5,69,468	5,70,178
ಗವರ್ನಮೆಂಟ್ ಮನೆಗಳು	1,13 767	1,21,078
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	2 55,737	2 15 916
ಸಿವಿಲ್ ಫರ್ಲೋ ವೇತನಗಳು	..	29
ವಯೋಧಿಕರಿಗಾಗಿ ಕೊಟ್ಟ ವೇತನಗಳೂ ಗ್ರಾಟ್ಯುಟಿಗಳೂ	95 128	1 12,621
ಲೇಖನಸಾಧನಗಳು ಮತ್ತು ಅಚ್ಚು	1 68 657	1,51 -85
ಕೊಂಡುಕೊಂಡ ಸರ್ಕಾರಿ ಪತ್ರಗಳಿಗಾಗಿ ಕೊಟ್ಟ ನಫೆ	4 203	8 974
ಇತರ ಬಾಬುಗಳು	10 95 179	6,2',057
ಪ್ಲೇಗು	1 21 606	1,16,686
ಕ್ಷಾಮಪರಿಹಾರ	108	.
ಮರಾಮತ್ತು, ಆರೋಗ್ಯಾಭಿವೃದ್ಧಿಯೂ ಸೇರಿ	39,79,341	30 49,,81
ರೈಲ್ವೆ	13,15,126	13 11 930
ಮೈಸೂರು ಹರಿಹರ ಮಾರ್ಗದ ಬಂಡವಾಳದಲ್ಲಿ ಕಟಾಯಿಸಿದಭಾಗದ ಮೇಲಿನ ಬಡ್ಡಿ	7,10,165	7,15 193
ರೈಲ್ವೆಗಳ ಬಂಡವಾಳದ ಲೆಕ್ಕ	57 0-9	35 2,6
ಕಾವೇರಿ ಪ್ರಪಾತದ ವೈದ್ಯುತಶಕ್ತಿ ವಾರೋಪಾಯದ ಹುಟ್ಟುವಳಿ ಲೆಕ್ಕ	1,99,304	2 17,'08
ಇದರ ಬಂಡವಾಳ	7,77,701	9,51,925
ಜುಮ್ಲಾ ಖರ್ಚು .	2 20,08,138	2,16,51,799

ಮೈಸೂರು ಸಂಸ್ಥಾನವು.

1905-06ನೆಯ ವರ್ಷದ ಜಮಾ ಖರ್ಚು ಅಂದಾಜುಪಟ್ಟಿ (ಬಜೆಟ್).

ಜಮಾ ಬಾಬುಗಳು.

	ರೂಪಾಯಿ.
ಜಮೀನು ಕಂದಾಯ	99 50,00J
ಗಣಿಗಳ ರಾಜಾಯ ಮತ್ತು ಗುತ್ತಿಗೆಗಳು	17,62,60
ಜಂಗಲುಗಳು	18 0,,00 0
ಅಬ್ಕಾರಿ	38,,0 000
ತೆರಿಗೆಗಳು	3,06 000
ಸಾಯರು ತೆರಿಗೆ	3,66,003
ಉಪ್ಪಿನ ಮೋಳೆ	20 000
ಸ್ಟಾಂಪು	7,11 000
ರಿಜಿಸ್ಟ್ರೇಷನ್	1 08,0,C
ಬಡ್ಡಿ	1,42,0000

ಲಾಭ ಅಥವಾ ನಷ್ಟ	2,56,000
ನೋಟ್ಸು ಖಾರಖಾನೆ ಸಿಬ್ಬಂದಿ	6,000
ಕೋರ್ಟುಗಳು	51,000
ಬಂದೀಖಾನೆಗಳು	28,000
ಪೋಲೀಸು	32,000
ವಿದ್ಯಾಭ್ಯಾಸ	1,22 000
ವೈದ್ಯ	1 27 000
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	38,000
ವಯೋಧಿಕಕ್ಕಾಗಿ ಕೊಡುವ ಪೆನ್ಷನ್ನಿಗಾಗಿ ಬಂತದ್ದು	3,000
ನಾನಾ ಚಿಲ್ಲರೆ ಬಾಬುಗಳು	1,50.000
ಸೈನ್ಯ	37 000
ಕಾವೇರೀ ಪ್ರವಾಹದ ವೈದ್ಯುತ ಶಕ್ತಿ ವಾಹಕೋಪಾಯ	18,00 000
ಸರ್ಕಾರಿ ರೈಲ್ವೆಗಳ ಹುಟ್ಟುವಳಿ ಲೆಕ್ಕ	7,25 000
ಮುಂಚನ್ನತ್ತು	3,27,000
ಒಟ್ಟು ಆದಾಯ	2 47,13,000

ಖರ್ಚುಬಾಬುಗಳು.

ಮಾಪಸ್ ಜಮೆ	ರೂಪಾಯಿ	2,36,000
ಜಮೀನ್ ಕಂದಾಯ		18,10,000
ಜಂಗಲುಗಳು		7,00,000
ಅಬ್ಕಾರಿ		3,16,000
ಸಾಯರು		15,000
ಸ್ಟಾಂಪು		16,000
ರಿಜಿಸ್ಟ್ರೇಷನ್		88,000
ಸಾಮಾನ್ಯ ಸಾಲದ ಬಡ್ಡಿ		2 000
ಇತರ ಬಡ್ಡಿ		3,22,000
ಲಾಭ ಅಥವಾ ನಷ್ಟ		7 000
ಅರಮನೆ		13,40 000
ಸಿವಿಲ್ ಇಲಾಖೆಗಳ ಸಂಬಳ ಮತ್ತು ಖರ್ಚು		8,32 000
ಕೋರ್ಟುಗಳು		9,14,000
ಬಂದೀಖಾನೆಗಳು		1 10,000
ಪೋಲೀಸು		9,97,000
ವಿದ್ಯಾಭ್ಯಾಸ		7,84,000
ಮುಜರಾಯಿ ಸತ್ರ ದೇವಾಲಯಗಳು		3,43,000
ವೈದ್ಯ		6,36,000
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು		2,99,000
ಖರಾಗಳ ಪ್ರಕಾರ ಕೊಡತಕ್ಕ ವೇತನಗಳು		35,90,000
ವಯೋಧಿಕಕ್ಕಾಗಿ ಅಲೋವೆನ್ಸುಗಳು ಮತ್ತು ಪೆನ್ಷನ್‌ಗಳು		1,20,000
ವಿವಿಧವಾದ ಖರ್ಚುಗಳು		7,81,000
ಸೈನ್ಯ		13,62,000
ಕಾವೇರಿ ಪ್ರವಾಹದ ವೈದ್ಯುತಶಕ್ತಿ ವಾಹಕೋಪಾಯ		1,51,000
ಸರ್ಕಾರಿ ರೈಲ್ವೆಗಳು		7 20 000
ಮರಾಮತ್ತು		35,60 000
ಒಟ್ಟು ಖರ್ಚು ...		2,13,40,000

ಮೈಸೂರು ಗೆಜೆಟು ಸಂಗ್ರಹ.

ಚಿತ್ರದುರ್ಗದ ಡಿಸ್ಟ್ರಿಕ್ಟು ಚಳ್ಳಕೆರೆ ತಾಲ್ಲೂಕಿಗೆ ಸೇರಿದ ೧೪೪ ಗ್ರಾಮಗಳಲ್ಲಿ ರಿವಿಷನ್ ಸರ್ವೆ ಸೆಟ್ಲ್‌ಮೆಂಟು ಮಾಡಿದ್ದಾರಾದ್ದು ಹೊಸ ದರಗಳ ಕಂದಾಯ ನಿಗದಿ ಮಾಡಿರುವುದು ೧೯೦೬—೦೭ನೇ ಸಾಲಿನಿಂದ ಜಾರೀಗೆ ಬಂದು, ಮೂವತ್ತು ವರುಷಗಳ ವರಗೆ ಆ ರೀತಿ ವಸೂಲಾಗತಕ್ಕದ್ದೆಂದು ನಿರ್ಧಾರವಾಗಿಸಲ್ಪಟ್ಟಿದೆ.

ಕೋಲಾರ್ ಚಿನ್ನದ ಗಣಿಗಳ ಅ॥ ಕಮೀಷನರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮ॥ ಆರ್. ಬಿ ಸ್ವಾಮಿ ಯವರು ಆಗಸ್ಟ ೨೩ ರಲ್ಲಿ ಕೆಲಸದ ಮೇಲೆ ಹಾಜರಾದಕಾರಣ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಶಿವಮೊಗ್ಗ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮ॥ ಜಹೀರುದ್ದೀನ್ ಮಕ್ಕೆ ಯವರು ಸೆಪ್ಟೆಂಬರ್ ೧೩ರಲ್ಲಿ ಕೆಲಸದ ಮೇಲೆ ಹಾಜರಾದಕಾರಣ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ.

ಮೈಸೂರು ಅ॥ ಮುನ್ಸಿಫ್ ಮ॥ ಬಿ ಎ. ಶಿವರಾಮ ಪಿಳ್ಳೆ ಯವರಿಗೆ ಅಕ್ಟೋಬರ್ ೧೪ ರಿಂದ ಎರಡು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಅಡ್ವೊಕೇಟ್ ಮ॥ ಎಸ್. ವೆಂಕಟಕೃಷ್ಣಯ್ಯನವರು ಮೈಸೂರು ಅಡಿಷನಲ್ ಮುನ್ಸಿಫರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದಾರೆ.

ಕೋಲಾರ್ ತಾಲ್ಲೂಕ್ ಅಮಲ್ದಾರ್ ಮ॥ ಎ ಮೃತ್ಯುಂಜಯ ಅಯ್ಯರಿಗೆ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಆ ಕಾಲದಲ್ಲಿ ಶಿರಸ್ತೆದಾರ್ರು ತಾಲ್ಲೂಕಿನ ಬಾಬ್ತಿ ಕೆಲಸಗಳ ಛಾರ್ಜನ್ನು ವಹಿಸಿದ್ದರು.

ಕೋಲಾರ್ ಡಿವಿಜನ್ ಎಕ್ಸೈಸ್ ಅ॥ ಕಮೀಷನರ್ ಮ॥ ಬಿ ಶಾಮಣ್ಣನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅರಕಲಗೂಡು ತಾಲ್ಲೂಕ್ ಸಬ್ ಪ್ರೊಬೆಷನರಿ ಅಮಲ್ದಾರ್ ಮ॥ ಎಸ್. ರಾಮಸ್ವಾಮಿ ಅಯ್ಯಂಗಾರ್ರಿಗೆ ೧೨ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಆ ಕಾಲದಲ್ಲಿ ಶಿರಸ್ತೆದಾರ್ರು ತಾಲ್ಲೂಕಿನ ಬಾಬ್ತಿ ಕೆಲಸಗಳ ಛಾರ್ಜನ್ನು ವಹಿಸಿದ್ದರು.

ತುಂಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಮ॥ ಕೆ ದೊರೆಸ್ವಾಮಿ ಅಯ್ಯರವರಿಗೆ ಕೊಟ್ಟಿದ್ದ ೫೭ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ದಿನ ಜಾಸ್ತಿ ಮಾಡಿದೆ

ಸಾಗರ್ ತಾಲ್ಲೂಕಿನ ಅಮಲ್ದಾರ್ ಮ॥ ವಿ ಪಾರ್ಥಸಾರಥಿ ಅಯ್ಯಂಗಾರ್ರು ಸೆಪ್ಟೆಂಬರ್ ೫ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ

ಮಧುಗಿರಿ ತಾಲ್ಲೂಕ್ ಅಮಲ್ದಾರ್ ಮ॥ ವಿ. ಕೃಷ್ಣರಾಯರನ್ನು ಎಕ್‌ಸ್ಟ್ರಾ ಅ ಕಮೀಷನರಾಗಿ ಬದಲಿ ನೇಮಿಸಿ. ಕಡೂರು ಡಿಸ್ಟ್ರಿಕ್ಟು ಖಜಾನೆಯ ಛಾರ್ಜಿಗೆ ವರ್ಗಮಾಡಿದೆ

ತುಂಕೂರ್ ಡಿಸ್ಟ್ರಿಕ್ಟ್ ಆಫೀಸ ಶಿರಸ್ತೆದಾರ್ ಮ॥ ಸಿ. ಗೋಪಾಲಾಚಾರ್ಯರು ಮಧುಗಿರಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ

ಚಿತ್ರದುರ್ಗ ಡಿವಿಜನ್ ಅ॥ ಎಗ್ಜಿಕ್ಯುಟಿವ್ ಇಂಜನಿಯರ್ ಮ॥ ಆರ್. ವಿ. ಸುಂದರಂ ಅಯ್ಯರವರಿಗೆ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಅರಮನೆ ಡಿವಿಜನ್ ಸಬ್ ಅ॥ ಇಂಜನಿಯರ್ ಮ॥ ಎಚ್. ಶ್ರೀನಿವಾಸ ಅಯ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೨೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನ ಡಿವಿಜನ್ ಅ॥ ಇಂಜನಿಯರ್ ಮ॥ ವೆಂಕಟರಾವ್, ಆರ್. ನಿಜಗಲ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ವಿಳಾಸಪತ್ರಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ಚಾಮರಾಜನಗರದ ವಿಷಯಗಳು.

ಅಯ್ಯಾ,

ಕೆಲವು ದಿವಸಗಳ ಹಿಂದೆ ಅಲೂರು ಗ್ರಾಮದಲ್ಲಿ ನಡೆದ ಖೂನಿಯು ವಾಚಕರೆಲ್ಲರಿಗೂ ಗೊತ್ತಿರುತ್ತೆಯಷ್ಟೆ. ಈ ಕೊಲೆಯನ್ನು ನಡೆಸಿದವರು ಯಾರೆಂಬುವುದು ಇನ್ನು ಗೊತ್ತಾಗಲಿಲ್ಲ. ಗುಮಾನಿ ಆಸಾಮಿಗಳಾದರೋ ಇನ್ನು ಪತ್ತೆ ಆಗಲಿಲ್ಲವೆಂಬುವದು ಆಶ್ಚರ್ಯವಾಗಿದೆ ಇದರಿಂದ ತಾಲ್ಲೂಕು ಪೋಲೀಸಿನವರ ಅಜಾಗರತೆಯೂ ತೋರಬರುತ್ತದೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಬರುವರೆಂದು ವದಂತಿ ಇದೆ. ಇದು ಮುಂದೆ ಹೇಗೆ ಪರಿಣಮಿಸುವುದೋ ನೋಡಬೇಕು. ಅಂತು ಇದನ್ನು ಪತ್ತೆ ಮಾಡಿ ಕೀರ್ತಿ ಪಡೆಯುವರೆಂದು ನಂಬುತ್ತೇನೆ.

ಮರಹಳ್ಳಿ ಸಂತೆಯಲ್ಲಿ ಕಳ್ಳತನಗಳು ಜೋರಾಗಿ ನಡೆಯುತ್ತವೆ ಎಂದು ತಿಳಿಯಬರುತ್ತೆ ತಾ ೧೭ ನೇ ಮಂಗಳವಾರ ಸಂತೆಯಲ್ಲಿರುವ ಕೊಳದಲ್ಲಿ ಶ್ರೀ॥ ನರಸಿಂಹರದವನೊಬ್ಬನು ತನ್ನ ಹತ್ತಿರ ಇದ್ದ ಗಂಟನ್ನು ಇಟ್ಟು ಊಟ ಮಾಡುತ್ತಿರುವಾಗ ಗಂಟನ್ನು ಯಾರೋ ಅಪಹರಿಸಿದರು. ನಂತರ ಪೋಲೀಸಿನವರು ಕಳೆದುಕೊಂಡಾತನಿಂದ ತೋರಿಸಲ್ಪಟ್ಟ ಒಬ್ಬ ಹೆಂಗಸಿನ ಮೇಲುಗಂಟಿನ ಜಗ್ಗೋ ತಿಪ್ಪುರದಲ್ಲಿ ಪತ್ತೆ ಮಾಡಿದರು. ಆ ಗಂಟಿನಲ್ಲಿ ೧೦೦ ರೂಪಾಯಿನವರೆಗೆ ಇತ್ತೆಂದು ತಿಳಿಯಬರುತ್ತೆ. ಅಂತು ಗಂಟು ಹೋದ ಕ್ಷಣವೇ ಆ ಬಡಪಾಯಿಗೆ ಛಳಿಜ್ವರ ಬಂದು ನೂತನಾದುದ್ದಕ್ಕೆ ಚೈತನ್ಯವಿರಲಿಲ್ಲ ಈ ಕಳ್ಳರನ್ನು ಏನು ಮಾಡುವರೋ ತಿಳಿಯತಕ್ಕದ್ದಾಗಿದೆ.

ಪ್ರತ್ಯಕ್ಷದರ್ಶಿ.

ಸಾಣೆಹಳ್ಳಿ ದೊಡ್ಡಮಠದ ವಿಚಾರವು

ಅಯ್ಯಾ,

ಹೊಳಲ್ಕೆರೆ ತಾಲ್ಲೂಕು ಅದೇ ಸಮ್ಮತು ಶ್ರೀಮನ್ ಸಾಣೆಹಳ್ಳಿ ದೊಡ್ಡ ಮಠದ ಮಹಾ ಸಂಸ್ಥಾನದಲ್ಲಿ ಇದೇ ಆಶ್ವೀಜ ಶುದ್ಧ ೧೩—೧೪ ದಿವಸಗಳಲ್ಲಿ ದಸರಾ ಉತ್ಸವಕ್ಕೆ ೫—೬ ಸಹಸ್ರ ಪ್ರಜೆಗಳು ಕೂಡಿ ಇದ್ದರು. ಈ ಸಂಸ್ಥಾನಕ್ಕೆ ಪಟ್ಟಕ್ಕೆ ಶ್ರೇಷ್ಠರಾದ ಶ್ರೀಗುರು ಶಾಂತದೇಶಿಕೇಂದ್ರ ಸ್ವಾಮಿಗಳವರ ಉತ್ಸವವೂ ಮಹಾ ಗಣಾರಾಧನೆಯೂ ಬಹಳ ವಿನೋದವಾಗಿ ನಡೆದವು ಮತ್ತು ಈ ದಸರಾ ಉತ್ಸವಕ್ಕೆ ಕೂಡಿದ ಬಹುಭಾಗದ ಪ್ರಜೆಗಳೆಲ್ಲಾ ಸಿಂಹಾಸನದ ಮುಂದೆ ವಿನಂತಿ ನಡೆಸಿ, ಹೊಸದುರ್ಗ ತಾಲ್ಲೂಕು ಕೋಡಿಹಳ್ಳಿ ಪಟೇಲ ಸಿದ್ರಾಮೇಗೌಡರ ಮಕ್ಕಳು ನೇಸರ ಶಿದ್ದಪ್ಪ, ಮತ್ತು ಜಂತಿಗೊಳಲ ಪಟೇಲ ಲಿಂಗೇಗೌಡರ ಮಕ್ಕಳು ಶಿದ್ದೇಗೌಡರು, ಗುಂಡೇರಮುದ್ರದ ಮಲ್ಲಪ್ಪನ ಮಗ ಮಲ್ಲಪ್ಪ, ಆಸಂದಿ ಪುರಾಳೇಗೌಡರ ಮಗ ಉಜ್ಜನೇಗೌಡರು, ಬುದ್ಧಿವಂತ ಪುರದೈಯನ ಬಸಪ್ಪ, ಹೋಮನಹಳ್ಳಿ ಬುದ್ಧಿವಂತ ಬಸಪ್ಪ, ಚಿಕ್ಕನಲ್ಲೂರು ಬಸ್ವೇಗೌಡರ ಮಕ್ಕಳು ಕಲ್ಲೇಗೌಡರು, ಅಹುಮನಹಳ್ಳಿ ಬತ್ತಿಗೌಡರ ಮಕ್ಕಳು ನಾಗಪ್ಪಗೌಡರು, ಬುದ್ಧಿವಂತ ದಣ್ಣಾಪುರದ ವ[illegible]ವಪ್ಪ, ಈ ೯ ಜನಗಳನ್ನು ಈ ಸಂಸ್ಥಾನದ ಮೆಂಬರುಗಳ[illegible] ನೇಮಕ ಮಾಡಿ, ಪ್ರತಿ ವರುಷವೂ ದಸರಾ ಉತ್ಸವದ ಕಾರ್ಯ[illegible] ಆಗಲಿ, ಈ ಸಂಸ್ಥಾನದ ಇನ್ನಾವ ಕಾರ್ಯಗಳೇ ಆಗಲಿ [illegible] ಕೊಂಡು ಹೋಗುವ ಹಾಗೆ ಗೊತ್ತು ಮಾಡಿಕೊಂಡರು.

೨೬—೧೦—೧೯೦೫. ಮು. ಶಾಪ್ಪ.

ನಂಜನಗೂಡು ಸಮಾಚಾರ.

ಅಯ್ಯಾ,

ಈ ಪ್ರಾಂತ್ಯ ಚಿತ್ತ ಮಳೆಯು ೧—೨ ಬಾರಿ ಬಂದು [illegible] ಮನಸ್ಸನ್ನು ಸಂತೋಷಪಡಿಸಿತು ಹುರಳಿ ಮತ್ತು ಇತರ [illegible]ರು ಬೆಳೆಗಳು ಸಾಧಾರಣವಾಗಿದೆ ದಿನಸಿ ಧಾರಣೆಗಳು ಸ್ವಲ್ಪ[illegible] ವಾಗುತ್ತಾ ಬರುತ್ತಿವೆ.

ಇಲ್ಲಿಗೆ ತಾ ೧೨ ರಲ್ಲಿ ಶ್ರೀಮನ್ಮಹಾರಾಜರವರು ಪರಿ[illegible] ಸಮೇತ ಶ್ರೀಶ್ರೀಕಂಠೇಶ್ವರಸ್ವಾಮಿಯ ಸೇವೆಗೋಸ್ಕರ ದಯ[illegible] ಶಿದರು. ಈ ಊರಲ್ಲಿರುವ ಸಿವಿಲ್ ಆಫೀಸರು, ಮುನ್ಸಿ[illegible] ಲಾಯರುಗಳೇ ಮೊದಲಾದ ದೊಡ್ಡ ಮನುಷ್ಯರುಗಳೆಲ್ಲ ರೈಲ್[illegible] ಬಂಗಲ್ಲ ಬಳಿ ಕಾದಿದ್ದು, ಶ್ರೀಮನ್ಮಹಾರಾಜರವರಿಗೆ ಪುಷ್ಪ[illegible] ಗಳೊಡನೆ ಹೂವಿನ ಹಾರ ಮೊದಲಾದ್ದನ್ನು ಒಪ್ಪಿಸಿದರು [illegible] ಮಹಾಸ್ವಾಮಿಯವರು ಅರಮನೆಗೆ ದಯಮಾಡಿ, ಸ್ವಾಗತ [illegible] ವಂದನೆಗಳನ್ನು ತೀರಿಸಿಕೊಂಡು, ದೇವಸ್ಥಾನಕ್ಕೆ ಬಿಜಯ[illegible]ದು ನಂಜುಂಡೇಶ್ವರಸ್ವಾಮಿಯವರ ಸೇವೆಯನ್ನು [illegible] ಅಲ್ಲಿಂದ ಶಿವಶಿಂದ ಸ್ವಾಮಿಯವರು ಪ್ರತಿಷ್ಠೆ ಮಾಡಿಸಿರುವ [illegible] ಮುಂಡೇಶ್ವರಿ ದೇವಸ್ಥಾನಕ್ಕೆ ದಯಮಾಡಿ, ಅಲ್ಲಿ ಸೇವೆ [illegible] ಮಾಡಿಕೊಂಡು, ಅರಮನೆಗೆ ಬಿಜಯಂಗೈದು, ಭೋಜನಾ[illegible] ಸುಮಾರು ನಾಲ್ಕುವರೆ ಗಂಟೆ ಸಮಯದಲ್ಲಿ ರಾಜಧಾನಿ[illegible] ಕಾರಿನ ತೆರಳಿದರು ಪರಿವಾರದವರೆಲ್ಲರು ಸುಮಾರು ೭ ಗಂ[illegible] ವರಿಗೂ ಇದ್ದು ಸೋಸಲೇಮಿ ರಥವನ್ನು ನೋಡಿಕೊಂಡು ಪ್ರಯಾಣ ಮಾಡಿದರು

ಇತ್ತ ಸಂಜೆಯವರಿಗೆ ಶ್ರೀರಾಘವೇಂದ್ರಸ್ವಾಮಿಗಳ ಮಠ[illegible] ಸ್ಮಾರ್ತರಿಗೆ ದೇವಸ್ಥಾನದಲ್ಲೂ ಶ್ರೀವೈಷ್ಣವರಿಗೆ ಬ್ಯಾಂಕ್[illegible] ಟರ ಮನೆಯಲ್ಲೂ ಸಮಾರಾಧನೆ ನಡೆಯಲು ಏರ್ಪಾಡಾಗಿ[illegible] ಸ್ಮಾರ್ತರಿಗೆ ಏರ್ಪಾಡಾದ ಸ್ಥಳಕ್ಕೆ ಸಬ್ ಡಿವಿಜನ್ ಆಫೀ[illegible] ಮುನ್ಸಿಫರೂ, ಶ್ರೀವೈಷ್ಣವರ ಸಂತರ್ಪಣೆ ನಡೆಸತಕ್ಕ ಬಗ್ಗೆ[illegible] ಲ್‌ದಾರರೂ ನಿಂತು ಶ್ರೀಮನ್ಮಹಾರಾಜರವರ ಕಾರ್ಯವೇ [illegible]ದೆಂಬ ಅಭಿಮಾನದಿಂದ ಬ್ರಾಹ್ಮಣ ಸುವಾಸಿನಿಯರಿಗೆ ಅತ್ಯಂ[illegible] ದಿಂದ ಭೋಜನ ಮಾಡಿಸಿದರು ಆದರೆ ಶ್ರೀರಾಘವೇಂದ್ರ[illegible] ಮಿಗಳ ಮಠಕ್ಕೆ ಊಟಕ್ಕೆ ಹೋಗಿದ್ದ ಕೆಲವು ಜನರ ವಿಷಯ[illegible] ನಕರವಾಗಿದೆ ಈ ಸಮಾರಾಧನೆಯಲ್ಲಿ ಅನ್ನ ಸಾರು ಸಿಕ್ಕ[illegible] ಕಷ್ಟವಾದಂತೆಯೂ ಸ್ಥಳದರ್ಪಡದವರು ಬಹು ಸಂಕೋಚ[illegible] ಜನದಿಂದ ಮನೆಗೆ ಹೋದರೆಂತಲೂ ಹೇಳಿದರು ಮಠದ [illegible]ಜರು ಇನ್ನು ಮುಂದೆ ಸರಿಯಾದ ನಿಗಾ ಕೊಟ್ಟು ಸರ್ವರಿಗೂ [illegible] ಸಮಾನಾದ ಭೋಜನ ಮಾಡಿಸುತ್ತಾರೆಂದು ನಂಬುತ್ತೇನೆ

ಈ ಊರಿನಲ್ಲಿ ಕಪಿಗಳ ಕಾಟವನ್ನು ತಡೆಯಲು ಅಸಾ[illegible] ಗಿರುತ್ತೆ. ಒಂದೊಂದು ಗುಂಪಿಗೆ ನೂರಾರು ಇದೆ ಇವು[illegible] ಮನೆಗಳ ಮೇಲೆ ಬಂದು ಹೆಂಚು ತೆಗೆದು ಒಳಗೆ ನುಗ್ಗಿ [illegible] ಗಳನ್ನು ತಿಂದು ನಾಶಮಾಡಿ ಹೋಗುತ್ತವೆ. ಈ ವಿಷಯ[illegible] ಮುನಿಸಿಪಾಲಿಟಿಯವರು ಮನಸ್ಸಿಗೆ ತಂದುಕೊಳ್ಳುವದಿಲ್ಲ. [illegible] ಒಂದು ಸಾರಿ ಕಪಿ ಹಿಡಿಯುವ ವಿಷಯಕ್ಕೆ ಮೆಂಬರುಗಳೆಲ್ಲ[illegible] ವಿವಾದಂಗು ನಡಿಸಿ ಏನೋ ಏರ್ಪಾಡು ಮಾಡಿದರು ಆ ಏರ್[illegible] ನಿಂತು ಬಹು ದಿನಗಳಾಗುತ್ತಾ ಬಂತು ಈಚೆಗೆ ಈ ಸಲ [illegible] ತ್ರಿಯಲ್ಲಿ ಶ್ರೀಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನದಲ್ಲಿ [illegible] ಬ್ರಾಹ್ಮಣರು ಜಪ ಪಠ್ಯರ ನಡಿದ್ದಕ್ಕೆ ಪಡಿಮೂಲ್ ಪ್ರಕಾ[illegible]ದ ದುಡ್ಡನಲ್ಲಿ ಅವರವರ ಯೋಗ್ಯತಾನುಸಾರ ಬಟವಾಡೆ [illegible] ಕಾಲದಲ್ಲಿ ಬಟವಾಡೆಗೆ ಬಂದಿದ್ದ ಅಧಿಕಾರಿಗಳು ಹಿಡಿದುಕೊ[illegible] ಬಾಕಿ ನೌಕರಿಗಳನ್ನು ಮಾಡತಿ ಮಾಡಿಸಿದರಂತೆ. ಇದು ಯಾವ[illegible] ಸೋ ಗೊತ್ತಾಗಲಿಲ್ಲ ಮುನಿಸಿಪಾಲಿಟಿಯಲ್ಲಿ ಹಣವಿಲ್ಲದೆ [illegible] ಗಿದ್ದರೆ ಹೀಗೆ ಮಾಡಬಹುದಾಗಿತ್ತು ಅಥವಾ ಒಂದು [illegible] ಇಷ್ಟೆಂದು ಪಟ್ಟೀ ಹಾಕಿ ಒಬ್ಬ ಜವಾನನಿಂದ ವಸೂಲು[illegible]ದ್ದರೆ ಕಪಿಗಳ ಹಿಂಸೆಯನ್ನು ತಡೆಯಲಾರದವರೆಲ್ಲ ಕೂಗ[illegible] ವಸೂಲ್ ಕೊಡುತ್ತಿದ್ದರು. ಇದನ್ನು ಬಿಟ್ಟು ಮೇಲ್ಕಂಡಂತೆ[illegible]ದ್ದು ಉಚಿತವಾಗಿ ತೋರುವದಿಲ್ಲ

ನಮ್ಮ ಅಮಲ್‌ದಾರರು ಕ್ಲಪ್ತಕಾಲಕ್ಕೆ ಕೋರ್ಟಿಗೆ [illegible] ದಿಲ್ಲ. ೩—೪ ಗಂಟೆ ಸಮಯದಲ್ಲಿ ದಯಮಾಡುತ್ತಾರೆ ೫[illegible] ಗಂಟೆಯವರೆಗೂ ಅರ್ಜಿಗಳನ್ನು ಕೂಗಿಸುವದೇ ಇಲ್ಲ [illegible] ೧೦—೧೧ ಗಂಟೆ ಸಮಯದಲ್ಲಿ ಕ್ರಿಮಿನಲ್ ಕೇಸ್ ವಿಚಾರಣೆ[illegible] ಡಿ. ಆವೇಳೆಯಲ್ಲಿ ಶಿಕ್ಷೆ ವಿಧಿಸುತ್ತಾರೆ ಅಪರಾಧಿಗಳು ಆ [illegible] ಯಲ್ಲಿ ಪರ್ತಕರಲ್ಲಾಗಲಿ, ಅಥವಾ ಇತರರಲ್ಲಿ ಯಾಗಲಿ [illegible] ಸೌಲಗಳನ್ನು ಮಾಡಿ ಜಾಮೀನ್ ಕೊಡುವದಕ್ಕೆ ಯು[illegible] ಲಾಕಪ್ಪಿನಲ್ಲಿ ಬಿದ್ದಿರಬೇಕಾಗುತ್ತೆ. ಇದರಿಂದ ಅರ್ಜಿದಾ[illegible] ಕಕ್ಷಿಗಾರರಿಗೂ ಬಹು ತೊಂದರೆಗೆ ಕಾರಣವಾಗಿರುತ್ತೆ. [illegible] ಯಾದರೂ ೧೧ ರಿಂದ ೫ ಗಂಟೆ ವರಿಗೆ ಕೋರ್ಟು ನ[illegible] ಯಾದಿ ಅಪರಾಧಿಗಳಿಗೂ ಅರ್ಜಿ ಕಟ್ಟೆ ಲಾಯರುಗಳು [illegible] ಕ್ಕೂ ಅನುಕೂಲವಾಗುತ್ತೆ.

ಮುನ್ಸಿಫ್ ಕೋರ್ಟನಲ್ಲಿ ನಡೆಯುವ ಸಾಕ್ಷಿ [illegible] ನಿಗೆ ಸಮನುಗಳನ್ನು ಜಾರಿಗೆ ಕೊಟ್ಟದ್ದು ವಾಪಸು [illegible] ರೆಂದೂ ಜಾರಿ ೧೩೦೩—೪—೫ ರಲ್ಲಿ ಹರಾಜಾದ [illegible] ಸುಕರುವನ್ನು ಕಮ್ಮಿ ಬೇಟನಲ್ಲಿ ವಾದಿ ಹೆಸರಿಗೆ ಕಾವೇ [illegible]

...ದಾರರಿಂದಲೂ ಚೀಫ್ ಕೋರ್ಟಿಗೆ ಯಾರೋ ಅರ್ಜಿ ...ದ್ದಕ್ಕೆ ನಮ್ಮ ಡಿಸ್ಟ್ರಿಕ್ಟ್ ಜಡ್ಜಿಯವರಾದ ಮೆ॥ ...ರವರು ಬಂದು ಇನ್ಸ್‌ಪೆಕ್ಟ್ ಮಾಡಿದರು. ...ರಂತೆ ಸರ್ವರುಗಳೆಲ್ಲ ವಾಪಸು ತೆಗೆದುಕೊಂಡ ದಾ ...ಬೀದಲ್ಲಿ ಜಡ್ಜಿಯವರ ಸನ್ನಿಧಾನದಲ್ಲಿ ಈ ಕೋ ...ಗಳೆಲ್ಲ ಸೇರಿ ಅಭಿನವ... ...ತೋಂದರೆಯನ್ನು ಹೇಳಿಕೊಂಡರು ಅದಕ್ಕೆ ಶಕ್ತಿ ...ತೊಂದರೆಯನ್ನು ನಿವಾರಣೆ ಮಾಡಿಕೊಡುವುದಾಗಿ ಅಪ್ಪಣೆ ...ಗಿ ತಿಳಿಯಬರುತ್ತೆ. ಒಬ್ಬ ಬಾತ್ಮೀದಾರ್.

ಶ್ಲಾಘನೀಯ ವರ್ತಮಾನಗಳು.

ಹೊಳೆನರಸೀಪುರ. ಈವರ್ಷ ಆರೋಗ್ಯಕರವಾಗಿಯೂ, ಮಳೆ ...ಅನುಕೂಲವಾಗಿಯೂ ಇದೆ. ಆದರೆ ಧಾನ್ಯಾದಿಗಳು ...ಜಾಸ್ತಿಯಾಗುತ್ತಾ ಇದೆ. ರಾಗಿ ರೂಪಾಯಿಗೆ ೧೬—೧೮ ...ಸೇರು ಮಾರುವುದು. ಈ ಡಿಸ್ಟ್ರಿಕ್ಟಿನ ...ಗಳಿಗಿಂತ ಈ ಊರಿನಲ್ಲಿ ಮಳೆಯು ಸಮೃದ್ಧಿ ...ಎಲ್ಲಾ ತಾಲ್ಲೂಕಿಗಿಂತ ಈ ಊರಿನಲ್ಲಿ ರಾಗಿಯ ಧಾರ ...ಧಾವಾಗಿರುವುದು ಎಲ್ಲರಿಗೂ ಬಹಳ ಆಶ್ಚರ್ಯಜನ ...ವಾಗಿದೆ.—ಊರು ಪಾಕೀಜು ವಿಷಯದಲ್ಲಿ ಮ್ಯೂನಿಸಿಪಾ ...ಬಹಳ ಮುತುವರ್ಜಿ ವಹಿಸಿ, ಗಲ್ಲಿಗಳು ರಸ್ತೆಗಳು ...ಬಹು ಶುಭ್ರವಾಗಿ ಸಲಾಗುವಾಗಿ ಗಾಡಿಗಳು ತಿರುಗುವ ...ಕೆಲಸ ದಿನದ ಹಾಗೆಯೂ ಯಾವಾಗಲೂ ವಹಿಸು ...ಯಾತ್ತಿದ್ದಾರೆ.—ಈ ಊರಿಗೆ ಯಾಸ್ಸಾಪುರು ಶ್ರೀಕೃಷ್ಣ ...ನಾಟಕ ಸಭಾ ಎಂಬ ಕಂಪೆನಿಯವರು ಬಂದು ...ನಾಟಕಗಳನ್ನು ಆಡಿದರು ಈ ನಾಟಕದವರು ಇನ್ನು ...ಗಳು ಈ ಊರಿನಲ್ಲಿರ ಬೇಕೆಂದು ತಿಳಿಯಬಂದಿದೆ.

...ರು.—ಎಂಟು ಹತ್ತು ದಿವಸಗಳಿಂದ ಬಿದ್ದ ಕರೆಯ ...ಯು ಬಂದು ಅನುಕೂಲವಾಗಿ ತುಂಬಿರುತ್ತದೆ. ಈಚೆಗೆ ...ದ ಮಳೆ ರೈತರಿಗೆ ಸಂತೋಷವನ್ನುಂಟುಮಾಡಿದೆ. ಮ ...ಗ್ರಾಮದಲ್ಲಿ ೧೬ ವರುಷದ ಹುಡುಗನು ಮೇಲೆ ಮನೆ ...ಬಿದ್ದು ಪ್ರಾಣ ನಷ್ಟವಾದಂತೆ ತಿಳಿಯಿತು.—ಮುಂ ...ಯ ದನಕ್ಕನು ಪುಟ್ಟ ಎಂಬ ಮನೆ ಗೋಡೆಯನ್ನು ...ಒಳಗೆ ... ತಲೆಯಲ್ಲಿ ರಕ್ತ ಬರುವಂತೆ ಅವಳ ...ಹೊಡೆದಿದ್ದನು. ಇವ ... ಇವನಿಗೆ ೩ ತಿಂಗಳ ಸಜಾ ...ದು ತಿಳಿಯಿತು.—ಪೋಸ್ಟ್ ಮಾಸ್ಟರ್ ಮೆ॥ ದಾಮೋದರ ...ಯವರು ಬಂದ ಮೇಲೆ ಪೋಸ್ಟ್ ಆಫೀಸ್ ಕಟ್ಟಡವನ್ನು ...ರೀತಿಯಲ್ಲಿ ಒಳ್ಳೆ ... ಮಾಡಿರುವುದಲ್ಲದೆ ಪ್ರಜೆ ...ಗೆ ಪಾತ್ರರಾಗಿ ತಮ್ಮ ಕೆಲಸವನ್ನು ಜಬಾಬ್ದಾರಿಯಿಂದ ...ದ್ದಾರೆ.—ಟರ್ಮಿನಲ್ ಕೆಲಸದ ಈ ಟವುನಿನಲ್ಲಿ ಬಹಳ ...ದಾರಿ ವಿಶೇಷವಾಗಿದೆ. ಆದರೆ ಸಂಬಳ ಮಾತ್ರ ಕಡಿ ...ದರಿಂದ ಇಲಾಖೆಯ ಮ ವ್ಯವಹಾರಗಳು ವಿಳಂಬವಾಗಿ ...ದೆ.—ಒಬ್ಬನು ಮರ ಹತ್ತಿ ಕೆಳಗೆ ಬಿದ್ದು ಬಾಲ ಬಿಟ್ಟ ...ವಾದ ಸಂಗತಿ.—ಈಗಾಗಲೇ ೬ ಮನ್ವ ... ...ಇಲ್ಲಿ ಜನರು ಭಯ ಪ್ರಾರಂಭದಿಂದ ಪೀಡಿತರಾಗಿದ್ದಾರೆ ...ರಾಗಿಯು ತೆನೆಯಾಯಿತು, ಹಿಂದಿನ ಬಿತ್ತನೆಯವರು ...ಬಿಟ್ಟ ... ವಿಶೇಷ ರಾಗಿ ...ಬಂದು ಹೇಳಬಹುದು ಆದರೆ ಧಾರಣೆ ಮಾತ್ರ ಇದ್ದ ...ದಿಂದ ಅನೇಕರು ವ್ಯಾಪಾರ ತೆರೆದುಕೊಂಡರು.

...ಬಳ್ಳಾಪುರ. ಇಲ್ಲಿ ೧೯ ದಿವಸದಿಂದ ಮಳೆ ಇಲ್ಲ. ...ಬಂದೇರ ಹವ ಮಳೆಯಾದ್ದರಿಂದ ಪೈರುಗಳಿಗೆ ತುಂಬಾ ...ಕರವಾಗಿತ್ತು. ...ವನ್ನು ... ...ಗಳು ... ಇದರಲ್ಲಿ ಪ್ರಮಾಣವಿಲ್ಲವೆಂದು ...ಯಾರಲ್ಲಿಯೂ ಮತ್ತು ... ಸೇರಿದ್ದ ...ಕಟ್ಟು ... ಭೀ ... ಸಹಾಯವಾಯಿತೆಂದು ಜನರು ಹೇಳು ...ತ್ತಾರೆ.—ಅಕ್ಟೋಬರ್ ತಾ ೧೯ ರಲ್ಲಿ ಗುಂಡಕಲ್ ಕಡೆ ...ಬರುತ್ತಿದ್ದ ಮೆಯಿಲ್ ಟ್ರೈನಿನಿ ಪಾಕಳಗೂ ದೊಡ್ಡಬ ...ಮಧ್ಯೆ ಸ್ಟೇಷನಿನಲ್ಲಿ ಅಪಾಯ ಸಂಭವಿಸಿತು. ಜಿಲ್ಲೆ ...ಮಳೆಯಿಂದ ಭೂಮಿ ... ...ಯ ಪಟ್ಟಿಗಳು ಅವರ ... ...ಅಳು ಎತ್ತರದಿಂದ ...ಅಲ್ಲಿ ಇದ್ದ ... ಮುಚ್ಚಿ ಬಿಟ್ಟಿತು ...ತಪ್ಪಿತು. ಇದರ ಮುಂಭಾಗದ ಕೆಲವು ಪಾದವಾರು ...ಹೋದರೆ ೧—೦ ದಿನ ಗಾಡಿ ಜೋಗಿಗವರಕ್ಕೆ ...ಪ್ರವಾಹವು ... ...ಗಳು ಬಿದ್ದಿದ್ದರೆ ...ಆಗುತ್ತಿತ್ತು. ಅದ್ದರಿಂದ ಆ ಕಡೆ ಎತ್ತರವಾಗಿ ...ನಿತ್ಯ ಗಳನ್ನು ಇನ್ನೂ ಜಾಗ್ರತೆಯಾಗಿ ಮಾಡಿದರೆ ಹಾಗೆ ...ಬೀಳದಂತೆ ಆಗುವುದು ತಪ್ಪುತ್ತದೆ.—ದೊಡ್ಡಬಳ್ಳಾಪುರದ ...ಲ್ಲಿ ಪ್ರಾರ್ಥಮಿಕ ಪಾಠ್ಯಶಾಲಗಳಾದ ಧರ್ಮ ಶಾಲೆಯಾ ...ಶಾಲೆಯಾ ಎಂಬುದರ ಗರಡಿಯು ಅತ್ಯವಶ್ಯಯದಿಂದ ಇರು ...ಇದು ಇಲ್ಲಿಗೆ ಪ್ರಸಿದ್ಧಿಯಾದ ಗರಡಿ ತಾ ೧೬ ರಲ್ಲಿ ಇದ ...ಪ್ರಾರಂಭ ಮಾಡಿದರು ಈ ಗರಡಿಯು ಶಾಶ್ವತ ಕೆಲಸದ ಬರೀ ...ಗಳಿಂದ ಕಟ್ಟಿದೆ. ಗರಡಿಯನ್ನು ಚೆನ್ನಾಗಿ ಅಲಂಕಾ ...ದ್ದರು. ನಮ್ಮ ಅಮಲ್ದಾರರು, ಮುನಸೀಫರೇ ಮುಂತಾ ...ದೀ ಅಧಿಕಾರಿಗಳೂ ಹೊರಕ ಮನುಷ್ಯರೂ ಬಹು ಜನರು ...ದ್ದರು ಬ್ಯಾಂಡ್ ಭಜನೆ ಮುಂತಾದ ವಾದ್ಯಗಳಾದುವು.— ...ಕಲ್ಲಿ ಪಟ್ಟಣ ಚನ್ನ ಸಿಕ್ಕಿತೆಂದು ಕಂಪೆನಿಯವರು ಆಗಿ ...ಸೆ ತಿಂಗಳಿಂದಲೂ ಶೋಧಿಸಿದರು. ಚನ್ನ ಅಕ್ಕಪಕ್ಕಲ್ಲಿಲ್ಲ, ...ಸ್ವಲ್ಪವಿದೆ. ಇದರಿಂದ ಲಾಭವಿಲ್ಲವೆಂದು ನೆನಸಿ, ...ಈಚೆಗುಡ್ಡದ ಹತ್ತಿರ ಚಿನ್ನ ಶೋಧಿಸುವ ಕೆಲಸವನ್ನು

ಸಧ್ಯಕ್ಕೆ ನಿಲ್ಲಿಸಿದರೆಂದು ಹೇಳುತ್ತಾರೆ.—ನಾಗರಾಗಲ್ಲಿಯ ಬೇಡರ ಚಿನ್ನನಾಯಕನ ಮಕ್ಕಳು ತಿಮ್ಮ, ಚನ್ನಿಗ, ಗೊಲ್ಲರ ತಿಪ್ಪ ಎಂಬುವರು ಕಳೆದ ತಾ॥ ೧೧ ರಲ್ಲಿ ಬೆನಗೊಂಡೆ ಕಾಡೆಯಿಂದ ಬಂದ ಕುರಿಗಳ ಪೈಕಿ ಸುಮಾರು ೩ನ್ನು ಕದ್ದು ತಿಂದು, ಮಿಕ್ಕ ೧೯ನ್ನು ಮಾರುವುದಕ್ಕೆ ಮೇಲುಕೋಟೆ ಕಡೆ ತೆಗೆದುಕೊಂಡು ಹೋಗಿದ್ದವರನ್ನು ಈ ತಾಲ್ಲೂಕು ಪೋಲೀಸಿನವರು ತುಂಬಾ ಸಹಾಸದಿಂದ ಹಿಡಿದು, ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿದಾರೆ.

ಕುಶೀಪೇಟೆ.—ಕಳೆದ ಸೋಮವಾರ ಮಧ್ಯಾಹ್ನ ೨ ಗಂಟೆಯಲ್ಲಿ ಈ ಊರಲ್ಲಿರುವ ಸುಕ್ಕುದೀ ಸಂಘದವರು ವರ್ಗ ಪಟ್ಟ ಡೆಪ್ಯುಟಿ ಅಮಲ್ದಾರ್ ಮೆ॥ ಅನಂತರಾಮಯ್ಯಂಗಾರ್ಯರನ್ನು ಅವರ ಬದ್ಲಿಗೆ ಡೆಪ್ಯುಟಿ ಅಮಲ್ದಾರ್ ಮೆ॥ ಮಹ್ಮದ್ ಮಸ್ತಾಯವರನ್ನು ಸಬ್ ಡಿವಿಜನ್ ಆ॥ ಕವಿತಾರ್ಥಕರ್ ಮೆ॥ ಆನಂದರಾವ್ ಸಿನಿಯವರನ್ನೂ ವಾದ್ಯಗಳೊಡನೆ ಬಂದು ಸಭಾಸ್ಥಾನಕ್ಕೆ ಕರೆತಂದು, ಇವರೆಲ್ಲರ ಗುಣಕಥನಗಳನ್ನು ಅಪ್ಪಳಿಸಿ ವಿವರಿಸಿದ ಮೇಲೆ ಇವರೆಲ್ಲರಿಗೂ ದೇವರು ಉತ್ತಮ ಪದವಿಗಳನ್ನು ಅನುಗ್ರಹಿಸುವಂತೆ ಪ್ರಾರ್ಥಿಸಿದರು ಮುಖ್ಯವಾಗಿ ವರ್ಗವಿಟ್ಟ ಡೆ॥ ಅ॥ ಅನಂತರಾಮಯ್ಯಂಗಾರ್ಯರು ಪಕ್ಷಪಾತವಿಲ್ಲದೆ ಸರ್ವರನ್ನೂ ಬಹು ಪ್ರೀತಿಯಿಂದ ಕಾಪಾಡಿದರೆಂದೂ ವಿಶೇಷವಾಗಿ ಮುಕ್ಕುದಿ ಮತಸ್ಥರನ್ನು ಸರ್ವ ಭಾಗಗಳಲ್ಲೂ ತುಂಬಾ ಸಂತೋಷಪಡಿಸಿದರೆಂದೂ ಪ್ರಕಟಿಸಿದರು ನಂತರ ಜಮೀನ್ದಾರ್ ಮೆ॥ ವೈದ್ಯನಾಥಯ್ಯನವರು ಅವರ ಗುಣಾತಿಶಯಗಳನ್ನೂ ಕೆಲಸವನ್ನೂ ಶ್ಲಾಘಿಸಿದರು. ಹಿಂದುಗಳ ಪಕ್ಷವಾಗಿ ಕೆಲವು ಮೆಂಬರುಗಳು ದಯಮಾಡಿಸಿದ್ದರು. ನಂತರ ಅಮಲ್ದಾರರೂ ಅವರಿಗೆಲ್ಲಾ ತಾವೇ ಕೃತಜ್ಞರಾಗಿದ್ದೇವೆಂತಲೂ ಈ ಪರ ಸಂತೋಷದಲ್ಲಿ ತಾವು ಭಾಗಿಗಳಾಗಿದ್ದೇವೆಂತಲೂ ತಿಳಿಸಿದರು. ಅವರೊಂದಿಗೆ ಕರೆಸಲ್ಪಟ್ಟಿದ್ದ ಹೊಸ ಪೋಲೀಸ್ ಇನ್ಸ್‌ಪೆಕ್ಟರು ಸಹ ಸರ್ವ ವಿಷಯಗಳಲ್ಲೂ ತಮಗೆ ಮುಂದೆ ತುಂಬಾ ಆನಂದವನ್ನುಂಟುಮಾಡುವರೆಂದು ತಿಳಿಸಲ್ಪಟ್ಟಿತು. ಶ್ರೇಷ್ಠವಾದ ಹಾರಗಳನ್ನು ಅಧಿಕಾರಿಗಳಿಗೆ ಹಾಕಿ ಮುಯ್ಯಾಗಿಗಳೊಡನೆ ಹಾಡಲು, ಬ್ಯಾಂಡ್ ವಾದ್ಯ ಬಾರಿಸುತ್ತಿತ್ತು. ಕಡೆಯಲ್ಲಿ ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟವು. ಪುರದಾ ಬ್ಯಾಂಡಿನೊಂದಿಗೆ ಅಮಲ್ದಾರರನ್ನು ಸಾಗಕಳುಹಿಸಿ, ಹೀಗೆ ಪ್ರಜಾಕರ್ಷ್ಯವನ್ನು ಪಡೆದಿರುವುದರ ... ಡೆಪ್ಯುಟಿ ಅಮಲ್ದಾರರು ಮತ್ತು ಇನ್ಸ್‌ಪೆಕ್ಟರು ಮಹ ಜನಾನುರಾಗವೂ ಶ್ಲಾಘನೀಯರಾಗಿಯೂ ಇರುವಂತೆ ತೋರುತ್ತೆ.—ವಾಳಿಕೆಯು ಕ್ಲುಪ್ತಿಕರವಾಗಿದೆ.

ಇಂದ್ರನಾಳ.—ಆಗಿನ ಮಳೆಯಿಂದ ಪೈರುಗಳಿಗೆ ಕಟ್ಟಮ್ಮ ಅನುಕೂಲವಾಯಿತು ಕೆರೆಗಳಿಗೆ ಮಾತ್ರ ನೀರು ಬರಲಿಲ್ಲ. ಇನ್ನು ಕೆಲವು ದಿನಗಳಲ್ಲಿ ಮಳೆಯಾದರೆ ಪೈರುಗಳಿಗೆಲ್ಲಾ ಬಹಳ ಅನುಕೂಲವಾಗುತ್ತೆ.—ಈ ಊರಿನಲ್ಲಿ ಸುಮಾರು ಒಂದು ತಿಂಗಳಿಂದಲೂ ಇಲಿಗಳು ಸಾಯುತ್ತಿರುವುದನ್ನು ಜನರು ಲಕ್ಷ್ಯವಿಡದೆ ಸಾರಿಗೂ ತಿಳಿಸದೆ ಸುಮ್ಮನೆ ಇದ್ದಕಾರಣ ಪ್ಲೇಗ್ ಊರಿಗೆ ವ್ಯಾಪಿಸಿ, ೩—೪ ಜನರನ್ನು ಆಹುತಿಮಾಡಿಕೊಂಡಿದೆ. ಈ ವಿಷಯಕ್ಕೆ ಜನರು ಕೆಟ್ಟ ನಿಗಾಕೊಡದೆ ಜಾಗ್ರತೆಪಡಿಸಿದರೆ ಅಲಕ್ಷ್ಯಮಾಡಿದರೆ ಅದರಿಂದ ತುಂಬಾ ಅನರ್ಥಗಳಾಗಬಹುದು.—ಈ ಊರಿನಲ್ಲಿ ಆಸ್ಪತ್ರೆ ಅಸಿಸ್ಟೆಂಟರಾದ ಮೆ॥ ಚನ್ನಾಪುಯ್ಯನವರು ಜನರ ಮನೆಗಳಿಗೆ ಹೋಗಿ ಪ್ರಜೆ, ಜನರಿಗೆ ಬುದ್ಧಿವಾದಗಳನ್ನು ಹೇಳುವುದೂ, ಶಾಲೆಯವರಿಗೆ ಔಷಧಿ ವಗೈರೆ ಕೊಟ್ಟು ಉಪಚರಿಸುವುದೂ ಉಂಟು. ಇವರು ಈಸ್ಥಳಕ್ಕೆ ಬಂದ ಮೇಲೆ ಜನರ ಪ್ರೀತಿಗೆ ಪಾತ್ರರಾಗಿ ರೋಗಿಗಳಿಗೆ ತಕ್ಕ ಚಿಕಿತ್ಸೆಮಾಡುವುದರಿಂದ ಆಸ್ಪತ್ರೆಯಲ್ಲಿ ರೋಗಿಗಳೂ ತುಂಬಾ ಬರುತ್ತಾರೆ.—ಈ ಊರಿನ ಸಂತೆ ವ್ಯಾಪಾರವಾದರೂ ವರ್ತಕರಲ್ಲಿ ಕಿರಿದ್ ಅಲ್ಲ ಸೇರುಗಳೂ, ತೂಕದ ಬೊಟ್ಟುಗಳೂ ಉಂಟು. ಇದರಿಂದ ವರ್ತಕರಿಗೆ ಲಾಭವೂ ಬಡವರಿಗೆ ನಷ್ಟವೂ ಉಂಟಾಗುತ್ತೆ ಈ ಬಗ್ಗೆ ನಮ್ಮ ಅಮಲ್ದಾರರು ನಿಗಾ ಬೀಳುವುದಾದರೆ ಅನ್ಯಾಯಗಾರರಿಗೆ ಶಿಕ್ಷೆಯೂ ಬಡವರಿಗೆ ಪ್ರಯೋಜನವೂ ಉಂಟಾಗುತ್ತೆ ಸಂತೆಯಲ್ಲಿ ನೊಡ ಅಂಗಡಿಗಳಿಂದ ತೆರಿಗೆ ವಸೂಲ್ ಮಾಡುವುದು ನ್ಯಾಯವಾಗಿರುತ್ತದೆ ಆದರೆ ಹಳ್ಳಿಯವರು ಗೂಡೆಗಳಲ್ಲಿ ಸ್ವಲ್ಪ ತರಕಾರಿಯನ್ನೂ ಬೇರೆ ಬಿಡಿಸಿಯನ್ನೂ ತಂದು ಇಟ್ಟುಕೊಂಡ ಪರತ್ವವರ ಅವರಿಂದ ೩—೬ ಕಾಸು ವಸೂಲ್ಮಾಡುವುದು ಸರ್ಕಾರದ ಪರ ಹುಕುಮೋ ಇಲ್ಲವೇ ಮಧ್ಯದಲ್ಲಿ ... ಕ್ರಮವೋ ಎಂಬುದಾಗಿ ಜನರು ಬಹಳ ಅಸಮಾಧಾನದಿಂದ ಹೇಳಿಕೊಳ್ಳುತ್ತಾರೆ. ಆಗಿದ್ದ ತಾ. ೨೯ ರಲ್ಲಿ ಒಬ್ಬಳು ಬಂದು ಗುಡಿಯಲ್ಲಿ ೩—೪ ಕರಿಬೇವಿನಸೊಪ್ಪನ್ನು ತಂದಿದ್ದಳು. ಅವಳಿಂದ ೩ ಕಾಸು ವಸೂಲಾಗುವ ತನಕ ಬಿಡಲಿಲ್ಲ.—ಈ ಸ್ಥಳದಲ್ಲಿ ಒಬ್ಬ ಸ್ಟಾಂಪು ವೆಂಡರು ಇರುತ್ತಾರೆ ಅವರನ್ನು ಸ್ಟಾಂಪು ಕಾಗದ ಮುಂತಾದ್ದನ್ನು ಕೇಳಿದರೆ ತರಿಸಬೇಕು ಎಂಬುದಾಗಿ ಹೇಳುತ್ತಾರೆ ಇದರಿಂದ ಜನರಿಗೆ ವಾದ ಕಾರ್ಯಗಳಿಗೆ ತುಂಬಾ ಅಡ್ಡಿಯಾಗುತ್ತದೆ. ಈ ವಿಷಯಕ್ಕೆ ಅವರು ಯಾವಾಗಲೂ ತಮ್ಮ ಕಾಗದಗಳನ್ನು ಸಿದ್ಧಪಡಿಸಿಕೊಂಡಿದ್ದರೆ ಜನರಿಗೆ ಪ್ರಯೋಜನವೂ ಅವರಿಗೆ ಅನುಕೂಲವೂ ಉಂಟು. ಈ ವಿಷಯಕ್ಕೆ ಅವರೇ ಪ್ರಕಾರಿಲ್ಲದೆ ನಡೆಸಿಕೊಂಡು ಹೋದರೆ ತುಂಬಾ ಸಹಾಯ.—ಈ ಊರಿನಲ್ಲಿ ಸರ್ಕಾರದ ಸ್ಕೂಲ್ ಇಲ್ಲದೆ ಬಡಜನರಿಗೆ ಬಹಳ ಕಷ್ಟ ಉಂಟು. ಈ ವಿಷಯಕ್ಕೆ ಮೇಲಿನವರು ಗಮನಕ್ಕೆ ತಂದುಕೊಂಡರೆ ಬಡವರ ಕಷ್ಟ ಪರಿಹಾರವಾಗಲು ಬಹಳ ಸಹಾಯವಾಗುತ್ತೆ.

ಚಿಕ್ಕಮಗಳೂರು.—ಈ ತಿಂಗಳಲ್ಲಿ ಇದುವರೆಗೂ ಜೆಟ್ಟಿ ಕತ್ತಿಗೆ ೭॥ ಅಂಗುಲ ಮಳೆಯಾಗಿದೆ ಈ ವರುಷ ಈ ಊರಿನಲ್ಲಿ ಬಿದ್ದ ಮಳೆಯು ಸುಮಾರು ೬೩ ಅಂಗುಲ ಮಾತ್ರವೇ. ಇದು ಹೋದ ವರುಷಕ್ಕಿಂತ ಕಮ್ಮಿಯಾಗಿದೆ. ಈ ಪ್ರಾಂತ್ಯ ಸಣ್ಣ ಕೆರೆಗಳಿಗೆ ಮಾತ್ರ ಹಳ್ಳಸುತ್ತಿಗೂ ನೀರು ಬಂದಿದೆ. ದೊಡ್ಡ ಕೆರೆಗಳಿಗೆ

ಬಂದಿರುವ ನೀರು ಬಹಳ ಕಮ್ಮಿಯಾಗಿದೆ. ಇನ್ನೂ ೬ ದಿವಸ ಒಳ್ಳೇ ಮಳೆ ಬೇಕಾಗಿದೆ. ಇಲ್ಲಿ ಛಳಿಗಾಲ ಪ್ರಾರಂಭವಾಗಿದೆ. ಮಾಗಿಕಾಲದ ಫಲವನ್ನು ಈಗಾಗಲೇ ಅನೇಕರು ಅನುಭವಿಸುತ್ತಾ ಆಸ್ಪತ್ರೆಯ ಖಾಯಿಲೆಯವರ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದಾರೆ.—ಇಲ್ಲಿಗೆ ಎರಡು ತಿಂಗಳ ಹಿಂದೆ ಆಕ್ಟಿಂಗ್ ಪೋಸ್ಟ್ ಮಾಸ್ಟರಾಗಿ ಬಂದಿದ್ದ ಮೆ॥ ಕಾರ್ಲೋಸ್ ಎಂಬುವರು ಮಂಗಳೂರಿಗೆ ಹೋದರು ಖಾಯಂ ಪೋಸ್ಟ್ ಮಾಸ್ಟರ್ ಮೆ॥ ಕೃಷ್ಣಪ್ಪಯ್ಯರು ಕೆಲಸವನ್ನು ನೋಡುತ್ತಿದ್ದಾರೆ.—ಇಲ್ಲಿಗೆ ಕಾಶ್ಮೀರ ದೇಶದ ಗುರುಗಳು ಬಂದಿದ್ದಾರೆ. ಇವರನ್ನು ಕೆಲವರು ತಮ್ಮ ಮನೆಗಳಿಗೆ ಕರೆಸಿಕೊಂಡು, ಪಾದಪೂಜೆ ಮಾಡಿದರು.—ಶಿವಮೊಗ್ಗೆಯಿಂದ ಸರ್ವೆಯರ್ ಜಡ್ಜಿಯವರು ಇಲ್ಲಿಗೆ ಬಂದು ಇದೇ ತಿಂಗಳು ೧೯ನೇ ತಾ. ನಿಂದ ನೋಟೀಸುಗಳನ್ನು ವಿಚಾರಿಸುತ್ತಿದ್ದಾರೆ ಇದುವರೆಗೂ ನಾಲ್ಕು ನೋಟೀಸುಗಳನ್ನು ಪೂರೈಸಿ ತೀರ್ಮಾನ ಹೇಳಿರುವುದಾಗಿ ಕೇಳುತ್ತೇನೆ. ಇಲ್ಲಿನ ಅಂಡಾಧಿಕ್ಯದಲ್ಲಿ ಜತ್ತ ಶಿಕ್ಷೆಯನ್ನು ಹೊಂದು ಬಿಡುವ ಹೆಂಗಸಿಗೆ ೬ ತಿಂಗಳ ಸಜಾವೂ, ಮೂಡಿಗೆರೆಯಲ್ಲಿ ತನ್ನ ಧಣಿಯ ದಾರವನ್ನು ಕೊಂದಿದ್ದ ಹೆಂಗಸಿಗೆ ಮರಣಾಂತದ ಸಜಾವೂ, ಇಲ್ಲಿ ಬಂದು ಎತ್ತನ್ನು ಕದ್ದು ಕಾಯುತ್ತಿದ್ದ ಒಬ್ಬ ಮುಸಲ್ಮಾನನಿಗೆ ೬ ತಿಂಗಳ ಸಜಾವೂ, ಅಲ್ಲೂರಿನಲ್ಲಿ ಒಂದು ಎಮ್ಮೆಯನ್ನು ಕದ್ದು ಕೊಯಿದಿದ್ದ ಇಬ್ಬರು ಜೋಗಿಯರಿಗೆ ಆರಾರು ತಿಂಗಳ ಸಜಾವೂ ಆಗಿದೆ. ಇನ್ನು ಕೆಲವು ಮೊಕದ್ದಮೆಗಳನ್ನು ವಿಚಾರಿಸುತ್ತಿದ್ದಾರೆ. ಪ್ರಾಯಶಃ ಜಡ್ಜಿಯವರು ಈ ತಿಂಗಳ ಕಡೆವರೆಗೂ ಇದ್ದು ಇರುವ ಕೇಸುಗಳನ್ನು ಫೈಸಲ್‌ಮಾಡಿ ಹೊರಡುವವರಾಗಿದ್ದಾರೆಂದು ವರ್ತಮಾನ.—ಈ ಊರಿನಲ್ಲಿ ದೊಡ್ಡ ಮನುಷ್ಯರಾಗಿಯೂ ಒಳ್ಳೆಯವರೂ ಉಪಕಾರಿಗಳೂ ಸ್ನೇಹಪರರೂ ಆಗಿದ್ದ ನಾಟೀಖಾನೆಯ ಮೆ॥ ಸುಂದರ ಗಣೇಶರಾಯರು, ಇದೇ ತಿಂಗಳು ೨೫ ತಾ ರಾತ್ರಿ ವ್ಯಾಧಿನಿಗಾದ ಸಮಾಚಾರವು ಇಲ್ಲಿನ ನಿವಾಸಿಗಳಿಗೆಲ್ಲಾ ತುಂಬಾ ದುಃಖವನ್ನುಂಟುಮಾಡಿದೆ.—ಇಲ್ಲಿನ ಮುನಸು ಪಾಲಿಟಿಯ ದೀಪಗಳು ರಾತ್ರಿಯಲ್ಲಿ ಉರಿಯುತ್ತಿರುವಾಗ ಕೆಲವು ಜನರು ಸಹಿತ ಜಿಮುಳಗಳು ಕಳುವಾದಂತೆಯೂ ಇನ್ನು ಮೇಲೆ ಕಳುವಾದ ದೀಪಗಳು ಪತ್ತೆ ಆಗುವ ಭಾಗದಲ್ಲಿ ಸುಲಭವಾಗಿ ಇದು ಮುನಸಿಪಾಲಿಟಿಗೆ ಸೇರಿದ್ದೇ ಎಂಬು ಕಂಡುಬರುವಂತೆ ಜನರಿಗೆ ತಿಳುಪಿನ ಭಾಗದಲ್ಲಿ ಒಂದು ಗುರುತನ್ನೂ ಜಿಮುಳಗಳಿಗೆ ಸಿ. ಎಂ. ಎಂಬ ಅಕ್ಷರಗಳನ್ನೂ ಹಾಕಿಸಿರುವುದಾಗಿ ಕೇಳುತ್ತೇನೆ.—ಭದ್ರೆ ... ದೊರೆಯವರು ನಕಲೆಪುರದ ಕಡೆ ೧೬ ದಿವಸಗಳ ಪರಿಗೂ ಸರ್ಕೀಟ್ ಮಾಡಿ, ತಾ. ೨೦ನೇ ಗುರುವಾರ ಇಲ್ಲಿಗೆ ಬಂದರು.

ತುಂಕೂರು. ಪ್ರತಿ ದಿನವೂ ಬಿಸಲು ಕಾಯುತ್ತಲಿದೆ. ಮಳೆ ಕಳೆದ ವಾರ ಬಂದುದು ಜೊತೆ ಈಚೆಗೆ ಸ್ವಲ್ಪವಾದರೂ ಬರಲಿಲ್ಲ. ಈ ವರುಷ ನಮ್ಮ ಪ್ರಾಂತ್ಯದಲ್ಲಿ ಹರೀ ವಸಲಿಗೆ ಅನಾವರ್ಗ ಯೇ ಉಂಟಾಗುತ್ತೆ ಎಂಬುದಕ್ಕೆ ಕೆರೆಯಲ್ಲಿ ಮೂರು ತಿಂಗಳಿಗಿಂತ ಹೆಚ್ಚಾಗಿಲ್ಲದಿರುವುದೇ ದೃಷ್ಟಾಂತವಾಗಿದೆ ಮುಂದಿನ ಬೇಸಿಗೆಯಲ್ಲಿ ಜಾನುವಾರುಗಳಿಗೂ ಜನಗಳಿಗೂ ಕುಡಿಯುವ ನೀರಿಗೆ ದುರ್ಲಭವಾಗುತ್ತೆ. ಇವುಗಳ ವಸಲಾ ಕೂಡ ತುಂಬಾ ಕನಿಷ್ಠ ಸ್ಥಿತಿಯಲ್ಲಿದೆ. ಸಧ್ಯದಲ್ಲಿ ಭಗವತ್ಕಾರುಣ್ಯದಿಂದ ಯಾವ ರೋಗಾದಿಗಳ ಭೀತಿಯೂ ಇಲ್ಲದೆ ಜನರೆಲ್ಲರೂ ಸೌಖ್ಯವಾಗಿದ್ದಾರೆ.—ಈಗ ಬಂದು ತಿಂಗಳಿಂದಲೂ ದಿನಕ್ಕೆ ಗಾಡಿಗಳು ಸ ... ಬಾರಿನಿಂದ ಮುಂದಿನವರು ... ವ್ಯಾಪಾರಾದಿಗಳಿಲ್ಲದೆ ಪ್ರಾರಂಭವನ್ನು ... ನಿಂತುಹೋಯಿತೆಲ್ಲಾ ಎಂದು ಹಲ್ಲುಬಿಡುತ್ತಾರೆ. ಧಾರಣೆವಾಸಿಗಳು ಮಾತ್ರ ಮೊದಲಿನಂತೆ ಜಾಸ್ತಿಯಾಗಿಯೇ ಇವೆ.—ನಮ್ಮ ಪ್ರೆಸಿಡೆಂಟ್ ನೂತನ ರಾಯರು ಹಚ್ಚಿಸುವುದು ದಯಮಾಡುತ್ತಾ ಈ ಸಲ ಕಾಲದಲ್ಲೇ ಇಲ್ಲಿ ಪ್ರಜೋಪಯೋಗಕ್ಕೆ ಕೆಲವು ಏರ್ಪಾಡುಗಳನ್ನು ಮಾಡುತ್ತಾರೆ. ಬಡವರಲ್ಲಿ ಕೆರೆಯ ಅಂಗಳದಲ್ಲಿದ್ದ ಬಾವಿಗೆ ಸುತ್ತಲೂ ಗೋಡೆ ಕಟ್ಟಿಸಿ ಗಾಲಿಗಳನ್ನು ಹಾಕಿಸಿದರು. ಬಂದ ಸ್ಕೂಲಿಗೆ ಅಡ್ಡ ಎಮ್ಮೆಕೆರೆಯಿಂದ ವಿಶಾಲವಾದ ರಸ್ತೆಯು ಮಂಡಿಪೇಟೆಯ ಹತ್ತಿರ ಹರಿಯುತ್ತಿರುವುದು. ಹೊಸ ಪೇಟೆಯು ಚಾಲ್ತಿಗೆ ಬರುವುದಕ್ಕೆ ಅನುಕೂಲ ... ನೊಂದಲಿಂದಲೂ ಆಲೋಚನೆಯಲ್ಲಿದ್ದದ್ದು ಈಗ ಸಾರ್ಥಕವಾಗಿ, ಅಲ್ಲಿನ ನಿವಾಸಿಗಳು ಗಲ್ಲಾ ನೋಟೀಸ್ ಮೂಲಕ ತಿಳಿಯಬಹುದು, ... ಶೀಘ್ರ ಮಾಡುತ್ತಾರೆ. ಇದಕ್ಕಾಗಿ ಅನೇಕರು ತಮಗೆ ಸರಿಹಾರ ದ್ರವ್ಯವು ತುಂಬಾ ಅಲ್ಪವೆಂತಲೂ ಇದ್ದರಿಂದ ಸರ್ಕಾರದವರು ಮುಂದೆ ಮನೆ ಕಟ್ಟಲು ಜಾಗವನ್ನು ಕೊಡಬೇಕೆಂದಾಗಿಯೂ ಮನವಿ ಬರೆದಿರುತ್ತಾರೆ. ಸರ್ಕಾರದವರು ಅದೇ ರೀತಿ ಪ್ರಜಾನುಕೂಲ ಪಡಿಸುವರೆಂದು ನಂಬುತ್ತೇವೆ.—ಕಳೆದ ವಾರ ಇಲ್ಲಿಗೆ ಸ ... ವಿಷಯ ಗ್ರಾಮವಾದ ಕ್ಯಾತಸಂದ್ರದಲ್ಲಿ ತಿಗಳರವನೊಬ್ಬನು ತನ್ನ ತೋಟದಲ್ಲಿ ಕೆಂಗ ಮೇಲಿಂದ ಕಾಲುತಪ್ಪಿ ಬಿದ್ದು ತುಂಬಾ ಅಪಾಯ ಕರವಾದ ಸ್ಥಿತಿಯಲ್ಲಿ ಇಲ್ಲಿನ ಆಸ್ಪತ್ರೆಗೆ ತರಲ್ಪಟ್ಟನು ಡಾಕ್ಟರವರು ತುಂಬಾ ಶ್ರಮವಹಿಸಿ ಆಗಾಗಿ ಗುಣಪಡಿಸಿದ್ದನ್ನು ದಿನ ದಿನಕ್ಕೆ ಗುಣಮುಖವಾಗುತ್ತಿದ್ದಾರೆ.—ಇಲ್ಲಿನ ಸ್ಕೂಲ್ ಮಾಸ್ಟರೊಬ್ಬರು ತಮ್ಮ ಮನೆ ಬಾವಿಗೆ ನೀರಿಗಾಗಿ ಬಂದಿದ್ದ ಒಬ್ಬ ಹೆಂಗಸನ್ನು ಬಲಾತ್ಕಾರವಾಗಿ ಹೊಡೆದದ್ದರಿಂದ ರಕ್ತ ಸುರಿದು ಆ ಹೆಂಗಸಿಗೆ ತುಂಬಾ ಆಯಾಸವಾಯಿತೆಂತಲೂ ಇದರಿಂದ ಆಕೆಯ ಮನೆಯವರು ಈ ವಿಷಯವಾಗಿ ಮುಂದಿನ ಕ್ರಮ ಜರುಗಿಸುವುದರಲ್ಲಿ ಪ್ರಯತ್ನಿಸಿದರೆಂದೂ ಊರಿನಲ್ಲಿ ಜನರು ಗುಜುಗುಜು ಬೀಳುತ್ತಿದ್ದಾರೆ. ಈಗ ಆರು ಏಳು ವರುಷದಿಂದಲೂ ಪರೀಕ್ಷೆಗೆ ಬಿಡುತ್ತಿದ್ದ ವಿದ್ಯಾರ್ಥಿಗಳಿಗೆ ಅನುಕೂಲವಾಗಿ ಅನ್ಯೋನ್ಯತೆಗಳನ್ನು ಒದಗಿಸುತ್ತಿದ್ದ ಪ್ಲೀಡರ್ ಮೆ॥ ಇ. ಕೃಷ್ಣರಾಯರು ಈಗ ಶಾಲೆಬಿಡುತ್ತಿರುವುದರಿಂದ ಈ ವರುಷ ವಿದ್ಯಾರ್ಥಿಗಳಿಗೆ ಅನುಕೂಲವಾಗಲಾರದು. ಆ ಮಹನೀಯರಂತೆ ಮತ್ತ್ಯಾರಾದರೂ ಸಹಾಯ ಮಾಡಿ ಕೀರ್ತಿ ಸಂಪಾದಿಸುವರೆಂದು ನಿರೀಕ್ಷಿಸುತ್ತೇವೆ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲಿ ಇತರ ಸ್ಥಳಗಳಲ್ಲಿ ನಮ್ಮ ಏಜಂಟರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . . ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳುಗಳಿಗೆ ಪೋಸ್ಟೇಜ್ ಸೇರಿ . . . . ರೂ ೧—[illegible]—೦

" " ೬ " " ೦—[illegible]—೦

ಚಂದಾದಾರರಾಗಬೇಕಾದವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ಪತ್ರ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ ಮೈಸೂರು

ತ್ವರೆಮಾಡಿರಿ! ತ್ವರೆಮಾಡಿರಿ!!

ಒಮ್ಮೆ ಉಪಯೋಗಿಸಿ ತರುವಾಯ ನೋಡಿರಿ

ಲಭ್ಯವಾದ

ಪೇಟೆಂಟು ರಾಸ್ಕೋಪ್ ಸಿಸ್ಟಂ ಲೀವರ ವಾಚುಗಳು

ಈ [illegible]ಗಳು ಬಹಳ ಮಜಬೂತ ಇದ್ದು ವರ್ಷಗಟ್ಟಲೆ ಬಾಳುತ್ತವೆ. ಪ್ರತಿ ಒಂದು ವಾಚಿನ ಕಿಮ್ಮತ್ತು ರೂ [illegible], ರೂ [illegible], ರೂ [illegible] ಇದ್ದು ಇವುಗಳಿಗೆ ಕ್ರಮವಾಗಿ [illegible] ವರ್ಷ ಗ್ಯಾರಂಟಿ ಇರುತ್ತದೆ. ಇದರ ಹೊರ್ತು [illegible] ವಾಚುಗಳೂ, [illegible] ಮತ್ತು [illegible] ರೂ ಕಿಮ್ಮತ್ತಿನ [illegible] ರೂ ಕಿಮ್ಮತ್ತಿನ ಬೆಳ್ಳಿಯ [illegible] ಸರಪಣಿಗಳೂ, [illegible] ಆಣೆಯ ಬಿರುಸಿನ ಸಾಮಾನುಗಳೂ, [illegible] ಸಿಕ್ಕುತ್ತವೆ. [illegible] ಮೇಲೆ ಕಾಣಿಸಿದ ಯಾವ ವಾಚುಗಳು ಬೇಕಾದರೆ [illegible] ಮತ್ತು [illegible] ವಿ. ಪಿ. ಪೋಸ್ಟ್ [illegible]

ವಿಳಾಸ ಆರ್ ವಿ [illegible] ವಾಚ್ ಮರ್ಚಂಟ್,

ಪೋಸ್ಟ ಅಂಕೋಲಾ, ಜಿಲ್ಲಾ ಉ ಕಾನಡಾ

"ವಾಗ್ದೇವಿ"

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ

[illegible] ಒಂದು [illegible] [illegible] ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಬೋರ್ಡ್ ಬಾಬೂರಾವ್, ಮಂಗಳೂರು

ಜ್ವರನು ದಾ

ಇದನ್ನು ಓದಿ! ಬಿಡಬೇಡಿ!! ಗಮನಿಸಿ!!!

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, [illegible] ಜ್ವರ, ಪ್ಲೇಗ್ ಜ್ವರ, ಮರೆಮಾಡು ಜ್ವರ, ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಗಳು ಹೇಳುತ್ತಾರೆ. [illegible], ತಲೆನೋವು, ಅರತಲೆನೋವು, [illegible], [illegible] ನೋವು ಮುಂತಾದವುಗಳನ್ನು [illegible] ದಿಗಂತಕ್ಕೆ [illegible] 'ಸುಧಾ' ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವು ಹೇಗೆ ಮೈ ಅಂಟುವದಿಲ್ಲವೋ ಹಾಗೆಯೆ ನಮ್ಮ ಜ್ವರಸುಧೆ ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ. ಒಂದು ಸೀಸೆ ಔಷಧಿಯಲ್ಲಿ [illegible] ಕಟ್ಟ [illegible] ಸೀಸೆ ಒಂದಕ್ಕೆ [illegible] ಹಾಕಲು ಬೇರೆ

ಜೀವನಸುಧಾ—ಜ್ವರ ನಿಂತಕೂಡಲೆ ನಿಶ್ಚಯವಾಗಿ ತಿಳಿದ ಮೇಲೆ ನಮ್ಮಿಂದ ತಯಾರು ಮಾಡಲ್ಪಟ್ಟಿರುವ ಸಂಜೀವನ [illegible] ಒಂದು ತಿಂಗಳು ಸೇವಿಸಿದರೆ ಜ್ವರದಿಂದುಂಟಾದ ಕ್ಷೀಣತೆ ಹೋಗಿ ರಕ್ತವೃದ್ಧಿಯಾಗಿ ಬಲಬರುತ್ತೆ. ಸೀಸೆ ಒಂದಕ್ಕೆ ರೂಪಾಯಿ ೧—೦—೦

[illegible] —ಜಗತ್ಪ್ರಖ್ಯಾತವಾದ [illegible] ಸೀಸೆ ಒಂದಕ್ಕೆ [illegible] ಸೀಸೆಗಳಿಗೆ [illegible]

ದೇವನಹಳ್ಳಿ ಟವರ್ [illegible] ಗೋವಿಂದಶೆಟ್ಟಿ,

ಬೆಂಗಳೂರು ಡಿಸ್ಟ್ರಿಕ್ಟ [illegible] ಪ್ರಾಕ್ಟಿಷನರ್

ಮೈಸೂರು ಸಂಸ್ಥಾನದ ಪ್ಲೇಗ್ [illegible]

[illegible] ೧೦—೧೯೦೫ ರಿಂದ [illegible]—೧೦— [illegible]

ಸ್ಥಳ			
ಬೆಂಗಳೂರು ಪಟ್ಟಣ	7	4	11
ಮೈಸೂರು ,,	0	0	56
ಬೆಂಗಳೂರು ಡಿಸ್ಟ್ರಿಕ್ಟ	7	7	188
ಮೈಸೂರು ,,	2[illegible]	19	20[illegible]
ಕೋಲಾರ್ ,,	0	0	20
ಕೋಲಾರ್ [illegible] ಗಣಿಗಳು	0	0	18
ತುಂಕೂರು ಡಿಸ್ಟ್ರಿಕ್ಟ		1	53
ಹಾಸನ ,,	0	0	9
ಚಿತ್ರದುರ್ಗ ,,	0	0	60
ಕಡೂರ್ ,,	22	15	[illegible]4
ಶಿವಮೊಗ್ಗ ,,	1	[illegible]	68
ಒಟ್ಟು	[illegible]		[illegible]

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಕಾರ್ತೀಕ ಶುದ್ಧ ಷಷ್ಠಿ ಗುರುವಾರದಿಂದ ಕಾರ್ತೀಕ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ನವೆಂಬರ್

ತಾ.	ವಾರ.	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
[illegible]	ಗುರು [illegible]	ಷಷ್ಠಿ	[illegible]	ಪೂರ್ವಾ	[illegible]
[illegible]	ಶುಕ್ರ	ಸಪ್ತಮಿ	11	ಉತ್ತರಾ	[illegible]
[illegible]	ಶನಿವಾರ	ಅಷ್ಟಮಿ	13 [illegible]	ಶ್ರ	[illegible]
[illegible]	ರವಿವಾರ	ನವಮಿ	13 [illegible]	ಧ	[illegible]
[illegible]	ಚಂದ್ರ ‡	ದಶಮಿ	11 [illegible]	[illegible]	[illegible]
7	ಕುಜ *	ಏಕಾದಶಿ	[illegible]	ಪೂರ್ವಾ	[illegible]
[illegible]	ಬುಧ ,,	ದ್ವಾದಶಿ	[illegible]	ಉತ್ತರಾ	[illegible]

[illegible] ‡ ಕಾರ್ತೀಕ ಸೋಮವಾರ, [illegible] * ಸರ್ವತ್ರ ಏಕಾದಶಿ, [illegible] ದ್ವಾದಶಿ ಚಲುಕಾದ್ವಾದಶಿ, ಕ್ಷೀರಾಬ್ಧಿ ವ್ರತ, [illegible] ಶ್ರೀರಂಗಪಟ್ಟಣದಲ್ಲಿ ಪ್ರಸನ್ನ [illegible] ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವ

ಪೇಟೆ ಧಾರಣೆ

ದಿನಸು	ಮೈಸೂರು	ಬೆಂಗಳೂರು
ಕಸ್ತೂರಿ ಅಕ್ಕಿ ಪಲ್ಲಾ ೧ಕ್ಕೆ	[illegible]	[illegible]
ಕೆಂಪುಸಣ್ಣ ಅಕ್ಕಿ ಅವಲ್	[illegible]	[illegible]
,, ಮಧ್ಯಮ	[illegible]	[illegible]
ಜಾಮಾನ್ ಅಕ್ಕಿ	[illegible]	[illegible]
ಸಣ್ಣಕ್ಕಿ ಅವಲ್	[illegible]	[illegible]
,, ಮಧ್ಯಮ	[illegible]	[illegible]
ತೊಗರಿ ಬೇಳೆ ಪಲ್ಲಾ ೧ಕ್ಕೆ	[illegible]	[illegible]
,, ಮಧ್ಯಮ	[illegible]	[illegible]
ಹೈಬ್ರಾಗಿ ಪಲ್ಲಾ ೧ಕ್ಕೆ	[illegible]	[illegible]
ಕಾರ್ರಾಗಿ	[illegible]	[illegible]
ಜೋಳ	[illegible]	[illegible]
ಹುರುಳಿ ಪಲ್ಲಾ ೧ಕ್ಕೆ	[illegible]	[illegible]
ಬಿಳೇ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹರಳು ೧೨ ಸೇರಿಗೆ	[illegible]	[illegible]
ಶೇಂಗೇಕಾಯಿ ಮೂಟೆ ೧ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
,, ಮಧ್ಯಮ	[illegible]	[illegible]
ಬೆಲ್ಲ ದೊಡ್ಡ ಅಚ್ಚು	[illegible]	[illegible]
ಬೆಳ್ಳುಳ್ಳಿ ಮೂಟೆ ೧ಕ್ಕೆ	[illegible]	[illegible]
ಈರುಳ್ಳಿ ,,	[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	[illegible]	[illegible]
ಉಪ್ಪು ,,	[illegible]	[illegible]
ಹುಣಸೇ ಹಣ್ಣು	[illegible]	[illegible]
,, ಹಳೇದು	[illegible]	[illegible]
ತುಪ್ಪ	[illegible]	[illegible]
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]
ಅಡಕೇಕಾಯಿ ಮೂಟೆ ೧ಕ್ಕೆ	[illegible]	[illegible]
ಅಂಟುವಾಳದಕಾಯಿ ಮೂಟೆ ೧ಕ್ಕೆ	[illegible]	[illegible]
ಹತ್ತಿ (ಬೀಜ) ಕ್ಯಾಂಡಿ	[illegible]	[illegible]
,, ,, ನಡುಮ	[illegible]	[illegible]
,, ,, ಗಟ್ಟಿ ತೊಲ ೧ಕ್ಕೆ	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	[illegible]	[illegible]

ನಗಗಳ ಹರಾಜು ನೋಟೀಸ್

ಮೈಸೂರು ಪೇಟೆ ಅಗ್ರಹಾರದಲ್ಲಿದ್ದ ಘಾತಿಯಾದ ಇನ್ಸ್ಪೆಕ್ಟರ್ ರಾಮರಾಯರ [illegible] ಸಂಪತ್ತಿ[illegible] ೧೯೦[illegible]ನೇ ಇಸವಿ ಜುಲೈ ತಾ [illegible] ರಲ್ಲಿ ನಮ್ಮಲ್ಲಿ ಈ ಕೆಳಗೆ [illegible] ಚಿನ್ನ, ಬೆಳ್ಳಿ, ಜವಾಹಿರು ವಗೈರೆ ನಗಗಳನ್ನು ಗಿರವಿ ಇಟ್ಟು, ೨,೦೦೦ (ಎರಡು ಸಾವಿರ) ರೂಪಾಯಿಗಳನ್ನು [illegible] ಬಡ್ಡಿ ಸಾಲವಾಗಿ ತೆಗೆದುಕೊಂಡು, ಕೆಲವು ದಿವಸದವರಿಗೆ ಬಡ್ಡಿಯನ್ನು ಮಾತ್ರ ಪಾವತಿ [illegible] ಅಸಲನ್ನು ಸಹಾ ಪಾವತಿ [illegible] ಸದರೀ ಇನ್ಸ್ಪೆಕ್ಟರ್ ರಾಮರಾಯರು ಮೃತರಾಗಿರುತ್ತಾರೆ. [illegible] ವರುಷಗಳಿಂದ ಸದರೀ ರಾಮರಾಯರ ವಾರಸುದಾರರಾದ ಇವರ ಹೆಂಡತಿ [illegible] ತಮ್ಮ [illegible] ಇವರುಗಳಿಗೆ ಮೇಲ್ಕಂಡ ಅಸಲು ಬಡ್ಡಿ [illegible] ಪಾವತಿ [illegible] ತಗೆದುಕೊಳ್ಳಬೇಕೆಂದು ಎಷ್ಟು [illegible] ತಗಾದೆ ಮಾಡಿದಾಗ್ಯೂ ಮತ್ತು [illegible] ಇವರುಗಳಿಗೆ ರಿಜಿಸ್ಟರ್ ನೋಟೀಸ್ ಮೂಲಕ ಸಹಾ ತಿಳಿಯಪಡಿಸಿದಾಗ್ಯೂ ನಗಗಳನ್ನು ಬಿಡಿಸಿಕೊಳ್ಳದೆ ಇರುವದರಿಂದಲೂ ಸದರೀ ನಗಗಳ ಮೇಲೆ ನನಗೆ ಬರಬೇಕಾದ ಅಸಲು ರೂ ೨,೦೦೦ ಇದುವರೆಗೆ ಪಾವತಿ ಆಗಿರುವ ಬಡ್ಡಿ [illegible] ಆಗುವ ಬಡ್ಡಿ ಸುಮಾರು ರೂ [illegible] ಒಟ್ಟು [illegible] (ನಾಲ್ಕು ಸಾವಿರದ ಮುನ್ನೂರೈವತ್ತು) ರೂಪಾಯಿಗಳಿಗೇನೇ ಗಿರವಿ ನಗಗಳು ಸಾಲದೆ ಇರುವದರಿಂದಲೂ ಈ ನಗಗಳನ್ನು [illegible] ಇಸವಿ ಡಿಸೆಂಬರ್ ತಾ ೧೦ನೇ [illegible] ರ ವೇಳೆಗೆ [illegible] ಗಂಟೆ ಲಾಗಾಯಿತು ಬಹಿರಂಗವಾಗಿ [illegible] ದಿವಸಗಳ ವರೆಗೂ ಮೈಸೂರು ಕಲ್ಲಯಲ್ಲಿರುವ ನನ್ನ ಸ್ವಂತ ಮನೆಯಲ್ಲಿ ಹರಾಜು ಮಾಡಲ್ಪಡುವದು. ಬೇಕಾದ ಜನಗಳು ಆದರಲ್ಲಿ [illegible] ಹರಾಜು [illegible] ನಂತರ ನಗದು [illegible] ಪಾವತಿ [illegible] ನಗಗಳು ದೊರೆಯುವದು. ಹರಾಜಿನ [illegible] ಬಾಬು [illegible] ಡಿಪಾಜಿಟ್ ಕಟ್ಟಬೇಕು. ಉಳಿದ ಮೊಬಲಗನ್ನು ಎರಡನೇ ದಿವಸ ಪ್ರಾತಃಕಾಲದೊಳಗೆ ಪಾವತಿಮಾಡಿ, ನಗಗಳನ್ನು ಹರಾಜುದಾರರು ತಕ್ಕೊಂಡು ಹೋಗತಕ್ಕದ್ದು. ಸದರೀ ನಗಗಳನ್ನು ಪುನಃ ಹರಾಜು ಹಾಕುವದು. ಹಾಗೆ ಮಾಡುವದರಲ್ಲಿ ಡಿಪಾಜಿಟ್ ಮೊಬಲಗನ್ನು ಕಳೆದುಕೊಳ್ಳುವದಲ್ಲದೆ ಕಮ್ಮಿಯಾದರೆ ಮೊದಲ್ ದರ [illegible] ದಾರನು ಗುರಿಯಾಗುತ್ತಾನೆ. ಜಾಸ್ತಿ ಹುಟ್ಟಿದರೆ [illegible] ಹರಾಜುದಾರನಿಗೆ [illegible] ಸಿಕ್ಕಲಾರದು. ಮತ್ತು ಮೇಲ್ಕಂಡ ರಾಮರಾಯರ ವಾರಸುದಾರರಾದ ಇವರ ಹೆಂಡತಿ ಜಾನಕಿಯಮ್ಮನವರಿಗೂ, ತಮ್ಮ [illegible] ರಾಯರಿಗೂ ರಿಜಿಸ್ಟರ್ ನೋಟೀಸ್ ಮೂಲಕ ತಿಳಿಸಲ್ಪಟ್ಟಿರುತ್ತೆ.

ನಗಗಳ ತಪಸೀಲು

[illegible] ಚಿನ್ನದ [illegible] ಒಟ್ಟು ತೂಕ [illegible] ರೂ ತೂಕ [illegible]

೭ ಚಿನ್ನದ [illegible] ೩, ಒಂದು [illegible], ಅರಗು [illegible] ರೂ ತೂಕ [illegible]

[illegible] ಚಿನ್ನದ [illegible] ಜತೆ [illegible] ಅರಗು [illegible] ರೂ ತೂಕ [illegible]

೧ ಚಿನ್ನದ [illegible] ಜೋಡಿ ೧ಕ್ಕೆ ಬೆಳ್ಳಿ, [illegible] ದ ಮೊಳೆ ಸಹಾ ರೂ ತೂಕ [illegible]

[illegible] ಚಿನ್ನದ [illegible] ಸಣ್ಣದು ೧, [illegible] ೧, [illegible] ಬೆಳ್ಳಿ [illegible] ಅರಗು ಸಹಾ ರೂ ತೂಕ [illegible]

೧ [illegible] ಚಿನ್ನದ [illegible] ಜೋಡಿ ೧ಕ್ಕೆ ರೂ ತೂಕ [illegible]

೧ ಚಿನ್ನದ [illegible] ೩, ಅರಗು, ಧಾರ [illegible] ಬೆಳ್ಳಿ ಸಹಾ ರೂ ತೂಕ [illegible]

೧ ಚಿನ್ನದ [illegible] ಜೋಡಿ ೧ಕ್ಕೆ ಅರಗು, ಬೆಳ್ಳಿ, ಧಾರ ಸಹಾ ರೂ ತೂಕ [illegible]

[illegible] ಚಿನ್ನದ [illegible] ಜೋಡಿ ೧ಕ್ಕೆ [illegible], ಸಣ್ಣ [illegible] ೬, ಧಾರ ಅರಗು ಸಹಾ ರೂ ತೂಕ [illegible]

೧, ಹವಳ [illegible] ಧಾರ ಸಹಾ ರೂ ತೂಕ [illegible]

೧ ಸಣ್ಣ [illegible] ಜೋಡಿ ೧ಕ್ಕೆ ಅರಗು ಚಿನ್ನ ಮುತ್ತು ವಗೈರೆ ರೂ ತೂಕ [illegible]

೧ [illegible] ಜೋಡಿ ೧.

೧ [illegible] ಜೋಡಿ ೧

೧ [illegible] ಜೋಡಿ ೧

೧ [illegible] ಜೋಡಿ ೧ಕ್ಕೆ [illegible]

೧ [illegible] ಜೋಡಿ ೧ಕ್ಕೆ ರೂ ತೂಕ [illegible]

ಬೆಳ್ಳಿ ನಗಗಳು

೧ [illegible] ಜೋಡಿ ೧ಕ್ಕೆ ರೂ ತೂಕ [illegible]

೧ ಸಣ್ಣ [illegible] ಜೋಡಿ ೧ಕ್ಕೆ ರೂ ತೂಕ [illegible]

[illegible] ೧, [illegible] ಜೋಡಿ ೧, [illegible] ೧ಕ್ಕೆ ರೂ ತೂಕ [illegible]

ಮುನ್ನೂರು ನಗಗಳು ಇಪ್ಪತ್ತೊಂಬತ್ತು ಮಾತ್ರ

ಮತ್ತು ನನ್ನ ಸ್ವಂತ ಬಾಬತು ಚಿನ್ನ ಬೆಳ್ಳಿ ಜವಾಹಿರಿ ನಗಗಳು ಸಹಾ ಹರಾಜು ಹಾಕಲ್ಪಡುತ್ತೆ.

ಕೋಟೆ, ಮೈಸೂರು. ಕಡಪದ ಮನ್ನಾರಿ ಕೃಷ್ಣಶೆಟ್ಟಿ.

Printed and Published by the Rev H Spencer the Proprietor and Manager, Wesleyan Mission Press, Mysore 2/11/1905

ವೃತ್ತಾಂತ ಪತ್ರಿಕೆ.

REGISTERED M 20

ಪ್ರ ೧ ಯ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧ — ಮೈಸೂರು—ಸನ್ ೧೯೦೫ ನೇ ಇಸವಿ ನವಂಬರ್ ತಾರೀಖು ೯ ನೇ ಗುರುವಾರ. — ಸಂಚಿಕೆ ೨[illegible]

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಕ್ಕೆ ಇತರ ಜನಗಳಲ್ಲೂ ಪತ್ರ್ಕೆ ವಿ ಬಾಬ್ತು

ಕೆ ಮುಂದರವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಮುಂಗಡ) . . . . . ರೂ ೧—೦—೦

ಯು ಆಫೀಸಿನಿಂದ ಅಂಚೆಯ ಮೇಲೆ ಕಳು

ಕ್ಕೆ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್

. . . . ರೂ. ೧—೧೪—೦

. . . . . . ೧—೧೪—೦

ಪಾರಗಳನ್ನೂ ಪತ್ರ ಕಾಗದ ವಿಚಾರಗಳನ್ನು ಸ್ಪಷ್ಟ

ಗಿ ಬರೆಯಬೇಕು

ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

"ವಾಗ್ದೇವಿ"

2

ಹಾಸ್ಯ ಕರುಣಾ ವೀರ ರಸಗಳಿಂದ ಭರಿತವಾದ ಕಾದಂಬರಿ.

ಕ್ರಯ ಒಂದು ರೂಪಾಯಿ. ಅಂಚೆ ಹಾಸಲು ವಿನಹ.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು

ಬೋಳಾರ ಬಾಬೂರಾವ್, ಮಂಗಳೂರು.

WANTED WILD ANIMALS.

ಬೇಕಾಗಿದೆ — ಬೇಕಾಗಿದೆ

31

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ರವರ ಹ್ಯೂಗಸ್ ಸಾಹೇಬರು ಕೊಂಡುಕೊಳ್ಳುವರು.

Apply to Mr. Hughes, Mysore Zoo

ಸಚಿತ್ರವಿನೋದಿನಿ ಮಾಸಪತ್ರಿಕೆ.

7

ವಾರ್ಷಿಕ ಚಂದಾ ರೂ. ೧—೮—೦.

. . . .ವಿನೋದಿನಿ ಎಂಬ ಈ ಹೆಸರೇ ಇದಕ್ಕೆ ಹೆಸರಿಗೆ ಸರಿಯಾಗಿ ವಿನೋದ ಉಂಟುಮಾಡುವ ಕಾಲದಲ್ಲಿ ವಿನೋದಪಡುವವರಿಗೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹವಿಲ್ಲ. . . . . . .

ಸ್ವದೇಶಿ. ೨೮-೩-೦೫

ವಿಳಾಸ.—ಮ್ಯಾನೇಜರ್, ವಿನೋದಿನಿ ಆಫೀಸು, ಕಾರವಾರ

"ಆಂಗ್ಲೇಯ ವೈದ್ಯಶಾಸ್ತ್ರ"

ಕ್ರಯ ರೂ ೧ ೮ ೦, ಹಾಸಲು ೨ ಆ , ವಿ. ಪಿ. ೩ ಆಣೆ.

11

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿಧಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಒಳ್ಳೆದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಯಂತ್ರಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ಅಂಶಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಾಶಸ್ತ್ಯವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವದಕ್ಕೂ ಹಾಗೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೂ, ಇದು ಬಹಳ ಸಹಾಯಕರವಾಗಿರುವುದು.

ವಿಳಾಸ —ಎಂ. ಗುರುರಾವ್, ಆಸ್ಪತ್ರೆ ಅಸಿಸ್ಟೆಂಟ್,

ಹರೀಹರ, ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

8

[ಸ್ಥಾಪಿತವಾದದ್ದು ೧೯೦೨ರಲ್ಲಿ]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅವರ ಧಂಧ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (\ ) ತರಗತಿಗೆ ಸೇರಿದವರು ಪಡೆಯಬೇಕೆಂದು ಬಯಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಪ್ರವೇಶ ರುಸುಮು ಒಂದೊಂದು ರೂಪಾಯಿಯು ಪ್ರಕಾರ ಒಟ್ಟು ರೂ ೫೩ನ್ನು ಮಾತ್ರವೇ ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯಕ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೈಲ್ವೆ ಪಕ್ಕದಲ್ಲಿರುವ "ಕೊಲ್ಹಾಂ ಎಸ್ಟೇಟ್" ಎಂಬ ಸರ್ವೋಚ್ಚ ದ್ರವ್ಯಾಂಶ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಿಮೆಯಾಗುವ ಭಯ ಎಂದೂ ಇಲ್ಲ.

ಈ ಆಫೀಸಿನಲ್ಲಿ ಧರ್ಮಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಅದಾಯ ಸಮ್ಮಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ಇವರ್ತು ಭೂಸ್ಥಿತಿಯು ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಧರ್ಮಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಏನಕ್ಕೂ ಅಭಿಪ್ರಾಯವಾಗಿ ತಂದುಬಾರದಿದ್ದರೆ ಅವರು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಬೇಕೆಂದಿಚ್ಛಿಸುವವರು ಅರ್ಧಾಣೆ ಸ್ಟಾಂಪನ್ನು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ:—The Manager,

The India Agricultural and Helping Office,

Vengurla Post Bombay Presidency.

ನಗಗಳ ಹರಾಜು ನೋಟೀಸ್.

2

ಮೈಸೂರು ಹಳೇ ಅಗ್ರಹಾರದಲ್ಲಿದ್ದ ಸ್ಟೋತ್ರಿಯದ ಇನ್ಸ್ಪೆಕ್ಟರ್ ರಾಮರಾಯರೆಂಬುವರು ವಿರೋಧಿ ಸಂವತ್ಸರದ ಮಾಘ ಬ ೧ ಸ ೧೮೯೯ನೇ ಇಸವಿ ಮಾರ್ಚಿ ತಾ. ೨೮ ರಲ್ಲಿ ನನ್ನಲ್ಲಿ ಈ ಕೆಳಗೆ ವಿವರಿಸುವ ಚಿನ್ನ, ಬೆಳ್ಳಿ, ಹವಳ ವಗೈರೆ ನಗಗಳನ್ನು ಗಿರವಿ ಇಟ್ಟು, ೨,೦೦೦ (ಎರಡು ಸಾವಿರದ ಇನ್ನೂರು) ರೂಪಾಯಿಗಳನ್ನು ಬಡ್ಡಿ ಸಾಲ ತೆಗೆದುಕೊಂಡು, ಕೆಲವು ದಿವಸದವರಿಗೆ ಬಡ್ಡಿಯನ್ನು ಮಾತ್ರ ಪಾವತಿ ಮಾಡಿ, ಈಚೆಗೆ ಬಡ್ಡಿಯನ್ನೂ ಅಸಲನ್ನೂ ಪಾವತಿ ಮಾಡದೆ ಇನ್ಸ್ಪೆಕ್ಟರ್ ರಾಮರಾಯರು ಧನಿಕರಾಗಿರುತ್ತಾರೆ ಆ ರಾಮರಾಯರು ಬದುಕಿರುವಾಗ ಬ ಈ ಇವರ ವಾರಸುದಾರರಾದ ರಾಮರಾಯರ ವಾರಸುದಾರರು ಇವರ ಹೆಂಡತಿ ಜಾನಕಮ್ಮನವರು ಮತ್ತು ರಾಮರಾಯರ ಅಣ್ಣನವರಾದ ಇವರುಗಳಿಗೆ ಮೇಲ್ಕಂಡ ಅಸಲು ಬಡ್ಡಿ ಮೊಬಲಗನ್ನು ಪಾವತಿ ಮಾಡಿ ನಗಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಎಷ್ಟು ವಿಧವಾಗಿ ಹೇಳಿದ್ದಾಗ್ಯೂ ಈವರೆಗೆ ಇವರುಗಳಿಗೆ ರಿಜಿಸ್ಟರ್ ನೋಟೀಸ್ ಮೂಲಕ ಸಹಾ ತಿಳಿಯಪಡಿಸಿದಾಗ್ಯೂ ನಗಗಳನ್ನು ಬಿಡಿಸಿಕೊಳ್ಳದ ಕಾರಣದಿಂದಲೂ ಸದರೀ ನಗಗಳ ಮೇಲೆ ನನಗೆ ಬರಬೇಕಾದ ಅಸಲು ರೂ. ೨,೦೦೦, ಇದುವರೆಗೆ ಪಾವತಿ ಆಗಿರುವ ಬಡ್ಡಿ ಜಮಾಬಾಕಿ ಆಗುವ ಬಡ್ಡಿ ಒಟ್ಟು ರೂ ೪,೧೫೦, ಹುಪ್ಪು ೩,೩೫೦ (ನಾಲ್ಕು ಸಾವಿರದ ಒಂಭತ್ತೈವತ್ತು) ರೂಪಾಯಿಗಳಿಗೇನೇ ಗಿರವಿ ಹಾಕಿದ ಕಾರಣದಿಂದಲೂ ಈ ನಗಗಳನ್ನು ಇದೇ ಇಸವಿ ಡಿಸೆಂಬರ್ ತಾ. ೧೧ನೆ ಸೋಮವಾರ ಬೆಳಗಿನ ೮ ಘಂಟೆಗೆ ಆರಂಭವಾಗಿ ಬಹಿರಂಗವಾಗಿ ೩ ದಿವಸಗಳ ವರಗೂ ಮೈಸೂರು ಕೆಲ್ಲೆಯಲ್ಲಿರುವ ನನ್ನ ಸ್ವಂತ ಮನೆಯಲ್ಲಿ ಹರಾಜು ಮಾಡಲ್ಪಡುವವು. ಬೇಕಾದ ಜನಗಳು ಧರವನ್ನು ಮಾಡಿ ತೆಗೆದುಕೊಳ್ಳಬಹುದು. ಹರಾಜು ಖೈದಾದ ನಂತರ ಹರಾಜಿನ ಪ್ರಕಾರ ಪಾವತಿ ಮಾಡುವ ಮೊತ್ತದ ಧರವಾಸು ದಾರನಿಗೆ ನಗಗಳು ದೊರೆಯುವುದಿಲ್ಲ ಹರಾಜಾದ ಕಾಲದಲ್ಲಿ ಒಂದು ಭಾಗದ ಮೊಬಲಗು ಡಿಪಾಜಿಟ್ ಕಟ್ಟಬೇಕು. ಉಳಿದ ಮೊಬಲಗನ್ನು ಎರಡನೇ ದಿವಸ ಪ್ರಾತಃಕಾಲ ಪಾವತಿ ಮಾಡಿ, ನಗಗಳನ್ನು ಹರಾಜುದಾರನು ತೆಗೆದುಕೊಳ್ಳದ ಪಕ್ಷದಲ್ಲಿ ಸದರೀ ನಗಗಳನ್ನು ಪುನಃ ಹರಾಜು ಹಾಕುವದು. ಹಾಗೆ ಮಾಡುವದರಲ್ಲಿ ಡಿಪಾಜಿಟ್ ಮೊಬಲಗನ್ನು ಕಳೆದುಕೊಳ್ಳುವದಲ್ಲದೆ ಕಮ್ಮಿಯಾದರೆ ಆ ಧರವಾಸು ದಾರನು ಗುರಿಯಾಗುತ್ತಾನೆ ಜಾಸ್ತಿ ಬಂದರೆ ಮೊದಲ ಹರಾಜುದಾರನಿಗೆ ಏನೂ ಸಿಕ್ಕಲಾರದು. ಮೇಲ್ಕಂಡ ರಾಮರಾಯರ ವಾರಸುದಾರರಾದ ಅವರ ಹೆಂಡತಿ ಜಾನಕಿಯಮ್ಮನವರಿಗೂ, ತಮ್ಮ ಅಣ್ಣಾಜೀರಾವ್ ರಿಜಿಸ್ಟರ್ ನೋಟೀಸ್ ಮೂಲಕ ತಿಳಿಸಲ್ಪಟ್ಟಿರುತ್ತೆ.

ನಗಗಳ ತಪಸೀಲು.

ಚಿನ್ನದ ಕಾಸಿನ ಅಡ್ಡಿಕೆ ೨, ಲಾಯರಿ ಅಡ್ಡಿಕೆ ೧, ಜುಮ್ಕಿ ೩ಕ್ಕೆ ಅರಗು ಧಾರ ಸಹಾ ರೂ ತೂಕ ೨೦ .

ಚಿನ್ನದ ದೊಡ್ಡಗುಂಡಿನಸರ ೩, ಒಂದು ಪವಿತ್ರ ಚಿನ್ನ, ಅರಗು ಕಲ್ಲುವಗೈರೆ ರೂ ತೂಕ ೩೦॥ .

ಚಿನ್ನದ ಜೋಮಾಲೆಸರ ೨ಕ್ಕೆ ಬೆಳ್ಳಿ, ಅರಗು, ಧಾರ ಸಹಾ ರೂ ತೂಕ ೨೦॥.

ಚಿನ್ನದ ಮುಟ್ಟಾಣಿ ಜೋಡಿ ೧ಕ್ಕೆ ಬೆಳ್ಳಿ, ತಿರುಪು, ತಾಂಬ್ರದ ವೋಲೆ ಸಹಾ ರೂ. ತೂಕ ೧೦॥

ಚಿನ್ನದ ಪದಕಬಿಲ್ಲೆ ೨, ಸಣ್ಣದು ೧, ಕೇತಕಿ ೧, ಜುಮ್ಕಿ ೩ಕ್ಕೆ ಬೆಳ್ಳಿಬಿಲ್ಲೆ ಅರಗು ಸಹಾ ರೂ ತೂಕ ೧೩ ।.

ಹಿಂದ್ರದ ಅಚ್ಚಿಹಾಕಿರುವ ಚಿನ್ನದ ಕಡಗ ಜೋಡಿ ೧ಕ್ಕೆ ರೂ. ತೂಕ. ೫।= .

ಚಿನ್ನದ ಪದಕಾಚ್ಚು ೩, ಅರಗು, ಧಾರ ತಾಂಬ್ರದ ಬಿಲ್ಲೆ ಸಹಾ ರೂ. ತೂಕ ೪॥– .

ಚಿನ್ನದ ಹನುಮಂತನ ತಾಳಿ ೧ಕ್ಕೆ ಅರಗು, ಬೆಳ್ಳಿ, ಧಾರ ಸಹಾ ರೂ ತೂಕ ೪– .

೨. ಚಿನ್ನದ ಹಳಕಿಜೋಡಿ ೨ಕ್ಕೆ ಮುಪ್ಪುರವಳ ೮, ಸಣ್ಣಹವಳ ೩, ಧಾರ ಅರಗು ಸಹಾ ರೂ ತೂಕ ೨೦॥.

೧. ಹವಳ ೮ಕ್ಕೆ ಧಾರ ಸಹಾ ರೂ ತೂಕ ೩।.

೧. ಸಣ್ಣ ಮುತ್ತು ಹಾಕಿದ ಕುತ್ರಾಬಿ ವಾಲೆ ಜೋಡಿ ೧ಕ್ಕೆ ಅರಗು ಚಿನ್ನ ಮುತ್ತು ವಗೈರೆ ರೂ ತೂಕ ೮.

೧ ವಜ್ರದ ಆಟ್ಟೇಲಿ ಹಕ್ಕಡಕು ಜೋಡಿ ೧.

೧. ಬಾದಾಂ ಪಚ್ಚದ ಹಕ್ಕಡಕು ಜೋಡಿ ೧.

೧ ಕೆಂಪಿನ ಹಕ್ಕಡಕು ಜೋಡಿ ೧

೧. ಬಚ್ಚಕಾನೆ ಕೆಂಪಿನ ಚಂದ್ರಮುರು ಜೋಡಿ ೧ಕ್ಕೆ ಬಳ್ಳೀ ಮುತ್ತು ೧೩

೧ ಸಣ್ಣ ಕೆಂಪುಮುತ್ತಿನ ಮುಗತಿ ಜೋಡಿ ೧ಕ್ಕೆ ರೂ ತೂಕ ೧=

ಬೆಳ್ಳಿ ನಗಗಳು.

೧. ಕಾಲುಸರ ಜೊತೆ ೧ಕ್ಕೆ ರೂ. ತೂಕ ೮೨

೧. ಸಣ್ಣ ಕಾಲುಸರ ಜೊತೆ ೧ಕ್ಕೆ ರೂ ತೂಕ ೩೩.

೨. ಪಾಡಗ ಜೋಡಿ ೧, ಉಳಿ ಜೋಡಿ ೧, ಜುಮ್ಕಿ ೨ಕ್ಕೆ ರೂ. ತೂಕ ೪೩.

ಜುಮ್ಕಿ ನಗಗಳು ಇಪ್ಪತ್ತೊಂಬತ್ತು ಮಾತ್ರ.

ಮತ್ತು ನನ್ನ ಸ್ವಂತ ಬಾಬತ್ತು ಚಿನ್ನ ಬೆಳ್ಳಿ ಜವಾಹಿರಿ ನಗಗಳು ಸಹಾ ಹರಾಜು ಹಾಕಲ್ಪಡುತ್ತೆ.

ಕಿಲ್ಲೆ, ಮೈಸೂರು. — ಕಡಪದ ಮನ್ನಾರಿ ಕೃಷ್ಣಶೆಟ್ಟಿ.

P. SUBBAROY'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

3

೧೦. ಜ್ವರಸಂಹಾರಿ.—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ೨ ರ, ೩ ರ, ೪ ರ, ಚಳಿ, ಅಗ್ನಿಮಾಂದ್ಯ, ಅಸ್ಥಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು. ಪೆಟ್ಟಿಗೆ ೧ಕ್ಕೆ ರೂ ೧. ವಿ. ಪಿ. ಚಾರ್ಜು ೫ ಆಣೆ.

೧೧. ಕೂದಲು ಉದುರಿ ಹೋಗುವದಕ್ಕೆ.—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿ ಹೋಗುವದು ಸೀಸೆ ೧ಕ್ಕೆ ೪ ಆಣೆ ವಿ ಪಿ. ಚಾರ್ಜು ೬ ಸೀಸೆ ವರಿವಿಗೂ ೫ ಆಣೆ

೧೨ ಸುಗಂಧದಂತಚೂರ್ಣ.—ಎಲ್ಲಾ ವಿಧವಾದ ಹಲ್ಲು ರೋಗಗಳನ್ನು ವಾಸಿಮಾಡುವದು. ಸೀಸೆ ೧ಕ್ಕೆ ೩ ಆಣೆ ವಿ. ಪಿ ಚಾರ್ಜು ೫ ಸೀಸೆ ವರೆಗೂ ೫ ಆಣೆ

೧೩ ಚೇಳಿನ ಔಷಧಿ.—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಕೆಲವು ತೊಟ್ಟುಗಳನ್ನು ಬಿಟ್ಟ ಕ್ಷಣವೇ ಉರಿಯು ನಿಲ್ಲುವದು. ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು ಸೀಸೆ ೧ಕ್ಕೆ ೪ ಆಣೆ. ವಿ ಪಿ ಚಾರ್ಜು ೧೨ ಸೀಸೆ ವರಿಗೂ ೫ ಆಣೆ ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೆಲೆ ರೂ ೨—೮—೦. ವಿ. ಪಿ ಚಾರ್ಜು ಅಲಾಯಿದ. ಸಿರೋನಿಗೆ ೬ ಆಣೆ

೧೪ ಮಧುರಧ್ವನಿ ಮಾತ್ರೆ.—ಧ್ವನಿಯುಳ್ಳರಾದ ವ್ಯಾಸಂಗಗಳನ್ನು ಸರಿಪಡಿಸಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಪಷ್ಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ವೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು. ಸೀಸೆ ೧ಕ್ಕೆ ೮ ಆಣೆ. ವಿ ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ

೧೫. ಸ್ನಾನಕ್ಕೆ ಸುವಾಸನಾ ಭಸ್ಮ.—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನು ಬೆವರಿನ ದುರ್ಗಂಧವನ್ನು ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪುಕೊಟ್ಟು, ತಂಪನ್ನುಂಟುಮಾಡುವದು. ಅಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಚೂರ್ಣವು ಸ್ನಾನ ಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿ ೧ಕ್ಕೆ ೮ ಆಣೆ ವಿ. ಪಿ. ಹಾಸಲು ೩ ಆಣೆ.

೧೬. ಸಂಜೀವನ ಮಾತ್ರೆಗಳು.—ಮಕ್ಕಳಿಗೆ ಜ್ವರ, ಹಲ್ಲುಗಳ ಸೆಳತ, ನಿದ್ರೆಬಾರದಿರುವದು, ಅಧಿಕವಾಗಿ ಹೋಗುವದು, ಚಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ ೧ಕ್ಕೆ ೧೦ ಆಣೆ ವಿ ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೧೭. ಗೋರೋಚನ ಮಾತ್ರೆ.—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ಎರಡನೆ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲಸಾಡ, ದ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಿದುಳು ಶ್ವಾಸಕೋಶಗಳು ಕೆಟ್ಟಿದ್ದರೆ ಗುಣ ಮಾಡುವದು. ಮಕ್ಕಳಿಗೆ ಬರುವ ಜ್ವರ, ಅಮಶಂಕೆ, ಅತಿಸಾರ, ಹಲ್ಲುಗಳ ಸೆಳತ, ನಿದ್ರೆ ಬಾರದಿರೋಣ, ಹೆಚ್ಚಾಗಿ ಹೋಗುವದು, ಚಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು. ಸೀಸೆ ೧ಕ್ಕೆ ೧೦ ಆಣೆ. ವಿ ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೧೮. ಚರ್ಮರೋಗಕ್ಕೆ ಔಷಧಿ.—ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಕಜ್ಜಿ, ಆನೆಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ಅಲಿಯುಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಗಾಗಿ ವಾಸಿಯಾಗುವವು ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಚಾರ್ಜು ೨ ಬಾಟ್ಲಿ ವರೆಗೆ ೫ ಆಣೆ.

೧೯. ಕೇಶವಾಸಿನಿ.—ಈ ತೈಲವು ಪೂರ್ವಪದ್ಧತಿ ಮದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ವಿಶಾಸ, ಕಣ್ಣು ರೆಪ್ಪೆ ಅಭಿವೃದ್ಧಿಯಾಗಿ ಬೆಳೆಯುತ್ತವೆ. ತಲೆ ಮೆದುಳು ಕಣ್ಣುಗಳಿಗೆ ತಂಪುಕೊಡುತ್ತದೆ. ಟೋಳಾತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ ವಿಲಾಯಿತಿ ಪರಿಮಳ ವಸ್ತುಗಳ ಮೇಲೆ ಪ್ರೀತಿ ಇರುವವರಿಗೆ ಅತ್ಯು ಮೆಚ್ಚುವದಾಗಿರುತ್ತದೆ. ಬೆಲೆ ರೂ. ೧ ವಿ ಪಿ. ಚಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ.

ಕಾಗದಗಳನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲೇನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.

44



ಶೀತ, ಕೆಮ್ಮು, ಗಂಟಲು ಗಾರೆಮ್ಮುವದು, ಇವೇ ವೊದಲಾದ ಎದೆಯ ಮತ್ತು ಗಂಟಲಿನ ಬಾಧೆಗೆ ಔಷಧವು ಬಹಳ ಪ್ರಾಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವು ಬಂದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಉಪೇಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು, ಎದೆಯು ಬಾಗಿಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ ಆದಕಾರಣ ಶೀತವಾಗಿದೆ ಎಂದು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತದೆ. ಜೊತೆಗೇ ಒಂದು ಶೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಶೀಸೆ ೧ಕ್ಕೆ ೧ ರೂ., ೨ ರೂ. ಈ ... ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ... ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುತ್ತೆ—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪನಿ,

ಮೌಂಟ್ ರೋಡ್,

ಮದರಾಸ್.

ಕ್ಷೇತ್ರಗಣಿತ.

ಮೂರು ಭಾಗಗಳಿಂದ ಕೂಡಿದ ೪೦೦ ಪುಟಗಳುಳ್ಳ ಸಂಪೂರ್ಣವಾದ ಈ ಪುಸ್ತಕದಲ್ಲಿ ಒಟ್ಟು ಸುಮಾರು ೨,೦೦೦ ಲೆಕ್ಕಗಳು ಉತ್ತರಗಳೊಡನೆ ಕೂಡಿವೆ ಉತ್ತಮ ಪತ್ರ ಪ್ರತಿದ ೧ಕ್ಕೆ ರೂ ೧—೪—೦ ಮಧ್ಯಮ ಪತ್ರ ಪ್ರತಿ ೧ಕ್ಕೆ ರೂ ೧ ವಿದ್ಯಾರ್ಥಿಗಳಿಗೆ ಬಹಳ ಆವಶ್ಯವಾದದ್ದು ವಿಳಾಸ —ಸಿ ಕಣ್ಣಪ್ಪ, ಟ್ಯಾಂಕ್ ಇನ್ಸ್‌ಪೆಕ್ಟರ್, ಕಂಬನಗೂಡು

ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

16

ಮೆಕ್ಮಿಲ್ಲನ್ ಕನ್ನಡದ ೫ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ,, ,, ೬ ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೯—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ದೇವಾಂಗ ಪಂಡಿತರಿಗೆ ಅಗತ್ಯ ಬೇಕಾದದ್ದು.



10

ಸ್ವಲ್ಪ ಪ್ರತಿಗಳಿವೆ ಜಾಗ್ರತೆಪಡಿಸಿ ಸಿಕ್ಕುತ್ತೆ. ನಂತರ ಬಂದರೆ ಸಿಕ್ಕುವದಿಲ್ಲ ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಹಾ ಮತ್ತು ಕಾರಕಕ್ಕೆ ಸುಂದರವಾದ ೧೪ ಚಿತ್ರಗಳಿವೆ. ಕ್ರಯ ಸುಲಭವಾಗಿದೆ. ೧೪ ಚಿತ್ರವಿರುವ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೨—೮. ಚಿತ್ರವಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೧—೮ ವೇದ ಉಪನಿಷತ್ತು ಅರ್ಥಸಹಿತ ಮಹಾಸ್ತಂಭ ೧ಕ್ಕೆ ರೂ ೧—೮. ತಕ್ಷಣ ಮಣಿಆರ್ಡರಿಗೂ ವಿ. ಪಿ ಗೂ ಕಳುಹಿಸುತ್ತೆ. ವಿಳಾಸ—ಮೈಸೂರು ಪವಳ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

ಸನ್ ೧೯೦೬ನೇ ಇಸವಿಯ

ಎಂ ನಂ॥ ಎಫ್ ನಂ॥ ಬಿ ನಂ॥ ಸಿ ನಂ॥ ಹೆಚ್. ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಈ ಡೈರಿಗಳು ವರ್ತಕರು, ಉದ್ಯೋಗಿಗಳು, ಕಂಟ್ರ್ಯಾಕ್ಟರು, ದೊಡ್ಡಮನುಷ್ಯರು, ಖಾಸ್‌ಖಾಸ್ ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟ್ಯಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌಳಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿಬಿದ್ದ ಫಲ, ರಾಹು ಗುಳಿಕಕಾಲ, ವಾರ ಕೋಲೆ, ದಿನಸಂಬಳದಪಟ್ಟಿ, ದೋಬಿಲೆಕ್ಕ, ಬಡ್ಡಿಚಕ್ರದಪಟ್ಟಿ, ಇನ್ನೂ ಅನೇಕ ವಿಷಯಗಳುಂಟು ಉತ್ಕೃಷ್ಟವಾದ ಕಾಗದ, ಗಿಲ್ಟು ಹಾಕಿದೆ, ಶೀಮೆ ಸಾವರ್ನ್ ಬೈಂಡು, ಚಿನ್ನ ಬೆಳ್ಳಿ ಗಿಲೀಟು ಮಾಡಿದೆ.

ಎ. ನಂಬರ್ ಚಿಕ್ಕಸೈಜು ೩ ಆಣೆ	ಸಿ. ನಂಬರ್ ದೊಡ್ಡಸೈಜು ೬ ಆ.
ಎಫ್. ,, ,, ೪ ,,	ಎಚ್. ,, ,, ೯ ,,
ಬಿ. ,, ಮಧ್ಯಸೈಜು ೫ ,,	ಡಿ. ,, ಮಧ್ಯಸೈಜು ೮ ,,

ಪೋಸ್ಟ್ ಚಾರ್ಜು ಬೇರೆ ಒಂದೇ ಸಮೂಹ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಸವಿನುಡಿ

ಲೋಕಹಿತಕ್ಕೋಸ್ಕರ ತಿಂಗಳಿಗೆರಡುಸಲ ಪ್ರಕಟವಾಗುವ ಪತ್ರಿಕೆ.

ಓದುಗರಿಗೆ ಅನೇಕ ಉಪಯುಕ್ತಾಂಶಗಳಡಗಿ ಇಷ್ಟು ಅಲ್ಪ ಚಂದಾ ಉಳ್ಳ ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಯಾವುದೂ ಇಲ್ಲ.

ಪ್ರಗಸಟಿ ದೂರದಂತ ಮಾದರಿ ಸಂಚಿಕೆ—ಓದಿ ... ಕರಾದವರು ಪತ್ರಿಕೆಗೆ ಅಗ್ರಿಯ ಕೊಡದೆ ಇರುವುದೇ ಇಲ್ಲ. ... ಬೇಕೆ?

ಅಂಚೆ ವೆಚ್ಚ ಸಮೇತ ವರುಷ ಚಂದಾ —

ಮುಂಗಡ ದಸ್ತರದಾನೆ ಮಾತ್ರವೇ; ನಂತರ, ... ರೂಪಾಯಿ ಎಂಟಾಣೆ ಮಾತ್ರ

ವಿದ್ಯಾರ್ಥಿಗಳು ಅಂಚೆ ಖರ್ಚಿನ ಪೂರ್ತಿ ಅರು ... ಕಾಲಣೆಯ ಅಂಚೆ ಚೀಟಿಗಳು ಮುಂಗಡ ಕೊಟ್ಟು ಒಂದು ವರುಷ ಪೂರ್ತಿ ಪತ್ರಿಕೆಯನ್ನು ಪ್ರಗಸಟಿ ಕೊಡುತ್ತೇವೆ ವಿ ಪಿ ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು

ಓದಿ ಬುದ್ಧಿವಂತರಾಗಬೇಕೆಂಬಿಚ್ಛೆಯುಳ್ಳವರು ಈ ... ಯನ್ನು ಬಿಡಬೇಡಿ ಬೇಗ ಬೇಗ ನಿಮ್ಮ ವಿಳಾಸಗಳ ... ಕೊಟ್ಟು ಮಾದರಿ ಸಂಚಿಕೆಯೊಂದನ್ನು ಓದಿನೋಡಿ.

ವಿಳಾಸ —ಭಾರತಿನಂದನಂಗಿಲಾಸು, ಸಂಪಾದಕ, ಸವಿನುಡಿ, ಹೊಸಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್.

ವೃತ್ತಾಂತ ಪತ್ರಿಕೆ.

೧೯೦೫ನೇ ಇಸವಿ ನವಂಬರ್ ೯ನೇ ಗುರುವಾರ

ಪ್ರಿನ್ಸ್ ಆಫ್ ವೇಲ್ಸ್ ರವರು

ವಿಲಾಯಿತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರನ್ನೂ ಅವರ ಪತ್ನಿಪರಿವಾರದವರನ್ನೂ ಕರೆತರುವ ರಿನೌನ್ ಎಂಬ ಹಡಗು ಈ ದಿನ ಮಧ್ಯಾಹ್ನ ಸುಮಾರು ೨ ಗಂಟೆಗೆ ಬೊಂಬಾಯಿ ಪಟ್ಟಣವನ್ನು ಪ್ರವೇಶಿಸಿತೆಂತಲೂ, ಯುವರಾಜರವರೂ ಅವರ ಪತ್ನಿಯವರೂ ೩ ಗಂಟೆ ಹೊತ್ತಿಗೆ ಹಡಗನ್ನು ಬಿಟ್ಟು, ಪಟ್ಟಣದೊಳಕ್ಕೆ ಗಮನಮಾಡುವರೆಂತಲೂ ತಂತೀ ವರ್ತಮಾನ ಬಂದಿದೆ ಪ್ರಭುಗಳು ನಮ್ಮ ದೇಶದ ಮೇಲೆ ದಯೆ ಕರುಣೆಯಿಟ್ಟು ದರ್ಶನ ಕೊಡುವಂತಾದದ್ದು ನಮ್ಮ ಭಾಗ್ಯವೇ ಸರಿ ಎಂದು ಪ್ರಜೆಗಳೆಲ್ಲಾ ಸಂಭ್ರಮಯುಕ್ತರಾಗಿ ಆಶೀರ್ವಾದಗಳೂ ಪರಮ ಸಂತೋಷದೊಡನೆ ಸುಸ್ವಾಗತವನ್ನು ಬಯಸುವರು. ಯುವರಾಜರವರ ಸವಾರಿಯು ನಮ್ಮ ರಾಷ್ಟ್ರಕ್ಕೆ ದಯಮಾಡುವುದರಲ್ಲಿ ಮುಖ್ಯವಾದ ಎರಡು ಉದ್ದೇಶಗಳುಂಟೆಂದು ಕಾಣುತ್ತಿದೆ. ರಾಷ್ಟ್ರವನ್ನಾಳುವ ಚಕ್ರವರ್ತಿ ಸಾರ್ವಭೌಮರಿಗೂ ಮಹಾ ಮಾತೃಶ್ರೀಯವರಾದ ಚಕ್ರವರ್ತಿನಿಯವರಿಗೂ ಬ್ರಿಟಿಷ್ ಚಕ್ರಾಧಿಪತ್ಯದ ರಾಜವರ್ಗದವರಿಗೂ ಪ್ರಜಾ ಕೋಟಿಗಳಾದ ನಮ್ಮ ಮೇಲೆ ಇರುವ ಪ್ರೇಮವನ್ನೂ ಸೌಹಾರ್ದತೆಯನ್ನೂ ಸಾಕ್ಷಾತ್ ತೋರಿಸುವುದಕ್ಕೋಸ್ಕರ ಈಗ ಯುವರಾಜರವರು ದಯಮಾಡುವರು. ಎರಡನೆಯದಾಗಿ ಇವರು ಇನ್ನು ಮುಂದೆ ನಮ್ಮನ್ನು ಆಳಿ ಪರಿಪಾಲನೆ ಮಾಡುವವರಾಗಿರುವುದರಿಂದ—ಇಂಥಾ ಭಾಗ್ಯವು ಅವರಿಗೆ ಲಭಿಸಲೆಂದು ಸುಮ್ಮನೆ—ಅವರೇ ಸ್ವತಃ ದಯಮಾಡಿ ನಮ್ಮನ್ನು

...ವನನ್ನು ನೋಡಿ ಪರಿಚಯ ಮಾಡಿಕೊಂಡು ಹೋಗು...ವುದಕ್ಕಾಗಿಯೂ ಇರುತ್ತಾರೆ. ಆದಕಾರಣ ಈ ರಾಜಪುತ್ರರು ಈ ದೇಶದಲ್ಲಿ ಸುರಕ್ಷಿತರಾಗಿಯೂ ಸಂತೋಷದಿಂದಲೂ ಸಂಚಾರ ಮಾಡಿಕೊಂಡು ಹೋಗಲೆಂದೂ, ...ಲ್ಲಿ ನಮ್ಮ ದೇಶದ ವಿಷಯವಾಗಿ ಪ್ರೇಮಾತಿಶಯವೇ ...ದಲ್ಲಿ ನೆಲೆಗೊಳ್ಳುವಂತಾಗಲೆಂದೂ, ಅವರ ಈ ಆಗಮನವು ನಮ್ಮ ರಾಷ್ಟ್ರಕ್ಕೆ ಫಲದಾಯಕವಾಗಲೆಂದೂ ...ಹಾರೈಸುತ್ತೇವೆ

...ಕಳೆದ ಶನಿವಾರದ ದಿನ ಯುವರಾಜರವರು ಏಡನ್ ...ಪಟ್ಟಣವನ್ನು ತಲುಪಿದರು. ಕೂಡಲೇ ನಮ್ಮ ವೈಸ್ ...ರಾಯ್ ಲಾರ್ಡ್ ಕರ್ಜನ್ ರವರು ಅವರಿಗೆ ತಂತೀ ವರ್ತಮಾನ ಕೊಟ್ಟು ಅರಿಕೆ ಮಾಡಿದ್ದೇನೆಂದರೆ—ಏಡನ್ ನಗರವು ...ನಮ್ಮ ರಾಷ್ಟ್ರಕ್ಕೆ ಹೊರ ಪಾರ್ಶ್ವದ ಎಲ್ಲೆಕಟ್ಟಾಗಿರುವುದರಿಂದ ತಾವುಗಳು ಅಲ್ಲಿಗೆ ದಯಮಾಡಿದ್ದನ್ನು ನೋಡಿ ...ಹಿಂದೂಸ್ಥಾನದ ಸಕಲ ಪ್ರಜೆಗಳೂ ರಾಜಭಕ್ತಿಯುತರಾಗಿಯೂ ಉತ್ಸಾಹಪೂರಿತರಾಗಿಯೂ ತಮಗೆ ಸುಸ್ವಾಗತವನ್ನು ಬಯಸುವರೆಂಬೀ ಅರಿಕೆಯನ್ನು ತಾವುಗಳು ಅಂಗೀಕರಿಸಬೇಕೆಂದು ಬೇಡುತ್ತೇನೆ. ತಮ್ಮ ಆಗಮನವು ನಮ್ಮ ...ದಲ್ಲಿ ಚಿರಸ್ಮರಣೀಯವಾಗಬೆಂಬುವುದೂ ತಮಗೆ ...ಲ್ಲಾ ಭಾಗಗಳಲ್ಲೂ ಸುಖಸಂತೋಷಗಳು ಲಭ್ಯವಾಗಲೆಂಬುವುದೂ, ಇವೆರಡೇ ನಮ್ಮ ಹಿಂದುಸ್ಥಾನದ ಪರಮ ...ಕಾಂಕ್ಷೆಗಳಾಗಿರುತ್ತವೆ ಎಂಬುದೇ.

ಇದಕ್ಕೆ ಯುವರಾಜರವರು ಜವಾಬಾಗಿ ಲಕ್ಷ್ಯ ...ಹಿಸಿದ್ದೇನೆಂದರೆ—ನಿಮ್ಮ ಮೇಲೂ ಹಿಂದುಸ್ಥಾನದ ...ಜೆಗಳ ಮೇಲೂ ನಮ್ಮಗಳಿಗಿರುವ ಪ್ರೇಮವಾತ್ಸಲ್ಯಗಳನ್ನು ನಾವು ಅಲ್ಲಿಗೆ ಬಂದ ಕೂಡಲೆ ಪ್ರಕಾಶಪಡಿಸಲು ...ತವಕಪಡಲಯುಕ್ತರಾಗಿರುವೆವು. ನಿಮ್ಮ ಸಂತೋಷಪೂರ್ವಕವಾದ ಸುಸ್ವಾಗತದ ವಾರ್ತೆಯನ್ನು ನಾವು ಸಂತೋಷಪೂರ್ವಕವಾಗಿ ಅಂಗೀಕರಿಸಿದ್ದೇವೆ ಎಂಬುದೇ

ರಷ್ಯಾ ಚಕ್ರಾಧಿಪತ್ಯದ ರಾಜಕೀಯ ವಿಷಯಗಳು.

ಈ ವಾರ ಬಂದಿರುವ ವರ್ತಮಾನಗಳಲ್ಲೆಲ್ಲಾ ರಷ್ಯಾ ಚಕ್ರಾಧಿಪತ್ಯದ ವಿಷಯವಾದದ್ದೇ ಬಹು ವಿಶೇಷವಾದದ್ದು ಎನ್ನುವುದಕ್ಕೆ ಸಂಶಯವಿಲ್ಲ. ರಾಜ್ಯಭಾರ ವಿಚಾರದಲ್ಲಿ ಯೂರೋಪ್ ಖಂಡದ ದೊರೆಗಳು ತಮ್ಮ ಪ್ರಜೆಗಳಿಗೂ ಜವಾಬ್ದಾರಿಯನ್ನೂ ಅಧಿಕಾರಗಳನ್ನೂ ವಹಿಸಿರುತ್ತಾರೆ. ಆದರೆ ರಷ್ಯಾ ಚಕ್ರಾಧಿಪತ್ಯದಲ್ಲಿ ಮಾತ್ರ ಪ್ರಜೆಗಳಿಗೆ ಅಂಥಾ ಅಧಿಕಾರವನ್ನಾಗಲಿ ಜವಾಬ್ದಾರಿಯನ್ನಾಗಲಿ ವಹಿಸದೆ ಹಿಂತೆಗೆದಿರುವರು. ಆ ರಾಜ್ಯದಲ್ಲಿ ...ಮಾ ಎಂಬೊಂದು ಪ್ರತಿನಿಧಿ ಸಭೆಯನ್ನು ಮಾಡಿಕೊಂಡಿದಾರೆ. ಆದರೂ ಈ ಸಭೆಗೆ ಕ್ರಮವಾಗಿ ಪ್ರಜಾಪ್ರತಿನಿಧಿಗಳನ್ನು ಚುನಾಯಿಸುವ ಏರ್ಪಾಡಿಲ್ಲ. ರಾಜ್ಯದ ...ದರಬಾರುಗಳನ್ನೆಲ್ಲಾ ಚಕ್ರವರ್ತಿಯವರೂ ಅವರ ...ಯ ಕೆಲವು ಮಂತ್ರಿಗಳೂ ವಹಿಸಿಕೊಂಡು ನಡೆಸುತ್ತಿದ್ದಾರೆ. ಪ್ರಜೆಗಳಾದರೋ ತಮ್ಮ ಹಕ್ಕು ...ಸ್ವಾತಂತ್ರ್ಯಾದಿಗಳನ್ನು ಹೆಚ್ಚಿಸಿಕೊಡಬೇಕೆಂದು ಆಗಿಂ...ದಾಗ್ಗೆ ಕೇಳುತ್ತಾ ಬಂದಿರುವುದೂ ಚಕ್ರವರ್ತಿ ಜಾರ್ ...ರವರು ಬದಲಾವಣೆ ಮಾಡಿಕೊಡುತ್ತೇವೆಂದು ಹೇಳುತ್ತಾ ಬಂದಿರುವುದೂ ತಪ್ಪಲಿಲ್ಲ. ಆದರೆ ಪ್ರಜೆಗಳಲ್ಲಿ ...ಐಕಮತ್ಯವಿಲ್ಲದಿದ್ದದ್ದರಿಂದ ಚಕ್ರವರ್ತಿಯವರು ತಮ್ಮ ...ವಚನವನ್ನು ಕಾರ್ಯತಃ ನೆರವೇರಿಸದೆ ಕಾಲಕಳೆಯುತ್ತಾ ಬರಲು ಅವಕಾಶವಾಯಿತು. ಈಗಲಾದರೋ ಪ್ರಜೆ...ಗಳಲ್ಲಿ ಐಕಮತ್ಯ ಉಂಟಾಗಿದೆ ಎಂತಲೂ ಅದರಿಂದ ಅವರಿಗೆ ...ಹೆಚ್ಚು ಭಾಗ ಪ್ರಯೋಜನವೂ ಆಗಿದೆ ಎಂತಲೂ ತಿಳಿದು ...ಬಂದಿದೆ. ಗವರ್ನಮೆಂಟಿನ ಕಾರುಬಾರುಗಳಲ್ಲಿ ಪ್ರಜೆಗಳು ತಮಗೂ ಪಾಲು ಸಿಕ್ಕಬೇಕೆಂದು ಬಗ್ಗಟ್ಟಾಗಿ ಹಟ ...ಹಿಡಿದ್ದಲ್ಲದೆ ಮುಖ್ಯ ಮುಖ್ಯವಾದ ರೈಲುಗಳ ನೌಕರರೂ ಕೆಲಸಗಾರರೂ ನಿಂತುಬಿಟ್ಟರು. ಇದರಿಂದ ರೈಲ್ ...ಗಳ ಸಂಚಾರ ನಿಂತು ಹೋಯಿತು. ತಂತೀ ವರ್ತಮಾನ ಮಾತ್ರ ಹೋಗಿಬರುತ್ತಿದೆ. ಜನರಾಗಲಿ ಸರಕುಗಳಾಗಲಿ ಊರಿಂದೂರಿಗೆ ಹೋಗಿ ಬರುವುದೇ ದುರ್ಲಭವಾಯಿತು. ಪ್ರಯಾಣ ಹೊರಟಿದ್ದ ಮೂರು ಸಾವಿರ ...ಜನರು ಮಾಸ್ಕೋ ಪಟ್ಟಣದಲ್ಲೇ ನಿಲ್ಲಬೇಕಾಯಿತು. ...ದು ರಷ್ಯಾ ಅಡ್ಡಿಯಾದದ್ದರಿಂದ ಆಹಾರ ದಿನಸುಗಳೂ ಸಿಕ್ಕದೆ ಪ್ರಯಾಸವಾಯಿತು. ಮುಖ್ಯ ಮುಖ್ಯವಾದ ನಗರಗಳಲ್ಲಿ ರಾತ್ರಿ ದೀಪ ಹಚ್ಚುವ ಕಾರ್ಖಾನೆಗಳೂ ...ಗಳವರು ಕೆಲಸಕ್ಕೆ ಹೋಗದೆ ನಿಂತುಬಿಟ್ಟದ್ದರಿಂದ ಆ ಪಟ್ಟಣಗಳಲ್ಲಿ ಗಾಢಾಂಧಕಾರವೇ ಮುಸುಕಿಯುತ್ತಿತ್ತು. ಇಷ್ಟೆಲ್ಲಾ ಆಗುವಾಗ್ಗೆ ಎಲ್ಲಾ ಕಡೆಗಳಲ್ಲೂ ಗಲಿಬಿಲಿಯೂ ನಾನಾ ಕಷ್ಟಗಳೂ ಪ್ರಾಪ್ತವಾದವೆನ್ನುವುದೇನೂ ಆಶ್ಚರ್ಯವಲ್ಲ. ಆಗ ಗವರ್ನಮೆಂಟಿನವರು ಪ್ರಜೆಗಳ ಕೋರಿಕೆಯನ್ನು ನೆರವೇರಿಸದೆ ಇನ್ನು ಕಾಲಹರಣ ಮಾಡುವುದು ತರವಲ್ಲವೆಂದು ತಿಳಿದವರಾಗಿ ಹಿಂಸಾ ಕೃತ್ಯಗಳನ್ನು ನಿಲ್ಲಿಸಿದರು. ಈಗ ಚಕ್ರವರ್ತಿ ಜಾರ್ ಯವರು ಕೌಂಟ್ ಡಿ ವಿಟ್ಟೆ ಯವರಿಗೆ ಪ್ರಧಾನ ಮಂತ್ರಿ ಪದವಿಯನ್ನು ಕೊಟ್ಟು, ಅವರಿಗೆ ರಾಜ್ಯಭಾರ ಕ್ರಮಗಳನ್ನು ಪ್ರಜಾರಂಜಕವಾಗುವಂತೆ ಬದಲಾವಣೆ ಮಾಡಬೇಕೆಂದು ಆಜ್ಞೆ ಮಾಡಿದಾರೆ.

ಒಳದೇಶದ ವೃತ್ತಾಂತಗಳು.

ಬೇಲೂರು ತಾಲ್ಲೂಕಿನಲ್ಲಿರುವ ಕಿಕ್ಕೇರಿ [illegible]ನ್ನು ನಾಲೆಯನ್ನು ದುರಸ್ತು ಮಾಡಬೇಕೆಂದು ಸರ್ಕಾರದವರು [illegible] ವಹಿಸಿ, ಅದಕ್ಕೆ ಬೇಕಾಗುವ ಸಾಮಾನುಗಳನ್ನು ಕೊಂಡು[illegible]ವುದಕ್ಕೆ ನರಸೀಪುರದ ಸಬ್ ಡಿವಿಜನ್ ಆಫೀಸರಿಗೆ ಅಧಿಕಾರ ವಹಿಸಿದಾರೆ.

****

ಮೈಸೂರು ಸಂಸ್ಥಾನದ ರೈತ [illegible] ಕಬ್ಬಿನ ಯಂತ್ರವನ್ನು ಕರಿಸಬೇಕೆ[illegible] ವ್ಯವಸಾಯವನ್ನು ಅಪೇಕ್ಷಿಸಿದರೆ ಅಂಥವರಿಗೆ [illegible] ರೂಪಾಯಿ ಅನಕ ಸರ್ಕಾರದಿಂದ ಸಾಲ ಕೊಡಬಹುದೆಂ[illegible] ಗವರ್ನಮೆಂಟಿನವರು ತಿಳಿಸಿರುತ್ತಾರೆ.

****

ಮೈಸೂರ[illegible]ನದ ವ್ಯವಸಾಯದ ಪರೀಕ್ಷಾಲಯದಲ್ಲಿ ೪೦ ರೂ. ವೇ[illegible] ಮೂರು ಮಂದಿ ವಿದ್ಯಾರ್ಥಿಗಳನ್ನು ನೇಮಿಸಿಕೊಳ್ಳ[illegible] ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ. ಅರ್ಜಿದಾರರು [illegible] ಸಂಸ್ಥಾನದವರಾಗಿಯೂ ಬಿ. ಎ. ಪರೀಕ್ಷೆಯನ್ನು ಕೊ[illegible]ಗಿಯೂ ಇರಬೇಕು.

****

ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾಗಿ ನೇಮಕವಾಗಿರುವ ಮಿ॥ ಎಸ್. ಫ್ರೇಸರ್‌ಯವರು ಈ ತಿಂಗಳು ಸುಮಾರು ೨೦ನೆ ತಾರೀಖಿಗೆ ಬೊಂಬಾಯಿನಿಂದ ಬೆಂಗಳೂರಿಗೆ ಬಂದು ಕೆಲಸದ ಛಾರ್ಜನ್ನು ಪಡೆಯುವರೆಂತಲೂ ಮಿ॥ ಎ. ವಿಲ್ಲಿಯಂಸ್‌ಯವರು ಬೆಲೂಚಿಸ್ಥಾನದ ಕಮಿಷನರಾಗಿ ಪ್ರಯಾಣಮಾಡುವರೆಂತಲೂ ಪ್ರಕಟವಾಗಿದೆ

****

ದಾವಣಗೆರೆ ಮುನಿಸಿಪಲ್ ಸ್ಥಾನದಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸನ್ನು ಮಾಡಿಕೊಂಡಿದಾರೆ ಇದಕ್ಕೆ ಬಾಡಿಗೆ ಪಡೆಯಬೇಕೆಂದು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ತೀರ್ಮಾನ ಮಾಡಿದರು. ಪ್ರಯಾಣಿಕರ ಸೌಕರ್ಯಕ್ಕೆ ಏರ್ಪಾಡಾಗಿರುವ ಕಟ್ಟಡವು ಹೀಗೆ ದುರುಪಯೋಗವಾಗುತ್ತಿರುವುದು ಅನ್ಯಾಯವೆಂದು ಮೆಂಬರುಗಳಿಗೆ ತೋರದೆಹೋದದ್ದು ಆಶ್ಚರ್ಯ.

****

ತಿರುಮಕೂಡ್ಲು ನರಸೀಪುರದ ತಾಲ್ಲೂಕು ಗರ್ಗೇಶ್ವರಿ ಔಟ್ ಪೋಸ್ಟ್ ಪೋಲೀಸಿನವರು ಪ್ರಜಾಕಂಟಕರಾಗಿದಾರೆಂದೂ ಅವರನ್ನು ಅಲ್ಲಿಂದ ವರ್ಗಮಾಡಬೇಕೆಂದೂ ಒಬ್ಬ ಚಂದಾದಾರರು ಬರೆಯುತ್ತಾರೆ. ಆ ಇಲಾಖಾ ಅಧಿಕಾರಿಗಳು ಈ ವಿಷಯಕ್ಕೆ ಗಮನಕೊಡಬೇಕಾಗಿದೆ. ಕಷ್ಟನಷ್ಟಗಳಿಗೆ ಗುರಿಯಾದವರು ಏಕವಾಗಿ ಅರ್ಜಿ ಬರೆದು ಮೇಲ್ಪಟ್ಟ ಹುದ್ದೆದಾರರಿಗೆ ಬರೆದುಕೊಳ್ಳತಕ್ಕದ್ದು.

****

ಮೊನ್ನೆ ಸೋಮವಾರ ಬೆಳಗ್ಗೆ ಸುಮಾರು ೯ ಗಂಟೆಗೆ ಶ್ರೀ ಮಹಾ ಯುವರಾಜರವರು ಮೋಟಾರ್ ಕಾರ್ ಎಂಬ ಗಾಡಿಯಲ್ಲಿ ಬೆಂಗಳೂರಿಗೆ ದಯಮಾಡಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಅವರ ಸಂಗಡ ಕರ್ನಲ್ ಹಿಲ್ ಯವರೂ, ಪ್ರಿನ್ಸ್ ಗೋದಾವರಿ ಅರಸಿನವರೂ, ಡಾಕ್ಟರ್ ಎಸ್. ...ಣ್ಣನವರೂ ಹೋಗಿರುತ್ತಾರೆ ಯುವರಾಜರವರು ಬೆಂಗಳೂರು ಅರಮನೆಯಲ್ಲಿ ಇರುವರೆಂದು ಕೇಳುತ್ತೇವೆ.

****

ಚಿತ್ರದುರ್ಗದಲ್ಲಿರುವ ವೆಂಕಟರಮಣಪ್ಪನವರ ಮಗ ಲಕ್ಷ್ಮಣಪ್ಪನವರು ಕರ್ನಾಟಕ ಪಂಡಿತರಾಗಿ ಅನೇಕರಿಗೆ ಔಷಧ ಕೊಡುವರೆಂತಲೂ ಅವರಿಗೆ ಮಾಹೆಯಾನಾ ೧೫ ರೂ ಗ್ರಾಂಟು ಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಡಿಸ್ಟ್ರಿಕ್ಟ್ ಬೋರ್ಡಿನವರು ಅರ್ಜಿ ಬರೆದುಕೊಂಡ ಪಂಡಿತರನ್ನು ಬಿಟ್ಟು, ಪಂಡಿತ ವೆಂಕಟರಮಣಪ್ಪನವರಿಗೆ ತಿಂಗಳಿಗೆ ೮ ರೂ ಕೊಡಬೇಕೆಂತಲೂ ಇವರು ಗ್ರಾಂಟು ಪಡೆಯುವುದಕ್ಕೆ ಮೊದಲು ಆಸ್ಪತ್ರೆ ಡಾಕ್ಟರಿಂದ ಯೋಗ್ಯತಾ ಪತ್ರಿಕೆಯನ್ನು ತಂದು ತೋರಿಸಬೇಕೆಂತಲೂ ಗೊತ್ತು ಮಾಡಿದಾರೆ.

****

ಅರ್ಕಾಟ್ ನವಾಬರವರು ಕಳೆದ ಶನಿವಾರ ಮಧ್ಯಾಹ್ನ ರಾಜಧಾನಿಗೆ ಬಂದು, ಅಲ್ಲಿನ ಜಗನ್ಮೋಹನ ಬಂಗಲೆಯಲ್ಲಿ ಇಳುಕೊಂಡಿದ್ದರು. ಭಾನುವಾರ ಮಧ್ಯಾಹ್ನ ಮಹಾರಾಜರವರು ಕರೀಕಲ್ಲು ತೊಟ್ಟಿಯಲ್ಲಿ ನವಾಬರಿಗೆ ಭೇಟಿ ಕೊಟ್ಟು, ಸ್ವಲ್ಪ ಹೊತ್ತು ಅವರ ಸಂಗಡ ಮಾತನಾಡುತ್ತಿದ್ದು ಕಳುಹಿಸಿ, ಸಾಯಂಕಾಲ ಜಗನ್ಮೋಹನ ಬಂಗಲೆಗೆ ದಯಮಾಡಿ, ನವಾಬರನ್ನು ಸಾರೋಟಿನಲ್ಲಿ ಕೂರಿಸಿಕೊಂಡು, ರಾಜಧಾನಿಯ ಮುಖ್ಯ ಭಾಗಗಳನ್ನೆಲ್ಲಾ ತೋರಿಸಿದರು. ಮರುದಿನ ಅರ್ಕಾಟ್ ನವಾಬರು ಪರಿವಾರ ಸಹಿತ ರಾಜಧಾನಿಯಿಂದ ಪ್ರಯಾಣಮಾಡಿದರು.

****

ಹೊಳಲಕೆರೆ ತಾಲ್ಲೂಕು ಆನಂದೂರು ಕೆರೆ ಕಾಮಗಾರಿ ವಿಚಾರದಲ್ಲಿ ಇಂಜನಿಯರ್ ಇಲಾಖೆಯವರು ಮೊದಲು ತಿಳಿಸಿದ್ದಕ್ಕಿಂತಲೂ ಹೆಚ್ಚು ಕಾಮಗಾರಿಗಳನ್ನು ಕಂಟ್ರಾಕ್ಟರಿಗೆ ವಹಿಸಿ ಮಾಡಿಸುತ್ತಿದಾರೆಂತಲೂ ಹೆಚ್ಚು ಕೆಲಸಕ್ಕೆ ತಕ್ಕ ಪ್ರತಿಫಲವಿಲ್ಲದೆ ಇದೆ ಎಂತಲೂ ಇದರಿಂದ ಕಂಟ್ರಾಕ್ಟರಿಗೆ ತುಂಬಾ ನಷ್ಟವಾಗುತ್ತಿದೆ ಎಂತಲೂ ಈ ವಿಷಯವಾಗಿ ಅನೇಕ ವೇಳೆ ಬರೆದುಕೊಂಡಾಗ್ಯೂ ಯಾರೂ ಅದಕ್ಕೆ ಗಮನ ಕೊಟ್ಟಿಲ್ಲವೆಂತಲೂ ಒಬ್ಬ ಚಂದಾದಾರರು ಬರೆಯುತ್ತಾರೆ. ಇನ್ನುಮೇಲಾದರೂ ಅವರಿಗೆ ಯಾವ ಪರಿಹಾರವು ದೊರಕಲಾರದೆಂದು ತಿಳಿಸುವೆವು.

****

ದೊಡ್ಡಬಾಣಾವರದ ಚಂದಾದಾರರು ಬರೆಯುವದೇನೆಂದರೆ— ಈ ಪ್ರಾಂತ್ಯ ಮಳೆ ಬಹಳ ದಿನಗಳಿಂದಲೂ ಇಲ್ಲ. ಕೆರೆಯಲ್ಲಿ ಬಿತ್ತಿದ ರಾಗಿ, ಹುರುಳಿ, ಹುಚ್ಚೆಳ್ಳು ಮಳೆ ಇಲ್ಲದೆ ಒಣಗಿಹೋದವು. ಇಲ್ಲವಾದರೆ ಅರ್ಧ ಫಸಲು ಸಿಕ್ಕುವುದೂ ದುರ್ಲಭ ಜನರು ಆಕಾಶವನ್ನು ನೋಡುತ್ತಾ ಚಿಂತಿಸುತ್ತಾರೆ ಅಂಥಾ ಕಾಲದಲ್ಲಿ ತಿರುಪೂರು ಕೋಟೆಯ ನಾಟಕದ ಕಂಪೆನಿಯವರು ಬಂದು ಬಿದಿರು ಆಟಗಳನ್ನು ಆಡಿದರೆಂದೂ ನೋಡದವರು ಅಕ್ಕ ಮಕ್ಕಳಿಗೆ ಚನ್ನಾಗಿ ಆಡುತ್ತಾರೆಂದೂ ಹೇಳಿಕೊಳ್ಳುತ್ತಾರೆ. ಇಂಥಾ ದುರ್ಭಿಕ್ಷ ಕಾಲದಲ್ಲಿ ಏನು ಕಾನೇ ಉತ್ಪತ್ತಿ ಆದೀತು ಎಂಬುದೇ.

****

ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಕಳೆದ ತಿಂಗಳ ತಾ. ೨೭ ರಲ್ಲಿ ರಾಜಧಾನಿಯಿಂದ ಹೊರಟು, ಹಂಪಾಪುರ, ಕಾಳನಕೋಟೆ, ಹೆಗ್ಗಡದೇವನಕೋಟೆ, ಹುಣಸೂರು ಪ್ರಾಂತ್ಯ ಸಂಚಾರ ಮಾಡಿಕೊಂಡು, ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯಕ್ಕಾಗಿ ಏರ್ಪಾಡಾಗಿರುವ ಎರಡು ಕೆಡ್ಡಾ ಕ್ಯಾಂಪುಗಳನ್ನೂ ಶಿಕಾರಿ ಕ್ಯಾಂಪನ್ನೂ ನೋಡಿ ತೃಪ್ತಿಪಟ್ಟು, ಹುಣಸೂರಿನಲ್ಲಿ ಪ್ರಜೆಗಳ ವಿಜ್ಞಾಪನಾ ಪತ್ರಿಕೆಯನ್ನು ಅಂಗೀಕರಿಸಿ, ಕಳೆದ ಗುರುವಾರ ರಾಜಧಾನಿಗೆ ವಾಪಸು ಬಂದು, ಭಾನುವಾರದ ತನಕ ಇಲ್ಲೇ ಇದ್ದು, ಆ ದಿನ ಬೆಳಗ್ಗೆ ಬನ್ನೂರಿನ ಕಡೆ ದಯಮಾಡಿದರು ಅಲ್ಲಿಂದ ಅವರು ಸೋಮವಾರ ಮಂಗಳವಾರ ಮಳವಳ್ಳಿಯಲ್ಲಿದ್ದು, ನೆನ್ನೆ ಬೆಳಗ್ಗೆ ಸಾತನೂರಿಗೆ ಹೋಗಿ ಅಲ್ಲೇ ಇದ್ದು, ಈ ದಿನ ಬೆಳಗ್ಗೆ ಅಲ್ಲಿಂದ ಹೊರಟು ಕಾನಕಾನಹಳ್ಳಿಗೆ ತಲುಪುವವರಾಗಿದಾರೆ ನಾಳೆಯೆಲ್ಲಾ ಅವರು ಅಲ್ಲೇ ಇದ್ದು ಶನಿವಾರ ಬೆಳಗ್ಗೆ ೧೦ ಗಂಟೆಗೆ ಕಾಲೀನ್ ಪೇಟೆಗೆ ಬಂದು ಭಾನುವಾರ ಅಲ್ಲೇ ತಂಗುವರು ತಾ. ೧೩ ನೆ ಸೋಮವಾರ ಬೆಳಗ್ಗೆ ೧೦ ಗಂಟೆಗೆ ಮಾಗಡಿಗೆ ಹೋಗಿ ಮಂಗಳವಾರವೆಲ್ಲಾ ಅಲ್ಲಿದ್ದು, ತಾ. ೧೫ ನೆ ಬುಧವಾರ ಬೆಳಗ್ಗೆ ೯ ಗಂಟೆಗೆ ಸೋಲೂರು ಸೇರಿ, ಗುರುವಾರ ಬೆಳಗ್ಗೆ ೯ ಗಂಟೆಗೆ ನೆಲಮಂಗಲವನ್ನು ತಲುಪುವರು ತಾ. ೧೮ ನೆ ಶನಿವಾರದ ತನಕ ನೆಲಮಂಗಲದಲ್ಲಿದ್ದು ಆ ದಿನ ಬೆಳಗ್ಗೆ ೧೦ ಗಂಟೆಗೆ ಅಲ್ಲಿಂದ ದೊಡ್ಡಬಳ್ಳಾಪುರಕ್ಕೆ ಹೋಗಿ ಮಾರನೇ ಭಾನುವಾರವೆಲ್ಲಾ ಅಲ್ಲೇ ಕಳೆಯುತ್ತಾರೆ. ಅಲ್ಲಿಂದ ಮುಂದಕ್ಕೆ ದಿವಾನರವರು ಯಾವ ಕಡೆ ದಯಮಾಡುವರೋ ಮುಂದೆ ತಿಳಿಯತಕ್ಕದ್ದಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಬೌರಿಂಗ್‌ಪೇಟೆ ರೈಲ್ವೆ ಸ್ಟೇಷನ್‌ನಲ್ಲಿ ಪ್ರಯಾಣಸ್ಥರ ದೇಹಸ್ಥಿತಿಯನ್ನು ಪರೀಕ್ಷೆ ಮಾಡುವುದಕ್ಕೆ ಘನವೆತ್ತ ಮೈಸೂರು ರೆಸಿಡೆಂಟರವರು ಸೀನಿಯರ್ ಆಸ್ಪತ್ರೆ ಅ॥ ಸರ್ಜನ್ ಪೀಟರ್ ಯವರನ್ನು ಡಾಕ್ಟರಾಗಿ ನೇಮಕ ಮಾಡಿರುತ್ತಾರೆ.

ಕೋಲಾರ್ ಅ॥ ಪೋಲೀಸ್ ಛಾರ್ಜನ್ನು ವಹಿಸಿರುವ ಆಕ್ಟಿಂಗ್ ಎಕ್‌ಸ್ಟ್ರಾ ಅ॥ ಕಮಿಷನರ್ ಮಿ॥ ಎ. ವೇದಾಂತ ದೇಶಿಗಂ ಇಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ಕಾರೀಖಿನಾರಭ್ಯ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೋಲಾರ್ ಪ್ರೊಬೇಷನರು ಡಿಸ್ಟ್ರಿಕ್ಟ್ ಪೋಲೀಸ್ ಛಾರ್ಜನ್ನು ವಹಿಸತಕ್ಕದ್ದು.

ಗವರ್ನಮೆಂಟ್ ಅ॥ ಸೆಕ್ರೆಟರಿಯಾಗಿ ಕೆಲಸ ನೋಡುವ ಅ॥ ಕಮಿಷನರ್ ಮಿ॥ ಪಿ. ಬಿ. ಡಿಸೌಜಾ ಯವರನ್ನು ಸೆಪ್ಟಂಬರ್ ೨೫ ರಿಂದ ೩ನೇ ದರ್ಜೆಯ ಅ॥ ಕಮಿಷನರಾಗಿ ಖಾಯಂ ಮಾಡಿದೆ.

ಅ॥ ಕಂಟ್ರೋಲರ್ ಮಿ॥ ಟಿ. ಲಕ್ಷ್ಮಣರಸಿಂಹರಾಯರಿಗೆ ಅಕ್ಟೋಬರ್ ೧೮ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಂಟ್ರೋಲರವರ ಛೀಫ್ ಅಸಿಸ್ಟೆಂಟರಾದ ಮಿ॥ ಟಿ. ವೈಯಾಪುರಿ ಚೆಟ್ಟಿಯವರಿಗೆ ಅಕ್ಟೋಬರ್ ೧೮ ರಿಂದ ಐದು ವಾರಗಳ ರಜಾ ಕೊಟ್ಟಿದೆ.

ಮಿ॥ ವಿಟಸ್‌ನ್ ಯವರು ಕಂಟ್ರೋಲರವರ ಛೀಫ್ ಅಸಿಸ್ಟೆಂಟರಾಗಿ ಬದಲಿ ನೋಡತಕ್ಕದ್ದು.

ಮುಂದೆ ಹೇಳುವ ಆಸ್ಪತ್ರೆ ಅಸಿಸ್ಟೆಂಟರನ್ನು ಅವರ ಕೆಲಸದಲ್ಲಿ ಖಾಯಂ ಮಾಡಿದೆ.—ಟಿ. ಸದಾಶಿವಂ ಪಿಳ್ಳೆಯವರು, ಟಿ. ಎಂ. ಜಗನ್ನಾಥಂ ಮೊದಲಿಯಾರು, ಎಸ್. ಆರ್. ಪದ್ಮನಾಭಂ ಯವರು, ಬಿ. ಎ. ರಾಜರತ್ನಂ ಪಿಳ್ಳೆಯವರು.

ಮಿ॥ ಬಿ. ಶ್ರೀನಿವಾಸರಾಯರನ್ನು ಜುಲೈ ೧ ರಿಂದ ೩ನೇ ಕ್ಲಾಸ್ ಅ॥ ಕಮಿಷನರಾಗಿ ಖಾಯಂ ಮಾಡಿದೆ

ಮಿ॥ ಜಾರ್ಜ್ ರಾಡೆಲ್ಲಿಯವರು ಕಾಲವಾದ ಕಾರಣ ಮಿ॥ ಬಿ. ಸುಬ್ಬರಾಯ ರವರನ್ನು ಮೈಸೂರು ಭೂಗರ್ಭ ಇಲಾಖೆಯಲ್ಲಿ ಗಣಿಗಳ ಅಸಿಸ್ಟೆಂಟರಾಗಿ ತಾತ್ಕಾಲಿಕವಾಗಿ ನೇಮಕ ಮಾಡಿದೆ.

ತಾರ್ಸದವನಾದ ಪೌಲನು ಕ್ರೈಸ್ತಭಕ್ತನಾದದ್ದು.

[ಈ ವಿಷಯವನ್ನು ವಿವರವಾಗಿ ತಿಳಿಯಬೇಕಾದರೆ ಹೊಸ ಒಡಂಬಡಿಕೆ ಎಂಬ ಗ್ರಂಥದ ಅಪೋಸ್ತಲರ ಕೃತ್ಯಗಳೆಂಬ ಭಾಗದಲ್ಲಿ ೯ನೇ ಅಧ್ಯಾಯ ೧—೨೨ ವಚನಗಳನ್ನು ಓದಬಹುದು.]

ಕ್ರೈಸ್ತ ಮತವು ಮೊದಲ್ಗೊಂಡಲು ಯೆಹೂದ್ಯರ ಸೀಮೆಯಾದ ಪಾಲೆಸ್ತೀನ್ ಎಂಬ ದೇಶದ ದಕ್ಷಿಣ ಭಾಗದಲ್ಲಿ ಪ್ರಬಲವಾಯಿತು. ಇದರ ಏಳಿಗೆಯನ್ನು ನೋಡಿ ಯೆಹೂದ್ಯ ಮತಸ್ಥರು ಅಸೂಯೆಯುಳ್ಳವರಾಗಿ ಆ ಮತಸ್ಥರನ್ನು ಹಿಂಸಿಸ ತೊಡಗಿದರು. ಸ್ತೆಫನನೆಂಬವನೊಬ್ಬನನ್ನು ಕೊಂದುಹಾಕಿದರು. ಪೇತ್ರನೆಂಬ ಶಿಷ್ಯನನ್ನು ಸೆರೆಮನೆಯಲ್ಲಿ ಹಾಕಿ ಅವನನ್ನು ಕೊಲ್ಲಬೆದರಿಸಿದರು. ಹೀಗೆಲ್ಲಾ ಅವರಿಗೆ ಹಿಂಸೆಯುಂಟಾದದರಿಂದ ಕ್ರೈಸ್ತ ಭಕ್ತರಾದವರು ಯೆರೂಸಲೇಮು ಪಟ್ಟಣವನ್ನು ಬಿಟ್ಟು ದೂರ ದೇಶಗಳಿಗೆ ಓಡಿಹೋದರು. ಅವರು ಹೀಗೆ ಓಡಿಹೋದದರಿಂದ ಮತಕ್ಕೆ ನಷ್ಟವೇನೂ ಆಗಲಿಲ್ಲ. ಲಾಭವೇ ಆಯಿತು ಹ್ಯಾಗಂದರೆ ತಾವು ಹೋದ ಸ್ಥಳಗಳಲ್ಲೆಲ್ಲಾ ಅವರು ತಮ್ಮ ರಕ್ಷಕನಾದ ಯೇಸುಸ್ವಾಮಿಯನ್ನು ಕುರಿತು ಸಾರಿ ಹೇಳುತ್ತಿದ್ದರು. ಇದರ ದೆಸೆಯಿಂದ ಕ್ರೈಸ್ತ ಭಕ್ತರ ಗುಂಪು ಬೇರೆ ಬೇರೆ ದೇಶಗಳಲ್ಲಿ ಹೆಚ್ಚಿತು. ಕ್ರೈಸ್ತರನ್ನು ಹಿಂಸಿಸಿದವರೊಳಗೆ ಸೌಲನೆಂಬೊಬ್ಬ ಯೌವನಸ್ಥನಿದ್ದನು. ಹಿಂಸಕರು ಸ್ತೆಫನನೆಂಬ ಆ ಭಕ್ತನನ್ನು ಕಲ್ಲೆಸೆದು ಕೊಲ್ಲುವಾಗ ತಮ್ಮ ಬಟ್ಟೆಗಳನ್ನು ಈ ಸೌಲನ ಪಾದದಲ್ಲೇ ಇಟ್ಟಿದ್ದರು. (ಅ. ಕೃ. ೭ ೫೮; ೮ ೧ ನೋಡಿರಿ) ಇವನು ಮೊದಲ್ಗೊಂಡು ಹಿಂಸಕರ ಕಾರ್ಯಗಳ ವೇಗವನ್ನು ಹೆಚ್ಚಿಸಿದನು ಯೆರೂಸಲೇಮಿನಲ್ಲಿ ಸಿಕ್ಕಿದ ಕ್ರೈಸ್ತ ಸ್ತ್ರೀಪುರುಷರನ್ನೆಲ್ಲಾ ಹಿಡಿದು ಸೆರೆಯಲ್ಲಿ ಹಾಕಿದನು (ಅ. ಕೃ. ೮ ೩, ೪). ಇವನು ತಾರ್ಸವೆಂಬ ಊರಿನವನು. ಈ ಊರು ಸೌಲನು ಹುಟ್ಟಿದ ಕಾಲದಲ್ಲಿ ಬಹು ಪ್ರಖ್ಯಾತಿಯನ್ನು ಹೊಂದಿತ್ತು. ಪೂರ್ವ ಕಾಲದಲ್ಲಿ ಜಗತ್ತಿನ ವಾಸಿಯನ್ನು ನಡೆಸಿದ್ದ ರೋಮಾಯರೆಂಬ ಜನಗಳು ಪೂರ್ವ ದಿಗ್ದೇಶಗಳಲ್ಲಿ ಸ್ಥಾಪಿಸಿದ್ದ ಮುಖ್ಯ ಪಟ್ಟಣಗಳಲ್ಲಿ ಇದೂ ಒಂದು. ಈಗ ಈ ಊರಿನಲ್ಲಿ ೩೦,೦೦೦ ನಿವಾಸಿಗಳಿದ್ದಾರೆ. ಇಲ್ಲಿ ಗ್ರೀಕ್ ಭಾಷೆಯನ್ನೇ ಆಡುತಲಿದ್ದದರಿಂದ ಸೌಲನು ಕೇವಲ ಯೆಹೂದ್ಯನಾಗಿದ್ದರೂ ಅವನಿಗೆ ಗ್ರೀಕ್ ಭಾಷೆಯೇ ಸ್ವಾಭಾವಿಕವಾಗಿತ್ತು. ಅವನು ಯೆಹೂದ್ಯರಿಗೆಲ್ಲಾ ಮಹಾ ಕ್ಷೇತ್ರವಾಗಿದ್ದ ಯೆರೂಸಲೇಮಿಗೆ ಬಂದು ಗಮಾಲಿಯೇಲನೆಂಬ ಮಹಾ ಶಾಸ್ತ್ರಿಯ ಬಳಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಫರಿಸಾಯರೆಂಬ ಪಂಗಡದವರಲ್ಲಿ ಬಹು ಬಂಧಕವಾದ ಫರಿಸಾಯನಾಗಿ ಕೇವಲ ಆಚಾರಶೀಲನಾಗಿದ್ದನು. ಇದಲ್ಲದೆ ಯೆಹೂದ್ಯರಲ್ಲಿ ಗಂಡು ಮಕ್ಕಳಿಗೆ ಯಾವದಾದರೂ ಒಂದು ಕಸಬನ್ನು ಕಲಿಸಬೇಕೆಂಬ ಕಟ್ಟಳೆ ಇದ್ದದರಿಂದ ಆ ಕಟ್ಟಳೆಯ ಪ್ರಕಾರ ಚಿಕ್ಕಂದಿನಲ್ಲೇ ಸೌಲನು ಗುಡಾರಗಳನ್ನು ಮಾಡುವ ಉದ್ಯೋಗವನ್ನು ಕಲಿತುಕೊಂಡಿದ್ದನು. ವಿದ್ಯಾವಂತನೂ ಯೌವನಸ್ಥನೂ ಕೇವಲ ಮತಾಸಕ್ತನೂ ಆಗಿದ್ದ ಈ ಸೌಲನು ಹೊಸದಾಗಿ ಹರಡಿಕೊಳ್ಳುತ್ತಾ ಇದ್ದ ಕ್ರೈಸ್ತ ಮತವನ್ನು ನಾಶಮಾಡಬೇಕೆಂಬ ಆಶೆಯುಳ್ಳವನಾಗಿ ಯೆರೂಸಲೇಮಿನಲ್ಲಿದ್ದ ಕ್ರೈಸ್ತ ಭಕ್ತರನ್ನು ಹಿಂಸಿಸುವದು ಸಾಲದೆ ದೂರ ದೇಶಗಳಿಗೆ ಓಡಿಹೋದವರನ್ನೂ ಹಿಡಿದುಕೊಂಡು ಬರಬೇಕೆಂದು ನಿಶ್ಚಯ ಮಾಡಿಕೊಂಡು ದಮಸ್ಕವೆಂಬ ಪಟ್ಟಣಕ್ಕೆ ಹೊರಟನು. ಬಹು ಪುರಾತನವಾದ ಈ ಪಟ್ಟಣವು ಈಗಲೂ ಇದೆ. ಯೆರೂಸಲೇಮಿನಿಂದ ಅಲ್ಲಿಗೆ ಸುಮಾರು ೧೩೦ ಮೈಲು, ಐದಾರು ದಿವಸಗಳ ಪ್ರಯಾಣ. ಸೌಲನು ಹೊರಟ ಪ್ರಯಾಣದ ಕಡೇ ದಿನ ಪಟ್ಟಣವನ್ನು ಸಮೀಪಿಸುತ್ತಿರುವಾಗ ಫಕ್ಕನೆ ಆಕಾಶದಲ್ಲಿ ಒಂದು ಬೆಳಕು ಅವನ ಸುತ್ತಲೂ ಮಿಂಚಿತು. ಅವನು ನೆಲಕ್ಕೆ ಬಿದ್ದು—ಸೌಲನೇ, ಸೌಲನೇ ನನ್ನನ್ನು ಯಾಕೆ ಹಿಂಸಿಸುತ್ತೀ? ಎಂದು ತನಗೆ ಹೇಳಿದ ಒಂದು ವಾಣಿಯನ್ನು ಕೇಳಿದನು. ಅವನು—ಪ್ರಭುವೇ, ನೀನ್ಯಾರು? ಎಂದು ಕೇಳಿದ್ದಕ್ಕೆ ಪ್ರಭುವು—ನೀನು ಹಿಂಸೆಪಡಿಸುವ ಯೇಸುವೇ ನಾನು. ನೀನೆದ್ದು ಊರೊಳಕ್ಕೆ ಹೋಗು, ನೀನು ಮಾಡಬೇಕಾದದ್ದು ನಿನಗೆ ತಿಳಿಸಲ್ಪಡುವದು ಎಂದು ಹೇಳಿದನು [ಕ್ರೈಸ್ತರನ್ನು ಹಿಂಸಿಸುವದು ಕ್ರಿಸ್ತನನ್ನೇ ಹಿಂಸಿಸಿದ ಹಾಗಾಯಿತು. ಅವನ್ನು ಮತ್ತಾಯ ೨೫ ೪೦ ರಲ್ಲಿ ಹೇಳಿರುವ ಸ್ವಾಮಿಯ ವಾಕ್ಯವನ್ನು ಹೋಲಿಸಿ ನೋಡಿದರೆ ನಾವು ಹೇಳತಕ್ಕ ಮಾತು ಚೆನ್ನಾಗಿ ಬಯಲು ಪಡುವದು].

ಈ ದರ್ಶನವು ಸೌಲನಿಗೆ ತೋರಿದ ಬಳಿಕ ಅವನಿಗೆ ಕಣ್ಣು ಕಾಣದೆ ಹೋಯಿತು. ಜೊತೆಯಲ್ಲಿದ್ದವರು ಅವನ ಕೈ ಹಿಡಿದುಕೊಂಡು ಊರೊಳಕ್ಕೆ ಕರೆದುಕೊಂಡು ಹೋದರು. ಅವನು ಮೂರು ದಿವಸಗಳವರೆಗೂ ಕಣ್ಣು ಕಾಣದೆಯೂ ಅನ್ನ ನೀರು ಮುಟ್ಟದೆಯೂ ಬಿದ್ದಿದ್ದನು. ಹೀಗಿರುವಲ್ಲಿ ಆ ದಮಸ್ಕವೆಂಬ ಊರಿನಲ್ಲಿ ಅನನೀಯನೆಂಬ ಭಕ್ತನಿದ್ದನು. ಅವನಿಗೆ ದೇವರು ಕಾಣಿಸಿಕೊಂಡು—ನೀನೆದ್ದು ನೆಟ್ಟನೇ ಬೀದಿ ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬವನನ್ನು ಕುರಿತು ವಿಚಾರಿಸು, ಅವನು ದೇವರ ಪ್ರಾರ್ಥನೆ ಮಾಡುತ್ತಿದ್ದಾನೆ ಎಂದು ಹೇಳಿದನು. ಅದಕ್ಕೆ ಅನನೀಯನು—ಪ್ರಭುವೇ, ಆ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನ ಪವಿತ್ರರಾದ ಭಕ್ತರಿಗೆ ಎಷ್ಟೋ ಕೇಡನ್ನುಂಟುಮಾಡಿದನು ಎಂದು ಅವನ ವಿಷಯವಾಗಿ ಅನೇಕರಿಂದ ಕೇಳಿದೆನು. ಮತ್ತು ನಿನ್ನ ಹೆಸರನ್ನು ಸ್ಮರಿಸುವವರೆಲ್ಲರಿಗೂ ಬೇಡಿ ಹಾಕುವದಕ್ಕೆ ಮಹಾ ಯಾಜಕರಿಂದ ಇಲ್ಲಿಯೂ ಅಧಿಕಾರವನ್ನು ಹೊಂದಿ ಬಂದಿರುತ್ತಾನೆ ಅಂದನು. ಅದಕ್ಕೆ ಸ್ವಾಮಿಯು ಅವನಿಗೆ—ಆ ಮನುಷ್ಯನು ನನ್ನ ಹೆಸರನ್ನು ಅನ್ಯಜನರಿಗೂ ಅರಸುಗಳಿಗೂ ತಿಳಿಸುವದಕ್ಕೆ ನಾನು ಆರಿಸಿಕೊಂಡಿರುವ ಸಾಧನವಾಗಿರುವದರಿಂದ ನೀನು ಹೋಗಬೇಕು. ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಬಾಧೆ ಪಡಬೇಕೆಂಬುವದನ್ನು ನಾನೇ ಅವನಿಗೆ ತೋರಿಸುವೆನು ಎಂದು ಹೇಳಿದನು. ಅನನೀಯನು ಹೊರಟುಹೋಗಿ ಅವನ ಮೇಲೆ ಕೈಯಿಟ್ಟು—ಸಹೋದರನಾದ ಸೌಲನೇ, ನೀನು ಬರುತ್ತಿದ್ದ ದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಪ್ರಭುವಾಗಿರುವ ಯೇಸು ನಿನಗೆ ಕಣ್ಣು ಕಾಣುವಂತೆಯೂ ನೀನು ಪವಿತ್ರಾತ್ಮಭರಿತನಾಗುವಂತೆಯೂ ನನ್ನನ್ನು ಕಳುಹಿಸಿಕೊಟ್ಟಿದ್ದಾನೆ ಎಂದು ಹೇಳಿದನು. ಹೇಳಿದ ಕೂಡಲೆ ಅವನ ಕಣ್ಣು ಕಾಣಿಸಿದವು. ಅವನು ಪವಿತ್ರಾತ್ಮನನ್ನು ಹೊಂದಿ ದೀಕ್ಷಾಸ್ನಾನವನ್ನು ಪಡೆದನು. ಅವನು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಆ ಕ್ಷಣವೇ ಅವನು ದಮಸ್ಕದಲ್ಲಿರುವ ಯೆಹೂದ್ಯರ ಸಭಾಮಂದಿರಗಳಿಗೆ ಹೋಗಿ—ಯೇಸು ವಂಚಕನಲ್ಲ, ದೇವಕುಮಾರನಾದ ಮೆಸ್ಸೀಯನೇ, ಯಾಕಂದರೆ ಆತನು ಸತ್ತರೂ ಜೀವದಿಂದೆದ್ದು ನನಗೆ ಕಾಣಿಸಿಕೊಂಡಿದ್ದಾನೆ ಎಂದು ಸಾರಿ ಹೇಳಿದನು!

ಸೌಲನು ಕ್ರೈಸ್ತ ಭಕ್ತನಾದದ್ದು ಎಷ್ಟು ಆಶ್ಚರ್ಯ! ಕ್ರೈಸ್ತರನ್ನು ಹಿಂಸಿಸುತ್ತಿದ್ದವನೇ ಕ್ರಿಸ್ತನ ಭಕ್ತನಾದನು! ಯೇಸುಸ್ವಾಮಿಯ ಶತ್ರುವಾಗಿ ಅಹಂಕಾರದಿಂದ ಯೆರೂಸಲೇಮನ್ನು ಬಿಟ್ಟು ಹೊರಟವನು ಕುರುಡನಾಗಿ ಇತರರಿಂದ ನಡಿಸಲ್ಪಡುತ್ತಾ ಯೇಸುವನ್ನು ವಿರೋಧಿಸಿದುದರ ನಿಮಿತ್ತನಾಗಿ ಪಶ್ಚಾತ್ತಾಪದಿಂದಲೂ ನಾಚಿಕೆಯಿಂದಲೂ ತುಂಬಿದವನಾಗಿ ದಮಸ್ಕಕ್ಕೆ ಹೋದನು.

[redacted] ಉತ್ಪತ್ತಿಯಾಯಿತು ಬೆಸ್ತರ ಕೋಳಪ್ಪ ಎಂಬಾತನನ್ನು ಈ ಸ [redacted] ತ್ತಲಿನ ಜನರು ತಮ್ಮ ಗುರುವಾಗಿ ಭಾವಿಸಿ ಆತನು ಗದ್ದಿಗೆಯ [redacted] ಕೂತಿರುವಾಗ್ಯೆ ಆತನ ಪಾದಕ್ಕೆ ಬಿದ್ದು ದೇವರೆಂಬಂತೆ ಯಾಗಳನ್ನು ಕಾ [redacted] ಡುತ್ತಾರೆ. ಒಕ್ಕಲಿಗರ, ಗೌಡ ಲಿಂಗಾಯತರು, ಹೊಲೆಯರು [redacted] ಗಸರು ಮುಂತಾದವರೆಲ್ಲಾ ಕಾಣಿಕೆಗಳನ್ನು ಕೊಟ್ಟು ಸಾವಿರಾರು [redacted] ಳನ್ನು ಆತನ ಸುತ್ತು ತಿರುಗಿಸಿ, ಆ ಊರಿನ ತರ ಅಲ್ಲಿರುವ ಒಂದು ದೇ [redacted] ವನ್ನು ಪ್ರದಕ್ಷಿಣೆ ಮಾಡುತ್ತಾರೆ. ಈ ಜಾತ್ರೆಕಾಲದಲ್ಲಿ ಕೋಳಪ್ಪ [redacted] ಎರಡು ಸಾವಿರ ರೂಪಾಯಿ ಸರಿಗೂ ಸಿಕ್ಕುವದು ಅದರ [redacted] ಪೋಲೀಸಿನವರು ಬಹು ಮೊಹನತ್ತು ಮಾಡಿ ಈ ಜಾತ್ರೆಗೆ ಬಂದಿ [redacted] ರನ್ನು ಇಂಗಿತವರನ್ನೂ ಕಳ್ಳಕೊರಮರನ್ನೂ ಸೇರಿಸಲಿಲ್ಲ. [redacted] ಬಹುವಾಗಿದ್ದರು — ಈ ತಿಂಗಳು ೨ನೇ ತಾರೀಖಿನ ಸಾಯಂ [redacted] ಒಬ್ಬ ಗೌಡನು ಇಲ್ಲಿಗೆ ಸಮೀಪದಲ್ಲಿರುವ ತನ್ನ ಹೊಲದಲ್ಲಿ [redacted] ಮನೆಯಲ್ಲಿ ೧೩೦ ರೂಪಾಯಿ ಬಾಳುವ ಎರಡು ಎತ್ತುಗಳ [redacted] ಹಾಕಿ ಮನೆಗೆ ಬಂದು ಪುನಃ ಹೋಗಿ ನೋಡುವಲ್ಲಿ ಯಾರೋ [redacted] ಳ್ಳರು ಅವುಗಳನ್ನು ಬಿಚ್ಚಿಕೊಂಡು ಹೋಗಿದ್ದರು ಈ ವರೆಗೂ ಪತ್ತೆ ಇಲ್ಲ.

ಅನ್ಯಮತಸ್ಥರನ್ನು ಹಿಂಸಿಸಿದನೆಂಬ ಅಪರಾಧಕ್ಕೆ ಗುರಿಯಾಗಿದ್ದ ಈ ಸೌಲನಲ್ಲಿ ಕೆಲವು ಸುಗುಣಗಳು ಕಾಣಿಸುತ್ತಿದ್ದವು.

೧. ಅವನಲ್ಲಿ ಯಥಾರ್ಥತ್ವವು ಇತ್ತು. ಕ್ರಿಸ್ತನ ಮತವು ಸುಳ್ಳೆಂತಲೇ ಅವನು ನಂಬಿದ್ದನು. ಆದದರಿಂದಲೆ ಸೌಲನು ಕ್ರೈಸ್ತರನ್ನು ಹಿಂಸಿಸುವದು ಸರಿಯೆಂದು ನಿಶ್ಚಯಿಸಿಕೊಂಡನು. ಆದರೆ ಆ ಕ್ರೈಸ್ತ ಭಕ್ತರ ಸಹನವನ್ನೂ ಧೈರ್ಯವನ್ನೂ ಒಳ್ಳೇ ನಡತೆಯನ್ನೂ ನೋಡಿ ಅಂಥವರನ್ನು ಹಿಂಸಿಸುವದು ಸರಿಯಲ್ಲವೆಂದು ಅವನಲ್ಲಿ ತೋರಿರಲೇಬೇಕು. ಕ್ರಿಸ್ತನು ಮೆಸ್ಸೀಯನಾಗಿದ್ದರೂ ಇರಬಹುದು ಎಂದು ಅವನು ಅನುಮಾನಪಡುತ್ತಿದ್ದಿರಬೇಕು. ದೇವರು ಅವನ ಮೇಲೆ ಕನಿಕರವಿಟ್ಟು ಆಶ್ಚರ್ಯಕರವಾಗಿ ದರ್ಶನವನ್ನು ಕೊಟ್ಟು ಅವನ ಸಂಶಯಗಳನ್ನೆಲ್ಲಾ ಪರಿಹರಿಸಿದನು. ಸತ್ಯವನ್ನು ನಿರ್ವಂಚನೆಯಿಂದ ಹುಡುಕುವವರೆಲ್ಲರಿಗೆ ದೇವರು ತಿಳುವಳಿಕೆಯನ್ನು ದಯಪಾಲಿಸುವನೆಂದು ಈ ಚರಿತ್ರೆಯಿಂದ ಗೊತ್ತಾಗುತ್ತದೆ.

೨. ಅವನಲ್ಲಿ ವಿಧೇಯತ್ವವೂ ಪ್ರಯಾಸವೂ ಇತ್ತು. ತನಗೆ ಸರಿಯೆಂದು ತೋರಿದ್ದನ್ನೆಲ್ಲಾ ಸೌಲನು ಪೂರ್ಣ ಶಕ್ತಿಯಿಂದ ಆಯಾ ಕ್ಷಣವೇ ಮಾಡುತ್ತಿದ್ದನು. ದೇವರು ಅಪ್ಪಣೆಯನ್ನು ಕೊಟ್ಟಕೂಡಲೆ ದಮಸ್ಕದಲ್ಲಿರುವ ಯೆಹೂದ್ಯರಿಗೆ ಅವನು ಧರ್ಮಬೋಧನೆಯನ್ನು ಮಾಡಲುದ್ಯುಕ್ತನಾದನು.

೩. ಅವನಲ್ಲಿ ದೇವರ ಸೇವೆಯನ್ನು ಮಾಡುವದಕ್ಕೆ ಯೋಗ್ಯವಾದ ಸಾಮರ್ಥ್ಯವೂ ಇತ್ತು. ಈತನು ಅನ್ಯಜನಾಂಗದವರಿಗೆ ಧರ್ಮಬೋಧಕನಾಗಬೇಕೆಂದು ದೇವರು ಸಂಕಲ್ಪಿಸಿದ್ದನು. ಇದಕ್ಕೆ ತಕ್ಕ ಯೋಗ್ಯತೆಯೂ ಅವನಲ್ಲಿದ್ದಿತು. ಗ್ರೀಕ್ ಭಾಷೆಯನ್ನು ಬಲ್ಲವನು, ಅನ್ಯದೇಶದಲ್ಲೇ ವಾಸಿಸುತ್ತಿದ್ದವನು, ಯೆಹೂದ್ಯ ಮತಗ್ರಂಥಗಳನ್ನು ಚನ್ನಾಗಿ ಓದಿದವನು.

ಹೀಗೆ—ದೇವರ ಸೇವೆಯನ್ನು ಮಾಡಬೇಕೆಂದಿರುವವರಲ್ಲಿ ಯಥಾರ್ಥತ್ವವೂ ವಿಧೇಯತ್ವವೂ ಪ್ರಯಾಸವೂ ತಕ್ಕ ಸಾಮರ್ಥ್ಯವೂ ಇರಬೇಕೆಂದು ತಿಳಿಯತಕ್ಕದ್ದು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿತವಾದ ಸಾಮಾನ್ಯ ವಿಷಯಗಳು.

ನ್ಯಾಯಸ್ಥಾನವಿಚಾರಗಳು.

ಎಲ್ಲಾ ಪ್ರತಿನಿಧಿಗಳೂ ಏಕವಾಗಿ ಬಂದು ದಿವಾನರವರನ್ನು ಕುರಿತು—ಕ್ರೈಸ್ತಮತಕ್ಕೆ ಸೇರಿಕೊಳ್ಳುವ ಪ್ರಜೆಗಳಿಗೆ ಅವರ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲುಕೊಡಬೇಕೆಂಬುದಾಗಿ ನಮ್ಮ ಗವರ್ನಮೆಂಟಿನವರು ಕಾನೂನು ಮಾಡುವವರಾಗಿದ್ದಾರೆಂದು ತಿಳಿದು ಬಂದಿದೆ. ಇಂಥಾ ಕಾನೂನು ನಮ್ಮ ಸಂಸ್ಥಾನಕ್ಕೆ ಜಾರಿಗೆ ಬಾರದಂತೆ ಕಾಪಾಡಬೇಕು. ಅದರಿಂದ ನಮ್ಮ ಹಿಂದು ಮತ್ತು ಮುಸಲ್ಮಾನ ಪ್ರಜೆಗಳ ಮತಕ್ಕೂ ಆಚಾರ ವಿಚಾರಗಳಿಗೂ ಲೋಪವುಂಟಾಗುವದು ನಮ್ಮ ಮತಗಳು ಕ್ಷೀಣವಾಗುವವು. ಪ್ರಜೆಗಳು ವಿಶೇಷವಾಗಿ ಕ್ರೈಸ್ತಮತವನ್ನು ಅವಲಂಬಿಸುವದಕ್ಕೆ ಪ್ರೋ ಗುತ್ತದೆ. ನಮ್ಮ ಸಂಸ್ಥಾನವು ಹಿಂದು ಮತವಾದಿಯ ಳನ್ನೂ ಅವುಗಳ ಆಚಾರ ವಿಚಾರಗಳನ್ನೂ ಆಪೇಕ್ಷೆಯಿಂದ ಕಾಪಾಡಿ ಉದ್ಧಾರಮಾಡಿಕೊಂಡು ಬಂದಿರುತ್ತದೆ. ನಮ್ಮ ಜನರು ನಮ್ಮನ್ನೂ ನಮ್ಮ ಮತವನ್ನೂ ಕಾಪಾಡಿಕೊ ಬೇಕೆಂದು ಬೇಡುತ್ತೇವೆ. ಈ ಕಾನೂನು ಜಾರಿಗೆ ಬಂ ಅನರ್ಥಗಳುಂಟಾಗಲು ಅವಕಾಶವಾದೀತು. ಜಾತಿಬಿಟ್ಟು ತಿಯನ್ನು ಸೇರಿಕೊಳ್ಳುವವರಿಗೆ ಪಾಲುಕೊಡಬೇಕೆಂ ಶಾಸ್ತ್ರಸಮ್ಮತವಾದದ್ದಲ್ಲ. ಅದು ಆಚಾರಕ್ಕೂ ವಿರುದ್ಧ ಇಷ್ಟಕ್ಕೂ ಇಂಥಾ ಅಪೂರ್ವವಾದ ಮತ್ತು ಬಹುಪ್ರಜಾ ಲ್ಲದ ಕಾನೂನನ್ನು ಜಾರಿಗೆ ತರಬೇಕೆಂಬ ಆವಶ್ಯಕತೆಯೂ ವಿಲ್ಲ ಎಂಬೀ ರೀತಿಯಾಗಿ ಅರಿಕೆ ಮಾಡಿಕೊಂಡರು.

ದಿವಾನರವರು—ನಿಮ್ಮ ಅಭಿಪ್ರಾಯಗಳೇನೋ ಸರಿಯಾ ವಿಸ್ತಾರವಾಗಿಯೂ ಸ್ಪಷ್ಟವಾಗಿಯೂ ಹೇಳಿರುವಿರಿ. ನೀ ಷಯನ್ನೆಲ್ಲಾ ನಿಧಾನವಾಗಿ ಕೇಳುವದಕ್ಕೆ ಸಿದ್ಧರಾಗಿದ್ದೇವೆ. ನೀವು ಈಗ ಹೇಳುವದನ್ನು ನೋಡಿದಲ್ಲಿ ನಿಮಗೆ ಆ ಹ್ಯಾಗಿದೆ ಎಂಬುವದಾಗಲಿ ಅದರಲ್ಲಿ ಯಾವ ಯಾವ ಭಾಗವ ಕಿಸಿದ್ಧವೆಂಬುದಾಗಲಿ ಸ್ವಲ್ಪವೂ ತಿಳಿದಿರುವಂತೆ ಕಾಣ ಈಗ ಅದರ ಮಸೂದೆಯು ಸಿದ್ಧವಾಗಿದೆ. ಅದನ್ನು ಒಂದೆ ಗಳಲ್ಲೇ ಅಚ್ಚುಹಾಕಿ ಮೈಸೂರು ಗೆಜೆಟ್ಟಿನ ವಿಶೇಷ ಪತ್ರಿ ಪ್ರಕಟಿಸುತ್ತೇವೆ. ನೀವುಗಳೆಲ್ಲಾ ಅದರಲ್ಲಿರುವ ಕಲಮು ಓದಿ ಗ್ರಹಿಸಿಕೊಂಡ, ಆತರುವಾಯ ನಿಮ್ಮ ಅಭಿಪ್ರಾಯ ಧಾರಾಳವಾಗಿ ತಿಳಿಸಿದರೆ ಗವರ್ನಮೆಂಟಿನವರು ಪ್ರಯೋಜ ಮಾಡಿ, ಸರ್ವರಿಗೂ ಸಹಜವೂ ನ್ಯಾಯಬದ್ಧವೂ ಆದ ರೀ ಅದನ್ನು ಬದಲಾಯಿಸಿ, ಜಾರಿಯಲ್ಲಿ ತರುವರು ಎಂಬು ತಿಳಿಸಿದರು. [ಅದೇ ಪ್ರಕಾರ ಈ ಮಸೂದೆ ಕಾನೂ ಪ್ರಕಟಿಸಿದರು. ಅದನ್ನೂ ಅದರ ವಿಷಯದಲ್ಲಿ ನಮ್ಮ ಅಭಿ ವನ್ನೂ ಸರ್ವ ವಾಚಕರೆಲ್ಲಾ ಆಗಲೇ ಓದಿ ತಿಳಿದಿದ್ದಾರೆ.]

ಮೆ॥ ಬಾಲಕೃಷ್ಣರಾಯರು—ಸರ್ವ ಸಂಸ್ಥಾನದಲ್ಲಿ ಯ ಮತ್ತು ಮೈಸೂರಿಗೂ ಪ್ರೆಸಿಡೆನ್ಸಿಗೂ ಮೈನರುಗಳ ವಿಷಯದಲ್ಲೂ ಅವರ ಆಸ್ತಿಯ ವಿಚಾರದಲ್ಲೂ ಕಾನೂನು ನಿಷ್ಕೃಷ್ಟವಾದದ್ದಾಗಿಲ್ಲ. ಇದರಿಂದ ನಾನಾ ಗಳಿಗೆ ಕಾರಣವಾಗಿದೆ. ಬ್ರಿಟಿಷ್ ಇಂಡಿಯಾದಲ್ಲಿ ಜಾರಿ ಲ್ಲಿರುವಂತೆ ಆ ಕಾನೂನನ್ನು ಬದಲಾವಣೆ ಮಾಡಿಕೊಡಬೇ

ದಿವಾನರವರು—ಈ ಕಾನೂನು ಬದಲಾವಣೆ ಆಗಬೇ ಬಹುದು ಇದನ್ನು ನಾವೂ ಒಪ್ಪಿಕೊಳ್ಳುತ್ತೇವೆ. ಜಾಗ್ರ ಈ ವಿಷಯಕ್ಕೆ ಗಮನಕೊಡುವೆವು.

ಮೆ॥ ಲಂಗ್ಯಯಂಗಾರರು—ಬ್ರಿಟಿಷ್ ಇಂಡಿಯಾದ ಟ್ರಸ್ಟ್ ಮತ್ತು ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಸ್ವಾತ್ಯ ಪರಾಧೀನತೆಯ ವಿಷಯವಾದ ಕಾನೂನಿನಲ್ಲಿ ಸಂಸ್ಥಾನಕ್ಕೆ ಅನುಕೂಲವಾಗಿರುವ ಬದಲಾವಣೆಗಳನ್ನು ಜಾರಿಗೆ ತರಬೇಕು. ಈಗ ಇದಿಲ್ಲದಿರೋದರಿಂದ ನೀಳುವ ತೀರ್ಮಾನಗಳು ಅಸಮಂಜಸವಾಗಿರುವವು.

ದಿವಾನರವರು—ಈ ಕಾನೂನಿನ ಯಾವಯಾವ ಸೆಕ್ಷನ್ ನಮ್ಮ ಸಂಸ್ಥಾನದಲ್ಲಿ ಜಾರೀಲಿ ತರಬಹುದೋ ಪಯಿ ಗೆ ಬರೆದುಕೊಂಡು ಆಲೋಚನೆ ಮಾಡುತ್ತೇವೆ.

ಮೆ॥ ಬಾಲಕೃಷ್ಣರಾಯರು—ಸ್ಟ್ಯಾಂಪ್ ಆಕ್ಟಿನ ೩೫ ೪೦ (ಬಿ) ಎಂಬೀ ಸೆಕ್ಷನ್‌ಗಳನ್ನು ಗವರ್ನಮೆಂಟಿನವರು ವಣೆ ಮಾಡಿಕೊಡಬೇಕು. ಬಾಲೀಕಾಗದದ ದಸ್ತಾವೇಜು ಮುಂತಾದವುಗಳನ್ನು ಕೋರ್ಟು ಕಛೇರಿಗಳಿಗೆ ಹಾಜರುಮಾಡಿ ೫ ದಂಡ ಇಲ್ಲವೇ ಹತ್ತರಷ್ಟು ಸ್ಟ್ಯಾಂಪನ್ನು ವಸೂಲ್ ಮಾಡಬೇಕೆಂಬು ಈ ಸೆಕ್ಷನ್‌ಗಳಲ್ಲಿ ವಿಧಾಯಕವಾಗಿದೆ. ಹತ್ತರಷ್ಟು ಸ್ಟ್ಯಾಂ ಕೊಡುವದೆಂದರೆ ಬಹಳ ಕಷ್ಟವಾಗುತ್ತೆ. ಹತ್ತರಷ್ಟಕ್ಕೆ ಮೊಬಲಗನ್ನು ವಸೂಲುಮಾಡಬಹುದೆಂದು ಕಾನೂನು ಬದಲಾ ಕೊಡಬೇಕು. ಮೊದಲಿದ್ದ ಕಾನೂನಿನಲ್ಲಿ ಅದಕ್ಕೆ ಅವಕಾಶವಿ

ದಿವಾನರವರು—ಇದಕ್ಕೆ ಮೊದಲಿದ್ದ ಕಾನೂನಿನಲ್ಲಿ ಹೇಳುವಂತೆ ಅವಕಾಶವಿತ್ತು. ಆದರೆ ಅದನ್ನು ಯಾಕೆ ಬದಲಾ ಸಿದರೋ ಕಾರಣ ತೋರಿಸಿದರೆ ಈಗಲೂ ಪೂರ್ವದಂತೆ ಯಿಸಿ ಕೊಡುತ್ತೇವೆ. ಇಲ್ಲವಾದರೆ ನಿಮ್ಮ ವಿಜ್ಞಾಪನೆ ನಾವು ಕೇಳುವುದಿಲ್ಲ.

ಚಿತ್ರದುರ್ಗದ ಹನುಮಂತಪ್ಪನವರು—ಈ ಸಂಸ್ಥಾ ಮುನ್ಸಿಫ್ ಕೋರ್ಟುಗಳು ನಿರ್ಮಾಣವಾಗುವದಕ್ಕಿಂತ ಮುಂಚೆ ನ್ಯಾಯ ವಿಚಾರಕ್ಕೆ ಸಂಬಂಧಪಟ್ಟ ಸಿವಿಲ್ ಸ್ವಭಾವದ ವ್ಯಾ ಗಳನ್ನು ಅಮಲ್ದಾರರುಗಳೇ ತನಿಖೆಮಾಡಿ ಫೈಸಲ್ ಕೊಡುತ್ತಿ ಅದರಿಂದ ಪಕ್ಷಗಾರರಿಗೆ ಬಹಳ ಸುಗಮವಾಗಿತ್ತು. ಈಗ ಪಕ್ಷಗಾರರು ಸಾಕ್ಷಿಗಳನ್ನು ಕಟ್ಟಿಕೊಂಡು ಮುನ್ಸಿಫ್ ಕೋ ಗಳಿಗೆ ಬಹುದೂರ ಅಲೆದು ನಾನಾ ಕಷ್ಟ ನಷ್ಟಗಳಿಗೆ ಗುರಿ ಬೇಕಾಗಿದೆ. ಪೂರ್ವದಲ್ಲಿದ್ದಂತೆ ಅಮಲ್ದಾರರಿಗೆ ಅಧಿಕಾ ದರೆ ರೈತಪ್ರಜೆಗಳು ಸುಖವಾಗಿದ್ದಾರು.

ದಿವಾನರವರು—ಈ ವಿಷಯ ಕಳೆದ ೧೮೯೯ನೆ ವರ್ಷ ಸಭೆಯಲ್ಲಿ ಚರ್ಚೆಯಾಯಿತು. ನೀವು ಕೇಳುವಂತೆ ಬದ ಮಾಡಲಾಗುವದಿಲ್ಲವೆಂತಲೂ ಅದು ಅವಶ್ಯವಿಲ್ಲವೆಂದೂ ತೀರ್ಮಾನ ಮಾಡಲಾಗಿದೆ. ಪುನಃ ಈ ವಿಷಯವನ್ನು ತೆಗೆ ಬಾರದು

ಶ್ರೀರಂಗಪಟ್ಟಣದ ವೆಂಕಟಕೃಷ್ಣಯ್ಯನವರು—ಸಿವಿಲ್ ಮೆಗಳಲ್ಲಿ ಪ್ರತಿವಾದಿಯು ತಕರಾರು ಹಾಕದೆ ಕೋರ್ಟಿ

ಪಾದಿಸು ಸಂಗಡ ರಾಜೀನಾಮೆ ಕೊಡುತ್ತು, ಕೋರ್ಟಿಗೆ ತಿಳಿಸಿ ಮೊಕದ್ದಮೆ ವಜಾ ಆದರೆ ಅರ್ಧಸ್ಟಾಂಪನ್ನು ವಾಪಸ್ ಬಿಡುವಂತೆ ರೂಲ್ಸನ್ನು ಬದಲಾಯಿಸಿಕೊಡಬೇಕು.

ದಿವಾನರವರು—ಒಳ್ಳೇದು, ಈ ಸಂಗತಿಯನ್ನು ವಿಚಾರಿಸಿ ನೋಡುತ್ತೇವೆ.

ಅದೇ ಮೆಂಬರು—ಪ್ಲೀಡರುಗಳಲ್ಲಿ ೨ ತರಗತಿಗಳಿರುತ್ತವೆ. ಭೇದವನ್ನು ತೆಗೆದು ಒಂದೇ ಮಾಡಬೇಕು. ಇಲ್ಲವಾದರೆ ಈಗಿರುವ ೨ನೆ ಗ್ರೇಡ್ ಪ್ಲೀಡರುಗಳು ಸಬ್ ಜಡ್ಜರ ಕೋರ್ಟುಗಳಲ್ಲಿ ಒರಿಜಿನಲ್ ಮತ್ತು ಸ್ಮಾಲ್ ಕಾಸ್ ಮೊಕದ್ದಮೆಗಳನ್ನು ಹಿಡಿದು ವಾದಿಸಬಹುದೆಂಬ ರಿಯಾಯತಿ ತೋರಿಸಬೇಕು. ಈಗ ಅನೇಕ ೨ನೆ ಗ್ರೇಡ್ ಪ್ಲೀಡರುಗಳು ತುಂಬಾ ಕಷ್ಟಕ್ಕೆ ಗುರಿಯಾಗಿದ್ದಾರೆ.

ದಿವಾನರವರು—ವಕೀಲರ ಯೋಗ್ಯತೆಯನ್ನೂ ವಿದ್ಯಾಶಕ್ತಿಯನ್ನೂ ದಿನೇ ದಿನೇ ವೃದ್ಧಿಪಡಿಸಬೇಕೆಂಬುದು ಗವರ್ನಮೆಂಟಿನವರಿಗೂ ಪ್ರಜೆಗಳಿಗೂ ಉದ್ದೇಶವಾಗಿರುವಲ್ಲಿ ನೀವು ಹೇಳುವ ಬದಲಾವಣೆಯು ಅವಶ್ಯವಾದದ್ದೆಂದಾಗಲಿ ಸಹಜವಾದದ್ದೆಂದಾಗಲಿ ಒಪ್ಪಲಾರೆವು.

ಶ್ರೀ ರಂಗಯ್ಯಂಗಾರರೂ ಮೆ॥ ಮಾದಪ್ಪನವರೂ—ಮೈಸೂರು ಲ್ಯಾಂಡ್ ರವಿನ್ಯೂ ಕೋಡಿನ ೫೪ನೆ ಸೆಕ್ಷನ್ ಇನಾಂದಾರರಿಗೂ ಸಂಬಂಧಪಡತಕ್ಕದ್ದೆಂದು ಬದಲಾವಣೆಯಾಗಬೇಕು. ಇನಾಮತಿ ಭೂಮಿಯ ಕಂದಾಯವನ್ನು ಇನಾಂದಾರರು ತಮ್ಮ ರೈತರಿಂದ ವಸೂಲ್ಮಾಡಿಕೊಳ್ಳುವ ವಿಷಯದಲ್ಲಿ ತೊಂದರೆಯಾಗಿದೆ.

ದಿವಾನರವರು—ಈ ವಿಚಾರ ಹೋದವರುಷವೂ ಇಲ್ಲಿ ಚರ್ಚೆಯಾಯಿತು ಈ ವರುಷ ಪರ್ಯಾಲೋಚನೆ ಮಾಡಿ ತೀರ್ಮಾನ ಮಾಡುತ್ತೇವೆ

ಚಾಮರಾಜನಗರದ ಮೆ॥ ಲಕ್ಷ್ಮೀನರಸಿಂಹಾಚಾರ್ಯರು—ನಮ್ಮ ಸಂಸ್ಥಾನದಲ್ಲಿ ದುಡಿಯುವುದಕ್ಕೆ ಶಕ್ತಿಯುಳ್ಳ ಜನರೂ ಭಿಕ್ಷವೇತಿ ಹೊಟ್ಟೆಹೊರೆದುಕೊಳ್ಳುತ್ತಾರೆ. ಇವರ ಸಂಖ್ಯೆ ದಿನೇದಿನೇ ವೃದ್ಧಿಯಾಗುತ್ತಲೇ ಬಂದಿದೆ ಇದರಿಂದ ಸೋಮಾರಿಗಳು ಹೆಚ್ಚಿ ಜಮೀನುಗಳು ಪಾಳುಬೀಳುವುದಕ್ಕೂ ವ್ಯವಸಾಯವು ಕ್ಷೀಣವಾಗುವುದಕ್ಕೂ ಕಾರಣವಾಗಿದೆ ಈ ಜನರು ಸುಗ್ಗಿ ಕಾಲದಲ್ಲಿ ಜಮೀನುಗಳ ಮೇಲೆ ಹೊರಟು, ಅಲ್ಪಸ್ವಲ್ಪ ಬೆಳೆದ ರೈತರನ್ನೂ ಹಿಂಸಿಸಿ ಅವರ ಅನ್ನವನ್ನು ಕಿತ್ತುಕೊಳ್ಳುತ್ತಾರೆ. ಇವರಿಂದ ನಮ್ಮ ದೇಶವು ಅಭಿವೃದ್ಧಿ ಹೊಂದುವುದಕ್ಕೆ ತುಂಬಾ ಅಡಚಣೆಯಾಗಿದೆ. ಕುಂಗಲರೂ ಲಂಗಟೀಸರೂ ವಿನಹಾ ಉಳಿದವರ್ಯಾರೂ ನಮ್ಮ ಸಂಸ್ಥಾನದಲ್ಲಿ ಭಿಕ್ಷ ಬೇಡಕೂಡದೆಂದು ಕಟ್ಟುಮಾಡಿ, ಅಂಥವರನ್ನು ಶಿಕ್ಷಿಸುವಂತೆ ಕಾನೂನ್ ಜಾರಿಯಲ್ಲಿ ತರಬೇಕು. ಇತರ ದೇಶಗಳಲ್ಲಿ ಇಂಥಾ ಕಾನೂನು ಇರೋಣದರಿಂದ ಅನೇಕ ಪ್ರಯೋಜನಗಳು ಉಂಟಾಗಿವೆ ಎಂಬುವುದನ್ನು ನಾವೆಲ್ಲಾ ಓದಿಯೂ ಕೇಳಿಯೂ ಇದ್ದೇವೆ.

ದಿವಾನರವರು—ಇತರ ದೇಶಗಳಲ್ಲಿ ಇಂಥಾ ಕಾನೂನು ಇದೆ ಆದರಂತೆ ಅಲ್ಲಿನ ಪ್ರಜೆಗಳು ಬಡವರನ್ನು ಸಂಕುವುದಕ್ಕೆ ಪ್ರತ್ಯೇಕವಾದ ತೆರಿಗೆಯನ್ನೂ ಕೊಡುತ್ತಿದ್ದಾರೆ. ನಮ್ಮ ದೇಶದಲ್ಲಿ ಭಾವನಾಪೂರ್ವಕವಾಗಿ ದಾನಧರ್ಮ ಮಾಡುವುದು ಅನಾದಿಯಾದ ಪದ್ಧತಿ. ಗ್ರಾಮಾಂತರಗಳಲ್ಲಿ ಧರ್ಮಚಿತ್ತವೃತ್ತಿಯುಳ್ಳವರು ಇಲ್ಲದಿದ್ದರೆ ನೀವು ಹೇಳುವಂಥಾ ಕಾನೂನು ಜಾರಿಗೆ ತರಲೂ ಬಹುದು, ಅದಕ್ಕೆ ತಕ್ಕಂತೆ ನೀವುಗಳೆಲ್ಲಾ ತೆರಿಗೆಯನ್ನೂ ಕೊಡಬೇಕಾಗುತ್ತದೆ. ಆದರೂ ಈಗಿನ ಸ್ಥಿತಿಯಲ್ಲಿ ಇದು ಸಾಧ್ಯವಾದ ಸಂಗತಿಯಲ್ಲ.

ಮೆ॥ ವೆಂಕಟಕೃಷ್ಣಯ್ಯನವರೂ ಮೆ॥ ಅಂಬಳೀ ಪಂಡಿತರೂ—ಪೂರ್ವದಲ್ಲಿ ೮ ವರುಷಕ್ಕಿಂತಲೂ ಚಿಕ್ಕವಯಸ್ಸಿನ ಹೆಣ್ಣುಮಕ್ಕಳಿಗೆ ಮದುವೆ ಮಾಡುತ್ತಿದ್ದ ಕೆಟ್ಟಪದ್ಧತಿ ಇತ್ತು. ಲೇಟ್ ಮಹಾರಾಜರವರು ಕೃಪೆಯನ್ನಿಟ್ಟು ಒಂದು ಕಾನೂನುಮಾಡಿ ಬಾಲ್ಯವಿವಾಹಗಳನ್ನು ನಿಲ್ಲಿಸಿದರು. ಈ ಕಾನೂನು ಜಾರಿಯಲ್ಲಿ ಬಂದು ತುಂಬಾ ದಿನಗಳಾದವು ಈಗ ಗವರ್ನಮೆಂಟಿನವರು ಅದನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆಮಾಡಿ, ಪ್ರಜೆಗಳು ತಮ್ಮ ಹೆಣ್ಣುಮಕ್ಕಳಿಗೆ ೧೦ ವರುಷ ತುಂಬುವುದಕ್ಕೆ ಮುಂಚೆಯೂ, ಗಂಡುಮಕ್ಕಳಿಗೆ ೨೦ ವರುಷವಾಗುವುದಕ್ಕೆ ಮುಂಚೆಯೂ ವಿವಾಹಮಾಡಕೂಡದೆಂದು ವಿಧಿಸಬೇಕಾಗಿ ಪ್ರಾರ್ಥಿಸುತ್ತೇವೆ ಇದರಿಂದ ನಮ್ಮ ದೇಶದ ಬಾಲಕರು ಸಾಂಗವಾಗಿ ವಿದ್ಯಾಭ್ಯಾಸಮಾಡುವುದಕ್ಕೂ ದೃಢಾಂಗಿಗಳಾಗುವುದಕ್ಕೂ ತುಂಬಾ ಸಹಾಯವಾಗುವುದು. ಇದಲ್ಲದೆ ಋತುಶಾಂತಿ ಪ್ರಸ್ತವನ್ನು ಹೆಣ್ಣುಮಕ್ಕಳಿಗೆ ೧೪ ಅಥವಾ ೧೬ ಸಂವತ್ಸರಗಳು ತುಂಬುವ ವರೆಗೆ ಮಾಡದಂತೆ ಆಜ್ಞೆಯಾಗಬೇಕು. ಈ ಸಂಸ್ಥಾನದ ಪ್ರಜೆಗಳು ಇತರ ಕಡೆಗಳಿಗೆ ಹೋಗಿ ಬಾಲ್ಯವಿವಾಹವನ್ನು ಮಾಡಿಯೋ ಮಾಡಿಕೊಂಡೋ ವಾಪಸು ಬರುತ್ತಾರೆ. ಅಂಥವರನ್ನು ಕೂಡ ಹಿಡಿದು ಶಿಕ್ಷೆಮಾಡುವಂತೆ ಆ ಕಾನೂನನ್ನು ಬದಲಾವಣೆ ಮಾಡಬೇಕು.

ದಿವಾನರವರು—ಈ ವಿಷಯದಲ್ಲಿ ಇತರ ಮೆಂಬರುಗಳ ಅಭಿಪ್ರಾಯವೇನೆಂಬುದನ್ನು ತಿಳಿಯಬಯಸುತ್ತೇವೆ.

ಮೆ॥ ಬಲವಂತರಾಯರು—ಮಹಾಸ್ವಾಮಿ, ಈಗ ಮಾಡಿರುವ ನಿರ್ಬಂಧವೇ ಸಾಕಾಗಿದೆ ವಿವಾಹದ ವಿಷಯದಲ್ಲಿ ಇನ್ನೂ ಹೆಚ್ಚಿಗೆ ನಿರ್ಬಂಧವನ್ನು ಕಲ್ಪಿಸುವುದು ಸರಿಯಲ್ಲ.

ಇತರ ಬಹು ಮಂದಿ ಮೆಂಬರುಗಳು—ಸ್ವಾಮಿ, ಕಾನೂನನ್ನು ಬದಲಾವಣೆ ಮಾಡಬೇಕು. ನಮ್ಮ ದೇಶದ ಏಳಿಗೆಗೆ ಅದು ತುಂಬಾ ಸಹಕಾರಿಯಾದದ್ದು. ಆಗತ್ಯವಾಗಿ ಮಾಡಬಹುದು.

ದಿವಾನರವರು—ಒಳ್ಳೇದು; ಎಷ್ಟು ಮಟ್ಟಿಗೆ ಬದಲಾಯಿಸಬಹುದೋ ಯೋಚಿಸುತ್ತೇವೆ.

ಮೆ॥ ಗೋಪಾಲಯ್ಯನವರು—ಸರ್ಕಾರಿ ನೌಕರರ ಪೈಕಿ ೩೦ ರೂ. ಒಳಗೆ ಸಂಬಳವುಳ್ಳವರು ಮದುವೆ ಮುಂತಾದ ಗೃಹಕೃತ್ಯಕ್ಕೆ ಸಂಬಂಧಪಡುವ ವಿಶೇಷ ಖರ್ಚಿಗಾಗಿ ಸಾಹುಕಾರರಿಂದ ಶೇಕಡಾ ೨ ರೂ. ನಂತೆ ಬಡ್ಡಿ ಕೊಟ್ಟು ಸಾಲ ತರುತ್ತಾರೆ. ಇದರಿಂದ ಅವರಿಗೆ ತುಂಬಾ ಕಷ್ಟನಷ್ಟಗಳುಂಟಾಗುವವು. ಗವರ್ನಮೆಂಟಿನವರು ಅಂಥಾ ಅಲ್ಪ ನೌಕರರಿಗೆ ಸುಲಭ ಬಡ್ಡಿಗೆ ಅಲ್ಪಸ್ವಲ್ಪ ಸಾಲ ಕೊಡಿಸಿ, ಕಾಪಾಡಬೇಕಾಗಿದೆ.

ದಿವಾನರವರು—ನಿಮಗ್ಯಾಕೆ ಈ ವಿಚಾರ? ಆಗುವುದಿಲ್ಲ.

ಮೆ॥ ವೆಂಕಟಪ್ಪನವರು—ಡಿಕ್ರಿ ಆದ ಒಂದು ವರುಷದೊಳಗೆ ಪ್ರತಿವಾದಿಯು ಡಿಕ್ರಿ ಹಣವನ್ನು ವಾಪತಿ ಮಾಡದಿದ್ದರೆ ಸಿವಿಲ್ ಕೋರ್ಟಿನವರು ಅವನಿಗೆ ನೋಟೀಸ್ ಕೊಟ್ಟು ಹಣ ಪಾವತಿಮಾಡಬೇಕೆಂದು ತಿಳಿಸುತ್ತಾರೆ ಅವನು ಈ ನೋಟೀಸ್ ಹೋದಕೂಡಲೇ ತನ್ನ ಆಸ್ತಿಯನ್ನು ಪರಾಧೀನಮಾಡಿ, ಡಿಕ್ರಿದಾರನನ್ನು ಮೋಸಮಾಡುತ್ತಾನೆ. ಆದ್ದರಿಂದ ಅವನಿಗೆ ನೋಟೀಸ್ ಕೊಟ್ಟು ಎಚ್ಚರಿಸುವುದನ್ನು ತಪ್ಪಿಸಬೇಕು.

ದಿವಾನರವರು—ಇದು ಆಗತಕ್ಕದ್ದಲ್ಲ.

ಮೆ॥ ವರದಯ್ಯಂಗಾರ್ಯರು—ವರ್ತಕರು ತಾವೇ ತಮ್ಮ ಅಂಗಡಿ ಲೆಕ್ಕದ ಪುಸ್ತಕಗಳಲ್ಲಿ ಜನರಿಗೆ ಸಾಮಾನು ಕೊಟ್ಟಂತೆ ಬರೆದುಕೊಂಡು, ದಾವಾ ಮಾಡಿದರೆ ಕೋರ್ಟಿನವರು ಆ ಲೆಕ್ಕವನ್ನೇ ನಂಬಿ ಅದರಂತೆ ಡಿಕ್ರಿ ಕೊಡುತ್ತಾರೆ. ಇದರಿಂದ ಅನೇಕ ಪ್ರಜೆಗಳಿಗೆ ನಷ್ಟವಾಗುತ್ತದೆ ಸಾಮಾನು ತೆಗೆದುಕೊಳ್ಳುವ ಗೃಹಸ್ಥನೇ ವರ್ತಕನ ಲೆಕ್ಕದ ಪುಸ್ತಕದಲ್ಲಿ ಬರೆಯುವಂತೆಯೂ ಒಂದು ವೇಳೆ ಅವನು ಅಕ್ಷರಸ್ಥನಲ್ಲದಿದ್ದರೆ ಪರಭಾರೆಯವರಿಂದ ಬರೆಸುವಂತೆಯೂ ಸರ್ಕಾರದವರು ಹುಕುಂ ಕೊಡಬೇಕು.

ದಿವಾನರವರು—ಈ ವಿಚಾರ ಸಾಧ್ಯವಾದದ್ದಲ್ಲ.

ಮೆ॥ ವೆಂಕಟಸುಬ್ಬಯ್ಯನವರು—ಸಿವಿಲ್ ಕೋರ್ಟಿನ ಕೆಲಸಗಳು ಸರಿಯಾಗಿ ನಡೆಯುವುದಿಲ್ಲವಾದ್ದರಿಂದ ಕಕ್ಷಿಗಾರರಿಗೆ ತುಂಬಾ ನಷ್ಟವಾಗುತ್ತೆ. ಡಿಕ್ರಿಗಳು ಬೇಗನೆ ತೀರ್ಮಾನವಾಗುವವು. ಆದರೆ ಜಾರಿಯಾಗುವುದು ಮಾತ್ರ ತುಂಬಾ ನಿಧಾನ. ಇದರಿಂದ ಜಾರಿ ಕೆಲಸ ತೃಪ್ತಿಕರವಾಗಿ ಜಾಗ್ರತೆಯಿಂದ ನಡೆಯುವುದಿಲ್ಲವೆಂದು ಗೊತ್ತಾಗುವುದು. ಈಗ ಅಮೀನರಿಗೆ ತುಂಬಾ ಜವಾಬ್ದಾರಿ ವಹಿಸಲ್ಪಟ್ಟಿದೆ. ಇವರಿಗೆ ತಕ್ಕ ಪ್ರೋತ್ಸಾಹವಿಲ್ಲದ್ದರಿಂದಲೂ ವಿದ್ಯಾವಂತರನ್ನು ಈ ಕೆಲಸಕ್ಕೆ ನೇಮಿಸದೆ ಇರೋಣದರಿಂದಲೂ ಅವರ ಕೆಲಸ ಅತೃಪ್ತಿಕರವಾಗಿದೆ, ಮತ್ತು ಕಕ್ಷಿಗಾರರಿಗೆ ತೊಂದರೆಯೂ ನಷ್ಟವೂ ಉಂಟಾಗುವವು. ಆದಕಾರಣ ವಿದ್ಯಾವಂತರನ್ನೇ ಅಮೀನ್ ಕೆಲಸಕ್ಕೆ ನೇಮಿಸಬೇಕು.

ದಿವಾನರವರು—ಚೀಫ್ ಕೋರ್ಟಿನವರೂ ನಿಮ್ಮಂತೆಯೇ ಅಭಿಪ್ರಾಯಪಟ್ಟು ಸರಿಯಾದ ಏರ್ಪಾಡು ಮಾಡಬೇಕೆಂದು ಆಲೋಚಿಸುತ್ತಿದ್ದಾರೆ. ಜಾಗ್ರತೆ ಪಡಿಸುವಂತೆ ಸೂಚಿಸುತ್ತೇವೆ

ಮೆ॥ ಗೋಪಾಲರಾಯರು—ಕೋಲಾರ್ ಚಿನ್ನದಗಣಿ ಪ್ರಾಂತ್ಯದಲ್ಲಿ ಪೋಲೀಸಿನವರು ಪ್ರಜೆಗಳನ್ನು ಗಣಿಯ ಚಿಕ್ಕ ಕಳ್ಳರೆಂದು ದಸ್ತಗಿರಿ ಮಾಡಿ ಲಾಕಪ್ಪಿನಲ್ಲಿಟ್ಟು, ಚಿನ್ನವನ್ನು ಗಣಿಯದೇ ಅಲ್ಲವೇ ಎಂದು ಕಂಡುಕೊಳ್ಳುವ ಮಾಡುವುದಕ್ಕಾಗಿ ಸರ್ಕಾರಿ ಪರಿಶೋಧನಾಲಯಕ್ಕೆ ಕಳುಹಿಸುತ್ತಾರೆ ಅಲ್ಲಿ ಪರಿಶೋಧನೆಯಾಗಿ ಫಲಿತಾಂಶ ತಿಳಿಯುವುದು ೩-೬-೮ ತಿಂಗಳೇ ಆಗುವುದು. ಅದುವರೆಗೆ ದಸ್ತಗಿರಿ ಮಾಡಲ್ಪಟ್ಟವರು ಲಾಕಪ್ಪಿನಲ್ಲಿ ಬಿದ್ದಿರಬೇಕಾಗಿದೆ. ಗಣಿ ಕಂಪನಿಗಳ ಪರಿಶೋಧನಾಲಯಕ್ಕೆ ಕಳುಹಿಸಿದ ಪಕ್ಷದಲ್ಲಿ ಅವರು ಬೇಗನೆ ಅಂದರೆ ಒಂದು ವಾರದಲ್ಲೇ ಫಲಿತಾಂಶವನ್ನು ತಿಳಿಸುವರು ಆದ್ದರಿಂದ ನಮ್ಮ ಸರ್ಕಾರದವರು ಇಟ್ಟಿರುವ ಪರಿಶೋಧನಾಲಯದಲ್ಲೂ ಅದೇ ರೀತಿ ಜಾಗ್ರತೆಯಾಗಿ ಕೆಲಸ ನಡೆಯುಂತೆ ಮಾಡಿಸಬೇಕು. ಇದಲ್ಲದೆ ಪರಿಶೋಧನೆ ಮಾಡುವುದಕ್ಕೆ ಬಹಳ ಚಿನ್ನವನ್ನು ಉಪಯೋಗಿಸಿಕೊಳ್ಳುತ್ತಾರೆ ಗಣಿ ಕಂಪನಿಯ ಪರಿಶೋಧನಾಲಯದಲ್ಲಿ ಮಾತ್ರ ಬಹಳ ಸ್ವಲ್ಪವೇ ತೆಗೆದುಕೊಳ್ಳುವರು. ಗವರ್ನಮೆಂಟಿನವರು ಈ ವಿಚಾರಗಳನ್ನೆಲ್ಲಾ ಕ್ರಮಪಡಿಸಿ, ಪ್ರಜೆಗಳ ಕಷ್ಟವನ್ನು ನಿವಾರಣೆ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ

ಗವರ್ನಮೆಂಟ್ ಪರಿಶೋಧನಾಲಯದ ಮುಖ್ಯಾಧಿಕಾರಿಗಳಾದ ಡಾ॥ ಲೆಮ್ಮೇನವರು—ಚಿನ್ನವು ಗಣಿಯದೇ ಅಲ್ಲವೇ ಎಂಬುವುದನ್ನು ಪರಿಶೋಧನೆ ಮಾಡುವುದಕ್ಕೆ ಬೆಂಗಳೂರು ಬಿಟ್ಟರೆ ಪ್ರಾಂತದ ಮೇಲೆ ಇನ್ಯಾವ ಊರಿನಲ್ಲೂ ಕಾರ್ಖಾನೆ ಇರುವುದಿಲ್ಲ. ಮತ್ತು ಪರಿಶೋಧನಾ ಕಾರ್ಯವು ನಾವು ಮಾಡುವುದಕ್ಕಿಂತಲೂ ಜಾಗ್ರತೆಯಾಗಿ ಆಗಲಾರದು. ಗಣಿ ಕಂಪನಿಯವರು ಜಾಗ್ರತೆಯಾಗಿ ಮಾಡಿದ ಪಕ್ಷದಲ್ಲಿ ಅದು ತೃಪ್ತಿಕರವಾಗಿರುವುದಿಲ್ಲ. ಮತ್ತು ಪರಿಶೋಧನೆ ಮಾಡುವುದರಲ್ಲಿ ಹೆಚ್ಚು ಚಿನ್ನವನ್ನೇ ಉಪಯೋಗಿಸಬೇಕಾಗಿದೆ.

ದಿವಾನರವರು ಮೆಂಬರುಗಳನ್ನು ಕುರಿತು—ನೀವು ಸೂಚಿಸಿದ ಅಭಿಪ್ರಾಯಗಳೆಲ್ಲಾ ಆ ಇಲಾಖಾ ಅಧಿಕಾರಿಗಳು ಕೇಳಿ, ಅವರೇ ಈಗ ಜವಾಬು ಕೊಟ್ಟಿದ್ದಾರೆ. ಆದರೂ ಪರಿಶೋಧನಾ ಕಾರ್ಯವನ್ನು ಆದಷ್ಟು ಬೇಗನೆ ಮಾಡಿಸಬೇಕೆಂದು ನಾವೂ ಅವರಿಗೆ ಸರ್ಕಾರಿ ರೀತಿಯಾಗಿ ತಿಳಿಸುತ್ತೇವೆ.

ಮೆ॥ ದಾವೂದ್ ಖಾನರು—ಬಂದೀಖಾನೆಯಲ್ಲಿ ಖೈದಿಗಳನ್ನೆಲ್ಲಾ ಏಕವಾಗಿ ಅನ್ನ ಹಾಕುವುದರಿಂದ ಜಾತಿಸಂಕರವಾಗುತ್ತದೆ. ಆಯಾ ಜಾತಿಯವರಿಗೆ ಬೇರೆ ಬೇರೆ ಏರ್ಪಾಡು ಮಾಡುವಂತೆ ಅಪ್ಪಣೆ ಆಗಬೇಕು.

ದಿವಾನರವರು—ಇದು ಅನಾವಶ್ಯಕವಾದದ್ದು. ಸಾಧ್ಯವಲ್ಲ.

ಮೆ॥ ಶಿವಬಸವದೇವರು—ಮೈಸೂರಿನಲ್ಲಿರುವ ಎರಡು ಅತಿಸಣ್ ಮುನ್ಸಿಫ್ ಕೋರ್ಟುಗಳ ಪೈಕಿ ಒಂದನ್ನು ತಿಪಟೂರಿಗೆ ನರಸೀಪುರದಲ್ಲಿ ಇಡಿಸಿಕೊಡಬೇಕು. ಕಕ್ಷಿಗಾರರೂ ಸಾಕ್ಷಿಗಳೂ ಎರಡು ಹೊಳೆಗಳನ್ನು ದಾಟ ಬರುವುದು ತುಂಬಾ ಕಷ್ಟ.

ದಿವಾನರವರು—ಇದು ಆಗತಕ್ಕ ಕೆಲಸವಲ್ಲ.

ಮೆ॥ ರಾಮರಾಯರು—ಸರ್ಕಾರದವರು ಯಡತೊರೆ ಮುನ್ಸಿಫ್ ಕೋರ್ಟನ್ನು ತೆಗೆದು ಹರೀಕೆರೆಗೆ ಹಾಕುತ್ತಾರೆಂದು ಸರ್ಕಾರ ಮಾಡಿದೆ. ತೀರ್ಥಹಳ್ಳಿಯಲ್ಲಿಟ್ಟರೆ ಕಕ್ಷಿಗಾರರಿಗೆ ತುಂಬಾ ಸಹಾಯವಾಗುತ್ತೆ.

ದಿವಾನರವರು—ಯಡತೊರೆಯಿಂದ ತೆಗೆಯುವುದೇ ಇಲ್ಲ.

ಮೆ॥ ರಂಗರಾಯರು—ಹೊನ್ನಾಳಿಯಲ್ಲಿ ೨೨ ವರುಷಗಳಿಂದ ಇದ್ದ ಮುನ್ಸಿಫ್ ಕೋರ್ಟನ್ನು ತೆಗೆದು ಈಗ ಚಿತ್ರದುರ್ಗಕ್ಕೆ ಹಾಕಿದ್ದಾರೆ. ದಾವಣಗೆರೆ, ಶಿಕಾರಿಪುರ, ರಾಣಿಬೆನ್ನೂರು, ಕೋಟೆ ಮೊದಲಾದ ತಾಲ್ಲೂಕುಗಳ ಪ್ರಜೆಗಳಿಗೆ ತೊಂದರೆಯುಂಟಾಗಿದೆ. ಹೊನ್ನಾಳಿಯಲ್ಲೇ ಮತ್ತೆ ಇಟ್ಟುಕೊಡಬೇಕು.

ದಿವಾನರವರು—ಈ ಕೋರ್ಟನ್ನು ಬದಲಾಯಿಸಿ ಕೆಲವು ದಿನ ಮಾತ್ರವಾಯಿತು ಇಷ್ಟು ಬೇಗ ಈ ವಿಚಾರಕ್ಕೆ ಗಮನಕೊಡಲಾರೆವು

ಮೆ॥ ಬಲವಂತರಾಯರು—ಅರಸೀಕೆರೆಯಲ್ಲಿ ಒಂದು ಮುನ್ಸಿಫ್ ಕೋರ್ಟ್ ಆಗಬೇಕೆಂದು ಅಲ್ಲಿನ ಪ್ರಜೆಗಳೆಲ್ಲಾ ಬೇಡಿಕೊಳ್ಳುತ್ತಾರೆ.

ದಿವಾನರವರು—ಇದು ಆಗಲಾರದು.

ಮೆ॥ ಶ್ರೀನಿವಾಸರಾಯರು ಪ್ರತಿ ಎರಡು ತಾಲ್ಲೂಕಿಗೂ ಒಂದು ಮುನ್ಸಿಫ್ ಕೋರ್ಟನ್ನು ಇಡಿಸಿದರೆ ಕಕ್ಷಿಗಾರರಿಗೆ ತುಂಬಾ ಸರಾಗ. ಮೊಕದ್ದಮೆಗಳೂ ಬೇಗಬೇಗ ಫೈಸಲಾಗುತ್ತವೆ.

ದಿವಾನರವರು—ಸಾಧ್ಯವಲ್ಲ.

ಇಂಡಿಯಾ ದೇಶದ ವೃತ್ತಾಂತಗಳು.

ಕಪೂರ್ತಲ ಸಂಸ್ಥಾನದ ಮಹಾರಾಜರವರೂ ರಾಣಿಯವರೂ ಇಳಿದ ಶುಕ್ರವಾರ ಬೆಳಗ್ಗೆ ರೈಲಿನಿಂದ ವಾಪಸು ಬೊಂಬಾಯಿಗೆ ಬಂದು ಜಹಜು ಇಳಿದರು.

****

ರಾಜಪುಟಾನಾದಲ್ಲಿ ೨೬,೦೦೦ ಜನರೂ ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ದಕ್ಷಿಣ ದೇಶದಲ್ಲಿ ೨,೦೦೦ ಜನರೂ, ಸಂಯುಕ್ತ ಆಧಿಪತ್ಯದಲ್ಲಿ ೪,೦೦೦ ಜನರೂ ಕ್ಷಾಮಪೀಡಿತರಾಗಿ ಸರ್ಕಾರಿ ರಿಲೀಫ್ ಕಾಮಗಾರಿಯಿಂದ ಹೊಟ್ಟೆಹೊರೆದುಕೊಳ್ಳುತ್ತಿದ್ದಾರೆ.

****

ಇಂಡಿಯಾ ಗವರ್ನಮೆಂಟಿನವರು ಇಂಗ್ಲಿಷ್ ಸೈನ್ಯಕ್ಕೋಸ್ಕರ ಪರದೇಶಗಳಿಂದ ೨,೦೦೦ ಕುದುರೆಗಳನ್ನೂ ಈ ದೇಶದಲ್ಲೇ ಹುಟ್ಟಿ ಬೆಳೆದ ೬೫೦ ಕುದುರೆಗಳನ್ನೂ ಕೊಂಡುಕೊಳ್ಳುವವರಾಗಿದ್ದಾರೆ ಇದಕ್ಕೆಲ್ಲಾ ಸುಮಾರು ೧೫ ಲಕ್ಷ ರೂಪಾಯಿ ಖರ್ಚಾದೀತು.

****

ಪೋಸ್ಟ್ ಆಫೀಸುಗಳಲ್ಲಿ ಬಿಕರಿಯಾಗುವ ಅರ್ಧಾಣೆ ಲಕೋಟೆಗಳ ಮೇಲೂ ಕಾಲಾಣೆ ಕಾರ್ಡುಗಳ ಮೇಲೂ ಅದೇ ಬೆಲೆಗಳು ಒತ್ತಿ ಇರುತ್ತವಷ್ಟೆ. ಇವನ್ನು ಜನರು ಕತ್ತರಿಸಿಕೊಂಡು ಬೇರೆ ಲಕೋಟೆಗಳಿಗಾಗಲಿ ದೊಡ್ಡ ಸೈಜಿನ ಕಾರ್ಡುಗಳಿಗಾಗಲಿ ಅಂಟಿಸಿ ಅಂಚೆಗೆ ಹಾಕಬಹುದೆಂದು ಅಂಚೆ ಇಲಾಖೆಯವರು ರಿಯಾಯತಿ ತೋರಿಸಿದ್ದಾರೆ.

****

ಬರೋಡಾ ಸಂಸ್ಥಾನದ ಮಹಾರಾಜಾ ಸರ್ ಸಯಾಜಿರಾವ್ ರವರು ವೇದಗಳಿಗೆ ನಿಘಂಟನ್ನು ತಯಾರುಮಾಡಿಸುತ್ತಿದ್ದಾರೆ. ಸ್ವಾಮಿ ನಾರಾಯಣಾನಂದರವರೂ ಬ್ರಹ್ಮಚಾರಿ ನಿತ್ಯಾನಂದರವರೂ ಈ ವಿಶೇಷವಾದ ಕಾರ್ಯವನ್ನು ಒಪ್ಪಿಕೊಂಡು ಬರೆಯುತ್ತಿದ್ದಾರೆ. ಮಹಾರಾಜರವರು ಈ ಕಾರ್ಯಕ್ಕೆ ಸದ್ಯ ೧೫ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

****

ಆಟೇವಾರ ಹಿಂದುಸ್ಥಾನದಲ್ಲೆಲ್ಲಾ ೩,೩೩೬ ಪ್ಲೇಗ್ ಮರಣಗಳಾದವು. ಈ ಪೈಕಿ ಬೊಂಬಾಯಿ ಅಧಿಪತ್ಯದಲ್ಲಿ ೨,೨೩೩ ಜನರೂ, ಮಧ್ಯಪ್ರಾಂತ್ಯಗಳು ಮತ್ತು ಬೀರಾರಿನಲ್ಲಿ ೪೭೫ ಜನರೂ, ಮೈಸೂರು ಸಂಸ್ಥಾನದಲ್ಲಿ ೧೦೯ ಜನರೂ, ಹೈದರಾಬಾದ್ ಸಂಸ್ಥಾನದಲ್ಲಿ ೧೨೪ ಜನರೂ, ಉಳಿದ ಭಾಗಗಳಲ್ಲೆಲ್ಲಾ ೪೦೫ ಜನರೂ ಆ ಉಪದ್ರವದಲ್ಲಿ ಮೃತಪಟ್ಟರು.

****

ರಾವಲ್‌ಪಿಂಡಿ ಪಟ್ಟಣದ ಪುತ್ರಿಪಾಠಶಾಲಾ ಎಂಬ ಬಾಲಿಕಾ ಪಾಠಶಾಲೆಯಲ್ಲಿ ಆ ಊರಿನ ದೊಡ್ಡ ಮನುಷ್ಯರ ಮನೆ ಹೆಂಗಸರೆಲ್ಲಾ ಸಭೆ ಸೇರಿ, ಇನ್ನು ಮುಂದೆ ಪರದೇಶಗಳಿಂದ ತಯಾರಾಗಿ ಈ ದೇಶಕ್ಕೆ ಬಂದು ಬಿಕರಿ ಆಗತಕ್ಕ ಪದಾರ್ಥಗಳ್ಯಾವನ್ನೂ ಯಾರೂ ಕೊಂಡುಕೊಳ್ಳಕೂಡದೆಂದು ತಮ್ಮಲ್ಲೇ ಶಪಥ ಮಾಡಿಕೊಂಡರು. ಸ್ವದೇಶೀ ಪದಾರ್ಥಗಳನ್ನೇ ಇಟ್ಟು ಬಿಕರಿ ಮಾಡುವ ಅಂಗಡಿಗಳು ಆ ಪಟ್ಟಣದಲ್ಲಿ ಒಂದು ವಾರದಿಂದ ಹೆಚ್ಚುತ್ತಿವೆ

****

ಹಿಂದುಸ್ಥಾನದಲ್ಲಿ ಒಳ್ಳೇ ಗೋವುಗಳಿರುತ್ತವೆಂಬುವುದು ಪ್ರಸಿದ್ಧಿಗೆ ಬಂದಿದೆ. ಅಮೇರಿಕಾ ಖಂಡಕ್ಕೆ ಸೇರಿದ ಬ್ರೆಜಿಲ್ ದೇಶದಿಂದ ಏಜೆಂಟರಿಬ್ಬರು ಹಿಂದುಸ್ಥಾನಕ್ಕೆ ಬಂದು, ಇಲ್ಲಿನ ಕೆಲವು ಎತ್ತು ಹಸುಗಳನ್ನು ಕೊಂಡುಕೊಂಡು ತಮ್ಮ ದೇಶಕ್ಕೆ ಸಾಗಿಸುವವರಾಗಿದ್ದಾರೆ. ಇದಲ್ಲದೆ ಈ ದೇಶದಲ್ಲಿ ಕಬ್ಬು, ಹೊಗೆಸೊಪ್ಪು, ಕಾಫಿ, ಹತ್ತಿ ಈ ಮೊದಲಾದವನ್ನು ಬೆಳೆವ ರೀತಿ

ರೀತಿಯಲ್ಲಿ ಬೆಳೆ ಮಾಡುತ್ತಿದ್ದಾರೋ ಅದನ್ನು ನೋಡಿ ತಿಳಿದುಕೊಂಡು ಹೋಗುವರು.

****

ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಎದುರುಗೊಳ್ಳುವದಕ್ಕಾಗಿ ಮೊನ್ನೆ ೬ ನೇ ತಾ. ಸೋಮವಾರ ಬೊಂಬಾಯಿಗೆ ದಯಮಾಡಿದರು. ಆ ಪಟ್ಟಣದ ಬೈಕಲಾ ಕ್ಲಬ್ ಎಂಬ ಪ್ರಸಿದ್ಧವಾದ ಯೂರೋಪಿಯನ್ ದೊಡ್ಡಮನುಷ್ಯರ ಸಂಘದಲ್ಲಿ ಆ ರಾತ್ರಿಯೇ ಲಾರ್ಡ್ ಕರ್ಜನ್‌ರವರಿಗೆ ಭಾರೀ ಔತಣ ನಡೆಯಿತು. ಸುಮಾರು ೨೦೦ ಮಂದಿ ಸರ್ದಾರರು ವೈಸ್‌ರಾಯರೊಡನೆ ಕುಳಿತು ಭೋಜನ ಮಾಡಿದರು. ಅನಂತರ ಲಾರ್ಡ್ ಕರ್ಜನ್‌ರವರ ಗುಣಕಥನಾದಿಗಳೂ ನಡೆದವು.

****

ಕಳೆದ ಶುಕ್ರವಾರ ಬಂಗಾಳಾ ವರ್ತಕಮಂಡಲಿಯವರು ಕಲ್ಕತ್ತಾ ಪಟ್ಟಣದಲ್ಲಿ ಸಭೆ ಸೇರಿ, ಅನೇಕ ಮಂದಿ ದೊಡ್ಡಮನುಷ್ಯರನ್ನು ಬರಮಾಡಿಕೊಂಡು, ಲಾರ್ಡ್ ಕರ್ಜನ್‌ರವರ ಆಳ್ವಿಕೆಯ ವಿಷಯವಾಗಿಯೂ, ಅವರು ನಡೆಸಿರುವ ಸಾಹಸಪೂರ್ವಕವಾದ ಪ್ರಜಾರಂಜಕ ಕಾರ್ಯಗಳ ವಿಷಯವಾಗಿಯೂ ಉಪನ್ಯಾಸಗಳನ್ನು ಮಾಡಿದರು. ಕಡೆಯಲ್ಲಿ ಲಾರ್ಡ್ ಕರ್ಜನ್‌ರವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಕಲ್ಕತ್ತೆಯಲ್ಲಿ ಅವರ ಭಾವಪ್ರತಿಮೆಯನ್ನು ಮಾಡಿಸಿ ಇಡಬೇಕೆಂದು ಸರ್ವರೂ ಸಮ್ಮತಿಪಟ್ಟು ತೀರ್ಮಾನಿಸಿದಾರೆ.

****

ಲಾಹೋರ್ ಪಟ್ಟಣದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಸತ್ಕರಿಸುವುದಕ್ಕೆ ಒಂದು ಕಮಿಟಿ ಏರ್ಪಾಡಾಗಿದೆ. ಇವರು ಆ ಕಾರ್ಯಕ್ಕೆ ೨೦,೦೦೦ ರೂ ಬೇಕಾಗುವುದೆಂದು ಅಂದಾಜು ಮಾಡಿ, ದೊಡ್ಡ ಮನುಷ್ಯರಿಂದ ಚಂದಾ ಎತ್ತಬೇಕೆಂದು ಗೊತ್ತುಮಾಡಿ, ಮೊದಲು ಅಲ್ಲಿನ ನವಾಬ್ ಫತ್ತೆ ಅಲ್ಲಿ ಖಾನ್ ರವರ ಬಳಿಗೆ ಹೋದರು. ನವಾಬರು ಇಂಥಾ ಅಪೂರ್ವವಾದ ಉತ್ಸವಕ್ಕೆ ಎಲ್ಲರಿಂದಲೂ ಚಂದಾ ಎತ್ತಬೇಕಾದದ್ದಿಲ್ಲವೆಂದೂ ತಾವೇ ೨೦,೦೦೦ ರೂಪಾಯನ್ನೂ ಕೊಟ್ಟುಬಿಡುತ್ತೇವೆಂದೂ ತಿಳಿಸಿದರು. ಲಾಹೋರಿನ ಪ್ರಜೆಗಳೂ ಅಧಿಕಾರಿಗಳೂ ಆ ನವಾಬರ ರಾಜಭಕ್ತಿ ವಿಶ್ವಾಸಗಳನ್ನು ಕೇಳಿ ತುಂಬಾ ಸಂತೋಷಪಟ್ಟು, ಅವರ ಉದಾರ ಮನಸ್ಸನ್ನು ಹೊಗಳುತ್ತಿದಾರೆ.

****

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನೀಪರಿವಾರಸಹಿತ ಈ ದಿನ ಬೊಂಬಾಯಿಗೆ ದಯಮಾಡಿ, ಮಧ್ಯಾಹ್ನ ೩। ಗಂಟೆಗೆ ಹಡಗಿನಿಂದ ಇಳಿಯುತ್ತಾರೆ. ಸಮುದ್ರತೀರದಲ್ಲೇ ಬೊಂಬಾಯಿನ ದೊಡ್ಡ ಮನುಷ್ಯರೂ ಹಿಂದೂಸ್ಥಾನದ ಕೆಲವು ದೇಶೀಯ ರಾಜರುಗಳೂ, ವೈಸ್‌ರಾಯಿ ಯವರೂ, ಮ್ಯುನಿಸಿಪಲ್ ಕಮಿಷನರುಗಳೂ ಕಾದಿದ್ದು, ಯುವರಾಜರನ್ನು ಮರ್ಯಾದೆಗಳೊಡನೆ ಎದುರುಗೊಂಡು ಕರೆತರುವರು. ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿರುವ ಡೇರೆಯೊಳಗೆ ಮ್ಯುನಿಸಿಪಲ್ ಕಮಿಷನರು ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ಸುಸ್ವಾಗತವನ್ನು ಬಯಸಿ ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸುವರು. ಸುಮಾರು ೪ ಗಂಟೆಯೊಳಗಾಗಿ ಯುವರಾಜರವರು ಇದನ್ನೆಲ್ಲಾ ಪೂರೈಸಿಕೊಂಡು, ಬೆಳಕಿರುವಾಗಲೇ ಬೊಂಬಾಯಿ ಪಟ್ಟಣದ ರಾಜಬೀದಿಗಳ ಮೇಲೆ ಹೊರಟು ಸಂಚಾರ ಮಾಡಿಕೊಂಡು, ತಮ್ಮ ಬಿಡಾರವನ್ನು ಸೇರುವರು.

****

ಪ್ರಿನ್ಸ್ ಆಫ್ ವೇಲ್ಸ್‌ರವರು ನಮ್ಮ ದೇಶಕ್ಕೆ ದಯಮಾಡಿದರೆಂಬುದನ್ನು ಶಾಶ್ವತಪಡಿಸುವುದಕ್ಕಾಗಿ ಲಕ್ನೋ ಪಟ್ಟಣದಲ್ಲಿ ಅವರ ಹೆಸರಿನ ಮೇಲೆ ಒಂದು ದೊಡ್ಡ ವೈದ್ಯ ವಿದ್ಯಾಶಾಲೆಯನ್ನೂ ವೈದ್ಯ ಪುಸ್ತಕ ಭಂಡಾರವನ್ನೂ ಅದಕ್ಕೆ ಸೇರಿದಂತೆ ವಿದ್ಯಾರ್ಥಿ ನಿಲಯವನ್ನೂ ನಿರ್ಮಾಣ ಮಾಡಬೇಕೆಂದು ಬಹು ಮಂದಿ ದೊಡ್ಡ ಮನುಷ್ಯರು ಸೇರಿ ಗೊತ್ತುಮಾಡಿದಾರೆ. ಈ ಉದ್ದೇಶಕ್ಕೆ ಇದುವರೆಗೆ ನಾಲ್ಕು ಲಕ್ಷ ರೂಪಾಯಿ ಚಂದಾ ಕೂಡಿದೆ. ಬಲರಾಂಪುರದ ಮಹಾರಾಣಿಯವರೊಬ್ಬರೇ ಮೂರು ಲಕ್ಷ ರೂಪಾಯಿ ದಯಪಾಲಿಸಿದರು. ಅಯೋಧ್ಯೆಯ ಮಹಾರಾಜರವರು ೨೫,೦೦೦ ರೂಪಾಯನ್ನೂ ಜಹಾಂಗೀರಾಬಾದಿನ ರಾಜರವರು ೧೫,೦೦೦ ರೂಪಾಯನ್ನೂ ಖಜೂರಗಾಂವ್ ರಾಜಾ ಶಿವರಾಜಸಿಂಗರವರು, ನವಾಬ್ ಯೂಸುಫ್ ಅಲ್ಲಿಖಾನರವರು, ಕರ್ನಲ್ ಅಬ್ದುಲ್ ಸಮ್ಯದ್‌ಖಾನರವರು, ಬ್ರಿಟಿಷ್ ಇಂಡಿಯಾ ಸಂಘದವರು, ಇವರೆಲ್ಲಾ ತಲಾ ೧೦,೦೦೦ ರೂಪಾಯನ್ನು ಚಂದಾ ಕೊಟ್ಟಿದಾರೆ.

****

ಹಿಂದಿನ ವಾರ ಅನಂತಶಯನ ಸಂಸ್ಥಾನದ ದಿವಾನ್ ಮೆ॥ ವಿ. ಪಿ. ಮಾಧವರಾಯರು ಎರಡನೇ ವರುಷದ ಪ್ರಜಾಪ್ರತಿನಿಧಿ ಸಭೆಯನ್ನು ನಡಿಸಿದರು. ಮೈಸೂರಿನಲ್ಲಿ ಹ್ಯಾಗೋ ಹಾಗೆ ಮೊದಲನೆಯ ದಿನ ದಿವಾನ್‌ರವರು ಪ್ರತಿನಿಧಿಗಳಿಗೆ ಹಿಂದಿನ ವರುಷದ ಆಡಳಿತವನ್ನೂ ಬಾಕಿ ಸಾಲಿನ ಅಂದಾಜು ಪಟ್ಟಿಯನ್ನೂ ಸಂಸ್ಥಾನದಲ್ಲಿ ನಡೆದ ಮುಖ್ಯ ಮುಖ್ಯವಾದ ಕಾರುಬಾರುಗಳನ್ನೂ ಉಪನ್ಯಾಸ ರೂಪವಾಗಿ ಓದಿ ಹೇಳಿ, ತರುವಾಯ ಐದು ದಿನಗಳ ತನಕ ಮೆಂಬರುಗಳು ಕೇಳಿಕೊಂಡ ಪ್ರಜಾ ಸೌಕರ್ಯಾದಿ ವಿಷಯಗಳನ್ನು ಚರ್ಚಿಸಿ, ಸಭೆಯನ್ನು ಬರಖಾಸ್ತು ಮಾಡಿದರು. ಮೆ॥ ಮಾಧವರಾಯರು ಆ ಸಂಸ್ಥಾನದ ದಿವಾನಗಿರಿಯನ್ನು ಕೈಕೊಂಡಾರಭ್ಯ ಬಹು ಪ್ರಯಾಸಪಟ್ಟು ಅಲ್ಲಿನ ಸರ್ಕಾರಿ ವುಟ್ಟುವಳಿಯನ್ನು ಹೆಚ್ಚಿಸುತ್ತಲೂ ಅನೇಕ ತಿದ್ದುಗಳನ್ನೂ ಮಾಡುತ್ತಲೂ ಪ್ರಜೆಗಳ ಕಷ್ಟನಿಷ್ಠುರಗಳನ್ನು ಆಲಿಸಿ ಪರಿಹಾರ ಮಾಡುತ್ತಲೂ ಬಂದಿದಾರೆ. ಪ್ರಜೆಗಳು ಅವರನ್ನು ತುಂಬಾ ಶ್ಲಾಘಿಸುತ್ತಿರುವರು.

****

ಕುಮಾವೂನ್ ಡಿಸ್ಟ್ರಿಕ್ಟು ಹಿಮಾಲಯಪರ್ವತದ ತಪ್ಪಲಲ್ಲಿರುವುದು. ಅಲ್ಲಿ ಬಾಪೂರ್‌ಸಿಲಾ ಎಂಬ ಊರಿನ ಪ್ರಜೆಗಳು ಅನೇಕವರ್ಷದಿಂದಲೂ ಬೇಸಿಗೆಯಲ್ಲಿ ನಾಲ್ಕು ತಿಂಗಳ ಕಾಲ ನೀರಿಗೆ ಪಡುತ್ತಿದ್ದ ಶ್ರಮವು ವಿವರಿಸಲಶಕ್ಯವಾಗಿತ್ತು. ಅಲ್ಲಿ ಹರಿಯುವ ಮೂರು ಸಣ್ಣ ಹೊಳೆಗಳಲ್ಲಿ ೮ ತಿಂಗಳು ನೀರು ಬಲ್ಲು ಸ್ವಲ್ಪ ಹರಿಯುತ್ತಲೂ ಉಳಿದ ನಾಲ್ಕು ತಿಂಗಳು ಸಂಪೂರ್ಣವಾಗಿ ಬತ್ತಿಹೋಗುತ್ತಲೂ ಇತ್ತು. ಜನರು ಮೂರು ಮೈಲಿ ದೂರದಿಂದ ನೀರು ತಂದು ಸಮಸ್ತ ಕೆಲಸಗಳಿಗೂ ಉಪಯೋಗಿಸುತ್ತಿದ್ದರೆಂದು ಹೇಳುವಲ್ಲಿ ಅವರ ಕಷ್ಟ ದುಃಖಗಳು ಎಷ್ಟಾಗಿದ್ದುವೋ ಊಹಿಸಬಹುದು. ಆದರೆ ಕಷ್ಟಪಡುವವರು ಸುಖಪಟ್ಟಾರೆಂಬುದು ಆ ಪ್ರಜೆಗಳ ವಿಷಯದಲ್ಲಿ ಚೆನ್ನಾಗಿ ಪ್ರತ್ಯಕ್ಷಕ್ಕೆ ಬಂದಿದೆ. ಹ್ಯಾಗೆಂದರೆ, ಈ ವರುಷ ಕಳೆದ ಏಪ್ರಿಲ್ ೪ ರಲ್ಲಿ ಕುಲೂ ಮುಂತಾದ ಕಣಿವೆಗಳಲ್ಲಿ ಭಯಂಕರವಾದ ಭೂಕಂಪ ಪ್ರಾಪ್ತವಾಗಿ ಕೋಟ್ಯಂತರ ದ್ರವ್ಯವೂ ಸಾವಿರಾರು ಪ್ರಜೆಗಳೂ ನಷ್ಟಪಟ್ಟರಷ್ಟೆ. ಅದೇ ದಿನ ಅದೇ ಭೂಕಂಪದ ದೆಸೆಯಿಂದಲೇ ಮೇಲ್ಕಂಡ ಬಾಪೂರ್‌ಸಿಲಾ ಎಂಬ ಊರಿನ ಮೂರು ಹೊಳೆಗಳಲ್ಲೂ ಪೂರ್ಣವಾದ ಪ್ರವಾಹ ಬಂದು, ಸ್ವಲ್ಪವೂ ಕಡಿಮೆಯಾಗದೆ ಸಮೃದ್ಧಿಯಾಗಿ ಹರಿಯುತ್ತಲೇ ಇದೆ. ಆ ಪ್ರಜೆಗಳ ಕಷ್ಟವು ಶಾಶ್ವತವಾಗಿ ನಿರ್ನಾಮವಾಯಿತು. ಆ ಜನರು ಇದನ್ನು ನೋಡಿ, ಭೂಕಂಪವನ್ನು ದೇವರು ತಮ್ಮ ಕ್ಷೇಮಕ್ಕಾಗಿ ಉಂಟುಮಾಡಿದನೆಂದು ಸ್ತೋತ್ರಮಾಡುತ್ತಿದಾರೆ

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸಬೇಕಾದದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥಾವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ರೈಲ್ವೆ ಕಷ್ಟ.

ಅಯ್ಯಾ,

ಬೆಂಗಳೂರಿನಲ್ಲಿ ರಾತ್ರಿ ಗಾಡಿ ಪ್ರಯಾಣಮಾಡುವ ೩ ನೇ ತರಗತಿಯ ಪ್ರಯಾಣಿಕರ ಕಷ್ಟ ಹೇಳತೀರದು. ಹೋದ ತಿಂಗಳು ೨೪ ರಲ್ಲಿ ಒಂದೊಂದು ಕಂಪಾರ್ಟ್‌ಮೆಂಟಿಗೆ ೧೮—೧೯ ಜನರನ್ನು ತುಂಬಿಸಿದರು. ಸ್ಟೇಷನ್‌ನವರು ಪ್ರಯಾಣಿಕರ ತೊಂದರೆಯನ್ನು ಕೇಳುವದೇ ಇಲ್ಲ. ಬೇಕಾದಷ್ಟು ಗಾಡಿಗಳು ಅಲ್ಲಿದ್ದರೂ ಗಾರ್ಡರು ಬೇರೆ ಗಾಡಿಗಳನ್ನು ಹಂಚಿಸಿ ಹಟ್ಟಿಗಿರುವ ಪ್ರಯಾಣಿಕರನ್ನು ಆ ಗಾಡಿಗಳಲ್ಲಿ ಕೂರಿಸಬೇಕು. ಇದನ್ನು ಅವರು ಲಕ್ಷ್ಯಮಾಡುವದಿಲ್ಲ. ಒಬ್ಬರ ಮೇಲೆ ಒಬ್ಬರು ಬಿದ್ದರೂ ಸುಮ್ಮನಿರುತ್ತಾರೆ. ಆ ದಿನ ರಾತ್ರಿ ಕಂಟ್ರೋಲರ್ ಆಫೀಸಿನ ಒಬ್ಬ ಗುಮಾಸ್ತನು ತನಗೆ ಬಂದಿದ್ದ ಎ ಸಮನ್ಸಿಗೆ ಮೈಸೂರಲ್ಲಿ ಹಾಜರಾಗಬೇಕಾಗಿತ್ತು. ಆತ ಪೋಲೀಸಿನವರನ್ನು ಕರಮಾಡಿಕೊಂಡು ಕಾದಿದ್ದ ಗಾಡಿಗೆ ಯಾರನ್ನೂ ಬಿಡದೆ ಬಂದವರನ್ನೆಲ್ಲಾ ಓಡಿಸುತ್ತಿದ್ದನು. ಕಡೆಗೆ ಒಬ್ಬಿಬ್ಬರು ಆ ಗಾಡಿಗೆ ಹತ್ತಿದರು. ಅವರ ಸಂಗಡ ವ್ಯಾಜ್ಯಮಾಡಿ ಅವರಿಗೆ ತುಂಬಾ ತೊಂದರೆಯಾಯಿತು. ಅಷ್ಟರಲ್ಲಿ ಸಮೀಪದಲ್ಲಿದ್ದ ಒಬ್ಬ ದೊಡ್ಡ ಮನುಷ್ಯರು ಅವರ ವ್ಯಾಜ್ಯವನ್ನು ನಿಲ್ಲಿಸಿ ಬಿಟ್ಟರು. ಇಲ್ಲವಾದರೆ ಅವರು ಹೊಡೆದಾಡಿಕೊಂಡು ಕೋರ್ಟಿಗೆ ಹೋಗಬೇಕಾಗಿತ್ತು. ಈ ರೀತಿ ಪದೇ ಪದೇ ತೊಂದರೆಗಳು ಸಂಭವಿಸುತ್ತವೆ. ರೈಲ್ವೆ ಅಧಿಕಾರಿಗಳು ಈ ತೊಂದರೆಯನ್ನು ತಪ್ಪಿಸಿ ತಕ್ಕ ಅನುಕೂಲ ಕಲ್ಪಿಸುವರೆಂದು ನಂಬುತ್ತೇನೆ.

ಒಬ್ಬ ಪ್ರಯಾಣಿಕ.

ಕೊರಟಗೆರೆ ವಿಷಯಗಳು.

ಅಯ್ಯಾ,

ಇಲ್ಲಿ ಆಹಾರಧಾನ್ಯಗಳಿಲ್ಲದೆಯೂ, ಪ್ರಸ್ತುತದ ಬೆಳೆಯು ಕೈ ಸೇರದೆ ಒಣಗಿರುವುದರಿಂದಲೂ, ಹಾಲೀ ಮಳೆ ಇಲ್ಲದ್ದರಿಂದ ವೈಶಾಖೀ ಪೈರೂ ಕೈ ಸೇರಲಾರದೆಂತಲೂ, ಜನ ದನಗಳ ಸಾಹುಕಾರ ಬರೆಯಲಾರೆವು. ಕಾಲಸ್ಥಿತಿ ರಿಪೋರ್ಟುಗಳಾದರೋ ಸುಖಸ್ಥಿತಿಯನ್ನೇ ಸೂಚಿಸುತ್ತಿವೆ —ಮೋಜಣಿದಾರರು ನಿನ್ನೆ ಈ ಪ್ರಾಂತ್ಯ ಸರ್ವೆ ಮಾಡಲು ಬಂದರು. ಗ್ರಾಮಸ್ಥರೂ ಸರ್ವೆಯವರೂ ಏಕೀಭವಿಸಿ ನಮ್ಮ ಗತಿ ಏನು ಮಾಡುವರೋ ಎಂದು ಪಟೇಲ್ ರೈತರೂ ಭೀತಿಯಿಂದ ಕಳೆಗುಂದಿರುವರು. ಹೊಟ್ಟೆಗಿಲ್ಲದ್ದೊಂದು, ಕಂದಾಯದ ತಗಾದೆಯೊಂದು, ಇದರ ಮೇಲೆ ಇದೂ ಬಂದಾದರೆ "ಮೂರೂ ಕೂಡಿದರೆ ನನ್ನ ಪೂರ್ವಾರ್ಜಿತ" ಎಂಬ ಗಾದೆಗೆ ಸರಿಹೋಗುವುದು.—ನಮ್ಮ ಟಾಯಂ ಅಮಲ್ದಾರು ದಯಮಾಡಿ ಜಮಾಬಂದಿಯನ್ನು ಪೂರೈಸುತ್ತಿರುವರು. ಜನಾನುರಾಗಿಗಳಾಗಿಯೂ ದಕ್ಷರುಗಳಾಗಿಯೂ ಇರುವ ಇವರು ಸ್ತುತ್ಯರ್ಹರು. ನಮ್ಮ ಹೆಡ್ ಮಾಸ್ಟರು ಈ ಸಲ ಕನ್ನಡದಲ್ಲಿ ೪ ಜನರನ್ನೂ ಇಂಗ್ಲಿಷಿನಲ್ಲಿ ಇಬ್ಬರನ್ನೂ ಪರೀಕ್ಷೆಗೆ ಕಳುಹಿಸಿರುವರು. ವ್ಯವಸಾಯದ ಪರೀಕ್ಷಾ ಕ್ಷೇತ್ರ ವಿಚಾರದಲ್ಲಿ ಉಪಕರಣಗಳನ್ನು ಒದಗಿಸುವುದರಲ್ಲಿ ನಮ್ಮ ಹೆಡ್ ಮಾಸ್ಟರು ಉದ್ಯುಕ್ತರಾಗಿದಾರೆ —ಈ ಊರಿನ ನಾಟಕ ಸಂಘದವರು ಕೆಲವು ದಿನಗಳ ಕೆಳಗೆ ಇಲ್ಲಿನ ಸ್ಕೂಲಿನಲ್ಲಿ ಪಾಂಡವವಿಜಯವೆಂಬ ನಾಟಕವನ್ನು ಆಡಿ ಜನಗಳನ್ನೂ ಸಂತೋಷಪಡಿಸಿದರು —ಮ್ಯುನಿಸಿಪಲ್ ವಿಚಾರದಲ್ಲಿ ಕೆಲಸ ಯಾವದೂ ಇಲ್ಲದೆ ಕರಡ್ಡವನ್ನು ಅನುಸರಿಸಿರುವುದು. ನಮ್ಮ ಡೆಪ್ಟಿ ಕಮಿಷನರು ಈ ಪ್ರಾಂತ್ಯ ಸರ್ಕೀಟು ಮಾಡಿಕೊಂಡು ಹೋದರು. ಇವರು ತಮ್ಮ ಒಳ್ಳೇ ಅಭಿಪ್ರಾಯದೊಂದಿಗೆ ಶಿಫಾರಸು ಮಾ… ಪ್ರಜೆಗಳ ಕಷ್ಟಗಳನ್ನು ಕಡಮೆ ಮಾಡುವರೆಂದು ಹಾರೈಸುತ್ತೇವೆ. ಕ್ಷಾಮಕಾಲವನ್ನು ಇದಿರು ನೋಡುತ್ತಿದ್ದ ಸರ್ಕಾರದವರು ಇಲ್ಲಿನ ತುಂಬಾಡಿ ಕೆರೆ ಕಾಂಗಾರಿಯನ್ನು ಕ್ಷಾಮದಲ್ಲಿ ಪ್ರಾರಂಭ ಮಾಡಿದರೆ ಕೂಲಿಯಿಂದ ಜೀವಿಸುವವರಿಗೆ ವಿಶೇಷ ಸಹಾಯವಾಗುವುದು. ಇಂಥಾ ಸಮಯವು ಮುಕ್ತವಾಗ ದೊರಿಯಬಹುದು?

ಜನಾನುರಾಗಿ.

ಜ್ವರದ ಪುಡಿಯನ್ನು ಉಪಯೋಗಿಸುವ ಕ್ರಮ.

ಅಯ್ಯಾ,

ಪೋಸ್ಟಾಫೀಸಿನ ಕೊಯಿನಾ ಪೊಟ್ಟಣಗಳನ್ನು ಈ ಗ್ರಾಮಾಂತ್ರಗಳ ಜನರು ತಕ್ಕ ಮಟ್ಟಿಗೆ ತಿಳಿದುಕೊಂಡಾಗ್ಯೂ ಅದನ್ನು ಪೀಡಿತನಾದ ರೋಗಿಗೆ ಕೊಡುವ ವಿಧಾನವನ್ನು ಸಂಪೂರ್ಣವಾಗಿ ತಿಳಿಯದವರಾಗಿರುವದರಿಂದ ಜ್ವರವು ಹೋಗುವದಿಲ್ಲ. ಅನೇಕ ಜನರು ಅದರ ವಿಷಯದಲ್ಲಿ ಬೇರೆ ಬೇರೆ ವಿಧವಾಗಿ ಆಕ್ಷೇಪ ಮಾಡುತ್ತಾರೆ. ಇದು ಶುದ್ಧಾಂಗವಾಗಿ ಜನರ ದೊಡ್ಡ ತಪ್ಪು. ಹ್ಯಾಗೆಂದರೆ, ಎರಡು ಕಾಸು ಅಥವ ಮೂರು ಕಾಸು ಕೊಟ್ಟು ಒಂದು ಪೊಟ್ಟ ಅಥವ ಎರಡು ಪೊಟ್ಟ ಔಷಧವನ್ನು ತಂದು ಅದನ್ನು ಜ್ವರಪೀಡಿತನಾದ ರೋಗಿಗೆ ಕೊಡುತ್ತಾರೆ. ಒಂದೆರಡು ಪೊಟ್ಟ ಔಷಧದಿಂದ ಭಯಂಕರವಾದ ಜ್ವರವು ಹೋಗುವದಿಲ್ಲ. ದೊಡ್ಡವರಿಗೆ ಸಾಧಾರಣವಾಗಿ ೮—೯ ಪೊಟ್ಟಣಗಳಾದರೂ ಬೇಕಾಗುತ್ತದೆ. ಈ ಔಷಧಿಯನ್ನು ರೋಗಿಗೆ ಪ್ರತಿದಿನದಲ್ಲಿಯೂ ಮೂರು ವೇಳೆಗಳಲ್ಲಿ ಅಂದರೆ ಪ್ರಾತಃಕಾಲ, ಮಧ್ಯಾಹ್ನ, ಮತ್ತು ಸಾಯಂಕಾಲದಲ್ಲಿ ನಿಂಬೇಹಣ್ಣಿನ ರಸದಲ್ಲಿಯಾದರೂ, ತುಳಸಿ ಸೊಪ್ಪಿನ ರಸದಲ್ಲಿಯಾದರೂ, ಸ್ವಲ್ಪ ಬಿಸಿನೀರಿನಲ್ಲಿಯಾದರೂ ಕೊಡಬೇಕು. ಹೀಗೆ ಕೊಟ್ಟರೆ ಜ್ವರವು ಸಂಪೂರ್ಣವಾಗಿ ವಾಸಿಯಾಗುತ್ತದೆ. ಮತ್ತು ಆಸ್ಪತ್ರೆಯಲ್ಲಿ ಕೊಡುವ ಔಷಧದ ವಿಷಯದಲ್ಲಿಯೂ ಕೂಡ ಹಳ್ಳಿ ಜನಗಳು ಹೀಗೆ ಆಕ್ಷೇಪಣೆ ಮಾಡುತ್ತಾರೆ. ಒಂದು ದಿನ ಆಸ್ಪತ್ರೆಗೆ ಹೋಗಿ ಮೂರು ಮಾತ್ರೆಗಳನ್ನು ತೆಗೆದುಕೊಂಡು ಬಂದು ಅದನ್ನು ಕೂಡ ಸರಿಯಾಗಿ ತಿನ್ನದೆ—ಆಸ್ಪತ್ರೆಗೆ ಹೋಗಿದ್ದೆ, ಅದನ್ನು ತಿಂದರೂ ಜ್ವರ ಹೋಗುವದಿಲ್ಲ ಎಂದು ಹೇಳುತ್ತಾರೆ. ಇದು ಕೂಡ ದೊಡ್ಡ ತಪ್ಪು. ಆಸ್ಪತ್ರೆಯ ಡಾಕ್ಟರಿಗೆ ರೋಗಲಕ್ಷಣವನ್ನು ಚೆನ್ನಾಗಿ ತಿಳಿಸಿ, ಕೆಲವು ದಿವಸ ಆ ಔಷಧವನ್ನು ಕುಡಿದರೆ ಸಂಪೂರ್ಣವಾಗಿ ಗುಣ ಹೊಂದುತ್ತಾರೆ. ಆದ್ದರಿಂದ ಜನರು ಇಂಗ್ಲಿಷ್ ಔಷಧದ ವಿಷಯದಲ್ಲಿ ತಮ್ಮ ಸಂಶಯವನ್ನು ಬಿಟ್ಟು ಒಳ್ಳೆ ನಂಬಿಕೆ ಇಡುವಂತೆ ಅಪೇಕ್ಷಿಸುತ್ತೇನೆ. ಮತ್ತು ಈ ಕೊಯಿನ ಪೊಟ್ಟಣಗಳು ಪೋಸ್ಟಾಫೀಸಿನಲ್ಲಿ ಅಗ್ಗದ ಕ್ರಯಕ್ಕೆ ದೊರಕುವ ಹಾಗೆ ಗೌರ್ನಮೆಂಟಿನವರು ಮಾಡಿರುವದರಿಂದ ನಾವು ಅವರಿಗೆ ಕೃತಜ್ಞತೆಯುಳ್ಳವರಾಗಿರಬೇಕು. ಈ ಪೊಟ್ಟಣಗಳ ವಿಷಯದಲ್ಲಿ ನಮ್ಮ ನೆರೆಹೊರೆಯವರಿಗೆಲ್ಲ ತಿಳಿಸಬೇಕು. ಯಾಕೆಂದರೆ ಬಡವರಾದ ಜನರು ಪಂಡಿತರಿಗೆ ಹಣ ಕೊಡುವದಕ್ಕೆ ಶಕ್ತಿ ಸಾಲದು. ಸಣ್ಣ ಮಕ್ಕಳಿಗೆ ಒಂದು ಪೊಟ್ಟಣದ ೪ ಭಾಗ ಮಾಡಿ ಒಂದು ಭಾಗ ಔಷಧವನ್ನು ಎದೆ ಹಾಲಿನಲ್ಲಿ ಅಥವ ಸ್ಪೂರ್ಣ ಎಂಬ ಸೌಟಿನಲ್ಲಿ ಕಲಸಿ ಕುಡಿಸಬೇಕು. ಈ ಔಷಧದಿಂದ ದಿನಂಪ್ರತಿ ಬರುವ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮೂರುದಿನದ ಜ್ವರ, ನಾಲ್ಕರ ಜ್ವರ ಕೂಡ ವಾಸಿಯಾಗುತ್ತದೆ. ನಾನು ನೂರಾರು ಜನರಿಗೆ ಕೊಟ್ಟು ವಾಸಿಮಾಡಿದೇನೆ.

ಮಂಡ್ಯದ ಎನ್. ಮುದ್ದಪ್ಪ.

ಬೆಂಗಳೂರು ಬಸವಾಪುರದ ಕಾರ್ಪೋರೇಷನ್.

ಅಯ್ಯಾ,

ತಮ್ಮ ಮಾಹೆ ಅಕ್ಟೋಬರು ೧೯ ನೇ ತಾ॥ ಪತ್ರಿಕೆಯ ೩ ನೇ ಪುಟದಲ್ಲಿ ಬೆಂಗಳೂರು ಬಸವಾಪುರದ ಕಾರ್ಪೋರೇಷನ್ ವಿಷಯವಾಗಿ ಛಾಪಿಸಿರುವ ವಿಚಾರ ತಿಳಿಯಲಾಯಿತು. ಸದರಿ ವಿಚಾರವನ್ನು ತಮ್ಮ ಘನವಾದ ಪತ್ರಿಕೆಯಲ್ಲಿ ದಯವಿಟ್ಟು ಪ್ರಕಟಿಸುವದರ ಮೂಲಕ ಸದರಿ ಕಾರ್ಪೋರೇಷನ್ ಮ್ಯಾನೇಜರು ಸಮಾಧಾನಕರವಾದ ಸದುತ್ತರವನ್ನು ಬರಮಾಡಿಕೊಂಡು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ ತಮ್ಮಲ್ಲಿಗೆ ಇಲ್ಲಿಂದ ಮಾಹೆ … ೩ ನೇ ತಾ॥ ರವಾನಿಸಲಾಯಿತೇ ಹೊರತು ಈ ವಿಚಾರ ತಮ್ಮನ್ನು ಜವಾಬ್ದಾರರನ್ನಾಗಿ ಮಾಡಬೇಕೆಂದಾಗಲಿ … ತಮ್ಮಿಂದ ಪರಿಹಾರವನ್ನು ಹೊಂದಬೇಕೆಂದಾಗಲಿ ಕಳುಹಿಸಿದ್ದಲ್ಲ.

ಮೇಲ್ಕಂಡ ವಿಚಾರವನ್ನು ಪ್ರಕಟನೆಗೆ ತಮ್ಮಲ್ಲಿಗೆ ರವಾನಿಸಿದ ಈಚೆಗೆ ಅಂದರೆ ಮಾಹೆ ಅಕ್ಟೋಬರು ೪ ನೇ ತಾ॥ ಮೇಲ್ಕಂಡ ಕಾರ್ಪೋರೇಷನ್ ಮ್ಯಾನೇಜರು ನನಗೆ ಕಳುಹಿಸುವ ಔಷಧಗಳನ್ನು ಕಳುಹಿಸುತ್ತಿರುವಂತೆಯೂ ಅವುಗಳನ್ನು ಅಪಾಯಿಂಟ್‌ಮೆಂಟ್ ಆರ್ಡರ್ ಸಮೇತ ಮುಂದಿನ ತಿಂಗಳಲ್ಲಿ ಜಾಗ್ರತೆ ಕಳುಹಿಸುವೆಯು ೩೦—೯—೦೫ ನೇ ಮುಕ್ಕಾಂ ನಮೂದಿಸಿರುವ ಪೋಸ್ಟ್ ಕಾರ್ಡ್ ಮೂಲಕ ನನಗೆ ತಿಳಿಸಿ, ಇದೇ ಮಾಹೆ ೯ ನೇ ತಾ॥ … ದೊಂದು ರಿಜಿಸ್ಟ್ರೇಷನ್ ಇಲ್ಲದ ರೈಲ್ವೆ ರಶೀತಿಯನ್ನು ನನ್ನ ಹೆಸರಿಗೆ … ಸಿದ್ಧರ ಮೇಲೆ ಸದರಿ ರಶೀತಿಯನ್ನು ಅಡಸೀಕರಗೆ ಕಳುಹಿಸಿ … ಧಗಳ ಪ್ಯಾಕನ್ನು ಒಂದೂ ಚಿಲ್ಲರೆ ರೂಪಾಯಿ ಲಾಗವಡು … ನಿಂದ ಇಲ್ಲಿಗೆ ತರಿಸಿಕೊಂಡು ನೋಡಿದ್ದರಲ್ಲಿ ನಾನು ಕೇಳಿದ ಔಷಧಗಳೊಂದನ್ನೂ ರವಾನಿಸದೆ ಇತರ ವಿಧವಾದ ಔಷಧಗಳನ್ನು ರವಾನಿಸಿರುವದೂ, ಅವರ ನಿಬಂಧನೆಗೆ ವಿರೋಧವಾಗಿ ಅಪಾಯಿಂಟ್‌ಮೆಂಟ್ ಆರ್ಡರು ಮತ್ತು ಡಿಪಾಜಿಟ್ ಮೊಬಲಗಿನ ರಶೀತಿ ಸಹಾ ಕಳುಹಿಸದೆ ಇರುವದು ತಿಳಿಯಬಂತು. ನಂತರ ಇದೇ ವಿಚಾರವನ್ನು ಸದರಿ ಮ್ಯಾನೇಜರಿಗೆ ತಾ॥ ೧೬ ರಲ್ಲಿ ೧ ನೇ … ಕಾಗದದ ಮೂಲಕ ತಿಳಿಸಿ ಅವರ ನಿಬಂಧನೆಯಂತೆ ಅಪಾಯಿಂಟ್‌ಮೆಂಟ್ ಆರ್ಡರು, ರಶೀತಿ, ಸೆಪ್ಟೆಂಬರ್ ಮಾಹೆ ಪಲವು, … ನನ್ನ ಪಟ್ಟಿಯಂತೆ ಔಷಧಗಳು ಮತ್ತು ಲಾಗವಡು ವಗೈರೆ …

...ಕ್ಕೆ ನಕಲುಗಳು ಸಹಾ ದಯವಿಟ್ಟು ಕಳುಹಿಸಿ ದರೂ ... ರಿಜಿಸ್ಟ್ರರ್ಡ್ ಸಹಿತ ಜವಾಬು ಬರುವಂತೆ ಕೇಳಿಕೊಂಡ ... ಕಲ್ ಜವಾಬ್ ಕೊಟ್ಟಿಲ್ಲ. ...ವ್ಯವಹಾರಕ್ಕೆ ಮುಖ್ಯವಾದ ಸಂಚಿಕೆಯನ್ನು ಸದರಿ ಮ್ಯಾನೇಜರು ಕಾಪಾಡದೆ ತಪ್ಪಿದರೆ ಹ್ಯಾಗೆ? ಅವರ ನಿಬಂಧನೆಯಂತೆ ... ಸಪ್ಟೆಂಬರ್ ನೂರೆ ತಲಬು, ಅಪಾಯಿಂಟ್‌ಮೆಂಟ್ ಆರ್ಡರು, ...ಗದು ಬರ್ತ ವಗೈರೆ ಕಳುಹಿಸದೇಲೂ ಜವಾಬು ಕೊಡದೇ ... ಇರುವ ವಿಚಾರದಲ್ಲಿ ಸದರಿ ಮ್ಯಾನೇಜರ ಇರಾದೆ ಏನಿರಬಹುದುವದನ್ನು ಕಾವಾದರೂ ದಯವಿಟ್ಟು ತಿಳಿಸು ತಮ್ಮ ಪತ್ರಿಕೆ ಮೂಲಕ ಪ್ರಚುರಪಡಿಸಿದರೆ ನಮ್ಮಂತೆಯೇ ತೊಂದರೆಗೆ ಒಳಗಾದ ಮತ್ತು ಒಳಪಡುವ ಅನೇಕರಿಗೆ ತುಂಬಾ ಉಪಕಾರವಾಗುತ್ತಾ ಕಳುಹಿಸಿರುತ್ತೇನೆ.

ಹೊಳೆನರಸೀಪುರ. ವ.ಂಜಯ್ಯ.

ವೈಶ್ಯಪರೋಪಕಾರ ಸಂಘ.

...ರಿ,

ಧನಿಕರಿರಾ, ನಿಮ್ಮ ಗಮನವನ್ನು ಸ್ವಲ್ಪ ಇತ್ತಕಡೆಗೆ ತಿರುಗಿಸಿ ...ಮೂಲ್ಯವಾದ ನಿಧಿ ಸಂಪಾದಿಸಲು ಬಹು ಸುಲಭವಾದ ಯುಕ್ತಿಯನ್ನು ತಿಳಿಯಿರಿ. ಪ್ರಪಂಚದಲ್ಲಿನ ಸಕಲ ಪ್ರಾಣಿಗಳೂ ...ವಿಧವಾದ ನಿಧಿಯನ್ನು ಸಂಪಾದಿಸಲು ವಿಧವಿಧವಾಗಿ ಪ್ರಯತ್ನಪಡುವರು. ಈ ವಿಧಿಯು ಸುಲಭಸಾಧ್ಯವಾದದ್ದಲ್ಲ. ಇದಕ್ಕೆ ...ಗಳನೇಕ; ಈ ದಾರಿಗಳಲ್ಲಿ ನಡೆಯುವ ದಾರಿಗರಿಗೆ ವಿಶೇಷ ತೊಂದರೆಗಳು ಅನ್ನದೆ ಪ್ರಾಪ್ತವಾಗುವವು, ಹೀಗಿರಲು ನಿಮಗೆ ಬಹು ಸುಲಭವಾದ ಯುಕ್ತಿಯ ಉಪದೇಶವಾದ ದಾರಿಯು ತಿಳಿದರೆ ಬಹಳ ಅನುಕೂಲವಲ್ಲವೇ?

ಬೆಂಗಳೂರು ದಂಡು ವೈಶ್ಯರೆಲ್ಲರೂ ಈ ನಿಧಿಯ ಮಹಿಮೆಯನ್ನು ತಿಳಿದು ಇದನ್ನು ಪಡೆಯಲು ಸ್ಥಿರಚಿತ್ತರಾಗಿ, ಒಂದು ಅನುಕೂಲವಾದ ಮತ್ತು ಸುಲಭವಾದ ದಾರಿಯನ್ನು ಕಂಡುಹಿಡಿದು ಹೊಸ ಚಿಕ್ಕ ಕೆಲಸವನ್ನು ಒಬ್ಬನೇ ಸಾಧಿಸುವದು ಕಷ್ಟವಾಗಿರುವಲ್ಲಿ ಎಂಥಾ ಮಹತ್ಕಾರ್ಯಕ್ಕೆ ಒಬ್ಬನ ಪ್ರಯತ್ನ ಎಷ್ಟು ಮಾತ್ರವೂ ಉಚಿತವಾದದ್ದಲ್ಲವೆಂದು ತಿಳಿದು, ವೈಶ್ಯರು ಒಟ್ಟಾಗಿ ಸೇರಿ—"ವೈಶ್ಯಪರೋಪಕಾರಸಂಘ" ಎಂಬ ಒಂದು ಸಭೆಯನ್ನು ಮಾಡಿಕೊಂಡು ಏಕಮತ್ಯದಿಂದ ಅಮೂಲ್ಯನಿಧಿಯ ದಾರಿಗರಾಗಿ ಹೊರಟಿರುವರು. ಈ ದಾರಿಗರಿಗೆ ... ದಾರಿಗಳು ಕಂಪುಬಂದಾಗ್ಯೂ ಯಾತ್ರೆದನ್ನೂ ಲಕ್ಷಿಸದೆ ಪರೋಪಕಾರವೆಂಬ ದಾರಿಯೇ ಬಹು ಸುಲಭವಾದ ದಾರಿಯೆಂದು ಆ ದಾರಿಯಲ್ಲಿಯೇ ಪ್ರಯಾಣ ಹೊರಟಿರುವರು.

ಪರೋಪಕಾರದ ದಾರಿಯೇ ಈಗಿನ ಕಾಲದವರಿಗೆ ಸುಗಮವಾದದ್ದು. ಈ ದಾರಿಯಲ್ಲಿ ನಡೆಯುವವರೆಲ್ಲರೂ ಬಾಧ್ಯಕ ಸುಖಕ್ಕೆ ...ವಾದ ಅಮೂಲ್ಯನಿಧಿಗೆ ಪಾತ್ರರಾಗುವರೆಂಬುದರಲ್ಲಿ ಸಂದೇಹವು ಇಲ್ಲ. ಸತ್ಕಾರ್ಯಪ್ರವರ್ತಕರಿಗೆ ತೊಂದರೆ ಇಲ್ಲದೆ ಪ್ರಾಪ್ತವಾಗುವದೆಂಬ ವಿಷಯವು ಸಕಲರಿಗೂ ತಿಳಿದಿರುವದು. ಅದೇ ಪ್ರಕಾರ ಈ ದಾರಿಗರಿಗೂ ಕೆಲವು ತೊಂದರೆ ಸಂಪ್ರಾಪ್ತವಾದವು. ಈ ವೈಶ್ಯಪರೋಪಕಾರ ಸಂಘದವರು ಬಿಸಲಬೇಗೆಯನ್ನು ಸಹಿಸಲಾರದೆ, ಛಳಿಗಾಳಿಗಳ ಹೊಡೆತಕ್ಕಂಜಿ, ಭಗ್ನಮನೋರಥರಾಗಿ ಹಿಂತಿರುಗುವರಾಗಿತ್ತು. ...ದಲ್ಲಿ ಈ ದಾರಿ ಬಳಿ ಒಬ್ಬರಾದ ಮ|| ತುಳ್ಳಪ್ಪನವರ ಶ್ರೀಮಾನ್ ವೆಂಕಟಾಚಲಮಯ್ಯನವರೆಂಬ ವೈಶ್ಯೋತ್ತಮರು ... ಮನಸ್ಸಿನಿಂದ ತಮ್ಮ ವಿಶಾಲವಾದ ಮಹಡಿಯನ್ನು ದಾರಿಗರ ಉಪಯೋಗಕ್ಕಾಗಿ ಕೊಟ್ಟು ಅವರಿಗೆ ಪ್ರಾಪ್ತವಾದ ಸ್ವಲ್ಪ ...ವನ್ನು ಪರಿಹರಿಸಿ, ಧೈರ್ಯಹೇಳಿ ಹಿಂತಿರುಗದೆ ದಾರಿ ನಡೆಯುವಂತೆ ಮಾಡಿದರು. ಇವರು ಮಾಡಿದ ಉಪಕಾರದಿಂದ ದಾರಿಗರು ಪ್ರೋತ್ಸಾಹಿಸಲ್ಪಟ್ಟು, ದಾರಿ ನಡೆಯಲು ಮುಂದೆ ಸಾಗಿರುವರು.

ಪರೋಪಕಾರವೇ ಇವರ ಸುಲಭವಾದ ದಾರಿ. ಏಕಮತ್ಯದಿಂದ ...ದಲ್ಲಿ ಪ್ರಾಪ್ತವಾಗುವ ತೊಂದರೆಗಳನ್ನು ನಿವಾರಿಸಿಕೊಂಡು ... ಕೆಲಸವನ್ನು ಬೇಗನೆ ಸಾಧಿಸುವದೇ ಇವರ ಸುಲಭವಾದ ಯುಕ್ತಿ. ಈ ದಾರಿಗರ ಪ್ರಯಾಣವು ಕೈಸೇರುವಷ್ಟು, ಇವರು ಹೀಗೆ ...ಕ್ಕೆ ಪಾತ್ರರಾಗವೇಕೆನ್ನುವದೇ ನಮ್ಮಗಳ ಕೋರಿಕೆ.

ನಮ್ಮ ಮೈಸೂರು ಪ್ರಾಂತ್ಯದಲ್ಲಿರುವ ವೈಶ್ಯರೂ ಅನೇಕ ಶ್ರೀಮಂತರೂ ಮೇಲೆ ಹೇಳಿದ "ವೈಶ್ಯಪರೋಪಕಾರಸಂಘ" ದವರಂತೆ ಚಿಕ್ಕಚಿಕ್ಕ ಸಂಘಗಳನ್ನು ಏರ್ಪಡಿಸಿಕೊಂಡು ಸಹಾಯಕರೂ ಸಹೋದರರೂ ಆದ ಬಡಬಗ್ಗರನ್ನು ಉನ್ನತಸ್ಥಿತಿಗೆ ತರುತ್ತಾ ಬಂದಲ್ಲಿ ಆ ಮಹಾಪುರುಷರಿಗೆ ಕೀರ್ತಿಬರುವದಲ್ಲದೆ ಅಂಥಾ ಸತ್ಪುರುಷರುಳ್ಳನಾಗಿರುವ ನಮ್ಮ ರಾಜ್ಯದ ಯಶಸ್ಸು ಎಲ್ಲಾ ಕಡೆಯಲ್ಲೂ ನಿಸ್ಸಂದೇಹವಾಗಿ ವ್ಯಾಪಿಸುವದು. ಸಕಲಧರ್ಮಗಳಲ್ಲಿಯೂ ಪರೋಪಕಾರವೇ ಉತ್ತಮವಾದದ್ದೆಂದು ನಂಬಿ...

ಪರೋಪಕಾರ ಪ್ರೇಕ್ಷಕ.

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಈ ಪ್ರಾಂತ್ಯದ ರೈತರೆಲ್ಲ ಹಿಂಗಾರೆ ಮಳೆಯು ...ವಾಗಿ ನಂಬಿದ್ದು ಮೋಸಹೋದರು. ಸಣ್ಣ ಸಸಿಗಳು ...ತ್ತಿವೆ. ಅನೇಕ ಕಡೆಗಳಲ್ಲಿ ಜನಗಳಿಗೆ ಕುಡಿಯುವದಕ್ಕೆ ...ದುರ್ಲಭವಾಗಿದೆ. ದನಗಳ ಯೋಗಕ್ಷೇಮವನ್ನು ಇನ್ನು ... ವಹಿಸಿಕೊಳ್ಳಬೇಕು. ಈಗಲೇ ಅಕ್ಕಿ ರೂ. ೧ ಕ್ಕೆ ೮ ಸೇರು, ...೧೦ ಸೇರು, ಇತರೇ ದಿನಸುಗಳೆಲ್ಲ ೧ಕ್ಕೆ ೩ ರಷ್ಟು ಏರಿದೆ—ಈ ವರೆಗೂ ಹಳ್ಳಿಗಳಲ್ಲಿ ಅಗೆಯುತ್ತಾ ಮಾತ್ರ ನೀರು ...ತ್ತಿದ್ದರು. ಇನ್ನುಮೇಲೆ ಬೆಳಿಗ್ಗೆ ಐದು ಗಂಟೆಹೊತ್ತು ... ಎರಡು ಗಂಟೆಹೊತ್ತು ಬಿಡುತ್ತಾರೆ. ಸುಂಕವು ಅನೇಕ ಪದಾರ್ಥಗಳಿಗೆ ಇರುವದರಿಂದ ಅನೇಕ ಪದಾರ್ಥಗಳು ಬರದೆ ತೊಂದರೆಯಾಗುತ್ತಿದೆ.—ದಕ್ಷಿಣದೇಶದ ಇಬ್ಬರು ಸಂಗೀತಗಾರರು ಬಂದಿದ್ದಾರೆ.

ದೊಡ್ಡಬಳ್ಳಾಪುರ.—ಊರಿಗಳನ್ನು ಕಟ್ಟುವರಿಗೆ ೨೫ ರೂ ಬಾಲ್ಮನೆಯೂ ೧ ತಿಂಗಳು ೩ ತಿಂಗಳು ಸಹವೂ ಆಗಿದೆ ಎಂದು ತಿಳಿಯಿತು. ನಮ್ಮ ಅಮಲ್ದಾರರು ಬಹು ಚಟುವಟಿಕೆಯುಳ್ಳವರಾಗಿ ಎಲ್ಲಾ ಕಾರ್ಯಗಳನ್ನು ನ್ಯಾಯವಾಗಿ ನಡೆಸುತ್ತಾರೆ—ನಮ್ಮ ಮೈಸೂರಿನ ಘನತೊಂದಿದ ದಿವಾನ್ ಸಾಹೇಬರ ಸವಾರಿಯು ೧೪ಕ್ಕೆ ಇಲ್ಲಿಗೆ ದಯಮಾಡಿಸುವುದು. ಎಲ್ಲವನ್ನೂ ಸಿದ್ಧಪಡಿಸುತ್ತಾ ಇದ್ದಾರೆ. ಈ ಸಮಯದಲ್ಲಿ ಇಲ್ಲಿನ ನೀರಿನ ಕಷ್ಟವನ್ನು ಜನರು ಹೇಳಿಕೊಳ್ಳುವದು ಒಳ್ಳೇದು. ನಮ್ಮ ಘನ ದಿವಾನ್ ಸಾಹೇಬರು ನೀರಿನ ಕಷ್ಟವನ್ನು ತಪ್ಪಿಸುವರೆಂದು ಜನರು ನಿರೀಕ್ಷಿಸುತ್ತಾರೆ.

ದೊಮ್ಮಸಂದ್ರ.—ಈ ಕಡೆ ೧೦ ದಿನಗಳ ಹಿಂದೆ ಕೆಲವು ಒಳ್ಳೇ ಮಳೆ ಆಯಿತು. ಸುತರಾಂ ಒಣಗಿಹೋಗಿದ್ದ ಕೆರೆಕುಂಟೆಗಳಿಗೆ ನೀರು ಬಂತು. ಮುಂದಿನ ಬಿತ್ತನೆಯ ಪೈರುಗಳು ಕೊಡುವಷ್ಟುಗೆ ಚೆನ್ನಾಗಿವೆ. ಆದರೆ ಹಿಂದಿನ ಬಿತ್ತನೆಗಳಿಗೆ ಮಳೆಸಾಲದು. ಈಗ ಮಳೆಬಾರದೆ ಇದ್ದರೆ ಸುತರಾಂ ಒಣಗಿಹೋಗುವದಕ್ಕೆ ಸಂದೇಹವಿಲ್ಲ. ರೈತರಾದಿಗಳೇ ಚಿಂತಾಕ್ರಾಂತರಾಗಿದ್ದಾರೆ.—ಆನೇಕಲ್ ತಾಲ್ಲೋಕು ಅಮಲ್ದಾರ್ ಮ|| ಮಹಮ್ಮದ್ ರಜಾಸಾಹೇಬರು ಕಳೆದ ೨೪ನೇ ತಾ. ಇಲ್ಲಿಗೆ ದಯಮಾಡಿ ಇಲ್ಲಿನ ಯೂನಿಯನ್ ವಿಚಾರಗನ್ನು ತೀರಿಸಿಕೊಂಡು ಬೇರೆಕಡೆಗೆ ಹೊರಟುಹೋದರು. ಇವರು ಸರ್ಕಾರದ ಕೆಲಸದಲ್ಲಿ ಬಹಳ ಮಾತುವರ್ಜಿಯುಳ್ಳವರಾಗಿಯೂ ರೈತರ ಕಡೆಯಿಂದ ಬರುವ ಅರ್ಜಿಗಳನ್ನು ಜಾಗ್ರತೆಯಿಂದ ಅವರ ಮನವಿಗಳಿಗೆ ತಕ್ಕಪ್ರಕಾರ ಫೈಸಲ್ ಕೊಡುತ್ತಾ, ಊರಿನ ಖಾತೇದಾರ ವಿಷಯ ತುಂಬಾ ವಿಚಾರಮಾಡುವದಲ್ಲದೆ, ಪ್ರಜೆಗಳ ಅಹವಾಲುಗಳನ್ನು ವಿಚಾರಿಸಿಕೊಂಡು ಹೋಗುವವರಾಗಿಯೂ ಇದ್ದಾರೆ.—ಸುಮಾರು ಹತ್ತು ವರ್ಷಗಳ ಹಿಂದೆ ಈ ಗ್ರಾಮದಲ್ಲಿ ಲೋಯರ್ ಮಿಡ್ಲ್ ಗರ್ಲ್ಸ್ ಸ್ಕೂಲು ಸ್ಥಾಪನೆಯಾದ ಒಂಭತ್ತು ವರ್ಷಗಳ ತರುವಾಯ ಏನೇ ಕಾರಣದಿಂದ ಮುಚ್ಚಲ್ಪಟ್ಟಿತು. ಆದರೆ ಈಗ ಈ ಗ್ರಾಮಸ್ಥರ ಕೋರಿಕೆಯ ಪ್ರಕಾರ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಘನದಾದ್ರಿಗಳಾದ ಮಹಾಸ್ವಾಮಿ ದೊರೆಯವರು ಸ್ತ್ರೀವಿದ್ಯಾಭ್ಯಾಸದ ವಿಷಯಕ್ಕೆ ಪ್ರೋತ್ಸಾಹಪಡಿಸುವ ಉದ್ದೇಶದಿಂದ ಒಂದು ಗರ್ಲ್ಸ್ ಸ್ಕೂಲನ್ನು ಸ್ಥಾಪಿಸಿರುವುದರಿಂದ ಇದಕ್ಕಾಗಿ ಈ ಗ್ರಾಮಸ್ಥರು ತುಂಬಾ ಸಂತೋಷಿಸುವದಲ್ಲದೆ ಮೇಲ್ಕಂಡ ದೊರೆಯವರಿಗೆ ಬಹಳ ಕೃತಜ್ಞತೆಯುಳ್ಳವರಾಗಿದ್ದಾರೆ. ಇನ್ನು ಕೆಲವು ಬಾಲಕಿಯರ ವಿದ್ಯಾಭ್ಯಾಸಕ್ಕೆ ಕುಂದಕ ಉಂಟಾಗದಂತೆ ಮಿಡ್ಲ್ ಗಂಡುಹುಡುಗರ ಪಾಠಶಾಲೆಯಲ್ಲಿಯೇ ಸುಮಾರು ಇಪ್ಪತ್ತೈದು ಹೆಣ್ಣುಮಕ್ಕಳು ಓದುತ್ತಾ ಇದ್ದರು. ಈಗ ಇವರಿಗೋಸ್ಕರ ಪ್ರತ್ಯೇಕವಾದ ಸ್ಕೂಲ್ ಸ್ಥಾಪಿತವಾದ್ದರಿಂದ ಯಾರಿಗೆ ತಾನೆ ಸಂತೋಷವಿಲ್ಲದೆ ಇದ್ದೀತು? ಈ ಬಾಲಿಕೆಯರ ಸಂಖ್ಯೆಯು ಮೂವತ್ತೈದಕ್ಕೆ ಹೆಚ್ಚಿತು. ಈಗ ಈ ಗ್ರಾಮದಲ್ಲಿ ಮೂರು ವಿಧ ಪಾಠಶಾಲೆಗಳಾದವು. ಒಂದು ಬಾಯ್ಸ್ ಸ್ಕೂಲು, ಒಂದು ಗರ್ಲ್ಸ್ ಸ್ಕೂಲು, ಒಂದು ಹೊಲೆಯರ ಸ್ಕೂಲು.

ಹುಣಸೂರು.—ಮೈಸೂರು ಶ್ರೀಮೊಯ ದಿವಾನ್ ಬಹದ್ದೂರ್ ರವರಾದ ಸರ್. ಪಿ. ಎನ್. ಕೃಷ್ಣಮೂರ್ತಿಯವರ ಸವಾರಿಯು ತಮ್ಮ ಸೆಕ್ರೆಟರಿಯವರಾದ ಮ|| ಪಿ. ಎ. ನರಸಿಂಹಯ್ಯರ ಕೂಡ ಕಳೆದ ೩೧ ನೇ ತಾ ಬೆಳಿಗ್ಗೆ ೧೧ ಘಂಟೆಗೆ ಹುಣಸೂರು ಟ್ರಾವಲರ್ಸ್ ಬಂಗ್ಲೆಗೆ ದಯಮಾಡಿಸಿತು. ಇವರನ್ನು ಎದುರುಗೊಂಡು ಕರೆತರುವದಕ್ಕೆ ನಮ್ಮ ತಾಲ್ಲೋಕು ಅಮಲ್ದಾರರೂ, ಪೊಲೀಸ್ ಇನ್ಸ್‌ಪೆಕ್ಟರವರೂ ಹನಗೋಡಿನ ವರೆಗೂ ಹೋಗಿದ್ದರು. ಪೊಲೀಸ್ ಉಸ್ತುವಾರಿಯು ತೃಪ್ತಿಕರವಾಗಿತ್ತು. ಸದರಿ ಬಂಗ್ಲೆ ಬಳಿ ಬಂದರೂ ದೊಡ್ಡ ಮನುಷ್ಯರು ಮೊದಲಾದವರು ಕಾದುಕೊಂಡಿದ್ದು, ದಿವಾನರವರ ಭೇಟಿ ತೆಗೆದುಕೊಂಡರು. ಸಾಯಂಕಾಲ ೪|| ಗಂಟೆಗೆ ದಿವಾನರವರಿಗೆ ಇಲ್ಲಿನ ಇಂಗ್ಲಿಷ್ ಬಸ್ತೀ ಮೊದಲಾದವರು ಒಂದು ಅಡ್ರಸ್ಸನ್ನು ಓದಿ ಒಪ್ಪಿಸಿದರು. ಅದರಲ್ಲಿ ಕುಡಿಯುವ ನೀರಿನ ವಿಷಯ, ರೈಲು ಹಾಕುವ ವಿಚಾರ, ಮುನಿಸಿಪಲ್ ಕೋರ್ಟು ಬೇಕೆಂಬ ವಿಚಾರ, ಸಬ್ ಡಿವಿಜನ್ ಮೊದಲಾದ ವಿಷಯಗಳನ್ನು ಕುರಿತು ಅರಿಕೆ ಮಾಡಿಕೊಂಡರು. ಇದಕ್ಕೆಲ್ಲ ದಿವಾನರವರು ಪ್ರಜೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ದಯಪಾಲಿಸಿದರು. ನಂತರ ಕಪ್ಪೆಮಾಳವಾಡಿಗೆ ಹೋಗಿ ಲಕ್ಷ್ಮಣತೀರ್ಥದ ನದಿಗೆ ಕಟ್ಟಿರುವ ಅಣೆಕಟ್ಟು ನೋಡಿಕೊಂಡು ವಾಪಸು ಬಂದರು. ತಾ. ೧ ನೆ ಪ್ರಾತಃಕಾಲ ಡೆಪ್ಯುಟಿ ಕಮೀಷನರವರ ಜೊತೆ ಮಾಡಿಕೊಂಡು, ಕೈರಿಗೆಗೆ ಹೋಗಿ ಅಲ್ಲಿ ನೀರಿಗೆ ಮುಚ್ಚಿದ ಕೆರೆಗೆ ಕಟ್ಟೆಕಟ್ಟು ಒಂದು ದೊಡ್ಡ ಕೆರೆ ಮಾಡುವದಕ್ಕಿರುವ ಇಂಜನಿಯರ ಕೆಲಸವನ್ನು ನೋಡಿಕೊಂಡು ಬಂದು, ಮ್ಯಾಜಿಸ್ಟ್ರೇಟ್ ಕಂಪನಿಯನ್ನೂ, ಟವರ್ ತಾಲ್ಲೋಕು ಕಛೇರಿ ಮುಂತಾದ ಸ್ಥಳಗಳನ್ನೂ ನೋಡಿಕೊಂಡು ವಾಪಸ್ ಬಂಗ್ಲೆಗೆ ದಯಮಾಡಿದರು. ೨ ನೇ ತಾ ಪ್ರಾತಃಕಾಲ ತಮ್ಮ ಸೆಕ್ರೆಟರಿ ಮತ್ತು ಡೆಪ್ಯುಟಿ ಕಮೀಷನರ ಕೂಡ ಮೈಸೂರಿಗೆ ದಯಮಾಡಿದರು. ಇವರನ್ನು ಬಿಟ್ಟು ಬರಲು ಕೆಲವು ಮೈಲುಗಳ ದೂರ ಪೊಲೀಸ್ ಇನ್ಸ್‌ಪೆಕ್ಟರು ಹೋಗಿ ಬಂದರು. ದಿವಾನರವರು ಬಂದಿದ್ದಾಗ್ಯೆ ಇಲ್ಲಿನ ಮಿಡ್ಲ್ ಸ್ಕೂಲ್ ಬಾಲಕಿಯರು ಅವರಿಗೆ ಸಂತೋಷ ಉಂಟಾಗುವಂತೆ ಒಂದು ಗಾನವನ್ನು ಹಾಡಿದರು—ಇಲ್ಲಿಗೆ ೮ ಮೈಲಿ ಫಾಸಲೆಯಲ್ಲಿರುವ ಕೆರಗನಹೊಸ್ಸಳ್ಳಿ ಗ್ರಾಮದ ಕುರುಬರ ಜಾತಿ ಮಾಳ ಎಂಬುವಳಿಗೆ ಇವಳ ಮೈದುನನೆಂಬುವವನು ವಾಚ್ಚಿಗೆ ಮಾತಿಗೆ ಇವಳನ್ನು ತಾ. ೩ ರಲ್ಲಿ ಕೈಯಿಂದ ಗುದ್ದಿ, ಕಾಲಿನಿಂದ ಒದ್ದದ್ದರಿಂದ ಸತ್ತು ಹೋದಳು. ಇವನನ್ನು ಪೊಲೀಸಿನವರು ಹಿಡಿದು ಡಯರೆಕ್ಟರಿಗೆ ಗುರಿ ಮಾಡಿದ್ದಾರೆ. ವಿಚಾರಣೆ ಇನ್ನು ಪೂರೈಸಲಿಲ್ಲವೆಂದು ತಿಳಿದು ಬರುತ್ತದೆ—ಈಗ ಸುಮಾರು ೨ ತಿಂಗಳಿಂದ ಹಳ್ಳಿಗಳಲ್ಲಿ ನೀರಿಲ್ಲದೆ ಜನರು ಬಹು ತೊಂದರೆ ಪಡುತ್ತಾರೆ. ಹಳ್ಳಿ ನೀರನ್ನು ಕುಡಿದು ಅಭ್ಯಾಸವಾಗಿದ್ದು, ಈಗ ಹೊಳೆಯ ನೀರನ್ನು ಕುಡಿಯುವದರಿಂದ ಅನೇಕರು ತಲೆನೋವು, ನೆಗಡಿ, ಛಳಿಜ್ವರ ಮುಂತಾದವುಗಳಿಂದ ನರಳುವರು. ನೀರು ಸರಬರಾಯಿ ಮಾಡುವ ಸ್ಥಳವನ್ನು ರಿಪೇರಿ ಮಾಡುವದಕ್ಕೆ ಇಷ್ಟು ದೀರ್ಘಕಾಲ ಹಿಡಿದಿರುವದು ತುಂಬಾ ಆಶ್ಚರ್ಯ. ಮೇಲ್ಪಟ್ಟ ಅಧಿಕಾರಿಗಳು ಇದಕ್ಕೆ ನಿಗಾ ಕೊಡುವದು ಅವಶ್ಯವಾಗಿದೆ—ಕಳೆದ ತಿಂಗಳಲ್ಲಿ ಮಿಷನ್ ಇಲಾಖಾ ಉಪದೇಶಿಗಳಲ್ಲಿ ಕೆಲವರು ಪ್ರಸಂಗಪ್ರಯಾಣ ಹೊರಟು ಪಿರಿಯಾಪಟ್ಟಣ, ಬೆಟ್ಟದಪುರ, ಸಾಲಿಗ್ರಾಮ ಮುಂತಾದ ಸ್ಥಳಗಳನ್ನು ಸಂಧಿಸಿದರು. ಆ ಪ್ರಾಂತ್ಯ ಮಳೆ ಇಲ್ಲದೆ ಜನರು ಬಹು ತೊಂದರೆ ಪಡುತ್ತಾ ಇದ್ದಾರೆ. ಮತ್ತು ಕೆಲವು ಗ್ರಾಮಗಳು ಬಹು ಗಲೀಜಾಗಿವೆ. ಈ ವಿಷಯದಲ್ಲಿ ಮೇಲಿನ ಅಧಿಕಾರಿಗಳು ಆಯಾ ಗ್ರಾಮದ ಪಟೇಲರುಗಳಿಗೆ ತಾಕೀತು ಮಾಡಿದರೆ ಬಹು ಉತ್ತಮವಾಗಿರುವದು.

ಮಂಡ್ಯ.—ಈ ಪ್ರಾಂತ್ಯ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗುತ್ತಾ ಇವೆ. ಕೈಗೆ ಬಂದ ಫಲ ಬಾಯಿಗೆ ಬರಲಿಲ್ಲವೆಂದು ಜನರು ಗೋಳಾಡುತ್ತಾರೆ. ಕೆರೆಗಳಿಗೆ ನೀರು ಬರುವಂಥಾ ಮಳೆ ಈ ವರ್ಷ ಆಗಲೇ ಇಲ್ಲ. ಮುಂದೆ ದನಕರುಗಳಿಗೂ ಮನುಷ್ಯರಿಗೂ ನೀರಿನ ಕಷ್ಟ ಬಹಳವಾದೀತು. ಪೇಟೆ ಸಂತೆಗಳಲ್ಲಿ ದವಸಗಳ ಧಾರಣೆ ಹೆಚ್ಚುತ್ತಾ ಇದೆ—ಇಲ್ಲಿನ ಹೊಲಗೇರಿಯು ಮುನಿಸಿಪಾಲಿಟಿಗೆ ಸೇರಿದೆ. ಹಿಂದೆ ಇದ್ದ ಅಮಲ್ದಾರರು ಹೊಲಗೇರಿಯಲ್ಲಿ ಚರಂಡಿ ಮುಂತಾದ್ದನ್ನು ಹಾಕಿಸಿದ್ದರು. ಆಗ ವಸ್ತಿ ಚನ್ನಾಗಿ ಇತ್ತು. ಈಗ ಚರಂಡಿಗಳೆಲ್ಲಾ ಮುಚ್ಚಿಹೋಗಿವೆ. ಮಳೆ ನೀರು ರಸ್ತೆಯ ಮೇಲೆ ಹರಿದು ಕೊರೆದು ಕೆಲವು ಸ್ಥಳಗಳಲ್ಲಿ ಹಳ್ಳ ಬಿದ್ದಿದೆ. ಮಕ್ಕಳು ಆಟವಾಡುವಾಗ್ಯೆ ಬೀಳುವರು. ರಾತ್ರಿವೇಳೆ ದೊಡ್ಡವರು ಸಹ ಹಳ್ಳದಲ್ಲಿ ಕಾಲಿಟ್ಟರೆ ಅಪಾಯವಾಗುತ್ತೆ. ಇವರ ಬೀದಿ ಗುಡಿಸುವದಕ್ಕೆ ಜಾಡಮಾಲಿಗಳಿಲ್ಲ. ರಾತ್ರಿವೇಳೆ ದೀಪಗಳಿಲ್ಲ. ಇವರ ವಿಷಯ ಇಲ್ಲಿನ ಮುನಿಸಿಪಾಲಿಟಿಯವರು ಯೋಚಿಸಿ ಅವರಿಗೆ ಅನುಕೂಲವಾಗಿ ಲಾಂದ್ರ ಇಡಿಸಿಕೊಟ್ಟರೆ ಉತ್ತಮ—ಹೊಲಗೇರಿಗೆ ಹೋಗುವ ರೈಲ್ವೆ ಗೇಟಿನ ಹತ್ತಿರ ತುಂಬಾ ದುರ್ಗಂಧ. ಅನೇಕ ದೊಡ್ಡಮನುಷ್ಯರು ಮುಸಾಫರಿ ಬಂಗ್ಲೆಗೆ ಈ ದಾರಿಯಲ್ಲಿ ಹೋಗುತ್ತಾರೆ. ಅವರು ಇದನ್ನು ನೋಡಿದರೆ ಈ ಊರಿನ ಮುನಿಸಿಪಾಲಿಟಿಯವರಿಗೆ ಎಷ್ಟು ಕೀರ್ತಿ ಬರುವದೋ. ಹೊಲಗೇರಿಯ ಹತ್ತಿರ ಒಂದು ಕಕ್ಕಸನ್ನು ಕಟ್ಟಿಸಿದರೆ ಆ ಪ್ರಾಂತ್ಯ ಶುಚಿಯಾಗುವದು. ಇಲ್ಲವಾದರೆ ಸಾಂಕ್ರಾಮಿಕ ರೋಗಕ್ಕೆ ಆಸ್ಪದವಾಗುತ್ತೆ—ಈ ಪ್ರಾಂತ್ಯ ಕೆಲವು ಕೊರಚರು ಕಾಸಿಕಾನಹಳ್ಳಿ ಕಡೆಯಿಂದ ಬಂದು, ಮೈಸೂರಿಗೆ ಸಮರಾಕ್ರೆ ಹೋಗಬೇಕೆಂದು ಇದ್ದರು. ಇಲ್ಲಿನ ಪೊಲೀಸ್ ಇನ್ಸ್‌ಪೆಕ್ಟರು ಅವರನ್ನು ಅಪಮಾನಿಸಿ ಮಾಡಿದ್ದರಲ್ಲಿ ಅವರ ಬಳಿ ಕನ್ನಗತ್ತರಿ ಮುಂತಾದ್ದು ಸಿಕ್ಕಿತು. ಒಂದೇದು ಸ್ಥಳದಲ್ಲಿ ಕನ್ನಹಾಕಿದ್ದರೆಂದು ಪೊಲೀಸಿನವರು ತೀರ್ಪು ವಿಚಾರಣೆಗೆ ಗುರಿಮಾಡಿದರು. ಅವರಲ್ಲಿ ಇಬ್ಬರಿಗೆ ೨ ವರ್ಷ ಸಜಾ ಆಯಿತು. ಇನ್ನು ಕೆಲವರಿಗೆ ಆಗಬಹುದು—ಒಬ್ಬ ಬಟ್ಟೆಗರವನು ಬ್ರಾಹ್ಮಣನೆಂದು ಹೇಳಿಕೊಂಡು ಸುತ್ತುಮುತ್ತು ಜನರಿಂದ ಹಾಲುಗಳನ್ನು ಕದ್ದಿದ್ದನೆಂದು ಮೋಕದ್ದಮೆ ನಡೆಸಿದ್ದರ ಮೇಲೆ ಸೆಷನ್ಸ್ ಕೋರ್ಟಿನಲ್ಲಿ ಆವನಿಗೆ ೪ ವರ್ಷ ಸಜಾ ಆಯಿತು—ಹಿಂದಿನ ವಾರ ಹೊಳಲುಕೆರೆಯಲ್ಲಿ ಕುರುಬರ ಚಿಕ್ಕ ಎಂಬವನು ತನ್ನ ಹೆಂಡತಿ ಸಿದ್ಧಿ ಎಂಬವಳನ್ನು ಕೊಂದುಹಾಕಿದನು. ಇಲ್ಲಿನ ಡಾಕ್ಟರೂ ಪೊಲೀಸ್ ಇನ್ಸ್‌ಪೆಕ್ಟರೂ ಹೋಗಿ ವಿಚಾರಿಸಿದ್ದರಲ್ಲಿ ಅಗಾಗ್ಯೆ ಆಕೆಗೆ ಬರುವ ಒಂದು ರೋಗದಲ್ಲಿ ಆಕೆ ತೀರಿಹೋದಳೆಂದು ಆ ಜನರು ಹೇಳಿದರು. ಡಾಕ್ಟರು ಶವವನ್ನು ಪರೀಕ್ಷೆ ಮಾಡಿದ್ದರ ಮೇಲೆ ಏಟಿನಿಂದ ತೀರಿಹೋದಳೆಂದು ಗೊತ್ತಾಯಿತು. ಅನಂತರ ಪೊಲೀಸಿನವರು ತನಿಖೆ ಮಾಡುವಲ್ಲಿ ಕೊಲೆದಾದ್ದು ನಿಜವೆಂದು ಅಪರಾಧಿ ಒಪ್ಪಿಕೊಂಡನಂತೆ. ಆ ಹೆಂಗಸಿಗೆ ಅತ್ತೆ ಸರಿಯಾಗಿ ಊಟ ಕೊಡುತ್ತಿರಲಿಲ್ಲವಂತೆ. ಆಕೆ ಗಂಡನ ಕೂಡ ಹೇಳಿಕೊಳ್ಳಲು ತಾಯಿಯ ಮಾತನ್ನು ಕೇಳಿಕೊಂಡು ಅವನು ಹೆಂಡತಿಯನ್ನು ಹೊಡೆದನೆಂದೂ ಜನರು ಹೇಳಿಕೊಳ್ಳುತ್ತಾರೆ. ಅಮಲ್ದಾರರು ಹೋಗಿ ಸ್ಥಳ ನೋಡಿಕೊಂಡು ಬಂದರು. ಪೊ|| ಸೂಪರಿಂಟೆಂಡರು ಸಹ ಕಡೆಯಲ್ಲಿ ಬಂದು ಹೋದರು—ಇದೇ ಕಾಲದಲ್ಲಿ ಇಲ್ಲಿ ಒಂದು ಜಾತ್ರೆಯಾಯಿತು. ಬೆಸ್ತರ ಕೊಸಪ್ಪ ಎಂಬಾತನನ್ನು ಈ ಸುತ್ತುಮುತ್ತಲಿನ ಜನರು ತಮ್ಮ ಗುರುವಾಗಿ ಭಾವಿಸಿ ಆತನು ಗದ್ದಿಗೆಯ ಮೇಲೆ ಕೂತಿರುವಾಗ್ಯೆ ಆತನ ಪಾದಕ್ಕೆ ಬಿದ್ದು ರೂಪಾಯಿಗಳನ್ನು ಕಾಣಿಕೆ ಕೊಡುತ್ತಾರೆ. ಒಕ್ಕಲಿಗರು, ಗೌಡ ಲಿಂಗಾಯತರು, ಹೊಲೆಯರು, ಆಗಸರು ಮುಂತಾದವರೆಲ್ಲಾ ಕಾಣಿಕೆಗಳನ್ನು ಕೊಟ್ಟು ಸಾವಿರಾರು ದನಗಳನ್ನು ಆತನ ಸುತ್ತು ತಿರುಗಿಸಿ, ಅನಂತರ ಅಲ್ಲಿರುವ ಒಂದು ದೇವಸ್ಥಾನವನ್ನು ಪ್ರದಕ್ಷಿಣೆ ಮಾಡುತ್ತಾರೆ. ಈ ಜಾತ್ರೆಕಾಲದಲ್ಲಿ ಕೊಸಪ್ಪನವರಿಗೆ ಎರಡು ಸಾವಿರ ರೂಪಾಯಿ ವರೆಗೂ ಸಿಕ್ಕುವದು. ಆದರೆ ಈ ವರ್ಷ ಪೊಲೀಸಿನವರು ಬಹು ಮೆಹನತ್ತು ಮಾಡಿ ಈ ಜಾತ್ರೆಗೆ ಜೂಜಾಟದವರನ್ನೂ ಇಸಪೀಟಿನವರನ್ನೂ ಕಳ್ಳಕೊರಮರನ್ನೂ ಸೇರಿಸಲಿಲ್ಲ. ಕಳ್ಳರು ದೂರವಾಗಿದ್ದರು—ಈ ತಿಂಗಳು ೨ನೇ ತಾರೀಖಿನ ಸಾಯಂಕಾಲ ಒಬ್ಬ ಗೌಡನು ಇಲ್ಲಿಗೆ ಸಮೀಪವಿರುವ ತನ್ನ ಹೊಲದಲ್ಲಿ ಕಟ್ಟಿರುವ ಮನೆಯಲ್ಲಿ ೧೩೦ ರೂಪಾಯಿ ಬಾಳುವ ಎರಡು ಎತ್ತುಗಳನ್ನು ಕಟ್ಟಿ ಹಾಕಿ ಮನೆಗೆ ಬಂದು ಪುನಃ ಹೋಗಿ ನೋಡುವಲ್ಲಿ ಯಾರೋ ಕಳ್ಳರು ಬಂದು ಅವುಗಳನ್ನು ಬಿಚ್ಚಿಕೊಂಡು ಹೋದರು. ಈ ವರೆಗೂ ಪತ್ತೆ ಇಲ್ಲ.

೨ ನೇ ಛಾಪಿ ಪ್ರಶ್ನೋತ್ತರ ಲೇಖ್ಯಬೋಧಿನಿ.

ಸಿವಿಲ್, ಕ್ರಿಮಿನಲ್, ಮೊದಲಾದ ಸಮಸ್ತ ಲಾ ಸಾರಾಂಶಗಳನ್ನೂ ತಿಳಿಸತಕ್ಕ ಲಾ ಪುಸ್ತಕ. ಕ್ರಯ, ೧ ಕ್ಕೆ ೧ ರೂ. ೪ ಆಣೆ.

ಮೋಜಣಿ ಕಲಿಯತಕ್ಕ ಪುಸ್ತಕ.—ಕ್ರಯ, ೧ ಕ್ಕೆ ೧ ರೂ. ಮಾತ್ರ. ಅನೇಕರು ಬಗೆಬಗೆಯಾಗಿ ಶಿಫಾರಸುಮಾಡುತ್ತಿದ್ದಾರೆ. ಇವರ ಒಂದಾವರ್ತಿ ತರಿಸಿ ನೋಡಿದಲ್ಲಿ ನಮ್ಮ ಶ್ರಮವು ಸಾರ್ಥಕವಾಗುತ್ತದೆ. ಮಾದರಿ ಅಪೇಕ್ಷಿಸುವವರು ೧ ಆಣೆ ಸ್ಟಾಂಪು ಕಳುಹಿಸಿ ತರಿಸಿಕೊಳ್ಳಬಹುದು.

ವಿಳಾಸ—ಬಿ. ಕೆ. ಮಾರ್ಕೆಟ್ ಕಂಪನಿ, ಬೆಂಗಳೂರು ಸಿಟಿ

೧೯೦೬ ನೇ ವರುಷದ ರಾಯಲ್ ಡೈರಿಗಳು.

ರ

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಅಡಾಂಗಳೆ, ವಾರಕೂಲಿ, ಟಪಾಲಿನ ಮುಖ್ಯವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟರ್ ಫಿ, ಕೋರ್ಟು ಫಿ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೇಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಬಡ್ಡಿ ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ ರಲ್ಲಿನ ಏಕಾದಶಿ, ಪೌರ್ಣಮಿ, ಅಮಾವಾಸ್ಯೆ, ಸಂಕ್ರಮಣ, ಗೌರೀಪಂಚಾಂಗ, ರೈಲ್ವೆ ಪಾರಸಲ್ ಛಾರ್ಜ್, ಯದುವಂಶರತ್ನಾಕರ, ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ.

ನಂ॥ ೧	ದೊಡ್ಡ ಸೈಜು ರೂಲು ಹಾಕಿದೆ ಕ್ರಯ.	೦—೮—೦
,, ೨	,, ,, ,, ಮುಚ್ಚಳ ಇರತಕ್ಕದ್ದು	೦—೧೦—೦
,, ೩	ಚಿಕ್ಕ ,, ,, ,, ,,	೦—೬—೦
,, ೪	,, ,, ,, ,, ,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ. ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ದೊರೆಯುತ್ತೆ.

ದಿ ಜನರಲ್ ಏಜನ್ಸಿ, ಮೈಸೂರು.

ಜ್ವರಹರಿ. 2



ಇದು ಸಾಧಾರಣ ಜ್ವರ, ಚಳೀಜ್ವರ, ನೈರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಅಮಲ್ದಾರ್ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಪಿ ಮಂ ಕ ರ್ಪೂ ರ.

Swami Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ ಉಬ್ಬರ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧನಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪ್ರಿಯರವರೆ ನಿಮ್ಮ ಕರ್ಪೂರವನ್ನು ನಾನೂ ನನ್ನ ಕಾಂಪೌಂಡರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ:—

ಪ್ರಿಯರ್ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

[illegible], ಮದರಾಸ್.

SREEMADACHARYA SUKTI MUKTAVALI
ಶ್ರೀಮದಾಚಾರ್ಯಸೂಕ್ತಿ ಮುಕ್ತಾವಳೀ

3

ಈ ಜನವರಿನಿಂದ ಪ್ರತಿ ತಿಂಗಳಲ್ಲಿಯೂ ಒಂದು ಸಂಚಿಕೆಯು ಪ್ರಕಟಿಸಲ್ಪಡುವುದು. ಇದರಲ್ಲಿ ಶ್ರೀರಾಮಾನುಜಸಿದ್ಧಾಂತ ಸ್ಥಾಪಕರಾದ ಪೂರ್ವಾಚಾರ್ಯರುಗಳು ನಡಿಸಿರುವ ಸ್ತೋತ್ರ, ಪ್ರಾಮಿಡಪ್ರಬಂಧ, ಗ್ರಂಥಗಳಿಗೆ ಕನ್ನಡದಲ್ಲಿ ಪ್ರತಿಪದ ಟೀಕಾ ತಾತ್ಪರ್ಯಗಳು ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಾಗಿ ಬರೆದು ಮುದ್ರಿಸಲ್ಪಡುವುವು. ಶ್ರೀವಿಷ್ಣುಸಹಸ್ರನಾಮಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತ ಭಾಷ್ಯಗಳೂ ಕನ್ನಡದಲ್ಲಿ ಅರ್ಜುನವೊಡನಾಡಿ ಮುದ್ರಿಸಲ್ಪಡುವುವು. ಈ ಸಂಪೂರ್ಣ ಗ್ರಂಥಕ್ಕೆ ಪೋಸ್ಟೇಜು ಡೆಲಿವರಿ ರೂ. ೨-೬; ಶ್ರೀಮದಾಚಾರ್ಯಸೂಕ್ತಿ ಮುಕ್ತಾವಳೀ ಸಾಂವತ್ಸರಿಕ ಚಂದಾ ಪೋಸ್ಟು ಚಾರ್ಜು ಸಹಿತ ರೂ ೧-೧೪.

ಇದರ ವಿಶೇಷ ವಿವರಗಳನ್ನು ತಿಳಿಯಬೇಕ್ಷಿಸುವವರು ಈ ಕೆಳಗಿನ ವಿಲಾಸದಾರರಿಗೆ ಬರೆಯಬೇಕು.

ತೂಪ್ಪಲ್ ವೆಂಕಟಾಚಾರ್ಯರು,

ತುಲಸೀ ತೋಟ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತ್ವರೆಮಾಡಿರಿ!!

ಒಮ್ಮೆ ಅನುಭವ ತಕ್ಕೊಂಡು ನೋಡಿರಿ
ಅಲಭ್ಯಲಾಭ. 4

ಪೇಟೆಂಟು ರಾಸ್ಕೋಪ್ ಸಿಸ್ಟಂ ಲೀವರ ವಾಚುಗಳು.

ಈ ವಾಚುಗಳು ಬಹಳ ಮಜಬೂತ ಇದ್ದು ವರ್ಷಗಟ್ಟಲೆ ಟಿಕಾವು ಬರುತ್ತವೆ. ಪ್ರತಿ ಒಂದು ವಾಚಿನ ಕಿಮ್ಮತ್ತು ರೂ. ೪, ರೂ. ೫, ರೂ ೬ ಇದ್ದು ಇವುಗಳಿಗೆ ಕ್ರಮವಾಗಿ ೪, ೫, ೬ ವರ್ಷ ಗ್ಯಾರಂಟಿ ಇರುತ್ತದೆ. ಇದರ ಸೊಕರ್ ಕ್ಕೆಗೆ ಕಟ್ಟುವ ಲೇಡಿ ವಾಚುಗಳೂ, ೭॥ ಮತ್ತು ೩ ರೂ ಕಿಮ್ಮತ್ತಿನ (ಬಿ) ಟಯ್ಮಪೀಸುಗಳೂ, ೧॥ ರೂ. ೨॥ ರೂ ಕಿಮ್ಮತ್ತಿನ ಖರೆ ಬೆಳ್ಳಿಯ ಫೌಂಟನ್ ಸರಪಳಿಗಳೂ, ೪, ೬, ೮ ಆಣೆಯ ಜರ್ಮನ್ ಸಿಲ್ವರ ಸರಪಳಿಗಳೂ, ೧ ಆಣೆ ಕಿಮ್ಮತ್ತಿನ ಖರೇ ರೇಷ್ಮೆಯ ಗೊಂಡೆಗಳೂ ನಮ್ಮಲ್ಲಿ ಸಿಕ್ಕುತ್ತವೆ. ಸೂಚನೆ—ಮೇಲೆ ಕಾಣಿಸಿದ ಯಾವದೇ ವಾಚುಗಳು ಒಮ್ಮೆಗೇ ೩ ತಕ್ಕೊಂಡರೆ (ಬಿ) ಟಾಯ್ಮಪೀಸ ಒಂದು ಇನಾಮು, ಮತ್ತು ೬ ತಕ್ಕೊಂಡರೆ ಒಂದು ವಾಚ ಇನಾಮು ಸಿಗುವದು.

ವಿಳಾಸ—ಆರ್. ವಿ. ಪೈ, ವಾಚ್ ಮರ್ಚಂಟ್,

ಪೋಸ್ಟ ಅಂಕೋಲಾ, ಜಿಲ್ಲಾ ಉ. ಕಾನಡಾ

ಹೋ ಲೋ ಪೋ ಸಿ ಯಾ.

ಕಷ್ಟ ಪರಿಹಾರ.

ಹಗಲಾತ್ರಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಸಾಲೆ, ಆಸಮಾನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಪ್ರಪಂಚದಲ್ಲಿ ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕೂಡಲೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಮಾಂಸಕರ್ಣಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ಕಜ್ಜಿಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪುರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಶಸ್ತ್ರ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಲೋಪೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಲೋಪೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಲೋಪೋಸಿಯಾ ಕಂಪನಿ, ೨೩ [illegible] ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

20—10—1905 ರಿಂದ 26—10—1905 ರ ವರೆಗೆ.

ಸ್ಥಳ.	ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಜನವರಿಯಿಂದ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	15	6	29	16
ಮೈಸೂರು ,,	0	0	79	60
ಬೆಂಗಳೂರು ಡಿಸ್ಟ್ರಿಕ್ಟ್	18	6	169	128
ಮೈಸೂರು ,,	9	5	153	103
ಕೋಲಾರ ,,	0	0	25	19
ಕೋಲಾರ ಚಿನ್ನದ ಗಣಿಗಳು	0	0	31	25
ತುಮಕೂರು ಡಿಸ್ಟ್ರಿಕ್ಟ್	2	0	70	47
ಹಾಸನ ,,	0	0	18	19
ಚಿತ್ರದುರ್ಗ ,,	0	0	75	50
ಕಡೂರು ,,	3	5	90	54
ಶಿವಮೊಗ್ಗ ,,	0	0	83	53
ಜುಮ್ಲಾ.	47	28	841	565

ಶಾಲಿವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಕಾರ್ತೀಕ ಶುದ್ಧ ತ್ರಯೋದಶಿ ಗುರುವಾರದಿಂದ ಕಾರ್ತೀಕ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ನವಂಬರ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ವೃ.
9	ಗುರು ನ	ತ್ರಯೋ	56-20	ರೇ	55-38	24
10	ಶುಕ್ರ ‡	ಚತುರ್ದಶಿ	60 0	ಶ್ವ	60-0	25
11	ಶನಿ *	ಚತುರ್ದಶಿ	1-42	ಶ್ವ	2-12	26
12	ರವಿ ¦	ಪೌರ್ಣಮಿ	6-58	ಭ	8 30	27
13	ಚಂದ್ರ	ಪಾಡ್ಯ	11-45	ಕೃ	14-46	28
14	ಕುಜ ,,	ಬಿದಿಗೆ	16-20	ರೋ	20-22	29
15	ಬುಧ ¶	ತದಿಗೆ	19-38	ಮೃ	24-14	30

ನ ಪ್ರದೋಷ ‡ ವೈಕುಂಠಚತುರ್ದಶಿ. * ಧಾತ್ರೀ ಪೂಜಾ ¦ ವ್ಯಾಸಪೂರ್ಣಿಮಾ . ಕಾರ್ತೀಕ ಸೋಮವಾರ. ,, ಕೃ[illegible]ಯಾತಿಥಿ ¶ ಶೂನ್ಯತಿಥಿ, ಸಂಕಷ್ಟಚತುರ್ಥಿ.

ಪೇಟೆ ಧಾರಣೆ.

ದಿನಸು.	ಮೈಸೂರು.	ಬೆಂಗಳೂರು.
ಸಣ್ಣ ಅಕ್ಕಿ ಪಲ್ಲ ೧ ಕ್ಕೆ	ರೂ. ೧೨—೮—೦	೧೩—[illegible]
ಕೆಂಪುಸಾಲಿ ಅಕ್ಕಿ ಅವಲ್ ..	.. ೧೨—೪—೦	೧೩—೮—[illegible]
,, ಮಾಯಂ	.. ೧೨—೦—೦	೧೨—೮—[illegible]
ಜಾಪಾನ್ಯ ಅಕ್ಕಿ ..	.. ೧೨—೦—೦	೧೨—೧೦—[illegible]
ಸಣ್ಣಕ್ಕಿ ಅವಲ್ ..	.. ೧೪—೦—೦	೧೫—[illegible]
,, ಮಾಯಂ ..	.. ೧೩—೮—೦	೧೩—೮—[illegible]
ತೊಗರೀ ಬೇಳೆ ಪಲ್ಲ ೧ ಕ್ಕೆ	.. ೧೦—೦—೦	೧೦—೮—[illegible]
,, ಮಾಯಂ ..	.. ೧೦—೮—೦	೧೦—೧೨—[illegible]
ಹೈನ್ ರಾಗಿ ಪಲ್ಲ ೧ ಕ್ಕೆ ..	.. ೬—೪—೦	೫—೮—[illegible]
ಕಾರ್ರಾಗಿ	.. ೬—೦—೦	೫—೪—[illegible]
ಜೋಳ	.. ೬—೦—೦	೬—೮—[illegible]
ಹುಲಸಂದೆ ಪಲ್ಲ ೧ ಕ್ಕೆ ..	.. ೧೦—೧—೦	೯—೮—[illegible]
ಬಿಳೀ ಅವರೆ ..	.. ೮—೧೨—೦	೯—[illegible]
ಹೆಸರು	.. ೯—೧೨—೦	೧೦—೮—[illegible]
ಉದ್ದು	.. ೧೦—೦—೦	೯—೮—[illegible]
ಕಡಲೆ	.. ೧೨—೦—೦	೧೦—[illegible]
ಎಳ್ಳು	.. ೧೩—೦—೦	೧೫—[illegible]
ಹುರುಳಿ	.. ೧೦—೦—೦	೯—೪—[illegible]
ಹರಳು ೧೨೩ ಸೇರಿಗೆ ..	.. ೧೨—೮—೦	೧೨—[illegible]
ಸೀಗೇಕಾಯಿ ಮಣ ೧ ಕ್ಕೆ	.. ೩—೮—೦	೩—೧೨—[illegible]
ಮೆಣಸಿನಕಾಯಿ ..	.. ೪—೮—೦	೩—೧೨—[illegible]
,, ಮಾಯಂ ..	.. ೩—೧೨—೦	೩—೮—[illegible]
ಬೆಲ್ಲ ದೊಡ್ಡ ಅಚ್ಚು ..	.. ೬—೪—೦	ಮು ೨—[illegible]
ಒಳ್ಳೆಣ್ಣೆ ಮಣ ೧ ಕ್ಕೆ ..	.. ೪—೪ ೦	೪—೨—[illegible]
ಹರಳೆಣ್ಣೆ ,, ..	.. ೫—೦—೦	೪—೪—[illegible]
ಕೊತ್ತುಂಬರಿ ಪಲ್ಲ ೧ ಕ್ಕೆ ..	.. ೧೦—೮—೦	೯—೧೦—[illegible]
ಉಪ್ಪು ,, ..	.. ೩—೦—೦	೬—೧೨—[illegible]
ಹುಣಸೇ ಹಣ್ಣು ..	.. ೧ ೦—೦	೦—೧೨—[illegible]
,, ಹಳೇದು ..	.. ೦—೧೪—೦	೦—೧೦—[illegible]
ತುಪ್ಪ	.. ೧೨—೮—೦	೧೧—೧೨—[illegible]
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	.. ೫—೦—೦	೪—೧೨—[illegible]
ತೆಂಗಿನಕಾಯಿ ೧೦೦ ಕ್ಕೆ	.. ೫—೦—೦	೩—೧೨—[illegible]
ಅಳಲೇಕಾಯಿ ಮಣ ೧ ಕ್ಕೆ	.. ೧—೦—೦	೦—೦—[illegible]
ಅಂಟ್ವಾಳಕಾಯಿ ಮಣ ೧ ಕ್ಕೆ	.. ೦—೧೪—೦	೦—೦—[illegible]
ಚಿನ್ನ (ಪೌನ್) ಕೆಂಪು	.. ೧೫—೮—೦	೧೫—೧—[illegible]
,, ,, ಪಸಿಮ	.. ೧೫—೧೦—೦	೧೬—೩—[illegible]
,, ,, ಗಟ್ಟಿ ತೊಲ ೧ ಕ್ಕೆ ..	೨೬—೦—೦	೨೪—೬—[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೭೨—೦—೦	೭೮—[illegible]

Printed and Published by the Rev. H. Spencer, B.[illegible] the Proprietor and Manager, Wesleyan Mission Press, Mysore. 9/11/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ನವಂಬರ್ ತಾರೀಖು ೧೬ ನೇ ಗುರುವಾರ. — ಸಂಚಿಕೆ ೨೫

ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

17

ಮೆಟ್ರಿಕ್ಯುಲೇಷನ್ ಕನ್ನಡದ ೧೯ನೆ ಪುಸ್ತಕದ ನೋಟ್ಸು ೦—೪—೦

ಹೀಗೆ ,, ,, ೬ ನೆ ಪುಸ್ತಕದ ನೋಟ್ಸು ೦—೪—೦

ಹೀಗೆ ೩—೪ ನೆಯ ಪುಸ್ತಕಗಳ ನೋಟ್ಸು ೦—೨—೦

ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಷೆ) ೦—೧—೨

ಎನ್ತರಗತಿ ಪದ್ಯಸಂಗ್ರಹದ ನೋಟ್ಸು ೦—೧—೬

ಸಚಿತ್ರವಿನೋದಿನಿ ಮಾಸಪತ್ರಿಕೆ.

ವಾರ್ಷಿಕಚಂದಾ ರೂ ೦—೮—೦.

....ವಿನೋದಿನಿ ಎಂಬ ಪತ್ರಿಕೆ ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದವೃತ್ತಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹವಿಲ್ಲ. . . . .

ಸತ್ಯದೀಪಿಕೆ. ೨೮-೬-೦೫

ವಿಳಾಸ.—ಮ್ಯಾನೇಜರ್, ವಿನೋದಿನಿ ಆಫೀಸು, ಕಾರವಾರ.

೧೯೦೬ನೇ ವರುಷದ ರಾಯಲ್ ಡೈರಿಗಳು.

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚದುರಳತೆ, ವಾರಸೂಲೆ, ಟಪಾಲಿನ ನಿಯಮಗಳು, ಸ್ಟ್ಯಾಂಪ್ ಆಕ್ಟು, ರಿಜಿಸ್ಟರ್ ಫೀ, ಕೋರ್ಟ್ ಫೀ, ಆಯಾ ವರ್ಷದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ನೇ ವರುಷದ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೆಜಿಸ್ಟ್ರೇಟರುಗಳ ಅಧಿಕಾರಗಳು, ಬಡ್ಡಿ ಪಟ್ಟಿ, ಪ್ರತಿದಿನದ ಸಂಖ್ಯೆಯನ್ನು ತಿಳಿಸುವ ಪಟ್ಟಿ, ೧೯೦೬ ರಲ್ಲಿನ ಏಕಾದಶಿ, ಪೌರ್ಣಿಮೆ, ಅಮಾವಾಸ್ಯೆ, ಸಂಕ್ರಮಣ, ಗೌರೀಪಂಚಾಂಗ, ರೈಲ್ವೆ ಪಾರ್ಸಲ್ ಛಾರ್ಜ್, ಹುಟ್ಟುನಂತರತ್ನಾಕರ, ಇವೇ ಮುಂತಾದ ಅನೇಕ ವಿಷಯಗಳು ಕೂಡಿದೆ

ನಂ ೧ ದೊಡ್ಡ ಸೈಜು ರೂಲು ಹಾಕಿದೆ ಕ್ರಯ ೦—೮—೦

ನಂ ೨ ,, ,, ,, ಮುಚ್ಚಳ ಇರತಕ್ಕದ್ದು ೦—೧೦—೦

ನಂ ೩ ಚಿಕ್ಕ ,, ,, ,, ,, ೦—೬—೦

ನಂ ೪ ,, ,, ,, ,, ,, ೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ. ೩—೪ನೇ ನಂ. ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ದೊರಕುತ್ತೆ

ದಿ ಜನರಲ್ ಏಜನ್ಸಿ, ಮೈಸೂರು.

ಸುವಿನೋದ

ಲೋಕಹಿತಕ್ಕೋಸ್ಕರ ತಿಂಗಳಿಗೆರಡಾವರ್ತಿ ಪ್ರಕಟವಾಗುವ ಪತ್ರಿಕೆ.

ಓದುವುದಕ್ಕೆ ಅನೇಕ ಹಾಸ್ಯಯುಕ್ತಾಂಶಗಳಡಗಿ ಇಷ್ಟು ಸುಲಭವಾದ ಬೆಲೆಯುಳ್ಳ ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಬೇರೆ ಯಾವುದೂ ಇಲ್ಲ

ಪುಗಸಟೆ ದೊರೆಯುವ ಮಾದರಿ ಸಂಚಿಕೆ—ಓದಿದರೆ ರಸಿಕರು ಪತ್ರಿಕೆಗೆ ಆಶ್ರಯ ಕೊಡದೆ ಇರುವುದೇ ಇಲ್ಲ. ಹೋಗಲೇ?

ಅಂಚೆ ವೆಚ್ಚ ಸಮೇತ ವರುಷ ಚಂದಾ — ಮುಂಗಡ ಹನ್ನೆರಡಾಣೆ ಮಾತ್ರವೇ; ನಂತರ, ಒಂದು ರೂಪಾಯಿ ಎಂಟಾಣೆ ಮಾತ್ರ.

ವಿದ್ಯಾರ್ಥಿಗಳು ಅಂಚೆ ಖರ್ಚಿನ ಪೂರ್ತಿ ಆರಾಣೆಗೆ ಬದಲಾಗಿ ಅಂಚೆ ಚೀಟಿಗಳು ಮುಂಗಡ ಕೊಟ್ಟರೆ, ವರುಷದ ಪೂರಾ ಪತ್ರಿಕೆಯನ್ನು ಪುಗಸಟೆ ಕೊಡುತ್ತೇವೆ. ವಿ. ಪಿ. ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು.

ಬುದ್ಧಿವಂತರಾಗಬೇಕೆಂಬಿಚ್ಛೆಯುಳ್ಳವರು ಈ ಸಂಧಿಯನ್ನು ಬಿಡಬಾರದು. ಬೇಗ ಬೇಗ ವಿಷ್ಣು ವಿಳಾಸಗಳ ಮಾತ್ರ ಬರೆದು ಮಾದರಿ ಸಂಚಿಕೆಯೊಂದನ್ನು ಓದಿನೋಡಿ.

ವಿ.—ಭಾರತೀಸಂಜೀವರಾಯ, ಸಂಪಾದಕ, ಸುವಿನೋದ, ಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

"ವಾಗ್ದೇವಿ."

3

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ. ಕ್ರಯ ಒಂದು ರೂಪಾಯಿ. ಅಂಚೆ ಹಾಸಲು ವಿನಹ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು

ಬೋಳಾರ್ ಬಾಬೂರಾವ್, ಮಂಗಳೂರು.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

32

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo.

ನಗಗಳ ಹರಾಜು ನೋಟೀಸ್.

3

ಮೈಸೂರು ಹಳೇ ಅಗ್ರಹಾರದಲ್ಲಿದ್ದ ಶ್ರೋತ್ರಿಯರಾದ ಇಸ್ಪ್ಲೇಟ್ ರಾಮರಾಯರೆಂಬುವರು ವಿರೋಧಿ ಸಂವತ್ಸರದ ಶ್ರಾವಣ ಶುದ್ಧ ೧ ಸನ್ ೧೮೮೯ನೆ ಇಸವಿ ಜುಲೈ ತಾ. ೨೮ ರಲ್ಲಿ ನನ್ನಲ್ಲಿ ಈ ಕೆಳಗೆ ವಿವರಿಸುವ ಚಿನ್ನ, ಬೆಳ್ಳಿ, ಜವಾಹಿರು ವಗೈರೆ ನಗಗಳನ್ನು ಗಿರವಿ ಇಟ್ಟು ೨,೦೦೦ (ಎರಡು ಸಾವಿರದ ಇನ್ನೂರು) ರೂಪಾಯಿಗಳನ್ನು ಬಡ್ಡಿ ಸಾಲವಾಗಿ ತೆಗೆದುಕೊಂಡು, ಕೆಲವು ದಿವಸದವರಿಗೆ ಬಡ್ಡಿಯನ್ನು ಮಾತ್ರ ಪಾವತಿಮಾಡಿ, ಕಡೆಗೆ ಬಡ್ಡಿಯನ್ನೂ ಅಸಲನ್ನೂ ಸಹಾ ಪಾವತಿಮಾಡದೆ, ಸದರೀ ಇಸ್ಪ್ಲೇಟ್ ರಾಮರಾಯರು ಫವತೀ ಆಗಿರುತ್ತಾರೆ. ಆ ಬಾಗಾಯಿತು ಇದುವರೆಗೆ ೩—೪ ವರುಷಗಳಿಂದ ಸದರೀ ರಾಮರಾಯರ ವಾರಸುದಾರರಾದ ಇವರ ಹೆಂಡತಿ ಜಾನಕಿಬಾಯಮ್ಮ ಮತ್ತು ರಾಮರಾಯರ ತಮ್ಮ ಅಂಬಾಜೀರಾವ್ ಇವರುಗಳಿಗೆ ಮೇಲ್ಕಂಡ ಅಸಲು ಬಡ್ಡಿ ಮೊಬಲಗನ್ನು ಪಾವತಿಮಾಡಿ ನಗಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಎಷ್ಟುವಷ್ಟೂ ಹೊತ್ತು ತಗಾದೆ ಮಾಡಿದಾಗ್ಯೂ ಮತ್ತು ಕಡೆಗೆ ಇವರುಗಳಿಗೆ ರಿಜಿಸ್ಟರ್ ನೋಟೀಸ್ ಮೂಲಕ ಸಹಾ ತಿಳಿಯಪಡಿಸಿದಾಗ್ಯೂ ನಗಗಳನ್ನು ಬಿಡಿಸಿಕೊಳ್ಳದೆ ಇರುವದರಿಂದಲೂ ಸದರೀ ನಗಗಳ ಮೇಲೆ ನನಗೆ ಬರಬೇಕಾದ ಅಸಲು ರೂ ೨,೦೦೦, ಇದುವರೆಗೆ ಬಾಕಿ ಆಗಿರುವ ಬಡ್ಡಿ ಜಾಬಿತಾ ಆಗುವ ಬಡ್ಡಿ ಸುಮಾರು ರೂ. ೨,೧೪೦, ಜುಮ್ಲಾ ೪,೩೪೦ (ನಾಲ್ಕು ಸಾವಿರದ ಮುನ್ನೂರೈವತ್ತು) ರೂಪಾಯಿಗಳಿಗೇನೇ ಗಿರವಿ ನಗಗಳು ಸಾಲದ ಇರುವದರಿಂದಲೂ ಈ ನಗಗಳನ್ನು ಇದೇ ಇಸ್ವಿ ಡಿಸೆಂಬರ್ ತಾ. ೧೧ನೆ ಭಾನುವಾರ ಬೆಳಗಿನ ೮ ಗಂಟೆ ಬಾಗಾಯಿತು ಬಹಿರಂಗವಾಗಿ ೩ ದಿವಸಗಳ ವರಿಗೂ ಮೈಸೂರು ಕಿಲ್ಲೆಯಲ್ಲಿರುವ ನನ್ನ ಸ್ವಂತ ಮನೆಯಲ್ಲಿ ಹರಾಜು ಮಾಡಲ್ಪಡುವದು. ಬೇಕಾದ ಜನಗಳು ಖುದವರಬಾಸ್ತು ಮಾಡಿ ತೆಗೆದುಕೊಳ್ಳಬಹುದು. ಹರಾಜು ಖೈದಾದ ನಂತರ ನಗದು ಹಣ ಪಾವತಿಮಾಡದ ದೊರ್ತು ದರಖಾಸ್ತುದಾರನಿಗೆ ನಗಗಳು ದೊರೆಯಲಾರದು. ಹರಾಜಾದ ಕಾಲದಲ್ಲಿ ನಾಲ್ಕನೇ ಒಂದು ಭಾಗದ ಮೊಬಲಗು ಡಿಪಾಜಿಟ್ ಕಟ್ಟಬೇಕು. ಉಳಿದ ಮೊಬಲಗನ್ನು ಎರಡನೇ ದಿವಸ ಪ್ರಾತಃಕಾಲದೊಳಗೆ ಪಾವತಿಮಾಡಿ, ನಗಗಳನ್ನು ಹರಾಜುದಾರನು ಬಿಡಿಯದೆಹೋದ ಪಕ್ಷದಲ್ಲಿ ಸದರೀ ನಗಗಳನ್ನು ಪುನಃ ಹರಾಜು ಹಾಕುವದು. ಹಾಗೆ ಮಾಡುವದರಲ್ಲಿ ಡಿಪಾಜಿಟ್ ಮೊಬಲಗನ್ನು ಕಳೆದುಕೊಳ್ಳುವದಲ್ಲದೆ ಕಮ್ಮಿಯಾದರೆ ಮೊದಲ್ ದರಖಾಸ್ತುದಾರನು ಗುರಿಯಾಗುತ್ತಾನೆ. ಜಾಸ್ತಿ ಹುಟ್ಟಿದರೆ ಮೊದಲ್ ಹರಾಜುದಾರನಿಗೆ ಏನೂ ಸಿಕ್ಕಲಾರದು. ಮತ್ತು ಮೇಲ್ಕಂಡ ರಾಮರಾಯರ ವಾರಸುದಾರರಾದ ಅವರ ಹೆಂಡತಿ ಜಾನಕಿಬಾಯಮ್ಮನವರಿಗೂ, ತಮ್ಮ ಅಂಬಾಜೀರಾಯರಿಗೂ ರಿಜಿಸ್ಟರ್ ನೋಟೀಸ್ ಮೂಲಕ ತಿಳಿಸಲ್ಪಟ್ಟಿರುತ್ತೆ.

ನಗಗಳ ತಪಸೀಲು.

೩. ಚಿನ್ನದ ಕಾಶೀ ಅಡ್ಡಿಕೆ ೨, ಲಾಯರಿ ಅಡ್ಡಿಕೆ ೧, ಜುಮ್ಲಾ ೩ಕ್ಕೆ ಅರಗು ಧಾರ ಸಹಾ ರೂ. ತೂಕ ೨೦=.

೩. ಚಿನ್ನದ ದೊಡ್ಡಗುಂಡಿನಸರ ೩, ಒಂದು ಕಮ್ಮಿಚಿನ್ನ, ಅರಗು ಕಲ್ಲುವಗೈರೆ ರೂ. ತೂಕ ೩೦॥=.

೨. ಚಿನ್ನದ ಜೋಮಾಲೆಸರ ೨ಕ್ಕೆ ಬೆಳ್ಳಿ, ಅರಗು, ಧಾರ ಸಹಾ ರೂ. ತೂಕ ೪೦॥.

೧. ಚಿನ್ನದ ಹಟ್ಟಿಬಳೆ ಜೋಡಿ ೧ಕ್ಕೆ ಬೆಳ್ಳಿ, ತಿರುಪು, ತಾಂಬ್ರದ ಮೊಳೆ ಸಹಾ ರೂ. ತೂಕ ೧೧॥.

೪. ಚಿನ್ನದ ಬಡೆಬಿಲ್ಲೆ ೨, ಸಣ್ಣದು ೧, ಕೇತಿಕೆ ೧, ಜುಮ್ಲಾ ೪ಕ್ಕೆ ಬೆಳ್ಳಿಬಿಲ್ಲೆ ಅರಗು ಸಹಾ ರೂ. ತೂಕ ೧೬।.

೧. ತಾಂಬ್ರದ ಅಸ್ತ್ರ ಹಾಕಿರುವ ಚಿನ್ನದ ಕಡಗ ಜೋಡಿ ೧ಕ್ಕೆ ರೂ. ತೂಕ. ೫।=.

೧. ಚಿನ್ನದ ಬಡೆಕಾಚ್ಚು ೩, ಅರಗು, ಧಾರ ತಾಂಬ್ರದ ಬಿಲ್ಲೆ ಸಹಾ ರೂ. ತೂಕ ೪॥=.

೧. ಚಿನ್ನದ ಹನುಮಂತನ ತಾಳಿ ೧ಕ್ಕೆ ಅರಗು, ಬೆಳ್ಳಿ, ಧಾರ ಸಹಾ ರೂ. ತೂಕ ೪—.

೨. ಚಿನ್ನದ ಚಳಕಿಜೋಡಿ ೨ಕ್ಕೆ ದಪ್ಪಹವಳ ೮, ಸಣ್ಣಹವಳ ೬, ಧಾರ ಅರಗು ಸಹಾ ರೂ ತೂಕ ೨॥.

೧. ಹವಳ ೮ಕ್ಕೆ ಧಾರ ಸಹಾ ರೂ ತೂಕ ೬।.

೧. ಸಣ್ಣ ಮುತ್ತುಹಾಕಿದ ಉತ್ರಾಜಿ ವಾಲೆ ಜೋಡಿ ೧ಕ್ಕೆ ಅರಗು ಚಿನ್ನ ಮುತ್ತು ವಗೈರೆ ರೂ ತೂಕ ೮.

೧. ವಜ್ರದ ಅಟ್‌ಬೇಲಿ ಹಕ್ಕಡಕು ಜೋಡಿ ೧.

೧. ಬಾದಾಂ ವಜ್ರದ ಹಕ್ಕಡಕು ಜೋಡಿ ೧.

೧ ಕೆಂಪಿನ ಹಕ್ಕಡಕು ಜೋಡಿ ೧.

೧. ಬಚ್ಚಕಾನೆ ಕೆಂಪಿನ ಚಂದ್ರಮುರು ಜೋಡಿ ೧ಕ್ಕೆ ಒಳ್ಳೇ ಮುತ್ತು ೧೬.

೧ ಸಣ್ಣ ಕರಡುಮುತ್ತಿನ ಬುಗಡಿ ಜೋಡಿ ೧ಕ್ಕೆ ರೂ. ತೂಕ ೧=.

ಬೆಳ್ಳಿ ನಗಗಳು.

೧. ಕಾಲುಸರ ಜೊತೆ ೧ಕ್ಕೆ ರೂ. ತೂಕ ೮೨.

೧. ಸಣ್ಣ ಕಾಲುಸರ ಜೊತೆ ೧ಕ್ಕೆ ರೂ. ತೂಕ ೬೩.

೨. ಪಾದಗ ಜೋಡಿ ೧, ಬಳೆ ಜೋಡಿ ೧, ಜುಮ್ಲಾ ೨ಕ್ಕೆ ರೂ. ತೂಕ ೪೬.

ಜುಮ್ಲಾ ನಗಗಳು ಇಪ್ಪತ್ತೊಂಬತ್ತು ಮಾತ್ರ.

ಮತ್ತು ನನ್ನ ಸ್ವಂತ ಬಾಬತು ಚಿನ್ನ ಬೆಳ್ಳಿ ಜವಾಹಿರಿ ನಗಗಳು ಸಹಾ ಹರಾಜು ಹಾಕಲ್ಪಡುತ್ತೆ.

ಕೋಟೆ, ಮೈಸೂರು. — ಕಡಪದ ಮನ್ನಾರಿ ಕೃಷ್ಣಶೆಟ್ಟಿ.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

3

೧. ಪುಷ್ಟಿ ರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿವಿಧವಾದ ಎಲ್ಲಾ ಶರೀರದ ದೌರ್ಬಲ್ಯಗಳು ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ ದೇಹವು ಪುಷ್ಟಿ ಹೊಂದುವದು. ಪುಷ್ಟಿ ಮತ್ತು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ಒಳ್ಳೆ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವು, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವದು. ಪೆಟ್ಟಿ ೧ ಕ್ಕೆ ರೂ. ೨. ವಿ. ಪಿ. ಛಾರ್ಜಿ ೬ ಆಣೆ.

೨೦. ಅತ್ಯುತ್ತಮವಾದ ಕಸ್ತೂರಿ.—ಕಾಶ್ಮೀರದಿಂದ ತರಿಸಿದ್ದು. ಅತ್ಯುತ್ತಮವಾದದ್ದು ಮತ್ತು ಒಂದೇ ರಬಂ ಇರತಕ್ಕದ್ದು ತೊಲೆ ೧ ಕ್ಕೆ ರೂ ೪೮. ಚಿಲ್ರೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ. ಪಿ ಚಾರ್ಜು ಅಲಾಯಿದ.

೨೧. ಸುಗಂಧ ನಶ್ಯಪುಡಿ.—ಈ ನಶ್ಯಪುಡಿಯು ಬಹಳ ಸುವಾಸನಾಯುಕ್ತವಾಗಿರೋದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಕೂಡದು. ನೀವು ದಿನವೂ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಕಿಯಷ್ಟನ್ನು ಬೆರಸಬೇಕು. ಹೀಗೆ ಬೆರಿಕೆಮಾಡಿದ ಮೇಲೆ ನಶ್ಯವು ಬಹು ಸುವಾಸನೆಯುಳ್ಳದ್ದಾಗಿಯೂ ಮನೋಹರವಾಗಿಯೂ ಆಗುವುದು. ಇದರಿಂದ ನಶ್ಯಹಾಕಿಕೊಳ್ಳುವವರ ಬಳಿ ಬರುವ ಕಠಿಣವಾದ ಕೆಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಹಳ ಹೊತ್ತು ಇರುತ್ತದೆ. ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ. ಇಂಥಾ ನಶ್ಯಹಾಕಿಕೊಂಡಲ್ಲಿ ಶೀತ, ಅರೆತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ. ಆಗಾಗ್ಗೆ ನಶ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು. ಇದರಲ್ಲಿ ನವಾಸಾಗರ ಖಂಡಿತವಾಗಿ ಸೇರಿರುವುದಿಲ್ಲ. ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ತನಕ ಬರುತ್ತೆ. ಒಂದು ಡಬ್ಬಿಗೆ ಕ್ರಯ ೪ ಆಣೆ. ೧ ರಿಂದ ೩ ಡಬ್ಬಿ ತನಕ ವಿ. ಪಿ ಛಾರ್ಜು ೩ ಆಣೆ ಹೆಚ್ಚು. ವಿ ಪಿ. ಛಾರ್ಜು ೪ ರಿಂದ ೬ ಡಬ್ಬಿ ತನಕ ೫ ಆಣೆ ೭ ರಿಂದ ೧೨ ಡಬ್ಬಿ ವರೆಗೆ ವಿ ಪಿ ಛಾರ್ಜು ೬ ಆಣೆ.

೨೨. ರಕ್ಷಾಮೃತಂ.— ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಿಬಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರಮಾಡಲ್ಪಟ್ಟಿರುತ್ತದೆ. ಕಾಫಿ, ಟೀಯಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀರೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ಉಪಕಾರವಾದ ಪಾನವಾಗುವದು.

ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ, ಬಸಕು, ಹೆರಿಗೆ, ವಾಂತಿಭೇದಿ. ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ದಣಿವನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗೂರ್ಲು ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ. ಪ್ರಾಣಾಧಾರವಾದ ರಕ್ತವನ್ನು ಶುದ್ಧಿಮಾಡಿ, ಧಾತು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತವೆ. ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದ ಚೂರ್ಣವು ಇದೇ.

ಇದನ್ನು ಕ್ರಮಮಾಡಿ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರ ತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು; ಮೆದುಳನ್ನು ಬಲಪಡಿಸಿ ಜ್ಞಾನಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಲೆಯನ್ನು ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸಿದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು. ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ ಕ್ಕೆ ಕ್ರಯ ಆಣೆ ೬. ವಿ. ಪಿ. ಛಾರ್ಜು ಆಣೆ ೩ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪುಟ್ಟು ಬರೆದಲ್ಲಿ ಒಂದು ಡಬ್ಬಿ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮುಳಿನಲ್ಲಿ ಬರೆಯಿರಿ.

Apply to.—P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಬಾಮು.

15



ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಏಟು ಬಿದ್ದರೂ ಹರಿಯುವ ಗಾಯವಾ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿ ರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ತಕ್ಷಣ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ. ; ೨ ರೂ. ಮೈಸೂ ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವಾ ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇಲ್ಲದೆ ಕಳ ವಿಳಾಸದಾರರಲ್ಲೂ ಸಿಕ್ಕುವದು:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವ್ಂಟ್ ರೋಡ್,
ಮದರಾಸ್.

ಅವಶ್ಯಪದಾರ್ಥಗಳ ಮಾರಾಟ.

ಕಸ್ತೂರಿಮಾತ್ರೆ ೧,೦೦೧ ಉಳ್ಳ ೧ ಶೀಸೆಗೆ ೧ರೂ, ಮದ್ದು ಶೀಸೆಗೆ ೧೦ ರೂ. ಕಾಪಿಯಿಂಗ್ ಪ್ರೆಸ್—ಅರ್ಧಶಾವೆ ಸೈಜ್, ೧ ಹಾಳೆಗೆ ೧೦೦ ಪ್ರತಿಯಂತೆ ತೆಗಿಯಬಹುದು, ಕ್ರಯ ೩ ರೂ. ಬಾಧಾಪರಿಹಾರಿಣಿ ೧ ಡಬ್ಬಿಗೆ ೪ ಆಣೆ. ಚಿನ್ನಾ ಕಾಡಿಗೆ ೧ ಡಬ್ಬಿಗೆ ೪ ಆಣೆ; ಡಜನಿಗೆ ೨॥ರೂ. ಆಶ್ಚರ್ಯವಾದ ಉತ್ಕೃಷ್ಟವ ಲಕ್ಕ ನವೀನವಸ್ತು ಬುಕ್ಕು ಯಾವ ವಸ್ತು ಇಟ್ಟು ಪುನಃ ನೋಡಿದರೆ ಇಲ್ಲದಂತೆ ಕಾಣುವದು ಕ್ರಯ ೮ ಆಣೆ. ಬ್ಲೂ ಬ್ಲಾಕ್ ಮತ್ತು ಕೆಂಪು ಶಾಯಿಕಾಗದ ೧೦೦ಕ್ಕೆ ೧೨ ಆಣೆ. ದ್ರಾವಕ ಮಾತ್ರೆ ೧ ಗ್ರೋಸಿಗೆ ೧ರೂ. ಸಕಲು ಯಷ್ಟೆ ಶೀಸೆಗೆ ೧ ರೂ. ಆರು ನಮೂನೆ ಅತ್ತರು ಇರುವ ಪೆಟ್ಟಿಗೆ ೧। ರೂ. ನಮ್ಮ ವಿಳಾಸ—ಕೆ. ರಾಂಭಟ್ಟ(ಯೇರಾಂಬು) ಭಟ್ಟ, ಸಾಗರ.

"ಆಂಗ್ಲೇಯ ವೈದ್ಯಶಾಸ್ತ್ರ"

ಕ್ರಯ ರೂ. ೧-೮-೦, ಹಾಸಲು ೨ ಆ, ವಿ. ಪಿ. ೩ ಆಣೆ.

13

ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಪ್ರತಿಯೊಂದು ವ್ಯಾಧಿಯ ಸ್ವರೂಪ, ನಿದಾನ, ಚಿಹ್ನೆಗಳು, ಪರಿಣಾಮ, ಚಿಕಿತ್ಸೆಗಳು, ಅನೇಕ ವ್ಯಾಧಿಗಳಿಗೆ ಹಿಂದೂ ವೈದ್ಯ, ಪೇಟೆಂಟ್ ಔಷಧಗಳು ಮತ್ತು ಇವುಗಳನ್ನು ಉಪಯೋಗಿಸುವ ಕ್ರಮ, ಮೊದಲಾದ ಅನೇಕ ಅಂಶಗಳನ್ನು ಕುರಿತು ೩೩೦ ಪುಟಗಳುಳ್ಳ ಈ ಪುಸ್ತಕವು ಪ್ರಾಶಸ್ತ್ಯವನ್ನು ಹೊಂದಿದ ಅನೇಕ ಇಂಗ್ಲೀಷ್ ವೈದ್ಯಗ್ರಂಥಗಳ ಸಹಾಯದಿಂದ ರಚಿಸಲ್ಪಟ್ಟಿದೆ. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವುದಕ್ಕೂ, ವ್ಯಾಧಿಗಳು ಪ್ರಾಪ್ತವಾಗದಂತೆ ತಡೆಯುವುದಕ್ಕೂ ಹಾಗೂ ಒಂದು ವೇಳೆ ಪ್ರಾಪ್ತವಾದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೂ, ಇದು ತುಂಬಾ ಸಹಾಯಕರವಾಗಿರುವುದು.

ವಿಳಾಸ —ಎಂ. ಗುರುರಾವ್, ಆಸ್ಪಟಲ್ ಅಸಿಸ್ಟೆಂಟ್,
ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

ವೃತ್ತಾಂತ ಪತ್ರಿಕೆ.

ಸ ೧೯೦೪ ನೇ ಇಸವಿ ನವಂಬರ್ ತಾ॥ ೧೬ ನೇ ಗುರುವಾರ

ಲಾರ್ಡ್ ಕರ್ಜನ್ ಪ್ರಭುಗಳು.

ಲಾರ್ಡ್ ಕರ್ಜನ್ ಪ್ರಭುಗಳು ನಾಳೆ ಶನಿವಾರ ಹಿಂದುಸ್ಥಾನವನ್ನು ಬಿಟ್ಟು ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆ. ವೈಸ್‌ರಾಯಿ ಗವರ್ನರ್ ಜನರಲ್ಲಾಗಿ ಅವರು ಈ ರಾಷ್ಟ್ರವನ್ನು ಕಳೆದ ಏಳು ಸಂವತ್ಸರಗಳಿಂದಲೂ ಆಳುತ್ತಾರೆ. ಹೊರಟುಹೋಗುವ ಇಂಥಾ ಸಮಯದಲ್ಲಿ ಅವರಿಗೆ ದೇಹಸ್ಥಿತಿಯು ಅನುಕೂಲವಾಗಿಲ್ಲದೆ ಹೋಯಿತೆಂದು ವಿಷಾದಪಡುವೆವು. ಆದರೆ ಅವರ ಕ್ಷೇಮಾಕಾಂಕ್ಷಿತರೆಲ್ಲಾ ಅವರಿಗೆ ತಮ್ಮ ಜನ್ಮಭೂಮಿಯ ವಾಯುಗುಣವು ಬೇಗನೆ ಕಾಯಪುಷ್ಟಿಯನ್ನೂ ಶರೀರ ಸೌಖ್ಯವನ್ನೂ ಕೊಟ್ಟು ಕಾಪಾಡುವುದೆಂದು ನಿರೀಕ್ಷಿಸುವರು. ಲಾರ್ಡ್ ಕರ್ಜನ್‌ರವರ ರಾಜ್ಯಭಾರ ಕ್ರಮಗಳನ್ನು ನೋಡಿ ಅವರಿಗೆ ಪ್ರತಿ ಪಕ್ಷಿಗಳಾಗಿರತಕ್ಕವರು ಕೂಡ, ಹಿಂದುಸ್ಥಾನಕ್ಕೆ ಬಂದು ಈ ರಾಷ್ಟ್ರವನ್ನಾಳಿದ ವೈಸ್‌ರಾಯಿಗಳ ಪೈಕಿ ಲಾರ್ಡ್ ಕರ್ಜನ್‌ರವರು ಮಹಾ ಸಮರ್ಥರೆಂತಲೂ ಕಾರ್ಯದಕ್ಷರೆಂತಲೂ ಒಪ್ಪಿ ಹೇಳುತ್ತಿದ್ದಾರೆ. ಲಾರ್ಡ್ ಕರ್ಜನ್‌ರವರು ಈ ದೇಶದ ಪ್ರಜಾಕೋಟಿಗಳ ಶ್ರೇಯೋಭಿವೃದ್ಧಿಯನ್ನೇ ಪ್ರಾಮುಖ್ಯವಾಗಿಟ್ಟುಕೊಂಡು, ಅದು ಸಾರ್ಥಕವಾಗುವಂತೆ ವಿಶೇಷ ಕಷ್ಟಪಟ್ಟಿರುತ್ತಾರೆಂದು ನಾವು ನಂಬುವೆವು. ಬಹುಶಃ ಅವರು ಹಿಂದುಸ್ಥಾನದಲ್ಲಿ ಪ್ರಜಾರಂಜಕರೆಂಬ ಹೆಸರನ್ನು ವಿಶೇಷವಾಗಿ ಸಂಪಾ ಕೊಳ್ಳದೆ ಇರಬಹುದು. ಯಾಕಂದರೆ, ಸ್ತೋತ್ರಪ್ರಿ ರಾದವರನ್ನು ಅವರು ಹೊಗಳಿ ಉಬ್ಬಿಸದೆ ಹೋದ ಇನ್ನೂ ಏನೆಂದರೆ, ಬರೀ ಕೆಲಸವನ್ನಿಟ್ಟುಕೊಂಡೂ ತನ ಸೋಮಾರಿತನದಿಂದ ಕಾಲಯಾಪನೆ ಮಾಡುತ್ತಿ ಥಾ ನೌಕರನಾಮಧೇಯರನ್ನು ಅವರು ಸುಮ್ಮನೆ ಬಿಡ ಅವರನ್ನು ಒತ್ತಿ ಅವರಿಂದ ಸರಿಯಾಗಿ ಕೆಲಸ ತೆಗೆದು ಳ್ಳುತ್ತಿದ್ದರು. ಲಾರ್ಡ್ ಕರ್ಜನ್ ಪ್ರಭುಗಳು ಪ್ರತಿ ಒ ಇಲಾಖೆಯ ಕಾರುಬಾರುಗಳನ್ನೂ ಸ್ವತಃ ಪರಿಶೋ ಮಾಡುವುದರಲ್ಲೂ ಅವುಗಳನ್ನೆಲ್ಲಾ ಕ್ರಮಕ್ಕೆ ತಂದಿಡು ವದರಲ್ಲೂ ತುಂಬಾ ಶ್ರಮಪಟ್ಟದ್ದರ ದೆಸೆಯಿಂದ ಅ ಆರೋಗ್ಯವು ಕೆಲವು ಕಾಲದ ವರೆಗೆ ಕೆಟ್ಟುಹೋಗು ತಾಯಿತು. ದೇವರ ದಯದಿಂದ ಅವರು ಯಥಾಪ್ರ ಕಾಯಪುಷ್ಟಿಯನ್ನೂ ದೇಹಾರೋಗ್ಯವನ್ನೂ ಪಡೆ ಸರಾಸರಿ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅವರು ಇ ದೊಡ್ಡ ಪದವಿಗಳಿಗೆ ಏರುತ್ತಾರೆಂದು ನಾವು ನಿರೀ ತ್ತೇವೆ

ಪ್ರಿನ್ಸ್ ಆಫ್ ವೇಲ್ಸ್ ರವರ ಭಕ್ತಿಮಾರ್ಗ.

ಪ್ರಿನ್ಸ್ ಆಫ್ ವೇಲ್ಸ್ ರವರು ಹಿಂದುಸ್ಥಾನದಲ್ಲಿ ಸಂಚಾರ ಮಾಡುವಾಗ್ಗೆ ಭಾನುವಾರಗಳಲ್ಲಿ ಅವರು ಯ ವಿನವಾದ ಉತ್ಸವಗಳಿಗೂ ದಯಮಾಡುವುದಿಲ್ಲವೆಂ ಯಾವ ಊರಿಗಾದರೂ ಹೋಗುವಾಗ ಅಥವಾ ವಾಗ ಭಾನುವಾರದ ದಿನ ವಿಶೇಷ ಕಾರ್ಯಗಳನ್ನು ನತಕ್ಕದ್ದಲ್ಲವೆಂತಲೂ ಅಪ್ಪಣೆ ಕೊಡಿಸಿರುವಂತೆ ತ್ತೇವೆ. ಭಾನುವಾರ ಪ್ರಯಾಣಮಾಡಬೇಕಾದ ರ್ಥದಲ್ಲಿ ಸ್ಪೆಷಲ್ ಗಾಡಿಯನ್ನು ಅಲ್ಲಲ್ಲಿ ನಿಲ್ಲಿಸಿ ಭಗವ ಧನೆ ನಡೆಸುವಂತೆ ಏರ್ಪಾಡಾಗಿದೆ. ಯುವರಾಜರ ಇಷ್ಟುಮಟ್ಟಿಗೆ ಸ್ವಮತಭಕ್ತಿಯುತರಾಗಿದ್ದಾರೆಂದು ನಾ ತುಂಬಾ ಸಂತೋಷಪಡುತ್ತೇವೆ. ಈ ರಾಷ್ಟ್ರದ ಪ್ರಜೆ ಅವರ ಅಪೇಕ್ಷೆಗೂ ಅವರ ಭಕ್ತಿ ಕ್ರಮಗಳಿಗೂ ವಿ ಧವಾಗದಂತೆ ಭಾನುವಾರಗಳಲ್ಲಿ ಅವರಿಗೋಸ್ಕರ ಯ ವಿಶೇಷೋತ್ಸವವನ್ನೂ ಏರ್ಪಡಿಸಲಾರರೆಂದು ರುವೆವು.

ಒಳದೇಶದ ವೃತ್ತಾಂತಗಳು.

ಕಳೆದ ಶನಿವಾರ ಶ್ರೀಮನ್ಮಹಾರಾಜರವರೂ ಮ ಶ್ರೀಯವರೂ ಪರಿವಾರ ಸಹಿತ ನಂಜನಗೂಡಿಗೆ ದೇವರ ಸೇ ದಯಮಾಡಿದ್ದು ಆ ದಿನ ಸಾಯಂಕಾಲವೇ ವಾಪಸು ಬಂ

****

ಇಲ್ಲಿನ ಕಾಪ್ಪಣ್ಣನ ತೋಟದಲ್ಲಿ ಲಕ್ಷ್ಮಣಲಾಲು ಹುಗೆ ಬಂಡ ಎಂಬುವನು ತೆಂಗಿನಕಾಯಿ ಕದ್ದನೆಂದು ರು ಅವನಿಗೆ ಮ್ಯಾಜಿಸ್ಟ್ರೇಟರು ಒಂದು ತಿಂಗಳ ಸಜಾ ವಿಧಿಸಿ

****

ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಸಂ ಪಾಠಶಾಲೆಯಲ್ಲಿ ಈ ಸಲ ನವರಾತ್ರಿಗೆ ಮುಂಚೆ ನಡೆದ ಪರೀಕ್ಷೆಗೆ ಉಮೇದುವಾರರಾಗಿದ್ದ ೪೦ ಮಂದಿ ಪೈಕಿ ಮಂದಿ ಪಾಸಾಗಲಿಲ್ಲ ; ಉಳಿದವರಲ್ಲಿ ೧೮ ಮಂದಿ ಹುಡು ಜ್ಯೋತಿಷ, ವ್ಯಾಕರಣ, ತರ್ಕ, ಮೀಮಾಂಸ, ವೇದಾಂ ಕ್ಯದ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ, ಒಟ್ಟು ೧,೪೦೦ ಯು ಬಹುಮಾನ ಪಡೆದಿರುತ್ತಾರೆ.

ತಾಲ್ಲೂಕು ಹರಿಹರಪುರದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ತೆಗೆದು ಆಲ್ದೂರಿನಲ್ಲಿ ಬಾಳೂರಿನಲ್ಲಿ ಇಡಬೇಕೆಂದು ಸಲ್ಲಿಸಲ್ಪಟ್ಟ ರೋಗ ಸ್ಥಳವಾದ್ದರಿಂದ ಅಲ್ಲಿನ ಆಸ್ಪತ್ರೆಯನ್ನು ತೆಗೆಯಕೂಡದೆಂತಲೂ ಸದರಿ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳು ತೀರ್ಮಾನ ಮಾಡಿದಾರೆ.

****

ಮಳೆ, ಮೋಡ, ಗಾಳಿ, ಹವಾ, ಬಿಸಲು, ಈ ಮುಂತಾದ ಕಾಲಗಳನ್ನು ಯಂತ್ರಸಹಾಯದಿಂದ ಪರೀಕ್ಷೆಮಾಡಿ ಪ್ರಕಟಿಸುವ ಸರ್ಕಾರದವರು ಹತ್ತಾರು ವರುಷಗಳಿಂದಲೂ ಬೇರೆ ಇಲಾಖೆಯನ್ನು ಇಟ್ಟಿರುತ್ತಾರೆ. ಈ ಇಲಾಖೆಗೆ ಕಳೆದ ವರುಷ ... ಚಿಲ್ಲರೆ ರೂಪಾಯಿ ಖರ್ಚಾಯಿತು.

****

ಚಿಕ್ಕಗಿರಿಯಲ್ಲಿರುವ ಆರ್ಯಬಾಲಿಕಾ ಪಾಠಶಾಲೆಯನ್ನು ಸರ್ಕಾರಕ್ಕೆ ಸೇರಿಸಿಬಿಟ್ಟರು. ಅದರ ಕಟ್ಟಡವನ್ನು ಫಂಡಿನಲ್ಲಿರುವ ೬೦೦ ರೂಪಾಯನ್ನು ಅವರಿಗೆ ವಹಿಸುವ ಭಾಗದಲ್ಲಿ ... ಅಥವಾ ದ್ರವ್ಯ ಸಹಾಯ ಮಾಡಿದವರು ಮುಂದಿನ ತಿಂಗಳು ...ಲ್ಲಿ ಸಭೆ ಸೇರಿ ಚರ್ಚಿಸುವವರಾಗಿದಾರೆ.

****

ಮಿಟ್ಟಕ್ಷರ ಮತವನ್ನು ತ್ಯಜಿಸಿ ಅನ್ಯಮತವನ್ನು ಅವಲಂಬಿಸುವಾಗ ಅವರ ಪಿತ್ರಾರ್ಜಿತ ಸ್ವತ್ತಿನಲ್ಲಿ ದಾಯಭಾಗ ಕೊಡಬೇಕೆಂದಾಗಿ ಗವರ್ನಮೆಂಟಿನವರು ಒಂದು ಮಸೂದೆ ಕಾನೂನು ಮಾಡಿರುತ್ತಾರಷ್ಟೆ. ಈ ವಿಷಯವನ್ನು ಕುರಿತು ಚರ್ಚೆ ಮಾಡಿ ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ಅರಿಕೆ ಮಾಡುವ ಉದ್ದೇಶದಿಂದ ರಾಜಧಾನಿಯ ಪ್ರಜೆಗಳು ಇಲ್ಲಿನ ಟೌನ್ ಹಾಲಿನಲ್ಲಿ ನೆನ್ನೆ ... ಸಭೆ ಸೇರುವವರಾಗಿದ್ದರು.

****

ಮೈಸೂರು ಕಸಬುಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವನ್ನು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಸಬೇಕೆಂದು ಮೊದಲು ಯೋಚನೆ ಇತ್ತು. ಈಗ ಗವರ್ನಮೆಂಟಿನ ಆ ಕಟ್ಟಡವು ಅನುಕೂಲವಾಗಿಲ್ಲವೆಂತಲೂ ಪಶ್ಚಿಮಭಾಗದ ಪಟ್ಟಿ ಅರಸುಗಳ ಬೋರ್ಡಿಂಗ್ ಸ್ಕೂಲಿನ ಎದುರು ಭಾಗದಲ್ಲಿ ಮೈದಾನದೊಳಗೆ ಭಾರೀ ಚಪ್ಪರ ಮುಂತಾದ್ದನ್ನು ಹಾಕಿ, ಅಲ್ಲಿ ಪ್ರದರ್ಶನವನ್ನು ನಡಿಸಬೇಕೆಂತಲೂ ತೀರ್ಮಾನ ಮಾಡಿ, ಅದರ ಖರ್ಚಿಗೆ ೨೮,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುವಂತೆ ಗೊತ್ತಾಗುತ್ತೇನೆ.

****

ಮೈಸೂರು ಸಂಸ್ಥಾನದಲ್ಲಿ ಬಾಕಿ ಅಂದರೆ ೧೯೦೪—೫ ನೆ ಸಾಲಿನಲ್ಲಿ ಬೆಳೆಗಳು ಯಾವ ರೀತಿಯಲ್ಲಿವೆ ಎಂಬುವದನ್ನು ತಿಳಿದುಕೊಳ್ಳುವ ಉದ್ದೇಶದಿಂದ ಸರ್ಕಾರದವರು ಅಪ್ಪಣೆ ಕೊಟ್ಟಿರುವುದೇನೆಂದರೆ— ವ್ಯವಸಾಯಗಾರರು ಬರೆಯತಕ್ಕ ಪಹಣಿ ಪತ್ರಿಕೆಯು ... ಇಲ್ಲವೇ ಎಂಬುದನ್ನು ಶೇಖದಾರರೂ ಅಮಲ್ದಾರರೂ ಅಸಿಸ್ಟೆಂಟ್ ಕಮಿಷನರುಗಳೂ, ಡೆಪ್ಟಿ ಕಮಿಷನರುಗಳೂ ಪದೇ ಪದೇ ಗ್ರಾಮಾಂತ್ರ ಸಂಚಾರ ಮಾಡಿ ಆದಷ್ಟು ಜಾಗರೂಕತೆಯಿಂದ ಮುಂದಿನ ಫೆಬ್ರವರಿ ನಾಲ್ಕನೇ ವಾರದ ಅಂತ್ಯದೊಳಗೆ ಗವರ್ನಮೆಂಟಿಗೆ ರಿಪೋರ್ಟು ಕಳುಹಿಸತಕ್ಕದ್ದು ಎಂಬುದೇ.

****

ಕಳೆದ ಅಕ್ಟೋಬರ್ ೯ ನೆ ತಾರೀಖು ಬೆಳಿಗ್ಗೆ ರಾಜಧಾನಿಯಲ್ಲಿ ದಿವಾನ್ ಸರ್ ಕೃಷ್ಣಮೂರ್ತಿಯವರೇ ಮೊದಲಾದ ಲೌಕಿಕ ಜನರೂ ಅರಮನೆ ಧರ್ಮಾಧಿಕಾರಿಗಳೇ ಮುಂತಾದ ವೈದಿಕರೂ ... ಇಲ್ಲಿನ ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ಸಭೆ ಸೇರಿ, ಆರ್ಯಧರ್ಮೋಜ್ಜೀವಿನಿ ಎಂಬ ಸಭೆಯನ್ನು ಸ್ಥಾಪಿಸಿದ ವೃತ್ತಾಂತವನ್ನು ಹಿಂದೆಯೇ ತಿಳಿಸಿರುತ್ತೇವಷ್ಟೆ. ಈ ಸಂಘದವರು ಕನ್ನಡದಲ್ಲಿ ಮೂರು ತಿಂಗಳಿಗೊಂದು ಸಾರಿ ಒಂದು ಪತ್ರಿಕೆಯನ್ನು ಪ್ರಕಟಿಸಲಾರಂಭಿಸಿದಾರೆ. ಇದಕ್ಕೆ ವಾರ್ಷಿಕ ಚಂದಾ ಒಂದು ರೂಪಾಯಿ. ಅದರ ಮೊದಲನೆ ಸಂಚಿಕೆಯಲ್ಲಿ ಈ ಪತ್ರಿಕಾ ... ಆ ಸಭೆಯ ವೃತ್ತಾಂತ, ಅದರ ಕಾರ್ಯನಿರ್ವಾಹಕ ಸಂಘದ ... ಕೂಟಗೆ ನಡೆಸಿದ ವೃತ್ತಾಂತ, ಈ ವಿಷಯಗಳನ್ನು ಪ್ರಕಟಿಸಿದೆ.

****

ಹಿರೋಡೆಯಲ್ಲೂ ಶ್ರೀರಂಗಪಟ್ಟಣದಲ್ಲೂ ಪ್ಲೇಗ್ ಉಪದ್ರವವಿರುವದರಿಂದ ಆ ಪ್ರಾಂತ್ಯದ ಜನರು ರಾಜಧಾನಿಗೆ ಬಂದರೆ ಆ ... ಬಿದ್ದರೆ ಮನೆಯವರು ಕೂಡಲೆ ಸರ್ಕಾರಕ್ಕೆ ತಿಳಿಸಬೇಕೆಂತಲೂ ಹಾಗೆ ತಿಳಿಸದೆ ಹೋದರೆ ರಾಜಧಾನಿಯಲ್ಲಿ ಉಪದ್ರ ಪ್ರಾರಂಭವಾಗಿ ಪ್ರಜೆಗಳು ನಾನಾ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುವದೆಂತಲೂ, ಸರ್ಕಾರದವರು ಕಾಯಿಲೆಯವರನ್ನು ಆಸ್ಪತ್ರೆಯಲ್ಲೂ ಅವರ ಸಂಪರ್ಕದಲ್ಲಿರುವ ಮನೆಯವರನ್ನು ಹೆಲ್ತ್ ಕ್ಯಾಂಪಿನಲ್ಲೂ ಇಟ್ಟು, ಬಹು ಎಚ್ಚರಿಕೆಯಿಂದ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವಂತೆಯೂ ನವ್ಮ ಡೆಪ್ಟಿ ಕಮಿಷನರವರು ಪ್ರಜೆಗಳಿಗೆಲ್ಲಾ ತಿಳಿಸಿರುತ್ತಾರೆ. ಈ ಉಪದ್ರವು ರಾಜಧಾನಿಯನ್ನು ಪ್ರವೇಶಿಸಿಕೊಳ್ಳದಂತೆ ಜನರು ಈ ರೀತಿಯಾಗಿ ಸರ್ಕಾರದವರಿಗೆ ಸಹಾಯಮಾಡುವರೆಂದು ನಿರೀಕ್ಷಿಸುತ್ತೇವೆ.

****

ಹಿಂದೀಯಾನೆಯಿಂದ ಬಿಡುಗಡೆ ಹೊಂದುವುದಕ್ಕೆ ಮುಂಚೆ ... ಜೈಲ್ ಅಧಿಕಾರಿಗೆ ತಾನು ಜೈಲಿನಿಂದ ಹೋದ ಮೇಲೆ ವಾಸಮಾಡುವ ಗ್ರಾಮ ಊರು ಕೇರಿಗಳನ್ನು ತಿಳಿಸಿ ಬರೆಸಬೇಕೆಂತಲೂ ಆ ಅಧಿಕಾರಿಯು ಇಲಾಖೆಯ ಮೂಲಕ ಅಂಥಾ ಊರಿನ ಪೊಲೀಸ್ ಸ್ಟೇಷನ್‌ಗೆ ಮೊದಲೇ ಅವನ ವಿಷಯ ತಿಳಿಸಬೇಕೆಂತಲೂ, ಅವನು ಅಂಥಾ ಊರಿಗೆ ಹೋಗತಕ್ಕಲೇ ಅಲ್ಲಿನ ಪೊಲೀಸ್ ಸ್ಟೇಷನ್ನಿನಲ್ಲಿ ಹಾಜರಾಗಿ ತನ್ನ ವಾಸಸ್ಥಳ ಜೀವನ ಮುಂತಾದ್ದನ್ನು ತಿಳಿಸಬೇಕೆಂತಲೂ ಅಲ್ಲಿಂದ ಅವನು ಆಚೆ ಕಡೆಗಳಿಗೆ ಹೋಗಬೇಕಾದರೂ ಒಂದೆರಡು ದಿನ ಮುಂಚಿತವಾಗಿ ಠಾಣಾದಲ್ಲಿ ಬರೆಸಬೇಕೆಂತಲೂ ಇದಕ್ಕೆ ತಪ್ಪಿದರೆ ಅಂಥಾ ವ್ಯಕ್ತಿಯನ್ನು ಹಿಡಿ

ದು ಶಿಕ್ಷಿಸಲಾಗುವುದೆಂತಲೂ ನವ್ಮ ಸರ್ಕಾರದವರು ಒಂದು ಹೊಸ ಕಾನೂನು ಮಾಡಿ ಜಾರಿಯಲ್ಲಿ ತಂದಿದಾರೆ. ಅದರ ಹೀಗೆ ಬಿಡುಗಡೆ ಹೊಂದಿ ಗ್ರಾಮಾಂತರಗಳಿಗೆ ಹೋಗಿ ಸೇರಿಕೊಳ್ಳುವ ವ್ಯಕ್ತಿಗಳಿಗೆ ... ಕಾಟ ... ತಪ್ಪುವದೆಂದು ಸರ್ಕಾರದವರು ಮೇಲ್ವಿಚಾರಣೆ ನೋಡಿಕೊಂಡಾರೆಂದು ನಿರೀಕ್ಷಿಸುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಸಬ್ ಆ॥ ಸರ್ಜನ್ ಮೆ॥ ವಿ. ಮುತ್ತುಸ್ವಾಮಿದಾಸ್ ಯವರಿಗೆ ನೊವೆಂಬರ್ ೧೫ ರಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗವರ್ನಮೆಂಟ್ ಡೆಪ್ಟಿ ಸೆಕ್ರೆಟರಿ ಮೆ॥ ಕೆ. ಚಂದ್ರಶೇಖರ ಐಯರವರಿಗೆ ನೊವೆಂಬರ್ ೧೬ ರಿಂದ ಕ್ರಿಸ್‌ಮಸ್ ರಜಾ ಪ್ರಾರಂಭದ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೋಲಾರ್ ಚಿನ್ನದ ಗಣಿಗಳ ಪೊಲೀಸ್ ಸೂಪರಿಂಟೆಂಡೆಂಟ್ ಮೆ॥ ಪಿ. ಬಿ. ಥಾಮಸ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ಅದರ ಜೊತೆಗೆ ಒಂಬತ್ತು ತಿಂಗಳ ಫರ್ಲೋ ರಜವನ್ನು ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ತುಂಕೂರು ತಾಲ್ಲೂಕ್ ಅಮಲ್ದಾರ್ ಮೆ॥ ಎಚ್. ಸೀತಾರಾಮಯ್ಯನವರು ಎಕ್‌ಸ್ಟ್ರಾ ಅ॥ ಕಮಿಷನರಾಗಿ ನೇಮಿಸಲ್ಪಟ್ಟು, ತುಂಕೂರು ಡಿಸ್ಟ್ರಿಕ್ಟ್ ಎಕ್ಸೈಸ್ ಕೆಲಸಕ್ಕೆ ವರ್ಗ ಮಾಡಲ್ಪಟ್ಟಿದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಇನ್‌ಸ್ಪೆಕ್ಟರ್ ಮೆ॥ ಸಿ. ನಾರಾಯಣರಾಯರು ತುಂಕೂರು ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು.

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಅ॥ ಕನ್ಸರ್ವೇಟರ್ ಮೆ॥ ಸಿ. ಅಪ್ಪಯ್ಯನವರು—ಮೈಸೂರಿನಿಂದ ತುಂಕೂರು ಡಿಸ್ಟ್ರಿಕ್ಟ್‌ಗೆ, ಡೆಪ್ಟಿ ಕನ್ಸರ್ವೇಟರ್ ಮೆ॥ ಬಿ. ಹೀರಾಸಿಂಗ್ ಯವರು—ತುಂಕೂರಿನಿಂದ ಕಡೂರು ಡಿಸ್ಟ್ರಿಕ್ಟ್‌ಗೆ, ಅ॥ ಕನ್ಸರ್ವೇಟರ್ ಮೆ॥ ಎ. ಜಿ. ರಾಮರಾಯರು—ಕಡೂರಿನಿಂದ ಮೈಸೂರು ಡಿಸ್ಟ್ರಿಕ್ಟ್‌ಗೆ.

ಪ್ರಿನ್ಸ್ ಆಫ್ ವೇಲ್ಸ್‌ರವರ ದೇಶಸಂಚಾರ.

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಪರಿವಾರಸಹಿತ ಕಳೆದ ಗುರುವಾರ ಬೆಳಿಗ್ಗೆ ೧೦ ಘಂಟೆಗೆ ಬೊಂಬಾಯಿ ಪಟ್ಟಣದ ಸಮುದ್ರತೀರವನ್ನು ತಲುಪಿದರು. ಅವರು ದಯಮಾಡಿಸಿದ ಹಡಗೂ ಅದಕ್ಕೆ ಜೊತೆಗಾವಲಾಗಿಯೂ ಗೌರವಾರ್ಥವಾಗಿಯೂ ಬಂದ ಹಡಗುಗಳೂ ಬಹು ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದವು. ಪ್ರತಿ ಹಡಗಿನಿಂದಲೂ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ೧೧ ಘಂಟೆ ಹೊತ್ತಿಗೆ ಹಡಗುಗಳೆಲ್ಲಾ ತವ್ಮ ತವ್ಮ ಸ್ಥಾನಗಳಲ್ಲಿ ನಿಂತುಕೊಂಡವು. ವೈಸ್‌ರಾಯಿ ಲಾರ್ಡ್ ಕರ್ಸನ್‌ರವರು ಪತ್ನಿಸಹಿತರಾಗಿ ಸಕಲ ಮರ್ಯಾದೆಗಳೊಡನೆ ಮಧ್ಯಾಹ್ನ ೩ ಗಂಟೆಗೆ ಶ್ರೇಷ್ಠವಾದ ನಾವೆಯಲ್ಲಿ ಕುಳಿತು ಸಮುದ್ರತೀರಕ್ಕೆ ದಯಮಾಡಿ ನಾವೆಯನ್ನು ಬಿಟ್ಟು ಬೀ ಎಂಬ ದೋಣಿಯಲ್ಲಿ ಕುಳಿತು, ಪ್ರಿನ್ಸ್ ಆಫ್ ವೇಲ್ಸ್‌ರವರ ಸಂದರ್ಶನಕ್ಕಾಗಿ ಅವರಿದ್ದ ಹಡಗಿಗೆ ದಯಮಾಡಿದರು. ಸುಮಾರು ಕಾಲುಗಂಟೆ ಬಿಟ್ಟುಕೊಂಡು ಬೊಂಬಾಯಿ ಗವರ್ನರ್ ಲಾರ್ಡ್ ಲಾಮಿಂಗ್‌ಟನ್‌ರವರು ಮುಖ್ಯ ಉದ್ಯೋಗಸ್ಥರ ಸಹಿತ ಯುವರಾಜರವರ ಭೇಟಿಗೆ ಹೋದರು.

ಸಾಯಂಕಾಲ ೪ ಗಂಟೆಗೆ ಯುವರಾಜರವರು ಪತ್ನಿಸಹಿತರಾಗಿ ಪರಿವಾರದೊಡನೆ ಕೂಡಿ ಹಡಗಿನಿಂದಿಳಿದು ದೋಣಿಗಳಲ್ಲಿ ಕುಳಿತು ಭೂಸ್ಪರ್ಶ ಮಾಡಿದರು. ಕೂಡಲೆ ಒಂಬತ್ತನೆ ವಾದ್ಯಗಳೂ ಕಹಳೆಗಳೂ ಇನ್ನೊಂದು ಕಡೆ ಗೌರವಾರ್ಥವಾಗಿ ಹಾರಿಸಲ್ಪಟ್ಟ ತೋಪುಗಳೂ ಎಲ್ಲಾ ಕಡೆಗಳಲ್ಲೂ ಜಯಘೋಷಗಳೂ ಮೊರೆದವು. ಮೊದಲು ಕೆಲವು ನ್ಯಾಯಾಧಿಪತಿಗಳನ್ನೂ ಐಡಾರ್ ಸಂಸ್ಥಾನದ ಮಹಾರಾಜಾ ಸರ್ ಪ್ರತಾಪಸಿಂಗ್‌ರವರನ್ನೂ ಕಂಡು ಯುವರಾಜರವರು ಅವರ ಯೋಗಕ್ಷೇಮಗಳನ್ನು ವಿಚಾರಿಸಿದರು. ಪ್ರಿನ್ಸ್ ಆಫ್‌ವೇಲ್ಸ್‌ರವರು ಅಲ್ಲಿಂದ ಮೆಟ್ಟಿಲು ಹತ್ತಿ ಮೇಲಕ್ಕೆ ಬಂದು ಅಲ್ಲಿ ಅವರ ಆಗಮನವನ್ನು ಎದುರುನೋಡುತ್ತಾ ಕಾದಿದ್ದ ದೊಡ್ಡ ದೊಡ್ಡ ಉದ್ಯೋಗಸ್ಥರಿಗೆ ದರ್ಶನಕೊಟ್ಟು, ಮುಖ್ಯ ಮುಖ್ಯರಾದ ದೇಶೀಯರಾಜರುಗಳನ್ನು ಸಂಧಿಸಿ, ಅವರ ಸಂಗಡ ಕೆಲವು ನಿಮಿಷಗಳು ಸಲ್ಲಾಪಮಾಡಿ, ಅಲ್ಲಿಂದ ಮುಂದೆ ನೇತ್ರಾನಂದಕರವಾಗಿಯೂ ವಿಶಾಲವಾಗಿಯೂ ಹಾಕಿದ್ದ ಸರ್ವಾಲಂಕಾರಯುಕ್ತವಾದ ಮಂಟಪಕ್ಕೆ ದಯಮಾಡಿದರು. ಇಲ್ಲಿ ಬೊಂಬಾಯಿ ಪಟ್ಟಣದ ಪುರಾಧ್ಯಕ್ಷರು, ಎಲ್ಲಾ ಕೋಮುಗಳ ಮುಖಂಡರು, ವರ್ತಕಮಂಡಲಿಯವರು, ಕಾರ್ಖಾನೆಗಳ ಮಾಲೀಕರು, ಲಕ್ಷಾಧಿಪತಿಗಳು ಈ ಮೊದಲಾದ ಪ್ರಜಾಪ್ರತಿನಿಧಿಗಳು ಸಾವಿರಗಟ್ಟಲೆಯಾಗಿ ಯುವರಾಜರವರ ಮತ್ತು ಅವರ ಪತ್ನಿಯರವರ ಸಂದರ್ಶನವನ್ನೇ ಎದುರುನೋಡುತ್ತಾ ಕಾದಿದ್ದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ದಯಮಾಡಿ, ಆ ಮಂಟಪದಲ್ಲಿ ಅವರಿಗಾಗಿ ಏರ್ಪಡಿಸಿದ್ದ ರತ್ನಖಚಿತವಾದ ಸಿಂಹಾಸನಗಳನ್ನು ಅಲಂಕರಿಸಿದರು. ಕೂಡಲೇ ಪುರಾಧ್ಯಕ್ಷರಲ್ಲಿ ಪ್ರಮುಖರಾದ ಸರ್ ಫೆರೋಸ್ ಷಾ ಎಂ. ಮೆಹತಾಯವರು ಮುಂದೆ ಬಂದು ಯುವರಾಜರನ್ನೂ ಅವರ ಪತ್ನೀಯರವರನ್ನೂ ಕುರಿತು ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಕೈಪೆಟ್ಟಿಗೆಯಲ್ಲಿಟ್ಟು ಅವರುಗಳಿಗೆ ಸಮರ್ಪಣೆ ಮಾಡಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಅತ್ಯಾದರಪೂರ್ವಕವಾಗಿ ಸ್ವೀಕರಿಸಿ, ವಿಲಾಯಿತಿ ರಾಜ್ಯದ ರಾಜಮನೆತನದವರೆಲ್ಲಾ ಹಿಂದುಸ್ಥಾನದ ಪ್ರಜೆಗಳ ಮೇಲಿರುವ ಅಂಚಂಚಲವಾದ ಪ್ರೀತಿವಿಶ್ವಾಸಗಳನ್ನೂ ಅದರಲ್ಲೂ ತವ್ಮ ತಂದೆಯವರಾದ ಮಹಾರಾಜಾಧಿರಾಜ ಚಕ್ರವರ್ತಿಯವರಿಗಿರುವ ಪ್ರೇಮಾತಿಶಯವನ್ನೂ ವಿವರಿಸಿ, ಬೊಂಬಾಯಿ ಪ್ರಜೆಗಳ ಅಭಿನಂದನ ಪೂರ್ವಕವಾದ ಆ ವಿಜ್ಞಾಪನಾಪತ್ರಿಕೆಗಾಗಿಯೂ ಅದರಲ್ಲಿ ಕಂಡ ಭಯಭಕ್ತಿ ಪ್ರೀತಿಯುಕ್ತವಾದ ವಾಕ್ಯಗಳಿಗಾಗಿಯೂ ಅವರನ್ನು ಮನಃಪೂರ್ವಕ ವಂದಿಸಿದರು.

ಹಿಂದುಸ್ಥಾನವನ್ನು ನೋಡಬೇಕೆಂಬ ಕುತೂಹಲವು ತವ್ಮಗೆಳಗೆ ವಿಶೇಷವಾಗಿತ್ತೆಂತಲೂ ಈಗ ಅದು ಸಾಫಲ್ಯವಾಯಿತೆಂತಲೂ ವಿಶೇಷಕಾಲ ಅವರುಗಳು ಈ ರಾಷ್ಟ್ರದಲ್ಲಿದ್ದು ಸಂಚಾರಮಾಡಿ ಪ್ರಜೆಗಳ ರಾಜಭಕ್ತಿ ಪ್ರೀತಿಯುಕ್ತವಾದ ಕಾರ್ಯಗಳನ್ನೆಲ್ಲಾ ಸಾಂಗವಾಗಿಯೂ ಸಂಪೂರ್ಣವಾಗಿಯೂ ನೋಡಲು ಅವಕಾಶವಾಗಲಾರದಾದರೂ ಅವುಗಳ ಅಭಿಪ್ರಾಯಗಳೇನೇ ಭಾವಿಸುವುದಕ್ಕೆ ಸಂಶಯವಿಲ್ಲವೆಂತಲೂ, ಇಲ್ಲಿ ಕಾಣುವ ನೋಡಿ ಕೇಳಿದ ವಿಷಯಗಳೆಲ್ಲಾ ತಮಗೆ ಯಾವತ್ತೂ ಜ್ಞಾಪಕದಲ್ಲಿರುವವೆಂತಲೂ, ಈ ರಾಷ್ಟ್ರದ ಪ್ರಜೆಗಳಲ್ಲಿರುವ ರಾಜಭಕ್ತಿವಿಶ್ವಾಸಗಳನ್ನೂ ಅವರ ಸತ್ಕಾರಗಳನ್ನೂ ಚಕ್ರವರ್ತಿಯವರಿಗೂ ಮಹಾರಾಜ್ಞಿಯವರಿಗೂ ಖಂಡಿತವಾಗಿಯೂ ಅರಿಕೆ ಮಾಡುತ್ತೇವೆಂತಲೂ ಅಪ್ಪಣೆ ಕೊಡಿಸಿದರು. ತರುವಾಯ ಪುರಾಧ್ಯಕ್ಷರು ರಾಜದಂಪತಿಗಳಿಗೆ ನಾನಾ ತರಾಯಗಳನ್ನೊಪ್ಪಿಸಿ ಸಂತೋಷಪಡಿಸಿದರು.

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ಶ್ರೇಷ್ಠವಾದ ಸಾರೋಟಿನಲ್ಲಿ ಕುಳಿತು ಸೈನ್ಯವೇ ಮೊದಲಾದ ಸಕಲ ಮರ್ಯಾದೆಗಳೊಡನೆ ಬೊಂಬಾಯಿ ಪಟ್ಟಣದೊಳಗೆ ಮೆರವಣಿಗೆಯಾಗಿ ದಯಮಾಡಿದರು. ರಾಜಬೀದಿಗಳ ಶೃಂಗಾರವೂ ಪ್ರಜಾಕೋಟಿಗಳ ಜಯಧ್ವನಿಗಳೂ ಆ ದಿನ ವಿವರಿಸಲಾಗದಷ್ಟು ಸಂತೋಷಕರವಾಗಿಯೂ ಸಂಭ್ರಮಯುಕ್ತವಾಗಿಯೂ ಇದ್ದವು.

ದರ್ಬಾರು ಮುಂತಾದ್ದು.

ತಾ॥ ೧೨ನೆ ರವಿವಾರ ಮಧ್ಯಾಹ್ನ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ಬೊಂಬಾಯಿ ಗವರ್ನಮೆಂಟ್ ಹೌಸ್ ಬಂಗಲೆಯಲ್ಲಿ ದರ್ಬಾರ್ ಮಾಡಿದರು. ಸಮಸ್ತ ಬಿರುದುಗಳೂ ಮರ್ಯಾದೆಗಳೂ ಸೈನ್ಯ ಸಲ್ಯೂಟುಗಳೂ ಮೈದಾನದಲ್ಲಿ ಮೆರೆಯುತ್ತಿದ್ದವು. ಕೊಲ್ಲಾಪುರ ಸಂಸ್ಥಾನದ ಮಹಾರಾಜರವರು, ಕಚ್ ಸಂಸ್ಥಾನದ ರಾವ್ ರಾಜರು, ಕಥ್ಯವಾಡ ಸಂಸ್ಥಾನಗಳ ರಾಜರುಗಳು, ಜುನಾಘಡದ ನವಾಬರು, ನವಾನಗರದ ಜಾಂ ಸಾಹೆಬ್ ರಾಜರು, ಭಾವನಗರದ ಠಾಕೂರ್ ಸಾಹೆಬ್ ರಾಜರು, ರಾಜಪಿಪ್ಲ ಸಂಸ್ಥಾನದ ರಾಜರು, ಕ್ಯಾಂಬೇ ನವಾಬರು, ಪೋರಬಂದರಿನ ರಾಣಾರವರು, ಧ್ರಂಗಧ್ರ ಸಂಸ್ಥಾನದ ರಾಜಾಸಾಹೇಬರು, ಗೊಂಡಾಲ್ ಸಂಸ್ಥಾನದ ಠಾಕೂರ್ ಸಾಹೇಬ್‌ಯವರು, ಈ ಮೊದಲಾದ ಬೊಂಬಾಯಿ ಆಧಿಪತ್ಯಕ್ಕೆ ಸೇರಿರುವ ದೇಶೀಯ ಸಂಸ್ಥಾನಗಳ ರಾಜರುಗಳು ಒಬ್ಬರಾದಮೇಲೊಬ್ಬರು ತವ್ಮ ತವ್ಮ ಬಿರುದು ಪರಿವಾರಗಳೊಡನೆ ಸನ್ಮಾನಪೂರ್ವಕವಾಗಿ ದರ್ಬಾರಿಗೆ ಬಂದು, ಸ್ವಲ್ಪಹೊತ್ತು ಯುವರಾಜರವರ ಸಂಗಡ ಕಲೆತು ಪರಸ್ಪರ ಯೋಗಕ್ಷೇಮಗಳನ್ನು ವಿಚಾರಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಈ ರಾಜರುಗಳನ್ನೆಲ್ಲಾ ವಿಶೇಷ ಪ್ರೀತಿಯಿಂದಲೂ ಸಗೌರವವಾಗಿಯೂ ಕಂಡು, ಕಡೆಯಲ್ಲಿ ಎಲ್ಲರಿಗೂ ಅತ್ತರ್ ಪಾನ್ ಮುಂತಾದ್ದನ್ನು ಕೊಡಿಸಿ ಕಳುಹಿಸಿಕೊಟ್ಟರು. ಅನಂತರ ಯುವರಾಜರವರ ಪತ್ನೀಯರವರು ಜನಾನಿಗೆ ದಯಮಾಡಿ ಶ್ರೇಷ್ಠಾಸನವನ್ನಲಂಕರಿಸಿ, ದೇಶೀಯ ರಾಜರುಗಳ ಜನಾನಾ ಸ್ತ್ರೀಯರನ್ನೂ, ಬೊಂಬಾಯಿ ಪಟ್ಟಣದ ದೇಶೀಯ ದೊಡ್ಡಮನುಷ್ಯರ ಪತ್ನೀ ಪುತ್ರಿಯರನ್ನೂ ಕರೆಸಿಕೊಂಡು, ಎಲ್ಲರಿಗೂ ಭೇಟಿಕೊಟ್ಟು, ಸ್ವಲ್ಪಹೊತ್ತು ಅವರ ಸಂಗಡ ಸಂಭಾಷಣೆಮಾಡಿ, ಪದ್ಧತಿಯನ್ನನುಸರಿಸಿ ಅವರಿಗೆಲ್ಲಾ ಮರ್ಯಾದೆಮಾಡಿ ಕಳುಹಿಸಿದರು.

ಪ್ರಿನ್ಸ್ ಆಫ್ ವೇಲ್ಸ್‌ರವರು ಆ ದಿನ ಮಧ್ಯಾಹ್ನದಮೇಲೆ ಪತ್ನಿ ಪರಿವಾರಸಹಿತ ಸಾರೋಟಿನಲ್ಲಿ ಕುಳಿತು ಸಮಸ್ತ ಮರ್ಯಾದೆಗಳೊಡನೆ ರಾಜಭಕ್ತಪ್ರಜೆಗಳ ಸಂತೋಷಾರ್ಥವಾಗಿ ಏರ್ಪಡಿಸಿದ್ದ ಮಂಟಪಕ್ಕೆ ಚಿತ್ತೈಸಿ, ಅಲ್ಲಿ ನಡೆದ ನಾನಾ ಸಂತೋಷೋತ್ಸವಗಳನ್ನೂ ಆಟಪಾಟ ವಿನೋದಗಳನ್ನೂ ಪರಾಂಬರಿಸಿದರು. ಅಲ್ಲಿಂದ ಮುಂದಕ್ಕೆ ಮೆರವಣಿಗೆಯಾಗಿ ದಯಮಾಡಿ, ರಾಜಬೀದಿಗಳ ಅಲಂಕಾರವನ್ನೂ ಕಿಕ್ಕಿರಿದಿದ್ದ ಪ್ರಜೆಗಳ ಕೋಲಾಹಲವನ್ನೂ ನೋಡಿ ಪರಮಸಂತೋಷದೊಡನೆ ಬಾರಿಬಾರಿಗೂ ಪ್ರತಿವಂದನೆ ಮಾಡುತ್ತಾ, ಟೌನಿಗೆ ಬಂದು ಒಂದು ಹೊಸದಾದ ಮತ್ತು ಭಾರಿಯಾದ ರಸ್ತೆಗೆ ಪ್ರಿನ್ಸೆಸ್ ಸ್ಟ್ರೀಟ್ ಎಂಬ ಅಂಕಿತವನ್ನು ದಯಪಾಲಿಸಿ ಪ್ರತಿಷ್ಠೆಮಾಡಿದರು. ಅಲ್ಲಿ ಪುರಾಭಿವೃದ್ಧಿಯ ಸಂಘದವರು ಯುವರಾಜರವರಿಗೆ ತಾವು ಮಾಡುತ್ತಿರುವ ಕಾರ್ಯವಿಶೇಷಗಳನ್ನೆಲ್ಲಾ ಕ್ರೋಢೀಕರಿಸಿ ಅಚ್ಚುಹಾಕಿಸಿದ ಪುಸ್ತಕವನ್ನು ಒಪ್ಪಿಸಿದರು. ಯುವರಾಜರವರು ಅಲ್ಲಿಂದ ಮುಂದಕ್ಕೆ ಹೊರಟು ಎಲ್ಲಾ ಬೀದಿಗಳಲ್ಲೂ ಸಂಚಾರಮಾಡಿಕೊಂಡು ರಾತ್ರಿ ಸುಮಾರು ೭ ಗಂಟೆಗೆ ಅರಮನೆಯನ್ನು ತಲುಪಿದರು.

ಆ ರಾತ್ರಿ ಅರಮನೆಯ ದರ್ಬಾರ್ ಮಂದಿರದಲ್ಲಿ ಯುವರಾಜರವರು ಪತ್ನಿಯುತರಾಗಿ ಸುಮಾರು ೧,೫೦೦ ಮಂದಿ ಯೂರೋಪಿಯನ್ ಸರ್ದಾರರಿಗೂ ದೊರೆಸಾನಿಗಳಿಗೂ ದರ್ಶನಕೊಟ್ಟು, ಅವರ ಪರಿಚಯಮಾಡಿಕೊಂಡರು.

೧೩ನೇ ಸೋ. ಬೆಳಿಗ್ಗೆ ಯುವರಾಜರವರು ಮರ್ಯಾದೆಗಳೊಡನೆ ಹೊರಟು ದೇಶೀಯ ರಾಜರುಗಳ ಬಂಗಲೆಗಳಿಗೆ ದಯಮಾಡಿ, ಮರುಭೇಟಿ ಕೊಟ್ಟು ಅವರಿಂದ ಸನ್ಮಾನಹೊಂದಿ ವಾಪಸು ಬಂದರು. ಮಧ್ಯಾಹ್ನ ಕ್ರೆಸೆಂಟ್ ಮೈದಾನಕ್ಕೆ ದಯಮಾಡಿ ತವಾಪಿ ಬಂಗಲೆ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರು. ಅಲ್ಲಿ ಶೀಫ್ ಜಸ್ಟಿಸ್‌ರು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು. ಯುವರಾಜರವರು ಸದುತ್ತರವನ್ನು ದಯಪಾಲಿಸಿದರು. ಅವರ ಪತ್ನೀಯರವರು ಟೌನ್ ಹಾಲಿಗೆ ದಯಮಾಡಿ, ಶ್ರೇಷ್ಠಾಸನದಲ್ಲಿ ಕುಳಿತು, ಬೊಂಬಾಯಿನ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರಮನೆ ಸ್ತ್ರೀಯರಿಗೂ ದರ್ಶನ ಕೊಟ್ಟು, ಅವರಿಂದ ಅಪೂರ್ವವಾದ ಮರ್ಯಾದೆ ಹೊಂದಿ, ಅವರ ಸಂಗಡ ವಿಶೇಷ ಆದರಪೂರ್ವಕವಾಗಿ ಸಂಭಾಷಣೆ ಮಾಡಿ ಪ್ರತಿವಂದನೆ ಮಾಡಿದರು.

ತಾ॥ ೧೫ನೇ ಬುಧವಾರ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ಬಂಗಲೆಯಲ್ಲೇ ವಿಶ್ರಾಮವಾಗಿ ಕಳೆದು, ಸಾಯಂಕಾಲ ದೇವಾಲಯಕ್ಕೆ ದಯಮಾಡಿ, ಭಗವದಾರಾಧನೆಯನ್ನು ತೀರಿಸಿಕೊಂಡು ಬಂದರು.

ಪವಿತ್ರಾತ್ಮನಿಂದಾಗುವ ಪುನರುಜ್ಜೀವನ.

[ಇಂಗ್ಲಾಂಡಿನಲ್ಲಿ ಒಂದು ಭಾಗವಾಗಿರುವ ವೇಲ್ಸ್ ದೇಶದಲ್ಲಿ ಕೆಲವು ಕಾಲಕ್ಕೆ ಹಿಂದೆ ಆಶ್ಚರ್ಯ ರೀತಿಯಲ್ಲಿ ಭಗವಂತನು ಜನಗಳಲ್ಲಿ ಭಕ್ತಿ ಪುನರ್ಜೀವವನ್ನು ಹುಟ್ಟಿಸಿದನು. ಈ ಮಹತ್ಕಾರ್ಯವು ಇನ್ನೂ ಪ್ರಬಲಿಸುತ್ತಾ ಬರುವದಲ್ಲದೆ ನಮ್ಮ ಹಿಂದೂ ದೇಶದ ಉತ್ತರ ಭಾಗದಲ್ಲಿರುವ ಅಸ್ಸಾಮ್ ದೇಶದಲ್ಲಿಯೂ ತೋರಿದೆ. ಅಲ್ಲಿಂದ ಪೂನಾ ಪಟ್ಟಣದಲ್ಲಿಯೂ ಪ್ರಾರಂಭಿಸಿದೆ. ಇದರ ವಿವರವನ್ನೆಲ್ಲಾ ತಿಳಿಸ ಬೇಕಾದರೆ ವೆಸ್ಲಿಯನ್ ಮಿಷನ್ ಮುದ್ರಾಶಾಲೆಯಲ್ಲಿ ಮುದ್ರಿತವಾಗಿರುವ ಒಂದು ಸಣ್ಣ ಪುಸ್ತಕದಿಂದ (ಬೆಲೆ ೨ ಕಾಸು) ತಿಳಿಯಬಹುದು. ಇಂಥ ಮಹತ್ಕಾರ್ಯವು ನಮ್ಮ ಮೈಸೂರು ಸಂಸ್ಥಾನದ ಬೆಂಗಳೂರಿನಲ್ಲಿಯೂ ಪ್ರತ್ಯಕ್ಷವಾಗಿದೆಯೆಂಬ ವಿಷಯವನ್ನು ಕೇಳಿ ನಾವು ಸಂತೋಷಿಸುವದಲ್ಲದೆ ನಮ್ಮ ವಾಚಕರೂ ಇದಕ್ಕೆ ಲಕ್ಷ್ಯಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಈ ವಿಷಯವು ಬೆಂಗಳೂರಿನಲ್ಲಿ ನಡೆಯುತ್ತಿರುವ ವಿವರವನ್ನು ಕುರಿತು ನಮ್ಮಲ್ಲಿಗೆ ಬಂದ ಲೇಖನವನ್ನು ಇಲ್ಲಿ ಸಂತೋಷವಾಗಿ ಪ್ರಕಟಿಸುತ್ತೇವೆ. ಕ್ರೈಸ್ತ ಛರ್ಚುಗಳಲ್ಲಿ ಪ್ರತ್ಯಕ್ಷವಾಗಿರುವ ಭಕ್ತಿಸಂಜೀವನವೆಂಬ ಜ್ವಾಲೆಯು ನಮ್ಮ ಸಂಸ್ಥಾನದಲ್ಲಿರುವ ಸಕಲ ಜನಗಳಲ್ಲಿಯೂ ಹೊತ್ತಿಕೊಂಡು ಸಕಲರ ಜೀವಮಾನವನ್ನು ಪವಿತ್ರಪಡಿಸಲಿಯೆಂದು ನಾವು ಮನಃಪೂರ್ವಕವಾಗಿ ವಿಜ್ಞಾಪಿಸುತ್ತೇವೆ —ಎಡಿಟರ್]

ಕಳೆದ ವಾರದಿಂದ ಈ ಊರಲ್ಲಿ ಭಗವಂತನ ಕಾರ್ಯವು ಬಹು ಆಶ್ಚರ್ಯವಾಗಿ ನಡೆಯುತ್ತಿರುವದು. ಘನವುಳ್ಳ ಸ್ತ್ರೀಯರಲ್ಲಿ ಒಬ್ಬರಾಗಿಯೂ ಬರಿಶಿಖಂಡದಲ್ಲಿ ವಿಶೇಷವಾಗಿ ಧಾರವಾಡಯಲ್ಲಿರುವ ವಿಧವೆಯರಿಗಾಗಿ ತನ್ನ ಜೀವಮಾನಕಾಲವನ್ನೆಲ್ಲಾ ಒಪ್ಪಿಸಿಕೊಡುತ್ತಾ ನಿಜವಾಗಿ ದೇವರ ಸೇವೆಯನ್ನು ಮಾಡುವವರಾಗಿಯೂ ಇರುವ ಪಂಡಿತ ರಮಾಬಾಯಿಯವರಿಂದ ಸ್ಥಾಪಿತವಾದ ಪಾಠಶಾಲೆಗಳು ಈಗ ಬೆಂಗಳೂರಲ್ಲಿಯೂ ದೊಡ್ಡಬಳ್ಳಾಪುರದಲ್ಲಿಯೂ ಇರುವವು. ಈ ಎರಡು ಪಾಠಶಾಲೆಗಳಲ್ಲಿ ಸುಮಾರು ೩೦ ಮಂದಿ ಸ್ತ್ರೀಯರು ಇರುತ್ತಾರೆ. ಇವರು ಸದ್ಗುಣದಲ್ಲಿಯೂ ಸನ್ಮಾರ್ಗದಲ್ಲಿಯೂ ದೈವ ಭಕ್ತಿಯಲ್ಲಿಯೂ ನಿರತರಾಗುವಂತೆ ಮಾಡಲು ಮೇರಿಬಾಯಿ ಅಮ್ಮನವರು ನೇಮಿಸಲ್ಪಟ್ಟಿರುವರು. ಈ ಶಾಲೆಗಳಲ್ಲಿರುವವರು ನಮ್ಮ ಗೋಚರಕ್ಕೆ ಅಲ್ಪರಾಗಿಯೂ ಭಕ್ತಿಹೀನರಾಗಿಯೂ ತೋರಿದರೂ ಎಲ್ಲರನ್ನು ಏಕರೀತಿಯಾಗಿ ಪ್ರೀತಿಸುವಂಥ ಮತ್ತು ಎಲ್ಲರ ಪಿತೃವಾದ ಸ್ವಾಮಿಯು ಆ ಅಬಲೆಯರಿಂದಲೇ ತನ್ನ ಮಹತ್ಕಾರ್ಯಗಳನ್ನು ಪ್ರಕಾರಪಡಿಸುತ್ತಲಿರುವನೆಂದು ಹೇಳಬಹುದು. ದೇವರಾದ ಯೆಹೋವನು ತನ್ನ ಸೇವಕನಾದ ಎಜೆಕಿಯೇಲನ ಮೂಲಕ ಒಣಗಿದ ಎಲುಬುಗಳಿಂದ ಹ್ಯಾಗೆ ಮಹತ್ಕಾರ್ಯವನ್ನು ನಡಿಸಿದನೋ (ಎಜೆಕಿಯೇ ೩೭ ಸಂ ೧—೫) ಹಾಗೆಯೇ ಈಗಲೂ ಆತನು ತನ್ನ ಕಾರ್ಯವನ್ನು ತಾನು ಹೇಳಿದ ಹಾಗೆಯೇ ಪ್ರಾಣಿಗಳಲ್ಲಿ ಶ್ರೇಷ್ಠರಾದ ಮನುಷ್ಯ ವರ್ಗಕ್ಕೆ ಸೇರಿದ ಈ ಸ್ತ್ರೀಯರಲ್ಲಿ ನಡಿಸುವದು ಆಶ್ಚರ್ಯವಲ್ಲ.

ಪ್ರಪಂಚದಲ್ಲಿ ನಡಿಯತಕ್ಕ ವಿಷಯಗಳನ್ನು ವಿಮರ್ಶೆಮಾಡುವಲ್ಲಿ ಒಂದು ಅಪೂರ್ವವಾದ ಸಂಗತಿಯನ್ನು ಕಂಡುಕೊಳ್ಳುತ್ತೇವೆ. ಏನಂದರೆ ನಮ್ಮ ರಕ್ಷಕನಾದ ಯೇಸುಕ್ರಿಸ್ತ ಸ್ವಾಮಿಯು ತಾನು ಪರಲೋಕಕ್ಕೆ ಏರಿಹೋಗುವಾಗ್ಯೆ ತನ್ನ ಭಕ್ತರಾದ ಶಿಷ್ಯರಿಗೆ ಪರಿಶುದ್ಧಾತ್ಮವನ್ನು ಕಳುಹಿಸಿ ಕೊಡುತ್ತೇನೆಂದು ವಾಗ್ದಾನ ಮಾಡಿ ಪಂಚಾಶತ್ತಮ ದಿನದಲ್ಲಿ ಆದರಿಂದ ಅವರನ್ನು ಹ್ಯಾಗೆ ಅಭಿಷೇಕಿಸಿದನೋ ಆ ಪರಿಶುದ್ಧಾತ್ಮನೇ ಈಗ ವೇಲ್ಸ್, ಅಸ್ಸಾಮ್, ಪೂನ ಮುಂತಾದ ಪ್ರಪಂಚದ ಕೆಲವು ಭಾಗಗಳಲ್ಲಿಯೂ ಮತ್ತು ಮೇಲ್ಕಂಡ ಈ ಎರಡು ಪಾಠಶಾಲೆಗಳಲ್ಲಿಯೂ ತನ್ನ ಸೇವಕರ ಮೂಲಕ ಕೆಲಸ ನಡಿಸುತ್ತಲಿದ್ದಾನೆಂದು ದೃಢವಾಗಿ ಹೇಳಬಹುದು. ಈ ಶಾಲೆಯ ಹೆಂಗಸರು ದೈವ ಭಕ್ತಿಯಲ್ಲಿಯೂ, ಸದ್ಗುಣಗಳಲ್ಲಿಯೂ ಕ್ರಮೇಣ ವೃದ್ಧಿಹೊಂದುತ್ತಿರುವಲ್ಲಿ ಆ ವೇಲ್ಸ್ ಮುಂತಾದ ದೇಶಗಳಲ್ಲಿ ಮುಖ್ಯವಾಗಿ ಅನೇಕ ಅಬಲೆಯರಿಂದೊಡಗೂಡಿದ ಆ ಪೂನಾ ಪಾಠಶಾಲೆಯಲ್ಲಿ ಪವಿತ್ರಾತ್ಮನ ಆಗಮನದಿಂದುಂಟಾದ ಮಹಾ ಸಂತೋಷಕ್ಕೆ ತಾವೂ ಭಾಗಿಗಳಾಗಬೇಕೆಂಬ ಆಶೆಯು ಇವರಲ್ಲಿಯೂ ನಾಟಿ ಕ್ರಮೇಣ ವೃದ್ಧಿಹೊಂದಿತು.

ಪ್ರವಾದಿಯಾದ ಯೋವೇಲನು ಪ್ರವಾದಿಸಿದ್ದಕ್ಕೆ ಅನುಸಾರವಾಗಿ (ಯೋವೇಲನು : ೨ ಸಂ ೨೮ ೨೯ ವಚನ.) ಪವಿತ್ರಾತ್ಮನನ್ನು ಇವರು ಹೊಂದಿದ್ದಕ್ಕೆ ಗುರುತಾಗಿ ಅನೇಕರು ದರ್ಶನಗಳನ್ನು ಕಂಡರು ಮತ್ತು ಅನೇಕರು ಪ್ರಾರ್ಥನೆಯನ್ನು ಕುತೂಹಲಾವಿಷ್ಟರಾಗಿ ಪ್ರಾರ್ಥಿಸಿ ತಾವು ಇಂಥಿನವರೆಗೂ ಮಾಡಿದ ಪಾಪಗಳನ್ನು ಎಲ್ಲರ ಮುಂದೆ ಸ್ವಲ್ಪವಾದರೂ ನಾಚಿಕೆಯಿಲ್ಲದೆ ಅರಿಕೆಮಾಡಿಕೊಂಡರು. ಕಳ್ಳತನ ಮಾಡಿದವರನೇಕರು ತಾವು ಕದ್ದ ಪದಾರ್ಥಗಳನ್ನು ತಂದು ಕೊಟ್ಟುಬಿಟ್ಟರು. ಕೆಲವರು ಸ್ವಾಮಿಯಾದ ಯೇಸುಕ್ರಿಸ್ತನನ್ನೇ ತಮ್ಮ ನಿಜವಾದ ಆಭರಣವನ್ನಾಗಿ ಭಾವಿಸಿಕೊಂಡು ತಮ್ಮಲ್ಲಿದ್ದ ಹಣವನ್ನೂ ಆಭರಣಗಳನ್ನೂ ತಂದು ಸ್ವಾಮಿಯ ಕಾರ್ಯಕ್ಕೋಸ್ಕರ ಕೊಟ್ಟಿರುವರು. ಮೇಲೆ ಹೇಳಿದ ಆ ಗುಣಗಳು ಪವಿತ್ರಾತ್ಮನ ಸಹಾಯವಿಲ್ಲದೆ ಬರತಕ್ಕವುಗಳಲ್ಲವೆಂದು ಸುಲಭವಾಗಿ ತಿಳಿಯಬಹುದು.

ಈ ಹೆಂಗಸರು ಒಂದು ರಾತ್ರಿ ಪ್ರಾರ್ಥಿಸುತ್ತಿದ್ದು ಹೊರಗೆ ಬಂದಾಗ್ಯೆ ಅವರಲ್ಲಿ ಒಬ್ಬಳು ಆಕಾಶಮಂಡಲದಲ್ಲಿ ಒಂದು ಶಿಲುಬೆಯ ಆಕೃತಿಯನ್ನು ಕಂಡು, ತನ್ನ ಗೆಳತಿಯರಿಗೆ ತಿಳಿಸಿದಳು. ಅವರೆಲ್ಲರೂ ಇದೇನಾಗಿರಬಹುದೋ ಎಂದು ಒಬ್ಬರನ್ನೊಬ್ಬರು ವಿಚಾರಿಸುತ್ತಾ ಕಡೆಗೆ ಮೇರಿಬಾಯಿ ಅಮ್ಮನವರ ಬಳಿಗೆ ಬರಲು ಅವರು ಆ ಶಿಲುಬೆಯೆಂಬುವದನ್ನು ಅದರ ಮೇಲೆ ಯಾರು ಕ್ರೂರವಾದ ಮರಣವನ್ನನುಭವಿಸಿದನೆಂಬುವದನ್ನೂ ಅಂಥಾ ಶಿಲುಬೆಯ ಮರಣವು ನಮ್ಮಗಳ ಪಾಪಕ್ಕಾಗಿಯೇ ಆತನಿಗೆ ಸಂಭವಿಸಿತೆಂದೂ ಆತನ ಮರಣದಿಂದಲೇ ನಮಗೆ ಪಾಪಪರಿಹಾರಕ್ಕೆ ಮಾರ್ಗವಾಯಿತೆಂದೂ ಅದ್ದರಿಂದ ನಾವು ನಮ್ಮ ಪಾಪಗಳಿಗೋಸ್ಕರ ನಿಜವಾಗಿ ಪಶ್ಚಾತ್ತಾಪಪಟ್ಟರೆ ಆತನೇ ಬಣ್ಣದೋಪಾದಿಯಲ್ಲಿರುವ ನಮ್ಮ ಪಾಪವನ್ನು ಹಿಮದೋಪಾದಿಯಲ್ಲಿ ಬೆಳ್ಳಗೆ ಮಾಡುವನೆಂದೂ ಅವರಿಗೆ ವಿವರಿಸಿದರು. ಬಳಿಕ ಎಲ್ಲರೂ ಆ ರಾತ್ರಿಯನ್ನು ಆ ಪರಮಾತ್ಮನ ಧ್ಯಾನದಲ್ಲಿಯೇ ಕಳೆದರು. ಆ ದಿನ ಮೊದಲು ಇವರು ಯಾವಾಗಲೂ ತಮ್ಮ ಸಮಯವನ್ನು ದೇವರ ವಿಷಯವಾದ ಕಾರ್ಯಕ್ಕೇ ವಿನಿಯೋಗಿಸುತ್ತಲೂ ಸಂಗೀತಗಳನ್ನು ಹಾಡುವದರಲ್ಲಿಯೂ ಪ್ರಾರ್ಥನೆಗಳನ್ನು ಮಾಡುವದರಲ್ಲಿಯೂ ಕಳೆಯುತ್ತಲೂ ನಿಜವಾಗಿಯೂ ಪವಿತ್ರಾತ್ಮನಿಗೆ ತಮ್ಮ ಹೃದಯವನ್ನು ಆನಂದಮಂದಿರವಾಗಿ ಮಾಡಿಕೊಟ್ಟಿರುವರೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ಪವಿತ್ರಾತ್ಮನ ಆಗಮನದಿಂದುಂಟಾದ ಸಂತೋಷವು ಇವರನ್ನು ಜಯಧ್ವನಿಗೈಯುವಂತೆ ಮಾಡಿತು. ಇವರು ರಾತ್ರಿಹಗಲೆನ್ನದೆ ಆಹಾರ ನಿದ್ರೆಗಳನ್ನು ಚಿಂತಿಸದೆ ತಮ್ಮ ಮನೆಗಳಲ್ಲಿಯೂ ವಿಶೇಷವಾಗಿ ತಮ್ಮ ಸ್ನೇಹಿತರ ಮನೆಗಳಲ್ಲಿಯೂ ಆಸಕ್ತಿಯಿಂದ ಪ್ರಾರ್ಥನೆ ಮಾಡುವದನ್ನು ನೋಡಿ ಯೇಸುವಿನ ಶಿಷ್ಯರು ಯೇಸುವಿನ ಪುನರುತ್ಥಾನದಲ್ಲಿ ಹೇಗೆ ಸಂದೇಹಪಟ್ಟರೋ ಹಾಗೆಯೇ ಅನೇಕರು ಈ ಹೆಂಗಸರು ಪವಿತ್ರಾತ್ಮನನ್ನು ಹೊಂದಿದ ವಿಷಯದಲ್ಲಿ ಸಂದೇಹಪಡುತ್ತಿರುವರು (ಮಾರ್ಕನು ೧೬ ಸಂ. ೯—೧೬ ವಚನ.) ನಾವಾದರೋ ಇವರು ಆ ಪವಿತ್ರಾತ್ಮನನ್ನು ನಿಶ್ಚಯವಾಗಿ ಹೊಂದಿದ್ದಾರೆಯೋ ಇಲ್ಲವೋ ಎಂಬುವದನ್ನು ನಮ್ಮ ವಿಶೇಷ ಕಾರ್ಯವಾಗಿ ಮಾಡಿಕೊಳ್ಳದೆ ನಮ್ಮೆಲ್ಲರಿಗೂ ಪವಿತ್ರಾತ್ಮನ. ಅಗತ್ಯವಾಗಿ ಬೇಕು, ಆತನ ಹೊರತು ನಾವು ನಿತ್ಯಜೀವವನ್ನು ಹೊಂದಲಾರೆವು. ಅದನ್ನು ಹ್ಯಾಗಾದರೂ ಸಂಪಾದಿಸಿಕೊಳ್ಳುವಂತೆ ನಮ್ಮ ಕರ್ತನು ತೋರಿಸಿಕೊಟ್ಟಿರುವ ನಿಜವಾದ ಪಶ್ಚಾತ್ತಾಪ, ನಂಬಿಕೆಯಿಂದ ಕೂಡಿದ ಪ್ರಾರ್ಥನೆ ಎಂಬಿವುಗಳನ್ನು ಕ್ರಮವಾಗಿ ಅನುಸರಿಸುವದರ ಮೂಲಕ ಹೊಂದಲು ಪ್ರಯತ್ನಪಡುವದೇ ಮುಖ್ಯ ಕರ್ತವ್ಯ.

ಮೇಲೆ ವಿವರಿಸಿರುವ ಸಂಗತಿಗಳನ್ನು ನೋಡಿಕೊಂಡು ಬರಲು ದೊಡ್ಡಬಳ್ಳಾಪುರಕ್ಕೆ ಹೋಗಿದ್ದ ೫ ಮಂದಿ ಬೈಬಲ್ ವುಮೆನ್ಸ್ ಎಂಬ ಸತ್ಯ ಪ್ರಸಾರಕ ಸ್ತ್ರೀಯರು ಅಲ್ಲಿ ನಡೆದ ವಿಷಯಗಳು ನಿಶ್ಚಯವೆಂತಲೂ ನಾವು ಅಲ್ಲಿ ಹೋದದರಿಂದ ನಮ್ಮ ಆತ್ಮಗಳಿಗೆ ನಿಶ್ಚಯವಾಗಿ ಪ್ರಯೋಜನವಾಯಿತೆಂತಲೂ ತಮ್ಮ ಅನುಭವಸಾಕ್ಷಿಯನ್ನು ಕಳೆದ ವಾರ ನಡೆದ ಒಂದು ಕೂಟದಲ್ಲಿ ಎಲ್ಲರ ಮುಂದೆಯೂ ಹೇಳಿದರು.

ಆದದರಿಂದ ಕ್ರೈಸ್ತರಾದ ನಾವು ಸ್ವಾಮಿಗೆ ಸ್ತೋತ್ರ ಮಾಡಿ ಅವರಲ್ಲಿ ಹುಟ್ಟಿರುವ ಭಕ್ತಿಯು ವೃದ್ಧಿಹೊಂದುತ್ತಾ ಬಂದು ಇದರಿಂದ ದೇವರ ನಾಮಕ್ಕೆ ಘನವೂ ಅನೇಕರ ಆತ್ಮಗಳಿಗೆ ಪ್ರಯೋಜನವೂ ಉಂಟಾಗುವಂತೆ ಇವರನ್ನು ಭಗವಂತನು ನಡಿಸಲಿ ಎಂದು ಪ್ರಾರ್ಥಿಸತಕ್ಕವರಾಗಿದ್ದೇವೆ.

S. D.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಜರುಗಿದ ಸಾಮಾನ್ಯ ವಿಷಯಗಳು.

ನ್ಯಾಯಸ್ಥಾನ ವಿಚಾರ.

ಮೆ॥ ಶ್ರೀನಿವಾಸರಾಯರು—ಸಾಹುಕಾರರು ಪ್ರಜೆಗಳಿಂದ ಪುಚಾರಿ ಬ್ಯಾಂಗ ಪತ್ರ ಬರೆಸಿಕೊಂಡು, ಅದೇ ಪ್ರಕಾರ ಬಡ್ಡಿ ವಸೂಲುಮಾಡುತ್ತಾ ಬರುವುದಲ್ಲದೆ ಅದೇ ದರದಂತೆ ಬಡ್ಡಿ ಕೊಡಿಸಬೇಕೆಂದು ದಾವಾ ಮಾಡುತ್ತಾರೆ. ಬಡವರು ಅಷ್ಟು ಬಡಿ ತೆರುವುದರಲ್ಲೇ ನಿರ್ಗತಿಕರಾಗುವರು. ಆದಕಾರಣ ಮೊಕದ್ದಮೆ ಕೋರ್ಟಿಗೆ ಬಂದಾಗಲಾದರೂ ಪತ್ರದಲ್ಲಿ ಕಂಡ ಬಡ್ಡಿದರದಲ್ಲಿ ಅರೆವಾಸಿಯನ್ನು ವಜಾ ಮಾಡುವಂತೆ ಮುನಸಿಫರುಗಳಿಗೆ ಅಧಿಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ದಿವಾನರವರು—ಇದು ಸಾಧ್ಯವಲ್ಲ.

ಮೆ॥ ಹುಚ್ಚೀರೇಗೌಡರು—ಒಂದು ಮೊಕದ್ದಮೆಯಲ್ಲಿ ಒಂದೆರಡು ಸಾಕ್ಷಿಗಳಿಗೆ ಸಮನ್ ಜಾರಿ ಆಗದೆಹೋದರೆ ಕಕ್ಷಿಗಾರರು ಅಂಥವರಿಗೂ ಜಾರಿ ಆದ ಸಾಕ್ಷಿಗಳಿಗೂ ಮತ್ತೆ ಫೀಜನ್ನೂ ಭತ್ಯವನ್ನೂ ಕಟ್ಟಬೇಕೆಂದು ಹೊಸ ರೂಲಸಾಗಿದೆ. ಇದರಿಂದ ಕಕ್ಷಿಗಾರರಿಗೆ ತುಂಬಾ ನಷ್ಟವಾಗುವುದು. ಇದನ್ನು ತಪ್ಪಿಸಿಕೊಡಬೇಕು.

ದಿವಾನರವರು—ನೀವು ಹೇಳುವಂತೆ ರೂಲು ಮಾಡಿಲ್ಲವೆಂದು ಛೀಫ್ ಕೋರ್ಟಿನವರು ಹೇಳುತ್ತಾರೆ. ವಿಚಾರಿಸುತ್ತೇವೆ

ಮೆ॥ ನಾರಣಪ್ಪನವರು—ತಾಲ್ಲೂಕ್ ಜಾಗದಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಡಿದು ವಾದಿಸುವುದಕ್ಕೆ ಸರಿಯಾದ ವಕೀಲರು ಸಿಕ್ಕುವುದಿಲ್ಲ. ರೈತರೂ ಇತರ ಪ್ರಜೆಗಳೂ ಬಹಳ ಹಣ ಖರ್ಚು ಮಾಡಿ ದೂರದಿಂದ ಲಾಯರುಗಳನ್ನು ಕರೆದುಕೊಂಡು ಬರಬೇಕಾಗಿದೆ. ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಕನ್ನಡ ಭಾಷೆಯಲ್ಲಿ ಒಂದು ಕ್ರಿಮಿನಲ್ ಪರೀಕ್ಷೆಯನ್ನು ಏರ್ಪಾಡು ಮಾಡಿ ಕೊಟ್ಟರೆ ಅವರಲ್ಲಿ ಪ್ಯಾಸ್ ಮಾಡಿದವರು ವಕೀಲರಾಗಲು ಸಹಾಯವಾಗುವುದು.

ದಿವಾನರವರು—ಇದು ಆಗತಕ್ಕದ್ದಲ್ಲ.

ಮೆ॥ ಸಂಜಪ್ಪನವರು—ದಸರಾ, ಕ್ರಿಸ್‌ಮಸ್ ಮೊದಲಾದ ಹಬ್ಬಗಳಿಗಾಗಿ ಉನ್ನತ್ಕೆ ೨—೩ ಅಥವಾ ಹೆಚ್ಚು ದಿನಗಳ ರಜಾ ಬರುವಾಗ್ಗೆ ಮ್ಯಾಜಿಸ್ಟ್ರೇಟರು ಅಪರಾಧಿಗಳಿಗೆ ರಜಾ ಹಿಂದಿನ ದಿನ ಸಜಾ ಜುಲ್ಮಾನೆ ಶಿಕ್ಷೆಗಳನ್ನು ವಿಧಿಸುತ್ತಾರೆ. ಅಪರಾಧಿಗಳು ಕೋರ್ಟು ಅಪೀಲ್ ಮಾಡಿಕೊಳ್ಳುವುದಕ್ಕೆ ಇಲ್ಲದೆ ರಜಾ ಪೂರೈಸುವ ತನಕ ಶಿಕ್ಷೆಯನ್ನು ಅನುಭವಿಸಬೇಕಾಗುವುದು. ಆದಕಾರಣ ಅಂಥಾ ರಜಗಳು ಬರುವುದಕ್ಕೆ ಮೊದಲನೇ ದಿನ ಮ್ಯಾಜಿಸ್ಟ್ರೇ[illegible] ಜಡ್ಜಮೆಂಟ್ ಹೇಳದೆ ರಜಾ ಮುಗಿದ ಮೇಲೆ ಹೇಳತಕ್ಕದ್ದೆ[illegible] ಅಂಕಿತು ಅಪ್ಪಣೆ ಆಗಬೇಕು.

ದಿವಾನರವರು—ನೀವು ಹೇಳುವ ಪ್ರಕಾರ ಅಪರಾಧಿಗಳು [illegible] ಹರಿ ದಿನಗಳನ್ನು ತೀರಿಸಿಕೊಂಡು, ಜಡ್ಜಮೆಂಟಿಗೆ ಏಕಾ[illegible] ದಿನ ಕೋರ್ಟಿಗೆ ಬರುವಂತೆ ಆಗಬೇಕೆನ್ನುತ್ತೀರೋ? [illegible] ಆಗುವದಿಲ್ಲ.

ಮೆ॥ ಗೋಪಾಲರಾಯರು—ನರಸಾಪುರದ ಹೋಬಳಿಯ[illegible] ಚನ್ನರಾಯಪಟ್ಟಣದ ಮುನಸಿಫ್ ಕೋರ್ಟಿಗೆ ಸೇರಿಸಿರುವುದರಿಂದ [illegible] ಕ್ಷಿಗಳೂ ಕಕ್ಷಿಗಾರರೂ ಅಷ್ಟು ದೂರ ಅಲೆದು ನಾನಾ ಕಷ್ಟ[illegible] ಳಿಗೆ ಗುರಿಯಾಗುತ್ತಿದ್ದಾರೆ. ಈ ಹೋಬಳಿಯನ್ನು ಕೋ[illegible] ಮುನಸಿಫ್ ಕೋರ್ಟಿಗೆ ಸೇರಿಸಿಕೊಟ್ಟರೆ ತುಂಬಾ ಸಹಾ[illegible] ವಾಗುತ್ತೆ.

ದಿವಾನರವರು—ಮೊನ್ನೆ ತಾನೇ ಬದಲಾಯಿಸಿದೆ. ಪದೇ [illegible] ಬದಲಾಯಿಸುವುದಕ್ಕಾಗುವುದಿಲ್ಲ.

ಮೆ॥ ರಂಗೈಯಂಗಾರ್ರು—ಸಿವಿಲ್ ಕೋರ್ಟುಗಳಲ್ಲಿ [illegible] ಸೆಂಟ್ರಲ್ ನಾಜರ್ ಏರ್ಪಾಡಿನಿಂದ ತೃಪ್ತಿಕರವಾಗಿ ಕೆಲಸಗಳು [illegible] ಯುತ್ತಾ ಇಲ್ಲ. ಆ ಸಿಬ್ಬಂದಿಯನ್ನೇ ವಜಾಮಾಡಬೇಕು; [illegible] ಸಾಧ್ಯವಿಲ್ಲದೆಹೋದರೆ ಆ ಸಿಬ್ಬಂದಿಯನ್ನು ಡಿಸ್ಟ್ರಿಕ್ಟ್ [illegible] ಸ್ವಾಧೀನ ತಪ್ಪಿಸಿ ಸಬ್ ಜಡ್ಜರಿಗೆ ವಹಿಸಿಕೊಡಬೇಕು.

ದಿವಾನರವರು—ಒಳ್ಳೇದು. ಆಲೋಚನೆಮಾಡುತ್ತೇವೆ.

ಮೆ॥ ರಾಮೇಗೌಡನವರು—ಪಟೇಲರಿಗೆ ಪೊತ್ತು ವಿಚಾರ[illegible] ನ್ನು ತಪ್ಪಿಸಬೇಕು. ಈಗ ಅವರಿಂದ ಜನರಿಗೆ ನಾನಾ ತೊ[illegible] ಗಳಿವೆ. ಮತ್ತು ಅದನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ [illegible] ರಿಗೆ ಅವಕಾಶವೂ ಇಲ್ಲ

ದಿವಾನರವರು—ಒಳ್ಳೇದು, ನೋಡೋಣ.

ಮೆ॥ ಬಲವಂತರಾಯರು—ಅರಸೀಕೆರೆಯಿಂದ ಹಾಸ[illegible] ಹೋಗುವ ಭರ್ತಿ ಗಾಡಿಗಳಿಗೆ ಅರಸೀಕೆರೆಯಿಂದಾಚೆ ಕಳ್ಳರು ಬ[illegible] ಮೂಟೆಗಳನ್ನು ಒಡೆದು. ಪದಾರ್ಥಗಳನ್ನು ಅಪಹರಿಸುತ್ತಾ[illegible] ಈಚೆಗೆ ಇದು ಬಹಳ ಹೆಚ್ಚಾಗಿದೆ ಆದ್ದರಿಂದ ಒಂದು ಹೊ[illegible] ಲೀಸ್ ಸ್ಟೇಷನ್ ಮಾಡಿಕೊಡಬೇಕು; ಇಲ್ಲವೇ ಪೊಲೀಸ್ ಠಿ[illegible] ಯನ್ನು ಸ್ವಲ್ಪ ಗಟ್ಟಿಯಾಗಿ ಇಡಬೇಕು.

ದಿವಾನರವರು—ಈ ಸಂಗತಿ ನಮಗೆ ತಿಳಿದಿದೆ. ಆ ಸ್ಥಳ[illegible] ಒಂದೆರಡು ಕಡೆ ಪೊಲೀಸ್ ಉಕ್ಕಡಗಳನ್ನು ಇಟ್ಟು ಬಂದೋ[illegible] ಸ್ತು ಮಾಡಬೇಕೆಂದು ಡೆಪ್ಯುಟಿ ಕಮಿಷನರರಿಗೆ ಹೇಳಿದ್ದೇವೆ. ಅ[illegible] ಮಾಡುತ್ತಾರೆ.

ಮೆ॥ ಮೈಲಾರೈಯ್ಯನವರು—ಅಮಲ್ದಾರ್ರಿಗೆ ಪೊಲೀಸ್ [illegible] ಕಾರ್ಯವನ್ನು ತಪ್ಪಿಸಿದಲ್ಲಿ ಪ್ರಜೆಗಳಿಗೆ ನ್ಯಾಯ ಸಿಕ್ಕುವುದು.

ದಿವಾನರವರು— ಇದು ಸಾಧ್ಯವಲ್ಲ.

ಮೆ॥ ಗೋಪಾಲರಾಯರು—ಅಮಲ್ದಾರ್ರಿಗೆ ಕೆಲಸದ ಗ[illegible] ತುಂಬಾ ಇರೋಣದರಿಂದ ಅವರಿಗೆ ಮೊಕದ್ದಮೆಗಳನ್ನು ಹಿ[illegible] ಫೈಸಲ್ ಮಾಡುವುದಕ್ಕೆ ಅವಕಾಶವಿಲ್ಲ. ರೆವಿನ್ಯೂ ಕೆಲಸ[illegible] ಸುಸ್ತಿಯಾಗುತ್ತವೆ ಆದ್ದರಿಂದ ಮೊಕದ್ದಮೆ ನಡಿಸುವ ಅಧಿ[illegible] ಅವರಿಗೆ ತಪ್ಪಿಸಿಕೊಟ್ಟಲ್ಲಿ ಪ್ರಜೆಗಳಿಗೆ ಅನುಕೂಲವಾಗು[illegible] ಸರ್ಕಾರದ ರೆವಿನ್ಯೂ ಕೆಲಸಗಳೂ ತೃಪ್ತಿಕರವಾಗಿ ನಡೆವಾವೆ

ದಿವಾನರವರು—ಡೆಪ್ಯುಟಿ ಕಮಿಷನರುಗಳಿಗೆ ಈ ವಿಷಯ[illegible] ಲ್ಲಾ ಚನ್ನಾಗಿ ತಿಳಿದಿರುತ್ತದೆ. ಈ ವಿಷಯದಲ್ಲಿ ಅವರು ಕೆ[illegible] ನ್ನು ಸರಿಯಾಗಿ ಹಂಚುತ್ತಾರೆ.

ಮೆ॥ ಮೈಲಾರೈಯ್ಯನವರು—ಡಿವಿಜನ್ ಆಫೀಸರುಗಳಿಗೆ [illegible] ಮಿನಲ್ ಮತ್ತು ರಿಜಿಸ್ಟ್ರೇಷನ್ ಅಪೀಲುಗಳನ್ನು ಹಿಡಿದು [illegible] ಮಾಡುವಂತೆ ಅಧಿಕಾರ ಕೊಡಬೇಕು.

ದಿವಾನರವರು—ಒಳ್ಳೇದು; ಎಷ್ಟು ಮಟ್ಟಿಗೆ ಸಾಧ್ಯವೋ [illegible] ಚಾರಿಸಿ ಮಾಡುತ್ತೇವೆ

ಮೆ॥ ಮೈಲಾರೈಯ್ಯನವರು—ನಮ್ಮ ಸಂಸ್ಥಾನದಲ್ಲಿ ಸಿ[illegible] ರಿಜಿಸ್ಟ್ರೇಷನ್, ರೆವಿನ್ಯೂ ಇಲಾಖೆಗಳ ನೌಕರ ಮಾನೇ[illegible] ಸಂಬಳವು ವ್ಯತ್ಯಾಸವಿಲ್ಲದೆ ಏಕರೀತಿಯಲ್ಲಿರುವಂತೆ ಪುನರ್ವಿಮ[illegible] ಯಿಂದ ಕ್ರಮಪಡಿಸಿಕೊಡಬೇಕು.

ದಿವಾನರವರು—ಇದು ಗವರ್ನಮೆಂಟಿನವರು ನೋಡಿಕೆ[illegible] ತಕ್ಕ ವಿಚಾರ ನಿಮ್ಮ ಶಿಫಾರಸು ಅನಾವಶ್ಯಕವಾಗಿದೆ.

ಹೆಗ್ಗಡದೇವನ ಕೋಟೆ ಮೆ॥ ಲಕ್ಷ್ಮೀನಾರಣಪ್ಪನವರು—ಸಿ[illegible] ಕೋರ್ಟ್ ಡಿಕ್ರಿ ಪ್ರಕಾರ ಸ್ಥಿರಚರಸ್ವತ್ತುಗಳನ್ನು ಭತ್ತು ವಿ[illegible] ಅಂದಾಜುಕಟ್ಟಿ ಹರಾಜುಮಾಡುತ್ತಾರೆ. ಅವರು ಸರಿಯಾ[illegible] ದಾಜಾ ಕಟ್ಟುವುದಿಲ್ಲ. ಕೊಂಡುಕೊಳ್ಳುವವರು ಇಲ್ಲದೆಹೋ[illegible] ಡಿಕ್ರೀದಾರನೇ ತನ್ನ ಬೀಟಿಗೆ ನಿಲ್ಲಿಸಿಕೊಳ್ಳಬೇಕಾಗಿದೆ. [illegible] ಬದಲಾಗಿ ತಾಲ್ಲೂಕ್ ಅಮಲ್ದಾರ್ರ ಮೂಲಕ ಅಂದಾಜು ಕ[illegible] ವಂತೆಯೂ ಹೋಬಳಿ ಶೇಕ್ದಾರ್ರು ಹರಾಜು ಮುಂತಾದ್ದನ್ನು [illegible] ಡಿಸುವಂತೆಯೂ ಅಪ್ಪಣೆ ಆಗಬೇಕು.

ದಿವಾನರವರು—ತಾಲ್ಲೂಕಿನ ಮೂಲಕ ಈ ಅಮಲನ್ನು [illegible] ಸುವಂತೆ ಮಾಡುವುದು ಸಾಧ್ಯವಲ್ಲ. ಅವಿಷಯ ಪರ್ಯಾ[illegible] ಛೀಫ್ ಕೋರ್ಟಿನವರು ಪುನರ್ವಿಮರ್ಶೆ ಮಾಡುತ್ತಿದ್ದಾರೆ. [illegible] ಮುಂದೆ ಶಕ್ತರಾದವರನ್ನೇ ಆ ಕೆಲಸಕ್ಕೆ ನೇಮಿಸುವಂತೆ ಏರ್ಪಾ[illegible] ಮಾಡುತ್ತಾರೆ.

ಮೈಸೂರು ಮ್ಯುನಿಸಿಪಲ್ ಮೆಂಬರ್ ಮೆ॥ ರಂಗೈಯ[illegible] ರ್ರು—ಸಿವಿಲ್ ಕೋರ್ಟಿನ ಡಿಕ್ರಿ ಮೇರೆ ಹರಾಜಾದ ಸ್ಥಿರಸ್ವ[illegible] ಪ್ರತಿವಾದಿಯು ಒಂದು ತಿಂಗಳೊಳಗಾಗಿ ಡಿಕ್ರಿ ಹಣವನ್ನು [illegible] ಸಮೇತ ತಂದು ದಾಖಲು ಮಾಡಿದರೆ ಅವನಿಗೆ ಕೊಡಿಸ[illegible] ಹುಕುಂ ಆಗಬೇಕು. ಒಂದು ತಿಂಗಳ ಅವಧಿ ಸಿಕ್ಕಿದರೆ [illegible] ದಿಗೆ ತುಂಬಾ ಸಹಾಯ[illegible]

…ದಿವಾನರವರು—ಇದು ಒಳ್ಳೇ ಸಲಹೆ. ಈ ವಿಷಯವನ್ನು …ಕೋರ್ಟಿಗೆ ಬರೆದು ಅವರ ಅಭಿಪ್ರಾಯವೇನೆಂದು ಕೇಳು…ನೆ

…ಜಮೀನ್ದಾರ್ ಮೆ|| ಕೃಷ್ಣಮೂರ್ತಿರಾಯರು—ಅಂ…ಯುಮಲ್ಲಿ ಬೇರೆ ಬೇರೆ ಕ್ರಯದ ತಲೆಚೀಟಿ (ಸ್ಟಾಂಪು) …ಬೇರೆ ಬೇರೆ ಬಣ್ಣಗಳಿರುತ್ತವೆ. ಇದರಿಂದ ಕೊಂಡುಕೊ…ವರಿಗೂ ಬಿಕರಿ ಮಾಡುವವರಿಗೂ ತುಂಬಾ ಸರಾಗವಾಗಿದೆ …ರ್ಟ್ ಫೀ ಸ್ಟಾಂಪುಗಳಾದರೋ ಎಲ್ಲಾ ಒಂದೇ ಬಣ್ಣವಾಗಿದೆ. …ರಿಂದ ಕೆಲವು ವೇಳೆ ಮೋಸಮಾಡುವುದಕ್ಕೂ ಮೋಸಹೋಗು…ಕ್ಕೂ ಅವಕಾಶವಾಗುತ್ತದೆ. ಕೋರ್ಟ್ ಫೀ ಸ್ಟಾಂಪನ್ನೂ …ರೆ ಬೇರೆ ಬಣ್ಣಗಳಲ್ಲಿ ಹಾಕಿಸಬೇಕು.

ದಿವಾನರವರು—ಇದು ಸಾಧ್ಯವಲ್ಲ.

…ಪಟ್ಟಣದ ಮೆ|| ರಂಗೈಯ್ಯಂಗಾರ್ಯ—ಉಪಯೋಗಿಸದೆ …ಪತ್ರಗಳನ್ನು ಆರು ತಿಂಗಳೊಳಗಾಗಿ ಹಾಜರ್ ಮಾಡಬೇ…ಲು, ಅದಕ್ಕೆ ಮೀರಿದರೆ ಅವುಗಳ ಕ್ರಯವನ್ನು ವಾಪಸು …ವುದಿಲ್ಲವೆಂತಲೂ ಸರ್ಕಾರದವರ ರೂಲಸು ಇದೆ. ಈ ೬ …ಳ ಅವಧಿ ಸಾಲದು ಅದನ್ನು ವಜಾಮಾಡಿಕೊಡಬೇಕು.

ದಿವಾನರವರು—ಹೀಗೆ ಅವಧಿಯನ್ನು ೬ ತಿಂಗಳಿಗಿಂತ ಹೆಚ್ಚು …ವುದು ಅವಶ್ಯವೆಂದು ಕಾಣುವುದಿಲ್ಲ

…ರು ಮೆ|| ಶ್ರೀನಿವಾಸರಾಯರು—ಸಿವಿಲ್ ಕೋರ್ಟ್ …ಗಳು ಕಾರಣಾಂತರದಿಂದ ಸರಿಯಾಗಿ ಜಾರಿಯಾಗುವುದಿಲ್ಲ. …ಕಕ್ಷಿಗಾರರಿಗೆ ನಷ್ಟವಾಗುವುದು. ಕಕ್ಷಿಗಾರರು ಇಷ್ಟ …ಸಮನ್ಸುಗಳನ್ನು ಅಂಚೆಯ ಮೇಲೆ ರಿಜಿಸ್ಟರ್ ಮಾಡಿ ಕಳುಹಿ…ಕೆ ಅಪ್ಪಣೆ ಆಗಬೇಕು. ಇದಕ್ಕಾಗಿ ಕಕ್ಷಿಗಾರರಿಂದ ಎರಡರ …ಸುವಂತೆ ಫೀಜು ವಸೂಲ್ಮಾಡಿಕೊಳ್ಳಬಹುದು.

ದಿವಾನರವರು—ಅಂಚೆ ಇಲಾಖೆಯು ನಮ್ಮ ತಾಬೆಯಲ್ಲಿಲ್ಲ. …ಹೇಳುವಂತೆ ಬದಲಾವಣೆ ಮಾಡಲಾಗದು

…ಪುರದ ಮೆ|| ದೇವಪ್ಪನವರು—ಶಿಕಾರಿಪುರ, ಸೊರಬ, …ಳ್ಳಿ ಮುಂತಾದ ಕಡೆಗಳಲ್ಲಿ ಜಮೀನ್ದಾರರು ಶಿಕ್ಮಿದಾರ…ಒಂದೊಂದು ವರುಷಕ್ಕೆ ಕೊಡುತಾಗುವಳಿ ಚೀಟಿ ಬರಸಿಕೊ…ಹೋಗುತ್ತಿರುವುಂಟು. ಈ ಚೀಟಿಯಲ್ಲಿ ಇಷ್ಟೇ ದವಸ ಕೊಡ…ವೆಂದು ಕಾಣಿಸುವುದಿಲ್ಲ. ಇಂಥಾ ಚೀಟನ್ನು ರಿಜಿಸ್ಟರ್ ಮಾಡಿ…ಬೇಕೆಂದು ಸರ್ಕಾರದ ಅಪ್ಪಣೆ ಇದೆ. ಮೊಬಲಗು ಇಷ್ಟೆಂದು …ಲ್ಲದಿದ್ದರೆ ೧೧ ರೂ ರಿಜಿಸ್ಟರ್ ಫೀಜು ಕೊಡಬೇಕು. ಇದು …ಬಾ ದುಬಾರಿ. ಜಮೀನ್ ಉತ್ಪತ್ತಿಯೇ ಕೆಲವು ವೇಳೆ ಅಷ್ಟು …ವುದಿಲ್ಲ. ಈ ಫೀಜಿನ ದರವನ್ನು ಕಮ್ಮಿಮಾಡಿಕೊಡಬೇಕು.

ದಿವಾನರವರು—ಇಂಥಾ ಗೇಣೀ ಚೀಟಿಗಳು ಎಷ್ಟಿವೆ; ಅದ…ಏನಾದರೂ ಪ್ರಮಾಣವುಂಟೋ ಎಂದು ಡೆಪ್ಟಿ ಕಮಿಷನರನ್ನು …ಕೇಳುತ್ತೇವೆ.

ಅದೇ ಮೆಂಬರು—ನೂರು ರೂಪಾಯಿಗೆ ಒಳಪಟ್ಟ ಸ್ಥಿರಸ್ವ…ಆಧಾರಪತ್ರಗಳು ರಿಜಿಸ್ಟರಾಗಲೇಬೇಕೆಂಬ ವಿಧಿ ಇಲ್ಲದಿರೋ…ದ ಜನರು ಒಂದೇ ಆಸ್ತಿಯನ್ನು ಅನೇಕರಿಗೆ ಆಧಾರಮಾಡಿ, …ಕೆ ಬಂದ ಪತ್ರವನ್ನು ಮಾತ್ರ ರಿಜಿಸ್ಟರ್ ಮಾಡಿಸುವುದಕ್ಕೂ …ಆಧಾರದಾರರಿಗೆ ಮೋಸಪಡಿಸುವುದಕ್ಕೂ ಆಸ್ಪದವಾಗಿದೆ. …ರಿಂದ ಆ ವಿನಾಯಿತಿಯನ್ನು ತೆಗೆದುಹಾಕಿ ನೂರು ರೂಪಾ…ಗೆ ಒಳಪಟ್ಟ ಆಧಾರಪತ್ರಗಳೂ ರಿಜಿಸ್ಟರಾಗಲೇಬೇಕೆಂದು ವಿಧಿ …ಎಷ್ಟೋ ಕ್ಷೇಮವಾದೀತು

ದಿವಾನರವರು—ಇದು ಅವಶ್ಯವಿಲ್ಲ.

ಶಿವಮೊಗ್ಗೆಯ ಮೆ|| ಬಾಲಕೃಷ್ಣರಾಯರು—ಸರ್ಕಾರದವರು …ಬ್ ರಿಜಿಸ್ಟ್ರಾರುಗಳ ಸಂಬಳವನ್ನು ಜಾಸ್ತಿಮಾಡಿ, ಯೋಗ್ಯರಾದವರು …ಕೆಲಸಕ್ಕೆ ಬರುವಂತೆ ಏರ್ಪಾಡು ಮಾಡಿದ್ದಾರೆ. ಇವರಲ್ಲಿ ಮೊದ…ರ್ಜೆಯ ಸಬ್ ರಿಜಿಸ್ಟ್ರಾರುಗಳಿಗೆ ಆಯಾ ತಾಲ್ಲೂಕುಗಳ …ಮಾಯಿಷಿ ತರೀಖು ಮ್ಯಾಜಿಸ್ಟ್ರೇಟ್ ಅಧಿಕಾರವನ್ನು …ರೆ, ಅಮಲ್ದಾರ್ಯರಿಗಳು ಮೊಕದ್ದಮೆ ದರ್ಯಾಪ್ತಿಮಾಡದಂತೆ …ತು ಮಾಡಬೇಕು. ಇದು ಸಮರ್ಪಕವಾಗಿದೆ ಎಂದು ಕಂ…ದರೆ ಎಲ್ಲಾ ಅಮಲ್ದಾರ್ಯರುಗಳಿಗೂ ಮ್ಯಾಜಿಸ್ಟ್ರೇಟ್ ಅಧಿ…ತಪ್ಪಿಸಿ ಸಬ್ ರಿಜಿಸ್ಟ್ರಾರುಗಳಿಗೆ ವಹಿಸುವುದಕ್ಕೆ ಅನುಕೂಲ…ದೆ. ಈ ವಿಷಯಕ್ಕೆ ಗವರ್ನಮೆಂಟಿನವರು ಗಮನ ಕೊಡ…ಬೇಕಾಗಿ ಪ್ರಾರ್ಥಿಸುತ್ತೇವೆ.

ದಿವಾನರವರು—ಈ ವಿಚಾರವನ್ನು ಕುರಿತು ಗವರ್ನಮೆಂಟಿ…ನವರು ಮೊನ್ನೆ ತಾನೇ ಕಾಗದ ಪತ್ರಗಳನ್ನು ನೋಡಿ, ಬಹಳ …ರ್ವಾಮಾಡಿದರು. ಅದಿಗೆ ಸಧ್ಯ ಇದು ಅನವಶ್ಯವೆಂದು ತೀರ್ಮಾನ…ಮಾಡಿಕೊಂಡಿದ್ದಾರೆ. ಮುಂದೆ ನೋಡೋಣ

ಅದೇ ಮೆಂಬರು—ಶಿವಮೊಗ್ಗೆಯಲ್ಲಿ ಸಬ್ ಜಡ್ಜಿ ಕೋರ್ಟ್ …ರ್ದಾಗಿರೋಣದರಿಂದ ಚಿಕ್ಕಮಗಳೂರಿನಲ್ಲಿರುವ ಸಬ್ ಜಡ್ಜಿ …ಕೋರ್ಟನ್ನು ತೆಗೆದು ಮುನಸಿಫ್ ಕೋರ್ಟ್ ಇಟ್ಟರೆ ಅನುಕೂಲ. …ದು ಸಾಧ್ಯವಲ್ಲವಾದರೆ ಚಿಕ್ಕಮಗಳೂರು ಸಬ್ ಜಡ್ಜರ ಸ್ಮಾಲ್ …ಸ್ ಅಧಿಕಾರವನ್ನು ಶಿವಮೊಗ್ಗೆಯಲ್ಲಿರುವಂತೆ ೧೦೦ ರೂ. ಗೆ …ಬಹುದು

ದಿವಾನರವರು—ಸಬ್ ಜಡ್ಜುಗಳಿಗೆ ಈಗ ಕೊಟ್ಟಿರುವ ಅಧಿ…ಕಾರವನ್ನು ಅವರು ದುರುಪಯೋಗಪಡಿಸಿಲ್ಲವೆಂದು ಚೀಫ್ ಕೋ…ರ್ಟಿನಿಂದ ತಿಳಿದು ಬಂದಿದೆ. ಇನ್ನು ಮುಂದೆ ಅಧಿಕಾರಿಗಳನ್ನು …ನೇಮಿಸುವಾಗ್ಗೆ ಸ್ಮಾಲ್ ಕಾಸ್ ಅಧಿಕಾರವನ್ನೂ ಕಡಿಮೆಮಾ…ಡುತ್ತ.

ಶಿಕಾರಿಪುರದ ಮೆ|| ಶಿವಪ್ಪದೀಕ್ಷಿತರು—ಪತ್ರವನ್ನು ರಿಜಿಸ್ಟರ್ …ಮಾಡುವುದಕ್ಕೆ ಸಬ್ ರಿಜಿಸ್ಟ್ರಾರನ್ನು ಆಫೀಸಿನಿಂದ ಮನೆಗೆ ಕರೆ…ದುಕೊಂಡು ಹೋದರೆ ಅವರಿಗೆ ೧೦ ರೂ. ಕಮಿಷನ್, ಮೈಲಿಗೆ ೪ ಆಣೆಯಂತೆ ಪ್ರಯಾಣದ ಖರ್ಚು ಕೊಡಬೇಕಾಗಿದೆ. ಇದು ಬಹಳ ದುಬಾರಿ. ಕಮಿಷನ್ ೫ ರೂ ಗೆ ಇಳಿಸಬೇಕು.

ದಿವಾನರವರು—ಈಗಿರುವ ರೂಲಸನ್ನು ಬದಲಾವಣೆ ಮಾಡಬೇಕಾದ ಅಗತ್ಯವಿಲ್ಲ

ಮೆ|| ಬಾಲಕೃಷ್ಣರಾಯರೇ ಮೊದಲಾದ ಕೆಲವು ಮೆಂಬರುಗಳು—ದಾವಾ ದಾಖಲಾದ ಮೇಲೆ ಪ್ರತಿವಾದಿಯು ಕೋರ್ಟಿಗೆ ಬಂದು ಹಣ ಕೊಡತಕ್ಕದ್ದುಂಟೆಂದೂ ಡಿಕ್ರಿ ಆಗಬಹುದೆಂದೂ ಕೋರ್ಟಿನೊಳಗೆ ತಿಳಿಸಿ ಕೇಳಿಕೊಂಡಾಗಲೂ, ವಾದಿ ಪ್ರತಿವಾದಿಗಳು ಕೋರ್ಟಿನ ಹೊರಗೆ ರಾಜೀಮಾಡಿಕೊಂಡಾಗಲೂ ಎಕ್ಸ್‌ಪಾರ್ಟಿ ಆದಾಗಲೂ ವಾದಿಯು ಕೋರ್ಟ್ ಖರ್ಚಿನಲ್ಲಿ ಅರ್ಧವನ್ನು ವಜಾ ಮಾಡುವಂತೆ ಮುನಸಿಫರಿಗೆ ಅಧಿಕಾರ ಕೊಡಬೇಕು. ಈ ವಿಷಯದಲ್ಲಿ ಈಗ ಕೊಟ್ಟಿರುವ ಹುಕುಮು ಸ್ಪಷ್ಟವಾಗಿಲ್ಲ.

ದಿವಾನರವರು—ಈ ಭಾಗದಲ್ಲಿ ಚೀಫ್ ಕೋರ್ಟಿನವರ ಅಭಿಪ್ರಾಯವನ್ನು ಕೇಳಿ ಹುಕುಂ ಕೊಡಲಾದೀತು.

ಬಹು ಜನ ಮೆಂಬರುಗಳು—ಸರ್ಕಾರಕ್ಕೆ ಅರ್ಜಿ, ದಾವಾ ಮುಂತಾದವುಗಳನ್ನು ಬರೆಯುವುದಕ್ಕೆ ಸರ್ಕಾರದವರು ಗೊತ್ತುಮಾಡಿರುವ ೪ ಕಾಸಿನ ಕಾಗದವನ್ನೇ ಉಪಯೋಗಿಸಬೇಕೆಂಬ ವಿಧಾಯಕವಾಗಿರೋಣದರಿಂದ ಆ ಕಾಗದವನ್ನೇ ಕರುವುದೆಂದರೆ ರೈತ ಪ್ರಜೆಗಳು ಹೆಚ್ಚು ಖರ್ಚು ಮಾಡಬೇಕಾಗಿದೆ. ಆ ಕಾಗದವಾದರೋ ಬಹಳ ಒರಟಾಗಿದೆ, ಬರೆದರೆ ಶಾಯಿ ಹರಿಯುವುದು. ಅದನ್ನು ವಜಾ ಮಾಡಿ ಗಟ್ಟಿಯಾದ ಬಳಕೆಗೆ ಬರುವ ಒಳ್ಳೇ ಕಾಗದವನ್ನು ಉಪಯೋಗಿಸುವಂತೆ ಅಪ್ಪಣೆ ಆಗಬೇಕು

ದಿವಾನರವರು—ಅರ್ಜಿ ಕಾಗದಕ್ಕೆ ೪ ಪೈ ಕೊಡೋಣದರಿಂದ ವಿಶೇಷ ನಷ್ಟವಾಗುತ್ತೆಂದು ಹೇಳಲಾಗದು. ಚೀಫ್ ಕೋರ್ಟ್ ಜಡ್ಜಿಗಳು ಅದನ್ನು ಜಾರೀಗೆ ತಂದಿದ್ದಾರೆ. ಅವರು ದೊಡ್ಡ ಅಧಿಕಾರಿಗಳು. ಅವರು ಮಾಡಿದ್ದು ಸರಿಯಲ್ಲವೆಂದು ಹ್ಯಾಗೆ ಹೇಳಬಹುದು? ಕಾಗದ ಕೆಟ್ಟದ್ದೆಂದು ಹೇಳೋಣ. ಇನ್ನೂ ಹದಿನಾರು ವರುಷಗಳ ತನಕ ಉಪಯೋಗಿಸಬಹುದಾದಷ್ಟು ಕಾಗದವನ್ನು ಕೊಂಡಿಟ್ಟಿದ್ದಾರೆ. ಅದೆಲ್ಲಾ ಮುಗಿಯುವ ತನಕ ಬದಲಾಯಿಸುವುದಕ್ಕಾಗಲಾರದು. ನೀವೆಲ್ಲಾ ಚೀಫ್ ಕೋರ್ಟಿಗೆ ಬರೆದು ಕೇಳಿಕೊಳ್ಳಿ. ನಾವೇನೂ ಮಾಡುವುದಕ್ಕಾಗುವುದಿಲ್ಲ.

ಅನೇಕ ಮೆಂಬರುಗಳು—ಪತ್ರವನ್ನು ರಿಜಿಸ್ಟರ್ ಮಾಡುವುದರಲ್ಲಿ ಮೊದಲು ೩೦೦ ಮಾತುಗಳಿಗೆ ಛಾರ್ಜ್ ತೆಗೆದುಕೊಳ್ಳುತ್ತಿರಲಿಲ್ಲ. ಅದಕ್ಕಿಂತ ಹೆಚ್ಚಾಗಿದ್ದರೆ ಪ್ರತಿ ನೂರು ಮಾತಿಗೂ ೪ ಆಣೆಯಂತೆ ರುಸುಂ ತೆಗೆದುಕೊಳ್ಳುತ್ತಿದ್ದರು. ಹೋದ ವರುಷ ಸರ್ಕಾರದವರು ಆ ರಿಯಾಯಿತಿಯನ್ನು ವಜಾ ಮಾಡಿ ಪತ್ರದಲ್ಲಿರುವ ಪ್ರತಿ ನೂರು ಮಾತುಗಳಿಗೂ ಎರಡಾಣೆಯಂತೆ ರುಸುಂ ತೆಗೆದುಕೊಳ್ಳಬೇಕೆಂದು ವಿಧಿಸಿ ಜಾರೀಲಿ ತಂದಿದ್ದಾರೆ. ಇದರಿಂದ ಪ್ರಜೆಗಳಿಗೆ ತುಂಬಾ ನಷ್ಟವಾಗುತ್ತಿದೆ. ಈ ಛಾರ್ಜನ್ನು ವಜಾ ಮಾಡಿ ಕೊಡಬೇಕು.

ಎಲ್ಲಾ ಡೆಪ್ಟಿ ಕಮಿಷನರುಗಳೂ—ಈ ರೂಲಸನ್ನು ಆಡಮಾಯಿಷಿ ತರೀಖು ಜಾರೀಲಿ ತಂದು ಇನ್ನೂ ವರುಷವಾಗಲಿಲ್ಲ, ಇಷ್ಟು ಬೇಗ ಇದನ್ನು ಬದಲಾಯಿಸುವುದು ತರವಲ್ಲ.

ದಿವಾನರವರು—ಈ ರೂಲಸನ್ನು ಈಗತಾನೇ ಜಾರೀಗೆ ತಂದಿದೆ. ಒಂದು ವರುಷ ಹೀಗೆ ನಡೆಯಲಿ; ಮುಂದೆ ನೋಡೋಣ.

ಕೆಲವು ಮೆಂಬರುಗಳು—ಸಿವಿಲ್ ಕೋರ್ಟುಗಳಲ್ಲಿ ಜಪ್ತಿ ನೋಟೀಸ್, ದರಾಬು, ಹರಾಜು ವಾರಂಟು ಈ ಮೊದಲಾದವುಗಳಿಗೆ ಪೂರ್ವದಲ್ಲಿದ್ದ ಫೀಜಿನ ದರವನ್ನು ತೆಗೆದು ಈಗ ಜಾಸ್ತಿ ಮಾಡಿದ್ದಾರೆ. ಕೆಲವಕ್ಕೆ ಮೊದಲು ಫೀಜೇ ಇರಲಿಲ್ಲ. ಮಸಲಾ ೧೦ ರೂ ಬಾಳುವ ಆಸ್ತಿಯನ್ನು ಜಪ್ತಿ ಹರಾಜು ಮುಂತಾದ ಕ್ರಮ ನಡಿಸಿ ವಸೂಲ್ಮಾಡಿಕೊಳ್ಳುವುದಕ್ಕೆ ಕೋರ್ಟ್ ಫೀಜು ರೂ ೩—೮ ಆಣೆ ಬೀಳುವುದು. ೫೦ ರೂ. ಒಳಗಿರುವ ಅಥವಾ ಚಿಲ್ಲರೆ ಮೊಬಲಗು ಬಾಳುವ ಆಸ್ತಿ ವಿಚಾರದಲ್ಲಿ ಫೀಜನ್ನು ಕಡಿಮೆ ಮಾಡಿಕೊಡಬೇಕು

ದಿವಾನರವರು—ಒಳ್ಳೇದು. ಈ ಭಾಗದಲ್ಲಿ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಕಡಿಮೆ ಮಾಡಬಹುದೋ ಚೀಫ್ ಕೋರ್ಟಿನವರ ಅಭಿಪ್ರಾಯವನ್ನು ಪಡೆದು ಹುಕುಂ ಕೊಡುತ್ತೇವೆ.

ಮೆ|| ಬಾಲಕೃಷ್ಣರಾಯರು—ಜಪ್ತಿ ಆದ ಚರಸ್ವತ್ತನ್ನು ಜಾಮೀನ್ದಾರರ ವಶದಿಂದ ಬಿಡಿಸಿಕೊಳ್ಳುವುದಕ್ಕೆ ಹೊಸದಾಗಿ ದಾವಾ ನೇ ಹೂಡಬೇಕಾಗಿದೆ. ಇದನ್ನು ತಪ್ಪಿಸಿ ಜಾರೀ ಕ್ರಮ ನಡಸುವಂತೆ ಕಾನೂನ್ ಬದಲಾವಣೆ ಮಾಡಿಕೊಡಬೇಕು

ದಿವಾನರವರು—ಈ ವಿಷಯಕ್ಕೆ ಒಂದು ರೆಗ್ಯುಲೇಷನ್ ಮಾಡಿದೇವೆ. ಅದು ಇನ್ನೂ ಇತ್ಯರ್ಥವಾಗಿಲ್ಲ.

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನ್ ಪಟ್ಟಣದಲ್ಲಿ ಪೂರ್ಣಾಯುಸ್ಸಿನ ಮೂರು ಮಂದಿ ಕಳೆದ ವಾರ ಕಾಲವಾದರು. ಮೊದಲನೆಯವನು ಹಿಂದುವು, ಇವನಿಗೆ ೯೯ ವರುಷ ವಯಸ್ಸಾಗಿತ್ತು. ಒಬ್ಬ ಮಹಮದೀಯ ಹೆಂಗಸು ಎರಡನೆಯವಳು, ಈಕೆಗೆ ಅವಸಾನ ಕಾಲದಲ್ಲಿ ೧೦೦ ಸಂವತ್ಸರಗಳು ತುಂಬಿದ್ದವು. ಮೂರನೆಯವಳು ಒಬ್ಬ ಬರ್ಮಾಯಳು; ಇವಳಿಗಾದರೋ ೧೦೫ ವರುಷವಾಗಿತ್ತು.

* * * *

ಈ ವರುಷ ಹತ್ತಿ ಬೆಳೆಯು ಬಹಳ ಹುಲುಸಾಗಿರುವಂತೆ ಪ್ರಕಟವಾಗಿದೆ. ರೈತರು ಮಧ್ಯ ಪ್ರಾಂತ್ಯಗಳಲ್ಲಿ ೧೬,೪೩,೩೪೭ ಎಕರೆ ಜಮೀನಿನಲ್ಲೂ ಬೀರಾರಿನಲ್ಲಿ ೩೩,೭೫,೧೫೩ ಎಕರೆ ಜಮೀನಿನಲ್ಲೂ ಹತ್ತಿ ಬೆಳೆಯನ್ನು ಮಾಡಿದ್ದಾರೆ. ಹೋದ ವರುಷ ಅವೆರಡು ಕಡೆಗಳಿಂದಲೂ ೭,೭೬,೭೦೬ ಗಟ್ಟಾಗಳ ಹತ್ತಿ ಬಹುಗಳ ಮೇಲೆ ರಫ್ತಾಯಿತು. ಈ ವರುಷವಾದರೋ ಇದಕ್ಕಿಂತಲೂ ರಫ್ತು ಹೆಚ್ಚುವುದಕ್ಕೆ ಸಂಶಯವಿಲ್ಲ.

* * * *

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೩,೫೫೧ ಮಂದಿಗೆ ಪ್ಲೇಗ್ ತಗಲಿ ಆ ಪೈಕಿ ೨,೬೦೩ ಮಂದಿ ಕಾಲವಾದರು. ಈ ಪೈಕಿ ಬೊಂಬಾಯಿ ಅಧಿಪತ್ಯದಲ್ಲಿ ಪ್ಲೇಗ್ ತಗಲಿದವರು ೨,೧೫೨ ಮಂದಿ, ಸತ್ತವರು ೧,೫೯೬ ಜನ; ಮಧ್ಯಪ್ರಾಂತ್ಯಗಳಲ್ಲಿ ೫೦೬ ಜನಕ್ಕೆ ತಗಲಿತು, ೪೨೨ ಜನ ಸತ್ತರು; ಸಂಯುಕ್ತ ಅಧಿಪತ್ಯದಲ್ಲಿ ೧೫೦ ಜನರಿಗೆ ತಗಲಿತು, ೧೩೪ ಜನರು ತೀರಿಹೋದರು; ಪಂಜಾಬಿನಲ್ಲಿ ೧೨೦ ಮಂದಿಗೆ ತಗಲಿತು, ೭೨ ಮರಣಗಳಾದವು. ಮೈಸೂರು ಸಂಸ್ಥಾನದಲ್ಲಿ ೧೪೪ ಜನರಿಗೆ ತಗಲಿತು, ೧೦೪ ಮಂದಿ ತೀರಿಹೋದರು.

* * * *

ರಂಗೂನ್ ಪಟ್ಟಣದಲ್ಲಿರುವ ಬರ್ಮಾಯರ ದೊಡ್ಡ ಗುರುವು ಈ ವರುಷ ಆ ದೇಶದಲ್ಲಿ ವೀಶ ಕ್ಷಾಮವು ಪ್ರಾಪ್ತವಾಗುವುದೆಂತಲೂ ಅದನ್ನು ನಿವಾರಣೆ ಮಾಡುವುದಕ್ಕೆ ಬರ್ಮಾಯ ಶಿಷ್ಯರೆಲ್ಲಾ ತಮ್ಮ ತಮ್ಮ ಗ್ರಾಮ ಊರು ಕೇರಿಗಳಲ್ಲಿ ಒಗ್ಗಟ್ಟಾಗಿ ಮರಳಿನ ದೇವಸ್ಥಾನಗಳನ್ನು ಕಟ್ಟಿ, ವೈದಿಕರಿಗೆ ಅನ್ನದಾನ ಮಾಡಬೇಕೆಂತಲೂ ನೋಟೀಸುಗಳನ್ನು ಬರೆದು ಅಚ್ಚುಹಾಕಿಸಿ ಆ ಪ್ರಾಂತ್ಯದಲ್ಲೆಲ್ಲಾ ಹಂಚಿಸಿರುತ್ತಾನೆ. ಪ್ರತಿ ಒಂದು ಊರು ಗ್ರಾಮದಲ್ಲೂ ಜನರು ಅದೇ ಪ್ರಕಾರ ದೇವಸ್ಥಾನ ಕಟ್ಟಲೂ ಅನ್ನದಾನ ಮಾಡಲೂ ಪ್ರಯತ್ನ ಮಾಡುತ್ತಿದ್ದಾರೆ.

* * * *

ಹಿಂದುಸ್ಥಾನದ ಕ್ಷಾಮಗಳನ್ನು ಕುರಿತು ಒಂದಾನೊಂದು ಪತ್ರಿಕೆಯು ಬರೆಯುವುದೇನೆಂದರೆ—ಕಳೆದ ೧೮೬೫ರಿಂದ ೧೯೦೦ ನೇ ಇಸವಿ ವರೆಗೆ ಹಿಂದುಸ್ಥಾನದಲ್ಲಿ ಇಪ್ಪತ್ತೆಂಟಾವರ್ತಿ ಕ್ಷಾಮ ಪ್ರಾಪ್ತವಾಯಿತು. ಮತ್ತು ೧೮೭೦ನೇ ವರುಷದಿಂದೀಚೆಗೆ ಪ್ರತಿ ವರುಷವೂ ಯಾವದಾದರೂ ಒಂದು ಭಾಗದಲ್ಲಿ ಕ್ಷಾಮವಿದ್ದೇ ಇದೆ. ೧೮೭೬ ರಿಂದ ೧೯೦೦ನೇ ಇಸವಿ ವರೆಗೆ ೨೬೦ ಲಕ್ಷ ಪ್ರಜೆಗಳು ಕ್ಷಾಮದ ದೆಸೆಯಿಂದ ಲಯವಾಗಿದ್ದಾರೆಂದು ತಿಳಿದು ಬಂದಿದೆ. ಹೋದ ವರುಷದ ಕ್ಷಾಮನಿವಾರಣೆಗೆ ಇಂಡಿಯಾ ಗವರ್ನಮೆಂಟಿನವರು ೩೫ ಕೋಟಿ ರೂಪಾಯಿ ಖರ್ಚುಮಾಡಿದಾರೆ ಎಂಬುದೇ

* * * *

ಮುಂದಿನ ತಿಂಗಳಲ್ಲಿ ಕಾಶೀಪಟ್ಟಣದೊಳಗೆ ಬಹು ವಿಶೇಷವಾದ ಅನೇಕ ಸಂಘಗಳೂ ಸಮಾಜಗಳೂ ನಡೆಯುವವು. ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಮಹಾಸಭೆ, ಕೈಗಾರಿಕೆಯ ಮತ್ತು ವ್ಯವಸಾಯೋಪಕರಣಗಳ ವಸ್ತುಪ್ರದರ್ಶನ, ಸಂಘಪರಿಷ್ಕರಣ ಸಮಾಜ, ಮದ್ಯಪಾನ ನಿರೋಧಕಸಂಘ, ಆರ್ಯಸಮಾಜಕೂಟ, ರಜಪುತ್ರಮಹಾಸಭೆ, ಭಾರತ ಧರ್ಮ ಮಹಾಮಂಡಲ, ಈ ಸಮಾಜಗಳು ನಡೆಯುತ್ತವೆ. ಬಹುಮಂದಿ ಸರ್ದಾರರೂ ಕಲಾಕೋವಿದರೂ ಉಪನ್ಯಾಸಗಳನ್ನು ಮಾಡುವರು. ಅಲ್ಲದೆ ಘಾಜೀಪುರದಲ್ಲಿ ಕಾಯಸ್ಥರ ಸಮಾಜವೂ ಷಾಹಜಹಾನ್‌ಪುರದಲ್ಲಿ ಭಾರ್ಗವಸಭೆಯೂ ನಡೆಯುವಂತೆ ಏರ್ಪಾಡಾಗಿದೆ.

* * * *

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಗಂಗಾನದಿ ಯ ಮೇಲೆ ಈಗ ತಾನೇ ಕಟ್ಟಿ ಪೂರೈಸಿರುವ ಭಾರೀ ಸೇತುವೆಯನ್ನು ನೋಡಿ, ಪ್ರಪಂಚದಲ್ಲಿ ಇದಕ್ಕಿಂತಲೂ ದೊಡ್ಡ ಸೇತುವೆಗಳು ಮೂರಕ್ಕಿಂತ ಹೆಚ್ಚಾಗಿಲ್ಲವೆಂದು ಹೇಳುತ್ತಾರೆ. ಈ ಹೊಸ ಸೇತುವೆಯು ೩,೩೦೦ ಗಜಗಳಷ್ಟು ಉದ್ದವಾಗಿಯೂ ರೈಲು, ಗಾಡಿ, ಜನ, ಜಾನವಾರುಗಳು ಪ್ರತ್ಯೇಕ ಪ್ರತ್ಯೇಕವಾಗಿ ಸಂಚಾರ ಮಾಡುವುದಕ್ಕೆ ಅನುಕೂಲವಾಗಿಯೂ ವಿಶೇಷ ಆಶ್ಚರ್ಯವೂ ಅದ್ಭುತವೂ ಆದ ಯಂತ್ರಸಾಧನಗಳಿಂದ ಕಟ್ಟಿರುವುದಾಗಿಯೂ ಇದೆ. ಹದಿನೈದು ಕಮಾನುಗಳುಳ್ಳ ಈ ಸೇತುವೆಗೆ ನದಿಯ ಪಾತ್ರದಲ್ಲಿ ನೂರಾರು ಅಡಿ ಪ್ರಮಾಣ ಭೂಮಿಯನ್ನು ಶೋಧನೆ ಮಾಡಿ ತಳಹದಿ ಕಟ್ಟಿರುತ್ತಾರೆ.

* * * *

ಧೋಳ್ಪುರ ಸಂಸ್ಥಾನದ ಸರಹದ್ದಿನಲ್ಲಿರುವ ಜಾಗ್ನರ್ ಎಂಬ ಊರಿಗೆ ಕಳೆದ ವಾರ ಸುಮಾರು ೧೦೦ ಮಂದಿ ಡಕಾಯಿತಿ ಕಳ್ಳರು ನುಗ್ಗಿ, ಅಲ್ಲಿನ ಪೊಲೀಸ್ ಠಾಣ್ಯಕ್ಕೆ ಮುತ್ತಿಗೆಹಾಕಿ ಒಳಗಿದ್ದ ಪೊಲೀಸಿನವರನ್ನೆಲ್ಲಾ ದಸ್ತಗಿರಿಮಾಡಿ, ತರುವಾಯ ಆ ಊರಿನ ಭಾರೀ ಸಾಹುಕಾರನ ಮನೆಗೆ ಹೋಗಿ ಕೊಳ್ಳೆಹೊಡೆಯುತ್ತಿದ್ದರು. ಅಷ್ಟರಲ್ಲಿ ಆ ಸ್ಟೇಷನ್ ಪೊಲೀಸ್ ಅಧಿಕಾರಿಯು ಸರ್ಕೀಟಿನಿಂದ ವಾಪಸು ಬಂದು, ಈ ಕಳ್ಳರ ಅವಾಂತ್ರವನ್ನು ಕೇಳಿ, ಕೂಡಲೇ ಆ ಸಾಹುಕಾರನ ಮನೆಗೆ ಹೋಗಿ, ಗುಂಡು ಹೊಡೆದು ಗ್ರಾಮಸ್ಥರಲ್ಲಿ ಭರವಸವನ್ನೂ ಕಳ್ಳರಲ್ಲಿ ಭೀಕರವನ್ನೂ ಹುಟ್ಟಿಸಿದನು. ಕಳ್ಳರೆಲ್ಲಾ ಪರಾರಿಯಾದರು. ಒಬ್ಬನುಮಾತ್ರ ಸಿಕ್ಕಿಬಿದ್ದಿದ್ದಾನೆ. ಈ ಗಲಭೆಯಲ್ಲಿ ಕೆಲವು ರೈತರಿಗೆ ಗಾಯಗಳಾಗಿವೆ.

* * * *

ಒಬ್ಬ ಬಾತ್ಮಿದಾರನು ಬರೆಯುವುದೇನೆಂದರೆ—ನಾನು ಉತ್ತರ ದೇಶದಲ್ಲೂ ಮಧ್ಯ ಹಿಂದುಸ್ಥಾನದಲ್ಲೂ ವಿಶೇಷವಾಗಿ ಸಂಚಾರ ಮಾಡತಕ್ಕವನಾಗಿದ್ದೇನೆ. ದೊಡ್ಡ ದೊಡ್ಡ ಪಟ್ಟಣಗಳಲ್ಲೆಲ್ಲಾ ಜರ್ಮನಿಯ ವರ್ತಕರು ಬಂದು, ಅಂಗಡಿಗಳನ್ನಿಟ್ಟುಕೊಂಡು, ದನಗಳನ್ನು ಕೊಲ್ಲುವ ಕಟುಕರಿಂದ ಆ ರಕ್ತವನ್ನು ಕೊಂಡುಕೊಳ್ಳುತ್ತಲೂ ಜರ್ಮನಿಗೆ ರವಾನೆ ಮಾಡುತ್ತಲೂ ಇದಾರೆ. ಜರ್ಮನಿಯಿಂದ ಒಂದು ತರಹಾ ಪದಾರ್ಥವನ್ನು ಕಳುಹಿಸುತ್ತಾರೆ. ಅದನ್ನು ಈ ಜನಗಳ ರಕ್ತಕ್ಕೆ ಬೆರಸಿ ಚೆನ್ನಾಗಿ ಕುದಿಸುತ್ತಾರೆ. ರಕ್ತವು ಕೊಳೆವಿಲ್ಲದೆ ಸುಲಭವಾಗಿ ಸಾಗಿಸುವುದಕ್ಕೆ ಅನುಕೂಲವಾಗುತ್ತದೆ. ಇಂಥಾ ದುಃಖಕರವಾದ ವ್ಯಾಪಾರವನ್ನು ನಿಲ್ಲಿಸುವುದಕ್ಕೆ ದೇಶಪಕ್ಷದವರೂ ಮ್ಯುನಿಸಿಪಲ್ ಕಮಿಷನರುಗಳೂ ಪ್ರಯತ್ನಪಡಬಾರದೇ ಎಂಬುದೇ.

ಹೋದ ವರುಷ ಡಿಸೆಂಬರ್ ತಿಂಗಳಲ್ಲಿ ಜಾಲಂಧರದಲ್ಲಿದ್ದ ಸುಬೇದಾರ್ ಮೇಜರ್ ಬಾರ್‌ಸಿಂಗ್ ಎಂಬಾತನ ಮನೆಗೆ ಡಕಾಯಿತರು ನುಗ್ಗಿ ಆತನನ್ನು ಕೊಂದುಹಾಕಿ ೩೦,೦೦೦ ರೂಪಾಯಿ ನಗನಾಣ್ಯಗಳನ್ನು ಕಳುವುಮಾಡಿಕೊಂಡು ಹೋದರು. ಪೊಲೀಸಿನವರು ಇವರನ್ನು ಫಿರೋಜ್‌ಪುರದಲ್ಲಿ ದಸ್ತಗಿರಿ ಮಾಡಿ, ಮಿ॥ ಯಂಗ್ ಎಂಬ ಡಿಪ್ಟಿಯವರಿಂದ ತನಿಖೆ ಮಾಡಿಸುತ್ತಿದ್ದರು. ಏಪ್ರಿಲ್ ೪ ರಲ್ಲಿ ಪ್ರಾಪ್ತವಾದ ಭೂಕಂಪದ ದೆಸೆಯಿಂದ ಆ ಡಿಪ್ಟಿಯವರೂ ಒಬ್ಬ ಖೈದಿಯೂ ಮೃತರಾದರು. ಹೊಷಿಯಾರ್‌ಪುರದ ಸೆಷನ್ಸ್ ಜಡ್ಜರು ಈ ಮೊಕದ್ದಮೆಯನ್ನು ತನಿಖೆ ಮಾಡಿ, ಕಳೆದ ವಾರ ತೀರ್ಮಾನ ಹೇಳಿದಾರೆ. ಹದಿಮೂರು ಮಂದಿ ಖೈದಿಗಳ ಪೈಕಿ ಇಬ್ಬರಿಗೆ ಫಾಸೀ ಸಜಾ ಆಯಿತು, ಏಳು ಮಂದಿಗೆ ಯಾವಜ್ಜೀವವೂ ಬಂಕೋಲ್ ಸಜಾ ಆಯಿತು, ನಾಲ್ವರಿಗೆ ಹಲಾ ಹತ್ತು ವರುಷದಂತೆ ಬಂಗೋಲ್ ಶಿಕ್ಷೆಯಾಗಿದೆ.

****

ಗತಿಸಿದ ಚಿರಸ್ಮರಣೀಯರಾದ ವಿಕ್ಟೋರಿಯಾ ಮಹಾರಾಜ್ಞೀಯವರ ಹೆಸರನ್ನು ಈ ರಾಷ್ಟ್ರದಲ್ಲಿ ಶಾಶ್ವತಮಾಡುವುದಕ್ಕೆ ಲಾರ್ಡ್ ಕರ್ಜನ್ ಪ್ರಭುಗಳು ಚಂದಾ ಎತ್ತಿ ಅಪಾರ ಹಣವನ್ನು ಕೂಡಿಸಿ, ಅದರಲ್ಲಿ ಎರಡು ಕೆಲಸಗಳನ್ನು ಪ್ರಾರಂಭಿಸಿದಾರೆ ಕಲ್ಕತ್ತೆಯಲ್ಲಿ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಸರ್ವವಸ್ತು ಪ್ರದರ್ಶನಾಲಯವನ್ನು ಕಟ್ಟಿಸುವುದು ಮೊದಲನೇ ಭಾಗ. ಈ ದೇಶದ ಸ್ತ್ರೀ ಪ್ರಜೆಗಳ ಕಷ್ಟನಿವಾರಣೆಗಾಗಿ ವಿದ್ಯಾವತಿಯರಾದ ಯುವತಿಯರಿಗೆ ವೇತನ ಕೊಟ್ಟು ವೈದ್ಯ ಮೊದಲಾದ ಭಾಗಗಳನ್ನು ಕಲಿಸಿ ಪ್ರತಿ ಒಂದು ಊರಿಗೂ ವೈದ್ಯ ಮಾಡುವುದಕ್ಕೆ ಕಳುಹಿಸಿಕೊಡುವುದೂ, ಅಲ್ಲಲ್ಲಿ ಸ್ತ್ರೀಯರಿಗಾಗಿ ಆಸ್ಪತ್ರೆಗಳನ್ನಿಡುವುದೂ ಎರಡನೇ ಭಾಗವಾಗಿರುತ್ತದೆ. ಈ ವಿಕ್ಟೋರಿಯಾ ಮೆಮೋರಿಯಲ್ ಸ್ಕಾಲರ್‌ಷಿಪ್ ಫಂಡಿಗೆ ಈಗ ೬,೦೯,೮೦೦ ರೂಪಾಯಿ ಕೂಡಿದೆ ಈ ಆಸ್ಪತ್ರೆಗಳಲ್ಲಿ ಕಳೆದ ವರುಷ ಒಟ್ಟು ೧೮,೫೧,೫೦೦ ಮಂದಿ ಸ್ತ್ರೀ ಪ್ರಜೆಗಳು ಔಷಧಾದಿಗಳನ್ನು ಪಡೆದಿರುತ್ತಾರೆ ಈ ಫಂಡಿನಿಂದ ೧೬೦ ಮಂದಿ ಸೂಲಗಿತ್ತಿಯರು ತರಪೇತಾಗುತ್ತಿರುವರು. ಈ ಫಂಡಿನ ಮೇಲ್ವಿಚಾರಣೆಯಲ್ಲಾ ಇದುವರೆಗೆ ವೈಸ್‌ರಾಯಿಯವರ ಪತ್ನೀರಾದ ಲೇಡಿ ಕರ್ಜನರವರೇ ಮುದ್ದಾಗಿ ನೋಡಿಕೊಳ್ಳುತ್ತಿದ್ದರು.

****

ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಕಮಿಷನರು ಕಳೆದ ಗುರುವಾರ ಸಾಯಂಕಾಲ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಸುಖಾಗಮನವನ್ನು ಬಯಸುವುದಕ್ಕಾಗಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ, ರತ್ನಖಚಿತವಾದ ಒಂದು ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಈ ನವೀನ ಕೈಪೆಟ್ಟಿಗೆಯು ವಿವರಿಸಲಶಕ್ಯವಾದಷ್ಟು ಸುಂದರವಾಗಿಯೂ ನವರತ್ನ ಖಚಿತವಾಗಿಯೂ ಇರುತ್ತದೆ. ಸಮುದ್ರವೂ ಭೂಮಿಯೂ ಬೆಳ್ಳಿಯ ತಗಡುಗಳಿಂದಲೂ ಗಿಲೀಟಿನಿಂದಲೂ ಪೆಟ್ಟಿಗೆಯ ಮೇಲೆ ಬಿಡಿಸಲ್ಪಟ್ಟಿವೆ ಒಂದುಕಡೆ ಹಿಂದುಸ್ಥಾನದ ಆಕಾರವನ್ನೂ ಅದರಲ್ಲಿ ನದಿ ಬೆಟ್ಟ ಮುಂತಾದ ಭಾಗಗಳನ್ನೂ ಕೆತ್ತನೆಯಾಗಿದೆ ಕಲ್ಕತ್ತೆ, ಬೊಂಬಾಯಿ, ಅಲಹಾಬಾದ್, ರಂಗೂನ್, ಢಕ್ಕಾ, ಈ ಮಹಾಪಟ್ಟಣಗಳಿರುವ ಸ್ಥಳಗಳನ್ನು ಸರ್ವೋತ್ತಮವಾದ ವಜ್ರ ರತ್ನದಿಂದ ಕೆತ್ತಿ ತೋರಿಸಿದೆ. ಇತರ ಪಟ್ಟಣಗಳು ಅಂದರೆ ಸುಮಾರು ೫೦ ನಗರಗಳು ಕೆಂಪು ಪಚ್ಚೆಗಳಿಂದ ಬಿಡಿಸಲ್ಪಟ್ಟಿವೆ ಆ ಪೆಟ್ಟಿಗೆಯ ಇನ್ನೊಂದು ಕಡೆ ಒಂದು ಪಾರ್ಶ್ವದಲ್ಲಿ ೧೬೭೦ ನೇ ಇಸವಿಯಲ್ಲಿ ಬೊಂಬಾಯಿ ಪಟ್ಟಣವಿದ್ದ ಸ್ವರೂಪವನ್ನೂ ಇನ್ನೊಂದು ಪಾರ್ಶ್ವದಲ್ಲಿ ಆ ಪಟ್ಟಣದ ಈಗಿನ ಆಕೃತಿಯನ್ನೂ ಬಹು ವಿವರವಾಗಿ ತೋರಿಸಿದೆ. ನವರತ್ನಗಳಲ್ಲೂ ನಾನಾ ಪಕ್ಷಿಗಳನ್ನೂ ನವಿಲು ಗಿಳಿ ಮೊದಲಾದವುಗಳನ್ನೂ ಕೆತ್ತನೆಮಾಡಿದೆ. ಇನ್ನೊಂದುಕಡೆ ಮ್ಯುನಿಸಿಪಲ್ ಕಟ್ಟಡಗಳೂ ರಾಜಾಬಾಯಿ ಗೋಪುರವೂ ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಪ್ರತಿಮೆಗಳೂ ವಿವರವಾಗಿ ತೋರಿಸಲ್ಪಟ್ಟಿವೆ ಈಗ ಚಕ್ರವರ್ತಿಯವರಾಗಿರುವ ಎಡ್ವರ್ಡ್ ಸಾರ್ವಭೌಮರವರು ಯುವರಾಜರಾಗಿದ್ದು ೩೦ ವರುಷಗಳ ಕೆಳಗೆ ಬೊಂಬಾಯಿಗೆ ದಯಮಾಡಿದ್ದಾಗ್ಯೂ ಅವರು ಆಗ ಮ್ಯುನಿಸಿಪಲ್ ಕಮಿಷನರುಗಳಿಂದ ವಿಜ್ಞಾಪನೆಯನ್ನು ಅಂಗೀಕರಿಸಿದ ಭಾವವೂ ಬೊಂಬಾಯಿಗೆ ಹೋಗಿದ್ದ ದೇಶೀಯ ರಾಜರುಗಳ ಸಂಗಡ ಅವರು ನಿಂತು ಅವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದ ಭಾವವೂ, ಇದೇ ರೀತಿ ಇನ್ನೂ ನಾನಾ ಆಹ್ಲಾದಕರಗಳಾದ ಸಂಗತಿಗಳೂ ಈ ಕೈಪೆಟ್ಟಿಗೆಯನ್ನು ನೋಡಿದಕೂಡಲೇ ಜ್ಞಾಪಕಕ್ಕೆ ಬರುವಂತೆ ಅದರ ಮೇಲೆ ಚಿತ್ರಬರಿಸಿ ತಯಾರುಮಾಡಿರುತ್ತಾರೆ. ಇಂಥಾ ಅಪೂರ್ವವೂ ವಿಚಿತ್ರವೂ ಚರಿತ್ರಾರ್ಹವೂ ಆದಂಥಾ ಕೈಪೆಟ್ಟಿಗೆಯನ್ನೂ ಅರ್ಜಿಯನ್ನೂ ಪ್ರಿನ್ಸ್ ಆಫ್ ವೇಲ್ಸ್‌ರವರು ಬಹಳ ಸಂತೋಷ ಪೂರ್ವಕವಾಗಿ ಅಂಗೀಕರಿಸಿ ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳನ್ನು ಬಹು ಆದರದಿಂದ ವಂದಿಸಿರುತ್ತಾರೆ.

ತಾಲ್ಲೋಕು ವರ್ತಮಾನಗಳು.

ತಿಪ್ಟೂರು.—ಕೆಲವು ದಿನಗಳಿಂದ ಮಳೆ ನಿಂತಿರುತ್ತದೆ. ಚನ್ನಾಗಿ ಬೆಳೆದಿದ್ದ ಪೈರು ಬಾಡಿ ಹೋಗುವದಲ್ಲದೆ ರಾಗಿಯು ಸಹಾ ಸೀಕಲು ಕಾಳಾಗುವಂತಾಯಿತು ಎಂದು ಎಲ್ಲರೂ ವ್ಯಸನಪಡುತ್ತಿದ್ದಾರೆ.—ಕಳೆದ ಸಂತೆಯು ಬಡವರಿಗೆ ಬಹುಮಟ್ಟಿಗೆ ಒಂಟು ಮಾಡಿತು. ರೂ. ಗೆ ೧೮ ಸೇರು ರಾಗಿ, ೬ ಸೇರು ಅಕ್ಕಿ ಮಾರಾಟವಾಯಿತು. ಇಂಥಾಪ್ಪರಲ್ಲಿ ಒಬ್ಬನು ಪಟ್ಟೆ ಸೇರನ್ನು ಇಟ್ಟು ಮಾರುತ್ತಿದ್ದು ಸಿಕ್ಕಿಬಿದ್ದನು. ನಮ್ಮ ಅಮಲ್ದಾರರು ಇವನಿಗೆ ಶಿಕ್ಷೆ ವಿಧಿಸಿದರೆ ಉಳಿದಿರುವ ಅನ್ಯಾಯಗಾರರಿಗೆ ಭಯವೂ ಪ್ರಜೆಗೆ ಪ್ರಯೋಜನವೂ ಉಂಟಾಗುತ್ತದೆಂದು ಎಲ್ಲರೂ ನಿರೀಕ್ಷಿಸುತ್ತಾರೆ ಇದಕ್ಕೆ ಹಿಂದಿನ ಸಂತೆಗಳಲ್ಲಿ ಕೆಲವರು ಹೊಟ್ಟು ಊದುವ ರಾಗಿಯನ್ನು ಮಾರಿದರು ತಿಂದವರಲ್ಲಿ ಅನೇಕರು ಹೊಟ್ಟೆ ಉಬ್ಬಿಸಿಕೊಂಡರೆಂದು ತಿಳಿಯಿತು ಆದ್ದರಿಂದ ಕಳೆದ ಸಂತೆಯ ದಿನ ಪೊಲೀಸ್ ಇನ್ಸ್‌ಪೆಕ್ಟರೂ ಪಟೇಲರೂ ಸಂತೆಗೆ ಹೋಗಿ ಶುಲ್ಕರಾಗಿ ಮಾರುತ್ತಿದ್ದವನನ್ನು ಹಿಡಿದುಕೊಂಡರೆಂದು ವರ್ತಮಾನವಿದೆ—ಕಳೆದ ೩೧ ನೇ ತಾ॥ ಮಂಗಳವಾರ ರಾತ್ರಿ ಗವರ್ನಮೆಂಟ್ ಸೈಟ್ ಸ್ಕೂಲಿನ ವಾರ್ಷಿಕ ವಿದ್ಯಾಭಿವೃದ್ಧಿ ಮಹಾ ಸಭೆಯು ಬಹಳ ಚನ್ನಾಗಿ ನೆರವೇರಿತು—ಸುಲ್ತಾನಿ ಎಂಬ ಹೆಂಗಸು ಒಬ್ಬ ಹುಡುಗಿಯನ್ನು ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದಕ್ಕಾಗಿ ಆ ಹುಡುಗಿಯ ವಾರಸ್‌ದಾರರ ರಿಪೋರ್ಟಿನ ಮೇಲೆ ಇಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಅಪರಾಧಿ ಸುಲ್ತಾನಿಗೆ ೩ ತಿಂಗಳು ಸಜಾವೂ ೫೫ ರೂ ಜುಲ್ಮಾನೆಯೂ ಆಯಿತೆಂದು ವರ್ತಮಾನವಿರುತ್ತೆ.

ಚಿತ್ರದುರ್ಗ.—ಈ ೪-೫ ದಿನಗಳಿಂದಲೂ ಸಾಯಂಕಾಲ ಮೋಡಗಳು ಸಂಚಾರಮಾಡುತ್ತವೆ ಮಳೆಯಿಲ್ಲ ಧಾನ್ಯಗಳೆಲ್ಲಾ ಕಳೆದ ಸಂತೆಗಿಂತಲೂ ಬಹಳ ಪ್ರಿಯವಾದವು. ಅಕ್ಕಿ ರೂ ಗೆ ೬ ಸೇರು, ಜೋಳ, ರಾಗಿ ೧೬ ಸೇರು, ಈ ರೀತಿ ಇದೆ ದಾವಣಗೆರೆ, ಚನ್ನಗಿರಿ ಪ್ರಾಂತ್ಯದವರು ತುಂಬುವದಕ್ಕೆ ಬರುತ್ತಾರೆ. ಬೊಂಬಾಯಿ ಅಧಿಕಸ್ಯದಲ್ಲಿ ಕೆಲವು ಕಡೆ ೧೧—೧೨ ಸೇರು ಮಾರುತ್ತದೆಂತ ಅನೇಕ ವರ್ತಕರು ರೈಲಿನಲ್ಲಿ ಸಾಗಿಸುವದಕ್ಕೆ ಬರುತ್ತಾರಾದ್ದರಿಂದ ಪೈಪೋಟಿಯಿಂದ ಧಾರಣೆ ಹೆಚ್ಚಿಸುವರು. ಇದರಿಂದ ಬಡವರ ಕಷ್ಟ ಹೆಚ್ಚಿದೆ. ಸರ್ಕಾರದವರು ೮ ಸೇರು ಅಕ್ಕಿ, ೨೦ ಸೇರು ರಾಗಿ ಮಾರಾಟವಾಗುವಂತೆ ಏರ್ಪಾಡುಮಾಡಿಕೊಟ್ಟರೆ ಉತ್ತಮ ಎಕ್ಸೈಜ್ ಕಮಿಷನರು ಈ ಪ್ರಾಂತ್ಯ ಸರ್ಕೀಟು ಬರುವ ಬಾಗಿ ಕೇಳಿ ಮುನಿಸಿಪಾಲಿಟಿಯವರು ಊರನ್ನೆಲ್ಲಾ ಶುಚಿಮಾಡಿದರು ಯಾವಾಗಲೂ ಇದೇ ರೀತಿ ಇಟ್ಟುಕೊಂಡಿರುವದಾದರೆ ಆರೋಗ್ಯವಿಚಾರದಲ್ಲಿ ರಾಜಧಾನಿಯನ್ನು ಸಿಂಗರಿಸಬಹುದು. ಮುಖ್ಯ ಮುಖ್ಯವಾದ ಬೀದಿಗಳನ್ನೆಲ್ಲಾ ತೋರಣ, ವೆಲ್ಕಂ ಮೊದಲಾದವುಗಳಿಂದ ಶೃಂಗರಿಸಿದ್ದರು. ಬಂಗ್ಲೆ, ಟವರ್ ಹಾಲ್ ಮುಂಭಾಗದಲ್ಲಿ ಚಪ್ಪರ, ನಿಶಾನಿ, ಸ್ತಂಭಗಳು ಅಂದವಾಗಿ ನೋಟಕರ ಮನಸ್ಸನ್ನು ಸೆಳೆಯುತ್ತಿದ್ದವು ತಾ ೧೦ ನೇ ಶುಕ್ರವಾರ ಸಾಯಂಕಾಲ ಮಿ॥ ಕೆ॥ ಪೂರ್ಣಯ್ಯ ಶ್ರೀಮಂತರ ಸವಾರಿ ಚಿತ್ತೈಸಿತು ಅನೇಕ ಜನ ದೊಡ್ಡ ಮನುಷ್ಯರು, ವರ್ತಕರು, ಆಫೀಸರುಗಳು ಕಾದಿದ್ದು ಎದುಗೊಂಡು ಹಾರ ತುರಾಯಿಗಳಿಂದ ಸತ್ಕರಿಸಿ ಸುಖಾಗಮನವನ್ನು ಕೋರಿ ಟ್ರಾವಲರ್ಸ್ ಬಂಗ್ಲೆಗೆ ಕರತಂದರು ಅಲ್ಲಿ ಬಹಳ ರಮಣೀಯವಾದ ದೀಪೋತ್ಸವವು ನಡೆದಿತ್ತು. ಮರುದಿನ ಬೆಳಿಗ್ಗೆ ಟವರ್ ಹಾಲಿನಲ್ಲಿ ಹೈ ಸ್ಕೂಲಿನ ವಿದ್ಯಾರ್ಥಿಗಳಿಗೂ ಗರ್ಲ್ ಸ್ಕೂಲ್ ವಿದ್ಯಾರ್ಥಿನಿಯರಿಗೂ ಬಹುಮಾನ ಸಭೆಯಾಯಿತು ಸ್ತ್ರೀವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ೭ ಬೆಳ್ಳಿ ಪದಕಗಳು, ೨ ಬಟ್ಟಲುಗಳು, ೨ ರವಿವರ್ಮ ಪಟಗಳು ಬಾಲಿಕೆಯರಿಗೆ ದೊರಕಿದವು ಮಧ್ಯಾಹ್ನ ಡಿಸ್ಟ್ರಿಕ್ಟ್ ಆಫೀಸ್ ಮೊದಲಾದ ಸರ್ಕಾರದ ವಿಚಾರಣೆ ಕೆಲಸದಲ್ಲಿದ್ದರು. ಆ ದಿನ ರಾತ್ರಿ ಹೈ ಸ್ಕೂಲು ವಿದ್ಯಾರ್ಥಿಗಳಿಂದ ಆಡಿದ ನಾಟಕಕ್ಕೆ ದಯಮಾಡಿದ್ದರು. ಅಲ್ಲೇ ಮುಸಲ್ಮಾನ ಜನಗಳು ಕೆಲವು ಸೀನುಗಳನ್ನು ತೋರಿಸಿದರು. ಬಹಳ ವಿನೋದವಾಗಿತ್ತು. ತಾ. ೧೨ ನೇ ಭಾನುವಾರ ಇಂಡಸ್ಟ್ರಿಯಲ್ ಸ್ಕೂಲನ್ನು ನೋಡಿಕೊಂಡು, ಚಳ್ಳಕೆರೆ ಪ್ರಾಂತ್ಯ ಹೊರಡುವ ವಹಂತಿ ಇದೆ—ಸೆಷನ್ಸ್ ಕೋರ್ಟು ಬಂದು ೪—೫ ದಿವಸಗಳಾದವು, ಒಂದು ಮೊಕದ್ದಮೆ ಇದೆ.

ಚಿಕ್ಕಮಗಳೂರು.—ಈ ಊರಿನಲ್ಲಿ ಈಚಿಗೆ ಮಳೆ ಬರಲಿಲ್ಲ ಇನ್ನೊಂದು ಹದ ಒಳ್ಳೇ ಮಳೆಯಾದರೆ ಭತ್ತದ ಬೆಳೆಯಾಗುವದೆಂದೂ ಬಾರದೆ ಹೋದರೆ ಆಗುವದಿಲ್ಲವೆಂದೂ ಹೇಳುತ್ತಾರೆ ಇಲ್ಲಿನ ಬಸವನಹಳ್ಳಿ ಕೆರೆಯಲ್ಲಿದ್ದ ಸ್ವಲ್ಪ ನೀರನ್ನು ಗದ್ದೆಗಳಿಗೆ ಬಿಟ್ಟುಕೊಂಡ ಕಾರಣ ಈಗ ಕೆರೆಯಲ್ಲಿ ನೀರೇ ಇಲ್ಲದಂತಾಯಿತು. ಮುಂದೆ ದನಕರುಗಳಿಗೂ ಸಂತೆಗೆ ಬರುವ ಗಾಡಿ ಎತ್ತುಗಳಿಗೂ ನೀರಿನ ಕ್ಷಾಮನಾದಂತಾಯಿತು ಈಗಲೋ ಆಗಲೋ ಮಳೆ ಬರುವಂತೆ ಮೋಡವಾಡುತ್ತಿದೆ—ಸೆಷನ್ಸ್ ಜಡ್ಜಿಯವರು ಬೀರೂರು ದರೋಡೆ ಮೊಕದ್ದಮೆಯಲ್ಲಿ ಸಿಕ್ಕಿದ ೮ ಜನರಲ್ಲಿ ಒಬ್ಬನನ್ನು ಖುಲಾಸೆ ಮಾಡಿ, ನಿಂತ ೭ ಜನರಿಗೆ ಇಸಂ ಒಂದಕ್ಕೆ ೫ ವರ್ಷದಂತೆ ಸಜಾ ವಿಧಿಸಿದರು. ಕೊಪ್ಪದ ತಾಲ್ಲೋಕಿನಲ್ಲಿ ಖೂನಿ ನಡಿಸಿದವನಿಗೆ ಫಾಸೀ ಸಜವೂ, ಗಡಸಾಲಿನಲ್ಲಿ ಅರೀಕೆರೆ ಯಡೇಹಳ್ಳಿ ರಸ್ತೆಯಲ್ಲಿ ದರೋಡೆ ನಡಿಸಿ ತಪ್ಪಿಸಿಕೊಂಡಿದ್ದ ಒಬ್ಬನಿಗೆ ೭ ವರ್ಷ ಸಜವೂ ಆಯಿತು. ಈ ಟೌನಿನಲ್ಲಿ ವಸ್ತಾರೆ ಶಾಮರಾಯರ ಮನೆಯಲ್ಲಿ ಒಣಗಲಿಕ್ಕೆ ಹಾಕಿದ್ದ ೩ ಸೀರೆಗಳನ್ನು ಕದ್ದಿದ್ದವನಿಗೆ ತಾಲ್ಲೋಕ್ ಮ್ಯಾಜಿಸ್ಟ್ರೇಟರು ೦ ತಿಂಗಳ ಸಜವೂ, ಸಾರಾಯಿ ಅಂಗಡಿಯಲ್ಲಿ ಖೋಟನಾಣ್ಯವನ್ನು ಚಲಾವಣೆಗೆ ತಂದಿದ್ದ ಮುರ್ತುಜಾ ಎಂಬುವನಿಗೆ ೯ ರೂಪಾಯಿ ಜುಲ್ಮಾನೆಯೂ ಆಯಿತು.—ಇದೇ ತಿಂಗಳು ೧೭ ನೆ ತಾರೀಖಿನಿಂದ ಮೈಸೂರು ಶೀಮೊಗ್ಗ ಸರಹದ್ದನ್ನು ಕ್ರಮಗಡಿಸುವ ಕೆಲಸವನ್ನು ಪ್ರಾರಂಭಿಸೋಣದರಿಂದ ಜನರಲ್ ಅ॥ ಕಮಿಷನರ್ ಮಿ॥ ಚೊಕ್ಕಣ್ಣನವರು ಬೌಂಡರಿ ಕೆಲಸಕ್ಕೆ ಹೋಗುವದರಿಂದ ಅವರ ಕೆಲಸಕ್ಕೆ ಮಿ॥ ಮೈಲಾರಿರಾಯರೂ ಮಿ॥ ಮೈಲಾರಿರಾಯರ ಕೆಲಸಕ್ಕೆ ಮಿ॥ ವೆಂಗ್ರಿ ಕೃಷ್ಣರಾಯರೂ ಬರುವರೆಂತ ಹೇಳುತ್ತಾರೆ. ಇಲ್ಲಿನ ಅ॥ ಕನಸರ್ವೇಟರ್ ಮಿ॥ ರಾಮರಾಯರಿಗೆ ಮೈಸೂರಿಗೆ ವರ್ಗವಾದಂತೆಯೂ ಅವರ ಸ್ಥಾನಕ್ಕೆ ತುಮಕೂರಿನ ಮಿ॥ ಹೇಸ್ಟಿಂಗ್ಸ್‌ರವರು ಬರುವರೆಂತಲೂ ವರ್ತಮಾನವಿದೆ ಇದೇ ತಿಂಗಳು ೭ ನೆ ತಾರೀಖಿಗೆ ವೆಸ್ಟ್ರನ್ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಕ್ಯಾಪ್ಟನ್ ಟ್ರಿಯಲ್ ಸಾಹೇಬರು ಇಲ್ಲಿಗೆ ಬಂದು ಸಂದಲ್‌ಕೋಠಿಯ ಹೊಸ ಕಟ್ಟಡವನ್ನೂ ಆಸ್ಪತ್ರೆಯಲ್ಲಿ ಕಟ್ಟುತ್ತಿರುವ ಹೊಸ ಕಟ್ಟಡಗಳನ್ನೂ ನೋಡಿಕೊಂಡು, ಮೂಡುಗೆರೆ ಪ್ರಾಂತ್ಯ ಅದೇ ದಿನ ಬಿಟ್ಟು ಹೋದರು—ಹೋದ ಸಂತೆಯಲ್ಲಿ ಅಕ್ಕಿ ೬॥ ಸೇರು, ರಾಗಿ ಸೇರು ಮಾರಾಟ ಮಾಡಿದರು. ಮುಂದೇನಾಗುವದೋ ತಿಳಿಯದು.

ಕೊಪ್ಪ.—ಇಲ್ಲಿ ಭತ್ತದ ಬೆಳೆಯು ತಕ್ಕಮಟ್ಟಿಗೂ ಆಗುತ್ತೆ. ಆದರೇನು, ಅವರವರ ಮನೆಯ ಖರ್ಚುಗಳಿಗೂ ಅಥವಾ ಖರ್ಚುಗಳಿಗೂ ೬ ತಿಂಗಳ ಗ್ರಾಸಕ್ಕೆ ಆಗುತ್ತೋ ಇಲ್ಲವೋ ಹೇಳಲು ಅಸಾಧ್ಯ. ಇಲ್ಲಿನ ಸಂತೆಗೆ ಶಿವಮೊಗ್ಗ ತರೀಕೆರೆ ಕಡೆಯಿಂದ ರಾಗಿ ಮೊದಲಾದ ದಿನಸುಗಳೆಲ್ಲಾ ಬರಬೇಕಾಗಿರುತ್ತೆ ಅಲ್ಲಿ ರೂ ೬—೮ ಸೇರು ಅಕ್ಕಿಯಾದರೆ ಇಲ್ಲಿಗೆ ತಂದು ಸಣ್ಣವರು ಮಾರಬೇಕಾದಲ್ಲಿ ಯಾವರೀತಿ ಕೊಡಬೇಕೋ ವಾಚಕರು ಊಹಿಸಬಹುದು. ಬಡಬಗ್ಗರೂ ಅಲ್ಪಬಲಬಿನವರೂ ಜೀವಿಸುವ ಬಗೆಯಿಲ್ಲ. ಬರಗಾಲವೇ ಬಂತೆಂದು ಹೇಳಬೇಕು—ಮೇಗರವಳ್ಳಿಯಲ್ಲಿ ಮಂಜಿ ಎಂಬ ಒಬ್ಬ ಗೌಡರ ಹೆಂಗಸು ಕಳ್ಳತನದ ಆಪಾದನೆಯಿಂದ ಅಭಿಮಾನಭಂಗವಾಗುತ್ತೆಂದು ಭಯಪಟ್ಟು ಮಗುವನ್ನು ಹೆತ್ತು ನಗಣೆಯಗುಂಡಿಯಲ್ಲಿ ಹಾಕಿದ್ದದನ್ನು ಪೊಲೀಸ್ ಜಮೆದಾರರು ದಫೇದಾರರು ಬಹಳ ಸಾಹಸಪಟ್ಟು ಅವಳ ಮೇಲೆ ಮೊಕದ್ದಮೆ ಮಾಡಿದಾರೆ ಆಕೆಯನ್ನು ಈಗ ಸಟಬು ಇನ್ನೂ ಇಲ್ಲಿನ ಲಾಕಪ್ಪಿನಲ್ಲಿಯೇ ಇಟ್ಟಿದಾರೆ ಮುಚ್ಚಮಗಳೂರಿನ ಡಿ. ಮೇಜಿಸ್ಟ್ರೇಟರಲ್ಲಿ ದರ್ಯಾಪ್ತು ಆಗುವದೆಂದು ಇಲ್ಲಿನ ಅಮಲ್ದಾರ್ರವರು ಆಕೆಗೆ ತಿಳಿಸಿರುತ್ತಾರೆ—ಅಮ್ಮದಪೇಟೆನಲ್ಲಿ ಕೂಲಿ ಕೆಲಸಮಾಡುವ ಒಬ್ಬ ಲಂಬಾಣಿ ಹೆಂಗಸಿನ ಎಡಹುಬ್ಬಿಗೆ ದಿನೇದಿನೇ ಹೆಚ್ಚುತ್ತಾ ವ್ರಣವಾಗಿ ಕ್ರಮೇಣ ಆ ಕಣ್ಣು ಕೆಟ್ಟುಹೋಗುವ ಸ್ಥಿತಿಗೆ ಬಂತು ಅದನ್ನು ಎಸ್ಟೇಟುಗಳ ಡಾಕ್ಟರ್ ಸಾಹೇಬರಿಗೆ ತೋರಿಸಲು ಅವರು ಆ ಕಣ್ಣನ್ನು ತೆಗೆಸಿ ಗುಣಪಡಿಸಬೇಕೆಂದು ಹೇಳಲು ಆ ಹೆಂಗಸು ಭಯಪಟ್ಟು ಕೊಪ್ಪದ ಆಸ್ಪತ್ರೆಗೆ ಬಂದು ಅಸಿಸ್ಟೆಂಟ್ ಮಿ ವಿ. ಸಿದ್ದಣ್ಣನವರಿಂದ ಚಿಕಿತ್ಸೆಯನ್ನು ಹೊಂದುತ್ತಿದ್ದಳು. ಅವರು ಬಹು ಮುತುವರ್ಜಿಯಿಂದ ಔಷಧೋಪಚಾರ ಮಾಡಲು ಸಂಪೂರ್ಣವಾಗಿ ಗುಣವಾಯಿತು ಕಳೆದುಕೊಳ್ಳಲಿಕ್ಕಿದ್ದ ಕಣ್ಣು ಉಳಿದುಕೊಂಡು ಮತ್ತು ಹರ ಹಾಗೆ ಆದದ್ದಕ್ಕಾಗಿ ಆ ಹೆಂಗಸೂ ಅವಳ ಕಡೆ ಜನರೂ ಬಹಳ ಸಂತೋಷಪಡುವದಲ್ಲದೆ ಮಿ॥ ಸಿದ್ದಣ್ಣನವರ ಪ್ರೋತ್ಸಾಹಕರವನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ—ಇಲ್ಲಿನ ಶೃಂಗೇರಿ ಟ್ರಾನ್ಸ್‌ಪೋರ್ಟ್ ಕಂಪನಿ ಏಜೆಂಟ್ ಅಪ್ಪರ್ ಸಾಹೇಬರ ತಮ್ಮ ಅಬ್ದುಲ್ ಜಬ್ಬಾರ್ ಶೃಂಗೇರಿಯ ದಸರಾ ಉತ್ಸವಕಾಲದಲ್ಲಿ ಜನಸಂಘವು ತುಂಬಾಗ್ಗೆ ಗಾಡಿಯನ್ನು ವೇಗವಾಗಿ ಬಿಡಿಸಿಕೊಂಡು ಹೋಗುತ್ತಿರಲು ಬೀಟಿನ ಪೊಲೀಸ್ ಕಾನ್ಸ್‌ಟೆಬಲ್ ಗಾಡಿಯನ್ನು ನಿಧಾನವಾಗಿ ಬಿಡಿಸಿಕೊಂಡು ಹೋಗಬೇಕೆಂದು ಹೇಳಲು ಆ ಮಾತನ್ನು ಲಕ್ಷಿಸದೆ ತನ್ನ ಕೈ ಕೋಲಿನಿಂದ ಆತನನ್ನು ಹೊಡೆದು ಮುಂದಕ್ಕೆ ಹೊರಟು ಹೋದನೆಂದು ಇಲ್ಲಿನ ಮ್ಯಾಜಿಸ್ಟ್ರೇಟ್ ಮಿ॥ ಬಾಲ್‌ಕೃಷ್ಣರ ಕೋರ್ಟಿನಲ್ಲಿ ಫಿರ್ಯಾದಾಗಿ ದರ್ಯಾಪ್ತಿಯಿಂದ ಅಪರಾಧಿಗೆ ೭ ದಿನಗಳ ಕಾರಾಗೃಹವೂ ೧೦ ರೂಪಾಯಿ ಜುಲ್ಮಾನೆಯೂ ಆಯಿತು

ಪ್ರೇಸರ್‌ಪೇಟ್.—ಈ ಪ್ರಾಂತ್ಯ ಒಂದು ತಿಂಗಳಿಂದಲೂ ಮಳೆ ಇಲ್ಲ ಕೆಲವು ಕಡೆ ರಾಗಿ ಪೈರು ಗರ್ಭ ಒಣಗಿ ಹೋಯಿತು ಈಗಲಾದರೂ ಒಂದು ಹದ ಮಳೆಯಾದರೆ ಅಷ್ಟು ಮಟ್ಟಿಗೆ ಜೀವದಾಯಿತು. ದಿನಸಿ ಧಾರಣೆ ಏರಾಗಿದೆ. ಅಕ್ಕಿ ರೂಪಾಯಿಗೆ ೭ ಸೇರು, ರಾಗಿ ೧೫ ಸೇರು, ಇತರ ಪದಾರ್ಥಗಳು ಹೇಳಕೂಡದು. ಈ ಪ್ರಾಂತ್ಯ ಪ್ಲೇಗ್ ತಲೆ ಹಾಕಿ ಜನರನ್ನು ಆಹುತಿ ಮಾಡಿಕೊಳ್ಳುತ್ತಾ ಬರುತ್ತಿದೆ ಅಕ್ಟೋಬರು ತಿಂಗಳಲ್ಲಿ ಪ್ರಾರಂಭಿಸಿ ಈಗಿನ ವರಿಗೆ ೨೬ ಜನರಿಗೆ ತಗಲಿತು ೧೫ ಜನರು ಸತ್ತರು.—ತಾ ೮ ರಲ್ಲಿ ಡೆಪ್ಟಿ ಕಮಿಷನರೂ ಡಾಕ್ಟರ್ ಅಚ್ಯುತರಾಯರೂ ಇಲ್ಲಿಗೆ ದಯಮಾಡಿ, ಊರನ್ನೆಲ್ಲ ಗಸ್ತುಮಾಡಿ ಜನರ ಕಷ್ಟಗಳನ್ನೆಲ್ಲಾ ನೋಡಿ ಮರುಗಿದರು. ಜನರ ಛಿನ್ನಹಗಳನ್ನೆಲ್ಲಾ ಬಿಡಿಸಿ ಜೋಪಡಿಯಲ್ಲಿರತಕ್ಕ ಜನರಿಗೆ ನೀರಿಗೆ ಕಷ್ಟವಾದ್ದರಿಂದ ಭಾವಿಗಳನ್ನು ತೋಡಿಸಬೇಕೆಂದೂ, ರಾತ್ರಿ ಕಾಲದಲ್ಲಿ ಲಾಂದ್ರಗಳೂ, ಪೊಲೀಸಿನ ಸಿಬ್ಬಂದಿಯೂ ಇರಬೇಕೆಂದೂ ಬಡವರಿಗೆ ಗಳು ಬೊಂಬುಗಳನ್ನು ಕೊಟ್ಟು ಸಹಾಯ ಮಾಡಬೇಕೆಂದೂ ಅಮಲ್ದಾರರಿಗೆ ಹೇಳಿದ್ದರ ಮೇಲೆ ಅವರು ಈ ಹುಕುಮನ್ನು ಜಾರಿಗೆ ತಂದರು. ಇದರಿಂದ ಜನರಿಗೆಲ್ಲಾ ಬಹಳ ಸಹಾಯವಾಯಿತು ಮುಂದೆ ಬೇಸಿಗೆ ಕಾಲಕ್ಕೆ ನೀರಿಗೆ ಬಹಳ ಕಷ್ಟ ಬರುತ್ತದೆ. ಕೆರೆಯಲ್ಲಿ ಸ್ವಲ್ಪ ನೀರುಂಟು. ಕೆಳಗಡೆ ಏರಲು ಹೆಚ್ಚಾಗಿರುವದರಿಂದ ಯಥೇಚ್ಛವಾಗಿ ನೀರು ಹೊರಟುಹೋಗುತ್ತಾ ಇದೆ. ಈ ವಿಷಯಕ್ಕೆ ಅಧಿಕಾರಿಗಳ ಗಮನ ಬಿದ್ದರೆ ಜನರಿಗೆ ಬಹಳ ಪ್ರಯೋಜನವಾದೀತು. ಈ ಕಾಲದಲ್ಲಿ ನಮ್ಮ ಅಮಲ್ದಾರರೂ ಅಸ್ಪತ್ರೆ ಅಸಿಸ್ಟೆಂಟರೂ ಹೇಳುವ ಪ್ರಕಾರ ಜನರು ತಮ್ಮ ಮನೆಗಳ ಮೇಲಿನ ಕೆಲವು ಹೆಂಚುಗಳನ್ನು ತೆಗೆದು, ಗಾಳಿ ಬೀಸಲು ಒಳಗೆ ಬರುವಂತೆಯೂ ಮನೆಗಳಲ್ಲಿ ಬೆರಣಿಯಿಂದ ಹೊಗೆಯನ್ನು ಹಾಯಿಸುವಂತೆಯೂ ಮಾಡಿದರೆ ಊರಿಗೆ ಬಹಳ ಕ್ಷೇಮವಾಗುತ್ತೆ. ಈ ಭಾಗದಲ್ಲಿ ಜನರು ಅಧಿಕಾರಿಗಳ ಮಾತನ್ನು ಅಲಕ್ಷ್ಯ ಮಾಡಿದರೆ ಬಹಳ ಕಷ್ಟ ಹೊಂದುತ್ತಾರೆನ್ನುವದಕ್ಕೆ ಸಂಶಯವಿಲ್ಲ.—ಸರ್ಕಾರದ ನಿರ್ಬಂಧವಿಲ್ಲದ್ದರಿಂದ ತಮ್ಮ ಪ್ರಯೋಜನಕ್ಕೆ ಹೇಳುವ ಅಧಿಕಾರಿಗಳ ಮಾತುಗಳನ್ನು ಅಲಕ್ಷ್ಯಮಾಡುವ ಹಾಗೆ ಆಯಿತು. ಜನರೆಲ್ಲರೂ ಬೇಗನೇ ಸಾಂಊರನ್ನು ಬಿಟ್ಟರೆ ರೋಗವು ಸಹ ಬೇಗನೆ ಊರನ್ನು ಬಿಟ್ಟು ಹೋಗುವದು. ಈ ವಿಷಯಕ್ಕೆ ಜನರು ಗಮನ ಕೊಡಬೇಕು—ಈ ಕಾಲದಲ್ಲಿ ಮುನಿಸಿಪಲ್ ಮೆಂಬರುಗಳು ಊರಿನ ಆರೋಗ್ಯದ ವಿಷಯ ಹೆಚ್ಚಾಗಿ ಚಿಂತಿಸಿ ರಸ್ತೆ, ಸಂದು, ಗಲ್ಲಿಗಳಲ್ಲಿರುವ ಬಚ್ಚಲಿನ ರೋಜೆ, ಕಸ ಮುಂತಾದ್ದು ಇಲ್ಲದ ಹಾಗೂ

[illegible]ಗಳ ವಿಸರ್ಜನೆ ಮೊದಲಾದ ಶುಚಿಯಾದುದನ್ನೂ ಮಾಡಿಸ[illegible]ವುದು ಅವರ ಕರ್ತವ್ಯವಾಗಿದೆ. ಜಾಡಮಾಲಿಗಳು ಅಧಿಕಾರಿಗಳ ದೃಷ್ಟಿಗೆ ಬೀಳದಿರುವ ಸ್ಥಳಗಳನ್ನು ಮಾತ್ರ ಸ್ವಲ್ಪ ಶುಚಿ ಮಾಡಿ, ಬೇರೆ ಸ್ಥಳಗಳಲ್ಲಿ ಅವರು ಹೋಗುವದೇ ಇಲ್ಲ. ಇವರ [illegible] ಒಬ್ಬ ಮೇಸ್ತ್ರಿಯನ್ನು ನೇಮಿಸುವದಾದರೆ ಅವರ ಕೆಲಸಗಳು ಸರಿಯಾಗಿ ನಡೆಯುತ್ತವೆ. ಇದಕ್ಕೆ ಮೇಲಿನವರು ಗಮನ ಕೊಟ್ಟರೆ ಬಹಳ ಪ್ರಯೋಜನವಾಗುತ್ತದೆ.

ಚನ್ನರಾಯಪಟ್ಟಣ.—ಕಳೆದ ಅಕ್ಟೋಬರ್ ತಾ. ೩೦ ನೇ [illegible]ವಾರ ಬೆಳಗ್ಗೆ ಯಶಸ್ವೀ ಕಮಿಷನರಾದ ಮೆ॥ ಪಿ. [illegible] ಫ್ರಾನ್ಸಿಸ್ ಐಯ್ಯರವರ ಸವಾರಿಯು ಹಾಸನದಿಂದ ಈ ಊರಿಗೆ ದಯಮಾಡಿಸೋಣವಾಯಿತು. ಇಲ್ಲಿನ ಅಮಲ್ದಾರ್ ಮೆ॥ ಚಿಕ್ಕಪ್ಪ [illegible]ನವರೂ ಪೋಲೀಸ್ ಇನ್ಸ್‌ಪೆಕ್ಟರ್ ಚನ್ನವೀರಪ್ಪನವರೂ ಈ [illegible] ಸರಹದ್ದಾದ ದಂಡಿಗನಹಳ್ಳಿ ವರೆಗೂ ಹೋಗಿ ಅವರನ್ನು ಸ್ವಾಗತಿಸಿ ಕರೆದುಕೊಂಡು ಬಂದರು. ಒಡನೆಯೇ ಟ್ರಾವೆಲರ್ಸ್ ಬಂಗ್ಲೆ ಗೇಟಿನ ಹತ್ತಿರ ಅವರ ಆಗಮನಾರ್ಥವಾಗಿ ಕಾದುಕೊಂಡಿದ್ದ [illegible]ಸ್ಟ್ರೇಟರು, ಸಬ್ ರಿಜಿಸ್ಟ್ರಾರು, ಡಾಕ್ಟರು, ತಾಲ್ಲೋಕು [illegible]ಗಳವರು, ಜೋಯಿಸರು, ಶೆಟ್ಟಿ ವರ್ತಕರೇ ಮುಂತಾಗಿ [illegible] ಅವರಿಗೆ ಫಲ ಪುಷ್ಪಹಾರಗಳನ್ನು ಸಮರ್ಪಿಸಿದರು. ವೇ[illegible] ಫಲ ಮಂತ್ರಾಕ್ಷತೆಗಳನ್ನು ಆಶೀರ್ವದಿಸಿ ಕೊಟ್ಟರು. ಮೆ॥ [illegible]ಯ್ಯರವರು ಗಾಡಿಯನ್ನು ಬಿಟ್ಟುಕೊಂಡು ಬ್ಯಾಂಡ್ ವಾದ್ಯದೊಡನೆ ಬಂಗ್ಲೆಗೆ ದಯಮಾಡಿಸಿ, ಬಾಗಿಲಲ್ಲಿ ತಾಲ್ಲೋಕು ಅಧಿಕಾರಿಗಳು ಮರ್ಯಾದಾರ್ಥವಾಗಿ ಹಾಕಿಸಿದ್ದ ಚಪ್ಪರದೊಳಗೆ ಗಾಡಿ [illegible], ಅಲ್ಲಿ ಹಾಜರಾಗಿದ್ದ ಮಿಷನ್ ಸ್ಕೂಲ್ ಬಾಲಕಿಯರ [illegible] ಮಾಸ್ಟರುಗಳ ವಂದನಾದಿಗಳನ್ನು ಸ್ವೀಕರಿಸಿ, ಬಳಿಕ ಮಾ[illegible]ಗಳನ್ನು ಕುರಿತು—ನಿಮ್ಮ ಸ್ಕೂಲಿನಲ್ಲಿ ಎಷ್ಟು ಮಂದಿ ಬಾಲಕಿಯರಿದ್ದಾರೆಂದು ಪ್ರಶ್ನೆ ಮಾಡಿ, ೩೦ ಮಂದಿ ಇರುವರೆಂಬುದನ್ನು ಕೇಳಿ ಬಹಳ ಸಂತೋಷಪಟ್ಟರು. ಕೂಡಲೆ ಬಾಲಕಿಯರು ಸಂತೋಷಕರವಾದ ಮಂಗಳ ಪದ್ಯಗಳನ್ನು ಹೇಳಿದ್ದನ್ನು [illegible] ಹರ್ಷಚಿತ್ತರಾಗಿ ಕಣಿಕರಪಟ್ಟು—ನನಗೋಸ್ಕರ ೧೦ ಘಂಟೆ [illegible] ಇವರೆಲ್ಲಾ ಕಾದಿರುತ್ತಾರೆ ಬಹಳ ಹೊತ್ತಾಯಿತು. ಈಗ [illegible]ಕೊಂಡು ಹೋಗಿ. ಮಧ್ಯಾಹ್ನದ ಮೇಲೆ ಸಮಯವಾದರೆ [illegible]ಗೆ ಬರುತ್ತೇನೆ ಎಂದು ಅಪ್ಪಣೆ ಕೊಟ್ಟರು. ಅದೇ ಸಮಯ[illegible] ಈ ಊರಿನ ನೈಪಥ್ಯದಲ್ಲಿ ಸಾಹೇಬರು ಅವರ ಸುಬಾಗ[illegible]ವನ್ನು ಕುರಿತು ಪತ್ರಿಕೆ ಓದಿ ಹೇಳಿದರು. ನಂತರ ಬಂದಿದ್ದ [illegible] ಮನುಷ್ಯರಾದಿಯಾಗಿ ಸರ್ವರನ್ನೂ ಯಥಾಯೋಗ್ಯರೀತಿಯ ವಂದನೆ ಮಾಡಿ ಮೆ॥ ಫ್ರಾನ್ಸಿಸ್‌ಐಯ್ಯರವರು ಬಂಗ್ಲೆಯ ಒಳಕ್ಕೆ [illegible]ಕ್ಕಾಗಿ ದಯಮಾಡಿದರು. ಬಳಿಕ ಸರ್ವರೂ ಅವರವರ [illegible]ಗಳಿಗೆ ತೆರಳಿದರು. ಪುನಃ ಸಾಯಂಕಾಲ ೪ ಘಂಟೆಗೆ ಎಕ್ಸ್[illegible] ಕಮಿಷನರವರು ಬಂಗ್ಲೆಯಿಂದ ಹೊರಟು ತಾಲ್ಲೋಕು ಕಛೇರಿ[illegible] ಬಂದು ನೋಡತಕ್ಕದ್ದನ್ನೆಲ್ಲಾ ನೋಡಿ, ಪೋಲೀಸ್ ಆಫೀಸು[illegible], ಸಬ್ ರಿಜಿಸ್ಟ್ರಾರ್ ಆಫೀಸು ಮುಂತಾದ್ದನ್ನು ಇನ್ಸ್‌ಪೆ[illegible] ಮಾಡುವಾಗ್ಯೆ ೬ ಘಂಟೆಯಾದ್ದರಿಂದ ಅವರಿಗೋಸ್ಕರ ಸ್ಕೂಲಿ[illegible] ಕಾದುಕೊಂಡಿದ್ದ ಬಾಲಕಿಯರು ಮತ್ತು ಉಪಾಧ್ಯಾಯರ [illegible] ಸ್ಕೂಲು ವಿಚಾರಣೆ ಕರ್ತರಾದ ಮೆ॥ ದೇವಸಹಾಯಂ [illegible] ಕಛೇರಿಗೆ ಹೋಗಿ ಅವರ ಸಮಯವನ್ನು ನಿರೀಕ್ಷಿಸಿ ಸ್ಕೂಲಿಗೆ [illegible]ಕೆಂದು ಕೇಳಿಕೊಂಡದ್ದಕ್ಕೆ ಉಪದೇಶಿಗಳನ್ನು ಕುರಿತು [illegible]ಗೋಸ್ಕರ ನೀವುಗಳು ಬಾಲಕಿಯರ ಸಮೇತ ಕಾದಿರುತ್ತೀರಿ [illegible] ಬರಲು ಸಮಯವಾಗಲಿಲ್ಲವಲ್ಲಾ ಎಂದು ತುಂಬಾ ವ್ಯಾಕುಲಪಡುತ್ತೇನೆ. ಈ ದಿವಸದ ಮಟ್ಟಿಗೆ ಬಾಲಕಿಯ[illegible] ಬಿಟ್ಟುಬಿಡಿ ಎಂದು ಬಹಳ ಕನಿಕರಪಟ್ಟು ಹೇಳಿದರು. ಅವರ [illegible] ಪ್ರಕಾರ ಉಪದೇಶಿಗಳಾದ ಮೆ॥ ದೇವಸಹಾಯಂರವರು [illegible] ಸ್ಕೂಲಿಗೆ ಬಂದು ಅವರು ಹೇಳಿದ ಮಾತನ್ನೇ ತಿಳಿಸಿ ಬಾಲಕಿ[illegible]ರನ್ನು ಅವರವರ ಮನೆಗಳಿಗೆ ಕಳುಹಿಸಿಕೊಟ್ಟರು. ಮಾರನೇ [illegible] ಮೆ॥ ಫ್ರಾನ್ಸಿಸ್‌ಐಯ್ಯರವರು ಗಂಡಸಿ ಮಾರ್ಗವಾಗಿ ಅರಸಿ[illegible]ಕೆರೆ ಮೊಕ್ಕಾಮಿಗೆ ದಯಮಾಡಿಸಿದರು

ಬಾತ್ಮಿದಾರರಿಗೆ ಸೂಚನೆ.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ [illegible]ಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ[illegible]ರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬಗೆದು ತಿಳಿಸ[illegible]. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ [illegible]ಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು [illegible]ದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಸತ್ಯಭಾಷಿ, ನಂಜನಗೂಡು—ನೀವು ಹೇಳುವ ಮಠದಲ್ಲಿ ಪ್ರ[illegible] ಪದಾರ್ಥಗಳನ್ನು ಮಾಡಿದ್ದರು ; ಭಕ್ಷ್ಯಭೋಜ್ಯಗಳನ್ನು ಮಾ[illegible] ಎಂಬುದಾಗಿ ಆ ಬಾತ್ಮಿದಾರರು ಆಕ್ಷೇಪಣೆ ಮಾಡಿ ಇಲ್ಲ. [illegible] ಮೇಲ್ವಿಚಾರಣೆ ತೃಪ್ತಿಕರವಾಗಿದ್ದಿಲ್ಲವೆಂತಲೂ ಅದರಿಂದ [illegible]ಯಾಯಿತೆಂತಲೂ ಅವರು ಹೇಳಿದಾರೆ. ನಿಮ್ಮ ಬಾತ್ಮಿಯು ಈ [illegible]ವನ್ನೇ ಹೇಳುವುದಿಲ್ಲ.—ಎಡಿ.]

ಸಂತಿತವಾದಿ, ನೊಣವಿನಕೆರೆ—ಬಾಲಕರ ವಿದ್ಯಾಭ್ಯಾಸ ಕ್ರ[illegible] ಸ್ತ್ರೀವಿದ್ಯಾಭ್ಯಾಸದ ಕ್ರಮವನ್ನೂ ನೀವು ಹೋಲಿಸಿ, [illegible]ರುವ ಪ್ರೋತ್ಸಾಹವು ಮತ್ತೊಂದಕ್ಕಿಲ್ಲವೆಂದು ಹೇಳುತ್ತೀ[illegible] ಬಾಲಕರಿಗೆ ವಿದ್ಯೆಕಲಿಸುವ ಉಪಾಧ್ಯಾಯರ ಸಂಬಳವು ಬಹಳ ಕಡಿಮೆಯಾಗಿದೆ ಎಂಬುದನ್ನೂ ಅವರಿಗೆ ಜೀವನಕ್ಕೆ ತಕ್ಕಷ್ಟಾಗುವಂತೆ ಅವರ ಸಂಬಳವನ್ನು ಜಾಸ್ತಿ ಮಾಡಿಕೊಡಬೇಕೆಂಬುದನ್ನೂ ನಾವು ಒಪ್ಪಿಕೊಂಡು, ಅದೇ ಅರ್ಥಕ್ಕೆ ಪತ್ರಿಕೆಗೆ ಬಂದಿರುವ ಬಾತ್ಮಿಗಳನ್ನು ಪ್ರಕಟಿಸಿಯೂ ಇದೇವೆ. ಗವರ್ನಮೆಂಟಿನವರು ಇದು ಅವಶ್ಯವೆಂದು ಅಭಿಪ್ರಾಯಪಟ್ಟು, ಅವರ ಸಂಬಳ ಜಾಸ್ತಿ ಮಾಡುವ ಭಾಗದಲ್ಲಿ ಅನುಕೂಲವುಳ್ಳವರಾಗಿರುವಂತೆಯೂ ಅದಕ್ಕಾಗಿ ಇನ್ನೂ ಹಣ ಒದಗಲಿಲ್ಲವೆಂತಲೂ ಒದಗಿದ ಕೂಡಲೇ ಮಾಡುವವರಾಗಿರುವಂತೆಯೂ ತಿಳಿಸಿರುತ್ತಾರೆ. ಸ್ತ್ರೀವಿದ್ಯಾಭ್ಯಾಸವು ಇನ್ನೂ ಬಾಲ್ಯಸ್ಥಿತಿಯಲ್ಲಿರೋಣದರಿಂದ ಗವರ್ನಮೆಂಟಿನವರೂ ದೇಶಾಭಿಮಾನಿಗಳೂ ಅದಕ್ಕೆ ಪ್ರೋತ್ಸಾಹಕೊಡುವುದು ನ್ಯಾಯವಾಗಿದೆ. ಆದಕಾರಣ ಸ್ತ್ರೀವಿದ್ಯಾಭ್ಯಾಸಕ್ಕಿರುವಷ್ಟು ಪ್ರೋತ್ಸಾಹವು ಬಾಲಕರ ವಿದ್ಯಾಭ್ಯಾಸಕ್ಕಿಲ್ಲವೆಂದು ಹೋಲಿಸಿ ಆಕ್ಷೇಪಣೆ ಮಾಡುವುದು ಸಹಜವಾದದ್ದಲ್ಲವೆಂದು ಅಭಿಪ್ರಾಯಪಡುತ್ತೇವೆ.—ಎಡಿ.]

ಕರೆಸ್‌ಪಾಂಡೆನ್ಸ್.

ಹಿರೆಬೆಳ್ಳಾಳು ಪೋಲೀಸ್ ಮತ್ತು ಅಂಚೆ.

ಅಯ್ಯಾ,

ಈ ಊರಿನಲ್ಲಿ ಇದ್ದ ಪೋಲೀಸ್ ಔಟ್ ಪೋಸ್ಟನ್ನು ತೆಗೆದು ಹಾಕಿ ೪—೫ ತಿಂಗಳು ಆಗುತ್ತಾ ಬಂತು. ಬೇರೆ ಕಟ್ಟಡವನ್ನು ತಯಾರುಮಾಡಿ ಪುನಃ ಕೊಡುತ್ತಾರೆಂಬ ವರ್ತಮಾನದ ಮೇಲೆ ಮೂಡಿಗೆರೆ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರ್ ಮೆ॥ ಸಾಂಬಶಿವಶಾಸ್ತ್ರಿಗಳು ಇಲ್ಲಿಗೆ ಬಂದು ಸ್ಥಳ ನೋಡಿ ಸ್ಕೆಚ್ಚು ತಯಾರು ಮಾಡಿಕೊಂಡು ಹೋಗಿ ೨ ತಿಂಗಳಾಯಿತು. ಇದುವರಿಗೆ ಸದರಿ ವಿಚಾರ ಏನೂ ಗೊತ್ತಾಗಲಿಲ್ಲ. ಕಾಫಿ ಕೊಯ್ಲಿನ ಕಾಲ ಸಮೀಪಿಸಿತು. ಕಳ್ಳರಿಗೆ ಅನುಕೂಲವಾಗದಂತೆ ಕ್ಷಿಪ್ರದಲ್ಲಿಯೇ ಸರ್ಕಾರದವರು ಪೋಲೀಸ್ ಸಹಾಯ ದಯಪಾಲಿಸುವರೆಂದು ನಿರೀಕ್ಷಿಸುತ್ತೇವೆ.

ಇಲ್ಲಿನ ಪೋಸ್ಟಾಫೀಸು ವಿಚಾರವಾಗಿ ಪ್ರೆಮುಗೆಳೆನೋ ಬದಲಾವಣೆ ಆದವು. ರಾತ್ರಿ ಸುಮಾರು ೯ ಘಂಟೆಗೆ ಬಾಳೂರಿಂದಲೂ ಸಾಯಂಕಾಲ ೮ ಘಂಟೆ ಸಮಯಕ್ಕೆ ಕಳಸದ ಪ್ರಾಂತ್ಯದಿಂದಲೂ ಬಂದು. ಕ್ರಮವಾಗಿ ಬೆಳಗಿನ ಝಾಮ ೩ ಮತ್ತು ೫ಕ್ಕೆ ರವಾನೆಗಳು ಆಗುತ್ತವೆ. ಇದರಿಂದ ರಾತ್ರಿಯೆಲ್ಲಾ ಪೋಸ್ಟ್‌ಮಾಸ್ಟರಿಗೆ ನಿದ್ದೆಕೇಡು ಅಲ್ಲದೆ ರನ್ನರುಗಳಿಗೆ ಶ್ರಮ ಶಿವಾಯ ಪ್ರಜೆಗಳಿಗೆ ಉಪಕಾರವೇನು ?

ಸಜ್ಜನಮಿತ್ರ.

ವೇದಾಂತ ಬೋಧನೆಯು ತೃಪ್ತಿಕರವಾಗಿದೆಯೋ ?

ಅಯ್ಯಾ,

ಜನ್ಮಾಂತರವೆಂಬ ಬೋಧನೆಯು ಮನುಷ್ಯ ಕಲ್ಪಿತ ಸೂತ್ರವೆಂತಲೂ ತಪ್ಪಾದ್ದೆಂತಲೂ ಕೆಲವು ವಾದಗಳ ಹಿಂದೆ ತಕ್ಕ ಕಾರಣಗಳೊಂದಿಗೆ ಅರಿಕೆ ಮಾಡಲಾಯಿತು. ಮನುಷ್ಯಾದಿಗಳು ಅನುಭವಿಸುತ್ತಿರುವಂಥ ಜನ್ಮಗಳಿಗೂ ಸ್ಥಿತಿಗಳಿಗೂ ಕಾರಣವು ಜನ್ಮಾಂತರ ಅಥವಾ ಪೂರ್ವಕರ್ಮವಲ್ಲವೆಂತಲೂ ಋಷಿಗಳೆಲ್ಲರೂ ಅದನ್ನು ಏಕವಾಕ್ಯತೆಯಿಂದ ಒಪ್ಪಿದ್ದರೂ ಅನುಭವಕ್ಕೆ ಅಂದರೆ ಪ್ರತ್ಯಕ್ಷ ಪ್ರಮಾಣಗಳಿಗೆ ವಿರೋಧವೆಂತಲೂ ಆಧಾರವಿಲ್ಲವೆಂತಲೂ ಸ್ಥಾಪಿಸಲಾಗಿದೆ. ಆದರೆ ಈಗ ಮಾಯೆ ಎಂಬುವುದೇನೆಂದು ವಿಚಾರಿಸಿದರೆ ಅದು ಸತ್ವ ರಜ ತಮೋ ಗುಣಗಳುಳ್ಳ ಪ್ರಕೃತಿಯಾಗಿದೆ ಎನ್ನುತ್ತಾರೆ. "ಸತ್ವ ರಜ ತಮ ಇತಿ ಪ್ರಕೃತಿ ಸಂಭವಾ." ಈಶ್ವರನಲ್ಲಿ ಮಾಯೆ ಉತ್ಪನ್ನವಾದದ್ದು ಹ್ಯಾಗೆ ? ಈಶ್ವರನಲ್ಲಿ ತಮೋಗುಣವಿರುವದು ಹ್ಯಾಗೆ ? ಇದು ಅಸಂಗತವಾಗಿದೆ. ಆದ್ದರಿಂದ ಎಲ್ಲಾ ತಮೋಗುಣಗಳಿಗೆ ಕಾರಣವಾದ ಅಜ್ಞಾನವು ಈಶ್ವರನಲ್ಲಿದ್ದರೆ ಆತನು ಅಪರಿಮಿತ ಪರಿಶುದ್ಧನೂ ಪೂರ್ಣ ಜ್ಞಾನಿಯೂ ಆಗಿರುವದು ಹ್ಯಾಗೆ ? ಈ ಆಕ್ಷೇಪಕ್ಕೆ ವೇದಾಂತದಲ್ಲಿ ಆಧಾರವುಳ್ಳ ತೃಪ್ತಿಕರವಾದ ಉತ್ತರವಿಲ್ಲವು. "ಮಾಯಾ ಪರಮೇಶ್ವರಸ್ಯೋಪಾಧಿಃ" ಮಾಯೆಯು ಬ್ರಹ್ಮದಲ್ಲಿ ವಾಸಿಸುವದು ಮತ್ತೂ ಅಸಂಗತವಲ್ಲವೇ ?

ಜೀವಾತ್ಮನು ಅಥವಾ ಕಲ್ಪಿತ ಪುರುಷನು ಸುಳ್ಳಾದರೆ ಕರ್ಮ ವ್ಯಾರಿಗೆ ? ಬಿಂಬವು ಸುಳ್ಳಷ್ಟೆ ? ಯಾಕೆಂದರೆ ಅದು ಒಂದು ವಾಸ್ತವ್ಯ ಪದಾರ್ಥವಲ್ಲ, ಅಂದರೆ ಬ್ರಹ್ಮವಲ್ಲ. ಮನಸ್ಸು ಸುಖದುಃಖಾದಿಗಳಿಗೆ ಕಾರಣವಾದ ಮೇಲೆ ಅದನ್ನು ಅನುಭವಿಸುವವನೂ ಮಾಡುವವನೂ ಇಲ್ಲವೆಂಬುವದು ಹ್ಯಾಗೆ ? ಮನಸ್ಸು ಸಹ ಅಂತರಿಂದ್ರಿಯವಾದರೆ ಅದರೊಂದಿಗೆ ಇದ್ದು ಕರ್ತವ್ಯ ನಡಿಸುವ ಜೀವಾತ್ಮನಿಲ್ಲದಿರುವದು ಹ್ಯಾಗೆ ? ಜೀವಾತ್ಮನ ಕರ್ಮ ಫಲಗಳು ಶುದ್ಧ ಬ್ರಹ್ಮಕ್ಕಿಲ್ಲವಾದರೆ ಬಿಂಬವು ಜೀವಾತ್ಮನಾದನಷ್ಟೇ ? ಆದ್ದರಿಂದ ಜೀವಾತ್ಮನಿರುವದು ವಾಸ್ತವ್ಯವೆಂತಲೂ ಅವನಲ್ಲಿ ಪಾಪವಿದೆ ಎಂತಲೂ ವಾಸ್ತವ್ಯವಾಗಿದೆ ಎಂತಲೂ ತಿಳಿಯಲು ಅನುಮಾನವೇನು ? ನಮ್ಮ ಪಾಪಗಳಿಗೋಸ್ಕರ ಮಾನಸಾಂತರಪಟ್ಟು ಸದ್ಗುರುವಾಗಿರುವ ಯೇಸು ಕ್ರಿಸ್ತನ ಮರಣಪುಣ್ಯವನ್ನಾಶ್ರಯಿಸುವವರಿಗೆ ಮಾತ್ರ ಪಾಪಪರಿಹಾರವುಂಟಾಗುತ್ತೆ. ಇದು ಅನುಭವಸಿದ್ಧವು ಹ್ಯಾಗೆಂದರೆ "ಪಾಪಿಗಳು ರಕ್ಷಿಸಲ್ಪಡುವಂತೆ ಆಕಾಶದ ಕೆಳಗೆ ಕೊಡಲ್ಪಟ್ಟ ಬೇರೆ ಹೆಸರು ಇಲ್ಲವೇ ಇಲ್ಲ ; ಆತನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದಾನೆ. ಆತನು ತನ್ನ ಬಳಿಗೆ ಬರುವ ಪಾಪಿಯನ್ನು ಎಂದೂ ತಳ್ಳದೆ ಅಂಗೀಕರಿಸುವನು" ಹೀಗೆನ್ನುವ ಲೂಕನ ಸುವಾರ್ತೆ ೧೫ನೇ ಸಂಧಿಯನ್ನು ಪೂರ್ಣ ಅನುಭವಕ್ಕೂ ಅವಗಾಹನೆಗೂ ತರುವದು ಸಾಕು. ಇದರಿಂದ ವೇದಾಂತದಲ್ಲಿ ನಿಜ ಮುಕ್ತಿಯಿಲ್ಲವೆಂಬುವದು ಸ್ಪಷ್ಟಪಡುವದು.

ಈ ವಿಷಯಗಳಿಗೆ ಉತ್ತರ ಕೊಡುವವರು ದಯವಿಟ್ಟು ವೇದಾಂತ ಗ್ರಂಥಗಳಿಂದಲೇ ತಿಳಿಸುವದು ವಾಸಿ. ಯೋಗವಾಸಿಷ್ಠ, ಬ್ರಹ್ಮಸೂತ್ರ, ವೇದಾಂತ ಪರಿಭಾಷೆಗಳನ್ನಾಗಲೀ ಉಪನಿಷತ್ತುಗಳನ್ನಾಗಲೀ ಸೂಚಿಸಬಹುದು. ಪುರಾಣಗಳಿಗೂ ಅಜ್ಜಿ ಕಥೆಗಳಿಗೂ ವ್ಯತ್ಯಾಸ ತೋರುವದಿಲ್ಲವಾಗಿ ದಯವಿಟ್ಟು ಅವುಗಳನ್ನು ಮನ್ನಿಸ ಬೇಕಾಗಿದೆ.

ಭಕ್ತಿಶಿರೋಮಣಿ.

ವಿದೇಶ ವರ್ತಮಾನಗಳು.

ಚೀನಾ ಗವರ್ನಮೆಂಟಿನವರು ಜರ್ಮನಿ ಸೈನ್ಯದ ಮೇಲ್ಪಙ್ಕ್ತಿಯನ್ನನುಸರಿಸಿ, ಚೀನಾ ರಾಜ್ಯದಲ್ಲಿ ೧೦ ಲಕ್ಷ ಸೈನ್ಯವನ್ನು ಬೇಗ ತಯಾರು ಮಾಡಿ ಇಟ್ಟುಕೊಳ್ಳುವವರಾಗಿದಾರೆ.

****

ವಿಲಾಯತಿಗೆ ಸೇರಿದ ಲಿವರ್‌ಪೂಲ್ ಪಟ್ಟಣದಲ್ಲಿ ಮಿಡ್‌ಫೀಡ್ ಎಂಬವರ ಕಾರ್ಖಾನೆಗೆ ಬೆಂಕಿ ಬಿದ್ದು ೨,೮೦೦ ಹತ್ತಿ ಗಟ್ಟುಗಳು ಸುಟ್ಟು ಹೋದವು. ಆ ಸಾಹುಕಾರರಿಗೆ ೨। ಲಕ್ಷ ದ್ರವ್ಯ ನಷ್ಟವಾಯಿತು.

****

ಐರ್ಲಾಂಡಿಗೆ ಸೇರಿದ ಫೈಫ್ ಎಂಬ ನಗರದ ಒಂದು ಕಾರ್ಖಾನೆಯೊಳಗೆ ೧೦,೦೦೦ ಟನ್ನುಗಳ ಕಲ್ಲಿದ್ದಲಿಗೆ ಬೆಂಕಿ ಬಿದ್ದು ಉರಿಯುತ್ತಿದೆ. ಇನ್ನೂ ಎರಡು ತಿಂಗಳ ವರೆಗೆ ಅದರ ಜ್ವಾಲೆಗಳು ಶಮನವಾಗುವಂತೆ ತೋರುವುದಿಲ್ಲ.

****

ಚೀನಾ ಆಧಿಪತ್ಯಕ್ಕೆ ಸೇರಿದ ಕ್ವಾಂಗ್ಸಿ ಎಂಬ ಪಟ್ಟಣದಲ್ಲಿ ಪ್ರಜೆಗಳು ಕ್ರೈಸ್ತರ ಮೇಲೆ ದ್ವೇಷಾಸೂಯೆಗಳನ್ನು ಪ್ರಕಾಶಪಡಿಸಿ, ಐದು ಮಂದಿ ಮಿಷನ್ ಪಾದ್ರಿಗಳನ್ನೂ ಅವರ ಹೆಂಡಿರುಮಕ್ಕಳ ಸಮೇತ ಕೊಂದು ಹಾಕಿರುತ್ತಾರೆಂದು ತಂತೀ ವರ್ತಮಾನ ಬಂದಿದೆ.

****

ಜರ್ಮನ್ ರಾಜ್ಯದ ಮೂರು ಅಧಿಪತ್ಯಗಳಲ್ಲಿ ಈಸಲ ಧಾನ್ಯದ ಬೆಳೆಯು ಕೆಟ್ಟು ಹೋಗಿದೆ. ಮುಂದಿನ ವರುಷ ಬರ್ಮಾದಿಂದ ಬಹಳ ಅಕ್ಕಿಯನ್ನು ಅವರು ತರಿಸಿಕೊಳ್ಳುವವರಾಗಿದಾರೆಂದು ಬರ್ಮಾ ವರ್ತಕರು ಸಂತೋಷದಿಂದ ಬಾಭತ್ತಾಲವನ್ನು ಎದುರು ನೋಡುವರು.

****

ಮೆ॥ ಕಾರ್ನೆಗಿ ಎಂಬ ಕೋಟ್ಯಾಧೀಶ್ವರನು ಸೆಂಟ್ ಆಂಡ್ರೂ ವಿದ್ಯಾನಿಲಯಕ್ಕೆ ಒಂದೂವರೆ ಲಕ್ಷ ಪೌಂಡಿನ ಪತ್ರಗಳನ್ನು ಧರ್ಮಾರ್ಥವಾಗಿ ಕೊಟ್ಟು, ಅದರಲ್ಲಿ ವರುಷೇವರುಷ ಉತ್ಪತ್ತಿಯಾಗುವ ೭॥ ಸಾವಿರ ಪೌಂಡಿನಿಂದ ಒಂದು ಉದ್ಯಾನವನವನ್ನೂ ಒಂದು ಗರಡಿಯನ್ನೂ ಇಟ್ಟು ನಡಸಬೇಕೆಂದು ತಿಳಿಸಿದಾನೆ.

****

ಪೋಟ್ಸ್‌ಡಾಂ ನಗರದ ಲಾಂಗ್ ಜೋಸಫ್ ಎಂಬುವನು ಜರ್ಮನ್ ಸೈನ್ಯಕ್ಕೆ ಈಗತಾನೇ ಸೇರಿಕೊಂಡನು. ಇವನಿಗೆ ವಯಸ್ಸು ೨೦ ವರುಷವಾದರೂ ೭ ಅಡಿ ೧೦ ಅಂಗುಲ ಎತ್ತರವಾಗಿಯೂ ೨೨೫ ಪೌಂಡಿನಷ್ಟು ಭಾರವಾಗಿಯೂ ಬೆಳೆದಿರುತ್ತಾನೆ. ಜರ್ಮನಿ ರಾಜ್ಯದ ಸೈನ್ಯದಲ್ಲೆಲ್ಲಾ ಇವನಷ್ಟು ಉದ್ದವಾಗಿರುವವರ್ಯಾರೂ ಇಲ್ಲ.

****

ಬೇರೆ ಬೇರೆ ಕಸಬುಗಳನ್ನು ಕಲಿತು ಬರುವುದಕ್ಕಾಗಿ ೩೨ ಮಂದಿ ಚೀನಾ ಯೌವನಸ್ಥರು ಕಳೆದ ವಾರ ಲಂಡನ್ ಪಟ್ಟಣದಲ್ಲಿ ಬಂದು ಇಳಿದರು. ಆ ಪೈಕಿ ೧೦ ಮಂದಿ ಆಸ್ಟ್ರಿಯ ಮುಖ್ಯಪಟ್ಟಣವಾದ ವಿಯನ್ನಾ ನಗರಕ್ಕೂ ೧೫ ಮಂದಿ ಜರ್ಮನಿಗೂ ಹೋಗಿ ಕಸಬು ಕಲಿಯುವರು. ಉಳಿದ ೭ ಮಂದಿ ವಿಲಾಯತಿಯಲ್ಲೇ ವಿದ್ಯಾಭ್ಯಾಸ ಮಾಡುತ್ತಾರೆ

****

ರಷ್ಯಾ ರಾಜ್ಯದ ಪ್ರಧಾನ ಮಂತ್ರಿಯಾದ ಕೌಂಟ್ ಡಿ ವಿಟ್ಟೆಯವರು ಅಮೇರಿಕಕ್ಕೆ ಹೋಗಿ ಜಪಾನ್ ರಾಯಭಾರಿಗಳ ಸಂಗಡ ಚರ್ಚೆ ಮಾಡಿ, ರಷ್ಯಾ ಜಪಾನ್ ರಾಜ್ಯಗಳಿಗೆ ತಹನಾಮೆಯನ್ನು ಬರೆಸಿ, ಯುದ್ಧ ಸಮಾಪ್ತಿ ಮಾಡಿ ಬಂದ ಶುಭವಾರ್ತೆಯನ್ನು ಸೂಚಿಸುವುದಕ್ಕೋಸ್ಕರ ಅವರ ಪತ್ನಿಯವರು ಸೆಂಟ್ ಪೀಟರ್ಸ್‌ಬರ್ಗಿನಲ್ಲಿರುವ ಬಡಬಗ್ಗರಿಗೆ ೧೫,೦೦೦ ರೂಪಾಯಿಗಳನ್ನು ಧರ್ಮ ಕೊಟ್ಟಿದಾರೆ.

****

ಸುಮಾರು ೭—೮ ವರುಷಗಳ ಕೆಳಗೆ ಚೀನಾ ರಾಜ್ಯದವರು ನಾಗರಿಕತೆಯಲ್ಲೂ ವಿದ್ಯಾಭಿವೃದ್ಧಿಯಲ್ಲೂ ತುಂಬಾ ಹಿಂದೆ ಬಿದ್ದಿದ್ದರು. ಆಗ ಚೀನೆಯವರು ಇಬ್ಬರೇ ಇಬ್ಬರು ಜಪಾನಿಗೆ ಹೋಗಿ ವಿದ್ಯಾರ್ಜನೆ ಮಾಡುತ್ತಿದ್ದರು. ಈಗಲಾದರೋ ೩,೦೦೦ ಚೀನಾ ವಿದ್ಯಾರ್ಥಿಗಳು ಜಪಾನ್ ರಾಜ್ಯದಲ್ಲಿ ನಾನಾ ವಿದ್ಯೆಗಳನ್ನು ಕಲಿಯುತ್ತಿದಾರೆ. ಅಲ್ಲದೆ ಯೂರೋಪ್ ಖಂಡದ ಪ್ರತಿ ಒಂದು ರಾಜ್ಯಕ್ಕೂ ಹೋಗಿ ಒಂದೊಂದು ವಿದ್ಯೆಯನ್ನು ಕಲಿಯುತ್ತಿರುವ ಚೀನಾ ವಿದ್ಯಾರ್ಥಿಗಳ ಸಂಖ್ಯೆಯು ಅಪಾರವಾಗಿದೆ. ಇದರಿಂದ ಆ ಚಕ್ರಾಧಿಪತ್ಯವು ಬೇಗ ಬೇಗನೆ ನವನಾಗರಿಕವಾಗುತ್ತಿದೆ ಎಂದು ಹೇಳಬಹುದು.

****

ವಿಲಾಯತಿಗೆ ಸೇರಿದ ಬ್ರಾಡ್‌ಫರ್ಡ್ ನಗರದಲ್ಲಿ ಸರ್ ಹೆನ್ರಿ ಇರ್ವಿಂಗ್ ಎಂಬಾತನು ನಾಟಕಶಾಲೆಯೊಳಗೆ ಬೆಕೆಟ್ ಎಂಬ ಸಂತ ವೇಷ ಹಾಕಿಕೊಂಡು, ನಾಟಕವಾಡುತ್ತಾ—"ನಿನ್ನ ಬಳಿಗೆ ಕರೆದುಕೋ, ಓ ದೇವರೇ, ನಿನ್ನ ಬಳಿಗೆ ಕರೆದುಕೋ" ಎಂದು ಆರ್ತಸ್ವರದಿಂದ ಬೇಡಿಕೊಂಡವನು ಹಾಗೇ ಸ್ಮರಣೆ ತಪ್ಪಿ ಬಿದ್ದುಬಿಟ್ಟನು. ನಾಟಕಶಾಲೆಯವರೂ ಸ್ನೇಹಿತರೂ ಆತನನ್ನು ಒಂದು ಹೋಟೇಲಿಗೆ ಎತ್ತಿಕೊಂಡು ಹೋಗಿ ಎಷ್ಟೋ ಬಗೆಯಿಂದ ಉಪಚಾರ ಮಾಡಿದಾಗ್ಯೂ ಪ್ರಯೋಜನವಾಗಲಿಲ್ಲ. ಆತನು ಸ್ವಲ್ಪ ಹೊತ್ತಿನಲ್ಲೇ ಹಾಗೇ ಪ್ರಾಣಬಿಟ್ಟನು. ವರ್ತಮಾನ ಪತ್ರಿಕೆಗಳೂ ವಿಲಾಯತಿಯಲ್ಲೂ ಯೂರೋಪ್ ಅಮೇರಿಕಗಳಲ್ಲೂ ಇರುವ ಪ್ರಸಿದ್ಧ ನಾಟಕಧಾರಿಗಳೂ ಈ ಸಂಗತಿಯನ್ನು ಕೇಳಿ ಆತನಷ್ಟು ಪ್ರಖ್ಯಾತಿವಂತನಾದ ನಾಟಕಧಾರಿಯೇ ಇಲ್ಲವೆಂದು ಹೊಗಳುತ್ತಿದಾರೆ.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

3

[ಸ್ಥಾಪಿತವಾದದ್ದು ೧೯೦೩ರಲ್ಲಿ]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದು ಅಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಪ್ರತಿ ಯೊಬ್ಬನೂ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೬ನ್ನು ಮಾತ್ರವೇ ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರರೀತಿಯಾಗಿ ನಡಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೇಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವ ದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಪಾಲುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ. ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ:—The Manager,
The India Agricultural and Helping Office,
Vengurla Post, Bombay Presidency.

ಜ್ವರಹರಿ. 3



ಇದು ಸಾಧಾರಣ ಜ್ವರ, ಚಳೀಜ್ವರ, ಮೈರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಓವರ್‌ಸಿಯರ್ ಆಫೀಸರ್ ಎಸ್. N ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಎನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

Omum Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆನ್ರಿಯವರ ಓಮಂ ಕರ್ಪೂರವನ್ನು ನಾನೂ ನನ್ನ ಕಾಪೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಕ್ರಯ:—

ಪೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಪೆರಂಬ್ ಬ್ಯಾರೆಕ್ ರೋಡ್, ಮದರಾಸ್.

ಕ್ಷೇತ್ರಗಣಿತ.

2

ಮೂರು ಭಾಗಗಳಿಂದ ಕೂಡಿದ ೪೦೦ ಪುಟಗಳುಳ್ಳ ಸಂಪೂರ್ಣವಾದ ಈ ಪುಸ್ತಕದಲ್ಲಿ ಒಟ್ಟು ಸುಮಾರು ೨,೦೦೦ ಲೆಕ್ಕಗಳು ಉತ್ತರಗಳೊಡನೆ ಕೂಡಿವೆ. ಉತ್ತಮ ಪತ್ರ ಪ್ರತಿದ ೧ಕ್ಕೆ ರೂ. ೧—೪—೦. ಮಧ್ಯಮ ಪತ್ರ ಪ್ರತಿ ೧ಕ್ಕೆ ರೂ ೧ ವಿದ್ಯಾರ್ಥಿಗಳಿಗೆ ಬಹಳ ಅಗತ್ಯವಾದದ್ದು. ವಿಳಾಸ —ಸಿ ಕೃಷ್ಣ, ಟ್ಯಾಂಕ್ ಇನ್ಸ್‌ಪೆಕ್ಟರ್, ನಂಜನಗೂಡು.

ಸನ್ ೧೯೦೬ನೇ ಇಸವಿಯ

ಎಂ. ನಂ॥ ಎಫ್ ನಂ॥ ಬಿ. ನಂ॥ ಸಿ. ನಂ॥ ಹೆಚ್. ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ ಪಾಕೆಟ್ ಡೈರಿಗಳು. 3

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಮುಷ್‌ಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು.—ಪರಾಭವ ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಭಾಡಿಗೆ, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಮುಖ್ಯ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿಬಿದ್ದ ಫಲ, ರಾಹು ಗುಳಿಕಕಾಲ, ವಾರ ಶೂಲೆ, ದಿನಸಂಬಳದಪಟ್ಟಿ, ಬಡ್ಡಿಲೆಕ್ಕ, ಜವಾಬ್‌ದಾರಿಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ಗೂಲು ಹಾಕಿದೆ, ಶೀಮೆ ಪಾಪರ್ ಬೈಂಡು, ರೇಖೆನಿಂದ ಗಿಲ್ಟು ಮಾಡಿದೆ.

ಎ. ನಂಬರ್ ಚಿಕ್ಕಸೈಜು ೩ ಆಣೆ | ಸಿ. ನಂಬರ್ ದೊಡ್ಡಸೈಜು ೬ ಆ.
ಎಫ್. ,, ,, ೪ ,, | ಎಚ್. ,, ,, ೭ ,,
ಬಿ. ,, ಮುಚ್ಚಳದ್ದು ೫ ,, | ಡಿ ,, ಮುಚ್ಚಳದ್ದು ೮ ,,

ಪೋಸ್ಟ್ ಚಾರ್ಜು ಬೇರೆ. ಒಂದೇ ನಮೂನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಮು ವಿ. ಪಿ. ಮೂಲಕ ತರಿಸಿಕೊಳ್ಳಿ

ನಮ್ಮ ವಿಳಾಸ:—ಎಂ. ಆರ್ ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಹೋಮೋಸಿಯಾ.

ಕಷ್ಟ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಪ್ರಪಂಚದಲ್ಲಿ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅತಿ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಶೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗೆಡ್ಡೆಗಳು, ರಣಗಳು, ಮುಳುಕಚ್ಚು, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಬಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಹವಾ ಬದಲು ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕ್ರಯ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವಿಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಸೆಕೆಂಡ್ ಬೀಚ್ ಲೈನ್, ಮದರಾಸ್.

ಮೈಸೂರು ಶೀಮೆಯಲ್ಲಿ ಪ್ಲೇಗಿನ ಸ್ಥಿತಿ.

27—10—1905 ರಿಂದ 3—11—1905 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿ ಪಟ್ಟ.	ಸತ್ತ ಪಟ್ಟ.	ಹೋದವಾರ... ಈ ವಾರ ಸಂಖ್ಯೆ	[illegible]
ಬೆಂಗಳೂರು ಪಟ್ಟಣ	15	14	45	[illegible]
ಮೈಸೂರು ,, ಹೊರಗಿನದು	5	3	106	[illegible]
ಬೆಂಗಳೂರು ಡಿಸ್ಟ್ರಿಕ್ಟ್	31	17	173	[illegible]
ಮೈಸೂರು ,,	11	4	178	[illegible]
ಕೋಲಾರ್ ,,	0	0	51	[illegible]
ಕೋಲಾರ್ ಚಿನ್ನದ ಗಣಿಗಳು	5	2	29	[illegible]
ತುಂಕೂರು ಡಿಸ್ಟ್ರಿಕ್ಟ್	5	3	49	[illegible]
ಹಾಸನ ,,	2	1	12	[illegible]
ಚಿತ್ರದುರ್ಗ ,,	5	2	71	[illegible]
ಕಡೂರ್ ,,	12	"	77	[illegible]
ಶಿವಮೊಗ್ಗ ,,	0	0	78	[illegible]
ಮೊತ್ತ.	91	53	864	[illegible]

ಶಾಲೀವಾಹನ ಶಕ ೧೮೨೮ ನೇ ವಿಶ್ವಾವಸು ಸಂವತ್ಸರ ಕಾರ್ತೀಕ ಬಹುಳ ಚೌತಿ ಗುರುವಾರದಿಂದ ಕಾರ್ತೀಕ ಬಹುಳ ದಶಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ನವಂಬರ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
16	ಗುರು ☆	ಚೌತಿ	21-42	ಆ	28 2	1
17	ಶುಕ್ರ ‡	ಪಂಚಮಿ	22-25	ಪು	30-13	2
18	ಶನಿವಾ	ಷಷ್ಠಿ	21-50	ಪ್ಯ	30 58	3
19	ರವಿವಾ ǀ	ಸಪ್ತಮಿ	20-12	ಶ್ಲೇ	30-11	4
20	ಚಂದ್ರ	ಅಷ್ಟಮಿ	17-22	ಮ	29-15	5
21	ಕುಜ	ನವಮಿ	13-23	ಪು	26 12	6
22	ಬುಧ ¶	ದಶಮಿ	8 39	ಉ	23 30	7

☆ ಚತುರ್ಥಿತಿಥಿ ‡ ಮಹಾವ್ಯತೀಪಾತ.
ǀ ತಿಥಿದ್ವಯಂ.
ಕಾರ್ತೀಕ ಸೋಮವಾರ.
¶ ಸ್ಮಾರ್ತರ ಏಕಾದಶಿ.

ಪೇಟೆ ಧಾರಣೆ.

ಜಿನಸು.	ಮೈಸೂರು	ಬೆಂಗಳೂರು
ಕಗ್ಗ ಅಕ್ಕಿ ಪಲ್ಲ ೧ಕ್ಕೆ	ರೂ. ೧೨—೮—೦	೧೩—[illegible]
ಕೆಂಬತ್ತಿ ಅಕ್ಕಿ ಅವಲ್ ..	.. ೧೨—೪—೦	೧೩—೮
,, ಮಾಯಂ	.. ೧೨—೦—೦	೧೨—೮
ಬಾಸ್ಮತಿ ಅಕ್ಕಿ ..	.. ೧೨—೦—೦	೧೨—೦
ಸಣ್ಣಕ್ಕಿ ಅವಲ್ ..	.. ೧೪—೦—೦	೧೫—[illegible]
,, ಮಾಯಂ ..	.. ೧೩ ೮—೦	೧೩ ೮
ತೊಗರೀ ಬೇಳೆ ಪಲ್ಲ ೧ಕ್ಕೆ ..	.. ೧೧—೦—೦	೧೧ ೮
,, ಮಾಯಂ ..	.. ೧೦—೮—೦	೧೦—೧[illegible]
ಹುರಳೀ ರಾಗಿ ಪಲ್ಲ ೧ಕ್ಕೆ ..	.. ೬—೪—೦	೫—೮
ರಾಗಿ ..	.. ೬—೦—೦	೫—[illegible]
ಜೋಳ ..	.. ೬—೦—೦	೬—೮
ಕಡಲೆ ಪಲ್ಲ ೧ಕ್ಕೆ ..	.. ೧೦—೦—೦	೯—೮
ಬಿಳೀ ಅವರೆ ..	.. ೮—೧೨—೦	೯—[illegible]
ಹೆಸರು ..	.. ೯—೧೨—೦	೧೧—೮
ಉದ್ದು ..	.. ೧೦—೦—೦	೯—೮
ಕಡಲೆ ..	.. ೧೦—೦—೦	೧೦—[illegible]
ಎಳ್ಳು ..	.. ೧೬—೦—೦	೧೫—[illegible]
ಹುರುಳಿ ..	.. ೧೦—೦—೦	೯—[illegible]
ಹರಳು ೧೨೬ ಸೇರಿಗೆ ..	.. ೧೨—೮—೦	೧೨—[illegible]
ಸೀಗೇಕಾಯಿ ಮಣ ೧ಕ್ಕೆ ..	.. ೩—೮—೦	೩—೦[illegible]
ಮೆಣಸಿನಕಾಯಿ ..	.. ೪—೮—೦	೩—೦[illegible]
,, ಮಾಯಂ ..	.. ೩—೧೨—೦	೩—೮[illegible]
ಬೆಲ್ಲ ದೊಡ್ಡ ಅಚ್ಚು ..	.. ೭—೪—೦	ಮ ೨.[illegible]
ಒಳ್ಳೆಣ್ಣೆ ಮಣ ೧ಕ್ಕೆ ..	.. ೪—೪ ೦	೪—[illegible]
ಹರಳೆಣ್ಣೆ ,, ..	.. ೫—೦—೦	೪—೪[illegible]
ಕೊತ್ತಂಬರಿ ಪಲ್ಲ ೧ಕ್ಕೆ ..	.. ೧೦—೮—೦	೧೦—[illegible]
ಉಪ್ಪು ,, ..	.. ೭—೦—೦	೮—೮[illegible]
ಹುಣಸೇ ಹಣ್ಣು ..	.. ೧ ೦—೦	೦—೧[illegible]
,, ಹಳೇದು ..	.. ೦—೧೪—೦	೦—೧೦[illegible]
ತುಪ್ಪ ..	.. ೧೨—೮—೦	೧೨—೮[illegible]
ಸೀಮೆಯಂಚಿ ಪಟ್ಟ ೧ಕ್ಕೆ ..	.. ೫—೦—೦	೪—೧೨[illegible]
ತೆಂಗಿನಕಾಯಿ ೧೦೦ ಕ್ಕೆ ..	.. ೫—೦—೦	೩—೦[illegible]
ಅಡಕೇಕಾಯಿ ಮಣ ೧ಕ್ಕೆ ..	.. ೧—೦—೦	೦—೧[illegible]
ಅಂಬ್ಯಾಳಕಾಯಿ ಮಣ ೧ಕ್ಕೆ ..	.. ೦—೧೪—೦	೦—೧[illegible]
ಹತ್ತಿ (ಬೀಜ) ಕಂಡು ..	.. ೧೫—೮—೦	೧೫—[illegible]
,, ,, ಹಸಿಮೆ ..	.. ೧೫—೧೦—೦	೧೬—೩[illegible]
,, ,, ಗಟ್ಟಿ ತೊಲ ೧ಕ್ಕೆ ..	.. ೨೬—೦—೦	೨೪—[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	.. ೩೨—೦—೦	೩೮—[illegible]

Printed and Published by the Rev. H. Spencer, B.A., the Proprietor and Manager, Wesleyan Mission Press, Mysore 16/11/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ನವಂಬರ್ ತಾರೀಖು ೨೩ ನೇ ಗುರುವಾರ. — ಸಂಚಿಕೆ ೨೭

ಯಸ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು

ಮೆಕ್ರಿಲ್ಲನ್ ಕನ್ನಡದ ೫ನೆ ಪುಸ್ತಕದ ನೋಟ್ಸು	೧—೪—೦
ಷಡ್ಡು ,, ,, ೬ ನೆ ಪುಸ್ತಕದ ನೋಟ್ಸು	೦—೪—೦
ಷಡ್ಡು ೩—೪ ನೆಯ ಫಸ ಲಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೦
ಎನೆಕರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಸಚಿತ್ರವಿನೋದಿನಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ ೧—೮—೦

ವಿನೋದಿನಿ ಎಂಬ ... ತನ್ನ ಹೆಸರಿಗೆ ಸರಿಯಾಗಿ ವಿನೋದ ಕಾಲದಲ್ಲಿ ವಿನೋದವುಳ್ಳದ್ದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂಶಯವಿಲ್ಲ.

ಸತ್ಯದೀಪಿಕೆ ೨೮ ೨ ೦೫

ವಿಳಾಸ —ಮ್ಯಾನೇಜರ್, ವಿನೋದಿನಿ ಆಫೀಸು, ಶಾಲಿವಾಹ.

೧೯೦೬ನೇ ವರುಷದ ರಾಯಲ್ ಡೈರಿಗಳು.

ಈ ರಾಯಲ್ ಡೈರಿಗಳು ವಿಶ್ವಾವಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚಪ್ಪಟೆ, ನಾರಸೂಲಿ, ಟಪಾಲಿನ ಮುಖ್ಯ ವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟ್ರೇಷನ್ ಫೀ, ಕೋರ್ಟು ಫೀ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿನಗಳು, ೧೯೦೬ರ ಹಬ್ಬ ಹರಿದಿನಗಳು ಮತ್ತು ವಿಶೇಷ ದಿವಸಗಳು, ಮೇಜೆಸ್ಟ್ರೇಟರಿಗೆ ಇರತಕ್ಕ ಅಧಿಕಾರಗಳು, ಬಡ್ಡಿ ಪಟ್ಟಿ, ಪ್ರತಿದಿನದ ಸಂಬಳವನ್ನು ತಿಳಿಸುವ ಪಟ್ಟಿ, ೧೯೦೬ರಲ್ಲಿನ ವಿವಾಹ, ಫ್ರೋನೋಗ್ರಾಫಿ, ಆ ... ಸಂಕ್ರಮಣ, ಗೌರೀಪಂಚಾಂಗ, ರೈಲ್ವೆ ಟಾಯಿಲೆಟ್ ಭಾ ..., ಯುಧವಂಶದತ್ತಾ..., ಇವೇ ಮುಂತಾದ ಅನೇಕ ವಿಷಯಗಳು ಕೂಡಿವೆ

ನಂ ೧ ಬೆಲ್ವ ಸ್ವೈದು ರೂಲು ಹಾಕಿದೆ ಕ್ರಯ	೦—೮—೦
,, ೨ ,, ,, ,, ಮುಚ್ಚಳ ಇರತಕ್ಕದ್ದು	೦—೧೦—೦
,, ೩ ಚಿಕ್ಕ ,, ,, ,, ,,	೦—೬—೦
,, ೪ ,, ,, ,, ,, ,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಟಕರಿಗೆ ಸಿದ್ಧವಾಗಿವೆ. ೩—೪ನೇ ನಂ. ಡೈರಿಗಳು ಅಕ್ಟೋಬರು ೧೦ ರ ಒಳಗಾಗಿ ದೊರೆಯುತ್ತವೆ.

ದಿ ಜನರಲ್ ಏಜನ್ಸಿ, ಮೈಸೂರು.

ಸ್ವಪನೀಯ

ಲೋಕಹಿತಕ್ಕೋಸ್ಕರ ತಿಂಗಳಿಗೆರಡುಸಲ ಪ್ರಕಟವಾಗುವ ಪತ್ರಿಕೆ.

ಓದುವುದಕ್ಕೆ ಅನೇಕ ಉಪಯುಕ್ತಾಂಶಗಳಡಗಿ ಇಷ್ಟು ಸುಲಭ ಚಂದಾ ಉಳ್ಳ ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಬೇರೆ ಮತ್ತೊಂದು ಇಲ್ಲ

ಕೈಗೆಸಿಗೆ ದೊರೆಯುವ ಮಾದರಿ ಸಂಚಿಕೆ—ಓದಿದರೆ ರಸಿಕರಾದವರು ಪತ್ರಿಕೆಗೆ ಆಶ್ರಯ ಕೊಡದೆ ಇರುವುದೇ ಇಲ್ಲ. ಹೋಗಲಿ ನೋಡೋಣ!

ಅಂಚೆ ವೆಚ್ಚಸಮೇತ ವರುಷ ಚಂದಾ — ಮುಂಗಡ ಹಸ್ತೈರಡಾಣೆ ಮಾತ್ರವೇ, ಹಿಂದೆ, ಒಂದು ರೂಪಾಯಿ ಎಂಟಾಣೆ ಮಾತ್ರ.

ವಿದ್ಯಾರ್ಥಿಗಳು ಅಂಚೆ ಖರ್ಚಿನ ಪೂರ್ತಿ ಆರಾಣೆಗೆ ಅರಾಣೆಯು ಅಂಚೆ ಚೀಟಿಗಳು ಮುಂಗಡ ಕೊಟ್ಟರೆ, ಒಂದು ವರುಷ ಪೂರಾ ಪತ್ರಿಕೆಯನ್ನು ಪುಗಸಟೆ ಕೊಡುತ್ತೇವೆ. ವಿ ಪಿ ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು.

ಓದಿ ಬುದ್ಧಿವಂತರಾಗಬೇಕೆಂಬ ಇಚ್ಛೆಯುಳ್ಳವರು ಈ ಸಂಧಿಯನ್ನು ಬಿಡಬಾರದು. ಬೇಗ ಬೇಗ ನಿಮ್ಮ ವಿಳಾಸಗಳ ಮಾತ್ರ ಕಳುಹಿಸಿ ಮಾದರಿ ಸಂಚಿಕೆಯೊಂದನ್ನು ಓದಿನೋಡಿ.

ವಿಳಾಸ —ಭಾರತಿಸಂಪಂಗಿರಾಮ, ಸಂಪಾದಕ, ಸವಿನುಡಿ, ಹೊಸಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್.

"ವಾಗ್ದೇವಿ"

ಶೃಂಗಾರ ಹಾಸ್ಯ ವೀರ ರಸಗಳಿಂದ ಭರಿತವಾದ ಕಾದಂಬರಿ ಕ್ರಯ ಒಂದು ರೂಪಾಯಿ ಅಂಚೆ ಹಾಸಲು ಬಿನಹ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ಬೋಳಾರ್ ಬಾಬೂರಾವ್, ಮಂಗಳೂರು.

WANTED WILD ANIMALS.

ಬೇಕಾಗಿದೆ. — ಬೇಕಾಗಿದೆ.

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಗಾರ್ಡನ್ ಸೂಪರಿಂಟೆಂಡೆಂಟ್ ಹ್ಯೂಜಸ್ ಅವರು ಕೊಂಡುಕೊಳ್ಳುವರು

Apply to Mr. Hughes, Mysore Zoo.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಊರುಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . . . ರೂ ೧—೦—೦

ಪಟ್ಟಣ ಹೊರಗಿನವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸಹಿತ . . . . . ರೂ ೧—೧೪—೦

,, ,, ,, ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ಪತ್ರ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ರಬ್ಬರ್ ಸ್ಟಾಂಪುಗಳು

ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಇಂಗ್ಲಿಷ್ ಮಾದರಿ ರಬ್ಬರ್ ಸ್ಟಾಂಪುಗಳು ಬರುವ ಜನವರಿ ಆಖೈರೊಳಗಾಗಿ ದಯವಿಟ್ಟು



ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ ... ರಬ್ಬರು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦, ಪೋಸ್ಟೇಜು ೩ ಆಣೆ.

ವಿಳಾಸ —ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಜಾರ್ಜ್ ಟೌನ್, ಮದ್ರಾಸ್.

ಗಡಿಯಾರಗಳೂ ಪುಸ್ತಕಗಳೂ.

ನಿಕ್ಕಲ್ ಸಿಲ್ವರ್, ಓಪನ್ ಫೇಸ್, ಲಿವರ್ ವಾಚು, ಅತಿ ನಂಬಿಕೆಯಾದ್ದು, ಕ್ರಯ ೧ಕ್ಕೆ ೨ ರೂ. ೧೫ ಆಣೆ ಡಿಸೆಂಬರ್ ಆಖೈರ್‌ವರಿಗೆ ಬರತಕ್ಕ ಅಪ್ಲಿಕೇಷನ್‌ಗಳಿಗೆ ಮಾತ್ರ ಈ ಕ್ರಯ. ೬ ವಾಚು ಒಂದೇ ಸಲ ತರಿಸಿಕೊಳ್ಳುವವರಿಗೆ ಮಾತ್ರ ೧ ವಾಚು ಮುಫತು ಕೊಡುತ್ತೆ. ಸ್ವಲ್ಪ ಇರುವವರಿಂದ ಬೇಗ ಬರೀರಿ.

ಸಿವಿಲ್, ಕ್ರಿಮಿನಲ್, ಲೇವಾದೇವಿ, ರೋಮ ವರ್ಗ, ಭ್ಯಾನ ಭಾವಿಕ ಲೆಕ್ಕ, ಇತ್ಯಾದಿ ಸಮಸ್ತ ಸಾರಾಂಶಗಳನ್ನು ತಿಳಿಸತಕ್ಕ ಲಾ ಪುಸ್ತಕ. ಕ್ರಯ ೧ ಕ್ಕೆ ೧ ರೂ ೪ ಆಣೆ ಮಾತ್ರವೇ ಸ್ವಲ್ಪ ಪ್ರತಿಗಳೇ ಇರುವವರಿಂದ ಬೇಗ ಬರೆಯಿರಿ!

ಮೋಜಿನೀ ಕಲಿಯತಕ್ಕ ಪುಸ್ತಕ—ಕೇಶ ದಾರರಾಗತಕ್ಕವರಿಗೆ ಲ್ಲಾ ಅತ್ಯುಪಯೋಗವಾದದ್ದು. ಕ್ರಯ ೧ ಕ್ಕೆ ೧ ರೂ ಮಾತ್ರ

ತಾಂಬೂಲ ಸಂಜೀವಿನಿ—ಅನೇಕರು ಬಗೆ ಬಗೆಯಾಗಿ ತಯಾರ್ ಮಾಡುತ್ತಿದ್ದಾರೆ ಅದರ ೧ । ಆನೆ ಸ್ಟಾಂಪಿಟ್ಟು ನಮಗೆ ಬರೆದು ಮಾದರಿ ತರಿಸಿಕೊಂಡು ನೋಡಿದಲ್ಲಿ ನಮ್ಮ ಶ್ರಮವು ಸಾರ್ಥಕವಾಗುವದು ಕ್ರಯ ಡಬ್ಬಿ ೧ ಕ್ಕೆ ೪ ಆಣೆ.

ವಿಳಾಸ—ಟಿ. ಕೆ ಮೂರ್ತಿ ಕಂಪೆನಿ, ಬಳೇಪೇಟೆ, ಬೆಂಗಳೂರು ಸಿಟಿ

ದೇವಾಂಗ ಪಂಚಸ್ಥರಿಗೆ ಅಗತ್ಯ ಬೇಕಾದದ್ದು.

ದೇವಾಂಗಮಠ ಮೂಲಸ್ತಂಭ — ದೇವಾಂಗಮಠ ಪ್ರಕಾಶಿಕ

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸಪ್ತ ಮತಾಚಾರ್ಯರ ಸುಂದರವಾದ ೧೪ ತಸ್ವೀರಿದೆ. ಕ್ರಯ ಸುಲಭವಾಗಿದೆ. ೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೨—೮. ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತು ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮. ತಪ್ಪದೆ ಮನಿಆರ್ಡರಿನಿಂದಾಗಲಿ ವಿ ಪಿ ಲೂ ಕಳುಹಿಸುತ್ತ ವಿಳಾಸ— ಮೈಸೂರು ಬಸಳ ಅಂಗಡಿ ಪ್ರತ್ಯಕ್ಷ ಯಜಮಾನ ಪುಟ್ಟಮಲ್ಲಯ್ಯ.

SRI MADHVACHARYA SUKTI MUKTAVALI

ಶ್ರೀಮಧ್ವಾಚಾರ್ಯಸೂಕ್ತಿ ಮುಕ್ತಾವಳೀ

ಈ ಹೆಸರಿನಿಂದ ಪ್ರತಿ ತಿಂಗಳಲ್ಲಿಯೂ ಒಂದು ಸಂಚಿಕೆಯು ಪ್ರಕಟಿಸಲ್ಪಡುತ್ತದೆ ಇದರಲ್ಲಿ ಶ್ರೀಮದಾನಂದತೀರ್ಥ ಸಿದ್ಧಾಂತ ಸ್ಥಾಪಕರಾದ ಪೂರ್ವಾಚಾರ್ಯರುಗಳು ಮಾಡಿರುವ ಸ್ತೋತ್ರ, ಪ್ರಾಬಂಧ, ಗ್ರಂಥಗಳ ಕನ್ನಡದಲ್ಲಿ ಪ್ರತಿಪದ ಟೀಕಾ ತಾತ್ಪರ್ಯಗಳು ಸರ್ವರಿಗೂ ಅನುಕೂಲವಾಗಿ ಸುಲಭಶೈಲಿಯಾಗಿ ಬರೆದು ಮುದ್ರಿಸಲ್ಪಡುತ್ತೆ ಶ್ರೀವಿಷ್ಣು ಸಹಸ್ರನಾಮಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತ ಭಾಷ್ಯಗಳೂ ಕನ್ನಡದಲ್ಲಿ ಅರ್ಥವಿಸ್ತಾರ ಮುದ್ರಿಸಲ್ಪಡುತ್ತೆ ಈ ಸಂಪೂರ್ಣ ಗ್ರಂಥಕ್ಕೆ ಪೋಸ್ಟೇಜು ಬೇಬಲ್ ರು. ೨-೬, ಶ್ರೀಮಧ್ವಾಚಾರ್ಯಸೂಕ್ತಿ ಮುಕ್ತಾವಳೀ ಸಾಂವತ್ಸರಿಕ ಚಂದಾ ಪೋಸ್ಟು ಚಂದಾ ಸಹಿತ ರೂ ೧ ೦೪

ಇದರ ವಿಶೇಷ ವಿವರಗಳನ್ನು ತಿಳಿಯಬಯಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆಯಬೇಕು.

ಉಪ್ಪಲ್ ವೆಂಕಟಾಚಾರ್ಯರು,
ತುಳಸೀ ತೋಟ, ಬೆಂಗಳೂರು ಸಿಟಿ.

ಪ್ರಪಂಚದಲ್ಲಿ ಮುಖ್ಯವು ಯಾವದು?

ಜ್ಞಾನವೋ? ದ್ರವ್ಯವೋ? ಸ್ನೇಹಿತರೋ? ಜಾಗ್ರತೆ ತಿಳಿಯಿರಿ ಜ್ಞಾನಸಂಪಾದನೆ ಬೇಕಾದರೆ ಕೆಳಗೆ ಕಂಡ ಪುಸ್ತಕಗಳನ್ನು ತರಿಸಿ ನೋಡಿರಿ —

೧. "ಅನುಭವಸಾರ."

ಈ ಪುಸ್ತಕವನ್ನು ಮುನಿಶ್ರೇಷ್ಠರಾದ ನಿಜಗುಣ ಯೋಗಿಗಳರೆ ಬರೆದರು. ಅದ್ವೈತ ತತ್ವವನ್ನು ಸಂಪೂರ್ಣವಾಗಿ ತಿಳಿಯಬೇಕಾದ್ದು ಈ ಪುಸ್ತಕವನ್ನು ಬಿಟ್ಟರೆ ಬೇರೆ ಯಾವ ಪುಸ್ತಕವೂ ದೊರೆಯಲಾರದು ಇದಕ್ಕೆ ಟಿಪ್ಪಣಿಯನ್ನು ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಎ॥ ರಾ॥ ಕೃಷ್ಣಶಾಸ್ತ್ರಿಗಳು ಬರೆದಿದಾರೆ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಬಹು ನೇತ್ರಾನಂದಕರವಾಗಿವೆ. ಇದರ ಕ್ರಯ ೧೨ ಆಣೆ, ವಿ ಪಿ. ಮೂಲಕ ೧೪ ಆಣೆ

೨. "ಜಾತಿಪದ್ಧತಿ."

ಜಾತಿಯ ವಿಷಯವಾಗಿ ಹೇಳತಕ್ಕದ್ದೆಲ್ಲಾ ಇದರಲ್ಲಿ ಹೇಳಿದೆ. ಇದರ ವಿಷಯವಾಗಿ ಕನ್ನಡ ವಿದ್ವಾಂಸರಾದ ರಾಮಾನುಜಯ್ಯಂಗಾರ್ಯರು ಬಹು ಉತ್ಕೃಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುವರು. ಕ್ರಯ ೨ ಆಣೆ.

೩. "ಸ್ವಪ್ನಪ್ರಯಾಸ ಫಲದೀಪಿಕೆ."

ಎಲ್ಲರ ಮನೆಗಳಲ್ಲಿಯೂ ಇರತಕ್ಕದ್ದು. ಕ್ರಯ ೪ ಆಣೆ.

೪	"ರೋಮನರ ಚರಿತ್ರೆ."	ಕ್ರಯ ೦—೨—೦
೫.	"ಗ್ರೀಕರ ಚರಿತ್ರೆ"	,, ೦—೨—೦
೬.	"ಅನುಭವಾನಂದ." ,,	೦—೬—೦
೭	"ಗಣಿತ ಸಂಜೀವಿನಿ."	೦—೮—೦
೮.	"ಗಣಿತ ಚಿಂತಾಮಣಿ"	೦—೧೦—೦
೯.	"ಚಾಮರಾಜೇಂದ್ರ ವಿಲಾಸ"	೦—೧೨—೦
೧೦.	"ಹಿಂದೂ ಧರ್ಮಶಾಸ್ತ್ರ (ಲಾ) ಸಂಗ್ರಹ."	೦—೧೬—೦
೧೧	"೧೯೦೬ನೇ ವರುಷದ ಡೈರಿಗಳು"	

ಫ್ಲಾಪ್, ಪೆನ್ಸಿಲ್ ಸಹಿತ ೦—೬—೦ ; ಸಾದಾ ೦—೪—೦.

ಮ್ಯಾನೇಜರ್,
ಸಿ. ಎಲ್. ಎನ್ ಬುಕ್ ಡಿಪೋ,
ಮೈಸೂರು.

P. SUBBAROY'S

World Renowned and most Efficacious
Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

1

೧. ಪುಷ್ಟಿ ರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿವಿಧವಾದ ಎಲ್ಲಾ ಶರೀರದ ದುರ್ಬಲಗಳು ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ ದೇಹವು ಪುಷ್ಟಿ ಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವದು. ಪೆಟ್ಟಿ ೧ ಕ್ಕೆ ರೂ. ೨. ವಿ. ಪಿ. ಭಾಂಗಿ ೬ ಆಣೆ.

೨. ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ದೆ ಹತ್ತದಿರುವಿಕೆ, ತಲೆ ತಿರುಗುವುದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿ ೧ ಕ್ಕೆ ೮ ಆಣೆ. ವಿ. ಪಿ. ೨ ಪೆಟ್ಟಿಗೆ ವರೆಗೆ ಭಾಂಗಿ ಚಾರ್ಜು ೫ ಆಣೆ.

೩. ಲಕ್ಷ್ಮೀಶ್ವರ ಕಸ್ತೂರಿಮಾತ್ರೆ.—ಇದು ತಾಂಬೂಲಕ್ಕೆ ಪ್ರಾಣವಿತ್ತಿತು. ಇದರಿಂದ ಬಾಯಿಯ ದುರ್ಗಂಧವು ಹೋಗುವದು. ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾ ದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು. ಇದರಲ್ಲಿ ಅಫೀಮೇ ಮೊದಲಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ಹೊರತು ಮುಂತಾದ ಅಮೂಲ್ಯವಸ್ತುಗಳು ಸೇರಿರುವದರಿಂದಲೂ, ಎಳೆ ಮಕ್ಕಳಿಂದ ಮುದುಕರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವ ಬರಿಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಆಸ್ಪದ ಕೊಡದೆ ಸಹ ನೋಡಿಕೊಳ್ಳುವದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ ೧ ರಿಂದ ೧೨ ಸೀಸೆಗೆ ವಿ. ಪಿ. ಭಾಂಗಿ ಚಾರ್ಜು ೫ ಆಣೆ

೪. ವೇದನಾಪರಿಹಾರಕ ತೈಲವು.—ಇದನ್ನು ಮೇಲ್ಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವುದು, ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ, ನೋವುಗಳು, ಸೊಂಟ ಮತ್ತು ಎದೆ ಇವುಗಳ ನೋವು, ಕೀಲು ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು, ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ ಕ್ಕೆ ೧ ರೂ. ೩ ಬಾಟ್ಲಿ ವರೆಗೆ ವಿ. ಪಿ. ಭಾಂಗಿ ಚಾರ್ಜು ೯ ಆಣೆ.

೫. ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು.—ಬೋಳು ತಲೆ, ಸುಂಡು ಅಥವ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ, ತಲೆಯನ್ನೂ ಮಿದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಗಳ ಕೂದಲನ್ನು ಹೇರಳವಾಗಿ ಬೆಳೆಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿ ಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಬೆಲೆ ಸೀಸೆ ೧ ಕ್ಕೆ ೮ ಆಣೆ. ೩ ಸೀಸೆ ವರೆಗೆ ವಿ. ಪಿ. ಚಾರ್ಜು ೫ ಆಣೆ.

೬. ನೇತ್ರಬಿಂದು.—ಮಬ್ಬಾದ ದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು, ಹೂವು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ೧ ಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೭. ಶ್ರೋತ್ರಬಿಂದು.—ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಅದನ್ನೂ ಕೀವು ಸುರಿಯುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು. ಬೆಲೆ ಸೀಸೆ ೧ ಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೮. ಹುಳಕಡ್ಡಿಗೆ ಔಷಧಿ.—ಚರ್ಮರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವುದಿಲ್ಲ. ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೯. ಸುಖಭೇದಿ.—ಸ್ವಲ್ಪವೂ ಹೊಟ್ಟೆನೋವು, ಆಯಾಸ ಯಾವದೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು. ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ ೧ ಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ.

ಚೇಂಬರ್ಲಿನ್‌ಯವರು ಹೊಟ್ಟೆಶೂಲೆ, ಕಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

46



ಕಳಹೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬರೀ ಭೇದಿಯಾಗುವದು, ಆಮಶಂಕೆ, ಕಾಲುಗಳ ... ಉಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಸಂಶೆ ... ಮತ್ತೆ ಬೇರೆ ಇಲ್ಲ. ಈಚೆಗೆ ಮದರಾಸಿನ ಒಬ್ಬಾನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"... ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪೈಕಿ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಹಿಡಿದ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡಿರುತ್ತೇನೆ." ಕರುಳು ಸಡಿಲವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆ ತೊಳಸುವಿಕೆ ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ... ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈಹೊತ್ತೇ ಕೊಂಡು ತರಿಸಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ.; ೨ ರೂ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಷಾಪು ಇಟ್ಟಿರುವವರಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ... ಳಗಿನ ವಿಳಾಸದಾರರಲ್ಲಿ ಸಿಕ್ಕುವದು ಖಂಡಿತ —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮವ್ಬ್ರೇ ರೋಡ್,
ಮದರಾಸ್.

ಆಸ್ತಿ ಬಗೆಲ್ ನೋಟೀಸು, ಸಕಲ್ಪಾಪತ್ರ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—ಕಡೂರು ತಾಲ್ಲೂಕು ಸಖರಾಯಪಟ್ಟಣದಲ್ಲಿರುವ ಮರಿಯಪ್ಪನ ಮಗ ಸಣ್ಣ ಸೋಮಯ್ಯನ ಹೆಂಡತಿ ಗಂಗಮ್ಮನು ಅಪ್ರಾಪ್ತವಂತಳು. ಇವಳ ಗಂಡನಿಗೆ ಸ್ಥಿರ, ಚರ ಆಸ್ತಿಗಳು, ನಗಗಳು, ನಗದು ಸುಮಾರು ೧೦,೦೦೦ ಹತ್ತು ಸಾವಿರ ರೂಪಾಯಿವರಿಗೆ ಇವೆ. ಅಡಿಕೆ ತೋಟದಲ್ಲಿ ವರುಷ ಒಂದಕ್ಕೆ ೩೦೦ ಮುನ್ನೂರು ರೂಪಾಯಿ ಬೆಳೆ ಬರುತ್ತದೆ. ತರೀ ಜಮೀನಿನಲ್ಲಿ ಭತ್ತ ಬರುತ್ತದೆ. ಅಲ್ಲದೆ ರಾಗಿ ಮುಂತಾದ ಫಸಲು ಆಗುತ್ತದೆ. ಹೀಗಿರುತ್ತಾ ಸದರಿ ಸಣ್ಣ ಸೋಮಯ್ಯನ ಅನಂತರ ವಾರಸುದಾರರಿಗೆ ಮೋಸ ಮಾಡಬೇಕೆಂಬ ಇರಾದೆಯಿಂದ ಸ್ಥಿರ ಆಸ್ತಿಗಳನ್ನು ಸದರಿ ಗಂಗಮ್ಮನು ಪರಾಧೀನಮಾಡುವ ಪ್ರಯತ್ನದಲ್ಲಿ ಇದ್ದಾಳೆ. ಆದ್ದರಿಂದ ಯಾರೂ ಅವಳಿಂದ ಸದರಿ ಸಣ್ಣ ಸೋಮಯ್ಯನಾದ ಅವಳ ಗಂಡನ ಸ್ಥಿರ ಆಸ್ತಿ ಎಂದರೆ ಸಖರಾಯಪಟ್ಟಣದಲ್ಲಿರುವ ಅಡಿಕೆ ತೋಟ, ಗದ್ದೆ, ಇವುಗಳನ್ನು, ಅವು, ಖರೀದಿ, ದಾನ ಮುಂತಾದ ಪರಾಧೀನ ಮೂಲಕವಾಗಿ ತೆಗೆದುಕೊಳ್ಳಕೂಡದು. ಹಾಗೆ ತೆಗೆದುಕೊಂಡರೆ ಅಂಥಾ ಪರಾಧೀನವು ಕಾನೂನು ಪ್ರಕಾರ ಮಂಜೂರಾಗುವದಿಲ್ಲ. ಅಲ್ಲದೆ, ಈ ನೋಟೀಸು ಕೆಳಗೆ ರುಜು ಹಾಕಿರುವ ದೊಡ್ಡ ಸೋಮಯ್ಯನು ಅಂಥಾ ಪರಾಧೀನವನ್ನು ರದ್ದುಪಡಿಸಲು ಸಿದ್ಧವಾಗಿ ಇದ್ದಾನೆ.

ದೊಡ್ಡ ಸೋಮಯ್ಯನ ರುಜು ಗುರುತು.

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ನವಂಬರ್ ತಾ|| ೨೩ ನೇ ಗುರುವಾರ

ವೈಸ್‌ರಾಯಿ ಲಾರ್ಡ್ ಮಿಂಟೋಯವರು.

ಕಳೆದ ಏಳು ವರುಷಗಳಿಂದ ಹಿಂದುಸ್ಥಾನವನ್ನಾಳಿದ ಲಾರ್ಡ್ ಕರ್ಜನ್‌ರವರು ಪತ್ನಿಪರಿವಾರ ಸಹಿತ ೧೮ ನೆ ತಾ. ಶನಿವಾರ ಬೆಳಗ್ಗೆ ಬೊಂಬಾಯಿ ಪಟ್ಟಣದಲ್ಲಿ ದಫ್ರಿನ್ ಎಂಬ ಜಹಜು ಹತ್ತಿ ಸೀಮೆಗೆ ಪ್ರಯಾಣ ಮಾಡಿದರು. ಗವರ್ನರುಗಳೂ ಮಹಾರಾಜರುಗಳೂ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಬಂದರದಲ್ಲಿ ಕಾದಿದ್ದು ಅವರನ್ನು ಸಾಗಕಳುಹಿಸಿ ಬಂದರು.

ಲಾರ್ಡ್ ಮಿಂಟೋಯವರು ಪತ್ನಿ ಮೂವರು ಪುತ್ರಿಯರ ಸಮೇತ ಶುಕ್ರವಾರ ಸಾಯಂಕಾಲ ಬೊಂಬಾಯಿ ಪಟ್ಟಣಕ್ಕೆ ದಯಮಾಡಿದರು. ಶನಿವಾರ ಬೆಳಗ್ಗೆ ಲಾರ್ಡ್ ಮಿಂಟೋಯವರು ಲಾರ್ಡ್ ಕರ್ಜನ್‌ರವರನ್ನು ಸಾಗಕಳುಹಿಸಿ, ಗವರ್ನಮೆಂಟ್ ಹೌಸ್ ದರ್ಬಾರ್‌ಹಾಲಿಗೆ ದಯಮಾಡಿ, ಕೌನ್ಸಿಲ್ ಮೆಂಬರುಗಳ ಮಧ್ಯೆ ಪೀಠವನ್ನಲಂಕರಿಸಿ, ಹಿಂದುಸ್ಥಾನದ ವೈಸ್‌ರಾಯಿ ಪದವಿಯನ್ನು ಯಥಾವಿಧಿಯಾಗಿ ವಹಿಸಿದರು. ತರುವಾಯ ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಕಮಿಷನರಿಂದಲೂ ಅಲ್ಲಿನ ವರ್ತಕಮಂಡಲಿಯವರಿಂದಲೂ ಅಡ್ರೆಸ್ಸುಗಳನ್ನು ಅಂಗೀಕರಿಸಿ ಉಚಿತವಾದ ಪ್ರತ್ಯುತ್ತರಗಳನ್ನಿತ್ತರು. ಕಳೆದ ಸೋಮವಾರ ಬೆಳಗ್ಗೆ ೧೧|| ಗಂಟೆಗೆ ಅವರು ಸ್ಪೆಷಲ್ ರೈಲು ಹತ್ತಿ ಪ್ರಯಾಣಮಾಡಿ, ನೆನ್ನೆ ಬೆಳಗ್ಗೆ ಕಲ್ಕತ್ತಾ ಪಟ್ಟಣವನ್ನು ತಲಪುವವರಾಗಿದ್ದರು. ಲಾರ್ಡ್ ಮಿಂಟೋಯವರ ಆಳ್ವಿಕೆಯು ಈ ಭರತಖಂಡಕ್ಕೆ ಪ್ರಜಾನೆಮ್ಮದಿಯನ್ನೂ ಶ್ರೇಯೋಭಿವೃದ್ಧಿಯನ್ನೂ ಕೊಡುವುದಾಗಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಅರಮನೆ ಕಳ್ಳಿಯ ಧಾತ್ರೀಶನ ಸಮಾರಾಧನೆಯು ತಾ. ೨೩ ನೆ ಸೋಮವಾರ ಮಧ್ಯಾಹ್ನದಲ್ಲಿ ನಡೆಯುವುದು.

ಮ|| ಎ. ವಿಲ್ಲಿಯಂಸ್‌ಯವರು ರೆಸಿಡೆಂಟ್ ಕೆಲಸದ ಭಾರವನ್ನು ಮಿ|| ಎಸ್. ಎಂ. ಫ್ರೇಸರ್‌ಯವರಿಗೆ ಸೋಮವಾರ ಮಧ್ಯಾಹ್ನ ೨ ಗಂಟೆಗೆ ವಹಿಸುತ್ತಾರೆ. ಅವರು ಇನ್ನೂ ಕೆಲವುದಿನ ಬೆಂಗಳೂರಿನಲ್ಲೇ ಇರುವರೆಂದು ತಿಳಿದುಬಂದಿದೆ.

*****

ಮಿ|| ಎಸ್. ಎಂ. ಫ್ರೇಸರ್‌ಯವರು ತಾ. ೨೦ನೆ ಸೋಮವಾರ ಬೆಳಗ್ಗೆ ಪತ್ನಿಸಹಿತ ಬೆಂಗಳೂರಿಗೆ ಬಂದಿಳಿದರು. ಶ್ರೀಮನ್ಮಹಾರಾಜರವರೂ ಯುವರಾಜರವರೂ ರೆಸಿಡೆನ್ಸಿ ಬಂಗಲೆಗೆ ಹೋಗಿ ಅವರನ್ನು ಕಂಡುಬಂದರು.

*****

ರಾಜಧಾನಿಯಲ್ಲಿ ಸ್ಕೂರಿಗಳನ್ನು ಕಲಿಯುವ ಹೊಸ ಶಾಲೆಯನ್ನು ರೈಲ್ವೆ ಸ್ಟೇಷನ್ನಿಂದ ಬರುವ ರಸ್ತೆ ಪಾರ್ಶ್ವದಲ್ಲಿ ... ದು ಲಕ್ಷ ರೂಪಾಯಿ ಮುಟ್ಟಿಸಿ ಕಟ್ಟಿಸುವರು. ಈ ಕಟ್ಟಡಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರ ಹಸ್ತದಿಂದ ಅಸ್ತಿಭಾರವನ್ನು ಹಾಕಿಸುತ್ತಾರೆ.

*****

ಬೆಂಗಳೂರು ತಾಲ್ಲೂಕ್ ಕಚೇರಿ ರಸ್ತೆಯಲ್ಲಿರುವ ಸರ್ಕಾರಿ ಬಾಲಿಕಾ ಪಾಠಶಾಲೆಯೊಳಗೆ ಕಳೆದ ಶನಿವಾರ ಸಾಯಂಕಾಲ ... ವಾರ್ಡರವರ ಪತ್ನೀಯರವರು ಯೂರೋಪಿಯನ್ ಮತ್ತು ದೇಶೀಯ ದೊಡ್ಡಮನುಷ್ಯರ ಮನೆ ಸ್ತ್ರೀಯರನ್ನು ಕರೆಸಿಕೊಂಡು, ಎಲ್ಲರೂ ಸ್ವಲ್ಪ ಹೊತ್ತು ಆಟಪಾಟ ವಿನೋದಗಳಲ್ಲಿ ಆಸಕ್ತರಾಗಿ ಸಂತೋಷದಿಂದ ಕಾಲವನ್ನು ಕಳೆದರು.

*****

ಕಳೆದ ಶನಿವಾರ ಬೆಳಗ್ಗೆ ೧೦ ಘಂಟೆಯ ಮೇಲೆ ಶ್ರೀಮನ್ಮಹಾರಾಜರವರು ಮೋಟಾರ್ ಗಾಡಿಯಲ್ಲಿ ಕುಳಿತು ಬೆಂಗಳೂರಿಗೆ ಪ್ರಯಾಣಮಾಡಿ, ಸಾಯಂಕಾಲ ೬|| ಗಂಟೆಗೆ ತಲಪಿದರು. ಹೋಗುವಾಗ ಇಲ್ಲೂ ತಲಪಿದಾಗ ಬೆಂಗಳೂರಿನಲ್ಲೂ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ದಿವಾನರವರು ಆ ದಿನವೇ ದೊಡ್ಡಬಳ್ಳಾಪುರದಿಂದ ಸಂಚಾರ ತೀರಿಸಿಕೊಂಡು ಬೆಂಗಳೂರಿಗೆ ಹೋಗಿ ಶ್ರೀಮನ್ಮಹಾರಾಜರವರನ್ನು ಎದುರುಗೊಂಡರು.

*****

ಕೃಷ್ಣಾ ಜಿಲ್ಲೆಗೆ ಸೇರಿದ ನುಜವೀಡ್ ಜಮೀನ್‌ದಾರರಾದ ಶ್ರೀ ರಾಜಾ ವೆಂಕಟರಂಗ ಅಪ್ಪರಾವ್ ಬಹದೂರ್‌ಯವರು ಕಳೆದ ... ರಾತ್ರಿ ರಾಜಧಾನಿಗೆ ಬಂದು ನಮ್ಮ ಮಹಾರಾಜರವರ ಆತಿಥ್ಯವನ್ನು ಹೊಂದಿದ್ದುಕೊಂಡು, ಮಹಾರಾಜರವರ ಭೇಟಿಮಾಡಿ, ಒಂದು ಸಣ್ಣ ... ಆದರಕ್ಕಾಗಿ ತರಪೇತುಮಾಡುವ ನಾಲ್ಕು ಜಿಂಕೆಗಳು ಮತ್ತು ಒಂದು ಹೆಣ್ಣುಹುಲಿ, ಇವನ್ನು ಒಪ್ಪಿಸಿದರು. ಆ ಜಮೀನ್‌ದಾರರ ... ಅವರ ಹಿಂಬಾಲಕರಾಗಿ ಬಂದಿದ್ದ ೨೨ ಮಂದಿ ಸೇವಕರ ಸತ್ಕಾರ ಸೌಕರ್ಯಾದಿಗಳನ್ನು ಮಹಾರಾಜರವರು ಮೋತಿಮಹಲ್ ಮ್ಯಾನೇಜರಾದ ಮಿ|| ಎಚ್. ರಾಮಾನುಜರಿಗೆ ವಹಿಸಿದ್ದರು. ಜಮೀನ್‌ದಾರರು ೧೦ ದಿನ ಇದ್ದು ಕಳೆದ ಗುರುವಾರ ವಾಪಸು ಪ್ರಯಾಣಮಾಡಿದರು.

ಪ್ರಿನ್ಸ್ ಆಫ್ ವೇಲ್ಸ್‌ರವರ ದೇಶಸಂಚಾರ.

ಬೊಂಬಾಯಿ ಪಟ್ಟಣ.

ಪ್ರಿನ್ಸ್ ಆಫ್ ವೇಲ್ಸ್‌ರವರು ಬೊಂಬಾಯಿ ಪಟ್ಟಣದಲ್ಲಿ ಲಾರ್ಡ್ ಕರ್ಜನ್‌ರವರಿಗೂ ಅವರ ಪತ್ನೀಯರವರಿಗೂ ಬಹು ವಿಶೇಷವಾದ ಸಮ್ಮಾನವನ್ನು ದಯಪಾಲಿಸಿದರು.

ತಾ. ೧೩ ನೆ ಸೋಮವಾರ ಬೆಳಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಸಮಸ್ತ ಮರ್ಯಾದೆಗಳ ಸಹಿತ ಅರಮನೆಯಿಂದ ಹೊರಟು ... ರಾಜಪಿಪ್ಲ ರಾಜರು, ಜುನಾಘಡದ ನವಾಬರು, ಗೊಂಡಾಲ್ ಠಾಕೂರ್ ಸಾಹೇಬರು, ಕಚ್ಛಿನ ರಾವ್ ಯವರು, ನವಾನಗರದ ಜಾಮ್ ಸಾಹೇಬರು, ಈ ದೇಶೀಯ ರಾಜರುಗಳ ಬಂಗಲೆಗೆ ದಯಮಾಡಿ ಅವರುಗಳಿಗೆ ಮರುಭೇಟಿಯನ್ನು ದಯಪಾಲಿಸಿದರು. ಆ ದಿನ ಮಧ್ಯಾಹ್ನದ ಮೇಲೆ ಯುವರಾಜರವರು ಪತ್ನಿಸಹಿತರಾಗಿ ಮೋಟಾರ್ ... ಟಿನಲ್ಲಿ ಕುಳಿತು, ಸಮುದ್ರ ತೀರಕ್ಕೆ ದಯಮಾಡಿದರು. ಅಲ್ಲಿ ... ಗುಗಳನ್ನು ನಿಲ್ಲಿಸತಕ್ಕ ಒಂದು ಕಟ್ಟಡಕ್ಕೆ ಅವರ ಹಸ್ತದಿಂದ ಅಸ್ತಿಭಾರವನ್ನು ಹಾಕಿಸಿದರು. ಗವರ್ನರೇ ಮುಂತಾದ ಅಧಿಕಾರಿಗಳೂ ಹತ್ತಾರು ಸಹಸ್ರ ಪ್ರಜೆಗಳೂ ದೊಡ್ಡಮನುಷ್ಯರೂ ಯುವರಾಜರನ್ನು ವಂದಿಸಿದರು. ಆ ಕಟ್ಟಡದಲ್ಲಿ ...

ಪತ್ರವನ್ನು ಒದಿ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು ಪ್ರಿನ್ಸ್ ಆಫ್ ವೇಲ್ಸ್‌ರವರು ಅದನ್ನು ಅಂಗೀಕರಿಸಿ, ಅವರಿಗೆ ಸಹಾನ್ತರವನ್ನಿತ್ತರು ಆ ರಾತ್ರಿ ಯುವರಾಜರವರಿಗೆ ಎಂದು ಸಂಘಗಳ ದೊಡ್ಡ ಔತಣವನ್ನು ಏರ್ಪಡಿಸಿದರು ಅಪಾರವಾದ ದೀಪೋತ್ಸವಗಳು ನಡೆದುವು

ತಾ ೧೪ನೆ ಮಂಗಳವಾರ ಬೆಳಗ್ಗೆ ಯುವರಾಜರವರು ಅರಮನೆಯಲ್ಲಿ ದರ್ಬಾರ್ ಮಾಡಿ ಅನೇಕ ದೇಶೀಯ ರಾಜರುಗಳಿಗೆ ಭೇಟಿಕೊಟ್ಟರು ತರುವಾಯ ರಾಜಕುಮಾರ್ ವಿದ್ಯಾಶಾಲೆಯಲ್ಲಿ ಓದುವ ಬಹು ಮಂದಿ ರಾಜಕುಮಾರರುಗಳು ಬಂದು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕಂಡು ಅವರಿಂದ ಸನ್ಮಾನ ಹೊಂದಿದರು ಅನಂತರ ಬೊಂಬಾಯಿ ಗವರ್ನಮೆಂಟ್ ರಾಜಕೀಯ ಇಲಾಖಾ ಸೆಕ್ರೆಟರಿ ಮಿ॥ ಎಡ್ಗರ್ಲೀ ಯವರಿಗೂ, ಪೋಲೀಸ್ ಕಮೀಷನರ್ ಮಿ॥ ಗಾರ್ ಹುವರಿಗೂ, ಭಾರೀ ವರ್ತಕರೂ ದಮರ್ಷ್ಟರೂ ಆದ ಮಿ॥ ಕರೀಂಭಾಯಿ ಇಬ್ರಾಹಿಂ ಯವರಿಗೂ, ಷೆರಿಫ್ ಮಿ॥ ಡೇವಿಡ್ ಯವರಿಗೂ ಮಹಾ ಗೌರವವಾದ ಬಿರುದುಗಳನ್ನು ದಯಪಾಲಿಸಿ, ಕೆಲ ಪ್ರಮುಖರುಗಳಿಗೆ ಭೇಟಿ ಕೊಟ್ಟರು ಮಧ್ಯಾಹ್ನ ಗವಿಗಳ ಪ್ರದೇಶವಾದ ವಿಶೇಷ ಸ್ಥಳಗಳನ್ನು ಪರಾಂಬರಿಸಿ, ರಾತ್ರಿ ಬೊಂಬಾಯಿ ರೈಲ್ ಹತ್ತಿ, ಪಟ್ಟಣದಿಂದ ಇಂದೋರ್ ಸಂಸ್ಥಾನಕ್ಕೆ ತೆರಳಿದರು

ಇಂದೋರ್ ಸಂಸ್ಥಾನ

ತಾ ೧೫ನೆ ಬುಧವಾರ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಸಮೇತರಾಗಿ ಇಂದೋರನ್ನು ತಲಪಿದ ಕೂಡಲೆ ಅಲ್ಲಿ ಮಧ್ಯ ಹಿಂದೂಸ್ಥಾನದ ಕೆಲ ದೇಶೀಯ ರಾಜರುಗಳೂ ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿ, ಮೆರವಣಿಗೆಯಾಗಿ ಊರೊಳಕ್ಕೆ ಕರೆದುಕೊಂಡುಹೋಗಿ ರೆಸಿಡೆನ್ಸಿ ಬಂಗಲೆಯಲ್ಲಿ ಇಳಿಸಿದರು ಅಲ್ಲಿ ಭೇಟಿ ಮರುಭೇಟಿಗಳು ಪದ್ಧತಿಯಂತೆ ನಡೆದುವು

ತಾ ೧೬ನೆ ಗುರುವಾರ ಯುವರಾಜರು ಪತ್ನಿ ಸಹಿತ ವಿಶಾಲವಾದ ದೊಡ್ಡ ಡೇರೆಯೊಳಗೆ ಭಾರೀ ದರ್ಬಾರ್ ಮಾಡಿದರು ಅಲ್ಲಿ ಸೇರಿದ್ದ ೧೦ ೨೦ ರಾಜರುಗಳ ಪೈಕಿ ಧಾರ್ ಸಂಸ್ಥಾನದ ಬೇಗಂ ರಾಣಿಯವರಿಗೆ ಮೊದಲನೇ ಸ್ಥಾನವೂ ವಿಶೇಷವಾದ ಸನ್ಮಾನಗಳೂ ದೊರಕಿದುವು ಆ ದಿನ ರಾತ್ರಿ ಆ ರಾಣಿಯವರಿಗೂ ಕಾಶ್ಮೀರದ ರಾಜರಿಗೂ ಯುವರಾಜರವರು ಶ್ರೇಷ್ಠವಾದ ಜಿ ಸಿ ಎಸ್ ಐ ಎಂಬ ಬಿರುದುಗಳನ್ನು ದರ್ಬಾರಿನಲ್ಲಿ ದಯಪಾಲಿಸಿದರು ಬೇಗಂ ರಾಣಿಯವರು ಬುರ್ಖಾ ತೆಗೆದಿಟ್ಟು, ಅವರನ್ನು ವಿಶೇಷವಾಗಿ ವಂದಿಸಿದರು

ತಾ ೧೭ನೆ ಶುಕ್ರವಾರ ಬೆಳಗ್ಗೆ ಆ ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಸೈನಿಕರ ಕವಾಯತು, ಕಸರತ್ತುಗಳನ್ನು ಯುವರಾಜರವರು ಪರಾಂಬರಿಸಿ ಸಂತೋಷಪಟ್ಟು ಅವರ ಪರಾಕ್ರಮವನ್ನು ಹೊಗಳಿದರು ಸಾಯಂಕಾಲ ಚಕ್ರವರ್ತಿಯವರ ಹೆಸರಿನ ಮೇಲೆ ಕಟ್ಟಿರುವ ಭಾರೀ ಬಂಗಲೆಯನ್ನು ಪ್ರತಿಷ್ಠೆ ಮಾಡಿದರು ಹೋಳ್ಕರ್ ಮಹಾರಾಜರು ಕೆಲವು ಮಾತುಗಳನ್ನು ಹೇಳಿ ಯುವರಾಜರನ್ನು ವಂದಿಸಿದರು ಅವರೂ ಅದಕ್ಕೆ ಪ್ರತಿಯಾಗಿ ಸವಿಯಾದ ಉತ್ತರವನ್ನಿತ್ತರು ಆ ರಾತ್ರಿಯೇ ಅಲ್ಲಿಂದ ಉದಯಪುರವನ್ನು ಕುರಿತು ಪ್ರಯಾಣ ಮಾಡಿದರು ಆ ಸಂಸ್ಥಾನದಲ್ಲಿ ನಡೆದ ಆತಿಥ್ಯವೂ ಉತ್ಸವಗಳೂ ಅಪೂರ್ವವಾಗಿದ್ದುವು

ಉದಯಪುರ ಸಂಸ್ಥಾನ

ತಾ ೧೮ನೆ ಶನಿವಾರ ಬೆಳಗ್ಗೆ ಯುವರಾಜರವರು ಉದಯಪುರವನ್ನು ತಲಪಿದರು ಮಹಾರಾಜಾ ರಾಣಾರವರು ಸಮಸ್ತ ಪರಿವಾರ ಸೈನ್ಯಸಮೂಹಗಳೊಡನೆ ಕಾದಿದ್ದು ಯುವರಾಜರವರನ್ನು ಎದುರುಗೊಂಡು, ಮಹಾ ಆಟ್ಟಹಾಸದಿಂದ ಉತ್ಸವದೊಡನೆ ರೆಸಿಡೆನ್ಸಿ ಬಂಗಲೆಯಲ್ಲಿ ಇಳಿಸಿದರು ತರುವಾಯ ಭೇಟಿ ಮರುಭೇಟಿಗಳು ನಡೆದುವು ಮಧ್ಯಾಹ್ನ ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ರಾಚೀನಕಾಲದ ರಮಣೀಯವಾದ ಪಟ್ಟಣದೊಳಗೆ ಪ್ರವೇಶಿಸಿ, ಮುಖ್ಯ ಮುಖ್ಯ ಭಾಗಗಳನ್ನು ನೋಡಿ ಬಂದರು ಆ ರಾತ್ರಿಯೇ ಮಹಾರಾಣಾರ ಕೆರೆ ದೀಪದ ನೂರಾರು ಬಣ್ಣಬಣ್ಣಗಳ ವಿಚಿತ್ರಗಳೂ ದೀಪೋತ್ಸವ ವಿಭವವೂ ಆ ರಾತ್ರಿ ಅದ್ವಿತೀಯಗಳಾಗಿದ್ದುವು

ತಾ ೧೯ನೆ ಭಾನುವಾರವನ್ನು ಪ್ರಿನ್ಸ್ ಆಫ್ ವೇಲ್ಸ್‌ರವರು ಬಹು ಗಂಭೀರವಾಗಿ ಕಳೆದರು ಬೆಳಗ್ಗೆ ದೇವಸ್ಥಾನಕ್ಕೆ ದಯಮಾಡಿ ಪ್ರಾರ್ಥನಾದಿಗಳಲ್ಲಿ ಮಗ್ನರಾಗಿದ್ದರು ಮಧ್ಯಾಹ್ನ ಜಗಮಂದಿರವೆಂಬ ಚರಿತ್ರಾರ್ಹವಾದ ಅರಮನೆಯನ್ನು ಹೋಗಿ ಪರಾಂಬರಿಸಿ ಬಂದರು.

ತಾ ೨೦ನೆ ಸೋಮವಾರ ಬೆಳಗ್ಗೆ ಯುವರಾಜರವರು ಅತ್ಯಾದರದಿಂದ ಆನೆಗಳ ಸಹಿತ ಷಿಕಾರಿಗಾಗಿ ದಯಮಾಡಿದರು ಜಗದೀಶ ದೇವಸ್ಥಾನವನ್ನು ಆ ಸಾಯಂಕಾಲ ಪರಾಂಬರಿಸಿ, ರೈಲ್ ಹತ್ತಿ ಗಾಡಿಯಲ್ಲೇ ಬೋಜನ ತೀರಿಸಿಕೊಂಡು ಅಲ್ಲಿಂದ ಮುಂದಕ್ಕೆ ತೆರಳುವರು

ಮತಾಂತರ ಹೊಂದಿದವರ ಹಕ್ಕು ಬಾಧ್ಯತೆಗಳು

ರಾಜಧಾನಿಯಲ್ಲಿ ನಡೆದ ಸಭೆಗಳು

ಬುಧವಾರದ ಸಭೆ

ಕಳೆದ ೧೫ನೆ ತಾ ಬುಧವಾರ ಸಾಯಂಕಾಲ ರಾಜಧಾನಿಯ ಪ್ರಜೆಗಳು ಸುಮಾರು ೨೦೦೦ ಮಂದಿ ಇಲ್ಲಿನ ಟೌನ್ ಹಾಲ್ ಬಂಗಲೆಯೊಳಗೆ ಸಭೆಸೇರಿ, ಮೈಸೂರು ಸರ್ಕಾರದವರು ಪ್ರಕಟಿಸಿರುವ, ಹುಟ್ಟು ಬೇರೆಮತಕ್ಕೆ ಸೇರಿಕೊಳ್ಳುವವರ ಹಕ್ಕು ಬಾಧ್ಯತೆ ದಾಯಭಾಗ ವಿಷಯವಾದ ಹೊಸದೆ ಕಾನೂನ್ ವಿಚಾರವಾಗಿ ಚರ್ಚೆಮಾಡಿದರು ಆ ದಿನ ಹಿಂದುಗಳು ಮಾತ್ರ ಹಾಜರಾಗಿದ್ದರು ವೆಂಬಳೇ ಅಣ್ಣಯ್ಯ ಪಂಡಿತರಿಗೆ ಅಗ್ರಾಸನವನ್ನು ವಹಿಸಿದರು. ಆ ಪಂಡಿತರು ಸಭಿಕರನ್ನು ಕುರಿತು ಹೇಳಿದ್ದೇನೆಂದರೆ— ಹುಟ್ಟಿದ ಮತವನ್ನು ತ್ಯಜಿಸಿ ಅನ್ಯ ಮತವನ್ನು ಅವಲಂಬಿಸಿದವರಿಗೆ ಅಂದರೆ ಈಗ ಸನ್ನ ಕ್ರೈಸ್ತಮತಕ್ಕೆ ಸೇರಿಕೊಳ್ಳುವವರಿಗೆ ಪಿತ್ರಾರ್ಜಿತ ಸ್ವತ್ತಿನಲ್ಲಿ ಪಾಲು ಕೊಡಬೇಕೆಂತಲೂ ಅವರಿಗೆ ಇನ್ನೂ ಕೆಲವು ಹಕ್ಕು ಬಾಧ್ಯತೆಗಳನ್ನು ವಹಿಸಬೇಕೆಂತಲೂ ನಮ್ಮ ಸರ್ಕಾರದವರು ಒಂದು ಕಾನೂನ್ ಮಾಡುವವರಾಗಿದ್ದಾರೆ ಈ ವಿಷಯದಲ್ಲಿ ಅವರು ಪ್ರಜೆಗಳಾದ ನಮ್ಮ ಅಭಿಪ್ರಾಯಗಳನ್ನು ಕೇಳುವರು ಅವರು ಕೊಟ್ಟಿರುವ ೬೦ ದಿನಗಳ ಅವಧಿಯ ಪೈಕಿ ೪೦ ದಿನ ಕಳೆದುಹೋಯಿತು ಇನ್ನೂ ನಾವು ಸುಮ್ಮನಿರುವುದು ಸರಿಯಲ್ಲ ಬ್ರಿಟಿಷ್ ಮಹಾರಾಜ್ಞಿ ಚಕ್ರವರ್ತಿನಿಯವರು ೧೮೫೮ನೆ ಇಸವಿಯಲ್ಲಿ ಹಿಂದೂಸ್ಥಾನದ ಪ್ರಜಾಕೋಟಿಗಳನ್ನು ಅವರವರ ಜಾತಿ ಮತ ಆಚಾರಗಳಿಗೆ ಲೋಪಬರದಂತೆ ಕಾಪಾಡುತ್ತಾ ಬರುತ್ತೇವೆಂದು ಪ್ರಕಟಿಸಿರುತ್ತಾರೆ ನಮ್ಮ ಸಂಸ್ಥಾನವು ದೇಶೀಯ ರಾಜರುಗಳಿಂದ ಆಳಲ್ಪಡುತ್ತಿದೆ ಇಂಥಾ ರಾಜ್ಯದಲ್ಲಿ ಈ ನವೀನವಾದ ಮತ್ತು ವಿಶೇಷ ಹಾನಿಕರವಾದ ಕಾನೂನನ್ನು ಜಾರಿಗೆ ತರಬೇಕೆಂದು ಪ್ರಯತ್ನಪಟ್ಟಿದ್ದಾರೆ ಈ ವಿಷಯದಲ್ಲಿ ಸಭಿಕರೆಲ್ಲಾ ನಿಮ್ಮ ಅಭಿಪ್ರಾಯಗಳನ್ನು ಯೋಗ್ಯವಾದ ರೀತಿಯಲ್ಲಿ ತಿಳಿಸಬೇಕಾಗಿದೆ ಎಂದು ಹೇಳಿದರು.

ಅಡ್ವೊಕೇಟ್ ಮೆ॥ ಕೆ ಚಂದ್ರಶೇಖರಯ್ಯನವರು ಹೇಳಿದ್ದೇನೆಂದರೆ—ಇಂಡಿಯಾ ಗವರ್ನಮೆಂಟಿನವರು ೧೮೫೦ನೆ ಇಸವಿಯಲ್ಲಿ ಮಾಡಿ ಜಾರಿಗೆ ತಂದಿರುವ ೨೧ನೆ ಕಾನೂನ್ ಅನುಸರಿಸಿ, ನಮ್ಮ ಸರ್ಕಾರದವರು ಈ ಮಸೂದೆಯನ್ನು ಮಾಡಿ, ಮೂರು ಸೆಕ್ಷನ್ ಸೇರಿಸಿದ್ದಾರೆ ಇದರಲ್ಲಿ ಹೇಳಿರುವ "ಸ್ವಂತ ಹಕ್ಕು" ಎಂಬುದು ಯಾವುದೋ ವಿವರಿಸಲಿಲ್ಲ ಜಾತಿಭ್ರಷ್ಟನಿಗೆ ದಾಯಭಾಗ ಉಂಟು, ಬಂಧು ಹಕ್ಕು ಬರುವ ಹಕ್ಕೂ ಎರಡೂ ಉಂಟು, ವಿವಾಹ ಸಂಬಂಧ, ಮಕ್ಕಳ ಮತ್ತು ಹೆಂಡತಿಯ ಮೇಲಣ ಅಧಿಕಾರ, ಈ ಯಾವೂ ಅವನಿಗೆ ಹೋಗುವುದಿಲ್ಲ ಎಂದು ಬರೆದಿದ್ದಾರೆ ಹಿಂದುಗಳಲ್ಲಿ ಪತಿತರಿಗೆ ದಾಯಭಾಗವಿಲ್ಲವೆಂದು ಋಷಿಗಳು ಸೂಚಿಸಿದ್ದಾರೆ ಮುಸಲ್ಮಾನರಲ್ಲಿ ಕಾಫರರಿಗೆ ಹಕ್ಕು ಬಾಧ್ಯತೆಗಳಿಲ್ಲ ಇದು ಕಾನೂನ್ ಆದಲ್ಲಿ ನಮ್ಮ ಜಾತಿಗೂ, ಮತಕ್ಕೂ, ಆಚಾರಕ್ಕೂ, ಅವಿಭಕ್ತ ಕುಟುಂಬನಿಂಬ ಕಟ್ಟಳೆಗೂ ಅತ್ಯಂತರ ತಂದೆ ಹಿಂದೂ ಮಹಮದೀಯರ ಕೆಲಸಗಳೆಲ್ಲಾ ಮತವನ್ನೇ ಅನುಸರಿಸಿದ್ದಾಗಿವೆ ಕ್ರೈಸ್ತಮತ ಈಚೆಗೆ ಬಂದದ್ದು ಅದರ ಪ್ರೋತ್ಸಾಹಕ್ಕಾಗಿಯೇ ಈ ಕಾನೂನ್ ಮಾಡಿದ್ದೆಂದು ಗೊತ್ತಾಗುತ್ತದೆ ಹಿಂದುಗಳು ಪರಮತದವರನ್ನು ಸೇರಿಸಿಕೊಳ್ಳುವದಿಲ್ಲ ಮಹಮದೀಯರು ಈಗ ಈ ಕೆಲಸವನ್ನು ಬಿಟ್ಟು ಕಾಟಸ್ಥರಾದನ್ನು ವಹಿಸಿದ್ದಾರೆ

ಹಿಂದುಗಳು ವೇದಶಾಸ್ತ್ರಗಳಲ್ಲಿ ಹೇಳಿರುವ ಪ್ರಕಾರ ಅನೇಕ ಜನ್ಮ ಪರುಷಗಳಿಂದಲೂ ಒಂದೇ ರೀತಿಯಲ್ಲಿ ನಡೆಯುತ್ತಾ ಬಂದಿದ್ದಾರೆ ಹೆಂಡತಿ ಸಹಿತ ತಾಯಿತಂದೆಗಳ ಬಳಿ ಇದ್ದು ಅವರನ್ನು ಪೋಷಿಸಬೇಕೆಂಬುದು ನಮ್ಮ ಮತ ಎಲ್ಲಾ ಏಕ ಗೃಹಕೃತ್ಯದಲ್ಲಿರುತ್ತೇವೆ ಈ ಕಾನೂನು ಇದಕ್ಕೆ ವಿರೋಧವಾಗಿದೆ ನಮ್ಮಲ್ಲಿ ಮತ ಧರ್ಮಗಳನ್ನೆಲ್ಲಾ ಸರ್ವ ಕಾಲಕ್ಕೂ ಅನುಗುಣವಾಗುವಂತೆ ಋಷಿಗಳು ಮಾಡಿಟ್ಟಿದ್ದಾರೆ ಕಾಲಾನುಗುಣ್ಯವಾಗಿ ಬದಲಾವಣೆ ಮಾಡಬೇಕೆಂದು ನಮ್ಮ ಸರ್ಕಾರದವರು ಈ ಕಾನೂನು ಮಾಡಿದ್ದಾರೆ ಈ ಸಂಸ್ಥಾನದಲ್ಲಿ ಎಷ್ಟು ಮಂದಿ ಕ್ರೈಸ್ತರಿದ್ದಾರೆ ಹಿಂದೂ ಮಹಮದೀಯರೆಷ್ಟು ಮಂದಿ ಇರುವರು? ಸ್ವಲ್ಪ ಸಂಖ್ಯೆಯವರಿಗೆ ಒಳ್ಳೆಯದಾಗಬೇಕೆಂದು ಬಹು ಪ್ರಜಾಸಂಖ್ಯೆಗೆ ಕಷ್ಟ ದುಃಖ ನಷ್ಟಗಳನ್ನುಂಟುಮಾಡುವುದು ಒಪ್ಪತಕ್ಕ ಕಾರ್ಯವೇ?

ಈ ಕಾನೂನು ಮಾಡುವುದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಇದರಲ್ಲಿ ತಿಳಿಸಿ ಇಲ್ಲ ಈ ಮರುಷ ವರ್ತಮಾನಗಳಲ್ಲಿ ಸರ್ಕಾರದವರು ಒಂದು ಕಮಿಟಿ ಮಾಡಿದರೆಂದೂ ಆ ಕಮಿಟಿಯವರು ಚರ್ಚಿಸುತ್ತಿದ್ದಾರೆಂದೂ ಬೆಂಗಳೂರು ಪತ್ರಿಕೆಯೊಂದು ಹೇಳಿತು ಅದರ ಮೇಲೆ ಮೈಸೂರು ಪ್ರಜೆಗಳು ಆಗಲೇ ಒಂದು ಸಭೆಮಾಡಿ, ಆ ಕಾನೂನ್ ಮಾಡದಂತೆ ಸರ್ಕಾರದವರನ್ನು ಪ್ರಾರ್ಥಿಸಿಕೊಂಡರು ಇದುವರೆಗೂ ಅದಕ್ಕೆ ಜವಾಬೇ ಬರಲಿಲ್ಲ ಈ ಕಾನೂನಿನಲ್ಲಿ 'ಯುಕ್ತವೆಂದು ತೋರಿದೆ" ಎಂದು ಬರೆದಿದೆ ಯಾವದು ಯುಕ್ತವೋ ಹ್ಯಾಗೆ ಯುಕ್ತವೋ ಕಾರಣಸಹಿತ ಹೇಳಿದ್ದರೆ ನಾವು ಇನ್ನೂ ಚನ್ನಾಗಿ ತಿಳಿದು ಚರ್ಚಿಸಬಹುದಾಗಿತ್ತು

ಹಿಂದುಸ್ಥಾನದಲ್ಲಿ ಹಿಂದೂ ರಾಜರೂ ಮಹಮದೀಯ ಅರಸುಗಳೂ ಹಿಂದೂ ಮಂತ್ರಿಗಳನ್ನೇ ತಮ್ಮ ಬಳಿ ಇಟ್ಟುಕೊಂಡು, ಹಿಂದೂ ಮತ ಆಚಾರ ಪದ್ಧತಿಗಳಿಗೆ ನ್ಯೂನತೆಯುಂಟಾಗದಂತೆ ಪರಿಪಾಲಿಸಿಕೊಂಡು ಬಂದರು ಈಗ ಇಂಗ್ಲಿಷ್ ಪ್ರಭುಗಳೂ ಹಿಂದೂಲಾ ಪ್ರಕಾರ ನಮ್ಮನ್ನು ನಡೆಸುತ್ತಿದ್ದಾರೆ ೧೮೫೮ ರಲ್ಲಿ ಕೊಟ್ಟ ಚಕ್ರವರ್ತಿನಿಯವರ ಇಸ್ತಿಹಾರಿನಂತೆ ೧೮೫೦ನೆ ಇಸವಿಯ ಕಾನೂನ್ ರದ್ದಾಗಬೇಕಾಗಿತ್ತು ಈ ಸಂಸ್ಥಾನವನ್ನು ನಮ್ಮ ರಾಜವಂಶೀಯರಿಗೆ ವಹಿಸುವುದಕ್ಕೆ ಮೊದಲೇ ಅಂದರೆ ಇಂಗ್ಲಿಷ್ ದಲಿತು ಆದಾಗ್ಗೆ ಅವರು ಈ ಕಾನೂನನ್ನು ಜಾರಿಗೆ ತರಬಹುದಾಗಿತ್ತಲ್ಲವೇ? ಯಾಕೆ ತರಲಿಲ್ಲ?

ಈಚೆಗೆ ನಮ್ಮ ಸಂಸ್ಥಾನದಲ್ಲಿ ಕ್ರೈಸ್ತರ ಒಂದೆರಡು ಮೊಕದ್ದಮೆಗಳು ಹುಟ್ಟಿ, ಹಯಾರ್ಪ್ಟಿ ಆಗಿ ಅವರಿಗೆ ವಿರೋಧವಾಗಿ ತೀರ್ಮಾನವಾದವು ಆಗ ಈ ಕಾನೂನನ್ನೂ ಮದುವೆಯನ್ನಳಿಸುವ ಕಾನೂನನ್ನೂ ಜಾರಿಗೆ ತರಬೇಕೆಂದು ಪ್ರಯತ್ನಪಟ್ಟರು ನಮ್ಮ ಸರ್ಕಾರದವರು ಮೊದಲನೆಯದು ಅವಶ್ಯವಿಲ್ಲವೆಂದು ತಳ್ಳಿ, ಎರಡನೆಯದನ್ನು ಜಾರಿಗೆ ತಂದರು ಅಂದಿನಿಂದ ಈ ಚರ್ಚೆ ನಡೆಯುತ್ತಲೇ ಇದೆ ನಮ್ಮ ಮಹಾರಾಣಿ ರೀಜೆಂಟರು ಆಳುತ್ತಿದ್ದಾಗ ಆ ಕಾನೂನ್ ಜಾರಿಗೆ ತರಬೇಕೆಂಬ ಪ್ರಯತ್ನ ನಡೆಯಿತು ಅದಕ್ಕೆ ಮಹಾ ಮಾತೃಶ್ರೀಯವರ ಅನುಮತಿಯನ್ನು ಕೇಳಿದಾಗ ಅವರು—ಈ ಕಾನೂನು ನಮ್ಮ ದೇಶದ ಪ್ರಜೆಗಳ ಸಂಸಾರ, ಮತದ ಕಟ್ಟುಪಾಡು, ಸಂಘ, ಜಾತಿಗಳನ್ನೆಲ್ಲಾ ಹಾಳುಮಾಡುವಂಥಾದ್ದು. ನಮ್ಮ ಆಳ್ವಿಕೆಯಲ್ಲಿ ಇದನ್ನು ಇಲ್ಲಿಗೆ ಜಾರಿ ಮಾಡಕೂಡದೆಂದು ಪ್ರಾರ್ಥನಾಪತ್ರವೆಂದು ತಿಳಿಸಿದರು

ಹುಟ್ಟಿದ ಮಾರ್ಗಕ್ಕೇ ದಾಯದ ಹಕ್ಕು ಬರುವುದಿಲ್ಲ ಹಿಂದೆ ದಾನ ಮಾಡಿದವನಿಗೆ ಮಾತ್ರ ದಾಯವುಂಟು ಆಸ್ತಿ ಬೇಕು, ಹಿಂದಿನ ಮಾಡುವದಿಲ್ಲವೆಂದು ಹೇಳುವುದು ಯಾವ ಧರ್ಮ? ಎಂಬುದೇ

[ಆ ದಿನ ಸಭೆಗೆ ಮಹಮದೀಯರ್ಯಾರೂ ಬರಲಿಲ್ಲವೆಂತಲೂ ಅವರಿಗಿದ್ದ ಉಪವಾಸದ ಹಬ್ಬವೇ ಅದಕ್ಕೆ ಕಾರಣವೆಂತಲೂ ಹೇಳಿ ಕಳುಹಿಸಿದ ಕಾರಣ ಭಾನುವಾರ ಬೆಳಗ್ಗೆ ಮತ್ತೆ ನಡೆಸಬೇಕೆಂದು ಗೊತ್ತುಮಾಡಿ, ಮುಕ್ತಾಯಮಾಡಿದರು]

ಶನಿವಾರದ ಸಭೆ

ಕಳೆದ ಶನಿವಾರ ಸಾಯಂಕಾಲ ಇಲ್ಲಿನ ವೈದಿಕ ಮಂಡಲಿಯವರೆಲ್ಲಾ ಸದ್ವಿದ್ಯಾ ಪಾಠಶಾಲೆಯಲ್ಲಿ ಸಭೆ ಸೇರಿದರು ಸುಮಾರು ೩೦೦ ಮಂದಿ ಪಂಡಿತರೂ ಶಾಸ್ತ್ರಿಗಳೂ ಹಾಜರಾಗಿದ್ದರು ಪಂಡಿತರತ್ನಂ ವೇ॥ ಕಸ್ತೂರಿ ರಂಗಾಚಾರ್ಯರು ಸಭಾನಾಯಕರಾಗಿ, ಈ ಕಾನೂನಿನ ವಿಚಾರವನ್ನು ಕುರಿತು ಉಪನ್ಯಾಸ ಮಾಡಿದರು ವೇ॥ ಶೃಂಗೇರಿ ರಾಮಕೃಷ್ಣ ಜೋಯಿಸರೂ ಧರ್ಮಶಾಸ್ತ್ರಗಳನ್ನೆಲ್ಲಾ ಶೋಧನೆ ಮಾಡಿ, ಈ ದಾಯ ಭಾಗ ವಿಚಾರವನ್ನು ಕುರಿತು ಪ್ರಮಾಣಗಳ ಸಹಿತ ಬರೆದು ಸಿದ್ಧಪಡಿಸಿದ್ದ ಉಪನ್ಯಾಸವನ್ನು ಓದಿದರು ಚಾಮರಾಜನಗರದ ವೇ॥ ನರಹರಿ ಜೋಯಿಸರೂ ಇತರ ಕೆಲವು ವೈದಿಕರೂ ಅದೇ ಅರ್ಥಕ್ಕೆ ಉಪನ್ಯಾಸ ಮಾಡಿದರು ಇವರು ವಿವರಿಸಿದ ಸಂಗತಿಗಳಲ್ಲಿ ಕಂಡುಬರುವುದೇನೆಂದರೆ—ಪತಿತರಿಗೆ ಜೀವನಾಂಶವಾಗಲಿ ದಾಯಭಾಗವಾಗಲಿ ಸಲ್ಲುವುದಿಲ್ಲ ಸ್ವಕರ್ಸ್ಥರಾದ ಪಂಚಮ ಹಾಪಾತಕಿಗಳೂ ಕರ್ಮಭ್ರಷ್ಟರಾದವರೂ ಪತಿತರೆನಿಸಿಕೊಳ್ಳುತ್ತಾರೆ ಅದರೆ ಕುಟುಂಬದಲ್ಲಿ ಕುರುಡ, ಕುಂಟ, ಅಂಗಹೀನ, ಕಿವುಡು ಮೂಗ, ಮಹಾರೋಗದ ದೀರ್ಘರೋಗಿ, ಪೆದ್ದ, ಇವರ್ಯಾರಾದರೂ ಇದ್ದರೆ ಇವರು ಕರ್ಮಕ್ಕೆ ಅನರ್ಹರಾದ ಕಾರಣ ಇವರಿಗೆ ಆ ಕುಟುಂಬದ ಆಸ್ತಿಯಲ್ಲಿ ಜೀವನಾಂಶವೊಂದೇ ಅಲ್ಲದೆ ದಾಯಭಾಗವಿಲ್ಲ ಅಂತು ಆ ದಿನ ಸಭಿಕರು—ಈ ವಿಷಯಗಳನ್ನೆಲ್ಲಾ ಸಕಾರಣವಾಗಿ ಬರೆದು ಮಹಾರಾಜರವರಿಗೂ ಮಾರಾಧಿಪತಿಗಳಿಗೂ ಒಪ್ಪಿಸತಕ್ಕದ್ದೆಂದು ತೀರ್ಮಾನ ಮಾಡಿಕೊಂಡರು.

ಭಾನುವಾರದ ದೊಡ್ಡ ಸಭೆ

ಕಳೆದ ಭಾನುವಾರ ಬೆಳಗ್ಗೆ ಇಲ್ಲಿನ ಎಲ್ಲಾ ಕೋಮುಗಳ ಪ್ರಜೆಗಳು ಸುಮಾರು ೫೦೦೦ ಮಂದಿ ಟೌನ್ ಹಾಲಿನಲ್ಲಿ ಮೇಲ್ಕಂಡ ವಿಷಯವನ್ನು ಚರ್ಚಿಸುವುದಕ್ಕೆ ಸಭೆ ಸೇರಿದರು. ಮಹಮದೀಯರಲ್ಲೂ ಮುಖ್ಯಮುಖ್ಯರಾದವರೂ ಹಾಜರಾಗಿದ್ದರು. ಹಿಂದುಗಳ ಪಕ್ಷಕ್ಕೆ ವೆ॥ ಅಂಬಳೆ ಅಣ್ಣಯ್ಯ ಪಂಡಿತರನ್ನೂ ಮುಸಲ್ಮಾನರ ಪಕ್ಷಕ್ಕೆ ಮೌಲ್ವಿ ಹವೇಲಿ ಪಿರಾರವರನ್ನೂ ಸಭಾನಾಯಕರನ್ನಾಗಿ ನೇಮಿಸಿದರು ಅಧ್ಯಕ್ಷರುಗಳು ಸಭೆಯ ಕಾರ್ಯೋದ್ದೇಶವನ್ನು ತಿಳಿಸಿದ ಮೇಲೆ

ಅಡ್ವೊಕೇಟ್ ಮಿ॥ ಎ ರಾಮಣ್ಣನವರು ಹೇಳಿದ್ದೇನೆಂದರೆ— ಹಿಂದೂಸ್ಥಾನದಲ್ಲಿ ಏಕಾಗ್ರಹಕ್ಕನ್ನು ಪೊಬ ಪದ್ಧತಿ ಇದೆ ನಮ್ಮ ಸಂಪಾದನೆಯ ಉದ್ದೇಶವೇನು? ನಮ್ಮ ಮಕ್ಕಳೂ ಮರಿಮಕ್ಕಳೂ ನಮ್ಮ ಸನಾತನ ಧರ್ಮಗಳನ್ನು ಕಾಪಾಡುತ್ತಾ ನಮ್ಮ ಹಿರಿಯರನ್ನು ಸ್ವರ್ಗಕ್ಕೆ ಸೇರಿಸಬೇಕೆಂಬುದಲ್ಲವೇ? ಹುಟ್ಟಿದ ಮಾತ್ರದಿಂದ ತಂದೆಗೂ ಮಗನಿಗೂ ಒಂದು ಕರಾರು ಹುಟ್ಟುತ್ತೆ ಆ ಮಗನು ಕರಾರಿನ ಪ್ರಕಾರ ಪಿತೃಕರ್ಮಗಳನ್ನು ಮಾಡದೆ ಹೋದರೆ ಕರಾರು ಸಿದ್ಧವಾದೀತೇ? ಕರಾರಿನಂತೆ ಕೆಲಸಮಾಡುವುದಿಲ್ಲವೆಂದೂ ಪ್ರತಿಫಲ ಮಾತ್ರ ಕೊಡಬೇಕೆಂದೂ ಕೇಳಿದರೆ ಕೊಡುವುದು ನ್ಯಾಯವೇ? ಪಿತೃಕಾರ್ಯ ನಡೆಸದಂಥಾ ಮಗನಿಗೆ ಆಸ್ತಿಯನ್ನು ದಾನವಾಗಲಿ ವಿಲ್ ಬರೆದಾಗಲಿ ಕೊಡದಿದ್ದಕ್ಕೆ ಯಾವ ತಂದೆ ತಾನೆ, ಮುಕ್ತಾತ ಒಪ್ಪುವನು? ಆದ್ದರಿಂದ ಆಸ್ತಿಯನ್ನು ಬಲಾತ್ಕಾರದಿಂದ ಕಿತ್ತುಕೊಳ್ಳುವುದಕ್ಕೇ ಈ ಕಾನೂನು ಬಂದಿದೆ ಅಂಥವನಿಗೆ ಜೀವನಾಂಶ ಕೊಡತಕ್ಕದ್ದೆಂದು ಮನುಸ್ಮೃತಿಯ ೯ನೇ ಅಧ್ಯಾಯ ೨೦೨ನೆ ಪ್ರಕರಣದಲ್ಲಿ ಹೇಳಿದೆ ಅದರಂತೆ ಅವನಿಗೆ ಬದುಕಿರುವತನಕ ಜೀವನಾಂಶ ಕೊಡಬಹುದು. ಆಸ್ತಿಯನ್ನೇ ಕೊಟ್ಟರೆ ಹಣ ಚದರಿಹೋಗಿ ಕೊಟ್ಟವರಿಗೂ ಕಷ್ಟವಾಗುತ್ತೆ ಈ ಕಾರಣಗಳಿಂದ ಈ ಕಾನೂನು ಅಗತ್ಯವಾದದ್ದಲ್ಲವೆಂದು ಖಂಡಿತವಾಗಿ ಹೇಳುತ್ತೇನೆ.

ಅನಂತರ ಮೌಲ್ವಿ ಷಹಬುದ್ದೀನರವರು, ಮೌಲ್ವಿ ಸಿಕಂದರ್ ಸಾಬರು, ಮ್ಯುನಿಸಿಪಲ್ ಕಮೀಷನರ್ ಮಿ॥ ಷೇಕ್ ಇಬ್ರಾಹಿಂ ಸಾಬರು, ಮೌಲ್ವಿ ಮಿರ್ ಮಹಮ್ಮದ್ ಹುಸೇನ್ ಸಾಬರು, ಬ್ರಿಟಿಷ್ ಮಿ॥ ನರಹರಿ ಜೋಯಿಸರು, ಲಕ್ಷ್ಮೀನರಸಿಂಹ ಶಾಸ್ತ್ರಿಗಳು, ಬಾಜೆ ಸ್ವರೂಪ್ ಪ್ಯಾಸುದ್ದೀನರವರು, ಮಿ॥ ಗಳಾದ ಅಪ್ಪಾಜಿಶೆಟ್ಟರು, ಪುಟ್ಟಯ್ಯಾಜಿ ಅರಸಿನವರು, ಎ ವಿ ವರದಾಚಾರ್ಯರು, ಬೋರಯ್ಯನವರು, ಆನಂದರಾವ್ ಮಾಧವನವರು, ಸುಬ್ರಹ್ಮಣ್ಯಲಾಲಾರವರು, ಬಿ ಬಸವಯ್ಯನವರು, ಮಹಮ್ಮದ್ ರಾಮಜೋಯಿಸರು, ಘನಪಾಠಿ ಶಿಂಗ್ರಾಚಾರ್ಯರು, ಎ. ಗೋವಿಂದಾಚಾರ್ಯರು, ಈ ಮೊದಲಾದವರೆಲ್ಲಾ ಅದೇ ಅರ್ಥಕ್ಕೆ ಉಪನ್ಯಾಸ ಮಾಡಿ, ಈ ಕಾನೂನ್ ಮಾಡದಂತೆ ಗವರ್ನಮೆಂಟಿನವರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು

ಕಡೆಯಲ್ಲಿ ಸಭಿಕರೆಲ್ಲಾ ಏಕವಾಕ್ಯತೆಯಿಂದ ತೀರ್ಮಾನಿಸಿದ್ದೇನೆಂದರೆ—(೧) ಇಂಥಾ ಕಾನೂನು ಹಿಂದೂ ಮಹಮದೀಯರ ಮತ ಆಚಾರ ಕುಟುಂಬಗಳಿಗೆ ಹಾನಿಕರವಾಗಿರೋಣದರಿಂದ ಇದನ್ನು ಜಾರಿಗೆ ತರದಂತೆ ಗವರ್ನಮೆಂಟಿಗೆ ಅರಿಕೆಮಾಡಬೇಕು (೨) ಸಭಾ ಕಾರ್ಯಗಳನ್ನೆಲ್ಲಾ ಸವಿಸ್ತಾರವಾಗಿಯೂ ಸಕಾರಣವಾಗಿಯೂ ಬರೆದು ಶ್ರೀಮನ್ ಮಹಾರಾಜರವರಿಗೂ, ಬ್ರಿಟಿಷ್ ರೆಸಿಡೆಂಟರಿಗೂ, ಇಂಡಿಯಾ ಗವರ್ನಮೆಂಟಿಗೂ ಒಂದೊಂದು ಪ್ರತಿಯನ್ನು ಒಪ್ಪಿಸಬೇಕು (೩) ಈ ಉದ್ದೇಶಗಳನ್ನು ನೆರವೇರಿಸುವುದಕ್ಕೆ ೧೦ ಮಂದಿ ಮೆಂಬರುಗಳುಳ್ಳ ಒಂದು ಕಮಿಟಿ ಆಗಬೇಕು.

ಸತ್ಯಕ್ಕಾಗಿ ಪ್ರಾಣಕೊಟ್ಟ ಹುಡುಗನು.

ಅಮೇರಿಕ ಖಂಡದ ಸಂಯುಕ್ತ ಸಂಸ್ಥಾನಗಳಲ್ಲಿ ಷಿಕಾಗೋ ಎಂಬ ನಗರ ಉಂಟಷ್ಟೆ. ಸನ್ ೧೮೫೩ನೆ ಇಸವಿ ಆಗಸ್ಟ್ ೯ರಲ್ಲಿ ಆ ಪಟ್ಟಣದ ಸಮೀಪದಲ್ಲಿ ದನಗಳನ್ನು ಮೇಯಿಸುವದಕ್ಕಾಗಿ ಇವರ್ಸನ್ ಎಂಬೊಬ್ಬ ಹುಡುಗನು ಹೋಗುತ್ತಿದ್ದನು. ಕೊಂಚ ಹೊತ್ತಿನೊಳಗಾಗಿ ಅವನು ಒಂದು ಕಾಲುವೆಯ ಬಳಿಗೆ ಬಂದನು. ಆ ಕಾಲುವೆಯ ದಡದಲ್ಲಿ ಆಟವಾಡಿಕೊಂಡು ಇದ್ದ ಧಾಂಡಿಗರಾದ ಸೋಮಾರಿ ಹುಡುಗರು ಈ ಇವರ್ಸನನನ್ನು ನೋಡಿ ಹತ್ತಿರಕ್ಕೆ ಬಂದು ಎಲೋ ಹುಡುಗಾ, ಸಮೀಪದಲ್ಲಿರುವ ಈ ತೋಟಕ್ಕೆ ನುಗ್ಗಿ ಸೇಬಿ ಹಣ್ಣುಗಳನ್ನು ಕಿತ್ತುಕೊಂಡು ಬಾ ಎಂದರು. ಅದಕ್ಕೆ ಆ ಚಿಕ್ಕ ಹುಡುಗನು ಅಣ್ಣಂದಿರಾ, ನಾನು ಕದಿಯುವ ಕೆಲಸವನ್ನು ಎಂದಿಗೂ ಮಾಡಲಾರೆ ಎಂದು ತಕ್ಷಣ ಉತ್ತರ ಹೇಳಿದನು. ಆ ತುಂಟಹುಡುಗರು ಅವನಿಗೆ ನೀನು ಖಂಡಿತವಾಗಿ ಕದಿಯಬೇಕು, ಇಲ್ಲದಿದ್ದರೆ ನೋಡಿಕೋ ಎಂದು ಹೆದರಿಸಿದಾಗ್ಯೂ ಇವರ್ಸನನು ಯಾರು ಹೇಳಿದಾಗ್ಯೂ ನಾನು ಎಂದಿಗೂ ಆ ಕೆಲಸವನ್ನು ಮಾಡೆನು ಎಂದನು. ಅದಕ್ಕವರು ನಾವು ಹೇಳಿದ್ದನ್ನು ನೀನು ಕೇಳದಿದ್ದರೆ ನಿನ್ನನ್ನು ಈ ಕಾಲುವೆಯ ನೀರಿನಲ್ಲಿ ಮುಳುಗಿಸುತ್ತೇವೆ ಎಂದು ಹೇಳಿದರು. ಇದನ್ನು ಕೇಳಿ ಆ ಹುಡುಗನು ಹೆದರುವನೆಂದು ಆ ದುಷ್ಟಹುಡುಗರು ಯೋಚಿಸಿದಾಗ್ಯೂ ಇವರ್ಸನನು ಅದಕ್ಕೆ ಬೆಗ್ಗಲಿಲ್ಲ. ಆದದರಿಂದ ಅವರು ಇವನನ್ನು ಹಿಡಿದು ನೀರಿನ ಅಂಚಿಗೆ ಎಳೆದುಕೊಂಡು ಹೋಗಿ ಅವನು ಎಷ್ಟು ಕಿರಿಚಿಕೊಂಡಾಗ್ಯೂ ಬಿಡದೆ ನೀರಿನೊಳಕ್ಕೆ ದೊಬ್ಬಿದರು. ಇವರ್ಸನನು ಗುಟುಕು ನೀರು ಕುಡಿಯುತ್ತಾ ಪ್ರಾಣ ಹೋಗುವ ಹಾಗಿದ್ದರೂ ದೇವರು ಕದಿಯಬೇಡವೆಂದು ಹೇಳಿಕೊಟ್ಟಿರುವ ಅಪ್ಪಣೆಯನ್ನು ಮೀರುವದಕ್ಕೆ ಸ್ವಲ್ಪವೂ ಒಡಂಬಡದೆ ಹೋದನು. ಇವನ ಸ್ಥಿರವಾದ ಪಟ್ಟನ್ನು ಆ ದುಷ್ಟರು ನೋಡಿ ಮತ್ತಷ್ಟು ರೇಗಿ ಅವನನ್ನು ತಿರಿಗಿ ನೀರಿನಲ್ಲಿ ಅಮುಕಿದರು. ಇವರ್ಸನನು ಒಲ್ಲೆನೆಂದು ಹೇಳುವದನ್ನು ಬಿಡಲೇ ಇಲ್ಲ. ಅವರು ಅವನನ್ನು ನೀರಿನೊಳಕ್ಕೆ ಅಮುಕುವದನ್ನು ಬಿಡಲಿಲ್ಲ. ಈ ಘೋರಕೃತ್ಯವನ್ನು ನೋಡುವವರು ಯಾರೂ ಸಮೀಪದಲ್ಲಿರಲಿಲ್ಲ. ಆ ಮಗುವಿನ ಪ್ರಾಣವು ಹೋಗುವದಾಗಾಯಿತು. ಅವನು ನೀರಿನೊಳಗೆ ಒದ್ದಾಡುವದು ಕಡಿಮೆಯಾಗುತ್ತಾ ಬಂತು. ಕಡೆಗೆ ಪ್ರಾಣವೂ ಹೋಯಿತು. ಇವರ್ಸನನು ಸುಮಾರಾಗಿ ೧೩ ವರುಷದವನಾಗಿದ್ದನಷ್ಟೆ. ಪ್ರಾಣ ಹೋದರೂ ಹೋಗಲಿ ಕದಿಯಕೂಡದು ಎಂದು ಅವನು ಮಾಡಿಕೊಂಡ ತೀರ್ಮಾನವು ಅತ್ಯಂತ ಆಶ್ಚರ್ಯವಾದದ್ದು.

ಆ ದುಷ್ಟಹುಡುಗರು ಮಾಡಿದ್ದನ್ನೆಲ್ಲಾ ಸಮೀಪದಲ್ಲಿದ್ದುಕೊಂಡು ನೋಡಿದ ಇನ್ನೊಬ್ಬ ಹುಡುಗನು ಬಹಳ ಭಯಪಟ್ಟು ಜಾಗ್ರತೆಯಾಗಿ ಮನೆಗೆ ಓಡಿಹೋಗಿ ಈ ದುಃಖಕರವಾದ ವರ್ತಮಾನವನ್ನು ತಿಳಿಸಿದನು. ತಂದೆತಾಯಿಗಳು ಬಂದು ಆ ರಾತ್ರಿಯೆಲ್ಲಾ ಹುಡುಕಿದಾಗ್ಯೂ ಅವರ ಮಗುವಿನ ಶವವು ಮಾರನೆ ಪ್ರಾತಃಕಾಲದ ವರೆಗಂತೂ ಸಿಕ್ಕಲಿಲ್ಲ. ಅವನ ಅಕಾಲ ಮರಣವನ್ನು ಕುರಿತು ಕೇಳಿದವರೆಲ್ಲರೂ ಸತ್ಯಕ್ಕಾಗಿ ಮರಣವನ್ನು ಹೊಂದಿದ ಮಹಾ ಭಕ್ತರೊಳಗೆ ಇವರ್ಸನನು ಒಬ್ಬನಾಗಿದ್ದಾನೆಂದು ಗೋಳಾಡಿದರು.

೧. ಇವರ್ಸನೆಂಬ ಆ ಹುಡುಗನ ಸತ್ಯವು ಅವನ ಆಪತ್ತಿಗೆ ಒದಗಲಿಲ್ಲ. ಇದು ನಿಜವೇ. ಹಾಗಾದರೆ ಸತ್ಯವು ತಿರಸ್ಕಾರಾರ್ಹವಾದೀತೆ? ಸತ್ಯಕ್ಕಾಗಿ ಈ ಲೋಕದಲ್ಲಿ ಅನೇಕಾನೇಕ ಜನರು ಪ್ರಾಣತ್ಯಾಗ ಮಾಡುವದರಿಂದ ಅದರ ಬೆಲೆಯು ಅತಿಯಾದದ್ದೆಂದೇ ಸಿದ್ಧಾಂತವಾಗುತ್ತದೆ. ಪರಂತು ಸತ್ಯವು ತನ್ನನ್ನು ಆಶ್ರಯಿಸಿದವರನ್ನು ಕಾಪಾಡಿದೆಯೆಂದು ಅನೇಕ ದೃಷ್ಟಾಂತಗಳನ್ನು ಕೊಡಬಹುದು. ಇಲ್ಲದಿದ್ದರೆ ಸತ್ಯವೇ ಜಯ ಎಂಬ ನಾಣ್ಣುಡಿಯು ಹುಟ್ಟೀತೆ? ಕೆಲವು ವೇಳೆ ಸತ್ಯವು ಆಪತ್ತಿಗೆ ಒದಗದೆ ಅಕಾಲ ಮರಣಕ್ಕೆ ಕಾರಣವಾದಾಗ್ಯೂ ಹಾಗೆ ಸತ್ತವರ ಕೀರ್ತಿಯು ಆಚಂದ್ರಾರ್ಕವಾಗಿದ್ದು ಅನೇಕರಿಗೆ ಸುಪ್ರೇರಣೆಯನ್ನು ಕೊಡುವಂತೆ ಮಾಡಿರುವದರಿಂದ ಸತ್ಯವನ್ನು ಅನುಸರಿಸಬೇಕೆಂಬ ಉದ್ದೇಶವು ಸಾರ್ಥಕವಾಗುವದಕ್ಕೆ ಆಸ್ಪದವಾಗುತ್ತದೆಯಷ್ಟೆ. ಪ್ರಾಪಂಚಿಕ ಸುಖಕ್ಕೆ ಸಹಾಯಕವಾದ ಸತ್ಯಕ್ಕಿಂತ ಸರ್ವಜನೋಪಯೋಗಿಯಾದಂಥ ಮತ್ತು ಪಾರಮಾರ್ಥಿಕ ಸುಖವನೀಯತಕ್ಕಂಥ ಸತ್ಯವೇ ಅತಿಪ್ರಿಯವಾದದ್ದಲ್ಲವೇ? ಸತ್ಯಕ್ಕಾಗಿ ಹೊಂದಿದ ಮರಣ ಅನರ್ಥವಾಗುವದಿಲ್ಲವೆಂಬುದಕ್ಕೆ ಕ್ರೈಸ್ತ ಮತಸ್ಥಾಪಕರಾದ ಕ್ರೀಸ್ತುಸ್ವಾಮಿಯ ಮರಣವೇ ಬಹು ಘನವಾದ ಮತ್ತು ಎದುರಿಸಕೂಡದ ದೃಷ್ಟಾಂತವಾಗಿದೆ. ಆತನು ಸತ್ತಾಗ ಆತನ ಶತ್ರುಗಳು—ಕ್ರೀಸ್ತನು ಸತ್ತುಹೋದನು. ಆತನನ್ನು ನಂಬಿದವರೆಲ್ಲರೂ ಆತನ ಸಂಗಡಲೇ ನಿರ್ನಾಮವಾದರು. ಆತನ ಬೋಧನೆಯೂ ನಾಶವಾಯಿತು ಎಂದು ಯೋಚಿಸಿದರು. ಆದರೆ ಬಹು ಕೊಂಚ ಕಾಲದಲ್ಲೇ ಹನ್ನೊಂದು ಮಂದಿಯಾಗಿದ್ದ ಆತನ ಶಿಷ್ಯವರ್ಗವು ಸಾವಿರಾರು ಮಂದಿಯಾದರು. ಈಗ ಲಕ್ಷೋಪಲಕ್ಷವಾಗಿದ್ದಾರೆ. ಇನ್ನೂ ಹೆಚ್ಚುತ್ತಿದ್ದಾರೆ.

೨. ಇವರ್ಸನನ ಹಿಂಸಕರಿಗೆ ದೇವರು ಸುಬುದ್ಧಿಯನ್ನು ಕೊಡಬಾರದಾಗಿತ್ತೋ! ದುಷ್ಟರಿಗೆ ಸುಬುದ್ಧಿಯುಂಟಾಗಲೆಂದು ದೇವರು ಸುಪ್ರೇರಣೆಯನ್ನು ಕೊಡುತ್ತಾನೆಂಬುವದು ಸತ್ಯ. ಆದಾಗ್ಯೂ ಮನುಷ್ಯನಿಗೆ ಸ್ವಾತಂತ್ರ್ಯವಿರುವದರಿಂದ ಅವನು ದೇವರ ಸುಪ್ರೇರಣೆಯನ್ನೇ ತಿರಸ್ಕಾರ ಮಾಡುವವನಾಗುತ್ತಾನೆ. ಇದು ಬಹು ದುಃಖಕರವಾದ ವಿಷಯವಾದರೂ ಲೋಕದಲ್ಲಿ ನಿತ್ಯವೂ ನಡೆಯುತಕ್ಕ ಕಾರ್ಯವಾಗಿದೆ. ದೇವರು ಯಾಕೆ ಮನುಷ್ಯನಿಗೆ ಸ್ವಾತಂತ್ರ್ಯವನ್ನು ಕೊಡಬೇಕು ಎಂದು ಹೇಳುವದಕ್ಕಾದೀತೇ? ಮಡಕೆಯು ಕುಂಬಾರನಿಗೆ ನನಗೆ ಹೀಗೆ ಯಾಕೆ ಮಾಡಿದಿ? ಎಂದು ಪ್ರಶ್ನಿಸುವದಕ್ಕೆ ಅಧಿಕಾರವುಂಟೆ? ಮನುಷ್ಯನು ತನ್ನ ಬುದ್ಧಿಗೆ ಮೀರಿದ ವಿಷಯವನ್ನು ತಿಳಿಯಲಪೇಕ್ಷಿಸುವದು ಶುದ್ಧ ಮೂಢತನವಾಗಿದೆ. ಮನುಷ್ಯರಿಗೆ ಸ್ವಾತಂತ್ರ್ಯ ಯಾಕೆ ಇರಬೇಕೆಂದು ಕೇಳುವವರಿಗೆ ಕೈ ಕಾಲುಗಳು ಯಾಕೆ ಇರಬೇಕು? ಕಣ್ಣು ಮೂಗು ಯಾಕೆ? ಇಂಥ ಪ್ರಶ್ನೆಗಳಿಂದ ಯಾವ ಪ್ರಯೋಜನವೂ ಆಗಲಾರದು. ಮುಖ್ಯವಾಗಿ ಮನುಷ್ಯನಿಗೆ ಸ್ವಾತಂತ್ರ್ಯವನ್ನು ತಪ್ಪಿಸಿದರೆ ಅವನು ಸಹ ಕಲ್ಲು ಮಣ್ಣಿನ ಹಾಗೆ ಜಡಪದಾರ್ಥನಾಗುವನಲ್ಲವೇ? ಇದು ಮನುಷ್ಯನಿಗೆ ಘನವಾಗಿರುವದೇ? ಅದಕ್ಕಿಂತ ಆ ಸ್ವಾತಂತ್ರ್ಯವನ್ನು ಸದ್ವಿನಿಯೋಗ ಮಾಡಿ ನಿತ್ಯನನ್ನೇ ಅವಲಂಬಿಸುವದು ಮನುಷ್ಯನು ಈ ಲೋಕದಲ್ಲಿ ಬಾಳುವದಕ್ಕೆ ಸಾರ್ಥಕವಾಗಿರುವದಲ್ಲವೇ?

೩. ಇವರ್ಸನಂಥ ಸತ್ಯವಂತರೇ ಸಾವಿರಗಟ್ಲೆ ಹೆಚ್ಚಲೆಂದರೆ ಎಲ್ಲರೂ ಸತ್ಯಕ್ಕೋಸ್ಕರ ಪ್ರಾಣವನ್ನು ಕಳಕೊಳ್ಳಬೇಕೆಂಬುವ ಅಭಿಪ್ರಾಯವಲ್ಲ. ಒಂದು ವೇಳೆ ಸತ್ಯಕ್ಕಾಗಿ ಪ್ರಾಣವನ್ನು ಕೊಡಬೇಕಾದ ಸಂದರ್ಭ ಬಂದರೆ ಸತ್ಯವನ್ನು ಬಿಡುವದಕ್ಕಿಂತ ಪ್ರಾಣವನ್ನು ಬಿಡುವದೇ ಉತ್ತಮವೆಂದು ಯೋಚಿಸಿ ನಡೆಯುವ ಸತ್ಯವಂತರು ಹೆಚ್ಚಲೆಂಬುವದೇ ತಾತ್ಪರ್ಯ. ಇಂಥವರು ನಮ್ಮ ದೇಶಕ್ಕೆ ಬಹು ಅಗತ್ಯವಾಗಿದ್ದಾರೆಂಬುವದು ನಿಜವೋ? ಸುಳ್ಳೋ? ಸತ್ಕಾರ್ಯವನ್ನು ಹೊಗಳುವದು ಸುಲಭ, ಅದನ್ನು ಸಾಗಿಸುವದು ಬಹು ಕಷ್ಟ. ಕ್ಷಾಮ ಪೀಡಿತರಾದ ಜನಗಳಿಗೆ ದ್ರವ್ಯ ಸಹಾಯ ಮಾಡುವದು ಒಳ್ಳೇ ಕಾರ್ಯವೆಂದು ಹೇಳುವದು ಸುಲಭ. ಅದರ ವಿಷಯದಲ್ಲಿ ಕಲ್ಲೆದೆಯನ್ನೂ ಕರಗಿಸತಕ್ಕ ವಾಕ್ಚಾತುರ್ಯದಿಂದ ಉಪನ್ಯಾಸಗಳನ್ನಾದರೂ ಮಾಡಬಹುದು. ಆದರೆ ಅಂಥ ಸಹಾಯಕ್ಕೆ ತನ್ನ ಜೇಬಿನ ಬಾಯಿಯನ್ನು ಬಿಚ್ಚಿ ಧನಸಹಾಯವನ್ನು ಯಾರಾದರೂ ಕೊಡುವರೇ? ಒಂದು ವೇಳೆ ಒಬ್ಬನು ಕ್ಷಾಮಪೀಡಿತನಾದವನ ಸಂಕಟವನ್ನು ನೋಡಲಾರದೆ ತನ್ನ ಅನ್ನದಲ್ಲಿ ಅರ್ಧವನ್ನು ಕೊಟ್ಟು ಬಿಟ್ಟರೆ ಅವನನ್ನು ಹುಚ್ಚನೆಂದು ಕರೆಯಬಹುದೇ? ಇಂಥ ದಾತೃಗಳು ಲೋಕದಲ್ಲಿ ಹೆಚ್ಚಲಿ ಎಂದರೆ ಎಲ್ಲರೂ ಉಪವಾಸವಾಗಿರಲಿ ಎಂದು ಅರ್ಥವಾದೀತೇ? ಆದರೆ ದೇವರ ಕಟ್ಟಳೆಯನ್ನು ಮೀರುವದಕ್ಕಿಂತ ಸಾಯುವದೇ ಉತ್ತಮವೆನ್ನುವದಕ್ಕೆ ಯಾವ ಸಂದೇಹವೂ ಇಲ್ಲ. ಯಾಕೆಂದರೆ ದೇವರ ಕಟ್ಟಳೆಯನ್ನು ಮೀರಿದರೆ ಮನುಷ್ಯನ ಮನಸ್ಸಮಾಧಾನವೂ ಸುಖವೂ ನಾಶವಾಗುತ್ತವೆ. ಹೀಗೆ ಬಾಳುವದಕ್ಕಿಂತ ಸತ್ತು ನೆಟ್ಟಗೆ ದೇವರ ಸನ್ನಿಧಾನವನ್ನು ಸೇರುವದು ಉತ್ತಮವೆಂದು ಪರಿಷ್ಕಾರವಾಗಿ ತಿಳಿಯುತ್ತದೆ. ಹೀಗಿರುವದರಿಂದ ನಮ್ಮ ದೇಶದಲ್ಲಿ ಸತ್ಯವೇ ನಿಶ್ಶೇಷವೆಂಬೂ ಸ್ವಪ್ರಯೋಜನಾಪೇಕ್ಷೆಯು ಶ್ಲಾಘನೀಯವಾದದ್ದಲ್ಲ ಎಂಬೂ ತಿಳಿದು ದೇಶದ ಶ್ರೇಯಸ್ಸನ್ನೇ ಕೋರುವಂಥ ಮಹಾನುಭಾವರು ಲಕ್ಷ ಸಂಖ್ಯೆಯಾಗಿ ಹೆಚ್ಚಲೆಂದೂ ಅಪೇಕ್ಷಿಸುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

ರೆವಿನ್ಯೂ ವಿಚಾರಗಳು.

ಕೆಲವು ಮೆಂಬರುಗಳು—ರೈತರು ಕಣಗಳಲ್ಲಿ ಬೆಳೆಯನ್ನೂ ಹುಲ್ಲು ಸೌದೆ ಮೊದಲಾದ್ದನ್ನೂ ಕುಂಟಿಟ್ಟುಕೊಳ್ಳುತ್ತಾರೆ. ಅದಕ್ಕೆಲ್ಲಾ ಅವರಿಗೆ ಇನ್ನೆಲ್ಲೂ ಸ್ಥಳವಿಲ್ಲ. ಸರ್ಕಾರದವರು ಇಂಥಾ ಕಣಗಳ ಮೇಲೆ ತೆರಿಗೆ ಹಾಕಿದಾರೆ. ಇದನ್ನು ವಜಾ ಮಾಡಿಕೊಡಬೇಕು.

ದಿವಾನರವರು—ಈ ಕಂದಾಯವನ್ನು ಬಿಡಬಹುದೆಂತಲೇ ರೆವಿನ್ಯೂ ಕಮೀಷನರೇ ಮೊದಲಾದವರು ಅಭಿಪ್ರಾಯ ಪಡುತ್ತಾರೆ. ಇದು ಚರ್ಚೆಯಲ್ಲಿದೆ. ಮುಂದೆ ನೋಡೋಣ.

ಹರಿಹರದ ಮ॥ ಶ್ರೀನಿವಾಸರಾಯರು—ರೈತರು ಸ್ವಂತ ಲಾಗವಡಿನಿಂದ ಕಟ್ಟಿಕೊಂಡಿರುವ ಕಟ್ಟೆಗಳ ಕೆಳಗೆ ತರೀ ಫಸಲು ಮಾಡಿಕೊಂಡರೆ ಅಂಥಾ ಜಮೀನಿಗೆ ತರೀ ಕಂದಾಯವನ್ನೂ ಇದರ ಮೇಲೆ ಲೋಕಲ್ ಸೆಸ್ಸು, ನೀರಾವರಿ ಕಂದಾಯಗಳನ್ನೂ ಹಾಕಿ ವಸೂಲ್ಮಾಡುತ್ತಾರೆ. ಆದ್ದರಿಂದ ಅಂಥಾ ತರೀ ಕಂದಾಯವನ್ನು ವಜಾ ಮಾಡಿಕೊಡಬೇಕು; ಇದು ಸಾಧ್ಯವಲ್ಲವಾದರೆ ಲೋಕಲ್ ಸೆಸ್ಸು ನೀರಾವರಿ ಕಂದಾಯಗಳನ್ನಾದರೂ ತೆಗೆದುಹಾಕಬೇಕು.

ದಿವಾನರವರು—ಇಂಥಾದ್ದು ಎಲ್ಲಿ ನಡೆದಿದೆ?

ಮೆಂಬರು—ನಾಗೇನಹಳ್ಳಿಯಲ್ಲಿ ಹಾಕಿದಾರೆ. ಸ್ವಾಮಿ.

ದಿವಾನರವರು—ಎಷ್ಟು ವರುಷದಿಂದ ಈ ರೀತಿ ವಸೂಲ್ಮಾಡುತ್ತಿದ್ದಾರೆ?

ಮೆಂಬರು—ಮೂವತ್ತು ಸಂವತ್ಸರಗಳಿಂದಲೂ ವಸೂಲಾಗುತ್ತಿದೆ.

ದಿವಾನರವರು—ಖುಷ್ಕಿ ರೇಟಿಗಿಂತ ಜಾಸ್ತಿಯಾಗಿಲ್ಲವೆಂದು ಸರ್ವೆ ಕಮೀಷನರು ಹೇಳುತ್ತಾರೆ. ಆದರೂ ಅಂಥಾ ಜಮೀನ್ ಮಾಡುವವರು ಅಪೀಲ್ ಮಾಡಿಕೊಳ್ಳಲಿ.

ಹೊಳಲ್ಕೆರೆ ಮ॥ ವೆಂಕಟಸುಬ್ಬಯ್ಯನವರು—ಬಾವಿ ಆಸರೆಯಿಂದಾಗುವ ತರಿ ಬಾಗಾಯತಿಗೆ ಕಂದಾಯ ಕಮ್ಮಿ ಆಗದೆ. ಮಳೆ ಆಸರೆಯಿಂದಾಗತಕ್ಕದ್ದಕ್ಕೆ ಆಗಿಲ್ಲ. ಇದನ್ನು ಕಮ್ಮಿ ಮಾಡಿಕೊಡಬೇಕು.

ಡೆಪ್ಯುಟಿ ಕಮೀಷನರ ಅಭಿಪ್ರಾಯ—ಈ ಪ್ರಾರ್ಥನೆಯು ಸಹಜವಾದದ್ದೆಂದು ಕಾಣುತ್ತದೆ. ಸರ್ಕಾರಿ ನೀರನ್ನು ಅಂಥಾ ಜಮೀನಿಗೆ ಕೊಡುವುದಿಲ್ಲ.

ದಿವಾನರವರು—ಇಂಥಾದ್ದು ಬಹಳ ಅಪರೂಪವೆಂತಾ ಹೇಳುತ್ತಾರೆ. ಒಳ್ಳೇದು, ವಿಚಾರಿಸಿ ನೋಡೋಣ.

ತುಂಕೂರು ಮ॥ ದಾವೂದ್ ಖಾನ್ ಸಾಹೇಬರು—ರೈತರ ಸ್ವಂತ ಕೆರೆ ಕೆಳಗೆ ತರೀ ಫಸಲು ಮಾಡಿಕೊಂಡರೆ ಅಂಥಾದ್ದಕ್ಕೂ ನೀರಾವರಿ ಕಂದಾಯವನ್ನು ಹಾಕಿ ವಸೂಲ್ಮಾಡಬೇಕೆಂದು ರೂಲಸು ಮಾಡಿದೆ. ಸರ್ಕಾರದವರು ಅಂಥಾ ಕೆರೆ ಕೆಳಗೆ ರಿಪೇರಿ ಕಾಮಗಾರಿ ಮಾಡಿಸಿಕೊಡುವುದಾದರೆ ಈ ನೀರಾವರಿಯನ್ನು ಹಾಕಬಹುದು. ಹಾಗೆ ಮಾಡಿಸುವುದಿಲ್ಲವೆಂದು ಹೇಳುವಪಕ್ಷಕ್ಕೆ ಆ ನೀರಾವರಿಯನ್ನೇ ವಜಾ ಮಾಡಿಬಿಡಬೇಕು.

ದಿವಾನರವರು—ಇದರಿಂದ ಅನ್ಯಾಯವೇನೂ ಇಲ್ಲ.

ತುಂಕೂರು ಮ॥ ಶಾಸಲ ಶಿವಣ್ಣಗೌಡರು—ಖುಷ್ಕಿ ಜಮೀನಿಗೆ ನೀರುಸರದಿ ದಾಖಲಾದ ಮೇಲೆ ಆಕಾರ ಬಾಂದುಗಳ ಬದಲಾವಣೆ ಮಾಡುವಷ್ಟರೊಳಗಾಗಿ ರೈತನು ಅಂಥಾ ಜಮೀನಿಗೆ ನೀರು ಹತ್ತುವುದಿಲ್ಲವೆಂತಲೋ ನೀರು ಸಾಕಾಗುವುದಿಲ್ಲವೆಂತಲೋ ಅರ್ಜಿ ಕೊಟ್ಟು, ನೀರು ಸರದಿಯನ್ನು ವಜಾ ಮಾಡಿಕೊಡಬೇಕೆಂದು ಕೇಳಿಕೊಂಡರೆ ಅಂಥಾದ್ದನ್ನು ತೆಗೆದುಹಾಕಬೇಕು.

ಡೆಪ್ಯುಟಿ ಕಮೀಷನರ ಅಭಿಪ್ರಾಯ—ನೀರುಸರದಿಯನ್ನು ವಿಧಾಯಕ ಮಾಡುವುದಕ್ಕಿಂತ ಮೊದಲೇ ತಕ್ಕಷ್ಟು ನೀರಿದೆಯೇ, ಆ ನೀರು ಆ ಜಮೀನಿಗೆ ಹಾಯುವುದೇ ಎಂಬೀ ಸಂಗತಿಯನ್ನು ಪರಿಷ್ಕಾರವಾಗಿ ಗೊತ್ತು ಮಾಡಲಾಗುತ್ತೆ.

ದಿವಾನರವರು—ಈ ವಿಷಯದಲ್ಲಿ ಸರ್ವತ್ರ ಅನ್ವಯಿಸುವ ಹುಕುಂ ಕೊಡಲಾಗುವುದಿಲ್ಲ. ಡೆಪ್ಯುಟಿ ಕಮೀಷನರಿಗೆ ರಿಯಾಯಿತಿ ತೋರಿಸುವ ಅಧಿಕಾರವಿದೆ. ಅವರನ್ನೇ ಅರ್ಜಿ ಬರೆದು ಕೇಳಿಕೊಳ್ಳಿ.

ಕೊಪ್ಪದ ಮ॥ ಕಿಗ್ಗ ಚನ್ನಕೇಶವರಾಯರು—ಕಂದಾಯ ಬಾಕಿಗೋಸ್ಕರ ಗ್ರಾಮಾಧಿಕಾರಿಗಳು ಜಮೀನಿಗೆ ಬಹಳ ಕಮ್ಮಿ ಕ್ರಯ ಕಟ್ಟುತ್ತಾರೆ. ಕ್ರಯದ ಮೊಬಲಗು ಆ ಜಮೀನಿನ ಕಂದಾಯಕ್ಕಿಂತಲೂ ಬಹಳ ಕಡಿಮೆಯಾಗುವುದು. ಹೀಗೆ ಮಾಡದೆ ಜಮೀನಿಗೆ ನ್ಯಾಯವಾದ ಬೆಲೆ ಕಟ್ಟುವ ಪಕ್ಷದಲ್ಲಿ ಅಷ್ಟು ಕ್ರಯವುಳ್ಳ ಭೂಮಿಯನ್ನು ಬಿಕರಿ ಮಾಡುವುದಕ್ಕೇ ಕಲೆಕ್ಟರಿಗೆ ಅಧಿಕಾರವಿರುವುದಿಲ್ಲ. ಅವರು ತಮ್ಮ ಅಧಿಕಾರಕ್ಕೊಳಪಡಲೆಂದು ಹಾಗೆ ಮಾಡುತ್ತಾರೆ. ಇಂಥಾ ಸಂಗತಿಗಳನ್ನು ಎಷ್ಟುಸರ್ತಿ ಅಮಲ್ದಾರರಿಗೆ ಅರ್ಜಿ ಮಾಡಿ ಕೇಳಿಕೊಂಡಾಗ್ಯೂ ಅವರು ತಮ್ಮ ಶೇಕ್‌ದಾರರ ಮಾತನ್ನು ನಂಬುತ್ತಾರೆಯೇ ವಿನಾ ರೈತರ ಹೇಳಿಕೆಯನ್ನು ಕೇಳುವುದಿಲ್ಲ. ಹೀಗೆ ಮಾಡೋಣದರಿಂದ ಬಡ ರೈತ ಪ್ರಜೆಗಳು ಕೆಟ್ಟುಹೋಗುತ್ತಾರೆ. ಸಿವಿಲ್ ಕೋರ್ಟು ಹರಾಜಿನಲ್ಲಿ ಜಮೀನಿನ ಕ್ರಯವನ್ನು ಕಂದಾಯದ ಇಪ್ಪತ್ತರಷ್ಟಕ್ಕೆ ಹೆಚ್ಚಿಸಿರುವುದು ಮಾತ್ರ ಕಂಡಿದೆ. ಆದಕಾರಣ ಗ್ರಾಮಾಧಿಕಾರಿಗಳು ಕಟ್ಟುವ ಕ್ರಯ ಸಹಜವಾದದ್ದೇ ಅಲ್ಲವೇ ಎಂದು ಮಹಲ್ತು ಅಮಲ್ದಾರರು ನೋಡಿದ ಹೊರತು ಜಮೀನುಗಳನ್ನು ಹರಾಜು ಹಾಕಕೂಡದೆಂದು ಹುಕುಂ ಅಪ್ಪಣೆ ಆಗಬೇಕು.

ಡೆಪ್ಯುಟಿ ಕಮೀಷನರ ಅಭಿಪ್ರಾಯ—ಅವರಲ್ಲದ್ರು ಅಂಥಾ ಪ್ರತಿ ಒಂದು ಜಮೀನನ್ನೂ ಹೋಗಿ ನೋಡಲಿಕ್ಕಾಗುವದಿಲ್ಲ. ನಷ್ಟಪಟ್ಟ ರೈತರು ಡೆಪ್ಯುಟಿ ಕಮೀಷನರವರಲ್ಲಿ ಅಪೀಲ್ ಮಾಡಿದರೆ ಅನುಕೂಲವಾಗುವುದು.

ದಿವಾನರವರು—ಅಂದಾಜು ಸರಿಯಾಗಿ ಮಾಡಬೇಕೆಂದು ಹುಕುಂ ಕೊಟ್ಟು ಒಂಬತ್ತು ವರುಷವಾಯಿತು. ಈಗಲೂ ಮತ್ತೆ ಹುಕುಂ ಕೊಡುತ್ತೇವೆ.

ಹೆಗ್ಗಡದೇವನಕೋಟೆ ಮ॥ ಲಕ್ಷ್ಮೀನಾರಣಪ್ಪನವರು—ಕಂದಾಯ ಬಾಕಿಗಾಗಿ ಖಾತೇದಾರನಿಗೆ ನೋಟೀಸ್ ಕೊಟ್ಟು, ಅದರಿಂದ ವಸೂಲಾಗದೆ ಹೋದಾಗ ಸರ್ಕಾರದವರು ಜಮೀನನ್ನು ಹರಾಜು ಹಾಕಿ, ಒಂದು ಪೈಗೆ ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಾರೆ. [illegible]ರುವಾಯು ಖಾತೇದಾರನ ಹಕ್ಕನ್ನು ಹರಾಜು ಹಾಕುವರು. ಆದ್ದರಿಂದ ಖಾತೇದಾರನಿಗೂ ಅನುಭವದಾರನಿಗೂ ತುಂಬಾ ನಷ್ಟವಾಗುತ್ತದೆ. ಇದಕ್ಕೆ ಬದಲಾಗಿ ಖಾತೇದಾರನಿಗಾಗಲಿ ಅನುಭವದಾರನಿಗಾಗಲಿ ನೋಟಿಸ್ ಕೊಟ್ಟ ಮೇಲೆ ಜಮೀನ್ ಹರಾಜು ಹಾಕುವುದಕ್ಕೆ ಮುಂಚೆ ಚರಸ್ವತ್ತನ್ನು ಜಪ್ತಿ ಮುಂತಾದ್ದು ಮಾಡಿದರೆ ಉತ್ತಮ.

ಡೆಪ್ಯುಟಿ ಕಮೀಷನರ ಅಭಿಪ್ರಾಯ—ಅಂಥಾ ಸಂದರ್ಭದಲ್ಲಿ ಜಮೀನು ಸರ್ಕಾರಕ್ಕೆ ಸೇರಿಹೋಗುತ್ತೆ. ಭೋಗ್ಯ ಆಧಾರದಾರರಿದ್ದರೆ ಕಂದಾಯ ಕೊಟ್ಟು ತಮ್ಮ ಹೆಸರಿಗೆ ಮಾಡಿಸಿಕೋಬಹುದು.

ದಿವಾನರವರು—ಮೊದಲು ಚರಜಿಂದಗಿಯನ್ನು ಜಪ್ತಿ ಮಾಡುವುದು ಯೋಗ್ಯವಲ್ಲವೆಂದು ಹೋದ ವರುಷವೇ ಚರ್ಚೆ ಆಗಿ ತೀರ್ಮಾನವಾಗಿದೆ. ಇಂಥಾ ಬದಲಾವಣೆ ಅವಶ್ಯವಿಲ್ಲ.

ಕೆಲವು ಮೆಂಬರುಗಳು—ಒಬ್ಬ ಜಮೀನ್ದಾರನ ಖಾತೆಯಲ್ಲಿರುವ ಜಮೀನುಗಳನ್ನು ಅನೇಕರು ಅನುಭವಿಸುವುದುಂಟು. ಇವರ ಪೈಕಿ ಯಾರು ಕಂದಾಯ ಕೊಡದೆಹೋದರೂ ಉಳಿದವರ ಜಮೀನೂ ಜಪ್ತಿ ಹರಾಜಾಗುತ್ತದೆ. ಇದನ್ನು ತಪ್ಪಿಸುವುದಕ್ಕೆ ಖುಷ್ಕಿ ೩ ಎಕರೆ, ತರೀ ೨೦ ಗುಂಟೆ, ಬಾಗಾಯತು ೧೦ ಗುಂಟೆ, ಈ ರೀತಿ ಜಮೀನುಗಳನ್ನು ವಿಂಗಡಿಸಿ. ನಂಬರು ಹಾಕಿಕೊಡಬೇಕು.

ದಿವಾನರವರು—ಬೊಂಬಾಯಿ ಗವರ್ನಮೆಂಟಿನವರು ಜಮೀನು ಪೋಡು ಮಾಡುವ ವಿಷಯದಲ್ಲಿ ಚರ್ಚೆ ಮಾಡುತ್ತಿದ್ದಾರೆ. ಅವರ ತೀರ್ಮಾನವೇನಾಗುವುದೋ ನೋಡೋಣ. ಹೋದ ವರುಷ ಈ ವಿಚಾರವಾಗಿ ಡೆಪ್ಯುಟಿ ಕಮೀಷನರುಗಳ ಅಭಿಪ್ರಾಯವನ್ನು ಕೇಳಿದ್ದಕ್ಕೆ ಅವರು ಹಾಗೆ ಮಾಡಬಾರದೆಂದು ಹೇಳುತ್ತಾರೆ. ಇದನ್ನು ಪರ್ಯಾಲೋಚನೆ ಮಾಡುತ್ತೇವೆ.

ಮ॥ ನಾಡಿಗ ಗುರುರಾಯರು—ರೆವಿನ್ಯೂ ಹರಾಜಿನಲ್ಲಿ ಜಮೀನು ಕೊಂಡುಕೊಂಡರೆ ಅಂಥಾ ಜಮೀನನ್ನು ೬ ತಿಂಗಳು ಅಥವಾ ೧ ವರುಷಗಳಲ್ಲಿ ಬಿಟ್ಟು ಬಿಡಬೇಕಾಗುತ್ತೆ. ಡೆಪ್ಯುಟಿ ಕಮೀಷನರು ಹರಾಜು ರದ್ದು ಮಾಡುತ್ತಾರೆ. ಕೊಂಡುಕೊಂಡವನು ನಿರರ್ಥಕವಾಗಿ ತನ್ನ ಹಣವನ್ನು ಹಾಕಿರಬೇಕು. ಅವನ ಹಣಕ್ಕೆ ಬಡ್ಡಿ ಇಲ್ಲ, ಜಮೀನೂ ಅವನಿಗೆ ನಿಲ್ಲುವುದಿಲ್ಲ. ಇದರಿಂದ ರೆವಿನ್ಯೂ ಹರಾಜಿನಲ್ಲಿ ಬೀಟು ಮಾಡುವುದೇ ಕಮ್ಮಿ ಆಗುತ್ತದೆ. ಆದಕಾರಣ ಕ್ರಮವಾಗಿ ರೆವಿನ್ಯೂ ಹರಾಜಿನಲ್ಲಿ ಕೊಂಡುಕೊಂಡಿರುವುದನ್ನು ಡೆಪ್ಯುಟಿ ಕಮೀಷನರು ಯಾವ ಕಾರಣದಿಂದಲೂ ರದ್ದು ಮಾಡಕೂಡದೆಂದು ಹುಕುಂ ಅಪ್ಪಣೆ ಆಗಬೇಕು.

ಡೆಪ್ಯುಟಿ ಕಮೀಷನರ ಅಭಿಪ್ರಾಯ—ಹರಾಜನ್ನು ರದ್ದು ಮಾಡುವುದು ಅಪರೂಪ. ರದ್ದು ಮಾಡಿದರೂ ಅದಕ್ಕೆ ಸರಿಯಾದ ಕಾರಣಗಳಿದ್ದೇ ಇರುತ್ತವೆ.

ಭಾರ್ಗವರು—ಈ ವಿಷಯದಲ್ಲಿ ಬೀಟು ಮಾಡಿ ಹಣ ಕಟ್ಟಿದವ ನಾದರೂ ಸ್ವಲ್ಪ ಪ್ರತಿಫಲ ಕೊಡಿಸತಕ್ಕ ವಿಚಾರವನ್ನು ಈ ಸಿಡರ್ ಕೌನ್ಸಲರನ್ನೂ ರೆವಿನ್ಯೂ ಕಮಿಷನರನ್ನೂ ಮೂ ಷ್ಟು ಕಮಿಷನರುಗಳನ್ನೂ ಕೇಳಿದ್ದಕ್ಕೆ ಅವರೆಲ್ಲಾ ಏನಾದ ಪ್ರತಿಫಲ ಸಿಕ್ಕುವಂತೆ ಮಾಡುವುದು ಅವಶ್ಯವೆಂದು ಹೇಳಿದಾ ಒಳ್ಳೇದು, ಯೋಚಿಸುತ್ತೇವೆ.

ಶ್ರೀನಿವಾಸಪುರದ ಮೇ॥ ಚಿನ್ನಪ್ಪನವರು—ಈಗ ಪ್ರತಿವರುಷ ಮಳೆ ಸರಿಯಾಗಿ ಆಗುವುದೂ ಕೆರೆಗಳು ತುಂಬುವುದ ? ಪ್ರೂ ಸಂಭವ ಇಲ್ಲ. ಹತ್ತು ವರುಷಗಳಲ್ಲಿ ನಾಲ್ಕು ವರುಷಗ ಮಾತ್ರ ಬೆಳೆ ಆಗುತ್ತೆ. ಮತ್ತು ಎರಡು ವರುಷ ಕಾಲುಪಾಲು ಆಗುತ್ತದೆ. ಬಾಕಿ ನಾಲ್ಕು ವರುಷ ಸಂಪೂರ್ಣವಾಗಿ ಬೆಳೆ ಸಿಕ್ಕದೆ ಜಮೀನು ಬಂಜರು ಬಿದ್ದು ಅಥವಾ ಫೀಕ್‌ಸುಕ್ತೆ ಇಂಥಾ ಸಾಲುಗಳಲ್ಲಿ ತರಿ ಕಂದಾಯದಾರರಾದ ನಾವು ಸರ್ಕಾರಕ್ಕೆ ದಂಡತೆತ್ತು, ಜಮೀನ್ ರಾಜೀನಾಮೆ ಕೊಡಲಾ ಇದ್ದ ಆಸ್ತಿಯನ್ನೆಲ್ಲಾ ಹೋಗಲಾಡಿಸಿಕೊಂಡು, ಹೀನಸ್ಥಿ ಬರುತ್ತೇವೆ ಒಟ್ಟು ಲೆಖ್ಖ ನೋಡಿದರೆ ತರೀ ಕಂದಾಯ ದಾರಿರುವವರೂ ಅವರ ಕುಟುಂಬದವರೂ ಈ ಶೀಮೆಯಲ್ಲಿ ೧೦ ಲಕ್ಷ ಪ್ರಜೆ ಇರಬಹುದೆಂದು ತೋರುತ್ತೆ. ಇಷ್ಟು ನ್ನು ಕಾಪಾಡತಕ್ಕದ್ದು ಮುಖ್ಯಕರ್ತವ್ಯವಾಗಿ ಎಣಿಸಿ, ಮ ಶೀಮೆಯಲ್ಲಿ ಜಾರೀಲಿ ಇರುವ ರೀತ್ಯಾ ತರಿ ಬಂಜರು ಫೀ ಗೆ ರಿಮಿಷನ್ ಕೊಡುವ ಪದ್ಧತಿ ಜಾರೀಲಿ ತರಬೇಕೆಂದು ಸುತ್ತೇವೆ. ಇತರ ಜಮೀನುಗಳು ಈ ದೇಶದಲ್ಲಿ ವಿಶೇಷ ಬಾಳುವುದಕ್ಕೆ ಯೋಗ್ಯತೆ ಇಲ್ಲದ್ದಾಗಿವೆ ಬಂಜರು, ಫೀ ಗೆ ರಿಮಿಷನ್ ಕೊಡುವ ವಿಚಾರದಲ್ಲಿ ಯೋಗ್ಯವಾದ ಕ್ರ ತರೀ ಕಂದಾಯದಾರರು ಭ್ರಷ್ಟರಾಗುವು ದೇ ಕಾರಣಭೂತವಾಗಿದೆ ಇದು ಪರಿಹಾರವಾಗದೆ ಇರುವ ವಿಚಾ ೧೦ ಲಕ್ಷ ರೈತಪ್ರಜೆಗಳು ನಾಶವಾಗುವುದಕ್ಕೆ ಇನ್ನ್ಯಾವ ವೂ ಅವಶ್ಯವಿಲ್ಲ. ನಂತರವರು ಈ ದೇಶದಲ್ಲಿ ಪದವಿ ಸಿದ್ದಕ್ಕೆ ಇಷ್ಟು ಜನರನ್ನು ಕಾಪಾಡಿ ಕೀರ್ತಿಹೊಂದಲೀ ರಿಮಿಷನ್ ಕೊಡುವ ಅಧಿಕಾರ ೧೮೯೬ ವರೆಗೆ ಡೆಪ್ಯು ಕಮೀಷನರಿಗೂ ಇತ್ತು. ಈಚೆಗೆ ಈ ಹಕ್ಕನ್ನು ಗವರ್ನಮೆಂಟಿನ ವಹಿಸಿಕೊಂಡಿದ್ದಾರೆ ಕಾರ್ತೀಕ ಸಾಗುವಳಿ ಫಸಲು ಎ ಸಿಕ್ಕೋ ಅಷ್ಟಕ್ಕೆ ದಾಖಲೆಯಂತೆ ಕಂದಾಯ ವಸೂಲ್ ಸು, ವೈಶಾಖ ಸಾಗುವಳಿ ಫಸಲನ್ನು ರೈತರಿಗೆ ಬಿಟ್ಟುಕೊ ಕೋಲಾರ, ತುಂಕೂರು. ಬೆಂಗಳೂರು ಡಿಸ್ಟ್ರಿಕ್ಟ್‌ಗ ವಿಶೇಷವಾಗಿರುತ್ತದೆ. ಪಾವಂವರು ರಿಮಿಷನ್ ರೂಲನ್ನು ರೂ ಮಾಡಿ ಬಿಡಲಾಯಿಸಿಕೊಡಬೇಕು.

ಭಾರ್ಗವರು [ಸರ್ವೆ ಕಮಿಷನ್ ರವರನ್ನು ಕರೆದು ಅವರ ಬಹಳ ಜೊತ್ತು ಆಲೋಚನೆ ಮಾಡಿ]—ಸಾಮಾನ್ಯವಾಗಿ ನ್ನು ಬದಲಾಯಿಸಲಾಗುವುದಿಲ್ಲ. ಯಾವದಾದರೂ ಒಂದು ಹಾಗಾದರೆ ವಿಚಾರಣೆ ಮಾಡಲಾಗುತ್ತೆ. ಒಳ್ಳೇದು, ನೀವು ವಿಷಯವನ್ನು ಎಷ್ಟು ಶ್ರದ್ಧೆಯಿಂದಲೂ ಆಸಕ್ತಿಯಿಂದಲೂ ರೋ ನಾವೂ ಅಷ್ಟು ಶ್ರದ್ಧೆಯಿಂದಲೂ ಪರಿಷ್ಕಾರನಾಗಿಯೂ ರುತ್ತೇವೆ

ದೇವನಹಳ್ಳಿ ಮೇ॥ ಲಕ್ಷ್ಮಿನಾರಣಪ್ಪನವರು—ಕಂದಾ ಪೋಲೀಸ್ ಫಸ್ಲುವರಿಯಿಂದ ನಾಲ್ಕು ಖಿಸ್ತು ಮಾಡಿದೆ ಅದ ಪ್ಪಿಸಿ ಆರು ಕಿಸ್ತು ಮಾಡಿಕೊಡಬೇಕು

ಭಾರ್ಗವರು—ಇದು ಸಾಧ್ಯವಾಗಲಾರದು

ಕಾನಹಳ್ಳಿ ಮೇ॥ ರಾಮಯ್ಯನವರು—ರಾಸುಭಾಂಗರ ಲೆ ವಿದಿ ತಖ್ತೆಯಲ್ಲಿ ಹಣ ಪಾವತಿ ಆದದ್ದನ್ನು ಮಾತ್ರ ದಾಖಲ್ ಕ್ತಾರೆ ಹಣ ಕೊಟ್ಟವನ ಹೆಸರನ್ನೂ ಬರೆದುಕೊಡುವಂತೆ ಆಗಬೇಕು.

ಷ್ಟಿ ಕಮಿಷನರ ಅಭಿಪ್ರಾಯ—ಈ ರೀತಿ ಮಾಡಬಹುದು ತೋರುತ್ತೆ

ಭಾರ್ಗವರು—ಹೆಸರು ಬರೆಯುವ ವಿಷಯದಲ್ಲಿ ಬಾಧಕವೇ ತೋರುವುದಿಲ್ಲ. ಆದರೂ ವಿಚಾರಿಸಿ ಹುಕುಂ ಕೊಡುತ್ತೇವೆ

ಗಿರಿ ಮೇ॥ ಚಿಕ್ಕೇಗೌಡರು—ರೈತರು ದರಖಾಸ್ತು, ರಾಜೀ ವರ್ಗ ರಾಜೀನಾಮೆಗಳನ್ನು ಅಮಲ್ದಾರ್ರಿಗೆ ಒಪ್ಪಿಸಬೇಕು. ಶೇಕ್ದಾರರಿಂದ ಸ್ಥಳೀಯ ಅಮಲು ತಿಳಿದು ಅವರ ಮೂ ಹುಕುಂ ಕೊಡಲು ಬಹಳ ಸಾವಕಾಶವಾಗುವುದು. ಆದಕ್ಕೆ ಗಿ ಅಂಥಾ ಅರ್ಜಿಗಳನ್ನು ಮೊದಲೇ ಶೇಕ್ದಾರರು ತೆಗೆದು ಬೇಕೆಂತಲೂ ಸ್ಥಳೀಯ ಅಮಲನ್ನು ಕೂಡ್ಲೆ ಬರೆದು ಸಲ ಅಮಲ್ದಾರರಿಗೆ ರಿಪೋರ್ಟ್ ಮಾಡಬೇಕೆಂತಲೂ ಕೊಡಬೇಕು.

ಭಾರ್ಗವರು—ನೀವು ಹೇಳುವಂತೆ ಶೇಕ್ದಾರರಿಗೆ ಆ ಅಧಿಕಾ ಕೊಡಲಾಗುವುದಿಲ್ಲ

ಬಾಗೇಪಲ್ಲಿ ಮೆಂಬರು—ಶಿಕಸ್ತಾದ ಕೆರೆಗಳ ಕೆಳಗಿರುವ ನ್ನು ಹೆಚ್ಚು ಖುಷ್ಕಿ ಕಂದಾಯದ ದರಕ್ಕೆ ಸಾಗುವಳಿಗೆ ಬೇಕು

ಭಾರ್ಗವರು—ಅನಾದಿಯಿಂದ ಬಂದಿರತಕ್ಕ ಪದ್ಧತಿಯನ್ನು ಬದಲಾಯಿಸಲಾಗುವುದಿಲ್ಲ.

ನದ ಮೇ॥ ಲಕ್ಷ್ಮಿನರಸಿಂಹಾಚಾರ್ರು ಮತ್ತು ಕುಂತೂರು ಪ್ಪದ್ ಖಾನ್ ಸಾಹೇಬರು—ಒಳಗೆರೆಗಳಲ್ಲಿ ಖುಷ್ಕಿ ಫಸಲು ಬೆಳೆಯುವುದಕ್ಕೆ ಆಕ್ಷೇಪಣೆ ಕೊಡುತ್ತಾರೆ. ಇದು ಸರಿಯಲ್ಲ ಬೆಳೆ ಕೊಡಕೊಡದೆಂದು ಅಪ್ಪಣೆ ಮಾಡಬೇಕು.

ಭಾರ್ಗವರು—ಇದು ಸಾರ್ವತ್ರಿಕವಾಗಿ ನಡೆಯುತ್ತಿರುವಂತೆ ವರು. ಇದನ್ನು ಸರಿಯಾಗಿ ವಿಚಾರಿಸಿ ರಿಪೋರ್ಟ್ ಕೊಡ ಎಲ್ಲಾ ಡೆಪ್ಯುಟಿ ಕಮಿಷನರುಗಳಿಗೆ ಬರೆಯುತ್ತೇವೆ.

ಮೇ॥ ಹುಚ್ಚೇಗೌಡರು—ಗೋಮಾಳಗಳನ್ನು ಕಂದಾ ಕೊಡುತ್ತಾರೆ. ಇದನ್ನು ತಪ್ಪಿಸಬೇಕೆಂದು ಬೇಡುತ್ತೇನೆ.

ದಿವಾನರವರು—ಹಾಗೆ ನಿರ್ಬಂಧ ಮಾಡಲಾಗದು; ಸಂಗತ್ಯನುಸಾರ ಅಪ್ಪಣೆ ಮಾಡುತ್ತೇವೆ.

ಶ್ರೀನಿವಾಸಪುರದ ಮೇ॥ ಚಿನ್ನಪ್ಪನವರು—ಈ ವರುಷ ಸಾರ್ವತ್ರಿಕವಾಗಿ ಮಳೆ ಕಡಿಮೆ. ಗೋಕಾಯಿಗಳು ಮೇವಿಲ್ಲದೆ ಲಯವಾಗುವವು ಈ ವರುಷದ ಮಟ್ಟಿಗೆ ಸರ್ಕಾರಿ ಬಂಜರಿನಲ್ಲಿ ಹುಲ್ಲುಬನ್ನಿ ಇಲ್ಲದೆ ದನಗಳ ಮೇವಿಗೆ ಅವಕಾಶಮಾಡಿಕೊಟ್ಟರೆ ತಮಗೆ ತುಂಬಾ ಪುಣ್ಯಬರುತ್ತೆ.

ದಿವಾನರವರು—ಸಂಗತಿ ವಿಚಾರಿಸಿ ಹುಕುಂ ಕೊಡುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ವಿಜಯನಗರದಲ್ಲಿ ಆ ಸಂಸ್ಥಾನವನ್ನಾಳಿದ ಮಹಾರಾಜರುಗಳ ಭಾವಪ್ರತಿಮೆಗಳನ್ನು ಕಳೆದ ಶನಿವಾರ ಮೇ॥ ಡುರೇಲ್ ಸಾಹೇಬರವರು ಬಹು ವಿಶೇಷವಾದ ಉತ್ಸವಪೂರ್ವಕವಾಗಿ ಪ್ರತಿಷ್ಟೆ ಮಾಡಿದರು

*****

ಅಹಮದಾಬಾದಿನಲ್ಲಿ ೧೫,೦೦೦ ಮಗ್ಗಗಳುಳ್ಳ ಒಂದು ನೆಯ್ಗೆ ಕಾರ್ಖಾನೆಯನ್ನು ಕೆಲವು ಮಂದಿ ಯೂರೋಪ್ಯರು ಸೇರಿ ಸ್ಥಾಪಿಸುವವರಾಗಿದಾರೆ ಈ ಕಾರ್ಖಾನೆಯ ಮೂಲ ಧನಕ್ಕೆ ೮೦ ಲಕ್ಷ ರೂಪಾಯಿ ಕೂಡಿಸಿದಾರೆ.

*****

ಹೊಸ ವೈಸ್‌ರಾಯ್ ಲಾರ್ಡ್ ಮಿಂಟೋಯವರು ಪತ್ನಿ ಮೂರು ಮಂದಿ ಪುತ್ರಿಯರ ಸಮೇತ ಕಳೆದ ಶನಿವಾರ ಬೊಂಬಾಯಿ ಪಟ್ಟಣಕ್ಕೆ ಬಂದು ಇಳಿದು, ಲಾರ್ಡ್ ಕರ್ಜನರವರಿಂದ ಅಲ್ಲೇ ಛಾರ್ಜು ವಹಿಸಿಕೊಂಡು, ಕಲ್ಕತ್ತಾಪಟ್ಟಣಕ್ಕೆ ದಯಮಾಡಿದರು

*****

ಲಾಹೋರ್ ಪಟ್ಟಣದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಸತ್ಕರಿಸುವುದಕ್ಕೆ ನಾನಾ ವಿಶೇಷೋತ್ಸವಗಳನ್ನು ಏರ್ಪಾಡುಮಾಡಿದಾರೆ ಸುತ್ತು ಮುತ್ತಿನ ರಾಜರುಗಳೆಲ್ಲಾ ಅವರ ಭೇಟಿಗೆ ದಯಮಾಡುವರು. ಆದಕಾರಣ ಅಲ್ಲಿನ ಮನೆ ಬಂಗಲೆಗಳ ಬಾಡಿಗೆದರವು ೧೫ ದಿನಕ್ಕೆ ೧,೦೦೦ ರೂಪಾಯಿ ಕೊಟ್ಟರೂ ಸಿಕ್ಕದಂತೆ ಹೆಚ್ಚಿರುತ್ತದೆ

*****

ದಕ್ಷಿಣ ಕನಡಾ ಜಿಲ್ಲಾ ಹುಬ್ಬನಕಟ್ಟೆಯಿಂದ ಕೊತಿಯಾಲ್ ಪ್ಯಾಲಿಗೆ ಹೋಗುವ ಮಾರ್ಗದಲ್ಲಿರುವ ಮೇ॥ ಪಂಡಿತರಾಮೇಶ್ವರ್ಯನವರ ಮನೆಯಲ್ಲಿ ಕಳೆದ ತಿಂಗಳ ಕಡೇ ವಾರದಲ್ಲಿ ಭಾರಾಕಾಗದ, ನೋಟು, ಬೆಳ್ಳಿ ಬಂಗಾರ ಮುಂತಾದ ಸುಮಾರು ೪೦,೦೦೦ ರೂಪಾಯಿನ ಆಸ್ತಿಯು ಕಳುವಾಯಿತು ಪೋಲೀಸಿನವರಿಗೆ ಕಳ್ಳರು ಸಿಕ್ಕಿಬಿದ್ದಿರುವರು

*****

ಸಿಲೋನ್ (ಲಂಕಾ) ದ್ವೀಪದ ಸಮುದ್ರ ತೀರದೊಳಗೆ ಮುತ್ತಿನ ಚಿಪ್ಪುಗಳನ್ನು ತೆಗೆದುಕೊಳ್ಳುವುದಕ್ಕೆ ಲಂಡನ್ ಪಟ್ಟಣದ ಒಂದು ಕಂಪನಿಯವರು ಪ್ರತಿ ವರುಷವೂ ಸಿಲೋನ್ ಗವರ್ನಮೆಂಟ್‌ಗೆ ೨ ಲಕ್ಷ ರೂಪಾಯಿನಂತೆ ಕೊಡುವುದಾಗಿ ತಿಳಿಸಿದ್ದರು ಈಗ ಅವರು ವರುಷಕ್ಕೆ ಮೂರು ಲಕ್ಷ ರೂಪಾಯಿನಂತೆ ಕೊಡುತ್ತೇವೆಂದು ಹೇಳಿಕಳುಹಿಸಿದಾರೆ ಗವರ್ನಮೆಂಟಿನವರು ಆ ಕಂಪನಿಯವರಿಗೆ ಕಂಟ್ರಾಕ್ಟು ವಹಿಸಬಹುದೆಂದು ಕಾಣುವುದು.

*****

ಬರ್ಮಾ ಅಧಿಪತ್ಯಕ್ಕೆ ಸೇರಿದ ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ಈ ವರುಷ ಪ್ರವಾಹಗಳ ದೆಸೆಯಿಂದ ೩,೯೭,೩೭೩ ಎಕರೆ ಜಮೀನಿನ ಫಸಲು ಕೊಚ್ಚಿಹೋಯಿತು ಇನ್ನು ನಾಲ್ಕು ಡಿಸ್ಟ್ರಿಕ್ಟುಗಳೊಳಗೆ ದನಗಳಿಗೆ ಅಂಟುರೋಗ ಬಂದು ಸಾವಿರಗಟ್ಲೆ ಮೃತಪಟ್ಟಕಾರಣ ಜಮೀನು ಉಳುವುದಕ್ಕೆ ದನಗಳಿಲ್ಲದೆ ೪,೯೭,೨೪೦ ಎಕರೆ ಭೂಮಿ ಪಾಳು ಬಿದ್ದಿದೆ. ಈ ಎರಡು ಕಾರಣಗಳಿಂದ ಆ ಪ್ರಾಂತ್ಯ ಈ ಸಲ ಬತ್ತದ ಬೆಳೆಯು ಸ್ವಲ್ಪ ಕಡಿಮೆಯಾಗುವುದು.

*****

ಹಂಪೆ, ಗಂಡಿಕೋಟಾಲ್, ತಿರುಮಾಲೆ, ಈ ಸ್ಥಳಗಳಲ್ಲಿರುವ ಚರಿತ್ರಾರ್ಹವಾದ ಪ್ರಾಚೀನ ಕಟ್ಟಡಗಳನ್ನೆಲ್ಲಾ ದುರಸ್ತು ಮಾಡಿ ಕಾಪಾಡಬೇಕೆಂದು ಇಂಡಿಯಾ ಗವರ್ನಮೆಂಟಿನವರು ೧೩,೪೦೮ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಈ ಹಣದಲ್ಲಿ ಮದರಾಸ್ ಗವರ್ನರವರು ೭,೪೦೮ ರೂಪಾಯನ್ನು ಹಂಪೆಗೂ, ಗಂಡಿಕೋಟಾಲ್ ದೇವಸ್ಥಾನಗಳಿಗೆ ೫,೦೦೦ ರೂಪಾಯಿ, ತಿರುಮಲೆ ಜೈನ ದೇವಸ್ಥಾನಕ್ಕೆ ೧,೦೦೦ ರೂಪಾಯನ್ನೂ ವಿನಿಯೋಗಿಸಿ ಕಾಮಗಾರಿ ನಡಿಸುವರು.

*****

ಪೂನಾ ಪಟ್ಟಣದಲ್ಲಿರುವ ಸಸೂನ್ ಆಸ್ಪತ್ರೆಯಲ್ಲಿ ಯೂರೋಪಿಯನ್ ರೋಗಿಗಳಿಗೆ ಉಪಚಾರ ಮಾಡುವುದಕ್ಕೆ ಅವಕಾಶ ಸಾಲದೆ ಇರುವುದನ್ನು ನೋಡಿ ಮಿ॥ ಜೇಕಬ್ ಸಸೂನ್‌ರವರು ಅದನ್ನು ಬದಾವಣೆ ಮಾಡಬೇಕೆಂದೂ ಯೂರೋಪಿಯನರಿಗೆ ಪ್ರತ್ಯೇಕವಾದ ಆಸ್ಪತ್ರೆ ಕಟ್ಟಿಸಬೇಕೆಂದೂ ತೀರ್ಮಾನಿಸಿ, ಈ ಹೊಸ ಕಟ್ಟಡದ ಕಾಮಗಾರಿಗೆ ಎರಡು ಲಕ್ಷರೂಪಾಯಿ ಕೊಟ್ಟಿದಾರೆ. ಇದನ್ನು ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸರಿನ ಮೇಲೆ ಕಟ್ಟುವರೆಂದು ತಿಳಿದು ಬಂದಿದೆ

*****

ರಂಗೂನ್ ಪಟ್ಟಣದಲ್ಲಿ ಕೆಲವು ದೇಶೀಯ ವರ್ತಕರು ಸೇರಿ ಜಹಜುಗಳ ಟ್ರಸ್ಟ್ ಕಂಪನಿಯೊಂದನ್ನು ಸ್ಥಾಪಿಸಿದಾರೆ ಈ ಕಂಪನಿಯ ಮೂಲಧನ ೧೦ ಲಕ್ಷ ರೂಪಾಯಿಗಳನ್ನು ಒಂದು ಲಕ್ಷ ಷೇರುಗಳು ಮಾಡಿ, ಷೇರು ೧ಕ್ಕೆ ೧೦ ರೂಪಾಯಿನಂತೆ ವಿಕರಿ ಮಾಡಿ, ಹಣ ಕೂಡಿಸುತ್ತಿದಾರೆ. ಷೇರುಗಳನ್ನು ಹಿಂದುಸ್ಥಾನದ ಮತ್ತು ಬರ್ಮಾದೇಶೀಯ ಪ್ರಜೆಗಳಿಗಲ್ಲದೆ ಅನ್ಯರಿಗೂ ಕೊಡಕೂಡದೆಂದು ಗೊತ್ತುಮಾಡಿರುವರು. ಈ ಕಂಪನಿಯ ಜಹಜುಗಳಲ್ಲಿ ಜನರು ವಿಶೇಷವಾಗಿ ಪ್ರಯಾಣಮಾಡಲಾರಂಭಿಸಿದಾರೆ.

*****

ಪ್ರಿನ್ಸ್ ಆಫ್ ವೇಲ್ಸ್‌ರವರು ಬೊಂಬಾಯಿ ಪಟ್ಟಣದಿಂದ ರೈಲು ಹತ್ತಿ ಮುಂದಕ್ಕೆ ತೆರಳಿದ ಕೂಡಲೆ ಬೊಂಬಾಯಿ ಪಟ್ಟಣದ ರೈಲ್ವೆ ಆಫೀಸ್ ಕಟ್ಟಡಗಳಿಗೆ ಬೆಂಕಿ ಬಿದ್ದು ಬಹು ಭಾಗ ಸುಟ್ಟು ಬಿದ್ದು ಹೋದವು. ಸುಮಾರು ಹತ್ತು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ನಷ್ಟವಾಗಿದೆ. ಪ್ರಿನ್ಸ್ ಆಫ್ ವೇಲ್ಸ್‌ರವರು ಈ ವರ್ತಮಾನವನ್ನು ಕೇಳಿ, ಹಿಂದಿನ ರಾತ್ರಿ ತಮಗೋಸ್ಕರ ಮಾಡಿದ ದೀಪೋತ್ಸವದ ದೆಸೆಯಿಂದ ಈ ಅನಾಹುತವಾಯಿತೆಂದೂ ಅದಕ್ಕಾಗಿ ತಮಗೆ ತುಂಬಾ ವ್ಯಸನ ಉಂಟಾಗಿರುವುದೆಂದೂ ರೈಲ್ವೆ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.

*****

ಕೊಚ್ಚಿ ಸಂಸ್ಥಾನದ ರಾಜಧಾನಿಯಾದ ಯರ್ನಾಕುಳಂ ಪಟ್ಟಣದಲ್ಲಿ ಕಳೆದ ವಾರ ಸೆಂಟ್ರಲ್ ಜೈಲಿನೊಳಗೆ ಬಂದೀವಾನರು ದಂಗೆಯೆದ್ದು ಜೈಲ್ ಸೂಪರಿಂಟೆಂಡೆಂಟ್ ಮೇ॥ ಮಾರ್ಷಲ್‌ರವರನ್ನು ಬಹಳವಾಗಿ ಹೊಡೆದರು. ಅವರ ತಲೆಗೆ ಪೂರಾ ಏಟು ಬಿದ್ದಿದೆ ಕೂಡಲೆ ಪೋಲೀಸಿನವರನ್ನೂ ನಾಯರ್ ಸೈನಿಕರನ್ನೂ ಜೈಲಿಗೆ ಕರೆಸಿಕೊಂಡರು ಅವರು ಬಂದೀವಾನರ ಮೇಲೆ ಗುಂಡು ಹೊಡೆದು, ಹತ್ತಾರು ಮಂದಿ ಖೈದಿಗಳಿಗೆ ಗಾಯಮಾಡಿ, ೩೦ ಮಂದಿಯನ್ನು ದಸ್ತಗಿರಿಮಾಡಿ, ದಂಗೆಯನ್ನು ಶಮನಮಾಡಿದ್ದಾರೆ. ದಿವಾನರೇ ಮೊದಲಾದ ಅಧಿಕಾರಿಗಳು ಜೈಲಿಗೆ ಹೋಗಿ ತನಿಖೆ ಮಾಡಿದರು.

*****

ಪೂರ್ವ ಬಂಗಾಳ ಎಂಬ ಹೊಸ ಅಧಿಪತ್ಯಕ್ಕೆ ಸೇರಿದ ಬಾರಿಸಾಲ್ ಪಟ್ಟಣದಲ್ಲಿ ಸ್ವಲ್ಪ ಮಟ್ಟಿಗೆ ಪ್ರಜಾ ನೆಮ್ಮದಿ ಕೆಟ್ಟಿರುವಂತೆ ಕಾಣುತ್ತದೆ ದುಷ್ಟ ಜನರು ಗುಂಪು ಸೇರಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನೂ ಇನ್ನೂ ಕೆಲವು ಯೂರೋಪಿಯನ್ ಅಧಿಕಾರಿಯನ್ನೂ ಅವಮಾನಪಡಿಸಿ ಹೊಡೆದರೆಂದೂ, ವ್ಯಾಪಾರ ವಿಚಾರಕ್ಕೆ ಆತಂಕವನ್ನುಂಟುಮಾಡಿದಾರೆಂದೂ, ಇಂಥಾ ದೊಂಬೀ ಜನಗಳಿಗೆ ಬುದ್ಧಿ ಕಲಿಸುವುದಕ್ಕೂ ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೂ ಸರ್ಕಾರದವರು ಕಲ್ಕತ್ತೆಯಿಂದ ೧೦೦ ಮಂದಿ ಗೂರ್ಖಾ ಮಿಲ್ಟೇರಿ ಪೋಲೀಸಿನವರನ್ನು ಅಲ್ಲಿಗೆ ಕರೆಸಿಕೊಂಡಿದಾರೆಂದೂ ತಂತೀ ವರ್ತಮಾನ ಬಂದಿದೆ

*****

ಮಧ್ಯ ಹಿಂದುಸ್ಥಾನಕ್ಕೆ ಸೇರಿದ ಧಾರ್ ಎಂಬ ದೇಶೀಯ ಸಂಸ್ಥಾನದಲ್ಲಿ ಕುಷ್ಟ ರೋಗಿಗಳಿಗೆ ಚಿಕಿತ್ಸೆ ಮಾಡುವ ಒಂದು ಹೊಸದಾದ ಭಾರೀ ಆಸ್ಪತ್ರೆಯನ್ನು ಅಲ್ಲಿ ಬ್ರಿಟಿಷ್ ರೆಸಿಡೆಂಟರವರು ಕಳೆದವಾರ ಪ್ರತಿಷ್ಟೆಮಾಡಿದರು. ಅಮೇರಿಕ ಮಿಷನ್ ಪಾದ್ರಿಗಳು ಬಹಳ ಶ್ರಮಪಟ್ಟು ತಮ್ಮ ಶೀಮೆಯಿಂದ ಹಣ ತರಿಸಿಕೊಂಡು ಬಂದು ಈ ಆಸ್ಪತ್ರೆಯನ್ನು ಕಟ್ಟಿ ನಡಿಸುತ್ತಿದಾರೆ. ಇಂಥಾ ಪುಣ್ಯ ಕೆಲಸಕ್ಕೆ ಆ ಪ್ರಾಂತ್ಯದ ದೇಶೀಯ ರಾಜರುಗಳೆಲ್ಲಾ ತಲಾ ಅಷ್ಟಷ್ಟು ದ್ರವ್ಯಸಹಾಯ ಮಾಡುವುದಾಗಿ ವಾಗ್ದಾನಮಾಡಿರುವರು. ಕುಷ್ಟರೋಗಿಗಳನ್ನು ಅಲ್ಲೇ ಇಟ್ಟು ಅನ್ನವಸ್ತ್ರ ಕೊಟ್ಟು ಔಷಧ ಚಿಕಿತ್ಸೆ ಮಾಡುತ್ತಾರೆ

*****

ಹಿಂದುಸ್ಥಾನದ ದೇಶೀಯ ಪ್ರಜೆಗಳು ವ್ಯಾಪಾರ, ದೇಶಾಟನೆ ಅಥವಾ ಜೀವನೋಪಾಯ ಮೊದಲಾದ ಕಾರಣಗಳಿಗಾಗಿ ಆಸ್ಟ್ರೇಲಿಯಾ ದ್ವೀಪಕ್ಕೆ ಹೋದರೆ ಅಲ್ಲಿನ ಸರ್ಕಾರದವರು ಸೇರಿಸಿಕೊಳ್ಳದೆ ಬಹು ಕಠಿನವಾದ ರೂಲುಗಳನ್ನು ಮಾಡಿಕೊಂಡಿದ್ದರು. ಈ ಸಂಗತಿಯು ಇಂಗ್ಲಿಷ್ ರಾಜ್ಯಭಾರದ ಕ್ರಮಗಳಿಗೆ ಕುಂದಕವಾದುದೆಂದು ಅನೇಕ ದೇಶವತ್ಸಲರೂ ಅಧಿಕಾರಿಗಳೂ ಆ ಗವರ್ನಮೆಂಟಿಗೆ ತಿಳಿಸಿ ಅವರ ಸಂಗಡ ಚರ್ಚೆ ಮಾಡುತ್ತಿದ್ದರು. ಈಗ ಆಸ್ಟ್ರೇಲಿಯಾ ಸರ್ಕಾರದವರು ಹಿಂದುಸ್ಥಾನದ ಮತ್ತು ಜಪಾನಿನ ಪ್ರಜೆಗಳ ವಿಷಯದಲ್ಲಿ ಅಂಥಾ ನಿರ್ಬಂಧವೇನೂ ಇಡಕೂಡದೆಂದು ತೀರ್ಮಾನಮಾಡಿದಾರೆ.

*****

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಲ್ ಕಮಿಷನರು ಅಲ್ಲಿನ ಕವಾಡಿಗರ ಮನೆಗಳನ್ನೂ ಅವರ ದನಗಳ ಕೊಟ್ಟಿಗೆಗಳನ್ನೂ ನೋಡಿ ಬಹಳ ಕೊಳಕಾಗಿವೆ ಎಂತಲೂ ಇಂಥಾ ದನರಿಂದ ಪ್ರಜೆಗಳು ಕೊಂಡು ಉಪಯೋಗಿಸುವ ಹಾಲು ಬಹಳ ರೋಗಜನಕವಾಗಿದ್ದೀತೆನ್ನುವುದಕ್ಕೆ ಸಂಶಯವಿಲ್ಲವೆಂತಲೂ ಅವರ ಮನೆಗಳನ್ನೂ ದನಗಳ ಕೊಟ್ಟಿಗೆಗಳನ್ನೂ ಬಹಳ ಚೊಕ್ಕಟವಾಗಿಟ್ಟುಕೊಳ್ಳುವಂತೆಯೂ ಅದಕ್ಕಾಗಿ ಮ್ಯುನಿಸಿಪಾಲಿಟಿಯವರಿಂದ ಲೈಸೆನ್ಸು ಪಡೆಯುವಂತೆಯೂ ಕಾನೂನು ಮಾಡಿ ಕ್ರಮಪಡಿಸಬೇಕೆಂತಲೂ ರಿಪೋರ್ಟ್ ಮಾಡಿದರು. ಮೆಂಬರುಗಳೆಲ್ಲಾ ಈ ವಿಷಯವು ಬಹು ಮುಖ್ಯವಾದದ್ದೆಂದು ತೀರ್ಮಾನಿಸಿದಾರೆ

*****

ಲಕ್ನೋ ಪಟ್ಟಣದಲ್ಲಿ ಪ್ರಿನ್ಸ ಆಫ್ ವೇಲ್ಸ್‌ರವರ ಹೆಸರಿನ ಮೇಲೆ ಒಂದು ಭಾರೀ ವೈದ್ಯ ವಿದ್ಯಾಶಾಲೆಯನ್ನೂ ವಿದ್ಯಾರ್ಥಿನಿಲಯವನ್ನೂ ಕಟ್ಟಿಸಿ ನಡಸಬೇಕೆಂದು ಅಲ್ಲಿನ ಪ್ರಜೆಗಳೂ ದೊಡ್ಡ ಮನುಷ್ಯರೂ ಪ್ರಯತ್ನಪಟ್ಟಿದ್ದಾರೆ. ಈ ಉದ್ದೇಶಕ್ಕೆ ಇದುವರೆಗೆ ೫ ಲಕ್ಷಕ್ಕಿಂತಲೂ ಹೆಚ್ಚಾಗಿಯೇ ಚಂದಾ ಕೂಡಿದೆ ಲೆಫ್ಟಿನೆಂಟ್ ಗವರ್ನರವರು ಪ್ರಜೆಗಳ ಮುಖಂಡರನ್ನು ಕರೆಸಿಕೊಂಡು, ಈಗ ಕೂಡಿಸಿರುವ ಚಂದಾ ಆ ಉದ್ದೇಶಕ್ಕೆಲ್ಲಾ ಸಾಕಾಗಲಾರದು; ಹತ್ತು ಇಲ್ಲವೇ ಎಂಟು ಲಕ್ಷ ರೂಪಾಯಿಯಾದರೂ ಈ ತಿಂಗಳು ಮುಗಿಯುವಷ್ಟರೊಳಗಾಗಿ ಕೂಡುವುದಾದರೆ ಇಂಥಾ ವಿದ್ಯಾಶಾಲೆಗೆ ಅಸ್ತಿಭಾರ ಹಾಕುವಂತೆ ನಾವು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಬೇಡಿಕೊಳ್ಳಬಹುದಾಗಿದೆ ಎಂದು ಅಪ್ಪಣೆಕೊಡಿಸಿದರು.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ದೇವಪಟದಲ್ಲಿ ಶಾಕಿ ಎಂಬ ವೇಶ್ಯಾಸ್ತ್ರೀಯೂ ಗಾಜೂ ಎಂಬುವವನೂ ಸೇರಿ ಗೋಕಳ ಎಂಬ ಮೈನರ್ ಹುಡುಗಿಗೆ ಕಠಾರಿ ಪ್ರಸ್ತ ಮಾಡಿದರು. ಸರ್ಕಾರದವರು ಅವರಿಬ್ಬರನ್ನೂ ಹಿಡಿದು, ಆ ಹುಡುಗಿಯನ್ನು ದುರ್ವ್ಯಾಪಾರಕ್ಕೆ ತರಬೇಕು ಮಾಡುತ್ತಾರೆಂದು ಮೊಕದ್ದಮೆ ಹೂಡಿದರು. ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿ, ರುಜುವಾತಾಗಲಿಲ್ಲವೆಂದು ಹೇಳಿ ಮೊಕದ್ದಮೆಯನ್ನು ವಜಾಮಾಡಿಬಿಟ್ಟರು ಆದರ ಮೇಲೆ ಸರ್ಕಾರದವರು ಬೊಂಬಾಯಿ ಹೈಕೋರ್ಟಿನಲ್ಲಿ ಅಪೀಲ್ ಮಾಡಿದರು ಇಬ್ಬರು ಜಡ್ಜಿಗಳು ಫಿರ್ಯಾದಿ ಮತ್ತು ಅಪರಾಧಿಗಳ ಕಡೆ ವಕ್ಕೀಲುಗಳನ್ನು ಕೇಳಿ, ರಿಕಾರ್ಡೆಲ್ಲಾ ಪರಿಶೋಧನೆ ಮಾಡಿ, ಅಪರಾಧಿಗಳಿಬ್ಬರಿಗೂ ತಲಾ ಆರು ತಿಂಗಳಂತೆ ಕಠಿಣ ಸಜಾ ವಿಧಿಸಿರುತ್ತಾರೆ.

****

ಬರ್ಮಾ ಅಧಿಪತ್ಯದಲ್ಲಿ ದುಷ್ಟರೂ ಕೊಲೆಗಾರರೂ ಬಹಳ ಮಂದಿ ಇರುವಂತೆ ಕಾಣುತ್ತದೆ. ಕಳೆದ ೧೯೦೧ ರಲ್ಲಿ ವೈಸ್‌ರಾಯಿ ಲಾರ್ಡ್ ಕರ್ಜನರವರು ಮೌಲ್ಮೀನ್ ಪಟ್ಟಣಕ್ಕೆ ದಯಮಾಡಿದ್ದಾಗ ಅವರು ಹೋಗುವುದರ ಹಿಂದಿನ ದಿನ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸುಮಾರು ೧೧೦ ಜನ ಖದ್ದ ಚಾಳಿಯವರನ್ನು ಹಿಡಿದು ಬಂದೀಖಾನೆಯಲ್ಲಿ ಹಾಕಿಸಿದ್ದಲ್ಲದೆ ಸರಿಯಾದ ಜಾಮೀನು ತೆಗೆದುಕೊಂಡು ಸುಮಾರು ೨೦ ಮಂದಿಯನ್ನು ಬಿಟ್ಟಿದ್ದರು. ವೈಸ್‌ರಾಯಿಯವರು ಅಲ್ಲಿಂದ ವಾಪಸು ಹೋದ ಮೇಲೆ ಆ ಜನರನ್ನೆಲ್ಲಾ ಜೈಲಿನಿಂದ ಬಿಟ್ಟುಬಿಟ್ಟರು ಈಗ ಯುವರಾಜರವರು ಆ ಪ್ರಾಂತ್ಯ ದಯಮಾಡುವವರಾಗಿರೋಣದರಿಂದ ಆ ಪದ್ಧತಿಯನ್ನೇ ಈಗಲೂ ಅಧಿಕಾರಿಗಳು ಅನುಸರಿಸಿ ಜನರನ್ನು ಹಿಡಿದು, ಜೈಲಿನಲ್ಲಿ ಹಾಕುವರೋ ಏನೋ ನೋಡಬೇಕು

****

ಪೂರ್ವಬಂಗಾಳ ಮತ್ತು ಅಸಾಂ ಎಂಬ ಹೊಸ ಅಧಿಪತ್ಯದಲ್ಲಿ ಫ್ಲಿನೇಟ್ ಗವರ್ನರವರು ಢಕ್ಕಾ ಡಿವಿಜನ್ ಸ್ಕೂಲುಗಳ ಇನ್ಸ್‌ಪೆಕ್ಟರಿಗೆ ಹುಕುಂ ಕೊಟ್ಟಿರುವುದೇನೆಂದರೆ—ಸ್ಕೂಲು ಮತ್ತು ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಬಾಲಕರು ತಮ್ಮ ಕರ್ತವ್ಯಗಳನ್ನು ಬಿಟ್ಟು, ಸರ್ಕಾರದವರು ನಡಸುವ ಕಾರುಬಾರುಗಳ ವಿಚಾರಕ್ಕೆ ತಲೆಹಾಕುವುದು ಅವರಿಗೆ ಅಯೋಗ್ಯವಾಗಿರುತ್ತದೆ. ಆದಕಾರಣ ಕಾಲೇಜುಗಳ ಪ್ರಿನ್ಸಿಪಾಲರೂ ಸ್ಕೂಲುಗಳ ಹೆಡ್ ಮಾಸ್ಟರುಗಳೂ ಬಾಲಕರ ಮೇಲೆ ದರ್ಪವಿಟ್ಟು, ಅವರನ್ನು ತಹಬಂದಿಯಲ್ಲಿಟ್ಟುಕೊಂಡು, ಅವರು ವಿದ್ಯಾಸಂಪಾದನೆಯಲ್ಲೇ ಆಸಕ್ತರಾಗಿರುವಂತೆ ನೋಡಿಕೊಳ್ಳಬೇಕು. ಇದು ಸಾಧ್ಯವಲ್ಲದೆ ಹೋದರೆ ಅಂಥಾ ಸ್ಕೂಲು ಮತ್ತು ಕಾಲೇಜುಗಳಿಗೆ ಸರ್ಕಾರದವರು ಕೊಡತಕ್ಕ ಸಹಾಯದ್ರವ್ಯವನ್ನು ನಿಲ್ಲಿಸಬೇಕಾಗುವುದು, ಮತ್ತು ಅಂಥಾ ಬಾಲಕರಿಗೆ ಸರ್ಕಾರಿ ನೌಕರಿ ಯಾವದೂ ಸಿಕ್ಕಲಾರದೆಂದು ವಿಧಿಸಬೇಕಾಗುವುದು ಅಮಾರ್ಗದಲ್ಲಿ ಪ್ರವರ್ತಿಸತಕ್ಕ ಬಾಲಕರು ದೊಡ್ಡವರಾದಾಗ ಸತ್ಪ್ರಜೆಗಳೆನಿಸಿಕೊಳ್ಳುವುದಿಲ್ಲ ಎಂಬುದೇ

****

ಪೋರ್ಚುಗೀಸರಿಗೆ ಸೇರಿದ ಗೋವೆಯ ಬಳಿ ಇರುವ ಪೋಂಡಾ ಎಂಬ ಸ್ಥಳದಲ್ಲಿ ಸ್ಮಾರ್ತಸಾರಸ್ವತ ಬ್ರಾಹ್ಮಣರ ಮಠಾಧಿಪತಿಯಾಗಿದ್ದ ಶ್ರೀ ಆತ್ಮಾನಂದಸರಸ್ವತಿ ಸ್ವಾಮಿಗಳು ಕಳೆದ ೧೮೯೮ ನೆ ಡಿಸೆಂಬರಿನಲ್ಲಿ ಕಾಲಗತಿಯನ್ನೈದಿದರು ಅವರಿಗೆ ಪೋರ್ಚುಗೀಸ್ ಸರ್ಕಾರದವರು ೧೨೦ ರೂಪಾಯಿ ವರ್ಷಾಶನ ಕೊಡುತ್ತಿದ್ದರು ಅವರ ಕಾಲಾನಂತರ ಆ ಪೀಠಕ್ಕೆ ಶ್ರೀ ಪೂರ್ಣಾನಂದಸರಸ್ವತಿ ಯವರು ಸ್ವಾಮಿಗಳಾಗಿ ಆ ವರ್ಷಾಶನ ತಮಗೂ ಸಲ್ಲತಕ್ಕದ್ದೆಂದು ಅರ್ಜಿ ಬರೆದುಕೊಂಡರು ಅದಕ್ಕೆ ಪೋರ್ಚುಗೀಸ್ ಸರ್ಕಾರದವರು ಈ ಸ್ವಾಮಿಗಳು ಮೊದಲಿದ್ದವರ ಔರಸಪುತ್ರರಲ್ಲವಾದ್ದರಿಂದ ಅವರಿಗೆ ಆ ವರ್ಷಾಶನ ಸಲ್ಲತಕ್ಕದ್ದಲ್ಲವೆಂದು ಹುಕುಂಕೊಟ್ಟರು ಸ್ವಾಮಿಗಳು ಅಪೀಲ್ ಮಾಡಿಕೊಂಡು, ಸನ್ಯಾಸಿಗೆ ಮನೆ ಮಠ ಹೆಂಡತಿ ಮಕ್ಕಳು ಇರಕೂಡದೆಂತಲೂ ಯೋಗ್ಯರಾದ ಶಿಷ್ಯರಲ್ಲಿ ಒಬ್ಬನನ್ನು ಪೀಠಕ್ಕೆ ಅಭಿಷೇಕ ಮಾಡಬೇಕಾಗುವುದೆಂತಲೂ ಅದೇ ಪ್ರಕಾರ ತಮ್ಮನ್ನು ನೇಮಿಸಿರುತ್ತಾರಾದಕಾರಣ ಆ ಪೀಠಕ್ಕೆ ಸಲ್ಲತಕ್ಕ ವರ್ಷಾಶನವನ್ನು ಸರ್ಕಾರದವರು ಶಾಶ್ವತವಾಗಿ ನಡಿಸಿಕೊಂಡು ಬರಬೇಕೆಂತಲೂ ಕೇಳಿಕೊಂಡರು. ಪೋರ್ಚುಗೀಸ್ ರಾಜ್ಯದ ಮಂತ್ರಿಯವರು ಇದನ್ನೆಲ್ಲಾ ಪರಾಂಬರಿಸಿ, ಆ ಸ್ವಾಮಿಗಳಿಗೆ ವರ್ಷಾಶನವನ್ನು ಸಲ್ಲಿಸಬೇಕೆಂದು ಈಗ ಹುಕುಂ ಕೊಟ್ಟಿದ್ದಾರೆ.

****

ಕಳೆದ ಏಪ್ರಿಲ್ ೪ನೆ ತಾರೀಖಿನ ಬೆಳಗ್ಗೆ ಕಾಂಗ್ರಾ ಕಣಿವೆಯಲ್ಲಿ ಭೂಕಂಪ ಪ್ರಾಪ್ತವಾಗಿ ನಾನಾ ಅನಾಹುತಗಳು ನಡೆದವಷ್ಟೆ. ಸರ್ಕಾರದವರು ಈ ವಿಷಯದಲ್ಲಿ ಸಂಪೂರ್ಣವಾದ ರಿಪೋರ್ಟನ್ನು ಈಗತಾನೇ ಪ್ರಕಟಿಸಿದಾರೆ. ಇದರಿಂದ ತಿಳಿದುಬರುವ ಮುಖ್ಯ ಸಂಗತಿಗಳೇನೆಂದರೆ—ಈ ಭೂಕಂಪವು ಕಾಂಗ್ರಾ, ಪಾಲಂಪುರ, ಡೀರ, ಹಮೀರ್‌ಪುರ ಎಂಬೀ ತಹಶೀಲುಗಳೊಳಗೆ ೧,೦೦೦ ಚದರ ಮೈಲಿ ವಿಸ್ತಾರವಾದ ಪ್ರದೇಶದಲ್ಲಿ ವ್ಯಾಪಿಸಿ ೪೦೯ ಗ್ರಾಮಗಳಲ್ಲಿ ಪ್ರಾಣನಷ್ಟವನ್ನುಂಟುಮಾಡಿತು. ಇನ್ನು ಕೆಲವು ಪ್ರಾಂತ್ಯದಲ್ಲೂ ಕೆಲವು ಸ್ವತ್ತುಗಳು ಹಾಳಾದವು ಕೂಲು, ಲಾಹೋಲ್, ಸ್ಪಿತಿ, ಮೊದಲಾದ ೬,೩೪೪ ಚದರ ಮೈಲಿ ವಿಸ್ತಾರವುಳ್ಳ ಪ್ರದೇಶಗಳಲ್ಲೂ ಅನೇಕ ನಷ್ಟಗಳುಂಟಾಗಿರುತ್ತವೆ ಈ ಸುತ್ತಿನಲ್ಲಿ ಒಂದು ಲಕ್ಷ ಮನೆಗಳು ಬಿದ್ದು ನೆಲಸಮನಾದವು. ಇದುವರೆಗೆ ಗೊತ್ತಾಗಿರುವ ಲೆಕ್ಕಗಳ ಪ್ರಕಾರ ೨೦,೦೪೬ ಪ್ರಾಣಗಳು ಲಯವಾಗಿರುತ್ತವೆ. ಆ ಪ್ರಾಂತ್ಯದಲ್ಲಿದ್ದ ಸಮಸ್ತ ಟೀ ತೋಟಗಳೂ ಉದ್ಯೋಗವಸತಿಗಳೂ ಕಾರ್ಖಾನೆ ಬಂಗಲೆ ಯಂತ್ರ ಸಾಮಾನುಗಳ ಸಹಿತ ಸಂಪೂರ್ಣವಾಗಿ ನಾಶವಾದವು ೫೦ ಮಂದಿ ಪ್ಲಾಂಟೇಷನ್‌ಗಳಲ್ಲಿದ್ದ ಯೂರೋಪಿಯನರು ಮೃತಪಟ್ಟರು. ಆದರೆ ಧರ್ಮಶಾಲಾ ಕಾಂಗ್ರಾ ಎಂಬೀ ಸ್ಟೇಷನ್‌ಗಳೊಳಗೆ ಇನ್ನೂ ಅಪಾರವಾದ ನಷ್ಟ ಸಂಭವಿಸಿತು. ಕಾಂಗ್ರಾದಲ್ಲಿ ಬದುಕಿ ಬಂದವರೇ ಯಾರೂ ಇಲ್ಲ. ಧರ್ಮಶಾಲಾದೊಳಗಿದ್ದ ೬೬ ಮಂದಿ ಯೂರೋಪಿಯನ್ನರಲ್ಲಿ ೨೫ ಜನ ತೀರಿಹೋದರು. ಅಲ್ಲಿನ ದಂಡಿನಲ್ಲಿ ೧೧೨ ಮಂದಿ ಪ್ರಾಣಕೊಟ್ಟರು. ಕಾಂಗ್ರಾ ತಾಲ್ಲೂಕಿನ ೬೭ ಗ್ರಾಮಗಳು ಸಂಪೂರ್ಣವಾಗಿ ಕೊಚ್ಚಿಹೋಗಿರುತ್ತವೆ. ಈ ಪೈಕಿ ೧೧ ಗ್ರಾಮಗಳೊಳಗಿದ್ದ ಪ್ರಜೆಗಳ ಪೈಕಿ ನೂರಕ್ಕೆ ೨೦ ರಷ್ಟು ಜನರು ಹತರಾದರು. ಪಾಲಂಪುರದಲ್ಲಿ ಇದಕ್ಕಿಂತ ಸ್ವಲ್ಪ ಕಡಿಮೆ ೧೯ ಗ್ರಾಮಗಳಲ್ಲಿ ಶೇಕಡಾ ೧೫ ರಷ್ಟು ಪ್ರಜೆಗಳು ಬಲಿಯಾದರು. ಗೋರ್ಖಾ ಯುಗಳೇ ಮೊದಲಾದ ಸಾಧು ಪ್ರಾಣಿಗಳ ನಷ್ಟವು ಅಪಾರವಾಯಿತು. ಎಲ್ಲಾ ಕಡೆಗಳಲ್ಲೂ ಬೇಗನೆ ಅಪ್ಪಿಸಿಕೊಳ್ಳುವುದಕ್ಕೆ ಶಕ್ತಿಸಾಲದ ಮುದುಕರೂ ಹೆಂಗಸರೂ ಮಕ್ಕಳೂ ವಿಶೇಷವಾಗಿ ಪ್ರಾಣಕೊಟ್ಟರು ಆ ಡಿಸ್ಟ್ರಿಕ್ಟಿನೊಳಗೆಲ್ಲಾ ಇದ್ದ ೭೮ ಸ್ಕೂಲುಗಳ ಪೈಕಿ ೩೭ ನಾಶ ಹೊಂದಿದವು ಒಟ್ಟು ಇದ್ದ ೧೦೪ ಉಪಾಧ್ಯಾಯರ ಮತ್ತು ೧,೯೭೩ ವಿದ್ಯಾರ್ಥಿಗಳಲ್ಲಿ ೧೨ ಉಪಾಧ್ಯಾಯರೂ ೩೪೯ ವಿದ್ಯಾರ್ಥಿಗಳೂ ಪ್ರಾಣ ಕಳೆದುಕೊಂಡರು

ಮೈಸೂರು ಗೆಜೆಟ್ ಸಂಗ್ರಹ.

ತುಂಕೂರು ಡಿಸ್ಟ್ರಿಕ್ಟ್ ಎಕ್ಸೈಸ್ ಎಕ್‌ಸ್ಟ್ರಾ ಅ|| ಕಮಿಷನರ್ ಮೆ|| ಟಿ. ಬಾಪಾರಾಯರಿಗೆ ಆರು ತಿಂಗಳ ರಜಾ ಕೊಟ್ಟಿದೆ

ತುಂಕೂರು ಡಿಸ್ಟ್ರಿಕ್ಟ್ ಎಕ್‌ಸ್ಟ್ರಾ ಅ|| ಕಮಿಷನರ್ ಮೆ|| ಸಿ. ನಾರಾಯಣರಾಯರಿಗೆ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಚಿಕ್ಕನಾಯ್ಕನಹಳ್ಳಿ ತಾಲ್ಲೂಕ್ ಅಮಲ್ದಾರ್ ಮೆ|| ಎಂ ಪಿ ವಿಶ್ವನಾಥರಾಯರಿಗೆ ಕೊಟ್ಟಿದ್ದ ಆರು ತಿಂಗಳ ರಜವನ್ನು ಇನ್ನೂ ಒಂದು ವಾರ ಜಾಸ್ತಿ ಮಾಡಿದೆ

ಅಮಲ್ದಾರ್ ಮೆ|| ಎಚ್. ಎನ್. ವೆಂಕಟಾಚಾರ್ಯ ಸೆಪ್ಟೆಂಬರ್ ೨೦ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಹೊಳಲ್ಕೆರೆ ತಾಲ್ಲೂಕ್ ಸಬ್ ಪ್ರೊ ಟೆಂ ಅಮಲ್ದಾರ್ ಮೆ|| ವಿ. ಎಸ್. ರಾಜಗೋಪಾಲಾಚಾರ್ಯ ಸೆಪ್ಟೆಂಬರ್ ೨೩ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಯಡತೊರೆ ತಾಲ್ಲೂಕ್ ಅಮಲ್ದಾರ್ ಮೆ|| ಎನ್. ರಾಮರಾಯರಿಗೆ ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಮಂಜರಾಬಾದ್ ತಾಲ್ಲೂಕ್ ಅಮಲ್ದಾರ್ ಮೆ|| ಬಿ. ಕೃಷ್ಣಸಿಂಗ್ ಯವರಿಗೆ ೨ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ. ಮತ್ತು ಅವರ ಬ್ರೀಚ್ ಆಫ್ ಕಾಂಟ್ರ್ಯಾಕ್ಟ್ ಆಕ್ಟಿನ ಮೊಕದ್ದಮೆಗಳನ್ನು ಹಿಡಿದು ತನಿಖೆ ಮಾಡತಕ್ಕದ್ದು

ಕೊಪ್ಪ ತಾಲ್ಲೂಕ್ ಅಮಲ್ದಾರ್ ಮೆ|| ಜೆ ಬಾಲ್ ಯವರಿಗೆ ನೊವೆಂಬರ್ ೧೫ ರಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮೆ|| ಬಿ ಎಸ್ ವೆಂಕಟೇಶೈಯನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೊಪ್ಪ ತಾಲ್ಲೂಕ್ ಚಾರ್ಜನ್ನು ವಹಿಸಿರತಕ್ಕದ್ದು. ಇವರು ನೊವೆಂಬರ್ ೧೫ನೇ ತಾರೀಖು ಪೂರ್ವಾಹ್ನ ಕೆಲಸದ ಮೇಲೆ ಹಾಜರಾಗಬೇಕು.

ಹೊಳಲ್ಕೆರೆ ತಾಲ್ಲೂಕ್ ಸಬ್ ಪ್ರೊ ಟೆಂ ಅಮಲ್ದಾರ್ ಮೆ|| ವಿ. ಎಸ್. ರಾಜಗೋಪಾಲಾಚಾರ್ಯರಿಗೆ ಸೆಪ್ಟೆಂಬರ್ ೧೫ ರಿಂದ ಹದಿನೈದು ದಿನಗಳ ವಿಶೇಷ ರಜಾ ಕೊಟ್ಟಿತ್ತು

ಎಕ್ಸೈಸ್ ಇಲಾಖಾ ಎಕ್‌ಸ್ಟ್ರಾ ಅ ಕಮಿಷನರ್ ಮೆ| ಆರ್. ಟಿ ಮಹದೇವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಚಿಕ್ಕಮಗಳೂರು ಖಜಾನೆ ಅ|| ಕಮಿಷನರು ಕಡೂರು ಎಕ್ಸೈಸ್ ಡಿವಿಜನ್ ಆಫೀಸ್ ಛಾರ್ಜನ್ನೂ ವಹಿಸಿರತಕ್ಕದ್ದು

ಹೆಡ್ ಮಾಸ್ಟರ್ ಮೆ|| ರಾಘವೇಂದ್ರರಾಯರನ್ನು ನ್ಯಾಮತಿ ಮ್ಯುನಿಸಿಪಲ್ ಬೋರ್ಡಿಗೂ ಮೆ|| ಪ್ಲೀಡರ್ ವೇದಾಂತೈಯಂಗಾರ್ಯರನ್ನು ಚಿತ್ರದುರ್ಗದ ತಾಲ್ಲೂಕ್ ಬೋರ್ಡಿಗೂ ಮೆಂಬರಾಗಿ ನೇಮಿಸಿದೆ.

ಸೂಪರ್‌ವೈಜರುಗಳಾದ ಮೆ|| ಎನ್ ಸಿ. ನರಸಿಂಹೈಯಂಗಾರ್ರಿಗೂ, ಮೆ| ಜೆ. ಎಂ ಸಬ್ಬಿಂಗ್ಸ್ ಯವರಿಗೂ, ಓವರ್ಸಿಯರುಗಳಾದ ವಿ. ಕೃಷ್ಣಸ್ವಾಮಿ ಐಯರಿಗೂ, ಟಿ. ಎಸ್. ಲಕ್ಷ್ಮಣರಾಯರಿಗೂ, ಮೆ|| ಇ ಪಟ್ಟಿಯ ಮಾಜೆಂಟ್ ಯವರಿಗೂ, ವಿ. ಲಕ್ಷ್ಮಣರಾಯರಿಗೂ ಬಡ್ತಿ ಕೊಟ್ಟಿದೆ.

ಮೈಸೂರು ಇಂಪೀರಿಯಲ್ ಸರ್ವಿಸ್ ರಿಜಿಮೆಂಟಿನ ಕಮಿಷನ್ಡ್ ರ್ಯಾಂಕಿಯಲ್ಲಿ ಮುಂದೆ ಹೇಳುವವರಿಗೆ ಅಕ್ಟೋಬರ್ ೧ ರಿಂದ ಬಡ್ತಿ ಕೊಟ್ಟಿದೆ—ಅಬ್ದುಲ್ ಕರೀಂ ಬಿಂತೂರಿಯವರು, ಶ್ರೀನಿವಾಸರಾವ್ ಸಾಲಿಕೆಯವರು, ಲಕ್ಷ್ಮಣರಾವ್ ಪೋಲೆ ಯವರು, ಸಯಾತ್ ಉಲ್ಲಾ ಖಾನರು, ಮಹಮದ್ ನಸೀರ್ ಅಹಮದ್ ಯವರು, ಕೃಷ್ಣರಾವ್ ಸಿಂಧೆಯವರು, ಸೈಯದ್ ಹುಸೈನ್ ಯವರು, ಅಬ್ದುಲ್ ಗಫಾರ್ ಯವರು, ಹನುಮಂತರಾವ್ ಪವಾರ್ ಯವರು.

ದಿವಾನರವರ ಸರ್ಕೀಟು.

ನೆಲಮಂಗಲ

ಈ ತಿಂಗಳ ೧೬ ನೇ ತಾ. ಪ್ರಾತಃಕಾಲ ೯ ಘಂಟೆಗೆ ಮೈಸೂರು ಶೀಮೆಯ ದಿವಾನರವರು ಅವರಿಗಾಗಿ ಅಲಂಕರಿಸಲ್ಪಟ್ಟಿದ್ದ ಚಾವಡಿ ಇರುವ ಮುನ್ಸಿಫ್ ಕೋರ್ಟು ಬಿಲ್ಡಿಂಗಿನಲ್ಲಿ ಬಿಡಾರವಂಗೈದು, ೧೬ ನೇ ತಾ. ಪ್ರಾತಃಕಾಲ ಟವರ್ ಕೆರೆಯನ್ನು ನೋಡುವದಕ್ಕೆ ಬಂದರು. ಆಗ ಪ್ರಜೆಗಳೆಲ್ಲರೂ ಹೇಳಿಕೊಂಡದ್ದೇನೆಂದರೆ—ಕೆರೆಯ ನೀರು ಸಾಗುವಾಗ ಬಿಡಕೂಡದೆಂತಲೂ, ಬಿಟ್ಟಲ್ಲಿ ನೀರಿನ ಪ್ರವಾಹದಿಂದ ತುಂಬಾ ಸಂಕಟಪಡಬೇಕಾಗುತ್ತದೆಂತಲೂ ಹೇಳಿಕೊಂಡದ್ದರ ಮೇಲೆ ದಿವಾನರವರು ಈ ವಿಷಯ ಆಲೋಚಿಸಿ ತಿಳಿಸುತ್ತೇವೆಂದು ಅಪ್ಪಣೆ ಕೊಡಿಸಿದರು ಟವರ್ ಪ್ರವೇಶಿಸಿ, ವರ್ತಕರು ಹಾಕಿಸಿದ್ದ ಚಪ್ಪರದ ಮಾರ್ಗ ಹಿಂದುಸ್ತಾನಿ ಹುಡುಗರ ಸ್ಕೂಲಿಗೆ ಬಂದು, ಅಲ್ಲಿನ ಹೆಡ್ಮಾಸ್ಟರು ಮಾಡಿದ ಅಡ್ರೆಸ್ಸನ್ನು ಓದಿಸಿ ಕೇಳಿ ಸಂತೋಷವಂಗೈದು, ದ ಹಿಂದುಸ್ತಾನಿ ಹುಡುಗಿಯರ ಸ್ಕೂಲನ್ನು ನೋಡಿ ಅಲ್ಲಿಂದ ಕೆಲವು ಹಿಂದೂ ದೇವಾಲಯವಂ ಹೊಕ್ಕು ದೇವರ ದರ್ಶನವಂಗೈದು, ಆ ನಂತರ ಸಬ್ ರಿಜಿಸ್ಟ್ರಾರ್ ಆಫೀಸಿಗೆ ಸಂಚರಿಸಿ ವೆಸ್ಲಿಯನ್ ಹುಡುಗಿಯರ ಸ್ಕೂಲಿಗೆ ದಯಮಾಡಿಸಿ, ಪುಷ್ಪಹಾರಗಳನ್ನು ಸ್ವೀಕರಿಸಿ, ಹುಡುಗಿಯರ ಮಂಗಳಕರವಾದ ಹಾಡುಗಳನ್ನು ಕೇಳಿ ತುಂಬಾ ಸಂತೋಷಪಟ್ಟು ಅಲ್ಲಿಂದ ಎ. ವಿ. ಸ್ಕೂಲಿಗೆ ಹೋಗಿ ಅಲ್ಲಿನ ಹೆಡ್ಮಾಸ್ಟರು ಮಾಡಿಸಿದ್ದ ಸಂಸ್ಕೃತ ಕನ್ನಡ ಅಡ್ರೆಸ್ಸುಗಳನ್ನು ಕೇಳಿ ಸಂತೋಷಪಟ್ಟು ಆ ಅಡ್ರೆಸ್ಸುಗಳನ್ನು ದಿವಾನರವರು ಸ್ವಗೃಹಕ್ಕೆ ಅರಿಸಿಕೊಂಡರು. ಆ ಸ್ಕೂಲಿನ ಕಿಂಡರ್ ಗಾರ್ಡನನ್ನೂ ಡ್ರಿಲ್ಲನ್ನೂ ನೋಡಿ ಸಂತೋಷಪಟ್ಟು, ಆಸ್ಪತ್ರೆಗೆ ಹೋಗಿ ಅಲ್ಲಿ ಸ್ವಲ್ಪ ಹೊತ್ತು ಇದ್ದು ಅಮೇಲೆ ಸೂಪರ್‌ವೈಯರ್ ಆಫೀಸಿಗೆ ಹೋಗಿ ಅಲ್ಲಿನ ಸೂಪರ್‌ವೈಜರವರಿಂದ ತವಾದ ಥರಾಯಿ ಹಾರಗಳನ್ನು ಸ್ವೀಕರಿಸಿ, ಅಮೇಲೆ ಅಮಲ್ದಾರವರು ಮಾಡಿಸಿದ್ದ ಪರಿಶೋಭಿತವಾದ ಪುಷ್ಪ ಚಪ್ಪರವಂ ಕೊಂಡು ಕಛೇರಿಗೆ ದಯಮಾಡಿಸಿ, ಅಲ್ಲಿನ ಕೆಲಸಗಳನ್ನು ಬರಿಸಿ, ಅತ್ಯಾನಂದದೊಡನೆ ಸ್ವಗೃಹಕ್ಕೆ ತೆರಳಿ ಮಾರನೇಯ ದೊಡ್ಡಬಳ್ಳಾಪುರಕ್ಕೆ ದಯಮಾಡಿಸಿದರು ತಾಲ್ಲೂಕ್ ಅಮಲ್ದಾರರು ದಿವಾನರವರಿಗಾಗಿ ಮಾಡಿಸಿದ್ದ ಗೃಹವು ಸ್ವಲ್ಪ ದಿವಸಗಳಲ್ಲಿ ರವಾಟ್ಟಿಗೆ ಅತ್ಯಾಲಂಕಾರವಾದದ್ದನ್ನು ಜನರು ನೋಡಿ ಸಂತೋಷಪಡುತ್ತಿದ್ದಾರೆ.

ದೊಡ್ಡಬಳ್ಳಾಪುರ

ಮೈಸೂರು ಶೀಮೆಯ ದಿವಾನಬಹದ್ದೂರವರಾದ ಸರ್ ಯಂ ಕೃಷ್ಣಮೂರ್ತಿಗಳವರು ಸಮಾಧಾನ ನೆಲಮಂಗಲ ಇದೇ ತಿಂಗಳು ೧೮ನೇ ತಾ ರಾತ್ರಿ ೯| ಗಂಟೆಗೆ ದೊಡ್ಡಬಳ್ಳಾಪುರಕ್ಕೆ ದಯಮಾಡಿಸೋಣವಾಯಿತು ಇವರನ್ನು ಭೇಟಿಮಾಡುವದಕ್ಕೆ ನಮ್ಮ ಅಮಲ್ದಾರ್ರವರು ತಾಲ್ಲೋಕಿನ ಸಾಹಿದ್ದಿನವರಿಗೂ ಮಾಡಿಸಿದ್ದರು ನಂತರ ಸಚಿವರ ಸವಾರಿಯು ತಾಲ್ಲೋಕ್ ಕಛೇರಿಗೂ ಸ್ಕೂಲಿಗೂ ಮಧ್ಯದಲ್ಲಿ ಹಾಕಿದ್ದ ಮತ್ತು ನಾನಾ ವಿಧ ಚಿತ್ರಗಳಿಂದ ಅಲಂಕಾರ ಮಾಡಿದ ಚಪ್ಪರದಲ್ಲಿ ತಮ್ಮ ಸಾರೋಟನ್ನು ನಿಲ್ಲಿಸಿದರು ಅಲ್ಲಿ ಇವರ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಮತ್ತು ವೈದಿಕ ಮಹಾ ಜನಗಳಿಂದ ಕೊಡಲ್ಪಟ್ಟ ಮಂತ್ರಾಕ್ಷತೆಗಳನ್ನು ಸ್ವೀಕರಿಸಿದ್ದಲ್ಲದೆ, ಮುನ್ಸಿಫರೇ ಆದಿಯಾಗಿ ಸಕಲ ಉದ್ಯೋಗಸ್ಥರ ಕೈಗಳಿಂದಲೂ ಮ್ಯುನಿಸಿಪಲ್ ಮೆಂಬರುಗಳಿಂದಲೂ ಸೆಟ್ಟಿ ವರ್ತಕರಾದಿಯಾಗಿ ಗ್ರಾಮದ ದೊಡ್ಡಮನುಷ್ಯರುಗಳಿಂದಲೂ ಕೊಡಲ್ಪಟ್ಟ ಹಾರ ತುರಾಯಿಗಳನ್ನು ಸ್ವೀಕರಿಸಿ ಗರಲ್ಸ್ ಸ್ಕೂಲ್ ಗೀತೋಪಾಧ್ಯಾಯರಿಂದ ಕಲಿಸಲ್ಪಟ್ಟ ಬಾಲಿಕೆಯರ ಗಾನಗಳನ್ನೂ ಕನ್ನಡ, ಸಂಸ್ಕೃತ, ಹಿಂದೂಸ್ತಾನಿ ವಿದ್ಯಾರ್ಥಿಗಳು ಹೇಳಿದ ಗೀತಗಳನ್ನು ಕೇಳಿ ಹರ್ಷಚಿತ್ತರಾದರು ಅಲ್ಲಿಯೇ ಕೆಲವರು—ಜೀಯಾ, ಈ ಊರಿನಲ್ಲಿ ನೀರಿಲ್ಲದೆ ಸಕಲ ಜನಗಳೂ ಶ್ರಮಪಡುತ್ತಾ ಇದಾರೆ. ಈ ಊರಿನ ಸಮೀಪದಲ್ಲಿ ನಾಗರಕೆರೆಯ ನೀರನ್ನು ತದಾ ನಲ್ಲಿಗಳನ್ನಿಟ್ಟರೆ ಜನರ ಶ್ರಮ ತಪ್ಪಿಹೋಗುವದಲ್ಲದೆ, ಶಾಶ್ವತವಾದ ಕೀರ್ತಿಯು ಖಂಡಿತ ಸಂದೇಹವಿಲ್ಲವೆಂಬ ಅಹವಾಲುಗಳನ್ನು ಕೇಳಿ ಮನಮುಟ್ಟಿ ಈ ರೀತಿಯಾಗಿ ಅಪ್ಪಣೆ ಕೊಟ್ಟರು. ಏನಂದರೆ—ನಾವು ಪ್ರಕಟಿಸುತ್ತೇವೆ ಆಗ ೧–೨ ದಿನಗಳು ಮೊಕ್ಕಾಂಮಾಡಿ ತಾಲ್ಲೋಕು ನೋಡಿ ನೀವುಗಳು ಕೇಳಿಕೊಂಡ ನಲ್ಲಿಗಳ ಏರ್ಪಾಡುಗಳನ್ನು ಸಹ ಮಾಡುತ್ತೇವೆಂಬದಾಗಿ ಅಪ್ಪಣೆಯನ್ನು ದಯಪಾಲಿಸಿದ ಕ್ಷಣದಲ್ಲಿಯೇ ಮಂಗಳಕರವಾದ ಬ್ಯಾಂಡ್ ವಾದ್ಯಗಳು ಮೊಳಗಿದವು ಅಲ್ಲಿಂದ ಟ್ರಾವೆಲರ್ಸ್ ಬಂಗ್ಲೆಕ್ಕೆ ದಯಮಾಡಿ, ಭೋಜನಾನಂತರ ಬೆಂಗಳೂರಿಗೆ ದಯಮಾಡಿಸಿದರು. ಬಂಗ್ಲೆ ಮಧ್ಯೆಯೂ ಟವರ್ ರೆಕಾರ್ಡ್ ನ್ಯುಮತಾದವರು ಅಲಂಕಾರವಾದ ಚಪ್ಪರ ಹಾಕಿಸಿದ್ದರು ಮುನ್ಸಿಫ್ ಕೋರ್ಟಿನ ಮುಂದೆ ಸಹ ಚಪ್ಪರ ಹಾಕಿದ್ದರು. ಪ್ರಜೆಗಳಾದರೋ ಅವರ ಪ್ರಸಾದಗಮನವನ್ನೇ ನಿರೀಕ್ಷಿಸುತ್ತಿದ್ದಾರೆ

ಈ ಊರಿನಲ್ಲಿ ದೇಶಪಾಂಡೆ ಪುರೋಹಿತರಾದ ವೇ|| ಅಶ್ವತ್ಥಾಚಾರ್ಯರವರು ಅರ್ಧಯಿಂದಲೂ ಬಂದ ಧಾತ್ರೋತ್ಸವವನ್ನು ಪ್ರತಿ ವರ್ಷದಲ್ಲಿಯೂ ನಡಸುತ್ತಿರುವರಷ್ಟೆ. ಅದೇ ಮೇರೆಗೆ ಈ ವರ್ಷವೂ ನಡೆಯಿತು —ಈ ಪ್ರಾಂತ್ಯ ಮಳೆ ಇಲ್ಲದೆ ಪೈರು ಎಲ್ಲಾ ಒಣಗುತ್ತಿವೆ ಕೈಗೆ ಬಂದದ್ದು ಬಾಯಿಗೆ ಬರಲಿಲ್ಲವೆಂದು ಗೋಳಾಡುತ್ತಾರೆ. ೩—೪ ದಿನಗಳ ಕೆಳಗೆ ಸ್ವಲ್ಪ ಜಡಿಮಳೆ ಬಂತು. ಕೆರೆಗಳಿಗೆ ನೀರೇನೂ ಬರಲಿಲ್ಲ. ಧಾರಣೆವಾಸಿಗಳು ಏರಿಗಿವೆ. ಬಡವರ್ಗದರು ಶ್ರಮಪಡುತ್ತಾ ಇದಾರೆ.

ತಾಲ್ಲೋಕು ವರ್ತಮಾನಗಳು.

ಚಾಮರಾಜನಗರ —ಮಾರಹಳ್ಳಿ ಸಂತೆಯು ಬಹು ದೊಡ್ಡ ಸಂತೆಯಾಗಿರುತ್ತೆ ಈ ಸಂತೆಯಲ್ಲಿ ಪ್ರತಿ ವಾರದಲ್ಲೂ ವ್ಯಾಪಾರಸ್ತರ ಸರಕುಗಳ ಮೇಲೆ ಹಾಕಿರುವ ಸುಂಕವು ಸರ್ವರಿಗೂ ತಿಳಿದಿಲ್ಲ. ಅಲ್ಲದೆ ತಿಳಿಯತಕ್ಕ ಬೋರ್ಡನ್ನಾದರೂ ಸುಂಕದ ಕಟ್ಟೆಯ ಹತ್ತಿರ ತಗಲಿಹಾಕಿಸಿದರೆ ತುಂಬಾ ಉತ್ತಮ. ಕೆ

...ನಾನಾ ತರವಾಗಿ ವರ್ಣಿಸಲ್ಪಡುವರು. ಇದಕ್ಕೆ ತಕ್ಕ ಏ... ...ಯಾವುದೂ? ಸಾಯಬೇಕ್ತೇನೆ.—ಸಂತೆಯಲ್ಲಿ ಧಾರಣೆ ...ಗಳು ತುಂಬಾ ಭಾರವಾಗಿರುವುದರಿಂದ ಬಡಬಗ್ಗರಿಗೆ ತುಂಬಾ ...ಕರವಾಗಿರುತ್ತೆ. ಜನರೆಲ್ಲರೂ ಮಳೆಯನ್ನೇ ಹಾರೈಸುತ್ತಾ ...ನಗರಕ್ಕೂ ಸಂತೆಗೂ ಇರುವ ರಸ್ತೆಯು ನೋಡ ...ಗಿಂತಲೂ ಈಗಿನ ಸ್ಥಿತಿಯು ಬಹು ಚನ್ನಾಗಿರುವುದರಿಂ ...ಗಾಡಿಗಳಿಗೂ ವ್ಯಾಪಾರಿಗಳಿಗೂ ಅನುಕೂಲವಾಗಿದೆ ...ಅಲ್ಲಿ ಹರಿಯುವ ಹಳ್ಳಗಳು ಮಳೆಗಾಲದಲ್ಲಿ ತುಂಬಾ ...ವಾಗಿರುವುದರಿಂದ ಸರ್ಕಾರದವರು ಸೇತುವೆಗಳನ್ನು ...ವಾಗ ಪುಣ್ಯವನ್ನು ಸಂಪಾದಿಸುವರೋ.

ಮಂಡ್ಯ.—ಈ ೧೮ ನೇ ಶನಿವಾರ ಸುಮಾರು ೧ ಗಂಟೆಯ ...ಊರಿನ ಮಾರ್ಗವಾಗಿ ನಮ್ಮ ಶ್ರೀಮನ್ಮಹಾರಾಜರವರ ...ರು ಮೋಟಾರ್ ಕಾರ್ ಗಾಡಿಯಲ್ಲಿ ಬೆಂಗಳೂರಿಗೆ ಚಿತ್ತೈ... ...ಈ ಊರಿನ ವರ್ತಕರೆಲ್ಲಾ ಸೇರಿ ಚೌಕದಲ್ಲಿ ಒಂದು ...ಲಂಕಾರವಾದ ಚಪ್ಪರವನ್ನು ಹಾಕಿ ಅಲಂಕಾರ ಮಾಡಿದ್ದ ...ತ್ತು ಕೆಲವರು ಬಾಳೆಗೊನೆಗಳನ್ನು ನೇತಹಾಕಿದ್ದರು. ಕೆಲ ...ತೋರಣಗಳನ್ನು ಕಟ್ಟಿ ತಮ್ಮ ಮನೆಯ ಮುಂದೆ ನೀರನ್ನು ...ದರು. ಮತ್ತು ತಟ್ಟೆಯಲ್ಲಿ ಫಲಪುಷ್ಪಾದಿಗಳನ್ನು ಇರಿಸಿ, ...ರಾಜರವರಿಗೆ ಸಮರ್ಪಿಸಬೇಕೆಂದಿದ್ದರು ಆದರೆ ಧೊರೆಗ... ...ತೋರಿಸಿದ ರಾಜಮರ್ಯಾದೆಗಳನ್ನು ನೋಡಿಕೊಂಡು ...ಹೋದರು ಅನೇಕ ಜನರು ಮಹಾರಾಜರನ್ನು ನೋಡಿ ...ಪಟ್ಟರು ಇಲ್ಲಿ ಹಿಂದೆ ಕಳುವಾಗಿ ಹೋಗಿದ್ದ ಎತ್ತುಗಳ ...ಗಳನ್ನು ಕದ್ದವರು ಸಿಕ್ಕಿದಾರೆ ಪೋಲೀಸಿನವರು ತನಿಖೆ ...ತ್ತಿದಾರೆ.—ಸಂತೆಗಳಲ್ಲಿ ರಾಗಿಯನ್ನು ಹೆಚ್ಚು ಸೇರಿನಲ್ಲಿ ಅಳೆ ...ತ್ತಾರೆ. ಹೊಟ್ಟೆ ಊದುವ ಕೆಟ್ಟ ರಾಗಿಯನ್ನು ಮಾರುತ್ತಾರೆ. ...ಬಹಳ ಕ್ರಯ ಪಡಬೇಕಾಗಿದೆ ಅಧಿಕಾರಿಗಳು ಏನೂ ...ಡಾಗಿದಾರೆ ಈ ಕಾಲದಲ್ಲಿ ವರ್ತಕರನ್ನೂ ಅವರ ಸೇ...ಗಳನ್ನೂ ಪರೀಕ್ಷಿಸಿದರೆ ಉತ್ತಮ.

ತೀರ್ಥಹಳ್ಳಿ.—ಈಗಾರೆ ಮಳೆಯು ಸರಿಯಾಗಿ ನಡೆಸಿದ ...ಆಗಿ ಫಸಲಾಗಲಿ ಬತ್ತದ ಪೈರಾಗಲಿ ರೈತರಿಗೆ ಅನುಕೂ... ...ಕೆಲವು ಸ್ಥಳಗಳಲ್ಲಿ ಗದ್ದೆ ಫಸಲು ಸಂಪೂರ್ಣವಾಗಿ ...ಹೋಗಿದೆ ... ಕೆಲವು ಅರ್ಧ ಫಸಲಾಗಬಹುದು ...ರೈತರು ಆಗಲೇ ತಿನ್ನಲಿಕ್ಕೆ ಮಾರ್ಗವಿಲ್ಲದೆ ಗದ್ದೆ ... ಅಮೃತ ಮಾಡಿ ನ್ಯಾಯಕ್ಕೆ ಸಹ ಕೊಟ್ಟು ಜೀವನ ಮಾಡು...—ದಿವಾನ್ ಸಾಹೇಬರ ಸವಾರಿಯು ಈ ಪ್ರಾಂತ್ಯ ...ದ್ದಾಗ ಪ್ರಜೆಗಳ ಈ ತರವಾದ ತೊಂದರೆಗಳನ್ನು ಸ್ವತಃ ...ಹೋಗಿದಾರೆ ಅದ್ದರಿಂದ ಡೆಪ್ಟಿ ಕಮಿಷನರು ಎಲ್ಲಾ ...ಮಾಡಿ ಪ್ರಜೆಗಳ ಕಷ್ಟಗಳನ್ನು ಸರಿಯಾಗಿ ಗವರ್ನ ...ಗೆ ರಿಪೋರ್ಟ್ ಮಾಡುವಂತೆಯೂ, ಮುಖ್ಯವಾಗಿ ಕಷ್ಟದ ...ರೈತರನ್ನು ವಿಚಾರಿಸಿ ತಕ್ಕಷ್ಟು ಸಹಾಯ ಮಾಡುವ ಹಾಗೆ ...ಸರ್ಕಾರು ಏರ್ಪಡಿಸಿದಾರೆಂದು ವರ್ತಮಾನ ಹುಟ್ಟಿದೆ ಹೀಗಿ... ...ನಮ್ಮ ಶಿವಮೊಗ್ಗ ಡೆಪ್ಟಿ ಕಮಿಷನರು ಬಹು ಮಟ್ಟಿಗೆ ಸಂ...ಚಾರ ಮಾಡಿ ಪ್ರಜೆಗಳ ಕಷ್ಟಗಳನ್ನು ನೋಡಿ ತಕ್ಕ ಏರ್ಪಾಡು ...ಮಾಡುವರೆಂದು ಎಲ್ಲರೂ ನಿರೀಕ್ಷಿಸುತ್ತಾರೆ.—ಈ ತಾ...ಲ್ಲೂಕಿನಲ್ಲಿ ಸೂಲಗಿತ್ತಿ ಇಲ್ಲದೆ ಪ್ರಜೆಗಳಿಗೆ ಬಹು ತೊಂದರೆ ಉಂ... ...ಇಲ್ಲಿಗೆ ಬಂದಿದ್ದ ಸೂಲಗಿತ್ತಿಯನ್ನು ಬೇರೆ ಕಡೆಗೆ ವರ್ಗ ...ದರು ಆಗ ಈ ಪ್ರಾಂತ್ಯದ ಹೆಂಗಸರು ಸೂಲಗಿತ್ತಿಯನ್ನು ...ಸಿಕ್ಕದಿರುವದರಿಂದ ಬಹು ತೊಂದರೆ ಪಡುತ್ತಿದಾರೆ. ...ರು ಮನವಿ ಮಾಡಿದ್ದಾಗ ಸಹ ಯಾಕೆ ಸೂಲಗಿತ್ತಿ ಬಂದಿಲ್ಲ ...ಕೇಳಿದ್ದಲ್ಲದೆ ಮೇಲಕ್ಕೆ ಬರೆದು ಕೇಳಬೇಕೆಂದು ಕೇಳ...—ಇಲ್ಲಿನ ಸಂಪಲಕೋಡಿಯ ಗಂಧವನ್ನು ಹರಾಜು ...ದರು ಸಾಹುಕಾರರು ಬೇರೆ ಬೇರೆ ಸ್ಥಳಗಳಿಂದ ಬಂದು ಹರಾ... ...ಕೊಂಡುಕೊಂಡು ಹೋದರು. ಸುಮಾರು ಒಂದು ಲಕ್ಷ ...ಯು ಹುಟ್ಟುವಳಿ ಆಯಿತು ಹೋದ ವರ್ಷ ಇದಕ್ಕಿಂತ ...ಬೆಲೆ ಬಂದಿತ್ತು.—ಇಲ್ಲಿನ ಪೋಲೀಸ್ ನೌಕರರು ಸರಿಯಾಗಿ ...ಗಸ್ತು ಮಾಡುವದಿಲ್ಲವೆಂತಲೂ ಚೌಕದಲ್ಲಿ ಕಾವಲುಗಾರರು ...ಕಳ್ಳರಿಂದ ಭಯಂಗಲೆ ನಡೆಯುತ್ತದೆಂತಲೂ ಜನರು ಹೇಳು...ತ್ತಾರೆ. ಮೇಲಿನವರು ರಾತ್ರೀ ಹಗಲೂ ನಿಗಾ ಕೊಟ್ಟು ...ಜೆಗಳ ಸಂಕಟಗಳನ್ನು ಕೇಳಿ ಅನುಕೂಲ ಮಾಡಿದರೆ ಉತ್ತ...—ಇಲ್ಲಿಗೆ ಸನಿಹದ ಗ್ರಾಮದ ಒಬ್ಬ ಹೆಂಗಸು ಮೂರು ದಿನಗ... ...ಬಲಮಬಾದಿಗಳು ಕಟ್ಟಿ ಬಹು ಕಷ್ಟಪಡುತ್ತಾ ಗಾಡಿಯ... ...ಆಸ್ಪತ್ರೆಗೆ ಬಂದಳು ಇಲ್ಲಿನ ಡಾಕ್ಟರು ಆಕೆಗೆ ತಕ್ಕ ಚಿಕಿ...ತ್ಸೆ ಔಷಧಗಳನ್ನು ಕೊಟ್ಟು ವಾಸಿಮಾಡಿದಾನೆ.

ನಂಜನಗೂಡು.—ಈ ಟವರಿನಲ್ಲಿ ಈಗಲೇ ಪ್ಲೇಗು ಕಾಣುತ್ತೆ. ಅಕ್ಕಿ ರೂಪಾಯಿಗೆ ೭ ಸೇರಿನ ಮೇರೆ... ಧಾರಣೆಗಳೆಲ್ಲಾ ಬಹಳ ತಗ್ಗಿಗಿವೆ. ಬಡಬಗ್ಗರಿಗೆ ಜೀವ...ನ ತುಂಬಾ ಕಷ್ಟವಾಗಿದೆ.—ಇಲ್ಲಿಗೆ ಬೊಂಬಾಯಿನಿಂದ ಸ...ರ್ಕಸ್ ಕಂಪೆನಿಯವರು ಬಂದು ನರಸಣ್ಣನವರ ಅಗ್ರಹಾರದ ...ಬಾಗಿಲಿನಲ್ಲಿ ಡೇರಾ ಹಾಕಿ ಬಹಳ ಚಮತ್ಕಾರವಾಗಿ ೬—೭ ...ಗಳನ್ನು ಆಡಿದರು.—ಊರಿನಲ್ಲಿರುವ ಮುನಸೀಫ್ ಕೋರ್ಟ ...ಆಫೀಸರುಗಳು ಕಮ್ಮಿಯಾಗಿದಾರೆ. ಆದರೆ ಜಾರೀ ಇಲಾಖೆ ...ಕೆಲಸಗಳು ಜಾಸ್ತಿಯಾಗಿರುವುದರಿಂದಲೂ ಅಲ್ಲಿ ಒಬ್ಬ ಗುಮಾ...ಸ್ತೆ ಇರುವುದರಿಂದಲೂ ಕೆಲಸಗಳು ಸಮರ್ಪಕವಾಗಿ ನಡೆ... ...ಕಕ್ಷಿಗಾರರಿಗೆ ತುಂಬಾ ತೊಂದರೆಯಾಗಿದೆ. ಒಂದು ಅರ್ಜ...ಯನ್ನು ದಾಖಲ್ಮಾಡಿದರೆ ಅದು ಹರಾಜಿಗೆ ಬರಬೇಕಾದರೆ ೩—೪ ...ಗಳಾಗುತ್ತೆ. ಅದರ ಮೇಲೂ ಬರೆಯಲು ಕಾಲಸಾಲದೆ ಗುಮಾ...ಸ್ತೆ ಒಂದೆರಡು ತಿಂಗಳು ಮುಂದಕ್ಕೆ ಹೀರಿಂಗು ಹಾಕುತ್ತಾರೆ. ಕಕ್ಷಿಗಾರರು ಹೀರಿಂಗು ತಾರೀಖಿನಲ್ಲಿ ಕೋರ್ಟಿಗೆ ಬಂದು ವಾಪಸು ಹೋಗಬೇಕಾಗಿದೆ. ಹಿಂದೆ ೫—೬ ವರ್ಷಗಳ ಕೆಳಗೆ ಜಾರೀ ಇಲಾಖೆಯಲ್ಲಿ ಒಬ್ಬ ಅಸಿಸ್ಟೆಂಟು ಬರೆಯುತ್ತಿದ್ದಾಗ್ಯೆ ಆತನಿಗೆ ಬರೆಯಲು ಸ್ಥಿರಪಟ್ಟಿ ಮತ್ತು ಹರಾಜುಗಳಿಗೆ ೭ ಆಣೆ ಮೇರೆ ಕಕ್ಷಿಗಾರರಿಂದ ವಸೂಲ್ಮಾಡಿ ಕ್ಯಾಷಿಗೆ ಕಟ್ಟುತ್ತಿದ್ದರು. ಬರೆಯತಕ್ಕವರಿಗೆ ೮—೧೦ ರೂಪಾಯಿ ಆದಾಯವಿತ್ತು. ಕೆಲಸಗಳು ಏನೂ ಲೋಪವಿಲ್ಲದೆ ಬಹಳ ಜಾಗ್ರತೆಯಾಗಿ ನಡೆಯುತ್ತಿದ್ದವು ಈಚೆಗೆ ಮೇಲ್ಕಂಡ ಪದ್ಧತಿಯು ಯಾವ ಕಾರಣದಿಂದಲೋ ನಿಂತು ಹೋಗಿ ಹೀಗೆ ಕಕ್ಷಿಗಾರರಿಗೆ ತೊಂದರೆಯಾಗಿದೆ ಈಗಲೂ ಕೋರ್ಟಿನವರು ದಯವಿಟ್ಟು ಇಲ್ಲಿನ ಕಷ್ಟಗಳನ್ನು ಪರಾಂಬರಿಸಿ, ಯಾವನಾದರೂ ಒಬ್ಬ ಪ್ರೊಬೇಷನರಿಗೆ ಮೇಲ್ಕಂಡ ಕೆಲಸವನ್ನು ಗೊತ್ತು ಮಾಡಿದರೆ ಇಲ್ಲಿನ ಲಾಯರುಗಳೂ ಕೂಡ ಮೇಲ್ಕಂಡಂತೆ ಕಕ್ಷಿಗಾರರಿಂದ ವಸೂಲ್ಮಾಡಬಹುದಾಗಿರುತ್ತೆ.—ಈ ನವಂಬರು ಮಾಹೆ ೧೧ ನೇ ತಾ. ಶನಿವಾರ ಸಾಯಂಕಾಲ ಸುಮಾರು ೪½ ಗಂಟೆಯಲ್ಲಿ ನಮ್ಮ ಮಹಾರಾಜರವರೂ, ಮಹಾರಾಣಿಯವರೂ ಪರಿವಾರ ಸಹಿತ ಪೌರ್ಣಮಿ ಸೇವೆಗಾಗಿ ಈ ಟವರಿಗೆ ಮೋಟಾರ್ ಕಾರ್ ಎಂಬ ಗಾಡಿಯಲ್ಲಿ ಕುಳಿತು ದಯಮಾಡಿಸಿದರು. ಅಮಲ್ದಾರರು ಮುನಸಿಪಲ್ ಮೆಂಬರು ಮುನಸಿಫರು ಸಬ್ ಡಿವಿಜನ್ ಆಫೀಸರವರು, ಲಾಯರುಗಳು, ಮುಂತಾಗಿ ವೈದಿಕ ಮಹಾಜನಗಳು, ಬಂಗಲೆ ಸಮೀಪದಲ್ಲಿ ಕಾದಿದ್ದು ಮಹಾರಾಜರಿಗೆ ಸುಸ್ವಾಗತವನ್ನು ಬಯಸಿದರು ಸವಾರಿಯು ಅರಮನೆಗೆ ಚಿತ್ತೈಸಿ ಅರ್ಧ ಗಂಟೆ ವಿಶ್ರಮಿಸಿಕೊಂಡು, ನಂತರ ದಿವ್ಯವಾದ ಮ್ಯಾನಾದಲ್ಲಿ ಕುಳಿತು ಚನ್ನವಾದ ಕಟ್ಟೆ ರಸ್ತೆ ಮಾರ್ಗವಾಗಿ ಅಂಗಡಿ ಬೀದಿಯಲ್ಲಿ ಹೊರಟು, ಸಾಹುಕಾರ್ ಬಂಡಯ್ಯನವರ ಮಳಿಗೆ ಹತ್ತಿರ ಹಾಕಿಸಿದ್ದ ಚಪ್ಪರಕ್ಕೆ ದಯಮಾಡಿಸಿ, ಅಲ್ಲಿ ವರ್ತಕರು ಒಪ್ಪಿಸಿದ ಹಾರತುರಾಯಿಗಳನ್ನು ಸ್ವೀಕರಿಸಿ, ಶಿವಬೋಧಸ್ವಾಮಿಗಳವರು ಕಟ್ಟಿಸಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನವಿರುವ ಗೌರೀಪಟ್ಟದಲ್ಲಿ ಸ್ನಾನಾದಿಗಳನ್ನು ಮಾಡಲು ದಯಮಾಡಿಸಿದರು ಹೊಳೆಯ ಹತ್ತಿರವೆಲ್ಲಾ ದಾರಿಯುದ್ದಕ್ಕೂ ತೋರಣಗಳನ್ನು ಕಟ್ಟಿ ಚಪ್ಪರಗಳನ್ನು ಹಾಕಿ ತುಂಬಾ ನೇತ್ರಾನಂದಕರವಾಗಿ ಮಾಡಿದ್ದರು ಶಿವಬೋಧಸ್ವಾಮಿಗಳವರು ಹೊಳೆಯ ಹತ್ತಿರ ಚಪ್ಪರವನ್ನು ಹಾಕಿಸಿ ದೇವಸ್ಥಾನದಲ್ಲಿ ತುಂಬಾ ಅಲಂಕಾರ ಮಾಡಿಸಿ ಅಮ್ಮನವರಿಗೆ ಬಹಳ ಚನ್ನಾಗಿ ಅಲಂಕಾರ ಮಾಡಿಸಿದ್ದರು. ಸ್ನಾನಾದಿಗಳನ್ನು ತೀರಿಸಿಕೊಂಡು ಸವಾರಿಯು ಅಮ್ಮನವರ ಸೇವೆಯನ್ನು ಕೈಗೊಂಡು, ಅಂಗಡಿ ಬೀದಿಯ ಮಾರ್ಗವಾಗಿ ಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನವನ್ನು ಕುರಿತು ತೆರಳಿದರು ಅಂಗಡಿ ಬೀದಿಯಲ್ಲಿ ಎರಡು ಪಾರ್ಶ್ವದಲ್ಲಿಯೂ ವರ್ತಕರು ತೋರಣಾದಿಗಳಿಂದ ಅಲಂಕಾರ ಮಾಡಿದ್ದರು. ಶ್ರೀಕಂಠೇಶ್ವರಸ್ವಾಮಿಯವರ ಸೇವೆಯನ್ನು ಕೈಗೊಂಡು ಮಹಾರಾಜರವರು ಮ್ಯಾನಾದಲ್ಲಿ ಕುಳಿತು ಶ್ರೀರಾಘವೇಂದ್ರಸ್ವಾಮಿಗಳವರ ಮಠಕ್ಕೆ ದಯಮಾಡಿ ಶ್ರೀಗಳವರ ಆಶೀರ್ವಾದವನ್ನು ಕೈಗೊಂಡು ಅರಮನೆಗೆ ೭ ಗಂಟೆಗೆ ದಯಮಾಡಿಸಿದರು. ಅರಮನೆಯಲ್ಲಿ ಸುವಾಸಿನಿಯರಿಗೆ ಸುವಾಸಿನಿ ಪೂಜೆಗಳೂ ದಂಪತಿ ಪೂಜೆಗಳೂ ಮಾಡಲ್ಪಟ್ಟವು ಬ್ರಾಹ್ಮಣರಿಗೆಲ್ಲಾ ಪರಶುರಾಮದೇವರ ದೇವಸ್ಥಾನದ ಬಳಿ ಸಮಾರಾಧನೆಯು ತುಂಬಾ ವಿಜೃಂಭಣೆಯಿಂದ ನಡೆಯಿತು. ಆ ದಿನ ಸ್ವಾಮಿಯೂ ಸ್ವಾಮಿಗಳವರೂ ದಯಮಾಡಿಸಿದ್ದರು ಸ್ಮಾರ್ತರ ಊಟದ ಕಡೆ ಮುನಸೀಫರೂ ಅಮಲ್ದಾರರವರೂ, ವೈಷ್ಣವರ ಕಡೆ ಪ್ಲೀಡರ್ ಗುರುರಾಯರೇ ಮುಂತಾದವರೂ ನಿಂತು ಏನೂ ಲೋಪವಿಲ್ಲದೆ ಸಮಾರಾಧನೆಯನ್ನು ಆಗಮಾಡಿಸಿದರು ಸಾಯಂಕಾಲ ೬ ಗಂಟೆಗೆ ಪೌರ್ಣಮಿ ರಥವು ಹೊರಟಿತು. ಬಹಳವಾಗಿ ಬಾಣಬಿರುಸುಗಳು ಹಾರಿಸಲ್ಪಡುತ್ತಿದ್ದವು ನಂತರ ೭ ಗಂಟೆಗೆ ಇಲ್ಲಿನ ಹಜಾಮರು ಹುವ್ವಿನ ಪಲ್ಲಕ್ಕಿ ಉತ್ಸವವನ್ನು ಮಾಡಿಸಿದರು. ಪಲ್ಲಕ್ಕಿಯನ್ನು ಹುವ್ವಿನಿಂದಲೂ ಚಿತ್ರವಿಚಿತ್ರವಾಗಿ ಕಾಗದಗಳಿಂದಲೂ ಅಲಂಕರಿಸಿದ್ದರು ಉತ್ಸವವು ಅರಮನೆಯ ಹತ್ತಿರ ಸುಮಾರು ೮½ ಗಂಟೆಗೆ ಸರಿಯಾಗಿ ಬಂತು ಮಹಾರಾಜರೇ ಮುಂತಾದವರು ಉತ್ಸವವನ್ನು ಪರಾಂಬರಿಸಿದರು. ಅರಮನೆ ಮುಂದೆ ಬಹಳವಾಗಿ ವಿಚಿತ್ರವಾದ ಬಾಣಬಿರುಸುಗಳು ೧ ಗಂಟೆ ವರಿಗೂ ಹಾರಿಸಲ್ಪಟ್ಟವು ಈ ಉತ್ಸವವನ್ನು ಪರಾಂಬರಿಸಿ ಪ್ರಸಾದವನ್ನು ಕೈಗೊಂಡು, ೯ ಗಂಟೆಗೆ ಮೋಟಾರ್ ಕಾರ್ ಗಾಡಿಯಲ್ಲಿ ಕುಳಿತು ಮಹಾರಾಜರವರು ಮೈಸೂರಿಗೆ ಪ್ರಯಾಣ ಮಾಡಿದರು. ಆ ದಿನ ನಮ್ಮ ಮಹಾರಾಜರವರ ದರ್ಶನವಾಗಿ ಈ ಊರಿನವರೆಲ್ಲಾ ಬಹಳ ಸಂತೋಷದಿಂದ ಇದ್ದರು ಪರಸ್ಥಳದವರೂ ಸಾವಿರಾರು ಮಂದಿ ಸೇರಿದ್ದರು.

ವಿದೇಶ ವರ್ತಮಾನಗಳು.

ಜರ್ಮನಿ ಚಕ್ರವರ್ತಿಯವರು ಜಪಾನ್ ಚಕ್ರವರ್ತಿಯವರಿಗೆ ಶ್ರೇಷ್ಠವಾದ ಆರು ಕಪ್ಪು ಕುದುರೆಗಳನ್ನು ಬಹುಮಾನಾರ್ಥವಾಗಿ ಕಳುಹಿಸಿಕೊಟ್ಟಿದಾರೆ.

****

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲಿನಲ್ಲಿ ಡ್ರೈಫಾಂಟೇನ್ ಪಟ್ಟಣದ ಒಂದು ಚಿನ್ನದ ಗಣಿಯಲ್ಲಿ ಕಳೆದ ವಾರ ಅನಾಹುತ ನಡೆದು ೬೮ ಮಂದಿ ಕೂಲಿಕಾರರು ಮೃತಪಟ್ಟರೆಂದು ತಂತೀವರ್ತಮಾನ ಬಂದಿದೆ

****

ಮಿಲಾನ್ ಮತ್ತು ಟ್ಯೂರಿನ್ ಪಟ್ಟಣಗಳಲ್ಲಿ ಸಂಗೀತ ವಿದ್ಯೆಯಲ್ಲಿ ತುಂಬಾ ಹೆಸರುವಾಸಿ ಪಡೆದಿದ್ದ ಸೇನಾರ್ ಟಮಾನೋ ಎಂಬುವವನು ಆ ಪಟ್ಟಣಗಳಲ್ಲಿರುವ ಬಡಬಗ್ಗರ ಜೀವನಕ್ಕಾಗಿ ತನ್ನ ಆಸ್ತಿಯಲ್ಲಿ ಎರಡು ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಬರೆದಿಟ್ಟಿದಾನೆ.

ರಷ್ಯಾ ಜಪಾನ್ ಯುದ್ಧದಲ್ಲಿ ರಷ್ಯಾದವರು ಹಿಡಿದುಕೊಂಡು ಹೋಗಿ ಸೆರೆಯಲ್ಲಿ ಹಾಕಿಕೊಂಡಿರುವ ಜಪಾನ್ ಸೈನಿಕರನ್ನು ವಾಪಸು ಕರೆಸಿಕೊಳ್ಳುವುದಕ್ಕೆ ಜಪಾನ್ ಸರ್ಕಾರದವರು ಹಡಗುಗಳನ್ನು ಗೊತ್ತು ಮಾಡಿದಾರೆ. ಅವರಲ್ಲಾ ೧೨೦ ಮಂದಿ ಉದ್ಯೋಗಸ್ಥರೂ ೨,೦೦೦ ಮಂದಿ ಸೈನಿಕರೂ ಇದ್ದಾರೆಂದು ತಿಳಿದು ಬಂದಿದೆ.

****

ಆಫ್ರಿಕಕ್ಕೆ ಸೇರಿದ ಸೋಮಾಲಿ ದೇಶದ ಮುಖಂಡನಾದ ಮುಲ್ಲಾ ಮಹಮ್ಮದನು ತನ್ನ ಹಿಂಬಾಲಕರ ಸಹಿತ ಮತ್ತೆ ಗ್ರಾಮಾಂತರಗಳ ಮೇಲೆ ನುಗ್ಗಿ ಲೂಟಿ ಮಾಡುತ್ತಾ, ಇಂಗ್ಲಿಷ್ ಮತ್ತು ಇಟಲಿ ಸರ್ಕಾರಗಳಿಗೆ ಸೇರಿದ ಪ್ರಜೆಗಳನ್ನು ಹಿಂಸೆ ಪಡಿಸುತ್ತಿದಾನೆ ಆ ಎರಡು ರಾಜ್ಯಗಳವರೂ ತಮ್ಮ ತಮ್ಮ ಸ್ವಾರ್ಥಗಳನ್ನು ಕಾಪಾಡಿಕೊಳ್ಳುವುದಕ್ಕೆ ಸನ್ನಾಹ ಮಾಡಿದಾರೆ

****

ಕಳೆದವಾರ ಜಪಾನ್ ಚಕ್ರವರ್ತಿಯವರು, ರಾಜವರ್ಗದವರು, ಪ್ರಧಾನ ಮಂತ್ರಿಯೂ, ಇತರ ಮಂತ್ರಿಗಳೂ, ಈ ಮೊದಲಾದವರೆಲ್ಲಾ ಸೇರಿ ವಿಶೇಷವಾದ ಉತ್ಸವದಲ್ಲಿ ಸಕಲ ಬಿರುದುಗಳೊಡನೆ ಹೊರಟು ಐಸೆ ಎಂಬ ದೇವಾಲಯಕ್ಕೆ ಹೋಗಿ ತಮ್ಮ ರಾಜ್ಯಕ್ಕೆ ಜಯಪ್ರದವನ್ನು ದಯಪಾಲಿಸಿದ್ದಕ್ಕಾಗಿಯೂ ಈರಾರಾಗಿ ಪ್ರಜಾನೆಮ್ಮದಿಯು ಯಥಾಪ್ರಕಾರ ನೆಲೆಗೊಂಡದ್ದಕ್ಕಾಗಿಯೂ ಪಿತೃಗಳಿಗೆ ಪ್ರಾರ್ಥನೆಗಳನ್ನೂ ವಂದನೆಗಳನ್ನೂ ಸಮರ್ಪಿಸಿ ಬಂದರು.

****

ವಿಲಾಯಿತಿಯ ಮಹಾರಾಜಾ ಚಕ್ರವರ್ತಿಯವರು ಜಪಾನ್ ಚಕ್ರವರ್ತಿಯವರಿಗೆ ಒಂದು ಶ್ರೇಷ್ಠವಾದ ಬಿರುದನ್ನು ದಯಪಾಲಿಸುತ್ತಾರೆ. ಪ್ರಿನ್ಸ್ ಆರ್ಥರ್ ಆಫ್ ಕನ್ನಾಟ್ ಎಂಬ ರಾಜಕುಮಾರರು ಕೆಲವು ಉದ್ಯೋಗಸ್ಥರ ಸಹಿತ ವಿಲಾಯಿತಿಯಿಂದ ಜಪಾನಿಗೆ ಹೋಗಿ ದೊಡ್ಡ ದರ್ಬಾರಿನಲ್ಲಿ ಆ ಬಿರುದನ್ನು ಚಕ್ರವರ್ತಿಯವರಿಗೆ ಒಪ್ಪಿಸುತ್ತಾರೆ. ಇವರೆಲ್ಲಾ ಮುಂದಿನ ಜನವರಿ ತಿಂಗಳ ಎರಡನೇ ವಾರದಲ್ಲಿ ವಿಲಾಯಿತಿಯಿಂದ ಹೊರಡುವರು.

****

ಫಿಲಿಪ್ಪೈನ್ ದ್ವೀಪಗಳಿಗೆ ಸೇರಿದ ಮನಿಲ್ಲಾ ಪಟ್ಟಣದಲ್ಲಿ ಭಯಂಕರವಾದ ಸುಂಟರಗಾಳಿಯು ಪ್ರಾಪ್ತವಾಗಿ ಒಂದು ದೋಣಿಯು ಸಮುದ್ರದಲ್ಲಿ ಮುಳುಗಿಹೋಯಿತು. ಅದರಲ್ಲಿದ್ದ ೩೧ ಜನರೂ ಪ್ರಾಣಕಳೆದುಕೊಂಡರು ಸಾಸೋರ್ಗಾನ್‌ನಲ್ಲಿ ೧೭ ಜನರು ಸುಂಟರಗಾಳಿಗೆ ಸಿಕ್ಕಿ ಸತ್ತು ಹೋದರು. ಆ ಪ್ರಾಂತ್ಯ ಆಧಾರವಾಗಿ ಬೆಳೆ ಮಾಡಿದ್ದ ನಾರಿನ ತೋಟಗಳೆಲ್ಲಾ ಕೊಚ್ಚಿ ಹೋದದ್ದರಿಂದ ಪ್ಲಾಂಟರುಗಳಿಗೆ ೩೦ ಲಕ್ಷ ರೂಪಾಯಿಗಿಂತ ಹೆಚ್ಚಾಗಿಯೇ ನಷ್ಟವಾಯಿತು.

****

ಲಂಡನ್ ಪಟ್ಟಣದಲ್ಲಿ ವಿಕ್ಟೋರಿಯಾ ಮಹಾರಾಣಿಯವರ ಹೆಸರಿನ ಮೇಲೆ ಕಟ್ಟುವ ಬಂಗಲೆ ಉದ್ಯಾನವನ ಭಾವಪ್ರತಿಮೆ ಮುಂತಾದ ಶಾಶ್ವತ ಕಾರ್ಯಗಳ ಖರ್ಚಿಗೆ ಆಸ್ಟ್ರೇಲಿಯಾ ಗವರ್ನಮೆಂಟಿನವರು ೩,೭೫,೦೦೦ ರೂಪಾಯಿ ಕಳುಹಿಸಿ ಕೊಡಬೇಕೆಂದು ಅಲ್ಲಿನ ಮುಖ್ಯ ಮಂತ್ರಿಯು ಸಭೆಯಲ್ಲಿ ಸೂಚಿಸಿದ್ದಕ್ಕೆ ಮಿ ವಾಟ್ಸನ್ ಎಂಬೊಬ್ಬ ಮೆಂಬರು ಕೂಡದೆಂದು ಪ್ರತಿಭಟಿಸಿದನು ಈ ಚರ್ಚೆಯು ಹ್ಯಾಗೆ ತೀರ್ಮಾನವಾಯಿತೋ ಇನ್ನೂ ಪ್ರಕಟವಾಗಿಲ್ಲ.

****

ಲಂಡನ್ ಪಟ್ಟಣದಲ್ಲಿ ಕೂಲಿ ಮೊದಲಾದದ್ದೇನೂ ಸಿಕ್ಕದೆ ಜೀವನಕ್ಕೆ ಮಾರ್ಗವಿಲ್ಲದೆ ಅಲೆಯುತ್ತಿರುವವರ ಸಂಖ್ಯೆ ಹೆಚ್ಚಾಗಿಯೂ ಅವರ ಹೊಟ್ಟೆಬಟ್ಟೆ ಆಧಾರವಾಗಿಯೂ ಇರೋಣದರಿಂದ ಚಕ್ರವರ್ತಿ ಸಾರ್ವಭೌಮರವರು ಅಂಥವರ ಪೋಷಣೆಗೋಸ್ಕರ ಒಂದು ಧರ್ಮಫಂಡನ್ನು ಮಾಡಿ, ಹಣ ಕೂಡಿಸಬೇಕೆಂದು ಅಪ್ಪಣೆ ಕೊಡಿಸಿದಾರೆ ವಿಲಾಯಿತಿಯ ರಾಜವರ್ಗದವರು ಮೊದಲುಗೊಂಡು ಎಲ್ಲರೂ ಈ ಫಂಡಿಗೆ ಚಂದಾ ಕೊಡುತ್ತಿರುವರು. ಇದುವರೆಗೆ ಈ ಫಂಡಿನಲ್ಲಿ ೧೯ ಲಕ್ಷ ರೂಪಾಯಿ ತನಕ ಕೂಡಿರುತ್ತದೆ.

****

ರಷ್ಯಾ ಚಕ್ರಾಧಿಪತ್ಯದಲ್ಲಿ ಪ್ರಜಾ ನೆಮ್ಮದಿಗೆ ಭಂಗ ಉಂಟಾಗಿದೆ ಸರ್ಕಾರದವರು ದಂಗೆಯನ್ನು ಅಡಗಿಸುವುದಕ್ಕೆ ಕೇವಲ ಕಡೆಗಳಲ್ಲಿ ಅಶಕ್ತರಾಗಿರುವಂತೆಯೂ ತೋರುವುದು ಆ ರಾಜ್ಯದಲ್ಲಿರುವ ನಾನಾ ಪಂಗಡದವರು ಯೆಹೂದ್ಯ ಜನರ ಮೇಲೆ ಬಿದ್ದು ಅವರ ಸಂಸಾರಗಳನ್ನೇ ನಾಶ ಮಾಡುತ್ತಿದಾರೆ. ಅನೇಕ ಸ್ಥಳಗಳಲ್ಲಿ ಯೆಹೂದ್ಯ ಪ್ರಜೆಗಳಿಗುಂಟಾಗಿರುವ ಕಷ್ಟ ನಷ್ಟಗಳು ಇಷ್ಟಿಷ್ಟೆಂದು ವಿವರಿಸಕೂಡದು ವಿಲಾಯಿತಿ ರಾಜ್ಯದವರೂ ಇತರ ರಾಜ್ಯಗಳವರೂ ಅವರ ಕಷ್ಟ ನಿವಾರಣೆಗೆ ಪ್ರತೀಕಾರ ಮಾಡಬೇಕೆಂದು ಸಭೆಗಳನ್ನು ಕೂಡಿಸಿ ಚಂದಾ ಕೂಡಿಸುತ್ತಿದಾರೆ.

****

ಬೆಹರಿಂಗ್ ಎಂಬೊಬ್ಬ ಪ್ರಸಿದ್ಧ ವೈದ್ಯನು ಕ್ಷಯರೋಗವನ್ನು ವಾಸಿಮಾಡುವುದಕ್ಕೆ ಔಷಧ ವಿಶೇಷವನ್ನು ಕಂಡು ಹಿಡಿದಿರುತ್ತಾನೆ ಪ್ಯಾರಿಸ್ ಪಟ್ಟಣದಲ್ಲಿ ನಡೆದ ಪಂಡಿತರುಗಳ ಸಭೆಯೊಳಗೆ ಆ ಪಂಡಿತನು ಈ ಸಂಗತಿಯನ್ನು ಸೂಕ್ಷ್ಮವಾಗಿ ತಿಳಿಸಿದನು. ಡಾಕ್ಟರುಗಳೆಲ್ಲಾ ಅದು ಸರಿಯಾದ ಚಿಕಿತ್ಸೆಯೆಂದು ಅಭಿಪ್ರಾಯ ಪಟ್ಟರು. ಆದರೆ ಆ ಪಂಡಿತನು ಚಿಕಿತ್ಸೆಯ ವಿಧಾನ ಮುಂತಾದ್ದನ್ನು ಯಾರಿಗೂ ತಿಳಿಸುವುದಿಲ್ಲವೆಂದು ಹೇಳಿದನು. ಈ ಸಂಗತಿಯನ್ನು ಅಮೇರಿಕದ ಒಬ್ಬ ಶ್ರೀಮಂತನು ಕೇಳಿ ಬೆಹರಿಂಗ್ ಡಾಕ್ಟರನ್ನು ಕುರಿತು—ನೀನು ಕಂಡು ಹಿಡಿದಿರತಕ್ಕ ಚಿಕಿತ್ಸೆಯನ್ನು ಪ್ರಕಟಪಡಿಸುವುದಾದರೆ ನಿನಗೆ ಒಂದೂವರೆ ಲಕ್ಷ ದ್ರವ್ಯ ಇನಾಮು ಕೊಡುತ್ತೇನೆಂದು ಹೇಳಿಕಳುಹಿಸಿದನು. ಆತನು ಅದಕ್ಕೂ ಒಪ್ಪದೆ ಇರುತ್ತಾನೆ.

ಇಂಡಿಯನ ವ್ಯವಸಾಯ ಮತ್ತು ಸಹಾಯಕ ಆಫೀಸು

10

[ಸ್ಥಾಪಿತವಾದದ್ದು ೧೮೯೦ರಲ್ಲಿ]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭಕವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು

ಈ ಆಫೀಸಿನ (\ ) ತರಗತಿಗೆ ಸೇರಿದವರು ಪಡೆಯಬೇಕೆಂದ ಅಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆ ಯಾನಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ [illegible]ನ್ನು ಮಾತ್ರವೇ ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರರೀತಿಯಾಗಿ ನಡಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು ವ್ಯವಸಾಯ ನಿಮಿತ್ತವಾಗಿ ನಾವು W I P ರೈಲ್ವೆ ಹಳ್ಳದಲ್ಲಿರುವ "ಕೊಲ್ಹಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು [illegible] ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ ಅವರು ಪಸ್ತಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆಯುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭಕ್ಕೆ ತೃಪ್ತಿಕರವಾಗಿ ಕಾಣದೆಬಾರದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆಯತಕ್ಕದ್ದು

ವಿಳಾಸ —The Manager
The India Agricultural and Helping Office,
Vengurla Post, Bombay Presidency

ಜ್ವರಹರಿ 1

ಇದು ಸಾಧಾರಣ ಜ್ವರ, ಚಳಿಜ್ವರ, ಮೈಲಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿರುವ ಮರಂಮತ್ [illegible] ಸಬ್ ಓವರ್ಸಿಯರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಜ್ವರಹರಿ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆರೋಗ್ಯ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ಕ್ಕೆ ೪ ಆಣೆ, ೧ ರೂ , ೧—೪ ರೂ , ಡ ೨—೧ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಫೋಸ್ಟೇಜು ಮಾಫಿ ಬಿಡಲಾಗುವದು.

\$\$\$\$\$\$\$\$

ಅಮೃತಕರ್ಪೂರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಮುಂತಾದ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯೌಷಧವಾಗಿ ಪರಿಣಮಿಸಿ , ಕಾಲರೋಗದೊಳಗೂ ಕೂಡ ಇದು ಬೆಂಗಳೂರು ತಿಂಗಳಿಗೆ ಒಂದಾವರ್ತಿ ಹೊಡೆದು ಆಗುವ ಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತನ್ನಿಯ ೨೦ ಕರ್ಪೂರವನ್ನು ನಾನೂ ನನ್ನ ಕಾರ್ಬೇರಾರ ಮ್ಯಾನೇಜರ ಆಸ್ಪತ್ರೆಯಲ್ಲಿ ಅನೇಕ ಪರಾಧಗಳಲ್ಲಿ ಉಪಯೋಗಿಸಿ, ಅಜೀರ್ಣ ಭೇದಿ, ಅಜೀರ್ಣ ರೋಗಿಸ್ಟರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗಕ್ಕೆ ಗುಣವಾಗುತ್ತದೆ ಇದು ಬಹು ಒಳ್ಳೇ ಔಷಧವೆಂದ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ — ಪಡೆಯುವರ [illegible] ಔಷಧಗಳ ಆಫೀಸು,

ಕೆಂಪ್ ಅಂಡ್ ಕಂ, ಮುಂಬಾಯ್.

ದೃಷ್ಟಿಗಳ ಕಳೆ

3

ದೂರದ ಭಾಗಗಳಿಂದ ಕಾಗದಗಳ ಪೂರೈಸ ಶ್ರೀಮಂತ ಸಂಪೂರ್ಣವಾದ ಈ ಪುಸ್ತಕದಲ್ಲಿ ಒಟ್ಟು ಸುಮಾರು ೨,೦೦೦ ದೃಷ್ಟಿಗಳ ಉತ್ತರಗಳೊಡನೆ ಕೂಡಿದೆ. ಕಾಗದ ಪತ್ರ ಪ್ರತಿ ೧ಕ್ಕೆ ರೂ. ೧—೪—೦ ಮಧ್ಯಮ ಪತ್ರ ಪ್ರತಿ ೧ಕ್ಕೆ ರೂ ೧. ವಿದ್ಯಾರ್ಥಿಗಳಿಗೆ ಬಹಳ ಅಗತ್ಯವಾದದ್ದು. ವಿಳಾಸ—ಸಿ ಕಲ್ಲಪ್ಪ, [illegible] ಸ್ಟೋರ್, ನಂಜನಗೂಡು

ಸನ್ ೧೯೦೬ನೇ ಇಸವಿಯ

ಎಂ ನಂ೮ ಎಫ್ ನಂ೭ ಜಿ ನಂ೭ ಸಿ ನಂ೭ ಡಿ [illegible] ನಂ೭ ಡಿ ನಂ೭

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಉದ್ಯೋಗಸ್ಥರು, ಕಾಲೇಜ್ ವಿದ್ಯಾರ್ಥಿಗಳು, ದೊಡ್ಡಮನುಷ್ಯರು, ಮುಂತಾದ ಸಕಲರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅನೇಕವಾದ ವಿಷಯಗಳು —ಸ್ಥಾನದ ನಂ ೮ ಪಂಚಾಂಗ [illegible], ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, [illegible] ರುಸುಂ, ಸ್ಟಾಂಪು [illegible], [illegible] ಮುಖ್ಯ ವಿಷಯಗಳು, [illegible] ಪಂಚಾಂಗ, [illegible] ಫಲ, [illegible], [illegible] ರ ಕೋಲೆ, ದಿನಸಂಬಳಪಟ್ಟಿ. [illegible]. ಇನ್ನೂ ಅನೇಕ ವಿಷಯಗಳಿವೆ. [illegible] ಹಾಕಿದೆ, [illegible].

ಎ ನಂಬರ್ [illegible]
ಎಫ್ ,, ,, [illegible] ,, ,,
ಬಿ ,, [illegible] ,, [illegible]

ಪೋಸ್ಟ್ ಚಾರ್ಜ್ ಬೇರೆ. [illegible] ಸಿದರೆ [illegible] ಮೂಲಕ ಕಳುಹಿಸ[illegible]

ನಮ್ಮ ವಿಳಾಸ—[illegible]

[illegible]

ಹೊಸ ಔಷಧಿ.

ಕಷ್ಟದ ಪರಿಹಾರ

ಆರೋಗ್ಯದ ರೋಗ ವಾಸಿ ಮಾಡುತ್ತೆ.

ಈ ಔಷಧಿಯು ಮಹಾ, ಅಜೀರ್ಣ, ಕಾಮಾಲೆ, ಅಕ್ಕತ್ತೆ, ಡಯಾಬಿಟಿಸ್ ಜಾಡ್ಯ, ವಿಷ್ಯಾಕಾರ, [illegible], ಮುಂತಾದ ಸ್ತ್ರೀಗಳಲ್ಲೆಲ್ಲಾ ಇದ್ದೇ ಇರುವಂಥಾ [illegible] ಪ್ರವರ ಕ್ಯಾಪದ [illegible] ಇಲ್ಲವೆಂಬುವದು [illegible].

ಈ ಕೈಲಿನ ಔಷಧಿಯಲ್ಲಿ [illegible] ಈ ಔಷಧ ಇದನ್ನು [illegible] ಮನುಷ್ಯರು. [illegible], ಮುಂತಾದವರು ಇದರ ಗುಣವನ್ನು [illegible] ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. [illegible] ಇದನ್ನು [illegible] ಕೂಡಲೇ ವಾಸಿಯಾಗುವದು

ಈ ಕೈಲಿನ ಆರೆ ಪರಿಕೋತ್ತೆ, ನೋಟನೋತ್ತೆ, [illegible], ಮೂಲವ್ಯಾಧಿ, ಅಜೀರ್ಣ, ವಾಯುಗಳು, ಸತ ಹೊಡೆಯುವದು, ಉಬ್ಬಸ, ಕೆಮ್ಮು, ಗುಳ್ಳೆಗಳು, ಹಲ್ಲುನೋವು, [illegible], ಗಾಯಗಳು, ಸೆಳೆವು, ರೋಗಗಳು, [illegible] ಮತ್ತು ಹೀಗೆ ಕಡಿತದಲ್ಲಿ, ಚಿಕಿತ್ಸೆಯನ್ನು, [illegible] ಕೂಡದು, ಕಡ್ಡಿ ಗಾಯ—ಇವೇ ಮೊದಲಾದ [illegible] ಮುಟ್ಟದಿರಸುತ್ತದೆ. [illegible] ಕೊಂಡು ಮೂಲಿಗೆ ಸೇರುವದಿಲ್ಲ.

ಕ್ರಯ —ಸಣ್ಣ ಸೀಸೆ ೧ಕ್ಕೆ ೧ ರೂ , ದೊಡ್ಡದಕ್ಕೆ ರೂ ೨—೪ ಆ , ಒಂದೇ ಸಲ ೨ ಸೀಸೆ ತರಿಸಿಕೊಂಡರೆ ಪೋಸ್ಟು ಖರ್ಚು ಮಾಫಿ ಬಿಡುತ್ತಾರೆ ರೂ ೨—೪ [illegible] ೧ ರೂ. [illegible] ಕ್ಕೆ. ಈ ರೂ ೨—೪ ಆ. [illegible] ಪೋಸ್ಟ್ ಖರ್ಚು ಮಾಫಿ ಬಿಡುತ್ತಾರೆ.

\$\$\$\$\$\$\$\$

ಹೋಮಿಯೋಪತಿ ಔಷಧಗಳು.

ಈ ಕೈಲಿನ ಹಳೇ [illegible] ಕಾಯಿಲೆಗಳ [illegible] ಖರ್ಚು ಒಡೆದ ಕಡೆ ಇದನ್ನು ಹಚ್ಚಿದರೆ [illegible]. ಇದರಲ್ಲಿ ರೋಗಿಯ ಗುಣಗಳ ಬಹು [illegible]. [illegible] ಇದರಲ್ಲಿ ಇನ್ನೂ ಗುಣಗಳು [illegible] ವನ್ನು [illegible] ಸೇವಿಸತಕ್ಕಂಥದ್ದು ಸೀಸೆಯಲ್ಲಿ ಹಂಚಿ ೪ ಆಣೆಗೂ, ೧ ರೂ. ಗೂ ಒಂದರಂತೆ ಮಾರುವೆವು. ೨—೪ [illegible] ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರವನ್ನೂ, ಸರ್ಟಿಫಿಕೇಟುಗಳನ್ನೂ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ —ಹೋಮಿಯೋಪತಿ ಆಫೀಸು. [illegible], ಮುಂಬಾಯ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

೩—11—1905 ರಿಂದ ೧೦—11—1905 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಸತ್ತದ್ದು	ಹೊಸ ಕೇಸು
ಬೆಂಗಳೂರು ಪಟ್ಟಣ	16	8	27
ಮೈಸೂರು ,,	0	0	9[illegible]
ಬೆಂಗಳೂರು ಡಿಸ್ಟ್ರಿಕ್ಟು	[illegible]	[illegible]	15[illegible]
ಮೈಸೂರು ,,	[illegible]	[illegible]0	1[illegible]8
ಕೋಲಾರ್ ,,	0	0	30
ಕೋಲಾರ್ ಚಿನ್ನದ ಗಣಿಗಳು	1	[illegible]	26
ತುಮಕೂರು ಡಿಸ್ಟ್ರಿಕ್ಟು	10	5	40
ಹಾಸನ ,,	2	1	[illegible]
ಚಿತ್ರದುರ್ಗ ,,	4	2	68
ಕಡೂರ್ ,,	5	0	47
ಶಿವಮೊಗ್ಗ ,,	3	8	97
ಜುಮ್ಲಾ	[illegible]8	5[illegible]	[illegible]

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರದ ಕಾರ್ತೀಕ ಬಹುಳ ಏಕಾದಶಿ ಗುರುವಾರದಿಂದ ಮಾರ್ಗಶಿರ ಶುದ್ಧ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೫ ನೇ ಇಸವಿ ನವಂಬರ್

ತಾ.	ವಾರ.	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಪು
[illegible]	ಗುರು	ಏಕಾದಶಿ	[illegible] 2[illegible]	ಉತ್ತರ	5[illegible] 31	9
[illegible]	ಶುಕ್ರ	ತ್ರಯೋದಶಿ	[illegible]1 [illegible]0	ಹಸ್ತ	1[illegible] 18	9
[illegible]	ಶನಿವಾ	ಚತುರ್ದಶಿ	[illegible]	ಸ್ವಾತಿ	11 36	10
[illegible]	ರವಿವಾ	ಅಮಾ	10 2[illegible]	[illegible]	7 [illegible]	11
[illegible]	ಸೋಮ	ಪಾಡ್ಯ	11 [illegible]	ಅನು	3 18	12
[illegible]	ಮಂಗಳ	ಬಿದಿಗೆ	25 10	ಜ್ಯೇ	0 12	13
[illegible]	ಬುಧ	ತದಿಗೆ	[illegible] 1[illegible]	ಪೂಷಾ	5[illegible] 2[illegible]	14

[illegible] ವೈಷ್ಣವಪಾರಾಣಾಮೇಕಾದಶೀ

[illegible] ಸರ್ವತ್ರದರ್ಶಾಮಾವಾಸ್ಯ [illegible]

[illegible] ಚಂದ್ರೋದಯ

[illegible]

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
[illegible] ಅಕ್ಕಿ ಪಲ್ಲ ೧ಕ್ಕೆ	ರೂ	೧೬—೪—೦	೧೩—[illegible]
[illegible] ಅಕ್ಕಿ ಅವಲ್	..	೧೨—೮—೦	೧೪—[illegible]
,, ಮಧ್ಯಮ		೧೨—೨—೦	೧೩—[illegible]
ಜಾವಾರ್ ಅಕ್ಕಿ	..	೧೨—೦—೦	೧೨—೦[illegible]
ಸಣ್ಣಕ್ಕಿ ಅವರೆ	..	೦೮—೦—೦	೦೫—[illegible]
,, ಮಧ್ಯಮ	..	೦೩—೪—೦	೦೩ ೪[illegible]
[illegible] ಪಲ್ಲ ೧ಕ್ಕೆ	..	೦೦ ೦ ೦	೦೦ ೪[illegible]
,, ಮಧ್ಯಮ		೦೦—೪—೦	೦೦—೦[illegible]
[illegible] ಪಲ್ಲ ೧ಕ್ಕೆ	..	೬—೮—೦	೬—[illegible]
ರಾಗಿ	..	೬—೦—೦	೫—೪[illegible]
ಹುರುಳಿ	..	೬—೦—೦	೬—೪[illegible]
[illegible] ಪಲ್ಲ ೧ಕ್ಕೆ	..	೧೦—೦—೬	೯—೪[illegible]
[illegible]	..	೪ ೧೨ ೦	೯—[illegible]
ತೊಗರಿ	..	೯ ೧೨—೦	೧೦—೪[illegible]
[illegible]	..	೧೦ ೦—೦	೯—೪[illegible]
[illegible]	..	೧೦ ೦—೦	೧೦—೪[illegible]
[illegible]	..	೦೬ ೦—೦	೦೫—[illegible]
[illegible]	..	೧೦—೦ ೦	೯—೪[illegible]
[illegible] ಸೇರಿಗೆ	..	೧೨—೪—೦	೧೨—[illegible]
[illegible] ಮಣ ೧ಕ್ಕೆ	..	೩—೪—೦	೩—೦[illegible]
[illegible]	..	೪—೪—೦	೩—೦[illegible]
,, ಮಧ್ಯಮ	..	೩—೧೨—೦	೩—೪[illegible]
[illegible]	..	೭—೬—೦	[illegible]
[illegible] ಮಣ ೧ಕ್ಕೆ	..	೪—೪ ೦	೪—[illegible]
[illegible] ,,	..	೫—೦—೦	೪—[illegible]
[illegible] ಪಲ್ಲ ೧ಕ್ಕೆ	..	೧೦—೪—೦	೧೦—[illegible]
[illegible] ,,	..	೨—೦—೦	೪—೪[illegible]
[illegible]	..	೧ ೦—೦	೦—೦[illegible]
,, [illegible]	..	೦—೧೪—೦	೦—೧೧[illegible]
[illegible]	..	೧೨ ೪—೦	೧೨—೪[illegible]
[illegible] ಪಲ್ಲ ೧ಕ್ಕೆ		೫—೦—೦	೪—೧೨[illegible]
[illegible] ೧೦೦ ಕ್ಕೆ		೫—೦—೦	೩—೦[illegible]
[illegible] ಮಣ ೧ಕ್ಕೆ	..	೧—೦—೦	೦—೦[illegible]
[illegible] ಮಣ ೧ಕ್ಕೆ	..	೦—೧೪—೦	೦—೦[illegible]
[illegible] ([illegible]) ಕಂಡ್ಗ	..	೦೫—೪—೦	೦೪—[illegible]
,, ,, ಜವೆ	..	೦೫ ೦೦—೦	೦೬—[illegible]
,, ,, ಗಟ್ಟಿ ತೊಲ ೧ಕ್ಕೆ	..	[illegible]—೦—೦	[illegible]
[illegible] ತೊಲ ೧೦೦ ಕ್ಕೆ	..	[illegible]—೦—೦	[illegible]

Printed and Published by the Rev H Spencer, BA the Proprietor and Manager, Wesleyan Mission Press Mysore 22/11,1905

ವೃತ್ತಾಂತ ಪತ್ರಿಕೆ.

REGISTERED. M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ನವಂಬರ್ ತಾರೀಖು ೩೦ ನೇ ಗುರುವಾರ. — ಸಂಚಿಕೆ ೨೩

ಗೃಹಕೃತ್ಯವಿಚಾರದ ನೋಟೀಸು.

ಬಾಬಾಂಜನಗರದ ತಾಲ್ಲೋಕು ದೊಡ್ಡಾಯಪೇಟೆಯಲ್ಲಿ ಇದ್ದ ಸುಬ್ಬಶೆಟ್ಟಿ ಮಗ ವೆಂಕಟಶೆಟ್ಟಿ ಫವತಿ ಇವನ ಹೆಂಡತಿ ವೆಂಕಮ್ಮನೆಂಬುವಳು ತನ್ನ ಮಗಳು ನೀಲಮ್ಮನೆಂಬ ಮೈನರಿಗೂ ವಾರಸುದಾರರಿಗೂ ನಷ್ಟಪಡಿಸುವ ಇರಾದೆಯಿಂದ ವೆಂಕಟಶೆಟ್ಟಿ ಬಾಬ್ತು ಆಸ್ತಿಗಳನ್ನು ಖರೀದಿ ಭೋಗ್ಯ ಅಧಾರ ಮಾಡುವ ಪ್ರಯತ್ನಪಟ್ಟು ಇರುವಳೆಂತ ತಿಳಿಯಬರುತ್ತೆ. ಇವಳಿಂದ ಯಾರು ಕ್ರಯ ಭೋಗ್ಯ ಮಾಡಿಕೊಂಡವರಿಗೆ ಯಾವ ಹಕ್ಕೂ ಉಂಟಾಗಲಾರದು ಎಂದು ನೀಲಮ್ಮನ ಗಾರ್ಡಿಯನ್ ಟಾಬಾರಾಜು ಪೇಟೆಯಲ್ಲಿರುವ ಮುದ್ದಶೆಟ್ಟಿ ಮಗ ರಂಗಶೆಟ್ಟಿಯಾದ ನಾನು ಈ ಮೂಲಕ ತಿಳಿಸುತ್ತೇನೆ.

ರಾಮು ರಂಗಶೆಟ್ಟಿ.

ಗೃಹಕೃತ್ಯವಿಚಾರದ ನೋಟೀಸು.

ಶಿವಮೊಗ್ಗ ನರಶೀಪುರದ ತಾಲ್ಲೂಕು ತಲಕಾಡಿನಲ್ಲಿರುವ ಕೃಷ್ಣ ಚನ್ನಬಸವೈಯ್ಯನ ಮಗ ಕಾಡಬಸವೈಯ್ಯನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ —ನನ್ನ ತಮ್ಮ ಮೃತ ಬಸವೈಯ್ಯನಿಗೆ ನನ್ನ ಸೋದರ ಮಗ ಚನ್ನಬಸವೈಯ್ಯನು ದತ್ತು ಪುತ್ರನಾಗಿರುತ್ತಾನೆ. ದತ್ತು ಮಗನಿಗೂ ನನಗೂ ವೈಮನಸ್ಯ ಬರಬೇಕೆಂಬ ಇರಾದೆಯಿಂದ ಫವತಿಯಾದ ಸದರಿ ನನ್ನ ತಮ್ಮನ ಹೆಂಡತಿ ಗಿರಿಜಮ್ಮನು ಈ ಸ್ವತ್ತನ್ನು ಗಂಡನ ಸಾಲವಿದೆಯೆಂಬ ನೆಪದ ಮೇಲೆ ಮಾರುವುದಕ್ಕೆ ಪ್ರಯತ್ನ ಪಟ್ಟಿದ್ದಾಳೆ. ಒಂದು ಗದ್ದೆಯನ್ನು ಮಾತ್ರ ೬ ವರ್ಷಕ್ಕೆ ಇಳಿ ಭೋಗ್ಯಕ್ಕೆ ಕೊಟ್ಟಿದ್ದು ಈ ಸಾಲ ತೀರಿ ಹೋಗುತ್ತೆ. ನಾನೇ ಅದರೂ ಇಳಿ ಭೋಗ್ಯಕ್ಕೆ ತೆಗೆದುಕೊಂಡು ಸಾಲ ತೀರಿಸಲು ಸಿದ್ಧನಾಗಿದ್ದೇನೆ. ಸದರಿಯವಳು ಕೋರ್ಟಿನ ಕ್ರಯಪತ್ರ ಆಸಿವ ವಾದದ್ದು ಈ ಗ್ರಾಮದ ಎಸ್ಟೇಟ್ ಶ್ರೀಗೌಡ ನನಗಾಗದ ಇಸಂ ಇತರರು ಇವಳಿಗೆ ದುರ್ಬೋಧನೆ ಮಾಡಿ, ಕ್ರಯ ಮಾಡಿಸುತ್ತಿದ್ದಾರೆ. ಇವಳಿಂದ ಸ್ವತ್ತನ್ನು ತೆಗೆದುಕೊಂಡವರಿಗೆ ಯಾವ ಹಕ್ಕೂ ಬರುವುದಿಲ್ಲ.

೨೫—೧೧—೧೯೦೫. (ರುಜು) ಕಾಡಬಸವೈಯ್ಯ.

ಸಂಪನ್ನ ಪುಸ್ತಕ ಟೋಪಿ ದಾರವು ಸೀಮೆಯಿಂದ

ಈಗತಾನೇ ಬಂದಿದೆ.

(೧) ಸ್ವೆಟರ್ ಎಂಬ ಉಳಿದ ಮಾರ್ಕ ಬೇಟ ವುಲ್ ದಾರವು ಪೌಂಡ್ ೧ಕ್ಕೆ ೧—೧೨—೦ ಕೆಂಪು ಕಪ್ಪು ಮಿಕ್ಸ್ಡ್ ಹಸ್ಸಿ ಕೆಂಪು

(೨) ಇದಕ್ಕೂ ಹಸನಾದ್ದು ಪೌಂಡ್ ೧ಕ್ಕೆ ೧—೧೪—೦ ಕೆಂಪು ಕಪ್ಪು ಯಳ್ಳ ಕೆಂಪು

(೩) ಸಂಬರು ವುಲ್ ಪೌಂಡ್ ೧ಕ್ಕೆ ೨—೦—೦ ಯಳ್ಳೆ ಹಸಿರು ಮಾತ್ರ ಎರಡು ಬಣ್ಣ.

(೪) ಸಂಬರು ಸೋಮರ್‌ಸೆಟ್ ವುಲ್ ದಾರ ಪೌಂಡ್ ೧ಕ್ಕೆ ೩—೪—೦.

ವುಲ್ ದಾರದ ನಮೂನೆ ಟೋಪಿಗಳು.

ಡಜನ್ ೧ಕ್ಕೆ ೭—೦—೦, ೭—೮—೦, ೯—೦—೦, ೧೦—೦—೦ ೧೨—೦—೦, ೧೩—೦—೦, ೧೬—೮—೦, ೨೯—೦—೦

ಮಕ್ಕಳಿಗೆ ಮತ್ತು ದೊಡ್ಡವರಿಗೆ ಆಗತಕ್ಕ ವುಲ್‌ನಲ್ಲಿ ತಯಾರಾದ ನೈಟ್‌ಕ್ಯಾಪ್‌ಗಳು.

ಒಂದು ತಿಂಗಳಿಂದ ವರುಷದ ಮಕ್ಕಳಿಗೆ ಆಗತಕ್ಕದ್ದು ೧ಕ್ಕೆ ೦—೭—೦.

ಒಂದು ವರುಷದಿಂದ ಐದುವರುಷದ ವರಿವಿಗೆ ಆಗತಕ್ಕದ್ದು ೧ಕ್ಕೆ ೦—೧೨—೦.

೫ ರಿಂದ ೧೦ರ ವರಿವಿಗೆ ಆಗತಕ್ಕದ್ದು ೧ಕ್ಕೆ ೦—೧೪—೦.

೧೦ ರಿಂದ ೨೫ರ ವರಿವಿಗೆ ಆಗತಕ್ಕದ್ದು ೧ಕ್ಕೆ ೧—೦—೦.

ಕಾಂಫೂರ್ ತರದಾ ವುಲ್ ಟೋಪಿಗಳು.

೧ಕ್ಕೆ ೦—೧೦—೦, ೦—೧೨—೦, ೦—೧೪—೦, ೧—೦—೦

ಶಿರಿವಾಲ್ ಶ್ಯಾಲುಗಳು ಕೆಂಪು ಕೇಸರಿ ಹಸ್ಸಿ ಕೆಂಪು ಈ ಬಣ್ಣವುಳ್ಳದ್ದು ೬ ಮೊಳ ಉದ್ದ ೩ ಮೊಳ ಅಗಲವುಳ್ಳದ್ದು ೧ಕ್ಕೆ ೨—೪—೦.

ವಿ. ಪಿ. ಮೂಲಕ ತರಿಸಿಕೊಳ್ಳುವವರು ೧೦೦ಕ್ಕೆ ೨೫ ರಂತೆ ಮುಂಗಡವಾಗಿ ಕಳುಹಿಸಬೇಕು. ಪರಸ್ಥಳದವರು ಅವರವರ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ಯಲ್. ಎ. ಫೂರ್ನ್ಯಾಲ್ ಕಂಪನಿ ಬೆಂಗಳೂರು ಸಿಟಿ.

L. A. FOURNAL & Co,
BANGALORE CITY.

ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

19

ಸೌತ್ಕೆಲ್ಲರ್ ಕನ್ನಡದ ೫ನೆ ಪುಸ್ತಕದ ನೋಟ್ಸು	೨—೪—೦
ಡಿಟೊ ,, ,, ೬ ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ೭—೮ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಷೆ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಸಚಿತ್ರವಿನೋದಿನಿ ಮಾಸಪತ್ರಿಕೆ.

10

ವಾರ್ಷಿಕಚಂದಾ ರೂ. ೧—೮—೦.

....ವಿನೋದಿನಿ ಎಂಬ ಈ ಶಿರೋನಾಮವು ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದಪಡುವುದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುವದರಲ್ಲಿ ಸಂದೇಹವಿಲ್ಲ... ....

ಸತ್ಯದೀಪಿಕೆ. ೨೮-೩-೦೫

ವಿಳಾಸ:—ಮ್ಯಾನೇಜರ್, ವಿನೋದಿನಿ ಆಫೀಸು, ಕಾರವಾರ.

೧೯೦೬ನೇ ವರುಷದ ರಾಯಲ್ ಡೈರಿಗಳು.

10

ಈ ರಾಯಲ್ ಡೈರಿಗಳು ವಿಷಯಸು—ಪರಾಭವ ಸಂವತ್ಸರಗಳ ಪಂಚಾಂಗ, ಭೂಮಿಯ ಚಿದಾಂಳತೆ, ವಾರಶೂಲೆ, ಟಪಾಲಿನ ಮುಖ್ಯವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟರ್ ಫಿ, ಕೋರ್ಟ್ ಫಿ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೇಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರಪಟ್ಟಿ, ಬಡ್ಡಿ ಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ ರಲ್ಲಿನ ಏಕಾದಶಿ, ಪೌರ್ಣಮಿ, ಅಮಾವಾಸ್ಯೆ, ಸಂಕ್ರಮಣ, ಗೌರೀಪಂಚಾಂಗ, ರೈಲ್ವೆ ಪಾರಸಲ್ ಛಾರ್ಜ, ಯಮವಂಕರತ್ನಾಕರ, ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿದೆ

ನಂ ೧ ದೊಡ್ಡ ಸೈಜು ರೂಲು ಹಾಕಿದೆ ಕ್ರಯ	೦—೮—೦
,, ೨ ,, ,, ,, ಮುಚ್ಚಳ ಇರತಕ್ಕದ್ದು	೦—೧೦—೦
,, ೩ ಚಿಕ್ಕ ,, ,, ,, ,,	೦—೬—೦
,, ೪ ,, ,, ,, ,, ,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ. ೩—೪ ನೇ ನಂ. ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ದೊರೆಯುತ್ತೆ.

ದಿ ಜನರಲ್ ಏಜೆನ್ಸಿ, ಮೈಸೂರು.

ಸ್ವವಿನೋದಿ.

1

ಲೋಕಹಿತಕ್ಕೋಸ್ಕರ ತಿಂಗಳಿಗೆರಡುಸಲ ಪ್ರಕಟವಾಗುವ ಪತ್ರಿಕೆ.

ಓದುವುದಕ್ಕೆ ಅನೇಕ ಉಪಯುಕ್ತಾಂಶಗಳಡಗಿ ಇಷ್ಟು ಸುಲಭ ಚಂದಾ ಉಳ್ಳ ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಬೇರೆ ಯಾವುದೂ ಇಲ್ಲ.

ಪುಗಸಟೆ ದೊರೆಯುವ ಮಾದರಿ ಸಂಚಿಕೆ.—ಓದಿದರೆ ರಸಿಕರಾದವರು ಪತ್ರಿಕೆಗೆ ಆಶ್ರಯ ಕೊಡದೆ ಇರುವುದೇ ಇಲ್ಲ. ಹೊಗಳುವುದೇಕೆ ?

ಅಂಚೆ ವೆಚ್ಚಸಮೇತ ವರುಷ ಚಂದಾ.—

ಮುಂಗಡ ಹನ್ನೆರಡಾಣೆ ಮಾತ್ರವೇ; ಸೆಂಡರ, ಒಂದು ರೂಪಾಯಿ ಎಂಟಾಣೆ ಮಾತ್ರ.

ವಿದ್ಯಾರ್ಥಿಗಳು ಅಂಚೆ ಖರ್ಚಿನ ಪೂರ್ತಿ ಆರಾಣೆಗೆ ಕಾಲಾಣೆಯ ಅಂಚೆ ಚೀಟಿಗಳು ಮುಂಗಡ ಕೊಟ್ಟರೆ, ಒಂದು ವರುಷ ಪೂರಾ ಪತ್ರಿಕೆಯನ್ನು ಪುಗಸಟೆ ಕೊಡುತ್ತೇವೆ. ವಿ. ಪಿ. ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು.

ಓದಿ ಬುದ್ಧಿವಂತರಾಗಬೇಕೆಂಬಿಚ್ಛೆಯುಳ್ಳವರು ಈ ಸಂಧಿಯನ್ನು ಬಿಡಬಾರದು. ಬೇಗ ಬೇಗ ನಿಮ್ಮ ವಿಳಾಸಗಳ ಮಾತ್ರ ಕೊಟ್ಟು ಮಾದರಿ ಸಂಚಿಕೆಯೊಂದನ್ನು ಓದಿನೋಡಿ.

ವಿಳಾಸ:—ಭಾರತಿಸಂಪಂಗಿರಾಮ, ಸಂಪಾದಕ, ಸವಿನುಡಿ, ಹೊಸಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್.

"ವಾಗ್ದೇವಿ."

5

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ. ಕ್ರಯ ಒಂದು ರೂಪಾಯಿ. ಅಂಚೆ ಹಾಸಲು ವಿನಹ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

ಬೋಳಾರ್ ಬಾಬೂರಾವ್, ಮಂಗಳೂರು.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

34

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr. HUGHES, MYSORE ZOO.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ. ೧—೦೪—೦
,, ,, ೬ ,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ರಬ್ಬರ್ ಸ್ಟಾಂಪುಗಳು.

2

ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಇಂಗ್ಲಿಷ್ ಮೋಡ್ ರಬ್ಬರ್ ಸ್ಟಾಂಪುಗಳು ಬರುವ ಜನವರಿ ಆಖೈರೊಳಗಾಗಿ ಧರಖಾಸ್ತು



ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ. ಬಾದಾಮಿ. ರವೀಂದು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ರಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦; ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಪಾರ್ಕ್ ಟೌನ್, ಮದ್ರಾಸ್.

ಗಮಿಯಾರಗಳೂ ಪುಸ್ತಕಗಳೂ.

2

ನಿಕ್ಕಲ್ ಸಿಲ್ವರ್, ಓರ್ಪನ್ ಕೇಸ್, ಲಿವರ್ ವಾಚು, ಅತಿ ನಂಬಿಕೆಯಾದ್ದು, ಕ್ರಯ ೧ಕ್ಕೆ ೨ ರೂ ೧೫ ಆಣೆ. ಡಿಸೆಂಬರ್ ಆಖೈರ್‌ವರಿಗೆ ಬರತಕ್ಕ ಅಪ್ಲಿಕೇಷನ್‌ಗಳಿಗೆ ಮಾತ್ರ ಈ ಕ್ರಯ. ೬ ವಾಚು ಒಂದೇ ಸಲ ತರಿಸಿಕೊಳ್ಳುವವರಿಗೆ ಮಾತ್ರ ೧ ವಾಚು ಮುಫತ್ತು ಕೊಡುತ್ತೆ. ಸ್ವಲ್ಪ ಇರುವದರಿಂದ ಬೇಗ ಬನ್ನಿರಿ.

ಸಿವಿಲ್, ಕ್ರಿಮಿನಲ್, ಲೇವಾದೇವಿ, ರೋಜು ವಗೈರೆ, ಕ್ಯಾಷ್ ಭಾವಿಕ ಲೆಕ್ಕ, ಇತ್ಯಾದಿ ಸಮಸ್ತ ಸಾರಾಂಶಗಳನ್ನೂ ತಿಳಿಸತಕ್ಕ ಲಾ ಪುಸ್ತಕ, ಕ್ರಯ ೧ ಕ್ಕೆ ೧ ರೂ ೪ ಆಣೆ ಮಾತ್ರವೇ. ಸ್ವಲ್ಪ ಪ್ರತಿಗಳೇ ಇರುವದರಿಂದ ಬೇಗ ಬರೆಯಿರಿ!

ಮೋಜಿನೀ ಕಲಿಯತಕ್ಕ ಪುಸ್ತಕ—ಕೇಕದಾರರಾಗತಕ್ಕವರಿಗೆಲ್ಲಾ ಅತ್ಯುಪಯೋಗವಾದದ್ದು. ಕ್ರಯ ೧ ಕ್ಕೆ ೧ ರೂ ಮಾತ್ರ

ಅಂಬುಲ ಸಂಜೀವಿನಿ—ಅನೇಕರು ಬಗೆ ಬಗೆಯಾಗಿ ತಯಾರು ಮಾಡುತ್ತಿದ್ದಾರೆ. ಆದರೆ ೧!! ಆಣೆ ಸ್ಟಾಂಪಿಟ್ಟು ನಮಗೆ ಬರೆದು ಮಾದರಿ ತರಿಸಿಕೊಂಡು ನೋಡಿದರೆ ನಮ್ಮ ಶ್ರಮವು ಸಾರ್ಥಕವಾಗುವದು. ಕ್ರಯ ಡಬ್ಬಿ ೧ ಕ್ಕೆ ೪ ಆಣೆ.

ವಿಳಾಸ—ಬಿ. ಕೆ. ಮೂರ್ತಿ ಕಂಪನಿ, ಬಳೇಪೇಟೆ, ಬೆಂಗಳೂರು ಸಿಟಿ.

P. SUBBAROY'S
World Renowned and most Efficacious Ayurvedic Medicines.

ಪಿ. ಸುಬ್ಬರಾಯಿಯವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

5

೧೦. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ೨ ರ, ೩ ರ, ೪ ರ, ಚಳಿ, ಇನ್‌ಫ್ಲುಯಂಜಾ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು ಪೆಟ್ಟಿಗೆ ೧ ಕ್ಕೆ ರೂ. ೧. ವಿ. ಪಿ. ಚಾರ್ಜು ೪ ಆಣೆ

೧೧. ಕೂದಲು ಉದುರಿ ಹೋಗುವದಕ್ಕೆ.—ಕೂದಲು ಬೆಳೆಸಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲಿ ಉದುರಿ ಹೋಗುವದು. ಸೀಸೆ ೧ ಕ್ಕೆ ೬ ಆಣೆ. ವಿ ಪಿ ಚಾರ್ಜು ೬ ಸೀಸೆ ವರಿವಿಗೂ ೫ ಆಣೆ

೧೨. ಸುಗಂಧದಂತಚೂರ್ಣ.—ಎಲ್ಲಾ ವಿಧವಾದ ಹಲ್ಲು ನೋವುಗಳನ್ನು ವಾಸಿಮಾಡುವದು. ಸೀಸೆ ೧ ಕ್ಕೆ ೩ ಆಣೆ. ವಿ. ಪಿ. ಚಾರ್ಜು ೫ ಸೀಸೆ ವರೆಗೂ ೫ ಆಣೆ.

೧೩ ಚೇಳಿನ ಔಷಧಿ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಕೆಲವು ತೊಟ್ಟುಗಳನ್ನು ಬಿಟ್ಟ ಕ್ಷಣವೇ ಉರಿಯು ನಿಲ್ಲುವದು. ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು. ಸೀಸೆ ೧ ಕ್ಕೆ ೪ ಆಣೆ. ವಿ. ಪಿ. ಚಾರ್ಜು ೧೨ ಸೀಸೆ ವರಿಗೂ ೫ ಆಣೆ. ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೆಲೆ ರೂ ೨—೮—೦ ವಿ ಪಿ ಚಾರ್ಜು ಅಲಾಯಿದ. ಸಿಬೋನಿಗೆ ೩ ಆಣೆ

೧೪ ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಪಷ್ಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿ ಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಗಾದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು. ಸೀಸೆ ೧ ಕ್ಕೆ ೮ ಆಣೆ ವಿ ಪಿ. ಚಾರ್ಜು ೬ ಸೀಸೆ ವರಿಗೂ ೪ ಆಣೆ.

೧೫ ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪುಕಟ್ಟಿ, ತಂಪನ್ನುಂಟುಮಾಡುವದು. ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪಟ್ಟಿ ೧ ಕ್ಕೆ ೮ ಆಣೆ ವಿ ಪಿ. ಹಾಸಲು ೩ ಆಣೆ

೧೬. ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳ ಸೆಳತ, ನಿದ್ರೆಬಾರದಿರುವದು, ಅಧಿಕವಾಗಿ ಹೋಗುವದು, ಚಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು ಸೀಸೆ ೧ ಕ್ಕೆ ೧೦ ಆಣೆ. ವಿ ಪಿ ಚಾರ್ಜು ೬ ಸೀಸೆ ವರಿಗೂ ೫ ಆಣೆ

೧೭. ಗೋರೋಚನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ಎರಡನೆ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಿದಳು ಶ್ವಾಸಕೋಶಗಳು ಕೆಟ್ಟಿದ್ದರೆ ಗುಣ ಮಾಡುವದು. ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳತ, ನಿದ್ರೆ ಬಾರದಿರೋಣ, ಜಬ್ಬಾಗಿ ಹೋಗುವದು, ಚಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು. ಸೀಸೆ ೧ ಕ್ಕೆ ೧೦ ಆಣೆ. ವಿ ಪಿ ಚಾರ್ಜು ೬ ಸೀಸೆ ವರಿಗೂ ೫ ಆಣೆ.

೧೮. ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಕಜ್ಜಿ, ಆನೆಕಜ್ಜಿ, ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ ೧ ಕ್ಕೆ ೮ ಆಣೆ ವಿ. ಪಿ. ಚಾರ್ಜು ೨ ಬಾಟ್ಲಿ ವರಗೆ ೫ ಆಣೆ.

೧೯. ಕೇಶಸುವಾಸಿನಿ.—ಈ ತೈಲವು ಪೂರ್ವಪಕ್ಷಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ. ಇದರ ಉಪಯೋಗದಿಂದ ಕೂದಲು, ಮಿಸೆ, ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ. ತಲೆ ಮಿದುಳು ಕಣ್ಣುಗಳಿಗೆ ತಂಪುಕೊಡುತ್ತದೆ. ಬೋಳುತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯತಿಯ ಪರಿಮಳ ವಸ್ತುಗಳ ಮೇಲೆ ಪ್ರೀತಿ ಇರುವವರಿಗೆ ಇಚ್ಛೆ ಮೆಚ್ಚಿಕೆಯಾಗಿರುತ್ತದೆ. ಬೆಲೆ ರೂ ೧. ವಿ. ಪಿ ಚಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರಿಯಿರಿ.

Apply to:—P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲಿನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.

47

ಶೀತ, ಕೆಮ್ಮು, ಗಂಟಲು ಗೂರೆನ್ನುವದು, ಇನ್ನೇ ಮೊದಲಾದ ಎದೆಯ ಮತ್ತು ಗಂಟಲಿನ ಇರಿತಕ್ಕೆ ಈ ಔಷಧವು ಬಹಳ ಪ್ರಿಯವಾಗಿರುತ್ತದೆ. ಸೇವಿಸಲು ರುಚಿಯಾದ ಔಷಧ; ಜಾಗ್ರತೆಯಿಂದಲೂ ಸಂಪೂರ್ಣವಾಗಿಯೂ ಗುಣ ಕೊಡುವದು. ಶೀತವಾ ಬಿದ್ದ ಪಕ್ಷದಲ್ಲಿ ಅದನ್ನು ಬೇಗನೇ ನಿವಾರಣೆ ಮಾಡಿಕೊಳ್ಳದೆ ಅಲಕ್ಷ್ಯ ಮಾಡಿಬಿಟ್ಟರೆ ಅದರ ಮೇಲೆ ಜ್ವರ ಹುಟ್ಟುವದು; ಎದೆಯು ಬಿಗಿದುಹೋಗುವದು. ಇದರಿಂದಲೇ ಅನೇಕರು ಸತ್ತುಹೋಗುತ್ತಾರೆ. ಆದಕಾರಣ ಶೀತವಾಗಿದೆ ಎಂಬು ಗೊತ್ತಾದ ಕೂಡಲೇ ಈ ಕೆಮ್ಮಿನ ಔಷಧವನ್ನು ಸೇವನೆ ಮಾಡಿದಲ್ಲಿ ರೋಗವು ನಿವಾರಣೆಯಾಗುತ್ತದೆ. ಈ ಔಷಧದಲ್ಲಿ ಕೇಡನ್ನುಂಟುಮಾಡುವ ಪದಾರ್ಥವೇನೂ ಇಲ್ಲ. ಆದಕಾರಣ ಎಳೇ ಮಕ್ಕಳಿಗೂ ದೊಡ್ಡವರಿಗೂ ಮುದುಕರಿಗೂ ಸುಲಭವಾಗಿ ಕೊಡಬಹುದು. ಇದರಿಂದ ರೋಗ ಸೂಚನೆಯು ಜಾಗ್ರತೆಯಿಂದಲೂ ಖಂಡಿತವಾಗಿಯೂ ನಿವಾರಣೆಯಾಗುತ್ತ. ಈ ಹೊತ್ತೇ ಒಂದು ಸೀಸೆಯನ್ನು ಕೊಂಡಿಟ್ಟುಕೊಳ್ಳಿ. ಕ್ರಯ ಸೀಸೆ ೧ಕ್ಕೆ ೧ ರೂ.; ೨ ರೂ. ಈ ಔಷಧವು ಮೈಸೂರು, ಬೆಂಗಳೂರುಗಳಲ್ಲಿ ಔಷಧಗಳನ್ನಿಟ್ಟು ಮಾರುವ ಅಂಗಡಿಗಳಲ್ಲೆಲ್ಲಾ ದೊರಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ಸಿಕ್ಕುತ್ತೆ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಐದು ವರ್ಷಗಳ ಹರ್ಷಸಮೆ ಪಂಚಾಂಗವು.

ಹರ್ದನಹಳ್ಳಿ ತಗ್ಗಿನ ಮಠದ ಸ್ಥಳಂಗ, ಕೇಲಕ, ಸೌಮ್ಯ, ಸಾಧಾರಣ, ಫಲಸಹಿತ ಪರಾಭವ ಸಂ. ದ ಸಿದ್ಧಾಂತ ಪಂಚಾಂಗ. ೨ ನೆಯವರ ಪಂಚಾಂಗದಲ್ಲಿರುವ ವಿಷಯವೂ ಈ ಪಂಚಾಂಗದಲ್ಲಿ ಬರೆಯುವದಲ್ಲದೆ ಹೆಚ್ಚಾದ ವಿಷಯ ಮಾತ್ರ ವೃಷ್ಟಿ ಪಾದಪಾದಕ್ಕೂ ಪ್ರವೇಶಕ್ಕೆ ಲಗ್ನ ವಾಹನ, ನಾಡಿ, ರೋಹಿಣಿಚಕ್ರ, ಅಷ್ಟಕುಷ್ಠಿ, ಸ್ತ್ರೀಪುರುಷ, ರವಿಚಂದ್ರನಕ್ಷತ್ರ, ಮಲಚಂದ್ರ, ಗ್ರಹ, ಸುಯೋಗ, ದುಯೋರ್ಗ ತಿಳಿಯುವ ಚಕ್ರ, ಅಷ್ಟವಿಧಕೋಟಗಳ ಪ್ರತ್ಯೇಕ ಚಕ್ರ, ವಿರುದ್ಧಕೋಟಪಾಂತಿ ಭಾವರೀತಿ ಉದಾಹರಣೆ ಸಹಿತ ಲಗ್ನ ಕುಂಡಲಿ, ಯಾವ ಲಗ್ನದಲ್ಲಿ ಯಾರು ಪಟ್ಟಬಾರದು, ಸಕಲ ದುರ್ಮುಹೂರ್ತಗಳಿಗೂ ಶಾಂತಿ ಕ್ರಮ. ವಿವಾಹವ್ಯಾಪಾರ, ಚಾಂದ್ರ ಸಾಂವತ್ಸರ ಪರ್ವ, ನಿರ್ಜಾತ, ಪ್ಲೇಗುರೋಗ, ಸುಭಿಕ್ಷ, ದುರ್ಭಿಕ್ಷ ವರ್ಷ ಮಾಸಫಲ ನಿರ್ಣಯ ಇನ್ನು ವಿಶೇಷ ಫಲ ಸಹಿತ ಬರೆಯಲ್ಪಟ್ಟಿದೆ ಕ್ರಯ. ೩ ಆಣೆ ಅವಲೋಕನದಿಂದ ಗುಣಗ್ರಾಹ್ಯವಾಗುವದು.

ವಿಳಾಸ:—ಆರ್. ಶಾಂತಪ್ಪಜಿ, ತಂಗಿನಮ ೮ ಹರವನಹಳ್ಳಿ

ಅಸ್ತಿ ಪರಬಾರೆ ನೋಟೀಸು, ಸಕ್ರಾಪಟ್ಟಣ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—ಕಡೂರು ತಾಲ್ಲೂಕು ಸಕ್ರಾಪಟ್ಟಣದಲ್ಲಿರುವ ಮರಿಯಪ್ಪನ ಮಗ ಸಣ್ಣ ಸೋಮಯ್ಯನ ಹೆಂಡತಿ ಗಂಗಮ್ಮನು ಅಪ್ರಾಪ್ತವಯಸ್ಕಳು ಇವಳ ಗಂಡನಿಗೆ ಸ್ಥಿರ. ಚರ ಆಸ್ತಿಗಳು, ನಗಗಳು, ನಗದು ಸುಮಾರು ೧೦,೦೦೦ ಹತ್ತು ಸಾವಿರ ರೂಪಾಯಿವರಿಗೆ ಇವೆ ಅಡಕೆ ತೋಟದಲ್ಲಿ ವರುಷ ಒಂದಕ್ಕೆ ೩೦೦ ಮುನ್ನೂರು ರೂಪಾಯಿ ಚೇಣಿ ಬರುತ್ತದೆ ತರೀ ಜಮೀನಿನಲ್ಲಿ ಭತ್ತ ಬರುತ್ತದೆ ಅಲ್ಲದೆ ರಾಗಿ ಮುಂತಾದ ಫಸಲು ಆಗುತ್ತದೆ ಹೀಗಿರುತ್ತಾ ಸದರಿ ಸಣ್ಣ ಸೋಮಯ್ಯನ ಅನಂತರ ವಾರಸುದಾರರಿಗೆ ಮೋಸ ಮಾಡಬೇಕೆಂಬ ಇರಾದೆಯಿಂದ ಸ್ಥಿರ ಆಸ್ತಿಗಳನ್ನು ಸದರಿ ಗಂಗಮ್ಮನು ಪರಾಧೀನಮಾಡುವ ಪ್ರಯತ್ನದಲ್ಲಿ ಇದ್ದಾಳೆ. ಅದ್ದರಿಂದ ಯಾರೂ ಅವಳಿಂದ ಸದರಿ ಸಣ್ಣಸೋಮಯ್ಯನಾದ ಅವಳ ಗಂಡನ ಸ್ಥಿರ ಆಸ್ತಿ ಅಂದರೆ ಸಕ್ರಾಪಟ್ಟಣದಲ್ಲಿರುವ ಅಡಿಕೆ ತೋಟ, ಗದ್ದೆ, ಇವುಗಳನ್ನು ಆದವು, ಕರೀದಿ, ದಾನ ಮುಂತಾದ ಪರಾಧೀನ ಮೂಲಕವಾಗಿ ತೆಗೆದುಕೊಳ್ಳಕೂಡದು. ಹಾಗೆ ತೆಗೆದುಕೊಂಡರೆ ಅಂಥಾ ಪರಾಧೀನವು ಕಾನೂನು ಪ್ರಕಾರ ಜಂಜೂರಾಗುವದಿಲ್ಲ ಅಲ್ಲದೆ, ಈ ನೋಟೀಸು ಕೆಳಗೆ ರುಜು ಹಾಕಿರುವ ದೊಡ್ಡ ಸೋಮಯ್ಯನು ಅಂಥಾ ಪರಾಧೀನವನ್ನು ರದ್ದುಪಡಿಸಲು ಸಿದ್ಧವಾಗಿ ಇದ್ದಾನೆ.

ದೊಡ್ಡ ಸೋಮಯ್ಯನ ರುಜು ಗುರ್ತು.

ಅಗ್ಗ! ಅಗ್ಗ!! ಬಹು ಅಗ್ಗ!!!

ಮೇಲಾದ ಜರ್ಮನ್ ಸಿಲ್ವರ್ ಪುಷ್ಪಚೇರಿ ಬೋಲ್ ಕಾಲ್ ಗೊಲಸು. ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿರುತ್ತೆ. ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದಲೂ ಮಡಚಬೋದದ ತಿರುಪಿನಿಂದಲೂ ಬೆಳ್ಳಿ ಗೊಲಸಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತಯಾರಿಸಲ್ಪಟ್ಟಿರುತ್ತೆ. ಎಂದಿಗೂ ಬಣ್ಣ ಕೆಡತಕ್ಕದ್ದು ಇದನ್ನು ನೋಡಿದವರು ಬಿಡರು. ಒಂದು ಜೊತೆಯನ್ನು ತರಿಸಿ ಪರೀಕ್ಷಿಸಿರಿ. ಬಡವರಿಗೂ ಭಾಗ್ಯವಂತರಿಗೂ ಉಪಯೋಗಿಸುವಷ್ಟು ಸುಲಭ ಕ್ರಯ.

ದೊಡ್ಡವರಿಗೆ ಜೊತೆ ೧ ಕ್ಕೆ ರೂ. ೧-೮-೦. ಚಿಕ್ಕವರಿಗೆ ರೂ ೧. ಮಕ್ಕಳಿಗೆ ೧೨ ಆಣೆ.

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯೂವಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

ಬಹುಮಾನದ ನೋಟೀಸ್.

ಚನ್ನಪಟ್ಟಣದಲ್ಲಿರುವ ಮಾಗಡಿ ತಾಲ್ಲೋಕು ತಿಪ್ಪಸಂದ್ರ ಹೋಬಳಿ ಶೇಕದಾರ್ ಕೃಷ್ಣಪ್ಪ ತಿಳಿಸುವದೇನೆಂದರೆ—ನನ್ನ ಮಗ ವಿಷ್ಣು ಎಂಬುವನು ತಪ್ಪಿಸಿಕೊಂಡು ಹೋಗಿ ೧ ತಿಂಗಳ ಮೇಲಾಯಿತು ಅವನ ವಯಸ್ಸು ೧೬, ಕೆಂಪಗೆ ತೆಳ್ಳಗಿದ್ದಾನೆ, ಕನ್ನಡ ಇಂಗ್ಲಿಷ ತಿಳಿಯುತ್ತೆ. ಇವನನ್ನು ಪತ್ತೆಮಾಡಿ ಕೊಡುವವರಿಗೆ ೨೫ ರೂಪಾಯಿ ಬಹುಮಾನಕೊಡುತ್ತೇನೆ. ಬಾಬು ಶೇಕ್ದಾರ್ ಕೃಷ್ಣಪ್ಪ.

ವೃತ್ತಾಂತ ಪತ್ರಿಕೆ.

ಸಂ ೧೯೦೫ ನೇ ಇಸವಿ ನವಂಬರ್ ತಾ॥ ೩೦ ನೇ ಗುರುವಾರ.

ಆಸ್ಥಾನ ಪಂಡಿತರಿಂಬರೆಯೂ, ಪಶ್ಚಿಮ ಬ್ರಾಹ್ಮಣರ ಶಿರೋಧಾರ್ಯವೂ.

ಮೈಸೂರು ಗವರ್ನಮೆಂಟಿನವರು ಪ್ರಕಟಿಸಿರುವ ಹೊಸ ಕಾನೂನಿನ ಮಸೂದೆಯು ವಿಷಯದಲ್ಲಿ ರಾಜಧಾನಿಯ ಪ್ರಜೆಗಳು—ಹಿಂದುಗಳೂ, ಮಹಮ್ಮದೀಯರೂ ಸಭೆಸೇರಿ ಚರ್ಚೆಮಾಡಿದ ವಿಚಾರವನ್ನೆಲ್ಲಾ ವಿಸ್ತಾರವಾಗಿ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ. ಸರ್ಕಾರದವರು ಈ ಮಸೂದೆಯನ್ನು ರಚಿಸುವುದಕ್ಕೆ ಮೊದಲೇ ಅಂದರೆ ಕೆಲವು ತಿಂಗಳ ಹಿಂದೆ ಮೈಸೂರು ಪ್ರಜೆಗಳು ಇಂತಹ ಪ್ರಜಾತಂತ್ರವಾದ ಒಂದು ಸಭೆಯನ್ನು ನಡಿಸಿ, ಇಂಥಾ ಕಾನೂನು ಮಾಡತಕ್ಕದ್ದೆಂದು ತೀರ್ಮಾನಿಸಿ ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡಿದ್ದರು. ಇವರ ಸಿದ್ಧಾಂತವೇನಾಯಿತೆಂಬುದನ್ನು ನಾವು ಸೂಚಿಸಬೇಕಾದ ಅಗತ್ಯವಿಲ್ಲ. ಗವರ್ನಮೆಂಟಿನವರೇ ಈ ಮಸೂದೆಯನ್ನು ಬರೆದು ಪ್ರಕಟಿಸಿರುತ್ತಾರೆ. ಪ್ರಜೆಗಳು ಮೊದಲನೆಯ ಸಭೆಯಲ್ಲಿ ತಿಳಿಸಿದ ವಿಷಯಗಳಿಗಿಂತಲೂ ಕಳೆದ ವಾರದ ಸಭೆಯಲ್ಲಿ ಹೆಚ್ಚು ಸಂಗತಿಗಳನ್ನು ಕಾರಣ ಸಹಿತವಾಗಿ ಚರ್ಚೆಮಾಡಿ ಗವರ್ನಮೆಂಟಿಗೆ ತಿಳಿಸುತ್ತಾರೆಂದು ನಿರೀಕ್ಷಿಸಿಕೊಂಡಿದ್ದೆವು. ಆದರೆ ಅವರು ಅಂಥ ಹೊಸ ವಿಷಯಗಳನ್ನೇನನ್ನೂ ಹೊರಪಡಿಸಲಿಲ್ಲ. ಮೊದಲನೆಯ ಸಭೆಯಲ್ಲಿ ಹೇಳಿ ತಿಳಿಸಿದ ಸಂಗತಿಗಳನ್ನೇ ಈ ಎರಡನೇ ಸಭೆಯಲ್ಲೂ ಹೇಳಿ ಮತ್ತೆ ಮತ್ತೆ ಅದೇ ವಿಚಾರವನ್ನು ಹಿಡಿದು ಮಾತನಾಡಿದರು. ಈ ಭಾಗ್ಯಕ್ಕೆ ಎರಡನೆಯ ಸಭೆಯನ್ನೇಕೆ ಮಾಡಬೇಕಾಗಿತ್ತೋ ಗೊತ್ತಾಗುತ್ತದಿಲ್ಲ. ಇದರಿಂದ ಸಭೆಯವರು ಒಪ್ಪಿಸಿರುವ ಈಗಿನ ವಿಜ್ಞಾಪನೆಯು ಬಹುತರ ಹಿಂದಿನ ವಿಜ್ಞಾಪನೆಯ ಗತಿಯನ್ನೇ ಹಿಡಿದೀತೆಂದು ಕಾಣುತ್ತಿದೆ ಈ ಸಭೆಗಳಲ್ಲಿ ೧೯೦೪ನೇ ಇಸವಿಯ ಪ್ರಸಿದ್ಧಪತ್ರಿಕೆಯ ವಿಚಾರವನ್ನು ಎತ್ತಿ ಈ ಮಸೂದೆಯು ಆ ಪ್ರಸಿದ್ಧ ಪತ್ರಿಕೆಗೆ ವಿರುದ್ಧವಾಗಿರುತ್ತದೆಂದು ವಿವೇಕಿಗಳೂ ವಿದ್ಯಾವಂತರೂ ಹೇಳುತ್ತಿರುವದನ್ನು ನೋಡಿ ನಾವು ಆಶ್ಚರ್ಯಪಡುತ್ತೇವೆ. ಈ ಮಸೂದೆಯು ಆ ಪ್ರಸಿದ್ಧಪತ್ರಿಕೆಗೆ ಎಷ್ಟು ಮಾತ್ರವೂ ವಿರೋಧವಾಗಿಲ್ಲವೆಂಬಂಶವನ್ನು ಈಗಲೂ ಪಂಡಿಸ ಬಲ್ಲೆವು. ಪ್ರಪಂಚಜ್ಞಾನದಲ್ಲಿ ಪರಿಷ್ಕಾರವಾದ ಪರಿಶೀಲನೆಯನ್ನು ಪಡೆದವರಾಗಿರುವ ಮೆ॥ ಅಂಬಳೇ ಅಣ್ಣಯ್ಯ ಪಂಡಿತರೂ, ಕಾನೂನನ್ನು ಕಲಿತು ಮೊಕದ್ದಮೆಗಳನ್ನು ನಡಿಸುವುದರಲ್ಲಿ ಚತುರರೆನಿಸಿದ ಅಡ್ವೊಕೇಟ್ ಮೆ॥ ಕೆ. ಚಂದ್ರಶೇಖರಯ್ಯನವರೂ, ಮೆ॥ ವಿ. ರಾಮಣ್ಣನವರೂ ಆ ಪ್ರಸಿದ್ಧಪತ್ರಿಕೆಯ ಅರ್ಥವನ್ನು ಯಾಕೆ ಆ ರೀತಿ ತಿರುಗಿಸಿ ಮಗುಚಿಕೊಂಡು ವಿರೋಧವಾಗಿರುತ್ತದೆಂದು ಪಂಡಿಸಿ

ಶುತ್ತಿದ್ದರೆಯೋ ಇದು ನಮಗೆ ಪರಮಾಶ್ಚರ್ಯವಾಗಿದೆ. ಗ್ರಾಂಥ್ ಸಾಹೇಬರ ಇನ್ನೊಂದು ಇಷ್ತಿಹಾರ್‌ನಾಮೆಯು—ಯಾವನು ನಿಗಾಗಲಿ ಅವನ ಮತವನ್ನು ನೋಡಿ ಒಳ್ಳೇದು ಮಾಡುವುದಿಲ್ಲ; ಅವನ ಮತವನ್ನು ನೋಡಿ ಪಕ್ಷಪಾತ ಮಾಡುವುದಿಲ್ಲ; ಅವನ ಮತವನ್ನು ನೋಡಿ ಅವನಿಗೆ ಕಷ್ಟನಷ್ಟಗಳನ್ನುಂಟುಮಾಡುವುದಿಲ್ಲ ಎಂಬುದಾಗಿ ಹೇಳುವುದು. ಈ ಅರ್ಥವನ್ನೇ ನಾವು ಅನೇಕ ವೇಳೆ ವಿವರಿಸುತ್ತೇವೆ ಈಗಲೂ ವಾಚಕರು ಈ ಅರ್ಥವನ್ನು ತಿಳಿದುಕೊಳ್ಳಬೇಕೆಂದು ಹೇಳುವೆವು. ಈಗ ಮೈಸೂರು ಸಂಸ್ಥಾನದಲ್ಲಿ ನಡೆಯುವುದನ್ನು ನೋಡಿದರೆ ಹಿಂದು ಮಹಮ್ಮದೀಯರು ಆಯಾ ಮತಸ್ಥರಾಗಿರೋಣದರಿಂದಲೇ ಅವರಿಗೆ ಒಳ್ಳೇದಾಗುತ್ತಿದೆ; ಅವರಿಗೆ ಯಾವ ಕಷ್ಟನಷ್ಟಗಳೂ ಉಂಟಾಗದಂತೆ ಅವರನ್ನೂ ಇತರ ಹಕ್ಕು ಬಾಧ್ಯತೆಗಳನ್ನೂ ಕಾಪಾಡುತ್ತಾರೆ. ಪಕ್ಷಪಾತವು ಅವರ ವಿಷಯದಲ್ಲಿ ವಿಶೇಷವಾಗಿರುತ್ತದೆ. ಪರಮತವನ್ನು ಅವಲಂಬಿಸಿದವರನ್ನಾದರೋ ಹಾಗೆ ಅವಲಂಬಿಸಿದ ಕಾರಣಕ್ಕಾಗಿಯೇ ನಾನಾ ಕಷ್ಟನಷ್ಟಗಳಿಗೆ ಗುರಿಪಡಿಸಿದ್ದಾರೆ, ಮತ್ತು ಬೇರೆ ಮತದವರಲ್ಲ ಎಂದು ಅವರ ಸಹಜವಾದ ಹಕ್ಕು ಬಾಧ್ಯತೆಗಳಿಗೂ ಲೋಪಮಾಡಿದ್ದಾರೆ. ಮೈಸೂರು ಗವರ್ನ್‌ಮೆಂಟಿನವರು ಹುಟ್ಟಿದ ಮತದಲ್ಲೇ ಇರತಕ್ಕ ಪ್ರಜೆಗಳಿಗೂ ಅನ್ಯಮತದಲ್ಲಿ ಸೇರಿಕೊಂಡ ಪ್ರಜೆಗಳಿಗೂ ಯಾವ ವಿಧವಾದ ತಾರತಮ್ಯಗಳೂ ಇರಬಾರದೆಂದು ತೀರ್ಮಾನಮಾಡಿ ಮೇಲ್ಕಂಡ ಪ್ರಸಿದ್ಧಪತ್ರಿಕೆಯ ಅಭಿಪ್ರಾಯಕ್ಕೆ ಅನುಸಾರವಾಗಿರುವಂತೆ ಈಗ ಕಾನೂನನ್ನು ಮಾಡಿರುವರು ಈ ಕಾನೂನಿಯು ಆ ಇಷ್ತಿಹಾರ್‌ನಾಮೆಯ ಅರ್ಥವನ್ನು ಪೂರ್ಣವಾಗಿ ಸಾರ್ಥಕಪಡಿಸುತ್ತದೆನ್ನುವುದರಲ್ಲಿ ಸಂದೇಹವಿಲ್ಲ.

"ಇದಲ್ಲದೆ ಈ ಕಾನೂನು ವಿಶೇಷ ಹಾನಿಕರವಾದದ್ದೆಂದು ಒಂದು ೬ ಪತ್ರಿಕೆಯು ತಿಳಿಸುತ್ತಾರೆ. ಹಿಂದೂಸ್ತಾನದಲ್ಲೆಲ್ಲಾ ಕಾಶಿಗಿಂತಲೂ ವಿಶೇಷವಾದ ಪುಣ್ಯಕ್ಷೇತ್ರವಿಲ್ಲವಷ್ಟೆ. ಇಂಥಾ ಕಾನೂನು ಆ ಪಟ್ಟಣದಲ್ಲೂ ಇತರ ಹಿಂದೂ ಪುಣ್ಯಭೂಮಿಗಳಲ್ಲೂ ೫೦ ವರ್ಷಗಳಿಂದಲೂ ಜಾರಿಯಲ್ಲಿರುವುದಲ್ಲಾ! ಇದರಿಂದ ಆಯಾ ನಗರಗಳಿಗೆ ಎಷ್ಟು ನಷ್ಟ ಹಾನಿಯುಂಟಾಗಿದೆ! ಇದೂ ಅಲ್ಲದೆ ಈ ಕಾನೂನಿಯು ಮನುಧರ್ಮಶಾಸ್ತ್ರಕ್ಕೂ ವಚನಗಳಿಗೂ ಬಹಳ ವಿರೋಧವಾಗಿರುತ್ತದೆಂದು ಆಧಾರಪೂರ್ವಕವಾಗಿ ಒತ್ತಿ ಹೇಳುತ್ತಾರೆ. ಇದನ್ನು ನೋಡಿ ಇದೆಂದು ನಾವೂ ಒಪ್ಪಿಕೊಳ್ಳುವೆವು. ಮನುವೂ ಋಷಿಗಳೂ ಮಾಡಿಟ್ಟಿರುವ ಧರ್ಮಶಾಸ್ತ್ರಗಳು ನ್ಯಾಯವಾದುವೆಂದೂ ಅವುಗಳನ್ನು ಬದಲಾಯಿಸಬಾರದೆಂದೂ ಕಂಡುಬಂದುದರಿಂದಲೇ ಸರ್ಕಾರದವರು ಈ ಕಾನೂನನ್ನು ಮಾಡಬೇಕಾಯಿತು. ಮನು ಋಷಿ ಮಾಡಿದ್ದನ್ನು ಕಾಲಾನುಗುಣ್ಯವಾಗಿ ತಿದ್ದಿಕೊಳ್ಳುವುದಕ್ಕೆ ಮನುಷ್ಯರು ಪ್ರಯತ್ನಪಡಬಾರದೋ? ಅಷ್ಟು ಮಾತ್ರವಲ್ಲ ಕಾಲವನುಸರಿಸಿ ಅದಕ್ಕೆ ನೇರ್ಪಡಿಸಿಕೊಳ್ಳದೇ ಯುಕ್ತವೋ" ಆ ಜನರು ಧರ್ಮಶಾಸ್ತ್ರಗಳನ್ನು ಬರೆದಿಟ್ಟ ಪ್ರಾಚೀನ ಕಾಲವೂ ಈ ನವನಾಗರಿಕ ಕಾಲವೂ ಒಂದೆಯೋ? ಅಂದಿನಿಂದ ಈ ವರೆಗೂ ಪ್ರಪಂಚವು ನಾನಾ ಪ್ರಕಾರವಾಗಿ ಬದಲಾವಣೆಯನ್ನು ಹೊಂದಿರುತ್ತದೆ. ಆಗಿನವರು ಕಾಣದೆ ತಿಳಿಯದೆ ಇದ್ದ ಅನೇಕಾನೇಕ ವಿಷಯಗಳು ಈಗ ನಮಗೆ ತಿಳಿದಿರುವವು. ಆದಕಾರಣ ಕಾಲಾನುಗುಣ್ಯವಾಗಿ ಸರ್ಕಾರದವರು ಮಾಡಿರುವ ಈ ಕಾನೂನಿನ ... ಕಾನೂನೆಯು ನ್ಯಾಯವಾಗಿಯೂ ನಿಷ್ಪಕ್ಷಪಾತವಾಗಿಯೂ ಇರುತ್ತದೆ.

ಒಳದೇಶದ ವೃತ್ತಾಂತಗಳು.

ದಿವಾನರವರು ಕಾನಕಾನಹಳ್ಳಿಗೆ ದಯಮಾಡಿದ್ದಾಗ ಅಲ್ಲಿನ ಪಟ್ಟಣದ ಪ್ರಜೆಗಳು ಅವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು.

* * * *

ದೊಡ್ಡಕಟ್ಟೆ ಉರುಫ್ ಲಕ್ಕಕಟ್ಟೆ ಎಂಬ ಸುಮಾರು ೩೦ ವರುಷದ ... ಮೈಸೂರಿನಲ್ಲೂ ಬಸವಾಪಟ್ಟಣದಲ್ಲೂ ಅಪರಾಧಗಳನ್ನು ಮಾಡಿ, ಬಸವಾಪಟ್ಟಣದ ಪೋಲೀಸ್ ಲಾಕಪ್ಪಿನಿಂದ ತಪ್ಪಿಸಿಕೊಂಡು ಹೋದನು.

* * * *

ರಾಜಧಾನಿಯ ಮಧ್ಯವನದಲ್ಲಿ ಮೊನ್ನೆ ಸೋಮವಾರ ನಡೆದ ... ಸಮಾರಾಧನೆಯು ಎಂದಿನಂತೆ ತೃಪ್ತಿಕರವಾಗಿ ನಡೆ... ಲಕ್ಷಣಗಳು ನಡೆದು ಸ್ವಲ್ಪಮಟ್ಟಿಗೆ ಆಭಾಸವಾದಂತೆ ...ವೆ.

ರಾಜಧಾನಿಯಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮಿ॥ ಏವಾಫ್ ಯವರಿಗೆ ವರ್ಗವಾಗಿ ನೀಲಗಿರಿಗೆ ಪ್ರಯಾಣವಾದರು ಮಿ॥ ಇಲಿಯಾಟ್ ಎಂಬುವರು ಇಲ್ಲಿನ ಪೋಸ್ಟ್ ಮಾಸ್ಟರ್ ಕೆಲಸಕ್ಕೆ ನೇಮಕವಾಗಿದ್ದಾರೆ.

* * * *

ಮೈಸೂರುಪಟ್ಟಣದ ಪುರಾಭಿವೃದ್ಧಿ ಸಂಘದವರು ಮಳೆನೀರನ್ನು ಊರ ಹೊರಗೆ ಸಾಗಿಸುವ ಉಪಾಯವನ್ನು ಯಂತ್ರಗಳ ಮೂಲಕ ೫೦೦ ರೂಪಾಯಿ ಖರ್ಚಿಟ್ಟು ಮುಂದೆ ನಡೆಯುವ ಪ್ರದರ್ಶನ ಶಾಲೆಯಲ್ಲಿ ನೋಟಕರಿಗೆ ತೋರಿಸುವವರಾಗಿದ್ದಾರೆ

* * * *

ಶ್ರೀರಂಗಪಟ್ಟಣದ ಪ್ಲೀಡರ್ ಮಿ॥ ಎ. ರಾಮಣ್ಣನವರು ವರುಷಕ್ಕೆ ೫೦೦ ರೂ. ಉತ್ಪತ್ತಿಯುಳ್ಳ ದಡದಹಳ್ಳಿ ಎಂಬ ತಮ್ಮ ಸ್ವಂತ ಗ್ರಾಮವನ್ನು ಅತ್ತಿಕುಪ್ಪೆಯಲ್ಲಿರುವ ಶ್ರೀಮಲ್ಲೇಶ್ವರಸ್ವಾಮಿ ದೇವಸ್ಥಾನಕ್ಕೆ ಬಿಟ್ಟುಕೊಟ್ಟಿದ್ದಾರೆಂದು ಕೇಳುತ್ತೇವೆ

* * * *

ಕಳೆದ ವಾರ ಆರ್ಕಾಟ್ ನವಾಬರವರು ಪರಿವಾರಸಹಿತ ಕೋಲಾರ್ ಚಿನ್ನದ ಗಣಿಗಳಿಗೆ ಹೋಗಿ ಚಿನ್ನ ತೆಗೆಯುವ ವಿಧಾನವನ್ನೆಲ್ಲಾ ನೋಡಿಬಂದರು. ಮಿ॥ ಪ್ಲಮರ್ ಮ್ಯಾಜಿಸ್ಟ್ರೇಟರೇ ಮೊದಲಾದ ಸರ್ಕಾರಿ ಅಧಿಕಾರಿಗಳು ಅವರನ್ನು ಸತ್ಕರಿಸಿ ಸಾಗಕಳುಹಿದರು.

* * * *

ಮಿ॥ ಎ ವಿಲ್ಲಿಯಂಸ್ ಯವರು ಕಳೆದ ಸೋಮವಾರ ಮಧ್ಯಾಹ್ನ ಮೈಸೂರು ಸಂಸ್ಥಾನದ ರೆಸಿಡೆಂಟ್ ಕೆಲಸದ ಛಾರ್ಜನ್ನು ಮಿ॥ ಫ್ರೇಸರ್ ಯವರಿಗೆ ವಹಿಸಿ, ಒಂದೆರಡು ದಿನ ಇದ್ದು ಕಳೆದ ಸೋಮವಾರ ಕ್ವೆಟ್ಟಾ ಪಟ್ಟಣವನ್ನು ಕುರಿತು ಪ್ರಯಾಣ ಮಾಡಿದರು

* * * *

ಕೋಲಾರದ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ॥ ಪಿ ಬಿ. ಥಾಮಸ್‌ಯವರು ಈ ತಿಂಗಳ ಕೊನೆಗೆ ಫರ್ಲೋ ರಜಾ ಉಪಯೋಗಿಸಿಕೊಂಡು ಸೀಮೆಗೆ ಪ್ರಯಾಣಮಾಡುವರು ಇವರ ಕೆಲಸಕ್ಕೆ ಸರ್ಕಾರದವರು ಮದರಾಸಿನಿಂದ ಮಿ॥ ಡೇವಿಡ್ ಎಂಬುವರನ್ನು ಕರೆಸಿ ನೇಮಿಸುತ್ತಾರೆ.

* * * *

ನರಸೀಪುರದಲ್ಲೂ ಚಿಕ್ಕಮಗಳೂರಿನಲ್ಲೂ ಇದ್ದ ವ್ಯವಸಾಯದ ಬ್ಯಾಂಕುಗಳನ್ನು ಸರ್ಕಾರದವರು ಮುಚ್ಚಿಸಿಬಿಟ್ಟರಷ್ಟೆ. ಆ ಬ್ಯಾಂಕುಗಳ ಮೆಂಬರುಗಳು ಸರ್ಕಾರಕ್ಕೆ ಬರೆದು ಕೊಡಬೇಕಾಗಿರುವ ಹೊಸ ಪತ್ರಗಳಿಗೆ ಛಾಪಾಕಾಗದದ ಕಿಮ್ಮತ್ತನ್ನು ಸರ್ಕಾರದವರು ಮಾಫಿ ಬಿಟ್ಟಿದೆ ಎಂದು ಪ್ರಕಟಿಸಿದ್ದಾರೆ.

* * * *

ಕಳೆದ ಗುರುವಾರ ಶ್ರೀಮನ್ ಯುವರಾಜರವರು ತಮ್ಮ ವಿದ್ಯಾಗುರುಗಳೊಡನೆ ಬೆಂಗಳೂರಿನಿಂದ ಕೋಲಾರ್ ಚಿನ್ನದ ಗಣಿಗಳಿಗೆ ದಯಮಾಡಿ, ಗಣಿ ಕಂಪನಿಯವರ ಆತಿಥ್ಯವನ್ನು ಸ್ವೀಕರಿಸಿ, ಗಣಿಗಳಲ್ಲಿ ಚಿನ್ನ ತೆಗೆಯುವುದೇ ಮೊದಲಾದ ಕಾರ್ಯಗಳನ್ನೂ ಪ್ರಜೆಗಳ ಸ್ಥಿತಿಗತಿಯನ್ನೂ ಪರಾಂಬರಿಸಿ ವಾಪಸು ಬಂದರು.

* * * *

ಮೈಸೂರು ಸಂಸ್ಥಾನದ ಅನೇಕ ಕಡೆಗಳಲ್ಲಿ ಮಳೆ ಆಗದೆ ಕಾಲಸ್ಥಿತಿಯು ಕೆಟ್ಟುಹೋಗಿ ಪ್ರಜೆಗಳಲ್ಲಿ ಕ್ಷಾಮವುಂಟಾಗಿದೆ ಧಾರಣೆಬೆಲೆಗಳು ಬಹಳವಾಗಿ ಹೆಚ್ಚಿರುತ್ತವೆ ಬಡವರು ಜೀವನಕ್ಕೆ ತುಂಬಾ ಕಷ್ಟಪಡುತ್ತಾರೆ. ಸರ್ಕಾರದವರು ಈ ವಿಷಯಕ್ಕೆ ಮೊದಲು ಗಮನಕೊಟ್ಟು, ಪ್ರಜಾಕ್ಷೇಮಕ್ಕೆ ಸಹಾಯಕವಾದ ಏರ್ಪಾಡುಗಳನ್ನು ಮಾಡಲಾರಂಭಿಸುವುದು ಅವಶ್ಯವೆಂದು ಕಾಣಬರುತ್ತದೆ.

* * * *

ಕಾಶಿಯಲ್ಲಿ ಹೋದ ವರುಷ ಒಂದು ದೊಂಬಿ ಜಗಳವಾಯಿತು. ಆ ಜಗಳದಲ್ಲಿ ಸೇರಿದ್ದನೆಂದು ಪೋಲೀಸಿನವರು ಒಬ್ಬನನ್ನು ದಸ್ತಗಿರಿ ಮಾಡಿದರು. ಅವನು ಜಗಳವಾದ ದಿನ ಕಾಶಿಯಲ್ಲೇ ಇರಲಿಲ್ಲವೆಂದೂ, ತಾನು ಮೈಸೂರು ಪಟ್ಟಣದಲ್ಲಿದ್ದನೆಂದೂ ಹೇಳಿ ಅದಕ್ಕಾಗಿ ತನ್ನ ಹೆಸರಿನ ಪಾಸ್‌ಪೋರ್ಟನ್ನು ಹಾಜರುಮಾಡಿದನು. ಕೋರ್ಟಿನವರು ಅದರ ನಿಜಸ್ಥಿತಿಯನ್ನು ಗೊತ್ತುಮಾಡುವುದಕ್ಕೆ ಇಲ್ಲಿ ಆಗ ಹೆಲ್ತ್ ಆಫೀಸರಾಗಿದ್ದ ಮಿ॥ ಕುಪ್ಪುಸ್ವಾಮಿ ಮೊದಲಿಯಾರ್‌ರನ್ನೂ ಒಬ್ಬ ಗುಮಾಸ್ತೆಯನ್ನೂ ಕರೆಸಿಕೊಂಡಿದ್ದಾರೆಂದು ಕೇಳುತ್ತೇವೆ.

* * * *

ಕಳೆದ ಶನಿವಾರ ಸಾಯಂಕಾಲ ಶ್ರೀಮನ್ಮಹಾರಾಜರವರು ದಯಮಾಡಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಸ್ವಹಸ್ತದಿಂದ ಹಂಚಿಕೊಟ್ಟು, ಆ ಪಾಠಶಾಲೆಯಲ್ಲಿ ಶಾಸ್ತ್ರವಿದ್ಯಾಭ್ಯಾಸವನ್ನು ಕುರಿತು ಹೊಗಳಿ ಉಪನ್ಯಾಸ ಮಾಡಿದರು. ಯುವರಾಜರವರು, ದಿವಾನರವರು, ರೆಸಿಡೆಂಟರವರು, ಕೌನ್ಸಲ್ ಮೆಂಬರುಗಳು, ಛೀಫ್ ಕೋರ್ಟ್ ಜಡ್ಜಿಗಳು, ಈ ಮೊದಲಾದವರೆಲ್ಲಾ ಬಹುಮಾನಸಭೆಯನ್ನಲಂಕರಿಸಿದ್ದರು. ವಿದ್ಯಾರ್ಥಿಗಳಿಗೆ ಆ ಕಾಲೇಜಿನಲ್ಲಿ ಪುಸ್ತಕಭಂಡಾರ ಮತ್ತು ವಾಚನಶಾಲೆಗೆ ಬೇರೇ ಕಟ್ಟಡ ಆಗಬೇಕಾಗಿದೆ ಎಂದು ಪ್ರಿನ್ಸಿಪಲ್‌ರವರು ಸೂಚಿಸಿದ್ದಕ್ಕೆ ಶ್ರೀಮನ್ಮಹಾರಾಜರವರು ಅದನ್ನು ಮಾಡಿಸಿಕೊಡುವುದಾಗಿ ಅಪ್ಪಣೆಯಿತ್ತರು.

ಪ್ರಿನ್ಸ್ ಆಫ್ ವೇಲ್ಸ್‌ರವರ ದೇಶಸಂಚಾರ.

ಉದಯಪುರ ಸಂಸ್ಥಾನ.

ತಾ. ೨೦ ನೆ ಸೋಮವಾರ ಬೆಳಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಉದಯಪುರದ ಮಹಾರಾಜರವರ ಸಂಗಡ ಕಾಡಿಗೆ ದಯಮಾಡಿ, ಷಿಕಾರಿ ಮಾಡಿದರು. ೧ ಹುಲಿ, ೩ ಸಾರಗ, ೪ ಕಾಡುಹಂದಿಗಳು ಯುವರಾಜರವರ ಷಿಕಾರಿಗೆ ದೊರೆತವು ಹಿಂದುಸ್ಥಾನದಲ್ಲಿ ಅವರಿಗೆ ಷಿಕಾರಿಯ ಅನುಭವ ಇದೇ ಮೊದಲು. ಅವರ ಸಂತೋಷವೂ ಉತ್ಸಾಹವೂ ವಿಶೇಷವಾಗಿದ್ದವು. ಅತ್ತಲಾಗಿ ಪಟ್ಟಣದೊಳಗೆ ಯುವರಾಜರವರ ಪತ್ನೀಯವರು ಅರಮನೆ, ಉದ್ಯಾನವನ, ಅಲ್ಲಿಟ್ಟಿರುವ ಮೃಗಗಳು ಪಕ್ಷಿಗಳು, ಜಗದೀಶ ದೇವಾಲಯ, ಈ ಮೊದಲಾದ ಮುಖ್ಯ ಸ್ಥಳಗಳನ್ನು ಹೋಗಿ ನೋಡಿಬಂದರು. ಸಾಯಂಕಾಲ ಮಹಾರಾಜರವರು ರೆಸಿಡೆನ್ಸಿ ಬಂಗಲೆಗೆ ದಯಮಾಡಿ, ರಾಜದಂಪತಿಗಳನ್ನು ಕಂಡು ಬಂದರು. ಯುವರಾಜರವರು ರೈಲು ಹತ್ತಿ ಗಾಡಿಯಲ್ಲೇ ಭೋಜನಾದಿಗಳನ್ನು ತೀರಿಸಿಕೊಂಡು, ಪ್ರಯಾಣಮಾಡಿ ಮರುದಿನ ಬೆಳಗ್ಗೆ ಜಯಪುರ ಸಂಸ್ಥಾನವನ್ನು ತಲಪಿದರು.

ಜಯಪುರಸಂಸ್ಥಾನ.

ತಾ. ೨೧ ನೆ ಮಂಗಳವಾರ ಬೆಳಗ್ಗೆ ಜಯಪುರದ ಮಹಾರಾಜರವರು ಚತುರಂಗಬಲಸಮೇತರಾಗಿ ಆಸ್ಥಾನ ಸಾಮಾಜಿಕರ ಸಹಿತ ದಿವ್ಯಾಭರಣ ಭೂಷಿತರಾಗಿ ರೈಲ್ ಸ್ಟೇಷನ್‌ನಲ್ಲಿ ಕಾದಿದ್ದು, ಪ್ರಿನ್ಸ್ ಆಫ್ ವೇಲ್ಸ್‌ರವರನ್ನೂ ಅವರ ಪತ್ನೀಯವರನ್ನೂ ವಿಶೇಷ ಆಟ್ಟಹಾಸದೊಡನೆ ಯಥಾವಿಧಿಯಾಗಿ ಎದುರುಗೊಂಡು, ಉತ್ಸವಪೂರ್ವಕವಾಗಿ ಅವರನ್ನು ರಾಜಬೀದಿಗಳ ಮೇಲೆ ಕರೆದುಕೊಂಡು ಹೋಗಿ ರೆಸಿಡೆನ್ಸಿಯಲ್ಲಿ ಇಳಿಸಿ ಬಂದರು. ಪಟ್ಟಣದ ಶೃಂಗಾರವು ನೇತ್ರಾನಂದಕರವಾಗಿತ್ತು. ಆ ದಿನ ಬೆಳಗ್ಗೆಯೇ ಮಹಾರಾಜರವರು ಭೇಟಿಮಾಡಿ ಬಂದರು. ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರು ಅರಮನೆಗೆ ದಯಮಾಡಿ ಮರುಭೇಟಿಕೊಟ್ಟರು. ಮಧ್ಯಾಹ್ನ ಜಯಪುರದ ಪುರಾಧ್ಯಕ್ಷರು ಯುವರಾಜರಿಗೆ ಸುಸ್ವಾಗತವನ್ನು ಬಯಸಿ, ಅಡ್ರೆಸ್ಸನ್ನು ಒಪ್ಪಿಸಿದರು ಅದನ್ನು ಸ್ವೀಕರಿಸಿ ಅವರನ್ನು ವಂದಿಸಿದ್ದಾಯಿತು. ಅನಂತರ ಪ್ರಿನ್ಸ್ ಆಫ್ ವೇಲ್ಸ್‌ರವರು ಆ ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಸೈನ್ಯವನ್ನು ಪರಾಂಬರಿಸಿ, ಕಮ್ಯಾಂಡರಾದ ರಾಯಬಹದ್ದೂರ್ ಧನಪತಿರಾಯ ಯವರನ್ನು ಕೊಂಡಾಡಿದರು. ಅಲ್ಲಿಂದ ಬಂಗಲೆಗೆ ದಯಮಾಡಿ ಸ್ವಲ್ಪ ಷಿಕಾರಿಯನ್ನೂ ಮಾಡಿಕೊಂಡು ಬಂದರು ಶ್ರೀಮನ್ಮಹಾರಾಜರವರು ಯುವರಾಜರವರ ಆಗಮನವನ್ನು ಚಿರಸ್ಥಾಯಿಪಡಿಸುವುದಕ್ಕೆ ಹಿಂದುಸ್ಥಾನದ ಕ್ಷಾಮ ನಿವಾರಣೆಯ ಮೂಲಧನಕ್ಕೆ ಎರಡು ಲಕ್ಷ ರೂಪಾಯಿಯನ್ನು ಧರ್ಮಮಾಡಿರುತ್ತಾರೆ.

ತಾ. ೨೨ ನೆ ಬುಧವಾರ ಯುವರಾಜರವರು ಅಶ್ವಾರೂಢರಾಗಿ ಪರಿವಾರ ಸಹಿತ ಬಂಗಲೆಗೆ ದಯಮಾಡಿ, ಒಂದು ಹುಲಿಯನ್ನು ಷಿಕಾರಿ ಮಾಡಿಕೊಂಡು ಬಂದರು. ಅರಮನೆಯ ಮೈದಾನದಲ್ಲಿ ನಾನಾ ಕಾಡು ಮೃಗಗಳ ಕಾಳಗಗಳಾದವು. ರಾತ್ರಿ ಅರಮನೆಯಲ್ಲಿ ಯುವರಾಜರವರಿಗೆ ಔತಣ ನಡೆಯಿತು. ಮಹಾರಾಜರವರೂ ಪ್ರಿನ್ಸ್ ಆಫ್ ವೇಲ್ಸ್‌ರವರೂ ಪರಸ್ಪರ ಆಯುರಾರೋಗ್ಯಾದಿಗಳನ್ನು ಬಯಸಿ ಉಪನ್ಯಾಸ ಮಾಡಿದರು. ಮಹಾರಾಜರವರು ಕ್ಷಾಮದ ಫಂಡಿಗೆ ನಾಲ್ಕು ಲಕ್ಷ ರೂಪಾಯಿ ಕೊಡುವಂತೆ ಮತ್ತೂ ವಾಗ್ದಾನ ಮಾಡಿದ್ದನ್ನು ನೋಡಿ, ಯುವರಾಜರವರು ಅವರ ಔದಾರ್ಯವನ್ನೂ ಭೂತದಯೆಯನ್ನೂ ಕೊಂಡಾಡಿದರು. ಆ ರಾತ್ರಿ ಪಟ್ಟಣದಲ್ಲಿ ನಡೆಸಿದ ದೀಪೋತ್ಸವವು ಅದ್ವಿತೀಯವಾಗಿತ್ತು.

ತಾ. ೨೩ ನೆ ಗುರುವಾರ ಪ್ರಿನ್ಸ್ ಆಫ್ ವೇಲ್ಸ್‌ರವರು ಷಿಕಾರಿಗಾಗಿ ದಯಮಾಡಿದರು ಆದರೆ ಯಾವ ಮೃಗವೂ ದೊರಕದೆ ವಾಪಸು ಬಂದರು. ಆ ಸಾಯಂಕಾಲವೇ ಯುವರಾಜರವರು ರೈಲು ಹತ್ತಿ ಬಿಕಾನೀರ್ ಸಂಸ್ಥಾನವನ್ನು ಕುರಿತು ತೆರಳಿದರು ಜಯಪುರದಲ್ಲಿ ಕ್ಷಾಮಸೂಚನೆಯುಂಟಾಗಿದೆ. ಎಲ್ಲರೂ ಮಳೆಯನ್ನೇ ಎದುರುನೋಡುವರು. ಕ್ಷಾಮಫಂಡನ್ನು ಸ್ಥಾಪನೆಮಾಡಿದ ಆ ಮಹಾರಾಜರವರು ತಮ್ಮ ಸಂಸ್ಥಾನದ ಪ್ರಜೆಗಳ ಕಷ್ಟವನ್ನು ನಿವಾರಣೆ ಮಾಡದೆ ಇದ್ದಾರೇ?

ಬಿಕಾನೀರ್ ಸಂಸ್ಥಾನ.

ತಾ. ೨೪ ನೆ ಶುಕ್ರವಾರ ಬಿಕಾನೀರ್ ಮಹಾರಾಜರವರು ಪರಿವಾರ ಸಮೇತ ಸ್ಟೇಷನ್ನಿನಲ್ಲಿ ಕಾದಿದ್ದು, ಯುವರಾಜರನ್ನೂ ಅವರ ಪತ್ನೀಯರನ್ನೂ ಎದುರುಗೊಂಡು, ಉತ್ಸವದೊಡನೆ ಲಾಲ್‌ಘರ್ ಎಂಬ ಅರಮನೆಗೆ ಕರೆದುಕೊಂಡು ಹೋಗಿ ಇಳಿಸಿದರು. ಈ ಬಂಗಲೆಯು ಬಹು ಮನೋಹರವಾದ ಉದ್ಯಾನವನದ ಮಧ್ಯೆ ಹೊಸದಾಗಿ ಕಟ್ಟಲ್ಪಟ್ಟಿರುವುದು. ಇಷ್ಟು ಮನೋಹರವಾದ ಬಂಗಲೆಯನ್ನು ಯುವರಾಜರವರು ಹಿಂದುಸ್ಥಾನಕ್ಕೆ ದಯಮಾಡಿದಾರಭ್ಯ ಯಾವ ಸಂಸ್ಥಾನದಲ್ಲೂ ನೋಡಿರಲಿಲ್ಲ ಬೊಂಬಾಯಿಪಟ್ಟಣದಲ್ಲೂ ಅದಕ್ಕೆ ಸರಿಸಮಾನವಾದ ಕಟ್ಟಡವಿರುವುದಿಲ್ಲ. ಬೆಳಗ್ಗೆ ಪದ್ಧತಿಯನ್ನನುಸರಿಸಿ ಭೇಟಿ ಮರುಭೇಟಿಗಳು ನಡೆದವು.

ತಾ. ೨೫ ನೆ ಶನಿವಾರ ಬೆಳಗ್ಗೆ ಯುವರಾಜರವರೂ ಮಹಾರಾಜರವರೂ ಗುಜ್ನೇರ್ ಎಂಬ ದೊಡ್ಡ ಕೆರೆಯ ಬಳಿಗೆ ದಯಮಾಡಿ, ಆ ಕೆರೆಯಲ್ಲಿದ್ದ ಹಕ್ಕಿಪಕ್ಷಿಗಳನ್ನು ಮೂರು ಗಂಟೆಗಳ ಕಾಲ ಇದ್ದು ಷಿಕಾರಿ ಮಾಡಿದರು. ಈ ಷಿಕಾರಿಯಲ್ಲಿ ೧,೦೦೦ ಹಕ್ಕಿಪಕ್ಷಿಗಳು ಸತ್ತು ಬಿದ್ದವು. ಮಧ್ಯಾಹ್ನ ಯುವರಾಜರವರು ಬಂಗಲೆಗೆ ದಯಮಾಡಿ ಕಾಡುಹಂದಿ ಮೊದಲಾದ ನಾಲ್ಕಾರು ಮೃಗಗಳನ್ನು ಷಿಕಾರಿಮಾಡಿಕೊಂಡು ಬಂದರು.

ತಾ. ೨೬ನೇ ಭಾನುವಾರವನ್ನು ಯುವರಾಜರವರು ಯಾವ ಉತ್ಸವಾದಿಗಳಲ್ಲೂ ಬೆರೆಯದೆ ಅರಮನೆಯಲ್ಲೇ ಕಳೆದರು. ಬೆಳಗ್ಗೆ ಗುಜ್ನೇರ್ ಅರಮನೆಯೊಳಗೆ ದೇವರ ಪ್ರಾರ್ಥನೆ ಆರಾಧನೆಗಳು ನಡೆದವು.

ತಾ. ೨೭ನೇ ಸೋಮವಾರ ಪ್ರಿನ್ಸ್ ಆಫ್ ವೇಲ್ಸ್‌ರವರು ಲಾಲ್‌ಘರ್ ಅರಮನೆಗೆ ಬೆಳಗ್ಗೆ ದಯಮಾಡಿ, ಒಂಟೆಗಳ ಸೈನಿಕರು ಸೋಮಾಲಿಲಾಂಡಿನಲ್ಲೂ ಚೀನಾದಲ್ಲೂ ನಡೆಸಿದ ಪರಾಕ್ರಮ ಕಾರ್ಯಗಳಿಗಾಗಿ ಅವರಿಗೆ ಯೋಗ್ಯವಾದ ಬಿರುದು ಬಿಲ್ಲೆಗಳನ್ನು ದಯಪಾಲಿಸಿದರು. ಆ ರಾತ್ರಿ ಪ್ರಿನ್ಸ್ ಆಫ್ ವೇಲ್ಸ್‌ರವರು ಅರಮನೆಯಲ್ಲಿ ಭೋಜನಾದಿಗಳನ್ನು ತೀರಿಸಿಕೊಂಡು, ರೈಲನ್ನು ಹತ್ತಿ ಲಾಹೋರ್ ಪಟ್ಟಣಕ್ಕೆ ಬಿಜಯಮಾಡಿದರು.

"ನೀನು ನೀತಿಯನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ."

ಸುಮಾರು ಹದಿನೈದು ದಿನಗಳ ಹಿಂದೆ ಇಂಡಿಯಾ ವೈಸ್ರಾಯರಾಗಿದ್ದ ಕರ್ಸನ್ ಪ್ರಭುಗಳವರಿಗೆ ಬೊಂಬಾಯಿ ನಗರದ ಬೈಕಲಾ ಕ್ಲಬ್ ಎಂಬ ಸಾಮಾಜಿಕರು ಔತಣವನ್ನು ಮಾಡಿ ಸತ್ಕರಿಸಿದ ಕಾಲದಲ್ಲಿ ಪ್ರಭುಗಳು ಆ ಸಾಮಾಜಿಕರಿಗೆ ಹೇಳಿದ ಉಪನ್ಯಾಸದಲ್ಲಿ ಈ ದೇಶೀಯರಿಗೆ ಸ್ವಸ್ತಿವಾಚನಿಕವಾದ ಕೆಲವಂಶಗಳನ್ನು ತಿಳಿಸಿದರು. ಅಗ್ಗ ಅವರು ಸ್ವಾನುಭವವನ್ನು ಕುರಿತು ಅಪ್ಪಣೆಕೊಟ್ಟದ್ದೇನೆಂದರೆ—ಈ ದೇಶಕ್ಕೆ ಬರತಕ್ಕಂಥ ಪ್ರತಿಯೊಬ್ಬ ಇಂಗ್ಲಿಷ್ ನವನೂ ತನ್ನ ತನ್ನ ಕೆಲಸವನ್ನು ಮುಗಿಸಿ ಸ್ವದೇಶಕ್ಕೆ ತೆರಳುವಂಥ ಕಾಲದಲ್ಲಿ—ನೀನು ನೀತಿಯನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ" ಎಂದು ಯಾವ ವಿಷಯದಲ್ಲಿ ಹೇಳಲ್ಪಟ್ಟಿತೋ ಆ ವಾಕ್ಯವನ್ನು ತನ್ನ ವಿಷಯದಲ್ಲಿಯೂ ಅನ್ವಯಿಸಿಕೊಳ್ಳುವ ರೀತಿಯಾಗಿ ನಡೆಯಿತೆಂದರೆ ಎಷ್ಟು ಒಳ್ಳೇದು ಎಂಬುದಾಗಿ ನಾನು ಎಷ್ಟೋ ಸಾರಿ ಹೇಳಿಕೊಂಡಿದ್ದೇನೆ. ಯಾವನು ಈ ದೇಶೀಯರ ವಿಷಯದಲ್ಲಿ ತನ್ನ ಕರ್ತವ್ಯವನ್ನು ನಂಬಿಕೆಯಿಂದ ನಿರ್ವಹಿಸಲೆತ್ನಿಸಿದ್ದಾನೋ ಅವನನ್ನು ಕುರಿತು ಈ ಮಾತನ್ನು ಹೇಳುವುದರಲ್ಲಿ ಸಂಶಯವಿಲ್ಲ. ಅವನು ಮಿಕ್ಕ ವಿಷಯಗಳಲ್ಲಿ ಇನ್ನೆಷ್ಟು ಸಫಲವನ್ನು ಹೊಂದಿದ್ದಾಗ್ಯೂ ಅದೆಲ್ಲಾ ಕೇವಲ ಅಲ್ಪವಾದ ಸಂಗತಿಗಳಾಗಿಯೂ ಹುರುಳಿಲ್ಲದ ವಿಷಯಗಳಾಗಿಯೂ ಇವೆಯೆಂದು ಭಾವಿಸತಕ್ಕದು ಎಂದು ಹೇಳಿದರು.

ಲಾರ್ಡ್ ಕರ್ಸನ್ ಪ್ರಭುಗಳವರ ಈ ಉಪನ್ಯಾಸವನ್ನು ಕೇಳುತ್ತಿದ್ದವರು ಇಂಗ್ಲಿಷಿನವರೇ. ಅವರು ಆ ಮಹನೀಯರ ವಾಕ್ಯಗಳನ್ನು ಎಷ್ಟು ದಿನವಾದರೂ ಮರೆಯದೆ ಇರುವರೆಂದು ನಾವು ನಿರೀಕ್ಷಿಸುತ್ತೇವೆ. ನಾವಾದರೋ ಇಂಗ್ಲಿಷಿನವರಲ್ಲ, ನಮ್ಮ ಈ ಇಂಡಿಯಾ ದೇಶಸ್ಥರಿಗೇನೇ ಬರೆಯಲುದ್ಯುಕ್ತರಾಗಿರುವುದರಿಂದ ಪ್ರತಿಯೊಬ್ಬ ಸ್ತ್ರೀಗೂ ಪುರುಷನಿಗೂ—ನೀನು ನೀತಿಯನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ ಎಂದು ಹೇಳತಕ್ಕಷ್ಟು ಸಮರ್ಪಕವಾದ ಗುಣವುಳ್ಳವರೂ ನಡತೆಯುಳ್ಳವರೂ ಆಗಿರಲೆಂದು ನಾವು ಹೃದಯಪೂರ್ವಕವಾಗಿ ಹೇಳ ಬಯಸುತ್ತೇವೆ. ಈ ನಮ್ಮ ಅಪೇಕ್ಷೆಯು ನೆರವೇರುವ ಮಟ್ಟಿಗೂ ಈ ದೇಶೀಯರ ನಿಮಿತ್ತವಾಗಿ ಉದ್ಯೋಗಿಗಳಾಗಿರುವುದನ್ನೂ ದೇವರ ಪ್ರಾರ್ಥನೆ ಮಾಡುತ್ತಿರುವುದನ್ನೂ ಬಿಡೆವು. ಅದಂತಿರಲಿ ಪ್ರಕೃತದಲ್ಲಿ ಪ್ರತಿಯೊಬ್ಬರೂ ತಮ್ಮಲ್ಲಿ ತಾವೆ—ಈ ಮಾತುಗಳನ್ನು ನನ್ನ ವಿಷಯದಲ್ಲಿ ಹೇಳಿಸಿಕೊಳ್ಳತಕ್ಕ ಯೋಗ್ಯತೆಯು ನನ್ನಲ್ಲುಂಟೇ? ಎಂದು ಕೇಳಿಕೊಳ್ಳತಕ್ಕದ್ದು. ನಾನು ಅಧರ್ಮವನ್ನು ದ್ವೇಷಿಸುತ್ತೇನೋ? ನೀತಿಯನ್ನು ಪ್ರೀತಿಸುತ್ತೇನೋ? ಎಂದು ಕೇಳಿಕೊಳ್ಳೋಣ. ಯಾರು ತಮ್ಮನ್ನು ಏನೆಂದು ಕರೆಯಿಸಿಕೊಂಡರೂ ಚಿಂತೆಯಿಲ್ಲ. ಹಿಂದುವಾಗಲಿ ಮುಸಲ್ಮಾನನಾಗಲಿ ಬೌದ್ಧ ಮತಸ್ಥನಾಗಲಿ ಕ್ರೈಸ್ತ ಮತಸ್ಥನಾಗಲಿ ಅದು ಮುಖ್ಯವಲ್ಲ. ಯಾವನೇ ಆಗಲಿ ಅಧರ್ಮವನ್ನು ಪ್ರೀತಿಸುವವನಾಗಿದ್ದರೆ ಅವನ ಗುಣವು ಪರಿವರ್ತನೆಯನ್ನು ಹೊಂದುವದು ಅತ್ಯವಶ್ಯಕವಾಗಿದೆ.

ನೀತಿಯೆಂದರೇನು? ಸ್ಥಾಪಿತವಾಗಿರುವ ಕಟ್ಟಳೆಗೆ ಭಂಗ ಬಾರದಂತೆ ಯಾವ ಮನುಷ್ಯನು ನಡೆಯುತ್ತಾನೋ ಅವನೇ ನೀತಿವಂತನೆಂದು ಆ ಆಜ್ಞೆಯು ವಿಧಿಸುತ್ತದೆ. ದೃಷ್ಟಾಂತವಾಗಿ—ಮತ್ತೊಬ್ಬರ ಒಡವೆಯನ್ನು ಕದ್ದರೆ ದೇಶದ ಕಟ್ಟಳೆಗೆ ಆ ಕಾರ್ಯವು ವಿರೋಧವಾಯಿತು. ಯಾವನು ಕದಿಯುತ್ತಾನೋ ಅವನು ಅಧರ್ಮಿಯಾದನು. ಯಾವನು ಕದಿಯುವದಿಲ್ಲವೋ ಅವನು ನೀತಿವಂತನೆಂದು ಹೇಳಿಸಿಕೊಳ್ಳುತ್ತಾನೆ. ಆದರೆ ಕಟ್ಟಳೆಗೆ ವಿರೋಧವಾಗಿರದಿದ್ದರೂ ತಪ್ಪೆಂದು ನಿರ್ಧರಿಸಲ್ಪಟ್ಟಿರುವ ಅನೇಕ ವಿಷಯಗಳವೆ. ಸುಳ್ಳನ್ನು ಹೇಳಿದ ಮನುಷ್ಯನು ತನ್ನ ಸುಳ್ಳಿನಿಂದ ಬೇರೊಬ್ಬನಿಗೆ ಯಾವ ವಿಧವಾದ ಬಾಧೆಯನ್ನುಂಟು ಮಾಡದಿದ್ದರೆ ಅವನಿಗೆ ಆ ಸುಳ್ಳಿನ ನಿಮಿತ್ತವಾಗಿ ಕಾರಾಗೃಹ ಶಿಕ್ಷೆಯುಂಟಾಗುವದಿಲ್ಲ. ದೇಶದ ಕಟ್ಟಳೆಯು ಹೇಗಿದ್ದರೂ ಕೂಡ, ಸುಳ್ಳು ಹೇಳುವದು ತಪ್ಪೆಂದು ಎಲ್ಲರೂ ತಿಳಿದಿರುತ್ತೇವೆ. ಸುಳ್ಳು ಹೇಳುವವನು ಎಷ್ಟು ಮಾತ್ರವೂ ನೀತಿವಂತನಾಗಲಾರನು. ಸುಳ್ಳೆಂಬುವದು ಭಗವಂತನೇ ನಮ್ಮ ಹೃದಯದಲ್ಲಿ ಇರಿಸಿರುವ ಪ್ರಮಾಣಕ್ಕೆ ವಿರುದ್ಧವಾದ ಕಾರ್ಯವಾಗಿದೆ. ಆ ಪ್ರಮಾಣವ್ಯಾವುದೆಂದು ಕೇಳಿದರೆ ದೈವಸ್ವಭಾವವೇ ಅದು ಎಂದು ತಿಳಿಯತಕ್ಕದ್ದು. ಸುಳ್ಳು ದೇವಸ್ವಭಾವಕ್ಕೇ ವಿರೋಧವಾಗಿರುವದರಿಂದ ಅದು ತಪ್ಪೆಂದು ನಿರ್ಧರಿಸಲ್ಪಡುತ್ತದೆ. ಯಾವ ಮನುಷ್ಯನು ದೇವರ ಸ್ವಭಾವಕ್ಕೆ ಅನುಸಾರವಾಗಿಯೇ ನಡೆಯುತ್ತಾನೋ ಮಾತನಾಡುತ್ತಾನೋ ಆಲೋಚಿಸುತ್ತಾನೋ ಅವನೇ ನೀತಿವಂತನೆಂದು ಹೇಳಬೇಕಾಗಿದೆ.

ಆದರೆ ಕರ್ಸನ್ ಪ್ರಭುಗಳು—"ನೀನು ನೀತಿಯನ್ನು ನಡಸಿದಿ, ಅಧರ್ಮವನ್ನು ನಡಸಲಿಲ್ಲ" ಎಂದು ಹೇಳಿದರೇ? ಇಲ್ಲ. "ನೀನು ನೀತಿಯನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ" ಎಂದೇ ಹೇಳಿದರು. ಕೆಲವರು—ಅಧರ್ಮಕೃತ್ಯಗಳನ್ನು ಮಾಡುವದರಿಂದ ಯಾವಯಾವ ಅನರ್ಥವು ಉಂಟಾದೀತೋ ಎಂದು ಹೆದರಿಕೊಳ್ಳುವದರಿಂದಲೇ ಅಂಥ ಕೃತ್ಯಗಳನ್ನು ಮಾಡದೆ ಇರುತ್ತಾರೆ. ಅಂಥವರು ನೀತಿಯನ್ನು ನಡಸುವವರಾಗಿದ್ದರೂ ಅಧರ್ಮವನ್ನು ಪ್ರೀತಿಸುವವರಾಗಿದ್ದಾರೆ. ಅದಕಾರಣ ಒಬ್ಬ ಮನುಷ್ಯನು ನಡಸುವ ಕೃತ್ಯಗಳು ಯಾವವು ಎಂದು ತಿಳಿಯುವದೊಂದೇ ಸಾಲದು. ಅವುಗಳನ್ನು ನಡಸುವದಕ್ಕೆ ಕಾರಣವೇನೆಂಬುವದನ್ನೂ ತಿಳಿದುಕೊಳ್ಳಬೇಕು. ಯಾವನು ನೀತಿಯನ್ನು ನಡಸುತ್ತಾನೋ ಅವನೇ ನೀತಿವಂತನೆಂದಲ್ಲ, ಯಾವನು ನೀತಿಯನ್ನು ಪ್ರೀತಿಸುತ್ತಾನೋ ಅವನೇ ನೀತಿವಂತನು. ಹಾಗಂದರೆ ಯಾವಾತನು ದೇವರನ್ನೇ ಪ್ರೀತಿಸುತ್ತಾನೋ ಅವನೇ ನೀತಿವಂತನು.

ಲಾರ್ಡ್ ಕರ್ಸನ್ ಪ್ರಭುಗಳು ಹೇಳಿದ ಈ ಮಾತು ಹೊಸ ಒಡಂಬಡಿಕೆಯೆಂಬ ಗ್ರಂಥದಿಂದ ಉದ್ಧೃತವಾಗಿವೆ. ಆ ಮಾತನ್ನು ಯೇಸುಸ್ವಾಮಿಗೇ ವಹಿಸಿ ಆ ಸ್ಥಳದಲ್ಲಿ ಹೇಳಿದೆ. ಆತನೇ ಸಕಲ ಮನುಷ್ಯರಿಗೂ ಸರ್ವ ಸಂಪೂರ್ಣನಾದ ಮಾದರಿಯಾಗಿದ್ದಾನೆ. ಕರ್ಸನ್ ಪ್ರಭುಗಳು ಹೇಳಿದ ಮಾತಿನ ಅಭಿಪ್ರಾಯವೇನೆಂದರೆ—ಈ ಇಂಡಿಯಾ ದೇಶದಲ್ಲಿರುವ ಇಂಗ್ಲಿಷರೆಲ್ಲರೂ ಆ ಯೇಸುಸ್ವಾಮಿಯಂತೆಯೇ ಇರಬೇಕೆಂದಪೇಕ್ಷಿಸುತ್ತೇನೆ ಎಂದು ತಾತ್ಪರ್ಯವಾಯಿತು. ನಾವು ನೀತಿಯನ್ನು ಪ್ರೀತಿಸತಕ್ಕವರಾಗಿರಬೇಕೆಂದೇ ಯೇಸುಸ್ವಾಮಿಯು ಬೋಧಿಸಿದ್ದಾನೆ. ಆತನು ಹೀಗೆ ಬೋಧಿಸಿದುದು ಮಾತ್ರವೇ ಅಲ್ಲ, ತಾನೇ ಅದನ್ನು ಪ್ರೀತಿಸಿ ನಾವೂ ಆತನನ್ನು ಹಿಂಬಾಲಿಸಿ ನಡೆಯಬೇಕೆಂಬ ಅಭಿಪ್ರಾಯದಿಂದ ಒಂದು ಮಾದರಿಯನ್ನೂ ಕೊಟ್ಟಿದ್ದಾನೆ. ಆ ಪ್ರಕಾರ ನಡೆಯುವದಕ್ಕೆ ಯಾರ್ಯಾರು ಪ್ರಯತ್ನಿಸುತ್ತಾರೋ ಅವರಿಗೆ ತನ್ನ ಕೃಪಾ ಪ್ರಸಾದವನ್ನೂ ಸಾಮರ್ಥ್ಯವನ್ನೂ ಕೊಟ್ಟು ನೀತಿಯನ್ನು ಪ್ರೀತಿಸುವಂತೆಯೂ ಅಧರ್ಮಗಳನ್ನು ದ್ವೇಷಿಸುವಂತೆಯೂ ಮಾಡುವನು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

ರೆವಿನ್ಯೂ ವಿಚಾರಗಳು.

ಗುಬ್ಬಿ ಮೆ|| ಹುಚ್ಚೀರೇಗೌಡರು—ಕೆಲವು ಒಳಗೆರೆಗಳಿಗೆ ಅಮೃತಮಹಲ್ ಕಾವಲುಗಳೆಂದು ಕಟ್ಟುಮಾಡಿರೋಣವರಿಂದ ಗ್ರಾಮಸ್ಥರ ಗೋಕಾಯಿಗಳು ಮೇಯುವುದಕ್ಕೆ ಸ್ಥಳವಿಲ್ಲದೆ ತುಂಬಾ ಕಷ್ಟವಾಗುತ್ತಿದೆ. ಆದರೆ ಅಂಥಾ ಕೆರೆಗಳ ಮಟ್ಟು ಕಾಮಗಾರಿಯೇನೋ ರೈತರೇ ಮಾಡಬೇಕೆಂಬ ವಿಧಿ ತಪ್ಪಲಿಲ್ಲ. ಇಂಥಾ ತೊಂದರೆಯನ್ನು ತಪ್ಪಿಸಿಕೊಡಬೇಕು.

ಡೆಪ್ಯುಟಿ ಕಮಿಷನರ ಅಭಿಪ್ರಾಯ—ಕಷ್ಟವಾಗಿರುವ ಒಂದೆರಡು ಕಡೆಗಳಲ್ಲಿ ಸಂದರ್ಭಾನುಸಾರ ಫೈಸಲ್ ಮಾಡುತ್ತೆ.

ದಿವಾನರವರು—ಇದು ಆಗತಕ್ಕದ್ದಲ್ಲ.

ಕುಣಿಗಲು ಮೆ|| ರಂಗಣ್ಣನವರೇ ಮುಂತಾದವರು—೧೦ ಗುಂಟೆಗಿಂತ ಕೆಟ್ಟಾಗಿರುವ ಹಿತ್ತಲುಗಳಿಗೆ ಕಂದಾಯ ದಾಖಲಾಗಿದೆ. ರೈತರಿಗೆ ೧೦ ಗುಂಟೆ ಸ್ಥಳ ಸಾಕಾಗುವುದಿಲ್ಲ. ಅಂಥಾ ಕಂದಾಯವನ್ನು ವಜಾಮಾಡಿಕೊಡಬೇಕು.

ದಿವಾನರವರು—ಹಿತ್ತಲು ೧೦ ಗುಂಟೆಯಿದ್ದಿದ್ದರೆ ಕಂದಾಯ ಕೊಡಬೇಕಾದ್ದಿಲ್ಲವೆಂದು ಹುಕುಂ ಕೊಟ್ಟು ಸ್ವಲ್ಪದಿನವಾಗಿದೆ. ಹೀಗೇ ಇನ್ನು ಒಂದೆರಡು ವರುಷ ನಡೆಯಲಿ. ಅನಂತರ ಕಷ್ಟವೆಂದು ಕಂಡುಬಂದರೆ ನೋಡೋಣ.

ಮಂಜರಾಬಾದ್ ಮೆ|| ಸಣ್ಣೇಗೌಡರು—ನಿವೇಶನ, ಹಿತ್ತಲು ೧ ಎಕರೆ ಇದ್ದವರೂ ೨೦ ಎಕರೆ ಇದ್ದವರೂ ಒಂದೇ ಕಂದಾಯ ದಾಖಲಾಗಿದೆ. ಇದನ್ನು ತಪ್ಪಿಸಿ ಎಕರೆಗೆ ಇಷ್ಟೆಂದು ವಿಧಿಸಿದರೆ ಉತ್ತಮ.

ದಿವಾನರವರು—ಈಗಿರುವ ರೂಲನ್ನು ಬದಲಾಯಿಸಲಾಗದು.

ಗುಬ್ಬಿ ಮೆ|| ಹುಚ್ಚೀರೇಗೌಡರೇ ಮುಂತಾದವರು—ಮನೆಕಟ್ಟುವ ನಿವೇಶನಗಳಿಗೆ ಕಂದಾಯ ದಾಖಲ್ ಮಾಡುವ ವಿಷಯದಲ್ಲಿ ಸರ್ಕಾರದವರು ಕೊಟ್ಟಿರುವ ಹೊಸ ಹುಕುಮನ್ನು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಜಾರೀಗೆ ತಂದಿಲ್ಲ. ಇದರಿಂದ ಜನರಿಗೆ ತುಂಬಾ ಕಷ್ಟವಾಗಿದೆ.

ದಿವಾನರವರು—ಆ ರೂಲನ್ನು ಕೂಡ್ಲೆ ಜಾರೀಗೆ ತರುವಂತೆ ಹುಕುಂ ಕೊಡುತ್ತೇವೆ, ಹೋಗಿ.

ಶಿವಮೊಗ್ಗೆಯ ಮೆ|| ಶೀನಪ್ಪನವರೇ ಮುಂತಾದವರು—ಗ್ರಾಮಾಂತರಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ನಿವೇಶನಗಳನ್ನು ಹರಾಜು ಮೂಲಕ ವಿಕ್ರಯಮಾಡುತ್ತಾರೆ. ಇದರಿಂದ ಬಡಬಗ್ಗರಿಗೆ ಸ್ಥಳ ಸಿಕ್ಕುವುದೇ ಅಸಾಧ್ಯವಾದ್ದರಿಂದ ಅದನ್ನು ತಪ್ಪಿಸಿ, ಕ್ರಯ ಇಷ್ಟೆಂದು ಗೊತ್ತುಮಾಡಿ ಬಿಕರಿ ಮಾಡುವಂತೆ ಅಪ್ಪಣೆ ಆಗಬೇಕು.

ದಿವಾನರವರು—ಹರಾಜು ಹಾಕುವುದಕ್ಕೂ ಕ್ರಯ ಗೊತ್ತುಮಾಡಿಕೊಡುವುದಕ್ಕೂ ಡೆಪ್ಯುಟಿ ಕಮಿಷನರಿಗೆ ಅಧಿಕಾರವಿದೆ. ಅವರನ್ನು ಕೇಳಿಕೊಂಡರೆ ಸಂದರ್ಭಾನುಸಾರ ಅವರು ಹುಕುಂ ಕೊಡುತ್ತಾರೆ.

ಹುರುವೇಕೆರೆ ಮೆ|| ಕೃಷ್ಣಯ್ಯಂಗಾರ್ರು—ಹಳ್ಳಿಗಳಲ್ಲಿ ರೈತರು ಮನೆಕಟ್ಟುವಂಥಾ ಸ್ವಂತ ನಿವೇಶನಗಳಲ್ಲಿ ಹುಲ್ಲು ಗೊಬ್ಬರ ಮುಂತಾದ್ದನ್ನು ಹಾಕುತ್ತಾರೆ. ಇದನ್ನು ತಪ್ಪಿಸಿ, ಮನೆ ಕಟ್ಟುವಂತೆಯೂ ಕಟ್ಟದೆ ಹೋದರೆ ಸ್ಥಳವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವಂತೆಯೂ ಹುಕುಂ ಕೊಡಬೇಕು.

ದಿವಾನರವರು—ಪ್ರಜೆಗಳನ್ನು ಹಾಗೆಲ್ಲಾ ನಿರ್ಬಂಧಪಡಿಸಲಾಗುವುದಿಲ್ಲ.

ಶ್ರೀನಿವಾಸಪುರದ ಮೆ|| ಚಿಕ್ಕಣ್ಣಪ್ಪನವರು—ಸರ್ವೆ ಸೆಟ್ಲ್‌ಮೆಂಟ್ ಕಾಲದಲ್ಲಿ ದಾಖಲಾಗದೆ ತಪ್ಪಿಹೋಗಿರುವ ಹಳ್ಳದಾರಿ ತೋಪುಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಾರೆ. ಹಳ್ಳದಾರರು ಯಾರಾದರೂ ಇದಾರೆಯೋ ಎಂದು ತನಿಖೆಮಾಡಿ, ಅವರ ಸ್ವಾಧೀನಕ್ಕೆ ಬಿಡುವಂತೆ ಅಪ್ಪಣೆ ಕೊಡಿಸಬೇಕು.

ದಿವಾನರವರು—ಹಾಗೆ ಸೇರಿಸಿಕೊಂಡಿರುವ ತೋಪುಗಳ ಹೆಸರು ಮುಂತಾದ್ದನ್ನು ಆಯಾ ಡೆಪ್ಯುಟಿ ಕಮಿಷನರ ಮೂಲಕ ಗವರ್ನಮೆಂಟಿಗೆ ಅರಿಕೆಮಾಡಿಕೊಳ್ಳಿ. ಇತ್ಯರ್ಥಮಾಡುತ್ತೇವೆ.

ಅನೇಕ ಮೆಂಬರು—ಪಟೇಲ್ ಶ್ಯಾನುಭೋಗರು ಬಹುಕಾಲದಿಂದ ಇನಾಂತಿಯಾಗಿ ಅನುಭವಿಸುತ್ತಿರುವಂಥಾ ಹುಣಸೇ ಮರಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಾರೆ. ಅವರಿಗೆ ಬರುವ ಫೋಟಿಗೆ ಜೀವನಕ್ಕೂ ಇತರ ಖರ್ಚಿಗೂ ಏನೇನೂ ಸಾಕಾಗುವಷ್ಟು ಬಹಳ ಕಷ್ಟವಾಗಿದೆ. ಇದನ್ನಾದರೂ ಅವರಿಗೆ ಬಿಟ್ಟುಕೊಡುವ ಅಪ್ಪಣೆ ಕೊಡಿಸಬೇಕು.

ದಿವಾನರವರು—ಆಗಲಿ, ನೋಡೋಣ.

ಬೆಂಗಳೂರು ಮೆ|| ಚಿಕ್ಕಗುರುವರಯ್ಯನವರು—ಅಮಲ್ದಾರ್ರ ಮಾಮೂಲು ಕೆಲಸಗಳಲ್ಲಿ ಸಣ್ಣ ಕೆರೆಗಳನ್ನು ನೋಡಿಕೊಳ್ಳುವದೂ ರಿಪೇರಿಮಾಡಿಸುವುದೂ ಸಾಧ್ಯವಲ್ಲ. ಈ ಕೆಲಸವನ್ನು ಇರಿಗೇಷನ್ ಇಲಾಖೆಗೇ ವಹಿಸಿಬಿಟ್ಟರೆ ತುಂಬಾ ತೃಪ್ತಿಕರವಾಗಿದ್ದು ನೀರು ಅನಾವಶ್ಯಕವಾಗಿ ನಷ್ಟವಾಗುವುದು ತಪ್ಪೀತು.

ದಿವಾನರವರು—ಆ ಇಲಾಖೆಯವರು ಇದನ್ನೂ ಮಾಡುವುದು ಸಾಧ್ಯವೇ? ಹಾಗೆ ಮಾಡುವುದಕ್ಕಾಗುವುದಿಲ್ಲ.

ನೆಲಮಂಗಲದ ಮೆ|| ದಾಸಪ್ಪನವರು—ಒಡೆದುಹೋದ ಕೆರೆಗಳನ್ನು ದುರಸ್ತುಮಾಡಿಸದೆ ಇರೋಣದರಿಂದ ಸರ್ಕಾರಕ್ಕೂ ಹಣ ನಷ್ಟ. ಜಮೀನು ಪಡೆದಿರುವ ರೈತರು ಕಂದಾಯ ತೆರುವುದೂ ಇಲ್ಲ. ನಮ್ಮ ತಾಲ್ಲೋಕಿಗೆ ಸೇರಿದ ಅಪ್ಪೇನಹಳ್ಳಿ ಕೆರೆ, ಕಾಗೆರೆ, ಗೊಲ್ಲನಬೆಲೆಕೆರೆ, ಇವು ಈ ಸ್ಥಿತಿಯಲ್ಲಿರುತ್ತೆ. ಜಾಗ್ರತೆಯಾಗಿ ರಿಪೇರಿ ಮಾಡಿಸಿಕೊಡುವಂತೆ ಅಪ್ಪಣೆ ಆಗಬೇಕು. ಈ ವಿಷಯವನ್ನು ಹನ್ನೆರಡು ವರುಷಗಳಿಂದಲೂ ಕೇಳಿ ಕೇಳಿ ಸಾಕಾಗಿದ್ದೇವೆ.

ದಿವಾನರವರು—ಒಳ್ಳೇದು, ಕೂಡ್ಲೆ ಡೆಪ್ಯುಟಿ ಕಮಿಷನರನ್ನು ವಿಚಾರಿಸುತ್ತೇವೆ.

ಚಾಮರಾಜ ನಗರದ ಮೆ|| ರಾಮಯ್ಯಂಗಾರ್ರು—ಈ ಸಂಸ್ಥಾನದ ನಾಲೆಗಳನ್ನು ಬೇರೆ ಇಲಾಖೆಗೆ ವಹಿಸಿರುತ್ತಾರೆ. ಚಾಮರಾಜನಗರದಲ್ಲಿರುವ ನಾಲೆಗಳನ್ನು ಮಾತ್ರ ಆ ಇಲಾಖೆಗೆ ಸೇರಿಸಲಿಲ್ಲ. ಇರಿಗೇಷನ್ ಇಲಾಖೆಯವರೇ ಇಟ್ಟುಕೊಂಡಿದ್ದಾರೆ. ಬೇಸಿಗೆಯಲ್ಲಿ ರೈತರು ಜಮೀನಿಗೆ ನೀರಿಲ್ಲದೆ ತೊಂದರೆಪಡುತ್ತಾರೆ.

ದಿವಾನರವರು—ಚೀಫ್ ಇಂಜನಿಯರವರು ಆ ನಾಲೆ ಭಾರವನ್ನು ವಹಿಸಿರುತ್ತಾರೆ. ನೀವು ಮಾಡುವ ಆಕ್ಷೇಪಣೆ ಅವರಿಗೆ ತಿಳಿಸಿದ್ದೇವೆ. ಅವರು ಅದಕ್ಕೆ ಗಮನಕೊಡುವರು.

ತುಮಕೂರು ಮೆ|| ದಾವೂದ್ ಖಾನರು—ದೊಡ್ಡ ಜಲ ವೃತ್ತಿ ಕೆರೆಗಳಲ್ಲಿ ರೈತರು ಮಣ್ಣಿನ ಅಡ್ಡಕಟ್ಟೆಗಳನ್ನು ಹಾಕಿ ನೀರು ನಿಲ್ಲಿಸಿಕೊಂಡು, ಆ ನೀರಿನಿಂದ ಸಾಗುವಳಿ ಮಾಡುವುದು ವಾಡಿಕೆಯಾಗಿದೆ. ದೊಡ್ಡ ಮಳೆಗಳು ಬಂದಾಗ ಆ ಮಣ್ಣಿನ ಕಟ್ಟೆಗಳು ಕೊಚ್ಚಿಹೋಗಿ ಕೆರೆಯನ್ನೇ ಮುಚ್ಚಿಬಿಡುತ್ತವೆ. ಇದು ಬಹಳ ಕೆಟ್ಟ ಪದ್ಧತಿ. ಮಣ್ಣಿನ ಬದಲಾಗಿ ಗಾರೆಯಿಂದ ಬಲವಾಗಿ ಕಟ್ಟಿಕೊಳ್ಳುವುದಕ್ಕೆ ಉಚಿತವಾಗಿ ನಿಲ್ಲುತ್ತವೆ.

ದಿವಾನರವರು—ಅಂಥಾ ಅಡ್ಡ ಕಟ್ಟುವುದಕ್ಕೆ ಯಾಕೆ ಅವಕಾಶ ಕೊಡುತ್ತಾರೆ? ವಿಚಾರಿಸುತ್ತೇವೆ.

ಅನೇಕ ಮೆಂಬರುಗಳು—ಅಡಿಕೆ ಫಸಲಿಗೆ ಹಿಡಿಯುವ ಕೊಳೆ ರೋಗಕ್ಕೆ ಪರಿಹಾರ ಕಂಡುಹಿಡಿಯಲಿಲ್ಲವಾದ್ದರಿಂದ ಮಲೆನಾಡಿನಲ್ಲಿ ಆ ರೋಗ ಜಾಸ್ತಿಯಾಗಿರುವಾಗ್ಗೆ ವ್ಯವಸಾಯ ಶಾಸ್ತ್ರಜ್ಞರೆಂಬ ಅಧಿಕಾರಿಯನ್ನು ಪರೀಕ್ಷೆಮಾಡುವುದಕ್ಕಾಗಿ ಅಲ್ಲಿಗೆ ಕಳುಹಿಕೊಡಬೇಕು. ಈ ರೋಗದ ನಿಮಿತ್ತ ರೈತರಿಗೆ ತುಂಬಾ ಕಷ್ಟನಷ್ಟವೂ ದುಃಖವೂ ಪ್ರಾಪ್ತವಾಗಿವೆ. ಆ ರೋಗಕ್ಕೆ ನಾವು ಮಾಡುತ್ತಿರುವ ಪರಿಹಾರ ಕಾರ್ಯಗಳು ಪ್ರಯೋಜನಕರವಾಗಿಲ್ಲ. ಇದರ ನಿವಾರಣೆ ಮಾಡಿಕೊಟ್ಟು ಕಾಪಾಡಬೇಕು.

ದಿವಾನರವರು—ಸರ್ಕಾರಿ ವ್ಯವಸಾಯ ಶಾಸ್ತ್ರಜ್ಞರು ಮಲೆನಾಡಿನಲ್ಲಿ ಅನೇಕ ವೇಳೆ ಸಂಚಾರಮಾಡಿ, ಈ ಕೊಳೆ ರೋಗ ಕಾರಣ ಪರಿಹಾರಗಳನ್ನು ಕುರಿತು ಪರೀಕ್ಷೆ ಮಾಡಿರುವರು. ಅವರ ಸಂಗಡ ಪ್ರಸಿದ್ಧ ಕೆಮಿಸ್ಟ್ರರೂ ಕೆಲವರು ಹೋಗಿ ನೋಡಿ ಬಂದರು. ಅದು ಬಹಳ ಕೆಟ್ಟರೋಗವೆಂದು ಹೇಳುತ್ತಾರೆ. ಆದರೆ ಅವರು ಇದುವರೆಗೆ ಪರಿಶೋಧನೆ ಮಾಡಿರುವುದರಲ್ಲಿ ಸರಿಯಾದ ಪರಿಹಾರ ಮಾರ್ಗ ಸಿಕ್ಕಲಿಲ್ಲವೆಂದು ಹೇಳುವರು. ಆದಕಾರಣ ಈಗ ನೀವು ಮಾಡುತ್ತಿರುವ ಪ್ರತಿಬಂಧಕ ಕಾರ್ಯಗಳನ್ನೇ ಮಾಡುತ್ತಾ ಬನ್ನಿ. ಪರಿಹಾರವೇನೂ ಕಾಣುವುದಿಲ್ಲ.

ಸುಮಾರು ೫೦—೬೦ ಮೆಂಬರುಗಳು—ಸುಪಾರಿ ಹಾಸಲನ್ನು ವಜಾ ಮಾಡಿಕೊಡಬೇಕು. ವರುಷೇ ವರುಷ ನಾವುಗಳು ಸನ್ನಿಧಾನದಲ್ಲಿ ವಿಜ್ಞಾಪಿಸಿಕೊಂಡು ಪ್ರಾರ್ಥಿಸುತ್ತಿದೇವೆ. ಇದುವರೆಗೂ ದಯವಿಲ್ಲ ಹಾಸಲಿಲ್ಲ. ನಾವು ಹಾನಲು ತೆತ್ತು ನಷ್ಟಪಡುತ್ತಾ ಇದೇವೆ. ಅಡಿಕೆ ಧಾರಣೆಯು ಬಹಳ ಕೆಟ್ಟುಹೋಗಿದೆ. ದಳ್ಳಾಳಿಗೆ ನಷ್ಟವೇನೂ ಇಲ್ಲ. ಬೆಳೆಯುವವನೇ ತುಂಬಾ ನಷ್ಟಪಟ್ಟು ಜೀವನಕ್ಕೆ ಕಷ್ಟಪಡುವನು. ಗವರ್ನಮೆಂಟಿನವರು ಈ ವಿಷಯವನ್ನು ಈಗಲೇ ಇತ್ಯರ್ಥಪಡಿಸಬೇಕು.

ದಿವಾನರವರು—ಕಷ್ಟವೇನೋ ಎಲ್ಲಾ ತಿಳಿದೇ ಇದೆ. ಉತ್ಪತ್ತಿಯಲ್ಲಿ ೩—೪ ಲಕ್ಷ ರೂಪಾಯಿ ಒಂದೇ ಸಲ ಬಿಟ್ಟು ಬಿಡುವುದು ಎಂದರೆ ಸುಲಭವಲ್ಲ. ಇನ್ನೂ ಚನ್ನಾಗಿ ಯೋಚಿಸಬೇಕಾಗಿದೆ. ಆದ್ದರಿಂದ ಸ್ವಲ್ಪ ಸಾವಕಾಶವಾಗಿ ತೀರ್ಮಾನಮಾಡುತ್ತೇವೆ.

ಕೊಪ್ಪದ ಚನ್ನಕೇಶವರಾಯರು—ಅಡಿಕೆ ತೋಟಗಳ ಕಂದಾಯದ ವಸೂಲಿ ಬಿಸ್ತನ್ನು ಹೆಚ್ಚಿಸಿಕೊಡಬೇಕೆಂದು ಹೋದ ವರುಷ ಬೇಡಿಕೊಂಡೆನು. ತನಿಖೆ ಮಾಡಿ ಹುಕುಂ ಕೊಡುತ್ತೇವೆಂದು ಜವಾಬು ಅಪ್ಪಣೆ ಆಯಿತು. ದಯಮಾಡಿ ಈಗಲಾದರೂ ನೆರವೇರಿಸಿಕೊಡಬೇಕು.

ದಿವಾನರವರು—ವಿಚಾರಣೆ ಮಾಡುತ್ತಿದೇವೆ. ಇನ್ನೂ ತೀರ್ಮಾನವಾಗಿಲ್ಲ.

ಹರಿಹರದ ಮೆ|| ಶ್ರೀನಿವಾಸರಾಯರು—ಗ್ರಾಮಾಂತರಗಳಲ್ಲಿ ಕಂದಾಯ ಕೊಡುವ ರೈತರ ಮನೆಗಳು, ಅವರು ದನ ಕಟ್ಟುವ ಮನೆಗಳು, ಅವರು ವ್ಯವಸಾಯ ಉಪಕರಣಗಳನ್ನು ಇಟ್ಟು

...ಮನೆಗಳು, ಇವಕ್ಕೆ ಮನೆಕಂದಾಯ ಮಾಫಿ ಬಿಡೋಣವಾ ... ಅವರ ಜೀತಗಾರರೂ ಕೂಲಿ ಆಳುಗಳೂ ಇರುವ ಮನೆಗ ... ಕಂದಾಯ ಬಿಟ್ಟುಕೊಡಬೇಕು.

...ವಾನರವರು—ಸದ್ಯ ಈಗಿನಂತೆಯೇ ನಡೆಯುತ್ತಾ ಇರಲಿ; ...ಲಿ ನೋಡೋಣ.

...ಅದೇ ಮೆಂಬರು—ಮ್ಯುನಿಸಿಪಾಲಿಟಿ ಇರುವ ಕಡೆ ೫೦ ರೂಪಾ ...ಳುವ ಮನೆಗೆ ೮ ಆಣೆ ಮನೆಗಂದಾಯ ಹಾಕಿದಾರೆ. ಗ್ರಾ ...ಮಗಳಲ್ಲಿ ೧೦ ರೂಪಾಯಿ ಬಾಳುವ ಮನೆಗಳಿಗೆ ೨ ರೂಪಾ ...ಕೊಡಬೇಕು. ಇದು ತುಂಬಾ ದುಬಾರಿಯಾಗಿದೆ. ಈ ಪರಗ ...ವ ಬದಲಾವಣೆ ಮಾಡಿಕೊಡಬೇಕು.

...ವಾನರವರು—ಈ ಕಾಲಸು ಎಂಟು ವರುಷದಿಂದ ಜಾರೀ ...ಯನ್ನು ಬದಲಾಯಿಸಬೇಕೆಂದು ಯೋಚಿಸುತ್ತಿದೇವೆ. ...ಲಿ ನೋಡೋಣ.

...ಕೆರೆ ಮ॥ ಬಲವಂತರಾಯರೂ ಶಿವಮೊಗ್ಗ ಮ॥ ಬಾಲ ...ರಾಯರೂ—ನಮ್ಮ ಸಂಸ್ಥಾನದಲ್ಲಿ ಮೂವತ್ತು ವರುಷ ...ವರ್ತಿ ಸರ್ವೇ ಸೆಟ್ಲು ಮಾಡುತ್ತಾರೆ. ಇದನ್ನು ನಿಲ್ಲಿಸಿ ...ಶಾಶ್ವತವಾದ ಒಂದೇ ಪರವನ್ನು ಜಮೀನುಗಳಿಗೆ ಗೊತ್ತು ...ಪಕ್ಷದಲ್ಲಿ ರೈತರು ಖುಷಿಕೊಂಡಾರು. ದಿವಸಗಳ ಧಾರ ...ಧವಾದ ಹಾಗೆಲ್ಲಾ ಜಮೀನುಗಳ ಸಾರವೂ ಕಡಿಮೆಯಾ ...ಒಂದೆ ಸೆಟ್ಲು ಆದಾಗ ಜೀವನ ಸುಲಭವಾಗಿ ನಡೆಯು ...ಆಚೆಗೆ ತುಂಬಾ ಕಷ್ಟವಾಗಿದೆ. ರೈತನು ದಿನೇ ದಿನೇ ...ಗುವುದಕ್ಕೆ ಬದಲಾಗಿ ದರಿದ್ರನಾಗುತ್ತಿದಾನೆ. ರೈತ ಬೆಳೆ ...ಧಾನ್ಯಗಳ ಬೆಲೆ ಹೆಚ್ಚಿದ್ದಾಗ್ಯೂ ಅವನ ಸ್ಥಿತಿಯೇನೋ ...ಗಿಲ್ಲ. ಒಂದಾವರ್ತಿ ವಿಧಿಸಿದ ಕಂದಾಯವೇ ಶಾಶ್ವತವಾ ...ಪಕ್ಷಕ್ಕೆ ರೈತನಿಗೆ ಸ್ವಲ್ಪ ಸಹಾಯವಾದೀತು.

...ವಾನರವರು—ನೀವು ಹೇಳತಕ್ಕ ಈ ವಿಚಾರವು ಕೇಳತಕ್ಕ ...ಮೇ ಹೊರತು ಜವಾಬು ಹೇಳುವಂಥಾದ್ದಲ್ಲ.

...ರ್ ಮ॥ ಮಂಜಯ್ಯ ಉಡುಪರು—ಮಲೆನಾಡಿನಲ್ಲಿ ಆರಿ ...ಜಮೀನುಗಳು ತುಂಬಾ ಪಾಳು ಬಿದ್ದಿವೆ. ಕಾಡು ಮೃಗಗಳ ...ನಾನಾ ರೋಗಗಳ ಕಾಟವೂ ಅದಕ್ಕೆ ಕಾರಣ. ಆದ್ದರಿಂ ...ಸರ್ವೆ ಮಾಡುವ ಕಾಲದಲ್ಲಿ ಜಮೀನುಗಳ ಕಂದಾಯವ ...ಮ್ಮಸಧಂತೆ ಅಪ್ಪಣೆ ಕೊಡಬೇಕು.

...ವಾನರವರು—ಅಂಥಾ ಅಪ್ಪಣೆ ಕೊಡುವುದು ಅಸಾಧ್ಯ.

...ಸೊರಬದ ಮ॥ ಲಕ್ಷ್ಮಣರಾಯರೇ ಮುಂತಾದವರು—ಜಮೀ ...ಸರ್ವೆ ನಂಬರುಗಳನ್ನು ಕಲ್ಲುಗಳ ಮೇಲೆ ಕೆತ್ತಿ, ಜಮೀ ...ಬಳವಾಗಿ ನೆಡಿಸಿದರೆ ತುಂಬಾ ಉಪಕಾರವಾಗುತ್ತೆ. ರೈತ ...ಮಾಡಿಕೊಳ್ಳುತ್ತೇವೆಂದು ಕೇಳಿದರೆ ಅಪ್ಪಣೆ ಕೊಡುವುದಿಲ್ಲ.

...ವಾನರವರು—ನೀವೇ ಮಾಡಿಕೊಳ್ಳುವುದರಲ್ಲಿ ಅಭ್ಯಂತರ ...ಇಲ್ಲ. ಆದರೆ ನಾವು ಮಾಡುವುದು ಕಷ್ಟ. ಗ್ರಾಮಸ್ಥ ...ಬಿದ್ದರೆ ಹಾಗೇ ಹಾಕಿಕೊಳ್ಳಬಹುದೆಂದು ಹುಕುಂ ಕೊ...

...ಡಬಳ್ಳಾಪುರದ ಮ॥ ಬೈರೇಗೌಡರೇ ಮುಂತಾದವರು— ...ಮುಗಳಲ್ಲಿರುವ ಮಣ್ಣಿನ ಬಾಂಧುಗಳು ಬಹಳ ಸ್ಥಳ ಆಕ್ರಮಿ ...ಕ್ಕುತ್ತವೆ. ಅವು ನಾನಾ ಕಾರಣಗಳಿಂದ ಶಿಥಿಲವಾಗುವವು. ...ಬಾಧವೂ ಅವನ್ನು ಜೋಡಾಗಿ ಹಾಕುತ್ತಲೇ ಇರಬೇಕು. ...ರೈತರಿಗೂ ಸರ್ಕಾರದವರಿಗೂ ತುಂಬಾ ಕಷ್ಟವಾಗಿದೆ. ಅವ ...ಬದಲಾಗಿ ಚಿಕ್ಕನಾದ ಕಲ್ಲಿನ ಮೇಲೆ ನಂಬರು ಬರೆಸಿ ನೆಡಿ ...ಶಾಶ್ವತವಾಗಿರುತ್ತವೆ. ರೈತರು ಜಮೀನು ಒತ್ತಿಕೊಳ್ಳುವ ...ಅವಕಾಶವಾಗುವುದಿಲ್ಲ.

...ವಾನರವರು—ನೀವು ಹೇಳುವಂತೆ ನಾಲ್ಕು ಗ್ರಾಮಗಳ ರೈತ ...ಒಪ್ಪಿಗೆ ಕರೆದುಕೊಂಡು ಬನ್ನಿ. ಆದರ ಜೊತೆಯಲ್ಲಿ ನಾ ...ಗ್ರಾಮಗಳಿಗೆ ಅಪ್ಪಣೆ ಕೊಡುತ್ತೇವೆ.

...ಶೀ ಮ॥ ಶಿಂಗರಾಚಾರ್ಯ—ದೇವಾದಾಯದ ಮೇಲಿನ ...ವನ್ನು ವಜಾ ಮಾಡಿಕೊಟ್ಟದೀರಿ. ಬ್ರಹ್ಮಾದಾಯದ ಬಾ ...ಇನ್ನೂ ವಸೂಲಾಗುತ್ತಿದೆ. ಬಹಳ ಅಲ್ಪವಾದ ಈ ಉತ್ಪ ...ನ್ನಿ ವಜಾ ಮಾಡಿಕೊಡಬೇಕು.

...ವಾನರವರು—ನೋಡೋಣ.

...ಕೆಲ ಮೆಂಬರುಗಳು—ಮಹಾರಾಜರವರ ಶ್ರೇಯಸ್ಸು ...ಮಾಡುವುದಕ್ಕಾಗಿ ಪೂರ್ವಿಕರಾದ ಪ್ರಭುಗಳಿಂದ ಬ್ರಾಹ್ಮಣರಿಗೆ ...ಕೊಟ್ಟಿರುವ ಇನಾಮತಿಗಳನ್ನು ಈಗ ಬ್ರಾಹ್ಮಣೇತರರು ಅ ...ರುತ್ತಾರೆ. ಕೊಟ್ಟವರ ಉದ್ದೇಶವು ಸಫಲವಾಗದಂತೆ ಆಗ್ತಿ ...ಅಂಥಾ ಇನಾಮತಿಗಳನ್ನು ಬ್ರಾಹ್ಮಣರಿಗೆ ಬಿಡಿಸಿಕೊಡ...

...ವಾನರವರು—ದಾನಪತ್ರದಲ್ಲೇ ಯಾರಿಗೆ ಬೇಕಾದರೂ ಕೊ ...ಡೆಂತಲೂ ಬರೆದಿದ್ದರೆ ನಾವೇನು ಮಾಡಬಹುದು! ಒಳ್ಳೇ ...ಲೋಚಿಸೋಣ.

...ಮೊಗ್ಗ ಮ॥ ಬಾಲಕೃಷ್ಣರಾಯರೇ ಮುಂತಾದವರು— ...ಗ್ರಾಮಗಳಿಗೆ ಸರ್ವೆ ಸೆಟ್ಲಮೆಂಟು ಮಾಡಿಸಬೇಕು. ವೃತ್ತಿ ...ಲ್ಲಾ ಇದಕ್ಕೆ ಸಮ್ಮತಿಪಡಿಸುವುದು ಅಸಾಧ್ಯ. ಸರ್ಕಾರ ...ದ್ದೇಶ ಮಾಡಿದ್ದರೆ ನಿರಬಂಧಿಗಳು ಕಷ್ಟಕ್ಕೆ ಗುರಿ ...ಯಾಗುವುದು.

...ವಾನರವರು—ಎಲ್ಲಾ ವೃತ್ತಿವಂತರ ಸಮ್ಮತಿಯೂ ಆದರೆ ...ಬಹುದು. ಅದರೂ ಘಾಯದೆ ಏನೂ ಕಾಣುವುದಿಲ್ಲ.

...ರಿಪುರದ ಮ॥ ದೇವಪ್ಪನವರು—ಇನಾಂ ಸೆಟ್ಲು ಆಗುವ ...ದಲ್ಲಿ ಪ್ರತಿ ಒಬ್ಬ ವೃತ್ತಿವಂತನ ಹೆಸರನ್ನೂ ಅವನು ...ಜೋಡಿಯನ್ನೂ ಇನಾಂ ಗ್ರಾಮದ ಚಿಟ್ಟಲೆಕ್ಕದಲ್ಲಿ ...ರುತ್ತು. ಪ್ರತಿ ವೃತ್ತಿವಂತನಿಂದಲೂ ಅಷ್ಟಷ್ಟೇ ಜೋಡಿ...ಯನ್ನು ವಸೂಲ್ಮಾಡುತ್ತಲೂ, ಕೊಡದೆ ಹೋದರೆ ಅಂಥಾವನ ಬಾ ಬತು ಜಮೀನನ್ನೇ ಜಪ್ತಿ ಹರಾಜು ಮಾಡುತ್ತಲೂ ಇದ್ದರು. ಈಗ ಇನಾಂ ಸೆಟ್ಲು ಆದ ಮೇಲೆ ಆ ಪದ್ಧತಿ ತಪ್ಪಿಹೋಯಿತು. ಒಬ್ಬನ ಜೋಡಿ ಬಾಕಿಗೆ ಇನಾಂ ಗ್ರಾಮವನ್ನೇ ಹರಾಜು ಹಾಕುತ್ತಾರೆ. ಸೊರಬದ ತಾಲ್ಲೂಕಿನಲ್ಲಿ ಮಾತ್ರ ಹೀಗೆ ನಡೆಯುವುದಿಲ್ಲ. ಇದ ನ್ನು ತಪ್ಪಿಸಿ ವೃತ್ತಿವಂತನಿಂದ ಅಥವಾ ಅವನ ಪಾಲಿನ ಜಮೀನಿನಿಂದ ಅವನ ಜೋಡಿಯನ್ನು ವಿಲೇ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ದಿವಾನರವರು—ಅಷ್ಟವಿರತಕ್ಕ ಇನಾಂದಾರರು ಬಂದು ಕೇಳಿಕೊಳ್ಳಲಿ. ಈಗಿರುವ ರೂಲನ್ನು ಬದಲಾಯಿಸಬೇಕಾದ ಆಗತ್ಯ ಕಾಣುವುದಿಲ್ಲ.

ನಾಲ್ಕಾರು ಮೆಂಬರುಗಳು—ಕಾಫಿ ವ್ಯವಸಾಯಕ್ಕೆ ೧೫ ಎಕರೆ ಜಮೀನನ್ನಾಗಲಿ ಅದಕ್ಕಿಂತ ಹೆಚ್ಚಾದ ಜಮೀನನ್ನಾಗಲಿ ಕಂದಾಯಕ್ಕೆ ತೆಗೆದುಕೊಳ್ಳಬೇಕೆಂದು ವಿಧಿಸಿದಾರೆ. ಬಡರೈತರು ಅಷ್ಟು ಜಮೀನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ೫ ಎಕರೆ ಎಂದು ಬದಲಾಯಿಸಿಕೊಡಬೇಕು.

ದಿವಾನರವರು—೧೫ ಎಕರೆ ನಿಶ್ಚಯಿಸಿದ್ದ ಕಡೆ ಕಮ್ಮಿ ಕೊಡಬಹುದೆಂದು ಹುಕುಂ ಕೊಡಲಾಗುತ್ತೆ. ನೀವು ಹೇಳುವಂತೆ ೧೫ ಎಕರೆಗೆ ವಿಧಿಯನ್ನು ೫ ಎಕರೆ ಕಮ್ಮಿ ಮಾಡಿಕೊಡಲಾರವು.

ಇಂಡಿಯಾ ದೇಶದ ವೃತ್ತಾಂತಗಳು.

ಬರ್ಮ ಅಧಿಪತ್ಯದಿಂದ ಪೆಲ್ಲಾಂಗ್ ಎಂಬ ಪ್ರಾಂತ್ಯಕ್ಕೆ ಅಲ್ಲಿನ ಜನರ ವೈಷಮ್ಯ ಕದನ ಇವುಗಳನ್ನು ಅಣಗಿಸುವುದಕ್ಕಾಗಿ ೨೦೦ ಇಂಗ್ಲಿಷ್ ಸೈನಿಕರು ಬಂದು ಪಿರಂಗಿ ತೆಗೆದುಕೊಂಡು ಹೋಗಿದಾರೆ.

*****

ಮಧುರೆಯಲ್ಲಿರುವ ಮಿಷನ್ ಪಾದ್ರಿಗಳು ಅಮೇರಿಕದ ಕೋಟ್ಯಾಧೀಶ್ವರನಾದ ಮ॥ ರಾಕ್‌ಫೆಲರ್ ಎಂಬಾತನಿಂದ ೯೩,೦೦೦ ರೂಪಾಯಿ ಧರ್ಮವನ್ನು ತೆಗೆದುಕೊಂಡು ಬಂದು, ಅಲ್ಲಿನ ವಿದ್ಯಾಶಾಲೆಯನ್ನು ಬಹುವಚ್ಚ ಮಾಡುತ್ತಿದಾರೆ.

*****

ಅನಂತಶಯನ ಸಂಸ್ಥಾನದ ಮಹಾರಾಜರವರು ಅವರ ದಿವಾನರಾದ ಮ॥ ವಿ. ಪಿ. ಮಾಧವರಾಯರೇ ಮೊದಲಾದ ಅಧಿಕಾರಿಗಳ ಸಮೇತ ಮುಂದಿನ ಜನವರಿ ಎರಡನೆ ವಾರದಲ್ಲಿ ಮದರಾಸಿಗೆ ದಯಮಾಡಿ, ಪ್ರಿನ್ಸ್ ಆಫ್ ವೇಲ್ಸ್‌ರವರ ಭೇಟಿ ಮಾಡುವವರಾಗಿದಾರೆ.

*****

ಸಿಲೋನ್ (ಲಂಕಾ) ದ್ವೀಪದಲ್ಲಿ ಸರ್ಕಾರಕ್ಕೆ ಈ ವರುಷ ಖರ್ಚು ಕಳೆದು ೩೫ ಲಕ್ಷ ರೂಪಾಯಿ ಆದಾಯವಾಗುತ್ತದು. ೧೯೦೬ನೇ ವರುಷದಲ್ಲಿ ೩ ೧೨,೬೦,೨೦೦ ರೂಪಾಯಿ ಜಮಾ ಆಗುವುದೆಂತಲೂ ಆ ಪೈಕಿ ೨,೭೭,೪೯,೦೦೦ ರೂಪಾಯಿ ಖರ್ಚಾಗುವುದೆಂತಲೂ ಅಂದಾಜು ಕಟ್ಟಿದ್ದಾರೆ.

*****

ಬೇಹಾರ್ ಡಿಸ್ಟ್ರಿಕ್ಟಿಗೆ ಸೇರಿದ ಸೋನೇಪುರದಲ್ಲಿ ಕಳೆದವಾರ ಸರ್ಕಾರದವರು ಕೈಗಾರಿಕೆಗಳ ವಸ್ತುಪ್ರದರ್ಶನವನ್ನು ಪ್ರಾರಂಭಿಸಿದರು. ಆ ಪ್ರಾಂತ್ಯದ ದೇಶೀಯ ಕಸಬುಗಳನ್ನು ವೃದ್ಧಿಪಡಿಸಬೇಕೆಂಬುವುದೇ ಅವರ ಉದ್ದೇಶವಾಗಿದೆ. ಸಾವಿರಾರು ಪ್ರಜೆಗಳು ಹೋಗಿ ಪ್ರದರ್ಶನವಸ್ತುಗಳನ್ನು ನೋಡಿ ಬರುತ್ತಿದ್ದಾರೆ.

*****

ಜೇಲಂ ಡಿಸ್ಟ್ರಿಕ್ಟಿಗೆ ಸೇರಿದ ಬಾಲ್ಕಸ್ಸಾರ್ ಗ್ರಾಮದವರು ತುಂಟರಾಗಿ ಅನೇಕ ಅಕ್ರಮಕಾರ್ಯಗಳನ್ನು ಮಾಡುತ್ತಿದ್ದರು. ಅವರ ಅಹಂಕಾರವನ್ನೂ ಪುಂಡಾಟವನ್ನೂ ಅಣಗಿಸುವದಕ್ಕೆ ಸರ್ಕಾರದವರು ಕೆಲವು ಪೋಲೀಸಿನವರನ್ನು ನೇಮಿಸಿ ಕಳುಹಿಸಿ, ಇವರ ಸಂಬಳವನ್ನು ಆ ಗ್ರಾಮಸ್ಥರಿಂದಲೇ ವಸೂಲ್ಮಾಡುತ್ತಿದ್ದಾರೆ.

*****

ಹಿಂದುಸ್ಥಾನದ ವೈಸ್‌ರಾಯ್ ಪದವಿಯನ್ನು ನೊನ್ನೆ ತಾನೇ ಬಿಟ್ಟುಹೋದ ಲಾರ್ಡ್ ಕರ್ಜನರವರ ಹೆಸರಿನ ಮೇಲೆ ಕಲ್ಕತ್ತೆಯಲ್ಲಿ ಅವರದೊಂದು ಭಾವಪ್ರತಿಮೆಯನ್ನು ನಾಟಿಸಬೇಕೆಂದು ಅಲ್ಲಿನ ಜನರು ತೀರ್ಮಾನ ಮಾಡಿ ಚಂದಾ ಎತ್ತುತ್ತಿದ್ದಾರೆ. ಇದಕ್ಕೆ ೨೫,೦೦೦ ರೂಪಾಯಿಗಿಂತ ಕಡಿಮೆ ಆಗಲಾರದೆಂದು ಗೊತ್ತಾಗಿದೆ.

*****

ಪಂಜಾಬ್ ಅಧಿಪತ್ಯದಲ್ಲಿರುವ ಸಮಸ್ತ ಪ್ರೈಮರಿ ಪಾಠಶಾಲೆಗಳಲ್ಲೂ ಉರುದು ಭಾಷೆಯಲ್ಲೇ ಎಲ್ಲಾ ಪಾಠಗಳನ್ನೂ ಹೇಳಿಕಲಿಸುವುದು ಅವಶ್ಯವೆಂದೂ, ಆ ಭಾಷೆಯನ್ನು ಬಿಡಕೂಡದೆಂದೂ ಲಾಹೋರ್ ಪಟ್ಟಣದ ಮುಸಲ್ಮಾನ್ ಸಂಘದವರು ಕಮಿಷನರುಗಳನ್ನೂ ಡೆಪ್ಯುಟಿ ಕಮಿಷನರುಗಳನ್ನೂ ವಿಜ್ಞಾಪನಾಪತ್ರಿಕೆಗಳ ಮೂಲಕ ಕೇಳಿಕೊಂಡಿದಾರೆ.

*****

ಮದರಾಸ್ ಗವರ್ನಮೆಂಟಿನವರು ೩,೧೭,೦೦೦ ರೂಪಾಯಿ ಖರ್ಚುಮಾಡಿ ಬೆಜವಾಡ ಪಟ್ಟಣದ ಪ್ರಜೆಗಳಿಗೆ ಆರೋಗ್ಯಕರವಾದ ಕುಡಿಯುವ ನೀರನ್ನು ಒದಗಿಸುವವರಾಗಿದಾರೆ. ಆ ಪಟ್ಟಣವು ವಾಂತಿಭೇದಿ ಉಪದ್ರಕ್ಕೆ ತೌರುಮನೆಯಾಗಿರುವುದನ್ನು ತಪ್ಪಿಸಬೇಕೆಂಬುದೇ ಗವರ್ನಮೆಂಟಿನವರ ಉದ್ದೇಶ. ಮತ್ತು ಬೇಸಿಗೆಯಲ್ಲಿ ಪ್ರಜೆಗಳು ಒಂದು ಮೈಲಿ ದೂರದಿಂದ ಕುಡಿಯುವ ನೀರನ್ನು ಹೊತ್ತು ತರಬೇಕಾಗಿದೆ.

*****

ಕಲ್ಕತ್ತೆಯಲ್ಲಿರುವ ಬಹು ಮಂದಿ ದೇಶೀಯ ದೊಡ್ಡ ಮನುಷ್ಯರೂ ವಿದ್ಯಾವಂತರೂ ಕಳೆದ ವಾರ ಒಂದು ಸಭೆಯನ್ನು ಮಾಡಿ, ದೇಶೀಯ ವಿದ್ಯಾಶಾಲೆಗಳನ್ನು ಸ್ಥಾಪಿಸಿಕೊಳ್ಳಬೇಕೆಂತಲೂ ಸರ್ಕಾರಿ ಪಾಠಶಾಲೆಗಳಿಗೆ ಬಾಲಕರನ್ನು ಕಳುಹಿಸಬಾರದೆಂತಲೂ ಗೊತ್ತುಮಾಡಿಕೊಂಡರು. ಅವರು ಆ ಉದ್ದೇಶಕ್ಕಾಗಿ ಒಂದು ಫಂಡನ್ನು ಮಾಡಿದರು. ಅದಕ್ಕೆ ಇದುವರೆಗೆ ೪೦—೫೦ ಸಹಸ್ರ ರೂಪಾಯಿ ಚಂದಾ ವಸೂಲಾಗಿರುವಂತೆ ತಿಳಿದುಬಂದಿದೆ.

*****

ಪ್ರಿನ್ಸ್ ಆಫ್ ವೇಲ್ಸ್‌ರವರು ಬೊಂಬಾಯಿ ಪಟ್ಟಣದಲ್ಲಿ ಮೋಟಾರಿನಲ್ಲಿ ಕುಳಿತು ಪಟ್ಟಣದೊಳಗೆ ಸಂಚಾರಮಾಡುತ್ತಿದ್ದಾಗ್ಗೆ ಕಾಬಾ ಫತ್ತಾ ಎಂಬೊಬ್ಬ ದೇಶೀಯ ಸೈನಿಕನು ಅವರಿಗೆ ಒಂದು ಅರ್ಜಿಯನ್ನು ಕೊಡಬೇಕೆಂದು ನುಗ್ಗಿಹೋದನು. ಪೋಲೀಸಿನವರು ಅವನನ್ನು ಬಿಡದೆ ಹಿಡಿದು ಲಾಕಪ್ಪಿನಲ್ಲಿ ಹಾಕಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಈ ಸುದ್ದಿಯನ್ನು ಕೇಳಿ, ತುಂಬಾ ಕನಿಕರದಿಂದ ಅವನನ್ನು ಸೆರೆಯಿಂದ ಬಿಡುಗಡೆಮಾಡಬೇಕೆಂದು ಅಪ್ಪಣೆ ಕೊಟ್ಟರು.

*****

ಕಲ್ಕತ್ತಾ ಪಟ್ಟಣದೊಳಗೆ ಉತ್ತರ ಭಾಗದ ಪ್ರಜೆಗಳಿಗೆ ಹಾಲು ತಂದು ಮಾರತಕ್ಕ ಗೌಳಿಗರ ಮನೆಗಳನ್ನೂ ಅವರ ದನಗಳ ಕೊಟ್ಟಿಗೆಗಳನ್ನೂ ಅವರು ಕರೆದ ಹಾಲನ್ನು ಇಡುವ ಸ್ಥಳ ಪಾತ್ರೆ ಮುಂತಾದ್ದನ್ನೂ ಆಗಿಂದಾಗ್ಗೆ ನೋಡಿ ಪರೀಕ್ಷೆ ಮಾಡುತ್ತಿರುವುದಕ್ಕಾಗಿಯೇ ಮ್ಯುನಿಸಿಪಾಲಿಟಿಯವರು ತಿಂಗಳಿಗೆ ೨೫೦ ರೂಪಾಯಿ ಸಂಬಳದ ಒಬ್ಬ ಅಧಿಕಾರಿಯನ್ನು ನೇಮಿಸಿದ್ದಾರೆ. ಇದಲ್ಲದೆ ತಿಂಡಿಯ ಪದಾರ್ಥ, ಆಹಾರದ ಜಿನಸುಗಳು, ಹಣ್ಣು ಹಂಪಲು ಇವುಗಳನ್ನೆಲ್ಲಾ ಪರೀಕ್ಷೆ ಮಾಡುವುದಕ್ಕೆ ಇನ್ನೊಬ್ಬ ಇನ್ಸ್‌ಪೆಕ್ಟರು ನೇಮಕವಾಗಿದ್ದಾನೆ.

*****

ಮುಂದಿನ ಜನವರಿ ಆಖೈರಿನಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ಮದರಾಸಿಗೆ ದಯಮಾಡಿ, ಅಲ್ಲಿ ಒಂದು ದರ್ಬಾರ್ ನಡೆಸುವರು. ಆ ಸಮಯಕ್ಕೆ ದರ್ಬಾರಿಗೆ ಬರಬೇಕೆಂದು ಮದರಾಸ್ ಸರ್ಕಾರದವರು ಆ ಅಧಿಪತ್ಯಕ್ಕೆ ಸೇರಿದ ಮುಂದೆ ಹೇಳುವ ಮಹಾರಾಜರೇ ಮುಂತಾದ ದೇಶೀಯ ಅಧಿಪತಿಗಳಿಗೆ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದಾರೆ. ಅವರು ಯಾರೆಂದರೆ—ತಿರುವಾಂಕೂರು ಮಹಾರಾಜರು, ಕೊಚ್ಚಿ ರಾಜರು, ಪುದುಕೋಟೆ ರಾಜರು, ಬಂಗನಪಲ್ಲಿ ನವಾಬರು, ಸಂಡೂರ್ ರಾಜರು, ಬೊಬ್ಬಿಲಿ ಮಹಾರಾಜರು, ವೆಂಕಟಗಿರಿ ರಾಜರು, ವಿಜಯನಗರದ ರಾಜರು, ಜಯಪುರದ ರಾಜರು, ಕಲ್ಲಿಕೋಟೆಯ ಜಾಮೊರಿನ್ ರಾಜರು, ಕುರುಪಂ ಜಮೀನ್ದಾರರು, ಇವರೇ.

*****

ಕಳೆದ ೧೯೦೫ ನೇ ಇಸವಿಯ ಆಗಾಯಿತು ಗ್ರೀನಿಚ್, ಪಾರಿಸ್, ಪೀಟರ್ಸ್‌ಬರ್ಗ್, ಎಂಬ ಈ ಮೂರು ನಗರಗಳಲ್ಲೂ ಸೂರ್ಯಮಂಡಲವನ್ನು ಶಾಸ್ತ್ರಜ್ಞರು ಪ್ರತಿನಿತ್ಯವೂ ದುರ್ಬೀನುಗಳಿಂದ ಪರೀಕ್ಷೆ ಮಾಡಿ, ಸೂರ್ಯಮಂಡಲದ ಲಕ್ಷಣಗಳನ್ನು ಬರೆದಿಡುತ್ತಿದ್ದಾರೆ. ಕಳೆದ ೧೯೦೫ ನೇ ಫೆಬ್ರವರಿ ತಿಂಗಳಲ್ಲಿ ಸೂರ್ಯಬಿಂಬದಲ್ಲಿ ಹಿಂದುಸ್ಥಾನದ ಡೆಹರಾಡೂನ್‌ನಗರದ ಶಾಸ್ತ್ರಜ್ಞರಿಗೆ ಕಂಡುಬಂದಷ್ಟು ವಿಸ್ತಾರವಾದ ಕಪ್ಪು ಚುಕ್ಕೆಯು ಹಿಂದೆ ಯಾವಾಗ ಇರಲಿಲ್ಲ. ಆ ಆಗಾಯಿತು ಸುಮಾರು ೮ ತಿಂಗಳ ಒಳಕ ಸೂರ್ಯಬಿಂಬದಲ್ಲಿ ವ್ಯತ್ಯಾಸವೇನೂ ಕಾಣಬರದೆ ಎಂದಿನಂತೆ ಸಾಮಾನ್ಯವಾಗಿಯೇ ಇತ್ತು, ಈಗ ಮೂರು ವಾರಗಳಿಂದಲೂ ಸೂರ್ಯಮಂಡಲದೊಳಗೆ ಬಹಳ ವಿಸ್ತಾರವಾದ ಭಾಗವು ಕಪ್ಪಾಗಿ ಕಾಣಿಸಿಕೊಳ್ಳುತ್ತಿದೆ. ಇದು ಅಪೂರ್ವವಾದದ್ದು. ಮೊದಲು ಫೆಬ್ರವರಿಯಲ್ಲಿ ಕಾಣಿಸಿದ ಚುಕ್ಕೆಗಿಂತಲೂ ಬಹಳ ವಿಸ್ತಾರವಾಗಿಯೂ ಚಕ್ರಾಕಾರವಾಗಿಯೂ ಇದೆ. ಆದರೆ ಕಳೆದ ೧೮ ನೇ ತಾರೀಖಿನಿಂದ ಈ ಕರೀ ಪಟ್ಟಿಯು ಸೂರ್ಯನ ಮಧ್ಯದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಉದ್ದಕ್ಕೂ ಹರಡಿಕೊಂಡು ಕಾಣುತ್ತಿದೆ. ಸೂರ್ಯಬಿಂಬದಲ್ಲಿ ಇಂಥಾ ವಿಚಿತ್ರಸ್ಥಿತಿಯನ್ನು ಇದುವರೆಗೆ ಯಾರೂ ನೋಡಿದ್ದೇ ಇಲ್ಲ.

*****

ಕೊಚ್ಚಿ ಸಂಸ್ಥಾನದ ರಾಜಧಾನಿಯಾದ ಯರ್ನಾಕುಳಂ ಸೆಂಟ್ರಲ್ ಜೈಲಿನಲ್ಲಿ ತುಂಬಾ ಗಲಾಟೆಯಾದುದಕ್ಕೆ ಕಾರಣವೇನೆಂದರೆ—ಈಗಿನ ಸೂಪರಿಂಟೆಂಡೆಂಟ್ ಮ॥ ಮಾರ್ಷಲ್‌ರವರಿಗೂ ಬಂದೀವಾನರಿಗೂ ಮೊದಲಿಂದಲೂ ಮನಸ್ತಾಪಗಳಿದ್ದೇ ಇದ್ದವು. ಇವರು ಹಿಂದುಸ್ಥಾನದ ಜೈಲ್‌ಖಾನೆಗಳಲ್ಲಿ ರೂಢಿಯಲ್ಲಿರುವಂಥಾ ಆಚರಣೆಯನ್ನೆಲ್ಲಾ ಈ ಜೈಲಿನಲ್ಲೂ ಜಾರೀಗೆ ತಂದರು. ಇದುವರೆಗೆ ಆ ಜೈಲಿನಲ್ಲಿ ಬಂದೀವಾನರಿಗೆ ಜಾತಿವಾರಾಗಿ ಅಡಿಗೆ ಊಟಗಳು ಪ್ರತ್ಯೇಕವಾಗಿ ನಡೆಯುತ್ತಿದ್ದವು. ಮ॥ ಮಾರ್ಷಲ್‌ರವರು ಈ ಪದ್ಧತಿಯನ್ನು ವಜಾಮಾಡಿ, ಎಲ್ಲಾ ಖೈದಿಗಳಿಗೂ ಒಂದೇ ಕಡೆ ಅಡಿಗೆ, ಎಲ್ಲರಿಗೂ ಒಂದೇ ಕಡೆ ಭೋಜನ, ಈ ರೀತಿ ನಡೆಯಬೇಕೆಂದು ವಿಧಿಸಿದರು. ಮೊದಲನೇ ದಿನ ಬಂದೀವಾನರೆಲ್ಲಾ ಊಟಕ್ಕೆ ಒಂದು ಕಡೆ ಸೇರಿದ್ದಾಗ ಮ॥ ಮಾರ್ಷಲ್‌ರವರು ಹೋಗಿ ನಿಂತುಕೊಂಡರು. ಆಗ ಒಬ್ಬ ಕ್ರಿಸ್ತ ಖೈದಿಯು ಊಟಮಾಡಲೊಲ್ಲದೆ ಎದ್ದು ನಿಂತನು. ಸೂಪರಿಂಟೆಂಡೆಂಟು ಅವನ ಬಳಿಗೆ ಹೋಗಿ ಅವನ ಭುಜಗಳನ್ನು ಹಿಡಿದು ಕೂತುಕೊಳ್ಳಬೇಕೆಂದು ಹೇಳಿ ಅಮುಕಿದರು. ಆ ಖೈದಿಗೆ ಅಷ್ಟಕ್ಕೇ ಕೋಪ ಬಂದು, ಮನಸೋಯಿಚ್ಛೆ ಅವರನ್ನು ಬೈದನು. ಇತರ ಖೈದಿಗಳೂ ಅವನಿಗೆ ಸಹಾಯಕರಾಗಿ ನಿಂತು, ಸೂಪರಿಂಟೆಂಡರನ್ನು ಕೆಳಕ್ಕೆ ಕೆಡವಿಕೊಂಡು, ಪಹರೆಯವರು ಹಿಡಿದಿದ್ದ ಸೋಟಾಗಳನ್ನು ಕಿತ್ತುಕೊಂಡು, ಬಿದ್ದಿದ್ದವನನ್ನು ಹೊಡೆದು ಅವರ ತಲೆ ತುಂಬಾ ಗಾಯಮಾಡಿದರು. ತರುವಾಯ ಪೋಲೀಸಿನವರು ಬಂದು ಗುಂಡು ಹೊಡೆದು ೬ ಜನ ಖೈದಿಗಳಿಗೆ ಗಾಯಮಾಡಿ, ದಂಗೆಯನ್ನು ಶಮನಮಾಡಿದರು. ಮುಖಂಡರಾಗಿದ್ದ ೨೬ ಖೈದಿಗಳನ್ನು ದಸ್ತಗಿರಿ ಮಾಡಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಅರಸೀಕೆರೆ ತಾಲ್ಲೂಕು ಅಮಲ್ದಾರ್ ಮೆ॥ ಟಿ. ಕೆ. ಲಕ್ಷ್ಮಣ ಐಯಂಗಾರವರಿಗೆ ಅಕ್ಟೋಬರ್ ೧೯ ರಿಂದ ೩೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನ ಡೆಪ್ಯುಟಿ ಕಮಿಷನರ ಆಫೀಸ್ ಹೆಡ್ ಕ್ಲಾರ್ಕ್ ಎಸ್. ರಾಮಸ್ವಾಮಿ ಐಯಂಗಾರ್ರು ಅರಸೀಕೆರೆಯ ಅಮಲ್ದಾರರಾಗಿ ಬದಲಿ ನೋಡತಕ್ಕದ್ದು.

ಫ್ರೆಂಚ್ ರಾಕ್ಸ್ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಸಿ. ಆರ್. ನಾರಾಯಣಸ್ವಾಮಿ ಮೊದಲಿಯಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಎಸ್. ಶ್ರೀನಿವಾಸೈಯಂಗಾರ್ರು ಆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ನಂಜನಗೂಡು ತಾಲ್ಲೂಕು ಅಮಲ್ದಾರ್ ಮೆ॥ ಎ ಕೃಷ್ಣಸ್ವಾಮ್ಯಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕೋಲಾರ್ ಡಿಸ್ಟ್ರಿಕ್ಟ್ ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಬಿ. ಸುಬ್ಬರಾಯರು ನಂಜನಗೂಡಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೆ॥ ಟಿ. ರಾಮಸ್ವಾಮ್ಯಯಂಗಾರ್ರು ಗವರ್ನಮೆಂಟ್ ಡೆಪ್ಯುಟಿ ಸೆಕ್ರೆಟರಿಯಾಗಿ ಬದಲಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಕೆಳಗೆ ಹೇಳುವ ಆಸ್ಪತ್ರೆ ಅಸಿಸ್ಟೆಂಟರನ್ನು ಜುಲೈ ೧ ರಿಂದ ಸೀನಿಯರ್ ಆಸ್ಪತ್ರೆ ಅಸಿಸ್ಟೆಂಟರಾಗಿ ಖಾಯಂಮಾಡಿದೆ.—ವಿ. ಎಸ್. ರಾಮಸ್ವಾಮಿ ಮೊದಲಿಯಾರ್ರು, ಅಬ್ದುಲ್ ವಾಹಬ್ ಯವರು, ಎಸ್. ಫೆರ್ನಾಂಡೀಸ್ ಯವರು.

ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಆರು ತಿಂಗಳ ತನಕ ಹಂಗಾಮಿಯಾಗಿ ಏರ್ಪಡಿಸಿದ್ದ ಎರಡನೇ ಅಡಿಷನಲ್ ಮುನಿಸಿಫ್ ಕೋರ್ಟುಗಳನ್ನು ೧೯೦೫ ನೆ ಇಸವಿ ಡಿಸೆಂಬರ್ ಆಖೈರ್ ವರೆಗೆ ನಡೆಯುವಂತೆ ಸ್ಯಾಂಕ್ಷನ್ ಮಾಡಿದೆ.

ಬೆಂಗಳೂರು ಡಿವಿಜನ್ ಅ॥ ಇಂಜನಿಯರ್ ಮೆ॥ ಎಂ. ಎ ಆನಂದಾಳ್ವಾರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೩೯ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರಾಜಧಾನಿಯ ಮ್ಯುನಿಸಿಪಲ್ ವಿಚಾರಗಳು

ಕಳೆದ ಶನಿವಾರ ಬೆಳಗ್ಗೆ ಮೈಸೂರು ಮ್ಯುನಿಸಿಪಲ್ ಕಮಿಷನರುಗಳು ಟೌನ್ ಹಾಲಿನಲ್ಲಿ ಸಭೆ ಸೇರಿ, ತಿಂಗಳುಕಟ್ಟಳೆಯ ಮ್ಯುನಿಸಿಪಲ್ ವಿಚಾರಗಳನ್ನು ನಡಿಸಿದರು. ಕಳೆದ ಅಕ್ಟೋಬರಿನ ಮತ್ತು ಸೆಪ್ಟೆಂಬರ್ ತಿಂಗಳ ಲೆಕ್ಕಗಳು ಓದಲ್ಪಟ್ಟು ಮಂಜೂರಾದವು. ಅದರಲ್ಲಿ ತಿಳಿದು ಬಂದ ಮುಖ್ಯ ಸಂಗತಿಗಳೇನೆಂದರೆ— ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೧,೯೩೦ ರೂಪಾಯಿ ಜಮಾ ಆಯಿತು. ೧೦,೮೩೫ ರೂಪಾಯಿ ಖರ್ಚಾಯಿತು. ಜನನ ೧೩೬; ಮರಣ ಪ್ಲೇಗ್ ೧, ಜ್ವರ ೧೪, ಇತರ ಕಾರಣಗಳಿಂದ ೧೦೯, ಅಂತು ೧೨೪ ಮರಣಗಳಾದವು. ಆಡಿಟರ ರಿಪೋರ್ಟಿನಿಂದ ಗೊತ್ತಾದ ವಿಷಯಗಳೇನೆಂದರೆ—ಆಕ್ಟ್ರಾಯಿ ಬಾಬಿನ ಉತ್ಪತ್ತಿಯಲ್ಲಿ ೪೦೦ ಚಿಲ್ಲರೆ ರೂಪಾಯಿ ಕಡಿಮೆಯಾಯಿತು, ೧,೪೪೨ ರೂಪಾಯಿ ಮೋಟರ್ಫಾರ್ ಕಂದಾಯ ವಸೂಲಾಗಿದೆ, ಇನ್ನೂ ೪೩,೯೦೬ ರೂಪಾಯಿ ಮೋಟರ್ಫಾರ್ ಮತ್ತು ಗಾಡಿ ಕಂದಾಯಗಳು ವಸೂಲಾಗದೆ ಬಾಕಿ ಉಳಿದಿದೆ

ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಸತ್ಕರಿಸುವುದಕ್ಕಾಗಿ ಪ್ರೋಗ್ರಾಂಗಳಾದಿಗಳನ್ನು ಮಾಡುವುದಕ್ಕೆ ಒಂದು ಕಮಿಟಿ ಏರ್ಪಡಾಗಿದೆ. ಈ ಕಮಿಟಿಯವರು ಇಲ್ಲಿನ ಜನರಲ್ ಆಸ್ಪತ್ರೆಯ ಎದುರಿಗೆ ಸಯ್ಯಾಜೀರಾವ್ ರಸ್ತೆಯಲ್ಲಿ ಒಂದು ಭುವನೇಶ್ವರಿಯನ್ನು ಹಾಕಿಸುವರು. ಅದರಲ್ಲಿ ಮ್ಯುನಿಸಿಪಲ್ ಕಮಿಷನರು ಕಾದಿದ್ದು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಸುಸ್ವಾಗತವನ್ನು ಬಯಸಿ ಅಡ್ರೆಸ್ ಒಪ್ಪಿಸುವರೆಂದು ಕಮಿಟಿಯವರು ನಿರೀಕ್ಷಿಸಿಕೊಂಡು, ಈ ಭುವನೇಶ್ವರಿಯನ್ನು ಹಾಕಿಸುವುದಕ್ಕೆ ಮ್ಯುನಿಸಿಪಾಲಿಟಿಯವರು ಎಷ್ಟು ಹಣ ಕೊಡುವರೆಂದು ಕೇಳಿದರು. ಮ್ಯುನಿಸಿಪಲ್ ಮೆಂಬರುಗಳು ಈ ವಿಚಾರವನ್ನು ಚರ್ಚೆಮಾಡಿ, ಕರ್ಜನ್ ಪಾರ್ಕಿನೊಳಗೆ ವಿಕ್ಟರ್ ರಸ್ತೆಯಲ್ಲಿ ೧,೫೦೦ ರೂಪಾಯಿ ಖರ್ಚುಮಾಡಿ ಪ್ರತ್ಯೇಕವಾದ ಚಪ್ಪರವನ್ನು ಹಾಕಿಸಿ, ಅದರಲ್ಲೇ ಮ್ಯುನಿಸಿಪಲ್ ಅಡ್ರೆಸ್ಸನ್ನು ಯುವರಾಜರವರಿಗೆ ಒಪ್ಪಿಸುವುದು ಉತ್ತಮವೆಂದು ಗೊತ್ತುಮಾಡಿದರು. ಆ ವಿಕ್ಟರ್ ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಸ್ಕೂಲ್ ಹುಡುಗರನ್ನು ಕೂರಿಸುವುದಕ್ಕೆ ಗ್ಯಾಲರಿಗಳನ್ನು ಹಾಕಿಸಬೇಕೆಂತಲೂ ತೀರ್ಮಾನ ಮಾಡಿದರು.

ರಾಜಧಾನಿಯ ರಾಜಬೀದಿಗಳನ್ನು ಚನ್ನಾಗಿ ರಿಪೇರಿ ಮಾಡಿಸುವುದಕ್ಕೆ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲವೆಂಬುವುದನ್ನು ಕೇಳಿ ತಿಳಿದು ಶ್ರೀಮನ್ ಮಹಾರಾಜರವರು ಸೂಪರಿಂಟೆಂಡಿಂಗ್ ಇಂಜನಿಯರ್ ಕ್ಯಾಪ್ಟನ್ ಟ್ರಯಲ್ ಯವರನ್ನು ಕಳುಹಿಸಿ, ಎಷ್ಟು ಹಣ ಬೇಕಾದೀತೆಂದು ಪರೀಕ್ಷೆ ಮಾಡಿಸಿದರು. ಅವರು ಬಂದು ನೋಡಿ ರಿಪೋರ್ಟು ಕೊಟ್ಟಿದ್ದರ ಮೇಲೆ ಗವರ್ನಮೆಂಟಿನವರು ರಸ್ತೆಗಳನ್ನು ರಿಪೇರಿ ಮಾಡಿಸಬೇಕೆಂದು ಮ್ಯುನಿಸಿಪಾಲಿಟಿಗೆ ೧೫,೦೦೦ ರೂಪಾಯಿ ಕೊಟ್ಟಿದೆ ಎಂದು ಸ್ಯಾಂಕ್ಷನ್ ಮಾಡಿದರು. ಮ್ಯುನಿಸಿಪಲ್ ಮೆಂಬರುಗಳು ಈ ಹಣವನ್ನು ಅಂಗೀಕರಿಸಿ ಗವರ್ನಮೆಂಟಿನವರನ್ನು ವಂದಿಸಿರುತ್ತಾರೆ.

ದೇವರಾಜ ಮಾರ್ಕೆಟ್ಟಿನ ಹಿಂದೆ ಜನರಲ್ ಆಸ್ಪತ್ರೆಯ ಎದುರಿಗೆ ಇರುವ ಮೈದಾನವನ್ನು ಪ್ರೈವೆಟ್ ಆಸ್ಪತ್ರೆ ಕಟ್ಟುವುದಕ್ಕೆ ಕೊಡಬೇಕೆಂದು ಎಂ. ಡಿ. ಕುಪ್ಪುಸ್ವಾಮಿಶೆಟ್ಟರು ಅರ್ಜಿ ಬರೆದಿದ್ದರು. ಡೆಪ್ಯುಟಿ ಕಮಿಷನರು ಆ ಸ್ಥಳದಲ್ಲಿ ಮಾರ್ಕೆಟ್ಟನ್ನು ಜಾಸ್ತಿ ಮಾಡಿ ಕಟ್ಟಬೇಕಾಗಿದೆ ಎಂತಲೂ ಅದು ಯಾರಿಗೂ ಕೊಡಬಾರದೆಂತಲೂ ಅಭಿಪ್ರಾಯ ಪಟ್ಟರು. ಮ್ಯುನಿಸಿಪಲ್ ಕಮಿಷನರು ಕೂಡ ಅದೇ ರೀತಿ ತೀರ್ಮಾನಿಸಿರುತ್ತಾರೆ.

ಗುಲಾಂ ರಜಾ ಬೇಗ್‌ಯವರನ್ನು ಅಸಿಸ್ಟೆಂಟ್ ಸ್ಯಾನಿಟರಿ ಇನ್ಸ್‌ಪೆಕ್ಟರಾಗಿ ಕೆಲವು ಕಾಲದ ಮಟ್ಟಿಗಾದರೂ ನೇಮಿಸಿಕೊಳ್ಳಬೇಕೆಂದು ವೈಸ್ ಪ್ರೆಸಿಡೆಂಟರು ಸೂಚಿಸಿದರು. ಸೀನಿಯರ್ ಸರ್ಜನ್‌ರವರು ಕೂಡ ಇವರನ್ನು ನೇಮಿಸಿ ಕಳುಹಿಸುವ ತನಕ ಬೇಗ್‌ಯವರಿಗೆ ಆ ಕೆಲಸವನ್ನು ಕೊಡಬಹುದೆಂದು ಮೆಂಬರುಗಳೆಲ್ಲಾ ಒಪ್ಪಿದರು

ಸುಮಾರು ಎರಡು ವರುಷಗಳ ಕೆಳಗೆ ರಸ್ತೆ ರಿಪೇರಿ ಮೊದಲಾದ ಕೆಲಸಗಳನ್ನು ಮಾಡಿದ್ದ ಕೆಲವು ಕಂಟ್ರಾಕ್ಟರುಗಳು ತಮಗೆ ಹಣ ಪಾವತಿ ಆಗಲಿಲ್ಲವೆಂತಲೂ ಈಗಲಾದರೂ ಕೊಡಿಸಬೇಕೆಂತಲೂ ಕೇಳಿದರು. ಈ ಹಣವು ಸುಮಾರು ೩,೦೦೦ ರೂಪಾಯಿ ಆಗಬಹುದೆಂತಲೂ ಅದಕ್ಕೆ ಸರಿಯಾದ ಲೆಕ್ಕಗಳು ಸಿಕ್ಕಲಿಲ್ಲವೆಂತಲೂ ಹಣ ಕೊಡಬಹುದೇ ಎಂತಲೂ ವೈಸ್ ಪ್ರೆಸಿಡೆಂಟರು ತಿಳಿಸಿ ಕೇಳಿದರು. ಮೆಂಬರುಗಳು ಅದಕ್ಕೆ ಒಪ್ಪದೆ, ಒಂದು ಕಮಿಟಿ ಏರ್ಪಡು ಮಾಡಿ, ಈ ಕಮಿಟಿಯವರು ತನಿಖೆ ಮಾಡಬೇಕೆಂದು ತೀರ್ಮಾನಿಸಿದಾರೆ.

ವಾರ್ತಾದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದ ಬರಹಕ್ಕೆ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ನಂಜನಗೂಡಿನಲ್ಲಿ ಚಪ್ಪರದ ವಿಚಾರ.

ಅಯ್ಯಾ,

ತಮ್ಮ ನವೆಂಬರ್ ೨೩ ನೆ ಪತ್ರಿಕೆಯಲ್ಲಿ ನಂಜನಗೂಡು ಬಾತ್ಮಿದಾರರು ಬರೆದಿರುವ ಲೇಖನದಲ್ಲಿ ಶ್ರೀಮನ್ ಮಹಾರಾಜರ ಸುಸ್ವಾಗತದ ವಿಷಯವಾಗಿ ಬರೆದಿರುವ ಅಂಶದಲ್ಲಿ ಒಂದು ಅಂಶವು ನಿಜಸ್ಥಿತಿಗೆ ವಿರೋಧವಾಗಿ ಬಿದ್ದಿದೆ. ಅದನ್ನು ತಿದ್ದಿಕೊಳ್ಳಬೇಕೆಂದು ಪ್ರಾರ್ಥನೆ ಸಾಹುಕಾರ್ ದೇವಿಗೌಡಪ್ಪನವರು ತಮ್ಮ ಅಂಗಡಿ ಮುಂದೆ ರಾಜಭಕ್ತಿಯನ್ನು ಪ್ರದರ್ಶನಪಡಿಸುವುದಕ್ಕಾಗಿ ಈ ಚಪ್ಪರವನ್ನು ಹಾಕಿಸಿದರು. ಆ ಅಂಶವನ್ನು ಲೇಖಕರು ವಿಚಾರಿಸದೆ ಬಂಡ್ಯಯ್ಯನವರ ಮಳಿಗೆ ಮುಂದೆ ಎಂದು ಬರೆದು ಇದ್ದಾರೆ ಈ ವ್ಯತ್ಯಾಸವನ್ನು ಮುಂದಣ ವಾರದಲ್ಲಾದರೂ ಬದಲಾಯಿಸಬೇಕೆಂದು ಈ ಲೇಖನ ಮೂಲಕ ತಮ್ಮಲ್ಲಿ ನಿಜಾಂಶವನ್ನು ಪ್ರಕಟಿಸುತ್ತೇನೆ.

ದೇ ರಂಗಪ್ಪ

ಆಸೆಯು ನಿರಾಸೆಯಾಯಿತು.

ಅಯ್ಯಾ,

ಈ ಮಲೆನಾಡು ನಿವಾಸಿಗಳಾದ ನಾವುಗಳು, ಅಡಕೆಯ ಫಸಲಿನ ದೆಸೆಯಿಂದ ಕ್ಷೀಣದೆಸೆಗೆ ಬಂದಿರುವಂಥ ರಯತರುಗಳಾದ ನಮ್ಮ ಮೈಸೂರು ಸರಕಾರದವರ ಚಿತ್ತಕ್ಕೆ ವೇದ್ಯವಿರುತ್ತದೆ. ಇದಕ್ಕಾಗಿ ನಾವುಗಳೆಲ್ಲಾ ಕೆಲವು ವರುಷಗಳ ಲಾಗಾಯ್ತು ರಯತರುಗಳಾದ ಮಹಾಪ್ರಭುಗಳ ಸನ್ನಿಧಿಯಲ್ಲಿ ಅಡಕೆಯ ಮೇಲೆ ಹಾಕಿರುವಂಥ ಎರಡು ತರವಾದ ಕಂದಾಯದಲ್ಲಿ ಒಂದು ಬಾಬನ್ನು ವಜಾಮಾಡಿಸಿ ಕೊಡಬೇಕೆಂದು ಬೇಡಿಕೊಳ್ಳುತ್ತಾ ಬಂದೆವು. ಈ ವರುಷವಾದರೂ ಈ ಪ್ರಾಂತ್ಯ ಸರ್ಕೀಟ್ ದಯಮಾಡಿಸಿದ ನಮ್ಮ ದಿವಾನ್ ಬಹದ್ದೂರ್ ಸರ್ ಪಿ. ಎನ್. ಕೃಷ್ಣಮೂರ್ತಿ ಯವರು ನಮ್ಮ ಕಷ್ಟಗಳನ್ನು ವಿಚಾರಿಸಿ, ನಮ್ಮ ಅಹವಾಲ್‌ಗಳನ್ನು ದಿವ್ಯ ಚಿತ್ತಕ್ಕೆ ತೆಗೆದುಕೊಂಡು, ನಮ್ಮಗಳನ್ನು ಉದ್ಧರಿಸಬೇಕೆಂಬ ನಮ್ಮ ಅಹವಾಲ್ ಮೂಲಕ ಬೇಡಿಕೊಂಡೆವು. ನಮ್ಮ ದಯಾಳು ಯವರು ಕೊಳೆಯುರೋಗದ ಸ್ಥಿತಿಯನ್ನು ಚನ್ನಾಗಿ ವಿಚಾರಿಸಿಕೊಂಡು, ಮುಂದಕ್ಕೆ ಪ್ರಯಾಣ ಬೆಳಸಿದರು. ಅನಂತರ ನಾವುಗಳೆಲ್ಲಾ ದಸರಾ ವಿಚಾರಂಗಿನಲ್ಲಿ ನಮ್ಮ ಗ್ರಾಹಚಾರಗಳೆಲ್ಲಾ ಅರೆವಾಸಿ ಬಯಲಾಗಬಹುದೆಂದು ಎದುರುನೋಡುತ್ತಾ ಇದ್ದೆವು. ಈಗ ನೋಡಲಾಗಿ ನಮ್ಮ ಆಸೆಯು ನಿರಾಸೆಯಾಯಿತು. ನಮ್ಮ ದುರದೃಷ್ಟವನ್ನು ಕುರಿತು ಯಾರಿಗ ಮೊರೆ ಇಟ್ಟರೂ ಸ್ವಲ್ಪವೇ ಇದೆ.

೧೬—೧೧—೦೫. ಕೆ. ಟಿ ತಿ

ಹಾರೋಹಳ್ಳಿಗೆ ಮುಸಾಫರಿ ಛತ್ರಬೇಕು.

ಅಯ್ಯಾ,

ಕಾನಕಾನಹಳ್ಳಿ ತಾಲ್ಲೂಕು ಹಾರೋಹಳ್ಳಿಯು ೩—೪ ಸಾವಿರ ಜನಗಳನ್ನುಳ್ಳ ದೊಡ್ಡ ಊರಾಗಿಯೂ, ರಸ್ತೆ ಪಕ್ಕದಲ್ಲಿರುವ ಸ್ಥಳವಾಗಿಯೂ ಇರುವುದರಿಂದ ನಾನಾ ಕಡೆಗಳಿಂದ ಇಲ್ಲಿಗೆ ಬಂದು ಹೋಗತಕ್ಕ ಪರಸ್ಥಳದವರು ಅನೇಕರಿರುತ್ತಾರೆ. ಅವರಿಗೆ ಒಂದೆರಡು ರಾತ್ರಿ ಇಳಿದುಕೊಳ್ಳುವುದಕ್ಕೆ ಅನುಕೂಲವಾದ ಒಂದು ಛತ್ರವು ಇಲ್ಲದೆ ಇರುವುದರಿಂದ ಆ ಪರಸ್ಥಳೀಕರ ಕಷ್ಟವು ಹೇಳತೀರದ್ದಾಗಿರುತ್ತದೆ ಮುಸಾಫರಿ ಛತ್ರವೆಂಬುದಿಗೆ ಮಾತ್ರ ಒಂದು ಕಂಚಿನ ಮನೆ ಇರುತ್ತದೆ ಇದನ್ನು ಯಾವಾಗಲೂ ಆಫೀಸರರು ಬಂದರೆ ಕೊಡುತ್ತಾರೆಯೇ ಹೊರ್ತು ಇತರರಿಗೆ ಕೊಡುವದಿಲ್ಲ. ಅದೂ ಒಬ್ಬ ಆಫೀಸರು ಬಂದರೇ ಹೊರ್ತು ಒಂದೇ ಕಾಲದಲ್ಲಿ ಇಬ್ಬರು ಬಂದರೆ ಅದೂ ಸಾಕಾಗುವದಿಲ್ಲ. ಆದ್ದರಿಂದ ನಮ್ಮ ದಯಾಳುಗಳಾದ ಶ್ರೀಮನ್ಮಹಾರಾಜರ ಸರ್ಕಾರದವರು ಈ ಊರಲ್ಲಿ ಬರ ಪರಸ್ಥಳೀಕರಿಗೆ ಅನುಕೂಲವಾದ ಒಂದು ಛತ್ರವನ್ನು ಕಟ್ಟಿಸಿಕೊಟ್ಟು ಬಡವಾಯಿಗಳ ಸಂಕಟವನ್ನೂ ಕಷ್ಟವನ್ನೂ ತಪ್ಪಿಸುತ್ತಾರೆಂದು ನಿರೀಕ್ಷಣೆ ಇದೆ. ಇದನ್ನು ನಮ್ಮ ಅಮಲ್ದಾರ್ರವರು ತಮ್ಮ ದಿವ್ಯವಾದ ಚಿತ್ತದಲ್ಲಿ ತೆಗೆದುಕೊಂಡರೆ ಛತ್ರವು ಜಾಗ್ರತೆ ತಯಾರಾಗಲೂ ಬಡ ಮುಸಾಫರುಗಳ ಗೋಳಾಟವು ತಪ್ಪಲೂ ತಮಗೆ ಅಮೋಘವಾದ ಕೀರ್ತಿಯುಂಟಾಗಲೂ ಸಂದೇಹವಿಲ್ಲವಾಗಿರುತ್ತೆ

ಪರೋಪಕಾರಿ

ಮತ ರಾಂತಿಗೆ ಮಯಸ್ಸು

ಅಯ್ಯಾ,

ಮೈಸೂರು ಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಮುಖ್ಯ ಸಂಗತಿಗಳಲ್ಲಿ ಈ ತಿಂಗಳ ೯ ನೇ ತಾರೀಖಿನ ವೃತ್ತಾಂತ ಪತ್ರಿಕೆಯಲ್ಲಿ ಮ ವೆಂಕಟಕೃಷ್ಣಯ್ಯನವರೂ ಮೆ॥ ಅಂಬಳೆ ಅಂಜನ ದಿವಾಕರವರಿಗೆ ಅರಿಕೆಮಾಡಿಕೊಂಡ ವಿಷಯಕ್ಕೆ ಹೆಣ್ಣುಮಕ್ಕಳ ೧೪—೧೬ ವರುಷಗಳ ವರಿವಿಗೂ ಋತುವಾಗದಂತೆ ಆರ್ಡರ್ ಹೊರಡಿಸಿದರೂ ಸರಿಯೆ, ಇಲ್ಲದೆ ಅದರೊಳಗಾಗಿ ಋತುವಾದರನ್ನು ಮನೆಯಲ್ಲಿಟ್ಟುಕೊಂಡಿದ್ದರೆ ಅವರು ಪಂಕ್ತಿರು......ನ್ನು ಮಾಡಿದರೆ ಅವರ್ ಬಹಿಷ್ಕಾರರಾಗಿರಬೇಕು. ಈ ಮೇಲ್ಕಂಡ ವಿಷಯಗಳು ನಡಿಸಿದ ಪಕ್ಷದಲ್ಲಿ ನಮ್ಮ ಬ್ರಾಹ್ಮಣ ಜಾತಿ ಕೆಡುವುದಕ್ಕೆ ಮೊದಲನೇ ಕಾರಣವಾಗಿರುತ್ತೆ.

ಎಚ್ ನರಸಿಂಗರಾವ್.

[ಕೆಟ್ಟುಹೋಗುವವರು ಎಂದಿದ್ದರೂ ಕೆಟ್ಟುಹೋಗುವರು. ಋತುವಾದ ಒಂದೆರಡು ವರುಷಗಳ ತನಕ ತಂದೆತಾಯಿಗಳು ಹೆಣ್ಣುಮಕ್ಕಳನ್ನು ಸಲಹುತ್ತಿದ್ದರೆ ಅವರು ಸಟ್ಟಿಕ್ಕೆಗಳೂ ದೃಢಾಂಗಳಾಗಲೂ ಆಗುವುದಿಲ್ಲ. ವಿದ್ಯಾದಿ ಪ್ರಾಚೀನ ಧರ್ಮಗಳನ್ನು ಬಳಸಿರುವವರು ಈಗಲೇ ಈ ರೀತಿ ಅಲ್ಲಲ್ಲಿ ಆಚರಣೆಯಲ್ಲಿಟ್ಟಿರುತ್ತಾರೆ. ಅದರ ಸುಗುಣವನ್ನು ಗ್ರಹಿಸಿಕೊಳ್ಳದೆ ಹೀಗೆ ಆಕ್ಷೇಪಣೆ ಮಾಡುವುದು ತರವಲ್ಲ —ಎಡಿ.]

ತುಂಕೂರು ಲೋವರ್ ಸೆಕಂಡರಿ ಪರೀಕ್ಷೆಯು.

ಅಯ್ಯಾ,

ಈ ಸಾರಿ ಜರದ ಲೋವರ್ ಸೆಕಂಡರಿ ಪರೀಕ್ಷೆಗಾಗಿ ತುಂಕೂರಿಗೆ ಸೇರಿದ ಎಲ್ಲಾ ಪ್ರಾಂತ್ಯಗಳಿಂದಲೂ ಅನೇಕ ವಿದ್ಯಾರ್ಥಿಗಳು ಬಂದು ಸೇರಿದ್ದರು ನೇಮಕವಾದ ಪ್ರಕಾರ ೨೦ ನೆ ತಾರೀಖಿನಲ್ಲಿ ಲಾಗಾಯ್ತು ೨೩ ನೆ ತಾರೀಖಿನ ವರಿಗೂ ಪರೀಕ್ಷೆಯು ನಡೆಯಿತು. ವಿದ್ಯಾರ್ಥಿಗಳಿಗೆ ಯಾವ ತೊಂದರೆಗಳೂ ಇಲ್ಲದ ಹಾಗೆ ಎಲ್ಲಾ ಸೌಕರ್ಯಗಳೂ ದೊರಕುವಂತೆ ಇಲ್ಲಿನ ಘನ ಹೊಂದಿದ ಸ್ಕೂಲ್ ಹೆಡ್ ಮಾಸ್ಟರವರು ಏರ್ಪಡಿಸಿದ್ದ ವಿಷಯ ತುಂಬಾ ಕೊಂಡಾಡಬೇಕಾಗಿದೆ ಮೊದಲು ಎರಡು ದಿನ ವಿದ್ಯಾರ್ಥಿಗಳು ಬಹು ಸಂತೋಷವಾಗಿದ್ದು ೩ ನೆ ದಿನ ಮುಕ್ಕಾಲು ಪಾಲಿಗಿಂತ ಜ್ಯಾಸ್ತಿ ವಿದ್ಯಾರ್ಥಿಗಳ ಮುಖಗಳು ಕಳೆಗುಂದಿ ಬಾಡಿ ಹೋಯಿತಕ್ಕೆಂದು ವಿಚಾರಿಸುವಾಗ್ಯೆ ಲೆಕ್ಕದ ಪ್ರಶ್ನೆಗಳು ತಮಗೆ ಕಠಿನವಾಗಿತ್ತೆಂತಲೂ ಇನ್ನು ಅನೇಕರು ತಮಗೆ ಕೊಡಲ್ಪಟ್ಟ ಕಾಲ ಆ ಲೆಕ್ಕಗಳನ್ನು ಮಾಡುವುದಕ್ಕೆ ಸಾಕಾದದ್ದಾಗಿಲ್ಲದ ಕಾರಣ ಗಾಬರಿಪಟ್ಟು ಪ್ರಾರಂಭಿಸಿದ ಕೆಲಸಗಳನ್ನು ಪೂರ್ತಿ ಮಾಡುವ ಅವಕಾಶವಾಗಲಿಲ್ಲವೆಂತಲೂ ಪ್ರಲಾಪಿಸಿದರು ಪರೀಕ್ಷೆಯು ಕಠಿನವಿಲ್ಲದೆ ಸುಲಭವಾಗಿಯೇ ಇರಬೇಕೆಂತ ಸೋಮಾರಿಗಳು ಅಪೇಕ್ಷಿಸುವದೇನೋ ನ್ಯಾಯವೆಂದು ಬುದ್ಧಿವಂತರು ತಿಳಿಯದೆ ಇರರು. ಪರೀಕ್ಷಕರು ವಿದ್ಯಾರ್ಥಿಗಳ ಯೋಗ್ಯತೆಗೆ ಮೀರಿದ ಪ್ರಶ್ನೆಗಳನ್ನು ಕೊಟ್ಟಿರಲಾರರೆಂದು ನಂಬಬೇಕಾಗಿದೆ ಕಾಲ ಸಾಲದಿದ್ದರೆ ಗಾಬರಿ ಪಡುವದೇನೋ ಸಹಜವೇ ಸರಿ. ಅಂಥಾ ಸಂದರ್ಭದಲ್ಲಿ ಅವರವರ ಕೆಲಸವನ್ನು ನೋಡಿ ತಕ್ಕಷ್ಟು ಕೂಲಿ ಕೊಡುವರೆಂದು ನಿರೀಕ್ಷಿಸಬೇಕಾಗಿರುತ್ತೆ. ನಮ್ಮ ಜನ್ಮಭೂಮಿಯಾದ ಮೈಸೂರು ದೇಶವು ಘನವನ್ನು ಹೊಂದಿದ ಮಹಾ ಸರ್ಕಾರದವರ ಉತ್ಕೃಷ್ಟವಾದ ಪ್ರೋತ್ಸಾಹದ ದೆಸೆಯಿಂದ ವಿದ್ಯಾಭಿವೃದ್ಧಿಯ ತುಂಬಾ ಪ್ರಕಾಶಕ್ಕೆ ಬರುವದೆಂತಲೂ ಮುಖ್ಯವು ಕ್ರಮೇಣ ನಾರ್ಮಲಾಗುವದೆಂತಲೂ ಅನೇಕರು ಕಂಡು ಮೈಸೂರು ಸರ್ಕಾರದವರನ್ನು ಕೊಂಡಾಡುತ್ತಿದ್ದಾರೆ.

ವಿದ್ಯಾಭಿಮಾನಿ

ವೈಶ್ಯರ ಮಕ್ಕಳ ವಿದ್ಯಾಭ್ಯಾಸ ವಿಚಾರ

ಅಯ್ಯಾ,

ಈ ಭರತಖಂಡದಲ್ಲಿರುವ ಅನೇಕ ಮತದವರು ತಮ್ಮ ಮತಗಳನ್ನು ಪ್ರಕಾಶಪಡಿಸುವದಕ್ಕೋಸ್ಕರ ಅನೇಕ ಏರ್ಪಾಡು ಮಹಾಸಭೆಗಳು ನಡಸಿ ಚಂದಾ ವಸೂಲಿಯಿಂದ ತಮ್ಮ ಮತದ ಬಡ ಮಕ್ಕಳಿಗೆ ವಿದ್ಯೆಯನ್ನು ಕಲಿಸುವದಕ್ಕೋಸ್ಕರ ಅನೇಕ ಏರ್ಪಾಡು ಮಾಡಿ ವಿದ್ಯಾವಂತರನ್ನು ಮಾಡಿ ಕೀರ್ತಿಪಡೆಯುತ್ತಾ ಇರುವಾಗ್ಯೂ ನಮ್ಮ ಮೈಸೂರು ದೇಶದ ವೈಶ್ಯರು ಮಾತ್ರ ಏನೊಂದು ಪ್ರಯತ್ನವೂ ನಡಿಸದೆ ತಮ್ಮ ಮಕ್ಕಳನ್ನು ಕುರಿಗಳೋಪಾದಿಯಲ್ಲಿ ಬೆಳಸಿಕೊಂಡು ವಿದ್ಯೆ ಕಲಿಸದೇ ಇರುವದು ನೋಡಿ ತುಂಬಾ ವ್ಯಸನವಾಗುತ್ತಾ ಇದೆ. ಈಗ ಬೆಂಗಳೂರಲ್ಲಿ ವೀರಶೈವ ಮುಕ್ಕರು

ಗಿ ಮಹಾಸಭೆಯನ್ನು ಮಾಡಿ ತಮ್ಮ ಮತದಲ್ಲಿ ಕೇವಲ ಬಡವರಾದ ಬಡತರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಲಕ್ಷಾಂತರ ರೂಪಾಯಿ ಚಂದಾ ಎತ್ತಿ ನಡೆಸುವ ಏರ್ಪಾಡ ಮಹನೀಯರಾದ ಬೆಂಗಳೂರು ದಂಡಿನಲ್ಲಿರುವ ವೈಶ್ಯರೆಲ್ಲಾ ಆಲೋಚಿಸಿ ವೈಶ್ಯ ಧನೋಪಕಾರ ಸಂಘವೆಂದು ಹೆಸರಿಟ್ಟು ನವಂಬರ್ ತಾ. ೨೫ ರಲ್ಲಿ ಬೆಂಗಳೂರು ದಂಡಿನಲ್ಲಿ ಸಭಸೇರಿ ವಿಚಾರಗಳನ್ನು ಉಪನ್ಯಾಸ ಮಾಡಿ ಬಡ ವೈಶ್ಯರ ಮಕ್ಕಳಿಗೆ ವಿದ್ಯೆ ಕಲಿಸುವದಕ್ಕೂ ಅನ್ನ ಹಾಕುವದಕ್ಕೂ ಚಂದಾ ಮಾಡುತ್ತಾ ಕೆಲಸ ಮಾಡುವದಾಗಿ ತಿಳಿದಿದೆ ಈ ಏರ್ಪಾಡನ್ನು ಕೇಳಿ ವೈಶ್ಯ ಜನರಿಗೆಲ್ಲಾ ಉಂಟಾದ ಆನಂದವನ್ನು ನಾವು ವಿವರಿಸಲು ಇದರಂತೆಯೇ ಮೈಸೂರು ಸೀಮೆಯ ಎಲ್ಲಾ ತಾಲ್ಲೂಕುಗಳಲ್ಲೂ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲೂ ಮೈಸೂರು ಶಹರಿನಲ್ಲಿಯೂ ಬೆಂಗಳೂರು ಶಹರಿನಲ್ಲಿಯೂ ವೈಶ್ಯರು ದಂಡು ವೈಶ್ಯರ ಏರ್ಪಾಡನ್ನೇ ಅನುಸರಿಸಿ ತಮ್ಮ ಬಡ ಮಕ್ಕಳಿಗೆ ವಿದ್ಯೆ ಕಲಿಸುವದಕ್ಕೋಸ್ಕರ ತಕ್ಕ ಏರ್ಪಾಡು ಮಾಡಿ, ದ್ರವ್ಯಸ್ಥರು ದೊಡ್ಡ ಮನಸು ಮಾಡಿ ತಮ್ಮ ತಮ್ಮ ಶಕ್ತಿ ಮೀರಿ ದ್ರವ್ಯ ಸಹಾಯ ಮಾಡಿ, ಪ್ರತಿ ತಾಲ್ಲೂಕಿನಲ್ಲೂ ಎಲ್ಲಾ ಗ್ರಾಮಗಳ ಬಡ ವೈಶ್ಯರ ಮಕ್ಕಳಿಗೆ ಅನ್ನ ಹಾಕಿ ವಿದ್ಯೆ ಕಲಿಸುವ ಏರ್ಪಾಡು ಕಸಬಾ ಟವನಿನಲ್ಲಿ ಒಂದೊಂದು ಸ್ಕೂಲ್ ಇಡಿಸಿ, ಸಂಸ್ಕೃತ ವಿದ್ಯೆಯನ್ನು ಕಲಿಸುವದಕ್ಕೆ ಉದ್ಯುಕ್ತರಾದರೆ ನಮ್ಮ ವೈಶ್ಯಕುಲವು ಕೇವಲ ಉನ್ನತಸ್ಥಿತಿಗೆ ಬಂದೀತೆಂದು ನಂಬುತ್ತೇನೆ

ಕೋಟ್ಲ ಚನ್ನಯ್ಯಶೆಟ್ಟಿ

ಚನ್ನಗಿರಿ ಪೋಲೀಸ್ ವಿಚಾರ.

ಸ್ವಾಮಿ,

ಕಳೆದ ತಿಂಗಳು ಗುರ್ತು ಲಾಗಾಯತು ಈ ತಾಲ್ಲೂಕಿನಲ್ಲಿ ೨ ಪ್ಲೇಗ್ ಇನ್ಸ್ಪೆಕ್ಷನ್ ಸೆಂಟರುಗಳನ್ನು ಮಾಡಿಟ್ಟು ಚನ್ನಗಿರಿಯಲ್ಲಿ ಒಂದು, ಬಸವಾಪಟ್ಟಣದಲ್ಲಿ ಒಂದು ಈ ಜಾಗಕ್ಕೆ ೨ ಜನ ದಫೇದಾರರನ್ನು ಇಟ್ಟಿದ್ದಾರೆ. ಇದೇನೋ ಬಹಳ ಸರಿಯೇ ಆದರೆ ದುರ್ಮಾರ್ಗಿಗಳಾದರೆ ಪಟ್ಟಣಗಳೂ ಹಳ್ಳಿ, ಮತ್ತು ಲಾಯಿಗಳ ಕಡೆಯಿಂದ ಸಂತೆ ಬೆನ್ನೂರು ಬರುವ ಸೆಂಟರಿಗೆ ಸೇರಿದೆ. ಬಸವಾಪಟ್ಟಣಕ್ಕೂ ಸಂತೆ ಬೆನ್ನೂರಿಗೂ ಮೈಲುಗಳು ಈ ಸ್ವಲ್ಪ ದಿವಸಗಳ ಒಳಗೆ ಸಂತೆ ಬೆನ್ನೂರಿ ಒಬ್ಬ ಹೆಂಗಸು ಭಾವಿಯಲ್ಲಿ ಬಿದ್ದು ಸತ್ತುಹೋದಳು ಸತ್ತು ಆ ಸಾಯಂಕಾಲದೊಳಗೇನೇ ಅಲ್ಲಿನ ಪೋಲೀಸ್ ಸ್ಟೇಷನ್ನಿಗೆ ಸಮಾಚಾರ ಹೋಯಿತು ೨ನೆ ದಿವಸ ಬಸವಾಪಟ್ಟಣದಲ್ಲಿದ್ದ ದಫೇದಾರನಿಗೆ ವರ್ತಮಾನವಾಗಿ ೩ನೇ ದಿವಸ ಬೆಳಗ್ಗೆ ಮಹಜರು ಮಾಡುವದಕ್ಕೆ ದಫೇದಾರಗೆ ಹುಕುಂ ಕೊಟ್ಟರು ೩ನೇ ದಿವಸ ಬರಿಯ ಬಿದ್ದಿರುವಲ್ಲಿಗೆ ಬಂದು ಸಿಬ್ಬಂದಿ ಬಸವಾಪಟ್ಟಣಕ್ಕೆ ೨೦ ಮೈಲಿ ದೂರ ಇರುವ ಸೀತೆಗೆರೆ ಗ್ರಾಮದಲ್ಲಿ ದುರ್ಮರಣವೆಂಬ ಟಪಾಲ್ ಇದೇ ಪರಿಣಾಮ ಹೊಂದಿತು. ಪಾಪಿಕರೇ, ಈ ದುರವಸ್ಥೆಯನ್ನು ಹೊಂದಿದ ಹೆಣದ ಬಂಧುವರ್ಗದವರ ವ್ಯಸನವನ್ನು ಬರೆಯಲಾಗದು. ಆ ಶರೀರದ ಗತಿ ಏನಾಗಿರಬಹುದು ಟಪಾಲ್ ಇರುವ ಹಿಂದೂಮತದ ಪದ್ಧತಿ ಪ್ರಕಾರ ಸಂಸ್ಕಾರಾದಿಗಳೇ ನಡೆಯದೆ ಸತ್ತ ಹೆಣಗಳನ್ನು ಸಾಗಿಸುವದು ಕಷ್ಟವಾಗಿದ್ದು, ದಫೇದಾರ ಅಧಿಕಾರವೆಂದು ಹಾಗಾಯಿತು ಸ್ವಾಮಿ, ಹೀಗೇ ಯೋಚಿಸಿ ಹಿಂದೆ ಎಂದಿಗೆ ನಿವಾರಣೆಯಾಗುವದೋ ಎಂದು ಜನಗಳ ಆತ್ಮಸ್ವರವನ್ನು ಪ್ರಾರ್ಥಿಸುತ್ತಾರೆ ಇದೆಲ್ಲಾ ಹಾಗಿರಲಿ. ನೊಂದ ಕಷ್ಟದಿಂದ ಕೂಡಿದ್ದ ಗ್ರಾಮಾಂತರಗಳಲ್ಲಿ ಟಪಾಲ್ ೩ ದಿವಸರಿಗೂ ಇದ್ದರೆ ಕೆಡುವದಿಲ್ಲವೇ ದುರ್ಗಂಧವನ್ನು ಹೊಂದಿಲ್ಲವೇ ಜನರು ಮಾತಾಡುವುದೇ, ಈಗಿನ ನಾಗರೀಕತೆ ಇದು ಆರೋಗ್ಯಶಾಸ್ತ್ರಕ್ಕೆ ವಿರುದ್ಧವಲ್ಲವೇ ಇಂಥಾ ಪ್ಲೇಗ್ ಸ್ಕೀಮಿನಿಂದ ಜನಗಳಿಗೆ ಏನು ಉಪಯೋಗ ಕಷ್ಟ ಹೊಂದಿದವರು ಕೊಳೆತು ಹೋಗುವದೇ ಉಪಯೋಗವೆಂದು ಉಪಯೋಗವಿದೆ ಇದು ಕಷ್ಟವಷ್ಟು ಈಗ ಪಾಪಿಕರೇ ಯೋಚಿಸಬಹುದು — ಗ್ರಾಮದ ಬಂಧುವರ್ಗದವರು ಶೋಕದಲ್ಲಿದೆ, ಹಾಗೂ ದಿವಾಂಜಿತ್ರು ನಿಬಂಧನೆಗಳನ್ನು ಮಾಡಿದೆಂದು, ಮತ್ತು ನಾಲ್ಕೈದು ದಿವಸಗಳಲ್ಲಿ ಕಾಯಿಲೆ ಬಿದ್ದು ಸತ್ತ ಹೆಣಗೆ ಇದ್ದವರೂ ಕೇಳಬೇಕಾಗುವದು.

ಓದುವಂಥ

ಶಾಂತಿಗ್ರಾಮ ಪತ್ರವರ್ತಮಾನಗಳು.

ಹೊಸಕೋಟೆ ಮಳೆ ಹೋಯಿತು ಪ್ಯೈರು ಒಣಗಿತು ಬಡಗಾಲ ಕಾಯಿಲೆಯೊಡನೆ ವರ್ಷಕ ಮಂಡಲಿಯವರ ಸಂತೋಷ ಪಟ್ಟು —ಹೊಸ ಅಮಲ್ದಾರರವರು ಈ ಊರಿಗೆ ಬಂದು ಎರಡು ಗಳು ಮಾತ್ರವೇ ಆಗಿದೆ ಇಷ್ಟು ಜಾಗ್ರತೆಯಾಗಿ ಫಂಡು ಆ ಸಂಸ್ಕಾರವನ್ನು ಅಡಗಿಸಿದರು. ಸುಂಕದ ಬಾಬು ಕ್ರಮ ಗವರ್ನಮೆಂಟ್ ಖಾತ್ರಿಯಲ್ಲಿ ಅನ್ಯಾಯವಾಗಿ ಮಾಡುತ್ತಿದ್ದ ಖರ್ಚು ಮಿತವಾಡಲ್ಪಟ್ಟಿತು ಲಂಚವೆನ್ನುವ ದೇವತೆ ಯನ್ನು ತನಗೆ ಈ ಊರಿನಲ್ಲಿ ಸ್ಥಳವು ಸಿಗಲಾರದೆಂದು ದೂರ ಹೋಯಿತು ಲಂಚವನ್ನು ತಿಂದು ಹಳಗಿದ್ದವರು ಮರುಗುತ್ತಾರೆ ಬಡ ಜನಗಳು ಉಳಿದುಕೊಂಡಂತಾಯಿತು.—ಇಲ್ಲಿ ಸ್ಕೂಲ್ ಮೂರು ವರ್ಷಗಳ ಲಾಗಾಯತು ಕಂಗಾಲಾಗಿ ಇಲ್ಲದೆ ಇರುತ್ತದೆ. ಎಂದಿಗೆ ಎಚ್ಚರವಾಗುವುದೋ ಹೊಸದಾಗಿ ಬಂದಿರುವ ಅವರು ನ್ಯಾಯಪರಿಪಾಲನೆಯಿಂದ ಈಗ ಕಟ್ಟುವ ಸ್ಕೂಲನ್ನು ಯಾವ ರೀತಿ ಕ್ರಮಪಡಿಸಿಕೊಟ್ಟು ಇಲ್ಲಿನ ಕಷ್ಟವನ್ನು ತಪ್ಪಿಸುವರೋ ನೋಡಬೇಕು.

ಸಿರಾ.—ಈ ವರುಷ ಇಲ್ಲಿನ ಎಲ್ಲಾ ಗ್ರಾಮಗಳಲ್ಲಿಯೂ ಮಳೆ ಇಲ್ಲದೆ ರೈತರು ಬೇಸಾಯಕ್ಕಿಲ್ಲದೆ ತುಂಬಾ ತೊಂದರೆಯಾಗಿದೆ. ಸಂತೆಯಲ್ಲಿ ಅಕ್ಕಿ ೧೫ ರೂ. ವರಿಗೂ ಧಾರಣೆ ಆಗಿತ್ತು. ಬಡಜನಗಳು ಅಮಲ್ದಾರರಲ್ಲಿ ಅರಿಕೆ ಮಾಡಿಕೊಂಡದ್ದರ ಮೇಲೆ ತಾವೇ ಸಂತೆಗೆ ಬಂದು ದಳ್ಳಾಳಿಗಳ ಮೂಲಕ ಬಡವರಿಗೆ ಸುಲಭ ಬೆಲೆಗೆ ಮಾರುವಂತೆ ದಳ್ಳಾಳಿಗಳಿಗೆ ಹೇಳಿದರು. ಇವರು ಮಾಡಿದ ಉಪಕಾರಕ್ಕಾಗಿ ಜನರು ಕೊಂಡಾಡುತ್ತಿದ್ದಾರೆ.—ಇಲ್ಲಿಗೆ ಸುಮಾರು ೪೫ ಮೈಲಿ ದೂರದಲ್ಲಿ ತುಮಕೂರು ರಸ್ತೆ ಕೂಡುವ ಸ್ಥಳ ಇದೆ ತುಮಕೂರಿಗೂ ನೆಲ್ಲಿಗೆರೆಗೂ ಹೋಗುವ ರಸ್ತೆ ಇದೆ. ಗಾಡಿಗಳು ತಿರುಗುವದಕ್ಕೆ ಚನ್ನಾಗಿದೆ. ಇಲ್ಲಿಗೆ ಸುತ್ತಲೂ ಸುಮಾರು ೫೦—೬೦ ಗ್ರಾಮಗಳಿವೆ ಈ ಸ್ಥಳದಲ್ಲಿ ಸಂತೆ ನಡೆಯುವಂತೆ ಗವರ್ನಮೆಂಟಿನವರು ಏರ್ಪಾಡು ಮಾಡಿದರೆ ಚನ್ನಾಗಿದೆ ಈಗ ಹಾಲಿ ನಡೆಯುತ್ತಿರುವ ಹಾಳೇಸಹಳ್ಳಿ ಸಂತೆಯು ಸರಿಯಾದ ಸ್ಥಳದಲ್ಲಿ ನೇಮಕವಾಗಿಲ್ಲ. ಯಾಕಂದರೆ ಈ ಸ್ಥಳವು ತುಂಬಾ ಗಲೀಜಾಗಿದೆ. ಇಲ್ಲಿ ೨ ಹಳ್ಳಗಳು ದಾರಿಯಲ್ಲಿ ಅಡ್ಡಲಾಗಿವೆ, ಇದಲ್ಲದೆ ಮಳೆಗಾಲದಲ್ಲಿ ತುಂಬಾ ಕೆಸರೂ ವ್ಯಾಪಾರಸ್ಥರಿಗೆ ತುಂಬಾ ತೊಂದರೆಯೂ ಆಗುತ್ತದೆ. ಇಂಥಾ ಸ್ಥಳದಲ್ಲಿ ಸಂತೆ ಕಟ್ಟುವದು ಸರಿಹೋದದ್ದಲ್ಲ. ಯಾಕಂದರೆ ಜನರ ಆರೋಗ್ಯಕ್ಕೆ ತುಂಬಾ ವಿರೋಧ ಇದನ್ನು ಸರ್ಕಾರದವರು ಯೋಚಿಸಿ ಸ್ಯಾನಿಟರಿ ರೂಲ್ಸಿಗೆ ಸರಿಯಾಗಿ ಎತ್ತರವಾಗಿಯೂ ಒಳ್ಳೇ ಗಾಳಿ ಬರುವ ಸ್ಥಳವಾಗಿಯೂ ಇರುವ ಕೂಡು ರಸ್ತೆ ಬಳಿ ಸಂತೆ ನಡಿಸಿದರೆ ಜನರ ಆರೋಗ್ಯಕ್ಕೂ ಗಾಡಿ ಸಂಚಾರಕ್ಕೂ ಬಹಳ ಚನ್ನಾಗಿದೆ. ಈಗ ಗವರ್ನಮೆಂಟಿನವರು ಯೋಚಿಸಿರುವ ಪ್ರಕಾರ ಚಿಕ್ಕನಹಳ್ಳಿ ಅಗ್ರಹಾರದ ತೋಪಿನಲ್ಲಿ ಸಂತೆ ನಡಿಸಿದರೆ ಮಳೆ ಬಂದರೆ ಸರಿಯಾಗಿರಲಾರದು ಇದಲ್ಲದೆ ಮಧ್ಯದಲ್ಲಿ ಗದ್ದೆ ಬೈಲಿದೆ. ಆದ್ದರಿಂದ ಸರ್ಕಾರದವರು ಅಪ್ಪಣೆಯಾಯಿತು ಮಾಡಿ, ಕೂಡುರಸ್ತೆಯ ಬಳಿ ಸಂತೆ ನಡಿಸಿದರೆ ಬಹಳ ಪ್ರಯೋಜನವಾಗಬಹುದು.

ಚಿಕ್ಕಮಗಳೂರು.—ಮಳೆ ಬರಲಿಲ್ಲ. ಮೋಡವು ಆಕಾಶವನ್ನು ವ್ಯಾಪಿಸಿ, ಈಗಲೋ ಆಗಲೋ ಮಳೆ ಬರುವದೆಂಬ ನಿರೀಕ್ಷೆಯನ್ನು ಹುಟ್ಟಿಸುತ್ತಲಿದೆ ಏನಸು ಧಾರಣೆಯಾದರೋ ದಿನದಿನಕ್ಕೆ ಏರುತ್ತಲಿದೆ ಬಡವರ ಕಷ್ಟವಾದರೋ ದಿನದಿನಕ್ಕೆ ಹೆಚ್ಚುತ್ತಲಿದೆ ಪೂರ್ವದಿಕ್ಕಿನಿಂದ ಬೀಸುವ ಗಾಳಿಯಿಂದ ಚಳಿ ಬಹಳವಾಗಿದೆ.—ಈ ವರ್ಷ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಈ ಡಿಸ್ಟ್ರಿಕ್ಟಿನ ಎಲ್ಲಾ ಕಡೆಯಿಂದಲೂ ಇಲ್ಲಿಗೆ ಬಂದಿದ್ದವರು ೯೩ ಮಂದಿ ಇವರಲ್ಲಿ ಮೂವರು ಹುಡುಗಿಯರು. ಈ ಪೈಕಿ ಇಂಗ್ಲೀಷಿಗಾಗಿ ಹೋಗಿದ್ದವರು ೩೭ ಮಂದಿ ಕನ್ನಡ ತೆಗೆದುಕೊಂಡವರು ೫೬ ಎಂದು ತಿಳಿದು ಬಂದಿದೆ. ಇಲ್ಲಿನ ಡಿಸ್ಟ್ರಿಕ್ಟ್ ಬೋರ್ಡ್ ಕೆಲಸಕ್ಕೆ ರಾಜೀನಾಮೆಯಿಂದ ಮಿ॥ ಚಕ್ ಪಾಣಿ ಅಯ್ಯಂಗಾರ್ಯ ಬಿಟ್ಟಿರುವದಾಗಿ ವರ್ತಮಾನ ಸಮ್ಮ ಡೆಪ್ಯುಟೀ ಕಮೀಷನರೂ, ಗವರ್ನ್‌ಮೆಂಟ್ ಕಮಿಷನರ್ ಸಹ ಟಿನಲ್ಲಿರುವದಾಗಿಯೂ ಈ ತಿಂಗಳ ಕಡೆಯಲ್ಲಿ ಹೆಡ್‌ಕ್ವಾರ್ಟರಿಗೆ ಬರುವದಾಗಿಯೂ ವರ್ತಮಾನವಿದೆ ಡಾಕ್ಟರ್ ಕಾಪ್ಪುಸಾಮಿ ಮೊದಲಿಯಾರ್ಯ ಮನೋ ಸರ್ಕಾರಿ ಕೆಲಸದ ಉದ್ದೇಶ್ಯ ಕಾಶಿಗೆ ಹೋಗಿರುವದಾಗಿಯೂ ಹಿಂದಿರುಗಿ ಬರುವದಕ್ಕೆ ಇನ್ನೂ ಒಂದು ವಾರವಾದೀತೆಂದೂ ಕೇಳುತ್ತೇವೆ —ಘನ ಸ್ಟೇಟಿಂಗೇಲ್ ದೊರೆಯವರು ಶಿವಮೊಗ್ಗೆಯಿಂದ ಇಲ್ಲಿಗೆ ಬಂದು ೧೨, ೧೫, ೧೬ ತಾರೀಖುಗಳಲ್ಲಿ ಇಲ್ಲಿನ ವೆಸ್ಲಿಸಭೆಯವರಿಗಾಗಿ ವಿನೋದಾರಾಧನೆಗಳನ್ನು ನಡಿಸಿದರು ಈ ಆರಾಧನೆಗಳಿಂದ ನಮ್ಮ ಸಭೆಯವರಿಗೆ ತುಂಬಾ ಪ್ರಯೋಜನವಾಯಿತು —ಈ ಊರಿಗೆ ಸುಮಾರು ೮ ಮೈಲಿ ದೂರದಲ್ಲಿರುವ ಜೋಡಳ್ಳಿ ಎಂಬ ಗ್ರಾಮದಲ್ಲಿ ಪ್ಲೇಗ್ ರೋಗದಿಂದ ನಾಲ್ಕು ಜನರು ಸತ್ತರಂತೆ ತರೀಕೆರೆಯಿಂದ ಇಲ್ಲಿಗೆ ಬಂದಿದ್ದ ಒಬ್ಬ ಘಾರೆಸ್ಟು ಗಾರ್ಡಾನನಿಗೆ ಪ್ಲೇಗ್ ಗಡ್ಡೆ ಆಗಿದೆ ಎಂಬ ಸಂಶಯದಿಂದ ಅವನನ್ನು ನೆನ್ನೆ ಬಿಡಾರದ ಕ್ಯಾಂಪಿಗೆ ಕಳುಹಿಸಿದರು ಇಲ್ಲಿನ ಸಂತೆಯಲ್ಲಿ ಉಪ್ಪುವಿನ ಅಂಗಡಿಗಳನ್ನು ಸಂತೆಯ ಮುಂಭಾಗದಲ್ಲಿಯೇ ಇಟ್ಟುಕೊಂಡಿರೋಣದರಿಂದ ಎದುರಾಗಿ ಬೀಸುವ ಗಾಳಿಯು ದೆಸೆಯಿಂದ ಅದರ ವಾಸನೆಯು ಸಮೀಪದಲ್ಲಿ ವ್ಯಾಪಾರ ಮಾಡುವವರಿಗೂ ಕೊಳ್ಳುವವರಿಗೂ ಸಹಿಸಲಾಗದ್ದಾಗಿರೋಣದರಿಂದ ಮುನಿಸಿಪಾಲಿಟಿಯವರು ಅದನ್ನು ಬೇರೆ ಪ್ರತ್ಯೇಕವಾದ ಸ್ಥಳದಲ್ಲಿ ಇಟ್ಟುಕೊಳ್ಳುವಂತೆ ಮಾಡುವದು ಒಳ್ಳೇದಾಗಿದೆ

ಪರದೇಶ ವರ್ತಮಾನಗಳು.

ಕಳೆದ ವರುಷ ಪ್ರಪಂಚದಲ್ಲಿರುವ ಎಲ್ಲಾ ಗಣಿಗಳಿಂದಲೂ ೬ ಕೋಟಿ ೯೫ ಲಕ್ಷ ಪೌಂಡುಗಳ ಬೆಳ್ಳಿಯೂ ಉತ್ಪತ್ತಿಯಾಗಿದೆ.

****

ಬರ್ಮಿಂಗ್ಹಾಂ ವಿದ್ಯಾಶಾಲೆಯ ಮೂಲಧನಕ್ಕೆ ಒಬ್ಬ ದೊಡ್ಡ ಮನುಷ್ಯನು ತನ್ನ ಹೆಸರು ತಿಳಿಸದೆ ನಾಲ್ಕನೇ ಸಲ ೫೦ ಲಕ್ಷ ರೂಪಾಯಿ ಧರ್ಮ ಮಾಡಿದಾನೆ

****

ಗ್ಲಾಸ್ಗೋಪಟ್ಟಣದ ಒಂದು ದೊಡ್ಡ ಬಾಡಿಗೆ ಮನೆಯಲ್ಲಿ ೩೬೪ ಬಡ ಜನರೇ ವಾಸಮಾಡುತ್ತಿದ್ದರು. ಆ ಮನೆಗೆ ಬೆಂಕಿ ಬಿದ್ದು ಅನಾಯತವಾಗಿ ೩೯ ಮಂದಿ ಒಂದೇ ಕಡೆ ಸಿಕ್ಕಿ ಸುಟ್ಟು ಹೋದರು.

****

ಕಳೆದವಾರ ಜರ್ಮನಿಯವರ ಒಂದು ಜಹಜು ಇಂಗ್ಲೀಷರ ಒಂದು ಜಹಜೂ ಪ್ರಯಾಣಮಾಡುತ್ತಿದ್ದಾಗ ಒಡೆದು ಅನಾಹುತವಾಗಿ ಮೊದಲನೆಯದರಲ್ಲಿ ೩೩ ಜನರೂ, ಎರಡನೆಯದರಲ್ಲಿ ೧೩೦ ಜನರೂ ಪ್ರಾಣ ಕಳೆದುಕೊಂಡರು.

****

ರಷ್ಯಾ ಜಪಾನಿನವರಿಗೆ ನಡೆದ ಕರಾರನ್ನು ಆಎರಡು ಗವರ್ನಮೆಂಟುಗಳವರೂ ಕಳೆದ ಬುಧವಾರ ವಾಷಿಂಗ್‌ಟನ್ ಪಟ್ಟಣಕ್ಕೆ ತಂತೀ ವರ್ತಮಾನ ಕೊಟ್ಟು ರುಜುಮಾಡಿ ಒಪ್ಪಿಕೊಂಡಿರುತ್ತಾರೆ ಇಲ್ಲಿಗೆ ಆ ಭಯಂಕರ ಯುದ್ಧ ವಿಚಾರವು ಪರಿಸಮಾಪ್ತಿ ಹೊಂದಿತು.

****

ಸರ್ ವಿಲ್ಲಿಯಂ ಗಾರ್‌ಸ್ಟಿನ್ ಎಂಬ ಇಂಜನಿಯರು ಈಜಿಪ್ಟ್ ರಾಜ್ಯದಲ್ಲಿ ನೈಲ್ ನದಿಯಿಂದ ನಾಲೆಗಳ ಮತ್ತು ಇನ್ನೂ ಕೆಲವು ನೀರಾವರಿ ಕಾಮಗಾರಿಗಳನ್ನು ಮಾಡಿಸಿದ್ದಕ್ಕಾಗಿ ಆ ಗವರ್ನಮೆಂಟಿನವರು ಅವನಿಗೆ ಸಂಬಳವಲ್ಲದೆ ೨ ಲಕ್ಷ ರೂಪಾಯಿ ಇನಾಮು ಕೊಟ್ಟಿದಾರೆ.

****

ಟೀಕಾರಾಜ್ಯದಲ್ಲಿ ರಾಜಮನೆತನದಲ್ಲೂ ಆವರ ಬಂಧುವರ್ಗದಲ್ಲೂ ಆಸ್ಥಾನಮಂಡಲಿಯಲ್ಲೂ ಇರುವ ಯೌವನಸ್ಥರನ್ನು ಒಂದು ಕಡೆಗೆ ಸೇರಿಸಿ, ಅವರಿಗೆ ಸೈನ್ಯ ವಿಚಾರವನ್ನೂ ಶಸ್ತ್ರವಿದ್ಯೆಯನ್ನೂ ಕಲಿಸಿ ತರಪೇತು ಮಾಡಬೇಕೆಂದು ಚಕ್ರವರ್ತಿಯವರು ಆಜ್ಞೆಮಾಡಿದಾರೆ

****

ಗ್ರೀಸ್ ರಾಜ್ಯದ ದೊರೆಯವರು ಕಳೆದ ವಾರ ವಿಲಾಯಿತಿಗೆ ಬಂದು ಚಕ್ರವರ್ತಿಯವರ ಆತಿಥ್ಯವನ್ನು ಸ್ವೀಕರಿಸಿದರು ವಿಲಾಯಿತಿಯವರು ಬಹು ಸಂಭ್ರಮಯುಕ್ತವಾದ ನಾನಾ ಉತ್ಸವಗಳನ್ನು ನಿರ್ವಹಿಸಿ, ಅವರನ್ನು ಸಂತೋಷಪಡಿಸಿದರು ಚಕ್ರವರ್ತಿಯವರು ಅವರಿಗಾಗಿ ದೊಡ್ಡ ದಿಬಾರವನ್ನು ಮಾಡಿಸಿದರು.

****

ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರ ಕುಮಾರಿಯು ಜಪಾನ್ ರಾಜ್ಯಕ್ಕೆ ಬಂದು ಚಕ್ರವರ್ತಿನಿಯವರಿಂದಲೂ ಪ್ರಜೆಗಳಿಂದಲೂ ಬಹು ವಿಶೇಷವಾಗಿ ಸತ್ಕಾರ ಹೊಂದಿ ವಾಪಸು ಹೋದರು ಆಕೆಯ ತಂದೆಯು ಜಪಾನ್ ಚಕ್ರವರ್ತಿನಿಯವರಿಗೆ ಅನೇಕ ಅಮೂಲ್ಯ ಆಭರಣಗಳನ್ನು ಬಹುಮಾನವಾಗಿ ಕಳುಹಿಸಿಕೊಟ್ಟಿದಾರೆ

****

ಜಪಾನ್ ರಾಜ್ಯದ ಕಾರ್ಖಾನೆಗಳವರು ಹತ್ತಿಯನ್ನು ಹಿಂದೂಸ್ಥಾನದಿಂದಲೂ ಅಮೇರಿಕದಿಂದಲೂ ತರಿಸಿಕೊಳ್ಳುತ್ತಿದಾರೆ. ಈಗ ಆ ಚಕ್ರಾಧಿಪತ್ಯದವರು ತಮ್ಮ ದೇಶದಲ್ಲೇ ಹತ್ತಿಯನ್ನು ಬೆಳೆಯಬೇಕೆಂದೂ ಹೊರಗಿನಿಂದ ತರಿಸಿಕೊಳ್ಳಕೂಡದೆಂದೂ ತೀರ್ಮಾನ ಮಾಡಿ, ಕೊರಿಯಾದಲ್ಲಿ ವಿಶೇಷವಾದ ಏರ್ಪಾಡುಗಳನ್ನು ಮಾಡ ಲಾರಂಭಿಸಿದಾರೆ

****

ವಿಲಾಯಿತಿಯ ಮಹಾರಾಜಾ ಚಕ್ರವರ್ತಿಯವರು "ಸ್ಯಾಂಡ್ರಿಂಗ್‌ಹ್ಯಾಮ್ ವಿಂಡ್‌ಸರ್ ಪಟ್ಟಣದ ಬಳಿ ಶಿಕಾರಿಗೋಸ್ಕರ ಹೋಗುತ್ತಿದ್ದಾಗ ಆಕಸ್ಮಾತ್ತಾಗಿ ಒಂದು ಗುಂಡಿಯಲ್ಲಿ ಕಾಲಿಟ್ಟದ್ದರಿಂದ ಕಾಲಿಗೆ ಸ್ವಲ್ಪ ಜಖಂ ಆಯಿತು. ಕೂಡಲೇ ಅವರನ್ನು ಗಾಡಿಯಲ್ಲಿ ಕೂರಿಸಿ, ಅರಮನೆಗೆ ಕರೆತಂದರು. ಅದರ ಬಾಧೆಯು ವಿಶೇಷವಾಗಿಲ್ಲದಿರೋಣದರಿಂದ ಚಕ್ರವರ್ತಿಯವರು ಸ್ವಲ್ಪ ಕುಂಟುತ್ತಾ ನಡೆದಾಡುತ್ತಿದಾರೆ.

****

ಸೂಯಸ್ ಕಾಲುವೆಗೆ ೨೪ ಕೋಟಿ ದ್ರವ್ಯ ಖರ್ಚಾಯಿತು. ಕಳೆದ ೧೮೬೯ನೆ ಇಸವಿಯಲ್ಲಿ ಕಾಮಗಾರಿಯೆಲ್ಲಾ ಪೂರೈಸಿ ಹಡಗುಗಳ ಸಂಚಾರಕ್ಕೆ ಪ್ರಾರಂಭವಾಯಿತು. ಮುಖ್ಯವಾಗಿ ಹಿಂದೂಸ್ಥಾನದವರೂ ವಿಲಾಯಿತಿಯವರೂ ಫ್ರೆಂಚ್ ಇಂಜನಿಯರ್ ಎಂ. ಫರ್ಡಿನಾಂಡ್ ಡಿಲೆಸ್ಸೆಪ್ಸ್ ಎಂಬಾತನಿಗೆ ತುಂಬಾ ಕೃತಜ್ಞರಾಗಿರಬೇಕು. ಈ ಕಾಲುವೆ ಆಗುವದಕ್ಕೆ ಮೊದಲು ಜಹಜುಗಳು ವಿಲಾಯಿತಿಯಿಂದ ಹಿಂದೂಸ್ಥಾನಕ್ಕೆ ೧೧,೨೨೦ ಮೈಲಿ ದೂರ ಸಂಚಾರ ಮಾಡಿಕೊಂಡು ಬರುತ್ತಿದ್ದವು. ಈಗ ಅದು ಸುತ್ತುವುದು ತಪ್ಪಿ ೬,೩೩೨ ಮೈಲಿಯಷ್ಟು ಹತ್ತಿರವಾಗಿದೆ. ಈ ಕಾಲುವೆಯ ಮೂಲಕ ಪ್ರತಿ ವರುಷವೂ ೨,೧೬,೦೦೦ ಪ್ರಯಾಣಿಕರು ಸಂಚಾರಮಾಡುತ್ತಿದಾರೆ. ವರುಷ ಒಂದಕ್ಕೆ ೪॥ ಕೋಟಿ ರೂಪಾಯಿ ಆ ಕಾಲುವೆ ಬಳಿಯಲ್ಲಿ ಸುಂಕ ವಸೂಲಾಗುವದು

****

ಯೂರೋಪ್ಖಂಡದಲ್ಲಿರುವ ನಾರ್ವೆ ಸ್ವೀಡನ್ ಎಂಬೀ ಎರಡು ದೇಶಗಳನ್ನೂ ಸ್ವೀಡನ್ ರಾಜನೇ ಆಳುತ್ತಾ ಬಂದಿರುವದೂ, ಈಚೆಗೆ ಅವೆರಡೂ ಬೇರೆ ಬೇರೆ ಆಗುವ ವಿಷಯದಲ್ಲಿ ತರ್ಕಗಳು ನಡೆಯುತ್ತಿರುವದೂ, ನಾರ್ವೆ ಸರ್ಕಾರದವರು ಪ್ರತ್ಯೇಕವಾದ ದೊರೆಯನ್ನು ನೇಮಿಸಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿದ್ದದ್ದೂ ನಮ್ಮ ವಾಚಕರಿಗೆ ತಿಳಿದಿದೆ. ಅದೇ ರೀತಿ ನಾರ್ವೆ ಪಾರ್ಲಿಮೆಂಟಿನವರು ಡೆನ್ಮಾರ್ಕಿನ ಯುವರಾಜರಾದ ಪ್ರಿನ್ಸ್ ಛಾರ್ಲ್ಸ್‌ರವರಿಗೆ ಹೇಳಿ ಕಳುಹಿಸಿ, ಅವರನ್ನು ತಮ್ಮ ದೊರೆಯಾಗಿ ನೇಮಿಸಿಕೊಂಡಿದಾರೆ ಯುವರಾಜರೂ ಅದಕ್ಕೆ ಒಪ್ಪಿದ್ದಾಯಿತು. ನಾರ್ವೆ ಸರ್ಕಾರದವರು ತಮ್ಮ ಹೊಸ ದೊರೆಯ ಅರಮನೆ ಮತ್ತು ಇತರ ಸ್ವಂತ ಖರ್ಚಿಗೆ ಅಲ್ಲಿನ ರಾಜಧಾನಿಯಲ್ಲಿ ಪ್ರತಿ ವರುಷವೂ ೬,೨೩,೦೦೦ ರೂಪಾಯಿ ಕೊಡುತ್ತೇವೆಂದು ಸ್ವೀಕಾರ ಮಾಡಿದಾರೆ. ಅವರಿಗೆ ಮೊನ್ನೆ ಶನಿವಾರದ ದಿನ ಕಿರೀಟಧಾರಣೆಯಾಗಿ ನಾರ್ವೆ ದೊರೆಯಾದ ಏಳನೇ ಹಾಕನ್‌ರವರು ಎಂಬ ಹೆಸರನ್ನಿಟ್ಟಿರುತ್ತಾರೆ.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

11

[ಸ್ಥಾಪಿತವಾದದ್ದು ೧೯೦೩ರಲ್ಲಿ]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿಪವರು ಪಡೆಯಬೇಕೆಂದ ಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆ ಯಾನಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೬ನ್ನು ಮಾತ್ರವೇ ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರೋಕ್ತರೀತಿಯಾಗಿ ನಡಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೇಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಿಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ಸದಕ್ಕ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪುಕಟ್ಟಿ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ.—The Manager,
The India Agricultural and Helping Office,
Vengurla Post, Bombay Presidency.

ಜ್ವರಹರಿ.



ಇದು ಸಾಧಾರಣ ಜ್ವರ, ಚಳೀಜ್ವರ, ಮೈಕರೀಜ್ವರ, ಪಿತ್ತಜ್ವರ, ಶೀತಜ್ವರ, ನಾಡಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮುತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

* * * * * * * * *

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಾಪರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟಂಟ್ ಸರ್ಜನ್ ಗಣಪತಿಯವರು—ಹೆಸ್ರು ಓಮಂ ಕರ್ಪೂರವನ್ನು ನಾನೂ ನನ್ನ ಕಾವೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪುರುಷರಿಗೂ ಹೆಂಗಸರಿಗೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಪನ್ರುಮುಕ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ನಂಬರ್ ೫೦ ಟೀಚ್ ಸ್ಟ್ರೀಟ್, ಮದರಾಸ್.

ಕ್ಷೇತ್ರಗಣಿತ

ಮೂರು ಭಾಗಗಳಿಂದ ಕೂಡಿದ ೪೦೦ ಪುಟಗಳುಳ್ಳ ಸಂಪೂರ್ಣವಾದ ಈ ಪುಸ್ತಕದಲ್ಲಿ ಒಟ್ಟು ಸುಮಾರು ೨,೦೦೦ ಲೆಕ್ಕಗಳು ಉತ್ತರಗಳೊಡನೆ ಕೂಡಿವೆ. ಉತ್ತಮ ಪತ್ರ ಪ್ರತಿದ ೧ಕ್ಕೆ ರೂ. ೧—೪—೦. ಮಧ್ಯಮ ಪತ್ರ ಪ್ರತಿ ೧ಕ್ಕೆ ರೂ. ೧. ವಿದ್ಯಾರ್ಥಿಗಳಿಗೆ ಬಹಳ ಆಗತ್ಯವಾದದ್ದು. ವಿಳಾಸ—ಪಿ ಕಷ್ಣಣ್ಣ, ಟ್ಯಾಂಕ್ ಇನ್ಸ್‌ಪೆಕ್ಟರ್, ನಂಜನಗೂಡು

ಸನ್ ೧೯೦೬ನೇ ಇಸವಿಯ

ಎಂ. ನಂ॥ ಎಫ್. ನಂ॥ ಬಿ. ನಂ॥ ಸಿ. ನಂ॥ ಹೆಚ್. ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ
ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಋಷಿಬಾಷ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಪ್ರಾರಂಭ ಪಟಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಭಾಡ್ಯ, ಕೋರ್ಟ್ ಫೀಜು, ಪ್ರೋಸೆಸ್ ದುಸ್ತುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಮುಖ್ಯ ವಿಷಯಗಳು, ನಾಣ್ಯಗಳ ಅಳತೆ, ತೂಕಗಳು ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿಬಿದ್ದ ಫಲ, ರಾಹು ಗುಳಿಕಕಾಲ, ವಾರ ಶೂಲೆ, ದಿನಕಂಬಳದಪಟ್ಟಿ, ದೋಬಿಲೆಕ್ಕ, ಜಮಾಖರ್ಚುಪಟ್ಟಿ ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ಗೂಲು ಹಾಕಿದೆ, ಶೀಘ್ರ ಸಾವರ್ಾ ಬೈಂಡು, ರೇಖಿನಿಂದ ಗಿಲೀಟು ಮಾಡಿದೆ.

ಎ. ನಂಬರ್ ಚಿಕ್ಕಸೈಜು ೩ ಆಣೆ	ಸಿ. ನಂಬರ್ ದೊಡ್ಡಸೈಜು ೬ ಆ.
ಎಫ್. ,, ,, ೪ ,,	ಹೆಚ್. ,, ,, ೭ ,,
ಬಿ. ,, ಮುಚ್ಚಳದ್ದು ೫ ,,	ಡಿ. ,, ಮುಚ್ಚಳದ್ದು ೮ ,,

ಪೋಸ್ಟು ಚಾರ್ಜು ಬೇರೆ. ಒಂದೇ ಸಮೂನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ ಪಿ ಮೂಲಕ ತರಿಸಿಕೊಳ್ಳಿ

ನಮ್ಮ ವಿಳಾಸ—ಎಂ ಟಿ ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಹೋಮೊಸಿಯ

ಕಷ್ಟ ಪರಿಹಾರ. ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಪ್ರಪಂಚದಲ್ಲಿ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಪ್ರತ್ಯಕ್ಷ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.—ಸಣ್ಣ ಡಬ್ಬಾ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ಈ ರೂ. ೨—೮ ಆ. ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

* * * * * * * * *

ಹೋಮೊಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ. ೨೭ ನಂಬರು ಟೀಚ್ ಸ್ಟ್ರೀಟ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

10—11—1905 ರಿಂದ 17—11—1905 ರ ವ

ಸ್ಥಳ.	ಪ್ಲೇಗ್ ತಗಲಿ ಸತ್ತದ್ದು.	ಸತ್ತದ್ದು.	ಹೋಗಿ ಆ ಸಂ
ಬೆಂಗಳೂರು ಪಟ್ಟಣ	13	9	51
ಮೈಸೂರು ,,	0	0	91
ಬೆಂಗಳೂರು ಡಿಸ್ಟ್ರಿಕ್ಟ್	11	10	154
ಮೈಸೂರು ,,	14	13	1?2
ಕೋಲಾರ್ ,,	0	0	95
ಕೋಲಾರ್ ಚಿನ್ನದ ಗಣಿಗಳು	5	1	27
ತುಮಕೂರು ಡಿಸ್ಟ್ರಿಕ್ಟ್	0	0	52
ಹಾಸನ ,,	0	0	25
ಚಿತ್ರದುರ್ಗ ,,	0	0	26
ಕಡೂರ್ ,,	8	4	37
ಶಿವಮೊಗ್ಗ ,,	13	11	66
ಜುಮ್ಲಾ.	61	47	668

ಶಾಲೀವಾಹನ ಶಕ ೧೮೨೭ ನೇ ವಿಶ್ವಾವಸು ಸಂವತ್ಸರ ಮಾರ್ಗಶಿರ ಶುದ್ಧ ಚೌತಿ ಗುರುವಾರದಿಂದ ಮಾರ್ಗಶಿರ ದಶಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೫ ನೇ ಇಸವಿ ನವಂಬರ್ ಮತ್ತು ಡಿಸೆಂಬರ್

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ
30	ಗುರು	ಚೌತಿ	23 38	ಉತ್ತ್ರಾಷಾ	54 25
1	ಶುಕ್ರ ॥	ಪಂಚಮಿ	20 10	ಶ್ರ	51-10
2	ಶನಿವಾ ‡	ಷಷ್ಠಿ	19 50	ಧ	56.0
3	ರವಿವಾ	ಸಪ್ತಮಿ	20 20	ಶ	56 30
4	ಚಂದ್ರ	ಅಷ್ಟಮಿ	22 2	ಪೂಭಾ	60 0
5	ಕುಜ	ನವಮಿ	24-55	ಉತ್ತ್ರಾಭಾ	2 40
6	ಬುಧ	ದಶಮಿ	28 50	ಉತ್ತ್ರಾಭಾ	7-10

॥ ಪಂಚಮಿತಾತಿಥಿ, ಕೊಟಿಕಲಪಂಚಮಿ.

‡ ಚಂಪಾಷಷ್ಠಿ, ಸುಬ್ರಹ್ಮಣ್ಯದಲ್ಲಿ ರಥೋತ್ಸವ.

ನಂದಸಪ್ತಮಿ

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ ೧೨—೮—	೧೩—೮
ಕೆಂಪುಸಾತಿ ಅಕ್ಕಿ ಅವಲ್	೧೯—೪—೦	೧೪—
,, ಮಯಂ	೧೨—೦—೦	೧೩—೮
ಜಾಪಾನೀ ಅಕ್ಕಿ	೧೨—೦—೦	೧೩—
ಸಣ್ಣಕ್ಕಿ ಅವಲ್	೧೪—೦—೦	೧೬—೦
,, ಮಯಂ	೧೩—೮—೦	೧೫—೦
ಹೊಗರೀ ಬೇಳೆ ಪಲ್ಲ ೧ಕ್ಕೆ	೧೧—೯—೦	೧೧ ೮
,, ಮಯಂ	೧೦—೮—೬	೧೦—೧೨
ದೈರ್ ರಾಗಿ ಪಲ್ಲ ೧ಕ್ಕೆ	೬—೪—೦	೬—೦
ಕಾರಾಗಿ	೬—೦—೦	೫—೧೨
ಜೋಳ	೬—೦—೦	೬—೮
ಹಲಸಂದೆ ಪಲ್ಲ ೧ಕ್ಕೆ	೧೦—೦—೦	೯—೮
ಬಿಳೀ ಅವರೆ	೮—೧೨ ೦	೯—೦
ಹೆಸರು	೯ ೧೨—೦	೧೧—೮
ಉದ್ದು	೧೧ ೦ ೦	೯—೮
ಕಡಲೆ	೧೦—೦—೦	೧೦—೮
ಎಳ್ಳು	೧೬ ೦ ೦	೧೫—೦
ಹುರುಳಿ	೧೦—೦ ೦	೯—೮
ಪರಳು ೧೨೬ ಸೇರಿಗೆ	೧೨—೮—೦	೧೨—೮
ಸೀಗೇಕಾಯಿ ಮಣ ೧ಕ್ಕೆ	೩—೮—೦	೩—೦೦
ಮೆಣಸಿನಕಾಯಿ	೪—೮—೦	೩—೧೨
,, ಮಯಂ	೩—೧೨—೦	೩—೮
ಬೆಲ್ಲ ದೊಡ್ಡ ಅಚ್ಚು	೭—೪—೦	೫ ೨ ೦
ಒಳ್ಳೆಣ್ಣೆ ಮಣ ೧ಕ್ಕೆ	೪—೪ ೦	೪—೪
ಹರಳೆಣ್ಣೆ ,,	೫—೦—೦	೪—೧೨
ಕೊತ್ತಂಬರಿ ಪಲ್ಲ ೧ಕ್ಕೆ	೧೧—೮—೦	೧೦—೦೦
ಉಪ್ಪು ,,	೭—೦—೦	೮—೮
ಹುಣಸೇ ಹಣ್ಣು	೧—೦—೦	೦—೧೨
,, ಹಳೇದು	೨—೧೪—೦	೧—೦೦
ಹುಷ್ಟ	೧೨—೮—೦	೧೨—೮
ಸೀಮೆಯೆಂಣೆ ಪೆಟ್ಟಿ ೧ಕ್ಕೆ	೫—೦—೦	೫—೦
ತೆಂಗಿನಕಾಯಿ ೧೦೦ಕ್ಕೆ	೫—೦—೦	೪—೦
ಅಳಲೇಕಾಯಿ ಮಣ ೧ಕ್ಕೆ	೧—೨—೦	೦—೧೪
ಅಂಟುವಾಳದಕಾಯಿ ಮಣ ೧ಕ್ಕೆ	೦—೧೪—೦	೦—೧೨
ಹತ್ತಿ (ಪೌಂ) ಕೆಂಪು	೧೫—೮—೦	೧೫—೪
,, ,, ಬಿಳಿದು	೧೭—೧೦—೦	೧೬—೩
,, ,, ಗಟ್ಟಿ ತೊಲ ೧ಕ್ಕೆ	೨೬—೦—೦	೨೪—೬
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೨—೦—೦	೭೮—೦

Printed and Published by the Rev H Sullivan B the Proprietor and Manager. Wesleyan Mission Press Mysore. 30/11/1905.

ವೃತ್ತಾಂತ ಪತ್ರಿಕೆ.

REGISTERED M. 20

ಯ ೧ ದು ಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಡಿಸೆಂಬರ್ ತಾರೀಖು ೭ ನೇ ಗುರುವಾರ. — ಸಂಚಿಕೆ ೪೯

ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

20

ಫಿಫ್ತ್ ಕನ್ನಡದ ೫ನೆ ಪುಸ್ತಕದ ನೋಟ್ಸ್	೦—೩—೦
ಟಿ. ,, ೬ ನೆ ಪುಸ್ತಕದ ನೋಟ್ಸ್	೦—೩—೦
ಟಿ. ೩—೪ ನೆಯ ಪುಸ್ತಕಗಳ ನೋಟ್ಸ್	೦—೨—೦
ಮೈಸೂರು ಸಂಸ್ಥಾನದ ಪ್ರ ಮಿಂ ... (೨ನೆ ಭಾಗ)	೦—೧—೦
೬ನೆ ತರಗತಿ ಪದ್ಯಸೋಪಾನದ ನೋಟ್ಸ್	೦—೧—೬

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ:

ಮೈಸೂರು ಇತರ ಕಡೆಗಳಲ್ಲಿ ವರ್ಷ ಒಂದಕ್ಕೆ,
... ಪತ್ರಿಕೆಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) ರೂ ೧ ೦—೦
... ಅಂಚೆಯ ಮೂಲಕ ...
... ೧ ಪ್ರತಿಗೆ ೧೨ ತಿಂಗಳಿಗೆ ...
ರೂ ೧—೧೨—೦
೧—೧೪—೦

ಚಂದಾದಾರರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ವಿಳಾಸ — ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸ ವಿ ನು ಡಿ.

5

ರಾಜಕೀಯ ... ಸ್ವರ ತಿಂಗಳಿಗೆರಡುಸಲ ಪ್ರಕಟ ವಾಗುವ ಪತ್ರಿಕೆ

... ಉಪಯುಕ್ತಾಂಶಗಳವಗಿ ಇಷ್ಟು ಸುಲಭ ... ಉಳ್ಳ ಪತ್ರಿಕೆ ಇದೊಂದಲ್ಲದೆ ಕನ್ನಡದಲ್ಲಿ ಬೇರೆ ... ಇಲ್ಲ.

ಫಾಸಟೆ ದೊರೆಯುವ ಮಾದರಿ ಸಂಚಿಕೆ—ರಸಿಕರಾದವ ... ಪತ್ರಿಕೆಗೆ ಆದಷ್ಟು ಜೊತೆ ಇರುತ್ತೇನೆ ಇಲ್ಲ ...

ಅಂಚೆ ವೆಚ್ಚಸಹಿತ ವರುಷದ ಚಂದಾ —
ಮುಂಗಡ ಹನ್ನೆರಡಾಣೆ ಮಾತ್ರವೇ, ಅನಂತರ, ಒಂದು ... ಬಾಣೆ ಮಾತ್ರ.

ವಿದ್ಯಾರ್ಥಿಗಳು ಅಂಚೆ ಖರ್ಚಿನ ಪೂರ್ತ **ಆರಾಣೆಗೆ ಕಾಲಾ ... ಅಂಚೆ ಚೀಟುಗಳನ್ನು ಮುಂಗಡ ಕೊಟ್ಟರೆ**, ಒಂದು ... ಪತ್ರಿಕೆಯನ್ನು **ಪ್ರಗಸಟೆ ಕೊಡುತ್ತೇವೆ** ... ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು.

... ನಂತರವಾಗಿ ... ಕೊಂಡಿಟ್ಟುಕೊಳ್ಳುವರು ಈ ಸಂಸ್ಥೆಯನ್ನು ... ವೇಗವೇಗ ... **ವಿಳಾಸಗಳ ಮಾತ್ರ ಕೊಟ್ಟು** ... ಸಂಚಿಕೆಯೊಂದನ್ನು ...

... —ಭಾರತೀಸಂಪಂಗಿ ..., ಸಂಪಾದಕ, ಸವಿನುಡಿ, ... ಪೇಟೆ, ಬೆಂಗಳೂರು ಡಿಸ್ಟ್ರಿಕ್ಟ್.

ಗಡಿಯಾರಗಳೂ ಪುಸ್ತಕಗಳೂ.

3

ನಿಕ್ಕಲ್ ಸಿಲ್ವರ್, ಜರ್ಮ ಕೇಸ್, ಲಿವರ್ ವಾಚು, ಅತಿ ನಂಬಿಕೆ ... ಕ್ರಯ ೧ ಕ್ಕೆ ... ೧೫ ಆಣೆ ಡಿಸೆಂಬರ್ ಆಖೈರ್ ... ಆಪ್ಲಿಕೇಷನ್‍ಗಳಿಗೆ ಮಾತ್ರ ಈ ಕ್ರಯ ... ತರಿಸಿಕೊಳ್ಳುವವರಿಗೆ ಮಾತ್ರ ೧ **ವಾಚು ಮುಫತ್ತು** ... ಸ್ವಲ್ಪ ಇರುವದರಿಂದ ವೇಗ ಬರೀರಿ

... ಕ್ರಿಮಿನಲ್, ಲೈವಾಸ್ಟೇವಿ, ರೋಜು ವರ್ಗ, ... ಇತ್ಯಾದಿ ಸಮಸ್ತ ಸಂಗಾಂಶಗಳನ್ನೂ ತಿಳಿಸತಕ್ಕ ... ಕ್ರಯ ೧ ಕ್ಕೆ ೧ ರೂ ೪ ಆಣೆ ಮಾತ್ರವೇ **ಸ್ವಲ್ಪ ಪ್ರತಿ ... ಉವದರಿಂದ ಬೇಗ ಬರೆಯಿರಿ!**

... ಕಲಿಯತಕ್ಕ ಪುಸ್ತಕ—ಹೇಕಮಾಡಲಾಗತಕ್ಕವರಿಗೆಲ್ಲಾ ... ಯೋಗವಾದದ್ದು ಕ್ರಯ ೧ ಕ್ಕೆ ೧ ರೂ ಮಾತ್ರ.

... ಸಂಜೀವಿನಿ—ಅನೇಕರು ಬಗೆ ಬಗೆಯಾಗಿ ತಯಾ ... ದಾರೆ ಆದರೆ ೧॥ ಆಣೆ ಸ್ಟಾಂಪಿಟ್ಟು ನಮಗೆ ಬರೆದು ... ತರಿಸಿಕೊಂಡು ನೋಡಲ್ಲಿ ನಮ್ಮ ಕ್ರಮವು ಸಾರ್ಥಕವಾ ... ಕ್ರಯ ಹಳ್ಳಿ ೧ ಕ್ಕೆ ೪ ಆಣೆ

... ಮೂರ್ತಿ ಕಂಪನಿ, ಬಳೇಪೇಟೆ ಬೆಂಗಳೂರು ಸಿಟಿ

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

35

ಎಲ್ಲಾ ಬಗೆಯ ಕಾಡು ಮೃಗಗಳನ್ನೂ ಮೈಸೂರು ಜೂ ಸೂಪ ರಿಂಟೆಂಡೆಂಟ್ ಮಿ॥ ಹ್ಯೂಜಸ್ ಅವರು ಕೊಂಡುಕೊಳ್ಳುವರು

Apply to—Mr Hughes, Mysore Zoo

೧೯೦೬ನೇ ವರುಷದ ರಾಯಲ್ ಡೈರಿಗಳು

11

ಈ ರಾಯಲ್ ಡೈರಿಗಳು ವಿದ್ವಾಂಸರು—ಸರ್ಕಾರದವರ ಸಂಪನ್ನರುಗಳ ಕಂಚಾಂಗ, ಫ ಮಿಂ ... ಚಿಪ್ಪದಳತೆ, ವಾರಕಟ್ಟೆ, ಟಪಾಲಿನ ಮುಖ್ಯ ವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟ್ರೇಷ್ ಫಿ, ಕೋರ್ಟು ಫಿ ಆಕ್ಟು, ಇಂತಾಯಾದಲ್ಲಿ ಮಹಾರಾಜರಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರ ತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೇಜಿಸ್ಟ್ರೇಟರಿಗೆ ಇರ ತಕ್ಕ ಅಧಿಕಾರವು ಬಡ್ಡಿಪಟ್ಟಿ ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ ರಲ್ಲಿನ ಪರ್ವದಿ, ಪೌರ್ಣಮಿ, ಅಮಾವಾಸ್ಯೆ, ಸಂಕ್ರಾಂತಿ ಗೌರೀಪಂಚಾಂಗ ರೈಲ್ವೆ ಪಾರಸಲ್ ಚಾರ್ಜು, ವರದು ನಂಬರವಾ ಕರ, ಇವೇ ಮುಂತಾದ ಅನೇಕ ವಿಷಯಗಳಿಂದ ಕೂಡಿವೆ

ನಂ	೧	ದಿನಕ್ಕೆ ಸ್ಪೇಸು ರೂಲು ಹಾಕಿದೆ ಕ್ರಯ				೦—೪—೦
,,	೨	,,	,,	,, ಮುಚ್ಚಳ ಇರತಕ್ಕದ್ದು		೦—೧೦—೦
,,	೩	ಚಿಕ್ಕ	,,	,,	,,	೦—೬—೦
,,	೪	,,	,,	,,	,,	೦—೩—೦

೧—೨ ನೇ ನಂಬರಿನ ಡೈರಿಗಳು ಈಗ ಬಿಕರಿಗೆ ಸಿದ್ಧವಾಗಿವೆ ೩—೪ ನೇ ನಂ ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ದೊರೆ ಯುತ್ತವೆ

ದಿ ಜನರಲ್ ಏಜನ್ಸಿ ಮೈಸೂರು

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

12

[೧೯೦೨ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೆ ನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅವರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವ ರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (1) ತರಗತಿಗೆ ಸೇರಿದವರು ಪಡೆಯಬೇಕೆಂದವರೇ ಕ್ಷೇಮದ ಪ್ರತಿ ೧೦೦೦ ರೂ ಹಾಯಿಗಳ ಮೊಬಲಗಿಗಾಗಿ ಮಾಹೆಯಾನಾ ಒಂದೊಂದು ರೂಪಾಯಿ ಯು ಪ್ರಕಾರ ಒಟ್ಟು ರೂ ೫೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರೀಯವಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾ ಗುವದು ವ್ಯವಸಾಯ ನಿಮಿತ್ತವಾಗಿ ನಾವು W.I.P ರೈಲ್ವೆ ಸಾಲ್ಟ ದಲ್ಲಿರುವ "ಕೋಲ್ಹಂ ಸ್ಟೇಷನ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ ಈ ಭೂ ಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂ ಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸೆಪತ್ರವನ್ನು ಪಡೆದಿರುವವರು ಚಂದಾದಾ ರರಾಗಿ ಮಾತ್ರ ಇದ್ದಾರೆ ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರು ದಾರರಾಗಿರುವದಿಲ್ಲ ಅವರೂ ಅವರ ... ನಮ್ಮ ಭೂಸ್ಥಿತಿಯ ... ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಹಾನತಿ ಮಾಡಿ ಭರವಸಪತ್ರವನ್ನು ಪಡೆದಿದ್ದ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭ ವು ತೃಪ್ತಿಕರವಾಗಿ ಕಂಡುಬಾರದಿದ್ದರೆ ಅವನು ಸಲ್ಲಿಸಿರುವ ಚಂದಾಮೊ ಬಲಗನ್ನೆಲ್ಲಾ ವಾಪಸುಪಡೆಯಬಹುದು

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಬಯಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು

ವಿಳಾಸ —The Manager,
The India Agricultural and Helping Office,
Vengurla Post, Bombay Presidency.

ಸನ್ ೧೯೦೬ನೇ ಇಸವಿಯ

ಎಂ ನಂ॥ ಎಫ್ ನಂ॥ ಬಿ ನಂ॥ ಸಿ ನಂ॥ ಹೆಚ್ ನಂ॥ ಡಿ ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು. 5

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ಪೋಸ್ಟ್ ಮಾಸ್ಟರು, ಖಿಷ್ಮೆದಾರ್ ಸಮಸ್ತರಿಗೂ ಉಪಯೋಗವಾಗಿ ರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ಪರಾಭವ ಸಂ॥ ಪಂಚಾಂಗ ... ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ... ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಮುಖ್ಯ ವಿಷಯಗಳು, ಜವಿನ್ಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿಬಿದ್ದ ಫಲ, ರಾಹು ಗುಳಿಕಕಾಲ, ವಾರ ಶೂಲೆ, ದಿನಸಂಬಳದ ಪಟ್ಟಿ, ದೋಬಿಲೆಕ್ಕ, ಜಮಾಖರ್ಚಿನ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕ್ರಿಮ್ ... ಬೈಂಡು, ರೇಕಿನಿಂದ ಗಿಲ್ಟು ಮಾಡಿದೆ

ಎ ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರ್ ದೊಡ್ಡಸೈಜು ೬ ಆ
ಎಫ್ ,, ,, ,, ೪	ಎಚ್ ,, ,, ೭ ,,
ಬಿ ,, ಮುಚ್ಚಳದ್ದು ೫ ,,	ಡಿ ,, ಮುಚ್ಚಳದ್ದು ೮ ,,

ಪೋಸ್ಟು ಚಾರ್ಜು ಬೇರೆ ಒಂದೇ ಸಮಯದಲ್ಲಿ ೧೨ ಡೈರಿ ತರಿ ಸಿದರೆ ೧ ಡೈರಿ ಇನಾಮು ವಿ ಪಿ ಮೂಲಕ ತರಿಸಿಕೊಳ್ಳಿ

**ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಸೆಟ್ಟಿ,
ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.**

ಬೇಗಬನ್ನಿ — ತಡಮಾಡಬೇಡಿ.

೧೦೦೦೦ ಪೌಂ ಉಲ್ಲನ್ ಟೋಪೀ ದಾರವು ಸೀಮೆಯಿಂದ ಈಗತಾನೇ ಬಂದಿದೆ. 2

(೧) ಸ್ಕೈಟರ್ ಎಂಬ ಹಳದ ಹೊಸ್ಸ ಚೀಟಿ ಉಲ್ಲನ್ ದಾರವು ಪೌಂ ೧ಕ್ಕೆ ೧—೨—೦ ಕೆಂಪು ಕಪ್ಪು ಮಿಕ್ಸದ್ ಯಲ್ಲೋ ಕೆಂಪು.

(೨) ಇದಕ್ಕಿಂತ ... ಪೌಂ ೧ಕ್ಕೆ ೧—೦೪—೦ ಕೆಂಪು ಕಪ್ಪು ಯಲ್ಲೋ ಕೆಂಪು

(೩) ನಂಬರು ಉಲ್ಲನ್ ಪೌಂ ೧ಕ್ಕೆ ೨—೦—೦ ಈ ರಂಗಿನಲ್ಲಿ ಮಾತ್ರ ಎರಡು ಬಣ್ಣ

(೪) ನಂಬರು ನೆಲ್ಸನ್‍ಸಂಟ್ ಉಲ್ಲನ್‍ದಾರ ಪೌಂ ೧ಕ್ಕೆ ೩—೪—೦

ಹಾಸನದ ಉಲ್ಲನ್ ನಮೂನೆ ಟೋಪಿಗಳು.

ಡಜನ್ ೧ಕ್ಕೆ ೭—೦—೦, ೭—೮—೦, ೯—೦—೦, ೧೧—೦—೦ ೧೨—೦—೦ ೧೩—೦—೦, ೧೬—೮—೦, ೨೧—೦—೦

ಮಕ್ಕಳಿಗೆ ಮತ್ತು ದೊಡ್ಡವರಿಗೆ ಆಗತಕ್ಕ ಉಲ್ಲನ್‍ನಲ್ಲಿ ತಯಾರಾ ದ ನೈಟ್‍ಕ್ಯಾಪ್‍ಗಳು

ಒಂದು ತಿಂಗಳಿಂದ ವರುಷದ ಮಕ್ಕಳಿಗೆ ಆಗತಕ್ಕದ್ದು ೧ಕ್ಕೆ ೦—೧೦—೦

ಒಂದು ವರುಷದಿಂದ ಐದುವರುಷದ ವರಿವಿಗೆ ಆಗತಕ್ಕದ್ದು ೧ಕ್ಕೆ ೦—೧೬—೧

೫ ರಿಂದ ೧೦ರ ವರಿವಿಗೆ ಆಗತಕ್ಕದ್ದು ೧ಕ್ಕೆ ೦—೧೪—೦

೧೦ ರಿಂದ ೨೫ರ ವರಿವಿಗೆ ಆಗತಕ್ಕದ್ದು ೧ಕ್ಕೆ ೧—೦—೦

ಕಾನ್‍ಪೂರ್ ತರಹಾ ಉಲ್ಲನ್ ಟೋಪಿಗಳು.

೧ಕ್ಕೆ ೦—೧೦—೦, ೦—೧೨—೦, ೦—೧೪—೧, ೧—೦—೦ ಇರುತ್ತೆ

ಫಾರಿವಾಲ್ ಶ್ಯಾಲುಗಳು ಕೆಂಪು ಹಸರು ಯಲ್ಲೋ ಕೆಂಪು ಈ ಬಣ್ಣವುಳ್ಳದ್ದು ೭ ಮೊ ಳ ಉದ್ದ ೩ ಮೊಳ ಅಗಲವುಳ್ಳದ್ದು ೧ಕ್ಕೆ ೩—೧೩—೦

ವಿ ಪಿ ಮೂಲಕ ತರಿಸಿಕೊಳ್ಳುವವರು ೧೦೦ಕ್ಕೆ ೨೫ ರಂತೆ ಮುಂಚಿತವಾಗಿ ಕಳುಹಿಸಬೇಕು ಪರಸ್ಥಳದವರು ಅವರವರ ವಿಳಾಸಗ ಳನ್ನು ಸ್ಪಷ್ಟವಾಗಿ ಬರೆಯಬೇಕು

ಯಲ್ ಎ ಪೋರ್ವಾಲ್ ಕಂಪನಿ ಬೆಂಗಳೂರು ಸಿಟಿ

L. A. Pourwal & Co,
Bangalore City.

P. SUBBAROY'S
World Renowned and most Efficacious Ayurvedic Medicines.

ಪಿ. ಸುಬ್ಬರಾಯಿಯವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

6

೧. ಪುಷ್ಟಿ ರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿ ೧ ಕ್ಕೆ ರೂ ೨ ವಿ. ಪಿ. ಛಾರ್ಗಿ ೭ ಆಣೆ.

೨೦. ಅತ್ಯುತ್ತಮವಾದ ಕಸ್ತೂರಿ.—ಕಾಶ್ಮೀರದಿಂದ ತರಿಸಿದ ಪರಿಶುದ್ಧ ಅತ್ಯುತ್ತಮವಾದದ್ದು ಮತ್ತು ಒಂದೇ ರಬಂ ಇರತಕ್ಕದ್ದು. ತೊಲಾ ೧ ಕ್ಕೆ ರೂ. ೩೮ ಚಿಲ್ರೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ. ಪಿ. ಛಾರ್ಜ್ ಅಲಾಯಿದ.

೨೧. ಸುಗಂಧ ನಶ್ಯಪುಡಿ.—ಈ ನಶ್ಯಪುಡಿಯು ಬಹಳ ಸುವಾಸನಾಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಕೂಡದು. ನೀವು ದಿನದಿನ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಿಕೆಯಷ್ಟನ್ನು ಬೆರಸಬೇಕು. ಹೀಗೆ ಬೆರಿಕೆಮಾಡಿದ ಮೇಲೆ ನಶ್ಯವು ಬಹು ಸುವಾಸನೆಯುಳ್ಳದ್ದಾಗಿಯೂ ಮನೋಹರವಾಗಿಯೂ ಆಗುವುದು. ಇದರಿಂದ ನಶ್ಯಹಾಕಿಕೊಳ್ಳುವವರ ಬಳಿ ಬರುವ ಕಠಿಣವಾದ ಕೆಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಹಳ ಹೊತ್ತು ಇರುತ್ತದೆ. ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ. ಇಂಥಾ ನಶ್ಯಹಾಕಿಕೊಂಡಲ್ಲಿ ಶೀತ, ಅರೆತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ. ಆಗಾಗ್ಗೆ ನಶ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು. ಇದರಲ್ಲಿ ನಶ್ಯಸಾಗರ ಖಂಡಿತವಾಗಿ ಸೇರಿರುವುದಿಲ್ಲ. ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ತನಕ ಬರುತ್ತೆ. ಕ್ರಯ ಒಂದು ಡಬ್ಬಿಗೆ ೪ ಆಣೆ. ೧ ರಿಂದ ೩ ಡಬ್ಬಿ ತನಕ ವಿ. ಪಿ. ಛಾರ್ಜ್ ೩ ಆಣೆ ಹೆಚ್ಚು. ವಿ. ಪಿ. ಛಾರ್ಜ್ ೪ ರಿಂದ ೬ ಡಬ್ಬಿ ತನಕ ೩೯ ಆಣೆ ೭ ರಿಂದ ೧೨ ಡಬ್ಬಿ ವರೆಗೆ ವಿ. ಪಿ. ಛಾರ್ಜ್ ೭ ಆಣೆ.

೨೨. ರಕ್ಷಾಮೃತಂ.—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಿಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರು ಮಾಡಲ್ಪಟ್ಟಿರುತ್ತದೆ. ಕಾಫಿ, ಟೀಯಿಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ, ಬಸುರು, ಬೇಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ತಾಟುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗುಲ್ಮ ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು, ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ. ಪ್ರಾಣಾಧಾರವಾಗಿರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ.

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಿಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು. ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ ಕ್ಕೆ ಕ್ರಯ ೩ ಆಣೆ. ವಿ. ಪಿ. ಛಾರ್ಜ್ ಆಣೆ ೩ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪುಗಳು ಬರೆದಲ್ಲಿ ಒಂದು ಡಬ್ಬಿ ಚೂರ್ಣ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮುಳಿನಲ್ಲಿ ಬರೆಯಿರಿ.

Apply to —**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

18



ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ನೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ನಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ವಿವನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣಕೊಡುತ್ತದೆ. ಇದನ್ನು ಯಾರೂ ಮಾಡೆಯಾರದು. ಕ್ರಯ, ಬಾಟ್ಲಿ ೧ ಕ್ಕೆ ೧ ರೂ., ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧವು ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಡಬ್ಲ್ಯು. ಇ. ಸ್ಮಿತ್ ಅಂಡ್‌ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಸಚಿತ್ರವಿನೋದಿನಿ ಮಾಸಪತ್ರಿಕೆ.

11

ವಾರ್ಷಿಕಚಂದಾ ರೂ. ೧—೮—೦

....ವಿನೋದಿನಿ ಎಂಬ ಈ ಶಿಶುವು ತನ್ನ ಹೆಸರಿಗೆ ಸರಿಯಾಗಿ ವಿರಾಮ ಕಾಲದಲ್ಲಿ ವಿನೋದಪಡಿಸುವುದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹವಿಲ್ಲ.. ....

ಸತ್ಯದೀಪಿಕೆ. ೨೮-೭-೦೫

ವಿಳಾಸ.—ಮ್ಯಾನೇಜರ್, ವಿನೋದಿನಿ ಆಫೀಸು, ಕಾರವಾರ

ಐದು ವರ್ಷಗಳ ಹರಪುರೀ ಪಂಚಾಂಗವು.

ಹರಪನಹಳ್ಳಿ ತೆಲಗಿಮಠದ ಪಂಚಾಂಗವು ಬಹು ನೂತನವಾಗಿ ತಯಾರಾಗಿರುತ್ತದೆ. ಈ ಪಂಚಾಂಗದಲ್ಲಿ ಇದುವರಿವಿಗೂ ಯಾರೂ ಪ್ರಚುರಪಡಿಸದೆ ಇರುವ ಅಪೂರ್ವ ಮರ್ಮವಿಷಯಗಳು ಬರೆಯಲ್ಪಟ್ಟಿವೆ. ಇದೊಂದು ಪಂಚಾಂಗ ಇದ್ದರೆ ಸಾಕು. ಇತರ ಪಂಚಾಂಗ ಪತ್ರಿಕೆ, ಮೂಹೂರ್ತ ಗ್ರಂಥಗಳನ್ನು ನೋಡುವ ಆವಶ್ಯವಿಲ್ಲ. ಹತ್ತಿರ ಒಬ್ಬ ಸಿದ್ಧಾಂತಿ ಇದ್ದಂತಾಗುತ್ತದೆ. ಅಲ್ಲದೆ ನಮ್ಮಲ್ಲಿ ಇನ್ನೂ ಅನೇಕ ತರಹ ಪಂಚಾಂಗಗಳು ಸಿಕ್ಕುವವು. ೫೯ ವರುಷದ ಫಲಸಹಿತ ಪಂಚಾಂಗ ೧ಕ್ಕೆ ಕ್ರಯ ೩ ಆಣೆ. ವಿಳಾಸ—
ಮ॥ ಗುರುಶಾಂತಪ್ಪ, ತೆಲಗಿಮಠ, ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಅಗ್ಗ! ಅಗ್ಗ!! ಬಹು ಅಗ್ಗ!!!

ಮೇಲಾದ ಜರ್ಮನ್ ಸಿಲ್ವರ್ ಪುದುಚೇರಿ ಬೋಲ್ ಕಾಲ್ ಗೋಲಸು. ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿರುತ್ತೆ. ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದಲೂ ಮಾದರಿಯಾದ ತಿರುಪಿನಿಂದಲೂ ಬೆಳ್ಳಿ ಗೋಲಸಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತಯಾರಿಸಲ್ಪಟ್ಟಿರುತ್ತೆ. ಎಂದಿಗೂ ಬಣ್ಣ ಕೆಡಲಾರದು. ಇದನ್ನು ನೋಡಿದವರು ಬಿಡರು. ಒಂದು ಜೊತೆಯನ್ನು ತರಿಸಿ ಪರೀಕ್ಷಿಸಿರಿ. ಬಡವರಿಗೂ ಭಾಗ್ಯವಂತರಿಗೂ ಉಪಯೋಗಿಸುವಷ್ಟು ಸುಲಭ ಕ್ರಯ. ದೊಡ್ಡವರಿಗೆ ಜೊತೆ ೧ ಕ್ಕೆ ರೂ. ೧—೮—೦. ಚಿಕ್ಕವರಿಗೆ ರೂ. ೧. ಸಾಕ್ಷಿಗೆ ೧೨ ಆಣೆ.



ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ,
2 ಸಾಹುಕಾರ್ ಪೇಟೆ, ಮದ್ರಾಸು.

ವೃತ್ತಾಂತ ಪತ್ರಿಕೆ.

—೦.—

ಸನ್ ೧೯೦೫ ನೇ ಇಸವಿ ಡಿಸೆಂಬರ್ ತಾ॥ ೭ ನೇ ಗುರುವಾರ.

ಸರ್ಕಾರವೂ ಸಚ್ಚರಿತ್ರವೂ.

ಬಂಗಾಳಾ ಆಧಿಪತ್ಯದ ಕೆಲವು ಪ್ರಜೆಗಳು ಗವರ್ನಮೆಂಟಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿ, ಸರ್ಕಾರದವರು ಸಮಸ್ತ ವಿದ್ಯಾಶಾಲೆಗಳಲ್ಲೂ ಬಾಲಕರಿಗೆ ಸದ್ಗುಣ ಸಚ್ಚರಿತ್ರಗಳನ್ನು ವಿಧಿಪೂರ್ವಕವಾಗಿ ಕಲಿಸುವಂತೆ ಆಜ್ಞೆಮಾಡಿ ಜಾರಿಯಲ್ಲಿ ತರಬೇಕೆಂದು ಪ್ರಾರ್ಥಿಸಿಕೊಂಡರು. ಇಂಡಿಯಾ ಗವರ್ನಮೆಂಟಿನವರು ಅವನ್ನೂ ಅವರ ಮೇಲೆ ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಬರೆದು ಕಳುಹಿಸಿದ ಅಭಿಪ್ರಾಯವನ್ನೂ ನೋಡಿ ತಿಳಿಸಿರುವುದೇನೆಂದರೆ—ಈ ಭಾಗದಲ್ಲಿ ಗವರ್ನಮೆಂಟಿನವರೂ ಪ್ರಜೆಗಳೂ ಏಕೀಭವಿಸಿ ಕಾರ್ಯಸಾಧನೆ ಮಾಡಬೇಕಾಗಿದೆ. ಈ ದೇಶದ ಬಾಲಕರನ್ನು ಸಚ್ಚರನ್ನಾಗಿ ಮಾಡಲು ನಾಲ್ಕು ಕಡೆಗಳಲ್ಲಿ ಅವಕಾಶವಿರುತ್ತದೆ. (೧) ತಂದೆತಾಯಿಗಳೂ ಬಂಧುಬಳಗಗಳೂ ಮನೆಗಳಲ್ಲಿ ಮೊದಲು ಬಾಲಕರಿಗೆ ಸಚ್ಚರಿತ್ರವನ್ನು ತಮ್ಮ ನಡೆನುಡಿಗಳಿಂದಲೂ ಆಚಾರ ವ್ಯವಹಾರಗಳಿಂದಲೂ ವಿವೇಕ ಹೇಳೋಣದರಿಂದಲೂ ಕಲಿಸಿಕೊಡಬೇಕು. (೨) ಶಾಲೆಗಳಲ್ಲಿ ಉಪಾಧ್ಯಾಯರ ನಡತೆಯೂ ಶಿಕ್ಷಣವೂ ಯೋಗ್ಯವಾದವುಗಳಾಗಿರಬೇಕು. (೩) ವಿದ್ಯಾಶಾಲೆಗಳಲ್ಲಿ ಬಾಲಕರು ಓದಿ ಕಲಿಯಬೇಕಾಗಿರುವ ಪುಸ್ತಕಗಳು ನಿರ್ಮಿಷ್ಟವಾದವುಗಳಾಗಿಯೂ ಸದ್ಗುಣ ಸಚ್ಚರಿತ್ರಗಳ ಪ್ರೋತ್ಸಾಹಕ್ಕೆ ಸಹಕಾರಿಗಳಾಗಿಯೂ ಇರಬೇಕು. (೪) ಹುಡುಗರು ಪಾಠಶಾಲೆಗಳ ಆವರಣದ ಹೊರಗಡೆ ಇರುವಾಗ್ಗೆ ಅಂದರೆ ಅವರು ಓದಿ ಬರೆಯುವಂಥಾ ಊಟ ನಿದ್ರೆ ಮಾಡುವಂಥಾ ನಿಲಯಗಳಲ್ಲೂ ಅವರು ಆಟಪಾಟ ವಿನೋದಗಳಲ್ಲಿ ಆಸಕ್ತರಾಗಿರುವಂಥಾ ಮೈದಾನುಗಳಲ್ಲೂ ಅವರ ಸಂಗಡಲೇ ಇದ್ದು, ಅವರು ದುರಾಲೋಚನೆ ದುರಭ್ಯಾಸ ದುರಾಚಾರಗಳಿಗೆ ಬೀಳದಂತೆ ಅವರನ್ನು ಬಹು ಎಚ್ಚರಿಕೆಯಿಂದ ಚನ್ನಾಗಿ ಮೇಲ್ವಿಚಾರಣೆ ನೋಡಿಕೊಳ್ಳಬೇಕು. ಇಂಥಾ ಮುಖ್ಯ ವಿಷಯಗಳನ್ನು ಸಾರ್ಥಕವಾಗಿ ನೆರವೇರಿಸುವುದಕ್ಕೆ ಸರ್ಕಾರದವರೂ ಪ್ರಜೆಗಳೂ ಏಕೀಭವಿಸಿ ಪ್ರವರ್ತಿಸಿದ ಹೊರತು ಆಗಲಾರದು.

ಒಳದೇಶದ ವೃತ್ತಾಂತಗಳು.

ನಗರ್ ತಾಲ್ಲೂಕಿಗೆ ಸೇರಿದ ರಿಪ್ಪನ್‌ಪೇಟೆಯು ಟೌನಿನಲ್ಲಿ ಪ್ರತಿ ಸೋಮವಾರವೂ ಸಂತೆ ಕಟ್ಟುವಂತೆ ಏರ್ಪಾಡಾಗುವುದರಲ್ಲಿದೆ.

✱✱✱✱✱

ಮೈಸೂರು ಸರ್ಕಾರದವರು ಇಪ್ಪತ್ತು ರೆವಿನ್ಯೂ ಅಪೀಲುಗಳನ್ನು ತೀರ್ಮಾನ ಮಾಡಿ, ಈ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿದಾರೆ.

✱✱✱✱✱

ಶ್ರೀಮನ್ ಮಹಾರಾಜರವರು ಸುಮಾರು ಈ ತಿಂಗಳ ೨೩ನೇ ತಾರೀಖಿಗೆ ಬೆಂಗಳೂರಿಂದ ರಾಜಧಾನಿಗೆ ದಯಮಾಡಬಹುದೆಂಬ ವರ್ತಮಾನವಿದೆ.

✱✱✱✱✱

ಸುಮಾರು ಎರಡು ವಾರಗಳ ಕೆಳಗೆ ಗುಂಡ್ಲುಪೇಟೆ ಟೌನು ಮುಸಾಫರಖಾನೆಯ ಬಳಿ ೩೦—೩೫ ವಯಸ್ಸುಳ್ಳ ಹೆಂಗಸಿನ ಹೆಣ ಬಿದ್ದಿತ್ತು. ಇದರ ಪೂರ್ವೋತ್ತರವೇನೆಂಬುದು ಗೊತ್ತಾಗಲಿಲ್ಲ.

✱✱✱✱✱

ಚಳ್ಳಕೆರೆ ತಾಲ್ಲೂಕಿಗೆ ಸೇರಿದ ೧೮೮ ಸರ್ಕಾರಿ ಗ್ರಾಮಗಳ ಹೊಸ ಕಂದಾಯದ ದರಗಳನ್ನು ಸರ್ಕಾರದವರು ಈ ತಿಂಗಳು ೨೫ ರ ಲಾಗಾಯಿತು ಚಳ್ಳಕೆರೆ ಕಸಬಾದಲ್ಲಿ ಪ್ರಕಟಿಸಲಾರಂಭ ಮಾಡುವರು.

✱✱✱✱✱

ಕಳೆದ ಶುಕ್ರವಾರದ ದಿನ ಮಹಾ ಮಾತೃಶ್ರೀ ಯವರು ಬಸವನಗುಡಿ ಶ್ರೀಮಹಾಗಣಪತಿ ಸಹಿತ ದೇವಸ್ಥಾನಕ್ಕೆ ದಯಮಾಡಿ, ದೇವರ ಸೇವೆ ದಾನಧರ್ಮ ಸಮಾರಾಧನೆಗಳನ್ನು ಆಗಮಾಡಿಕೊಂಡು ವಾಪಸ್ ಚಿತ್ತೈಸಿದರು.

✱✱✱✱✱

ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಇಷ್ಟರಲ್ಲೇ ಚಿನ್ನದಗಣಿಗಳಿಗೂ ಕೋಲಾರಕ್ಕೂ ದಯಮಾಡಿ, ಕೋಲಾರದ ಕೈಗಾರಿಕೆಗಳನ್ನು ಕಲಿಸತಕ್ಕ ಪಾಠಶಾಲಾ ಕಟ್ಟಡಕ್ಕೆ ಅಸ್ತಿಭಾರ ಹಾಕುತ್ತಾರೆಂದು ತಿಳಿದುಬಂದಿದೆ.

✱✱✱✱✱

ಮುಂಜಿರಾಬಾದ್ ತಾಲ್ಲೂಕಿನಲ್ಲಿ ಈಚೆಗೆ ಯಾವ ಕಾರಣದಿಂದಲೋ ಕೊಲೆಗಳು ಹೆಚ್ಚಾಗುತ್ತಿವೆ. ಪೊಲೀಸ್ ಇಲಾಖೆಯವರ ಆಲಸ್ಯ ಇಲ್ಲದಂತಾಗಿದೆ ಎಂದು ಅಲ್ಲಿನ ಬಾತ್ಮೀದಾರರು ಆಕ್ಷೇಪಿಸಿ ಮದರಾಸ್ ಪತ್ರಿಕೆಗೆ ಬರೆದಿದಾರೆ.

ಮೈಸೂರು ಸಂಸ್ಥಾನದ ಖಾಯಂ ರೆಸಿಡೆಂಟರಾಗಿದ್ದು ರಜಾ ಪಡೆದು ಸೀಮೆಗೆ ಹೋಗಿರುವ ಸರ್ ಜೇಂಸ್ ಬೋರ್ಡಿಲಾನ್‌ರವರು ಕಳೆದ ತಿಂಗಳ ತಾರೀಖಿನಿಂದ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಇರುವುದರಿಂದ ಅವರು ಪೆನ್ಷನ್ ಪಡೆಯುವಂತೆ ಇಂಡಿಯಾ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ

****

ಕೆಲವು ಕಾಲಕ್ಕೆ ಮುಂಚೆ ಪೆನ್ಷನ್ ಪಡೆದು ಕೆಲಸ ಬಿಟ್ಟು ಶ್ರೀರಂಗಪಟ್ಟಣದಲ್ಲಿದ್ದ ಮ॥ ವೆಂಕಟಾಚಾರ್ಯಂಬುವರನ್ನು ಮೈಸೂರು ಡೆಪ್ಯುಟಿ ಕಮಿಷನರು ತಮ್ಮ ಕೈಕೆಳಗೆ ಸ್ಪೆಷಲ್ ಡ್ಯೂಟಿ ಮಾಡುವುದಕ್ಕಾಗಿ ನೇಮಿಸಿಕೊಂಡು, ಅವರನ್ನು ಚಾಮರಾಜನಗರದ ತಾಲ್ಲೂಕಿಗೆ ಕಳುಹಿಸಿದಾರೆಂದು ಕೇಳುತ್ತೇವೆ

****

ನಮ್ಮ ಸರ್ಕಾರದವರು ಚಿಕ್ಕಮಗಳೂರಿನಲ್ಲೂ ಹಾಸನದಲ್ಲೂ ಇರುವ ಸಬ್ ಜಡ್ಜಿ ಕೋರ್ಟುಗಳ ಸ್ಮಾಲ್ ಕಾಜ್ ಅಧಿಕಾರವನ್ನು ಸಾವಿರ ರೂಪಾಯಿಗೆ ಇಳಿಸಿ, ಈ ಹುದ್ದೆಯು ಈಗಿರುವವರ ಸ್ಥಾನಕ್ಕೆ ಹೊಸ ಸಬ್ ಜಡ್ಜಿಗಳು ಆ ಕೋರ್ಟುಗಳಿಗೆ ನೇಮಕವಾದಲ್ಲಿ ಜಾರಿಗೆ ಬರತಕ್ಕದ್ದೆಂದು ಅಪ್ಪಣೆ ಕೊಡಿಸಿದಾರೆ.

****

ಲಾರ್ಡ್ ಕರ್ಜನ್‌ರವರ ಭಾವಪ್ರತಿಮೆಯನ್ನು ಕಲ್ಕತ್ತೆಯಲ್ಲಿ ಸ್ಥಾಪಿಸುವುದಕ್ಕೆ ಚಂದಾ ಕೊಡಿಸುತ್ತಿದ್ದಾರಷ್ಟೆ. ನಮ್ಮ ಶ್ರೀಮನ್ ಮಹಾರಾಜರವರು ಆ ಫಂಡಿಗೆ ೨,೦೦೦ ರೂಪಾಯಿ ಕಳುಹಿಸಿದಾರೆ. ಅದಕ್ಕೆ ಬೇಕಾಗಿರುವ ೭೫,೦೦೦ ರೂಪಾಯಿನ ಪೈಕಿ ೩೫,೦೦೦ ರೂಪಾಯಿ ಧನಕ ವಸೂಲಾಗಿರುವುದಾಗಿಯೂ ತಿಳಿದು ಬಂದಿದೆ

****

ಅರಮನೆಗೆ ಸೇರಿದ ಎಲ್ಲಾ ಇಲಾಖೆಗಳೂ ಇದುವರೆಗೆ ಆರ್ಡರ್ ಆಫೀಸರ ಅಧಿಕಾರಕ್ಕೊಳಪಟ್ಟಿರಲಿಲ್ಲ. ಈಗ ಸಮಸ್ತ ಇಲಾಖೆಗಳ ಮೇಲ್ವಿಚಾರಣೆಯನ್ನೂ ಶ್ರೀಮನ್ ಮಹಾರಾಜರವರು ಅವರಿಗೆ ವಹಿಸಿರುತ್ತಾರೆಂದು ಕೇಳುವೆವು ಇದಲ್ಲದೆ ಅರಮನೆಯ ಇಲಾಖಾ ಮುಂತಾದ ಕಡೆಗಳಲ್ಲಿದ್ದ ನೌಕರನಾನೇರ ಬದಲಾವಣೆ ಮೊದಲಾದ ಕೆಲವು ಹೊಸ ಏರ್ಪಾಡುಗಳು ಇನ್ನು ಮುಂದೆ ನಡೆಯುವವೆಂದು ವರ್ತಮಾನವಿದೆ.

****

ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದವರಿಗೆ ಒಂದು ಬಂಗಲೆ ಕಟ್ಟಿಕೊಳ್ಳುವುದಕ್ಕೆ ನಮ್ಮ ಮಹಾರಾಜರವರು ೫೦೦ ರೂಪಾಯಿಗಳನ್ನು ದಯಪಾಲಿಸಿದರಷ್ಟೆ. ಕಳೆದ ವಾರ ಮೈಸೂರಿನ ದಿವಾನರವರ ಪತ್ನೀರವರು ಆ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರು. ವೈಸ್ ಪ್ರೆಸಿಡೆಂಟರು ಆಗ ಆ ಕಟ್ಟಡದ ಉದ್ದೇಶವನ್ನು ಕುರಿತು ಉಪನ್ಯಾಸವಮಾಡಿ, ಅದಕ್ಕೆ "ಚಾಮರಾಜ ಮಂದಿರ" ಎಂದು ಹೆಸರನ್ನಿಡಬೇಕೆಂದು ತಿಳಿಸಿದರು

****

ಕೋಲಾರ್ ಚಿನ್ನದ ಗಣಿಗಳಲ್ಲಿ ಮ॥ ಹಾಜಿ ಇಸ್ಮೈಲ್ ಸೇಟ ಎಂಬುವರು ಯಂತ್ರಗಳ ಕಾರ್ಖಾನೆಗೆ ಪ್ರತಿದಿನ ೨,೫೦೦ ರೂಪಾಯಿನಷ್ಟು ಮರಗಳನ್ನು ಸರ್ಕಾರಿ ಜಂಗಲುಗಳಿಂದ ಕೊಂಡುಕೊಂಡು, ಸಾಮಾನುಗಳನ್ನು ತಯಾರಿಸುತ್ತಿದ್ದಾರೆ ಶ್ರೀಮನ್ ಯುವರಾಜರವರು ಕೋಲಾರಕ್ಕೆ ದಯಮಾಡಿದ್ದಾಗ್ಗೆ ಈ ಕಾರ್ಖಾನೆಯಲ್ಲಿ ಕೆಲಸ ನಡೆಯುವುದನ್ನು ಪರಾಂಬರಿಸಿ ಸಂತೋಷಪಟ್ಟುಕೊಂಡರೆಂದು ಕೇಳುತ್ತೇವೆ.

****

ಕಳೆದ ಗುರುವಾರ ಶ್ರೀಮನ್ ಯುವರಾಜರವರು ತಮ್ಮ ವಿದ್ಯಾಗುರುಗಳ ಸಮೇತ ಕೋಲಾರಕ್ಕೆ ದಯಮಾಡಿ, ಗಣಿಗಳಲ್ಲಿ ಚಿನ್ನ ತೆಗೆಯುವ ವಿಧಾನವನ್ನೆಲ್ಲಾ ಪರಾಂಬರಿಸಿ ಬಂದರು. ಡೆಪ್ಯುಟಿ ಕಮಿಷನರ್ ಮೊದಲಾದ ಸರ್ಕಾರಿ ಅಧಿಕಾರಿಗಳೂ ಗಣಿಗಳ ಮುಖಂಡರು ಶೃಂಗಾರಾದಿಗಳನ್ನು ಮಾಡಿಸಿ, ಯುವರಾಜರವರನ್ನು ಬಹು ವಿಶೇಷವಾಗಿ ಆದರಿಸಿ ಸತ್ಕಾರಮಾಡಿದರು. ಯುವರಾಜರವರು ಬಹು ಸಂತೋಷಪಟ್ಟು, ಅವರುಗಳನ್ನೆಲ್ಲಾ ವಂದಿಸಿರುತ್ತಾರೆ

****

ವ್ಯವಸಾಯಕ್ಕೆ ಉಪಯೋಗವಾಗುವಂಥಾ ಬಾವಿಗಳನ್ನು ತೋಡಿಸಿಕೊಳ್ಳುವುದಕ್ಕೆ ಮೈಸೂರು ಸರ್ಕಾರದವರು ೧೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಈ ಹಣವನ್ನು ರೈತರಿಗೆ ಸಾಲ ಕೊಡಬೇಕೆಂತಲೂ, ಇಂಥಾ ಸಾಲಕ್ಕಾಗಿ ಬರುವ ರೈತರ ಅರ್ಜಿಗಳನ್ನು ಬೇಗ ಬೇಗನೆ ಇತ್ಯರ್ಥಮಾಡಬೇಕೆಂತಲೂ ಡೆಪ್ಯುಟಿ ಕಮಿಷನರುಗಳಿಗೆಲ್ಲಾ ತಿಳಿಸಿದಾರೆ ಸಾಗುವಳಿ ಬಾವಿಗಳನ್ನು ಅಪೇಕ್ಷಿಸುವ ರೈತರು ಸುಲಭವಾಗಿ ಸಾಲಪಡೆಯಲು ಇದೇ ಅನುಕೂಲವೆಂದು ಸೂಚಿಸುತ್ತೇವೆ.

****

ಶ್ರೀರಂಗಪಟ್ಟಣದ ಅಮಲ್ದಾರ್ ಮ॥ ವೆಂಕಟಾಚಾರ್ಯರನ್ನು ನಾಗಮಂಗಲಕ್ಕೂ ನಾಗಮಂಗಲದ ಅಮಲ್ದಾರ್ ಮ॥ ಗೋಪಾಲಯ್ಯಂಗಾರ್ಯರನ್ನು ಶ್ರೀರಂಗಪಟ್ಟಣಕ್ಕೂ ವರ್ಗಮಾಡಿದಾರೆ. ಶ್ರೀಮನ್ ಮಹಾರಾಜರವರು ಡೆಪ್ಯುಟಿ ಕಮಿಷನರನ್ನು ಸಂಗಡ ಕರೆದುಕೊಂಡು ಮೋಟಾರ್ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದಾಗ್ಗೆ ಶ್ರೀರಂಗಪಟ್ಟಣದ ಬಳಿ ಅಲ್ಲಿನ ಅಮಲ್ದಾರರು ಸರಿಯಾಗಿ ಏರ್ಪಾಡು ಮಾಡಿರಲಿಲ್ಲವೆಂದೂ ಅದಕ್ಕಾಗಿ ಅವರಿಗೆ ವರ್ಗವಾಯಿತೆಂದೂ ವರ್ತಮಾನವಿದೆ.

****

ಮಂಗಳೂರು ಟೌನ್ ನಿವಾಸಿಗಳಾದ ಹಿಂದೂ ಮಹಮದೀಯರು ಗುರುತರವನ್ನು ಹೊಂದುವವರಿಗೆ ಬಾಯಿಭಂಗ ಕೊಡಿಸಲೇ ಬೇಕೆಂದೂ ಅಲ್ಲಿರುವ ಕ್ರೈಸ್ತ ಪ್ರಜೆಗಳು ಅದನ್ನು ಕುರಿತು ಪ್ರತಿಭಟನೆ ಮಾಡದೇ ಧರ್ಮವೆಂದೂ ಗವರ್ನಮೆಂಟಿಗೆ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿರುತ್ತಾರೆ. ಅವರು ಈ ಪತ್ರಿಕೆಗಳಲ್ಲಿ ಬರೆದಿರುವ ಸಂಗತಿಗಳನ್ನೆಲ್ಲಾ ಪ್ರಕಟಿಸಲು ಅವಕಾಶವಾಗಲಾರದೆಂದು ವಿಷಾದಿಸುತ್ತೇವೆ ಇದೇ ರೀತಿ ಈ ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿರುವ ಕ್ರೈಸ್ತಪ್ರಜೆಗಳೂ ಕೂಡ ಕಾನೂನು ಬೇಗ ಜಾರಿಗೆ ಬರಲೆಂದು ನಿರೀಕ್ಷಿಸಿ ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ವಂದನಾಪೂರ್ವಕವಾದ ವಿಜ್ಞಾಪನೆಗಳನ್ನು ಒಪ್ಪಿಸಿರುವಂತೆ ತಿಳಿದು ಬಂದಿದೆ.

****

ರಾಜಧಾನಿಯ ನಾರ್ಮಲ್ ಸ್ಕೂಲಿಗೆ ಎದುರಾಗಿಯೂ ಮಿಷನ್ ಪ್ರೆಸ್ಸಿನ ಪಕ್ಕದಲ್ಲೂ ಇರುವ ಪಾರ್ಕಿನೊಳಕ್ಕೆ ಹೋಗಲು ಅಡ್ಡಲಾಗಿ ಆಳವಾದ ಒಂದು ಗಾರೆ ಚರಂಡಿ ಸಿಕ್ಕುವುದು. ಇದರ ಮೇಲೆ ಜನರು ತಿರುಗಾಡುವಂತೆ ಮಂದ ದಪ್ಪ ಹಲಿಗೆಗಳನ್ನು ಕಟ್ಟ ಸೇತುವೆಯಂತೆ ಮಾಡಿದ್ದರು. ಈ ಸೇತುವೆಯ ಹಲಿಗೆಗಳು ಒಡೆದು ಬಿದ್ದು ಹೋಗಿವೆ ಸುಮಾರು ೧೫ ದಿನಗಳಿಂದಲೂ ಹೊಸ ಹಲಿಗೆಗಳನ್ನು ಹಾಕಿ ಇಲ್ಲ. ಬೆಳದಿಂಗಲ ಕಾಲದಲ್ಲಿ ಅಲ್ಲಿ ಯಾರಿಗೂ ಅಪಾಯವಾಗಲಾರದೆಂದು ಊಹಿಸಬಹುದಾದರೂ ಕತ್ತಲ ದಿನಗಳಲ್ಲಿ ಜನರು ಬಿದ್ದು ಗಾಯಪಟ್ಟುಕೊಳ್ಳುವುದಕ್ಕೆ ಸಂಶಯವಿಲ್ಲ. ಮ್ಯುನಿಸಿಪಾಲಿಟಿಯವರು ಈ ವಿಷಯಕ್ಕೆ ಕೂಡಲೇ ಗಮನ ಕೊಟ್ಟು, ಅದನ್ನು ಬೇಗ ದುರಸ್ತು ಮಾಡಿಸುವುದು ಅತ್ಯವಶ್ಯವೆಂದು ಸೂಚಿಸುತ್ತೇವೆ

****

ಸಾಗರದ ಟವನ್ ಆಸ್ಪತ್ರೆ ಅಸಿಸ್ಟೆಂಟರು ವಾರಕ್ಕೊಂದು ಸಲ ಅಲ್ಲಿಂದ ಆನಂದಪುರಕ್ಕೆ ಹೋಗಿ ಬರುವರು. ಇದಕ್ಕೆ ಅವರಿಗೆ ತಿಂಗಳಿಗೆ ೩೦ ರೂಪಾಯಿನಂತೆ ಅಲೋವೆನ್ಸು ಸಲ್ಲುತ್ತಿದೆ. ಇದನ್ನು ತಪ್ಪಿಸಿ, ಆನಂದಪುರದಲ್ಲೇ ಒಂದು ಆಸ್ಪತ್ರೆಯನ್ನು ಇಡಿಸಿ ಕೊಡುವುದು ಅನುಕೂಲವೆಂತಲೂ ೨೫ ರೂಪಾಯಿ ಸಂಬಳದಲ್ಲಿ ಒಬ್ಬ ಆಸ್ಪತ್ರೆ ಅಸಿಸ್ಟೆಂಟು ಸಿಕ್ಕಬಹುದೆಂತಲೂ, ಹೀಗೆ ಏರ್ಪಾಡು ಮಾಡೋಣದರಿಂದ ಸರ್ಕಾರದ ಹಣವು ಸದ್ವಿನಿಯೋಗವಾಗಿ ಅಲ್ಲಿನ ಪ್ರಜೆಗಳಿಗೆ ಸರ್ವದಾ ವೈದ್ಯನ ಸಹಾಯ ದೊರಕುವುದೆಂತಲೂ ಸೀನಿಯರ್ ಸರ್ಜನ್‌ರವರಿಗೆ ಬರೆದುಕೊಂಡದ್ದಕ್ಕೆ ಅವರು ಆಸ್ಪತ್ರೆ ಅಸಿಸ್ಟೆಂಟು ಸಿಕ್ಕುವುದಿಲ್ಲವೆಂದು ಜವಾಬು ಕೊಟ್ಟಿದಾರೆ ಈ ವಿಷಯವನ್ನು ಕುರಿತು ಡೆಪ್ಯುಟಿ ಕಮಿಷನರು ಪುನಃ ಗವರ್ನಮೆಂಟಿಗೆ ಬರೆದುಕೊಂಡಿದಾರೆಂದು ಕೇಳುತ್ತೇವೆ

****

ಮೈಸೂರು ಸಂಸ್ಥಾನದ ಜೈಲ್‌ಖಾನೆಗಳ ೧೯೦೪ನೇ ಇಸವಿಯ ರಿಪೋರ್ಟು ಪ್ರಕಟವಾಗಿ ಸುಮಾರು ಎರಡು ವಾರಗಳಾದವು. ಆ ವರುಷದಲ್ಲಿ ೧,೦೦೭ ಬಂದೀವಾನರು ಇದ್ದರು. ಆ ಪೈಕಿ ೪೨ ಮಂದಿ ಹುಡುಗರು. ಏಳು ಖೈದಿಗಳು ತಪ್ಪಿಸಿಕೊಂಡು ಹೋದರು. ಕಾಯಿಲೆಯಿಂದ ೧೬ ಜನ ಜೈಲಿನಲ್ಲಿ ಕಾಲವಾದರು ಒಟ್ಟು ಜೈಲ್‌ಖಾನೆಗಳಿಗೆ ೯೪,೧೯೦ ರೂಪಾಯಿ ಖರ್ಚಾಯಿತು. ಬಂದೀವಾನರು ತಯಾರುಮಾಡುವ ಜಮಖಾನ ಬಟ್ಟೆಬರೆಗಳ ಉತ್ಪತ್ತಿಯು ೨೩,೩೪೪ ರೂಪಾಯಿ ಆಯಿತು ಒಬ್ಬ ಖೈದಿಯನ್ನು ಒಂದು ವರುಷ ಜೈಲಿನಲ್ಲಿ ಇಡುವುದಕ್ಕೆ ಸರ್ಕಾರದವರಿಗೆ ರೂ. ೭೩—೪—೦ ಖರ್ಚಾಗುತ್ತದೆ ಬೊಂಬಾಯಿ, ಮದರಾಸು, ಬಂಗಾಳಾ ಆಧಿಪತ್ಯಗಳ ಜೈಲುಗಳಲ್ಲೆಲ್ಲಾ ಖರ್ಚು ಇಷ್ಟು ಹೆಚ್ಚಾಗುವುದಿಲ್ಲ. ಆದ್ದರಿಂದ ಖರ್ಚುಬಾಬನ್ನು ಇನ್ನೂ ಕಡಿಮೆಮಾಡಬೇಕೆಂದು ಸರ್ಕಾರದವರು ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಸಲಹೆಕೊಟ್ಟಿದಾರೆ.

****

ಇಂಡಿಯಾ ಗವರ್ನಮೆಂಟಿನವರು ಎಕ್ಸೈಸ್ ಇಲಾಖೆಯ ಕಾರುಬಾರುಗಳನ್ನು ಕ್ರಮಪಡಿಸಬೇಕೆಂದು ಕುತೂಹಲಪಟ್ಟು ಅನುಭವವುಳ್ಳ ನಾಲ್ವರು ಹುದ್ದೆದಾರರನ್ನು ಆರಾಯಿಸಿ ಒಂದು ಕಮಿಟಿ ಮಾಡಿ, ಹಿಂದುಸ್ಥಾನದ ಮುಖ್ಯ ನಗರಗಳಲ್ಲೆಲ್ಲಾ ಸಂಚಾರ ಮಾಡಿ, ಅಲ್ಲಲ್ಲಿರುವ ಅಧಿಕಾರಿಗಳ ಅಭಿಪ್ರಾಯಗಳನ್ನು ಪಡೆದುಕೊಂಡು, ರಿಪೋರ್ಟು ಮಾಡುವಂತೆ ನೇಮಿಸಿದಾರೆ ಈ ಕಮಿಟಿಯವರು ಕಳೆದ ವಾರ ಬೆಂಗಳೂರಿಗೆ ಬಂದು, ಅಲ್ಲಿ ತಮ್ಮ ಕಾರ್ಯಗಳನ್ನೆಲ್ಲಾ ಪೂರೈಸಿಕೊಂಡು, ಮೊನ್ನೆ ಶನಿವಾರ ರಾತ್ರಿ ರೈಲಿನಲ್ಲಿ ಬೆಂಗಳೂರಿಂದ ಹೊರಟು ಬೆಳಗಿನ ಝಾಮಕ್ಕೆ ಶ್ರೀರಂಗಪಟ್ಟಣದಲ್ಲಿಳಿದು, ಅಲ್ಲಿನ ಚರಿತ್ರಾರ್ಹವಾದ ಕಟ್ಟಡ ಮೊದಲಾದವನ್ನು ನೋಡಿಕೊಂಡು, ಕೂಡಲೇ ಅಲ್ಲಿಂದ ಮೈಸೂರಿಗೆ ಬಂದು ಒಂದೆರಡು ಗಂಟೆಗಳೊಳಗಾಗಿ ಅರಮನೆ, ಖಾಸ್ ಬಂಗಲೆ, ಅಶ್ವಶಾಲೆ, ಜಗನ್ಮೋಹನ ಬಂಗಲೆ ಮುಂತಾದ ಮುಖ್ಯ ಭಾಗಗಳನ್ನೆಲ್ಲಾ ನೋಡಿಕೊಂಡು, ಸೋಮವಾರ ಬೆಳಗ್ಗೆಯೇ ಮೆಯಿಲ್ ಗಾಡಿ ಹತ್ತಿ ಬೆಳ್ಳಾರಿಕ್ಕೆ ಪ್ರಯಾಣಮಾಡಿದರು.

ಪ್ರಿನ್ಸ್ ಆಫ್ ವೇಲ್ಸ್‌ರವರ ದೇಶಸಂಚಾರ.

ಲಾಹೋರ್ ಪಟ್ಟಣ.

ತಾ. ೨೮ ನೆ ಮಂಗಳವಾರ ಬೆಳಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಬಿಕಾನೀರ್ ಸಂಸ್ಥಾನದಿಂದ ಲಾಹೋರ್ ಪಟ್ಟಣಕ್ಕೆ ಬಂದು ಇಳಿದರು ಸ್ಟೇಷನಿನಲ್ಲಿ ಪಂಜಾಬಿನ ಲಫ್ಟಿನೆಂಟ್ ಗವರ್ನರು, ಸೈನ್ಯಾಧಿಪತಿಗಳೇ ಮೊದಲಾದ ಹುದ್ದೆದಾರರೆಲ್ಲಾ ಸಕಲ ಮರ್ಯಾದೆಗಳೊಡನೆ ಯುವರಾಜರವರನ್ನು ಎದುರುಗೊಂಡು, ಅವರಿಗೆ ಸುಸ್ವಾಗತವನ್ನು ಬಯಸಿದರು. ಸೈನಿಕರ ಕವಾತನ್ನು ನೋಡಿಕೊಂಡು ಅವರನ್ನು ವಂದಿಸಿ, ಅಧಿಕಾರಿಗಳ ಪರಿಚಯ ಮಾಡಿಕೊಂಡು ಯುವರಾಜರವರು ಪತ್ನಿ ಸಹಿತ ಲೆಫ್ಟಿನೆಂಟ್ ಗವರ್ನರವರನ್ನು ತಮ್ಮ ಪಕ್ಕದಲ್ಲಿ ಕೂರಿಸಿಕೊಂಡು ನಾಲ್ಕು ಕುದುರೆ ಕಟ್ಟಿನ ದಿವ್ಯವಾದ ಸಾರೋಟಿನಲ್ಲಿ ಕುಳಿತು, ದಿವ್ಯಾಲಂಕಾರಯುಕ್ತವಾಗಿ ಕಳಕಳಿಸುತ್ತಲೂ ಪ್ರಜಾ ಬಾಹುಳ್ಯದಿಂದ ಗಿಜಗಿರಿಯುತ್ತಲೂ ಇದ್ದ ಪುರವೀಧಿಗಳಲ್ಲಿ ನಿಧಾನವಾಗಿ ಮೆರವಣಿಗೆ ದಯಮಾಡುತ್ತಾ ಉತ್ಸವಕ್ಕೆ ಜಯಘೋಷಗಳನ್ನು ಮಾಡುತ್ತಿದ್ದ ಪ್ರಜೆಗಳಿಗೆ ಸಂತೋಷಪೂರ್ವಕವಾಗಿ ಪ್ರತಿವಂದನೆ ಮಾಡುತ್ತಾ, ದಾರಿಯಲ್ಲಿ ನೇತ್ರಾನಂದಕರವಾದ ಕ್ಯಾಂಪಿನಲ್ಲಿ ಝಗಝಗಿಸುವ ದಿವ್ಯಾಭರಣಗಳನ್ನೂ ದಿವ್ಯಾಂಬರಗಳನ್ನೂ ಧರಿಸಿಕೊಂಡು ಥಳಥಳನೆ ಹೊಳೆಯುತ್ತಿದ್ದ ದೇಶೀಯ ರಾಜರುಗಳ ಸಮೂಹವನ್ನು ಕಂಡು, ಅವರಿಂದ ಅಭಿನಂದನವನ್ನು ಸ್ವೀಕರಿಸಿ ಅವರನ್ನೆಲ್ಲಾ ವಂದಿಸಿ ಮುಂದಕ್ಕೆ ದಯಮಾಡುತ್ತಾ, ಅನಾರ್ಕಲಿ ಎಂಬ ಉದ್ಯಾನವನದಲ್ಲಿ ಲಾಹೋರ್ ಪಟ್ಟಣದ ಪುರಾಧ್ಯಕ್ಷ ಸಂಘದವರಿಂದ ಒಪ್ಪಿಸಲ್ಪಟ್ಟ ಅಡ್ರೆಸ್ಸನ್ನು ಪರಮಸಂತೋಷದೊಡನೆ ಅಂಗೀಕರಿಸಿ, ಸಮಯೋಚಿತವಾದ ಪ್ರತ್ಯುತ್ತರವನ್ನಿತ್ತು ವಂದಿಸಿ, ಗವರ್ನಮೆಂಟ್ ಹೌಸ್ ಎಂಬ ಬಂಗಲೆಗೆ ದಯಮಾಡಿದರು. ಆ ರಾತ್ರಿ ಮಾಂಟ್ಗುಮರಿ ಹಾಲ್ ಎಂಬ ವಿಸ್ತಾರವಾದ ಮತ್ತು ನೇತ್ರಾನಂದಕರವಾದ ಭವನದಲ್ಲಿ ಯುವರಾಜರವರು ಪತ್ನೀ ಪರಿವಾರ ಸಹಿತ ಶ್ರೇಷ್ಠಾಸನಗಳನ್ನಲಂಕರಿಸಿ ಒಡ್ಡೋಲಗವನ್ನಿತ್ತರು. ಲೆಫ್ಟಿನೆಂಟ್ ಗವರ್ನರವರು ಆ ಅಧಿಪತ್ಯದ ಮುಖ್ಯ ಮುಖ್ಯ ಸಿವಿಲ್ ಅಧಿಕಾರಸ್ಥರನ್ನೂ ಸೈನ್ಯಾಧಿಪತಿಯ ಹುದ್ದೆದಾರರುಗಳನ್ನೂ ರಾಜಕೀಯ ಇಲಾಖಾ ಸೆಕ್ರೆಟರಿಯವರು ದೇಶೀಯ ರಾಜರುಗಳನ್ನೂ ಕ್ರಮವಾಗಿ ಕರೆದುಕೊಂಡು ಹೋಗಿ ಯುವರಾಜರವರ ಪರಿಚಯ ಮಾಡಿಸಿದರು. ಪಾಟಿಯಾಲಾ, ಭಾವಲ್‌ಪುರ, ನಭಾ, ಜಿಂದ್, ಕಪೂರ್ಥಲ, ಮಂಡಿ, ಫರಿದ್ ಕೋಟ್, ಮಾಲೇರ್ ಕೋಟ್ಲಾ, ಚಂಬಾ, ಸುಕೇತ್, ಈ ಮೊದಲಾದ ದೇಶೀಯ ಸಂಸ್ಥಾನಗಳ ರಾಜರುಗಳು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕಂಡು ವಂದನೆಮಾಡಿದರು.

ತಾ. ೨೯ ನೆ ಬುಧವಾರ ದೇಶೀಯ ರಾಜರುಗಳು ತಮ್ಮ ತಮ್ಮ ಮಹಿಮಾಯೋಗ್ಯ ಸಲ್ತನುಗಳೊಡನೆ ಒಬ್ಬೊಬ್ಬರಾಗಿ ಅರಮನೆಗೆ ದಯಮಾಡಿ, ಯುವರಾಜರವರನ್ನು ಕಂಡು, ಅವರಿಂದ ಸತ್ಕಾರಹೊಂದಿ ಬಂದರು. ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರು ಯಥಾವಿಧಿಯಾಗಿ ಸೈನ್ಯಸಲ್ತನ ಸಹಿತ ದಯಮಾಡಿ, ಆ ದೇಶೀಯ ರಾಜರುಗಳಲ್ಲಿ ಕೆಲವರಿಗೆ ಮರುಭೇಟಿಕೊಟ್ಟು ಬಂದು, ಮಧ್ಯಾಹ್ನವನ್ನು ಅರಮನೆಯಲ್ಲೇ ವಿರಾಮವಾಗಿ ಕಳೆದರು. ಆ ರಾತ್ರಿ ಪಟ್ಟಣವನ್ನೆಲ್ಲಾ ಚಿತ್ರವಿಚಿತ್ರವಾದ ದೀಪಗಳನಿಟ್ಟು ಬೆಳಗಿಸಿದರು ಆದರೆ ಸಹಿಸಕೂಡದಷ್ಟು ಚಳಿಯೂ ಶೀತಗಾಳಿಯೂ ಯುವರಾಜರವರನ್ನು ಆ ರಾತ್ರಿ ಹೊರಕ್ಕೆ ದಯಮಾಡಗೊಡಲಿಲ್ಲ.

ತಾ. ೩೦ ನೆ ಗುರುವಾರ ಬೆಳಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಮೆರವಣಿಗೆ ಹೊರಟು, ಇನ್ನು ಕೆಲವು ದೇಶೀಯ ರಾಜರುಗಳಿಗೆ ಮರುಭೇಟಿಯನ್ನಿತ್ತರು ಮಧ್ಯಾಹ್ನ ಯುವರಾಜರವರು ಅಚ್ಚಿಸನ್ ಕಾಲೇಜ್ ಎಂಬ ರಾಜಕುಮಾರ ವಿದ್ಯಾಶಾಲೆಗೆ ದಯಮಾಡಿ, ಅಲ್ಲಿ ತರಪೇತಾಗುವ ೬೮ ಮಂದಿ ರಾಜಕುಮಾರರುಗಳನ್ನು ನೋಡಿ, ಅವರ ಸಂಗಡ ಬಹು ಸರಸವಾಗಿಯೂ ಸೌಜನ್ಯಯುಕ್ತವಾಗಿಯೂ ಸಂಭಾಷಣೆಮಾಡಿಕೊಂಡು ವಾಪಸ್ಸು ಬಂದರು. ಅತ್ತಲಾಗಿ ಯುವರಾಜರವರ ಪತ್ನೀರವರು ಅರಮನೆಯಲ್ಲೇ ಇದ್ದುಕೊಂಡು ದರ್ಬಾರ್ ಮಾಡಿ, ಲಾಹೋರ್ ನಗರದ ದೇಶೀಯ ದೊಡ್ಡಮನುಷ್ಯರ ದಿವಾನಾ ಸ್ತ್ರೀಯರಿಗೆಲ್ಲಾ ಭೇಟಿಕೊಟ್ಟು, ಅವರ ಸಂಗಡ ಸ್ವಲ್ಪ ಹೊತ್ತು ಸರಸಸಲ್ಲಾಪಗಳನ್ನು ಬೆಳೆಸಿದರು ಆ ರಾತ್ರಿ ಯುವರಾಜರವರಿಗೆ ದಿವ್ಯವಾದ ಔತಣ ದೊರೆಯಿತು. ಸುಮಾರು ೪೦೦ ಸರದಾರರೂ ಮೊಗಲಾನಿಗಳೂ ಸೇರಿ ಯುವರಾಜರವರ ಪಂಕ್ತಿಯಲ್ಲಿ ಕುಳಿತು ಭೋಜನಮಾಡಿದರು.

ಡಿಸೆಂಬರ್ ತಾ ೧ ನೆ ಶುಕ್ರವಾರ ಬೆಳಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಅಶ್ವಾರೂಢರಾಗಿ ಹೊರಟು, ಮೈದಾನಕ್ಕೆ ದಯಮಾಡಿ, ದೇಶೀಯ ರಾಜರುಗಳಿಂದ ಸಿದ್ಧಮಾಡಲ್ಪಟ್ಟಿರುವ ೪,೦೦೦ ಇಂಪೀರಿಯಲ್ ಸರ್ವಿಸ್ ಸೈನಿಕರನ್ನೂ ಅವರ ಕವಾತನ್ನೂ ಪರಾಂಬರಿಸಿ, ಅವರ ಪರಾಕ್ರಮವನ್ನೂ ಚಾಕಚಕ್ಯವನ್ನೂ ಮೆಚ್ಚಿಕೊಂಡರು. ಈ ಸೈನಿಕರು ಆ ದಿನ ಮಾಡಿ ತೋರಿಸಿದ ಚಮತ್ಕಾರ ಕಾರ್ಯಗಳು ಅಪೂರ್ವವೆನಿಸಿದ್ದವು. ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನೀಪರಿವಾರ ಸಹಿತ ಆ ರಾತ್ರಿ ಭೋಜನಾನಂತರ ರೈಲು ಹತ್ತಿ ಪಿಷಾವರ್ ಪಟ್ಟಣವನ್ನು ಕುರಿತು ತೆರಳಿದರು.

ಪಿಷಾವರ್ ಪಟ್ಟಣ.

ತಾ ೨ ನೆ ಶನಿವಾರ ಬೆಳಗ್ಗೆ ರಾಜಕುಮಾರ ದಂಪತಿಗಳು ನೇತ್ರಾನಂದಕರವಾಗಿ, ಅಲಂಕರಿಸಲ್ಪಟ್ಟು ಸಕಲ ಮರ್ಯಾದೆಗಳೊಡನೆ ಎದುರುನೋಡುತ್ತಿದ್ದ ಪಿಷಾವರ್ ಪಟ್ಟಣದ ಸ್ಟೇಷನಿನಲ್ಲಿ ಇಳಿದು, ಹುದ್ದೆದಾರರ ಸಂಗಡ ಮೆರವಣಿಗೆಯಾಗಿ ಪಟ್ಟಣದೊಳಕ್ಕೆ ಪ್ರವೇಶಿಸಿ, ಗವರ್ನಮೆಂಟ್ ಹೌಸ್ ಬಂಗಲೆಯನ್ನು ತಲಪಿದರು. ಗೋರ್‌ಖಾತ್ರಿ ಎಂಬ ಚೌಕದಲ್ಲಿ ಪುರಾಧ್ಯಕ್ಷರು ಒಪ್ಪಿಸಿದ ಅಡ್ರೆಸ್ಸನ್ನು ಅಂಗೀಕರಿಸಿ, ಪ್ರತ್ಯುತ್ತರದೊಡನೆ ಅವರನ್ನು ವಂದಿಸಿದರು. ಆ ಸರಹದ್ದು ಪ್ರಾಂತ್ಯಕ್ಕೆ ಸೇರಿದ ದೇಶೀಯ ರಾಜರೂ ಸಮಾಜರೂ ಹಾಜರಾಗಿದ್ದು ಯುವರಾಜರವರ ಭೇಟಿ ಪಡೆದು ಸಂತೋಷಪಟ್ಟರು ಮಧ್ಯಾಹ್ನ ಪ್ರಿನ್ಸ್ ಆಫ್ ವೇಲ್ಸ್‌ರವರು ಅರಮನೆಯಲ್ಲೇ ದರ್ಬಾರ್ ಮಾಡಿದರು ಸಾಯಂಕಾಲ ಸಾರೋಟಿನಲ್ಲಿ ಕುಳಿತು ಪುರವೀಧಿಗಳಲ್ಲಿ ಸವಾರಿ ದಯಮಾಡಿ, ಮುಖ್ಯವಾದ ಭಾಗಗಳನ್ನೆಲ್ಲಾ ಪರಾಂಬರಿಸಿ ಬಂದರು

ತಾ ೩ ನೆ ಭಾನುವಾರವನ್ನು ಅವರು ಅರಮನೆಯಲ್ಲೇ ದೇವರ ಪ್ರಾರ್ಥನೆಯಲ್ಲಿ ವಿರಾಮವಾಗಿ ಕಳೆದು, ಅಲ್ಲಿಂದ ಅಲಿಮಸ್‌ಜಿದ್, ಲಂಡಿಕೋಟಾಲ್ ಮುಂತಾದ ಚರಿತ್ರಾರ್ಹವಾದ ವಿಶೇಷ ಸ್ಥಳಗಳನ್ನು ಪರಾಂಬರಿಸಿ, ರಾತ್ರಿಭೋಜನವನ್ನು ತೀರಿಸಿಕೊಂಡು, ರಾವಲ್ ಪಿಂಡಿ ಎಂಬ ಪ್ರಸಿದ್ಧ ಪಟ್ಟಣಕ್ಕೆ ತೆರಳಿದರು. ಅಲ್ಲಿ ೪೦,೦೦೦ ಸೈನ್ಯ ಸೇರಿರುವುದು. ಈ ಅಪಾರವಾದ ಸೈನಿಕರಿಂದ ಲಾರ್ಡ್ ಕಿಚ್ನರ್ ಸೈನ್ಯಾಧಿಪತಿಗಳು ಮಾಡಿಸುವ ನಾನಾ ಚಮತ್ಕಾರ ಕಾರ್ಯಗಳನ್ನು ಪ್ರಿನ್ಸ್ ಆಫ್ ವೇಲ್ಸ್‌ರವರು ಪರಾಂಬರಿಸುವವರಾಗಿದಾರೆ.

ದೇವರು ಪ್ರಾರ್ಥನೆಗೆ ಪ್ರತ್ಯುತ್ತರವನ್ನು ಕೊಡುವುದು ಹೇಗೆ?

ದೇವರಿಗೆ ಪ್ರಾರ್ಥನೆಯನ್ನು ಮಾಡುವುದರಲ್ಲಿ ಫಲವೇನೂ ಇಲ್ಲವೆಂದು ಜನರು ಕೆಲವು ವೇಳೆ ಹೇಳುವುದುಂಟು. ಇದಕ್ಕೆ ಅವರು ಹೇಳುವ ಕಾರಣವೇನೆಂದರೆ—ದೇವರು ಸಕಲವನ್ನೂ ತಿಳಿದ ಸರ್ವಜ್ಞನಾಗಿದ್ದರೆ, ಇಂಥಿಂಥದ್ದನ್ನು ನಮಗೆ ಕೊಡು ಎಂದು ನಾವಾತನನ್ನು ಬಲಾತ್ಕರಿಸತಕ್ಕ ಅವಕಾಶವೇ ಇರುವದಿಲ್ಲ. ಹೀಗೆ ಸರ್ವಜ್ಞನೂ ಒಳ್ಳೆಯವನೂ ಆಗಿರುವ ದೇವರನ್ನು ಪ್ರಾರ್ಥಿಸುವದೇತಕ್ಕೆ? ಎಂದು ಜನರು ಹೇಳುವರು. ಇದೂ ಅಲ್ಲದೆ, ಭಗವಂತನು ಈ ಲೋಕವನ್ನಾಳುವದಕ್ಕೆ ಕೆಲವು ಆಜ್ಞೆಗಳನ್ನು ವಿಧಿಸಿದ್ದಾನೆ. ಆ ಆಜ್ಞೆಗಳ ಪ್ರಕಾರವೇ ಎಳ್ಳಷ್ಟೂ ತಪ್ಪದೆ ಭೂಲೋಕದ ಕಾರ್ಯಗಳು ನಡೆಯುತ್ತಲಿವೆ. ಹೀಗಿರಲಾಗಿ ಏನೇನು ಆಗಬೇಕಾಗಿದೆಯೋ ಅದೆಲ್ಲಾ ಆಗಲೇಬೇಕು. ಅಂಥ ಸಂಗತಿಗಳನ್ನು ನಾನು ನನ್ನ ಪ್ರಾರ್ಥನೆಯ ಮುಖಾಂತರ ಮಾರ್ಪಡಿಸುವುದಕ್ಕೆ ಪ್ರಯತ್ನಿಸುವದರಲ್ಲಿ ಫಲವೇನು? ಎಂದೂ ಆಕ್ಷೇಪಿಸುವರು.

ಈ ಆಕ್ಷೇಪವನ್ನು ನೋಡಿದಲ್ಲಿ ನಮಗೆ ತೋರುವದೇನೆಂದರೆ—ವಿಶ್ವವನ್ನು ನಡಸುವದಕ್ಕೆ ಭಗವಂತನು ವಿಧಿಸಿರುವ ಕಟ್ಟಳೆಗಳೆಲ್ಲಾ ನಮಗೆ ಪರಿಷ್ಕಾರವಾಗಿ ತಿಳಿದಿಲ್ಲ. ಅದಿರಲಿ ಮನುಷ್ಯಮಾತ್ರದವರಿಗೆ ತಿಳಿದಿರುವಷ್ಟು ಮಟ್ಟಿಗೆ ನೋಡಲಾಗಿ ಆಯಾ ಕಟ್ಟಳೆಗಳನ್ನು ನಮಗೆ ಪ್ರತಿಕೂಲವಾಗಿಯಾದರೂ ಅನುಕೂಲವಾಗಿಯಾದರೂ ಮಾರ್ಪಡಿಸಿಕೊಳ್ಳುವಂಥ ಶಕ್ತಿಯು ಮನುಷ್ಯನಲ್ಲಿ ಇಲ್ಲವೇ? ಇದಕ್ಕೊಂದು ಸಾದೃಶ್ಯವನ್ನು ಕೇಳಿರಿ. ಭಗವಂತನ ಆಜ್ಞೆಯ ಪ್ರಕಾರ ಕಾಲಕಾಲಕ್ಕೆ ಮಳೆಯು ಬರುವುದುಂಟಲ್ಲವೇ? ಈ ಮಳೆಗಳೂ ಮನುಷ್ಯನಿಗೆ ಜೀವನೋಪಾಯಗಳಾಗಿರುವುವರಿಂದ ಗಾಳಿ ಮಳೆಗಳಿಂದ ತಪ್ಪಿಸಿಕೊಳ್ಳುವಂತೆ ತಕ್ಕ ಆಶ್ರಯಸ್ಥಾನಗಳನ್ನು ಕಲ್ಪಿಸಿಕೊಳ್ಳದಿದ್ದರೆ ಮನುಷ್ಯರಿಗೆ ಎಷ್ಟೆಷ್ಟು ಕಷ್ಟಗಳೂ ಏನೇನು ರೋಗಗಳೂ ಪ್ರಾಪ್ತವಾಗುವವೋ ಹೇಳಲಾಗುವದೇ? ಜೀವನಮಾನದಲ್ಲಿ ಮಳೆಯು ಅತ್ಯವಶ್ಯವಾದ ಪದಾರ್ಥವೆಂದು ತಿಳಿದಿದ್ದಾಗ್ಯೂ [illegible]ವಾಗಿಯೇ ಮನೆಗಳನ್ನು ಕಟ್ಟಿಕೊಂಡು ಆಶ್ರಯಸ್ಥಾನಗಳನ್ನು ಕಲ್ಪಿಸಿಕೊಂಡಿರುವರು. ಈ ಸಾದೃಶ್ಯದಲ್ಲಿ ತೋರುವ ಅಂಶವೇನೆಂದರೆ—ವಿಶ್ವದಲ್ಲಿ ಮನುಷ್ಯನ ಉಪಯೋಗಕ್ಕಾಗಿ ಕಲ್ಪಿಸಿಕೊಟ್ಟಿರುವ ಒಂದು ಕಟ್ಟಳೆಯನ್ನು ಆ ಮನುಷ್ಯನೇ ಬೇರೊಂದು ಕಟ್ಟಳೆಯಿಂದ ಮಾರ್ಪಡಿಸಿ ಮೊದಲಿನ ಕಟ್ಟಳೆಯಿಂದುಂಟಾಗ ಬಹುದಾದ ಬಾಧಕಗಳನ್ನು ಎರಡನೆಯ ಕಟ್ಟಳೆಯ ದೆಸೆಯಿಂದ ಸಾಧಕಗಳನ್ನಾಗಿ ಮಾಡಿಕೊಳ್ಳುತ್ತಾನೆ.

ಸಮುದ್ರದ ಮೇಲೆ ಕಾಲ್ನಡೆಯಾಗಿ ಹೋಗುವುದಾಗಲಿ ಅಂತರಿಕ್ಷದಲ್ಲಿ ಹಾರಾಡುವುದಾಗಲಿ ಮನುಷ್ಯನಿಗೆ ಸಾಧ್ಯವಾಗಿಲ್ಲವಷ್ಟೆ. ವಿಶ್ವವ್ಯಾಪಾರಕ್ಕೆ ಸಲ್ಲತಕ್ಕ ಈ ಕಟ್ಟಳೆಯಲ್ಲಿ ಮನುಷ್ಯನು ತನಗೆ ಪ್ರತಿಕೂಲವಾಗಿರುವ ಅಂಶವನ್ನು ಅದೇ ವಿಶ್ವದಲ್ಲಿ ಜಗನ್ನಿಯಾಮಕನಾದ ದೇವರು ವಿಧಿಸಿರುವ ಬೇರೆ ಕೆಲವು ಕಟ್ಟಳೆಗಳನ್ನು ಸಹಾಯಕ್ಕೆ ತಂದುಕೊಂಡು ಯಾನಪಾತ್ರೆಗಳೆಂಬ ಹಡಗುಗಳನ್ನೂ ಆಕಾಶ ವಿಮಾನಗಳನ್ನೂ ನಿರ್ಮಿಸಿಕೊಂಡು ಸಮುದ್ರಗಳನ್ನು ದಾಟಿ ದ್ವೀಪಾಂತರ ವ್ಯಾಪಾರಗಳನ್ನು ನಡಸುತ್ತಲೂ ಅಂತರಿಕ್ಷದಲ್ಲಿ ಸಂಚರಿಸುತ್ತಲೂ ಇಲ್ಲವೇ?

ವಿಶ್ವವನ್ನು ನಡಸುವದಕ್ಕೆ ಭಗವಂತನು ನೇಮಿಸಿರುವ ಒಂದು ಕಟ್ಟಳೆಯನ್ನೇ ಮನುಷ್ಯನು ಬೇರೊಂದು ಕಟ್ಟಳೆಯಿಂದ ಮಾರ್ಪಡಿಸಿ ಸಕಲವಾದ ಕಟ್ಟಳೆಗಳೂ ತನಗೆ ಸಹಕಾರಿಯಾಗುವಂತೆ ಮಾಡಿಕೊಳ್ಳುತ್ತಾನೆಂಬುದು ಪ್ರತ್ಯಕ್ಷವಾಗಿ ತಿಳಿದ ವಿಷಯವಾಗಿದೆ. ದೇವರ ಪ್ರಾರ್ಥನೆಯ ವಿಷಯದಲ್ಲೂ ಹೀಗೇ ಸರಿ. ಜಗನ್ನಿಯಾಮಕನು ಏರ್ಪಡಿಸಿರುವ ಕಟ್ಟಳೆಗಳು ಇಂಥಾವುಗಳೆಂದು ಪ್ರತ್ಯಕ್ಷದಲ್ಲಿಯೇ ಗ್ರಹಿಸಬಹುದಾಗಿರುವಲ್ಲಿ ಧರ್ಮಸಂಬಂಧವಾದ ಕಟ್ಟಳೆಗಳನ್ನು ಭಗವಂತನೇ ತಿಳಿಯಪಡಿಸಬೇಕಾಗಿದೆ. ಆತನು ಇದನ್ನು ತಿಳಿಯಪಡಿಸತಕ್ಕ ವಿಧಗಳು ಒಂದಲ್ಲ, ಬೇರೆ ಬೇರೆಯಾಗಿವೆ. ಕೆಲವನ್ನು ಮನುಷ್ಯರ ಗುಣಚರ್ಯೆಗಳಿಂದಲೇ ತಿಳಿಯಬಹುದು. ಕೆಲವನ್ನು ಮನುಷ್ಯರಲ್ಲಿರುವ ಮನಸಾಕ್ಷಿಯಿಂದಲೆ ಗ್ರಹಿಸಬಹುದು. ಇನ್ನು ಕೆಲವನ್ನು ಆತನು ಅನುಗ್ರಹಿಸಿರುವ ಧರ್ಮಗ್ರಂಥಗಳಿಂದಲೆ ಅರಿಯಲಾಗುವದು. ಇದಕ್ಕನುಗುಣವಾಗಿ ಸಕಲ ಮತಸ್ಥರೂ ಪ್ರಾರ್ಥನೆ ಮಾಡುವರು. ಭಗವಂತನು ಅನುಗ್ರಹಿಸಿರುವ ಶ್ರೇಷ್ಠತರವಾದ ದಿವ್ಯ ಗ್ರಂಥದಲ್ಲಿ—ಪ್ರಾರ್ಥನೆಯು ದೇವರ ಆಜ್ಞೆಗೆ ಅನುಗುಣವಾದುದೆಂದು ಹೇಳಿದೆ. ಭಗವಂತನು ಈ ಭೂಲೋಕವನ್ನು ನಡಸುವದಕ್ಕಾಗಿ ಕೊಟ್ಟಿರುವ ಕಟ್ಟಳೆಗಳಲ್ಲಿ ಒಂದು ಯಾವದೆಂದರೆ—ತಾನು ತನ್ನನ್ನು ಕೇಳಿಕೊಳ್ಳುವವರ ಪ್ರಾರ್ಥನೆಗಳನ್ನು ನಡಸಿಕೊಡುತ್ತಾನೆಂಬುದೇ. ಆ ಕಟ್ಟಳೆಯು ವಿಮಾನದಲ್ಲಿ ಕುಳಿತುಕೊಂಡು ಆಕಾಶದಲ್ಲೆಲ್ಲಾ ಸಂಚರಿಸತಕ್ಕವನು ಹೇಗೆ ಯಾವ ಕಟ್ಟಳೆಯನ್ನೂ ಮೀರದೆ ಆಕಾಶ ಸಂಚಾರಕ್ಕೆ ಅನುಕೂಲವಾದ ಕಟ್ಟಳೆಯನ್ನೇ ಕಂಡು ಹಿಡಿದು ಅನುಸರಿಸುವನು ಹೇಗೋ ಹಾಗೆಯೇ ದೇವರ ಪ್ರಾರ್ಥನೆಯನ್ನು ಮಾಡುವವನ ಕಾರ್ಯವೂ ಉಂಟು. ದೇವರ ಪ್ರಾರ್ಥನೆಯೆಂಬುದು ವಿಶ್ವವಿಧಿಗಳಿಗೆ ವಿರೋಧವಾದ ಕಾರ್ಯವೇ ಅಲ್ಲ. ವಿಶ್ವಕರ್ತೃವಾದ ಭಗವಂತನು ನೇಮಿಸಿರುವ ವಿಶ್ವವಿಧಿಗೆ ಅನುಸಾರವಾದದ್ದಾಗಿಯೇ ಇದೆ.

ಇಷ್ಟೇ ಅಲ್ಲ. ಕೆಲವು ಸಂದರ್ಭಗಳಲ್ಲಿ ಮನುಷ್ಯನೂ ಸಹಕಾರಿಯಾಗಿರದಿದ್ದರೆ ದೇವರು ನೇಮಿಸಿರುವ ಕಟ್ಟಳೆಯಾದರೂ ನೆರವೇರದೆ ಹೋಗುವದು! ಇದಕ್ಕೊಂದು ದೃಷ್ಟಾಂತವನ್ನು ಹೇಳುತ್ತೇವೆ. ರೈತನಲ್ಲಿ ಹೊಲವುಂಟು, ಧಾನ್ಯವೂ ಉಂಟು. ಧಾನ್ಯವನ್ನು ಹೊಲದಲ್ಲಿ ಬಿತ್ತಿದರೆ ಮೊಳಕೆಯೆದ್ದು ಪೈರು ಬೆಳೆದು ಫಲವುಂಟಾಗುವದು ಎಂಬುದಾಗಿ ವಿಶ್ವವಿಧಿಯು ಸೂಚಿಸುತ್ತದೆ. ರೈತನು ಹೊಲವನ್ನೂ ಉಳದೆ, ಧಾನ್ಯವನ್ನೂ ಬಿತ್ತದೆ ಮನೆಯಲ್ಲಿ ಸುಮ್ಮನೆ ಕುಳಿತಿದ್ದರೆ ಹೊಲದಲ್ಲಿ ಪೈರು ಬೆಳೆಯುವದೇ? ಇಲ್ಲವೇ ಇಲ್ಲ. ರೈತನು ತನಗೆ ಬಂದ ಭಾಗವನ್ನು ಮಾಡಬೇಕು, ಹೊಲವನ್ನು ಕ್ರಮಪ್ರಕಾರವಾಗಿ ವ್ಯವಸಾಯ ಮಾಡಿ ಯಥಾಯೋಗ್ಯವಾಗಿ ಪಕ್ವಮಾಡಿ ಬಿತ್ತಿದರೆ ಭಗವಂತನ ದಯೆಯಿಂದ ಒಳ್ಳೇ ಫಲವನ್ನು ಕಾಣಬಹುದು. ಇದೇ ಪ್ರಕಾರವಾಗಿ ದೇವನು ಭೂಲೋಕದಲ್ಲಿ ನಡಸಬೇಕೆಂದಿರುವ ಕಟ್ಟಳೆಗಳನ್ನು ನೆರವೇರಿಸಿಕೊಳ್ಳುವದಕ್ಕೆ ಪ್ರಾರ್ಥನೆಯೆಂಬುದು ಬಹು ಉಚಿತವಾದ ಒಂದು ಸಾಧನವಾಗಿದೆ. ನಾವೆಲ್ಲರೂ ದೇವರ ಸಂಗಡ ಸೇರಿ ಈ ವಿಶ್ವಕಾರ್ಯಗಳನ್ನು ನಡಸತಕ್ಕವರಾಗಿದ್ದೇವೆ. ಇದರಲ್ಲಿ ನಮಗೆ ಭಗವಂತನು ವಹಿಸಿರುವ ಘನತೆಯನ್ನು ನಾವು ಚನ್ನಾಗಿ ಅರಿತವರಾದರೆ ಅತ್ಯಾಸಕ್ತಿಯಿಂದ ಪ್ರಾರ್ಥಿಸಿ ಇದರ ಮೂಲಕವೂ ಈ ಭೂಲೋಕದ ಆಳ್ವಿಕೆಯಲ್ಲಿ ಸಹಾಯಕರಾಗಿರತಕ್ಕದ್ದು.

ಪ್ರಾರ್ಥನೆಯು ಯಥೋಚಿತವಾದದ್ದಾಗಿರಬೇಕಾದರೆ ಅದನ್ನು ದೇವರೇ ನಮ್ಮಲ್ಲಿ ಪ್ರೇರಿಸಬೇಕಾಗಿದೆ. ನಮ್ಮ ಅಜ್ಞಾನದಿಂದ ಆತನ ಕಾರ್ಯಗಳು ಕೆಟ್ಟುಹೋಗದ ಹಾಗೆ ಆತನು ನಮಗೆ ಈ ವಿಷಯದಲ್ಲಿ ಅವಕಾಶವನ್ನು ಕೊಡುವದಿಲ್ಲ. ತನ್ನ ಧ್ವನಿಯು ನಮ್ಮಲ್ಲಿ ಪ್ರತಿಯೊಬ್ಬರ ಹೃದಯದೊಳಗೂ ಕೇಳಬರುವಂತೆ ಆತನು ಮಾಡುತ್ತಲೇ ಇದ್ದಾನೆ. ಆತನ ಚಿತ್ತವೇನೆಂದು ತಿಳಿಯುವದಕ್ಕೂ ಆ ಚಿತ್ತದ ಪ್ರಕಾರ ನಡೆಯುವದಕ್ಕೂ ಯಾರ್ಯಾರು ಯಥಾರ್ಥವಾಗಿ ಅಪೇಕ್ಷಿಸುತ್ತಾರೋ ಅವರು ಯಥೋಚಿತವಾಗಿ ಪ್ರಾರ್ಥಿಸುವಂತೆ ಆತನು ಸಹಾಯ ಮಾಡುವನೆಂಬುದರಲ್ಲಿ ಸಂಶಯವೇ ಇಲ್ಲ. ಆತನಿಗೆ ನಮ್ಮಲ್ಲಿ ಅತ್ಯತಿಶಯವಾದ ಪ್ರೀತಿ ಇರುವದರಿಂದಲೆ ತನ್ನ ಬಳಿಗೆ ನಾವು ಪ್ರಾರ್ಥನೆಯ ಮುಖಾಂತರವಾಗಿ ಬರಬಹುದೆಂಬ ಅನುಮತಿಯನ್ನು ಕೊಟ್ಟಿರುತ್ತಾನೆ. ಹೀಗೆ ಭಗವಂತನು ವಿಶ್ವದ ಕಾರ್ಯಗಳನ್ನು ನಡಸುವದಕ್ಕೆ ಸ್ಥಾಪಿಸಿರುವ ವಿಧಿಗಳಲ್ಲಿ ಒಂದು ಯಾವದೆಂದರೆ—ಕೇಳಿರಿ, ನಿಮಗೆ ಕೊಡಲ್ಪಡುವದು, ಹುಡುಕಿರಿ, ನಿಮಗೆ ದೊರಕುವದು, ತಟ್ಟಿರಿ, ನಿಮಗೆ ಬಾಗಿಲು ತೆರೆಯುವದು ಎಂಬುದೇ. ಈ ಮಹಾ ವಾಗ್ದಾನವನ್ನು ನಾವು ಕೃತಜ್ಞತೆಯಿಂದ ಕೈಗೊಂಡು ಆಸಕ್ತಿಯಿಂದ ಪ್ರಾರ್ಥಿಸಿ, ಭಗವಂತನ ಕೃಪೆಯಿಂದ ವಿಶೇಷವಾದ ವರಗಳನ್ನು ಪಡೆಯೋಣ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು

ರೆವಿನ್ಯೂ ವಿಚಾರಗಳು.

ಕೊಪ್ಪ ತಾಲ್ಲೂಕು ಮ॥ ಕಿಗ್ಗದ ಚನ್ನಕೇಶವರಾಯರು—ಮಲೆನಾಡಿನಲ್ಲಿ ಮಳೆ ವಿಪರೀತವಾಗಿ ಸುರಿವುದರಿಂದ ಭತ್ತ, ಅಡಿಕೆ ಫಸಲಲ್ಲದೆ ರೈತರು ಇನ್ನಾವುದನ್ನೂ ಬೆಳೆ ಮಾಡಲಾರರು. ಆ ಪ್ರಾಂತ್ಯ ಸರ್ಕಾರದವರು ಮಾದರಿಗಾಗಿ ಒಂದೆರಡು ಕಡೆ ಜಮೀನು ಮಾಡಿ, ಮಲೆನಾಡಿನಲ್ಲಿ ಬೆಳೆಯಬಹುದಾದ ಸಮಸ್ತ ಬೆಳೆಗಳನ್ನೂ ಅವುಗಳನ್ನು ಬೆಳೆ ಮಾಡತಕ್ಕ ವಿಧಾನಗಳನ್ನೂ ಅವುಗಳಿಗೆ ಹಾಕಬೇಕಾದ ಗೊಬ್ಬರಗಳನ್ನೂ ಪ್ರಯೋಗಿಸಿ ಮಾಡಿ ತೋರಿಸಿದರೆ ರೈತರಿಗೆ ಇತರ ಬೆಳೆಗಳನ್ನೂ ಮಾಡುವುದಕ್ಕೆ ಕಲಿಸಿಕೊಟ್ಟಂತಾಗುವುದು. ಇಂಥಾ ಪರೀಕ್ಷಾರ್ಥವಾದ ಜಮೀನುಗಳನ್ನು ಅಲ್ಲಲ್ಲಿ ಮಾಡಿಸಬೇಕು.

ದಿವಾನರವರು—ಎಲ್ಲಾ ಒಂದೆ ಸಲ ಮಾಡಲಾಗುವುದೇ? ನಿಧಾನವಾಗಿ ಮಾಡೋಣ. ಸಾಗರದ ತಾ॥ ಮ॥ ಎ. ನರಸಿಂಹಯ್ಯಂಗಾರ್ರು—ಮಲೆನಾಡಿನ ರೈತರಿಗೆ ಸರ್ಕಾರದವರು ಹೊಸ ಯಂತ್ರಗಳನ್ನು ತರಿಸಿಕೊಟ್ಟು, ವ್ಯವಸಾಯಾಭಿವೃದ್ಧಿಯಾಗುವಂತೆ ಪ್ರೋತ್ಸಾಹಪಡಿಸಬೇಕು.

ದಿವಾನರವರು—ದಕ್ಷಿಣದೇಶದ ಕೆಲವು ಕಡೆ ಹಾಗೆ ಮಾಡಿದಾರೆ. ಆಗಲಿ, ಮುಂದೆ ನೋಡೋಣ.

ಅರಸೀಕೆರೆ ಮ॥ ಬಲವಂತರಾಯರು ಮುಂತಾದವರು—ಸುಲಭವಾದ ಹೊಸ ತರಹಾ ನೇಗಲು ಮುಂತಾದ ವ್ಯವಸಾಯೋಪಕರಣಗಳನ್ನು ರೈತರಿಗೆ ಸರ್ಕಾರದವರು ತರಿಸಿಕೊಡಬೇಕು.

ದಿವಾನರವರು—ಸರ್ಕಾರದವರು ಇದಕ್ಕೆಲ್ಲಾ ಹಣ ಹಾಕುವುದು ಸಹಜವಾದದ್ದಲ್ಲ. ರೈತರೇ ಹಣ ಕೊಟ್ಟು ತರಿಸಿಕೊಳ್ಳಲಿ. ಅವರಿಗೆ ಬೇಕಾದರೆ ಅದಕ್ಕೆ ಹಣವನ್ನು ಸರ್ಕಾರದಿಂದ ಸಾಲ ಕೊಡುತ್ತೇವೆ. ಈ ಸಾಲವನ್ನು ತೀರಿಸುವುದಕ್ಕೆ ಹತ್ತು ವರುಷದ ತನಕ ಬೇಕಾದರೂ ವಾಯಿದೆ ಕೊಡುವೆವು. ಅನಾದರಿಸದೆ ನಮ್ಮ ದೇಶದ ಪೂರ್ವಕಾಲದ ನೇಗಲನ್ನು ನಿಧಾನವಾಗಿ ಬದಲಾಯಿಸಿಕೊಳ್ಳುತ್ತಾ ಬರಲಿ. ಒಟ್ಟಿಗೆ ಹಾರಿದರೆ ಬಿದ್ದು ಬಿಟ್ಟೇವು!

ಮ॥ ಅಂಬಳೆ ಅಣ್ಣಾಯ್ಯಪಂಡಿತರು ಮುಂತಾದವರು—ಈ ಸಂಸ್ಥಾನಕ್ಕೆ ಸೇರಿದ ಪ್ರತಿ ಮೂರು ತಾಲ್ಲೂಕುಗಳುಳ್ಳ ರೆವಿನ್ಯೂ ಸಬ್ ಡಿವಿಜನ್ನಿಗೂ ಒಬ್ಬೊಬ್ಬ ವ್ಯವಸಾಯದ ಇನ್ಸ್‌ಪೆಕ್ಟರನ್ನು ನೇಮಕಮಾಡಿ, ಅವರು ಅಮಲ್ದಾರರ ಸಂಗಡಲೇ ಇದ್ದು ಸರ್ಕೀಟು ಗ್ರಾಮಾಂತರ ಹೋದಾಗ ವ್ಯವಸಾಯಗಾರರಿಗೆ (೧) ಉತ್ತಮತರದ ನೇಗಲುಗಳ ವಿಚಾರವನ್ನೂ (೨) ಬೇರೆ ಬೇರೆ ತರಹಾ ಮಣ್ಣುಳ್ಳ ಭೂಮಿಗೆ ಬೇರೆ ಬೇರೆ ವಿಧವಾದ ಗೊಬ್ಬರ ಹಾಕುವುದನ್ನೂ (೩) ಗೊಬ್ಬರವನ್ನು ಕೂಡಿಸಿಡುವ ವಿಧಾನವನ್ನೂ (೪) ಬಿತ್ತನೇ ಬೀಜಗಳ ವಿಚಾರವನ್ನೂ ಹೇಳಿಕೊಡುವಂತೆ ಏರ್ಪಾಡು ಮಾಡಿಕೊಟ್ಟರೆ ವ್ಯವಸಾಯಾಭಿವೃದ್ಧಿಗೆ ತುಂಬಾ ಸಹಾಯವಾಗುವುದು.

ದಿವಾನರವರು—ಅಂಥಾ ವ್ಯವಸಾಯವನ್ನು ತಿಳಿದ ಇನ್ಸ್‌ಪೆಕ್ಟರುಗಳನ್ನು ಎಲ್ಲಿಂದ ತರೋಣ? ಸರ್ಕಾರಿ ವೇತನ ಪಡೆದು ಮದರಾಸ್ ಸೈದಾಪೇಟೆಯ ವ್ಯವಸಾಯಬೋಧನಾ ಪಾಠಶಾಲೆಯಲ್ಲಿ ಕಲಿತು ಬಂದಿರುವವರು ನೀವು ಹೇಳುವಂಥಾ ಕಾರ್ಯಗಳನ್ನು ಮಾಡಲು ಸಮರ್ಥರಾಗಿಲ್ಲವೆಂಬುದು ನಮಗೆ ದೃಷ್ಟಾಂತಕ್ಕೆ ಬಂದಿದೆ. ಅಲ್ಲಿ ವ್ಯವಸಾಯ ಕಲಿತು ಬಂದವರೆಲ್ಲಾ ಸರ್ಕಾರಿ ಆಫೀಸುಗಳಲ್ಲಿ ಗುಮಾಸ್ತೆ ಕೆಲಸ ಮಾಡಿಕೊಂಡಿದ್ದಾರೆ. ಈ ಭಾಗದಲ್ಲಿ ಏನು ಮಾಡಬೇಕೋ ಮುಂದಕ್ಕೆ ಸಾವಧಾನವಾಗಿ ಆಲೋಚನೆ ಮಾಡುವೆವು.

ತುರುವೇಕೆರೆಯ ಮ॥ ನಾರಣಪ್ಪನವರು—ಪರದೇಶಗಳಿಂದ ವ್ಯವಸಾಯೋಪಕರಣಗಳನ್ನು ತರಿಸುವುದಕ್ಕೆ ನಮ್ಮ ರೈತರು ಅಷ್ಟು ಪುಷ್ಟಿವಂತರಾಗಿಲ್ಲ. ಆದ್ದರಿಂದ ಅಂಥಾ ನೇಗಲು ಮುಂತಾದ ಉಪಕರಣಗಳನ್ನು ನಮ್ಮ ಸಂಸ್ಥಾನದಲ್ಲೇ ತಯಾರುಮಾಡುವುದಕ್ಕೂ ಕೆಟ್ಟು ಹೋದವುಗಳನ್ನು ರಿಪೇರಿ ಮಾಡುವುದಕ್ಕೂ ಮೈಸೂರಿನಲ್ಲಾಗಲಿ ಬೆಂಗಳೂರಿನಲ್ಲಾಗಲಿ ಒಂದು ಕಾರ್ಖಾನೆಯನ್ನು ಸರ್ಕಾರದವರೇ ಇಡಿಸಿಕೊಟ್ಟರೆ ತುಂಬಾ ಉಪಯೋಗವಾಗುವದು.

ದಿವಾನರವರು—ಇದು ಒಳ್ಳೇ ಸಲಹೆ. ಈ ವಿಷಯವನ್ನು ನಾವು ಆಲೋಚನೆ ಮಾಡಿ, ಆದಷ್ಟು ಬೇಗ ಗೊತ್ತು ಮಾಡುವೆವು.

ಅದೇ ಮೆಂಬರು—ಹೊಸ ತರಹಾ ವ್ಯವಸಾಯ ಮಾಡಬೇಕೆಂದು ಅಪೇಕ್ಷಿಸುವ ರೈತರಿಗೆ ಜಮೀನನ್ನು ಕಂದಾಯವಿಲ್ಲದೆ ಕೊಡುವಂತೆ ಸರ್ಕಾರದವರು ಅಮಲ್ದಾರರಿಗೂ ಡೆಪ್ಟಿ ಅಮಲ್ದಾರರಿಗೂ ಅಧಿಕಾರ ವಹಿಸಬೇಕು.

ದಿವಾನರವರು—ಬೇಕಾದವರು ಅರ್ಜಿ ಬರೆದು ಕೇಳಲಿ. ಸಂದರ್ಭಾನುಸಾರ ವ್ಯವಸ್ಥೆ ಮಾಡುತ್ತೇವೆ.

ಮ॥ ಅಂಬಳೆ ಅಣ್ಣಾಯ್ಯಪಂಡಿತರು—ಸರ್ಕಾರದವರು ಇಂಗ್ಲಿಷ್, ಕನ್ನಡ, ತಮಿಳು, ತೆಲುಗು ಮೊದಲಾದ ಭಾಷೆಗಳನ್ನು ಕಲಿತಿರುವ ಕೆಲವರನ್ನು ನೇಮಿಸಿ ಒಂದು ಕಮಿಟಿ ಮಾಡಿ ಅವರಿಂದ ಪುಸ್ಸೂರಿ, ಪೂನ, ಕೊಂಪೆ, ಸೈದಾಪೇಟೆಗಳ ವ್ಯವಸಾಯ ಸಂಘದವರು ಪ್ರಕಟಿಸುವ ವಿಚಾರಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿಸಿ, ಪುಸ್ತಕಗಳನ್ನು ಪ್ರಕಟಿಸಿ, ಗ್ರಾಮಾಂತರಗಳಲ್ಲಿ ಹಂಚಬೇಕು ಮತ್ತು ಗ್ರಾಮಾಂತರ ಪಾಠಶಾಲೆಗಳಿಗೂ ಇಟ್ಟು, ಹುಡುಗರಿಗೆ ಕಲಿಸುವಂತೆ ಅಪ್ಪಣೆ ಆಗಬೇಕು.

ದಿವಾನರವರು—ಆಗಲಿ ಯೋಚಿಸುತ್ತೇವೆ.

ಮೈಸೂರು ಮ॥ ಅನಂತರಾಜೈಯನವರೇ ಮುಂತಾದವರು—ನಮ್ಮ ಸಂಸ್ಥಾನಕ್ಕೆ ಸೇರಿದ ಅನೇಕ ಕಡೆಗಳಲ್ಲಿ ಭಾರಿ ಜಾತ್ರೆ ಉತ್ಸವಾದಿಗಳು ನಡೆಯುತ್ತವೆ. ಅಂಥಾ ಸ್ಥಳಗಳಲ್ಲಿ ಸರ್ಕಾರದವರು ಪ್ರೋತ್ಸಾಹಮಾಡಿ, ಕೈಗಾರಿಕೆ, ವ್ಯವಸಾಯೋಪಕರಣಗಳನ್ನೂ ಗೋಕಾಯಿಗಳನ್ನೂ ಪ್ರದರ್ಶನ ಮಾಡಿಸುತ್ತಾ ಬರಬೇಕು. ಇದು ಸಾಧ್ಯವಲ್ಲದಿದ್ದರೆ ವರುಷಕ್ಕೊಂದಾವರ್ತಿ ನವರಾತ್ರಿ ಉತ್ಸವ ನಡೆಯುವ ಕಾಲದಲ್ಲಿ ರಾಜಧಾನಿಯೊಳಗೆ ಪ್ರದರ್ಶನ ನಡೆಯುವಂತೆ ಏರ್ಪಾಡ ಮಾಡಿಕೊಡಬೇಕು.

ದಿವಾನರವರು—ಇಂಥಾ ಪ್ರದರ್ಶನವನ್ನು ಒಂದೆರಡುಸಲ ಮಾಡಿನೋಡಿದ್ದೇವೆ. ಎಷ್ಟೋ ಖರ್ಚು ಆಗುತ್ತೆ. ಧನವಂತರು ಮುಂದಾಳುಗಳಾಗಿ ನಿಂತು ನಡಸಿದರೆ ಸರ್ಕಾರದವರೂ ಅದಕ್ಕೆ ಸಹಾಯ ಮಾಡುತ್ತೇವೆ.

ತುರುವೆಕೆರೆ ಮ॥ ನಾರಣಪ್ಪನವರು—ಅಮೃತಮಹಲ ಕಾವಲುಗಳನ್ನು ರೈತ ಪ್ರಜೆಗಳಿಗೆ ಅರ್ಧ ಕ್ರಯಕ್ಕೆ ಕೊಡುವಂತೆ ಅಪ್ಪಣೆ ಆಗಬೇಕು.

ದಿವಾನರವರು—ಇದು ಆಗತಕ್ಕದ್ದಲ್ಲ.

ಆನೇಕಲ್ ಮ॥ ಪುಟ್ಟಣ್ಣನವರು ಮುಂತಾದವರು—ಸರ್ವೆ ನಕ್ಷೆ ನಕಲು ಬೇಕೆಂದು ಕೇಳಿದರೆ ಮೊದಲು ಕೊಡುತ್ತಿದ್ದರು. ಈಗ ಕೆಲವು ವರುಷಗಳಿಂದ ಕೊಡುತ್ತಿಲ್ಲ. ಕೊಡುವಂತೆ ಹುಕುಂ ಅಪ್ಪಣೆ ಆಗಬೇಕು.

ದಿವಾನರವರು—ಹೋದ ವರುಷವೂ ಇದು ಚರ್ಚೆಯಾಗಿ ಕೊಡುವುದಕ್ಕಾಗುವುದಿಲ್ಲವೆಂದು ತೀರ್ಮಾನಿಸಿದೆವು. ಇಷ್ಟು ಬೇಗ ಅದನ್ನು ಬದಲಾಯಿಸಲಾಗದು.

ನಂಜನಗೂಡು ಮ॥ ಗುರುರಾಯರು—ಸಿವಿಲ್ ಕೋರ್ಟಿನ ಡಿಕ್ರಿ ಸವಾಧಾನಕ್ಕೆ ವಾದಿಯು ರೆವಿನ್ಯೂ ಎಕ್ಸ್‌ಟ್ರಾಕ್ಟ್ ಬೇಕೆಂದು ತಾಲ್ಲೂಕಿಗೆ ಅರ್ಜಿ ಕೊಟ್ಟರೆ ತಾಲ್ಲೂಕಿನವರು ಅದನ್ನು ಹೋಬಳಿ ಶೇಕದಾರರಿಗೂ, ಅವರು ಶಾನುಭೋಗರಿಗೂ ಹಾಕುತ್ತಾರೆ. ಈ ಅಂತರಗಳೆಲ್ಲಾ ಕಳೆದ ರೆವಿನ್ಯೂ ಎಕ್ಸ್‌ಟ್ರಾಕ್ಟ್ ಬರುವದಕ್ಕೆ ಬಹಳ ದೀರ್ಘಕಾಲ ಹಿಡಿಯುವುದು. ಅಷ್ಟರಲ್ಲಿ ಪ್ರತಿವಾದಿಯು ಜಮೀನನ್ನು ಪರಭಾರೆ ವಿನಿಯೋಗಪಡಿಸಿ, ಮೋಸಮಾಡಬಹುದಾಗಿದೆ. ಇದಕ್ಕೆ ಅವಕಾಶವಾಗದಂತೆಯೂ ಅರ್ಜಿ ಕೊಟ್ಟ ಕೂಡಲೇ ತಾಲ್ಲೂಕಿನಲ್ಲಿರುವ ರಿಕಾರ್ಡು ತೆಗೆದು ನಕಲು ಕೊಡುವಂತೆಯೂ ಅಪ್ಪಣೆ ಆಗಬೇಕು.

ದಿವಾನರವರು—ಅರ್ಜಿ ಬರೆದು ಕೇಳಿಕೊಳ್ಳಲಿ. ಕೂಡಲೆ ನಕಲು ಕೊಡಬೇಕೆಂದು ಹುಕುಂ ಮಾಡುತ್ತೇವೆ.

ತುಂಕೂರ ತಾ॥ ಮ॥ ಸಾಸಲ ತಿಮ್ಮೇಗೌಡರು—ಗ್ರಾಮಗಳ ನಕ್ಷೆಯನ್ನು ಸರ್ವೆ ಇಲಾಖೆಯವರು ಬರೆದಿರುವಾಗ್ಗೆ ಗೋಮಾಳ ಕೆರೆಯು, ಸ್ಟೇಟ್ ಫಾರೆಸ್ಟುಗಳಿಗೆ ತಿರುಗಾಡತಕ್ಕಂಥಾ ಮಾರ್ಗಗಳನ್ನು ಕಾಣಿಸುತ್ತಿಲ್ಲ. ಇದರಿಂದ ರೈತರಿಗೂ ಗೋಕಾಯಿಗಳಿಗೂ ತುಂಬಾ ತೊಂದರೆಯಾಗುವುದು. ಅಂಥಾ ಮಾರ್ಗಗಳನ್ನು ಗುರುತು ಮಾಡಬೇಕೆಂದು ಸರ್ವೆ ಇಲಾಖೆಯವರಿಗೆ ಹುಕುಂ ಕೊಡಬೇಕು.

ದಿವಾನರವರು—ಸರ್ವೆ ಕಮಿಷನರವರಿಗೆ ಮೊದಲೇ ಮಾರ್ಗಗಳನ್ನು ರೈತರು ರಿವಿಜನ್ ಕಾಲದಲ್ಲಿ ತಿಳಿಸಿದರೆ ಅವರು ಗುರುತು ಮಾಡುತ್ತಾರೆ. ಇದಕ್ಕೆ ಬೇರೆ ಹುಕುಂ ಮಾಡಬೇಕಾದ ಆವಶ್ಯವಿಲ್ಲ.

ತರುವೆಕೆರೆ ಮ॥ ನಾರಣಪ್ಪನವರು—ಗೋಮಾಳ ಮತ್ತು ಖರಾಬ್ ಜಮೀನುಗಳಲ್ಲಿ ರೈತರು ಹೊಂಗೇ ಗಿಡಗಳನ್ನು ಹಾಕಿ ಬೆಳೆಸುವುದಕ್ಕೆ ಅವಕಾಶ ಕೊಡಬೇಕು. ಹೊಂಗೆ ಯಲೆ ಗೊಬ್ಬರಕ್ಕೆ ಉಪಯೋಗವಾಗಿರುತ್ತೆ. ಮಲೆನಾಡಿನಲ್ಲಿ ಅದನ್ನೇ ರೈತರು ಉಪಯೋಗಿಸುತ್ತಾರೆ.

ದಿವಾನರವರು—ಒಡುವಳಿಯಲ್ಲಿಲ್ಲದಂಥಾ ಮತ್ತು ಬಂಚರ್ ...ರುವಂಥ ಜಮೀನುಗಳನ್ನು ರೈತರಿಗೆ ಅವಶ್ಯಕ್ಕಾಗಿ ಕೊಡಬಹು... ...ಯ ೧೯೦೫ನೇ ಜುಲೈನಲ್ಲಿ ಹುಕುಂ ಕೊಟ್ಟಿದೇವೆ. ರೈತ ...ರ್ಜಿ ಕೊಟ್ಟು ಕೇಳಿಕೊಂಡಲ್ಲಿ ಕೊಡುತ್ತಾರೆ.

...ರು ಮೆ॥ ಶ್ರೀನಿವಾಸಯ್ಯನವರು—ಸರ್ವೆ ನಂಬರು ...ದ ಜಮೀನುಗಳಲ್ಲಿ ಮನೆಮಠ ಕಟ್ಟಿಕೊಳ್ಳುವಂತೆ ಹುಕುಂ ...ಬೇಕು

ದಿವಾನರವರು—ರೆವಿನ್ಯೂ ಕೋಡನ್ನು ನೀವು ಓದಿ ನೋಡಿ. ...ಪ್ರಕರಣವನ್ನು ಇದಕ್ಕೆ ಅವಕಾಶ ಮಾಡಿದೆ

...ಗೌರೀಬಿದನೂರು ಮೆ॥ ಚಿಕ್ಕಣ್ಣನವರೇ ಮುಂತಾದವರು—...ರಿ ಜಮೀನಿನಲ್ಲಿರುವ ಕಲ್ಲುಗಳನ್ನು ರೈತರು ಮನೆ ಮುಂ...ಕಟ್ಟಿಕೊಳ್ಳುವುದಕ್ಕೆ ಮೊದಲು ತಂದುಕೊಳ್ಳುತ್ತಿದ್ದರು ...ಅಂಥಾ ಕಲ್ಲನ್ನು ಪ್ರತಿ ವರುಷವೂ ಸರ್ಕಾರದವರು ಕಂ...ಕೊಡುತ್ತಾರೆ ಇದರಿಂದ ರೈತ ಪ್ರಜೆಗಳಿಗೆ ತುಂಬಾ ...ವಾಗಿದೆ. ಕಂಟ್ರಾಕ್ಟು ಕೊಡದಂತೆ ಅಪ್ಪಣೆ ಆಗಬೇಕು.

ದಿವಾನರವರು—ಹಾಗೆ ಹುಕುಂ ಕೊಡಲಾಗುವುದಿಲ್ಲ. ರೈತ ...ರ ಮನೆ ಮುಂತಾದ್ದು ಕಟ್ಟಿಕೊಳ್ಳುವುದಕ್ಕೆ ಬೇಕಾದಷ್ಟು ಕೊ...ದುಕೊಂಡು ರೂಲಸು ಇದ್ದೇ ಇದೆ. ಕೇಳಿಕೊಂಡರೆ ಕೊಡು...ರೆ

...ಕೃಷ್ಣರಾಜಪೇಟೆ ಮೆ॥ ವೆಂಕಟರಮಣಯ್ಯನವರು—ರೈತರು ನೇಗ...ಲು ಉಳುವಂಥಾ ಎತ್ತುಗಳನ್ನು ರುಸುಂ ಇಲ್ಲದೆ ಮೇಯ...ಬಹುದೆಂಬ ರಿಯಾಯತಿ ಆಗಬೇಕು.

ದಿವಾನರವರು ಉಳುವ ಎತ್ತು ಬೇರೆ ಎತ್ತು ಎಂಬುದನ್ನು ...ಸುವುದು ಸಾಧ್ಯವಲ್ಲ. ನೀವು ಕೇಳುವ ರಿಯಾಯತಿಯು ...ರದು

...ನರಸೀಪುರದ ಮೆ॥ ಶ್ರೀನಿವಾಸರಾಯರು—ನಾಟೆಗಳ ಬ...ಯಲ್ಲೂ ಅಕ್ಕಪಕ್ಕಗಳಲ್ಲೂ ಬೆಳೆಯುವ ಹುಲ್ಲನ್ನು ಮೊದಲು ...ಯು ತೆಗೆದುಕೊಂಡು ಹೋಗುವುದು ಆಚರಣೆಯಲ್ಲಿತ್ತು ...ದನಗಳನ್ನು ಬಿಟ್ಟು ಮೇಯಿಸುವುದಕ್ಕೆ ಅವಕಾಶ ಕೊಡುತ್ತಿ...ಲ್ಲ ಈಗ ದನ ಬಿಟ್ಟು ಮೇಯಿಸುತ್ತಾರೆ. ಇದಲ್ಲದೆ ಅಂಥಾ ...ಗಳಲ್ಲಿ ಮೇಯಿಸುವುದಕ್ಕೆ ಕಂಟ್ರಾಕ್ಟು ಕೊಡುತ್ತಾರೆ. ...ನ್ನು ತಪ್ಪಿಸುವುದು ಒಳ್ಳೇದು.

ದಿವಾನರವರು—ಆ ಥರ ಸ್ಥಳಗಳಲ್ಲಿ ದನ ಬಿಡಕೂಡದೆಂತಲೂ ...ನ್ನು ಕೊಯಿದು ತೆಗೆದುಕೊಂಡು ಹೋಗಬೇಕೆಂತಲೂ ಬಂದಿ...ಬಸ್ತು ಹುಕುಂ ಕೊಡುತ್ತೇವೆ

...ದೇವನಹಳ್ಳಿ ಮೆ॥ ಹನುಮಂತರಾಯರೇ ಮೊದಲಾದವರು—...ಸಾಲ ಬೇಕೆಂದು ಅರ್ಜಿ ಬರೆದುಕೊಂಡರೆ ಬೇಗ ಹಣ ...ದಿಲ್ಲ ಏನಾದರೂ ಒಂದು ಅಡ್ಡಿಯನ್ನು ಹಿಲ್ಪಿಸಿ, ಸಾವ...ಮಾಡುವುದರಿಂದ ರೈತರಿಗೆ ಕಾಲಕ್ಕೆ ಹಣ ಸಿಕ್ಕದೆ ಇರುವು...ದು ಇದರಿಂದ ಸರ್ಕಾರದವರು ಮಾಡಿರುವ ತಕಾವಿ ರೂಲಸು ...ಪ್ರಯೋಜನವಿಲ್ಲದಿರುವುದು.

ದಿವಾನರವರು—ಸಾಲ ಕೇಳತಕ್ಕ ರೈತನು ಸರ್ಕಾರದವರು ...ಳುವಳಿಗೂ ಅವಶ್ಯವಾದ ಸಂಗತಿಗಳನ್ನೆಲ್ಲಾ ಒಂದೇ ...ಸರಿಯಾಗಿ ಬರೆದು ಅರ್ಜಿ ಕೊಟ್ಟರೆ ಹಣ ಸ್ಯಾಂಕ್ಷನ್ ಆಗುವ...ತು ತಾವಕಾಶವಾಗಲಾರದು ಆದಾಗ್ಯೂ ಇಂಥಾ ಸಾಲವು ...ಬೇಗ ರೈತರಿಗೆ ಸಿಕ್ಕುವಂತೆ ನೋಡಿಕೊಳ್ಳಬೇಕೆಂದು ಹು...ಕೊಡುತ್ತೇವೆ

ಗುಬ್ಬಿ ಮೆ॥ ತಿಮ್ಮಶೆಟ್ರು ಮುಂತಾದವರು—ಗ್ರಾಮಾಂತರಗಳ...ರೈತರು ಸರಕುಗಳನ್ನು ತೆಗೆದುಕೊಂಡು ಹೋಗುತ್ತಾ ಬಿಕ...ಮಾಡ ಹಂಗಾಮಿ ವರ್ತಕರಿಂದ ಸುಂಕ ವಸೂಲು ಮಾಡುವುದನ್ನು ...ಬೇಕು ಪರದೇಶದಿಂದ ಬಂದು ನಮ್ಮ ವರ್ತಕರ ವ್ಯಾಪಾ...ನ್ನು ಕೆಡಿಸುವ ಲಬ್ಬೆಗಳೇ ಮೊದಲಾದವರಿಂದ ಬೇಕಾದರೆ ...ರದವರು ಕಾನೂನಿನಂತೆ ವ್ಯಾಪಾರ ಸುಂಕವನ್ನು ವಸೂ...ಬಹುದು

ದಿವಾನರವರು—ಸರ್ಕಾರದವರು ಈ ವಿಷಯದಲ್ಲಿ ಮಾಡಿರು...ರೂಲಸನ್ನು ಕೂಡಲೆ ಜಾರಿಗೆ ತರುವಂತೆ ಹುಕುಂ ಮಾಡುತ್ತೇವೆ.

...ಚೆಂಗರಾಯಪಟ್ಟಣದ ಮೆ॥ ಅಂಗಡಿ ಸಿದ್ದೇಗೌಡರು—ಕೊಂಡ...ಗಳ ಬಾಬ್ತಿನ ದರವು ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ಬಹಳ ...ಇದೆ ಇದನ್ನು ಕಮ್ಮಿಮಾಡಿ ಕೊಡಬೇಕು. ತೋಟಗಾರರ ...ತಮ್ಮ ಹೊಲ ಗದ್ದೆ ತೋಟಗಳಿಗೆ ಸರಿಯಾದ ಬೇಲಿ ಮುಂತಾ...ಹಾಕಿಕೊಳ್ಳುವಂತೆ ಕಟ್ಟುಮಾಡಿಸಬೇಕು

ದಿವಾನರವರು—ಅವರೂ ಬೇಲಿ ಹಾಕಿಕೊಳ್ಳಬೇಕು ಎಂದು ...ಕಮೀಷನರುಗಳಿಗೆ ತಿಳಿಸಿದೇವೆ. ದನಗಳನ್ನು ಜನರು ಕೋಂ...ಬಿನಂತೆ ಉಸ್ತುವಾರಿ ಇಟ್ಟು ತಮ್ಮ ಜೀತಗಾರರಿಂದ ಸರಿ...ಕಟ್ಟಿಹಾಕಿಸುತ್ತಾ ಬಂದರೆ ಯಾವ ತೊಂದರೆಯೂ ಉಂ...ವುದಿಲ್ಲ ಆದರೂ ಈ ಭಾಗದಲ್ಲಿ ಎರಡು ಮಲೆನಾಡು ಡಿಸ್ಟ್ರಿ...ಗಳ ಡೆಪ್ಟಿ ಕಮೀಷನರಿಂದಲೂ ಜವಾಬು ಬಂದಮೇಲೆ ಯೋ...ಮಾಡುತ್ತೇವೆ.

...ಕುಂಕೂರು ತಾ. ಮೆ॥ ಸಾಸಲ್ ತಿಮ್ಮೇಗೌಡರು—ಜಮೀನು ...ಪ್ರವಾಹದಿಂದ ಕೊಚ್ಚಿಕೊಂಡುಹೋಗುವ ಸಂದರ್ಭದಲ್ಲಿ ರೈತ ...ಸರ್ಕಾರದವರು ರಿಯಾಯತಿ ತೋರಿಸಬೇಕು

ದಿವಾನರವರು ಇಂಥಾ ಜಮೀನುಗಳಿಗೆ ಕಮ್ಮಿ ಹಾಕಬೇಕೆಂ...ರೆವಿನ್ಯೂ ಕೋಡಿನಲ್ಲೇ ಹೇಳಿದೆ. ಹೊಸ ರಿಯಾಯತಿ ಏನೂ ...ಕಾಣುವುದಿಲ್ಲ

...ದೊಡ್ಡಬಳ್ಳಾಪುರ ... ಚಿಕ್ಕನಾಯಕನಹಳ್ಳಿಗಳೂರು ಮೆ॥ ವಾಸುದೇವರಾಯರು—ಹೊಸ ಶೇಕ್ದಾರ ...ವಂತೆ ಪ್ರತಿ ಒಬ್ಬನೂ ಮೆಟ್ರಿಕ್ಯುಲೇಷನ್ ಪರಿಕ್ಷೆ ಕೊಟ್ಟ...ಕು ಆ ಕೆಲಸ ಸಿಕ್ಕುವುದಿಲ್ಲ. ಮುಜುಮದಾರರೇ ಮೊದಲಾ...ಕೆಲಸಗಾರರಿಗೆ ಇದು ಕಷ್ಟ. ಅಂಥವರಿಗೆ ಲೋವರ್ ಸೆಕಂ...ಪರೀಕ್ಷೆ ಆಗಿದ್ದರೆ ಸಾಕೆಂದು ರೂಲಸಿನಲ್ಲಿ ವಿನಾಯಿತಿ ಮಾಡ...ಬೇಕು.

ದಿವಾನರವರು—ಆದರಿಂದ ಜನರೆಲ್ಲಾ ವಿದ್ಯೆ ಕಲಿಯುವಂತೆ ಪ್ರೋತ್ಸಾಹವಾಗುವುದು. ಆದ್ದರಿಂದ ಈಗ ಮಾಡಿರುವ ರೂಲಸನ್ನು ಇಷ್ಟು ಬೇಗ ಬದಲಾಯಿಸುವುದಿಲ್ಲ.

ಹೆಗ್ಗಡದೇವನ ಕೋಟೆ ಮೆ॥ ಲಕ್ಷ್ಮೀನಾರಣಪ್ಪನವರು ಮೊದಲಾದವರು—ಈ ಸಂಸ್ಥಾನದಲ್ಲಿರುವ ಪಟೇಲರುಗಳ ಪೈಕಿ ಅರೆವಾಸಿ ಜನರಿಗೆ ವಿದ್ಯೆ ಬರುವುದಿಲ್ಲ. ಕಂದಾಯ ತೆಗೆದುಕೊಂಡು ಜಮಾ ಮಾಡುವುದಕ್ಕೂ ಅನೇಕರು ಅಶಕ್ತರಾಗಿದ್ದಾರೆ. ಇವರುಗಳ ಮೂಲಕ ನಾನಾ ತೊಂದರೆಗಳೂ ಅನುಮಾನಗಳೂ ಹುಟ್ಟುವವು ಇನ್ನು ಮುಂದೆ ವಿದ್ಯಾವಂತರಾಗಿರತಕ್ಕವರನ್ನೇ ಪಟೇಲಿ ಕೆಲಸಕ್ಕೆ ನೇಮಿಸಬೇಕು. ಬ್ರಾಹ್ಮಣರು ಸಾಮಾನ್ಯವಾಗಿ ವಿದ್ಯೆ ಕಲಿತವರಾದಕಾರಣ ಅವರನ್ನು ನೇಮಿಸಬಹುದು.

ದಿವಾನರವರು—ಮುಂದೆ ಬರತಕ್ಕವರು ವಿದ್ಯಾವಂತರಾಗಿಯೇ ಇರಬೇಕೆಂದು ಸರ್ಕಾರದಿಂದ ಹುಕುಂ ಕೊಡಲಾಗುತ್ತೆ. ಆದರೆ ಹಕ್ಕು ತಪ್ಪಿಸಲಾಗುವುದಿಲ್ಲ. ಬ್ರಾಹ್ಮಣರು ಹಕ್ಕುದಾರರಾಗಿದ್ದರೆ ಅವರಿಗೇ ಪಟೇಲಿ ಕೆಲಸ ಕೊಡುವೆವು

ಮೆ॥ ವೆಂಕಟಪ್ಪನವರೇ ಮುಂತಾದವರು—ಪಟೇಲ್ ಶಾನುಭೋಗರಿಗೆ ಮೊದಲಿದ್ದ ಖರಾಸನ್ನು ತಪ್ಪಿಸಿ, ಫೋಟಗಿ ಗೊತ್ತು ಮಾಡಿ, ಅವರ ಇನಾಂ ಜಮೀನುಗಳಿಗೆ ಕಂದಾಯ ದಾಖಲ್ ಮಾಡಿ ವಸೂಲು ಮಾಡುತ್ತಿದ್ದಾರೆ. ಇಂಥಾ ಜಮೀನುಗಳನ್ನು ಜೋಡಿ ಹೆಡ್ಡಿನಲ್ಲಿ ಬರೆದಿದ್ದಾರೆ. ಕಂದಾಯದ ಜಮೀನೆಂದು ಹೆಸರಿಟ್ಟರೆ ನ್ಯಾಯವಾಗುವುದು. ಹಾಗಿಲ್ಲದ ಪಕ್ಷಕ್ಕೆ ಕಂದಾಯ ಮಜಾ ಮಾಡಿ, ಜೋಡಿ ತೆಗೆದುಕೊಳ್ಳಬಹುದು. ಈಗ ನಡೆಯುವುದು ವ್ಯಾಧ್ಯಾರ್ಥ ಕೊಡುವಂಥಾದ್ದಾಗಿದೆ.

ದಿವಾನರವರು—ಬಹಳ ದೀರ್ಘವಾಗಿ ಆಲೋಚನೆ ಮಾಡಿಯೇ ಆ ರೀತಿ ಮಾಡಿದೇವೆ ಈಗ ಮತ್ತೆ ಈ ವಿಷಯವನ್ನು ಚರ್ಚಿಸಲಾರೆವು

ಹೊಳಲ್ಕೆರೆ ಮೆ॥ ಗೋಪಾಲಯ್ಯನವರು—ಪಟೇಲ್ ಶಾನುಭೋಗರನ್ನು ಗ್ರಾಮದ ಕರರು ಎಂದು ಸರ್ಕಾರೀ ಲೆಕ್ಕಗಳಲ್ಲಿ ದಾಖಲ್ಮಾಡಿದಾರೆ ತೋಟಿ, ತಳವಾರ, ನೀರಗಂಟಿ ಮೊದಲಾದವರಿಗೇ ಆ ಹೆಸರು ಸಲ್ಲುವುದು. ಪಟೇಲ್ ಶಾನುಭೋಗರಿಗೆ "ಗ್ರಾಮಾಧಿಕಾರಿಗಳು" ಎಂಬ ಹೆಸರು ಕೊಟ್ಟು ಲೆಕ್ಕಗಳಲ್ಲೂ ಅದೇ ರೀತಿ ದಾಖಲ್ಮಾಡುವಂತೆ ಹುಕುಂ ಆಗಬೇಕು.

ದಿವಾನರವರು—ಅವರವರ ಯೋಗ್ಯತಾನುಸಾರ ಗೌರತೆ ಕೊಡುತ್ತೇವೆ

ಅದೇ ಮೆಂಬರು—ಪಟೇಲ್ ಶಾನುಭೋಗರು ತಮ್ಮ ಫಿರ್ಕಾ ಗ್ರಾಮದಲ್ಲೇ ಇರಬೇಕೆಂದು ಆಜ್ಞೆಯಾಗಿದೆ. ಗ್ರಾಮಗಳಲ್ಲಿರುವುದಕ್ಕೆ ನಾನಾ ಅಸಂಗತಗಳಿರುವವು ಆದಕಾರಣ ಅವರು ತಾಲ್ಲೂಕ್ ಹೆಡ್ಕ್ವಾರ್ಟರಿನಲ್ಲಾಗಲಿ ಹೋಬಳಿಯಲ್ಲಾಗಲಿ ಇರಬಹುದೆಂದು ಅಪ್ಪಣೆ ಆಗಬೇಕು.

ದಿವಾನರವರು—ಗ್ರಾಮಾಧಿಕಾರಿ ಎಂಬ ಮರ್ಯಾದೆ ಮಾತ್ರ ಬೇಕೆನ್ನುತ್ತೀರಿ ಗ್ರಾಮದಲ್ಲಿರಬಾರದೋ? ಹಾಗೆ ಹುಕುಂ ಕೊಡಲಾರೆವು ಗ್ರಾಮದಲ್ಲೇ ಇರಬೇಕು.

ಹೆಗ್ಗಡದೇವನ ಕೋಟೆ ಮೆ॥ ಲಕ್ಷ್ಮೀನಾರಣಪ್ಪನವರು—ಐದು ವರುಷ ಸರ್ವಿಸ್ ಮಾಡಿದಂಥ ಅಥವಾ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವಂಥಾ ಶಾನುಭೋಗರಾಗಲಿ ಪಟೇಲರಾಗಲಿ ರೆವಿನ್ಯೂ, ಸಿವಿಲ್, ಕ್ರಿಮಿನಲ್, ಶೇಕ್ದಾರಿ, ಈ ಪೈಕಿ ಯಾವ ಪರೀಕ್ಷೆಗಾದರೂ ಓದಿ ತೇರ್ಗಡೆ ಹೊಂದಬಹುದೆಂದು ಅಪ್ಪಣೆ ಆಗಬೇಕು.

ದಿವಾನರವರು—ಇದಕ್ಕೆ ನಿಮ್ಮ ಉದ್ದೇಶವೇನು?

ಮೆಂಬರು—ವಿದ್ಯಾವಂತರಾಗಬೇಕೆಂಬುದೂ ಕಾನೂನ್ ತಿಳಿಯಬೇಕೆಂಬುದೂ ನಮ್ಮ ಉದ್ದೇಶ ಇದರಿಂದ ಅವರು ಸರ್ಕಾರಿ ಕೆಲಸಗಳನ್ನು ಇನ್ನೂ ಸಮರ್ಪಕವಾಗಿ ಮಾಡಬಹುದಲ್ಲವೋ? ಕಾನೂನ್ ಓದಿ ಪ್ಯಾಸ್ ಮಾಡುವಂತೆ ಅಪ್ಪಣೆ ಕೊಡುವುದರಲ್ಲಿ ಸರ್ಕಾರಕ್ಕೇನು ನಷ್ಟ?

ದಿವಾನರವರು—ಪಟೇಲ್ ಶಾನುಭೋಗರು ಪರೀಕ್ಷೆ ಮಾಡಿಬಿಟ್ಟರೆ ತಮ್ಮ ಹಕ್ಕುದಾರಿ ನೌಕರಿ ಬಿಟ್ಟು ಇತರ ಕೆಲಸಗಳಿಗೆ ಬಿದ್ದಾರೆಂಬ ಅನುಮಾನವಿದೆ ಆದರೂ ಚಿಂತೆಯಿಲ್ಲ ರೆವಿನ್ಯೂ ಪರೀಕ್ಷೆ ವಿಷಯದಲ್ಲಿ ಯೋಚನೆ ಮಾಡಿ, ಪಟೇಲ್ ಶಾನುಭೋಗರು ಓದಿ ತೇರ್ಗಡೆ ಹೊಂದುವುದಕ್ಕೆ ಅಪ್ಪಣೆ ಕೊಡುತ್ತೇವೆ ಇತರ ಪರೀಕ್ಷೆಗಳ ವಿಚಾರ ಮುಂದೆ ನೋಡೋಣ

ಶಿವಮೊಗ್ಗ ಮೆ॥ ನಾಡಿಗ ಶೀನಪ್ಪನವರು—ಗ್ರಾಮನೌಕರರಿಗೆ ದಾಖಲೆ ನೋಡಿಕೊಳ್ಳುವುದಕ್ಕೆ ರೆವಿನ್ಯೂ ರೂಲ್ಸ್, ಕೋಡು, ಮ್ಯಾನ್ಯುಯಲ್ ಎಂಬ ಪುಸ್ತಕಗಳನ್ನು ಕ್ರಯವಿಲ್ಲದೆ ಕೊಡಿಸುವಂತೆ ಅಪ್ಪಣೆ ಆಗಬೇಕು.

ದಿವಾನರವರು—ಹಾಗೆ ಕೊಡುವುದಕ್ಕಾಗುವುದಿಲ್ಲ.

ಶಿಕಾರಿಪುರದ ಮೆ॥ ದೇವಪ್ಪನವರು ಮುಂತಾದವರು—ಸರ್ವೆ ಸೆಟ್ಲು ಆಗಿರುವಂಥ ಇನಾಂ ಗ್ರಾಮಗಳಲ್ಲಿ ಪಟೇಲ್ ಶಾನುಭೋಗರಿಗೆ ಸರ್ಕಾರದಿಂದ ಫೋಟಗಿ ನಿಷ್ಕರ್ಷೆ ಆಗಿ ಅದರಂತೆ ಕೊಡುತ್ತಿದ್ದಾರೆ. ಸೆಟ್ಲು ಆಗದೆ ಇರುವ ಗ್ರಾಮಗಳ ನೌಕರರಿಗೂ ಫೋಟಗಿಯನ್ನು ಗೊತ್ತು ಮಾಡಿಕೊಡಬೇಕು.

ದಿವಾನರವರು—ಈ ವಿಷಯದಲ್ಲಿ ಕೆಲವು ರೂಲಸು ಮಾಡಿ ಅಷ್ಟರಲ್ಲೇ ಜಾರಿಗೆ ತರುತ್ತೇವೆ.

ಅನೇಕ ಮೆಂಬರುಗಳು—ತೋಟತಳವಾರ ಮುಂತಾದ ಬಲ್ಲೆರೆ ಗ್ರಾಮನೌಕರರಿಗೆ ಮಿರಾಸು ಆಯ ಮುಂತಾದ್ದನ್ನು ಗೊತ್ತುಮಾಡಿದ್ದಾರೆ. ಇದನ್ನು ರೈತರು ಕೊಡಲಾರದೆ ಬಹಳ ಕಷ್ಟಪಡುವರು. ಇದನ್ನು ತಪ್ಪಿಸಿ ಅವರಿಗೂ ರುಸುಂ ಗೊತ್ತು ಮಾಡಿ ಬಿಟ್ಟರೆ ರೈತರು ಕೊಡಬಲ್ಲರು.

ದಿವಾನರವರು—ಕಂದಾಯದಲ್ಲಿ ಸ್ವಲ್ಪ ಜಾಸ್ತಿ ಮಾಡಿದರೆ ಆ ರೀತಿಯೆಂದು ಕಾಣುವುದು. ಈ ವಿಷಯವನ್ನು ಪರ್ಯಾಲೋಚನೆ ಮಾಡಬೇಕಾಗಿದೆ.

ಗುಬ್ಬಿ ಮೆ॥ ಹುಚ್ಚೀರೇಗೌಡರು—ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕುಗಳಲ್ಲಿಟ್ಟಿರುವ ರಿಜಿಸ್ಟರುಗಳು ಅಂದರೆ ತೋಟಿ, ತಳಾರಿ, ನೀರುಗಂಟಿಗಳ ರಿಜಿಸ್ಟರು ಕ್ರಮವಾಗಿಲ್ಲ. ಬಹಳ ಹಳೇ ಹೆಸರುಗಳಿರುತ್ತವೆ. ಆ ಹೆಸರಿನವರು ಸತ್ತು ಬಹಳ ಹೋಗಿದ್ದಾರೆ. ಈಗ ಕೆಲಸ ಮಾಡತಕ್ಕವರ ಹೆಸರುಗಳೇ ದಾಖಲಾಗಿಲ್ಲ ಅದನ್ನು ಚಾಲ್ತಿಗೆ ತರಬೇಕೆಂದು ಅಪ್ಪಣೆ ಕೊಡಬೇಕು,

ದಿವಾನರವರು—ಇದು ಬಹಳ ಅವಶ್ಯ. ಗ್ರಾಮ ರಿಜಿಸ್ಟರುಗಳನ್ನೇ ಚಾಲ್ತಿಯಲ್ಲಿರುವಂತೆ ಬರೆಸಿಡಬೇಕೆಂದು ಹುಕುಂ ಕೊಡುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಲಾಹೋರ್ ಪಟ್ಟಣದಲ್ಲಿ ಕಟ್ಟಲ್ಪಡುವ ವೈದ್ಯ ವಿದ್ಯಾಶಾಲೆಯ ಮೂಲಧನಕ್ಕೆ ಕಾಶ್ಮೀರ ಮಹಾರಾಜರವರು ೫೦,೦೦೦ ರೂಪಾಯಿ ಕೊಟ್ಟಿದ್ದಾರೆ.

* * * *

ಟಿಬೆಟ್ಟಿನಿಂದ ತಾಷಿಲಾಮಾ ಎಂಬ ಬೌದ್ಧ ಗುರುವು ಹಿಂದುಸ್ಥಾನಕ್ಕೆ ಬಂದು ಇಲ್ಲಿರುವ ಸಮಸ್ತ ಬೌದ್ಧ ಪುಣ್ಯಕ್ಷೇತ್ರಗಳನ್ನೂ ನೋಡಿಕೊಂಡು ಹೋಗುವನು. ಇವನ ಸಂಗಡ ಸರತಚಂದ್ರ ದಾಸನೆಂಬ ಪ್ರಸಿದ್ಧ ಬಂಗಾಳಿ ಪಂಡಿತನು ಬರುವನು.

* * * *

ದೆಹಲಿ ಪಟ್ಟಣದಲ್ಲಿ ವರ್ತಕರು ಸೇರಿ ಒಂದು ಗೋಶಾಲೆಯನ್ನಿಟ್ಟು ಹನ್ನೊಂದು ವರುಷಗಳಿಂದ ನಡಸುತ್ತಿದ್ದಾರೆ ಈಗ ಆ ಗೋಶಾಲೆಯಲ್ಲಿ ೯೫೩ ಗೋವುಗಳಿರುವವು. ಕಳೆದ ವರುಷ ಆ ದರ ಫಂಡಿಗೆ ೨೧,೯೩೭ ರೂಪಾಯಿ ಜಮಾ ಆಯಿತೆಂತಲೂ ಆ ಪೈಕಿ ೨೫,೭೮೫ ರೂಪಾಯಿ ಖರ್ಚಾಯಿತೆಂತಲೂ ತಿಳಿದು ಬರುವುದು.

* * * *

ಪಂಜಾಬ್ ಅಧಿಪತ್ಯದ ಸಕ್ಕರೆ ವ್ಯಾಪಾರವೆಲ್ಲಾ ರಾವಲ್ಪಿಂಡಿ ನಗರದಲ್ಲೇ ನಡೆಯುವುದು. ಅವರಲ್ಲೂ ಪರದೇಶಗಳಿಂದ ರಫ್ತಾಗಿ ಬರುವ ಸಕ್ಕರೆಯ ಬಿಕರಿಯೇ ಅಲ್ಲಿ ಬಹಳ ವಿಶೇಷ ಈಚೆಗೆ ಅಲ್ಲಿನ ಸಕ್ಕರೆ ವ್ಯಾಪಾರಸ್ಥರೆಲ್ಲಾ ಸಭೆಸೇರಿ, ಇನ್ನು ಮುಂದೆ ಯಾರೂ ಪರದೇಶದಿಂದ ಸಕ್ಕರೆಯನ್ನು ತರಿಸಕೂಡದೆಂತಲೂ, ಅಂಥಾ ಸಕ್ಕರೆಯನ್ನು ತಮ್ಮಲ್ಲಿ ಯಾರಾದರೂ ಬಿಕರಿ ಮಾಡಿದ ಪಕ್ಷದಲ್ಲಿ ಬಹಿಷ್ಕಾರ ಹಾಕುತ್ತೇವೆಂತಲೂ ಶಪಥಮಾಡಿಕೊಂಡಿದ್ದಾರೆ.

* * * *

ಬಂಗಳೂರ ಪಟ್ಟಣದ ಬಳಿ ಪುರ್ಗ್ವೀ ಎಂಬ ಗ್ರಾಮದ ಹತ್ತಿರ ಮೂವರು ಶಿಕಾರಿ ಮಾಡುವುದಕ್ಕೆ ಹೋಗುತ್ತಿರುವಲ್ಲಿ ಒಂದು ಭಾರೀ ಹಾವು ಅವರ ಕಣ್ಣಿಗೆ ಕಂಡಿತು. ಮೂವರೂ ಸೇರಿ ಗುರಿಯಿಟ್ಟು ಗುಂಡು ಹೊಡೆದು ಅದನ್ನು ಕೊಂದುಹಾಕಿದರು. ಈ ಹಾವು ೨೦ ಅಡಿ ಉದ್ದವಾಗಿಯೂ ೧೮ ಅಂಗುಲ ಗಾತ್ರವಾಗಿಯೂ ಇತ್ತು ಮೂವರು ಸೇರಿ ಪ್ರಯತ್ನಪಟ್ಟರೂ ಅದನ್ನು ಹೊರುವುದಕ್ಕಾಗದೆ ಹೋದ್ದರಿಂದ ಅದರಲ್ಲಿ ಬಾಲದ ಕಡೆಯ ೮ ಅಡಿಯಷ್ಟನ್ನು ಅಲ್ಲೇ ಬಿಟ್ಟು, ತಲೇಕಡೆಯ ೧೨ ಅಡಿಯಷ್ಟನ್ನು ಎತ್ತಿಕೊಂಡು ಬಂದರು.

* * * *

ಪೋಸ್ಟ್ ಇಲಾಖೆಯವರು ಹಿಂದುಸ್ಥಾನದಲ್ಲಿ ೨೦ ಡೆಡ್ ಲೆಟರ್ ಆಫೀಸುಗಳನ್ನು ಇಟ್ಟಿದ್ದಾರೆ ಯಾವ ಕಾರಣದಿಂದಲಾದರೂ ಕಾಗದಗಳು ವಿಳಾಸದಾರರಿಗೆ ದಾಖಲೆ ಆಗದೆ ಹೋದರೆ ಅವುಗಳನ್ನು ಈ ಆಫೀಸುಗಳಿಗೆ ಕಳುಹಿಸುವರು ಅಲ್ಲಿ ಅಂಥಾ ಕಾಗದಗಳನ್ನು ಒಡೆದು, ಬರೆದವರ ಹೆಸರು ವಿಳಾಸಗಳನ್ನು ತಿಳಿದುಕೊಂಡು, ಅವರಿಗೆ ವಾಪಸು ಕಳುಹಿಸುತ್ತಾರೆ. ಒಂದುವೇಳೆ ಬರೆದವರೂ ಪತ್ತೆಯಾಗದೆ ಹೋದರೆ ಅಂಥಾ ಕಾಗದವನ್ನು ಕೆಲವು ಕಾಲದವರೆಗೆ ಇಟ್ಟಿದ್ದು ಸುಟ್ಟುಹಾಕುವರು ಕಳೆದ ವರುಷ ಈ ಆಫೀಸುಗಳಲ್ಲಿ ೧೫,೦೦,೭೫೦ ಕಾಗದಗಳು ವಿಳಾಸ ಮುಂತಾದ್ದೇನೂ ಗೊತ್ತಿಲ್ಲದೆ ಉಳುಕೊಂಡವು ಹೀಗೆ ಒಡೆದು ತೆಗೆದ ಕಾಗದ ಮುಂತಾದವುಗಳಲ್ಲಿ ೬,೮೩,೪೮೬ ರೂಪಾಯಿನ ನೋಟು, ಚೆಕ್ಕು ಮೊದಲಾದವು ಸಿಕ್ಕಿದವು

* * * *

ಹೌರಾ ಪಟ್ಟಣದ ಹತ್ತಿರ ಘಲಧಸಘಡವೆಂಬ ಸಣ್ಣ ಊರಿನಲ್ಲಿ ಮ್ಯುನಿಸಿಪಾಲಿಟಿಗೆ ಸೇರಿದ ಒಂದು ಕಟ್ಟಡವಿತ್ತು ಅದನ್ನು ಸರಿಯಾಗಿ ಕಟ್ಟಬೇಕೆಂದು ಸರ್ಕಾರದವರು ಒಬ್ಬನಿಗೆ ಕಂಟ್ರಾಕ್ಟು ಕೊಟ್ಟು ಕಳುಹಿಸಿದರು ಇವನು ಆ ಕಟ್ಟಡದ ಬಳಿಗೆ ಹೋದನು. ಅಲ್ಲಿನ ಮ್ಯುನಿಸಿಪಲ್ ಕಮೀಷನರಾಗಿಯೂ ಮ್ಯಾಜಿಸ್ಟ್ರೇಟಾಗಿಯೂ ಇರುವ ಬಾಬೂ ನಾರಾಯಣ ಚಂದ್ರ ಬಾನರ್ಜಿ ಎಂಬುವನೂ ಅವನ ಇಬ್ಬರು ಮಕ್ಕಳೂ ಮೂರು ಮಂದಿ ಸೇವಕರೂ ಸೇರಿಕೊಂಡು, ಕಂಟ್ರಾಕ್ಟರನ್ನು ಅಡ್ಡಿಮಾಡಿ ಹೆದರಿಸಿ, ಓಡಿಸಿಬಿಟ್ಟು, ಒಂದೇ ರಾತ್ರಿಯೊಳಗಾಗಿ ಆ ಕಟ್ಟಡವನ್ನು ಕಿತ್ತು ಕೆಡವಿ, ಅದೇ ಸ್ಥಳದಲ್ಲಿ ಒಂದು ಹೊಸ ಮನೆಯನ್ನು ಕಟ್ಟಿದರು. ಸರ್ಕಾರದವರು ಬಂದು ನೋಡುವಾಗ್ಗೆ ಈ ಮ್ಯುನಿಸಿಪಲ್ ಕಮೀಷನರು—ಆ ಮನೆಯೂ ಸ್ಥಳವೂ ತನ್ನವೇ ಎಂದು ಪ್ರತಿಭಟಿಸಿ ಹೇಳಿದನು. ಆಗ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇಂಜನಿಯರನ್ನು ಕಳುಹಿಸಿ ಆ ಮನೆ ಕೆಡವುವಂತೆ ಹುಕುಂ ಕೊಟ್ಟರು. ಇಂಜನಿಯರು ಅದೇ ಪ್ರಕಾರ ಬಂದು ಮನೆಯನ್ನೆಲ್ಲಾ ನೆಲಸಮ ಮಾಡಿದನು. ಆಗಲೂ ಆ ಮ್ಯುನಿಸಿಪಲ್ ಕಮೀಷನರು ಅಲ್ಲಿಗೆ ಹೋಗಿ ಇಂಜನಿಯರನ್ನೂ ಆಳುಗಳನ್ನೂ ಹೊಡೆದು ಬಡಿದು ಆ ಮನೆ ಸಾಮಾನುಗಳನ್ನೆಲ್ಲಾ ಅದೇ ಸ್ಥಳಕ್ಕೆ ತರಿಸಿ ಹಾಕಿಸಿದನು. ಈಗ ಪೋಲೀಸಿನವರು ಬಂದು ಆ ಬಾಬುವನ್ನೂ ಮೇಲ್ಕಂಡ ಐದು ಮಂದಿಯನ್ನೂ ಹಿಡಿದು ಜಾಮೀನಿನ ಮೇಲೆ ಬಿಟ್ಟು ಅವರ ಮೇಲೆ ಮೊಕದ್ದಮೆ ನಡಿಸುತ್ತಿದ್ದಾರೆ.

ಬೊಂಬಾಯಿ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಗೆ ಬರುವ ವರುಷ ೯೧ ಲಕ್ಷದ ೧೩ ಸಾವಿರ ರೂಪಾಯಿ ಉತ್ಪತ್ತಿಯಾಗುವುದೆಂತಲೂ ಖರ್ಚು ೯೦ ಲಕ್ಷದ ೩೦ ಸಾವಿರ ರೂಪಾಯಿ ಆಗುವುದೆಂತಲೂ ಬಡ್ಜೆಟ್ (ಅಂದಾಜು ಪಟ್ಟಿ) ಆಗಿದೆ

◆◆◆◆

ಪ್ರತಿ ಒಂದು ಗ್ರಾಮದಲ್ಲೂ ಪಟೇಲನ ಬಳಿ ೧೦—೧೨ ಸೀಸೆ ತುಂಬಾ ವಿನೆಗರ್ ಎಂಬ ದ್ರಾಕ್ಷಾರಸವನ್ನು ಇಡಿಸಿರಬೇಕೆಂತಲೂ ನಾಗರಹಾವು ಕಡಿದವರಿಗೆ ಕೂಡಲೇ ಈ ದ್ರಾವಕವನ್ನು ಗಾಯಕ್ಕೆ ಹಾಕಿದರೆ ವಿಷವೇರುವುದಿಲ್ಲವೆಂತಲೂ ಉತ್ತರ ಆರ್ಕಾಟಿನ ಮೆ॥ ಗ್ರೀಗ್ರಾಸ್ ಎಂಬುವರು ತಿಳಿಸುತ್ತಾರೆ ಈ ದ್ರಾವಕದ ಚಿಕಿತ್ಸೆಯಿಂದ ಕೆಲವು ಕಡೆ ಹಾವುಕಡಿದವರು ಬದುಕಿಕೊಂಡಿದ್ದಾರೆಂದು ತಿಳಿದುಬಂದಿದೆ

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಸ್ವದೇಶ ಪಕ್ಷಪಾತಿಗಳಾದ ಹಿಂದುಗಳು ದೇಶೀಯ ಕಸುಬುಗಳನ್ನು ಅಭಿವೃದ್ಧಿಗೆ ತರಬೇಕೆಂದು ಆಧಾರವಾದ ಹಣವನ್ನು ಕೂಡಿಸುತ್ತಿದ್ದಾರೆ ಈ ಹಣದಲ್ಲಿ ಏಳೂವರೆ ಲಕ್ಷ ರೂಪಾಯಿ ಕೊಟ್ಟು ಸ್ತ್ರೀ ಬಟ್ಟೆ ತಯಾರಾಗುವ ಒಂದು ಕಾರ್ಖಾನೆಯನ್ನು ಕೊಂಡುಕೊಳ್ಳಬೇಕೆಂದು ತೀರ್ಮಾನವಾಗಿದೆ ಆ ಜನಗಳು ಈ ಕಾರ್ಖಾನೆಯನ್ನು ಏಕಮತ್ಯವಾಗಿ ನಡಿಸಿಕೊಂಡುಬಂದು, ಅಭಿವೃದ್ಧಿಗೆ ತರತಕ್ಕದ್ದು ನಮ್ಮ ಕೋರಿಕೆಯಾಗಿದೆ

◆◆◆◆

ಕಾನಾ ಟ್ ಡಿಸ್ಟ್ರಿಕ್ಟಿಗೆ ಸೇರಿದ ಮಾರ್ಗಪುರವೆಂಬ ಗ್ರಾಮದಲ್ಲಿ ಕಾಂಪೋ ಜಾತಿಯ ಒಬ್ಬ ಹೆಂಗಸು ತನ್ನ ಗಂಡನನ್ನು ಬರದು [illegible] ವರುಷಗಳ ಕೆಳಗೆ ಕಳೆದುಕೊಂಡು ವೈಧವ್ಯವನ್ನು ಸಹಿಸಲಾರದೆ ಅಗ್ನಿಗುಂಡವನ್ನು ಮಾಡಿ ಅವರಲ್ಲಿ ಬಿದ್ದು ಆತ್ಮಹತ್ಯವಾಡಿಕೊಂಡಳು ಅನೇಕ ಜನರು ಎದುರಿಗಿದ್ದು ಅವಳಿಗೆ ಎಷ್ಟು ವಿಧವಾಗಿ ವಿವೇಕ ಹೇಳಿದಾಗ್ಯೂ ಅವಳು ಕೇಳದೇ ಹೋದಳು ಈ ಆತ್ಮಹತ್ಯವು ನಡೆಯುವುದನ್ನು ನೋಡಲಿಕ್ಕಾಗಿ ಪೊಲೀಸಿನವರು ಆ ಗ್ರಾಮಕ್ಕೆ ಹೋಗಿ ಸೆರೆಯಾದರೆಂದು ವರ್ತಮಾನಬಂದಿದೆ

◆◆◆◆

ಡೆಲ್ಲಿ ಪಟ್ಟಣದ ವ್ಯಾಪಾರಿ ಸಾಹುಕಾರರೆಲ್ಲಾ ಸೇರಿ ಒಂದು ಸ್ವದೇಶೀ ಸಂಘವನ್ನು ಮಾಡಿಕೊಂಡು, ೪೦,೦೦೦ ರೂಪಾಯಿ ಮೂಲಧನ ಹಾಕಿ ಸ್ವದೇಶೀ ಸರಕುಗಳ ವ್ಯಾಪಾರವನ್ನು ಪ್ರಾರಂಭಿಸಿದ್ದಾರೆ ಸಿಯಾಲ್ ಕೋಟ್ ಪಟ್ಟಣದಲ್ಲಿ ಒಂದು ಸ್ವದೇಶೀ ಕಂಪನಿ ಏರ್ಪಾಡಾಗಿದೆ ಈ ಕಂಪನಿಯ ಮೂಲಧನ ೫೦,೦೦೦ ರೂಪಾಯಿಗಳನ್ನು ಪೇರು-ಷೇರು [illegible] ಮಾಡಿ ಕೂಡಿಸಿದ್ದಾರೆ ಸಾಧಾರಣ ಜನರು ಕೂಡ ಪಾಲ್ದಾರರಾಗುವರು ಈ ಕಂಪನಿಯವರು [illegible] ಸ್ವದೇಶಿ ಸರಕುಗಳನ್ನೇ ವಿಕರಿ ಮಾಡತಕ್ಕ ಅಂಗಡಿಗಳನ್ನಿಟ್ಟಿದ್ದಾರೆ

◆◆◆◆

ದರ್ಬಾಂಗದ ಸಸ್ಥಾನದ ಲೇಟ್ ಮಹಾರಾಜರವರ ಇಬ್ಬರು ಮಹಾರಾಣಿಯರು ಈಗಿನ ಮಹಾರಾಜಾ ಲಕ್ಷ್ಮೀಶ್ವರಸಿಂಗ್ ಬಹದ್ದೂರ್ ಯವರ ಮೇಲೆ ಜೀವನಾಂಶಕ್ಕಾಗಿ ದಾವಾಮಾಡಿದ್ದರು ಡಿಸ್ಟ್ರಿಕ್ಟ್ ಜಡ್ಜಿಯವರು ಅವರಿಬ್ಬರಿಗೂ ತಲಾ ವರುಷಕ್ಕೆ ೩೦,೦೦೦ ರೂಪಾಯಿ ಪರ್ಪೆ ಕೊಡಬೇಕೆಂದು ಡಿಕ್ರಿ ಕೊಟ್ಟರು ಈಚೆಗೆ ಆ ಮಹಾರಾಣಿಯರು ಅಷ್ಟು ಸಾಲದೆಂತಲೂ ಇನ್ನೂ ಹೆಚ್ಚಾಗಿ ಕೊಡಿಸಬೇಕೆಂತಲೂ ಕಲ್ಕತ್ತಾ ಹೈಕೋರ್ಟಿನಲ್ಲಿ ಅಪೀಲ್ ಮಾಡಿದ್ದರು ಹೈಕೋರ್ಟ್ ಜಡ್ಜಿಗಳು ಅವರಿಬ್ಬರಿಗೂ ವರುಷಕ್ಕೆ ೧ ಲಕ್ಷ ೦೦೦ ರೂಪಾಯಿಯಂತೆ ಯಾಕೆ ಕೊಡಬಾರದೆಂದು ಮಹಾರಾಜರವರಿಗೆ ನೋಟಿಸ್ ಕೊಟ್ಟಿದ್ದಾರೆ

◆◆◆◆

ಬಿಜಾಪುರದಲ್ಲಿ ಕ್ಷಾಮ ಪ್ರಬಲವಾಗಿದೆ ಎಂದು ಕೇಳಿಕೆಯು, ಇಂಡಿಯಾ ಗವರ್ನಮೆಂಟಿನವರು ರಾಜಕೀಯ ಇಲಾಖೆಯಲ್ಲಿದ್ದ ಮೆ॥ ಡಾಬ್ಸ್ ಯವರನ್ನು ಕ್ಷಾಮನಿವಾರಣೆಯ ಕಮಿಷನರಾಗಿ ನೇಮಿಸಿದರು ಅಜ್ಮೀರ ಮರ್ವಾರ, ಈ ಮಧ್ಯದಲ್ಲಿ ಕ್ಷಾಮ ಸ್ವಲ್ಪ ಕಾಣುತ್ತಿರುವುದು. ಆ ಪ್ರಾಂತ್ಯದಲ್ಲಿ ೩೦,೦೦೦ ಜನರು ರಿಲೀಫ್ ಕಾಮಗಾರಿಗಳನ್ನು ಮಾಡಿ ಹೊಟ್ಟೆಹೊರಕೊಳ್ಳುತ್ತಿದ್ದಾರೆ ಇತ್ತಲಾಗಿ ಜಬಲ್ಪುರ ಎಂಬಲ್ಲಿಯೂ ೪೦,೦೦೦ ಜನರು ಹಿಂದೋರೆಯಲ್ಲಿ ೩,೦೦೦ ಜನರೂ ಸರ್ಕಾರದವರ ಪೋಷಣೆಯಲ್ಲಿ ಬಿದ್ದಿದ್ದಾರೆ ಇವಲ್ಲದೆ ಪೂನ ಅಹಮದ್ನಗರ ಬೆಳ್ಗಾಂ, ಈ ಪ್ರಾಂತ್ಯಗಳಲ್ಲಿ ಇನ್ನೂ ಕ್ಷಾಮ ಪ್ರಾರಂಭವಾಗಿಲ್ಲವಾದರೂ ಧಾರಣೆಸಾಮಗ್ರಿಗಳು ಹೆಚ್ಚಿ, ಬಡಬಗ್ಗರು ಜೀವನಕ್ಕೆ ತುಂಬಾ ಕಷ್ಟಪಡುತ್ತಿದ್ದಾರೆ.

◆◆◆◆

ಮದರಾಸ್ ಆಧಿಪತ್ಯಕ್ಕೆ ಗವರ್ನರಾಗಿ ಐದು ವರುಷಗಳಿಂದ ಆಳುತ್ತಿರುವ ಲಾರ್ಡ್ ಆಂಪ್ಟಿಲ್ ಯವರು ಮುಂದಿನ ಫೆಬ್ರವರಿ ತಿಂಗಳಲ್ಲಿ ವಿಲಾಯಿತಿಗೆ ಪ್ರಯಾಣಮಾಡುವರು ಅವರ ಕೆಲಸದ ಅವಧಿಯು ಪೂರೈಸುತ್ತಾ ಬಂದಿದೆ ಅವರ ಸ್ಥಾನಕ್ಕೆ ಸರ್ ಆರ್ಥರ್ ಲಾಲಿ ಎಂಬುವವರನ್ನು ವಿಲಾಯಿತಿ ಗವರ್ನಮೆಂಟಿನವರು ನೇಮಕಮಾಡಿರುವಂತೆ ಕಳೆದವಾರದ ತಂತೀ ವರ್ತಮಾನ ಬಂದಿರುವುದು ಸರ್ ಆರ್ಥರ್ ಲಾಲಿ ಯವರು ಈಗ ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್ವಾಲ್ ಆಧಿಪತ್ಯದಲ್ಲಿ ೧೯೦೧ ನೇ ಇಸವಿಯಿಂದ ಲೆಫ್ಟಿನೆಂಟ್ ಗವರ್ನರಾಗಿ ಅಧಿಕಾರ ನಡೆಸುತ್ತಿದ್ದಾರೆ ಇವರು ಹಿಂದೆ ಮದರಾಸ್ ಗವರ್ನರಾಗಿದ್ದ ಲಾರ್ಡ್ ವೆನ್ಲಾಕ್ ರವರ ಸಹೋದರರು ಇವರಿಗೆ ೬೪ ವರುಷಗಳಾಗಿವೆ ಈಗ ಒಬ್ಬಳು ಗಂಡು ಮಗನೂ ಇಬ್ಬರು ಹೆಣ್ಣು ಮಕ್ಕಳೂ ಇರುತ್ತಾರೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯ ಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ಬಹಿಷ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು — ಎ.

ಜಿ ಆರ್ ಶ್ರೀನಿವಾಸಾಚಾರ್ರು ಕಲ್ಯಾಣಕೆರೆ — ನೀವು ಬರೆದಿರುವ ಸಂಗತಿಯನ್ನು ಬಾರ್ಮೆಕೊಟ್ಟು ಪ್ರಕಟವಾಗುವುದಿಲ್ಲ.

ಜವಿರ್ಗಾಪಾರ್, ರೇಣಿನೂರು — ಈ ವಿಷಯವನ್ನು ನೀವು ಮುಜರಾಯಿ ಸೆಕ್ರೆಟರಿಯವರಿಗೆ ಬರೆದು ಅವರ ಜವಾಬು ತಿಳಿದುಕೊಳ್ಳಿ

ಕರೆಸ್ಪಾಂಡೆನ್ಸ್.

ಸತ್ತ ಬೀಜ ಬಿಕ್ರ

ಅಯ್ಯಾ

ಈಗ ಕೆಲವು ಸವಾಗಿ ನಮ್ಮ ಸೀಮೆಗೆ ಒಂದು ವಿಧವಾದ ಹತ್ತಿ ಬೀಜ ಬಂದಿರುವುದಾಗಿಯೂ ಇದನ್ನು ಬೆಳೆದರೆ ರೈತರಿಗೆ ಹೆಚ್ಚಾದ ಲಾಭ ಸಿಕ್ಕುವುದಾಗಿಯೂ ಜನಗಳು ಹೇಳುತ್ತಾರೆ ಅಲ್ಲದೆ ಈ ವಗ ಸರ್ಕಾರದವರು ಮೇಲ್ಕಂಡ ಬೀಜವನ್ನು ತರಿಸಿ ಸರ್ಕಾರಿ ತೋಟದಲ್ಲಿ ಆಯಾ ಗ್ರಾಮದ ರೈತ ಜನಗಳಿಗೆ ಹಂಚಿದ್ದಾರೆಂತೆ ಅದ್ದರಿಂದ ಮೇಲ್ಕಂಡ ಬೀಜದಲ್ಲಿ ಸಿಕ್ಕುತ್ತ [illegible] ಇದನ್ನು ತಮ್ಮ ಪತ್ರಿಕೆಯ ಮೂಲಕ ತಿಳಿಸಿದರೆ ಬರೆದು ತರಿಸಿಕೊಳ್ಳುತ್ತೇನೆ.

ಸ ಜ್ಞಾನಪ್ಪ
ಮಠದಹಳ್ಳಿ ಗ್ರಾಮಠಾಣ, ನಲ್ಲಿಕಟ್ಟೆ

ಗಣಿಕಟ್ಟಿ ಪೊಲೀಸ್ ವಿಚಾರ

ಅಯ್ಯಾ,

ಇದೇ ನಗರದ ಭಗವನ್ ರೋಡ್ ಪೊಲೀಸಿನಲ್ಲಿ ಇಬ್ಬರು ಕೆಲಸದ ನಡತೆಯುಳ್ಳ ಪೊಲೀಸ ಕಾನ್ಸ್ಟೆಬಲ್ ಕರ್ತವ್ಯ [illegible] ವರ ವಿಷಯವನ್ನು ಇತ್ತ [illegible] ಮಾಹಿತಿ ಸಾರ್ವಜನಿಕ ಜನ ಕ್ಷೇಮಕ್ಕೆ ಯಲ್ಲಿ ಪ್ರಕಟಿಸುವುದು [illegible] ಇವರ ಕರ್ತವ್ಯನಿಷ್ಠೆ ಕೃತಜ್ಞತೆಗೆ [illegible] ಮಾರ್ಗವಾದ್ದರಿಂದ ಈ ಪತ್ರಿಕೆ ಮೂಲಕ [illegible] ಇಲ್ಲಿನ ಪ್ರಜೆಗಳಿಗೆ ಅನುಕೂಲವಾದ ಕರ್ತವ್ಯವು [illegible] ಯೋಗ್ಯರಾದ ಸರ್ಕಾರದವರಿಗೆ ನಾವುಗಳು ಬಹಳ ಕೃತಜ್ಞರಾಗಿರುತ್ತೇವೆ

ನಿಮ್ಮ ಚಂದಾದಾರ

ಪಿತಾರ್ಜಿತ ಸ್ವತ್ತಿನ ಬಾಧ್ಯತೆ

ಅಯ್ಯಾ

ನಮ್ಮ ತಂದೆ ಮತ್ತು ಜಾತ್ಯಂತರವಾದವನಿಗೆ ಪಿತ್ರಾರ್ಜಿತ ಸ್ವತ್ತಿನ ಬಾಧ್ಯತೆ ಇಂದರೇನು? ಆಸ್ತಿಯಲ್ಲಿ ಒಬ್ಬ ಮನುಷ್ಯನಿಗೆ ಒಬ್ಬ ಮಗನೂ ಇದ್ದಾನೆ ಈ ಆಸ್ತಿಯಲ್ಲಿ ಎರಡು ವಿಧ ಉಂಟು. ಒಂದು ಪಿತ್ರಾರ್ಜಿತ, ಎರಡನೇದು ಸ್ವಯಾರ್ಜಿತ ಈ ಎರಡು ವಿಧ ಸ್ವತ್ತುಗಳಲ್ಲಿ ಮಗನಿಗೆ ಜನ್ಮಾರಭ್ಯ ಹಕ್ಕು ಉಂಟೆ, ಎರಡನೇದು ತಂದೆ ತನ್ನ ಆರ್ಜಿತದಿಂದ ಸಂಪಾದಿಸಿದ್ದು ಅದರ ವೇದದಲ್ಲಿ ಉಚಿತವಾಗಿ ಸಿಕ್ಕಿದ್ದು ಎನ್ನಿರು ಮತ್ತು ಸಂಪಾದಿಸಿದ್ದು ಹೀಗಿರುವದರಿಂದ ಎರಡನೇದಾದ ಸ್ವಪ್ರಯೋಜನದ ಪಾಲ ಅದರ ಸ್ವಯಾರ್ಜಿತ ಸೊತ್ತು ಮುಂತಾದ ಯಾವ ವಸ್ತು ವಿಷಯಗಳಲ್ಲಿ ಮಾಲೀಕನು ಅಂದರೆ ಅದನ್ನು ಸಂಪಾದಿಸಿದ ಸಂಭಾದಿಸಿದವನು ತಾನೇ ಅದನ್ನು ಅನುಭವಿಸುವುದು ತಕ್ಕದ್ದಾಗಿದೆ ಇಲ್ಲದೆ ಅವನಿಗಿಷ್ಟವಿದ್ದಂತೆ ಅದನ್ನು ಯಾರಿಗಾಗಲೀ ಕೊಡಲು ಅಧಿಕಾರ ಮತ್ತು ಸ್ವತಂತ್ರವುಳ್ಳವನಾಗಿರುತ್ತಾನೆ ಯಾಕಂದರೆ ಆ ಸ್ವತ್ತು ಅವನ ಕಷ್ಟಾರ್ಜಿತ ಫಲವಾಗಿಯೂ ಅದರಿಂದ ಆಗನಿಗೆ ಆಗಿಯೂ ಇರುವದು ವಾಸ್ತವವು ಆದ್ದರಿಂದ ಅವನು ತನ್ನ ಆಸ್ತಿಯನ್ನು ತನ್ನ ಜಾತಾಂತರವಾದ ಅಥವ ಜಾತ್ಯಂತರವಾದ ಮಗನಿಗೆ ಕೊಡಬಹುದು, ಅದನ್ನು ಬಿಡಬಹುದು ಅಂತು ಅದು ಅವನ ಸ್ವಂತ ಇಷ್ಟದ ಮೇರಿಗೆ ನಡೆಯಲಿಕ್ಕೆ ಸರ್ಕಾರದವರಾಗಲೀ ಮತ್ಯಾರಾಗಲೀ ಪ್ರವೇಶಿಸಲಿಕ್ಕೆ ಕಾರಣ ತೋರುವದಿಲ್ಲ ಯಾಕಂದರೆ ಆ ಸ್ವತ್ತು ಯಾ ಆ ಆಸ್ತಿ ಆಗಿನ್ನೇ ಆಗಿರುತ್ತದೆ ಅವನು ಅವನ್ನ ತನ್ನ ಮನಸ್ಸಿನ ಯಾವ ಅಪೇಕ್ಷೆಯ ಮೇರಿಗಾಗಲೀ ಯಾರಿಗಾಗಲೀ ಯಾವಾಗಲಾದರೂ ಯಾತಕ್ಕಾದರೂ ಕೊಡಲಿಕ್ಕೆ ಯಾವ ಅಡ್ಡಿಯೂ ಆಕ್ಷೇಪಣೆಯೂ ಇರುವದು ಅತ್ಯಂತ ಅನಾವಶ್ಯವಾಗಿರುತ್ತದೆ ಆದ್ದರಿಂದ ಒಬ್ಬನ ಕಷ್ಟಾರ್ಜಿತವನ್ನು ಮತ್ತೊಬ್ಬನು ಕೇಳಲಿಕ್ಕೆ ನ್ಯಾಯವಾದ ಯಾವ ಕಾರಣವೂ ಇರುವುದಿಲ್ಲವೆಂಬುವದು ಸ್ಪಷ್ಟವಿದ್ದರೂ ಈ ಧವ ಪ್ರಮಾಣವೂ ಆಗಿರುವದರಲ್ಲಿ ಅನುಮಾನವೇನೂ ತೋರುವದಿಲ್ಲವು

ಪಿತ್ರಾರ್ಜಿತ ಅಥವ ವಂಶಪಾರಂಪರ್ಯವಾಗಿ ಬರುವ ಸ್ವತ್ತಿನ ಹಕ್ಕುದಾರಿ ವಿಷಯ. ಈ ಹಕ್ಕು ಯಾರಿಗೆ ಸೇರತಕ್ಕದ್ದು? ಯಾತಕ್ಕೆ ಸೇರತಕ್ಕದ್ದು? ಈ ವಿಷಯಗಳನ್ನು ಪರಿಷ್ಕರಿಸಬೇಕಾಗಿದೆ ಈ ಪಿತ್ರಾರ್ಜಿತ ಸ್ವತ್ತಿನ ಹಕ್ಕುಬಾಧ್ಯತೆ ವಿಷಯದಲ್ಲಿ ಬೇರೆ ಬೇರೆ ನ್ಯಾಯಪ್ರಮಾಣಗಳುಂಟು ಹ್ಯಾಗಂದರೆ ಇಂಗ್ಲಿಷ್ ಲಾ, ಹಿಂದೂ ಲಾ, ಮಹಮ್ಮದೀ ಲಾ ಮುಂತಾಗಿ ಆಯಾ ದೇಶಕಾಲ ಮತಪದ್ಧತಿಗಳನ್ನು ಅನುಸರಿಸಿ ಪೂರ್ವಿಕರು ರಚಿಸಿ ಸ್ಥಾಪಿಸಿರುವ ಧರ್ಮ ಪ್ರಮಾಣಗಳನ್ನು ಯಾ ಆಚರಣೆಗಳನ್ನು ಯಾ ಕರ್ತವ್ಯಬಾಧ್ಯತೆಗಳನ್ನು ಆಯಾ ಸಮುದಾಯದವರೆಲ್ಲಾ ಏಕವಾಕ್ಯತೆಯಿಂದ ಬಹುಕಾಲದಿಂದ ತೃಪ್ತಿಗಡು ಅನುಸರಿಸುತ್ತಾ ಆಚರಿಸುತ್ತಾ ಏನೊಂದು ಕೊರತೆ ಇಲ್ಲದಿರಲು ಕಾಣಬರುತ್ತಿರುವ ಹೀಗಿರುವಲ್ಲಿ ಈಗ ಚರ್ಚೆಗೆ ವಿಷಯವಾದ ಜಾತ್ಯಂತರ ಯಾ ದಾತ್ಯಂತರನಿಗೆ ಪಿತ್ರಾರ್ಜಿತ ಸ್ವತ್ತು ಯಾ ಬಾಧ್ಯತೆ ವಿಷಯದಲ್ಲಿ ಸಂಕ್ಷೇಪವಾಗಿಯೂ ನ್ಯಾಯವಾಗಿಯೂ ಹರಿವಾಗಿಯೂ ಪ್ರಕಟಿಸಬೇಕಾದದ್ದೇನಂದರೆ— ಒಂದು ಪಿತ್ರಾರ್ಜಿತ ಸ್ವತ್ತು ಇರುವಾಗ ಅದನ್ನು ಅನುಭವಿಸುವದಕ್ಕೂ ಕಾಪಾಡುವದಕ್ಕೂ ವೃದ್ಧಿಪಡಿಸುವದಕ್ಕೂ ಮತಾಂತರ ಮತ್ತು ಜಾತ್ಯಂತರವಾದವನು ಅರ್ಹನೇ ಅಲ್ಲವೇ ಎಂಬ ವಿಷಯದಲ್ಲಿ ಹಿಂದ ಧರ್ಮಶಾಸ್ತ್ರಗಳು ಪ್ರಕಟಿಸಿರುವ, ಅನೇಕ ಕಾಲದಿಂದ ಆಚರಣೆಯಲ್ಲಿರುವ ನ್ಯಾಯಗಳನ್ನು ನ್ಯಾಯಸ್ಥರು ಸರ್ಕಾರದವರು ಬದಲಾಗಿ ಪಡೆಯಲಿಕ್ಕೆ ಆ ನ್ಯಾಯವನ್ನು ಬಾರಿಗೆ ತರಲು ಪ್ರಯತ್ನಿಸಿದರಲ್ಲಿ ಅದರಿಂದ ಸಂತೋಷವೂ ಹೀಗೆ ಮಾಡಿದಕ್ಕೆ ಫಲವೂ ಉಂಟಾಗುವದಿಲ್ಲ.

ಏಕೆಂದರೆ ಮತಾಂತರ ಹೊಂದಿದ್ದರಿಂದಾಗಲೀ ಜಾತ್ಯಂತರವಾದ್ದರಿಂದಾಗಲೀ ಸ್ವಾತಂತ್ರ್ಯ ಬಾಧ್ಯತೆಯನ್ನು ಕಳೆದುಕೊಳ್ಳಬೇಕು ಅನೇಕ ಮುಖ್ಯ ವಿಷಯಗಳಲ್ಲಿ ಮಗನ ಆಚಾರ ನಡೆವಳಿಗಳು ಆಯಾ ಜಾತಿಗಳಲ್ಲಿ ರೂಢಿಯಾಗಿರುವ ತಂದೆಯ ತರುವಾಯ ಸ್ವತ್ತನ್ನು ಪಡೆಯಲು ಅರ್ಹರಾಗಿರುತ್ತಾರೆ ಹೀಗಿರುವಲ್ಲಿ ಆತನ ಬೇರೆ ಆಚರಣೆ ನಡೆಯಲಿಕ್ಕೆ ಕೊಡುವ ಕಟ್ಟಳೆಗಳನ್ನು ಉಲ್ಲಂಘಿಸಿದಾಗ ಆತನು [illegible] ಪಿತ್ರಾರ್ಜಿತ ಸ್ವತ್ತನ್ನು ಅನುಭವಿಸುವದಕ್ಕೆ ಮಾತ್ರವಲ್ಲ, ಅದನ್ನು ಕಾಪಾಡುವ [illegible] ಅವನು ಸಮುದಾಯ ಸ್ಥಾನ [illegible] ಆಚರಣೆಗಳನ್ನು ಹೊಂದದೆ [illegible] ಇಲ್ಲದೆ ಇರುವದರಿಂದ [illegible] ಆ ಹಕ್ಕಿಗೆ ಅವನು ಅರ್ಹನಲ್ಲ [illegible] ಅನರ್ಹನಾಗುವನು [illegible] ವಿಚಾರಗಳಿಂದ ಅವರ ಸಂತಾನಕ್ಕೂ ಆ ಹಕ್ಕು ಸಲ್ಲತಕ್ಕದ್ದಲ್ಲ [illegible] ಪಿತ್ರಾರ್ಜಿತ ಸ್ವತ್ತಿನ ಬಾಧ್ಯತೆಯನ್ನು ಮಾತಾಂತರ ಯಾ ಜಾತ್ಯಂತರನಿಗೆ ಸಲ್ಲತಕ್ಕದ್ದಲ್ಲ ಎನ್ನುವ ನ್ಯಾಯ ಸರ್ಕಾರದವರು ಪ್ರಕಟಿಸಿರುವ ಶಾಸನಗಳಲ್ಲಿ ಅದಕ್ಕೆ ವಿರೋಧವಾದ ನ್ಯಾಯವನ್ನು ಸ್ಥಾಪಿಸಲು ಪ್ರಯತ್ನಿಸುವುದು [illegible] ಅನ್ಯಾಯವಾಗುವುದು ಆದ್ದರಿಂದ ಈ ಹಕ್ಕು ಬಾಧ್ಯತೆ ವಿಷಯ ತೀರ್ಮಾನವಾಗುವುದಕ್ಕೆ ತಕ್ಕಷ್ಟಾಗಿ ಹಿಂದೂಮತದ ಆ ವಿಷಯ ಪರ್ಯಾಲೋಚನೆ ಜನಕರವಾಗುವದು.

ನಿಮ್ಮ ಪತ್ರಿಕಾ ವಾಚಕ

ತಾಲ್ಲೂಕು ವರ್ತಮಾನಗಳು.

ತಿಪ್ಟೂರು.—ಜಗನ್ನಾಥಪುರದ ಜನರು ಪ್ಲೇಗಿನಲ್ಲಿ ರುತ್ತಾ [illegible] ಇರದ ಇಲ್ಲ ಅನೇಕ ಕಾಡಿಗೆ [illegible] ಪೂರೈಸುತ್ತಾ ಬಂದು ಅಕ್ಟೋಬರ ವಾಯಿದೆ ಸಮೀಪಿಸುತ್ತಾ [illegible] ಪಟ್ಟಣದವರ ತಾಲೂಕಿನವರ ತಾಲೂಕಿನ ಸಹಾಯ ಬಹಳ ಬಿದ್ದು ಇಬ್ಬರು ಕಳ್ಳರಿಗೆ ದಲಾ ಆರು ತಿಂಗಳ ಶಿಕ್ಷೆಯಾದ ಹಾಗೆ ತಿಳಿಯುತ್ತದೆ ಪ್ರಕಾಶ ಗ್ರಾಮದ ಸ್ಥಾನಿಕ ಪ್ಯಾಕ್ಟರಿ ಇಂಥಾ ಸಂಗತಿಯಲ್ಲಿ ಉದಾಸೀನ ಮಾಡದೆ ಜಾಗ್ರತೆ ವಿಚಾರ ಮಾಡಿದರೆ ಒಳ್ಳೆಯದು ಸ್ಮರಿಸುತ್ತೇವೆ

ಚಾಮರಾಜನಗರ.—ಪೋತುವನ್ನ ಜೋರಾಗಿ ಅನುಭವಿಸಿಕೊಂಡು ಪುಲಿಯ ಏನೂ ಪಾಲೆ ಮಾತ್ರ ಇಲ್ಲ ಜನರಲ್ಲಿ ರ ಮಾಳಿಯ ಸ್ಪಷ್ಟ ಮಾಡಲಿಕ್ಕೆ ದುರಿತವಾಗಿ ಕಾಣಿಸಲಾಗಿ [illegible] ನಮ್ಮ ಊರು ಗ್ರಾಮದ ಜನ ನಮ್ಮ ತಾಲೂಕು ಎಲ್ಲವಾಗಿದೆ —ಈ ಸಲ ಲೈನ್ ಸ್ಕೂಲ್ನಿಂದ ಕನ್ನಡದಲ್ಲಿ [illegible] ಇಂಗ್ಲಿಷಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೆಲವರು ಹೋಗಿದ್ದಾರೆ ಈ ಸ್ಕೂಲಿನ ಹುಡುಗರ ಪೈಕಿ ಇಂಗ್ಲೀಷಿನಲ್ಲಿ ಹೆಚ್ಚು ನಂಬರು ತೆಗೆದುಕೊಂಡವನಿಗೆ ಹ ರ ಬಹುಮಾನ ಬಹುಮಾನವನ್ನು ಕನ್ನಡದಲ್ಲಿ ತೆಗೆದುಕೊಂಡವನಿಗೆ [illegible] ಬಹುಮಾನವನ್ನು [illegible] ವ್ಯಾಜಟ್ಟಿಯವರು ಕೊಡುವದಾಗಿ ತಿಳಿಯಪಡಿಸಿರುತ್ತಾರೆ —ಈ ಊರಿನ ಹಿಂದ್ರನುಂಬಲಿ ನಾಟಕ ಸಂಘದವರು ನಾಟಕಗಳನ್ನಾಡಲು ಪ್ರಯತ್ನಪಟ್ಟರುತ್ತಾರೆ ಅಲಂಕಾರದಿಂದಲು ಅರೆಮನಸ್ಸಿನಿಂದಲು ಕೆಲವು ಜನರು ಹುಟ್ಟುವ ಕಾರಣದಿಂದಲು ಆ ಕೆಲಸ ಫಲಿಸುವದಿಲ್ಲವಾದ್ದರಿಂದಲು. ಕೆಲವು ಮಂದಿಯ ಭಯಮಾಡುವದಕ್ಕೆ ಹಿಂಜರಿಯುವರಿಂದಲು ಅವನ್ನೆಲ್ಲಾ ಪರಿಹರಿಸಿ ಈ ದರಿಂದ ನಿಷೇಧಿಸಿ ಜನರಿಗಾನಂದ ಪಡಿಸತಕ್ಕ ಕೆಲಸ ನಾಟಕಗಳನ್ನಾಡಿ ದ್ರವ್ಯವನ್ನು ಶೇಖರಿಸಿ ಆ ಮೂಲಕ ದಾರಿದ್ರ್ಯದ ಪೀಡೆಯನ್ನು ಹೋಗಲಾಡಿಸುವದಕ್ಕೂ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ವಿನಿಯೋಗಿಸಬೇಕೆಂಬ ಉದ್ದೇಶದಿಂದ ಯತ್ನಪಟ್ಟರುವರಾಗಿ ತಿಳಿಯಬರುತ್ತದೆ

ಬೇಲೂರು—ಇಲ್ಲಿನ ಆಸ್ಪತ್ರೆಯು ಉತ್ಪತ್ತಿಯು ಅವಶ್ಯವಾಯಿಗಿದ್ದವನ್ನು ನಮ್ಮ ಡಾಕ್ಟರ ಸಬ್ ರಿಜಿಸ್ಟ್ರಾರು ಈ ಮಾಡಿಷನವರು, ಆ ಬಾಬಿನ್ನು ರೂಡಿಸುತ್ತಲೂ ಅದರಿಂದ ಜಿಲ್ಲಾ ಆದಾಯವನ್ನುಂಟು ಮಾಡುತ್ತಲೂ ಇದ್ದರು ಹೀಗೆಯೇ ಇದರ ಮುನಿಸಿಪಾಲಿಟಿ ಸ್ಯಾನಿಟೇಷನ್ ಮುಂತಾದ ವಿಷಯದಲ್ಲಿ ಪ್ರಜಾಭ್ಯಾಸವನ್ನುಂಟುಮಾಡುತ್ತಿರುವದರಿಂದ ಇದ ನರಿಗೆ ಯಾವಾಗಲೂ ಇಲ್ಲದೆ ಇದೆ ಅವರ ಬಿದುಬಿ ಸುಮಾರು ೩ ತಿಂಗಳಿಂದ ಇಲ್ಲಿ ಇಲ್ಲಿ ಇದ್ದೇ ಇರುವರು ಮೊನ್ನೆ ಹಿಡಬಿನ ಇನ್ಸ್ಪೆಕ್ಟರು ಅದರ ಬಗ್ಗೆ ಬಂದಿದ್ದಾಗ ಈ ಊರಿನಲ್ಲಿ ಇಬ್ಬರು ಹಿಡುಬಿಗಳು [illegible] ವಿರುವರೆಂದು ವ್ಯಕ್ತವಾಯಿತು ಈ ವರುಷ ಪಾಳೆ ಇಲ್ಲದೆ [illegible]

…ರುವವರಿಂದ ಪ್ರಜೆಗಳು ಕೆರೆಯಿಂದಲೇ ನೀರನ್ನು ಸ್ನಾನ… ತೆಗೆದುಕೊತ್ತು ತರಬೇಕಾಗಿದೆ. ಮುನಿಸಿಪಾಲಿಟಿಯವರು ತೀ… …ಸುವಂತೆ ನಲ್ಲಿಯನ್ನು ಇಡಲು ಗವರ್ನಮೆಂಟಿನವರು ಸ್ವಾಂ… …ಮಾಡಿದರೆ ಈ ಊರು ಪ್ರಜೆಗಳಿಗೆ ನಿರಂತರವಾದ ನೀರಿನ ಸೌಲ… …ಕಟ್ಟು ಮಾಡಿದ ಪುಣ್ಯ ಬರುವದು.—ಈ ಸಾರಿ ಮಳೆನಾಡಿನಲ್ಲಿ …ಬೇಕಾದ ಯಾತ ಬೆಳೆಯೂ ಕಾಣುವದಿಲ್ಲ. ಆದರೆ ಕೆಲವು …ಲ್ಲಿ ಈಗ ಕಟಾವು ಕಾಲ. ಪ್ರಜೆಗಳಿಗೆ ಹೊಟ್ಟೆಗಿಲ್ಲದೆ ಕಳ್ಳತ… ಹೆಚ್ಚಾಗಿದೆ. ಪೋಲೀಸಿನವರ ಕುಮಕು ಬಹಳ ಕಡಿಮೆ.— …ಹೆಡ್ ಮಾಸ್ಟರನ್ನು ಇಸ್ಕೂಲಿಂದು ಕಡೆಗೆ ವರ್ಗಮಾಡಿ, …ಬ್ಬರನ್ನು ಕಳುಹಿಸಬೇಕೆಂದು ಕೆಲವು ಪ್ರಜೆಗಳು ಅರ್ಜಿ ಬರೆ… …ದಿರವಂತೆಯೂ ಇನ್ನು ಕೆಲವರು ಅವರನ್ನು ಇಲ್ಲೇ ಇಟ್ಟಿರ… …ದು ಅದಕ್ಕೆ ಪ್ರತಿಯಾಗಿ ಬರೆದಿರುವಂತೆಯೂ ಕೇಳುತ್ತೇನೆ. …ಪ್ತರು ಮನುಷ್ಯರಾದವರು ಒಂದೊಂದೇ ಸ್ಥಳದಲ್ಲಿ ಅಧಿಕಾರಿ… ವರ್ಗಮಾಡದೆ ಇಟ್ಟರೆ ಅವರಲ್ಲಿ ಕೆಲಸ ತೃಪ್ತಿಕರವಾಗಿ …ರವೆಂದು ನನಗೆ ತೋರುತ್ತದೆ.

…ಪ್ಪ.—…ಕ್ಕೆ ಮೈಲು ದೂರದಲ್ಲಿರುವ …ರಿಹರ …ಹಂಗಾನದಿಯ ದಡದಲ್ಲಿ ಕಟ್ಟಲ್ಪಟ್ಟ ಕೆಲವು ವರುಷಗಳ …ಹರ್ಲೋಕ್ ಖಜಾನೆಯಿಂದಲೂ ಅಮಲ್ದಾರರಿಂದಲೂ …ರ್ಲೋಕ್ ನೌಕರರಿಂದಲೂ ಗ್ರಾಮಸ್ಥರುಗಳಿಂದಲೂ ಹೋಬಿ… ಯಾವಾಗ ಇಲ್ಲಿನ ತಾಲ್ಲೂಕ್ ಕಚೇರಿಯು ಕೊಪ್ಪ… …ರ್ಗಾಯಿಸಲ್ಪಟ್ಟಿತೋ, ಆಗ್ಯೇ ಎಲ್ಲಾ ನೌಕರಮಾನೇರುಗಳೂ …ಕ್ಕೆ ಹೊರಟು ಹೋದರು. ಗ್ರಾಮವು ದಿನೇ ದಿನೇ ಕ್ಷೀಣಗುಗ… ಈಗ …ಮಾರು ೨—೩೦ ಮನೆಗಳಿದ್ದರೆ ಹೆಚ್ಚು. ಇಂಥಾ …ದ ಆಸ್ಪತ್ರೆಯನ್ನು ತಗೆಯದೆ ಇದುವರೆಗೂ ಇಟ್ಟದ್ದು …ನವರ ಘನತೆ ಮಾಡಿದ್ದು ಹೇಳಬೇಕಾಗಿತ್ತು. ಅವರ …ಕಮಿಷನರ್ ಸಾಹೇಬರವರು ಇದಕ್ಕಿಂತಲೂ ಜನರ ಪ್ರಯ… …ಕ್ಷಣವಾಗಿಯೂ ಆಸ್ಪತ್ರೆಗಳ ದರಾಗಿಯೂ ಇರು… …ಡಿದವು …ರುವಿದ್ದಲ್ಲಿ …ಗೆ ತಂದುಕೊಳ್ಳಲು ಅಪ್ಪ… …ಪ್ಪಡು ತಿಳಿದು …ಗೆ ಮಾಡುವುದು ಸಮಂಜಸವಾಗಿದೆ ಎಂದು …ಕೊಳ್ಳಬೇಕಾಗುತ್ತದೆ. …ಮನೆ …ದ ಆಸ್ಪತ್ರೆಯನ್ನು …ಕೊಳ್ಳುವದಕ್ಕಾಗಿ …ಪ್ರಯತ್ನವೇನಾದರೂ ಪಟ್ಟ… …ರಿಯೋ… …ಇವರಲ್ಲಿ …ದಿಲ್ಲವೆ …ಸರ್ಕಾರಕ್ಕೆ …ಅರ್ಜಿ …ಬರೆದುದರಲ್ಲಿ …ಮಾತ್ರ ನಿಶ್ಚಯವಾಗಿ ಕಾಣುವದು. …ಕಷ್ಟವು …ಆದ್ದರಿಂದ …ಸರಕಾರ …ಮೇಲೆ ನಾಲ್ಕಾರು ಅರ್ಜಿಗಳನ್ನು …ದಿರುವದಲ್ಲದೆ ಈ …ಆಸ್ಪತ್ರೆ …ಒಂದು ಅರ್ಜಿಯನ್ನು …ಮಾಡಿದರೆ …ಕಾರಣ …ವಿಚಾರಿಸಿ …ಯಥಾರ್ಥ ಕಾರಣವು …ಸಿವಿಲ್ ಮತ್ತು ಕ್ರಿಮಿನಲ್ ವೆ ಕಷ್ಟಗಳ… …ಇರುವಾಗಲೂ ಇಂಥಾ …ಗಳ …ಸರ್ಕಾರ …ಗಳು …ವ್ಯಸನಪಟ್ಟು ಇವರುಗಳ …ಮೇಲ್ಪಟ್ಟ ಅಧಿಕಾರಿಗಳ …ಅಸಂತೋಷವನ್ನು …ಹೇಳಲು …ಬರೆಯುತ್ತಾ …ಮೇಲ್ಪಟ್ಟ ಅಧಿಕಾರಿಗಳು …ಇಂಥಾ …ಸರ್ಕಾರ …ಅಮಲ್ದಾರರ ಮೇಲೆ …ದ ಅರ್ಜಿಗಳ ಫಲಿತಾಂಶದಿಂದಲೇ …ಬರುತ್ತೆ.

ಹನ್ನಪಟ್ಟಣ.—ಈ …ಷ ಮಳೆಯು ಬೆಳೆಗೆ ಸಾಕಾದಷ್ಟು ಬಾ… …ದದ್ದರಿಂದ ಈ ತಾಲ್ಲೂಕಿನ ಸಕಲ ಭಾಗಗಳಲ್ಲಿ ಫಸಲು …ಫಲಕ್ಕೆ ಬಾರದೆ, ಅರ್ಧ ಬೆಳೆ ಮಾತ್ರವೆ ಆಗಿವೆ. ಕೆರೆಗಳ… …ಲ್ಲದೆ ಬತ್ತಿದ ಸ್ವರು ಒಣಗುತ್ತಾ ಬಂದಿವೆ. ಕೆಲವು ಕಡೆ …ಪೈರನ್ನೇ …ಬಿಟ್ಟರು. ಈ ಊರಿನಲ್ಲಿ ಸುತ್ತ… …ಗ್ರಾಮಾಂತರಗಳಲ್ಲೂ ಅನೇಕ ರೈತ ಜನರು ಜೀವನಕ್ಕೆ …ತೊಂದರೆಪಡುತ್ತಾ ಇರುವರು. …ರ ೧—೧೭ರ ವರಿಗೂ ಜವಾವಾಗಿವೆ. …ಗಿ …ರ ವರಿಗೆ …ಇಂಥಾ ಕಷ್ಟ ಕಾಲದಲ್ಲಿಯೂ …ಬಿಡಲೊಲ್ಲರು. …ತರದ ಸೇರು …ಉಪಯೋಗಿಸುವರು …ಗೆ ೧೫ ಸೇರು ರಾಗಿ ತಂದರೆ …ಲ್ಲಿ ೧೩ ಸೇರೇ ಇರುತ್ತೆ. ಎಂತ ಬಡ ಜನರು ಬೋಟ್ಟೆ … …ತೆ ಮುಖ್ಯವಾಗಿ ಈ ಊರಿನ ಕೆರೆಯಲ್ಲಿ ನೀರು ಇಲ್ಲದಿರುವ …ನೆಯೇ ಪ್ರಜೆಗಳ ಮನಸ್ಸನ್ನು ಕೊರೆಯುತ್ತಾ ಇದೆ. ಈಗ …ಲ್ಲಿರುವ ನೀರು ಇನ್ನು ೧೫ ದಿನಗಳಿಗೆ ಸಾಕಾದೀತೋ… …ಅನಂತರ ಏನು ಮಾರ್ಗ ಎಂಬ ಪ್ರಸ್ತಾಪವೇ ಎಲ್ಲೆಲ್ಲೂ …ದೆ. ಈಗ ಕುಡಿಯುತ್ತಿರುವ ನೀರಾದರೋ ರಾಡಿ, ಪಾಚಿ; …ರೋಗ್ಯಕರವಾಗಿದೆ. ಊರಿಗೆಲ್ಲಾ ಆ ನೀರೇ ಮುಖ್ಯಾಧಾರ. …ಗಳೂ, ಪ್ರಜಾಪಾಲಕರೂ ಆದ ಸರ್ಕಾರದವರು ನಮ್ಮ ಊ… …ದೌರ್ಭಾಗ್ಯ ಸ್ಥಿತಿಯನ್ನು ನಿವಾರಣೆ ಮಾಡಲು ಈಗಿನಿಂದಲೇ …ಸಿದರೆ ಉಪಕಾರವಾಗಿದೆ. ಅಲ್ಲದೆ ಇಲ್ಲಿಗೆ ಸಮೀಪದ ಗ್ರಾಮ… …ಮಂಗಳವಾರಪೇಟೆಯು ಮತ್ತು ಮಳೂರು ಜನರು ಈಗಲೇ …ಸ್ಸರ ಪಡುತ್ತಿರುವ ಅವಸ್ಥೆಯನ್ನು ಹೇಳಲಸಾಧ್ಯ.—ಈ …ಲ್ಲಿ ಸಂತೆಗೆ ಹೋಗಿ ಬರುವ ಬಂಡಿಗಳ ಗಲಿಬಿಲಿ ಬಹಳ. ಬನ… …ಬಂಡಿಗಳನ್ನು ಎಷ್ಟು ಕಷ್ಟವಾಗಿದ್ದರೂ ಸರಿಯೇ ನಾನು …ನಾನು ಮುಂದು ಎಂದು ಷರತ್ತಿನ ಮೇಲೆ ಓಡಿಸಿಕೊಂಡು …ದರಿಂದ ಆಗಾಗ್ಯೆ ಕೆಲವು ಅನರ್ಥಗಳೂ, ಪ್ರಾಣಹಾನಿ… …ವೆ ಮುಂದೆಯೂ ಹಾಗೆ ನಡೆಯುವದೇ ಬದ್ಧವು. ಒಬ್ಬ… …ನ ಮೇಲೆ ಬಂಡಿಯು ಹೋಗಿ ಮೃತನಾದನು. ಒಬ್ಬನ ಕಾಲ್ಬೆರಳು ಕತ್ತರಿಸಿಹೋಯಿತಂತೆ. ಆದದರಿಂದ ದಯಾಳು ಪ್ರಭುಗಳಾದ ಸರ್ಕಾರದವರು, ಈ ಊರಿನ ಪ್ರತಿಯೊಬ್ಬ ಗಾಡಿಯವರೂ ರಾತ್ರಿ ವೇಳೆಯಲ್ಲಿ ಒಂದೊಂದು ಲಾಂದ್ರ ಗಾಡಿಗೆ ಕಟ್ಟುವಂತೆ ಅಪ್ಪಣೆ ಕೊಡುವದೂ ಮತ್ತು ಈ ಊರಿನಿಂದ ಮಂಗಳವಾರಪೇಟೆ ಮಳೂರು ವರಿಗೂ ಒಬ್ಬನೋ ಇಬ್ಬರೋ ಪೋಲೀಸಿನವರನ್ನು ಅರ್ಧರಾತ್ರಿಯು ಮಟ್ಟ ಗಾವರೂ ಬೀಟಿನ ಮೇಲೆ ಬಿಡುವದು ಯುಕ್ತವಾದ ಏರ್ಪಾಡುಗಳಾಗಿವೆ ಎಂದು ತೋರುತ್ತೆ. ಮಂಗಳವಾರಪೇಟೆಯು ಚನ್ನಪಟ್ಟದ ಕಸಬೆಗೆ ಸೇರಿದ್ದೇ. ಹಾಗಾದರೆ ಕಸಬಾ ಪೋಲೀಸಿನಿಂದ ಒಬ್ಬಿಬ್ಬರನ್ನು ಮಂಗಳವಾರಪೇಟೆಯವರಿಗೂ ಬಿಡುವದಕ್ಕೇನು ಅಡ್ಡಿ?—ಕಳೆದ ತಿಂಗಳು ತಾ ೨೯ ನೇ ಶನಿವಾರದ ಬೆಳಿಗ್ಗೆ ಇಲ್ಲಿನ ಮಧ್ಯ ಪೇಟೆ ತರ್ಕಾರಿ ಚೌಕದಲ್ಲಿ ವಿಷಾದಕರವಾದ ಸಂಗತಿ ನಡೆಯಿತು. ಏನೆಂದರೆ— ಯಾಕೂಬ್‌ಸಾಬ್ ಎಂಬ ಮಹಮ್ಮದಿಯನು ತರ್ಕಾರಿ ಕೊಳ್ಳುತ್ತಾ ಕೂತಿರಲು ಹಿಂದಿನಿಂದ ಅಕಸ್ಮಾತ್ತಾಗಿ ೧೫—೨೦ ಜನರು ಬಂದು ಅವನನ್ನು ಸುತ್ತಿಕೊಂಡು ಮುಷ್ಟಿಗಳಿಂದಲೂ ಕಬ್ಬಿನ ಸೋಗೆಗಳಿಂದಲೂ ಗುದ್ದಿ ಹೊಡೆದು ನೆಲದ ಮೇಲೆ ಉರುಳಿಸಿ ಗಾಯಗಳಿಲ್ಲದ ಹಾಗೆ ಅವನ ಮೈಯನ್ನೆಲ್ಲಾ ಜಜ್ಜುಗುಜ್ಜುಮಾಡಿ ಪರಾರಿಯಾದರು. ಇಷ್ಟು ಗಲಾಟೆಯಾದರೂ ಪೋಲೀಸಿನವರೊಬ್ಬರೂ ಇಲ್ಲ. ಈ ಬಡಿದಾಟದ ಕಾರ್ಯ ನಡೆದ ವಾರದ ಬೆಳಿಗ್ಗೆ ಪೋಲೀಸ್ ಸಿಪಾಯಿಯವರು ವಿಚಾರಣೆಗಾಗಿ ದಯಮಾಡಿಸಿದ್ದರು. ಈ ಮೊಕದ್ದಮೆಗೆ ಊರಿನಲ್ಲಿ ಪೂಜ್ಯರಾದ ಇಬ್ಬರು ಮಹಮ್ಮದಿಯ ದೊಡ್ಡ ಮನುಷ್ಯರೇ ಕಾರಣವೆಂತಲೂ, ಇವರಿಗೂ ಪೆಟ್ಟು ತಿಂದು ಇನಾಮು ಹೊಂದುತ್ತಿರುವ ಯಾಕೂಬ್ ಎಂಬಾತನಿಗೂ ರೇಷ್ಮೆ ವ್ಯಾಪಾರ ವಿಷಯದಲ್ಲಿ ಏನೋ ಮನಸ್ತಾಪ ಬಂದುದರಿಂದ ಅವರೇ ತಮ್ಮ ಕಡೆಯವರಿಂದ ಈ ಕೃತ್ಯ ಮಾಡಿಸಿದರೆಂತಲೂ ಮಾತನಾಡಿಕೊಳ್ಳುತ್ತಾರೆ. ತಾ ೨೫ ನೇ ಬೆಳಿಗ್ಗೆ ಇಲ್ಲಿನ ನಮ್ಮ ಅಮಲ್ದಾರರು ಮಹಮ್ಮದೀಯರಲ್ಲಿ ಘನವಂತರಾದ ಸಾಹುಕಾರ್ ಬುಡ್ಡೆಮಿಯಾ ಸಾಹೇಬರೇ ಮೊದಲಾದ ಕೆಲವು ದೊಡ್ಡ ಮನುಷ್ಯರನ್ನು ಆಫೀಸಿಗೆ ಬರಮಾಡಿಕೊಂಡು, ಅವರುಗಳಿಗೆ ಅನೇಕ ಬಗೆಯಿಂದ ಬುದ್ಧಿ ಹೇಳಿ, ಬಹು ಮಾನತ್ತಿನಿಂದ ಉಭಯತ್ರರಿಗೂ ರಾಜಿ ಖಬೂಲ್ ಮಾಡಿಸಿ, ಸಮಾಧಾನಪಡಿಸಿದರು. ಈ ವಿಷಯದಲ್ಲಿ ನಮ್ಮ ಅಮಲ್ದಾರರ ದಯಾದ್ರ್ರ ಮನಸ್ಸನ್ನೂ ಅವರ ಸಾಹಸವನ್ನೂ ಸ್ತುತಿಸತಕ್ಕದ್ದಾಗಿದೆ. ಆದರೆ ಇಂಥಾ ಕ್ರೂರ ಸಡವೆಗಳಿಗೆ ತಕ್ಕ ಪ್ರತಿಫಲವಿಲ್ಲದೆ ಹೋದರೆ ಅಂಥವರು ಮತ್ತೂ ಮತ್ತೂ ದುಷ್ಕಾರ್ಯಗಳನ್ನು ನಡಿಸಲು ನಿರ್ಭೀತರಾಗುವದಿಲ್ಲವೇ? ಮಾನಸ್ಥರ ವಿಷಯ ಹೀಗೆ, ಬಡವರ ವಿಷಯ ನಾವು ಹೇಳುವದು ರೀತಿಯೇನು ಎಂಬ ಪ್ರಸ್ತಾಪಗಳಿವೆ.—ಇಲ್ಲಿನ ಚರ್ಮದ ಮಂಡಿಗಳ ದುರ್ಗಂಧವನ್ನು ಸಹಿಸಿ ಸಾಕಾಯ್ತು. ಯಾವ ಪ್ರಯೋಜನಕ್ಕಾಗಿ ಈ ಮಂಡಿಗಳನ್ನು ಊರೊಳಗೆ ಏರ್ಪಡಿಸಿದ್ದಾರೋ! ಅಮಲ್ದಾರ್ ಮಿ॥ ರಂಗೈಯಂಗಾರ್ರ ಕಾಲದಲ್ಲಿ ಊರ ಹೊರಗೆ ಇರಬೇಕೆಂಬ ಆಜ್ಞೆ ಕೊಟ್ಟಿತ್ತು. ಹಾಗೆಯೇ ಪಟ್ಟದ ಹೊರಗಿದ್ದ ಈ ಮಂಡಿಗಳು ಪುನಃ ಊರೊಳಕ್ಕೆ ಬರಲು ಸರ್ಕಾರದವರು ಅವಕಾಶ ಕೊಟ್ಟಿರುವ ಕಾರಣವೇನೋ! …ದವರ ಆದಾಯಕ್ಕೆ …ತ ಸಮೀಪವಾಸಿಗಳಾದ ಪ್ರಜೆಗಳಿಗೆ ತುಂಬಾ ಅನಾರೋಗ್ಯವೂ …ಸಿಕೆಯೂ ಆಗಿವೆ. ಊರಿನ ದಕ್ಷಿಣ …ದಲ್ಲಿ …ನಳ್ಳಿ ಪಕ್ಕದಲ್ಲಿಯೇ "ಇಕ್ಕಳ್ಳಿ" ಎಂಬುದುಂಟು. ಊರಿನ ಬಚ್ಚಲ ನೀರೆಲ್ಲಾ ಅದಕ್ಕೆ ಸೇರುತ್ತೆ. ಕಟುಕ… …ನಗಳನ್ನು …ದ ಅದರ ಕಲ್ಮಲವನ್ನೆಲ್ಲಾ ಅದರಲ್ಲಿ …ಯುತ್ತಾ ಬರುವದರಿಂದ ಅದರ ನೀರು ನಾತ ಕಂಪು …ತ್ತಾ ಇದೆ. ಈ ನೀರು ಬೇರೆ ಕಡೆಗೆ …ದು ಹೋಗಲು ಮಾರ್ಗವಿಲ್ಲ. …ಗದ್ದೆಗಳಿಗೆ ಉಪಯೋಗಿಸಿಕೊಳ್ಳಲೂ ಯತ್ನವಿಲ್ಲ. ಅದು ನಿಷ್ಪ್ರಯೋಜನವಾಗಿದ್ದು ದುರ್ಗಂಧದಿಂದ ಪ್ರಜೆಗಳಿಗೆ ಅನಾರೋಗ್ಯವನ್ನುಂಟುಮಾಡುತ್ತಾ ಇದೆ. ದಯವಿಟ್ಟು ಸರ್ಕಾರದವರು ಈ ವಿಚಾರವನ್ನು ಗಮನಿಸಿ, ಈ ಹಳ್ಳವನ್ನು ಮುಚ್ಚಿಸಿ ಸದರಿ ನೀರು ಬೈಪಳ್ಳಿಯ ಕೆರೆಗೆ ಹೋಗುವಂತ ಮಾಡಿದರೆ ಶ್ರೇಯಸ್ಕರವೆಂದು ತೋರುತ್ತೆ.

ವಿದೇಶ ವರ್ತಮಾನಗಳು.

ಪೂರ್ವಆಫ್ರಿಕಾದಲ್ಲಿ ಕಳೆದ ವಾರ ಎರಡು ಸಿಂಹಗಳು ರೈಲ್‌ಗಾಡಿಗೆ ಸಿಕ್ಕಿ ಸತ್ತು ಹೋದವು. ಅವೆರಡೂ ಆಹಾರವನ್ನು ತಿಂದು ರೈಲ್ ಕಂಬಿಗಳ ಮೇಲೆ ಆಷ್ಟಲಾಗಿ ಮಲಗಿ ನಿದ್ದೆ ಮಾಡುತ್ತಿದ್ದವೆಂದು ತಿಳಿದು ಬಂದಿದೆ.

✦✦✦✦

ಕೋನಿಗ್ಸ್‌ಬರ್ಗ್ ನಗರದಲ್ಲಿ ಕ್ಯಾಂಟ್ ಎಂಬ ಪಂಡಿತನ ಹೆಸರನ್ನು ಶಾಶ್ವತಪಡಿಸುವುದಕ್ಕೆ ಒಂದು ಫಂಡು ಏರ್ಪಾಟಾಗಿದೆ. ಈ ಫಂಡಿಗೆ ವಿಲಾಯಿತಿಯ ಮಹಾರಾಜಾಚಕ್ರವರ್ತಿಯವರೂ ಮಹಾರಾಜ್ಞೀರವರೂ ೨,೫೦೦ ರೂಪಾಯಿ ಚಂದಾ ಕಳುಹಿಸಿದಾರೆ.

✦✦✦✦

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟಿನಲ್ಲಿ ಬಹು ಜನರು ಬೌದ್ಧಮತವನ್ನವಲಂಬಿಸಿ, ಒಂದು ಬುದ್ಧದೇವಸ್ಥಾನವನ್ನು ಕಟ್ಟುವುದಕ್ಕೆ ೬ ಲಕ್ಷ ರೂಪಾಯಿ ಮುಟ್ಟಿಸಿರುತ್ತಾರೆ. ಹಿಂದೂಸ್ಥಾನದಿಂದ ನಾಲ್ಕಾರು ಮಂದಿ ಬೌದ್ಧ ಸನ್ಯಾಸಿಗಳು ಅಲ್ಲಿ ಹೋಗಿ ಉಪದೇಶ ಮಾಡುತ್ತಿದ್ದಾರೆ.

✦✦✦✦

ಪೂರ್ವ ಆಫ್ರಿಕಾದಲ್ಲಿ ಜರ್ಮನಿ ಸರ್ಕಾರದ ಸೈನಿಕರ ಮೇಲೆ ಕೈಮಾಡಿ, ಲೂಟಿ ಮೊದಲಾದ ಅನ್ಯಾಯಗಳನ್ನು ನಡಿಸಿದ ಹಾಟೆಂಟಾಟ್ ಜನರ ಮುಖಂಡನೂ ಅವನ ಕೈಕೆಳಗಿನ ಹನ್ನೆರಡು ಮಂದಿ ಮುಖ್ಯಸ್ಥರೂ ಒಟ್ಟಾಗಿ ಹೋಗಿ ಜರ್ಮನಿ ಸರ್ಕಾರದವರಿಗೆ ಶರಣಾಗತರಾದರೆಂದು ತಂತೀ ವರ್ತಮಾನ ಬಂದಿದೆ.

ಯೂರೋಪ್ ಖಂಡಕ್ಕೆ ಸೇರಿದ ಕೆಲವು ರಾಜ್ಯಗಳವರು ತಮ್ಮ ರಾಜ್ಯಗಳಲ್ಲಿ ಪ್ರಜೆಗಳು ಹಣಗಳನ್ನು ಸುಡಬಹುದೆಂದೂ ಇದರಿಂದ ಬಹಳ ಉಪಯೋಗ ಉಂಟೆಂದೂ ಕಾನೂನು ಮಾಡಿ ಜಾರಿಯಲ್ಲಿ ತಂದಿದಾರೆ. ಅಂಥಾ ರಾಜ್ಯಗಳ್ಯಾವವೆಂದರೆ—ಸ್ಯಾಕ್ಸನಿ, ಸ್ಯಾಕ್ಸ್‌ಕೋಬರ್ಗ್, ಹಾಂಬರ್ಗ್, ಬೇಡ್ನ, ಹೆಸ್ಸಿ, ಸ್ಯಾಕ್ಸ್‌ವೀಮರ್, ವೂರ್ಟಂಬರ್ಗ್, ಬ್ರೆಮೆನ್, ಈ ಮೊದಲಾದವು.

✦✦✦✦

ರಷ್ಯಾ ರಾಜ್ಯದಲ್ಲಿರುವ ಯೆಹೂದ್ಯ ಪ್ರಜೆಗಳ ಸಹಾಯಾರ್ಥವಾಗಿ ಇತರ ರಾಜ್ಯಗಳಲ್ಲಿರುವ ಶ್ರೀಮಂತರಾದ ಯೆಹೂದ್ಯರೇ ಮೊದಲಾದ ಐಶ್ವರ್ಯವಂತರು ಒಂದು ಫಂಡು ಏರ್ಪಾಡು ಮಾಡಿದ್ದಾರೆ. ಈ ಫಂಡಿಗೆ ಇದುವರೆಗೆ ೧೫ ಲಕ್ಷ ದ್ರವ್ಯ ವಸೂಲಾಗಿರುವುದು. ರಷ್ಯಾದಲ್ಲಿ ಜನರು ಯೆಹೂದ್ಯ ಪ್ರಜೆಗಳನ್ನು ಬಹಳ ಕಷ್ಟ ನಷ್ಟ ದುಃಖಗಳಿಗೆ ಗುರಿಪಡಿಸುತ್ತಿರುವುದೇ ಇದಕ್ಕೆ ಕಾರಣವೆಂದು ತಿಳಿಯುವುದು.

✦✦✦✦

ವಿಲಾಯಿತಿ ರಾಜ್ಯದ ಧೊರೆಯವರ ಸಹೋದರರಾದ ಡ್ಯೂಕ್ ಆಫ್ ಕನಾಟರವರು ಈ ತಿಂಗಳ ಕಡೇ ವಾರದಲ್ಲಿ ದಕ್ಷಿಣ ಆಫ್ರಿಕಕ್ಕೆ ಪ್ರಯಾಣ ಮಾಡಿ, ಅಲ್ಲಿನ ಸೈನ್ಯವನ್ನೂ ದೇಶವನ್ನೂ ನೋಡಿಕೊಂಡು ಬರುವವರಾಗಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲಿಷ್ ಸೈನ್ಯವನ್ನು ವಿಶೇಷವಾಗಿಟ್ಟು ಹಿಂದುಸ್ಥಾನಕ್ಕೆ ಅವಶ್ಯವಾದಾಗ ಕಳುಹಿಸುವುದಕ್ಕೆ ಅನುಕೂಲವಾಗುವಂತೆ ಏರ್ಪಾಡು ಮಾಡುವರೆಂದು ತಿಳಿದು ಬಂದಿದೆ.

✦✦✦✦

ರಷ್ಯಾ ಜಪಾನ್ ಯುದ್ಧದಲ್ಲಿ ಖೈದಿಗಳಾಗಿ ಹಿಡಿಯಲ್ಪಟ್ಟು ಜಪಾನಿನವರ ಸ್ವಾಧೀನದಲ್ಲಿದ್ದ ಸಾವಿರಾರು ರಷ್ಯಾ ಸೈನಿಕರು ಬಿಡುಗಡೆ ಹೊಂದಿ, ಹಿಂತಿರುಗಿ ರಷ್ಯಾಕ್ಕೆ ಬರುತ್ತಿದ್ದಾರೆ. ಇವರೆಲ್ಲಾ ವ್ಲಾಡಿವೋಸ್ಟಾಕಿನಲ್ಲಿ ಅಧಿಕಾರಿಗಳ ಮೇಲೆ ದಂಗೆ ಎದ್ದು ಅವರಲ್ಲಿ ಕೆಲವರನ್ನು ಕೊಂದು ಗಲಭೆ ಮಾಡಿದರು. ಕಾಸಾಕ್ ಎಂಬ ರಷ್ಯಾ ಸೈನಿಕರು ಮಹಾ ಕ್ರೂರವಾಗಿ ಅವರ ಮೇಲೆ ಬಿದ್ದು ಅವರ ಪುಂಡಾಟಗಳನ್ನೆಲ್ಲಾ ನಿಲ್ಲಿಸಿ, ಪ್ರಜಾ ನೆಮ್ಮದಿಯನ್ನು ಕಾಪಾಡಿದರು. ಆದಾಗ್ಯೂ ಆ ಸೈನಿಕರ ಹಾವಳಿ ಆಗಾಗ್ಗೆ ತಪ್ಪಿದಂತೆ ಕಾಣುವುದಿಲ್ಲ.

✦✦✦✦

ಅಮೇರಿಕಕ್ಕೆ ಸೇರಿದ ಆರಿಜೋನಾ ಡಿಸ್ಟ್ರಿಕ್ಟಿನಲ್ಲಿ ಕೆಲವು ದಿನಗಳಿಗೆ ಮುಂಚೆ ಒಂದು ನಕ್ಷತ್ರವು ಬಿದ್ದು ಭೂಮಿಯೊಳಗೆ ಹೋಗಿ ಸೇರಿಕೊಂಡಿತು. ಈ ನಕ್ಷತ್ರದಲ್ಲಿ ೩೦೦ ಲಕ್ಷ ದ್ರವ್ಯ ಉತ್ಪತ್ತಿಯಾಗುವಷ್ಟು ಬೆಳ್ಳಿ ಬಂಗಾರವೇ ಮೊದಲಾದ ಲೋಹಗಳು ಸಿಕ್ಕುತ್ತವೆಂದೂ ಅದನ್ನು ತೆಗೆಯುವುದಕ್ಕೆ ಭೂಮಿಯಲ್ಲಿ ಮುಕ್ಕಾಲು ಮೈಲಿ ಉದ್ದವಾಗಿಯೂ ೬೦೦ ಅಡಿ ಅಗಲವಾಗಿಯೂ ಗುಣಿ ತೋಡಬೇಕೆಂದೂ ಕೆಲವರು ಗೊತ್ತುಮಾಡಿದಾರೆ. ಇದನ್ನು ತೆಗೆಯುವುದಕ್ಕೆ ಅವರು ಒಂದು ಕಂಪನಿ ಮಾಡಿ, ಷೇರುಗಳ ಮೂಲಕ ಹಣ ಕೂಡಿಸುತ್ತಿರುವರು.

✦✦✦✦

ಲಂಡನ್ ಪಟ್ಟಣದಲ್ಲಿ ಅನಾಥಶಾಲೆಯನ್ನು ಸ್ಥಾಪಿಸಿ, ಅದನ್ನು ನಡಿಸುವುದರಲ್ಲೇ ತನ್ನ ಜೀವಮಾನವನ್ನೆಲ್ಲಾ ಕಳೆದು ಕಾಲವಾದ ಡಾಕ್ಟರ್ ಬರ್ನಾರ್ಡೋ ಎಂಬ ಪುಣ್ಯಾತ್ಮನ ಹೆಸರನ್ನು ಶಾಶ್ವತ ಪಡಿಸುವುದಕ್ಕೆ ಲಂಡನ್ ಪಟ್ಟಣದ ದೊಡ್ಡ ಮನುಷ್ಯರೆಲ್ಲಾ ದ್ರವ್ಯಸಹಾಯ ಮಾಡುತ್ತಿದಾರೆ. ಈ ಫಂಡಿಗೆ ಆಗಲೇ ಲಕ್ಷಾಂತರ ದ್ರವ್ಯ ಕೂಡಿರುವುದು. ಡಾಕ್ಟರ್ ಬರ್ನಾರ್ಡೋ ಎಂಬಾತನ ಅನಾಥಶಾಲೆಯಲ್ಲಿ ೬೦,೦೦೦ ಮಂದಿ ಗಂಡು ಹೆಣ್ಣು ಮಕ್ಕಳು ಅನ್ನ ಬಟ್ಟೆ ಪಡೆದು, ಕಸಬುಗಳನ್ನು ಕಲಿತು ಈಗ ಸ್ವತಂತ್ರರಾಗಿ ಜೀವನ ಮಾಡುತ್ತಿದ್ದಾರೆ. ಇವರಲ್ಲಿ ಅನೇಕಾನೇಕರು ಬಹಳ ಐಶ್ವರ್ಯವಂತರಾಗಿಯೂ ಇರುವರು.

✦✦✦✦

ರಷ್ಯಾ ರಾಜ್ಯದ ಅನೇಕ ಪಟ್ಟಣಗಳಲ್ಲೂ ಬಂದರುಗಳಲ್ಲೂ ಪ್ರಜೆಗಳು ಸರ್ಕಾರದವರ ಮೇಲೆ ದಂಗೆ ಎದ್ದು ಅನೇಕ ಅನಾಹುತಗಳನ್ನು ಮಾಡುತ್ತಿದಾರೆ. ಬಹು ಜನರು ಪ್ರಾಣ ಕಳೆದುಕೊಂಡರು. ಸರ್ಕಾರದವರು ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೆ ತುಂಬಾ ಹಿಂಸೆಕರವಾದ ಕಾನೂನುಗಳನ್ನು ಜಾರಿಗೆ ತಂದಿದ್ದರೂ ನಿಷ್ಪ್ರಯೋಜನವಾಗಿದೆ. ಕೆಲವು ಕಡೆ ಸರ್ಕಾರಿ ಸೈನಿಕರು ಕೂಡ ಪ್ರಜೆಗಳ ಸಂಗಡ ಸೇರಿಕೊಂಡು ಪ್ರತಿಭಟಿಸುತ್ತಾರೆ. ರಾಜ್ಯಭಾರ ವಿಚಾರದಲ್ಲಿ ಪ್ರಜೆಗಳಿಗೂ ಅಧಿಕಾರ ಕೊಡಬೇಕೆಂತಲೂ ನಿರಂಕುಶ ಪ್ರಭುತ್ವಕ್ಕೆ ಅಂತ್ಯವನ್ನು ತರಬೇಕೆಂತಲೂ ಶಪಥಮಾಡಿಕೊಂಡು ಜನರು ಎಲ್ಲೆಲ್ಲೂ ಈ ರೀತಿ ದಂಗೆಯನ್ನೆಬ್ಬಿಸಿದ್ದಾರೆ. ಚಕ್ರವರ್ತಿಯವರು ಪ್ರಜಾಪ್ರತಿನಿಧಿ ಸಭೆಯನ್ನು ಮಾಡುವುದಾಗಿಯೂ ಪ್ರಜಾಕಂಟಕರಾದ ಅಧಿಕಾರಿಗಳನ್ನು ವಜಾಮಾಡುವುದಾಗಿಯೂ ಇಸ್ತಿಹಾರು ಕೊಟ್ಟಿದ್ದಾರೆ. ಆದರೂ ಪ್ರಜೆಗಳಿಗೆ ಆ ಇಸ್ತಿಹಾರಿನಲ್ಲಿ ಕಂಡ ವಾಗ್ದಾನಗಳು ತೃಪ್ತಿಕರವಾಗಲಿಲ್ಲ.

✦✦✦✦

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಬಫೆಲೋ ಎಂಬ ಪಟ್ಟಣದಲ್ಲಿ ಜೋಸೆಫ್ ಎಂಬುವನು ತನ್ನ ಅಂಗಿಯ ಜೇಬಿನಲ್ಲಿ ಯಾವಾಗಲೂ ದುಡ್ಡು ಕಳುವಾಗುತ್ತಿದ್ದುದನ್ನು ನೋಡಿ, ಕಳ್ಳನನ್ನು ಹಿಡಿಯಬೇಕೆಂದು ಒಂದು ದಿನ ಆ ಜೇಬಿನಲ್ಲಿ ಇಲಿ ಹಿಡಿಯುವಂಥಾ ಒಂದು ಕತ್ತರಿಯನ್ನು ಇಟ್ಟನು. ಅವನ ಹೆಂಡತಿಯೇ ಯಾವಾಗಲೂ ದುಡ್ಡನ್ನು ತೆಗೆದುಕೊಳ್ಳುತ್ತಿದ್ದು ಆ ದಿನವೂ ತೆಗೆದುಕೊಳ್ಳುವುದಕ್ಕೆಂದು ಕೈಯಿಟ್ಟಳು. ಕತ್ತರಿಯು ಬೆರಳನ್ನು ಹಿಡಿದು ಗಾಯ ಮಾಡಿತು. ಆಗ ಅವಳು ಗಂಡನ ಕ್ರೂರತನವನ್ನು ನೋಡಿ ಅವನ ಮೇಲೆ ಕೋರ್ಟಿಗೆ ಅರ್ಜಿ ಹಾಕಿ, ವಿವಾಹಸಂಬಂಧವನ್ನು ಒಡೆಯಬೇಕೆಂದು ಕೇಳಿಕೊಂಡಳು. ದರ್ಯಾಫ್ತಿಯಲ್ಲಿ ಅವಳು ಮಾಡುತ್ತಿದ್ದ ಅಕೃತ್ಯವು ಹೊರಪಟ್ಟಿತು. ಆಗ ನ್ಯಾಯಾಧೀಶನು ಅವಳನ್ನು ಕುರಿತು—ನೀನು ಮಾಡಿದ ಅಕೃತ್ಯಕ್ಕೆ ನಿನಗೆ ಆದ ಶಿಕ್ಷೆ ಸಾಲದು. ಇನ್ನು ಮುಂದೆ ಹಾಗೆ ಮಾಡದೆ ಸತ್ಯವಂತಳಾಗಿ ಗಂಡನ ಸಂಗಡ ಸಂಸಾರ ಮಾಡಿಕೊಂಡಿರು ಎಂದು ವಿವೇಕ ಹೇಳಿ, ಕಳುಹಿಸಿ ಬಿಟ್ಟನು.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

12

ಸ್ವಲ್ಪ ಪ್ರತಿಗಳಿವೆ ಜಾಗ್ರತೆಪಟ್ಟರೆ ಸಿಕ್ಕುತ್ತವೆ ನಂತರ ಖಂಡಿತ ಸಿಕ್ಕುವದಿಲ್ಲ ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಪ್ತಾವತಾರಕ್ಕ್ಕ ಸುಂದರವಾದ ೧೭ ತಸ್ವೀರಿದೆ ಕ್ರಯ ಸುಲಭಮಾಡಿದೆ ೧೭ ತಸ್ವೀರಿರುವ ಪ್ರತಿ ೧ ಕ್ಕೆ ವಿ ಪಿ ಖರ್ಚು ಸೇರಿ ರೂ ೨—೮

ತಸ್ವೀರಿಲ್ಲದ ಇದೇ ಪ್ರತಿ ೧ ಕ್ಕೆ ವಿ ಪಿ ಖರ್ಚು ಸೇರಿ ರೂ ೧—೮

ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ ಕ್ಕೆ ರೂ ೭—೮

ರಕ್ಷಣೆ ಮಣಿಆರ್ಡರಿಗೂ ವಿ ಪಿ ಲಿ ೦ ಕಳುಹಿಸುತ್ತ - ವಿಳಾಸ— ಮೈಸೂರು ಬನಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

SREEMADACHARYA SUKTI MUKTAVALI
ಶ್ರೀಮದಾಚಾರ್ಯಸೂಕ್ತಿ ಮುಕ್ತಾವಲೀ.

5

ಈ ಜನವರಿಯಿಂದ ಪ್ರತಿ ತಿಂಗಳಲ್ಲಿಯೂ ಒಂದು ಸಂಚಿಕೆಯು ಪ್ರಕಟಿಸಲ್ಪಡುವುದು ಇದರಲ್ಲಿ ಶ್ರೀರಾಮಾನುಜಸಿದ್ಧಾಂತ ಸ್ಥಾಪಕರಾದ ಪೂರ್ವಾಚಾರ್ಯರುಗಳು ಮಾಡಿರುವ ಸ್ತೋತ್ರ, ದ್ರಾವಿಡಪ್ರಬಂಧ, ಗ್ರಂಥಗಳಿಗೆ ಕನ್ನಡದಲ್ಲಿ ಪ್ರತಿಪದ ಟೀಕಾ ತಾತ್ಪರ್ಯಗಳು ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಾಗಿ ಬರೆದು ಮುದ್ರಿಸಲ್ಪಡುವುವು ಶ್ರೀವಿಷ್ಣುಸಹಸ್ರನಾಮಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತ ಭಾಷ್ಯಗಳ ಕನ್ನಡದಲ್ಲಿ ತರ್ಜುಮೆಮಾಡಿ ಮುದ್ರಿಸಲ್ಪಡುವುವ ಈ ಸಂಪೂರ್ಣ ಗ್ರಂಥಕ್ಕೆ ಪೋಸ್ಟೇಜು ದೇಖೀಲ್ ರೂ ೨-೬, ಶ್ರೀಮದಾಚಾರ್ಯಸೂಕ್ತಿ ಮುಕ್ತಾವಲೀ ಸಾಂವತ್ಸರಿಕ ಚಂದಾ ಪೋಸ್ಟು ಚಾರ್ಜು ಸಹಿತ ರೂ ೯-೪

ಇದರ ವಿಶೇಷವಿವರಗಳನ್ನು ತಿಳಿಯಬೇಕ್ಷಿಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆಯಬೇಕು

ತಪ್ಪಲ್ ವೇಂಕಟಾಚಾರ್ಯರು

ರಂಗಸ್ವಾಮಿ ದೇವಸ್ಥಾನ ಬೀದಿ, ಬೆಂಗಳೂರು ಸಿಟಿ

ಜ್ವರಹರಿ.

6



ಇದು ಸಾಧಾರಣ ಜ್ವರ ಹಳೇಜ್ವರ ವಿಷಮಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ ೧ ರೂ, ೧—೯ ರೂ, ರೂ ೨—೧೨ ಆ., ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕಪೂರ.



ಈ ಔಷಧವು ಅಜೀರ್ಣ, ಬೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಚಿಕ್ಕ ಮಕ್ಕಳು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂಕರ್ಪೂರವನ್ನು ನಾನೂ ನನ್ನ ಡಾಕ್ಟರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ವಾಶ್ರಗಳಲ್ಲೂ, ಔಷದ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಹೆನ್ರಿಯವರ ಸ್ಟ್ರೀಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್ ಮದ್ರಾಸ್.

“ವಾಗ್ದೇವಿ”

6

ಹಾಸ್ಯ ಕರುಣಾ ವೀರ ರಸಗಳಿಂದ ಭರಿತವಾದ ಕಾದಂಬರಿ

ಕ್ರಯ ಒಂದು ರೂಪಾಯಿ ಅಂಚೆ ಹಾಸಲು ವಿನಾ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು

ಬೋಳಾರ್ ಬಾಬೂರಾವ್, ಮಂಗಳೂರು

ಕ್ಷೇತ್ರಗಣಿತ

5

ಮೂರು ಭಾಗಗಳಿಂದ ಕೂಡಿದ ೪೦೦ ಪುಟಗಳುಳ್ಳ ಸಂಪೂರ್ಣವಾದ ಈ ಪುಸ್ತಕದಲ್ಲಿ ಒಟ್ಟು ಸುಮಾರು ೨,೦೦೦ ಲೆಕ್ಕಗಳು ಉತ್ತರಗಳೊಡನೆ ಕೂಡಿವೆ ಉತ್ತಮ ಪತ್ರ ಪತಿಪದ ೧ಕ್ಕೆ ರೂ ೧—೪—೦ ಮಧ್ಯಮ ಪತ್ರ ಪ್ರತಿ ೧ಕ್ಕೆ ರೂ ೧ ವಿದ್ಯಾರ್ಥಿಗಳಿಗೆ ಬಹಳ ಅಗತ್ಯವಾದದ್ದು ವಿಳಾಸ —ಸಿ ಕೃಷ್ಣ, ಟ್ಯಾಂಕ್ ಇನ್ಸ್ಪೆಕ್ಟರ್, ನಂಜನಗೂಡು

ಆಸ್ತಿ ಖಲಲ್ ನೋಟೀಸು, ಸಕ್ರಾಪಟ್ಣ.

ಇದರಿಂದ ಸಮಸ್ತರಿಗೆ ತಿಳಿಯಪಡಿಸುವದೇನಂದರೆ—ಕಡೂರು ತಾಲ್ಲೂಕು ಸಕ್ರಾಪಟ್ಟಣದಲ್ಲಿರುವ ಮರಿಯಪ್ಪನ ಮಗ ಸಣ್ಣಸೇಮಯ್ಯನ ಹೆಂಡತಿ ಗಂಗಮ್ಮನು ಅಪುತ್ರವಂತಳು ಇವಳ ಗಂಡನಿಗೆ ಸ್ಥಿರ, ಚರ ಆಸ್ತಿಗಳು, ನಗಗಳು, ನಗದು ಸುಮಾರು ೧೦ ೦೦೦ ಹತ್ತು ಸಾವಿರ ರೂಪಾಯಿವರಿಗೆ ಇವೆ ಅಡಿಕೆ ತೋಟದಲ್ಲಿ ವರುಷ ಒಂದಕ್ಕೆ ೩೦೦ ಮುನ್ನೂರು ರೂಪಾಯಿ ಚಿಲ್ಲರೆ ಬರುತ್ತದೆ ತರೀ ಜಮೀನಿನಲ್ಲಿ ಭತ್ತ ಬರುತ್ತದೆ ಅಲ್ಲದೆ ರಾಗಿ ಮುಂತಾದ ಫಸಲು ಆಗುತ್ತದೆ ಹೀಗಿರುತ್ತಾ ಸದರಿ ಸಣ್ಣಸೋಮಯ್ಯನ ಅನಂತರ ವಾರಸುದಾರರಿಗೆ ಮೋಸ ಮಾಡಬೇಕೆಂಬ ಇರಾದೆಯಿಂದ ಸ್ಥಿರ ಆಸ್ತಿಗಳನ್ನು ಸದರಿ ಗಂಗಮ್ಮನು ಪರಾಧೀನ ಮಾಡುವ ಪ್ರಯತ್ನದಲ್ಲಿ ಇದ್ದಾಳೆ ಅದ್ದರಿಂದ ಯಾರೂ ಅವಳಿಂದ ಸದರಿ ಸಣ್ಣಸೋಮಯ್ಯನಾದ ಅವಳ ಗಂಡನ ಸ್ಥಿರ ಆಸ್ತಿ ಅಂದರೆ ಸಕ್ರಾಪಟ್ಣದಲ್ಲಿರುವ ಅಡಿಕೆ ತೋಟ, ಗದ್ದೆ, ಇವುಗಳನ್ನು ಅಡವು, ಕರೀದಿ, ದಾನ ಮುಂತಾದ ಪರಾಧೀನ ಮೂಲಕವಾಗಿ ತೆಗೆದುಕೊಳ್ಳಕೂಡದು. ಹಾಗೆ ತೆಗೆದುಕೊಂಡರೆ ಅಂಥಾ ಪರಾಧೀನವು ಕಾನೂನು ಪ್ರಕಾರ ಮುಂದುವರಿಯುವದಿಲ್ಲ ಅಲ್ಲದೆ, ಈ ನೋಟೀಸು ಕೆಳಗೆ ರುಜು ಹಾಕಿರುವ ದೊಡ್ಡ ಸೋಮಯ್ಯನು ಅಂಥಾ ಪರಾಧೀನವನ್ನು ರದ್ದುಪಡಿಸಲು ಸಿದ್ಧನಾಗಿ ಇದ್ದಾನೆ 3

ದೊಡ್ಡ ಸೋಮಯ್ಯನ ಗುರುತು.

ಹೋಮಿಯೋಪತಿಯಾ

ತಕ್ಷಣ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ ಕೋರ್ಟು, ಕಚೇರಿ ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷದ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ ವಾಯುಗಳು, ನರ ಹೊರಳುವದು ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಿದಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ – ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ರೂ ೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮಿಯೋಪತಿಯಾ ಯಂಬ್ರೋಕೇಷನ್.

ಈ ತೈಲವು ಎಲ್ಲಾ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋಪತಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಪಾಶ್ರಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ —ಹೋಮಿಯೋಪತಿಯಾ ಕಂಪನಿ ೨೩ ಸೆಕೆಂಡ್ ಬೀಚ್ ಲೈನ್ ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

17—11—1905 ರಿಂದ 24—11—1905 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದವರ್ಷ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ		10	12	31	19
ಮೈಸೂರು	,,	0	0	90	72
ಬೆಂಗಳೂರು ಡಿಸ್ಟ್ರಿಕ್ಟು		1	1	109	48
ಮೈಸೂರು	,,	7	5	146	114
ಕೋಲಾರ್	,,	1	0	87	21
ಕೋಲಾರ್ ಚಿನ್ನದ ಗಣಿಗಳು		3	2	22	14
ತುಮಕೂರು ಡಿಸ್ಟ್ರಿಕ್ಟು		0	0	49	49
ಹಾಸನ	,,	0	0	42	34
ಚಿತ್ರದುರ್ಗ	,,	0	0	36	25
ಕಡೂರ್	,,	13	10	40	30
ಶಿವಮೊಗ್ಗಾ	,,	8	5	71	38
	ಜುಮ್ಲಾ	51	35	656	490

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ವಿಶ್ವಾವಸುಸಂವತ್ಸರದ ಮಾರ್ಗಶಿರ ಶುದ್ಧ ಏಕಾದಶಿ ಗುರುವಾರದಿಂದ ಮಾರ್ಗಶಿರ ಬಹುಳ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

• ೧೯೦೫ ನೇ ಇಸವಿ ಡಿಸೆಂಬರ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ವ್ಯ ಮಾ
7	ಗುರು		ಏಕಾದಶಿ	33-48	ರೇ	12 52	22
8	ಶುಕ್ರ	¶	ದ್ವಾದಶಿ	38 59	ಅಶ್ವಿ	19-9	23
9	ಶನಿ	‡	ತ್ರಯೋದ	44 20	ಭ	25 48	24
10	ರವಿವಾ	†	ಚತುರ್ದಶಿ	49 19	ಕೃ	31 56	25
11	ಚಂದ್ರ	*	ಪೂರ್ಣಿಮೆ	54 32	ರೋ	37 36	26
13	ಕುಜ		ಪಾಡ್ಯಮಿ	56-48	ಮೃ	42-12	27
13	ಬುಧ		ಬಿದಿಗೆ	58 50	ಆರ್ದ್ರ	45 53	28

¶ ಕೌಶಿಕದ್ವಾದಶೀ ‡ ಶನಿಪ್ರದೋಷ ಚಾಮರಾಜನಗರದಲ್ಲಿ ಚಿತ್ರನಾಟಕರಥ † ಚಾಮರಾಜೇಶ್ವರರಥ, ಶಿವದೀಪ

* ದತ್ತಾತ್ರೇಯ ಜಯಂತೀ, ನಂಜನಗೂಡಿನಲ್ಲಿ ಕೃತ್ತಿಕಾದೀಪ, ವಿಷ್ಣುದೀಪ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ	೧೨ ೮-೦	೧೩-೮-[illegible]
ಕೆಂಬತಿ ಅಕ್ಕಿ ಅವಲ್		೧೨ ೪ ೦	೧೨ ೦-[illegible]
,, ದುಯ್ಯಂ		೧೨ ೦ ೦	೧೩-೮-[illegible]
ಜಾಪಾಳ ಅಕ್ಕಿ		೧೬ ೦-೦	೧೩ ೦-[illegible]
ಸಣ್ಣಕ್ಕಿ ಅವಲ್		೧೪ ೦-೯	೧೬-೦-[illegible]
,, ದುಯ್ಯಂ		೧೩-೮-೦	೧೬-೦-[illegible]
ತೊಗರೀ ಬೇಳೆ ಪಲ್ಲ ೧ಕ್ಕೆ		೧೧-೦-೦	೧೬-೦-[illegible]
,, ದುಯ್ಯಂ		೧೦ ೮-೦	೧೦ ೧೬-[illegible]
ಹೈನ ರಾಗಿ ಪಲ್ಲ ೧ಕ್ಕೆ		೨-೪ ೦	೬-೦-[illegible]
ಕಾರಾಗಿ		೬-೦-೦	೫ ೧೨-[illegible]
ಜೋಳ		೬-೦ ೦	೬-೮-[illegible]
ಕಾಲಸಂದೆ ಪಲ್ಲ ೧ಕ್ಕೆ		೬-೦-೦	೧೦-೦-[illegible]
ಬಿಳೀ ಅವರೆ		೧೦-೦ ೦	೯-೮-[illegible]
ಹೆಸರು		೮-೧೨-೦	೧೦ ೮-[illegible]
ಉದ್ದು		೯-೧೨ ೦	೯-೮-[illegible]
ಕಡಲೆ		೧೦-೦-೬	೧೦-೮-[illegible]
ಎಳ್ಳು		೧೦-೦-೦	೧೫-೦-[illegible]
ಹುರುಳಿ		೧೬-೦-೦	೧೦-೦-[illegible]
ಹರಳು ೧೨೨ ಸೇರಿಗೆ		೧೦-೦-೦	೭ ೬-೮-[illegible]
ಸೀಗೇಕಾಯಿ ಮಣ ೧ಕ್ಕೆ		೧೨ ೮ ೦	೩-೧೦-[illegible]
ಮೆಣಸಿನಕಾಯಿ		೩ ೮-೦	೩ ೧೨-[illegible]
,, ದುಯ್ಯಂ		೪-೮-೦	೩-೮-[illegible]
ಬೆಲ್ಲ ದೊಡ್ಡ ಅಚ್ಚು		೩-೧೨-೦	ಮ ೨ ೪-[illegible]
ಒಳ್ಳೆಣ್ಣೆ ಮಣ ೧ಕ್ಕೆ		೨-೪-೦	೪-೪-೦
ಹರಳೆಣ್ಣೆ ,,		೪-೪-೦	೪-೧೨-[illegible]
ಕೊತ್ತುಂಬರಿ ಪಲ್ಲ ೧ಕ್ಕೆ		೫-೦-೦	೧೦-೧೦-[illegible]
ಉಪ್ಪು ,,		೧೦-೮-೦	೮-೮-[illegible]
ಹುಣಸೇ ಹಣ್ಣು		೭-೦-೦	೦-೧೨-[illegible]
,, ಹಳೇದು		೧-೦-೦	೦-೧೦-[illegible]
ತುಪ್ಪ		೦-೧೪-೦	೧೨-೮-೦
ಸೀಮೆಯೆಣ್ಣೆ ಪಟ್ಟ ೧ಕ್ಕೆ		೧೨-೮-೧	೯-೦-[illegible]
ತೆಂಗಿನಕಾಯಿ ೧೦೦ ಕ್ಕೆ		೫-೦ ೦	೪-೦-[illegible]
ಅಳಲೇಕಾಯಿ ಮಣ ೧ಕ್ಕೆ		೫-೦-೦	೦ ೧೦-[illegible]
ಅಂಟುವಾಳದ ಕಾಯಿ ಮಣ ೧ಕ್ಕೆ		೧-೦-೦	೬-೧೨-[illegible]
ಚಿನ್ನ (ಪೌನ್) ಕೆಂಪು		೦-೧೪-೦	೧೫-೪-[illegible]
,, ,, ಪಸಿಮೆ		೧೫-೧೦ ೦	೧೬-೩-[illegible]
,, ,, ಗಟ್ಟಿ ತೊಲ ೧ಕ್ಕೆ		೨೬ ೦ ೦	೨೪-೬-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೩೭ ೦ ೦	೭೯-೦-[illegible]

Printed and Published by the Rev H Spencer, B.A., the Proprietor and Manager, Wesleyan Mission Press, Mysore. 7/12/1905.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಡಿಸೆಂಬರ್ ತಾರೀಖು ೧೪ ನೇ ಗುರುವಾರ. — ಸಂಚಿಕೆ ೨೯

ಯನ್ ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು.

21

ಮೆಟ್ರಿಕ್ಯುಲೇಷನ್ ಕನ್ನಡದ ೧ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ,, ,, ೬ ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಭಾಗ)	೦—೧—೦
೭ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್, ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . ರೂ ೧—೦—೦

ಹೊರಗಿನವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಡಾಕ್ ಸಹಿತ ರೂ ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಸವಿನುಡಿ.

6

ಲೋಕೋಪಕಾರಕ್ಕೋಸ್ಕರ ತಿಂಗಳಿಗೆರಡುಸಲ ಪ್ರಕಟವಾಗುವ ಪತ್ರಿಕೆ.

ಮಹತ್ವದ ಅನೇಕ ಉಪಯುಕ್ತಾಂಶಗಳಿಂದ ಇಷ್ಟು ಸುಲಭ ಕ್ರಯವುಳ್ಳ ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಬೇರೆ ಯಾವದೂ ಇಲ್ಲ.

ಧರ್ಮಾರ್ಥ ದೊರೆಯುವ ಮಾದರಿ ಸಂಚಿಕೆ—ರಸಿಕರಾದವರು ಓದಿದರೆ ಪತ್ರಿಕೆಗೆ ಆಶ್ರಯ ಕೊಡದೆ ಇರುವುದೇ ಇಲ್ಲ. ಹೋಗಲಿ ನೋಡಬೇಕೆ?

ಅಂಚೆ ವೆಚ್ಚಸಮೇತ ವರುಷದ ಚಂದಾ —

ಮುಂಗಡ ಹನ್ನೆರಡಾಣೆ ಮಾತ್ರವೇ; ಅನಂತರ. ಒಂದು ರೂಪಾಯಿ ಎಂಟಾಣೆ ಮಾತ್ರ.

ವಿದ್ಯಾರ್ಥಿಗಳು ಅಂಚೆ ಖರ್ಚಿನ ಪೂರ್ತ **ಆರಾಣೆಗೆ ಕಾಲಾಣೆಯ ಅಂಚೆ ಚೀಟುಗಳನ್ನು ಮುಂಗಡ ಕೊಟ್ಟರೆ**, ಒಂದು ವರುಷ ಪೂರಾ ಪತ್ರಿಕೆಯನ್ನು **ಪುಗಸಟೆ ಕೊಡುತ್ತೇವೆ.** ವಿ. ಪಿ. ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು

ಚಂದಾದಾರರಾಗಬೇಕೆಂಬಿಚ್ಛೆಯುಳ್ಳವರು ಈ ಸಂಧಿಯನ್ನು ಬಿಡದೆ ಬೇಗ ಬೇಗ ನಿಮ್ಮ **ವಿಳಾಸಗಳ ಮಾತ್ರ ಕೊಟ್ಟು** ಮಾದರಿ ಸಂಚಿಕೆಯೊಂದನ್ನು ಓದಿನೋಡಿ

ವಿಳಾಸ —ಭಾರತಿಸಂಪಂಗಿರಾಮು, ಸಂಪಾದಕ, ಸವಿನುಡಿ, ಹೊಸ ಕೋಟೆ, ಬೆಂಗಳೂರು ಡಿಸ್ಟ್ರಿಕ್ಟು.

ಗಡಿಯಾರಗಳೂ ಪುಸ್ತಕಗಳೂ.

4

ನಿಕ್ಕಲ್ ಸಿಲ್ವರ್, ಓಪನ್ ಕೇಸ್, ಲಿವರ್ ವಾಚು, ಅತಿ ನಂಬಿಕೆಯುಳ್ಳದ್ದು, ಕ್ರಯ ೧ ಕ್ಕೆ ೨ ರೂ. ೧೫ ಆಣೆ. ಡಿಸೆಂಬರ್ ಆಖೈರ್ ವರೆಗೆ ಬರತಕ್ಕ ಅಪ್ಲಿಕೇಷನುಗಳಿಗೆ ಮಾತ್ರ ಈ ಕ್ರಯ ೬ ವಾಚುಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಮಾತ್ರ ೧ **ವಾಚು ಮುಫತ್ತು** ಕೊಡಲಾಗುತ್ತೆ, ಸ್ವಲ್ಪ ಇರುವದರಿಂದ ಬೇಗ ಬರೀರಿ.

ಸಿವಿಲ್, ಕ್ರಿಮಿನಲ್, ಲೇವಾದೇವಿ, ರೋಜು ವರ್ಗ, ಬ್ಯಾಂಕು, ಇತ್ಯಾದಿ ಸಮಸ್ತ ಸಮಾಂಶಗಳನ್ನೂ ತಿಳಿಸತಕ್ಕ ಲಾ ಬುಕ್, ಕ್ರಯ ೧ ಕ್ಕೆ ೧ ರೂ ೪ ಆಣೆ ಮಾತ್ರವೇ. **ಸ್ವಲ್ಪ ಪ್ರತಿಗಳು ಇರುವದರಿಂದ ಬೇಗ ಬರೆಯಿರಿ!**

ಇಂಗ್ಲೀಷನ್ನು ಕಲಿಯತಕ್ಕ ಪುಸ್ತಕ—ಲೋಕದಾಸರಾಗತಕ್ಕವರಿಗೆಲ್ಲಾ ಉಪಯೋಗವಾದದ್ದು. ಕ್ರಯ ೧ ಕ್ಕೆ ೧ ರೂ ಮಾತ್ರ

ಅಮೃತ ಸಂಜೀವಿನಿ—ಅನೇಕರು ಬಗೆ ಬಗೆಯಾಗಿ ತಯಾರು ಮಾಡುತ್ತಿದ್ದಾರೆ ಆದರೆ ೧೫ ಆಣೆ ಸ್ಟಾಂಪಿಟ್ಟು ನಮಗೆ ಬರೆದು ತರಿಸಿಕೊಂಡು ನೋಡಿದಲ್ಲಿ ನಮ್ಮ ಶ್ರಮವು ಸಾರ್ಥಕವಾಗುವದು. ಕ್ರಯ ಡಬ್ಬಿ ೧ ಕ್ಕೆ ೪ ಆಣೆ.

ಎಸ್. ಕೆ. ಮೂರ್ತಿ ಕಂಪೆನಿ, ಬಳೇಪೇಟೆ, ಬೆಂಗಳೂರು ಸಿಟಿ.

WANTED WILD ANIMALS.

ಬೇಕಾಗಿದೆ. — ಬೇಕಾಗಿದೆ.

36

ಎಲ್ಲಾ ಬಗೆಯ ಕಾಡು ಮೃಗಗಳನ್ನೂ. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ರವರು ಕೊಂಡುಕೊಳ್ಳುವರು

Apply to—Mr. Hughes, Mysore Zoo

೧೯೦೬ನೇ ವರುಷದ ರಾಯಲ್ ಡೈರಿಗಳು.

12

ಈ ರಾಯಲ್ ಡೈರಿಗಳು ವಿದ್ವಾಂಸರು—ಪರಾಭವ ಸಂವತ್ಸರಗಳ ಪಂಚಾಂಗ, ಭೂ ಮಿಂಚು ಚಮತ್ಕೃತಿ, ವಾರ್ತೆಯ ಪೋಸ್ಟಾಫೀಸಿನ ಮುಖ್ಯ ವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟರ್ ಫಿ, ಕೋರ್ಟು ಫಿ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ ಹಾರಿಸುವ ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರತಕ್ಕ ಹಬ್ಬಗಳು ಮತ್ತು ವಿಶೇಷ ದಿವಸಗಳು, ಮೆಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರವು, ಬಿಟ್ಟಿಪಟ್ಟಿ ಪ್ರತಿದಿವಸದ ಸಂಬಳವನ್ನು ತೋರಿಸುವ ಪಟ್ಟಿ, ೧೯೦೬ ರಲ್ಲಿನ ಏಕಾದಶಿ, ಪೌರ್ಣಮಿ, ಅಮಾವಾಸ್ಯೆ, ಸಂಕ್ರಾಂತಿ, ಗೌರೀಪಂಚಾಂಗ, ರೈಲ್ವೆ ಪಾರಸಲ್ ಛಾರ್ಜ, ಬಡ್ಡಿಯ ಪಂಚರಿತ್ರಾಕರ, ಇವೇ ಮೊದಲಾದ ಅನೇಕ ವಿಷಯಗಳಿಂದ ಕೂಡಿದೆ

ನಂ॥	೧	ದೊಡ್ಡ ಸೈಜು ರೂಲು ಹಾಕಿದೆ ಕ್ರಯ					೦—೧—೦
,,	೨	,,	,,	,, ಮುಚ್ಚಳ ಇರತಕ್ಕದ್ದು			೦—೧೦—೦
,,	೩	ಚಿಕ್ಕ	,,	,,	,,	,,	೦—೬—೦
,,	೪	,,	,,	,,	,,	,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ವಿಕ್ರಯಕ್ಕೆ ಸಿದ್ಧವಾಗಿವೆ ೩—೪ ನೇ ನಂ ಡೈರಿಗಳು ಅಕ್ಟೋಬರು ೧೦ ರ ಹೊಳಗಾಗಿ ದೊರೆಯುತ್ತವೆ

ದಿ ಜನರಲ್ ಏಜನ್ಸಿ, ಮೈಸೂರು

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

13

[೧೯೦೨ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಆದರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆಯಾನಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೧೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರೋಕ್ತರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೈಲ್ವೆ ಪಕ್ಕದಲ್ಲಿರುವ "ಕೋಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಾಣಿಸದಿದ್ದರೆ ತಾನು ಸಲ್ಲಿಸಿರುವ ಚಂದಾ ಮೊಬಲಗನ್ನೆಲ್ಲಾ ವಾಪಸುಪಡೆಯಬಹುದು

ಈ ಆಫೀಸಿಗೆ ಸಬ್ ಏಜಂಟರುಗಳು ಬೇಕಾಗಿವೆ ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು

ವಿಳಾಸ—The Manager,
The India Agricultural and Helping Office,
Vengurla Post, Bombay Presidency.

ಸನ್ ೧೯೦೬ನೇ ಇಸವಿಯ

ಎಂ ನಂ॥ ಎಫ್, ನಂ॥ ಬಿ ನಂ॥ ಸಿ. ನಂ॥ ಹೆಚ್ ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

6

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಎಲ್ಲಾ ತರಹ ಜನರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಪರಾಭವ ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್ವೆಛಾರ್ಜು, ಕೋರ್ಟ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಮುಖ್ಯ ವಿಷಯಗಳು, ದವಿರ್ಣಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿಬಿದ್ದ ಫಲ, ರಾಹು ಗುಳಿಕಕಾಲ, ವಾರ ಶೂಲೆ, ದಿವಸಂಬಳದ ಪಟ್ಟಿ, ಡೇಬಿಲ್ಸ್, ಜನಾಮಿಚರ್ಣ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀಮೆ ಸಾಮಾನ್ ಬೈಂಡು, ರೇಖಿನಿಂದ ಗಿಲೀಟು ಮಾಡಿದೆ

ಎ ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರ್ ದೊಡ್ಡಸೈಜು ೬ ಆ.
ಎಫ್. ,, ,, ,, ೪ ,,	ಎಚ್ ,, ,, ೭ ,,
ಬಿ ,, ಮುಚ್ಚಳವುಳ್ಳದ್ದು ೫ ,,	ಡಿ ,, ಮುಚ್ಚಳವುಳ್ಳದ್ದು ೮ ,,

ಪೋಸ್ಟು ಛಾರ್ಜ ಬೇರೆ ಒಂದೇ ಸಮನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ ವಿ ಪಿ. ಮೂಲಕ ತರಿಸಿಕೊಳ್ಳಿ

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಸೆಟ್ಟಿ,
ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಬೇಗಬನ್ನಿ — ತಡಮಾಡಬೇಡಿ.

೧೫೦೦೦ ಪೌಂ ಉಲ್ಲನ್ ಟೋಪೀ ದಾರವು ಸೀಮೆಯಿಂದ ಈಗತಾನೇ ಬಂದಿದೆ.

3

(೧) ಸ್ಕೈಟರ್ ಎಂಬ ಉಲ್ಲದ ಮಾದರಿ ಚೀಟಿ ಉಲ್ಲನ್ ದಾರವು ಪೌಂ ೧ಕ್ಕೆ ೧—೧೨—೦ ಕೆಂಪು ಕಪ್ಪು ಮಿಕ್ಸ್ಚರ್ ಯಸ್ಲೋ ಕೆಂಪು.

(೨) ಇದಕ್ಕೂ ಹಸನಾದ್ದು ಪೌಂ ೧ಕ್ಕೆ ೧—೧೪—೦ ಕೆಂಪು ಕಪ್ಪು ಯಸ್ಲೋ ಕೆಂಪು.

(೩) ನಂಬರು ಉಲ್ಲನ್ ಪೌಂ ೧ಕ್ಕೆ ೨—೦—೦ ಯಸ್ಲೋ ರಂಗಿನಲ್ಲಿ ಮಾತ್ರ ಎರಡು ಬಣ್ಣ.

(೪) ನಂಬರು ಸೋಮರ್‌ಸೆಟ್ ಉಲ್ಲನ್ ದಾರ ಪೌಂ ೧ಕ್ಕೆ ೩—೪—೦

ಹಾಸನದ ಉಲ್ಲನ್ ನಮೂನೆ ಟೋಪಿಗಳು.

ಡಜನ್ ೧ಕ್ಕೆ ೭—೦—೦, ೭—೮—೦, ೯—೦—೦, ೧೦—೦—೦ ೧೨—೦—೦, ೧೩—೦—೦, ೧೬—೮—೦, ೨೧—೦—೦.

ಮಕ್ಕಳಿಗೆ ಮತ್ತು ದೊಡ್ಡವರಿಗೆ ಆಗತಕ್ಕ ಉಲ್ಲನಲ್ಲಿ ತಯಾರಾದ ನೈಟ್‌ಕ್ಯಾಪ್‌ಗಳು.

ಒಂದು ತಿಂಗಳಿಂದ ವರುಷದ ಮಕ್ಕಳಿಗೆ ಆಗತಕ್ಕದ್ದು ೧ಕ್ಕೆ ೦—೧೦—೦

ಒಂದು ವರುಷದಿಂದ ಐದುವರುಷದ ವರಿವಿಗೆ ಆಗತಕ್ಕದ್ದು ೧ಕ್ಕೆ ೦—೧೨—೦

೫ ರಿಂದ ೧೦ರ ವರಿವಿಗೆ ಆಗತಕ್ಕದ್ದು ೧ ಕ್ಕೆ ೦—೧೪—೦.

೧೦ ರಿಂದ ೨೫ರ ವರಿವಿಗೆ ಆಗತಕ್ಕದ್ದು ೧ ಕ್ಕೆ ೧—೦—೦

ಕಾನ್‌ಪೂರ್ ತರಹಾ ಉಲ್ಲನ್ ಟೋಪಿಗಳು.

೧ಕ್ಕೆ ೦—೯—೦, ೦—೧೨—೦, ೦—೧೪—೦, ೧—೦—೦ ಇರುತ್ತೆ.

ಧಾರಿವಾಲ್ ಶ್ಯಾಲುಗಳು ಕೆಂಪು ಕೇಸರಿ ಯಸ್ಲೋ ಕೆಂಪು ಈ ಬಣ್ಣವುಳ್ಳದ್ದು ೬ ಮೊ ಳ ಉದ್ದ ೩ ಮೊಳ ಅಗಲವುಳ್ಳದ್ದು ೧ಕ್ಕೆ ೩—೧೩—೦

ವಿ. ಪಿ ಮೂಲಕ ತರಿಸಿಕೊಳ್ಳುವವರು ೧೦೦ಕ್ಕೆ ೨೫ ರೂ ಮುಂಚಿತವಾಗಿ ಕಳಿಸಬೇಕು ಪರಸ್ಥಳದವರು ಅವರವರ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ಯಲ್. ಏ. ಪೌರ್ವಾಲ್ ಕಂಪನಿ ಬೆಂಗಳೂರು ಸಿಟಿ.

L. A. Pourwal & Co.,
BANGALORE CITY.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

7

೧. ಪುಷ್ಟಿ ರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿ ಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿ ೧ ಕ್ಕೆ ರೂ. ೨. ವಿ. ಪಿ. ಛಾಂಗಿ ೬ ಆಣೆ.

೨. ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ದೆ ಹತ್ತದಿರುವಿಕೆ, ತಲೆ ತಿರುಗುವುದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿ ೧ ಕ್ಕೆ ೮ ಆಣೆ ವಿ. ಪಿ. ೨ ಪೆಟ್ಟಿಗೆ ವರೆಗೆ ಛಾಂಗಿ ಚಾರ್ಜು ೫ ಆಣೆ.

೩. ಲಕ್ಷ್ಮೀಶ್ವರ ಕಸ್ತೂರಿಮಾತ್ರೆ.—ಇದು ತಾಂಬೂಲಕ್ಕೆ ಪ್ರಾಣಮಿತ್ರನು. ಇದರಿಂದ ಬಾಯಿಯ ದುರ್ಗಂಧವು ಹೋಗುವದು. ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾ ದ್ರವ್ಯಗಳು ಅನಾವಶ್ಯಕವಾಗಿರುವುವಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನೂ ಕೂಡ ಜೀರ್ಣಕ್ಕೆ ತರುವುದು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು. ಇದರಲ್ಲಿ ಆಕ್ಷೇಪಣೀಯವಾದ ಮತ್ತು ನಿಷಿದ್ಧವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ, ಸುವರ್ಣ ವರಕು ಮುಂತಾದ ಅಮೂಲ್ಯವಸ್ತುಗಳು ಸೇರಿರುವದರಿಂದಲೂ, ಎಳೆ ಗುಸ್ಸಳಿಂದ ಮುದುಕರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವ ಬರಿ ಬಾಯಲ್ಲಿ ಹಾಕಿಕೊಂಡು ಉಪಯೋಗಿಸುವದು ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಅಸ್ಪದ ಕೊಡದೆ ಸದಾ ನೋಡಿಕೊಳ್ಳುವದು. ಜ್ವರ, ನೆಗಡಿ, ಕೆಮ್ಮಲು ಮುಂತಾದ ರೋಗಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ. ೧ ರಿಂದ ೧೨ ಸೀಸೆಗೆ ವಿ. ಪಿ. ಛಾಂಗಿ ಚಾರ್ಜು ೫ ಆಣೆ.

೪. ವೇದನಾಪರಿಹಾರಕ ತೈಲವು.—ಇದನ್ನು ಮೇಲ್ಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೆಳಕಂಡ ಹಿಡಿದುಕೊಳ್ಳುವುದು, ವಾತರೋಗ, ವಾತ್ಯಾವಾಯು, ನರಗಳ ಸೆಳತ, ನೋವು ಸೊಂಟ ಮತ್ತು ಎದೆ, ಇವುಗಳ ನೋವು, ತೋಳು ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು, ಮುಂತಾದ ಎಲ್ಲಾ ವಿಧವಾದ ನೋವುಗಳೂ ಬಿಂದಾಗಿ ವಾಸಿಯಾಗುವವು. ಸೀಸೆ ೧ ಕ್ಕೆ ೧ ರೂ ೩ ಬಾಟ್ಲಿ ವರೆಗೆ ವಿ. ಪಿ. ಛಾಂಗಿ ಚಾರ್ಜು ೫ ಆಣೆ.

೫. ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು.—ಬೋಳು ತಲೆ, ಸುಂಡು ಅಥವ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ, ತಲೆಯನ್ನೂ ಮಿದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ನಿಸಾಸೆ, ಹುಬ್ಬುಗಳ ಕೂದಲನ್ನು ಹೇರಳವಾಗಿ ಬೆಳೆಸುವದು. ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿ ಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಬೆಲೆ ಸೀಸೆ ಒಂದಕ್ಕೆ ೮ ಆಣೆ ೨ ಸೀಸೆ ವರೆಗೆ ವಿ. ಪಿ. ಚಾರ್ಜು ೫ ಆಣೆ.

೬. ನೇತ್ರಬಿಂದು.—ಸವಿಶಾಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು, ಹೂವು ಬೆಳೆಯುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ಒಂದಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೭. ಶ್ರೋತ್ರಬಿಂದು.—ಕಿವಿಯು ಎಷ್ಟು ಹೆಚ್ಚಾಗಿ ಸೋರುತ್ತಿದ್ದರೂ ಅದನ್ನೂ ಕೀವು ಸುರಿಯುವುದು, ಕಿವಿಯ ಮೊರೆತವು, ಕಿವುಡು ಮುಂತಾದವನ್ನೂ ಜಾಗ್ರತೆ ಪರಿಹರಿಸುವುದು. ಬೆಲೆ ಸೀಸೆ ಒಂದಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೮. ತುರಿಕಜ್ಜಿಗೆ ಔಷಧಿ.—ಚರ್ಮರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವುದಿಲ್ಲ. ಸೀಸೆ ೧ ಕ್ಕೆ ೪ ಆಣೆ. ವಿ. ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

೯. ಸುಖಭೇದಿ.—ಸ್ವಲ್ಪವೂ ಹೊಟ್ಟೆನೋವು, ಆಯಾಸ ಯಾವದೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು. ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ ೧ ಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆ ವರಿಗೂ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಬರೆಯಿರಿ.

Apply to:—P. SUBBAROY, Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್, ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

49



ಕಿಬ್ಬೊಟ್ಟೆಯ ನೋವು, ವಾಂತಿಭೇದಿ ಉಪದ್ರ, ಬಿರಿ ಭೇದಿಯಾಗುವದು, ಆಮಶಂಕೆ, ಕಾಲುಗಳ ಸೆಳೆತ ಮೊದಲಾದ ಉಗಳ ನೋವು, ಹೊಟ್ಟೆಶೂಲೆ—ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. ಈಚಿಗೆ ಮದರಾಸಿನ ಒಬ್ಬ ನೊಬ್ಬ ಭಾರೀ ಡಾಕ್ಟರು ಹೇಳಿರುವದನ್ನು ಕೇಳಿ:—"ಕಿಬ್ಬೊಟ್ಟೆಯ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು ನೋಡಿದ್ದರ ಪ್ರಕಾರ ಇದೇ ಸರ್ವೋತ್ಕೃಷ್ಟವಾದ ಔಷಧ; ಮತ್ತು ವಾಂತಿಭೇದಿ ಜಾಡ್ಯ ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು ವಾಸಿಮಾಡುತ್ತೇನೆ" ಕೆಲವು ಸಂಶಯವಾದ ಸಂದರ್ಭಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು. ಹೊಟ್ಟೆನೋಯುವದು ಈ ಔಷಧದಿಂದ ಬೇಗ ನಿವಾರಣೆಯಾಗುತ್ತೆ. ಮೊದಲೇ ಜಾಗ್ರತೆಯಾಗಿ ಕೊಟ್ಟರೆ ವಾಂತಿಭೇದಿಯನ್ನು ಸಹ ತಕ್ಷಣ ಗುಣಮಾಡುವದು. ಆದಕಾರಣ ಯಾವ ಮನೆಯಲ್ಲೂ ಈ ಔಷಧ ಇಲ್ಲದೆ ಇರಬಾರದು. ಈ ಹೊತ್ತೇ ಕೊಂಡು ಇಡಿರಿ; ಪ್ರಾಣವನ್ನು ಬದುಕಿಸಿಕೊಳ್ಳಬಹುದು. ಕ್ರಯ ೧ ಬಾಟ್ಲಿಗೆ ೧ ರೂ ; ೨ ರೂ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಔಷಧಿ ಮಾರು ಅಂಗಡಿಗಳಲ್ಲಿ ಈ ಔಷಧ ದೊರಕುತ್ತದೆ. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚೆನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಮತ್ತು ಕೆಳಗಿನ ವಿಳಾಸದಾರರಿಗೆ ಸಿಕ್ಕುವದು ಖಂಡಿತ:—

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್.

ಸಚಿತ್ರವಿನೋದಿನಿ ಮಾಸಪತ್ರಿಕೆ.

12

ವಾರ್ಷಿಕಚಂದಾ ರೂ. ೧—೮—೦.

....ವಿನೋದಿನಿ ಎಂಬ ಈ ಶಿರಪತ್ರ ತನ್ನ ಹೆಸರಿಗೆ ಸರಿಹೊಂದುವಂತೆ ನಡೆಯುವ ಕಾಲದಲ್ಲಿ ವಿನೋದಪಡುವುದಕ್ಕೆ ತಕ್ಕ ಸಾಹಿತ್ಯವಾಗುವದು ಎಂಬುದರಲ್ಲಿ ಸಂದೇಹವಿಲ್ಲ.....................

ಸತ್ಯದೀಪಿಕೆ. ೨೯-೬-೦೫

ವಿಳಾಸ:—ಮ್ಯಾನೇಜರ್, ವಿನೋದಿನಿ ಆಫೀಸು, ಕಾರವಾರ

COMMERCIAL CLASSES.

Hardwicke College, Mysore.

These classes will be opened, 8th. Jan., 1906.

TEACHER—Mr S. GNANAPPAH, of the Reid College, Lucknow holder of the Remington Gold Medal for Typewriting

HOURS—7—10 a.m., & 7—8 p.m.

FEES—Typewriting, Rs 1 8-0 per month, Shorthand Re 1; Bookkeeping, Re 1 Commercial Correspondence & Commercial Geography, (if desired), Re 1.

SCHOOL STUDENTS AT HALF-FEES.

ADMISSION FEE—Re. 1

Application for admission to be made to

The PRINCIPAL, Hardwicke College

ವೃತ್ತಾಂತ ಪತ್ರಿಕೆ.

ಸನ್ ೧೯೦೫ ನೇ ಇಸವಿ ಡಿಸೆಂಬರ್ ತಾ|| ೧೪ ನೇ ಗುರುವಾರ.

೧೯೦೫ ನೆ ಡಿಸೆಂಬರ್ ತಾ|| ೧೩.

ಈ ಡಿಸೆಂಬರ್ ೧೩ ನೆ ತಾ. ಕಳೆದು ಹೋಯಿತು. ಹೊಸ ಕಾನೂನ್ ವಿಷಯದಲ್ಲಿ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಪ್ರಜೆಗಳಿಗೆ ಸರ್ಕಾರದವರು ಕೊಟ್ಟಿದ್ದ ಎರಡು ತಿಂಗಳ ಅವಧಿಯು ಪೂರೈಸಿವೆ. ಇನ್ನು ಇದಕ್ಕೆ ಅವಕಾಶವಿಲ್ಲ. ಈಗ ಗವರ್ನಮೆಂಟಿನವರು ತೀರ್ಮಾನ ಹೇಳುವದೊಂದೇ ಸಾವಕಾಶ. ಎಲ್ಲರೂ ಅದನ್ನೇ ಎದುರು ನೋಡತಕ್ಕದ್ದಾಗಿದೆ. ಕಾನೂನು ಬದಲಾವಣೆಯಾಗಬೇಕಾದದ್ದು ಧರ್ಮವೆಂತಲೂ ನ್ಯಾಯವೆಂತಲೂ ಗವರ್ನಮೆಂಟಿನವರೇ ಅಭಿಪ್ರಾಯಪಟ್ಟಿರುತ್ತಾರಾದಕಾರಣ ಈಗ ಅವರು ಅಂಥಾ ಅಭಿಪ್ರಾಯವನ್ನು ಕಾರ್ಯದಲ್ಲಿ ತೋರಿಸಲು ಇನ್ನೇನೂ ಸಾವಕಾಶವಾಗಲಾರದೆಂದು ನಿರೀಕ್ಷಿಸುತ್ತೇವೆ. ಈ ಮಸೂದೆಯ ಪಕ್ಷ ಪರಪಕ್ಷಗಳನ್ನು ಹಿಡಿದು ಚರ್ಚೆಮಾಡುವುದರಲ್ಲಿ ನಮ್ಮ ಪ್ರತಿಕಕ್ಷಿಗಳು ಈ ವಿಷಯವಾಗಿ ನಮ್ಮ ಮೇಲೆ ಅನ್ಯಾಯವಾದ ಅನೇಕ ಕಠಿಣ ವಾಕ್ಯಗಳನ್ನು ಹೊರಿಸಿರುತ್ತಾರೆ. ಇದನ್ನು ನಾವು ವಿಶೇಷವಾದ ಸಂಗತಿಯೆಂದು ಎಣಿಸುವುದಿಲ್ಲ. ಅಂಥಾ ಆಕ್ಷೇಪಣೆಗಳಿಗೆ ನಾವು ಪ್ರತ್ಯುತ್ತರವನ್ನು ಕೊಟ್ಟು, ಈ ವಾಗ್ವಾದವನ್ನು ಬೆಳೆಯಿಸುವುದರಿಂದ ಯಾರಿಗೂ ಯಾವ ಪ್ರಯೋಜನವೂ ಆಗಲಾರದು. ಆದರೂ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾತ್ರ ತಿಳಿಸಬೇಕೆಂದು ಅಪೇಕ್ಷಿಸುತ್ತೇವೆ. ಈ ಕಾನೂನಿನ ಪಕ್ಷವಾಗಿ ನಾವು ಚರ್ಚೆಮಾಡುವುದನ್ನು ನೋಡಿ, ಅನೇಕಾನೇಕರು—ನಾವು ಹಿಂದೂಮತಕ್ಕೆ ಹಾನಿಯನ್ನುಂಟುಮಾಡಿ, ಹಿಂದೂಮತಾವಲಂಬಿಗಳಿಗಿಂತಲೂ ವಿಶೇಷವಾದ ಪ್ರಯೋಜನವನ್ನು ಪಡೆಯಬೇಕೆಂಬ ಕುತೂಹಲಯುಕ್ತರಾಗಿದ್ದೇವೆಂದು ತಿಳಿದುಕೊಂಡಿದ್ದಾರೆ. ಇಂಥಾ ತಿಳುವಳಿಕೆಗೆ ಯಾವ ಆಧಾರವೂ ಇರುವುದಿಲ್ಲ. ಈ ಕಾನೂನಿನಿಂದ ಪ್ರಜಾ ಬಾಹುಳ್ಯಕ್ಕಾಗಲಿ ಅಥವಾ ಯಾವ ಒಬ್ಬ ನಿಗ್ಗಾಗಲಿ ವ್ಯಥಾ ಅನ್ಯಾಯವು ನಷ್ಟವೂ ಆಗುವ್ವದೆಂದು ತೋರಿಸಿಕೊಡುವುದು ಸಾಧ್ಯವಾಗಿದ್ದ ಪಕ್ಷಕ್ಕೆ ನಾವು ಎಷ್ಟುಮಾತ್ರಕ್ಕೂ ಅದರ ಪಕ್ಷವನ್ನು ವಹಿಸುತ್ತಿರಲಿಲ್ಲ. ಸಕಲ ಮತಗಳೂ ಧರ್ಮನಿಷ್ಠ ಪಾತಕೆಗಳಿಂದ ಕೂಡಿ ಮೆರೆಯುತ್ತಿರಬೇಕೆಂಬುವುದೇ ನಮ್ಮ ಕುತೂಹಲ ಸಣ್ಣದಾಗಿಯೂ ಈಗೀಗ ವೃದ್ಧಿಹೊಂದುತ್ತಲೂ ಇರುವಂಥಾ ಗುಂಪಿನ ಪ್ರಜೆಗಳಿಗೆ ಪಕ್ಷಪಾತದಿಂದ ಅನ್ಯಾಯವಾಗದಂತೆ ಈ ಕಾನೂನು ಕಾಪಾಡುತ್ತದೆಯಾದಕಾರಣ ನಾವು ಅದರ ಪಕ್ಷವನ್ನು ಹಿಡಿದು ಮಾತನಾಡುವೆವೇ ಹೊರತು ಮತ್ತೆ ಬೇರೆ ಅಲ್ಲ. ಈ ಕಾನೂನು ಜಾರಿಗೆ ಬಂದರೂ ಬಾರದೆಹೋದರೂ ಕ್ರೈಸ್ತ ಪ್ರಜೆಗಳಿಗೆ ಯಾವ ಪ್ರಯೋಜನವಾಗಲಿ ಕುಂದಕವಾಗಲಿ ಉಂಟಾಗಲಾರದು. ಇದೇ ಪ್ರಕಾರ ಅದರಿಂದ ಹಿಂದೂಮತಕ್ಕೂ ಎಂದಿಗೂ ಯಾವ ವಿಧವಾದ ನ್ಯೂನತೆಯೂ ಉಂಟಾಗುವುದಿಲ್ಲ.

"ನಮ್ಮೂರಿನ ನದಿಗಳು ನಿಮ್ಮೂರಿನ ನದಿಗಿಂತ ಎಷ್ಟೋ ಉತ್ತಮ."

ನಮ್ಮ ಆಸೀಯ ಖಂಡದ ವಾಯುವ್ಯ ಭಾಗದಲ್ಲಿ ಒಂದು ಊರಿದ್ದಿತು. ಅದನ್ನು ಮಹಾ ಶಕ್ತನಾದ ಒಬ್ಬ ದೊರೆಯು ಆಳುತ್ತಿದ್ದನು. ಆತನ ಹತ್ತಿರ ಮಹಾ ಖ್ಯಾತಿವಂತನಾದ ದಳವಾಯಿ ಇದ್ದನು. ಈ ದಳಪತಿಯು ಬಹು ಧೈರ್ಯಶಾಲಿ. ಮಹಾ ಶೂರನು. ಪ್ರಜೆಗಳೂ ದೊರೆಯೂ ಸಹಾ ಅವನನ್ನು ಬಹಳವಾಗಿ ಘನಪಡಿಸುತ್ತಿದ್ದರು. ಹೀಗೆ ಪೆಸರ್ಗೊಂಡಿದ್ದ ಈ ದೊಡ್ಡ ಮನುಷ್ಯನು ಪ್ರಬಲವಾದುದೊಂದು ಕೊರತೆಯಿದ್ದಿತು. ಅದೇನಂದರೆ—ಅವನ ದೇಹದಲ್ಲಿ ಕುಷ್ಠರೋಗವು ಕಾಣಿಸಿಕೊಂಡಿದ್ದ ಕಾರಣ ಆ ಕಾಹಿಲೆಯೇ ದೇಹವನ್ನೆಲ್ಲಾ ವ್ಯಾಪಿಸಿ ತನ್ನನ್ನು ಇತರ ಜನರ ಸಹವಾಸಕ್ಕೆ ಸಂಪೂರ್ಣ ಅಯೋಗ್ಯನನ್ನಾಗಿ ಮಾಡಿ ಬಿಡುವದೇನೋ ಎಂದು ಮನಸ್ಸಿನಲ್ಲಿ ರಾತ್ರೀ ಹಗಲೂ ಚಿಂತೆಯು ಕೊರೆಯುತ್ತಿದ್ದಿತು. ಅವನ ಸಂತೋಷವೆಲ್ಲಾ ದುಃಖವಾಗಿ ಮಾರ್ಪಡುವಂಥದ್ದಾಯಿತು.

ಹೀಗೆ ಅನೇಕ ಕಾಲವು ಕಳೆದು ಹೋಗುತ್ತಿರಲು, ಒಂದಾನೊಂದು ದಿನ ಆ ದಳವಾಯಿಯ ಮನೆಯಲ್ಲಿ ಭಾರ್ಯೆಯು ಒಬ್ಬ ಚಿಕ್ಕ ಹುಡುಗಿಯ ಕೈಯಲ್ಲಿ ಸೇವೆಯನ್ನು ಒಪ್ಪಿಸಿಕೊಳ್ಳುತ್ತಿದ್ದಳು. ಆ ಹುಡುಗಿಯು ಬೇರೊಂದು ದೇಶದವಳು. ಆ ದೇಶದ ಮೇಲೆ ಈ ದಳಪತಿಯು ದಂಡೆತ್ತಿ ಹೋಗಿದ್ದು ಜಯಿಸಿ, ಆ ದೇಶದಲ್ಲಿ ಚಿಕ್ಕವರೂ ದೊಡ್ಡವರೂ ಆದವರನೇಕರನ್ನು ಸೆರೆ ಹಿಡಿದುಕೊಂಡು ಬಂದಿದ್ದನು. ಅಂಥ ಸೆರೆಯವರೊಳಗೆ ಈ ಚಿಕ್ಕ ಹುಡುಗಿಯು ಒಬ್ಬಳು. ಅವಳು ಯಜಮಾನಿಯ ಬಳಿಯಲ್ಲಿ ಸೇವೆಯನ್ನು ಮಾಡುತ್ತಿರಲು ಆಕೆಯನ್ನು ಕುರಿತು—"ನಮ್ಮ ಯಜಮಾನರು ನನ್ನನ್ನು ಹಿಡಿದು ತಂದ ದೇಶಕ್ಕಾದರೂ ಹೋಗಬಾರದೇ" ಎಂದಳು. ಈ ಚಿಕ್ಕ ಹುಡುಗಿಯ ಮಾತನ್ನು ಕೇಳಿ ಆ ಯಜಮಾನಿಗೆ ಬಹಳ ಆಶ್ಚರ್ಯವಾಯಿತು. ಆಕೆಯು ಹುಡುಗಿಯನ್ನು ನೋಡಿ—ಇದೇನು, ಹೀಗೆ ಹೇಳುತ್ತೀ? ನಮ್ಮ ಯಜಮಾನರು ನಿಮ್ಮ ದೇಶಕ್ಕೆ ಯಾಕೆ ಹೋಗಬೇಕು? ಎಂದು ಕೇಳಲು, ಹುಡುಗಿಯು—ಅಮ್ಮಾ, ಯಜಮಾನರು ನಮ್ಮ ದೇಶಕ್ಕೆ ಹೋದರೆ ಅಲ್ಲಿ ಒಬ್ಬ ಮಹಾತ್ಮನಿದ್ದಾನೆ, ಆತನು ಇವರನ್ನು ಗುಣಮಾಡಿ ಕಳುಹಿಸಬಲ್ಲನು ಎಂದು ಹೇಳಿದಳು. ಈ ಮಾತು ಕ್ರಮೇಣ ದೊರೆಯವರ ಕಿವಿಗೂ ಮುಟ್ಟಿತು. ಅವನು ಆ ಹುಡುಗಿಯ ದೇಶದ ರಾಜನ ಅರಸನಿಗೆ ಒಂದು ಕಾಗದವನ್ನು ಬರೆಯಿಸಿ, ಧನಕನಕವಸ್ತ್ರಾಭರಣಗಳನ್ನು ಬಹುಮಾನವಾಗಿ ಆ ದಳವಾಯಿಯ ಕೈಯಲ್ಲಿ ಕೊಟ್ಟು ಕಳುಹಿಸಿದನು. ದಳಪತಿಯು ರಾಜನಿಂದ ಹೊರಟು ಪತ್ರಿಕೆಯನ್ನೂ ಬಹುಮಾನದ ಪದಾರ್ಥವನ್ನೂ

ಕು ಅನೇಕ ಪರಿವಾರ ಜನಗಳನ್ನು ಕರೆದುಕೊಂಡು ಪಯಣಗಿ ಹೊರಟು ಬಹು ಆಡಂಬರದಿಂದ ಬಂದು ದೇಶವನ್ನು ದನು. ಈ ದೊಡ್ಡ ಮನುಷ್ಯನು ಬಂದ ವರ್ತಮಾನವನ್ನು ದೇಶದ ಅರಸು ತನ್ನ ಸಚಿವ ಪ್ರಧಾನರನ್ನು ಕಳುಹಿಸಿ ಆದ ಬಹು ಮರ್ಯಾದೆಯೊಡನೆ ಕರೆಯಿಸಿಕೊಂಡು ಉಪಚರಿಸಿ ದೂರ ಪಯಣಮಾಡಲು ನಿಮಿತ್ತವೇನೆಂದು ಕೇಳಿದನು. ದಳಪತಿಯು ತನ್ನ ರಾಜನು ಬರೆಯಿಸಿಕೊಟ್ಟಿದ್ದ ಪತ್ರಿಕೆ ಕೈಗೆ ಕೊಟ್ಟನು. ಅದರಲ್ಲಿ ಬರೆದಿದ್ದ ಅಭಿಪ್ರಾಯವೇ —ಸ್ವಸ್ತಿ. ಈ ಪತ್ರಿಕೆಯನ್ನು ತಂದಿರುವ ನಮ್ಮ ಸೇವಕ ಈ ಜನನಿಗೆ ಪ್ರಬಲವಾದ ರೋಗವು ಹಿಡಿದಿರುವದು. ಈತ ನಿಮ್ಮ ಬಳಿಗೆ ಕಳುಹಿಸಿರುತ್ತೇನೆ. ನೀವು ಈತನನ್ನು ಸ್ವಸ್ಥ ಕಳುಹಿಸಬೇಕೆಂಬುದು ನಮ್ಮ ಕೋರಿಕೆಯಾಗಿದೆ. ಹೀ ಬರೆದಿರುವ ಪತ್ರವನ್ನು ನೋಡಿ ಆ ರಾಜನು ಪರಮಾಶ್ಚರ್ಯಭರಿತನಾಗಿ—ಇದೇನು ಮಾಯವ್ವೋ! ಇದೇ ದಳವಾಯಿ ಈ ರಾಜನು ಕೆಲವು ದಿನಗಳ ಹಿಂದೆ ಕಳುಹಿಸಿ ದೇಶದ ಸೂರೆಗೊಂಡು ಹೋಯಿತು ಸಾಲದೆ ಈಗ ಹೊಸದಾಗಿ ಜಗಳ ತೆರೆದುಕೊಂಡು ಬರುವ ಈ ಹೇತುವೇನು? ಎಂದು ವಾಗಿ ಚಿಂತಿಸುತ್ತಿರುವ ಸುದ್ದಿಯನ್ನು ಆ ದೇಶದಲ್ಲಿದ್ದ ಆತ್ಮನು ಕೇಳಿ—ನೀವು ಈ ವಿಷಯದಲ್ಲಿ ಚಿಂತಿಸಬೇಕಾದ ವಿರುವದಿಲ್ಲ. ಆ ದಳಪತಿಯನ್ನು ನನ್ನ ಬಳಿಗೆ ಕಳುಹಿಸಿ ನು ಅವನನ್ನು ಸ್ವಸ್ಥ ಪಡಿಸುವದೂ ಅಲ್ಲದೆ ನಮ್ಮ ಈ ಲ್ಲಿ ದೇವರ ಮಹಾತ್ಮ್ಯವು ಪ್ರಸನ್ನವಾಗಿರುವ ವಿಷಯವನ್ನು ಮುಂದಿಟ್ಟು ಮಾಡಿಸಿ ಕಳುಹಿಸುತ್ತೇನೆ ಎಂದು ಹೇಳಿ ಕಳುಹಿದನು.

ತರುವಾಯ ಆ ದಳಪತಿಯು ರಥವನ್ನೇರಿ ಅರಮನೆಯ ಕಟ್ಟ ಧರ್ಮಿಷ್ಠರು ಮುಂತಾದವರಿಂದ ಪರಿವೃತನಾಗಿಯೂ ದೀಪಾವಳಿಗಳನ್ನು ಮೆರೆಯಿಸಿಕೊಂಡವನಾಗಿಯೂ ಹೊರ ಮಹಾತ್ಮನಿರುವ ಕುಟೀರಕ್ಕೆ ಬಂದನು. ಆಗಲು ಮಹಾತ್ಮನಿರುವ ಸ್ಥಾನವನ್ನೂ ಬಿಟ್ಟೇಳದೆ ತನ್ನ ಸಮುಖದಲ್ಲಿ ವನ್ನು ಮಾಡುತ್ತಿದ್ದ ಶಿಷ್ಯನಿಗೆ ಹೇಳತಕ್ಕದ್ದನ್ನು ಹೇಳಿ ದನು. ಆ ಶಿಷ್ಯನು ಈಚೆಗೆ ಬಂದು ಆ ದೊಡ್ಡ ಮನುಷ್ಯನ ಕುರಿತು—ಅಯ್ಯಾ ದಳವಾಯಿಯೇ, ನೀನು ಇಲ್ಲಿಗೆ ಸಮೀಪವಾಗಿ ಹರಿಯುತ್ತಿರುವ ಆ ಹೊಳೆಗೆ ಹೋಗಿ ಏಳು ಸಾರಿ ಸ್ನಾನ ಮಾಡಿದರೆ ನಿನ್ನ ರೋಗವು ಪರಿಹಾರವಾಗುವದು ಅಪ್ಪಣೆಯಾಗಿದೆ ಎಂಬುದಾಗಿ ಹೇಳಿ ಬಳಿಕ ಹೊರಟು ದನು. ಆ ಪರಾಕ್ರಮಶಾಲಿಗಾದರೋ ಮಹಾ ಕೋಪವುಂಟಾ ಇವನೆಂಥ ಮಹಾತ್ಮನು! ನನ್ನಂಥ ದೊಡ್ಡ ಮನುಷ್ಯ ಸ್ವಲ್ಪವೂ ಲಕ್ಷ್ಯಮಾಡದೆ ಇದ್ದ ಬಳಿಯಿಂದಲೆ ಹೀಗೆ ಹೇಳಿ ಸಿದ್ದಾನೆ! ಇವನ ಧೈರ್ಯವು ಎಷ್ಟು? ಇಂಥ ಅಪಮಾನ ಹೊಂದಿ ಹೋಗುವದಕ್ಕೇನೇ ನಾನಿಷ್ಟು ದೂರ ಬಂದದ್ದು? ದೇಶವನ್ನೆಲ್ಲಾ ಸುಟ್ಟು ಬೂದಿಯನ್ನಾಗಿ ಮಾಡತಕ್ಕ ಪರಾಕ್ರಮವುಳ್ಳವನನ್ನು ಈ ದೇಶೀಯರು ಅರಿಯರೇ? ಕೆಲವು ದಿನ ಹಿಂದೆ ನಾನು ಬಂದು ಈ ದೇಶವನ್ನು ಸೂರೆ ಮಾಡಿಕೊಂಡು ದ್ದು ಅಲ್ಲದೆ ಇದುವರೆಗೂ ಈ ದೇಶದ ಅರಸನು ನಮ್ಮ ಅರಸನಿಗೆ ಕಪ್ಪವನ್ನು ಒಪ್ಪಿಸುವಂತೆ ಮಾಡಿದೇನೆಂಬು ಇಷ್ಟು ಬೇಗ ಮರೆತರೋ? ಸ್ನಾನಮಾಡಬೇಕಾದರೆ ದೇಶದಲ್ಲಿರುವ ನದಿಗಳಿಗಿಂತ ಈ ದೇಶದ ಹೊಳೆಯು ಬಹು ವಾದುದೋ? ಈ ಹೊಳೆಯೋ ಬಹಳ ನೀರಸವಾಗಿದೆ. ದೇಶದ ಹೊಳೆಗಳೋ ಸಮುದ್ರದ ಹಾಗೆ ವಿಸ್ತಾರವಾ ಅತಿ ರಮಣೀಯವಾದ ಪ್ರದೇಶಗಳಲ್ಲಿ ಹರಿಯತಕ್ಕವುಗಳಾ ಇವೆ. ಅಂಥ ಪುಣ್ಯತೀರ್ಥಗಳಲ್ಲಿ ನಾನೆಷ್ಟೋ ಸಾರಿ ಮಾಡಿರಲಿಲ್ಲವೇ? ಅದರೂ ನನಗೆ ಗುಣವಾಗದಿರಲು ಈ ಗ್ಯನ ಮಾತನ್ನು ಕೇಳಿ ಕೆಸರಿನ ಮುದ್ದೆಯಾಗಿರುವ ಈ ಹೊಳೆಯಲ್ಲಿ ನಾನು ಮೈತೊಳೆದುಕೊಂಡರೆ ಗುಣವಾಗುವದಂದ? ಇಷ್ಟು ಅಪಮಾನಕ್ಕೆ ನನ್ನನ್ನು ಗುರಿಮಾಡಿದವರಿಗೆ ಶಿಕ್ಷೆಯನ್ನು ಕೊಟ್ಟರೆ ತಾನೆ ಆದೀತು? ಎಂದು ಹೇಳಿ ಕ್ರೋಧಪರವಶನಾದನು.

ಆಗ ಆತನ ಸೇವಕರು ಬಂದು—ಸ್ವಾಮಿ, ತಾವು ಈ ಪ್ರಕಾರ ಸಿಟ್ಟುಗೊಳ್ಳುವದು ತಕ್ಕದ್ದಲ್ಲ. ಈ ಮಹಾತ್ಮನು ಹೇಳಿರುವ ಕಾರ್ಯವು ಅಷ್ಟು ದೊಡ್ಡ ವಿಷಯವಲ್ಲ. ಅದನ್ನು ಮಾಡುವದರಿಂದ ತಮಗೆ ನಷ್ಟವೇನೂ ಇಲ್ಲ. ಒಂದು ವೇಳೆ ಆತನು —ಇಂಥಿಂಥ ರಾಜ್ಯಗಳ ಅರಸುಗಳನ್ನು ಸದೆ ಬಡಿದು ಅವರ ಕೋಶವನ್ನೆಲ್ಲಾ ತಂದು ಕೊಡೆಂದಾಗಲಿ ಸಾವಿರಾರು ಗುಲಾಮರನ್ನು ಹಿಡಿದು ತಂದೊಪ್ಪಿಸೆಂದಾಗಲಿ ಹೇಳಿದ್ದರೆ ನಾವು ಆತನ ಕೇವಲ ಸಂತೋಷದಿಂದ ನಡೆಸುತ್ತಿರಲಿಲ್ಲವೇ? ಹೀಗಿ ಅತಿ ಸುಲಭವಾದ ಈ ಕೆಲಸವನ್ನು ಆತನು ನೇಮಿಸಿರ ನಿಷ್ಟು ಆವಂದದಿಂದ ಇದನ್ನು ಮಾಡಲಾಗದು! ಎಂದು ವಿನಯದಿಂದ ಅರಿಕೆ ಮಾಡಿಕೊಳ್ಳಲು, ಆ ದಳಪತಿಗೆ ಇಳಿದು ಸ್ವಲ್ಪ ಶಾಂತನಾಗಿ ಸೇವಕರ ನಯವಾಕ್ಯದಿಂದ ಬೇರೆಯಾಗಲು ಬಿಟ್ಟಿಗೆ ಆ ಹೊಳೆಗೆ ಹೋಗಿ ಏಳು ಮೈಯನ್ನು ತೊಳೆದುಕೊಂಡನು. ದೈವ ಕಟಾಕ್ಷದಿಂದ ಕುಷ್ಠರೋಗವು ಪರಿಹಾರವಾಯಿತು.

ಕಥೆಯನ್ನು ನೋಡಲಾಗಿ ಇವರ ಅಭಿಪ್ರಾಯವು ಸುಲಭ ಗೊತ್ತಾಗುತ್ತದೆ. ನಿಮ್ಮ ವಿದೇಶೀಯವಾದ ಮತವು ದಕ್ಕೆ? ನಮ್ಮ ಮತವು ಎಷ್ಟೋ ಉತ್ತಮವಾಗಿದೆ. ವಾದ ನದಿಯಂತಿರುವ ನಮ್ಮ ಭಗವದ್ಗೀತೆಗಿಂತ ನಿಮ್ಮ ಸತ್ಯವೇದವು ಹೆಚ್ಚೋ? ನಮ್ಮ ಹಿರಿಯರ ಕಾಲದಿಂದ ಮತವು ತೃಪ್ತಿಯನ್ನು ಕೊಡುತ್ತಾ ಬರುತ್ತಿರುವದೋ ಅದನ್ನು ಬಿಟ್ಟುಬಿಡುವದು ನ್ಯಾಯವಲ್ಲ ಎಂದು ಎಷ್ಟೋ ಮಂದಿ ಹೇಳುತ್ತಿದ್ದಾರಲ್ಲವೇ? ಈ ಅಭಿಪ್ರಾಯವನ್ನು ಖಂಡಿಸುವದು ನಮ್ಮ ಪ್ರಕೃತ ಉದ್ದೇಶವಲ್ಲ. ನಾವು ಈಗ ಹೇಳುವ ಮುಖ್ಯವಿಷಯವೇನೆಂದರೆ—ಯೇಸುಕ್ರಿಸ್ತಸ್ವಾಮಿಯಿಂದ ಹೊರಟುಬರುತ್ತಿರುವ ಪಾಪವಿಮೋಚನೆಯೆಂಬ ನದಿಯು ನಮಿಾಪದಲ್ಲೇ ಹರಿಯುತ್ತಿದೆ. ಅದರ ಮಹಾತ್ಮ್ಯವನ್ನು ಅನುಭವಪೂರ್ವಕವಾಗಿ ತಿಳಿದವರು ಅನೇಕರಿದ್ದಾರೆ. ನೀವು ನಿಮ್ಮಲ್ಲಿರುವ ಅನೇಕ ಯತ್ನಗಳನ್ನು ಪರೀಕ್ಷಿಸಿದ್ದೀರಿ. ನೀವು ನಿಮ್ಮ ಪುಣ್ಯತೀರ್ಥಗಳಲ್ಲಿ ಮೈತೊಳಕೊಂಡಿರಬಹುದು. ನಿಮ್ಮ ಆರಾಧನಾ ಕ್ರಮವನ್ನೂ ಅನುಸರಿಸುತ್ತಾ ಬಂದಿದ್ದೀರಿ. ನಿಮ್ಮಲ್ಲಿರುವ ಪುರಾತನ ಗ್ರಂಥಗಳನ್ನೂ ಓದಿದ್ದೀರಿ. ಅವುಗಳಿಂದ ಏನಾದರೂ ಗುಣವುಂಟಾಗಿದೆಯೇ? ಈ ದಳಪತಿಯ ಚರಿತ್ರೆಯನ್ನು ಕೇಳಿದ ಮೇಲೆ ಆತನು ಪರೀಕ್ಷೆಮಾಡಿ ಅನುಭವಕ್ಕೆ ತಂದುಕೊಂಡಂತೆಯೇ ಈಗಲೂ ಕ್ರೀಸ್ತನ ಬಳಿಯಿಂದ ಹೊರಟು ಬರುವ ದೈವಕೃಪೆಯೆಂಬ ಹೊಳೆಯಲ್ಲಿ ಮಿಂದು ನಿಮ್ಮ ಪಾಪಗಳನ್ನು ಕಳೆದುಕೊಳ್ಳಿರಿ.

ಒಳದೇಶದ ವೃತ್ತಾಂತಗಳು.

ಮೈಸೂರು ಸರ್ಕಾರದವರು ಹತ್ತು ರೆವಿನ್ಯೂ ಅಪೀಲುಗಳನ್ನು ತೀರ್ಮಾನ ಮಾಡಿ, ಈ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿದಾರೆ.

❖❖❖❖

ತುಂಕೂರು ಡಿಸ್ಟ್ರಿಕ್ಟಿಗೆ ಸೇರಿದ ಚಿಕ್ಕನಹಳ್ಳಿಯಲ್ಲೂ, ಅಮ್ಮಕೂರಿನಲ್ಲೂ ಸಂತೆ ಕಟ್ಟುವಂತೆ ಏರ್ಪಾಡು ಮಾಡಬೇಕೆಂದು ಗೊತ್ತುಮಾಡಿದಾರೆ.

❖❖❖❖

ತುಂಕೂರು ಡಿಸ್ಟ್ರಿಕ್ಟ್ ಬೋರ್ಡಿನವರು ಪ್ರಾರಂಭಿಸಿದ ಕಾಮಗಾರಿಗಳನ್ನೆಲ್ಲಾ ಪೂರ್ತಿಮಾಡಬೇಕೆಂದು ತಿಳಿಸಿ, ೧೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಕೋಲಾರದ ಡಿಸ್ಟ್ರಿಕ್ಟ್ ಪೊಲೀಸ್ ಸೂಪರೇಂಟರಾದ ಮೆ॥ ಪಿ. ಬಿ ಥಾಮಸ್ ಯವರು ಪತ್ನಿಸಹಿತ ಇದೇ ತಾ. ೧೨ನೇ ಮಂಗಳವಾರದಿಂದ ರಜಾ ಉಪಯೋಗಿಸಿಕೊಂಡು, ಶೀಮೆಗೆ ಪ್ರಯಾಣ ಮಾಡಿದರು.

❖❖❖❖

ಮಹಾಮಾತೃ ಶ್ರೀ ಯವರೂ, ಮಹಾರಾಣಿಯವರೂ, ಮಹಾರಾಜಕುಮಾರಿಗಳೂ ಪರಿವಾರ ಸಹಿತ ಮೊನ್ನೆ ನಂಜನಗೂಡಿಗೆ ದಯಮಾಡಿ, ಕೃತ್ತಿಕಾದೀಪ ಉತ್ಸವಾದಿಗಳನ್ನು ಪರಾಂಬರಿಸಿ, ವಾಪಸು ಬಂದರು.

❖❖❖❖

ದೊಡ್ಡಬಳ್ಳಾಪುರದ ಚಿನ್ನದ ಗಣಿಯಲ್ಲಿ ಚಿನ್ನವನ್ನು ತೆಗೆಯುವದಕ್ಕೆ ಬೆಂಗಳೂರಿನಲ್ಲಿರುವ ಮೆ॥ ದೊಬ್ರೋವಿಚ್ ಎಂಬ ಸಾಹೇಬರು ಒಂದು ಕಂಪನಿಯನ್ನು ಮಾಡಿ, ೧೫ ಲಕ್ಷ ರೂಪಾಯನ್ನು ಷೇರುಗಳ ಮೂಲಕ ಕೂಡಿಸುತ್ತಿದಾರೆ

❖❖❖❖

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಡಾಕ್ಟರ್ ಅಪ್ಪಯ್ಯನವರನ್ನು ಮೈಸೂರು ಸರ್ಕಾರದವರು ಮತ್ತೆ ದಂಡಿನ ಸರ್ಕಾರಕ್ಕೆ ಕಳುಹಿಸುತ್ತಾರೆಂದು ಪ್ರಕಟವಾಗಿದೆ. ಇವರು ಮೊದಲು ಬೆಂಗಳೂರು ದಂಡಿನಲ್ಲಿ ಡಾಕ್ಟರಾಗಿದ್ದರು.

❖❖❖❖

ಇಂಡಿಯಾ ಗವರ್ನಮೆಂಟಿನವರು ಮೆ॥ ಎಸ್. ಎಂ. ಫ್ರೇಸರ್ ಯವರನ್ನು ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾಗಿಯೂ ಕೊಡಗಿನ ಚೀಫ್ ಕಮಿಷನರಾಗಿಯೂ ಇರತಕ್ಕದ್ದೆಂದು ಖಾಯಂ ಮಾಡಿರುತ್ತಾರೆಂದು ತಿಳಿಸಲು ಸಂತೋಷಪಡುವೆವು.

❖❖❖❖

ಪಂಡಿತ ಕೃಷ್ಣಾಚಾರ್ಯ, ಭಾಗವತ ನಾರಾಯಣ ಶಾಸ್ತ್ರಿಗಳೂ ರಾಜಧಾನಿಗೆ ಬಂದು ಎರಡು ಮೂರು ವಾರಗಳಿಂದ ಅನೇಕ ಕಡೆಗಳಲ್ಲಿ ಹರಿಕಥೆಗಳನ್ನು ಮಾಡುತ್ತಿದಾರೆ. ಪುರಜನರೂ ಅಧಿಕಾರಿಗಳೂ ವರ್ತಕರೇ ಮುಂತಾದವರೂ ಚಂದಾ ಕೊಟ್ಟು ಕಥಾ ಶ್ರವಣ ಮಾಡಿ, ಹೊಗಳುತ್ತಿರುವರು.

❖❖❖❖

ಅರಮನೆಯಲ್ಲಿದ್ದ ಪೂರ್ವಕಾಲದ ಕೆಲವು ಭಾರೀ ತಸ್ವೀರುಗಳನ್ನು ಪ್ರಸಿದ್ಧ ಚಿತ್ರಗಾರರಾದ ರಾಜಾರವಿವರ್ಮರವರು ಮತ್ತೆ ಬರೆದು ತರುವದಕ್ಕೆ ತೆಗೆದುಕೊಂಡು ಹೋಗಿದಾರೆ. ಕೆಲಸವೆಲ್ಲಾ ಪೂರೈಸಿದ್ದರಿಂದ ಅವರು ಅವುಗಳ ಸಮೇತ ಮುಂದಿನ ವಾರದಲ್ಲಿ ರಾಜಧಾನಿಗೆ ಬರುವರೆಂದು ಕೇಳುತ್ತೇವೆ.

❖❖❖❖

ಬೊಂಬಾಯಿ ಪಟ್ಟಣದಲ್ಲಿ ನಮ್ಮ ಮಹಾರಾಜರವರ ಪರಿಚಿತಸ್ಥರಾದ ಮೆ॥ ವೀರಚಂದ್ ದೀಪಚಂದ್ ಎಂಬ ಸಾಹುಕಾರರು ತಮ್ಮ ಕುಮಾರನಿಗೆ ಈಗ ವಿವಾಹ ಮಾಡುವರು. ವಧೂವರರಿಗೆ ಕೊಡುವದಕ್ಕೆ ಅರಮನೆಯಿಂದ ಉಡುಗೆರೆ ಮುಂತಾದ್ದನ್ನು ಕಳೆದ ವಾರ ಬೊಂಬಾಯಿಗೆ ಕಳುಹಿಸಿಕೊಟ್ಟಿದಾರೆ.

❖❖❖❖

ಗುಂಡ್ಲುಪೇಟೆ ಕಸಬಾ ಮುಸಾಫರಖಾನೆ ಬಳಿ ಕಳೆದ ತಿಂಗಳು ೧೩ ರಲ್ಲಿ ಒಬ್ಬ ದೊಡ್ಡ ಹೆಂಗಸಿನ ಶವ ಬಿದ್ದಿತ್ತೆಂದು ತಿಳಿಸಿದ್ದೆವಷ್ಟೆ. ಅದೇ ತಿಂಗಳ ೧೭ ರಲ್ಲಿ ಅದೇ ತಾಲ್ಲೂಕು ಹಂಗಳದ ಚಾವಡಿ ಬಳಿ ಸುಮಾರು ೪೦ ೪೫ ವರುಷದ ಗಂಡಸಿನ ಹೆಣ ಬಿದ್ದಿತ್ತೆಂತಲೂ ಕ್ಷಯರೋಗದಲ್ಲಿ ಸತ್ತವನೆಂತಲೂ ಪ್ರಕಟವಾಗಿದೆ.

❖❖❖❖

ರಾಜಪುಟಾನಾ ಪ್ರಾಂತ್ಯದಲ್ಲಿ ಸುಮಾರು ಒಂದು ಲಕ್ಷ ಪ್ರಜೆಗಳ ಜನರ ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿ ರಿಲೀಫ್ ಕಾಮಗಾರಿಗಳನ್ನು ಮಾಡುತ್ತಾ ಜೀವನ ಮಾಡಲಾರಂಭಿಸಿದಾರೆ. ಇತ್ತಲಾಗಿ ನಮ್ಮ ಸಂಸ್ಥಾನದಲ್ಲಿ ಕ್ಷಾಮದ ಹೆಸರು ಇಷ್ಟು ಹುಟ್ಟಿದಿದ್ದರೂ ಅನೇಕ ಕಡೆಗಳಲ್ಲಿ ಮಳೆಬೆಳೆಗಳಿಲ್ಲದೆ ಪ್ರಜೆಗಳು ಜೀವನಕ್ಕೆ ತುಂಬಾ ತಾಪತ್ರಯಪಡಲಾರಂಭವಾಗಿರುವದು. ಗೋಕಾಯಿಗಳಿಗೂ ಜನರಿಗೂ ನೀರು ಸಿಕ್ಕುವದೂ ಕಷ್ಟವಾಗುತ್ತಾ ಬಂದಿದೆ

❖❖❖❖

ಕೋಲಾರದ ಚಿನ್ನದ ಗಣಿಗಳಲ್ಲಿ ಕಳೆದ ತಿಂಗಳು ನಡೆದ ಅನಾಹುತಗಳಲ್ಲಿ ಐದಾರುಮಂದಿ ಕೂಲಿಕಾರರು ಪ್ರಾಣ ಕೊಟ್ಟರು; ಹತ್ತಾರು ಮಂದಿಗೆ ಗಾಯಗಳಾದವು ಇಂಥಾ ಅನಾಹುತಗಳನ್ನು ಸಂಪೂರ್ಣವಾಗಿ ತಪ್ಪಿಸುವದು ಸಾಧ್ಯವಲ್ಲ. ಬುದ್ಧಿಹೀನರಾದ ಕೂಲಿ ಜನರು ಭೂಮಿಯೊಳಗೆ ೨೦೦—೪೦೦ ಅಡಿ ಆಳವಾದ ಹಳ್ಳಗಳಲ್ಲಿ ಇಳಿದು ಕೆಲಸಮಾಡಬೇಕಾಗಿರುತ್ತದೆ. ಗಣಿ ಕಂಪನಿಯವರೂ ತಕ್ಕಮಟ್ಟಿಗೆ ಉಸ್ತುವಾರಿ ಇಟ್ಟು, ಅಪಾಯ ಸಂಭವಿಸದಂತೆ ನೋಡಿಕೊಳ್ಳುತ್ತಿದಾರೆ.

❖❖❖❖

ಕೋಲಾರದ ಚಿನ್ನದ ಗಣಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೆಲವು ಭಾರೀ ಮೊಕದ್ದಮೆಗಳು ದಾಖಲಾಗಿವೆ. ಕೋಲಾರದ ಮುಲ್ಲಪ್ಪನೆಂಬ ದೊಡ್ಡ ವರ್ತಕನ ಹತ್ತಿರ ೨೦೯ ರೂಪಾಯಿನ ಗಣಿ ಚಿನ್ನ ಸಿಕ್ಕಿತೆಂದು ಅವನ ಮೇಲೆ ಮೊಕದ್ದಮೆ ಆಗಿ ನಡೆಯುತ್ತಿದೆ. ಇನ್ನೊಂದು ಮೊಕದ್ದಮೆಯಲ್ಲಿ ಪೊಲೀಸ್ ಹೆಡ್ ಕಾನ್ಸ್ಟೆಬಲ್ ಮನ್ನಾಜಿ ರಾಯನೂ ಇನ್ಸ್ಪೆಕ್ಟರ್ ಕೋಲಾರದ ಕಂದಸ್ವಾಮಿಯೂ ನಾಲ್ವರು ಒಡ್ಡರನ್ನು ಬಂಧನದಲ್ಲಿಟ್ಟು ಹಿಂಸೆಪಡಿಸಿದರೆಂತಲೂ ಆ ಒಡ್ಡರಲ್ಲಿ ಒಬ್ಬನು ಭಾವಿಯಲ್ಲಿ ಬಿದ್ದು ಸತ್ತುಹೋದನೆಂತಲೂ ಪ್ರಕಟವಾಗಿದೆ.

❖❖❖❖

ಕಳೆದ ೧೯೦೪ನೇ ಇಸವಿ ಆಗಾಯಿತು ಇದುವರಗೆ ಕೋಲಾರದ ಗಣಿಗಳಿಂದ ೬,೨೭೫ ರೂಪಾಯಿನ ಚಿನ್ನ ಕಳುವಾದದ್ದು ಪತ್ತೆಯಾಗಿ, ಈ ಪೈಕಿ ೨,೦೦೦ ಮೊಕದ್ದಮೆಗಳಲ್ಲಿ ಸಿಕ್ಕಿದ ೩೧,೧೬೪ ರೂಪಾಯಿನ ಚಿನ್ನವನ್ನು ಗಣಿಗಳ ಕಂಪನಿಯವರಿಗೆ ವಾಪಸು ಆಯಿತು. ಇದಲ್ಲದೆ ೩, ಮೊಕದ್ದಮೆಗಳಲ್ಲಿ ಸಿಕ್ಕಿದ ೩೦,೧೧೫ ರೂಪಾಯಿನ ಬಾಕಿ ಚಿನ್ನಕ್ಕೆ ಸರಿಯಾದ ಮಾಲೀಕರು ದೊರೆಯದೆ ಹೋದದ್ದರಿಂದ ಅದನ್ನೆಲ್ಲಾ ಸರ್ಕಾರದವರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದಾರೆ. ಗಣಿ ಚಿನ್ನವು ಕಳುವುಮಾಡುವವರಲ್ಲಿ ೧೦ಕ್ಕೆ ಇಬ್ಬರು ಮಾತ್ರ ಸಿಕ್ಕಿಬೀಳುವರೆಂದೂ ಉಳಿದ ೮ ಜನ ತಪ್ಪಿಸಿಕೊಳ್ಳುವರೆಂದೂ ಹೇಳುತ್ತಾರೆ. ಇದರಿಂದ ಆ ಪ್ರಾಂತ್ಯ ಪ್ರತಿ ವರುಷವೂ ಬಹಳ ಚಿನ್ನ ಕಳುವಾಗುತ್ತಿರಬೇಕೆಂದು ಊಹಿಸಬಹುದಾಗಿದೆ

ಪ್ರಿನ್ಸ್ ಆಫ್ ವೇಲ್ಸ್ ರವರ ದೇಶಸಂಚಾರ.

ರಾವಲ್‌ಪಿಂಡಿ ಪಟ್ಟಣ

ಡಿಸೆಂಬರ್ ತಾ. ೪ ನೆ ಸೋಮವಾರದಿಂದ ತಾ. ೭ ನೆ ಗುರುವಾರ ರಾತ್ರಿ ವರೆಗೂ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಪರಿವಾರ ಸಹಿತ ರಾವಲ್‌ಪಿಂಡಿ ಎಂಬ ನಗರದಲ್ಲಿದ್ದುಕೊಂಡು, ಹಿಂದೂಸ್ಥಾನದ ಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರ ಆತಿಥ್ಯವನ್ನು ಸ್ವೀಕರಿಸುತ್ತಾ, ಸೈನಿಕರ ಯುದ್ಧಕಾರ್ಯಗಳನ್ನೂ ಸಾಹಸ ಚಮತ್ಕಾರಗಳನ್ನೂ ಪರಾಂಬರಿಸಿ ತುಂಬಾ ಸಂತೋಷಪಟ್ಟರು. ಅಲ್ಲಿ ಹಿಂದುಸ್ಥಾನದ ಸೈನ್ಯದ ಪೈಕಿ ೫೫,೦೦೦ ಸೈನಿಕರೂ ಯುದ್ಧವೀರರೂ, ೧೩,೦೦೦ ಕುದುರೆಗಳೂ, ೧೪೭ ಫಿರಂಗಿಗಳೂ, ೧೩೭ ಮೆಷೀನ್ ಎಂಬ ಫಿರಂಗಿಗಳೂ, ೧೫,೦೦೦ ಹಿಂಬಾಲಕರೂ ಸೇರಿದ್ದರು. ಇಂಥಾ ನೋಟವು ಹಿಂದೂಸ್ಥಾನದಲ್ಲಿ ಅಪೂರ್ವವೆನ್ನುವದಕ್ಕೆ ಸಂಶಯವಿಲ್ಲ.

ಕಾಶ್ಮೀರ ಸಂಸ್ಥಾನ

ತಾ. ೯ನೆ ಶನಿವಾರ ಯುವರಾಜರವರು ಪತ್ನಿಸಹಿತ ಕಾಶ್ಮೀರ ಸಂಸ್ಥಾನದ ರಾಜಧಾನಿಯಾದ ಜಾಮೂ ಪಟ್ಟಣವನ್ನು ತಲಪಿದರು. ಮಹಾರಾಜರವರಿಗೆ ದೊರೆತನ ಸಿಕ್ಕಿ ಸುಮಾರು ಒಂದು ತಿಂಗಳಾಗಿದೆ. ಅವರು ವಿಶೇಷ ಉತ್ಸಾಹಯುಕ್ತನಾಗಿ ಪ್ರಿನ್ಸ್ ಆಫ್ ವೇಲ್ಸ್ ರವರನ್ನು ಎದುರುಗೊಂಡು, ಮೆರವಣಿಗೆಯಾಗಿ ಕರೆದುಕೊಂಡು ಹೋಗಿ, ಅವರಿಗಾಗಿ ಏರ್ಪಡಿಸಿದ್ದ ದಿವ್ಯವಾದ ಕ್ಯಾಂಪಿನಲ್ಲಿ ಇಳಿಸಿದರು. ತರುವಾಯ ಭೇಟಿಮರುಭೇಟಿಗಳು ನಡೆದವು. ರಾತ್ರಿ ಅವರಿಗೆ ಔತಣ ಮಾಡಿದರು. ಮರು ದಿನ ಭಾನುವಾರವಾದ್ದರಿಂದ ಬೆಳಿಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಕ್ಯಾಂಪಿನಲ್ಲೇ ಇದ್ದುಕೊಂಡು ದೇವರ ಆರಾಧನೆಯನ್ನು ನಡಿಸಿ, ಮಧ್ಯಾಹ್ನದ ಮೇಲೆ ಮಹಾರಾಜರವರ ಸಂಗಡ ಹಜಾರಿಬಾಗ್ ಎಂಬ ಉದ್ಯಾನವನಕ್ಕೆ ದಯಮಾಡಿ, ೨೦,೦೦೦ ಬಡಬಗ್ಗರಿಗೆ ತಿಂಡಿಪದಾರ್ಥಗಳ ವಿನಿಯೋಗವನ್ನು ನೋಡಿಕೊಂಡು ಬಂದು, ರಾತ್ರಿಯೇ ಅಮೃತಸರ ಪಟ್ಟಣವನ್ನು ಕುರಿತು ಪ್ರಯಾಣಮಾಡಿದರು. ಜಾಮೂ ನಗರದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸರಿನ ಮೇಲೆ ಒಂದು ವಿದ್ಯಾಶಾಲೆಯನ್ನು ಕಟ್ಟಿಸುತ್ತೇವೆಂದು ಮಹಾರಾಜರವರು ಅವರಿಗೆ ತಿಳಿಸಿ ಅವರ ಅನುಮತಿಯನ್ನು ಪಡೆದರು.

ಅಮೃತಸಾರ ಪಟ್ಟಣ.

ತಾ. ೧೧ ನೆ ಸೋಮವಾರ ಬೆಳಿಗ್ಗೆ ಯುವರಾಜರವರು ಪತ್ನಿಸಹಿತ ಅಮೃತಸಾರಕ್ಕೆ ಬಂದಿಳಿದು, ಸರ್ ಛಾರ್ಲಸ್ ರಿವಾಸ್ ಯವರೇ ಮೊದಲಾದ ಉದ್ಯೋಗಸ್ಥರಿಂದ ಸತ್ಕಾರ ಹೊಂದಿ, ಮ್ಯುನಿಸಿಪಲ್ ಅಡ್ರೆಸ್ಸನ್ನು ಅಂಗೀಕರಿಸಿ, ಖಾಲ್ಸಾ ಕಾಲೇಜ್, ಸಿಕ್ಕರ ಚಿನ್ನದ ದೇವಸ್ಥಾನ ಈ ಮೊದಲಾದವನ್ನು ಪರಾಂಬರಿಸಿ, ಆ ರಾತ್ರಿಯೇ ದೆಹಲಿ ನಗರಕ್ಕೆ ಪ್ರಯಾಣಮಾಡಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

ರೆವಿನ್ಯೂ ವಿಚಾರಗಳು

ಗುಬ್ಬಿ ತಾ. ಮೆ॥ ಜುಟ್ಟೇಗೌಡರು—ಗ್ರಾಮಾಂತರಗಳಲ್ಲಿರುವ ಅಗಸ, ಕ್ಷೌರಕ, ಕಮ್ಮಾರ, ಈ ಮೊದಲಾದ ಕೆಲವು ಕಸಬುದಾರರು ಸರ್ಕಾರಿ ಇನಾಮತಿಗಳನ್ನು ಅನುಭವಿಸುತ್ತಾರೆ ಅವರು ಸರ್ಕಾರಕ್ಕೆ ಯಾವ ಚಾಕರಿಯನ್ನೂ ಮಾಡುವುದಿಲ್ಲ ಇದಲ್ಲದೆ ಇನಾಮತಿಯನ್ನು ಯಾವ ಕೆಲಸಮಾಡುವುದಕ್ಕಾಗಿ ಅವರಿಗೆ ಕೊಟ್ಟಿರುವರೋ ಅಂಥಾ ಕೆಲಸವನ್ನು ಮಾಡುವುದಿಲ್ಲ. ಮತ್ತು ಅವರಿಂದ ಏನಾದರೂ ಕಸಬುದಾರಿ ಕೆಲಸಮಾಡಿಸಿಕೊಳ್ಳಬೇಕೆಂದು ರೈತರು ಹೋಗಿ ಕೇಳಿದರೆ ಅವರು ಕೇಳುವಷ್ಟು ದುಡ್ಡು ಕೊಟ್ಟಲ್ಲದೆ ಮಾಡಿಕೊಡುವುದಿಲ್ಲ ಇಂಥಾ ಬಾರಾಬಲೂತಿ ಕಸಬುದಾರರು ಗ್ರಾಮಸ್ಥರಿಗೆ ಕೆಲಸಗಳನ್ನು ಮಾಡಿಕೊಡುವಂತೆಯೂ, ಅವರಿಗಿರುವ ಇನಾಮತಿಗಳನ್ನು ಮನಸ್ಸು ಬಂದಂತೆ ಪರಾಧೀನಮಾಡದಂತೆಯೂ ಕಟ್ಟುಮಾಡಿ, ಜಾರಿಗೆ ತರಬೇಕು

ದಿವಾನರವರು—ಗ್ರಾಮಾಂತರಗಳಲ್ಲಿ ಇನಾಮತಿ ಪಡೆದಿರುವಂಥಾ ಯಾವ ಕಸಬುದಾರನೇ ಆಗಲಿ ಗ್ರಾಮಸ್ಥರಿಗೆ ಕೆಲಸಮಾಡಿಕೊಡುವುದಿಲ್ಲವೆಂದು ತಿರಸ್ಕಾರಮಾಡಿದರೆ ಅಂಥಾವನ ವಿಷಯದಲ್ಲಿ ಪಟೇಲರು ಮೇಲ್ಪಟ್ಟ ಅಧಿಕಾರಿಗಳಿಗೆ ರಿಪೋರ್ಟುಮಾಡಲಿ ಅಂಥಾ ಕಸಬುದಾರರ ಇನಾಮತಿಯನ್ನು ತಪ್ಪಿಸಿ, ಕಂದಾಯ ಡಬಲ್ ಮಾಡುತ್ತೇವೆ ಇದಕ್ಕೆ ಹಿಂದೆ ಮಾಡಿರುವ ರೂಲುಗಳೇ ಸಾಕಾಗಿವೆ ಹೊಸ ನಿರ್ಬಂಧಗಳೇನೂ ಮಾಡಬೇಕಾಗಿಲ್ಲ.

ಚನ್ನಪಟ್ಣ ತಾ ಮೆ॥ ರಂಗಯ್ಯಂಗಾರು—ವರುಷಕ್ಕೆ ಎರಡು ಸಲ ತರೀ ಫಸಲು ಮಾಡುವುದನ್ನು ತಪ್ಪಿಸಬೇಕು ನೀರು ಉಳಿದರೆ ಮೂರನೇ ವರುಷದ ಬೆಳೆಗೆ ಉಪಯೋಗವಾಗುವುದು ವೈಶಾಖ ಫಸಲನ್ನು ತಪ್ಪಿಸಿ ಕಾರ್ತೀಕ ಫಸಲನ್ನು ಮಾತ್ರ ಇಡುವಂತೆ ಹುಕುಂ ಅಪ್ಪಣೆ ಕೊಡಬೇಕು

ದಿವಾನರವರು—ಆಲೋಚನೆ ಮಾಡಬೇಕಾದ ವಿಷಯವೇ ಹೌದು ಹಾಗೆ ಕಟ್ಟುಮಾಡಬೇಕೆಂದು ನಾವೂ ಒಪ್ಪಿಕೊಳ್ಳುತ್ತೇವೆ ಇನ್ನೊಂದಾವರ್ತಿ ಯೋಚಿಸಿ ಹುಕುಂ ಕೊಡುವೆವು

ಶಿವಮೊಗ್ಗೆ ತಾ ಮೆ॥ ಚನ್ನಪ್ಪನವರು—ಸರ್ವೆಸೆಟ್ಲ್ಮೆಂಟ್ ಆದ ಕಾಲದಲ್ಲಿ ಗೋಮಾಳವೆಂದು ಬಿಟ್ಟಿರುವುದುಗಳನ್ನು ಫಾರೆಸ್ಟ್ ಇಲಾಖೆಯವರು ತಮ್ಮ ಸರಹದ್ದಿಗೆ ಸೇರಿಸಿಕೊಂಡಿದ್ದಾರೆ. ಇದರಿಂದ ಗ್ರಾಮಾಂತರಗಳ ಗೋಕಾವುಗಳು ಮೇಯುವುದಕ್ಕೆ ಸ್ಥಳವಿಲ್ಲದೆ ತೊಂದರೆಯಾಗಿದೆ. ಅಂಥಾ ಜಮೀನುಗಳನ್ನು ಫಾರೆಸ್ಟಿನಿಂದ ತಪ್ಪಿಸಿಕೊಡಬೇಕು

ದಿವಾನರವರು—ರೂಲನ್ನು ಬದಲಾಯಿಸುವುದಕ್ಕಾಗಲಾರದು. ಆದರಿಂದ ಕಷ್ಟವನ್ನನುಭವಿಸುತ್ತಿರುವಂಥಾವರು ಅರ್ಜಿ ಬರೆದುಕೊಳ್ಳಲಿ ತನಿಖೆಮಾಡಿ ಸರಿಪಡಿಸುತ್ತೇವೆ

ಫಾರೆಸ್ಟ್ ವಿಚಾರಗಳು

ಹೊಸದುರ್ಗ, ಕಂಸಿ, ಜಗಲೂರು ಸಾಗರ ತಾ ಮೆಂಬರುಗಳು—ಸ್ಟೇಟ್ ಫಾರೆಸ್ಟ್‌ಗಳಲ್ಲಿ ಗೋಕಾವುಗಳನ್ನು ಮೇಯುವುದಕ್ಕೆ ಬಿಟ್ಟರೆ ವಾಸಿಗೆ ಇಷ್ಟೆಂದು ವಿಧಿಸಿರುವ ದರಗಳು ಬಹಳ ಹೆಚ್ಚಾಗಿವೆ ಈ ದರಗಳನ್ನು ಕಮ್ಮಿ ಮಾಡಿಕೊಡಬೇಕು.

ದಿವಾನರವರು—ಹೋದ ವರುಷ ಇದೇ ವಿಷಯವು ಚರ್ಚೆಯಾಯಿತು ಈಗ ಇರತಕ್ಕ ದರಗಳನ್ನು ಬದಲಾಯಿಸಲಾಗುವುದಿಲ್ಲವೆಂದು ಆಗಲೇ ಹೇಳಿದ್ದೇವೆ

ಸಿರಾ, ಚಿಕ್ಕಬಳ್ಳಾಪುರ, ಕೋಲಾರ ತಾ ಮೆಂಬರುಗಳು—ಜೂನ್ ನಿಂದ ಡಿಸೆಂಬರ್ ವರೆಗೆ ಗೋಕಾವುಗಳಿಗೆ ಛಾರ್ಜ್ ಕೊಟ್ಟರೆ ಸ್ಟೇಟ್ ಫಾರೆಸ್ಟಿಗೆ ಬಿಡುವರು ಬೇಸಿಗೆಯಲ್ಲಿ ಛಾರ್ಜ್ ಕೊಡುತ್ತೇವೆಂದರೂ ಮೇಯಗೊಡಿಸುವುದಿಲ್ಲ. ವರುಷಾ ಕಾಲವೂ ಮೇಯುವುದಕ್ಕೆ ಅವಕಾಶಕೊಡುವಂತೆ ಅಪ್ಪಣೆ ಆಗಬೇಕು.

ದಿವಾನರವರು—ಹಾಗೆ ಬಿಡಲಾಗುವುದಿಲ್ಲ ಬೇಸಿಗೆ ತುಂಬಾ ಕಷ್ಟವೆಂದು ತಿಳಿದುಬಂದಾಗ್ಗೆ ಬಿಡುತ್ತೇವೆ ಈ ವರುಷ ಕೆಲವು ಕಡೆ ಸ್ಟೇಟ್ ಫಾರೆಸ್ಟಿನಿಂದ ಹುಲ್ಲು ಕೊಯಿದು ತೆಗೆದುಕೊಂಡು ಹೋಗುವಂತೆ ಅವಕಾಶಕೊಟ್ಟಿದೇವೆ

ಚಾಮರಾಜನಗರದ ಮೆ॥ ಲಕ್ಷ್ಮೀನರಸಿಂಹಯ್ಯಂಗಾರು—ನಮ್ಮ ತಾಲ್ಲೂಕಿನಲ್ಲಿ ಇದುವರೆಗೆ ಡಿಸ್ಟ್ರಿಕ್ಟ್ ಫಾರೆಸ್ಟಿಗೆ ಸೇರಿದ್ದ ಬಹಳ ವಿಸ್ತಾರವಾದ ಕಾಡಿನಲ್ಲಿ ರೈತರು ತಮ್ಮ ಗೋಕಾವುಗಳನ್ನು ಬಿಟ್ಟು ಮೇಯಿಸಿಕೊಳ್ಳುತ್ತಲೂ ವ್ಯವಸಾಯೋಪಕರಣಗಳಿಗೆ ಬೇಕಾಗುವ ಮರಮುಟ್ಟನ್ನು ತಂದುಕೊಳ್ಳುತ್ತಲೂ ಇದ್ದರು. ಇಂಥಾ ಫಾರೆಸ್ಟನ್ನೆಲ್ಲಾ ಅಮೃತಮಹಲ್ ಇಲಾಖೆಯವರು ತಮ್ಮ ಕಾವಲಿಗೆ ಸೇರಿಸಿಕೊಂಡು ಕಟ್ಟುಮಾಡಿದಾರೆ ಆ ಕಾಡಿನ ಸುತ್ತಲೂ ಅದೂಬಾಜೂವಲ್ಲೂ ಇರುವ ಸುಮಾರು ೨೧—೨೫ ಗ್ರಾಮಗಳಿಗೆ ತುಂಬಾ ಕಷ್ಟವಾಗಿದೆ ಇದನ್ನು ತಪ್ಪಿಸಿಕೊಡಬೇಕು

ದಿವಾನರವರು—(ಆ ೨೦—೨೫ ಗ್ರಾಮಗಳ ಹೆಸರುಗಳನ್ನು ಕೇಳಿ ಬರೆದುಕೊಂಡು) ಒಳ್ಳೇದು; ಈ ಕಷ್ಟ ಉಂಟಾಗಿರುವ ವಿಷಯವನ್ನು ಕೂಡಲೇ ವಿಚಾರಿಸಿ, ಪರಿಹರಿಸಿಕೊಡುತ್ತೇವೆ

ಅನೇಕ ಮೆಂಬರು—ಸ್ಟೇಟ್ ಫಾರೆಸ್ಟಿನಿಂದ ಸೌದೆಯಾಗಲಿ ಬಿದರಾಗಲಿ ತಂದುಕೊಳ್ಳುವುದಕ್ಕೆ ರೈತರು ಸರ್ಕಾರಕ್ಕೆ ದೊಡ್ಡ ಗಾಡಿಗೂ, ಒಡ್ಡರ ಬಂಡಿ ಎಂಬ ಸಣ್ಣ ಗಾಡಿಗೂ ಒಂದೇ ರೀತಿ ೪ ಆಣೆ ಲೈಸೆನ್ಸ್ ಫೀ ಕೊಡಬೇಕು ದೊಡ್ಡ ಗಾಡಿಗೆ ಇಟ್ಟಿರುವ ದರದಲ್ಲಿ ಸಣ್ಣ ಗಾಡಿಗೆ ಅರೆವಾಸಿ ಮಾಡಿಕೊಟ್ಟರೆ ನ್ಯಾಯವಾಗಿದೆ ಒಡ್ಡರ ಬಂಡಿಗೆ ದರವನ್ನು ಕಮ್ಮಿಮಾಡುವುದಾಗಿ ಹೋದ ವರುಷ ಅಪ್ಪಣೆ ಆಯಿತು ಇನ್ನೂ ಅದು ಜಾರಿಗೆ ಬರಲಿಲ್ಲ.

ದಿವಾನರವರು—ಅರೆವಾಸಿ ಮಾತ್ರ ತೆಗೆದುಕೊಳ್ಳಬೇಕೆಂದು ರೂಲನ್ನು ಮಾಡಿದೇವೆ ಕನ್ಸರ್ವೇಟರವರೂ ಇದನ್ನು ಬೇಗ ತನಿಖೆಮಾಡಿ ಜಾರೀಲಿ ತರುತ್ತಾರೆ.

ಚನ್ನಗಿರಿ, ನಗರ, ಸೊರಬ, ಜಗಲೂರು ಗುಬ್ಬಿ ತಾ ಮೆಂಬರುಗಳು—ರೈತರಿಗೆ ಸೌದೆಗೂ ನೇಗಲು ಮುಂತಾದ್ದು ಮಾಡಿಕೊಳ್ಳುವುದಕ್ಕೂ ಹಳೇ ಮರವನ್ನು ಫಾರೆಸ್ಟಿನಿಂದ ಛಾರ್ಜಿಲ್ಲದೆ ತರಲು ಅವಕಾಶವಿಲ್ಲ ಮುಳ್ಳುಗಳು, ದಿಂಡಿಗ ಬ್ಯಾಲ ನಾರೆ, ಕಲಬ್ರಿ, ಬನ್ನಿಂಗಿ ಮೊದಲಾದ ಜಂಗಲ್ ಗಿಡಗಳನ್ನು ಕಡಿದು ತಂದುಕೊಳ್ಳುವಂತೆ ಅಪ್ಪಣೆ ಆಗಬೇಕು.

ದಿವಾನರವರು—ರೈತರಿಗೆ ಯಾವ ಜಾತಿಯ ಮರಗಳನ್ನು ಕೊಡಬೇಕೆಂದೋ ಯಾವದನ್ನು ಕೊಡಕೂಡದೆಂದೋ, ಅದನ್ನೆಲ್ಲಾ ವಿಂಗಡಿಸಿ ಹುಕುಂ ಕೊಟ್ಟಿದೇವೆ. ಅರ್ಜಿ ಬರೆದು ಕೇಳಿಕೊಂಡರೆ ಅದರಂತೆ ಕೊಡುತ್ತಾರೆ

ಗೌರಿಬಿದನೂರು ತಾ ಮೆ॥ ಬಸಪ್ಪಯ್ಯನವರು—ನಮ್ಮ ಕಡೆ ಮನೆಕಟ್ಟುವುದಕ್ಕಾಗಲಿ ನೇಗಲು ಮುಂತಾದ್ದು ಮಾಡಿಕೊಳ್ಳುವುದಕ್ಕಾಗಲಿ ಒಣಗಿದ ಮರಗಳನ್ನು ಉಪಯೋಗಿಸುವುದೇ ಇಲ್ಲ. ಹಸೀ ಮರವನ್ನೇ ತಂದುಕೊಳ್ಳಬೇಕಾಗಿದೆ ರೈತರಿಗೆ ಇಂಥಾ ಮರಗಳನ್ನು ಕೊಡಿಸುವಂತೆ ಅಪ್ಪಣೆ ಆಗಬೇಕು

ದಿವಾನರವರು—ಹಸೀಮರವನ್ನು ಬೇಕಾದರೆ ಕಡಿದು ಸಾಗಿಸಿಕೊಂಡು ಹೋಗಬಹುದೆಂತಲೂ ಅದಕ್ಕೆ ಅಡ್ಡಿಮಾಡುವುದೇ ಇಲ್ಲವೆಂತಲೂ ಕನ್ಸರ್ವೇಟರವರು ಹೇಳುತ್ತಾರೆ ಬೇರೆ ಹುಕುಂ ಕೊಡಬೇಕಾದ ಅಗತ್ಯವಿಲ್ಲ

ಮಾಲೂರು, ಗುಬ್ಬಿ ಸೊರಬದ ತಾ ಮೆಂಬರುಗಳು—ರೈತರಿಗೆ ಬ್ಯಾರಕ್ಕೆ ಉಪಯೋಗಿಸುವ ಹೆಣ್ಣೆ ಮೊದಲಾದ ಗರಿ ಎಲೆಗಳನ್ನು ಫಾರೆಸ್ಟಿನಿಂದ ತಂದುಕೊಳ್ಳುವುದಕ್ಕೆ ಅವರಿಗೆ ಅವಕಾಶಕೊಡಬೇಕು

ದಿವಾನರವರು—ಎಷ್ಟು ಸಾಧ್ಯವೋ ಅಷ್ಟು ಅವಕಾಶ ಕೊಡುವುದಕ್ಕೆ ಯೋಚಿಸುತ್ತೇವೆ

ನರಸೀಪುರದ ತಾ. ಮೆ॥ ಸ್ವಾಮಿನಾಯಕರು—ರೈತರು ಸೌದೆ ತಂದುಕೊಳ್ಳುವುದಕ್ಕೆ ಪಾಸು ಲೈಸೆನ್ಸು ಪಡೆಯಬೇಕಾದರೆ ಅಮಲ್ದಾರರಿಗೆ ಅರ್ಜಿ ಬರೆಯಬೇಕು. ಅವರಿಗೆ ಅಪ್ಪಣೆ ಬರುವುದು ತುಂಬಾ ತಡವಾಗುತ್ತದೆ ಆದ್ದರಿಂದ ಗ್ರಾಮದ ಪಟೇಲರೇ ಪಾಸು ಲೈಸೆನ್ಸು ಕೊಡುವಂತೆ ಅವರಿಗೆ ಅಧಿಕಾರ ಕೊಡಬೇಕು ಅದ್ದು ರೈತರಿಗೆ ಸುಲಭವಾಗುವುದು

ದಿವಾನರವರು—ಈ ವಿಷಯದಲ್ಲಿ ವಿಚಾರಮಾಡಿ ಹುಕುಂ ಕೊಡಲಾಯಿತು

ಅರಕಲಗೂಡು ತಾ ಮೆ॥ ಸೂರ್ಯನಾರಾಯಣಪ್ಪನವರು—ರೈತರ ಉಪಯೋಗಕ್ಕೆ ಬಿಟ್ಟಿರುವ ಗೋಮಾಳಗಳಲ್ಲಿ ಫಾರೆಸ್ಟ್ ಇಲಾಖೆಯವರು ಮರಗಳನ್ನು ಕಡಿದು ಬೀಳುಮಾಡುತ್ತಾರೆ ಈ ಮರಗಳು ರೈತರ ಸೌದೆಗೂ ನೇಗಲು ಮುಂತಾದ್ದಕ್ಕೂ ಉಪಯೋಗವಾಗುತ್ತವೆ

ದಿವಾನರವರು—ವಿಚಾರಿಸಿ, ಹಾಗೆ ಅವರು ಬೀಳುಮಾಡದಂತೆ ಹುಕುಂ ಕೊಡುತ್ತೇವೆ

ಮೈಸೂರು ಮೆ॥ ಅನಂತರಾಜಯ್ಯನವರು—ರೈತರ ಜಮೀನುಗಳಲ್ಲಿ ಬೆಳೆಯತಕ್ಕ ಸಂದಲ್ ಮರಗಳ ವಿಷಯದಲ್ಲಿ ಸರ್ಕಾರದವರು ಮಾಡಿರತಕ್ಕ ರೂಲುಗಳು ಬಹಳ ಕಷ್ಟಕರಗಳಾಗಿವೆ

ದಿವಾನರವರು—ಈಗ ಮಾಡಿರತಕ್ಕ ರೂಲನ್ನು ಬದಲಾಯಿಸಿ ನಿರ್ಬಂಧವನ್ನು ತಪ್ಪಿಸುವುದಕ್ಕಾಗಲಾರದು.

ಮೈಸೂರು ತಾ ಮೆ॥ ಲಿಂಗೇಗೌಡರು—ರೈತರ ಜಮೀನುಗಳಲ್ಲಿ ಬೆಳೆಯುವ ಗಂಧದ ಮರಗಳು ದನಗಳ ಮೇಲೆ ಮುಂತಾದ ನಾನಾ ಕಾರಣಗಳಿಂದ ಸತ್ತುಹೋದಾಗ್ಯೂ ಅವುಗಳ ನಷ್ಟವನ್ನು ರೈತರೇ ಕೊಡಬೇಕಾಗಿದೆ ಅವು ಸರ್ಕಾರಿ ಲೆಕ್ಕಗಳಲ್ಲಿ ದಾಖಲಾಗಿರುವುದೂ ಇಲ್ಲ

ದಿವಾನರವರು—ಗ್ರಾಮದ ಪಹಣಿ ಲೆಕ್ಕದಲ್ಲಿ ಈ ಮರಗಳನ್ನು ಕಾಣಿಸಬೇಕೆಂದು ಹುಕುಂ ಮಾಡಿದೆ

ನಗರ, ಸೊರಬ, ಕೊಪ್ಪ ತಾ ಮೆಂಬರುಗಳು—ಮಲೆನಾಡಿನಲ್ಲಿ ರೈತಪ್ರಜೆಗಳು ಮನೆ ಕಟ್ಟಿಕೊಳ್ಳುವುದಕ್ಕೂ ನೇಗಲು ಮಾಡಿಕೊಳ್ಳುವುದಕ್ಕೂ ಬೋಗಿ, ಜಂಬೆ ಕಿರಳಬೋಗಿ, ಈ ಮರಗಳನ್ನು ಉಪಯೋಗಿಸುತ್ತಾರೆ ಈ ಮರಗಳನ್ನು ಕೊಡಕೂಡದೆಂದು ಸರ್ಕಾರದವರು ಗೊತ್ತುಮಾಡಿರುವುದರಿಂದ ಜನರಿಗೆ ತುಂಬಾ ಕಷ್ಟವುಂಟಾಗಿದೆ. ಕೊಡಿಸುವಂತೆ ಅಪ್ಪಣೆ ಆಗಬೇಕು.

ದಿವಾನರವರು—ಈ ಭಾಗದಲ್ಲಿ ರೈತರಿಗೆ ಕಷ್ಟವಿದೆ ಎಂದು ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ ನಿಮಗೆ ರಿಯಾಯಿತಿ ತೋರಿಸುವ ವಿಷಯದಲ್ಲಿ ಅಧಿಕಾರಿಗಳ ಅಭಿಪ್ರಾಯವನ್ನು ತರಿಸಿಕೊಂಡಿದೇವೆ ಅದನ್ನೆಲ್ಲಾ ಸರಿಯಾಗಿ ನೋಡಿ ಬೇಗನೆ ಹುಕುಂ ಕೊಡುವೆವು.

ಲೋಕಲ್ ಮತ್ತು ಮ್ಯುನಿಸಿಪಲ್ ಬೋರ್ಡುಗಳು

ಕಾರ್ಕಾನಹಳ್ಳಿಯ ಮತ್ತು ಶಿವಮೊಗ್ಗೆಯ ಮೆಂಬರುಗಳು—ಅಮಲ್ದಾರರನ್ನು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನ ಮೆಂಬರುಗಳಾಗಿ ನೇಮಕಮಾಡಿದರೆ ಅವರ ಮೂಲಕ ಸ್ಥಳದ ಅಮಲೆಲ್ಲಾ ಚನ್ನಾಗಿ ತಿಳಿಯಲು ಅವಕಾಶವಾಗುತ್ತೆ

ದಿವಾನರವರು—ಲೋಕಲ್ ಬೋರ್ಡುಗಳು ಹೊಸದಾಗಿ ಏರ್ಪಾಡಾಗಿ ಇನ್ನೂ ಸ್ವಲ್ಪಕಾಲವೇ ಆಗಿದೆ ಅಮಲ್ದಾರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಮೆಂಬರಾಗಿರಬೇಕಾದ್ದಿಲ್ಲವೆಂದು ಸದ್ಯದಲ್ಲಿ ಕಾಣುವುದು ಹೀಗೇ ಇನ್ನು ಕೆಲವು ಕಾಲ ನಡೆಯಲಿ ಮುಂದೆ ಅವಶ್ಯ ತೋರಿದರೆ ಅವರನ್ನೂ ಸೇರಿಸೋಣ

ಮೊಳಕಾಲ್ಮೂರು, ತಿ ನರಸೀಪುರ, ಹಿರಿಯೂರು ಮೆಂಬರುಗಳು—(೧) ವಿದ್ಯಾಭ್ಯಾಸದ ಇಲಾಖೆಯಲ್ಲಿ ಪ್ರೊಫೆಸರರು, ಮಾಸ್ಟರುಗಳೂ, ಪಂಡಿತರೂ ಹುಡುಗರಿಗೆ ಭಕ್ತಿ ಆಚಾರ, ನಡತೆ, ವಿದ್ಯೆ ಮೊದಲಾದವನ್ನು ಕಲಿಸುತ್ತಾರೆ. ಇಂಥಾವರಿಗೆ ಈಗ ಯಾವದೊಂದು ಗೌರವವೂ ಇಲ್ಲದೆ ಇದೆ. ಇವರನ್ನು ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿ ನೇಮಿಸಿಕೊಳ್ಳಬೇಕು (೨) ತಾಲ್ಲೂಕ್ ಬೋರ್ಡಿನವರೂ ಪ್ರತಿನಿಧಿಗಳನ್ನು ಈ ಸಭೆಗೆ ಚುನಾಯಿಸಿ ಕಳುಹಿಸುವಂತೆ ಅವಕಾಶಮಾಡಿಕೊಡಬೇಕು

ದಿವಾನರವರು—ಅಂಥಾ ಅವಶ್ಯವೇನೂ ಕಾಣುವುದಿಲ್ಲ.

ಚಾಮರಾಜನಗರದ ಮೆ॥ ಲಕ್ಷ್ಮೀನರಸಿಂಹಾಚಾರು—ಪ್ರತಿ ಗ್ರಾಮದಲ್ಲೂ ಶ್ಯಾನುಭೋಗನು ಮುಖಂಡನಾಗಿದ್ದುಕೊಂಡು, ರೈತರಿಗೆ ನಾನಾ ಕಷ್ಟನಷ್ಟಗಳನ್ನುಂಟುಮಾಡುತ್ತಾನೆ ಅವನ ಕಾರುಬಾರುಗಳನ್ನು ತಪ್ಪಿಸುವುದಕ್ಕಾಗಿ ಗ್ರಾಮಗಳಲ್ಲಿ ಮುಖಂಡರಾಗಿರತಕ್ಕವರನ್ನು ಒಂದು ಸಂಘವಾಗಿ ಮಾಡಿಟ್ಟರೆ ಅನುಕೂಲ

ದಿವಾನರವರು—ಎಲ್ಲೆಲ್ಲೂ ಪಂಚಾಯತವನ್ನು ಎತ್ತಿಹಾಕುವುದಕ್ಕೆ ವಕೀಲರು ಇರುತ್ತಲ್ಲಾ? ಹೊಸಮೆಂಬರುಗಳ ಆವಶ್ಯಕತೆಯೇ ಇರುವುದು?

ಗುಬ್ಬಿ ತಾ ಮೆ॥ ಜುಟ್ಟೇಗೌಡರು—ಮ್ಯುನಿಸಿಪಾಲಿಟಿಗಳ ಯೂನಿಯನ್‌ಗಳಿಗೆ ಬೇರೆ ಬೇರೆ ಕೋಮುಗಳ ಪ್ರತಿನಿಧಿಗಳನ್ನು ಮೆಂಬರುಗಳನ್ನಾಗಿ ಚುನಾಯಿಸಬೇಕು.

ದಿವಾನರವರು—ಜಾತಿವಾರಾಗಿ ಮೆಂಬರುಗಳನ್ನು ಚುನಾಯಿಸಲಾರೆವು

ಹೆಗ್ಗಡದೇವನಕೋಟೆ ತಾ ಮೆ॥ ಲಕ್ಷ್ಮೀನಾರಣಪ್ಪನವರು—೩೦೦ ಮನೆಗಳಾಗಲಿ ಅಥವಾ ೧೦೦೦ ಪ್ರಜಾಸಂಖ್ಯೆಯಾಗಲಿ ಉಳ್ಳಂಥ ಗ್ರಾಮಗಳಲ್ಲಿ ಯೂನಿಯನ್ ಸಂಘಗಳನ್ನಿಡುವಂತೆ ಅಪ್ಪಣೆಯಾದರೆ ಗ್ರಾಮಗಳ ಆರೋಗ್ಯವಿಚಾರವು ಕ್ರಮಪಟ್ಟೀತು

ದಿವಾನರವರು—ನೀವು ಹೇಳುವಂಥಾ ಗ್ರಾಮಗಳ ಸಂಖ್ಯೆ ಮುಂತಾದ ವಿಷಯಗಳನ್ನು ತನಿಖೆಮಾಡುತ್ತಿದೇವೆ ಎಷ್ಟುಮಟ್ಟಿಗೆ ಸಾಧ್ಯವೋ ನೋಡೋಣ

ಅನೇಕ ಮೆಂಬರು—ಅನೇಕ ಗ್ರಾಮಗಳಲ್ಲಿ ಚಾವಡಿಗಳೇ ಇಲ್ಲ ದಿರೋಣದಿಂದ ಆಗಂತುಕರಿಗೂ ಸರ್ಕಾರಿ ನೌಕರರಿಗೂ ಇಳಿಯುವುದಕ್ಕೆ ಸ್ಥಳವಿಲ್ಲದೆ ತೊಂದರೆಯಾಗಿದೆ ಸರ್ಕಾರದವರು ಮುಖ್ಯಾಗಿ ಮಂಜೂರು ಮಾಡಿ, ರೈತರಿಂದ ಚಾವಡಿಗಳನ್ನು ಕಟ್ಟಿಸಬೇಕು

ದಿವಾನರವರು—ಚಾವಡಿ ಕಟ್ಟುವುದಕ್ಕೆ ಮರಮುಟ್ಟು ಬೇಕೆಂದು ಗ್ರಾಮಸ್ಥರು ಕೇಳಿದರೆ ಕೊಡ ... ಇದ್ದೇ ಇದೆ ಅರ್ಜಿ ಬರೆದುಕೊಳ್ಳಲಿ

ನೆಲಮಂಗಲ ತಾ ಮೆ॥ ಅನಂತಕೇಶವಾಚಾರು—ಅನೇಕ ಗ್ರಾಮಗಳಲ್ಲಿ ಜನರಿಗೆ ಕುಡಿಯುವುದಕ್ಕೆ ನೀರೇ ಇಲ್ಲದೆ ಬಹಳ ಕಷ್ಟವನ್ನು ಅನುಭವಿಸುತ್ತಾರೆ ಅಮಲ್ದಾರರು ಜಮಾಬಂದಿ ಆಖೈರುಗಳ ಸರ್ಕೀಟು ಬಂದಾಗ ಅರೆವಾಸಿ ಆಗಿರುವ ಬಾವಿಗಳ ಕಾರುಬಾರಿಯನ್ನು ಪ್ರೋತ್ಸಾಹಿಸಿ ಅಂತಲೂ ಹೊಸ ಬಾವಿಗಳನ್ನು ತೋಡಿಸಬೇಕೆಂತಲೂ ಅಪ್ಪಣೆಕೊಡಬೇಕು

ದಿವಾನರವರು—ಆ ಒದಗಿದ ಹಾಗೆಲ್ಲಾ ಬಾವಿಗಳನ್ನು ತೋಡಿಸುತ್ತಾ ಬಂದಿದೇವೆ

ತುರುವೇಕೆರೆ ತಾ ಮೆ॥ ಕೃಷ್ಣಯ್ಯಂಗಾರು—ಅನೇಕ ಗ್ರಾಮಗಳಲ್ಲಿ ಲಂಬಾಣಿ ಮಾದಿಗರೂ ಊರಮಧ್ಯೆ ಮನೆಗಳನ್ನು ಕಟ್ಟಿಕೊಂಡು ವಾಸಮಾಡುತ್ತಾರೆ ಅಂಥವರು ಪ್ರತ್ಯೇಕವಾಗಿರುವಂತೆ ಹುಕುಂ ಕೊಡಬೇಕು

ದಿವಾನರವರು—ಅವರು ಪ್ರಜೆಗಳಲ್ಲವೇ? ಈ ವಿಷಯವನ್ನು ಗ್ರಾಮಸ್ಥರೇ ಸೇರಿ ಏರ್ಪಾಡುಮಾಡಿಕೊಳ್ಳಬೇಕು ನಾವು ಪ್ರವರ್ತಿಸಲಾರೆವು

ಹೆಗ್ಗಡದೇವನಕೋಟೆ ತಾ ಮೆ॥ ಲಕ್ಷ್ಮೀನಾರಣಪ್ಪನವರು—ಗ್ರಾಮಾಂತರಗಳಲ್ಲಿ ವಾಗ್ಗದ ಕಂದಾಯವನ್ನು ವಸೂಲುಮಾಡಿ ಆದೇಶ ವರುಷಗಳಾದವು ಅವರ ಗ್ರಾಮಗಳ ಪೌತಿಖಾತೆ ರಿಜಿಸ್ಟರುಗಳಲ್ಲಿ ಅನಾವಶ್ಯವಾದ ೨—೩ ಹೆಸರುಗಳು ಇದ್ದೇ ಇರುತ್ತವೆ ಇನ್ನು ಮುಂದೆ ರಿಜಿಸ್ಟರುಗಳಲ್ಲಿ ಆ ಹೆಸರುಗಳನ್ನು ಬಿಟ್ಟು ಅಚ್ಚು ಹಾಕಿಸಬೇಕು

ದಿವಾನರವರು—ಆಗಬಹುದು ರೆವಿನ್ಯೂ ಕಮಿಷನರಿಗೆ ತಿಳಿಸುತ್ತೇವೆ

ದೇವನಹಳ್ಳಿ ತಾ ಮೆ॥ ಗೋಪಾಲಾಚಾರು—೪ ಆಣೆ ಮೊತ್ತ ಕಂದಾಯ ಕೊಡದೆ ನಾದಾರಿಯಾದವರಲ್ಲಿ ಅದಕ್ಕೆ ನೋಟೀಸ್ ಫೀ ೪ ಆಣೆ ಕೊಡಬೇಕು ಇದನ್ನು ೨ ಆಣೆಗೆ ಇಳಿಸಿಕೊಟ್ಟರೆ ಬಡಬಗ್ಗರು ಬದುಕಿಕೊಂಡಾರು

ದಿವಾನರವರು—ನೋಟೀಸ್ ಹುಟ್ಟಿದಂತೆ ಮೊದಲೇ ಪಾವತಿ ಮಾಡಲಿ ನೋಟೀಸ್ ಫೀಯನ್ನು ಕಮ್ಮಿ ಮಾಡಲಾಗದು

ಹಾಸನದ ಮೆ॥ ತಿರುನಾರಾಯಣಯ್ಯಂಗಾರು—ಹೊಳೆ ದಾಟುವ ಹರಿಗೋಲು ದೋಣಿಗಳ ಉತ್ಪತ್ತಿಯನ್ನು ಈಗ ಪ್ರತಿವರುಷವೂ ಹರಾಜು ಹಾಕುತ್ತಾರೆ ಕಂಟ್ರಾಕ್ಟುದಾರರು ಪ್ರಯಾಣಸ್ಥರಿಂದ ನಾನಾ ರೀತಿ ಸುಂಕ ವಸೂಲುಮಾಡುವುದೂ ಮನಸ್ಸುಬಂದಾಗ ಸಾಗಿಸುವುದೂ, ಇಲ್ಲದಾಗ ಬಿಡುವುದೂ ಅಭ್ಯಾಸವಿಲ್ಲದಂಥಾ ಅಂಬಿಗರನ್ನು ಕೋಲಿಗೆ ನೇಮಿಸುವುದೂ, ಹರಿಗೋಲನ್ನು ದುರಸ್ತುಮಾಡಿಸದಿರುವುದೂ, ಹೀಗೆಲ್ಲಾ ಮಾಡುತ್ತಾರೆ. ಇದರಿಂದ ಪ್ರಯಾಣಸ್ಥರಿಗೆ ತುಂಬಾ ತೊಂದರೆಯೂ ನಷ್ಟವೂ ಆಗುತ್ತದೆ ಇದನ್ನು ತಪ್ಪಿಸಿ, ಪ್ರತಿ ವರುಷಕ್ಕೆ ಇಲ್ಲವೇ ಐದು ವರುಷಕ್ಕೆ ಒಂದು ಸಲದಂತೆ ಹರಾಜು ಹಾಕಬೇಕು ಕಂಟ್ರಾಕ್ಟುದಾರರು ಸಿಕ್ಕದೆ ಹೋದರೆ ತಾಲ್ಲೂಕ್ ಬೋರ್ಡುಗಳವರೇ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುವಂತೆ ಮಾಡಬೇಕು ಅಂಥಾ ನದೀ ತೀರದಲ್ಲಿ ಬೀಳುವ ಗೊಬ್ಬರಗಳನ್ನು ಆಗಾಗ್ಗೆ ಹರಾಜು ಹಾಕಿಸಿದರೆ ಸರ್ಕಾರಕ್ಕೆ ಉತ್ಪತ್ತಿ ಆಗುತ್ತದೆ

ದಿವಾನರವರು—ಇದೆಲ್ಲಾ ಯುಕ್ತವಾದದ್ದೇ ಆಗಲಿ ಯೋಚಿಸೋಣ

ಹೊಳೆನರಸೀಪುರ ತಾ ಮೆ॥ ವೆಂಕಟರಮಣಪ್ಪನವರು—ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲಿರುವ ಆಸ್ಪತ್ರೆಗಳಲ್ಲಿ ಔಷಧ ಪಡೆಯುವುದಕ್ಕೆ ಹೋಗುವ ಹೆಂಗಸರಿಗೆ ನಿಲ್ಲುವುದಕ್ಕೆ ಪ್ರತ್ಯೇಕವಾದ ಕೊಠಡಿ ಇಲ್ಲ. ಗಂಡಸರ ಮಧ್ಯೆ ನಿಲ್ಲಬೇಕು ಇದರಿಂದ ಅನೇಕ ಹೆಂಗಸರು ಆಸ್ಪತ್ರೆಗೇ ಹೋಗುವುದಿಲ್ಲ. ಪ್ರತಿ ಆಸ್ಪತ್ರೆಯಲ್ಲೂ ಹೆಂಗಸರಿಗಾಗಿಯೇ ಬೇರೆ ಕೊಠಡಿ ಇರುವಂತೆ ಏರ್ಪಾಡು ಮಾಡಿಕೊಡಬೇಕು

ದಿವಾನರವರು—ನೀವು ಹೇಳುವುದೇನೋ ಅವಶ್ಯವಾದದ್ದೇ. ಹಣ ಒದಗಿದ ಹಾಗೆ ಮಾಡುತ್ತೇವೆ

...ಗ್ರಾಮದ ನಾಗಪ್ಪನವರೂ ಮಂಜಯ್ಯನವರೂ—ಸಿಡುಬಿನ ಹಾಕಿಸಿಕೊಂಡರೆ ಒಳ್ಳೇದೆಂದು ಅನೇಕರಿಗೆ ಗೊತ್ತಾಗಿದ್ದರೂ ಜನರು ತಮ್ಮ ಮಕ್ಕಳಿಗೆ ಸಿಡುಬು ಹಾಕಿಸುವುದಿಲ್ಲ. ಪಲಿನಾ ಅನೇಕರು ಸಿಡುಬು ಬಂದು ಸಾಯುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಎಲ್ಲಾ ಪ್ರಜೆಗಳೂ ಸಿಡುಬು ಹಾಕಿಸಿಕೊಳ್ಳಲೇ ಬೇಕೆಂದು ಸರ್ಕಾರದವರು ವಿಧಿಸಿದರೆ ಆಗಲಾದರೂ ಈ ಮರಣಸಂಖ್ಯೆ ಕಡಿಮೆಯಾದೀತು.

ಶ್ಯಾನುಭೋಗರು—ಇಂಥಾ ಕಾನೂನು ಮಾಡುವುದು ಅಗತ್ಯವೆಂದು ಮೆಂಬರುಗಳೂ ಒಪ್ಪುತ್ತಾರೆಯೋ?

ಬಹುಮಂದಿ ಮೆಂಬರುಗಳು ಮುಂದೆ ಬಂದು—ಇದಕ್ಕೆ ಕಾನೂನು ಮಾಡಬೇಕಾದದ್ದಿಲ್ಲ. ಸಿಡುಬಿನ ಫಲಾಫಲಗಳು ಪ್ರಜೆಗಳಿಗೆ ಚೆನ್ನಾಗಿ ತಿಳಿದಿವೆ. ಕಾನೂನು ಮಾಡಕೂಡದು.

ಶ್ಯಾನುಭೋಗರು—ಕಾನೂನು ಅಗತ್ಯವಿಲ್ಲವೆಂದು ನಾವೂ ಒಪ್ಪುತ್ತೇವೆ. ತಿಳಿವಳಿಕೆ ಉಳ್ಳವರು ಜನರಿಗೆ ಬುದ್ಧಿ ಹೇಳಿ, ಸಿಡುಬು ಹಾಕಿಸಿಕೊಳ್ಳುವಂತೆ ಸ್ವಲ್ಪ ಪ್ರಯತ್ನ ಪಟ್ಟರೆ ಸಾಕಾಗಿದೆ.

ಹಳ್ಳಿಯವರು ಹೋಬಳಿ ಸ್ಕೂಲ್ ಮಾಸ್ಟರುಗಳಿಗೆ ಮಾಡುವ ಸಹಾಯ.

[ಬರೆದು ಬಂದದ್ದು]

ನಾರಣಪ್ಪ—(ಪಟೇಲನಿಂದ ಸ್ಕೂಲ್ ಚಾರ್ಜನ್ನು ಪಡೆದನಂತರ ಪಟೇಲನನ್ನು ಕುರಿತು) ಪಟೇಲರೇ, ನನಗೆ ವಾಸಮಾಡುವುದಕ್ಕೆ ಮನೆ ಇದೆಯೆ?

ಪಟೇಲ—ನಾವೇನು ಮಾಡೋಣಪ್ಪ?

ನಾರಣಪ್ಪ—ಎಲ್ಲಿಯಾದರೂ ಒಂದು ಮನೆಯನ್ನು ಕೊಡಿಸಿರಿ.

ಪಟೇಲ—ಈ ಊರಾಗೆ ಮನೆಯೇ ಇಲ್ಲ.

ನಾರಣಪ್ಪ—ಊರು ಮುಂದೆ ಇರುವ ಮಂಟಪದಲ್ಲಿ ಅಡಿಗೆ ಮಾಡುತ್ತಾ ರಾತ್ರಿ ಸ್ಕೂಲಿನಲ್ಲಿ ಮಲಗಿಕೊಂಡರಾಯಿತು. ಇನ್ನು ಮಾಡುವುದೇನು?

ಪಟೇಲ—ಸ್ವೈ! ಸ್ವೈ! ನಿಂದು ಇದೆಂಥ ಇಕಮತ್ತು ಕಾಣಯ್ಯಾ! ಮುಂಚೆ ನಿಂದ್ನಂಗೆ ಇದ್ದ ಮೇಷ್ಟರು (ಶೇಕದಾರರ ಜನರಾದವರು) ಹೀಗೆ ಮಾಡಿದ್ದರೆ? ಅವರು ನನ್ನ ಜೀವ ತೆಗೆದು ಬಿಟ್ಟರು ಅಷ್ಟೆ.

ನಾರಣಪ್ಪ—ಇನ್ನು ಮಾಡುವುದೇನು? ಸ್ಕೂಲಿನಲ್ಲೇ ಒಂದು ತಟ್ಟಿಯನ್ನು ಮಾಡಿಕೊಂಡರಾಯಿತು.

ಪಟೇಲ—ಊ! ಅಂಥ್ಯೇನ ದಾಕ್ಷ್ಯಣ್ಯ! ಈ ಸ್ಕೂಲ ನಿಮ್ಮಪ್ಪನದೆ! ಬಿಟ್ರೆ ನಮ್ಮ ಶೇಕದಾರ ಸೋದರಳಿ ಶ್ಯಾನುಭೋಗನಲ್ಲ ಊರ ಹೊರಗೆ ಹಾಕಿಬಿಟ್ಟಾನೆ.

ನಾರಣಪ್ಪ—(ಇನ್ನು ಮಾತನಾಡುವುದರಿಂದ ಫಲವಿಲ್ಲವೆಂದು ತಿಳಿದು ಆ ರಾತ್ರಿಯನ್ನು ಪಟೇಲನ ಮನೆಯಲ್ಲೇ ಕಳೆದು, ಮಾರನೇ ದಿವಸ ಸ್ಕೂಲ್ ಬಿಟ್ಟ ಕೂಡಲೇ ಒಂದು ಮೈಲಿ ಫಾಸಲೆಯಲ್ಲಿರುವ ದೊಡ್ಡ ಗ್ರಾಮದಲ್ಲಿ ಬಾಸಿಂಗರಲ್ಲಿ ಈ ವಿಚಾರವನ್ನು ತಿಳಿಸಿ, ಅವರ ಮನೆಯಲ್ಲಿ ಊಟ ಮಾಡುತ್ತಾ ಸ್ಕೂಲಿನ ಹೊತ್ತಿಗೆ ಮೇಲೆ ಊರಿಗೆ ಬಂದು ಸ್ಕೂಲಿನಲ್ಲಿ ಕಾಲಕಳೆಯುವನು)

ಪಟೇಲ—ಅಯ್ಯ, ನೀನು ಊರಾಗೆ ಇರಾಕಿಲ್ಲವಂತೆ. ಅದು ಡೆಪ್ಯೂಟಿಗೆ ಒಂದ್ಸಲ ಹೋದರೂ ಆದೀತು. ಆದು ಇರಲಿ ನನ್ನ ಡೆಪ್ಯೂಟಿಗೆ ಹೇಳಿದರೆ ನಾನು ಲಿಪೋರ್ಟು ಮಾಡೋದು ನಿಜ!

ನಾರಣಪ್ಪ—(ಕೆಟ್ಟದ್ದನ್ನು ಯೋಚಿಸುತ್ತಾನೆಂದು ತಿಳಿದು, ಬಾಸಿಂಗರ ಹತ್ತಿರ ಇದನ್ನು ಹೇಳಿ, ಅವರಲ್ಲಿ ಕೆಲವು ಪಾತ್ರೆಗಳನ್ನು ಇಸಗೊಂಡು, ಹಗಲು ಕೆರೆ ಹತ್ತಿರ ಅನ್ನ ಗೊಜ್ಜು ಮಾಡಿ ಹಗಲು ಮಾತ್ರ ಊಟಮಾಡುತ್ತಾ ರಾತ್ರಿ ನಿರಶನನಾಗಿ ಕಾಲವನ್ನು ಕಳೆಯುವನು)

ಪೋಲೀಸ್ ಕಾನಸ್ಟೇಬಲ್—(ಪಟೇಲನನ್ನು ಕುರಿತು) ಎಲೋ ರಂಗ, ಮೇಷ್ಟ್ರು ಸಾಹೇಬರು ಬರುತ್ತಾರಂತೆ! ಗ್ರಾಮ ಪಬ್ಲಿಕ್ ಜಾರಿಯ ಹೊಲದ ತಿಪ್ಪೆಗಳನ್ನು ತೆಗಿಸಬೇಕೆಂದು ದಫೇದಾರರು ಹೇಳಿದ್ದಾರೆ.

ಪಟೇಲ—ನಾವು ನಾವು ಎರಡು ಆಕ್ಕಿಲ್ಲವಾ!

ಪೋಲೀಸ್ ಕಾ—ನಾವ ನಾವು ಎರಡು ದಿನ ಆಕ್ಕಿಲ್ಲವಪ್ಪಾ ಜಾಗಂಟೆ ಬೆಟ್ಟದಲ್ಲಿ ಬರೆಸಿ ರುಜು ಹಾಕಲಿ! ನಮ್ಗೆ ಅವೆಲ್ಲಾ ಯಾಕಪ್ಪಾ ಕಾಸು! ನಾವು ಸರಿಮಾಡಿಬಿಡ್ತೀವಿ!

ಪಟೇಲ—(ಇದೆ ಒಳ್ಳೆ ಸಮಯಕ್ಕೆ ಒಂತೆಂದು ಯೋಚಿಸಿ, ಕಾನಸ್ಟೇಬಲನನ್ನು ಸಮಾಧಾನಕೊಂಡು, ಬಾಯಿಯಿಂದ ಬಣ್ಣಿಸಿ ಮಾತಾಡಿ ಕಳುಹಿಸುತ್ತಾನೆ)

ದಫೇದಾರ್—(ಊರಿಗೆ ಬಂದವರು ಸ್ಕೂಲಿಗೆ ಬಂದು ಮಾಸ್ಟರಲ್ಲಿ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು, ಮಾಸ್ಟರಿಂದ ಸ್ವಲ್ಪ ಕಾಗದವನ್ನು ತೆಗೆದುಕೊಂಡು, ಯಾವದೋ ಊರಿಗೆ ಕಾಗದವನ್ನು ಬರೆಯುತ್ತಿರುವ ಆ ಊರಿನ ಬಸವನೆಂಬುವನು ನೋಡಿ ಜಾಗ್ರತೆ ಪಟೇಲನ ಹತ್ತಿರ ಬಂದು, ಏ ರಂಗಪ್ಪ! ಜವಾಬ್ದಾರನಾದ ಉಪಾಧ್ಯಾಯನ ಹತ್ತಿರ ನೀನು ಹ್ಯಾಗೆ ಮಸಲತ್ತು ಮಾಡ್ತಿಯೋ! ಜವಾಬ್ದಾರ ನಿನಗೆ ಕೆಲಸ ಕಿತ್ತಾಕಸ್ತಾನೆ! ಹುಷಾರ್ ಆಕಸ್ತಾನಂತೇ!)

ಪಟೇಲ—(ಹಿಂದೆ ಯಾವದೋ ಮೊಕದ್ದಮೆಯಲ್ಲಿ ಸಿಕ್ಕಿ, ದಫೇದಾರನಿಂದ ವಿಪರೀತ ನರಳಿದವನಾದ್ದರಿಂದ ಈಗಲೂ ಭಯದಿಂದ ಮನೆ ಸೇರಿ ಅವಿತುಕೊಳ್ಳುವನು)

ದಫೇದಾರ್—(ತಳವಾರನನ್ನು ಬರಮಾಡಿಕೊಂಡು) ಎಲೋ, ಪಟೇಲನನ್ನು ಕರೆದುಕೊಂಡು ಬಾರೋ.

ತಳವಾರ—(ಪಟೇಲನ ಹೆಂಡತಿಯನ್ನು ಕುರಿತು)—ಯವ್ವೋ, ಶ್ಯಾನುಭೋಗರು (ದಫೇದಾರು) ಕೂಗ್ತಾರೆ.

ಪಟೇಲನ ಹೆಂಡತಿ—ಅಪ್ಪಣ್ಣ! ಅವರು ಮನೆಯಲ್ಲಿಲ್ಲ ಅನ್ನು. ಅವರ ವಿಷಯವೇ? ನಿನ್ನ ದಮ್ಮಯ್ಯ ಅಂತೀನಿ, ಎಳೆಗೀಳೆಯಾ! ಹುಷಾರ್! ನಿಮ್ಮ ದಮ್ಮಯ್ಯ!

ತಳವಾರ—ಬುದ್ಧಿ! ಗೌಡರು ಮನೆಯಲ್ಲಿಲ್ಲ.

ದಫೇದಾರ್—ಮಾದಳ್ಳಿರ್ಗಾದ ರಜಾ ಇಲ್ಲದೆ ಎಲ್ಲಿ ಹೋದ? ಅವನಿಲ್ಲವೆಂದು ಕೈಹಿಡಿಯುತ್ತ ಕೊಡು.

ತಳವಾರ—ಬುದ್ಧಿ! ಅಂಗೆ ಮಾಡಬ್ಯಾಡಿ. ಎಲ್ಲಿದ್ದರೂ ಕರ್‍ಕೊಂಡ್ಬರ್ತೀನಿ.

ದಫೇದಾರ್—ಕರೆದುಕೊಂಡು ಬಾ.

ತಳವಾರ (ಪಟೇಲನ ಹೆಂಡತಿಯನ್ನು ಕುರಿತು)—ಯವ್ವೋ! ಆಕ್ಕಿಲ್ಲ. ದಫೇದಾರ ಬದ್ಯೇಕೆ ಒತ್ತಾನೆ. ಕೈಮೇತ ಕೊಡಬೇಕಂತೆ ಕೆಲಸ ಕಿತ್ತಾಕಸ್ತಾನಂತೆ.

ಪಟೇಲನ ಹೆಂ—(ಪಟೇಲನನ್ನು ಕುರಿತು)—ಹೋಗಿ ಯಂಗಾದೂ ಮಾಡನಾಕ್ಯಾ?

ಪಟೇಲ—ಜವಾಬ್ದಾರ ಉಪಾಧ್ಯಾಯ ಅಂಗಲ್ಲಾ ಕಾಸೇ. ದೊಡ್ಡ ಸರ್ಕಾರದೋನು ಅಲ್ಲದೆ ಯಾಸತೀ ನಗಂಡು ಯಂಗಾರೂ ಆಗಲಿ. ನಲ್ಲಾಡ್ತಾ ಮೇಲ್ಗಡೆ ಹೋಗಿ ನೋಡ್ತೀನಿ ಎಂದು ಹೇಳಿ ನರಳಾಡುತ್ತಾ ಬಂದು ಮೂರ್ಛೆ ರೋಗದವನಂತೆ ದಫೇದಾರ ಎದುರಿಗೆ ಬೀಳುವನು.

ದಫೇದಾರ್—(ಇವನ ವಿದ್ಯಮಾನವನ್ನು ತಿಳಿದವನಾದ್ದರಿಂದ ಬೆತ್ತವನ್ನು ತೆಗೆದುಕೊಂಡು ಎರಡು ಮೂರು ಏಟು ಹೊಡೆದ ಕೂಡಲೆ) ಬುದ್ಧಿ, ಹೆಳದಂಗೆ ಕೇಳ್ತೀನಿ ಪೋಟೀಜಿ (ಅನ್ನುವನು) ಬುದ್ಧಿ! ಕಾಯಿಲಾ ಇಲ್ಲ. ಹೇಳಿದಂಗೆ ಕೇಳ್ತೀನಿ ಎಂದು ಮೇಲಕ್ಕೇಳುವನು.

ದಫೇದಾರ್—ಗ್ರಾಮ ಹಾಕೀಜಾ ಮಾಡಿಸಿರುತ್ತೀಯಾ?

ಪಟೇಲ—ಮುಂದಿನ ಕರ್ತವ್ಯವನ್ನು ದಫೇದಾರನಿಂದ ತಿಳಿದು, ಅವರಿಂದ ತನಗೆ ಅನುಕೂಲವಾದ ಮಾರ್ಗವನ್ನು ತಿಳಿದು, ಅವರನ್ನು ಮರ್ಯಾದೆಯಿಂದ ಕಳುಹಿಸಿ, ಅನಂತರ—"ಈ ತಂತ್ರೆಲ್ಲಾ ಉಪಾಧ್ಯಾಯನದಲ್ಲವಾ" ಎಂದು ಯೋಚಿಸುತ್ತಾ, ಮಠದ ಹತ್ತಿರ ಬಂದು ಮಾಸ್ಟರನ್ನು ಹೀನಾ ಮಾನಾ ಬಯ್ಯುತ್ತಾ, ಪುನಃ ಕೆನ್ನೆಗೆ ಬಿಸಿಯನ್ನು ತೋರಿಸುವುದಕ್ಕೆ ಪ್ರಯತ್ನಪಡುವನು. ಘಟ್ಟಬಾರಿಯ ಬಿಡಿಸುವನು. ತದನಂತರ ಮಾಸ್ಟರ ವಿಷಯದಲ್ಲಿ ದ್ವೇಷವನ್ನು ಬೆಳೆಸುತ್ತಿರುವನು.

ಶೇಕದಾರು (ಗ್ರಾಮಕ್ಕೆ ಬಂದು ತಳವಾರನನ್ನು ಕುರಿತು) ಯಲಾ, ಪಟೇಲನನ್ನು ಕರೀತೋ!

ತಳವಾರ—(ಪಟೇಲನಲ್ಲಿ ಹೋಗಿ) ಶೇಕದಾರು, ಕರೀತಾರೆ ಕಾಣಪ್ಪೋ!

ಪಟೇಲ—(ಶೇಕದಾರರ ಹತ್ತಿರ ಬಂದು) ಎದ್ದಿ, ಬಂದಿದೀ! ಪಾಪಕ್ಕೆ ಬಿದ್ದೆ ಒಪ್ಪವಾಯ್ತಂತೆ!

ಶೇಕದಾರು—ಶತಪಾದರಕ್ಷ! ಏನು ನಾಳೆ ಸಾಹೇಬರು ಬರುತ್ತಾರೆ. ಬೀದಿಗಳು ದುರಸ್ತು ಮಾಡಿಸಿರುತ್ತೀಯೋ?

ಪಟೇಲ—ಊ.

ಶೇಕದಾರು—ಏನು ಊ ನಿನ್ನ ಪಿಂಡ! ಲುಚ್ಚಾಮುಂಡೇಗಂಡ! ನಿನ್ನ್ಯಾತಕ್ಕೆ ಪಟೇಲಿ? ನಿನಗೆ ಸಸ್ಪೆಂಡು ಮಾಡಸ್ತೀನಿ ಎಂದು ಕೂಗಾಡುವರು.

ಪಟೇಲ—ಚಂಜೆ ವರಿಗಾಗಿ ಮಾಡಸ್ತೇನೆ ಎಂದು ಸಮಾಧಾನ ಪಡಿಸುವನು.

ಶೇಕದಾರು—ಯಲಾ! ಅಕ್ಕಿ ಬೇಳೆ ರಂಗನ ತೋಟದ ಹತ್ತಿರಕ್ಕೆ ಕಳಿಸು. ನಾನು ಬಂದೆ, ಸ್ನಾನ ಮಾಡುವೆನು.

ಪಟೇಲ—ತಾವ್ಯಾಕೆ ಬುದ್ಧಿ ಕೈಸುಟ್ಟುಕೊಳ್ತೀರಿ? ಮ್ಯಾಟ್ರು ಅವನೆಲ್ಲಾ! ಬೇಸಾಕ್ತಾನೆ.

ಶೇಕದಾರು—ಅಯ್ಯೋ ಪಾಪ! ಅವರು ಗಂಡಸರು. ನಮ್ಮ ಹಾಗೆ ಅಲ್ಲವೇನೋ?

ಪಟೇಲ—ಅವನ್ ಅವನಪ್ಪನೂ ಬೇಸಾಕಿದ್ರೂಯ! ಅವನು ಸರ್ಕಾರಿ ಸಂಬಳ ನನ್ನಂಗೆ ತಿನ್ನೋಕಿಲ್ವಾ? ಎಲ್ಲಿ ನನ್ನ ಮಾತು ಕಿತ್ತಾಕ್ಲಿ ನೋಡುವಾ!

ಶೇಕದಾರು—ನೀ ಕೆಟ್ಟ ಮುಚ್ಚುಮುಂಡೆ ಸರ್ಕಾರಿ ನೌಕರರನ್ನು ಇತರರಲ್ಲಿ ಹಾಗೆ ಅವಮಾನದ ಮಾತುಗಳನ್ನು ಆಡು. ಅವರು ನಿನಗೆ ತಕ್ಕ ಹಾಗೆ ಮಾಡಿಬಿಡುತ್ತಾರೆ!

ಪಟೇಲ—(ಶೇಕದಾರು ಮಾಸ್ಟರ ಪಕ್ಷಪಾತಿಗಳೆಂದು ತಿಳಿದು) ಮ್ಯಾಟ್ರು ಒಳ್ಳೇರು ಬುದ್ಧಿ. ಇಂಗಿಂಗೆ ಶೇಕದಾರು ಬಂದವರೆ. ಯಂಗಾರೂ ಮಾಡಿ ಭೋಜನ ಮಾಡಿಸಬೇಕು ಅಂದರೆ ಮಾಡಸ್ತಾರೆ.

ಶೇಕದಾರು—ಅವರಿಗೆ ಹೊತ್ತಾದರೆ ಅವರು ಮಾಡಲಿ, ಇಲ್ಲದಿದ್ದರೆ ನಾನೇ ಮಾಡ್ತೇನೆ. ಅವರನ್ನೂ ಬರಹೇಳು.

ಪಟೇಲ—(ಹಿಂಗೆ ಮಾಸ್ಟರ ಹತ್ತಿರ ಬಂದು) ಅಯ್ಯಾ, ಶೇಕದಾರು ಬಂದವರೆ. ಜಲ್ದಿ ಈ ಸ್ಕೂಲ್ನ ಬಿಟ್ಟು ಚಟ್‌ಪಟ್ ಅಡಿಗೆ ಮಾಡು. ಅವರೂ ಈಗ ಬತ್ತಾರೆ. ಅವರು ಕೇಳಿದರೆ ಪಟೇಲ್ ರಂಗಪ್ಪನೋರು ಅಕ್ಕಿ ಪಡಿ, ವಡಕಲು, ತುಪ್ಪ ಇಷ್ಟೆಲ್ಲಾನೂ ತಂದು ಕೊಟ್ಟರು ಅನ್ನು. ಇಲ್ಲ ಅಂದೀಯೆ!

ಮಾಸ್ಟರು—ನೀವೇನೂ ಶೇ. ದಫೇ ಇದ್ದದ್ದರಲ್ಲಿ ನಾನೇ ಮಾಡುವೆನು. ಬಂದು ಊಟ ಮಾಡಿಕೊಂಡು ಹೋಗಲಿ.

ಪಟೇಲ—ಯಂಗಾರ ಅಗ್ಲಿ, ನೀನಂಗನ್ನು ನೀನೇನಯ್ಯಾ ದರೋಡೆ? ೬ ರೂಪಾಯಿ ಸಂಬ್ಳ ತಿಂತೀಯಾ? ಮಾಡ್ಯೆಯಾ ಕಂಡಿವಿ! ಬಳಿಪಾಲಾ ಕಿಸಿಬ್ಯಾಡ! ಎಂದು ಹೇಳಿ ಶೇಕದಾರು ಹತ್ತಿರ ಹೋಗಿ—ಅಡಿಗಾಗುತ್ತಿದೆ ಬುದ್ಧಿ ಅಂದನು.

ವಾಚಕರೇ, ಎಲ್ಲಾ ಇಲಾಖೆಯ ನೌಕರರಿಗಿಂತಲೂ ಮಾಸ್ಟರುಗಳು ಮಾತ್ರ ಏನು ಪಾಪವನ್ನು ಮಾಡಿದ್ದರು? ನಮ್ಮ ಸರ್ಕಾರದವರು ವಿಶೇಷ ಗೌರವವನ್ನು ದಯಪಾಲಿಸಿರುವ ಈ ಇಲಾಖೆಗೆ ಗ್ರಾಮ್ಯರು ಮಾಡುತ್ತಿರುವ ಅವಮಾನವು ಎಂದಿಗೆ ತೊಲಗಿ ತುಂಟರಿಗೆ ಎಂದಿಗೆ ಶಿಕ್ಷೆಯಾದೀತೋ ಎಂದು ಹಾರೈಸುತ್ತಿರುವೆವು.

ವಿದ್ಯಾಪಕ್ಷಪಾತಿ

ಇಂಡಿಯಾ ದೇಶದ ವೃತ್ತಾಂತಗಳು.

ಕರ್ಕಿ ಪಟ್ಟಣದ ಬಳಿ ಸರ್ಕಾರದವರು ೨,೬೦೦ ಎಕರೆ ಜಮೀನನ್ನು ತೆಗೆದುಕೊಂಡು, ಸೈನ್ಯದ ದನಗಳಿಗೆ ಹುಲ್ಲು ಬೆಳೆಸಬೇಕೆಂದು ಗೊತ್ತುಮಾಡಿದಾರೆ.

****

ಕಲ್ಕತ್ತಾ ಪಟ್ಟಣದಲ್ಲಿ ಹಿಗ್ಗಿನ್ಸ್ ಎಂಬುವನು ೧೩ ವರುಷದ ಒಬ್ಬ ಹುಡುಗಿಯ ಮೇಲೆ ಬಿದ್ದು ಅವಳ ಮಾನಭಂಗಪಡಿಸುವುದಕ್ಕೆ ಪ್ರಯತ್ನಪಟ್ಟನು. ಸೆಷನ್ಸ್ ಜಡ್ಜರು ಅವನಿಗೆ ೧೦ ವರುಷದ ಕಠಿಣ ಸಜವನ್ನೂ, ಅವನಿಗೆ ಆ ಕೃತ್ಯದಲ್ಲಿ ಸಹಾಯಕನಾಗಿದ್ದ ಕ್ಲಾರೆನ್ಸ್ ಬೆಲ್ ಎಂಬುವನಿಗೆ ೫ ವರುಷ ಕಠಿಣ ಸಜವನ್ನೂ ವಿಧಿಸಿರುತ್ತಾರೆ.

****

ಹೈದರಾಬಾದ್ ಪಟ್ಟಣದಲ್ಲಿ ರಂಗಅಕ್ಕಮ್ಮನೆಂಬೊಬ್ಬ ವಿಧವೆಯು ತುಂಬಾ ಐಶ್ವರ್ಯವತಿಯಾಗಿದ್ದಳು. ಮೂರು ಮಂದಿ ಘಾತುಕರು ಅವಳ ಮನೆಗೆ ನುಗ್ಗಿ ಅವಳು ಮಲಗಿ ನಿದ್ದೆ ಮಾಡುತ್ತಿದ್ದಾಗ ಬಹು ಭಯಂಕರವಾದ ರೀತಿಯಲ್ಲಿ ಕೊಂದು ಹಾಕಿ, ಅವಳ ಬಳಿ ಇದ್ದ ಸುಮಾರು ೨೦,೦೦೦ ರೂಪಾಯಿನ ನಗಗಳನ್ನೆಲ್ಲಾ ಎತ್ತಿಕೊಂಡು ಹೋದರು. ಮಾರ್ಚಂಟ್ ಎಂಬ ಪೋಲೀಸ್ ಇನ್ಸ್‌ಪೆಕ್ಟರು ಆ ಮೂರು ಮಂದಿಯನ್ನೂ ಹಿಡಿದು, ೨೦,೦೦೦ ರೂಪಾಯಿ ನಗಗಳನ್ನು ತಂದು ಹಾಜರು ಪಡಿಸಿದಾನೆ. ಮೊಕದ್ದಮೆ ನಡೆಯುತ್ತಿದೆ.

****

ಪೂನಾ ರೈಲ್ ಗಾಡಿಯಲ್ಲಿ ೧೪ ಜನ ಬಂಧೂ ಮಾನಾ ಓದಿದರು ಕೆಲವು ದಿನಗಳ ಕೆಳಗೆ ಕೂತುಕೊಂಡು ಪ್ರಯಾಣ ಮಾಡುತ್ತಾ ಜೂಜಾಡಿದರು. ಪೋಲೀಸಿನವರು ಅವರನ್ನೆಲ್ಲಾ ದಸ್ತಗಿರಿ ಮಾಡಿ, ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರ ಮೇಲೆ ಫಿರ್ಯಾದು ತಂದರು. ಮ್ಯಾಜಿಸ್ಟ್ರೇಟ್ ಮಿ॥ ಕೃಷ್ಣರಾವ್ ವಾಸುದೇವ ಜೋಷಿ ಯವರು ಅವರೆಲ್ಲಾ ಜುಲ್ಮಾನೆಯನ್ನೂ ಸಜಾ ಶಿಕ್ಷೆಯನ್ನೂ ವಿಧಿಸಿದರು. ಆದರ ಮೇಲೆ ಅವರು ಬೊಂಬಾಯಿ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ವಾಜ್ಯವನ್ನು ಕೇಳಿ, ರೈಲು ಗಾಡಿಯು ಬಹಿರಂಗವಾದ ಸ್ಥಳವೆನಿಸುವುದಿಲ್ಲವೆಂದು ಗೊತ್ತು ಮಾಡಿ, ಕೆಳಕೋರ್ಟಿನ ತೀರ್ಪನ್ನು ರದ್ದುಪಡಿಸಿ, ಅಪರಾಧಿಗಳನ್ನೆಲ್ಲಾ ಖುಲಾಸ್ ಮಾಡಿಸಿರುತ್ತಾರೆ.

****

ಸಾತಾರೆ ಡಿಸ್ಟ್ರಿಕ್ಟಿನಲ್ಲಿ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಆಗಿದ್ದ ಬಾಸ್ಕರ ಸಹಸ್ರಬುದ್ಧಿ ಎಂಬುವನು ಬಂದು ಮೊಕದ್ದಮೆಯಲ್ಲಿ ಶಂಕರ ಎಂಬುವನಿಂದ ೩೦೦ ರೂಪಾಯಿ ಲಂಚ ತಿಂದನು. ಸೆಷನ್ಸ್ ಜಡ್ಜರು ಅವನಿಗೆ ೫೦೦ ರೂಪಾಯಿ ಜುಲ್ಮಾನೆಯನ್ನೂ ಒಂದು ವರುಷದ ಸಾದಾ ಸಜವನ್ನೂ ವಿಧಿಸಿದರು. ಈ ಲಂಚವನ್ನು ಕೊಡಿಸುವುದಕ್ಕೆ ಮಧ್ಯಸ್ಥಿಕೆ ಮಾಡಿದ ಶ್ರೀನಿವಾಸ ಕೃಷ್ಣನೆಂಬ ಭಾರೀ ಸಾಹುಕಾರನಿಗೂ ೨ ವರುಷ ಕಠಿಣ ಸಜವನ್ನೂ ೩೦೦೦ ರೂಪಾಯಿ ಜುಲ್ಮಾನೆಯನ್ನೂ ಹಾಕಿದರು. ಇವರು ಬೊಂಬಾಯಿ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ವಿಚಾರಣೆ ಮಾಡಿ, ಮೊದಲನೇ ಅಪರಾಧಿಯ ಶಿಕ್ಷೆಯನ್ನು ಖಾಯಂ ಮಾಡಿ, ಸಾಹುಕಾರನಿಗಾಗಿದ್ದ ಶಿಕ್ಷೆಯಲ್ಲಿ ಅರೆವಾಸಿ ಮಾಫ್ ಮಾಡಿದರು.

****

ಬೊಂಬಾಯಿ ಆಧಿಪತ್ಯದ ಗವರ್ನರಾದ ಲಾರ್ಡ್ ಲಾಮಿಂಗ್‌ಟನ್ ರವರು ತಮ್ಮ ಪತ್ನೀರವರ ದೇಹಸ್ಥಿತಿಯು ಚನ್ನಾಗಿರಲಿಲ್ಲವಾದ್ದರಿಂದ ಆಕೆಯವರನ್ನು ವಿಲಾಯಿತಿಗೆ ಕಳುಹಿಸಿರುತ್ತಾರಷ್ಟೆ. ಆಕೆಯವರಿಗೆ ತಲೆಯಲ್ಲಿ ಏನೋ ಗಾಯವಾಗಿ ಶಸ್ತ್ರಹಾಕಿಸಿದಾಗ್ಗೆ ತುಂಬಾ ಕಷ್ಟ ಉಂಟಾಯಿತು. ಅವರು ಬದುಕುವುದೇ ದುಸ್ತರವೆಂದು ಗವರ್ನರವರಿಗೆ ವರ್ತಮಾನ ಬಂದಿತು. ಗವರ್ನರವರು ಆ ಕೂಡಲೇ ರಜಾ ಪಡೆದು ಶೀಘ್ರವಾಗಿ ಪ್ರಯಾಣ ಮಾಡುವಂತೆ ನಿಶ್ಚಯ ಮಾಡಿಕೊಂಡು ಹೊರಡುವ ದಿವಸವನ್ನು ಹಡಗನ್ನು ಗೊತ್ತುಮಾಡಿ, ಇಸ್ತಿಹಾರ್ ಸಹ ಹೊರಡಿಸಿದರು. ಆದರೆ ದೇವರ ದಯೆಯಿಂದ ಆಕೆಯವರಿಗೆ ಸ್ವಲ್ಪ ವಾಸಿಯಾಗಿದೆ ಎಂತಲೂ ಪ್ರಾಣಭಯವೇನೂ ಇಲ್ಲವೆಂತಲೂ ಮರುದಿನವೇ ಗವರ್ನರವರಿಗೆ ವರ್ತಮಾನ ಬಂದದ್ದರಿಂದ ಗವರ್ನರವರು ಪ್ರಯಾಣವನ್ನು ನಿಲ್ಲಿಸಿಬಿಟ್ಟರು. ಈಚೆಗೆ ಬೊಂಬಾಯಿ ಪಟ್ಟಣದ ಹಿಂದೂ ಮಹಮ್ಮದಿಯರೇ ಮೊದಲಾದ ಎಲ್ಲಾ ಮತಗಳ ಜನರೂ ತಮ್ಮ ತಮ್ಮ ದೇವಸ್ಥಾನಗಳಲ್ಲಿ ಸೇರಿ, ಗವರ್ನರವರ ಪತ್ನಿಯವರಿಗೆ ಆಯುರಾರೋಗ್ಯಾದಿಗಳನ್ನು ದಯಪಾಲಿಸುವಂತೆ ಪೂಜೆ ಪುನಸ್ಕಾರ ಉತ್ಸವ ಪ್ರಾರ್ಥನಾದಿಗಳನ್ನು ನಡಿಸಿರುತ್ತಾರೆ.

****

ಶೀಮೆಯಿಂದ ಬರುವಂಥಾ ಸಕ್ಕರೆಗೆ ಮೂಳೆಯ ಪುಡಿಯನ್ನೂ ಗೋವುಗಳ ರಕ್ತವನ್ನೂ ಬೆರಸಿ ತಯಾರ್ ಮಾಡುತ್ತಾರೆಂದು ನೋಟೀಸುಗಳನ್ನು ಅಚ್ಚು ಹಾಕಿಸಿ, ಪಂಜಾಬ್ ಆಧಿಪತ್ಯದಲ್ಲೆಲ್ಲಾ ಪ್ರಕಟಿಸಿರುತ್ತಾರೆ. ಮುಲ್ತಾನ್ ನಗರದ ದೇವಸ್ಥಾನದಲ್ಲಿ ಅನೇಕ ಸಹಸ್ರ ಬ್ರಾಹ್ಮಣಾದಿಗಳು ಸಭೆ ಸೇರಿ, ಅಂಥಾ ಸಕ್ಕರೆಯನ್ನು ಉಪಯೋಗಿಸುವುದು ಹಿಂದೂ ಶಾಸ್ತ್ರಕ್ಕೆ ವಿರೋಧವಾಗಿದೆ ಎಂದು ಉಪನ್ಯಾಸ ಮಾಡಿದರು. ಅಲ್ಲಿದ್ದವರೆಲ್ಲಾ ಪರದೇಶದ ಸಕ್ಕರೆಯನ್ನು ಕೊಂಡು ಉಪಯೋಗಿಸುವುದಿಲ್ಲವೆಂದೂ ಉಪಯೋಗಿಸಿದವರನ್ನು ಜಾತಿಯಿಂದ ಹೊರಗೆ ಹಾಕಬೇಕೆಂದೂ ಶಪಥ ಮಾಡಿಕೊಂಡರು. ಮರುದಿನ ಬೆಳಿಗ್ಗೆ ಬೀದಿ ಬೀದಿಗಳಲ್ಲಿ ತಮಟೆ ಹೊಡೆಯುತ್ತಾ, ಯಾವನೊಬ್ಬ ಹಿಂದುವೇ ಆಗಲಿ ಅಂಥಾ ಸಕ್ಕರೆ ಹಾಕಿದ ತಿಂಡಿ ಪದಾರ್ಥವನ್ನು ಯಾವ ಬ್ರಾಹ್ಮಣನಿಗೂ ತಿನ್ನಲಿಕ್ಕೆ ಕೊಡಕೂಡದೆಂದು ಡಂಗುರ ಹಾಕಿಸಿದರು. ಕಾಂಗ್ರಾ ಪಟ್ಟಣವಲ್ಲಾ ಮರೀ ವಿನಾಯಕ ಬ್ರಾಹ್ಮಣರೂ ಇತರ ವರ್ತಕರೂ ದೇವಸ್ಥಾನದಲ್ಲಿ ಸಭೆ ಸೇರಿ, ಯಾರೇ ಆಗಲಿ ಶೀಮೆಯ ಸಕ್ಕರೆಯನ್ನು ಕೊಂಡು ಯಾವ ಕೆಲಸಕ್ಕೂ ಉಪಯೋಗಿಸಕೂಡದೆಂದು ಕರಾರು ಬರೆದು, ಅದಕ್ಕೆ ಎಲ್ಲರೂ ರುಜು ಮಾಡಿದಾರೆ.

ಬರ್ಡ್ವಾನ್ ಸಂಸ್ಥಾನದ ವೃದ್ಧಮಹಾರಾಣಿಯವರು ಕೆಲವು ಕಾಲದಿಂದ ಕಾಯಿಲೆಯಾಗಿದ್ದು, ಕಳೆದ ವಾರ ತೀರಿಹೋದರೆಂದು ಶೋಕವರ್ತಮಾನ ಬಂದಿದೆ.

◆◆◆◆

ವೇಲೂರ್ ಪಟ್ಟಣದಲ್ಲಿ ವಿದ್ಯಾಶಾಲೆಯನ್ನು ಬಡಾವಣೆ ಮಾಡುವುದಕ್ಕೆ ತಗಲುವ ೩೦,೦೦೦ ರೂಪಾಯಿನ ಪೈಕಿ ೧೦,೦೦೦ ರೂಪಾಯನ್ನು ಮದರಾಸ್ ಗವರ್ನಮೆಂಟಿನವರು ಕೊಡುವುದಾಗಿ ಒಪ್ಪಿಕೊಂಡಿದಾರೆ.

◆◆◆◆

ವೇಲೂರು ಮ್ಯುನಿಸಿಪಲ್ ಸಂಘದವರು ಆ ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವ ನೀರಾವರಿ ಕಾಮಗಾರಿಗೆ ೧,೮೮,೩೫೦ ರೂಪಾಯಿ ಸಾಲವಾಗಬಹುದೆಂದು ಮದರಾಸ್ ಗವರ್ನಮೆಂಟಿನವರು ಸ್ವೀಕಾರಮಾಡಿದಾರೆ.

◆◆◆◆

ಟ್ರಿನಿಡಾಡ್ ದ್ವೀಪಕ್ಕೆ ಹೋಗಿ ಅಲ್ಲಿ ಕೂಲಿನಾಲಿ ಮಾಡುತ್ತಿದ್ದ ನೂರಾರು ಮಂದಿ ಹಿಂದುಸ್ಥಾನದ ಪ್ರಜೆಗಳು ಕಳೆದವಾರ ಅಲ್ಲಿಂದ ವಾಪಸು ಬಂದರು. ಅಲ್ಲಿಂದ ಇವರು ೭ ಲಕ್ಷವೂ ೩೮ ಸಾವಿರ ರೂಪಾಯಿ ಕೂಡಿಸಿ ಆಸ್ತಿಮಾಡಿ ತೆಗೆದುಕೊಂಡು ಬಂದಿರುತ್ತಾರೆ

◆◆◆◆

ಧೋಲ್‌ಪುರ ಸಂಸ್ಥಾನದ ಬಾಲ್ಯವಯಸ್ಸಿನ ಮಹಾರಾಜಾರವರು ಪಟ್ಟಗಳಂಥ ನಾರಿನ ಎಳೆಗಳನ್ನು ಬಿಡಿಸುವಂಥಾ ಒಂದು ಯಂತ್ರವನ್ನು ಕಂಡುಹಿಡಿದು, ಅದನ್ನು ತಮ್ಮ ಹೆಸರಿನಲ್ಲಿ ರಿಜಿಸ್ಟರ್ ಮಾಡಿಕೊಂಡಿದಾರೆ. ಅವರ ಬುದ್ಧಿಕುಶಲತೆಯನ್ನು ನೋಡಿ ಅನೇಕರು ಅವರನ್ನು ಹೊಗಳುತ್ತಿರುವರು

◆◆◆◆

ಪ್ರಿನ್ಸ್ ಆಫ್ ವೇಲ್ಸ್‌ರವರು ಡೆಹಲಿ ಪಟ್ಟಣಕ್ಕೆ ದಯಮಾಡುವಾಗ್ಗೆ ಬಡಬಗ್ಗರಾದ ಪ್ರಜೆಗಳೆಲ್ಲಾ ಸಂತೋಷಪಡುವಂತೆ ಅಲ್ಲಿನ ಹಿಂದೂ ಮಹಮದೀಯ ದೊಡ್ಡಮನುಷ್ಯರು ಅವರಿಗಾಗಿ ಅನೇಕ ವಿಧವಾದ ವಿನೋದಗಳನ್ನು ನಡಸುವರು. ಅನೇಕ ಸಹಸ್ರ ಪ್ರಜೆಗಳಿಗೆ ಸುಖಭೋಜನಾದಿಗಳನ್ನು ಮಾಡಿಸುವರು.

◆◆◆◆

ರಂಗೂನ್ ಪಟ್ಟಣದಲ್ಲಿ ಭಿಕ್ಷುಕರ ಕಾಟ ದಿನೇ ದಿನೇ ಹೆಚ್ಚುತ್ತಾ ಇದೆ. ಕಳೆದ ವಾರ ಮ್ಯಾಜಿಸ್ಟ್ರೇಟರು ೬೭ ಮಂದಿ ಭಿಕ್ಷಗಾರರನ್ನು ದರ್ಯಾಪ್ತಿ ಮಾಡಿ, ತಲಾ ೨೫ ರೂಪಾಯಿನಂತೆ ದುಲ್ಮಾನೆಯನ್ನು ವಿಧಿಸಿ, ದುಲ್ಮಾನೆ ಕೊಡದಿದ್ದರೆ ಒಂದೊಂದು ವಾರ ಕಠಿಣ ಸಜಾ ಅನುಭವಿಸಬೇಕೆಂದು ಆಜ್ಞೆಮಾಡಿದರು.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಹಿಗ್ಗಿನ್ಸ್ ಎಂಬುವವನು ೧೩ ವರುಷದ ಒಬ್ಬ ಹುಡುಗಿಯ ಮೇಲೆ ಬಿದ್ದು ಮಾನಭಂಗಪಡಿಸುವುದಕ್ಕೆ ಪ್ರಯತ್ನಪಟ್ಟನು. ಸೆಷನ್ಸ್ ಜಡ್ಜರು ಅವನಿಗೆ ೧೦ ವರುಷದ ಕಠಿಣಸಜೆಯನ್ನೂ ಅವನಿಗೆ ಆ ಕೃತ್ಯದಲ್ಲಿ ಸಹಾಯಕನಾಗಿದ್ದ ಚಾರ್ಲೆಸ್ ಬೆಲ್ ಎಂಬುವನಿಗೆ ೫ ವರುಷದ ಕಠಿಣಸಜೆಯನ್ನೂ ವಿಧಿಸಿರುತ್ತಾರೆ.

◆◆◆◆

ಢಕ್ಕಾ ನಗರದಲ್ಲಿ ಕಳೆದ ವಾರ ಸುಮಾರು ೨೦,೦೦೦ ಮುಸಲ್ಮಾನರು ಸಭೆಸೇರಿ ಹಬ್ಬದ ಉತ್ಸವವನ್ನು ಮಾಡಿ, ಕಡೆಯಲ್ಲಿ ಸರ್ಕಾರದವರು ಬಂಗಾಳಾ ಆಧಿಪತ್ಯವನ್ನು ವಿಭಾಗನೆ ಮಾಡಿದ್ದು ಸರ್ವೋತ್ತಮವಾದ ಕಾರ್ಯವೆಂತಲೂ ಮಹಮದೀಯರೆಲ್ಲಾ ಸರ್ಕಾರದವರ ಪಕ್ಷವನ್ನು ವಹಿಸುತ್ತಾರೆಂತಲೂ ಉಪನ್ಯಾಸಮಾಡಿದರು.

◆◆◆◆

ಖೈರ್‌ಪೂರ್ ಸಂಸ್ಥಾನದ ಮಹಾರಾಜರವರು ಇಂಡಿಯಾ ಗವರ್ನಮೆಂಟಿನವರ ಉಪಯೋಗಕ್ಕಾಗಿ ತಮ್ಮ ಸಂಸ್ಥಾನದಲ್ಲಿ ಒಂದು ರಿಜಿಮೆಂಟಿನ ಒಂಟೆಗಳ ಸೈನ್ಯವನ್ನೂ ಯುದ್ಧಕಾಲದಲ್ಲಿ ಸೈನಿಕರ ಸಾಮಾನು ಸಾಗಿಸುವ ಗಾಡಿಗಳನ್ನೂ ಸಿದ್ಧಪಡಿಸಿ ಕೊಡತಕ್ಕದ್ದೆಂದು ಅರಿಕೆಮಾಡಿಕೊಂಡಿದ್ದರು. ವಿಲಾಯಿತಿಯ ಚಕ್ರವರ್ತಿ ಸಾರ್ವಭೌಮರವರು ಅದರಂತೆ ಒಪ್ಪಿಕೊಂಡು, ಮಹಾರಾಜರವರನ್ನು ವಂದಿಸಿರುತ್ತಾರೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಹೊಟೂನ್ ಬೀಬಿ ಎಂಬುವಳ ಹೆಸರಿನಲ್ಲಿರುವ ೧,೮೫,೦೦೦ ರೂಪಾಯಿನ ಹತ್ತು ಸರ್ಕಾರಿ ಪತ್ರಗಳನ್ನು ಅವಳ ಮಗನು ಸುಮಾರು ೨॥ ತಿಂಗಳ ಕೆಳಗೆ ಬಂಗಾಳಾ ಬ್ಯಾಂಕಿಗೆ ತಂದುಕೊಟ್ಟು, ಆ ಪತ್ರಗಳ ಬಡ್ಡಿಯನ್ನು ಕೇಳಿದನು. ರಸೀತಿಗೆ ಅವಳ ರುಜು ಹಾಕಿಲ್ಲವೆಂದು ಬ್ಯಾಂಕಿನವರು ಹಣ ಕೊಡದೆಹೋದರು. ಕಳೆದ ವಾರ ಇಬ್ಬರು ಹಿಂದೂಗಳು ಅದೇ ಪತ್ರಗಳನ್ನು ಹಾಜರುಮಾಡಿ, ಬಡ್ಡಿ ಕೊಡಬೇಕೆಂದು ಕೇಳಿದರು. ವಿಚಾರಣೆ ಮಾಡುವಲ್ಲಿ ಆ ಪತ್ರಗಳ ಮಾಲೀಕಳು ಸತ್ತುಹೋಗಿ ಎರಡು ವರುಷಗಳಾಗಿವೆ ಎಂದು ಗೊತ್ತಾಯಿತು. ಸರ್ಕಾರದವರು ಅವರಿಬ್ಬರನ್ನೂ ದಸ್ತಗಿರಿ ಮಾಡಿ, ಮೊಕದ್ದಮೆ ನಡಸುತ್ತಿದಾರೆ

◆◆◆◆

ನವಾಬ್ ಸುಲ್ತಾನ್ ಜಹಾನ್ ಬೇಗಂ ಸಾಹೇಬಾ ಯವರು ೧೯೦೧ನೇ ಇಸವಿಯ ಲಾಗಾಯತು ಭೋಪಾಲ ಸಂಸ್ಥಾನವನ್ನು ಆಳುತ್ತಿದಾರೆ. ಪ್ರತಿ ಒಂದು ಇಲಾಖೆಯ ಕಾರುಬಾರುಗಳೂ ಆಕೆಯವರಿಗೆ ಬಹಳ ಚನ್ನಾಗಿ ಗೊತ್ತಾಗಿವೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ಅಪೀಲಿಗೆ ಬಂದರೆ ರಾಣಿಯವರೇ ಸ್ವತಂತ್ರವಾಗಿ ವಿಚಾರಣೆಮಾಡಿ ತೀರ್ಮಾನ ಹೇಳುತ್ತಾರೆ. ಆ ಸಂಸ್ಥಾನದಲ್ಲಿರುವ ಏಳು ಲಕ್ಷ ಪ್ರಜೆಗಳ ಪೈಕಿ ಮುಕ್ಕಾಲು ಪಾಲಿನವರು ಹಿಂದೂಗಳು. ವಿದ್ಯಾಭಿವೃದ್ಧಿಯು ಸ್ವಲ್ಪ ಕಡಿಮೆ ಕಳೆದ ವರುಷ ೩,೪೫೦ ಹುಡುಗರು ಮಾತ್ರ ವಿದ್ಯಾಭ್ಯಾಸಮಾಡುತ್ತಿದ್ದರು. ಹೆಂಗಸರಿಗೂ ವಿಧವೆಯರಿಗೂ ಒಂದು ಪಾಠಶಾಲೆಯನ್ನು ಇಟ್ಟು, ಅವರಿಗೆ ಜೀವನೋಪಾಯವನ್ನು ಕಲಿಸುತ್ತಿದಾರೆ.

ಖಾಂದೇಷ್ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಸಣ್ಣ ದೇಶೀಯಸಂಸ್ಥಾನದಲ್ಲಿ ಆರು ಮಂದಿ ಘಾತುಕರು, ಹತ್ತು ವರುಷಗಳ ಕೆಳಗೆ ಆ ಸಂಸ್ಥಾನದ ದಿವಾನ್ ಕೆಲಸ ನೋಡುತ್ತಿದ್ದು ಡಿಸ್ಮಿಸ್ ಮಾಡಲ್ಪಟ್ಟ ಜಮಾದಾರ್ ಅಮೀರುದ್ದೀನ್ ಎಂಬಾತನನ್ನು ಕೊಂದುಹಾಕಿದರು. ಈ ಮಾಜಿ ದಿವಾನನಿಗೂ ಆ ಸಂಸ್ಥಾನದ ದೊರೆಗೂ ಮನಸ್ತಾಪಗಳಿದ್ದವು. ಒಬ್ಬರಿಗೊಬ್ಬರು ಬಹು ಕಠಿಣವಾದ ಕಾಗದ ಪತ್ರಗಳನ್ನು ಬರೆಯುತ್ತಿದ್ದರು. ೫೦೦ ರೂಪಾಯಿ ಲಂಚ ತೆಗೆದುಕೊಂಡು, ಆ ಆರು ಜನ ಘಾತುಕರೂ ದಿವಾನನ ಮನೆಗೆ ಹೋಗಿ ಅವನನ್ನು ನಿದ್ದೆಮಾಡುತ್ತಿದ್ದಾಗ ಕೊಂದುಹಾಕಿದರು. ಸರ್ಕಾರದವರು ಬಹಳ ಸಾಹಸಪಟ್ಟು, ಆ ಘಾತುಕರನ್ನು ಪತ್ತೆಮಾಡಿ ಹಿಡಿದು ದರ್ಯಾಪ್ತಿ ಮಾಡಿದರು. ಸೆಷನ್ಸ್ ಜಡ್ಜರು ಆ ಆರುಮಂದಿ ಅಪರಾಧಿಗಳಿಗೂ ಆಮರಣಾಂತವಾದ ಬಂಕೋಲ್ ಶಿಕ್ಷೆಯನ್ನು ವಿಧಿಸಿದರು ಈಗ ಇವರು ಬೊಂಬಾಯಿ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದಾರೆ

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ರೆವಿನ್ಯೂ ಸರ್ವೆ ಸಬ್ ಅ॥ ಸೂಪರಿಂಟೆಂಡೆಂಟ್ ಮೆ॥ ಯಲ್. ಶ್ರೀನಿವಾಸರಾಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೇಳು ದಿನ ಜಾಸ್ತಿ ಮಾಡಿದೆ.

ಅ॥ ಕಮಿಷನರ್ ಮೆ॥ ಸಿ. ರಾಮರಾಯರಿಗೆ ಕೊಟ್ಟಿರುವ ಎರಡೂವರೆ ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನ ಜಾಸ್ತಿ ಮಾಡಿದೆ

ನಿಸಾರ್ ಅಲ್ಲಿಖಾನ್ ಯವರನ್ನು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ೫ ನೆ ಗ್ರೇಡಿನ ಜಮಾದಾರ್ ಟ್ರೂಪ್ ಕಮ್ಯಾಂಡರಾಗಿ ನೇಮಿಸಿದೆ.

ಮೈಸೂರು ಇನ್‌ಫೆಂಟ್ರಿ ೧ ನೆ ಬಟಾಲಿಯನ್ ಕಮಿಷನ್ಡ್ ರ್ಯಾಂಕಿಯಲ್ಲಿ ಮುಂದೆ ಹೇಳುವವರಿಗೆ ನವಂಬರ್ ೧ ರಿಂದ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ.—ಜಮಾದಾರ್ ಗುಲಾಬ್‌ಸಿಂಗರಿಗೆ ೨ನೆ ಗ್ರೇಡ್ ಸುಬೇದಾರಿ, ಕಲರ್ ಹವಿಲ್‌ದಾರ್ ಅಹಮದ್ ಹುಸ್ಸೇನ್ ಯವರಿಗೆ ೨ನೆ ಗ್ರೇಡ್ ಜಮಾದಾರಿ.

ಹೆಗ್ಗಡದೇವನ ಕೋಟೆ ತಾಲ್ಲೂಕು ಸರಗೂರು ಹೋಬಳಿಗೆ ಸೇರಿದ ಚಮರ ಎಂಬ ಗ್ರಾಮದ ಹೆಸರನ್ನು ಚಾಮಲಾಪುರವೆಂದು ಬದಲಾಯಿಸಿರುತ್ತೆ

ಮೆ॥ ಡಿ. ಜಾನ್ ಯವರನ್ನು ಹಂಗಾಮಿಯಾಗಿ ೩ನೇ ಕ್ಲಾಸ್ ಆಕ್ಟಿಂಗ್ ಸಬ್ ಅ॥ ಸರ್ಜನ್ರಾಗಿ ನೇಮಕಮಾಡಿದೆ

ಸಬ್ ಅ॥ ಸರ್ಜನ್ ಮೆ॥ ಎ. ಕೋದಂಡಪಾಣಿ ಮೊದಲಿಯಾರ್ರಿಗೆ ಮೊದಲು ಕೊಟ್ಟಿದ್ದ ೧ ವರುಷ ೪ ತಿಂಗಳ ಸಂಬಳವಿಲ್ಲದ ರಜವನ್ನು ಇನ್ನೂ ಆರು ತಿಂಗಳಿಗೆ ಜಾಸ್ತಿಮಾಡಿದೆ

ಕಡೂರ್ ತಾಲ್ಲೂಕ್ ಅಮಲ್ದಾರ್ ಮೆ॥ ಎಂ. ಎಸ್. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ೨೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡುವತನಕ ತಾಲ್ಲೂಕ್ ಶಿರಸ್ತೆದಾರ್ ಸಿ. ವಿ. ರಾಮರಾಯರು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು

ಮೆ॥ ಗುಲಾಬ್ ಖಾನ್ ಯವರು, ಅಂಬಳೆ ಅಣ್ಣಯ್ಯಪಂಡಿತರು, ಹುಸ್ಸೇನ್ ಅಲಿಬೇಗ್ ಯವರು, ಮೆ॥ ಸಾಹುಕಾರ್ ಮೊಹಿದೀನ್ ಸಾಹೇಬರು, ಇವರನ್ನು ಮೂರು ವರುಷ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರಾಗಿ ನೇಮಕ ಮಾಡಿದೆ.

ಬೆಂಗಳೂರು ಭೂಗರ್ಭ ಶೋಧನಾ ಇಲಾಖೆಯ ಕ್ಯೂರೆಟರ್ ಮೆ॥ ವಿ. ಎಸ್. ಸಾಂಬಶಿವ ಐಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತಾಲ್ಲೋಕು ವರ್ತಮಾನಗಳು.

ಚಾಮರಾಜನಗರ.—ಈ ಊರಿಗೆ ಡೆಪ್ಯುಟಿ ಕಮಿಷನರ್ ಸಾಹೇಬರವರ ಸವಾರಿಯು ದಯಮಾಡಿಸಿ, ಜಮಾಬಂದಿಯನ್ನು ಮಾಡುತ್ತಿರುವರು.—ಇಲ್ಲಿನ ತಾಲ್ಲೂಕ್ ಮೇಸ್ತ್ರಿಗಳಾದ ಟಿ. ಆರ್. ರಾಮಾನುಜಲು ನಾಯ್ಡು ಯವರು ತಾ ೩೦ ರಲ್ಲಿ ಪತ್ನಿವಿಯೋಗವನ್ನು ಹೊಂದಿದರು. ೪ ಸಣ್ಣ ಮಕ್ಕಳುಗಳುಳ್ಳ ಸಂಸಾರವನ್ನು ಕಟ್ಟಿಕೊಂಡು ಅವರು ಇಷ್ಟರಲ್ಲೇ ಪತ್ನಿ ವಿಯೋಗವನ್ನು ಹೊಂದಿದ್ದಕ್ಕಾಗಿ ತುಂಬಾ ವಿಷಾದಪಡಬೇಕಾಗಿದೆ.—ನಮ್ಮ ಫಾರೆಸ್ಟ್ ರೇಂಜರ್ ವರದಾಚಾರ್ಯರಿಗೆ ಗುಂಡ್ಲುಪೇಟೆಗೆ ವರ್ಗವಾಗಿ ಪ್ರಯಾಣ ಬೆಳಸಿದರು ನಿಷ್ಪಕ್ಷಪಾತಿಗಳೂ, ಸ್ನೇಹಪರರೂ, ಔದಾರ್ಯ ಗುಣಗಳೂ ಆದ ಇವರ ವಿಯೋಗವನ್ನು ಹೊಂದಿದ್ದಕ್ಕಾಗಿ ಇವರ ಮಿತ್ರ ಮಂಡಲಿಯವರೆಲ್ಲ ವ್ಯಸನಪಡುತ್ತಿರುವರು.

ಚಿಕ್ಕಮಗಳೂರು.—ಈ ಊರಿನಲ್ಲಿ ಛಳಿ ವಿಪರೀತವಾಗಿ ಸಹಿಸುವದು ಕಷ್ಟವಾಗಿದೆ. ಬಡಬಗ್ಗರು ಆಹಾರಕ್ಕಾಗಿ ಒದಗಿಸಿಕೊಳ್ಳುವರೋ ಹೊದಿಕೆಗಾಗಿ ಒದಗಿಸಿಕೊಳ್ಳುವರೋ ಹೇಳಲಸಾಧ್ಯವಾಗಿದೆ ಇಂಥಾ ಕಾಲದಲ್ಲಿ ಕಳ್ಳತನವು ಟವುನಿನಲ್ಲಿ ತಲೆಹಾಕಿದಂತೆ ಕಾಣುತ್ತಲಿದೆ. ಕಳೆದ ತಿಂಗಳು ೨೯ನೇ ತಾ. ರಾತ್ರಿ ರಹೀಮ್‌ಖಾನ್ ಸಾಹೇಬರ ಅಂಗಡಿಯಲ್ಲಿ ಸುಮಾರು ನಾನೂರು ರೂಪಾಯಿನ ಮಾಲು ಕಳುವಾಯಿತೆಂತಲೂ ಇದುವರಿಗೂ ಪತ್ತೆಯಾಗಲಿಲ್ಲವೆಂತಲೂ ಹೇಳುತ್ತಾರೆ.—ಇದೇ ತಿಂಗಳು ೬ನೇ ತಾರೀಖಿಗೆ ಮುಜರಾಯಿ ಸೆಕ್ರೆಟರಿ ಮೆ॥ ಎಲ್. ಅನಂತಸ್ವಾಮಿ ರಾಯರು ಇಲ್ಲಿಗೆ ಬಂದು, ಇಲ್ಲಿ ತಮ್ಮ ಇಲಾಖೆಗೆ ಸಂಬಂಧಪಟ್ಟ ಕೆಲಸಗಳನ್ನು ನೋಡಿಕೊಂಡು, ೬ನೇ ತಾರೀಖಿಗೆ ಬಾಬಾಬುಡನ್‌ಗಿರಿಗೆ ಹೋಗಿ, ಅಲ್ಲಿಂದ ೯ಕ್ಕೆ ಇಲ್ಲಿಗೆ ಬಂದು, ಇಲ್ಲಿಂದ ಮುಂದೆ ಕಳಸ ಗೇರಿ ಪ್ರಾಂತ್ಯ ಹೊರಡುವರೆಂದು ಕೇಳುತ್ತೇನೆ.—ಇಲ್ಲಿ ಡಿಸ್ಟ್ರಿಕ್ಟ್ ಸರ್ಜನ್ರಾದ ಡಾ॥ ಕುಪ್ಪುಸ್ವಾಮಿ ಮೊದಲಿಯಾರ್ರು ಡಿಸ್ಟ್ರಿಕ್ಟಿನ ಆಸ್ಪತ್ರೆಗಳನ್ನೆಲ್ಲಾ ಇನ್ಸ್‌ಪೆಕ್ಷನ್ ಮಾಡಿಕೊಂಡು ಬರಲು ನೆನ್ನೆ ಹೊರಟರು.— ಇಲ್ಲಿನ ಮುನಿಸಿಪಾಲಿಟಿಯವರು … ಯ ಕಡೆಗೆ ಸ್ವಲ್ಪ ನಿಗಾ ಕೊಟ್ಟು, ಅಲ್ಲಿ ಸಿಕ್ಕುವ ಕಮಿಷ್ಟ … ಕಮಿಷ್ಟ ತೋಳ ಇವುಗಳನ್ನು ಕಂಡು ಹಿಡಿದು, ಒಬ್ಬೊಬ್ಬರಿಗೆ … ಮಾಡಿದರೆ ಬಡ ಜನರಿಗೆ ತುಂಬಾ ಉಪಕಾರ ಮಾಡಿದಂತಾಗುವ …

ಅರಸಿಕೆರೆ ತಾ॥ ಕಣಕಟ್ಟೆ.—ಈ ಗ್ರಾಮದ ಸುತ್ತುಮು… ೪—೫ ಹಳ್ಳಿ (ಸಾತಂಗೆರೆ, ದಿಬ್ಬೂರು, ಕಿತ್ತನಕೆರೆ, ಮಲ್ಲಸಜ ಬಿಚ್ಚೈನಹಳ್ಳಿ) ಗಳಿಗೆ ಸಮಯಕ್ಕೆ ಮಳೆ ಬಾರದೆ ಪೈರುಗಳ… ಒಣಗಿ ಹೋದವು ದನಕರಗಳಿಗೆ ಬಹಳ ಕಷ್ಟ —ಅಲ್ಲದೆ ಇ… ಇಂಥಾ ದೊಡ್ಡ ಕೆರೆ ಒಣಗಿ ಹೋಗಿ ಕುಡಿಯುವದಕ್ಕೆ ನಿ… ಸಿಕ್ಕುವದು ಕಷ್ಟವಾಗಿದೆ ಈ ಊರಿನಲ್ಲಿರುವ ಭಾವಿಗಳ… ಒಣಗಿಹೋಗಿವೆ. ಕೆರೆ ಅಂಗಳದಲ್ಲಿರುವ ಸೀನೀರಿನ ಭಾವಿ… ಲ್ಲಿ ಅರ್ಧ ರಾತ್ರಿಯಲ್ಲಿ ಹೋಗಿ ತಂದವರಿಗೆ ಒಂದೆಂದು ಗ… ಮಾತ್ರ ನೀರು ಸಿಕ್ಕುತ್ತೆ. ಸ್ವಲ್ಪ ತಡಮಾಡಿದವರಿಗೆ ಇಲ್ಲ ಇಲ್ಲ. ಇಂಥಾ ಸಂದರ್ಭದಲ್ಲಿ ತಾ॥ ೧೦ನೇ ಭಾನುವಾರ … ಇಲ್ಲಿ ಬೆಂಕಿ ಬಿದ್ದು ಸುಮಾರು ೨೦—೨೫ ಮನೆಗಳು ಸು… ಹೋದವು. ಬಂದ ಜನಗಳು ನೀರಿಲ್ಲದೆ ಸುಮ್ಮನೆ ನಿಂತಿದ್ದರು ದೇವರು ಇಂಥಾ ಕಷ್ಟಕಾಲ ತಂದಿಟ್ಟಿದ್ದಾನೆ. ಬಡಬಗ್ಗರ ಜನ ನಡೆಯುವದು ಬಹಳ ಕಷ್ಟ ಬಂತು. ಬನ್ನಿಕೆರೆಯವರ ಕೂಲಿಸಹಾ ಸಿಕ್ಕುವದಿಲ್ಲ ಸಾತಂಗೆರೆಯ ಕೆರೆ ಕಾಮಗಾರಿ ಶು… ಆಗುತ್ತೆಂದು ವರ್ತಮಾನವಿದೆ. ಜಾಗ್ರತೆಯಿಂದ ಆದಾದರೂ ಬ… ರೆ ಬಡಜನಗಳಿಗೆ ಕೂಲಿಯಾದರೂ ಸಿಕ್ಕುವದು —ದಿನಸಿನ ಧಾ… ದಿನೇದಿನೇ ಏರುತ್ತಲೇ ಇದೆ. ಅಕ್ಕಿ ರೂಪಾಯಿಗೆ ೬॥—೭ ಸೇ… ರಾಗಿ ೧೬—೧೭ ಸೇರು ಮಾರುತ್ತಾರೆ ಅದರಲ್ಲೂ ಕೆಲವು ವ್ಯ… ಕರು ಕಮ್ಮಿ ಸೇರು ಇಟ್ಟು ಅಳೆಯುತ್ತಾರೆ. ನಮ್ಮ ಐಫೇದಾರ ಇದಕ್ಕೆ ನಿಗಾ ಕೊಡ್ತಾರೆಂದು ನಂಬುತ್ತೇವೆ.

ಹುಣಸೂರು.—೧೯೦೫ನೇ ಇಸವಿ ಸೆಪ್ಟಂಬರ್ ತಿಂಗ… ತಾ. ೧೯ ರಲ್ಲಿ ಹುಣಸೂರು ತಾಲ್ಲೋಕು ಮಂಚೇನಹಳ್ಳಿ ಗ… ಮಕ್ಕೆ ಬೆಂಕಿ ಬಿದ್ದು ೧೦ ಮನೆಗಳು ಬೆಂದುಹೋದವು ಸ… ಮನೆಗಳ ಪೈಕಿ ಬ್ಯಾಡರ ತಿಮ್ಮನ ಮನೆಯಲ್ಲಿ ಬೆಂಕಿಗೆ ಸಿಕ್ಕಿ… ಮೂರು ವರುಷದ ವೆಂಕಟರಮಣನೆಂಬ ಗಂಡು ಮಗುವನು ಕಟ್ಟೆಮಳಲವಾಡಿಯಲ್ಲಿರುವ ಮೆ॥ ವೆಂಕಟರಾಮಯ್ಯನವರು ಬೆಂಕಿಯೊಳಗೆ ನುಗ್ಗಿ ಮಗುವಿಗೆ ಸ್ವಲ್ಪವೂ ಅಪಾಯವಾಗದಂತೆ ಹೊರ ತಂದರು. ಇದರಿಂದ ಇವರಿಗೆ ಒಂದು ಭಾಗವೆಲ್ಲಾ ಬೆಂಕಿಯಿಂ… ಸುಟ್ಟುಹೋಗಿ, ಸುಧಾರಿಸಿಕೊಳ್ಳುವುದಕ್ಕೆ ಸುಮಾರು ೨ ತಿಂಗ… ಯಿತು ಮಗುವೇನೋ ಆರೋಗ್ಯವಾಗಿದೆ ಈ ಸಂಗತಿಗಳ… ಲ್ಲಾ ಇಲ್ಲಿನ ಅಮಲ್ದಾರರೂ ಪೊಲೀಸ್ ಇನ್ಸ್‌ಪೆಕ್ಟರೂ ಮೇಲ… ರಿಪೋರ್ಟ್ ಮಾಡಿದ್ದಾಗ್ಯೂ ಮೇಲ್ಪಟ್ಟವರಿಂದ ಇವರಿಗೆ ಯಾ… ವಿಧವಾದ ಪ್ರೋತ್ಸಾಹವೂ ಉಂಟಾಗದೆ ಇರುವದು ತುಂಬಾ ಆ… ಶ್ಚರ್ಯವಾಗಿದೆ. ಅಂಥಾ ಆಪತ್ಕಾಲದಲ್ಲಿ ಸಹಾಯಕರಾದಂಥವರಿ… ಸರ್ಕಾರದವರು ಪ್ರೋತ್ಸಾಹಪಡಿಸುವದು ಅವಶ್ಯವಾಗಿದೆ.—ಈ ವ… ಗೂ ಮೈಸೂರಿಂದ ಹುಣಸೂರು ವರೆಗೆ ಮಾತ್ರ ತಂತಿ ಟಪ್ಪಾಲು ಇತ್ತು ಹೆಗ್ಗಡದೇವನಕೋಟೆಗೆ ಇರಲಿಲ್ಲ. ಈಗ ಶ್ರೀಮನ್ಮಹಾರಾಜರವರು ಖೆಡ್ಡಾದಿಂದಲೂ ಅವರು ಶಿಕಾರಿಗಾಗಿ ಕಾಕನ… ಕೋಟೆಗೆ ಬರುವದರಿಂದಲೂ ಹುಣಸೂರಿಂದ ಕಾಕನಕೋಟೆ… ತಂತಿ ಟಪ್ಪಾಲ್ ಹಾಕುತ್ತಾರೆ. ಅದರ ಕೆಲಸವು ಶುರುವಾಗಿದೆ ಇದಕ್ಕಾಗಿ ಟೆಲಿಗ್ರಾಫ್ ಸೂಪರಿಂಟೆಂಡೆಂಟರವರು ಇಲ್ಲಿಗೆ ಬಂದು ೧೫ ದಿನಗಳಾದವು. ಬಹುಶ ಈ ಕೆಲಸ ಮುಗಿಯುವ ತನಕ ಇ… ರು ಇಲ್ಲಿಯೇ ಇದ್ದಾರು.—ಜನಗಳಿಗೆ ಕುಡಿಯುವ ನೀರಿನ ಸಂಕ… ಷ್ಟ ಬಹಳವಾಗಿದೆ. ಈಗ ಸುಮಾರು ಮೂರು ತಿಂಗಳಾಗುತ್ತಾ ಬ… ಡಾಗ್ಯೂ ಇನ್ನೂ ನೀರಿನ ನಲ್ಲಿಗಳನ್ನೂ ನೀರು ತುಂಬಿರುವ ಸ್ಥ… ವನ್ನೂ ರಿಪೇರಿ ಮಾಡುವ ಕೆಲಸವು ಮುಗಿಯಲಿಲ್ಲ. ಈ ವಿಷಯದಲ್ಲಿ ತನಿಖೆಮಾಡುವವರೇ ಇಲ್ಲವೆಂದು ಕಾಣಬರುತ್ತದೆ ಇಲ್ಲಿನ ಮ್ಯುನಿಸಿಪಾಲಿಟಿ ಚರಂಡಿಗಳನ್ನು ಬೇಕಾಬಿಟ್ಟಿಯಾಗಿ ರಿಪೇರಿಮಾಡುತ್ತಾ ಇದ್ದಾರೆ. ಅವಶ್ಯವಾದಂಥ ಚರಂಡಿಗಳನ್ನು ರಿಪೇರಿ ಮಾಡದೆ ಸುಮ್ಮನಿರುತ್ತಾರೆ. ಕೇಳಿದರೆ ಮ್ಯುನಿಸಿಪಾಲಿಟಿಗೆ ಸಾಲವಾಗಿದೆ ಎಂದು ಉತ್ತರ ಕೊಡುತ್ತಾರೆ. ಮ್ಯುನಿಸಿಪಾಲಿಟಿಗೆ ಸಾಲವೇನೋ ಇರಬಹುದು. ಆದರೆ ಊರಿನ ಕೊಳಕು ಸಲೀಸಾಗಿ ಸಾಗದೆ, ಒಂದೇ ಸ್ಥಳದಲ್ಲಿ ನಿಂತುಕೊಂಡು, ದುರ್ವಾಸನೆ ಬಡಿದು ಪ್ರಜೆಗಳಿಗೆ ನಷ್ಟವನ್ನುಂಟುಮಾಡಬಹುದೋ? ಮಹನೀಯರೇ ಯೋಚಿಸಬೇಕು —ಕಳೆದ ತಿಂಗಳ ಆದಿಯಲ್ಲಿ ಯಾರೋ ಕಳ್ಳತನದಿಂದ ಹೆತ್ತ ಗಂಡು ಮಗುವನ್ನು ಬೇಲಿಯ ಪಕ್ಕದಲ್ಲಿ ಹಾಕಿದ್ದರು. ಅದನ್ನು ಇಲ್ಲಿನ ಡಾಕ್ಟರು ಇಲ್ಲಿನ ಸೂಲಗಿತ್ತಿಯ ವಶಕ್ಕೆ ಕೊಟ್ಟು, ಪೋಷಣೆಮಾಡಿಸುತ್ತಾ ಇದ್ದಾರೆ ಇಂಥಾ ದುಷ್ಟ ಹೆಂಗಸರನ್ನು ಪೋಲೀಸಿನವರು ಪತ್ತೆಮಾಡಿ, ಬಂದೋಬಸ್ತು ಮಾಡಿದರೆ ಮುಂದೆ ಇಂಥಾ ದುಷ್ಕಾರ್ಯಕ್ಕೆ ಅವಕಾಶವಾಗಲಾರದು.—ಕಳೆದ ತಿಂಗಳು ೨೫ ರಲ್ಲಿ ಹುಣಸೂರಿನ ಸಭೆಯ ವಿಚಾರಕರಾದ ಘನ ಹೊಂದಿದ ಸಾಧುಬೋಧಕರು ಇಲ್ಲಿಗೆ ದಯಮಾಡಿಸಿ, ಇಲ್ಲಿನ ಕನ್ನಡ ಮತ್ತು ಇಂಗ್ಲೀಷ್ ಸಭೆಯವರ ಯೋಗಕ್ಷೇಮ ಮುಂತಾದ್ದನ್ನು ವಿಚಾರಿಸಿ, ಪದ್ಧತಿಯ ಪ್ರಕಾರ ಭಾನುವಾರ ಆರಾಧನೆ ತೀರಿಸಿದ ನಂತರ ಕರ್ತನ ರಾತ್ರಿಭೋಜನ, ದೀಕ್ಷಾಸ್ನಾನ ಮುಂತಾದ ಆಚಾರಗಳನ್ನು ನಡಸಿದರು. ಸೋಮವಾರ ಬೆಳಗ್ಗೆ ಸ್ಕೂಲುಗಳನ್ನು ಪರೀಕ್ಷಿಸಿ, ಅತ್ಯಂತ ಸಂತೋಷಭರಿತರಾಗಿ ಮಧ್ಯಾಹ್ನ ಸುಮಾರು ೨ ಘಂಟೆಗೆ ಮೈಸೂರಿಗೆ ಪ್ರಯಾಣ ಬೆಳಸಿದರು.

...ಕರು.—ದಿನಂಪ್ರತಿಯಲ್ಲೂ ಸಹಿಸಕೂಡದಷ್ಟು ಚಳಿ ... ಊರಿನಲ್ಲಿ ಅಲ್ಲಲ್ಲಿ ಸಿಡುಬಿನ ಉಪದ್ರವು ಆಲೆದೋರು ... ವರುಷ ನಮ್ಮ ಪ್ರಾಂತ್ಯ ಮುಷ್ಟೀ ಧಕಲು ಕಾಲುಭಾ... ಧಕಲಿಗೆ ಅನಾವೃಷ್ಟಿಯುಕ್ತವೂ ಉಂಟಾಗಿದೆ. ಪ್ರಕೃತ ...ವಾಸಿಗಳಾದರೋ ಉಪ್ಪು ಒಂದು ಹೊರತು ಬಾಕಿ ...ಗಳೂ ಒಂದಕ್ಕೆ ದುಗುಣವಾಗಿ ಮಾರಲ್ಪಡುತ್ತ. ...ಗಳ ವ್ಯಾಪಾರದಿಂದ ಸಾವಿರಾರು ಜನರ ಜೀವನವು ನಡೆ... ಈಗ ಧಿನಸಿ ಗಾಡಿಗಳು ಸುತರಾಂ ಬಾರ ...ರಿಂದ ಎಲ್ಲರಿಗೂ ಜೀವನಕ್ಕೆ ಮಾರ್ಗವಿಲ್ಲದಂತಾಗಿ, ...ಸಂಸಾರಗಳು ಕಷ್ಟಪಡುತ್ತಲಿವೆ. ಅಷ್ಟರ ಮುಖ್ಯವಾಗಿ ...ಗಳು ಮತ್ತು ಜನರು ಕ್ಷಾಮದೇವತೆಗೆ ಆಹುತಿಯಾಗು... ಸಂಶಯವಿರಲಾರದೆಂದು ಪ್ರಕೃತ ಸಂದರ್ಭದಿಂದಲೇ ...ವಾಗಿದೆ ಈಗ ನಮ್ಮ ಸರ್ಕಾರದವರು ಜನರಿಗೆ ...ಕೇಳಿ, ಧಾರಣೆವಾಸಿಗಳನ್ನು ಒಂದೇ ಸಮನಾಗಿ ನಿಲ್ಲಿಸಿ, ...ಗೆ ಧಾರಾಳವಾಗಿ ದವಸ ಸಿಕ್ಕುವ ಹಾಗೆ ಮಾಡುವದಲ್ಲದೆ, ...ಇಲ್ಲದೆ ಇರುವವರಿಗೆ ರಿಲೀಫ್ ಕಾಮಗಾರಿಗಳನ್ನು ...ಡಿಸುವದರಿಂದ ಅನುಕೂಲವಾದೀತೆಂದು ನಿರೀಕ್ಷಿಸಲ್ಪಟ್ಟ... ...ದರಲ್ಲಿ "ದುರ್ಭಿಕ್ಷಕಾಲದಲ್ಲಿ ಅಧಿಕ ಮೋಸ" ಎಂಬಂತೆ ...ವಾರ ಫ್ರೀ ಛತ್ರಿಯವರ ಸರ್ಕಸ್ಸಿನ ಕಂಪನಿಯವರು ...ಟಗಳಾಗಿ, ೧—೩ ಸಾವಿರ ರೂಪಾಯಿನ ವರಿಗೂ ವಸೂ...ಕೊಂಡು ಹೊರಟು ಹೋದರು.—ಈ ಮಧ್ಯೆ ಬಳ್ಳಾರಿ ...ವಾಗಿ ಲಷ್ಕರು ಬಂದು ಬೆಂಗಳೂರಿಗೆ ಹೋಯಿತು. ಈ ...ಗಾರಿ ಕೆಲಸಗಳಿಂದ ಜನರು ಮತ್ತಷ್ಟು ಕಳೆಗುಂದಿದವ... —ಈ ನಮ್ಮ ಟೌನ್ ಪೂರ್ವದಿಂದಲೂ ಬಂಡೆ ತುಂಕೂ ...ಪ್ರಸಿದ್ಧವಾಗಿದೆ ಕೆರೆಯಲ್ಲಿ ಸಂಪೂರ್ಣವಾಗಿ ನೀರು ಇದ್ದ... ...ಬಾವಿಗಳಲ್ಲೆಲ್ಲಾ ಸಮೃದ್ಧಿಯಾಗಿ ನೀರಿರುತ್ತೆ. ಇದರಲ್ಲೂ ಈಗ ...ಲ್ಲಿ ಇನ್ನು ೩ ತಿಂಗಳಿಗೆ ಕೂಡಾ ಸಾಲದಷ್ಟು ನೀರಿರುವಲ್ಲಿ ...ಊರಿನ ಬಾವಿಗಳ ನೀರಿನ ವಸತಿ ಎಷ್ಟು ಮಟ್ಟಗಿರಬಹುದು ...ಅಲ್ಲದೆ ಬೇಸಗೆಗೆ ನೀರಿನ ಅಭಾವವು ಹ್ಯಾಗೆ ಪರಿಣಮಿಸು... ...ವಂಚಕರೇ ಯೋಚಿಸಲಿ ಈ ನೀರಿನ ತೊಂದರೆ ವಿಷಯ ...ನಮ್ಮ ಶ್ರೀಮನ್ ಮಹಾರಾಜಾ ಗವರ್ನಮೆಂಟಿನವರಿಗೆ ...ಬಿನ್ನೈಸಿಕೊಂಡಾಗ್ಯೂ ಈ ವರಿಗೂ ಸಮೃದ್ಧಿಯಾದ ಜಲವಸತಿ ...ಉಂಟಾಗಲಿಲ್ಲ. ಈಗಲಾದರೂ ಬಾವಂತರವರು ನಮ್ಮ ...ನೀರಿನ ಅಭಾವವನ್ನು ಹೋಗಲಾಡಿಸುವಂತೆ ಅಪ್ಪಣೆ ...ಬೇಕಾಗಿ ಪ್ರಾರ್ಥಿಸುತ್ತೇವೆ—ಕಳೆದ ತಿಂಗಳು ೨೭ನೇ ...ವಾರ ಇಲ್ಲಿ ಮತಾಂತರ ಹೊಂದಿದವರಿಗೆ ದಾಯಭಾಗ ಹಕ್ಕು ...ದೆಂಬುವದಕ್ಕೆ ವಿವಾಹಂಗು ನಡೆಯಿತು. ಅವರಲ್ಲಿ ಕೆಲ ...ಊದಾರರಾಗಿ ಮಿಷನ್ ಸ್ಕೂಲಿಗೆ ಬಾಲಕ ಬಾಲಕಿಯ... ಕಳುಹಿಸಕೂಡದೆಂದು ಉಪನ್ಯಾಸ ಮಾಡಿದರೆಂದು ವರ್ತ... ...ಆಗಿನಿಂದ ಕೆಲವರು ಅತಿ ಹಟ ಹಿಡಿದು ಜನರಲ್ಲಿ ಬಹಾ ...ವಾಡುತ್ತಾ, ಗಲ್ಭೆ ಮಾಡುತ್ತಿದ್ದಾರೆ ಕಂಪೆನಿಯುಗಳು ಈ ...ಆರೋಪಣೆಗಳಿಗೆ ಮನಸ್ಸನ್ನು ಕೊಡದೆ ನ್ಯಾಯಾನ್ಯಾ... ...ವಿಚಾರಿಸಬೇಕಲ್ಲದೆ ವ್ಯರ್ಥ ಮಿಷನರಿಗಳನ್ನು ನಿಂದಿಸು... ...ದ ಉಪಯೋಗವಿಲ್ಲ —ಬಳ್ಳಾರಿ ಮಾರ್ಗವಾಗಿ ಬಂದ ...ಪೋರ್ಟ್ ೪೯ ನೇ ಸಂಬರ್ ಸೋಲ್ಜರುಗಳು ನಮ್ಮ ...ಟೀಮಿನವರ ಸಂಗಡ ಫುಟ್ ಬಾಲ್ ಆಡಿ, ಜಯ ಹೊಂದಿ ...ಹಿಂದೆ ಇದೇ ಸಂಘದವರು ನಮ್ಮ ಊರಿನವರ ಮೇಲೆ ಆಡಿ. ...ಹೋಗಿದ್ದರು ಈಗ ಅವರು ಬಹಳ ಮುಹನತ್ತಿನಿಂದ ...ಹೊಂದಿದಕ್ಕಾಗಿ ಬಹಳ ಸಂತೋಷಿಸುತ್ತೇ.—ಈಗ ನಾಲ್ಕೈ... ...ವರುಷಗಳಿಂದಲೂ ನಮ್ಮ ಊರಿನಲ್ಲಿ ಮಿಷನ್ ಪಾದ್ರಿಗಳಾದ ...ಎಸ್. ಎಡ್ವರ್ಡ್ಸ್ ದೊರೆಯವರು ಮುಂದಲ ವರುಷದ ...ಲ್ಲಿ ದೇಹಾರೋಗ್ಯಕ್ಕಾಗಿ ಸೀಮೆಗೆ ದಯಮಾಡಿಸುತ್ತಾ... ...ಕರ್ಣಿವಾರವು ಸರ್ವರಿಗೂ ವ್ಯಸನವಾಗಿದೆ. ಸ್ವಾಮಿ ಅವ... ...ಸ್ವದೇಶದಲ್ಲಿ ಕ್ಷೇಮವನ್ನು ದಯಪಾಲಿಸಲೆಂದು ಪ್ರಾರ್ಥ... ...ನೆ

ಬಾತ್ಮಿದಾರರಿಗೆ ನೋಟೀಸು.

...ರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ...ಕಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ... ...ಕ್ಕ ಸರಿಯಾದ ನಿಜವಾದ ವಿಳಾಸಗಳನ್ನು ಬರೆದು ತಿಳಿಸಬೇ... ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ...ಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು. ...ಸರಾರವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ...ರಿಗೆ ವಾಪಸು ಕಳುಹಿಸಲಾರೆವು. ...ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರ... ...ರಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ಮತವೂ ಪಾಠಶಾಲೆಯೂ.

...

...ನೇ ಡಿಸೆಂಬರ್ ತಾರೀಖು ೩ನೆ ಮಂಗಳವಾರ "ವೃತ್ತಾಂತ ...ಕೆ"ಯಲ್ಲಿ ಹಿಂದೂ ಮತಾಭಿಮಾನಿ ಎಂಬಭಿಧಾನದಿಂದ ...ರು ಹಿಂದೂ ಮುಸಲ್ಮಾನರ ಮಕ್ಕಳನ್ನು ಕ್ರೈಸ್ತರ ಪಾಠಶಾ... ...ಕಳುಹಿಸಕೂಡದೆಂತಲೂ, ಅವರ ಪತ್ರಿಕೆಗಳಿಗೆ ಸಹಾಯಮಾಡ... ...ಲೂ ತಿಳಿಸುತ್ತಾರೆ. ಇದು ಯಾವ ಧರ್ಮ? ಅವರು ...ನ್ನು ಚನ್ನಾಗಿ ತಿಳಿಯದ ಲೌಕಿಕ (? ವೈದಿಕ) ರಾಗಿರು...ವಂತೆ ತೋರುತ್ತೆ. ಪಾಠಶಾಲೆಗಳಿಗೆ ಮಕ್ಕಳನ್ನು ಕಳುಹಿಸದಿದ್ದಲ್ಲಿ ಅವರಿಗೆ ಆದ ನಷ್ಟವೂ ಇವುಗೆ ಆದ ಆದಾಯವೂ ಏನು? ಹಾಗೆ ಕಳುಹಿಸದಿರುವವರು ಹೀಗೆಲ್ಲಾ ಪಬ್ಲಿಕ್ ಮಾಡುವದರಿಂದ ಯಾವ ಪ್ರಯೋಜನವನ್ನು ಹೊಂದ್ಯಾರು? ಪತ್ರಿಕೆಗಳಿಂದ ಜನರಿಗೆ ಅನೇಕ ವಿಧದಲ್ಲಿ ಸಹಾಯವೇ ವಿನಹ ಪ್ರತಿಕೂಲವೇನಿದೆ? ತಮ್ಮತಮ್ಮ ಜಾತಿಗೆ ತಾವೇ ಮೇಲು. ಇತರರ ಜಾತೀ ದೂಷಣೆಯಿಂದ ಸಫಲ ಗೇನು? ವರ್ತಮಾನ ಪತ್ರಿಕೆಗಳಿಗೆ ಸಹಾಯಮಾಡಕೂಡದೆಂದು ಹೇಳುವ ಈ ಮತಾಭಿಮಾನಿಗಳು ಓದದೆಯೂ, ಕೇಳದೆಯೂ, ಕಣ್ಣೆತ್ತಿ ನೋಡದೆಯೂ ಇರಲಿ. ಇಲ್ಲವೇ, ನೋಡಿ ಓದುವವರನ್ನಾಗಲಿ ನೋಡದಿರಲಿ. ಹಿತೈಷಿ.

ಹಾಸನದ ಪೋಲೀಸ್ ಏರ್ಪಾಡು.

ಅಯ್ಯಾ,

ಈ ಊರಲ್ಲಿ ಕೆಲವರು ಘಾಟರು ಸೇರಿಕೊಂಡು ಮಾನಿಷ್ಟರ ಮೇಲೆ ಆಯಾ ಇಲಾಖೆಗಳಿಗೆ ಘೂಂಡು ಅರ್ಜಿಗಳನ್ನೂ ಹೆಸರಿಲ್ಲದ ಮೂಗರ್ಜಿಗಳನ್ನೂ ಬರೆಯುವರು. ಮತ್ತು ಈ ಘಾಟರು ನಾನಾ ವಿಧವಾಗಿ ಅರ್ಜಿಗಳನ್ನು ಬರೆದುಬಿಟ್ಟು ಬೇರೆ ಬೇರೆ ಮಾನಿಷ್ಟರ ರುಜುವುಗಳನ್ನು ಹಾಕಿ, ಕಳುಹಿಸುತ್ತಾರೆ. ಬೇರೆ ಬೇರೆ ದೊಡ್ಡ ದೊಡ್ಡ ಕಂಪನಿಗಳಿಗೆ ಭಾರಿ ಭಾರಿ ಸಾಮಾನುಗಳು ಬೇಕೆಂದು ದೊಡ್ಡ ದೊಡ್ಡ ಮನುಷ್ಯರುಗಳನ್ನು ಬೇಕೆಂದು ಅವಮಾನಮಾಡಿ, ಕಂಪನಿದಾರರಲ್ಲಿ ಅವರುಗಳ ಹೆಸರನ್ನು ಕೆಡಿಸಲು ಸುಳ್ಳುಸುಳ್ಳಾಗಿ ಬರೆದು, ಆ ದೊಡ್ಡಮನುಷ್ಯರುಗಳು ಬರೆದಂತೆ ಬರೆದು, ಅವರ ರುಜುಗಳು ಹಾಕಿ ಕಳುಹಿಸಿಬಿಡುತ್ತಾರೆ ಆ ಕಂಪನಿಯವರು ನಿಜವೆಂದು ಭಾವಿಸಿ, ಅವರುಗಳ ಹೆಸರಿಗೆ ಬೇಕಾದ ಸಾಮಾನುಗಳು ವಿ. ಪಿ ಪೋ. ಮೂಲಕ ಕಳುಹಿಸಿಬಿಡುತ್ತಾರೆ. ಪೋಸ್ಟಾಫೀಸಿನವರು ಈ ಪಾರ್ಸಲುಗಳನ್ನು ಆಯಾ ವಿಳಾಸದಾರರಿಗೆ ಕಳುಹಿಸುವಾಗ್ಗೆ ನಾವಲ್ಲ, ತಾವಲ್ಲ, ನಾವು ಬರೆಯಲೇ ಇಲ್ಲ ಎಂದು ಬಾಯಿ ಬಡಕೊಂಡು, ವಾಪಸು ಮಾಡುತ್ತಾರೆ. ಇದರಿಂದ ಮಾನಿಷ್ಟರಿಗೆ ಅವಮಾನವೂ, ಕಂಪನಿಯವರಿಗೆ ನಷ್ಟವೂ, ಪೋಸ್ಟಾಫೀಸಿನವರಿಗೆ ದಣಿವೂ ಎಷ್ಟಾಗುತ್ತೆ? ಮೇಲಿನವರು ತಿಳಿದುಕೊಳ್ಳಲಿ ಮತ್ತು ಈ ಘಾಟರು ಮಾಡುವ ಮತ್ತೊಂದು ಕೆಲಸವೇನೆಂದರೆ, ಮನೆಗಳಿಗೆ ಕನ್ನಾಹಾಕುವದು, ಬೀಗಗಳು ಮುರಿಯುವದು, ಮನೆಗಳ ಮೇಲೆ ಕಲ್ಲು ಎಸೆಯುವದು, ಘೂಂಡು ನೋಟೀಸುಗಳನ್ನು ಬರೆದು ಹಚ್ಚುವದು, ಇವೇ ಮುಂತಾದ ದುಷ್ಕಾರ್ಯಗಳನ್ನು ಮಾಡುತ್ತಾ ಬರುತ್ತಾರೆ. ಇವರನ್ನು ಪತ್ತೇಮಾಡಿ, ಇವರ ಘೂಂಡನ್ನು ಅಣಗಿಸುವ ದಾತರೇ ಇಲ್ಲವೇ! ದಿನದಿನಕ್ಕೆ ಇವರ ಘೂಂಡು ಹೆಚ್ಚುತ್ತಾ ಬರುತ್ತಿಯೇ ಹೊರ್ತು ತಗ್ಗುವುದಿಲ್ಲ. ಕಾರಣವೇನೆಂದರೆ, ಪೋಲೀಸಿನವರ ತನಿಖೆಯೂ ಪತ್ತೇ ಆದರೂ ಅಸ್ಥಿರಮಟ್ಟಿಗೆ ಇದೆ. ಧರ್ಮಪ್ರಭುಗಳಾದ ಸರ್ಕಾರದವರು ಇದಕ್ಕೆ ಪೂರಾ ನಿಗಾಕೊಟ್ಟು, ಮೇಲ್ಕಂಡ ಘೂಂಡಾಟಗಳನ್ನು ಅಡಗಿಸುವಂತೆ ಈ ಘಾಟರನ್ನು ಪತ್ತೇಮಾಡಿಸಿ, ಪ್ರಜಾನೆಮ್ಮದಿಯನ್ನು ಉಂಟುಮಾಡ್ಯಾರೆಂದು ಹಾರೈಸುವ ಕ್ಷೇಮಚಿಂತಕ.

ಶೃಂಗೇರಿ ಕಡೇಮನೆ ಕೆಂಪಿನ ಗಣಿ.

ಅಯ್ಯಾ,

ಕೊಪ್ಪ ತಾಲ್ಲೋಕು ಶೃಂಗೇರಿ ಜಹಗೀರಿಗೆ ಸೇರಿದ ಸುಮಾರು ೧॥ ಮೈಲಿ ದೂರದಲ್ಲಿರುವ ಕಡೇ ಮನೆ ಎಂಬಲ್ಲಿ ಒಂದು ಕೆಂಪಿನ ಗುಡ್ಡವು ಈಗೀಗ ದೃಷ್ಟಿಗೆ ಗೋಚರವಾಗುತ್ತಿದೆ ಇಲ್ಲಿಯ ಕಲ್ಲುಗಳನ್ನು ಶೃಂಗೇರಿ ಶ್ರೀಮಠದ ಏಜಂಟರು ಬೊಂಬಾಯಿಗೆ ಕಳುಹಿಸಿ ಶೋಧಿಸಿದಲ್ಲಿ ಶ್ರೇಷ್ಠವಾದ ಕೆಂಪಾಗುತ್ತೆಂದು ಗೊತ್ತಾಯಿತು ಮತ್ತು ನವರಾತ್ರಿಯಲ್ಲಿ ಬೊಂಬಾಯಿ ಸಾಹುಕಾರರೊಬ್ಬರು ಬಂದು ನೋಡಿಕೊಂಡು ಹೋದರು ಮತ್ತು ಈ ಡಿಸ್ಟ್ರಿಕ್ಟಿನ ಡೆಪ್ಯುಟಿಕಮೀಷನರು ಸಹ ಈಗ್ಗೆ ೨೦ ದಿವಸದ ಹಿಂದೆ ಬಂದು ನೋಡಿಕೊಂಡು ಹೊರಟುಹೋದರು. ಈ ಕೆಂಪಿನ ಗಣಿಗೆ ಸರಿಯಾದ ಕಾವಲು ಮೊದಲಾದುವುಗಳು ಇಲ್ಲದಿರುವಿಕೆಯಿಂದ ಅನೇಕರು ಈ ಗಣಿಯಲ್ಲಿ ಕೆಂಪಿನ ಕಲ್ಲುಗಳನ್ನು ತೆಗೆದು, ಕೆಂಪನ್ನು ಮಾಡಿದರೆಂಬ ವದಂತಿ ಹುಟ್ಟಿದೆ.

ಈಗ್ಯೆ ಸುಮಾರು ಒಂದೂವರೆ ತಿಂಗಳ ಹಿಂದೆ ರಾತ್ರಿ ಸಮಯದಲ್ಲಿ ಗದ್ದೇಕಾವಲಿಗೆ ಹೋದ ಇಬ್ಬರು ಜೊತೆಗಾರರು ಬಂದೂಕನ್ನು ಹಿಡಿದುಕೊಂಡು ಕೂತುಕೊಂಡಿದ್ದರು. ಅದರಲ್ಲಿ ಒಬ್ಬನು ಕನಿಕಾಟದಿಂದ ಮಲಬಾಧೆ ತೀರಿಸಿಕೊಂಡು ಬರಲು ಹೋಗಿ, ಒಂದು ಕರೀ ಕಂಬಳಿಯನ್ನು ಹೊದ್ದುಕೊಂಡು, ಗದ್ದೆಯ ಹಂಚಿನ ಮೇಲೆ ಬರುತ್ತಿರಲು ಮತ್ತೊಬ್ಬನು ಹಂದಿ ಬಂತೆಂದು ಗುಂಡಿನಿಂದ ಹೊಡೆದನು. ಆ ಗುಂಡು ಹಂಚಿನ ಮೇಲೆ ಬರುತ್ತಿದ್ದವನ ತೊಡೆಗೆ ಬಿದ್ದು ಹೊರಟುಹೋಯಿತು. ಇದೂ ಅಲ್ಲದೆ ನಾಲ್ಕು ರವೆಗಳೂ ಸಹಾ ಹೊಕ್ಕಿದ್ದವು. ಅವುಗಳಲ್ಲಿ ಎರಡು ಮಾತ್ರ ತೊಡೆಯಲ್ಲಿಯೇ ಇದ್ದವು. ಈ ಗಾಯಗಳು ಇದೇ ಊರಿನ ಡಾಕ್ಟರ ಚಿಕಿತ್ಸೆಯಿಂದ ಗುಣಹೊಂದುತ್ತಿವೆ

ಇದೇ ಊರಿನಲ್ಲಿ ಈಗ್ಯೆ ಸುಮಾರು ೧೫ ದಿವಸಗಳ ಹಿಂದೆ ಒಂದು ವಿಚಿತ್ರ ಸೃಷ್ಟಿಯುಂಟಾಗಿತ್ತು. ಆ ಕೂಸು ಹುಟ್ಟುವಾಗಲೇ ಯಮನ ಪಟ್ಟಣವನ್ನು ಸೇರಿದ್ದಿತು. ಮತ್ತು ಪಿಶಾಚದ ಆಕೃತಿಯುಳ್ಳದ್ದಾಗಿತ್ತು. ಎಂ. ಎಸ್ ಹೆಚ್.

ವಿದೇಶ ವರ್ತಮಾನಗಳು.

ಜಪಾನ್ ಹಡಗುಗಳ ಸೈನ್ಯಾಧಿಪತಿಯಾದ ಅಡ್ಮಿರಲ್ ಟೋಗೋಯವರು ತಮ್ಮ ಕೈಕೆಳಗಿನ ನಾಲ್ಕು ಭಾರೀ ಯುದ್ಧದ ಹಡಗುಗಳನ್ನು ತೆಗೆದುಕೊಂಡು, ವಿಲಾಯಿತಿಗೆ ಹೋಗಿ ಬರುವವರಾಗಿದ್ದಾರೆ. ಅಲ್ಲಿ ಅವರಿಗೆ ವಿಶೇಷ ಸನ್ಮಾನವೂ ಸತ್ಕಾರವೂ ನಡೆಯುವವು.

ಸಿಂಗಪುರದ ಸಮುದ್ರ ತೀರದಲ್ಲಿ ಚೀನಾ ಬೆಸ್ತರು ಒಂದು ಭಾರಿಯಾದ ತಿಮಿಂಗಿಲವನ್ನು ಹಿಡಿದು ಅದರ ಹೊಟ್ಟೆಯನ್ನು ಸೀಳಿ ನೋಡುವಲ್ಲಿ ಒಂದು ಕಡೆ ೨೦ ಸೇರಿನಷ್ಟು ಭಾರವುಳ್ಳ ಅವಳದ ಗಟ್ಟಿಯೂ, ಗರ್ಭಕೋಶದಲ್ಲಿ ೧೪ ಮರಿ ತಿಮಿಂಗಿಲಗಳೂ ಸಿಕ್ಕಿದವು.

❖❖❖❖

ರಷ್ಯಾ ಜಪಾನ್ ಜಹಜಿನ ಯುದ್ಧದಲ್ಲಿ ಗಾಯಪಟ್ಟು ಜಪಾನ್ ನವರಿಗೆ ಕೈಸೆರೆ ಸಿಕ್ಕಿ ಅವರ ಆಸ್ಪತ್ರೆಯಲ್ಲಿದ್ದುಕೊಂಡು ಚಿಕಿತ್ಸೆ ಹೊಂದುತ್ತಿದ್ದ ರಷ್ಯಾ ಅಡ್ಮಿರಲ್ ರಾಸ್ ಡೆಸ್ಟ್ವೆನ್‌ಸ್ಕಿ ಯವರು ಆರೋಗ್ಯ ಹೊಂದಿ, ಯಾಕೊಬ್ ಎಂಬ ಹಡಗು ಹತ್ತಿ, ಕೋಬೆ ನಗರದಿಂದ ರಷ್ಯಾ ರಾಜ್ಯವನ್ನು ಕುರಿತು ಪ್ರಯಾಣಮಾಡಿದಾರೆ.

❖❖❖❖

ಸುಮಾತ್ರಾ ದ್ವೀಪದ ಪ್ಲಾಂಟರುಗಳು ತಮ್ಮ ತೋಟಗಳಲ್ಲಿ ಕೂಲಿಮಾಡತಕ್ಕ ಜನಗಳ ಮಕ್ಕಳಿಗೆ ಸಾಧಾರಣವಾದ ವಿದ್ಯೆ ಕಲಿಸುವುದಕ್ಕೆ ಅನೇಕವಾಗಿ ಪಾಠಶಾಲೆಗಳನ್ನು ಇಡಿಸಿರುತ್ತಾರೆ. ಕೂಲಿಯವರು ಮಕ್ಕಳ ಆತಂಕವಿಲ್ಲದೆ ಯಜಮಾನನ ತೋಟದಲ್ಲಿ ಚನ್ನಾಗಿ ಕೆಲಸ ಮಾಡುವುದಕ್ಕೆ ಇದರಿಂದ ಬಹಳ ಪ್ರೋತ್ಸಾಹವಾಯಿತೆನ್ನುವದರಲ್ಲಿ ಸಂಶಯವಿಲ್ಲ.

❖❖❖❖

ಲಂಡನ್ ಪಟ್ಟಣದ ಛೇರಿಂಗ್ ಕ್ರಾಸ್ ಎಂಬ ಭಾರೀ ರೈಲ್ವೆ ಸ್ಟೇಷನ್ನಿನ ಮೇಲ್ಛಾವಣಿಯು ಕಳೆದ ವಾರ ಇದ್ದಕ್ಕಿದ್ದಹಾಗೇ ಕಳಚಿ ಬಿದ್ದುಹೋಯಿತು. ಅನೇಕ ರೈಲ್ ಗಾಡಿಗಳ ತುಂಬಾ ಪ್ರಯಾಣಸ್ಥರು ಕುಳಿತಿದ್ದರು. ಆ ವೈಕಿ ಹಲವರು ಈ ಅನಾಹುತದಲ್ಲಿ ಸಿಕ್ಕಿ ಪ್ರಾಣ ಕಳೆದುಕೊಂಡರೆಂತಲೂ ೩೦—೪೦ ಜನರಿಗೆ ನಾನಾ ಗಾಯಗಳಾದವೆಂತಲೂ ತಂತೀ ವರ್ತಮಾನ ಬಂದಿದೆ

❖❖❖❖

ಭೂಕಂಪದ ಪೂರ್ವೋತ್ತರವನ್ನು ಪರಿಷ್ಕಾರವಾಗಿ ತಿಳಿದಿರುವಂಥಾ ಜಪಾನ್ ರಾಜ್ಯದ ಓಮೋರಿ ಎಂಬ ಪಂಡಿತನು ಹಿಂದೂಸ್ಥಾನದಿಂದ ಜಪಾನಿಗೆ ವಾಪಸು ಹೋಗಿ, ಹಿಮಾಲಯ ಪರ್ವತದ ತಪ್ಪಲಲ್ಲಿ ಪ್ರಾಪ್ತವಾದ ಭೂಕಂಪದ ವಿಚಾರವನ್ನು ಕುರಿತು ಕೆಲವು ವಿದ್ವಾಂಸರ ಸಮಾಜಗಳಲ್ಲಿ ಉಪನ್ಯಾಸ ಮಾಡಿ, ಭೂಕಂಪವನ್ನು ತಡೆಯುವಂಥಾ ರೀತಿಯಲ್ಲಿ ಮನೆಮಠಗಳನ್ನು ಕಟ್ಟುವವರ ಕ್ರಮವು ಹಿಂದೂಸ್ಥಾನದವರಿಗೆ ತಿಳಿಯದು ಎಂದು ಹೇಳುತ್ತಿದ್ದಾನೆ.

❖❖❖❖

ಲಾರ್ಡ್ ಕರ್ಜನ್‌ರವರು ಪತ್ನಿಸಹಿತ ಕಳೆದ ವಾರ ಲಂಡನ್ ಪಟ್ಟಣವನ್ನು ತಲುಪಿದರು. ಅವರನ್ನು ಎದುರುಗೊಳ್ಳುವುದಕ್ಕೆ ಸರ್ಕಾರಿ ಅಧಿಕಾರಿಗಳ್ಯಾರೂ ಸ್ಟೇಷನ್‌ಗೆ ಬಂದಿರಲಿಲ್ಲ. ಕೆಲವು ಮಂದಿ ಸ್ನೇಹಿತರು ಮಾತ್ರ ಬಂದಿದ್ದರು ಮಾರು ದಿನ ಲಾರ್ಡ್ ಕರ್ಜನ್‌ರವರು ರಾಜಭವನಕ್ಕೆ ದಯಮಾಡಿ, ಮಹಾರಾಜಾ ಚಕ್ರವರ್ತಿಯವರ ಭೇಟಿ ಪಡೆದು ಬಂದರು ಅವರು ಇಷ್ಟರಲ್ಲೇ ಹವಾ ಬದಲಾಯಿಸುವುದಕ್ಕಾಗಿ ಪತ್ನಿಸಹಿತ ಫ್ರಾನ್ಸಿಗೆ ಪ್ರಯಾಣ ಮಾಡುವವರಾಗಿದ್ದಾರೆ.

❖❖❖❖

ಈಗ ಜಪಾನ್ ರಾಜ್ಯದ ಕೆಲವು ಪ್ರಾಂತ್ಯಗಳಲ್ಲಿ ಕ್ಷಾಮವು ಬಹು ಕಠಿಣವಾಗಿರುವಂತೆ ತಂತೀ ವರ್ತಮಾನ ಬಂದಿದೆ ಜನರು ತಮ್ಮ ಕೂಸುಗಳನ್ನು ತಲೆಗೆ ೧ ರೂಪಾಯಿ ಹಿಡಿದು ೩ ರೂಪಾಯಿ ವರೆಗೆ ಬಿಕರಿ ಮಾಡಿ ಕೊಟ್ಟು ಪೋರಕೊಳ್ಳುತ್ತಿದ್ದಾರೆ. ಅನೇಕಾನೇಕರು ಹಸಿವನ್ನು ಸೈರಿಸಲಾರದೆ ಹುಚ್ಚು ಹಿಡಿದು ನಾನಾ ಅಕೃತ್ಯಗಳನ್ನು ಮಾಡುವರು. ಬಹು ಜನರು ಕುದುರೆಗಳನ್ನು ಇದ್ದ ಕೊಯಿದು ತಿನ್ನುವರು ಬೇರುಗಳನ್ನು ಕತ್ತಿ ತರೆದು ಬೇಯಿಸಿ ತಿನ್ನುತ್ತಿದ್ದಾರೆ.

❖❖❖❖

ಪ್ರಪಂಚದ ಸಮಸ್ತ ಚಿನ್ನ ಬೆಳ್ಳಿ ಗಣಿಗಳಲ್ಲೂ ಕಳೆದ ೧೯೦೩ನೇ ಇಸವಿಯಲ್ಲಿ ೧೦೯,೪೯,೫೫,೯೭೦ ರೂಪಾಯಿನ ಚಿನ್ನವೂ ೩೭,೫೩,೯೪,೩೬೫ ರೂಪಾಯಿನ ಬೆಳ್ಳಿಯೂ ಉತ್ಪತ್ತಿಯಾದವು. ಟ್ರಾನ್ಸ್‌ವಾಲಿನ ಚಿನ್ನದ ಗಣಿಗಳಿಂದಲೇ ೨೪,೪೧೦೫೯,೫೨೫ ರೂಪಾಯಿನ ಚಿನ್ನವನ್ನು ತೆಗೆದಿರುತ್ತಾರೆ. ಹಾಲಿ ಅಂದರೆ ೧೯೦೪ನೇ ವರುಷದಲ್ಲಿ ಹೋದ ವರುಷಕ್ಕಿಂತಲೂ ಏಳುವರೆ ಕೋಟಿ ರೂಪಾಯಿನ ಚಿನ್ನ ಬೆಳ್ಳಿಯನ್ನು ಹೆಚ್ಚಾಗಿ ತೆಗೆಯುವುದರಲ್ಲಿ ಸಂಶಯವಿಲ್ಲವೆಂದು ಅಂದಾಜು ಹಾಕಿದಾರೆ.

❖❖❖❖

ಚೀನಾ ಜನರನ್ನು ಅಮೇರಿಕಕ್ಕೆ ಬಿಡಕೂಡದೆಂದು ಅಮೇರಿಕದವರು ಕಾನೂನ್ ಮಾಡಿಕೊಂಡದ್ದನ್ನು ನೋಡಿ, ಚೀನಾ ಜನರು ಅಲ್ಲಿಂದ ತಮ್ಮ ರಾಜ್ಯಕ್ಕೆ ಬಂದು ಬಿಕರಿ ಆಗುವ ಯಾವ ಪದಾರ್ಥವನ್ನಾಗಲಿ ಯಾರೂ ಕೊಂಡು ಉಪಯೋಗಿಸಕೂಡದೆಂದು ಗೊತ್ತುಮಾಡಿಕೊಂಡರು. ಅಮೇರಿಕದ ಅನೇಕಾನೇಕ ಸರಕುಗಳು ಚೀನಾದಲ್ಲಿ ಬಿಕರಿ ಆಗದೆ ವರ್ತಕರಿಗೆ ಬಹಳ ನಷ್ಟವಾಗುತ್ತಿತ್ತು. ಅಮೇರಿಕದ ಪ್ರೆಸಿಡೆಂಟರು ಇದನ್ನು ನೋಡಿ ಕಳೆದ ವಾರ ತಮ್ಮ ಮಂತ್ರಾಲೋಚನಾ ಸಭೆಯಲ್ಲಿ—ಇನ್ನು ಮೇಲೆ ವಿದ್ವಾಂಸರಾದ ಚೀನೆಯವರು ಅಮೇರಿಕಕ್ಕೆ ದೇಶಸಂಚಾರಾರ್ಥವಾಗಿ ಬಂದರೆ ಅಂಥವರನ್ನು ಅಡ್ಡಿಮಾಡುವುದಿಲ್ಲವೆಂತಲೂ ಆದರೆ ಕೂಲಿನಾಲಿ ಮಾಡಿ ಜೀವನೋಪಾಯವನ್ನು ಕಲ್ಪಿಸಿಕೊಳ್ಳುವುದಕ್ಕಾಗಿ ಬರುವ ಚೀನೆಯವರನ್ನು ಮಾತ್ರ ಅಮೇರಿಕಕ್ಕೆ ಬಿಡಕೂಡದೆಂತಲೂ ಕಾನೂನನ್ನು ಬದಲಾವಣೆ ಮಾಡುತ್ತೇವೆಂದು ತಿಳಿಸಿ, ಚೀನೆಯವರ ಸ್ನೇಹಕ್ಕೆ ಕುಂದಕ ಬಾರದಂತೆ ಮಾಡಿಕೊಂಡರು.

ಕ್ಷೇತ್ರಗಣಿತ.

6

ಮೂರು ಭಾಗಗಳಿಂದ ಕೂಡಿದ ೪೦೦ ಪುಟಗಳುಳ್ಳ ಸಂಪೂರ್ಣವಾದ ಈ ಪುಸ್ತಕದಲ್ಲಿ ಒಟ್ಟು ಸುಮಾರು ೨,೦೦೦ ಲೆಕ್ಕಗಳು ಉತ್ತರಗಳೊಡನೆ ಕೂಡಿವೆ. ಉತ್ತಮ ಪತ್ರ ಪತಿದರ ೧ಕ್ಕೆ ರೂ ೧—೪—೦. ಮಧ್ಯಮ ಪತ್ರ ಪ್ರತಿ ೧ಕ್ಕೆ ರೂ ೧ ವಿದ್ಯಾರ್ಥಿಗಳಿಗೆ ಬಹಳ ಅಗತ್ಯವಾದದ್ದು. ವಿಳಾಸ—ಸಿ. ಕಪ್ಪಣ್ಣ, ಬ್ರ್ಯಾಂಕ್ ಇನ್ಸ್ಪೆಕ್ಟರ್, ನಂಜನಗೂಡು

ಅಗ್ಗ! ಅಗ್ಗ!! ಬಹು ಅಗ್ಗ!!!

ಮೇಲಾದ ಜರ್ಮನ್ ಸಿಲ್ವರ್ ಪುದುಚೇರಿ ಬ್ಲೇಲ್ ಕಾಲ್ ಗೊಲಸು. ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿರುತ್ತೆ. ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದಲೂ ಮಜಬೂತಾದ ತಿರುಪಿನಿಂದಲೂ ಬೆಳ್ಳಿ ಗೊಲಸಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತಯಾರಿಸಲ್ಪಟ್ಟಿರುತ್ತೆ. ಎಂದಿಗೂ ಬಣ್ಣ ಕೆಡಲಾರದು. ಇದನ್ನು ನೋಡಿದವರು ಬಿಡರು. ಒಂದು ಜೋತೆಯನು ತರಿಸಿ ಪರೀಕ್ಷಿಸಿರಿ. ಬಡವರಿಗೂ ಭಾಗ್ಯವಂತರಿಗೂ ಉಪಯೋಗಿಸುವಷ್ಟು ಸುಲಭ ಕ್ರಯ.



ದೊಡ್ಡವರಿಗೆ ಜೊತೆ ೧ಕ್ಕೆ ರೂ ೧-೮-೦ ಚಿಕ್ಕವರಿಗೆ ರೂ ೧ ಮಕ್ಕಳಿಗೆ ೧೨ ಆಣೆ

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ ಮದ್ರಾಸು

3

ಜ್ವರಹರಿ.

7



ಇದು ಸಾಧಾರಣ ಜ್ವರ, ಚಳೀಜ್ವರ, ಮರೋಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ. ೨—೧೨ ಆ, ೧೧ ರೂ; ಎರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

ಈ ಔಷಧವು ಅಜೀರ್ಣ, ಬೇತಿಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆನ್ನಿಯ ಓಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಪೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್ ಮದ್ರಾಸ್.

"ವಾಗ್ದೇವಿ."

7

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ ಕ್ರಯ ಒಂದು ರೂಪಾಯಿ ಅಂಚೆ ಹಾಸಲು ವಿನಾ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಬೋಳಾರ್ ಬಾಬೂರಾವ್, ಮಂಗಳೂರು.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

15

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮ॥ ಟಿ. ಎಂ. ರಾಮಸ್ವಾಮಿಯವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨॥ ಯಂತೆ ಡಿಸ್ಕೌಂಟು ಕೊಡಲಾಗುವುದು. ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು— ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ:—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಹೋಮೋಸಿಯಾ.

ತಕ್ಷಣ ಪರಿಹಾರ



ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಸಹಜವಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮೂಗು ನೋವು, ಊತಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪನಿ. ೨೩ ಸೆಕೆಂಡು ಬೀಚ್ ಲೈನ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

21—11—1905 ರಿಂದ 12— —1905 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕೋ(ದಲು) ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	21	13	23	[illegible]
ಮೈಸೂರು ,,	0	0	77	7
ಬೆಂಗಳೂರು ಡಿಸ್ಟ್ರಿಕ್ಟು	6	5	114	8
ಮೈಸೂರು ,,	4	3	107	6
ಕೋಲಾರ್ ,,	0	0	39	2
ಕೋಲಾರ್ ಚಿನ್ನದ ಗಣಿಗಳು	8	4	11	1
ತುಮಕೂರು ಡಿಸ್ಟ್ರಿಕ್ಟು	3	8	10	3
ಹಾಸನ (ಕೊರಗಿನದು)	9	9	8	[illegible]
ಚಿತ್ರದುರ್ಗ ,,	1	1	34	31
ಕಡೂರ್ ,,	6	6	15	[illegible]
ಶಿವಮೊಗ್ಗ ,,	5	3	68	3[illegible]
ಜುಮ್ಲಾ	54	39	546	41[illegible]

ಶಾಲಿವಾಹನ ೧೮೨೭ ನೇ ವಿಶ್ವಾವಸುಸಂವತ್ಸರದ ಮಾರ್ಗಶಿರ ಬಹುಳ ತದಿಗೆ ಗುರುವಾರದಿಂದ ಮಾರ್ಗಶಿರ ಬಹುಳ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ.	ವ್ಯ ವಾ
14	ಗುರು	ತದಿಗೆ	59-30	ಶ್ರ	48 10	20
15	ಶುಕ್ರ *	ಚೌತಿ	58 46	ಧ	49-12	1
16	ಶನಿ	ಪಂಚಮಿ	57-7	ಶ	48-58	2
17	ರವಿ	ಷಷ್ಠಿ	51-16	ಪೂ	47-59	3
18	ಚಂದ್ರ ‡	ಸಪ್ತಮಿ	51-21	ಉ	45-48	4
19	ಕುಜ (	ಅಷ್ಟಮಿ	45-48	ರೇ	42-50	5
20	ಬುಧ	ನವಮಿ	40-30	ಅ	39-29	6

* ಷಡಶೀತಿಪುಣ್ಯಕಾಲ, ಧನುರ್ಮಾಸಪೂಜಾರಂಭ, ಸಂಕಷ್ಟ ಚತುರ್ಥಿ

‡ ತಿಸ್ರೋಷ್ಟಕಾ.

(ಕಾಲಭೈರವಾಷ್ಟಮಿ

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ ರೂ	೧೨-೮-೦	೧೩-೮
ಕೆಂಬೂತಿ ಅಕ್ಕಿ ಅವಲ್	೧೨-೮-೦	೧೩-೦
,, ದುಯಂ	೧೨-೦-೦	೧೩-೮
ಜಾಪಾನ್ ಅಕ್ಕಿ	೧೨-೦-೦	೧೩-೪
ಸಣ್ಣಕ್ಕಿ ಅವಲ್	೧೩-೦-೦	೧೬-೦
,, ದುಯಂ	೧೨-೮-೦	೧೫-೦
ತೊಗರೀ ಬೇಳೆ ಪಲ್ಲ ೧ಕ್ಕೆ	೧೦-೮-೦	೧೨-೦
,, ದುಯಂ	೧೦-೪-೦	೧೦-೦
ಹೈ ರಾಗಿ ಪಲ್ಲ ೧ಕ್ಕೆ	೬-೧೨-೦	೬-೦
ಕಾರ್ರಾಗಿ	೬-೪-೦	೫-೧೨
ಜೋಳ	೩-೦-೦	೬-೮
ನೆಲಗಡಲೆ ಪಲ್ಲ ೧ಕ್ಕೆ	೮-೮-೦	೧೦-೦
ಬಿಳೀ ಅವರೆ	೧೧-೦-೦	೯-೧೨
ಹೆಸರು	೯-೪-೦	೧೦-೮
ಉದ್ದು	೧೧-೮-೦	೯-೧೨
ಕಡಲೆ	೧೨-೦-೦	೧೦-೦
ಎಳ್ಳು ಸೆ ೧೨೩ ಕ್ಕೆ	೧೯-೦-೦	೧೫-೦
ಹುರುಳಿ	೯-೪-೦	೧೦-೦
ಹರಳು ೧೨೩ ಸೇರಿಗೆ	೧೧-೧೨-೦	೧೨-೮
ಸೀಗೇಕಾಯಿ ಮಣ ೧ಕ್ಕೆ	೬-೮-೦	೬-೮
ಮೆಣಸಿನಕಾಯಿ	೩-೧-೦	೩-೧೨
,, ದುಯಂ	೩-೪-೦	೩-೮
ಬೆಲ್ಲ ದೊಡ್ಡ ಅಚ್ಚು	೪-೮-೦	ಮ ೨-೦
ಬಿಳ್ಳೆ ಮಣ ೧ಕ್ಕೆ	೫-೪-೦	೨-೪
ಹರಳೆಣ್ಣೆ ,,	೫-೦-೦	೪-೧೨
ಕೊತ್ತಂಬರಿ ಪಲ್ಲ ೧ಕ್ಕೆ	೧೨-೦-೦	೧೦-೧೦
ಉಪ್ಪು ,,	೨-೦-೦	೮-೮
ಮೆಣಸೇ ಹಣ್ಣು	೦-೧೨-೦	೦-೧೨
,, ಹಳೇದು	೦-೮-೦	೦-೧೧
ತುಪ್ಪ	೧೪-೦-೦	೧೨-೮
ಸೀಮೆಯೆಣ್ಣೆ ಪಟ್ಟೆ ೧ಕ್ಕೆ	೫-೦-೦	೫ ೦
ತೆಂಗಿನಕಾಯಿ ೧೦೦ ಕ್ಕೆ	೩-೧೨-೦	೪-೨
ಆಳಲೆಕಾಯಿ ಮಣ ೧ಕ್ಕೆ	೦-೧೨-೦	೦-೧
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೨
ಚಿನ್ನ (ಪೌನ್) ಕೆಂಪು	೧೫-೪-೦	೧೫-೪
,, ,, ಹಸಿಮೆ	೧೫-೮-೦	೧೬-೩
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪-೬
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩೭-೦-೦	೮೦-೦

Printed and Published by the Rev. H Spencer, ... the Proprietor and Manager, Wesleyan Mission Press, Mysore. 14/12/1905.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

REGISTERED M. 20

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ ಮೈಸೂರು—ಸನ್ ೧೯೦೫ ನೇ ಇಸವಿ ಡಿಸೆಂಬರ್ ತಾರೀಖು ೨೧ ನೇ ಗುರುವಾರ. ಸಂಚಿಕೆ ೫೦

ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

23

ಮೆಟ್ರಿಕ್ಯುಲೇಷನ್ ಕನ್ನಡದ ೧ನೆ ಪುಸ್ತಕದ ನೋಟ್ಸ್	೦—೭—೦
ಷೆ ,, ,, ೭ನೆ ಪುಸ್ತಕದ ನೋಟ್ಸ್	[illegible]
ಷೆ ೩—೪ ನೆಯ ಪುಸ್ತಕಗಳ ನೋಟ್ಸ್	[illegible]
ಮೈಸೂರು ಸಂಸ್ಥಾನದ ನ[illegible] (೨ನೆ ಭಾಗ)	[illegible]
೨ನೆ ತರಗತಿ ಪದ ಸಂಗ್ರಹ ನೋಟ್ಸ್	[illegible]

"ವೃತ್ತಾಂತ ಪತ್ರಿಕೆ" ಚಂದಾ ಸೀರ್ಜಾ

[illegible] ಇತರ ಕಡೆಗಳಲ್ಲೂ ನಮ್ಮ ಏಜಂಟ್[illegible]
[illegible] ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) . . . [illegible]
[illegible] ಆಫೀಸಿನಿಂದ ಅಂಚೆಯ ಮೂಲಕ ತರಿಸಿ[illegible]
[illegible]ಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ [illegible]
[illegible]
[illegible]ಗಳು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ [illegible]ಬೇಕು
[illegible] ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು



ಅದ್ಭುತ ಜವಳಿ ಪ್ರಜೆಂಟೇಷನ್ ಬಾಜು!
[illegible] ನಕ್ಷೆಯಲ್ಲಿ ತೋರಿಸಿರುವ [illegible] ಗಳು [illegible] ಜನವರಿ ಮುಹೂರ್ತದ [illegible] ಕ್ರಯ [illegible]
ಜರ್ಮನ್ ಸಿಲ್ವರ್ ಬೆಳ್ಳಿ [illegible] ಕ್ರಯ [illegible]
ಮುಟಿಗುವಮನೆ [illegible] ಕ್ರಯ, [illegible]
ತರಟ್ ಗುಂಡಿ—ಇದು ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಿರುತ್ತೆ ಕ್ರಯ, [illegible]
ಹಣದ ಪೆಟ್ಟಿಗೆ—ಹಣ [illegible] ಭದ್ರವಾಗಿ [illegible] ಕ್ರಯ, [illegible]
ವಿಳಾಸ,—ಫ್ರಾಂಕಲಿನ್ ವಾಚ್ ಕಂಪೆನಿ,
ಪಾರ್ಕ್ ಟವುನ್ ಮದರಾಸ್.

ಸ್ವದೇಶಮಿತ್ರ (?) ಸುವಿನುದಿ.

7

ಲೋಕಹಿತಕ್ಕೋಸ್ಕರ ತಿಂಗಳಿಗೆರಡುಸಲ ಪ್ರಕಟ [illegible] ಪತ್ರಿಕೆ

[illegible] ಅನೇಕ ಉಪಯುಕ್ತಾಂಶಗಳುಳ್ಳ ಇಷ್ಟು ಸುಲಭ [illegible] ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಬೇರೆ [illegible] ಇಲ್ಲ.

ಉಚಿತವಾಗಿ ದೊರೆಯುವ ಮಾದರಿ ಸಂಚಿಕೆ—[illegible] ಪತ್ರಿಕೆಗೆ ಆಶ್ರಯ ಕೊಡದೆ ಇರುವುದೇ ಇಲ್ಲ. [illegible]

ಅಂಚೆ ವೆಚ್ಚಸಮೇತ ವಾರ್ಷಿಕ ಚಂದಾ —
ಮುಂಗಡ ಹನ್ನೆರಡಾಣೆ ಮಾತ್ರವೇ; ಅನಂತರ, ಒಂದು [illegible] ಮಾತ್ರ.

[illegible]ಗಳು ಅಂಚೆ ಖರ್ಚಿನ ಪೂರ್ತಿ ಆರಾಣೆಗೆ ಕಾಲಾ[illegible] ಅಂಚೆ ಚೀಟುಗಳನ್ನು ಮುಂಗಡ ಕೊಟ್ಟರೆ, ಒಂದು [illegible] ಪತ್ರಿಕೆಯನ್ನು ಪುಗಸಟೆ ಕೊಡುತ್ತೇವೆ. ವಿ.
[illegible] ತರಿಸಿಕೊಂಡರೆ [illegible]
[illegible]ವಂತರಾಗಬೇಕೆಂಬಿಚ್ಛೆಯುಳ್ಳವರು ಈ ಸಂಧಿಯನ್ನು [illegible] ಬೇಗ ಬೇಗ ನಿಮ್ಮ ವಿಳಾಸಗಳ ಮಾತ್ರ ಕೊಟ್ಟು [illegible] ಸೂಚನೆಯೊಂದನ್ನು ಒದಿಸೋಣ
—ಭಾರತಿಸಂಘಿಗಳು, ಸಂಪಾದಕ, ಸವಿನುಡಿ,
ಹೊಸ ಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

37

ಎಲ್ಲಾ ಬಗೆಯ ಕಾಡು ಮೃಗಗಳನ್ನೂ, ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—MR HUGHES, MYSORE ZOO

೧೯೦೬ನೇ ವರುಷದ ರಾಯಲ್ ಡೈರಿಗಳು.

13

ಈ ರಾಯಲ್ ಡೈರಿಗಳು ಸಿದ್ಧವಾಗಿ—ಪರಾಭವ ಸಂವತ್ಸರದ ಪಂಚಾಂಗ, [illegible] ಚಕ್ರಾವಳಿ, ಪಾಂಚಾಲಿ, [illegible] ಮುಖ್ಯ ವಿಷಯಗಳು, ಸ್ಟಾಂಪು ಆಕ್ಟು, ರಿಜಿಸ್ಟರ್ ಫೀ, ಕೋರ್ಟ್ ಫೀ ಆಕ್ಟು, ಇಂಡಿಯಾದಲ್ಲಿ ಮಹಾರಾಜರುಗಳಿಗೆ ಗೌರವಾರ್ಥವಾಗಿ [illegible] ತೋಪುಗಳ ವಿವರ, ಸರ್ಕಾರಿ ರಜಾ ದಿವಸಗಳು, ೧೯೦೬ ರಲ್ಲಿ ಬರ[illegible] ದಿವಸಗಳು, ಮೆಜಿಸ್ಟ್ರೇಟರುಗಳ [illegible] ಅಧಿಕಾರವು [illegible] ಪ್ರತಿದಿನದ ಸಂಬಳವನ್ನು [illegible] ಪಟ್ಟಿ, ೧೯೦೬ ರಲ್ಲಿನ ಏಕಾದಶಿ, ಪೌರ್ಣಮಿ, ಅಮಾವಾಸ್ಯೆ, ಸಂಕ್ರಮಣ, ಗೌರಿ ಪಂಚಾಂಗ, ರೈಲ್ವೆ ಪಾರಸಲ್ ಛಾರ್ಜು, ಯಮಪಂಚಕಾಕರ, ಇವೇ ಮೊದಲಾದ ಅನೇಕ ವಿಷಯಗಳಿಂದ ಕೂಡಿದೆ.

ನಂ॥ ೧	ದೊಡ್ಡ ಸೈಜು	[illegible] ಕ್ರಯ	೦—೮—೦
,, ೨	,, ,,	ಮುಚ್ಚಳ ಇಲ್ಲದ್ದು	೦—೧೦—೦
,, ೩	ಚಿಕ್ಕ ,,	,, ,,	೦—೬—೦
,, ೪	,, ,,	,, ,,	೦—೪—೦

೧—೨ ನೇ ನಂಬರಿನ ಡೈರಿಗಳು ಈಗ ಮಾರಾಟಕ್ಕೆ ಸಿದ್ಧವಾಗಿವೆ ೩—೪ ನೇ ನಂ ಡೈರಿಗಳು ಅಕ್ಟೋಬರು ೧೦ ರ ವಳಗಾಗಿ ಬೀರಿಯುತ್ತವೆ

ದಿ ಜನರಲ್ ಏಜನ್ಸಿ, ಮೈಸೂರು

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

11

[೧೯೦೫ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅವರ ಭರವಸ [illegible] ಕೊಂಡಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯುವ ಕಂಪನಿ[illegible] ಪ್ರತಿ ೧೦೦೦ ರೂಪಾಯಿಗಳ ಸ್ವಾಧೀನಕ್ಕಾಗಿ ಮಾಸಿಕವಾಗಿ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ [illegible] ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರೋಕ್ತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W. I. P. ರೈಲ್ವೆ ಪಕ್ಕದಲ್ಲಿರುವ "ಕೆಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಬರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ ಆದಾಯ ನಷ್ಟಗಳಿಗೆ ಭಾಗಿಗಳಾದವರು ಆಗಿರುವದಿಲ್ಲ ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಬರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಬಯಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು

ವಿಳಾಸ.—The Manager,
The India Agricultural and Helping Office,
Vengurla Post, Bombay Presidency.

ಸನ್ ೧೯೦೬ನೇ ಇಸವಿಯ

ಎ ನಂ॥ ಎಸ್. ನಂ॥ ಬಿ. ನಂ॥ ಸಿ. ನಂ॥ ಹೆಚ್ ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

7

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಖುದ್ದುಬಾಷ್ ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಪರಾಭವ ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, [illegible]ಗಳು, ರಜಾದಿನಗಳು ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಮುಖ್ಯ ವಿಷಯಗಳು, ಐವಿರ್ಭಾಗಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, [illegible], ರಾಹು ಗುಳಿಕಕಾಲ, ವಾರ ಶೂಲೆ, ದಿನಸಂಬಳದ ಪಟ್ಟಿ, ದೇವಬಡ್ಡಿ, ಜಮಾಖರ್ಚಿನ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕೆಮೆ ಸಾವರಾ ಬೈಂಡು, ರ್ಯಾಬಿನಿಂದ ಗಿಲ್ಟು ಮಾಡಿದೆ

ಎ. ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರ್ ದೊಡ್ಡಸೈಜು ೬ ಆ.	
ಎಸ್ ,, ,, ೪ ,,	ಎಚ್ ,, ,, ೭ ,,	
ಬಿ ,, ಮುಚ್ಚಳವಿದ್ದ ೫ ,,	ಡಿ ,, ಮುಚ್ಚಳವಿದ್ದ ೮ ,,	

ಪೋಸ್ಟು ಛಾರ್ಜು ಬೇರೆ ಒಂದೆ ನಮೂನೆ ೧೨ ಡೈರಿ ತರಿಸಿದರೆ ೧ ಡೈರಿ ಇನಾಮು ವಿ. ಪಿ. ಮೂಲಕ ತರಿಸಿಕೊಳ್ಳಿ

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಸೆಟ್ಟಿ,
ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಬೇಗಬನ್ನಿ ಪಡಮಾಡಬೇಡಿ.

೧೫೦೦೦ ಪೌಂ ಉಲ್ಲನ್ ಟೋಪೀ ದಾರವು ಸೀಮೆಯಿಂದ ಈಗತಾನೇ ಬಂದಿದೆ.

4

(೧) ಸ್ಕೈಟರ್ ಎಂಬ [illegible] ಚೀಟಿ ಉಲ್ಲನ್ ದಾರವು ಪೌನ್ ೧ಕ್ಕೆ ೦—೧೨—೦ ಕೆಂಪು ಕಪ್ಪು ಮಿಕ್ಸ್ ಚ್ ಯೆಲ್ಲೋ ಕೆಂಪು.

(೨) ಇದಕ್ಕಿಂತ [illegible] ಪೌನ್ ೧ಕ್ಕೆ ೧—೧೪—೦ ಕೆಂಪು ಕಪ್ಪು ಯೆಲ್ಲೋ ಕೆಂಪು

(೩) ನಂಬರ [illegible] ಉಲ್ಲನ್ ಪೌನ್ ೧ಕ್ಕೆ ೨—೦—೦ ಯೆಲ್ಲೋ ರಂಗಿನಲ್ಲಿ ಮಾತ್ರ [illegible]

(೪) ನಂಬರು [illegible] ಉಲ್ಲನದಾರ ಪೌನ್ ೧ಕ್ಕೆ ೩—೪—೦

ಹಾಸನದ ಉಲ್ಲನ್ ನಮೂನೆ ಟೋಪಿಗಳು.

ದರ್ಜ ೧ಕ್ಕೆ ೩—೨—೦, ೩—೮—೦, ೯—೦—೦, ೧೦—೦—೦ ೧೨—೦—೦, ೧೩—೦—೦, ೧೬—೮—೦, ೨೧—೦—೦

ಮಕ್ಕಳಿಗೆ ಮತ್ತು ದೊಡ್ಡವರಿಗೆ ಆಗತಕ್ಕ ಉಲ್ಲನಿನಲ್ಲಿ ತಯಾರ್ ಆದ ನೈಟ್ ಕ್ಯಾಪ್ ಗಳು

ಒಂದು [illegible]ಗಳಿಂದ ವರುಷದ ಮಕ್ಕಳಿಗೆ ಆಗತಕ್ಕದ್ದು ೧ಕ್ಕೆ ೦—೧೦—೦

ಒಂದು ವರುಷದಿಂದ ಐದು ವರುಷದ ವರಿವಿಗೆ ಆಗತಕ್ಕದ್ದು ೧ಕ್ಕೆ ೦—೧೨—೦

೫ ರಿಂದ ೧೦ರ ವರಿವಿಗೆ ಆಗತಕ್ಕದ್ದು ೧ ಕ್ಕೆ ೦—೧೪—೦

೧೦ ರಿಂದ ೨೫ರ ವರಿವಿಗೆ ಆಗತಕ್ಕದ್ದು ೧ ಕ್ಕೆ ೧—೦—೦

ಕಾಣ್ಪೂರ್ ತರಹಾ ಉಲ್ಲನ್ ಟೋಪಿಗಳು.

೧ಕ್ಕೆ ೦—೧೦—೦, ೦—೧೨—೦, ೦—೧೪—೦, ೧—೦—೦ ಇರುತ್ತೆ.

ಥಾರಿವಾಲ್ ಶ್ಯಾಲುಗಳು ಕೆಂಪು ಕೇಸರಿ ಯೆಲ್ಲೋ ಕೆಂಪು ಈ ಬಣ್ಣವುಳ್ಳದ್ದು ೬ ಮೊಳ ಉದ್ದ ೩ ಮೊಳ ಅಗಲವುಳ್ಳದ್ದು ೧ಕ್ಕೆ ೩—೧೩—೦

ವಿ ಪಿ ಮೂಲಕ ತರಿಸಿಕೊಳ್ಳುವವರು ೧೦೦ಕ್ಕೆ ೨೫ ರಂತೆ ಮುಂಚಿತವಾಗಿ ಕಳುಹಿಸಬೇಕು. ಖರೀದಿದಾರರು ಅವರವರ ವಿಳಾಸಗಳನ್ನು ಸ್ಪಷ್ಟವಾಗಿ ಬರಿಯಬೇಕು.

ಯಲ್. ಎ. ಪೋರ್ವಾಲ್ ಕಂಪನಿ ಬೆಂಗಳೂರು ಸಿಟಿ.
L. A. POURWAL & Co.,
BANGALORE CITY

P. SUBBAROY'S

World Renowned and most Efficacious Ayurvedic Medicines.

ಪಿ ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

B

೧೦ ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, [illegible]

೧೧ [illegible]

೧೨ [illegible]

೧೩ [illegible]

[illegible]

ಕಾಗದವನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಬರೆಯಿರಿ

Apply to —**P. SUBBAROY,**

Porto Novo, South Arcot.

ವಿಳಾಸ—ಪಿ ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ.

ಚೇಂಬರ್ಲೆನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



(M)

[illegible]

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮವುಂಟ್ ರೋಡ್,

ಮದರಾಸ್

COMMERCIAL CLASSES.

Hardwicke College, Mysore

These classes will be opened, 8th. Jan., 1906.

TEACHER—Mr. S. [illegible] of the Reid College Lucknow holder of the Remington Gold Medal for Typewriting

HOURS—*7—10 a m, & 7—8 p m*

FEES—Typewriting Rs 1—8—0 per month Shorthand Re 1, Bookkeeping Re 1 Commercial Correspondence & Commercial Geography (if desired) Re 1

SCHOOL STUDENTS AT HALF FEES

ADMISSION FEE—Re 1 2

Application for admission to be made to

The PRINCIPAL, Hardwicke College

ಹೊಲಿಯುವ ಯಂತ್ರಗಳು.



[illegible]

ಕಮಿಷನ್ ಮತ್ತು ಜನರಲ್ ಏಜನ್ಸಿ,

ಸೋಲ್ ಏಜಂಟರು, ಶಿವಮೊಗ್ಗ

ವೃತ್ತಾಂತ ಪತ್ರಿಕೆ.

[illegible]

ದರ್ಭಾಂಗ ರಾಜಮನೆತನವು.

ದರ್ಭಾಂಗದ ಮಹಾರಾಜರವರು ಕಾಲವಾಗಿ ಎಂಟು ವರುಷಗಳಾದವು. ಅವರ ಇಬ್ಬರು ಪತ್ನೀಯರುಗಳ ಹೊಟ್ಟೆಯಲ್ಲೂ ಪುತ್ರಸಂತಾನವಾಗಲಿಲ್ಲ. ಆದಕಾರಣ ಅವರ ಸಹೋದರನೇ ಮಹಾರಾಜಾಧಿಕಾರವನ್ನು ವಹಿಸಿಕೊಂಡಿರುತ್ತಾನೆ. ಆ ಇಬ್ಬರು ಪತ್ನೀಯರುಗಳೂ ಆ ಸಂಸ್ಥಾನದ ಆಸ್ತಿಪಾಸ್ತಿಗಳಿಗೆ ತಾವೇ ಹಕ್ಕುದಾರರೆಂದೂ ತಮ್ಮ ಮೈದುನಿಗೆ ಹಕ್ಕಿಲ್ಲವೆಂತಲೂ ವ್ಯಾಜ್ಯವಾಡಿ, ಕೋರ್ಟು ಹತ್ತಿದರು. ಆಗ ಕೆಲವು ದೊಡ್ಡ ಮನುಷ್ಯರೂ ಸರ್ದಾರರೂ ಪ್ರವೇಶಿಸಿ, ಈ ವ್ಯಾಜ್ಯವನ್ನು ಇತ್ಯರ್ಥಮಾಡಿ, ಮಹಾರಾಜನಾಗಿರುವ ಮೈದನು ಇಬ್ಬರು ರಾಣೀಯರಿಗೂ ಜೀವನಾಂಶ ಕೊಡತಕ್ಕದ್ದೆಂದು ಗೊತ್ತುಮಾಡಿದರು. ಈಚೆಗೆ ಒಂದೆರಡು ತಿಂಗಳಲ್ಲಿ ಈ ರಾಣೀರಿಗೂ ಅವರ ಮೈದನಿಗೂ ಜೀವನಾಂಶದ ವಿಚಾರವಾಗಿ ವಾಗ್ವಾದ ನಡೆದು, ಅವರಿಬ್ಬರೂ ಆತನ ಮೇಲೆ ದಾವಾ ಮಾಡಿದರು. ಅವರವರ ವ್ಯಾಜ್ಯದ ಬಲಾಬಲಗಳು ಹ್ಯಾಗಾದರೂ ಇರಲಿ. ದೊಡ್ಡ ಮನೆತನದವರು ಇಂಥಾ ವ್ಯಾಜ್ಯಗಳನ್ನು ಅಂತರಂಗದಲ್ಲಿ ಇತ್ಯರ್ಥಮಾಡಿಕೊಳ್ಳುವುದೇ ಅನೇಕ ವಿಧಗಳಲ್ಲಿ ಉತ್ತಮವಾದದ್ದಾಗಿರುವುದು. ಕಾಶೀ ಮಹಾರಾಜರವರು ಆ ರಾಣಿಗೆ ಮಧ್ಯಸ್ತಿಕೆಮಾಡಿ, ಈ ವ್ಯಾಜ್ಯವನ್ನು ಪರಿಹರಿಸಿದ್ದಾರೆಂದು ತಿಳಿಸಲು ಸಂತೋಷಪಡುವೆವು. ಆ ಮಹಾರಾಣೀರು ಜೀವಂತರಾಗಿರುವ ತನಕ ಅವರಿಗೆ ವರುಷಕ್ಕೆ ಒಂದೂವರೆಲಕ್ಷ ರೂಪಾಯಿ ಉತ್ಪತ್ತಿಯಾಗುವ ಜಮೀನನ್ನು ಬಿಟ್ಟುಕೊಡುವುದಲ್ಲದೆ ಮೂರುಲಕ್ಷ ರೂಪಾಯಿಗಳನ್ನು ಈಗ ನಗದು ಕೊಡುವುದಾಗಿಯೂ ಅವರ ಮೈದನು ಒಪ್ಪಿಕೊಂಡಿರುವನು. ಕಾಶೀಮಹಾರಾಜರವರು ಈ ರೀತಿ ಇತ್ಯರ್ಥಮಾಡಿದ್ದು ಸಂತೋಷಪ್ರದವಾಗಿರುತ್ತದೆ.

ದೇವರು ಮನುಷ್ಯರನ್ನು ಹುಡುಕುವನು

[illegible]

ಹು: ಇಲ್ಲದೆ ಒಂದೆಯು ತನ್ನನ್ನು ಆರಾಧಿಸುವವರು ಇಂಥ | ಲೇಡಿ ಮಹಾರಾಜಾಯವರಿಂದ ಒಡೆಯರವರ ೧೦ ನೇ ವರ್ಷ | ಲ್ಲೂ ೨ನೆ ಫಿರಂಗಿಗಳೂ ಬರುವವು ಈ ಸ್ವೀಕಾರಗಳಿಗೆ ಚಾಮುಂಡಿ

[illegible]

ಸ್ವಸ್ತಿಕ್ಕೆ ರಿಸೆಪ್ಶನ್ ಬಂಗಲೆಯು ಬಲ ಕ್ಕೆ ಸರ್ಕಾರದವರು ಬಿಡಾರಗಳನ್ನು

ಸ್ವರಾಜ ದೇಶೀಯ ಸಮಾಚಾರ.

ಪಟ್ಟಣ.

ಏರ್ಪಾಡಿನ ಪ್ರಕಾರ ಪಟ್ಟಣದಲ್ಲಿ ದ್ವಾಸ್ಥ್ಯ ದೇವಸ್ಥಾನಕ್ಕೆ ದಯಮಾಡಿ, ಬಹು ಸಂಗಗಳನ್ನೂ ಪರಾಂಬರಿಸಿ ಸಂತೋಷ ಗೊಂಡು ರಾಜರ ಧರ್ಮಮಾ ದ ಯುವರಾಜರವರು ಪತ್ನಿ ಪರಿವಾರ ಸಮೇತರಾಗಿ ಈ ಚರಿತ್ರೆ ಪ್ರಸಿದ್ಧ ಸ್ಥಳಗಳನ್ನು ನೋಡಿ ಸಂತೋಷಪಡುವ ಎಂಬ ಅರಮನೆಯಲ್ಲಿ ಇಳಿದಿದ್ದು ನಗರ ಸೂಕ್ತನಗರವನ್ನು ಬಿಡುವು ದಿವಾನ್ ಪತ್ರಿಕೆಯನ್ನು ಓದಿ ಒಪ್ಪಿ ಪಟ್ಟಣದ ಎಲ್ಲಾ ಭಾಗಗಳಲ್ಲೂ ಅತಿ ಸ್ವತಃ ತೃಪ್ತಿಪೂರ್ವಕವಾಗಿ ವಿನಯಿಸಿ ವೇಲ್ಸ್ ರವರು ಪ್ರಸಂಗದಲ್ಲಿ ಲಾರ್ಡ್ ಎಂಬ ಮಹಮ್ಮದೀಯ ದಿವಾನ್ ವಂಶದ ಸಂತೋಷದ ಪಟ್ಟಣದ ಚರಿತ್ರೆಯನ್ನು, ಕೋಟೆಯೊಳಗಿರುವ ಸ್ಥಳಗಳಾಗಿದ್ದ ಪ್ರಸಿದ್ಧ ದಿವಾನ್ ಭವನಗಳನ್ನು ಪರಾಂಬರಿಸಿದರು. ಪ್ರಿಂಸ್ ರ ಪ್ರಾಂತ್ಯದ ಆಳುವ ರನ್ನು ನಿರಸ್ತ ಮಾಡಿರುವ ಕಾಲ ರಾಜರುಗಳು. ಅಲ್ಲಿಂದ ಗೌರವ ಬನ್ನು ನೋಡಿ ಬಂದರು.

ಪ್ರಿನ್ಸ್ ಆಫ್ ವೇಲ್ಸ್ ರವರು, ಅಲ್ಲಿಯೂ ಗಡಿಯ, ಬರು, ಈ ಕಾಲದಲ್ಲಿ ದೇಶೀಯ

ರಾಜರವರು ಬಂದ ನಡೆದ ಪ್ರತಿ ಚಕ್ರವರ್ತಿಗಳ ಗೋರಿಗಳನ್ನೂ ಪಟ್ಟಣವನ್ನೂ ಸುತ್ತಿದರು ಬಂಗಲೆ ಗೆ (ಟಾರ್ ಗುಡಿಯಲ್ಲಿ ಸಂಚಾ ರ ಮುಗಿಸಿಯು ಮಾಲಿಂದಕ್ಕೆ ಲ ರಾಜರು ಇನಾಮು ದಯ

ಆಫ್ ವೇಲ್ಸ್ ರವರು ಆಲ್ಫ ಸೋಮಾರ್ ಎಂಬ ದಳವಾಯಿ ಕೃಷ್ಣದಾಸಿಗೆ ದಯಮಾಡಿ, ಅಲ್ಲಿ ಕಾಲವಾದ ದಿವಾನ್ ರ ಚರಿತ್ರೆ ಯನ್ನು ಪರಾಂಬರಿಸಿದರು. ಸಾ ಮನೋಹರವನ್ನು ನೋಡಿ ಗಡಿಗೆ ಪ್ರವೇಶ ಆಗು

ಪ್ರಿನ್ಸ್ ಆಫ್ ವೇಲ್ಸ್ ರವರು ನ್ನು ಕಳುಹಿದರು. ಪ್ರಿನ್ಸೆಸ್ ಸ್ಟೇ ಷನ್ ನಿಂದ ಅಲಂಕಾರಗಳನ್ನು ಪಟ್ಟಣಕ್ಕೆ ಸಹಿತ ಎದುರು ಗೊಂಡು ವಿಶ್ರಮಿಸಿ ಪ್ರಿನ್ಸ್ ಆಫ್ ವೇಲ್ಸ್ ರವರ ಸಮ ಕ್ಷಮವಾದ ಸಾರೋಟಿನಲ್ಲಿ ಕೂತು ಕಾದಿದ್ದ ಪುರ ದಲ್ಲಿ ಹೊರಟು, ಸಿಕಂದ್ರ ದಯಮಾಡಿದರು ಮಧ್ಯಾ

ಮಹಾರಾಜರವರು ಪ್ರಿನ್ಸ್ ಆಫ್ ಪತ್ರಿಕೆಯಿಂದ ಸಿದ್ಧ ರಿಂದ ಈ ದಿನ ಸಾಯಂಕಾಲ ರಾಜಧಾನಿಗೆ ಬರುವುದು ಬರೆಂದು ಕೇಳಿಕೆ ಇದೆ.

●●●●

ನ ಆಸ್ಪತ್ರೆಯ ಡಾಕ್ಟರ್ ಮಿ॥ ಅನಂತಾರಾಮಯ್ಯ ರವರು ಬಿದ್ದರಿಂದ ಸಹಾಯ ಪಡೆದು ಅವರ ಕೆಲಸಕ್ಕೆ ಮಿ॥ ನ್ನು ಕಳುಹಿಸಿದಾರೆ

●●●●

ರದವರು ಗುಬ್ಬಿ ಅಮಲ್ದಾರ್ ಮಿ॥ ೨ನೆ ರಂಗರಾಯರು ದಿನದ ರಜಾ ತೆಗೆದುಕೊಳ್ಳಲು ಅವರಿಗೆ ಅಪ್ಪಣೆ ಕೊಟ್ಟು ಬರುವವರೆಗೆ ಲೋಕಲ್ ಆಗಿ ನೇಮಿಸಿ, ಜವಾಬ್ದಾರಿಗೆ ವರ್ಗಮಾಡಿದಾರೆ

●●●●

ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮಿ॥ ಫ್ರೇಸರ್ ಳಿದ ವಾರ ಮದರಾಸಿಗೆ ದಯಮಾಡಿ, ಮದರಾಸ್ ಗವ ರ್ನರರೊಂದು, ಅವರ ಸಂಗಡ ಮಾತನಾಡಿಕೊಂಡು ವಾಪಸು ಪ್ರಕಟವಾಗಿದೆ.

●●●●

ಮಹಾರಾಜರವರು ಕಳೆದ ಶುಕ್ರವಾರ ಸಾಯಂಕಾಲ ರುವ ಯುವರಾಜರ ಪ್ರಿನ್ಸ್ ಸಿಡ್ನಿ ರವರ ದೊರೆಸಾನಿ ರೊಂದು ಅವರೆಲ್ಲಾ ಫೋಟೋಗ್ರಾಫರಿಂದ ಗ್ರೂಪನ್ನೂ ವಿನೋದ ಸಿ ಸಂತೋಷಪಡಿಸಿದರು.

ಇಲಾಖೆ, ದನಗಳ ಕೆಲಸ, ಸ್ತ್ರೀಗಳ ಇಲಾಖೆಗಳ ಗೌರವಿಸು ವುದಿಲ್ಲ

●●●●

ಪ್ರಿನ್ಸ್ ಆಫ್ ವೇಲ್ಸ್ ರವರು ದಿನವು ೨೧ ನೆ ತಾರೀಖಿನ ದಿನ ರಾಜಧಾನಿಗೆ ದಯಮಾಡುವರು. ಆ ದಿನವೇ ಅವರಿಗೂ ನಮ್ಮ ಶ್ರೀ ಮನ್ಮಹಾರಾಜರವರಿಗೂ ಭೇಟಿ ಮರುಭೇಟಿಗಳು ನಡೆಯುವವು. ಮಾರನೆ ದಿನ ಬೆಳಿಗ್ಗೆ ಪ್ರಿನ್ಸ್ ಆಫ್ ವೇಲ್ಸ್ ರವರು ಆಸ್ಪತ್ರೆಯ ಬಳಿಗೆ ದಯಮಾಡಿ, ನಮ್ಮ ಸರ್ಕಾರದವರು ಆ ಬಳಿ ಕಟ್ಟಿಸುವ ಚಾಮರಾಜ ಕ್ಕೆ ಗುದ್ದಲಿ ಪೂಜಾ ಕಾಲಿಗೆ ಅಸ್ತಿಭಾರವನ್ನು ಹಾಕುವರು. ಅನಂತರ ಯು ವರಾಜರವರು ಪರಿವಾರ ಸಹಿತ ರಾಜಧಾನಿಯಿಂದ ಹೊರಟು ಕ್ಯಾಂಪಿಗೆ ಬಿಟ್ಟು ಸಿ, ಅಲ್ಲಿ ಮೂರು ದಿನಗಳ ವರೆಗ ಇದ್ದು, ಅನೇಗಳನ್ನ ಹಿಡಿ ಯುವುದು, ಶಿಕಾರಿಮಾಡುವುದು, ಈ ಮುಂತಾದ ವಿನೋದಗಳಲ್ಲಿ ಆಸ ಕ್ತರಾಗಿದ್ದು, ವಾಪಸು ದಯಮಾಡಿ, ಮಾರುದಿನ ಬೆಂಗಳೂರಿಗೆ ಪ್ರ ಯಾಣ ಬೆಳಸಿ, ಅಲ್ಲಿ ಎರಡು ದಿನ ತಂಗಿ ಪ್ರಜೆಗಳ ಆತಿಥ್ಯ ವನ್ನು ಸ್ವೀಕರಿಸಿ, ಮುಂದಕ್ಕೆ ತೆರಳುವರು. ರಾಜಧಾನಿಯ ಟೌನ್ ಹಾಲ್ ಬಂಗಲೆಗೆ ಪ್ರಿನ್ಸ್ ಆಫ್ ವೇಲ್ಸ್ ರವರನ್ನು ಬಿರದಾಡಿಕೊಂಡು, ಅವ ರಿಗಾಗಿ ಅಲ್ಲಿ ಒಂದೆರಡು ಗಂಟೆ ಹೊತ್ತು ನಾನಾ ವಿನೋದಗಳನ್ನು ಮಾಡಿಸಬೇಕೆಂದು ಮೊದಲು ನಿಷ್ಕರ್ಷೆಯಾಗಿದ್ದಿತು. ಆದರೆ ಈಚೆಗೆ ಇದು ಅಗತ್ಯವಿಲ್ಲವೆಂದು ತೆಗೆದುಬಿಟ್ಟಿದಾರೆ. ಪ್ರಿನ್ಸ್ ಆಫ್ ವೇಲ್ಸ್ ರವರ ಸಂಗಡ ಗೌರವಾರ್ಥವಾಗಿ ಸುಮಾರು ೨,೦೦೦ ಇಂಗ್ಲಿಷ್ ಸ್ಪೈ

ರ ರಾಜಮಂಡಲಿಗಳ ಸಾರೋಟಿನಲ್ಲಿ ಕಾಳಿಕಾ ಪಟ್ಟಣದೊಳಗಿನ ಗಂಬಾರ ಸೌಧ, ಸಿಕಂದ್ರಾ ಎಂಬ ಕಟ್ಟಡವನ್ನೂ ಮೊಗಲಾಯಿ ಚಕ್ರವರ್ತಿ ಅಕ್ಬರನ ಗೋರಿಯನ್ನೂ ಪರಾಂಬರಿಸಿದರು. ರಾತ್ರಿ ಪಟ್ಟಣದಲ್ಲಿ ದೀಪೋತ್ಸವ ನಡೆಯಿತು.

ತಾ ೧೬ ನೆ ಭಾನುವಾರ ಬೆಳಿಗ್ಗೆ ಯುವರಾಜರವರು ಮಸೀದಿ ದೇವಸ್ಥಾನಕ್ಕೆ ದಯಮಾಡಿ, ಭಗವತ್ ಪ್ರಾರ್ಥನೆಗಳನ್ನು ನೆರವೇರಿಸಿ ಕೊಂಡು, ಮಧ್ಯಾಹ್ನ ದೋಣಿಗಳ ಸ್ಪರ್ಧೆ ನಡೆಯಿತು. ಇದು ಟ ಇತ್ಮದುದ್ದೌಲಾ ಎಂಬ ಗೋರಿಯನ್ನು ಪರಾಂಬರಿಸಿದರು. ಸಂಜೆಗೆ ಲಾಡು ಬಳಿ ಷಹ ಜಹಾಂಗೀರನ ಪತ್ನಿ ನೂರಜಹಾನ್ ಎಂಬ ರಾಣಿಯು ಇದನ್ನು ಕಟ್ಟಿಸಿದಳು. ಅಲ್ಲಿಂದ ಯುವರಾಜರವರು ತಾಜ್ ಮಹಾಲ್ ಎಂಬ ಕಟ್ಟಡಕ್ಕೆ ದಯಮಾಡಿ, ಅದರ ಸೊಬಗನ್ನು ಅವಲೋಕಿಸಿದರು. ಅದ್ಭುತ ಕಟ್ಟಡ ನೋಡುತ್ತಾ ಸಾಯಂಕಾಲ ವನ್ನು ಕಳೆದರು. ಪ್ರಪಂಚದಲ್ಲಿ ಇದಕ್ಕೆ ಸರಿಸಮಾನವಾದ ಕಟ್ಟಡ ವಿಲ್ಲವೆಂದು ಪ್ರಸಿದ್ಧವಾಗಿದೆ.

ತಾ ೧೮ ನೆ ಸೋಮವಾರ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಸಹಿತ ಕೋಟೆಗೆ ದಯಮಾಡಿ, ಮೊಗಲಾಯಿ ಚಕ್ರವರ್ತಿ ಗಳಾದ ಅಕ್ಬರ್, ಜಹಾಂಗೀರ್, ಷಹಾಜಹಾನ್ ಬಾದಷಾಹರವರ ಅರಮನೆಗಳನ್ನೂ ವಿಸ್ತಾರವಾದ ಸಾವಿಗಳನ್ನೂ ಪರಾಂಬರಿಸಿ, ಬಹಳ ಸಂತೋಷಪಟ್ಟರು. ಮಧ್ಯಾಹ್ನ ಫತ್ತೇಪುರಕ್ಕೆ ದಯಮಾಡಿ, ಅಕ್ಬರ್ ಚಕ್ರವರ್ತಿ ನಿ ವಿಶ್ರಾಂತಿ ಯಾರವರ ಭಾವಚಿತ್ರವನ್ನು ಪ್ರತಿಷ್ಠೆ ಮಾಡಿದರು.

P. SUBBAROY'S
World Renowned and
Ayurvedic M
ಪಿ ಸುಬ್ಬರಾ
ಲೋಕಪ್ರಸಿದ್ಧವಾದ ಮತ್ತು
ಆಯುರ್ವೇದ

೧೦ ಜ್ವರಸಂಹಾರಿ—ಎಲ್ಲಾ ವಿಧ ...ರ, ...ರ, ಚಳಿ, ಇಕಸ್ಲುಯೆಂಜಾ ...ಳನ್ನು ಸಂಪೂರ್ಣವಾಗಿ ನಾಶಮಾಡ... ಪಿ ಪಿ ಛಾರ್ಜು ೫ ಆಣೆ

೧೧ ಕೂದಲು ಉದರಿಹೋಗ... ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೆ... ಉದುರಿಹೋಗುವದು. ಸೀಸೆ ೧ ... ಸೀಸೆ ವರಿವಿಗ... ೫ ಆಣೆ

೧೨ ಸುಗಂಧಕಪಂಚಜ ... ವ್ರಣಗಳನ್ನು ನಾಶಮಾಡುವದು ಸೀ... ೩ ಸೀಸೆ ವರೆಗೂ ೫ ಆಣೆ

೧೩ ಚೇಳಿನ ಔಷಧ—ಚೇಳ... ಕೆಲವು ತೊಟ್ಟುಗಳನ್ನು ಬಿಟ್ಟ... ಪ್ರತಿ ಕುಟುಂಬದಲ್ಲಿಯೂ ಅ... ೧ಕ್ಕೆ ೨ ಆಣೆ ಪಿ ಪಿ ಛಾರ್ಜು ಸೀಸೆಗಳನ್ನು ಒಂದೇ ಆವರ್ತ... ರೂ ಪಿ ಪಿ ಛಾರ್ಜು ಅಲಾಯು

೧೪ ಮಧುರಧ್ವನಿ ಮಾತ್ರೆ—ಸರಿಮಾಡಿ ಮನೋಹರವಾದ ಮಾತನಾಡುವದಕ್ಕೆ ವಿಶೇಷ ಆನವಾಗಿ ಸಂಗೀತಗಾರರು, ಉಪನ್ಯಾಸಕಾರರು ಇದರ ಸೇವನೆಯಿಂದ ವದು ಸಾಧಿದರೆ ಕಿವಿಗಿಂಪಾಗು ಸೀಸೆ ೧ಕ್ಕೆ ೮ ಆಣೆ ಪಿ ಪಿ

೧೫ ಸ್ನಾನಕ್ಕೆ ಸುವಾಸನಾ ... ವನ್ನು ಸ್ನಾನಕಾಲದಲ್ಲಿ ಪ್ರಾಂ... ಶರ ... ಉಪಯೋಗಿಸುವದಕ್ಕೆ ಆ... ವಾದ ಕೊಳೆಯನ್ನೂ ಬೆವರಿನ ಚರ್ಮವನ್ನು ಮೃದುಮಾಡಿ, ವಿಂ... ಟುಮಾಡುವದು ಇದಲ್ಲದೆ ದೇ... ಮಾಡುವದು ...ರ್ಣವು ಸ... ವಾದುದರಿಂದ ಪ್ರತಿಯೊಬ್ಬರ... ಪೆಟ್ಟಿ ೧ಕ್ಕೆ ೮ ಆಣೆ ಪಿ ಪಿ

೧೬ ಸಂಜೀವನ ಮಾತ್ರೆಗ... ಪಿಸ್ತ್ರೀವಿರುವವು, ಅಧಿಕ... ತಲೆ ನೋವು, ನೆಗ..., ಇನ್ನೂ ... ವಾದ ರೋಗಗಳಿಗೆ ಒಳ್ಳೇ ... ಸು ಉಪಯೋಗಿಸಬಹುದು ... ೩ ಸೀಸೆ ವರೆಗೂ ೫ ಆಣೆ

೧೭ ಗೋರೋಚನ ಮಾ... ವಿಷಮಶೀತಜ್ವರ, ಎರಡನೇ ಜ್ವ... ಯವಾದ ಔಷಧವು ಬಾಲನಾ... ಧ್ವರೆ, ನಿದ್ರೆ ಶ್ವಾಸಕೋ... ಮಕ್ಕಳಿಗೆ ಬರುವ ಜ್ವರ, ಆವ... ಬಾಧಿರೋಗ, ಹೊಟ್ಟೆಗಿ ನೊ... ವು, ಮಕ್ಕಳಿಗೂ ದೊಡ್ಡವರಿ... ಮಾಡುವದು ಸೀಸೆ ೧ಕ್ಕೆ ... ಗೂ ೫ ಆಣೆ

೧೮ ಚರ್ಮರೋಗಕ್ಕೆ ... ಹುರಿ ... ಕಜ್ಜಿ, ಆನೆಕಜ್ಜಿ ಮತ್ತು ... ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಟು, ತಲೆಯು ಲ್ಲಿಯೂ ಇತರ ಕಡೆಗಳಲ್ಲಿಯೂ ಬಿಳಿ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ...ಗಳೂ ಹೊರಗೆ ಹಚ್ಚುವದರಿಂದಲೇ ಶೀಘ್ರತೆಯಾಗಿ ವಾಸಿಯಾಗುವವು ಬೆಲೆ ಸೀಸೆ ೧ಕ್ಕೆ ೮ ಆಣೆ ಪಿ ಪಿ ಛಾರ್ಜು ೨ ಬಾಟ್ಲಿ ವರೆಗೆ ೫ ಆಣೆ

೧೯ ಕೇಶಸುವಾಸಿನಿ —ಈ ತೈಲವು ಪೂರ್ವಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ಮೀಸೆ, ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ ತಲೆ ಮೆದುಳು ಕಣ್ಣುಗಳಿಗೆ ತಂಪುಕೊಡುತ್ತದೆ ಬೋಳುತಲೆ, ಸುಂಟು ಮುಂತಾದ್ದನ್ನು ನಾಶಮಾಡುತ್ತದೆ ವಿಲಾಯತಿಯ ಸುವಾಸನಾ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚು ಮೆಚ್ಚಿನದಾಗಿರುತ್ತದೆ ಬೆಲೆ ರೂ ೧ ಪಿ ಪಿ ಛಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ

Apply to.—**P. SUBBAROY,**
Porto Novo, South Arcot.
ವಿಳಾಸ—ಪಿ ಸುಬ್ಬರಾಯ್,
ಪೋರ್ಟನೋವೊ, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲಿನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

50

ಚೈನಾ ಸಿಲ್ಕು.

CHINA SILKS! **CHINA SILKS!!**

೧ ತರ	20-18 ಗಜ	೧ಕ್ಕೆ.	೦	೧೫	೦
	ಪೀಸು	೧ಕ್ಕೆ.	೧೫	೦	೦
೨ "	10-18 ಗಜ	೧ಕ್ಕೆ.	೧	೦	೦
	ಪೀಸು	೧ಕ್ಕೆ.	೧೩	೦	೦
೩ "	20-18 ಗಜ	೧ಕ್ಕೆ.	೧	೧	೦
	ಪೀಸು	೧ಕ್ಕೆ.	೧೮	೦	೦
೪ "	19-20 ಗಜ	೧ಕ್ಕೆ.	೧	೧೦	೦
	ಪೀಸು	೧ಕ್ಕೆ.	೨೩	೮	೦
೫ "	28-17 ಗಜ	೧ಕ್ಕೆ.	೧	೧೨	೦
	ಪೀಸು	೧ಕ್ಕೆ	೨೮	೪	೦

THE STYLO PEN

ಸ್ಟೈಲೋ ಪೆನ್



ರೂ ೧ ರೂ.
ಒಂದು ದಫಾ ಮಸಿಹಾಕಿದರೇ ೧೦,೦೦೦
ಮಾತುಗಳನ್ನು ಬರಿಯುವತನಕ
ಮಸಿಯನ್ನು ಮುಟ್ಟಲವ
ಬಹಳ ಕಡಿಮಿಧರ. ಶ್ಯಕವಿಲ್ಲ.
೬ಕ್ಕೆ ೫ ೧೨ ೦
೧೨ಕ್ಕೆ ೧೦ ೮ ೦

ರಿಯಲ್ ಇಣ್ ಡಿಪೆಣ್ ಡೆಂಟು ಪೆನ್ (ಲೇಖನಿ) [U S A]
ಕ್ರಯ ರೂ. ೧ ೮ ೦
ಇಣ್ ಡಿಪೆಣ್ ಡೆಂಟುಪೆನ್. English ಕ್ರಯ ರೂ. ೧ ೪ ೦
ಮೈಸೂರ್ ಪೆನ್, ಈ ಲೇಖನಿಗಳು ನಮಗೂಸ್ಕರ ಸ್ಪೆಷಲಾಗಿ ಬಂದಿವೆ. ಬಹಳ ಬಾಳಿಕೆ ಬರುವವು. ಕ್ರಯ ರೂ. ೨ ೮ ೦
ಕರ್ಟ್ಸ್ ಪೆನ್. ೧೪ ಕ್ಯಾರೆಟ್
ಚಿನ್ನದ ನಿಬ್ ಯುಕ್ತದೆ ಕ್ರಯ ರೂ ೪ ೦ ೦

ಜಂಪ್ಯಾಸ್ ಗಳು.

ಈ ಜೋಡೆಗಳು ತೊಗಲಿನಿಂದ ಮಾಡದೇ ಎಲ್ಲ ಕಟ್ಟರಿ ರಬ್ಬ... ರು ಕಿತ್ತಾನಿಂದಮಾಡಿರುತ್ತವೆ. ಇವುಎಲ್ಲರಿಗೂ ಉಪಯೋಗವಾದದ್ದು. ಇದರಿಂದ ಯಾವಆಚಾರಕ್ಕೂ ಭಿನ್ನವಾಗುವದಿಲ್ಲ ಕೃ.
ಇದು ಬಹಳವಾಗಿ ಟೆನ್ನಿಸ್, ಜಿಂನೆಸಿಯಂ ಮಾಡುವವರಿಗೆ ಬಹಳ ಉಪಯೋಗವಾದದ್ದು.
ಸೈಜು. ೫, ೬, ೭, ೮, ೯, ೧೦. ಕ್ರಯ ರೂ. ೨ ೪ ೦
ಪ್ರತಿ ಜತೆಯು ಸಹಿತ ೨ ಜತ ಲೇಸಸ್ ಪೆಟ್ಟಿಗೆಸಹ ಕೊಡಲ್ಪಡುವದು.

DRESSING SHIRTS.

ಡ್ರೆಸಿಂಗ್ ಷರ್ಟುಗಳು.



ಲಾಂಕ್ಲಾತ್ ಷರ್ಟುಗಳು.
೧ ತರ ಸ್ಟಿಚ್ ಫ್ರೆಂಟ್ ಮತ್ತು ಕಪ್ ಗಳು.
೧ಕ್ಕೆ ರೂ ೧ ೪ ೦
೧೨ಕ್ಕೆ ಕ್ರಯ ೨ರೂಪಾಯಿಂದ ೧ ೬ ೦ ವರಿವಿಗುಇದೆ.
೨ ತರ ೧ ೩ ೦ ಯಿಂದ ೧ ೮ ೦ ವರಿವಿಗುಇದೆ

VERY CHEAP! **VERY CHEAP!!**
FANCY POST CARDS.
ಇವರಲ್ಲಿ ಅತಿಸುಂದರವಾದ ರೂಪಗಳನ್ನು ಹಾಕಲ್ಪಟ್ಟಿವೆ
೧೦೦ಕ್ಕೆ ಕ್ರಯ ರೂ. ೧ ೧೨ ೦
೧೦೦ಕ್ಕೆ ಕ್ರಯ ರೂ. ೦ ೫ ೦
ನಮ್ಮ ಕಾತದಾರರಿಗೆ ೧೦೦ಕ್ಕೆ ೧ ೧೦ ೦
೧೦೦ಕ್ಕೆ ಕ್ರಯ ೦ ೨ ೬

ಬೆಂಗಾಲ್ ಸಾಬೋನಗಳು.

ಮಹಾರಾಜಾ ೩ ಬಿಲ್ಲೆ	೧	೮	೦
ಪಟ್ಟಿಗ ಬಿಲ್ಲಿ ರೋಜ್	೧	೦	೦
ಹಿಂದುಸಾಬೂನ್	೦	೧೦	೦
ಎಕ್ಸೆಲ್ಸಿಯರ್	೦	೮	೦
ವಯೋಲೆಟ್	೦	೬	೦
ಟಾಯಿಲೆಟ್ ಸುಪೀರಿಯರ್ ೪ ಬಿಲ್ಲೆಗಳು	೦	೬	೦
ಟರ್ಕಿಷ್ ಬಾತ್ ೧೨ ಬಿಲ್ಲೆಗಳು	೧	೬	೦
ಗ್ಲಿಸರೀನ್	೦	೫	೦
ಕಾರ್ಬಾಲಿಕ್	೦	೧೫	೦
ಬ್ರಷ್ ವಿಸ್ಕರ್ ೨೪ ಬಿಲ್ಲೆಗಳು	೧	೨	೦
ಇಂಪೀರಿಯಲ್ ಬಾತ್ ೨೦ ಬಾಲ್ ಗಳು	೩	೧೨	೦

ಇವಲ್ಲದೆ ಯನ್ನು ಇಂಗಿಲೀಷ್ ಸಾಬೂನಗಳು ದೊರಿಯುವದು.

ವರುಷಗಳಾದವು. ಅವರ ಇಬ್ಬರು ಪತ್ನೀರುಗಳ ... ಟ್ಟೆಯಲ್ಲೂ ಪುತ್ರಸಂತಾನವಾಗಲಿಲ್ಲ. ಆದಕಾರಣ ಅವರ ಸಹೋದರನೇ ಮಹಾರಾಜಾಧಿಕಾರವನ್ನು ವಹಿಸಿಕೊಂಡಿರುತ್ತಾನೆ. ಆ ಇಬ್ಬರು ಪತ್ನೀರುಗಳೂ ಆ ಸಂಸ್ಥಾನದ ಆಸ್ತಿಪಾಸ್ತಿಗೆಲ್ಲಾ ತಾವೇ ಪಕ್ಷದಾರರೆಂದೂ ತಮ್ಮ ಮೈದುನಿಗೆ ಹಕ್ಕಿಲ್ಲವೆಂತಲೂ ವ್ಯಾಜ್ಯವಾಡಿ, ಕೋರ್ಟು ಹತ್ತಿದರು. ಆದರೆ ಕೆಲವು ದೊಡ್ಡ ಮನುಷ್ಯರೂ ಸರ್ದಾರರೂ ಪ್ರವೇಶಿಸಿ, ಈ ವ್ಯಾಜ್ಯವನ್ನು ಇತ್ಯರ್ಥಮಾಡಿ, ಮಹಾರಾಜನಾಗಿರುವ ಮೈದನು ಇಬ್ಬರು ರಾಣೀರಿಗೂ ಜೀವನಾಂಶ ಕೊಡತಕ್ಕದ್ದೆಂದು ಗೊತ್ತುಮಾಡಿದರು. ಈಚೆಗೆ ಒಂದೆರಡು ತಿಂಗಳಲ್ಲಿ ಈ ರಾಣೀರಿಗೂ ಅವರ ಮೈದನಿಗೂ ಜೀವನಾಂಶದ ವಿಚಾರವಾಗಿ ವಾಗ್ವಾದ ನಡೆದು, ಅವರಿಬ್ಬರೂ ಆತನ ಮೇಲೆ ದಾವಾ ಮಾಡಿದರು. ಅವರವರ ವ್ಯಾಜ್ಯದ ಬಲಾಬಲಗಳು ಹ್ಯಾಗಾದರೂ ಇರಲಿ. ದೊಡ್ಡಮನೆತನದವರು ಇಂಥಾ ವ್ಯಾಜ್ಯಗಳನ್ನು ಅಂತರಂಗದಲ್ಲಿ ಇತ್ಯರ್ಥಮಾಡಿಕೊಳ್ಳುವುದೇ ಅನೇಕ ವಿಧಗಳಲ್ಲಿ ಉತ್ತ

ಕುಪಂಥನರಿಗೆ ವಿಷ್ಣುಸೂತ್ರಕ ... ವ ... ಲ್ಲವೆಂದು ತಿಳಿಯದ್ದು ಅವು ಕಾರಣ—“ದೇವರನ್ನು ಹುಡುಕಿರಿ ಆತನು ನಿಮಗೆ ದೊರೆವನು” ಎಂದು ಪ್ರಧಾನಾಗಿ ಹೇಳುತ್ತಿರುವರು; ... ರತು ಆತನು ... ಹುಡುಕುವವರು ವೃಥಾ ಶ್ರಮಪಡುತ್ತಾರೆಂದು ಎ... ಹೇಳಿಲ್ಲ

ಪರಂತು ದೇವರನ್ನು ಹುಡುಕಿದವರಾದರೋ ತಮ್ಮ ಕಾಯದಲ್ಲಿ ಸಂಪೂರ್ಣವಾಗಿ ಫಲವನ್ನು ಕಂಡಿದ್ದಾರೆಂತಲ ಹೇಳುವದಕ್ಕಾಗದಿಲ್ಲ ಇದಕ್ಕೆ ದೃಷ್ಟಾಂತವಾಗಿ ವೇದವಾಕ್ಯವು— ‘ಒಬ್ಬನು ದೇವರನ್ನು ಹುಡುಕುವದರಿಂದ ಆತನನ್ನು ಕಂಡು ಹಿಡಿಯಲಾಗುವದೇ? ಎತಲೀ ಸರ್ವಶಕ್ತನಾದ ಜಗದೀಶನನ್ನು ಸಂಪೂರ್ಣವಾಗಿ ಕಂಡುಹಿಡಿಯಲಾಪೆಯಾ? ಆ ತಿಳುವಳಿಕೆಯು ಆಕಾಶದಷ್ಟು ಎತ್ತರವಾಗಿರುವದರಿಂದಲೂ ಪಾತಾಳಕ್ಕಿಂತ ಆಳವಾಗಿರುವದರಿಂದಲೂ ನೀನೇನು ಮಾಡಬಲ್ಲೆ, ನೀನೇನು ಹೇಳಬಲ್ಲೆ?’” ಎಂತಲೂ ತಿಳಿಸುತ್ತ ಮನುಷ್ಯರೊಳಗೆ ಯಾರು ಯಾರು ದೇವರನ್ನು ಹುಡುಕುವರೋ ... ರು ಸಂಪೂರ್ಣವಾಗಿ ಆತನನ್ನೂ ಹೊಂದಿಲ್ಲ ಸಂಪೂರ್ಣ ... ಯನ್ನು ಹೊಂದಿಲ್ಲವೆಂದು ತಿಳಿಯತಕ್ಕದ್ದು ... ಸ್ವಾಮಿ ... ಹೇಳಿರುವ ಮಹಾ ವಿಶೇಷವಾದ ವಿಷಯವೇನೆಂದರೆ—ದೇವರೇ ಮನುಷ್ಯರನ್ನು ಹುಡುಕುತ್ತಾನೆಂಬುವದು ಈ ವಿಷಯದಲ್ಲಿ ಆತ ಹೇಳಿರುವ ವಾಕ್ಯಗಳನ್ನು ಇಲ್ಲಿ ಉದಾಹರಿಸುತ್ತೇವೆ —“ದೇವಾರಾಧನೆ ಮಾಡುವವರು ಆತ್ಮದಿಂದಲೂ ಸತ್ಯದಿಂದಲೂ ತಂದೆಯನ್ನು ಆ

...ನು, ಹೀಗಲ್ಲದೆ ತಂದೆಯು ತನ್ನನ್ನು ಆರಾಧಿಸುವವರು ಇಂಥ ...ಗಬೇಕೆಂದು ಹುಡುಕುತ್ತಾನೆ.'' ತನ್ನ ವಿಷಯವಾಗಿ ಮಾತ್ರ ...ವ ಆತನು ಹೇಳಿದುದೇನೆಂದರೆ—''ಮನುಷ್ಯ ಕುಮಾರನು ...(ದವನ್ನು ಹುಡುಕುವದಕ್ಕೂ ರಕ್ಷಿಸುವದಕ್ಕೂ ಬಂದನು'' ...ಕಾರ್ಯಗಳನ್ನು ಪುಷ್ಟೀಕರಿಸುವದಕ್ಕೆ ಆತನು ಕಳೆದು ಹೋ... ...ಕುರಿಯನ್ನು ಹುಡುಕುವ ಕುರುಬನ ಸಾಮ್ಯವನ್ನೂ ಕೈತಪ್ಪಿ ...ದ ನಾಣ್ಯವನ್ನು ಹುಡುಕುವ ಹೆಂಗಸಿನ ಸಾಮ್ಯವನ್ನು ತಪ್ಪಿ ...ಮಗನು ಹಿಂದಿರುಗಿ ಬರುವನೆಂದು ಆತ್ಯಾಶೆಯಿಂದ ನಿರೀಕ್ಷಿಸು... ...ತಂದೆಯ ಸಾಮ್ಯವನ್ನೂ ಹೇಳಿದನು.

...ಸುಸ್ವಾಮಿಯು ಅವತರಿಸಿದ್ದರಲ್ಲಿ ದೇವರ ಸದ್ಬುದ್ಧೇಶವು ...ಳ ಪರಿಷ್ಕಾರವಾಗಿ ಪ್ರಕಟವಾಯಿತು. ದೇವರ ಪ್ರೀತಿಯಂಥ ...ದು ಬೇರೆ ಯಾವ ಸಂಭವದಿಂದಲಾದರೂ ಇಷ್ಟು ಪರಿಷ್ಕಾರ ...ಗೊತ್ತಾಗುತ್ತಿರಲಿಲ್ಲ. ಅದನ್ನು ನಾವೇ ಸ್ವಶಕ್ತಿಯಿಂದ ಎಷ್ಟು ...ತಿಳಕೊಳ್ಳಿರಲಾರೆವು. ಒಬ್ಬನಲ್ಲಿ ಪ್ರೀತಿಯಿದೆಯೆಂಬು ...ಸಾಕ್ಷಿಯಾಗಿ ಅವನಲ್ಲಿ ಸ್ವಾರ್ಥಪರತ್ವದ ಸಂಶಯವೆಂಬ ಮ... ...ವು ಪ್ರಕಟವಾದರೆ ಹೊರತು ಬೇರೆ ಯಾವ ಬಗೆಯಿಂದ ...ಅದು ಗೊತ್ತಾಗುತ್ತದೆ? ಪ್ರೀತಿಯುಳ್ಳವರು ಕಾದ ಅವನ್ನು ...ಸುವಷ್ಟರ ಅವರ ಇರುವಿಕೆಯು ಗೊತ್ತಾಗುವದು. ಸ್ವರ್ಗೀ... ...ನಾದರೋ ಮನುಷ್ಯರನ್ನು ಹುಡುಕಿಕೊಂಡು ಬಂದ ಕಾರಣ ...ದೇವರು ಮನುಷ್ಯರೆಲ್ಲರನ್ನು ತನ್ನ ಸ್ತೋತ್ರವು ಹೇಳುವ ...ವಿಚಿತ್ರವಾಯಿತು. ನಮ್ಮನ್ನು ಪುನಃ ಸ್ವಾಧೀನಪಡಿಸಿಕೊ... ...ವಾಗಿ ದೇವರು ತನ್ನ ಸ್ವಂತ ಪುತ್ರನನ್ನೇ ಕಳುಹಿಸಿಕೊಟ್ಟ ...ಮಾತಿನಲ್ಲಿ ನಮ್ಮ ಪರಿಯ ವಿಷಯವಾಗಿ ದೇವರಿಗೆ ಎಷ್ಟು ...ದ ಭಾವವಿದೆಯೆಂಬುದು ಗೊತ್ತಾಗುತ್ತದೆ. ಇದಲ್ಲದೆ ನಮ್ಮ ...ಹೊಂದಿಸುವದಕ್ಕಾಗಿ ಎಷ್ಟು ಕೊಟ್ಟರೂ ಸಾಲದು! ಎಂಬಂತೆ ...ದ ಕಾರ್ಯವನ್ನು ನೋಡಲಾಗಿ ನಮ್ಮಲ್ಲಿ ಆತನಿಟ್ಟ ...ವಿಶ್ವಾಸವು ಇನ್ನೆಷ್ಟು ಅತಿಶಯವಾದದ್ದೆಂದು ಹೇಳಲಾರವು.

...ಕ್ರಿಸ್ತಸ್ವಾಮಿಯು ಈ ಲೋಕದ ನಿವಾಸಿಗಳಿಗೆ ತಿಳಿ... ...ದು ದೇವರು ಪ್ರೀತಿಯಾಗಿದ್ದಾನೆ, ಅಲ್ಲದೆ ದೇವರ ಬಲವನ್ನು ...ಸಿರುತ್ತಾನೆ. ಅದು ಸ್ವರ್ಗದಿಂದ ಮನುಷ್ಯಕುಮಾರನು ...ಹೋದವರನ್ನು ರಕ್ಷಿಸುವದಕ್ಕೂ ಬಂದನು. ಕೆಲವರು ...ದರ ನಿರಾಕರಿಸಿಕೊಳ್ಳುವದಿಲ್ಲವಲ್ಲ. ಕ್ರಿಸ್ತನು ಅಂಥವ ...ಆತನು ಮಾಡುಕಾವದ ... ಅಲ್ಲದ ರಕ್ಷಿಸಲು ಶಕ್ತನಾಗಿದ್ದಾನೆ. ...ಆರಂಭಿಸಿದ ಕೆಲಸವನ್ನು ಮುಗಿಸಿಯೇ ಬಿಡುತ್ತಾನೆ. ದೇವರ ...ಯೆಲ್ಲಾ ಯೇಸುಕ್ರಿಸ್ತನಲ್ಲಿ ಪ್ರಕಟವಾಗುತ್ತದೆ. ಆತ ...ಮವಾಗಿಯಾದ ದೇವರೇ ಹೊರತು ಬೇರೆಯಲ್ಲ. ಆತನು ...ಕದಲ್ಲಿ ನೆರವೇರಿಸಿರುವ ಮಹತ್ತರವಾದ ಮಾರ್ಗಟು ...ದರೆ—ಮನುಷ್ಯರು ಪುನಃ ದೇವರನ್ನು ತಿಳಿದುಕೊಳ್ಳುವಂ ...ಆತನೊಡನೆ ಐಕ್ಯಸ್ವವನ್ನು ಹೊಂದುವಂತೆಯೂ ಮಾಡಿ ...ತಾನು ಮಾಡುವದಕ್ಕೆ ಬಂದ ಈ ಕಾರ್ಯವನ್ನ ನಿತ್ಯವೂ ...ದ್ಧಿಪಡಿಸುವದಕ್ಕೆ ಪ್ರತಿದಿನವೂ ನಿದರ್ಶನಗಳು ದೊರಕು ...ವೆ. ಆದುದರಿಂದ ನಾವು ಈ ಕ್ರಿಸ್ತಜಯಂತ್ಯುತ್ಸವವನ್ನು ...ತೋಷದಿಂದಲೂ ಕೃತಜ್ಞತೆಯಿಂದಲೂ ಕೊಂಡಾಡುತ್ತೇವೆ. ...ಯೇಸುಸ್ವಾಮಿಯು ಅವತರಿಸಿ ಹೋದಷ್ಟಾಯಿತೆಂದು ನಾವು ...ದು ಆತನು ಭೂತಕಾಲಕ್ಕೆ ಸೇರಿದ ಚರಿತ್ರಪುರುಷನಾ ...ಲ್ಲದೆ ಈಗಲೂ ಆತ್ಮಭಾವದಲ್ಲಿ ಜೀವಿಸುತ್ತಿರುವ ಪುರುಷ ...ನೆ ತನ್ನನ್ನು ಕರೆಯುವವರೆಲ್ಲರ ಬಳಿಯಲ್ಲೇ ಇರುತ್ತಾನಾದ ...ಮ್ಮಲ್ಲಿ ಯಾರೇ ಆಗಲಿ ದೇವರನ್ನು ಅರಿತಿಲ್ಲವೆಂದೂ ಅಥವಾ ...ಐಕ್ಯತೆಗೆ ದೂರವಾಗಿದ್ದೇವೆಂದೂ ತಿಳಿದುಕೊಂಡರೆ ...ಗೆ ಯೇಸುಸ್ವಾಮಿಯು ದೇವರನ್ನು ಪ್ರಕಟಪಡಿಸಿ ದೇವರೇ ...ದ ಸ್ವರ್ಗಕ್ಕೆ ಅವರನ್ನು ನಡಿಸಿಕೊಂಡು ಹೋಗುವನು ...ನೀನು ಮನುಷ್ಯರಾದ ನಮ್ಮನ್ನು ನಿನಗೋಸ್ಕರವಾಗಿ ...ದ್ದೀ, ನಮ್ಮ ಮನಸ್ಸು ನಿನ್ನಲ್ಲಲ್ಲದೆ ಬೇರೆ ಯಾವ ಸ್ಥಳದ ...ವಿಲ್ಲದಿರದೆ ಕಳವಳಪಡುತ್ತಲಿರುತ್ತದೆ'' ಎಂದು ನಾವೂ ...ಮಾಡಿದ ಯೇಸುಸ್ವಾಮಿಯು ನಮ್ಮ ಬಿನ್ನಹವನ್ನು ಲಾಲಿಸಿ ...ಶಾಂತಿಯನ್ನು ಅನುಗ್ರಹಿಸುವನು

ಸ್ವದೇಶದ ವೃತ್ತಾಂತಗಳು.

ಮೈಸೂರು

...ಶ್ರೀಮನ್ಮಹಾರಾಜರವರು ಪ್ರೈವೆಟ್ ಸೆಕ್ರೆಟರಿಯವರ ಸಮೇ... ...ದರಿಂದ ಈ ದಿನ ಸಾಯಂಕಾಲ ರಾಜಧಾನಿಗೆ ದಯಮಾಡು... ...ರೆಂದು ಕೇಳುತ್ತೇವೆ.

****

...ಣಿ ಆಸ್ಪತ್ರೆಯ ಡಾಕ್ಟರ್ ಮಿ॥ ನರಸಿಂಹಸಿಂಗರು ರಜಾ ...ದ್ದರಿಂದ ಸರ್ಕಾರದವರು ಅವರ ಕೆಲಸಕ್ಕೆ ಮಿ॥ ...ರನ್ನು ಕಳುಹಿಸಿದಾರೆ.

****

...ರದವರು ಗುಬ್ಬಿ ಅಮಲ್ದಾರ್ ಮಿ॥ ಎಂ. ರಂಗಾಚಾರ್ಯರ ...ರ್ಜೆಯ ಎಕ್ಸ್ಟ್ರಾ ಅ॥ ಕಮಿಷನರನ್ನಾಗಿ ನೇಮಿಸಿ, ...ಳಾಖೆಗೆ ವರ್ಗ ಮಾಡಿದಾರೆ

****

...ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮಿ॥ ಫ್ರೇಸರ್ ...ಳೆದ ವಾರ ಮದರಾಸಿಗೆ ದಯಮಾಡಿ, ಮದರಾಸ್ ಗವ ...ರಂದು, ಅವರ ಸಂಗಡ ಮಾತನಾಡಿಕೊಂಡು ವಾಪಸು ...ಪ್ರಕಟವಾಗಿದೆ.

****

...ಶ್ರೀಮನ್ಮಹಾರಾಜರವರು ಕಳೆದ ಶುಕ್ರವಾರ ಸಾಯಂಕಾಲ ...ರುವ ಯುರೋಪಿಯರ್ ಸರ್ದಾರರನ್ನು ದೊಡ್ಡ... ...ಕೊಂಡು ಅವರಿಗೆಲ್ಲಾ ಫಲಾಹಾರಾದಿಗಳನ್ನೂ ವಿನೋ... ...ಸಿ ಸಂತೋಷಪಡಿಸಿದರು.

ಲೇಟ್ ಮಹಾರಾಜಾ ಚಾಮರಾಜ ಒಡೆಯರವರ ೪೩ ನೇ ವರ್ಷಾಬ್ದೀಕವು ತಾ. ೨೮ ನೆ ಬುಧವಾರ ಅರಮನೆಯಲ್ಲಿ ಜರುಗುವುದು.

****

ಶ್ರೀರಂಗಪಟ್ಟಣದಲ್ಲಿ ಮೊನ್ನೆ ಮಂಗಳವಾರ ಜಗಲಿ ಹೊತ್ತಿನಲ್ಲೇ ಒಬ್ಬನು ತನ ಸಂಬಂಧಿಯಾದ ಒಬ್ಬ ಹುಡುಗನನ್ನು ಕಡಿದು ಸಾಯಿಸಿದನೆಂದು ಕೇಳುತ್ತೇವೆ.

****

ಶ್ರೀಮನ್ಮಹಾರಾಜರವರು ಕೀಮೆಯಿಂದ ಭಾರೀ ಬೆಲೆ ಕೊಟ್ಟು ಕೊಂಡು ತರಿಸಿರುವ ಮುಂಡೇರಾ ಎಂಬ ಕುದುರೆಯನ್ನು ಈಗ ಕಲ್ಕತ್ತಾ ಪಟ್ಟಣಕ್ಕೆ ಕಳುಹಿಸಿದಾರೆ. ಅದು ಈ ಸಲ ಅಲ್ಲಿ ನಡೆಯುವ ಭಾರೀ ಪಂದ್ಯದಲ್ಲಿ ಓಡುವದಾಗಿಲ್ಲವೆಂದೂ ಆ ಪ್ರಾಂತ್ಯ ಸುತ್ತಿಬರ ಬೇಕು ಕಳುಹಿಸಲ್ಪಟ್ಟಿದೆ ಎಂದೂ ಕೇಳುತ್ತೇವೆ.

****

ಬೆಂಗಳೂರು ದಂಡಿನಲ್ಲಿರುವ ಮೂವರು ಸರ್ದಾರರು ಶ್ರೀಮನ್ಮಹಾರಾಜರವರ ಅಪ್ಪಣೆ ಪಡೆದು ಸರ್ಕಾರಿ ರಿಜರ್ವ್ ಫಾರೆಸ್ಟಿನಲ್ಲಿ ಸಂಚಾರ ಮಾಡಿ, ಒಂದು ಗಂಡು ಹುಲಿ ಒಂದು ಹೆಣ್ಣು ಹುಲಿ, ಒಂದು ಕಾಡುಕೋಣ ಈ ಮೂರನ್ನೂ ಷಿಕಾರಿ ಮಾಡಿದ್ದಲ್ಲದೆ ಎರಡು ಹುಲಿ ಮರಿಗಳನ್ನು ಹಿಡಿದುಕೊಂಡು ಬಂದಿದಾರೆ

****

ಬೆಂಗಳೂರು ಸಿಟಿ ಮ್ಯುನಿಸಿಪಲ್ ಸ್ಕೂಲಿನಲ್ಲಿ ಕಳೆದ ವಾರ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಟ್ಟರು. ಅಗ್ಗೆ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮಿ॥ ಪೋಕಾನಕೆಯವರು ಸಭಾಧ್ಯಕ್ಷರಾಗಿದ್ದ ಆ ಸ್ಕೂಲಿನಲ್ಲಿ ಹುಡುಗರ ವಿದ್ಯಾಭಿವೃದ್ಧಿಯು ತೃಪ್ತಿಕರವಾಗಿದೆ ಎಂದು ಹೇಳಿ ಉಪಾಧ್ಯಾಯರ ಶ್ರಮವನ್ನು ಸಾರ್ಥಕಪಡಿಸಿದರು

****

ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಾಗಿದ್ದು ತುಂಕೂರಿಗೆ ವರ್ಗವಾಗಿದ್ದ ಮಿ॥ ಸಿ. ಅಪ್ಪಯ್ಯನವರು ಕೆಲವು ದಿನ ರಜಾ ಪಡೆದು ದಿ ರಾಜೇಂದ್ರಪುರಿಗೆ ಹೋಗಿದ್ದರು. ಇವರು ಅಲ್ಲಿ ಕಾಯಿಲೆಯಾಗಿ ಕಳೆದ ಶುಕ್ರವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಸರ್ಕಾರೀ ಕೆಲಸ ನಡಸುವುದರಲ್ಲಿ ಇವರು ತುಂಬಾ ಸಮರ್ಥರೆಂಬ ಹೆಸರು ಪಡೆದಿದ್ದರು

****

ದಿವಾನ್ ಸರ್ ವಿ. ಪಿ. ಕೃಷ್ಣಮೂರ್ತಿಯವರು ತಮ್ಮ ಸೆಕ್ರೆಟರಿ ಮಿ॥ ನರಸಿಂಗರಾಯರ ಸಮೇತ ಮೊನ್ನೆ ಮಂಗಳವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿ ನೆನ್ನೆ ಬೆಳಗ್ಗೆ ಇಲ್ಲಿಂದ ಕಾಕನಕೋಟೆ ಕೆಡ್ಡಾ ಕ್ಯಾಂಪಿಗೆ ಪ್ರಯಾಣಮಾಡಿದರು. ಅವರು ಅಲ್ಲಿನ ಕ್ಯಾಂಪ್ ಏರ್ಪಾಡೆಲ್ಲಾ ನೋಡಿಕೊಂಡು, ನಾಳೆ ಸಾಯಂಕಾಲ ರಾಜಧಾನಿಗೆ ವಾಪಸು ದಯಮಾಡುವವರಾಗಿದಾರೆ

****

ಬೆಂಗಳೂರು ಪಟ್ಟಣದ ಸಾಹುಕಾರ್ ಮಿ॥ ಸೊಣ್ಣಪ್ಪನವರು ಅಲ್ಲಿನ ಕೋಟೆ ಮುಂಭಾಗದಲ್ಲಿ ಕಟ್ಟಿಸುತ್ತಿದ್ದ ದೊಡ್ಡ ಬಂಗಲೆಯು ಪೂರೈಸಿದೆ. ಅವರಲ್ಲಿ ಒಂದು ಧರ್ಮದ ಛತ್ರವನ್ನು ಇಡಬೇಕೆಂತಲೂ ಪ್ರಜೆಗಳು ಸಾಮಾನ್ಯವಾಗಿ ಸಭೆ ಸೇರುವುದಕ್ಕೂ ಉಪಯೋಗಿಸಿಕೊಳ್ಳಬೇಕೆಂತಲೂ ಅಭಿಪ್ರಾಯಪಟ್ಟು ಈ ಬಂಗಲೆಯನ್ನು ಕಟ್ಟಿಸಿರುವರು. ಈ ರೀತಿ ಪಿಸ್ಯಾಪ್ರೋತ್ಸಾಹಕ್ಕಾಗಿ ಈ ಸಾಹುಕಾರರು ಧರ್ಮಮಾಡುವ್ದು ಸ್ತೋತ್ರಾರ್ಹವಾದದ್ದಾಗಿದೆ.

****

ಅರಮನೆ ಧರ್ಮಾಧಿಕಾರಿಗಳಾಗಿಯೂ ಮಹಾ ವಿದ್ವಾಂಸರಾಗಿಯೂ ಇದ್ದ ಮಿ॥ ಚಕ್ರವರ್ತಿ ಐಯ್ಯಂಗಾರ್ಯರು ಕಳೆದ ವಾರ ರಾಜಧಾನಿಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ವ್ಯಾಕರಣ ವೇದಾಂತ ಶಾಸ್ತ್ರಗಳಲ್ಲಿ ಪೂರ್ಣ ಪಂಡಿತರಾಗಿದ್ದರು. ತಾವೇ ಒಂದು ಮುದ್ರಾಯಂತ್ರವನ್ನಿಟ್ಟು, ಅನೇಕ ಸಂಸ್ಕೃತಗ್ರಂಥಗಳನ್ನು ಅಚ್ಚುಹಾಕಿ ಪ್ರಕಟಿಸಿರುತ್ತಾರೆ. ಇವರಿಗೆ ೭೫ ವರುಷ ವಯಸ್ಸಾಗಿದ್ದರೂ ತುಂಬಾ ಗಟ್ಟಿಮುಟ್ಟಾಗಿದ್ದರು.

****

ಮೈಸೂರು ಸಂಸ್ಥಾನದಲ್ಲಿರುವ ಸಮಸ್ತ ಪಬ್ಲಿಕ್ ಆಫೀಸುಗಳಿಗೂ, ಕೋರ್ಟುಗಳಿಗೂ, ಸ್ಕೂಲುಗಳಿಗೂ ಕ್ರಿಸ್‌ಮಸ್ ಹಬ್ಬದ ನಿಮಿತ್ತ ಡಿಸೆಂಬರ್ ೨೪ ನೆ ಸೋಮವಾರದಿಂದ ೧೯೦೬ ನೆ ಜನವರಿ ೨ ನೆ ಮಂಗಳವಾರದ ತನಕ ಉಭಯ ದಿನಗಳೂ ಸೇರಿ ರಜಾ ಕೊಟ್ಟರುತ್ತೆ. ಆತುರವುಳ್ಳ ಕೆಲಸಗಳು ನಡೆಯುವಂತೆ ಇಲಾಖಾ ಮುಖ್ಯಸ್ಥರು ಏರ್ಪಾಡು ಮಾಡತಕ್ಕದ್ದು. ಈ ರಜವು ತಾಲ್ಲೂಕಾ ಇಲಾಖೆ, ಜಮಾಬಂದಿ ಕೆಲಸ, ಸ್ಟಾಂಪು ಇಲಾಖೆಗಳಿಗೆ ಸಂಬಂಧಿಸುವುದಿಲ್ಲ.

****

ಪ್ರಿನ್ಸ್ ಆಫ್ ವೇಲ್ಸ್‌ರವರು ಜನವರಿ ೨೯ ನೆ ತಾರೀಖಿನ ದಿನ ರಾಜಧಾನಿಗೆ ದಯಮಾಡುವರು. ಆ ದಿನವೇ ಅವರಿಗೂ ನಮ್ಮ ಶ್ರೀಮನ್ಮಹಾರಾಜರವರಿಗೂ ಭೇಟಿ ಮರುಭೇಟಿಗಳು ನಡೆಯುವವು. ಮರುದಿನ ಬೆಳಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಆಸ್ಪತ್ರೆಯ ಬಳಿಗೆ ದಯಮಾಡಿ, ನಮ್ಮ ಸರ್ಕಾರದವರು ಆ ಬಳಿ ಕಟ್ಟಿಸುವ ಚಾಮರಾಜ ಟೆಕ್ನಿಕಲ್ ಶಾಲೆಗೆ ಅಸ್ತಿಭಾರವನ್ನು ಹಾಕುವರು. ಅನಂತರ ಯುವರಾಜರವರು ಪರಿವಾರ ಸಹಿತ ರಾಜಧಾನಿಯಿಂದ ಕೆಡ್ಡಾ ಕ್ಯಾಂಪಿಗೆ ಚಿತ್ತೈಸಿ, ಅಲ್ಲಿ ಮೂರು ದಿನಗಳ ವರೆಗೆ ಇದ್ದು, ಆನೆಗಳನ್ನು ಹಿಡಿಯುವುದು, ಷಿಕಾರಿಮಾಡುವುದು, ಈ ಮುಂತಾದ ವಿನೋದಗಳಲ್ಲಿ ಆಸಕ್ತರಾಗಿದ್ದು, ವಾಪಸು ದಯಮಾಡಿ, ಮರುದಿನ ಬೆಂಗಳೂರಿಗೆ ಪ್ರಯಾಣ ಬೆಳಸಿ, ಅಲ್ಲೂ ಎರಡು ದಿನ ತಂಗಿ ಪ್ರಜೆಗಳ ಆತಿಥ್ಯವನ್ನು ಸ್ವೀಕರಿಸಿ, ಮುಂದಕ್ಕೆ ತೆರಳುವರು. ರಾಜಧಾನಿಯ ಟೌನ್ ಹಾಲ್ ಬಂಗಲೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಬರಮಾಡಿಕೊಂಡು, ಅವರಿಗಾಗಿ ಅಲ್ಲಿ ಒಂದೆರಡು ಗಂಟೆ ಹೊತ್ತು ನಾನಾ ವಿನೋದಗಳನ್ನು ಮಾಡಿಸಬೇಕೆಂದು ಮೊದಲು ನಿಶ್ಚಯವಾಗಿದ್ದಿತು. ಅದನ್ನ ಈಚೆಗೆ ಅದು ಅಗತ್ಯವಿಲ್ಲವೆಂದು ತೆಗೆದುಬಿಟ್ಟದಾರೆ. ಪ್ರಿನ್ಸ್ ಆಫ್ ವೇಲ್ಸ್‌ರವರ ಸಂಗಡ ಗೌರವಾರ್ಥವಾಗಿ ಸುಮಾರು ೨,೦೦೦ ಇಂಗ್ಲಿಷ್ ಸೈನ್ಯವೂ ೬೭ ಫಿರಂಗಿಗಳೂ ಬರುವವು. ಈ ಸೈನಿಕರಿಗೆ ಚಾಮುಂಡಿ ಬೆಟ್ಟದ ತಪ್ಪಲಲ್ಲೂ, ಫಿರಂಗಿ ಸೈನ್ಯಕ್ಕೆ ರೆಸಿಡೆನ್ಸಿ ಬಂಗಲೆಯ ಬಲ ಪಾರ್ಶ್ವದ ಮೈದಾನದಲ್ಲೂ ನಮ್ಮ ಸರ್ಕಾರದವರು ಬಿಡಾರಗಳನ್ನು ಸಿದ್ಧಪಡಿಸುವರು

ಪ್ರಿನ್ಸ್ ಆಫ್ ವೇಲ್ಸ್‌ರವರ ದೇಶಸಂಚಾರ.

ಡೆಲ್ಲಿ ಪಟ್ಟಣ.

ಪ್ರಿನ್ಸ್ ಆಫ್ ವೇಲ್ಸ್‌ರವರು ಅಮೃತಸಾರ ಪಟ್ಟಣದಲ್ಲಿದ್ದಾಗ್ಗೆ ಅಲ್ಲಿನ ಸಿಕ್ಕರ ಪ್ರಸಿದ್ಧ ಚಿನ್ನದ ದೇವಸ್ಥಾನಕ್ಕೆ ದಯಮಾಡಿ, ಬಹು ಉತ್ಸಾಹಪೂರ್ವಕವಾಗಿ ಎಲ್ಲಾ ಭಾಗಗಳನ್ನೂ ಪರಾಂಬರಿಸಿ ಸಂತೋಷಪಟ್ಟು, ಆ ದೇವಸ್ಥಾನದ ಫಂಡಿಗೆ ೧,೫೦೦ ರೂಪಾಯಿ ಧರ್ಮಮಾಡಿದರು. ತಾ. ೧೨ ನೆ ಮಂಗಳವಾರ ಯುವರಾಜರವರು ಪತ್ನಿ ಪರಿವಾರ ಸಹಿತ ಡೆಲ್ಲಿ ಪಟ್ಟಣಕ್ಕೆ ದಯಮಾಡಿದರು. ಈ ಚರಿತ್ರಾರ್ಹವಾದ ನಗರವು ಅವರಿಗೆ ವಿಶೇಷವಾದ ಸನ್ಮಾನಗಳನ್ನು ಮಾಡಿ ಸಂತೋಷಪಡಿಸಿತು. ಅವರು ಸರ್ಕಿಟ್ ಹೌಸ್ ಎಂಬ ಅರಮನೆಯಲ್ಲಿ ಇಳಿಕೊಂಡರು. ಮೊದಲು ಪುರಾಧ್ಯಕ್ಷರು ಅವರಿಗೆ ಸುಸ್ವಾಗತವನ್ನು ಬಯಸಿ ಟೌನ್ ಹಾಲ್ ಬಂಗಲೆಯಲ್ಲಿ ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿ, ಆ ಪಟ್ಟಣವು ಈಗಿಗ ಎಷ್ಟು ಮಟ್ಟಿಗೆ ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಹೊಂದಿದೆ ಎಂಬಂಶವನ್ನು ಕೃತಜ್ಞತಾಪೂರ್ವಕವಾಗಿ ವಿವರಿಸಿದರು. ಮಧ್ಯಾಹ್ನ ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ರಪಂಚದಲ್ಲೆಲ್ಲಾ ಅದ್ವಿತೀಯವಾದುದೂ ಜುಮ್ಮಾ ಮಸೀತಿ ಎಂಬ ಮಸೀದಿಯ ದೇವಸ್ಥಾನಕ್ಕೆ ದಯಮಾಡಿ, ಅದನ್ನು ನೋಡಿ ತುಂಬಾ ಸಂತೋಷಪಟ್ಟು, ಅಲ್ಲಿಂದ ಪತ್ನಿ ಸಹಿತ ಸಾರೋಟಿನಲ್ಲಿ ಚಿತ್ತೈಸಿ, ಕೋಟೆಯೊಳಗಿರುವ ಮೊಗಲಾಯಿ ಚಕ್ರವರ್ತಿಗಳ ಆಸ್ಥಾನಗಳಾಗಿದ್ದ ಪ್ರಸಿದ್ಧ ದಿವಾನಿಯಾಂ, ದಿವಾನಿಖಾಸ್ ಎಂಬಿ, ರಾಜಭವನಗಳನ್ನು ಪರಾಂಬರಿಸಿದರು. ಲಾರ್ಡ್ ಕರ್ಜನರವರ ಅಪ್ಪಣೆಯ ಪ್ರಕಾರ ಈ ಪ್ರಾಚೀನ ಕಾಲದ ಚರಿತ್ರಾರ್ಹವಾದ ಬಂಗಲೆ ಅರಮನೆಗಳನ್ನು ದುರಸ್ತು ಮಾಡಿಸಿ ಕಳೆಕಳೆಸುವಂತೆ ಮಾಡಿಟ್ಟದಾರೆ. ರಾಜದಂಪತಿಗಳು ಅಲ್ಲಿಂದ ಹೊರಟು ವಿಕ್ಟೋರಿಯಾ ಜನಾನಾ ಆಸ್ಪತ್ರೆಯನ್ನು ನೋಡಿ ಬಂದರು.

ತಾ. ೧೩ ನೆ ಬುಧವಾರ ಮಧ್ಯಾಹ್ನ ಪ್ರಿನ್ಸ್ ಆಫ್ ವೇಲ್ಸ್‌ರವರು ದರ್ಬಾರ್ ಮಾಡಿ, ಸಿರಮೂರ್ ರಾಜರು, ಕಾಲ್ಸಿಯಾ ಸರ್ದಾರ್, ಪತೌಡಿ, ಲೋಹಾರು, ದುಜಾನಾ ನವಾಬರು ಈ ಮೊದಲಾದ ದೇಶೀಯ ರಾಜರಿಗೆ ಭೇಟಿಯನ್ನಿತ್ತರು

ತಾ. ೧೪ ನೆ ಗುರುವಾರ ಯುವರಾಜರವರು ದಂಗೆ ನಡೆದ ಪ್ರಸಿದ್ಧ ಸ್ಥಳಗಳನ್ನೂ ಮೊಗಲಾಯಿ ಚಕ್ರವರ್ತಿಗಳ ಗೋರಿಗಳನ್ನೂ ಕುಟುಬ್ ಮಿನಾರ್ ಎಂಬ ಪ್ರಖ್ಯಾತ ಕಟ್ಟಡವನ್ನೂ ಸಾಫ್ದರ್ ಜಂಗರ ಸಮಾಧಿಯನ್ನೂ ನೋಡಿಕೊಂಡು, ಮೋಟಾರ್ ಗಾಡಿಯಲ್ಲಿ ಸಂಚಾರಮಾಡಿಕೊಂಡು ಬಂದರು. ಜುಮ್ಮಾ ಮಸೀತಿಯ ಮಹೋಪಯೋಗಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರು ೧,೫೦೦ ರೂಪಾಯಿ ಇನಾಮು ದಯಪಾಲಿಸಿರುತ್ತಾರೆ.

ತಾ. ೧೫ನೆ ಶುಕ್ರವಾರ ಪ್ರಿನ್ಸ್ ಆಫ್ ವೇಲ್ಸ್‌ರವರು ಅಶ್ವಾರೂಢರಾಗಿಯೂ ಅವರ ಪತ್ನಿಯವರು ಮೋಟಾರ್ ಎಂಬ ರಥಾರೂಢರಾಗಿಯೂ ಡೆಲ್ಲಿ ದರ್ಬಾರ್ ನಡೆದ ಮೈದಾನಿಗೆ ದಯಮಾಡಿ, ಅಲ್ಲಿ ಲಾರ್ಡ್ ಕರ್ಜನರವರು ನಡಸಿದ್ದ ಅಪೂರ್ವವಾದ ದರ್ಬಾರಿನ ಚರಿತ್ರೆಯನ್ನು ಕೇಳಿ, ಮ್ಯೂಟಿನಿ ಮಾನ್ಯುಮೆಂಟನ್ನು ಪರಾಂಬರಿಸಿದರು. ಸಾಯಂಕಾಲ ಪಟ್ಟಣದಲ್ಲಿ ಸಂಚಾರಮಾಡಿ ದೀಪೋತ್ಸವವನ್ನು ನೋಡಿಕೊಂಡು ಬಂದು, ಭೋಜನಾನಂತರ ೧೧ ಗಂಟೆಗೆ ರೈಲ್ ಹತ್ತಿ ಆಗ್ರಾ ಪಟ್ಟಣಕ್ಕೆ ತೆರಳಿದರು

ಆಗ್ರಾ ಪಟ್ಟಣ

ತಾ. ೧೬ನೆ ಶನಿವಾರ ಬೆಳಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಆಗ್ರಾ ಪಟ್ಟಣವನ್ನು ತಲಪಿದರು. ರೈಲ್ವೆ ಸ್ಟೇಷನ್ನಲ್ಲಿ ಪುರಾಧ್ಯಕ್ಷರು ಚಿತ್ರವಿಚಿತ್ರವಾದ ನಾನಾ ಅಲಂಕಾರಗಳನ್ನು ಮಾಡಿಸಿ, ರಾಜದಂಪತಿಗಳನ್ನು ವಿಶೇಷ ಆಡಂಬರದೊಡನೆ ಎದುರುಗೊಂಡು ಅವರಿಗೆ ಸುಸ್ವಾಗತವನ್ನು ಬಯಸಿ ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಸಮಯೋಚಿತವಾಗಿ ಅವರನ್ನು ವಂದಿಸಿ, ಶ್ರೇಷ್ಠವಾದ ಸಾರೋಟಿನಲ್ಲಿ ಕುಳಿತು, ಉತ್ಸಾಹಶೀಲರಾಗಿ ಎದುರುನೋಡುತ್ತಾ ಕಾದಿದ್ದ ಪುರಜನರಿಗೆ ದರ್ಶನವನ್ನಿತ್ತು ರಾಜಬೀದಿಗಳಲ್ಲಿ ಹೊರಟು, ಸರ್ಕಿಟ್ ಹೌಸ್ ಕ್ಯಾಂಪ್ ಎಂಬ ರಾಜಭವನಕ್ಕೆ ದಯಮಾಡಿದರು. ಮಧ್ಯಾಹ್ನ ರಾಜದಂಪತಿಗಳು ಸಾರೋಟಿನಲ್ಲಿ ಕುಳಿತು ಪಟ್ಟಣದೊಳಗೆ ಸಂಚಾರ ಹೊರಟು, ಸಿಕಂದ್ರಾ ಎಂಬ ಕಟ್ಟಡವನ್ನೂ ಮೊಗಲಾಯಿ ಚಕ್ರವರ್ತಿ ಅಕ್ಬರನ ಗೋರಿಯನ್ನೂ ಪರಾಂಬರಿಸಿದರು. ರಾತ್ರಿ ಪಟ್ಟಣದಲ್ಲಿ ದೀಪೋತ್ಸವ ನಡೆಯಿತು.

ತಾ. ೧೭ ನೆ ಭಾನುವಾರ ಬೆಳಗ್ಗೆ ಯುವರಾಜರವರು ಮಠದ ದೇವಸ್ಥಾನಕ್ಕೆ ದಯಮಾಡಿ, ಭಗವತ್ಪ್ರಾರ್ಥನಾದಿಗಳನ್ನು ನೆರವೇರಿಸಿಕೊಂಡು, ಮಧ್ಯಾಹ್ನ ದೋಣಿಗಳ ಸೇತುವೆಯ ಮೇರಿ ನದಿಯನ್ನು ದಾಟಿ ಇತ್ಮದುದ್ದೌಲಾ ಎಂಬ ಗೋರಿಯನ್ನು ಪರಾಂಬರಿಸಿದರು. ಮೊಗಲಾಯಿ ಚಕ್ರವರ್ತಿ ಜಹಾಂಗೀರನ ಪತ್ನಿ ನೂರ್‌ಮಹಾಲ್ ಎಂಬ ರಾಣಿಯು ಇದನ್ನು ಕಟ್ಟಿಸಿದಾಳೆ. ಅಲ್ಲಿಂದ ಯುವರಾಜರವರು ತಾಜ್‌ಮಹಾಲ್ ಎಂಬ ಕಟ್ಟಡಕ್ಕೆ ದಯಮಾಡಿ, ಅದರ ಸೊಬಗನ್ನು ಅಲಂಕಾರವನ್ನು ಅಚ್ಚುಕಟ್ಟನ್ನೂ ನೋಡುತ್ತಾ ಸಾಯಂಕಾಲವನ್ನು ಅಲ್ಲೇ ಕಳೆದರು. ಪ್ರಪಂಚದಲ್ಲಿ ಇದಕ್ಕೆ ಸರಿಸಮಾನವಾದ ಕಟ್ಟಡ ಮತ್ತೊಂದಿಲ್ಲವೆಂದು ಪ್ರಸಿದ್ಧಿಯಾಗಿದೆ.

ತಾ. ೧೮ ನೆ ಸೋಮವಾರ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಹಿತ ಕೋಟೆಗೆ ದಯಮಾಡಿ, ಮೊಗಲಾಯಿ ಚಕ್ರವರ್ತಿಗಳಾದ ಅಕ್ಬರ್, ಜಹಾಂಗೀರ್, ಷಹಾಜಹಾನ್ ಬಾದಷಹರವರ ಅರಮನೆಗಳನ್ನೂ ವಿಹಾರಸ್ಥಾನಾದಿಗಳನ್ನೂ ಪರಾಂಬರಿಸಿ, ಬಹಳ ಸಂತೋಷಪಟ್ಟರು. ಮಧ್ಯಾಹ್ನ ಮೈದಾನಿಗೆ ದಯಮಾಡಿ, ಲೇಟ್ ಚಕ್ರವರ್ತಿನಿ ವಿಕ್ಟೋರಿಯಾರವರ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯವಿಷಯಗಳು.

ವೈದ್ಯ ಇಲಾಖಾ ವಿಚಾರಗಳು

ಶಿವಮೊಗ್ಗೆಯ ಮೆ॥ ಎಸ್. ಆರ್ ಬಾಲಕೃಷ್ಣರಾಯರು—ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಜಾತಿವಾರಾಗಿ ರೋಗಿಗಳಿಗೆ ಚಿಕಿತ್ಸೆ ದೊರೆಯುವಂತೆ ಬೇರೆಬೇರೆ ವಾರ್ಡುಗಳನ್ನು ಕಲ್ಪಿಸಿ ಕೊಡಬೇಕು

ದಿವಾನರವರು—ಸಾಧ್ಯವಾದಷ್ಟು ಮಾಡಿಕೊಡುತ್ತಾ ಬಂದಿದ್ದೇವೆ

ಅದೇ ಮೆಂಬರು—ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ರೋಗಿಗಳನ್ನು ಕರೆದುಕೊಂಡು ಹೋಗಿ ಬಿಟ್ಟರೆ, ರೋಗಿಗಳ ರಕ್ತಸಂಬಂಧಿಗಳು ಯಾವಾಗಲೂ ಅವರ ಬಳಿಯಲ್ಲಿದ್ದು ನೋಡಿಕೊಳ್ಳುವುದಕ್ಕೆ ಆಸ್ಪತ್ರೆಯವರು ಅವಕಾಶಕೊಡುವುದಿಲ್ಲ ಆ ಆಸ್ಪತ್ರೆಯ ಎದುರು ಪಾರ್ಶ್ವದಲ್ಲೇ ಸರ್ಕಾರದವರು ಕೆಲವು ಮನೆಗಳನ್ನು ಮಾಡಿಕೊಟ್ಟರೆ ಅಂಥಾ ರಕ್ತಸಂಬಂಧಿಗಳು ಇರುವುದಕ್ಕೂ ಆಗಾಗ್ಗೆ ರೋಗಿಗಳನ್ನು ಆಸ್ಪತ್ರೆಯಲ್ಲಿ ನೋಡಿಕೊಂಡು ಬರುವದಕ್ಕೂ ತುಂಬಾ ಸಹಾಯವಾದೀತು

ದಿವಾನರವರು—ಈ ವಿಷಯದಲ್ಲಿ ಸೀನಿಯರ್ ಸರ್ಜನವರ ಅಭಿಪ್ರಾಯವನ್ನು ಕೇಳಿದೆವು ಅವರು—ಆಸ್ಪತ್ರೆಯಲ್ಲಿ ತಕ್ಕ ರೋಗಿಗಳ ರಕ್ತಸಂಬಂಧಿಗಳ ಕಾಟ ಹೆಚ್ಚಾಗಲೇ; ವಿಶೇಷವಾಗಿದೆ ಎಂತಲೂ ಇದರಿಂದ ರೋಗಿಗಳಿಗೆ ಬೇಗನೆ ವಾಸಿಯಾಗದೆ ಅಡ್ಡಿಯಾಗಿದೆ ಎಂತಲೂ ಅವರಿಗೆ ಸಮೀಪದಲ್ಲೇ ಮನೆಮಾಡಿಕೊಡುವುದು ಕ್ಷೇಮಕರವಲ್ಲವೆಂತಲೂ, ರಕ್ತಸಂಬಂಧಿಗಳ ಕಾಟ ತಪ್ಪಿದರೆ ಬೇಗ ರೋಗಿಗಳನ್ನು ಗುಣ ಮಾಡುವುದಕ್ಕೆ ಸಹಾಯವಾಗುವುದೆಂತಲೂ ಹೇಳುತ್ತಾರೆ ಆದಕಾರಣ ನೀವು ಕೇಳುವಂತೆ ಮನೆ ಕಟ್ಟಿಸಿ ಕೊಡುವುದು ಒಳ್ಳೇದಲ್ಲ

ಅದೇ ಮೆಂಬರು—ಅನೇಕ ದೊಡ್ಡ ಊರುಗಳಲ್ಲಿ ಸರಿಯಾದ ವೈದ್ಯರು ಇಲ್ಲದೆ ಪ್ರಜೆಗಳು ತುಂಬಾ ಕಷ್ಟ ಪಡುತ್ತಾರೆ ಇಂಗ್ಲಿಷ್ ಆಸ್ಪತ್ರೆಗಳನ್ನು ಎಲ್ಲಾ ಕಡೆಗಳಲ್ಲೂ ಇಡಿಸುವುದಕ್ಕೆ ಬಹಳ ಹಣ ಖರ್ಚಾಗಬೇಕು ಆದ್ದರಿಂದ ಮೈಸೂರು ಪಟ್ಟಣದಲ್ಲಿರುವ ಸರ್ಕಾರಿ ಕರ್ನಾಟಕ ಆಸ್ಪತ್ರೆಯಲ್ಲಿ ಹಿಂದೂ ಯುನಾನಿ ವೈದ್ಯವಿದ್ಯೆಯನ್ನು ಜನರಿಗೆ ಕಲಿಸಿ ಇಂಥವರನ್ನು ದೊಡ್ಡದೊಡ್ಡ ಊರುಗಳಿಗೆ ಕಳುಹಿಸಿದರೆ ಎಷ್ಟೋ ಉಪಕಾರವಾಗುವದು ಈ ಆಸ್ಪತ್ರೆಯಲ್ಲಿ ಮೊದಲು ಕೆಲವರನ್ನು ತರಪೇತು ಮಾಡುತ್ತಿದ್ದರು ಈಗ ಇದು ನಿಂತು ಹೋದಂತ ಕಾಣುತ್ತದೆ

ದಿವಾನರವರು—ಇದು ಯಾಕೆ ನಿಂತು ಹೋಯಿತೋ ವಿಚಾರಣೆಮಾಡಿ, ಸರಿಯಾದ ಹುಕುಂ ಕೊಡುತ್ತೇವೆ

ಚಿತ್ರದುರ್ಗದ ಮೆ॥ ಜಿ ಗೋಪಾಲೈಯ್ಯನವರು—ತಾಲ್ಲೂಕ್ ಜಾಗಗಳಲ್ಲಿರುವ ಸರ್ಕಾರಿ ಸ್ಥಳಗಿತ್ತಿಯರು ನಡೆಯುವ ಆಸ್ಪತ್ರೆಗೆ ಬಂದು ಸ್ವಲ್ಪಹೊತ್ತಿದ್ದು ಹೋದರೆ ತಮ್ಮ ಕೆಲಸ ಮುಗಿಯಿತೆಂದು ತಿಳಿದಿದ್ದಾರೆ ಸೋದ್ದ ಮನುಷ್ಯರೂ ಧನ್ಯವಂತರೂ ಅವರನ್ನು ಕರೆಗೆಗೆ ಕರೆದರೆ ಹೋಗುತ್ತಾರೆ ಬಡಬಗ್ಗರು ಕರೆದರೆ ಬರುವುದೆ ದುಂಬಾ ಕಷ್ಟ ಅವರು ಕೇಳುವಷ್ಟು ಹಣ ಬೇರೆ ಕೊಡಬೇಕು ಇದರಿಂದ ಅವರಿದ್ದೂ ಬಡ ಪ್ರಜೆಗಳ ಕಷ್ಟ ತಪ್ಪಲಿಲ್ಲ ಆದಕಾರಣ ಅವರು ಪ್ರತಿತಿಂಗಳಲ್ಲೂ ಇಷ್ಟು ಹೆರಿಗೆಗಳನ್ನು ಮಾಡಬೇಕೆಂತಲೂ, ಅಷ್ಟು ಹೆರಿಗೆ ಮಾಡದಿದ್ದರೆ ಅವರಿಗೆ ಸಂಬಳ ಕೊಡಕೂಡದೆಂತಲೂ ಖಂಡಿತವಾದ ಹುಕುಂ ಆಗಬೇಕು

ದಿವಾನರವರು—ಸೂಲಗಿತ್ತಿಯರು ಪ್ರತಿತಿಂಗಳಲ್ಲೂ ಇಷ್ಟು ಹೆರಿಗೆಗಳನ್ನು ಮಾಡಲೆ, ಬೇಕೆಂತಲೂ ಅದಕ್ಕೆಂತಲೂ ಹೆಚ್ಚಾದರೆ ಪ್ರತಿ ಹೆಂಗಸರಿಗೆ ೮ ಆಣೆಯಂತೆ ಬಹುಮಾನ ಕೊಟ್ಟು ಪ್ರೋತ್ಸಾಹಪಡಿಸಬೇಕೆಂತಲೂ ಹುಕುಂ ಇದ್ದೇ ಇದೆ ಈ ಹುಕುಮಿಗೆ ತಕ್ಕ ನಡೆಯಬೇಕೆಂದು ಸೀನಿಯರ್ ಸರ್ಜನರವರಿಗೆ ಹೇಳುತ್ತೇವೆ

ಮೈಸೂರು ಮೆ॥ ಎಂ ವೆಂಕಟಕೃಷ್ಣಯ್ಯನವರು—ಪಶ್ಚಿಮ ರಾಜ್ಯಗಳಲ್ಲಿ ಪ್ರಜೆಗಳಿಗೆ ಆರೋಗ್ಯ ವಿಚಾರಗಳನ್ನು ಕುರಿತು ಉಪನ್ಯಾಸಗಳ ಮೂಲಕ ಬುದ್ಧಿ ಹೇಳುವುದಕ್ಕೆ ಸರ್ಕಾರದವರು ಪ್ರತ್ಯೇಕವಾದ ಅಧಿಕಾರಿಗಳನ್ನು ನೇಮಿಸಿದ್ದಾರೆ ನಮ್ಮ ಸಂಸ್ಥಾನದಲ್ಲೂ ಅಂಥಾ ಏರ್ಪಾಡುಮಾಡಿ ಕೊಡಬೇಕು ಇದು ಪ್ರಜಾಕ್ಷೇಮಕ್ಕೂ ಅಭಿವೃದ್ಧಿಗೂ ಅವಶ್ಯವಾದದ್ದು

ದಿವಾನರವರು—ಇದೇನೋ ಅವಶ್ಯವಾದ ವಿಷಯವೇ ಆದರೂ ಅದಕ್ಕೆ ಸಲಕರಣೆಗಳು ಬಹಳವಾಗಿ ಬೇಕಾಗುತ್ತವೆ ಒಳ್ಳೇದು ಆಲೋಚನೆ ಮಾಡುತ್ತೇವೆ

ಬಹುಮಂದಿ ಮೆಂಬರುಗಳು—ಪಶುವೈದ್ಯವನ್ನು ಶಾಸ್ತ್ರವತ್ತಾಗಿ ಕಲಿತಿರುವ ಪಂಡಿತರು ನಮ್ಮ ಸಂಸ್ಥಾನದ ಪ್ರತಿ ಒಂದು ತಾಲ್ಲೂಕಿನಲ್ಲೂ ಇದ್ದರೆ ರೈತಪ್ರಜೆಗಳಿಗೆ ತುಂಬಾ ಸಹಾಯವಾಗುವದು ಹಳ್ಳಿಗಳಲ್ಲಿ ರೈತರಿಗೆ ಪಶುವೈದ್ಯ ತಿಳಿಯದೆ ಇರೋಣದರಿಂದ ಗೋಕಾಯಿಗಳೂ ಜಾನುವಾರು ದನಗಳೂ ಲಯವಾಗಿ ವ್ಯವಸಾಯಕ್ಕೆ ಕುಂದಕ ಬರುವುದು

ದಿವಾನರವರು—ಪಶುವೈದ್ಯವನ್ನು ಕಲಿಯುವುದಕ್ಕೆ ಸರ್ಕಾರದವರು ವೇತನವನ್ನು ಕೊಡುವಂತೆ ಏರ್ಪಾಡು ಮಾಡುತ್ತಾರೆ ಕಲಿತವರು ಬಂದನಾಗೆಲ್ಲಾ ತಾಲ್ಲೂಕುಗಳಿಗೆ ನೇಮಿಸಿ ಕಳುಹಿಸುವರು

ವಿದ್ಯಾಭ್ಯಾಸದ ಇಲಾಖಾ ವಿಚಾರಗಳು

ಕೆಲವು ಮೆಂಬರುಗಳು—ಈಚೆಗೆ ಸರ್ಕಾರದವರು ಸ್ಕೂಲ್ ಫೀಜಿನ ದರಗಳನ್ನು ಹೆಚ್ಚಿಸಿರುತ್ತಾರೆ ಹುಡುಗರು ಮೊದಲಿದ್ದ ಫೀಜನ್ನೇ ಕೊಡಲಾರದೆ ಕ್ಲಿಷ್ಟಪಡಬೇಕಾಗಿತ್ತು ಈಗಿನ ಜಾಸ್ತಿ ದರಗಳನ್ನು ಕಡಿಮೆ ಮಾಡದಿದ್ದರೆ ವಿದ್ಯಾಭಿವೃದ್ಧಿಗೆ ತುಂಬಾ ಕುಂದಕವಾಗುವುದು

ದಿವಾನರವರು—ಫೀ ದರಗಳನ್ನು ಜಾಸ್ತಿ ಮಾಡಿ ಇನ್ನೂ ಸ್ವಲ್ಪ ದಿನಗಳಾಗಿವೆ ಇಷ್ಟು ಬೇಗ ಅದರ ಫಲಾಫಲಗಳನ್ನು ಗೊತ್ತು ಮಾಡಲಾಗದು. ಇನ್ನೂ ಕೆಲವುಕಾಲ ಅದೇ ರೀತಿ ನಡೆಯಲಿ; ನೋಡೋಣ

ಶಿವಮೊಗ್ಗೆಯ ಮೆ॥ ಎಸ್ ಆರ್. ಬಾಲಕೃಷ್ಣರಾಯರು—ಸರ್ಕಾರಿ ಪಾಠಶಾಲೆಗಳಲ್ಲಿ ಅನುಕೂಲವನ್ನು ಮಿಡಲ್ ತರಗತಿಯಿಂದ ಇಟ್ಟು ಹುಡುಗರಿಗೆ ಅರ್ಥವಾಗುವಂತ ಪಾಠಮಾಡಿಸಬೇಕು ದೊಡ್ಡ ಪರೀಕ್ಷೆಗಳನ್ನು ಕೊಟ್ಟ ಯುವಕರೂ ಕೂಡ ಕನ್ನಡದಲ್ಲಿ ಪ್ರತಿಪದಗಳು ತಿಳಿಯದೆ, ಕನ್ನಡ ಭಾಷೆಯೇ ಕ್ಷೀಣಿಸುವಂತಾಗಿದೆ

ದಿವಾನರವರು—ಒಳ್ಳೇದು, ಯೋಚಿಸಿ ಹುಕುಂ ಕೊಡುತ್ತೇವೆ

ಅನೇಕ ಮೆಂಬರುಗಳು—ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ ಹಳ್ಳಿ ಗ್ರಾಮ, ಹೋಬಳಿಗಳೇ ಮೂಲಸ್ಥಾನಗಳಾಗಿವೆ ಅಂಥಾ ಪಾಠಶಾಲೆಗಳ ಉಪಾಧ್ಯಾಯರಿಗೆ ತಕ್ಕ ಪ್ರೋತ್ಸಾಹವಿಲ್ಲದೆ ಇರೋಣದರಿಂದ ವಿದ್ಯಾಭಿವೃದ್ಧಿಗೆ ತುಂಬಾ ಕೊರತೆಯಾಗಿದೆ ೭ ರೂಪಾಯಿ ಇರತಕ್ಕವರಿಗೆ ೧೦ ರೂಪಾಯಿ ತನಕ, ೧೦ ರೂಪಾಯಿಯವರಿಗೆ ೧೪ ರೂಪಾಯಿ ತನಕ ಪ್ರತಿ ವರುಷವೂ ಬಡ್ತಿ ಸಿಕ್ಕುವಂತೆ ಮಾಡಿಕೊಡಬೇಕು

ದಿವಾನರವರು—ಇದಕ್ಕೆ ಹಣ ಬೇಕು ಆಗಲಿ, ನೋಡೋಣ

ಮೈಸೂರು ಮೆ॥ ಎಂ ವೆಂಕಟಕೃಷ್ಣಯ್ಯನವರು—ಸಕಲ ವಿಧವಾದ ಅಭಿವೃದ್ಧಿಗೂ ವಿದ್ಯೆಯೇ ಮುಖ್ಯಕಾರಣ ನಮ್ಮ ಸಂಸ್ಥಾನದ ಒಂದೆರಡು ದೊಡ್ಡ ಪಟ್ಟಣಗಳಲ್ಲಿ, ಪರೀಕ್ಷಾರ್ಥವಾಗಿ ಎಲ್ಲಾ ಮಕ್ಕಳಿಗೂ ಕಲಿಸುವಂತ ಕಾನೂನನ್ನು ಜಾರಿಗೆ ತರಬೇಕು ಬರೋಡೆ ಸಂಸ್ಥಾನದಲ್ಲಿ ಇದನ್ನು ಪ್ರಾರಂಭಿಸಿದ್ದಾರೆ ನಮ್ಮ ಪಟ್ಟಣಗಳಲ್ಲೇ ಅನೇಕಾನೇಕರು ವಿದ್ಯೆಯಿಲ್ಲದೆ ನಾನಾ ದುರಭ್ಯಾಸಗಳಲ್ಲಿ ಬಿದ್ದು ದುಷ್ಟಜನಗಳಾಗುತ್ತಿರುವರು ಸಮಯವನ್ನು ವ್ಯರ್ಥಕಾಲಕ್ಷೇಪದಲ್ಲಿ ಶಕ್ತಿಯನ್ನು ನಿರರ್ಥಕಗಳಾದ ಉದ್ಯೋಗಗಳಲ್ಲೂ ಕಳೆದು ಕೆಟ್ಟುಹೋಗುವರು

ದಿವಾನರವರು—ಒಳ್ಳೇದು, ಆಗಲಿ ನೋಡೋಣ

ಶಿವಮೊಗ್ಗೆಯ ಮೆ॥ ಎಸ್ ಆರ್ ಬಾಲಕೃಷ್ಣರಾಯರು—ಮಾಡಿಸ ವಿದ್ಯಾರ್ಥಿಗಳಿಗೆ ಬಿ ಎ ಎ ಪರೀಕ್ಷೆಗಳಿಗೆ ಓದುವುದಕ್ಕೆ ಇನ್ನು ಹೆಚ್ಚಾಗಿ ವೇತನಗಳನ್ನು ಕೊಡಬೇಕು ಈಗ ಕೆಲವರಿಗೆ ಮಾತ್ರ ಕೊಡುತ್ತಿದ್ದಾರೆ ಇದು ಸಾಲದು

ದಿವಾನರವರು—ಈಗ ಅಂತಾ ೧೦ ವಿದ್ಯಾರ್ಥಿಗಳಿಗೆ ಐವತ್ತು ರೂಪಾಯಂತೆ ವೇತನ ಕೊಡಬೇಕೆಂದು ಮಾಡಿದೆ ಬಡಬಗ್ಗರಾದ ಅಂಥಾ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದರೆ ಮುಂದೆ ನೋಡೋಣ

ಮೈಸೂರು ಮೆ॥ ಎಂ ವೆಂಕಟಕೃಷ್ಣಯ್ಯನವರು—ಸರ್ಕಾರಿ ಪಾಠಶಾಲೆಗಳಲ್ಲೂ ಗ್ರಾಂಟು ಪಡೆಯುವ ಸ್ಕೂಲುಗಳಲ್ಲೂ ವಿದ್ಯಾರ್ಥಿಗಳಿಗೆ ಭಕ್ತಿ ಮಾರ್ಗವನ್ನು ಕಲಿಸಕೂಡದೆಂದು ಸರ್ಕಾರದವರು ಆಜ್ಞೆಮಾಡಿದ್ದಾರೆ ಹಿಂದೂಸ್ಥಾನಿ ಸ್ಕೂಲುಗಳಲ್ಲಿ ಆ ಮತದವರಲ್ಲದ ಮತ್ತ್ಯಾವ ಮತದವರೂ ಓದುವದಿಲ್ಲವಾದ್ದರಿಂದ ಅಲ್ಲಿ ಮುಸಲ್ಮಾನ ಮತಭಕ್ತಿಯನ್ನು ಬಾಲಕರಿಗೆ ಹೇಳಿ ಕೊಡುವರು ಭಕ್ತಿ ವಿಚಾರವಾದ ಬೋಧನ ಇಲ್ಲದೆ ಇರೋಣದರಿಂದ ಹುಡುಗರು ದುರಾಚಾರ ದುರಭ್ಯಾಸಗಳಲ್ಲಿ ಬಿದ್ದು ಕೆಡುವದಕ್ಕೆ ಮಾರ್ಗವಾಗಿದೆ ಮತವಿಷಯವನ್ನು ಹುಡುಗರಿಗೆ ಕಲಿಸುವುದು ಸಾಧ್ಯವಲ್ಲದಿದ್ದರೂ ಸಚ್ಚರಿತ್ರೆ ಗುರುಹಿರಿಯರಲ್ಲಿ ಭಕ್ತಿ ಮುಂತಾದ್ದನ್ನು ಕಲಿಸುವಂತ ಏರ್ಪಾಡು ಮಾಡಿಕೊಡಬೇಕು

ದಿವಾನರವರು—ಇದು ದೊಡ್ಡ ವಿಷಯ, ಚನ್ನಾಗಿ ಪರ್ಯಾಲೋಚಿಸಿ ಮಾಡಬೇಕಾಗಿದೆ

ಚಿಕ್ಕಮಗಳೂರು ಮೆ॥ ಶ್ರೀನಿವಾಸರಾಯರು—ಮದರಾಸ್ ಅಧಿಪತ್ಯದಲ್ಲಿ ಗ್ರಾಂಟು ಪಡೆಯುವಂಥಾ ಪಾಠಶಾಲೆಗಳಲ್ಲಿ ಅಧ್ಯಕ್ಷರು ಪಾಠಗಳನ್ನು ಪ್ರಾರಂಭಿಸುವದಕ್ಕೆ ಮುಂಚೆ ತಮ್ಮ ಮತಕ್ಕೆ ಅನುಸಾರವಾದ ಪ್ರಾರ್ಥನೆ ಮಾಡುತ್ತಾರೆ ಆ ಕಾಲದಲ್ಲಿ ವಿದ್ಯಾರ್ಥಿಗಳ ಪೈಕಿ ಇಷ್ಟವುಳ್ಳವರು ಹಾಜರಾಗಿರಬಹುದೆಂತಲೂ ಇತರರು ಇರಬೇಕಾದ ಅಗತ್ಯವಿಲ್ಲವೆಂತಲೂ ಸರ್ಕಾರದವರು ವಿಧಿಸಿರುವರು ನಮ್ಮ ಸಂಸ್ಥಾನದ ಪಾಠಶಾಲೆಗಳಿಗೂ ಅಂಥಾ ವಿಧಿಯನ್ನು ಜಾರಿಗೆ ತರಬೇಕು

ದಿವಾನರವರು—ಈ ಸಂಗತಿಯನ್ನು ಪರ್ಯಾಲೋಚಿಸಿ ಹುಕುಂ ಕೊಡುತ್ತೇವೆ

ಮೈಸೂರು ಮೆ॥ ವೆಂಕಟಕೃಷ್ಣಯ್ಯನವರು—ಹೆಣ್ಣು ಮಕ್ಕಳಿಗೆ ಸಾಮಾನ್ಯವಾಗಿ ಕನ್ನಡ ಭಾಷೆಯನ್ನು ಕಲಿಸಿದರೆ ಸಾಕಾಗಿದೆ ಇಂಗ್ಲೀಷಾಗಲಿ ಪ್ರೌಢವಿದ್ಯೆಯಾಗಲಿ ಅಗತ್ಯವಿಲ್ಲ ಬಾಲಿಕಾ ಪಾಠಶಾಲೆಗಳನ್ನು ಹೆಚ್ಚು ಮಾಡಬೇಕು.

ದಿವಾನರವರು—ಇದು ಯೋಚಿಸಿ ಮಾಡತಕ್ಕ ವಿಷಯ

ಅದೇ ಮೆಂಬರು—ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಾಗುವಂತೆ ಸ್ತ್ರೀಯರು ಲೋವರ್ ಮತ್ತು ಅಪ್ಪರ್ ಸೆಕಂಡರಿ ಪರೀಕ್ಷೆಗೆ ಉಮೇದುವಾರರಾಗಿ ಅರ್ಜಿ ಬರೆದು ಕೊಂಡಲ್ಲಿ ಅವರಿಗೆ ಪರೀಕ್ಷೆಯ ಫೀಜನ್ನು ಮಾಫಿ ಬಿಡಬೇಕು

ದಿವಾನರವರು—ಇದು ಒಳ್ಳೇ ಸಲಹೆ ಆಲೋಚಿಸಿ ಹುಕುಂ ಕೊಡುತ್ತೇವೆ

ಜಹಗೀರುಗಳ ವಿಚಾರಗಳು

ಚಿತ್ರದುರ್ಗದ ಮೆ॥ ಜಿ ಗೋಪಾಲೈಯ್ಯನವರು—ಪ್ಲೇಗ್ ಮೊದಲಾದ ಅಂಟು ಜಾಡ್ಯಗಳಿರುವಾಗಲೂ ಕ್ಷಾಮ ತಟ್ಟಗಳು ಬಂದಾಗಲೂ ಕಷ್ಟ ಪಡುವ ಜನರಿಗೆ ಸಹಾಯ ಮಾಡುವುದಕ್ಕಾಗಿ ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡುಗಳ ವಶಕ್ಕೆ ಸ್ಪೆಷಲ್‌ಫಂಡು ಕೊಟ್ಟಿರಬೇಕು.

ದಿವಾನರವರು—ಇದು ಸಾಧ್ಯವಲ್ಲ.

ನಗರದ ಸಾಹುಕಾರ್ ಮೆ॥ ನಾಗಪ್ಪನವರು—ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಹಣ ಹಾಕಿರತಕ್ಕವರ ಮತ್ತು ಗವರ್ನಮೆಂಟ್ ಲೈಫ್ ಅಷೂರೆನ್ಸ್ ಪಡೆದಿರತಕ್ಕವರ ಹಕ್ಕುದಾರರು ಅಂಥಾ ಹಣವನ್ನು ಸರ್ಕಾರದವರೇ ಠೇವಣಿಯಾಗಿ ಇಟ್ಟುಕೊಂಡು, ಕೇಳಿದಾಗ ಅದರ ಬಡ್ಡಿಯನ್ನು ಮಾತ್ರ ಕೊಡುತ್ತಾ ಬರಬೇಕೆಂದು ಅಪೇಕ್ಷೆ ಪಡುವುದಾದರೆ ಗವರ್ನಮೆಂಟಿನವರು ಹಾಗೆ ನಡಿಸಿಕೊಡಬೇಕು. ಮತ್ತು ಅಂಥಾ ಹಣಕ್ಕಾಗಲಿ ಅದರ ಬಡ್ಡಿಗಾಗಲಿ ಸಿವಿಲ್ ಕೋರ್ಟಿನ ಡಿಕ್ರಿ ಲಗಾವಾದರೆ ರೂಲಸು ಮಾಡಬೇಕು

ದಿವಾನರವರು—ಗವರ್ನಮೆಂಟಿನವರು ಅದೇ ರೀತಿ ಮಾಡುತ್ತಿದ್ದಾರೆ.

ಅದೇ ಮೆಂಬರು—ಧರ್ಮಕಾರ್ಯಗಳನ್ನು ನಡಿಸುವುದಕ್ಕೋಸ್ಕರ ಜನರು ಗವರ್ನಮೆಂಟಿಗೆ ಹಣ ಠೇವಣಿಯಿಟ್ಟು ಕೊಟ್ಟರೆ ಅಂಥಾ ಹಣಕ್ಕೆ ಈಗ ಕೊಡುವ ಬಡ್ಡಿ ದರವು ಬಹಳ ಸ್ವಲ್ಪವಾಗಿದೆ ಈ ದರವನ್ನು ಶೇಕಡಾ ವರುಷಕ್ಕೆ ೪ ರಂತೆ ಹೆಚ್ಚಿಸಿಕೊಟ್ಟರೆ ಇತರರಿಗೂ ಪ್ರೋತ್ಸಾಹವಾಗುವದು

ದಿವಾನರವರು—ಹಾಗೇ ಮಾಡಬೇಕೆಂದು ಯೋಚಿಸುತ್ತಾ ಇದ್ದೇವೆ

ಎಕ್ಸೈಸ್ ವಿಚಾರಗಳು

ಗುಬ್ಬಿ ಮೆ॥ ಚಿಕ್ಕೇಗೌಡರು—ವೃದ್ಧಾಪರದಿಂದ ಕೇಂದಿ ಮಿನ್ನು ಮೊಬಲಗನ್ನು ವಸೂಲ್ಮಾಡಿಕೊಳ್ಳುವಂತೆ ಪಟೇಲ್ ಶ್ಯಾನುಭೋಗರಿಗೆ ಅಧಿಕಾರ ಕೊಡಬೇಕು

ದಿವಾನರವರು—ಇದು ಆಗಲಾರದು, ಅಂಥಾ ಅವಶ್ಯಕತೆಯೂ ತೋರುವುದಿಲ್ಲ

ದೇವನಹಳ್ಳಿ ಮೆ॥ ಡಿ ಶ್ರೀಕಂಠರಾಯರು—ಶರಾಬ್ ದುಕಾನುಗಳನ್ನು ಈಗ ಪ್ರತಿ ವರುಷವೂ ಹರಾಜು ಹಾಕುತ್ತಾರೆ ಇದರಿಂದ ಕಂಟ್ರಾಕ್ಟುದಾರರು ತುಂಬಾ ನಷ್ಟಪಟ್ಟು ಕೆಟ್ಟು ಹೋಗುತ್ತಾರೆ. ಅಂಥಾ ಹರಾಜನ್ನು ಮೂರು ವರುಷಕ್ಕೊಂದಾವರ್ತಿಯಂತೆ ಹಾಕುತ್ತಾ ಬಂದರೆ ಬಹಳ ಅನುಕೂಲ ಅದರಲ್ಲಿ ಸರ್ಕಾರಕ್ಕೂ ತುಂಬಾ ಫಾಯಿದೆ ಉಂಟು

ದಿವಾನರವರು—ಈಗ ಈ ಪದ್ಧತಿಯೇ ಇನ್ನೂ ಹೊಸದಾದ್ದರಿಂದ ಕೆಲವು ಕಾಲ ನಡೆಯಲಿ ನೀವು ಹೇಳುವಂತೆ ಬದಲಾವಣೆ ಮಾಡುವುದು ಒಳ್ಳೇದೆಂದು ತೋರುತ್ತದೆ ಇನ್ನು ಸ್ವಲ್ಪ ದಿನದ ತನಕ ಕಂಟ್ರಾಕ್ಟುದಾರರು ಕಷ್ಟವನ್ನು ತಡೆಯಲಿ ಇದರ ಅನುಭವ ಬಂದ ಮೇಲೆ ಬದಲಾಯಿಸುವುದು ಅಗತ್ಯವೆಂದು ಕಂಡು ಬಂದಲ್ಲಿ ಬದಲಾಯಿಸುತ್ತೇವೆ

ಮರಾಮತ್ ಇಲಾಖಾ ವಿಚಾರಗಳು

ಮಧುಗಿರಿ ತಾ ಮೆ॥ ಚಿಕ್ಕೇಗೌಡರು—ಪ್ರದೇಶದಲ್ಲಿ ಸ್ವಲ್ಪ ಸಾಯದ ಬಾವಿಗಳನ್ನು ತೋಡಿಸುವುದಕ್ಕೆ ಇರುವಂಥಾ ಯಂತ್ರಗಳನ್ನು ತರಿಸಿ, ನಮ್ಮ ಸೀಮೆಯಲ್ಲೂ ಪರೀಕ್ಷಾರ್ಥವಾಗಿ ಒಂದೆರಡು ಅಂಥಾ ಬಾವಿಗಳನ್ನು ತೆಗಿಸಬೇಕು.

ದಿವಾನರವರು—ನಮ್ಮ ಸೀಮೆಯ ರೈತರಿಗೆ ಸದ್ಯದಲ್ಲಿ ಇಂಥದ್ದೆಲ್ಲಾ ಅಸಾಧ್ಯ ಸುಲಭವಾದ ವ್ಯವಸಾಯ ಕ್ರಮಗಳನ್ನು ಸ್ವಲ್ಪಸ್ವಲ್ಪವಾಗಿ ಕಲಿತು ರೂಢಿಗೆ ತರುತ್ತಾ ಬರುವುದು ಕ್ಷೇಮಕರ ಒಂದೇ ಸಲ ಕಷ್ಟವಿಷಯಗಳನ್ನು ಕಲಿತುಕೊಳ್ಳುವುದು ಸಾಧ್ಯವಲ್ಲ ಇಂಥ ಬಾವಿಗಳನ್ನು ತೆಗೆಯುವುದು ನಮ್ಮ ರೈತರಿಂದ ಆಗಲಾರದು

ಶಿವಮೊಗ್ಗೆ ಮತ್ತು ನಗರ್ ತಾ ಮೆಂಬರುಗಳು—ಶಿವಮೊಗ್ಗೆ ಚಿಕ್ಕಮಗಳೂರು, ಇವೆರಡು ಡಿಸ್ಟ್ರಿಕ್ಟುಗಳಲ್ಲೂ ದೊಡ್ಡ ನೀರಾವರಿ ಕಾಮಗಾರಿ ಯಾವುದೂ ಮಾಡಿಲ್ಲ ಭದ್ರಾನದಿಯ ಅಣೆ ಕಟ್ಟಿ ನಾಲೆಗಳನ್ನು ತೆಗಿಸಿದರೆ ಅವೆರಡು ಡಿಸ್ಟ್ರಿಕ್ಟುಗಳಲ್ಲೂ ಅಪಾರವಾದ ಜಮೀನು ಸಾಗುವಳಿಗೆ ಬಂದು, ಸರ್ಕಾರಕ್ಕೆ ವುಟ್ಟುವಳಿ ಆಗುವುದಲ್ಲದೆ ರೈತರಿಗೆ ಸಹಾಯವಾದೀತು.

ದಿವಾನರವರು—ಭದ್ರಾನದಿಯ ಅಣೆಕಟ್ಟು ಒಳ್ಳೇದೇ, ಅದರಿಂದ ಸರ್ಕಾರಕ್ಕೂ ಚನ್ನಾಗಿ ವುಟ್ಟುವಳಿ ಆದೀತು ಅದರ ಕಾಮಗಾರಿಗೆ ೧೫ ಲಕ್ಷ ರೂಪಾಯಿ ಬೇಕೆಂದು ಅಂದಾಜು ಹಾಕಿದಾರೆ ಅದನ್ನು ಚನ್ನಾಗಿ ಪರಿಶೋಧನೆ ಮಾಡಬೇಕೆಂದು ಚೀಫ್ ಇಂಜನಿಯರಿಗೆ ಕಳುಹಿಸಿದ್ದೇವೆ ಅವರಿಂದ ಜವಾಬು ಬಂದ ಮೇಲೆ ಇದನ್ನು ಇತ್ಯರ್ಥ ಮಾಡುತ್ತೇವೆ

ಕುರುವೆಕೆರೆ ಮೆ॥ ಕೃಷ್ಣಯ್ಯಂಗಾರು—ಸಣ್ಣಕೆರೆ ದೊಡ್ಡ ಕೆರೆಗಳಿಗೆ ಸಾಲಾಬಾದು ಕಾಮಗಾರಿ ಮಾಡುವುದನ್ನು ರೈತರಿಗೆ ವಹಿಸಿದಾಗ ಅದಕ್ಕೆ ಏಕಕಾಲದಲ್ಲಿ ರೈತರೆಲ್ಲಾ ಸೇರುವುದು ಸಾಧ್ಯವಲ್ಲ ಇದಕ್ಕೆ ಬದಲಾಗಿ ಎಕರೆಗೆ ಇಷ್ಟೆಂದು ಗೊತ್ತುಮಾಡಿ ರೈತರಿಗೆ ಹಂಚಿದರೆ ಅವರು ಆ ಹಣವನ್ನು ಕೊಡುವುದಕ್ಕೆ ಸಿದ್ಧರಾಗಿರುವರು ಅದರಿಂದ ಸರ್ಕಾರದವರೇ, ರೈತರ ಸಹಾಯವನ್ನು ಅಪೇಕ್ಷಿಸದೆ ಕಾಮಗಾರಿ ಮಾಡಿಕೊಳ್ಳುವುದಕ್ಕೆ ಸಲೀಸಾಗುವುದು

ದಿವಾನರವರು—ಮರಿಯನ್ನು ಗೊತ್ತುಮಾಡಿ ವಸೂಲ್ಮಾಡಬೇಕೆಂದು ಗ್ರಾಮಸ್ಥರೆಲ್ಲಾ ಒಪ್ಪಿ ಅರ್ಜಿ ಬರೆದುಕೊಂಡರೆ ಹಾಗೇ ಮಾಡುತ್ತೇವೆ.

ಮಾಲೂರು ಮೆ॥ ಶ್ರೀನಿವಾಸರಾಯರು—ಪ್ರಥಮ ಹೆಚ್ಚಿಂದು ಒಡೆದುಹೋದಂಥಾ ಕೆರೆಗಳಿಗೆ ಕಾಮಗಾರಿಮಾಡಿಸಿ, ಅದರ ಹಣವನ್ನು ರೈತರು ಕೊಡಬೇಕೆಂದು ಹಿಂಸೆಮಾಡುತ್ತಾರೆ ಇದನ್ನು ತಪ್ಪಿಸಿಕೊಡಬೇಕು

ದಿವಾನರವರು—ಸಾಲಾಬಾದ್ ಕಾಮಗಾರಿ ಮಾಡಿದ್ದಕ್ಕೆ ಹಣ ವಸೂಲ್ಮಾಡಬೇಕೆಂತಲೂ ಕೆರೆ ರಿಪೇರಿ ಮಾಡಿದ್ದಕ್ಕೆ ರೈತರು ಕಂಟ್ರಿಬ್ಯೂಷನ್ ಕೊಡಬೇಕಾದಿಲ್ಲವೆಂತಲೂ ಹುಕುಂ ಕೊಡುತ್ತೇವೆ

ಅದೇ ಮೆಂಬರು—ಸಣ್ಣಕೆರೆ ದೊಡ್ಡಕೆರೆಗಳ ಕಾಮಗಾರಿಯ ಕಂಟ್ರಾಕ್ಟನ್ನು ಪರದೇಶಸ್ಥರಿಗೆ ಕೊಡುತ್ತಾರೆ ಅವರು ಮಾಡುವ ಕಾಮಗಾರಿ ತೃಪ್ತಿಕರವಾಗಿರುವುದಿಲ್ಲ ಇಂಥಾ ಪದ್ಧತಿಯನ್ನು ತಪ್ಪಿಸಿ ಕೆರೆಗಳಿಗೆ ಬಾರೀ ಜಮೀನು ಪಡೆದಿರುವಂಥಾ ರೈತರಿಗೇ ಕಂಟ್ರಾಕ್ಟ್ ಕೊಡಿಸುವಂತೆ ಹುಕುಂ ಆಗಬೇಕು

ದಿವಾನರವರು—ಇದು ನ್ಯಾಯವಾದ ಅಪೇಕ್ಷೆ ವಿಚಾರ ಮಾಡಿ ಹುಕುಂ ಕೊಡುವೆವು

ಚಾಮರಾಜನಗರದ ಮೆ॥ ಕೊಡ್ಲೂರು ವೆಂಕಟಶಾಮೈಯ್ಯರು —ನಾಲಾ ಓವರ್‌ಸೀರುಗಳ ಮತ್ತು ಸೌಡಿಗಳ ಏರಾವರ್ ಅವುಗಳು ರೆವಿನ್ಯೂ ಇಲಾಖೆಯಲ್ಲೂ ಇನ್ನಾರು ತಿಂಗಳು ಇರ

...ಇರುವಂತೆ ಏರ್ಪಾಡಾಗಿದೆ. ಇದರಿಂದ ಕಾಲದಲ್ಲಿ ...ಸಿಕ್ಕದೆ ವ್ಯವಸಾಯಕ್ಕೆ ಪರಕತ್ತಾಗುವವು. ಇದನ್ನು ...ಬರಾವರ್ದನ್ನು ಖಾಯಮಾಗಿ ರೆವಿನ್ಯೂ ಇಲಾಖೆಯಲ್ಲೇ ...ತುಂಬಾ ಸಹಾಯವಾದೀತು.

...ರವರು—ಚಾಮರಾಜನಗರದ ನಾಲೆಗಳ ವಿಷಯದಲ್ಲಿ ತನಿ... ...ರಿಪೋರ್ಟು ಕೊಡುವಂತೆ ಛೀಫ್ ಇಂಜನಿಯರಿಗೆ ಬರೆದು ...ತ್ತೇವೆ.

...ಗೌಡರು ಮಿ॥ ಕೆ ವೆಂಕಟಸುಬ್ಬೈಯ್ಯನವರು—ದೊಡ್ಡ ...ಜನಾದ ಕಾಮಗಾರಿಯನ್ನೆಲ್ಲಾ ಸರ್ಕಾರದವರೇ ವಹಿಸಿ ...ಕೆರೆನಾಲೆಗಳ ಕಾಮಗಾರಿಯನ್ನು ಮಾತ್ರ ರೈತರ ತಲೆಯ ...ಕಿದಾರೆ. ಕಂದಾಯದ ದರವೂ ಕಂಟ್ರಿಬ್ಯೂಷನ್ ವೊಬಲ ...ನಾಲೆ ಕೆಳಗಿರತಕ್ಕ ಜಮೀನುಗಳು ಕೆರೆನಾಲೆ ಕೆಳಗಿರತಕ್ಕ ...ಯಾವ ತಾರತಮ್ಯವೂ ಇಲ್ಲದೆ ಒಂದೇ ಸಮನಾಗಿದೆ. ...ದ ಕ್ರಮವು ಅಸಂಗತವಾದದ್ದಾಗಿಯೂ ರೈತರಿಗೆ ನಷ್ಟ ...ಉ ಆಗುವುದು. ಇವಲ್ಲದೆ ಇತರ ಕಡೆಗಳಲ್ಲಿ ನಾಲೆಗಳ ...ದ ಕಾಮಗಾರಿಗೆ ಮೈಲಿ ೧ ಕ್ಕೆ ೭೫ ರೂಪಾಯಿನಂತೆ ...ಜನಗೂಡಿನ ನಾಲೆಗಳಿಗೆ ಮಾತ್ರ ಮೈಲಿ ೧ ಕ್ಕೆ ೧೦೦ ರೂ. ...ದೆ. ಈ ವಿಚಿತ್ರವಾದ ಕ್ರಮವನ್ನು ರದ್ದು ಮಾಡಿ, ಸಣ್ಣನಾ... ...ದ ಕಾಮಗಾರಿಯನ್ನು ಸರ್ಕಾರದವರೇ ವಹಿಸಿಕೊಂ... ...ಗೆ ಕಾಲಕ್ಕೆ ಸರಿಯಾಗಿ ನೀರು ಸಿಕ್ಕುವಂತೆ ಬಂದೋಬಸ್ತು ಮಾಡಿ... ...ವು.

...ರವರು—ಈ ವಿಷಯದಲ್ಲಿ ಛೀಫ್ ಇಂಜನಿಯರಿಂದ ...ಬರಬೇಕಾಗಿದೆ. ಅದು ಬಂದ ಮೇಲೆ ನಾವು ವ್ಯವಸ್ಥೆ... ...ತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಹೈದರಾಬಾದಿನಲ್ಲಿ ಮುಂದೆ ಜನವರಿ ೨೭ ಕ್ಕೆ ಕೈಗಾರಿಕೆಗಳ ...ದರ್ಶನೋತ್ಸವವು ಪ್ರಾರಂಭವಾಗತಕ್ಕದ್ದೆಂದು ಗೊತ್ತುಮಾಡಲ್ಪ...

✦✦✦✦

...ಯಾದಿಂದ ಮಾಲಿ ಬಂದರಿಗೆ ರೈಲ್‌ರಸ್ತೆ ಹಾಕುವುದಕ್ಕೆ ...ಡಿಯಾ ಗವರ್ನಮೆಂಟಿನವರು ೧೭ ಲಕ್ಷ ೭ ಸಾವಿರ ಸ್ಟೆರ್ಲಿಂಗ್ ...ದೆ.

✦✦✦✦

...ಮಹಾರಾಜರವರು ಲಕ್ನೋ ಪಟ್ಟಣದಲ್ಲಿ ಹೊಸ ...ದ ಕ್ಯಾನಿಂಗ್ ಕಾಲೇಜ್ ಎಂಬ ವಿದ್ಯಾಶಾಲೆಗೆ ಮೂರು ...ರೂಪಾಯಿ ಧರ್ಮ ಕೊಟ್ಟಿದ್ದಾರೆ.

✦✦✦✦

ಈಸ್ಟ್ ಬರ್ಮಾ ಆಧಿಪತ್ಯದಿಂದ ಮೂರು ಕೋಟಿ ಪಲ್ಲಾ ದವಸ ...ದೇಶಗಳಿಗೆ ರಫ್ತಾಗಬಹುದೆಂದು ಅಂದಾಜು ಕಟ್ಟಿ... ...ದರಲ್ಲಿ ಮುಕ್ಕಾಲು ಪಾಲು ಜಪಾನಿಗೆ ಹೋಗಬಹುದು

✦✦✦✦

...ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಂಡಲೇ ನಗರದಲ್ಲಿ ಒಬ್ಬ ...ನಿವನು ಇನ್ನೊಬ್ಬ ಪೋಲಿಸಿನವನನ್ನು ಗುಂಡಿನಿಂದ ಹೊಡೆದು ...ಕೊಂದು ಹಾಕಿ, ತಾನು ಆ ಕ್ಷಣ ಆತ್ಮಹತ್ಯ ಮಾಡಿ... ...ನು.

✦✦✦✦

...ಕಲ್ಕತ್ತಾ ಪಟ್ಟಣದ ಸಮುದ್ರತೀರದಲ್ಲಿ ಜುಬ್ಲಿ ಎಂಬ ...ಗಿನ ...ಕ್ಕಾಗಿ ಬೆಂಕಿ ಬಿದ್ದು, ಅದರಲ್ಲಿದ್ದ ೭೫೦೦ ಮೂಟೆಗಳು ಸಾಮಾನು ...ಸುಟ್ಟುಹೋಗಿ ಮಾಲೀಕರಿಗೆ ೨೦ ಸಾವಿರ ರೂಪಾಯಿನ ತನಕ ...ನಷ್ಟವಾಗಿರುವುದು

✦✦✦✦

...ಪುರ ಪಟ್ಟಣದಲ್ಲಿ ನವಂಬರ್ ತಿಂಗಳಲ್ಲಿ ೧೩,೭೦೦ ಇಲಿ ...ಗಳನ್ನು ಕೊಂದು ಹಾಕಿದರು. ಇದುವರೆಗೆ ಅಂದರೆ ಫೆಬ್ರವರಿ ...೧,೩೫,೩೪೭ ಇಲಿ ಹೆಗ್ಗಣಗಳು ಆ ಪಟ್ಟಣದಲ್ಲಿ ನಿರ್ನಾಮ... ...ವಾದುವು ತಿಳಿದುಬರುತ್ತದೆ

✦✦✦✦

ಕಾಶೀ ಪಟ್ಟಣದಲ್ಲಿ ಮಿಸೆಸ್ ಬೆಸೆಂಟ್ ಎಂಬಾಕೆ ಸ್ಥಾಪಿಸಿ... ...ದ್ದಿರುವ ಹಿಂದೂ ವಿದ್ಯಾಶಾಲೆಗೂ, ಅಲಿಘರದಲ್ಲಿರುವ ಮಹ... ...ದ ವಿದ್ಯಾಶಾಲೆಗೂ ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡಿ, ...ನೋಡಿ ಕೊಂಡು ಬರುತ್ತೇವೆಂದು ಅಪ್ಪಣೆ ಕೊಡಿಸಿದ್ದಾರೆ.

✦✦✦✦

ಬೊಂಬಾಯಿ ಪಟ್ಟಣದಲ್ಲಿ ಒಂದು ಮನೆಯೊಳಗೆ ಕೆಲವರು ಸೇ... ...ದ್ದರು. ಅವರಲ್ಲಿ ಇಬ್ಬರಿಗೆ ಮಾತು ನಡೆದು ವ್ಯಾ... ...ಒಬ್ಬನು ಇನ್ನೊಬ್ಬನನ್ನು ಕತ್ತಿಯಿಂದ ತಿವಿದು ಕೊಂದು... ...ಟನು. ಈಗ ಅವನನ್ನು ಹಿಡಿದು ವಿಚಾರಣೆ ಮಾಡುತ್ತಿದ್ದಾರೆ.

✦✦✦✦

...ಲಾಮಾ ಎಂಬ ಟಿಬೆಟ್ಟಿನ ಗುರುವು ೩೦೦ ಮಂದಿ ಪರಿವಾರ ...ಸಹ ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕಂಡು ಹೋಗುವುದಕ್ಕೆ ...ದಕ್ಕೆ ಬಂದಿರುವನು. ಇಂಡಿಯಾ ಗವರ್ನಮೆಂಟಿನವರು ...ಯಲ್ಲಿರುವ ಹೇಸ್ಟಿಂಗ್ಸ್ ಹೌಸ್ ಎಂಬ ಅರಮನೆಯನ್ನು ಅವ... ...ಬಿಟ್ಟುಕೊಟ್ಟಿದ್ದಾರೆ.

✦✦✦✦

ಮದರಾಸ್ ಪಟ್ಟಣದಲ್ಲಿ ಗಾಜಿನ ಭಾರೀ ಪೆಟ್ಟಿಗೆಗಳನ್ನಿಟ್ಟು ...ಸುರಿದು ಅವುಗಳಲ್ಲಿ ಸಮುದ್ರದ ಪ್ರಾಣಿಗಳನ್ನೂ ಜಲಚರಗ... ...ಮುಂತಾದುವುಗಳನ್ನೂ ಇಟ್ಟು ಬೆಳೆಸಬೇಕೆಂದು ಪ್ರಯತ್ನ ಪಟ್ಟ... ...ದಕ್ಕೆಲ್ಲಾ ೧೧,೦೦೦ ರೂಪಾಯಿ ಖರ್ಚಾಗಬಹುದೆಂದು ...ಕಾಣುವುದು.

ಬೊಂಬಾಯಿ ಪಟ್ಟಣದ ಸಮಸ್ತ ಕಾರ್ಖಾನೆಗಳ ಯಜಮಾನರೂ ಸಭೆ ಸೇರಿ, ಇನ್ನು ಮೇಲೆ ಯಾವ ಕಾರ್ಖಾನೆಯಲ್ಲೂ ದಿನಕ್ಕೆ ೧೩ ಗಂಟೆಗಿಂತ ಜಾಸ್ತಿಯಾಗಿ ಕೆಲಸಗಾರರಿಂದ ಕೂಲಿ ಮಾಡಿಸಕೂಡದೆಂತಲೂ, ಎಂಥಾ ಸಂದರ್ಭದಲ್ಲೂ ಸಾಯಂಕಾಲ ೭ ಗಂಟೆಯಾದ ಮೇಲೆ ಕೆಲಸ ಮಾಡಿಸಕೂಡದೆಂತಲೂ ಗೊತ್ತುಮಾಡಿದಾರೆ. ಇದರಿಂದ ಕೂಲೀ ಜನರ ಕಷ್ಟ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು

✦✦✦✦

ರಾಜಪುಟಾನಾ ಸಂಸ್ಥಾನಗಳ ರೆಸಿಡೆಂಟರಾದ ಮಿ॥ ಕಾಲ್ವಿನ್ ರವರೂ ಜಯಪುರ ಸಂಸ್ಥಾನದ ರೆಸಿಡೆಂಟರಾದ ಕರ್ನಲ್ ಹರ್ಬರ್ಟ್‌ಯವರೂ ಪರಿವಾರ ಸಹಿತ ಕಳೆದ ಸೋಮವಾರ ಕೃಷ್ಣಗಢಕ್ಕೆ ಹೋಗಿ, ಪ್ರಾಪ್ತವಯಸ್ಕರಾದ ಮಹಾರಾಜರವರಿಗೆ ಸಂಸ್ಥಾನವನ್ನಾಳುವ ಅಧಿಕಾರವನ್ನು ವಹಿಸಿ ಬಂದರು. ಮಹಾರಾಜರವರ ಆತಿಥ್ಯವೂ ಪಟ್ಟಾಭಿಷೇಕೋತ್ಸವದ ವಿಭವವೂ ವಿಶೇಷ ಸಂತೋಷಸಂಭ್ರಮಗಳನ್ನುಂಟುಮಾಡಿದವು.

✦✦✦✦

ಜೇಲಂ ಡಿಸ್ಟ್ರಿಕ್ಟಿನ ಸೈನ್ಯದ ಸವಾರನಾದ ಕಾಬೂಲ್ ಸಿಂಗ್ ಎಂಬುವನು ಒಬ್ಬ ಹುಡುಗನನ್ನು ಕಡಿದು ಹಾಕಿ, ಅನಂತರ ಇನ್ನೊಬ್ಬ ಸಿಪಾಯಿಯನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟನು. ಸೆಷನ್ಸ್ ಜಡ್ಜರು ಅವನಿಗೆ ಮೊದಲನೆಯ ಅಪರಾಧಕ್ಕೆ ಫಾಸಿ ಸಜವನ್ನೂ ಎರಡನೆಯ ಅಪರಾಧಕ್ಕೆ ಏಳು ವರುಷ ಕಠಿಣ ಸಜವನ್ನೂ ವಿಧಿಸಿದಾರೆ. ಅವನು ಇವೆರಡರಲ್ಲಿ ಮೊದಲು ಯಾವ ಶಿಕ್ಷೆಯನ್ನು ಅನುಭವಿಸಬೇಕೆಂದು ವಿಧಿಸುವರೋ ತಿಳಿಯಲಿಲ್ಲ.

✦✦✦✦

ಕಳೆದ ವಾರ ಮಿ॥ ಸ್ಟ್ಯಾನ್ಲಿ ಸ್ಪೆನ್ಸರ್ ಎಂಬಾತನು ಆಕಾಶಬುಟ್ಟಿಯಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚಾರ ಮಾಡಿಕೊಂಡು ಬಂದು ಇಳಿದನು. ಆತನು ಭೂಮಟ್ಟದಿಂದ ೩,೫೦೦ ಅಡಿ ಎತ್ತರಕ್ಕೆ ಏರಿ ಹೋಗಿದ್ದನೆಂತಲೂ, ಅಷ್ಟು ಮೇಲೆ ಹೋಗಿದ್ದರೂ ಭೂಮಿಯ ಮೇಲೆ ಜನರು ಆಡುತ್ತಿದ್ದ ಮಾತುಕತೆಗಳೆಲ್ಲಾ ಅವನಿಗೆ ಪರಿಷ್ಕಾರವಾಗಿ ಕೇಳಿಸುತಿತ್ತೆಂತಲೂ ಸುಮಾರು ಅರ್ಧ ಗಂಟೆಹೊತ್ತು ಮಾತ್ರ ಆಕಾಶ ಮಾರ್ಗದಲ್ಲಿ ಸಂಚಾರ ಮಾಡಿದನೆಂತಲೂ ತಿಳಿದುಬಂದಿದೆ

✦✦✦✦

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಮಾಜವು ಕಾಶೀಪಟ್ಟಣದಲ್ಲಿ ಈ ತಿಂಗಳ ೨೭ ನೇ ತಾರೀಖು ಬುಧವಾರ ಪ್ರಾರಂಭವಾಗಿ ಮೂರು ದಿನ ನಡೆಯುವುದು. ಅನಂತರ ತಾ ೩೦ ನೆ ಶನಿವಾರ ಕೈಗಾರಿಕೆ ವ್ಯವಸಾಯೋಪಕರಣಗಳ ಪ್ರದರ್ಶನವು ಪ್ರಾರಂಭವಾಗುವುದು ಉತ್ಕೃಷ್ಟವಾದ ಪದಾರ್ಥಗಳನ್ನು ಆರಿಸಿ ಪ್ರದರ್ಶನ ಮಾಡತಕ್ಕವರಿಗೆ ಈ ವರುಷ ಅನೇಕರು ಚಿನ್ನ ಬೆಳ್ಳಿ ಬಿರುದುಗಳನ್ನೂ ಬಹುಮಾನಗಳನ್ನೂ ಕೊಡುವುದಾಗಿ ವಾಗ್ದಾನ ಮಾಡಿದಾರೆ.

✦✦✦✦

ಕಲ್ಕತ್ತಾ ಪಟ್ಟಣದಲ್ಲಿ ಮೂಗು ಪ್ರಾಣಿಗಳ ಸಂರಕ್ಷಣ ಮಾಡತಕ್ಕವರ ಒಂದು ಸಂಘವಿರುವುದು. ಆ ಸಂಘದ ಮೆಂಬರುಗಳಾದ ನಾಲ್ವರು ಕೆಲವು ಕಾಲದಿಂದಲೂ ಪಟ್ಟಣದ ಗಡಿಗಳಲ್ಲಿ ನಿಂತು ಎಳ್ಳು ಗಾಡಿಯವರನ್ನು ತಡೆದು ಅವರನ್ನು ಹಿಂಸೆಮಾಡಿ, ಅವರಿಂದ ದುಡ್ಡುಕಿತ್ತು ತಿನ್ನುತ್ತಿದ್ದರೆಂದು ತಿಳಿದುಬಂದ ಕೂಡಲೇ ಪೋಲಿಸಿನವರು ಆ ನಾಲ್ವರನ್ನು ಹಿಡಿದು, ಅವರ ಮೇಲೆ ಫಿರ್ಯಾದು ಮಾಡಿದಾರೆ. ಅವರು ಈ ರೀತಿಯಲ್ಲಿ ತುಂಬಾ ಪ್ರಯೋಜನ ಹೊಂದುತ್ತಿದ್ದರೆಂದು ತಿಳಿದು ಬಂದಿದೆ

✦✦✦✦

ಶ್ರೀ ಭಾರತವರ್ಷ ಮಹಾಮಂಡಲವೆಂಬ ವೈದಿಕ ಸಮಾಜವು ಈ ತಿಂಗಳ ಕಡೆಗೆ ಕಾಶೀ ಪಟ್ಟಣದಲ್ಲಿ ನಡೆಯುವುದು ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ವೈದಿಕರೇ ಈ ಸಭೆಗೆ ಪ್ರತಿನಿಧಿಗಳಾಗಿ ಹೋಗುವರು ಕಡೇ ದಿನ ತಾ॥ ೩೧ ರಲ್ಲಿ ಆ ಸಮಾಜದವರೆಲ್ಲಾ ವೇದಘೋಷ, ಭಗವನ್ನಾಮಸಂಕೀರ್ತನಾದಿಗಳನ್ನು ಮಾಡಿಕೊಂಡು ರಾಜ ಬೀದಿಗಳಲ್ಲಿ ಮೆರವಣಿಗೆ ಹೊರಡುವರು ಈ ಮೆರವಣಿಗೆಯ ದಿನ ಅನೇಕ ರಾಜರೂ ಮಹನೀಯರೂ ಜಮೀನ್ದಾರರೂ ನಾಜರಾಗಿರುವಂತೆ ಒಪ್ಪಿಕೊಂಡಿದಾರೆ.

✦✦✦✦

ಮಧ್ಯಪ್ರಾಂತ್ಯಗಳ ಗವರ್ನಮೆಂಟಿನವರು ಆ ಅಧಿಪತ್ಯದಲ್ಲಿ ಪಾಠಶಾಲಾ ಉಪಾಧ್ಯಾಯರುಗಳ ಸಂಬಳವು ಇನ್ನು ಮುಂದೆ ೧೦ ರೂಪಾಯಿಗಿಂತ ಕಡಮೆಯಾಗಿರಲೇಕೂಡದದೆಂದು ವಿಧಿಸಿದಾರೆ. ಅದಕ್ಕಿಂತಲೂ ಕಮ್ಮಿ ಸಂಬಳಕ್ಕೆ ಸಿಕ್ಕುವ ಉಪಾಧ್ಯಾಯರು ಯೋಗ್ಯರಾಗಿರಲಾರರೆಂದು ಅವರಿಗೆ ಪರಿಷ್ಕಾರವಾಗಿ ತಿಳಿದಿದೆ. ನಾಗಪುರದಲ್ಲಿ ಈಗ ಪಂಕಾ ಎಳೆಯುವವನೂ ಜಾಲ್ಲು ಕೊಯ್ಯುವವನೂ ನೀರು ತರುವವನೂ ಎಂಟೆಂಟು ರೂಪಾಯಿ ಸಂಬಳ ತರುವಾಗ್ಗೆ ಉಪಾಧ್ಯಾಯನಿಗೆ ೧೦ ರೂಪಾಯಿ ಕೊಡುವುದು ಸರಿಯಾಗಿದೆ.

✦✦✦✦

ಪೂನಾಪಟ್ಟಣದ ಮಿ॥ ಗೋಖಲೆಯವರು ವಿಲಾಯಿತಿಗೆ ಹೋಗಿ ಹಿಂದುಸ್ಥಾನದಲ್ಲಿ ಸರ್ಕಾರದವರು ನಡಸುತ್ತಿರುವ ಕಾರ್ಯಗಳು ಸಮರ್ಪಕವಾಗಿಲ್ಲವೆಂದೂ ರಾಜ್ಯಭಾರ ಕ್ರಮಗಳನ್ನು ಬದಲಾಯಿಸಿ ದೇಶೀಯ ವಿದ್ಯಾವಂತರಿಗೆ ಹೆಚ್ಚಾಗಿ ಅಧಿಕಾರಗಳನ್ನು ಕೊಡಬೇಕೆಂತಲೂ ಉಪನ್ಯಾಸಗಳನ್ನು ಮಾಡಿ, ಏಳು ವಾರಗಳ ಮೇಲೆ ಹಿಂದುಸ್ಥಾನಕ್ಕೆ ವಾಪಸು ಬಂದರು. ಕಳೆದ ವಾರ ಬೊಂಬಾಯಿ ಪಟ್ಟಣದಲ್ಲಿ ಅವರು ಹಡಗು ಇಳಿದಾಗಲೂ ಅಲ್ಲಿಂದ ಪೂನಾಪಟ್ಟಣಕ್ಕೆ ವಾಪಸು ಬಂದಾಗಲೂ ಪ್ರಜೆಗಳು ಅವರನ್ನು ವಿಶೇಷ ಸನ್ಮಾನ ಜಯಘೋಷಗಳೊಡನೆ ಉತ್ಸಾಹಪೂರ್ವಕವಾಗಿ ಎದುರುಗೊಂಡರು.

✦✦✦✦

ಪೂನಾ ರೈಲ್‌ಗಾಡಿಯಲ್ಲಿ ೧೩ ಜನ ಹಿಂದು ಮಹಮದೀಯರು ಕೆಲವು ದಿನಗಳ ಕೆಳಗೆ ಕೂತುಕೊಂಡು ಪ್ರಯಾಣಮಾಡುತ್ತಾ ಜೂಜಾಡಿದರು. ಪೋಲೀಸಿನವರು ಅವರನ್ನೆಲ್ಲಾ ದಸ್ತಗಿರಿ ಮಾಡಿ, ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರ ಮೇಲೆ ಫಿರ್ಯಾದು ತಂದರು ಮ್ಯಾಜಿಸ್ಟ್ರೇಟ್ ಮಿ॥ ಕೃಷ್ಣರಾವ್ ವಾಸುದೇವ ಜೋಷಿಯವರು ಅವರಿಗೆಲ್ಲಾ ಜುಲ್ಮಾನೆಯನ್ನೂ ಸಜಾ ಶಿಕ್ಷೆಯನ್ನೂ ವಿಧಿಸಿದರು ಅದರ ಮೇಲೆ ಅವರು ಬೊಂಬಾಯಿ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಮಾಹ್ಮೂಲವನ್ನು ಕೇಳಿ ರೈಲ್‌ಗಾಡಿಯು ಬಹಿರಂಗವಾದ ಸ್ಥಳವೆನಿಸುವದಿಲ್ಲವೆಂದು ಗೊತ್ತುಮಾಡಿ, ಕೆಳಕೋರ್ಟಿನ ತೀರ್ಪನ್ನು ರದ್ದು ಪಡಿಸಿ, ಅಪರಾಧಿಗಳನ್ನೆಲ್ಲಾ ಖುಲಾಸ್ ಮಾಡಿಸಿರುತ್ತಾರೆ

✦✦✦✦

ಹೈದರಾಬಾದ್ ಸಂಸ್ಥಾನದ ನೈಜಾಮರು ಜೂಬಿಲಿ ಮಹೋತ್ಸವವನ್ನು ಮಾಡಿಕೊಳ್ಳುತ್ತಾರೆ. ಈ ಮಹೋತ್ಸವವು ಈ ತಿಂಗಳ ೨೭ ರಿಂದ ೩೧ ನೇ ತಾರೀಖು ತನಕ ನಡಿಯುವುದು. ಆ ವಾರವೆಲ್ಲಾ ಸಮಸ್ತ ಸರ್ಕಾರೀ ಇಲಾಖೆಗಳಿಗೂ ರಜಾ ಕೊಟ್ಟದಾರೆ ನೈಜಾಮರವರು ಸಮಸ್ತ ಬಿರುದು ಸಲ್ತನತ್ ಸಹಿತ ಮೆರವಣಿಗೆಯಲ್ಲಿ ಹೊರಟು, ಅಲ್ಲಿರುವ ಮಕ್ಕಾ ಮಜೀದ್ ಎಂಬ ದೇವಸ್ಥಾನಕ್ಕೆ ದಯಮಾಡಿ, ದೇವರ ಪ್ರಾರ್ಥನಾದಿ ಆಚರಣೆಗಳನ್ನು ಪದ್ಧತಿಯ ಪ್ರಕಾರ ನೆರವೇರಿಸುತ್ತಾರೆ. ಅಡ್ರೆಸ್ಸುಗಳೂ ವಿಜ್ಞಾಪನಾ ಪತ್ರಿಕೆಗಳೂ ಪ್ರಜೆಗಳಿಂದ ಒಪ್ಪಿಸಲ್ಪಡುವವು ಕೈಗಾರಿಕೆಗಳ ಪ್ರದರ್ಶನೋತ್ಸವ ನಡೆಯುವಂತೆ ಏರ್ಪಾಡಾಗಿರುವಂಥಾ ದಿವ್ಯವಾದ ಉದ್ಯಾನವನದಲ್ಲಿ ನಾನಾ ಉತ್ಸವಗಳೂ ಆಟಪಾಟವಿನೋದಗಳೂ ಜರುಗುವವು

✦✦✦✦

ಕಲ್ಕತ್ತಾ ಪಟ್ಟಣದ ಖರಗ್‌ಸಿಂಗ್ ಲಖಿರಾಂ ಎಂಬ ಭಾರೀ ಸಾಹುಕಾರನು ಐವತ್ತು ಸಾವಿರ ರೂಪಾಯಿನಂತೆ ೧೩ ಪೆಟ್ಟಿಗೆಗಳಲ್ಲಿ ಹಣವನ್ನು ಭರ್ತಿಮಾಡಿ, ರೈಲಿನಲ್ಲಿ ಮಿರಾಜ್‌ಪುರಕ್ಕೆ ರವಾನೆ ಮಾಡಿದನು ಅವರ ಉಸ್ತುವಾರಿಗೆ ತನ್ನ ಇಬ್ಬರು ಸೇವಕರನ್ನೂ ಕಳುಹಿಸಿದನು. ಇವರು ದಾರಿಯಲ್ಲಿ ನಿದ್ದೆಮಾಡುತ್ತಿದ್ದಾಗ ಗಾಡಿ ನಡಿಸುವವನು ರೈಲನ್ನು ನಿಧಾನವಾಗಿ ಬಿಡುತ್ತಾ, ಅವರಿದ್ದ ಗಾಡಿಗೆ ಬಂದು ಒಂದು ಪೆಟ್ಟಿಗೆಯನ್ನು ಅಪಹರಿಸಿಕೊಂಡು ಹೋಗಿ ದಾರಿಯಲ್ಲೇ ಒಂದು ಕಡೆ ಗೊತ್ತಾದ ಮರದ ಕೆಳಗೆ ಇಳಿಸಿ, ಅಲ್ಲಿಂದ ಮುಂದಕ್ಕೆ ಗಾಡಿಯನ್ನು ಬೇಗಬಿಟ್ಟುಕೊಂಡು ಹೋದನು ಆ ಸೇವಕರು ಎದ್ದು ನೋಡಿ ಗಾಬರಿಬಿದ್ದು ಕೂಡ್ಲೆ ಪೋಲೀಸಿಗೆ ರಿಪೋರ್ಟು ಮಾಡಿದರು ಕೆಲವು ದಿನಗಳ ಮೇಲೆ ಆ ಗಾಡಿ ನಡಿಸುವವನೂ ಅವನ ಕೈಕೆಳಗಿನ ಇಬ್ಬರು ಜವಾನರೂ ಸಿಕ್ಕಿಬಿದ್ದು ತಾವು ಕಳುವುಮಾಡಿದ್ದುಂಟೆಂದು ಒಪ್ಪಿಕೊಂಡರು. ಮೊಕದ್ದಮೆ ನಡಿಯುತ್ತಾ ಇದೆ.

✦✦✦✦

ತಂತಿಟಪ್ಪಾಲ್ ಮೂಲಕ ಮಣಿಆರ್ಡರು ರವಾನೆ ಮಾಡುವ ದರಗಳನ್ನು ಇಂಡಿಯಾ ಗವರ್ನಮೆಂಟಿನವರು ಬಹಳ ಸುಲಭ ಮಾಡಿಕೊಟ್ಟಿರುತ್ತಾರೆ. ಈ ದರಗಳು ಮುಂದಿನ ಜನವರಿ ೧ ರ ಲಾಗಾಯತು ಜಾರಿಯಲ್ಲಿ ಬರುವವು ೧೦ ರೂಪಾಯಿಗೆ ಮೀರದ ಮಣಿಯಾರ್ಡರಿಗೆ ೧೦ ಆಣೆ, ೧೫ ರೂ. ಮೀರದಿದ್ದರೆ ೧೧ ಆಣೆ, ೨೫ ರೂಪಾಯಿ ಮೀರದಿದ್ದರೆ ೧೨ ಆಣೆ. ೨೫ ರೂ. ಮೇಲೆ ೬೦೦ ರೂ. ಒಳಗೆ ಮೊದಲನೆ ೨೫ ರೂ. ಗೆ ೧೨ ಆಣೆ, ತರುವಾಯ ಪ್ರತಿ ೨೫ ರೂಗೂ ಅದರ ಭಿನ್ನಾಂಶಕ್ಕೂ ೪ ಆಣೆಯಂತೆ ಇದಲ್ಲದೆ ಅರ್ಜೆಂಟಾಗಿ ಅಂದರೆ ಜಾಗ್ರತೆಯಾಗಿ ಮಣಿಯಾರ್ಡರನ್ನು ತಲುಪಿಸಬೇಕಾದರೆ ಟೆಲಿಗ್ರಾಂ ಛಾರ್ಜ್ ಜಾಸ್ತೀ ಕೊಡಬೇಕು, ಮೊಬಲಗು ೧೦ ರೂಪಾಯಿಗೆ ಮೀರದಿದ್ದರೆ ೧ ರೂ. ೨ ಆ. ರುಸುಂ ೧೫ ರೂಪಾಯಿಗೆ ರೂ. ೧—೩. ಮೊಬಲಗು ೨೫ ರೂಪಾಯಿನೊಳಗಿದ್ದರೆ ರೂ ೧—೪. ಈ ರೀತಿ ದರಗಳನ್ನು ಕಡಿಮೆ ಮಾಡಿದ್ದರಿಂದ ವರ್ತಕರಿಗೂ ಇತರ ಪ್ರಜೆಗಳಿಗೂ ತುಂಬಾ ಅನುಕೂಲವಾಯಿತು.

✦✦✦✦

ಮದರಾಸ್ ಪಟ್ಟಣದ ಎಗ್ಮೋರ್ ಎಂಬ ಭಾಗದಲ್ಲಿರುವ ಕೋರ್ಲ್ಯಾಂಡ್ ಎಂಬ ಉದ್ಯಾನವನದಲ್ಲಿ ಸುಮಾರು ೭೦೦ ಮಂದಿ ಹಿಂದೂ ಸ್ತ್ರೀಯರು ಕಳೆದ ವಾರ ಸಭೆಸೇರಿ ಆಟಪಾಟ ವಿನೋದಗಳಲ್ಲಿ ಕಾಲವನ್ನು ಕಳೆದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಮದರಾಸಿಗೆ ದಯಮಾಡುವಾಗ್ಗೆ ಅವರ ಪತ್ನಿಯವರನ್ನು ವಿಶೇಷ ಮರ್ಯಾದೆಗಳೊಡನೆ ಮದರಾಸ್ ಪಟ್ಟಣದ ಸ್ತ್ರೀಸಂಘದವರು ಸತ್ಕರಿಸಿ, ಅವರಿಗೆ ವಿಜ್ಞಾಪನಾ ಪತ್ರಿಕೆಯನ್ನೊಪ್ಪಿಸಬೇಕೆಂತಲೂ ಈ ತಿಂಗಳ ಆಖೈರಿನಲ್ಲಿ ಕಾಶೀಪಟ್ಟಣದಲ್ಲಿ ನಡೆಯುವ ಸರ್ವಕಲಾ ಪ್ರದರ್ಶನೋತ್ಸವಕ್ಕೆ ಮದರಾಸಿನಿಂದ ಕೆಲವು ಸ್ತ್ರೀಯರನ್ನು ಪ್ರತಿನಿಧಿಗಳನ್ನಾಗಿ ಕಳುಹಿಸಿಕೊಡಬೇಕೆಂತಲೂ ಆ ದಿನ ನಡೆದ ಸಭೆಯಲ್ಲಿ ತೀರ್ಮಾನ ಮಾಡಿಕೊಂಡಿದಾರೆ. ನಮ್ಮ ದೇಶದ ಸ್ತ್ರೀಯರಲ್ಲಿ ಐಕಮತ್ಯವೂ ವಿದ್ಯಾಭಿವೃದ್ಧಿಯೂ ಉಂಟಾಗುವ ಹಾಗೆಲ್ಲಾ ಈ ರಾಷ್ಟ್ರವೂ ಏಳಿಗೆಯಾಗುತ್ತಿರುವುದಕ್ಕೆ ಸಂಶಯವಿಲ್ಲ

✦✦✦✦

ಸಿಂಧುದೇಶಕ್ಕೆ ಸೇರಿದ ಸಕ್ಕರ್ ಎಂಬ ಊರಿಗೆ ಸುಮಾರು ೧೧೦ ವರುಷದ ಒಬ್ಬ ಸನ್ಯಾಸಿಯು ಬಂದು, ಅಲ್ಲಿನ ದೇವಸ್ಥಾನದೊಳಗೆ ಇಳಿದುಕೊಂಡು, ಪೂಜಾರಿಯ ಮಕ್ಕೆ ತನ್ನ ಬಳಿ ಇದ್ದ ೩೬೦ ರೂಪಾಯಿ ಕೊಟ್ಟು, ತಾನು ಕಳೆದ ೭ನೇ ತಾ ರಾತ್ರಿ ೧೧ ಗಂಟೆಗೆ ಈ ದೇಹವನ್ನು ಬಿಟ್ಟು ತೆರಳುವವನಾಗಿಯೂ, ತನ್ನ ಉತ್ತರಕ್ರಿಯಾದಿಗಳನ್ನು ಆ ಹಣದಿಂದ ನೆರವೇರಿಸಬೇಕೆಂತಲೂ ಹೇಳಿದನು. ಈ ವರ್ತಮಾನವು ಸುತ್ತಮುತ್ತಿನ ಪಟ್ಟಣ ಊರು ಗ್ರಾಮಗಳಿಗೆ ಹಬ್ಬಿ, ಸಹಸ್ರಾರು ಜನರು ಇಂಥಾ ಮಹಾತ್ಮನ ದರ್ಶನಮಾಡಿಕೊಂಡು ಹೋಗಬೇಕೆಂದು ಬರಲಾರಂಭಿಸಿದರು. ಅವನ ಅವಸಾನದ ದಿನವಂತೂ ಲಕ್ಷಾಂತರ ಪ್ರಜೆಗಳು ಆ ದೇವಸ್ಥಾನದಲ್ಲೇ ಹಾಜರಾಗಿದ್ದು, ಅವನು ಯಾವ ರೀತಿ ಪ್ರಾಣತ್ಯಾಗಮಾಡುವನೋ ಎಂದು ನಿದ್ರಾಹಾರಾದಿಗಳನ್ನು ಬಿಟ್ಟು ಕಾದು ಎದುರುನೋಡುತ್ತಿದ್ದರು. ಸನ್ಯಾಸಿಯಾದರೋ ಅಂದಿಗೆ ಮೂರು ದಿನ ಹಿಂದಿನಿಂದಲೂ ಆಹಾರವನ್ನು ಬಿಟ್ಟು ತಪಸ್ಸುಮಾಡುತ್ತಿದ್ದನು. ಅವನು ಪ್ರಾಣಬಿಡಬೇಕೆಂದು ಆ ರಾತ್ರಿ ಎಷ್ಟೋ ಪ್ರಯತ್ನಪಟ್ಟನು. ಆದರೂ ಪ್ರಯೋಜನವಾಗಲಿಲ್ಲ. ಭಕ್ತಾದಿಗಳು ಸಾವಿರಾರು ರೂಪಾ...

ಯ ಕಾಣಿಕೆಯನ್ನೂ ಹಣ್ಣು ಹಂಪಲುಗಳನ್ನೂ ತಂದು ಅವನ ಮುಂದೆ ರಾಶಿ ಸುರಿಯುತ್ತಾ ಬಂದರು. ಇದರಿಂದ ಬಾಡಿಗೇ ಗಾಡಿಯವರಿಗೇನೋ ತುಂಬಾ ಪ್ರಯೋಜನವಾಯಿತು. ಅವರು ಈ ಸಾಧುವನ್ನು ಹೊಗಳುತ್ತಾರೆ. ಸಾಧುವು ಉಪವಾಸಮಾಡಿ ಶರೀರಸ್ಥಿತಿಯನ್ನು ಕೆಡಿಸಿಕೊಂಡು, ಈಗ ಬಹಳ ಕಷ್ಟಸ್ಥಿತಿಯನ್ನು ಅನುಭವಿಸುತ್ತಿದ್ದಾನೆ. ಅವನು ಹೇಳಿದಂತೆ ಆ ರಾತ್ರಿ ಸಾಯುವದು ಸಾಧ್ಯವಾಗದೆ ಹೋದರೂ, ಶಾಯಿಲೆ ಜಾಸ್ತಿಯಾಗಿರೋಣದರಿಂದ ಅವನು ಬದುಕಿರಬೇಕೆಂದು ಅಪೇಕ್ಷೆಪಟ್ಟರೂ ಅವನ ಪ್ರಾಣ ಬೇರೆ ಉಳಿಯುವ ಹಾಗೆ ಕಾಣುವುದಿಲ್ಲ.

ಮೈಸೂರು ಸರ್ಕಾರಿ ಹುಕುಮು.

ಗವರ್ನಮೆಂಟೂ "ಸ್ಟ್ಯಾಂಡರ್ಡ್" ಪತ್ರಿಕೆಯೂ.

"ಮೈಸೂರು ಸ್ಟ್ಯಾಂಡರ್ಡ್" ಪತ್ರಿಕೆಯ ವಿಷಯದಲ್ಲಿ ಈ ತಿಂಗಳು ೯ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ಮಾಡಿರತಕ್ಕ ಪ್ರೊಸೀಡಿಂಗ್ಸ್:—

೧ "ಮೈಸೂರು ಸ್ಟ್ಯಾಂಡರ್ಡ್" ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಮುದ್ರಿಸಲ್ಪಟ್ಟ ಮೆ॥ ಮಹದೇವಪ್ಪನವರ ವಿಷಯದಲ್ಲೂ ಮೆ॥ ಸತ್ಯಾಚೆರಾಯರನ್ನು ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಿದ ವಿಷಯದಲ್ಲೂ ೧೯೦೪ನೇ ಇಸವಿ ಮೇ ೬ನೇ ತಾರೀಖಿನ ಲೀಡರೆಟ್.

೨. "ಈಗಿನ ಅತೃಪ್ತಿ ನಂಬರು (೩)" ಎಂಬ ಹೆಡ್ಡಿಂಗ್ ಉಳ್ಳ ೧೯೦೪ನೇ ಇಸವಿ ಜುಲೈ ೨೬ನೇ ತಾರೀಖಿನ ಪ್ರಶ್ನೋತ್ತರ.

೩. "ದಿವಾನರು ಮತ್ತು ಪ್ರಜೆಗಳು" ಎಂಬ ಹೆಡ್ಡಿಂಗ್ ಉಳ್ಳ ೧೯೦೪ನೇ ಇಸವಿ ಆಕ್ಟೋಬರ್ ೧೮ನೇ ತಾರೀಖಿನ ಲೀಡರ್.

೪ ೧೯೦೪ನೇ ಇಸವಿ ನವಂಬರ ೧೩ನೇ ತಾರೀಖಿನಲ್ಲಿ ಮೇಲೆ ಸಮೂದಿಸಲ್ಪಟ್ಟ ಆಕ್ಷೇಪಣೀಯವಾದ ವಿಷಯಗಳಿಗೆ ಜವಾಬ್ದಾರರಾಗಿ, ಜವಾಬು ಕೊಡಬೇಕೆಂದು ರೆವಿನ್ಯೂ ಮತ್ತು ಜನರಲ್ ಸೆಕ್ರೆಟರಿಯವರು ಮೈಸೂರು ಸ್ಟ್ಯಾಂಡರ್ಡ್ ಎಡಿಟರ್ ಮತ್ತು ಪ್ರೊಪ್ರೈಟರಾದ ಮೆ॥ ಎಂ. ಗೋಪಾಲಯ್ಯಂಗಾರ್ರಿಗೂ ಇದೇ ಪತ್ರಿಕೆಯ ಪ್ರಿಂಟರ್ ಮತ್ತು ಪಬ್ಲಿಷರ್ ಆದ ಮೆ॥ ಎಂ ಶ್ರೀನಿವಾಸೈಯ್ಯಂಗಾರ್ರಿಗೂ ೧೯೦೪ನೇ ಇಸವಿ ನವಂಬರು ೧೧ನೇ ತಾರೀಖಿನಲ್ಲಿ ಕೊಡಲ್ಪಟ್ಟದ್ದ ನೋಟೀಸು.

೫. ಮೆ॥ ಎಂ. ಗೋಪಾಲಯ್ಯಂಗಾರ್ರ ಪರವಾಗಿ ಮೆ॥ ಎಂ. ಶ್ರೀನಿವಾಸಯ್ಯಂಗಾರ್ರಿಂದ ನವಂಬರು ೧೩ನೇ ತಾರೀಖಿನಲ್ಲಿ ಬರೆಯಲ್ಪಟ್ಟ ಲೆಟರು.

೬ ನವಂಬರು ತಾರೀಖು ೧೨ ರಲ್ಲಿ ಮೆ॥ ಎಂ. ಶ್ರೀನಿವಾಸಯ್ಯಂಗಾರ್ರು ಸ್ವಂತವಾಗಿ ಬರೆದ, ಅದರ ಈಚೆಗೆ ತಲುಪಿದ ಲೆಟರು.

ಇವೆಲ್ಲಾ ಓದಲ್ಪಟ್ಟವು

ಇವುಗಳ ಮೇಲೆ ನಂಬರು ಜಿ ೩೦೩೬—೪ಜಿ. ಎಂ. ೧೩೫-೦೫ ೩೯, ತಾರೀಖು ಬೆಂಗಳೂರು, ೯ನೇ ಡಿಸೆಂಬರು ೧೯೦೪ನೇ ಇಸವಿ ಕೊಡೋಣವಾದ ಹುಕುಂ ಏನೆಂದರೆ—

೧. ಈ ವರ್ತಮಾನಪತ್ರಿಕೆಗೂ ಮೆ॥ ಗೋಪಾಲೈಯಂಗಾರ್ರಿಗೂ ಇರತಕ್ಕ ಸಂಬಂಧವಾದ ವಿಷಯದಲ್ಲಿ ಮೆ॥ ಶ್ರೀನಿವಾಸೈಯ್ಯಂಗಾರ್ರಿಂದ ಬಂದಿರುವ ೧೩—೧೭ ನೇ ತಾರೀಖುಗಳ ಕಾಗದದಲ್ಲಿರತಕ್ಕ ವಾಖ್ಯಗಳು ಪರಸ್ಪರವಿರೋಧವಾಗಿರುವವು. ಇದಲ್ಲದೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕೊಟ್ಟಿರುವ ರಿಟರ್ನಗಳಲ್ಲಿರತಕ್ಕ ಲೇಖನವೂ ಈ ಲೆಟರುಗಳ ಅಭಿಪ್ರಾಯವೂ ಸಮಂಜಸವಾಗಿಲ್ಲ. ಅವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಿರುವ ರಿಟರ್ನಗಳ ಪ್ರಕಾರ "ಮೈಸೂರು ಸ್ಟ್ಯಾಂಡರ್ಡ್" ಪತ್ರಿಕೆಗೆ ಮೆ॥ ಎಂ ಗೋಪಾಲೈಯ್ಯಂಗಾರ್ರು ಎಡಿಟರ್ ಮತ್ತು ಪ್ರೊಪ್ರೈಟರೆಂದು ಗೊತ್ತಾಗುವುದು

೨. "ಮೈಸೂರು ಗವರ್ನಮೆಂಟಿನ ವಿಷಯದಲ್ಲೂ, ಶ್ರೀಮನ್ಮಹಾರಾಜರವರ ವಿಷಯದಲ್ಲೂ, ನನಗೆ ಇರುವ ಸಂಪೂರ್ಣವಾದ ರಾಜಭಕ್ತಿಗೆ ಸ್ವಲ್ಪವಾದರೂ ನ್ಯೂನತೆಮಾಡುವ ವಿಷಯವನ್ನು ಹೇಳುವದಕ್ಕೆ ನನಗೆ ಕುತೂಹಲವಿರಲಿಲ್ಲ" ಎಂದು ಮೆ॥ ಶ್ರೀನಿವಾಸಯ್ಯಂಗಾರ್ರು ಬರೆದಿರತಕ್ಕ ಲೇಖನಕ್ಕೂ, ಮೇಲೆ ಹೇಳಿದ ಲೇಖನಗಳಲ್ಲಿ "ಈ ಸಂಸ್ಥಾನದ ನಿಜವಾದ ಪ್ರಭುಗಳು ಸರ್ಕಾರಿ ಪ್ರಪಂಚಕ್ಕೆ ತಿಳಿವಂತೆ ಪೂರ್ಣಪ್ರಮಾಣದಲ್ಲಿ ವಾಸಮಾಡುತ್ತಾರೆ. ಅರಮನೆಯಲ್ಲಿ ವಾಸಮಾಡುವದಿಲ್ಲ" ಎಂಬದಾಗಿ ಹೇಳಿರತಕ್ಕ ಲೇಖನಕ್ಕೂ, ೧೯೦೪ ನೇ ಇಸವಿ ಜುಲೈ ೨೬ ನೇ ತಾರೀಖಿನಲ್ಲಿ ಇದೇ ಅಭಿಪ್ರಾಯ ಬರುವಂತೆ ಬರೆದಿರುವ ಲೇಖನಕ್ಕೂ, ೧೯೦೪ ನೇ ಇಸವಿ ಅಕ್ಟೋಬರು ೧೮ ನೇ ತಾರೀಖಿನ ಪತ್ರಿಕೆಯಲ್ಲಿ ಮುದ್ರಿಸಲ್ಪಟ್ಟಿರುವ "ಮಂದಮತಿ" ಎಂಬ ಅಭಿಪ್ರಾಯವಾದ ಲೇಖನಕ್ಕೂ ಪರಸ್ಪರ ಸಂಬಂಧವಿಲ್ಲ. ಈ ಲೇಖನಗಳು ಶ್ರೀಮನ್ಮಹಾರಾಜರವರ ಪ್ರಭುತ್ವವನ್ನು ತಿರಸ್ಕಾರಕ್ಕೆ ಗುರಿಮಾಡಬೇಕೆಂಬ ಉದ್ದೇಶದಿಂದ ಬರೆಯಲ್ಪಟ್ಟಿರುವುವೆಂದು ಗವರ್ನಮೆಂಟಿನವರಿಗೆ ಗೊತ್ತಾಗಿದೆ.

೩ ಈ ಆಕ್ಷೇಪಣೆಗೆ ಗುರಿಯಾದ ಲೇಖನಗಳು ತಮಗೆ ಗೊತ್ತಿಲ್ಲದೇ ಇದ್ದಂತೆ ಇವರು ಅಭಿನಯಿಸುತ್ತಾರೆ. ಆದಾಗ್ಯೂ ಇಂಥಾ ಆಕ್ಷೇಪಣೀಯವಾದ ಬರವಣಿಗೆಗೆ ಅವರ ಸಮಾಧಾನವನ್ನು ಅವರಿಂದಲೇ ತಿಳಿದುಕೊಳ್ಳುವದಕ್ಕೋಸ್ಕರ ಕರೆಸಿದಾಗ್ಯೂ ಈ ಪತ್ರಿಕೆಯ ಎಡಿಟರ್ ಮತ್ತು ಪ್ರೊಪ್ರೈಟರು ಪ್ರಿಂಟರ್ ಮತ್ತು ಪಬ್ಲಿಷರು ಬುದ್ಧಿಪೂರ್ವಕವಾಗಿ ಸಮಾಧಾನವನ್ನು ಹೇಳುವುದಕ್ಕೂ ತಿರಸ್ಕರಿಸಿದರು. ಆದಕಾರಣದಿಂದ ಗವರ್ನಮೆಂಟಿನವರು ಅವರ ಈಚಿನ ನೋಟೀಸಿನಲ್ಲಿ ತಮ್ಮ ಅಸಮಾಧಾನವನ್ನು ಖಂಡಿತವಾಗಿ ಪ್ರದರ್ಶನ ಮಾಡಿರುವರು. ಅವರು ಸರಿಯಾಗಿ ಸಮಾಧಾನವನ್ನು ಕೊಡದೇ ಇದ್ದದ್ದರಿಂದ ಇನ್ನೊಂದು ನೋಟೀಸು ಕೊಡುವ ತನಕ ಈ ಹುಕುಂ ಜಾರಿಯಲ್ಲಿರುವುದೆಂದು ಅವರಿಗೆ ತಿಳಿಸುವುದು ಸಾಕಾಗಿರುತ್ತದೆ

೪ ಆದರೆ ಈ ಪತ್ರಿಕೆಯ ಎಡಿಟರ್ ಮತ್ತು ಪ್ರೊಪ್ರೈಟರಿಗೂ ಪ್ರಿಂಟರ್ ಮತ್ತು ಪಬ್ಲಿಷರಿಗೂ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ಕೊಡತಕ್ಕ ಕ್ರಮವಾದ ಎಚ್ಚರಿಕೆ ಏನೆಂದರೆ—ಇನ್ನು ಮೇಲೆ ೧೯೦೪ ನೇ ಇಸವಿ ಮೇ ೬ ನೇ ತಾರೀಖಿನ ಪತ್ರಿಕೆಯಲ್ಲೂ ೧೯೦೪ ನೇ ಜುಲೈ ೨೬ ನೇ ತಾರೀಖಿನ ಪತ್ರಿಕೆಯಲ್ಲೂ ಮುದ್ರಿಸಲ್ಪಟ್ಟಂಥಾ, ಶ್ರೀಮನ್ಮಹಾರಾಜರವರಿಗೆ ಅವಮಾನಕರವಾದ ಲೇಖನಗಳನ್ನೂ, ರಾಜಭಕ್ತಿ ವಿಶ್ವಾಸಗಳಿಲ್ಲವೆಂಬುದಾಗಿ ತೋರಿಸುವ ಲೇಖನಗಳನ್ನೂ, ೧೯೦೪ ನೇ ಇಸವಿ ಅಕ್ಟೋಬರು ೧೮ ನೇ ತಾರೀಖಿನಲ್ಲಿ ಮುದ್ರಿಸಲ್ಪಟ್ಟಿರುವ ಲೇಖನದಂತೆ ಶ್ರೀಮನ್ಮಹಾರಾಜರವರ ರಾಜ್ಯಭಾರವನ್ನು ತಿರಸ್ಕಾರಕ್ಕೆ ಗುರಿಮಾಡುವಂತೆ ಇರತಕ್ಕ ಲೇಖನಗಳನ್ನೂ ಮುಂದೆ ಬರೆಯುವ ಪಕ್ಷದಲ್ಲಿ ಅದಕ್ಕೆ ತಕ್ಕ ಬಂದೋಬಸ್ತು ಮಾಡಲ್ಪಡುವುದು.

ಟಿ. ಕೆ. ವೆಂಕಟವರದೈಯ್ಯಂಗಾರ್,
ಗವರ್ನಮೆಂಟ್ ಜ. ರೆ ಸೆಕ್ರೆಟರಿ.

ಮೈಸೂರು ಗೆಜೆಟ್ ಸಂಗ್ರಹ.

ಚೀಫ್ ಕೋರ್ಟ್ ರೆಜಿಸ್ಟ್ರಾರ್ ಮೆ॥ ವಿ. ಎ ರಾಜರತ್ನ ಮೊದಲಿಯಾರ್ರಿಗೆ ಡಿಸೆಂಬರ್ ೧೨ ರಿಂದ ೧೨ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಡಿಪ್ಟಿ ರೆಜಿಸ್ಟ್ರಾರ್ ಮೆ॥ ಬಿ ಬಸವಾರಾಧ್ಯರು ತಮ್ಮ ಕೆಲಸದೊಂದಿಗೆ ರೆಜಿಸ್ಟ್ರಾರ್ ವರ ಚಾರ್ಜಿ ಕೆಲಸಗಳನ್ನೂ ನಡಿಸತಕ್ಕದ್ದು.

ಯಡೆಹಳ್ಳಿ ಮುನಸಿಫ್ ಮೆ॥ ಎನ್. ನರಸಿಂಹಯ್ಯಂಗಾರ್ರಿಗೆ ಕೊಟ್ಟಿರುವ ಆರು ತಿಂಗಳ ಶಾಯಿಲೆ ರಜವನ್ನು ಇನ್ನೂ ಮೂರು ತಿಂಗಳಿಗೆ ಜಾಸ್ತಿ ಮಾಡಿದೆ.

ಫ್ಯಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಎಂ. ಶ್ರೀನಿವಾಸರಾಯರಿಗೆ ನವಂಬರ್ ೧೫ ರಿಂದ ಮೂರು ತಿಂಗಳ ಶಾಯಿಲೆ ರಜಾ ಕೊಟ್ಟಿದೆ.

ಗುಬ್ಬಿ ತಾಲ್ಲೂಕ್ ಅಮಲ್ದಾರ್ ಮೆ॥ ಎಂ. ರಂಗರಾಯರಿಗೆ ಡಿಸೆಂಬರ್ ೧೩ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅಗ್ಗೆ ಶಿರಸ್ತೆದಾರರು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ತಾಲ್ಲೂಕ್ ಛಾರ್ಜನ್ನು ವಹಿಸಿದ್ದರು.

ಸೊನ್ನಾಳಿ ತಾಲ್ಲೂಕಿನ ಅಮಲ್ದಾರ್ ಮೆ॥ ಕೃಷ್ಣಾಜೀರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಹದಿನೇಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರ ಗೈರ್ಹಾಜರಿಯಲ್ಲಿ ಶಿರಸ್ತೆದಾರರು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು

ಮೆ॥ ಸುಂದರರಾಜೈಯ್ಯಂಗಾರ್ರು ಬೇರೆ ಕೆಲಸದ ಮೇಲೆ ಇರುವ ತನಕ ಮುಳಬಾಗಲು ಅಮಲ್ದಾರ್ ಮೆ॥ ವೆಂಕಟರಾಮಯ್ಯನವರನ್ನು ಮೈಸೂರು ತಾಲ್ಲೂಕ್ ಅಮಲ್ದಾರನ್ನಾಗಿ ವರ್ಗ ಮಾಡಿದೆ ಕೂಡಲೇ ಹೊಸ ಕೆಲಸದ ಮೇಲೆ ಹಾಜರಾಗತಕ್ಕದ್ದು

ರೆವಿನ್ಯೂ ಪ್ರೊಬೇಷನರ್ ಮತ್ತು ಮೈಸೂರು ಆಕ್ಟಿಂಗ್ ಅಮಲ್ದಾರ್ ಮೆ॥ ಎಂ. ಎ ಶ್ರೀನಿವಾಸೈಯಂಗಾರ್ರನ್ನು ಮುಳಬಾಗಲಿಗೆ ವರ್ಗಮಾಡಿದೆ ಕೂಡಲೆ ಹೊಸ ಕೆಲಸದ ಮೇಲೆ ಹಾಜರಾಗತಕ್ಕದ್ದು

ಆಕ್ಟಿಂಗ್ ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಟಿ. ಕೆ ಸುಂದರರಾಜೈಯ್ಯಂಗಾರರನ್ನು ಕೋಲಾರದಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗ ಮಾಡಿದೆ ಕೂಡಲೇ ಹೊಸ ಕೆಲಸದ ಮೇಲೆ ಹಾಜರಾಗತಕ್ಕದ್ದು

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೊಪ್ಪದ ಅಮಲ್ದಾರ್ ಮೆ॥ ಬಾಲ್ ಯವರನ್ನು ಗುಬ್ಬಿ ತಾಲ್ಲೂಕಿಗೆ ವರ್ಗಮಾಡಿದೆ.

ಮುಂದೆ ಹೇಳುವ ಅಮಲ್ದಾರ್ರ ವರ್ಗಾವಣೆಗೆ ಹುಕುಂ ಮಾಡಲ್ಪಟ್ಟಿದೆ.—(೧) ಮೆ॥ ಎಚ್. ಎಸ್ ವೆಂಕಟಾಚಾರ್ರನ್ನು ಶ್ರೀರಂಗಪಟ್ಟಣದಿಂದ ನಾಗಮಂಗಲಕ್ಕೆ; (೨) ಮೆ॥ ಎನ್ ಗೋಪಾಲಕೃಷ್ಣಯ್ಯಂಗಾರರನ್ನು ನಾಗಮಂಗಲದಿಂದ ಶ್ರೀರಂಗಪಟ್ಟಣಕ್ಕೆ.

ಆಕ್ಟಿಂಗ್ ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಜೆ ಆರ್ ಶ್ರೀನಿವಾಸೈಯ್ಯಂಗಾರರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆ ಛಾರ್ಜಿನಿಂದ ಬಿಡುಗಡೆ ಆದ ಮೇಲೆ ಎಕ್ಸೈಸ್ ಕಮಿಷನರರ ಕೈಕೆಳಗೆ ಕೆಲಸ ಮಾಡುವುದಕ್ಕೆ ಹಾಜರಾಗತಕ್ಕದ್ದು.

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ.—ಈ ಊರಿನಲ್ಲಿ ಈ ತಿಂಗಳು ೪ ನೇ ತಾರೀಖು ಲಾಗಾಯಿತು ೮ ನೇ ತಾರೀಖು ವರಿವಿಗೂ ಅದ್ಭುತವಾದ ಮಳೆ ಬಂದು, ಜನಗಳ ಮನಸ್ಸಂತೋಷ ಮಾಡಿತು —ಪೈರು ಪಚ್ಚೆಗಳು ಚನ್ನಾಗಿರುತ್ತವೆ. ಕೆರೆಕುಂಟೆಗಳಿಗೆ ನೀರು ಬಂತು.—ಈ ಗ್ರಾಮದಲ್ಲಿ ಈಗ್ಗೆ ೩ ವಾರದ ಮುಂಚೆ ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಪಟ್ಟ ಹೆಂಗಸು ಈ ಗ್ರಾಮದ ಆಸ್ಪತ್ರೆ ಡಾಕ್ಟರವರ ಇಲಾಜಿನಿಂದ ಗುಣ ಹೊಂದಿ ಸೌಖ್ಯವಾಗಿರುತ್ತಾಳೆ ಈ ಊರಿನಲ್ಲಿ ಕರ್ನಾಟಕ ಆಯುರ್ವೇದ ವೈದ್ಯಶಾಲಾಧ್ಯಕ್ಷರಾದ ಮೆ॥ ನಂದಿಗಿರಿ ದೀಕ್ಷಿತರೆಂಬುವರು ಪ್ರತಿ ದಿನವೂ ವೈದ್ಯಶಾಲೆಯಲ್ಲಿ ೨೦—೨೫ ಜನಗಳಿಗೆ ಧರ್ಮಾರ್ಥವಾಗಿ ಔಷಧ ಕೊಡುವರು. ಅಲ್ಲದೆ ಬಡವರಾದವರಿಗೆ ತಮ್ಮ ಸ್ವಂತ ಖರ್ಚಿನಿಂದ ಅನ್ನಪಾನಗಳಿಗೆ ಸಹಾಯ ಮಾಡಿ ಬಹಳ ಮುತುವರ್ಜಿಯಿಂದ ಇಲಾಜು ಮಾಡುತ್ತಾರೆ. ಇವರಿಗೆ ಸರ್ಕಾರದವರು ಕೊಡತಕ್ಕ ೫ ರೂಪಾಯಿ ಗ್ರಾಂಟನ್ನು ಮುಖಭೂಷಣವಾಗಿ ಎಣಿಸಿಕೊಂಡಿರುತ್ತಾರೆಯೇ ಹೊರತು ಒಂದು ದಿನದ ಔಷಧಾದಿಗಳಿಗೆ ಸಾಲದ್ದಾಗಿ ತೋರುತ್ತೆ.—ಸಂದರ್ಭಾನುಸಾರ ಯುನಾನಿ, ಇಂಗ್ಲಿಷ್ ಔಷಧಗಳನ್ನು ಷಾಪುಗಳಿಂದ ತರಿಸಿ ಉಪಯೋಗಿಸುವರು. ಇಂಥಾವರಿಗೆ ಸರ್ಕಾರದವರು ಇನ್ನೂ ಪ್ರೋತ್ಸಾಹ ಕೊಟ್ಟು ವ್ಯವಸಾಯ ಮಾಡಿದಲ್ಲಿ ಪ್ರಜೆಗಳಿಗಾಗಿ ಮಾಡಿದ ಹಾಗೆ ಆಗುತ್ತೆ.

ತಿಪ್ಟೂರು.—ಸಿಡುಬಿನ ಹಾವಳಿ ಜೋರಾಗಿದೆ. ಕೆಲವು ಮಕ್ಕಳು ಸತ್ತವು. ಮಕ್ಕಳಿಗೆ ಸಿಡುಬುಹಾಕಿಸಿ ಎಂದು ಹೇಳಿದರೆ ನಮ್ಮ ಮನೆತನಕ್ಕೆ ಆಗಿಬರುವದಿಲ್ಲವೆಂದು ಕೆಲವರು ಹೇಳುತ್ತಾರೆ ಇದೊಂದು ಮೂಢತನ? ಸಿಡುಬಿನ್ನ ಮಕ್ಕಳ ದುರವಸ್ಥೆಯನ್ನು ನೋಡಿಯಾದರೂ ಈ ದೊಡ್ಡವರಿಗೆ ಬುದ್ಧಿ ಬರುವದಿಲ್ಲವೇ ? ಸಿಡುಬುಹಾಕಿದ ಮಕ್ಕಳಿಗೆ ಸಿಡುಬೇಳುವದಿಲ್ಲವೇ ಎಂದು ಮಂದಮತಿಗಳು ಆಕ್ಷೇಪಿಸುತ್ತಾರೆ. ಒಂದೇವೇಳೆ ಒಬ್ಬಿಬ್ಬರಿಗೆ ಅಪರೂಪವಾಗಿ ಎದ್ದರೂ ಅದರಿಂದ ಪ್ರಾಣಭಯವೇನೂ ಇಲ್ಲ. ಇನಾಕ್ಯುಲೇಷನ್ ಅನುಭವಕ್ಕಿಂತ ವ್ಯಾಕ್ಸಿನೇಷನ್ ಅನುಭವವು ಎಲ್ಲರಲ್ಲೂ ಜಾಸ್ತಿ ಇದೆಯಲ್ಲವೇ. ಮತ್ಯಾಕೆ ಹೆದರಬೇಕೋ ತಿಳಿಯದು —ತಿಮ್ಮನ ಮಗ ರಾಮನೆಂಬವನು ಒಂದು ಎತ್ತನ್ನು ಕಳೆದ ಸಂತೆಯಲ್ಲಿ ಮಾರುತ್ತಿರುವದನ್ನು ಸಮ್ಮ ಪಟೇಲ ನಂಜೇಗೌಡರು ನೋಡಿ, ಕೂಡಲೆ ಅನುಮಾನ ತೋರಿದ್ದರಿಂದ ಮಾಲುಸಹಿತ ಆಸಾಮಿಯನ್ನು ಕಚೇರಿಗೆ ಕರೆದೊಯ್ಯಲು, ಮಾಲಿಕನು ಅಲ್ಲಿಯೇ ಇದ್ದು ಹಿಡುಕೊಂಡನು. ಕಳ್ಳನು ಕಾಂಪೌಂಡು ದಾಟಿ ಹೊಳೆಯಲ್ಲಿ ಬಿದ್ದಂತಾಯಿತು ಈಗ ಮೊಕದ್ದಮೆ ನಡೆಯುತ್ತಿದೆ —ಅಮಲ್ದಾರರು ಇಂಥಾ ವಿಷಯಗಳಲ್ಲಿ ತಮ್ಮ ಸಣ್ಣ ನೌಕರರನ್ನು ಪ್ರೋತ್ಸಾಹಪಡಿಸುತ್ತಾರೆಂಬ ನಂಬಿಕೆಯುಂಟು ಇದೇ ತಾಲ್ಲೂಕಿನ ಜೇಠ್ಯೋಬ್ಬಗೌಡನಿಗೆ ೫ ರೂ. ಬೆಳ್ಳಿಯಮೆಡಲ್ ಇತ್ಯರ್ಥ ಬರುತ್ತದೆಂಬ ವರ್ತಮಾನ ಉಂಟು.—ಈ ಊರಿನಲ್ಲಿ ಸಕಲ ಪದಾರ್ಥಗಳೂ ಹೆಚ್ಚಿನ ಧಾರಣೆಯಾಗಿರುತ್ತವೆ ಪ್ರೊಫೆಸರ್ ಭಾ[illegible] ಸರ್ಕಸ್ ಕಂಪನಿಯವರು ಬಂದು ಎರಡು ಆಟಗಳನ್ನು ಚನ್ನಾಗಿ ಆಡಿ ೩ನೇ ಆಟವನ್ನು ಚನ್ನಾಗಿ ಆಡಲಿಲ್ಲವೆಂದು ಗುಣಗುಟ್ಟುತ್ತಾರೆ ಈ ಊರು ಪರ್ಲಾಂಗ್ ಅನೇಕ ತಂತೀ ಸಮಾಚಾರಗಳನ್ನು ಕಳಿಸುತ್ತಾರೆಂದು ಗೊತ್ತಾದ್ದರಿಂದ ಪೋಸ್ಟ್ ಮಾಸ್ಟರ್ ಮೆ॥ ದಾಸ[illegible]ವರ ನಾಯ್ಡುಯವರು ತಮ್ಮ ಇಲಾಖೆಯವರಿಗೆ ಬರೆದು, ಒಬ್ಬ ಸಿಗ್ನಲರನ್ನು (ತಂತಿಬಿಡುವವರನ್ನು) ಪ್ರತ್ಯೇಕ ಇಲ್ಲಿಗೆ ಕಳಿಸಿಕೊಂಡಿರುವದರಿಂದ ಇಲಾಖೆಯ ಕೆಲಸಗಳು ಜಾಗ್ರತೆ ನಡೆಯುವದಲ್ಲದೆ ವರ್ತಕರಿಗೆ ಮಹದುಪಕಾರವಾಯಿತು.

ಕೊಡಗು ವೀರರಾಜಪೇಟೆ.—ಇಲ್ಲಿ ಆಹಾರ ಧಾನ್ಯಗಳೆಲ್ಲಾ ಬಹು ತುಟ್ಟಿಯಾಗಿರುವದರಿಂದಲೂ, ಪ್ರಕೃತದ ಬೆಳೆಯು ಕೈಸೇರದೆ ಇರುವದರಿಂದಲೂ ಜನ ದನಗಳ ಹಾಹಾಕಾರವನ್ನು ವಿವರಿಸಲಾಗದು. ಈ ಪ್ರಾಂತ್ಯದ ರೈತರು ಹಂಗಾಮಿನಲ್ಲಿಯೂ ಸಹಿತ ಮೋಸಹೋದರು ಈಗ ಸುಮಾರು ಒಂದೂವರೆ ಎರಡು ತಿಂಗಳಿಂದ ಒಳ್ಳೆ ಅಕ್ಕಿ ರೂಪಾಯಿಗೆ ೩ ಸೇರು, ರಾಗಿ ೧೨ ಸೇರು ಸಿಕ್ಕುವದೇ ದುರ್ಲಭವಾಗಿದೆ. ಬಡಬಗ್ಗರ ಕಷ್ಟ ಹೇಳತೀರದು ಇದೂ ಅಲ್ಲದೆ ಪೇಟೆ ಸಂತೆಗಳ ಧಾರಣೆ ಕೂಡ ಇನ್ನೂ ಏರುತ್ತಾ ಇದೆ ಈ ಊರಲ್ಲಿ ಪ್ರತಿ ಬುಧವಾರವೂ ಸಂತೆ ಕಟ್ಟತಕ್ಕ ಪದ್ಧತಿ ಈ ತಿಂಗಳು ತಾ. ೭ನೇ ಬುಧವಾರ ಪದ್ಧತಿಯಂತೆ ಸಂತೆ ಕಟ್ಟಿತು ಆ ಸಂತೆಯು ಇಲ್ಲಿನ ಕೊಡಗರಿಗೆ ಉತ್ಸವದ ಸಂತೆಯಾಗಿತ್ತು. ಆ ದಿನ ದಿನಸಿಗಳ ಧಾರಣೆಯನ್ನು ನೋಡಿ ಬಡಜನಗಳು ತುಂಬಾ ಕೊರಗಿದರು. ಆದರೆ ಇಲ್ಲಿ ಒಬ್ಬ ವ್ಯಾಪಾರಿಯು—ಈತನ ಸ್ಥಳ ಪ್ರಾಂತ್ಯ ಹಿರೇ[illegible] ಬಹಳ ದಿವಸಗಳಿಂದಲೂ ಈ ಸ್ಥಳದಲ್ಲಿ ಇರುವನು ಈತನು ತೆಲುಗುಬಣಜಿಗರ ವೆಂಕಟರಮಣಶೆಟ್ಟಿ ಈ ವ್ಯಾಪಾರಿಯು ಆ ದಿವಸ ಬಡಜನಗಳ ಗೋಳಾಟವನ್ನು ನೋಡಿ ಸಹಿಸಲಾರದೆ, ತನ್ನ ಅಂಗಡಿಯಲ್ಲಿರತಕ್ಕ ಚಾಕರುಮಾನರಿಗೆಲ್ಲಾ ರೂಪಾಯಿ ೧ಕ್ಕೆ ೨೦ ಸೇರು ರಾಗಿಯಂತೆಯೂ ೧೦ ಸೇರು ಅಕ್ಕಿಯಂತೆಯೂ ಮಾರಬೇಕೆಂದು ಹೇಳಿ, ತಾನೇ ಅಂಗಡಿಯಮೇಲೆ ಕೂತುಕೊಂಡು, ಬಂದ ಜನರಿಗೆಲ್ಲಾ ಅದೇ ಮೇರೆ ವ್ಯವಹಾರವನ್ನು ಮಾಡಿದನು. ಈತನು ತಗ್ಗಿನ ದರದಲ್ಲಿ ಕೊಂಡು, ಇಷ್ಟು ಅಗ್ಗವಾಗಿ ಬಿಕರಿಮಾಡಿರುವದು ಈತನಿಗೆ ಸಾಧಾರಣವಷ್ಟಿಗೆ ಲುಕ್ಸಾನು ಆಗಿದ್ದರೂ ತನಗೆ ಲುಕ್ಸಾನು ಆಯಿತೆಂಬ ಯೋಚನೆಯು ಸ್ವಲ್ಪವಾದರೂ ಆತನ ಮನಸ್ಸಿಗೆ ಬರಲಿಲ್ಲ ಇಂಥಾ ಕಷ್ಟಕಾಲದಲ್ಲಿ ಈರೀತಿ ಉದಾರತ್ವದಿಂದ ವ್ಯಾಪಾರಮಾಡಿದ್ದು ಸ್ತೋತ್ರಾರ್ಹವಾದದ್ದೇಸರಿ ಆ ದಿನ ಬಡರೈತರುಗಳ ಸಂತೋಷವನ್ನು ಹೇಳಲು ಅಸದಳವಾಗಿತ್ತು. ಸಾಧಾರಣ ಬೆಳಿಗ್ಗೆ ೧೦ ಗಂಟೆಗೆ ವ್ಯಾಪಾರಕ್ಕೆ ಷುರು ಆದದ್ದು ರಾತ್ರಿ ೧೦ ಗಂಟೆ ವರಿವಿಗೂ ಅದೇ ರೀತಿ ವ್ಯಾಪಾರ ನಡಿಯಿತು ಅಲ್ಲದೆ ೧೯೦೨ನೇ ಇಸವಿಯಲ್ಲಿ ಈ ಪ್ರಾಂತ್ಯ ಇದಕ್ಕಿಂತಲೂ ಹೆಚ್ಚಾದ ಕಷ್ಟವು ಪ್ರಾಪ್ತವಾಗಿ, ರೂಪಾಯಿಗೆ ೬ ಸೇರು ಅಕ್ಕಿ ಸಿಕ್ಕುವದು ದುರ್ಲಭವಾಗಿತ್ತು. ಅಂಥಾ ಕಾಲದಲ್ಲಿಯೂ ಈ ಪುಣ್ಯಾತ್ಮನು ರೂಪಾಯಿಗೆ ೧೦—೧೨ ಸೇರು ಅಕ್ಕಿಯಂತೆ ಮಾರಿಸುತ್ತಲೂ ಅನೇಕ ಬಡಬಗ್ಗರಿಗೆ ಅನ್ನ ಹಾಕಿಸುತ್ತಲೂ ಬಂದು ಒಳ್ಳೇ ಕೀರ್ತಿಯನ್ನು ಪಡೆದಿರುವನು ಮುಖ್ಯವಾಗಿ ಹೀಗೆ ದಯಾಳುಗಳಾದಂಥಾ ಸಾಹುಕಾರರು ಎಲ್ಲೆಲ್ಲಿಯೂ ಬಡರೈತರುಗಳ ಕ್ಷೇಮಲಾಭವನ್ನು ನೋಡಿಯಾರೆಂದು ಹಾರೈಸುತ್ತೇನೆ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಕಟಿಸಲಾರವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ವಿನೆಗರ್ ಪ್ರಾಪ್ತಕ ಎಲ್ಲಿದೆ?

ಅಯ್ಯಾ,

ಇದೇ ಡಿಸೆಂಬರ್ ೩ನೆ ತಾರೀಖಿನ "ವೃತ್ತಾಂತ ಪತ್ರಿಕೆ"ಯಲ್ಲಿ ವಿನೆಗರ್ ಎಂಬ ದ್ರಾಕ್ಷಾರಸ ನಾಗರಹಾವು ಕಡಿದ ಜಾಗಕ್ಕೆ ಹಾಕಿದರೆ ಹೋಗುತ್ತೆ. ಅದರಿಂದ ಅನೇಕ ಜನಗಳು ಗುಣಹೊಂದಿರು

...ಗ್ರೀಗ್ಯಾಸ್ ಯವರು ತಿಳಿಸಿರುವಂತೆ ಪ್ರಕಟಿಸಿರುತ್ತೀ... ಕಟ್ಟಿಂದ ದ್ರಾವಕ ಯಾರಲ್ಲಿ ಸೇರತೆಯಂತ್ತೆ? ಅಥವಾ ...

ಗಾಡಿಗೆ ಸರಿಯಾಗಿ ಒಳಗೆ ಒಡುವ ಸುಡುಗರು ಮಾತ್ರ ಎಷ್ಟು ದಿವಸ ಮಾಡರೂ ಏನೂ ಬಾರದೆ ಇರುತ್ತಾರೆ. ಈ ವಿಚಾರದಲ್ಲಿ ಜಬರತೀ ... ಗಳಿಗೆ ಗಮನಿಸಿರುವ ಅರಿಕೆಮಾಡಿಕೊಂಡ

ಯು ಅವುಗಳ ಮೂಲಕ ಉಂಟಾಗುವ ಕೊರತೆ ಕಲಹಗಳೂ ತಪ್ಪುವದಿಲ್ಲವಷ್ಟೇ. ಹ್ಯಾಗೂ ಮೊದಲನೇ ಸ್ಥಿತಿಗೂ ಎರಡನೇ ಸ್ಥಿತಿಗೂ ಅನೇಕ ವಿಷಯಗಳಲ್ಲಿ ತುಂಬಾ ವ್ಯತ್ಯಾಸ ತೋರಿಬರುವದಿಲ್ಲವೇ. ...ಯಾಗಲೀ ತಮ್ಮ ಪೂರ್ವದ ಪತ್ನೀ ...ದವುಗಳನ್ನೂ ಮರೆಯುವದೂ ಅಸಾ...ವೇ ಸ್ಥಿತಿಗಿಂತ ಎರಡನೇ ಸ್ಥಿತಿಯು ಕೊರತೆಗಳುಳ್ಳದ್ದೆಂಬುವದೇ ಸಸ... ತಪ್ಪೆಂತ ಹೇಳುವದಿಲ್ಲ. ಮುಸಲ್ಮಾನ... ಪದ್ಧತಿಯು ಕೇವಲ ಅಸಭ್ಯವೂ ತೋಂ...ದೆ. ಎಂದು ಬಲ್ಲವರು ಹೇಳದಿರಲಾ...ಗಳಿಗೂ ಅನಾಗರೀಕರಿಗೂ ವ್ಯತ್ಯಾಸ... ದ್ಧತಿ ಮೊದಲನೇ ವಿವಾಹವಲ್ಲವೇ.

ಪ್ರಜಾ ಹಿತೈಷಿ.

ವರ್ತಮಾನಗಳು.

ಹ್ಯಾಂಕೋ ಪಟ್ಟಣದಲ್ಲಿ ಬೆಂಕಿಯು ...ಸಸ್ರ ಮನೆಮಠಗಳು ನಾಶವಾದವೆಂದು

●●●●

...ಆರ್ಗೆಂಟೈನ್ ಪ್ರಜಾಪ್ರಭುತ್ವದಲ್ಲಿ ...ದ ಗೋಧಿಯನ್ನು ಬೆಳೆಯುವಂಥಾ ...ಡೆಲ್ಲಾ ಒಟ್ಟು ಸುಮಾರು ಒಂದು ಸ... ...ತ್ರಾರವಾಗಿದೆ.

●●●●

...ಮುಖ್ಯಪಟ್ಟಣವಾದ ನ್ಯೂಯಾರ್ಕ್ ...ನು ವಿಶವಾಗಿದ್ದ ತನ್ನ ಐದು ಮನೆಗಳ ...ದ ಸಂಸಾರಗಳ ಸಮೇತ ಯಂತ್ರಗಳ ಅನಾಮತ್ತಾಗಿ ಸಾಗಿಸುತ್ತಿದಾನೆ.

●●●●

...ಪತಿ ಸಹಿತ ಇಪ್ಪರಲ್ಲೀ ವಿಲಾಯತಿಯಿಂ ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟ...ದಿವಾದ ಮಿ॥ ಜೋಸಫ್ ಲೈಟ್ ಯವ... ನವರಾಗಿದೂರೆಂದು ವರ್ತಮಾನವಿದೆ

●●●●

...ದ ಕ್ಯಾಪ್ಟನ್ ಅಂಬ್ರೋಸ್ ಯವರು ...ವನನ್ನು ಕೈಸೆರೆ ಹಿಡಿದುಕೊಳ್ಳುತ್ತೇವೆಂ... ದೊರೆಯು ಗಾಬರಿ ಬಿದ್ದು ಸಂಸ್ಥಾನವ... ...ಪ್ಪಿಸಿಕೊಂಡು ಓಡಿ ಹೋದನೆಂದು ತಂತೀ

●●●●

ಕೆಲಸಗಳಲ್ಲೆಲ್ಲಾ ದೊಡ್ಡದಾದದ್ದು ರಾಜ... ...ನದೇ. ಪ್ರಪಂಚದಲ್ಲಿರುವ ಕೆಲಸಗಳಲ್ಲಿ ಕೆಳಗೆ ಇಂಗ್ಲಿಷರು ಗ್ರೇಟ್‌ಬ್ರಿಟನ್ ಅಫ್ ...ಟ್ಟಿದ್ದಾರೆ. ಈ ಸರೋವರವು ಇಪ್ಪ... ...ಳನ್ನು ಆಕ್ರಮಿಸಿಕೊಂಡಿದೆ.

●●●●

...ಡದ ಕನಸಾ ರಾಜ್ಯದಲ್ಲಿ ನೀರಿಗೆ ಬಿದ... ...ಂದ ಒಂದು ಬಾವಿಯು ಸಿಕ್ಕಿರುತ್ತದೆ. ...ಯಾರ ಸಾಗೆ ಈ ಬಾವಿಯಿಂದ ಮರಳು ...ಸ ರು ಅತಿ ಆಳವಾಗಿರುವ ಈ ಬಾವಿ ...ಕ್ಯಾಗೆ ಬರುತ್ತದೋ ತಿಳಿಯದು ... ...ಹುತ್ತಿದ್ದಾರೆ.

●●●●

...ದಿಂದ ಫುಟ್‌ಬಾಲ್ ಎಂಬ ಚಂಡಿನಾಟದ ...ಗೆ ಹೋಗಿ ಅಲ್ಲೂ ಸ್ಕಾಟ್‌ಲೆಂಡ್ ಮತ್ತು ...ವ ಒಳ್ಳೊಳ್ಳೇ ಫುಟ್‌ಬಾಲ್ ಸಂಘದವರ... ...ಪ್ಪ ಕಟ್ಟಿ ಆಡಿ, ಪ್ರತಿ ಪಂದ್ಯದಲ್ಲೂ ಗೆದ್ದು ...ಷಯದಲ್ಲಿ ವಿಲಾಯತಿಯವರಿಗೆಲ್ಲಾ ಸೋ... ಆಶ್ಚರ್ಯವನ್ನುಂಟುಮಾಡಿದೆ.

●●●●

ರಷ್ಯಾರಾಜ್ಯದಲ್ಲಿ ಪ್ರಜಾಸಮ್ಮತಿಗೆ ಭಂಗವುಂಟಾಗಿ ನಾನಾಪಟ್ಟಣಗಳಲ್ಲಿ ಅನೇಕ ಕಷ್ಟನಷ್ಟಗಳುಂಟಾಗುತ್ತಿವೆ. ಆ ರಾಜ್ಯದಲ್ಲಿರುವ ಯಹೂದ್ಯ ಪ್ರಜೆಗಳನ್ನು ತುಂಟರು ಬಹಳವಾಗಿ ಹಿಂಸೆ ಮಾಡುತ್ತಿದ್ದಾರೆ. ಮನೆಮಠಗಳನ್ನೂ ಆಸ್ತಿಪಾಸ್ತಿಯನ್ನೂ ಜೀವನೋಪಾಯವನ್ನೂ ಕಳೆದುಕೊಂಡು ಅಲೆಯುತ್ತಿರುವ ಯಹೂದ್ಯ ಪ್ರಜೆಗಳ ಸಹಾಯಕ್ಕಾಗಿ ವಿಲಾಯತಿಯವರೂ ಅಮೇರಿಕದವರೂ ಒಂದು ಫಂಡನ್ನು ಕೂಡಿಸಿರುತ್ತಾರೆ. ಈ ಫಂಡಿಗೆ ಇದುವರೆಗೆ ೩೬ ಲಕ್ಷ ರೂಪಾಯಿ ಹಣ ವಸೂಲಾಗಿರುವುದು

●●●●

ಜರ್ಮನ್ ದೇಶದಲ್ಲಿ ಬಾಲಕಬಾಲಿಕೆಯರನ್ನು ವಿದ್ಯಾಭ್ಯಾಸ ಮಾಡಿಸಬೇಕೆಂದು ಕಾನೂನು ಮಾಡಿರುತ್ತಾರೆ. ಮಕ್ಕಳಿಗೆ ಆರು ವರುಷವಾದ ಕೂಡಲೇ ಸ್ಕೂಲಿಗೆ ಕಳುಹಿಸಿ ಹದಿನಾಲ್ಕು ವರುಷದ ವರೆಗೆ ವಿದ್ಯೆ ಕಲಿಸಬೇಕು. ಆ ಸ್ಕೂಲಿನ ಮೊದಲನೇ ನಾಲ್ಕು ವರುಷ ಅವರಿಗೆ ಜರ್ಮನೀ ಮತ್ತು ಲ್ಯಾಟಿನ್ ಭಾಷೆಗಳನ್ನೂ, ಇನ್ನು ನಾಲ್ಕು ವರುಷ ಇಂಗ್ಲೀಷು ಭಾಷೆಯನ್ನೂ ಕಲಿಸುವರು. ತಮ್ಮ ಸಾಮಾನ್ಯ ಪಾಠಶಾಲೆಗಳಲ್ಲಿ ತಕ್ಕಷ್ಟು ಪರಿಶ್ರಮವನ್ನು ಹೊಂದಿದರ ಅನಂತರ ಅವರು ಇಂಗ್ಲೀಷು ಭಾಷೆಯನ್ನು ವಿಶೇಷವಾಗಿ ಪ್ರಯೋಗಿಸುವದಕ್ಕೆ ಬರೆಯಲೂ ಬಹುದು.

...ಗ್ರಾಮದ ಕೆರೆಯು ತುಂಬಿಲಲ್ಲ. ಈ ಕಾ... ...ಳು ಘಸರಿ ಇರುತ್ತೆ ಈ ವೈಲಿನಲ್ಲಿ ಅರ್ಧ ಮುಕ್ಕಾಲು ...ಲ್ಲ ಗ್ರಾಮಾಧಿಕಾರಿಗಳು ಮತ್ತು ವರ್ತಕರು ಇವರದೇ ...ಷ್ಟು. ಮಳಿಷ ವರುಷವೂ ಇವರ ಜಮೀನಿನಲ್ಲಿ ಆಗುವ ಬೆಳೆಯು ...ದು ಮತ್ತು ಮಾತುಬಾರಿಯಿಲ್ಲದವರು ಜಮೀನಿನಲ್ಲಿ ಆಗು... ...ಕಾರಣವೇನಂದರೆ ನೀರುಗಂಟಿಗಳು ಇವರಿಗೆ ಹೆದರಿ ಅವರ ...ದಿ ...ಗಲು ನೀರು ಸಪ್ಲೈ ಮಾಡುತ್ತಾರೆ ಬಾಕಿಯವರ ...ಗು ಕೇಳತೀರದ್ದಾಗಿದೆ ಮತ್ತು ಇಂಥಾವರ ಮುಂದೆ ಗರೀಬರ ...ಸುಕ ನಡಯುವದಿಲ್ಲ

...ಗ್ರಾಮದ ಸಂತೆ ಕಟ್ಟುವ ಸ್ಥಳದಲ್ಲಿ ಚರ್ಮದ ಮಂಡಿಗಳು ...ಅಂಗಡಿಗಳು ಇರುತ್ತವೆ ಇದರಿಂದ ಸಂತೆಯಲ್ಲಿ ಸೇರು... ...ಸಹಿಸಲಶಕ್ಯವಾದ ದುರ್ವಾಸನೆಯುಂಟಾಗುತ್ತದೆ. ಅಲ್ಲದೆ ...ಟು ಕಾಲದಲ್ಲಿ ಇವು ಇಲ್ಲಿರತಕ್ಕದ್ದು ಆರೋಗ್ಯಕ್ಕೂ ...ಕೆಟ್ಟದ್ದು. ದಯಾಳುಗಳಾದ ಸರ್ಕಾರದವರು ಈ ಮಂಡಿಗ ...ಹೊರಗೆ ಇಡುವಂತೆ ಮಾಡಿಸಿದರೆ ತುಂಬಾ ಪ್ರಯೋಜನವಾ...

...ಗ್ರಾಮದಲ್ಲಿರುವ ಸ್ಕೂಲ ಮನೆಯು ನೋಡುವದಕ್ಕೆ ...ತುಂಬಾ ಸುಂದರವಾಗಿರುತ್ತೆ ಆದರೆ "ಮೇಲೆ ನೋಡಿದರೆ ...; ಒಳಗೆ ನೋಡಿದರೆ ಗೋಳೇ ಸೊಪ್ಪು" ಎಂಬುವ

...ಸಂತು ಕೇವಲ ಅನ್ಯಾಯವೂ ಕೆಟ್ಟದ್ದೂ ಅಂತ ಜಗತ್ಪ್ರಸಿದ್ಧವಾಗಿ ತೋರುವದರಿಂದ ಅದರ ಚರ್ಚೆಯೇ ಅನಾವಶ್ಯವಾಗಿದೆ ಯಾಕೆಂದರೆ ಬುದ್ಧಿಶಾಲಿಗಳೆಲ್ಲರೂ ಮಾಡುತ್ತಿರುವ ಪ್ರಯತ್ನದಿಂದ ಈ ಬಾಲ್ಯವಿವಾಹ ಪದ್ಧತಿ ನಿಂತು ಹೋಗುವವರಲ್ಲೇನೂ ಸಂಶಯವಿಲ್ಲ. ಆದರೆ ವಿಧವಾವಿವಾಹದಿಂದ ಪೂರ್ಣ ತೃಪ್ತಿಕರವಾಗುತ್ತದೋ, ಅಥವ ಒಂದು ಸರತಿ ಬಿಟ್ಟಿಗ ತ್ಯಾಜ ಮಾಡಿದಂತೆಯಾದೀತೋ ನೋಡೋಣ. ಮುಂಚೆ ತಿಳಿಸಿದಂತೆ ದಾಂಪತ್ಯಸ್ಥಿತಿಯನ್ನನುಭವಿಸುವಾಗ್ಯೆ ಗಂಡನು ಯಾ ಹೆಂಡತಿಯು ಮೃತರಾದರೆ ಮರಳಿ ಅವರು ಪುನರ್ವಿವಾಹವಾಗು... ವರು. ಅದರಲ್ಲಿ ಮದುವೆಯಾಗದ ಕನ್ಯೆಯಾ ವರನನ್ನು ಮಾಡಿಕೊಳ್ಳುವದು ಒಂದುಭಾಗ ವಿಧವೆ ಹೆಂಡತಿಸತ್ತವನನ್ನು ಮಾಡಿಕೊಳ್ಳುವದು ಮತ್ತೊಂದುಭಾಗ. ಒಬ್ಬ ಹೆಂಗಸು (ಗಂಡಸು) ತನ್ನ ಜೀವಕಾಲದಲ್ಲಿ ಒಬ್ಬ ಪುರುಷನಿಗಿಂತ (ಒಬ್ಬ ಸ್ತ್ರೀಗಿಂತ) ಹೆಚ್ಚಾನಂದಿಗಳವರ (ಸ್ತ್ರೀಯರ) ಸಂಗಡ ಮದುವೆ ಸ್ಥಿತಿಯನ್ನು ಅನುಭವಿಸುವದು ಪೂರ್ಣ ತೃಪ್ತಿಕರವಾದದ್ದೋ ನ್ಯಾಯವಾದದ್ದೋ ಅವಶ್ಯವಾದದ್ದೋ ವಿಚಾರಿಸಿ ನೋಡಿದರೆ ಸ್ವಲ್ಪ ಅಸಮಾಧಾನವೂ ಅತೃಪ್ತಿಯೂ ಗಲಿಬಿಲಿಯೂ ತೋರಿಬರುವದಿಲ್ಲವೇ ... ಆದರೂ ಇದು ವ್ಯಭಿಚಾರವಲ್ಲವಷ್ಟೆ. ಅಂತು ಕೂಡಾವಳಿ ಅಂತ ಹೇಳಬಹುದೋ ಮತ್ತು ಇದರಿಂದ ಮೊದಲೇ ಹೊಂದಿದ್ದ ಮಕ್ಕಳ ಸಂಬಂಧವೂ ಅತಿ

ಯ ಶಾಲೆಯನ್ನೂ ದಣ್ಣ ಹಂಪಲುಗಳನ್ನೂ ತಂದು ಅವನ ಮುಂದೆ ರಾಶಿ ಸುರಿಯುತ್ತಾ ಬಂದರು ಅದರಿಂದ ಬಾಡಿಗೇ ಗಾಡಿಯವರಿಗೇನೋ ತುಂಬಾ ಪ್ರಯೋಜನವಾಯಿತು ಅವರು ಈ ಸಾಧುವನು ಹೊಗಳುತಿದಾರೆ ಸಾಧುವು ಉಪವಾಸನಾಗಿ ಈಗ ಬಹಳ ಅಸ್ವಸ್ಥತೆಯನ್ನು ಅನುಭವಿಸುತ್ತಿದ್ದಂತೆ ಆ ರಾತ್ರಿ ಸಾಯುವದು ಸಾಧ್ಯ ಪ್ರಾಪ್ತವಾಗಿರೋಣದರಿಂದ ಅವನು ಪಟ್ಟರೂ ಅವನ ಪ್ರಾಣ ಬೇರೆ ಉಳಿದ

೧೯೦೫ ನೇ ಜೂನ್ ೨೬ ನೇ ತಾರೀಖಿನ ಪತ್ರಿಕೆಯಲ್ಲೂ ಮುದ್ರಿಸಲ್ಪಟ್ಟಂಥಾ, ಶ್ರೀಮನ್ಮಹಾರಾಜರವರಿಗೆ ಅವಮಾನಕರವಾದ ಲೇಖನಗಳನ್ನೂ, ರಾಜಭಕ್ತಿ ...

ಮೂರ್ಖತನ ? ಕಿಡುಬೆದ್ದ ಮಕ್ಕಳ ದುರವಸ್ಥೆಯನ್ನು ನೋಡಿಯೂ ಈ ದೊಡ್ಡವರಿಗೆ ಬುದ್ಧಿ ಬರುವದಿಲ್ಲವೇ ? ಕಿಡುಬು ಹಾಕಿಸ ಮಕ್ಕಳ

ಮೈಸೂರು ಸರ್ಕಾರ

ಗವರ್ನಮೆಂಟೂ "ಸ್ಟ್ಯಾಂಡರ್ಡ್" "ಮೈಸೂರು ಸ್ಟ್ಯಾಂಡರ್ಡ್" ತಿಂಗಳು ೯ನೇ ತಾರೀಖಿನಲ್ಲಿ ಶ್ರೀಮನ್ನವರು ಮಾಡಿರತಕ್ಕ ಪ್ರೊಸೀಡಿಂಗ್ಸ್

೧ "ಮೈಸೂರು ಸ್ಟ್ಯಾಂಡರ್ಡ್" ಯಲ್ಲಿ ಮುದ್ರಿಸಲ್ಪಟ್ಟ ಮೆ॥ ಮಾವಸತ್ಯಾಚಾರ್ಯರನ್ನು ಪ್ರಾಸಿಕ್ಯೂಟ್ ಮಾಡಲು, ೧೯೦೫ನೇ ಇಸವಿ ಮೇ ೭ನೇ ತಾರೀಖು

೨ "ಈಗಿನ ಅತೃಪ್ತಿ ನಂಬರು ೧ ೧೯೦೫ನೇ ಇಸವಿ ಜುಲೈ ೨೭ನೇ ತಾರೀಖು

೩ "ವಿವಾನರು ಮತ್ತು ಪ್ರಜೆ" ೧೯೦೫ನೇ ಇಸವಿ ಆಕ್ಟೋಬರ್ ೧೪ನೇ

೪ ೧೯೦೫ನೇ ಇಸವಿ ನವಂಬರು ನಮೂದಿಸಲ್ಪಟ್ಟ ಆಕ್ಷೇಪಣೆಯವಾದರಾಗಿ, ಜವಾಬು ಕೊಡಬೇಕೆಂದು ರೆವಿನ್ಯೂ ಸೆಕ್ರೆಟರಿಯವರು ಮೈಸೂರು ಸ್ಟ್ಯಾಂಡರ್ಡ್ ದಾದ ಮೆ॥ ಎಂ ಗೋಪಾಲಯ್ಯಂಗಾರ್, ಪ್ರಿಂಟರ್ ಮತ್ತು ಪಬ್ಲಿಷರ್ ಆದ ಮೆ॥ ರಿಗೂ ೧೯೦೫ನೇ ಇಸವಿ ನವಂಬರು ೧ ಟ್ಟದ್ದ ನೋಟೀಸು

೫ ಮೆ॥ ಎಂ ಗೋಪಾಲಯ್ಯಂಗಾರ್ ವಾಸುದ್ಯಂಗಾರರಿಂದ ನವಂಬರು ೧೩ನೇ ಲೆಟರು

೬ ನವಂಬರು ತಾರೀಖು ೧೬ ರಲಿ ಗಾರು ಸ್ವಂತವಾಗಿ ಬರೆದ, ಅವರ ಈಚೆ ಇವೆಲ್ಲಾ ಪ್ರತಿಪಾದವು

ಇವುಗಳ ಮೇಲೆ ನಂಬರು ಜಿ ... ಶನ್, ತಾರೀಖು ಡಿಸೆಂಬರು ... ನೇ ... ಕೊಡೋಣಾದ ಹುಕುಂ ಏನೆಂದರೆ—

೧ ಈ ವರ್ತಮಾನಪತ್ರಿಕೆಗೆ ಮೆ॥ ಇರತಕ್ಕ ಸಂಬಂಧವಾದ ವಿಷಯದಲ್ಲಿ ರಿಂದ ಬಂದಿರುವ ೧೩—೧೬ ನೇ ತಾರೀಖು ಕಾಗದಗಳು ಪರಸ್ಪರವಿರೋಧವಾಗಿ ಕ್ಟ ಮ್ಯಾಜಿಸ್ಟ್ರೇಟರಿಗೆ ಕೊಟ್ಟಿರುವ ರಿಪೋ ಈ ಲೆಟರುಗಳ ಅಭಿಪ್ರಾಯವೂ ಸಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಿ "ಮೈಸೂರು ಸ್ಟ್ಯಾಂಡರ್ಡ್" ಪತ್ರಿಕೆಗೆ ಗ ರಿ ಎಡಿಟರ್ ಮತ್ತು ಪ್ರೊಪ್ರೈಟರೆಂದು

೨ "ಮೈಸೂರು ಗವರ್ನಮೆಂಟಿನ ವಿಚಾರದ ವಿಷಯದಲ್ಲಿ ನಮಗೆ ಇರುವ ಕ್ತಿಗೆ ಸ್ವಲ್ಪವಾದರೂ ನ್ಯೂನತೆಮಾಡುವ ಕಾರ್ಯ ನಮಗೆ ಕುತೂಹಲ ವಿರಲಿಲ್ಲ" ಯಂಗಾರ್ರು ಬರೆದಿರತಕ್ಕ ಲೇಖನಕ್ಕೆ ಇಲ್ಲಿ "ಈ ಸಂಸ್ಥಾನದ ನಿಜವಾದ ಪ್ರಭುತ್ವಕ್ಕೆ ತೀರದಂತೆ ಪೂರ್ಣಪ್ರಸಾದವಲ್ಲಿ ವಾಸಯಲ್ಲಿ ವಾಸಮಾಡುವದಿಲ್ಲ" ಎ ಬವಾಗಿ ೧೯೦೫ ನೇ ಇಸವಿ ಜುಲೈ ೨೭ ನೇ ತಾರೀಖು ಯ ಬರುವಂತೆ ಬರೆದಿರುವ ಲೇಖನಕ್ಕೂ ಆಕ್ಟೋಬರು ೧೪ ನೇ ತಾರೀಖಿನ ಪತ್ರಿಕೆ ರುವ "ಮಂದವಾಣಿ" ಎಂಬ ಆಭಾಸವು ಪರಸ್ಪರ ಸಂಬಂಧವಿಲ್ಲ. ಈ ಲೇಖನಗಳು ಶ್ರೀಮನ್ಮಹಾರಾಜರವರ ಪ್ರಭುತ್ವವನ್ನು ತಿರಸ್ಕಾರಕ್ಕೆ ಗುರಿ ಮಾಡಬೇಕೆಂಬ ಉದ್ದೇಶದಿಂದ ಬರೆಯಲ್ಪಟ್ಟಿರುವುವೆಂದು ಗವರ್ನಮೆಂಟಿನವರಿಗೆ ತೋರುತ್ತಾ ಇದೆ

೩ ಈ ಆಕ್ಷೇಪಣೆಗೆ ಗುರಿಯಾದ ಲೇಖನಗಳು ತಮಗೆ ಗೊತ್ತಿಲ್ಲದೇ ಇದ್ದಂತೆ ಇವರು ಅಭಿನಯಿಸುತ್ತಾರೆ ಆದಾಗ್ಯೂ ಇಂಥಾ ಆಕ್ಷೇಪಣೀಯವಾದ ಬರವಣಿಗೆಗೆ ಅವರ ಸಮಾಧಾನವನ್ನು ಅವರಿಂದಲೇ ತಿಳಿದುಕೊಳ್ಳುವದಕ್ಕೋಸ್ಕರ ಕರೆಸಿದಾಗ್ಯೂ ಈ ಪತ್ರಿಕೆಯ ಎಡಿಟರ್ ಮತ್ತು ಪ್ರೊಪ್ರೈಟರು ಪ್ರಿಂಟರ್ ಮತ್ತು ಪಬ್ಲಿಷರು ಬುದ್ಧಿಪೂರ್ವಕವಾಗಿ ಸಮಾಧಾನವನ್ನು ಹೇಳುವುದಕ್ಕೂ ತಿರಸ್ಕರಿಸಿದರು ಆದದರಿಂದ ಗವರ್ನಮೆಂಟಿನವರು ಅವರ ಈಚಿನ ನಡತೆಯಲ್ಲಿ ತಮ್ಮ ಅಸಮಾಧಾನವನ್ನು ಖಂಡಿತವಾಗಿ ಪ್ರದರ್ಶನ ಮಾಡಿರುವರು ಅವರು ಸರಿಯಾಗಿ ಸಮಾಧಾನವನ್ನು ಕೊಡದೇ ಇದ್ದದ್ದರಿಂದ ಇನ್ನೊಂದು ನೋಟೀಸು ಕೊಡುವ ತನಕ ಈ ಹುಕುಂ ಜಾರಿಯಲ್ಲಿರುವುದೆಂದು ಅವರಿಗೆ ತಿಳಿಸುವುದು ಸಾಕಾಗಿರುತ್ತದೆ

೪ ಆದರೆ ಈ ಪತ್ರಿಕೆಯ ಎಡಿಟರ್ ಮತ್ತು ಪ್ರೊಪ್ರೈಟರಿಗೂ ಪ್ರಿಂಟರ್ ಮತ್ತು ಪಬ್ಲಿಷರಿಗೂ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ಕೊಡತಕ್ಕ ಕ್ರಮವಾದ ಎಚ್ಚರಿಕೆ ಏನೆಂದರೆ—ಇನ್ನು ಮೇಲೆ ೧೯೦೫ ನೇ ಇಸವಿ ಮೇ ೭ ನೇ ತಾರೀಖಿನ ಪತ್ರಿಕೆಯಲ್ಲೂ





SUPPLEMENT TO THIS ISSUE.

GURU BASAVA & CO., SOWCARPET, MADRAS.

ಗುರು ಬಸವ ಅಂಡ್ ಕಂಪೆನಿ, ಸಾಹುಕಾರ್‌ಪೇಟೆ, ಮದ್ರಾಸ್.

ಶ್ರೀಗುರುಬಸವಲಿಂಗಾಯನಮಃ.

ವೀ ರ ಶೈ ವ ಪ್ರ ಭಾ ಕ ರ

ಎಂಬ ಮಾಸಪತ್ರಿಕೆ.

ಈನವೀನವಾದ ಕನ್ನಡಮಾಸಪತ್ರಿಕೆಯು ೧೯೦೬ನೇ ಇಸವಿ ಜನವರಿ ತಿಂಗಳಾರಭ್ಯ ಪ್ರತಿಮಾಸೆಯ ೧ನೇ ತಾರೀಖಿನಲ್ಲಿ ಪ್ರಕಟಿಸಲ್ಪಡುವುದು

ಈ ಪತ್ರಿಕೆಯಲ್ಲಿ ವೀರಶೈವಮತದ ಪ್ರಾಚೀನ ಮತ್ತು ನವೀನ ಗ್ರಂಥಗಳೂ, ಪುರಾತನರ ಚರಿತ್ರೆಗಳೂ, ಲೋಕವ್ಯವಹಾರಗಳೂ, ವ್ಯವಸಾಯ ಕೈಗಾರಿಕೆವಿಷಯಗಳೂ. ಸ್ತ್ರೀಧರ್ಮನೀತಿಗಳೂ, ಸ್ತ್ರೀವಿದ್ಯಾಭ್ಯಾಸ, ಸ್ವದೇಶವಿದೇಶವರ್ತಮಾನಗಳೂ ಇನ್ನೂ ಅನೇಕ ವಿಷಯಗಳೂ ಪ್ರಕಟಿಸಲ್ಪಡುವುವು.

ಈಪತ್ರಿಕೆಯನ್ನು ಓದುವುದರಿಂದ ವೀರಶೈವಮತಾಭಿಮಾನಿಗಳಿಗೆ ಸ್ವಮತದ ಸಾರಾಂಶಗಳು ಚೆನ್ನಾಗಿ ತಿಳಿಯುವುವು.

ಇತರರಿಗೆ ದೇಶಾಂತರವರ್ತಮಾನಗಳೂ, ವ್ಯವಸಾಯಗಾರರಿಗೆ ಕೃಷಿ ಬೆಳೆಯನ್ನು ಬೆಳಸಬೇಕಾದರೀತಿಯು, ಅದರಿಂದಾಗತಕ್ಕ ಪ್ರಯೋಜನಗಳೂ ಬೋಧವಾಗುವುವು.

ವಿದ್ಯಾರ್ಥಿಗಳಿಗೆ, ಕೈಗಾರಿಕೆ ಮೊದಲಾದ ನವೀನವಿಷಯಗಳು ತಿಳಿಸಲ್ಪಡುವುವು.

ಈ ಪತ್ರಿಕೆಯು ಉತ್ತಮವಾದ ಕಾಗದದಲ್ಲಿ ೪೦ ಪುಟಗಳುಳ್ಳದ್ದಾಗಿ ಪ್ರಕಟಿಸಲ್ಪಡುವುದು.

ಪ್ರತಿಯೊಬ್ಬಮಹನೀಯರು ಈ ಪತ್ರಿಕೆಯನ್ನು ಓದಿನೋಡಿದರೆ ಇತರಪತ್ರಿಕೆಯನ್ನುಅಪೇಕ್ಷಿಸಲಾರರೆಂದು ದೃಢವಾಗಿ ಹೇಳುತ್ತೇವೆ.

ಪ್ರಾಪಂಚಿಕವಿಶಿಷ್ಟಸಂಗತಿಗಳನ್ನು ಪ್ರಕಾಶಪಡಿಸತಕ್ಕ ಈಪತ್ರಿಕೆಯನ್ನು ಸರ್ವರಗ್ರಾಹ್ಯಕ್ಕೋಸ್ಕರಬಹಳಕಡಿಮೆ ಚಂದಾ ಅಂದರೆ ವರ್ಷ ೧ಕ್ಕೆ ಅಂಚೇ ಹಾಸಲು ಸೇರಿ ರೂ. ೧ ೦ ೦ ಮಾತ್ರ ಇಟ್ಟಿರುತ್ತೇವೆ

ವಿದ್ಯಾರ್ಥಿಗಳಿಗೆ ವಾರ್ಷಿಕಚಂದಾ ೦ ೮ ೦ ಅಣೆಗಳು.

ಒಂದೇ ಹೆಸರಿಗೆ ೧೨ ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ೧ ಪ್ರತಿ ಉಚಿತವಾಗಿ ಕಳುಹಿಸಲ್ಪಡುವುದು

ಚಂದಾದಾರರು ತಮ್ಮ ಹೆಸರು, ಗ್ರಾಮ, ಪೋಸ್ಟಾಫೀಸು ಜಿಲ್ಲೆ ಇವುಗಳನ್ನು ಸ್ಪಷ್ಟವಾಗಿ ಬರಿಯಬೇಕು.

ಸುಜನಮನೋಗ್ರಾಹಿಗಳಾದ ಸರ್ವರೂ ತಮ್ಮ ಬಾಲಕರ ಮೇಲಿರುವ ಪ್ರೀತಿಯಂತೆ, ಈನಮ್ಮ ಪತ್ರಿಕೆಯಮೇಲೆಯೂ ಅಭಿಮಾನವಿಟ್ಟುನಾವು ಉದ್ದೇಶಿಸಿರುವಕಾರ್ಯವನ್ನು ಸಾಂಗಗೊಳಿಸಬೇಕೆಂದು ಪ್ರಾರ್ಥಿಸುತ್ತೇವೆ.

ಮಾನೇಜರು

ನಮ್ಮ ವಿಳಾಸ— "ವೀರಶೈವಪ್ರಭಾಕರ" ಸಾಹುಕಾರ್‌ಪೇಟೆ, ಮದ್ರಾಸ್.

ಬಹಳಕಡಿಮೆದರದ ವಾಚುಗಳು ಮತ್ತು ಟೈಂಪೀಸುಗಳು.

ಪ್ರತಿ ವಾಚಿನಸಂಗಡ ಸುಂದರವಾದ ಪೆಟ್ಟಿಗೆ ಸ್ಪ್ರಿಂಗು ಕನ್ನಡಿ ಸರಪಣಿ ಸಹಿತಕಳುಹಿಸುತ್ತೇವೆ.

ರಾಸ್ಕೋಪ್ ಸಿಸ್ಟಂ ವಾಚು.

ದೀಗಮಿಲ್ಲದ್ದು, ಬಹಳ ಬಾಳಿಕೆಬರುವುದು. ಇದರಲ್ಲಿ ೭ ಕೆಂಪುಗಳುಕೆತ್ತಿಯಿದೆ,ಕಾಲಕ್ಕೆ ಸರಿಯಾಗಿ ನಡೆಯುವದು. ಗ್ಯಾರಂಟಿ ೩ ವರ್ಷಗಳು. ಕಿಮ್ಮತ್ತು ರೂ. ೪ ೮ ೦

ರಯಿಲ್ವೇ ರೆಗುಲೇಟರ್ ವಾಚುಗಳು. ನಿಕ್ಕಲ್‌ಬೆಳ್ಳಿಯಿಂದ ಮಾಡಲ್ಪಟ್ಟದ್ದು.

ನಂ ೧ ಕ್ರಯ ರೂ. ೪ ೦ ೦

" ೨ " ರೂ. ೩ ೦ ೦

" ೩ " ರೂ. ೩ ೮ ೦

ಆಟೋಮೇಟಿಕ್ ಅಲ್ಲದೆ ಹಾಂಡ್‌ಲೆಸ್‌ವಾಚುಗಳು. ಇಲ್ಲಿ ಕಾಣಿಸಿರುವ ಚಿತ್ರದಂತೆ ಯಿರುವವು.

ಈ ವಾಚುಗಳು ಬಹಳ ಬಾಳಿಕೆ ಬರುವದಲ್ಲದೆ ನೋಡುವದಕ್ಕೆ ಅತಿರಮಣೀಯವಾಗಿ ಕಾಣುವದು,ಮತ್ತು ಬಹಳ ಗಟ್ಟಿಯಾಗಿರುವದು, ಗಂಟೆಕಾಣಿಸುವನಂಬರುಗಳು ಮಾತ್ರ ಆಗಾಗ್ಗೆ ಕಾಣಿಸುತಿರುವದು,ನಿಮಿಷಗಳುಸೆಕೆಂಡುಗಳು ಕಾಣಿಸುವದಕ್ಕೆ ಪ್ರತ್ಯೇಕವಾಗಿರುವದು. ಓಪನ್‌ಫೇಸ್ ನಿಕ್ಕಲ್‌ಬೆಳ್ಳಿಯಿಂದ ಸುಂದರವಾದಡಯಲ್ ಇಡಲ್ಪಟ್ಟಿರುವದು. ಇದಕ್ಕೆ ೩ ವರ್ಷ ಗ್ಯಾರಂಟಿ ಕ್ರಯ. ರೂ. ೧೯ ೮ ೦

ಬೆಳ್ಳಿಯ ರೂ. ೨೨ ೦ ೦

ನೋಡಿಯಾರೆಂದು ಹಾರೈಸುತ್ತೇನೆ

ಚನ್ನಾಗಿರುತ್ತವೆ ಕೆರೆಕುಂಟೆಗಳಿಗೆ ನೀರು ಬಂತು —ಈ ಗ್ರಾಮದಲ್ಲಿ ಈಗ್ಗೆ ೭ ವಾರದ ಮುಂಚೆ ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಪಟ್ಟ ಹೆಂಗಸು ಈ ಗ್ರಾಮದ ಆಸ್ಪತ್ರೆ ಡಾಕ್ಟರವರ ಇಲಾಜಿನಿಂದ ಗುಣ ಹೊಂದಿ ಸೌಖ್ಯವಾಗಿರುತ್ತಾಳೆ ಈ ಊರಿನಲ್ಲಿ ಕರ್ನಾಟಕ ಆಯುರ್ವೇದ ವೈದ್ಯಶಾಲಾಧ್ಯಕ್ಷರಾದ ಮೆ॥ ನಂದಿಗಿರಿ ದೀಕ್ಷಿತರೆಂಬುವರು ಪ್ರತಿ ದಿನವೂ ವೈದ್ಯಶಾಲೆಯಲ್ಲಿ ೫೦—೬೦ ಜನಗಳಿಗೆ ಧರ್ಮಾರ್ಥವಾಗಿ ಔಷಧ ಕೊಡುವರು ಅಲ್ಲದೆ ಬಡವರಾದವರಿಗೆ ತಮ್ಮ ಸ್ವಂತ ಖರ್ಚಿನಿಂದ ಅನ್ನಪಾನಗಳಿಗೆ ಸಹಾಯ ಮಾಡಿ ಬಹಳ ಮುತುವರ್ಜಿಯಿಂದ ಇಲಾಜು ಮಾಡುತ್ತಾರೆ ಇವರಿಗೆ ಸರ್ಕಾರದವರು ಕೊಡತಕ್ಕ ೪೦ ರೂಪಾಯಿ ಗ್ರಾಂಟನ್ನು ಮಹದ್ಭೂಷಣವಾಗಿ ಎಣಿಸಿಕೊಂಡಿರುತ್ತಾರೆಯೇ ಹೊರ್ತು ಒಂದು ದಿವಸ ಔಷಧದಿಗಳಿಗೆ ಸಾಲದ್ದಾಗಿ ತೋರುತ್ತೆ —ಸಂದರ್ಭಾನುಸಾರ ಯುನಾನಿ ಇಂಗ್ಲಿಷ್ ಔಷಧಗಳನ್ನು ಷಾಪುಗಳಿಂದ ತರಿಸಿ ಉಪಯೋಗಿಸುವರು ಇಂಥಾವರಿಗೆ ಸರ್ಕಾರದವರು ಇನ್ನೂ ಪ್ರೋತ್ಸಾಹ ಕೊಟ್ಟು ವ್ಯವಸಾಯ ಮಾಡಿದಲ್ಲಿ ಪ್ರಜೆಗಳಿಗಾಗಿ ಮಾಡಿದ ಹಾಗೆ ಆಗುತ್ತೆ

ತಿಪ್ಟೂರು—ಕಿಡುಬಿನ ಹಾವಳಿ ಜೋರಾಗಿದೆ ಕೆಲವು ಮಕ್ಕಳು ಸತ್ತವು ಮಕ್ಕಳಿಗೆ ಕಿಡುಬುಹಾಕಿಸಿ ಎಂದು ಹೇಳಿದರೆ ನಮ್ಮ ಮನೆತನಕ್ಕೆ ಆಗಿಬರುವದಿಲ್ಲವೆಂದು ಕೆಲವರು ಹೇಳುತ್ತಾರೆ ಅದೆಂಥಾ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಕಟಿಸಲಾರವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ವಾಪಸ್ ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಕರೆಸ್‌ಪಾಂಡೆನ್ಸ್.

ವಿನೆಗರ್ ದ್ರಾವಕ ಎಲ್ಲಿದೆ ?

ಅಯ್ಯಾ,

ಇದೇ ಡಿಸೆಂಬರ್ ೭ ನೆ ತಾರೀಖಿನ "ವೃತ್ತಾಂತ ಪತ್ರಿಕೆ" ಯಲ್ಲಿ ವಿನೆಗರ್ ಎಂಬ ದ್ರಾಕ್ಷಾರಸ ನಾಗರಹಾವು ಕಚ್ಚಿದ ಜಾಗಕ್ಕೆ ಹಾಕಿದರೆ ಹೋಗುತ್ತೆ ಇದರಿಂದ ಅನೇಕ ಜನಗಳು ಗುಣಹೊಂದಿರು

ಶ್ರೀ (ಗ್ರಾ)ಸ್ ಯವರು ತಿಳಿಸಿರುವಂತೆ ಪ್ರಕಟಿಸಿರುತ್ತೀ[ರಿ] ಮೇಲ್ಕಂಡ ಬ್ರಾಹ್ಮಣ ಯಾರಲ್ಲಿ ದೊರೆಯುತ್ತದೆ? ಅಥವಾ ಪ್ರಕಟಿಸಬೇಕು ಎಂಬ ಅಂಶವನ್ನು ವಿಶದವಾಗಿ ನಾಳಿನ ಪತ್ರಿಕೆ[ಯಲ್ಲಿ] ಪ್ರಕಟಿಸಿದರೆ ಅನೇಕ ಜನಗಳು ತರಿಸಬಹುದು. ಆದ್ದರಿಂದ ಪ್ರಕಟಿಸಬೇಕಾಗಿ ಪ್ರಾರ್ಥನೆ

ಬಿ. ಪದ್ಮನಾಭಯ್ಯ,

ದೊಡ್ಡಬಳ್ಳಾಪುರ.

[ಮೈಸೂರಿನಲ್ಲಾಗಲಿ ಬೆಂಗಳೂರಿನಲ್ಲಾಗಲಿ ಇಂಗ್ಲಿಷ್ ಔಷಧ ಮಾರುವ ವರ್ತಕರಿಗೆ ಬರೆದರೆ ಅನುಕೂಲ. ಅದರ ಕ್ರಮವನ್ನು ತಿಳಿಸುವರು. ತರಿಸಿಕೊಳ್ಳುವುದಕ್ಕೆ ಅನುಕೂಲವಾಗಿ ಎಡಿ.]

ರಬ್ಬರ್ ಬೆಳೆಯ ವಿಚಾರ—ಪ್ರಶ್ನೆ.

ನಮ್ಮ ನಾಲ್ಕಾರು ವಾರಗಳ ಹಿಂದಿನ ಪತ್ರಿಕೆಯಲ್ಲಿ ದಿವಾನರು ... ಶಿವಮೊಗ್ಗಾ ಪ್ರಾಂತ್ಯ ಸಕೀ(ಟು ದಯಮಾಡಿಸಿದ್ದಾಗ್ಗೆ ... ಒಬ್ಬ ಪ್ಲಾಂಟರು ೩೫೦ ಎಕರೆ ರಬ್ಬರ್ ತೋಟ ಮಾಡಿರುವದಾಗಿಯೂ ಅದು ಬಹಳ ಚೆನ್ನಾಗಿರುವದಾಗಿಯೂ ... ತಿಳಿದು ಬಂತು. ಇದನ್ನು ನೋಡಿ ... ಗಿಡಗಳನ್ನು ಬೆಳೆಸುವ ವಿಧಾನವನ್ನೂ ರಬ್ಬರ್ ತೆಗೆಯುವ ... ಕಲಿತುಕೊಂಡು ಬರಬೇಕೆಂತಾ ಇಚ್ಛೆಯುತ್ತೇನೆ. ... ಸ್ಥಳದಲ್ಲಿದೆ? ಅವರ ಅಡ್ರೆಸ್ಸು ಏನು? ಇದನ್ನು ... ತಮ್ಮ ವಾಚಕರ್ಯಾರೇ ಆಗಲಿ ದಯಪಾಲಿಸಿ ತಿಳಿಸಬೇಕೆಂದು ... ನೆ. ಹಾಗೂ ರಬ್ಬರ್ ತೋಟವನ್ನು ಮಾಡತಕ್ಕ ಕ್ರಮ ... ಮತ್ತೆ ಯಾರಾಗಲಿ ತಿಳಿದಿರುವ ಪಕ್ಷದಲ್ಲಿ ದಯವಿಟ್ಟು ... ಮುಖಾಂತರ ತಿಳಿಸಬೇಕೆಂದು ಕೋರುತ್ತೇನೆ.

... ವೆಂಕಟೇಶ ..., ... ಎಸ್ಟೇಟ್,

ಜೋಳಿಗಾ...

ಮಾಳನಾಡು ಆಗುಂಬೆ ವಿಚಾರ

... ಊರಿನ ... ಸುತ್ತ ... ತಗಲಿದ ಕೆಲಸವು ದಿನಗಳಿಗೆ ಮಾತ್ರ ... ಇದ್ದಾರೆ. ಊರವರು ಊರು ... ಹಳ್ಳಿಗಳಿಗೆ ಓಡುವವರಾಗಿರುತ್ತಾರೆ. ಮತ್ತು ಆ ... ಸಮೀಪ ಇರುವದರಿಂದಲೂ ದಕ್ಷಿಣಕನ್ನಡಾ ಜಿಲ್ಲೆ ... ಮೈಸೂರು ಜಿಲ್ಲೆಗೆ ... ಮಧ್ಯಮಾರ್ಗವಾಗಿರುವದರಿಂದಲೂ ... ಹೆಚ್ಚಾಗಿರುತ್ತೆ ... ಸಮೀಪ ಇರು... ಜನಗಳು ... ದೇ ... ಅಲ್ಲದೆ ... ದಿನ ... ಸೇರಿಸುತ್ತೆ ... ಇವುಗಳನ್ನು ... ಒಂದು ... ಇವರ ... ಎಲ್ಲರಿಗೂ ತಿಳಿಯಬೇಕು ... ಹೀಗೆ ಮಾಡುತ್ತಾರೆಯೋ ತಿಳಿಯದು.

...

ಬೆಕ್ಕೂರು ವಿಷಯಗಳು

ಈ ಪ್ರಾಂತ್ಯ ಒಂದು ಕಡೆ ಮಳೆ ಸಾಲದೆ ಪೈರಿಲ್ಲಾ ... ಧಾರಣೆಗಳು ಬಹಳ ತುಟ್ಟಿಯಲ್ಲಿರುತ್ತೆ. ಇದು ... ಬಹಳ ಅನುಕೂಲವಾಗಿರುತ್ತೆ. ಅಕ್ಕಿ ರೂಪಾಯಿಗೆ ... ಸೇರು ಈ ಜೋಳ ಮಾರಲ್ಪಡುತ್ತೆ. ಬಡಬಗ್ಗರ ... ದ ಕಷ್ಟವನ್ನು ಪರಿಹರಿಸಲಸಾಧ್ಯ. ಇಂಥಾ ಕಾಲದಲ್ಲಿ ... ವರ್ತಕರೆಲ್ಲಾ ಇಂಥಾ ಸಮಯ ಬಿಟ್ಟರೆ ತಮಗೆ ಸಂಪಾ[ದನೆ ಸಾಧ್ಯ]ವಿಲ್ಲವೆಂದು ಭಾವಿಸಿ, ತಮ್ಮ ಸಂಪಾದನೆ ನೋಡುತ್ತಾ[ರೆ] ... ಬಡವರ ... ಗಳು ಯಾರೂ ಇಲ್ಲ. ದಯಾಳುಗ[ಳಾದ] ಸರ್ಕಾರದವರೂ ಇಂಥಾ ಕಷ್ಟಕಾಲದಲ್ಲಿ ಮೇಲ್ಕಂಡ ... ಸಹಾಯ ಮಾಡ್ಯಾರೆಂದು ನಂಬಿರುತ್ತೇವೆ

ಈ ಗ್ರಾಮದ ಕೆರೆಯು ತುಂಬಲಿಲ್ಲ. ಈ ಕೆರೆ ... ಮೈಲ್ ... ಇರುತ್ತೆ. ಈ ... ಅರ್ಧ ಮುಕ್ಕಾಲು ... ಗ್ರಾಮಾಧಿಕಾರಿಗಳು ಮತ್ತು ವರ್ತಕರು ಇವರೇ ... ಮನೆ ಪುರುಷರೂ ಇವರ ಜಮೀನಿನಲ್ಲಿ ಆಗುವ ಬೆಳೆಯು ... ಮತ್ತು ಮಾತಬಾರಿಯಲ್ಲದವರು ಜಮೀನಿನಲ್ಲಿ ಆಗು[ವುದಿಲ್ಲ] ಕಾರಣವೇನೆಂದರೆ ನೀರುಗಂಟಿಗಳು ಇವರಿಗೆ ... ರಾತ್ರಿ ಹಗಲು ನೀರು ಸಪ್ಲೈ ಮಾಡುತ್ತಾರೆ. ಬಾಕಿಯವರ ... ಕೇಳುವರಿಲ್ಲದಾಗಿದೆ. ಮತ್ತು ಇಂಥವರ ಮುಂದೆ ಗರೀಬರ ... ಸಹ ನಡೆಯುವದಿಲ್ಲ.

ಈ ಗ್ರಾಮದ ಸಂತೆ ಕಟ್ಟುವ ಸ್ಥಳದಲ್ಲಿ ಚರ್ಮದ ಮಂಡಿಗಳು ... ಅಂಗಡಿಗಳು ಇರುತ್ತವೆ. ಇದರಿಂದ ಸಂತೆಯಲ್ಲಿ ಸೇರು[ವ ಜನರಿ]ಗೆ ಸಹಿಸಲಶಕ್ಯವಾದ ದುರ್ವಾಸನೆಯುಂಟಾಗುತ್ತದೆ. ಅಲ್ಲದೆ ... ಜಾಡ್ಯದಲ್ಲಿ ಇವು ಇಲ್ಲಿರತಕ್ಕದ್ದು ಆರೋಗ್ಯಕ್ಕೆ ... ಕೆಟ್ಟದ್ದು. ದಯಾಳುಗಳಾದ ಸರ್ಕಾರದವರು ಈ ಮಂಡಿಗ[ಳನ್ನು] ಹೊರಗೆ ಇರುವಂತೆ ಮಾಡಿಸಿದರೆ ತುಂಬಾ ಪ್ರಯೋಜನವಾ[ಗು]ತ್ತದೆ.

ಈ ಗ್ರಾಮದಲ್ಲಿರುವ ಸ್ಕೂಲು ಮನೆಯು ನೋಡುವದಕ್ಕೆ ... ತುಂಬಾ ಸುಂದರವಾಗಿರುತ್ತೆ. ಆದರೆ "ಮೇಲೆ ನೋಡಿದರೆ ...; ಒಳಗೆ ನೋಡಿದರೆ ಗೋಳೇ ಗೋಳು" ಎಂಬುವ ಗಾದೆಗೆ ಸರಿಯಾಗಿ ಒಳಗೆ ಓದುವ ಹುಡುಗರು ಮಾತ್ರ ಎಷ್ಟು ದಿವಸ ಓದಿದರೂ ಏನೂ ಬಾರದೆ ಇರುತ್ತಾರೆ. ಈ ವಿಚಾರದಲ್ಲಿ ಹಜರತೀ ಇನ್‌ಸ್ಪೆಕ್ಟರ್ ಸಾಹೇಬರವರಿಗೆ ರೂಬರೂಬು ಅರಿಕೆಮಾಡಿಕೊಂಡ ದ್ದಕ್ಕೆ ಈಗ್ಯೆ ೬–೭ ತಿಂಗಳಲ್ಲೇ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡು ಮಾಡಿಕೊಡುವದಾಗಿ ಹೇಳಿದ್ದರು. ಇದುವರೆಗೂ ಯಾವ ಏರ್ಪಾಡೂ ಕಾಣಲಿಲ್ಲ. ಊರಿನಲ್ಲಿ ಸ್ಕೂಲ್ ಇಲ್ಲದಿದ್ದರೆ ಎಷ್ಟು ಅನಾನುಕೂಲವೋ ಇದ್ದರೂ ಅಷ್ಟೇ ಆಗಿರುತ್ತೆ.

ಈ ಗ್ರಾಮದ ಹೋಬಳಿಯರ ಸ್ಕೂಲು ಬಹಳ ಉನ್ನತಸ್ಥಿತಿಯ ಲ್ಲಿತ್ತು. ಸ್ಥಾಪಿಸಿದ ೭ ವರುಷಕ್ಕೆ ಕೆಲವು ಮಂದಿ ೭ ನೇ ಕ್ಲಾಸಿಗೆ ಬಂದಿದ್ದರು. ಆದರೆ ಮುಂಚಿನ ಮಾಸ್ಟರೇ ಈಗಲೂ ಇದ್ದರೂ ಬಾಲಕರು ಸರಿಯಾಗಿ ಬಾರದೆ ಹೀನಸ್ಥಿತಿಗೆ ಬರುವಂತೆ ತೋರುತ್ತೆ.

ಕಳೆದ ದಸರಾದಲ್ಲಿ ಮಾವಿನಾಲಿಲ್ಲದ ಜಿನದೇವರ ಉತ್ಸವವು ಈಗ್ಗೆ ೧೦–೧೨ ವರುಷಗಳಿಂದಲೂ ವ್ಯಾಜ್ಯವಾಗಿಯುತ್ತಾ ಇದ್ದು. ಇದುವರೆಗೂ ಆರ್ಡರು ಸಿಕ್ಕದೆ ಈಸಲ ದೊರತು ಉತ್ಸವ ನಡಿಸಲ್ಪಟ್ಟಿತು. ಗ್ರಾಮದ ಕೋಮಿನವರೆಲ್ಲಾ ಸೇರಿ ಆ ದಿವಸವೇ ಗ್ರಾಮದ್ದೇವತೆ ಉತ್ಸವವನ್ನು ಅವರ ಉತ್ಸವದ ಎದುರಿಗೆ ನಡೆಸಿದರು. ಮಾವಿನಾಲ್ ನಡೆಯುತ್ತಿದ್ದ ಶ್ರೀ ಆದಿನಾಥಸ್ವಾಮಿ ಉತ್ಸವವು ನಿಂತು ಹೋಯಿತು. ದಸರಾ ದಿವಸ ಬಹು ವಿಜೃಂಭಣೆಯಿಂದ ನಡೆಯುತ್ತಿದ್ದ ಆದಿನಾಥಸ್ವಾಮಿ ಉತ್ಸವಕ್ಕೆ ಪ್ರತಿವರುಷವೂ ೧,೦೦೦–೨,೦೦೦ ಜನದವರಿಗೆ ಸೇರುತ್ತಿತ್ತು. ಈ ವರುಷವೂ ನೋಡಲು ಬಂದಿದ್ದ ಸಾವಿರಾರು ಜನಗಳು ದೇವರದರ್ಶನ ದೊರೆಯದೆ ವಾಪಸು ಹೋದರು. ಮೇಲ್ಕಂಡ ಜನಗಳೆಲ್ಲಾ ಮುಂದಿನ ದಸರಾಕ್ಕಾದರೂ ದರ್ಶನ ಸಿಕ್ಕುವಂತೆ ಜಿನೇಶ್ವರನೆಂದು ಸ್ತೋತ್ರದಲ್ಲಿರುತ್ತಾರೆ.

ಹಿಂದೆ ಶ್ರೀರಂಗಪಟ್ಟಣದಲ್ಲಿ ಪ್ಲೇಗ್ ಗಲಾಟೆ ಸುರುವಾಗಿರುವದರಿಂದ ಆ ಪ್ರಾಂತ್ಯ ಹೋಗಿಬರುವ ಜನಗಳನ್ನು ಗ್ರಾಮಾಧಿಕಾರಿಗಳು ಸಿಗು ಇರುವದಲ್ಲದೆ ಊರೆಲ್ಲಾ ಶುಚಿಯಾಗಿರುವಂತೆ ಏರ್ಪಾಡು ಮಾಡಿದರೆ ತುಂಬಾ ಅನುಕೂಲ

ಪ್ರಜಾ ಹಿತಚಿಂತಕ.

ಪುನರ್ವಿವಾಹ ವಿಚಾರ

ಅಯ್ಯಾ,

ಈ ವಿಷಯದಲ್ಲಿ ಅನೇಕ ಮತಗಳಿವೆಯಷ್ಟೆ. ಅವುಗಳ ಪದ್ಧತಿಗಳಲ್ಲಿ ಆಯಾ ಮತಸ್ಥರಿಗೆ ಅಸಮಾಧಾನವು ಪ್ರಾಯಶಃ ಬರುವುದಿಲ್ಲ. ಹೀಗಿರುವಲ್ಲಿ ಎಲ್ಲರಿಗೂ ನ್ಯಾಯವಾದ ಪದ್ಧತಿ ಯಾವದೆಂತ ವಿಚಾರಿಸೋಣ. ಹಿಂದೂ ಬೌದ್ಧ ಮಹಮ್ಮದೀಯ ಕ್ರೈಸ್ತ ಮತಸ್ಥರಲ್ಲಿ ಪ್ರತಿ ಸಂಗಡದವರೂ ತಮ್ಮದೇ ಉತ್ತಮವೆಂದೆನುತ್ತಾರೆ. ಯಾವದು ಉತ್ತಮವೆಂದು ನೋಡುವ. ಒಬ್ಬ ಮನುಷ್ಯನಿಗೆ ಯಾವ ವಯಸ್ಸಿನಲ್ಲಿ ಹೆಂಡತಿಯು ಯಾವ್ಯಾವ ಕಾರ್ಯಗಳಿಗೋಸ್ಕರ ಅವಶ್ಯವಾಗಿರುವಳೋ ಮತ್ತು ಇದು ದೈವನಿಯಾಮಕವೋ ಅಥವ ಬರೀ ಮನುಷ್ಯಪ್ರಯತ್ನವೋ, ಇವುಗಳು ಬರೀ ಲೌಕಿಕ ಕಾರ್ಯಗಳೇ ಅಥವ ಪಾರಮಾರ್ಥಿಕ ಸಂಬಂಧವು ಉಂಟೋ ಈ ಕಾರ್ಯಗಳನ್ನೆಲ್ಲಾ ಬುದ್ಧಿಯಿಂದಲೂ ನ್ಯಾಯದಿಂದಲೂ ಅನುಭವಿಸಿ ... ವಿಮರ್ಶಿಸಿ ತಿಳಿಯಬೇಕಾದ ಕಾರಣ ಚರ್ಚಿಸಲವಶ್ಯವಿಲ್ಲ. ಆದ್ದರಿಂದ ಮುಖ್ಯವಾಗಿ ಒಂದು ವಿಷಯಮಾತ್ರ ಪ್ರಸ್ತಾಪ ಮಾಡಲವಶ್ಯವಾಗಿದೆ. ಅದ್ಯಾವದೆಂದರೆ, ಒಬ್ಬ ಗಂಡಸು ಮತ್ತು ಹೆಂಗಸು ಯೌವನಕಾಲದಲ್ಲಿ ಪೂರ್ಣ ಕ್ಷೇಮದಲ್ಲಿರುವಾಗಲೂ ಒಂದು ಕುಟುಂಬ ಪೋಷಣೆಗೆ ಅವಶ್ಯಕವಾದ ಗಂಡಸು ಸಂಪಾದಿಸಿರುವಾಗಲೂ ಸರ್ವವಿಷಯಗಳಲ್ಲೂ ತನ್ನ ಮನಸ್ಸಿಗೆ ಪೂರ್ಣ ತೃಪ್ತಿಕರವಾದಂಥ ಅಂದರೆ ಮೇಲ್ಕಂಡಂತೆ ಪ್ರಾಪ್ತವಯಸ್ಸು ತಕ್ಕ ದೇಹಶಕ್ತಿಯು ಹೆಣ್ಣಿನ ಜೀವನ ಮಾತ್ರವಲ್ಲ ಮನ, ವಿದ್ಯೆ, ಕುಟುಂಬಸಂರಕ್ಷಣೆ, ನಾಗರೀಕತೆ ಗುಣಗಳು ಲಕ್ಷಣಗಳು ಐಶ್ವರ್ಯ ಅಥವ ಬಡತನ ಮುಂತಾಗಿ ಬಹು ಸಂಗತಿಗಳು ಏಕೀಭವಿಸುವಂತಿರುವ ಸ್ಥಿತಿಯಲ್ಲಿ ತನಗ ಅರ್ಧಾಂಗಿಯಾಗಿರುವ ಪತಿಯಾಗಲೀ ಪುರುಷನಾಗಲೀ, ಧರ್ಮ, ಅರ್ಥ, ಕಾಮ, ಮೋಕ್ಷಗಳಿಗೋಸ್ಕರ ವರಿಸಿ ಮದುವೆಯಾಗಿ ಮರಣಾವಧಿ ಸುಖ ದುಃಖಾದಿಗಳನ್ನು ಅನುಭವಿಸುತ್ತಾ ಇಲ್ಲವೇ. ಮತ್ತು ಈಸ್ಥಿತಿಯು ಮನುಷ್ಯಸ್ಥಿತಿಯಲ್ಲಿ ಮಾತ್ರವಲ್ಲ, ಸಮಸ್ತ ಚೇತನ ವಸ್ತುಗಳಲ್ಲೂ ಅತ್ಯಂತ ತೃಪ್ತಿಕರವಲ್ಲವೇ. ಹಾಗಾದರೆ ಈ ಜೀವಿತ ಕಾಲದ ಮಧ್ಯೆ ಅಕಸ್ಮಾತ್ತಾಗಿ ಹ್ಯಾಗೋ ಪುರುಷನೋ ಅಥವ ಪತ್ನಿಯೋ ಮೃತರಾಗುವದರಿಂದ ಪುನರ್ವಿವಾಹವಾಗುವದಲ್ಲವೇ. ಆದರಿಂದ ಆಗುವ ಮುಂದಣ ಪರಿಣಾಮವೇನೆಂತ ಪರಾಂಬರಿಸೋಣ. ಬಾಲ್ಯವಿವಾಹವಂತು ಕೇವಲ ಅನ್ಯಾಯವೂ ಕೆಟ್ಟದ್ದೂ ಅಂತ ಜಗತ್ಪ್ರಸಿದ್ಧವಾಗಿ ಹೋಗಿರುವದರಿಂದ ಅದರ ಚರ್ಚೆಯೇ ಅನಾವಶ್ಯವಾಗಿದೆ. ಯಾಕೆಂದರೆ ಬುದ್ಧಿಶಾಲಿಗಳೆಲ್ಲರೂ ಮಾಡುತ್ತಿರುವ ಪ್ರಯತ್ನದಿಂದ ಈ ಬಾಲ್ಯವಿವಾಹ ಪದ್ಧತಿ ನಿಂತು ಹೋಗುವದರಲ್ಲೇನೂ ಸಂಶಯವಿಲ್ಲ. ಆದರೆ ವಿಧವಾವಿವಾಹದಿಂದ ಪೂರ್ಣ ತೃಪ್ತಿಕರವಾಗುತ್ತದೇ, ಅದರ ಒಂದು ... ಒಬ್ಬಗ ... ಹಾಕಿದಂತಿರುವದೇ ನೋಡೋಣ. ಮುಂಚೆ ತಿಳಿಸಿದಂತೆ ದಾಂಪತ್ಯಸ್ಥಿತಿಯನ್ನನುಭವಿಸುವಾಗ್ಯೆ ಗಂಡನು ಯಾ ಹೆಂಡತಿಯು ಮೃತನಾದರೆ ಉಳಿದವನು ಪುನರ್ವಿವಾಹವಾಗುವರು. ಅವರಲ್ಲಿ ಮದುವೆಯಾಗದ ಕನ್ಯೆ ಯಾ ವರನನ್ನು ಮಾಡಿಕೊಳ್ಳುವದು ಒಂದುಭಾಗ. ವಿಧವೆ ಹೆಂಡತಿಸತ್ತವನನ್ನು ಮಾಡಿಕೊಳ್ಳುವದು ಮತ್ತೊಂದುಭಾಗ. ಒಬ್ಬ ಹೆಂಗಸು (ಗಂಡಸು) ತನ್ನ ಜೀವನಕಾಲದಲ್ಲಿ ಒಬ್ಬ ಪುರುಷನಿಗಿಂತ (ಒಬ್ಬ ಸ್ತ್ರೀಗಿಂತ) ಹೆಚ್ಚುಮಂದಿ ಗಂಡಸರ (ಸ್ತ್ರೀಯರ) ಸಂಗಡ ಮದುವೆ ಸ್ಥಿತಿಯನ್ನು ಅನುಭವಿಸುವದು ಪೂರ್ಣ ತೃಪ್ತಿಕರವಾದುದ್ದೋ ನ್ಯಾಯವಾದುದ್ದೋ ಅವಶ್ಯವಾದದ್ದೋ ವಿಚಾರಿಸಿ ನೋಡಿದರೆ ಸ್ವಲ್ಪ ಅಸಮಾಧಾನವೂ ಅತೃಪ್ತಿಯೂ ಗಲಿಬಿಲಿಯೂ ತೋರಿಬರುವದಿಲ್ಲವೇ. ಹಾಗಾದರೂ ಇದು ವ್ಯಭಿಚಾರವಲ್ಲವಷ್ಟೆ. ಅಂತು ಈ ... ಅಂತ ಹೇಳಬಹುದೋ ಮತ್ತು ಇದರಿಂದ ಮೊದಲೇ ಹೊಂದಿದ್ದ ಮಕ್ಕಳ ಸಂಬಂಧವೂ ಆಕೆಯೂ ಅವುಗಳ ಮೂಲಕ ಉಂಟಾಗುವ ಕೊರತೆ ಕಲಹಗಳೂ ತಪ್ಪುವದಿಲ್ಲವಷ್ಟೇ. ಹ್ಯಾಗೂ ಮೊದಲನೇ ಸ್ಥಿತಿಗೂ ಎರಡನೇ ಸ್ಥಿತಿಗೂ ಅನೇಕ ವಿಷಯಗಳಲ್ಲಿ ತುಂಬಾ ವ್ಯತ್ಯಾಸ ತೋರಿಬರುವದಿಲ್ಲವೇ. ಮತ್ತು ಗಂಡನಾಗಲೀ ಹೆಂಡತಿಯಾಗಲೀ ತಮ್ಮ ಪೂರ್ವದ ಪತ್ನೀ ಪತಿಗಳನ್ನು ಅವರಿಂದ ಅನುಭವಿಸಿದವುಗಳನ್ನೂ ಮರೆಯುವದೂ ಅಸಾಧ್ಯವಷ್ಟೆ. ಆದ್ದರಿಂದ ಮೊದಲನೇ ಸ್ಥಿತಿಗಿಂತ ಎರಡನೇ ಸ್ಥಿತಿಯು ಹ್ಯಾಗೂ ಅನೇಕ ವಿಷಯಗಳಲ್ಲಿ ಕೊರತೆಗಳುಳ್ಳದ್ದೆಂಬುವದೇ ಸನ್ಯಾಯವಾಗಿದೆ. ಆದರೂ ಇದು ತಪ್ಪೆಂತ ಹೇಳುವದಿಲ್ಲ. ಮುಸಲ್ಮಾನರಲ್ಲಿರುವ ಬಹು ಪತ್ನೀವಿವಾಹ ಪದ್ಧತಿಯು ಕೇವಲ ಅಸಹ್ಯವೂ ತೊಂದರೆ ಕಲಹಗಳಿಗಾಸ್ಪದವೂ ಆಗಿದೆ, ಎಂದು ಬಲ್ಲವರು ಹೇಳದಿರಲಾರರಷ್ಟೆ. ನಾಗರೀಕರ ಪದ್ಧತಿಗಳಿಗೂ ಅನಾಗರೀಕರಿಗೂ ವ್ಯತ್ಯಾಸವಿದ್ದರೂ ಎಲ್ಲಕ್ಕಿಂತ ಶ್ರೇಷ್ಠಪದ್ಧತಿ ಮೊದಲನೇ ವಿವಾಹವಲ್ಲವೇ.

ಪ್ರಜಾ ಹಿತೈಷಿ.

ವಿದೇಶ ವರ್ತಮಾನಗಳು.

ಚೀನಾರಾಜ್ಯಕ್ಕೆ ಸೇರಿದ ಹ್ಯಾಂಕೋ ಪಟ್ಟಣದಲ್ಲಿ ಬೆಂಕಿಯು ಅನಾಹುತ ಸಂಭವಿಸಿ ಐದು ಸಹಸ್ರ ಮನೆಮಠಗಳು ನಾಶವಾದವೆಂದು ತಂತೀವರ್ತಮಾನ ಬಂದಿದೆ

●●●●

ದಕ್ಷಿಣ ಅಮೆರಿಕಾಖಂಡದ ಅರ್ಜೆಂಟೈನ ಪ್ರಜಾಪ್ರಭುತ್ವದಲ್ಲಿ ಪ್ರಪಂಚದಲ್ಲೆಲ್ಲಾ ದೊಡ್ಡದಾದ ಗೋಧಿಯನ್ನು ಬೆಳೆಯುವಂಥಾ ಜಮೀನುಗಳು ಇರುತ್ತವೆ. ಅದೆಲ್ಲಾ ಒಟ್ಟು ಸುಮಾರು ಒಂದು ಕೋಟಿ ... ಚದರ ಮೈಲಿನಷ್ಟು ವಿಸ್ತಾರವಾಗಿದೆ

●●●●

ಅಮೇರಿಕ ಸಂಸ್ಥಾನಗಳ ಮುಖ್ಯಪಟ್ಟಣವಾದ ನ್ಯೂಯಾರ್ಕ ನಗರದಲ್ಲಿ ಒಬ್ಬ ಸಾಹುಕಾರನು ಏಕವಾಗಿದ್ದ ತನ್ನ ಐದು ಮನೆಗಳನ್ನು ಸಮಸ್ತ ಸಾಮಾನು ಕಟ್ಟಡ ಸಂಸಾರಗಳ ಸಮೇತ ಯಂತ್ರಗಳಿಂದ ನಿಟ್ಟು ಇನ್ನೊಂದು ಬೀದಿಗೆ ಅನಾಮತ್ತಾಗಿ ಸಾಗಿಸುತ್ತಿದಾನೆ

●●●●

ಲಾರ್ಡ ಕರ್ಜನರವರ ಪತ್ನಿ ಸಹಿತ ಇಷ್ಟರಲ್ಲೇ ವಿಲಾಯತಿಯಿಂದ ಹಡಗಿನ ಮೇಲ ಹೊರಟು ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣಕ್ಕೆ ಹೋಗಿ, ತಮ್ಮ ಮಾವನಾದ ಮಿ॥ ಜೋಸಫ್ ಲೈಟ್ ರವರನ್ನು ನೋಡಿಕೊಂಡು ಬರುವವರಾಗಿದ್ದಾರೆಂದು ವರ್ತಮಾನವಿದೆ

●●●●

ಬ್ರಿಟಿಷ್ ಕಮಿಷನರಾದ ಕ್ಯಾಪ್ಟನ್ ಅಂಬ್ರೋಸ್ ಯವರು ... ಗಾಸಿನ ದೇಶೀಯ ದೊರೆಗೆ ಅವನನ್ನು ಕೈಸೆರೆ ಹಿಡಿದುಕೊಳ್ಳುತ್ತೇವೆಂದು ಹೇಳಿ ಹೆದರಿಸಿದ್ದಕ್ಕೆ ಆ ದೊರೆಯು ಗಾಬರಿ ಬಿದ್ದು ಸಂಸ್ಥಾನವನ್ನೇ ಬಿಟ್ಟು ಎಲ್ಲೋ ತಲೆತಪ್ಪಿಸಿಕೊಂಡು ಓಡಿ ಹೋದನೆಂದು ತಂತೀ ವರ್ತಮಾನ ಬಂದಿದೆ.

●●●●

ಮನುಷ್ಯಕೃತವಾದ ಕೆಲಸಗಳಲ್ಲೆಲ್ಲಾ ದೊಡ್ಡದಾದದ್ದು ರಾಜಪ್ರಭುತ್ವದಲ್ಲಿರುವ ಸರೋವರವು. ಪ್ರಪಂಚದಲ್ಲಿರುವ ... ಲ್ಲಾ ದೊಡ್ಡದಾಗಿರುವ ಈ ಕೆರೆಗೆ ಇಂಗ್ಲಿಷರು ಗ್ರೇಟ್ ಟ್ಯಾಂಕ್ ಆಫ್ ... ಎಂಬುದಾಗಿ ಹೆಸರಿಟ್ಟಿದ್ದಾರೆ. ಈ ಸರೋವರವು ಇಪ್ಪತ್ತೊಂದು ಚದರ ಮೈಲಿ ಸ್ಥಳವನ್ನು ಆಕ್ರಮಿಸಿಕೊಂಡಿದೆ

●●●●

ಉತ್ತರ ಅಮೇರಿಕಾಖಂಡದ ಕೆನಡಾ ರಾಜ್ಯದಲ್ಲಿ ನೀರಿಗೆ ಒದಗಿ ... ನೆಲವನ್ನು ಕೊರೆದುದರಿಂದ ಒಂದು ಬಾವಿಯು ಸಿಕ್ಕಿರುತ್ತದೆ. ಚಿಲುಮೆಯಿಂದ ನೀರು ಊದುವ ಹಾಗೆ ಈ ಬಾವಿಯಿಂದ ಮರಳು ಸಣ್ಣಗೆ ಪ್ರವಹಿಸುತ್ತದೆ. ಮರಳು ಅತಿ ಆಳವಾಗಿರುವ ಈ ಬಾವಿಯ ... ಮೇಲಕ್ಕೆ ಮರಳು ಹ್ಯಾಗೆ ಬರುತ್ತದೋ ತಿಳಿಯದು. ಈ ವಿಚಿತ್ರವನ್ನು ಪರೀಕ್ಷೆ ಮಾಡುತ್ತಿದ್ದಾರೆ.

●●●●

ನ್ಯೂಜೀಲಾಂಡ್ ದ್ವೀಪದಿಂದ ಫುಟ್‌ಬಾಲ್ ಎಂಬ ಚೆಂಡಿನಾಟವನ್ನು ಆಡುವರು ವಿಲಾಯತಿಗೆ ಹೋಗಿ ಅಲ್ಲಿ ಸ್ಕಾಟ್‌ಲೆಂಡ್ ಮತ್ತು ಐರ್ಲಾಂಡುಗಳಲ್ಲೂ ಇರುವ ಒಳ್ಳೊಳ್ಳೆ ಫುಟ್‌ಬಾಲ್ ಸಂಘದವರ ಮೇಲೆ ಅನೇಕ ಪಂದ್ಯಗಳನ್ನು ಕಟ್ಟಿ ಆಡಿ, ಪ್ರತಿ ಪಂದ್ಯದಲ್ಲೂ ಗೆದ್ದು ಇರುತ್ತಾರೆ. ಈ ಆಟದ ವಿಷಯದಲ್ಲಿ ವಿಲಾಯತಿಯವರಿಗೆಲ್ಲಾ ಸೋಲಾಗಿರುವುದು ಅನೇಕರಲ್ಲಿ ಆಶ್ಚರ್ಯವನ್ನುಂಟುಮಾಡಿದೆ.

●●●●

ರಷ್ಯಾರಾಜ್ಯದಲ್ಲಿ ಪ್ರಜಾನೆಮ್ಮದಿಗೆ ಭಂಗವುಂಟಾಗಿ ನಾನಾಪಟ್ಟಣಗಳಲ್ಲಿ ಅನೇಕ ಕಷ್ಟನಷ್ಟಗಳುಂಟಾಗುತ್ತಿವೆ. ಆ ರಾಜ್ಯದಲ್ಲಿರುವ ಯೆಹೂದ್ಯ ಪ್ರಜೆಗಳನ್ನು ತುಂಟರು ಬಹಳವಾಗಿ ಹಿಂಸೆ ಮಾಡುತ್ತಿದ್ದಾರೆ. ಮನೆಮಠಗಳನ್ನೂ ಆಸ್ತಿಪಾಸ್ತಿಯನ್ನೂ ಜೀವನೋಪಾಯವನ್ನೂ ಕಳೆದುಕೊಂಡು ಅಲೆಯುತ್ತಿರುವ ಯೆಹೂದ್ಯ ಪ್ರಜೆಗಳ ಸಹಾಯಕ್ಕಾಗಿ ವಿಲಾಯತಿಯವರೂ ಅಮೇರಿಕದವರೂ ಒಂದು ಫಂಡನ್ನು ಕೂಡಿಸಿರುತ್ತಾರೆ. ಈ ಫಂಡಿಗೆ ಇದುವರೆಗೆ ೭೬ ಲಕ್ಷ ರೂಪಾಯಿ ಚಂದಾ ವಸೂಲಾಗಿರುವುದು

●●●●

ಜರ್ಮನ ದೇಶದಲ್ಲಿ ಬಾಲಕಬಾಲಿಕೆಯರನ್ನು ವಿದ್ಯಾಭ್ಯಾಸ ಮಾಡಿಸಬೇಕೆಂದು ಕಾನೂನು ಮಾಡಿರುತ್ತಾರೆ. ಮಕ್ಕಳಿಗೆ ಆರು ವರುಷವಾದ ಕೂಡಲೇ ಸ್ಕೂಲಿಗೆ ಕಳುಹಿಸಿ ಹದಿನಾಲ್ಕು ವರುಷದ ವರೆಗೆ ವಿದ್ಯೆ ಕಲಿಸಬೇಕು. ಆ ಪೈಕಿ ಮೊದಲನೇ ನಾಲ್ಕು ವರುಷ ಅವರಿಗೆ ಜರ್ಮನೀ ಮತ್ತು ಪ್ರೆಂಚ್ ಭಾಷೆಗಳನ್ನೂ, ಇನ್ನು ನಾಲ್ಕು ವರುಷ ಇಂಗ್ಲೀಷು ಭಾಷೆಯನ್ನೂ ಕಲಿಸುವರು. ತಮ್ಮ ಸಾಮಾನ್ಯ ವ್ಯಾಪಾರಗಳಲ್ಲಿ ತಕ್ಕಷ್ಟು ಪರಿಶ್ರಮವನ್ನು ಹೊಂದಿದರೆ ಅನಂತರ ಅವರು ಇಂಗ್ಲೀಷು ಭಾಷೆಯನ್ನೂ ವಿಶೇಷವಾಗಿ ಪ್ರಯೋಗಿಸುವದಕ್ಕೆ ಬರುವುದೂ ಬಹುದು.

"ವಾಗ್ದೇವಿ."

8

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ ಕ್ರಯ ಒಂದು ರೂಪಾಯಿ. ಅಂಚೆ ಹಾಸಲು ವಿನಾ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಬೋಳಾರ್ ಬಾಬೋರಾವ್, ಮಂಗಳೂರು.

ಕ್ಷೇತ್ರಗಣಿತ.

7

ಮೂರು ಭಾಗಗಳಿಂದ ಕೂಡಿದ ೩೦೦ ಪುಟಗಳುಳ್ಳ ಸಂಪೂರ್ಣವಾದ ಈ ಪುಸ್ತಕದಲ್ಲಿ ಒಟ್ಟು ಸುಮಾರು ೨,೦೦೦ ಲೆಕ್ಕಗಳು ಉತ್ತರಗಳ ಸಹಿತ ಕೂಡಿವೆ ಉತ್ತಮ ಪತ್ರ ಪತಿಡರ ೧ಕ್ಕೆ ರೂ. ೧—೪—೦ ಮಧ್ಯಮ ಪತ್ರ ಪ್ರತಿ ೧ಕ್ಕೆ ರೂ. ೧. ವಿದ್ಯಾರ್ಥಿಗಳಿಗೆ ಬಹಳ ಅಗತ್ಯವಾದದ್ದು. ವಿಳಾಸ —ಸಿ ಕಪ್ಪಣ್ಣ, ಬ್ಯಾಂಕ್ ಇನ್ಸ್ಪೆಕ್ಟರ್, ನಂಜನಗೂಡು.

ರಬ್ಬರ್ ಸ್ಟಾಂಪುಗಳು.

ನಮ್ಮ ಕಂಪೆನಿಯಲ್ಲಿ ತಯಾರಾಗಿರುವ ಇಂಗ್ಲಿಷ್ ವೆಬ್ ರಬ್ಬರ್ ಸ್ಟಾಂಪುಗಳು ಬರುವ ಜನವರಿ ಆಖೈರಿನೊಳಗಾಗಿ ವರ್ಡರು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ

ಗುಂಡಾಗಿ, ರವುಂಡು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ರಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸೆ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧ ಇವುಗಳ ಸಹಿತ ಕ್ರಯ ರೂ ೧—೮—೦ ; ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಪಾರ್ಕ್ ಟೌನ್, ಮದ್ರಾಸ್.

ಜ್ವರಹರಿ.

8

ಇದು ಸಾಧಾರಣ ಜ್ವರ, ಚಳೀಜ್ವರ, ಮರೋಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಮತ್ ತಾಲೂಕು ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಪಿ ಮುಂ ಕ ರ್ಪೂ ರ.

[redacted]

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ತಕ್ಷಣವೇ ಗುಣಕೊಡುವದು. ಇನ್ನು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯವರ ಪಿಮುಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ನೇಕಿ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಪಿರಿಯಲ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್ ಮದ್ರಾಸ್.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

[redacted] 13

ಸ್ವಲ್ಪ ಪ್ರತಿಗಳವೆ. ಜಾಗ್ರತೆಪಟ್ಟರೆ ಸಿಕ್ಕುತ್ತವೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಪುರಪ್ರಕಾಶಿಕೆ. ಸಪ್ತಾವತಾರಕ್ಕೂ ಸುಂದರವಾದ ೧೭ ತಸ್ವೀರಿದೆ ಕ್ರಯ ಸುಲಭಮಾಡಿದೆ. ೧೭ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮. ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತುಗಳ ಅರ್ಥಸಹಿತ ಪುಸ್ತಕ ೧ಕ್ಕೆ ರೂ. ೧—೮. ತಕ್ಷಣ ಮನಿಆರ್ಡರಿಗೆ ವಿ. ಪಿ. ಲೂ ಕಳುಹಿಸುತ್ತೆ ವಿಳಾಸ— ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ.

SREEMADACHARYA SUKTI MUKTAVALI.
ಶ್ರೀಮದಾಚಾರ್ಯಸೂಕ್ತಿ ಮುಕ್ತಾವಳೀ.

6

ಈ ಹೆಸರಿನಿಂದ ಪ್ರತಿ ತಿಂಗಳಲ್ಲಿಯೂ ಒಂದು ಸಂಚಿಕೆಯು ಪ್ರಕಟಿಸಲ್ಪಡುವುದು ಇದರಲ್ಲಿ ಶ್ರೀರಾಮಾನುಜಸಿದ್ಧಾಂತ ಸ್ಥಾಪಕರಾದ ಪೂರ್ವಾಚಾರ್ಯರುಗಳು ಮಾಡಿರುವ ಸ್ತೋತ್ರ, ದ್ರಾವಿಡಪ್ರಬಂಧ, ಗ್ರಂಥಗಳಿಗೆ ಕನ್ನಡದಲ್ಲಿ ಪ್ರತಿಪದ ಟೀಕಾ ತಾತ್ಪರ್ಯಗಳು ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಾಗಿ ಬರದು ಮುದ್ರಿಸಲ್ಪಡುವುವು. ಶ್ರೀವಿಷ್ಣುಸಹಸ್ರನಾಮಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತ ಭಾಷ್ಯಗಳೂ ಕನ್ನಡದಲ್ಲಿ ತರ್ಜುಮೆಮಾಡಿ ಮುದ್ರಿಸಲ್ಪಡುವುವು ಈ ಸಂಪೂರ್ಣ ಗ್ರಂಥಕ್ಕೆ ಪೋಸ್ಟೇಜು ಡೆಲಿವೆಲ್ ರೂ. ೨-೬, ಶ್ರೀಮದಾಚಾರ್ಯಸೂಕ್ತಿ ಮುಕ್ತಾವಳೀ ಸಾಂವತ್ಸರಿಕ ಚಂದಾ ಪೋಸ್ಟು ಚಾರ್ಜು ಸಹಿತ ರೂ. ೧-೧೪

ಇದರ ವಿಶೇಷವಿವರಗಳನು ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಲಾಸದಾರರಿಗೆ ಬರೆಯಬೇಕು.

ತುಪ್ಪಲ್ ವೇಂಕಟಾಚಾರ್ಯರು
ತುಲಸಿತೋಟ, ಬೆಂಗಳೂರು ಸಿಟಿ

ಹೋಮೋಸಿಯಾ.

ತಕ್ಷಣ ಪರಿಹಾರ.

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ಬಾಣಗಳು, ಮುಳುಕಟ್ಟು, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನು ಹಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ. ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ. ೨೩ ಸೆಕೆಂಡು ಬೀಚ್ ಲೈನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

1—12—1905 ರಿಂದ 8—12—1905 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಜೋಡಿಸ... ಈ ವಾರ ಸಂಖ್ಯೆ.	[illegible]
ಬೆಂಗಳೂರು ಪಟ್ಟಣ	14	10	26	[illegible]
ಮೈಸೂರು ,,	0	0	46	[illegible]
ಬೆಂಗಳೂರು ಡಿಸ್ಟ್ರಿಕ್ಟು	3	3	141	[illegible]
ಮೈಸೂರು ,,	11	5	76	[illegible]
ಕೋಲಾರ್ ,,	0	0	23	[illegible]
ಕೋಲಾರ್ ಚಿನ್ನದ ಗಣಿಗಳು	6	1	9	[illegible]
ತುಂಕೂರು ಡಿಸ್ಟ್ರಿಕ್ಟು	8	8	50	[illegible]
ಹಾಸನ (ಹೊರಗಿನದು)	0	0	80	[illegible]
ಚಿತ್ರದುರ್ಗ ,,	0	0	35	[illegible]
ಕಡೂರ್ ,,	2	2	16	[illegible]
ಶಿವಮೊಗ್ಗ ,,	1	1	40	[illegible]
ಜುಮ್ಲಾ	45	35	190	[illegible]

ಶಾಲಿವಾಹನ ಶಕ ವರುಷಗಳು ೧೮೨೮ ನೇ ವಿಶ್ವಾವಸು ಸಂವತ್ಸರದ ಮಾರ್ಗಶಿರ ಬಹುಳ ದಶಮಿ ಗುರುವಾರದಿಂದ ಪುಷ್ಯ ಶುದ್ಧ [illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಡಿಸೆಂಬರ್.

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
21	ಗುರು	ದಶಮಿ	34-56	ಚಿತ್ತಾ	35 25	7
22	ಶುಕ್ರ *	ಏಕಾದಶಿ	29-0	ಸ್ವಾತಿ	31-34	8
23	ಶನಿವಾ ,,	ದ್ವಾದಶಿ	23-20	ವಿ	27 25	9
24	ರವಿವಾ †,	ತ್ರಯೋದ	17-40	ಅ	23-30	10
25	ಚಂದ್ರ ‡	ಚತುರ್ದಶಿ	12-22	ಜ್ಯೇ	20-16	11
26	ಕುಜ	ಅಮಾವಾ	7-40	ಮೂ	16 56	12
27	ಬುಧ ¶	ಪಾಡ್ಯ	3-30	ಪೂಷಾ	14-40	13

· ಮಾರ್ಗಶಿರ ಅಷ್ಟಕೀವ್ರತ. * ಸರ್ವತ್ರ ಏಕಾದಶಿ. ,, ಶನಿಪ್ರದೋಷ † ತಿಥಿದ್ವಯಂ, ಮಾಸಶಿವರಾತ್ರಿ, ವ್ಯತೀಪಾತಯೋಗ. ‡ ಕೇಮಿ... ¶ ಶೂನ್ಯಮಾಸಾರಂಭ

ಪೇಟೇ ಧಾರಣೆ.

ಪಿನಸಿ.		ಮೈಸೂರು.	ಬೆಂಗಳೂರು.
ಬೆಳ್ತೀ ಅಕ್ಕಿ ಪಲ್ಲ ೧ಕ್ಕೆ	ರೂ.	೧೨-೮-೦	[illegible]
ಕೆಂಬತಿ ಅಕ್ಕಿ ಅವಲ್	..	೧೨-೮-೦	[illegible]
,, ಮಧ್ಯಂ	..	೧೨-೦-೦	[illegible]
ಜಾವಾಣಿ ಅಕ್ಕಿ	..	೧೨-೧-೦	[illegible]
ಸಣ್ಣಕ್ಕಿ ಅವಲ್	..	೧೩-೧-೧	[illegible]
,, ಮಧ್ಯಂ	..	೧೨-೮-೦	[illegible]
ತೊಗರಿ ಬೇಳೆ ಪಲ್ಲ ೧ಕ್ಕೆ	..	೯-೧-೨-೦	[illegible]
,, ಮಧ್ಯಂ	..	೯-೮-೦	[illegible]
ರಾಗಿ ಪಲ್ಲ ೧ಕ್ಕೆ	..	೩-೮-೦	[illegible]
ಕಾರಾಗಿ	..	೩-೪-೦	[illegible]
ಜೋಳ	..	೩-೦-೦	[illegible]
ಹಲಸಂದೆ ಪಲ್ಲ ೧ಕ್ಕೆ	..	೮-೮-೦	[illegible]
ಬಿಳೀ ಅವರೆ	..	೯-೦-೦	[illegible]
ಹೆಸರು	..	೯-೪-೦	[illegible]
ಉದ್ದು	..	೧೧-೮-೦	[illegible]
ಕಡಲೆ	..	೧೨-೦-೦	[illegible]
ಎಳ್ಳು ಸೆ ೧೨೩ ಕ್ಕೆ	..	೧೯-೦-೦	[illegible]
ಹುರುಳಿ	..	೩-೧೨-೦	[illegible]
ಹರಳು ೧೨೩ ಸೇರಿಗೆ	..	೧೧-೧೨-೦	[illegible]
ಸೀಗೇಕಾಯಿ ಮಣ ೧ಕ್ಕೆ	..	೬-೮-೦	[illegible]
ಮೆಣಸಿನಕಾಯಿ	..	೩-೮-೦	[illegible]
,, ಮಧ್ಯಂ	..	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	..	೪-೮-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	..	೫-೮-೦	[illegible]
ಹರಳೆಣ್ಣೆ ,,	..	೫-೦-೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	..	೧೨-೦-೦	[illegible]
ಉಪ್ಪು ,,	..	೩-೦-೦	[illegible]
ಹುಣಸೇ ಹಣ್ಣು	..	೦-೧೨-೦	[illegible]
,, ಹಳೇದು	..	೦-೮-೦	[illegible]
ತುಪ್ಪ	..	೧೪-೦-೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೫-೨-೦	[illegible]
ತೆಂಗಿನಕಾಯಿ ೧೦೦ ಕ್ಕೆ	..	೪-೦-೦	[illegible]
ಅಳಲೇಕಾಯಿ ಮಣ ೧ಕ್ಕೆ	..	೦-೧೧-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	[illegible]
ಚಿನ್ನ (ಪೌನ್) ಕೆಂಪು	..	೧೫-೪-೦	[illegible]
,, ,, ಹಸಿಮೆ	..	೧೫-೮-೦	[illegible]
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೬೨-೦-೦	[illegible]

Printed and Published by the Rev. H. Spencer, [illegible] the Proprietor and Manager, Wesleyan Mission Press, Mysore. 21/12/1905.

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಡಿಸೆಂಬರ್ ತಾರೀಖು ೨೮ ನೇ ಗುರುವಾರ. — ಸಂಚಿಕೆ ೩೧.

ಸನ್ ೧೯೦೬ನೇ ಇಸವಿಯ

೧ ನಂ ಎ ನಂ ೮ ಬಿ ನಂ ೧ ಸಿ ನಂ ೧ ಹೆಚ್ ನಂ ೬ ನಂ

ಪಂಚಾಂಗ ಸಹಿತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು. 8

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ಮನುಷ್ಯರು, ಒಷ್ಟರಿಗೂ ಉಪಯೋಗವಾಗಿವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು - ಪರಾಭವ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ... ರೈಲ್ವೆ ಗೈಡ್, ಕೋರ್ಟ್ ಫೀಜು, ಪ್ರೋಸೆಸ್ ... ಸ್ಟಾಂಪ್ ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಮುಖ್ಯ ... ಜರೂರಿಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ... ಪಲ್ಲಿ ಬಿದ್ದ ಫಲ, ರಾಗ ಗಳ ಕಾಲ, ವಾರ ಶೂಲೆ, ... ಪಟ್ಟಿ, ಜನ್ಮದ ಪಟ್ಟಿ, ಜಮಾಬಂದಿ ಪಟ್ಟಿ, ಇನ್ನೂ ... ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ... ಸಾದಾ ಬೈಂಡು ರೇಖಿನಿಂದ ಗಿಲಿಟು ಮಾಡಿದೆ

ಪಾಕೆಟ್ ಚಿಕ್ಕಸೈಜು ೨ ಆಣೆ	ಸಿ ನಂಬರ್ ದೊಡ್ಡಸೈಜು ೬ ಆ
" " " ೭ "	ಎಚ್ " " ೫ "
" ಮುಚ್ಚಳವುಳ್ಳ ೯ "	ಡಿ " ಮುಚ್ಚಳವುಳ್ಳ ೮ "

ಪೋಸ್ಟು ಚಾರ್ಜು ಬೇರೆ ಬಂದೆ ನಮೂನೆ ೧೨ ಡೈರಿ ತರಿ... ೧೦ ಡೈರಿ ಇದ್ದರೆ ವಿ ಪಿ ಮೂಲಕ ತರಿಸಿಕೊಳ್ಳಿ

ನಮ್ಮ ವಿಳಾಸ:—ಎಂ. ಆರ್ ಕೃಷ್ಣಸ್ವಾಮಿ ಸೆಟ್ಟಿ,

ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು.

23

ಮೆಟ್ರಿಕ್ಯುಲೇಷನ್ ಕನ್ನಡದ ೫ನೆ ಪುಸ್ತಕದ ನೋಟ್ಸು	೦—೭—೦
ಡಿಟೊ " " ೬ ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ೩—೪ ನೆಯ ಪುಸ್ತಕಗಳ ನೋಟ್ಸು	೦ —೨—೦
ಮೈಸೂರು ಸಂಸ್ಥಾನದ ಚರಿತ್ರವಿವರಣೆ (೨ನೆ ಭಾಗ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್

ಸೇರಿ ರೂ ೧—೪—೦

" " ೬ " " ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಅದ್ಭುತ ಜನರ ಪ್ರಜೆಂಟೇಷನ್ ಬಾಕ್ಸು! 2

[illegible]

ವಿಳಾಸ,—ಫ್ಲಾರೆಕ್ ವಾಚ್ ಕಂಪೆನಿ,

ಜಾರ್ಜ್ ಟವನ್ ಮದರಾಸ್.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

38

ಎಲ್ಲಾ ಬಗೆಯ ಕಾಡು ಮೃಗಗಳನ್ನೂ ಮೈಸೂರು ಜೂ ಸೂಪರಿಂಟೆಂಡೆಂಟ್ ಮೆ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು

Apply to—Mr Hughes, Mysore Zoo.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

16

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮೆ॥ ಟಿ. ಎಂ ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨॥ ಯಂತೆ ಡಿಸ್ಕೌಂಟು ಕೊಡಲಾಗುವುದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು— ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು— ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ.—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು

15

[೧೮೦೭ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ... ಆಗಲಿ ಈ ಆಫೀಸಿನ ಚಂದಾದಾರರಾಗಿ ಅವರ ಭರವಸ ... ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವ ... ಕೊಡಲ್ಪಡುವದು

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯ ಬೇಕೆಂದರೆ ... ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಸೆಯಾನಾ ... ರೂಪಾಯಿಯ ಪ್ರಕಾರ ಒಟ್ಟು ರ ೬೬ ನ್ನು ಮಾತ್ರವೇ ... ಬೇಕಾಗುವದು

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ... ಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ... ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾ... ಈ ವ್ಯವಸಾಯ ನಿಮಿತ್ತವಾಗಿ ನಾವು W I P ರೈಲ್ವೆ ಪಕ್ಕ... "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ... ನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ ಈ ಭೂ... ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂ... ಡಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾ... ಮಾತ್ರ ಇದ್ದಾರೆ ಆದಾಯ ನಷ್ಟಗಳಿಗೆ ಭಾಗಿಗಳಾದ ಪೇರು... ವುದಿಲ್ಲ ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ... ಗಿರುತ್ತದೆ

... ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ... ವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭ ... ವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾವೊ... ವಾಪಸು ಪಡೆಯಬಹುದು

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿವೆ ವಿವರವಾಗಿ ... ಪೇಕ್ಷಿಸುವವರು ಅರ್ಧಾಣೆ ಸ್ಟಾಂಪು ಇಟ್ಟು ಕೆಳಗಿನ ವಿಳಾಸಕ್ಕೆ ... ಬರೆದುಕೊಳ್ಳತಕ್ಕದ್ದು

... —The Manager,

India Agricultural and Helping Office,

... Post. Bombay Presidency

ಸವಿನುಡಿ

8

ಲೋಕೋತ್ತರಕ್ಕೋಸ್ಕರ **ತಿಂಗಳಿಗೆರಡುಸಲ** ಪ್ರಕಟವಾಗುವ ಪತ್ರಿಕೆ

ಓದುವುದಕ್ಕೆ ಅನೇಕ ಉಪಯುಕ್ತಾಂಶಗಳಿದ್ದಾಗ್ಯೂ ಇಷ್ಟು ಸುಲಭ ಚಂದಾ ಉಳ್ಳ ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಬೇರೆ ಯಾವುದೂ ಇಲ್ಲ

ಪುಗಸಟೆ ದೊರೆಯುವ ಮಾದರಿ ಸಂಚಿಕೆ—ರಸಿಕರಾದವರು ಓದಿದರೆ ಪತ್ರಿಕೆಗೆ ಆಶ್ರಯ ಕೊಡದೆ ಇರುವುದೇ ಇಲ್ಲ. ಹೋಗಕೂಡದೇಕೆ?

ಅಂಚೆ ವೆಚ್ಚಸಮೇತ ವರುಷದ ಚಂದಾ —

ಮುಂಗಡ ಹನ್ನೆರಡಾಣೆ ಮಾತ್ರವೇ; ಅನಂತರ, ಒಂದು **ರೂಪಾಯಿ** ಎಂಟಾಣೆ ಮಾತ್ರ

ವಿದ್ಯಾರ್ಥಿಗಳು ಅಂಚೆ ಖರ್ಚಿನ ಪೂರ್ತಿ ಆರಾಣೆಗೆ **ಕಾಲಾಣೆಯ ಅಂಚೆ ಚೀಟುಗಳನ್ನು ಮುಂಗಡ ಕೊಟ್ಟರೆ,** ಒಂದು ವರುಷ **ಪೂರಾ** ಪತ್ರಿಕೆಯನ್ನು **ಪುಗಸಟೆ ಕೊಡುತ್ತೇವೆ** ವಿ ಪಿ ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು

ಓದಿ ಬುದ್ಧಿವಂತರಾಗಬೇಕೆಂಬಿಚ್ಛೆಯುಳ್ಳವರು ಈ ಸಂಧಿಯನ್ನು ಬಿಡಬಾರದು ಬೇಗ ಬೇಗ ನಿಮ್ಮ **ವಿಳಾಸಗಳ ಮಾತ್ರ ಕೊಟ್ಟು ಮಾದರಿ ಸಂಚಿಕೆಯೊಂದನ್ನು** ಓದಿನೋಡಿ

ವಿಳಾಸ —**ಭಾರತಿಸಂಘಾಂಗಿಯಮ್ಮ, ಸಂಪಾದಕ,** ಸವಿನುಡಿ,

[illegible]

ಮುದ್ರಾಮಂಜೂಷ—ಎರಡನೆಯ ಮುದ್ರಣ.

ಕ್ರಯ, ರೂ ೧—೮—೦

ವಿದ್ಯಾರ್ಥಿಗಳೂ ವಿದ್ಯಾವಂತರೂ **ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ದೊಡ್ಡದಾದ ಹೊಸ ಅಕ್ಷರದಿಂದ ಒಳ್ಳೇ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ, ಪ್ರಕಟಿಸಲ್ಪಟ್ಟಿದೆ. ಚಿಮ್ಮಿ ಅಪ್ಪನಪ್ರ, ಸೆಕ್ಷನ್ ಹೊಲಿಗೆ, ಸುಂದರವಾದ ಕ್ಯಾಲಿಕೋ ಬೈಂಡು. ಬಹು ಶುದ್ಧವಾದ ಪ್ರತಿ. ಇದಕ್ಕೆ ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ' ಎಂಬೀಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ ೧—೮—೦, ಪೋಸ್ಟೇಜು ೨ ಆಣೆ. ವಿ ಪಿ ಪಿ. ತರಿಸಿಕೊಂಡರೆ ರೂ. ೧—೧೧—೦ ಬೇಕಾಗುವುದು ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಪುಸ್ತಕವ್ಯಾಪಾರಿಗಳಿಗೆ ಶೇಕಡಾ ೨೫ ರೂಪಾಯಿಯಂತೆ ಡಿಸ್ಕೌಂಟು ಕೊಡಲಾಗುತ್ತದೆ. ಬೇಗ ಈ ವಿಳಾಸಕ್ಕೇನೇ ಬರೆಯಿರಿ.—**

ವಿಳಾಸ—ಮ್ಯಾನೇಜರ್. ಸಿ. ಎಲ್. ಎಸ್. ಬುಕ್ ಡಿಪೋ,

P. SUBBAROYI'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ

ಆಯುರ್ವೇದ ಔಷಧಗಳು.

9

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಒಳ್ಳೇ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿ ೧ಕ್ಕೆ ರೂ ೨ ವಿ ಪಿ. ಛಾರ್ಜಿ ೩ ಆಣೆ.

೨. ಅತ್ಯುತ್ತಮವಾದ ಕಸ್ತೂರಿ.—ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು. ಮತ್ತು ಒಂದೇ ರಸಂ ಇರತಕ್ಕದ್ದು. ತೋಲಾ ೧ಕ್ಕೆ ರೂ. ೬೪ ಬೆಲೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ ಪಿ. ಛಾರ್ಜಿ ಅಲಾಯಿದ.

೩. ಸುಗಂಧ ನಶ್ಯಪುಡಿ —ಈ ನಶ್ಯಪುಡಿಯು ಬಹಳ ಸುವಾಸನಾ ಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಕೂಡದು. ನೀವು ದಿನವಂ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಿಕೆಯಷ್ಟನ್ನು ಬೆರಸಬೇಕು. ಹೀಗೆ ಬೆರಕೆಮಾಡಿದಮೇಲೆ ನಶ್ಯವು ಬಹು ಸುವಾಸನೆಯದಾಗಿಯೂ ಮನೋಹರವಾಗಿಯೂ ಆಗುವುದು ಇದರಿಂದ ನಶ್ಯಹಾಕಿಕೊಳ್ಳುವವರ ಬಳಿ ಬಡಿಯುವ ಕಾರಣವಾದ ಕೆಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಹಳಹೊತ್ತು ಇರುತ್ತದೆ ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ. ಇಂಥಾ ನಶ್ಯಹಾಕಿಕೊಂಡಲ್ಲಿ ಶೀತ, ಅರೆತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ. ಆಗಾಗ್ಗೆ ನಶ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು. ಇದರಲ್ಲಿ ನವಾಸಾಗರ ಖಂಡಿತವಾಗಿ ಸೇರಿರುವುದಿಲ್ಲ ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ತನಕ ಬರುತ್ತೆ ಕ್ರಯ ಒಂದು ಡಬ್ಬಿಗೆ ೪ ಆಣೆ. ೧ ರಿಂದ ೩ ಡಬ್ಬಿ ತನಕ ವಿ. ಪಿ. ಛಾರ್ಜಿ ೩ ಆಣೆ ಹೆಚ್ಚು. ವಿ. ಪಿ. ಛಾರ್ಜಿ ೪ ರಿಂದ ೬ ಡಬ್ಬಿ ತನಕ ೫ ಆಣೆ. ೭ ರಿಂದ ೧೨ ಡಬ್ಬಿ ವರೆಗೆ ವಿ. ಪಿ ಛಾರ್ಜಿ ೭ ಆಣೆ.

೪. ರಕ್ಷಾಮೃತಂ—ನಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಿಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ ಕಾಫಿ, ತೇಯಿಲೆಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ.

ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ ಬಸರು, ಸೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು ಪಿತ್ತವಾಯುವು, ಗೂರ್ಲು ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ. ಪ್ರಾಣಾಧಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ತೇಯಿಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು. ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ೬ ಆಣೆ. ವಿ. ಪಿ. ಛಾರ್ಜಿ ೩ ಆಣೆ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪುಟ್ಟು ಬರೆದಲ್ಲಿ ಒಂದು ಡಬ್ಬಿ ಚೂರ್ಣ ಕಳುಹಿಸಲ್ಪಡುತ್ತೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to :—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟೊನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಚೇಂಬರ್ಲೇನ್ ಯವರು ಹೂಡಿದ ನೋವುಹರ ಔಷಧವು.



51

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾದದ್ದು. ಶರೀರಕ್ಕೆ ಮೂಗು ಪೆಟ್ಟು ಬಿದ್ದರೂ ಚೂರಿಯಿಂದ ಗಾಯವಾದರೂ ಕೂಡಲೇ ಆ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, [illegible] ನೋವು ನಿವಾರಣೆಯಾಗುವವು ಇದರಿಂದ ವಾಯುನೋವು ಚನ್ನಾಗಿ ಬಿಟ್ಟುಹೋದೀತು ಆದಕಾರಣ ಪ್ರತಿ ಮನೆಯವರೂ ಚೇಂಬರ್ಲೇನ್ ನೋವುಹರವೆಂಬೀ ಔಷಧದ ಒಂದು ಬಾಟ್ಲಿಯನ್ನು ಆಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣಕೊಡುತ್ತದೆ ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೧ ರೂ.; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು —

ಡಬ್ಲ್ಯು. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

"ವಾಗ್ದೇವಿ."

9

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ. ಕ್ರಯ ಒಂದು ರೂಪಾಯಿ. ಅಂಚೆ ಹಾಸಲು ಬಿನಾ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

ಸೋಲಾರ್ ಔಷಧಿದಾಸ್, ಮಂಗಳೂರು

ಸಿಂಗರ್ ಹೊಲಿಯುವ ಯಂತ್ರಗಳು.

ಈ ಹೊಲಿಯುವ ಯಂತ್ರಗಳು ಮನೆಯ ಕೆಲಸಕ್ಕೂ ಕಸಬುದಾರರ ಕೆಲಸಕ್ಕೂ ಉಪಯುಕ್ತವಾಗಿವೆ ಯಂತ್ರಗಳ ರಚನೆಯು ಸರ್ವೋತ್ಕೃಷ್ಟವಾದದ್ದು; ಆ ಪಾರ ಕೆಲಸಮಾಡಲು ಸಾಮರ್ಥ್ಯವುಳ್ಳದ್ದು ತುಂಬಾ ಬಾಳಿಕೆ ಬರುವಂತದ್ದೂ ಪ್ರಸಿದ್ಧಪಡೆದಿವೆ



ಈ ಯಂತ್ರಗಳ ಮಾರಾಟಕ್ಕೆ ಸಬ್ ಏಜಂಟರುಗಳೂ, ಪ್ರೋತ್ಸಾಹ ಪಡಿಸುವವರೂ, ರಖಂವಾರಿಗಿಯೂ ಚಿಲ್ಲರೆಯಾಗಿಯೂ ಕೊಂಡುಕೊಳ್ಳತಕ್ಕವರೂ ಮದರಾಸ್ ಅಧಿಪತ್ಯ, ಮೈಸೂರು ಸಂಸ್ಥಾನ, ಕೊಡಗು ಸೀಮೆ, ತಿರುವಾಂಕೂರು ಸಂಸ್ಥಾನ, ಕೊಚ್ಚಿ ಸಂಸ್ಥಾನ. ಈ ಪ್ರಾಂತ್ಯಗಳಲ್ಲೆಲ್ಲಾ ಬೇಕಾಗಿವೆ. ಖರೀದಿ ಮುಂತಾದ ಸಂಗತಿಗಳನ್ನು ಈ ವಿಳಾಸದಾರರಿಗೆ ಬರೆದು ತಿಳಿಯಬೇಕು — 2

ಕಮಿಷನ್ ಮತ್ತು ಜನರಲ್ ಏಜನ್ಸಿ.

ಸೋಲ್ ಏಜಂಟರು, ಶಿವಮೊಗ್ಗಾ.

ಪರಿಮಳ ನಶ್ಯದಪುಡಿ

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ	0—9—0
ಅಂಚೆ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ...	0—6—0
ಅಂಚೆ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯಲ್ಲಾ ಗಮಗಮಿಸುತ್ತೆ ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ

ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧರ್ಮ ವೈದ್ಯಶಾಲಾ

69 ಚೈನಾಬಜಾರು ರೋಡ್, **ಸಾಹುಕಾರ್ ಪೇಟೆ, ಮದರಾಸು.**

ವೃತ್ತಾಂತ ಪತ್ರಿಕೆ.

—:o:—

ಸ ೧೯೦೫ ನೇ ಇಸವಿ ಡಿಸೆಂಬರ್ ತಾ॥ ೨೮ ನೇ ಗುರುವಾರ.

ನಮ್ಮ ಚಂದಾದಾರರಿಗೆ.

ಪದ್ಧತಿಯನ್ನನುಸರಿಸಿ ಕ್ರಿಸ್‌ಮಸ್ ಹಬ್ಬಕ್ಕಾಗಿ ನಮ್ಮ ಆಫೀಸಿಗೆ ರಜಾ ಕೊಡುವುದರಿಂದ ಬರುವ ವಾರದ ಅಂದರೆ ಜನವರಿ ೪ನೇ ತಾರೀಖಿನ "ವೃತ್ತಾಂತ ಪತ್ರಿಕೆ" ಯನ್ನು ಪ್ರಕಟಿಸುವುದಿಲ್ಲವೆಂದು ಈ ಮೂಲಕ ಕೃತಪಡಿಸಿರುತ್ತೇವೆ.

೧೯೦೫ ನೆ ಇಸವಿ.

ಇನ್ನು ಮೂರು ದಿನಗಳಲ್ಲಿ ಮುಕ್ತಾಯವಾಗುವ ೧೯೦೫ ನೆ ವರುಷವು ಬಹು ವಿಶೇಷವಾರ್ತೆಗಳನ್ನುಳ್ಳದ್ದಾಗಿದೆ. ಹನ್ನೆರಡು ತಿಂಗಳಿಂದೆ ರಷ್ಯಾದವರು ಇನ್ನೂ ಪೋರ್ಟ್ ಆರ್ಥರನ್ನು ಕಾಪಾಡಿಕೊಳ್ಳುತ್ತಿದ್ದರು. ಈ ವರ್ಷ ಜಪಾನವರು ರಷ್ಯಾದವರನ್ನು ಪೋರ್ಟ್ ಆರ್ಥರ್, ಮುಕ್ಡೆನ್, ಸುಷೀಮಾ ಎಂಬೀ ಸ್ಥಳಗಳಲ್ಲಿ ಸಂಪೂರ್ಣವಾಗಿ ಸೋಲಿಸಿದರು. ಯುದ್ಧಕಾರ್ಯಗಳು ಕೊನೆಗಂಡು ಬಹು ಅಪೂರ್ವವಾದ ಕರಾರು ನಡೆದುದನ್ನು ನಮ್ಮ [illegible]ಕರು ಮರೆತಿರಲಾರರು. ರಷ್ಯಾದವರು ಪೂರ್ವ [illegible]ಗಕ್ಕೆ ಸೋತು, ಒಳದೇಶದ ಗಲಭೆಗಳಲ್ಲಿ ಸಿಕ್ಕಿಕೊಂಡು ಶತೃಗಳು ಹೊರಗಿಲ್ಲ ಒಳಗೇ ಇದ್ದಾರೆಂಬುದನ್ನು [illegible] ದುಕೊಳ್ಳುತ್ತಿದ್ದಾರೆ. ಈಗ ರಷ್ಯಾದಲ್ಲಿ ನಡೆಯುತ್ತಿರುವ ಭಯಂಕರವಾದ ಕಾರ್ಯಗಳು ವಿಸ್ಮಯವನ್ನುಂಟುಮಾಡಿರುವವು. ರಾಜ್ಯಭಾರಕ್ರಮವೇ ಬದಲಾಯಿಸುತ್ತಿದೆಯೆಂದು ಹೇಳುವರು. ಅನೇಕ ವರುಷಗಳಿಂದ ಪ್ರಜೆಗಳು ಅಧಿಕಾರಿಗಳ ಕ್ರೂರತನವನ್ನು ಸಹಿಸುತ್ತಾ ಬಂದು ಈಗ ತಿರಿಗಿಬಿದ್ದಿದ್ದಾರೆ ನಾರ್ವೆ ರಾಜ್ಯದವರು ಸ್ವೀಡನ್ ಸಂಸರ್ಗವನ್ನು ತ್ಯಜಿಸಿ, ನಮ್ಮ ಚಕ್ರವರ್ತಿಯವರ [illegible] ಯುವರಿನ್ನು ತಮ್ಮ ದೊರೆಯನ್ನಾಗಿ ಚುನಾಯಿಸಿ ನೇಮಿಸಿಕೊಂಡರು.

ಇತ್ತಲಾಗಿ ಹಿಂದುಸ್ಥಾನದೊಳಗೆ ಕಳೆದ ಏಪ್ರಿಲ್ ೪ ರಲ್ಲಿ ನಡೆದ ಭಯಂಕರವಾದ ಭೂಕಂಪವೂ, ಅದರಿಂದುಂಟಾದ ಪ್ರಜಾನಷ್ಟವೂ, ಅದಕ್ಕಾಗಿ ಲೋಕದವರೆಲ್ಲರೂ ಪಟ್ಟ ಸಂತಾಪವೂ ಇಷ್ಟು ಬೇಗನೆ ಮರೆಯುವವುಗಳಲ್ಲ. ರಾಜಕೀಯ ಸಾಂಸರ್ಗಿಕ ವಿಚಾರಗಳಲ್ಲೂ ಭಯಂಕರವಾದ ಬದಲಾವಣೆಗಳಾಗಿರುತ್ತವೆ. ಲಾರ್ಡ್ ಕರ್ಜನ್ನರು ಯುದ್ಧದ ಇಲಾಖೆಯ ಕಾರುಬಾರುಗಳಲ್ಲಿ ತಮಗೂ ಲಾರ್ಡ್ ಕಿಚ್ನರ್ ಮತ್ತು ವಿಲಾಯತಿ ಗವರ್ನಮೆಂಟಿನವರಿಗೂ ಉಂಟಾದ ವಾಗ್ವಾದದ ನಿಮಿತ್ತ ಕೆಲಸಕ್ಕೆ ರಾಜೀನಾಮೆ ಕೊಡಬೇಕಾಯಿತು; ಇವರು ಕಡೆಕಡೆಗಾದರೂ ಹಿಂದುಸ್ಥಾನದ ಶ್ರೇಯಸ್ಸನ್ನು ಬಯಸಿ, ಅನೇಕ ಪ್ರಜಾಹಿತಕಾರ್ಯಗಳನ್ನು ನಡೆಸಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಬಂಗಾಳಾ ಅಧಿಪತ್ಯವನ್ನು ವಿಭಜನೆಮಾಡಿದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. ಇದರಿಂದ ಆ ಪ್ರಾಂತ್ಯದಲ್ಲಿ ಹುಟ್ಟಿರುವ ಖೇದವೂ ಗಲಭೆಯೂ ಬೇಗ ಶಮನವಾಗಲೆಂದು ಹಾರೈಸುವೆವು. ಸ್ಥಳಸಂಕೋಚದಿಂದ ಅನೇಕ ಸಂಗತಿಗಳನ್ನು ಇಲ್ಲಿ ಸೂಚಿಸುವುದಕ್ಕಾಗಲಿಲ್ಲ. ವರ್ಷಾಂತ್ಯದಲ್ಲಿ ಈ ಭರತಖಂಡದ ಯುವರಾಜರವರೂ [illegible] ಪತ್ನೀರವರೂ ಕೃಪೆಯಿಟ್ಟು ದಯಮಾಡಿರುತ್ತಾರೆ. ಬರುವ ಹೊಸ ವರ್ಷ ಈ ರಾಜದಂಪತಿಗಳಿಗೂ ನಮ್ಮ ದೇಶಕ್ಕೂ ನಮ್ಮ ವಾಚಕರಿಗೂ ಸುಖಸಂತೋಷಗಳನ್ನು ಕೊಡುವುದಾಗಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ನಮ್ಮ ಚಂದಾದಾರರಿಗೆಲ್ಲಾ ೧೯೦೬ ನೆ ವರುಷದ ಕ್ಯಾಲೆಂಡರ್ ಈ ಪತ್ರಿಕೆಯ ಸಂಗಡ ಕಳುಹಿಸಿರುತ್ತೇವೆ.

❖❖❖❖

ಕಳೆದ ವಾರ ಶ್ರೀಮನ್ಮಹಾರಾಜರವರು ಬೆಂಗಳೂರಿನಲ್ಲಿ [illegible] ಅಲ್ಲಿನ ಕೋಟೆಗೆ ದಯಮಾಡಿ, ಪೋಲೀಸ್ ಶಿಪಾಯಿಯನ್ನೂ [illegible] ಕವಾತು ಮುಂತಾದ್ದನ್ನೂ ಪರಾಂಬರಿಸಿದರು.

❖❖❖❖

ಇಲ್ಲಿ ಕೋಟೆಯ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯ ಡಾಕ್ಟರಾಗಿದ್ದ ಮಿಸ್ ವಾಟ್ಸ್ ಎಂಬಾಕೆಯನ್ನು ಮೈಸೂರು [illegible] ರದವರು ಹೆಚ್ಚು ಸಂಬಳ ಕೊಟ್ಟು ಇಲ್ಲಿಗೆ ಕರೆಸಿಕೊಂಡಿದಾರೆ.

❖❖❖❖

ಪ್ರಸಿದ್ಧ ಚಿತ್ರಗಾರರಾದ ರಾಜಾ ರವಿವರ್ಮರವರು ಕಳೆದ [illegible] ರಾಜಧಾನಿಗೆ ಬಂದು, ಲೇಟ್ ದಿವಾನರವರ ಬಂಗಲೆಯಲ್ಲಿ ಇಳಿದಿದಾರೆ. ಇವರಿಗೆ ಎಲ್ಲಾ ಸರಕಾರದ ಅರಮನೆ [illegible]

ಫಸ್ಟ್ ಕೋರ್ಟ್ ಜಡ್ಜಿರಾದ ಮೆ॥ ನಂಜುಂಡಯ್ಯನವರು ಕಳೆದ ಗುರುವಾರ ನಂಜನಗೂಡಿಗೆ ದಯಮಾಡಿ, ಅಲ್ಲಿನ ಮುನಿಸಿಪಲ್ ಕೋರ್ಟಿನ ವಿದ್ಯಮಾನಗಳನ್ನು ತನಿಖೆ ಮಾಡಿ ಭಾನುವಾರ ವಾಪಸು ಬೆಂಗಳೂರಿಗೆ ಪ್ರಯಾಣಮಾಡಿದರು.

ದೊಡ್ಡಬಳ್ಳಾಪುರದ ಬ್ರಾಹ್ಮಣ ಕೇರಿಯಲ್ಲಿ ಕಳೆದ ಬುಧವಾರ ಸಾಯಂಕಾಲ ೬ ವರುಷದ ಮಗುವು ಆಡುತ್ತಿದ್ದು ಕಟ್ಟಿಗೆ ಭರ್ತಿ ಗಾಡಿಗೆ ಸಿಕ್ಕಿತೆಂತಲೂ ತುಂಬಾ ಜಖಂ ಆಗಿ ಅಲ್ಲಿನ ಆಸ್ಪತ್ರೆಯಲ್ಲಿ ಗುಣಹೊಂದುತ್ತಿದೆ ಎಂತಲೂ ಕೇಳುತ್ತೇವೆ.

ಮುಂದಿನ ಫೆಬ್ರವರಿ ೨೪ಕ್ಕೆ ಬೆಂಗಳೂರು ಲಾಲ್ ಬಾಗ್ ಉದ್ಯಾನದಲ್ಲಿ ನಡೆಯತಕ್ಕ ಫಲಪುಷ್ಪ ಪ್ರದರ್ಶನದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸರಿನ ಮೇಲೆ ಶ್ರೀಮನ್ ಮಹಾರಾಜರವರು ಚಿನ್ನದ ಮೆಡಲ್ (ಬಿಲ್ಲೆ) ಯನ್ನು ಇನಾಮು ದಯಪಾಲಿಸುವವರಾಗಿದ್ದಾರೆ.

ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಮಹಮ್ಮದ್ ಗುಮಾಸ್ತೆ ...ನಾಯಿಸು ಸರ್ಕಾರಿ ಹಣವನ್ನು ದುರುಪಯೋಗ ಪಡಿಸಿದನೆಂದು ...ಸ್ ಪಟ್ಟರು ವಿಚಾರಣೆ ಮಾಡಿ, ಆತನಿಗೆ ನಾಲ್ಕು ವರುಷ ಕಠಿಣ ಸಜವನ್ನೂ ೬೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು

ಇಲ್ಲಿನ ರೆವಿನ್ಯೂ ಚೇರಿಯಲ್ಲಿದ್ದ ಸರ್ವೆ ಅಮಲ್ದಾರ್ ಮೆ॥ ...ಸಿಂಗಪ್ಪನವರು ಮೊನ್ನೆ ಸೋಮವಾರ ಸ್ವರ್ಗದಲ್ಲಿ ಕಾಲವಾದ ... ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೪ ವರುಷವಾಗಿತ್ತು. ... ದೊಡ್ಡ ಸಂಸಾರಿಗಳಾಗಿಯೂ ಪರೋಪಕಾರಿಗಳಾಗಿಯೂ ಇದ್ದರೆಂದು ತಿಳಿಯಬರುತ್ತದೆ.

ಹಿಂದಿನ ಮಂಗಳವಾರ ಸೀನಿಯರ್ ಸರ್ಜನ್ ಡಾಕ್ಟರ್ ಸ್ಮಿತ್ ... ಶಾಸನಕ್ಕೆ ದಯಮಾಡಿದ್ದಾಗ ಮಿಷನ್ ಸಂಘದವರು ಅಲ್ಲಿ ಕಟ್ಟುವುದಕ್ಕೆ ಏರ್ಪಾಡು ಮಾಡಿರುವ ಹೊಸ ಆಸ್ಪತ್ರೆಗೆ ಅಸ್ತಿಭಾರ ಹಾಕಿದರು. ಈ ಆಸ್ಪತ್ರೆಗೆ ಸುಮಾರು ೩೦,೦೦೦ ರೂಪಾಯಿ ಖರ್ಚಾಗುವುದೆಂದು ಕೇಳುತ್ತೇವೆ.

ಮದರಾಸ್ ಪಟ್ಟಣದಲ್ಲಿ ಪೋಲೀಸ್ ಸೂಪರಿಂಟೆಂಡೆಂಟಾದ ... ಡೇವಿಡ್ ಎಂಬುವರನ್ನು ಮೈಸೂರು ಸರ್ಕಾರದವರು ಕರೆಸಿ, ಕೋಲಾರದ ಪೋಲೀಸ್ ಸೂಪರಿಂಟೆಂಡೆಂಟ್ ಕೆಲಸಕ್ಕೆ ನೇಮಿಸುತ್ತಾರೆ. ಇವರು ಕಳೆದ ೧೫ ನೆ ತಾರೀಖಿನಲ್ಲಿ ಕೆಲಸದ ಚಾರ್ಜನ್ನು ವಹಿಸಿಕೊಂಡರೆಂದು ತಿಳಿದುಬಂದಿದೆ

ಚಿಕ್ಕನಾಯಕನಹಳ್ಳಿ ... ತಾಲ್ಲೂಕುಗಳಿಗೆ ಸೇರಿರುವ ೩೦ ಗ್ರಾಮಗಳ ಜಮೀನುಗಳನ್ನು ಸರ್ಕಾರದವರು ಪುನಹ ... ಮಾಡಿ, ಹೊಸ ದರದ ಕಂದಾಯಗಳನ್ನು ನಿಷ್ಕರ್ಷೆ ಮಾಡಿ, ... ೧೯೦೬—೦೭ನೇ ಸಾಲಿನಿಂದ ಮೂವತ್ತು ವರುಷದವರೆಗೆ ಕಂದಾಯಗಳನ್ನು ವಸೂಲ್ಮಾಡಬೇಕೆಂದು ಪ್ರಕಟಿಸಿದ್ದಾರೆ.

ಕಳೆದ ಗುರುವಾರ ಸಾಯಂಕಾಲ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಂದ ರಾಜಧಾನಿಗೆ ಸುರಕ್ಷಿತರಾಗಿ ದಯಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಇವರ ಸಂಗಡ ಪ್ರೈವೆಟ್ ಸೆಕ್ರೆಟರಿ ಮೆ॥ ...ನಕೆಯವರೂ, ಮೆ॥ ರಾಘವೇಂದ್ರರಾಯರೂ, ಸರ್ದಾರ್ ...ಬಾಲರಾಜೇ ಅರಸಿನವರೂ ಬಂದರು.

ಈ ಸಲ ಮೈಸೂರು ಕಾಲೇಜಿನಲ್ಲಿ ಅಪ್ಪರ್ ಸೆಕೆಂಡರಿ ಪರೀಕ್ಷೆಯ ... ವಿದ್ಯಾರ್ಥಿಯು ಜಲಬಾಧೆಯನ್ನು ತಡೆಯಲಾರದೆ ಹೊರಕ್ಕೆ ಹೋಗಿ ಬರುತ್ತೇನೆಂದು ಪರೀಕ್ಷಾಧಿಕಾರಿಯನ್ನು ಕೇಳಿದ್ದಕ್ಕೆ ಅವರು ಅವನನ್ನು ಕಳುಹಿಸಿದರು ಆದರೆ ಮತ್ತೆ ಬಂದಾಗ ಸೇರಿಸಿಕೊಳ್ಳಲಿಲ್ಲ. ಮರುದಿನದಿಂದ ಪರೀಕ್ಷೆಗೇ ಬಿಡದಂತೆ ಅವನನ್ನು ತಡೆದುಬಿಟ್ಟರು. ಆ ವಿದ್ಯಾರ್ಥಿಯು ಈ ವಿಷಯವಾಗಿ ಅರ್ಜಿ ಬರೆದುಕೊಂಡಿರುವುದಾಗಿ ಕೇಳುತ್ತೇವೆ.

ದಿವಾನರವರು ಕಳೆದ ವಾರ ಕೆಡ್ಡಾ ಕ್ಯಾಂಪಿಗೆ ದಯಮಾಡಿದ್ದರು. ಅಲ್ಲಿ ಕಳೆದ ಶನಿವಾರ ೫೫ ಆನೆಗಳು ಸಿಕ್ಕಿಬಿದ್ದವು. ಅದನ್ನು ನೋಡಿಕೊಂಡು ಅವರು ಭಾನುವಾರ ಸಾಯಂಕಾಲ ರಾಜಧಾನಿಗೆ ಹಿಂತಿರುಗುತ್ತಾರೆ. ಇನ್ನೂ ೩—೪ ದಿನ ಇಲ್ಲೇ ಇರಬಹುದೆಂದು ಕೇಳುತ್ತೇವೆ. ಈ ಸಲ ಕೆಡ್ಡಾ ಕ್ಯಾಂಪಿನಲ್ಲಿ ಅಷ್ಟೊಂದು ಆನೆಗಳು ಸಿಕ್ಕಿದ್ದು ಬಹು ಸಂತೋಷಕರವಾಗಿದೆ. ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಕೆಡ್ಡಾ ಕ್ಯಾಂಪಿನಲ್ಲಿ ಒಳ್ಳೇ ನೋಟಗಳು ಲಭಿಸುವವೆನ್ನುವುದಕ್ಕೆ ಸಂಶಯವಿಲ್ಲ.

ಬೆಂಗಳೂರಿನಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ಒಂದು ಪರಸ್ಪರ ಸಹಾಯಕ ಸಂಘವು ಏರ್ಪಟ್ಟಾಗಿದೆ. ...ದಿನ ಸೋಮವಾರ ಈ ಸಂಘದವರು ದೊಡ್ಡ ಸಭೆಯನ್ನು ಮಾಡಿದರು. ದಿವಾನ್ ಸರ್ ಕೃಷ್ಣಮೂರ್ತಿಯವರು ಅಗ್ರಾಸನವನ್ನು ವಹಿಸಿ, ಈ ಸಂಘದವರೆಲ್ಲಾ ದ್ರವ್ಯವನ್ನು ಕೂಡಿಸಿ, ಈ ಸಂಸ್ಥಾನದಲ್ಲಿ ಬಿಲಾಗುತ್ತಿರುವ ಕೈಗಾರಿಕೆಗಳನ್ನೂ ವ್ಯವಸಾಯವನ್ನೂ ಅಭಿವೃದ್ಧಿಗೆ ತರಬೇಕೆಂತಲೂ ಅವಶ್ಯವಿದ್ದರೆ ಈ ಸಂಘಕ್ಕೆ ಸರ್ಕಾರದ ಸಹಾಯವನ್ನು ಕೊಡಬಹುದೆಂತಲೂ ಉಪನ್ಯಾಸ ಮಾಡಿದರು.

ಕೋಲಾರಕ್ಕೆ ಸೇರಿದ ಛಾಂಪಿಯನ್ ರೀಫ್ ಎಂಬ ಚಿನ್ನದ ಗಣಿಯಲ್ಲಿ ಮೊನ್ನೆ ಭಾನುವಾರ ಸಮರಾತ್ರಿಯಲ್ಲಿ ಒಂದು ದೊಡ್ಡ ಅಪಾಯವಾಯಿತು. ಒಬ್ಬ ಯೂರೋಪಿಯನ್, ಆರು ಜನ ಕೂಲಿಯವರು ಪ್ರಾಣಕಳೆದುಕೊಂಡರು ಒಬ್ಬ ಯೂರೇಷಿಯನಿಗೂ ಐದು ಮಂದಿ ಕೂಲಿಯವರಿಗೂ ತುಂಬಾ ಗಾಯಗಳಾದವು. ಈ ಪೈಕಿ ಒಬ್ಬನು ಆಸ್ಪತ್ರೆಯಲ್ಲಿ ಸತ್ತುಹೋದನು. ಬಾಕಿಯವರು ಬದುಕಿಕೊಳ್ಳುತ್ತಾರೆಂದೂ, ಈ ಅನಾಹುತಕ್ಕೆ ಕಾರಣ ಮುಂತಾದ್ದನ್ನು ಸರ್ಕಾರದವರೂ ಗಣಿಯವರೂ ವಿಚಾರಣೆ ಮಾಡುತ್ತಿದ್ದಾರೆಂದೂ ತಂತೀ ವರ್ತಮಾನ ಬಂದಿದೆ.

ಕರ್ನಲ್ ದೇಶರಾಜೇ ಅರಸಿನವರ ಬಂಗಲೆಯಲ್ಲಿ ಅವರ ಚಾಕರನು ಕೆಲವು ಸಾವಿರ ರೂಪಾಯಿ ಸಾಮಾನುಗಳನ್ನು ಕಳವು ಮಾಡಿದನೆಂತಲೂ ಈ ಮೊಕದ್ದಮೆಯನ್ನು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡುತ್ತಿದ್ದಾರೆಂತಲೂ ತಿಳಿಸಿದ್ದೆವು. ಈ ಮೊಕದ್ದಮೆಯಲ್ಲಿ ಇಬ್ಬರಿಗೆ ಖುಲಾಸಾಯಿತು. ಕೆಂಪನೆಂಬುವನಿಗೆ ೨ ವರುಷ ಕಠಿಣ ಸಜ, ೨೦೦ ರೂಪಾಯಿ ಜುಲ್ಮಾನೆ, ಜುಲ್ಮಾನೆ ಕೊಡದಿದ್ದರೆ ಇನ್ನಾರು ತಿಂಗಳ ಸಜ; ಅವನ ಅಣ್ಣ ಮಾದನಿಗೆ ೧ ವರುಷ ಕಠಿಣ ಸಜ, ೫೦ ರೂಪಾಯಿ ಜುಲ್ಮಾನೆ, ಜುಲ್ಮಾನೆ ಕೊಡದಿದ್ದರೆ ಇನ್ನು ಮೂರು ತಿಂಗಳ ಸಜ; ಇವರ ತಾಯಿ ಕಾಳಿ ಎಂಬುವಳಿಗೆ ೩ ತಿಂಗಳ ಸಜ, ಈ ರೀತಿ ಶಿಕ್ಷೆಯಾಯಿತೆಂದು ವರ್ತಮಾನ ಬಂದಿದೆ

ಮೈಸೂರು ಗೆಜೆಟ್ ಸಂಗ್ರಹ.

ಕಡೂರ್ ಡಿಸ್ಟ್ರಿಕ್ಟ್ ಆಫೀಸ್ ಜುಡಿಷಿಯಲ್ ಹೆಡ್ ಮುನ್ಷಿ ಸ್ವಾಮಿರಾಯರು ಆಗಸ್ಟ್ ೧೬ ರಿಂದ ಅಕ್ಟೋಬರ್ ೨೫ ರ ವರೆಗೆ ತರೀಕೆರೆ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ಕೆಲಸ ನೋಡಿದರು.

ದಿವಾನರವರ ಪ್ರೈವೆಟ್ ಸೆಕ್ರೆಟರಿ ಮೆ॥ ಎಂ. ಶ್ರೀನಿವಾಸ ಮೂರ್ತಿಯವರಿಗೆ ಸೆಪ್ಟೆಂಬರ್ ೪ ರಿಂದ ಅಕ್ಟೋಬರ್ ೩ ರ ವರೆಗೆ ಕಾಯಿಲೆ ರಜಾ ಕೊಟ್ಟಿತ್ತು.

ದಿವಾನರವರ ಪರ್ಸನೆಲ್ ಇಲಾಖಾ ಸೂಪರಿಂಟ್ ಮೆ॥ ಬಿ ವಿ. ಲಕ್ಷ್ಮಣರಾಯರು ಆ ಕಾಲದಲ್ಲಿ ದಿವಾನರವರ ಪ್ರೈವೆಟ್ ಸೆಕ್ರೆಟರಿಯಾಗಿ ಕೆಲಸ ಮಾಡಿದ್ದಾರೆ.

ಎಕ್ಸೈಸ್ ಇಲಾಖಾ ಅ॥ ಕಮಿಷನರ್ ಮೆ॥ ಡನ್ನಿಂಗ್‌ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಎಚ್. ರಾಮಯ್ಯನವರು ತುಂಕೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ವರ್ಗ ಮಾಡಲ್ಪಟ್ಟಿದ್ದಾರೆ.

ಕಡೂರು ಡಿಸ್ಟ್ರಿಕ್ಟ್ ಆಕ್ಟಿಂಗ್ ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಪಿ ಕೃಷ್ಣಮೂರ್ತಿರಾಯರಿಗೆ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮತ್ತೊಂದು ಹುಕುಂ ಹೊರಡುವ ತನಕ ಅಮಲ್ದಾರ್ ಮೆ॥ ವಿ. ಕಂಠೀರವಾಚಾರ್ರನ್ನು ತುಂಕೂರು ತಾಲ್ಲೂಕಿಗೆ ವರ್ಗ ಮಾಡಿದೆ.

ಎಕ್ಸೈಸ್ ಇಲಾಖಾ ಮೆ॥ ಕೆ. ಶ್ರೀಕಂಠಯ್ಯನವರನ್ನು ೫ ನೆ ತರಗತಿಯ ಎಕ್ಸ್ಟ್ರಾ ಅ॥ ಕಮಿಷನರವರ ದರ್ಜೆಯಲ್ಲಿ ಖಾಯಂ ಮಾಡಿದೆ.

ಮೈಸೂರು ಇನ್‌ಫೆಂಟ್ರಿ ೨ ನೆ ಬಟಾಲಿಯನ್ ಕಮಿಷನ್ ರ್ಯಾಂಕಿಯಲ್ಲಿ ಸೈಯದ್ ಅಬ್ದುಲ್ ಅಹಮದ್ ಯವರನ್ನು ಸುಬೇದಾರ್ ಮೇಜರ್ ದರ್ಜೆಗೆ ಬಡ್ತಿ ಮಾಡಿದೆ

ಪ್ರಿನ್ಸ್ ಆಫ್ ವೇಲ್ಸ್‌ರವರ ದೇಶಸಂಚಾರ.

ಆಗ್ರಾಪಟ್ಟಣ

ತಾ. ೧೯ ನೆ ಮಂಗಳವಾರ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಹಿತ ಮೋಟಾರ್ ಗಾಡಿಯಲ್ಲಿ ಕುಳಿತು ಆಗ್ರಾಪಟ್ಟಣದಿಂದ ಸ್ವಲ್ಪ ದೂರದಲ್ಲಿರುವ ಅಕ್ಬರ್ ಬಾದಷಹಾನಿನ ಪಟ್ಟಣವಾದ ಫತೆ ಪೂರ್ ಸಿಕ್ರಿ ಎಂಬ ಹಾಳು ನಗರವನ್ನು ಹೋಗಿ ನೋಡಿಕೊಂಡು ಬಂದು, ಮುಂದಕ್ಕೆ ಪ್ರಯಾಣ ಮಾಡಿದರು.

ಗ್ವಾಲಿಯರ್ ಸಂಸ್ಥಾನ.

ತಾ. ೨೦ನೇ ಬುಧವಾರ ಬೆಳಗ್ಗೆ ಯುವರಾಜರವರು ಪತ್ನಿ ಸಹಿತ ಗ್ವಾಲಿಯರ್ ಸಂಸ್ಥಾನಕ್ಕೆ ದಯಮಾಡಿದರು. ಮಹಾರಾಜರವರು ಪರಿವಾರಸಹಿತ ಸಕಲ ಮರ್ಯಾದೆಗಳೊಡನೆ ರೈಲ್ ಸ್ಟೇಷನಲ್ಲಿ ಕಾದಿದ್ದು ರಾಜದಂಪತಿಗಳನ್ನು ಎದುರುಗೊಂಡರು. ತರುವಾಯ ಯುವರಾಜರವರೂ ಮಹಾರಾಜರವರೂ ಆನೆಯ ಮೇಲೆ ಹತ್ತಿ ಅಂಬಾರಿಯೊಳಗೆ ಕುಳಿತುಕೊಂಡರು. ಅವರ ಪತ್ನಿಯವರು ಇನ್ನೊಂದು ಆನೆಯ ಮೇಲೆ ಕುಳಿತುಕೊಂಡರು ಈ ಆನೆಗಳ ಮೇಲೆ ರಾಜದಂಪತಿಗಳು ಚಿತ್ತೈಸಿ, ಸಕಲ ಮರ್ಯಾದೆಗಳೊಡನೆ ರಾಜಬೀದಿಗಳಲ್ಲಿ ಮೆರವಣಿಗೆಯಾಗಿ ಹೊರಟು, ಕಿಕ್ಕಿರಿಯುತ್ತಿದ್ದ ಪ್ರಜೆಗಳಿಗೆ ದರ್ಶನವನ್ನಿತ್ತರು. ಈ ಮೆರವಣಿಗೆಯು ಅಪೂರ್ವವಾದದ್ದಾಗಿಯೂ ರಾಜದಂಪತಿಗಳಿಗೆ ಪರಮ ಸಂತೋಷಪ್ರದವಾಗಿಯೂ ಇತ್ತು. ಪ್ರಿನ್ಸ್ ಆಫ್ ವೇಲ್ಸ್‌ರವರು ಅರಮನೆಗೆ ದಯಮಾಡಿ, ಅಂಬಾರಿಯಿಂದಿಳಿದು, ವಾದ್ಯಘೋಷಗಳ ಮಧ್ಯೆ ಅರಮನೆಗೆ ಚಿತ್ತೈಸಿದರು. ಮಧ್ಯಾಹ್ನ ಭೇಟಿ ಮರುಭೇಟಿಗಳು ನಡೆದವು. ಗ್ವಾಲಿಯರ್ ಸಂಸ್ಥಾನಕ್ಕೆ ರಾಜಧಾನಿಯಾದ ಲಷ್ಕರ್ ಎಂಬ ಪಟ್ಟಣದಲ್ಲಿ ಸಾಯಂಕಾಲ ಪ್ರಿನ್ಸ್ ಆಫ್ ವೇಲ್ಸ್‌ರವರು ವಿಕ್ಟೋರಿಯಾ ಮೆಮೋರಿಯಲ್ ಮಾರ್ಕೆಟ್ಟನ್ನು ಪ್ರತಿಷ್ಠೆಮಾಡಿ, ಉಪನ್ಯಾಸ ಮಾಡಿದರು ಅಲ್ಲಿಂದ ರಾಜದಂಪತಿಗಳು ಸಾರೋಟುಗಳಲ್ಲಿ ಕುಳಿತು ಪಟ್ಟಣವನ್ನೆಲ್ಲಾ ಸುತ್ತಿ ನೋಡಿಕೊಂಡು ಬಂದರು.

ತಾ ೨೧ನೆ ಗುರುವಾರ ಬೆಳಗ್ಗೆ ಯುವರಾಜರವರು ಗ್ವಾಲಿಯರಿನ ೫,೦೦೦ ಸೈನ್ಯವನ್ನೂ ಕವಾತನ್ನೂ ನೋಡಿ ಸಂತೋಷಪಟ್ಟರು. ಸಾಯಂಕಾಲ ಮೈದಾನಿನಲ್ಲಿ ಸೈನಿಕರು ಮಾಡಿದ ಸಾಹಸ ಚಮತ್ಕಾರ ಕಾರ್ಯಗಳನ್ನು ಪರಾಂಬರಿಸಿ ಅವರಿಗೆ ಬಹುಮಾನಗಳನ್ನು ದಯಪಾಲಿಸಿದರು. ರಾತ್ರಿ ಅರಮನೆಯಲ್ಲಿ ಸಿಂಧಿಯಾ ಮಹಾರಾಜರವರು ರಾಜದಂಪತಿಗಳಿಗೆ ದಿವ್ಯವಾದ ಔತಣವನ್ನು ಮಾಡಿದರು. ಭೋಜನಾನಂತರ ಪರಸ್ಪರ ಮಾತುಕಥೆಗಳು ನಡೆದವು.

ತಾ. ೨೨ ನೆ ಶುಕ್ರವಾರವೂ ಶನಿವಾರ ಸೋಮವಾರಗಳೂ ಯುವರಾಜರವರು ಜಂಗಲಿಗೆ ದಯಮಾಡಿ ಹುಲಿ ಷಿಕಾರಿ ಮಾಡಿದರು. ಮೊದಲನೆ ದಿನ ಒಂದು ಹುಲಿಯು ಅವರ ಗುಂಡಿಗೆ ಸಿಕ್ಕಿ ಮೃತಪಟ್ಟಿತು. ಮರುದಿನವೂ ಪ್ರಿನ್ಸ್ ಆಫ್ ವೇಲ್ಸ್‌ರವರು ಹುಲಿ, ಹೋರಿ ಮೊದಲಾದ ಮೃಗಗಳನ್ನು ಷಿಕಾರಿ ಮಾಡಿದರು ಅರಮನೆಯಲ್ಲಿ ಅವರ ಪತ್ನಿಯವರು ಮಹಾರಾಣಿಯವರ ಸಹವಾಸದಲ್ಲಿ ಬಹು ಸಂತೋಷವಾಗಿ ಕಾಲ ಕಳೆದರು. ಭಾನುವಾರದ ದಿನ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಹಿತ ದೇವಾಲಯಕ್ಕೆ ದಯಮಾಡಿ ಭಗವದಾರಾಧನೆ ಪ್ರಾರ್ಥನಾದಿಗಳನ್ನು ನೆರವೇರಿಸಿದರು

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರು ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಕಳೆದ ನವಂಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ೧೧,೪೩೫ ರೂಪಾಯಿ ಉತ್ಪತ್ತಿಯೂ ೧೧,೦೦೦ ರೂಪಾಯಿ ಖರ್ಚೂ ಆಯಿತು ಆ ತಿಂಗಳಲ್ಲಿ ಜನನ ೧೯೮; ಮರಣ—ಪ್ಲೇಗ್ ೨, ಜ್ವರ ೧೭, ಇತರ ಕಾರಣಗಳಿಂದ ೧೩೦, ಅಂತು ೧೪೯ ಮರಣಗಳಾದವು.

ಚಾಮರಾಜ ಮೊಹಲ್ಲೆಗೂ ನಜರ್‌ಬಾದ್ ಮೊಹಲ್ಲೆಗೂ ಮ್ಯುನಿಸಿಪಾಲಿಟಿಯವರೇ ಸಿಬ್ಬಂದಿ ಇಟ್ಟು ಪಾಯಖಾನೆಗಳನ್ನು ಗುಡಿಸಿ ಚೊಕ್ಕಟ ಮಾಡಿಸಬೇಕೆಂತಲೂ ಇದಕ್ಕಾಗಿ ಅಲ್ಲಿನ ಮನೆಗಳಿಗೆ ತೆರಿಗೆ ಗೊತ್ತುಮಾಡಿ ಪ್ರತಿ ತಿಂಗಳೂ ವಸೂಲ್ಮಾಡಬೇಕೆಂತಲೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿ, ಈ ವಿಷಯದಲ್ಲಿ ಬಾರೀಗೆ ತರುವ ಕಾನೂನ್ ಮಸೂದೆಯನ್ನು ಕಳುಹಿಸಿಕೊಡಬೇಕೆಂದು ಕೇಳಿದ್ದರು. ಮ್ಯುನಿಸಿಪಲ್ ಕಮಿಷನರು ಈ ಸಂಗತಿಯನ್ನು ಚರ್ಚೆ ಮಾಡಿದರು. ಅನೇಕ ಮನೆಗಳಿಗೆ ಪಾಯಖಾನೆಗಳೇ ಇಲ್ಲವೆಂತಲೂ, ಅದನ್ನು ಸಾಗಿಸುವುದಕ್ಕೆ ಗಲ್ಲಿಗಳನ್ನು ಮಾಡಿಕೊಟ್ಟಿಲ್ಲವೆಂತಲೂ, ಕೆಲವು ಕಡೆ ಮನೆಗಳಲ್ಲಿ ಭಾವಿಗಳನ್ನು ಮಾಡಿಕೊಂಡಿದ್ದಾರೆಂತಲೂ ಮೆಂಬರುಗಳು ಸೂಚಿಸಿ, ಈ ಲೋಪಗಳನ್ನೆಲ್ಲಾ ಮೊದಲು ಮ್ಯುನಿಸಿಪಾಲಿಟಿಯವರು ಕ್ರಮಪಡಿಸಿಕೊಡಬೇಕಾಗಿದೆ ಎಂತಲೂ ಇದಕ್ಕೆ ಮುಂಚೆ ತೆರಿಗೆಯನ್ನು ಹಾಕುವುದು ಸರಿಯಾಗಿ ಕಾಣುವುದಿಲ್ಲವೆಂತಲೂ ತಿಳಿಸಿದರು. ವೈಸ್‌ಪ್ರೆಸಿಡೆಂಟರು ಗವರ್ನಮೆಂಟ್ ಸ್ಯಾಂಕ್ಷನ್ ಆಗಿರುವ ಈ ತೆರಿಗೆಯನ್ನು ಕೂಡಲೆ ಹಾಕಿ ಜಾರೀಲಿ ತರಬೇಕೆಂತಲೂ ಅವಕಾಶವಿಲ್ಲದ ಕಡೆ ಬಲಾತ್ಕಾರಮಾಡಿ ಪ್ರಜೆಗಳಿಂದ ಮಾಡಿಸಬೇಕಾಗಿದೆ ಎಂತಲೂ ಹೇಳಿದರು ಕಡೆಗೆ ಬೆಂಗಳೂರಿನಲ್ಲಿರುವ ರೂಲಗಳನ್ನು ತರಿಸಿನೋಡಿ, ಗವರ್ನಮೆಂಟಿಗೆ ಜವಾಬು ಬರೆಯಬೇಕೆಂದು ತೀರ್ಮಾನ ಮಾಡಿದರು

ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಗೆ ದಯಮಾಡುತ್ತಾರಾದಕಾರಣ ಇಲ್ಲಿನ ಕಸ ಕಡ್ಡಿಗಳನ್ನು ತೆಗೆದು ಚಚ್ಚಲ ಮೋರಿಗಳನ್ನು ಪಾಕುಮಾಡುವುದಕ್ಕೂ ಎಲ್ಲಾ ಭಾಗಗಳನ್ನೂ ನಿರ್ಮಲವಾಗಿಡುವುದಕ್ಕೂ ಗವರ್ನಮೆಂಟಿನವರು ೩,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಈ ಹಣವನ್ನು ಮ್ಯುನಿಸಿಪಾಲಿಟಿಯವರು ತಮ್ಮ ಶಿಲ್ಕಿನಿಂದ ಖರ್ಚು ಮಾಡತಕ್ಕದ್ದೆಂದು ಹುಕುಂ ಕೊಟ್ಟಿದ್ದಾರೆ.

ಬೆಳಗೊಳದಿಂದ ನಲ್ಲಿಯ ಮೂಲಕ ರಾಜಧಾನಿಗೆ ಬರುವ ನೀರು ಸುಮಾರು ಅರ್ಧ ಮೈಲಿ ದೂರ ತೆರೆದ ಚಚ್ಚಲಲ್ಲಿ ಹರಿದು ಒಂಟಿಕೊಪ್ಪಲು ಬಳಿ ದೊಡ್ಡ ಕೊಳಗಳಿಗೆ ಬೀಳುತ್ತಿದೆ. ಹಾಗೆ ತೆರೆದಿರುವ ಚಚ್ಚಲನ್ನು ಮುಚ್ಚದೆ ಇರೋಣದರಿಂದ ಜನರು ಅದರಲ್ಲಿ ಹರಿಯುವ ನೀರನ್ನು ಕೊಳಕುಮಾಡುವುದಕ್ಕೆ ಅವಕಾಶವಾಗಿದೆ. ಗವರ್ನಮೆಂಟಿನವರು ಇದನ್ನು ಚಪ್ಪಡಿ ಹೊದಿಸಿ ಮುಚ್ಚಿಸುವುದಕ್ಕೆ ೪,೩೧೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಈ ಹಣವನ್ನು ಮ್ಯುನಿಸಿಪಾಲಿಟಿಯವರು ಕೊಟ್ಟು ಕೆಲಸ ಮಾಡಿಸಬೇಕೆಂದು ತಿಳಿಸಿದರು. ಮೆಂಬರುಗಳು ಈ ವಿಚಾರವನ್ನು ಚರ್ಚಿಸಿ, ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲವಾದಕಾರಣ ಗವರ್ನಮೆಂಟಿನವರೇ ಈ ಖರ್ಚನ್ನು ವಹಿಸಿಕೊಂಡು ಮಾಡಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ

ರಾಜಧಾನಿಯಲ್ಲಿರುವ ಜಯಲಕ್ಷ್ಮೀ ಆರ್ಯಬಾಲಿಕಾ ಪಾಠಶಾಲೆಗೆ ನವಂಬರ್ ೧ ರಿಂದ ಮ್ಯುನಿಸಿಪಾಲಿಟಿಯವರು ತಿಂಗಳಿಗೆ ೧೫ರೂ. ಪಾಯಿನಂತೆ ಗ್ರ್ಯಾಂಟು ಕೊಡಬೇಕೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

ಮೈಸೂರು ಪಟ್ಟಣದಲ್ಲಿ ಅನೇಕ ಮನೆಗಳು ಬೀಗ ಹಾಕಿರೋಣದರಿಂದ ಅವುಗಳ ಮ್ಯುನಿಸಿಪಲ್ ತೆರಿಗೆ ವಸೂಲಾಗುವುದಕ್ಕೆ ಮಾರ್ಗವಿಲ್ಲವೆಂತಲೂ ಬೀಗ ತೆಗೆದು ಒಳಗೆ ಸಿಕ್ಕುವ ಮಾಲನ್ನು ಹರಾಜು ಹಾಕಿದರೆ ಇತರರು ಬಂದು ಆ ಮಾಲುಗಳು ಮನೆ ಮಾಲೀಕನಿಗೆ ಸೇರಿದವುಗಳಲ್ಲವೆಂದು ಪ್ರತಿಭಟಿಸಬಹುದೆಂತಲೂ ಇಂಥಾ ಬಾಕಿಗಳನ್ನು ಯಾವರೀತಿ ವಸೂಲ್ಮಾಡಬೇಕೆಂತಲೂ ವೈಸ್‌ಪ್ರೆಸಿಡೆಂಟರು ಸೂಚಿಸಿ ಕೇಳಿದರು. ಮೆಂಬರುಗಳು ಇಂಥಾ ಸಂದರ್ಭಗಳಲ್ಲಿ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಏನು ಮಾಡುವರೋ ಬರೆದು ಕೇಳಬೇಕೆಂದು ಗೊತ್ತು ಮಾಡಿದರು.

ರಾಜಧಾನಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಏರ್ಪಡಾಗಿರುವ ಟ್ರಸ್ಟ್ ಬೋರ್ಡಿನಲ್ಲಿ ಇಬ್ಬರು ಮ್ಯುನಿಸಿಪಲ್ ಕಮಿಷನರು ಮೆಂಬರಾಗಿರುತ್ತಾರೆ ಮ್ಯುನಿಸಿಪಾಲಿಟಿಯವರು ಇವರನ್ನು ಚುನಾಯಿಸಿ ಎರಡು ವರುಷಗಳಾದವು. ಅವರ ಅಧಿಕಾರಾವಧಿಯು ಪೂರೈಸಿದ್ದರಿಂದ ಇಬ್ಬರು ಮೆಂಬರುಗಳನ್ನು ಟ್ರಸ್ಟ್ ಬೋರ್ಡಿಗೆ ಚುನಾಯಿಸಬೇಕಾಗಿ ಸರ್ಕಾರದಿಂದ ಹುಕುಂ ಬಂದಿತ್ತು. ಮ್ಯುನಿಸಿಪಲ್ ಕಮಿಷನರು ಸಮ್ಮತಿ ಹಾಕಿ ಮತ್ತೆ ಮೆ॥ ಎಲ ವೆಂಕಟಕೃಷ್ಣಯ್ಯನವರನ್ನೂ ಅಡ್ವೋಕೇಟ್ ಮೆ॥ ಎಂ ಸಿ ರಂಗಯ್ಯಂಗಾರ್ರನ್ನೂ ಚುನಾಯಿಸಿರುತ್ತಾರೆ.

ಜೋಯಿಸರೂ ನಕ್ಷತ್ರವೂ.

ಯೇಸುಸ್ವಾಮಿಯು ಬೆತ್ಲೆಹೇಮೆಂಬ ಗ್ರಾಮದಲ್ಲಿ ಹುಟ್ಟಿದ ಕೆಲವು ದಿವಸಗಳ ಮೇಲೆ ಪಾಲಸ್ತೀನ್ ದೇಶದ ರಾಜಧಾನಿಯಾದ ಯೆರೂಸಲೇಮಿಗೆ ಯಾವದೋ ಒಂದು ಪೂರ್ವದಿಗ್ದೇಶದಿಂದ ಕೆಲವು ಮಂದಿ ಜೋಯಿಸರು ಬಂದರು. ಇವರು ಆಕಾಶದಲ್ಲಿ ನಕ್ಷತ್ರಗತಿಯ ವಿಷಯವಾಗಿ ತಿಳಿದಷ್ಟನ್ನು ತಿಳಿದಿದ್ದರು. ಇದಲ್ಲದೆ ಆಕಾಶದಲ್ಲಿ ನಕ್ಷತ್ರಗಳು ಚಲಿಸುವ ಕ್ರಮವನ್ನು ನೋಡಿ ಭವಿಷ್ಯದ್ವರ್ತಮಾನಗಳನ್ನು ತಿಳಿಸುತ್ತೇವೆಂದು ಹೇಳುತ್ತಿದ್ದರು. ಹೀಗೆ ಅವರು ತಮ್ಮ ಶಾಸ್ತ್ರದೊಂದಿಗೆ ಮೂಢಭಕ್ತಿಯನ್ನೂ ಸೇರಿಸಿಕೊಂಡಿದ್ದರು ಮತ್ತು ಇವರಲ್ಲಿ ಸತ್ಯವೂ ತಪ್ಪಭಿಪ್ರಾಯವೂ ಮಿಶ್ರವಾಗಿದ್ದವು. ಇವರು ಯೆರೂಸಲೇಮಿಗೆ ಬಂದು—ನಾವು ನಮ್ಮ ದೇಶದಲ್ಲಿರುವಾಗ್ಯೆ ಅಪೂರ್ವವಾದ ಒಂದು ನಕ್ಷತ್ರವನ್ನು ಕಂಡೆವು. ಆದದರಿಂದ ಯೆಹೂದ್ಯರ ದೇಶದಲ್ಲಿ ಒಬ್ಬ ಅರಸನು ಹುಟ್ಟಿದ್ದಾನೆಂದು ಸೂಚನೆಯುಂಟಾಯಿತು ಎಂದು ಹೇಳುತ್ತಾ ತಿರುಗಿದರು. ಮತ್ತು ರಾಜನಾಗಿ ಹುಟ್ಟಿರುವ ಕೂಸನ್ನು ನೋಡಿ ಪೂಜಿಸಿಕೊಂಡು ಬರಬೇಕೆಂತಲೇ ಈ ನಕ್ಷತ್ರವು ತಮಗೆ ಕಾಣಿಸಿಕೊಂಡಿತೆಂದು ಊಹಿಸಿ ಆ ರಾಜಧಾನಿಗೆ ಬಂದು ಆ ರಾಜಕುಮಾರನು ಹುಟ್ಟಿರುವದೆಲ್ಲಿ ಎಂಬದಾಗಿ ಅರಮನೆಯಲ್ಲಿ ವಿಚಾರಿಸಿದರು.

ಆ ಅರಮನೆಯಲ್ಲಾದರೋ ಯಾವ ರಾಜಪುತ್ರನೂ ಹೊಸದಾಗಿ ಹುಟ್ಟಿರಲಿಲ್ಲ. ಆ ರಾಜನಾದರೋ ಬಹು ದುಷ್ಟನು, ಕ್ರೂರಾತ್ಮನು, ಪ್ರಜೆಗಳೆಲ್ಲಾ ಯಾವ ಸಮಯದಲ್ಲಿ ದಂಗೆ ಏಳುವರೋ ಎಂಬದಾಗಿ ನಿರಂತರವಾದ ಭೀತಿಗೆ ಒಳಪಟ್ಟವನಾಗಿದ್ದನು. ಇದಲ್ಲದೆ ಆ ಜನಗಳಲ್ಲಿ ಒಬ್ಬ ರಾಜಕುಮಾರನು ಹುಟ್ಟಿ ಕೈತಪ್ಪಿಹೋಗಿದ್ದ ರಾಜ್ಯವನ್ನು ಪುನಃ ಸ್ಥಾಪಿಸಿ ಮೊದಲಿಗಿಂತಲೂ ಅಧಿಕ ಮಹಿಮೆಯಿಂದ ಕೂಡಿದ ರಾಜ್ಯವನ್ನಾಗಿ ಮಾಡುವನೆಂದೂ ಆ ಕಾಲವು ಬೇಗ ಬರುವದರಲ್ಲಿದೆಯೆಂದೂ ಒಂದು ನಿರೀಕ್ಷೆಯು ಸರ್ವಸಾಧಾರಣವಾಗಿರುವ ವಿಷಯವನ್ನು ಈ ರಾಜನು ತಿಳಿದಿದ್ದನು. ಆದಕಾರಣ ಈ ಪಂಡಿತರು ಬಂದು ಹೊಸದಾಗಿ ಹುಟ್ಟಿದ ರಾಜನೆಲ್ಲಿದ್ದಾನೆಂದು ವಿಚಾರಿಸಲು ಇವರ ಮಾತನ್ನು ಕೇಳಿ ಜನರೆಲ್ಲರೂ ದಂಗೆ ಎದ್ದು ತನ್ನನ್ನು ಸಿಂಹಾಸನದಿಂದ ತಳ್ಳಿಬಿಟ್ಟು ಆ ಹೊಸ ದೊರೆಯನ್ನು ನೇಮಿಸಿಕೊಳ್ಳುವರೇನೋ ಎಂದು ಅತಿ ಭಯಸ್ಥನಾದನು. ಹೀಗೆ ಮನಸ್ಸಿನಲ್ಲಿ ಭಯವಿದ್ದರೂ ಹೊರಗೆ ತೋರಿಸಿಕೊಳ್ಳದೆ, ಆ ಮಗುವು ಹುಟ್ಟಿದ ವಿಷಯದಲ್ಲಿ ತನಗೆ ಬಹು ಸಂತೋಷವುಂಟಾಯಿತೆಂದು ನಟಿಸುತ್ತ ಸಮಯಸಿಕ್ಕಿದಾಗ್ಗೆ ಅವನನ್ನು ಕೊಲ್ಲಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು. ತರುವಾಯ ಆ ದೇಶದಲ್ಲಿದ್ದ ಶಾಸ್ತ್ರಿಗಳನ್ನು ಕರೆಯಿಸಿ ಸಭೆಮಾಡಿ ಆ ರಾಜಕುಮಾರನು ಹುಟ್ಟುವ ಸ್ಥಳವು ಯಾವದು? ಎಂದು ವಿಚಾರಿಸಿದನು. ಅವರು—ಬೆತ್ಲೆಹೇಮ್‌ಪುರವೇ ಎಂದು ಹೇಳಿದರು. ಆಗಲಾ ಕಪಟಿಯಾದ ರಾಜನು ಪೂರ್ವದಿಗ್ದೇಶದಿಂದ ಬಂದಿದ್ದ ಜೋಯಿಸರನ್ನು ಕರೆಯಿಸಿ ಬೆತ್ಲೆಹೇಮಿಗೆ ಕಳುಹಿಸಿದ್ದಲ್ಲದೆ—ನಿಮಗೆ ಆ ಮಗುವು ದೊರಕಿದಮೇಲೆ ಹಿಂದಿರುಗಿ ಬಂದು ನನಗೆ ಹೇಳಬೇಕು ಆಗ ನಾನೂ ಬಂದು ಪೂಜಿಸುವೆನು ಎಂದು ಹೇಳಿದನು.

ಜೋಯಿಸರು ಆ ಊರಿಗೆ ಪಯಣವಾಗಿ ಹೊರಟರು. ಆಗ ಹಿಂದೆ ತಮ್ಮ ದೇಶದಲ್ಲಿ ಕಾಣಿಸಿಕೊಂಡಿದ್ದ ಆ ಅಪೂರ್ವ ನಕ್ಷತ್ರವೇ ಪುನಃ ಕಾಣಿಸಿಕೊಂಡು ಮುಂದೆ ಮುಂದೆ ನಡೆಯುತ್ತಿರಲು ಅದನ್ನು ಈ ಜೋಯಿಸರು ಹಿಂಬಾಲಿಸಿ ಬೆತ್ಲೆಹೇಮಿಗೆ ಬಂದು ಸೇರಿದರು. ತರುವಾಯ ಆ ನಕ್ಷತ್ರವು ಯಾವ ಮನೆಗೆ ಮೇಲ್ಗಡೆಯಲ್ಲಿ ಸರಿಯಾಗಿ ನಿಂತಿತ್ತೋ ಆ ಮನೆಯೊಳಗೆ ಹೊಕ್ಕು ನೋಡುವಲ್ಲಿ ಕೂಸಾಗಿರುವ ಯೇಸುಸ್ವಾಮಿಯು ಅವರಿಗೆ ಗೋಚರಿಸಿದನು. ಅವರು ಅತಿ ಸಂತೋಷಪಟ್ಟು ತಮ್ಮೊಡನೆ ತಂದಿದ್ದ ಚಿನ್ನವನ್ನೂ ಧೂಪವನ್ನೂ ಆತನಿಗೆ ಒಪ್ಪಿಸಿ ಪೂಜಿಸಿದರು. ಅನಂತರ ಯೆರೂಸಲೇಮಿಗೆ ಹೋಗಕೂಡದೆಂದು ದೇವರಿಂದ ಅಪ್ಪಣೆಯನ್ನು ಹೊಂದಿ ಹೆರೋದನನ್ನು ನೋಡದೇ ತಮ್ಮ ದೇಶಕ್ಕೆ ಬೇರೆ ಮಾರ್ಗವಾಗಿ ಹಿಂದಿರುಗಿ ಹೋದರು.

ಈ ವೃತ್ತಾಂತವನ್ನು ನೋಡಲಾಗಿ—ಸಂಪೂರ್ಣವಾಗಿ ನಿಶ್ಚಯವಿಲ್ಲದ ಅಭಿಪ್ರಾಯವನ್ನು ಹಿಡಿದಿರುವವರೂ ಸಹ ಸತ್ಯವನ್ನು ಗ್ರಹಿಸತಕ್ಕವರಾಗಬಹುದೆಂದು ತೋರ್ಪಡುತ್ತದೆ. ಇವರಿಗೆ ಅಪೂರ್ವವಾದ ನಕ್ಷತ್ರವು ಕಾಣಿಸಲಿಲ್ಲವೆಂದೂ, ಆ ನಕ್ಷತ್ರವು ಸಾಧಾರಣವಾದುದಾಗಿದ್ದರೂ ಇವರು ತಿಳಿಯದೆ ಅದೊಂದು ಅತಿಶಯವಾದ ನಕ್ಷತ್ರವೆಂದು ಊಹಿಸಿದರೆಂಬದಾಗಿ ಕೆಲವರು ಭಾವಿಸುವರು. ಇನ್ನು ಕೆಲವರು—ಇದೆಲ್ಲಾ ಆ ಜೋಯಿಸರ ಊಹೆಯೇ ಹೊರತು ಯಾವದೂ ನಿಜವಾಗಿ ನಡೆದದ್ದೇ ಅಲ್ಲವೆಂದು ಹೇಳುವದಲ್ಲದೆ ನಕ್ಷತ್ರವು ಮುಂದೆ ನಡೆದು ಹೋಯಿತೆಂಬದೂ ಒಂದು ಮನೆಯ ಮೇಲ್ಗಡೆ ನಿಂತಿತೆಂಬವದೂ ಶುದ್ಧ ಭ್ರಮೆಯೇ ಎಂತಲೂ ಸಾಧಿಸುವರು. ಈ ಊಹೆಗಳೆಲ್ಲಾ ಹಾಗಿರಲಿ. ಆ ಜೋಯಿಸರಾದರೋ, ದೇವರು ತನ್ನ ಚಿತ್ತವನ್ನು ನಕ್ಷತ್ರಗತಿಯ ಮೂಲಕವಾಗಿ ತಿಳಿಯಪಡಿಸುತ್ತಾನೆಂದು ದೃಢವಾಗಿ ನಂಬಿದ್ದರು. ಇದರಲ್ಲೇನೂ ಸಂಶಯವಿಲ್ಲ. ಮತ್ತು ಆ ಸ್ವಾಮಿಯ ಚಿತ್ತವೇನೆಂದು ಗ್ರಹಿಸುವದಕ್ಕಾಗಿಯೇ ನಕ್ಷತ್ರಗತಿಯನ್ನು ಪರೀಕ್ಷಿಸುತ್ತಿದ್ದರು. ಅವರು ಯಾವದನ್ನು ನಂಬಿದ್ದರೋ ಅದನ್ನು ಹಿಡಿದಿದ್ದದ್ದಲ್ಲದೆ ಹೊಸದಾಗಿ ತಿಳಿದ ಸತ್ಯವನ್ನು ಸ್ವೀಕರಿಸುವದಕ್ಕೂ ಹೆದರಲಿಲ್ಲ. ಅವರು ಯಾವದನ್ನು ನಿಜವೆಂದು ನಂಬಿದ್ದರೋ ಅದನ್ನೇ ದೇವರು ಸಾಧನವಾಗಿ ಮಾಡಿಕೊಂಡು ಅವರು ಬೇರೆ ಯಾವ ವಿಧದಲ್ಲಿಯೂ ಗ್ರಹಿಸಲಾರದ ಸತ್ಯವನ್ನು ಅವರಿಗೆ ತಿಳಿಯಪಡಿಸಿದನು.

ಇದೇ ವಿಷಯವನ್ನು ಬೇರೆ ದೃಷ್ಟಾಂತಗಳಿಂದಲೂ ಸ್ಥಾಪಿಸಬಹುದು. ಒಂದಾನೊಂದು ದಿನ ಆ ಯೇಸುಸ್ವಾಮಿಯು ಒಂದು ಗುಂಪಿನಲ್ಲಿ ಹಾದು ಹೋಗುತ್ತಿರುವಾಗ್ಗೆ ಆತನ ಬಟ್ಟೆಗಳಲ್ಲಿಯೂ ಏನೋ ಒಂದು ಶಕ್ತಿಯು ಇದೆಯೆಂತಲೂ ಅದನ್ನು ಮುಟ್ಟಿದ ಮಾತ್ರದಲ್ಲಿಯೇ ಎಂಥ ರೋಗವಿದ್ದರೂ ಪರಿಹಾರವಾಗುತ್ತದೆಂತಲೂ ತಿಳಿದಿದ್ದ ಒಬ್ಬ ರೋಗಿಷ್ಠಳಾದ ಹೆಂಗಸು ಹಿಂದಿನಿಂದ ಬಂದು ಆತನ ಉಡುಪಿನ ಅಂಚನ್ನು ಮುಟ್ಟಿದಳು. ಅವಳ ನಂಬಿಕೆಯಂತೆಯೇ ಆಕೆಗೆ ಸ್ವಸ್ಥವಾಯಿತು. ಆ ಸ್ವಸ್ಥತೆಯು ಸ್ವಾಮಿಯ ಬಟ್ಟೆಯಿಂದ ಉಂಟಾಗಲಿಲ್ಲ. ಆದರೆ ಆಕೆಯಲ್ಲಿದ್ದ ನಂಬಿಕೆಯ ದೆಸೆಯಿಂದಲೇ ಉಂಟಾಯಿತೆಂದು ಸ್ವಾಮಿಯು ಹೇಳಿದನು. ಆಕೆಯು ತಪ್ಪಾಗಿ ತಿಳಿದುಕೊಂಡು ಬಂದರೂ ಆಕೆಗೆ ಸತ್ಯವನ್ನು ತಿಳಿಯಪಡಿಸುವದಕ್ಕೆ ಆ ತಪ್ಪಭಿಪ್ರಾಯವನ್ನೇ ಸ್ವಾಮಿಯು ಒಂದು ನಿಮಿತ್ತವನ್ನಾಗಿ ಮಾಡಿದನು.

ಸುಮಾರು ೩೦೦ ವರುಷಗಳಿಗೆ ಹಿಂದೆ ಯೂರೋಪ್ ಖಂಡದಲ್ಲಿ ಮಾರ್ಟಿನ್ ಲೂಥರನೆಂಬೊಬ್ಬ ಮನುಷ್ಯನು ಜೀವಿಸುತ್ತಿದ್ದನು. ಆತನು ತಿಳಿದಿದ್ದ ಸತ್ಯದ ಜೊತೆಯಲ್ಲಿ ತುಂಬಾ ಮೂಢಭಕ್ತಿಯು ಇದ್ದಿತು. ಈತನು ಪಾಪಗಳನ್ನು ಕಳೆದುಕೊಂಡು ಪವಿತ್ರನಾಗಬೇಕೆಂದು ಅಪೇಕ್ಷಿಸಿದನು. ಅಂಥ ಪುಣ್ಯವನ್ನು ಪಡೆಯುವದಕ್ಕೋಸ್ಕರ ರೋಮ್‌ನಗರದಲ್ಲಿ ಪ್ರಸಿದ್ಧವಾದ ದೇವಾಲಯಕ್ಕೆ ಹಾಕಿರುವ ಕಲ್ಲಿನ ಸೋಪಾನಗಳನ್ನು ಬರೀ ಮೊಣಕಾಲಿನಿಂದಲೇ ಹತ್ತಿ ಹೋಗಬೇಕೆಂಬ ಕಟ್ಟಳೆಯು ಆ ಕಾಲದಲ್ಲಿ ರೂಢಿಯಾಗಿತ್ತು. ಈ ಮಾರ್ಟಿನ್ ಲೂಥರನು ಕಟ್ಟಳೆಯ ಪ್ರಕಾರ ಆ ಸೋಪಾನಗಳನ್ನು ಹತ್ತಿ ಅರ್ಧದೂರದ ವರೆಗೂ ಹೋಗುವದರೊಳಗಾಗಿ ಆತನಲ್ಲಿ ಒಂದು ಧ್ವನಿಯು ಕೇಳಿಬಂತು. ಅದೇನಂದರೆ—"ನೀತಿವಂತರು ನಂಬಿಕೆಯ ಮುಖಾಂತರವಾಗಿಯೇ ಜೀವಿಸುವರು" ಈ ವೇದವಾಕ್ಯವನ್ನು ಆತನು ಸ್ಮರಿಸಿಕೊಂಡ ಕೂಡಲೆ ತನ್ನ ದೇಹದಂಡನೆಯಿಂದ ಯಾವ ಪ್ರಯೋಜನವೂ ಇಲ್ಲವೆಂದು ನಿಶ್ಚಯಿಸಿಕೊಂಡು ಎದ್ದು ನಿಂತು ಇಳಿದು ಬಂದು ಅಂದಿನಿಂದ ಯೇಸುಕ್ರಿಸ್ತಸ್ವಾಮಿಯಲ್ಲಿ ಪೂರ್ಣನಂಬಿಕೆಯುಳ್ಳವನಾಗಿ ಪರಿಶುದ್ಧ ಜೀವಿತವನ್ನು ಪ್ರಕ್ರಮಿಸಿದನು.

ನಮ್ಮ ದೇಶೀಯರು ಸರ್ವಸಾಧಾರಣವಾಗಿ—ಸಕಲ ಮತತತ್ವವೂ ಒಂದೇ ಎಂದು ಹೇಳುವದುಂಟು. ಇದನ್ನು ನಾವು ಒಪ್ಪಲಾರೆವು. ಸಕಲ ಮತತತ್ವಗಳೂ ಒಂದೇ ಅಲ್ಲ. ಯಾವಾತನು ಯಥಾರ್ಥವಾಗಿ ಸತ್ಯವನ್ನು ಕಂಡುಹಿಡಿಯಬೇಕೆಂದು ಭಕ್ತಿಯಿಂದ ಪ್ರಯತ್ನಿಸುತ್ತಾನೋ ಆತನಿಗೆ ಆ ಮತವು ಕ್ರಿಸ್ತನ ಬಳಿಗೆ ನಡಿಸಿಕೊಂಡು ಹೋಗುವ ಸಾಧಕವಾಗಿ ಪರಿಣಮಿಸಬಹುದು. ನಾನಾ ಅಭಿಪ್ರಾಯಗಳನ್ನು ಹಿಡಿದಿರುವವರು ಯಥಾರ್ಥವಂತರಾಗಿದ್ದರೆ ಸತ್ಯವಾದ ಹೊಸ ಸಂಗತಿಗಳು ಯಾವ ಯಾವ ವಿಧದಲ್ಲಿ ಬಂದರೂ ಅವುಗಳನ್ನೂ ಅನುಸರಿಸಲೂ ಸಿದ್ಧರಾಗಿರುವರು. ನಾವೆಲ್ಲರೂ ಯಥಾರ್ಥವಾದಿಗಳಾಗಿರುವಂತೆಯೂ ಸತ್ಯದ ಬಳಿಗೆ ನಡಿಸಿಕೊಂಡು ಹೋಗುವಂತೆಯೂ ದೇವರು ಸಹಾಯ ಮಾಡಲಿ!

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯವಿಷಯಗಳು.

ರೈಲ್ವೆ ವಿಚಾರಗಳು

ಕೋಲಾರ್ ಡಿಸ್ಟ್ರಿಕ್ಟಿನ ಮೆಂಬರುಗಳು—ಬೌರಿಂಗ್ ಪೇಟೆಯಿಂದ ಮದನಪಲ್ಲಿಗೂ, ಕಬ್ಬಾಳೆಶ್ವರದಿಂದ ಚಿಂತಾಮಣಿಗೂ, ಬೌರಿಂಗ್‌ಪೇಟೆಯಿಂದ ಕೋಲಾರಕ್ಕೂ ರೈಲ್‌ರಸ್ತೆಗಳನ್ನು ಹಾಕಿಸಿ ಕೊಡಬೇಕು. ಆಕಡೆಗಳ ಆಮದು ರಫ್ತು ಬಹಳವಾಗಿರೋಣದ್ದರಿಂದ ಪ್ರಜೆಗಳಿಗೆ ಸೌಕರ್ಯವೂ ಸರ್ಕಾರಕ್ಕೆ ಫಾಯಿದೆಯೂ ಆಗುವದರಲ್ಲಿ ಸಂಶಯವಿಲ್ಲ.

ದಿವಾನರವರು—ಈ ವಿಷಯವನ್ನು ಯೋಚಿಸುತ್ತಾ ಇದ್ದೇವೆ, ಇನ್ನೂ ಪರಿಹರಿಸಲಿಲ್ಲ.

ಬಗಲೂರು ಮ॥ ನರಸಿಂಗಪ್ಪನವರು—ಕೋಟ್ಟೂರಿನಿಂದ ಬಗಲೂರಿಗೆ ಫೈಲ್‌ರಸ್ತೆ ಹಾಕಿಸಿಕೊಡಬೇಕು.

ದಿವಾನರವರು—ರೈಲ್ವೆ ಕಂಪನಿಯವರು ಈ ರಸ್ತೆಯನ್ನು ಹಾಕಬಹುದೇ ಎಂದು ನಮ್ಮನ್ನು ಕೇಳಿದರು. ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲವೆಂದು ತಿಳಿಸಿದ್ದೇವೆ. ನೋಡೋಣ.

ಹುಣಸೂರು ಮ॥ ನರಸಿಂಗರಾಯರು—ಮೈಸೂರಿಂದ ಹುಣಸೂರಿಗೆ ರೈಲಾದರೆ ಸರ್ಕಾರಕ್ಕೆ ತುಂಬಾ ಆದಾಯ ಬಂದೀತು. ಹುಣಸೂರು ದೊಡ್ಡ ವ್ಯಾಪಾರಸ್ಥಳ. ಲಕ್ಷ್ಮಣತೀರ್ಥಕಟ್ಟೆ, ಯಡತೊರೆ, ಈ ಊರುಗಳ ಮೇಲೆ ರಸ್ತೆ ಹಾಕಬೇಕು.

ದಿವಾನರವರು—ಇದಕ್ಕೆಲ್ಲಾ ಹಣ ಬೇಕಾಗುವದು. ಒಳ್ಳೇದು, ನೋಡೋಣ.

ಮಾಲೂರು ಮ॥ ರಾಮರಾಯರು—ನವರಾತ್ರಿ ಮೊದಲಾದ ಉತ್ಸವಕಾಲಗಳಲ್ಲಿ ಮೂರನೇ ತರಗತಿಯ ಪ್ರಯಾಣಿಕರಿಗೆ ಸ್ಟೇಷನುಗಳಲ್ಲಿ ಟಿಕೀಟು ಸಿಕ್ಕುವದು ತುಂಬಾ ಪ್ರಯಾಸ. ಅನೇಕರು ತಮ್ಮ ಗಂಟುಮೂಟೆಗಳನ್ನು ಕಳಕೊಳ್ಳುತ್ತಾರೆ. ರೈಲ್ವೆಯವರು ಸರ್ವದಾ ಟಿಕೀಟುಗಳನ್ನು ವಿಕರಿಮಾಡುವಂತಾದರೆ, ಈ ತೊಂದರೆ ಇರುವುದಿಲ್ಲ. ಮದ್ದೂರು ರೈಲ್ವೆ ಸ್ಟೇಷನಿನಲ್ಲಿ ೩ ನೇ ತರಗತಿಯ ಪ್ರಯಾಣಿಕರು ನಿಲ್ಲುವುದಕ್ಕೆ ಸ್ಥಳವಿಲ್ಲದೆ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಈ ತೊಂದರೆಯನ್ನು ತಪ್ಪಿಸಿ ಕೊಡಬೇಕು.

ದಿವಾನರವರು—ಒಳ್ಳೇದು. ಈ ಸಂಗತಿಯನ್ನು ರೈಲ್ವೆ ಕಂಪನಿಯವರಿಗೆ ತಿಳಿಸುತ್ತೇವೆ.

ಇತರ ವಿಷಯಗಳು

ಕೆಲವು ಮೆಂಬರುಗಳು—ನಮ್ಮ ಸಂಸ್ಥಾನದಲ್ಲಿ ಅನಾಥರಾದ ಮಕ್ಕಳು ಬಹುಮಂದಿ ಇರುತ್ತಾರೆ. ಪ್ರತಿ ಡಿಸ್ಟ್ರಿಕ್ಟಿನಲ್ಲೂ ಒಂದು ಅನಾಥಾಲಯವನ್ನಿಡಿಸಿದರೆ ಸರ್ಕಾರಕ್ಕೆ ತುಂಬಾ ಪುಣ್ಯಬರುವುದು. ಜನರಿಗೆ ಸನ್ಮಾರ್ಗವನ್ನು ಕಲಿಸುವುದಕ್ಕೆ ಸಹಾಯವಾಗುತ್ತದೆ.

ದಿವಾನರವರು—ಈಗ ಮೈಸೂರು ಪಟ್ಟಣದಲ್ಲೊಂದು ಬೆಂಗಳೂರಿನಲ್ಲೊಂದು ಅನಾಥಾಲಯಗಳಿರುತ್ತವೆ. ಇನ್ನು ಕೆಲವುಕಾಲ ಹೀಗೇ ನಡಿಯಲಿ. ಮುಂದೆ ನೋಡೋಣ.

ಮೈಸೂರು ಮ॥ ವೆಂಕಟಕೃಷ್ಣಯ್ಯನವರು—ಸರ್ಕಾರದವರು ಸಾಹುಕಾರರಿಂದಾದ ಪುಸ್ತಕ ಭಂಡಾರಗಳಿಗೆ ಆಗಿಂದಾಗ್ಯೆ ದ್ರವ್ಯ ಸಹಾಯ ಮಾಡಬೇಕು. ಪ್ರಜೆಗಳು ಇದರಿಂದ ತುಂಬಾ ಪ್ರಯೋಜನವನ್ನು ಪಡೆಯುತ್ತಾರೆ.

ದಿವಾನರವರು—ಒಳ್ಳೇದು, ಹಣ ಒದಗಿದ ಹಾಗೆ ಮಾಡೋಣ.

ಚಿತ್ರದುರ್ಗದ ಮ॥ ಗೋಪಾಲಯ್ಯನವರು—ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಿಗೆ ಕನ್ನಡದ ಸರ್ಕಾರಿ ಗೆಜೆಟ್ಟನ್ನು ಧಾರಾಳನೆ ಕೊಡಿಸಬೇಕು.

ದಿವಾನರವರು—ನಿಮ್ಮ ಉದ್ದೇಶವೇನು? ವರುಷಕ್ಕೆ ೧॥ ಅಥವಾ ೧॥। ರೂಪಾಯಿ ಕೊಟ್ಟರೆ ಗೆಜೆಟ್ಟನ್ನು ತರಿಸಿಕೊಳ್ಳಬಹುದು. ಹೆಚ್ಚೇನು? ಒಂದುವೇಳೆ ನಾವು ಛಾರ್ಜಿಲ್ಲದೆ ಕೊಟ್ಟರೂ ಮೆಂಬರುಗಳು ಬದಲಾವಣೆಯಾಗುತ್ತಾರಾದ್ದರಿಂದ ಪ್ರಯೋಜನವಾಗುವದಿಲ್ಲ. ಆದಕಾರಣ ಛಾರ್ಜಿಲ್ಲದೆ ಗೆಜೆಟ್ಟು ಕೊಡಲಾಗದು.

ಮೈಸೂರು ತಾ॥ ಮ॥ ಲಿಂಗೇಗೌಡರು—ಶ್ಯಾನುಭೋಗರಿಗೂ ಪಟೇಲರಿಗೂ ಸರ್ಕಾರದವರು ಗೆಜೆಟ್ಟಿನಲ್ಲಿ ಪ್ರಕಟಿಸುವ ರೂಲುಸು ತಿಳಿಯುವುದಕ್ಕೆ ಅವಕಾಶವಿಲ್ಲ. ಗೆಜೆಟ್ಟಿನ ಛಾರ್ಜನ್ನು (ವರುಷದ [illegible]ದಾ) ಕಡಿಮೆ ಮಾಡಿ ಅವರಿಗೆ ೧ ರೂಪಾಯಿಗೆ ಕೊಡುವಂತೆ ಅಪ್ಪಣೆ ಕೊಡಿಸಬೇಕು.

ದಿವಾನರವರು—ಸರ್ಕಾರಿ ಗೆಜೆಟ್ಟನ್ನು ಲಾಭಸಂಪಾದಿಸಬೇಕೆಂಬ ಉದ್ದೇಶದಿಂದ ಪ್ರಕಟಿಸುವದಿಲ್ಲ. ಅದಕ್ಕೆ ತಗಲುವ ಖರ್ಚು ಚಂದಾಹಣದ ಮೂಲಕ ಉತ್ಪತ್ತಿಯಾದರೆ ಸಾಕಾಗಿದೆ. ಅದರ ಖರ್ಚ[illegible]ಗುತ್ತೆಂದು ವಿಚಾರಿಸಿದ್ದೇವೆ. ಈಗಿರುವ ಚಂದಾದರವನ್ನು ಕಡಿಮೆಮಾಡಲು ಆಗುವುದಿಲ್ಲ.

ದೇವನಹಳ್ಳಿ ಮ॥ ಟಿ ಶ್ರೀಕಂಠರಾಯರು—ಸರ್ಕಾರದವರು ಪ್ರಕಟಿಸುವ ಪ್ರೊಸೀಡಿಂಗ್ಸ್ ನಕಲುಗಳು ಅಮಲ್ದಾರರಿಗೆ ಬಿಡಿಬಿಡಿಯಾಗಿ ಬರುತ್ತವೆ. ಅವನ್ನೆಲ್ಲಾ ಕೂಡಿಸಿ ಕಾಪಾಡುವುದು ಕಷ್ಟ. ಅಚ್ಚಾದ ಪ್ರೊಸೀಡಿಂಗ್ಸ್ ಪುಸ್ತಕಗಳನ್ನು ಕಳುಹಿಸಿದರೆ ತುಂಬಾ ಅನುಕೂಲವಾದೀತು.

ದಿವಾನರವರು—ಇದು ಸಾಧ್ಯವಲ್ಲ.

ನಗರ ತಾ॥ ಮ॥ ಸಾಹುಕಾರ್ ನಾಗಪ್ಪನವರು ಮೊದಲಾದವರು—ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಸರ್ಕಾರದವರು ತಾಲ್ಲೂಕು ಅಮಲ್ದಾರರನ್ನು ಕರೆಸಿಕೊಂಡರೆ ಮೆಂಬರುಗಳು ಗವರ್ನಮೆಂಟಿಗೆ ಅರಿಕೆ ಮಾಡಿಕೊಳ್ಳತಕ್ಕ ವಿಚಾರಗಳೂ ಅವರ ಕಷ್ಟ ಅನಾನುಕೂಲಗಳೂ ಅಮಲ್ದಾರರಿಗೆ ತಿಳಿಯುವುದಕ್ಕೆ ಅವಕಾಶವಾಗುತ್ತದೆ.

ದಿವಾನರವರು—ಇದು ಸಾಧ್ಯವಲ್ಲ. ತಾಲ್ಲೂಕ್ ಜತಿನಲ್ಲಿ [illegible]ಯುವ ಕೆಲಸಗಳಿಗೆ ಅಡ್ಡಿಯಾಗುತ್ತದೆ.

ಶಿವಮೊಗ್ಗೆ ಮ॥ ಎಸ್ ಆರ್ ಬಾಲಕೃಷ್ಣರಾಯರು—ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸುವ ರೂಲುಸು ಬಹುಕಾಲದಿಂದ ಒಂದೇರೀತಿಯಲ್ಲಿರುತ್ತದೆ. ವಿದ್ಯಾವಂ[illegible] ಹೆಚ್ಚಿದ ಹಾಗೆಲ್ಲಾ ಅವರಿಗೂ ಮೆಂಬರಾಗಿರುವುದಕ್ಕೆ ಅವಕಾಶವಾಗುವಂತೆ ರೂಲುಸನ್ನು ಕಾಲಾನುಗುಣ್ಯವಾಗಿ ಬದಲಾಯಿಸಿ, ಈ ಸಭೆಯನ್ನು ಒಳ್ಳೇಸ್ಥಿತಿಗೆ ತಂದಿಡಬೇಕು. ಹತ್ತು ವರುಷದಿಂದ ಲಾಯ[illegible]ರಿತಕ್ಕವರು ಮೆಂಬರುಗಳಾಗಿ ಬರಬಹುದೆಂದೂ ಕಂದಾಯ ವಿ[illegible]ವಾಗಿ ಕೊಡುವುದನ್ನೇ ಪ್ರಧಾನವಾಗಿಟ್ಟುಕೊಳ್ಳಕೂಡದೆಂದೂ ರೂಲುಸು ಬದಲಾಯಿಸಬೇಕು.

ದಿವಾನರವರು—ಲಾಯರಾಗಿರತಕ್ಕವರು (ಬಿ ಎ, ಬಿ ಎಲ್[illegible]ಗಳು) ಯಾವ ಸಂಘದ ಪ್ರತಿನಿಧಿಗಳೆಂದು ಹೇಳುವುದಕ್ಕಾದೀತು? ಅವರೂ ಕಂದಾಯದಾರರಾಗಲಿ ಪ್ರಜೆಗಳಿಂದ ಗೌರವ ಸನ್ಮಾನಗಳನ್ನು ಹೊಂದಲಿ. ಆಗ್ಗೆ ಜನರು ಅಂಥವರನ್ನಲ್ಲದೆ ಇನ್ಯಾರನ್ನು ಚುನಾಯಿಸ್ಯಾರು? ಆಸ್ತಿಯಿಲ್ಲದೆ ಬರೀ ವಿದ್ಯಾವಂತರಾಗಿರತಕ್ಕವರನ್ನು ಯಾವ ಗವರ್ನಮೆಂಟಿನಲ್ಲೂ ಮೆಂಬರಾಗಿ ಚುನಾಯಿಸುವುದಿಲ್ಲ. ಈಗಿನ ಅಭಿಪ್ರಾಯದಲ್ಲಿ ಈ ರೂಲುಸು ಬದಲಾವಣೆ ಆಗಬೇಕಾದ ಅಷ್ಟೇನೂ ಅವಶ್ಯವೆಂದು ಕಾಣುವುದಿಲ್ಲ.

ಅರಸೀಕೆರೆ ಮ॥ ಬಲವಂತರಾಯರು—ಸರ್ಕಾರದವರು ಅನೇಕ ಸ್ಪೆಷಲ್ ಸಬ್‌ರಿಜಿಸ್ಟ್ರಾರುಗಳನ್ನು ನೇಮಿಸಿ ಕಳುಹಿಸುತ್ತಾರೆ. ಇವರು ತಮ್ಮ ಸರಹದ್ದಿನಲ್ಲಿರುವ ಸ್ಟಾಂಪ್ ವೆಂಡರು (ಛಾಪಾಕಾಗದ ಮಾರತಕ್ಕವರ) ರಿಜಿಸ್ಟರು ಮುಂತಾದ ಲೆಕ್ಕಗಳನ್ನು ಆಗಿಂದಾಗ್ಗೆ ಹೋಗಿ ಆಜಮಾಯಿಷಿ ಮಾಡುವಂತೆ ಅಧಿಕಾರ ವಹಿಸಲ್ಪಟ್ಟರೆ ತುಂಬಾ ಅನುಕೂಲ. ಈಗ ಅವರ ರಿಜಿಸ್ಟರುಗಳನ್ನು ಸರಿಯಾಗಿ ತನಿಖೆ ಮಾಡುವವರೇ ಇಲ್ಲವಾಗಿದೆ. ಇದರಿಂದ ನಾನಾ ಅಕೃತ್ಯಗಳು ನಡಿಯಲು ಆಸ್ಪದವಾಗಿದೆ.

ದಿವಾನರವರು—ಆಗಬಹುದು, ಆಲೋಚನೆಮಾಡಿ ಹುಕುಂ ಕೊಡುತ್ತೇವೆ.

ಕೋಲಾರ್ ತಾ॥ ಮ॥ ಚಿಕ್ಕರಾಮಣ್ಣನವರೂ ಸೂರ್ಯನಾರಾಯಣಪ್ಪನವರೂ—ದೊಡ್ಡ ಕೆರೆಗಳ ಕೆಳಗೆ ಜಮೀನ್ ಪಡೆದಿರತಕ್ಕವರು ಸಾಲುಬಾದು ಕಾಮಗಾರಿ ಮಾಡಬೇಕಾಗಿಲ್ಲ. ಸಣ್ಣಕೆರೆ[illegible] ಜಮೀನ್ ಪಡೆದಿರುವವರು ಮಾತ್ರ ಕಾಮಗಾರಿಗೆ ಮಾಡಬೇ[illegible]. ಅವರಿಗಿರತಕ್ಕ ಸ್ವಾತಂತ್ರ್ಯವನ್ನು ಇವರಿಗೂ ಕಲ್ಪಿಸಿಕೊಡಬೇಕು.

ದಿವಾನರವರು—ಈ ರೂಲನ್ನು ಚೆನ್ನಾಗಿ ಯೋಚಿಸಿ ಮಾಡಿ[illegible]. ಸದ್ಯ ಅದನ್ನು ಬದಲಾಯಿಸಲಾಗುವುದಿಲ್ಲ.

ಅದೇ ಮೆಂಬರುಗಳು—ಖುಷ್ಕಿ ಜಮೀನುಗಳಿಗೆ ಕೆಲವು ಕಡೆ ಖುಷ್ಕಿ ಕಂದಾಯವೂ ನೀರು ಸರದಿಯೂ ದಾಖಲಾಗಿದೆ. ರಿವಿಷನ್ ಆಗ[illegible]ಕಾವ ಸಂದರ್ಭದಲ್ಲಿ ಆರೆವಾಸಿ ನೀರು ಸರದಿಯನ್ನು ಮಾತ್ರ ರಿವಿಷನ್ ಮಾಡುವರು. ಖುಷ್ಕಿ ಕಂದಾಯದಲ್ಲಿ ಆರೆವಾಸಿ ರಿವಿಷನ್ ಮಾಡಿಕೊಡಬೇಕು. ಬರೀ ನೀರು ಸರದಿಗಾಗಿಯೇ ಕೊ[illegible] ದಾಖಲಾತುಗಳನ್ನು ಅಂಗೀಕರಿಸುವಂತೆ ಹುಕುಂ ಆಗಬೇಕು.